ಎಂ.ವಿ.ಸೀತಾರಾಮಯ್ಯ
೨೧.೨.೧೯೮೦

ಬಿ. ಎಂ. ಶ್ರೀ ಪ್ರತಿಷ್ಠಾನ
೬೧೮
ಗ್ರಂಥಾಲಯ
೬೦೯
ಬೆಂಗಳೂರು

ಪ್ರಬುದ್ಧ ಕರ್ಣಾಟಕ

ಚಿನ್ನದ ಸಂಚಿಕೆ

ಸಾಹಿತ್ಯ ಸಂಪುಟ

ಬಿ. ಎಂ. ಶ್ರೀ ಸ್ಮಾರಕ ಪ್ರತಿಷ್ಠಾನ
ಗ್ರಂಥ ಭಂಡಾರ
ಕ್ರಮ ಸಂಖ್ಯೆ 2331
ವರ್ಗ
ವರ್ಗ ಸಂಖ್ಯೆ
ಬಂದ ತಾ| 12-6-96
ಬೆಲೆ 50-00

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೬೯

PRABUDDHA KARNATAKA, Kannada Quarterly of the *University of Mysore.* Golden Jubilee Special Number ; Literature. Edited by Dr. H. Manappa Nayak, Dr. H. Thipperudra Swamy and J. R. Lakshmana Rao

All Rights Reserved

ಬೆಲೆ : ಐವತ್ತು ರೂಪಾಯಿಗಳು

ಪ್ರಧಾನ ಸಂಪಾದಕರು
ಪ್ರೊಫೆಸರ್ ಡಿ. ಜವರೇಗೌಡ

೨೯೧೧೮·೨೬

ಸಂಪಾದಕರು
ಡಾ. ಹಾ. ಮಾನಪ್ಪ ನಾಯಕ
ಡಾ. ಎಚ್. ತಿಪ್ಪೇರುದ್ರಸ್ವಾಮಿ
ಜೆ. ಆರ್. ಲಕ್ಷ್ಮಣರಾವ್

ಪ್ರಕಾಶಕರು
ಡಾ. ಪ್ರಭುಶಂಕರ
ಡೈರೆಕ್ಟರ್, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ

ಮುದ್ರಕರು
ಎಚ್. ನರಸಣ್ಣ
ಡೈರೆಕ್ಟರ್, ಮೈಸೂರು ವಿಶ್ವವಿದ್ಯಾನಿಲಯ ಮುದ್ರಣಾಲಯ

ಬೆಂಗಳೂರು-೧೯ 609
ಎಂ.ವಿ.ಸೀ. ೨೧/೨/೮೦

ವಿಷಯ ಸೂಚಿ

	ಚಿನ್ನದ ಹೊಸ್ತಿಲಲ್ಲಿ	...	vii
೧	ಕೃಪಾಚಂಚು	... ಕುವೆಂಪು	೧
೨	ನೀ ನಾದಿನೀ	... ಅಂಬಿಕಾತನಯದತ್ತ	೨
೩	ಶಾಂಭವೀ	... ಅಂಬಿಕಾತನಯದತ್ತ	೩
೪	ಆಕಾಶಯಾನ	... ಪು.ತಿ.ನ	೪
೫	ರಂಗಯ್ಯನ ವಚನಗಳು	... ಎಸ್. ವಿ. ರಂಗಣ್ಣ	೭
೬	ವಚನಗಳು	... ಎಸ್. ವಿ. ಪರಮೇಶ್ವರ ಭಟ್ಟ	೧೩
೭	ಸಂಪಾತಿ	... ಸುಬ್ಬಣ್ಣ ರಂಗನಾಥ ಎಕ್ಕುಂಡಿ	೧೯
೮	ಕೆಲವು ನೆನಪುಗಳು	... ಸಿ. ಕೆ. ವೆಂಕಟರಾಮಯ್ಯ	೨೫
೯	ಸಮಾಗಮ	... ಕೆ. ಗೋಪಾಲಕೃಷ್ಣರಾಯ	೪೯
೧೦	ರಾಧಾಕೃಷ್ಣ	... ಅಶ್ವತ್ಥ	೭೩
೧೧	ಕೊಡಗಿನ ಕೊನೆಯ ದೊರೆ	... ಕೊರಟಿ ಶ್ರೀನಿವಾಸರಾವ್	೧೦೩
೧೨	ಕೆಂಪು ಹುಂಜ	... ಬೆಸಗರಹಳ್ಳಿ ರಾಮಣ್ಣ	೧೦೭
೧೩	ತ್ರಿಮೂರ್ತಿಕಲ್ಪ	... ಬಿ. ಪುಟ್ಟಸ್ವಾಮಯ್ಯ	೧೨೩
೧೪	ಒಂಟಿ ಮರ	... ಉಮಾಶಂಕರ	೧೪೫
೧೫	ಸಂಕ್ರಾಂತಿ	... ಚೆನ್ನವೀರ ಕಣವಿ	೧೬೫
೧೬	ಮಂಗಳಾರ	... ಸಮೇತನಹಳ್ಳಿ ರಾಮರಾಯ	೧೭೧
೧೭	ಸಿಗಾರೇಟ್ ಸನ್ಯಾಸ	... ರಾ. ಕು.	೧೮೯
೧೮	ಮಹತ್ ಸಾನ್ನಿಧ್ಯದಲ್ಲಿ	... ಗೊರೂರು ರಾಮಸ್ವಾಮಯ್ಯಂಗಾರ್	೧೯೭
೧೯	ನಮ್ಮ ಅಜ್ಜಿ ಅಡಿಗೆ	... ವಿ. ಸೀ.	೨೦೫
೨೦	ಸವಿನೆನಪು	... ನಾಡಿಗ ನೀಲಕಂಠಪ್ಪ	೨೩೧
೨೧	ಜೀವನ ಕಲಿಸಿದ ಪಾಠ	... ಎನ್. ಪ್ರಹ್ಲಾದ ರಾವ್	೨೩೫
	ನಮ್ಮ ಸಾಹಿತ್ಯ		
೨೨	ಪ್ರಬಂಧ ಸಾಹಿತ್ಯ	... ಎಚ್ಚೆಸ್ಕೆ	೨೪೯
೨೩	ಕಥಾ ಸಾಹಿತ್ಯ	... ಎಂ. ವಿ. ಸೀತಾರಾಮಯ್ಯ	೨೫೯
೨೪	ನಾಟಕಗಳು	... ಎಲ್. ಎಸ್. ಶೇಷಗಿರಿರಾವ್	೨೮೩
೨೫	ಕಾವ್ಯಮೀಮಾಂಸೆ	... ಜಿ. ಎಸ್. ಶಿವರುದ್ರಪ್ಪ	೩೦೩
೨೬	ಪ್ರವಾಸ ಸಾಹಿತ್ಯ	... ವರದರಾಜ ಹುಯಿಲಗೋಳ	೩೪೭
೨೭	ಕಾದಂಬರಿಗಳು	... ಎಚ್. ಜೆ. ಲಕ್ಕಪ್ಪಗೌಡ	೩೫೯
೨೮	ಮಕ್ಕಳ ಸಾಹಿತ್ಯ	... ಮಿರ್ಜಿ ಅಣ್ಣಾರಾಯ	೩೯೧
೨೯	ಕನ್ನಡ ಕಾವ್ಯ	... ಎಸ್. ಅನಂತನಾರಾಯಣ	೪೩೭
೩೦	ಜಾನಪದ ಅಧ್ಯಯನ	... ಜೀ. ಶಂ. ಪರಮಶಿವಯ್ಯ	೪೯೧
೩೧	ಸಾಹಿತ್ಯ ವಿಮರ್ಶೆ	... ಎಚ್. ಎಂ. ಚನ್ನಯ್ಯ	೫೩೫
೩೨	ಅನುವಾದ: ಸಂಸ್ಕೃತ ಸಾಹಿತ್ಯ	... ಡಾ. ಕೆ. ಕೃಷ್ಣಮೂರ್ತಿ	೫೪೯

೩೩	ಅನುವಾದ : ಸಂಸ್ಕೃತಶಾಸ್ತ್ರ ಸಾಹಿತ್ಯ	... ಎಂ. ಜಿ. ನಂಜುಂಡಾರಾಧ್ಯ	೫೬೭
೩೪	ಅನುವಾದ : ಇಂಗ್ಲಿಷ್ ಸಾಹಿತ್ಯ	... ಎಂ. ರಾಮರಾವ್	೫೯೭
೩೫	ಅನುವಾದ : ಹಿಂದಿ ಸಾಹಿತ್ಯ	... ಪ್ರಧಾನ್ ಗುರುದತ್ತ	೬೧೩
೩೬	ಅನುವಾದ : ಇತರ ಭಾಷೆಗಳು	... ಎನ್. ಅನಂತರಂಗಾಚಾರ್	೬೬೧

ನಮ್ಮ ಸಾಧನೆ

೩೭	ವ್ಯಾಕರಣ ಸಾಹಿತ್ಯ	.... ಟಿ. ವಿ. ವೆಂಕಟಾಚಲ ಶಾಸ್ತ್ರೀ	೬೭೫
೩೮	ಗ್ರಂಥ ಸಂಪಾದನೆ	... ಡಾ. ಜಿ ವರದರಾಜರಾವ್	೭೨೩
೩೯	ವಯಸ್ಕರ ಶಿಕ್ಷಣ ಸಾಹಿತ್ಯ	... ರಾ. ವೆಂ. ಶ್ರೀ.	೭೪೫
೪೦	ಸಂಗೀತ	... ರಾ ಸತ್ಯನಾರಾಯಣ	೭೫೫
೪೧	ನೃತ್ಯ	... ಕೆ. ಶಿವರಾಮ ಐತಾಳ	೭೬೫
೪೨	ರಂಗಭೂಮಿ	... ಸಿಂಧುವಳ್ಳಿ ಅನಂತಮೂರ್ತಿ	೭೮೯
೪೩	ಚಿತ್ರಕಲೆ	... ಪಿ. ಆರ್. ತಿಪ್ಪೇಸ್ವಾಮಿ	೮೦೩
೪೪	ಚಲನಚಿತ್ರೋದ್ಯಮ	... ಎಂ. ಬಿ. ಸಿಂಗ್	೮೧೭
೪೫	ಪ್ರಕಟನ ಪ್ರಪಂಚ	... ಎಚ್. ಎಂ. ಶಂಕರನಾರಾಯಣರಾವ್	೮೨೭
೪೬	ಮುದ್ರಣ	... ಎಚ್. ನರಸಣ್ಣ	೮೪೩
೪೭	ಗ್ರಂಥಾಲಯಗಳು	... ಟಿ. ವಿ. ಸುಬ್ರಹ್ಮಣ್ಯಂ	೮೫೫
೪೮	ಶೀಘ್ರಲಿಪಿ	... ಆರ್. ಜಿ. ಕೃಷ್ಣನ್	೮೭೧
೪೯	ಮಹಿಳೆಯರ ಕೊಡುಗೆ	... ಚಿ. ನ. ಮಂಗಳ	೮೮೫
೫೦	ತತ್ತ್ವಶಾಸ್ತ್ರ	... ಜಿ. ಹನುಮಂತರಾವ್	೯೦೧

ಹಳೆಯ ಸಾಹಿತ್ಯ

೫೧	ಶಾಸನಗಳು ಮತ್ತು ಕನ್ನಡ ಸಾಹಿತ್ಯ	... ಡಾ. ಎಂ. ಚಿದಾನಂದಮೂರ್ತಿ	೯೦೯
೫೨	ಚಂಪೂ ಸಾಹಿತ್ಯ	... ಹಂಪ. ನಾಗರಾಜಯ್ಯ	೯೨೧
೫೩	ವಚನ ಸಾಹಿತ್ಯ	.... ಡಾ. ಎಚ್. ತಿಪ್ಪೇರುದ್ರಸ್ವಾಮಿ	೯೪೩
೫೪	ರಗಳೆ	.... ಬಿ. ಸಿ. ಜವಳಿ	೯೫೫
೫೫	ಷಟ್ಪದಿ	.... ಎಂ. ಮರಿಯಪ್ಪ ಭಟ್ಟ	೯೮೯
೫೬	ಸಾಂಗತ್ಯ	.... ಎನ್. ಬಸವಾರಾಧ್ಯ	೯೯೯
೫೭	ತ್ರಿಪದಿ	.... ಡಿ. ಎಸ್. ಕರ್ಕಿ	೧೦೦೭
೫೮	ದಾಸ ಸಾಹಿತ್ಯ	.... ಡಾ. ಕೆ. ಎಂ. ಕೃಷ್ಣರಾವ್	೧೦೨೧

ಕಾವ್ಯಾವಲೋಕನ

೫೯	ಮಹಾಛಂದಸ್ಸಿನ ಶ್ರೀ ರಾಮಾಯಣ ದರ್ಶನಂ	.... ಪ್ರಭುಶಂಕರ	೧೦೪೩
೬೦	ಕನ್ನಡ ಸಾಹಿತ್ಯ ಚರಿತ್ರೆ	.... ಕೆ. ವೆಂಕಟರಾಮಪ್ಪ	೧೦೬೫

೬೧	ಅರಳು–ಮರಳು	.... ಜಿ. ಎಸ್. ಸಿದ್ಧಲಿಂಗಯ್ಯ	೧೦೭೯
೬೨	ಯಕ್ಷಗಾನ ಬಯಲಾಟ	.... ಟಿ. ಕೇಶವಭಟ್ಟ	೧೧೦೩
೬೩	ದ್ಯಾವಾಪೃಥಿವೀ	.... ಸ. ಸ. ಮಾಳವಾಡ	೧೧೧೯
೬೪	ಬಂಕಿಮಚಂದ್ರ	.... ಸಿ. ಕೃಷ್ಣ	೧೧೩೫
೬೫	ಮಹಾಕ್ಷತ್ರಿಯ	.... ಸಿ. ಆರ್. ಶ್ರೀನಿವಾಸ ಅಯ್ಯಂಗಾರ್	೧೧೪೯
೬೬	ಕ್ರಾಂತಿ ಕಲ್ಯಾಣ	... ಎಚ್. ಎಸ್. ಹರಿಶಂಕರ್	೧೧೬೩
೬೭	ರಂಗಬಿನ್ನಪ	... ಬಿ. ಎಚ್. ಶ್ರೀಧರ	೧೨೦೭
೬೮	ಹಂಸದಮಯಂತಿ ಮತ್ತು ಇತರ ರೂಪಕಗಳು	.... ಗುಂಡ್ಮಿ ಚಂದ್ರಶೇಖರ ಐತಾಳ	೧೨೨೫
೬೯	ಶ್ರೀಮದ್ಭಗವದ್ಗೀತಾ ತಾತ್ಪರ್ಯ ಅಥವಾ ಜೀವನ ಧರ್ಮಯೋಗ	.... ಸಿ. ಪಿ. ಕೆ.	೧೨೪೭
೭೦	ಸಣ್ಣ ಕತೆಗಳು	.... ಸುಧಾಕರ	೧೨೬೭
೭೧	ಕರ್ಣಾಟಕ ಸಂಸ್ಕೃತಿ ಸಮೀಕ್ಷೆ	.... ಪ. ವಿ. ಚಂದ್ರಶೇಖರ	೧೨೭೯
೭೨	ಕರ್ಣಾಟ ಸಂಸ್ಕೃತಿಯ ಪೂರ್ವ ಪೀಠಿಕೆ	.... ಎ. ವಿ. ನರಸಿಂಹಮೂರ್ತಿ	೧೨೯೩

ಸಂಪಾದಕೀಯ

೭೩	'ಪ್ರಬುದ್ಧ ಕರ್ಣಾಟಕ'ದ ಈಚಿನ ಇಪ್ಪತ್ತೈದು ವರ್ಷಗಳು	.... ಹಾ. ಮಾ. ನಾಯಕ	೧೩೦೫
೭೪	ಈ ಸಂಪುಟದ ಲೇಖಕರು		೧೩೧೯

ಚಿನ್ನದ ಹೊಸ್ತಿಲಲ್ಲಿ

ಒಂದು ಪತ್ರಿಕೆ ಪ್ರಬಲ ಬೋಧನಮಾಧ್ಯಮವಾಗಿರುವಂತೆ, ನವೋನವವಾದ ಚಲನ ವಿಶ್ವಕೋಶವಾಗಿರುವಂತೆ, ಸಾಮಾಜಿಕ ರಾಜಕೀಯ ವಿಚಾರಗಳ ಸಮರ್ಥ ಪ್ರಸಾರಸಾಧನವಾಗಿರುವಂತೆ ತನ್ನ ನಾಡಿನ ಭಾಷಾ ಸಾಹಿತ್ಯಗಳ ತುಂಬುಬೆಳೆವಣಿಗೆಗೆ ಪ್ರೇರಕ ಹಾಗೂ ಆಶ್ರಯಶಕ್ತಿಯಾಗಿರುತ್ತದೆ. ಆಂಗ್ಲ ಸಾಹಿತ್ಯದ ಇತಿಹಾಸ ಬಲ್ಲವರಿಗೆ ಈ ಮಾತು ಹೊಸದಲ್ಲ. ಸಮಕಾಲೀನ ರಾಜಕೀಯ ಸಾಮಾಜಿಕ ವಿಚಾರವೇದಿಕೆಗಳಾಗಿ ಉಗಮಗೊಂಡ ದೈನಿಕೆ ವಾರಿಕೆ ಮಾಸಿಕೆಗಳು ಸಾಹಿತ್ಯದ ಹಲವು ಪ್ರಕಾರಗಳನ್ನು ಪೋಷಿಸಿ ಬೆಳೆಸಿ, ಅಜರಾಮರವಾಗುಳಿದಿವೆ. ಅವುಗಳಲ್ಲಿ ಕೆಲವು ಬಹು ಬೇಗನೆ ಅಂತ್ಯಗೊಂಡರೂ ಮಹಾ ಸಾಹಿತಿಗಳ ಪ್ರತಿಭಾಸಂಸ್ಪರ್ಶದಿಂದ ಕೀರ್ತಿಭಾಜನವಾಗಿವೆ. ಅವು ಅನೇಕ ಕವಿಗಳನ್ನು ಸೃಷ್ಟಿಸಿ, ಪೋಷಿಸಿ, ಪ್ರೋತ್ಸಾಹಿಸಿ ಮಗನ ಹೆಸರಿನಿಂದ ತಂದೆ ಬೆಳಕಿಗೆ ಬರುವಂತೆ, ತಾವೇ ಹೊತ್ತು ಸಾಕಿದ ಕವಿಗಳ ಹೆಗ್ಗಳಿಕೆಯೆ ಕಾರಣವಾಗಿ ಆ ಪತ್ರಿಕೆಗಳು ಜನಮನದ ತಳದಲ್ಲಿ ಅಚ್ಚೊತ್ತಿ ನಿಂತಿವೆ. ೧೮ ಮತ್ತು ೧೯ನೆಯ ಶತಮಾನದ ಬ್ರಿಟನ್ನಿನಲ್ಲಿ ಹುಟ್ಟಿದ ಪತ್ರಿಕೆಗಳ ಸಂಖ್ಯೆ ವಿಸ್ಮಯಕಾರಿಯಾದದ್ದು. ದಿ ಬೀ, ದಿ ಫಿಮೇಲ್, ಸ್ಪೆಕ್ಟೇಟರ್ (೧೭೪೪–೪೬), ದಿ ಪ್ಯಾರಿಟ್ (೧೭೪೬) ಮೊದಲಾದ ಕೆಲವು ಪತ್ರಿಕೆಗಳು ಕೆಲವು ತಿಂಗಳಲ್ಲಿಯೇ ಅವಸಾನಹೊಂದಿದ್ದಾದರೆ, ಲಂಡನ್ ಮ್ಯಾಗಜೈನ್, ಕ್ವಾರ್ಟರ್ಲಿ ರೆವ್ಯೂ ಮೊದಲಾದುವು ಹಲವಾರು ವರ್ಷಗಳು ನಡೆದು ಆಂಗ್ಲರ ಬದುಕಿನ ಮೇಲೆ ಅಪಾರ ಪ್ರಭಾವ ಬೀರಿವೆ. ಅಡಿಸನ್, ಸ್ಟೀಲ್, ಸ್ವಿಫ್ಟ್ ಮೊದಲಾದ ಮಹಾ ಸಾಹಿತಿಗಳ ಸಂಪರ್ಕದಿಂದ ಟ್ಯಾಟ್ಲರ್ ಮತ್ತು ಸ್ಪೆಕ್ಟೇಟರ್ ಪತ್ರಿಕೆಗಳು ಮಾನವಸ್ಮೃತಿಪಟಲದಲ್ಲಿ ರಿಂಗಣ ಗುಣಿಯುವಂತಾಗಿದೆ. ಲೀ ಹಂಟ್, ಲೋ ಕಾರ್ಥ್ ಮತ್ತು ಸ್ಯಾಮುಯಲ್ ಜಾನ್‌ಸನ್‌ರು ಎಕ್ಸಾಮಿನರ್, ಕ್ವಾರ್ಟರ್ಲಿ ರೆವ್ಯೂ, ರ್ಯಾಂಬ್ಲರ್ ಮೊದಲಾದ ಪತ್ರಿಕೆಗಳನ್ನು ಸ್ವತಃ ಸ್ಥಾಪಿಸಿ, ಸಂಪಾದಿಸಿ, ತಮ್ಮ ಲೇಖನಗಳಿಂದ ಪೋಷಿಸಿದ್ದುಂಟು. ಈ ಅಪಾರ ಸಂಖ್ಯೆಯ ಪತ್ರಿಕೆಗಳು ಆ ದೇಶದಲ್ಲಿ ತಲೆಯೆತ್ತದಿದ್ದರೆ ಅಲ್ಲಿಯ ಮಾನವ ಪ್ರತಿಭೆ ಬತ್ತಿಹೋಗುತ್ತಿತ್ತು, ಕಾವ್ಯಸ್ಫೂರ್ತಿ ಇಂಗಿಹೋಗುತ್ತಿತ್ತು.

ಕನ್ನಡ ನಾಡಿನ ಅನೇಕ ಪತ್ರಿಕೆಗಳು ಇಂಥದೇ ಮಹತ್ಕಾರ್ಯವನ್ನು ಅಲ್ಲಿಯಷ್ಟೇ ಶ್ರದ್ಧೆಯಿಂದ ಸುಸಮರ್ಥವಾಗಿ ಸಾಧಿಸುತ್ತಿವೆ. ಅವುಗಳಿಗೆಲ್ಲ ಪ್ರಬುದ್ಧ ಕರ್ಣಾಟಕ ನಾಯಕಸ್ಥಾನದಲ್ಲಿದೆಯೆಂದರೆ ಅತಿಶಯೋಕ್ತಿಯಾಗಲಾರದು. ಅದು ಇಷ್ಟು ಹೊರವಾಗಿ, ಇಷ್ಟು ಕೀರ್ತಿಯುತವಾಗಿ, ಇಷ್ಟು ಕಾಲ ಬೆಳೆದು, ನಾಡಿನ ಸಜ್ಜನರು ಕೈಗೆತ್ತಿಕೊಂಡು ಕಣ್ಣೊತ್ತಿಕೊಂಡು ಮನಮನಗಳಲ್ಲಿ ಮೆರೆಸುತ್ತಾರೆಂಬ ಕಲ್ಪನೆ ಅದನ್ನು ಐವತ್ತು ವರ್ಷಗಳ ಹಿಂದೆ ಹುಟ್ಟುಹಾಕಿದವರ ಕನಸುಮನಸುಗಳಿಗೆ ಬಂದಿರಲಿಲ್ಲವೆಂದು ತೋರುತ್ತದೆ. ದಿನಕಳೆದಂತೆಲ್ಲ ಮೈತುಂಬಿಕೊಳ್ಳುತ್ತ ತೇಜೋ

ವಂತವಾಗುತ್ತ ಬಲಾಢ್ಯವಾಗುತ್ತ, ಕಾಲಕ್ಕೆ ಸರಿಯಾಗಿ ಗ್ರಾಹಕರ ಕೈಯಲ್ಲಿ ನಲಿದಾಡುತ್ತ ವಿಶ್ವವಿದ್ಯಾನಿಲಯದ ಹೆಮ್ಮೆಯಾಗಿ ಬೆಳಕಾಗಿ ಗಂಗೆಯಾಗಿ, ಕವಿಗಳ ಕಾಮಧೇನುವಾಗಿ, ನಾಡಿನ ಕಲ್ಪವೃಕ್ಷವಾಗಿ, ಕನ್ನಡದ ಶಕ್ತಿಯಾಗಿ ಮೆರೆದಾಡುತ್ತಿರುವ ಈ ಪತ್ರಿಕೆಯನ್ನು ಯಾವ ಶುಭಮುಹೂರ್ತದಲ್ಲಿ ಪ್ರತಿಷ್ಠಾಪಿಸಿದರೊ, ಆ ಪ್ರತಿಷ್ಠಾಪಿಸಿದ ದಿ॥ ಪ್ರೊ. ಕೃಷ್ಣಶಾಸ್ತ್ರಿಗಳು ಧನ್ಯರು. ಆಗಾಗ್ಗೆ ನಾಡಿನ ಏಳ್ಗೆಗಾಗಿ ಸಂತರು ಪ್ರವಾದಿಗಳು ಮಹಾತ್ಮರು ಅವತರಿಸುವಂತೆ ಪತ್ರಿಕೆಗಳೂ ಜನ್ಮಧಾರಣೆ ಮಾಡುತ್ತವೆ. ನಿಜವಾದ ಪತ್ರಿಕೆ ನಾಡಿನ ಅಗ್ರಶಕ್ತಿ. ಕನ್ನಡ ಸಾಹಿತ್ಯದ ನವೋದಯಕ್ಕೆ ಶ್ರೀಯವರು ಕಾರಣರಾದಂತೆ ಈ ಪತ್ರಿಕೆಯೂ ಸಮಾನಕಾರಣವಾಯಿತೆಂದರೆ ತಪ್ಪಾಗಲಾರದು. ಅದು ಶ್ರೀಯವರ ಕಾರುಣ್ಯದ ತೊಟ್ಟಿಲಲ್ಲಿ, ಕುವೆಂಪು ಅವರ ಪ್ರತಿಭಾರಕ್ಷೆಯಲ್ಲಿ, ವಿಸೀ ತೀನಂಶ್ರೀ ದೊಲನ ಅವರ ವಿದ್ವತ್ಸಂಪರ್ಕದಲ್ಲಿ ಅದಮ್ಯಶಕ್ತಿಯಾಗಿ ಬೆಳೆದಿದೆ. ಬೇಂದ್ರೆ ಮಾಸ್ತಿ ಪೈ ಪುತಿನ ಶಿವರುದ್ರಪ್ಪ ಮೊದಲಾದ ಹಿರಿಯ ಕಿರಿಯ ಕವಿಗಳ ಹರಕೆ ಹಾರೈಕೆಗಳಿಂದ ಅದು ವಿಶ್ವಕುಟುಂಬಿಯಾಗಿ, ಅನೇಕ ಕಿರಿಯ ಪತ್ರಿಕೆಗಳಿಗೆ ಮಾರ್ಗದರ್ಶಕವಾಗಿ,ಮಾದರಿಯಾಗಿ ಶೋಭಿಸುತ್ತಿದೆ. ಒಂದು ರೀತಿಯಲ್ಲಿ ಆಧುನಿಕ ಕನ್ನಡ ಸಾಹಿತ್ಯದ ಚರಿತ್ರೆಯೆಂದರೆ ಪ್ರಬುದ್ಧ ಕರ್ಣಾಟಕದ ಚರಿತ್ರೆಯೆಂದೇ ಹೇಳಬಹುದು.

ಪ್ರಾರಂಭದಲ್ಲಿ ಕಿರುತೊರೆಯಾಗಿ ಕಾಣಿಸಿಕೊಂಡ ಈ ಪತ್ರಿಕೆ ಇಂದು ಮಹಾಪೂರವಾಗಿ ಪರಿಣಮಿಸಿದೆ ; ಅದರ ಮೊದಲ ಸಂಪುಟ ೧೨೦ ಪುಟಗಳ ಗಾತ್ರದ್ದಾಗಿದ್ದು ಐವತ್ತನೆಯ ಸಂಪುಟ ಅದರ ಹತ್ತರಷ್ಟು ಬೆಳೆದಿದೆ. ಈ ವರೆಗಿನ ಅದರ ಒಟ್ಟು ಪುಟಸಂಖ್ಯೆ ೩೩೧೫೦ಕ್ಕೆ ಮಿಕ್ಕಿದ್ದು, ಒಂದೊಂದು ಸಂಪುಟದ ಸರಾಸರಿ ಪುಟಸಂಖ್ಯೆ ಸುಮಾರು ೬೬೩. ಸುಮಾರು ೫೬೦ ಲೇಖಕರು ಹೆಚ್ಚು ಕಡಿಮೆ ೨೯೫೯ ಲೇಖನಗಳನ್ನು ಬರೆದಿದ್ದಾರೆ. ಇವುಗಳಲ್ಲಿ ೨೦೮ ಸಾಹಿತ್ಯೇತರ ಲೇಖನಗಳು. ಅವುಗಳ ಗಾತ್ರ ೩೯೫೦ ಪುಟಗಳಷ್ಟಾಗುತ್ತದೆ. ಈ ಅಂಕಿ ಅಂಶಗಳನ್ನು ಗಮನಿಸಿದಾಗ ಅದು ಸಾಹಿತ್ಯ ಕ್ಷೇತ್ರದಲ್ಲಿ ಮಾತ್ರವಲ್ಲ, ಸಾಹಿತ್ಯೇತರ ಕ್ಷೇತ್ರಗಳಲ್ಲಿಯೂ ಕ್ರಾಂತಿಯನ್ನುಂಟುಮಾಡಿದೆಯೆಂದು ಹೇಳಬಹುದು. ಸಾಹಿತ್ಯ ಭಾಷೆಯನ್ನು ಸೃಷ್ಟಿಸಿದಂತೆಯೆ ವೈಜ್ಞಾನಿಕ ಭಾಷೆಯನ್ನೂ ಸಾಕಷ್ಟು ಪ್ರಮಾಣದಲ್ಲಿ ನಿರ್ಮಿಸಿದೆ. ಅದು ಸಾಧಿಸಿರುವ ಸಿದ್ಧಿ ವಿಕ್ರಮಗಳ ಕಡೆಗೆ ಕಣ್ಣು ಹಾಯಿಸಿದಾಗ ನಾವು ಮೂಕ ವಿಸ್ಮಯರಾಗುತ್ತೇವೆ. ಈ ಒಂದು ಪತ್ರಿಕೆ ನಡೆಸಿರುವ ವಿಕ್ರಮವನ್ನು ಮೇಲೆ ಸೂಚಿಸಿರುವ ಯಾವ ಆಂಗ್ಲ ಪತ್ರಿಕೆಯೂ ಸಾಧಿಸಿಲ್ಲವೆಂದೇ ಹೇಳಬಹುದು. ಇಷ್ಟೆಲ್ಲ ಸಾಧನೆಗೆ ಅರ್ಥಾಭಿಲಾಷೆಯಿಲ್ಲದೆ ಸಕಾಲಕ್ಕೆ ಸತ್ವಪೂರ್ಣವಾದ ಸಾಮಗ್ರಿಯನ್ನೊದಗಿಸುತ್ತಿರುವ ಲೇಖಕರೆಷ್ಟು ಕಾರಣರೊ ಶ್ರದ್ಧಾನಿಷ್ಠೆಗಳಿಂದ ಶ್ರಮವನ್ನು ಲೆಕ್ಕಿಸದೆ ಸತತ ದುಡಿಯುತ್ತಿರುವ ಸಂಪಾದಕರೂ ಅಷ್ಟೇ ಕಾರಣರು. ಈ ವರೆಗೆ ೫ ಮಂದಿ ಪ್ರಧಾನ ಸಂಪಾದಕರೂ ೧೪ ಮಂದಿ ಸಂಪಾದಕರೂ ಇದರ ಶ್ರೇಯೋಭಿವೃದ್ಧಿಗಾಗಿ ಅಹರ್ನಿಶಿ ಶ್ರಮಿಸಿದ್ದಾರೆ.

ಇಂಥದೊಂದು ಪತ್ರಿಕೆ ನಡಸುವುದು ಸುಲಭದ ಕೆಲಸವಲ್ಲ. ಲೇಖನ ಸಂಪಾದನೆಯೆ ಪರಮ ಸಾಹಸದ ಕಾರ್ಯವಾಗುತ್ತದೆ. ಪತ್ರಿಕೆಯ ಮಟ್ಟ ಇಳಿದು ಹೋಗದಂತೆ, ಲೇಖಕರ ಮನಸ್ಸಿಗೆ ನೋವಾಗದಂತೆ, ಎರಡನ್ನೂ ತೂಗಿಸುವ ಕಾರ್ಯ ಕಷ್ಟಸಾಧ್ಯವಾದದ್ದು. ದೊಡ್ಡವರಿಗೆ ಪುರಸತ್ತಿಲ್ಲ, ಎಳೆಯರಿಗೆ ತಾಳ್ಮೆಯಿಲ್ಲ; ಒಳ್ಳೆಯ ಲೇಖನ ಬರುವಂತಿಲ್ಲ, ಬಂದದ್ದನ್ನೆಲ್ಲ ಹಾಕುವಂತಿಲ್ಲ, ಹಾಕದಿದ್ದರೆ ನಿಂದೆ ತಪ್ಪುವಂತಿಲ್ಲ. ಕಾಗದ ಬರೆದರೆ ಉತ್ತರವಿಲ್ಲ, ಮನೆಗೆ ಹೋದರೆ ಸಬೂಬು ನೆಪಗಳಿಗೆ ನಿಲುಗಡೆಯಿಲ್ಲ. ಬಂದ ಹಸಿಲೇಖನವನ್ನು ನೇರಾಗಿ ಅಚ್ಚಿನ ಮನೆಗೆ ರವಾನಿಸುವಂತಿಲ್ಲ. ತಿದ್ದಿದರೆ ಬೈಗುಳ, ತಿದ್ದದಿದ್ದರೆ ಆಕುಲ. ಕೆಲವರ ಕಾಕಲಿಪಿಯೊ, ಬ್ರಹ್ಮನೇ ಕಾಪಾಡಬೇಕು! ವಿವಿಧ ಮೋಡಿಗಳನ್ನೋದುವಾಗ ಕಣ್ಣಿಗೆ ಶ್ರಮ, ಮನಸ್ಸಿಗೆ ತ್ರಾಸ. ಕೊನೆಗೆ ಅಚ್ಚಿನ ಮನೆಯಲ್ಲಿ ಚತುರೋಪಾಯಗಳನ್ನೂ ಕಾರ್ಯಗತ ಗೊಳಿಸಬೇಕು; ಇಲ್ಲವಾದರೆ ಪತ್ರಿಕೆ ಬೆಳಕು ಕಾಣುವಂತಿಲ್ಲ. ಪ್ರೂಫು ತಿದ್ದುವ ಕೆಲಸ ಹಗೆಗೂ ಬೇಡ; ತಿದ್ದದೆ ಉಪಾಯವಿಲ್ಲ. ಇದೆಲ್ಲ ಹೆಚ್ಚು ಕಡಿಮೆ ಬಿಟ್ಟಿ ಕೆಲಸ! ಇದನ್ನೇ ಕೃಷ್ಣಶಾಸ್ತ್ರಿಗಳು ಮಾಡಿದ್ದು; ಈಚಿನವರಿಗೂ ಅದೇ ಪ್ರಾಪ್ತಿ.

ಮೊದಲು ಸರ್ಕಾರ, ಆಮೇಲೆ ವಿಶ್ವವಿದ್ಯಾನಿಲಯ ಧಾರಾಳವಾಗಿ ದ್ರವ್ಯಸಹಾಯ ನೀಡಿದುವು. ಪತ್ರಿಕೆಗೆ ತಗಲುವ ವಾರ್ಷಿಕ ವೆಚ್ಚ ಹನ್ನೆರಡು–ಹದಿಮೂರು ರೂಪಾಯಿಯಾದರೆ, ಅದರ ವಾರ್ಷಿಕ ಚಂದಾ ಹಣ ಕೇವಲ ನಾಲ್ಕು/ಐದು ರೂಪಾಯಿ. ಆದರೆ ಚಂದಾದಾರರ ಸಂಖ್ಯೆ? ಎರಡೂವರೆ ಕೋಟಿ ಜನರಿರುವ ರಾಜ್ಯದಲ್ಲಿ ಆ ಸಂಖ್ಯೆ ಹೇಳಲು ನಾಚಿಕೆಯಾಗುತ್ತದೆ. ಇದು ಮುಂದುವರಿದ ಜನರ ಲಕ್ಷಣವಲ್ಲ. ಕಾಡುಜನರಾದರೆ ಇವೆಲ್ಲ ಬೇಕಿಲ್ಲ. ಹೇಳಿ ಪ್ರಯೋಜನವಿಲ್ಲ. ಎಂಥೆಂಥದಕ್ಕೊ ಖರ್ಚುಮಾಡುತ್ತೇವೆ–ಸಿನಿಮಾ, ಹೋಟಲು, ಜೂಜು, ಷೋಕಿ ಇತ್ಯಾದಿ. ಇಂಥ ಪ್ರೌಢಪತ್ರಿಕೆ ನಾಗರಿಕ ಜೀವನದ ಅತ್ಯಗತ್ಯ ವಸ್ತುವಲ್ಲವೆ? ತಮಿಳರಿಂದ–ಅವರ ರಿಕ್ಷಾವಾಲರಿಂದ–ನಮ್ಮ ಜನ ಪಾಠ ಕಲಿಯಬೇಕಾಗಿದೆ. ಚಿನ್ನದ ಹಬ್ಬದಲ್ಲಿ ಇದನ್ನೆಲ್ಲ ಹೇಳಬಾರದಿತ್ತೇನೊ? ಹಬ್ಬವೋ ಹರಿದಿನವೋ, ಸಂಕಟವುಕ್ಕಿದಾಗ ಕೋಡಿ ಹರಿಯಲೇಬೇಕು; ನೋವಾದವರು ಕ್ಷಮಿಸಬೇಕು. ನಮ್ಮ ಮಾನಸಿಕ ಆರೋಗ್ಯ ಹಾಗೂ ಬೌದ್ಧಿಕ ಸಾಮರ್ಥ್ಯ ಕುದುರಬೇಕಾದರೆ ಈ ಪರಿಕರಗಳೆಲ್ಲ ಬೇಕೆನ್ನುವುದಕ್ಕೆ ಇಷ್ಟೆಲ್ಲ ಹೇಳಬೇಕಾಯಿತು.

ಈ ಹಬ್ಬಕ್ಕೆ ಒಂದು ವರ್ಷದಿಂದ ಏರ್ಪಾಡು ನಡೆಯುತ್ತಿದೆ. ಚಿನ್ನದ ಹಬ್ಬದಲ್ಲಿ ಮೊದಲ ಸಂಚಿಕೆಯ ಲೇಖಕರಿಗೆ ಸನ್ಮಾನ ಮಾಡಬೇಕು, ಲೇಖಕರ ಸಮ್ಮೇಲನ ನಡಸಬೇಕು, ಸಾವಿರ ಪುಟಗಳ ವಿಶೇಷ ಸಂಚಿಕೆ ಪ್ರಕಟವಾಗಬೇಕು-ಇದು ಹಾಕಿಕೊಂಡ ಯೋಜನೆ. ಸಾವಿರ ಪುಟದ ಯೋಜನೆ ಎರಡೂವರೆ ಸಾವಿರಕ್ಕೂ ಮಿಕ್ಕಿತು. ಇದಕ್ಕೆ ಸಂಪಾದಕರ ಉತ್ಸಾಹದ ಜೊತೆಗೆ ಲೇಖಕರ ಉತ್ಸಾಹವೂ ಕಾರಣ. ವಿಜ್ಞಾನ ವಿಭಾಗವೇ ಆಂಜನೇಯನಂತೆ ಬೆಳೆದು ೧೬೫೦ ಪುಟಗಳವರೆಗೆ ಮುಟ್ಟಬೇಕೆ! ಇದರ

ಜೊತೆಗೇ ವಿಜ್ಞಾನ ಕರ್ಣಾಟಕ–ಪ್ರಬುದ್ಧ ಕರ್ಣಾಟಕದ ಮಗಳು! ಸಂತೋಷದ ಮೇಲೆ ಸಂತೋಷ! ಹಬ್ಬದೆಡೆಯಲ್ಲಿಯೆ ಆ ಮಹಾಮಹಿಮಳ, ಆ ಕಾರಣಪುರುಷೆಯ ಜನನ! ಸಾವಿರ ಪುಟಗಳ ಸಾಹಿತ್ಯಾಂಕವೂ ಇದೇ ಸಮಯಕ್ಕೆ ಬೆಳಕಿಗೆ ಬರಬೇಕು. ಸಂಪಾದಕರೂ ವಿದ್ವಾಂಸರೂ ಶಿಸ್ತಿನ ಸಿಪಾಯಿಗಳು, ಶ್ರದ್ಧಾಳುಗಳು, ಕರ್ತವ್ಯನಿಷ್ಠರು, ಸೌಂದರ್ಯೋಪಾಸಕರು–ಪರಿಪೂರ್ಣತೆ ಅವರ ಗುರಿ; ಎಲ್ಲವೂ ಚೆನ್ನಾಗಿರಬೇಕು, ಪಕ್ವವಾಗಿರಬೇಕು. ಆ ನಾಲ್ವರು–ನಾಯಕ್, ತಿಪ್ಪೇರುದ್ರಸ್ವಾಮಿ, ಲಕ್ಷ್ಮಣರಾವ್, ಬೋಳೇಗೌಡ–ಒಂದು ವರ್ಷಲಾಗಾಯ್ತು ಹಗಲಿರುಳೂ ದುಡಿಯುತ್ತಿದ್ದಾರೆ; ಲೇಖನ ಸಂಪಾದಿಸಿ, ತೂರಿ ಕೇರಿ ಒನೆದು ಒಪ್ಪಮಾಡಿ, ಅಚ್ಚಿನ ಮನೆಯಲ್ಲಿ ಕುಳಿತು ಪ್ರೂಫು ತಿದ್ದಿ ಅಂದವಾಗಿ ಮುದ್ರಣವಾಗುವಂತೆ ಹುಷಾರಿಯಿಂದ ನೋಡಿಕೊಂಡಿದ್ದಾರೆ–ತಮ್ಮ ಇತರ ಕೆಲಸದ ಜೊತೆಗೆ! ಇದು ದುಡ್ಡಿಗೆ ಮಾಡುವ ಕೆಲಸವಲ್ಲ, ಕನ್ನಡದ ಮೇಲಣ ಪ್ರೀತಿಯಿಂದ, ಕಾಯಕನಿಷ್ಠೆಯಿಂದ ಎಸಗುತ್ತಿರುವ ಉದ್ಯೋಗ. ಇಂಥವರ ಜೊತೆ ಕೆಲಸಮಾಡುವ ಭಾಗ್ಯ ನನ್ನದಾಗಿದೆ.

ಇವರೆಲ್ಲರೂ ಆದರ್ಶವ್ಯಕ್ತಿಗಳು, ನಿಜ. ಆದರೆ ಲಕ್ಷ್ಮಣರಾಯರನ್ನು ಕುರಿತು ಒಂದು ಹೆಚ್ಚಿಗೆ ಮಾತು ಹೇಳಲೇಬೇಕು. ೧೬೦೦ ಪುಟಗಳ ಪ್ರಮಾಣವುಳ್ಳ ೫೭ ಲೇಖನಗಳನ್ನು ವಿಜ್ಞಾನ ಸಂಚಿಕೆಗೆ ಕೂಡಿಹಾಕಿರುವ ಅವರ ಸಾಹಸ ಶ್ಲಾಘನೀಯವಾದದ್ದು. ಕಳೆದ ಇಪ್ಪತ್ತೈದು ವರ್ಷಗಳ ವೈಜ್ಞಾನಿಕ ಪ್ರಗತಿಯ ಕತೆ ಈ ಲೇಖನಗಳ ವಸ್ತು. ಬಹುಶಃ ಯಾವ ಭಾರತೀಯ ಭಾಷೆಯಲ್ಲಿಯೂ ಈವರೆಗೆ ಇಂಥದೊಂದು ವ್ಯಾಪಕವಾದ ಗ್ರಂಥ ಬಂದಿಲ್ಲವೆಂದೇ ಹೇಳಬಹುದು. ಆ ಕ್ಷೇತ್ರದಲ್ಲಿ ಇದೊಂದು ಗೌರೀಶಂಕರ; ಅವರದು ತೇನ್‌ಸಿಂಗ್ ಸಾಹಸ! ಕನ್ನಡ ಮಾಧ್ಯಮ ವಿರೋಧಿಗಳಿಗೆ ಇದೊಂದು ಸಶಕ್ತ ಸವಾಲು! ಕನ್ನಡ ವೈಜ್ಞಾನಿಕ ಭಾಷೆಯಾಗಿಲ್ಲವೆಂದು ಕುಂಯ್‌ಗುಟ್ಟುವ ಸಂಶಯಗ್ರಸ್ತರಿಗೆ ಇದೊಂದು ಗದಾಪ್ರಹಾರ!

ಸಾಹಿತ್ಯಾಂಕ ವಿಜ್ಞಾನಾಂಕಗಳೆರಡೂ ಐವತ್ತರ ಹರೆಯದ ಪ್ರಬುದ್ಧ ಕರ್ಣಾಟಕದ ಅಪೂರ್ವ ಸಿದ್ಧಿಯ ಧವಳಗಿರಿ ಶೃಂಗಗಳು; ಕನ್ನಡದ ಶಕ್ತಿ ದಿಗ್ದಿಗಂತಗಳಲ್ಲಿ ಅನುರಣಿತವಾಗುವಂತೆ ಘೋಷಿಸುವ ದೇವದತ್ತ ಪಾಂಚಜನ್ಯಗಳು; ಕನ್ನಡದ ವಿಜಯವನ್ನು ವಿಶ್ವವಿದ್ಯಾನಿಲಯದ ಕೀರ್ತಿಯನ್ನು ಮೆರೆವ ನಭಶ್ಚುಂಬಿ ವೈಜಯಂತಿಗಳು.

ಚಿನ್ನದ ಹಬ್ಬ ಹೆಸರಿಗೆ ತಕ್ಕಂತೆ ವೈಭವಯುತವಾಗಿ ನಡೆಯುವಂತೆ ಸಕಲಾನುಕೂಲಗಳನ್ನು ಕಲ್ಪಿಸಿಕೊಟ್ಟ ಮೈಸೂರು ವಿಶ್ವವಿದ್ಯಾನಿಲಯವನ್ನೂ ಮೈಸೂರು ಸರ್ಕಾರದ ವಿದ್ಯಾಸಚಿವ ಖಾತೆಯನ್ನೂ ಕೃತಜ್ಞತೆಯಿಂದ ವಂದಿಸುತ್ತೇನೆ. ಉತ್ಸವವನ್ನು ಉದ್ಘಾಟಿಸಿ, ವಿಶೇಷ ಸಂಚಿಕೆಯನ್ನು ಬಿಡುಗಡೆಮಾಡಿಕೊಟ್ಟು ನಮ್ಮನ್ನು ಹರಸಿರುವ ರಾಷ್ಟ್ರಕವಿ ಶ್ರೀ ಕುವೆಂಪು ಅವರ, ಸಮಾರಂಭದ ಅಧ್ಯಕ್ಷತೆ ವಹಿಸಿ ಪ್ರೋತ್ಸಾಹ ನೀಡಿರುವ ಉಪಕುಲಪತಿ ಡಾ. ಕೆ. ಎಲ್. ಶ್ರೀಮಾಲಿಯವರ

ಮತ್ತು ಅನೇಕ ವಿಧಗಳಲ್ಲಿ ನಮ್ಮೊಡನೆ ಸಹಕರಿಸಿದ ರಿಜಿಸ್ಟ್ರಾರ್ ಕೆ. ಆರ್. ರಾಮಚಂದ್ರನ್ ಅವರ ಉಪಕಾರವನ್ನು ವಂದನಪೂರ್ವಕವಾಗಿ ಸ್ಮರಿಸುತ್ತೇನೆ. ಪ್ರಸಾರಾಂಗದ ನಿರ್ದೇಶಕರಾದ ಡಾ. ಪ್ರಭುಶಂಕರ, ಸಂಪಾದಕ ಮಂಡಲಿಯ ಸದಸ್ಯರು ಮತ್ತು ಸಂಪಾದಕರು, ವಿಶ್ವವಿದ್ಯಾನಿಲಯ ಮುದ್ರಣಾಲಯದ ಡೈರೆಕ್ಟರ್ ಶ್ರೀ ಎಚ್. ನರಸಣ್ಣ ಮತ್ತು ಅವರ ಸಿಬ್ಬಂದಿ ವರ್ಗದವರ ಸಹಾಯಕ್ಕಾಗಿ ನಾನು ಋಣಿ.

ಕನ್ನಡ ಅಧ್ಯಯನ ಸಂಸ್ಥೆ
೩೧-೩-೬೯

ದೇ. ಜವರೇಗೌಡ
ಪ್ರಧಾನ ಸಂಪಾದಕ

ಕುವೆಂಪು

ಕೃಪಾಚಂಚು

ಮಳೆಗರೆಯುವ ಕರ್ಮೋಡಕೆ
ಎಂತೊ ಬಳ್ಳಿಮಿಂಚು
ಅಂತೆ ಇಹುದು ಕತ್ತಲೆಗೂ
ಬೆಳ್ಳಿ ಬೆಳಕಿನಂಚು :
ದುಃಖಗರ್ಭದಲ್ಲಿ ಹೊರೆಯುತಿಹುದೊ ಸುಖದ ಹೊಂಚು,
ಕ್ಲೇಶಾಂಡವ ಕುಕ್ಕಿ ಹೊಮ್ಮುವಂತೆ ಕೃಪೆಯ ಚಂಚು !

ಅಬಿಂಕಾತನಯದತ್ತ

೧

ನೀ ನಾದಿನೀ

ನಾ ಭಾವಾ ಮೈದುನನಲ್ಲ
ನಾನೀ । ನೀನಾ ।
ನೀ । ನಾದಿನೀ । ನಾ । ನಾದೆನೇ । ನದಿನೀ । ಏನಾದಿನೀ । ದಾನೀ
ವಾದಿನೀ । ಸಂವಾದಿನೀ । ಸಂವೇದಿನೀ । ದಿನದಿನ ಸಂಧಾನಿ । ನೀ
ಸರಿ ಸರೀ ಗಮಕಾ । ಪದ ಪದಾನೀ । ದನಿದನೀ
ನಿಶಾವಾಸಿನೀ । ಬ್ರಹ್ಮದಾಸಿನೀ । ದೊರೆಸಾನಿ ನೀ । ಸ್ವಾಮಿನೀ.
ಆನಾದೇ ದಣಿದಗೇ । ಈನಾದೇ ತಣಿದಗೇ ।
ಊನಾದೇ । ಅನೂನಾದೇ । ಹಣ್ಣಾದಾ । ಹುಣ್ಣಿಮಿಾ
ಅವನಾ । ಅವಳಾ ಹವಳಾ । ಅದಾದೀ । ಆದೀ
ಆಹಾದೀ । ಕಾದೀ । ಸಾದೀ ಸಾಂತಾ ।
ನಳದಾ । ದಾದೀ ದಾಯೀ । ಮಂಗಲದಾಯೀ ।
ಅಬ್ಬಾ । ಆಯೀ । ಈ ಬಾಯಿ । ತಾಯೀ ।
ನಾನಾಯೀ । ಸನಾಯೀ । ನಾಗಸ್ವರ ಕಾಮೀ ।
ಪುಂಗಿ । ಉತ್ತುಂಗೀ । ಗಂಗೀ ।
ನಾದಿಂ ಧಿನ್ನಾ । ಮಾದಿನೀ । ಆಸ್ವಾದಿನೀ । ವಾಜಿನೀ
ಜೀವಾಜಿನೀ । ವಾಜಿ ನೀ ವತೀ । ಸರಸ್ವತೀ
ರಸ ಸಾರಸ । ಹಂಸೀ । ತಮುಧ್ವಂಸೀ ।
ಉತ್ತಮಾ । ಆದಿ ಮಾ । ಮಾ । ಅದಿತೀ
ಸಂವದತಿ । ಉನ್ಮಾನಿನೀ । ನೀನಾ । ನಾನಾ ।

೨

ಶಾಂಭವೀ

ಶಂಭೂ । ಸ್ವಯಂಭೂ । ಭವಿತಾ । ಭಾವಿತಾ
ಅಭಿನಯಿತಾ । ಮುದ್ರಾಂಕುರಿತಾ । ತಾರಿತಾ
ತರತಮಿತಾ । ಪ್ರಭೂ । ವಿಭೂ । ಸಂಭೂ
ಅಧಿಭೂತಾ । ಅಧ್ಯಾತ್ಮಿಕಾ । ದೇವಿಕಾ
ವಸು ದಾ । ವಾಸು ವಾಸಾ । ಸು ವಾಸಾ ।
ಯ ರ ಲ ವಾ । ಪಿಶೇಷಾ । ಸಾ ।
ಹಳಿತಾ । ಅಹಲ್ಲ್ಯ । ರಾಮಾ । ವಿರಮಿತಾ । ನಮಿತಾ
ಗೌತಮತ್ಯಕ್ತಾ । ಅವಿಶೇಷಾ । ಸ್ವಯಂವ್ಯಕ್ತಾ
ಅರ್ಧೋನ್ಮೇಷಾ । ಮಿಥುನಿತಾ । ವೈದೇಹಿ । ದೇಹಿ
ಕುಶಲವಮಾತಾ । ಜಾತವೇದಾ । ಯಜ್ಞ ಕ್ಷೇತ್ರೇ । ಜ್ಞಾತಾ
ಸಂಪದ ಪ್ರಾಪ್ತಾ । ಆಪ್ತಾ । ಸ್ವಯಂ ತೃಪ್ತಾ । ಶಾಂಭವೀ
ಭೋ । ಭೋ । ಭಿಕ್ಷಾಂದೇಹೀ ।

ಪು. ತಿ. ನ.

ಆಕಾಶಯಾನ

ಒಮ್ಮೆ ನಾ ಕುಳಿತಿದ್ದೆ ಆಕಾಶಬಾಣದೊಳು
—ಸೊರಗಿಹೋಗುವುದಯ್ಯ ಬೆರಗೆ ಈ ಕಾಲದೊಳು—
ಸರ್‍ರನೇರಿತು ನೆಲವ ಬಿಟ್ಟದು ಮೇಲೆ ಮೇಲೆ
ದೀವಳಿಗೆಯೊಳು ಬಿಡುವ ಬಾನಿನ ಬಾಣದೋಲೆ.
ರಾಮನಂಬಿದು ದಿಟ ನಿಂತುನೋಡುವ ಜನಕೆ
ಏರಿದುದನೇ ತಿಳಿಯಲಾಗದೆನ್ನಯ ಮನಕೆ.
ಸುಮ್ಮನೆಯೆ ಕುಳಿತಿದ್ದೆ ನಾನೊಳಗೆ ಪೀಠದೊಳು
ಬಲುಸದ್ದು ಸಿಡಿಸಿತದು ನೆಲ ತೊರೆವ ವೇಳೆಯೊಳು.
ಇದುವೆ ಮೇಲೇರಿತೋ ಭೂತಳವೆ ಕುಸಿಯಿತೋ
ಹಿರಿಯ ಕಾಸಾರವದು ಕಿರುಬೆಂಚೆಯಾಯಿತೋ
ಅಂತಸ್ತಿನುಪ್ಪರಿಗೆ ಗೊಂಬೆಸಾಲಿನ ಮನೆ
ಊರಿದಂಗ್ಯೆಯಗಲ ಸ್ಲಾಯಿಡ್ ನಮೂನೆ
ಸರ್ವೆಮರಗಳ ತೋಪು ಪಚ್ಚೆತೆನೆಗಳ ಮಡಿ
ಬೆಟ್ಟವದು ಬರಿ ಕುಪ್ಪೆ ಹೊಳೆಗು ಬಚ್ಚಲೆ ಪಡಿ
ಹೋಗುತಿದೆ ಪಾತಾಳಕಿಳಿದು ಬರಿ ತಳವಾಗಿ
ಭೂಮಿ ; ಕುಳಿತಿಹೆನೊಳಗೆ ಏರುವನುಭವ ನೀಗಿ.
ಸಸಿಯ ಪಾತಿಗೆ ನೀರ ಹನಿಸುತಿರುವುದ ನೋಡ
ಹಿಂಜಿ ಹಬೆಯಾಗುತಿಹ ತೂತಿನೊಂದರಿ ಮೋಡ
ಗರುಡವೆಲ್ಲೋ ಬಯಲ ಸಾಗರದ ಕಿರು ಮೀನ
ಚಲಿಸದೆಯೆ ನಿಂತಿಹುದೊ ನಟ್ಟನಡುವೆ ವಿಮಾನ?
ದರಿಗಿಲ್ಲ ಕುಗ್ಗೀಗ ಗಿರಿಗಿಲ್ಲ ಹೆಚ್ಚಳ
ತಿರೆ ತೆರೆದ ಬೋಗುಣಿ ಬಾನದರ ಮುಚ್ಚಳ
ಮೇಲಾಳ ಕೆಳಗಾಳ ಸುತ್ತ ಬಯಲಿನ ಗೋಳ

ದೆಸೆಕೋದು ಕೊಂಡಿರುವೆಲ್ಲೆಗೆರೆ ಚಕ್ರವಾಳ
ಎಲ್ಲವತಿ ನಿಶ್ಚಲ ಸನಿಯ ದೂರಗಳಿಲ್ಲ
ಹರಿಯ ನಾಭೀಕಮಲದರಳೆ ಸರಿ ಇದು ಫುಲ್ಲ
ಇಲ್ಲವೊಳಗಲುಗಾಟ ಬಾಹ್ಯವಸ್ತುಗಳೋಟ
ಇದ್ದೆಡೆಯೊಳೇ ಇಹುದು ಬಾನಿಳೆಯ ದೆಸೆ ಕೂಟ
ಬರಿ ಊಹೆ ನಂಬುಗೆ ಈ ವಿಮಾನದ ವೇಗ
ತಳವಿಲ್ಲದಂತರದಿ ತೂಗುತಿಹೆ ನಾನೀಗ
ಕುಳಿತೆಡೆಯೆ ಕುಳಿತಿರುವೆನೆನ್ನೆ ನಿಜದನುಭವ
ಆದರೂ ಹಾರುತಿಹೆನೂರೂರ ಬಲು ಹರವ
ಕುಡಿವ ಪಾತ್ರೆಯೊಳುದಕಕಿಲ್ಲ ಮೇಲ್ಮೈ ಮುರಿತ
ಭ್ರಮೆಯ ತರದಾರಿಗೀ ಹಾರುತೇರಿನ ಸರಿತ
ಈ ಸರಿತೆಗೆಮಗಿಲ್ಲಿ ಶ್ರುತಿಯೆ ಪ್ರಮಾಣ
ಇದರುದರ ವಾಸದೊಳು ಸೊಗಕಿಲ್ಲ ತ್ರುಸವೂನ
ಹೊರಗೆ ಬಲುಚಳಿಯೆಂಬರೊಳಗೊ ಚೈತ್ರಾನಿಲ
ಬಡಿಸುವಳು ಬಾಗೆಳತಿ ಅನ್ನಪಾಯಸ ಫಲ
ಏನೊ ಉಲ್ಲಸ ಮನಕೆ ಆದೆ ನಾ ಬಲುಹಗುರ
ವಿಯತ್ ಪಥದೊಳು ಸಂಚರಿಸುತಿಹ ವಿದ್ಯಾಧರ.

ತಿರೆಯ ತಳ ದಿಂದಿರುಳುಮೇಲೇರುತಿಹುದಿತ್ತ
ರವಿಯೆತ್ತಲೋ ಮುಳುಗೆ ರಂಗುಗಳ ನುಂಗುತ್ತ.
ಚುಕ್ಕಿ ಮೂಡಿತು ಕೆಳಗೆ ಜೋಗಿಗಳ ಮನದಂತೆ.
ನಗರದೇವತೆ ಹರಳಿನೊಡವೆಗಳ ತೊಟ್ಟಂತೆ
ವೈದ್ಯುತ ದ್ಯುತಿಗಳಿವು ಜೀವರತ್ನದೊಲಿಹವು
ಈಸುತ್ತ ಶೂನ್ಯದೊಳು ಇವಕಾಯ್ತು ಕಣ್ಣೊಲವು
ಏರೇರುವಂತೀಗ ಬರುತಿಹುದು ಭೂಭಾಗ
ನಮ್ಮತ್ತ ; ಸಿಕ್ಕಿತಿಗೊ ನಾವು ಬಯಸಿದ ಜಾಗ.
ಮೈಲಿಗಟ್ಟಲೆ ದೂರ, ನಿಮಿಷ ಪ್ರಯಾಣ
ಮನೋವೇಗದಿ ಪ್ರಿಯರ ಸನಿಯವಿಹ ಸುಮ್ಯಾನ !

ಸೆನೆಯುತಿದೆ ಮನವಿದನು ಮನೆಕುರ್ಚಿಯೊರಗಿನೊಳು
ಹಿರಿದಾಗುತಿಹುದತ್ತ ಚೌತಿ ಚಂದಿರನೆಸಳು
ತೋರ ತಿರೆಯುರುಳುತಿದೆ ಮಹಾವೇಗವನಾಂತು
ಹೆಬ್ಬಯಲ ದುಂಡಿನೊಳು ತಾನಾವುದಕೊ ನೋಂತು
ಕಣ್ಮಿಟುಕೆ ಗಾವುದ ಅರಿತರಾರಿದರ ಹದ

ತಿರ್ರನಿದು ವಿಷ್ಣು ಚಕ್ರದೊಲು ತಿರುಗುತಿಹುದ
ಮರಳಿ ಮನಕಾಗುತಿಹುದಂದಿನ ವಿಯಚ್ಚರತೆ
ಮುದ್ರಿತ ವಿಮಾನದೊಳು ನಾ ಪಟ್ಟ ನಿಶ್ಚಲತೆ
ಅನಿಲ ವಿದ್ಯುತ್ ವೈದ್ಯುದಯಸ್ಕಾಂತಿಕ ಕೋಶ—
ವೃತಿಗೊಂಡ ಭೂಯಾನದಾಕಾಶ ಸಂವೇಶ—
ಗತುಲ ವೇಗಾನುಮಿತಿಗಿಂಬಾಯ್ತು ನನ್ನ ಮನ
–ಸತ್ಯಮಿಂತಪ್ಪುದಲ ಭ್ರಮೆಗೆ ಮಹದಾಯತನ–
ಕಲ್ಪಿಸಿಹರಾರೆನಗೆ ಈ ಯಾನದೇರಿಕೆಯ
ಹಾರೈಸುತಿದೆ ಜೀವ ಯಾವೂರ ಸೇರಿಕೆಯ
ಆವ ವಿರಹದ ಮುಗಿವು, ಆವರ ಪುನರ್ಮಿಳನ?
ಎನಿತು ಸೊಗವೆನಿತಿನಿದು ಈ ವಿಮಾನದಿ ಪಯಣ!
ಎಂಬೆ ತಿರೆಯೀ ತೇರ ಸರಿತವನು ಮನದಂದು
ಖೇಚರೋಲ್ಲೋಸದೊಳು ಕುಳಿತೆಡೆಯೆ ಕುಳಿತಿಂದು.

ಎಸ್. ವಿ. ರಂಗಣ್ಣ

ರಂಗಯ್ಯನ ವಚನಗಳು

೧

ನಿದ್ದೆಯೆಂಬ ಗಂಡನಿಗೆ ಕನಸುಗಳೆಂಬ ಹಲವು ಹೆಂಡಿರ ಕಾಟವಯ್ಯ,
ರಂಗೇಶ

೨

ಮತಧರ್ಮ ಹುಲ್ಲೆಕರುವೇನಯ್ಯ? ವಿಜ್ಞಾನ ಹೆಬ್ಬುಲಿಯೇನಯ್ಯ? ಇದನ್ನು ಕಂಡು ಅದು ಕಂಗೆಡುವುದೇಕೆ, ಕಾಲಿಗೆ ಬುದ್ಧಿ ಹೇಳುವುದೇಕೆ? ಮತಧರ್ಮ ನಡೆಯುವ ಹಾದಿ ಮುಟ್ಟಲಾಟಿಸುವ ಗುರಿ ಎರಡೂ, ರಂಗಯ್ಯ ನೀನೆ ಆಗಿರುವಾಗ ಅದಕ್ಕೆ ಯಾವ ಅಂಜಿಕೆಯಯ್ಯ? ನಿನ್ನ ಇನ್ನೊಂದು ಹೆಸರಾದ ಸತ್ಯವನು ಹುಡುಕುವುದೆ ವಿಜ್ಞಾನದ ಉದ್ದೇಶ : ಅದಕೆಂತಯ್ಯ ಕ್ರೌರ್ಯ?

೩

"ಮಕ್ಕಳಿದ್ದರೆ ತಂದೆತಾಯಿಗಳ ಸಮಸ್ತ ಕೊರತೆಗೂ ಪರಿಹಾರ, ಮಕ್ಕಳಿರುವ ಕೊರತೆಯೊಂದು ವಿನಾ!" ಹೀಗೆ ಅಣಕಿಸಿದನಯ್ಯ ಸಂಸಾರ ವಿರೋಧಿಯೋರ್ವ. ಅವನ ಕಲ್ಪನೆ ಮೊಟುಕು; ಅದೊಂದೇ ಏಕೆ ಅಂಥ ಅಣಕಗಳ ತಡೆಯಿಲ್ಲದೆ ನಿರ್ಮಿಸಿ ಎಸೆಯಬಹುದಯ್ಯ. ಗಂಡನ ಸಮಸ್ತ ಕೊರತೆಗೂ ಹೆಂಡತಿಯೆ ಪರಿಹಾರ, ಹೆಂಡತಿಯೆಂಬ ಕೊರತೆಯೊಂದು ವಿನಾ. ಹೆಂಡತಿಯ ಸಮಸ್ತ ಕೊರತೆಗೂ ಗಂಡನೆ ಪರಿಹಾರ, ಗಂಡನೆಂಬ ಕೊರತೆಯೊಂದು ವಿನಾ. ಅರ್ಥದ ಸಮಸ್ತ ಕೊರತೆಗೂ ಶಬ್ದವೆ ಪರಿಹಾರ, ಶಬ್ದವೆನ್ನುವ ಕೊರತೆಯೊಂದು ವಿನಾ. ಶಬ್ದದ ಸಮಸ್ತ ಕೊರತೆಗೂ ಅರ್ಥವೆ ಪರಿಹಾರ, ಅರ್ಥವೆನ್ನುವ ಕೊರತೆಯೊಂದು ವಿನಾ. ದೇಹದ ಸಮಸ್ತ ಕೊರತೆಗೂ ಆತ್ಮವೆ ಪರಿಹಾರ, ಆತ್ಮವೆಂಬ ಕೊರತೆಯೊಂದು ವಿನಾ. ಆತ್ಮದ ಸಮಸ್ತ ಕೊರತೆಗೂ ದೇಹವೆ ಪರಿಹಾರ, ದೇಹವೆನ್ನುವ ಕೊರತೆಯೊಂದು ವಿನಾ. ಊಟದ ಸಮಸ್ತ ಕೊರತೆಗೂ ಹಸಿವೆ ಪರಿಹಾರ, ಹಸಿವೆಂಬ ಕೊರತೆಯೊಂದು ವಿನಾ. ಹಸಿವಿನ ಸಮಸ್ತ ಕೊರತೆಗೂ ಊಟವೆ ಪರಿಹಾರ, ಊಟವೆಂಬ ಕೊರತೆಯೊಂದು ವಿನಾ. ಬಾವಿಯ ಸಮಸ್ತ

ಕೊರತೆಗೂ ನೀರೆ ಪರಿಹಾರ, ನೀರೆನ್ನುವ ಕೊರತೆಯೊಂದು ವಿನಾ. ನೀರಿನ ಸಮಸ್ತ ಕೊರತೆಗೂ ಬಾವಿಯೆ ಪರಿಹಾರ, ಬಾವಿಯೆಂಬ ಕೊರತೆಯೊಂದು ವಿನಾ. ಸಾಕೊ, ಇನ್ನೆಷ್ಟು ಬೇಕೊ? ಪರಿಹಾಸ ಹಾಗಿರಲಿ, ನಿಜಾಂಶವೇನಯ್ಯ? ಕೊರತೆ ಯಾವುದೊ ಪರಿಹಾರವೂ ಅದೇ; ಎಲ್ಲಿಂದ ತೊಂದರೆಯೊ ಅಲ್ಲಿಂದಲೆ ಸಮಾಧಾನ. ಜೀವನದ ಕಷ್ಟ ಪರಂಪರೆಯ ಜೀವನವೆ ನೀಗಬೇಕು; ಮರಣದ ಪ್ರಶ್ನಾವಳಿಗೆ ಮರಣವೆ ಜವಾಬು, ರಂಗಯ್ಯ.

೪

ಓ ರಂಗ, ಕವಿಯೊ ಜಂಭದ ಕೆಂಬೂತವೊ

೫

ಮುದಿ ಎತ್ತನ್ನು ಕಂಡು, "ಇದು ಬೇಕಾದಷ್ಟು ದಿವಸ ಉತ್ತು ಭಾರವ ಹೊತ್ತು ಜೀತಗೈದಿದೆ" ಎನ್ನುತ್ತ ಮೆಚ್ಚುವವರಾರಯ್ಯ? ಈಗ ಮೇಲೆಲ್ಲ ಮರಳಾಗಿ ಹರಡಿರುವ ತೊರೆಯ ಕಂಡು, "ಇದು ತುಂಬಿ ಹರಿಯುತ್ತ ಜನ ಜಾನುವಾರು ಜಮೀನಿಗೆ ತೃಪ್ತಿ ಕೊಟ್ಟಿತು ಆಗ" ಎನ್ನುತ್ತ ಮೆಚ್ಚುವವರಾರಯ್ಯ?

ಕೆಲವೇ ಹಣ್ಣೆಲೆಗೂಡಿ ಬರಲಾಗಿ ನಿಂದಿರುವ ಫಲವೃಕ್ಷವ ಕಂಡು, "ಎಷ್ಟೊಂದು ರುಚಿಹಣ್ಣುಗಳ ಇದು ಒದಗಿಸಿತು ನಮಗೆ ಮೊನ್ನೆ ಮೊನ್ನೆ" ಎನ್ನುತ್ತ ಮೆಚ್ಚುವವರಾರಯ್ಯ?

ಪ್ರಯೋಜನಕ್ಕೆ, ಎಂದರೆ ತನ್ನ ಪ್ರಯೋಜನಕ್ಕೆ, ಹಾಗು ತತ್‌ಕ್ಷಣದ ಪ್ರಯೋಜನಕ್ಕೆ ಬಾರದೆನಿಸುವ ವಸ್ತುವಿನ ಕಡೆಗೆ ಕಣ್ಣು ಹಾಯಿಸಿದರೆ ಮನುಜ ಮನುಜನಾದಾನೆ, ರಂಗಯ್ಯ?

೬

"ಕೊಡು" "ಕಿತ್ತುಕೊ"—ಇವರೀರ್ವರೂ ಆದಿಮಾನವನ ಕುವರಿಯರು. ಒಬ್ಬಳು ಗರತಿ, ಇನ್ನೊಬ್ಬಳು ಗಯ್ಯಾಳಿ, ರಂಗಯ್ಯ.

೭

ನಾಚಿಕೊಳ್ಳದೆ ಎಲ್ಲರೆದುರಾಗಿ ನಾ ನುಡಿಯ ಬಲ್ಲೆ: ನನಗುಂಟು ಒಂದಲ್ಲ ಎರಡಲ್ಲ ಹತ್ತು ಪ್ರೇಯಸಿಯರು! ಅವರೊಂದಿಗಾಗುವ ಸರಸ ಸಲ್ಲಾಪದಿಂದ ನನಗೆ ಪುನಃ ಪುನಃ ಬ್ರಹ್ಮಾನಂದ. ನನಗೆ ಯಾವಾಗ ಅಪೇಕ್ಷೆಯೊ ಆಗಲೆ ಅವರು ಬರುತ್ತಾರೆ ಅಭಿಸಾರಿಕೆಯರಾಗಿ; ಅಥವಾ ನಾನೇ ನಡೆಯುತ್ತೇನೆ ಅವರಿರುವ ಸಂಕೇತ ಸ್ಥಾನಕ್ಕೆ. ಯಾರವರು? ಹೆಸರಿಟ್ಟು ಕರೆಯಲೆ, ರಂಗೇಶ? ಮುದ್ದು ಹೆಸರುಗಳ ಉಚ್ಚರಿಸುವುದಕ್ಕೆ ಸಾವಧಾನವೇಕೆ: ಹೇಳುವೆನು, ಆಲಿಸಯ್ಯ ಕಿವಿಗೊಟ್ಟು: ಗಾಳಿ ಮಳೆ ಹಗಲು ಇರುಳು ವನ ನದಿ ಬೆಟ್ಟ ರವಿ ಶಶಿ ತಾರೆ!

೮

ನಾನು, ನಾನೆಂಬ 'ನಾನಿಕೆ' ಸ್ವಪ್ರತಿಷ್ಠೆಯಯ್ಯ, ಅಧಮವಯ್ಯ. ನೀನು, ನೀನೆಂಬ 'ನೀನಿಕೆ', ಒಂದು ಪ್ರಸಂಗ ಹೊರತು, ಅರೆಸ್ವಾರ್ಥವಯ್ಯ, ಮಧ್ಯಮವಯ್ಯ. ಅವನು ಅವನೆಂಬ 'ಅವನಿಕೆ' ನಿಸ್ವಾರ್ಥವಯ್ಯ, ಉತ್ತಮವಯ್ಯ ನಿನ್ನನ್ನು ಕುರಿತು, ರಂಗಯ್ಯ, "ಎಲ್ಲ ನಿನ್ನದು, ನೀನೆ ಎಲ್ಲ" ಎನ್ನುವಾಗ ಮಾತ್ರ 'ನೀನಿಕೆ' ಅತ್ಯುತ್ತಮವಯ್ಯ !

೯

ನಾವೆಂದುದಕೆ ಸುಮ್ಮನೆ 'ಹೌದು' ಎನ್ನುವವ ತುಂಬ ಬುದ್ಧಿವಂತ, ನಮ್ಮ ತೀರ್ಮಾನದಂತೆ, ರಂಗಯ್ಯ.

೧೦

ಅಂದಿನ ಅನ್ಯೋಕ್ತಿಕವಿಗೂ ಇಂದಿನ ಸಾಂಗತ್ಯ ಕವಿಗೂ ಒಂದೆಬಗೆ ಮೆಚ್ಚಿಕೆಯಾಯ್ತು ಕಾಡುಜಿಂಕೆಯ ಬದುಕು. ಹಾಡಿ ಹೊಗಳಿದರಯ್ಯ ಇಂತು : "ಓ ಜಿಂಕೆ, ಹಸಿಹುಲ್ಲು ತಿಂದು ತಿಳಿನೀರು ಕುಡಿದು ನೀ ಮಲಗುವೆ, ನಿದ್ರಿಸುವೆ ಹಾಯಾಗಿ, ಆಸೆಗೂಡಿ ಯಾರ ಮುಖಕ್ಕೂ ನೀ ಮುಖವೆತ್ತೆ; ಯಾರಿಗೂ ಕೈಯೊಡ್ಡೆ. ಅದಾವ ತಪಸ್ಸು ನಿನ್ನಿಂದಾಯ್ತು, ತಿಳಿಸಲಾರೆಯ ನನಗೂ ?"

ಇಂಥ ಅಂಗಲಾಚಿಕೆಯ ಕಂಡು ನಗುಬಂತು ಜಿಂಕೆಗೆ; ಜರೆಚಿತಯ್ಯ ಹೀಗೆ : "ಮನುಷ್ಯರೇ ಬುದ್ಧಿಶಾಲಿಗಳು; ಕವಿಗಳಾದರೊ ಹೆಚ್ಚಿನ ಬುದ್ಧಿಶಾಲಿಗಳು. ಆದರೇಕೊ ಅವರಿಗೆ ಇರುವ ಎರಡು ಕಣ್ಣುಗಳಲ್ಲಿ ಸಾಮಾನ್ಯವಾಗಿ ಒಂದರಿಂದಲೇ ನೋಟ. ಹರಿಣ ಜಾತಿಯ ಹಗರಣ ಅವರಿಗೆ ಅರಿವಾಗದು. ತೃಣವೆಲ್ಲಿ ಒಣಗೀತೊ, ಜಲವೆಂದು ಬತ್ತಿಹೋದೀತೊ, ಹೋರಾಡುವ ಗಂಡುಸಾರಗ ಯಾವುದು ಗೆದ್ದು ಹಿಂಡನ್ನು ಆಳಬರುವುದೊ, ಯಾವ ಜಿಂಕೆ ಏನು ತುಂಟಾಟ ಎಸಗುವುದೊ, ನನ್ನ ಪಾಡೇನು, ಮರಿಗಳ ಪಾಡೇನು—ಇಂಥ ಚಿಂತೆಗಳುಂಟು ಹತ್ತೆಂಟು ನನಗೆ. ಗುಂಪಿನೊಂದಿಗೆ ಚರಿಸುತ್ತ, ನಳನಳಿಸುವ ದಳಗಳಿಗೆ ನಾಲಗೆ ಸೋತು ಹಿಂದುಳಿದಂದು, ಕುಂಟೆಯ ಅಂಚಿನಲ್ಲಿ ತಲೆಬಗ್ಗಿಸಿ ನೀರ ಚಪ್ಪರಿಸುತ್ತಿರುವಂದು, ಬೆಳ್ದಿಂಗಳಿನಲ್ಲಿ ಉಪ್ಪುಮಣ್ಣನ್ನು ನೆಕ್ಕುತಿರುವಂದು, ಗಪ್ಪನೆ ಕಿರಬ ಮೇಲೆರಗುವುದೊ ಏನೊ ಎಂಬ ಭೀತಿ ನರನರದಲ್ಲು ನನಗುಂಟು. ಹುಲಿಗೆ ಹುಲಿಯಾಗಬಲ್ಲ ಬೇಡರ ಬಲೆ ಬಾಣಗಳ ನೆನೆಸಿಕೊಂಡರೆ ಹೌ ಹಾರಿಹೋಗುವೆನು ಭರದಿಂದ. ವನವಿಹಾರ ನಿಮಗೆ, ವನ್ಯಬಾಳು ನನಗೆ; ಅಂದ ಚಂದಗಳೆಲ್ಲ ನಿಮಗೆ, ಭಂಗ ಭೀಕರತೆ ನನಗೆ !"

ಮಾನವ ಭಾಷೆ ಮಾನವ ಭಾವಗಳನು ಪಶುಗಳಿಗು ಆರೋಪಿಸದೆ ಕವಿತ್ವ ಕಟ್ಟಲಾರದ ಅರ್ಧ ದೃಷ್ಟಿಗಳಿಗೆ ಪೂರ್ಣಸತ್ಯದ ಛಾಯೆಯಾದರು ಗೊತ್ತಾದೀತೆ, ರಂಗಯ್ಯ ?

೧೧

“ಆಗುವುದೆಲ್ಲ ವಿಧಿಯಿಂದ. ವಿಧಿಯೇ ಕೊಡುತ್ತದೆ, ವಿಧಿಯೇ ಕಿತ್ತುಕೊಳ್ಳುತ್ತದೆ!” ಹೀಗೆ ಮಂದಿ ಬಿಸುಸುಯ್ಯುವುದ ಕಾಣದವರಿಲ್ಲ; ಕಂಡು ಅಯ್ಯೊ ಎನ್ನದವರಿಲ್ಲ. ವಿಧಿಯಲ್ಲಿ ನನಗೂ ನಂಬಿಕೆಯಯ್ಯ; ನಾನೂ ವಿಧಿಯ ಆರಾಧಕನಯ್ಯ. ಆದರೆ ಜನರಿಗೂ ನನಗೂ ನಡುವೆ ದೊಡ್ಡ ಕಮರಿ: ಅವರ ವಿಧಿ ವಿಧಿಮಾರಿ, ನನ್ನ ವಿಧಿ ವಿಧಿದೇವಿ. ಆ ಮಾರಿಯ ಆಕಾರ ಅಂಗಾಂಗಗಳ ಪರಿಚಯ ಪ್ರಾಯಶಃ ಅವರೊಬ್ಬರಿಗೂ ಇಲ್ಲ; ನನ್ನ ದೇವತೆಯ ರೂಪ ಅಂಗವಿನ್ಯಾಸವನು ನಾ ಬಲ್ಲೆ. ಪ್ರಾಮಾಣಿಕತೆಯೇ ವಿಧಿಮೂರ್ತಿಯ ಶಿರಸ್ಸು; ದೃಢಸಂಕಲ್ಪವೇ ಅವಳ ಬಲಗೈ; ಉದ್ಯೋಗಶೀಲವೇ ಎಡಗೈ; ಮಿತವ್ಯಯವೇ ಅವಳ ಉದರಭಾಗ; ತಾಳ್ಮೆಯೇ ಅವಳ ಬಲಗಾಲು; ಆಶಾಭಾವವೇ ಎಡಗಾಲು! ಇದು ನಿಜವಾದ ವಿಧಿಯ ಅವತಾರ. ಇಂಥ ವಿಧಿಯನ್ನು ನಂಬದವನಾರಯ್ಯ, ನಂಬಿ ಕೆಟ್ಟವನುಂಟೆ, ರಂಗಯ್ಯ?

೧೨

ಕಾನೂನು ಇಲ್ಲದಿದ್ದರೇನಯ್ಯ ನ್ಯಾಯುವಳರಿಗೆ? ಕಾನೂನು ಇದ್ದರೇನಯ್ಯ ಅನ್ಯಾಯಗುಳಿಗಳಿಗೆ, ರಂಗಯ್ಯ?

೧೩

ಯುಗಾದಿಯ ದಿವಸ ಹಬ್ಬ ಆಚರಿಸುವ ಸಂತೋಷ ಸಡಗರ. ಮಾರನೆಯ ದಿನ ಯುಗಾದಿ ತಡುಕು; ಹೊಸವರ್ಷದಲಿ ಮಾಡಿಯೇ ಮಾಡುವೆವೆಂಬ ಕಜ್ಜಗಳ ಕುರಿತು ಗಾಢ ಸಂಕಲ್ಪ ನಮ್ಮಲ್ಲಿ ಮೂಡಿಬರುವ ದಿವಸ. ಅತಿ ಚೆಲುವಾಗಿ ಅಚ್ಚುಕಟ್ಟಾಗಿ ಅತ್ಯುಲ್ಲಾಸ ಬೀರುವ ಆ ಸಂಕಲ್ಪ ಸ್ಫುಟರೂಪ ತಾಳುವುದಕ್ಕೆ ಆ ದಿವಸ ಮರುದಿವಸ ಮತ್ತೊಂದು ದಿವಸ ಮೀಸಲು ಸರಿ; ಆಮೇಲೆ? ಸಂಕಲ್ಪದ ಹಲವು ಮುಖಗಳ ನೋಡಿ ನೋಡಿ ತಲೆದೂಗುತ್ತ, ಹೆಚ್ಚು ಹೆಚ್ಚು ಉತ್ಸಾಹದಿಂದ ನಲಿಯುತ್ತ “ಎಂಥ ಭಾರಿ ಕಾರ್ಯಾವಳಿ ನಮ್ಮಿಂದ ಆಗಲಿದೆ!” ಎಂದು ಹಿಗ್ಗುತ್ತ, ಒಂದು ತಿಂಗಳನು ಕಳೆಯುವೆವು, ಹೇಗೆ ಕಳೆದೆವು ಎಂಬುದನ್ನೇ ಅರಿಯದೆ.

ತರುವಾಯ ಸಂಕಲ್ಪ ಸಾಧನೆಗೆ ಅನುರೂಪ ನಿಯಂತ್ರಣವ ಆಲೋಚಿಸಿ ನಕ್ಷೆಮಾಡಿ ತಿದ್ದಿ ಮತ್ತೆ ಮತ್ತೆ ಬದಲಾಯಿಸಿ ಅನುಬಂಧ ಸೇರಿಸಿ ಕೊನೆಗೊಂದು ದೊಡ್ಡ ಯೋಜನೆಯ ತಯಾರಿಸುವೆವು ಎರಡು ತಿಂಗಳು ಶ್ರಮಪಟ್ಟು. ಅದಕ್ಕೊಂದು ಕಾರ್ಯಸೂಚಿ ಅತ್ಯಗತ್ಯ; ಅದಕ್ಕಾಗಿ ಒಂದು ತಿಂಗಳು ಬೇಕೇಬೇಕು.

ಕ್ರಿಯೆಯ ಕಡೆಗೆ ಚಿತ್ತ ತಿರುಗಿಸಿ, ಕೈಕಾಲುಗಳಿಗೆ ವ್ಯಾಯಾಮಕೊಟ್ಟು ಅಷ್ಟಿಷ್ಟು ಆಸಕ್ತಿಯಿಂದ ಕೆಲಸಮಾಡುವಾಗ, ಅಡ್ಡಿ ಅಡಚಣೆ ಎದ್ದುಬಂದು ದಿಗಿಲು ಶಂಕೆಗಳಿಂದ ನಮ್ಮ ಅಂತರ್ಯವನು ತುಂಬುವುವು. “ಸಂಕಲ್ಪ ಬಹಳ ಎತ್ತರದ್ದಾಯ್ತು;

ಯೋಜನೆ ಬಹಳ ವಿಶಾಲವಾಯ್ತು" ಎಂಬ ವ್ಯಾಕುಲ ಅಡಸುವುದು ನಮ್ಮನ್ನ. ಅಷ್ಟು ಹೊತ್ತಿಗೆ ಇನ್ನೆರಡು ತಿಂಗಳು ಕಾಲನ ಉದರದಲ್ಲಿ ಜೀರ್ಣ.

ಮಾಡಿ ಸಾಧಿಸಬೇಕಾದ್ದನ್ನು ಆಕಾರದಲ್ಲಿ ಕುಗ್ಗಿಸಿ ಹಾಳತಗೈಯುವ ಆವಶ್ಯಕ. ಪ್ರಯತ್ನಕ್ಕೆ ಮತ್ತೊಂದು ತಿಂಗಳು ಏನೂ ಹೆಚ್ಚಲ್ಲ. ಎರಡನೆಯ ಬಾರಿ ಕೆಲಸಗಾರಿಕೆಯ ಪ್ರಾರಂಭ, ಯಾವುದನ್ನೊ ಕೈಗೊಂಡು ನಡೆಸತೊಡಗಿ ಅರ್ಧಮಾಡಿ, "ಅಯ್ಯೊ, ತಪ್ಪಾಯ್ತು ; ಇದನ್ನು ಮೊದಲು ತೆಗೆದುಕೊಳ್ಳಬಾರದಿತ್ತು !" ಎನ್ನುತ್ತ, ಅದನ್ನತ್ತ ತಳ್ಳಿಬಿಟ್ಟು ಬೇರೊಂದಕ್ಕೆ ಕೈಹಾಕುವೆವು. ಮತ್ತೆರಡು ತಿಂಗಳ ಕದ್ದೋಟ ಈ ಮಧ್ಯೆ. ಅದಕ್ಕೂ ಅದೇ ಕಥೆ. ಅದು ಮುಂದರಿಯದೆ ನಿಲ್ಲುವ ಹೊತ್ತಿಗೆ ಇನ್ನೊಂದು ತಿಂಗಳ ಸವೆತ. ಮೂರನೆಯದ ಮುಗಿಸಿಯೇ ತೀರಬೇಕೆಂದು ಹಠಹಿಡಿದು, ಕುದುರಿದ ಶ್ರದ್ಧೆಯಿಂದ ವಿಪರೀತ ದುಡಿದು, ದಣಿದು, ಸೋತು ಸೊರಗಿ ಬೆಂಡಾಗಿ ಬೀಳುವೆವು ತಿಂಗಳೊಂದರಲ್ಲಿ.

"ಇದೇನು ಎಷ್ಟೊಂದು ಸಮಯ ಸುಮ್ಮನೆ ವ್ಯರ್ಥವಾಯ್ತು ! ಯಾವೊಂದನ್ನೂ ನೆರವೇರಿಸಲಿಲ್ಲ !" ಎಂದು ದುಗುಡಗೊಂಡು, ಕನಲಿ, ಯಾವಯಾವುದನ್ನೊ ಬೇಗ ಬೇಗ ಮಾಡತೊಡಗಿ, ಕೆಡಿಸಿಬಿಟ್ಟು, ದುಃಖಪಟ್ಟು, ಹತಾಶರಾಗಿ ಗಳಹುವೆವು, ಸಿನಿಮ ನೋಡುವೆವು, ತೆಪ್ಪಗೆ ಬಿದ್ದುಕೊಳ್ಳುವೆವು.

ನಿಲ್ಲದ ಕಾಲ ಸಂವತ್ಸರದ ಸಮಾಪ್ತಿಯನ್ನು ತಂದೆ ತರುವುದು. ಕೊನೆಯ ರಾತ್ರಿ ನಾವು ಎದ್ದು ಕಣ್ಣೊರಸಿಕೊಂಡು ಕಷ್ಟದಿಂದ ಕತ್ತೆತ್ತಿ ಕೃತಕ ಹುಸಿನಗು ನಗುತ್ತ, ಸಮಾಧಾನ ಹೇಳಿಕೊಳ್ಳುವೆವು ಹೀಗೆ ನಮಗೆ ನಾವೇ, ರಂಗಯ್ಯ : "ಪಾಠ ಕಲಿತದ್ದಾಯ್ತು ಈ ವರ್ಷ. ಬರುವ ವರ್ಷ ನಮ್ಮ ತೆರನೇ ಬೇರೆ. ನಾಳೆಯೇ ಯುಗಾದಿ !"

೧೪

"ನಡುವೆ ನಿಲ್ಲದು" ಎಂಬ ಏರ್ಪಾಡಿನ ಪ್ರಯಾಣ ಬಸ್ಸುಂಟು. ಅದಕ್ಕೊಂದು ಅಚ್ಚರಿ ವೈಶಿಷ್ಟ್ಯ ; ಯಾವಾಗಲು ಅದನ್ನು ಕಂಡು ಜನರಿಗೆ ಕುತೂಹಲ. ಅದಕ್ಕಿಂತ ಹೆಚ್ಚಿನ ಅಚ್ಚರಿಯು ನಾ ಕಂಡೆನಯ್ಯ ಒಂದು ಮಧ್ಯಾಹ್ನ, ರಂಗಯ್ಯ : ತಲೆಚೀಟಿ ಯಾವುದನು ತೋರದೆ, ಘೋಷಣೆ ಯಾವುದನು ಸಾರದೆ, ಪಯಣದುದ್ದಕ್ಕು ನಾಲಗೆಯ ನಿಲ್ಲಿಸದ ಪಯಣಗಿತ್ತಿ ಮಾರಾಯಿತಿ !

೧೫

ಹತ್ತು ನಿಮಿಷ ಹಾಯಾಗಿ ಕುಳಿತು ವಿಶ್ರಾಂತಿ ಪಡೆಯೋಣ ಎಂದರೆ, "ಆಲಸ್ಯ ತಗದು; ಏಳು, ಹಳೆವಚನ ತಿದ್ದು, ಹೊಸವಚನ ಬರೆ !" ಎನ್ನುತ್ತ, ಗುಲಾಮ ದುಡಿಮೆ ದುಡಿಸಿಕೊಳ್ಳುವೆ ನನ್ನಿಂದ. ನಿನ್ನಂದದ ನಿಷ್ಕರುಣೆ ಬೇರುಂಟೆ, ರಂಗೇಶ ? ಅದೆ ನಿನ್ನ ಕರುಣೆಯೇನೊ !

೧೬

ಸರಸ ಸಲ್ಲಾಪ ಕೇಳಿದ್ದೇನೆ; ಗಂಭೀರ ಭಾಷಣವ ಶ್ರವಣಗೈದಿದ್ದೇನೆ; ಕೂಗು ಚಿಲಿಪಿಲಿ ಕಲಕಲ ಭೋರ್ಗರೆ ಸಂಗೀತ ವಾದ್ಯಧ್ವನಿಗಳಿಗೆ ಕಿವಿಗೊಟ್ಟಿದ್ದೇನೆ; ಕೆನೆತ ಬಗುಳು ಗುಟುರೆ ಘರ್ಜನೆ ಘೀಂಕಾರಗಳ ಆಲಿಸಿದ್ದೇನೆ; ಒಮ್ಮೆಯಲ್ಲ ಹಲವೊಮ್ಮೆ, ಒಂದು ಸಲವಲ್ಲ, ಅನೇಕ ಬಾರಿ. ಅವೆಲ್ಲ ನನ್ನ ದೃಷ್ಟಿಗೆ ಗದ್ಯ, ಅಲ್ಪಸ್ವಲ್ಪ ರಾಗಯುಕ್ತ ಗದ್ಯ. ತನಿರಸ ತೊಟ್ಟಿಕ್ಕುವ ಪದ್ಯ ಒಂದುಂಟು, ರಂಗಯ್ಯ : ಒಳಗಿವಿಯಿಂದ ಅನುಭೋಗಿಸಬೇಕಾದ ನಿಶ್ಶಬ್ದ !

೧೭

ಶೋಕೋಪಶಮನಕ್ಕೆ ಸುರೆ ಸಂಗೀತ ಎರಡೇ ಉಪಾಯವಂತೆ, ನೋಡಯ್ಯ, ಸುರೆಯಿಂದ ಮೊದಲು ಕ್ಷಣಿಕ ಸಮಾಧಾನ, ಆಮೇಲೆ ಜಡತೆ ಕಸಿವಿಸಿ ಚಾಪಲ್ಯ ಮುಂತಾದ ಕೆಟ್ಟ ಪರಿಣಾಮ. ಸಂಗೀತ ಸಿಕ್ಕದು ಬೇಕು ಬೇಕಾದಾಗ; ಸಿಕ್ಕಿದಾಗಲು ಅದರ ಅನುಭೋಗಕ್ಕೆ ಅರ್ಹತೆ ಅಗತ್ಯ. ಎರಡನ್ನು ಮೀರಿಸಿದ ಮೂರನೆಯ ಮಹೋತ್ಕೃಷ್ಟ ಉಪಾಯ ಉಂಟಯ್ಯ : ಕಾರ್ಯಮಗ್ನತೆ, ರಂಗಯ್ಯ.

ಎಸ್. ವಿ. ಪರಮೇಶ್ವರ ಭಟ್ಟ

ವಚನಗಳು

೧

ಕಲ್ಲು ಕಠಿಣ, ಕಬ್ಬಿಣ ಕಠಿಣ, ವಜ್ರ ಕಠಿಣ
ಆದರೆ ಲೋಭಿಯ ಮನದ ಮುಂದೆ
ಇವೆಲ್ಲವೂ ಮೃದು ಸದಾಶಿವಗುರು.

೨

ನನಗೆ ನಿನ್ನ ಕೃಪೆಯಿದ್ದರೆ
ನಾನು ಏರಿದ ರಥವೆ ವಿಮಾನವಾಗುತ್ತದೆ ಗುಡ್ಡವಡ್ಡವಾದರೆ.
ನನಗೆ ನಿನ್ನ ಕೃಪೆಯಿದ್ದರೆ
ನಾನು ಏರಿದ ರಥವೆ ಹರಿಗೋಲಾಗುತ್ತದೆ ಹೊಳೆ ಅಡ್ಡವಾದರೆ.
ನನಗೆ ನಿನ್ನ ಕೃಪೆಯಿದ್ದರೆ
ನಾನು ಏರಿದ ರಥವೆ ಬೈತ್ರವಾಗುತ್ತದೆ ಕಡಲು ಅಡ್ಡವಾದರೆ
ಭವದ ನನ್ನನುಭವವಿದನಿಂತಾಡಿಸುತ್ತಿದೆ ಸದಾಶಿವಗುರು.

೩

ನಿನಗೆ ನಿನ್ನ ಭಕ್ತರಿಗೆ ನಡುವೆ ಪೂಜಾರಿ ಇರುವ ಹಾಗೆ
ಮಂತ್ರಿಗೆ ಅವನ ಜನರಿಗೆ ನಡುವೆ ಅಧಿಕಾರಿ ಇರುವ ಹಾಗೆ
ನನಗೆ ನನ್ನ ವಾಚಕರಿಗೆ ನಡುವೆ ವಿಮರ್ಶಕ ಇದ್ದಾನೆ ಸದಾಶಿವಗುರು.

೪

ನರ ವಾನರರ ಭೇದ ಆಕಾರದಲ್ಲಿ ಮಾತ್ರ,
ಮರ್ಕಟತನದಲ್ಲಿ ನರನದೆ ಮೇಲುಗೈ ಸದಾಶಿವಗುರು.

೫

ಮತದಾರನಾದಿಮಾನವನಾಗಿರುವನ್ನಕ್ಕ
ಪ್ರಜಾಪ್ರಭುತ್ವವೆಂತು ಸುಗಮವಕ್ಕು ಸದಾಶಿವಗುರು.

೬

ತಾರೀಖು ತಿಳಿದಿದ್ದರೆ ವಾರ ತಿಳಿವುದು ಕಷ್ಟವಾಗದು
ವಾರ ತಿಳಿದಿದ್ದರೆ ತಾರೀಖು ತಿಳಿವುದು ಕಷ್ಟವಾಗದು
ಎರಡೂ ತಿಳಿಯದ ಗಾಂಪನಿಗೇಕೆ ಕ್ಯಾಲೆಂಡರು ಸದಾಶಿವಗುರು ?

೭

ವಿಜ್ಞಾನಿ ಕೃಷಿಕ ಕಾರ್ಮಿಕ ವಣಿಕರೆಂಬೀ ನಾಲ್ವರು
ಜನ ಶಂಕರಿಯ ಗುಡಿಯ ನಾಲ್ದೆಸೆಯ ಆಧಾರಸ್ತಂಭ ಸದೃಶರು
ಉಪಾಧ್ಯಾಯರು ಅರ್ಚಕರು, ಸದಾಶಿವಗುರು.

೮

ನಿನ್ನ ಎದುರೊಳು ಸಾಲುಗಟ್ಟಿನಿಂತ ಭಕ್ತರೊಳು
ನಿನಗೆ ಮನಬಂದರೆ ಹಿಂದೆ ನಿಂತೆನಾದರು ಮೊದಲು ಕರೆವೆಯಯ್ಯ
ನಿನಗೆ ಮನಕೆ ಬಾರದಿರೆ ಮುಂದೆ ನಿಂತೆನಾದರು ಕರೆವುದಿಲ್ಲವಯ್ಯ
ನಿನ್ನೆದುರು ಕ್ಯೂ ಪದ್ಧತಿ ನಿರರ್ಥಕವಯ್ಯ ಸದಾಶಿವಗುರು.

೯

ಮನ ತುಂಬ ಕಾಮ ಮೈ ತುಂಬ ಕಾವಿ, ಆಗದಯ್ಯ ಆಗದಯ್ಯ
ವೇಷವೇನೋ ಸಾಧು, ಬಾಯಿ ತುಂಬ ಸೀದು ಆಗದಯ್ಯ ಆಗದಯ್ಯ
ಇಡಿಸಿದ್ದು ಬೆಳ್ಳಿ ತಟ್ಟೆ ಬಡಿಸಿದ್ದು ಮೆಣಸಿನ ಸಾರು ಆಗದಯ್ಯ ಆಗದಯ್ಯ
ವಿಚಾರಕ್ಕೆ ತಕ್ಕ ಆಚಾರವಿರಬೇಕಯ್ಯ
ಆಧಾರಕ್ಕೆ ತಕ್ಕ ಆಧೇಯವಿರಬೇಕಯ್ಯ
ಮನದಂತೆ ಮಾತಿದ್ದು ಮಾತಿನಂತೆ ಮಾಟವಿದ್ದವರ ನೀನೊಲಿವೆಯಯ್ಯ
ಸದಾಶಿವಗುರು.

೧೦

ಯಾವೂರ ಜನಸಂಖ್ಯೆ ಎಷ್ಟಿದ್ದರೇನಯ್ಯ
ಅಲ್ಲಿ ಶಿಷ್ಟರ ದುಷ್ಟರ ಪ್ರಮಾಣ
ಪಾಂಡವರ ಕೌರವರ ಪ್ರಮಾಣವಯ್ಯ ಸದಾಶಿವಗುರು.

೧೧

ಹಾಲು ಅಡಿಗೆಯ ಮನೆಯ ಒಳಗೆ ಇರುವನ್ನಕ್ಕ ನನಗೆ ಬೆಕ್ಕಿನ ಭಯ
ಅದಕ್ಕಾಗಿ ಅದನು ಕುಡಿವುದೆ ಲೇಸಯ್ಯ

ಆಮೇಲೆ ಬಾಗಿಲು ಹಾರುಹೊಡೆದು ಬಂದರೆ
ನಷ್ಟವೇನನಗೇನಯ್ಯ ಸದಾಶಿವಗುರು.

೧೨

ಹಿಡಿದರೆ ಪರಿಮಳ ಕೊಡದ ಹೂವು
ಮುಡಿದರೆ ಪರಿಮಳ ಕೊಟ್ಟೀತೆ ಸದಾಶಿವಗುರು ?

೧೩

ಬದಲಿ ಹೃದಯದ ಜೋಡಣೆಯು ಪವಾಡ ವಿಜ್ಞಾನದ ಸಿದ್ಧಿ
ಇರುವ ಹೃದಯವನೆ ಪರಿವರ್ತಿಸುವ ಪವಾಡ ಸಾಹಿತ್ಯದ ಸಿದ್ಧಿ
ಉಭಯ ಸಿದ್ಧಿಯ ಸಮನ್ವಯ ಬುದ್ಧಿಯಿಂದ ಮಾತ್ರ ನಮ್ಮಭ್ಯುದಯ
ಸದಾಶಿವಗುರು.

೧೪

ದೊಡ್ಡವರ ಸಂಗ ನಮಗೆ ಮತ್ತೆ ಮತ್ತೆ ಆಗುತ್ತಿರಬೇಕು
ಗಂಟೆಯ ಮುಳ್ಳಿನ ಸಂಗ ಸೆಕೆಂಡಿನ ಮುಳ್ಳಿಗೆ ಆಗುತ್ತಿರುವ ಹಾಗೆ
ಸದಾಶಿವಗುರು.

೧೫

ಶಾಸನದಿಂದ ರಾಜಧನ ಕಸಿಯಲಹುದು
ಶಾಸನದಿಂದ ರಾಜವಿದ್ಯೆ ಕಸಿಯಲಾಗದು ಸದಾಶಿವಗುರು.

೧೬

ಅನುಭವ ಬಯಲಾಂಜನೇಯ
ಅದು ಬೆಳೆಯುತ್ತಲೇ ಇರುತ್ತದೆ
ಅದಕ್ಕೆ ಗುಡಿಕಟ್ಟಿ ಕದವಿಕ್ಕಿದವರುಂಟೆ ಸದಾಶಿವಗುರು.

೧೭

ನನ್ನಲ್ಲಿ ರಸಿಕತೆ ಇದ್ದರೆ ರಸೇಪ್ಸುಗಳು ತಾವಾಗಿ ಬರುವರು
ಸಕ್ಕರೆ ಇರುವೆಗೆ ಕರೆಕಳುವುದಿಲ್ಲ ಸದಾಶಿವಗುರು.

೧೮

ಕಳೆದ ಶತಮಾನದ ಹಿರಿಯರು
ಸಾಹಿತ್ಯ ಸಾಗರದೊಳು
ಹೊಸ ಹೊಸ ಭೂಖಂಡಗಳನರಸಿ ನಡೆದರು

ಅವರು ಕೊಲಂಬಸರು ವಾಸ್ಕೋಡಿಗಾಮರು.
ಈ ಶತಮಾನದ ಆದಿಯ ಹಿರಿಯರು
ಅಲ್ಲಿ ವಸಾಹತುಗಳನು ಕಟ್ಟಿ ನೆಲೆನಿಂತ ಧೀಮಂತರು.
ಈಗ ನಾವು ಇವರ ನೆರಳೊಳು
ಸಿರಿವೀಡುಗಳ ಕಟ್ಟಿ ವಾಣಿಜ್ಯೋದ್ಯಮಗಳನು ಕೈಕೊಂಡ
ಸಾಹಿತ್ಯದ ಹರದರು ಸದಾಶಿವಗುರು.

೧೯

ರವಿಯು ಮುಸುಕಿದ ಮೋಡ ಮಳೆಯ ತರುವ ಹಾಗೆ
ಕವಿಯು ಮುಸುಕಿದ ದುಗುಡ ಕವಿತೆಯ ತರುವ ಹಾಗೆ
ನನ್ನ ಮುಸುಕಿದ ಚಿಂತೆ ನಿನ್ನ ನೆನಹ ತರುವುದು ಸದಾಶಿವಗುರು.

೨೦

ನನ್ನದು ಕಳ್ಳಿ ದೀಪ
ನನ್ನದು ಮಿಣಿ ಮಿಣಿ ಬೆಳಕು.
ಪೈಸೆಗಳ ಲೆಕ್ಕದಲ್ಲಿ ಚಟಾಕು ಪಾವುಗಳಲ್ಲಿ
ಕಳ್ಳಿ ಅಳೆದುಕೊಡುವ ಡೇರೆಯಾಚೆಯ ಬೇಹಾರ ನನ್ನದು
ಅದಕೆ ಈ ಬೆಳಕು ಸಾಕು.
ಆದರೆ ನಿನ್ನ ಲೋಕ ತನ್ನ ಪ್ರೇಮದ ವಿದ್ಯುದ್ದೀಪಗಳನೆ ತಂದು
ತನ್ನ ವಿಶ್ವಾಸದ ಹಿಲಾಲುಗಳನೆ ಹೊತ್ತಿಸಿ
ನನ್ನನ್ನು ಬೆಳಗುತ್ತಿದೆಯಾಗಿ
ನಿನಗೆ, ನಿನ್ನ ಲೋಕಕ್ಕೆ, ನಮೋ ನಮೋ ಎಂಬೆನಯ್ಯ ಸದಾಶಿವಗುರು.

೨೧

ಕಣ್ಣು ಮುಚ್ಚಿಕೊಂಡೆನಯ್ಯ
ಮೂಗು ಒತ್ತಿಕೊಂಡೆನಯ್ಯ
ಗಂಟಲು ಸರಿಮಾಡಿಕೊಂಡೆನಯ್ಯ
ಬಾಯಿ ಆ ಎಂದು ತೆರೆದೆನಯ್ಯ
ಸಮಾಜ ಕೊಟ್ಟ ನಂಜನು
ಒಮ್ಮೆಗೆ ಗಟಕ್ಕನೆ ನುಂಗಿದೆನಯ್ಯ
ನುಂಗಿ ಬದುಕಿದೆನಯ್ಯ
ನಿನ್ನ ಕರುಣೆಯಿದಯ್ಯ ಸದಾಶಿವಗುರು.

೨೨

ಒಮ್ಮೆ ಮಂಗಳೂರಿನಿಂದ ಉಡುಪಿಗೆ ಕಾರಿನೊಳು ಹೋದೆನಯ್ಯ
ನಡು ದಾರಿಯೊಳು ರೋಡೆಂಜಿನ್ನೊಂದು ಇದಿರಾಯಿತ್ತಯ್ಯ
ಅದರ ದಡಬಡದ ಉರುಳಾಟಕೆ ಡಾಮರು ರೋಡು ತತ್ತರಿಸಿತ್ತಯ್ಯ
ತತ್ತರಿಸಿ ತತ್ತರಿಸಿ ಗದ್ಗದಧ್ವನಿಗೈದು ನನ್ನೊಳಿಂತುಸುರಿತ್ತಯ್ಯ
"ಓ ಕವಿಯೆ ನನ್ನ ಮೊರೆಯನಾಲಿಸಯ್ಯ.
ನನ್ನಲ್ಲಿ ಹಳ್ಳಕೊಳ್ಳಗಳಿಲ್ಲವಯ್ಯ, ಹರುಕು ಬಿರುಕುಗಳಿಲ್ಲವಯ್ಯ
ನಾನಳ್ಳೆ ಜೊಳ್ಳೆಯವನಲ್ಲವಯ್ಯ, ಟೊಳ್ಳು ಡೊಳ್ಳು ಎನಗಿಲ್ಲವಯ್ಯ
ಹತ್ತಾರು ಲಾರಿ ಏರೇರಿ ಬಂದರು ಜಗ್ಗದೆದೆಯ ದೃಢಕಾಯ ನನ್ನದಯ್ಯ
ಇಂಥ ನನ್ನ ಮೇಲೆ ಇಂದು ರೋಡೆಂಜಿನ್ನು
ಏಕೆ ವಿನಾಕಾರಣ ಧಾಳಾಧೂಳಿಗೈದೆನ್ನನಂಜಿಸುತ್ತಿಹುದಯ್ಯ?"
ನಾನು ಸಾನುಕ್ರೋಶಪರನಾದ ಕಾರಣ ರೋಡೆಂಜಿನ್ನನು
ಕುರಿತು ಕೇಳಿದೆ: 'ಏನು ನಿನ್ನ ಭೈರವ ಲೀಲೆ'ಯೆಂದು.
ಹೇಳಿತು ರೋಡೆಂಜಿನ್ನು:
"ಹಳ್ಳ ಕೊಳ್ಳಗಳ ದಮ್ಮಸುಗೈದು
ಜಲ್ಲಿಜಲ್ಲಿಗಳ ಸಮತಟ್ಟುಗೈದು
ಟಾರು ಸಿಮೆಂಟು ಮರಳು ಮಣ್ಣುಗಳ ಕಚ್ಚಿಸಿ
ರಾಜಮಾರ್ಗಗಳ ನಿರ್ಮಿಸಿ ಕೊಡುವ ಕಾಯಕ ನನ್ನದು.
ಶಿವನಿತ್ತ ಕಾಯಕವ ನಿರ್ವಂಚನೆಯಿಂದ ನಡೆಸುತ್ತಿದೇನೆ ಅಯ್ಯ
ಮುಂದಿನ ಊರಿನೊಳು ನಿನ್ನೆ ಬಿದ್ದ ಮಳೆಯಿಂದಾಗಿ
ಗ್ರಾಮ ಪಥವೊಂದು ಡೊಗರು ಬಿದ್ದಿಹುದಯ್ಯ
ಅದರ ರಿಪೇರಿ ನಡೆದಿಹುದಯ್ಯ
ಆ ಜಾನಪದ ಪಥವನೀ ರಾಜಮಾರ್ಗಕೆ ಬೆಸೆಯೆ
ಪೋಗುತಿಹೆನಾ ದೆಸೆಯೆ.
ಅತ್ತ ಪೋಗುವರೆ ಈ ದೃಢಕಾಯನೆದೆಯ ಮೇಲೆಯೆ
ಚಿತ್ತೈಸಬೇಕಲ್ಲದನ್ಯ ಮಾರ್ಗವುಂಟೆ ನನಗೆ, ಕವಿಯೆ?
ಇದಕೆ ವೃಥಾ ನೋವಹುದೆಂದು ನೀರೋಗಿಗೇಕೆ ಭೇಷಜವೆಂದು
ಬಳಿಯ ಕೆಸರು ಗದ್ದೆಯೊಳು ನಾ ನಡೆಯ ಬಹುದೆ ಬಂಧು?
ಅಲ್ಲಿ ಕೆಸರಿನೊಳು ಉರುಳಿ ಹೊರಳುವುದು ಓಡಿ ಗೆಲ್ಲುವುದು
ಯಾವುದೆಂಬುದನು ನೀನರಿಯೆಯಾ ರಸಿಕ ಕುಲಶೇಖರ!"
ರೋಡೆಂಜಿನ್ನಿನೀ ಮಾತು ಪಥ್ಯವಾಯಿತು ರಾಜಪಥಕೆಂದರಿತೆ ನಾನು.
ಮುಂದೆ ಉಡುಪಿಯೊಳು ಭಾಷಣಗೈದೆ:

'ಕವಿಯ ಚೇತನವೆ ರೋಡೆಂಜಿನ್ನು, ಅದರ ಕಾಯಕ ಶಿವಪಥದ ನಿರ್ಮಾಣ,
ಧನಿಕ ರಸಿಕರ ಗಟ್ಟಿನೆಲವಿರಬೇಕು ಅದರ ಉರುಳಾಟಕೆ' ಇತ್ಯಾದಿ.
ಹಿಂದಿರುಗಿ ಬರುವಾಗ ನಟ್ಟಿರುಳು
ರೋಡೆಂಜಿನ್ನು ಸಿಗಲಿಲ್ಲ ದಾರಿಯೊಳು
ದೃಢಕಾಯನಾದ ಶಿವಪಥ ಪ್ರಾಚಾರ್ಯ ಮಲಗಿದ್ದ
ನಿಷ್ಕಾಮ ಕರ್ಮವ ಗೈದ ಧನ್ಯತೆಯೊಳದ್ದಿ ಉದ್ಬುದ್ಧವಾಗಿ.
ಕಾರಿನೊಳು ನನ್ನ ಚೇತನದ ರೋಡೆಂಜಿನ್ನು ಸಹ
ವಿಶ್ರಾಂತಿ ಸುಖವಡೆದುದಡ್ಡಡ್ಡವಾಗಿ ನಿನ್ನ ನೆನಹಿನೊಳದ್ದಿ ಸದಾಶಿವಗುರು.

ಸುಬ್ಬಣ್ಣ ರಂಗನಾಥ ಎಕ್ಕುಂಡಿ

ಬೆಂಗಳೂರು-19

ಸಂಪಾತಿ

೧

ಕಣ್ಣು ತೆರೆಯಿತು ಮುಗಿಲು ಬಂಗಾರ ಬಳಿದು
ಮಾಹೇಂದ್ರಪರ್ವತದ ಗಿಡಮರದೊಳಿಳಿದು
ಕುಂಕುಮದ ಹುಡಿಯೆರಚಿ ಹೊಳೆವಗ್ನಿಪಿಂಡ
ಮೂಡಿರಲು ಬೆಳಗಿತು ಸಮಸ್ತಬ್ರಹ್ಮಾಂಡ
ಹೂ ಹೂವಿನಂಗಳದಿ ಹರುಷದಿಂದಲೆದು
ಸೌಗಂಧಿಕದ ರಂಗವಲ್ಲಿಯನು ಬರೆದು
ಬೀಸತೊಡಗಿತು ಗಾಳಿ ಮಾಹೇಂದ್ರಗಿರಿಗೆ
ಹಕ್ಕಿ ಗರಿಬಿಚ್ಚಿದವು ಮೋಡಗಳ ಕರೆಗೆ
ಚಿಲಿಪಿಲಿಸಿ ಹಾರಿದವು ದಿಕ್ಕುಗಳನಳೆದು
ಹಣ್ಣೆಲೆಗಳುದುರಿದವು ಹಸಿರು ದಿನ ನೆನೆದು.
ಹನಿಮಂಜು ತಂಪಿನಲಿ ಗಿರಿಯನೆಲತೊಯಿದು
ಪಕ್ಷಿಸೂಕ್ತವ ಕೇಳಿದೊಡನೆ ಕಣ್ತೆರೆದು
ಸೂರ್ಯಸಾರಥಿಯರುಣಪುತ್ರ ಸಂಪಾತಿ
ಸುಟ್ಟು ಸೀಕರಿಗೊಂಡ ರೆಕ್ಕೆಗಳ ಚಾಚಿ
ಹಸಿಮಣ್ಣು ಹಸಿರಿನಲಿ ಮಲಗಿ ಮೈಚಾಚಿ
ಒಡಲಿನಡಿ ನಿತ್ರಾಣಕಾಲುಗಳ ನೀಡಿ
ಬಿದ್ದಲ್ಲೆ ಬಿದ್ದಿರಲು ಸುತ್ತಲೂ ನೋಡಿ
ಕಣ್ಣು ಹನಿದುಂಬಿದವು ಮೇಲಿತ್ತು ಮುಗಿಲು.
ಕೆಳಗೆ ಮೈಚಾಚಿತ್ತು ನೊರೆನಗೆಯ ಕಡಲು.
ಪರಿಮಳದ ಬೀಸಣಿಕೆ ಹಿಡಿದಿರುವ ಗಾಳಿ
ಕರೆಯುತೊಡಗಿವೆ ದಿಕ್ಕು ಹೊಸ ಹಿಗ್ಗುತಾಳಿ
ಉಕ್ಕಿಬಂದಿತು ದುಃಖ '' ಓ ನೀಲಮುಗಿಲೆ

ನೂರೆನಗೆಯ ರತ್ನಗರ್ಭದ ನೀಲಕಡಲೆ
ಪರಿಮಳದ ಹರಿಕಾರ ಓ ವಾಯುದೇವ
ಬೆಳಗಿ ಬೆಳೆಸುವ ಬಿಂಬ ಓ ಸೂರ್ಯದೇವ
ಮತ್ತೊಂದು ಬೆಳಗಾಯ್ತು, ಮತ್ತೊಂದು ಇರುಳು.
ನನ್ನ ಪಾಲಿಗೆ ಮಾತ್ರ ಎಲ್ಲವೂ ನೆರಳು."

೨

ಬೆಂದ ರೆಕ್ಕೆಯ ನೀಡಿ ಕನವರಿಸಿ ನುಡಿದು
ದಿಕ್ಕುಗಳ ಮೋಡಗಳ ದಾರಿಗಳ ನೆನೆದು
ಹುಲ್ಲುನೆಲದಲಿ ಮತ್ತೆ ಕೊರಳಿರಿಸಿಕೊಂಡು
ಮಲಗಿರಲು ಕಣ್ತೆರೆದು ಸುತ್ತಲೂ ಕಂಡು.
ಚಿಕ್ಕಂದು ನೋಡಿರುವ ಬೆಳಕುಗಳ ನೆನಪು
ಮರಳಿಬರತೊಡಗಿತ್ತು ತಾಯನುಡಿ ನೆನಪು.
ಒಂದು ದಿನ ಮುಂಜಾವು ಮುಗಿಲೆಲ್ಲ ಕೆಂಪು
ಬೆಳಕು ಚಿನ್ನದ ನೀರು ಗಾಳಿ ಬಲು ತಂಪು
ಮನೆಯ ಕಿಡಕಿಯ ತೆರೆದು ದೂರ ಕೈ ಮಾಡಿ
ತಾಯಿ ನುಡಿದಳು ತನಗೆ " ಅಲ್ಲಿಹನು ನೋಡಿ
ಎಲ್ಲ ಬ್ರಹ್ಮಾಂಡಗಳ ಬೆಳಗುತಿಹ ಸೂರ್ಯ
ಇವನ ರಥ ನಡೆಸುವದೆ ತಂದೆಗಿಹ ಕಾರ್ಯ
ಇವನ ಬಿಂಬನೆ ಸಕಲ ಚೈತನ್ಯಮೂಲ
ಬ್ರಹ್ಮಾಂಡಗಳ ಬದುಕು ಈ ಸೂರ್ಯಗೋಲ "
ನೆನಪಿಡಿರಿ ಮಕ್ಕಳೆ. ಎತ್ತರಕೆ ನಡೆದು
ತೇಜಸ್ವಿಯಾಗಿರಿ, ಸೂರ್ಯನನು ನೆನೆದು.
ಸಂಪಾತಿ ಸೋದರ ಜಟಾಯುವನು ಕೂಡಿ
ಹರ್ಷಪಟ್ಟರು ಸೂರ್ಯಬಿಂಬವನು ನೋಡಿ.

೩

ಮಲಗಿದೆಡೆ ಮರಳಿತ್ತು, ಬಾಲ್ಯಗಳ ನೆನಪು
ತಾಯ, ತಮ್ಮದಿರ ವಾತ್ಸಲ್ಯಗಳ ನೆನಪು.
ಒಂದು ದಿನ ಸಂಪಾತಿ ಜಟಾಯುವನು ಕೂಡಿ
ಸೂರ್ಯನನು ಮುಟ್ಟಿ ಬರುವಂಥ ಪಣ ಹೂಡಿ
ಹಾರಿ ನಡೆದರು ಮೇಲೆ ತಾಯ ನುಡಿ ನೆನೆದು
ಸುತ್ತಲೂ ಪವಡಿಸಿದ ಹೊಂಬಿಸಿಲಿಗೊಲಿದು.

ಗಾಳಿಗಳ ಬಾಚಿದವು ಸೋದರರ ರೆಕ್ಕೆ
ಮೋಡಗಳ ದಾಟಿದವು ಮತ್ತೆ ಮೇಲಕ್ಕೆ
ಹಾರಿಯೇ ಹಾರಿದರು ಅಣ್ಣತಮ್ಮದಿರು.
ಬೆಳಕಿನಲಿ ನಡೆದಷ್ಟು ಬಿಸುಪಾಯ್ತು ಕದಿರು.
ಸೂರ್ಯ ನೆತ್ತಿಗೆ ಬಂದ, ಬಿಸಿಲು ಸುಡುತಿತ್ತು
ಮೋಡಗಳೆ ಇರಲಿಲ್ಲ, ಗಾಳಿಯಡಗಿತ್ತು.
ಆದರೂ ಸೋದರರು ಹಾರಿದರು ಮೇಲೆ
ರೆಕ್ಕೆ ಚುರುಗುಟ್ಟಿದವು ಬೆಳತಿತ್ತು ಜ್ವಾಲೆ.
ಜಟಾಯು ಹೇಳಿದ ಅಣ್ಣ ಸುಡುತಿಹವು ರೆಕ್ಕೆ
ಆದರೂ ಹೋಗೋಣ ಮತ್ತೆ ಮೇಲಕ್ಕೆ
ಸೋದರರು ರೆಕ್ಕೆಗಳ ಬೀಸಿಯೆ ಬೀಸಿ
ಮತ್ತೆ ನಡೆದರು ಮೇಲೆ ಉರಿಬೆಳಕನೀಸಿ
ಬಳಲಿದ ಜಟಾಯುವಿನ ದುರ್ದೆಸೆಯ ಕಂಡು
ರೆಕ್ಕೆಗಳ ತಂಪಿನೊಳಗವನಿರಿಸಿಕೊಂಡು
ಸಂಪಾತಿ ಹಾರಿರಲು ಇನ್ನಷ್ಟು ಮೇಲೆ
ಸುಟ್ಟುಬಿಟ್ಟಿತು ರೆಕ್ಕೆಗಳ ಸೂರ್ಯಜ್ವಾಲೆ
ಕುಸಿದು ಬಿದ್ದನು ಆಗ ಸಂಪಾತಿ ಕೆಳಗೆ
ಆದರೂ ತಮ್ಮಗವಚಿದ್ದ ಗರಿಯೊಳಗೆ.

೪

ಎದೆಗವಚಿ ಸಲುಹಿರುವ ತಮ್ಮನನು ನೆನೆದು
ಸುಟ್ಟುಕೊಂಡಿರುವಂಥ ರೆಕ್ಕೆಗಳ ನೆನೆದು
ಮಲಗಿರಲು ಕೇಳಿಸಿತು ಸಂಪಾತಿಗಂದು
ಗಿರಿಯಡಿಯೊಳಿಂಪಾದ ಜಯಘೋಷವೊಂದು:
" ರಘುಪತಿ ರಾಘವ ರಾಜಾರಾಮ
ಪತಿತ ಪಾವನ ಸೀತಾರಾಮ. "
ಕಿವಿಗಿಳಿಯಿತಮೃತವು ಎಚ್ಚರವು ಬಂದು
ಮೈಗಿಳಿಯಿತಮೃತವು ಮೈಪುಲಕಗೊಂಡು
ಮೆಲ್ಲಮೆಲ್ಲನೆ ತನ್ನ ಕೊರಳೆತ್ತಿಕೊಂಡು
ನೋಡಿರಲು ಕಾಣಿಸಿತು ಕಪಿಸೈನ್ಯವೊಂದು.
ಶ್ರೀರಾಮ ಸೇವೆಯಲಿ ದೀಕ್ಷೆಯನು ತಳೆದು
ಜಾನಕಿಯ ಶೋಧಿಸುತ ಎಲ್ಲಕಡೆಗಲೆದು

ಎಲ್ಲಿಯೂ ಕಾಣದೆ ನಿರಾಸೆಯಲಿ ನೊಂದು
ಹನುಮಂತನೊಡನೆ ಕಪಿಸಂಕುಲವು ಬಂದು
ಅನ್ನನೀರನು ತೊರೆದು ದೀಕ್ಷೆಯಲಿ ಕುಳಿತು
ಹಾಡಿದವು ಮಂಗಗಳು ಗಿರಿಯಡಿಗೆ ಕಲೆತು :
" ರಘುಪತಿ ರಾಘವ ರಾಜಾರಾಮ
ಪತಿತಪಾವನ ಸೀತಾರಾಮ ".
ಹಾಡು ಕೇಳಿಯೆ ಶಕ್ತಿ ಸೆಲೆ ಮೂಡುತಿತ್ತು
ಬೆಂದವಗೆ ರಾಮಕಥೆ ಬಲನೀಡುತಿತ್ತು.

೫

ಮೈಯೆಲ್ಲ ಕಿವಿಯಾಗಿ ಕೇಳಿ ಸಂಪಾತಿ
ಎದ್ದು ಕುಳಿತನು ಸಾವಕಾಶ ಕಾಲೂರಿ.
" ದಶರಥನಂದನ ಶ್ರೀರಾಮ
ಪ್ರಜೆಗಳ ಹೃದಯದ ಚಂದ್ರಾಮ
ವಿಶ್ವಾಮಿತ್ರನ ಜೊತೆಗುಳಿದು
ಯಜ್ಞವ ಪೊರೆದನು ಬಿಲ್ಪಿಡಿದು
ಋಷಿ ಸಂಕುಲವನು ಸಲುಹಿದನು
ಅಸುರರ ಶಿರಗಳನಿಳುಹಿದನು
ಕಲ್ಲಿಗೆ ಕರುಣೆಯ ನೀಡಿದನು
ಅಹಲ್ಯೋದ್ಧಾರವ ಮಾಡಿದನು
ಈಶ್ವರ ಧನುವನು ನೆಗಹಿದನು
ಸೀತೆಯ ಮಾಲೆಯ ಧರಿಸಿದನು
ತಂದೆಯ ಮಾತನು ನಡೆಸಿದನು
ದೂರದ ಕಾಡಿಗೆ ತೆರಳಿದನು
ಗುಹನಲಿ ಸ್ನೇಹವ ಮಾಡಿದನು
ಭರತಗೆ ಪಾದುಕೆ ನೀಡಿದನು
ಚಿನ್ನದ ಜಿಂಕೆಯ ನೋಡಿದನು
ಅಸುರಗೆ ಬಾಣವ ಹೂಡಿದನು
ಸೀತಾದೇವಿಯ ಹುಡುಕಿದನು
ಕಪಿಗಳ ಗೆಳೆತನ ಬೆಳೆಸಿದನು ".

೬

ರಾಮಕಥೆಯೊಂದೊಂದು ಪಲ್ಲವಿಯ ಕೇಳಿ

ಬೆಂದಕಡೆಗೊಂದೊಂದು ಹೊಸ ರೆಕ್ಕೆ ತಾಳಿ
ಸಂಪಾತಿ ಆನಂದಬಾಷ್ಪಗಳ ಸುರಿಸಿ
ತಲೆದೂಗಿ ಆಲಿಸಿದ ರಾಮಕಥೆ ಸ್ಮರಿಸಿ
" ವೀರ ಜಟಾಯುವ ನೋಡಿದನು
ಅಮೃತಲೋಕವ ನೀಡಿದನು "
ಕಿವಿನಿಮಿರಿ ಕೇಳಿ ಹರ್ಷೋದ್ರೇಕಗೊಂಡು
ಕೂಗಿದನು ಸಂಪಾತಿ " ಓ ತಮ್ಮ " ಎಂದು.
ಹೊಸರೆಕ್ಕೆಗಳ ತೆರೆದು ಹೊಸ ಆಸೆ ಮೂಡಿ
ಹಾರಿಬಂದನು ಬೇಗ ಕಪಿಯ ಬಳಿಗೋಡಿ.
ವಿಸ್ತಾರವಾಗಿರುವ ರೆಕ್ಕೆಗಳ ನೆರಳು
ಹಾಡುತಿಹ ಮಂಗಗಳ ಸನಿಹದಲಿ ಬರಲು
ಬಳಿಗೆ ಬಂದಿರುವ ಹಿರಿಹಕ್ಕಿಯನು ಕಂಡು
ಮಂಗಗಳು ಕೇಳಿದವು ಆಶ್ಚರ್ಯಗೊಂಡು :
ಪಕ್ಷಿಯೇ ನೀನಾರು? ಇಲ್ಲಿಗೇಕಿಂದು
ಈ ಗಿರಿಯ ತಪ್ಪಲಿಗೆ ಬಂದಿರುವೆಯೆಂದು ?
ಸಂಪಾತಿ ಹೇಳಿದನು ಹರ್ಷವನು ತಾಳಿ
ರಾಮಕಥೆಯೊಂದೊಂದು ಪಲ್ಲವಿಯ ಕೇಳಿ
ಬೆಂದಬದಿಗೊಂದೊಂದು ಹೊಸರೆಕ್ಕೆ ಮೂಡಿ
ಧನ್ಯವಾಯಿತು ಬದುಕು ಹೊಸ ಆಸೆ ಗೂಡಿ
ರಾಮಕಥೆ ಹಾಡುತಿಹ ಬಾಳುವೆಯು ಧನ್ಯ
ರಾಮಕಥೆ ಕೇಳಿಯೆ ನಾನಾದೆ ಧನ್ಯ
ಅರುಣ ಪುತ್ರನು ನಾನು ಹೆಸರು ಸಂಪಾತಿ
ನನ್ನ ತಮ್ಮ ಜಟಾಯು ನನಗೆ ಬಲು ಪ್ರೀತಿ
ಎಲ್ಲಿಯಾದರು ಅವನ ಕಂಡಿರುವಿರೇನು ?
ಹೆಸರು ದೆಸೆಗುರುತುಗಳು ನಿಮಗಿರುವವೇನು ?

೭

ಸಂಪಾತಿಯಾಡಿರುವ ಮಾತುಗಳ ಕೇಳಿ
ಒಮ್ಮೆಲೆ ಮಂಗಗಳು ಮೌನವನು ತಾಳಿ
ಸುಮ್ಮನಾಗಲು : ನುಡಿದ ಕಪಿ ಜಾಂಬುವಂತ
" ಧೀರ ಜೀವ ಜಟಾಯು ಬಲು ಪುಣ್ಯವಂತ
ಸೀತೆಯನು ದಶಕಂಠ ಕದ್ದೊಯ್ಯುತಿರಲು

ಅದನು ಕಂಡ ಜಟಾಯು ಅವನೆದುರು ಬರಲು
ಜಾನಕಿಯ ರಕ್ಷಣೆಗೆ ಹೋರಾಟ ಹೂಡಿ
ರಾಮಕಾರ್ಯಕೆ ತನ್ನ ಪ್ರಾಣವನೆ ನೀಡಿ
ಧನ್ಯನಾದನು'', ಎಂಬ ಮಾತುಗಳ ಕೇಳಿ
``ಹಾ ತಮ್ಮ !'' ಎಂದಿದ್ದ ದುಃಖ ಎದೆ ಸೀಳಿ
ಕುಸಿಯುತೊಡಗಿತು ಮತ್ತೆ ಮೈಯೊಳಿಹ ತ್ರಾಣ
ಕುತ್ತಿಗೆಗೆ ಬಂದಿತ್ತು ಶೋಕದಲಿ ಪ್ರಾಣ.
ಒಂದೊಂದೆ ನೆನಪಾಗಿ ಸೋದರನ ಕುರಿತು
ಎಡೆಬಿಡದೆ ಸಂಪಾತಿ ಅಳುತಿರಲು ಕುಳಿತು.
ಹನುಮಂತ ಹೇಳಿದನು ಅವನ ಬಳಿ ಬಂದು
``ಸಂಪಾತಿ ಅಳಬೇಡ ಸಹಿಸಿಕೊ'' ಎಂದು
``ರಾಮಕಾರ್ಯಕೆ ಪ್ರಾಣವಿತ್ತವನು ಧನ್ಯ !
ರಾಮಕಾರ್ಯಕ್ಕೆಂದೆ ಕೇಳುವೆನು ನಿನ್ನ
ಕಳ್ಳರಾಕ್ಷಸನೂರು ಕಂಡಿರುವೆಯೇನು ?
ಅಲ್ಲಿ ತಲುಪುವ ದಾರಿ ನೀ ಬಲ್ಲೆಯೇನು ?''
ಉಕ್ಕಿಬರುತಿರುವಂಥ ದುಃಖವನು ತಡೆದು
ಹಿತವಚನದಮೃತದ ಹನಿಗಳನು ಕುಡಿದು
ತಮ್ಮನಿಗೆ ಕರುಣಿಸಿದ ಸದ್ಗತಿಯ ನೆನೆದು
ಸಂಪಾತಿ ಹೇಳಿದನು : ``ಈ ಕಡಲಿನಾಚೆ
ಲಂಕೆಯಿದೆ, ಅಲ್ಲಿಹುದು ರಾವಣನ ರಾಜ್ಯ.
ಕಡಲಸೇತುವೆ ಕಟ್ಟಿ ಲಗ್ಗೆಯನು ಇಟ್ಟು
ಕೆಂಡ ಕದ್ದಿರುವವನ ಕುಲವೆಲ್ಲ ಸುಟ್ಟು
ತುಂಬಿತುಳುಕಿರುವಾಗ ರಾಕ್ಷಸನ ಕೊಡವು
ರಾಮಬಾಣವ ಹೂಡಲಿನ್ನೇಕೆ ತಡವು ?
ಭೂಭಾರವಿಳಿಸಿ ಸಲುಹಯ್ಯ ಶ್ರೀರಾಮ
ಭಕ್ತವತ್ಸಲ ರಾಮ ನೀನಮೃತಧಾಮ.''
ಸಂಪಾತಿ ಗದ್ಗದಿಸಿ ಕಣ್ಣೀರು ಸುರಿಸಿ
ಕರುಣಾಸಮುದ್ರ ಶ್ರೀರಾಮನನು ಸ್ಮರಿಸಿ
ಕಪಿಗಳಿಗೆ ಹೇಳಿದನು : ``ಧನ್ಯರೈ ನೀವು.
ರಾಮಚರಿತಾಮೃತವನೀಂಟಿದೆವು ನಾವು
ಬದುಕಿನಲಿ ಸಲುಹಿರಲು ಶ್ರೀರಾಮ ಹಸ್ತ
ಇನ್ನಾರ ಭಯವುಂಟು–ಈ ಜೀವ ಮುಕ್ತ !''

ಸಿ. ಕೆ. ವೆಂಕಟರಾಮಯ್ಯ

ಕೆಲವು ನೆನಪುಗಳು

ಒಂದು ಸಂಸ್ಥೆಯಾಗಲಿ, ಒಂದು ಪತ್ರಿಕೆಯಾಗಲಿ ಐವತ್ತು ವರ್ಷಗಳಕಾಲ ವರ್ಧಿಷ್ಣುವಾಗಿ ಕೆಲಸಮಾಡಿ ನಾಡು ನುಡಿಗಳಿಗೆ ಸೇವೆಸಲ್ಲಿಸಿ ಬಾಳುವುದು ನಿಜವಾಗಿಯೂ ಅಚ್ಚರಿಯ ಸಂಗತಿ; ಅದು ಆನಂದದ ಸಂಗತಿಯೂ ಹೌದು. ಬೆಂಗಳೂರು ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘದ ಸೇವಾಕಾರ್ಯಗಳು ಐವತ್ತು ವರ್ಷಗಳಕಾಲ ನಡೆದುದಕ್ಕಾಗಿ ಅದರ ಸುವರ್ಣೋತ್ಸವವು ಈಚೆಗೆ ನೆರವೇರಿರುವುದೂ, ಆ ಸಂಘದ ಆಶ್ರಯದಲ್ಲಿ ಆರಂಭವಾಗಿ ಹಲವು ವರ್ಷಗಳಕಾಲ ನುಡಿಸೇವೆ ಮಾಡಿ ಕಾಲಕ್ರಮದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಆಡಳಿತಕ್ಕೆ ಸೇರಿದ "ಪ್ರಬುದ್ಧ ಕರ್ಣಾಟಕ" ಪತ್ರಿಕೆಯೂ ಐವತ್ತು ವರ್ಷಗಳಕಾಲ ಬೆಳಗಿದ ನಿಮಿತ್ತವಾಗಿ ಸುವರ್ಣೋತ್ಸವ ಸಂಚಿಕೆಯೊಂದು ೧೯೬೯ನೆಯ ಸಂವತ್ಸರದ ಆದಿಭಾಗದಲ್ಲಿ ಪ್ರಕಟವಾಗಲಿರುವುದೂ ಅತ್ಯಾನಂದದ ಸಂಗತಿಗಳೇ ಸರಿ. ನಾನು ಸೆಂಟ್ರಲ್ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದಾಗ ಕರ್ಣಾಟಕ ಸಂಘ ಸ್ಥಾಪನೆಯಾದುದನ್ನೂ, ಅನಂತರ ಸ್ವಲ್ಪಕಾಲದ ತರುವಾಯ ಅದರ ಆಶ್ರಯದಲ್ಲಿ "ಪ್ರಬುದ್ಧ ಕರ್ಣಾಟಕ" ಪತ್ರಿಕೆಯ ಪ್ರಕಟನೆಯು ಪ್ರಾರಂಭವಾಗಿ ಅವೆರಡರ ಸಂಬಂಧವಾಗಿಯೂ ಸೇವಾವಕಾಶದ ಸುಯೋಗವನ್ನು ಇತರರೊಡನೆ ನಾನೂ ಪಡೆದಿದ್ದುದನ್ನೂ, ಅವೆರಡೂ ಕನ್ನಡ ಭಾಷೆಯ ಪುರೋಭಿವೃದ್ಧಿಗಾಗಿ ಸಲ್ಲಿಸಿದ ಮತ್ತು ಸಲ್ಲಿಸುತ್ತಿರುವ ಅಮೋಘ ಸೇವೆಯನ್ನೂ ಸ್ಮರಿಸಿದರೆ ನನ್ನ ಹೃದಯದಿಂದ ಆನಂದ ತರಂಗಗಳೇ ಉಕ್ಕುತ್ತವೆ. "ಪ್ರಬುದ್ಧ ಕರ್ಣಾಟಕ" ಪತ್ರಿಕೆಯ ಸುವರ್ಣೋತ್ಸವ ಸಂಚಿಕೆಯನ್ನು ಪ್ರಕಟಿಸುವ ಮಹತ್ತರ ಕಾರ್ಯವನ್ನು ಕೈಕೊಂಡಿರುವುದಕ್ಕಾಗಿ—ಅದರ ಸಂಬಂಧವಾಗಿ—ಪ್ರಾಧ್ಯಾಪಕ ಶ್ರೀ ದೇ. ಜವರೇಗೌಡರವರನ್ನೂ, ಸಂಪಾದಕರಾದ ಡಾಕ್ಟರ್ ಹಾ. ಮಾ. ನಾಯಕ ಮತ್ತು ಡಾಕ್ಟರ್ ಹೆಚ್. ತಿಪ್ಪೇರುದ್ರಸ್ವಾಮಿಯವರನ್ನೂ, ಪತ್ರಿಕೆಯ ಚಿನ್ನದ ಹಬ್ಬದ ಸಂಚಿಕೆಯನ್ನು ಪ್ರಕಟಿಸುವ ಕೆಲಸದಲ್ಲಿ ಅವರೊಡನೆ ಸಹಕರಿಸಿ ಶ್ರಮಿಸುತ್ತಿರುವ ಅವರ ಸಹೋದ್ಯೋಗಿಗಳೆಲ್ಲರನ್ನೂ ನಾನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಅಲ್ಲದೆ, ಐವತ್ತು ವರ್ಷಗಳ ಹಿಂದೆ "ಪ್ರಬುದ್ಧ ಕರ್ಣಾಟಕ" ಪತ್ರಿಕಾ ಪ್ರಕಟಣೆಗೆ ಸಂಬಂಧಪಟ್ಟ

ಸಮಯದ ನೆನಪುಗಳನ್ನು ಮಾತ್ರವೇ ಅಲ್ಲದೆ ನಾನು ಸರಕಾರದ ಕೆಲಸಕ್ಕೆ ಸೇರಿದ ತರುವಾಯದ ನೆನಪುಗಳನ್ನೂ ಚಿನ್ನದ ಹಬ್ಬದ ಸಂಚಿಕೆಯಲ್ಲಿ ಪ್ರಕಟವಾಗುವುದಕ್ಕಾಗಿ ಬರೆದು ಕಳುಹಬೇಕೆಂದು ಪ್ರೀತಿಯಿಂದ ನನ್ನನ್ನು ಕೇಳಿದ ಸ್ನೇಹ ಸೌಹಾರ್ದಗಳಿಗಾಗಿ ಪ್ರಾಧ್ಯಾಪಕ ದೇ. ಜವರೇಗೌಡರಿಗೂ, ಪ್ರಾಧ್ಯಾಪಕರಾದ ಡಾಕ್ಟರ್ ಹಾ. ಮಾ. ನಾಯಕರವರಿಗೂ, ಡಾಕ್ಟರ್ ಹೆಚ್. ತಿಪ್ಪೇರುದ್ರಸ್ವಾಮಿಯವರಿಗೂ, ಶ್ರೀ ಎಸ್. ನಾರಾಯಣಶೆಟ್ಟಿಯವರಿಗೂ ನಾನು ಅತ್ಯಂತ ಕೃತಜ್ಞನಾಗಿದ್ದೇನೆ.

ಒಂದೇ ವಾಕ್ಯದಲ್ಲಿ ಹೇಳುವುದಾದರೆ, ಪ್ರಖ್ಯಾತ ವಿದ್ಯಾಸಂಸ್ಥೆಯೊಂದರ ಅಧ್ಯಾಪಕ ವರ್ಗಕ್ಕೆ ಸೇರಿದ್ದ ಉದ್ದಾಮ ವಿದ್ವಾಂಸರೊಬ್ಬರು (ಡಾಕ್ಟರ್ ಎ. ಆರ್. ಕೃಷ್ಣಶಾಸ್ತ್ರಿಯವರು) ಕನ್ನಡ ಭಾಷೆಯ ಮೇಲಿನ ಉಜ್ಜ್ವಲ ಪ್ರೇಮದಿಂದ ಉದ್ದೀಪಿತರಾಗಿ ಸ್ಥಾಪಿಸಿದ ಆದರ್ಶ ಕರ್ಣಾಟಕ ಸಂಘದ ಆಶ್ರಯದಲ್ಲಿ ಐವತ್ತು ವರ್ಷಗಳ ಹಿಂದೆ ಅಮಿತೋತ್ಸಾಹದಿಂದ ಪ್ರಕಟವಾಗಲಾರಂಭವಾದ ಶ್ರೇಷ್ಠವರ್ಗದ ತ್ರೈಮಾಸಿಕ ಕನ್ನಡ ಪತ್ರಿಕೆ ನಮ್ಮ "ಪ್ರಬುದ್ಧ ಕರ್ಣಾಟಕ" ಪತ್ರಿಕೆಯೆಂದು, ಧಾರಾಳವಾಗಿ ಹೇಳಬಹುದು. ಆ ಸಂಘದಿಂದ ಮತ್ತು ಆ ಪತ್ರಿಕೆಯಿಂದ ಕನ್ನಡ ನಾಡುನುಡಿಗಳಿಗೆ ಎಷ್ಟು ಅಮೂಲ್ಯವಾದ ಸೇವೆ ನಡೆದಿದೆ ಮತ್ತು ನಡೆಯುತ್ತಿದೆಯೆಂಬುದನ್ನು ಸಂಕ್ಷೇಪವಾಗಿ ಸೂಚಿಸುವುದಕ್ಕಿಂತ ಮುಂಚೆ, ಸೆಂಟ್ರಲ್ ಕಾಲೇಜಿನ ಖ್ಯಾತಿ, ಅಧ್ಯಾಪಕವರ್ಗದವರ ಪಾಂಡಿತ್ಯ ಶ್ರದ್ಧೆಗಳು ಮುಂತಾದ ವಿಚಾರಗಳಿಗೆ ಸಂಬಂಧಪಟ್ಟ ಕೆಲವು ಸವಿನೆನಪುಗಳನ್ನು ಸಂಕ್ಷೇಪವಾಗಿ ಸೂಚಿಸುವುದು ಯುಕ್ತವೆಂದು ತೋರುತ್ತದೆ. ಕರ್ಣಾಟಕ ಸಂಘ ಸ್ಥಾಪನೆಯಾಗಿ ಆ ತರುವಾಯ "ಪ್ರಬುದ್ಧ ಕರ್ಣಾಟಕ" ಪತ್ರಿಕೆಯ ಪ್ರಕಟಣೆಗಾರಂಭವಾದ ಸಮಯದ ಸನ್ನಿವೇಶವನ್ನು ಗ್ರಹಿಸಲು ಅದರಿಂದ ಅನುಕೂಲ. ಬೆಂಗಳೂರಿನ ನಮ್ಮ ಸೆಂಟ್ರಲ್ ಕಾಲೇಜು ಮತ್ತು ಮೈಸೂರಿನ ಮಹಾರಾಜಾ ಕಾಲೇಜು ಇಡೀ ದಕ್ಷಿಣ ಭಾರತದಲ್ಲಿಯ ಹಲವಾರು ಕಾಲೇಜುಗಳಲ್ಲಿ ಅತ್ಯಂತ ಪ್ರಖ್ಯಾತವಾಗಿದ್ದ ಕೆಲವೇ ಕಾಲೇಜುಗಳಲ್ಲಿರಡೆಂಬುದು, ಆಗ್ಗೆ ನಮ್ಮ ಹೆಮ್ಮೆ. ಅಧ್ಯಾಪಕ ವರ್ಗದವರ ಅಸಾಧಾರಣ ಪಾಂಡಿತ್ಯ ಪ್ರತಿಭೆಗಳೂ, ಸ್ನೇಹ ಸೌಜನ್ಯಗಳೂ, ಕರ್ತವ್ಯ ನಿಷ್ಠೆ ಶಿಷ್ಯ ಪ್ರಿಯತೆಗಳೂ, ಈ ಕಾಲೇಜುಗಳ ಖ್ಯಾತಿಗೆ ಕಾರಣಗಳಾಗಿದ್ದುವು. ಶಿಕ್ಷಣದ ಗರಿಮೆಯಲ್ಲಿ ಒಂದು ಕಾಲೇಜು ಮತ್ತೊಂದನ್ನು ಮೀರಿಸಬೇಕೆಂದು ಸಂತತವಾಗಿ ಎಲ್ಲ ಕಾಲೇಜುಗಳಿಗೂ ಪರಸ್ಪರ ಸ್ಪರ್ಧೆ. ಇಂಗ್ಲಿಷ್ ಪ್ರಾಧ್ಯಾಪಕರೂ ಕಾಲೇಜಿನ ಮುಖ್ಯಾಧಿಕಾರಿಯವರೂ (Professor of English and Prinicipal) ಆಗಿದ್ದ ಜೆ. ಜಿ. ಟೇಟ್‌ಸಾಹೇಬರ ಅತ್ಯಂತ ದಕ್ಷವಾದ ಆಡಳಿತದಲ್ಲಿ, ಅವರಿಗಿದ್ದ ಅದ್ಭುತವಾದ ಬೋಧನಾ ಸಾಮರ್ಥ್ಯದ ಫಲವಾಗಿ ಮತ್ತು ಅಧ್ಯಾಪಕ ವರ್ಗದವರ ಮೇಲೆ ಅವರ ಸದ್ಗುಣಗಳಿಂದ ಉಂಟಾದ ಪರಿಣಾಮವಾಗಿ ಸೆಂಟ್ರಲ್ ಕಾಲೇಜು ಹಿಂದಿದ್ದುದಕ್ಕಿಂತಲೂ ಅತ್ಯಂತ ಹೆಚ್ಚಿನ ಖ್ಯಾತಿಯನ್ನು ಗಳಿಸಿತು. ಬೆಂಗಳೂರಿನಲ್ಲಿ ಸೆಂಟ್ರಲ್ ಕಾಲೇಜೂ, ಮೈಸೂರಿನಲ್ಲಿ ಮಹಾರಾಜಾ ಕಾಲೇಜೂ, ಇಡೀ ದಕ್ಷಿಣ ಭಾರತದಲ್ಲಿ

ಸುಪ್ರಸಿದ್ಧವಾಗಿದ್ದುವಲ್ಲದೆ, ೧೯೧೬ನೆಯ ಸಂವತ್ಸರದಲ್ಲಿ ಸ್ಥಾಪಿತವಾದ ಮೈಸೂರು ವಿಶ್ವವಿದ್ಯಾನಿಲಯದ ಎರಡು ಕಣ್ಣುಗಳಂತೆ ಶೋಭಿಸುತ್ತಿದ್ದುವು. ಪ್ರಾಧ್ಯಾಪಕ ಟೇಟ್ ಸಾಹೇಬರು ಗುರುಗಳಾಗಿ ಲಭಿಸಿದುದು ತಮ್ಮ ಪುಣ್ಯವೆಂಬುದು ಅವರ ಶಿಷ್ಯರೆಲ್ಲರ ಅಭಿಪ್ರಾಯ. ವಿದ್ಯಾರ್ಥಿಗಳೆಂದರೆ ಅವರಿಗೆ ಪ್ರಾಣ. ಬಡವಿದ್ಯಾರ್ಥಿಗಳಿಗೆ ಅವರು ಮಾಡುತ್ತಿದ್ದ ಧನಸಹಾಯಕ್ಕಂತೂ ಇತಿಮಿತಿಯೇ ಇರಲಿಲ್ಲ. ಅವರ ವಿಚಾರ ವಾಗಿಯೂ, ಅಧ್ಯಾಪಕ ವರ್ಗದಲ್ಲಿ ಅವರ ಸಹೋದ್ಯೋಗಿಗಳಾಗಿದ್ದ ಪ್ರಾಧ್ಯಾಪಕರೇ ಮುಂತಾದವರಲ್ಲಿ ಶಿಷ್ಯರಿಗೆ ಬಹಳ ಪ್ರಿಯರಾಗಿದ್ದ ಮತ್ತೆ ಕೆಲವರ ವಿಚಾರವಾಗಿಯೂ ಬರೆಯಹೊರಟರೆ, ಅದಕ್ಕಾಗಿ ಅತ್ಯಂತ ದೀರ್ಘವಾದ ಪ್ರಬಂಧವನ್ನೇ ಬರೆಯಬೇಕಾಗು ತ್ತದೆ.

ಆಗಿನ ಅಧ್ಯಾಪಕ ವರ್ಗಕ್ಕೆ ಸೇರಿದ್ದ ಮಹನೀಯರಲ್ಲಿ ಕೆಲವರ ನಡೆನುಡಿಗಳೂ, ವಿದ್ವತ್ತೂ, ಬೋಧನಾ ಸಾಮರ್ಥ್ಯವೂ, ಶಿಷ್ಯ ವಾತ್ಸಲ್ಯ ಮುಂತಾದ ಸದ್ಗುಣಗಳೂ, ಅವರ ಶಿಷ್ಯರೆಲ್ಲರೂ ಹೆಮ್ಮೆ ಪಡುವಂತಿದ್ದುವು. ಅವರಲ್ಲಿ ಡಾಕ್ಟರ್ ಎ. ಆರ್. ಕೃಷ್ಣ ಶಾಸ್ತ್ರಿಯವರೂ ಒಬ್ಬರು. ಅವರು ಕನ್ನಡವನ್ನು ಬೋಧಿಸಲು "ಟ್ಯೂಟರ್" ಹುದ್ದೆ ಯಲ್ಲಿ ನೇಮಕವಾಗಿ ಸೆಂಟ್ರಲ್ ಕಾಲೇಜಿಗೆ ಬಂದವರು. ಆಗ್ಗೆ ಅವರ ಹುದ್ದೆಯು ಕಿರಿದು, ಆದರೆ ಅವರ ಯೋಗ್ಯತೆಯು ಹಿರಿದು. ಅವರು ತಮ್ಮ ನಡೆನುಡಿಗಳಿಂದಲೂ, ವಿದ್ವತ್ತಿ ನಿಂದಲೂ, ಕಾರ್ಯ ಶ್ರದ್ಧೆಯಿಂದಲೂ ಮುಖ್ಯಾಧಿಕಾರಿ (Principal) ಟೇಟ್ ಸಾಹೇಬರೇ ಮುಂತಾದವರ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾಗಿದ್ದರೆಂಬಷ್ಟರಿಂದಲೇ ಅವರ ಯೋಗ್ಯತೆ ಎಷ್ಟು ಹಿರಿದೆಂಬುದು ವ್ಯಕ್ತವಾಗುತ್ತದೆ. ಗುರುವರ್ಯರಾದ ಅವರ ಶಿಷ್ಯ ನಾದುದು ನನ್ನ ಪುಣ್ಯವೆಂಬುದು ನನ್ನ ಭಾವನೆ. ಅವರು ಕನ್ನಡ, ಸಂಸ್ಕೃತ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಉದ್ದಾಮ ಪಾಂಡಿತ್ಯವನ್ನು ಪಡೆದಿದ್ದರು; "ಎಂ.ಎ" ಪರೀಕ್ಷೆಯ ಪ್ರಶಸ್ತಿಯನ್ನು ಪಡೆದಿದ್ದರು; ಮುಂದೆ ಕಾಲಕ್ರಮದಲ್ಲಿ ಅವರು ಇತರ ಕೆಲವು ಭಾಷೆಗಳನ್ನೂ ಕಲಿತು ಪಾಂಡಿತ್ಯವನ್ನು ವೃದ್ಧಿಪಡಿಸಿಕೊಂಡರು. ಅವರು ಸೆಂಟ್ರಲ್ ಕಾಲೇಜಿನಲ್ಲಿ ಕನ್ನಡದ ಅಧ್ಯಾಪಕರಾಗಿ ನೇಮಕವಾದುದರಿಂದ ಕನ್ನಡಕ್ಕೆ ಕಳೆಯೇರಿತು. ಅದುವರೆಗೂ ಕನ್ನಡವನ್ನು ಬೋಧಿಸುತ್ತಿದ್ದ ಪಂಡಿತರು ತುಲನಾತ್ಮಕ ವಾಗಿ ಪಾಠ ಹೇಳಿ ಕನ್ನಡ ಗ್ರಂಥಗಳನ್ನು ಇತರ ಭಾಷೆಗಳ—ಮುಖ್ಯವಾಗಿ ಇಂಗ್ಲಿಷ್ ಭಾಷೆಯ ಆ ಆ ಪ್ರಕಾರಗಳ ಗ್ರಂಥಗಳಿಗೆ ಹೋಲಿಸಿ, ಸಾಮ್ಯ ವೈಷಮ್ಯಗಳನ್ನು ಸೂಚಿಸಿ ವಿಮರ್ಶಿಸುತ್ತಿರಲಿಲ್ಲ. ಗುರುವರ್ಯ ಶ್ರೀ ಎ. ಆರ್. ಕೃಷ್ಣಶಾಸ್ತ್ರಿಯವರು ಆ ಕೊರತೆಯನ್ನು ಪರಿಹರಿಸಿದುದೂ, ಕನ್ನಡ ಭಾಷೆಯ ವಿಚಾರದಲ್ಲಿ ಅವರಿಗಿದ್ದ ಅಭಿ ಮಾನವೂ, ಸೆಂಟ್ರಲ್ ಕಾಲೇಜಿನಲ್ಲಿ ಕನ್ನಡಕ್ಕೆ ಕಳೆಯೇರಲು ಮುಖ್ಯ ಕಾರಣಗಳು. ತಮ್ಮ ಶಿಷ್ಯರಿಗೆ ಕನ್ನಡದ ಮೇಲೆ ಪ್ರೀತಿ ಮಮತೆಗಳು ವೃದ್ಧಿಯಾಗುವಂತೆ ಮಾಡಲು ಅವರು ಶ್ರದ್ಧಾಪೂರ್ವಕವಾಗಿ ಪ್ರಯತ್ನಗಳನ್ನು ನಡೆಸುತ್ತಿದ್ದರು; ಕನ್ನಡ ಕಾವ್ಯಗಳ ಸೊಬಗನ್ನೂ, ಕನ್ನಡಿಗರು ಸಾಧಿಸಿದ್ದ ಮಹತ್ತರ ಕಾರ್ಯಗಳ ಹಿರಿಮೆಯನ್ನೂ ಒತ್ತಿ

ಹೇಳಿ ಕನ್ನಡದ ವಿಚಾರವಾಗಿ ಅಭಿಮಾನವನ್ನು ತಳೆದು ವೃದ್ಧಿಪಡಿಸಿಕೊಳ್ಳುವುದು ಕನ್ನಡ ರಾಜ್ಯದಲ್ಲಿ ಅವಶ್ಯ ಕರ್ತವ್ಯವೆಂದು ವಿದ್ಯಾರ್ಥಿಗಳಿಗೆ ಮನಮುಟ್ಟುವಂತೆ ಅವರು ಬೋಧಿಸುತ್ತಿದ್ದುದೂ, ಆ ಕಾರಣಗಳಲ್ಲೊಂದು. ಒಂದು ದಿನ ಅವರೊಡನೆ ಮಾತ ನಾಡುತ್ತಿದ್ದಾಗ ನಾನು, "ಹೊಸದಾಗಿ ಇಂಗ್ಲಿಷ್ ಪ್ರೊಫೆಸರಾಗಿ ಬಂದಿರುವ ಮೆಕಾಲ್ಪೈನ್ ಸಾಹೇಬರಿಗೆ ತಮ್ಮ ಮಾತೃಭಾಷೆಯಾದ ಇಂಗ್ಲೀಷ್ ಮೇಲೆ ಎಷ್ಟು ಪ್ರೀತಿ, ಎಷ್ಟು ಮಮತೆ, ಎಷ್ಟು ಹೆಮ್ಮೆ! ನಮ್ಮ ಮಾತೃಭಾಷೆಯಾದ ಕನ್ನಡದ ಮೇಲೆ ನಮ್ಮೋರಿಗೆ ಆ ಪ್ರೀತಿ, ಆ ಮಮತೆ, ಆ ಹೆಮ್ಮೆ ಬೇಡ್ವೇ, ಸಾರ್? ಅವು ಇರಬೇಕಲ್ವೇ, ಸಾರ್?" ಎಂದು ಕೇಳಿದೆ. ಅವರು, "ಅವು ಮೂರೂ ಇರಬೇಕು. ಆದರೆ ಕನ್ನಡಿ ಗರಲ್ಲಿ ವಿದ್ಯಾವಂತರೆನಿಸಿಕೊಂಡಿರೋರಲ್ಲಿ ಬಹಳ ಜನಕ್ಕೆ ಅವಿಲ್ಲವೇ ಇಲ್ಲವಲ್ಲಾ! ಕನ್ನಡವೇ ಅವರಿಗೆ ಬೇಕಿಲ್ಲವಲ್ಲಾ! ಇಂಗ್ಲೀಷ್ ಭಾಷೆ ಮಾತೃಭಾಷೆಯಾಗಿರೋರಿಗೆ ಇಂಗ್ಲೀಷ್ ಮೇಲಿರೋ ಪ್ರೀತಿ ಮಮತೆಗಳು ಕನ್ನಡ ಮಾತೃಭಾಷೆಯಾಗಿರೋರಿಗೆ ಕನ್ನಡದ ಮೇಲೆ ಎಂದಿಗೆ ಬರುತ್ತೋ!" ಎಂದು ಉತ್ತರ ಹೇಳಿ, ವ್ಯಥೆಯಿಂದ ಮುಖ ವನ್ನು ಹಿಂಡಿಕೊಂಡರು. ಕನ್ನಡದ ವಿಚಾರವಾಗಿ ಮತ್ತು ಕನ್ನಡ ಸಾಹಿತ್ಯದ ವಿಚಾರ ವಾಗಿ ಕನ್ನಡಿಗರಲ್ಲಿ ಬಹು ಸಂಖ್ಯೆಯವರಿಗೆ ತಾತ್ಸಾರವಿದ್ದ ಕಾಲವದು. ಇಂಗ್ಲಿಷ್ ಭಾಷೆಯನ್ನು ಬಲ್ಲ ಕನ್ನಡಿಗರಲ್ಲಿ ಶೇಕಡ ತೊಂಬತ್ತಕ್ಕೂ ಹೆಚ್ಚು ಜನರು ಕನ್ನಡದ ಪುರೋಭಿವೃದ್ಧಿಗಾಗಿ ಶ್ರಮಿಸುತ್ತಿದ್ದ ಕೆಲವರು ಉತ್ಸಾಹಿಗಳನ್ನು ಕಂಡು ಮರುಕ ಪಡುತ್ತಿದ್ದ ಮತ್ತು ತಾವು ಕನ್ನಡದಲ್ಲಿ ಮಾತನಾಡುವುದೇ ತಮಗೆ ಅಪಮಾನವೆಂದು ಹೀನಾಯಪಡುತ್ತಿದ್ದ ಕಾಲವದು. ಕನ್ನಡವೇ ಮಾತೃಭಾಷೆಯಾಗಿದ್ದವರಲ್ಲಿ ಕೆಲವರು ಮಹನೀಯರೂ, ಕನ್ನಡವು ಮಾತೃಭಾಷೆಯಾಗಿಲ್ಲದಿದ್ದವರಲ್ಲಿ ಕೆಲವರು ಮಹ ನೀಯರೂ ಕನ್ನಡ ಭಾಷೆಯ ಏಳಿಗೆಗಾಗಿ ಆಸ್ಥೆಯಿಂದ ಶ್ರಮಿಸುತ್ತಿದ್ದುದನ್ನು ಕಂಡು ಅವರಿಗೆ ತಾತ್ಸಾರ. ವಿಶ್ವವಿದ್ಯಾನಿಲಯದ ಪದವೀಧರರಾಗಿ ದೊಡ್ಡ ಹುದ್ದೆಯಲ್ಲಿದ್ದ ಕನ್ನಡಿಗರೊಬ್ಬರು, "ಕನ್ನಡವೂ ಒಂದು ಭಾಷೆಯೆ?" ಎಂದು ಪ್ರಶ್ನಿಸಿ ತಿರಸ್ಕಾರವನ್ನು ಸೂಚಿಸಿದ್ದುದುಂಟು. ವಿಶ್ವವಿದ್ಯಾನಿಲಯದ ಪದವೀಧರರಾಗಿ ದೊಡ್ಡ ದೊಡ್ಡ ಹುದ್ದೆ ಗಳಲ್ಲಿದ್ದವರು ಕೆಲವರು ಸಾರ್ವಜನಿಕ ಸಭೆಗಳಲ್ಲಿ ತಾವು ಕನ್ನಡದಲ್ಲಿ ಮಾತನಾಡುವುದಿಲ್ಲ ವೆಂದು ನಿರಾಕರಿಸಿದುದಲ್ಲದೆ ಅದು ತಮ್ಮ ಸ್ಥಾನಮಾನಗಳಿಗೆ ಸಲ್ಲದ ಹೀನ ಕಾರ್ಯವೆಂದು ಧ್ವನಿ ಬರುವಂತೆ ವ್ಯವಸ್ಥಾಪಕರಿಗೆ ತಿಳಿಸಿದ್ದ ನಿದರ್ಶನಗಳೂ ಇದ್ದುವು.

ಹೆಜ್ಜೆ ಹೆಜ್ಜೆಗೂ ಹೀಗೆ ಉತ್ಸಾಹ ಭಂಗವನ್ನುಂಟುಮಾಡುತ್ತಿದ್ದ ಪರಿಸ್ಥಿತಿಯಿದ್ದ ಕಾಲದಲ್ಲಿ, ಪೂಜ್ಯ ಶ್ರೀ ಎ. ಆರ್. ಕೃಷ್ಣಶಾಸ್ತ್ರಿಯವರು ಕನ್ನಡದ ಮೇಲಿನ ಉಜ್ಜ್ವಲವಾದ ಅಭಿಮಾನದಿಂದ ಉದ್ದೀಪಿತರಾಗಿ ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘವನ್ನು ಸ್ಥಾಪಿಸಿದರು; ಅದು, ಕನ್ನಡದ ಏಳಿಗೆಯನ್ನು ಸಾಧಿಸಿ ಕನ್ನಡದ ಮೇಲಿನ ಪ್ರೀತಿ ಮಮತೆಗಳನ್ನು ವೃದ್ಧಿಗೊಳಿಸುವ ದೀಕ್ಷೆಯನ್ನೇ ತಳೆದು ಆಗಿನ ಮೈಸೂರು ಸಂಸ್ಥಾನದ ಮೊಟ್ಟಮೊದಲನೆಯ ಆದರ್ಶ ಸಂಘವಾಯಿತು. ಅದರ ಅಧ್ಯಕ್ಷರಾಗಿರಲು

ಪೂಜ್ಯ ಶ್ರೀ ಬೆಳ್ಳಾವೆ ವೆಂಕಟನಾರಣಪ್ಪನವರು ಕೃಪೆಮಾಡಿ ಸಮ್ಮತಿಸಿದರು. ಶ್ರೀ ಎ. ಆರ್. ಕೃಷ್ಣಶಾಸ್ತ್ರಿಯವರ ಕ್ರಿಯಾಶಕ್ತಿಯೇ ಅದರ ಜೀವ ಕಳೆಯಂತಿದ್ದಿತು. ಶ್ರೀ ಗುರುರಾವ್ ದೇಶಪಾಂಡೆಯವರು ಸಂಘದ ಮೊಟ್ಟಮೊದಲನೆಯ ಕಾರ್ಯದರ್ಶಿಯಾಗಿ ಉತ್ಸಾಹದಿಂದ ಕೆಲಸಮಾಡಲಾರಂಭಿಸಿದರು. ಸಂಘ ಸ್ಥಾಪನೆಯಾದ ಶುಭ ದಿನ, ಪ್ರಾಕ್ತನ ವಿಮರ್ಶ ವಿಚಕ್ಷಣ ರಾವ್‌ಬಹದ್ದೂರ್ ಪೂಜ್ಯ ಶ್ರೀ ಆರ್. ನರಸಿಂಹಾಚಾರ್ಯರಿಂದ ಕನ್ನಡದಲ್ಲಿ ನಮ್ಮ ಕರ್ಣಾಟಕ ಸಂಘದ ಸಮಾರಂಭ ಭಾಷಣವಾಯಿತು; ಕನ್ನಡದಲ್ಲಿ ಭಾಷಣ ಮಾಡಲು ಸಮ್ಮತಿಸದೆ ಇಂಗ್ಲಿಷ್ ಭಾಷೆಯಲ್ಲಿ ಕರ್ಣಾಟಕ ಸಂಘದ ಸಮಾರಂಭ ಭಾಷಣ ಮಾಡುವುದಾಗಿ ಕೆಲವರು "ದೊಡ್ಡವರು" ಹೇಳಿದ್ದ ಸಮಯದಲ್ಲಿ ಪೂಜ್ಯ ನರಸಿಂಹಾಚಾರ್ಯರು ಕೃಪೆಮಾಡಿ ಕನ್ನಡದಲ್ಲಿ ಸಮಾರಂಭ ಭಾಷಣಮಾಡಿದಾಗಿನ ಉತ್ಸಾಹ ಸಂತೋಷಗಳನ್ನು ವರ್ಣಿಸಲಳವಲ್ಲ. ವಿದ್ಯಾರ್ಥಿಯೇ ಸಂಘದ ಕಾರ್ಯದರ್ಶಿಯಾಗಿರಬೇಕು; ಸಂಘದ ಕಾರ್ಯ ನಿರ್ವಹಣದಲ್ಲಿ ವಿದ್ಯಾರ್ಥಿಗಳ ಅಭಿಪ್ರಾಯಗಳಿಗೂ ಸ್ಥಾನವಿದ್ದು ಅವಕ್ಕೂ ತೂಕ ಕೊಡಬೇಕು; ಸಂಘದ ಆಶ್ರಯದಲ್ಲಿ ವಿದ್ಯಾರ್ಥಿಗಳಿಂದಲೂ ಭಾಷಣಗಳು ನಡೆಯಬೇಕು, ಸಂಘದ ಆಶ್ರಯದಲ್ಲಿ ನಡೆಯುವ ಚರ್ಚಾ ಕೂಟಗಳಲ್ಲಿ ವಿದ್ಯಾರ್ಥಿಗಳೇ ಭಾಗವಹಿಸಬೇಕು; ಒಟ್ಟಿನ ಮೇಲೆ ವಿದ್ಯಾರ್ಥಿಗಳಿಗಾಗಿಯೇ ಅದು ಏರ್ಪಟ್ಟು, ವಿದ್ಯಾರ್ಥಿಗಳಿಂದಲೇ ಬಹುಮಟ್ಟಿಗೆ ಕಾರ್ಯ ನಿರ್ವಹಣ ನಡೆಯುವ ವಿದ್ಯಾರ್ಥಿಗಳ ಸಂಘವೇ ಆಗಿರಬೇಕು; ಎಂಬಿವು ಸಂಘದ ಅಧ್ಯಕ್ಷರ ಅನುಮೋದನವನ್ನು ಪಡೆದು ಶ್ರೀ ಎ. ಆರ್. ಕೃಷ್ಣಶಾಸ್ತ್ರಿಯವರು ರೂಪಿಸಿದ—ಆದರೆ ನನಗೆ ನೆನಪಿರುವ ಮಟ್ಟಿಗೆ ಅವರು ಲಿಖಿತ ರೂಪಕ್ಕೇನೂ ಇಳಿಸದಿದ್ದ—ಸಂಘ ನಿಯಮಗಳು. ಆ ನಿಯಮಗಳಿಂದ ವಿದ್ಯಾರ್ಥಿಗಳಿಗೆ ಅಪಾರ ಸಂತೋಷವಾಯಿತು. ಹಿರಿಯರ ಜ್ಞಾನಾನುಭವಗಳೂ, ವಿದ್ಯಾರ್ಥಿಗಳ ಉತ್ಸಾಹ ಶ್ರದ್ಧೆಗಳೂ ಸಂಘದ ಕಾರ್ಯ ನಿರ್ವಹಣದಲ್ಲಿ ಅನುಗೂಡಿ ಒದಗುವಂತಾದುದು ಅವುಗಳಿಂದ ಲಭಿಸಿದ ಫಲ. ಅದರ ಪ್ರಭಾವದಿಂದ ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘವನ್ನು, ಆಗಿನ ಇಡೀ ಮೈಸೂರು ಸಂಸ್ಥಾನಕ್ಕೇ ಆದರ್ಶ ಸಂಘವೆಂದು ಸುಸಂಸ್ಕೃತರು ಭಾವಿಸುವಂತೆ ಸಂಘದ ಕಾರ್ಯ ಕಲಾಪಗಳು ನಡೆಯತೊಡಗಿದುವು. ನಮ್ಮ ಕರ್ಣಾಟಕ ಸಂಘವೂ ಸೇರಿ ಒಟ್ಟು ಸೆಂಟ್ರಲ್ ಕಾಲೇಜೇ ಒಂದು ಕುಟುಂಬವೆಂಬ ಭಾವನೆಯನ್ನು ಮೂಡಿಸಿತು, ಅಧ್ಯಾಪಕ ಶಿಷ್ಯ ವರ್ಗದವರ ವಾತ್ಸಲ್ಯ. ಇಡೀ ವಿದ್ಯಾರ್ಥಿವೃಂದವೇ ಹೆಮ್ಮೆ ಪಡುವಂತೆ ಮಾಡಿತ್ತು ಸೆಂಟ್ರಲ್ ಕಾಲೇಜಿನ ಅಧ್ಯಾಪಕ ವರ್ಗದವರ ಅಪಾರ ವಿದ್ವತ್ತಿನ ಮತ್ತು ಶಿಷ್ಯ ಪ್ರಿಯತೆಯ ಕೀರ್ತಿ. ವಿದ್ಯಾರ್ಥಿಗಳ ಮತ್ತು ಹಿರಿಯರ ಹೃದಯಗಳೇ ಭಾಷಾಭಿಮಾನದಿಂದ ಬೆಳಗುವಂತಿದ್ದುವು, ನಮ್ಮ ಪ್ರಖ್ಯಾತ ವಿದ್ಯಾಸಂಸ್ಥೆಯ ಆದರ್ಶ ಕರ್ಣಾಟಕ ಸಂಘದ ಕನ್ನಡತನ ಮತ್ತು ವಿವಿಧ ಕಾರ್ಯ ಕಲಾಪಗಳು. ೧೯೧೧ನೆಯ ಸಂವತ್ಸರದಲ್ಲಿ ಸಂಘ ಸ್ಥಾಪನೆಯು ನೆರವೇರಿದಮೇಲೆ ಸ್ವಲ್ಪಕಾಲದ ತರುವಾಯ ಸಂಘದ ಆಶ್ರಯದಲ್ಲಿ ನನ್ನ ಭಾಷಣವನ್ನೂ, ಆ ಬಳಿಕ—

ಆಗ ನನ್ನ ಸಹಪಾಠಿಗಳಲ್ಲೊಬ್ಬರಾಗಿದ್ದು ಆಗಿನಿಂದ ಇಂದಿನವರೆಗೂ ನನ್ನ ಆಪ್ತ ಮಿತ್ರರಾಗಿರುವ—ಶ್ರೀ ಎಸ್. ವಿ. ರಂಗಣ್ಣನವರ ಭಾಷಣವನ್ನೂ ನಮ್ಮ ಗುರುವರ್ಯರು ವಿಶ್ವಾಸದಿಂದ ಏರ್ಪಡಿಸಿದರು. ಅವೆರಡು ಭಾಷಣಗಳೂ ವಿಶೇಷ ರೀತಿಯಲ್ಲಿ ಸಭಿಕರ ಮೆಚ್ಚುಗೆಯನ್ನು ಗಳಿಸಿದುದಕ್ಕಾಗಿ ನಮ್ಮಿಬ್ಬರಿಗಿಂತ ಅವರೇ ಹೆಚ್ಚಾಗಿ ಹರ್ಷಿಸಿ ನಮ್ಮನ್ನು ಹರಸಿದರು. ಆ ಬಳಿಕ ಸ್ವಲ್ಪ ಕಾಲದಮೇಲೆ, ನಮ್ಮ ಸಂಘದ ಆಶ್ರಯದಲ್ಲಿ ಒಂದು ಚರ್ಚಾಕೂಟವನ್ನು, ಸಂಘದ ಆಧಾರ ಸ್ತಂಭವಾಗಿದ್ದ ಗುರುವರ್ಯರು ಏರ್ಪಡಿಸಿದ್ದರು. ಆಗ್ಗೆ ವಿದ್ಯಾಭ್ಯಾಸ ಶಾಖೆಯ "ಇನ್‌ಸ್ಪೆಕ್ಟರ್–ಜನರಲ್" ಪದವಿಯಲ್ಲಿದ್ದ ಡಾಕ್ಟರ್ ಸಿ. ಆರ್. ರೆಡ್ಡಿಯವರು ಆ ಚರ್ಚಾಕೂಟದ ಸಭೆಯಲ್ಲಿ ಅಧ್ಯಕ್ಷತೆ ವಹಿಸಲು ಸಮ್ಮತಿಸಿದರು. ಆದರೆ, ಅವರು ಕನ್ನಡದಲ್ಲಿ ಮಾತನಾಡುವುದು ತಮಗೆ ಶಕ್ಯವಿಲ್ಲವೆಂದೂ, ಸಭೆಯ ಕಾರ್ಯಕಲಾಪಗಳು ಇಂಗ್ಲಿಷ್ ಭಾಷೆಯಲ್ಲಿ ನಡೆಯಬೇಕೆಂದೂ ತಿಳಿಸಿದರು, (ಈಗಿನ "ಡೈರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್" ಹುದ್ದೆಗೆ ಆಗಿನ ಹೆಸರು "ಇನ್‌ಸ್ಪೆಕ್ಟರ್–ಜನರಲ್" ಎಂದು.) ಅವರು ಹಾಗೆ ತಿಳಿಸಿದುದರಿಂದಲೂ, ಪ್ರಿನ್ಸಿಪಾಲ್ ಜೆ. ಜಿ. ಟೇಟ್ ಸಾಹೇಬರು ಹುದ್ದೆಯಿಂದ ನಿವೃತ್ತರಾಗಿ ಆ ಹುದ್ದೆಗೇರಿದ್ದ ಪ್ರಾಧ್ಯಾಪಕ ಇ. ಪಿ. ಮೆಟ್ಕಾಫ್ ಸಾಹೇಬರು ತಾವೂ ಸಭೆಗೆ ಬರುವುದಾಗಿ ಸೂಚಿಸಿ—ತಮಗೆ ಕನ್ನಡ ಭಾಷೆಯ ಪರಿಚಯವಿಲ್ಲದಿದ್ದ ಕಾರಣ—ಸಭೆಯ ಕಾರ್ಯಕಲಾಪಗಳು ಇಂಗ್ಲಿಷ್ ಭಾಷೆಯಲ್ಲಿ ನಡೆಯಬೇಕೆಂದರು. ಕರ್ಣಾಟಕ ಸಂಘದ ಕಾರ್ಯಕಲಾಪಗಳು ಕನ್ನಡದಲ್ಲಿ ನಡೆಯದೆ ಇಂಗ್ಲಿಷ್ ಭಾಷೆಯಲ್ಲಿ ನಡೆಯುವುದು ಅಸಂಗತವಾದರೂ, ನಿರ್ವಾಹವಿಲ್ಲದೆ ಅದಕ್ಕೆ ಒಪ್ಪಿಕೊಳ್ಳಬೇಕಾಯಿತು. ಭಾರತದ ವಿಶ್ವವಿದ್ಯಾನಿಲಯಗಳಲ್ಲಿ ಪ್ರಾದೇಶಿಕ ಭಾಷೆಯೇ ಶಿಕ್ಷಣ ಮಾಧ್ಯಮವಾಗಿರಬೇಕೆಂಬುದು ಚರ್ಚೆಯ ವಿಷಯ. ಆದರೆ, ಚರ್ಚೆಯ ವಿಷಯವನ್ನು ಮಂಡಿಸಿದ್ದ ಪದಗಳ ಜೋಡಣೆಯನ್ನು ನಾನು ಈಗ ಮರೆತಿದ್ದೇನೆ. ಚರ್ಚಾಕೂಟದ ಸಭೆಗೆ ಸೆಂಟ್ರಲ್ ಕಾಲೇಜಿನ ಅಧ್ಯಾಪಕ ವರ್ಗದವರ ಜೊತೆಗೆ ಇತರ ಅನೇಕ ಸರಕಾರಿ ಅಧಿಕಾರಿಗಳೂ, ಬೆಂಗಳೂರು ನಗರದ ಪ್ರಮುಖ ಸಾರ್ವಜನಿಕರೂ ಆಹ್ವಾನಿತರಾಗಿದ್ದರು. ಅವರೂ, ವಿದ್ಯಾರ್ಥಿಗಳೂ ಕಿಕ್ಕಿರಿದು ತುಂಬಿದ್ದ ಭಾರಿ ಸಭೆ. ಸಭಾಧ್ಯಕ್ಷತೆ ವಹಿಸಿದ್ದ ಡಾಕ್ಟರ್ ಸಿ. ಆರ್. ರೆಡ್ಡಿಯವರ ಪಾರ್ಶ್ವದಲ್ಲಿ ಪ್ರಿನ್ಸಿಪಾಲ್ ಡಾಕ್ಟರ್ ಇ. ಪಿ. ಮೆಟ್ಕಾಫ್ ಸಾಹೇಬರೂ ಕುಳಿತಿದ್ದರು. ಬಹು ಜನರಿಗೆ ಬೇಡವಾಗಿದ್ದ ಚರ್ಚಾವಿಷಯ; ಅದರ ಪರವಾಗಿ ವಾದಿಸಿ ಮಾತನಾಡಿದ ನಮ್ಮ ಪಕ್ಷದವರ ಪಾಡು ನಮ್ಮ ಶತ್ರುಗಳಿಗೂ ಬೇಡವೆಂದು ನಮಗೆ ತೋರಿತು. ಪ್ರಪಂಚದ ಇತರ ದೇಶಗಳ ವಿಶ್ವವಿದ್ಯಾನಿಲಯಗಳಲ್ಲೆಲ್ಲ ಆ ಆ ಪ್ರದೇಶದ ಭಾಷೆಯೇ ಶಿಕ್ಷಣ ಮಾಧ್ಯಮವಾಗಿರುವಲ್ಲಿ, ನಮ್ಮ ದೇಶವೊಂದೇ ಅದಕ್ಕವಕಾಶವಿಲ್ಲದ ನಿರ್ಭಾಗ್ಯದೇಶವೆಂದು ಮುಂತಾಗಿ ತಾತ್ಪರ್ಯವಾಗುವಂತೆ ಇಂಗ್ಲಿಷಿನಲ್ಲಿ ನಾನು ಮಾತನಾಡಿದೆ. ಆಗ್ಗೆ ಎರಡು ವರ್ಷಗಳ ಹಿಂದೆ (೧೯೧೬ನೆಯ ಸಂವತ್ಸರದಲ್ಲಿ) ಸ್ಥಾಪಿತವಾಗಿದ್ದ ನಮ್ಮ ಮೈಸೂರು ವಿಶ್ವವಿದ್ಯಾ

ನಿಲಯದಲ್ಲಿಯ ಶಿಕ್ಷಣಮಾಧ್ಯಮವು ಕನ್ನಡವೇ ಆಗಬೇಕೆಂದು ಅಭಿಮಾನದಿಂದ ಪ್ರತಿಪಾದಿಸಿದೆ. ಆಗ ಬಗೆ ಬಗೆಯ ರೂಪಗಳಲ್ಲಿ ನಡೆದ ಸಭಿಕರ ವಿರೋಧ ಪ್ರದರ್ಶನವನ್ನು ವರ್ಣಿಸಲಳವಲ್ಲ. ಯಾವ ವಿಚಾರವನ್ನು ಕುರಿತು ಚರ್ಚಿಸಿದರೆ ಇಂದು ಮೆಚ್ಚಿಕೆಯೂ ಶ್ಲಾಘನೆಯೂ ಅಪರಿಮಿತವಾಗಿ ಲಭಿಸುತ್ತವೋ ಅದೇ ವಿಚಾರವನ್ನು ಚರ್ಚಿಸಿದಾಗ ಅಂದು ಆ ದುರವಸ್ಥೆ. ಅಂದಿನ ನಮ್ಮ ಎದುರುಪಕ್ಷದವರ ವಾದಕ್ಕೆ ಸಭಿಕರ ಪೂರ್ಣ ಪ್ರಸನ್ನತೆ; ಸಂತೋಷ ಪ್ರದರ್ಶನ, "ಹಿಯರ್, ಹಿಯರ್!" ಮುಂತಾದ ಆನಂದ ಘೋಷಗಳ ಮೂಲಕ. ಅಧ್ಯಕ್ಷತೆ ವಹಿಸಿದ್ದ ಡಾಕ್ಟರ್ ಸಿ. ಆರ್. ರೆಡ್ಡಿಯವರು ವಿಚಾರಪೂರಿತವಾಗಿದ್ದ ಸೊಗಸಾದ ಭಾಷಣಮಾಡಿದುದಲ್ಲದೆ, ಸಭಾಭವನದಿಂದ ಹೊರಡುವ ಮುನ್ನ ನನ್ನಲ್ಲಿ ಆದರತೋರಿ ನನ್ನ ಭಾಷಣದ ವಿಷಯವಾಗಿ ತಮ್ಮ ಮೆಚ್ಚಿಕೆಯನ್ನು ಸೂಚಿಸಿದರು. ಆದರೂ ಅನೇಕ ದಿನಗಳಕಾಲ ನಾನು ಅನೇಕರ ಅಪಹಾಸ್ಯದ ಮತ್ತು ಕುಹಕದ ಟೀಕೆಗಳನ್ನು ಕೇಳಬೇಕಾಯಿತು; ಸಭಾಧ್ಯಕ್ಷರ ಮೆಚ್ಚಿಕೆಯೂ, ಗುರುಗಳ ಮೆಚ್ಚಿಕೆಯೂ ಲಭಿಸಿದ್ದ ಕಾರಣದಿಂದ ನನಗೆ ಉಂಟಾಗಿದ್ದ ಆನಂದೋತ್ಸಾಹಭರದಲ್ಲಿ ಆ ಟೀಕೆಗಳು ನನ್ನ ಮನಸ್ಸಿಗೆ ಅಂಟಲೇ ಇಲ್ಲ.

ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘವನ್ನು ಏರ್ಪಡಿಸಿದ ತರುವಾಯ ಸ್ವಲ್ಪ ಕಾಲದ ಮೇಲೆ (೧೯೧೯ನೆಯ ಸಂವತ್ಸರದಲ್ಲಿ) ಆ ಆದರ್ಶ ಸಂಘದ ಆಶ್ರಯದಲ್ಲಿ ಗುರುಗಳು "ಪ್ರಬುದ್ಧ ಕರ್ಣಾಟಕ" ಪತ್ರಿಕೆಯನ್ನು ಪ್ರಕಟಿಸುವ ಮಹತ್ತರ ಕಾರ್ಯವನ್ನಾರಂಭಿಸಿದರು. ಕನ್ನಡ ಭಾಷೆಯ ಮೇಲಿನ ಉಜ್ಜ್ವಲ ಪ್ರೀತಿಯೇ ಅದರ ಪ್ರೇರಕ. "ಪ್ರಬುದ್ಧ ಕರ್ಣಾಟಕ" ಪತ್ರಿಕೆಯನ್ನು ಅನೇಕರು ಆದರ್ಶ ಕರ್ಣಾಟಕ ಸಂಘದ ಆದರ್ಶ ಕನ್ನಡ ಪತ್ರಿಕೆಯೆಂದು ಶ್ಲಾಘಿಸಿದರು. ನಮ್ಮ ಗುರುಗಳಾದ ಡಾಕ್ಟರ್ ಎ.ಆರ್. ಕೃಷ್ಣಶಾಸ್ತ್ರಿಯವರು ಅದರ ಸಂಪಾದಕರಾಗಿದ್ದು ಉತ್ಸಾಹದಿಂದ ಕೆಲಸಮಾಡಿದರು. ಪತ್ರಿಕೆಯ ಮೊಟ್ಟ ಮೊದಲನೆಯ ಸಂಚಿಕೆಯಲ್ಲಿ ಮತ್ತು ಎರಡನೆಯ ಸಂಚಿಕೆಯಲ್ಲಿ ನನ್ನ ಭಾಷಣವೂ, ಮುಂದಿನ ಸಂಚಿಕೆಯಲ್ಲಿ ನನ್ನ ಮಿತ್ರರಾದ ಶ್ರೀ ಎಸ್. ವಿ. ರಂಗಣ್ಣನವರ ಭಾಷಣವೂ ಪ್ರಕಟವಾದುವು. ಅವು ಜನಪ್ರಿಯವಾದುದನ್ನು ಕಂಡು ನಮ್ಮಿಬ್ಬರಿಗಿಂತ ನಮ್ಮ ಗುರುಗಳಿಗೇ ಹೆಚ್ಚು ಸಂತೋಷವಾಯಿತು. ಅವರದೆಷ್ಟು ಮಟ್ಟಿನ ಶಿಷ್ಯವಾತ್ಸಲ್ಯ ಮತ್ತು ಅವರದೆಷ್ಟು ಮಟ್ಟಿನ ಉದಾರ ಸ್ವಭಾವ—ಎಂಬ ಸಂಗತಿಗಳನ್ನು ಸೂಚಿಸುವ ಉದ್ದೇಶದಿಂದ ಇದನ್ನು ಇಲ್ಲಿ ಪ್ರಸ್ತಾಪಿಸಿದ್ದೇನೆ. ಅದೇ ಉದ್ದೇಶದಿಂದ ಮತ್ತೆರಡು ಸಂಗತಿಗಳನ್ನೂ ಇಲ್ಲಿ ಪ್ರಸ್ತಾಪಿಸಬಹುದಾಗಿದೆ; ಮೊದಲನೆಯದು, ೧೯೧೮ನೆಯ ಸಂವತ್ಸರದಲ್ಲಿ ಮೈಸೂರು ವಿಶ್ವವಿದ್ಯಾನಿಲಯದವರು ಕನ್ನಡದಲ್ಲಿ ಗ್ರಂಥರಚನೆಮಾಡಲು ಬಹುಮಾನ ಸ್ಪರ್ಧೆಯನ್ನೇರ್ಪಡಿಸಿ, ಆಗಿನ ಮೈಸೂರು ಸಂಸ್ಥಾನದಲ್ಲಿ ಮಾತ್ರವಲ್ಲದೆ ಇಡೀ ಕನ್ನಡ ನಾಡಿನಲ್ಲಿ ಯಾರು ಬೇಕಾದರೂ ಸ್ಪರ್ಧಿಸಿ ತಮ್ಮ ಗ್ರಂಥಗಳನ್ನು ಸ್ಪರ್ಧೆಗೆ ಕಳುಹಬಹುದೆಂದು ಪ್ರಕಟಿಸಿದ್ದ ಸಂಬಂಧವಾಗಿ ನನಗೆ ಏಳು ನೂರು ರೂಪಾಯಿಗಳ ಬಹುಮಾನ ಲಭಿಸಿದ್ದ ತೀರ್ಮಾನ ೧೯೧೯ನೆಯ ಸಂವತ್ಸರದಲ್ಲಿ

ತಿಳಿದಾಗ ಇನ್ನೂ ವಿದ್ಯಾರ್ಥಿಯಾಗಿದ್ದ ನನಗೆ ಅಷ್ಟು ದೊಡ್ಡ ಮೊತ್ತದ ಬಹುಮಾನ ಲಭಿಸಿದುದಕ್ಕಾಗಿ ಗುರುಗಳು ನನಗಿಂತ ಹೆಚ್ಚಾಗಿ ಹರ್ಷಿಸಿ, ತಮ್ಮ ಮೆಚ್ಚಿಕೆಯನ್ನು ಸೂಚಿಸಿ, ಅದನ್ನು "ಪ್ರಬುದ್ಧ ಕರ್ಣಾಟಕ" ಪತ್ರಿಕೆಯಲ್ಲಿ ಪ್ರಕಟಿಸಿ ಪ್ರಶಂಸಿಸಿದ ಸಂಗತಿ; ಎರಡನೆಯದು, "ಸಂಯುಕ್ತಾಪಹರಣ" ವೆಂಬ ಹೆಸರಿನಿಂದ ನಾನು ರಚಿಸಿದ್ದ ಕಾದಂಬರಿಯ ಸ್ವಲ್ಪ ಸ್ವಲ್ಪ ಭಾಗಗಳನ್ನು "ಪ್ರಬುದ್ಧ ಕರ್ಣಾಟಕ"ದ ಹಲವು ಸಂಚಿಕೆಗಳಲ್ಲಿ ಪ್ರಕಟಿಸಿ ವಾತ್ಸಲ್ಯ ತೋರಿ ಕೃಪೆಮಾಡಿದ ಸಂಗತಿ. ಅವರ ವಾತ್ಸಲ್ಯವನ್ನೂ, ಪ್ರೋತ್ಸಾಹವನ್ನೂ, ಕೃಪೆಯನ್ನೂ ಎಷ್ಟು ಕೊಂಡಾಡಿದರೂ ತೀರದು. ಪತ್ರಿಕೆಯ ಸಂಬಂಧವಾಗಿ ಹೇಳುವುದಾದರೆ, ಆಗ್ಗೆ "ಪ್ರಬುದ್ಧ ಕರ್ಣಾಟಕ" ಪತ್ರಿಕೆಯನ್ನು ಹೋಲುವಂತಿದ್ದ ಮತ್ತೊಂದು ತ್ರೈಮಾಸಿಕ ಪತ್ರಿಕೆಯೇ ಆಗಿನ ಮೈಸೂರು ಸಂಸ್ಥಾನದಲ್ಲಿರಲಿಲ್ಲವೆಂಬ ಶ್ಲಾಘನೆಯನ್ನು ಪಡೆಯುವ ಹಂತದ ಮೇಲ್ಮೆಯನ್ನು ಅವರು ಸಾಧಿಸಿದರು. ಪ್ರಾಮಾಣಿಕತೆ, ಕಲಾಪ್ರೇಮ, ಅಚ್ಚುಕಟ್ಟು, ಶಿಸ್ತು—ಇವು, ರಕ್ತಗತವಾಗಿ ಅವರಲ್ಲಿದ್ದ ಅಮೋಘ ಗುಣಗಳಲ್ಲಿ ನಾಲ್ಕು. ಪತ್ರಿಕೆಯ ಸಂಪಾದಕೀಯ ಲೇಖನಗಳು, ಪತ್ರಿಕೆಯನ್ನು ನೋಡಿದೊಡನೆಯೇ ಆಹ್ಲಾದಗೊಳಿಸುತ್ತಿದ್ದ ಕನ್ನಡ ಸೂರ್ಯೋದಯದ ಸಂಕೇತವಾದ ಮುಖಚಿತ್ರ, ಪತ್ರಿಕೆಯ ಸೊಗಸಾದ ಮುದ್ರಣ ಮತ್ತು ಕಾಲಕ್ಕೆ ಸರಿಯಾಗಿ ಸಂಚಿಕೆಗಳ ಪ್ರಕಟಣೆ—ಇವು ನಾಲ್ಕೂ ಅನುಕ್ರಮವಾಗಿ ಆ ನಾಲ್ಕು ಗುಣಗಳಿಗೆ ನಿದರ್ಶನಗಳು. ಪತ್ರಿಕೆಯನ್ನು ನೋಡಿ ಹರ್ಷಿಸಿದವರು ಹೆಚ್ಚಾಗಿದ್ದರೂ, ಕನ್ನಡದ ಪತ್ರಿಕೆಗೇಕೆ ಇಷ್ಟು ಅಲಂಕಾರವೆಂಬ ಭಾವನೆಯವರೂ ಕೆಲವರಿದ್ದರು. ಅವರಲ್ಲೊಬ್ಬರು "ಪತ್ರಿಕೆಗೆ ಅರಳೇಪೇಟೆ ರೇಷ್ಮೆ ಸೀರೆ ಉಡಿಸಿದ್ದೀರಿ" ಎಂದು ಅವರೊಡನೆ ಕುಹಕದ ಮಾತನ್ನಾಡಿದಾಗ, "ದೇವರ ದಯೆಯಿದ್ದರೆ ಕಾಶಿಯ ಪೀತಾಂಬರವನ್ನೇ ಉಡಿಸುತ್ತೇನೆ" ಎಂಬ ದಿಟ್ಟತನದ ಉತ್ತರವನ್ನು ಕೇಳಬೇಕಾಯಿತು. ನಮ್ಮ ಸಂಘದ ಸ್ಥಾಪನೆಯಿಂದ ಮತ್ತು "ಪ್ರಬುದ್ಧ ಕರ್ಣಾಟಕ" ಪತ್ರಿಕೆಯ ಪ್ರಕಟಣೆಯಿಂದ ವಿದ್ಯಾರ್ಥಿ ವೃಂದಕ್ಕೆ ಉಂಟಾದ ಆನಂದಕ್ಕೆ ಪಾರವೇ ಇರಲಿಲ್ಲ. ಸಂಘದ ಆಶ್ರಯದಲ್ಲಿ ಆಗಿಂದಾಗ್ಗೆ ಅನೇಕರಿಂದ ಕನ್ನಡದಲ್ಲಿ ಭಾಷಣಗಳು ನಡೆದುವು; ನಮ್ಮ ಸಂಘದ ಆದರ್ಶದಿಂದ ಹಲವಾರು ಸ್ಥಳಗಳಲ್ಲಿ ಬಗೆ ಬಗೆಯ ಸಂಘಗಳು ಏರ್ಪಟ್ಟುವು.

ಕನ್ನಡವನ್ನು ಆರಿಸಿಕೊಂಡು "ಎಂ.ಎ." ಪರೀಕ್ಷೆಗೆ ವ್ಯಾಸಂಗ ಮಾಡಬೇಕೆಂಬುದು ನನಗಿದ್ದ ಆಕಾಂಕ್ಷೆ. ನಾನು "ಬಿ.ಎ." ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದಾಗ ಮೈಸೂರಿನಲ್ಲಾಗಲಿ, ಬೆಂಗಳೂರಿನಲ್ಲಾಗಲಿ ಆ ವ್ಯಾಸಂಗಕ್ಕೆ ವ್ಯವಸ್ಥೆಯಿರಲಿಲ್ಲ. ಆದ ಕಾರಣ, ಮುಂಬಯಿ ನಗರಕ್ಕೆ ಹೋಗಿ "ಎಂ.ಎ." ಪರೀಕ್ಷೆಗೆ ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳನ್ನು ಆರಿಸಿಕೊಂಡೆ; "ಎಂ.ಎ." ಪರೀಕ್ಷೆಗೂ, "ಎಲ್‌ಎಲ್.ಬಿ." ಪರೀಕ್ಷೆಗೂ ವ್ಯಾಸಂಗ ಮಾಡಿ ಅವುಗಳಲ್ಲಿ ತೇರ್ಗಡೆ ಹೊಂದಿದೆ. ಸ್ವಲ್ಪ ಕಾಲ ಲಾಯರಾಗಿ ಕೆಲಸ ಮಾಡಿದೆ. ಅನಂತರ, ಮೈಸೂರು ಸರಕಾರದವರು ಏರ್ಪಡಿಸಿದ ಸ್ಪರ್ಧಾ ಪರೀಕ್ಷೆಯಲ್ಲಿ ಪ್ರಥಮ ಸ್ಥಾನವನ್ನು ಪಡೆದುದರಿಂದ ಸರಕಾರದ ಭಾಷಾಂತರ

ಕಾರನಾಗಿ (Government Translator) ನೇಮಕವಾದೆ, ೧೯೨೪ನೆಯ ಸಂವತ್ಸರದ ಮಾರ್ಚ್ ತಿಂಗಳಿನಲ್ಲಿ. ಕನ್ನಡದ ವಿಚಾರದಲ್ಲಿ ಆಗಲೂ ಅಪಹಾಸ್ಯದ ಕಾಲವೆ! ನಾನೂ ಒಬ್ಬ "ಗೆಜೆಟೆಡ್ ಆಫೀಸರ್" ಆಗಿಯೇ ನೇಮಕವಾಗಿದ್ದೂ, ಕನ್ನಡದಲ್ಲಿ ತರ್ಜುಮೆ ಮಾಡುತ್ತಿದ್ದವನೆಂದು ಅನೇಕರಿಗೆ ತಾತ್ಸಾರ—ಅನೇಕರಿಗೇ ಹೊರತು ಎಲ್ಲರಿಗೂ ಅಲ್ಲ. ಆಗ ನಡೆದ ಘಟನೆಗಳಲ್ಲೊಂದು, ಇದು; ೧೯೨೪ನೆಯ ಸಂವತ್ಸರದ ಜೂನ್ ತಿಂಗಳಿನಲ್ಲಿ ಮೈಸೂರು ನಗರದಲ್ಲಿ ಪ್ರಜಾಪ್ರತಿನಿಧಿ ಸಭೆಯ ಅಧಿವೇಶನ ನಡೆಯುತ್ತಿದ್ದಾಗ ಒಂದು ದಿನ, ಅಂದಿನ ಸಭಾಕಾರ್ಯಗಳು ಪೂರೈಸಿದ ಮೇಲೆ ಸದಸ್ಯರಲ್ಲೊಬ್ಬರು ನನ್ನ ಬಳಿಗೆ ಬಂದರು, "ರೀ, ರೀ, ಕನ್ನಡ, ಕನ್ನಡ! ಕೊಂಚ ನಿಂತ್ಕೊಳ್ರೀ" ಎಂದು ಕೂಗುತ್ತ. ನಾನು ಆಶ್ಚರ್ಯ ಚಕಿತನಾಗಿ ನಿಂತೆ. ಅವರು ಹತ್ತಿರಕ್ಕೆ ಬಂದು, ತಮಗೆ ಸಭೆಯಲ್ಲಿ ಕೊಟ್ಟಿದ್ದ ಅಚ್ಚಾದ ಸರಕಾರಿ ಕಾಗದ ಪತ್ರಗಳನ್ನು ನನ್ನ ಮುಂದೆ ಹಿಡಿದು, "ರೀ, ಕನ್ನಡ! ಇವೆಲ್ಲಾ ನಮ್ಮ ಮನೇಗೆ ಕೊಟ್ಟುಬಿಡ್ರಿ. ಐದೂವರೆ ಗಂಟೆಗೆ ದಿವಾನ್ ಬ್ಯಾನರ್ಜಿ ಸಾಹೇಬರ ಬಂಗ್ಲೆಗೆ 'ಟೀ ಪಾರ್ಟೀ'ಗೆ ಹೋಗಬೇಕು" ಎಂದರು; ತಮ್ಮ ಮನೆ ಎಲ್ಲೆಂಬುದನ್ನೂ ತಿಳಿಸಿದರು. ಆ ಮಾತುಗಳನ್ನು ಕೇಳಿ ನನ್ನ ಮನಸ್ಸಿಗೆ ಹೇಗಾಯಿತೆಂಬುದನ್ನು ವರ್ಣಿಸುವುದಕ್ಕಿಂತ ಊಹಿಸಿಕೊಳ್ಳಲು ಬಿಡುವುದೇ ಮೇಲು. ನಾನು ಸ್ವಲ್ಪ ದೂರದಲ್ಲಿ ನಿಂತಿದ್ದ ಕೆಲವರು ಅಧಿಕಾರಿಗಳ ಕಡೆಗೆ ಕೈತೋರಿಸಿ, "ಅವರಲ್ಲಿ ಯಾರಿಗಾದರೂ ಇವನ್ನ ಕೊಟ್ಟು ಮನೆಗೆ ಕಳಿಸಿಬಿಡಿ" ಎಂದೆ. ಅವರು, "ಅಯ್ಯೋ, ಎಲ್ಲಾದರೂ ಉಂಟೇ? ಅವರೆಲ್ಲಾ ಗೆಜೆಟೆಡ್ ಆಫೀಸರು. ನೀವೇ ತೆಗೊಂಡು ಹೋಗಿ" ಎಂದು ಉತ್ತರ ಹೇಳಿದರು. ನಾನು ನಗುತ್ತ "ನಾನೂ ಗೆಜೆಟೆಡ್ ಆಫೀಸರೇ! ದಿವಾನರ ಬಂಗ್ಲೆಗೆ 'ಟೀಪಾರ್ಟಿ'ಗೆ ನನಗೂ ಆಹ್ವಾನ ಬಂದಿದೆ. ನಾನೂ ಅಲ್ಲಿಗೆ ಹೊರಡಬೇಕು" ಎಂದೆ. ಅವರು, "ಕನ್ನಡದೋರೂ ಗೆಜೆಟೆಡ್ ಆಫೀಸರೆ? ದಿವಾನರ ಬಂಗ್ಲೇಗೆ 'ಟೀಪಾರ್ಟಿ'ಗೆ ನಿಮ್ಮನ್ನೂ ಕರೆದಿಧಾರೆಯೆ? ನಂಬೋಕೇ ಆಗಲ್ಲಪ್ಪಾ!" ಎಂದು ಉದ್ಗಾರ ಮಾಡಿದರು. ನಾನು, "ನೀವು ನಂಬದೇ ಇದ್ದರೂ ನಾನು ಹೇಳಿದ್ದು ನಿಜ. ನೀವು ಸದಸ್ಯರಾಗಿದ್ದೀರಲ್ಲಾ, ಪ್ರಜಾಪ್ರತಿನಿಧಿ ಸಭೆ, ಅದರ ಕಾರ್ಯಕಲಾಪ ನಡೆಯೋದೇ ಕನ್ನಡದಲ್ಲಿ; ದಿವಾನರ ಭಾಷಣ ಮಾತ್ರ ಇಂಗ್ಲಿಷಿನಲ್ಲಿ ನಡೆದ್ರೂ ಅದರ ಕನ್ನಡ ಭಾಷಾಂತರ ಓದದೆ ತಪ್ಪೋದೇ ಇಲ್ಲ. ಕನ್ನಡಿಗರಾಗಿ ಕನ್ನಡಕ್ಕೇ ಅಪಚಾರ ಮಾಡಬೇಡಿ" ಎಂದು ಉತ್ತರ ಹೇಳಿದೆ. ದಿವಾನರು ಏರ್ಪಡಿಸಿದ್ದ ಸತ್ಕಾರ ಕೂಟದಲ್ಲಿ ಇತರರೊಡನೆ ನಾನೂ ಭಾಗಿಯಾಗಿದ್ದುದನ್ನು ಕಂಡಾಗ ಅವರಿಗೆ ಆಶ್ಚರ್ಯವಾಯಿತು. ಮೂರನೆಯ ದಿನ ನಡೆದ ವಿನೋದ ಪ್ರಸಂಗವನ್ನೂ ಈ ಸಂಬಂಧವಾಗಿ ಸೂಚಿಸಬಹುದಾಗಿದೆ. ವಿಶದವಾಗಿ ಸೂಚಿಸದೆ ಅತಿ ಸಂಕ್ಷೇಪವಾಗಿ ತಿಳಿಸುತ್ತೇನೆ: ಸಭೆಯ ಕಾರ್ಯಕಲಾಪಗಳು ಅಪರಾಹ್ನ ಮೂರು ಗಂಟೆಯವರೆಗೆ ನಡೆದ ಮೇಲೆ ಅರ್ಧ ಗಂಟೆಯ ಕಾಲ ಉಪಹಾರಕ್ಕಾಗಿ ವಿರಾಮ; ಅಂದು ಆ ವಿರಾಮ ಕಾಲದಲ್ಲಿ ನನ್ನ ಜೊತೆಯಲ್ಲಿ ಕುಳಿತಿದ್ದ ಸರಕಾರಿ ಅಧಿಕಾರಿಯವರೊಬ್ಬರು (ವಿಷಯ ಮುಖ್ಯವೇ

ಹೊರತು, ಅವರ ಹೆಸರನ್ನು ಸೂಚಿಸುವ ಅಗತ್ಯವಿಲ್ಲ) ನನ್ನನ್ನು ಕುರಿತು, "ಟಿಕೆಟ್—ಅನ್ನೋದಕ್ಕೆ ನಿಮ್ಮ ಕನ್ನಡ ಭಾಷೆಯಲ್ಲಿ ಏನ್ರೀ 'ಇಕ್ವಿವಲೆಂಟ್'?" ಎಂದು ಕೇಳಿದರು. ಅವರ ಪ್ರಶ್ನೆಯನ್ನು ಕೇಳಿ, "ನೀವೂ ಕನ್ನಡಿಗರೇ ತಾನೆ! ನಿಮ್ಮ ಮಾತೃಭಾಷೆಯೂ ಕನ್ನಡ, ನಂದೂ ಕನ್ನಡ. 'ನಿಮ್ಮ ಕನ್ನಡ ಭಾಷೆಯಲ್ಲಿ' ಅನ್ನೋದೇಕೆ? 'ನಮ್ಮ ಕನ್ನಡ ಭಾಷೆಯಲ್ಲಿ' ಅಂತ ಹೇಳಬಹುದಲ್ಲಾ.!" ಎಂದು ನಾನು ಹೇಳಿದೆ. ಅನೇಕರು ನಕ್ಕುದನ್ನು ಕಂಡು ಅವರಿಗೆ ಮುಜಗರವಾಗಿ "ಅದೆಲ್ಲಾ ಹಾಗಿರಲ್ರೀ, ನನ್ನ ಪ್ರಶ್ನೆಗೆ ಉತ್ತರ ಹೇಳ್ರೀ. 'ಟಿಕೆಟ್'—ಅನ್ನೋದಕ್ಕೆ ಕನ್ನಡದಲ್ಲೇನ್ರೀ?" ಎಂದು ಮತ್ತೆ ಪ್ರಶ್ನೆ ಮಾಡಿದರು. ಕನ್ನಡ ಭಾಷೆ ಕೊಂಬಿನ ಭಾಷೆಯೆಂದೂ, "ಟಿಕೆಟ್" ಎಂಬುದರ ಕಡೆಯ ಅಕ್ಷರವನ್ನು ಮಾರ್ಪಡಿಸಿ "ಟಿಕೆಟ್ಟು" ಎಂದರೆ, (ರೈಲು, ಪೋಸ್ಟು, ರಿಜಿಸ್ಟರು ಮುಂತಾದವುಗಳಂತೆ) ಕನ್ನಡವಾಯಿತೆಂದೂ ಉತ್ತರ ಹೇಳಿದೆ; ವಿನೋದಕ್ಕಾಗಿ. ಅನಂತರ ನಡೆದ ಚರ್ಚೆಯ ವಿವರಗಳು ಇಲ್ಲಿ ಅಪ್ರಕೃತ. ಇತರ ಭಾಷೆಗಳಿಂದ ಪದಗಳನ್ನು ಅವಶ್ಯ ಕಂಡಲ್ಲಿ ಕನ್ನಡಕ್ಕೆ ಸೇರಿಸುವುದು ತಪ್ಪಲ್ಲವೆಂದೂ, "ಟಿಕೆಟ್" ಎಂಬುದಕ್ಕೆ ಆಜ್ಞಾಪತ್ರವೆಂದರೆ ದೊಡ್ಡ ಹಾಳೆಯೇ ನಮ್ಮ ಮನಸ್ಸಿನ ಮುಂದೆ ನಿಲ್ಲುವುದೆಂದೂ, ಅಪ್ಪಣೆ ಚೀಟಿಯೆಂದರೆ ಜನ ಸಾಮಾನ್ಯರ ಪರಿಭಾಷೆಯಲ್ಲಿ "ಯಮಲೋಕದ ಕರೆ" ಎಂದೂ ಅರ್ಥವಾಗುವುದೆಂದೂ, ಆದ ಕಾರಣ "ಟಿಕೆಟ್ಟು" ಎಂಬುದೇ ಸರಿಹೋಗುವುದೆಂದೂ, ನಾನು ಹೇಳಿದೆ. ಅವರು ಮುಖವನ್ನು ಗಂಟಿಟ್ಟು, ಕನ್ನಡದಲ್ಲಿ ಪದಗಳ ಅಭಾವವೆಂದು ಒಪ್ಪಿಕೊಳ್ಳಬೇಕೆಂದು ನನಗೆ ಇಂಗ್ಲಿಷ್ ಭಾಷೆಯಲ್ಲಿ ತಿಳಿಸಿದರು. ನಾನು ಕನ್ನಡದಲ್ಲಿ ಮಾತನಾಡುತ್ತ "ಅದು ಇಂಗ್ಲಿಷ್ ಭಾಷೆಗೂ ತಪ್ಪಿಲ್ಲ. 'ಒಬ್ಬೊಟ್ಟು' ಎಂಬುದಕ್ಕೆ ಇಂಗ್ಲಿಷಿನಲ್ಲಿ ಏನು ಹೇಳಬೇಕು? ಅದನ್ನ ನೀವು ತಿಳಿಸಿದ ಮರುಕ್ಷಣದಲ್ಲಿ 'ಟಿಕೆಟ್' ಎಂಬುದಕ್ಕೆ ಕನ್ನಡದಲ್ಲೇನೆಂಬುದನ್ನ ನಾನೂ ಹೇಳ್ತೀನಿ" ಎಂದೆ. ಅನೇಕರು ಘೊಳ್ಳೆಂದು ನಕ್ಕರು. ಆ ಬಳಿಕ ನಡೆದ ಚರ್ಚೆಯನ್ನು ಸೂಚಿಸುವ ಅಗತ್ಯವೂ ಇಲ್ಲ, ಅದು ಸ್ಥಳಾಭಾವದಿಂದ ಇಲ್ಲಿ ಸಾಧ್ಯವೂ ಅಲ್ಲ. ಈ ಬಗೆಯ ವಿಕಟ ಸನ್ನಿವೇಶಗಳೊದಗುವುದು ತಪ್ಪುವಂತೆ ಮಾಡಿಕೊಳ್ಳುವ ಮಾರ್ಗವನ್ನು ಕುರಿತು ಯೋಚಿಸಿದೆ. ಭಾಷಾಂತರ ಕಾರ್ಯವನ್ನು ಆದಷ್ಟು ಉತ್ತಮಗೊಳಿಸಿ ಕನ್ನಡವೆಷ್ಟು ಸೊಗಸಿನ ಭಾಷೆಯೆಂಬುದನ್ನು ತೋರಿಸಿ ಕನ್ನಡದ ಸೇವೆ ಮಾಡಬೇಕೆಂಬ ಉದ್ದೇಶದಿಂದ ಶ್ರಮವನ್ನೆಣಿಸದೆ ದುಡಿಯತೊಡಗಿ ನಾಲ್ಕು ವರ್ಷಗಳಲ್ಲಿ ತಕ್ಕಷ್ಟು ಪ್ರಗತಿಯನ್ನು ಸಾಧಿಸಿ ನನ್ನ ಪ್ರಯತ್ನವನ್ನು ಮುಂದುವರಿಸಿದೆ. ಉದ್ದಾಮ ವಿದ್ವಾಂಸರಾಗಿದ್ದ ಹಲವರು ಮಹನೀಯರ ಮೆಚ್ಚಿಕೆಯೂ ಶ್ಲಾಘನೆಯೂ ಲಭಿಸಿ ನಾನು ಕೃತಾರ್ಥನಾದೆ. ಆ ಮಹನೀಯರ ಹೆಸರುಗಳನ್ನು ಸೂಚಿಸಿದರೆ ದೊಡ್ಡ ಪಟ್ಟಿಯೇ ಆದೀತು. ಅವರ ಮೆಚ್ಚುಗೆಯ ಪರಿಣಾಮವಾಗಿ, ಅದುವರೆಗೆ ನನ್ನನ್ನು ಕಡೆಗಾಣುತ್ತಿದ್ದವರ ದೃಷ್ಟಿಯಲ್ಲಿ ನನ್ನ ತೂಕವೇರಿತು. ದಿವಾನರಾಗಿದ್ದ ಸರ್ ಮಿರ್ಜಾ ಇಸ್ಮಾಯಿಲ್ ಅವರು ಗ್ರಾಮಾಂತರ ಪ್ರದೇಶಗಳಲ್ಲಿಯ

ಸಮಾರಂಭಗಳಲ್ಲಿ ಭಾಗವಹಿಸಿದಾಗ ಇಂಗ್ಲಿಷಿನಲ್ಲಿ ತಮ್ಮ ಭಾಷಣವನ್ನೇ ಓದದೆ ಅದರ ಕನ್ನಡ ಭಾಷಾಂತರವನ್ನು ಮಾತ್ರವೇ ನನ್ನಿಂದ ಓದಿಸಲು ಪ್ರಾರಂಭಿಸಿದರು. ಅನೇಕ ಅಧಿಕಾರಿಗಳೂ, ವೃದ್ಧ ಪಿತಾಮಹ ದಯಾಸಾಗರ ಶ್ರೀ ಎಂ. ವೆಂಕಟಕೃಷ್ಣಯ್ಯನವರೇ ಮುಂತಾದ ಮಹನೀಯರೂ ನನ್ನ ಭಾಷಾಂತರ ಕಾರ್ಯವನ್ನು ಶ್ಲಾಘಿಸಿದುದರಿಂದಲೂ, ಮೈಸೂರು ನಗರಕ್ಕೆ ಮುಂಬಯಿ ಪ್ರಾಂತದಿಂದ ಬಂದಿದ್ದ ಪ್ರಾಧ್ಯಾಪಕರೊಬ್ಬರು ದಿವಾನರ ಇಂಗ್ಲಿಷ್ ಭಾಷಣದ ಕನ್ನಡ ಭಾಷಾಂತರವನ್ನು ಆದರ್ಶ ಭಾಷಾಂತರವೆಂದು ಪ್ರಶಂಸೆ ಮಾಡಿ ಅದರ ಆರು ಪ್ರತಿಗಳನ್ನು ಅವರಿಂದ ಪಡೆದು ತಮ್ಮೊಡನೆ ತೆಗೆದುಕೊಂಡು ಹೋದುದರಿಂದಲೂ, ಒಂದು ಸಮಾರಂಭಕ್ಕೆ ಸಂಬಂಧಪಟ್ಟ ತಮ್ಮ ಇಂಗ್ಲಿಷ್ ಭಾಷಣದ ಮತ್ತು ಅದರ ಕನ್ನಡ ಭಾಷಾಂತರದ ಪ್ರತಿಗಳನ್ನು ದಿವಾನರು ಆಗಿನ ಶೃಂಗೇರಿ ಜಗದ್ಗುರುಗಳಾಗಿದ್ದ ಶ್ರೀ ಚಂದ್ರಶೇಖರ ಭಾರತೀ ಮಹಾ ಸ್ವಾಮಿಗಳವರ ಸನ್ನಿಧಿಗೆ ಕಳುಹಿದಾಗ ಶ್ರೀ ಶ್ರೀಗಳವರು ತಮ್ಮ ಸಂತೋಷವನ್ನು ಸೂಚಿಸಿ ಇಂಗ್ಲಿಷ್ ಪ್ರತಿಯು ಮೊದಲು ಸಿದ್ಧವಾಗಿ ಅನಂತರ ಕನ್ನಡಕ್ಕೆ ಭಾಷಾಂತರವಾಯಿತೋ ಅಥವಾ ಕನ್ನಡ ಪ್ರತಿಯು ಮೊದಲು ಸಿದ್ಧವಾಗಿ ಇಂಗ್ಲಿಷಿಗೆ ಭಾಷಾಂತರವಾಯಿತೋ ತಿಳಿಯದೆಂಬ ಸಂದೇಹವನ್ನು ವ್ಯಕ್ತಪಡಿಸಿ ಶ್ರೀಮುಖ ಪತ್ರವನ್ನು ಬರೆದುದರಿಂದಲೂ, ಸರ್ ಮಿರ್ಜಾ ಇಸ್ಮಾಯಿಲ್ ಅವರಿಗೆ ನನ್ನ ಮೇಲಿನ ಪ್ರೀತಿ ವಿಶ್ವಾಸಗಳು ವಿಶೇಷವಾಗಿ ವೃದ್ಧಿಯಾದುವು. ಅವರ ಪ್ರೀತಿ ವಿಶ್ವಾಸಗಳನ್ನೂ ಪ್ರಸನ್ನತೆಯನ್ನೂ ಕನ್ನಡದ ಪ್ರಯೋಜನಕ್ಕಾಗಿ ಉಪಯೋಗಿಸಿಕೊಳ್ಳಬೇಕೆಂದು ನನಗೆ ಆಶೆಯಾಯಿತು. ಮೈಸೂರು ವಿಶ್ವ ವಿದ್ಯಾನಿಲಯದಲ್ಲಿ ಆಗ ಕನ್ನಡ "ಎಂ.ಎ." ತರಗತಿಯಾಗಲಿ, ಕನ್ನಡ ಪ್ರಾಧ್ಯಾಪಕ (Professor of Kannada) ಹುದ್ದೆಯಾಗಲಿ ಇಲ್ಲದಿದ್ದ ಕೊರತೆಯನ್ನು, ನನಗಿಂತ ದೊಡ್ಡವರೂ ನನ್ನ ಆಪ್ತ ಮಿತ್ರರೂ, ಕನ್ನಡ ಪ್ರೇಮಿಗಳೂ ಆಗಿದ್ದ ಶ್ರೀ ಎಸ್. ಜಿ. ಶಾಸ್ತ್ರಿಯವರಿಗೆ ತಿಳಿಸಿ ಆ ಕೊರತೆಯ ಪರಿಹಾರಕ್ಕಾಗಿ ನಾವಿಬ್ಬರೂ ದಿವಾನರನ್ನು ಸಂದರ್ಶಿಸಿ ಮಾತನಾಡಬೇಕೆಂದು ಸಲಹೆ ಮಾಡಿದೆ. ಆಗ ಅವರು ತೋರಿದ ಉತ್ಸಾಹವನ್ನು ವರ್ಣಿಸಲಳವಲ್ಲ. (ಅವರು ಸರಕಾರಿ ಸಾಬೂನು ಕಾರ್ಖಾನೆಯ "ಸೂಪರಿಂಟೆಂಡೆಂಟ್" ಹುದ್ದೆಯಲ್ಲಿದ್ದರು.) ನಾವಿಬ್ಬರೇ ಹೋಗದೆ, ಹಿಂದೆ ನಮ್ಮಿಬ್ಬರ ಗುರುಗಳೂ, ಭೌತಶಾಸ್ತ್ರದ ನಿವೃತ್ತ ಪ್ರಾಧ್ಯಾಪಕರೂ ಕನ್ನಡದ ಅಭಿಮಾನಿಗಳೂ ಸೆಂಟ್ರಲ್ ಕಾಲೇಜು ಕರ್ಣಾಟಕ ಸಂಘದ ಅಧ್ಯಕ್ಷರವರೂ ಆಗಿದ್ದ ಪೂಜ್ಯ ಶ್ರೀ ಬೆಳ್ಳಾವೆ ವೆಂಕಟನಾರಣಪ್ಪನವರ ನೇತೃತ್ವದಲ್ಲಿ ಹೋಗುವುದು ಮೇಲೆಂದು ಮಾತನಾಡಿಕೊಂಡು ನಾವಿಬ್ಬರೂ ಅವರ ಬಳಿಗೆ ಹೋದೆವು. ಅವರು ನಮ್ಮ ಬಿನ್ನಹಕ್ಕೆ ಸಂತೋಷದಿಂದ ಸಮ್ಮತಿಸಿದರು. ಮೊದಲು ದಿವಾನರನ್ನು ಕಂಡು ಮಾತನಾಡಿದ ಮೇಲೆ "ಲಘು ಬಿಗು" ನೋಡಿಕೊಂಡು ಅನೇಕರಿಂದ ಸಹಿಮಾಡಿಸಿದ ಮನವಿಯೊಂದನ್ನೂ ಸಿದ್ಧಪಡಿಸಿ—ಅವಶ್ಯ ಕಂಡರೆ—ಅದನ್ನೂ ಒಪ್ಪಿಸಬೇಕೆಂದು ನಾವು ಮೂವರೂ ತೀರ್ಮಾನಿಸಿಕೊಂಡೆವು. ದಿವಾನರನ್ನು ಕಾಣಲು ಗೊತ್ತಾದ ದಿನ ಸಕಾಲಕ್ಕೆ ಅವರ ಕಚೇರಿಗೆ

ಹೋದೆವು. ನಾವು ಅವರ ಬಳಿಗೆ ಹೋದಾಗ, ನನ್ನ ಮೇಲಿನ ಅಧಿಕಾರಿಯವರಾಗಿದ್ದ ಸರಕಾರದ ಮುಖ್ಯ ಕಾರ್ಯದರ್ಶಿಯವರೂ, ಶ್ರೀ ಎಸ್. ಜಿ. ಶಾಸ್ತ್ರಿಯವರ ಮೇಲಿನ ಅಧಿಕಾರಿಯವರೂ ಅಲ್ಲಿದ್ದರು. ದಿವಾನರು ನಮ್ಮನ್ನು ಸ್ವಾಗತಿಸಿದ ಬಳಿಕ ಅವರಿಬ್ಬರ ಕಡೆಗೆ ನೋಡಿ, "Here is a deputation of my revered Guru and my intellectual brethren" ಎಂದು ತಿಳಿಸಿ ಅವರಿಬ್ಬರನ್ನೂ ಬೀಳ್ಕೊಟ್ಟರು. ಸರ್ ಮಿರ್ಜಾ ಇಸ್ಮಾಯಿಲ್ ಅವರೂ ನಮ್ಮ ಪೂಜ್ಯ ಗುರುಗಳ ಶಿಷ್ಯರಾಗಿದ್ದವರೆಂಬುದು ನನಗೆ ಗೊತ್ತಾದುದು ಆಗ ಮಾತ್ರವೇ. ನಾವು ದಿವಾನರಲ್ಲಿಗೆ ಹೋಗಿದ್ದ ಉದ್ದೇಶ ವನ್ನು ನಮ್ಮಲ್ಲಿ ಪ್ರತಿಯೊಬ್ಬರೂ ಒತ್ತಿ ಹೇಳಿ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಪ್ರಾಧ್ಯಾಪಕ ಹುದ್ದೆಯನ್ನು ಏರ್ಪಡಿಸದೆ ತಪ್ಪಿದ್ದುದು ಕನ್ನಡಿಗರಿಗೂ ಕನ್ನಡಕ್ಕೂ ಮೈಸೂರು ವಿಶ್ವವಿದ್ಯಾನಿಲಯಕ್ಕೂ, ಮೈಸೂರು ಸಂಸ್ಥಾನಕ್ಕೂ ಅಪಮಾನ ವೆಂದು ಉತ್ಸಾಹದಿಂದ ಬಿನ್ನೈಸಿದೆವು. ದಿವಾನರು ಕೇಳಿದ ಪ್ರಶ್ನೆಗಳಿಗೆ ಸಮಂಜಸವಾಗಿ ಉತ್ತರ ಹೇಳಿದೆವು. ದಿವಾನರು ನಮ್ಮ ಸಲಹೆಗಳನ್ನು ಕುರಿತು ಸಂಬಂಧಪಟ್ಟವರೊಡನೆ ಚರ್ಚೆಮಾಡಿ ಪರ್ಯಾಲೋಚಿಸಿ ನೋಡುವುದಾಗಿ ತಿಳಿಸಿದರು. ಮನವಿಯೊಂದನ್ನು ಸಿದ್ಧಪಡಿಸಿದುದೇ ಮುಂತಾದ ಪ್ರಯತ್ನಗಳು ನಡೆದು ಮುಂದೆ ಯಥಾಕಾಲದಲ್ಲಿ ಮೈಸೂರಿನ ಮಹಾರಾಜಾ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕ ಹುದ್ದೆಯ ಏರ್ಪಾಟು ನಡೆಯಿತು. ಅದರಿಂದ ನಮ್ಮ ಮೂವರಿಗೂ ಮನವಿಗೆ ಸಹಿ ಮಾಡಿದ್ದ ಇತರ ಉತ್ಸಾಹಿ ಗಳಿಗೂ ಉಂಟಾದ ಆನಂದವೆಷ್ಟೆಂಬುದನ್ನು ವಿವರಿಸಬೇಕಾದ ಆವಶ್ಯಕತೆಯೇ ಇಲ್ಲ. ಏತನ್ಮಧ್ಯೆ, ಶ್ರೀ ಎಸ್. ಜಿ. ಶಾಸ್ತ್ರಿಯವರೂ, ನಾನೂ, ನಮ್ಮ ನಮ್ಮ ಮೇಲಿನ ಅಧಿಕಾರಿ ಯವರಿಂದ ಅನುಮತಿಯನ್ನೇ ಪಡೆಯದೆ ದಿವಾನರವರಲ್ಲಿಗೆ ನೇರವಾಗಿ ಹೋದುದು ತಪ್ಪೆಂಬ ಆಕ್ಷೇಪ ಬಂದು ನಮ್ಮಿಬ್ಬರ ಮನಸ್ಸಿಗೂ ಆತಂಕವಾಯಿತು. ಅದು ಶಿಸ್ತು ಪಾಲನೆಯ ನ್ಯಾಯವಾದ ಪ್ರಶ್ನೆ. ಆದರೆ, ನಾವು ಸ್ವಪ್ರಯೋಜನಕ್ಕಾಗಿ ಹಾಗೆ ಮಾಡಲಿಲ್ಲವೆಂದೂ, ಕನ್ನಡ ಭಾಷೆಯ ಮೇಲಿನ ಅಭಿಮಾನದಿಂದ ವರ್ತಿಸಿದ್ದೇವೆಂದೂ ಸ್ವಯಂ ದಿವಾನರೇ ಅಭಿಪ್ರಾಯಪಟ್ಟುದರಿಂದ, ಬೆಟ್ಟದಂತೆ ಬಂದುದು ಮಂಜಿನಂತೆ ಪರಿಹಾರವಾಯಿತು. ಅಲ್ಲದೆ, ಮುಂದೆ ಕೆಲವು ವರ್ಷಗಳ ತರುವಾಯ ನಾವು ಮೂವರೂ ಇಂಗ್ಲಿಷ್-ಕನ್ನಡ ನಿಘಂಟಿನ ರಚನೆಯಾಗಬೇಕೆಂಬ ಸಲಹೆಯ ಸಂಬಂಧ ವಾಗಿ ದಿವಾನರ ಸಂದರ್ಶನಕ್ಕೆ ಹೋದಾಗಲೂ, ಮತ್ತು ಪರಿಷತ್ತಿನ ವರ್ಷಾಶನವನ್ನು ಸರಕಾರದವರು ಹೆಚ್ಚಿಸಬೇಕೆಂಬ ಬಿನ್ನಹ ಸಂಬಂಧವಾಗಿ ಪೂಜ್ಯ ಶ್ರೀ ಬೆಳ್ಳಾವೆ ವೆಂಕಟನಾರಣಪ್ಪನವರ ಮತ್ತು ಪೂಜ್ಯ ಶ್ರೀ ಡಿ. ವಿ. ಗುಂಡಪ್ಪನವರ ಸಂಗಡ ನಾನೂ ಸಂದರ್ಶನಕ್ಕೆ ಹೋದಾಗಲೂ ಅದಕ್ಕೆ ಯಾವ ಆಕ್ಷೇಪವೂ ಬರಲಿಲ್ಲ.

ನಾನು ಸರಕಾರಿ ಉದ್ಯೋಗಕ್ಕೆ ಸೇರಿ ಒಂದು ವರ್ಷ ಕಳೆದಮೇಲೆ ನಡೆದ ಒಂದು ವಿಚಿತ್ರ ಘಟನೆಯನ್ನೂ ಇಲ್ಲಿ ಸೂಚಿಸಬಹುದಾಗಿದೆ; ಅದರ ಹಿನ್ನೆಲೆಯನ್ನು ವಿವರಿಸಿ ದಲ್ಲದೆ ಅದನ್ನು ತಿಳಿಸಿ ಪ್ರಯೋಜನವಿಲ್ಲ. ಅದರ ಹಿನ್ನೆಲೆಯ ವಿವರಗಳಿವು: ಸೆಂಟ್ರಲ್

ಕಾಲೇಜಿನಲ್ಲಿ ಭಾರಿ ಭಾರಿ ಸಂಬಳಗಳನ್ನುಪಡೆಯುತ್ತಿದ್ದ ಯೂರೋಪಿಯನ್ ಜನಾಂಗದ ಪ್ರಾಧ್ಯಾಪಕರು ಕೂಡ ಕಡಮೆ ಸಂಬಳಗಳನ್ನು ಪಡೆಯುತ್ತಿದ್ದ ಅಧ್ಯಾಪಕ ವರ್ಗದವ ರೊಡನೆ ಮತ್ತು ಗುಮಾಸ್ತರುಗಳೊಡನೆ ನಯವಿನಯಗಳಿಂದ ವರ್ತಿಸುತ್ತಿದ್ದುದನ್ನು ಕಣ್ಣಾರೆ ಕಂಡು, ಆಗಾಗ "ಈಶ್ವರಸ್ಸರ್ವಭೂತಾನಾಂ ಹೃದ್ದೇಶೇऽರ್ಜುನ ತಿಷ್ಠತಿ" ಎಂಬ ಗೀತಾ ವಾಕ್ಯವನ್ನು ಮನನಮಾಡುತ್ತಿದ್ದ ನನಗೆ "ಸೆಕ್ರೆಟೇರಿಯಟ್"ನಲ್ಲಿ ಗೆಜೆಟೆಡ್ ಆಫೀಸರುಗಳಲ್ಲನೇಕರು "ನಾನ್‌ಗೆಜೆಟೆಡ್" ವರ್ಗದವರನ್ನು ನಿಕೃಷ್ಟವಾಗಿ ಕಾಣುತ್ತಿದ್ದುದು ಅಸಭ್ಯವರ್ತನೆಯೆಂದು ತೋರಿತು. ಚಿಕ್ಕ ವಯಸ್ಸಿನ "ಗೆಜೆಟೆಡ್ ಆಫೀಸರ್" ಮುಂದೆ ನಿಂತುಕೊಂಡೇ ಕಾಗದಪತ್ರಗಳನ್ನು ತೋರಿಸುತ್ತಿದ್ದರು, ಹಿರಿಯ ವಯಸ್ಸಿನ "ನಾನ್‌ಗೆಜೆಟೆಡ್" ವರ್ಗದವರು; "ಗೆಜೆಟೆಡ್ ಆಫೀಸರ್" ಗಳಲ್ಲಿ ಕೇವಲ ಕಿರಿಯರೇ ತಮ್ಮ ಬಳಿಗೆ ಬಂದರೂ ಹಿರಿಯ "ಗೆಜೆಟೆಡ್" ಆಫೀಸರು ಗಳು ಅವರನ್ನು ಕುರ್ಚಿಗಳ ಮೇಲೆ ಕುಳಿತುಕೊಳ್ಳುವಂತೆ ಹೇಳುತ್ತಿದ್ದರು; ಇನ್ನೊಂದು ವಿಲಕ್ಷಣ ಸಂಗತಿಯೆಂದರೆ, ಒಂದೇ ದೊಡ್ಡ ಕೊಟಡಿಯಲ್ಲಿ ಒಟ್ಟಿಗೆ ಪಕ್ಕಪಕ್ಕದಲ್ಲಿ ಕುಳಿತು ಕಚೇರಿಯ ಕೆಲಸಮಾಡುತ್ತಿದ್ದ "ನಾನ್ ಗೆಜೆಟೆಡ್" ವರ್ಗದವರಲ್ಲಿ ಯಾರೊಬ್ಬರಿಗಾದರೂ "ಗೆಜೆಟೆಡ್ ಆಫೀಸರ್" ಹುದ್ದೆಯು ಲಭಿಸಿ ಅವರು ಅದೇ ಅಠಾರಾ ಕಚೇರಿ (Public Offices) ಕಟ್ಟಡದಲ್ಲಿ ತಮಗಾಗಿ ಗೊತ್ತಾಗಿದ್ದ ಕೊಟಡಿಗೆ ಹೋಗಿ ನೆಲಸಿದರೆ ತೀರಿತು; ಆದುವರೆಗೆ ಅವರ ಅಕ್ಕಪಕ್ಕಗಳಲ್ಲಿ ಕುಳಿತು ಕೆಲಸಮಾಡು ತ್ತಿದ್ದ "ನಾನ್‌ಗೆಜೆಟೆಡ್" ವರ್ಗದವರೇ—ಅದುವರೆಗಿನ ಅವರ ಗೆಳೆಯರೇ—ಕಾಗದ ಪತ್ರಗಳನ್ನು ತೆಗೆದುಕೊಂಡು ಅವರಿಗೆ ತೋರಿಸಿ ಅವರ ಸಹಿ ಹಾಕಿಸಿಕೊಂಡು ಬರಲು ಅವರ ಕೊಟಡಿಗೆ ಹೋದರೂ, ಸುಖವಾಗಿ ಕುರ್ಚಿಯಲ್ಲಿ ಮಂಡಿಸಿದ್ದ ಆ ಗೆಜೆಟೆಡ್ ಆಫೀಸರ್" ಬಳಿಯಲ್ಲಿ—ಅಲ್ಲಿ ಅನೇಕ ಕುರ್ಚಿಗಳಿದ್ದರೂ—ನಿಂತುಕೊಂಡೇ, ಎಷ್ಟು ಹೊತ್ತಾದರೂ ನಿಂತುಕೊಂಡೇ, "ಫೈಲುಗಳ ಸುಲಾವಣೆ" ಮಾಡಿ ಹಿಂತಿರುಗಬೇಕು. ಇದು ಆಗಿನ ಬಿಕ್ಕಟ್ಟಾದ ಸಂಪ್ರದಾಯದಂತಿದ್ದ ವಾಡಿಕೆ. ಇದು ನನ್ನ ಮನಸ್ಸಿಗೆ ಸರಿ ಬೀಳಲಿಲ್ಲ. ತಿಂಗಳಿಗೆ ಸಾವಿರದ ಇನ್ನೂರು ರೂಪಾಯಿ ಸಂಬಳವನ್ನು ಪಡೆಯುತ್ತಿದ್ದ "ಗೆಜೆಟೆಡ್ ಆಫೀಸರ್" ಹುದ್ದೆಯಲ್ಲಿದ್ದ ಪ್ರಿನ್ಸಿಪಾಲ್ ಟೇಟ್ ಸಾಹೇಬರು ತಿಂಗಳಿಗೆ ಎಪ್ಪತ್ತೈದು ರೂಪಾಯಿ ಸಂಬಳವನ್ನು ಪಡೆಯುತ್ತಿದ್ದ "ನಾನ್‌ಗೆಜೆಟೆಡ್" ವರ್ಗದ ಅಧ್ಯಾಪಕರುಗಳನ್ನು ಕುರ್ಚಿಗಳ ಮೇಲೆ ಕುಳ್ಳಿರಿಸಿಕೊಂಡು ಮಾತನಾಡುತ್ತಿದ್ದುದನ್ನು ನಾನು ಕಣ್ಣಾರೆ ಕಂಡಿದ್ದುದೇ ಅದಕ್ಕೆ ಕಾರಣ. ನನ್ನ ಕಚೇರಿಯಲ್ಲಾಗಲಿ, "ಸೆಕ್ರೆ ಟೇರಿಯಟ್" ಕಚೇರಿಯಲ್ಲಾಗಲಿ ಕೆಲಸ ಮಾಡುತ್ತಿದ್ದ "ನಾನ್‌ಗೆಜೆಟೆಡ್" ವರ್ಗ ದವರು ಯಾರೇ ನನ್ನ ಬಳಿಗೆ ಬಂದರೂ ಅವರನ್ನು ಕುರ್ಚಿಯ ಮೇಲೆ ಕುಳ್ಳಿರಿಸಿಕೊಂಡು ಮಾತನಾಡುತ್ತಿದ್ದೆ. ಅದು ಆದ್ಯಕರ್ತವ್ಯವೆಂದೇ ನನ್ನ ಭಾವನೆ. ನನ್ನ ಸಹಾಯ ವನ್ನು ಕೋರಿ ಬರುತ್ತಿದ್ದ ವಿದ್ಯಾರ್ಥಿಗಳನ್ನು ಕೂಡ ನನ್ನ ಬಳಿಯಲ್ಲಿ ಕುಳ್ಳಿರಿಸಿ ಮಾತ ನಾಡಿ ಶಕ್ತ್ಯನುಸಾರವಾಗಿ ಸಹಾಯ ಮಾಡಿ ಕಳುಹುತ್ತಿದ್ದೆ. "ಸೆಕ್ರೆಟೇರಿಯಟ್"

ಕಚೇರಿಯಲ್ಲಿ "ಸೂಪರಿಂಟೆಂಡ್" ಹುದ್ದೆಯಲ್ಲಿದ್ದ "ನಾನ್‌ಗೆಜೆಟೆಡ್" ವರ್ಗದವರಾದ ಹಿರಿಯರೊಬ್ಬರು ಒಮ್ಮೆ ನನ್ನ ಬಳಿಗೆ ಬಂದಾಗ ನನ್ನ ಬಿನ್ನಹದಂತೆ ಕುಳಿತುಕೊಳ್ಳಲು ಸಮ್ಮತಿಸದೆ, "ಗೆಜೆಟೆಡ್ ಆಫೀಸರ ಹತ್ತಿರ ನಾನು ಕೂತ್ಕೊಳ್ಳೋದೇ, ಸಾರ್?" ಎಂದು ಕೇಳಿದರು. ಆಗ ನಾನು ನನ್ನ ತಲೆಯ ಮೇಲಿನ ರುಮಾಲನ್ನು ತೆಗೆದು ಕೈಯಲ್ಲಿ ಹಿಡಿದುಕೊಂಡು, "ನನ್ನ ತಲೆ ನೋಡಿ. ಬೋಳುತಲೆ. ಕೊಂಬುಗಳಿಲ್ಲ. ತಾವು ಕುಳಿತುಕೊಂಡು ಮಾತನಾಡದಿದ್ರೆ ನಾನೂ ನಿಂತುಕೊಂಡೇ ಮಾತನಾಡ್ತೇನೆ" ಎಂದು ಉತ್ತರ ಹೇಳಿ ಎದ್ದು ನಿಂತೆ. ಅವರು ನಕ್ಕು, ನಿರ್ವಾಹವಿಲ್ಲದೆ ಕುಳಿತುಕೊಂಡರು. ಅವರಿಗೆ ಸಂತೋಷವಾಯಿತು. ನಮ್ಮಿಬ್ಬರಿಗೂ ಕಾಫಿಯನ್ನೂ ತರಿಸಿದೆ. ನನ್ನ ವರ್ತನೆಯ ಸುದ್ದಿಯನ್ನು ಅವರು ಹರಡಿದರು. ನಾನು ಹಾಗೆ "ನಾನ್‌ಗೆಜೆಟೆಡ್" ವರ್ಗದವರನ್ನು ಕುಳ್ಳಿರಿಸಿ ಮಾತನಾಡುತ್ತಿದ್ದ ಸಂಗತಿಯು "ಗೆಜೆಟೆಡ್ ಆಫೀಸರ್" ವರ್ಗದವರಲ್ಲಿ ಅನೇಕರಿಗೆ ಸರಿಬೀಳದೆ "ಗೆಜೆಟೆಡ್ ಆಫೀಸರ್" ದರ್ಜೆಯ ದರ್ಪಗೌರವಗಳಿಗೇ ನನ್ನಿಂದ ಅಪಮಾನವೆಂದು ಅವರು ದೂರತೊಡಗಿದರು. ಈ ಬಗೆಯ ಸನ್ನಿವೇಶದಲ್ಲಿ ಒಂದು ದಿನ ಸಾಯಂಕಾಲ ಆರು ಗಂಟೆಯವರೆಗೂ ನಾನು ಕೆಲಸಮಾಡುತ್ತ ನನ್ನ ಕೋಣೆಯಲ್ಲಿ ಕುಳಿತಿದ್ದೆ. ಅಂದು ನನ್ನ ಕಚೇರಿಯ ದಫೇದಾರ್ ಮತ್ತು ಇಬ್ಬರು ಡವಾಯತರು—ಈ ಮೂವರೂ ರಜದ ಮೇಲಿದ್ದರು; ತನ್ನ ಮದುವೆಗಾಗಿ ಒಬ್ಬಾತನಿಗೆ ರಜ, ತಾಯಿಯ ರೋಗದ ದೆಸೆಯಿಂದ ಇನ್ನೊಬ್ಬಾತನಿಗೆ ರಜ; ಕೈಬೆರಳಿಗೆ ಚೇಳು ಕುಟುಕಿದ್ದ ಕಾರಣದಿಂದ ಮೂರನೆಯಾತನಿಗೆ ರಜ. ನನ್ನ ಕಚೇರಿಯ ಸಹೋದ್ಯೋಗಿಗಳು ಐದು ಗಂಟೆಗೆ ತೆರಳಬಹುದೆಂದು ಹೇಳಿ, ಅವರು ತಮ್ಮ ಕೊಟಡಿಗೆ ಬೀಗ ಹಾಕಿಸಿ ಹೊರಟುಹೋದ ಮೇಲೂ ನಾನು ನನ್ನ ಕೋಣೆಯಲ್ಲಿ ಕೆಲಸ ಮಾಡುತ್ತಿದ್ದೆ. ನಾನು ಆ ದಿನ ರಾತ್ರಿ ಶ್ರೀಮನ್ಮಹಾರಾಜರವರ ಭಾಷಣವನ್ನು ಮನೆಯಲ್ಲಿ ಕನ್ನಡಕ್ಕೆ ಭಾಷಾಂತರ ಮಾಡಿ ಬೆಳಗ್ಗೆ ಎಂಟು ಗಂಟೆಗೆ ಸರಕಾರಿ ಮುದ್ರಣಾಲಯಕ್ಕೆ ಕನ್ನಡ ಭಾಷಾಂತರವನ್ನು ಕಳುಹಬೇಕಾಗಿದ್ದ ಕಾರಣ, ಅದನ್ನೂ ಬಿಳಿಯ ಕಾಗದವನ್ನೂ ಕಟ್ಟಿದ್ದ "ಫೈಲ್ ಬೋರ್ಡನ್ನು" ಕಾಗದದ ಚೀಲಕ್ಕೆ ಹಾಕಿ, ಆ ಚೀಲವನ್ನು (ಮನೆಗೆ ಕಳುಹಲು ಸಿಬ್ಬಂದಿಯ ಮೂವರಲ್ಲಾರೂ ಇಲ್ಲದಿದ್ದುದರಿಂದ) ನಾನೇ ತೆಗೆದುಕೊಂಡು ಹೋಗಲು ಕೈಯಲ್ಲಿ ಹಿಡಿದುಕೊಂಡು, ಕಟ್ಟಡದ "ವಾಚ್ಮನ್" ಬಳಿಗೆ ಹೋಗಿ ಆತನನ್ನು ಕರೆದುಕೊಂಡು ಬಂದು ನನ್ನ ಕೊಟಡಿಗೆ ಬೀಗ ಹಾಕಿಸಿ, ಆತನು ಬೀಗದಕೈಗಳ ಗೊಂಚಲನ್ನು ಹೆಗಲಿಗೇರಿಸಿಕೊಂಡು ಹೊರಟಕೂಡಲೆ ಕೆಳಕ್ಕಿಳಿಯಲು ಮಹಡಿ ಮೆಟ್ಟಲುಗಳ ಕಡೆಗೆ ನಡೆಯಲಾರಂಭಿಸಿದೆ. "ಕಾರಿಡರ್"ನಲ್ಲಿ ಹಿಂದಿನಿಂದ ಬರುತ್ತಿದ್ದ ಹಿರಿಯ "ಗೆಜೆಟೆಡ್ ಆಫೀಸರ್" ಒಬ್ಬರು ನನ್ನ ಕೈಯಲ್ಲಿದ್ದ ಕಾಗದದ ಚೀಲವನ್ನು ನೋಡಿ, "ಇದೇನ್ರೀ ನಿಮ್ಮ ಅವಸ್ಥೆ? 'ಗೆಜೆಟೆಡ್' ಆಫೀಸರಾಗಿದ್ದೂ ಫೈಲ್ ಕವರ್ ಹಿಡಿದು ಜವಾನನ ಕೆಲಸಕ್ಕಿಳಿದಿದ್ದೀರಿ? ನಿಮ್ಮಿಂದ ನಮಗೆಲ್ಲಾ ಅವಮಾನ" ಎಂದರು. ನಾನು ಮುಂದೆ ನಡೆಯದೆ ನಿಂತುಕೊಂಡೆ. ಅವರೂ ನನ್ನ ಬಳಿಗೆ

ಬಂದು ನಿಂತು, " ನಾನು ಹೇಳಿದ್ದು ಅರ್ಥವಾಯಿತೇನ್ರೀ ? " ಎಂದು ಅಸಮಾಧಾನದಿಂದ ಪ್ರಶ್ನೆ ಮಾಡಿದರು, ನನಗೆ ನಗು ಬಂದರೂ ನಗದೆ ತಡೆದು, " ಅರ್ಥವಾಯಿತೂ, ಸಾರ್, ಭಗವಂತ ಮುಂದಿನ ಜನ್ಮಕ್ಕೆ ಜವಾನ ಕೆಲಸಕ್ಕೇ ಕಳಿಸಬಹುದೋ ಏನೋ ! ಪ್ರಭು ಅದಕ್ಕೆ ಈಗಿನಿಂದಲೇ ನನ್ನ ಸಿದ್ಧಪಡಿಸ್ತಾ ಇದಾನೋ ಏನೋ ! " ಎಂದು ಶಾಂತವಾಗಿಯೇ ಉತ್ತರ ಹೇಳಿದೆ. ಅವರು " ಏನೆಂದಿರಿ ? " ಎಂದು ಕೇಳಿ ಒಂದೆರಡು ಕ್ಷಣಕಾಲ ಸ್ತಬ್ಧರಾಗಿ ನಿಂತಿದ್ದು, " ಚೆನ್ನಾಗಿ ಪಾಠ ಕಲಿಸಿದ್ರಿ. ನನ್ನ ತಪ್ಪು ಗೊತ್ತಾಯ್ತು. ನಿಮ್ಮನ್ನ ' ಕ್ರಿಟಿಸೈಜ್ ' ಮಾಡ್ತಿದ್ದೋರಲ್ಲಿ ನಾನೂ ಒಬ್ಬ " ಎಂದು ಗದ್ಗದ ಧ್ವನಿಯಿಂದ ಹೇಳಿದರು. ಅವರ ಕೆನ್ನೆಗಳ ಮೇಲೆ ಕಂಬನಿಯುರುಳಿತು, ಕಣ್ಣುಗಳಿಂದ. ಅವರು ಸುಸಂಸ್ಕೃತರು ; ಆದರೂ ಸಂಪ್ರದಾಯದ ಬಿಕ್ಕಟ್ಟಿಗೆ ಒಳಗಾಗಿದ್ದರು; ಸಂಪ್ರದಾಯದ ಬಿಕ್ಕಟ್ಟು ಧಾರ್ಮಿಕ ಕ್ಷೇತ್ರಕ್ಕೆ ಮಾತ್ರವೇ ಸೀಮಿತವಲ್ಲ. ಜಾತಿ ಮತ ವರ್ಗಗಳನ್ನೆಣಿಸದೆ ನನ್ನ ಸಹೋದ್ಯೋಗಿಗಳೂ ನಾನೂ ಒಂದೇ ಕುಟುಂಬಕ್ಕೆ ಸೇರಿದವರೆಂಬ ಭಾವನೆಯಿಂದ ನಾನು ವರ್ತಿಸುತ್ತಿದ್ದುದರ ಗುಟ್ಟು ತಮಗೆ ಮನವರಿಕೆಯಾಯಿತೆಂದೂ ಅವರು ಆ ಬಳಿಕ ಆತ್ಮೀಯತೆಯಿಂದ ನನ್ನೊಡನೆ ತಿಳಿಸಿದಾಗ, ಸರ್ವ ಸಮಭಾವದಿಂದ ವರ್ತಿಸುತ್ತಿದ್ದ ನನ್ನ ಗುರುಗಳೆಲ್ಲರ ಮಾರ್ಗದರ್ಶನ ಪ್ರಭಾವವೂ, ನನ್ನ ಸಹೋದ್ಯೋಗಿಗಳ ಸೋದರ ಪ್ರೇಮದ ಸಹಕಾರವೂ ಅದಕ್ಕೆ ಕಾರಣಗಳೆಂದೂ, ಅವು ಲಭಿಸಿದುದು ನನ್ನ ಪೂರ್ವಜನ್ಮದ ಪುಣ್ಯವೆಂದೂ ಹೇಳಿದೆ. ಈ ಘಟನೆಯು ನಡೆದ ಕೆಲವು ತಿಂಗಳುಗಳ ತರುವಾಯ ದಿವಾನ್ ಸರ್. ಎ. ಆರ್. ಬಾನರ್ಜಿಯವರು ತಮ್ಮ ಹುದ್ದೆಯಿಂದ ವಿಶ್ರಾಂತರಾದಾಗ ನಡೆದ ವಿಶೇಷ ಸ್ವಭಾವದ ಒಂದು ಸಂಗತಿಯನ್ನೂ ಈ ಸಂದರ್ಭದಲ್ಲಿ ಸೂಚಿಸಲಿಚ್ಛಿಸುತ್ತೇನೆ. ಆ ಬಗೆಯದು ಹಿಂದೆಂದೂ ನಡೆದಿರಲಿಲ್ಲ ಮತ್ತು ಆ ತರುವಾಯವೂ ನಡೆಯಲಿಲ್ಲ; ಆದುದರಿಂದ, ನನ್ನ ಭಾವನೆಯಲ್ಲಿ ಅದು ವಿಶೇಷ ಸ್ವಭಾವದ ಸಂಗತಿ ; ಅದು ಅಸಾಧಾರಣ ಸಂಗತಿಯೆಂದರೂ ಸಲ್ಲುವುದು. ದಿವಾನರು ಬೀಳ್ಕೊಡುಗೆಯ ಸಮಾರಂಭಕ್ಕೂ ಅದರ ಸಂಬಂಧವಾದ ಉಪಾಹಾರ ಕೂಟಕ್ಕೂ ಕೃಪೆಯಿಟ್ಟು ಸಮ್ಮತಿಸಬೇಕೆಂದು ಸರಕಾರದ ಮುಖ್ಯಕಾರ್ಯದರ್ಶಿಯವರೇ ಮುಂತಾದ ಹಿರಿಯ ಅಧಿಕಾರಿಗಳು ಬಿನ್ನೈಸಿದಾಗ, ಅವರು ಎರಡು ಸಮಯಗಳ (ಷರತ್ತುಗಳ) ಮೇಲೆ ಸಮ್ಮತಿಸುವುದಾಗಿ ತಿಳಿಸಿದರು ; " ನಾನ್‌ಗೆಜೆಟೆಡ್ " ವರ್ಗದವರಿಂದ ಚಂದಾಹಣವನ್ನೆತ್ತದೆ " ಗೆಜೆಟೆಡ್ " ವರ್ಗದವರೇ ವೆಚ್ಚವನ್ನು ಪೂರ್ತಿಯಾಗಿ ವಹಿಸಬೇಕು, " ಗೆಜೆಟೆಡ್ " ವರ್ಗದವರಲ್ಲಿ ಅಶಕ್ತರಾಗಿರುವ ಹೆಚ್ಚು ವಯಸ್ಸಿನವರು ಹೊರತು ಉಳಿದವರೆಲ್ಲರೂ ಉಪಾಹಾರ ಕೂಟದಲ್ಲಿ " ನಾನ್‌ಗೆಜೆಟೆಡ್ " ವರ್ಗದವರಿಗೆ ಉಪಾಹಾರ ವಸ್ತುಗಳನ್ನು ಬಡಿಸಿ ಆ ಬಳಿಕ ತಾವೂ ಅವುಗಳನ್ನು ಸೇವಿಸಬೇಕು—ಎಂಬಿವು, ಆ ಸಮಯಗಳು (ಷರತ್ತುಗಳು) ; ಅವಕ್ಕನುಸಾರವಾಗಿಯೇ ಉಪಾಹಾರ ಕೂಟವೂ, ಬೀಳ್ಕೊಡುಗೆಯ ಸಮಾರಂಭವೂ ನಡೆಯಲೇಬೇಕಾಯಿತು. ನನ್ನ ಮನಸ್ಸಿಗೇನೋ ಪರಮ ಸಂತೋಷ. ಐನೂರು ರೂಪಾಯಿಗಳಿಗಿಂತ ಕಡಮೆ ಸಂಬಳ

ಪಡೆಯುತ್ತಿದ್ದವರು ಪ್ರತಿಯೊಬ್ಬರೂ ಐವತ್ತು ರೂಪಾಯಿಗಳನ್ನೂ, ಉಳಿದವರು ಪ್ರತಿಯೊಬ್ಬರೂ ನೂರು ರೂಪಾಯಿಗಳನ್ನೂ ಕೊಡುವಂತೆ ಗೊತ್ತಾಯಿತು. ಅನೇಕರ ಮನಸ್ಸಿಗೆ ಅಸಮಧಾನ; "ಇದು ಪಾಪ್ಯುಲಾರಿಟಿ ಸ್ಟಂಟ್", "ಕೇಟರರ್ ಕಳಿಸೋ ಸರ್ವೆಂಟ್ಸ್ ಜೊತೇಲಿ ನಾವೂ ಫಳಾರದ ಸಾಮಾನು ಹೊತ್ತು ನಾನ್‌ಗೆಜೆಟೆಡ್ ತಂಡ ದೋರಿಗೆ ಟೇಬಲ್ ಸರ್ವಿಸ್ ಮಾಡೋದೆ, ಗೆಜೆಟೆಡ್ ಆಫೀಸರುಗಳಾಗಿ?" ಮುಂತಾದ ಉದ್ಗಾರಗಳು ಅವರಿಂದ; ಮಾಡಲು ಅಪಮಾನ ಭಾವನೆ; ಮಾಡುವುದಿಲ್ಲವೆನ್ನಲು ಮನಸ್ಸಿಲ್ಲ, ದಿವಾನರ ಕೊನೆಯ ಆಣತಿಯಂತಿದ್ದ ಅವರ ಕೋರಿಕೆಯನ್ನು ನಡಸುವುದು ತಮ್ಮ ಕರ್ತವ್ಯವೆಂಬ ದಾಕ್ಷಿಣ್ಯ ಭಾವನೆಯ ಕಾರಣದಿಂದ. ಬಡಿಸ ಹೊರಡಲು ಅವರಲ್ಲಿ ಕೆಲವರು ಸಂತೋಷವಾಗಿಯೇ ಇದ್ದರು. ಆದರೆ ಉಳಿದವರನೇಕರಿಗೆ ಅದು ಸುತರಾಂ ಇಷ್ಟವಾಗಲಿಲ್ಲ. ಆದರೂ, ಬಲವಂತ ಮಾಘಸ್ನಾನದಂತೆ ಉಪಾಹಾರ ಕೂಟ ವೇನೊ ನಡೆದೇ ಹೋಯಿತು, ದಿವಾನರ ಕೋರಿಕೆಗನುಸಾರವಾಗಿ; ಅದು ಹಾಗಿರಲಿ. ನಾನು ಸರಕಾರಿ ಉದ್ಯೋಗಕ್ಕೆ ಸೇರಿದ ತರುವಾಯ ನನಗೆ ನಿಕಟಸಂಬಂಧವಿದ್ದ ಅನೇಕ ಅಧಿಕಾರಿಗಳ (ಆಫೀಸರುಗಳ) ಅಮೋಘ ಗುಣಗಳ ಸವಿನೆನಪುಗಳನ್ನು ನಿದರ್ಶನಪೂರ್ವಕವಾಗಿ ಸೂಚಿಸಲು ಆಸೆಯಾಗುತ್ತಿದೆ. ಆದರೆ, ಅದಕ್ಕೆ ಇಲ್ಲಿ ಸ್ಥಳಾವಕಾಶವಿಲ್ಲವೆಂದು ಸುಮ್ಮನಿರಬೇಕಾಗಿದೆ.

ಹಿಂದೆ ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿ (Vice-Chancellor) ಪದವಿಯಲ್ಲಿದ್ದ ಡಾಕ್ಟರ್ ಸರ್ ಬ್ರಜೇಂದ್ರನಾಥ್ ಶೀಲ್ ಅವರ ಉಪಕಾರದ ಸವಿನೆನಪನ್ನು ಸೂಚಿಸುವುದು ನನ್ನ ಕರ್ತವ್ಯ. ಬೆಂಗಳೂರಿನ "ಮಿಥಿಕ್ ಸೊಸೈಟಿ" ಎಂಬ ಸಂಘದ ಆಶ್ರಯದಲ್ಲಿ ನಾನು ೧೯೨೫ನೆಯ ಸಂವತ್ಸರದಲ್ಲಿ "Bhasa and Kalidasa in the light of western criticism" ಎಂಬ ವಿಷಯವನ್ನು ಕುರಿತು ಇಂಗ್ಲಿಷ್ ಭಾಷೆಯಲ್ಲಿ ಭಾಷಣಮಾಡಿದೆ. ಭಾಸಮಹಾಕವಿಯ ವಿಷಯವಾಗಿ ಬೆಂಗಳೂರಿನಲ್ಲಿ ಅದಕ್ಕೆ ಮುಂಚೆ ಮತ್ತಾರೂ ಭಾಷಣ ಮಾಡಿರಲಿಲ್ಲ. ಅಧ್ಯಕ್ಷತೆ ವಹಿಸಿದ್ದ ರಾಜಕಾರ್ಯ ಪ್ರಸಕ್ತ ರಾವ್‌ಬಹದ್ದೂರ್ ಶ್ರೀ ಎಂ. ಶಾಮರಾಯರಿಂದಲೂ, ಉದ್ದಾಮ ವಿದ್ವಾಂಸರುಗಳಾಗಿದ್ದ ಇತರ ಅನೇಕ ಮಹನೀಯರಿಂದಲೂ ಲಭಿಸಿದ ಮೆಚ್ಚಿಕೆಯಿಂದ ನಾನು ಧನ್ಯನಾದೆನೆಂದುಕೊಂಡೆ. ಪ್ರಾಕ್ತನ ವಿಮರ್ಶ ವಿಚಕ್ಷಣ ರಾವ್‌ಬಹದ್ದೂರ್ ಶ್ರೀ ಆರ್. ನರಸಿಂಹಾಚಾರ್ಯರು, ಶ್ರೀ ಬೆನಗಲ್ ರಾಮರಾಯರು, ರಾಜಚರಿತ ವಿಶಾರದ ರಾವ್‌ಸಾಹೇಬ್ ಶ್ರೀ ಸಿ. ಹಯವದನರಾಯರು, ರಾಜಸೇವಾಸಕ್ತ ಶ್ರೀ ಡಿ. ವೆಂಕಟರಾಮಯ್ಯನವರು, ರಾಜಸಭಾಭೂಷಣ ಫಾದರ್ ಟಬಾರ್ಡ್ ಅವರು ("ಮಿಥಿಕ್ ಸೊಸೈಟಿ"ಯ ಆಗಿನ ಅಧ್ಯಕ್ಷರು), ಫಾದರ್ ಬ್ರೌನ್ ಅವರು, ಕರ್ನಲ್ ಸ್ಮಿಪ್ಲಿತ್ ಅವರು, ಅರ್ಥಶಾಸ್ತ್ರವಿಶಾರದ ಮಹಾಮಹೋಪಾಧ್ಯಾಯ ಡಾಕ್ಟರ್ ಆರ್. ಶಾಮಶಾಸ್ತ್ರಿಯವರು ಮುಂತಾದವರು ತಮ್ಮ ಮೆಚ್ಚಿಕೆಯನ್ನು ಸೂಚಿಸಿ ಅಭಿನಂದಿಸಿದ ಆ ಮಹನೀಯರಲ್ಲಿ ಮುಖ್ಯರು. ನನ್ನ ಭಾಷಣವನ್ನು ಸಂಘದವರು,

ಸಂಘದಿಂದ ಪ್ರಕಟವಾದ ಇಂಗ್ಲಿಷ್ ಪತ್ರಿಕೆಯಲ್ಲಿ ಪ್ರಕಟಿಸಿದರು. ಆ ತರುವಾಯ ಒಂದು ದಿನ ಡಾಕ್ಟರ್ ಸರ್ ಬ್ರಜೇಂದ್ರನಾಥ್ ಶೀಲ್ ಅವರು (ಬೆಂಗಳೂರಿನಲ್ಲಿ) ತಮ್ಮನ್ನು ಕಾಣಬೇಕೆಂದು ಆಹ್ವಾನಿಸಿದರು. ನಾನು ಅದಕ್ಕೆ ಮೊದಲು ಅವರ ಪರಿಚಯದ ಸುಯೋಗವನ್ನೇ ಪಡೆದಿರಲಿಲ್ಲ. ನನ್ನನ್ನು ಅವರು ವಿಶ್ವಾಸದಿಂದ ಬರಮಾಡಿ ಕೊಂಡು ಪತ್ರಿಕೆಯಲ್ಲಿ ಪ್ರಕಟವಾಗಿದ್ದ ನನ್ನ ಭಾಷಣವನ್ನು ತಾವು ಓದಿದು ದಾಗಿಯೂ, ತಮ್ಮ ಸಂತೋಷವನ್ನೂ ಅಭಿನಂದನೆಗಳನ್ನೂ ಸೂಚಿಸುವುದಕ್ಕಾಗಿ ನನಗೆ ತೊಂದರೆ ಕೊಟ್ಟು ನನ್ನನ್ನು ಬರಮಾಡಿಕೊಂಡುದಾಗಿಯೂ ಆದರದಿಂದ ತಿಳಿಸಿದರು. ಅಂತರ ರಾಷ್ಟ್ರೀಯ ಖ್ಯಾತಿಯನ್ನುಗಳಿಸಿದ್ದ ಆ ಮಹನೀಯರ ಮಾತುಗಳಿಂದ ನನಗುಂಟಾದ ಆನಂದಭರದಲ್ಲಿ ಮಾತೇ ಹೊರಡದಂತಾಯಿತು; ಅವರಿಗೆ ಕೃತಜ್ಞತೆಯಿಂದ ವಂದನೆ ಗಳನ್ನೂ ಸಲ್ಲಿಸದೆ ಮೌನವಾಗಿ ನಿಂತೆ. ಒಂದೆರಡು ನಿಮಿಷಗಳು ಹಾಗೆ ನಿಂತಿದ್ದು ಆ ಬಳಿಕ ಅಷ್ಟು ದೊಡ್ಡವರು ಅಲ್ಪನಾದ ನನ್ನಲ್ಲಿ ತೋರಿದ ಪರಮಕೃಪೆಗಾಗಿ ನಾನು ಅವರಿಗೆ ಎಷ್ಟು ಕೃತಜ್ಞನಾಗಿದ್ದರೂ ಸಾಲದೆಂದು ತಿಳಿಸಿದೆ, ಇಂಗ್ಲಿಷ್ ಭಾಷೆಯಲ್ಲಿ. ಅವರು ಆ ಬಳಿಕ, "I advised a friend of mine to write a book on Bhasa and Kalidasa on these lines but unfortunately he died. I am too old to take up this work. I think you are the fittest person to take up this work and write a book. I give you the blessings of an old man and wish you success" ಎಂದು ಹೇಳಿದರು; ಭಾಸ ಮಹಾಕವಿಯ ಮತ್ತು ಕಾಳಿದಾಸ ಮಹಾಕವಿಯ ವಿಚಾರವಾಗಿ ನಾನು ಇಂಗ್ಲಿಷ್ ಭಾಷೆಯಲ್ಲಿ ಒಂದು ದೊಡ್ಡ ವಿಮರ್ಶಾ ಗ್ರಂಥವನ್ನು ಬರೆಯಬೇಕೆಂಬುದು ಅವರು ಹೇಳಿದ ಮಾತುಗಳ ಆಶಯ. ಆದರೆ ನಾನು ಹಾಗೆ ಮಾಡದೆ ಕನ್ನಡದ ಮೇಲಿನ ಪ್ರೀತಿಯಿಂದ ಮುಂದೆ ೧೯೩೦ನೆಯ ಸಂವತ್ಸರದಲ್ಲಿ "ಭಾಸ ಮಹಾಕವಿ" ಎಂಬ ಹೆಸರಿನ ಕನ್ನಡ ಪುಸ್ತಕವನ್ನು ಪ್ರಕಟಿಸಿದೆ. ಆ ಪುಸ್ತಕದ ಪ್ರತಿಗಳ ಬೆಲೆಯನ್ನು ಅಸಲು ಮೊಬಲಗಿನ ಅರ್ಧದಷ್ಟೇ ಇರುವಂತೆ ಗೊತ್ತುಮಾಡಿದೆ. ಪೂಜ್ಯ ಶ್ರೀ ಡಿ. ವಿ. ಗುಂಡಪ್ಪನವರು ಅದನ್ನು ಕಂಡು ಹರ್ಷಿಸಿ, ಪುಸ್ತಕದ ವಿಚಾರವಾಗಿ ತಮ್ಮ ಮೆಚ್ಚಿಕೆಯನ್ನು ಸೂಚಿಸಿ, ನನ್ನನ್ನು "ಭಾಸ ಮಿಷನರಿ" ಎಂದು ಕರೆದು ವಾತ್ಸಲ್ಯ ತೋರಿದರು. ಪ್ರಾಧ್ಯಾಪಕ ಎಂ. ಹಿರಿಯಣ್ಣನವರು, ಅರ್ಥಶಾಸ್ತ್ರವಿಶಾರದ ಶ್ರೀ ಆರ್. ಶಾಮಶಾಸ್ತ್ರಿಯವರು, ಪ್ರಾಧ್ಯಾಪಕ ಬಿ. ಎಂ. ಶ್ರೀಕಂಠಯ್ಯನವರು, ನನ್ನ ಗುರುಗಳಾದ ಶ್ರೀ ಎ. ಆರ್. ಕೃಷ್ಣಶಾಸ್ತ್ರಿಯವರು ಮುಂತಾದ ಇತರ ವಿದ್ವಾಂಸರುಗಳೂ ತಮ್ಮ ಮೆಚ್ಚಿಕೆಯನ್ನು ಸೂಚಿಸಿ ಉಪಕರಿಸಿದರು. ಮದರಾಸಿನ "ಇಂಡಿಯನ್ ರಿವ್ಯೂ" ಎಂಬ ಹೆಸರಿನ ಇಂಗ್ಲಿಷ್ ಪತ್ರಿಕೆಯಲ್ಲಿ ಪ್ರಕಟವಾಗಿದ್ದ (ನಾನಾ ಪತ್ರಿಕೆ ಗಳಲ್ಲಿಯ ಗಮನಾರ್ಹ ಲೇಖನಗಳ) ವಿಮರ್ಶೆಯ ಟಿಪ್ಪಣಿಗಳಲ್ಲಿ ಪ್ರಸಕ್ತ ಲೇಖನದ (ಎಂದರೆ, ನನ್ನ ಭಾಷಣದ) ಮೇಲಿನ ಶ್ಲಾಘನೆಯ ಟಿಪ್ಪಣಿಯೂ ಪ್ರಕಟವಾಗಿದ್ದುದನ್ನೂ

ಅವರೇ ನನಗೆ ತೋರಿಸಿ "ಹಾರ್ಟಿ ಕಂಗ್ರ್ಯಾಚುಲೇಷನ್ಸ್" ("ಹಾರ್ದಿಕ ಅಭಿನಂದನೆಗಳು") ಎಂದರು. ಅವರ ಸರಳತೆಯನ್ನೂ, ಸೌಹಾರ್ದವನ್ನೂ ಕಂಡು ನಾನು ಬೆಕ್ಕಸ ಬೆರಗಾದೆ. ಆ ಬಳಿಕ ಅವರು ಆದರದಿಂದಲೂ ವಾತ್ಸಲ್ಯದಿಂದಲೂ ನನ್ನೊಡನೆ ಆಡಿದ ಮಾತುಗಳು ನನ್ನ ಹೃದಯದಲ್ಲಿ ಅವರ ಮೇಲಿನ ಅಚಲ ಭಕ್ತಿಯನ್ನೂ ಅಮಿತ ಪ್ರೀತಿಯನ್ನೂ ಮೂಡಿಸಿದುವು. ಅದೇ ೧೯೨೯ನೆಯ ವರ್ಷ ಬೆಂಗಳೂರಿನ "ಅಮೆಚ್ಯೂರ್ ಡ್ರಮ್ಯಾಟಿಕ್ ಅಸೋಸಿಯೇಷನ್" ಎಂಬ ಹೆಸರಿನ ನಾಟಕ ಕಲಾಸಂಘದವರು ಕಾಳಿದಾಸ ಜಯಂತ್ಯುತ್ಸವದಲ್ಲಿ ನಾನು ಕಾಳಿದಾಸ ಮಹಾಕವಿಯ ವಿಚಾರವಾಗಿ ಕನ್ನಡದಲ್ಲಿ ಭಾಷಣ ಮಾಡಿದಾಗಲೂ, ಆ ತರುವಾಯ ನಾನು ಮೈಸೂರು ವಿಶ್ವವಿದ್ಯಾನಿಲಯದ ಪ್ರಚಾರೋಪನ್ಯಾಸ ಮಾಲೆಗೆ ಸಂಬಂಧಪಟ್ಟಂತೆ ಮೈಸೂರು ಮಹಾರಾಜಾ ಕಾಲೇಜಿನಲ್ಲಿ ಎರಡು ಭಾಷಣಗಳನ್ನು ಮಾಡಬೇಕೆಂಬ ಆಹ್ವಾನ ಬಂದುದರ ಮೇಲೆ ಭಾಸ ಮಹಾಕವಿಯ ವಿಚಾರವಾಗಿ ಕನ್ನಡದಲ್ಲಿ ಭಾಷಣ ಮಾಡಿದಾಗಲೂ ನನಗೆ ಲಭಿಸಿದ ಪ್ರೋತ್ಸಾಹವೂ ಶ್ಲಾಘನೆಯೂ ಅಷ್ಟಿಷ್ಟಲ್ಲ. ಆ ಉಪಕಾರವನ್ನು ಕೃತಜ್ಞತೆಯಿಂದ ನೆನೆಯುವುದು ಮನಸ್ಸಿಗೆ ಹಿತವಾದ ಕರ್ತವ್ಯ; ಕನ್ನಡಕ್ಕೆ ಪ್ರಾಧಾನ್ಯ ಪ್ರೋತ್ಸಾಹಗಳು ತೀರ ಕಡಮೆಯಾಗಿದ್ದ ಕಾಲದಲ್ಲಿ ನಡೆದ ಆ ಬಗೆಯ ಉಪಕಾರಕ್ಕೆ ಬಹಳ ಬೆಲೆಯೆಂದರೆ, ಅದೇನೂ ಅತ್ಯುಕ್ತಿಯಲ್ಲ. ಆ ಬಳಿಕ ಅನೇಕ ಸ್ಥಳಗಳ ನಾನಾ ಸಂಘಗಳ ಮತ್ತು ಸಂಸ್ಥೆಗಳ ಆಶ್ರಯದಲ್ಲಿ ಭಾಷಣಮಾಡಲು ನನಗೆ ಆಹ್ವಾನಗಳು ಬರತೊಡಗಿದುವು. ನನ್ನ ಕನ್ನಡ ಬಾಂಧವರ ಅಕ್ಕರೆಯ ಕರೆಗೆ ಓಗೊಟ್ಟು ಆಸ್ಥೆಯಿಂದ ಕನ್ನಡದ ಸೇವೆಮಾಡಲು ನಿರ್ಧರಿಸಿದೆ. ಮತ್ತು ಕನ್ನಡದಲ್ಲಿ ಗ್ರಂಥಗಳನ್ನು ಬರೆದೂ ಕನ್ನಡಕ್ಕೆ ನನ್ನ ಅಲ್ಪ ಸೇವೆಯನ್ನು ಭಕ್ತಿಯಿಂದ ಸಲ್ಲಿಸಬೇಕೆಂದೂ ನಿರ್ಧರಿಸಿದೆ. ಕೋಲಾರ ಮುಂತಾದ ಕೆಲವು ಸ್ಥಳಗಳಿಗೆ ಪೂಜ್ಯ ಶ್ರೀ ಬಿ. ಎಂ. ಶ್ರೀಕಂಠಯ್ಯನವರ ಜೊತೆಯಲ್ಲಿ ಹೋಗಿ ಅವರ ಅಧ್ಯಕ್ಷತೆಯಲ್ಲಿ ಭಾಷಣಮಾಡಿದ ಸುಯೋಗವೂ ಲಭಿಸಿತು. ಕನ್ನಡದ ಏಳಿಗೆಗಾಗಿ ದುಡಿಯುತ್ತಿದ್ದ ಆಗಿನ ಸಂಘ ಸಂಸ್ಥೆಗಳಲ್ಲಿ ಹೆಚ್ಚು ಸಂಖ್ಯೆಯವುಗಳಿಗೆ ಭಾಷಣಕಾರರ ಮತ್ತು ಅಧ್ಯಕ್ಷರ ಪ್ರಯಾಣದ ವೆಚ್ಚವನ್ನು ಸಲ್ಲಿಸುವಷ್ಟು ಮಟ್ಟಿನ ಹಣದ ಅನುಕೂಲವೂ ಇರಲಿಲ್ಲ. ಆದಕಾರಣ, ಅವರು ತಮ್ಮ ಪ್ರಯಾಣದ ವೆಚ್ಚವನ್ನು ತಾವೇ ವಹಿಸಿಕೊಂಡು ಸೇವೆ ಸಲ್ಲಿಸಿ ಬರುತ್ತಿದ್ದುದೇ ಆಗಿನ ವಾಡಿಕೆ. ನಿರ್ಮಲ ಮನಸ್ಸಿನ ಗುರುವರ್ಯರುಗಳಲ್ಲೊಬ್ಬರಾಗಿದ್ದ ಪೂಜ್ಯ ಶ್ರೀ ಎ. ಆರ್. ಕೃಷ್ಣಶಾಸ್ತ್ರಿಯವರಿಂದ ಲಭಿಸಿದ ಶಿಕ್ಷಣದ ಪರಿಣಾಮವಾಗಿ ನನ್ನಲ್ಲಿ ಕನ್ನಡದ ಮೇಲಿನ ಗೀಳೇ ಮೂಡಿತು. ವಾತ್ಸಲ್ಯ ಪೂರಿತವಾದ ಅವರ ಹರಕೆಯ ಪ್ರಭಾವವೇ, ನಮ್ಮ ಕನ್ನಡನಾಡಿನ ಮೇಲಿನ ಪ್ರೀತಿ ಭಕ್ತಿಗಳನ್ನು ನನ್ನಲ್ಲಿ ಉದ್ದೀಪಿಸಿ, ನಾನಾ ಸಮಾರಂಭಗಳಲ್ಲಿ ಭಾಷಣಮಾಡುವುದಕ್ಕಾಗಿ ಮತ್ತು ಅಧ್ಯಕ್ಷತೆ ವಹಿಸುವುದಕ್ಕಾಗಿ ನಾನಾ ಸ್ಥಳಗಳ ಯಾತ್ರೆಗೆ ನನ್ನನ್ನು ನಿಯೋಜಿಸಿ ಧನ್ಯನಾಗಿಸಿತೆಂಬುದೆಂದು ನನ್ನ ನಂಬಿಕೆ. ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಾದ ತರುವಾಯ ಆರುನೂರು ಸಂವತ್ಸರಗಳು

ಪೂರೈಸಿದ ಸವಿನೆನಪಿಗಾಗಿ ಹಂಪೆಯಲ್ಲಿ ವಿಶೇಷ ವೈಭವ ವಿಜೃಂಭಣೆಗಳಿಂದ ಹಂಪೆಯಲ್ಲಿ ನಡೆದ ಸ್ಮರಣಮಹೋತ್ಸವ ಸಮಾರಂಭದಲ್ಲಿ ಕನ್ನಡ ನಾಡಿನ ನಾನಾ ಭಾಗಗಳಿಂದ ಬಂದಿದ್ದ ವಿದ್ವಾಂಸರುಗಳೂ, ಅಧ್ಯಕ್ಷರಾಗಿದ್ದ ಕರವೀರ ಪೀಠಾಧಿಪತಿಗಳಾದ ಜಗದ್ಗುರುಗಳೂ. ಆಗ್ಗೆ ಸೇರಿದ್ದ ಇತರ ಅನೇಕ ಸಹಸ್ರಮಂದಿ ದೇಶಬಾಂಧವರೂ ನನ್ನಿಂದ ನಡೆದ ಮೂರು ಭಾಷಣಗಳನ್ನು ಕೇಳಿ ಹರ್ಷಿಸಿ ನನ್ನಲ್ಲಿ ತೋರಿದ ಮೆಚ್ಚಿಕೆಯ ಮತ್ತು ಪ್ರೀತ್ಯಾದರಗಳ ಸವಿನೆನಪು ಎಂದಿಗೂ ಮಾಸುವಂತಿಲ್ಲ. ಶ್ರೀ ಮಂಜಯ್ಯ ಹೆಗ್ಗಡೆಯವರ ಕಾಲದಲ್ಲಿ ಧರ್ಮಸ್ಥಳದ ಲಕ್ಷದೀಪೋತ್ಸವ ಸಮಯದಲ್ಲಿ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದಾಗಿನ ಮತ್ತು ಮುಂದೆ ೧೯೪೭ನೆಯ ಸಂವತ್ಸರದಲ್ಲಿ ಹರಪನಹಳ್ಳಿಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದಾಗಿನ ಸವಿನೆನಪೂ ಅದೇ ಬಗೆಯವು.

ನಾನು ಅಪರಿಚಿತರೊಬ್ಬರಿಗೆ ಸಹಾಯವನ್ನು ದೊರೆಯಿಸಿದ ಸುಯೋಗದ ನೆನಪನ್ನು ಸೂಚಿಸಲು ಸಂತೋಷವಾಗುತ್ತದೆ. ಒಂದು ಭಾನುವಾರ ಬೆಳಗ್ಗೆ ಎಂಟು ಗಂಟೆಯ ಸಮಯದಲ್ಲಿ ಯುವಕರೊಬ್ಬರು ನನ್ನ ಮನೆಗೆ ಬಂದರು. ನಾನು ಅವರನ್ನು ಕುರಿತು "ಬನ್ನಿ, ನೀವು ಯಾರು, ನನ್ನಿಂದೇನಾಗಬೇಕು?" ಎಂದು ಹೇಳಿ ನನ್ನ ಕೋಣೆಗೆ ಕರೆದುಕೊಂಡು ಹೋದೆ. ಅವರು, "ನಾನು ಬಿ.ಎಸ್‌ಸಿ. ಮಾಡಿದ್ದೀನಿ. ಹಸಿವಿನಿಂದ ದಿಕ್ಕುತೋರದಂತಾಗಿದ್ದೀನಿ. ತಮ್ಮ ಸಹಾಯವಾಗಬೇಕು" ಎಂದರು. "ಅಗತ್ಯವಾಗಿ ಆಗಲಿ, ಕೂತುಕೊಳ್ಳಿ. ಈಗಲೇ ಬರ್ತೀನಿ" ಎಂದು ಹೇಳಿ, ಅಡಿಗೆಯ ಮನೆಗೆ ಹೋಗಿ ನನ್ನ ಸಹಧರ್ಮಿಣಿಗೆ ಯುವಕರೊಬ್ಬರು ಹಸಿದು ಬಂದಿದ್ದಾರೆಂದು ತಿಳಿಸಿ, ಆಕೆ ಕೊಟ್ಟ ಉಪ್ಪಿಟ್ಟಿನ ತಟ್ಟೆಯನ್ನೂ ಚಮಚವನ್ನೂ ತೆಗೆದುಕೊಂಡು ಬಂದೆ. ಆತ ನಿಂತೇ ಇದ್ದರು; ನನ್ನನ್ನು ಕಂಡೊಡನೆ "ತಾವು ಅದನ್ನು ತಿನ್ನುವವರೆಗೂ ಹೊರಗೆ ವರಾಂಡಾದಲ್ಲಿದ್ದು ಬರುತ್ತೇನೆ" ಎಂದು ಹೇಳಿ ಹೊರಡಲನುವಾದರು. ನಾನು ಬಾಗಿಲಿನಲ್ಲಿ ನಿಂತು, "ಹಸಿವಾಗಿದೆಯೆಂದಿರಿ. ಈಗ ಹೀಗೆ ಹೇಳ್ತೀರಿ. ಇದು ನನಗಲ್ಲ. ನಿಮಗಾಗಿಯೇ ತಂದಿದ್ದೀನಿ" ಎಂದು ಹೇಳಿದೆ. ಆತ, "ನಾನು ಸ್ಪಷ್ಟವಾಗಿ ಹೇಳಬೇಕಾಗಿತ್ತು. ತಪ್ಪುಮಾಡಿದೆ. ನಾನು ಹೇಳಿದ್ದು ಓದಬೇಕೆಂಬ ಹಸಿವಿನಿಂದ ದಿಕ್ಕುತೋರದಂತಾಗಿದ್ದೀನಿ—ಅಂತ. ತಟ್ಟೆ ನೋಡಿ ತಮಗಾಗಿ ತಂದುಕೊಂಡಿರೆಂದುಕೊಂಡೆ. ನಾನು ಬ್ರಾಹ್ಮಣೇತರ. ಆದ್ದರಿಂದ ತಾವು ತಿಂದು ಮುಗಿಸೋವರೆಗೆ ಹೊರಗೆ ವರಾಂಡಾದಲ್ಲಿರೋದಾಗಿ ಹೇಳಿದೆ. ನನಗಾಗಿ ತಾವೇ ಇದನ್ನ ತಂದಿದ್ದೀರಲ್ಲಾ!" ಎಂದರು. ನಾನು, "ಬ್ರಾಹ್ಮಣೇತರ, ಬ್ರಾಹ್ಮಣ ಅನ್ನೋ ಮಾತು ನನ್ನ ಮುಂದೆ ಆಡಬೇಡಿ. ದೇಹೋ ದೇವಾಲಯಃ ಪ್ರೋಕ್ತಃ—ಎಂದಿದ್ದಾರೆ, ಪೂಜ್ಯರಾದ ಪೂರ್ವಿಕರು. ಪ್ರತಿಯೊಂದು ದೇಹವೂ ದೇವಾಲಯವೆಂತ ಅದರ ಅರ್ಥ. ಬ್ರಾಹ್ಮಣನ ದೇಹ ಮಾತ್ರವೇ ದೇವಾಲಯವೆಂದಿಲ್ಲ, ಅವರು. ನಾವೆಲ್ಲಾ ಒಂದೇ. ಕೂತುಕೊಳ್ಳಿ" ಎಂದು ಹೇಳಿ, ಅವರನ್ನು ಕುರ್ಚಿಯಮೇಲೆ ಕುಳ್ಳಿರಿಸಿ, ತಟ್ಟೆಯನ್ನು ಮೇಜಿನ

ಮೇಲಿಟ್ಟೆ. ಅಷ್ಟರಲ್ಲಿ ನನಗಾಗಿ ನನ್ನ ಸಹಧರ್ಮಿಣಿ ತಂದ ಉಪ್ಪಿಟ್ಟಿನ ತಟ್ಟೆಯನ್ನು ತೆಗೆದುಕೊಂಡೆ; ಆ ಬಳಿಕ ಆಕೆ ನಮ್ಮಿಬ್ಬರಿಗೂ ಕಾಫಿಯನ್ನೂ ತಂದುಕೊಟ್ಟಳು. ನಮ್ಮಿಬ್ಬರ ಉಪಾಹಾರವೂ ಮುಗಿದು ನಾವು ಕಾಫಿಯನ್ನು ಕುಡಿದ ಬಳಿಕ, ನಮ್ಮಿಬ್ಬರ ಮುಂದಿದ್ದ ತಟ್ಟೆಗಳನ್ನೂ ಬಟ್ಟಲುಗಳನ್ನೂ ಎತ್ತಿಕೊಂಡು ಮೇಲಕ್ಕೆದ್ದೆ. ಆತ "ಇದೇನ್ಸಾರ್, ಇದೇನ್ಸಾರ್, ಹೀಗೆ ಮಾಡಿದಿರಿ!'' ಎಂದು ರಭಸದಿಂದ ಕೂಗಿ ಕೊಳ್ಳುತ್ತಿರುವಲ್ಲಿ ಅಲ್ಲಿಂದ ಹೊರಟು ಅವುಗಳನ್ನು ಒಳಗಿಟ್ಟು ಬಂದು ಅವರೆದುರಿಗೆ ಕುಳಿತು, "ನನ್ನಿಂದ ಏನಾಗಬೇಕೋ ಈಗ ಹೇಳಿ" ಎಂದೆ. ಅವರು, "ನನಗೆ ಓದಿನ ಹಸಿವು, ಸಾರ್. ನಾನು 'ಬಿ.ಇ.'ಗೆ ಓದಬೇಕು. ಗವರ್ನ್‌ಮೆಂಟ್ ಇಂಜನಿಯ ರಿಂಗ್ ಕಾಲೇಜಿನಲ್ಲಿ 'ಸೀಟ್' ಸಿಕ್ಕಲಿಲ್ಲ. ಬಿ.ಎಂ.ಎಸ್. ಕಾಲೇಜಿಗೆ ಸೇರೋಕೆ 'ಅಪ್ಲೈ' ಮಾಡಿದ್ದೆ. ನನ್ನ ಜೊತೇಲೇ ಓದಿ 'ಬಿ.ಎಸ್‌ಸಿ.' ಪರೀಕ್ಷೇಲಿ ನನಗಿಂತ ಕಡಮೆ 'ಮಾರ್ಕ್ಸ್' ಬಂದಿರೋರು ಇಬ್ಬರಿಗೆ ಅಲ್ಲಿ ಸೀಟ್ ಸಿಕ್ಕಿದೆ. ಅವರಿಗಿಂತ ಹೆಚ್ಚು 'ಮಾರ್ಕ್ಸ್' ಬಂದಿದ್ರೂ ನಂಗೆ ಸೀಟ್ ಸಿಕ್ಕಿಲ್ಲ. ಅವರಿಗಿರೋ ಹಾಗೆ ನಂಗೆ ದೊಡ್ಡೋರ ಸಿಫಾರಸಿಲ್ಲ; ಅವರ ಹಾಗೆ ನಾನು ದೊಡ್ಡೋರ ಬಳಗವಲ್ಲ. ನಾನು ಬಡವ. ತಾವು ಬಿ. ಎಂ. ಶ್ರೀನಿವಾಸಯ್ಯನವರಿಗೆ ಹೇಳಿ ನಂಗೆ ಅವರ ಕಾಲೇಜಿನಲ್ಲಿ ಸೀಟ್ ಕೊಡಿಸಬೇಕು. ಅವರಿಗೂ ತಮಗೂ ಪರಿಚಯವಿದೆಯೆಂತ ತಿಳೀತು. ಇಲ್ಲೀಗೆ ಬಂದೆ" ಎಂದು ಉತ್ತರ ಹೇಳಿದರು. ನಾನು, "ಅವರ ಪರಿಚಯವೇನೋ ನನಗಿದೆ. ಆದರೆ, ಸಿಫಾರಸು ಹೇಳಬೇಕಾದ್ರೆ ಇರಬೇಕಾದಷ್ಟು ಮಟ್ಟಿನ ಪರಿಚಯವಿಲ್ಲ. ಅದಕ್ಕೆ ನಾನು ಸಣ್ಣವನು. ದೊಡ್ಡವರು ಅನೇಕರಿದ್ದಾರೆ. ಸರಿಯಾದವ್ರ ಹತ್ತಿರಹೋಗಿ ಅವರಿಂದ ಹೇಳಿಸಿದ್ರೆ ನಿಮ್ಮ ಉದ್ದೇಶ ಈಡೇರಬಹುದು" ಎಂದು ಸಲಹೆ ಹೇಳಿದೆ. ಅವರು, "ಈಗ ಮೂರು ದಿನಗಳಿಂದ ಯಾರ್‍ಯಾರ ಹತ್ತಿರಕ್ಕೋ ಹೋಗಿ ಬೇಡಿಕೊಂಡೆ. ಯಾರೂ ಕಿವಿಗೆ ಹಾಕ್ಕೊಳ್ಳಲೇ ಇಲ್ಲ. ಬಡವ್ರಾಗಿ ಹುಟ್ಟಬಾರ್ದು. ಕಡೇ ಪ್ರಯತ್ನ ಮಾಡೋಣವೆಂತ ಇಲ್ಲಿಗೆ ಬಂದೆ. ತಾವು ಸಹಾಯ ಮಾಡ್ದೇ ಹೋದ್ರೆ ಮುಳುಗೇ ಹೋಗ್ತೀನಿ, ಹ್ಯಾಗೆ ಬೇಕಾದ್ರೂ ಮಾಡಿ" ಎಂದರು. ನನ್ನ ಮನಸ್ಸು ಕರಗಿಹೋಗಿ "ಪೇಚಾಡಬೇಡಿ. ದೇವರು ಮಾಡಿಸಿದಂತಾಗಲಿ, ನಡೀರಿ. ಅವರೇನೋ ಬಹಳ ಒಳ್ಳೆಯವರು. ಪಕ್ಷಪಾತಮಾಡಿರಲಾರರು; ಮತ್ತೇನೋ ಆಗಿರಬೇಕು ನಾನೂ ಹೇಳ್ತೀನಿ. ಅವರು ನನ್ನ ಮಾತಿಗೆ ತೂಕಕೊಟ್ಟು ನಿಮಗೆ 'ಸೀಟ್' ಕೊಟ್ಟು ನನ್ನ ಮಾನ ಉಳಿಸಿದ್ರೆ ಸಾಕು. ಹೋಗೋಣ, ನಡೀರಿ" ಎಂದು ಹೇಳಿದೆ. ಅವರ ಮನೆಗೆ ಹೋದಾಗ, ಅವರು ಆದರದಿಂದ ಬರಮಾಡಿಕೊಂಡು ನಾನು ಹೇಳಿದುದನ್ನೆಲ್ಲ ಸಾವಧಾನ ದಿಂದ ಆಲಿಸಿದರು. ಕಾಲೇಜಿಗೆ ವಿದ್ಯಾರ್ಥಿಗಳನ್ನು ಆಯ್ಕೆ ಮಾಡುವ ಕೆಲಸದಲ್ಲಿ ನಿರತರಾಗಿ ಕಾಗದ ಪತ್ರಗಳನ್ನು ಪರಿಶೀಲಿಸುತ್ತ ಕಾಲೇಜಿನ ಅಧಿಕಾರಿ ವರ್ಗದವರೊಡನೆ ಅವರು ಕುಳಿತಿದ್ದರು. ವಿದ್ಯಾರ್ಥಿಗಳ ಹೆಸರುಗಳ ಪಟ್ಟಿಯಲ್ಲಿ "ಬಿ.ಎಸ್‌ಸಿ." ಪರೀಕ್ಷೆಯಲ್ಲಿ ಪ್ರಸಕ್ತ ಅಭ್ಯರ್ಥಿಗೆ ಬಂದಿದ್ದ ಅಂಕಗಳನ್ನು ("Marks") ಆತನ ಹೆಸರಿನ ಪಕ್ಕದಲ್ಲಿ

ಬರೆದವರ ಅಜಾಗರೂಕತೆಯಿಂದ ಅವು ತಪ್ಪಾಗಿ ಬರೆಯಲ್ಪಟ್ಟಿದ್ದ ಕಾರಣದಿಂದ, ಹೆಚ್ಚು ಅಂಕಗಳು ಆತನಿಗೆ ಬಂದಿದ್ದೂ "ಸೀಟ್" ಸಿಕ್ಕದೆ ಹೋಯಿತೆಂಬುದು ಸ್ಪಷ್ಟವಾದಾಗ ಶ್ರೀ ಬಿ. ಎಂ. ಶ್ರೀನಿವಾಸಯ್ಯನವರು ಬಹಳ ಪೇಚಾಡಿ, ನಾನು ಅವರ ಬಳಿಗೆ ಹೋಗಿ ತಿಳಿಸಿದ ಕಾರಣ ತಾವು ಒಬ್ಬಾತನಿಗೆ ಅನ್ಯಾಯವಾಗಿದ್ದುದನ್ನು ಪರಿಹರಿಸಲು ಅವಕಾಶ ವಾಯಿತೆಂದು ಹೇಳಿದರು. ನನ್ನೊಡನೆ ಕರೆದುಕೊಂಡು ಹೋಗಿದ್ದವರಿಗೆ "ಸೀಟ್" ಕೊಟ್ಟುದಲ್ಲದೆ, ಮುಂದೆ ಯಾರ ವಿಷಯದಲ್ಲೂ ಹಾಗೆ ನಡೆಯದಂತೆ ತಾವೂ, ಅಧಿಕಾರಿ ವರ್ಗದವರೂ ನೋಡಿಕೊಳ್ಳುವುದಾಗಿ ಭರವಸೆ ಹೇಳಿ ಅವರು ನಮ್ಮಿಬ್ಬರನ್ನೂ ವಿಶ್ವಾಸ ದಿಂದ ಬೀಳ್ಕೊಟ್ಟರು. ಪಕ್ಷಪಾತವೇನೂ ನಡೆದಿರಲಿಲ್ಲ. ನಡೆದಿದ್ದುದು ಅಜಾಗರೂ ಕತೆಯ ಘಟನೆ.

ನನ್ನಿಂದ ಗುರುದ್ರೋಹದ ಪಾತಕ ನಡೆಯುವಂತಿದ್ದುದು ದೈವಕೃಪೆಯಿಂದ ತಪ್ಪಿಹೋದ ಸವಿನೆನಪನ್ನು ಸೂಚಿಸಲು ನನಗೆ ಅತ್ಯಂತ ಸಂತೋಷವಾಗುತ್ತದೆ. ೧೯೩೯ನೆಯ ಸಂವತ್ಸರದ ಆದಿಭಾಗ. ಮೈಸೂರು ಮಹಾರಾಜಾ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿದ್ದ ಶ್ರೀ ಟಿ. ಎಸ್. ವೆಂಕಣ್ಣಯ್ಯನವರ ಅಕಾಲಮರಣ ವಾರ್ತೆ ಯನ್ನು ಕೇಳಿ, ಅನೇಕರಂತೆ ನಾನೂ ವ್ಯಥೆಪಡುತ್ತಿದ್ದೆ. ಆಗ ನಾನು ಆರು ವಾರ ವಿಷಮಶೀತಜ್ವರದಿಂದ ನರಳಿ ಚೇತರಿಸಿಕೊಳ್ಳುತ್ತಿದ್ದೆ. ಒಂದು ದಿನ ಬೆಳಗ್ಗೆ ಪೂಜ್ಯ ಶ್ರೀ ಬಿ. ಎಂ. ಶ್ರೀಕಂಠಯ್ಯನವರು ನನ್ನನ್ನು ಕುರಿತು, "ನೀವು ಕನ್ನಡ ಪ್ರೊಫೆಸ ರಾಗುತ್ತೀರಂತೆ. ಸಂತೋಷ, ನಂಗೆ. ಸರ್ ಮಿರ್ಜಾ ಅವರೇ—ನಿಮಗೆ ಪ್ರೊಮೋಷನ್ ಕೊಟ್ಟು ಕಳಿಸೋದಾಗಿ—ಹೇಳ್ತಾ ಇದ್ದರಂತೆ. ಕೇಳಿದವರಿಂದ ನನಗೆ ತಿಳಿಯಿತು" ಎಂದರು. ಆ ವಿಚಾರವೇ ನನಗೆ ಗೊತ್ತಿರಲಿಲ್ಲ. ನಾನು ಕಕ್ಕುಬಿಕ್ಕಾಗಿ, "ಸಾರ್, ಅನ್ನಾನ ರಕ್ತದಲ್ಲಿ ಕಲಸಿ ತಿನ್ನು—ಅಂದರೆ ನಂಗೆಷ್ಟು ಸಂತೋಷಾನೋ, ಈ ಪ್ರಮೋಷನ್ನಿನಿಂದಾನೂ ನಂಗೆ ಅಷ್ಟೇ ಸಂತೋಷ. ಅದೂ ಅಲ್ದೆ, ಈ ಕೆಲಸ ನನ್ನ ಗುರುಗಳಾದ ಶ್ರೀ ಎ. ಆರ್. ಕೃಷ್ಣಶಾಸ್ತ್ರಿಯವರಿಗೇ ಆಗಬೇಕಾದ ಕೆಲಸ. ಅದಕ್ಕೆ ಕೈಚಾಚುವಷ್ಟು ನೀಚನಲ್ಲ, ನಾನು. ಆ ಕೆಲಸ ನನಗೆ ಖಂಡಿತ ಬೇಡ. ದಿವಾನರು ಅದರ ವಿಚಾರ ಹೇಳಿದ್ದೂ ನಂಗೆ ತಿಳಿಯದು" ಎಂದು ಉತ್ತರಕೊಟ್ಟೆ. ಅವರಿಗೆ ಸಂತೋಷವಾಯಿತು. ಅವರು, "ನೀವು ಕೈಚಾಚಿಲ್ಲ. ನೀವು ಕೇಳಿಯೂ ಇಲ್ಲ. ನಾನು ಪದೇ ಪದೇ ಬಂದು ನಿಮ್ಮ ದೇಹಸ್ಥಿತಿ ವಿಚಾರಿಸಿಲ್ಲವೆ? ನಿಮಗೆ ಇನ್ನೂ ಮೂರು ನಾಲ್ಕು ವಾರ ರಜಾ ಇದೆಯೆನ್ನೋದೂ ನಂಗೆ ಗೊತ್ತಿಲ್ಲವೆ? ನೀವು ದಿವಾನರ ಬಳಿ ಹೋಗಿಲ್ಲವೆಂಬುದೂ ಗೊತ್ತು. ನಾನು ಕೇಳಿದ ಸುದ್ದಿ ನಿಮ್ಮ ಕಿವಿಗೂ ಹಾಕಿದೆ. ನಿಮಗೆ ಐನೂರು ರೂಪಾಯಿ ಗ್ರೇಡಿನಲ್ಲಿ ಐನೂರು ರೂಪಾಯಿ ಬರ್ತಿದೆ. ಆದ್ದರಿಂದ ದಿವಾನರೇ ಪ್ರೊಮೋಷನ್ ಕೊಡಬೇಕೆಂದಿರಬಹುದು" ಎಂದರು. ನಾನು ಯಥೋಚಿತ ವಾಗಿ ಉತ್ತರ ಹೇಳಿದೆ; ಅವರೂ ತಮ್ಮ ಸಂತೋಷವನ್ನು ಸೂಚಿಸಿದರು. ಆ ಬಳಿಕ ಕೆಲವು ದಿನಗಳು ಕಳೆದುವು. ಒಂದು ದಿನ ಬೆಳಗ್ಗೆ, ದಿವಾನರ ಆಪ್ತಕಾರ್ಯದರ್ಶಿ

ಯವರು ನಮ್ಮ ಮನೆಗೆ ಬಂದು, ತಮ್ಮ “ಕಾರ್”ನಲ್ಲಿ ನಾನು ಕೂಡಲೆ ಕಾರ್ಲ್‌ಟನ್ ಹೌಸ್”ಗೆ (ದಿವಾನರ ನಿವಾಸಕ್ಕೆ) ಹೋಗಿ ದಿವಾನರನ್ನು ಕಾಣಬೇಕೆಂದು ಹೇಳಿದರು; ಅಲ್ಲದೆ, ನಾನು ಇನ್ನೂ ಅಶಕ್ತನಾಗಿದ್ದ ಕಾರಣ “ಕಾರ್”ನಲ್ಲಿ ಕರೆದುಕೊಂಡು ಬರುವಂತೆ ಅವರು ಅಜ್ಞಾಪಿಸಿದ್ದರೆಂದೂ ತಿಳಿಸಿದರು. ನಾವಿಬ್ಬರೂ ದಿವಾನರನ್ನು ಕಂಡಾಗ ಅವರು, ಇಂಗ್ಲಿಷಿನಲ್ಲಿ ಮಾತನಾಡಿ, ನನ್ನ ಹೇಹಸ್ಥಿತಿಯನ್ನು ಆದರದಿಂದ ವಿಚಾರಿಸಿದರು. (ನಾನು ವಿಷಮಶೀತಜ್ವರದಿಂದ ನರಳುತ್ತಿದ್ದಾಗಲೂ ಅವರು ತಮ್ಮ ಕಡೆಯವರನ್ನು ಕಳಿಸಿ ಆಗಾಗ ನನ್ನ ಸ್ಥಿತಿಯನ್ನು ವಿಚಾರಿಸಿಕೊಂಡಿದ್ದರು). ಶ್ರೀಮನ್ಮಹಾರಾಜ ಶ್ರೀ ಕೃಷ್ಣರಾಜೇಂದ್ರ ಒಡೆಯರ್ ಮಹಾಸ್ವಾಮಿಯವರಿಗೂ ತಮಗೂ, ನಾನು ಅಪಾಯದಿಂದ ಪಾರಾದುದಕ್ಕಾಗಿ, ಬಹಳ ಸಂತೋಷವಾಯಿತೆಂದರು. (ಅದಕ್ಕೆ ಮುಂಚೆ ಶ್ರೀಮನ್ಮಹಾರಾಜರವರು ನನ್ನನ್ನು ಬೆಂಗಳೂರು ಅರಮನೆಗೆ ಬರಮಾಡಿಕೊಂಡು ಅನೇಕ ಭಾಷಣಗಳನ್ನು ನನ್ನಿಂದ ಮಾಡಿಸಿ ಕೃಪೆತೋರಿದ್ದರು. ನನ್ನಿಂದ ರಚಿತವಾದ “ಮಂಡೋದರಿ”, “ನಚಿಕೇತ”, “ತೆನಾಲಿರಾಮಕೃಷ್ಣ” ಮತ್ತು “ಬ್ರಹ್ಮವಾದಿನಿ” ನಾಟಕಗಳು ಮಹಾಸ್ವಾಮಿಯವರ ಸಮ್ಮುಖದಲ್ಲಿ ಮತ್ತು ಆಹ್ವಾನಿತ ಪ್ರೇಕ್ಷಕರ ಸಮ್ಮುಖದಲ್ಲಿ ಆ ವೇಳೆಗೆ ಮೈಸೂರು ಜಗನ್ಮೋಹನ ಪ್ರಾಸಾದದಲ್ಲಿ ಅಭಿನಯಿಸಲ್ಪಟ್ಟು ಪ್ರಭುಗಳ ಮೆಚ್ಚಿಕೆಯ ಭಾಗ್ಯವನ್ನು ಪಡೆದಿದ್ದುವು.) ದಿವಾನರಿಗೆ ನನ್ನ ಕೃತಜ್ಞತೆಯ ವಂದನೆಗಳನ್ನು ಸಲ್ಲಿಸಿ, ಮಹಾಸ್ವಾಮಿಯವರಿಗೆ ನನ್ನ ರಾಜಭಕ್ತಿಯ ಮತ್ತು ಕೃತಜ್ಞತೆಯ ವಂದನೆಗಳನ್ನು ಅರಿಕೆಮಾಡಿ ಉಪಕರಿಸಬೇಕೆಂದು ಬಿನ್ನೈಸಿಕೊಂಡೆ; ಅವರಿಬ್ಬರ ಸೇವೆಯ ಸುಯೋಗವೇ ನನ್ನ ಭಾಗ್ಯವೆಂದೆ. ಅನಂತರ ದಿವಾನರು ಕನ್ನಡ ಪ್ರಾಧ್ಯಾಪಕ ಹುದ್ದೆಗೆ ನನ್ನನ್ನು ನೇಮಕಮಾಡಬೇಕೆಂದು ಒಂದು ಮನವಿಪತ್ರವನ್ನು (Representation) ಬರೆದು ಆ ದಿನವೇ ಸರಕಾರದ ಮುಖ್ಯ ಕಾರ್ಯದರ್ಶಿಯವರಿಗೆ ಸೇರುವಂತೆ ಅದನ್ನು ಕಳಿಸಬೇಕೆಂದೂ, ನಾನು ಆಗಲೆ ಅದನ್ನು ಬರೆದು ತಮ್ಮ ಆಪ್ತಕಾರ್ಯದರ್ಶಿಯವರ ಕೈಗೆ ಕೊಟ್ಟರೆ ಅವರು ಮುಖ್ಯ ಕಾರ್ಯದರ್ಶಿಯವರಿಗೆ ಅಂದೇ ಅದು ಕೈಸೇರುವಂತೆ ಮಾಡುತ್ತಾರೆಂದೂ, ವಾತ್ಸಲ್ಯದಿಂದ ತಿಳಿಸಿದರು. ನನ್ನ ಮನಸ್ಸು ಹೇಗೋ ಆಯಿತು. ನಾನು ಅವರಿಗೆ ವಂದನೆಗಳನ್ನು ಕೂಡ ಹೇಳದೆ ನಾನು ಅದನ್ನು ಬರೆದುಕೊಡುವುದಿಲ್ಲವೆಂದುಬಿಟ್ಟೆ. ಅವರ ಆಪ್ತ ಕಾರ್ಯದರ್ಶಿಯವರಿಗೂ ವಿಸ್ಮಯವಾಯಿತು, ದಿವಾನರ ಅಪ್ಪಣೆಗೆ ವಿರೋಧವಾಗಿ ಹೇಳಿದ ನನ್ನ ಮಾತುಗಳನ್ನು ಕೇಳಿ. ದಿವಾನರಿಗಂತೂ, ನನ್ನಮೇಲೆ ಆಗ್ರಹವೇ ಹುಟ್ಟಿತು. ನನ್ನ ಹಿತಚಿಂತನೆಯಿಂದ ಉಪಕಾರಮಾಡಲಿಚ್ಛಿಸಿದುದನ್ನೇ ಪರಿಗಣಿಸದೆ ನಾನು ತಲೆಹರಟೆಮಾಡಿದೆನೆಂದು ಮುಂತಾಗಿ ಇಂಗ್ಲಿಷಿನಲ್ಲಿ ಸೂಚಿಸಿ, “ನಿಮಗೆ ನನ್ನ ಆಜ್ಞೆಯನ್ನು ಮೀರಿ ನಡೆಯುವಷ್ಟು ಧೈರ್ಯವೆ?” ಎಂದು ತಾತ್ಪರ್ಯವಾಗುವಂತೆ, “How dare you disobey my command?” ಎಂದರು, ಏರು ದನಿಯಲ್ಲಿ. ನನ್ನ ಆತಂಕವನ್ನು ವರ್ಣಿಸಲಳವಲ್ಲ. ನಾನು ವಿನಯದಿಂದ ಅವರ ಕ್ಷಮೆಯನ್ನು

ಯಾಚಿಸಿ, ಅವರ ಅವ್ಯಾಜ ಪ್ರೀತಿವಾತ್ಸಲ್ಯಗಳಿಗೆ ನನ್ನ ಕೃತಜ್ಞತೆಯ ವಂದನೆಗಳನ್ನು ತಿಳಿಸಿ, ನನ್ನದು ಅವಿಧೇಯತೆಯಲ್ಲವೆಂದೂ, ನನ್ನ ವರ್ತನೆಗೆ ಕಾರಣವಿದ್ದಿತೆಂದೂ ಬಿನ್ನೈಸಿದೆ. ಅವರ ಕೋಪವೇ ಇಳಿಯಲಿಲ್ಲ. ನಾನು ಆ ಬಳಿಕ ಆಗಿನ ಪರಿಸ್ಥಿತಿಯನ್ನು ವಿವರಿಸಿ, ನನಗೆ ಮನವಿಪತ್ರವನ್ನು ಬರೆದು ಸಲ್ಲಿಸುವುದು ಶಕ್ಯವಿರಲಿಲ್ಲವೆಂದೂ, ಅದನ್ನು ಸಲ್ಲಿಸಿದರೆ ಗುರುದ್ರೋಹಪಾತಕವೆಂದೂ, ತಿಳಿಸಿದೆ; ಅವರ ಅಪ್ಪಣೆಯಂತೆ ನಡೆಯದಿದ್ದುದಕ್ಕಾಗಿ ನನ್ನನ್ನು ಕ್ಷಮಿಸಬೇಕೆಂದು ಬಿನ್ನೈಸಿದೆ. ಅವರ ಕೋಪವು ಮಾಯವಾಗಿ ಸಂತೋಷದಿಂದ ಅರಳಿದ ನಗುಮುಖವನ್ನು ಕಂಡು ನನ್ನ ಮನಸ್ಸಿನ ಆತಂಕವೆಲ್ಲ ಪರಿಹಾರವಾಯಿತು. ಅವರು ತಮ್ಮದೇ ಆದೊಂದು ವಾತ್ಸಲ್ಯದಿಂದ "I am proud of you" ಎಂದು ಹೇಳಿ ನನ್ನ ಬೆನ್ನನ್ನು ಸವರಿದರು; ನನಗಾದ ಸಂತೋಷವನ್ನು ಹೇಳತೀರದು.

ನನ್ನಿಂದ ರಚಿತವಾಗಿರುವ ಗ್ರಂಥಗಳಿಗೆ ಉದ್ದಾಮ ವಿದ್ವಾಂಸರುಗಳಿಂದ ಲಭಿಸಿದ ಮೆಚ್ಚಿಕೆಯ ವಿಚಾರವಾಗಿ ನನ್ನ ನೆನಪುಗಳನ್ನು ಇಲ್ಲಿ ಸೂಚಿಸುವುದು ಅಪ್ರಕೃತವೆಂದು ನನ್ನಭಾವನೆ. ನನ್ನಿಂದ ರಚಿತವಾದ ನಾಟಕಗಳನ್ನು ಅಭಿನಯಿಸಿದ ನಾನಾ ಸಂಘಗಳ ಸಂಬಂಧದ ನೆನಪುಗಳನ್ನು ಸೂಚಿಸುವುದೂ ಶಕ್ಯವಿಲ್ಲ. "ತೆನಾಲಿ ರಾಮಕೃಷ್ಣ" ನಾಟಕದ ಆಧಾರದ ಮೇಲೆ ಶ್ರೀ ಬಿ. ಎಸ್. ರಂಗಾ ಅವರು ರಚಿಸಿದ ತೆಲುಗು ಭಾಷೆಯ ಚಲನಚಿತ್ರಕ್ಕೆ ರಾಷ್ಟ್ರಪತಿ ಪ್ರಶಸ್ತಿ ಲಭಿಸಿದುದನ್ನು ಸೂಚಿಸಲು ಸಂತೋಷವಾಗುತ್ತದೆ. ಮದರಾಸು ಸರಕಾರದ ಸೆಕ್ರೆಟೇರಿಯಟ್ ಹುದ್ದೇದಾರರ ನಾಟಕಶಾಖೆಯವರು ನನ್ನಿಂದ ರಚಿತವಾಗಿರುವ "ಮಂಡೋದರಿ" ನಾಟಕವನ್ನು ಕನ್ನಡದಲ್ಲಿ ಮತ್ತು ಅದರ ತಮಿಳು ಭಾಷಾಂತರವನ್ನು ತಮಿಳಿನಲ್ಲಿ, ಮದರಾಸು ನಗರದ ಶ್ರೀರಾಮಕೃಷ್ಣ ವಿದ್ಯಾರ್ಥಿ ನಿಲಯದ ಸಹಾಯಾರ್ಥವಾಗಿ ಮದರಾಸು ರಾಜ್ಯದ ನಾನಾ ಸ್ಥಳಗಳಲ್ಲಿ ಅಭಿನಯಿಸಿ ಒಂದು ಲಕ್ಷ ರೂಪಾಯಿಗಳಿಗಿಂತಲೂ ಹೆಚ್ಚು ಮೊಬಲಗನ್ನು ಕೂಡಿಸಿಕೊಟ್ಟ ಸಂಗತಿಯನ್ನೂ ಅತ್ಯಂತ ಸಂತೋಷದಿಂದ ಸೂಚಿಸಲಿಚ್ಛಿಸುತ್ತೇನೆ.

ಅನೇಕಾನೇಕ ನೆನಪುಗಳಿದ್ದರೂ, ಅವುಗಳಲ್ಲಿ ಕೆಲವನ್ನು ಮಾತ್ರವೇ ಇಲ್ಲಿ ಸೂಚಿಸಿದ್ದೇನೆ. ನನ್ನ ನೆನಪುಗಳನ್ನು ಬರೆದು ಕಳುಹಬೇಕೆಂದು ನನ್ನನ್ನು ಪ್ರೀತಿಯಿಂದ ಕೇಳಿದುದಕ್ಕಾಗಿ, ಕನ್ನಡಕ್ಕೆ ತಕ್ಕ ಸ್ಥಾನಮಾನಗಳನ್ನು ಗಳಿಸಿಕೊಡಬೇಕೆಂಬ ದೀಕ್ಷೆಯನ್ನು ತಳೆದು ಕನ್ನಡದ ಮೇಲಿನ ಪ್ರೀತಿಯಿಂದಲೂ, ಶ್ರದ್ಧೆಯಿಂದಲೂ, ಉತ್ಸಾಹದಿಂದಲೂ ಶ್ರಮಿಸುತ್ತಿರುವ ಪ್ರಾಧ್ಯಾಪಕ ದೇ. ಜವರೇಗೌಡರವರಿಗೂ, ಪ್ರಾಧ್ಯಾಪಕ ಹಾ. ಮಾ. ನಾಯಕರವರಿಗೂ, ಡಾಕ್ಟರ್ ಹೆಚ್. ತಿಪ್ಪೆರುದ್ರಸ್ವಾಮಿಯವರಿಗೂ, ಶ್ರೀ ಎಸ್. ನಾರಾಯಣಶೆಟ್ಟಿಯವರಿಗೂ, ಮತ್ತೊಮ್ಮೆ ಕೃತಜ್ಞತಾ ಪೂರ್ವಕವಾದ ನನ್ನ ಹಾರ್ದಿಕ ವಂದನೆಗಳನ್ನು ಸಲ್ಲಿಸುತ್ತೇನೆ.

"ಪ್ರಬುದ್ಧ ಕರ್ಣಾಟಕ" ಪತ್ರಿಕೆಯಿಂದ, ಗುರುವರ್ಯ ಡಾಕ್ಟರ್ ಎ. ಆರ್. ಕೃಷ್ಣಶಾಸ್ತ್ರಿಯವರು ಅದರ ಸಂಪಾದಕರಾಗಿದ್ದಷ್ಟು ಕಾಲವೂ, ಅವರು,

ಅದರ ಸಂಪಾದಕತ್ವವನ್ನು ಬಿಟ್ಟಾಗಿನಿಂದ ಇದುವರೆಗೂ ಕನ್ನಡ ನಾಡುನುಡಿಗಳಿಗೆ ಅಮೋಘ ಸೇವೆಯಾಗಿಯೂ ಸೇವೆಯಾಗುತ್ತಲೂ ಇರುವುದಲ್ಲದೆ, ಎಷ್ಟು ಜಟಿಲವಾದ ವಿಷಯಗಳನ್ನೂ ಕನ್ನಡದಲ್ಲಿ ಸರಳವಾಗಿಯೂ ಸುಲಲಿತವಾಗಿಯೂ ಬರೆಯುವುದು ಶಕ್ಯವಾಗುವ ಮಟ್ಟಿಗೆ ಕನ್ನಡಭಾಷೆಗೆ ಸತ್ತ್ವವಿದೆಯೆಂಬ ಸಂಗತಿಯೂ ಹೃದಯಂಗಮವಾಗಿ ವ್ಯಕ್ತಪಟ್ಟಿದೆ. ಕನ್ನಡಿಗರ ಹೆಮ್ಮೆಯೆಂದು ಧಾರಾಳವಾಗಿ ಹೇಳಬಹುದಾದಷ್ಟು ಉನ್ನತವಾದ ಮಟ್ಟದಲ್ಲಿ "ಪ್ರಬುದ್ಧ ಕರ್ಣಾಟಕ" ಪತ್ರಿಕೆಗೆ ಸಂಬಂಧಪಟ್ಟ ಕಾರ್ಯಕಲಾಪಗಳು ಅತ್ಯಂತ ದಕ್ಷತೆಯಿಂದಲೂ ವಿಚಕ್ಷಣೆಯಿಂದಲೂ ನಡೆಯುತ್ತಿವೆ. ಅದರ ಚಿನ್ನದ ಹಬ್ಬದ ಸಂಚಿಕೆಯ ಪ್ರಕಟಣೆ ನಡೆಯುವುದು ಅತ್ಯಾನಂದದ ಸಂಗತಿ. ಪತ್ರಿಕೆಯ ಕಾರ್ಯಕಲಾಪಗಳು ಸಂತತವಾಗಿ ವೃದ್ಧಿಹೊಂದುತ್ತ, ಪತ್ರಿಕೆಯಿಂದ ಇತೋಪ್ಯಧಿಕವಾಗಿ ಕನ್ನಡ ನಾಡು ನುಡಿಗಳಿಗೆ ಚಿರಕಾಲ ಸೇವೆಸಲ್ಲುತ್ತ ಬರುವಂತೆ ಕನ್ನಡಮಾತೆಯ ಪೂರ್ಣಾನುಗ್ರಹ ಲಭಿಸಲೆಂಬುದೇ ಆಕೆಯ ಪಾದಕಮಲಗಳ ಸನ್ನಿಧಿಯಲ್ಲಿ ನನ್ನ ಭಕ್ತಿಪೂರ್ವಕವಾದ ಪ್ರಾರ್ಥನೆ.

ಕೆ. ಗೋಪಾಲಕೃಷ್ಣರಾಯ

ಸಮಾಗಮ

" ನಿಮ್ಮ ಕೆಲಸ ಎಲ್ಲಾ ಮುಗಿದ ಮೇಲೆ ಸ್ವಲ್ಪ ಮನೆಯ ಕಡೆಗೆ ಬರುತ್ತೀರಾ, ಕಾರನ್ನು ಕಳುಹಿಸಿಕೊಡುತ್ತೇನೆ " ಎಂದರು ನಮ್ಮ ಕಂಪನಿಯ ಜನರಲ್ ಮ್ಯಾನೇಜರು.

" ಆಗಲಿ " ಎಂದೆ.

" ಆರು ಗಂಟೆಗೆ ಕಾರನ್ನು ಕಳುಹಿಸಿಕೊಡಲೇ ? " ಎಂದು ಕೇಳಿದರು.

" ತಾವು ಕಾರನ್ನೇನೂ ಕಳುಹಿಸಿಕೊಡಬೇಕಾಗಿಲ್ಲ. ಕೆಲಸ ಮುಗಿದೊಡನೆಯೇ ನಾನು ನಡೆದುಕೊಂಡು ಬಂದುಬಿಡುತ್ತೇನೆ. ಮನೆಯೇನೂ ಬಹಳ ದೂರವಿಲ್ಲವಲ್ಲ " ಎಂದೆ.

" ಹೇಗೆಬೇಕಾದರೂ ಮಾಡಿ. ತಾವು ದೊಡ್ಡವರು. ನಾನು ಕಾರನ್ನು ಕಳುಹಿಸಿ ಕೊಡಲೂ ಸಿದ್ಧವಾಗಿದ್ದೇನೆ. ಅಂತೂ ಸಂಜೆ ಖಂಡಿತವಾಗಿ ಮನೆಯ ಕಡೆಗೆ ಬನ್ನಿ " ಎಂದು ಹೇಳಿ ಹೊರಟು ಹೋದರು.

ನಾನು ಸರ್ಕಾರೀ ಉದ್ಯೋಗದಿಂದ ನಿವೃತ್ತನಾದಮೇಲೆ ಒಂದು ಖಾಸಗಿ ಕಂಪೆನಿ ಯಲ್ಲಿ ಕೆಲಸಕ್ಕೆ ಸೇರಿಕೊಂಡಿದ್ದೆ. ಅದರ ಆಡಳಿತದ ವ್ಯವಹಾರವನ್ನು ವಿಮರ್ಶಿಸಿ, ಈಚಿನ ಕಾನೂನಿಗನುಸಾರವಾಗಿ ಬದಲಾವಣೆಗಳನ್ನೇನಾದರೂ ಮಾಡಬೇಕಾಗಿದ್ದರೆ ಅದನ್ನು ಸೂಚಿಸಿ ವರದಿಯೊಂದನ್ನು ತಯಾರಿಸಿಕೊಡುವ ಕೆಲಸ ನನ್ನದಾಗಿತ್ತು. ನಾನು ಮಧ್ಯಾಹ್ನದ ಮೇಲೆ ಕಚೇರಿಗೆ ಬಂದು ಸಂಜೆಯವರೆಗೂ ಅಲ್ಲಿ ಇದ್ದು ತೆರಳುತ್ತಿದ್ದೆ. ಅಲ್ಲಿನ ಅಧಿಕಾರಿಗಳೆಲ್ಲರೂ ನನ್ನೊಡನೆ ಸಹಕರಿಸಿ ನನಗೆ ಬಹಳ ನೆರವನ್ನು ನೀಡು ತ್ತಿದ್ದರು. ನಾನು ವಯಸ್ಸಿನಲ್ಲಿ ಹಿರಿಯನೆಂದೇನೋ ನನ್ನನ್ನು ಬಹಳ ಗೌರವದಿಂದ ಕಾಣುತ್ತಿದ್ದರು. ಕಂಪನಿಯೂ ಬಹಳ ಅಭಿವೃದ್ಧಿ ಸ್ಥಿತಿಯಲ್ಲಿತ್ತು. ಅದರ ಆಡಳಿತವೂ ಪಾಶ್ಚಾತ್ಯ ಕಂಪನಿಗಳ ಆಡಳಿತಗಳಿಗಿಂತ ಒಂದು ಕೈ ಮಿಗಿಲಾಗಿಯೇ ಇತ್ತು. ನೌಕರರಿಗೆ ಕಂಪನಿಯವರು ಕೈತುಂಬ ಸಂಬಳ ಕೊಡುತ್ತಿದ್ದರು. ಅಲ್ಲದೆ ಅವರಿಂದ ಕೆಲಸವನ್ನೂ ಚೆನ್ನಾಗಿ ತೆಗೆದುಕೊಳ್ಳುತ್ತಿದ್ದರು.

ಅದರ ಜನರಲ್ ಮ್ಯಾನೇಜರು ವಿದೇಶದಲ್ಲಿ ಬಹಳ ಕಾಲವಿದ್ದು ಪಾಶ್ಚಾತ್ಯ ಕಂಪನಿಗಳಲ್ಲಿ ಕೆಲಸಮಾಡಿ ಹೆಸರುಗಳಿಸಿದ್ದವರು. ಆತನಿಗೆ ವಯಸ್ಸು ಅಷ್ಟೇನೂ ಹೆಚ್ಚು

ಆಗಿರಲಿಲ್ಲ. ಸುಮಾರು ನಲವತ್ತು, ನಲವತ್ತೈದು ಇದ್ದಿರಬಹುದು. ನೋಡಿದರೆ ಇನ್ನೂ ಕಡಮೆಯ ವಯಸ್ಸಿನವರಂತೆ ಕಾಣುತ್ತಿದ್ದರು. ಆತನಿಗೆ ಇನ್ನೂ ಮದುವೆಯಾಗಿರಲಿಲ್ಲ. ಅವರ ಮನೆ, ಕಂಪನಿಯ ಕಚೇರಿಗೆ ಒಂದು ಫರ್ಲಾಂಗ್ ದೂರದಲ್ಲಿತ್ತು. ಅದೂ ಕಂಪನಿಯ ಕಟ್ಟಡವೇ. ಕಂಪನಿಯ ಕಾರ್ಖಾನೆಯೂ ಹತ್ತಿರದಲ್ಲಿಯೇ ಇತ್ತು. ಅವರ ಮನೆಯಲ್ಲಿ ಇದ್ದವರು ಅವರೊಬ್ಬರೇ. ಆದರೂ ಮನೆಯ ಕುರ್ಚಿ, ಸೋಫಾ, ಮೇಜುವಾನಿ ಸಾಮಗ್ರಿಗಳಿಂದಲೂ ರೇಡಿಯೋ ಮೊದಲಾದ ಸಲಕರಣೆಗಳಿಂದಲೂ ಸಜ್ಜು ಗೊಳಿಸಲ್ಪಟ್ಟಿತ್ತು. ಆಳು ಕಾಳುಗಳೊಂದಿಗೆ ಮನೆಯಲ್ಲಿ ಕೇರಳದ ಕಡೆಯವನೊಬ್ಬ ಅಡಿಗೆಯವನಿದ್ದ. ಆತನೇ ಯಜಮಾನರಿಗೆ ಕಾಫೀ, ತಿಂಡಿ ಊಟ ಉಪಚಾರದ ಸೌಕರ್ಯಗಳನ್ನೊದಗಿಸುತ್ತಿದ್ದ.

ಕಂಪನಿಯ ಕೆಲಸ ಮುಗಿಸಿದೊಡನೆಯೆ ಜನರಲ್ ಮ್ಯಾನೇಜರು ಕಾರ್ಖಾನೆಯ ಕಡೆಗೆಹೋಗಿ ಅನಂತರ ಕಂಪನಿಯ ಅಫೀಸರುಗಳ ಕ್ಲಬ್ಬಿನಲ್ಲಿ ಟೆನ್ನಿಸ್ ಆಡಿ, ತಿಂಡಿ ತೀರ್ಥಕ್ಕೆ ಮನೆಗೇ ನೇರಾಗಿ ಬಂದು ಬಿಡುತ್ತಿದ್ದರು. ಅವರಿಗೆ ಸಂಗೀತದ ಹುಚ್ಚು ಹೆಚ್ಚಾಗಿದ್ದಿತೆಂದು ಕಾಣುತ್ತಿತ್ತು. ಅವರೇ ಸ್ವತಃ ಪಿಟೀಲನ್ನು ನುಡಿಸುತ್ತಿದ್ದರು. ಕರ್ಣಾಟಕ, ಹಿಂದೂಸ್ತಾನಿ ಮತ್ತು ಪಾಶ್ಚಾತ್ಯ ಪದ್ಧತಿಗಳ ಪರಿಚಯ ಚೆನ್ನಾಗಿದ್ದಂತೆ ತೋರುತ್ತಿತ್ತು. ಬಿಡುವಿದ್ದ ಸಮಯಗಳಲ್ಲಿ ತಮಗೆ ಮನಸ್ಸು ಬಂದಷ್ಟು ರಾಗಗಳನ್ನು ನುಡಿಸುತ್ತಾ ನಾದಾನುಸಂಧಾನದಲ್ಲಿ ಮಗ್ನರಾಗಿರುತ್ತಿದ್ದರು.

ಒಳ್ಳೆಯ ರಸಿಕರು. ಅವರ ಮನೆಯಲ್ಲಿ ಆರಿಸಿ ಅಲಂಕರಿಸಿದ್ದ ತೈಲ ಚಿತ್ರಗಳು, ಬಾಗಿಲುಗಳಿಗೆ ಉಪಯೋಗಿಸಿದ್ದ ಪರದೆಗಳು ಕುರ್ಚಿ, ಮೇಜು ಎಲ್ಲಾ ಅವರ ಕಲಾ ವಂತಿಕೆಯ ಅಭಿರುಚಿಯನ್ನು ವ್ಯಕ್ತಗೊಳಿಸುತ್ತಿತ್ತು. ಎಲ್ಲದರಲ್ಲಿಯೂ ಒಂದು ಒಪ್ಪ ಓರಣ ಎದ್ದು ಕಾಣುತ್ತಿತ್ತು.

ಅವರಲ್ಲಿ ನನಗೆ ಕಂಡಿದ್ದು ಒಂದೇ ಒಂದು ದುರಭ್ಯಾಸ; ಅದು ಧೂಮಪಾನ. ಯಾವಾಗಲೂ ಅವರ ತುಟಿಯ ಸಂದಿಯಲ್ಲಿ ಸಿಗಾರಿದ್ದೇ ಇರುತ್ತಿತ್ತು. ಅವು ಉತ್ತಮ ದರ್ಜೆಯವೇ ಆಗಿರುತ್ತಿದ್ದವು. ಆದರೇನು? ಅವರಿಗೆ ವೈನ್, ವಿಸ್ಕಿ ಮೊದಲಾದ ಪಾನೀಯಗಳ ಚಟವಿದ್ದ ಹಾಗೆ ಕಾಣುತ್ತಿರಲಿಲ್ಲ. ಯಾವುದಾದರೂ ಗೋಷ್ಠಿಗಳಲ್ಲಿ ಅವುಗಳನ್ನು ಸೇವಿಸುತ್ತಿದ್ದರೋ ಏನೋ; ಅದೂ ಮಿತಿಯಲ್ಲಿರಬೇಕು. ಅವರು ಯಾವಾಗಲೂ 'ಸೋಬರ್' ಆಗಿ ಇರುವುದನ್ನು ನಾನು ಕಂಡಿದ್ದೇನೆಯೇ ವಿನಹ ಅವರು ಪ್ರಜ್ಞೆತಪ್ಪಿ ನಡೆದುಕೊಂಡ ಪ್ರಸಂಗ ನಾನು ಕಂಡೂ ಇಲ್ಲ, ಯಾರಿಂದಲೂ ಕೇಳಿಯೂ ಇಲ್ಲ.

ನನಗೆ ಆಗಾಗ ಅನ್ನಿಸುತ್ತಿತ್ತು, ಇವರು ನಮ್ಮ ಕಂಪನಿಯ ಪ್ರಮುಖ ಡೈರೆಕ್ಟರ ಮಗಳನ್ನು ಏಕೆ ಮದುವೆಮಾಡಿಕೊಳ್ಳಬಾರದೆಂದು. ಆಕೆಯೂ ವಿದ್ಯಾವತಿ, ಕಲಾ ನಿಪುಣೆ. ವಿದೇಶಗಳಿಗೂ ತನ್ನ ತಂದೆಯೊಡನೆ ಹೋಗಿ ಬಂದಿದ್ದಾಳೆ. ಪ್ರಪಂಚದ ಜ್ಞಾನ ಚೆನ್ನಾಗಿದೆ. ಎಲ್ಲದಕ್ಕೂ ಹೆಚ್ಚಾಗಿ ಆಕೆಗೆ ಭಾರತದ ಮೇಲೆ ಅಪಾರ ಪ್ರೇಮ. ನಮ್ಮ ಕಂಪನಿಯ ಮುನ್ನಡೆಗೆ ಆಕೆಯೂ ಅವರ ತಂದೆಯೊಡನೆ ಸಹಕರಿಸುತ್ತಿದ್ದಾಳೆ.

ಈ ವಿಷಯವನ್ನು ನಾನು ಯಾರಲ್ಲಿಯೂ ಪ್ರಸ್ತಾಪಿಸಿರಲಿಲ್ಲ. ಅವರಿಬ್ಬರೂ ಒಟ್ಟಿಗೆ ಟೆನ್ನಿಸ್ ಆಡುವುದನ್ನು ನೋಡುತ್ತಿದ್ದೆ. ಔತನದ ಎಡೆಗಳಲ್ಲಿ ಇಬ್ಬರೂ ಒಟ್ಟಿಗೆ ಕಲೆತು ಹರಟೆ ಹೊಡೆಯುತ್ತಿರುವುದನ್ನು ನೋಡುತ್ತಿದ್ದೆ. ಅವು ಅವರ ಪ್ರಣಯಕ್ಕೆ ಎಡೆಕೊಟ್ಟು ಅವರಿಬ್ಬರಿಗೂ ವಿವಾಹ ಆಗಿ ಆತನ ಸಂಸಾರ ಬೆಳೆಯಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತಿದ್ದೆ.

ನಾನು ಅವರ ಮನೆಯನ್ನು ತಲುಪಿ ಬಾಗಿಲಬಳಿ ಇದ್ದ ಬೆಲ್ಲನ್ನು ಒತ್ತಿದಾಗ ಅವರೇ ಎದ್ದು ನನ್ನನ್ನು ಸ್ವಾಗತಿಸಲು ಬಂದರು. ಬಿಳಿಯ ಪಾಪ್ಲಿನ್ ಷರಟು, ಬಿಳಿಯ ವುಲ್ಲನ್ ಪ್ಯಾಂಟು. ಬಾಟಾ ಷೂ, ಬಾಯಲ್ಲಂತೂ ಸಿಗಾರು ಇದ್ದೇ ಇತ್ತು. ಹಸ್ತಲಾಘವ ನೀಡಿ ಒಳಕ್ಕೆ ಬರಮಾಡಿಕೊಂಡರು.

ಒಳಗೆ ಡ್ರಾಯಿಂಗ್ ರೂಮಿನಲ್ಲಿ ಇಬ್ಬರೂ ಕುಳಿತುಕೊಂಡಾಗ ಅಡಿಗೆಯ ಪರಿಚಾರಕ ತಟ್ಟೆಗಳಲ್ಲಿ ತಿಂಡಿ ತೆಗೆದುಕೊಂಡು ಬಂದ. ಅವರೇ ಎದ್ದು ಟೀಪಾಯೊಂದನ್ನು ತೆಗೆದು ನನ್ನ ಮುಂದಿರಿಸಿದರು. ಅಡಿಗೆಯ ಪರಿಚಾರಕ ತಿಂಡಿಯ ತಟ್ಟೆಯನ್ನು ಮೇಜಿನ ಮೇಲೆ ಇಡುತ್ತಿದ್ದಂತೆ ನಮ್ಮ ಜನರಲ್ ಮ್ಯಾನೇಜರು ನನಗೆ ಕಾಫಿಯೋ, ಟೀಯೋ ಎಂದು ಕೇಳಿದರು. ನಾನು 'ಕಾಫಿ' ಎಂದೆ. ಆತ ಪರಿಚಾರಕನಿಗೆ ಕಾಫಿತರಲು ಹೇಳಿದರು. ನನಗೆ ತಿಂಡಿ ಸ್ವೀಕರಿಸಲು ತಿಳಿಸಿದರು. ಮಾತಿಗೆ ಮೊದಲಾಯಿತು.

ಮಾತನ್ನು ಆರಂಭಿಸಿದವನು ನಾನೇ.

"ತಾವು ಅನ್ಯಥಾ ತಿಳಿದುಕೊಳ್ಳದಿದ್ದಾರೆ ನನ್ನ ಮನಸ್ಸಿಗೆ ಬಂದ ಒಂದು ಭಾವನೆಯನ್ನು ವ್ಯಕ್ತಪಡಿಸುತ್ತೇನೆ." ಎಂದೆ

"ಆಗಬಹುದು" ಎಂದರು

"ಇಲ್ಲಿ ಎಲ್ಲಾ ಇದೆ. ಆದರೆ ಒಂದರ ಅಭಾವ ಎದ್ದು ಕಾಣುತ್ತಿದೆ" ಎಂದೆ.

"ಯಾವುದು ಅದು?"

"ಮತ್ತಾವುದು. ಗೃಹಿಣಿಯ ಅಭಾವ."

"ಅಷ್ಟೇ ತಾನೆ"

"ತಾವು ಹಾಗೆ ತೇಲಿಹಾಕಿ ಮಾತನಾಡಬಾರದು."

"ಮತ್ತೆ!"

"ಮನೆಗೆ ಕಳೆ ಗೃಹಿಣಿಯಿಂದ."

"ಹಾಗಾದರೆ ಮನೆಯೀಗ ಕಾಂತಿವಿಹೀನವಾಗಿದೆಯೆ?" ಎಂದು ಎದ್ದು ಎಲೆಕ್ಟ್ರಿಕ್ ದೀಪಗಳ ಸ್ವಿಚ್ಚುಗಳನ್ನು ಒಂದೊಂದಾಗಿ ಹಾಕಿದರು. ಅವುಗಳ ಬೆಳಕಿನಿಂದ ಮನೆ ಕಾಂತಿಯುಕ್ತವಾದಾಗ ನನ್ನ ಕಡೆ ನೋಡುತ್ತಾ ಎದುರಲ್ಲಿದ್ದ ಸೋಫಾದಲ್ಲಿ ಕುಳಿತುಕೊಂಡರು. ಅವರ ಮೊಗದಲ್ಲಿ ಕಿರುನಗೆಯೊಂದು ಸುಳಿದಿತ್ತು. ಅಷ್ಟರಲ್ಲಿ ಕಾಫಿ ಬಂತು ಪರಿಚಾರಕ ಅವರಿಗೂ ಟೀಯನ್ನು ತೆಗೆದುಕೊಂಡು ಬಂದ.

"ಏನೋ ಸ್ವಾಮಿ, ತಿಳಿದವರಿಗೆ ನಾನು ಹೆಚ್ಚು ಹೇಳಲಾರೆ" ಎಂದೆ.

"ತೆಗೆದುಕೊಳ್ಳಿ ಕಾಫೀನ" ಎಂದರು.

"ಏನು ಸ್ವಾಮಿ, ಎಷ್ಟು ದಿನಗಳು ನೀವು ಹೀಗೆ ಬ್ರಹ್ಮಚಾರಿಗಳಾಗಿರಬೇಕೆಂದು ಮಾಡಿಕೊಂಡಿದ್ದೀರಿ?"

"ನಡೆದಷ್ಟು ದಿನ"

"ತಾವು ನಮ್ಮ ಪ್ರಮುಖ ಡೈರೆಕ್ಟರ ಮಗಳನ್ನು ಮದುವೆ ಮಾಡಿಕೊಂಡರೆ ಚೆನ್ನಾಗಿರುತ್ತದೆ. ನಿಮ್ಮಿಬ್ಬರ ಜೋಡಿ ಬಹಳ ಚೆನ್ನಾಗಿದೆ. ಆಕೆಯೂ ನಿಮ್ಮಲ್ಲಿ ಅನುರಕ್ತಳಾಗಿದ್ದಾಳೆ. ತಾವು ಇನ್ನೂ ದೊಡ್ಡಮನಸ್ಸು ಮಾಡಿಲ್ಲ"

"ಅದು ಎಲ್ಲಿ ಪತ್ತೆಹಚ್ಚಿದಿರಿ?"

"ನೋಡಿ, ಪತ್ತೆ ಹಚ್ಚಿದ್ದೀನಿ. ನಿಮ್ಮಿಬ್ಬರಿಗೆ ಮದುವೆಯಾಗಲಿ ಎಂದು ನನ್ನ ಮನ ಬಯಸುತ್ತಿದೆ. ಬೇಗನೆ ಮದುವೆ ಮಾಡಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತಿದ್ದೇನೆ. ಮದುವೆಯಾದರೆ ನನಗೂ ಊಟ ಸಿಗುತ್ತದೆ"

"ತಾವು ಹೇಳುವುದು ಸರಿ. ನಾನೇನೋ ಆಕೆಯನ್ನು ಮದುವೆಯಾಗಬೇಕೆಂದಿದ್ದೆ. ಅವರ ತಂದೆಯವರಿಗೂ ಅದು ಇಷ್ಟ ಎಂದು ತೋರುತ್ತದೆ. ನಾನು ವಿದೇಶದಿಂದ ತಾಯ್ನಾಡಿಗೆ ಹಿಂತಿರುಗಲು ಅವರೇ ಕಾರಣರು. ಅವರು ತಮ್ಮ ಮಗಳೊಡನೆ ಜರ್ಮನಿಗೆ ಬಂದಿದ್ದಾಗ ಒಂದು ಹೊಟೇಲಿನಲ್ಲಿ? ನನಗೆ ಅವರಿಬ್ಬರ ಪರಿಚಯವಾಯಿತು. ನಾನು ಆಕೆಯ ನಡೆ ನುಡಿ, ಅಭಿರುಚಿಗಳನ್ನು ನೋಡಿ ಅಂದಿನಿಂದಲೂ ಮೆಚ್ಚಿಕೊಂಡಿದ್ದೇನೆ ಅವರು ನನ್ನನ್ನು ಇಲ್ಲಿಗೆ ಹಿಂತಿರುಗಿ ತಮ್ಮ ಕಂಪನಿಯ ಮ್ಯಾನೇಜರಾಗಬೇಕೆಂದು ಆಹ್ವಾನಿಸಿದಾಗ ನನ್ನ ಮನ ಡೋಲಾಯಮಾನದಲ್ಲಿತ್ತು. ಆಗ ಆಕೆ "ಬಂದೇ ಬರುತ್ತಾರೆ" ಎಂದು ಹೇಳಿ ನನ್ನ ಕಡೆಗೆ ಆದರ ಪೂರ್ಣ ದೃಷ್ಟಿ ಬೀರಿದಳು. ನಾನು ಒಡನೆಯೇ ಒಪ್ಪಿಕೊಂಡೆ. ಅವರ ಕರೆಗೆ ಮನ್ನಣೆಯಿತ್ತೆ. ಇಲ್ಲಿಗೆ ಬಂದೆ. ಆದರೆ ಈಗ ಒಂದು ಸಮಸ್ಯೆ ನಮ್ಮಿಬ್ಬರ ನಡುವೆ ಎದ್ದು ನಿಂತಿದೆ"

"ಏನದು? ಕೇಳಬಹುದೇ!"

"ಅದನ್ನು ನಿಮಗೆ ಹೇಳಿ ನಿಮ್ಮ ಸಲಹೆ ಪಡೆಯಲೆಂದೇ ನಿಮ್ಮನ್ನು ಇಲ್ಲಿಗೆ ಬರ ಮಾಡಿಕೊಂಡಿದ್ದು. ನಿಮಗೆ ತೊಂದರೆಕೊಟ್ಟಿದ್ದು."

"ತೊಂದರೆ ಯೇನೂ ಇಲ್ಲ. ಏನು ಅದು ಹೇಳಿ"

"ಕೆಲವು ದಿವಸಗಳ ಹಿಂದೆ ನಾವು ಒಬ್ಬ ಸ್ಟೆನೋಗ್ರಾಫರನ್ನು ತೆಗೆದುಕೊಂಡೆವು. ನೋಡಿದ್ದಿರಾ ಆಕೆಯನ್ನ?"

"ನೋಡಿದ್ದೇನೆ. ಅದೇ ಪಂಜಾಬೀ ಡ್ರಸ್ಸನ್ನು ಹಾಕಿಕೊಂಡು ಬರುತ್ತಾಳಲ್ಲಾ ಅವಳು. ಆಕೆ ಇನ್ನೂ ಹಸುಳೆ"

"ಹೌದು. ಅವರು ಪಂಜಾಬಿಗಳಲ್ಲ; ಈ ಕಡೆಯವರೇ. ಆ ಹುಡುಗಿ ಪಂಜಾಬಿನಲ್ಲೇ ಹುಟ್ಟಿ ಬೆಳೆದಳು. ಅದರಿಂದ ಅಲ್ಲಿನ ರೂಢಿಯಂತೆಯೇ ಪೋಷಾಕನ್ನು ಹಾಕಿಕೊಳ್ಳುತ್ತಿದ್ದಾಳೆ."

"ಏನು ತಮಗೆ ಆಕೆಯ ವಿಷಯ ಅಷ್ಟೊಂದು ವೇದ್ಯವಾಗಿದೆ! ಆಕೆಯ ವಿಚಾರ ದಲ್ಲಿ ತಾವೂ ಅಷ್ಟು ವಿಶ್ವಾಸದಿಂದ ಮಾತನಾಡುತ್ತಿದ್ದೀರಿ? ಆ ಎಳೆಯ ಪ್ರಾಯದ ಮುಗ್ಧೆ ತಮ್ಮನ್ನು ಮೋಹಗೊಳಿಸಿರುವಳೇ, ತಮ್ಮ ಮನ ಸೆಳೆದಿರುವಳೇ"

"ಛೆ, ಛೆ ಹಾಗೇನೂ ಅಲ್ಲ. ಆಕೆ ತನ್ನೊಡನೆ ಒಂದು ವಾರ್ತೆಯನ್ನು ತಂದಳು. ಅದು ನನ್ನನ್ನು ಜರ್ಜರಗೊಳಿಸಿದೆ. ನನ್ನ ನಿರ್ಧಾರ ಬದಲಾಯಿಸುವಂತೆ ಮಾಡಿದೆ:

"ಏನದು ಆ ವಾರ್ತೆ?"

ಅವರು ಎದ್ದು ಒಂದು ಹೊಸ ಸಿಗಾರನ್ನು ಹೊತ್ತಿಸಿ ಅದನ್ನು ಸೇದುತ್ತಾ, ಅದರ ಹೊಗೆಯನ್ನು ದಿಟ್ಟಿಸುತ್ತಾ ಕೆಲಹೊತ್ತು ಮೌನವಾಗಿ ಕುಳಿತುಕೊಂಡರು. ಅನಂತರ ಅವರ ಚರಿತ್ರೆಯನ್ನು ಹೇಳತೊಡಗಿದರು.

"ಈಗ ನಾನು ನನ್ನ ಜೀವನ ಚರಿತ್ರೆಯನ್ನು ತಮಗೆ ಸಂಪೂರ್ಣವಾಗಿ ತಿಳಿಸ ಬೇಕು. ಈವರಿಗಾಗಲೇ ನಾನು ಮೈಸೂರಿನವನೇ ಎಂದು ವೇದ್ಯವಾಗಿದೆ. ನಮ್ಮ ವಂಶೀ ಕರು ಕಣಿವೆಯ ಕೆಳಗಿನಿಂದ ಬಂದು ಮೈಸೂರಿನಲ್ಲಿ ನೆಲೆಸಿದರು. ನಮ್ಮ ಹಿರಿಯರೆಲ್ಲಾ ಶ್ರೀಮನ್ಮಹಾರಾಜರ ಆಶ್ರಯದಲ್ಲಿ ಬೆಳೆದವರು. ನನ್ನ ತಂದೆ ಮೈಸೂರಿನಲ್ಲಿಯೇ ಮರಾ ಮತ್ತು ಇಲಾಖೆಯಲ್ಲಿದ್ದವರು. ನನ್ನ ವಿದ್ಯಾಭ್ಯಾಸ ಮೈಸೂರಿನಲ್ಲಿ ಆಯಿತು. ಅನಂತರ ಪುಣೆಗೆ ಹೋದೆ. ಅಲ್ಲಿ ನಮ್ಮ ಚಿಕ್ಕಪ್ಪಂದಿರಿದ್ದರು. ಅವರ ಮನೆಯಲ್ಲಿ ಒಂದು ವರ್ಷವಿದ್ದು ವ್ಯಾಸಂಗಿಸಿದೆ. ಆಮೇಲೆ ಇಂಗ್ಲೆಂಡಿಗೆ ತೆರಳಿದೆ.

"ನಾನು ಮೈಸೂರಿನಲ್ಲಿದ್ದಾಗಲೇ ನನ್ನ ತಾಯಿ ತೀರಿಕೊಂಡಿದ್ದರು. ನನಗೆ ಇದ್ದವಳು ಒಬ್ಬಳೇ ಸಹೋದರಿ. ಆಕೆಗೆ ಮೈಸೂರಿನಲ್ಲಿಯೇ ಕೊಟ್ಟು ಮದುವೆಯಾಗಿತ್ತು. ನಾನು ಮೈಸೂರನ್ನು ಬಿಟ್ಟು ಪುಣೆಗೆ ತೆರಳುವ ಹೊತ್ತಿಗೆ ಆಕೆಗೆ ಒಬ್ಬ ಮಗ ಒಬ್ಬ ಮಗಳೂ ಇದ್ದರು. ನಾನು ಇಂಗ್ಲೆಂಡಿನಲ್ಲಿರುವಾಗ ನನ್ನ ತಂದೆಯವರು ತೀರಿಕೊಂಡರು. ನನ್ನ ತಂದೆಯ ಆಸ್ತಿಪಾಸ್ತಿಯನ್ನೆಲ್ಲಾ ನನ್ನ ಸಹೋದರಿಗೇ ಕೊಡಲು ನಿಶ್ಚಯಿಸಿದೆ. ಹಾಗೆ ಏರ್ಪಾಡೂ ಮಾಡಿಬಿಟ್ಟೆ.

"ಆಗ ಇನ್ನೂ ಎರಡನೆಯ ಮಹಾಯುದ್ಧ ಆರಂಭವಾಗಿರಲಿಲ್ಲ. ಅನಂತರ ಯುದ್ಧ ಮುಗಿಯುವವರಿಗೆ ನಾನು ಸ್ವದೇಶಕ್ಕೆ ಹಿಂತಿರುಗುವ ಅವಕಾಶವಿರಲಿಲ್ಲ. ಅಲ್ಲಿ ವ್ಯಾಸಂಗ ಮುಗಿಸಿದ ಮೇಲೆ ಅಲ್ಲಿಯೇ ಕೆಲಸಕ್ಕೆ ಸೇರಿಕೊಂಡಿದ್ದೆ. ಸೈನ್ಯದಲ್ಲಿಯೂ ಸೇರಿಕೊಂಡು ಯುದ್ಧದಲ್ಲಿ ಭಾಗವಹಿಸಬೇಕಾಗಿ ಬಂದಿತ್ತು. ಜರ್ಮನಿಯಲ್ಲಿ ಯುದ್ಧದ ಕೈದಿಯಾಗಿ ಸೆರೆಯನ್ನು ಅನುಭವಿಸಬೇಕಾಯಿತು.

"ಯುದ್ಧ ಮುಗಿದು ನನಗೆ ಸೆರೆಯಿಂದ ಬಿಡುಗಡೆಯಾದ ಮೇಲೆ ತಾಯ್ನಾಡಿಗೆ ಹಿಂತಿರುಗಲು ಏರ್ಪಾಡು ಮಾಡಿಕೊಂಡೆ. ಪತ್ರವ್ಯವಹಾರ ಮಾಡಿದ್ದಲ್ಲಿ ನನ್ನ ಭಾವ, ಸಹೋದರಿ ಮತ್ತು ಆಕೆಯ ಮಗಳು ಒಂದು ರೈಲ್ವೆಯ ಅಪಘಾತದಲ್ಲಿ ಮಡಿದರೆಂದು ವರ್ತಮಾನ ಬಂತು. ಇನ್ನು ನನಗೆ ನನ್ನ ತಾಯ್ನಾಡಿನಲ್ಲಿ ಯಾರನ್ನು ನೋಡಬೇಕಾಗಿದೆ! ನನ್ನ ಸೋದರಳಿಯನನ್ನೂ ಜರ್ಮನಿಗೆ ಕರೆಯಿಸಿಕೊಂಡೆ. ಆ ಹೊತ್ತಿಗೆ ನನಗೂ ಜರ್ಮನಿ

ಯಲ್ಲಿ ಒಂದು ಒಳ್ಳೆಯ ಕೆಲಸ ದೊರಕಿತ್ತು. ನನ್ನ ಸೋದರಳಿಯನಿಗೆ ಅಲ್ಲೇ ವಿದ್ಯಾರ್ಜನೆಗೆ ಏರ್ಪಾಡು ಮಾಡಿದೆ. ಈಗ ಅವನು ಶಿಕ್ಷಣವನ್ನು ಮುಗಿಸಿ ಅಲ್ಲಿ ಇಂಜಿನಿಯರ್ ಪ್ರೊಫೆಸರಾಗಿದ್ದಾನೆ.

"ನಾವು ನಮ್ಮ ತಾಯ್ನಾಡನ್ನು ಬಿಟ್ಟು ಹದಿನೆಂಟು ವರ್ಷಗಳ ಮೇಲೆ ಆಗಿದ್ದಿತು. ನಮ್ಮ ಡೈರೆಕ್ಟರು ಅಲ್ಲಿಗೆ ಬಂದಿದ್ದಾಗ ಹೊಟೇಲೊಂದರಲ್ಲಿ ಅವರ ಭೆಟ್ಟಿಯಾಯಿತು. ನಾವೂ ಅವರೂ ಕೂಡಿ ಸ್ವಿಜರ್ಲೆಂಡಿಗೆ ಹೋಗಿಬಂದೆವು. ಭಾರತದಲ್ಲಿ ಕೈಗಾರಿಕೋದ್ಯಮದ ಪ್ರಗತಿಯ ವಿಷಯದಲ್ಲಿ ಬಹಳ ಮಾತೂಕತೆ ನಡೆಸಿದೆವು. ಏನೋ ನನಗೂ ಅವರಿಗೂ ವಿಶ್ವಾಸ ಬೆಳೆಯಿತು. ಅವರು ನನ್ನನ್ನು ಮರಳಿ ತಾಯ್ನಾಡಿಗೆ ಕರೆತಂದರು." ಎಂದು ಹೇಳಿ ಸಿಗಾರಿನ ಧೂಳನ್ನೆಲ್ಲಾ ಕೊಡಹಿ ಮತ್ತೆ ಅದನ್ನು ಹಚ್ಚಿಸಿ ಹೊಗೆ ಬಿಡುತ್ತಾ ಕುಳಿತುಕೊಂಡರು.

"ಆಕೆ ತಂದ ವಾರ್ತೆ ಏನೂ ಎನ್ನುವುದನ್ನೇ ನೀವು ಹೇಳಲಿಲ್ಲವಲ್ಲಾ" ಎಂದೆ.

"ಹೇಳುತ್ತೇನೆ, ಹೇಳುತ್ತೇನೆ, ನೀವು ಆ ಮಗು ಟೈಪು ಮಾಡುವುದನ್ನು ನೋಡಿದ್ದೀರಾ. ಅವಳ ಬೆರಳುಗಳು ಎಷ್ಟು ನೀಳವಾಗಿವೆ"

"ಇಲ್ಲ, ಅದನ್ನು ಗಮನಿಸಿಲ್ಲ"

"ಅವು ಎಷ್ಟು ಮಾಟವಾಗಿವೆ."

"ಆ ಬೆರಳುಗಳಿಂದ ನಿಮ್ಮ ಮದುವೆಗೆ ಅಡ್ಡಿ ಬಂದಿದೆಯೇ"

"ಅಷ್ಟೇ ನೀಳವಾದ ಇನ್ನೊಬ್ಬರ ಬೆರಳುಗಳು ವೀಣೆಯನ್ನು ನುಡಿಸುತ್ತಿದ್ದವು. ಆ ಬೆರಳುಗಳು ವೀಣೆಯ ಮೇಲೆ ಚಲಿಸುತ್ತಿದ್ದಾಗ ಹೊರಡುತ್ತಿದ್ದ ಮಧುರನಾದಕ್ಕೆ ಮನಸೋತಿದ್ದೆ. ಮರುಳನಾಗಿದ್ದೆ. ಆಕೆಯನ್ನು ಕಂಡದ್ದು ಹದಿನೆಂಟು ವರ್ಷಗಳ ಹಿಂದೆ. ಅದು ಪುಣೆಯಲ್ಲಿ. ಆಕೆಯ ರೂಪು ನನ್ನ ಮನದಲ್ಲಿ ಅಳಿದುಹೋಗಿದ್ದರೂ ಅವಳ ವೀಣೆಯ ಗಾನ ನನ್ನ ಕಿವಿಯಲ್ಲಿ ಇನ್ನು ಝೇಂಕರಿಸುತ್ತಿದೆ. ಆ ಬೆರಳುಗಳು ನನ್ನ ಕಣ್ಣ ಮುಂದೆ ನಿಂತಂತಿದೆ. ಅದರ ಚಲನೆ ನನ್ನ ಹೃದಯದಲ್ಲಿ ತರಂಗ ತರಂಗವನ್ನು ಎಬ್ಬಿಸುವಂತಿದೆ. ಒಂದು ಬೆರಳಿನಲ್ಲಿ ಮೂರು ಹರಳಿನ ವಜ್ರದ ಉಂಗುರವೊಂದಿತ್ತು. ಅದರ ಆಕೃತಿಯಂತೂ ನನ್ನ ಚಿತ್ತಭಿತ್ತಿಯಲ್ಲಿ ಸ್ಥಿರವಾಗಿ ನಿಂತುಬಿಟ್ಟಿದೆ" ಎಂದು ಹೇಳಿ ಮತ್ತೆ ಸಿಗಾರನ್ನು ಕೊಡವಿ ಅದನ್ನು ತದೇಕಚಿತ್ತರಾಗಿ ಸೇದುತ್ತಾ ಕುಳಿತುಬಿಟ್ಟರು. ಅನಂತರ ಪರಿಚಾರಕನನ್ನು ಕರೆದರು. ಅವನಿಗೆ ಮತ್ತೆ ಟೀ ತರಲು ಹೇಳಿದರು. ನನಗೆ ಕಾಫಿ ತರಿಸುತ್ತೇನೆ ಎಂದು ಕಾಫಿಯನ್ನು ತರಲು ಪರಿಚಾರಕನಿಗೆ ಅಪ್ಪಣೆಕೊಟ್ಟರು.

"ನೀವೇನು ಇಂದು ಬಹಳ ಭಾವೋದ್ರೇಕರಾಗಿದ್ದೀರಲ್ಲಾ" ಎಂದೆ.

"ಹೌದು, ಎಷ್ಟು ದಿನಗಳು ನಾನು ಆಕೆಯ ವೀಣಾನಾದದೊಂದಿಗೆ ನನ್ನ ಪಿಟೀಲನಾದವನ್ನು ಕೂಡಿಸಿ ನುಡಿಸಿದ್ದೇನೆ. ಎಷ್ಟು ದಿನಗಳು ನಾವು ತನ್ಮಯರಾಗಿ ನಮ್ಮ ವಾದ್ಯಗಳನ್ನು ನುಡಿಸುತ್ತಾ ಆನಂದವನ್ನನುಭವಿಸಿದ್ದೇವೆ. ಹೇಗೆ ಆ ಸಂಗೀತದಲ್ಲಿ ನಮ್ಮ ಅವರ ಹೃದಯಗಳು ಮಿಲನಗೊಂಡಿದ್ದವು"

"ಸರಿ ಆಕೆಗೂ ಈ ಹುಡುಗಿಗೂ ಏನು ಸಂಬಂಧ"

"ಈ ಹುಡುಗಿಗೆ ನಮ್ಮ ಕಂಪನಿಯಲ್ಲಿ ಕೆಲಸ ದೊರೆತಾಗ ನನ್ನನ್ನು ನೋಡಲು ಬಂದಳು. ಇವಳ ಇನ್‌ಟರ್‌ವ್ಯೂ ಮಾಡಿದವನು ನಾನಲ್ಲ. ಇವಳನ್ನು ಆರಿಸಿದವನೂ ನಾನಲ್ಲ. ಇವಳಿಗೆ ಕೆಲಸದೊರೆತ ಮೇಲೆ ಆರ್ಡರ್ ಹೋದಮೇಲೇ ಒಂದು ಪತ್ರ ವೊಂದನ್ನು ತೆಗೆದುಕೊಂಡು ನನ್ನ ಬಳಿಗೆ ಬಂದಳು. ನಾನು ಏನೋ ವಿಚಾರದಲ್ಲಿ ಮಗ್ನನಾಗಿದ್ದೆ. 'ಕುಳಿತುಕೊಳ್ಳಿ' ಎಂದು ಹೇಳಿದೆ. ಎದುರಿನಲ್ಲಿದ್ದ ಕುರ್ಚಿಯ ಮೇಲೆ ಕುಳಿತುಕೊಂಡಳು. ಅನಂತರ ಆ ಪತ್ರವನ್ನು ನನ್ನ ಮುಂದೆ ನೀಡಿದಳು. ಆಗ ನೀಳವಾದ ಆ ಬೆರಳುಗಳನ್ನು ಕಂಡೆ. ಒಂದು ಬೆರಳಿನಲ್ಲಿ ಮೂರು ಹರಳಿನ ವಜ್ರದ ಉಂಗುರವಿತ್ತು. ನನ್ನ ಮನ ಒಮ್ಮೆಯೇ ಎಲ್ಲಿಗೋ ಹಾರಿತು. ಹಿಂದಿನ ನೆನಪು ಬಂತು. ಅವಳ ಮುಖ ವನ್ನು ನೋಡಿದೆ, ಪತ್ರದ ಲಕ್ಕೋಟೆಯನ್ನು ಒಡೆದು ಪತ್ರವನ್ನು ಓದಿದೆ. ಅದರಲ್ಲಿ ಹೀಗೆ ಬರೆದಿತ್ತು 'ಹದಿನೆಂಟು ವರ್ಷಗಳ ಮೇಲೆ ನಿಮ್ಮ ವಿಚಾರ ತಿಳಿಯಿತು. ಯಾವ ಸಂಯೋಗದಿಂದಲೋ ಮಗು ನಿಮ್ಮ ಆಶ್ರಯದಲ್ಲಿ ಬಂದು ಸೇರಿಕೊಂಡಿದ್ದಾಳೆ. ಇನ್ನು ನನ್ನ ಹೊಣೆ ತೀರಿತು. ಇನ್ನು ಮುಂದೆ ಅದನ್ನು ಪೋಷಿಸಿ, ಮದುವೆಮಾಡಿ ಸಂಸಾರ ನಿಲ್ಲಿಸುವಹೊಣೆ ನಿಮ್ಮ ಮೇಲೆ ಇದೆ. ಭಗವಂತನು ನಿಮಗೆ ಸಕಲ ಸನ್ಮಂಗಳವನ್ನು ದಯಪಾಲಿಸಲೆಂದು ಅವನಲ್ಲಿ ಸದಾ ಪ್ರಾರ್ಥಿಸುತ್ತಿರುವುದೊಂದೇ ನನ್ನ ಕರ್ತವ್ಯ' ಈ ಒಕ್ಕಣೆಯೊಂದಿಗೆ ಒಂದು ಟಿಪ್ಪಣಿಯೂ ಇತ್ತು 'ಹಿಂದೆ ತಾವು ಎಲ್ಲಿದ್ದರೂ ಭಗವಂತ ತಮ್ಮನ್ನು ಕಾಪಾಡುತ್ತಿರಲಿ ಎಂದು ಪ್ರತಿದಿನವೂ ಪ್ರಾರ್ಥಿಸುತ್ತಿದ್ದೆ. ಈಗ ತಾವಿರುವ ನೆಲೆಯನ್ನು ತೋರಿಸಿಕೊಟ್ಟು ಮಗುವನ್ನು ತಮ್ಮ ಮಡಲಿನಲ್ಲಿ ಹಾಕುವಂತೆ ಏರ್ಪಡಿಸಿದ ಆ ಭಗವಂತನ ಕರುಣೆ ಅಪಾರವಾದುದಲ್ಲವೇ' ಎಂದಿತ್ತು. 'ನಿಮ್ಮ ತಾಯಿ ಎಲ್ಲಿದ್ದಾರೆ?' ಎಂದು ಕೇಳಿದೆ. ಅನಂತರ "ನಿಮ್ಮ ತಂದೆ ಕೆಲಸದಿಂದ ನಿವೃತ್ತರಾದರೇ? ನಿನಗೆ ಎಷ್ಟು ಜನ ತಮ್ಮಂದಿರೂ ತಂಗಿಯರೂ ಇದ್ದಾರೆ?" ಎಂದೂ ವಿಚಾರಿಸಿದೆ. ಅವಳು 'ನಮ್ಮ ತಾಯಿ ಈಗ ಇಲ್ಲಿಯೇ ಇದ್ದಾರೆ. ನಮ್ಮ ತಂದೆ ತೀರಿಕೊಂಡಾಗಲೇ ಆರು ವರ್ಷಗಳಾ ದವು. ನನಗೆ ·ಯಾವ ಸಹೋದರ ಸಹೋದರಿಯರಿಲ್ಲ. ಎಂದು ಹೇಳಿದಳು, 'ಹಾಗಾ' ಎಂದೆ. ಅವಳು ಹೇಳತೊಡಗಿದಳು 'ನಾನೂ ನನ್ನ ತಾಯಿ ಮೊನ್ನೆಯವರಿಗೂ ಚಂಡೀಘರದಲ್ಲೇ ಇದ್ದೆವು. ನನ್ನ ವ್ಯಾಸಂಗ ಮುಗಿದಮೇಲೆ ನಾವು ಇಲ್ಲಿಗೆ ಬಂದೆವು. ತಮ್ಮ ಕಂಪನಿಯಲ್ಲಿ ಕೆಲಸ ಇರುವುದೆಂಬ ಜಾಹೀರಾತನ್ನು ನಾವು ಇಲ್ಲಿಗೆ ಬಂದಮೇಲೆ ನೋಡಿದ್ದು, ಅರ್ಜಿಹಾಕಿದ್ದು. ನನ್ನ ಇನ್‌ಟರ್‌ವ್ಯೂ ಆಗಿ ಕೆಲಸ ದೊರೆತಾಗ ಇಲ್ಲಿನ ಅಧಿಕಾರಿಗಳು ತಮ್ಮ ವಿಷಯದಲ್ಲಿ ಮಾತನಾಡುತ್ತಿದ್ದುದನ್ನು ಆಲಿಸಿದೆ. ಆಗಲೇ ತಮ್ಮ ಹೆಸರೂ ನನಗೆ ತಿಳಿದಿದ್ದು–ಮನೆಗೆ ಹೋದಾಗ ಅದನ್ನು ನನ್ನ ತಾಯಿಗೆ ತಿಳಿಸಿದೆ, ಅವರು ಈ ಪತ್ರವನ್ನು ತಮಗೆ ಕೊಡಲು ಹೇಳಿ ಕೊಟ್ಟರು' ಎಂದಳು. 'ನೀನು ಹೋಗಿ ನಿನ್ನ ತಾಯಿಯನ್ನು ಕರೆದುಕೊಂಡು ಬಾ, ನನ್ನ ಕಾರನ್ನು ತೆಗೆದುಕೊಂಡು ಹೋಗು' ಎಂದು ಹೇಳಿದೆ, ನಮ್ಮ ದಫೇದಾರನಿಗೆ ಈಕೆಯನ್ನು ಕಾರಿನಲ್ಲಿ ಮನೆಗೆ ಕಳುಹಿಸಿ ಕೊಡಲು ತಿಳಿಸಿದೆ.

ಆಕೆ ಹಿಂತಿರುಗಿ ಬಂದಳು. ತನ್ನ ತಾಯಿ ಈಗ ಬರದಿರುವುದಕ್ಕೆ ಕ್ಷಮಿಸ ಬೇಕೆಂದು ಕೇಳಿಕೊಂಡಳು. ಒಂದು ದಿನ ಆಕೆಯೇ ಬಂದು ಕಾಣುತ್ತೇನೆಂದು ಹೇಳಿ ಕಳುಹಿಸಿದ್ದಾರೆಂದಳು.

"ಆಕೆಯನ್ನು ಎಂದು ಕಂಡೇನು ಎಂದು ಮನ ಹಾತೊರೆಯುತ್ತಿತ್ತು. ಆ ಹುಡುಗಿ ಹೋದಮೇಲೆ ಆಕೆಯ ಕೆಲಸದ ದಾಖಲೆಯ ಕಾಗದ ಪತ್ರಗಳನ್ನು ತರಿಸಿ ನೋಡಿದೆ. ಆಕೆಯ ಹುಟ್ಟಿದ ವರ್ಷ, ತಿಂಗಳು ತಾಳೆ ಹಾಕಿದೆ. ನನ್ನ ಸಂಶಯ ಧೃಢ ವಾಯಿತು" ಹೀಗೆಂದು ಹೇಳಿ ಮತ್ತೆ ಸಿಗಾರಿನ ಬೂದಿಯನ್ನು ಕೊಡಹಿ, ಅದನ್ನು ಹಚ್ಚಿಸಿ ಸೇದತೊಡಗಿದರು.

"ಯಾರು ಸ್ವಾಮಿ ಆಕೆ, ಪುಣೆಯಲ್ಲಿ ವೀಣೆ ನುಡಿಸಿದವಳು, ನಿಮ್ಮನ್ನು ಆಕರ್ಷಿಸಿದವಳು" ಎಂದು ಕೇಳಿದೆ.

"ಆಕೆಯ ವಿಚಾರವನ್ನು ನಿಮಗೆ ಸಂಪೂರ್ಣವಾಗಿ ಹೇಳುತ್ತೇನೆ ಕೇಳಿ" ಎಂದು ಅವರು ಹೇಳತೊಡಗಿದರು.

"ಆಕೆಯ ವಿಚಾರವನ್ನು ನಿಮಗೆ ಸಂಪೂರ್ಣವಾಗಿ ಹೇಳುತ್ತೇನೆ. ನಾನು ನನ್ನ ವಿದ್ಯಾಭ್ಯಾಸ ಮೈಸೂರಿನಲ್ಲಿ ಮುಗಿಸಿ ಮುಂದಿನ ವ್ಯಾಸಂಗಕ್ಕಾಗಿ ಪುಣೆಯಲ್ಲಿ ಒಂದು ವರ್ಷ ನಮ್ಮ ಚಿಕ್ಕಪ್ಪನ ಮನೆಯಲ್ಲಿ ಇದ್ದೆನೆಂದು ಆಗಲೇ ಹೇಳಿದ್ದೇನಲ್ಲಾ. ಆಗ ಒಂದು ಘಟನೆ ನಡೆಯಿತು. ಅದು ನನ್ನ ಜೀವನವನ್ನೇ ಮಾರ್ಪಡಿಸಿತು. ನಾನು ಮೈಸೂರಿನಲ್ಲಿ ದ್ದಾಗ ನನ್ನ ವಿದ್ಯಾಭ್ಯಾಸದ ಜೊತೆಗೆ ಸಂಗೀತವನ್ನು ಅಭ್ಯಾಸಮಾಡಿದ್ದೆ. ಪಿಟೀಲು ನುಡಿಸುವುದನ್ನು ಕಲಿಸಿದ್ದೆ. ನಮ್ಮ ಹಿರಿಯರೆಲ್ಲರಿಗೂ ಸಂಗೀತದ ಹುಚ್ಚು ಇತ್ತು. ನಮ್ಮ ತಾತ ಮೈಸೂರು ಅರಮನೆಯ ಇಲಾಖೆಯಲ್ಲಿ ಪೇಷ್ಕಾರರಾಗಿದ್ದರು. ಅವರಿಗೆ ಸಂಗೀತ ಎಷ್ಟರಮಟ್ಟಿಗೆ ಬರುತ್ತಿದ್ದಿತೆಂದರೆ ಒಂದು ಸಲ ಆಸ್ಥಾನದಲ್ಲಿ ಶ್ರೀಮನ್ಮಹಾ ರಾಜರ ಸಮ್ಮುಖದಲ್ಲಿ ಕುಳಿತು ತಕ್ಕ ಪಕ್ಕವಾದ್ಯಗಳೊಡನೆ ಒಂದು ಘಂಟೆ ಕಚೇರಿ ಯನ್ನೇ ಮಾಡಿದರಂತೆ. ಅಂದು ಅವರು ಹಾಡಿದ ಕಲ್ಯಾಣಿರಾಗದ ಕೀರ್ತನೆ ಅತ್ಯದ್ಭುತ ವಾಗಿದ್ದಿತಂತೆ. ಅದನ್ನು ಮೆಚ್ಚಿಕೊಂಡ ಮಹಾರಾಜರು ಅವರಿಗೆ ಪಾರಿತೋಷಕವನ್ನು ದಯಪಾಲಿಸಿದರಂತೆ. ಅಂದಿನಿಂದ ಅವರ ಹೆಸರಿನ ಜೊತೆಗೆ ಕಲ್ಯಾಣಿ ಎಂಬ ಪದವೂ ಸೇರಿಹೋಯಿತಂತೆ. ನಮ್ಮ ತಂದೆಯವರು ಅದೇ ಅರಮನೆಯ ಮರಾಮತ್ತು ಇಲಾಖೆ ಯಲ್ಲಿದ್ದರು. ಅವರಿಗೂ ಸಂಗೀತ ಚೆನ್ನಾಗಿ ಬರುತ್ತಿತ್ತು. ಅವರು ನನಗೆ ಪಿಟೀಲು, ನನ್ನ ಸಹೋದರಿಗೆ ವೀಣೆ ಪಾಠ ಹೇಳಿಸಿದ್ದರು.

"ನಾನು ಪುಣೆಗೆ ಬಂದಾಗ ನನ್ನೊಡನೆ ಪಿಟೀಲನ್ನೂ ತೆಗೆದುಕೊಂಡು ಬಂದೆ. ಬಂದ ಹೊಸದರಲ್ಲಿ ಒಂದು ದಿನ ನಮ್ಮ ಚಿಕ್ಕಪ್ಪನವರ ಮನೆಯಲ್ಲಿ ಕುಳಿತು ಪಿಟೀಲನ್ನು ನುಡಿಸುತ್ತಿದ್ದಾಗ ಯಾರೋ ಬಾಗಿಲಬಳಿ ಅತ್ತಿಂದಿತ್ತ ಇತ್ತಿಂದತ್ತ ಸುಳಿದಾಡಿದಂತೆ ಭಾಸವಾಯಿತು. ಆಕೆ ಉಟ್ಟಿದ್ದ ಗಟ್ಟಿ ಬಣ್ಣದ ಸೀರೆ ನನ್ನ ದೃಷ್ಟಿಯನ್ನು ಆ ಕಡೆಗೆ ಸೆಳೆಯಿತು. ಮಹಾರಾಷ್ಟ್ರರಿಗೇ ಮುಡುಪಾದ ಆ ಪುಣೆ ನಗರದಲ್ಲಿ ದಕ್ಷಿಣಾದಿ ರೀತಿಯಲ್ಲಿ

ಸೀರೆಯನ್ನುಟ್ಟ ಹೆಂಗಸನ್ನು ನೋಡಿದ್ದು ಇದೇ ಮೊದಲು. ಆಕೆ ಯಾರೆಂದು ನನ್ನ ಚಿಕ್ಕಮ್ಮನನ್ನು ವಿಚಾರಿಸಿದೆ. ನಾವು ಇದ್ದಿದ್ದು ಆ ಮನೆಯ ಮೊದಲನೆಯ ಮಹಡಿಯಲ್ಲಿ. ಅವರು ಗಂಡ ಹೆಂಡತಿ ಎರಡನೆಯ ಮಹಡಿಯಲ್ಲಿದ್ದಾರೆ. ತುಂಬ ಗೌರವಸ್ಥರು, ಆಕೆಗೂ ಸಂಗೀತ ಬರುತ್ತದೆ ಎಂದು ತಿಳಿಯಿತು.

ಅಂದು ಭಾನುವಾರ ನಮ್ಮ ಚಿಕ್ಕಪ್ಪನವರೂ ಮನೆಯಲ್ಲಿಯೇ ಇದ್ದರು. ಆತ ನಮ್ಮ ಮನೆಗೆ ದಯಮಾಡಿಸಿ, ನಮ್ಮನ್ನು ಅವರ ಮನೆಗೆ ಟೀಗೆ ಬರಬೇಕೆಂದು ಆಹ್ವಾನಿಸಿದರು. ಬರುವಾಗ ನಾನು ನನ್ನ ಜೊತೆಯಲ್ಲಿ ಪಿಟೀಲನ್ನು ತರಬೇಕೆಂದು ಪ್ರಾರ್ಥಿಸಿಕೊಂಡರು.

"ನಾವು ಅಲ್ಲಿಗೆ ಹೋದಾಗ ಅವರ ಮನೆ ಸುಸಜ್ಜಿತವಾಗಿದ್ದುದನ್ನು ಕಂಡೆ." ಸೋಫಾಗಳಲ್ಲಿ ನಮ್ಮನ್ನು ಕುಳಿತುಕೊಳ್ಳಲು ಪ್ರಾರ್ಥಿಸಿದರು. ತಿಂಡೀತೀರ್ಥ ತಂದು ಟೀಪಾಯಿಗಳಲ್ಲಿಟ್ಟರು. ಟೀ ಟ್ರೇ ತಂದಿರಿಸಿದ ಮೇಲೆ ಆಕೆ ನನ್ನ ಚಿಕ್ಕಮ್ಮನೊಂದಿಗೆ ಒಂದು ಸೋಫಾದಲ್ಲಿ ಕುಳಿತುಕೊಂಡರು. ನಾನೂ ನನ್ನ ಚಿಕ್ಕಪ್ಪ ಮತ್ತೊಂದು ಸೋಫಾದಲ್ಲಿ ಕುಳಿತಿದ್ದೆವು. ಆತ ನಮ್ಮ ಬಳಿಗೆ ಬಂದು ಕುರ್ಚಿಯೊಂದನ್ನು ಎಳೆದುಕೊಂಡು ಕುಳಿತುಕೊಂಡ. 'ಏನು ವಿಶೇಷ ಈ ದಿನ' ಎಂದು ನಮ್ಮ ಚಿಕ್ಕಪ್ಪ ಕೇಳಲು 'ವಿಶೇಷ ವೇನೂ ಇಲ್ಲ. ತಾವು ದಯಮಾಡಿಸಿದುದೇ ದೊಡ್ಡ ವಿಶೇಷ. ತಮ್ಮ ಅಣ್ಣಂದಿರ ಮಕ್ಕಳಿಂದ ಎರಡು ಕೀರ್ತನೆಗಳನ್ನು ನುಡಿಸಿ ಆಲಿಸಬೇಕೆನ್ನಿಸಿತು. ಅದರಿಂದ ತಮ್ಮನ್ನು ಆಹ್ವಾನಿಸಿದೆವು' ಎಂದರು.

"ಹಾಲಿನ ನಡುವೆ ರತ್ನಗಂಬಳಿ ಹಾಸಿತ್ತು ಅದರಮೇಲೆ ವೀಣೆಯೊಂದನ್ನೂ ಸಿದ್ಧಪಡಿಸಿ ಇಟ್ಟಿತ್ತು. ನಮ್ಮ ಚಿಕ್ಕಪ್ಪ 'ನಿಮ್ಮ ಆಕೆ ವೀಣೆಯನ್ನು ನುಡಿಸಲಿ. ಇವನೂ ಎರಡು ಕೀರ್ತನೆಗಳನ್ನು ನುಡಿಸುತ್ತಾನೆ' ಎಂದರು.

"ತಿಂಡೀತೀರ್ಥವಾದಮೇಲೆ ಆತ ಮೊದಲು ನಾನು ಪಿಟೀಲು ನುಡಿಸುವಂತೆ ಪ್ರಾರ್ಥಿಸಿದರು. ಆಗ ನಾನು ಹೇಳಿದೆ. ಅವರು ವೀಣೆ ನುಡಿಸಲಿ ಅವರೊಂದಿಗೆ ನಾನು ಪಿಟೀಲನ್ನು ನುಡಿಸುತ್ತೇನೆ ಎಂದೆ. ಅವರ ಯಜಮಾನರು ಆಕೆಯನ್ನು ಒಪ್ಪಿಸಿದರು. ನಾವಿಬ್ಬರೂ ನಮ್ಮ ವಾದ್ಯಗಳನ್ನು ಶ್ರುತಿಪಡಿಸಿ ನುಡಿಸಲು ಆರಂಭಿಸಿದೆವು. ಆಕೆ ವರ್ಣ 'ವನಜಾಕ್ಷಿ' ಕಲ್ಯಾಣಿ ರಾಗದಲ್ಲಿ ಆರಂಭಿಸಿದಳು. ಅನಂತರ ತ್ಯಾಗರಾಜರ ಕೃತಿ ಧೇನುಕರಾಗದಲ್ಲಿ ವೀಣೆಯಮೇಲೆ ಝೇಂಕರಿಸಿತು. ಆಕೆಯ ಕೈ ಚಳಕ ನೋಡಿ ನನಗೆ ಆಶ್ಚರ್ಯವಾಯಿತು. ಆಕೆಗೆ ಹೊಂದಿಕೊಂಡು ನಾನು ಪಿಟೀಲನ್ನು ನುಡಿಸುತ್ತಿದ್ದೆ. ಅವರ ಯಜಮಾನರು ಹೇಳಿದರು. 'ಆಕೆ ವೀಣೆಯನ್ನು ಮುಟ್ಟಿ ವರ್ಷದ ಮೇಲಾಗಿದ್ದಿತು. ಇಲ್ಲಿ ಯಾರಿಗೆ ಕರ್ಣಾಟಕ ಸಂಗೀತ ಬೇಕಾಗಿದೆ! ತಾವು ಶುದ್ಧ ಕರ್ಣಾಟಕ ರಾಗಗಳನ್ನು ನುಡಿಸುತ್ತಿದ್ದಾಗ ಈಕೆ ಕೆಲಸಗಳನ್ನೆಲ್ಲಾ ಒತ್ತೊಟ್ಟಿಗಿಟ್ಟು ಕೆಳಗಿನಿಂದ ಬರುತ್ತಿದ್ದ ಸಂಗೀತವನ್ನು ಆಲಿಸುತ್ತಾ ಅದರ ಮಾಧುರ್ಯದಲ್ಲಿ ತಲ್ಲೀನಳಾಗಿರುತ್ತಿದ್ದಳು. ಆಕೆಯೇ ತಮ್ಮನ್ನು ಕರತರಲು ಕಳುಹಿಸಿ ಕೊಟ್ಟವಳು ಎಂದು ತಿಳಿಸಿದರು. ಆದಿನವೇ ಕಾನಡ,

ಕಾಮೋಜು, ಶಂಕರಾಭರಣ ರಾಗಗಳಾದಮೇಲೆ ತಾನ ರಾಗಮಾಲಿಕೆ ನುಡಿಸಲು ಆರಂಭಿಸಿದಳು. ಅದರಲ್ಲಿ ಮೂರು ಘನರಾಗಗಳು ರೀತಿಗೌಳ, ಆರಭಿ, ವರಾಳಿ ಇದ್ದವು. ಆಕೆಯೂ ಅದ್ಭುತಸಾಧನೆ ಮಾಡಿರಬೇಕು. ಆಕೆಯೇನೂ ಸಾಧಾರಣ ಸ್ತ್ರೀ ಅಲ್ಲ ಎನ್ನಿಸಿತು.

ಮುಂದಿನ ಭಾನುವಾರದಿಂದ ಎಲ್ಲಾ ರಜಾದಿನಗಳಲ್ಲೂ ಆಕೆಯ ಯಜಮಾನರೇ ನಮ್ಮನ್ನು ಅವರ ಮನೆಗೆ ಆಹ್ವಾನಿಸುತ್ತಿದ್ದರು. ನಾನು ಹೋಗಿ ಆಕೆಯೊಡನೆ ಹಲವಾರು ಕೀರ್ತನೆಗಳನ್ನೂ ರಾಗಗಳನ್ನೂ ನುಡಿಸಿ ಬರುತ್ತಿದ್ದೆ. ತ್ಯಾಗರಾಜರು, ಶ್ಯಾಮಶಾಸ್ತ್ರಿಗಳು ಮುತ್ತುಸ್ವಾಮಿ ದೀಕ್ಷಿತರು ಪುರಂದರದಾಸರು ಎಲ್ಲರ ಕೃತಿಗಳ ಪರಿಚಯವೂ ಆಕೆಗೆ ಚೆನ್ನಾಗಿತ್ತು. ಆಕೆಯ ಯಜಮಾನರು ನಮ್ಮೆದುರಲ್ಲಿ ಕುಳಿತು ಅವುಗಳನ್ನು ಕೇಳಿ ಆನಂದಿಸುತ್ತಿದ್ದರು. ನಾನು ಪುಣೆಯಲ್ಲಿ ನೆಲಸಿದಮೇಲೆ ಅಲ್ಲಿ ನನಗೆ ಒಬ್ಬ ಉತ್ತರಾದಿ ಸಂಗೀತದ ಗವಾಯಿಯ ಪರಿಚಯವಾಯಿತು. ಪ್ರತಿ ಸಂಜೆಯೂ ಆತನ ಮನೆಗೆ ಹೋಗಿ ಉತ್ತರಾದಿ ಸಂಗೀತವನ್ನೂ ಕಲಿಯಲಾರಂಭಿಸಿದೆ. ನಾನು ಕಲಿತಿದ್ದನ್ನು ಆಕೆಯ ಮುಂದೆ ನುಡಿಸಿ ಅದರ ಮಾಧುರ್ಯವನ್ನೂ ತಿಳಿಸಿಕೊಡುತ್ತಿದ್ದೆ. ಇಬ್ಬರೂ ಜೊತೆಗೂಡಿ ಕರ್ಣಾಟಕ ರಾಗದ ಸೀರೆಯ ಸೆರಗಿಗೆ ಉತ್ತರಾದಿ ಸಂಗೀತದ ಕಾಶೀಪೀತಾಂಬರದ ಮೆರಗನ್ನು ಕೊಟ್ಟು ಹೊಸ ಪ್ರಯೋಗವನ್ನು ಮಾಡುತ್ತಿದ್ದೆವು. ಉತ್ತರಾದಿ ಸಂಗೀತದ 'ತರಾನ' ರಚನೆಯ ಅನುಕರಣವಾದ, ಶೃಂಗಾರ ಪ್ರಧಾನ ಸಾಹಿತ್ಯದಿಂದ ಕೂಡಿದ, ನರ್ತನಕ್ಕೇ ಮೀಸಲಾದ ತಿಲ್ಲಾನಗಳ ರಚನೆಗೂ ತೊಡಗಿದೆವು.

"ಒಂದು ಸಲ ಪುಣೆಯಲ್ಲಿನ ಕರ್ಣಾಟಕ ಸಂಘದಲ್ಲಿ ವಸಂತಸಾಹಿತ್ಯ ಮಹೋತ್ಸವ ನಡೆಯಿತು. ನಮ್ಮ ಚಿಕ್ಕಪ್ಪ ಆ ಸಂಘದ ಕಾರ್ಯಕರ್ತರಲ್ಲಿ ಪ್ರಮುಖನಾಗಿದ್ದನು. ಆತ ಆ ಸಂಬಂಧದಲ್ಲಿ ನಮ್ಮ ಈರ್ವರ ಪಿಟೀಲು ವೀಣಾವಾದನ ಕಚೇರಿಯನ್ನು ಏರ್ಪಡಿಸಿದನು. ಅಲ್ಲಿನ ತಬಲಾ ವಿದ್ವಾಂಸರೊಬ್ಬರು ತಬಲದ ಮೇಲೆ ಟೀಕಾ ಹಾಕುತ್ತಾ ನಮ್ಮೊಡನೆ ಕಚೇರಿಯಲ್ಲಿ ಸಹಕರಿಸಿದರು. ಆ ದಿನ ಕಚೇರಿ ಅದ್ಭುತವಾಗಿತ್ತು. ಶುದ್ಧ ಕರ್ಣಾಟಕ ರಾಗಗಳನ್ನೂ ಕೃತಿಗಳನ್ನೂ ನುಡಿಸಿದಮೇಲೆ ನಾವು ನಡೆಸಿದ್ದ ಪ್ರಯೋಗಗಳನ್ನು ಪ್ರದರ್ಶಿಸಿದೆವು. "ಭೇಷ್ ಭೇಷ್, ವಹವಾ, ವಹವಾ" ಎಂದು ಸಭಿಕರು ಉದ್ಗಾರ ತೆಗೆಯುತ್ತಾ ತಮ್ಮ ಮೆಚ್ಚುಗೆಯನ್ನು ತೋರ್ಪಡಿಸಿದರು. ಕೊನೆಯಲ್ಲಿ ನಾವೇ ರೂಪಿಸಿದ್ದ ತಿಲ್ಲಾನ ನುಡಿಸಿದಾಗ ಸಭಿಕರ ಆನಂದಕ್ಕಂತೂ ಪಾರವೇ ಇಲ್ಲ. ಕರತಾಡನ ಎಷ್ಟು ಹೊತ್ತಾದರೂ ನಿಲ್ಲಲಿಲ್ಲ. ಇದರ ವಿಷಯ ಬೊಂಬಾಯಿ ಪತ್ರಿಕೆಗಳಲ್ಲಿ ವರದಿಯಾಯಿತು. ನಾವು ಪ್ರದರ್ಶಿಸುತ್ತಿದ್ದಾಗ ತೆಗೆದ ಚಿತ್ರಗಳು ಅಲ್ಲಿನ ಮತ್ತು ಬೊಂಬಾಯಿಯ ಪತ್ರಿಕೆಗಳಲ್ಲಿ ಬಂದವು. ನಾವು ನಡೆಸಿದ ಪ್ರಯೋಗ ಸಂಗೀತ ಪ್ರಪಂಚದಲ್ಲಿ ಒಂದು ಕ್ರಾಂತಿಯನ್ನೇ ಹುಟ್ಟಿಸುವುದೆಂದು ಸಾರಿದ್ದರು.

"ಪತ್ರಿಕೆಗಳಲ್ಲಿ ಪ್ರಕಟವಾದ ವರದಿಗಳನ್ನು ಓದಿದ ಆಕೆಯ ಯಜಮಾನರ ಮೇಲಿನ ಅಧಿಕಾರಿಗಳು ಆಕೆಯ ವೀಣಾವಾದನವನ್ನು ಕೇಳಬೇಕೆಂದು ಅಪೇಕ್ಷಿಸಿದರಂತೆ.

ಅವರೆಲ್ಲರೂ ಮಿಲಿಟರಿ ಅಧಿಕಾರಿಗಳು. ಆತ ಮಿಲಿಟರಿ ಇಲಾಖೆಯ ಲೆಕ್ಕ ಪರಿಶೋಧನದ ಅಧಿಕಾರಿಗಳಾಗಿದ್ದರು. ಆತ ನಮ್ಮ ಮನೆಯ ಮೇಲಂತಸ್ತಿನ ಮಾಳಿಗೆಯ ಮೇಲೆ ಮುಂದಿನ ಭಾನುವಾರ ಒಂದು ಪಾರ್ಟಿ ಏರ್ಪಡಿಸಿದ. ಅದಕ್ಕೆ ಅಲ್ಲಿನ ರೊಟೇರಿಯನ್ನರೂ, ಮಿಲಿಟರಿ ಅಧಿಕಾರಿಗಳೂ ಅವರ ಪತ್ನಿಯರೂ ದಯಮಾಡಿಸಿದ್ದರು.

"ಆ ದಿನ ಸಂಗೀತ ಸಮಾರೋಹವಂತೂ ದಿವ್ಯವಾಗಿತ್ತು. ಅಂದು ನಮ್ಮ ಮನೋಧರ್ಮ, ನೆರೆದಿದ್ದ ಶ್ರೋತೃಗಳ ಸಹೃದಯತೆ ಒಂದುಗೂಡಿ ಒಂದು ಅವರ್ಣನೀಯ ಗಂಧರ್ವ ಲೋಕವನ್ನೇ ಸೃಜಿಸಿತ್ತು. ಮೂರು ಗಂಟೆಗಳ ಕಾಲ ಮೂರು ನಿಮಿಷದಂತೆ ಕಳೆದುಹೋಯಿತು. ಆಕೆಯನ್ನು ಅತಿಥಿಗಳು ಕೊಂಡಾಡಿ ತೆರಳಿದರು. ನನಗೂ ಶಹಬಾಷ್ ಗಿರಿ ಕೊಟ್ಟರು. ತಬಲಾ ನುಡಿಸಿದ ವಿದ್ವಾಂಸರನ್ನೂ ಟ್ಯಾಕ್ಸಿಯೊಂದರಲ್ಲಿ ಕಳುಹಿಸಿ ಕೊಟ್ಟಾಯಿತು. ಕೊನೆಯವರಿಗೂ ಕುಳಿತು ಕೇಳುತ್ತಿದ್ದ ಆತನ ಮೇಲಿನಧಿಕಾರಿಗಳು ಆಕೆಯನ್ನು ತಮ್ಮ ಮನೆಗೆ ಒಂದು ಸಲ ಬಂದು ನುಡಿಸಬೇಕೆಂದು ಪ್ರಾರ್ಥಿಸಿಕೊಂಡರು. ಅಲ್ಲದೆ ಆಕೆಯ ಗಂಡನನ್ನು ತನ್ನೊಡನೆ ತಮ್ಮ ಕಾರಿನಲ್ಲಿ ಕೂಡಿಸಿಕೊಂಡು ಕರೆದುಕೊಂಡು ಹೋದರು. ಅಂದಿನ ತಿಂಡೀ ತೀರ್ಥ ಎಲ್ಲಾ ಏರ್ಪಾಡಿನಲ್ಲೂ ಅವರೊಡನೆ ಸಹಕರಿಸಿದ್ದ ನಮ್ಮ ಚಿಕ್ಕಪ್ಪ ಚಿಕ್ಕಮ್ಮ ತಮ್ಮ ಮನೆಗೆ ತೆರಳಲು ಬಯಸಿದರು. ನಾವು ಮೇಲ್ಮಾಳಿಗೆಯಿಂದ ಸಾಮಾನುಗಳನ್ನೆಲ್ಲಾ ಅವರ ಮನೆಗೆ ಸಾಗಿಸಿದ್ದಾಯಿತು. ನಮ್ಮ ಚಿಕ್ಕಪ್ಪ ಚಿಕ್ಕಮ್ಮನೂ ನಮ್ಮ ಮನೆಗೆ ತೆರಳಿದ್ದರು. ಇನ್ನು ಅವರ ಮನೆಯಲ್ಲಿ ಉಳಿದಿದ್ದವರು ನಾವಿಬ್ಬರೇ. ಆಕೆ ನನ್ನನ್ನು ಸ್ವಲ್ಪಹೊತ್ತು ಕುಳಿತುಕೊಳ್ಳಲು ಹೇಳಿ, ನನಗೆ ತಿಂಡಿ ತೀರ್ಥಗಳನ್ನು ತರಲು ಸಡಗರದಿಂದ ಒಳಕ್ಕೆ ಹೋದಳು. ನಾನು ಆದಿನದ ಯಶಸ್ವಿ ಕಾರ್ಯಕ್ರಮವನ್ನೂ ಆಕೆಯ ಪ್ರದರ್ಶನ ಪಾಂಡಿತ್ಯವನ್ನೂ ವೀಣೆಯ ಮೇಲೆ ಚಲಿಸುತ್ತಿದ್ದ ಆಕೆಯ ಬೆರಳುಗಳ ವೈಖರಿಯನ್ನೂ ನೆನೆಯುತ್ತಾ ಕುಳಿತುಕೊಂಡೆ. ಆಗ ಆಕೆಗೆ, ನನ್ನ ವಯಸ್ಸು ಅಥವಾ ಒಂದೆರಡು ವರ್ಷ ಕಡಮೆ ಇದ್ದಿರಬೇಕು. ಆದರೆ ಆ ಹೊತ್ತಿನಲ್ಲಿ ಆಕೆ ಹದಿನಾರು ವರ್ಷದ ಕನ್ಯೆಯಂತೆ ಕಾಣುತ್ತಿದ್ದಳು. ಅವಳ ಸುಳಿದಾಟ ಹರಿಣಿಯ ಮರಿಯಂತಿತ್ತು. ಆ ದಿನದ ಯಶಸ್ವಿ ಕಾರ್ಯಕ್ರಮ ಆಕೆಗೆ ಹಿಡಿಸಲಾರದಷ್ಟು ಆನಂದ ತಂದಿತ್ತು. ಅವಳ ಹೃದಯದಲ್ಲಿ ಉತ್ಸಾಹ ಹೊಮ್ಮಿ ಹರಿಯುತ್ತಿತ್ತು. ಅವಳ ಕಣ್ಣುಗಳಲ್ಲಿ ಕೃತಜ್ಞತಾಭಾವ ಎದ್ದು ಕಾಣುತ್ತಿತ್ತು.

"ತಿಂಡಿ ತೀರ್ಥ ಹಣ್ಣುಹಂಪಲು ಎಲ್ಲವನ್ನೂ ತಂದು ಟೀಪಾಯಿಯ ಮೇಲೆ ಇಟ್ಟು 'ಸ್ವೀಕರಿಸಬೇಕು' ಎಂದಳು, ನಾನು ಸೋಫಾದಲ್ಲಿ ಕುಳಿತಿದ್ದೆ. 'ನೀವೂ ಸ್ವೀಕರಿಸಬಹುದಲ್ಲಾ ಇಬ್ಬರೂ ಒಟ್ಟಿಗೆ ತೆಗೆದುಕೊಳ್ಳೋಣ' ಎಂದೆ. ಹಾಗಾದರೆ ಬಂದೆ ಎಂದು ಆಕೆ ಒಳಗಡೆ ಹೋಗಿ ಸೀರೆ ಬದಲಾಯಿಸಿ ಅಡಿಗೆಯ ಮನೆಯಿಂದ ಟೀ ಹಾಲು ಮೊದಲಾದುವುಗಳಿಟ್ಟಿದ್ದ ಟ್ರೇ ತಂದು ಟೀಪಾಯಿಯ ಮೇಲಿಟ್ಟು ಕುರ್ಚಿಯನ್ನು ಎಳೆದುಕೊಂಡು ಅದರಲ್ಲಿ ಕುಳಿತುಕೊಂಡಳು. ಇಬ್ಬರೂ ಫಲಹಾರ ತೆಗೆದುಕೊಳ್ಳಲಾರಂಭಿಸಿದೆವು. ಆಕೆ ಮಧ್ಯಾಹ್ನದಿಂದಲೂ ಏನೂ ತೆಗೆದುಕೊಂಡಿದ್ದಹಾಗೆ ಕಾಣೆ. ಅಂದಿನ ವ್ಯವಸ್ಥೆ

ನೂಡುವುದರಲ್ಲಿಯೇ ಕಾಲ ಕಳೆದುಹೋಗಿತ್ತು. ಅನಂತರ ತನ್ನದೇ ಕಚೇರಿ. ಆದರೂ ಆಕೆ ಹಣ್ಣು ಹಂಪಲುಗಳನ್ನು ಮುಟ್ಟಿಗೆ ಸ್ವೀಕರಿಸಿದಳು. ತಿಂಡಿಯನ್ನೂ ತೆಗೆದುಕೊಳ್ಳಲು ನಾನು ಬಲವಂತ ಮಾಡಿದೆ. ಆಗ ಆಕೆಗೆ ತನ್ನ ಬಾಲ್ಯದ ದಿನಗಳು ನೆನಪಿಗೆ ಬಂದವು. ಹೇಳತೊಡಗಿದಳು.

"ಮದುವೆಗೆ ಮುಂಚೆ ತನ್ನ ತಂದೆಯ ಮನೆಯಲ್ಲಿದ್ದಾಗ ಕೊಯಮತ್ತೂರಿನಲ್ಲಿ ಒಂದು ಸಲ ರಾಮೋತ್ಸವದಲ್ಲಿ ಈಕೆಯು ವೀಣೆ ನುಡಿಸಿದಳಂತೆ. ಅಂದು ಅಲ್ಲಿಗೆ ದಯ ಮಾಡಿಸಿದ್ದ ಸಂಗೀತ ವಿದ್ವಾಂಸರು ಈಕೆಯ ವಿದ್ವತ್ತನ್ನು ಕಂಡು ಸಂತೋಷಗೊಂಡಿದ್ದ ಲ್ಲದೆ ಬಳಿವಳಿಯಿತ್ತು ಪ್ರಶಂಸಿಸಿದರಂತೆ. ಆಗ ಈಕೆಯ ತಂದೆಯ ಆನಂದಕ್ಕಂತೂ ಪಾರವೇ ಇಲ್ಲವಂತೆ. ಇದನ್ನು ಹೇಳುತ್ತಿದ್ದಾಗ ಅವಳ ಕಣ್ಣಿನಲ್ಲಿ ನೀರು ತುಂಬಿದವು. ಸೆರಗಿನಿಂದ ಹಾಗೇ ಒರಸಿಕೊಂಡಳು. 'ನಿಮ್ಮ ತಂದೆಯವರು ಈಗ ಎಲ್ಲಿದ್ದಾರೆ' ಎಂದು ಕೇಳಿದೆ. 'ಅವರು ಇಲ್ಲ. ನನ್ನ ಮದುವೆಯಾದ ಮೇಲೆ ಅದಕ್ಕೆ ಮಾಡಿದ ಸಾಲ ತೀರಿಸುವುದರಲ್ಲಿ ಅವರು ಹಣ್ಣಾಗಿ ತೀರಿಕೊಂಡರು. ನಾನು ತಂದೆ ತಾಯಿ, ಅಣ್ಣ ತಮ್ಮ, ಅಕ್ಕ ತಂಗಿ, ಯಾರೂ ಇಲ್ಲದ ತಬ್ಬಲಿ' ಎಂದಳು 'ನಿಮ್ಮ ಯಜಮಾನ ರಿದ್ದಾರಲ್ಲಾ ಆ ಕೊರತೆಯನ್ನು ತುಂಬುವುದಕ್ಕೆ ಎಂದೆ. ಆಕೆ ತನ್ನ ಕಣ್ಣುಗಳಲ್ಲಿ ತಳೆದಿದ್ದ ಕಂಬನಿಯನ್ನು ಒರಿಸಿಕೊಳ್ಳುತ್ತಾ 'ಅವರಿಗೆ ನಾನು ಎರಡನೆಯ ಹೆಂಡತಿ. ಮೊದಲ ಹೆಂಡತಿಗೂ ಮಕ್ಕಳಿರಲಿಲ್ಲ. ಆಕೆ ಇವರೊಡನೆ ಹತ್ತು ವರ್ಷ ಸಂಸಾರಮಾಡಿ ಕ್ಷಯ ರೋಗದಲ್ಲಿ ತೀರಿಕೊಂಡಿದ್ದಳು. ಅದು ಕ್ಷಯ ರೋಗವೊ ಅಥವಾ ಮನೋ ರೋಗವೋ. ನನ್ನ ತಂದೆ ವರದಕ್ಷಿಣೆ ಉಳಿಯುವುದೆಂದು ಈ ಎರಡನೆಯ ಸಂಬಂಧಕ್ಕೆ ಒಪ್ಪಿಕೊಂಡರು. ವರದಕ್ಷಿಣೆಯೇನೋ ಉಳಿಯಿತು. ಆದರೆ ಅದಕ್ಕೆ ನಾಲ್ಕರಷ್ಟು ಮದುವೆಗೆ ಖರ್ಚಾಯಿತು. ಈತ ಯಾವ ಸಂಭಾವನೆಯನ್ನು ತೆಗೆದುಕೊಳ್ಳದೇ ಇದ್ದರೂ ಇವರ ಕಡೆಯ ಜನರನ್ನು ಸುಧಾರಿಸುವುದರಲ್ಲಿ ನಮ್ಮ ತಂದೆ ಸೊರಗಿ ಹೋದರು' ಎಂದು ಹೇಳಿದಳು. ಆಕೆಯ ನುಡಿಗಳನ್ನು ಆಲಿಸುತ್ತಿದ್ದಾಗ ನನ್ನ ಕಣ್ಣು ಗಳಲ್ಲಿಯೂ ನೀರು ಬಂದಿತು. ಆಕೆ ಕಣ್ಣಿನ್ನು ಒರಿಸಿಕೊಂಡು 'ಟೀ'ಯನ್ನು ಬೆರಸಿ ಕಪ್ಪುಗಳಿಗೆ ಹಾಕಿಕೊಟ್ಟಳು. ಅನಂತರ 'ತಾಂಬೂಲ ಹಾಕಿಕೊಳ್ಳುತ್ತೀರಾ' ಎಂದು ವೀಳೆಯದೆಲೆಯ ತಟ್ಟೆಯನ್ನು ತಂದು ಮುಂದಿಟ್ಟಳು. ನಾವು ತೆಗೆದುಕೊಂಡಿದ್ದ ತಿಂಡಿ ತೀರ್ಥ, ಟೀ ಟ್ರೇ ತೆಗೆದಿಡುತ್ತಿದ್ದಾಗ ಕುರ್ಜಿಯ ಮೇಲೆ ಟೀ ಚೆಲ್ಲಿ ಒದ್ದೆಯಾಗಲು ಕುರ್ಜಿಯನ್ನು ಆ ಕಡೆಗೆ ಸರಿಸಿ ನಾನು ಕುಳಿತಿದ್ದ ಸೋಫಾದ ಒಂದೆಡೆ ಕುಳಿತು ಕೊಂಡಳು. ನಾನು ಅಡಕೆಯ ಬಟ್ಟಲಿನಿಂದ ಅಡಕೆಯನ್ನು ತೆಗೆದು ಬಾಯಿಗೆ ಹಾಕಿ ಕೊಂಡೆ. ಆಕೆ ವೀಳೆಯದೆಲೆಗಳಿಗೆ ಸುಣ್ಣ ಹಚ್ಚಿ ಮಡಿಸಿಕೊಡತೊಡಗಿದಳು. ನಾನು ಎಂದೂ ವೀಳೆಯದೆಲೆಗಳನ್ನು ಹಾಕಿಕೊಂಡವನೇ ಅಲ್ಲ. ಕಾಲೇಜಿನಲ್ಲಿದ್ದಾಗ ಪಾರ್ಟಿ ಗಳಲ್ಲಿ ಬೀಡಾ ಹಾಕಿಕೊಂಡರೆ ಸೊಕ್ಕು ಬರುತ್ತಿತ್ತು. ಕಿವಿಗಳು ಬೆಚ್ಚಗೆ ಆಗುತ್ತಿದ್ದವು. ಈ ದಿನ ಅಂತಹದೇನೂ ಆಗಲಿಲ್ಲ. ಸುಮ್ಮನೆ ಆಕೆ ಮಡಿಸಿಕೊಡುತ್ತಿದ್ದ ಹಾಗೆ ಎಲೆ

ಗಳನ್ನು ಮೆಲ್ಲುತ್ತಿದ್ದೇನೆ. ನನಗೇ ನಗು ಬಂತು. 'ಏನು ನಗುತ್ತೀರಲ್ಲಾ' ಎಂದು ಕೇಳಿದಳು. ಆಕೆಗೆ ವಾಸ್ತವಾಂಶ ಹೇಳಿದೆ. ಆಕೆಗೆ ನಗೂ ಬಂತು. ಆಕೆ ನಕ್ಕಾಗ ಆಕೆಯ ಮೊಗದಲ್ಲಿ ಯಾವುದೋ ಮಿಂಚು ಹೊಮ್ಮಿ ವಿದ್ಯುತ್ ಪ್ರವಾಹ ಹರಿಯಿತು. ಆಗ ನಾನು ನಾನಾಗಿರಲಿಲ್ಲ. ನನ್ನ ಚೇತನ ನನ್ನಧೀನದಲ್ಲಿರಲಿಲ್ಲ. ನಡೆಯಬಾರದ್ದು ನಡೆದು ಹೋಯಿತು. ಆಕೆ ಚೇತರಿಸಿಕೊಳ್ಳುವುದರೊಳಗಾಗಿ ನಾನು ನನ್ನ ಪಿಟೀಲಿನ ಪೆಟ್ಟಿಗೆ ಯನ್ನು ಹಿಡಿದುಕೊಂಡು ಕೆಳಗಿಳಿದು ಬಂದುಬಿಟ್ಟಿದ್ದೆ.

"ಆಕೆಯ ಯಜಮಾನರು ಹಿಂತಿರುಗಿದಾಗ ನಡುರಾತ್ರಿಯಾಗಿತ್ತು. ನನಗಂತೂ ನಿದ್ರೆಯೇ ಬಂದಿರಲಿಲ್ಲ. ನನ್ನ ಕೊಠಡಿಯಲ್ಲಿ ಇನ್ನೂ ದೀಪವಿರುವುದನ್ನು ಕಂಡು ಬಾಗಿಲನ್ನು ತಟ್ಟಿ ನನಗೆ ವಂದನೆಗಳನ್ನು ಸಲ್ಲಿಸಿ ಮೇಲಕ್ಕೆ ಏರಿಹೋದರು.

"ನಾನು ಆಕೆಗೆ ಮುಖ ತೋರಿಸಲಾರದವನಾದೆ. ಮರು ಭಾನುವಾರ ಆಕೆಯ ಯಜಮಾನರು ಬಂದು ನನ್ನನ್ನು ಅವರ ಮನೆಗೆ ಬರಲು ಕರೆದಾಗಲೂ 'ಪರೀಕ್ಷೆ ಹತ್ತಿರಕ್ಕೆ ಬಂತು ಓದಬೇಕಾದದ್ದು ತುಂಬಾ ಇದೆ' ಎಂದು ಹೇಳಿ ಅವರ ಮನೆಗೆ ಹೋಗದೆ ತಪ್ಪಿಸಿಕೊಂಡು ಬಿಟ್ಟೆ. ಆಕೆಯೇನೋ ನಾನು ಕಟ್ಟಡದಿಂದ ಹೊರಗೆ ಹೊರಟಾಗಲೆಲ್ಲಾ ಕಿಟಕಿಯ ಬಳಿ ನಿಂತು ನೋಡುತ್ತಿರುವಂತೆ ಭಾಸವಾಗುತ್ತಿತ್ತು.

"ಪರೀಕ್ಷೆ ಮುಗಿಯಿತು. ಅದು ಮುಗಿದ ಮೂರನೆಯ ದಿನವೇ ಮೈಸೂರಿಗೆ ತೆರಳಿಬಿಟ್ಟೆ. ಆಕೆಯನ್ನಾಗಲೀ ಆಕೆಯ ಯಜಮಾನರನ್ನಾಗಲೀ ಕಂಡು ಬೀಳ್ಕೊಳ್ಳಲಿಲ್ಲ.

"ಮೈಸೂರಿನಲ್ಲಿ ನನ್ನ ಪರೀಕ್ಷೆಯ ಫಲಿತಾಂಶ ತಿಳಿದಮೇಲೆ ಇಂಗ್ಲೆಂಡಿಗೆ ಹೋಗಲು ಸನ್ನಿಹಿತನಾದೆ. ತೆರಳುವಾಗ ನಾನು ನನ್ನ ತಂದೆಯೊಡನೆ ನೇರವಾಗಿ ಬೊಂಬಾಯಿಗೆ ಬಂದೆ. ನಮ್ಮ ಚಿಕ್ಕಪ್ಪ ಚಿಕ್ಕಮ್ಮನೂ ನನ್ನನ್ನು ಕಳುಹಿಸಿಕೊಡಲು ಬೊಂಬಾಯಿಗೇ ಬಂದಿದ್ದರು. ಅಲ್ಲಿ ಚಿಕ್ಕಮ್ಮನನ್ನು ಆಕೆ ಕ್ಷೇಮವೇ ಎಂದು ವಿಚಾರಿಸಿದೆ. ನಾನು ಇಂಗ್ಲೆಂಡಿಗೆ ಹೋಗುವ ವಿಷಯ ಆಕೆಗೆ ತಿಳಿಯದೇ ಎಂದೂ ಕೇಳಿದೆ. ಒಂದು ವೇಳೆ ಚಿಕ್ಕಮ್ಮನೊಡನೆ ಆಕೆ ಬೊಂಬಾಯಿಗೆ ಬಂದರೂ ಬರಬಹುದೇನೋ ಎಂಬ ನಿರೀಕ್ಷೆಯಲ್ಲಿದ್ದೆ. 'ಇಲ್ಲ ಅವರ ಯಜಮಾನರಿಗೆ ಉನ್ನತ ಹುದ್ದೆ ದೊರೆತು ಅವರು ಉತ್ತರದೇಶದ ಕಡೆಗೆ ಹೊರಟು ಹೋಗಿಬಿಟ್ಟರು ಹೋಗಿ ಆಗಲೇ ಎರಡು ತಿಂಗಳುಗಳಾದವು. ನೀನು ವ್ಯಾಸಂಗವನ್ನು ಪೂರೈಸಿ ಪುಣೆಯಿಂದ ಹಿಂತಿರುಗಿದ ಕೆಲವು ದಿವಸಗಳಲ್ಲಿಯೇ ತೆರಳಿದರು' ಎಂದು ಹೇಳಿದಳು. ಈಗ ಆಕೆ ಎಲ್ಲಿದ್ದಾಳೆ, ಅವಳ ವಿಳಾಸವಾವುದು ಎನ್ನುವುದು ನನ್ನ ಚಿಕ್ಕಮ್ಮನಿಗೆ ತಿಳಿದಿರಲಿಲ್ಲ" ಹೀಗೆಂದು ಹೇಳಿ, ಆತ ಆರಿಹೋಗಿದ್ದ ಸಿಗಾರನ್ನು ಮತ್ತೆ ಹೆಚ್ಚಿಸಿ ಸೇದುತ್ತಾ ಕುಳಿತುಕೊಂಡರು. ಅನಂತರ ಹೇಳತೊಡಗಿದರು.

"ನಾನು ಇಂಗ್ಲೆಂಡಿನಲ್ಲಿ ಇದ್ದಾಗಲೇ ಅನೇಕ ತರುಣಿಯರು ನನ್ನ ಸಹವಾಸ ಬಯಸಿದ್ದರು, ಕೈಹಿಡಿಯಲು ಸಿದ್ಧರಿದ್ದರು. ಆದರೆ ನಾನು ಯಾರಿಗೂ ಉತ್ತೇಜನ ಕೊಡಲಿಲ್ಲ, ಯಾರನ್ನು ಮುಟಲಿಲ್ಲ. ಕಣ್ಣೆತ್ತಿ ಸಹ ನೋಡಲಿಲ್ಲ. ಜರ್ಮನಿಯಲ್ಲಿದ್ದಾಗ

ಬಾನ್ ನಗರದಲ್ಲಿ ಒಬ್ಬ ಶ್ರೀಮಂತರ ಮನೆಗೆ ಆಹ್ವಾನಿತನಾಗಿ ಆಗಿಂದಾಗ್ಗೆ ಹೋಗಿ ಬರುತ್ತಿದ್ದೆ. ಆತನಿಗೆ ಹಿಂದೂ ಮತದಲ್ಲಿ ಬಹಳ ವಿಶ್ವಾಸ. ಆತನಲ್ಲಿ ಅನೇಕ ಸಂಸ್ಕೃತ ಗ್ರಂಥಗಳಿದ್ದವು ಅವನಿಗೆ ಸಂಗೀತದಲ್ಲಿ ಬಹಳ ಅಭಿರುಚಿ. ಆತನ ಮಗಳು ಪಿಯಾನೋ ನುಡಿಸುತ್ತಿದ್ದಳು. ಅವರ ಮನೆಯಲ್ಲಿ ನಡೆಯುತ್ತಿದ್ದ ಪಾರ್ಟಿಗಳಲ್ಲಿ ಆಕೆಯೊಂದಿಗೆ ನಾನೂ ಪಿಟೀಲನ್ನು ನುಡಿಸಿದ್ದೇನೆ. ಆಕೆಯು ನನ್ನನ್ನು ಮದುವೆಯಾಗಲು ಬಯಸಿದಳು. ಅವಳ ತಾಯಿ ತಂದೆಗಳ ಸಮ್ಮತಿಯೂ ಇತ್ತು. ಆದರೆ ನಾನು ಆಕೆಯ ಒಲವನ್ನು ನಿರಾಕರಿಸಿದೆ. ಆಕೆಯಿಂದ 'ಷಂಡ' ಎಂದೂ ಕರೆಸಿಕೊಂಡೆ.

"ನನಗೆ ಅಲ್ಲಿ ನನ್ನ ಕೆಲಸ, ತಪ್ಪಿದರೆ ನನ್ನ ಪಿಟೀಲುವಾದನ. ಬೀಥೋವನ್, ಕ್ರಿಸ್ಲರ್ ಮೊದಲಾದವರುಗಳ ಗ್ರಾಮೋಫೋನ್ ರಿಕಾರ್ಡುಗಳನ್ನು ಹಾಕಿಕೊಂಡು ಅವುಗಳ ಜೊತೆಗೆ ನಾನು ಪಿಟೀಲನ್ನು ನುಡಿಸುತ್ತಾ ರಾತ್ರಿಯನ್ನೆಲ್ಲಾ ಕಳೆಯುತ್ತಿದ್ದೆ. ಹಗಲು ಪ್ರಶಾಂತ ಸಮಯದಲ್ಲಿ ಕರ್ಣಾಟಕ ಮತ್ತು ಹಿಂದೂಸ್ತಾನೀ ರಾಗಗಳನ್ನು ನುಡಿಸುತ್ತಾ ಗಾನದಲ್ಲಿ ತಲ್ಲೀನನಾಗಿರುತ್ತಿದ್ದೆ. ಅನೇಕ ಸಂದರ್ಭಗಳಲ್ಲಿ ಹೊಸ ಹೊಸ ಸ್ವರಗಳನ್ನು ಸೃಜಿಸಿ ನುಡಿಸುತ್ತಿದ್ದೆ. ಹೀಗೆ ಸಂಗೀತಕ್ಕೆ ಮಾರುಹೋಗಿದ್ದ ನನ್ನ ಮನದಲ್ಲಿ ಇತರ ಹೆಂಗಸರಿಗೆ ಎಲ್ಲಿತ್ತು ಸ್ಥಾನ.

"ಅಲ್ಲದೆ ನನಗೆ ಯಾವಾಗಲೂ ಆಕೆಯ ನೆನಪು. ಆಕೆಯ ಆಕೃತಿ ಆಗ ಮರೆತು ಹೋಗಿತ್ತು. ಆದರೆ ಆಕೆಯೊಡನೆ ನುಡಿಸಿದ ಕೃತಿಗಳ ಮತ್ತು ನಾವು ನಡೆಸಿದ್ದ ಪ್ರಯೋಗಗಳ ಝೇಕೃತಿ ನನ್ನ ಮನದಲ್ಲಿ ಸದಾ ನುಡಿಯುತ್ತಿತ್ತು ಆಕೆಯ ಬೆರಳುಗಳು ವೀಣೆಯ ಮೇಲೆ ಚಲಿಸುತ್ತಿದ್ದ ಚಿತ್ರ ನನ್ನ ಕಣ್ಣಿಗೆ ಕಟ್ಟಿದಂತಿತ್ತು. ನೋಡಿ, ಹೀಗೆ ಹದಿನೈದು ಇಪ್ಪತ್ತು ವರ್ಷಗಳನ್ನು ಕಳೆದು ಬಿಟ್ಟಿದ್ದೇನೆ. ನನ್ನ ಯೌವನವನ್ನೆಲ್ಲಾ ಸಂಗೀತಕ್ಕೇ ಧಾರೆಯೆರೆದು ಬಿಟ್ಟಿದ್ದೇನೆ.

"ನಮ್ಮ ಡೈರೆಕ್ಟರೂ, ಅವರ ಮಗಳೂ ಜರ್ಮನಿಗೆ ಬಂದರು. ಅದು ಹೇಗೋ ಆಕೆ ನನ್ನ ಮನವನ್ನೊಲಿಸಿದಳು. ಅವರೊಡನೆ ಇಲ್ಲಿಗೆ ಬಂದೆ. ಆಕೆಯನ್ನು ಮದುವೆಮಾಡಿ ಕೊಳ್ಳಬೇಕೆಂದು ನಿಶ್ಚಯಿಸಿದೆ, ಅಷ್ಟರಲ್ಲಿ ಈ ಘಟನೆ ಸಂಭವಿಸಿತು. ಆ ಮಗು ನನ್ನ ಬಳಿಗೆ ಬಂತು. ವಿಚಾರ ವೇದ್ಯವಾಯಿತು. ಇದು ಯಾರ ಕೈವಾಡ! ಈಗ ಹೇಗೆ ನಾನು ನಮ್ಮ ಡೈರೆಕ್ಟರ ಮಗಳನ್ನು ಮದುವೆಯಾಗಲಿ? ಆ ಮಗುವಿನ ತಾಯಿ ಸಮ್ಮತಿಸಿದ ಪಕ್ಷದಲ್ಲಿ ನಾನೀಗ ಆಕೆಯನ್ನು ಮದುವೆಮಾಡಿಕೊಳ್ಳಬೇಕೆಂದಿದ್ದೇನೆ.

"ಆಕೆಯನ್ನು ನಾನಿನ್ನು ನೋಡಿಲ್ಲ. ಆಕೆ ಒಂದು ದಿನ ಬರುವೆನೆಂದು ಹೇಳಿದ್ದಾಳೆ. ಆಕೆಗಾಗಿ ಕಾದಿದ್ದೇನೆ. ಈಗ ತಾವು ಹೇಳಬೇಕು, ನಾನು ಉದ್ದೇಶಿಸಿರುವುದು ಸರಿಯೋ ತಪ್ಪೋ ಎಂದು. ತಾವು ಹಿರಿಯರು ತಿಳುವಳಿಕಸ್ಥರು, ತಾವು ಹೇಳಿದಂತೆ ನಾನು ಮಾಡುತ್ತೇನೆ" ಎಂದರು.

ನಾನು ಮತ್ತೇನೂ ಅವರಿಗೆ ಹೇಳಲಿಲ್ಲ. "ಆಕೆಯನ್ನು ನೀವು ಕೇಳಿ. ಆಕೆಯ ಮನದಲ್ಲೇನಿದೆಯೋ ಅದನ್ನು ತಿಳಿದುಕೊಳ್ಳಿ. ಆಮೇಲೆ ಮಾತನಾಡೋಣ" ಎಂದು ಹೇಳಿ ಹೊರಡಲು ಎದ್ದೆ.

"ಇಲ್ಲೇ ಊಟ ತೀರಿಸಿಕೊಂಡು ಹೊರಡಬಹುದಲ್ಲಾ" ಎಂದರು.

"ನಾನು ರಾತ್ರಿಯ ಹೊತ್ತು ಊಟಮಾಡುವುದಿಲ್ಲ" ಎಂದು ಹೇಳಿದೆ.

"ಹಾಗಾದರೆ ಬನ್ನಿ ನಾನು ತಮ್ಮನ್ನು ನಿಮ್ಮ ಮನೆಗೆ ಕಾರಿನಲ್ಲಿ ಬಿಟ್ಟು ಬರುತ್ತೇನೆ. ರಾತ್ರಿ ಬಹಳ ಹೊತ್ತಾಗಿ ಬಿಟ್ಟಿದೆ, ಕ್ಷಮಿಸಬೇಕು" ಎಂದು ಹೇಳಿ ತಾವೇ ಹೋಗಿ ಕಾರನ್ನು ತಂದು ಅದರ ಬಾಗಿಲನ್ನು ತೆಗೆದು "ಬನ್ನಿ ಕುಳಿತುಕೊಳ್ಳಿ. ಡ್ರೈವರೂ ಮನೆಗೆ ಹೋಗಿ ಬಿಟ್ಟಿದ್ದಾನೆ. ನಾನೇ ನಡೆಸಿಕೊಂಡು ಬರುತ್ತೇನೆ." ಎಂದರು.

"ನಾನು ತಮಗೆ ತೊಂದರೆ ಕೊಡುತ್ತಿದ್ದೇನಲ್ಲಾ ನಾನು ಬಸ್ಸನ್ನು ಹಿಡಿದು ಹೋಗುತ್ತೇನೆ" ಎಂದೆ.

"ಛೆ, ಛೆ ಉಂಟೇ" ಎಂದು ಹೇಳಿ, ನನ್ನನ್ನು ಕಾರಿನಲ್ಲಿ ಕೂಡಿಸಿಕೊಂಡು ಹೊರಟರು. ದಾರಿಯಲ್ಲಿ ಈರ್ವರೂ ಒಂದು ಮಾತನ್ನೂ ಆಡಲಿಲ್ಲ.

ಕೆಲವು ದಿನಗಳ ನಂತರ ಅವರಿಂದ ಫೋನ್ ಬಂದಿತು. "ಸ್ವಲ್ಪ ಈ ಕಡೆಗೆ ಬರುತ್ತೀರಾ" ಎಂದು ಕರೆದರು. ಅವರ ಕರೆ ಬಂದಿದ್ದು ಅವರ ಆಫೀಸು ರೂಮಿನಿಂದ ನಾನು ಕಚೇರಿಗೆ ಬರುವ ಹೊತ್ತಿಗೆ ಅವರಿಂದ ಎರಡು, ಮೂರು ಸಲ ಕರೆ ಬಂದಿದ್ದಿತಂತೆ.

ನಾನು ಅವರಲ್ಲಿಗೆ ಹೋದಾಗ ಅವರೇ ಎದ್ದು ಬಾಗಿಲಿಗೆ ಬಂದು ನನ್ನನ್ನು ಸ್ವಾಗತಿಸಿ ಕುಳಿತುಕೊಳ್ಳಲು ಹೇಳಿ ತಾವೇ ಕೊಠಡಿಯ ಬಾಗಿಲುಗಳನ್ನು ಮುಚ್ಚಿಬಂದು ತಮ್ಮ ಆಸನದಲ್ಲಿ ಕುಳಿತರು,

"ಏನು ಸಮಾಚಾರ?" ಎಂದು ಕೇಳಿದೆ.

"ನಿನ್ನೆ ಆಕೆ ಮನೆಗೆ ಬಂದಿದ್ದರು" ಎಂದರು.

"ಹಾಗೋ"

"ನಿನ್ನೆ ಸಂಕ್ರಾಂತಿ ತಾನೆ. ತಾಯಿ ಮಗಳಿಬ್ಬರೂ ಕುಸಿರೆಳ್ಳು, ಸಿಹಿತಿಂಡಿ ತೆಗೆದು ಕೊಂಡು ಬಂದಿದ್ದರು, ಅವರಿಗೆ ನಾನು ಏಕಾಂಗಿಯಾಗಿರುವುದು ಗೊತ್ತಿರಲಿಲ್ಲ. 'ಮನೆ ಯಲ್ಲಿ ಅಮ್ಮನವರಿಲ್ಲವೇ' ಎಂದು ಕೇಳಿದರು, ಬಾಗಿನ ಕೊಡುವುದಕ್ಕೋಸ್ಕರವಾಗಿ. 'ನನ್ನ ಮನೆಯಲ್ಲಿ ಮತ್ತಾರೂ ಇಲ್ಲ, ನಾನು ಮದುವೆಯನ್ನು ಮಾಡಿಕೊಂಡೇ ಇಲ್ಲ' ಎಂದು ತಿಳಿಸಿದೆ. ನಾನೇ ಒಳಗಡೆಗೆ ಹೋಗಿ ತಟ್ಟೆಯೊಂದನ್ನು ತಂದಿಟ್ಟೆ. ಅಡಿಗೆಯವನಿಗೆ ತಿಂಡಿ ಮಾಡಲು ತಿಳಿಸಿದೆ, ಅವರನ್ನು ಸೋಫಾದಲ್ಲಿ ಕುಳಿತುಕೊಳ್ಳಲು ಪ್ರಾರ್ಥಿಸಿಕೊಂಡೆ.

"ನಾನು ಮೊದಲು ಆಕೆಯ ಮಗಳನ್ನು 'ಕೆಲಸ ಹೇಗಿದೆ? ನಿನಗೆ ಇಲ್ಲಿನ ಕೆಲಸ ಹಿಡಿಸುತ್ತದೆಯೇ' ಎಂದು ವಿಚಾರಿಸಿದೆ. ಅನಂತರ ಆಕೆಯನ್ನು "ನಿಮಗೆ ಮನೆ ಸರಿ ಯಾದ ಸ್ಥಳದಲ್ಲಿ ಸಿಕ್ಕಿದೆಯೇ, ಅಲ್ಲಿ ಎಲ್ಲಾ ಸೌಕರ್ಯಗಳಿವೆಯೇ. ನೆರೆಹೊರೆಯವರು ಹೇಗಿದ್ದಾರೆ, ನೀರಿನ ಕೊರತೆಯೇನೂ ಇಲ್ಲತಾನೆ" ಎಂದು ವಿಚಾರಿಸಿದೆ. ಅಷ್ಟರಲ್ಲಿ ತಿಂಡೀತೀರ್ಥ ಬಂತು ಅವನ್ನು ತೆಗೆದುಕೊಳ್ಳಲು ಹೇಳಿದೆ. ಪರಿಚಾರಕ, ಜಗ್ಗಿನಲ್ಲಿ ಡಿಕಾಕ್ಷನ್, ಹಾಲು ಸಕ್ಕರೆ ತಂದಿರಿಸಿದ. ಆಕೆಯೇ ಎದ್ದು ಬಟ್ಟಲುಗಳಿಗೆ ಡಿಕಾಕ್ಷನ್ ಹಾಲೂ ಹಾಕಿ ಬೆರಸಿ, ನನಗೆ ಎಷ್ಟು ಚಮಚ ಸಕ್ಕರೆ ಹಾಕಬೇಕೆಂದು ಕೇಳಿದರು; ನಾನು

ಹೇಳಿದಂತೆ ಸಕ್ಕರೆ ಹಾಕಿ ನನಗೆ ಟೀ ಮಾಡಿಕೊಟ್ಟರು. ನಮ್ಮ ಮನೆತನದ ಹೆಂಗಸರ ಕೈಯಿಂದ 'ಟೀ' ತೆಗೆದುಕೊಂಡು ಎಷ್ಟು ವರ್ಷಗಳಾಗಿದ್ದವು. ಏನೋ ಒಂದು ತೃಪ್ತಿ ನನಗೆ ಆಗ ಆಯಿತು. ನಾನು ಟೀಯನ್ನು ಸ್ವೀಕರಿಸುತ್ತಾ 'ನೀವಿಬ್ಬರೂ ಇಲ್ಲಿಗೇ ಯಾತಕ್ಕೆ ಬಂದು ಇದ್ದು ಬಿಡಬಾರದು' ಎಂದೆ. ಆಕೆ 'ಮೊದಲು ಇವಳಿಗೆ ಒಂದು ವರನನ್ನು ಗೊತ್ತುಮಾಡಿ ಮದುವೆ ಮಾಡಿ ಆಮೇಲೆ ನೋಡೋಣ' ಎಂದರು. 'ಅದನ್ನಾಗಲೇ ಗೊತ್ತುಮಾಡಿದ್ದೇನೆ. ನನ್ನ ಸೋದರಳಿಯನಿದ್ದಾನೆ, ಅವನಿಗೆ ಇವಳನ್ನು ಕೊಟ್ಟು ಮದುವೆ ಮಾಡಬೇಕೆಂದು ತೀರ್ಮಾನಿಸಿದ್ದೇನೆ. ಅವನು ನನ್ನ ಆಶ್ರಯದಲ್ಲಿಯೇ ಇದ್ದಾನೆ. ಜರ್ಮನಿಯಲ್ಲಿ ಇಂಜಿನಿಯರ್ ಪ್ರೊಫೆಸರನರಾಗಿದ್ದಾನೆ; ಹಿಂತಿರುಗಿ ಬರಲು ಬರೆದಿದ್ದೇನೆ' ಎಂದು ತಿಳಿಸಿದೆ. 'ಅಂತೂ ಅವಳು ನಿಮ್ಮ ಮಗು ಅದರ ಭವಿಷ್ಯ ನಿಮ್ಮ ಕೈಯಲ್ಲಿದೆ' ಎಂದು ಹೇಳಿ ಹೊರಡಲು ಎದ್ದರು. ಅವರು ನಮ್ಮ ತಟ್ಟೆಯಲ್ಲಿ ತೆಗೆದು ಇರಿಸಿದ್ದ ಕುಸಿರೆಳ್ಳನ್ನು ಬಾಯಿಗೆ ಹಾಕಿಕೊಂಡು ಮುಂದೆ ಏನು ಮಾತನಾಡಲೂ ತೋಚದೆ 'ಬರುತ್ತಾ ಇರಿ' ಎಂದೆ, 'ಬರದೇ ಇರುವುದಕ್ಕಾಗುತ್ತದೆಯೇ ನಾವು ಇನ್ನೆಲ್ಲಿಗೆ ಹೋಗಬೇಕು' ಎಂದು ನುಡಿದು ಹೊರಡಲು ಸಿದ್ಧರಾದರು. ನಾನು ಕಾರು ಕಳುಹಿಸಿಕೊಡುತ್ತೇನೆ ಎಂದು ಹೇಳಿ ಡ್ರೈವರ್‌ಗೆ ಕಾರುತರಲು ಹೇಳಿದೆ, ಅವರು ನನ್ನ ಇಚ್ಛೆಯನ್ನು ನಿರಾಕರಿಸಲಿಲ್ಲ. ಕಾರಿನಲ್ಲಿ ಕುಳಿತು ತೆರಳಿದರು" ಎಂದು ಹೇಳಿದರು.

"ನೀವೇನೂ ನಿಮ್ಮ ಮದುವೆಯ ವಿಚಾರವನ್ನೇ ಆಕೆಯೊಡನೆ ಎತ್ತಿದ ಹಾಗಿಲ್ಲವಲ್ಲ" ಎಂದೆ.

"ಎತ್ತಲಾಗಲಿಲ್ಲ" ಎಂದರು

ತಿಂಗಳುಗಳು ಕಳೆದವು. ಇಂದೋ ನಾಳೆಯೋ ಅವರ ಸೋದರಳಿಯ ಜರ್ಮನಿಯಿಂದ ಹಿಂತಿರುಗುವನೆಂದು ಹೇಳಿದ್ದರು. ಆ ಕಂಪನಿಯಲ್ಲಿ ನನಗೆ ವಹಿಸಿದ್ದ ಕೆಲಸ ಮುಗಿಯಿತು. ನಾನೂ ನನ್ನ ರಿಪೋರ್ಟನ್ನು ಬರೆದು ಪೂರೈಸಿ ಅವರಿಗೆ ಒಪ್ಪಿಸಿದ್ದಾಯಿತು. ಕೆಲಸದಿಂದ ನಿಂತುಬಿಟ್ಟಿದ್ದೆ.

ಒಂದು ದಿನ ಟಪಾಲಿನಲ್ಲಿ ಅವರಿಂದ ವಿವಾಹ ಮಹೋತ್ಸವದ ಆಹ್ವಾನಪತ್ರಿಕೆ ಬಂತು. ಆತನು ಆಕೆಗೆ ಮಾತುಕೊಟ್ಟಿದ್ದಂತೆ ಚೈತ್ರಮಾಸದಲ್ಲಿ ಆತನ ಸೋದರಳಿಯನಿಗೆ ಆಕೆಯ ಮಗಳನ್ನು ಕೊಟ್ಟು ಮದುವೆಗೆ ಏರ್ಪಾಡು ಮಾಡಿದ್ದರು. ನಾನೂ ಮದುವೆಗೆ ಹೋಗಿಬಂದೆ. ನಿರಾಡಂಬರ ಮದುವೆ, ಮದುವೆಯ ಕಾರ್ಯಗಳೆಲ್ಲಾ ವೈದಿಕ ಪದ್ಧತಿಯನ್ನನುಸರಿಸಿಯೇ ನಡೆಯಿತು. ಆರತಿ ಅಕ್ಷತೆಗೆ ಕಂಪನಿಯ ಡೈರೆಕ್ಟರುಗಳೆಲ್ಲಾ ಬಂದಿದ್ದರು. ರಿಸೆಪ್ಷನ್ ಸಮಯದಲ್ಲಿ ನಮ್ಮ ಡೈರೆಕ್ಟರ ಮಗಳೇ ವಿಶೇಷವಾಗಿ ಓಡಾಡುತ್ತಿದ್ದಳು. ಅನಂತರ ತಾಯಿಮಗಳಿಬ್ಬರೂ ಅವರಲ್ಲಿಯೇ ಉಳಿದುಕೊಂಡರೆಂದು ವರ್ತಮಾನ ಬಂತು. ಆತನ ಸೋದರಳಿಯನಿಗೆ ಅದೇ ಕಂಪನಿಯಲ್ಲಿ ಇಂಜಿನಿಯರ್ ಕೆಲಸ ದೊರೆಯಿತೆಂದೂ ಆಕೆ ಮದುವೆಯಾದ ಮೇಲೆ ಕೆಲಸಕ್ಕೆ ರಾಜೀನಾಮೆಯಿತ್ತಳೆಂದೂ ತಿಳಿಯಿತು.

ನನಗೆ ದೆಹಲಿಯಲ್ಲಿ ಮತ್ತಾವುದೋ ಕಂಪನಿಯ ರಿಪೋರ್ಟು ತಯಾರುಮಾಡಬೇಕಾಗಿ ಬಂದಿದ್ದರಿಂದ ಅಲ್ಲಿಗೆ ತೆರಳಬೇಕಾಯಿತು.

ಎರಡು ಮೂರು ವರ್ಷಗಳ ಮೇಲೆ ಮತ್ತೆ ಬೆಂಗಳೂರಿಗೆ ಬಂದೆ.

ಒಂದು ದಿನ ನನಗೆ ನಮ್ಮ ಆ ಕಂಪನಿಯ ಜನರಲ್ ಮ್ಯಾನೇಜರ ವಿಷಯ ತಿಳಿದುಕೊಳ್ಳಬೇಕೆಂದು ಮನಸ್ಸಿಗೆ ಬಂತು. ಒಡನೆ ಕಂಪನಿಯ ಕಚೇರಿಗೆ ಫೋನ್ ಮಾಡಿದೆ. ಆತನಿಗೇ ಕನೆಕ್ಷನ್‌ಕೊಟ್ಟರು. ಅವರು ನನ್ನನ್ನು ಆ ಭಾನುವಾರ ಅವರ ಮನೆಗೇ ಊಟಕ್ಕೆ ದಯಮಾಡಿಸಬೇಕೆಂದು ಪ್ರಾರ್ಥಿಸಿಕೊಂಡರು. ಆ ದಿನ ಮಧ್ಯಾಹ್ನ ಹನ್ನೆರಡು ಗಂಟೆಗೆ ನನ್ನ ಮನೆಗೆ ತಾವೇ ಕಾರು ಕಳುಹಿಸಿಕೊಡುವುದಾಗಿ ತಿಳಿಸಿದರು.

ಆ ಭಾನುವಾರ ಮಧ್ಯಾಹ್ನ ಹನ್ನೆರಡು ಗಂಟೆಗೆ ಸರಿಯಾಗಿ ಕಾರೂ ಬಂತು. ನಾನು ದೆಹಲಿಯಲ್ಲಿದ್ದಾಗ ಪ್ರಕಟಿಸಿದ್ದ The Spiritual Aspirations ಎನ್ನುವ ಇಂಗ್ಲಿಷು ಪುಸ್ತಕದ ಪ್ರತಿಯೊಂದನ್ನು ಅವರಿಗೆ ಕೊಡಲು ನನ್ನೊಡನೆ ತೆಗೆದುಕೊಂಡು ಹೊರಟೆ.

ಕಾರು ಅವರ ಮನೆಯ ವರಾಂಡದ ಬಳಿಗೆ ಬರುತ್ತಿದ್ದ ಹಾಗೇ ಅವರೇ ಬಂದು ಮಗುವನ್ನು ಎತ್ತಿಕೊಂಡು ನನ್ನನ್ನು ಸ್ವಾಗತಿಸಲು ನಿಂತಿರುವುದನ್ನು ಕಂಡೆ.

ನಾನು ಅವರನ್ನೆಂದೂ ಆ ಪೋಷಾಕಿನಲ್ಲಿದ್ದಿದ್ದನ್ನು ನೋಡಿದ್ದಿಲ್ಲ. ಸೊಗಸಾಗಿ ಕಚ್ಚೆ ಪಂಚೆ ಉಟ್ಟಿದ್ದಾರೆ, ರೇಶಿಮೆಯ ಜುಬ್ಬ ತೊಟ್ಟಿದ್ದಾರೆ. ಹಣೆಯಲ್ಲಿ ವೀಭೂತಿ, ಹುಬ್ಬಿನ ನಡುವೆ ಕುಂಕುಮ. ನಾನು ಮದುವೆಗೆ ಹೋಗಿದ್ದಾಗ ಅವರು ಪ್ಯಾಂಟು, ಷೂ ಹಾಕಿಕೊಂಡೇ ಓಡಾಡುತ್ತಿದ್ದರು. ಈಗ ಕಾಲಿನಲ್ಲಿ ಬಾಟಾ ಚಪ್ಪಲಿ. ನಾನು ಕಾರಿನಿಂದ ಇಳಿಯುತ್ತಿದ್ದಂತೆಯೇ ಅವರು ಮಗುವಿಗೆ "ತಾತಾಕಿ ವಾಂಗೋನು ಚೊಲ್ಲಿ ನಮಸ್ಕಾರಂ ಪಣ್ಣು" ಎಂದು ಹೇಳಿದರು. ಅದು ನನ್ನ ಕಡೆಗೆ ಕೈಜೋಡಿಸಿ "ತಾತಾ ವಾಂಗೋ" ಅಂದಿತು.

"ತಮ್ಮ ಮೊಮ್ಮಗನೇ" ಎಂದೆ.

"ಹೌದು" ಎಂದರು.

ನಾವು ಡ್ರಾಯಿಂಗ್ ರೂಮನ್ನು ಪ್ರವೇಶಿಸುತಿದ್ದಂತೆ ಅವರ ಸೋದರಳಿಯ ಮತ್ತು ಆ ಹೆಣ್ಣು ಮಗು ಬಂದು ನನಗೆ ನಮಸ್ಕರಿಸಿದರು. ಮದುವೆಯಲ್ಲಿ ಆಕೆ ಮೈಸೂರಿನವರಂತೆ ಪೀತಾಂಬರ ಉಟ್ಟಿದ್ದಳು ಈಗ ಶುದ್ಧ ದ್ರಾವಿಡರಂತೆ ದೊಡ್ಡ ಅಂಚಿನ ಗಟ್ಟೀ ಬಣ್ಣದ ರೇಷ್ಮೆ ಸೀರೆ ಉಟ್ಟಿದ್ದಾಳೆ. ಅಂದು ಹೆಣ್ಣು ಮಗು, ಇಂದು ತಾಯಿಯಾಗಿದ್ದಾಳೆ. ಆಕೆಯ ತಾಯಿಯೂ ಅಷ್ಟು ಹೊತ್ತಿಗೆ ಒಳಗಿನಿಂದ ಡ್ರಾಯಿಂಗ್ ರೂಮಿಗೆ ಬಂದರು, ನಾನು ಆಕೆಯನ್ನು ನೋಡಿದ್ದು ಅಂದೇ. ಮಗಳ ಮದುವೆಯಲ್ಲಿಯೂ ಆಕೆ ಕಾಣಿಸಿಕೊಂಡಿರಲಿಲ್ಲ.

ಆಕೆ ಶುಭ್ರ ಬಿಳಿಯ ಮಲ್ಲಿನ ಸೀರೆಯನ್ನುಟ್ಟಿದ್ದಾಳೆ, ಬಿಳಿಯ ರವಿಕೆ, ಕೊರಳಿನಲ್ಲಿ ಹವಳದ ಸರ. ಪ್ರತಿದಿನವೂ ತಲೆಗೆ ಸ್ನಾನಮಾಡುತ್ತಿದ್ದಂತೆ ತೋರುತ್ತದೆ. ಆ ದಿನವೂ

ತಲೆಗೆ ಸ್ನಾನವಮಾಡಿ ಬಾಚಿಕೊಳ್ಳದೇ ಕೊನೆಯಲ್ಲಿ ಗಂಟುಹಾಕಿಕೊಂಡಿದ್ದಳು. ಹಣೆಯಲ್ಲಿ ವಿಭೂತಿ. ಹಣೆ ವಿಶಾಲವಾಗಿದೆ. ಆತ ಹೇಳಿದ್ದಂತೆ ಆಕೆಯ ಕೈಬೆರಳುಗಳೂ ನೀಳವಾಗಿವೆ. ಆಕೆ ನನಗೆ ಕೈಜೋಡಿಸಿ ವಂದಿಸಿದಳು. ಆತ ನನ್ನ ಪರಿಚಯ ಮಾಡಿಕೊಡುತ್ತಾ 'ರಾಯರು ನಮಗೆಲ್ಲಾ ಹಿರಿಯರು. ನಮ್ಮ ಕಂಪನಿಯ ಕಚೇರಿಯ ವಿಶೇಷಾಧಿಕಾರಿಗಳಾಗಿ ಕೆಲಸವಮಾಡಿಪ್ಪಾರೆ. ಹಿಂದೆ ಮೈಸೂರು ಸರಕಾರದಲ್ಲಿ ಅಧಿಕಾರದಲ್ಲಿದ್ದರು. ಈಚೆಗೆ ದೆಹಲಿಯಲ್ಲಿ ಮತ್ತೊಂದು ಕಂಪನಿಯ ರಿಪೋರ್ಟು ಒಪ್ಪಿಸಿ ಹಿಂತಿರುಗಿ ಬಂದಿಪ್ಪಾರೆ' ಎಂದು ಹೇಳಿದರು.

ನಾನು ತೆಗೆದುಕೊಂಡು ಹೋಗಿದ್ದ ಪುಸ್ತಕವನ್ನು ಆ ದಂಪತಿಗಳಿಗೆ ಆಶೀರ್ವದಿಸಿ ಕೊಟ್ಟೆ. ಸೋದರಳಿಯ ಅದನ್ನು ಮಾವನ ಕೈಗೆ ಕೊಟ್ಟ. ಆತ ಆಕೆಗೆ ಈ ಪುಸ್ತಕವನ್ನು 'ಇವರೇ ಬರೆದದ್ದು. ಅನೇಕ ಗ್ರಂಥಗಳನ್ನೂ ಬರೆದಿದ್ದಾರೆ' ಎಂದು ಹೇಳಿ ಕೊಟ್ಟರು.

ಮಗುವಿನ ತಾಯಿ ಆತನಿಂದ ಮಗುವನ್ನು ಕರೆದುಕೊಂಡು ಒಳಕ್ಕೆ ಹೋದಳು. ಸೋದರಳಿಯನೂ ಆಕೆಯನ್ನು ಹಿಂಬಾಲಿಸಿದ. ಅಷ್ಟರಲ್ಲಿ ಪರಿಚಾರಕ ಒಂದು ಗಾಜಿನ ಹೂಜದಲ್ಲಿ ನಿಂಬೆಯಹಣ್ಣಿನ ಪಾನಕ, ಗ್ಲಾಸುಗಳನ್ನು ತಂದಿರಿಸಿದ. ಆಕೆ ನಮ್ಮಿಬ್ಬರಿಗೆ ಪಾನಕವನ್ನು ಕೊಟ್ಟು ಪುಸ್ತಕವನ್ನು ಕೈಯಲ್ಲಿ ಹಿಡಿದು ಒಳಕ್ಕೆ ತೆರಳಿದಳು.

ಮನೆಯ ಯಾಜಮಾನ್ಯ ಆಕೆಯೇ ವಹಿಸಿಕೊಂಡಿರುವಂತೆ ನನಗೆ ವೇದ್ಯವಾಯಿತು. ಪಾನೀಯಗಳನ್ನು ತಂದಿಡುವಾಗ ಪರಿಚಾರಕ ಆಕೆಯ ಕಡೆಗೆ ನೋಡುತ್ತಿದ್ದದ್ದೂ ಆಕೆ ಕಣ್ಣ ಸಂಜ್ಞೆಯಿಂದಲೇ ಆಜ್ಞೆ ನೀಡುತ್ತಿದ್ದಿದ್ದು ನನ್ನ ಕಣ್ಣಿಗೆ ಬೀಳದೆ ಹೋಗಲಿಲ್ಲ.

ನಾವಿಬ್ಬರೇ ಉಳಿದ ಮೇಲೆ ನಮ್ಮ ಮಾತುಕತೆಗೆ ಆರಂಭವಾಯಿತು.

"ಹಿಂದೆ ನಾನು ಹೇಳಿದ್ದು ನೆನಪಿದೆಯೇ. ಮನೆಗೆ ಗೃಹಣಿಯ ಆವಶ್ಯಕತೆಯ ವಿಷಯದಲ್ಲಿ" ಎಂದೆ ನಾನು.

"ಅದರಿಂದಲೇ ನಿಮ್ಮನ್ನು ನಾವು ಹಿರಿಯರು ಎಂದು ಭಾವಿಸಿರುವುದು" ಎಂದು ನುಡಿದರು.

"ನಿಮ್ಮ ಮದುವೆಯ ವಿಷಯ ಈಗ ಎಲ್ಲಿಗೆ ನಿಂತಿದೆ, ಈಕೆ ಏನಂದರು" ಎಂದು ಕೇಳಿದೆ.

"ನಾನು ಈಕೆಯನ್ನು ಕೇಳುವುದಕ್ಕೆ ಹೋಗಲಿಲ್ಲ. ಅದು ಅಸಾಧ್ಯ ಎಂದು ನನಗೇ ತೋರಿತು. ನಮ್ಮ ಡೈರೆಕ್ಟರ ಮಗಳಿಗೂ ನನ್ನ ಮತ್ತು ಈಕೆಯ ಸಂಬಂಧದ ವಿಷಯ ಹೇಳಿದೆ. ನಾನು ಬ್ರಹ್ಮಚಾರಿಯಾಗಿ ಮುಂದುವರಿಯಬೇಕೆಂದಿರುವ ದೃಢ ಸಂಕಲ್ಪವನ್ನೂ ತಿಳಿಸಿದೆ. ಆಕೆಗೆ ತಾನು ಕಟ್ಟಿಕೊಂಡಿದ್ದ ಗಾಳಿಗೋಪುರ ಹೀಗೆ ಕಳಚಿಬೀಳುವುದೆಂದು ತಿಳಿದಿರಲಿಲ್ಲ. ತಾನು ತಮ್ಮ ಸಂಬಂಧಿಗಳ ಪೈಕಿ ಬೇರೆಯೊಬ್ಬರನ್ನು ಮದುವೆಮಾಡಿಕೊಳ್ಳಲು ನಿಶ್ಚಯಿಸಿದ್ದಾಳೆ. ಇಷ್ಟರಲ್ಲಿಯೇ ಮದುವೆಯೂ ಆಗ

ಬಹುದು. ಅದೂ ನನ್ನ ತಲೆಯಮೇಲಿನ ದೊಡ್ಡ ಭಾರವೊಂದನ್ನು ಕೆಳಗಿಳಿಸಿದಂತಾಯಿತು. ಈಗ ಮನ ಹಗುರವಾಗಿದೆ" ಎಂದರು.

ಇದೂ ಅದೂ ಮಾತನಾಡುತ್ತಿರುವ ಹೊತ್ತಿಗೆ ಊಟಕ್ಕೆ ಒಳಗಿನಿಂದ ಕರೆಬಂತು. "ಏಳಿ. ಕಾಲು ತೊಳೆದುಕೊಳ್ಳುವುದಕ್ಕೆ ಹೀಗೆ ಬನ್ನಿ" ಎಂದು ನನ್ನನ್ನು ಒಳಕ್ಕೆ ಕರೆದುಕೊಂಡು ಹೋಗಿ ಅವರೇ ಬಿಸಿ ನೀರು ಕೊಟ್ಟರು. ಅನಂತರ ಅವರ ಸೋದರಳಿಯ ಟವಲನ್ನು ತಂದುಕೊಟ್ಟ.

ಊಟಕ್ಕೆ ಕೂಡುವ ಮೊದಲು ಅವರ ದೇವರ ಮನೆಯನ್ನು ನೋಡಬೇಕೆನ್ನಿಸಿತು. ಅದರ ಒಳಗಿನಿಂದ ಗಂಧದ ಕಡ್ಡಿಯ ಸುವಾಸನೆ ಬರುತ್ತಿತ್ತು. ಅಲ್ಲಿಗೆ ಕರೆದುಕೊಂಡು ಹೋದರು. ಎಷ್ಟು ಸ್ವಚ್ಛವಾಗಿದೆ ಈ ಮಂದಿರ! ಗೋಡೆಗಳಿಗೆ ಬಾದಾಮೀ ಬಣ್ಣದ 'ಡಿಸ್‌ಟೆಂಪರ್' ಹೊಡೆದಿದೆ. ನೆಲ ಕಾವಿಯ ಬಣ್ಣದಲ್ಲಿದ್ದರೂ ನಮ್ಮ ಮುಖವನ್ನು ನೋಡಿಕೊಳ್ಳಬಹುದು ಅಷ್ಟು ಸ್ವಚ್ಛವಾಗಿ ತೊಳೆದಿದೆ. ದೇವರ ಮನೆಯಲ್ಲಿ ಪೀಠದ ಮೇಲೆ ಇಟ್ಟದ್ದಿದ್ದು ಮೂರು ದೊಡ್ಡ ಭಾವಚಿತ್ರಗಳು. ಒಂದು ಅರವಿಂದರದು. ನಡುವೆ ಚರಣಸಿಂಗ್ ಮಹರಾಜರದು. ಅದರ ಪಕ್ಕದಲ್ಲಿ ರಮಣ ಮಹರ್ಷಿಗಳದು. ಹಿತ್ತಾಳೆಯ ಕೆತ್ತನೆ ಕೆಲಸಮಾಡಿರುವ ಸುಂದರ ಮಂಟಾಸನ. ಅದರಲ್ಲಿ ಚಿನ್ನದ ಪ್ರಭಾವಳಿಯೊಂದಿಗೆ ಶೋಭಿಸುತ್ತಿರುವ ಪಾಣೀಪಟ್ಟನಲ್ಲಿ ಸ್ಫಟಿಕ ಲಿಂಗ. ಅದನ್ನು ತುಂಬೇಹೂಗಳಿಂದ ಪೂಜಿಸಿದೆ. ಸಹಸ್ರನಾಮಾರ್ಚನೆ ನೆಡೆಸಿದ್ದಂತೆ ತೋರಿತು. ತುಂಬೇ ಹೂವಿನ ರಾಸಿಯೊಂದಿಗೆ ಒಂದೋ ಎರಡೋ ದಾಸವಾಳದ ಹೂಗಳು, ನಾಲ್ಕಾರು ಗುಲಾಬೀ ಪುಷ್ಪಗಳೂ ಇದ್ದವು. ನಾನು ವಿಶ್ವೇಶ್ವರನಿಗೆ ನಮಸ್ಕರಿಸಿದೆ. ಹತ್ತಿರದಲ್ಲೇ ಕರಿಯ ಮರದ ಭರಣಿಯಲ್ಲಿಟ್ಟದ್ದ ವಿಭೂತಿಯನ್ನು ತೆಗೆದು ಹಣೆಗೆ ಇಟ್ಟುಕೊಂಡೆ. ಆಗ ಮಣೆಯೊಂದರ ಮೇಲೆ ನಾನು ಕೊಟ್ಟದ್ದ ಪುಸ್ತಕ (The Spiritual Aspiration) ಇರುವುದನ್ನು ಕಂಡೆ. ಈಗ ಆ ಮನೆಯಲ್ಲಿ ಟೇಬಲ್ಲಿನ ಮೇಲೆ ಊಟವಿಲ್ಲ. ಲಕ್ಷಣವಾಗಿ ಮಣೆಹಾಕಿ ಅಗ್ರದ ಬಾಳೆಯೆಲೆಗಳಲ್ಲಿ ಬಡಿಸಿದ್ದರು. ಪ್ರತಿಯೊಬ್ಬರ ಎಲೆಗಳ ಬಳಿಯಲ್ಲಿಯೂ ಬೆಳ್ಳಿಯ ಬಟ್ಟಲುಗಳು ಲೋಟಗಳನ್ನು ಇರಿಸಿದ್ದರು. ಅವರ ಸೋದರಳಿಯನು ಪಂಚೆಯನ್ನುಟ್ಟು ಊಟಕ್ಕೆ ಬಂದು ಕುಳಿತ. ಎಲ್ಲರೂ ಒಟ್ಟಿಗೆ ಊಟಮಾಡತೊಡಗಿದೆವು.

ಆಕೆ ಆಗಲೇ ನನ್ನ ಪುಸ್ತಕವನ್ನು ತಿರುವಿಹಾಕಿದ್ದಂತಿತ್ತು. ಊಟಮಾಡುತ್ತಿದ್ದಾಗ ಅದರಲ್ಲಿ ನಾನು ಮಂಡಿಸಿದ್ದ ಕೆಲವು ಹೊಸ ವಿಷಯಗಳನ್ನೆತ್ತಿ ಮಾತನಾಡಿದರು. ಆಕೆ ಅನೇಕ ತತ್ವಶಾಸ್ತ್ರ ಪುಸ್ತಕಗಳನ್ನೂ ಓದಿರುವಂತೆ ಕಂಡಿತು. ಬಿಯಾಸಿನ ರಾಧಾಸ್ವಾಮಿ ಸತ್ಸಂಗದ ಗುರುಗಳಿಂದ 'ನಾಮ್' ಪಡೆದಿರುವುದಾಗಿಯೂ ತಿಳಿಯಿತು. ಆಕೆ 'ಸುರತ್' ಮೇಲೆ ಬಹಳ ಅಧಿಕಾರವಾಣಿಯಿಂದ ಮಾತನಾಡಿದಳು.

ಊಟವಾದ ಮೇಲೆ ಡ್ರಾಯಿಂಗ್ ರೂಮಿನಲ್ಲಿ ಹಣ್ಣು ಮತ್ತು ತಾಂಬೂಲ ತೆಗೆದುಕೊಂಡಿದ್ದಾಯಿತು. ಅನಂತರ ಆತ "ತಾವು ಸ್ವಲ್ಪ ವಿಶ್ರಮಿಸಿಕೊಳ್ಳಿ ಆಮೇಲೆ

ನಾನು ತಮ್ಮನ್ನು ಕಾರಿನಲ್ಲಿ ಕರೆದುಕೊಂಡು ಹೋಗಿ ಮನೆಗೆ ಬಿಟ್ಟುಬರುತ್ತೇನೆ'' ಎಂದು ಹೇಳಿದರು. ನನ್ನನ್ನು ಮತ್ತೊಂದು ಕೊಠಡಿಗೆ ಕರೆದುಕೊಂಡು ಹೋಗಿ ಸುಸಜ್ಜಿತ ಮಂಚವೊಂದನ್ನು ತೋರಿಸಿದರು. ಆತನೂ ನನ್ನೊಡನೆ ಒಳಕ್ಕೆ ಬಂದು ಮಾತನಾಡುತ್ತಾ ಕುಳಿತುಕೊಂಡರು. ಆಗ ಆತನಿಂದ ಆಕೆ ಪುಣೆಯನ್ನು ಬಿಟ್ಟನಂತರ ಪಟ್ಟ ಕಷ್ಟಗಳನ್ನು ಕೇಳಿದೆ. ಆಕೆಯ ಜೀವನವೃಂತ್ತಾಂತವನ್ನು ಅರಿತುಕೊಂಡೆ.

ಪುಣೆಯಿಂದ ಅವರಿಗೆ ಉತ್ತರ ಹಿಂದೂಸ್ಥಾನಕ್ಕೆ ವರ್ಗಾಯಿಸಿದಾಗ ಆಕೆಯ ಯಜಮಾನರಿಗೆ ಪ್ರಮೋಷನ್ನೇನೋ ಆಯಿತಂತೆ. ಹೆಚ್ಚಿನ ಸಂಬಳವೇನೋ ಬಂದಿತಂತೆ. ಆದರೆ ಅದಕ್ಕೆ ನಾಲ್ಕರಷ್ಟು ಖರ್ಚು ಹುಟ್ಟಿಕೊಂಡಿತಂತೆ. ಆಕೆಯಾಗಲೇ ಗರ್ಭವತಿಯಾಗಿದ್ದಾಳೆ. ಹೆರಿಗೆಯ ಸಮಯದಲ್ಲಿ ಬಹಳ ಕಷ್ಟವೇ ಆಯಿತಂತೆ. ವಿಶೇಷ ಹಣ ವೆಚ್ಚಮಾಡಬೇಕಾಗಿ ಬಂದಿತಂತೆ, ಅನಂತರ ಆಕೆಯ ಯಜಮಾನರಿಗೆ 'ಅಸ್ತಮಾ' ತಲೆದೋರಿ ಉಲ್ಬಣಾವಸ್ಥೆಗೆ ಏರಿತಂತೆ, ಆಕೆ ಆತನನ್ನು ಮದುವೆಯಾಗುವಾಗಲೇ ಆತನಿಗೆ ಆ ರೋಗವಿದ್ದಿತಂತೆ. ಅದನ್ನು ಇವರಿಗೆ ತಿಳಿಸಿಯೇ ಇರಲಿಲ್ಲ, ಪುಣೆಯಲ್ಲಿದ್ದಾಗ ಸುಪ್ತಾವಸ್ಥೆಯಲ್ಲಿದ್ದು ಇವರು ಪಂಜಾಬಿಗೆ ಬಂದಮೇಲೆ ಉಲ್ಬಣಾವಸ್ಥೆಗೆ ಬಂದಿತಂತೆ. ಆದರೆ ಅವರು ಪುಣೆಯಲ್ಲಿದ್ದಾಗ ಆಕೆ ತನ್ನ ಯಜಮಾನರನ್ನು ಕಂಡರೆ, ತಮಗೆ ಮೋಸ ಮಾಡಿ ಮದುವೆಮಾಡಿಕೊಂಡರೆಂಬ ಕೋಪ ಮನದಲ್ಲಿ ಮೂಡುತ್ತಿದ್ದುದರಿಂದ ಒಂದು ವಿಧವಾದ ತಿರಸ್ಕಾರ ತೋರಿಸುತ್ತಿದ್ದಳಂತೆ, ಆತನನ್ನು ಆಳುತ್ತಿದ್ದಳಂತೆ. ಆದರೂ ಆತನು ಸದಾ ಹಸನ್ಮುಖನಾಗಿಯೇ ಇರುತ್ತಿದ್ದನಂತೆ. ಪುಣೆಯನ್ನು ಬಿಟ್ಟನಂತರ ತನ್ನಲ್ಲಿಯೇ ಒಂದು ಅಳಕು ತೋರಿದ್ದರಿಂದ ಆಕೆಗೆ ಆತನನ್ನು ಕಂಡರೆ ಮರುಕ ಹುಟ್ಟುತ್ತಿದ್ದಿತಂತೆ, ಆದರಿಂದ ಮಿತಿಮೀರಿ ಆತನ ಸೇವೆಯಲ್ಲಿ ತೊಡಗುತ್ತಿದ್ದಳಂತೆ. ಅನೇಕ ವೇಳೆ ಅನ್ನಹಾರಗಳನ್ನೂ ಬಿಟ್ಟು ಆತನನ್ನು ಉಪಚರಿಸುತ್ತಿದ್ದಳಂತೆ.

ಆಕೆಯ ಪುತ್ರಿ ಬೆಳೆದು ಹೈಸ್ಕೂಲಿಗೆ ಬರುವ ಹೊತ್ತಿಗೆ ಆತ ತೀರಿಕೊಂಡನಂತೆ. ಅವನ ಜೀವವಿಮೆಯ ಹಣ, ಪ್ರಾವಿಡೆಂಟ್ ಫಂಡ್, ಕಂಪಾಷನೇಟ್ ಗ್ರಾಚುಯೇಟಿ ಹಣ ಎಲ್ಲಾ ಒಂದು ಮೊತ್ತ ಬರಲು ಅದನ್ನು ಬ್ಯಾಂಕಿನಲ್ಲಿಟ್ಟು ಅದರ ಸಹಾಯದಿಂದ ಮಗಳನ್ನು ಅಲ್ಲಿಯ ಸ್ಕೂಲು ಕಾಲೇಜುಗಳಲ್ಲಿ ಓದಿಸಿದಳಂತೆ. ಬಹಳ ವಿತರಣೆಯಿಂದ ಸಂಸಾರ ನಡೆಸಿ ಮಗಳನ್ನು ಮುಂದಕ್ಕೆ ತಂದಳಂತೆ. ಅವಳಿಗೆ ಜೊತೆಗೆ ಷಾರ್ಟ್‌ಹ್ಯಾಂಡ್, ಟೈಪರೈಟಿಂಗೂ ಕಲಿಸಿಕೊಟ್ಟಳಂತೆ.

ಆಕೆಯ ವ್ಯಾಸಂಗವೆಲ್ಲಾ ಮುಗಿದನಂತರ ಮುಂದೆ ಆಕೆಗೆ ವರನನ್ನು ದೊರಕಿಸಲು ಅನುಕೂಲವಾಗಲೆಂದು ತನ್ನ ಮಗಳೊಡನೆ ದಕ್ಷಿಣ ದೇಶಕ್ಕೆ ಮರಳಲು ಉದ್ದೇಶಿಸಿದಳಂತೆ. ಮೊದಲು ಅವರು ಬಂದು ತಂಗಿದ್ದು ಬೆಂಗಳೂರಿನಲ್ಲಿ. ಆಗ ವೃತ್ತಪತ್ರಿಕೆಗಳಲ್ಲಿ ಆ ಕಂಪನಿಗೆ ಸ್ಟೆನೋಗ್ರಾಫರ್ ಬೇಕೆಂದು ಬಂದ ಜಾಹೀರಾತನ್ನು ಕಂಡು ಅರ್ಜಿ ಹಾಕಿಸಿದಳಂತೆ. ಕೆಲಸ ದೊರತಮೇಲೆಯೇ ಆತ ಅಲ್ಲಿನ ಮೇಲಿನ ಅಧಿಕಾರಿಯೆಂದು ಆಕೆಗೆ ತಿಳಿದಿದ್ದು.

ಆತ ಇಷ್ಟನ್ನೂ ಹೇಳಿದಮೇಲೆ ನಾನು ಆತನನ್ನು ಕೇಳಿದೆ. "ಸರಿ, ನೀವು ಆಕೆಯನ್ನು ಮದುವೆಯಾಗುವೆನೆಂದು ಬಯಸಿದ್ದೂ, ನೀವು ಮದುವೆಯಾಗಬೇಕೆಂದು ಮಾಡಿಕೊಂಡಿದ್ದ ಹೆಣ್ಣನ್ನು ಬಿಟ್ಟುಕೊಟ್ಟದ್ದೂ ಆಕೆಗೆ ತಿಳಿಸಿದಿರಾ" ಎಂದೆ

"ಇಲ್ಲ" ಎಂದರು

"ಏಕೆ?" ಎಂದು ಕೇಳಿದೆ

"ಆಕೆ ತನ್ನ ಮಗಳೊಡನೆ ನಮ್ಮ ಮನೆಗೆ ಒಂದುಸಲ ಬಂದಿದ್ದಾಗ ಇಬ್ಬರೂ ಇಲ್ಲಿಯೇ ಬಂದು ನೆಲಸಿ ಎಂದು ಹೇಳಿದೆ. ಆಗ ಆಕೆ ಮೊದಲು ಮಗಳಿಗೆ ಒಂದು ವರನನ್ನು ಗೊತ್ತುಮಾಡಿ ಆಮೇಲೆ ಇತರ ವಿಚಾರಮಾಡೋಣ ಎಂದರು. ನಾನು ನನ್ನ ಸೋದರಳಿಯನಿಗೇ ಆಕೆಯನ್ನು ಕೊಟ್ಟು ಮದುವೆ ಮಾಡುವೆನೆಂದು ಹೇಳಿದೆ; ಮದುವೆಯನ್ನೂ ಮಾಡಿದೆ. ಅನಂತರ ಮಗಳೊಡನೆ ತಾಯಿಯೂ ಬಂದು ನಮ್ಮ ಮನೆಯಲ್ಲಿ ನಿಂತರು. ಆದರೆ ಆಕೆಯ ದೈನಂದಿನ ಜೀವನಕ್ರಮವನ್ನು ಕಂಡು ನಾನೇ ಆಕೆಯ ಬಳಿ ಮದುವೆಯ ಮಾತನ್ನೆತ್ತಲು ಹಿಂತೆಗೆದೆ. ನನಗೆ ನಿಜವಾಗಿಯೂ ಧೈರ್ಯ ಬರಲಿಲ್ಲ" ಎಂದರು.

ಈಗ ಇವರ ಜೀವನಕ್ರಮದಲ್ಲಿ ಬದಲಾವಣೆಯಾಗಿರುವುದನ್ನು ಕಂಡೆ. ಈ ಎರಡು ಮೂರು ವರ್ಷಗಳಲ್ಲಿ ಎಷ್ಟು ಬದಲಾವಣೆಯಾಗಿ ಹೋಗಿದೆ. ಒಂದು ವಿಶೇಷವೆಂದರೆ ಇವರು ಹಿಂದೆ ಒಂದೇಸಮನೆ ಸಿಗಾರನ್ನು ಸೇದುತ್ತಿದ್ದರು. ಅದು ಇವರ ಜನ್ಮಕ್ಕೇ ಅಂಟಿ ಬಂದಿದ್ದಂತೆ ತೋರುತ್ತಿತ್ತು. ಈ ದಿನ ಈತ ಸಿಗಾರನ್ನೂ ಮುಟ್ಟಿದನ್ನೇ ಕಾಣಲಿಲ್ಲ. ಈತ ಮುಂದುವರಿದು ಹೇಳತೊಡಗಿದರು.

"ಒಂದು ದಿನ ಆಕೆಯನ್ನು ವೀಣೆ ನುಡಿಸಲು ಕೇಳಿಕೊಂಡೆ. ನನಗೆ ಪುಣೆಯಲ್ಲಿ ಪರಿಚಯವಾಗಿದ್ದ ವೀಣೆಯನ್ನೇ ಅವರು ಭದ್ರವಾಗಿ ಕಾಪಾಡಿಕೊಂಡು ಬಂದಿದ್ದರು. ಜೊತೆಯಲ್ಲಿ ನಾನೂ ಪಿಟೀಲನ್ನು ನುಡಿಸುವೆನೆಂದು ಹೇಳಿದೆ, ಆಕೆ "ಒಳ್ಳೇ" ಎಂದುಬಿಟ್ಟರು, "ನಿಮ್ಮ ಮಗಳಿಗೆ ನನಗಿಂತಲೂ ಚೆನ್ನಾಗಿ ವೀಣೆ ನುಡಿಸಲು ಬರುತ್ತದೆ. ನಾವು ಪುಣೆಯಲ್ಲಿದ್ದಾಗ ಮಾಡಿದ ಪ್ರಯೋಗಗಳ ಪಾಠವನ್ನೆಲ್ಲಾ ಮಾಡಿಸಿದ್ದೇನೆ. ಆಕೆಯನ್ನು ವೀಣೆ ನುಡಿಸಲು ಹೇಳಿ ನಾವಿಬ್ಬರೂ ಕುಳಿತು ಕೇಳೋಣ. ಬೇಕಾಗಿದ್ದರೆ ನೀವೂ ಆಕೆಯೊಡನೆ ಪಿಟೀಲನ್ನು ನುಡಿಸಿ, ಇನ್ನೂ ನಿಮ್ಮ ವಿಶೇಷ ಪ್ರಯೋಗಗಳನ್ನು ಆಕೆಗೆ ತಿಳಿಸಿಕೊಡಿ. ಕಲಿತುಕೊಳ್ಳುತ್ತಾಳೆ ಎಂದು ಹೇಳಿಬಿಟ್ಟರು" ಎಂದರು.

ಅನಂತರ ಹೇಳಿದರು "ನಾವು ಆಗ ಆಹತ ನಾದದ ಅನುಸಂಧಾನ ಮಾಡಿದ್ದೆವು. ಈಗ ಅನಾಹತ ನಾದದ ಅನುಸಂಧಾನ ಮಾಡುತ್ತಿದ್ದೇವೆ. ಆಕೆ ಪಂಜಾಬಿನಲ್ಲಿದ್ದಾಗ ಬಿಯೂಸಿನಲ್ಲಿದ್ದ ರಾಧಾಸ್ವಾಮಿ ಸತ್ಸಂಗದ ಮಹಾರಾಜರಲ್ಲಿ 'ನಾಮ್' ತೆಗೆದುಕೊಂಡರೆಂದು ತಿಳಿಸಿದ್ದೆನಲ್ಲಾ. ಆ ಸತ್ಸಂಗದ ಈಗಿನ ಗುರುಗಳಾದ ಶ್ರೀ ಚರಣಸಿಂಗ್ ಮಹಾರಾಜರು ಬೆಂಗಳೂರಿಗೆ ದಯಮಾಡಿಸಿದ್ದಾಗ ನನ್ನನ್ನೂ ಕರೆದುಕೊಂಡು ಹೋಗಿ ನನಗೆ 'ನಾಮ್' ದಯಪಾಲಿಸಲು ತಿಳಿಸಿದರು. ಅವರೂ ಅನುಗ್ರಹಿಸಿದರು. ಈಗ

ನಾವಿಬ್ಬರೂ ಒಟ್ಟಿಗೆ ಧ್ಯಾನಕ್ಕೆ ಕುಳಿತುಕೊಳ್ಳುತ್ತೇವೆ. ಸ್ಮರಣೆ, ಧ್ಯಾನ, ಅನುಸಂಧಾನ ಎಲ್ಲಾ ಒಟ್ಟಿಗೆ ನಡೆಯುತ್ತಿದೆ. ನಾನು ಬೆಳಗಿನ ಜಾವ ಎದ್ದು ಮುಖ ತೊಳೆದು ಕೊಂಡು ದೇವರ ಮನೆಗೆ ಬಂದು ಮಣೆಯ ಮೇಲೆ ಧ್ಯಾನಕ್ಕೆ ಕೂಡುತ್ತೇನೆ. ಆ ಹೊತ್ತಿಗಾಗಲೇ ಆಕೆಯೂ ಸಿದ್ಧವಾಗಿ ಅಲ್ಲಿಗೆ ಬಂದು ಮಣೆಯ ಮೇಲೆ ಕುಳಿತಿರುತ್ತಾರೆ. ದೇವರಿಗೆ ತುಪ್ಪದ ಬತ್ತಿ ದೀಪ ಹೊತ್ತಿಸಿ, ಗಂಧದ ಕಡ್ಡಿಗಳನ್ನು ಹಚ್ಚಿಸಿಟ್ಟು ಎಲೆಕ್ಟ್ರಿಕ್ ದೀಪವನ್ನಾರಿಸಿ ಮಣೆಯ ಮೇಲೆ ಧ್ಯಾನಕ್ಕೆ ಕುಳಿತಿರುತ್ತಾರೆ. ಎರಡು ಗಂಟೆಗಳ ಕಾಲ ಯಾವ ಅಡಚಣೆಯೂ ಇಲ್ಲದೆ ನಾವು ಧ್ಯಾನದಲ್ಲಿ ತಲ್ಲೀನರಾಗಿರು ತ್ತೇವೆ. ಅನಂತರ ಗುರುವಿನುಪದೇಶದಂತೆ ಒಳಗಿನ ನಾದವನ್ನಾಲಿಸಲು ಅನುಸಂಧಾನ ದಲ್ಲಿ ನಿರತರಾಗಿರುತ್ತೇವೆ. ಪ್ರಣವನಾದದಲ್ಲಿ ತನ್ಮಯರಾಗಿ ಆನಂದವನ್ನನುಭವಿಸು ತ್ತೇವೆ. ಇಲ್ಲಿಯೇ ನಮ್ಮ ಸಮಾಗಮ. ಒಂದು ವಿಧದಲ್ಲಿ ಇಂದು ಆಕೆ ನನಗೆ ಗುರುವಿನ ಸ್ಥಾನದಲ್ಲಿದ್ದಾರೆ. ಆಧ್ಯಾತ್ಮ ವಿಚಾರದಲ್ಲೂ ಅಷ್ಟು ಮುಂದುವರಿದಿದ್ದಾರೆ. ಅನೇಕ ಗ್ರಂಥಗಳನ್ನು ಓದಿಕೊಂಡಿದ್ದಾರೆ. ತಮ್ಮಂಥವರು ಆಕೆಯೊಡನೆ ಜಿಜ್ಞಾಸೆಗೆ ತೊಡಗ ಬೇಕು" ಎಂದು ಹೇಳಿದರು.

ನನಗೆ ಸ್ವಲ್ಪ ಹೊತ್ತು ವಿಶ್ರಮಿಸಿಕೊಳ್ಳಲು ಹೇಳಿ ತಾವು ವಿಶ್ರಮಿಸಿಕೊಳ್ಳಲು ತಮ್ಮ ಕೋಣೆಗೆ ತೆರಳಿದರು.

ನಾನು ಸ್ವಲ್ಪ ಹೊತ್ತೇನು ಚೆನ್ನಾಗಿಯೇ ನಿದ್ರೆಮಾಡಿದೆ. ಎದ್ದಾಗ ಆಗಲೇ ಟೀ ಸಿದ್ಧವಾಗಿತ್ತು. ನಾನು ಕಾಫಿಯನ್ನು ಅಪೇಕ್ಷಿಸಿದೆ. ನನ್ನಪೇಕ್ಷೆಯಂತೆ ಕಾಫಿಯೂ ಬಂತು. ಅನಂತರ ಆ ಹೆಣ್ಣುಮಗು ವೀಣೆ ನುಡಿಸುವುದನ್ನು ಕೇಳಬೇಕೆಂದು ಅಪೇಕ್ಷಿಸಿದೆ. ನನ್ನ ಕೋರಿಕೆ ನೆರವೇರಿಸಲು ಆಕೆಯೂ ವೀಣೆಯನ್ನು ಶ್ರುತಿಮಾಡ ತೊಡಗಿದಳು. ನಾವೆಲ್ಲರೂ ಅವರ ಮನೆಯ ಒಳ ಅಂಗಳದಲ್ಲಿ ಕುಳಿತೆವು. ಆಕೆಯು ವೀಣೆಯನ್ನು ನುಡಿಸುತ್ತಿದ್ದಾಗ ಸರಸ್ವತಿಯೇ ಪ್ರತ್ಯಕ್ಷಳಾಗಿ ವೀಣೆಯನ್ನು ನುಡಿಸು ತ್ತಿರುವಂತೆ ನನಗೆ ಭಾಸವಾಯಿತು. "ಆಕೆಯೊಡನೆ ತಾವೂ ಪಿಟೀಲನ್ನು ನುಡಿಸ ಬಹುದಲ್ಲಾ" ಎಂದೆ. ಆ ಹೊತ್ತಿಗಾಗಲೇ ಅವರ ಮೊಮ್ಮಗ ಬಂದು ಅವರ ತೊಡೆ ಯನ್ನೇರಿದ್ದ. ಆತ "ಇಲ್ಲ ನಾನು ಈಗ ಪಿಟೀಲನ್ನು ನುಡಿಸುತ್ತಿಲ್ಲ. ನೋಡಿ, ಇವನೊಡನೆ ಆಡುವುದೇ ನನಗೆ ಸಾಕಾಗಿದೆ. ನಾನು ಪಿಟೀಲನ್ನು ನುಡಿಸುತ್ತಿದ್ದಾಗ ಯಾವ ಸುಖವನ್ನು ಅನುಭವಿಸುತ್ತಿದ್ದೆನೋ ಅದಕ್ಕಿಂತಲೂ ಹೆಚ್ಚಿನ ಸುಖ ಇವನೊಂದಿಗೆ ಆಡುತ್ತಿರುವಾಗ ನನಗೆ ಸಿಗುತ್ತಿದೆ" ಎಂದರು. ಆ ಮಗುವೂ ಅವರ ತೊಡೆಯನ್ನೇರಿ ಸ್ವಲ್ಪವೂ ಸದ್ದುಮಾಡದೆ ಸಂಗೀತವನ್ನಾಲಿಸುತ್ತಿತ್ತು. ನಾನು ಅದರ ಕೆನ್ನೆಯನ್ನು ಮೃದುವಾಗಿ ಮುಟ್ಟಿದೆ.

ಹೊತ್ತು ಹೇಗೆ ಕಳೆದುಹೋಯಿತೋ. ನಾನು ನನ್ನ ರಾತ್ರಿಯ ಫಲಹಾರ ವನ್ನು ಅಲ್ಲಿಯೇ ಪೂರೈಸಿ ತೆರಳಬೇಕಾಯಿತು. ಆ ದಿನವೂ ಜನರಲ್ ಮ್ಯಾನೇಜರೇ ಕಾರನ್ನು ನಡೆಸಿಕೊಂಡು ಬಂದು ನನ್ನನ್ನು ಮನೆಗೆ ತಲುಪಿಸಿ ತಮ್ಮ ಮನೆಗೆ ತೆರಳಿದರು.

ನನ್ನನ್ನು ತಾನೇ ಕಾರಿನಲ್ಲಿ ಕರೆದುಕೊಂಡು ಹೋಗಿ ಮನೆಗೆ ಬಿಟ್ಟು ಬರುವೆನೆಂದು ಆತನ ಸೋದರಳಿಯ ಮುಂದೆ ಬರಲು 'ನೀನೂ ನಿನ್ನ ಹೆಂಡತಿ ಮಗುವನ್ನು ಆಡಿಸಿ ಕೊಂಡಿರಿ. ನಾನು ಅವರನ್ನು ಕಳುಹಿಸಿಕೊಟ್ಟು ಬಂದು ಬಿಡುತ್ತೇನೆ' ಎಂದು ಹೇಳಿ ಅವರೇ ಹೊರಟರು.

ನಾವು ಹೊರಟಾಗ ಎಲ್ಲರೂ ನನಗೆ ನಮಸ್ಕಾರಮಾಡಿದರು. ನಾನು ಅವರನ್ನು ಹೃತ್ಪೂರ್ವಕವಾಗಿ ಆಶೀರ್ವದಿಸಿದೆ. ಅವರು ನಮನಮಾಡಿದ್ದು ಯಾರಿಗೆ ಯೋಚಿಸಿದೆ. ಈತನ ಒಳಗಿನ ಅಂತರ್ಯಾಮಿಗೆ, ಶ್ರೀಮನ್ನಾರಾಯಣನಿಗೆ, ಶ್ರೀಹರಿಗೆ.

ಆಕೆ "ಆಗಿಂಪಾಗ್ಗೆ ನೀವು ಇಲ್ಲಿಗೆ ಬರುತ್ತಿರಬೇಕು. ನಮ್ಮನ್ನು ಅನುಗ್ರಹಿಸು ತ್ತಿರಬೇಕು" ಎಂದರು. ಆಗ ನಾನು ಹೇಳಿದೆ "ಭಗವಂತನ ಕೃಪಾಕಟಾಕ್ಷ ತಮ್ಮ ಮೇಲೆ ಅನಂತವಾಗಿದೆಯಮ್ಮ. ಸಂತಮಹಾರಾಜರೇ ತಮ್ಮನ್ನು ಅನುಗ್ರಹಿಸಿದ್ದಾರೆ. ತಮ್ಮ ಸಮಾಗಮ ಎಂತಹುದು" ಎಂದು ಹೇಳಿ ಅನಂತರ "ಆಗಬಹುದು" ಎಂದು ಒಪ್ಪಿಕೊಂಡೆ. ಮಗುವಿಗೆ ಕೊಡಲು ನಾನು ಯಾವ ಉಡುಗೊರೆಯನ್ನೂ ತೆಗೆದು ಕೊಂಡು ಹೋಗಿರದಿದ್ದರಿಂದ ಜೋಬಿನಿಂದ ಹತ್ತು ರೂಪಾಯಿಯ ನೋಟೊಂದನ್ನು ತೆಗೆದು ಅದರ ಕೈಗೆ ಕೊಟ್ಟೆ. ಅದು "ವಾಂಡ, ವಾಂಡ" ಎಂದಿತು. ಅದರ ಅಜ್ಜಿ "ಯಡತಿಕೊ ತಾತ ಅನುಗ್ರಹಿಸಿ ಕುಡಿತಿರ್ಕ್ಕಾರ್" ಎಂದು ಹೇಳಿದಳು. ನೀವೆಲ್ಲರೂ ನಮ್ಮ ಮನೆಗೊಮ್ಮೆ ಬರಬೇಕೆಂದು ನಾನು ಅವರನ್ನು ಆಹ್ವಾನಿಸಿ ಕಾರನ್ನು ಹತ್ತಿದೆ.

ನಮ್ಮ ಜನರಲ್ ಮ್ಯಾನೇಜರು ಕಾರನ್ನು ನಡೆಸಿದರು. ಕಾರು ಚಲಿಸುತ್ತಿರಲು ನನ್ನ ಮನದಲ್ಲಿ ಇಂತು ಮೊಳಗಿತು:

ಅವನೆ ನಡೆಸುತಲಿರಲು ರಥವ ಮುಂದೆ
ಪ್ರಕೃತಿ ಪುರುಷರ ಕೂಟದಲೆ ಪ್ರಗತಿಯೆಂದೆ
ನಾದ ನಾದದಿ ಬೆರೆಯಲದೆ ಸಮಾಗಮವು
ನಿತ್ಯ ನೂತನ ವಿಶ್ವವಿದು ಚಲಿಸುತಿಹುದು

ಕಾವೇರಿಯಿಂದಮಾ ಗೋ
ದಾವರಿವರಮಿರ್ಪ ನಾಡದಾ ಕನ್ನಡದೊಳ್
ಭಾವಿಸಿದ ಜನಪದಂ ವಸು
ಧಾವಳಯವಿಲೀನ ವಿಶದ ವಿಷಯ ವಿಶೇಷಂ

* * *

ಪದನಱಿದು ನುಡಿಯಲುಂ ನುಡಿ
ದುದ ನಱಿದಾರಯಲುಮಾರ್ಪರಾ ನಾಡವರ್ಗಳ್
ಚದುರರ್ ನಿಜದಿಂದ ಕುಱಿತೋ
ದದೆಯುಂ ಕಾವ್ಯಪ್ರಯೋಗ ಪರಿಣತಮತಿಳ್

* * *

ಸುಭಟರ್ಕಳ್ ಕವಿಗಳ್ ಸು
ಪ್ರಭುಗಳ್ ಚೆಲ್ವರ್ಕಳಭಿಜನರ್ಕಳ್ ಗುಣಿಗಳ್
ಅಭಿಮಾನಿಗಳತ್ಯುಗ್ರರ್
ಗಭೀರಚಿತ್ತರ್ ವಿವೇಕಿಗಳ್ ನಾಡವರ್ಗಳ್

—ಕವಿರಾಜಮಾರ್ಗಂ

ಅಶ್ವತ್ಥ

ರಾಧಾಕೃಷ್ಣ

ದ್ವಾರಕಾ ನಗರಿ. ಇಳಿ ಮಧ್ಯಾಹ್ನ. ರಾಜಮಾರ್ಗದಲ್ಲಿ ಅತ್ತಿತ್ತ ನೋಡುತ್ತ ನಡೆದು ಬರುತ್ತಿದ್ದ ಯುವತಿ ರಾಜಭವನದ ಮಹಾದ್ವಾರದತ್ತ ತಿರುಗಿದಳು.

ದಷ್ಟಪುಷ್ಟವಾಗಿ ತುಂಬಿ ಬಿಗಿದ ಮೈ ಅವಳ ಎತ್ತರದ ನಿಲುವಿನಲ್ಲಿ, ಅದರ ಸೊಬಗಿನಲ್ಲಿ ತೆಳುವಾಗಿಯೇ ಸೂಕ್ಷ್ಮವಾಗಿಯೇ ಕಾಣುತ್ತಿತ್ತು ; ಗಂಟೊಂದನ್ನು ಎಡ ಸೊಂಟದ ಮೇಲಿಟ್ಟು, ತೋಳಿನಿಂದ ಬಳಸಿ ನಡೆಯುತ್ತಿದ್ದ ಸೂಚ್ಯ ನೃತ್ಯಭಂಗಿಯಲ್ಲಿ ದೇಹ ಕೊಂಚ ಕೊಂಚ ಬಳುಕುತ್ತಿದ್ದುದೂ ಆ ಭಾವನೆಯನ್ನು ಹೆಚ್ಚಿಸುತ್ತಿತ್ತು. ಹೊಟ್ಟೆಯ ಭಾಗವನ್ನು ಮುಚ್ಚದಷ್ಟು ಮೋಟಾದ, ಕಿಂಕಾಪಿನ ಕಸೂತಿಯ ರಕ್ತ ವರ್ಣದ ರವಿಕೆಯೊಳಗಿನಿಂದ ಎದ್ದುಬಂದು ರವಿಕೆಯ ಮಧ್ಯೆ ಹಿಸಿದ ಉದ್ದ ಸೀಳು ಬಿರುಕಿನಲ್ಲೂ ಸೂಸಿದ್ದ ಗುರುಕುಚ ಭಾರವನ್ನು ಸರಿದೂಗಿಸಲು ಹೆಜ್ಜೆ ಹೆಜ್ಜೆಗೂ ಶ್ರಮಿಸುತ್ತಿದ್ದ ತುಂಬು ನಿತಂಬದ ಮೇಲಿನ ಬಲವಾದ ನಡು ಹೋಲಿಕೆಯಿಂದ ಕಿರಿದಾಗಿಯೂ ದುರ್ಬಲವಾಗಿಯೂ ಇದ್ದಂತೆಯೇ ಮೋಸಗೊಳಿಸುತ್ತಿತ್ತು. ಖಂಖ ಸುಳಿ ಹೊಕ್ಕಳಿನ ಮಟ್ಟದಲ್ಲಿ ಜರಿಯಂಚಿನ, ಕಪ್ಪು ಬಿಳುಪು ದುಂಡು ಚಿಕ್ಕೆಗಳ, ಬೆಂಕಿ ಬಣ್ಣದ ತುಂಡು ಲಂಗ ಮಾಟವಾದ ಕುಣಿ ಕಣಕಾಲಿನ ಚುರುಕು ಕಾಣುವಷ್ಟು ಮೇಲಿತ್ತು. ಧೂಳಿಡಿದ ಪಾದಗಳ ನಡೆಯಲ್ಲಿ ಕಣಕಣ ಪದನೂಪುರ ಮತ್ತು ಝಣ ಝಣ ಗಂಟೆಗೆಜ್ಜೆಗಳ ಬೆಳ್ಳಿಯ ಕಾಲ್ಗಡಗಗಳೊಡನೆ, ಕೈಗಡಗ ಬಳೆಗಳು ಸಂಗೀತ ಸಂಭಾಷಣೆ ನಡೆಸುತ್ತಿದ್ದವು. ಅವಳ ಎದೆಯ ಮೇಲೆ ಸ್ವಲ್ಪ ಎದ್ದೆದ್ದು ಆಡುತ್ತಿದ್ದ ಅಡ್ಡಿಕೆಯ ಆ ಚಲನೆ, ಅದೇನು ಪ್ರಯಾಣದ ದಣಿವಿನ ಉಸಿರಿನಿಂದಲೋ, ಗುರಿ ಮುಟ್ಟುತ್ತಿದ್ದ ಉತ್ಸಾಹದ ಉಸಿರಿನಿಂದಲೋ ಅಥವ ಬಿಂಕದ ಕೊರಳಿನ ಕೊಂಕಿನಿಂದಲೋ, ಹೇಳುವುದು ಸುಲಭವಾಗಿರಲಿಲ್ಲ. ಅಲ್ಲಲ್ಲಿ ಮಾಗಿದ ಫಲಗೂಡಿದ ತನುಲತೆ ದೊಡ್ಡದೊಂದು ಹೂವನ್ನು ಬಿಟ್ಟಂತಿತ್ತು, ಅವಳ ಅರಳಿದ ಮುಖವನ್ನು ನೋಡಿದರೆ. ಸುತ್ತಿ ಸುತ್ತಿ ಅಲ್ಲಲ್ಲೆ ಹಾರುವ ದುಂಬಿಯ ಮೇಲಿನ ಹೂ ಪರಾಗದಂತೆ ಚಂಚಲ ಮುಂಗುರುಳೋಳಿಯ ಮೇಲೆ ಚಂದ್ರಧೂಳು ಕುಳಿತಿತ್ತು. ಅರುಣಾಗಸದಲ್ಲಿನ ಬಿಳಿಯ ಮೋಡದ ಪಟ್ಟಿಯಂತೆ ಎದೆಯ ಮೇಲೆ ಹಾಯ್ದುಹೋದ ಮೇಲುದದ ಸೆರಗು ಮಂಜಿನ

ಮುಸಕಾಗಿ ಅರ್ಧ ತಲೆಯನ್ನು ಮುಚ್ಚಿದ್ದರೆ ಆ ಸೆರಗನ್ನು ಅತಿಕ್ರಮಿಸಿ ಕೆಳಗಿಳಿದು ಕುಚ್ಚಿನಿಂದ ಆಡುತ್ತಿದ್ದ ಕಪ್ಪು ಜಡೆ ಮುಸಕು ನದಿನೀರಿನಲ್ಲಿ ಸುಳಿದಾಡುವ ಕಾಳಸರ್ಪವಾಗಿತ್ತು. ಬೈತಲೆಯ ತುದಿಯಲ್ಲಿ ನಾಗಮಣಿಯಾಗಿ ಹಣೆಯ ಸ್ವರ್ಣಾಭರಣ ಶೋಭಿಸುತ್ತಿತ್ತು. ಬಿಲ್ಲಾಗಿ ಬಾಗಲು ಅನುಮಾನಿಸುತ್ತಿದ್ದು ಅರ್ಧ ಬಾಗಿದ್ದ ತಿದ್ದು ಹುಬ್ಬುಗಳು; ಕೆಳಗೆ ಕಾಡಿಗೆ ತೀಡಿದಂತಿದ್ದ ಒತ್ತು ರೆಪ್ಪೆಕೂದಲು. ಜೋಡಿ ಕಪ್ಪು ಸೂರ್‍ಯನಂತೆ ಥಳಥಳಿಸುವ ಗುಡ್ಡೆಗಳ ಮೀನುಗಣ್ಣುಗಳು ಒಮ್ಮೊಮ್ಮೆ ಮುಖಕ್ಕೆ ಸ್ವಲ್ಪ ದೊಡ್ಡವೇ ಎನ್ನಿಸುತ್ತಿತ್ತು. ಉಂಗುರ ಮುಕುರದ ಒಂದೇ ಮುತ್ತು ನೀಳನಾಸಿಕದ ಮಾಟ ಮೊಗ್ಗು ತುದಿಯೊಡನೆ ಪೈಪೋಟಿ ನಡೆಸಿ ಸೋಲೊಪ್ಪಿಕೊಂಡು ದೂರದಲ್ಲಿ ಮರ್ಯಾದೆಯಿಂದ ನಿಂತು ಅಲಂಕಾರಸೇವೆಮಾಡುತ್ತಿತ್ತು. ರಸಚಿಮ್ಮುವ ತುಟಿಗಳ ಪುಟ್ಟ ಬಾಯಿ. ಅಂಡಾಕಾರದ ಮುಖದ ಕೆಳಕೊನೆಯಾಗಿ ಕಂಡೂ ಕಾಣದ ಗುಳಿಯ ಸುಳಿವಿನ ನುಣುಪು ಅಂದಗಲ್ಲ. ಮಾವಿನ ಚಿಗುರಿನ ಮಧ್ಯೆ ತೂಗಾಡುವ ಹೂವಿನ ಗೊಂಚಲಿನಂತೆ ಕಿವಿಯ ಹೊನ್ನಗೊಂಡೆಗಳು. ಈ ಗ್ರಾಮಮುಗ್ಧೆ ನಿರಾಭರಣ ಸುಂದರಿಯಲ್ಲ, ಆಭರಣ ಸುಂದರಿ—ತಾನೇ ಒಂದು ಜೀವಿತ ಆಭರಣವಾದ ಸುಂದರಿ. ಆ ಉಡುಪಿನಲ್ಲಿ ಇನ್ನೂ ಹುಡುಗಿಯೇ; ಚಂಚಲೆ.

ಮಹಾದ್ವಾರವನ್ನು ಸಮೀಪಿಸುತ್ತಿದ್ದಾಗ ದ್ವಾರಪಾಲಕರಿಬ್ಬರು ಅವಳನ್ನೇ ನಿಟ್ಟಿಸಿ ನೋಡುತ್ತ ಮಾತಾಡಿಕೊಳ್ಳುತ್ತಿದ್ದರು—ದ್ವಾರಕೆಯ ಮಾರ್ಗಗಳಲ್ಲಿ ಜನರು ನೋಡಿ ನೋಡಿ ಆಡಿಕೊಂಡಿದ್ದ ರೀತಿಯಲ್ಲಿ.

"ನೋಡು ನೋಡು ಆ ಹೆಣ್ಣು! ಅಬ್ಬಬ್ಬ!"

"ನೋಡ್ತಾಲೇ ಇದೀನಿ."

"ಯಾರಿರಬಹುದು ಅಂತ."

"ಯಾರಿಗಾಗಿ ಬರ್‍ತಾ ಇರಬಹುದು ಅಂತ."

"ಅಂಥ ಪುಣ್ಯವಂತ ಯಾವನಿದಾನೆ, ಇಲ್ಲಿ ಭೃತ್ಯರಲ್ಲಿ?"

"ನಾನು ನೀನು ಅಂತೂ ಅಲ್ಲ."

ಇಬ್ಬರೂ ನಿಟ್ಟುಸಿರು ಬಿಡುತ್ತಿರುವಾಗ ಹೆಣ್ಣು ಅವರ ಬಳಿಗೆ ಬಂದಳು.

"ಇಲ್ಲೇ ತಾನೆ ಕೃಷ್ಣ ಇರೋದು?" ಹುಡುಗಿ ದಿಟ್ಟತನದಿಂದ ಸರಳವಾಗಿ ಕೇಳಿದಳು.

"ಯಾವ........ಕೃಷ್ಣ?" ಒಬ್ಬ ಕೆಣ್ಣುಕಣ್ಣು ಬಿಡುತ್ತ ಕೇಳಿದ.

"ಅವನೇ, ಗೊಲ್ಲ........" ಅವಳು ವಿಶದೀಕರಿಸಹೊರಟಳು.

"ಗೊಲ್ಲನೇ? ಆ ಹೆಸರಿನೋನು ಯಾವನೂ ಇಲ್ಲಿಲ್ಲ" ಯೋಚಿಸುತ್ತ ದರ್ಪದಿಂದ ಎರಡನೆಯವನು ಉತ್ತರಿಸಿದ.

"ಗೊಲ್ಲರ ಬೀದಿಯಲ್ಲಿ ವಿಚಾರಿಸಬೇಕಾಗಿತ್ತು. ಅನೇಕ ಕೃಷ್ಣರಿದಾರೆ ಅಲ್ಲಿ! ಇಲ್ಲಿಗೇಕೆ ಬಂದೆ ಹ್ಹ!" ಮೊದಲನೆಯವನು ಗದರಿಸಿ ಉಪಹಾಸಮಾಡಿದ. ಇನ್ನೊಬ್ಬನೂ ಹಾಸ್ಯದಲ್ಲಿ ಸೇರಿಕೊಂಡ.

"ಆ ಕೃಷ್ಣರಲ್ಲ. ನನ್ನ ಕೃಷ್ಣ ಬೇಕು. ಅವನು ಗೋಕುಲದಲ್ಲಿ ಗೊಲ್ಲನಾಗಿದ್ದ. ಈಗ ಗೊಲ್ಲನಲ್ಲ. ಮಹಾರಾಜನೋ ಯುವರಾಜನೋ ಆಗಿದಾನಂತೆ ಇಲ್ಲಿ."

"ಏನೂ!" ಮೊದಲನೆಯವನಿಂದ.

"ಆ!" ಎರಡನೆಯವನಿಂದ.

"ಯಾರು? ಯದುವಂಶಶಿಖಾಮಣಿ ಶ್ರೀಮದ್ಯುವರಾಜ ಕೃಷ್ಣದೇವನೇ? ಎಚ್ಚರಿಕೆಯಿಂದ ಮಾತಾಡು!"

"ಹುಂ ಜೋಕೆ! ಏನೋ ನಿನ್ನ ಗೆಳೆಯ ಅನ್ನೋ ಹಾಗೆ........"

"ಹೌದು, ನನ್ನ ಗೆಳೆಯನೇ ಅವನು. ನಮ್ಮ ಬೀದೀಲೇ ಇದ್ದ. ನನ್ನ ಕೂಡೆ ಆಟ ಪಾಟ........"

"ಒಹೊಹೊಹೊಹೋ! ಗೆಳೆಯಾ!"

"ಹಹ್ಹಹಾ! ಇವಳ ಕೂಡೆ ಆಡ್ತಾ........!"

"ಹೋಗಿ, ಅವನಿಗೆ ತಿಳಿಸಿ, ನಿನ್ನ ಗೆಳತಿ ಬಂದಿದಾಳೆ ಅಂತ. ಅವನಿಗೆ ಗೊತ್ತಾಗುತ್ತೆ" ಕುಪಿತಳಾಗಿ ನುಡಿದಳು.

"ಓಹೋ ಆಜ್ಞೆಬೇರೆಯೋ ನಮಗೆ! ಹ್ಹ!"

"ಯಾವ ದೇಶದ ರಾಜಕುಮಾರಿ, ಯಾವ ಹೆಸರಿನೋರು ದಯಮಾಡಿಸಿದಾರೆ ಅಂತ ಹೇಳಬೇಕು ದೇವಿ, ಅಪ್ಪಣೆಕೊಡಿಸೋಣವಾಗಲಿ........ಹ್ಹಹಾ!"

"ರಾಧೆ ಬಂದಿದಾಳೆ ಅನ್ನಿ ಸಾಕು, ಬರ್ತ್ತಾನೆ" ರಾಧೆಯ ಉಸಿರು ಜೋರಾಗಿ ಹಾಯುತ್ತ ಎದೆ ಬಿದ್ದುಬಿದ್ದೇಳುತ್ತಿತ್ತು.

"ಗೊಲ್ಲತಿ ರಾಧೆ!"

"ಅಂದೊಡನೆ ಬಂದಾರು. ಬಂದಾರು ಓಡೋಡಿ!"

"ಹೋಗಿ ಹೇಳ್ತೀರೋ ಇಲ್ಲವೋ—ನಾನು ಹೇಳಿದ್ದನ್ನು?"

"ಈಗ ಬೆದರಿಕೆ ಬೇರೆ! ಹೋಗು ಹುಚ್ಚಿ! ಅವರು ಈಗ ರಾಣಿವಾಸದಲ್ಲಿರೋರು, ಗೊಲ್ಲ ಹೆಣ್ಣು ನೀನು ಹೇಳಿಕಳಿಹಿಸಿದೇ ಅಂತ....ಹ ಹ್ಹ ಹ್ಹಾ....ಮಾತಾಡೋದಕ್ಕೂ ಬಿಡೋದಿಲ್ಲ ಈ ನಗು."

"ಹೇಳೋದೂ ಇಲ್ಲ ಏನೂ ಇಲ್ಲ. ಹೋಗು ಇಲ್ಲಿಂದ ತೆಪ್ಪಗೆ. ನಿನ್ನ ಬುದ್ಧಿಗೆಟ್ಟ ವಿನೋದ ಸಾಕು!"

"ನಾನೇ ಒಳಗೆ ಹೋಗಿ........" ರಾಧೆ ಒಂದು ಹೆಜ್ಜೆಯನ್ನು ಮುಂದಿಟ್ಟಳು.

"ಏಯ್!"

"ಏ!"

"ತೊಲಗುತ್ತೀಯೋ ತಳ್ಳಿಬಿಡೋಣವೋ."

"ಏನೋ ಚೆನ್ನಾದ ಹೆಣ್ಣು ಅಂತ ನಾವು ಸದರಕೊಟ್ಟು ನಾಲ್ಕು ವಿನೋದದ ಮಾತಾಡಿದರೆ ಹದ್ದು ಮೀರಿ ನಡೀತೀಯಾ?"

ಅವರು ಮುಂದೆ ಸರಿದು ಭರ್ಜಿಗಳನ್ನು ಕತ್ತರಿಯಂತೆ ನಿಲ್ಲಿಸಿ ತಡೆದರು.

"ಹಾಗೇನು? ಇನ್ನೇನುಮಾಡಲಿ, ನಾನೇ ಕರೆಯುತ್ತೀನಿ, ಇಲ್ಲಿಂದಲೇ........ ಕೃಷ್ಣಾ! ಕೃಷ್ಣಾ! ಓ ಕೃಷ್ಣಾ!" ಆರ್ತಳಾಗಿ ಕಣ್ತುಂಬಿ ಕರೆದಳು.

"ಬಾಯಿ ಮು........!" ದ್ವಾರಪಾಲಕನ ಮಾತು ಮುಗಿಯಲೇ ಇಲ್ಲ.

"ಬಂದೆ, ಬಂದೇ........ಓ ರಾಧಾ!" ಮುಂದಿನ ಮೇಲುಪ್ಪರಿಗೆಯಿಂದ ಕೇಳಿ ಬಂದಿತು—ಮೊರೆಗೆ ಉತ್ತರ.

ದಿಗ್ಭ್ರಾಂತರಾದ ದ್ವಾರಪಾಲಕರು ದೊಡ್ಡದಾಗಿ ಕಣ್ಣುಬಿಟ್ಟು ಉಪ್ಪರಿಗೆಯ ಕಡೆಗೆ ನೋಡುತ್ತ ತೆಪ್ಪಗಾದರು.

ಅಂತಃಪುರದಲ್ಲಿ ಸತ್ಯಭಾಮಾ ಭವನದಲ್ಲಿ ಕೃಷ್ಣ ಮಯೂರತೂಲಿಕಾತಲ್ಪದಲ್ಲಿ ಮೆಲ್ಲಗೆ ತೂಗಿಕೊಳ್ಳುತ್ತ ಭಾಮೆಯೊಡನೆ ಪಗಡೆಯಾಟದಲ್ಲಿ ಮಗ್ನನಾಗಿದ್ದವನು ಕೂಗುತ್ತ ದಿಗ್ಗನೆದ್ದಾಗ ಭಾಮೆಗೆ ಆಶ್ಚರ್ಯವಾಯಿತಷ್ಟೇ ಅಲ್ಲ, ಸಹಜ ಕೋಪವೂ ಬಂದಿತು.

"ಆರ್ಯಪುತ್ರ, ಇದೇನು ಅವಸರ? ನಾನು ಈಗ ಇನ್ನೊಂದು ಗರ ಹಾಕಿದರೆ ನನ್ನ ಕಡೆಯ ಹಸಿರು ಕಾಯಿಯೂ ಹಣ್ಣಾಗುತ್ತದೆ. ಸ್ವಲ್ಪ ತಾಳು. ಇಗೊ."

"ಭಾಮಾ........ಆ ಕರೆ!........ಆ ಕರೆ!" ಎನ್ನುವಷ್ಟರಲ್ಲಿ ಕೃಷ್ಣ ಭಾಮಾ ಭವನದ ಬಾಗಿಲಿಗೆ ಬಂದುಬಿಟ್ಟಿದ್ದ. ಇನ್ನರ್ಧಕ್ಷಣದಲ್ಲಿ ದಡದಡನೆ ಒಟ್ಟೊಟ್ಟಿಗೆ ಎರಡೆರಡು ಮೆಟ್ಟಿಲಾಗಿ ಧುಮುಕುತ್ತ ಉಪ್ಪರಿಗೆಯನ್ನಿಳಿದು ಧಾವಿಸಿ ಮುಂಬಾಗಿಲಲ್ಲಿ ಕಾಣಿಸಿಕೊಂಡ. ಒಳಗೆ ಭಾಮೆ ಕೋಪ ಅಪಮಾನಗಳಿಂದ ಕುದಿಯುತ್ತಿದ್ದಳು.

"ರಾಧಾ! ಪ್ರಿಯೆ ರಾಧಾ! ರಾಧಿಕಾ! ನನ್ನ ರಾಧಿಕಾ!" ಹೇಳುತ್ತ ಹೇಳುತ್ತ ಹಾರಿ ಹಾರಿ ಬರುತ್ತ ಅವಳನ್ನು ಸೇರಿದ.

ಈಗ ಅರಮನೆಯ ಬಾಗಿಲುಗಳು ಕಿಟಕಿ ಮೇಲು ಮೊಗಸಾಲೆಗಳಲ್ಲಿ ಜನರು ಒತ್ತೊತ್ತಿ ನಿಂತು ಮಂತ್ರಮುಗ್ಧರಾಗಿ ನೋಡುತ್ತಿದ್ದರು; ಭಾಮೆಯೂ ಅವರೊಡನೆ. ದ್ವಾರಪಾಲಕರು ನಿಂತಲ್ಲೇ ಪ್ರತಿಮೆಗಳಾಗಿದ್ದರು.

"ಓ ಕೃ........!" ರಾಧೆಯ ನುಡಿ ಅಲ್ಲಿಗೇ ನಿಂತಿತು. ಅವನನ್ನು ಕಂಡು ಆನಂದದಿಂದ ಅರಳಿದ ಮುಖ ಆಶ್ಚರ್ಯ ಅನುಮಾನಗಳಲ್ಲಿ ನಿಂತಿತು—ಅವನ ದಿವ್ಯ ವಸ್ತ್ರಾಭರಣಗಳ ಸಿರಿತನವನ್ನು ನೋಡಿ ದಂಗುಬಡಿದು.

"ಏಕೆ ನಿಲ್ಲಿಸಿದೆ ರಾಧೆ ಅಷ್ಟಕ್ಕೇ?........" ನಸುನಗುತ್ತ ಪ್ರೇಮದಿಂದ ಅವಳ ಭುಜವನ್ನು ಮುಟ್ಟಿ ತಟ್ಟಿದ. "ನೋಡು, ನಾನು ಕೃಷ್ಣನೇ, ಹ್ಞೂ, ಅದೇ ಕೃಷ್ಣ, ನಿನ್ನ ಕೃಷ್ಣನೇ, ರಾಧಾಕೃಷ್ಣನೇ, ರಾಧಿಕಾ!"

ಅವಳು ಇನ್ನೂ ಅಪ್ರತಿಭಳಾಗಿಯೇ ಅವನನ್ನು ಮೌನದಿಂದ ನೋಡುತ್ತಲೇ ನಿಂತುಬಿಟ್ಟಿದ್ದಳು.

"ನೀನು........ಹೀಗೆ!........ಹೇಗೆ........ಎಷ್ಟೊಂದು........ಏನೇನೋ........ ಎಲ್ಲ........" ಮಾತು ಹೊರಟಾಗ ಅವಳು ಆಡಿದುದು ಕೂಡದೆ ತಡವರಿಸುತ್ತಿತ್ತು.

"ಆದರೇನಾಯ್ತು ರಾಧಾ? ನಾನು ಎಂದಿಗೂ ಎಂದೆಂದಿಗೂ ನಿನ್ನವನೇ, ಹಿಂದಿನವನೇ—ನಿನಗೆ. ಬಾ ರಾಧಾ."

"ಬೇಡ ಬೇಡ........ಇಲ್ಲ........"

"ಹುಚ್ಚು ಹುಡುಗಿ! ಇದೇನು ನಿನ್ನ ಭ್ರಾಂತಿ–ರೀತಿ? ನೋಡು" ಅವಳ ಪಾದದ ಬಳಿ ಒಂದು ಮಂಡಿಯೂರಿ ಕುಳಿತು ಅವಳ ಕೈತೆಗೆದುಕೊಂಡು ಅವಳ ಮುಖಕ್ಕೆ ಕಣ್ಣೆತ್ತಿ ನೋಡಿದ.

"ಅಯ್ಯೋ ಕೃ........ಕೃಷ್ಣ, ನಿನ್ನ ಪೀತಾಂಬರ ಮಾಸುತ್ತಿದೆಯಲ್ಲ!"

"ಆದರೇನು, ನಂಗೆ ಪ್ರಿಯವಾದ ಈ ನಿನ್ನ ಮೃದುಪಾದಗಳು ಧೂಳಿನಿಂದ ತುಂಬಿವೆಯಲ್ಲ" ಅವನು ಪೀತಾಂಬರದ ತುದಿಯಿಂದ ಅವಳ ಪಾದಗಳನ್ನು ಮೆಲ್ಲಗೆ ಒರೆಸಿದ.

"ಛಿ ಛೀ ಇದೇನು ಇದೇನು!" ರಾಧೆ ಹೆಜ್ಜೆಯನ್ನು ಹಿಂದೆ ಸರಿಸಲು ಯತ್ನಿಸಿ ವಿಫಲಳಾದಳು.

"ಅಷ್ಟೊಂದು ದೂರ ನಡೆನಡೆದು ಬಂದು ದಣಿದಿವೆಯಲ್ಲ ಇವು" ನಗುತ್ತ ಸರಿಸದಂತೆ ಪಾದಗಳನ್ನು ಹಿಡಿದುಕೊಂಡು ಹಸ್ತದಿಂದ ಮೃದುವಾಗಿ ಒತ್ತಿದ.

"ಕೃಷ್ಣ! ಓ ನನ್ನ ಕೃಷ್ಣಾ! ಗೋಪಾಲ! ಗೋವಿಂದ! ಏಳು, ಏಳು!" ಗಂಟನ್ನು ಹಾಗೆಯೇ ನೆಲಕ್ಕೆ ಬಿಟ್ಟು ಅವನನ್ನು ಎರಡು ಕೈಗಳಿಂದಲೂ ಹಿಡಿದು ಮೇಲೆತ್ತಿದಳು. "ನೀನು ಇನ್ನೂ ಅವನೇ—ನನ್ನ ಕೃಷ್ಣನೇ. ಅನುಮಾನವಿಲ್ಲ. ಓ ಪ್ರಾಣಗೆಳೆಯ! ಮುದ್ದುಗೊಲ್ಲ!"

"ಇಷ್ಟು ಹೊತ್ತು ಇಲ್ಲೇ ದ್ವಾರದಲ್ಲಿ ನಿಲ್ಲಿಸಿಬಿಟ್ಟೆನಲ್ಲ. ಬಾ, ಬಾ ಒಳಕ್ಕೆ!"

ಈಗ ಎಚ್ಚೆತ್ತು ಕೈಚಾಚಿದ ದ್ವಾರಪಾಲಕನಿಗೆ ಅವಳ ಗಂಟನ್ನು ಕೊಡದೆ ತಾನೇ ಬಲಗೈಯಿಗೆ ತೆಗೆದುಕೊಂಡು, ಎಡಗೈಯಿಂದ ಅವಳ ಸೊಂಟವನ್ನು ಬಳಸಿ ತಬ್ಬಿಕೊಂಡಂತೆ ಒತ್ತಿ ನಡೆಯುತ್ತ ಅವಳನ್ನು ಒಳಗಡೆಗೆ ಕರೆತರುತ್ತಿದ್ದ. ರಾಧೆ ನಡೆಯುತ್ತ ಸುತ್ತಲೂ ಎತ್ತರದಲ್ಲೂ ನೋಡುತ್ತಿದ್ದಳು.

"ನಾಚಿಕೆಯಾಗುತ್ತೆ ಕೃಷ್ಣ—ಈಗ ಇಲ್ಲಿ ಇದನ್ನೆಲ್ಲ ಕಾಣುತ್ತ, ಇವರೆಲ್ಲ........" ಮುಖ ಕೆಂಪೇರಿ ಹೇಳಿದಳು.

"ಓಹೋ ಆದೆಲ್ಲಿಂದ ಬಂತು ಲಜ್ಜೆ—ದಿಟ್ಟ ಕಾಡು ಹುಡುಗಿಗೆ, ಚೆಲ್ವು ಗೊಲ್ಲರ ಹೆಣ್ಣಿಗೆ? ಯಾವಾಗಿನಿಂದ ಈ ಮಾರ್ಪಾಡು? ನನ್ನಲ್ಲಿಲ್ಲ ಕಂಡೆಯಾ? ಜಗತ್ತೇ ನೋಡಲಿ, ದಿಟ್ಟಿಸಿ ನೋಡಲಿ, ನಿನ್ನ ನನ್ನ ಸ್ನೇಹವನ್ನು! ಇದು ನಂಗೆ ಈಗ ದ್ವಾರಕಾ ನಗರಿಯಲ್ಲ, ನಾವು ಒಡಗೂಡಿ ಆಡಿ ಬೆಳೆದ ಗೋಕುಲ, ನೃತ್ಯದಿಂದ ನಲಿದ ಬೃಂದಾವನ" ಇನ್ನೂ ಹತ್ತಿರ ಒತ್ತಿಕೊಳ್ಳುತ್ತ ಅವಳ ಕಡೆಗೆ ತಿರುಗಿ ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತ ಹೇಳಿ ನಕ್ಕ.

ತಗ್ಗಿದ್ದ ಅವಳ ದೃಷ್ಟಿ ಈಗ ಮೇಲೆದ್ದು ಒತ್ತುರೆಪ್ಪೆಯ ಮೋಡದ ಚೂರನ್ನು ಭೇದಿಸಿಕೊಂಡು ಅವನತ್ತ ಮಿಂಚಿತು. ಮೊಗ ಗಗನವನ್ನೆಲ್ಲ ನಗು ಬೆಳಕು ಬೆಳಗಿತು.

"ಹಾಗೇ ಕೃಷ್ಣ? ಆಗಲಿ. ನಂಗೂ ಹಾಗೆಯೇ" ಅವಳು ಮೆಲ್ಲನುಸಿರುತ್ತ ತನ್ನ ಕೈಯನ್ನು ನಿಧಾನವಾಗಿ ಅವನ ಭುಜಕ್ಕೆ ತಂದು ಸೋಕಿಸಿ ಮೃದುವಾಗಿ ಸವರಿದಳು.

"ಈಗ ಹೇಳು ರಾಧಿಕಾ, ಹೀಗೆ ನೀನೊಬ್ಬಳೇ ಬಂದುಬಿಟ್ಟೆಯಲ್ಲ."

"ಏನುಮಾಡಲಿ ಕೃಷ್ಣ, ನಿನ್ನನ್ನು ನೋಡಬೇಕು ಅಂತ ಅನ್ನಿಸಿಬಿಟ್ಟಿತು, ಬಂದೇಬಿಟ್ಟೆ."

"ಜತೆಗೆ ಯಾರಾದರೂ ಬಂದಿದ್ದರೆ........"

"ಅದನ್ನು ಯೋಚಿಸಲೇ ಇಲ್ಲ. ಆಸೆ ಹುಟ್ಟಿದುದೇ ತಡ, ಹೊರಟುಬಿಟ್ಟೆ. ಅದಕ್ಕಾಗಿ ಕಾದಿದ್ದರೆ ಎಷ್ಟು ನಿಧಾನವಾಗುತ್ತಿತ್ತೋ ಯಾರು ಬಲ್ಲರು."

"ಯಾರಿಗೂ ಹೇಳಲೇ ಇಲ್ಲವೆ?"

"ಅವರೇ ತಿಳಿದುಕೊಳ್ಳಲಾರರೆ? ಹೇಳಿದ್ದರೆ ಯಾವ ಯಾವ ಎಂಥೆಂಥ ಅಡ್ಡಿ ಅಡಚಣೆಗಳು ಬರುತ್ತಾ ಇದ್ದವೋ. ನಾನು ಸಹಿಸಬಲ್ಲವಳಾಗಿದ್ದೆನೇ—ಕಾತರ ಕಾಡುತ್ತ ಇರುವಾಗ?"

"ದಾರಿಯಲ್ಲಿ ಒಬ್ಬಂಟಿಗಳಾಗಿದ್ದೆಯಲ್ಲ, ಹೆದರಿಕೆಯಾಗದೆ ಬಂದದ್ದು........"

"ನನಗೇನು ಹೆದರಿಕೆ? ಹೆದರಿಸೋರು ಯಾರು? ನಿನ್ನನ್ನೇ ಕಾಡಿಸಿ ಪೀಡಿಸಿ ಹೆದರಿಸುತ್ತಾ ಇದ್ದೋಳು ನಾನು! ನಾನು ಅಂಥಿಂಥ ಹೆಣ್ಣೇ ಕೃಷ್ಣಾ?"

"ಹೌದು ಹೌದು, ಅಬ್ಬಾ! ಸ್ವಲ್ಪ ಮರೆತಿದ್ದೆ." ಜೋರಾಗಿಯೇ ನಕ್ಕ. "ಅಂತೂ ಅಷ್ಟೊಂದು ದೂರ ಅಷ್ಟೊಂದು ದಿನ ದಣಿದು ಬಂದೆಯಲ್ಲ ರಾಧಾ."

"ಇನ್ನೇನು ಮಾಡೋದು, ನೀನು ನಮ್ಮನ್ನೆಲ್ಲ ಬಿಟ್ಟು ಇಷ್ಟು ದೂರ ಬಂದು ಬಿಟ್ಟಮೇಲೆ? ನಿನ್ನನ್ನು ನೋಡುವ ಉತ್ಸಾಹದಲ್ಲಿ ಆತುರದಲ್ಲಿ, ನಿನ್ನ ನನಕೆಯಲ್ಲಿ ನನಗೆ ದಣಿವೇನಾದರೂ ಗೊತ್ತಾಯಿತು ಅಂದುಕೊಂಡೆಯಾ? ಈಗಲಂತೂ ನಿನ್ನ ಮುಖವನ್ನು ಕಂಡಮೇಲೆ, ನಿನ್ನನ್ನು ಸೇರಿದ ಮೇಲೆ ಇದ್ದಿರಬಹುದಾದ ಯಾವ ಕಷ್ಟ ತಾನೆ ಪರಿಹಾರವಾಗದೆ ಇದ್ದೀತು?"

"ನಿನ್ನ ಭಾವನೆ ಹೇಗಾದರೂ ನಿನ್ನ ಅನವರತ ಅರಳಿರುವ ಮುಖದಲ್ಲಿ ಕೊಂಚ ಆಯಾಸದ ಸೂಚನೆ ಈಗ ಈಗ ತೋರುತ್ತಿರುವಹಾಗಿದೆ. ಬಾ, ಇನ್ನು ವಿಶ್ರಮಿಸಿ ಕೊಳ್ಳುವೆಯಂತೆ."

ಈಗ ಅವರು ರಾಜಭವನದ ಬಾಗಿಲನ್ನು ದಾಟುತ್ತಿದ್ದರು. ನೆಲದ ಮೇಲೆ ಹಾಸಿದ್ದ ರತ್ನಗಂಬಳಿಯ ಮೇಲೆ ಅವಳು ಹೆಜ್ಜೆಯನ್ನಿಡಲೋ ಬೇಡವೋ ಎನ್ನುವಂತೆ ನಡೆಯುತ್ತಿದ್ದಳು.

"ಯಾಕೆ ರಾಧೆ, ಈ ಕಂಬಳಿ ನಿನ್ನ ಮೃದುಪಾದವನ್ನು ಚುಚ್ಚುತ್ತಿದೆಯೆ?"

"ಏನೆಂದೆ ಕೃಷ್ಣ? ಚೆನ್ನಾಯಿತು! ನೀನೇ ನನ್ನನ್ನು ಎಷ್ಟು ಬಾರಿ ಕಾಡು ಹುಡುಗಿ ಎಂದಿದ್ದೀಯೆ. ನಿತ್ಯವೂ ಗೋವನ್ನು ಮೇಯಿಸುವಾಗ ಕಾಡಿನ ಕಲ್ಲು ಕಂಟಕ

ದೊಡನೆ ಹೋರಾಡಿ ಗೆದ್ದ ಕಾಲು ನನ್ನದು ಅನ್ನೋದನ್ನು ಮರೆತೆಯಾ? ನಿನಗೆ ಮರೆವು ಬೇಗ ಬರುತ್ತಿದೆ. ಮುದುಕನಾಗುತ್ತಿದ್ದೀಯೆ! ಗರುಕೆ ಚುಚ್ಚಿ ರಕ್ತ ಚಿಮ್ಮುವ ಕಾಲಿನ ಸುಕುಮಾರಿಯಲ್ಲ, ಗೊಲ್ಲಳು ನಾನು. ನೀನಾದರೂ ಈ ಮೃದುಜೀವನಕ್ಕೆ ಹೇಗೆ ಒಗ್ಗಿಕೊಂಡಿದ್ದೀಯೆ ಕೃಷ್ಣ? ನಾನು ಯೋಚಿಸುತ್ತಾ ಇದ್ದದ್ದು ಈ ಮೃದುಕಂಬಳಿಯ ಪಾಡನ್ನು, ನನ್ನ ಒಡ್ಡ ಪಾದದ್ದನ್ನಲ್ಲ."

"ಒಡ್ಡ ಪಾದವೆ? ಅದು ಯಾವುದು, ನನಗೆ ಗೊತ್ತೇ ಇಲ್ಲವಲ್ಲ, ಅಷ್ಟು ಕಾಲ ಅದರ ಸೇವೆ ಮಾಡಿದ್ದರೂ?"

"ಇನ್ನೂ ಸಾಕಾದಷ್ಟು ಕಾಲ ಸೇವೆಮಾಡಿಲ್ಲ ಹಾಗಾದರೆ! ಇನ್ನಷ್ಟು ಮಾಡೋದಕ್ಕೆ ಈಗ ಬಂದಿದೆ ಆ ಅಪೂರ್ವ ಅವಕಾಶ!" ಕಿಲಕಿಲನೆ ಜಲತರಂಗವಾಗಿ ನಕ್ಕಳು. ಅವನ ಉತ್ತರದ ನಗೆ ತಾಳಹಾಕಿತು.

"ಅಮ್ಮ ಚೆನ್ನಾಗಿದಾಳೆ ತಾನೆ?" ಅವನು ಕುಶಲ ಪ್ರಶ್ನೆಗೆ ತೊಡಗಿದ.

"ಹ್ಞು, ಯಶೋದ ಅತ್ತೆಗೆ ಎಂದಿನಂತೆ ನಿನ್ನದೇ ಕನಸು, ಮಾತು. ನಾವು ಸಂಜೆ ನಿಮ್ಮ ಮನೆ ಜಗಲಿಗೆ ಹೋದರೆ ನಮ್ಮಂತೇ ಅವಳೂ ನಿನ್ನ ಬಾಲಲೀಲೆ ತುಂಟ ತನಗಳನ್ನೇ ಹೇಳುತ್ತಿರುತ್ತಾಳೆ. 'ಈಗ ಅಲ್ಲೇನು ಮಾಡುತ್ತ ಇಪಾನೋ, ಯಾವಾಗ ಬಂದಾನೋ' ಎಂದು ಹಂಬಲಿಸುತ್ತಿರುತ್ತಾಳೆ. ಕತ್ತಲೆ ಆದದ್ದೂ ಗೊತ್ತಾಗೋದಿಲ್ಲ."

"ಅಪ್ಪ ಬಾಯಲ್ಲಿ ಹೇಳಿಕೊಳ್ಳೋನಲ್ಲ, ಆದರೇನು ಒಳಗೆ ಅವನಿಗೆ ಅಮ್ಮನಷ್ಟೇ ಪ್ರೇಮ ವಾತ್ಸಲ್ಯ ತುಂಬಿವೆ. ಅವನು ಕ್ಷೇಮವೆ?"

"ಸದ್ಯ ಚೆನ್ನಾಗಿದಾರೆ. ಆದರೆ ನೀನು ಬಂದುಬಿಟ್ಟಮೇಲೆ ಏನೆಂದರೂ ನಂದ ಮಾವ ಕೊಂಚ ಪೆಚ್ಚೇ. ಅಂಥೋರಂತೂ ಬಹಳ ವಿರಳ. ಅವರು ಆಡದಿದ್ದರೂ ನಮ್ಮ ಒಂದು ಮಾತನ್ನೂ ಕೇಳಲು ತಪ್ಪಿಸಿಕೊಳ್ಳೋದಿಲ್ಲ."

"ನಿಮ್ಮ ಮನೇಲಿ?"

"ಎಲ್ಲ ಯಥಾಸ್ಥಿತಿ. ನಾನು ಅನ್ಯಮನಸ್ಕಳಾಗಿರುತ್ತೇನೆಂದೇ ನಮ್ಮನವ್ರಲ್ಲಿ ಎಂದಿನ ಮಾತೇನೋ ಇನ್ನೂ ಇದ್ದೇ ಇರುತ್ತದೆ ಅನ್ನು."

"ನಿನ್ನವರೆಲ್ಲ ಎಷ್ಟು ಒಳ್ಳೆಯೋರು! ಇನ್ನೊಬ್ಬರು ಇನ್ನೊಬ್ಬರಾಗಿದ್ದರೆ ನಾವು ಆಡಿದ ಆಟದಲ್ಲಿ ಏನೇನು ಮಾಡಿಬಿಡುತ್ತಿದ್ದರೋ........ಹುಂ, ಆ ವಿದೂಷಕ, ನನ್ನ ಕೌಪೀನ ಸ್ನೇಹಿತ ವಿನೋದನೋ?"

"ಅವನೊಡನೆ ತುಂಟಾಟ, ಕೀಟಲೆಯ ಸೆಣಸಾಟಕ್ಕೆ ನಿನ್ನ ಚುರುಕು ಇಲ್ಲದೆ ಒಂದುಕೈಚಪ್ಪಾಳೆಯಾಗಿದೆ. ಸಪ್ಪೆ. ನೀನೇ ಊಹಿಸು ಅವನ ಪಾಡನ್ನು, ನಾವು ಎಷ್ಟೆಷ್ಟೋ ಅವನಿಗೆ ಉತ್ಸಾಹ ತುಂಬೋ ಹಾಗೆ ಮಾಡುತ್ತ ಇರುತ್ತೇವೆ. ಆದರೂ ಒಮ್ಮೊಮ್ಮೆ ದಾರಿ ತಪ್ಪಿದ ಆತ್ಮದ ಹಾಗೆ ಒಬ್ಬನೇ ವನದಲ್ಲಿ, ಯಮುನಾ ತೀರದಲ್ಲಿ ಅಲೆಯುತ್ತ ಇರುತ್ತಾನೆ. ನಾನು ಆಗಾಗ ಹಾಗೇ ನಾನು ನೀನು ಬೆರೆದಿರುತ್ತಿದ್ದ ಸ್ಥಳ ಗಳಿಗೆ ಹೋಗುವಾಗ ಸಿಕ್ಕುತ್ತಲೇ ಇರುತ್ತಾನೆ, ಪಾಪ!"

"ಪಾಪ!........ಆ ಆರ್ಭಟದ ವೀರಮಲ್ಲ! ನಾನಿಲ್ಲದೆ ಅವನ ಮೈಯಿನ ತೀಟೆಯನ್ನು ತೀರಿಸುವರು ಯಾರು?"

"ಇನ್ನು ಯಾರು? ಆ ಗಜಗೌರಿಯನ್ನು ಮದುವೆಯಾಗಿದ್ದಾನೆ, ಪೆತ್ತಗಾಗಿ ಹೋಗಿದಾನೆ ಮೂಲೆಗೆ ಬಿದ್ದು. ಗೌರಿ ಅಬ್ಬರಿಸದಿದ್ದರೆ ಸದ್ಯ ಸಾಕು ಎಂದು ತಪಸ್ಸು ಮಾಡುತ್ತ ಇರುತ್ತಾನೆ ಯಾವಾಗಲೂ."

"ಹ್ದು! ಅವನಿಗೆ ಸರಿಯಾದ ಶಿಕ್ಷೆಯಾಯ್ತು. ನನಗೆ ಈಗ ಆಗಿರುವಂತೇ! ಏನೆಂದು ನೋಡುತ್ತಿರು, ನಿಂಗೇ ಗೊತ್ತಾಗುತ್ತೆ ಸದ್ಯದಲ್ಲೇ."

"ಆಹಾ!........ಅಯ್ಯೋ ಕೃಷ್ಣಾ! ನನ್ನಿಂದ ತಪ್ಪಿಸಿಕೊಂಡು ದರಿ ಬಿಟ್ಟು ಹುಲಿಗೆ ಸಿಕ್ಕಿದೆಯಾ? ಛಿ ಛಿ!"

"ನನ್ನ ಮಾತಿರಲಿ. ಇತರ ಗೆಳೆಯ ಗೆಳತಿಯರದ್ದು ಹೇಳು. ನಿನ್ನ ಹಿಂದೇ ಇರುತ್ತಿದ್ದ ಗೋಪ, ನನ್ನೊಡನೆ ಸರಸವಾಡಿದಳೆಂದು ನೀನು ಕೇಶಾಕೇಶಿ ನಡೆಸಿದ್ದೆಯಲ್ಲ ಆ ಲಕ್ಷ್ಮಿ........"

"ಅವರಿಬ್ಬರಿಗೂ ಮದುವೆಯಾಯಿತು ಮೊನ್ನೆ ಮೊನ್ನೆ."

"ಓ ಸರಿಯಾಯ್ತು. ಆ ರಾಸಕ್ರೀಡೆಯಲ್ಲಿ ನಿನಗೆ ಎಡಗೈಯಾದ ಮಂದಾಕಿನಿ?"

"ಅವಳು ಸನ್ಯಾಸಿನಿಯಾಗಿಯೇ ಇರುತ್ತಾಳಂತೆ—ಮದುವೆಯಾಗುವವರೆಗೆ! ನಿನ್ನ ಹಿಂದೆ ಬಿದ್ದು ಗಂಡು ಲೋಕವನ್ನೇ ಅಲ್ಲಗಳೆಯುತ್ತಿದ್ದ ಅನೇಕ ಗೆಳತಿಯರಲ್ಲಿ ಅವಳೊಬ್ಬಳು—ಮೂರ್ಖಳು!"

"ಪಾಪ ಪಾಪ! ಇನ್ನೂ ಎಷ್ಟೊಂದು ಪ್ರಿಯರಿದ್ದಾರೆ ವಿಚಾರಿಸುತ್ತಹೋದರೆ! ಕೊನೆಯೇ ಇಲ್ಲವೇನೋ. ನಿಧಾನವಾಗಿ ಕೇಳಬೇಕು ಎಲ್ಲರ ವಿಷಯವನ್ನೂ, ವಿವರ ವಿವರವಾಗಿ........ಹ್ದಾ, ನಿನ್ನ ನಂದಿನಿ ಹೇಗಿದೆ?"

"ಈಗ ಬಿಡಿಸಿಕೊಳ್ಳುವುದರಲ್ಲಿದೆ."

"ಪಾರ್ವತಿಯ ಬಿಳಿ ಮುದ್ದು ಕರು? ನಾನೆಲ್ಲಿ ಹೋದರಲ್ಲಿ ಬರುತ್ತಿತ್ತಲ್ಲ, ಅದು?"

"ತುಂಬಿದ ಕಡಸು. ಎರಡು ವಾರದಲ್ಲಿ ಈಯಬಹುದು."

"ನಮ್ಮ ನಂದಿ ಗೂಳಿಯಾಗಿರಬೇಕು."

"ಹುಂ, ಸಣ್ಣ ಆನೆಯ ಹಾಗಿದೆ."

"ನನ್ನ ಭೈರವ?"

"ಸತ್ತುಹೋಯಿತು."

"ಆ! ಸತ್ತುಹೋಯಿತೆ—ನನ್ನ ಮಂದೆಯ ನಾಯಿ ಸತ್ತಿತೆ?"

"ಹುಂ, ಆರೇಳು ತಿಂಗಳಾಯಿತು."

"ಅಯ್ಯೋ! ಛೆ ಛೆ!" ಉಪ್ಪರಿಗೆಯ ಮೇಲು ಮೆಟ್ಟಿಲಿನಲ್ಲಿ ಕೃಷ್ಣ ಕ್ಷಣ ಕಾಲ ನಿಂತುಬಿಟ್ಟ.

" ನನ್ನ ಕಾಳಿ ನೋಡಿದ್ದೆಯಲ್ಲ."

" ಹುಂ."

" ಅದರ ಮರಿಗಳಲ್ಲಿ ಒಂದು ನಿನ್ನ ಭೈರವನಂತೇ ಇದೆ–ಅದೇ ಮೈಕಪ್ಪು, ಹಣೆಯಲ್ಲಿ ಬಿಳಿಯ ನಾಮ, ಬಿಳಿಯ ಕತ್ತುಪಟ್ಟಿ, ಬಾಲದ ತುದಿ, ಕಾಲುಗಳ ಕೊನೆ, ಎಲ್ಲ ಹಾಗೇ."

" ಹಾಗೇ?........ವಂಶ ಉಳಿದ ಹಾಗಾಯ್ತು. ಚಿಕ್ಕ ಭೈರವ ಅನ್ನು........ ಹುಂ ಆ ಮಾವಿನ ಮರ–ಯಮುನಾ ತೀರದಲ್ಲಿ........"

" ನೀನು ವಸ್ತ್ರಾಪಹರಣಮಾಡಿ ಮೇಲೆ ಕುಳಿತಿದ್ದದ್ದು ? "

" ಹುಂ ಹುಂ! ಅದೇ. ನಾವು ಸೇರಿ ಅದರ ಕೆಳಗೆ ಆನಂದವಾಗಿ ಅದೆಷ್ಟು ಕಾಲವನ್ನೋ ಕಳೆಯುತ್ತಿದ್ದೆವಲ್ಲ, ಹಾಡುತ್ತಿದ್ದೆವಲ್ಲ; ನನ್ನ ಹೆಸರನ್ನು ನೀನೂ ನಿನ್ನ ಹೆಸರನ್ನು ನಾನೂ ಅಲ್ಲಿ ಕೆತ್ತಿದ್ದೆವಲ್ಲ; ನಾವು ಮನಸಾರೆ ತಿಂದ ಅದರ ಹಣ್ಣು ಎಷ್ಟು ರುಚಿ !........"

" ಈಗ ಅದರಲ್ಲಿ ಫಲ ಕಡಿಮೆಯಾಗಿ ಹೋಗಿದೆ."

" ಹಾಗೇ? " ಅವನು ಖಿನ್ನನಾದ ಮತ್ತೊಮ್ಮೆ.

" ಬಿಡು ಕೃಷ್ಣ, ನನ್ನ ಅಂಗಳದಲ್ಲಿ ನೀನು ಹುಟ್ಟುಹಾಕಿ ನಾನು ನೀರೆರೆದು ಬೆಳೆಸಿದ ಅದೇ ಮಾವಿನ ಸಸಿ ಹೆಮ್ಮರವಾಗಿದೆ, ಹೂ ಕಚ್ಚುತ್ತದೆ, ಹಣ್ಣೂ ಸುರಿಯುತ್ತದೆ. ಅದರ ಕೆಳಗೆ ಪೀಠ ಹಾಕಿಸಿದ್ದೇನೆ. ಮತ್ತೆ ನೀನು ಬಂದಾಗ ಕುಳಿತುಕೊಳ್ಳೋದಕ್ಕೆ ಅಂತ."

" ಬರುತ್ತೇನೆ ಬರುತ್ತೇನೆ, ಬೇಗಲೇ ಬೇಗಲೇ."

" ಓ ಎಷ್ಟು ಚೆನ್ನ ! "

" ಯಮುನೆಯ ವಿಚಾರ ಕೇಳಲೇ ಇಲ್ಲ."

" ಈ ಸಾರಿ ದಡದ ಊರುಗಳಿಗೆಲ್ಲ ನುಗ್ಗಿದ್ದಳು—ನೀನು ಇಲ್ಲವಲ್ಲ, ಎಲ್ಲಿ ಹೋದೆ ಎಂದು ಹುಡುಕುವುದಕ್ಕೇನೋ."

" ಆಹಾ !........ನೀನು ಚತುರೆಯಲ್ಲವೆ ರಾಧ ! "

" ಅವಳ ಸೆರಗಿನ ಮೇಲೆ ರಾಸಕ್ರೀಡೆಗೆ ಈಗ ನಿನ್ನಂಥ ನಾಯಕನೆಲ್ಲಿ? ಜಲ ಕ್ರೀಡೆಯಂತೂ ಆ ದಿನಗಳಿಗೇ ಆಯಿತು."

೨

ಈಗ ಅವರು ಭಾಮಾ ಭವನದ ಬಾಗಿಲನ್ನು ಪ್ರವೇಶಿಸುತ್ತಿದ್ದರು. ಭಾಮಾ ಭವನದ ವೈಭವಕ್ಕೆ ರಾಧೆ ಬೆರಗಾಗಿ ಸುತ್ತಲೂ ದೃಷ್ಟಿಹಾಯಿಸುತ್ತಿದ್ದಳು. ಮಯೂರ ತೂಲಿಕಾತಲ್ಪದ ಮೇಲೆ ಪಗಡೆಯಾಟ ಇನ್ನೂ ಹಾಸಿಯೇ ಇತ್ತು. ಬಾಗಿಲ ಕಡೆಗೆ ತಿರುಗಿ ಕುಳಿತಿದ್ದ ಸತ್ಯಭಾಮೆ ತಟ್ಟನೆ ಕಂಡೂ ಕಾಣದಂತೆ ಬೇರೆಯ ಕಡೆಗೆ ತಿರುಗಿ

ಕೊಂಡಾಗ ಕೃಷ್ಣ ಕಂಡು ನಸು ನಕ್ಕು ಅವಳ ಮುಂದೆಯೇ ರಾಧೆಯನ್ನು ಕರೆತಂದು ನಿಂತ.

ರಾಧೆ ಸತ್ಯಭಾಮೆಯನ್ನು ಪರೀಕ್ಷೆಯ ದೃಷ್ಟಿಯಿಂದ ನೋಡುತ್ತ ಮತ್ತಷ್ಟು ಬೆರಗಾದಳು.

"ಪ್ರಿಯೆ ಭಾಮಾ, ಇವಳು ರಾಧಿಕಾ" ಕೃಷ್ಣ ಪರಿಚಯವಾಗಿ ಹೇಳಿದ.

"ಆರ್ಯಪುತ್ರ, ನೀನೇಕೆ ಅಷ್ಟಕ್ಕೇ ಆಟ ಬಿಟ್ಟುಹೋದೆ?" ಹಟಮಾಡುವ ಮಗುವಿನಂತೆ ಕೇಳಿದಳು—ಅವನ ಮಾತನ್ನಾಗಲೀ ರಾಧೆಯನ್ನಾಗಲೀ ಲಕ್ಷ್ಯಕ್ಕೇ ತಂದುಕೊಳ್ಳದೆ.

"ಹೋಗಲಿ ಬಿಡು ಭಾಮಾ ಆ ಮಾತು, ನೀನೇ ಗೆದ್ದೆ, ಸರಿಯೇ? ಇವಳು ನನ್ನ ಗೆಳತಿ........"

"ಉಹುಂ, ಆ ಗೆಲವು ಗೆಲವೇ ಅಲ್ಲ. ನನ್ನನ್ನು ಬೇಕಾಗಿಯೇ ವಂಚಿಸಿದ್ದೀಯೆ, ಗೆಲ್ಲುತ್ತಾಳಲ್ಲ ಎಂದುಕೊಂಡೇ ಹೊಟ್ಟೆಯುರಿಯಿಂದ. ನೀನು ಶುದ್ಧ ವಂಚಕ!"

"ಹಾಗೂ ಆಗಲಿ ಪ್ರಿಯೆ, ಒಪ್ಪಿಕೊಂಡೆ. ಅಪರಾಧವನ್ನು ಕ್ಷಮಿಸಿಬಿಡು" ಅವಳ ಗಲ್ಲ ಹಿಡಿದು ಹೇಳಿದ. "ಇವಳು ನಮ್ಮೂರು ದೂರದ ಗೋಕುಲದಿಂದ ಬಂದಿದಾಳೆ, ನನ್ನನ್ನು—ನಮ್ಮನ್ನು—ನೋಡಲೆಂದೇ."

"ಉಹುಂ ಉಹುಂ, ನಿನ್ನನ್ನು ಎಂದೆಂದಿಗೂ ಕ್ಷಮಿಸುವುದಿಲ್ಲ. ಖಂಡಿತವಾಗಿ ನನ್ನಾಣೆಯಾಗಿ! ನನಗೆ ಅವಮಾನಮಾಡಬೇಕೆಂದೇ ಹಾಗೆ ಅವಸರವಾಗಿ ನನ್ನ ಮೇಲೆ ಅಲಕ್ಷ್ಯತೋರಿಸಿ ಹೊರಟುಹೋದೆ."

"ಇಲ್ಲ ಇಲ್ಲ ಖಂಡಿತವಾಗಿಯೂ. ನನ್ನಾಣೆಯಾಗಿಯೂ! ಅದನ್ನು ಮರೆತು ಬಿಡು ಮತ್ತೆ........ಇವಳು ನನ್ನ ಪ್ರಾಣ—ಗೆಳತಿ."

"ಏನು, ಏನೂ!"

"ಗೋಕುಲದಲ್ಲಿ ನಾವು ಒಟ್ಟಿಗೆ ಆಡುತ್ತಿದ್ದೆವು."

"ಗೊತ್ತು........ಗೊತ್ತು" ಭಾಮ ರಾಧೆಯನ್ನು ಆಪಾದಮಸ್ತಕ ನೋಡಿದಳು—ತಿಂದುಕೊಳ್ಳುವಂತೆ. "ಗೋಕುಲದ ಗೊಲ್ಲರವಳಲ್ಲವೆ?"

ರಾಧೆಯ ಹುಬ್ಬುಗಳು ಸ್ವಲ್ಪ ಹತ್ತಿರವಾದವು, ಕಣ್ಣಿನಿಂದ ಕಿಡಿ ಸಿಡಿದು ಕೂಡಲೇ ಮಂಕಾಯಿತು. ಮುಖಮುದ್ರೆ ಹರ್ಷವನ್ನು ಕಳೆದುಕೊಂಡು ಪೆಚ್ಚಾಯಿತು.

"ಭಾಮೆಯ ಹಾಸ್ಯವೇ ಹಾಗೆ, ತಪ್ಪು ತಿಳಿಯಬೇಡ ರಾಧ."

"ತಪ್ಪೇನಿದೆ ಅದರಲ್ಲಿ ಕೃಷ್ಣ, ನಾನು ಗೊಲ್ಲರವಳೇ ಅಲ್ಲವೆ? ಇನ್ನೇನು ರಾಜಕುಮಾರಿಯೆ? ರಾಣಿಯೆ?"

"ಭಾಮಾ, ನಾನಾದರೂ ಗೊಲ್ಲನೇ! ನೀನೂ ಗೊಲ್ಲನ ಹೆಂಡತಿಯೇ—ರಾಣಿಯೇ, ಹ್ಹ!" ಕೃಷ್ಣ ಗಹಿಗಹಿಸಿದ.

ರಾಧೆಯೂ ತಡೆಯಲಾರದೆ ನಸು ನಕ್ಕಳು. ಭಾಮೆ ಸುಮ್ಮನಿದ್ದಳು—ಬಿಗಿಯಾಗಿ.

"ರಾಧಿಕಾ, ಇವಳು ನನ್ನ ಮುದ್ದಿನ ಮಡದಿ, ಸತ್ಯಭಾಮಾದೇವಿ, ಔಪಚಾರಿಕವಾಗಿ ಪರಿಚಯಮಾಡಿಕೊಡಬೇಕಾದರೆ."

"ಕೇಳಿದ್ದೆ, ಈಗ ನೋಡಿದಂತಾಯಿತು. ಕೃಷ್ಣ, ನೀನು ಬಹಳ ಪುಣ್ಯವಂತ!"

"ಭಾಮಾ, ರಾಧಿಕಾ ಇಲ್ಲೇ ಇರುತ್ತಾಳೆ."

"ಆ!"

"ಅಂದರೆ ಸುಭದ್ರಾಭವನದಲ್ಲಿ ಅನ್ನು, ಅದೀಗ ತೆರವಾಗಿದೆಯಲ್ಲ."

"ಸಾರಿಕಾ!" ಭಾಮೆ ಚೇಟಿಯನ್ನು ಕರೆದಳು. "ಇವರು ಸುಭದ್ರಾಭವನಕ್ಕೆ ಹೋಗುತ್ತಾರೆ. ಕರೆದುಕೊಂಡು ಹೋಗು—ನೋಡಿಕೊ! ತಕ್ಕಂತೆ ಉಪಚರಿಸು."

ಕೃಷ್ಣ ಬಾಯಿನ ಮೇಲೆ ಮುಂಗೈಯಿಟ್ಟು ನಗುವನ್ನು ತಡೆದುಕೊಳ್ಳುತ್ತ ರಾಧೆಯನ್ನೂ ಎಳೆದುಕೊಂಡು ಹೊರಬಿದ್ದ. ಸಾರಿಕಾ ಆಗಲೇ ಬಹಳ ದೂರ ಮುಂದೆ ಹೋಗಿದ್ದಳು.

"ಗಿರಿಧಾರಿ ಕೃಷ್ಣ, ಗೋಕುಲದಲ್ಲಾಗಿದ್ದರೆ ನಿನ್ನ ಭಾಮೆಯ ಮುಖವನ್ನು ಪರಚಿಹಾಕಿಬಿಡುತ್ತಿದ್ದೆ—ನಿನ್ನ ಬಳಿಗೆ ಬಂದ ಸುಂದರ ಗೋಪಿಯರಿಗೆ ಮಾಡುತ್ತಿದ್ದೆನಲ್ಲ, ಹಾಗೇ."

"ಯಾಕೆ, ಇವಳೂ ಅಷ್ಟೊಂದು ಸೌಂದರ್ಯವತಿಯೆಂದೇ? ಗರ್ವಿಷ್ಠಳು ಕೋಪಿಷ್ಠಳೆಂದೋ?"

"ಅಷ್ಟೊ. ಕೃಷ್ಣ, ನಿನ್ನ ಸಹಜದೌರ್ಬಲ್ಯಕ್ಕೆ ಸರಿಯಾಗಿ ಇವಳ ಸೌಂದರ್ಯಕ್ಕೆ ಸೋತು, ಕೋಪತಾಪಕ್ಕೆ ಹೆದರಿ, ಹೆಚ್ಚಿಸಿ ಅತಿ ಸಲಿಗೆ ಕೊಟ್ಟುಬಿಟ್ಟಿದ್ದೀಯೆ—ಮದುವೆಯಾದ ಹೆಂಡತಿಯೆಂದುಕೊಂಡರೂ ಕೂಡ. ಬಡಪಾಯಿ ಕೃಷ್ಣ!"

"ಪ್ರಿಯೆ ರಾಧಿಕಾ, ನನ್ನ ಪಾಡು ಮೊದಲಿನಿಂದಲೂ ಹೀಗೇ ಆಯಿತಲ್ಲವೆ? ಮೊದಲು ನೀನು, ಈಗ ಇವಳು! ನೀನು ಅವಳಿಗೆ ಯಾವುದರಲ್ಲಿ ತಾನೆ ಕಡಿಮೆ ಹೇಳು? ಸೌಂದರ್ಯವೆ, ಕೋಪತಾಪವೇ?........"

"ಪಾಪ ಪಾಪ!"

"ಈಗಲೇ ನೋಡು ನೀನು ಅಂದದ್ದು, ಆ ಮುಖ ಪರಚುವ ಪ್ರಕರಣ!"

ರಾಧೆ ಗಟ್ಟಿಯಾಗಿಯೇ ನಕ್ಕಳು. "ಸಾಕು ಸಾಕು!"

"ಹೆಣ್ಣು ಹಾಗಿದ್ದರೂ ಚೆನ್ನವೇ, ನನ್ನ ರಾಧೆ!"

"ನಂಗೇನು ಗೊತ್ತು ಕೃಷ್ಣ, ಅದು? ನೀನು ,ರಸಿಕಶಿಖಾಮಣಿ."

"ಭಾಮೆ, ಬೇಕಾದರೆ ಹೇಗಿರಬಲ್ಲಳು ಅಂದುಕೊಂಡೆ!"

"ಆಹಾ! ಹೇಗೆ? ಹೇಗೆ? ಹೇಳು."

"ನಿನ್ನಂತೆಯೇ!"

"ಕಳ್ಳ!........ವಂಚಕನೆಂದರೆ ನೀನೇ! ಭಾಮೆ ಅಂದದ್ದು ಸರಿಯೇ ಸರಿ! ಅಂಥವನೆ!"

" ನೀನೂ ಅವಳಂಥವಳೇ ಎಂಬಾಯಿತೋ ಇಲ್ಲವೋ ಈಗ, ಅವಳಂತೆಯೇ ಅಂದ ಮೇಲೆ? ನಾನು ಅಂದದ್ದು ಸರಿಯಾಯಿತು " ಇಬ್ಬರೂ ನಗುತ್ತ ಮುಂದುವರಿದರು.

" ಬಾ, ರುಕ್ಮಿಣಿಯ ಅಂತಃಪುರಕ್ಕೆ ಹೋಗೋಣ " ಕೃಷ್ಣ ಮೊಗಸಾಲೆಯಲ್ಲಿ ತಿರುಗಿದ.

" ಸಾರಿಕಾ ಅತ್ತಹೋದಳಲ್ಲ ಮತ್ತೆ—ಸುಭದ್ರಾಭವನಕ್ಕೇನೋ."

" ಹೋದರೆ ಹೋಗಲಿ. ಕೇಳಿ ಭಾಮೆಗೆ ಮತ್ತಷ್ಟುಕೋಪ ಬರುತ್ತದೆ ಅಷ್ಟೆ. ಹೆಚ್ಚೇನಾಗುತ್ತದೆ ಹೇಳು? ರಾತ್ರಿಯಲ್ಲಿ ದಾರಿಗೆ ತಂದರಾಯಿತು."

" ಎಲ ಎಲಾ ! "

ರುಕ್ಮಿಣೀದೇವಿ ಬಾಗಿಲಲ್ಲೇ ನಿಂತಿದ್ದಳು, ಇವರನ್ನು ನಿರೀಕ್ಷಿಸುತ್ತ. ಇನ್ನೊಂದು ವಿಧದ ಈ ಸೌಂದರ್ಯರಾಶಿ ರಾಧೆಯ ಕಣ್ಮನಗಳನ್ನು, ಸೆಳೆಯಿತು, ಅಲ್ಲೇ ಇಟ್ಟು ಕೊಂಡಿತು ಕೂಡ.

" ಆರ್ಯಪುತ್ರನಿಗೆ ಜಯವಾಗಲಿ !........"

" ಇವಳು........ " ಕೃಷ್ಣ ಮೊದಲುಮಾಡಿದ.

" ನನಗೆ ಗೊತ್ತಿಲ್ಲವೇ ? ಎಲ್ಲವೂ ತಿಳಿದುಬಂದಿದೆ ಆಗಲೇ. ಬಾ ಅಕ್ಕ " ರಾಧೆಯನ್ನು ಬಾಚಿ ತಬ್ಬಿಕೊಂಡು ಒಳಗಡೆಗೆ ಕರೆದುಕೊಂಡು ಹೋದಳು. " ಆರ್ಯ ಪುತ್ರನಿಂದ ನಿನ್ನ ವಿಚಾರವನ್ನು ಎಷ್ಟೊಂದು ಕೇಳಿದ್ದೆನೋ—ನಿನ್ನ ಪೂರ್ಣಪರಿಚಯ ಆದಂತೆಯೇ, ಆಗಿಯೇ, ಇದೆ. ನನ್ನ ಹೃದಯೇಶ್ವರನ ಹೃದಯವನ್ನೇ ಕದ್ದು ಸೂರೆ ಗೊಂಡವಳಲ್ಲವೇ ನೀನು. ನನ್ನ ಪ್ರಿಯತಮನಿಗೆ ಅಷ್ಟೊಂದು ಪ್ರಿಯವಾದವಳು ನನಗೂ ಅಷ್ಟೇ ಪ್ರಿಯಳು........ನಿನ್ನ ಚೆಲುವಿನ ಬಗ್ಗೆ ಕೇಳಿದ್ದುದರಲ್ಲಿ ಕೊಂಚವೂ ಉತ್ಪ್ರೇಕ್ಷೆಯಿಲ್ಲ " ಎಂದು ಮತ್ತೆ ಮತ್ತೆ ಅವಳನ್ನು ನೋಡಿ ಆನಂದಿಸಿದಳು.

" ದೇವಿ, ನಿನ್ನನ್ನು ನೋಡಿರದಿದ್ದರೆ ನಿನ್ನಂಥವಳು ಒಬ್ಬಳಿರುತ್ತಾಳೆಂದೇ ನಂಬು ತ್ತಿರಲಿಲ್ಲ ನಾನು." ರಾಧೆಯ ಹರ್ಷ ಹೊನಲಾಯಿತು. " ನನ್ನ ಕೃಷ್ಣ ಎಷ್ಟು ಪುಣ್ಯವಂತ ಎಂದು ಮತ್ತೊಮ್ಮೆ ಹೇಳಬೇಕು—ಭಾಮಾದೇವಿಯನ್ನು ಕಂಡಾಗ ಹೇಳಿ ದಂತೆ ! " ಎಂದಾಗ ರಾಧಾಕೃಷ್ಣರು ಜೋರಾಗಿ ನಕ್ಕರು. ರುಕ್ಮಿಣಿಯೂ ಅರ್ಥ ಮಾಡಿಕೊಂಡು ಅವರೊಡನೆ ಸೇರಿಕೊಂಡಳು.

" ಉಸ್ಸಪ್ಪ ! ಸದ್ಯ, ಹಾಯೆನಿಸುತ್ತದೆ, ಈಗ " ಕೃಷ್ಣ ಗಂಟನ್ನಿಳಿಸಿ ರುಕ್ಮಿಣಿಯ ಹಂಸತೂಲಿಕಾತಲ್ಪದ ಮೇಲೆ ಒರಗಿ ಕುಳಿತು ಕಾಲುಚಾಚಿದ.

ಅವನ ಪಕ್ಕದಲ್ಲಿ ಈ ಸೋದರಿಯರು ಕುಳಿತರು. ಕುಶಲಪ್ರಶ್ನೆಗಳಾದವು. ದ್ವಾರಕೆಯ ಮಾತು, ಗೋಕುಲದ ಮಾತು ವಿನಿಮಯವಾಗುತ್ತಿದ್ದವು. ಅವರ ಕತೆ ಗಳಿಗೆ ಬಹಳವಾಗಿ ಕೃಷ್ಣನೇ ನಾಯಕ—ಕಥಾನಕದಲ್ಲಿ ಭಾಗವಹಿಸುತ್ತಿದ್ದ ನಾಯಕ. ರಾಧೆಯ ಕೈಕಾಲಿಗೆಂದು ನೀರು ಬಂದಿತು. ಉಪಾಹಾರ ಉಪಚಾರಗಳಾದವು. ಪರಿಚಾರಿಕೆಯರು ಚಾಮರ ಹಾಕುತ್ತಿದ್ದಾಗ ರಾಧೆಗೆ ಬಹಳ ಮೋಜೆನಿಸಿತು. ಹೊತ್ತು

ಕಳೆಯುತ್ತಿದ್ದುದೇ ತಿಳಿಯುತ್ತಿರಲಿಲ್ಲ. ಕಡೆಗೆ ಕೃಷ್ಣ ಆಕಳಿಸಿ ತೂಕಡಿಸಿ ಇಬ್ಬರಿಂದಲೂ ಬೈಯಿಸಿಕೊಂಡಮೇಲೆ ರಾಧಾಕೃಷ್ಣರು ರುಕ್ಮಿಣಿಯನ್ನು ಬೀಳ್ಕೊಳ್ಳಲು ಎದ್ದರು.

"ಆರ್ಯಪುತ್ರ, ನಿನ್ನ ಆಕ್ಷೇಪಣೆಯಿಲ್ಲದಿದ್ದರೆ ರಾಧಾ ಅಕ್ಕ ಕೆಲವು ದಿನ ಈ ಅಂತಃಪುರದಲ್ಲೇ ಇರಬಹುದಲ್ಲವೆ?"

"ಅದೇ ನನ್ನ ಅಪೇಕ್ಷೆಯೂ. ಭಾಮೆಗೆ ಹೇಳಿದೆ, ಒಪ್ಪಿಕೊಂಡಂತೆ ಕಾಣಲಿಲ್ಲ!" ಮೂವರೂ ಮತ್ತೆ ನಕ್ಕರು.

"ರಾಧಿಕಾ ಅಕ್ಕ, ಆ ನನ್ನ ತಂಗಿ ಯಾವಾಗಲೂ ಒಂದೇ ರೀತಿ ಇರುವುದಿಲ್ಲ. ಅದಷ್ಟೇ ನಮ್ಮಿಬ್ಬರಿಗೂ ಇರುವ ವ್ಯತ್ಯಾಸ ಅನ್ನು. ಶಾಂತವಾಗಿದ್ದಾಗ, ಸಂತೋಷದಿಂದಿದ್ದಾಗ ಅವಳಿಗೆ ಯಾರೂ ಸಮರಲ್ಲ—ನಾನೂ ಕೂಡ. ನಾಳೆಯೇ ನಿನ್ನನ್ನು ಬಲವಂತದಿಂದ ಎಳೆದೊಯ್ದರೂ ಆಶ್ಚರ್ಯವಿಲ್ಲ. ನಮ್ಮ ಮಧ್ಯೆ ಎಂಥೆಂಥದೋ ಪ್ರಕರಣಗಳು ನಡೆಯುತ್ತಲೇ ಇರುತ್ತವೆ. ಅವಳ ಅಸಮಾಧಾನವನ್ನು ನೀನು ಮನಸ್ಸಿಗೆ ತಂದುಕೊಳ್ಳಬಾರದು."

"ಅದೇನು ಅಸಹಜವಲ್ಲ ದೇವಿ. ಕೃಷ್ಣನ ವಿಷಯವೆಂದರೆ ನಾನೇ ಹೇಗೆ ಹೇಗೋ ಆಡುತ್ತೇನೆಂದರೆ, ಕೈಹಿಡಿದ ಮಡದಿ ಪ್ರೇಮದಿಂದ ಮುನಿಯುವುದು ಹೆಚ್ಚೆ? ಅದಿರಲಿ. ಕೃಷ್ಣ, ಭಾಮಾದೇವಿ ತೀರ್ಮಾನಿಸಿದಂತೆ ನಾನು ತೆರವಾದ ಸುಭದ್ರಾ ಭವನದಲ್ಲೇ ಇರುತ್ತೇನೆ—ನಾನು ಒಪ್ಪಲಿಲ್ಲವೆಂದು ರುಕ್ಮಿಣೀದೇವಿ ಬೇಸರಿಸದಿದ್ದರೆ."

ರುಕ್ಮಿಣಿ ಸ್ವಲ್ಪ ಅನುಮಾನಿಸಿ ಸಮ್ಮತಿಸಿದಳು. ರಾಧೆಯ ಗಂಟನ್ನು ಅಲ್ಲಿಗೆ ಕಳುಹಿಸಿದ್ದಾಯಿತು.

ರಾಧಾಕೃಷ್ಣರು ಬಲರಾಮನ ಬಳಿಗೆ ಹೋಗುತ್ತಿರುವಾಗ ರಾಧೆ "ಕೃಷ್ಣ, ನೀನು ಭಾಮಾವಲ್ಲಭನಿರಬಹುದು, ಆದರೆ ರುಕ್ಮಿಣೀಲೋಲನಾಗಿರುವುದು ಯೋಗ್ಯವೇ ಆಗಿದೆ. ಆಹಾ, ಜಗತ್ತಿನ ಹೆಂಗಸರೆಲ್ಲರೂ ರುಕ್ಮಿಣೀದೇವಿಯಂತಾದರೆ!" ಎನ್ನುತ್ತ ಕೊಂಚ ತಡೆದು ಯೋಚಿಸುತ್ತ "ಗೋಪಾಲ, ಒಂದು ವೇಳೆ, ಒಂದು ವೇಳೆ, ನಾನು ನಿನ್ನನ್ನು ಇನ್ನು ಯಾರಿಗಾದರೂ ಬಿಟ್ಟುಗಿಟ್ಟುಕೊಟ್ಟರೆ, ಹುಂ, ಅದು ರುಕ್ಮಿಣೀದೇವಿಗೇ, ಅವಳೊಬ್ಬಳಿಗೇ" ಎಂದು ಹೇಳಿದಳು.

"ಬಿಟ್ಟುಕೊಟ್ಟರೆಗಿಟ್ಟರೆ ತಾನೇ!" ಎಂದು ಅವನು ನಕ್ಕ.

ಶ್ರೀಮನ್ಮಹಾರಾಜ ಬಲರಾಮದೇವ ರಾಧೆಗೆ ಮಂತ್ರಾಲೋಚನಾ ಮಂದಿರದಲ್ಲಿ ರಾಜಪರಿವಾರದ ಮಧ್ಯೆ ಸಂದರ್ಶನವನ್ನು ನೀಡಿ ಸ್ವಾಗತವಿತ್ತು ಆದರಿಸಿದನಾದರೂ ರಾಜಗಾಂಭೀರ್ಯದ ಬಿಗಿಯನ್ನು ಬಿಡದೆ "ರಾಧಾದೇವಿ, ಗೋಕುಲದಲ್ಲಿ ಎಲ್ಲರೂ ಕುಶಲವೆ? ಇಲ್ಲಿ ರಾಜಭವನದಲ್ಲಿ ಉಪಚಾರಕ್ಕೆ ಎಲ್ಲ ಏರ್ಪಾಡುಗಳೂ ತೃಪ್ತಿಕರವಾಗಿ ಆಗಿವೆಯೆ........" ಎಂದು ಮುಂತಾಗಿ ವಿಚಾರಿಸಲು ಮೊದಲುಮಾಡಿದಾಗಿನಿಂದಲೇ ರಾಧೆ ಮುಳ್ಳಿನ ಮೇಲಿದ್ದಂತೆ ಚಡಪಡಿಸುತ್ತಿದ್ದಳು. ಅವನ ಪ್ರಶ್ನೆಗಳಿಗೆ 'ಹುಂ, ಉಹುಂ'ಗಳಿಗಿಂತ ಹೆಚ್ಚಾಗಿ ಉತ್ತರಿಸುವುದೇನೆಂದು ಅವಳಿಗೆ ಗೊತ್ತಾಗಲೇ ಇಲ್ಲ.

ಬಾಯಿಕಟ್ಟುತ್ತಿತ್ತು. ಸಮಯವರಿತು ಕೃಷ್ಣ ನಸುನಗುತ್ತ ತಿವಿದು ಕಿವಿಯಲ್ಲಿ 'ತಮ್ಮ ಕೃಪೆ' ಅನ್ನು, 'ಉಪಕಾರವಾಯಿತು' ಅನ್ನು ಎಂದು ಪಿಸಿಗುಟ್ಟುತ್ತಿದ್ದಾಗ ಅವಳು ಗಿಣಿಯಂತೆ ಅದನ್ನೇ ಹೇಳುತ್ತಿದ್ದಳು. ಕಡೆಗೆ ಕೃಷ್ಣ ಅವಳ ಕಷ್ಟವನ್ನು ನೋಡಲಾರದೆ ಕನಿಕರಿಸಿ ಜಾಣ್ಮೆಯಿಂದ ಈ ರಾಜಸಂಭಾಷಣೆಯ ಒಂದು ಘಟ್ಟದಲ್ಲಿ "ಅಣ್ಣಯ್ಯ, ರಾಧೆಯ ಪ್ರಯಾಣದ ದಣಿವು ಇನ್ನೂ ಪರಿಹಾರವಾಗಿಲ್ಲ, ಸ್ನಾನಪಾನಾದಿಗಳು ಇನ್ನೂ ಆಗಬೇಕಾಗಿವೆ, ಅಪ್ಪಣೆಯನ್ನು ದಯಪಾಲಿಸಿದರೆ........" ಎಂದು ಸುಳ್ಳು ಹೇಳಿ ಉತ್ತರಕ್ಕೆ ಕಾಯದೆಯೇ ಅವಳನ್ನು ಮೇಲೆಳೆದು ನಿಲ್ಲಿಸಿ, ಬಲರಾಮನಿಂದ "ಹಾಗೇ ಆಗಬಹುದು" ಎನ್ನಿಸಿಕೊಂಡು, ಅವಸರ ಅವಸರವಾಗಿ ಅವಳನ್ನು ಹೊರಡಿಸಿಕೊಂಡೇ ಬಂದುಬಿಟ್ಟ.

ಬೆನ್ನು ತಿರುಗಿದಾಗ ರಾಧ "ಅಬ್ಬಬ್ಬ ಮುಗಿತಲ್ಲ! ಈ ಬಲರಾಮ ಯಾವಾಗಲೂ, ಗೊಲ್ಲನಾಗಿದ್ದಾಗಲೂ ಒಂದು ತರಹವೇ, ಈಗಂತೂ ಮಹಾರಾಜ ಬೇರೆ. ಅಂದಮೇಲೆ ಸರಿಯೇ ಸರಿ ಅನ್ನು. ಗೋಪಾಲ, ಸದ್ಯ ನೀನಿನ್ನೂ ಯುವರಾಜನಾಗಿದೀಯೆ, ಅಂತಲೇ ನಾನು ಬದುಕಿಕೊಂಡೆ. ನೀನು ಮಹಾರಾಜನಾಗಿದ್ದರೆ, ಆಗಿಬಿಟ್ಟರೆ ಏನು ಗತಿ ಅಂತ ಭಯವಾಗುತ್ತಿದೆ" ಎಂದು ನಸು ನಕ್ಕಳು. ಅವನು "ಆ ಭಯವೇ ಬೇಡ ರಾಧಿಕಾ, ನಾನು ಮಹಾರಾಜನಂತೂ ಆಗುವುದೇ ಇಲ್ಲ. ನನ್ನಂಥವನಿಗೆ ರಾಜ ಠೀವಿ ಹೇಗೆ ಬಂದೀತು. ಅದು ಅಣ್ಣನಿಗೇ ಸರಿ. ನಾನೆಂದೂ ನಿನ್ನ ಗೊಲ್ಲನೇ, ಮರೆಯಬೇಡ" ಎಂದು ನಗುತ್ತ ಉತ್ತರವಿತ್ತ. ಅವಳು "ನೀನು ಆ ಅಣ್ಣನ ತಮ್ಮ ಹೇಗಾದೆಯೋ" ಎಂದಳು.

ದಾರಿಯಲ್ಲಿ ಅವರು ಅರಮನೆಯ ಗೋಶಾಲೆಯನ್ನು ಹೊಕ್ಕು ಆ ಗೋವುಗಳನ್ನು ಮುದ್ದಿಸಿದರೂ ಗೋಕುಲದ ಗೋವುಗಳೇ ಹೆಚ್ಚು ಮುದ್ದಾದುವೆಂದು ಒಮ್ಮತದಿಂದ ತೀರ್ಮಾನಿಸಿದರು.

೩

ಸುಭದ್ರಾಭವನವನ್ನು ತಲುಪುತ್ತಿದ್ದಾಗ ರಾಧೆ "ಕೃಷ್ಣ, ನಿಮ್ಮ ಅಣ್ಣನಿಗೆ ಏನೋ ಸುಳ್ಳು ಹೇಳಿದೆಯಲ್ಲ, ಸ್ನಾನಪಾನಾದಿಗಳು ಆಗಿಲ್ಲ ಅಂತ, ಅದನ್ನು ಸ್ವಲ್ಪವಾದರೂ ನಿಜವಾಗಿಸೋಣ. ಇಲ್ಲೊಂದು ಯಮುನೆ ಇದೆಯೆ?" ಎಂದು ವಿಚಾರಿಸಿದಳು.

"ಇಲ್ಲ, ಆದರೆ ಅರಮನೆಯ ಸ್ನಾನಗೃಹವಿದೆ, ಜಲಕ್ರೀಡೆಯ ಕೊಳವಿದೆ........"

"ಕೊಳವೆ? ಪಿಸ್ಸೆ! ಅದು ಯಾರಿಗೆಬೇಕು ಇಕ್ಕಟ್ಟು. ಯಮುನೆಯಷ್ಟು ವಿಶಾಲವಾದದ್ದೇನೂ ಇಲ್ಲವೇ ಇಲ್ಲವೆ ಇಲ್ಲಿ?"

"ಅದಕ್ಕಿಂತಲೂ ವಿಶಾಲವಾದದ್ದು ಇದೆ—ಸಮುದ್ರ."

"ಅ? ಹುಂ ಹುಂ ಸಮುದ್ರ! ಕೃಷ್ಣ, ಅಲ್ಲಿಗೇ ಹೋಗೋಣ, ಈಗ!"

ಅವನು ಬೇಡವೆನ್ನಲಿಲ್ಲ. ಸಂಜೆಯಲ್ಲಿ ಹೊರಟರು. ಅರಮನೆಯ ಸೇವಕರು ಜತೆಗೆ

ಬಂದಾಗ ಕೃಷ್ಣ ಕೈಯಾಡಿಸಿ ಕಳುಹಿಸಿಬಿಟ್ಟ. ಇಬ್ಬರೂ ಬೀದಿಗಳಲ್ಲಿ ಕೈಕೈಹಿಡಿದು ನಗುನಗುತ್ತ ಮಾತಾಡುತ್ತ ನಡೆಯುತ್ತಿದ್ದಾಗ ಎರಡು ಕಡೆಗಳಲ್ಲೂ ಜನರು ನಿಂತು ಬೆರಗಾಗಿ ನೋಡುತ್ತಿದ್ದರು.

"ಪುರಜನರು ಇವರೆಲ್ಲ ಏಕೆ ಹೀಗೆ ನೋಡುತ್ತಿದ್ದಾರೆ ಕೃಷ—ಗೋಕುಲದ ಗೊಲ್ಲರು ನಿನ್ನನ್ನು ನೋಡುತ್ತಿದ್ದ ಹಾಗೆ?"

"ಇವರು ನಿನ್ನನ್ನು ನೋಡುತ್ತಿದ್ದಾರೆ ರಾಧಿಕಾ."

"ಯಾಕೆ, ಹಳ್ಳಿಯ ಹೆಣ್ಣನ್ನು ಕಾಣರೇ?"

"ನಿನ್ನಂಥ ಅನುಪಮಸುಂದರ ಹೆಣ್ಣನ್ನು ಕಾಣರು, ಪಾಪ!"

"ಇಲ್ಲ ಇಲ್ಲ ಅದಲ್ಲ. ಅವರ ಯುವರಾಜ ಹಳ್ಳಿಯ ಹುಡುಗಿಯೊಬ್ಬಳ ಜತೆಯಲ್ಲಿ ಹೋಗುತ್ತಿದಾನಲ್ಲ ಅಂತಲೊ!"

"ಅಲ್ಲ ಅಲ್ಲ. ಅವರಿಗೆ ನನ್ನ ವಿಚಾರ ಚೆನ್ನಾಗಿ ಗೊತ್ತಿದೆ."

"ಏನು, ಬಹು ಸ್ತ್ರೀವಲ್ಲಭನೆಂದೋ?"

ಹೀಗೇ ಆಡುತ್ತ ನಡೆದು ತೀರಕ್ಕೆ ಹತ್ತಿರವಾದಾಗ ರಾಧೆ ತಟ್ಟನೆ ನಿಂತುಬಿಟ್ಟಳು, ಮುಂದಿನ ಸಮುದ್ರವನ್ನು ಕಂಡು.

"ಓಓ ಕೃಷ್ಣಾ! ನೋಡು, ನೋಡು ನೀಲಾಕಾಶವೇ ಕಳಚಿ ನೆಲದಮೇಲೆ ಬಿದ್ದಂತಿದೆ! ಆದರೆ ಇದು ಎದೆ ಎದ್ದೆದ್ದು ಬೀಳುವ ಜೀವಂತ ಆಕಾಶ! ಅಗೋ ಆ ಚಿಕ್ಕ ದೊಡ್ಡ ದೋಣಿಗಳು ಮೇಲಿನ ಆಕಾಶದ ಸಾಲು ಬೆಳ್ಳಕ್ಕಿಗಳಂತೆ, ತೇಲುವ ಬಿಳಿ ಮೋಡದ ತುಣುಕುಗಳಂತೇ ಇವೆ. ಎಂಥ ಗಾಳಿ ಬೀಸು, ಎಷ್ಟು ತಂಪಾಗಿ! ಹಿಟ್ಟು ಹರಡಿದಂತೆ ಈ ಮರಳೋ! ಓಹೋ ಎಷ್ಟು ಚೆನ್ನ!........ಅಗೋ ನೋಡು ಇಳಿಯುತ್ತ ಇರುವ ಸೂರ್ಯ—ಉರಿಯುವ ಊರಾಗಿದೆ ಅಲ್ಲಿ!........ಈಗ ದುಂಡು ಕೆಂಡದುಂಡೆ ಯಾಗಿದಾನೆ........ಈಗ ಅಂಡಾಕಾರವಾದ,........ಈಗ ಪಾಣಿಪೀಠವಾದ!........ಈಗ ಲಿಂಗವಾದ........ಈಗ ಮುಳುಗುತ್ತಿದಾನೆ ಮುಳುಗುತ್ತಿದಾನೆ, ಇನ್ನೇನು ಸ್ವಲ್ಪವೇ ಬಾಕಿ, ಆಯಿತು ಆಯಿತು ಆಗೇ ಆಗೇ ಹೋಯಿತು, ಮುಳುಗೇ ಬಿಟ್ಟ! ಅಲ್ಲಿ ನೋಡು ಮೇಲೆ ಆ ಮೋಡ, ಇನ್ನೂ ಎಷ್ಟು ವರ್ಣರಂಜಿತವಾಗಿದೆ. ಅರಿಸಿನ ಕುಂಕುಮ, ಕುಲುಮೆಯ ಚಿನ್ನ ನಮ್ಮ ಹೋಳಿಯೋಕುಳಿಯ ವಸ್ತ್ರಕ್ಕೆ ಮೆರಗುಕೊಟ್ಟಂತೆ! ಅಬ್ಬಬ್ಬ, ಎಂಥ ಧೃಶ್ಯ! ಎಂಥ ದೃಶ್ಯ!........"

ಅವನು ಅವಳ ಪರಮಾನಂದಭರಿತ ಭಾವಪರವಶತೆಗೆ ಅಡ್ಡಿ ಬರದಂತೆ ಮಾತಾಡದೆ ಸುಮ್ಮನೆ ನೋಡುತ್ತಿದ್ದ—ತಾನೂ ಅವಳ ಭಾವಾತಿರೇಕದಲ್ಲಿ ಭಾಗಗೊಳ್ಳುತ್ತ, ಅವಳ ಚಿತ್ರವನ್ನೂ ಕಂಡು ಸುಖಿಸುತ್ತ. "ಬಾ, ಬಾ ಕೃಷ್ಣಾ, ಆ ನೀಲಿ ನೀರಿನಲ್ಲಿ ಹೊಕ್ಕು ಬಿಡೋಣ, ಒಟ್ಟಿಗೆ ಮಾಯವಾಗಿಬಿಡೋಣ" ರಾಧೆ ಅವನನ್ನು ಎಳೆದುಕೊಂಡೇ ಓಡಿದಳು.

ಅವರು ನೊರೆನೊರೆಯ ಅಲೆಗಳನ್ನು ಅಟ್ಟಿಸಿಕೊಂಡು ಹೋದರು, ಅವುಗಳಿಂದ

ತಪ್ಪಿಸಿಕೊಳ್ಳಲು ಓಡಿ ಸಿಕ್ಕುಬಿದ್ದು ಮುಳುಗಿದರು, ಏದುತ್ತ ಕೊಡಹಿಕೊಂಡು ಮೇಲೆದ್ದರು, ಒಬ್ಬರಮೇಲೊಬ್ಬರು ಎರಡೆರಡು ಕೈಗಳಿಂದಲೂ ನೀರೆರಚಿದರು; ಪಂಥ ಕಟ್ಟಿ ಸೋಲದೆ ಗೆಲ್ಲದೆ ಒಬ್ಬರನ್ನೊಬ್ಬರು ನೀರಿನಲ್ಲಿ ಹಿಡಿದಾಡಿದರು, ಹಿಡಿ ಹಿಡಿದು ಮತ್ತೆ ಮತ್ತೆ ಮುಳುಗಿಸಿದರು, ನಗುನಗುತ್ತ ಮೇಲೆತ್ತಿದರು—ಹೀಗೆಯೇ ನಡೆಯು ತ್ತಿತ್ತು ಅವರ ಆಟ, ದಿನಬೆಳಕು ಹೋಗಿ ಆಶ್ವೀಜ ಶುದ್ಧ ಚತುರ್ದಶಿಯ ಚಂದ್ರ ಮೇಲೆ ಬಂದು ನಕ್ಕು ಹೊತ್ತಾಯಿತೆಂದು ಎಚ್ಚರಿಸುವವರೆಗೂ.

"ಕೃಷ್ಣ, ಸ್ನಾನದಾಟವೇನೋ ಚೆನ್ನ, ಆದರೆ ನಮ್ಮ ಮೈ ಅಂಟಾಯಿತಲ್ಲ!"

"ಇಲ್ಲೇ ಸಿಹಿನೀರಿನ ಬಾವಿಯಿದೆ ಬಾ."

ಒಬ್ಬರಿಗೊಬ್ಬರು ನೀರು ಸೇದಿ ಹುಯ್ದರು.

"ಇದು ಯಾವ ಸೀರೆ ಗೊತ್ತೆ ಕೃಷ್ಣ?" ಅವಳು ಹೂವು ಹೂವಿನ ಹಸಿರು ಸೀರೆಯನ್ನು ತೆಗೆದು ತೋರಿಸಿ ಉಟ್ಟುಕೊಳ್ಳುತ್ತ ಕೇಳಿದಳು.

"ಯಾವುದಿರಬಹುದೂ?"

"ಕಳ್ಳನಂತೆ ಆಡುತ್ತೀಯಾ? ನೀನು ಎಷ್ಟಾದರೂ ನಮ್ಮ ಸೀರೆಗಳನ್ನು ಕದ್ದವ ನಲ್ಲವೆ—ಆ ಜಲಕ್ರೀಡೆಯ ದಿನ?"

"ಇದನ್ನೇ ಅಲ್ಲವೆ ನಿನ್ನಿಂದ ನಾನು ಕದ್ದದ್ದು?"

"ಹೌದು, ಅನಂತರ ಕಾಡಿಬೇಡಿದ ಮೇಲೆ ನನಗೆ ನಿನ್ನ ಉಡುಗೊರೆಯೆಂದೇ ಕೊಟ್ಟದ್ದು! ನೆನಪಿದೆಯೇ?"

"ಇದೆ ಇದೆ! ಎಂಥೆಂಥ ಹುಡುಗಚೇಷ್ಟೆಯಾಡುತ್ತಿದ್ದೆವು! ಎಷ್ಟುಕಾಲ ವಾಯಿತು ಆಗಲೇ?"

"ಈ ಉಡುಗೊರೆ ನನಗೆ ಅತ್ಯಂತ ಪ್ರಿಯ. ಹೆಚ್ಚು ಉಟ್ಟು ಹರಿದುಬಿಡದೆ ಹೇಗೆ ಕಾಪಾಡಿಕೊಂಡು ಬಂದಿದೇನೆ ನೋಡು! ಈಗ ಇಲ್ಲಿಯ ವಿಶೇಷ ಸಂದರ್ಭಕ್ಕೆಂದು ಮಾತ್ರ ತಂದೆ."

"ನಿನ್ನಂಥ ಗೆಳತಿ ಇನ್ನೊಬ್ಬಳುಂಟೆ ರಾಧಿಕಾ! ಇದು ನಿನಗೆ ಎಷ್ಟು ಚೆನ್ನಾಗಿ ಒಪ್ಪುತ್ತದೆ, ಓ!"

"ನೀನು ಹಾಗೆನ್ನಲೆಂದೇ ನಾನು ಉಡುತ್ತಿರುವುದು........ಕೃಷ್ಣ, ನಾನು ಉಡು ತ್ತಿರುವುದು ಈ ಸೀರೆಯನ್ನಲ್ಲ, ನಿನ್ನ ಗೆಳೆಯತನವನ್ನು, ಸಂತೋಷವನ್ನೂ."

"ಓ ರಾಧಾ!........" ಎಂದು ಸ್ವಲ್ಪ ಸುಮ್ಮನಿದ್ದ.

"ಕೇಶವ, ನಿನ್ನೊಡನೆ ನೀರಿನೊಡನೆ ಆಟವಾಡಿ ಆಟವಾಡಿ ನನ್ನ ರಟ್ಟೆಗಳು ಸೋತವು. ಈ ನನ್ನ ಕೇಶವೋ ಇಷ್ಟೊಂದು ಉದ್ದ. ಒರೆಸಿಕೊಳ್ಳಲಾರೆನಪ್ಪ. ನೀನೇ ಒರೆಸಿ ತುರುಬು ಹಾಕಿಬಿಡು, ನಿನಗೆ ಅಭ್ಯಾಸವಿದೆಯಲ್ಲ—ನಾನೇ ಕಲಿಸಿದ ಪಾಠ!"

"ಅಪ್ಪಣೆ!" ಕೃಷ್ಣನಿಗೆ ಸಡಗರವೋ ಸಡಗರ, ಅವಳ ಸಂಭ್ರಮಕ್ಕೆ ತಕ್ಕಂತೆ.

ಅವರು ಸುಭದ್ರಾಭವನಕ್ಕೆ ಹಿಂತಿರುಗಿದ ಸ್ವಲ್ಪ ಹೊತ್ತಿನಲ್ಲೇ ದೊಡ್ಡ ತಟ್ಟೆ ಗಳಲ್ಲಿ ಷಡ್ರಸೋಪೇತವಾದ ಮೃಷ್ಟಾನ್ನಭೋಜನವನ್ನು ಪರಿಚಾರಕ ತಂದಿರಿಸಿದ.

" ಬಾ ರಾಧ, ಭೋಜನಕ್ಕೆ " ಕೃಷ್ಣ ಕರೆದ.

" ಈ ಅಡಿಗೆಯನ್ನು ಮಾಡಿದವರು ಯಾರು ಕೃಷ್ಣ ? "

" ಇನ್ನು ಯಾರು, ಅರಮನೆಯ ಬಾಣಸಿಗ."

" ಬಾಣಸಿಗನೇ! "

" ಅರಮನೆಯಲ್ಲಿ ಅಡಿಗೆಯನ್ನು ಇನ್ನು ಯಾರು ಮಾಡುತ್ತಾರೆ ಎಂದುಕೊಂಡೆ ರಾಧಾ ? ರಾಣಿಯರು ಮಾಡುತ್ತಾರೇ ? "

" ಅದರಲ್ಲೇನು ರುಚಿ ಕೃಷ್ಣ, ಮೃಷ್ಟಾನ್ನವಾಗಿದ್ದರೂ ? "

" ಮತ್ತೆ ನೀನು ಮಾಡಿ ಉಣ್ಣಿಸುತ್ತೀಯಾ ನನಗೆ ಈಗ ? "

" ಕೃಷ್ಣ......." ಅಲ್ಲಿಗೇ ನಿಲ್ಲಿಸಿದಳು.

" ಅದೇನು ರಾಧ ? " ಕುತೂಹಲದಿಂದ ಕೇಳಿದ.

"........"

" ಏಕೆ ಸುಮ್ಮನಿದ್ದೀಯೆ ? ಏನಾದರೂ ತಂದಿದ್ದೀಯ ನಂಗೆ ತಿನ್ನುವುದಕ್ಕೆ ? "

" ಓ ಕೃಷ್ಣಾ ! "

" ಹೇಳು ಹೇಳು........ತಾ ತಾ ಇದ್ದರೆ ! "

" ಕೃಷ್ಣಾ, ಹೇಳಲು ನಾಚಿಕೆಯಾಗುತ್ತದೆ—ಈ ಭೋಜನವನ್ನು ನೋಡಿದಾಗ."

" ಇರಲಿರಲಿ ಕೊಡು ಕೊಡು ! ರೊಟ್ಟಿ ಮುಂಚೆ, ಮಾತು ಆಮೇಲೆ." ಕೃಷ್ಣ ಅವಳ ಗಂಟಿಗೆ ಕೈಹಾಕಲು ನುಗ್ಗಿದ. ಅವಳು ನಗುತ್ತ ಅಡ್ಡಿಬಂದಳು. ಜಗ್ಗಾಟ ವಾಯಿತು. ಕಡೆಗೆ ಅವಳು ಕೆಲವು ರೊಟ್ಟಿಗಳನ್ನೂ ಎರಡು ಕುಡಿಕೆಗಳನ್ನೂ ತೆಗೆದಿಟ್ಟಳು.

" ನಿನಗೆ ಕೊಡಲೆಂದೇ ತಂದೆ. ಆದರೆ ರುಕ್ಮಿಣೀದೇವಿಯ ಮುಂದೆ ತೆಗೆಯಲು ನಾಚಿಕೆಯಾಯಿತು, ಈ ಬೆಳಿಗ್ಗೆ ದಾರಿಯ ಪಕ್ಕದಲ್ಲಿ ನನಗಾಗಿ ರೊಟ್ಟಿ ಸುಟ್ಟುಕೊಂಡಾಗ ಈ ರೊಟ್ಟಿಯನ್ನೂ ಮಾಡಿದೆ—ನಿನಗಾಗಿ ಅಂತ, ತುಂಬ ತುಪ್ಪ ಹಾಕಿ. ಆ ತುಪ್ಪವಾದರೂ ಯಾವುದು ಅಂದುಕೊಂಡೆ? ನನ್ನ ನಂದಿನಿಯ ಹಾಲಿನ ಬೆಣ್ಣೆಯದು. ಬೆಣ್ಣೆಯನ್ನೇ ತರಬೇಕೆಂದು ಇಷ್ಟ. ನೀನು ಬೆಣ್ಣೆ ಕಳ್ಳನೆಂದು ಕುಪ್ರಸಿದ್ಧನಾದವನಲ್ಲವೆ? ಆದರೆ ತರುವುದು ಹೇಗೆ, ಅಷ್ಟು ದಿನ ಆ ಬಿಸಿಲಿನಲ್ಲಿ? ಅದಕ್ಕೇ ಕರಗಿಸಿ ತುಪ್ಪವನ್ನು ತಂದಿ ದೇನೆ ಈ ಕುಡಿಕೆಯಲ್ಲಿ. ಈ ಇನ್ನೊಂದರಲ್ಲಿ ಮಧುವಿದೆ—ನಾನೇ ಮರ ಹತ್ತಿ ಜೇನಿನಿಂದ ಕಚ್ಚಿಸಿಕೊಂಡು ಹಿಂಡಿದ್ದು."

ಕೃಷ್ಣ ರೊಟ್ಟಿಯ ಮೇಲೆ ತುಪ್ಪ ಜೇನುಗಳನ್ನು ಸುರಿದ.

" ಎಲ್ಲಿ, ಉಣ್ಣಿಸುತ್ತೇನೆ ಅಂದೆಯಲ್ಲ, ಬಾ ಮತ್ತೆ."

" ನಾನೆಲ್ಲಿ ಹಾಗೆಂದೆ ಕೃಷ್ಣ ? ಹೋಗು ಹೋಗು ನೀನೊಂದು ಮಗು " ಹಾಗೆನ್ನು ತ್ತಲೇ ರಾಧೆ ರೊಟ್ಟಿಯನ್ನು ಮುರಿದು ಅವನ ಬಾಯಿಗಿಟ್ಟಳು.

" ಆಹಾ, ಏನು ರುಚಿ ! " ಕೃಷ್ಣ ತಿಂದು ಚಪ್ಪರಿಸಿದ. " ನಾವು ಗೋವನ್ನು ಮೇಯಿಸುವಾಗ ನೀನು ಮಾಡಿಕೊಂಡು ಬರುತ್ತಿದ್ದೆಯಲ್ಲ ಹಾಗೇ ಇದೆ, ಅದಕ್ಕಿಂತಲೂ ಒಂದು ಕೈ ಮೇಲೆ ! "

"ಅದೇನು ರುಚಿಯೋ, ಒಣಕಲು ರೊಟ್ಟಿ."

"ಒಣಕಲೂ! ನಿನ್ನ ನಿತ್ಯನವ್ಯ ಅಮೃತಹಸ್ತ ಸವಿಯೋ? ಮಾಡಿದ್ದು, ಉಣ್ಣಿಸಿದ್ದು ಬೇರೆ. ಎಲ್ಲಿ ನೀನೂ ರುಚಿನೋಡು, ನಾನು ಅಂದದ್ದು ಸರಿಯೋ ಇಲ್ಲವೋ ಅಂತ" ಅವಳಿಗೊಂದು ಚೂರನ್ನು ಬಾಯಿಗಿಟ್ಟ.

"ಬಲು ರುಚಿ! ನಿನ್ನ ಅಮೃತಹಸ್ತ ಸವಿ!"

"ನನ್ನ ಬಾಲ್ಯದ ಗೆಳೆಯ ಕುಚೇಲ ಹಿಡಿಯವಲಕ್ಕಿಯನ್ನು ತಂದಿದ್ದ. ಎಷ್ಟು ಸಿಹಿಯಾಗಿತ್ತು ಅಂದುಕೊಂಡೆ........ಓ."

"ನೀನು ಹೊಟ್ಟೆಗೆ ಇಂಥಾದ್ದನ್ನೇ ತುಂಬಿಕೊಂಡು ಬೆಳೆದವನು. ನಿಂಗೆ ಅರಮನೆಯೊಂದು ದಂಡ, ಅರಮನೆಯ ಊಟವೊಂದು ದಂಡ! ಗೋಕುಲಕ್ಕೆ ಬಂದು ಇದ್ದುಬಿಡು ಸುಮ್ಮನೆ!"

"ಆಹಾ! ಅದು ಸಾಧ್ಯವಾದರೆ!........ಇನ್ನೊಂದು ಚೂರು ತಿನ್ನಿಸು ಮತ್ತೆ."

"ಇಗೋ ಬಾಲಕೃಷ್ಣ, ಇನ್ನೊಂದು ತುತ್ತು ಮಮ್ಮ!"

"ಇಗೋ ನಿಂಗೊಂದು ತುತ್ತು ಅಮ್ಮ!"

ಹೀಗೆ ಕ್ಷಣಾರ್ಧದಲ್ಲಿ ರೊಟ್ಟಿ ತುಪ್ಪಜೇನು ಎಲ್ಲವೂ ಆಗಿಹೋದವು. ದಾಮೋದರ ಗುಟಾರೆಂದು ತೇಗಿದ. ಇಬ್ಬರೂ ನಕ್ಕರು. ಅರಮನೆಯ ಕೂಳು ಚಿನ್ನದ ಹರಿವಾಣದಲ್ಲಿ ತಂಗಳಾಗುತ್ತಿತ್ತು. ಚಿನ್ನದ ಕಳಶದಲ್ಲಿ ಕಮ್ಮನೆ ಕಾಯಿಸಿ ಕೇಸರಿ ಸುವಾಸನೆಯ ಕ್ಷೀರವನ್ನು ರಾಧೆ ಒಪ್ಪಲಿಲ್ಲ. "ಸ್ವಲ್ಪ ತಾಳು, ಬಂದು ಬಿಟ್ಟೆ" ಎಂದು ಹೋಗಿ ಬೆಚ್ಚನೆಯ ನೊರೆಹಾಲನ್ನು ತಂದು ಬಾಲಗೋಪಾಲನಿಗೆ ಕುಡಿಸಿದಳು. ಅವರು ಮತ್ತಷ್ಟು ಹರಟೆಕೊಚ್ಚಿದರು.

"ರಾಧಿಕಾ, ಇನ್ನು ಭಾಮಾರಾಣಿಯನ್ನು ಕೊಂಚ ವಿಚಾರಿಸಿಕೊಳ್ಳಬೇಕು. ಹೇಗಿದ್ದಾಳೋ, ಕೋಪದಲ್ಲಿ ಏನಾಗಿದ್ದಾಳೋ ಪಾಪ!........ನೀನು ಹಾಯಾಗಿ ನಿದ್ರಿಸು. ನಾಳೆ ಮುಂಜಾನೆ ಮುಂದಾಗಿ ಬರುತ್ತೇನೆ." ಕೃಷ್ಣ ಕಾಲೆಳೆದುಕೊಂಡು ಹೊರಟ. ರಾಧೆ ಭಾಮಾಭವನದ ಬಾಗಿಲವರೆಗೂ ಹೋಗಿ ಹಿಂದಿರುಗಿಬಂದಳು.

೪

ಭಾಮಾಭವನದಲ್ಲೂ ಅರಮನೆಯ ಮೃಷ್ಟಾನ್ನ ಕೆಟ್ಟುಹೋಗುತ್ತಿತ್ತು. ಭಾಮೆ ಮಯೂರತಲ್ಪ ಸುಪ್ಪತ್ತಿಗೆಯಲ್ಲಿ ಸುಮ್ಮನೆ ಬಿದ್ದುಕೊಂಡು ಬಿಸಿಯುಸಿರು ಬಿಡುತ್ತ ಹೊರಳಾಡುತ್ತಿದ್ದಳು. ಭಾಮಾ ಅವನ ಕಡೆಗೆ ತಿರುಗುವುದಕ್ಕೇ, ಬಾಯಿಬಿಡುವುದಕ್ಕೇ ಕೃಷ್ಣ ತನ್ನ ಚುರುಕು ಬುದ್ಧಿಯಲ್ಲಿ ಬೇಕಾದಷ್ಟನ್ನೇ ಖರ್ಚುಮಾಡಬೇಕಾಯಿತು, ದೀನನಾಗಿ ಅಂಗಲಾಚಬೇಕಾಯಿತು. ಎಷ್ಟೋ ಹೊತ್ತೂ ಕಳೆಯಿತು.

"ಬಾ ಭಾಮಾ, ನನ್ನಚಿನ್ನ, ಮುತ್ತುರನ್ನ, ಮುದ್ದಿನ ಮಡದಿ, ಒಂದು ತುತ್ತು ಉಂಡುಬಿಡು ಮತ್ತೆ," ತೋಳಿನಲ್ಲಿ ಬಳಸಿ ಮುದ್ದಿಸಿ ಕೇಳಿಕೊಂಡ.

" ಆಟ ಯಾಕೆ ಮುಗಿಸದೆ........"

" ಅಯ್ಯಯ್ಯೋ ಆ ಸಿಟ್ಟು ಇನ್ನೂ ಆರದೆ ಇದೆಯೆ? ಆ ಕಿಚ್ಚನ್ನೇ ಇನ್ನೂ ಹಾಸಿಕೊಂಡು ಹೊದ್ದುಕೊಂಡು ಮಲಗಿಬಿಟ್ಟಿದೀಯಾ? ನನ್ನ ಅಪರಾಧವನ್ನು ಮನ್ನಿಸಿಬಿಡು. ಇಗೊ ತುತ್ತು."

" ನನಗೆ ಬೇಡವೇ ಬೇಡ. ಎಲ್ಲೆಲ್ಲೋ ಉಂಡುಬರುವುದು, ಈಗ ಇಲ್ಲಿ ನಾಟಕವಾಡುವುದು. ಉಹುಂ, ಒಂಟಿ ಪಿಶಾಚಿಯಂತೆ ಒಬ್ಬಳೇ ಉಣ್ಣುವುದಿಲ್ಲ."

" ಒಂಟಿತನವೇಕೆ. ನಾನೂ ಇದ್ದೀನಲ್ಲ. ನಿನ್ನೊಡನೆಯೂ ಉಣ್ಣುತ್ತೇನೆ ಬಾ."

" ಆಗಲೇ ಊಟಕ್ಕೇಕೆ ಬರಲಿಲ್ಲ?"

" ಏನೋ ಹಳೆಯ ಗೆಳತಿ, ಬಹಳ ದಿನಗಳ ಮೇಲೆ........"

" ಮಧ್ಯಾಹ್ನದಿಂದಲೇ, ಅವಳ ಮುಖ ಕಂಡಾಗಿನಿಂದಲೇ ನನ್ನ ಮೇಲೆ ತಾತ್ಸಾರ. ನಿಮ್ಮನಿಮ್ಮದೇ ಆಟ—ಗಳಿಗೆಯೂ ಬಿಡಲಾರದ್ದು. ಹುಂ! ಈ ಸಂಪತ್ತಿಗೆ ಮದುವೆಯಾದ ಹೆಂಡಿರೇಕೋ, ನಾನೇಕೋ, ದಂಡ ದಂಡ!"

" ಹಾಗಲ್ಲ ಪ್ರಿಯೆ ಭಾಮಾ........"

" ಹಾಗೇ ಹಾಗೇ. ನನಗೆ ತಿಳಿಯದೇನು ನನ್ನ ಗಂಡನ ಗುಟ್ಟು!"

" ಅಯ್ಯಯ್ಯೋ ಅದೆಂಥ ಅಸೂಯೆಯ ಮೊಟ್ಟೆಯೋ ನೀನು ಭಾಮಾ!"

" ಅಸೂಯೆಯೇನಿಲ್ಲ, ಹೆಂಡತಿಯ, ರಾಣಿಯ, ಅಧಿಕಾರದ ವಿಚಾರ ಇದು."

" ಅದಕ್ಕೆ ಆ ಬಡಪಾಯಿ ಯಾವ ಅಪಾಯವನ್ನೂ ಉಂಟುಮಾಡಿಲ್ಲ ಪಾಪ."

" ಮಾಡದೆ ಏನು, ಕಾಣೋದಿಲ್ಲವೆ? ಅವಳು ಎಂದಿನಿಂದಲೋ ಮಂಕುಬೂದಿ ಎರಚಿ ಬಲೆಗೆ ಹಾಕಿಕೊಂಡಿದಾಳೆ. ಆಗೆಲ್ಲ ಗೋಕುಲದಲ್ಲಿ ಮಾಡಿದ್ದು ಸಾಲದು ಅಂತ ಇಲ್ಲಿಗೂ ಬಂದಿದಾಳೆ ವಶೀಕರಣಕ್ಕೆ, ನನಗೆ ಅಪಮಾನ ಮಾಡೋದಕ್ಕೆ. ದ್ವಾರಕೆಯೆಲ್ಲ ನನ್ನನ್ನು ನೋಡಿ ನಗುತ್ತಿದೆ, ಹೆಂಡತಿಯಾಗಿಯೂ ಇಷ್ಟೇಯೇ ಎಂದು. ಗಂಡನನ್ನು ವಶದಲ್ಲಿಟ್ಟುಕೊಳ್ಳದ ಹೆಣ್ಣಿನ ಬಾಳು ವ್ಯರ್ಥ, ಅದನ್ನು ಸುಡಬೇಕು. ಛಿ ಛೀ! ಅಂಥವಳಿಗೆ ಧಿಕ್ಕಾರ!"

" ಭಾಮಾ ಭಾಮಾ! ಹುಚ್ಚಿಯಂತೆ ಉದ್ವೇಗಕ್ಕೆ ಒಳಗಾಗಬೇಡ. ಸ್ವಲ್ಪ ತಾಳ್ಮೆ ತಂದುಕೋ ಪ್ರಾಣಪ್ರಿಯೆ."

" ಆಹಾ, ಮುದ್ದಿನ ಮಾತಿಗೇನು, ಮಾಡೋದು ಹೇಗಾದರೂ. ಮಧ್ಯಾಹ್ನದಿಂದ ಎಷ್ಟು ಸಂಕಟಪಡುತ್ತಿದೇನೆ. ಸ್ವಲ್ಪವಾದರೂ ಪ್ರೇಮ, ಕಡೆಗೆ ಕನಿಕರವಾದರೂ ಇದೆಯೇ? ಬೇಡ, ಈ ಸಂಗವೇ ಬೇಡ, ಅವಳ ಬಳಿಗೇ ಹೋಗಬಹುದು........ಹುಂ, ಹೀಗೆ ನನ್ನ ಗಂಡನ ಕಣ್ಣಿಗೇ ಮಣ್ಣೆರಚಿ ನನ್ನಿಂದ ಅವನನ್ನು ಕಸಿದುಕೊಳ್ಳುವುದಕ್ಕೆ ಆ ಹೆಣ್ಣಿನಲ್ಲಿರುವುದಾದರೂ ಏನು, ಹೋಗಲಿ ಎನ್ನುವುದಕ್ಕೆ? ಹಳ್ಳಿಯ ಒರಟಳು. ಕಾಡುಮನುಷ್ಯಳು. ಸ್ತ್ರೀಸಹಜವಾದ ಗಾಂಭೀರ್ಯ ಲಜ್ಜೆ ಒಂದಿಷ್ಟೂ ಇಲ್ಲ. ಎಂಥ ಹೆಂಗಸೋ ಏನೋ."

"ಮುಗ್ಧೆ, ಏನೊಂದು ಓರೆಕೋರೆಯನ್ನೂ ಅರಿಯದ, ಯೋಚಿಸದ ನೇರ ಹೃದಯ ಅವಳದ್ದು. ತಪ್ಪು ತಿಳಿವಳಿಕೆಗೆ ಅವಕಾಶಕೊಟ್ಟೇತು. ನಿನ್ನ ನಯ ನಾಗರಿಕತೆ ಸಂಸ್ಕೃತಿಗಳು ಅವಳಿಗೆಲ್ಲಿ ಬರಬೇಕು ಅನ್ನೂ. ಆ ಗೊಲ್ಲಳೆಲ್ಲಿ, ಈ ರಾಣಿಯೆಲ್ಲಿ."

"ಸೆವನೆವದಲ್ಲಿ ಅಂದು ಇನ್ನಷ್ಟು ನೋಯಿಸಬೇಕೇನೋ ನನ್ನನ್ನು."

"ಇಲ್ಲ ಇಲ್ಲ ಚಿನ್ನ. ಅದು ನನ್ನ ಯೋಚನೆಯಾಗಿರಲಿಲ್ಲ. ಕ್ಷಮೆ ಕ್ಷಮೆ!"

"ಆಗಲಿ, ಅವಳೇನು ಅಂಥ ರೂಪವತಿಯೇ ಅಂದರೆ ಅದೂ ಇಲ್ಲ. ಆಹಾ, ಆ ದುಂಡು ದುಂಡು ಅಂಗಾಂಗಗಳೋ........"

"ಕಾಡುಮೇಡಿನಲ್ಲಿಓಡಾಡಿ ಕುಣಿಕುಣಿದು, ಗಾಳಿ ಮಳೆ ಬಿಸಲುಗಳ ವರ ಪಡೆದು, ಗಟ್ಟಿ ರೊಟ್ಟಿಗಳನ್ನು ಅರಗಿಸಿಕೊಂಡು ಗೋಕುಲದ ಗೋವುಗಳ ಬೆಣ್ಣೆಯನ್ನು ಮೆದ್ದು ಕಾಡು ಹಣ್ಣು ಕಿತ್ತುತಿಂದು ಪೂರ್ಣವಾಗಿ ಬೆಳೆದಿವೆ ಪುಷ್ಟವಾಗಿ ನುಣುಪಾಗಿ. ನಾನೂ ಹಾಗೆಯೇ ಬೆಳೆದವನಲ್ಲವೆ? ಈಗಲೇ ಈ ಅರಮನೆಯ ಕೃತಕತೆಗೆ ಸಿಕ್ಕಿ ಕೃಶಿಸಿ ಹಾಳಾಗುತ್ತಿದ್ದೇನೆ."

"ಸರಿ ಸರಿ ಏನು ಹೇಳಬೇಕೋ ಈ ವಾದಕ್ಕೆ! ಗಾಂಭೀರ್ಯ ಲಜ್ಜೆ ಒಂದಿಷ್ಟೂ ಇಲ್ಲ. ಎಂಥ ಹೆಂಗಸೋ ಏನೋ.........ಆ ಮುಂದೆ ಹಿಂದೆ ಚಾಚಿಕೊಂಡ ಅವೋ ಎಷ್ಟು ಗ್ರಾಮ್ಯ!"

"ಅವಳ ಬೆಳವಣಿಗೆಗೆ ತಕ್ಕಂತೆ ಅವು ಆಕರ್ಷಕವೇ........"

"ಅ!"

"ನಿನ್ನ ತೆಳು ಆಕಾರಕ್ಕೆ, ಪುಟ್ಟಪುಟ್ಟ ರೂಪಕ್ಕೆ ಹೊಂದಿಕೊಂಡಂತೆ ಇಲ್ಲವೆ, ಹಾಗೇ."

"ಆ ಊರಗಲ ಕಣ್ಣೋ, ಮಾರುದ್ದ ರೆಪ್ಪೆಗೂದಲೋ, ತಿದ್ದಿ ಬರೆದಂಥ ಹುಬ್ಬೋ—ನಟಿಯರು ಮಾಡಿಕೊಳ್ಳುತ್ತಾರಲ್ಲ ಹಾಗೆ."

"ಹ್ಹ! ಸಹಜವಾಗಿದ್ದರೂ! ನಿನ್ನನ್ನು ತಾನೆ ಯಾವ ನಟಿ ಮೀರಿಸಬಲ್ಲಳು! ರಾಧೆಗೇ ತಿಳಿಯದು ಅವಳು ನಟಿಯಾಗಿದ್ದಾಳೆಂದು!"

"ಆ ಪ್ರತಿಷ್ಠೆಯ ಮೂಗೋ, ಭೋಗಾಸಕ್ತಿ ತುಂಬಿ ತುಳುಕುವ ತುಟಿಗಳೋ...."

"ನಿನ್ನವಕ್ಕಿಂತಲೇ! ಅವಳ ಬಗ್ಗೆ ಆಡುವ ಮುನ್ನ ನಿನ್ನ ಮುಖವನ್ನೇ ಮತ್ತೊಮ್ಮೆ ನೋಡಿಕೊ, ನನ್ನ ಕಣ್ಣು ಕನ್ನಡಿಯಲ್ಲಿ!" ಅವನು ಕಣ್ಣಲ್ಲಿ ಕಣ್ಣಿಟ್ಟು ಅವಳನ್ನು ಬರಸೆಳೆದು ಮುತ್ತಿಟ್ಟ.

"ಬೇಡ, ಬೇಡವೇ ಬೇಡ!" ಅವಳು ತುಟಿಯನ್ನು ಒರೆಸಿಕೊಂಡುಬಿಟ್ಟಳು, ಅವನಿಂದ ಕೊಡಹಿಕೊಂಡು ಸಿಡಿದು ಸರಿದಳು.

"ಬಟ್ಟೆಯಿಲ್ಲದ ಆ ಅರೆಬೆತ್ತಲೆ ಮೈ! ಅಸಹ್ಯ! ನಾಚಿಕೆಯಿಲ್ಲ!"

"ಹೌದು, ಅವಳಿಗೆ ನಾಚಿಕೆಯಿಲ್ಲ—ತನ್ನ ಅಂಗಸೌಷ್ಟವದ ಬಗ್ಗೆ! ನಮ್ಮ

ಹಳ್ಳಿಯ ಅಳತೆಯಲ್ಲಿ ಸಭ್ಯವಾದಷ್ಟನ್ನೂ ಮಾಡಿಕೊಂಡಿದ್ದಾಳೆ. ಆದುದರಿಂದಲೇ ಅವಳಿಗೆ ಇನ್ನಷ್ಟನ್ನು ಮುಚ್ಚಿಕೊಳ್ಳಬೇಕಾದಂಥ ಅವಲಕ್ಷಣವೇನೂ ಇಲ್ಲವೆಂದು ಅನ್ನಿಸಿರಬೇಕು! ಅಲ್ಲಿ ಯಾರಿಗೂ ನಾಗರಿಕರ ಯೋಚನೆಗಳು ಬರುವುದೇ ಇಲ್ಲ. ಮಕ್ಕಳ ಮನಸ್ಸಿನಿಂದ ಸರಳವಾಗಿದ್ದುಬಿಡುತ್ತಾರೆ. ನನಗಾದರೂ ಹೆಚ್ಚೇನೂ ಹೊಳೆದೇ ಇಲ್ಲ. ಅಲ್ಲದೆ, ಭಾಮಾ, ನೀನು ಅವಳನ್ನು ಮುಚ್ಚಿದ ಸೀರೆಯಲ್ಲಿ ನೋಡಿಲ್ಲ, ಅಷ್ಟೇ ಸುಂದರವಾಗಿರುತ್ತಾಳೆ!"

"ಓಹೊಹೋ! ಹೊಗಳಿಕೆಗೇನು, ಹೆಣ್ಣೆಂದರೇ ಆಯ್ತು, ಗಂಡು ಬಾಯಿ ಬಾಯಿ ಬಿಡುತ್ತದೆ!"

"ನಿನಗಾಗಿ ನಾನು ಬಿಡುವಂತೆ!"

"ಸಾಕು ಸಾಕು, ಮೋಸಹೋಗೋದಿಲ್ಲ ನಾನು. ಅವಳ ಒಡ್ಡೊಡ್ಡು ಒಡವೆಗಳೋ........"

"ಯಾಕೆ, ಅವಳಿಗೆ ಒಪ್ಪುವುದಿಲ್ಲವೆ, ಈ ನಿನ್ನ ಆಭರಣಗಳು ನಿನಗೆ ಒಪ್ಪುವಂತೆ?"

"ಒಪ್ಪುತ್ತದೆ ಒಪ್ಪುತ್ತದೆ! ಆರ್ಯಪುತ್ರನಿಗೆ ಅವಳು, ಅವಳದ್ದು, ರೂಪ ಅಲಂಕಾರ ಗುಣ ಎಲ್ಲವೂ ಒಪ್ಪೇ ಒಪ್ಪುತ್ತವೆ. ಇಬ್ಬರೂ ಗೋಕುಲದ ಗೊಡ್ಡುಗಳೇ."

"ಹ್ಹ!"

"ಅವಳಲ್ಲಿ ಅಂಥ ಅಂಥ ಮೋಹವಿರುವಾಗ ಎಲ್ಲವೂ ಒಪ್ಪಿಗೆಯೇ, ಕೈಹಿಡಿದವಳನ್ನು ಕಡೆಗಣಿಸುವವರೆಗೂ. ಬಿಡುವವರೆಗೂ ಏನೋ."

"ಪ್ರಿಯೆ ಭಾಮಾ, ನನಗೆ ಮೋಹವಿರುವುದು ನಿನ್ನಲ್ಲಿ. ನೀನು ನನ್ನ ಮೋಹದ ಮಡದಿ. ರಾಧೆಯಲ್ಲಿ ನನಗಿರುವುದು ಅಪಾರ ಪ್ರೇಮ—ಎಳೆಯತನದ ಗೆಳೆತನ ಹುಟ್ಟಿಸಿದ್ದು, ಬೆಳೆಸಿದ್ದು. ಅದಕ್ಕೆ ಅವಳ ರೂಪವಷ್ಟೇ ಅಲ್ಲ, ಗುಣವೂ ಕಾರಣ."

"ಓಹೋ, ಅದೇನಿದೆಯೋ ಅಂಥ ಗುಣ ಬೇರೆ!"

"ಇಲ್ಲಿನೋಡು ಭಾಮಾ, ನೀನು ಕೈಹಿಡಿದ ಮಡದಿಯಾಗಿ, ನನಗೆ ಒಡತಿಯಾಗಿ ಏನೇನು ಎಷ್ಟೆಷ್ಟನ್ನು ಅಧಿಕಾರದಿಂದ ಕೇಳುತ್ತಿದೀಯೆ—ಒಟ್ಟು ನನ್ನನ್ನೇ ಸಂಪೂರ್ಣವಾಗಿ ನಿನಗೆ ಕೊಟ್ಟುಬಿಡಬೇಕೆನ್ನುವಷ್ಟು. ಅವಳೂ ಹುಡುಗತನದಲ್ಲಿ ಹುಚ್ಚಿಯಂತೆ ಹೀಗೇ ಆಡುತ್ತಿದ್ದಳು. ಈಗ ಆ ಗೆಳತಿ, ಬಡಪಾಯಿ, ನನ್ನಿಂದ ಏನೊಂದನ್ನೂ ನಿರೀಕ್ಷಿಸದೆಯೇ ತನ್ನ ಪ್ರೇಮವನ್ನು ಸಮರ್ಪಿಸಲೆಂದೇ ಅಲ್ಲಿಂದ ಇಲ್ಲಿಗೆ ಬಂದಿದಾಳೆ. ನಾನು ಸ್ವಲ್ಪ ಸ್ನೇಹವನ್ನಾದರೂ ಕೊಡಬೇಡವೆ?"

"ಕೊಡಬೇಕು ಕೊಡಬೇಕು—ನನ್ನನ್ನು ವಂಚಿಸಿಯಾದರೂ. ಈ ಆಕರ್ಷಣೆಯ ಕಾರಣ ರೂಪವಲ್ಲ, ಗುಣವಲ್ಲ, ಗೆಳೆತನವೂ ಅಲ್ಲ, ಮುಖ್ಯವಾಗಿ ನನ್ನ ಪತಿ ನಿರ್ಲಜ್ಜ ಸ್ತ್ರೀಲೋಲನಾಗಿರುವುದು!"

"ಹ್ಹಹಾ! ಹಾಗಿದ್ದುದರಿಂದಲೇ ನಾನು ಭಾಮಾಲೋಲನಾಗಿರುವುದು!.... ಕೊಂಚ ತಾಳಿಕೋ ಭಾಮಾ. ಅವಳೆಷ್ಟು ದಿನ ಇದ್ದಾಳು ಪಾಪ!"

"ಎಷ್ಟು ದಿನವಾದರೇನು, ಗಳಿಗೆಗಳಾದರೇನು, ಅವಳಿರುವವರೆಗೂ ನನಗೆ ಸಮಾಧಾನವಿಲ್ಲ."

"ಛಿ ಛೀ, ಎಂಥ ಮಾತು!"

"ತಪ್ಪಾಯಿತು ಕ್ಷಮಿಸಬೇಕು. ಅವಳಲ್ಲಿಗೇ ಹೋಗಿ ಸುಖವಾಗಿರಬಹುದು. ನಾನೇನು ಬೇಡವೆಂದನೆ?"

"ನಾನು ನಿನ್ನಲ್ಲಿಗೇ ಬಂದಿರುವೆನಲ್ಲ, ಅವಳನ್ನು ಬಿಟ್ಟೇ. ನೋಡು ಶರದ ಚಂದ್ರಿಕೆ ಎಷ್ಟು ಚೆನ್ನಾಗಿದೆ ಹೊರಗೆ! ನಿನ್ನ ಮನಸ್ಸು ಶಾಂತವಾಗುತ್ತದೆ. ಬಾ ಹೊರಗೆ ಹೋಗೋಣ."

"ಅವಳೊಡನೆಯೇ ಹೋಗಿ ಆನಂದಿಸಬಹುದು. ನಾನು ಇಲ್ಲಿಯೇ ಶಾಂತಿ ಪಡೆಯುತ್ತೇನೆ."

ಅವಳು ಅತ್ತ ತಿರುಗಿ ಮಲಗಿಕೊಂಡಳು.

"ನಾನಾದರೂ ಕೊಂಚ ಹೊತ್ತು ಚಂದ್ರಿಕೆಯಲ್ಲಿದ್ದು ಬರುತ್ತೇನೆ ಬೇಗ. ಅಲ್ಲಿಯವರೆಗೆ ನೀನೂ ಸಮಾಧಾನ ಹೊಂದಿರಬಹುದು."

ಕೃಷ್ಣ ಸೋಲೊಪ್ಪಿಕೊಂಡು ಮೇಲೆದ್ದುಬಂದು ಬಾಗಿಲನ್ನು ತೆಗೆದಾಗ ಅಲ್ಲಿ ಕಂಡಳು ರಾಧೆ--ನೆಲದ ಮೇಲೆ ಮುದುರಿಕೊಂಡು ಗೋಡೆಯೊರಗಿ ಕುಳಿತು ಕಣ್ಣು ಮುಚ್ಚಿಕೊಂಡು.

"ರಾಧಾ! ರಾಧಿಕಾ!" ಕೃಷ್ಣ ಮೆಲುದನಿಯಲ್ಲಿ ಹೇಳುತ್ತ ಅವಳನ್ನು ಮೇಲೆಬ್ಬಿಸಿದ. "ಇದೇನು ನೀನು ಇಲ್ಲಿ ಹೀಗೆ?"

"ಕೃಷ್ಣ, ಆ ಹಂಸತೂಲಿಕಾತಲ್ಪದ ಸುಪ್ಪತ್ತಿಗೆ ಒತ್ತುತ್ತಿತ್ತು, ಕಿಟಕಿಯಿಂದ ಬಂದ ಚಂದ್ರಿಕೆ ಚುಚ್ಚುತ್ತಿತ್ತು, ನಿದ್ದೆ ಬರಲೇ ಇಲ್ಲ. ನಿಂಗೆ ಆದಷ್ಟೂ ಹತ್ತಿರ ಇರೋಣ ಎಂದೆನ್ನಿಸಿತು, ಬಂದು ಇಲ್ಲೇ ಕುಳಿತೆ."

"ಓ ರಾಧಾ! ಬಾ ಬಾ ಬೆಳುದಿಂಗಳಿಗೆ ಹೋಗೋಣ. ಚೊಕ್ಕ ಬೆಳ್ಳಿಯ ರಾತ್ರಿ, ಎಷ್ಟು ಶಾಂತ, ಆಕರ್ಷಕ! ನಮ್ಮ ನಮ್ಮ ಈ ಜಡ ಜಗತ್ತನ್ನೇ, ಈ ವ್ಯಾವಹಾರಿಕ ಲೌಕಿಕ ಲೋಕವನ್ನೇ ಮರೆಯಬಹುದು ಅಲ್ಲಿ........"

"ಭಾಮಾದೇವಿ ಬರುವುದಿಲ್ಲವೆ? ಬಾ, ಕರೆದುಕೊಂಡು ಹೋಗೋಣ."

"ಬೇಡ ಬೇಡ, ಅವಳು ದಣಿದು ಮಲಗಿದಾಳೆ, ವಿಶ್ರಾಂತಿ ಶಾಂತಿ ಹೊಂದಲಿ. ನಡೆ, ನನ್ನೊಡನೆ" ಕೃಷ್ಣ ಅನುಮಾನಿಸುತ್ತಿದ್ದವಳನ್ನು ಅರೆ ತಬ್ಬಿ ಎಳೆದುಕೊಂಡೇ ಹೊರಟ.

"ಬೆಳುದಿಂಗಳಲ್ಲಿ ನಿನ್ನ ಕೊಳಲು ಬೇಕೇಬೇಕಲ್ಲ?"

"ಓ, ನಾನು ಕೊಳಲನ್ನು ನುಡಿಸಿ ಯಾವುದೋ ಕಾಲವಾಗಿಹೋಯಿತು ರಾಧ; ಭಾಮಾಭವನದಲ್ಲಿ ಎಲ್ಲೋ ಬಿದ್ದು ಅದು ಧೂಳು ಹಿಡಿಯುತ್ತಿರಬೇಕು."

"ಹಾಗೇ?........ಹಾಗಾದರೆ ಬಾ ನನ್ನೊಡನೆ. ನನ್ನ ಗಂಟಿನಲ್ಲಿ ನಿನಗೆ

ತಂದ ಉಡುಗೊರೆಯೊಂದಿದೆ. ಸಂಜೆಯ ಸಡಗರದಲ್ಲಿ ಕೊಡುವುದೂ ಮರೆತು ಹೋಯಿತು. ನನ್ನ ಕೈಯಿಂದಲೇ ಮಾಡಿದ್ದು—ನಿನಗಾಗಿಯೇ."

"ನೀನು ಉಡುಗೊರೆಯಾಗಿ ಬಂದದ್ದು ಸಾಲದೆಂದು ಅದನ್ನೂ ತಂದೆಯಾ"

ಸುಭದ್ರಾಭವನದಲ್ಲಿ ಉಡುಗೊರೆ ದೊರಕಿದಾಗ ಕೃಷ್ಣನ ಸಡಗರ ದಡ ಮೀರಿತು. ಕೊಳಲಿಗೆ ತುಟಿಯಿಟ್ಟು ಕುಣಿದಾಡಿದ—ಕೊಂಚ ಕೊಂಚವೇ ಶಬ್ದ ಮಾಡುತ್ತ, ಪೀಪಿ ದೊರಕಿದ ತುಂಟ ಪೋರನಂತೆ. 'ಬಾ ಬಾ ಬಾ, ಬಾ ರಾಧಾ' ಎನ್ನುವಂತೆ ಪಲ್ಲವಿಯನ್ನು ಕೇಳಿಸಿಯೂ ಕೇಳಿಸದಂತೆ ನುಡಿಸುತ್ತ, ರಾಧೆಯನ್ನು ರಾಜ ಭವನದ ವನವೈಶಾಲ್ಯ ಉದ್ಯಾನವನದಲ್ಲಿ ಜನ ಭವನಗಳಿಗೆ ದೂರವಾಗಿದ್ದ ಅಶೋಕ ವೃಕ್ಷದ ಹಿನ್ನೆಲೆಯನ್ನು ಹೊಂದಿ ಬೆಳುದಿಂಗಳ ಹಾಲಿನಲ್ಲಿ ಅದ್ದಿ ಒದ್ದೆಯಾಗಿದ್ದ ನುಣ್ಪು ತಣ್ಪಿನ ಅಮೃತಶಿಲೆಗೆ ಕರೆದೈತಂದುನಿಂದ. ರಾಧೆಯ ಪ್ರೇಮದ ಮುರಲಿಗೆ ಮುತ್ತಿಟ್ಟು ಮೊದಲುಮಾಡಿದ, ಅಮರಗಾನವಾಹಿನಿಯನ್ನು ಮೀರಿಸಿದ ಕೃಷ್ಣಯಕ್ಷಿಣಿಯನ್ನು. ಆನಂದಾತಿಶಯದಿಂದ ಮೈಮರೆದು ಅವನ ಭುಜದ ಮೇಲೆ ಕೈಯಿಟ್ಟು ಪಕ್ಕದಲ್ಲಿ ಒತ್ತಿಕೊಂಡು ನಿಂತು ಅವನ ಮುಖವನ್ನೇ ನಿಟ್ಟಿಸಿ ನೋಡುತ್ತ ಅವನಲ್ಲೇ ಮುಳುಗಿ ಹೋಗಿದ್ದ ರಾಧೆ, ಕೃಷ್ಣನ ಕೊಳಲನ್ನು ಕೇಳುತ್ತ ಕೇಳುತ್ತ ಝುಣ ಝುಣ ಕಣ ಕಣದ ಕಾಲುಗಳಿಂದ ಹಾಗೆಯೇ ನಿಧಾನವಾಗಿ ನೃತ್ಯಹೆಜ್ಜೆಯ ತಾಳ ಹಾಕಲಾರಂಭಿಸಿದಳು. ಗಾನಮೋಹಿತನಾದ ಚಂದ್ರ ಆನಂದದಿಂದ ನೆತ್ತಿಯ ಮೇಲೆ ನಿಂತುಬಿಟ್ಟ. ಮೆಲ್ಲನೆ ಮೊರೆಯುತ್ತಿದ್ದ ಎಳೆಯ ಸುಳಿಗಾಳಿ ತನ್ನ ಶಬ್ದಕ್ಕೇ ಹೆದರಿ ಸ್ತಬ್ಧವಾಗಿ ಬೆರಗಾಗಿ ಅಲ್ಲೇ ನಿಂತು ಆಲಿಸುತ್ತಿತ್ತು. ಮೃದುವಾಗಿ ತಟ್ಟಿ ಎಬ್ಬಿಸಿದಂತಾಗಿ ಮರಗಳಲ್ಲಿ ಮಲಗಿದ್ದ ಮಯೂರ ಮೈನ ಶುಕ ಪಿಕ ಪಾರಿವಾಳಾದಿ ಪಕ್ಷಿಗಳು ಎಚ್ಚರಗೊಂಡು ರೆಕ್ಕೆ ಬಡಿಯದೆ ಕೂಗದೆ ಕೊಳಲಿನಲ್ಲಿ ಮುಳುಗಿದ್ದವು. ಮರುಳಾದ ಮರಗಳೂ ಎಲೆಯ ಬೆರಳಲುಗಿಸದೆ ತೂರು ಬೆಳಕಿನ ನೂರಾರು ನಯನಗಳನ್ನು ಮಾತ್ರ ತೆರೆದುಕೊಂಡು ನೆಟ್ಟ ಕಿವಿಗಳಿಂದ ಕೇಳುತ್ತಿದ್ದವು. ಇದ್ದಕ್ಕಿದ್ದಂತೆಯೇ 'ಅಂಬಾ ಅಂಬಾ' ಎಂಬ ತಂಬೂರಿ ನಾದ ಬಂದು, ಹಿಂದೆಯೇ ಅರಮನೆಯ ಗೋಶಾಲೆಯ ಗೋವುಗಳು ಕಣಿಕಿತ್ತು ಬಂದು ಸುತ್ತಲೂ ನಿಂತವು, ತಲೆಯಾಡಿಸುತ್ತ ಕಿವಿ ನಿಲ್ಲಿಸುತ್ತ. ಜತೆಯಲ್ಲೇ ಗೊಲ್ಲರು ಓಡೋಡಿ ಬಂದು ಕಾಣಿಸಿಕೊಂಡು ದೃಶ್ಯ ಕಂಡು ಮೂಕರಾಗಿ ಮುಗ್ಧರಾಗಿ ಮೆಲ್ಲಗೆ ಹೆಜ್ಜೆಯ ಮೇಲೆ ಹೆಜ್ಜೆಯಿಟ್ಟು ಮುಂದುವರಿದು ಗೋವುಗಳನ್ನೊರಗಿ ಗಾನತಲ್ಲೀನ ರಾದರು.

ಅಲ್ಲಿ ಆಗ ಕಾಣುತ್ತಿದ್ದುದೊಂದು ಚಿತ್ರಿಸಿದ ಅಪೂರ್ವ ಕಲಾಕೃತಿ—ಗಾನಕಲೆ ಯಿಂದಲೂ ಕೂಡಿದುದು!

ಅರಮನೆಯಲ್ಲಿ ಭಾಮೆಗೆ ಇನ್ನೂ ನಿದ್ದೆ ಹತ್ತಿರಲಿಲ್ಲ. ಆದರೆ ಮನಸ್ಸಿನ ಕೋಪಾವೇಶದಿಂದ ಕಿವಿ ಕಿವುಡಾಗಿ ಅವಳಿಗೆ ಕೊಳಲು ಕೇಳುತ್ತಿರಲಿಲ್ಲ. ಅತ್ತಿತ್ತ ಹೊರಳುತ್ತಿದ್ದಳಷ್ಟೆ. ಬಲರಾಮ ಮತ್ತಿನ ನಿದ್ದೆಯಲ್ಲಿ ಎಲ್ಲೋ ಇದ್ದ. ಮಲಗಿದ್ದ

ರುಕ್ಮಿಣಿ ತಟ್ಟನೆದ್ದು ಕುಳಿತು ಆಲಿಸಿ ಕೇಳಿ ಕಿಟಿಕಿಗೆ ಧಾವಿಸಿ ಬಂದು ನೆಲಕ್ಕಂಟಿಕೊಂಡು ನಿಂತುಬಿಟ್ಟಳು-ಪ್ರತಿಮೆಯಂತೆ.

ಈ ಮಧುರ ಮುರಲಿ ಎಷ್ಟು ಕಾಲ ನಡೆಯಿತೋ-ಕಾಲದೆಣಿಕೆಯಿರಲೇ ಇಲ್ಲ. ಈ ಕೊಳಲೂ ಕಡೆಗೊಮ್ಮೆ ನಿಂತಿತು.

"ಓ ಕೃಷ್ಣಾ! ಗೆಳೆಯ ಕೃಷ್ಣಾ! ಪ್ರಿಯ ಕೃಷ್ಣಾ! ಮುದ್ದು ಕೃಷ್ಣಾ, ನನ್ನ ಕೃಷ್ಣಾ, ರಾಧಾ ಕೃಷ್ಣಾ. ನನ್ನ ಪ್ರಾಣಾ!" ರಾಧೆ ಹರ್ಷೋದ್ವೇಗದಿಂದ ಕೃಷ್ಣನ ಕಿವಿಯೊಳಗೆ ಪಿಸಿಮಾತಿನಲ್ಲಿ ಉಸುರಿದಳು. "ಓ ಓ ಇದು ಗೋಕುಲ ಗೋಕುಲ! ದ್ವಾರಕೆಯಲ್ಲ ಅಲ್ಲ!....ಹೇ ಗೋಪಾಲ ಗೋವಿಂದ! ಈ ದಿವ್ಯಾನಂದಕ್ಕಾಗಿ ನಿನಗೇನು ಸಮರ್ಪಿಸಲಿ! ಇಗೊ ಇಗೋ ಒಪ್ಪಿಕೊ ಅರ್ಪಿಸಿಕೊ ಈ ಸಣ್ಣ ಕಾಣಿಕೆಯನ್ನು—ನನ್ನ ಸರ್ವಸ್ವವನ್ನು!" ಎನ್ನುತ್ತ ಆ ಅರೆ ಆಲಿಂಗನವನ್ನು ಮೆಲ್ಲಗೆ ಸಡಿಲಿಸಿ ಕೆಳಕೆಳಗೆ ಸರಿದು ಕೃಷ್ಣನ ಪಾದಕ್ಕಿಳಿದು ಕುಳಿತು ಕಾಲುಗಳನ್ನು ತೋಳುಗಳಿಂದ ಬಳಸಿಕೊಂಡಳು.

"ರಾಧಾ! ಬಾಳಗೆಳತಿ ರಾಧಾ! ನಾನು ರಾಧೆಯ ಕೃಷ್ಣನೇ, ರಾಧಾಕೃಷ್ಣ. ನಾವು ನಾವು ಬೇರೆಯೆ, ಬೇರೊಂದನ್ನು ಕೊಡುವುದಕ್ಕೆ? ನನ್ನ ಪ್ರೇಮದ ಸಾಕಾರ ಸ್ವರೂಪವೇ ನೀನು. ನೀನು ಕೊಡಬೇಕಾದದ್ದೇನಿದೆ, ಕೊಡಲೇನಿದೆ? ಏಳು ಏಳು?" ಅವಳನ್ನು ಕೈಹಿಡಿದು ಮೈಹಿಡಿದು ಮೇಲೆತ್ತಿನಿಲ್ಲಿಸಿಕೊಂಡ. "ಇಗೊ, ಕೊಡಬಹುದಾದುದೇನಾದರೂ ಇದ್ದರೆ ನಿನ್ನ ನೆಟ್ಟ ಈ ಪ್ರೇಮಪೂರಿತ ಮುಗ್ಧನೋಟವೊಂದೇ ಸಾಕು, ನನ್ನ ಕೆನ್ನೆಯ ಮೇಲೆ ಚಲಿಸುತ್ತಿರುವ ನಿನ್ನ ಬೆಚ್ಚನೆಯುಸಿರೇ ಸಾಕು, ನಿನ್ನ ಈ ಸಾಮೀಪ್ಯವೇ ಸಾಕು, ನೀನು ಅಂದ 'ಅರ್ಪಣೆ'ಯ ಪದವೊಂದಕ್ಕೆ ಬೆಲೆ ಕಟ್ಟಲಾರೆ—ನನ್ನನ್ನೇ ಕೊಟ್ಟುಕೊಂಡರೂ ಸಾಲದು, ಪ್ರಿಯೆ ರಾಧಿಕಾ!" ಅವಳ ತಲೆ ಮುಖ ಬೆನ್ನುಗಳನ್ನು ಮೃದುವಾಗಿ ನೇವರಿಸುತ್ತ ತಾನೂ ಅವಳ ಕಿವಿಯಲ್ಲಿ ಪಿಸಿಯುಸಿರಿದ.

ಈ ಮಾಯೆಯ—ಸತ್ಯಮಾಯೆಯ—ಜಗತ್ತು ಮುಗಿದು ಮಾಯವಾದ ಮೇಲೆ ಕೃಷ್ಣ ರಾಧೆಯನ್ನು ಸುಭದ್ರಾಭವನದಲ್ಲಿ ಬಿಟ್ಟು ಮುಂಜಾನೆ ಮುಂದಾಗಿ ಭೇಟಿಯಾಗುವುದಾಗಿ ಭರವಸೆಯಿತ್ತು ಭಾಮಾಭವನಕ್ಕೆ ಬಂದಾಗ ಮಧ್ಯರಾತ್ರಿ ಮೀರಿ ಯಾವುದೋ ಕಾಲವಾಗಿತ್ತು. ಇಲ್ಲಿ ಕೃಷ್ಣನ ಇನ್ನೊಂದು ವಶೀಕರಣ ಯಕ್ಷಿಣಿ ಪ್ರಕರಣ ನಡೆಯಲಾರಂಭಿಸಿತು.

೫

ನಿದ್ದೆಕೆಟ್ಟ ಕೆಂಗಣ್ಣಿನ ಕೃಷ್ಣ ಬೆಳಗ್ಗೆ ಅವಸರ ಅವಸರವಾಗಿ ಸುಭದ್ರಾಭವನಕ್ಕೆ ಬಂದಾಗ ರಾಧೆ ದ್ವಾರಕೆಗೆ ಬರುವಾಗ ಹಾಕಿಕೊಂಡಿದ್ದ ಉಡುಪನ್ನೇ ಧರಿಸಿ ಗಂಟನ್ನು ಹೊತ್ತು ನಿಂತಿದ್ದುದು ಕಂಡಿತು. ಅವಳ ಕಣ್ಣೂ ಕೆಂಪಾಗಿತ್ತು. ಬತ್ತಿದ ಮುಖ ಸ್ವಲ್ಪ ಬಾಡಿದ ಕೆಂದಾವರೆಯಾಗಿತ್ತು.

"ಓ, ಇದೇನು ರಾಧಿಕಾ!"

"ಹೌದು ಕೃಷ್ಣ, ಗೋಕುಲಕ್ಕೆ ಹೊರಟಿದೇನೆ, ರಾತ್ರಿಯೆಲ್ಲ ಯೋಚಿಸಿ ಯೋಚಿಸಿ ನಿರ್ಧರಿಸಿ."

"ಆಶ್ಚರ್ಯ ಆಶ್ಚರ್ಯ! ಇದೆಂಥ ಹುಚ್ಚು! ನೋಡಿದರೆ ಗೋಕುಲದಿಂದ ಕದ್ದು ಓಡಿಬಂದಂತೆ ಇಲ್ಲಿಂದಲೂ ಕದ್ದು ಓಡಿಹೋಗಬೇಕೆಂದು ಸನ್ನಾಹಮಾಡುತ್ತಿದ್ದೆಯೇನು?"

"ನಿಜ ಕೃಷ್ಣ, ನಿನ್ನನ್ನು ಬೀಳ್ಕೊಳ್ಳುವ ಧೈರ್ಯ, ಕಲ್ಲೆದೆ ನನಗೆಲ್ಲಿಯದು? ಆದರೂ ನಿನಗೆ ಹೇಳದೆ ಹೋಗಲಾರದೆ ಸಂಕಟ ಪಡುತ್ತ ತಡೆದು ಈಗ ಹೇಳಿಹೋಗುವ ಮಹಾ ಸಂಕಟಕ್ಕೆ ಸಿಕ್ಕಿಬಿಟ್ಟಿದ್ದೇನೆ. ಕೃಷ್ಣ, ನೀನೇ ಕಾಪಾಡಬೇಕು, ಶಕ್ತಿ ಕೊಟ್ಟು."

"ಚೆನ್ನಾಯಿತು, ಚೆನ್ನಾಯಿತು. ಹೆಂಗಸು ಚಂಚಲೆಯೆಂದೆನ್ನುವುದು ವ್ಯರ್ಥವಾಯಿತು. ಈಗಲೇ ಹೋಗವುದೆಂದರೇನು, ನಿನ್ನೆತಾನೆ ಬಂದಿದೀಯೆ. ಆಗದು ಆಗದು, ಆಗದು ರಾಧ" ಮುಂದೆ ಬಂದು ಸೊಂಟದ ಗಂಟಿಗೆ ಕೈಹಾಕಿದ.

"ಇರುವುದೂ ಆಗದು ಕೃಷ್ಣ. ನಿನಗೆ ಗೊತ್ತಿಲ್ಲದೆ, ನಾನು ಎಂದೂ ನಿನ್ನ ಆಜ್ಞಾಧಾರಕಳಾದವಳಲ್ಲ. ನೀನೇ ಆಜ್ಞಾಧಾರಕ. ಭಾಮಾದೇವಿಯಷ್ಟೇ ನಾನೂ ಬಿಗಿಯಾಗಿರಬಲ್ಲೆ ಬೇಕಾದರೆ!" ವಿಷಾದದಿಂದ ನಸುನಗುತ್ತ ಹೇಳಿದಳು.

"ಈ ಹಠಾತ್ ತೀರ್ಮಾನಕ್ಕೆ ಕಾರಣವಾದರೂ ಏನು?"

"ಇನ್ನೇನು ಕೃಷ್ಣ, ಬಂದಾಯಿತು, ನಿನ್ನನ್ನು ಕಣ್ಣುತುಂಬ ನೋಡಾಯಿತು, ನಿನ್ನೊಡನೆ ಇದ್ದು ನಲಿದಾಯಿತು—ಎದೆ ತಣಿಯುವಷ್ಟು, ದೇಹ ದಣಿಯುವಷ್ಟು. ಭೇಟಿಯ ಈ ಸುಖದ ಸವಿನೆನಪು ಇನ್ನು ಕೆಲವು ದಿನಗಳು ನನ್ನೊಡನಿದ್ದು ಪುನರ್ ಭೇಟಿಯ ಹಂಬಲವನ್ನು ಸ್ವಲ್ಪವಾದರೂ ತಡೆದಿರುತ್ತದೆ. ಈ ತುಂಬುಸುಖಕ್ಕಿಂತ ಹೆಚ್ಚನ್ನು ಅಪೇಕ್ಷಿಸುವುದು ದುರಾಸೆಯಾದೀತು. ಇಷ್ಟಕ್ಕೂ ಆಸೆಗೆ, ನನ್ನ ಆಸೆಗೆ, ಕೃಷ್ಣನ ಸಂಗಕ್ಕಾಗಿ ಹಾತೊರೆಯುವ ರಾಧೆಯ ಆಸೆಗೆ ಮಿತಿಯೆಲ್ಲಿ, ಕೊನೆಯೆಲ್ಲಿ? ...."

"ಇಷ್ಟೇ ಕಾರಣವಾಗಿರಲಾರದು; ನಾನು ಒಪ್ಪಲಾರೆ."

"ಗೋಕುಲದ ಗೊಲ್ಲಳಿಗೆ ಕೃಷ್ಣ ಒಪ್ಪಿಗೆಯಾದರೆ ಈ ನಾಗರಿಕತೆಯ ಶಿಖರ ಈ ದ್ವಾರಕಾನಗರಿ ಹೇಗೆ ಒಗ್ಗೀತು? ಎಂದಿಗೂ ಇಲ್ಲ. ಈ ಜಾಗ, ಈ ಜನ, ಉಹುಂ ಉಹುಂ." ತಲೆಯಲ್ಲಾಡಿಸಿದಳು.

"ನಾನು ಇದ್ದೇನಲ್ಲ ರಾಧಿಕಾ! ಯಾವಾಗಲೂ ಎಡೆಬಿಡದೆ ನಿನ್ನೊಡನೆ ಇರುತ್ತೇನೆ ಆಡುತ್ತೇನೆ ಪಾಡುತ್ತೇನೆ—ಎಲ್ಲ ಗೋಕುಲದಲ್ಲಿದ್ದಂತೆಯೇ."

"ಆಹಾ, ಅದಕ್ಕಿಂತ, ನಿನ್ನನ್ನು ಕ್ಷಣಕಾಲವಾದರೂ ನೋಡುವುದಕ್ಕಿಂತ ಹೆಚ್ಚಿನ ಆನಂದ ನನಗೇನು ಇದೆ? ಆದರೆ ಕೃಷ್ಣ, ನೀನಿಲ್ಲಿ ಗೊಲ್ಲನಲ್ಲ. ನೀನು ಯಾದವ

ವಂಶದ ಯುವರಾಜ. ಆ ಘನತೆಗೆ, ಹೊಣೆಗೆ ತಕ್ಕಂತೆ ನಡೆದುಕೊಳ್ಳಬೇಕು. ಅದು ಬಿಟ್ಟು ಹಳ್ಳಿಯ ಹುಡುಗಿಯೊಬ್ಬಳ ಸೆರಗನ್ನು ಹಿಡಿದುಕೊಂಡು ಓಡಾಡುತ್ತಿರುವುದು ಗೌರವದ ಮಾತೋ, ರಾಜಧರ್ಮವೋ?........"

"ಅದರ ಗೊಡವೆಯನ್ನು ಬಿಡು ರಾಧ. ನಾನು ನೋಡಿಕೊಳ್ಳುತ್ತೇನೆ."

"ಇಲ್ಲ ಕೃಷ್ಣ, ನಿನ್ನ ಘನತೆ ಗೌರವಗಳನ್ನು ಕಾಪಾಡುವ ಹೊಣೆಯೂ ನಿನ್ನ ಗೆಳತಿ ರಾಧೆಗಿದೆ. ಇಲ್ಲದಿದ್ದರೆ ನಾನೆಂಥ ಗೆಳತಿ ಹೇಳು."

"ಓಹೋ, ಬಹಳ ಬಹಳ ಯೋಚನೆ ಮಾಡುತ್ತಿದೀಯೆ ರಾಧಾ—ಆ ಸುಂದರ ಶಿರದಲ್ಲಿ. ಅದು ಯಾವುದೂ ನಿನಗೆ ಬೇಡ........"

"ಇನ್ನೂ ಕೇಳು ಕೃಷ್ಣ, ನಾನೊಬ್ಬಳು ಕಾಡು ಹುಡುಗಿ ಬಂದು ಹಳೆಯ ಸಂಬಂಧ ವನ್ನು ಮುಂದಿಟ್ಟು ನಿನ್ನನ್ನು ಕಟ್ಟಿಹಾಕಿ ನಿನ್ನ ಕೈಹಿಡಿದ ಮಡದಿಯರಿಂದ ಕಿತ್ತು ಕೊಳ್ಳಲೇ? ಆಗದು ಕೃಷ್ಣ. ಹಾಗಾಗಲೇ ಬಾರದು. ನಾನಿರುವವರೆಗೂ ನಿನ್ನನ್ನು ಬಿಡಲಾರೆ. ಕಾಡಿ ಬೇಡಿ ಸಂಗಡಲೇ ಇರುತ್ತೇನೆ. ಅಂದ ಮೇಲೆ ಏನು ಪರಿಣಾಮ ಯೋಚಿಸು."

"ಹ್ಞೂ! ಇದನ್ನೂ ಯೋಚಿಸಿಕೊಂಡಿದೀಯಾ?"

"ಹೌದು ಕೃಷ್ಣ, ನಿನ್ನೆ ಅಷ್ಟು ಕಾಲದ ಮೇಲೆ ನಿನ್ನನ್ನು ಕಂಡ ಸಂತೋಷ ಭರದಲ್ಲಿ ಸ್ವಾರ್ಥ ನನ್ನ ವಿವೇಚನೆಯನ್ನು ಮುಚ್ಚಿ ಹೇಗೆ ಹೇಗೋ ಹುಚ್ಚು ಹುಚ್ಚಾ ಗಿಯೇ ನಡೆಸಿಬಿಟ್ಟಿತು. ನೀನೂ ನಿನ್ನ ಔದಾರ್ಯದಿಂದ ಸ್ನೇಹದಿಂದ ರಾಜಪ್ರತಿಷ್ಠೆ ಯನ್ನು ಕಿತ್ತೊಗೆದು ನನ್ನೊಡನೆ ನನ್ನ ಗೊಲ್ಲನಂತೇ ನಡೆದುಕೊಂಡೆ. ಮತ್ತೆ, ಈಗ ಇನ್ನು ಮುಂದೆ ಇದನ್ನೆಲ್ಲ ತಿಳಿದು ತಿಳಿದೂ ಅದನ್ನೇ ಮುಂದುವರಿಸಲೆ? ಇದನ್ನೆಲ್ಲ ಚಿಂತಿಸುತ್ತ ಚಿಂತಿಸುತ್ತ ನನಗೆ ನಿದ್ದೆ ಹತ್ತಲೇ ಇಲ್ಲ."

"ಅಯ್ಯೋ, ನನ್ನ ಬಡ ರಾಧೆ! ಭಾಮೆಯೊಂದಕ್ಕೆ ನಿದ್ದೆಕೆಟ್ಟರೆ ನೀನು ಇನ್ನೊಂದಕ್ಕೆ—ತದ್ವಿರುದ್ಧ! ಇದೇ ಸುಖವನ್ನೇ ನಾನು ನಿನಗೆ ಕೊಟ್ಟದ್ದು ಕಡೆಗೆ?"

"ನೀನು ಗೆಳೆಯನಾಗಿ ಕೊಡದ ಸುಖ ಯಾವುದು ಕೃಷ್ಣ? ಆದರೆ ವಾಸುದೇವ, ಈಗ ನಿನ್ನ ಜಗತ್ತಿಗೂ ನನ್ನ ಜಗತ್ತಿಗೂ ಇರುವ ದೊಡ್ಡ ಅಂತರವನ್ನು ನಾನು ಅರಿತು ಕೊಂಡಿದ್ದೇನೆ."

"ಅ! ಏನೆಂದೆ? ಎಲ್ಲಿ ರಾಧ, ಮುಖ ಎತ್ತು. ನಿನ್ನನ್ನು ಇನ್ನೊಮ್ಮೆ ನೋಡು ತ್ತೇನೆ. ನೀನು ನನ್ನ ರಾಧೆಯೇ? ಅಥವ ಅವಳ ವೇಷದಲ್ಲಿ ಬಂದ ಉಪಾಧ್ಯಾಯಿನಿಯೋ, ಸನ್ಯಾಸಿನಿಯೋ? ಛಿ ಛಿ! ನಿನಗೇಕೆ ಈ ಧರ್ಮಸೂಕ್ಷ್ಮ—ನನಗೆ ಬಿಡುವುದರಬದಲು. ತೆಗಿ ತೆಗಿ ಗಂಟನ್ನು ಕೆಳಗಿಳಿಸು."

"ಇಲ್ಲ ಕೃಷ್ಣ, ಸಾಧ್ಯವೇ ಇಲ್ಲ. ಅಪ್ಪಣೆಕೊಟ್ಟುಬಿಡು. ನೀನು ಎಂದಾದರೂ ಗೋಕುಲಕ್ಕೆ ಬಂದರೆ ಮತ್ತೆ ನಿನ್ನೆಯಂಥ ಸವಿದಿನಗಳನ್ನು ಕಾಣುತ್ತೇನೆ. ದ್ವಾರಕೆ ಯಲ್ಲಿಲ್ಲ ಇನ್ನು."

"ಹುಂ! ಹುಂ!........ಅವನ್ನು ದ್ವಾರಕೆಯಲ್ಲಿ ಕಾಣಲೂ ಅಡ್ಡಿಯಿಲ್ಲವೆಂದೇ ನಾನು ಹೇಳುತ್ತಿರುವುದು........ನೀನು ಹೊರಡುವ ಮಾತೇ ಇಲ್ಲ."

"ಕೃಷ್ಣ, ಹುಡುಗನಂತೆ ಹಟಮಾಡಬೇಡ........"

"ನೀನು ಹುಡುಗಿಯಂತೆ ಮಾಡುತ್ತಿದೀಯಲ್ಲ ಮತ್ತೆ? ಹೋಗಲು ನಾನು ಬಿಡೆ."

"ನಿನ್ನ ಮಾತನ್ನು, ಆಜ್ಞೆಯನ್ನು ನಡೆಸಲು ನಾನು ನಿನ್ನ ಮಡದಿಯಲ್ಲ, ತಿಳಿ!" ರಾಧೆ ನಸುನಗುತ್ತ ಹೇಳಿದಳು "ಇಷ್ಟಬಂದಂತೆ ಮಾಡಬಲ್ಲ ಸ್ವತಂತ್ರಳು!"

ಅವಳ ವಿನೋದದಲ್ಲಿ ಬೆರೆದಿದ್ದ ವಿಷಾದ ಅವನಿಗೆ ಗೊತ್ತಾಗದೆ ಇರಲಿಲ್ಲ. ಅವನು ಕ್ಷಣಕಾಲ ಸುಮ್ಮನಿದ್ದ—ಅವಳಂತೆಯೇ ಪೆಚ್ಚಾಗಿ.

"ಹೂಂ. ಸರಿ ಸರಿ........ನಿನ್ನನ್ನು ನಿಲ್ಲಿಸಿಕೊಳ್ಳುವುದು ಸಾಧ್ಯವೇ ಇಲ್ಲ ಹಾಗಾದರೆ?" ಕೃಷ್ಣ ಯೋಚಿಸುತ್ತ ಕೇಳಿದ.

"ಇಲ್ಲ, ಖಂಡಿತವಾಗಿಯೂ ಇಲ್ಲ."

"ಸರಿ ಹಾಗಾದರೆ, ನಿನ್ನ ಇಷ್ಟವನ್ನು ಇನ್ನು ವಿರೋಧಿಸುವುದಿಲ್ಲ."

"ನನ್ನ ಕೃಷ್ಣ! ಈ ರಾಜ್ಯದೊಡನೆ, ನಿನ್ನ ಮಡದಿಯರೊಡನೆ ಸುಖವಾಗಿ ಬಾಳು! ನಿನ್ನ ಸೌಖ್ಯ ಶುಕ್ಲಪಕ್ಷದ ಚಂದ್ರನಂತೆ ದಿನದಿನಕ್ಕೂ ಹೆಚ್ಚುತ್ತಿರಲಿ! ಭಾಮಾದೇವಿಗೆ ನನ್ನ ಪ್ರೇಮವನ್ನು ತಿಳಿಸು, ರುಕ್ಮಿಣೀದೇವತೆಗೆ ಪ್ರೀತಿಯ ಪ್ರಣಾಮ, ಬಲದೇವನಿಗೆ ಭಕ್ತಿಯ ನಮಸ್ಕಾರ." ಕಣ್ಣು ತುಂಬಿದಳು.

"ರಥವನ್ನು ಸಿದ್ಧಪಡಿಸುವಂತೆ ಹೇಳುತ್ತೇನೆ."

"ಬೇಡ ಕೃಷ್ಣ, ಬಂದಂತೆ ಹೋಗಲಾರನೆ?"

"ರಾಧಾ, ಇದನ್ನಾದರೂ, ಇಷ್ಟನ್ನಾದರೂ ನಡೆಸಿಕೊಡಲಾರೆಯಾ?"

"ಆಗಲಿ ಕೃಷ್ಣ."

ಸಿದ್ಧವಾಗಿ ಬಂದ ರಥದ ತುಂಬ ಇದ್ದ ಅಮೂಲ್ಯ ವಸ್ತ್ರಾಭರಣಗಳನ್ನು ಕಂಡು ರಾಧೆ ವಿರೋಧಿಸಿದಳು.

"ಕೃಷ್ಣ, ಇವೊಂದೂ ಬೇಡ. ನಿನ್ನೊಡನಿದ್ದಾಯಿತು, ಅದಕ್ಕಿಂತಲೇ ಇನ್ನು? ಈ ನಿರ್ಜೀವವಸ್ತುಗಳಿಂದ ನನಗಾಗಬೇಕಾದುದೇನು?"

"ಇನ್ನು ಯಾವುದು ಬೇಕು ಹೇಳು ರಾಧಾ."

"ಯಾವುದೂ ಬೇಡ ಕೃಷ್ಣ."

"ನಾನೂ ಬೇಡವೆ?" ಕೃಷ್ಣ ನಗುತ್ತ ಕೇಳಿದ.

"ಅ! ಹಾಗೆಂದರೇನು ಕೃಷ್ಣಾ!........ನೀನು ಬೇಡವೆ ನನಗೆ, ನಿನ್ನ ರಾಧೆಗೆ? ಆದರೆ........"

"ನಾನು ನಿನ್ನೊಡನೆ ಬರುತ್ತೇನೆ ರಾಧೆ—ನೀನಿಲ್ಲಿ ಇದರ ಮೇಲೆ........ಬರಲೋ ಬೇಡವೋ?"

"ಓ ಕೃಷ್ಣ, ನನ್ನನ್ನು ಈ ಇಕ್ಕಟ್ಟಿಗೆ ಸಿಕ್ಕಿಸಬೇಡ. ಬಾ ಎನ್ನಲಾರೆ; ಬೇಡ ಎಂದೂ ಎನ್ನಲಾರೆ—ಅಂಥ ಎದೆ ನನಗಿದೆಯೆ? ಅಷ್ಟು ನಿಸ್ವಾರ್ಥಿಳಲ್ಲ ಕೃಷ್ಣ. ನನ್ನನ್ನು ಪರೀಕ್ಷಿಸಬೇಡ."

"ಹಾಗಾದರೆ ನಿನ್ನೊಡನೇ ಬರುತ್ತೇನೆ."

"ಓ ಕೃಷ್ಣಾ ! ನಾನೇನು ಹೇಳಲಿ, ಮಾಡಲಿ ?"

"ರಾಧಾ, ಬಹಳ ದಿನಗಳಿಂದ ನಿನ್ನ ಭೇಟಿಗಾಗಿ, ನಿಮ್ಮೆಲ್ಲರ ಭೇಟಿಗಾಗಿ ಗೋಕುಲಕ್ಕೆ ಬರಬೇಕೆಂದಿದ್ದೆ. ಈಗ ನೀನು ಆ ಸುಸಂದರ್ಭವನ್ನೂ ಒದಗಿಸಿ ಕೊಟ್ಟಿದೀಯೆ."

"ಆಹಾ, ಎಷ್ಟೊಂದು ಚೆನ್ನ !........ಆದರೆ ಕೃಷ್ಣ, ಹೀಗೇ ಬಂದುಬಿಡುತ್ತೀಯಾ ನಿನ್ನವರನ್ನೆಲ್ಲ ಇಲ್ಲೇ ಬಿಟ್ಟು? ಅದರಲ್ಲಿಯೂ ಸತ್ಯಭಾಮಾದೇವಿಯನ್ನು ಬಿಟ್ಟು ಬಂದರೆ........"

"ಅವರ ಪಾಡನ್ನು ಅವರು ನೋಡಿಕೊಳ್ಳಬಲ್ಲರು. ಈಗ ನಮ್ಮನಮ್ಮನ್ನು ನಾವು ನೋಡಿಕೊಳ್ಳೋಣ."

"ಅಂತೂ ಆಗಬಾರದ್ದು ಆಗುತ್ತಿದೆ. ಧರ್ಮೋಪದೇಶಮಾಡಿದ ನಾನೂ ಒಪ್ಪುತ್ತಿದ್ದೇನೆ. ನಾನೊಬ್ಬಳು ಮಹಾ ಆಸೆಬುರುಕಿ! ನನಗೆ ಧರ್ಮವೆಲ್ಲಿ. ನನ್ನಲ್ಲಿ ತುಂಬಿರುವುದೆಲ್ಲ ಬರಿ ಪ್ರೇಮವೇ."

"ಪ್ರೇಮಧರ್ಮ ರಾಧಿಕಾ !........ಈಗಲಾದರೂ ನನ್ನೊಡನೆ ರಥ ಹತ್ತುವೆ ತಾನೆ ?"

"ಕೇಳಬೇಕೇ ಕೃಷ್ಣ ? ನೀನಿದ್ದಲ್ಲಿ ನನ್ನ ಪ್ರಾಣವೂ. ನಾನು ಹೊರಹೊರಗೆ ಹೇಗೆ ಹೇಗೆ ನಟಿಸಿದರೂ ಕೃಷ್ಣ, ನಿನ್ನನ್ನು ಬಿಡಲಾರದೆ ಬಿಟ್ಟುಹೋಗಬೇಕೆಂದು ಕೊಂಡಾಗ ನನಗೆ ಹೇಗೆನ್ನಿಸುತ್ತಿತ್ತು ಬಲ್ಲೆಯಾ ?"

"ನನಗೆ ಗೊತ್ತಾಗದೇ ರಾಧ, ನಿನ್ನೊಡನೆ ನಿನ್ನೊಂದು ಭಾಗವಾಗಿ ಬೆಳೆದವನಿಗೆ ?"

ರಾಧೆಯನ್ನೆತ್ತಿ ಹತ್ತಿಸಿ ತಾನೂ ರಥವೇರಿದ ಕೂಡಲೇ ಕುದುರೆಗಳು ಚಿಮ್ಮಿದವು, ನಗರದ ಬೀದಿಗಳಲ್ಲಿ ಕುಣಿಕುಣಿಯುತ್ತ ಸಾಗಿದವು. ಸ್ವಲ್ಪ ಹೊತ್ತಿನಲ್ಲೇ ನಗರವನ್ನು ಬಿಟ್ಟವು.

ಪ್ರಯಾಣದಲ್ಲಿ ರಾಧೆ ಒಮ್ಮೆ ಹಿಂತಿರುಗಿ ನೋಡಿವಾಗ ಹಿಂದೆ ದೂರದಲ್ಲಿ ದೊಡ್ಡ ಧೂಳು ಎತ್ತರವಾಗಿ ಏಳುತ್ತಿದ್ದುದು ಕಂಡಿತು.

"ಕೃಷ್ಣ, ನೋಡು ನೋಡು ಅಲ್ಲಿ ! ಅದೇನು ?" ಅವನನ್ನು ಹಿಡಿದು ತಿರುಗಿಸಿದಳು.

"ಅದೇ ? ಯಾದವ ಸೈನ್ಯವೆಂದು ಕಾಣುತ್ತದೆ."

"ಯಾದವ ಸೈನ್ಯವೇ ! ಯಾಕೆ ಬರುತ್ತಿದೆ ಇತ್ತ ?"

"ಯಾಕೆ! ರಾಧೆ ಅಪಹರಿಸಿಕೊಂಡುಹೋಗುತ್ತಿರುವ ಯದುಕುಲಲಲಾಮ ನನ್ನು ಬಿಡಿಸಿಕೊಂಡುಹೋಗುವುದಕ್ಕೇ ಇರಬೇಕು, ಇನ್ನೇತಕ್ಕೆ?........ನಿನಗೆ ಭಯವೆ ರಾಧಾ?"

"ನನಗೆ ಯಾವ ಭಯ, ಯಾರ ಭಯ—ಪ್ರಪಂಚವೇ ಮೇಲೇರಿ ಬರಲಿ, ನೀನಿರುವೆಯಲ್ಲ. ನಿನ್ನ ಶಕ್ತಿ ಸಾಮರ್ಥ್ಯಗಳನ್ನರಿಯದವಳೇ ನಾನು. ಮಗುವಾಗಿ ದ್ದಾಗಲೇ ಪೂತನಾ ಪ್ರಕರಣದಿಂದ ಕಂಸವಧೆಯವರೆಗೆ ಮಹಾಮಹಿಮೆಯನ್ನು ತೋರಿಸಿದ ಮಹಿನೀಯನಲ್ಲವೆ ನೀನು?"

"ಯಾದವರೊಡನೆ ಭಾಮೆಯೂ ಬರುತ್ತಿರಬಹುದು."

"ಅ!"

"ನೋಡಿದೆಯಾ, ಭಾಮೆಯ ಭಯವಾದರೂ ಇದೆಯೋ—ನಿನಗೆ, ನನಗೆ!"

ಕ್ಷಣಕಾಲ ಮೌನ ನೆಲೆಸಿತ್ತು. ಕೃಷ್ಣ ಒಳಗೊಳಗೇ ನಗುತ್ತಿದ್ದ.

"ಭಯವೇನಿಲ್ಲ ಕೃಷ್ಣ........ಗೋಕುಲದಲ್ಲಿ ನಾನು ರಾಣಿ, ರಾಧಾರಾಣಿ, ಕೃಷ್ಣನ ರಾಣಿ! ಭಾಮಾದೇವಿಗೆ ತೋರಿಸುತ್ತೇನೆ—ಅವಳ ಪಟ್ಟನ್ನೇ!"

"ನೋಡಿದೆಯ, ನೋಡಿದೆಯಾ. ನಿಮ್ಮಿಬ್ಬರಿಗೂ ಚಾಚೂ ವ್ಯತ್ಯಾಸವಿಲ್ಲ. ಅಷ್ಟೇ ಅಸೂಯಾಪರರು!"

"ಇಲ್ಲ ಕೃಷ್ಣ, ನಾನು ಹಾಗಲ್ಲ. ನೀನು ಬೇಡಿದವಳಿಗೆ ಎದೆಯನ್ನು ಕೊಡು, ಕೈಹಿಡಿದವಳಿಗೆ ಕೈಕೊಡು ಅಷ್ಟೆ!"

"ಭಲೆ ಭಲೆ, ಒಳ್ಳೆಯ ತೀರ್ಮಾನ! ಬಹು ಸಾಧು!........ರಾಧಾ, ಆತಂಕ ವನ್ನು ಬಿಡು. ಅದಕ್ಕೆ ಅವಕಾಶವೇ ಇರುವುದಿಲ್ಲ. ಭಾಮಾ ಬಹಳ ಬದಲಾಯಿಸಿ ಬಿಟ್ಟಿರುತ್ತಾಳೆ—ಗೋಕುಲಕ್ಕೆ ತಲುಪುವಹೊತ್ತಿಗೆ. ನೀನು ಬಿಡುವ ಭಾಗವನ್ನೇ ಮಹಾಪ್ರಸಾದವೆಂದು ಸ್ವೀಕರಿಸುತ್ತಾಳೆ; ನೋಡುತ್ತಿರು."

"ಅದಕ್ಕೆ ಕಾರಣನೂ ನೀನೇ—ಕಳ್ಳ ಕೃಷ್ಣ!"

ಇಬ್ಬರೂ ಗಟ್ಟಿಯಾಗಿ ನಗುತ್ತಿದ್ದರು. ರಥ ಓಡುತ್ತಿತ್ತು.

ಸೊಗಯಿಸಿ ಬಂದ ಮಾಮರನೆ, ತಳ್ತೆಲೆವಳ್ಳಿಯೆ, ಪೂತಜಾತಿ ಸಂ।
ಪಗೆಯೆ, ಕುಕಿಲ್ವ ಕೋಗಿಲೆಯೆ, ಪಾಡುವ ತುಂಬಿಯೆ, ನಲ್ಲರೊಳ್ಮೊಗಂ॥
ನಗೆಮೊಗದೊಳ್ ಪಳಂಚಲೆಯೆ ಕೂಡುವನಲ್ಲರೆ ನೋೞ್ಪೊಡಾವ ಬೆ।
ಟ್ಟುಗಳೊಳಮಾವ ನಂದನವನಂಗಳೊಳಂ ಬನವಾಸಿ ದೇಶದೊಳ್॥

ಚಾಗದ ಭೋಗದಕ್ಕರದ ಗೇಯದ ಗೊಟ್ಟಿಯಲಂಪಿನಿಂಪುಗ।
ಳ್ಗಾಗರಮಾದ ಮಾನಸರೆ ಮಾನಸರಂತವರಾಗಿ ಪುಟ್ಟಲೇ-॥
ನಾಗಿಯುಮೇನೊ ತೀರ್ದಪುದೆ, ತೀರದೊಡಂ ಮಱಿದುಂಬಿಯಾಗಿ ಮೇಣ್।
ಕೋಗಿಲೆಯಾಗಿ ಪುಟ್ಟುವುದು ನಂದನದೊಳ್ ಬನವಾಸಿ ದೇಶದೊಳ್॥

—ಪಂಪ

ಕೊರಟ ಶ್ರೀನಿವಾಸರಾವ್

ಕೊಡಗಿನ ಕೊನೆಯ ದೊರೆ

ಪರಮಪಾವನೆಯಾದ ಗಂಗೆಯ ಮಡಿಲಲ್ಲಿ ಸ್ತಬ್ದವಾಗಿ ಮಲಗಿ ನಿದ್ರಿಸುವ ಮಗುವಿನಂತೆ ಕಾಶಿಯ ಚಿಕ್ಕವೀರರಾಜೇಂದ್ರನ ಅರಮನೆಯು ತೋರುತ್ತಿತ್ತು. ಸುಮಾರು ನೂರೈವತ್ತು ಜನ ಪರಿವಾರದವರೂ, ರಾಜಬಂಧುಗಳೂ ಆಶ್ರಿತರೂ ವಾಸವಾಗಿದ್ದ ಆ ಕೊಡಗಿನ ಅರಮನೆ ಕಾಶೀ ನಗರದಲ್ಲಿ ಜನಜಂಗುಳಿಯಿಂದ ದೂರವಾಗಿ, ಗಂಗಾನದಿಗೆ ಸಮೀಪವಾಗಿತ್ತು.

ಕಾಶಿಗೆ ಬಂದ ಯಾತ್ರಿಕರು ಅದನ್ನು ಕೊಡಗಿನ ದೊರೆಯ ಅರಮನೆ ಎಂದೇ ಕರೆಯುತ್ತಿದ್ದರು. ಆದರೆ ಅರಮನೆಗೆ ಇರಬೇಕಾದ ವೈಭವವಾಗಲಿ, ಆಳುಕಾಳು ಪಹರೆ ಸೈನಿಕರು, ನಗಾರಿನೌಪತ್ತುಗಳಾಗಲೀ, ಆನೆ ಕುದುರೆಗಳ ಸಾಲಾಗಲೀ, ಸಾಹಿತಿಗಳು, ಸಂಗೀತಕಾರರು, ನರ್ತಕಿಯರೇ ಮೊದಲಾದ ಕಲಾವಿದರ ಪರಿವಾರವಾಗಲೀ, ಹೊಗಳು ಭಟ, ಸ್ತುತಿಪಾಠಕರ ಗಲಭೆ ಗದ್ದಲಗಳಾಗಲೀ ಇರಲಿಲ್ಲ. ಎಲ್ಲ ವೈಭವ, ಸದ್ದುಗದ್ದಲ ಸಡಗರ ಸಂಭ್ರಮಗಳನ್ನು ತನ್ನೊಳಗೆ ಅಡಗಿಸಿಕೊಂಡು, ನೀರವವಾಗಿ ಹರಿಯುವ ಭಾಗೀರಥಿಯಂತೆ ಈ ಅರಮನೆ ನಿಶ್ಶಬ್ದವಾಗಿತ್ತು ; ಗಂಗಾ ನದಿಯಂತೆ ಅನೇಕ ಉಬ್ಬರವಿಳಿತಗಳನ್ನು ಕಂಡಿದ್ದ ದೊರೆಯ ಜೀವನ ಈಗ ಪ್ರಶಾಂತವಾಗಿ ಹರಿಯುತ್ತಿತ್ತು. ಆದರೆ ಗಂಗೆಯೊಡನೆ ಬಂದು ಸೇರಿದ್ದ ಗುಪ್ತಗಾಮಿನಿ ಸರಸ್ವತಿಯಂತೆ, ತಾನು ಕಳೆದುಕೊಂಡಿದ್ದ ಕೊಡಗಿನ ಅಧಿಕಾರ ಪದವಿಗಳನ್ನು ಮರಳಿ ಪಡೆಯುವ ಒಂದು ಆಸೆ ದೊರೆ ಚಿಕ್ಕವೀರರಾಜನ ಹೃದಯಾಂತರಾಳದಲ್ಲಿ ಗುಪ್ತವಾಹಿನಿಯಾಗಿ ಪ್ರವಹಿಸುತ್ತಿತ್ತು.

ಆ ದಿನ ಅರಮನೆಯ ಉಪ್ಪರಿಗೆಯಲ್ಲಿ ಕುಳಿತು ಬೆಳುದಿಂಗಳಲ್ಲಿ ಕಣ್ಣು ಹಾಯುವವರೆಗೂ ಹಾಲು ಹೊಳೆಯಂತೆ ಹರಿದಿದ್ದ ಗಂಗಾಜಲವನ್ನು ನೋಡಿ, ಬೇಸರ ಬಂದ ದೊರೆ ಚಿಕ್ಕವೀರರಾಜನು ತನ್ನ ಆಪ್ತಮಿತ್ರನಾದ ಸಿರಕಾರ ಬಿದ್ದಂಡ ಸೋಮಯ್ಯನೊಡನೆ ಉದ್ಗಾರ ತೆಗೆದನು.

"ಸೋಮಯ್ಯ, ನನ್ನ ಇಡೀ ಜೀವನ ಈ ಸವಿಯನ್ನು ನೋಡುತ್ತ ಕಳೆಯಬೇಕೆಂದು ಹೇಳುವೆಯಾ? ಇನ್ನೆಷ್ಟು ದಿನ ಈ ಇಂಗ್ಲಿಷ್ ಸಾಹೇಬರು ಹೇಳಿದಂತೆ ಕೇಳುತ್ತಾ, ಇಲ್ಲಿ ಅವರು ಕೃಪೆಯಿಟ್ಟು ಕೊಟ್ಟಿದ್ದನ್ನು ತಿಂದುಕೊಂಡು, ಈ ದೇಹ

ಬೆಳಸುತ್ತಾ ಇರಬೇಕೆಂದು ಹೇಳುವೆ? ನನಗಂತೂ ಈ ಕಾಶೀನಗರದ ಜೀವನ ಬೇಸರ ಬಂದಿದೆ. ಇಲ್ಲಿಂದ ಎಲ್ಲಾದರೂ ದೂರ-ಬಹುದೂರ-ನನ್ನನ್ನು ಯಾರೂ ಬಂದು ನೋಡದಂತಹ ಸ್ಥಳಕ್ಕೆ ನಾನು ದೊರೆ ಎಂಬುದನ್ನು ಯಾರೂ ಜ್ಞಾಪಿಸದಂತಹ ನಾಡಿಗೆ ಹೊರಟುಹೋಗಿ, ಅಲ್ಲಿ ಮನಬಂದಂತೆ ಜೀವನ ನಡೆಸಬೇಕೆನಿಸುತ್ತಿದೆ....ಈ ಬಯಕೆ ಎಂದು ಕೈಗೂಡುವುದೋ ಕಾಣೆ. ಅಥವಾ ಈ ಬಂಧನದಲ್ಲಿಯೇ ನನ್ನ ಜೀವನದ ಕೊನೆಯ ಅಂಕವೂ ಮುಗಿದುಹೋಗುವುದೇನೋ!....ನನಗಂತೂ ಇಲ್ಲಿ ನಿಷ್ಕ್ರಿಯವಾಗಿ ಕುಳಿತು ತುಂಬಾ ಬೇಸರ ಬಂದಿದೆ—"

"ಪ್ರಭೂ, ತಾವು ಸಮಾಧಾನ ತಂದುಕೊಳ್ಳಬೇಕು. ಈಗ ನಾವು ದುಡುಕಿದರೆ ನಮ್ಮ ಕಾರ್ಯ ಸಾಧಿಸುವುದಿಲ್ಲ. ಹಿಂದೆ ದುಡುಕಿ ರಾಜ್ಯಕೋಶಗಳನ್ನು ಕಳೆದುಕೊಳ್ಳಬೇಕಾಯಿತು—ಈ ಬಾರಿ ಅಂತಹ ಪ್ರಯತ್ನಮಾಡಿ, ಪ್ರಾಣಕ್ಕೇ ಎರವಾಗಬೇಕಾದೀತು. ನಾವು ತೀರ ಎಚ್ಚರಿಕೆಯಿಂದ ಹೆಜ್ಜೆ ಇಡಬೇಕು."—ಎಂದ ಸೋಮಯ್ಯ.

"ಇಂತಹ ಹೇಡಿ, ನಿಷ್ಕ್ರಿಯ ಬಾಳಿಗಿಂತ ಸಾವು ಸುಖಕರ. ನನಗಂತೂ ಇಲ್ಲಿನ ಪ್ರಶಾಂತ ಜೀವನ ಬೇಸರವನ್ನು ತಂದಿದೆ. ಬದುಕಿನ ಜಂಜಡವನ್ನು ಕಳೆಯುವಂತಹ ಯಾವುದಾದರೂ ಮಹತ್ಕಾರ್ಯ ಕೈಗೊಳ್ಳಬೇಕೆಂದಿದ್ದೇನೆ."

"ಅಂದರೆ ತಾವು ಕೊಡಗಿಗೆ ಹೋಗಬೇಕೆಂದು ಬಯಸುವಿರಾ?"

"ಆ ಆಸೆ ನನಗೆ ಇಲ್ಲ, ಸೋಮಯ್ಯ. ಈ ಅಪಮಾನದ ಮೋರೆ ಹೊತ್ತು, ಅಲ್ಲಿ ನನ್ನವರಿಗೆ ಹೇಗೆ ಮುಖ ತೋರಿಸಲಿ? ಅಲ್ಲಿಗೆ ಹೋಗುವುದಕ್ಕಿಂತ, ಸಾಯುವುದು ಲೇಸು...."

"ಹಾಗಾದರೆ ಬೇರೆಲ್ಲಿಗಾದರೂ ಹೋಗಬಯಸುವಿರಾ?"

"ಹೌದು. ಈ ಸ್ಥಳ ಬಿಟ್ಟು ಎಲ್ಲಿಗಾದರೂ ಸರಿ, ಹೊರಟುಹೋಗಿ ತಲೆ ತಪ್ಪಿಸಿಕೊಳ್ಳಬೇಕೆಂದು ಆಸೆಯಾಗುತ್ತಿದೆ. ಈ ಹದಿನಾರು—ಹದಿನೆಂಟು ವರ್ಷಗಳಿಂದ ಈ ನಗರದಲ್ಲಿ ಇದ್ದು ನನಗೆ ಬೇಸರಬಂದಿದೆ....ಇಲ್ಲಿಂದ ದೂರ ಹೋಗಬೇಕೆಂದು ಅನಿಸುತ್ತಿದೆ....ಇಲ್ಲಿಯೇ ಇದ್ದರೆ ನನಗೆ ಹುಚ್ಚು ಹಿಡಿಯುವುದು ಖಂಡಿತ...."

"ನಾವು ಇಲ್ಲಿ ಸ್ವತಂತ್ರರಾಗಿದ್ದರೂ—ಇಂಗ್ಲಿಷ್ ಸರಕಾರ ನಮ್ಮನ್ನು ನಿರ್ಬಂಧದಲ್ಲಿ ಇರಿಸಿದೆ ಎಂಬುದನ್ನು ತಾವು ಮರೆಯಬಾರದು, ಪ್ರಭು. ಅವರು ನಮ್ಮ ತಂಟೆಗೆ ಬಾರದಿದ್ದರೂ ನಮ್ಮ ಚಲನವಲನಗಳನ್ನು ಕೂಲಂಕಷವಾಗಿ ನೋಡುತ್ತ, ಮೇಲಧಿಕಾರಿಗಳಿಗೆ ವರದಿಮಾಡುತ್ತಿರುವ ಅನೇಕ ಗೂಢಚಾರರು ಇಲ್ಲಿದ್ದಾರೆ! ನಾವು ಅವರ ಕಣ್ಣು ತಪ್ಪಿಸಿ, ಯಾವ ಸಾಹಸಕಾರ್ಯಕ್ಕೆ ಎಳಸಲೂ ಸಾಧ್ಯವಿಲ್ಲ. ಅವರ ಅನುಮತಿ ಇಲ್ಲದೆ ಎಲ್ಲಿಗೆ ಹೋಗಲೂ ಸಾಧ್ಯವಿಲ್ಲ....ನಮ್ಮಮೇಲೆ ಸರ್ಪಕಾವಲು ನಿಂತಿರುವ ಈ ಇಂಗ್ಲಿಷರ ಕಣ್ಣು ತಪ್ಪಿಸಿ ನಾವು ಯಾವ ಕೆಲಸ ಮಾಡಿದರೂ ಅಪಾಯವೇ...."

"ಈಗ ನಾವು ಇಂಗ್ಲೆಂಡಿಗೆ ಹೋದರೆ ಹೇಗೆ?"

ಈ ಮಾತು ಕೇಳಿ ಸೋಮಯ್ಯ ಬೆಚ್ಚಿಬಿದ್ದ. ಅವನ ಮುಖ ವಿಸ್ಮಯದಿಂದ ತುಂಬಿತು. ಅವನು ಗಂಭೀರನಾಗಿ ಕುಳಿತ ದೊರೆಯನ್ನು ಅಚ್ಚರಿಯಿಂದ ನೋಡಿ ಕೇಳಿದ :

"ಪ್ರಭೂ, ತಾವು ತಮಾಷೆಮಾಡುತ್ತಿಲ್ಲ ತಾನೆ ?"

"ಇಲ್ಲ ಸೋಮಯ್ಯ. ನನ್ನ ಮನಸ್ಸಿನಲ್ಲಿ ಈ ಕೆಲವು ದಿನಗಳಿಂದ ಮೇಲೆ ಮೇಲೆ ಬರುತ್ತಿರುವ ವಿಚಾರಗಳನ್ನು ಈ ದಿನ ನಿನ್ನ ಮುಂದೆ ಇಡುತ್ತಿದ್ದೇನೆ. ಈಗ ನನಗಿರುವ ಮಿತ್ರರು ನೀನು ಮತ್ತು ತಿಮ್ಮಣ್ಣ ಇಬ್ಬರೇ. ನಿಮ್ಮಲ್ಲಿ ಈ ವಿಚಾರವನ್ನು ಹೇಳಬೇಕೆಂದು ನಾನು ಅನೇಕ ದಿನಗಳಿಂದಲೂ ಯೋಚಿಸುತ್ತಿದ್ದೆ. ಇಂದು ತೀರಾ ಬೇಸರವಾಯಿತು. ನಿನ್ನ ಮುಂದೆ ಅವರ ಪ್ರಸ್ತಾಪಮಾಡಿದೆ, ಅಷ್ಟೇ...."

"ಹಾಗಾದರೆ ತಾವು ಇಂಗ್ಲೆಂಡಿಗೆ ಹೋಗಲು ನಿಶ್ಚಯಿಸಿದ್ದೀರಾ....?"

"ಹೌದು...."

"ಇಂಗ್ಲೆಂಡಿಗೆ ಇದುವರೆಗೆ ಭಾರತದ ಯಾವ ಅರಸುಕುಮಾರರೂ ಹೋದುದು ಇಲ್ಲ. ಅಷ್ಟೇಕೆ ಭಾರತದ ಪುಣ್ಯಭೂಮಿಯನ್ನು ಬಿಟ್ಟು, ಸಮುದ್ರಯಾನ ಮಾಡಿ, ಆ ಆಂಗ್ಲರ ಭೂಮಿಗೆ ಹೋದ ಭಾರತೀಯನನ್ನು ನಾನು ನೋಡಿಲ್ಲ, ಕೇಳಿಲ್ಲ—"

"ನಾನು ಅಂತಹವರಲ್ಲಿ ಮೊದಲಿಗನಾಗಬೇಕೆಂದು ಬಯಸುತ್ತೇನೆ—"

"ಅಲ್ಲಿಗೆ ಹೋಗಿ ತಾವು ಮಾಡುವುದಾದರೂ ಏನು ?" ಶಂಕೆಯಿಂದ ಕೇಳಿದ ಸೋಮಣ್ಣ.

"ಅಲ್ಲಿಗೆ ಹೋಗಿ, ಆಂಗ್ಲ ನೆಲದ ಮೇಲೇ ನಿಂತು ಅವರೊಡನೆ ಹೋರಾಡುತ್ತೇನೆ. ನನ್ನಿಂದ ಅನ್ಯಾಯವಾಗಿ ಕಸಿದುಕೊಂಡ ರಾಜ್ಯಕೋಶಗಳನ್ನು ಮರಳಿ ಪಡೆಯಲು ಪ್ರಯತ್ನಿಸುತ್ತೇನೆ—"

"ಇದಕ್ಕೆ ಆಂಗ್ಲಸಾಹೇಬರು ಅವಕಾಶಕೊಡುವರೆ ? ನನಗೇನೋ ಅನುಮಾನ—" ಎಂದು ಚಿಕ್ಕವೀರರಾಜನ ಮುಖ ನೋಡುತ್ತ, ಮೌನ ತಾಳಿದ ಸೋಮಯ್ಯ. ಚಣಕಾಲ ಸುಮ್ಮನೆ ಕುಳಿತು ಆತ್ಮಗತದಂತೆ ಹೇಳಿದ :

"ನಾವು ಪುಣ್ಯಭೂಮಿಯಾದ ಕೊಡಗಿನಲ್ಲಿಯೇ ಉಳಿದರೆ, ಜನ ತಮ್ಮ ವಿರುದ್ಧ ತಿರುಗಿಬೀಳಬಹುದೆಂದು, ತಮ್ಮ ಸನ್ನಿಧಾನ ಅಲ್ಲಿರುವಾಗ ಕೊಡಗನ್ನು ದುರಾಕ್ರಮಿಸಿಕೊಳ್ಳುವುದು ಕಷ್ಟಸಾಧ್ಯವೆಂದು ಹೆದರಿ, ಆ ದ್ರೋಹಿಗಳು ನಮ್ಮನ್ನು ಕೊಡಗಿನಲ್ಲಿಡದೆ ಮೊದಲು ಬೆಂಗಳೂರಿಗೆ ಸಾಗಿಸಿದರು. ಅಲ್ಲಾದರೂ ನೆಮ್ಮದಿಯಿಂದ ಇರಬಯಸಿದರೆ, ಅದಕ್ಕೂ ಅವಕಾಶಕೊಡದೆ, ವೆಲ್ಲೂರಿನ ಕೋಟೆಗೆ ಸಾಗಿಸಿದರು. ಅಲ್ಲಿ ವಿದ್ರೋಹಿಗಳ ಜತೆ ಸೇರಿಕೊಂಡು ನಾವು ದಂಗೆ ಏಳಬಹುದೆಂದು ಹೆದರಿ ಈ ದೂರದ ಊರಾದ ಕಾಶೀ ನಗರಕ್ಕೆ ಕರೆತಂದು ಇಲ್ಲಿ ನಮ್ಮನ್ನು ನಿರ್ಬಂಧದಲ್ಲಿರಿಸಿದ್ದಾರೆ. ಪುಣ್ಯ ಕ್ಷೇತ್ರದ ಹೆಸರಿನಲ್ಲಿ ತಮ್ಮ ಸ್ವಾರ್ಥವನ್ನು ಅವರು ಸಾಧಿಸಿದ್ದಾರೆ. ಈಗ ಅಲ್ಲಿಂದ ಇಂಗ್ಲೆಂಡಿಗೆ ಹೊರಡಬೇಕೆಂದರೆ, ಆಂಗ್ಲ ಅಧಿಕಾರಿಗಳು ಒಪ್ಪುತ್ತಾರೆಯೆ ? ಅದರಲ್ಲೂ

ಕಳೆದುಕೊಂಡ ರಾಜ್ಯಕೋಶಗಳನ್ನು ಮರಳಿ ಪಡೆಯಲು ನಾವು ಹೋಗುತ್ತಿದ್ದೇವೆ ಎಂದು ತಿಳಿದರೆ ಅದಕ್ಕೆ ಅವರು ಅವಕಾಶ ಕೊಡುತ್ತಾರೆಯೆ? ನನಗೇನೋ ಅನುಮಾನ...." ಎಂದು ತನ್ನ ಹೃದಯಾಂತರಾಳದ ಸಂಶಯವನ್ನು ತೋಡಿಕೊಂಡ ಸೋಮಯ್ಯ.

"ಸೋಮಯ್ಯ, ನೀನು ಹೇಳಿದ ಮಾತು ನಿಜ. ಆದನ್ನು ನಾನು ಚೆನ್ನಾಗಿ ಆಲೋಚಿಸಿದ್ದೇನೆ. ನಾನು ಹೋರಾಡಲು ಇಂಗ್ಲೆಂಡಿಗೆ ಹೊರಟಿದ್ದೇನೆ ಎಂದು ಹೇಳಿದರೆ, ಈ ಇಂಗ್ಲಿಷ್ ಸಾಹೇಬರು ನಮ್ಮ ಪ್ರಯಾಣಕ್ಕೆ ಅನುಮತಿ ಕೊಡುವುದಿಲ್ಲ. ಅದಕ್ಕೆ ತಾನು ಬೇರೊಂದು ಉಪಾಯ ಮಾಡಿದ್ದೇನೆ—"

"ಏನು?"

"ಹೇಗೂ ನಮ್ಮ ಗೌರಮ್ಮನಿಗೆ ಆರು ವರ್ಷ ತುಂಬಿದೆ. ಅವಳಿಗೆ ರಾಜೋಚಿತವಾದ ಶಿಕ್ಷಣ ಕೊಡಿಸಲು, ಅವಳನ್ನು ಇಂಗ್ಲಿಷ್ ಮಹಿಳೆಯಂತೆ—ಅವರ ದೇಶದಲ್ಲಿ ಬೆಳಸಲು ನಾನು ಈ ಪ್ರಯಾಣ ಕೈಕೊಂಡಿರುವುದಾಗಿ ಹೇಳಿದರೆ, ಅವರನ್ನು ಸುಲಭವಾಗಿ ವಂಚಿಸಬಹುದು. ಇದರಿಂದ ಎರಡು ಕಾರ್ಯ ಸಿದ್ಧಿಸುತ್ತದೆ. ತಾಯಿ ಇಲ್ಲದ ತಬ್ಬಲಿ ಗೌರಮ್ಮನಿಗೆ ಯೋಗ್ಯಶಿಕ್ಷಣ ಕೊಡಿಸಿದಂತೆ ಆಗುವುದಲ್ಲದೆ, ನಾವು ನಮ್ಮ ಕೊನೆಯ ಹೋರಾಟ ನಡೆಸಲು ಅವಕಾಶವಾಗುವುದು—"

"ಇದು ಒಳ್ಳೆಯ ವಿಚಾರವೇ. ಆದರೂ ಈ ಬಗ್ಗೆ ತಾವು ತುಂಬಾ ನಿರೀಕ್ಷೆ ಇಟ್ಟುಕೊಳ್ಳುವುದು ಸರಿಯಲ್ಲ. ಒಂದುವೇಳೆ ನಮ್ಮ ಪ್ರಯತ್ನ ವಿಫಲವಾದರೆ—ಆಗ ಉಂಟಾಗುವ ನಿರಾಶೆ ಈ ನಿರೀಕ್ಷೆಗಿಂತ ದುಸ್ಸಹವಾಗುತ್ತದೆ...."

"ಅದನ್ನು ನಾನು ಬಲ್ಲೆ ಸೋಮಯ್ಯ, ಅಲ್ಲಿಗೆ ಹೋಗಿ ನಾನು ನನ್ನ ಕೊಡಗನ್ನು ಮರಳಿ ಪಡೆಯಲು ಕೈಲಾದಮಟ್ಟಿಗೆ ಹೋರಾಡುತ್ತೇನೆ. ಈ ಕಾರ್ಯದಲ್ಲಿ ವಿಫಲನಾದರೂ ನನಗೆ ಕಂಪನಿಯವರು ಕೊಡಬೇಕಾಗಿರುವ, ದೊಡ್ಡಪ್ಪನವರು ಕಂಪನಿಯ ಲೆಕ್ಕದಲ್ಲಿರಿಸಿರುವ ಆರು ಲಕ್ಷ ಎಂಭತ್ತುಸಾವಿರ ರೂಪಾಯಿ ಮೊತ್ತದ ಹಣಕ್ಕೆ ಬಡ್ಡಿಯನ್ನಾದರೂ ದೊರಕಿಸಿಕೊಳ್ಳಲು ಪ್ರಯತ್ನಿಸುತ್ತೇನೆ. ಸಫಲನಾಗುತ್ತೇನೆಂಬ ಭರವಸೆ ನನಗೆ ಇದೆ. ನಮ್ಮ ಪ್ರಯಾಣದಿಂದ ಈ ಎರಡು ಉದ್ದಿಶ್ಯಗಳಲ್ಲಿ ಯಾವುದೊಂದು ಕಾರ್ಯ ಕೈಗೂಡಿದರೂ, ನಾವು ಕೈಗೊಳ್ಳುವ ಇಂಗ್ಲೆಂಡ್ ಯಾತ್ರೆ ಸಫಲವಾದಂತೆಯೇ ಸರಿ...."

ಅಷ್ಟರಲ್ಲಿ ಹೊರಗೆ ಯಾರೋ ಬಂದಂತೆ ಹೆಜ್ಜೆಯ ಸಪ್ಪಳವಾಯಿತು. ಇಬ್ಬರೂ ಮಾತು ನಿಲ್ಲಿಸಿ, ಅತ್ತನೋಡಿದರು. ಕೆಲವೇ ನಿಮಿಷಗಳಲ್ಲಿ ಉಪ್ಪರಿಗೆಯನ್ನೇರಿ ಆರೇಳು ವರ್ಷಗಳ ಸುಂದರ ಬಾಲಕಿಯೊಬ್ಬಳ ಕೈಹಿಡಿದುಕೊಂಡು ಬಂದ ಒಬ್ಬ ಆಂಗ್ಲ ಹೆಣ್ಣುಮಗಳೂ, ಅವರ ಹಿಂದೆ ಒಬ್ಬ ಸದೃಢಕಾಯನಾದ ಯುವಕನೂ ಬಂದು—ನಗುತ್ತಾ ನಿಂತರು. ಆ ಹುಡುಗಿ ಚಿಕ್ಕವೀರರಾಜನನ್ನು ನೋಡುತ್ತಲೇ ಓಡಿ ಬಂದು ಅವನನ್ನು ಅಪ್ಪಿಕೊಂಡಳು.

ಅವಳನ್ನು ತನ್ನ ಬಾಹುಗಳಲ್ಲಿ ತೆಗೆದುಕೊಂಡು, ದೊರೆಯು ಪ್ರೀತಿಯಿಂದ ತಲೆಯನ್ನೂ ನೇವರಿಸುತ್ತಾ—

"ಯಾಕೆ ಇಷ್ಟುಹೊತ್ತು ಮಾಡಿದೆ ಮಗಳೇ, ಹೊರಗೆ ಹಿಮ ಬೀಳಲು ಆರಂಭಿಸಿದೆ. ನೀನು ಯಾಕೋ ಬರಲಿಲ್ಲವೆಂದು ನಿನ್ನದಾರಿ ಕಾಯುತ್ತಿದ್ದೆ—"ಎಂದು ಹೇಳಿ ಆಂಗ್ಲ ಮಹಿಳೆಯನ್ನೂ, ಅವಳ ಜತೆಯಲ್ಲಿದ್ದ ಪುರುಷನನ್ನೂ ನೋಡಿದನು.

"ಪ್ರಭೂ, ಗೌರಮ್ಮಾಜಿಯವರು ನಾವು ಎಷ್ಟು ಹೇಳಿದರೂ ಕೇಳಲಿಲ್ಲ. ಹಾಲು ಚಲ್ಲಿದ ಈ ಬೆಳುದಿಂಗಳಿನಲ್ಲಿ ನದಿಯ ತೀರದಲ್ಲಿ ಬಹುದೂರ ಹೋದರು. ಅವರನ್ನು ಮನವೊಲಿಸಿ ಕರೆತರುವುದೇ ಕಷ್ಟವಾಯಿತು—"

ಎಂದು ಆತನು ಹೇಳಿದ.

"ಹೌದಾ ಗೌರ, ಹೆಬ್ಬಾಲೇ ತಿಮ್ಮಣ್ಣ ಹೇಳುವ ಮಾತುನಿಜವೇ?—" ಎಂದು ಮಗಳನ್ನು ಕುತೂಹಲದಿಂದ ನೋಡಿದಾಗ, ಮಗಳು ಹೌದೆಂದು ತಲೆಯಲ್ಲಾಡಿಸಿ, ತುಂಟನಗೆ ನಕ್ಕಳು.

ಅವಳ ನಗುವನ್ನು ನೋಡಿ ಆಂಗ್ಲ ಮಹಿಳೆ—ಗೌರಮ್ಮನ ದಾದಿ—ಇಂಗ್ಲಿಷ್ ಬೆರೆತ ಕನ್ನಡದಲ್ಲಿ ಏನೋ ಹೇಳಿದಳು. ಬಹುಶಃ ಅವಳ ಹಠಮಾರಿತನ, ತುಂಟತನಗಳ ಉಲ್ಲೇಖ ಮಾಡುತ್ತಿರಬಹುದೆಂದು, ಇಂಗ್ಲಿಷ್ ಭಾಷೆಯ ಗಂಧ ಅರಿಯದಿದ್ದ ಚಿಕ್ಕ ವೀರರಾಜನು, ಅವಳ ಮಾತಿನ ಭಾವವನ್ನು ಗ್ರಹಿಸಿದವನಂತೆ.

"ಹೌದು, ಶ್ರೀಮತಿ ಲೂಸಿಹಾಕರ್ ಅವರೇ, ಈ ತುಂಟ ಹುಡುಗಿಗೆ ತಕ್ಕ ಶಿಕ್ಷೆ ವಿಧಿಸಬೇಕು. ಇನ್ನು ಮೇಲೆ ಇವಳ ಪುಂಡಾಟಗಳನ್ನೆಲ್ಲ ನಿಲ್ಲಿಸಲು ನಾನೊಂದು ಉಪಾಯಮಾಡಿದ್ದೇನೆ—"

ಎಂದು ಮಗಳ ತಲೆಯನ್ನು ಸವರುತ್ತಾ ನುಡಿದ ಚಿಕ್ಕವೀರರಾಜೇಂದ್ರ, ಲೂಸಿ ದಾದಿಯನ್ನು ಅರ್ಥಗರ್ಭಿತವಾಗಿ ನೋಡುತ್ತ.

"ಏನು ರಾಜಾಸಾಹೇಬರೇ...."

"ಈ ತುಂಟಿಯನ್ನು ಇಂಗ್ಲೆಂಡಿಗೆ ಕರೆದುಕೊಂಡು ಹೋಗಿ, ಅಲ್ಲಿ ಇವಳಿಗೆ, ಆಂಗ್ಲ ಶಿಕ್ಷಣ ಹಾಗೂ ಸಭ್ಯತೆ, ಶಿಷ್ಟಾಚಾರಗಳ ಪಾಠ ಕಲಿಸಬೇಕೆಂದಿದ್ದೇನೆ—"

"ನಿಮ್ಮ ಮಾತು ನಿಜವೆ?"

"ಹೌದು, ಅಕ್ಷರಶಃ ನಿಜ!"

"ವಂಡರ್‌ಫುಲ್! ವಂಡರ್‌ಫುಲ್! ಇವಳನ್ನು ಪುಟ್ಟ ರಾಣಿಯನ್ನಾಗಿ ಮಾರ್ಪಡಿಸಲು, ನಾವು ಇಂಗ್ಲೆಂಡಿಗೆ ಹೋಗಲೇಬೇಕು...." ಎಂದು ಹೇಳಿ ಲೂಸಿ ಹಾಕರ್ ಎಳೆಯ ಮಗುವಿನಂತೆ ಗೌರಮ್ಮನನ್ನೂ ಎತ್ತಿಕೊಂಡು ಕುಣಿದಾಡಿದಳು.

ಅವಳನ್ನೂ, ಲೂಸಿಯನ್ನೂ ಒಳಗೆ ಕಳುಹಿಸಿಕೊಟ್ಟು ಚಿಕ್ಕವೀರರಾಜನು ಹೆಬ್ಬಾಲೀ ತಿಮ್ಮಣ್ಣನಿಗೆ ತಾನು ಆಲೋಚಿಸಿದ್ದ ಎಲ್ಲ ಸಂಗತಿಯನ್ನು ತಿಳಿಸಿದನು.

ಆ ಸ್ವಾಮಿನಿಷ್ಠ ಸೇವಕನು ಇದರಿಂದ ತನ್ನ ದೊರೆಗೆ ಲೇಸಾಗುವುದಾದರೆ, ತಾನು ನರಕಕ್ಕೆ ಬೇಕಾದರೂ ಹೋಗಲು ಸಿದ್ಧವಿರುವುದಾಗಿ ತಿಳಿಸಿದನು.

ಅಂದೇ ಸಮ್ಮುಖದ ಕರಣಿಕನನ್ನು ಬರಮಾಡಿಕೊಂಡು ಕಂಪಿನಿ ಸರಕಾರದ ಅನುಮತಿ ಪಡೆಯಲು ಬರೆಯಬೇಕಾಗಿದ್ದ ಪತ್ರವನ್ನು ಸಿದ್ಧಪಡಿಸಲು ಹೇಳಿದನು. ಅದರಂತೆ ಅವನು ಕ್ರಿ.ಶ. ೧೮೪೮ನೇ ಮಾರ್ಚ್ ೭ರಂದು ಭಾರತದ ಗೌರ್‍ನರ್ ಜನರಲ್ಲಾದ ಲಾರ್ಡ್ ಡಾಲ್‌ಹೌಸಿಗೆ ಬರೆದ ಪತ್ರದಲ್ಲಿ ಈ ಮಾತುಗಳನ್ನು ಬರೆದಿದ್ದನು :

"...I feel it an impropriety on my part to enter into details of family matters...My daughter has, for some time past, adopted English habits and manners. This is Known to Col. Carpenter and other officers resident at the station...I am anxious that she should proceed to England to be brought in such a manner as the daughter of an English noble man would receive her education. If her gracious Majesty Queen Victoria should extend her favour also to my daughter, my happiness would be completed···I am the first of the native chiefs, your Lordship will observe, who has made this Proposition. My daughter's age is six years and six months...we look upon to you for indulgent consideration...

ಈ ಪತ್ರಕ್ಕೆ ಏನು ಉತ್ತರ ಕೊಡಬೇಕೆಂಬುದು ಗೌರ್‍ನರ್ ಜನರಲ್ಲಾಗಿದ್ದ ಡಾಲ್‌ಹೌಸಿಗೆ ತಿಳಿಯದಾಯಿತು. ಭಾರತದಲ್ಲಿ ಈ ಮೊದಲು ಯಾವ ದೊರೆಯೂ, ಅರಸುಮಗನೂ ಮಾಡದಿದ್ದ ವಿಚಿತ್ರವಾದ ಬೇಡಿಕೆ ಇದಾಗಿತ್ತು. ಇದರಲ್ಲಿ ಯಾವುದೇ ದುರಾಲೋಚನೆ ಇಲ್ಲವೆಂದು ಮನಗೊಂಡ ಮೇಲೆ, ಅವನು ಕ್ರಿ.ಶ. ೧೮೪೯ ಆಗಸ್ಟ್ ೨೧ರಲ್ಲಿ ಒಂದು ಪತ್ರ ಬರೆದು ಹೀಗೆ ತಿಳಿಸಿದನು :

"I have much pleasure in acknowledging receipt of your friendly letter, announcing your intention to proceed to England...I had the pleasure of meeting your daughter at Banaras and entertain regard for her···with respects to your intention, I am unable to give you permission until I obtain sanctions of Hon'ble the Court of directors···I hope you will always consider me as your sincere friend and well wisher"

ಈ ಪತ್ರ ಬಂದಮೇಲೆ ಚಿಕ್ಕವೀರರಾಜನಿಗೆ ಸಂತೋಷಕ್ಕಿಂತ ನಿರಾಶೆಯೇ ತುಂಬಿತು. ಸುಲಭವಾಗಿ ತನ್ನ ಮನದ ಆಸೆ ಈಡೇರುವುದೆಂದು ಅವನು ನಿರೀಕ್ಷಿಸಿದ್ದನು. ಆದರೆ ಈ ವಿಷಯದಲ್ಲಿ ನಿರ್ಧಾರಕ್ಕೆ ಬರಲು, ಗೌರ್‍ನರ್ ಜನರಲ್ಲನು ತನ್ನ ಮೇಲಿನವರ

ಅನುಮತಿಯನ್ನು ಅಪೇಕ್ಷಿಸಿದ್ದನು. ಅವರು ಈ ಬಗ್ಗೆ ಏನು ಮಾಡುವರೋ, ನಿಶ್ಚಿತ ವಿರಲಿಲ್ಲ. ಈ ಬಗ್ಗೆ ಪತ್ರ ನಿರೀಕ್ಷಿಸಿ, ತಿಂಗಳುಗಳ ಮೇಲೆ ತಿಂಗಳು ಉರುಳಿದವು.

ತನ್ನ ಪ್ರಾರ್ಥನೆ ಮುಂದಿಟ್ಟು ಪತ್ರ ಬರೆದು ಸರಿಯಾಗಿ ಎರಡು ವರ್ಷಗಳೇ ಕಳೆದವು. ಈ ಬಗ್ಗೆ ತನಗೆ ಅವರು ಅನುಮತಿ ಕೊಡಲಾರರೆಂದು ತೀರಾ ನಿರಾಶನಾದನು. ಹತಾಶಭಾವದಲ್ಲಿ ತನ್ನ ದೌರ್ಭಾಗ್ಯವನ್ನು ಹಳಿದುಕೊಳ್ಳುತ್ತಾ ಚಿಕ್ಕವೀರರಾಜನು ಇದನ್ನೆಲ್ಲ ಒಡೆದ ಕನಸೆಂಬಂತೆ - ಮರೆಯಲು ಸಿದ್ಧನಾಗುತ್ತಿದ್ದಾಗ, ಒಂದು ಪತ್ರ ಬಂದು ಅವನ ಕೈಸೇರಿತು. ಅದರಲ್ಲಿ ಅವನಿಗೆ ಸಂತೋಷದ ಸಮಾಚಾರವೊಂದು ಕಾದಿತ್ತು.

ಆ ಪತ್ರವನ್ನು ಭಾರತ ಸರಕಾರದ ಕಾರ್ಯದರ್ಶಿಯು ಕ್ರಿ.ಶ ೧೮೫೦ ಮಾರ್ಚ್ ೨೦ರಂದು ಬರೆದಿದ್ದನು :

"The Court of directors has been pleased to consent to the visit and to sanction Raja's absence from India for one year with the understanding, however, that the Grovernment are to be put into no expense on his account."

ಈ ಪತ್ರವನ್ನು ಓದಿಕೊಂಡು ದೊರೆಯು ತನ್ನ ಬಹಳ ಕಾಲದ ಹಾರೈಕೆ ಈಡೇರಿದ ಹಿಗ್ಗಿನಲ್ಲಿ ತೃಪ್ತಿಯಿಂದ ಮಗಳನ್ನು ಆಪ್ತಮಿತ್ರರನ್ನು ನೋಡಿ, ತನ್ನಲ್ಲಿಯೇ ಅರ್ಥಗರ್ಭಿತವಾಗಿ ನಕ್ಕನು.

೨

ಕೊಡಗನ್ನು ಟೀಪೂಸುಲ್ತಾನನ ಕ್ರೂರಮುಷ್ಟಿಯಿಂದ ಪಾರುಮಾಡಿ, ಅದನ್ನು ಆಂಗ್ಲಸಿಂಹಕ್ಕೂ ಬಲಿಗೊಡದೆ, ಸ್ವತಂತ್ರ ದೊರೆ ಎಂಬಂತೆ ಆಳಿದ ದೊಡ್ಡವೀರರಾಜನು ತನ್ನ ನಂತರ ಸಿಂಹಾಸನವನ್ನೇರಬಲ್ಲ ಪುತ್ರನಿಲ್ಲದೆ, ರಾಜ್ಯವನ್ನು ದೇವಮ್ಮಾಜಿಗೆ ಬಿಟ್ಟು ಕಣ್ಣು—ಮುಚ್ಚಿಕೊಂಡಿದ್ದನು. ಅವಳ ಪ್ರತಿನಿಧಿಯಾಗಿ ರಾಜ್ಯಾಡಳಿತವನ್ನು ನೋಡಿ ಕೊಳ್ಳಲು ಸೋದೆಯ ದೊರೆ ಅಳಿಯ ಬಸವಲಿಂಗ ರಾಜನನ್ನು ನೇಮಿಸಿದ್ದರೂ, ಪರಕೀಯನಾದ ಅವನನ್ನು ಮೂಲೆಗೊತ್ತಿ ದೊಡ್ಡ ವೀರರಾಜನ ಸಹೋದರ ಲಿಂಗರಾಜನು ಅಧಿಕಾರಕ್ಕೆ ಬಂದಿದ್ದನು. ಅವನು ದೇವಮ್ಮಾಜಿಯನ್ನು ಸಿಂಹಾಸನ ದಿಂದ ತಳ್ಳಿ, ಕೊಡಗಿನ ಅಧಿಪತಿಯಾಗಿ ಆಳಿ, ತನ್ನ ನಂತರ ಕೊಡಗು ರಾಜ್ಯವನ್ನು ತನ್ನ ಮಗ ಚಿಕ್ಕವೀರರಾಜನಿಗೆ ಬಿಟ್ಟುಕೊಟ್ಟಿದ್ದನು.

ಚಿಕ್ಕವೀರರಾಜನು ತಂದೆಯನಂತರ ಸಿಂಹಾಸನವನ್ನೇರಿದಾಗ ಇನ್ನೂ ಇಪ್ಪತ್ತರ ತರುಣನು. ಮೊದಲೇ ಯೌವನದ ಮದ, ಅದಕ್ಕೆ ತಕ್ಕಂತೆ ಅವಿವೇಕಿಗಳೂ, ದುಷ್ಟರೂ, ಸ್ವಾರ್ಥಪರರೂ ಆದ ಸಂಗಡಿಗರು ಅವನಿಗೆ ದೊರೆತು, ಚಿಕ್ಕವೀರರಾಜನು ನಿರಂಕುಶನಾಗಿ ಆಳಲಾರಂಭಿಸಿದನು. ತನ್ನ ತಂದೆಯ ಕಾಲದಲ್ಲಿ ತನ್ನನ್ನು ವಿರೋಧಿಸಿದವರನ್ನೆಲ್ಲ, ತನ್ನ

ಶತ್ರುಗಳನ್ನೆಲ್ಲ ಕ್ರೂರವಾಗಿ ಕೊಲ್ಲಿಸಿದನು. ಸ್ವಯಂ ದೊಡ್ಡವೀರರಾಜನ ಮಗಳು ದೇವಮ್ಮಾಜಿಯನ್ನೂ—ಅವಳ ಸಹೋದರಿಯರನ್ನೂ ಅಪ್ಪಂಗಳದ ಅರಮನೆಯಲ್ಲಿಟ್ಟು ಕ್ರೂರತನದಲ್ಲಿ ನಡಸಿಕೊಂಡನು.

ಇದಕ್ಕೆಲ್ಲ ಅವನಿಗೆ ಬೆಂಬಲಿಗರೆಂದರೆ ಕುಂಟಬಸವನೆಂಬ ಕುತ್ಸಿತಬುದ್ಧಿಯ ಕುತಂತ್ರಿ; ಇವನ ಮಿತ್ರ ಅಬ್ಬಸ ಆಲಿ ಬೇಗನೆಂಬ ನೀಚ. ಇವರಿಬ್ಬರ ಸಲಹೆ, ಸಮಾಲೋಚನೆಗಳನ್ನು ಕೇಳಿಕೊಂಡು, ಅನನುಭವಿಯಾದ ಚಿಕ್ಕವೀರರಾಜನು ದೊರೆಯಾದ ಕೂಡಲೇ ದೈತ್ಯಾಡಳಿತಕ್ಕೆ ಆರಂಭಿಸಿದ್ದನು.

ಹಿರಿಯ ಸ್ವಾಮಿನಿಷ್ಠ ಸೇವಕನಾದ ದಿವಾನ ಅಪ್ಪಾರಂಡ ಬೋಪಣ್ಣ ಮತ್ತು ಚೆಪುದಿರ ಪೊನ್ನಪ್ಪ, ಲಕ್ಷ್ಮೀನಾರಾಯಣಯ್ಯ ಮುಂತಾದವರು ಈ ದುಷ್ಟರ ಸಹವಾಸದಿಂದ ದೊರೆಯನ್ನು ಬಿಡಿಸಲು ಪ್ರಯತ್ನಿಸಿ ವಿಫಲರಾಗಿದ್ದರು. ಈಗ ಬೇರೆ ದಾರಿ ಕಾಣದೆ ಆ ನೀಚರ ವಿರೋಧ ಕಟ್ಟಿಕೊಳ್ಳಲು ಹೆದರಿ, ಮೇಲೆ ಅವರ ಮಿತ್ರರಂತೆ ನಟಿಸುತ್ತಾ ಆದಷ್ಟು ಮಟ್ಟಿಗೆ ಚಿಕ್ಕವೀರರಾಜನಿಂದ ಪ್ರಜೆಗಳಿಗೂ ರಾಜಕುಟುಂಬದವರಿಗೂ ತೊಂದರೆ ಸಂಭವಿಸದಂತೆ ನೋಡಿಕೊಳ್ಳುತ್ತಿದ್ದರು.

ಇದರಿಂದ ಕುಂಟಬಸವಯ್ಯನಿಗೆ ತನ್ನ ರೊಟ್ಟಿ ಜಾರಿ ತುಪ್ಪದಲ್ಲಿ ಬಿದ್ದಂತೆ ಆಗಿತ್ತು.

ಅವನು ತನ್ನ ಸವಿಮಾತುಗಳಿಂದಲೂ, ದುಷ್ಟಸಲಹೆಗಳಿಂದಲೂ, ವಿಚಿತ್ರ ಸ್ವಭಾವದ ದೊರೆಯನ್ನು ತನ್ನ ಸಂಪೂರ್ಣ ವರ್ಚಸ್ಸಿನಲ್ಲಿ ಇಟ್ಟುಕೊಂಡನು. ಅವನನ್ನು ಕೈಗೊಂಬೆಯಂತೆ ನಡೆಸಿಕೊಳ್ಳುತ್ತಾ, ತನ್ನದೇ ಅಧಿಕಾರ ನಡೆಸತೊಡಗಿದ್ದನು. ಸ್ವಭಾವತಃ ವಿಲಾಸಿಯೂ, ಹೇಡಿಯೂ ಹೇಳಿಕೆಯ ಮಾತುಗಳನ್ನು ಕೇಳುವ ಸ್ವಭಾವದವನೂ ಶೀಘ್ರಕೋಪಿಯೂ ಆಗಿದ್ದ ವೀರರಾಜನನ್ನು ಈ ಕುಂಟಬಸವಯ್ಯ ಮತ್ತು ಅಬ್ಬಾಸ ಆಲಿ ಬೇಗರು ಸೇರಿಕೊಂಡು ಅವನ ಸುತ್ತ ವಿಷಯಸುಖದ ವರ್ತುಲವನ್ನು ನಿರ್ಮಿಸಿ, ಸುಂದರ ಸ್ತ್ರೀಯರು, ಮದ್ಯ, ಮನೋರಂಜನೆಗಳ ಮೂಲಕ ಅವನನ್ನು ತಮ್ಮ ದಾಸನನ್ನಾಗಿ ಮಾಡಿಕೊಂಡು, ಅವನನ್ನು ತಮ್ಮ ಹೇಳಿಕೆಯಂತೆ ನಡೆಸಿಕೊಳ್ಳುತ್ತ, ತಾವೇ ಕೊಡಗಿನ ಅನಭಿಷಿಕ್ತ ಸಾಮ್ರಾಟರೆಂಬಂತೆ ಮೆರೆಯುತ್ತಿದ್ದರು. ಅವರನ್ನು ವಿರೋಧಿಸಿ, ಅವರ ಕೋಪ ಕಟ್ಟಿಕೊಂಡು, ಯಾರೇ ಆಗಲಿ, ಬದುಕುತ್ತಿರಲಿಲ್ಲ.

ಸ್ವಯಂ ಚನ್ನಬಸಪ್ಪನಂತಹ ರಾಜಬಂಧುವಿಗೂ ಕುಂಟಬಸವಯ್ಯನ ದ್ವೇಷಕ್ಕೆ ಪಾತ್ರನಾಗಿ, ಕೊಡಗಿನಲ್ಲಿ ರಕ್ಷಣೆ ಇಲ್ಲದೆ, ಮೈಸೂರಿಗೆ ಓಡಿಬಂದು ಬ್ರಿಟಿಷರ ಬಳಿ ರಕ್ಷಣೆ ಪಡೆಯಬೇಕಾದ ಪರಿಸ್ಥಿತಿ ಬಂದಿತ್ತು.

ಲಿಂಗರಾಜನಿಗೆ ದೇವಮ್ಮಾಜಿ ಎಂಬ ಮಗಳಿದ್ದಳಷ್ಟೆ. ಇವಳನ್ನು ಲಿಂಗರಾಜನು ಚನ್ನಬಸಪ್ಪನೆಂಬ ಕೊಡಗು ಯುವಕನಿಗೆ ಕೊಟ್ಟು ಮದುವೆಮಾಡಿದ್ದನು. ಈ ಚನ್ನಬಸಪ್ಪನು ಜೆಳುಗುಂಡ ಮುಕ್ಕಾಟೀರ ವಂಶಕ್ಕೆ ಸೇರಿದ್ದನು. ಅವನ ಶೌರ್ಯ, ಸಾಹಸ, ಸ್ವಾಮಿನಿಷ್ಠೆಗಳನ್ನು ಕಂಡ ದೊರೆಯು ಅವನಿಗೆ ಲಿಂಗದೀಕ್ಷೆಯಿತ್ತು ರಾಜ

ಬಂಧುವಾಗಿ ಮಾಡಿಕೊಂಡಿದ್ದನು. ಮೊದಲು ತನ್ನ ಒಬ್ಬ ಮಗಳನ್ನು ಕೊಟ್ಟು ಮದುವೆಮಾಡಿದ್ದನು. ಆದರೆ ಅವಳು ತೀರಿಕೊಳ್ಳಲು ತನ್ನ ಅಭಿಮಾನದ ಪುತ್ಥಳಿಯಾಗಿದ್ದ ದೇವಮ್ಮಾಜಿಯನ್ನು ಕೊಟ್ಟು ಮದುವೆ ಮಾಡಿದ್ದನು, ಮತ್ತು ಅಪ್ಪಂಗಳದ ಅರಮನೆಯನ್ನು—ಜಹಗೀರಿಯಾಗಿ ಕೊಟ್ಟಿದ್ದನು.

ಅವನು ತನ್ನ ಕುಟುಂಬದೊಡನೆ ಅಪ್ಪಂಗಳದ ಅರಮನೆಯಲ್ಲಿ ನೆಮ್ಮದಿಯಿಂದ ಇರುವಾಗಲೇ, ಕುಂಟಬಸವಯ್ಯನ ಕೋಪಕ್ಕೆ ಪಾತ್ರನಾಗಿ ರಾಜ್ಯಬಿಟ್ಟು ಓಡಬೇಕಾದ ಪರಿಸ್ಥಿತಿ ಬಂದಿತ್ತು.

ಕುಂಟಬಸವನು ವೀರರಾಜರ ಬಾಲ್ಯದ ಮಿತ್ರ ಅವನ ತಂದೆ ತಾಯಿಗಳು ಯಾರೋ ಯಾರಿಗೂ ತಿಳಿಯದು. ಅವನ ಮೇಲೆ ಕೃಪೆಯಿಟ್ಟು ಲಿಂಗರಾಜನು ಅರಮನೆಯಲ್ಲೇ ತನ್ನ ಮಗನ ಜತೆಯಲ್ಲಿ ಅವನನ್ನು ಬೆಳೆಸಿದ್ದನು. ಅವನು ಲಿಂಗರಾಜನ ಬೇಟೆಯ ನಾಯಿಗಳನ್ನು ನೋಡಿಕೊಳ್ಳುವ ಬೇಟೆಯ ಹುಡುಗನಾಗಿ ತನ್ನ ವೃತ್ತಿಯನ್ನು ಆರಂಭಿಸಿ, ದೊರೆಯ ಅಭಿಮಾನಕ್ಕೆ ಪಾತ್ರನಾಗಿ ಮಾಡಲು ಸಿಪಾಯಿಯಾಗಿ ಅನಂತರ ಜಮೇದಾರನಾಗಿ ಮೇಲೇರಿದ್ದನು. ಈ ಸಮಯದಲ್ಲಿ ಲಿಂಗರಾಜನು ತೀರಿಕೊಳ್ಳಲು ಚಿಕ್ಕವೀರರಾಜನು ದೊರೆಯಾದನು. ಆಗ ಕುಂಟಬಸವಯ್ಯನು ತನ್ನ ಮಂತ್ರಾಲೋಚನೆಯಿಂದ ಚಿಕ್ಕವೀರರಾಜನ ನಂಬಿಕೆಗೆ ಪಾತ್ರನಾಗಿ, ಅವನ ನರ್ಮ ಸಚಿವನಾಗಿ, ಕಡೆಗೆ ಕೊಡಗಿನ ದಿವಾನ ಪದವಿಗೂ ಏರಿದ್ದನು.

ಈ ಕುಂಟಬಸವಯ್ಯನ ಏಳಿಗೆಯನ್ನೂ ಅವನ ದುಷ್ಟವರ್ಚಸ್ಸನ್ನೂ ನೋಡಿ ಸಹಿಸದೆ, ಚನ್ನಬಸವಯ್ಯನಿಗೆ ಅನ್ಯಾಯವಾಗಿ ತನ್ನ ಭಾವಮೈದುನನು ಕೆಟ್ಟಹಾದಿ ಹಿಡಿಯುವಂತಾಯಿತಲ್ಲಾ ಎಂದು ತುಂಬಾ ವ್ಯಥೆಯಾಯಿತು. ಅವನನ್ನು ಹೇಗಾದರೂ ಮಾಡಿ ದಾರಿಗೆ ತರಲು, ಮದುವೆಯೊಂದೇ ದಾರಿ ಎಂದು ಬಗೆದು ಅವನಿಗೆ ಗೌರಮ್ಮಾಜಿ ಎಂಬ ಸುಲಕ್ಷಣ ಕನ್ಯೆಯನ್ನು ತಂದು ಮದುವೆಮಾಡಲು ಆಲೋಚಿಸಿ, ಸ್ವಾಮಿನಿಷ್ಠ ಸೇವಕರ ಬೆಂಬಲ ಪಡೆದು, ಬಹಳ ಕಷ್ಟದಿಂದ ಚಿಕ್ಕವೀರರಾಜನನ್ನು ಈ ವಿವಾಹಕ್ಕೆ ಒಪ್ಪಿಸಿದನು.

ಈ ವಿವಾಹವಾದ ಮೇಲಾದರೂ, ದೊರೆಯು ತನ್ನ ದುಷ್ಟಸಹವಾಸ ಬಿಟ್ಟು, ಸ್ವೈರವೃತ್ತಿಗೆ ತಿಲಾಂಜಲಿಯನ್ನು ಇತ್ತು ಯೋಗ್ಯನಾಗಬಹುದೆಂದು ಅವನು ನಿರೀಕ್ಷಿಸಿದ್ದನು. ಆದರೆ ಅದು ಬಿಸಿಲುಗುದುರೆಯೇ ಆಯಿತು.

ಕುಂಟಬಸವನು ತನ್ನ ಹಂಚಿಕೆಯ ತಂತುವನ್ನು ಈಗ ಮತ್ತಷ್ಟು ಬಿಗಿಗೊಳಿಸಿದ್ದನು. ತನ್ನ ಕೈಯಿಂದ ಈ ರಾಜದಂಪತಿಗಳು ಪಾರಾಗಬಾರದೆಂದು, ಅವನು ಆಲೋಚಿಸಿ, ದೊರೆಯನ್ನು ಅವನ ಬಂಧುಗಳಿಂದ ದೂರವಿರಿಸಲೆತ್ನಿಸಿದನು. ಅಷ್ಟು ಮಾತ್ರವಲ್ಲ, ದೊರೆಯು ಹಿತ್ತಾಳೆ ಕಿವಿಗೆ, ಅವನನ್ನು ಸಿಂಹಾಸನದ ವಿರುದ್ಧ ಚನ್ನಬಸಪ್ಪನು ಪಿತೂರಿ ಮಾಡುತ್ತಿರುವನೆಂಬ ಸಂಶಯದ ಬೀಜವನ್ನು ಬಿತ್ತಿ, ಅದಕ್ಕೆ ನೀರೆರೆದು, ಉಪಾಯವಾಗಿ ಚನ್ನಬಸಪ್ಪನನ್ನೂ ಅವನ ಪತ್ನೀ ಪುತ್ರರನ್ನೂ ಅಪ್ಪಂಗಳದ ಅರಮನೆಯಲ್ಲಿಯೇ ಸೆರೆ ಇಡಿಸಿದನು.

ತನ್ನ ಸಹೋದರಿ, ಸಹೋದರಿಯ ಗಂಡ ಮಕ್ಕಳನ್ನ ಹೀನವಾಗಿ ನಡೆಸಿಕೊಂಡ ಚಿಕ್ಕರಾಜನಿಗೆ ಬುದ್ಧಿಹೇಳಿ ಪ್ರಯೋಜನವಿಲ್ಲವೆಂದು ಬಗೆದು, ಇನ್ನು ಅಲ್ಲಿದ್ದರೆ ಕುಂಟ ಬಸವನಿಂದ ಮತ್ತೆ ತನ್ನವರಿಗೆ ತನಗೆ ಪ್ರಾಣಕ್ಕೆ ಅಪಾಯ ಬರಬಹುದೆಂದು ಹೆದರಿ, ಚನ್ನಬಸವನು ಅಪ್ಪಂಗಳದ ಅರಮನೆಯಿಂದ ಒಂದು ದಿನ ಯಾರಿಗೂ ತಿಳಿಯದಂತೆ ತಲೆತಪ್ಪಿಸಿಕೊಂಡು, ಮೈಸೂರು ಗಡಿಗೆ ಹೊರಟುಹೋದನು.

ಗಡಿಯಲ್ಲಿ ಅವರನ್ನು ತಡೆದ ಸೈನಿಕರನ್ನು ನಿಷ್ಕರುಣೆಯಿಂದ ಕೊಂದು, ಇಂಗ್ಲಿಷರ ಬಳಿಗೆ ಹೋಗಿ, ಆಶ್ರಯ ಪಡೆದನು.

ಈ ಸುದ್ದಿಯನ್ನು ಕೇಳಿ ಕುಂಟಬಸವನಿಗೆ ನಿರಾಶೆಯಾಯಿತು. ಆ ದ್ರೋಹಿಯು ಚನ್ನಬಸವನನ್ನು ಉಪಾಯವಾಗಿ ಕೊಲ್ಲಿಸಲು ಯೋಚಿಸಿದ್ದನು. ಇದನ್ನು ಕಾರ್ಯ ರೂಪಕ್ಕೆ ತರುವ ಮೊದಲೇ ಅವನು ಈ ದುಷ್ಟನ ಕೈಯಿಂದ ಪಾರಾಗಿದ್ದನು.

ಈಗ ಚನ್ನಬಸವನು ಇಂಗ್ಲಿಷರಿಗೆ ತಮ್ಮ ದೊರೆಯ ವಿರುದ್ಧ ಚಾಡಿ ಹೇಳಿ, ಅವರ ಮನಸ್ಸನ್ನು ಕೆಡಿಸಬಹುದೆಂದು ಕುಂಟಬಸವನು ಹೆದರಿದನು. ಅದಕ್ಕೆ ತಕ್ಕಂತೆ ವೀರರಾಜನೂ ದೊರೆಯಾದಮೇಲೆ, ಇಂಗ್ಲಿಷರ ವಿಷಯದಲ್ಲಿ ಅವಿಶ್ವಾಸವನ್ನು ಪ್ರಕಟಿಸುತ್ತಾ ಬಂದಿದ್ದನು.

ಅವನು ತನ್ನ ಕ್ರೂರಕೃತ್ಯಗಳು ಇಂಗ್ಲಿಷರಿಗೆ ತಿಳಿದರೆ ಅಪಾಯವೆಂದು ಅರಿತು, ಇಂಗ್ಲಿಷರನ್ನು ಕೊಡಗಿನ ಒಳಗೆ ಅಪ್ಪಣೆಯಿಲ್ಲದೆ ಬಿಡುತ್ತಿರಲಿಲ್ಲ; ಅಷ್ಟೇ ಅಲ್ಲ. ಕೊಡಗಿನ ಗಡಿಗಳಲ್ಲಿ ಉಕ್ಕಡಗಳನ್ನು ನಿರ್ಮಿಸಿ, ಬಲವಾದ ಪಹರೆ ಇಟ್ಟು, ತನ್ನ ಪ್ರಜೆಗಳು ಹೊರಗೆಹೋಗದಂತೆ ಕಾವಲಿಡಿಸಿದ್ದನು. ಅಂತೆಯೇ ಹೊರಗಿನವರಿಗೂ ಕೊಡಗಿಗೆ ಬರಲು ಅವಕಾಶಕೊಡುತ್ತಿರಲಿಲ್ಲ. ಇದರಿಂದ ತನ್ನ ರಾಜ್ಯದ ಗುಟ್ಟು ತನ್ನ ರಾಜ್ಯದಲ್ಲಿಯೇ ಇರುವುದೆಂದು ಅವನು ತಿಳಿದಿದ್ದನು.

ಆದರೆ ಅವನ ನಿರೀಕ್ಷೆ ಸುಳ್ಳಾಗಿತ್ತು. ಮೈಸೂರಿನ ಇಂಗ್ಲಿಷ್ ಅಧಿಕಾರಿ ರೆಸಿಡೆಂಟ ಕೋಲನಿಗೆ ಕೊಡಗಿನಲ್ಲಿ ನಡೆದಿದ್ದ ಎಲ್ಲ ವಿದ್ಯಮಾನಗಳೂ ತಿಳಿಯುತ್ತಿತ್ತು. ಅವನಿಗೆ ವೀರರಾಜ ಹಾಗೂ ಕುಂಟಬಸವರ ದೈತ್ಯಾಡಳಿತದ ಬಗ್ಗೆ ಅನೇಕ ದೂರುಗಳು ಬಂದಿದ್ದವು. ಒಮ್ಮೆ ಇದನ್ನೆಲ್ಲ ನೋಡಿ ಬರಲು ಕಾಸಮೇಜರನೆಂಬ ಅಧಿಕಾರಿಯನ್ನು ಕಳುಹಿಸಿದ್ದನು. ಅವನಿಗೆ ದೊರೆಯ ಕ್ರೌರ್ಯದ ಬಗ್ಗೆ ಆಧಾರ ದೊರಕಿರಲಿಲ್ಲ. ಈಗ ದೊರೆಯ ಹತ್ತಿರದ ಬಂಧುವಾದ ಚನ್ನಬಸಪ್ಪನು ಪತ್ನಿಯೊಡನೆ ಓಡಿಬಂದು ಅವನ ಆಶ್ರಯ ಬೇಡಿದ್ದನು.

ಅವನಿಂದ ಕೊಡಗಿನಲ್ಲಿ ನಡೆದಿದ್ದ ಕುಂಟಬಸವನ ನೀಚಕೃತ್ಯಗಳ ವಿಸ್ತೃತ ವರದಿ ಒಪ್ಪಿಸಲ್ಪಟ್ಟಿತ್ತು. ಎಲ್ಲಕ್ಕಿಂತಲೂ ದೊಡ್ಡ ವೀರರಾಜನ ಮಕ್ಕಳಾದ ದೇವಮ್ಮಾಜಿ ಮತ್ತು ಅವಳ ಸೋದರಿ ಮಹದೇವಮ್ಮಾಜಿಯರನ್ನು ಅವರು ಸೆರೆಯಲ್ಲಿಟ್ಟು ಕ್ರೂರ ತನದಲ್ಲಿ ನಡೆಸಿಕೊಳ್ಳುತ್ತಿರುವ ಬಗ್ಗೆ—ದೊರೆಯ ಸಹೋದರಿ ದೇವಮ್ಮಾಜಿಯೇ ಅಣ್ಣನ ವಿರುದ್ಧ ದೂರು ಕೊಟ್ಟಮೇಲೆ, ಇದನ್ನು ನಂಬದೆ ತಿರಸ್ಕರಿಸುವಂತೆ ಇರಲಿಲ್ಲ. ಆದರೂ ಅವರಿಗೆ ದಂಡೆತ್ತಿಹೋಗಲು ಒಂದು ಪ್ರಬಲ ಕಾರಣ ಬೇಕಿತ್ತು.

" ನಿಮಗೆ ಆ ಕುಂಟಬಸವಯ್ಯನ ಕೊಲೆ, ಸುಲಿಗೆಗೆ ಅತ್ಯಾಚಾರಗಳಿಗೆ ಆಧಾರ ಬೇಕೆ? ನೀವು ಈ ಹಿಂದೆ ನಿಮ್ಮ ಆಶ್ರಯಬೇಡಿ ಬಂದಿದ್ದನಲ್ಲ, ಆ ಚೆನ್ನವೀರನಿಗೆ ಯಾವ ಗತಿ ಬಂದಿತೆಂಬುದು ತಿಳಿದಿದೆಯೇ?"

—ತಿರಸ್ಕಾರದಿಂದ ಚನ್ನಬಸಪ್ಪನು ಕೇಳಿದನು.

" ಯಾವ ಚೆನ್ನವೀರ?"

" ನೀವು ಅವನನ್ನು ಇಷ್ಟುಬೇಗ ಮರೆತಿರಾ? ತನ್ನನ್ನು ವೀರರಾಜನು ಸೆರೆ ಹಿಡಿದು, ಹಿಂಸಿಸಿ ಕೊಲ್ಲುವನೆಂದು ತಿಳಿದು, ಕೊಡಗಿನಿಂದ ತಲೆತಪ್ಪಿಸಿಕೊಂಡು, ನಿಮ್ಮ ಆಶ್ರಯಕ್ಕೆ ಕೆಲವು ವರ್ಷಗಳ ಹಿಂದೆ ಬಂದಿದ್ದನಲ್ಲ, ಆ ದುರ್ದೈವಿ ಚೆನ್ನವೀರ. ಅವನ ಗತಿ ಏನಾಯ್ತು ಗೊತ್ತೆ?"

" ಇಲ್ಲ...."

" ನೀವು ಆಶ್ರಯಕ್ಕೆ ಬಂದವನನ್ನು ದೊರೆಯ ಒತ್ತಾಯಕ್ಕೆ ಕಟ್ಟುಬಿದ್ದು ಹಿಂದಕ್ಕೆ ಒಪ್ಪಿಸಿದಿರಿ. ಹೀಗೆ ಮರಳಿ ಪಡೆದ ಅವನನ್ನು ಚಿಕ್ಕವೀರರಾಜನು ರಾಜದ್ರೋಹಿ ಎಂದು ಸಾರಿ, ಅವನನ್ನು ಚರ್ಮ ಸುಲಿಸಿ ಕೊಂದನು. ಹೆಂಡತಿ ಮಕ್ಕಳ ತಲೆಯನ್ನು ಕಟುಕರಿಂದ ಹೊಡೆಸಿದನು. ಇದಕ್ಕಿಂತ ಘೋರವಾದ ಅನ್ಯಾಯ ನಡೆಯಬೇಕಿದ್ದರೆ ನಮ್ಮನ್ನು ನೀವು ವೀರರಾಜನ ಕೈಗೆ ಒಪ್ಪಿಸಿರಿ—"

ಎಂದ ತಿರಸ್ಕಾರದಿಂದ ಚೆನ್ನಬಸವ

" ಇಲ್ಲ, ನಿಮ್ಮನ್ನೆಂದಿಗೂ ಅವನ ಪಾಲು ಮಾಡುವುದಿಲ್ಲ. ನಿಮ್ಮನ್ನು ಶತ್ರುಗಳಿಗೆ ಒಪ್ಪಿಸಿಕೊಡುವುದಾದರೆ, ನಾವು ನಿಮಗೆ ಆಶ್ರಯ ಕೊಡುತ್ತಲೇ ಇರಲಿಲ್ಲ—ನೀವು ಇಲ್ಲಿ ನಿಶ್ಚಿಂತೆಯಿಂದ ಇರಿ. ನಾವು ಕೊಡಗಿನಲ್ಲಿ ನಡೆದಿರುವ ವಿದ್ಯಾಮಾನವನ್ನು ಅರಿತು, ಮುಂದೆ ಕೈಗೊಳ್ಳಬೇಕಾದ ಕಾರ್ಯನೀತಿಯನ್ನು ನಿರ್ಧರಿಸುತ್ತೇವೆ."

—ಎಂದು ರೆಸಿಡೆಂಟ ಕೋಲನು ಚನ್ನಬಸಪ್ಪ ದಂಪತಿಗಳಿಗೆ ಸಮಾಧಾನಮಾಡಿ, ಬೆಂಗಳೂರಿನಲ್ಲಿ ಅವರಿಗೆ ಬಿಡಾರ ಕಟ್ಟಿಸಿಕೊಟ್ಟನು.

ಅಷ್ಟರಲ್ಲಿ ಈ ಸುದ್ದಿ ತಿಳಿದ ಚಿಕ್ಕವೀರರಾಜನು ತನ್ನ ಭಾವ ಹಾಗೂ ಸೋದರಿ ಯರಿಂದ ತನ್ನ ಎಲ್ಲ ಸಂಗತಿ ಇಂಗ್ಲಿಷರಿಗೆ ವರದಿಯಾಗುವುದೆಂದು ಹೆದರಿ, ಹೇಗಾದರೂ ಮಾಡಿ ಅವರನ್ನು ಮತ್ತೆ ಹಿಂದಕ್ಕೆ ಕಳುಹಿಸಲು ಪತ್ರ ಬರೆದನು. ಈ ಪತ್ರಕ್ಕೆ ಇಂಗ್ಲಿಷರು ಬೆಲೆ ಕೊಡಲಿಲ್ಲ.

ಇದರಿಂದ ಕುಪಿತನಾಗಿ ವೀರರಾಜನು ಚೆನ್ನಬಸಪ್ಪನ ಮೇಲಿನ ಸಿಟ್ಟನ್ನು ಅವನ ಸಹೋದರ ಮುದ್ದಯ್ಯನ ಮೇಲೆ ತೀರಿಸಿಕೊಂಡನು.

ಕುಂಟಬಸವನ ಮಾತು ಕೇಳಿಕೊಂಡು, ನಿರಪರಾಧಿಯಾದ ಮುದ್ದಯ್ಯನನ್ನು ಚಿಕ್ಕವೀರರಾಜನು ಕೊಲ್ಲಿಸಿ, ತನ್ನ ಸೇಡು ತೀರಿಸಿಕೊಂಡನು.

ಈ ಕಗ್ಗೊಲೆಯನ್ನು ಕೇಳಿ ಇಂಗ್ಲಿಷರಿಗೆ ಕೊಡಗನ್ನು ಚಿಕ್ಕವೀರರಾಜನಿಂದ ಕೈವಶಮಾಡಿಕೊಳ್ಳಲು ಬೇಕಾಗಿದ್ದ ಒಂದು ಸ್ವರ್ಣ ಅವಕಾಶ ಸಿಕ್ಕಿದಂತೆ ಆಯಿತು.

ಅವರು ಕೊಡಗನ್ನು ಅವನಿಂದ ಕಿತ್ತುಕೊಳ್ಳಲು ಈ ಬಗ್ಗೆ ಅಂತಿಮ ತೀರ್ಮಾನ ಕೈಗೊಳ್ಳುವ ಮೊದಲು ನ್ಯಾಯತೀರ್ಮಾನದ ನಾಟಕವಾಡಿದರು. ೧೮೩೩ನೇ ಜನವರಿ ೧೮ರಲ್ಲಿ ಮದರಾಸಿನ ಗೌರ್ನರ್ ಎಫ್. ಅಡಾಮನು ಒಂದು ಪತ್ರ ಬರೆದು, ಕೊಡಗಿನಲ್ಲಿ ನಡೆದಿದ್ದ ಈ ಎಲ್ಲ ಹತ್ಯಾಕಾಂಡವನ್ನೂ, ದುರಾಡಳಿತವನ್ನೂ ಪ್ರಸ್ತಾವಿಸಿ, ದೊರೆಯಿಂದ ಈ ಬಗೆಗೆ ಸೂಕ್ತ ಸಮಜಾಯಿಷಿ ಬೇಡಿದನು.

ಈ ಪತ್ರಕ್ಕೆ ಚಿಕ್ಕವೀರರಾಜನು ಬೆಲೆಕೊಡದೆ, ತಿರಸ್ಕರಿಸಿ ಬಿಟ್ಟನು. ಕೊಡಗು ಸ್ವತಂತ್ರ ರಾಜ್ಯವೆಂದೂ, ಅದರ ಒಳಾಡಳಿತದಲ್ಲಿ ಯಾರಿಗೂ ಕೈಹಾಕಲು ಅಧಿಕಾರವಿಲ್ಲವೆಂದೂ ಪತ್ರ ಬರೆದನು. ಮತ್ತೆ ಕಾಸ ಮೇಜರನು ಕೊಡಗಿನ ದೊರೆಗೆ ಪತ್ರ ಬರೆದು, ಕೊಡಗು ರಾಜ್ಯವು ಕಂಪನಿಯ ಆಶ್ರಿತ ರಾಜ್ಯವೆಂದೂ, ಕಂಪೆನಿಗೆ ದೊಡ್ಡ ವೀರರಾಜನ ಕಾಲದಿಂದಲೂ, ಕೊಡಬೇಕಾಗಿದ್ದ ೨೪,೦೦೦ ರೂಪಾಯಿಗಳ ಪೊಗದಿಯ ಬದಲು ಒಂದು ಆನೆಯನ್ನು ಕಾಣಿಕೆಯಾಗಿ ಪಡೆಯಲಾಗುತ್ತಿದೆಯೆಂದೂ ತಿಳಿಸಿದನು.

ಈ ಪತ್ರಕ್ಕೆ ಚಿಕ್ಕವೀರರಾಜನು ಉತ್ತರ ಕೊಡುವ ಗೋಜಿಗೆ ಹೋಗದೆ, ಗುಟ್ಟಾಗಿ ದೊಡ್ಡ ವೀರರಾಜನ ಪುತ್ರಿಯರಾದ ದೇವಮ್ಮಾಜಿ ಮತ್ತು ಮಹದೇವಮ್ಮಾಜಿಯರನ್ನು ಕೊಲ್ಲಿಸಿದುದಲ್ಲದೆ, ವೀರರಾಜನ ಮೊಮ್ಮಕ್ಕಳಾದ ಅಪ್ಪಾಜಿ ಲಿಂಗರಾಜರನ್ನು ನಲನಾಡಿನ ಅರಮನೆಯಲ್ಲಿರಿಸಿದನು.

ಗೂಢಚಾರದಿಂದ ಕಾಸಮೇಜರನಿಗೆ ಇದೆಲ್ಲ ಸಂಗತಿ ವರದಿಯಾಗಿ, ಎಲ್ಲವನ್ನೂ ಪ್ರತ್ಯಕ್ಷ ತಿಳಿದು ವರದಿಮಾಡಲು, ತಲಚೇರಿಯಿಂದ ಇಬ್ಬರು ಸಮರ್ಥರಾದ ವಕೀಲರನ್ನು ಕೊಡಗಿಗೆ ಕಳುಹಿಸಿಕೊಟ್ಟನು.

ಅದರಂತೆ, ಕರುಣಾಕರ ಮೇನನ್ ಹಾಗೂ ದಾರಾಸೇಟರೆಂಬ ಮುತ್ಸದ್ದಿಗಳು ಈ ಕಾರ್ಯಕ್ಕೆ ಹೊರಟರು. ಚಿಕ್ಕವೀರರಾಜನು ದಾರಾಸೇಟನನ್ನು ಹಿಂದಕ್ಕೆ ಕಳುಹಿಸಿ, ಕರುಣಾಕರ ಮೇನನನ್ನು ಬಂಧಿಸಿ, ಕಾರಾಗೃಹದಲ್ಲಿ ಇರಿಸಿದನು.

ಈಗ ತಮ್ಮ ವಕೀಲರಿಗೆ ಬಂದೊದಗಿದ ದುರ್ಗತಿಯನ್ನು ತಿಳಿದು ಕಂಪನಿಯ ಸರಕಾರವು ಕೊಡಗಿನ ದೊರೆ ವೀರರಾಜನನ್ನು ತಮ್ಮ ಶತ್ರುವೆಂದು ಪರಿಗಣಿಸಿ, ಕೊಡಗಿನ ಮೇಲೆ ಯುದ್ಧ ಘೋಷಿಸಿದರು.

೧೮೩೪ನೇ ಏಪ್ರಿಲ್ ೧ನೇ ದಿನಾಂಕ ಈ ದಂಡೆಯಾತ್ರೆ ಆರಂಭವಾಯಿತು.

ಕೊಡಗನ್ನು ಇಂಗ್ಲಿಷರು ಮುತ್ತಿ ನಾಲ್ಕೂ ಕಡೆಯಿಂದ ಸುತ್ತುವರಿದರು.

ಬ್ರಿ. ಲಿಡ್ಸೆಯು ಕುಶಾಲನಗರದಿಂದಲೂ, ಜ. ಪಾಲಸನು ಕಣ್ಣಾನೂರಿನಿಂದಲೂ ಹೆಗ್ಗಳಘಾಟಿನ ಮೂಲಕವೂ ಹೊರಟರು. ಕರ್ನಲ್ ವಾಘನ ನೇತೃತ್ವದಲ್ಲಿ ಉತ್ತರದಿಂದಲೂ, ಲೆ. ಕರ್ನಲ್ ಜಾಕ್‌ಸನ್ನನ ನೇತೃತ್ವದಲ್ಲಿ ಮಂಗಳೂರಿನ ಕಡೆಯಿಂದಲೂ ಇಂಗ್ಲಿಷರ ಸೈನ್ಯ ಬಂದು ಕೊಡಗನ್ನು ಮುತ್ತಿಗೆ ಹಾಕಿತು. ಪೆರುಪಟ್ಟೂರು ಕಡೆಯಿಂದ ಜ. ಫ್ರೇಜರನು ಕೊಡಗಿಗೆ ಬಂದನು.

ಈ ಸಮಯದಲ್ಲಿ ತನಗೇ ಯುದ್ಧದಲ್ಲಿ ಜಯವಾಗುವುದೆಂದು ನಂಬಿ, ವೀರರಾಜನು ನಾಲ್ಕು ನಾಡಿನ ಅರಮನೆಯಲ್ಲಿ ನಿಶ್ಚಿಂತನಾಗಿದ್ದನು.

ಆದರೆ ಮಡಕೇರಿಯು ಶತ್ರುಗಳ ವಶವಾಗುತ್ತಲೇ ಕ್ರಿ.ಶ. ೧೮೩೪ನೇ ಏಪ್ರಿಲ್ ೯ರಲ್ಲಿ ಅಪ್ಪಾರುಂಡ ಬೋಪು ದಿವಾನನು ತನ್ನ ಬಳಿ ಇದ್ದ ೪೦೦ ಕೊಡಗು ಸೈನಿಕರೊಡನೆ ಆಂಗ್ಲರಿಗೆ ಶರಣಾಗಿ, ಮಡಕೇರಿಯನ್ನು ಶತ್ರುಗಳಿಗೆ ಒಪ್ಪಿಸಿಕೊಟ್ಟನು.

ಈ ಸುದ್ದಿ ಕೇಳಿ ಬೇರೆ ದಾರಿಕಾಣದೆ ಚಿಕ್ಕವೀರರಾಜನು ಪ್ರಾಣ ಉಳಿಸಿಕೊಳ್ಳಲು ದಿವಾನ ಲಕ್ಷ್ಮೀನಾರಾಯಣಯ್ಯನನ್ನು ಬಿಳಿಬಾವುಟದೊಂದಿಗೆ ಕಳುಹಿಸಿ, ಸಂಧಾನಕ್ಕೆಳಸಿದನು. ಅಲ್ಲದೆ ಮೇನನನ್ನು ಬಿಡುಗಡೆಮಾಡಿ ಶತ್ರುಗಳ ಬಳಿಗೆ ಕಳುಹಿಸಿಕೊಟ್ಟನು.

ಇಂಗ್ಲಿಷರು ಈಗ ಸೋತು ಶರಣು ಬಂದ ದೊರೆಯನ್ನು ಕೊಡಗಿನ ಸಿಂಹಾಸನದಿಂದ ತಳ್ಳಿ, ಕೊಡಗನ್ನೂ ತಮ್ಮ ಆಡಳಿತಕ್ಕೆ ತೆಗೆದುಕೊಂಡರು. ಚಿಕ್ಕವೀರರಾಜನನ್ನೂ, ಅವನ ಕುಟುಂಬದವರನ್ನು ದೂರದ ವಾರಣಾಸಿಗೆ ಕಳುಹಿಸಿ, ಅಲ್ಲಿ ನಿರ್ಬಂಧದಲ್ಲಿರಿಸಿ, ಕೊಡಗನ್ನು ತಮ್ಮ ಆಳ್ವಿಕೆಗೆ ತೆಗೆದುಕೊಂಡರು. ಜನತೆಯ ಹೆಸರಿನಲ್ಲಿ ಜನರಲ್ ಫ್ರೇಜರನು ಒಂದು ಇಸ್ತೀಹಾರನ್ನು ಹೊರಡಿಸಿದನು :

"ಕೊಡಗುದೇಶದ ನಿವಾಸಿಗಳು ಇನ್ನು ತಮಗೆ ವೀರರಾಜೇಂದ್ರ ಒಡೆಯರು ಅರಸಾಗಿರಬಾರದು, ಪೂರ್ವ ಇಂಡಿಯ ಕಂಪೆನಿಯ ಆಂಗ್ಲ ಸರಕಾರ ಈ ಪ್ರಾಂತವನ್ನು ನೋಡಿಕೊಳ್ಳಬೇಕು—ಎಂದು ಏಕಮತದಿಂದ ಅಪೇಕ್ಷಿಸಿರುವ ಕಾರಣ, ಈ ಅರಸರು ಈ ವರೆಗೆ ಆಳುತ್ತಿದ್ದ ಈ ದೇಶವನ್ನು ಇಂಡಿಯಾದೇಶದ ಗೌರ್ನರ್ ಜನರಲ್ ಸಾಹೇಬರು ಸಂತೋಷದಿಂದ ಘನಕಂಪೆನಿ ಸರಕಾರದ ಆಡಳಿತಕ್ಕೆ ತೆಗೆದುಕೊಂಡಿದ್ದಾರೆ.

ದೇಶವನ್ನು ಈ ಅರಸರ ಆಡಳಿತಕ್ಕೆ ಮತ್ತೆ ಬಿಟ್ಟು ಕೊಡುವುದಿಲ್ಲ ಎಂದೂ, ದೇಶದ ನಿವಾಸಿಗಳ ವ್ಯವಹಾರಿಕ, ಧಾರ್ಮಿಕ ವಿಷಯಗಳಲ್ಲಿ ಅವರವರ ಸಂಪ್ರದಾಯವನ್ನು ಗೌರವದಿಂದ ಕಂಡು, ನಡೆಸಿಕೊಡುತ್ತೇವೆಂದೂ, ಜನರ ಯೋಗಕ್ಷೇಮವನ್ನು ಅಭಿವೃದ್ಧಿಗೊಳಿಸುವುದು ತಮ್ಮ ಕರ್ತವ್ಯವೆಂದೂ, ಈ ಕರ್ತವ್ಯವನ್ನು ಸದಾ ಪಾಲಿಸುತ್ತೇವೆಂದೂ, ಘನಸರ್ಕಾರ ಈ ಮೂಲಕ ಆಶ್ವಾಸನ ಕೊಡುತ್ತದೆ—

ಮಡಕೇರಿ,
೭-೫-೧೮೩೪

ಜಿ. ಎಸ್. ಫ್ರೇಜರ್
ಲೆಫ್ಟಿನೆಂಟ್ ಕರ್ನಲ್ ಮತ್ತು
ರಾಜ ಪ್ರತಿನಿಧಿ"

ಈ ಇಸ್ತೀಹಾರಿನಂತೆ ಕೊಡಗು ಇಂಗ್ಲಿಷ್ ಸರಕಾರಕ್ಕೆ ಸೇರಿಹೋಯಿತು. ಫ್ರೇಜರನು ಕೊಡಗಿನ ಚೀಫ್ ಕಮಿಷನರಾಗಿ ನೇಮಕ ಹೊಂದಿದನು.

ಚಿಕ್ಕವೀರರಾಜನು ತನ್ನ ಪತ್ನೀಪುತ್ರಿಯರು, ಆಶ್ರಿತರೊಡಗೂಡಿ ಕಾಶಿಯಲ್ಲಿ ನಿಂತನು.

೩

ಚಿಕ್ಕವೀರರಾಜನು ಯಾವ ಘನ ಉದ್ದಿಶ್ಯಕ್ಕಾಗಿ ಇಂಗ್ಲೆಂಡಿಗೆ ಬಂದಿದ್ದನೋ ಆ ಉದ್ದಿಶ್ಯ ಕೈಗೂಡುವ ಭಾಗ್ಯ ಅವನು ಕೇಳಿಕೊಂಡು ಬಂದಿರಲಿಲ್ಲ.

ಅವನು ಆಳುವ ಮಹಾಸಾಮ್ರಾಜ್ಞಿಯ ಮನವನ್ನು ಒಲಿಸಿಕೊಳ್ಳಲು ತನ್ನ

ಮಗಳನ್ನು ಕ್ರೈಸ್ತ ಮತಕ್ಕೆ ಸೇರಿಸಿ, ಮಗಳ ಹೊಣೆಗಾರಿಕೆಯನ್ನು ಸಾಮ್ರಾಜ್ಞಿಗೆ ವಹಿಸಿದನು.

ಗೌರಮ್ಮನು ಸಾಮ್ರಾಜ್ಞಿಯ ಕೋರಿಕೆಯಂತೆ ಕ್ಯಾಂಟರ್‌ಬರಿಯ ಆರ್ಚ್ ಬಿಷಪ್ಪರಿಂದ ಕ್ರೈಸ್ತಮತ ದೀಕ್ಷೆ ಸ್ವೀಕರಿಸಿ, ವಿಕ್ಟೋರಿಯಾ ಗೌರಮ್ಮನೆಂಬ ಹೆಸರಿನಿಂದ ಸಾಮ್ರಾಜ್ಞಿಯ ವಿಶೇಷ ಪೋಷಣೆಗೆ ಸೇರಿದಳು. ಬ್ರಿಟಿಷ್ ಸರಕಾರವು ಗೌರಮ್ಮನ ವಿದ್ಯಾಭ್ಯಾಸಕ್ಕೆ ಯೋಗ್ಯ ವ್ಯವಸ್ಥೆಮಾಡಿ, ಅವಳನ್ನು ನೋಡಿಕೊಳ್ಳಲು ಮೊದಲು ಶ್ರೀಮತಿ ಡ್ರುಮಂಡಳೆಂಬಾಕೆಯನ್ನು ನೇಮಿಸಿದರು. ಅವಳಿಗೆ ಬಾಲ್ಯದಿಂದಲೂ ಇಂಗ್ಲಿಷ್ ಶಿಕ್ಷಣ ಕೊಟ್ಟು, ಆಂಗ್ಲ ಸದ್ಗೃಹಸ್ಥರ ಬಾಲಿಕೆಯಂತೆ ಬೆಳೆಸಲಾಯಿತು.

ಇದರಿಂದ ಚಿಕ್ಕವೀರರಾಜನ ಬಯಕೆ—ಕೊಡಗನ್ನು ಮತ್ತೆ ಆಂಗ್ಲರಿಂದ ದೊರಕಿಸಿಕೊಳ್ಳುವ ಬಯಕೆ—ಮಾತ್ರ ಈಡೇರದೆ ಹೋಗಿತ್ತು. ಅಲ್ಲದೆ ದೊಡ್ಡವೀರ ರಾಜನು ಮುಂಬಯಿ, ಕಲ್ಕತ್ತಾ ಮತ್ತು ಮದರಾಸುಗಳಲ್ಲಿ ಇರಿಸಿದ್ದ ಭಾರಿ ಮೊತ್ತದ ಹಣವನ್ನು ಮರಳಿ ಪಡೆಯಲು ಅವನು ಮಾಡಿದ್ದ ಎಲ್ಲ ಸಾಹಸವೂ ವ್ಯರ್ಥವಾಗಿತ್ತು.

ಇದೇ ಕೊರಗಿನಲ್ಲಿ ಅವನು ಹಾಸಿಗೆಹಿಡಿದು ಮಲಗಿದನು. ಅವನು ತಾನು ಭಾರತದಿಂದ ಬಂದುದೇ ತಪ್ಪಾಯಿತೆಂದುಕೊಂಡನು. ಆ ಪುಣ್ಯಭೂಮಿ ಭಾರತವನ್ನು ತನ್ನ ತಾಯಿನಾಡಾದ ಕೊಡಗನ್ನು, ಅದರ ಜನತೆಯನ್ನು ನೆನೆಯುತ್ತ ಲಂಡನಿನ ತನ್ನ ಮನೆಯಲ್ಲಿ ಕ್ರಿ. ಶ. ೧೮೬೦ರಲ್ಲಿ ಚಿಕ್ಕವೀರರಾಜನು ತನ್ನ ಕೊನೆಯುಸಿರನ್ನು ಬಿಟ್ಟನು. ಆ ದಿನ ಅವನು ತನ್ನ ಮಗಳ ಕೈಯನ್ನು ತನ್ನ ಕೈಯಲ್ಲಿ ಇರಿಸಿಕೊಂಡು :

"ಮಗು, ನಿನ್ನ ತಾಯಿನಾಡನ್ನು ಮಾತ್ರ ಮರೆಯಬೇಡ"—ಎಂದು ಹೇಳಿದನು. ಅನಂತರ ತನ್ನ ಬಳಿ ಇರಿಸಿಕೊಂಡಿದ್ದ ಬಹು ಬೆಲೆಯುಳ್ಳ ನಗಗಳನ್ನು ಮಗಳಿಗೆ ಕೊಟ್ಟು, ಕಂಬನಿದುಂಬಿದ ಕಣ್ಣನ್ನು ಮುಚ್ಚಿ ಕನಸುಕಾಣುತ್ತಾ ಮಲಗಿದನು.

ಮಲಗಿದವನು ಮೇಲೇಳಲಿಲ್ಲ—ಅದೇ ಅವನ ಬಾಳಿನ ಕೊನೆಯ ರಾತ್ರಿಯಾಗಿತ್ತು. ಅವನ ದೇಹವನ್ನು ಮೊದಲು ಕೆನಾಲ್ ಗ್ರೀನ್ ಸ್ಮಶಾನದಲ್ಲಿ ಹೂಳಿದರು. ಮಾರನೆಯ ವರ್ಷ—ಅದನ್ನು ಕಾಶಿಗೆ ತಂದು ಅಲ್ಲಿ ಮಣ್ಣುಮಾಡಲಾಯಿತು.

ಕೊಡಗಿನ ಕೊನೆಯ ದೊರೆಯ ಕಥೆ ಇತಿಹಾಸದಿಂದ ಹೀಗೆ ಕಣ್ಮರೆಯಾಯಿತು.

ಬೆಸಗರಹಳ್ಳಿ ರಾಮಣ್ಣ

ಕೆಂಪುಹುಂಜ

ಹೊಗೆ ಹೆಚ್ಚಾದುದರಿಂದ ಆಗಾಗ್ಗೆ ಕಣ್ಣಲ್ಲಿ ನೀರು ತುಂಬಿ ಮಂಜಾಗುತ್ತಿತ್ತು. ಕಣ್ಣುಗಳನ್ನು ಸೆರಗಿನಿಂದ ಒರಸಿಕೊಳ್ಳುತ್ತಾ ಉರಿಯನ್ನು 'ವಾಗೊಲೆ'ಗೆ ತಿರುಗಿಸಿ ಹಿಟ್ಟಿನ ಎಸರು ಕುದಿಯುತ್ತಿದೆಯೇ ಎಂದು ನಿಂಗಕ್ಕ ಮಡಕೆಯ ಬಾಯನ್ನು ಇಣುಕಿ ನೋಡಿದಳು. ಕಣ್ಣಗಲಿಸಿ ನೋಡುತಿದ್ದಂತೆಯೇ—ಹಿಂದಲಹಟ್ಟಿಯಲ್ಲಿ ಕೋಳಿಗಳನ್ನು ಹಿಡಿದು ಕವುಚಿಹಾಕುತ್ತಿದ್ದ ಮಗ ಚಿಕ್ಕಮಲ್ಲೆ "ಅವ್ವಾ, ಎಲ್ಲಾ ಬಂದೊ—ಕೆಂಪುಂಜ ಒಂದು ಬುಟ್ಟು" ಎಂದುದು ಕೇಳಿಸಿತು. ನಿಂಗಕ್ಕನಿಗೆ ಕೆಂಡದಮೇಲೆ ನಿಂತಂತಾಯಿತು. "ಅದ್ಯಾಕೆ ಬರಲಿಲ್ಲಾ—ಸರಿಯಾಗಿ ನೋಡೋ ನಿನ್ನ ಕಣ್ಣಿಂಗೋಗ" ಎಂದಳು.

"ಎಲ್ಲಾನು ನೋಡ್ದೆ, ಬೇಕಾದ್ರೆ ನೀನೇ ಬಂದು ನೋಡವ್ವಾ."

"ನಾನೇ ಬಂದು ನೋಡ್ಬೇಕೆ? ಆಗ್ಲೆ ವಾರುದ್ದ ನಾಲ್ಗೆ ತೋರ್ಸಿಯಾ? ಹಿಟ್ಟಿನ್‌ದೊಣ್ಣೆ ತಂದು ಇಕ್ಕುಡ್‌ಸುದ್ರೆ....ಇನ್ನೊಂದ್ಸಾರಿ ನೋಡು. ಅಂಗೆ ಓಗಿ ಸಂಪ್ಲೇಲಿ, ರೋಜಾದ ಮೆಳೇಲಿ, ದನೀನ ಗೊಂತೇಲಿ....ಕೇಳುಸ್ತೇನ್ಲಾ."

"ಹ್ಲೂಂ, ಕತ್ಲೆ ; ಹಿತ್ಲುಗೋಗೂಕೆ ಹೆದುರ್ಕೆಯಾಯ್ತದೆಕನ ಹೋಗು" ಎಂದು ಅಳುವ ದನಿಯಲ್ಲಿ ಮಗ ಗೋಗರೆದುದ್ದನ್ನು ಕೇಳಿ ನಿಂಗಕ್ಕ 'ಹಾಳುಂಜುಕ್ಕೇನಾಯ್ತು' ಎಂದುಕೊಂಡೇ ಕೋಣೆಯಿಂದ ಹೊರಕ್ಕೆಬಂದಳು.

ಹಿಂದಲಹಟ್ಟಿಗೆ ಹೋಗಿ, ತಾನೂ ಕೋಳಿಗಳನ್ನು ಎಣಿಸಿ, ಅಜಮಾಯಿಸಿ ಮಾಡಿದಳು. ಕೆಂಪು ಹುಂಜವಿರಲಿ, ಅದರ ಒಂದು ಪುಕ್ಕವೂ ಕಾಣಲಿಲ್ಲ. ಎದೆ ಒಡೆದುಹೋದಂತಾಯಿತು. ಮಗನನ್ನು "ಗೊಂತು, ಒಣಹುಲ್ಲು ಹಾಕಿರುವ ಮೂಲೆ, ಅಲ್ಲೆಲ್ಲಾ ದೀಪ ಹಿಡಕೊಂಡು ಹುಡುಕು" ಅಂತೇಳಿ, ಉಕ್ಕುಬಂದು ಹಿಟ್ಟಿನೆಸರು ಸುರಿದುಹೋದೀತೆಂದು ಮತ್ತೆ ಕೋಣೆಹೊಕ್ಕಳು.

ಆತುರಾತುರವಾಗಿ ಹಿಟ್ಟು ಓನಿಸಿ, ಮುದ್ದೆಕಟ್ಟಿಮುಗಿಸಿ, 'ಇದರ ಮನೆ ಯಕ್ಕಾ ಹುಟ್ಟೋಗ ; ಯತ್ತಾಗೊಯ್ತೋ ಕಾಣನಲ್ಲ' ಎಂದುಕೊಳ್ಳುತ್ತಾ ದೀಪಹಿಡಿದು ಹಿಂದಲ ಹಟ್ಟಿಯ ಕಡೆಗೆ ಹೆಜ್ಜೆಹಾಕಿದಳು.

"ಗೊಂತಿಲೆಲ್ಲೂ ಕೋಳಿ ಇಲ್ಲ" ಎಂದ ಮಗ.

"ಅಂಗರೆತ್ತಾಗೋಯ್ತಪ್ಪಾ. ಇಷ್ಟೊತ್ಗೆ ಎಲ್ಲಿದ್ರೂಬಂದ್ಬುಡಬೇಕಲ್ಲ. ಯಾಕೆ ಇವತ್ತಿಂಗ್ಮಾಡ್ತು ಅಂತೀನಿ. ಏನಾರ ನಾಯಿಗೀಯಿ ಹಿಡ್ಕೊತ್ತೊ, ಇಲ್ಲದೇಹೋದ್ರೆ ಯಾರಾರ ಮುರ್ಕೊಂಡ್ರೊ" ಎಂದು ಅನುಮಾನಗಳ ಗುಂಪನ್ನೇ ತನ್ನೆದುರಿಟ್ಟು ಕೊಂಡು, ತಾನೂ ಒಮ್ಮೆ ಗೊಂತು, ಹಿತ್ತಲು ಎಲ್ಲಾ ಕಡೆಗೂ ಹುಡುಕಿ ಎಲ್ಲೂ ಹುಂಜದ ಸದ್ದೇ ಕೇಳದಿರಲು ಕೇರಿಯನ್ನೆಲ್ಲಾ ಕೇಳಿಯೇಬಿಡಬೇಕೆಂದು ಮನೆಮನೆ ಯಲ್ಲೂ "ನಮ್ಮ ಕೆಂಪುಂಜ ಕಂಡ್ರಾ, ನಮ್ಮ ಕೆಂಪುಂಜ ಕಂಡ್ರಾ, ಇಲ್ಲೆಲ್ಲಾರ ಬಂದಿತ್ತೆ?....ಯಾವೊತ್ತೂ ಇಂಗಾಗಿರ್ಲಿಲ್ಲ. ಮುಸ್ಸಂದೆಗೆ ಸರಿಯಾಗಿ ಎಲ್ಲಿದ್ದರೂ ಬಂದ್ಬುಡ್ತಿತ್ತು. ನಿಮ್ಮ ಯಾಟೆಗೀಟೆ ಜೊತೆಲೇನಾರ ಆಡ್ಕೊಂಡು ಬಂದ್ ಗಿಂದಿದ್ದದ್ರೋ ಯಂಗ್ರವ್ವ" ಎಂದು ಎಲ್ಲರನ್ನೂ ಕೇಳಿದಳು. ಅದಕ್ಕೆ ಬಂದ ಉತ್ತರ: "ನಾವೇನ್ ಬಲ್ಲೊ" ಎನ್ನುವ ತಲೆಯೊಗೆತ.

ಮನೆಗೆ ಬಂದ ನಿಂಗಕ್ಕ ಮುಳ್ಳಿನ ಮೇಲೆ ನಡೆಯುವವಳಂತೆ ಹಿಂದಲಹಟ್ಟಿಯಿಂದ ಮುಂದಲಹಟ್ಟಿಗೆ, ಮುಂದಲಹಟ್ಟಿಯಿಂದ ಹಿಂದಲಹಟ್ಟಿಗೆ ಅಲ್ಲಿಂದ ಹಿತ್ತಲಿಗೆ ತಟಾದಳು. ಹಿತ್ತಲಲ್ಲಿ ನಿಂತು ದೀಪದ ಬೆಳಕಿನಲ್ಲಿ ತನ್ನ ವಾರಗಿತ್ತಿ ಜೋರಕ್ಕನ ಹಿತ್ತಲಿನಕಡೆ ಕತ್ತಲೆಯೆಲ್ಲವನ್ನೂ ಛಿದ್ರಛಿದ್ರಮಾಡಿ ನೋಡುವವಳಂತೆ ಕಣ್ಣುಗಳನ್ನು ಅಗಲಿಸಿ ದೃಷ್ಟಿಯನ್ನು ಕೇಂದ್ರೀಕರಿಸಿ ನೋಡಿದಳು. ಏನೋ ಕಪ್ಪಗೆ ಕಂಡಂತಾಯಿತು. ಹುಂಜವೇ ಇರಬೇಕೆಂದು ಅನುಮಾನಿಸಿದಳು. ಹುಡುಕಿ, ಕಲ್ಲೊಂದನ್ನು ಕೈಗೆತ್ತಿ ಕೊಂಡು ಅದರ ಕಡೆಗೆ ಎಸೆದಳು. ಸದ್ದಿಲ್ಲ: 'ಅಯ್ಯೊ ನನ್ನ ಬುದ್ಧಿಗೆ ಮಂಕುಬಡಿಯಾ. ಎಲ್ಲೊ ಮುಳ್ಳಿನ್ಗಿಡವೇನೋಕನೇಳು' ಎಂದು ತನಗೇ ಕೇಳುವಂತೆ ಹೇಳಿಕೊಂಡು ಮನೆಯೊಳಕ್ಕೆ ಬಂದು ತನ್ನಹಾಗೂ ವಾರಗಿತ್ತಿಯ ಮನೆಯ ಮಧ್ಯದ ಗೋಡೆಯ ಹತ್ತಿರ ನಡೆದು, 'ಕೋಳೀಕಂಟೀನಾರ ಬಂದಾದೆ' ಎಂದು ಮೂಗುದ್ದಮಾಡಿದಳು; ಮತ್ತೆ ನಿರಾಶೆ. 'ಏನಾತಿ ಹುಂಜ ಯಾರೋ....ಮುರ್ಕೊಂಡ್ರು. ಎಷ್ಟ್ದಿನಿಂದ ಕಾಯ್ಕೊಂಡಿದ್ರೊ! ಭೂಮಿಮ್ಯಾಲೆ ನಡೀತಿರಲಿಲ್ಲ. ಹಾರೂದು, ಹಾರೂದು. ಅದರ ಕೆಂಪುಪುಕ್ಕ, ನಡಿವಾಗ ಅತ್ತಾಗು ಇತ್ತಾಗುವೆ ಜುಮುಕ ಜುಮುಕ ಅಂತ ವಾಲಾಡುದು ಕಂಡು ಒಳಗೊಳಗೇ ಕರಬೂರು. ಇನ್ನೇನ್ಕರಬಾರು ಬುಡು. ಮುರ್ಕೊಂಡು ಯಕ್ಕ ಹುಟ್ಟಿಸ್ಕೊಂಡ್ರಲ್ಲ. ಹಿಂಗೇ ಸಾದಿಸ್ಕೊಂಡ್ಬಂದ್ರಲ್ಲ ಹಗೆ. ನಮ್ಮ ಮನೆ ಸುತ್ತಮುತ್ತಲೋರು ಮರ್ಕೊಳ್ಳಿ ಐಗಂಚಿಯಿಂದಬಂದ್ರೆ ಹಾಕಿಸ್ಕೊಂಡೋಗೂಕೆ' ಎಂದು ವಾರಗಿತ್ತಿಯ ಮನೆಯಕಡೆಗೆ ಎರಡೂ ಕೈಯನ್ನು ಚಾಚಿ ತೋರಿಸಿ ಎದೆಗೊತ್ತಿ ಕೊಂಡಾಗ, ಬೆರಳ ಗಂಟುಗಳಿಂದ ನೊರನೊರನೆ ನಟಿಕೆಗಳ ಸುರಿಮಳೆಯಾಯಿತು.

"ಲೋ ಮಗ, ಪಂಜರದಮ್ಯಾಲೆ ಕಲ್ಲು ಬಿಗಿಯಾಗಿ—ಇಪ್ಪಾದೆ ನೋಡ್ಲಾ. ಮರಿಕೋಳಿ ಸರಿಯಾಗಿ ನೋಡು. ಕೊತ್ತಿಗಿತ್ತಿ ಆಯ್ಕೊಂಡದು. ನಮ್ಮನೆ ಹಾಳಾದ್ರೆ ಸಾಕು ಅಂತಾ ಕಾಯ್ಕೊಂಡವ್ರೆ ಜನ. ಅವರ ಕಳಸಮುರಿಯ, ಕಳ್ಳನೆರೆ. ಅಂತಾ

ಚಂದುಳ್ಳಿ ಹುಂಜಾನ ಮಂಗರಮಾಯಾಮಾಡ್‌ಬುಟ್ಟ್ರು ತುಟಿಪಿಟಿಕ್‌ಅನ್ನದೆ ಏನೂ ಕಾಣದ ಸರಣೀರಂಗೆ ಅವರೆ. ನಮ್ಮ ಮನೆ ಹಾಳ್‌ಮಾಡೂಕೆ ನಡಕಟ್‌ಕೊಂಡು ನಿಂತವ್ರೆ ಕನೋ. ನಿಮ್ಮಪ್ಪನಿಗೆ ಗಿಣಿಗೆ ಹೇಳ್ದಂಗೆ ಹೇಳ್ದೆ : ಈ ಅನಿಷ್ಟದ ನೆರೆ ಸಾವಾಸಬ್ಯಾಡ. ಊರಿಂದಾಚೆಗೆ ಮನೆ ಕಟ್‌ಕೊಳ್ಳುವ ಅಂತಾ. ನನ್ನಮಾತ ಯಾರು ಕೇಳಾರು—ಮೂರುಕಾಸ ಹೆಂಗ್ಸು : ಲೆಕ್ಕಕ್ಕೊ ಜಮಕ್ಕೊ....ಹ್ಞು ಆಯ್ತು—ಇವತ್ತು ಹುಂಜ, ನಾಳೆಕೆ ಮರಿಕೋಳಿ, ನಾಳಿದ್ದುದನ, ಆಚೆನಾಳಿದ್ದುಎಮ್ಮೆ, ಕೊನೆಗೊಂದಿನ ನನ್ನ ಮಗನ್ನೂ ಯಾವೊತ್ತಾರೂ ಒಂದಿನ 'ಇಸ'ಹಾಕಿ ಪನಮಾಡ್ದೆ, ಬುಡೂದುಲ್ಲ. ಅದ ನಾನು ಕಂಡಿವ್ನಿ : ಅವು ಸಮಾಧಿಮ್ಯಾಲೆ ಹಾಕೋಬೇಕೂ ಅಂತ ಕಾಯ್‌ಕೊಂಡು ಕುಂತವ್ರೆ" ಎಂದು ಬೋರಕ್ಕನ ಮನೆಯಕಡೆಗೆ ಕೈತೋರಿಸಿ ನರನರನೆ ನಟಿಗೆ ಮುರಿಯುತ್ತಾ "ಹ್ಞೂ....ತಿರುಪತಿ ಎಂಕಟರಮಣ ಎಲ್ಲಾನೂ ನೀನೇ ನೋಡು. ನನ್ಮೇಲೇನಾರೂ ಕಿಂಚಿತ್‌ಕೇಡಿದ್ರೆ ನನ್ನ ಸುಳಿಹಾಳಾಗ್ಲಿ—ಇಲ್ದೆ ಇದ್ರೆ ಅವರ ಮಕ್ಕಳ ನೆಲ್ಲಾ ಸಾಲ್ಗೆ ಸಮಾಧಿಮಾಡ್ಬುಡು. ನನ್ನುಂಜ ಮುರ್‌ಕೊಂಡೋರ ಭೂಗತಮಾಡು. ಆಗ ನನ್ನೆದೆಗೆ ಸಮಾಧಾನ. ಅದೇನ್ ಹೊಟ್ಟೆ ಉರಿಸಾರಪ್ಪ ಅದೇನ್ ಹೊಟ್ಟೆ ಉರಿಸಾರಪ್ಪ....ಹ್ಞುಂ" ಎಂದು ಏದುಸಿರುಬಿಡುತ್ತಾ ಎದೆ ಚಚ್ಚಿಕೊಳ್ಳುವುದಕ್ಕೂ ಗಂಡ ಪುಟ್ಟಲಿಂಗಣ್ಣ ಕಬ್ಬಿನಗದ್ದೆಗೆ ನೀರಾಯಿಸಲು ಹೋಗಿದ್ದವನು ಚಳಿಯಲ್ಲಿ ನಡುಗುತ್ತಾ ಮನೆ ಬಾಗಿಲಿಗೆ ಕಾಲಿಕ್ಕುವುದಕ್ಕೂ ಬಂದಾಯಿತು.

"ಅದೇನ್ ಸೂರೋದುದ್ದು. ಹೊತ್ತುಗೊತ್ತೇ ಇಲ್ವಲ್ಲ ನಿಂಗೆ, ಎದೆ ಬಡ್‌ಕೋಬ್ಯಾಡ, ಸುಳಿಗಿಳಿ ಅನ್ನು ಮಾತ್ ಬಾಯಲಿ ಕಡೀಸ್‌ಬ್ಯಾಡ—ಮನೆಗೆ ಲಕ್ಷ್ಮೀ ಬರೂಹೊತ್ತು, ಅಂತ ಸಾವಿರಸಲ ಬಡಕೊಂಡ್ರೂ ಕೇಳೀಯ? ಆಡುದ್ನೆ ಆಡೋ ಕಿಸಬಾಯಿದಾಸ ಅಂತ....ಅದೇನ್ ನಿನಗೆ ಆಗಿರು ಕೊರೆ?...."

"ಚಂದುಳ್ಳಿ ಕೆಂಪುಂಜ ಮನೇಗೆ ಬರ್ಲಿಲ್ವಲ್ಲ. ಎಲ್ಲಾನು ಹುಡ್ಕಿ ಸಾಕಾಯ್ತು. ಸಾಕ್ದೋಳು ನನಗೆ ಹೊಟ್ಟೆ ಉರಿಯೂದಿಲ್ವೆ. ಹೊಟ್ಟೇಲಿ ಹುಟ್ಟುದ್ ಮಗನ ಸಾಕಿ ದಂಗೆ ಸಾಕಿದ್ದೆ—ಕಣಜದಭತ್ತ, ವಾಡೆರಾಗಿ ಹಾಕಿ. ನನಗೆ ಹೊಟ್ಟೆ ಉರಿಯೂದಿಲ್ವೆ ಅಂತೀನಿ, ಅವರ ಸುಳಿ ಹಾಳಾಗ್ಲಿ ಅಂತೀನಿ, ಸುಮ್ ಸುಮ್‌ನೆ ಬೊಯ್ಯ್ಯಾಕೆ ನಾನು ಅಪ್ಪನ್ಗೆಹುಟ್ಟವ್ನಿ—ಅಡ್‌ನಾಡಿಯಲ್ಲಕನ ಹಾಕು."

"ಅದ್ ಸರಿಕನಮ್ಮಿ ನೀರ್‌ತಕೊಂಡು ಬಾ, ಉಂಡ್ಬುಟ್ ಸಮಾಧಾನವಾಗಿ ಇನ್ನೊಂದ್‌ಸತ್ತಿ ಹುಡುಕುದ್ರೆ ಆಯ್ತದೆ. ಇಲ್ಲೆ ಎಲ್ಲೋ ಇರಬೇಕೂ ಕನ....ಲೋ ಮಗ ಉಂಡ್ಲಾ, ಬಾ ಕೈತೊಳ್ಕೊ" ಎಂದು ಕೈಕಾಲು ತೊಳೆದುಕೊಂಡು ತಣಿಗೆಯ ಮುಂದೆ ಉಣ್ಣಲು ಕುಳಿತ.

ಗಂಡ ಮತ್ತು ಮಗ ಉಂಡು ಮುಗಿಸಿದ ಮೇಲೆ ತಾನೂ ಒಂದು ತುತ್ತು ತಿಂದ ಶಾಸ್ತ್ರಮಾಡಿದ ನಿಂಗಕ್ಕ ಮೇಲೆದ್ದಳು. ಮಧ್ಯಾಹ್ನದ ಹೊತ್ತು ಉಂಡು, ತಣಿಗೆ ಎರಚುವಾಗ—ಹಜಾರದಲ್ಲಿ ತನ್ನ ಹಿಂದಿಂದೆಯೇ ಓಡೋಡಿ ಬಂದು ಅನ್ನದ ಅಗಳನ್ನು

ಆಯ್ದುಕೊಳ್ಳುತ್ತಿದ್ದ ಹುಂಜ, ಈ ಕತ್ತಲೆಯಲ್ಲಿಯೂ ತನ್ನ ಹಿಂದೆಯೇ 'ಕೊಕ್‌ಕೊಕ್' ಎಂದು ಎಲ್ಲಿಂದಲೋ ಇದ್ದಕಿದ್ದಂತೆಯೇ ಓಡಿಬರಬಾರದೆ? ಎಂದು ಬಿಸಿಯುಸಿರು ಬುಟ್ಟು ಎಲ್ಲ ಕೆಲಸಕಾರ್ಯಗಳನ್ನು ಮುಗಿಸಿ, ಮನೆಯ ಹಜಾರದಲ್ಲಿ ಮಲಗುವ ಸಿದ್ಧತೆ ಮಾಡಿದಳು.

ಪುಟ್ಟಲಿಂಗಣ್ಣ ಅಲ್ಲಲ್ಲಿ ಅಡ್ಡಾಡಿ ಹುಂಜ ಹುಡುಕಿದ. ಹೆಂಡತಿಗೇ ಸಿಗದಿರುವುದು ತನಗೆಲ್ಲಿ ಸಿಗಬೇಕೆಂಬ ಸಿದ್ಧಾಂತವನ್ನು ಪ್ರಯೋಗ ಪೂರ್ವಕವಾಗಿಯೂ ತಿಳಿದು ಕೊಂಡ. ಮನೆಗೆ ಬಂದವನೇ ಬೀಡಿಯನ್ನು ನೆಲಕ್ಕೊಗದು "ನೀ ಏನೂ ತಲೆ ಕೆಡಿಸ್‌ಕೋಬ್ಯಾಡ ನಮ್ಮದಾಗಿದ್ರೆ ಬತ್ತದೆ, ಇಲ್ಲದೇರೆಇಲ್ಲ — ಬೋದ್ರೆ ಆಡುದ್ರೆ ಬಂದದೆ? ಮಾಡದೋರಪಾಪ ಆಡದೋರಬಾಯಲಿ ಅಂತ, ಯಾರ್ನೂ ಸನ್‌ಗಿನ್ನೇಗಿ ಬೊಯ್‌ಬ್ಯಾಡ, ಅವರವರು ಮಾಡುದ್ದು ಅವರವರೆ ಅನುಭೋಗಿಸ್‌ಕೊಳ್ಲಿ" ಎಂದು ಕಂಬಳಿ ತೆಗೆದುಕೊಂಡು—ಒಂದು ಕೈಯಲ್ಲಿ ಹಚ್ಚಿದ ಲಾಟೀನು, ಕಂಕುಳಲ್ಲಿ ದೊಣ್ಣೆ, ಹೆಗಲ ಮೇಲೆ ಗುದ್ದಲಿ—ಸಮೇತ ಕಬ್ಬಿಗೆ ನೀರುಹಾಯಿಸಲು ಮನೆಯಿಂದ ಕಾಲುಕಿತ್ತ.

ಮುಂದಿನ ಬಾಗಿಲಿಗೆ ಚಿಲಕಹಾಕಿದ ನಿಂಗಕ್ಕ, ಇನ್ನೊಂದು ಸಾರಿ ದೀಪ ಹಿಡಿದು ಕೊಂಡು ಮನೆಯನ್ನೆಲ್ಲಾ ಹುಡುಕಿ ಒಳಗೆಮಾತ್ರ ಇಲ್ಲವೇ ಇಲ್ಲ ಎನ್ನಿಸುತ್ತಿದ್ದಂತೆಯೇ ಬೇಗಬೇಗನೆ ಕಣ್ಣುಗಳ ಜತೆಗೆ ಬಾಯೂ ಚೂಟಿಯಾಗಿ ಕೆಲಸಮಾಡತೊಡಗಿತು. ಬೈಗುಳದಲ್ಲಿ ಕಾರದ ಅಂಶ ಕೊಂಚ ಹೆಚ್ಚಾಗಿ ಕಂಡರೆ ಬೇಕಂತಲೇ ದನಿ ಎತ್ತರಿಸುವಳು— ಏನೂ ಅರಿಯದ ಮಳ್ಳಿಯಂತೆ ಕಾಣಿಸುತ್ತಾ ತುಟಿಪಿಟುಕೆನ್ನದ ವಾರಗಿತ್ತಿಯ ಮೇಲಿನ ಹಠದಿಂದ.

"ಇನ್ನಾರು ಕೆಂಪುಹುಂಜ ಮುಕ್ಕೋ ಧೈರ್ಯ ಮಾಡಾರು? ಇವಳೇ ಈ ಕಲಕೇತಿಯೇ ಮುರಿದಿರೂದು ನಾಕಾಣನೇ ಭಗವಂತ!" ಎಂದು ಕಾಸು—ಮಂತ್ರಿಸಿ, ಅರಸಿನದ ಪವಡೆಯಲ್ಲಿಟ್ಟು ನೆಲುವಿನ ತಲಕ್ಕೆ ಕಟ್ಟುವುದಕ್ಕೆ ಮುಂಚೆ ಹುಂಜವನ್ನು ಮಾರಮ್ಮನನ್ನು ಚಿತ್ರಿಸಿಕೊಂಡು ಕಣ್ಣು ಮುಚ್ಚಿ ಧ್ಯಾನಿಸುತ್ತಾ "ಊರ ಮುಂದಲ ಮಾರವ್ವ, ನಿನಗೆ ಕಾಣದೇ ಇರೂದು ಒಂದೂ ಇಲ್ಲ: ನನ್ನ ಕೋಳೀ ಮುಕ್ಕೊಂಡೋರ ಇನ್ನು ಮೂರು ನಾಲ್ಕು ದಿನಕ್ಕೆ ನನ್ನ ಕಣ್ಣೆದುರಿಗೇನೆ ಭೂಗತ ಮಾಡ್ಬುಡು" ಎಂದು ಹೇಳುತ್ತಾ, ಕಣ್ಣುಮುಚ್ಚಿಕೊಂಡೇ ಮೂರು ಸುತ್ತು ತಿರುಗುವ ಅವ್ವನನ್ನು ಕಂಡು— ಕಣ್ಣುಬಿಟ್ಟುಕೊಂಡ ಒಂದು ನೊಣವೂ ಸುತ್ತಮುತ್ತಲೂ ಇಲ್ಲವೆಂಬ ಭಾವನೆ ಚಿಕ್ಕಯಲ್ಲೆಯ ಮನಸ್ಸಿನಲ್ಲಿ ಉಂಟಾದಾಗ—ಮೈಯೆಲ್ಲಾ ನಡುಕಹುಟ್ಟಿತು.

ಮಲಗುವುದಕ್ಕೆ ಮುಂಚೆ—

'ನನ್ನ ಕೋಳಿ ಮುಕ್ಕೊಂಡಿರೊಳು ಅವಳೇ, ಇನ್ಯಾರೂ ಅಲ್ಲ—ಅದು ನನಗೆ ಗೊತ್ತು. ಇನ್ನು ಮೂರು ನಾಲ್ಕು ದಿನದೇಲೇ ಅವಳ ಹೆಣ ನನ್ನ ಕಣ್ಣೇಲಿ ನೋಡ್ತೀನಿ' ಎಂದು ಸಮಾಧಾನ ತಂದುಕೊಂಡಳು. ಮರಿಯಾಗಿದ್ದಾಗ ಹದ್ದಿನ ಕೈಗೆಸಿಕ್ಕಿಯೂ ಬದುಕಿಕೊಂಡ — ಅಂಥಾ ಘಾಟಿ ಹುಂಜಾನೇ ಏನೋ ಪಳಾನ್‌ಮಾಡಿ ಹಿಡಿದು

ಸದ್ದಿಲ್ಲದಂತೆ ಕತ್ತುಮಿಸುಕಿ, ಪತ್‌ಮಾರ್‍ಸವಳಲ್ಲಾ, ಚಿನಾಲಿ ಎಂದೆಲ್ಲಾ ಏನೇನೋ ಗೊಣಗುತ್ತಿದ್ದಂತೆಯೇ ಕಣ್ಣಿಗೆ ನಿದ್ದೆ ಹತ್ತದಾಯಿತು.

ಅತ್ತಇತ್ತ ಹೊರಳಾಟ : ಮತ್ತೆ ದೀಪ ಹತ್ತಿಸುವುದು, ಹುಡುಕುವುದು; ಗೊಣಗುವುದು. ಕಣ್ಣುಗಳು ಉರಿಯುವುದಕ್ಕೆ ಸುರುವಾದರೆ ತಲೆಕೊಡುವುದು ಮತ್ತೇರಿದಂತೆ ಮಂಜುಮಂಜು ನಿದ್ದೆ. ಹಾಗೆಯೇ ಮಂಪರಿನಲ್ಲಿ "ಕೊಕ್ಕ್" ಎಂದ ಕೆಂಪುಹುಂಜು. ದಢಕ್ಕನೆ ಮೇಲೆದ್ದರೆ ಬರೀ ಮನೆಯಲ್ಲಿ ಉರಿಯುತ್ತಿರುವ ದೀಪ; ಕಟಬಾಯಿಯಲ್ಲಿ ಜೊಲ್ಲು ಸುರಿಸುತ್ತಾ ಬಾಯಿಕಿಸಿದು ಮಲಗಿದಮಗ; ಕೊಟ್ಟಿಗೆಯಲ್ಲಿ, ಲಟಲಟನೆ ಆಕಡೆಗೂ ಈಕಡೆಗೂ ತಾಟುಯ್ಯುತ್ತಾ, ಹಸುವಿಗೆ ಹಾಕಿದ ಹುಲ್ಲಿಗೆ ನಾಲಗೆಯನ್ನು ಚೂಪಗೆ ಉದ್ದಮಾಡುವ ಅಗಾಡಿ ಎಮ್ಮೆ ಕಡಸು.

ಕುಂತಿದ್ದಂತೆಯೇ ನಿದ್ದೆ ಬಂದಂತಾಗಿ ಚಾಪೆಯಮೇಲೆ ಬುಡುಕ್ಕನೆ ಉರುಳಿದಳು.

ಮೇಯುತ್ತಿರುವ ಹುಂಜವನ್ನು ಯಾರೋ ಹಿತ್ತಲಲ್ಲಿ ಓಡಾಡಿಸುತ್ತಿದ್ದಾರೆ. ಬಾಗಿಲಲ್ಲಿ ನಿಂತುನೋಡಿದರೆ ಅವಳ ಮುಖಕಾಣದು. ಕೈಗೆ ಸಿಕ್ಕಿದ ಹುಂಜ ಆಮೂಲೆಯಿಂದ ಈಮೂಲೆಗೆ, ಈಮೂಲೆಯಿಂದ ಆಮೂಲೆಗೆ ರೋಜಾದ ಮೆಳೆಯಕಡೆಗೆ, ಹುಲ್ಲುಮೆದೆಯ ಕೆಳಕ್ಕೆ ಓಡುತ್ತಿದೆ. ಆದರೂ, ಸೋಲದ ಹೆಂಗಸು—ಗೆಲ್ಲುವ ಹುಂಜ. ಬುದ್ಧಿ ಉಪಯೋಗಿಸಿದ ಅವಳು ಮಡಲಿನಿಂದ ಏನನ್ನೋ ತೆಗೆದು "ಕ್ಕ್‌ಕ್ಕ್" ಎಂದು ಕರೆಯುತ್ತಾ ಮುಂದಕ್ಕೆ ಎಸೆದಳು. ಮೇಯಲು ನಿಂತ ಹುಂಜವನ್ನು ಗಬಕ್ಕನ್ನೆ ಹಿಡಿದು ಒದರಾಡಿದರೂ ಬಿಡದೆ ಕತ್ತುಮುರಿದಳು. ಅಷ್ಟು ಸಾಲದೆಂಬಂತೆ ಬಾವಿಗೆಸೆದು ತನ್ನ ಕಡೆಗೆ ನೋಡುತ್ತಾ ನಗುತ್ತಿದ್ದಾಳೆ. ಮುಖದ ಗುರುತೇ ಸಿಗುತ್ತಿಲ್ಲ: ಅಯ್ಯವ್ವಾ! ಕೋರೆಹಲ್ಲುಗಳು! ಕಣ್ಣುಸುತ್ತ ಕಪ್ಪುಬಣ್ಣ; ಕೆಂಪೂ ಅಂದರೆ ಕೆಂಪು ಗುಳ್ಳೆಗಳು; ಕೆದರಿ ಜಡೆಕಟ್ಟಿದ ಕೂದಲು ಬಾಗಿಲಲ್ಲಿ ನಿಂತ ತನ್ನಕಡೆಗೆ ಬರುತ್ತಿದ್ದಾಳೆ.... ನಿಂಗಕ್ಕನಿಗೆ ರೋಷ ಉಕ್ಕಿಬಂದು ಕಸದಬರಲು ತೆಗೆದುಕೊಂಡು "ಲೇ ಯಾರ್ಲೇ ಅವಳು, ಬಾರೆ ನನ್ನ ಆಳ್‌ಮಗನಿಗೆ ಹುಟ್‌ದೋಳೆ!" ಎನ್ನುತ್ತಾ ತಾನೇ ಮುಂದಾಗಿ ನುಗ್ಗಿದರೆ 'ನಾನು....ನಿನ್ನಪಾಲಿನ ಮಾರಿಕಣ ಬಾರೆ' ಎಂದು ಕಸದಬರಲನ್ನು ಕಿತ್ತುಕ್ಕೊಂಡು ಅದರಿಂದಲೇ ನಾಲ್ಕುಗಟ್ಟಿಸಿ ಕೆಳಕ್ಕೆ ಹಾಕಿಕೊಂಡು ರಗ್ಗಣ ಗುಣಿತದೊಡನೆ ತುಳಿಯತೊಡಗಿದಳು.

ಅಟ್ಟದಿಂದ ಎತ್ತಿಟ್ಟಂತಾದ ನಿಂಗಕ್ಕ ಧಿಗ್ಗನೆ ಕುಳಿತಳು. ಮೈಕೈಯೆಲ್ಲಾ ನೋವಾದಂತಾಗಿ ಗಡಗಡನೆ ನಡುಗಿದಳು. ಕಿಟ್ಟ ಕಟ್ಟಿಕೊಂಡು ಆಗಲೋ ಈಗಲೋ 'ತುಂಬಿ' ಹೋಗುವ ದೀಪದ ಮಗ್ಗುಲಲ್ಲಿ ಗೊರಕೆ ಹೊಡೆಯುತ್ತಲಿರುವ ಮಗ ದೂರದಲ್ಲಿ ಯಾವುದೋ ಹುಂಜ "ಕೊಕ್ಕೋ....ಕ್ಕೋ" ಎಂದು ಕೂಗಿದ್ದು ಕೇಳಿಸಿದಾಗ, ಕೋಳಿಕೂಗುವ ಹೊತ್ತಾಗುತ್ತಿದೆ ಎಂದುಕೊಳ್ಳುತ್ತಿದ್ದಂತೆಯೇ—ತನ್ನ ಇರುವಿಕೆಯ ಸಂಜ್ಞೆಯನ್ನೂ ಕೊಂಚ ಮಜಭೂತಾಗಿಯೇ ತೋರಿಸಿಕೊಡಬೇಕೆನ್ನುವಂತೆ ಇನ್ನೂ ಜೋರಾಗಿಯೇ "ಕೊಕ್ಕೋ....ಕ್ಕೋ" ಎಂದು ಕೂಗುತ್ತಾ ಉದ್ದ ಕೊರಳು

ಮಾಡಿ ಮೇಲೆತ್ತಿದ ತಲೆಗೆ ' ತೀರು ' ತಗುಲಿ—ಅಟ್ಟದಮೇಲಿಂದ ಕೆಳಕ್ಕೆಹಾರಿದ ಕೆಂಪು ಹುಂಜ ನಿಂಗಕ್ಕನಮೇಲೆ ನೆಗೆಯುತ್ತಾ, ರೆಕ್ಕೆಬಡಿತದಿಂದ ತಾನು 'ತುಂಬಿ'ದ ದೀಪವನ್ನು ಲೆಕ್ಕಕ್ಕೇ ತಾರದೆ ಆ ಕತ್ತಲಲ್ಲಿಯೇ ಇನ್ನೂ ಒಮ್ಮೆ ತನ್ನ ವಿಜಯ ದುಂದುಭಿಯನ್ನು ಬಾರಿಸಿತು.

ಕತ್ತಲಿಡೀ ಕೊತ್ತಿಯ ಭಯದಿಂದ ಅಟ್ಟದಮೇಲಿನ ಗುಡಾಣದಲ್ಲಿ ಅವಿತರೂ ಬೆಚ್ಚಗೆ ಕುಳಿತಿದ್ದ ಕೆಂಪುಹುಂಜ ಹಿಂದಲಹಟ್ಟಿಯಲ್ಲಿದ್ದ ಬಚ್ಚಲನ್ನು ಕಾಲಿನಲ್ಲಿ ಕೆದಕುತ್ತಾ, ತನ್ನ ವಾವೀವರಸೆಯ ಪರಿಭಾಷೆಯ ಪದಗಳಿಂದ ಪಂಜರದಲ್ಲಿದ್ದ ಯಾಟಿಗಳನ್ನು ಕರೆಯುತ್ತಾ—ಹುಳುಹುಪ್ಪಟೆ ಅನ್ನದಗುಳನ್ನು ಮತ್ತೆಮತ್ತೆ ಕುಕ್ಕತೊಡಗಿತು.

ಯಾವುದೋ ಕಗ್ಗಾಡಿನಲ್ಲಿ ದಿಕ್ಕುಗೆಟ್ಟು ಅಲೆಯುತ್ತಿದ್ದ ಚಿಕ್ಕಯಲ್ಲೆ ಆಡಿನ ಗುಂಪಿನ ಮೇಲೆ ನೆಗೆದ ಮೊಟ್ಟ ನಾಯಿಯನ್ನು ಕಂಡು ಹೀಕರಿಸಿ, ತೊಡೆಬಟ್ಟೆ ತೇವವಾದಾಗ ದಢಕ್ಕನೆ ಎದ್ದವನೆ—ಕೈಕಾಲುಗಳನ್ನು ಚಾಚಿ, ಅಲುಗಾಡದೆ, ಉಸುರುಯ್ಯದೇ ಮಲಗಿದ್ದ ಅಪ್ಪನನ್ನು ಕಾಣುತ್ತಲೇ "ಅಪ್ಪ....ಅಪ್ಪೋ" ಎಂದು ಕಿರುಚುತ್ತಾ, ಊರುಕೇರಿಯೆಲ್ಲಾ ಒಂದಾಗುವಂತೆ ಒಂದೇ ಉಸುರಿಗೆ, ಲಬಲಬನೆ, ಬಾಯಿ ಬಾಯಿ ಬಡಿದುಕೊಂಡ.

ಬಿ. ಪುಟ್ಟಸ್ವಾಮಯ್ಯ

ತ್ರಿಮೂರ್ತಿಕಲ್ಪ

"ನನ್ನ ವಿಮರ್ಶೆ ಅಪ್ರಿಯವಾದರೂ ಸಹೃದಯನ ಪ್ರಿಯವಚನಗಳಂತೆ ನೀವದನ್ನು ಪರಿಗ್ರಹಿಸಿರಿ ವಿಜಯಪಂಡಿತರೆ. ನೀವೇ ಒಂದೆಡೆಯಲ್ಲಿ ಹೇಳಿರುವಿರಲ್ಲವೆ

ಕಾಣನೇಗೆಯ್ದುಂ ತನ್ನ ದೋಷಮುಂ
ಕಾಣದಂತೆಂದುಂ ಕಣ್ಗಳ್ ತಮ್ಮ ಕಾಡಿಗೆಯಂ

ಎಂದು." ನಗೆದಳಿಯಿಂದ ಈಶ್ವರ ಕವಿ ನುಡಿದಾಗ ತಿಳಿದೆ, ನನ್ನ ಅಭಿಪ್ರಾಯಕ್ಕೆ ನಾನು ಬದ್ಧನೆಂದು, ನಾನು ಒಡ್ಡಿದ ಬಲೆಗೆ ನಾನೇ ಬಿದ್ದೆನೆಂದು.

ನಮ್ಮ ವಿಚಾರವಿನಿಮಯದ ಸಂಧ್ಯಾಧಿವೇಶನ ಆರಂಭವಾಗಿ ನನ್ನ ಮತ್ತು ಈಶ್ವರ ಕವಿಯ ಪರಿಚಯು ಗೆಳೆತನದ ವೇದಿಕೆಯೇರಿದ್ದು ಆ ತರುವಾಯ, ಅದರ ಪರಿಣಾಮವಾಗಿ. ನಿರಾಶೆಯಲ್ಲಿ ಪ್ರಾರಂಭವಾದ ನನ್ನಶಾಸ್ತ್ರಕೃತಿ "ರಾಜಾನುಮತಿ" ಪಡೆದು ಸತ್ಕಾವ್ಯಗಳ ಶ್ರೇಣಿಯಲ್ಲಿ ಪರಿಗಣಿಸಲ್ಪಡುವುದೆಂದು ಆಗ ನಾನು ಕನಸಿನಲ್ಲಿಯೂ ತಿಳಿದಿರಲಿಲ್ಲ. ದೈವಜ್ಞರು "ಅದೃಷ್ಟ" ಎಂದು ಕರೆಯುವುದು ಇಂತಹ ಘಟನೆಗಳನ್ನೇ ಇರಬೇಕು. ಆ ಅನಿರ್ವಚನೀಯ ಅದೃಷ್ಟದ ಸುಳಿಯಲ್ಲಿ ನಾನು ಸಿಕ್ಕಿಬಿದ್ದದ್ದು ಹೀಗೆ :

ಜನ್ಮದಿಂದ ನಾನು ಕ್ಷತ್ರಿಯ, ವೃತ್ತಿಯಿಂದ ಬ್ರಾಹ್ಮಣ. ನನ್ನ ಪೂರ್ವಜರು ಚಾಲುಕ್ಯ ಪುಲಿಕೇಶಿಯ ಸಾಮಂತರಾಗಿ, ದಂಡನಾಯಕರಾಗಿ ಉತ್ತರಾಪಥದ ದಂಡ ಯಾತ್ರೆಯಲ್ಲಿ ಭಾಗವಹಿಸಿದ್ದರಂತೆ. ಅಲೆದಾಟದ ಹುಚ್ಚು ಅವರಿಗೆ ರಕ್ತಗತವಾಗಲು ಅದು ಕಾರಣವಾಯಿತು. ಒಂದೆರಡು ತಲೆಮಾರುಗಳಲ್ಲಿ ನನ್ನ ಪೂರ್ವಜರಲ್ಲಿ ಬಹುಸಂಖ್ಯಾತರು ಅವಂತಿ ಮಗಧ ವಂಗರಾಜ್ಯಗಳಿಗೆ ವಲಸೆಹೋಗಿ ಅಲ್ಲಿಯೇ ನೆಲೆಸಿದ್ದರಿಂದ ಸ್ವಸ್ಥಳವಾದ ಒಕ್ಕುಂದದಲ್ಲಿ ನಮ್ಮದು ಒಂಟಿಮನೆಯಾಯಿತು. ಬಾಲ್ಯದಲ್ಲಿಯೇ ತಂದೆತಾಯಿಗಳನ್ನು ಕಳೆದುಕೊಂಡ ನಾನು ಅಜ್ಜ ಅಜ್ಜಿಯರ ಪೋಷಣೆಯಲ್ಲಿ ಬೆಳೆದು, ಅಗ್ರಹಾರದ ಮಠದಲ್ಲಿ ಅಕ್ಷರಾಭ್ಯಾಸಮಾಡಿ, ವ್ಯಾಕರಣ ಛಂದಸ್ಸು ಕಾವ್ಯ ನಾಟಕಗಳ ಅಧ್ಯಯನ ಮುಗಿಸಿ ಪಂಡಿತನಾದೆ.

ಒಂದು ದಿನ ಅಜ್ಜ ನನ್ನನ್ನು ಹತ್ತಿರ ಕರೆದು, "ಮುಂದೇನುಮಾಡಬೇಕೆಂದಿರುವೆ ವಿಜಯ? ಈ ಕುಗ್ರಾಮದ ಕೊಳಚೆಯಲ್ಲಿ ಜೀವನವೆಲ್ಲವನ್ನೂ ಕಳೆಯುವುದು ನಿನ್ನಿಚ್ಛೆಯೇ?" ಎಂದು ಕೇಳಿದರು.

"ಮನೆಯಲ್ಲಿ ಕುಳಿತು ಕಾವ್ಯರಚನೆಗೆ ತೊಡಗುತ್ತೇನೆ" ಎಂದೆ ನಾನು,

"ಕಾವ್ಯರಚನೆ!" ಅಜ್ಜ ನಕ್ಕರು. ಅನುಕಂಪದ ದೃಷ್ಟಿಯಿಂದ ನನ್ನನ್ನು ನೋಡುತ್ತ ನುಡಿದರು: "ಕಾವ್ಯರಚನೆಯಿಂದ ನಿನ್ನ ಜೀವನ ಸಾಗುವುದಿಲ್ಲ, ವಿಜಯ. ಈ ಸ್ಥಳದಲ್ಲಿ ನಿನ್ನ ಕಾವ್ಯಕ್ಕೆ ತಕ್ಕ ಸಂಭಾವನೆ ದೊರಕುವುದಿರಲಿ, ಅದನ್ನು ಆಸಕ್ತಿಯಿಂದ ಕೇಳುವವರೂ ಇಲ್ಲ."

"ಹಾಗಲ್ಲ, ಅಜ್ಜ," ನಾನು ಉತ್ತರಿಸಿದೆ. "ನನ್ನ ಚಂದ್ರಪ್ರಭ ಕಾವ್ಯದ ಕೆಲವು ಪದ್ಯಗಳನ್ನು ಅಗ್ರಹಾರದ ವಿದ್ವದ್ಗೋಷ್ಠಿಯಲ್ಲಿ ಓದಿದೆ. ಕೇಳಿ ತಲೆದೂಗಿದರು."

"ತಲೆದೂಗಿದರೆ ನಿನ್ನ ಹಣದ ಚೀಲ ತುಂಬಿದಂತಾಯಿತೆ? ಅಲ್ಲಿಯ ಜನ ಸಹಜವಾಗಿ ಅಸೂಯಾಪರರು, ಎದುರಿಗೆ ತಲೆದೂಗಿದವರೆ ಹಿಂದೆ ನಗುವರು. ನಾಳೆ ನಿನ್ನ ಪದ್ಯಗಳ ವಿಕೃತರೂಪ ಪಗರಣವೊಂದರಲ್ಲಿ ನಗೆನಟನ ಬಾಯಲ್ಲಿ ಸುಳಿದು ಜನರನ್ನು ನಗಿಸಿದರೆ ಆಶ್ಚರ್ಯವಲ್ಲ."

ಅಜ್ಜನಮಾತು ನಿಜವೆಂದು ತಿಳಿಯಲು ನನಗೆ ಹೆಚ್ಚುಕಾಲ ಹಿಡಿಯಲಿಲ್ಲ. ಕೆಲವು ವಾರಗಳ ಅನಂತರ ನಡೆದ ಊರಹಬ್ಬದಲ್ಲಿ ನೆರೆಹಳ್ಳಿಯ ಚತ್ರಾಣತಂಡ 'ಪ್ರಮತ್ತ ಪ್ರಲಾಪ' ಎಂಬ ನಗೆನಾಟಕವನ್ನು ಅಭಿನಯಿಸಿದಾಗ ವಿದೂಷಕ ಪಾತ್ರಧರಿಸಿದ್ದ ನಟ ನನ್ನ ಪದ್ಯವೊಂದನ್ನು ಹರಕುಮುರುಕಾಗಿ ಹಾಡಿಕುಣಿದಾಗ ಸಭೆಯಲ್ಲಿದ್ದವರು ಹಾರಿ ಹಾರಿ ನಕ್ಕರು. ಒಬ್ಬಿಬ್ಬರು ನನ್ನ ಕಡೆಗೆ ವ್ಯಂಗ್ಯದ ದೃಷ್ಟಿ ಹಾರಿಸಿದ್ದೂ ಉಂಟು.

ಮರುದಿನ ನಾನು ಅಗ್ರಹಾರದ ವಿದ್ವನ್ಮಣಿಗಳಲ್ಲಿ ವಯೋವೃದ್ಧರೂ ಪ್ರಭಾವ ಶಾಲಿಗಳೂ ಆಗಿದ್ದ ವೇದಶಿರ ವೈಶಾಲರ ಬಳಿ ಹೋಗಿ, "ನೆರೆಹಳ್ಳಿಯ ಚತ್ರಾಣತಂಡ ನನ್ನ 'ಚಂದ್ರಪ್ರಭಾ' ಕಾವ್ಯದ ಪದ್ಯವೊಂದನ್ನು ಉಪಹಾಸ ಮಾಡಿದೆ. ಅದಕ್ಕೆ ಪ್ರತೀಕಾರ ಬಯಸಿ ನಿಮ್ಮ ಬಳಿ ಬಂದಿದ್ದೇನೆ" ಎಂದು ಬಿನ್ನವಿಸಿಕೊಂಡೆ.

ವೈಶಾಲರು ನಸುನಕ್ಕು, "ನಾನು ಪಗರಣಗಳ ಆಟ ನೋಡಿ ಎಷ್ಟೋ ವರ್ಷಗಳು ಕಳೆದುಹೋಗಿವೆ. ವಾಸ್ತವದಲ್ಲಿ ಏನು ನಡೆಯಿತೆಂಬುದನ್ನು ತಿಳಿದರೆ ಪ್ರತೀಕಾರ ಚಿಂತಿಸಬಹುದು" ಎಂದರು.

ನಾನು ಹೇಳಿದೆ: "ಚಂದ್ರಪ್ರಭಾ ಕಾವ್ಯದಲ್ಲಿ ನಾಯಕನಾಯಕಿಯರ ಪ್ರಥಮದರ್ಶನದ ಒಂದು ಸನ್ನಿವೇಶ ಬರುತ್ತದೆ. ಆ ಸಂದರ್ಭದಲ್ಲಿ ನಡೆದುದನ್ನು ಸಖಿಯ ರಿಂದ ತಿಳಿದ ವಿದೂಷಕ ನಾಯಕನಿಗೆ ಅದನ್ನು ವಿವರಿಸುತ್ತಾನೆ. ಆಗ ನಾಯಿಕೆ ತನ್ನ ಸಖಿಗೆ ಹೇಳಿದುದುದನ್ನು ವಿದೂಷಕ ನಾಯಕನಿಗೆ ತಿಳಿಸುವ ಪದ್ಯ ಇದು.

ಆರಸು ಕುಮಾರನನಾಯತ
ತರ ಕಡೆಗಣ್ಣಿಂದೆ ನೋಡಿ ಕೆಳದಿಸಮೇತಂ
ಪರಿಗತ ನಗೆಯಿಂದಿರ್ದೆಂ
ಗುರುನಾಣ್ಭರದಿಂದ ಮೆರಗಿ ಮುಖತಾವರೆಯಂ

ಪದ್ಯದ ಸಮಾಸದೋಷಗಳನ್ನು ಒತ್ತಿ ಒತ್ತಿ ನುಡಿಯುತ್ತಾ ವಿದೂಷಕ ರಾಜಕನ್ಯೆಯಂತೆ ಅಭಿನಯಿಸಿದಾಗ ಜನ ನಕ್ಕರು. ನಾನು ಲಜ್ಜೆಯಿಂದ ತಲೆಬಾಗಿದೆ.''

ನನ್ನ ಮಾತುಗಳನ್ನು ಕೇಳಿ ವೈಶಾಲರ ಮುಖ ಗಂಭೀರವಾಯಿತು, "ವಿದೂಷಕನ ಅಜ್ಞತೆಯನ್ನು ತೋರಿಸಲು ನೀನು ರಚಿಸಿರಬಹುದಾದ ಈ ಪದ್ಯವನ್ನು ಚತ್ರಾಣದ ನಟ ತನ್ನ ಹಾಸ್ಯಾಭಿನಯಕ್ಕೆ ಬಳಸಿಕೊಂಡದ್ದು ಸಹಜ. ಆ ದುಷ್ಟರು ಮಾಡುವುದೇ ಹೀಗೆ" ಎಂದರು.

"ಮುಂದೆ ಪದ್ಯದ ಶುದ್ಧರೂಪವನ್ನೂ ನಾನು ಚಂದ್ರಪ್ರಭನಿಂದ ಹೇಳಿಸಿದ್ದೇನೆ:

ನರಪತಿ ತನಯುನನಾಯತ
ತರಳಾಪಾಂಗದೊಳೆ ನೋಡಿ ಕೆಳದಿಯರೊಡನಾಂ
ಪರಿಗತ ಹಾಸ್ಯದೊಳಿರ್ದೆಂ
ಗುರುಲಜ್ಜಾಭಾರದಿನೆರಗಿ ಮುಖಸರಸಿಜಮಂ

ಎಂದು. ಅದರಂತೆ ನಾಯಕ ವಿದೂಷಕನ ಕಿವಿ ಹಿಂಡಿ, ಕೆನ್ನೆಗೆ ಹೊಡೆದು ಪದ್ಯದ ಶುದ್ಧರೂಪವನ್ನು ಪಠಿಸಿದ್ದರೆ ನನ್ನ ಆಕ್ಷೇಪವೇ ಇರುತ್ತಿರಲಿಲ್ಲ. ಹಾಗೆ ಮಾಡದೆ ನಾನು ಕುಕವಿ ಎಂಬ ಪ್ರತೀತಿ ಜನರಲ್ಲಿ ಹರಡಲು ಎಡೆಮಾಡಿಕೊಟ್ಟಿದೆ ಈ ಚತ್ರಾಣತಂಡ" ಎಂದೆ ನಾನು.

"ಪ್ರೇಕ್ಷಕರನ್ನು ನಗಿಸುವುದೇ ಕಲೆಯ ಪರಾಕಾಷ್ಠೆಯೆಂದು ತಿಳಿದ ತುಂಟ ಪಗರಣಕಾರರಿಂದ ಮತ್ತೇನನ್ನು ನಿರೀಕ್ಷಿಸುವುದು ಸಾಧ್ಯ, ವಿಜಯ. ಪುರಾಣಕಥೆಗಳ ಅಸಭ್ಯ ಅನುಚಿತ ಘಟನೆಗಳನ್ನು ರಂಗದ ಮೇಲೆ ತಂದು ಅವರು ನಮ್ಮ ಸಂಸ್ಕೃತಿಗೆ ಕಳಂಕಹಚ್ಚುತ್ತಿದ್ದಾರೆ."

"ಅದಕ್ಕೆ ಪ್ರತೀಕಾರವೇನೂ ಇಲ್ಲವೆ?"—ನನ್ನ ಪ್ರಶ್ನೆ.

"ಸಾಮಾಜಿಕವಾಗಿ ಜನರ ಅರಿವಿನ ಮಟ್ಟವನ್ನು ಹೆಚ್ಚಿಸುವುದೊಂದೇ ಅದಕ್ಕೆ ಶಿಷ್ಟರು ಮಾಡಬಹುದಾದ ಪ್ರತೀಕಾರ. ಮಾನ್ಯಖೇಟದ ರಾಷ್ಟ್ರಕೂಟ ಅರಸು ನೃಪತುಂಗ ಮಹಾರಾಜರು ಆ ಕಾರ್ಯಕ್ಕೈಗೊಂಡಿದ್ದಾರೆ. ನಿನಗಿಷ್ಟವಿದ್ದರೆ, ನಿಮ್ಮ ಅಜ್ಜ ಒಪ್ಪುವುದಾದರೆ ನೀನು ಮಾನ್ಯಖೇಟಕ್ಕೆ ಹೋಗಿ ಆ ಸಾಹಿತ್ಯಸುಧಾರಣೆಯ ಕಾರ್ಯದಲ್ಲಿ ದೀಕ್ಷಿತನಾಗು. ದೈವಬಲವಿದ್ದರೆ ಪ್ರಭುಗಳ ಕೃಪಾದೃಷ್ಟಿ ನಿನ್ನಮೇಲೆ

ಬಿದ್ದರೂ ಬೀಳಬಹುದು. ಈ ಅಪ್ರಿಯ ಪ್ರಸಂಗವನ್ನು ಬೆಳಸುವುದರಿಂದ ಯಾರಿಗೂ ಪ್ರಯೋಜನವಿಲ್ಲ."

ವೈಶಾಲರ ಸಲಹೆ ಉತ್ತಮವೆಂದು ತೋರಿತು. ಅದಕ್ಕಾಗಿ ಅವರಿಗೆ ಕೃತಜ್ಞತೆ ಸಲ್ಲಿಸಿ ಹೊರಡಲು ಎದ್ದುನಿಂತಾಗ ಅವರು, "ನೀನು ರಚಿಸುತ್ತಿರುವ ಕಾವ್ಯದಲ್ಲಿ ಈ ಅರಿಸಮಾಸದ ಪ್ರಸಂಗ ಬಂದದ್ದು ಹೇಗೆ?" ಎಂದು ಕೇಳಿದರು.

"ಚಂದ್ರಪ್ರಭ ಕ್ಷತ್ರಿಯನಾದರೂ ಸಾಹಿತ್ಯ ರಚನಾಚತುರನೆಂದು ಸೂಚಿಸಲು ವ್ಯಾಕರಣ ಛಂದಸ್ಸು ಅಲಂಕಾರಗಳನ್ನು ಕುರಿತ ಇಂತಹ ಕೆಲವು ಪ್ರಸಂಗಗಳನ್ನು ತಂದಿದ್ದೇನೆ."

"ಕಾವ್ಯದಲ್ಲಿ ಶಾಸ್ತ್ರಾರ್ಥವಿಚಾರ ರಸಭಂಗಕ್ಕೆ ಕರೆಕೊಟ್ಟಂತೆ. ವ್ಯಾಕರಣ ಛಂದಸ್ಸು ಅಲಂಕಾರಶಾಸ್ತ್ರಗಳಲ್ಲಿ ನೀನು ಪರಿಣತನಾಗಿದ್ದರೆ ಒಂದು ಶಾಸ್ತ್ರಗ್ರಂಥವನ್ನೇ ರಚಿಸು,"—ಎಂದು ಹೇಳಿ ವೈಶಾಲರು ನನ್ನನ್ನು ಬೀಳ್ಕೊಟ್ಟರು.

ಅಂದು ನಾನು ಅಜ್ಜನಿಗೆ ಹೇಳಿದೆ. "ಇನ್ನು ನಾನು ಒಕುಂದದಲ್ಲಿರುವುದಿಲ್ಲ."

"ಎಲ್ಲಿಗೆ ಹೋಗುವೆ?"

"ಮಾನ್ಯಖೇಟಕ್ಕೆ. ನೃಪತುಂಗ ಮಹಾರಾಜರು ಪಂಡಿತರಿಗೆ ಆಶ್ರಯಕೊಡುವ ರಂತೆ. ಅಲ್ಲಿಗೆ ಹೋಗಿ ನನ್ನ ಅದೃಷ್ಟಪರೀಕ್ಷೆಮಾಡಲು ನಿರ್ಧರಿಸಿದ್ದೇನೆ."

ಕೆಲವು ಕ್ಷಣಗಳು ಯೋಚಿಸುತ್ತಿದ್ದು ಅಜ್ಜ ಹೇಳಿದರು: "ಕ್ಷತ್ರಿಯನಾಗಿ ಹುಟ್ಟಿ ಕುಲಧರ್ಮವನ್ನು ಮರೆತು ಶಾಸ್ತ್ರಾಭ್ಯಾಸಕ್ಕೆ ತೊಡಗಿದೆ. ಅದರ ಫಲವಾಗಿ ಕ್ಷತ್ರಿಯನನ್ನು ತಾನಾಗಿ ಹುಡುಕಿಕೊಂಡುಬರುವ ರಾಜಾಶ್ರಯ ಸಿರಿಸಂಪತ್ತುಗಳು ನಿನ್ನಿಂದ ದೂರವಾದವು. ದರಿದ್ರಭಿಕ್ಷುಕನಂತೆ ಈಗ ನೀನೇ ಅದನ್ನು ಹುಡುಕಿಕೊಂಡು ಹೋಗಬೇಕಾಗಿದೆ. ನೀನು ನನ್ನ ದೂರದ ಸಂಬಂಧಿ; ತಬ್ಬಲಿ ಮಗುವೆಂದು ಮನೆಯಲ್ಲಿ ಆಶ್ರಯಕೊಟ್ಟು ಬೆಳೆಸಿದೆ. ನನಗಿರುವ ಭೂಮಿಕಾಣಿಯೆಲ್ಲ ಪಿತ್ರಾರ್ಜಿತ. ಅದರಲ್ಲಿ ತುಂಡುಭೂಮಿಯನ್ನೂ ನಾನು ನಿನಗೆ ಕೊಡುವಂತಿಲ್ಲ. ಪುಲಿಗೆರೆಯ ನನ್ನ ದಾಯಾದರು ಕಾದಿದ್ದಾರೆ ಅದಕ್ಕಾಗಿ. ನಾನು ಮುಡಿಪಿದ ಮೇಲೆ ನೆಲೆಯಿಲ್ಲದಂತಾಗಿ ಹೇಗೂ ನೀನು ಈ ಸ್ಥಳ ಬಿಡಬೇಕಾಗುತ್ತದೆ. ಈಗಲೆ ಬಿಟ್ಟರೆ ಒಳ್ಳೆಯದು."

ನಾನು ಮಾನ್ಯಖೇಟಕ್ಕೆ ಹೊರಡುವ ದಿನ ಗೊತ್ತಾಯಿತು. ಒಂದು ಗಾಡಿ ತುಂಬುವಷ್ಟು ನಿತ್ಯೋಪಯೋಗಿ ಪಾತ್ರೆಪದಾರ್ಥ ಸಾಮಾನು ಸರಂಜಾಮುಗಳನ್ನೂ, ಒಂದು ವರ್ಷ ವೆಚ್ಚಕ್ಕೆ ಬೇಕಾದ ಹಣವನ್ನೂ ಕೊಟ್ಟು ಅಜ್ಜ ನನ್ನನ್ನು ಬೀಳ್ಕೊಟ್ಟರು. ಅವುಗಳಲ್ಲಿ ಮುಖ್ಯವಾದುದೆಂದರೆ ಅವರು ಸಂಗ್ರಹಿಸಿದ್ದ ಓಲೆಗರಿ ಹೊತ್ತಿಗೆಗಳ ಭಂಡಾರ. ಅಗ್ರಹಾರದ ವಿದ್ವಜ್ಜನರು ತಮಗೆ ಬೇಡವಾಗಿ ನನಗೆ ಉಪಯುಕ್ತವಾಗಿದ್ದ ಕೆಲವು ಹೊತ್ತಿಗೆಗಳನ್ನು ನನಗೆ ಕೊಟ್ಟರು.

ಮನಸ್ಸು ಮಾತು ಮೈ, ಈ ಮೂರಕ್ಕೂ ಉಪಯುಕ್ತವಾಗಿದ್ದ ಈ ಸಿರಿ ಸಂಪತ್ತುಗಳನ್ನು ಬಾಡಿಗೆ ಗಾಡಿಯಲ್ಲಿ ಹೇರಿಕೊಂಡು ಒಕ್ಕುಂದವನ್ನು ಬಿಟ್ಟು ಎರಡು ದಿನಗಳ ಅನಂತರ ನಾನು ರಾಷ್ಟ್ರಕೂಟ ರಾಜಧಾನಿ ಮಾನ್ಯಖೇಟವನ್ನು ತಲಪಿದೆ.

*   *   *

ರಾಜಧಾನಿನಗರದ ವ್ಯಾಪಕ ವಿಸ್ತರಣವೊಂದರಲ್ಲಿದ್ದ ಪಾರ್ಶ್ವನಾಥ ಬಸದಿಯ ಅತಿಥಿಶಾಲೆಯಲ್ಲಿ ನಾನು ಬಿಡಾರ ಮಾಡಿದಾಗ ಬಸದಿಯ ಮೊಕ್ತೇಸರ ಪರಿಚಾರಕರ ಹೊರತಾಗಿ ನಗರದಲ್ಲಿ ಮತ್ತಾರ ಪರಿಚಯವೂ ನನಗಿರಲಿಲ್ಲ.

ಆಮೇಲೆ ಒಂದುದಿನ, ಸಂಜೆ ನಾನು ಸಮೀಪದ ಕೆರೆಯ ದಂಡೆಯಲ್ಲಿ ತಿರುಗಾಡಲು ಹೋಗಿದ್ದಾಗ ಅಪರಿಚಿತನೊಬ್ಬನು, "ನೀವು ನಗರಕ್ಕೆ ಹೊಸಬರಂತೆ ಕಾಣುತ್ತಿದೆ, ಅಲ್ಲವೆ?" ಎಂದು ಪ್ರಶ್ನಿಸಿದನು.

"ನಿಮ್ಮ ಊಹೆ ನಿಜ. ನಾನು ಈ ಪ್ರಾಂತದವನಲ್ಲ. ನಿಮಗದು ತಿಳಿದದ್ದು ಹೇಗೆ?" ಎಂದೆ ನಾನು.

"ಸಮೀಪದ ಗ್ರಾಮವೊಂದರಲ್ಲಿ ಎರಡು ದಿನಗಳಿಂದ ಜಾತ್ರೆ ನಡೆಯುತ್ತಿದೆ. ಚತ್ತಾಣದ ನಾಲ್ಕು ತಂಡಗಳವರು ಅಲ್ಲಿ ಬಿಡಾರ ಮಾಡಿದ್ದಾರೆ. ಪ್ರತಿ ಸಂಜೆ ಒಂದೊಂದು ಅಟ್ಟದಲ್ಲಿಯೂ ಬೇರೆಬೇರೆ ಪಗರಣದ ಆಟ ನಡೆಯುತ್ತದೆ. ಆ ಪುಕ್ಕಟೆ ವಿನೋದವನ್ನು ಬಿಟ್ಟು ಈ ನಿರ್ಜನ ಪ್ರದೇಶಕ್ಕೆ ಬಂದ ನಿಮ್ಮನ್ನು ಸಹಜವಾಗಿ ಹೊಸಬರೆಂದು ತಿಳಿದೆ."

"ಜನಸಂದಣಿಗಿಂತ ನಿರ್ಜನ ಪ್ರದೇಶ ನನಗೆ ಹೆಚ್ಚು ಪ್ರಿಯ. ಕವಿಯ ಚಿಂತನ ಮಂಥನಗಳಿಗೆ ನಿಸರ್ಗದ ಚಲುವಿನಂತೆ ನಿರ್ಜನತೆಯೂ ಅಗತ್ಯ."

—ಎಂದೆ ನಾನು ಸಹೃದಯತೆಯ ಮೆಲುದನಿಯಲ್ಲಿ.

ಅಪರಿಚಿತನ ಕಣ್ಣುಗಳು ಅಚ್ಚರಿಯಿಂದ ಅರಳಿದವು. "ಎಂತಹ ಅವಿವೇಕಿ ನಾನು! ನಿಮ್ಮ ಈ ಅನ್ವೀಕ್ಷಕ ಕಣ್ಣುಗಳು, ಉಬ್ಬಿದ ಹಣೆ, ನೀಳವಾಗಿ ಬೆಳೆಸಿದ ತಲೆಗೂದಲು, ಇವುಗಳನ್ನು ನೋಡಿಯೂ ಕವಿಯೆಂದು ತಿಳಿಯಲಾರದೆ ಹೋದೆ, ನನ್ನ ಅಜ್ಞತೆಯನ್ನು ಕ್ಷಮಿಸಿರಿ"

—ಎಂದು ಉದ್ಗಾರ ತೆಗೆದ

ನಾವು ಒಂದೇ ಕಡೆ ಹೋಗುತ್ತಿದ್ದುದರಿಂದ ನಾಲ್ಕು ಹೆಜ್ಜೆ ನಡೆದ ಬಳಿಕ ಅಪರಿಚಿತನು ಪುನಃ "ನಾನು ಈ ನಗರದ ನಿವಾಸಿ. ತಂದೆ ಇಟ್ಟ ಹೆಸರು ಈಶ್ವರಚಂದ್ರ ಎಂದು. ಚಿಕ್ಕಂದಿನಲ್ಲಿ ಕವಿತ್ವ ಬರೆಯಲು ಪ್ರಾರಂಭಿಸಿದ್ದರಿಂದ ಜನ ನನ್ನನ್ನು ಈಶ್ವರ ಕವಿ ಎಂದು ಕರೆಯುತ್ತಾರೆ. ನಿಮ್ಮ ಪರಿಚಯ, ನಗರಕ್ಕೆ ನೀವು ಬಂದಿರುವ ಉದ್ದೇಶ, ಇವುಗಳನ್ನು ತಿಳಿಸಿದರೆ ನನ್ನಿಂದಾಗುವ ಸಹಾಯ ಮಾಡುತ್ತೇನೆ. ಈಗ ನಾವು ವೃತ್ತಿಯಲ್ಲಿ ಸಜಾತೀಯರೇ ಆದೆವಲ್ಲವೆ?" ಎಂದು ನುಡಿದ.

ನಾನು ಪರಿಚಯ ಹೇಳಿದೆ. ಉದ್ದೇಶವನ್ನೂ ತಿಳಿಸಿದೆ.

ಅಪರಿಚಿತನು ಗಂಭೀರವಾಗಿ ತಲೆಯಾಡಿಸಿ, ಹೇಳಿದ:

"ನಿಮ್ಮ ಉದ್ದೇಶ ಸಾಧುವಾದದ್ದು, ವಿಜಯಪಂಡಿತರೆ. ಆದರೆ ಪ್ರಭುಗಳ ಸಾಮಂತ ಮನ್ನೆಯರ ಪರಿಚಯವಿಲ್ಲದೆ ಹಠಾತ್ತಾಗಿ ನೀವು ನಗರಕ್ಕೆ ಬಂದದ್ದು ಸಾಹಸವೇ

ಎಂದು ಕಾಣುತ್ತದೆ. ಹಿಂದಿನಕಾಲ ಒಂದಿತ್ತು : ಸ್ತುತಿರೂಪವಾದ ಪದ್ಯವೊಂದನ್ನು ಪಠಿಸಿದರೆ ಅಕ್ಷರಕ್ಕೆಲಕ್ಷ ಕೊಡುತ್ತಿದ್ದರಂತೆ ಆಗ ಅರಸರು. ಈಗಿನವರು ಹಾಗಲ್ಲ. ಯಾವುದಾದರೊಂದು ಕಾವ್ಯವನ್ನು ಸಭೆಯಲ್ಲಿ ಪಠಿಸಿದರೇ ರಾಜಾಶ್ರಯ ಪುರಸ್ಕಾರಗಳು. ಅಂತಹ ಕಾವ್ಯ ಯಾವುದಾದರೂ ಇದೆಯೆ ನಿಮ್ಮಲ್ಲಿ? ರಚನೆಗೆ ತೊಡಗಿರುವಿರಾ ?"

"ಏಕಕಾಲದಲ್ಲಿ ಎರಡು ಕಾವ್ಯಗಳ ರಚನೆಗೆ ತೊಡಗಿದ್ದೇನೆ. ಒಂದು 'ಚಂದ್ರಪ್ರಭಾ ಚರಿತ್ರೆ,' ಇನ್ನೊಂದು 'ಕವಿಮಾರ್ಗ' ಎಂಬ ಹೆಸರಿನ ಶಾಸ್ತ್ರಗ್ರಂಥ. ಆದರೆ ನನ್ನ ದುರ್ದೈವಕ್ಕೆ ಎರಡೂ ಅಪೂರ್ಣ" ಎಂದೆ ನಾನು.

"ಅವಿಧೇಯನಾದ ಮಗನಿಂದ ತಾಯಿಯ ದೇಹಶೋಷಣೆಯಾಗುವಂತೆ ಅಪೂರ್ಣ ಗ್ರಂಥ, ಕರ್ತೃವಿನ ಪ್ರತಿಭಾವ್ಯಯಕ್ಕೆ ಕಾರಣವಾಗುತ್ತದೆ. ಆ ಎರಡು ಕಾವ್ಯಗಳಲ್ಲಿ ಒಂದನ್ನು ನೀವು ಬೇಗ ಮುಗಿಸಿದರೆ ರಾಜಸಭೆಯಲ್ಲಿ ಪಠಿಸಲು ಅವಕಾಶ ದೊರಕುವಂತೆ ಪ್ರಯತ್ನಿಸುತ್ತೇನೆ."

ಮಾತಾಡುತ್ತಿದ್ದಂತೆ ನಾವು ಅತಿಥಿ ಶಾಲೆಯ ಸಮೀಪಕ್ಕೆ ಬಂದೆವು.

"ಅವಕಾಶವಿದ್ದರೆ ದಯಮಾಡಿ ಒಳಗೆ ಬನ್ನಿರಿ, ಈಶ್ವರ ಕವಿಗಳೆ. ನಾನು ಒಕ್ಕುಂದದಿಂದ ತಂದಿರುವ ಗ್ರಂಥ ಸಂಗ್ರಹ ತಮಗೆ ತೋರಿಸುತ್ತೇನೆ" ಎಂದೆ ನಾನು.

ಈಶ್ವರಕವಿಯ ಮುಖದಲ್ಲಿ ವಿಡಂಬನೆಯ ಕಿರುನಗೆ ಮೂಡಿತು. "ನೃಪತುಂಗ ಮಹಾರಾಜರ ಅರಮನೆಯಲ್ಲಿ ಸರಸ್ವತೀ ಭಂಡಾರದ ಮೊಕ್ತೇಸರನು ನಾನು. ದಂಡ ಯಾತ್ರೆಯಲ್ಲಿ, ತೀರ್ಥಪ್ರವಾಸಗಳಲ್ಲಿ ಮಹಾರಾಜರು ಸಂಗ್ರಹಿಸಿದ ಸಂಸ್ಕೃತ ಪ್ರಾಕೃತ ಕನ್ನಡಗ್ರಂಥಗಳ ವಿಪುಳ ಸಂಗ್ರಹ ಈಗ ನನ್ನ ಮೇಲ್ವಿಚಾರಣೆಯಲ್ಲಿ ವ್ಯವಸ್ಥಿತ ರೂಪತಾಳುತ್ತಿದೆ. ತಾಳೆಗರಿಯ ಕಟ್ಟುಗಳ, ಕಡತದ ಹೊತ್ತಿಗೆಗಳ ಪರಿಶೀಲನೆ ವರ್ಗೀಕರಣಗಳು ನನ್ನ ದಿನಚರಿ. ಪಾನಾಸಕ್ತನಿಗೆ ಮಧುಭಾಂಡವನ್ನು ರಕ್ಷಣೆಗಾಗಿ ಕೊಟ್ಟಂತಿದೆ ನಿಮ್ಮ ಆಹ್ವಾನ. ನಿಮ್ಮ ಸಂಗ್ರಹದಲ್ಲಿ ಅಪೂರ್ವ ಗ್ರಂಥಗಳಿದ್ದರೆ ರಾಜ ಭಂಡಾರಕ್ಕಾಗಿ ಅದನ್ನು ಅಪಹರಿಸುವುದು ನನಗೆ ಅನಿವಾರ್ಯವಾಗಬಹುದು" ಎಂದು ನುಡಿದು ಆತ ನನ್ನ ಸಂಗಡ ಅತಿಥಿಶಾಲೆಗೆ ಬಂದ.

ಅತಿಥಿಶಾಲೆಯ ಎರಡು ಸಾಮಾನ್ಯ ಕೊಟಡಿಗಳೂ ನನ್ನ ವಾಸಕ್ಕೆ ಕೊಡಲ್ಪಟ್ಟಿದ್ದವು. ಒಂದನ್ನು ಅಡಿಗೆ ಊಟಗಳಿಗಾಗಿ ಇಟ್ಟುಕೊಂಡು ಇನ್ನೊಂದು ಕೊಟಡಿಯನ್ನು ಅಧ್ಯಯನ ಶಾಲೆಯಾಗಿ ಸಜ್ಜುಗೊಳಿಸಿದ್ದೆ. ಎರಡು ಪೆಟಾರಿಗಳಲ್ಲಿ ಅಡಕವಾಗಿ ಇಟ್ಟಿದ್ದ ಹೊತ್ತಿಗೆಗಳು ಮನೆಯತುಂಬ ಹರಡಿದ್ದವು.

"ಪಟ್ಟಿಮಾಡಲು ನಾನು ಎಲ್ಲವನ್ನೂ ತೆಗೆದಿಟ್ಟೆ" ಎಂದು ನಾನು ಸಮಾಧಾನ ಹೇಳುತ್ತಿದ್ದಂತೆ ಈಶ್ವರ ಕವಿ ಒಂದೆರಡು ಹೊತ್ತಿಗಳನ್ನು ತೆರೆದು ಗರಿಗಳನ್ನು ತಿರುವಿ ಹಾಕಿ, "ನಿಮ್ಮ ಒಲವು ಸಂಸ್ಕೃತದ ಕಡೆಗೆ. ಅದರಲ್ಲೂ ವ್ಯಾಕರಣ ಅಲಂಕಾರ ಶಾಸ್ತ್ರಗಳು ಹೆಚ್ಚು ಪ್ರಿಯ, ಅಲ್ಲವೆ?" ಎಂದು ಪ್ರಶ್ನಿಸಿದರು.

"ಹೌದು, ಅಲಂಕಾರ ಶಾಸ್ತ್ರವನ್ನು ಕುರಿತ ಒಂದೆರಡು ಗ್ರಂಥಗಳನ್ನಾದರೂ ಕನ್ನಡದಲ್ಲಿ ರಚಿಸಬಹುದೆಂದು ಸಂಕಲ್ಪಿಸಿದ್ದೇನೆ" ಎಂದು ಉತ್ತರಿಸಿದೆ ನಾನು.

ಇನ್ನೂ ಕೆಲವು ಹೊತ್ತಿಗೆಗಳನ್ನು ತಿರವಿಹಾಕಿ ಈಶ್ವರಕವಿ "ನೀವು ಪಟ್ಟಿ ತಯಾರಿಸಿದರೆ ಆಮೇಲೆ ನೋಡಬಹುದು, ಅಪಹಾರಯೋಗ್ಯವಾದ ಹೊತ್ತಿಗೆಗಳಿವೆಯೋ ಎಂಬುದನ್ನು. ಈಗ ಕ್ಷಮಿಸಿರಿ, ನಾನು ಹೋಗಬೇಕಾಗಿದೆ" ಎಂದು ಎದ್ದರು.

ಹೀಗೆ ಪ್ರಾರಂಭವಾದ ನಮ್ಮ ಪರಿಚಯ ಒಂದೆರಡು ದಿನಗಳಲ್ಲಿಯೇ ಸ್ನೇಹವಾಗಿ ಪರಿಣಮಿಸಿತು. ರಚನೆ ಅರ್ಧದಲ್ಲಿ ನಿಂತಿದ್ದ "ಕವಿಮಾರ್ಗ"ದ ಕೆಲವು ಪದ್ಯಗಳನ್ನು ಅವರ ಮುಂದೆ ತುಸು ಭಯದಿಂದಲೆ ಓದಿದೆ. ಅನಂತರ ಓದಿದುದರ ವಿಮರ್ಶೆಗೆ ಆರಂಭವಾಯಿತು.

ಮಂಗಳಾಚರಣ ರೂಪವಾದ ಅದರ ಮೊದಲ ಪದ್ಯ ಇದು :

ಶ್ರೀವಿಶದ ವರ್ಣೆ ಮಧುರಾ
ರಾವೋಚಿತೆ ಚತುರ ರುಚಿರ ಪದರಚನೆ ಚಿರಂ
ದೇವಿ ಸರಸ್ವತಿ ಹಂಸೀ
ಭಾವದೆ ನೆಲೆಗೊಳ್ಗೆ ಕೂರ್ತು ಮನ್ಮಾನಸದೊಳ್

"'ಕವಿಮಾರ್ಗ'ದಲ್ಲಿ ನೀವು ದಂಡಿಯ ಕಾವ್ಯಾದರ್ಶವನ್ನು ಬಹುಮಟ್ಟಿಗೆ ಆಶ್ರಯಿಸಿದಂತಿದೆ. ಆದರೆ ಅವನ ಮಂಗಳಶ್ಲೋಕದ ಕೀಲಕದಂತಿರುವ "ಸರ್ವಶುಕ್ಲಾ ಸರಸ್ವತಿಯು ನಿಮ್ಮ ಅನುವಾದದಲ್ಲಿ ಬಡವಾಗಿ ಬ್ರಹ್ಮದೇವನ ಆಶ್ರಯ ಕಳೆದು ಕೊಂಡಿದ್ದಾಳೆ"

—ಎಂದು ವ್ಯಂಗ್ಯವಾಗಿ ನುಡಿದರು ಈಶ್ವರಕವಿ.

ಕೀಟವೊಂದು ಕುಟುಕಿದಂತಾಯಿತು ನನಗೆ.

"ಇದು ಅನುವಾದವಲ್ಲ ವಿಮರ್ಶಕರೆ, ಅನುಕರಣ"

—ಎಂದೆ ನಾನು, ತುಸುಗಡುಸಾದ ದನಿಯಿಂದ.

"ಅನುವಾದವೋ ಅನುಕರಣವೋ, ಏನೇ ಆಗಲೀ, ಸಂಸ್ಕೃತ ಕಾವ್ಯಗಳಿಗೆ ದಂಡಿ ಹೇಳಿದ ಲಕ್ಷಣಗಳನ್ನು ನೀವು ಅನುವದಿಸಿ ಕನ್ನಡಕ್ಕೆ ಅನ್ವಯಿಸಲು ತೊಡಗಿರುವಾಗ ಮಂಗಳಶ್ಲೋಕದಲ್ಲಿ ಈ ಮಾರ್ಪಾಟಿನ ಅಗತ್ಯವೇನಿತ್ತು ?"

—ಈಶ್ವರಕವಿ ಅಷ್ಟೇ ಗಂಭೀರವಾಗಿ ಉತ್ತರಿಸಿದರು.

ಅಗತ್ಯವೇನಿತ್ತು ? ಬ್ರಹ್ಮಸರಸ್ವತಿಯರನ್ನು ಕುರಿತ ಪುರಾಣಕತೆ ಮನಸ್ಸಿನಲ್ಲಿ ಸುಳಿಯಿತು, ನುಡಿಯೊಡತಿಯನ್ನು ಕುರಿತ ಜೈನಕವಿಗಳ ಕಲ್ಪನೆ ಇದರಿಂದ ವಿಭಿನ್ನ; ಈ ಎರಡನೆ ಸಮನ್ವಯವನ್ನು ಸಾಧಿಸುವ ಪ್ರಯತ್ನದಲ್ಲಿ ಬ್ರಹ್ಮದೇವನ ಹೆಸರನ್ನು ಬಿಡುವುದು ನನಗೆ ಅಗತ್ಯವಾಯಿತು. ಮತೀಯವೆಂದು ಕಾಣಬಹುದಾದ ಈ ಮಾರ್ಪಾಟನ್ನು ಪ್ರಕಟವಾಗಿ ಸಮರ್ಥಿಸುವ ಇಚ್ಛೆಯಿಲ್ಲದೆ,

"ನೀವಾಗಿದ್ದರೆ ಹೇಗೆ ಅನುವಾದಮಾಡುತ್ತಿದ್ದಿರಿ ?"—ಎಂದು ಪ್ರಶ್ನಿಸಿದೆ.

"ದಂಡಿಯ ಪದ್ಯವನ್ನೊಂದು ಸಾರಿ ಪಠಿಸಿರಿ. ನನಗೆ ಮರೆತುಹೋಗಿದೆ ಅದು,"

—ಎಂದರು ಅವರು.

ನಾನು ಪಠಿಸಿದೆ !

"ಚತುರ್ಮುಖ ಮುಖಾಂಭೋಜವನ ಹಂಸವಧೂರ್ಮಮ
ಮಾನಸೇ ರಮತಾಂನಿತ್ಯಂ ಸರ್ವಶುಕ್ಲಾ ಸರಸ್ವತೀ."

ತನ್ಮಯರಾಗಿ ಕೇಳುತ್ತಿದ್ದ ಅವರು ಕೆಲವು ಕ್ಷಣಗಳ ಅನಂತರ ಅನುವಾದವನ್ನು ಪಠಿಸಿದರು.

ನಾಲ್ಮೊಗನ ಮುಖಾಂಬುಜವನ
ದೋಳೇರೆ ವರಸಂಜಿವೆಣ್ ಸರಸ್ವತಿ ತನುವಿಂ
ಮೇಲ್ಮೆಗೈದಿರಲು ಧವಳತೆ
ನಲ್ಮೆಯೊಳಿರ್ಕೆಂದು ನೆಲಸಿ ಮನ್ಮಾನಸದೋಳ್

ಪ್ರತಿಭೆಗೆ ತಲೆದೂಗಿದೆ. ಪದ್ಯದ ಕೆಲವು ದೋಷಗಳು ಕರೆಯದೆ ಬಂದ ದರಿದ್ರ ಬಂಧುಗಳಂತೆ ಮನದಲ್ಲಿ ತಲೆಹಾಕಿದ್ದುವು. "ನ"ಕಾರದಿಂದ ಮಂಗಳಶ್ಲೋಕದ ಆರಂಭ ; ವಾಕ್ಯದ ಕರ್ತೃಸರಸ್ವತಿಯೋ ಅಥವಾ ಅವಳ ಶರೀರದ ಧವಳತೆಯೋ ಎಂಬ ಸಂದೇಹಕ್ಕೆ ಎಡೆಗೊಡುವ ಕಾರಕದೋಷ ; 'ಎಂದು ನೆಲಸಿ' ಎಂಬುದು ಅವಧಾರಣ ದೋಷ—ಇತ್ಯಾದಿ.

ಆದರೆ ಹೊಸ ಪರಿಚಯದ, ಸಹೃದಯನಾದ, ಪಂಡಿತ ಕವಿಯ ವಿರೋಧ ಅವ್ಯವ ಹಾರಿಕವೆಂದು ಭಾವಿಸಿ, ಅಸಮಾಧಾನವನ್ನು ಮರೆಮಾಡಿ ಹೇಳಿದೆ, "ನಿಮ್ಮ ಪ್ರತಿಭೆ ಅಸಾಮಾನ್ಯ ಈಶ್ವರ ಪಂಡಿತರೆ. ಮೂಲಪದ್ಯವನ್ನು ಕೇಳಿದ ಪ್ರತಿಕ್ಷಣದಲ್ಲಿ ಅದರ ಅನುವಾದವನ್ನು ಲೀಲಾಜಾಲವಾಗಿ ರಚಿಸಬಲ್ಲ ಪ್ರತಿಭಾಶಾಲಿ ರಾಷ್ಟ್ರಕೂಟ ಆಸ್ಥಾನ ದಲ್ಲಿರುವನೆಂದು ನಾನು ಕನಸಿನಲ್ಲಿಯೂ ನಿರೀಕ್ಷಿಸಿರಲಿಲ್ಲ. ನೀವು ಮನಸ್ಸುಮಾಡಿದರೆ ತಿಂಗಳಿಗೊಂದು ಕಾವ್ಯವನ್ನು ರಚಿಸಬಹುದು. ಸಂಸ್ಕೃತ ಪ್ರಾಕೃತ ಭಾಷೆಗಳ ಸುಪ್ರಸಿದ್ಧ ಕಾವ್ಯನಾಟಕಗಳನ್ನು ಕನ್ನಡಿಸಬಹುದು"—ಎಂದು.

ನನ್ನ ಮಾತಿನ ಗೂಢಾರ್ಥವನ್ನು ಅವರು ಗಮನಿಸಿದಂತೆ ಕಾಣಲಿಲ್ಲ. ನಿಟ್ಟುಸಿರಿಳೆದು ನುಡಿದರು "ನನ್ನ ಪ್ರತಿಭೆ ವಸಂತದ ಅಲ್ಪ ವೃಷ್ಟಿಯಂತೆ ನಿಷ್ಪ್ರಯೋಜಕ ಶ್ರೀವಿಜಯ ಪಂಡಿತರೆ. ಓದು, ಬರಹಕ್ಕೆ ಶತ್ರು ಎಂಬ ನಾಣ್ಣುಡಿಯನ್ನು ನೀವು ಕೇಳಿಲ್ಲವೆ? ಬೇರೆ ಕವಿಗಳ ಗ್ರಂಥಗಳ ಪಠನೆಯಲ್ಲಿ ದಿನದ ಹೆಚ್ಚು ಕಾಲವನ್ನು ಕಳೆಯುವ ನನಗೆ ಕೃತಿರಚನೆಯ ಅವಕಾಶ ಎಲ್ಲಿ ದೊರಕಬೇಕು ?"

ಈ ರೀತಿ ನಮ್ಮ ಚರ್ಚೆ ಕೆಲವು ದಿನಗಳು ನಡೆದು ನನ್ನ ಚೊಚ್ಚಲಕೃತಿ "ಕವಿ ಮಾರ್ಗ" ಒಂದು ವ್ಯವಸ್ಥಿತರೂಪ ತಳೆಯಿತು. ಈಶ್ವರ ಕವಿಗಳ ಸಲಹೆಯಂತೆ ನಾನು ಅದರಲ್ಲಿ ಕೆಲವು ಮಾರ್ಪಾಟುಗಳನ್ನು ಮಾಡಿದೆ ನಾನೇ ರಚಿಸಿದ್ದ ಅನೇಕ ಉದಾಹರಣ ಪದ್ಯಗಳನ್ನು ತೆಗೆದುಹಾಕಿ ಆಗ ಪ್ರಚಾರದಲ್ಲಿದ್ದ ಬೆದಂಡೆ ಚತ್ತಾಣ ಭಾಜನೆಗಬ್ಬ

ಗಳಿಂದ ಪದ್ಯಗಳನ್ನು ಆರಿಸಿ ಆಯಾ ಸ್ಥಳಗಳಿಗೆ ಜೋಡಿಸಿದೆ. ಈ ವಿಚಾರದಲ್ಲಿ ಈಶ್ವರ ಕವಿಗಳಿಂದ ನನಗೆ ಹೆಚ್ಚು ಸಹಾಯ ದೊರಕಿತು.

ಚತುರನಾದ ತೋಟಗಾರನು ಋತುಧರ್ಮಕ್ಕೆ ಅನುಗುಣವಾಗಿ ನಡೆಸುವ ದೋಹದ ವಿಧಿಯಿಂದ ತರುಲತೆಗಳು ಫಲಪುಷ್ಪಭರಿತವಾಗುವಂತೆ ಈಶ್ವರ ಕವಿಗಳ ಪರಿಶೀಲನೆ ವಿಮರ್ಶೆಗಳಿಂದ ನನ್ನ ಕಾವ್ಯಲತೆ ಚೆಲುವಾಗಿ ಬೆಳೆದು ಹೂಬಿಟ್ಟಿತು. ಒಕ್ಕುಂದದಲ್ಲಿದ್ದಾಗ ನನ್ನನ್ನು ಆವರಿಸಿದ್ದ ನಿರಾಶೆಯ ತೆರೆಹರಿದು ಆಶೆಯ ರಜತರೇಖೆ ಕಾಣಿಸಿತು, ಆಗೊಂದು ದಿನ—

* * *

"ನಿನ್ನ ಅದೃಷ್ಟ ಕಣ್ತೆರೆಯಿತು, ಶ್ರೀ ವಿಜಯ,"

—ಎನ್ನುತ್ತ ಈಶ್ವರಕವಿ ನನ್ನ ಬಿಡಾರಕ್ಕೆ ಬಂದ, ಈ ಅವಧಿಯಲ್ಲಿ ನಮ್ಮ ಗೆಳೆತನ ತ್ವರಿತಗತಿಯಿಂದ ಬೆಳೆದು ಸಲಿಗೆ ಹೆಚ್ಚಿತ್ತು. ಪರಸ್ಪರ ಸಂಬೋಧನೆಯಲ್ಲಿ ಮಾರ್ಪಾಟು ತಲೆದೋರಿತ್ತು.

"ಏನಾಯಿತು ಕವೀಶ್ವರ? ಪ್ರಭುಗಳು ನಿನ್ನನ್ನು ಮಂತ್ರಿಪದವಿಗೇರಿಸಿದರೆ?"

—ಎಂದು ನಾನು ನಗೆಯಾಡಿದೆ.

"ಇದು ಉಪಹಾಸದ ವಿಷಯವಲ್ಲ, ಶ್ರೀವಿಜಯ. ನಾಳೆ ರಾಜಸಭೆಯಲ್ಲಿ ನಿನ್ನ ಕಾವ್ಯಪಠನೆ. ಸಿದ್ಧನಾಗಿರುವೆಯ?"

"ಯೋಧನ ಕುದುರೆಯಂತೆ ನಾನು ಯಾವಾಗಲೂ ಸಿದ್ಧ. ವಾಸ್ತವದಲ್ಲಿ ಏನು ನಡೆಯಿತು? ನನ್ನಕೃತಿಯ ವಿಚಾರ ಪ್ರಭುಗಳಿಗೆ ತಿಳಿದದ್ದು ಹೇಗೆ?"

—ಎಂದು ಕೇಳಿದೆ ನಾನು.

ಆಗ ಕವೀಶ್ವರ ಹೇಳಿದ, "ಈದಿನ ಪ್ರಭುಗಳು ಸರಸ್ವತೀ ಭಂಡಾರಕ್ಕೆ ಬಂದಿದ್ದರು. ಸಾಮಾನ್ಯವಾಗಿ ಅವರು ಅಲ್ಲಿಗೆ ಬರುವುದು ವರ್ಷಕ್ಕೊಂದುಸಾರಿ, ಸರಸ್ವತೀ ಪೂಜೆಯ ಸಂದರ್ಭದಲ್ಲಿ. ಯಾವುದಾದರೂ ಹೊತ್ತಿಗೆಬೇಕಾದರೆ ಹೆಗ್ಗಡೆಯನ್ನೊ ಪಸಾಯಿತನನ್ನೋ ಕಳುಹಿಸುತ್ತಿದ್ದರು.

"ಪ್ರಭುಗಳನ್ನು ಕಂಡು ನಾನು ಬೆಚ್ಚಿ ಎದ್ದುನಿಂತೆ, ಭಯದಿಂದ ಕಾಲುಗಳು ನಡುಗುತ್ತಿದ್ದುವು. ಕಡೆಗಣ್ಣಿಂದ ಇದನ್ನು ನೋಡಿದ ಪ್ರಭುಗಳು ಬರುತ್ತಿದ್ದ ನಗುವನ್ನು ಪ್ರಯತ್ನ ಪೂರ್ವಕವಾಗಿ ಅದುಮಿಟ್ಟು,

"ಉದಯ'ನ 'ರಾಜನೀತಿಸಾರ'ದ ಪ್ರತಿಯೊಂದು ನಮ್ಮಲ್ಲಿತ್ತಲ್ಲವೆ? ಅದನ್ನು ಹುಡುಕಿಕೊಡು ನೋಡೋಣ"

—ಎಂದರು, ಮಗುವೊಂದನ್ನು ನುಡಿಸುವಂತಿತ್ತು ಅವರ ದನಿ.

"ಅಪ್ಪಣೆ" ಎಂದು ನಾನು ಹುಡುಕಲು ಹೊರಟೆ.

ಪ್ರಭುಗಳು ಸುಖಾಸನದ ಮೇಲೆ ಕುಳಿತು ಪಾರ್ಶ್ವದ ಮಣೆಯ ಮೇಲಿದ್ದ

ಹೊತ್ತಿಗೆಗಳನ್ನು ನೋಡಲು ಮೊದಲು ಮಾಡಿದರು. ತುಸುಹೊತ್ತಿನ ಮೇಲೆ ಅಪೇಕ್ಷಿಸಿದ ಹೊತ್ತಿಗೆಯನ್ನು ತಂದು ನಾನು ಪ್ರಭುಗಳಿಗೆ ಅರ್ಪಿಸಿವಾಗ ನಿನ್ನಕೃತಿ 'ಕವಿಮಾರ್ಗ' ಅವರ ಕೃತಿಯಲ್ಲಿರುವುದನ್ನು ಕಂಡು ಅಪ್ರತಿಭನಾದೆ.

"ಇದನ್ನು ಯಾರು ರಚಿಸಿದವರು ?" ಎಂದು ಅವರು ಕೇಳಿದಾಗ ನನ್ನ ಜಂಘಾ ಬಲ ಉಡುಗಿತು. ನಿಜವಾಗಿ ಕುಸಿದು ಬಿದ್ದಂತಾಯಿತು. ಧೈರ್ಯತಂದುಕೊಂಡು ಕೈಜೋಡಿಸಿ ಹೇಳಿದೆ:

"ಮಹಾಪ್ರಭುಗಳು ಅವಧರಿಸಬೇಕು. ಒಕುಂದನಾಡಿನ ತರುಣಕವಿ, ಶ್ರೀವಿಜಯ ಅವನ ಹೆಸರು. ಈ ಶಾಸ್ತ್ರಕೃತಿಯನ್ನು ರಚಿಸಿ ಪ್ರಭುವರ್ಯರಿಗೆ ಅರ್ಪಿಸುವ ಉದ್ದೇಶ ದಿಂದ ನಗರಕ್ಕೆ ಬಂದಿದ್ದಾನೆ."

"ಇದು ನಿನ್ನಕೈಗೆ ಬಂದದ್ದು ಹೇಗೆ?" ಪುನಃ ಪ್ರಭುಗಳ ಪ್ರಶ್ನೆ.

"ಬಂದ ಕೆಲವು ದಿನಕ್ಕೆ ನನ್ನ ಪರಿಚಯವಾಯಿತು, ನೋಡಲು ತಂದೆ."

"ಇದುವರೆಗೆ ಈ ವಿಚಾರ ನಮಗೇಕೆ ವರದಿಯಾಗಲಿಲ್ಲ ?"

ನಾನು ಮೌನ. ರಾಜಸಭೆಯ ಪಂಡಿತ ಪ್ರವರರ, ವಿದ್ವನ್ಮಣಿಗಳ ಆಲಸ್ಯ ವರ್ತನೆಯ ಬಗೆಗೆ ದೂರು ಹೇಳಲು ನಾನುಯಾರು ?

ಪ್ರಭುಗಳಿಗೆ ನನ್ನ ಸಂದಿಗ್ಧದ ಅರಿವಾಗಿರಬೇಕು, ಉದಯನ "ರಾಜನೀತಿ ಸಾರ"ದ ಹೊತ್ತಿಗೆಯನ್ನು ನನ್ನಿಂದ ತೆಗೆದುಕೊಂಡು,

"ಹಿಂದೊಂದುಸಾರಿ ಇದರ ಪ್ರತಿಮಾಡಿದವನು ನೀನೇ ಅಲ್ಲವೆ? ಮಂತ್ರಿ ಚರ್ಯೆಯನ್ನು ಕುರಿತ ಆ ಪದ್ಯ ನಿನಗೆ ನೆನಪಿದೆಯೆ ?" ಎಂದು ಕೇಳಿದರು.

ಸಮಯಸ್ಫೂರ್ತಿಯಿಂದ ನಾನು ಪಠಿಸಿದೆ.

ಜನಮರಿಯದನ್ನೆಗಂ ಮು
ನ್ನ ನಯಮರಿದರಿಪಲಾರ್ಪೊಡದು ಮಂತ್ರಿಗುಣಂ
ಜನವಾದಂ ನೆಗಳೆ ನಗ
ಧ್ವನಿವೋಲನುಕರಣವಾರ್ತೆ ಮಂತ್ರಿಯ ಗುಣಮೇ

ಪದ್ಯವನ್ನು ಕೇಳುತ್ತಿದ್ದಂತೆ ಪ್ರಭುಗಳ ಮುಖದಲ್ಲಿ ವ್ಯಂಗ್ಯದ ಕಿರುನಗೆ ಮೂಡಿತು, "ಇಂತಹ ಆಲಸ್ಯ ಅಸಂಗತೆಗಳು ರಾಜಿಕದ ಸಾಮಾನ್ಯ ದೋಷಗಳು. ನಿನ್ನ ಆ ಮಿತ್ರನಿಗೆ ತಿಳಿಸು, ನಾಳೆ ರಾಜಸಭೆಯಲ್ಲಿ 'ಕವಿಮಾರ್ಗ'ದ ಪಠನೆಯನ್ನು ಕವಿ ಮುಖದಿಂದಲೇ ನಾವು ಕೇಳುವೆವೆಂದು"

—ಎಂದು ನುಡಿದು ಅವರು ಅಲ್ಲಿಂದ ನಡೆದರು

ಬಾಗಿಲಲ್ಲಿ ಪ್ರಭುಗಳಿಗಾಗಿ ಕಾಯುತ್ತಿದ್ದ ಹೆಗ್ಗಡೆ ಪಸಾಯಿತರು ಬೆಬ್ಬರಗಾಗಿ ನನ್ನನ್ನೇ ನೋಡುತ್ತಿದ್ದರು, ನಾನು ಆ ಕೂಡಲೆ ರಾಜಾಜ್ಞೆಯನ್ನು ಸಭಾಪತಿಗೆ ತಿಳಿಸಿ ನಿನ್ನಬಳಿಗೆ ಓಡುತ್ತ ಬಂದೆ."

—ಎಂದು ಕವೀಶ್ವರ ಮುಗಿಸಿದಾಗ ನಾನು ಅವಿಶ್ವಾಸದ ದನಿಯಿಂದ,

"ಇದು ನಿಜವಾಗಿ ನಡೆದದ್ದೆ? ಅಥವಾ ಕಥೆಕಟ್ಟಿ ಹೇಳುತ್ತಿರುವೆಯೋ?" ಎಂದು ಕೇಳಿದೆ.

ಕವೀಶ್ವರ ಗಹಗಹಿಸಿ ನಕ್ಕು, "ಕಥೆ ಕಟ್ಟುವುದು ಸತ್ಯದ ಅಸ್ತಿವಾರದ ಮೇಲೆಯೇ ಎಂಬುದು ಕವಿಯಾದ ನಿನಗೆ ತಿಳಿಯದೆ? ನಾಳೆ ರಾಜಾಜ್ಞೆ ಕೈಸೇರಿದಾಗ ನಿನಗೆ ಅದರ ಅರಿವಾಗುವುದು" ಎಂದು ಮಾರ್ಮಿಕವಾಗಿ ನುಡಿದ.

"ನನ್ನ 'ಕವಿಮಾರ್ಗ'ದ ಪ್ರತಿಯೆಲ್ಲಿ? ನೀನು ಕಲ್ಪನಾ ವಿಲಾಸದಲ್ಲಿ ಓಲಾಡುತ್ತ ಇಲ್ಲಗೆ ಬರುತ್ತಿದ್ದಾಗ ಅದು ಕಂಕುಳಿಂದ ಕಳಚಿ ಬೀದಿಯ ಬದಿಗೆ ಬೀಳದೆ ಉಳಿದಿದ್ದರೆ ನನ್ನ ಪುಣ್ಯ," ಎಂದೆ ನಾನು.

ಕೈಯಲ್ಲಿದ್ದ ಜಾಳಿಗೆಯಿಂದ ಓಲೆಗರಿಯ ಕಟ್ಟನ್ನು ತೆಗೆದು ಕವೀಶ್ವರ, "ಸ್ವೀಕರಿಸು ಮಹಾಶಯ, ನಿನ್ನ ಅದೃಷ್ಟಶಿಲ್ಪಿ ಈ ಕೃತಿ. ಕುಲಧನದಂತೆ ಅದನ್ನು ರಕ್ಷಿಸಿಕೊ. ಪಠನೆಯಲ್ಲಿ ಎಡವಿಬೀಳದಿರಲು ಮೊದಲಿಂದ ಕೊನೆಯವರೆಗೆ ಅದನ್ನು ಮತ್ತೊಂದು ಸಾರಿ ಓದಿಕೊಂಡಿದ್ದರೆ ಒಳ್ಳೆಯದು. ಈಗ ನನಗೆ ಸಮಯವಿಲ್ಲ"

—ಎಂದು ನುಡಿದು ಬಿಡಾರದಿಂದ ಕಾಲ್ತೆಗೆದ.

ಮರುದಿನ 'ವ್ಯಾಕರಣ ಕಾವ್ಯನಾಟಕ ಲೋಕಕಳಾ ಸಮಯ'ಗಳಲ್ಲಿ ವ್ಯಾಕುಲನಲ್ಲದ ವಿವೇಕ ಬೃಹಸ್ಪತಿ ಅಮೋಘವರ್ಷ ನೃಪತುಂಗ ಮಹಾರಾಜರ ಆಸ್ಥಾನದಲ್ಲಿ ನನ್ನ 'ಕವಿಮಾರ್ಗ'ದ ಪಠನೆ ನಡೆಯಿತು. ಮಂತ್ರಿ ಸಾಮಂತರು, ಪಂಡಿತೋತ್ತಮರು, ಕವಿಗಮಕಿ ಕಲಾವಿದರು, ನಾಗರಿಕಶ್ರೇಷ್ಠರು ಸಭೆಯಲ್ಲಿ ಉಚಿತಾಸನಗಳಲ್ಲಿ ಮಂಡಿಸಿದ್ದರು. ಅಂಚೆಯ ತುಪ್ಪಳದಂತೆ ಬಿಳಿದಾದ ರೇಶಿಮೆಯ ಧೋತ್ರ, ನಿಲುವಂಗಿ, ಅಂಗವಸ್ತ್ರ ಉಷ್ಣೀಷಗಳನ್ನು ಧರಿಸಿ ಮುತ್ತಿನ ಸರಗಳಿಂದ ಅಲಂಕೃತರಾಗಿದ್ದ ಅತಿಶಯಧವಳ ಮಹಾರಾಜರು ಸಭಾಮಧ್ಯದಲ್ಲಿ ವೇದಿಕೆಯ ಮೇಲೆ ಸಿಂಹಾಸನಾರೂಢರಾಗಿದ್ದರು.

ಸಭಾಭವನದ ಮೂರು ಕಡೆಗಳಲ್ಲಿ ರಚಿತವಾಗಿದ್ದ ಮೊಗಶಾಲೆಯ ತೆರೆಗಳ ಮರೆಯಲ್ಲಿ ಅಂತಃಪುರ ವಾಸಿನಿಯರಾದ ರಾಜತರುಣಿಯರು ಕುಳಿತಿದ್ದರೆಂಬುದನ್ನು ಕಂಚುಕಿ ಪ್ರತೀಹಾರಿಗಳ ಸಡಗರದಿಂದ ತಿಳಿಯಬಹುದಾಗಿತ್ತು.

ಸುಮಾರು ಮೂರುನೂರು ಪದ್ಯಗಳ ನನ್ನ ಕಾವ್ಯಪಠನೆಗೆ ಎರಡು ಪ್ರಹರಗಳ ಕಾಲ ಹಿಡಿಯಿತಾದರೂ ಸಭೆಯಲ್ಲಿದ್ದವರು ಆಸಕ್ತಿಯಿಂದ ಕುಳಿತು ಕೇಳಿದರು.

"ಕವಿಯಾದರೆ ಸಾಲದು, ಗಮಕಕಲೆಯೂ ತಿಳಿದಿರಬೇಕು." ರಾಜಾಶ್ರಯ ಜನಪ್ರಿಯತೆಗಳನ್ನು ಗಳಿಸಲು ಎರಡೂ ಅಗತ್ಯ ಎಂದು ಗುರುಗಳು ಹೇಳುತ್ತಿದ್ದುದ್ದು ಆಗ ನನಗೆ ನೆನಪಾಯಿತು. ಗಮಕಿಯಲ್ಲದ ಕವಿಯ ಕಾವ್ಯ ವಿಧವೆಯಾದ ಹೆಣ್ಣಿನಂತೆ ಮೂಲೆಗುಂಪಾಗುವ ಸಂಭವವೇ ಹೆಚ್ಚು.

ಈ ಸಂದರ್ಭಕ್ಕಾಗಿಯೇ ನಾನು ರಚಿಸಿದ್ದ ಅತಿಶಯಧವಳ ವೀರನಾರಾಯಣ ನೃಪತುಂಗ ಮಹಾರಾಜರ ಸ್ತುತಿರೂಪವಾದ ಎರಡು ಪದ್ಯಗಳನ್ನು ನಾನು ಶ್ರುತಿಮಧುರ

ವಾದ ರಾಗಾಲಾಪದಂತೆ ಸ್ಫುಟವಾಗಿ ಸುಂದರವಾಗಿ ಪಠಿಸಿದಾಗ ಸಭಾಸದರು ಕರತಾಡನ ಮಾಡಿ ತಮ್ಮ ಮೆಚ್ಚುಗೆಯನ್ನು ಪ್ರಕಟಿಸಿದರು. ಉತ್ತೇಜಿತನಾಗಿ ಆತ್ಮವಿಶ್ವಾಸದಿಂದ ನಾನು ಕಾವ್ಯಪಠನೆಗೆ ತೊಡಗಿದೆ.

ಓದುತ್ತಿದ್ದಂತೆ ನಾನು ಶ್ರೋತೃಗಳ ಪ್ರತಿಕ್ರಿಯೆಯನ್ನು ಸಾವಧಾನದಿಂದ ಗಮನಿಸಿದೆ. ಈ ಅಪರಿಚಿತ ಕವಿಯಾರು? ಸಭೆಯಲ್ಲಿ ತನ್ನ ಕಾವ್ಯವನ್ನು ಪಠಿಸುವ ಅವಕಾಶ ಇವನಿಗೆ ದೊರಕಿದ್ದು ಹೇಗೆ? ಈ ಸಮಸ್ಯೆ ಸಭೆಯಲ್ಲಿ ಕೆಲವರನ್ನು ಚಕಿತ ಗೊಳಿಸಿತ್ತೆಂಬುದನ್ನು ಅಧಿಕಾರಸ್ಥಾನಗಳಲ್ಲಿದ್ದವರ ಮುಖಭಂಗಿಯಿಂದ, ಸಭೆಯಲ್ಲಿ ಮೂಡಿದ್ದ ಸಾಂಪ್ರದಾಯಿಕ ಮೌನದಿಂದ ನಾನು ತಿಳಿದೆ.

ಮೊದಲನೆಯ ಪರಿಚ್ಛೇದದಲ್ಲಿ ಕಾವ್ಯದೋಷಗಳ ವಿಚಾರಬಂದಾಗ ಸಭೆಯಲ್ಲಿದ್ದ ಪಂಡಿತ ವರ್ಗದ ಕಿವಿ ನಿಮಿರಿತು. ನಿದರ್ಶನಕ್ಕಾಗಿ ಯಾರ ಕಾವ್ಯಗಳಿಂದ ಪದ್ಯಗಳನ್ನು ಆರಿಸಿಕೊಂಡಿದ್ದಾನೆ? ಅವರಲ್ಲಿ ಕೆಲವರಾದರೂ ತಮ್ಮನ್ನು ತಾವೇ ಪ್ರಶ್ನಿಸಿಕೊಂಡಿರ ಬೇಕು. ವ್ಯಂಗ್ಯದ ಕಿಡಿ ಕಣ್ಣಿಂದ ಕಣ್ಣಿಗೆ ಹಾರಾಡಿರಬೇಕು. ಕಾವ್ಯದೋಷಕ್ಕಾಗಿ ಆರಿಸಿದ ಪದ್ಯಗಳು ನನ್ನ ರಚನೆಯೇ ಎಂಬುದ ಅರಿವಾದಾಗ ಪಂಡಿತ ವರ್ಗದ ಅಸಮಾಧಾನ ಮೆಚ್ಚುಗೆಯಲ್ಲಿ ಪರಿಣಮಿಸಿತು.

ಕಾರಕದೋಷಗಳನ್ನು ವಿವರಿಸುವ ಪದ್ಯಗಳನ್ನು ಓದಿದಾಗ ಒಬ್ಬಿಬ್ಬ ಪಂಡಿತರ ದೃಷ್ಟಿ ನೇರವಾಗಿ ನನ್ನ ಕಡೆಗೆ ತಿರುಗಿ, "ಈ ಶಾಸ್ತ್ರ ವಿಚಾರಕಾವ್ಯವನ್ನು ಕೆಡಿಸಿದೆ" ಎಂದು ಹೇಳುವಂತಿತ್ತು.

ಮೊದಲ ಪರಿಚ್ಛೇದದ ಪಠನೆ ಮುಗಿದಾಗ ಉದ್ದೇಶಪೂರ್ವಕವಾಗಿ ನಾನು ಕೆಲವು ಕ್ಷಣಗಳು ಮೌನವಾಗಿ ನಿಂತು ಪ್ರಭುಗಳಿಗೆ ವಂದಿಸಿದೆ. ಇದು ಸಭೆಯ ಸಂಪ್ರದಾಯ ವೆಂದೂ ಪ್ರಭುಗಳು ಮೆಚ್ಚಿ ಇಂಗಿತಮಾಡಿದಾಗ ಮಾತ್ರವೇ ನಾನು ಪಠನೆಯನ್ನು ಮುಂದುವರಿಸಬೇಕೆಂದೂ ಕವೀಶ್ವರ ಮೊದಲೆ ತಿಳಿಸಿದ್ದ. ನನ್ನ ಅದೃಷ್ಟದ ಕುದುರೆ ಈ ಅಡಚಣೆಯನ್ನು ದಾಟಿ ಮುಂದೋಡುವುದೇ ಅಥವಾ ಮುಗ್ಗರಿಸಿ ಬೀಳುವುದೇ ಎಂದು ಚಿಂತಿಸಿ ನಾನು ಕಣ್ಣುಗಳನ್ನು ಮುಚ್ಚಿದೆ.

ಪ್ರತೀಹಾರಿಯ ದಂಡ ನೆಲವನ್ನು ಕುಟ್ಟಿದ ದನಿ ನನ್ನನ್ನು ಎಚ್ಚರಿಸಿತು. ಕಣ್ಣು ಗಳನ್ನು ತೆರೆದೆ, ಪ್ರಭುಗಳು ನನ್ನ ಕಡೆ ಮಿದುನಗೆ ಬೀರಿ ಪಠನೆ ಮುಂದುವರಿಯುವಂತೆ ಸನ್ನೆಮಾಡಿದರು.

ಶಬ್ದಾಲಂಕಾರಗಳನ್ನು ನಿರೂಪಿಸುವ ಎರಡನೆಯ ಪರಿಚ್ಛೇದ "ಕವಿಮಾರ್ಗ"ದ ನೀರಸ ಭಾಗವೆಂಬುದು ನನಗೆ ತಿಳಿದಿತ್ತು. ಯಮಕಕ್ಕಾಗಿ ನಾನು ರಚಿಸಿದ ನಿದರ್ಶನ ಪದ್ಯಗಳು ಅರ್ಥಪುಷ್ಟಿಯಿಲ್ಲದೆ ವ್ಯರ್ಥವಾಗಬಹುದಾದ ಸಂಭವವಿತ್ತು, ಈ ಕಾರಣದಿಂದ ಆ ಭಾಗದ ಪದ್ಯಗಳನ್ನು ಬಿಡಲು ಕವೀಶ್ವರನೂ ಸೂಚಿಸಿದ್ದ. ಕೃತಿಯ ಸಮಗ್ರತೆಗೆ ಭಂಗವಾಗಬಹುದೆಂದು ನಾನು ಅದಕ್ಕೊಪ್ಪಿರಲಿಲ್ಲ. ಪ್ರಾಸವಿಚಾರ, ದಕ್ಷಿಣೋತ್ತರ ಮಾರ್ಗಗಳ ನಿರೂಪಣೆ, ಈ ಭಾಗಗಳನ್ನು ಮೆಚ್ಚಿ ಪಂಡಿತರು ಕರತಾಡನ ಮಾಡಿದರು.

ಆದರಿಂದಾಗಿ ಸಭೆಯಲ್ಲಿ ಉದ್ಭವಿಸಿದ ಉತ್ತೇಜಿತ ವಾತಾವರಣವನ್ನು ಕೆಡಿಸದಿರಲು ಕವೀಶ್ವರನ ಸಲಹೆಯಂತೆ ಯಮಕ ವಿಭಾಗವನ್ನು ಬಿಟ್ಟು ಮೂರನೆಯ ಪರಿಚ್ಛೇದದ ಪಠನೆಗೆ ಆರಂಭಿಸಿದೆ.

"ಕವಿಮಾರ್ಗ"ದ ಕೊನೆಯ ಪರಿಚ್ಛೇದ ಕಾವ್ಯದೃಷ್ಟಿಯಿಂದ ಮೌಲಿಕವೂ ಸುಂದರವೂ ಆದದ್ದೆಂದು ನನ್ನ ವಿಶ್ವಾಸ. ಶ್ರೋತೃಗಳ ಪ್ರತಿಕ್ರಿಯೆ ಇದನ್ನು ದೃಢ ಪಡಿಸಿತು. ಲಕ್ಷ್ಯಲಕ್ಷಣಗಳೆರಡನ್ನೂ ಒಂದೇ ಪದ್ಯದಲ್ಲಿ ಹೇಳಿರುವುದು ಇಲ್ಲಿಯ ವೈಶಿಷ್ಟ್ಯ. ಉಪಮಾಲಂಕಾರದ ಎಲ್ಲ ಪ್ರಕಾರಗಳನ್ನೂ ನಿರೂಪಿಸುವ ಪದ್ಯಗಳನ್ನು ಸಭೆಯಲ್ಲಿದ್ದವರು ಆಸಕ್ತಿಯಿಂದ ಕೇಳಿ ತಲೆದೂಗಿದರು. ಮುಂದೆ ಈ ಪದ್ಯಗಳು ಜನಪ್ರಿಯವಾಗಿ ಕಲಾವಿದೆ ರಸಿಕ ಮೊನೆಗಾರರ ಬಾಯಲ್ಲಿ ಚಾಟು ಪದ್ಯಗಳಂತೆ ನಲಿದದ್ದೂ ಉಂಟು.

ಪಠನೆ ಮುಗಿದಂತೆ ಪಸಾಯಿತರು ನನ್ನನ್ನು ಪ್ರಭುಗಳ ಹತ್ತಿರ ಕರೆದುಕೊಂಡು ಹೋದರು. ಫಲಪುಷ್ಪ ವಸನ ಭೂಷಣಗಳಿಂದ ತುಂಬಿದ ಎರಡು ಹರಿವಾಣಗಳನ್ನು ಪ್ರಭುಗಳು ಕೈಮುಟ್ಟಿ ನನಗೆ ಕೊಡಿಸಿದರು.

* * *

ಆ ಮೇಲಿನ ಮೂರು ವಾರಗಳು ನನ್ನ ಜೀವಿತದಲ್ಲಿ ಪರ್ವ ದಿನಗಳು. ಆ ಅವಧಿಯಲ್ಲಿ ರಾಷ್ಟ್ರಕೂಟ ಚಕ್ರವರ್ತಿ ನೃಪತುಂಗ ಮಹಾರಾಜರು ಎರಡುಸಾರಿ ನನಗೆ ಪ್ರತ್ಯೇಕ ಸಂದರ್ಶನ ದಯಪಾಲಿಸಿದರು. ಅವುಗಳನ್ನು ವಿವರಿಸುವ ಮುನ್ನ ಸಭೆ ನಡೆದ ಮರುದಿನದ ಘಟನೆಯೊಂದನ್ನು ಪ್ರಸ್ತಾಪಿಸುತ್ತೇನೆ.

ಆ ದಿನ ನಾನು ಪ್ರಾತಃಕೃತ್ಯಗಳನ್ನು ಮುಗಿಸಿಕೊಂಡು ಅಧ್ಯಯನದ ಕೊಟಡಿಯಲ್ಲಿ ಕುಳಿತ್ತಿದ್ದಂತೆ ಅಪರಿಚಿತರಿಬ್ಬರು ಹಾರತುರಾಯಿಗಳನ್ನು ಹಿಡಿದು ಅಲ್ಲಿಗೆ ಬಂದರು.

ಅವರಲ್ಲಿ ಹಿರಿಯನು ನಮಸ್ಕಾರಮಾಡಿ "ನಾವು ಮಾನ್ಯಖೇಟನಗರದ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಕಾರ್ಯದರ್ಶಿಗಳು. ರಾಜಸಭೆಯಲ್ಲಿ ನಿಮ್ಮ ಕಾವ್ಯಕ್ಕೆ ದೊರಕಿದ ಸನ್ಮಾನದ ಸುದ್ದಿ ಕೇಳಿ ನಿಮ್ಮನ್ನು ಅಭಿನಂದಿಸಲು ಬಂದಿದ್ದೇನೆ. ನೀವು ರಚಿಸಿರುವ 'ಚಂದ್ರಪ್ರಭಾ' ಕಾವ್ಯದ ಪ್ರಥಮ ವಾಚನ ನಮ್ಮ ಸಂಘದ ಸಭಾ ಭವನದಲ್ಲಿ ನಡೆಯಬೇಕು. ನಮ್ಮ ಗೌರವಸೂಚಕವಾಗಿ ಇವುಗಳನ್ನು ಒಪ್ಪಿಸಿಕೊಳ್ಳಿ"

—ಎಂದು ನುಡಿದು ಹಾರತುರಾಯಿಗಳನ್ನು ಕೊಟ್ಟನು.

"ನೀವು ಹೇಳುವ ಆ ಕೃತಿ ಇನ್ನೂ ಅಪೂರ್ಣ, ಯಾವಾಗ ಮುಗಿಸುವೆನೋ ತಿಳಿಯದು" ಎಂದೆ ನಾನು.

"ಮುಂದೆ ನೀವು ಮಾನ್ಯಖೇಟದಲ್ಲಿಯೇ ಇರುವಿರಷ್ಟೇ. ಅದು ಮುಗಿದಾಗ ಮೊದಲ ವಾಚನ ನಮ್ಮ ಸಭೆಯ ಆಶ್ರಯದಲ್ಲಿ ನಡೆಸುವುದಾಗಿ ಅಭಿವಚನ ಕೊಟ್ಟರೆ ಸಾಕು."

—ಎಂದು ಅಧ್ಯಕ್ಷ ಪುನಃ ಒತ್ತಾಯಪಡಿಸಿದ.

ಈ ಬಲವಂತ ಮಾಘಸ್ನಾನದ ಪ್ರಸಂಗದಿಂದ ತಪ್ಪಿಸಿಕೊಳ್ಳುವುದು ಹೇಗೆ ಎಂದು ನಾನು ಯೋಚಿಸುತ್ತಿದ್ದಂತೆ ಅಲ್ಲಿಗೆ ಬಂದ ಕವೀಶ್ವರ ಅಪರಿಚಿತರನ್ನು ದುರದುರ ನೋಡುತ್ತಾ,

"ಆಗಲೇ ಪ್ರಾರಂಭವಾಯಿತೆ ನಿಮ್ಮ ರಗಳೆ; ಶ್ರೀ ವಿಜಯಪಂಡಿತರು ಈಗ ನಾಲ್ಕು ತಿಂಗಳಿಂದ ಇಲ್ಲಿ ಬಿಡಾರಮಾಡಿದ್ದಾರೆ. ಇದುವರೆಗೆ ಅವರನ್ನು ಬದುಕಿದಿರಾ ಸತ್ತಿರಾ ಎಂದು ಕೇಳುವವರೂ ಇರಲಿಲ್ಲ. ಮಹಾರಾಜರ ಕೃಪಾದೃಷ್ಟಿ ಅವರ ಮೇಲೆ ಬಿದ್ದಕೂಡಲೆ ಹಸಿದ ನಾಯಿಗಳಂತೆ ಓಡಿಬಂದಿರಿ. ಅವರ ಸಹಕಾರದ ತುಣಕು ರೊಟ್ಟಿಗಾಗಿ,"

—ಎಂದು ಮೂದಲಿಸಿ ನುಡಿದ.

"ಇಂತಹ ಕವಿಪುಂಗವರು ನಗರಕ್ಕೆ ಬಂದಿರುವುದಾಗಿ ನಮಗೆ ಹೇಗೆ ತಿಳಿಯ ಬೇಕು, ಈಶ್ವರ ಪಂಡಿತರೆ, ಅಜ್ಞಾನದಿಂದಾದ ಅಪರಾಧವನ್ನು ಕರ್ತವ್ಯಲೋಪವೆಂದು ತಿಳಿಯಬೇಡಿರಿ"

—ಎಂದು ಅಧ್ಯಕ್ಷ ಅಂಗಲಾಚಿದ.

"ಈಗ ನೀವು ಹೊರಟುಹೋಗಿರಿ. 'ಚಂದ್ರಪ್ರಭಾ' ಕಾವ್ಯದ ರಚನೆ ಮುಗಿದಮೇಲೆ ಶ್ರೀ ವಿಜಯರ ಅಭಿಮತವನ್ನು ನಿಮಗೆ ತಿಳಿಸುತ್ತೇನೆ. "ನಿಮ್ಮ ಈ ಹಾರ ತುರಾಯಿಗಳಿಗೆ ಈಗ ಕಾಸಿನ ಬೆಲೆಯೂ ಇಲ್ಲ. ಅದನ್ನು ನಿರಾಕರಿಸುವುದು ಉಚಿತವಾಗಿತ್ತು. ಉದಾರಚರಿತರಾದ ಇವರು ಅದನ್ನು ಸ್ವೀಕರಿಸಿದ್ದು ನಿಮ್ಮ ಪುಣ್ಯ. ಈಗ ಅವರಿಗೆ ಇದಕ್ಕಿಂತ ಹೆಚ್ಚಿನ ತೊಂದರೆ ಕೊಡಬೇಡಿರಿ."

—ಎಂದು ಕವೀಶ್ವರ ಬಿರುದನಿಯಿಂದ ನುಡಿದಾಗ ಅವರು ಅಲ್ಲಿಂದ ಹೋದರು.

"ಈ ನಿನ್ನ ಅಸಭ್ಯ ವರ್ತನೆ, ಬಿರುನುಡಿ, ಇವುಗಳ ಅರ್ಥವೇನು?"

—ಎಂದೆ ನಾನು, ಅಪರಿಚಿತರು ಹೋದಕಡೆ ನೋಡುತ್ತಾ.

"ನೀನು ನಗರಕ್ಕೆ ಹೊಸಬನು ಶ್ರೀ ವಿಜಯ," ಕವೀಶ್ವರ ಉತ್ತರಿಸಿದ. "ಇಲ್ಲಿಯ ನಾಗರಿಕತೆಯ ಹೊಲಸು ತಿಳಿಯಬೇಕಾದರೆ ಒಂದೆರಡು ವರ್ಷಗಳಾದರೂ ಬೇಕು. ಈ ವಿದ್ಯಾವರ್ಧಿನಿ ಸಂಘ ಒಂದು ಸಮಯಸಾಧಕ ಪೊಳ್ಳು ಸಂಸ್ಥೆ. ಸಂಘದ ಬಹುಸಂಖ್ಯಾತ ಸದಸ್ಯರು ವಿದ್ಯೆಯ ಗಂಧವೇ ಇಲ್ಲದವರು. ಸಂಘದ ಅಧ್ಯಕ್ಷ ಅವರನ್ನು ತನ್ನ ಕಾರ್ಯಸಾಧನೆಗಾಗಿ ಉಪಯೋಗಿಸಿಕೊಳ್ಳುತ್ತಿದ್ದಾನೆ,"

—ಕವೀಶ್ವರ ಉತ್ತರಿಸಿದ.

"ಅಧ್ಯಕ್ಷನಾರೆಂಬುದನ್ನು ತಿಳಿಸದೆ ನೀನು ಏನೋ ಹೇಳುತ್ತಿರುವೆ," ಎಂದೆ ನಾನು.

"ಅವನು ಹೆಸರಿಗೆ ಪಂಡಿತನಾದರೂ ನಡೆಸುತ್ತಿರುವುದು ಅಶ್ವವಾಣಿಜ್ಯ. ವಿದೇಶ ಗಳಿಂದ ಕುದುರೆಗಳನ್ನು ತರಿಸಿ ಮಾರಿ ಹೆಚ್ಚು ಹಣಗಳಿಸಿದ್ದಾನೆ. ಸೈನ್ಯಕ್ಕೆ ಬೇಕಾದ

ಕುದುರೆಗಳೆಲ್ಲವನ್ನೂ ತನ್ನಿಂದಲೆ ಕೊಳ್ಳುವಂತೆ ಪ್ರಭುತ್ವದೊಡನೆ ಒಪ್ಪಂದಮಾಡಿಕೊಳ್ಳುವುದು ಈಗ ಅವನ ಪ್ರಯತ್ನ. ಲಂಚದ ಆಸೆಯಿಂದ ಅಶ್ವಾಧ್ಯಕ್ಷ ಅದಕ್ಕೊಪ್ಪುತ್ತಿಲ್ಲ. ಈ ವಿಚಾರಗಳನ್ನು ಮಹಾರಾಜರ ಕಿವಿ ಮುಟ್ಟಿಸುವ ಕಾರ್ಯದಲ್ಲಿ ನಿನ್ನ ನೆರವು ಕೋರಲು ಅವನು ಇಲ್ಲಿಗೆ ಬಂದದ್ದು. ನಾನು ಬರುವುದು ತಡವಾಗಿದ್ದರೆ ಈ ವಿಚಾರವೆತ್ತಿ ಲಂಚದ ಮುಂಗಡವಾಗಿ ಐನೂರು ಹೊನ್ನುಗಳ ಜಾಳಿಗೆಯನ್ನೂ ನಿನಗೆ ಕೊಡುತ್ತಿದ್ದ."

"ಪ್ರಭುಗಳ ಪರಿಚಯವೇ ಇಲ್ಲದ ನನ್ನಿಂದ ಆ ಕೆಲಸ ಸಾಧ್ಯವೆ?"

"ಸಾಧ್ಯವೆಂದು ತಿಳಿದಿದ್ದಾನೆ ಧನಪಿಶಾಚ ಹಿಡಿದ ಆ ಅವಿವೇಕಿ. ಅರಮನೆಯ ಊಳಿಗದವರಿಗಿಂತ ನಗರಕ್ಕೆ ಹೊಸಬನಾದ ಕವಿಯ ಮಾತಿಗೆ ಮಹಾರಾಜರು ಬೆಲೆಕೊಡವರೆಂದು ಅವನ ನಂಬಿಕೆ."

"ಅಧ್ಯಕ್ಷನಾಯಿತು. ಇನ್ನು ಕಾರ್ಯದರ್ಶಿ?"

"ಅವನೊಬ್ಬ ದಲ್ಲಾಳಿ. ರಾಜಾನುಗ್ರಹ ಪಾತ್ರನಾದ ನಿನಗೆ ನಗರದಲ್ಲಿ ವಾಸಕ್ಕೊಂದು ಮನೆ, ಗೃಹಾಲಂಕಾರ ವಸ್ತುಗಳು, ಪರಿಚಾರಕರು, ಸೇವೆಗೆ ಒಬ್ಬ ತರುಣ ದಾಸಿ ಮುಂತಾದವನ್ನು ಅಗ್ಗದ ಬೆಲೆಯಲ್ಲಿ ನಿಮಗೆ ಒದಗಿಸುವುದಾಗಿ ಹೇಳಿ ಒಂದೇ ವಾರದಲ್ಲಿ ನಿನ್ನ ಹಣವನ್ನೆಲ್ಲ ವೆಚ್ಚಮಾಡಿಸಿಬಿಡುತ್ತಾನೆ. ಈ ಭ್ರಷ್ಟಾಚಾರದ ಸುಳಿಯಿಂದ ನಿನ್ನನ್ನು ಉದ್ಧರಿಸಿದೆ ನಾನು."

ಕವೀಶ್ವರ ಹೇಳುವುದು ಸುಳ್ಳೆ ನಿಜವೇ ಎಂಬುದನ್ನು ತಿಳಿಯುವ ಸಾಮರ್ಥ್ಯ ನನಗಿರಲಿಲ್ಲ.

"ನಾನು ಮಾನ್ಯಖೇಟಕ್ಕೆ ಬಂದು ವಂಚಕ ಧೂರ್ತರ ಯಜ್ಞಪಶುವಾಗಿದ್ದೇನೆ ಕವೀಶ್ವರ. ನಿನ್ನ ಇಷ್ಟ ಬಂದಂತೆ ಮಾಡು," ಎಂದೆ ನಾನು.

"ನೋಡು ಶ್ರೀ ವಿಜಯ. ಮುಂದೆ ನೀನು ನಿನ್ನ ಅಂತಸ್ತಿಗೆ ತಕ್ಕಂತೆ ಇರಬೇಕಾಗುತ್ತದೆ. ಮೊದಲು ಈ ಬಿಡದಿ ಮನೆಯನ್ನು ಬಿಟ್ಟು ನಗರಮಧ್ಯದಲ್ಲಿ ಒಂದು ಪ್ರಶಸ್ತವಾದ ಮನೆಯನ್ನು ಬಾಡಿಗೆಗೆ ತೆಗೆದುಕೊಳ್ಳಬೇಕು, ಏನು ಹೇಳುವೆ?"

—ಎಂದು ನುಡಿದು ಕವೀಶ್ವರ ಅರ್ಥಗರ್ಭಿತವಾಗಿ ನನ್ನ ಮುಖ ನೋಡಿದ.

ಕೆಲವು ಕ್ಷಣಗಳು ಯೋಚಿಸುತ್ತಿದ್ದು ನಿರ್ಧಾರಕ ಕಂಠದಿಂದ ನಾನು ನುಡಿದೆ! "ಪುಕ್ಕಟೆ ದೊರಕಿರುವ ಈ ಬಿಡದಿ ಮನೆಯನ್ನು ಸದ್ಯಕ್ಕೆ ಬಿಡುವ ಇಚ್ಛೆ ನನಗಿಲ್ಲ. ನಗರದ ಮಧ್ಯಪ್ರದೇಶಕ್ಕಿಂತ ಈ ಪ್ರಶಾಂತಸ್ಥಳ ಕಾವ್ಯರಚನೆಗೆ ಅನುಕೂಲವಾಗಿದೆ. ಮೇಲಾಗಿ ಮನೆಮಾಡಿ ಪರಿಚಾರಕರ, ದಾಸದಾಸಿಯರ ಬಲೆಯಲ್ಲಿ ಬೀಳುವುದು ವನಪಶುವಿನಂತೆ ಸ್ವತಂತ್ರ ಜೀವಿಯಾದ ನನಗೆ ಸರ್ವಥಾ ಇಚ್ಛೆಯಿಲ್ಲ."

ನನ್ನ ಮಾತುಗಳನ್ನು ಕೇಳಿ ಕವೀಶ್ವರ ಗಹಗಹಿಸಿ ನಗುತ್ತಾ,

"ನಿನ್ನನ್ನುಪರೀಕ್ಷಿಸಲು ಈ ಸಲಹೆ ಕೊಟ್ಟೆ ಶ್ರಿ ವಿಜಯ. ರಾಜಧಾನಿಯ ಅರ್ಥಹೀನ, ಗೊಂದಲಮಯ ವ್ಯರ್ಥ ಜೀವನಕ್ಕೆ ನಿನ್ನನ್ನು ತಳ್ಳುವ ಇಚ್ಛೆ ನನಗಿಲ್ಲ." ಎಂದನು.

ಇಷಾದ ಮರುದಿನ ಪ್ರಭುಗಳ ಆಹ್ವಾನ ನನಗೆ ಮುಟ್ಟಿತು. ಸನ್ಮಾನವಾಗಿ ನನಗೆ ಕೊಟ್ಟಿದ್ದ ಪೋಷಾಕುಗಳನ್ನು ಧರಿಸಿ ಗೊತ್ತಾಗಿದ್ದ ಸಮಯಕ್ಕೆ ಮೊದಲೇ ಕವೀಶ್ವರನನ್ನು ಕರೆದುಕೊಂಡು ಅರಮನೆಯ ಚಾವಡಿಗೆ ಹೋದೆ. ಅಲ್ಲಿ ತುಸು ಹೊತ್ತು ಕುಳಿತಿದ್ದ ಬಳಿಕ ಪ್ರತೀಹಾರಿ ನಮ್ಮನ್ನು ಅಂತಃಗೃಹದ ಅತಿಥಿಶಾಲೆಗೆ ಕರೆದುಕೊಂಡು ಹೋಗಿ ಸುಖಾಸನಗಳಲ್ಲಿ ಕುಳ್ಳಿರಿಸಿದ.

ಪ್ರಭುದರ್ಶನಕ್ಕಾಗಿ ಕಾಯುತ್ತಿದ್ದಂತೆ ಕವೀಶ್ವರ ಪಿಸುದನಿಯಲ್ಲಿ, "ಒಂದು ಸಂದರ್ಭದಲ್ಲಿ ಇಂದ್ರನನ್ನು ಕಾಣಲು ಬೃಹಸ್ಪತಿ ನೂರು ವರ್ಷಗಳ ಕಾಲ ಕಾಯ ಬೇಕಾಯಿತೆಂದು ಪುರಾಣ ಕಥೆ. ವಿವೇಕಬೃಹಸ್ಪತಿಯನ್ನು ನೋಡಲು ಅರ್ಧತಾಸಾ ದರೂ ಕಾಯದಿದ್ದರೆ ಹೇಗೆ?" ಎಂದು ನಗೆಯಾಡಿದ.

ಸಿರಿಸಂಪತ್ತು ವಿಲಾಸವೈಭವಗಳು ಮೂರ್ತಿವೆತ್ತಂತಿದ್ದ ಆ ವಿಚಿತ್ರ ವಾತಾವರಣ ದಲ್ಲಿ ನಾನು ಮೂಕನಂತೆ ಕುಳಿತಿದ್ದೆ. ಕವೀಶ್ವರನ ವಿಡಂಬಕ ನುಡಿಗಳನ್ನು ಖಂಡಿಸಿ ಉತ್ತರ ಕೊಡುವ ಇಚ್ಛೆಯಾಗಲಿ, ಉತ್ಸಾಹವಾಗಲಿ ಆಗ ನನಗಿರಲಿಲ್ಲ.

ಹೀಗೆ ಕೊಂಚ ಹೊತ್ತು ಕಳೆದಮೇಲೆ ಅವಸರದ ಪಸಾಯಿತನು ಓಡಿಬಂದು, "ಪ್ರಭುಗಳ ಸವಾರಿ ಚಿತ್ತೈಸುತ್ತಿದೆ" ಎಂದ. ನಾವು ಎದ್ದು ಕೈಕಟ್ಟಿ ನಿಂತೆವು.

ಬಿಳಿಯ ಧೋತ್ರ ಅಂಗವಸ್ತ್ರಗಳನ್ನು ಧರಿಸಿದ್ದ ಮಹಾರಾಜರು ಗಂಭೀರಗಮನ ದಿಂದ ಅತಿಥಿಶಾಲೆಗೆ ಬಂದಾಗ ನಾವು ಕೈಯೆತ್ತಿ ನಮಸ್ಕರಿಸಿ ತಲೆಬಾಗಿ ನಿಂತೆವು.

ನನ್ನ ಕಡೆಗೆ ಅನುಗ್ರಹದ ದೃಷ್ಟಿಬೀರಿ ಪ್ರಭುವರ್ಯರು "ಕುಳಿತುಕೊಳ್ಳಿರಿ ಶ್ರೀ ವಿಜಯ ಪಂಡಿತರೆ, ನಿಮ್ಮ 'ಕವಿಮಾರ್ಗ' ನಮಗೆ ಮೆಚ್ಚಿಗೆಯಾಯಿತು. ಅದನ್ನು ತಿಳಿಸುವುದಕ್ಕಾಗಿಯೇ ಕರೆಸಿಕೊಂಡೆವು," ಎಂದರು.

ಪ್ರಭುಗಳು ಆಸೀನರಾದಮೇಲೆ ಅವರ ಇಂಗಿತದಂತೆ ಎದುರಿನ ಇನ್ನೊಂದು ಆಸನದಲ್ಲಿ ನಾನು ಕುಳಿತುಕೊಂಡೆ. ಕವೀಶ್ವರ ನಿಂತೇ ಇದ್ದ. ಪ್ರಭುಗಳು ಆಜ್ಞೆಮಾಡಿ ದ್ದರೂ ಆಗಿನ ಸಭಾಪದ್ಧತಿಯಂತೆ ಅವನು ನಿಂತೇ ಇರಬೇಕಾಗುತ್ತಿತ್ತು ಎಂಬುದನ್ನು ನಾನು ಆಮೇಲೆ ತಿಳಿದೆ.

"ನೀನಾಗಿ ಮಾತಿಗೆ ಪ್ರಾರಂಭಿಸಬೇಡ. ಪ್ರಭುಗಳು ಪ್ರಶ್ನಿಸಿದಾಗ ತಲೆಬಾಗಿ ನಮ್ರತೆಯಿಂದ ಉತ್ತರ ಕೊಡಬೇಕು. ಸಭಾ ನಿಯಮಗಳಲ್ಲಿ ಸೂಜಿಯ ಮೊನೆಯಷ್ಟು. ಲೋಪವಾದರೂ ಪ್ರಭುಗಳು ಕೋಪದಿಂದ ಸಂದರ್ಶನ ಮುಗಿಸಿ ಎದ್ದುಹೋಗುವರು. ಆಮೇಲೆ ಪ್ರತೀಹಾರಿ ನಮ್ಮನ್ನು ಬಂಧಿಸಿ ದಂಡಾಧಿಕಾರಿಗಳ ಮುಂದೆ ನಿಲ್ಲಿಸುವರು" ಎಂದು ಕವೀಶ್ವರ ನನಗೆ ಮೊದಲೇ ಎಚ್ಚರಿಕೊಟ್ಟಿದ್ದ ಕಾರಣ ನಾನು ಪ್ರಭುಗಳ ಸಮಯವನ್ನು ನಿರೀಕ್ಷಿಸುತ್ತ ಮೌನವಾಗಿ ಕುಳಿತಿದ್ದೆ.

ಪ್ರಭುಗಳು ನುಡಿದರು, "ನಿಮ್ಮ ಕಾವ್ಯದ ಗುಣದೋಷಗಳ ವಿಮರ್ಶೆಗೆ ನಾವು ತೊಡಗುವುದಿಲ್ಲ. ಈ ಈಶ್ವರ ಕವಿ ಅದಕ್ಕೆ ಸಮರ್ಥರು. ಪರಿಷ್ಕರಣಕ್ಕೆ ಅಗತ್ಯವಾದ ಸಲಹೆಗಳನ್ನು ಅವರಿಂದ ಪಡೆಯಿರಿ. ಪಠನೆಯಲ್ಲಿ ನನ್ನ ಗಮನಕ್ಕೆ ಬಂದ ಒಂದೆರಡು

ವಿಚಾರಗಳನ್ನು ಮಾತ್ರ ಪ್ರಸ್ತಾಪಿಸುತ್ತೇನೆ. ದಂಡಿ ಭಾಮಹರನ್ನು ಕಾವ್ಯದುದ್ದಕ್ಕೂ ಅನುಸರಿಸಿದ ನೀವು ಶಬ್ದಾಲಂಕಾರವನ್ನು ವಿಸ್ತಾರವಾಗಿ ನಿರೂಪಿಸಿ ರಸವಿಚಾರವನ್ನು ಒಂದೆರಡು ಪದ್ಯಗಳಿಗೆ ಸೀಮಿತಗೊಳಿಸಿದುದೇಕೆ? ಕಾವ್ಯಂ ರಸಾತ್ಮಕಂ ಎಂಬ ಭರತ ಮುನಿಯ ವಾಕ್ಯವನ್ನು ಮರೆತಿರಾ?"

ಪ್ರಭುಗಳು ಉತ್ತರ ನಿರೀಕ್ಷಿಸಿ ನನ್ನ ಕಡೆ ತಿರುಗಿದರು. ನಾನು ನುಡಿದೆ: "ಅವಧರಿಸಬೇಕಾಗಿ ಬೇಡುತ್ತೇನೆ. ಭರತಮುನಿ ನಾಟಕವನ್ನು ಕುರಿತು ಆ ಮಾತು ಹೇಳಿದ್ದಾನೆ. ಕಾವ್ಯಸೌಂದರ್ಯಕ್ಕೆ ರಸ ಅಗತ್ಯವಾದರೂ ಕಾವ್ಯದ ಒಂದೊಂದು ಪದ್ಯ ದಲ್ಲಿಯೂ ರಸೋತ್ಪಾದನೆಯನ್ನು ತುಂಬುವುದು ಮಹಾಕವಿಗೂ ಸಾಧ್ಯವಲ್ಲ. ಇದನ್ನು ತಿಳಿದೇ ದಂಡಿಭಾಮಹರು ರಸವನ್ನು ಅಲಂಕಾರವೆಂದು ಪರಿಗಣಿಸಿದ್ದಾರೆ. ನಾನು ಅವರ ದಾರಿಯಲ್ಲಿ ನಡೆದಿದ್ದೇನೆ."

ಪ್ರಭುಗಳ ಮುಖದಲ್ಲಿ ಅಸಮಾಧಾನದ ನೆರಳು ಸುಳಿಯಿತು. ನಾನು ಭಯದಿಂದ ನಡುಗಿದೆ. ಕವೀಶ್ವರ ನನ್ನ ಕಡೆಗೆ ಎಚ್ಚರಿಕೆಯ ದೃಷ್ಟಿ ಬೀರಿದ. "ಪ್ರಥಮ ಚುಂಬನೇ ದಂತಭಗ್ನ" ಎಂದಾಗದಿರಲಿ ಸಂದರ್ಶನ ಎಂದು ನಾನು ಮಾನಸಿಕವಾಗಿ ಅದೃಷ್ಟ ಮಹಾ ಚೇತನಕ್ಕೆ ಕೈಮುಗಿದೆ.

ಕ್ಷಣಕಾಲಾನಂತರ ಪ್ರಭುಗಳು ಮತ್ತೆ ನುಡಿದರು: "ರಸವು ಕಾವ್ಯದ ಆತ್ಮ, ಅದು ಸಾವಿರ ಪದ್ಯಗಳ ಮಹಾ ಕಾವ್ಯವಾಗಿರಲಿ, ನಾಲ್ಕು ಸಾಲಿನ ಮುಕ್ತಕವಾಗಿರಲಿ. ನೀವು ಈ ವಿಚಾರದಲ್ಲಿ ವಾಮನ ಉದ್ಭಟರ ಅಭಿಪ್ರಾಯವನ್ನು ಪರಿಶೀಲಿಸಿ ರಸ ವಿಚಾರವನ್ನು ವಿಸ್ತರಿಸಬೇಕಾಗುವುದು."

"ಪ್ರಭುಗಳ ಆಜ್ಞೆಯಂತೆ ಆ ಭಾಗವನ್ನು ಪರಿಷ್ಕರಿಸುತ್ತೇನೆ"

—ಎಂದು ನಾನು ಬಿನ್ನವಿಸಿದೆ.

"ನೀವು ಈ ಕೃತಿಯನ್ನು ರಚಿಸುತ್ತಿರುವುದು ಕನ್ನಡಿಗರಿಗಾಗಿ, ಅಂದಮೇಲೆ ಕಾವ್ಯಾರಂಭದಲ್ಲಿ ಕನ್ನಡನಾಡು ನುಡಿಗಳನ್ನು ಕುರಿತ ಅವತರಣಿಕೆ ಅಗತ್ಯ. ಅದರ ರಚನೆ ಯಲ್ಲಿ ಈಶ್ವರ ಕವಿಯ ಸಹಾಯ ಪಡೆಯಿರಿ."

"ಪ್ರಭುಗಳ ಆಜ್ಞೆ."

"ಈಚೆಗೆ ಕಾಶ್ಮೀರದ ಪಂಡಿತರು ಕಾವ್ಯಕ್ಕೆ ಶೋಭಾಕರವೆಂದು ಹೇಳುವ ಧ್ವನಿ ವಿಚಾರವನ್ನೂ ಪ್ರಸ್ತಾಪಿಸಿದರೆ ಒಳ್ಳೆಯದು."

"ಆಜ್ಞೆ."

"ಈ ಸಲಹೆಗಳಂತೆ ಕೃತಿಯನ್ನು ಪರಿಷ್ಕರಿಸಿರಿ. ಅದು ಕನ್ನಡ ಕವಿಗಳಿಗೆ 'ರಾಜ' ಮಾರ್ಗದಂತೆ ಸುಗಮವಾಗುವುದು."

"ಆಜ್ಞೆ. ಈ ಸಲಹೆಗಳಿಗಾಗಿ ನಾನು ಪ್ರಭುಗಳಿಗೆ ಆಭಾರಿ. ಈ ವಿಚಾರವಾಗಿ ನನ್ನ ಮನವಿಯೊಂದಿದೆ."

—ಸಮಯಸ್ಫೂರ್ತಿಯಿಂದ ನುಡಿದೆ ನಾನು.

" ನಿಮ್ಮ ಬಿನ್ನಪವೇನು ಹೇಳಿರಿ."

ಪ್ರಭುಗಳ ಮುಖ ಪ್ರಸನ್ನತೆ ತಳೆದಿತ್ತು.

" ಕೃತಿಯ ಹೆಸರನ್ನು " ಕವಿರಾಜಮಾರ್ಗ " ಎಂದು ಪರಿವರ್ತಿಸಲು ಅನುಮತಿ ಬೇಡುತ್ತೇನೆ."

—ಕೈಮುಗಿದು ಬಿನ್ನವಿಸಿಕೊಂಡೆ.

" ಆಗಬಹುದು "

—ಎಂದು ನುಡಿದ ಪ್ರಭುಗಳು ಎದ್ದರು.

ಸಂದರ್ಶನ ಮುಗಿಯಿತು.

ಕಾಲಮಾನದಿಂದ ಸಂದರ್ಶನದ ಪೂರ್ಣಾವಧಿ ಅಲ್ಪವಾಗಿ ಕಂಡರೂ ಅದು ನನ್ನ ಮೇಲೆ, ನನ್ನ ಕಾವ್ಯದ ಮೇಲೆ ಹೆಚ್ಚು ಪ್ರಭಾವಬೀರಿತು.

ರಾಜ್ಯಕಾರ್ಯಗಳ ಒತ್ತಡ, ಪ್ರಭು—ಸಾಮಾನ್ಯರ ನಡುವೆ, ಅವನು ಕವಿಯೇ ಆಗಿರಲಿ, ಸಮಾಜ ನಿಯಮಗಳಂತೆ ಇರುವ ಅಂತರ, ರಾಜೋಚಿತವಾದ ಹಮ್ಮು ಬಿಮ್ಮು, ನಮ್ಮ ನಡುವೆ ದಾಟಲಾಗದ ಅಡ್ಡ ತೆರೆಯೆಂದು ತಿಳಿದೆ.

" ಪ್ರಭವಃ ಸ್ಮಯದೂಷಿತಃ " ಎಂಬ ಭರ್ತೃಹರಿಯ ಉದ್ಗಾರ ಆಗ ನನಗೆ ಅರ್ಥ ವಾಯಿತು. ಅಧಿಕಾರಾರೂಢರನ್ನು ಸಾಮಾನ್ಯ ಮಾನವರಿಂದ ಪ್ರತ್ಯೇಕಿಸುವ ಅಹಂಕಾರ ಮೂಲವಾದ ರಕ್ಷಣಾಕೋಶವೇ " ಸ್ಮಯ"; ಹಮ್ಮುಬಿಮ್ಮುಗಳಿಂದ ರಚಿಸಲ್ಪಟ್ಟ ಕವಚವನ್ನು ಧರಿಸಿದ ಪ್ರಭು, ಲೋಕವನ್ನು ಮಾತ್ರವಲ್ಲ, ತನ್ನನ್ನು ತಾನೇ ಮರೆಯು ತ್ತಾನೆ.

ಕಾಳಿದಾಸ ಭವಭೂತಿಗಳಂತಹ ಮಹಾಕವಿಗಳು ಮತ್ತೆ ಹುಟ್ಟಬಹುದು. ಆದರೆ ಭೋಜನಂತಹ ಸಹೃದಯನಾದ ಪ್ರಭು ಹುಟ್ಟುವುದು ಕಲ್ಪಾಂತಕ್ಕೆ.

* * *

ಆಮೇಲೆ ನಾಲ್ಕು ವಾರಗಳ ಕಾಲ ನನ್ನ ಕೃತಿಯ ಪರಿಷ್ಕರಣಕಾರ್ಯ ನಡೆಯಿತು. ಕನ್ನಡ ಜನಪದದ ವಿಸ್ತಾರವನ್ನೂ, ಆ ನಾಡವರ ಗುಣಗಳನ್ನೂ ವರ್ಣಿಸುವ ಅವತರಣಿಕೆ ಯನ್ನು ಈಶ್ವರಕವಿ ರಚಿಸಿ ಮೊದಲನೆಯ ಪರಿಚ್ಛೇದಕ್ಕೆ ಸೇರಿಸಿದನು.

" ಕುರಿತೋದದೆಯುಂ ಕಾವ್ಯಪ್ರಯೋಗ ಪರಿಣತಮತಿಗಳ್ " ಎಂಬ ಪದ್ಯಭಾಗ ವನ್ನು ಓದಿದಾಗ ನಾನು " ಇದು ನಿನ್ನ ಆತ್ಮಪ್ರಶಂಸೆಯಂತೆ ಕಾಣುತ್ತದೆ ಕವೀಶ್ವರ" ಎಂದು ಪರಿಹಾಸಮಾಡಿದೆ.

" ನನ್ನಂತಹ ಆಶಾವಾದಿ ಆಶು ಕವಿಗಳು ಈ ಹೊಗಳಿಕೆಯಿಂದ ತೃಪ್ತಿಪಡೆದರೆ ಅದರಿಂದ ನಿನಗಾದ ನಷ್ಟವೇನು, ಶ್ರೀ ವಿಜಯ ! " ಎಂದು ನಗುತ್ತಲೆ ಕವೀಶ್ವರ ಉತ್ತರಿಸಿದ. " ನಿನ್ನಂತೆ ನಾನು ಪಂಡಿತನಲ್ಲ. ಗುರುಗಳ ಹತ್ತಿರ ಶಾಸ್ತ್ರಾಭ್ಯಾಸ ಮಾಡಲಿಲ್ಲ. ಆದರೂ ಅಮೋಘವರ್ಷಾನುಮತವಾದ ಈ 'ಅಮೋಘ' ಕೃತಿಯ

ರಚನೆಯಲ್ಲಿ ಭಾಗವಹಿಸುವ ಅವಕಾಶ ನನಗೆ ದೊರೆಯಿತು. ತಾವು ಕೃತಿರಚನೆಮಾಡ ದಿದ್ದರೂ ಸಹ ಕವಿಗಳ ಕೃತಿರಚನೆಯಲ್ಲಿ ಸಹಕರಿಸುವ ಸಹೃದಯತೆ ಈ ನಾಡವರ ವಿಶೇಷಗುಣ."

ಈ ಬಗೆಯ ಅತಿಶಯೋಕ್ತಿಗಳಿಂದ ಜಾಣರಲ್ಲದವರಲ್ಲಿ ಆಗಬಹುದಾದ ಅತಿ ವಿಶ್ವಾಸದ ಅನರ್ಥಗಳನ್ನು ತಪ್ಪಿಸಲು ಕಾವ್ಯದೋಷ ಕಾರಕದೋಷ ಅವಧಾರಣ ದೋಷಗಳನ್ನು ಕುರಿತ ಕೆಲವು ಹೊಸ ಪದ್ಯಗಳನ್ನು ಅಲ್ಲಲ್ಲಿ ಸೇರಿಸಿದೆ.

ಕವೀಶ್ವರನ ಸಲಹೆಯಂತೆ ಅರಮನೆಯ ಸರಸ್ವತೀ ಭಂಡಾರದಿಂದ ಉದ್ಭಟನ "ಭಾಮಹ ವಿವರಣೆ," "ಕಾವ್ಯಾಲಂಕಾರ ಸಂಗ್ರಹ," ವಾಮನನ "ಕಾವ್ಯಾಲಂಕಾರ ಸೂತ್ರ" ಈ ಗ್ರಂಥಗಳನ್ನು ತರಿಸಿಕೊಂಡು ಓದಿದೆ. ಸೂತ್ರಗಳನ್ನು ಸರಳ ಗದ್ಯದಲ್ಲಿ ರಚಿಸಿ, ಉದಾಹರಣ ಪದ್ಯಗಳನ್ನು ಹಿಂದಿನ ಕವಿಗಳ ಕಾವ್ಯನಾಟಕಗಳಿಂದ ಆರಿಸಿ ಕೊಳ್ಳುವ ಹೊಸ ಪದ್ಧತಿ ವಾಮನನ "ಕಾವ್ಯಾಲಂಕಾರಸೂತ್ರ"ಕ್ಕೆ ಹೆಚ್ಚು ರಮ್ಯತೆ ಯನ್ನು ತಂದಿದೆ. ದಂಡಿಭಾಮಹರು ಉದಾಹರಣ ಪದ್ಯಗಳನ್ನು ತಾವೇ ರಚಿಸುವ ಸಂಪ್ರದಾಯದ ಮಾರ್ಗವನ್ನು ತ್ಯಜಿಸಿ, ತಮ್ಮ ಸಮಕಾಲೀನ ಕವಿಗಳಿಂದ ಉದಾಹರಣ ಪದ್ಯಗಳನ್ನು ಆರಿಸಿಕೊಂಡಿದ್ದರೆ, ನಷ್ಟಪ್ರಾಯವಾದ ಎಷ್ಟೋ ಕೃತಿಗಳ ಹೆಸರುಗಳಾದರೂ ಉಳಿಯುತ್ತಿತ್ತು ಎಂದುಕೊಂಡೆ.

ಇದರ ಪರಿಣಾಮವಾಗಿ ನಾನು ರಚಿಸಿದ ಅನೇಕ ಉದಾಹರಣ ಪದ್ಯಗಳನ್ನು ತೆಗೆದುಹಾಕಿ ಆಗ ಪ್ರಸಿದ್ಧರಾಗಿದ್ದ ವಿಮಲ, ಉದಯನ, ಚಂದ್ರಕವಿ, ಲೋಕಪಾಲ ಮುಂತಾದವರ ಕೃತಿಗಳಿಂದ ಉದಾಹರಣ ಪದ್ಯಗಳನ್ನು ಆರಿಸಿಕೊಂಡೆ. ಈ ಕಾರ್ಯದಲ್ಲಿ ಈಶ್ವರ ಕವಿ, ಅರ್ಥಾತ್ ಕವೀಶ್ವರನಿಂದ ನನಗಾದ ಸಹಾಯ ಅಷ್ಟಿಷ್ಟಲ್ಲ. ಈ ಪರಿಷ್ಕರಣದ ಜಾಳಿಗೆಗೆ ಸಿಕ್ಕು ಉಳಿದದ್ದು ಲಕ್ಷ್ಯಲಕ್ಷಣಗಳಿಂದ ಉಪಮಾಲಂಕಾರದ ಉದಾಹರಣ ಪದ್ಯಗಳು ಮಾತ್ರ.

ನೃಪತುಂಗ ಮಹಾರಾಜರು ಕಾವ್ಯಕ್ಕೆ ಶೋಭಾಕರವೆಂದು ಹೇಳಿದ "ಧ್ವನಿ" ಪ್ರಸ್ಥಾನವೇನೆಂಬುದನ್ನು ತಿಳಿಯಲು ನಾನು ಪ್ರಯತ್ನಿಸುತ್ತಿದ್ದಾಗ ಕವೀಶ್ವರ, "ನಿನ್ನ ಕೃತಿಯಲ್ಲಿಯೆ ಅದಕ್ಕೆ ನಿದರ್ಶನವಿದೆ" ಎಂದು ನುಡಿದ.

ಪರ್ಯಾಯಾಲಂಕಾರಕ್ಕಾಗಿ ನಾನು ಆರಿಸಿದ್ದ

ನೀಮಿರ್ವರುಮನ್ನೆಗಮಿಂ
ತೀ ಮಾಳ್ಕೆಯೊಳಿನಿಸು ಪೊಳ್ತುನುಡುವುತ್ತಿರಿ ಮಾ
ನಾಮೋದ ಕುಸುಮಸಮಿತಿಯ
ನಾ ಮರಗಳೊಳಾಯ್ದುಕೊಯ್ದುಮಿಲ್ಲಿಗೆ ಬರ್ಪೆಂ

ಎಂಬ ಉದಾಹರಣ ಪದ್ಯವನ್ನು ಪಠಿಸಿ,

"ನವಪ್ರಣಯಿಗಳಿಗೆ ಅವರ ಸಖಿ ಹೇಳುವ ಮಾತುಗಳ ವಾಚ್ಯಾರ್ಥ ಲಕ್ಷ್ಯಾರ್ಥ ಗಳಿಗೂ ಮಾತುಗಳ ನಡುವೆ ಬುದ್ಧಿಗೋಚರವಾಗಿ ಮಾತ್ರವೇ ಕಾಣುವ ನಿಜಾರ್ಥಕ್ಕೂ ಅಂತರ ಇದೆಯಲ್ಲವೆ?" ಎಂದು ಪ್ರಶ್ನಿಸಿದೆ.

"ಆ ವಿವರಣೆಯನ್ನು ನಾನೇ ಕೊಟ್ಟಿದ್ದೇನೆ ತರುವಾಯದ ಪದ್ಯದಲ್ಲಿ. ನವ ಪ್ರಣಯಿಗಳಿಗೆ ಏಕಾಂತ ಮಿಳನದ ಅವಕಾಶವನ್ನು ಕಲ್ಪಿಸುವುದಕ್ಕಾಗಿ ಹೂತಿರಿಯುವ ನೆವದಿಂದ ಹೊರಗೆ ಹೊರಗೆ ಹೋಗುತ್ತಾಳೆ. ಗಿಡಗಳು ಎನ್ನದೆ "ಆ ಮರಗಳೊಳ್" ಎನ್ನುವುದರಿಂದ ಅವರಿದ್ದ ಪ್ರದೇಶ ತರುನಿಬಿಡವಾದ ಅರಣ್ಯವೆಂದೂ, "ಕುಸುಮ ಸಮಿತಿಯ" ಎಂಬ ಪ್ರಯೋಗದಿಂದ ಬಗೆಬಗೆಯ ಹೆಚ್ಚು ಹೂಗಳನ್ನು ಸಂಗ್ರಹಿಸಲು ಸುಮಾರುಕಾಲ ಹಿಡಿಯುತ್ತದೆ ಎಂಬ ಅರ್ಥವೂ ಸೂಚಿತವಾಗುತ್ತದೆ," ಎಂದು ವ್ಯಾಖ್ಯಾನಿಸಿದೆ.

"ಅಭಿಧಾವೃತ್ತಿ ಲಕ್ಷಣಾ ವೃತ್ತಿಗಳಿಂದ ಬೇರೆಯಾದ ಈ ಶಬ್ದಶಕ್ತಿಯನ್ನು ಆಲಂಕಾರಿಕರು ಏನೆಂದು ಕರೆದಿದ್ದಾರೆ?"

—ಕವೀಶ್ವರನ ಪ್ರಶ್ನೆ.

"ವ್ಯಂಗ್ಯ ಎಂದು ಕರೆಯುವುದು ರೂಢಿ. ಪರ್ಯಾಯಾಲಂಕಾರದ ಜೀವಾಳವೇ ಈ ವ್ಯಂಗ್ಯ."

"ಈ ವ್ಯಂಗ್ಯ, ಅರ್ಥಾತ್ ಶಬ್ದದ ವ್ಯಂಜಕಶಕ್ತಿಯೆಂದು ಲಾಕ್ಷಣಿಕರು 'ಧ್ವನಿ' ಎಂದು ಕರೆದಿರಬೇಕೆಂದು ನನ್ನ ಅಭಿಪ್ರಾಯ."

ಕವೀಶ್ವರನ ನಿರ್ವಚನದಲ್ಲಿ "ಸತ್ಯ"ಕ್ಕಿಂತ "ಚಮತ್ಕಾರ" ಹೆಚ್ಚಿಸಿದೆಯೆಂದು ನನಗನ್ನಿಸಿತು.

"ನಿನ್ನ ವಾದಕ್ಕೆ ಮಣಿದು ಪರ್ಯಾಯಾಲಂಕಾರಕ್ಕೆ ಧ್ವನ್ಯಾಲಂಕಾರ ಎಂದು ಹೊಸವಾಗಿ ಹೆಸರಿಡಬಹುದು. ಆದರೆ ಅದರಿಂದ ಧ್ವನಿಪ್ರಸ್ಥಾನ ಊರ್ಜಿತವಾಗುವುದಿಲ್ಲ ಕವೀಶ್ವರ. 'ಧ್ವನಿಯೇ ಕಾವ್ಯದ ಆತ್ಮ' ಎಂಬ ನವೀನ ಅಲಂಕಾರದ ವಾದವನ್ನು ದಂಡಿಭಾಮಹರು ಒಪ್ಪುವುದಿಲ್ಲ"

—ಎಂದು ಹೇಳಿ ನಾನು ಚರ್ಚೆ ಮುಗಿಸಿದೆ. ಧ್ವನಿಪ್ರಸ್ಥಾನ ನನ್ನ ಕೃತಿಗೆ ದೂರವಾಗಿ ಉಳಿಯಿತು.

ಪರಿಷ್ಕರಣ ಕಾರ್ಯ ಮುಗಿದಮೇಲೆ ಪ್ರಭುಗಳನ್ನು ಎರಡು ಸಾರಿ ಸಂದರ್ಶಿಸಿದೆ. ಪರಿಷ್ಕೃತ ಭಾಗಗಳನ್ನು ಸಮ್ಮುಖದಲ್ಲಿ ಪಠಿಸಿದೆ. ಅನಂತರ ರಾಜಾಶ್ರಯದಲ್ಲಿ ನಡೆದ ವಿದ್ವತ್‌ಸಭೆಯಲ್ಲಿ "ಕವಿರಾಜಮಾರ್ಗ" ಪ್ರಕಟವಾಯಿತು. ಪ್ರಸಿದ್ಧ ಗಮಕಿಯೊಬ್ಬರು ಕೃತಿಯ ಕೆಲವು ಭಾಗಗಳನ್ನು ಸುಶ್ರಾವ್ಯವಾಗಿ ಪಠಿಸಿದರು. ಆ ಸಂದರ್ಭದಲ್ಲಿ ನನಗೆ ದೊರಕಿದ ಸನ್ಮಾನ ಪ್ರಶಂಸೆಗಳನ್ನು ಮೂರನೆಯ ಪರಿಚ್ಛೇದದ ಕೊನೆಯಲ್ಲಿ ಸೂಚಿಸಿದ್ದೇನೆ.

'ಕವಿರಾಜಮಾರ್ಗ' ಒಬ್ಬನ ರಚನೆಯಲ್ಲ, ತ್ರಿಮೂರ್ತಿಕಲ್ಪ. ಮೂವರ ಕೈವಾಡ ಅದರಲ್ಲಿದೆ.

ನಾನು ಒಕ್ಕುಂದದಲ್ಲಿ ಪ್ರಾರಂಭಮಾಡಿ ಮಾನ್ಯಖೇಟದಲ್ಲಿ ಮುಗಿಸಿದ "ಕವಿಮಾರ್ಗ" ಅನಾವಿದ್ಧ ಶಿಲಾಖಂಡವಾಗಿ ಉಳಿಯದೆ ಸಾಣೆ ಹಿಡಿದ ವಜ್ರದಂತೆ

ಬೆಳಗಿ "ಕವಿರಾಜಮಾರ್ಗ"ವಾಗಲು ರಾಷ್ಟ್ರಕೂಟ ಚಕ್ರವರ್ತಿ ಅಮೋಘವರ್ಷ ನೃಪತುಂಗ ಮಹಾರಾಜರು ಕಾರಣರು. ಕಾವ್ಯದುದ್ದಕ್ಕೂ ಅನೇಕ ಕಡೆಗಳಲ್ಲಿ ನಾನು ಇದನ್ನು ವ್ಯಕ್ತಪಡಿಸಿದ್ದೇನೆ. ನನ್ನ ಕೃತಿಗೆ

"ಪರಿಗತನೃಪತುಂಗದೇವ ಮಾರ್ಗಾಂ
ತರಗತಬೋಧ ವಿಶೇಷ ಯಾನಪಾತ್ರಂ"

—ಎಂಬುದಕ್ಕಿಂತ ಹೆಚ್ಚಿನ "ವಿಶಿಷ್ಟ"ತೆ ಮತ್ತೊಂದಿಲ್ಲ.

ಬೆಂಗಳೂರು-19

ಗಾಡಿಯಸೀಮೆ ಚೆಲ್ವೊಗೆವ ತಾಣಮಲಂಪಿನ ಸಂತೆ ಪೆಂಪು ಸಾ
ರ್ದಾಡುವ ಭೂಮಿ ಸೌಖ್ಯದೆಡೆ ಪುಣ್ಯದಗೊತ್ತು ವಿನೋದದಾಗರಂ
ವೋಡಿಯ ಮಂಟಪಂ ಸಿರಿಯ ಪೆರ್ಚುಗೆಗೊಳ್ಮನೆ ಮುಕ್ತಿಕಾಂತೆ ಕೈ
ಗೂಡುವ ಬೀಡು ಕನ್ನಡದನಾಡು ವಿರಾಜಿಪುದೆಂತು ಬಣ್ಣಿಪೆಂ

—ಚಿಕ್ಕುಪಾಧ್ಯಾಯ

ಉಮಾಶಂಕರ

ಒಂಟಿ ಮರ

'ಪ್ರಭು ....!'

'ಏನಮ್ಮಾ ....!'

'ಅಣ್ಣಾ, ಏನು ಮಾಡ್ತಾ ಇದಾರೊ?'

'ಬಟ್ಟೆ ಹಾಕೊಳ್ತಾ ಇದಾರಮ್ಮ........!'

'ಅವರದು ಪೂಜೆ ಆಯ್ತೇನು?'

'ಹೂಂ ನಮ್ಮಾ'

'ಸ್ವಲ್ಪ ಅವರನ್ನ ಇಲ್ಲಿ ಬರೇಳ್ತೀಯಾಪ್ಪs!'

'ಹೂಂ!'

'ಪಾರ್ವತೀ!....ಕೂಗಿದೆಯಾ?' ಎಂದು ನೀಲಕಂಠಪ್ಪ ಒಳಗಡೆ ಬಂದನು.

'ಹೂಂ....ಸ್ವಲ್ಪ ಹೊರಗಡೆ ಕರಕೊಂಡು ಹೋಗ್ತೀರಾ?'

'ಬಚ್ಚಲ್ಮನೆಗೊ....ಹಿತ್ತಲ ಕಡೆಗೋ?'

'ಬಚ್ಚಲ್ಮನೆಗೇ....ವಂದ ಮಾಡ್ಬೇಕು.'

ನೀಲಕಂಠಪ್ಪ ಮಂಚದಮೇಲೆ ಮಲಗಿದ್ದ ಪಾರ್ವತಿಯ ಹತ್ತಿರ ಬಂದು ಬಾಗಿ ತನ್ನೆರಡು ನಿಡಿದಾದ ತೋಳುಗಳನ್ನು ಮುಂದಕ್ಕೆ ಚಾಚಿ, ಅವಳ ಕುತ್ತಿಗೆಯ ಕೆಳಗೊಂದು ಕೈ, ಮತ್ತೊಂದನ್ನು ಅರೆಮೇಲೆದ್ದ ಮೊಣಕಾಲುಗಳ ಮಧ್ಯೆ ಸೇರಿಸಿ ತೊಟ್ಟಿಲಲ್ಲಿ ಮಲಗಿದ ಕಂದನನ್ನು ತಾಯಿ ಎತ್ತಿ ಎದೆಗವುಚಿಕೊಳ್ಳುವಂತೆ ಅನಾಮತ್ತು ಪಾರ್ವತಿಯನ್ನು ಎತ್ತಿ ಎದೆಗವುಚಿಕೊಂಡು ಬಲವಾಗಿ ಒತ್ತಿ ಹಿಡಿದನು. ಪಾರ್ವತಿ ತನ್ನ ಎರಡೂ ಕೈಗಳನ್ನು ಬಗ್ಗಿದ ನೀಲಕಂಠಪ್ಪನ ಬೆನ್ನಿಗೆಕೊಟ್ಟು ಅವನನ್ನು ಬಲವಾಗಿ ಆತುಕೊಂಡಳು.

ಹಾಗೆ ಎತ್ತಿಕೊಂಡ ಪಾರ್ವತಿಯನ್ನು ನೀಲಕಂಠಪ್ಪ ಬಚ್ಚಲಮನೆಗೆ ಕರೆದು ಕೊಂಡು ಹೋಗಿ ಅವಳನ್ನು ಬಚ್ಚಲೊಳಗೆ ಕುಳ್ಳಿರಿಸಿ ದೀರ್ಘವಾದ ಉಸಿರೊಂದನ್ನು ಬಿಟ್ಟು ಅಲ್ಲಿಯೇ ನಿಂತು

'ಪಾರ್ವತೀ, ಇನ್ನು ಮೇಲೆ ಮೊದಲಿನಂತೆ ಸುಲಭವಾಗಿ ನಿನ್ನನ್ನು ಎತ್ತಿಕೊಳ್ಳಲು

ಸಾಧ್ಯವಿಲ್ಲ. 'ಬೆಡ್-ಪಾನ್' ಉಪಯೋಗಿಸೆಂದು ಎಷ್ಟು ಹೇಳಿದರೂ ಕೇಳುವುದಿಲ್ಲ. ಡಾಕ್ಟರು ಬೇರೆ ಹೇಳಿದ್ದಾರೆ, ಹೀಗೆ ತುಂಬಿದ ಹೆಂಗಸನ್ನು ಅನಾಮತ್ತು ಎತ್ತಿಕೊಳ್ಳುವುದು ಸರಿಯಲ್ಲವೆಂದು. ಕೈ ಆಯ ತಪ್ಪಿದರೆ ಗತಿಯೇನು?'

'ಆಯಿತು, ನಿಮ್ಮ ಕೈಲಿ ಎತ್ತಲಿಕ್ಕೆ ಆಗುವವರೆಗೂ ಎತ್ತಿಕೊಂಡು ಹೋಗಿ. ಅನಂತರ ಇದ್ದೇ ಇದೆಯಲ್ಲ! ಏನೋ, ಮಲಗುವ ಹಾಸಿಗೆಯಲ್ಲೇ ಎಲ್ಲ ನಡೆಸುವುದು ನನಗೆ ಒಗ್ಗಲ್ಲ!'

'ಸರಿ, ನಿನಗೆ ತೋಚಿದಂತೆ ಮಾಡು' ಎಂದು ಅಲ್ಲಿಯೇ ನಿಂತ ನೀಲಕಂಠಪ್ಪನನ್ನು ನೋಡಿ.

'ಸ್ವಲ್ಪ ಹೊರಗಡೆ ಹೋಗ್ತೀರಾ?' ಎಂದು ಪಾರ್ವತಿ ಅವನತ್ತ ದೈನ್ಯದೃಷ್ಟಿ ಹಾಯಿಸಿದಳು. ಆ ಮಾತು ಕೇಳಿ ನೀಲಕಂಠಪ್ಪನ ಮುಖ ಒಂದುಕ್ಷಣ ಪೇಲವವಾಯಿತು. ಮರುಕ್ಷಣದಲ್ಲೇ ಹುಸಿನಗೆಯೊಂದು ಅವನ ಮುಖದಲ್ಲಿ ಸುಳಿದು ಹೋಯಿತು.

'ಅಯ್ಯೋ, ಹುಚ್ಚಿ! ಆರು ವರುಷಗಳಿಂದಲೂ ಮಗುವಿನಂತೆ ಆರೈಕೆ ಮಾಡುತ್ತ ಬಂದರೂ ನಿನ್ನ ಹೆಣ್ತನಕ್ಕೆ ಅಂಟಿದ ನಾಚಿಕೆ ಹೋಗಿಲ್ಲ' ಎಂದುಕೊಂಡು ಹೊರಬಂದು ಬಚ್ಚಲ ಬಾಗಿಲನ್ನು ಮುಂದಕ್ಕೆ ಎಳೆದುಕೊಂಡು ನಡುಮನೆಯಲ್ಲಿ ಬಂದು ನಿಂತನು. ಹಾಗೆಯೇ ಒಂದುಕ್ಷಣ ಊರ್ಧ್ವಮುಖಿಯಾಗಿ ಸೂರಿನತ್ತ ತನ್ನ ಶೂನ್ಯದೃಷ್ಟಿಯನ್ನು ಹರಿಸಿದನು.

ಎಂದೋ ತನ್ನ ಅಜ್ಜನೋ, ಮುತ್ತಜ್ಜನೋ ಕಟ್ಟಿಸಿದ ಆ ಮನೆ. ಅಲ್ಲಲ್ಲಿ ಗೋಡೆಗಳು ಬಿರುಕು ಹೊಡೆದಿದ್ದವು. ನಾಡುಹೆಂಚು ಹೊದಿಸಿದ ಆ ಮನೆ ಇತ್ತೀಚಿಗೆ ಹೆಂಚಿಗೆ ಕೈಯಾಡಿಸದೆ ಕಳೆದ ಮೂರು ದಿನಗಳಿಂದಲೂ ಹಿಡಿದ ಜಡಿಮಳೆಯಿಂದಾಗಿ ಸುತ್ತಲ ಬಿಳೀ ಗೋಡೆಗಳ ಮೇಲೆ ಮಳೆಯ ನೀರಿಳಿದು ಎಲ್ಲೆಲ್ಲೂ ಮಣ್ಣಿನ ಪಟ್ಟೆಗಳೇ ಆಗಿದ್ದವು. ಅವನ ಕಣ್ಣುಗಳು ಎದುರಿನ ಉದ್ದನೆಯ ಮಣ್ಣಿನ ಪಟ್ಟೆಯೊಂದನ್ನು ನೋಡುತ್ತಿದ್ದವು. ಆದರೆ ನೀಲಕಂಠಪ್ಪ ಅದನ್ನು ಎಷ್ಟಕ್ಕೂ ಗಮನಿಸಿದಂತೆ ಕಾಣಲಿಲ್ಲ. ಅವನ ಮನಸ್ಸು ಮತ್ತೆಲ್ಲೋ ಹರಿದಿತ್ತು.

'ರೀS .... ರೀS' ಬಚ್ಚಲ ಮನೆಯಿಂದ ಪಾರ್ವತಿ ಕೂಗಿದಳು.

ತನ್ನ ಚಿಂತೆಯಲ್ಲಿ ಮುಳುಗಿದ್ದ ನೀಲಕಂಠಪ್ಪ ಪಾರ್ವತಿಯ ದೊಡ್ಡ ಧ್ವನಿ ಕೇಳಿ ಕ್ಷಣ ಬೆಚ್ಚಿದಂತಾದನು. ಆ ಕ್ಷಣವೇ ಬಚ್ಚಲ ಮನೆಯೊಳಗೆ ನಡೆದು ಗುಬ್ಬಚ್ಚಿ ಮರಿಯಂತೆ ನಡುಬಚ್ಚಲಲ್ಲಿ ಕುಳಿತಿದ್ದ ಪಾರ್ವತಿಯನ್ನು ಎತ್ತಿಕೊಂಡುಬಂದು ಮತ್ತೆ ಮಂಚದ ಮೇಲೆ ಕುಳ್ಳಿರಿಸಿದನು. ಮಂಚದ ಮೇಲೆ ಸರಿಯಾಗಿ ಕುಳಿತ ಪಾರ್ವತಿ ತನ್ನ ಸೀರೆಯ ನೆರಿಗೆ ಹಾಗೂ ಸೆರಗನ್ನು ಸರಿಪಡಿಸಿಕೊಂಡು ಅಲ್ಲಿಯೇ ಏದುಸಿರುಬಿಡುತ್ತ ನಿಂತ ನೀಲಕಂಠಪ್ಪನ ಕಡೆಗೆ ಒಮ್ಮೆ ನೋಡಿದಳು. ಅವನತ್ತ ಹರಿಸಿದ ತನ್ನ ದೃಷ್ಟಿಯನ್ನು ಏಕೋ ಒಂದು ನಿಮಿಷ ಕದಲಿಸದಾದಳು.

ನೀಲಕಂಠಪ್ಪ ಹೇಳಿಕೊಳ್ಳುವಂತಹ ಆಳು. ಅವನ ಎತ್ತರ, ಮೈಕಟ್ಟು, ನಿಲುವು, ರೂಪ, ಬಣ್ಣ ಯಾವುದೂ ಕಳಪೆ ಎನ್ನುವಂತಹದಾಗಿರಲಿಲ್ಲ. ಹಳ್ಳಿಯಲ್ಲಿಯೇ ಹುಟ್ಟಿ ಬೆಳೆದು ಆ ಜೀವನಕ್ಕೆ ಒಗ್ಗಿದ ಬಗ್ಗಿದ ದೃಢ ಮೈಕಟ್ಟು ಅವನದು. ಎಲ್ಲಕ್ಕೂ ಮಿಗಿಲಾಗಿ ಅವನ ಸ್ವತಂತ್ರ ಮನೋವೃತ್ತಿ, ನಿಷ್ಕಲಂಕ ಮನಸ್ಸು, ಗಡುಸುಧ್ವನಿ, ಯಾವುದೂ ತನ್ನಿಂದ ಅಸಾಧ್ಯ ಎನ್ನುವ ನಿಶ್ಚಲತೆ ಇವುಗಳಿಂದಾಗಿ ಅವನ ಮುಖದಲ್ಲಿ ವಿಲಕ್ಷಣತೆ ಮೂಡಿ ಶೋಭೆಯನ್ನು ತಂದಿತ್ತು. ಇದೆಲ್ಲವನ್ನು ಗ್ರಹಿಸಿದ್ದ ಪಾರ್ವತಿ ಒಂದುಸಾರಿ ಗಂಡನನ್ನು ತುಂಬುಗಣ್ಣಿನಿಂದ ನೋಡಿ ದೃಷ್ಟಿಯಾದೀತೆಂದು ಅವನತ ಮುಖಿಯಾದಳು.

ಆದರೆ ಇದಾವುದನ್ನೂ ಗಮನಿಸದೆ ನಿಗೂಢ ಚಿಂತೆಗೊಳಗಾಗಿ ತನ್ನೆದುರು ನಿಂತ ಗಂಡನನ್ನು ಏನಾದರೂ ಮಾತಾಡಿಸಿ ಅವನ ಚಿಂತೆಯ ಹಾದಿಯನ್ನು ತಪ್ಪಿಸಬೇಕೆನ್ನಿಸಿತು.

' ಗಂಟೆ ಎಷ್ಟಿರಬಹುದೋ ? ಈ ಮಳೆ–ಮೋಡಗಳಿಂದಾಗಿ ಸರಿಯಾದ ಹೊತ್ತೇ ತಿಳಿಯದಾಗಿದೆ ! '

ಪಾರ್ವತಿಯ ಪ್ರಶ್ನೆಯಿಂದಾಗಿ ತನ್ನ ಧ್ಯಾನದಿಂದ ವಿಚಲಿತನಾದ ನೀಲಕಂಠಪ್ಪ ಎದುರುಗೋಡೆಗೆ ನೇತುಬಿದ್ದಿದ್ದ ಹಳೆಯ ಪೆಂಡುಲಂ ಗಡಿಯಾರವನ್ನು ನೋಡಿದನು. ಪೆಂಡುಲಂ ಚಲಿಸದೆ ನಿಂತಿತ್ತು. ಮುಳ್ಳುಗಳು ೫ ಮತ್ತು ೬ರಲ್ಲಿದ್ದವು.

' ಅರೇ, ಗಡಿಯಾರ ಯಾವಾಗ ನಿಂತಿತು....ನಿನ್ನೆತಾನೆ ಕೀ ಕೊಟ್ಟೆನಲ್ಲ ! '

' ಬೆಳಗಿನ ಜಾವ ನಿಂತಿರಬೇಕು ! ಹಾಗೆ ನಿಲ್ಲುವುದು–ನಡೆಯುವುದು ನಿಮ್ಮ ಗಡಿಯಾರಕ್ಕೆ ಹೊಸದೇನೂ ಅಲ್ಲವಲ್ಲ ? '

' ಹೂಂ........ಹಳೆಯ ಗಡಿಯಾರ !........ನಾನು ತಾನೆ ಇನ್ನೆಷ್ಟು ಸಾರಿ ರಿಪೇರಿ ಮಾಡಿಸಲಿ, ಹೋಗು '

' ನಾನು ಹೇಳುತ್ತಿಲ್ಲವೇನು ! ಅದರ ರಿಪೇರಿ ಗೋಜಿಗೆ ಹೋಗಬೇಡಿ ಅದನ್ನ ಸೀದು ಒಂದು ಹೊಸ ಗಡಿಯಾರ ತನ್ನಿ ಎಂದು. ಅದೇನು ವ್ಯಾಮೋಹವೋ ಹಳೆಯ ವಸ್ತುಗಳ ಬಗ್ಗೆ ' ಪಾರ್ವತಿ ಗೊಣಗಿದಳು.

ಸರಿ, ಪಾರ್ವತಿ ! ಹಳೆಯ ವಸ್ತುಗಳನ್ನು ಬಿಸಾಡುವುದು ದೊಡ್ಡದಲ್ಲ........ ಅದರ ಜಾಗದಲ್ಲಿ ಹೊಸದು ತಂದಿರಿಸುವುದು ನೀನು ತಿಳಿದಿರುವಷ್ಟು ಸುಲಭವಲ್ಲ.

' ಏಕೆ, ಸುಲಭವಲ್ಲ !........ಇದರ ರಿಪೇರಿಗೆ ಕಡಮೆ ಖರ್ಚು ಮಾಡಿರುವಿರೇನು ? ಆ ದುಡ್ಡಿಗೆ ಇಂಥ ಹತ್ತು ಗಡಿಯಾರಗಳನ್ನು ತರಬಹುದಿತ್ತು ! '

' ಪಾರ್ವತೀ, ಹಳೆಯ ವಸ್ತುಗಳನ್ನು ಮೂಲೆ ಗುಂಪು ಮಾಡಲು ನನಗಂತೂ ಇಷ್ಟವಿಲ್ಲ. ಅವು ನಮ್ಮ ಮನೆಗೆ ಬಂದ ಗಳಿಗೆ........ಈವರೆಗೂ ಅವು ನಮಗಾಗಿ ನೀಡಿರುವ ಸೇವೆ ನೆನಸಿಕೊಂಡಾಗ ಅವುಗಳನ್ನು ದೂರಮಾಡಲು ಸಾಧ್ಯವಿಲ್ಲವಾಗುತ್ತೆ.'

ತನ್ನ ಗಂಡನಲ್ಲಿ ತನ್ನವೇ ಆದ ಕೆಲವು ಅಭಿಪ್ರಾಯಗಳು ಇವೆಯೆಂದು ತಿಳಿದ ಪಾರ್ವತಿ ಆ ಮಾತನ್ನು ಮುಂದುವರಿಸದಾದಳು.

ಅಷ್ಟರಲ್ಲಿ ಆಳು ಮಾದ ಒಳಗೆ ಬಂದು

‘ಬುದ್ದೀ! ತೋಟದ ಹತ್ತಿರ ನೀರಗಂಟಿ ಹೊತ್ತುಂಟಿ ಬಂದಿದ್ದ. ಅದೇನೋ ತೀರ್ಮಾನ ಆಗೋವರ್ಗೂ ಕೆರೆನೀರು ಬಿಡಲ್ಲವಂತೆ’

‘ಏನು ತೀರ್ಮಾನನೋ?’

‘ಅದೇ ಬುದ್ದೀ, ಬದೀನ ಮೇಲಿರೋ ಮಾವಿನ ಮರ ಕಡಿಯೋ ವಿಚಾರ........ ಸೋಮಾರ ಪಂಚಾಯ್ತಿ ಸೇರುತ್ತೈತಂತೆ. ಅಲ್ಲಿನವರೆಗೂ ತೋಟಕ್ಕೆ ನೀರಿಲ್ಲವಂತೆ.’

ಪಂಚಾಯ್ತಿ!........ತೋಟಕ್ಕೆ ನೀರು........ಬದುವಿನ ಮೇಲಿರುವ ಮಾವಿನ ಮರ! ಈ ಮಾತುಗಳನ್ನು ಕೇಳಿದ ನೀಲಕಂಠಪ್ಪ ‘ಓಹೋ! ಪಂಚಾಯ್ತಿ ತೀರ್ಮಾನಕ್ಕೆ ಹೋಯ್ತೋ ಈ ವಿಚಾರ........ಹೂಂ........ಆಗ್ಲಿ’

‘ಲೋ, ಮಾದ........ಈಗ ನೀರು ಏಕೆ ಬೇಕು? ಮಳೆ ಹುಯ್ತಾ ಇಲ್ವೆನೋ? ಅದೇನು ಪಂಚಾಯ್ತಿ ತೀರ್ಮಾನ ಆಗುತ್ತೋ, ಆಗ್ಲಿ. ಆಮೇಲೆ ನೋಡೋಣ! ನೋಡು, ನಾನೀಗ ಊರಿಗೆ ಹೋಗಿ ಸಂಜೆಗೆ ಬರ್ತೀನಿ. ದನಕರುಗಳ ಮೇಲೆ ನಿಗಾ ಇಡು. ನಿನ್ನ ಹೆಂಡ್ತೀನ ಇಲ್ಲೇ ಇರುವಂತೆ ಹೇಳು, ಇವಳು ಏನಾದರೂ ಕೇಳಿಯಾಳು!’ ಎಂದು ಮಾದ ಮಾಡಬೇಕಾದ ಕೆಲಸಗಳನ್ನು ವಿವರಿಸುತ್ತಾ ನಿಂತನು.

ಅಷ್ಟರಲ್ಲಿಯೇ ಹೊರಗಡೆಯಿಂದ ತಳವಾಗ ಸೋಮು ಒಂದು ಕಾಗದವನ್ನು ಕೈಲಿಡಿದು ನಿಂತು ನೀಲಕಂಠಪ್ಪನನ್ನು ಕೂಗಿದನು.

ನೀಲಕಂಠಪ್ಪ ಹೊರಬಂದು ತಳವಾರನ ಕೈಲಿದ್ದ ನೋಟೀಸ್ ಪಡೆದು ಓದಿದನು. ಸೋಮವಾರ ಪಂಚಾಯ್ತಿ ಸೇರಿ ಮಾವಿನ ಮರ ತೆಗೆಸುವ ಬಗ್ಗೆ ತೀರ್ಮಾನ ಕೈಗೊಳ್ಳುತ್ತೆಂದೂ, ನೀಲಕಂಠಪ್ಪನೂ ಆ ದಿನ ಸಭೆಗೆ ಬರಬೇಕೆಂದು ಬರೆದಿದ್ದ ಒಕ್ಕಣೆ ನೋಡಿ ಅವನು ಕಣ್ಣು ಕೆಂಪಾದವು. ಮುಖ ಕೆಂಡ ಕೆದರಿದಂತಾಯಿತು.

‘ಆಗಲಿ, ಹೋಗು!’ ಎಂದು ತಳವಾರನನ್ನು ಅತ್ತ ಕಳುಹಿಸಿ ಒಳಗೆ ನಡೆದನು.

ತನ್ನ ಗಂಡ ಕೋಪ ಬಂದಾಗ ಹೇಗೆ ವರ್ತಿಸುವನೆಂದು ಸಹಜವಾಗಿ ತಿಳಿದಿದ್ದ ಪಾರ್ವತಿ ತಳವಾರ ಬಂದದ್ದು ಏಕೆಂದು ಕೇಳಿದಳು.

‘ನಾಳಿದ್ದು, ಊರ ಮುಂದೆ ಪಂಚಾಯ್ತಿ ಸೇರುತ್ತೈತಂತೆ. ನಾನೂ ಹೋಗಬೇಕಂತೆ?’

‘ಯಾಕೆ?’

‘ಅದೇ, ತೋಟದ ಬದುವಿನ ಮೇಲಿರುವ ನಮ್ಮ ಮಾವಿನಮರ ಕಡಿಸುವ ವಿಚಾರದಲ್ಲಿ........ಇದೆಲ್ಲಾ ಆ ರಾಮೇಗೌಡನ ತಾರಾತಿಕಡಿ ಅಂಥ ಕಾಣುತ್ತೆ?’

‘ಅದು ಸರಿ, ಅಂದ್ರೆ! ಆ ಮಾವಿನ ಮರದಿಂದ ನಮಗೇನು ಪ್ರಯೋಜನ ಅಂತೀನಿ. ಅದನ್ನು ಕಡಿಸಿ ಹಾಕೋದು ತಾನೆ? ಅದರಿಂದಾಗಿ. ಇಲ್ಲದ ಮನಸ್ತಾಪ ಹಳ್ಳೀಲಿ. ಸಣ್ಣ ವಿಷಯಕ್ಕೆಲ್ಲ ಅಕ್ಕಪಕ್ಕದವರ ದ್ವೇಷ ಕಟ್ಟಿಕೊಂಡರೆ ಈ ಹಳ್ಳಿಯಲ್ಲಿ ಬದುಕಲಿಕ್ಕಾಗುತ್ತೇ?’

'ಅದರ ವಿಚಾರ ನಿನಗೆ ಗೊತ್ತಿಲ್ಲ ಪಾರ್ವತಿ. ನೀನು ಆರು ವರುಷಗಳಿಂದ ಒಳಗೆ ಸೇರಿಕೊಂಡಿರುವಿ. ಹೊರಗಡೆ ಏನು ನಡೆಯುತ್ತಿದೆ ಎಂದು ತಿಳೀಲಾರೆ. ಅಷ್ಟಕ್ಕೂ ಅದನ್ನು ಕಡಿಸುವ ಪ್ರಮೇಯವಾದರೂ ಏನು? ಫಲ ಬಿಡುವ ಮರ ಅದು.

ಇನ್ನು ಹೆಚ್ಚು ಆ ಬಗ್ಗೆ ಕೆದಕುವುದು ಸರಿಯಲ್ಲವೆಂದು ತಿಳಿದು; ಪಾರ್ವತಿ ತನ್ನ ಮಾತನ್ನು ಬೇರೆ ಕಡೆ ಹರಿಯಬಿಟ್ಟಳು.

'ಈಗೆಲ್ಲಿಗೆ ಹೊರಟಿರುವಿರಿ?'

'ಊರು ಕಡೆ ಹೋಗಿ ಬರ್ತೇನೆ!'

'ಮೊನ್ನೆಯೆಲ್ಲ ಹೋಗಿ ಬಂದಿರಿ. ಈ ದಿನ ಮನೆಯಲ್ಲಿ ಜೆಣ್ಣೆಯೂ ಇದ್ದಂತೆ ಕಾಣಲಿಲ್ಲ, ಕೊಡಲಿಕ್ಕೆ ಹೋಗ್ತಾರೆ ಎನ್ನಲಿಕ್ಕೆ. ರಾತ್ರಿಯೆಲ್ಲ ಮಳೆ ಬಿದ್ದಿದೆ. ಆ ಜಿಗಟು ರಸ್ತೆಯಲ್ಲಿ ಐದಾರು ಮೈಲಿ ಸೈಕಲ್ ಸುತ್ತಿ ಬರದಿದ್ದರೆ ಆಗದೆ?'

'ಇಲ್ಲ, ಪಾರ್ವತಿ! ಯಾಕೋ ನನ್ನ ಮನಸ್ಸಿಗೆ ಸಮಾಧಾನವೇ ಇಲ್ಲ. ಊರಲ್ಲಿ ಸ್ವಲ್ಪ ಸುತ್ತಾಡಿ ಬರ್ತೇನೆ. ಅಲ್ಲದೆ ದೊಡ್ಡ ಆಸ್ಪತ್ರೆ ಡಾಕ್ಟರು ಬೇರೆ ಆಗಾಗ್ಗೆ ನಿನ್ನ ಹೆಂಡ್ತಿ ಆರೋಗ್ಯಕ್ಕೆ ಬಂದು ತಿಳಿಸು ಅಂಥ ಬೇರೆ ಹೇಳಿದ್ದಾರೆ. ಹೆರಿಗೆಗೆ ಒಂದು ತಿಂಗಳು ಇದೆ ಎನ್ನೋವಾಗ ಅಲ್ಲಿಗೇ ಕರೆದುಕೊಂಡು ಬಾ ಎಂದಿದ್ದಾರೆ. ನೋಡೋಣ, ಅವರ ನ್ನೊಮ್ಮೆ ಇಲ್ಲಿಗೇ ಬನ್ನಿ ಎಂದು ಕರೆಯುತ್ತೇನೆ. ಅವರೊಮ್ಮೆ ಇಲ್ಲಿಗೆ ಬಂದು ನಿನ್ನ ಸ್ಥಿತಿ ನೋಡಿ ಸಲಹೆ ನೀಡಿದರೆ ಉತ್ತಮ. ಈ ಹಳ್ಳಿ ಡಾಕ್ಟರನ್ನು ನಂಬಿದರೆ ಪ್ರಯೋಜನ ವಾಗಲ್ಲ. ಆರು ಹಳ್ಳಿ ಸೇರಿವೆ ಈ ಡಾಕ್ಟರಿಗೆ. ಮೂರಕ್ಕೋ ನಾಲ್ಕಕ್ಕೋ ಈ ಹಳ್ಳಿಗೆ ಬರೋದು ಅವ್ರು. ಅಲ್ದೆ, ಹಾಗೇ ಆ ಗಡಿಯಾರನ ರಿಪೇರಿಗೆ ಕೊಟ್ಟು ಬರ್ತೇನೆ.'

'ಸರಿ, ಗಡಿಯಾರದ ರಿಪೇರಿ ನಿಧಾನವಾಗಿ ಆಗ಼್ಿ. ಈಗ, ಡಾಕ್ಟರನ್ನು ನೋಡಿ ಬರುವುದಾದರೆ ಹೋಗಿ ಬನ್ನಿ. ಇನ್ನು ನನ್ನ ಮೈ ಕಳೆಯೋವರೆಗೂ ಎಲ್ಲಿಗೂ ಹೋಗ್ದೆ ಇದ್ರೆ ಚೆಂದ. ಏನಿಲ್ಲದೇ ಹೋದರೂ ನೀವು ಮನೆಯಲ್ಲಿದ್ದರೆ ನನಗೆ ನಿರಾಳ.'

'ಅದೆಲ್ಲ ಸರಿ, ಪಾರ್ವತಿ! ಆದ್ರೆ ಈ ಹಳ್ಳಿ ವ್ಯವಹಾರ ನನಗೆ ತುಂಬ ಬೇಸರ ತಂದಿದೆ. ಜಮೀನೆಲ್ಲ ಮಾರಿ ಈ ಹಳ್ಳಿ ಬಿಟ್ಟುಬಿಡೋನ ಅಂತಿದ್ದೀನಿ'

'ಈಗ್ಯಾಕೆ ಆ ಯೋಚ್ನೆ, ಊರಿಗೆ ಹೋಗೋದಾದ್ರೆ ಹೋಗಿ ಬೇಗ ಬಂದು ಬಿಡಿ. ಈ ದಿನವೂ ಮಳೆ ತಪ್ಪಿದ್ದಲ್ಲ. ಮಧ್ಯೆ ದಾರೀಲಿ ಮಳೆಗೆ ಸಿಕ್ಕೀರಾ?' ಎಂದು ಎಚ್ಚರಿಸಿ ತನ್ನ ಗಂಡ ಊರಿಗೆ ಹೋಗಿ ಬರಲು ಅನುಮತಿ ನೀಡಿದಳು.

'ಲೋ, ಪ್ರಭು! ಇಲ್ಲಿ ಬಾ!........ನೋಡು, ಅನ್ನ, ಆಲೂಗೆಡ್ಡೆ ಹುಳಿ ಮಾಡಿದ್ದೇನೆ; ನಿಮ್ಮಮ್ಮನಿಗೆ ಮಧ್ಯಾಹ್ನ ಊಟಕ್ಕೆ ಬಡಿಸು. ಉಪ್ಪಿನಕಾಯನ್ನು ಜಾಡೀಲಿ ತೆಗೆಯಬೇಡ ಎಲ್ಲಾದರೂ ಕೆಳಗೆ ಬೀಳಿಸೀಯೆ?........ಆ ಮರಗೇಲಿ ಸ್ವಲ್ಪ ಇದೆ. ಒಲೆ ಹಿಂದೆ ಹಪ್ಪಳ ಸುಟ್ಟು ಇಟ್ಟಿದ್ದೀನಿ. ತುಪ್ಪ ನೋಡು ಅಲಮಾರಿನಲ್ಲಿದೆ. ಈ ದಿನದ ಬೆಣ್ಣೆ ಮಜ್ಜಿಗೇಲೆ ಉಂಡೆಗಟ್ಟಿದ್ದೇನೆ, ಬೆಕ್ಕು ಬಂದೀತು. ಒಲೆ ಮೇಲೆ ಹಾಲಿದೆ. ಕಾಫಿ ಆ ಫ್ಲಾಸ್ಕ್‌ನಲ್ಲಿ ಹಾಕಿಟ್ಟೇದ್ದೀನಿ. ನಿಮ್ಮಮ್ಮ ಕೇಳಿದರೆ ಕೊಡು

ಎಂದು ಮಗನಿಗೆ ತಾತ್ಕಾಲಿಕವಾಗಿ ಅವನು ಮಾಡಬೇಕಾದ ಕೆಲಸಗಳನ್ನು ಹೇಳಿ ಸಕಾಲಿಕ ಎಚ್ಚರಿಕೆಯನ್ನು ನೀಡಿ.

'ಪಾರ್ವತಿ, ನೀನು ಬಚ್ಚಲ್ಮನೆಗೆ ಹೋಗಬೇಕಾದ್ರೆ ಮಾದನ ಹೆಂಡ್ತಿ ಇರ್‍ತಾಳಲ್ಲ' ಎಂದು ಹೇಳಿ ಒಗೆದ ಶರ್ಟು, ಪಂಚೆ ತೊಟ್ಟು ಹೆಗಲಮೇಲೆ ಒಂದು ವಲ್ಲಿ ಹಾಕಿಕೊಂಡು, ಅಟ್ಟೆಯಲ್ಲಿ ನಿಂತ ಸೈಕಲ್ಲಿನ ಎರಡೂ ಚಕ್ರಗಳಿಗೆ ಗಾಳಿ ತುಂಬಿದನು.

ಸೈಕಲ್ಲಿನ ಕ್ಯಾರಿಯರ್‌ಗೆ ಪೆಂಡುಲಂ ಗಡಿಯಾರವನ್ನು ಹಗ್ಗದಿಂದ ಬಿಗಿದು ಬೇಗ ಬರುತ್ತೇನೆಂದು ಹೇಳಿ ಸೈಕಲ್ಲು ಹತ್ತಿ ಹೊರಟನು. ಹಾಗೆ ಹೊರಟ ಗಂಡನ ದಾರಿಯ ಕಡೆಗೇ ಪಾರ್ವತಿ ಬಹಳ ಹೊತ್ತು ನೋಡುತ್ತಾ ಕುಳಿತಳು.

ನೀಲಕಂಠಪ್ಪನ ಹಳ್ಳಿಗೂ ಊರಿಗೂ ಸುಮಾರು ಆರು ಮೈಲಿ. ಸೀಳುಹಾದಿಯಲ್ಲಿ ಹೊರಟರೆ ನಾಲ್ಕು ಮೈಲಿ. ಏನೇ ಆದರೂ ಹಳ್ಳಿಯಿಂದ ಹೊರಟು ಟಾರು ರಸ್ತೆ ತಲುಪ ಬೇಕಾದ್ರೆ ಎರಡು ಮೈಲಿ ಬಂಡಿ ಜಾಡಿನಲ್ಲಿ ಹೋಗಬೇಕು. ಹಳ್ಳ, ಕೊರಕಲುಗಳಿಂದ ತುಂಬಿದ ಆ ರಸ್ತೆ ಬೇಸಗೆಯಲ್ಲಿ ಕುಂಕುಮದ ಹುಡಿಯಂತೆ ಧೂಳು ನಡೆಯುವವರ ಮೈಮೇಲೆ ಇರುತ್ತೆ. ಇನ್ನು ಮಳೆಗಾಲದಲ್ಲಾದರೆ ಆ ಜಿಗಟುಕಟ್ಟಿದ ಮಣ್ಣಿನಲ್ಲಿ ನಡೆಯುವುದೇ ಕಷ್ಟ. ಕಾಲಿನ ತುಂಬ ಮಣ್ಣಿನ ಎಕ್ಕಡ. ಇನ್ನು ಸೈಕಲ್ಲಿನ ಮೇಲೆ ಮಳೆಗಾಲದಲ್ಲಿ ಹೋಗುವುದಂತೂ ಸಾಧ್ಯವಿಲ್ಲದ ಮಾತು. ಟಾರ್ ರಸ್ತೆ ತಲುಪುವ ವರೆಗೂ ಸೈಕಲ್ಲನ್ನು ತಳ್ಳಿಕೊಂಡೇ ಹೋಗಬೇಕಾಗುತ್ತೆ.

ಮಳೆಗಾಲದ ದಿನ. ಶ್ರಾವಣದ ಜಡಿ ಬೇರೆ. ಆ ರಸ್ತೆಯಲ್ಲಿ ಓಡಾಡುವುದೇ ಕಷ್ಟ. ನೀಲಕಂಠಪ್ಪ ಗಡಿಯಾರ ಕಟ್ಟಿದ ಸೈಕಲ್ಲನ್ನು ಪ್ರಯಾಸದಿಂದ ತಳ್ಳಿ ಕೊಂಡೇ ಹೊರಟನು. ಸೈಕಲ್ಲಿನ ಎರಡೂ ಚಕ್ರಗಳಿಗೆ ಜೇಡಿಮಣ್ಣು ತೊಪ್ಪೆ ತೊಪ್ಪೆ ಯಾಗಿ ಅಂಟಿಕೊಂಡು ಉರುಳತೊಡಗಿತು. ಸೈಕಲ್ಲಿಗೆ ಅಂಟಿ ಮರುಕ್ಷಣದಲ್ಲೇ ಉದುರುತ್ತಿದ್ದ ಜೇಡಿಯನ್ನು ತದೇಕ ದೃಷ್ಟಿಯಿಂದ ನೋಡುತ್ತ ರಸ್ತೆಯನ್ನು ಸವೆಯಿಸತೊಡಗಿದನು. ನೀಲಕಂಠಪ್ಪನ ಬಾಳಿನ ರಸ್ತೆಯಲ್ಲೂ ನೂರೆಂಟು ನೆನಪಿನ ಜೇಡಿ ಅವನ ಮಿದುಳಿನ ಚಕ್ರಕ್ಕೆ ತೊಪ್ಪೆ ತೊಪ್ಪೆಯಾಗಿ ಅಂಟಿ ಗಪ್ಪನೆ ಉದುರ ತೊಡಗಿತು.

ನೀಲಕಂಠಪ್ಪ ಅನಾಥ. ಬುದ್ಧಿಕಾಣುವ ಮೊದಲೇ ತಂದೆ-ತಾಯಿಗಳನ್ನು ಕಳೆದು ಕೊಂಡಿದ್ದ. ಪಿತ್ರಾರ್ಜಿತವಾದ ಆಸ್ತಿ ಸಾಕಷ್ಟು ಇದ್ದುದರಿಂದ ನೆಂಟರಿಷ್ಟರು ಹುಡುಗ ನನ್ನು ಅಕ್ಕರೆಯಿಂದಲೇ ಸಾಕಿ ಬೆಳಸಿದರು. ಎಲ್ಲರೂ ಅವನನ್ನು ಪ್ರೀತಿಯಿಂದ ನೋಡಿ ದರೇ ವಿನಾ ಯಾರೂ ಇವನು ತಮ್ಮ ಹುಡುಗನೆಂಬ ಅಭಿಮಾನವಿಟ್ಟು ದಂಡಿಸಿ ಬುದ್ಧಿ ಕಲಿಸುವ ಗೋಜಿಗೆ ಹೋಗಲಿಲ್ಲ.

ಇದರಿಂದಾಗಿ ಅವನ ವಿದ್ಯಾಭ್ಯಾಸ ಪ್ರಾಥಮಿಕ ಶಾಲೆಗಿಂತ ಮುಂದೆ ಹೋಗಲಿಲ್ಲ. ಅದರಲ್ಲೂ ದೊಡ್ಡಪ್ಪ-ದೊಡ್ಡಮ್ಮನ ಅಕ್ಕರೆಯಿಂದಾಗಿ ಉಢಾಳನೇ ಆದ. ವಯಸ್ಸು ಬಂದಂತೆಲ್ಲ ಹಳ್ಳಿಯ ಹುಡುಗು ಪಟಾಲಂನ ಯಜಮಾನಿಕೆಯನ್ನೇ ಪಡೆದ. ಗೋಲಿ,

ಗೆಜ್ಜುಗ, ಪುಂಡಾಟಿಕೆ, ಇಸ್ಪೀಟು ಮುಂತಾದ ಎಲ್ಲದರಲ್ಲೂ ಹಿರಿಯ ಪಾತ್ರವನ್ನೇ ವಹಿಸಿದ. ಗರಡಿಮನೆ ಸೇರಿ ಸಾಮು ಮಾಡಿ ದೇಹ ಬೆಳಸಿ ಕೊಬ್ಬಿದ ಗೂಳಿಯಾದ. ಕ್ರಮೇಣ ಯಾರೂ ಹಳ್ಳಿಯಲ್ಲಿ ಇವನ ಮುಂದೆ ಮಾತಾಡಿ ಬದುಕುವುದೇ ಕಷ್ಟ ವಾಯಿತು. ಆದರೆ ನೀಲಕಂಠಪ್ಪನನ್ನು ಒಂದು ವಿಚಾರದಲ್ಲಿ ಮೆಚ್ಚತಕ್ಕದಿತ್ತು. ಹಿರಿಯರ ಆಸ್ತಿಯನ್ನು ಕಳೆಯಲು ಎಂದಿಗೂ ಹೋದವನಲ್ಲ. ತನಗೆ ಸ್ವಂತಬುದ್ಧಿ ಬಂದತಕ್ಷಣವೇ ತನ್ನ ಪಿತ್ರಾರ್ಜಿತ ಆಸ್ತಿಯನ್ನು ಕೈಗೆ ತೆಗೆದುಕೊಂಡು ಸ್ವಯಂ ಬೇಸಾಯ ಮಾಡಲು ಹೊರಟ ಹಿರಿತನವನ್ನು ಎಲ್ಲರೂ ಮೆಚ್ಚಿದ್ದರು.

ಹೀಗೆ ಬೆಳೆದು ಪ್ರಾಯಕ್ಕೆ ಬಂದ ನೀಲಕಂಠಪ್ಪನಿಗೆ ಅವನ ಬಂಧುವರ್ಗದವರು ಒಂದು ಹೆಣ್ಣು ತಂದು ಮದುವೆಮಾಡುವ ಸಾಹಸಕ್ಕೆ ತೊಡಗಿದರು. ಹಾಗೆ ಮಾಡಲು ಬಲವಾದ ಒಂದು ಕಾರಣವೂ ಇತ್ತು.

ಒಂದು ದಿನ ನಡುಹಗಲಿನಲ್ಲಿ ಸಿಹಿನೀರು ಬಾವಿಯಿಂದ ನೀರು ಹೊತ್ತು ತರು ತ್ತಿದ್ದ ಗೌಡನ ಮಗಳನ್ನು ಅಡ್ಡಗಟ್ಟಿ 'ಏನೇ, ಹುಡ್ಗಿ ನನ್ನನ್ನು ಮದ್ವೆ ಆಗ್ತೀಯಾ?' ಎಂದು ಕೇಳಿದ್ದ. ಅದು ಹಳ್ಳಿಯಲ್ಲಿ ಗುಸುಗುಸು ಎದ್ದಿತ್ತು. ಪಾಪದ ಹುಡುಗಿಗೆ ಆ ಪ್ರಕರಣ ಆದ ಹದಿನೈದು ದಿನಗಳಲ್ಲಿಯೇ ಗೌಡ ಗಂಡು ಗೊತ್ತುಮಾಡಿ, ಮದುವೆ ಯನ್ನೂ ಮಾಡಿ ಗಂಡನೂರಿಗೆ ಕಳುಹಿಸಿದ್ದ. ಹಳ್ಳಿಯ ನೆಮ್ಮದಿ ಕದಡೀತೆಂದು ನೀಲಕಂಠಪ್ಪನಿಗೆ ಮದುವೆ ಮಾಡಿಸಲು ಹಳ್ಳಿಯ ಹಲವರು ಟೊಂಕ ಕಟ್ಟಿ ನಿಂತರು.

ನೀಲಕಂಠಪ್ಪನಿಗೆ ಹೆಣ್ಣು ಕೊಡುವವರು ಕಡಮೆಯಿರಲಿಲ್ಲ. ಮುಂದಿನ ಮೂರು ತಲೆಮಾರು ಕುಳಿತು ತಿಂದರೂ ಜಗ್ಗದ ಭೂಮಿಕಾಣಿ ಅವನದಾಗಿತ್ತು. ಏರಿ ಕೆಳಗೆ ಒಂದೇ ಕಡೆ ಇರುವ ನಲನತ್ತು ಎಕರೆ ತರೀ ಜಮೀನು, ಐದೆಕರೆ ಬಾಗಾಯ್ತು ಸುತ್ತಲ ಒಂದೆರಡು ಹಳ್ಳಿಗಳಲ್ಲಿರುವ ಖುಷ್ಕಿ ಜಮಾನಿನ ದೊಡ್ಡ ಜಮಾನ್ದಾರಿಕೆ ಅವನದಾಗಿತ್ತು.

ಹಳ್ಳಿಗೇ ಧಡವತಿ ಕುಳ ಎನಿಸಿಕೊಂಡ ನೀಲಕಂಠಪ್ಪನಿಗೆ ಮಲೆನಾಡಿನ ಸಾಹು ಕಾರರೊಬ್ಬರು ಹೆಣ್ಣುಕೊಡಲು ಮುಂದಾದರು. ಅವರೂ ಇವನಿಗೆ ದೂರದ ನೆಂಟರೇ ಆಗಬೇಕಿತ್ತು. ಮದುವೆಯೂ ಆಯಿತು. ಪಾರ್ವತಿ ನೀಲಕಂಠಪ್ಪನ ಅರ್ಧಾಂಗಿ ಯಾಗಿ ಬಂದು ಮನೆತುಂಬಿದಳು.

ಮದುವೆಯಾದ ಹೊಸದರಲ್ಲಿ ನೀಲಕಂಠಪ್ಪ ತುಂಬ ಅಡಾಲುಡಿ ಮಾಡಿ ಎಲ್ಲದರಲ್ಲೂ ತನ್ನ ಒರಟುತನವನ್ನೇ ಪ್ರದರ್ಶಿಸಿದ. ಅಲ್ಲದ ಸಲ್ಲದ್ದಕ್ಕೆಲ್ಲ ಹೆಂಡತಿಯ ಗೋಳನ್ನೇ ಹೊಯ್ದುಕೊಂಡ. ಹಗಲು-ರಾತ್ರಿ 'ಪರೇಲು' ಆಟದಲ್ಲಿ ಮುಳುಗಿದ. ಇದರಿಂದಾಗಿ ಸ್ವಲ್ಪ ನಷ್ಟಕ್ಕೂ ಒಳಗಾದ. ಇದನ್ನು ತಿಳಿದು ಹೆಣ್ಣುಕೊಟ್ಟ ಮಾವ ಅಳಿಯನಿಗೆ ಬುದ್ಧಿ ಹೇಳಲು ಬಂದು ನಂಟುತನವನ್ನೇ ಕಡಿದುಕೊಂಡು ಹೋದ.

'ನನ್ನ ಹೆಂಡ; ನನ್ನ ಬುರುಡೆ; ನಿನ್ನದೇನು? ನನಗೂ ನಿನಗೂ ಏನೂ ಸಂಬಂಧ ವಿಲ್ಲ. ಹೊರಡು ಇಲ್ಲಿಂದ' ಎಂದು ಮಾವನ ಚಂಡಿಕೆಗೆ ಕೈಯಿಟ್ಟು ಮನೆಯಿಂದ ಹೊರಗಟ್ಟಿ ಯಾವೊತ್ತು ಮಾವನ ಮನೆಯ ಋಣಾನುಬಂಧವನ್ನೇ ಕಳೆದುಕೊಂಡಿದ್ದ.

ಬುದ್ಧಿವಂತೆಯಾದ ಪಾರ್ವತಿ ಇವನ ಅಲೆ-ಬಲೆಯನ್ನೆಲ್ಲ ತಡೆದು, ಅವನ ತಾಳಕ್ಕೆ ಇವಳೂ ತಾಳ ಹಾಕಿ ನಿಂತಳು. ಇದ್ದಕ್ಕಿದ್ದಂತೆ ನೀಲಕಂಠಪ್ಪ ಒಂದುದಿನ ಅತಿ ಸೌಮ್ಯನಾದ. ಹೆಂಡತಿಯನ್ನು ಮುದ್ದಿಸಿದ. ಅವಳನ್ನು ಹೊಗಳಿದ. 'ನನ್ನ ಧೂರ್ತತೆಯಿಂದಾಗಿ ನಿನಗೆ ತೌರು ಕಳೆದೆ ಎಂದು ನೊಂದು ಮಾತಾಡಿದ. ಅಂದೇ ಪಾರ್ವತಿಯ ಎದುರಿನಲ್ಲಿ ಇಸ್ಪೀಟು ಎಲೆಗಳನ್ನು ಹರಿದು ಬಿಸಾಡಿ ಇನ್ನೆಂದೂ ಅವುಗಳನ್ನು ಮುಟ್ಟುವುದಿಲ್ಲವೆಂದು ಅವಳ ಮೇಲೆ ಆಣೆಯಿಟ್ಟ.

ಆದಾದ ವರುಷದಲ್ಲೇ ಪಾರ್ವತಿ ಪ್ರಭುದೇವನನ್ನು ಪಡೆದಳು. ಅಲ್ಲಿಂದಾಚೆಗೆ ನೀಲಕಂಠಪ್ಪ ಎಲ್ಲದರಲ್ಲೂ ಒಳ್ಳೆಯತನವನ್ನು ಪ್ರದರ್ಶಿಸಿದ. ಆ ಹಳ್ಳಿಯ ಹತ್ತು ಸಮಸ್ತರಲ್ಲಿ ತಾನೂ ಒಬ್ಬ ಎನಿಸಿದ. ಅತ್ತ ತನ್ನ ಬೇಸಾಯವನ್ನು ಅಬಿವೃದ್ಧಿಪಡಿಸಿದ. ಒಂದೆರಡು ಎಕರೆ ಖುಷ್ಕಿಯನ್ನು ಬಾಗಾಯ್ತಾಗಿ ಪರಿಣಮಿಸಿದ. ಸಾವಿರ ಅಡಕೆ ಸಸಿ ನೆಟ್ಟ, ಅರ್ಧ ಎಕರೆಗೆ ಬಾಳೆ ಹಾಕಿದ. ಸುತ್ತ ಬದುವಿನಲ್ಲಿ ನಲವತ್ತು-ಐವತ್ತು ತೆಂಗು ನೆಟ್ಟ.

ಹೀಗಾಗಿ ಪಾರ್ವತಿ–ನೀಲಕಂಠಪ್ಪರ ದಾಂಪತ್ಯ ಮೊಳೆತು ಚಿಗುರಿತು. ಬೆಳೆಯಿತು. ನೀಲಕಂಠಪ್ಪ ಎಷ್ಟು ಉಢಾಳನೆನಿಸಿದ್ದನೋ ಅಷ್ಟೇ ರಸಿಕ ಎನಿಸಿಕೊಂಡ. ಪಾರ್ವತಿಯನ್ನು ಅರೆಕ್ಷಣ ಬಿಡದಾದ. ಅವಳಿಗೆ ತೌರಿನ ನೆನಪೇ ಬಾರದಂತೆ ನೋಡಿಕೊಂಡ. ತೌರಿನ ಕಡೆಯವರೂ ಅತ್ತಕಡೆ ಬರುವುದನ್ನೇ ಬಿಟ್ಟಿದ್ದರು. ಆ ಮಗಳು ನಮ್ಮ ತೌರಿಗೆ ಹೊರತು ಎಂದುಕೊಂಡರೋ ಏನೋ?

ಆ ಹಳ್ಳಿಯ ಪಟೇಲ ಭೀಮೇಗೌಡನದೂ ಒಳ್ಳೆಯ ಒಕ್ಕಲು. ಅವನ ಮಗ ರಾಮೇಗೌಡ ಬೆಂಗಳೂರಲ್ಲಿ ಬೇಸಾಯದ ಪರೀಕ್ಷೆಮಾಡಿಕೊಂಡು ಬಂದು, ಹಳ್ಳಿಯಲ್ಲೇ ನಿಂತು ಹೊಸತರಹೆ ಬೇಸಾಯಮಾಡಿ ಉತ್ತಮ ಬೇಸಾಯಗಾರ ಎನಿಸಿಕೊಂಡಿದ್ದ. ಏರಿ ಕೆಳಗಿನ ನೀಲಕಂಠಪ್ಪನ ಬಾಗಾಯ್ತಿಗೆ ಲಗತ್ತಾದ ತನ್ನ ಖುಷ್ಕಿ ಜಮೀನಿನಲ್ಲಿ ರಾಮೇಗೌಡನೂ ತೋಟ ಮಾಡತೊಡಗಿದ.

ಒಂದೆರಡು ವರುಷಗಳಲ್ಲಿ ರಾಮೇಗೌಡನ ನಾಲ್ಕು ಎಕರೆ ಖುಷ್ಕಿ ಜಮೀನು ತೆಂಗು–ಅಡಿಕೆ–ಬಾಳೆ ತೋಟವಾಗಿ ಪರಿಣಮಿಸಿತು. ಆದರೆ ಬೇಸಗೆಯಲ್ಲಿ ಕೆರೆಯನೀರು ರಾಮೇಗೌಡನ ತೋಟಕ್ಕೆ ಬರಬೇಕಾದರೆ ಮೊದಲು ನೀಲಕಂಠಪ್ಪನ ಬಾಗಾಯ್ತಿಗೆ ನುಗ್ಗಿ ಅನಂತರ ರಾಮೇಗೌಡನ ತೋಟಕ್ಕೆ ಬರಬೇಕಾಗಿತ್ತು.

ಮೊದಲಿಗೆ ನೀಲಕಂಠಪ್ಪ ಹಾಗೂ ರಾಮೇಗೌಡ ಇಬ್ಬರೂ ಅನ್ಯೋನ್ಯವಾಗೇ ಇದ್ದರು. ಆದರೆ ಒಂದು ಬೇಸಗೆಯಲ್ಲಿ ಇಬ್ಬರಿಗೂ ಹಣಾಹಣಿಯೇ ಆಯಿತು. ಏಕೆಂದರೆ ಬೇಸಗೆ ಬಂದಾಗ ಕೆರೆಯಲ್ಲಿ ನೀರು ಕಡಮೆಯಿರುತ್ತೆ. ಅರ್ಧತೂಬು ತೆಗೆದು ನೀರು ಬಿಡುತ್ತಾರೆ. ಆ ನೀರು ನೀಲಕಂಠಪ್ಪನ ತೋಟವನ್ನು ತೊಯ್ದು ರಾಮೇಗೌಡನ ತೋಟಕ್ಕೆ ನುಗ್ಗಬೇಕು. ಇವರಿಬ್ಬರ ತೋಟದ ಮಧ್ಯೆ ನೀರು ಹರಿಯುವ ಬದುವಿನಲ್ಲಿ ನೀಲಕಂಠಪ್ಪನಿಗೆ ಸೇರಿದ ಒಂದು ಮಾವಿನ ಮರವಿದೆ. ಆ ಮಾವಿನ ಮರದ ಬುಡ

ವನ್ನು ಸುತ್ತುವರಿದು ನೀರು ರಾಮೇಗೌಡನ ತೋಟಕ್ಕೆ ನುಗ್ಗಬೇಕು. ಇದರಿಂದ ಬೇಸಗೆಯಲ್ಲಿ ಕೆರೆಯನೀರು ರಾಮೇಗೌಡನ ತೋಟಕ್ಕೆ ಸರಿಯಾಗಿ ಬಾರದೆ ಬಾಳೆ–ಅಡಿಕೆ ಒಣಗಲಾರಂಭಿಸಿತು.

ದುರದೃಷ್ಟಕ್ಕೆ ರಾಮೇಗೌಡನ ತೋಟದ ಬಾವಿಯಲ್ಲೂ ಬೇಸಗೆಯಲ್ಲಿ ನೀರು ಇಣಕುವುದಿಲ್ಲ. ಅದರಿಂದಾಗಿ ರಾಮೇಗೌಡ ನೀಲಕಂಠಪ್ಪನನ್ನು ಕಂಡು 'ಆ ಮಾವಿನ ಮರ ತೆಗೆಸು; ಅದು ಏನಿಲ್ಲ ಎಂದರೂ ಐವತ್ತುರೂಪಾಯಿ ಬಾಳೀತು. ನಾನು ಅದಕ್ಕೆ ದಂಡವಾಗಿ ನೂರು ರೂಪಾಯಿ ಕೊಡುತ್ತೇನೆ' ಎಂದ.

'ಅದು ಸಾಧ್ಯವಿಲ್ಲ. ಫಲಬಿಡುವ ಮರ ಅದು. ನಮ್ಮ ಪೂರ್ವಿಕರು ನೆಟ್ಟಮರ. ಕಡಿಸಲಾರೆ. ದುಡ್ಡು ನೋಡಿರುವವನು ನೀನೇ ಅಲ್ಲ' ಎಂದ ನೀಲಕಂಠಪ್ಪ.

ಇದೇ ಇಬ್ಬರಲ್ಲೂ ದ್ವೇಷವಾಗಿ ನಿಂತು ಪರಸ್ಪರ ವಿದ್ವೇಷದಿಂದ ಬೇಯ ತೊಡಗಿದರು.

ನೀಲಕಂಠಪ್ಪನಿಗೆ ತನ್ನ ಪಿತ್ರಾರ್ಜಿತ ಆಸ್ತಿಯಮೇಲೆ ತುಂಬ ಅಭಿಮಾನ. ಅವನ ಅಭಿಮಾನ ಎಷ್ಟು ಅಂದರೆ ತಾನು ಕಂಡೇ ಇರದ ನೆನಪಿನ ಅಮ್ಮ ಬಳಸುತ್ತಿದ್ದ ಗಂಜಲ ಬಳಿದ ಹಳೆಯ ಮೊರಗಳನ್ನೂ ಅವನು ಬಿಸಾಡದಾಗಿದ್ದ. ಕೆಲಸಕ್ಕೆ ಬಾರದ ವನ್ನು ಒಂದು ಮೂಲೆಯಲ್ಲಿ ಹಾಕಿಡುವವನೇ ಹೊರತು ಎಂದಿಗೂ ಬಿಸಾಡಿದವನಲ್ಲ. ಅಂಥವ ಸುಲಭವಾಗಿ ಮಾವಿನ ಮರವನ್ನು ಕಡಿಸಲು ಒಪ್ಪುವನೆ?

ಅಲ್ಲದೆ ಆ ಮರದ್ದೂ ಒಂದು ಜಾಯಿಮಾನ ಎನ್ನಬೇಕು. ಅದು ಫಲಭರಿತ ವಾಗುವುದು ಮೂರು ವರುಷಗಳಿಗೊಮ್ಮೆ. ಫಲಬಿಟ್ಟರೆ ಜೊಂಪೆ ಜೊಂಪೆ ಹಣ್ಣು ಇಣಕುತ್ತವೆ ಆ ಮರದಲ್ಲಿ. ಅದು ಕಂತ್ರಿ ಮರವಾದರೂ ಆ ಹಣ್ಣಿನ ರುಚಿಯೇ ಬೇರೆ. ಸಿಪ್ಪೆ ತೆಳುವು, ಒಳಗೆಲ್ಲ ನಾರು, ಅದರ ತುಂಬ ರಸ, ವಾಟೆ ತುಂಬ ಚಿಕ್ಕದು. ಆ ಹಣ್ಣನ್ನು ಮೇಲಿನ ನಸುರು ತೆಗೆದು ಬಾಯಿಗಿಟ್ಟು ಸಿಪ್ಪೆ ಸಹಿತ ಚೀಪಿದರೆ ಅದರಿಂದ ಸುರಿವ ರಸ ಅಮೋಘ. ಚೀಪಿದಷ್ಟೂ ರುಚಿ ಆ ರಸ. ಅದರ ರುಚಿ ಬೇರಾವ ಕಸಿ ಹಣ್ಣಿಗೂ ತಗಲದು.

ಆ ಮರದಲ್ಲಿ ಹಣ್ಣು ಬಿಟ್ಟಾಗ ತನ್ನೆಲ್ಲ ಆಪ್ತೇಷ್ಟರಿಗೂ ಕೊಟ್ಟು, ಆ ಹಣ್ಣು ಇರುವಷ್ಟು ದಿನವೂ ಬೆಳಗ್ಗೆ, ಸಂಜೆ ಊಟವಾದಮೇಲೆ ಹೊರ ಜಗಲಿಯಲ್ಲಿ ಕುಳಿತು ಬುಟ್ಟಿಗಟ್ಲೆ ಹಣ್ಣನ್ನು ಎದುರಿಗಿಟ್ಟುಕೊಂಡು ಚೀಪಿಚೀಪಿ ಹಾಕುವ ನೀಲಕಂಠಪ್ಪ ಆ ಮರದ ಬಗ್ಗೆ ಒಂದು ಅತಿಯಾದ ವ್ಯಾಮೋಹವನ್ನೇ ತಾಳಿ ನಿಂತ. ರಾಮೇಗೌಡನ ದ್ವೇಷವನ್ನು ಎಷ್ಟಕ್ಕೂ ಲೆಕ್ಕಿಸಿದಾದ.

ಆದರೆ ಈಗ ಆರು ವರುಷಗಳ ಹಿಂದೆ ಅವನ ನಂಬುಗೆಯ ಶಿಖರ ಕಳಚಿಬಿದ್ದಿತ್ತು. ಅವನ ವಿಶ್ವಾಸಕ್ಕೆ ತಗುಲಿತ್ತು. ಅವನು ಪ್ರೀತಿಸಿದ ವಸ್ತುಗಳು ಅವನ ಕೈಬಿಡು ವಂತಾಗಿದ್ದವು.

ಅಂದು ನೀಲಕಂಠಪ್ಪ ನಿತ್ಯದಂತೆ ಊರಿಗೆ ಹೋಗಿದ್ದ. ಸಾಮಾನ್ಯವಾಗಿ

ನೀಲಕಂಠಪ್ಪ ವಾರಕ್ಕೊಮ್ಮೆ ಊರಿನ ಕಡೆ ಸಂತೆಯದಿನ ಹೋಗುವ ವಾಡಿಕೆ. ವಾರದಲ್ಲಿ ಕೂಡಿಸಿದ ಬೆಣ್ಣೆ ಹೊತ್ತು ಊರಿಗೆ ಹೋಗಿ ಅದನ್ನು ಸಂತೇಪೇಟೆ ಸಂಗಪ್ಪನ ಹೋಟೆಲ್ಲಿಗೆ ಹಾಕಿ, ಒಂದೆರಡು ಮಸಾಲೆದೋಸೆ ತಿಂದು, ಎರಡೆರಡು ಕಪ್ ಕಾಫಿ ಕುಡಿದು, ಹೋಟೆಲ್ಲಿ ನಲ್ಲಿಯೇ ಕೂಡುವ ನಾಲ್ಕಾರು ಸ್ನೇಹಿತರಲ್ಲಿ ಲೋಕಾಭಿರಾಮವಾಗಿ ಹರಟೆ ಕೊಚ್ಚಿ, ಮಧ್ಯಾಹ್ನದ ವೇಳೆಗೆ ಕೃಷ್ಣಾ ಸಿನಿಮಾ ಮಂದಿರದಲ್ಲಿ ಒಂದು ಮ್ಯಾಟನಿ ಷೋ ನೋಡಿ, ಸಂಜೆಗೆ ಸಂತೇಮಾಳದಲ್ಲಿ ವಾರದ ತರಕಾರಿಕೊಂಡು ಸೈಕಲ್ಲು ಹತ್ತಿ ಹಳ್ಳಿಗೆ ವಾಪಸ್ಸಾಗು ವುದು ವಾಡಿಕೆಯಾಗಿತ್ತು. ಅಂದು ಎಂದಿಲ್ಲದ ಮಳೆ. 'ಸಂಜೆಗೆ ಬಂದಮಳೆ; ರಾತ್ರಿ ಬಂದ ನೆಂಟ' ಹೋಗಲಾರರು ಎಂಬಂತೆ ಉದ್ದಕ್ಕೂ ಮಳೆಯಲ್ಲೇ ನೆನೆಯುತ್ತ ದಾರಿ ಕ್ರಮಿಸಿ ತೊಡಗಿದ.

ಟಾರುರಸ್ತೆ ಬಿಟ್ಟು ಹಳ್ಳಿಯ ಜೇಡುಮಣ್ಣಿನ ರಸ್ತೆಗೆ ತಿರುಗಿದ ಹತ್ತು ನಿಮಿಷದಲ್ಲಿ ತನ್ನ ಸೈಕಲ್ಲಿನ ಫ್ರೇಂ ಕಟ್ಟಾಗಿ ಕೆಳಗೆ ಬಿದ್ದುಬಿಟ್ಟ. ಅದೇ ಸಮಯದಲ್ಲಿ ಆಕಾಶದಲ್ಲಿ ರೊಯ್ಯನೆ ಬೆಳ್ಳಿಮಿಂಚೊಂದು ಬಾನಗಲಕ್ಕೂ ಥಳಥಳಿಸಿತು. ಅದರ ಬೆನ್ನಿಗಂಟಿಯೇ ಎಂದೂ ಕಾಣದ ಕೇಳದ ಸಿಡಿಲೊಂದು ಬಡಿಯಿತು. ಆ ಶಬ್ದಕ್ಕೆ ನೀಲಕಂಠಪ್ಪನಕಲ್ಲೆ ದೆಯೂ ಧಸಕ್ಕೆನ್ನದೆ ಉಳಿಯಲಿಲ್ಲ. ತುಸು ಗಾಬರಿಯೂ ಆಯಿತು. ಕತ್ತಲು ಬೇರೆ ಆವರಿಸಿತ್ತು. ಜೇಡಿಮಣ್ಣಿನಲ್ಲಿ ಫ್ರೇಂ ಮುರಿದ ಸೈಕಲ್ಲನ್ನು ತಳ್ಳಿಕೊಂಡು ಕೂಡ ಹೋಗ ಲಾಗದೆ ಪರಪಾಡತೊಡಗಿದ ನೀಲಕಂಠಪ್ಪ. ಮನದಲ್ಲಿ ಏನೋ ಅವ್ಯಕ್ತ ಭೀತಿಯೊಂದು ಅಂಕುರಿಸಿತು. ಬರುಬರುತ್ತಾ ಅದು ಬೆಳೆದು ಹೆಮ್ಮರವಾಗಿ ಅಂಜಿದ. ಕಾಣದ ನೋವೊಂದು ಅವನ ಹೃದಯಾಂತರಾಳದಲ್ಲಿ ಹೊಕ್ಕಿದಂತಾಗಿ ತಳಮಳಿಸಿದ.

ತಾನು ಮುವ್ವತ್ತು ವರುಷಗಳಿಂದ ನಡೆದಾಡಿದ ದಾರಿಯೇ ಆ ದಿನ ಕಾಣದೆ ತಬ್ಬಿಬ್ಬಾಗುವಂತಾಯಿತು. ಅರ್ಧತಾಸಿನ ಕಾಲುನಡಿಗೆಯನ್ನು ಕ್ರಮಿಸಲು ಆ ದಿನ ಸುಮಾರು ಮೂರು ತಾಸೇ ತೆಗೆದುಕೊಂಡು ಅಂತೂ ಹಳ್ಳಿಯನ್ನು ತಲುಪಿ ಮನೆಯ ಮುಂದೆ ನಿಂತ. ಹಟ್ಟಿಯಲ್ಲಿ ಹಚ್ಚಿಟ್ಟ ಲಾಂಟೇನು ತೊಲೆಗೆ ನೇತು ಬಿದ್ದಿತ್ತು. ಅದರ ಮಂದ ಪ್ರಕಾಶದಲ್ಲಿ ಒಳಗೆ ನಾಲ್ಕಾರು ಹೆಂಗಸರು ಸೇರಿಕೊಂಡು ಏನೋ ಮಾಡುತ್ತಿರುವುದು ಕಂಡಿತು. ಗಾಬರಿಯಾಗಿ ಒಳಗೆ ನಡೆದನು. ಮಂಚದ ಮೇಲೆ ತನ್ನ ಪಾರ್ವತಿ ಪ್ರಜ್ಞಾಹೀನಳಾಗಿ ಬಿದ್ದಿದ್ದಳು. ಕೆಲವರು ಅವಳ ಸೊಂಟ, ತೊಡೆ, ಅಂಗಾಲುಗಳನ್ನು ಬೆರಣಿಯ ಬೂದಿಯಿಂದ ಉಜ್ಜಿ ಮೈ ಬಿಸಿಯೇರುವಂತೆ ಮಾಡುತ್ತಿ ದ್ದರು. ಪಾರ್ವತಿಗೆ ಏನಾಗಿದೆ, ಸಂಗತಿಯೇನೆಂದು ತಿಳಿಯದೆ ಸುಮ್ಮನೆನಿಂತ ನೀಲಕಂಠಪ್ಪನನ್ನು ನೋಡಿ ಅಲ್ಲಿಯೇ ಇದ್ದ ಹಿರಿಯಾಕೆಯೊಬ್ಬಳು ಅವನನ್ನು ಮಾತಾಡಿಸಿ.

'ಗಾಬರಿಯಾಗಬೇಡ, ಮಗ! ಲಕ್ವಾ (ಪಾರ್ಶ್ವವಾಯು) ಬಡಿದಿರಬೇಕು. ಬೇಗ ಪಂಡಿತರನ್ನು ಕರೆದು ತಾ' ಎಂದು ಧೈರ್ಯ ಹೇಳಿದಳು.

ಅದನ್ನ ಕೇಳಿ ನೀಲಕಂಠಪ್ಪ ಏನೂ ತೋಚದೆ ಹುಚ್ಚನಂತೆ ಅಲೆದಾಡಿದ—ಪರ

ದಾಡಿದ. ಯಾರೋ ಪಂಡಿತರನ್ನು ಕರೆದುತಂದರು. ಬೆಳಗಿನವರೆಗೂ ಔಷಧೋಪ ಚಾರಗಳು ನಡೆದಮೇಲೆ ಪಾರ್ವತಿ ಕಣ್ಣು ತೆರೆದು ಎಲ್ಲರನ್ನೂ ನೋಡಿದಳು. ಆದರೆ ನಾಲಗೆ ಸಲೀಸಾಗಿ ಆಡದೆ ತೊದಲಿದಳು.

ಈ ಮಧ್ಯೆ ಇನ್ನೊಂದು ಅಚಾತುರ್ಯ ನಡೆದಿತ್ತು. ಅಂದು ಬಡಿದ ಬರಸಿಡಿಲಿಗೆ ಆಹುತಿಯಾಗಿ ತನ್ನ ಮತ್ತು ರಾಮೇಗೌಡನ ದ್ವೇಷಾಗ್ನಿಗೆ ತುತ್ತಾಗಿದ್ದ ಮಾವಿನ ಮರ ಅರ್ಧ ಸೀಳಿ ಬಿದ್ದಿತ್ತು. ಬಹು ಎತ್ತರಕ್ಕೆ ಬೆಳೆದಿದ್ದ ಒಂದೇ ಒಂದು ಕೊಂಬೆ ಮಾತ್ರ ಭೂಮಿ ಗಂಟೆ ನಿಂತಿತ್ತು. ಕೆಳಗಡೆ ಬುಡವೆಲ್ಲ ಅಲುಗಿ ಬೇರು ಬೀಳಲು ಬಿಟ್ಟಿತ್ತು. ಬೆಳಗ್ಗೆ ತೋಟದಲ್ಲಿ ದೈತ್ಯನಂತೆ ಬಿದ್ದಿದ್ದ ಆ ಮರವನ್ನು ಕಂಡಾಗ ನಿಜಕ್ಕೂ ನೀಲಕಂಠಪ್ಪನ ಗುಂಡಿಗೆಯೇ ಕಳಚಿ ಬಿದ್ದಂತಾಗಿತ್ತು.

ಇನ್ನೂ ಒಂದು ಅಚ್ಚರಿ ಪಡುವ ಸಂಗತಿಯೆಂದರೆ ಎಂದೂ ನಿಲ್ಲದ, ಸ್ವಲ್ಪ ಹಿಂದೆ ಮುಂದೆ ಹೋಗುತ್ತಿದ್ದ ಅಪ್ಪನ ಕಾಲದ ಪೆಂಡುಲಂ ಗಡಿಯಾರ ರಾತ್ರಿ ಏಳು ಮುವ್ವತ್ತಕ್ಕೆ ಸರಿಯಾಗಿ ನಿಂತಿತ್ತು. ಕೀ ಇಲ್ಲವೇನೋ ಎಂದು ತಿಳಿದು ಕೀ ಕೊಡಲು ಹೋದಾಗ ಗಡಿಯಾರ ಕೆಟ್ಟು ನಿಂತಿದೆ ಎಂದು ನೀಲಕಂಠನಿಗೆ ಗೋಚರಿಸಿದಾಗ ವಿಸ್ಮಯನಾಗಿ ನಿಂತ.

'ಇದೇನಿದು? ಯಾವುದಕ್ಕೆ ಏನು ತಾಳೆ? ರಸ್ತೆಯಲ್ಲಿ ಸೈಕಲ್ಲು ಫ್ರೇಂ ಮುರಿ ಯಿತು, ಮನೆಯಲ್ಲಿ ಹೆಂಡತಿ ಹಾಸಿಗೆ ಹಿಡಿದಳು, ತೋಟದಲ್ಲಿ ಮಾವಿನ ಮರ ಸೀಳಿ ಬಿದ್ದಿತು, ಇಲ್ಲಿ ನೋಡಿದರೆ ಗಡಿಯಾರ ನಿಂತಿದೆ. ಹೆಚ್ಚು, ಕಡಮೆ ಈ ಎಲ್ಲ ಅನಾಹುತ ಗಳು ಏಕಕಾಲದಲ್ಲಿ ಸಂಭವಿಸಿದಂತಿವೆ. ಯಾವುದಕ್ಕೆ ಯಾವುದು ಸಂಬಂಧ?' ನೀಲ ಕಂಠಪ್ಪ ಈ ಬಗ್ಗೆ ಯೋಚಿಸಿ ಯೋಚಿಸಿ ಏನೂ ತಿಳಿಯದಾಗಿದ್ದ.

ಹೀಗಾಗಿ ಪಾರ್ವತಿ ಹಾಸಿಗೆ ಹಿಡಿದು ಆರು ವರುಷಗಳೇ ಸಂದಿದ್ದವು. ಅವಳ ಸೊಂಟ ಕಾಲುಗಳಿಗೆ ಬಡಿದ ಪಾರ್ಶ್ವವಾಯುವಿನಿಂದಾಗಿ ಅವಳ ಸೊಂಟ ಕಾಲುಗಳಲ್ಲಿ ರಕ್ತಚಲನೆ ನಿಂತು ಮೇಲೇಳದಾಗಿದ್ದಳು. ಪಾರ್ವತಿಯ ನಾಲಗೆಯೂ ದಪ್ಪಗಾಗಿತ್ತು ಮಾತು ನಿಧಾನವಾಗಿ ತೊದಲಿಸಿ ಆಡುತ್ತಿದ್ದಳು. ನೀಲಕಂಠಪ್ಪನೂ ತನಗೆ ತೋಚಿದ ಕಂಡು, ಕೇಳಿದ ಎಲ್ಲ ಕಡೆಯಿಂದಲೂ ಔಷಧೋಪಚಾರಗಳನ್ನು ನಡೆಸಿ ವಿಫಲನಾಗಿದ್ದ.

ಈ ಆರು ವರುಷಗಳೂ ಅವನ ಜೀವನದ ಅಜ್ಞಾತವಾಸ ಎನ್ನಬೇಕು. ಎಷ್ಟು ಬೇಜವಾಬ್ದಾರಿಯಿಂದ ಉಢಾಳನಂತೆ ವರ್ತಿಸುತ್ತಿದ್ದನೋ ಈಗಷ್ಟು ಜವಾಬ್ದಾರಿ ಯುಳ್ಳವನಾಗಿ ಶಾಂತಮೂರ್ತಿಯಾಗಿ ನಡೆಯುತ್ತಿದ್ದ.

ಹೆಂಡತಿಯ ಲಾಲನೆ-ಪಾಲನೆ; ಸೇವೆ-ಶುಶ್ರೂಷೆ; ಮಗನ ಯೋಗಕ್ಷೇಮ ಅಡಿಗೆ ಮೊದಲಾದ ಮನೆಯ ಎಲ್ಲ ಕಾರ್ಯಗಳನ್ನೂ ತಾನೇ ವಹಿಸಿಕೊಂಡ. ಹೊರಗಿನ ಕೆಲಸಕ್ಕೆ ಮಾದನ ಹೆಂಡತಿ ನೆರವಾಗುತ್ತಿದ್ದಳು.

ಅಷ್ಟು ದೊಡ್ಡ ಜಮೀನ್ದಾರಿಕೆಯಿದ್ದರೂ; ಯಥೇಷ್ಟನಾಗಿ ಆಳು-ಕಾಳಿದ್ದರೂ ಮನೆಯ ಕೆಲಸಗಳಿಗೆ ಬೇರೊಬ್ಬನನ್ನು ನಂಬಿದವನಲ್ಲ. ಬೆಳಗಿನ ಒಂಬತ್ತು-ಹತ್ತು

ಗಂಟೆಗೆಲ್ಲ ಮನೆಯ ಕೆಲಸಗಳನ್ನೆಲ್ಲ ಪೂರೈಸುತ್ತಿದ್ದ. ಬೆಳಗಿನ ತಿಂಡಿ-ಕಾಫಿ, ಮಧ್ಯಾಹ್ನದ ಊಟಕ್ಕೆ ಅನ್ನ, ಒಂದಿಷ್ಟು ತರಕಾರಿಯ ಹುಳಿ ಮಾಡಿ, ದೇವರ ಪೂಜೆ ಮುಗಿಸಿ, ಪಾರ್ವತಿಯನ್ನು ಬಚ್ಚಲಮನೆಗೆ ಕರೆದೊಯ್ದು, ಅವಳ ಸ್ನಾನಕ್ಕೆ ಏರ್ಪಾಟು ಮಾಡಿ ಅವಳಿಗಿಷ್ಟು ಅನ್ನ ಹಾಕಿ ತೋಟ–ಗದ್ದೆಯ ಕಡೆ ಹೊರಟನೆಂದರೆ ಮತ್ತೆ ಅವನ ಆಗಮನ ಸಾಯಂಕಾಲವೇ. ಸಂಜೆಗೆ ಬಂದವನು ಒಂದಿಷ್ಟು ಅನ್ನ ಬೇಯಿಸಿ ಮಧ್ಯಾಹ್ನದ ಹುಳಿಯನ್ನೋ ಸಾರನ್ನೋ ಬಿಸಿ ಮಾಡಿ ಪಾರ್ವತಿಗೂ ಬಡಿಸಿ, ತಾನೂ, ಮಗ ಕೂಡಿ ಊಟ ಮಾಡಿ ಮಲಗಿದರೆಂದರೆ ಒಂದು ದಿನ ಕಳೆದಂತೆ.

ಹೀಗೆಯೇ ಆರು ವರುಷಗಳು ಕಳೆದಿದ್ದ.

ಒಮ್ಮೊಮ್ಮೆ ಬೇಸರ ಬಂದರೆ ಊರಿಗೆ ಹೋಗಿ ಪೇಟೆಯಲ್ಲಿ ಅಡ್ಡಾಡಿ ಬರುತ್ತಿದ್ದ. ಆರು ವರುಷಗಳಲ್ಲಿ ನೀಲಕಂಠಪ್ಪ ಒಂದು ದಿನವೂ ಪಾರ್ವತಿಯ ಅಸಹಾಯಕ ಸ್ಥಿತಿ ನೋಡಿ ಬೇಸರ ಪಟ್ಟವನಲ್ಲ. ತನ್ನ ಗಂಡ ಮಾಡುವ ಶುಶ್ರೂಷೆಗೆ ತಾನೇ ನಾಚಿ ನಲುಗಿ ನುಗ್ಗಾಗುತ್ತಿದ್ದಳು. ಕೃತಜ್ಞತೆಯ ಹೊನಲನ್ನೇ ಹರಿಸಿಬಿಡುತ್ತಿದ್ದಳು.

ಅದೊಂದು ರಾತ್ರಿ ಪಾರ್ವತಿಗೆ ಸ್ವಲ್ಪ ಮಂದವಾದಂತಾಗಿ ನಾಲ್ಕಾರು ಬಾರಿ ಮಲ ವಿಸರ್ಜನೆಯಾಯಿತು. ಬೆಳಗೆಲ್ಲ ಪಾರ್ವತಿಯನ್ನು ಎತ್ತಿಕೊಂಡು ಹೋಗಿ ಶೌಚ ಗೃಹದಲ್ಲಿ ಕುಳ್ಳಿರಿಸಿ ಮತ್ತೆ ಕರೆತಂದು ನೀಲಕಂಠಪ್ಪನೂ ಸೋತಿದ್ದ. ಇದನ್ನು ಅರಿತ ಪಾರ್ವತಿ ಗಂಡನಿಗೆ ಇನ್ನು ತ್ರಾಸ ಕೊಡಬಾರದೆಂದು ಯೋಚಿಸಿ ದೇಹ ಬಾಧೆಯನ್ನು ಆದಷ್ಟೂ ತಡೆದಳು. ಆದರೆ ಕೊನೆಗೆ ತಡೆಯಲಿಕ್ಕಾಗದೆ ಹಾಸಿಗೆಯಲ್ಲೇ ಎಲ್ಲವನ್ನೂ ಮಾಡಿ ಬೆಳಕು ಹರಿಸಿದಳು. ಬೆಳಗಾಗ ಎದ್ದ ನೀಲಕಂಠಪ್ಪ ಪಾರ್ವತಿಯ ಕಸಿವಿಸಿ ಕಂಡು, ಅರ್ಥ ಮಾಡಿಕೊಂಡು ಅವಳನ್ನು ಬಚ್ಚಲ ಮನೆಗೆ ಕರೆದೊಯ್ದನು. ಸ್ನಾನ ಮಾಡಿಸಿ ಬಂದು, ಹಾಸಿಗೆ ಮೇಲಿನ ಬಟ್ಟೆ ಬದಲಿಸಿ ಅವಳನ್ನು ಮಂಚದಮೇಲೆ ಕರೆತಂದು ಕುಳ್ಳಿರಿಸಿದನು. ಹಾಸಿಗೆ ಮೇಲಿಂದ ತೆಗೆದ ಬಟ್ಟೆಗಳನ್ನೆಲ್ಲ ತಾನೇ ಬಚ್ಚಲಲ್ಲಿ ನಿಂತು ಶುಚಿಮಾಡಿ ಗಳುವಿನಮೇಲೆ ಹರವಿ ಒಳಗೆ ಬಂದನು. ಇದನ್ನೆಲ್ಲ ನೋಡುತ್ತಿದ್ದ ಪಾರ್ವತಿಗೆ ಗಂಡನ ಕೈಲಿ ಮಾಡಿಸಬಾರದಂತ ಕೆಲಸ ಮಾಡಿಸುವ ಪಾಪಿತನವನ್ನು ದೇವರು ನನಗೆ ಕೊಟ್ಟನೆಂದು ದೊಡ್ಡದಾಗಿ ಅಳಲುಪಕ್ರಮಿಸಿದಳು.

ನೀಲಕಂಠಪ್ಪ ಹತ್ತಿರ ಬಂದು ಏನು ಸಮಾಧಾನ ಹೇಳಿದರೂ ಕೇಳದಾದಳು. ಅವನ ಕಾಲು ಹಿಡಿದು ಗೋಳೋ ಎಂದು ಅತ್ತಳು. ಅವನೆರಡು ಪಾದಗಳ ಮೇಲೆ ಮುಖವಿಟ್ಟು ಮತ್ತೆ ಮೇಲೆತ್ತದಾದಳು. ಆ ದಿನ ಸುಮಾರು ಹೊತ್ತೇ ಆಯಿತು ನೀಲಕಂಠಪ್ಪನಿಗೆ ಪಾರ್ವತಿಗೆ ಸಮಾಧಾನ ಹೇಳುವಾಗ.

ಇನ್ನೊಂದು ದಿನ ಪಾರ್ವತಿ ಹೇಳಿದ್ದಳು

'ನೀವು ನನಗೆ ಗಂಡನಲ್ಲ. ತಂದೆ–ತಾಯಿ ಎಲ್ಲವೂ ಆಗಿರುವಿರಿ. ಮುಂದಿನ ಜನ್ಮದಲ್ಲಿ ದೇವರು ನಿಮ್ಮ ಮಗಳಾಗಿ ಹುಟ್ಟುವ ಭಾಗ್ಯ ಕರುಣಿಸಲಿ' ಎಂದು ಹಲುಬಿದಳು.

ಒಮ್ಮೆ ಆ ಹಳ್ಳಿಗೆ ಟೆಂಟ್ ಸಿನಿಮಾ ಒಂದು ಬಂದಿತ್ತು. ಹೇಮರೆಡ್ಡಿ ಮಲ್ಲಮ್ಮ ಚಿತ್ರ ಪ್ರದರ್ಶಿಸುತ್ತಿತ್ತು. ಪ್ರದರ್ಶನದ ಕೊನೆಯದಿನ ನೀಲಕಂಠಪ್ಪ ಪಾರ್ವತಿಯನ್ನು ಹೇಗೊ ಒಪ್ಪಿಸಿ ತಾನೇ ಅವಳನ್ನು ಎತ್ತಿಕೊಂಡುಹೋಗಿ ಸಿನಿಮಾದಲ್ಲಿ ಕುಳ್ಳಿರಿಸಿ ಅದು ಮುಗಿದನಂತರ ಮತ್ತೆ ಕರೆತಂದನು. ಆ ಹಳ್ಳಿಯಲ್ಲಿ ಅದೊಂದು ಅಪೂರ್ವ ದೃಶ್ಯ ವಾಗಿತ್ತು. ಆ ಬಗ್ಗೆ ಹಲವರು ಆಡಿಕೊಂಡರು ಹಲವರು ಹೊಗಳಿದರು. ಒಟ್ಟಿನಲ್ಲಿ ಕೈಲಾಗದೆ ಮೂಲೆಗುಂಪಾದ ಹೆಂಡತಿಯನ್ನು ನೋಡಿಕೊಳ್ಳುವುದರಲ್ಲಿ ಆ ಸುತ್ತು ಮುತ್ತಲಿನಲ್ಲೇ ನೀಲಕಂಠಪ್ಪನ ಹೆಸರು ಮಾದರಿಯಾಗಿತ್ತು.

ಪಾರ್ವತಿ ಸಾವಿರ ಬಾರಿ ಹೇಳಿದ್ದಳು 'ನೀವು ಇನ್ನೊಂದು ಮದ್ವೆ ಮಾಡಿಕೊಳ್ಳಿ ನನ್ನಿಂದ ನಿಮಗೇನು ಸುಖವಿಲ್ಲ' ಎಂದು

ಪಾರ್ವತಿಯ ಬಾಯಿಂದ ಆ ಮಾತು ಕೇಳಿದಾಗಲೆಲ್ಲ ತನ್ನ ಮಗ ಪ್ರಭುವಿನ ಪ್ರೈಮರಿ ರೀಡರ್‌ನಲ್ಲಿರುವ 'ನ್ಯಾಯದ ಗಂಟೆ' ಕಥೆ ಜ್ಞಾಪಕಕ್ಕೆ ಬರುತ್ತಿತ್ತು ನೀಲ ಕಂಠಪ್ಪನಿಗೆ. ದುಡಿದು ಮುಪ್ಪಾದ ಕುದುರೆಯೊಂದು ಹಸಿವಿನ ಬಾಧೆಯನ್ನು ತಡೆಯ ಲಾರದೆ ಆ ಊರಿನ ದೊರೆಗೆ ತಮ್ಮ ಕಷ್ಟಗಳ ಬಗ್ಗೆ ನಿವೇದಿಸಿಕೊಳ್ಳಲು ಕಟ್ಟಿದ ಗಂಟೆಯ ಸರಪಳಿ ಮೇಲೆ ಹಬ್ಬಿದ ಬಳ್ಳಿಯನ್ನು ತಿನ್ನಲು ಕುದುರೆ ಬಾಯಿ ಹಾಕಿದಾಗ, ಆ ಗಂಟೆ ತಾಡನಗೊಂಡು ಸದ್ದು ಮಾಡಿತಂತೆ. ಅದನ್ನು ಕೇಳಿದ ದೊರೆ ಹೊರಗೆ ಬಂದನಂತೆ. ಹಸಿದು, ಹಬ್ಬಿದ ಬಳ್ಳಿಗೆ ಬಾಯಿ ಬಿಡುತ್ತಿದ್ದ ಕುದುರೆಯನ್ನು ನೋಡಿ ಅದರ ಕೈಲಿ ದುಡಿಸಿಕೊಂಡ ಯಜಮಾನ ಮುಪ್ಪಿನಲ್ಲೂ ಅದನ್ನು ಸಾಕಬೇಕೆಂದು ನ್ಯಾಯ ತೀರ್ಪಿತ್ತ ಕಥೆಯೊಂದು ಅವನ ನೆನಪಿನ ನೆತ್ತಿಯನ್ನು ಚುಚ್ಚುತ್ತಿತ್ತು.

ಆ ಮುಪ್ಪಿನ ಕುದುರೆಯಂತೆಯೇ ಪಾರ್ವತಿಯ ಸ್ಥಿತಿಯೂ ಕೂಡ. 'ಅವಳು ಚೆನ್ನಿರುವಾಗ ಅವಳಿಂದ ದುಡಿಸಿ, ದಣಿಸಿ ಸುಖ ಪಡಬಹುದಂತೆ' ಅವಳು ಅಸಹಾಯಕ ಳಾದಾಗ ಏಕೆ ಅವಳನ್ನು ಪಾಲಿಸಿ ಪೋಷಿಸಬಾರದು ಎಂಬ ತರ್ಕ ಅವನ ಅಂತರಾಳ ದಲ್ಲೇಳುತ್ತಿತ್ತು. ಆ ವಿವೇಕದಿಂದಲೇ ಕಳೆದ ಆರು ವರುಷಗಳಿಂದಲೂ ಸೌಮ್ಯ ತಾಳಿ ಸೇವಾಪರನಾಗಿ ನಿಂತಿರುವುದು.

ಅವನ ಮನಸ್ಸು ಇತ್ತೀಚಿಗೆ ತುಂಬ ಅಳುಕಿ ಅಧೀರಗೊಳ್ಳುತ್ತಿತ್ತು. ಅದರಲ್ಲೂ ಪಾರ್ವತಿಯ ಆಗಿನ ಸ್ಥಿತಿ ನೋಡಿದಾಗಲೆಲ್ಲ 'ನನ್ನ ವಿವೇಕ ಮಣ್ಣು ಮುಕ್ಕಿತ್ತೆ? ನನ್ನ ಪ್ರಜ್ಞೆಗೆ ರಾವು ಬಡಿದಿತ್ತೆ?' ಎಂದುಕೊಳ್ಳದಿರಲಾರ. ಪಾರ್ವತಿಯ ಇಂದಿನ ವ್ಯಥೆ ಗೆಲ್ಲ ತಾನೇ ಹೇತು ಎಂದುಕೊಳ್ಳುತ್ತಿದ್ದ. ಮುಂದೆ ಏನಾದರೂ ಹೆಚ್ಚು, ಕಡಮೆಯಾದರೆ ತಾನಾಗಿ ಪಾರ್ವತಿಯನ್ನು ಕೊಂದಂತೆ ಆಗುವುದಲ್ಲ ಎಂಬ ಅಳುಕು ಅವನ ಅಳ್ಳೆದೆಯನ್ನು ಅಲುಗಾಡಿಸುತ್ತಿತ್ತು.

ಹೋಮಿಯೋಪತಿಯಿಂದ ಯಾವ ಗುಣವನ್ನೂ ಕಾಣದೆ ಅಲೋಪತಿಯನ್ನು ಆಶ್ರಯಿಸಿದಾಗ ಸ್ವಲ್ಪ ಗುಣ ಕಂಡುಬಂದಿತ್ತು. ಅಂದೇ ಡಾಕ್ಟರು ಹೇಳಿದ್ದರು 'ಈಕೆಯ ಸೊಂಟಕ್ಕೆ ಬಲವಂತೂ ಬರಲಾರದು. ಆದರೂ ಇದೇ ಸ್ಥಿತಿಯಲ್ಲಿ ಈಕೆ

ಯನ್ನು ಕಾಪಾಡಿಕೊಂಡು ಬಂದರೆ ಬಹುಕಾಲ ಬದುಕಬಲ್ಲಳು. ಆದರೆ ಇದಕ್ಕೆ ಹಾಸಿಗೆ ಪಥ್ಯ ಬಹಳ ಮುಖ್ಯ. ಈಕೆ ಮತ್ತೊಮ್ಮೆ ಮೈತುಂಬಿಕೊಂಡರೆ ಗಂಟೆಗೇ ಮೋಸ' ಎಂದಿದ್ದರು. ಅದರಂತೆಯೇ ನೀಲಕಂಠಪ್ಪ ಹಾಸಿಗೆ ಪಥ್ಯ ವಹಿಸಿದ್ದ. ಮೊದಲ ನಾಲ್ಕೈದು ವರುಷಗಳು ಪಾರ್ವತಿ–ನೀಲಕಂಠಪ್ಪನವರಲ್ಲಿ ಪರಸ್ಪರ ತಾವು ಗಂಡ–ಹೆಂಡತಿ ಎಂಬ ಭಾವನೆಯೇ ಇಲ್ಲದಂತಾಗಿತ್ತು. ಆದರೊಂದು ವಿಷದಿನ ದೈಹಿಕ ಕಾಮನೆಯನ್ನು ತಡೆಯದಾದ ನೀಲಕಂಠಪ್ಪ ತಿಳಿದೂ ತಿಳಿದೂ ತಪ್ಪುಮಾಡಿದನು. ಅದರ ಫಲ ಫಲಿಸಿತೆಂದು ತಿಳಿವಾಗ ನೀಲಕಂಠಪ್ಪನ ಎದೆಗುಂಡಿ ಕಳಚಿಕೊಂಡಿತು. ಅಂದಿನಿಂದಲೇ ತಾನು ಗೈದ ಅನ್ಯಾಯಕ್ಕೆ ಪಶ್ಚಾತ್ತಾಪ ಪಡತೊಡಗಿದ. ಆದರೇನು ಎಲ್ಲ ಅವನ ಹಿಡಿತ ಮೀರಿ ನಿಂತಿತ್ತು.

ಈ ಎಲ್ಲ ವಿಪತ್ಪರಂಪರೆಗಳು ಅವನ ಮಿದುಳ ಚಕ್ರದಲ್ಲಿ ಉರುಳುತ್ತಿರುವಾಗ ಹಳ್ಳಿಯ ಬಂಡಿಜಾಡನ್ನು ತಟಾಯ್ದು ಟಾರುರಸ್ತೆಗೆ ಬಂದಿದ್ದನು. ಇನ್ನು ಸೈಕಲ್ಲು ಹತ್ತಬಹುದಲ್ಲ ಎಂದು ಯೋಚಿಸಿ ಸೈಕಲ್ಲು ಹತ್ತಿದನು.

ಮತ್ತೆ ಅವೇ ನೆನಪುಗಳು ತನ್ನ ಪಾರ್ವತಿ ನೆಲಕಚ್ಚಿದ ಮೇಲೆ ಆ ಹಳ್ಳಿಯಲ್ಲಿ ಅವನು ಯಾರ ಹತ್ತಿರವೂ ಸೇರದಾದ. ತಾನಾಯಿತು—ತನ್ನ ಕೆಲಸವಾಯಿತು. ಅನೇಕವೇಳೆ ಅವನು ಒಂಟಿವೀರನಾಗಿಯೇ ಕೆಲಸಗಳನ್ನು ಸಾಧಿಸಿದ್ದುಂಟು. 'ಹೇಗಿದ್ದ ಮನುಷ್ಯ ಹೇಗಾದ?' ಎಂದು ಹಳ್ಳಿಯವರು ಅಂದುಕೊಳ್ಳದೆ ಇರಲಿಲ್ಲ. ಆ ಹಳ್ಳಿಗೇ ದೊಡ್ಡಕುಳ ಎನಿಸಿಕೊಂಡ ರಾಮೇಗೌಡನ ದ್ವೇಷವನ್ನು ಕಟ್ಟಿಕೊಂಡಾಗಿತ್ತು. ಎಲ್ಲರ ದೃಷ್ಟಿಯಲ್ಲೂ ನೀಲಕಂಠಪ್ಪ ತಪ್ಪಿತಸ್ಥನೇ ಆಗಿದ್ದ. ಸಿಡಿಲೊಡೆದು ಅರ್ಧ ಉಳಿದಿದ್ದ ಆ ಮರವನ್ನು ಕಡಿದು ಹಾಕಿದರೆ ಏನಾಗುತ್ತೆ? ಇದೆಲ್ಲಾ ರಾಮೇಗೌಡನ ತೋಟಕ್ಕೆ ಸಲೀಸಾಗಿ ನೀರು ಹೋಗುತ್ತೆಂಬ ಅಸೂಯೆ ನೀಲಕಂಠಪ್ಪನಿಗೆ ಇದೆ ಎನ್ನುವಂತಾದರು.

ವಾಸ್ತವದಲ್ಲಿ ನೀಲಕಂಠಪ್ಪ ಅದೊಂದನ್ನೂ ಯೋಚಿಸದವ. ಆ ಮರದ ಮೇಲಿನ ತನ್ನ ಅಭಿಮಾನ, ಯಾರೋ ತನ್ನ ಪೂರ್ವಿಕರು ನೆಟ್ಟಮರ. ಅನೇಕ ವರುಷ ಫಲ ನೀಡಿದೆ—ನೀಡುತ್ತಿದೆ. ನಾನೂ ಅದರ ಫಲ ಉಂಡು ಬೆಳೆದಿದ್ದೇನೆ. ಅದನ್ನು ನಾನಾಗಿ ಕಡಿಯಲಾರೆ. ತಾನಾಗಿ ಬೇಕಾದರೆ ಉರುಳಲಿ ಎಂಬ ಬುದ್ಧಿ ಅವನದು. ಇದನ್ನು ತಿಳಿದವರು ಆ ಹಳ್ಳಿಯಲ್ಲಿ ಪ್ರಾಯಶಃ ಒಬ್ಬರೂ ಇದ್ದಿಲ್ಲ. ಅದರಿಂದಾಗಿ ನೀಲಕಂಠಪ್ಪ ಒಂಟಿವೀರನಾಗಿಯೇ ಉಳಿಯಬೇಕಾಯಿತು.

ಟಾರುರಸ್ತೆಗೆ ಬಂದ ಮೇಲೆ ಸೈಕಲ್ಲು ಹತ್ತಿ ಊರು ಸೇರಿದ. ಪರಿಚಿತವಾದ ಒಂದೆರಡು ಗಲ್ಲಿಗಳಲ್ಲಿ ಅಲೆದ. ಸಂಗಪ್ಪನ ಹೋಟೆಲ್ಲಲ್ಲಿ ಬೋಂಡಾ ತಿಂದು ಚಹಾ ಕುಡಿದ. ಅಲ್ಲಿದ್ದ ನಾಲ್ಕು ಜನರ ಎದುರು ಬಾಯಿಗೆ ಬಂದದ್ದು ಗಳಪಿದ. ಆದರೆ ಏನೋ ಮನಸ್ಸಿಗೆ ಅಶಾಂತಿ—ದುಗುಡ. ಎದೆ ವಿನಾಕಾರಣ ದವಡವ ಬಡಿಯುತ್ತಿತ್ತು. ಕ್ಷಣಕ್ಷಣಕ್ಕೂ ಅವನ ಉದ್ವಿಗ್ನತೆ ತೀವ್ರಗೊಳ್ಳುತ್ತಿತ್ತು. ಏನೆಂದು ಹೇಳಿಕೊಳ್ಳಲಾರ. ಎಲ್ಲಿಯೂ ನಿಲ್ಲಲಾರ, ಕೂಡಲಾರ ಹೀಗಾಗಿ ಇನ್ನೊಮ್ಮೆ ಚಹಾ ಕುಡಿದ.

ಏನೋ ಥಟ್ಟನೆ ಜ್ಞಾಪಕ ಬಂದು ಸೈಕಲ್ಲು ಹತ್ತಿ ವಾಚ್ ರಿಪೇರಿ ಪುಟ್ಟಯ್ಯನ ಅಂಗಡಿ ಬಳಿ ಬಂದು ಅವನ ಕೈಗೆ ಪೆಂಡುಲಂ ಗಡಿಯಾರ ಕೊಟ್ಟು ಆ ದಿನವೇ ಅದರ ರಿಪೇರಿ ಮಾಡು ಎಂದ. ಅವನು ಗಡಿಯಾರವನ್ನು ಬಿಚ್ಚಿನೋಡಿ ಇದನ್ನು ರಿಪೇರಿ ಮಾಡಿಸುವುದರಿಂದ ಏನೂ ಪ್ರಯೋಜನವಿಲ್ಲ. ಇದರ ರಿಪೇರಿ ದುಡ್ಡಿಗೆ ಹೊಸ ಗಡಿಯಾರ ಬರುತ್ತೆ. ಅಲ್ಲದೆ ಇದಕ್ಕೆ ಬೇಕಾಗುವ ಒರಿಜಿನಲ್ ಪಾರ್ಟ್ಸ್ ಸಿಗುವುದು ಕಷ್ಟ' ಎಂದ.

ಒಂದು ನಿಮಿಷ ನೀಲಕಂಠಪ್ಪನ ಬುದ್ಧಿ ತುಯ್ದಾಡಿತು. 'ಇದು ನಿನ್ನ ಬಳಿಯೇ ಇರಲಿ. ನಾಳೆ ಬಂದು ಏನು ಮಾಡಬೇಕೆಂದು ಹೇಳುತ್ತೇನೆ' ಎಂದು ಗಡಿಯಾರವನ್ನು ಅಲ್ಲಿಯೇ ಇಟ್ಟು ಸೈಕಲ್ಲು ಹತ್ತಿದ.

ನೇರ ಜನರಲ್ ಆಸ್ಪತ್ರೆಗೆ ಹೊರಟ. ಅಲ್ಲಿ ಅವನಿಗೆ ಪರಿಚಿತರಾದ ಡಾಕ್ಟರು ಸುಬ್ರಮಣ್ಯಂ ಅವರನ್ನು ಕಂಡು ಮಾತನಾಡಿದ. ಹೆಂಡತಿಯ ಸ್ಥಿತಿಗತಿಗಳನ್ನು ತಿಳಿಸಿದ. ತಾವೊಮ್ಮೆ ಬಂದು ನೋಡಬೇಕೆಂದು ಅಂಗಲಾಚಿದ. ಅವರು 'ಮುಂದಿನ ಬುಧವಾರ ಕಾರು ತಂದರೆ ನಿಮ್ಮ ಹಳ್ಳಿಗೆ ಬರುತ್ತೇನೆ' ಎಂದರು. ಅದಕ್ಕೆ ಒಪ್ಪಿ ಅಲ್ಲಿಂದ ನಡೆದ.

ಆದರೂ ಅವನ ಎದೆಯ ಬಡಿತ ನಿಲ್ಲಲಿಲ್ಲ. ಜೋರೇ ಆಯಿತು. ಊರಲ್ಲಿ ಏನಾದರೂ ಆಯಿತೋ ಏನೋ ಎನ್ನಿಸಿತು ಒಮ್ಮೆ. ಅಷ್ಟು ಹೊತ್ತಿಗೆ ಗಂಟೆ ಮೂರಾಗಿತ್ತು. ನೇರ ಕೃಷ್ಣ ಸಿನಿಮಾದ ಹತ್ತಿರ ಹೋಗಿ ಟಿಕೀಟುಕೊಂಡು ಸಿನಿಮಾದಲ್ಲಿ ಕುಳಿತ.

ಅಲ್ಲಿಯೂ ಅವನಿಗೆ ಚಿಂತೆಗಳೇ. ನಾಳಿದ್ದು ಸೋಮವಾರ. ಪಂಚಾಯ್ತಿ ಸೇರುತ್ತೆ. ಮಾವಿನಮರ ಕಡಿ ಇಲ್ಲವೇ ನಾವೇ ಕಡಿಸುತ್ತೇವೆ ಎನ್ನುತ್ತಾರೆ. ಆಗೇನು ಉತ್ತರ ಹೇಳುವುದು. ಪಂಚಾಯ್ತಿ ವಿರುದ್ಧ ಹೋಗಿ ಹಳ್ಳಿಯಲ್ಲಿ ಬದುಕುವುದೆಂತು? ಹಾಗೆಂದು ನನ್ನ ಕಣ್ಣಾರೆ ಆ ಮರ ಕಡಿದು ಉರುಳುವುದನ್ನು ಕಾಣಲಾರೆ ಎಂದು ತವಕ ಪಟ್ಟ. ಹಾಗೂ ಹೀಗೂ ಸಿನಿಮಾ ನೋಡಿ ಎದ್ದು ಬಂದು ಸೈಕಲ್ಲು ಹತ್ತಿ ಹಳ್ಳಿಗೆ ಅಭಿಮುಖ ಮಾಡಿ ಹೊರಟ.

ಟಾರುರಸ್ತೆ ಮುಗಿದು ಬಂಡಿಜಾಡಿಗೆ ಇಳಿಯುತ್ತಿದ್ದಂತೆ ಸಂಜೆಗತ್ತಲು ಆವರಿಸಿತು. ಮುಗಿಲಲ್ಲಿ ಬೆಳಗಿನಿಂದ ಅಲ್ಲಲ್ಲೆ ಅಲೆಯುತ್ತಿದ್ದ ಮೋಡಗಳು ಪರಸ್ಪರ ಭೇಟಿಯಾಗಿ ತೆಕ್ಕೆ ಬಿದ್ದವು. ಪರಿಣಾಮವಾಗಿ ಮಳೆ ಧೋ ಎನ್ನತೊಡಗಿ ಮುಗಿಲೇ ಹರಿದುಬಿದ್ದಂತಾಯಿತು. ಮುಂದಿನ ದಾರಿ ಕಾಣದಾಯಿತು. ಹಾಗೂ ಹೀಗೂ ಆ ಜಿಗಟು ಮಣ್ಣಿನಲ್ಲೇ ಸೈಕಲ್ಲು ಹತ್ತಿ ತುಳಿದ. ತುಳಿದೇ ತುಳಿದ.

ಒಂದರ್ಧ ಫರ್ಲಾಂಗ್ ಹೋದನೆಂದು ಕಾಣುತ್ತೆ. ಬೆಸಗೆ ಹಾಕಿದ್ದ ಸೈಕಲ್ ಫ್ರೇಂ ಕಟ್ ಎಂದು ಕೆಳಗೆ ಬಿದ್ದ.

ಮೊಳಕೈ ಮೊಣಕಾಲು ಅಲ್ಲಲ್ಲೆ ತರಚಿಕೊಂಡಿತು. ತಡವರಿಸಿ ಮೇಲೆದ್ದ. ಮಳೆ ಹನಿಗಳ ಪಟಪಟ ಶಬ್ದ, ಗವ್ ಎನ್ನುವ ಕತ್ತಲು ಇವುಗಳಿಂದಾಗಿ ಸೈಕಲ್ಲು ಎಲ್ಲಿದೆಯೆಂದು ಕಾಣದೆ ತಡಕಾಡಿದ. ಬಾನಲ್ಲಿ ಮಿಂಚೊಂದು ಥಳಾರ್ ಎಂದಾಗ

ಪಕ್ಕದ ಬದುವಿನಲ್ಲಿ ಸೈಕಲ್ಲು ಬಿದ್ದಿದ್ದು ಕಂಡು ಕೈಗೆತ್ತಿಕೊಂಡು ತಡವರಿಸುತ್ತ ಮುಂದೆ ಸಾಗಿದ. ದಿಗಂತದ ಸುತ್ತಲೂ ಮಿಂಚಿನ ಸಾಲುಚಪ್ಪರ; ಅದಕ್ಕೆ ಅಂಟಿಯೇ ಬಂದ ಗುಡುಗಿನ ಆರ್ಭಟ ಕೇಳಿದಾಗ ನೀಲಕಂಠಪ್ಪನ ಎದೆ ಬಡಿಬಡಿದು ನಿಲ್ಲುತಿತ್ತು.

ಆರು ವರುಷಗಳ ಕೆಳಗೆ ಇಂಥದೆ ಸನ್ನಿವೇಶ ಒದಗಿ ಸೈಕಲ್ಲು ಮುರಿದಿತ್ತು. ಅಲ್ಲಿಂದ ಏನೆಲ್ಲ ತೊಂದರೆಗಳನ್ನು ಅನುಭವಿಸಿದ್ದ. ಅಂದು ಹಾಕಿಸಿದ ಸೈಕಲ್ಲು ಬೆಸುಗೆ ಇಂದು ಮತ್ತೆ ಬಿಟ್ಟಿತ್ತು. ಆದರೆ ಮುಂದೇನು ತನಗಾಗಿ ಕಾದಿದೆಯೋ ಎಂಬ ಭಯ ಅವನ ಶಕ್ತಿಯನ್ನೆಲ್ಲ ಕುಗ್ಗಿಸಿಬಿಟ್ಟಿತು. ಕಾಲುಗಳನ್ನು ಮುಂದಿಕ್ಕಿದಾದ.

ಪ್ರಯಾಸದಿಂದ ಕಡೆಗೊಮ್ಮೆ ಹಳ್ಳಿ ಮುಟ್ಟಿದ. ಮನೆಯ ಹತ್ತಿರ ಬಂದು ಹಟ್ಟಿಯ ಮೂಲೆಯಲ್ಲಿ ಸೈಕಲ್ಲು ತೆಳ್ಳಿ ಒಳಗೆ ನಡೆದ. ಹಚ್ಚಿಟ್ಟ ಲಾಂಟೀನಿನ ಮಂದ ಪ್ರಕಾಶದಲ್ಲಿ ಪಾರ್ವತಿಯನ್ನು ನೋಡಿದ. ತುಸುವೇ ಧೈರ್ಯ ಬಂದಿತು. ತೀರ ಹತ್ತಿರಹೋಗಿ ಅವಳ ಮಂಚದ ಮೇಲೆ ಕುಳಿತ.

'ಪಾರ್ವತಿ'

'........' ಪಾರ್ವತಿ ಮಾತನಾಡಲಿಲ್ಲ.

ಮತ್ತೆ ಅದೇ ಧ್ವನಿಯಲ್ಲಿ 'ಪಾರ್ವತೀ........' ಎಂದ ನೀಲಕಂಠಪ್ಪ

ಈ ಬಾರಿಯೂ ಆಕೆ ಮಾತನಾಡಲಿಲ್ಲ. ಬದಲಿಗೆ ತನ್ನೆರಡು ಕಣ್ಣುಗಳನ್ನು ಅವನ ಮುಖಕ್ಕೆದುರು ನಿಲ್ಲಿಸಿದಳು. ಒಂದೇ ಕ್ಷಣ ಆ ಕಣ್ಣುಗಳನ್ನು ದಿಟ್ಟಿಸಿದ. ಪಾರ್ವತಿಯ ಕೆಳರೆಪ್ಪೆಗಳಲ್ಲಿ ನೀರು ನಿಂತಿತ್ತು. ಅದನ್ನು ಕಂಡು ಅಧೀರನಾದ.

ನಿಜಕ್ಕೂ ಪಾರ್ವತಿ ಅವನಿಗೆ ನಿಸ್ತೇಜಳಾಗಿ ಕಂಡಳು. ಗಾಬರಿಯಾಯಿತು.

'ಏನು, ಪಾರ್ವತಿ ?' ಎಂದು ಮತ್ತೊಮ್ಮೆ ಪ್ರಶ್ನಿಸಿದ. ಅದುವರೆಗೂ ತಡೆದಿದ್ದ ಅವಳ ಕಣ್ಣೀರಿನ ಕಟ್ಟೆ ಒಡೆಯಿತು. ನೀಲಕಂಠಪ್ಪನ ಎರಡು ಕೈಗಳನ್ನು ಹಿಡಿದು ಮುಳುಮುಳು ಅತ್ತಳು.

'ನನ್ನನ್ನು ಬಿಟ್ಟು ಇನ್ನೆಲ್ಲಿಗೂ ಹೋಗಬೇಡಿ........ಹೋಗಬೇಡಿ' ಎಂದು ಬೊಬ್ಬಿಡ ತೊಡಗಿದಳು.

'ಏಕೆ, ಪಾರ್ವತಿ !........ಏನಾಗಿದೆ ?' ಎಂದ ಗಾಬರಿಯಿಂದ.

'ಏನೂ, ಆಗಿಲ್ಲ........ನನಗೇಕೋ ಭಯವಾಗುತ್ತಿದೆ. ನಾನಿನ್ನು ಉಳಿಯುವುದಿಲ್ಲ. ಇರುವಷ್ಟು ಹೊತ್ತು ನನ್ನ ಬಳಿಯೇ ಇರಿ' ಎಂದು ಗದ್ಗದಿಸಿದಳು.

ಎಲ್ಲಿಯೋ ಸ್ವಲ್ಪ ಹೆದರಿವ್ವಾಳೆಂದು ತಿಳಿದು ನೀಲಕಂಠಪ್ಪ ಹಲವು ವಿಧದಲ್ಲಿ ಸಾಂತ್ವನಗೊಳಿಸಲು ಯತ್ನಿಸಿದನು. ಊರಿನಿಂದ ಸೋಮವಾರ ಡಾಕ್ಟರು ಬರುತ್ತಾರೆಂದು ಹೇಳಿದನು. 'ಅವರ ಸಲಹೆ ಕೇಳಿ ಗಾಡಿಕಟ್ಟಿಸಿಕೊಂಡು ನಿನ್ನನ್ನು ಊರಿನ ದೊಡ್ಡ ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತೇನೆ. ಹೇಗೂ ಈಗ ಏಳು ತಿಂಗಳು ತುಂಬುತ್ತಾ ಬರುತ್ತಿದೆ. ಒಂದೆರಡು ತಿಂಗಳು ಅಲ್ಲಿಯೇ ನಿಂತು ಮನೆಮಾಡಿ ನಿನ್ನನ್ನು ಆರೈಕೆ ಮಾಡುತ್ತೇನೆ. ಚಿಂತಿಸಬೇಡ 'ಎಂದು ಅಭಯ ನೀಡಿದನು.

‘ನಾನು ಸಾಯಲು ಚಿಂತಿಸುತ್ತಿಲ್ಲ. ಬದುಕಿ ಮಾಡುವುದೇನು? ಯಾರಿಗೆ ಸುಖ ಈ ಜೀವದಿಂದ. ಆದರೆ ನೀವು ಒಂದು ನಿಮಿಷ ಕಣ್ಮರೆಯಾದರೆ ನನಗೆ ಜೀವವೇ ಹೋದಂತೆ ಆಗುತ್ತೆ. ನೋಡಿ, ಬೆಳಗಿನಿಂದ ವಂದ ಸಿಕ್ಕಾಪಟ್ಟೆ ಆಗುತ್ತಿದೆ. ನಾಲ್ಕಾರು ಬಾರಿ ಮಾದನ ಹೆಂಡತಿಯ ಸಹಾಯದಿಂದ ಬಚ್ಚಲಿಗೆ ಹೋದೆ. ಇನ್ನು ಸಾಧ್ಯವಾಗ ಲಿಲ್ಲ. ನೀವು ತಂದ ‘ಬೆಡ್-ಪಾನ್’ ಇಟ್ಟುಕೊಂಡಿದ್ದೇನೆ ಹೊಟ್ಟೆ ಬೇರೆ ಸಣ್ಣಗೆ ನೋಯುತ್ತಿದೆ. ಏನಾದರೂ ಹೆಚ್ಚು ಕಡಮೆಯಾದರೆ ನಿಮ್ಮ ಮತ್ತು ಪ್ರಭುವಿನ ಗತಿಯೇನು? ನನಗದೇ ಚಿಂತೆಯಾಗಿದೆ.

‘ನನ್ನ ಮಾತು ಕೇಳಿ, ನನ್ನ ಜೀವ ಏನಾದರೂ ಆಗಲಿ. ನೀವು ಇನ್ನೊಂದು ಮದುವೆ ಆಗಲೇ ಬೇಕು. ಇದು ನನ್ನಾಣೆ........ನನ್ನಾಣೆ’ ಎಂದು ಪಾರ್ವತಿ ಕೈಚಾಚಿ ತುಸು ದೂರದಲ್ಲಿದ್ದ ನೀಲಕಂಠಪ್ಪನ ಪಾದಗಳನ್ನು ತಡಕಲು ಯತ್ನಿಸಿದಳು. ಅವಳು ಏನು ಹೇಳುತ್ತಿರುವಳೆಂದು ತಿಳಿದ ನೀಲಕಂಠಪ್ಪ ಪಾರ್ವತಿಗೆ ಸ್ವಲ್ಪವಾದರೂ ಸಮಾಧಾನ ವಾಗಲೆಂದು ಬಗೆದು

‘ಆಗಲಿ, ನಿನ್ನ ಇಷ್ಟದಂತೆ ನಡೆದುಕೊಳ್ಳುತ್ತೇನೆ. ಈಗ ಸುಮ್ಮನಿರು’ ಎಂದನು.

ಅಷ್ಟರಲ್ಲಿಯೇ ಮಾದ ಒಳಗೆ ಬಂದು

‘ಬುದ್ದೀ, ಅರಳೀಮರದಡಿ ಪಟೇಲರು, ಶಾನುಭೋಗರು, ಶೇಕ್‌ದಾರರು ಎಲ್ಲಾ ಸೇರವ್ರೆ. ಈ ಹೊತ್ತೇ ಮಾವಿನಮರದ ಪಂಚಾಯ್ತಿ ಮಾಡ್ತಾರಂತೆ. ಆ ರಾಮೇಗೌಡ ಅಲ್ಲೇ ಅವ್ನೆ. ಈವತ್ತು ಶೇಕ್‌ದಾರ್ರು ಹಳ್ಳಿಗೆ ಬಂದಿದ್ರಂತೆ. ಈವತ್ತು ಬಿಟ್ರೆ ಅವ್ರು ಮತ್ತೆ ಒಂದು ತಿಂಗ್ಳು ಈ ಕಡೆ ಬರಲ್ವಂತೆ. ರಾಮೇಗೌಡ್ನ ಮನೇಲೆ ಎಲ್ರೂ ಊಟ ಮಾಡಿಕೊಂಡು ಬಂದು ಕುಳಿತವ್ರೆ. ಶಾನುಭೋಗಪ್ಪನ್ನೋರೇ ಪುಟ್‌ಲೈಟು ಅಚ್ತಾ ಇದ್ರು. ನಿಮ್ಮನ್ನು ಕರೀಂತ ಹೇಳ್ತಿದ್ರು’ ಎಂದು ಒಂದೇ ಸಮನೆ ಬಡಬಡಿಸಿದ.

ಮಾದ ಹೇಳಿದ ವಿಚಾರ ಕೇಳಿ ನೀಲಕಂಠಪ್ಪ ವಿಸ್ಮಯ ತಾಳಿದ. ನಾಳಿದ್ದು ಸೇರುವ ಪಂಚಾಯ್ತಿ ಈ ಹೊತ್ತೇ ಸೇರಿರುವ ಉದ್ದೇಶವೇನು? ಇದರಲ್ಲಿ ಏನೋ ಇಕ್ಮತ್ ಇದೆ. ಈಗೇನು ಮಾಡುವುದು? ಪಂಚಾಯ್ತಿ ತೀರ್ಮಾನದ ಮುಂದೆ ನಾನೇನು ಮಾಡುವಂತಿದೆ. ಶಿವ ಇಟ್ಟಂತಾಗಲಿ ಎಂದು ಮಾದನಿಗೆ ಏನೂ ಹೇಳದೆ ಹಟ್ಟಿಯಲ್ಲಿ ಶತಪಥ ತಿರುಗತೊಡಗಿದ. ಮಳೆಯೂ ಸ್ವಲ್ಪ ಬಿಡವುಕೊಟ್ಟಿತ್ತು. ಗವ್ ಎನ್ನುವ ಕತ್ತಲಲ್ಲಿ ಕಪ್ಪೆಗಳ ವಟವಟ, ಜೀರುಂಡೆಗಳ ಜೀಯ್ ಗುಡಿತ, ಮಿಣಕು ಹುಳುಗಳ ಮಿಣುಕು ಬೆಳಕು ಹಳ್ಳಿಯ ಮೌನವನ್ನು ಬೇಧಿಸುತ್ತಿತ್ತು.

ಹಾಗೇ ಅದೆಷ್ಟು ಹೊತ್ತು ಶತಪಥ ಹಾಕಿದನೋ ತಿಳಿಯದು. ಒಳಗಿನಿಂದ ಪಾರ್ವತಿ ಕೂಗಿದ ಶಬ್ದಕೇಳಿ ನೀಲಕಂಠಪ್ಪ ಒಳಗೋಡಿದ.

‘ಯಾಕೋ ಹೊಟ್ಟೆನೋವು ಜಾಸ್ತಿ ಆಗ್ತಾಇದೇರೀ, ಹೆರಿಗೆ ಆದ್ರೂ ಆಗ ಬಹುದು. ಹೇಗಾದರೂ ಆಗ್ಲಿ, ಊರ ಮುಂದಿನ ಗಂಗಕ್ಕ, ಬಾವಿಮನೆ ಮಲ್ಲವ್ವನನ್ನು ಬರಹೇಳಿ. ಹಾಗೇ ಸೂಲಗಿತ್ತಿ ಸುಬ್ಬಕ್ಕನಿಗೂ ಹೇಳಿ ಕಳುಹಿಸಿ’ ಎಂದಳು.

ನೀಲಕಂಠಪ್ಪನಿಗೆ ಜಂಘಾಬಲವೇ ಹುದುಗಿಹೋಯಿತು. 'ದೇವರೇ ಇದೇನು ಪರೀಕ್ಷೆ, ಕಾಪಾಡು' ಎಂದು ಮನೆದೇವರು ಸಿದ್ಧಲಿಂಗೇಶನನ್ನು ನೆನೆಸುತ್ತಾ ಮಾದನಿಗಾಗಿ ಹುಡುಕಾಡಿದ. ಮಾದ ಮನೆಯಲ್ಲಿರಲಿಲ್ಲ. ಪಂಚಾಯ್ತಿ ಹತ್ತಿರ ಇರ ಬೇಕೆಂದು ಊಹಿಸಿ ದನಕಾಯೋ ಹುಡ್ಗ ತಿಮ್ಮನ ಕೈಲಿ ಕರೆಕಳುಹಿಸಿದ. ಸ್ವಲ್ಪ ಹೊತ್ತಿಗೆಲ್ಲ ಮಾದ ಬಂದ.

ಬಂದವನೇ, 'ಬುದ್ಧಿ, ಆ ರಾಮೇಗೌಡ್ನೇ ಕೊನ್ಗೂ ಗೆದ್ದ. ನಾಳೆ ಮಾವಿನ ಮರ ಕಡಿಸ್ತಾರಂತೆ. ಆಗಂತ ಪಂಚಾಯ್ತಿ ತೀರ್ಮಾನ ಮಾಡೈತೆ!' ಎಂದು ದುಃಖ ದಿಂದ ಮಾದ ಬೊಬ್ಬಿರಿದ.

ಆದರೆ ನೀಲಕಂಠಪ್ಪ ಇದಾವುದನ್ನೂ ನಿಂತು ಕೇಳುವ ಸ್ಥಿತಿಯಲ್ಲಿರಲಿಲ್ಲ. ದೈವೇಚ್ಛೆ ಇದ್ದಂತೆ ನಡೆಯಿಲಿ ಎಂದುಕೊಂಡು.

'ನೋಡು, ಮಾದ! ಬಿರೀನ ಹೋಗಿ ಸೂಲಗಿತ್ತಿ ಸುಬ್ಬಕ್ಕನನ್ನು ಕರೆದು ಕೊಂಡು ಬಾ!' ಎಂದು ಮಾದನನ್ನು ಅತ್ತ ಕಳುಹಿಸಿ ಇತ್ತ ತಾನೇ ಗಂಗಕ್ಕ-ಮಲ್ಲವ್ವ ನನ್ನು ಕರೆಯಲು ಓಡಿದ.

ಸ್ವಲ್ಪ ಹೊತ್ತಿಗೆಲ್ಲ ಹಳ್ಳಿಗೇ ಹಿರಿಯ ಜೀವಿಗಳು ಎನಿಸಿದ ಗಂಗಕ್ಕ-ಮಲ್ಲವ್ವ ಸೂಲಗಿತ್ತಿ ಸುಬ್ಬಕ್ಕ ಎಲ್ಲರೂ ಸೇರಿದರು. ನೀಲಕಂಠಪ್ಪನನ್ನು ಹೊರಗೆ ಕಳುಹಿಸಿ ಬಾಗಿಲು ಹಾಕಿಕೊಂಡರು. ಮಸದ ದಿಮ್ಮಿಯಂತೆ ಬಾಗಿಲ ಬಳಿಯೇ ನೀಲಕಂಠಪ್ಪ ನಿಂತ. ಬಾಯಲ್ಲಿ 'ಸಿದ್ಧಲಿಂಗೇಶ........ಸಿದ್ಧಲಿಂಗೇಶ! ಕಾಪಾಡು!' ಎಂದು ಒಂದೇ ಸಮನೆ ಒದರುತ್ತಿದ್ದ.

ಒದೆರಡು ತಾಸು ಪಾರ್ವತಿ ತುಂಬ ನೋವು ತಿಂದಳು. ಕಿರುಚಿದಳು. ಅತ್ತಳು........ಅಯ್ಯೋ ಎಂದಳು. ತನ್ನ ಯಜಮಾನರು, ಮಗನನ್ನು ನೋಡಿಕೊಳ್ಳಿ ಎಂದು ಎದುರಿಗಿದ್ದ ಗಂಗಕ್ಕ-ಮಲ್ಲವ್ವನಿಗೆ ಮೊರೆಯಿಟ್ಟಳು.

ಸ್ವಲ್ಪ ಬಿಡುವು ಕೊಟ್ಟಿದ್ದ ಮಳೆ ಮತ್ತೆ ಪ್ರಾರಂಭವಾಯಿತು. ಬಾನಲ್ಲಿ ಮಿಂಚಿನ ಬಳ್ಳಿಗಳು ಬೆಳೆಬೆಳೆದು ಹೊಳೆದವು. ಆಕಾಶ ಗುಡುಗುಟ್ಟಿತು. ಒಂದು ಹತ್ತು ನಿಮಿಷಗಳಲ್ಲೇ ದೆವ್ವದಂಥ ಮಳೆ ಸುರಿಯತೊಡಗಿತು. ಕಣ್ಣು ಕೋರೈಸುವಂಥ ಮಿಂಚು! ಕಿವುಡು ಹುಟ್ಟಿಸುವ ಗುಡುಗಿನ ಶಬ್ದಕ್ಕೆ ನೀಲಕಂಠಪ್ಪ ಸ್ತಬ್ಧನಾಗಿ ಬಾನಿನತ್ತ ಮುಖಮಾಡಿದ.

ಇದ್ದಕ್ಕಿದ್ದ ಹಾಗೆಯೇ ಇಡೀ ಹಳ್ಳಿಯೇ ದಗ್ ಎಂದು ಬೆಳಗಿದಂತಾಯಿತು. ಮರುಕ್ಷಣದಲ್ಲೇ ಬರಸಿಡಿಲೊಂದು ಬಡಿಯಿತು. ಇಡೀ ಹಳ್ಳಿಯೇ ಬೆಚ್ಚಿ ಬೆರ ಗಾಯಿತು. ಎಲ್ಲಿಯೋ ಮರಗಳು ಕಟಕಟ ಎಂದು ಮುರಿದಂತಾಯಿತು. ಬೆಚ್ಚಿದ ನಾಯಿ-ನರಿ; ದನ-ಕರುಗಳು ಬೊಬ್ಬಿಡಲಾರಂಭಿಸಿದವು. ಎಲ್ಲವೂ ಒಂದು ಕ್ಷಣದಲ್ಲಿ ನಡೆದಂತಾಯಿತು. ಅದೇ ಸಮಯದಲ್ಲಿ ಒಳಗಿನಿಂದ ಧ್ವನಿಯೊಂದು ಚೀರಿತು. ಏನೊಂದೂ ತಿಳಿಯದೆ ಗಾಬರಿಯಾದ ನೀಲಕಂಠಪ್ಪ ವಿಚಲಿತನಾಗದೆ ನಿಂತ.

ಯಾರೋ ಒಳಗಿನ ಬಾಗಿಲು ತೆರೆದರು. ಗಂಗಜ್ಜಿ ಹೊರಬಂದು 'ಹೆಣ್ಣುಮಗು' ಎಂದಳು

ಅವಳ ಹಿಂದೆಯೇ ಬಂದ ಮಲ್ಲವ್ವ

'ಪಾರ್ವತಿಯ ಆಸೆ ಬಿಡು ಮಗ, ಇನ್ನು!' ಎಂದಳು

ಆ ಮಾತನ್ನು ನೀಲಕಂಠಪ್ಪ ಕೇಳಿದನೋ ಇಲ್ಲವೋ? ಒಳಗೋಡಿದ. ರುಗ್ಣ ಶಯ್ಯೆಯಲ್ಲಿದ್ದ ಪಾರ್ವತಿಯನ್ನು ನೋಡಿದ. ಅವನ ಸಾಕ್ಷ್ಮಾತಿಸೂಕ್ಷ್ಮಬುದ್ಧಿ ಪಾರ್ವತಿಯ ಸ್ಥಿತಿಯನ್ನು ಗ್ರಹಿಸಿತು. ಒಂದುಕ್ಷಣ ಪಾರ್ವತಿಯನ್ನು ನಖಶಿಖಾಂತ ವಾಗಿ ನೋಡಿದ. ತನ್ನ ಪುಟ್ಟ ಕಂಗಳಲ್ಲಿ ಪಾರ್ವತಿಯನ್ನು ಅವಿತಿಟ್ಟು ನೀರಿನ ಬಲೆ ಹಾಕಿದ.

ಸೂಲಗಿತ್ತಿ ಪಕ್ಕದಲ್ಲಿ ಹಿಡಿದಿದ್ದ ಮಗು 'ಕಿಯುಂ' ಎನ್ನುತ್ತಿತ್ತು. ಅದೇ ಸಮಯಕ್ಕೆ ತೋಟದಲ್ಲಿ ಮಲಗಲು ಹೋಗಿದ್ದ ಮಾದ ಮನೆಯೊಳಗೆ ಓಡಿ ಬಂದು

'ಬುದ್ದೀ ಈಗ ಬಡಿದ ಸಿಡಿಲಿಗೆ ಮಾವಿನ ಮರ ಉರುಳಿಬಿತ್ತು. ಎನ್ನು ವುದಕ್ಕೂ,

'ಪಾರ್ವತೀऽ'........ಎಂದು ಅಲ್ಲಿ ನಿಂತ ನೀಲಕಂಠಪ್ಪ ಚೀರುವುದಕ್ಕೂ ಒಂದೇ ಆಯಿತು.

ನೀಲಕಂಠಪ್ಪನ ಆ ದೊಡ್ಡಧ್ವನಿಗೆ ಸಿಡಲಿಗೂ ಬೆಚ್ಚದ ಆ ಹಳ್ಳಿ ಬೆಚ್ಚಿ, ಎಚ್ಚರ ಗೊಂಡಿತು. ಅಷ್ಟೇಕೆ ಬಾನೇ ನಡುಗಿತು ಆ ಧ್ವನಿಗೆ. ಆಕಾಶದಲ್ಲಿ ಮಿಂಚುಗಳು ಸರಸರನೆ ಓಡಾಡಿ ಕಣ್ಣಿಗೆ ಕಾಣದಾದವು.

'ನನ್ನ ....ಪಾರ್ವತಿ ऽऽ,........' ಎಂದು ಇನ್ನೊಮ್ಮೆ ದೊಡ್ಡ ಧ್ವನಿ ತೆಗೆದು ನೀಲಕಂಠಪ್ಪ ಕೂಗಿ ರೊಪ್ಪನೆ ಅವಳಮೇಲೆ ಬಿದ್ದನು. ಆ ಬಾರಿ ಭೂಮಿ ನಡುಗಲಿಲ್ಲ. ಬದಲಿಗೆ ಆಕಾಶ ಗುಡುಗಿತು. ಬಹಳಹೊತ್ತಿನ ತನಕ ಆಕಾಶ ಗುಡು ಗುತ್ತಲೇ ಇತ್ತು.

ಸುಲಿದ ಬಾಳೆಯು ಹಣ್ಣಿನಂದದಿ
ಕಳಿದ ಸಿಗುರಿನ ಕಬ್ಬಿನಂದದಿ
ಅಳಿದ ಉಷ್ಣದ ಹಾಲಿನಂದದಿ ಸುಲಭವಾಗಿರ್ಪ
ಲಲಿತವಹ ಕನ್ನಡದ ನುಡಿಯಲಿ
ತಿಳಿದು ತನ್ನೊಳು ತನ್ನ ಮೋಕ್ಷವ
ಗಳಿಸಿಕೊಂಡರೆ ಸಾಲದೇ ಸಂಸ್ಕೃತದಲಿನ್ನೇನು ?

—ಮುಹಲಿಂಗರಂಗ

ಚೆನ್ನವೀರ ಕಣವಿ

ಸಂಕ್ರಾಂತಿ

ನಿವೇದಕ

ಮಾಸಕೊಮ್ಮೆ ಮಾಸದಂಥ ಹಾಸ ಭಾಸ ಪೃಥಿವಿಗೆ
ರಾಶಿಯಿಂದ ರಾಶಿಯೆಡೆಗೆ ಹೊರಟ ಸೂರ್ಯ ಮೈತ್ರಿಗೆ
ತನ್ನ ಅಕ್ಷದೊಡನೆ ಸುತ್ತಿ ಭೂಮಿ ಸೂರ್ಯನತ್ತಲು :
ಹಗಲು-ಇರುಳು ಅದೇ ಕಾರ್ಯ, ಅದೇ ಬೆಳಕು-ಕತ್ತಲು.

ಭೂಮಿ

ಮಾರ್ಗಶೀರ್ಷ ಮಾರ್ಗದಲ್ಲಿ ಮೈಲುಗಲ್ಲು ದಾಟಿತು,
ಪೌಷ್ಯದ ಹೊಸ ವೇಷದಲ್ಲಿ ಬೇರೆ ತಿರುವು ಮೀಟಿತು.
ವಿಷುವದಿಂದ ದೂರ ದೂರ ದಕ್ಷಿಣಕ್ಕೆ ಅಯನವು,
ಸುಕರವಾಗಿ ಮಕರದೆಡೆಗೆ ಹೊರಳೆ ದೇವನಯನವು.

ರೈತರು

(ಸುಗ್ಗಿಯ ಕುಣಿತದ ಹರ್ಷಧ್ವನಿ)

೧ : ಆಹಾ ! ಚಳಿಯು ಕಳೆದುಹೋಯ್ತು
ಬಿಸಿಲಿಗೆಲ್ಲ ಬನ್ನಿರೋ
೨ : ಗೋದಿ ಬೆಳಸಿ ತಿನ್ನಿರೋ.
೩ : ಕಂಬಳಿಯನು ತೆಗೆದು ಇಟ್ಟು
ಮುಗಿಲಿಗೆ ಕೈ ಮುಗಿಯಿರೋ
೪ : ಹಗಲಿಗೆ ಮೈ ತೆರೆಯಿರೋ.

೧-೪ : ಆಹಾ ! ಚಳಿಯು ಕಳೆದುಹೋಯ್ತು
ಬಿಸಿಲಿಗೆಲ್ಲ ಬನ್ನಿರೋ.

೧: ಸುಗ್ಗಿಯನ್ನು ಮುಗಿಸಿ ನಾವು
ಬಂದೆವಣ್ಣ ಬಯಲಿಗೆ
೨: ಒಟ್ಟಿ ಮೇವು ಬಣಿವೆಗೆ.
೩: ಗೋದಿ ತಿರುಗಿ ಹುಗ್ಗಿಯಾಯ್ತು
ಕುಸುಬೆ ಬಂತು ಕೊಯಿಲಿಗೆ.
೪: ಹಸಿವು ಹಬ್ಬ ಹುಣಿವೆಗೆ.

೧-೪: ಅಹಾ! ಚಳಿಯು ಕಳೆದುಹೋಯ್ತು
ಬಿಸಿಲಿಗೆಲ್ಲ ಬನ್ನಿರೊ.

ರೈತ ಹೆಣ್ಣುಮಕ್ಕಳು

(ತೋಟದಲ್ಲಿ ಕಾಲುವೆಯ ಜುಳುಜುಳು ದನಿ)

೧: ಕೈಯೆತ್ತರ ಬೆಳೆದ ಕಬ್ಬು
ಹಸುರುಗರಿಯ ಬಿಚ್ಚಿದೆ
ಹೊಸ ತುರಾಯಿ ಚುಚ್ಚಿದೆ.
ತೋಟದಲ್ಲಿ ನವಿಲ ಕುಣಿತ
ನಮಗು ಕುಣಿಯ ಹಚ್ಚಿದೆ
ಕೇಕೆ ಹೊಡೆಯ ಹಚ್ಚಿದೆ.

೨: ಕುಸುಬೆ ಹೂವ ಕುಸುರಿನಂಥ
ಕುಬುಸ ಕೊಡಿಸುತಾನೆ;
ಹಸುರು ಹತ್ತಿ-ಹೊಲದ ನಡುವೆ
ತೊಳೆಯ ಬಿಡಿಸುತಾನೆ.

೩: ಒಡೆದ ತುಟಿಗೆ ಕಡಲೆ ಗಿಡದ
ಹುಳಿಯ ತೊಡೆಯುತಾನೆ;
ಕಾಯಿ ಸುಲಿದು ಕಾಳು ಮಾಡಿ
ನನಗೆ ತಿನಿಸುತಾನೆ.

೪: ಕಾಲ ಪಿಲ್ಲೆ, ಮೂಗುಬಟ್ಟು
ಮಾಡಿ ಕೊಡಿಸುತಾನೆ;
ಜರದ ಪಟಕ ಸುತ್ತಿಕೊಂಡು
ಹೂವ ಮುಡಿಸುತಾನೆ.

೧-೪ : ಹಬ್ಬ ಬಂತು ಹಬ್ಬವೊ
ನಮ್ಮ ದುಡಿಮೆ ದಿಬ್ಬವು
ದೀನರನ್ನು ದಲಿತರನ್ನು
ತಬ್ಬಿಕೊಂಡ ಶಬ್ದವೊ
ಹಬ್ಬ ಬಂತು ಹಬ್ಬವೊ
ನಮ್ಮ ದುಡಿಮೆ ದಿಬ್ಬವು.

[ಹಾಡು ಮೆಲ್ಲಮೆಲ್ಲನೆ ದೂರ ಸರಿಯುವದು.]

ಕವಿ

ಮೂಡಗಾಳಿ ಎಡವುತಿರೆ
ಪಡುವಗಾಳಿ ತಡವುತಿರೆ
ಕುಳಿರು ಕುಳಿತು ನಡುಗುತಿರೆ
ನೋಡಿದ ರವಿಯು ;
ಬಿಸಿಲು ಕಾಸಿ ಬೆಚ್ಚಗಿರೆ
ಗಿಡದ ತೊಗಟೆ ಬಿಚ್ಚುತಿರೆ
ಕುಡಿಯು ಮುಡಿಗೆ ಚಾಚುತಿರೆ
ಹಾಡಿದ ಕವಿಯು

ಹಿಂದೆ ಹೋದ ಎಳ್ಳವಸೆ
ಹಿಂಗಾರಿಯು ತುಂಬಿ ದಿಸೆ
ಸೀಗೆಗುಂಡ ಆ ಉಣಿಸೆ
ಈಗಲು ರುಚಿಯು ;
ಬನದ ಹುಣಿವೆ ತುಂಬಲಿದೆ
ಬನಶಂಕರಿ ಹಂಬಲಿದೆ
ಸಂಕ್ರಾಂತಿಯ ನಂಬಲಿದೆ
ಇಂದಿನ ಶುಚಿಯು

ಅಗಲಿದವರು ಕೂಡಿಕೊಂಡು
ತಮತಮಗೇ ಹಾಡಿಕೊಂಡು
ಬಂಧುಬಳಗ ನೋಡಿಕೊಂಡು
ಸಾಗಲಿ ಬದುಕು ;
ದಕ್ಷಿಣದಿಂದುತ್ತರಕ್ಕೆ
ಪೂರ್ವದಿಂದ ಪಶ್ಚಿಮಕ್ಕೆ

ಸಂಕ್ರಮಣವು ಹಾಸುಹೊಕ್ಕೆ
ಮೂಡಲಿ ಬೆಳಕು

ಗಂಡು-ಹೆಣ್ಣು

[ನದಿಯಲ್ಲಿ ಮೀಯಲು ಬಂದಿದ್ದಾರೆ. ಹೃದಯದಲ್ಲಿ ಹಾಡಿನ ತರಂಗಮಾಲೆ]

ಗಂ: ಮೊರೆ ಮೊರೆಯುತ ಹರಿವ ಕೃಷ್ಣೆ
ಹೆ: ಕಳೆವಳೆಮ್ಮ ತೃಷ್ಣೆ
ಗಂ: ತೆರೆ ತೆರೆಗಳ ಮಲಪ್ರಭೆ
ಹೆ: ತೆರೆವಳೆಂಥ ಶೋಭೆ
ಗಂ: ತೂಗಿ ತೊನೆವ ತುಂಗಭದ್ರೆ
ಹೆ: ಪುಣ್ಯದ ಚಿರಮುದ್ರೆ
ಗಂ: ಕಲಕಲ ರವ ಕಾವೇರಿಗೆ
ಶ್ರೀರಂಗನ ನಿದ್ರೆ.
ಹೆ: ಬನವಾಸಿಯ ಕಾನನದೆದೆ
ತಣಿಸುವ ಶರ, ವರದೆ.

ಗಂ: ಹೊಳೆ ನದಿಗಳ ತಿಳಿಜಲದಲಿ ಮೀಯುವ ಬಾರಾ
ಮೈಮನಗಳ ಕೊಳೆ ತೊಳೆಯುವ, ಮಾರ್ಪೊಳೆಯುವ ಬಾರಾ
ಹೆ: ಈ ತೀರ್ಥದಿ ಮುಳುಗೇಳುವ ತಲೆ ತೊಳೆಯುವ ಒಮ್ಮೆ
ಸರ್ವರಿಗೂ ಪರ್ವಕಾಲ: ಹೊಸ ಬಾಳಿನ ಹಿರಿಮೆ.

ಗಂಡು-ಹೆಣ್ಣು ದನಿಗೂಡಿ: ಕೂಡಲದಲಿ ಮೌನ–ಧ್ಯಾನ
ಸಂಗಮವೇ ಶಿವನ ತಾಣ
ಹರಿಯುವದೇ ಜೀವ–ತ್ರಾಣ
ಜಗವೆಲ್ಲವು ಜಂಗಮ;
ಸೊಗಲದಲ್ಲಿ ಜೋಗ–ಯೋಗ
ನವಿಲು ತೀರ್ಥ ಏಕ ಭೋಗ
ಸೋಮೇಶ್ವರ ನಿಂತ ಜಾಗ
ಶಾಲ್ಮಲೆಗಿದೆ ಉಗಮ.

ಗಂ: ದೂರದಿಂದ ಬಂದೆವೋ
ಹೆ: ತಡಿತಡಿಯಲಿ ನಿಂದೆವೋ
ಗಂ: ಅಹಾ! ನೀರ ಮಿಂದೆವೊ
ಹೆ: ಹೊಸತೇನೊ ಕಂಡೆವೊ
ಗಂಡು-ಹೆಣ್ಣು ದನಿಗೂಡಿ: ಈ ಚೆಲುವಿಗೆ

ಈ ಒಲವಿಗೆ
ನಮೋಽ ಎಂದು ಅಂದೆವೋ
ನಮೋಽ ಎಂದು ಅಂದೆವು.

[ಗಾಳಿಯಲ್ಲಿ ಅಲೆ ಅಲೆಯಾಗಿ ತೇಲಿ ಕೊನೆಯ ಚರಣ ಕರಗುತ್ತದೆ.]

[ಹೆಣ್ಣು ಮಕ್ಕಳು ಮನೆಮನೆಗೆ ಎಳ್ಳು-ಬೆಲ್ಲ ಬೀರಿ ತಮತಮಗೆ ಸವಿದುಕೊಳ್ಳುವ ಸಂಭ್ರಮ. ಗಂಡಸರೂ ಅದರಲ್ಲಿ ಪಾಲುಗೊಳ್ಳುತ್ತಾರೆ.]

ಹೆ: ಎಳ್ಳೀಗೆ ಎಣ್ಣೀಗೆ ಮಿಂಚುಽವಕಣ್ಣೀಗೆ
ಹಂಚುಽವ ಬೆಲ್ಲದ ಕಣ್ಣಿಯಿದೆ;
ಮಿರಿಮಿರಿ ಮಿಂಚುವ ಸೀರೆಯು, ಕುಪ್ಪಸ
ತರತರದೊಡವೆಯ ಬಣ್ಣವಿದೆ.

ಗಂ: ಎಳೆಯ್ಯರು ಗೆಳೆಯ್ಯರು ಕುಲುಕುಲುನಗುವರು
ಕಲಕಲ ಹಚ್ಚ್ಯಿದ ಹೆಂಗಸರು;
ಹಳಬ್ಬರು ಹೊಸಬ್ಬರು ಮಕ್ಕಳು, ಮರಿಗಽಳು
ಚಕ್ಕಂದವಾಡುತ ಕುಳಿತಿಹರು.

ಹೆಣ್ಣು-ಗಂಡು ದನಿಗೂಡಿ: ಎಳ್ಳೀಗೆ ಎಣ್ಣೀಗೆ, ಮಿಂಚುಽವ ಕಣ್ಣೀಗೆ
ಹಂಚುಽವ ಬೆಲ್ಲದ ಕಣ್ಣಿಯಿದೆ.

ಹೆ: ಹಳ್ಳೀಗೆ ದಿಳ್ಳೀಗೆ ಬಳ್ಳಿ ಬಳ್ಳೀಯಾಗಿ
ನೇಹದ ನೆಂಟನು ಸುರಿದವರು;
ಹಸುರೀಗೆ, ಕುಸುರೀಗೆ, ಹಲವಾರು ಹೆಸರೀಗೆ
ಪ್ರೀತಿಯ ಮಳೆಯನು ಕರೆದವರು.

ಗಂ: ತಮಿಳಿನ ಪೊಂಗಲ: ನಾಡಿಗೆ ಮಂಗಲ
ಹಾಲು ಬೆಲ್ಲಽ ದಕ್ಕಿ ಪಾಯಸವು;
ಸಕ್ಕದವಾದರುಽ ಸಂಕ್ರಾಂತಿ ಕನ್ನಽಡ
ಹತ್ತು ದೀನಸಿನಡಿಗೆ ಬಗೆಬಗೆಯು.

ಗಂಡು-ಹೆಣ್ಣು ದನಿಗೂಡಿ: ಎಳ್ಳೀಗೆ, ಎಣ್ಣೀಗೆ, ಮಿಂಚುಽವ ಕಣ್ಣೀಗೆ
ಹಂಚುಽವ ಬೆಲ್ಲದ ಕಣ್ಣಿಯಿದೆ.

ಹೆ: ಎಳ್ಳು-ಬೆಲ್ಲಽ ಕೊಳ್ಳಿ, ಒಳ್ಳೊಳ್ಳೆ ಮಾತಾಡಿ
ಸುಳ್ಳೀಗೆ–ಸೊಟರೀಗೆ ಕಿವಿಗುಡದೆ;
ಕಳ್ಳು–ಬಳ್ಳೀಽಗೊಗೆದ ಹೂವಾಗಿ ಬಾಳೋಣ

ಜಳ್ಳನು ಗಾಳೀಗೆ ತೂರೋಣ.
ಗಂ : ಬಾಲ್ಯsದ ಚಿಗುಳೀಯ, ಹರೆಯsದ, ಮರೆಯsದ
ಒನಪು–ವಯ್ಯಾರದ ಸಂಗತಿಯ
ನೆನೆಯುತ ನಲಿಯೋಣ, ಹೊಸತೆಲ್ಲ ಕಲಿಯೋಣ
ಸಂಸಾರದೊಗಟನ್ನು ಒಡೆಯೋssಣ.

ಹೆಣ್ಣು-ಗಂಡು ದನಿಗೂಡಿ : ಎಳ್ಳೀಗೆ, ಎಣ್ಣೀಗೆ, ಮಿಂಚುsವ ಕಣ್ಣೀಗೆ
ಹಂಚುsವ ಬೆಲ್ಲದ ಕಣ್ಣಿಯಿದೆ.

ಸಮೇತನಹಳ್ಳಿ ರಾಮರಾಯ

ಮಂಗಳಾರ

ಪಾತ್ರಗಳು

ಶಾಂತಲಾದೇವಿ: ಹೊಯಿಸಳರಸು ವಿಷ್ಣುವರ್ಧನದೇವನ ಪಿರಿಯರಸಿ.
ಕೇಶವದೇವ: ನಿಷ್ಠ ಪ್ರಜೆಯೊಬ್ಬನು.
ಭರತ: ಹೊಯಿಸಳ ಸೇನೆಯ ಒಬ್ಬ ದಣಾಯಕ.
ನಾಗವ್ವೆ: ರಾಣಿಯೂಳಿಗದ ನಾಯಕಿ.
ಅಯ್ಯಣ: ವಿದ್ಯಾರ್ಥಿ.
ಮತ್ತು
ದಣಾಯಕ, ವಟುಗಳು, ಸೈನಿಕರು ಮುಂತಾದವರು.

[ಸ್ಥಾನ: ಬೆಲುಹೂರಿನ ಬಳಿಯ ಬದರೀನದಿ ಬಲದಂಡೆಯಲ್ಲಿ ಆವೂರ ಘಟಿಕಾಸ್ಥಾನದ ಉಪವನ].

(ಅಲ್ಲಿನ ಸುರುಗಿಯ ಮರ ತನ್ನ ಟೊಂಗೆಯ ಗೆಣ್ಣುಗೆಣ್ಣುಗಳಲ್ಲಿ ತನ್ನ ಹೂವನ್ನ ರಳಿಸಿ ಬೆಳ್ಳಿಯ ಕಿರುಗೆಜ್ಜೆಗಳನ್ನು ಕೋದಂತೆ ಕಂಗೊಳಿಸಿ ನಿಂತಿರುವುದು. ಅದರ ಪರಾಗ ಸಂಪತ್ತಿಗೆ ಪರಿಭ್ರಮಣಾಸಕ್ತ ಪರಮೆಗಳ ಪರಮ ಮಂಗಲ ಝೇಂಕಾರ ಉದಯದ ಆ ಪ್ರಶಾಂತತೆಯನ್ನು ಭೇದಿಸಿ ಕಿವಿಗಿನಿದಾಗಿ ಪರ್ಚಿರುವುದು.)

ವಟುಗಳು: (ದೂರದಲ್ಲಿ ಉದಯದ ವೇದೋಪನಿಷತ್ತುಗಳ ಪಾಠ ಪ್ರವಚನಗಳನ್ನು ಸ್ವರ ಪ್ರಸ್ತಾರ ಸಹಿತವಾಗಿ, ಘನಗಂಭೀರವಾಗಿ ಪ್ರಸ್ತುತಗೊಳಿಸಿಕೊಳ್ಳುತ್ತಿರುವರು)

ಕೇಶವದೇವ: (ಪ್ರವೇಶಿಸಿರುವನು. ವಯಸ್ಸಾಗಿದ್ದರೂ ಸುಕ್ಕುಗಾಣದ ಹಣೆಗೆನ್ನೆಗಳು ಅವನವು. ಇಡಿಕಿರಿದ ತುರುಗೆಮೆಯೆಂತೊ ಅಂತೆಯೇ ನೀಳವಾಗಿ ಬಳೆದ ಗಡ್ಡ ಮೀಸೆಗಳು ಕಳೆಗೊಟ್ಟಿರುವುವು. ಶುಭ್ರವಸನದ ವೀರಗಚ್ಚೆಯ ಮೇಲೆ ಸವ್ಯವಾಗಿ ಹೊದೆದುದೊಂದುತ್ತರೀಯದಮೇಲೆ ನೀಳವಾದ ತೋಳು ಬಂಗಾರದ ಕಾಂತಿಯಲ್ಲಿ ಬೆಳಗುತ್ತಿರುವುದು. ನೆಟ್ಟನೆ ನಿಂತ ಉನ್ನತಾಕೃತಿಯಲ್ಲಿ ಅವನು ತನ್ಮಯತೆಯಿಂದ ಮರದಲ್ಲಿ ಕೋದು ನಿಂತಿರುವ ಸುರುಗಿಯ ಹೂ ಸಾಲ್ಗಳನ್ನು

ನೋಡುತ್ತಿರುವನು. ಹೃದಯದ ಭಾವಸಮಾಧಿಯಲ್ಲಿ ಪೊಂಗಿದ ಅವನಾನಂದವು ಮಂದಹಾಸವಾಗಿ ಹೊರಚಿಮ್ಮುವುದು. ಆ ನವಿರ ನಡುವೆ ಅಸ್ಪಷ್ಟವಾಗಿ ಕಂಡರೂ ಮೊಗದಲ್ಲಿ, ಪ್ರಸ್ಫುರಿತ ಕಣ್ಣುಗಳಲ್ಲಿ, ಅನಿರ್ವಚನೀಯ ಕಾಂತಿ ಕಾಣುವುದು. ಒಮ್ಮೆ ತನ್ನ ಹಸ್ತದ ಬೆರಳ್ಗಳನ್ನು ಬಿಡಿಬಿಡಿಯಾಗಿಸಿಕೊಂಡು ಮೆಲ್ಲಗೆ, ಬಹುಮೆಲ್ಲಗೆ, ಹೂ ಸಾಲ್ಗಳಮೇಲೆ ಇರಿಸಹೋಗಿ ಇಡಲಾರದೆ ಇಳಿಸಿಕೊಳ್ಳುತ್ತಿರುವನು.)

ವಟುಗಳು : (ದೂರದಲ್ಲಿ)

ನಮೋ ಬ್ರಹ್ಮಣೇ
ನಮಸ್ತೇ ವಾಯೋ
ತ್ವಮೇವ ಪ್ರತ್ಯಕ್ಷಂ ಬ್ರಹ್ಮಾಸಿ
ತ್ವಾಮೇವ ಪ್ರತ್ಯಕ್ಷಂ ಬ್ರಹ್ಮವದಿಷ್ಯಾಮಿ

ಕೇಶವದೇವ : (ಅವುಗಳನ್ನು ಆಲಿಸುತ್ತಿರುವಾಗ ಭಾವಪಾನಂದದ ಹನಿಗಳೆರಡು ಕಣ್ಣ ಕೋಡಿಯಲ್ಲಿ ನಿಲ್ಲುವವು. ಅವುಗಳನ್ನು ಮಿಡಿಯಲೆಂದು ಬೆರಳನ್ನೆತ್ತುವನು.)

ವಟುಗಳು : ಋತಂ ವದಿಷ್ಯಾಮಿ !

ಕೇಶವದೇವ : (ಎತ್ತಿದ್ದ ಕೈಯನ್ನಷ್ಟಕ್ಕೇ ನಿಲ್ಲಿಸಿ, ಮತ್ತೊಂದನ್ನೂ ಎತ್ತಿ ಸೇರಿಸಿ, ಮುಕುಳಿತಾಂಜಲೀ ಪುಟನಾಗಿ ಧೀರ ವಾಣಿಯಲ್ಲಿ) ಅಹುದು ! ಅದುವೆ ದಿಟ !

ಋತಂ ವದಿಷ್ಯಾಮಿ
ಸತ್ಯಂ ವದಿಷ್ಯಾಮಿ
ತನ್ಮಾಮವತು
ತದ್ವಕ್ತಾರಮವತು
ಅವತು ಮಾಮ್
ಅವತು ವಕ್ತಾರಮ್
ಓಂ ಶಾಂತಿಃ ಶಾಂತಿಃ ಶಾಂತಿಃ.

ವಟುಗಳು : (ಪಾಠವನ್ನು ನಿಲ್ಲಿಸುವರು)

ಕೇಶವದೇವ : (ಅದನ್ನೇ ಪುನರುಚ್ಚರಿಸುತ್ತ ಕಣ್ಮುಚ್ಚುತ್ತಿರುವನು)

ಅಯ್ಯಣ : (ತರಳನಿವನು, ಸುರಗಿಯ ಮರದ ಸೊಬಗನ್ನು ನೋಡಲೆಂದು ಬಂದವನು ಕೇಶವದೇವನನ್ನು ನೋಡಿ, ನಿಂತು,) ಮಹಾಭಾಗ !

ಕೇಶವದೇವ : (ಇನ್ನೂ ಅದೇ ಲೋಕದಲ್ಲಿರುವನು)

ಅಯ್ಯಣ : ಆಚಾರ್ಯ !

ಕೇಶವದೇವ : (ಭಾವ ಲೋಕದಿಂದಿಳಿದು ಕಣ್ಣೆವೆಗಳನ್ನು ಬಿದಿರ್ಚುವನು.)

ಅಯ್ಯಣ : (ವಿನಯವನ್ನು ಮೆರೆದು) ನನ್ನಪರಾಧವನ್ನು ಆಚಾರ್ಯರು ಮನ್ನಿಸಿಕೊಳ್ಳಬೇಕು.

ಕೇಶವದೇವ: (ಉತ್ತರೀಯದ ಕೀಳ್ಸೆರಗಿನಿಂದ ಕಣ್ಣುಗಳನ್ನೊತ್ತಿಕೊಂಡು ಅಯ್ಯಣ ನನ್ನು ಆಪಾದಮಸ್ತಕ ನಿಟ್ಟಿಸಿನೋಡುವನು)

ಅಯ್ಯಣ: ನಿಮಗಡಸಿ ಬಂದ ಸಂಕಟವದೇನೋ !

ಕೇಶವದೇವ: (ನಕ್ಕುಬಿಡುವನು)

ಅಯ್ಯಣ: (ಬೆಪ್ಪಾಗಿ ನೋಡುವನು)

ಕೇಶವದೇವ: (ಗಂಭೀರವಾಣಿಯಿಂದ) ನೀನಾರು ?

ಅಯ್ಯಣ: ಈ ಘಟಿಕಾಸ್ಥಾನದಲ್ಲಿ ಜ್ಯೋತಿಷ್ಯವನ್ನಭ್ಯಸಿಸುತ್ತಿರುವ ಅರ್ಭಕನು ನಾನು ಭಾರದ್ವಾಜನು. ಅಯ್ಯಣ ಎಂದೆನ್ನುತ್ತಾರೆ.

ಕೇಶವದೇವ: (ಸಹಾಸನಾಗಿ) ಓ, ಹಾಗೇನು ! ಸಂತೋಷ.

ಅಯ್ಯಣ: ಏಕೆ ನೋಯ್ವಿರಲ್ಲ ?

ಕೇಶವದೇವ: ನೀ ಬಲ್ಲೆಯೇನದನ್ನು ?

ಅಯ್ಯಣ: ಅಹುದು ಬಲ್ಲೆ. ನಾನು ಬಂದು ನಿಂತಾಗ ನಿಮ್ಮ ಕಣ್ಣಿನಿಂದ ಹರಿವ ನೀರನ್ನು ನಾನೆ ಪ್ರತ್ಯಕ್ಷವಾಗಿ ಕಂಡೆನಲ್ಲಾ !

ಕೇಶವದೇವ: ದುಕ್ಕದೊತ್ತಡ ಅಧಿಕವಾದಾಗ ಮಾತ್ರ ಕಂಬನಿ ಕಾಂಬುದೆಂದು ತರ್ಕವೇ ನಿನ್ನದು ಅಯ್ಯಣ್ಣಾ ? (ನಗುತ್ತ) ನೀನಿನ್ನೂ ಕಿರಿಯನು. ಪ್ರಪಂಚದ ನೋವು ನಲಿವುಗಳಿಗೆ, ಜೀವನದ ನಿಷ್ಠೆ ನಿಷ್ಠೂರಗಳಿಗೆ, ಆಮೋದ ಪ್ರಮೋದಗಳಿಗೆ, ನಿನ್ನ ಮನವನ್ನೆದುರೊಡ್ಡಿ ವಿವಿಧ ಭಾವಾನುಭಾವಗಳನ್ನು ಆತು ಅಡಗಿಸಿಟ್ಟುಕೊಳ್ಳುವ ಆರಂಭದ ಹರೆಯದಲ್ಲಿ ಅಡಿಯನ್ನಿಡುತ್ತಿರುವೆ. ಅದಿರಲಿ. ಕಾವ್ಯ ನಾಟಕಗಳನ್ನು ನೀವು, ಜೋತಿಷಿಗಳು, ಓದುವುದೇ ಇಲ್ಲವೇನು ?

ಅಯ್ಯಣ: ಕಾವ್ಯದ ವಿವಿಧ ಪ್ರಕಾರಗಳ ಒಂದು ನಿರ್ದಿಷ್ಟ ಹಂತವನ್ನು ಮುಟ್ಟಿದಲ್ಲದೆ ಇಲ್ಲಿ ನಾವು ಅದಕ್ಕೆ ಅರ್ಹರಾಗುವುದಿಲ್ಲ.

ಕೇಶವದೇವ: ಹಾಗಿದ್ದರೆ ನನ್ನ ಕಣ್ಣನೀರು ನಿನಗೆ ಅರ್ಥವಾಗಿರಬೇಕಲ್ಲ ? ಸುಖವಾಗಲಿ ದುಃಖವಾಗಲಿ ಚಿತ್ತವೃತ್ತಿಗೆ ಅದರನುಭವದ ತೀವ್ರತೆ ಒಂದೇ ಸಮನಾಗಿರುವುದಲ್ಲವೆ ? ಶೋಕರಸ ಬಾಷ್ಪಕ್ಕೆ ಕಾರಣ ಹೇಗೋ, ಹಾಗೆಯೇ ಇತರ ರಸಗಳೂ ಇಲ್ಲಿ ಈ ಹೂವಿನ ಭವ್ಯತೆಯನ್ನು ನೋಡುತ್ತಿದ್ದ ಮನಸ್ಸಿನ ಮೇಲೆ, ಲೋಕದಲ್ಲಿ ನೇರವಾದ ಬದುಕನ್ನು ಮೂಡಿಸಬಲ್ಲ ಮಹಾಮಂಗಳವನ್ನು ಕುರಿತ ಮಾತು ಬಿದ್ದಿತು. ಆ ಉತ್ಕರ್ಷತೆಯಲ್ಲಿ ಕಣ್ಣಿನಿಂದ ಹನಿಗಳುದುರಿರಬಹುದು. ಅದಿರಲಿ ನಾನು ನೊಂದಿದ್ದೆನೆನ್ನು. ಅದರಿಂದ ನಿನಗೇನಾಗುತ್ತಿದ್ದಿತು ?

ಅಯ್ಯಣ: (ತಿರಸ್ಕೃತ ದಿಟ್ಟಿಯಿಂದವಲೋಕಿಸಿ) ನಿಮ್ಮ ನಾಡಾವುದು ?

ಕೇಶವದೇವ: ಏಕೆ ?

ಅಯ್ಯಣ : ನಿಮ್ಮ ಸಂಸ್ಕೃತಿಯನ್ನಳೆದು ನೋಡುವುದಕ್ಕೆ.

ಕೇಶವದೇವ : (ಘನಗಂಭೀರವಾಗಿ) ಭಾರತೀಯನು ನಾನು ! ಆರ್ಯಜನು ನಾನು !

ಅಯ್ಯಣ : ಬಳೆದದ್ದು ?

ಕೇಶವದೇವ : ಅದು ಅಪ್ರಕೃತ ಅಯ್ಯಣಾ. ವೈದಿಕಧರ್ಮದ ಬೆಳಸನ್ನಾವ ನಾಡು ಪರಿರಕ್ಷಿಸಿಕೊಂಡು ಬಂದಿತೋ ಆ ನಾಡಿನೊಳಗೆಲ್ಲ ಮನದ ಒಂದೇ ಒಂದು ಪರಿಪಾಕವನ್ನು ಕಂಡೇವು; ಆಸೇತು ಹಿಮಾಚಲ ಪರ್ಯಂತ ನಾವೆಲ್ಲ ಬೆಳೆಯುತ್ತಿರುವುದದೇ ಸಂಸ್ಕೃತಿಯಲ್ಲಿ. ಭಿನ್ನತೆಗೆ ಎಡೆ ಎಲ್ಲಿ ?

ಅಯ್ಯಣ : ನಿಜ. ಬಿದ್ದ ಬಿತ್ತುವೊಂದು ಬೆಳೆವ ಭೂಗುಣವನ್ನು ಮೆಯ್ಗೂಡಿಸಿಕೊಂಡು, ಅದರದೇ ಗುಣ ಸತ್ವಗಳನ್ನೂ ಕೂಡಿಸಿಕೊಳ್ಳುವಂತೆ ಸಂಸ್ಕೃತಿಯ ಬೆಳವಣಿಗೆಯೂ ಹೌದು. ಕೃಷಿಯ ರೀತಿ ನೀತಿಗಳು ಪಂಚಭೂತಗಳ ಇರವನ್ನವಲಂಬಿಸಿರುವಂತೆ, ಮಾನವನ ಉದಾತ್ತ ಭಾವನೆಗಳೂ ಜನಮನದ ರೀತಿಗಳನ್ನವಲಂಬಿಸಿರುತ್ತವೆ. ಆ ಜನಮನ ಬಳೆವ ಭೂಗುಣದ ಭೂಮಿಕೆಯ ಮೇಲೆ ನಿಂತಿರುತ್ತದೆ. ನಾನೆಂದುದದಕ್ಕೇ ನೀವಾವನಾಡು ಎಂದು.

ಕೇಶವದೇವ : (ಅಭಿಮಾನದಿಂದವನನ್ನೇ ನೋಡಿ) ನನ್ನ ಹುಟ್ಟು ಕನ್ನಡದ ಹುಟ್ಟು ಎಂದೆಂಬೆನಾದರೆ ?

ಅಯ್ಯಣ : ಇರಬಹುದು. ಬಳೆದದ್ದು ?

ಕೇಶವದೇವ : ಅದೂ ಆಗಬಾರದೇಕೆ ?

ಅಯ್ಯಣ : ಅದು ಖಂಡಿತಕ್ಕು ಅಲ್ಲ.

ಕೇಶವದೇವ : ಹೇಗೆ ?

ಅಯ್ಯಣ : ನೀವಂತು ಬಳೆದಿದ್ದರೆ ನನ್ನನ್ನಂತು ಪ್ರಶ್ನಿಸುತ್ತಿರಲಿಲ್ಲ. ನೋಯ್ವವರ ನೋವನ್ನಿಳಿಸಿಕೊಳ್ಳಬೇಕೆಂಬ ಸೇವಾಕಾಂಕ್ಷೆ ಈ ನಾಡವರದು ಎಂಬುದರರ್ಥ ನಿಮಗೆ ಪರಿಸ್ಫುಟವಾಗಿರುತ್ತಿದ್ದಿತು.

ಕೇಶವದೇವ : ಹಾಗಿದ್ದರೆ ನನ್ನ ಮಾತಿನೆಸಕದಿಂದ ನಿನಗೆ ನೋವಾಯಿತಲ್ಲಾ !

ಅಯ್ಯಣ : ನಾನು ನೊಂದೆನೆಂಬ ನೋವು ನಿಮ್ಮನ್ನು ಕಾಡದಿರಲಿ. ಬನ್ನಿ. ನಮ್ಮ ಘಳಿಸಾಸರನ್ನು ಕಾಣಿಸುತ್ತೇನೆ. ಇಂದು ನಮ್ಮ ಆತಿಥ್ಯವನ್ನು ಸ್ವೀಕರಿಸುವ ಕೃಪೆ ಮಾಡಿ. ಅಲ್ಲದೆ, ಇಂದು ಯಜ್ಞಪರಿಸಮಾಪ್ತಿಯ ಶುಭದಿನವೂ ಹೌದು.

ಕೇಶವದೇವ : ಶಾಂತಿ ಯಜ್ಞದ ಪೂರ್ಣಾಹುತಿಯ ಸಮಯದಲ್ಲಿ ಅರಸ ಅರಸಿತಿಯರೇ ಬಿಜಯಮಾಡಿಸಿ ಹವಿರ್ಭಾಗವನ್ನೊಪ್ಪಿಸಿಕೊಳ್ಳರೆಂಬುದನ್ನರಿತೇ ಬಂದಿರುವೆನು.

ಅಯ್ಯಣ : ಅದು ನಮ್ಮ ಭಾಗ್ಯ. ಬನ್ನಿರಲ್ಲಾ !

ಕೇಶವದೇವ : ಆಗಲಿ ಹೋಗೋಣ (ಅಯ್ಯಣನನ್ನೆಮೆಯಿಕ್ಕದೆ ನೋಡುವನು)

ಅಯ್ಯಣ: (ಅವನೂ ಕೇಶವದೇವನನ್ನೇ ನೋಡುತ್ತಿದ್ದು) ನಾನು ಭಾರದ್ವಾಜ ಗೋತ್ರದವನೆಂದಾಗ ನಿಮ್ಮ ಮುಖದಲ್ಲೊಂದು ನಗೆ ಮಿಂಚಿತಲ್ಲಾ?

ಕೇಶವದೇವ: (ಅಚ್ಚರಿಗೊಂಡು) ಕಂಡುಕೊಂಡೆಯೇನದನ್ನು? ಅಹುದು ಅಯ್ಯಣ, ನೀನೆಂದ ಆ ನಗೆ ಮಿನುಗಿತ್ತು ನಿಜ.

ಅಯ್ಯಣ: ಏಕೆ?

ಕೇಶವದೇವ: ನಾನು ಆ ಗೋತ್ರ ಸಂಭೂತನೆಂದೆಂಬ ಹೆಮ್ಮೆಯಿಂದ.

ಅಯ್ಯಣ: ನೀವು ಬ್ರಾಹ್ಮಣರೇನು?

ಕೇಶವದೇವ: (ನಿರ್ಧಾರಿತ ದನಿಯಲ್ಲಿ) ಅಲ್ಲ!

ಅಯ್ಯಣ: ಅಲ್ಲವೇನು! (ಅಚ್ಚರಿಯಿಂದ ನೋಡುವನು)

ಕೇಶವದೇವ: ಬ್ರಾಹ್ಮಣನಲ್ಲದ ನನ್ನನ್ನು ಸತ್ಕರಿಸಿಬಿಟ್ಟದ್ದಿದ್ದರೆ—

ಅಯ್ಯಣ: ಅದಲ್ಲ ನೀವು ಬ್ರಾಹ್ಮಣರಲ್ಲವೆಂಬುದನ್ನು ಹೇಗೆ ನಂಬಬೇಕೋ ಎಂಬ ಅಚ್ಚರಿಯಿದಷ್ಟೆ.

ಕೇಶವದೇವ: ನಾನಲ್ಲ. ಆದರೆ ನಮ್ಮ ಪೂರ್ವಜರು ಅವರಾಗಿದ್ದರು.

ಅಯ್ಯಣ: ಅಂದರೆ ನೀವಾ ವೈದಿಕ ಧರ್ಮವನ್ನುಳಿದು ಅನ್ಯ ಮತಾವಲಂಬಿಗಳಾದಿರೆಂಬ ಮಾತೇನು?

ಕೇಶವದೇವ: ಅಲ್ಲ ಬ್ರಾಹ್ಮಣನಾಗುವ ಆಸೆಯೇನೋ ಉಂಟು.

ಅಯ್ಯಣ: ಅಂದರೆ—

ಕೇಶವದೇವ: ನಿಸ್ಸಂಕೋಚವಾಗಿ ಕೇಳು ಮಗು

ಅಯ್ಯಣ: ಆಹಾರ ವಿಹಾರಗಳ ಕಟ್ಟನ್ನು ಸಡಿಲಿಸಿಕೊಂಡ ಕಾರಣವೇನಾದರೂ ಇದ್ದಿರ ಬಹುದೇ?

ಕೇಶವದೇವ: ಅದೂ ಅಲ್ಲ.

ಅಯ್ಯಣ: ನನಗರ್ಥವಾಗಲಿಲ್ಲ.

ಕೇಶವದೇವ: (ನಕ್ಕು ನೋಡುವನು)

ಅಯ್ಯಣ: (ಥಟ್ಟನೆ ಏನೋ ಹೊಳೆದು ಇವನೂ ನಕ್ಕುಬಿಡುವನು)

ಕೇಶವದೇವ: (ಸಾರ್ಕೆವಂದು ಮುಯ್ಪಿನ ಮೇಲೆ ಕೈಯಿಟ್ಟು) ನೀನು ಏನೆಂತಹ ಕುಶಲಮತಿ ಅಯ್ಯಣಾ! ನಿನ್ನಂತಹ ಮಗನನ್ನು ಪಡೆವ ಆ ಪರಮ ಸೌಭಾಗ್ಯ—

ಅಯ್ಯಣ: ನಿಮ್ಮಂತಹ ಅರಿವಿನ ಹೆಗ್ಗಡಲನ್ನೊಳಗೊಂಡ ಮಹಾನುಭಾವನ ಮಗನು ಎಂದೆಂಬ ಹೆಮ್ಮೆ, ನನಗೂ, ಅದಕ್ಕಿಂತ ನೂರ್ಮಡಿ ಮಿಗಿಲಾಗಿರುತ್ತಿದ್ದಿತೇನೋ, ಆಗ!

ಕೇಶವದೇವ: (ಮನಸ್ಸು ಊರ್ಧ್ವಮುಖವಾಗಿರಲು) ಅಹುದು ಅಯ್ಯಣಾ, ನಮ್ಮ ಹಿರಿಯರ ಆ ಪೂರ್ವ ಪುಣ್ಯ ಸಂಪಾದನೆಯ ನೆರಳಿನಲ್ಲಿದ್ದುಕೊಂಡು ತೃಪ್ತಿಪಟ್ಟು ಕೊಳ್ಳುವುದರಲ್ಲಿಯೇ ಪರ್ಯವಸಾನವಾಗುತ್ತಿದೆ ನಮ್ಮ ಬ್ರಾಹ್ಮಣ ಬಾಳು. ಯಾವನು ತನ್ನ ಸದಾಚಾರದಿಂದ ಲೋಕ ಜೀವನವನ್ನುದ್ಧರಿಸುವ ಮಹಚ್ಛಕ್ತಿ ಯನ್ನಾರ್ಜಿಸಿ ವಿನಿಯೋಗಿಸಬೇಕೋ, ಅವನೇ ಇಂದು ಕ್ಷುಲ್ಲಕ ವ್ಯಾಜಕ್ಕಾದರೂ ಅನೃತವನ್ನಾಡಿ ಹೊಡೆದುಂಬುವ ಕೀಳ್ಸಾಹಸವನ್ನೆಸಗಿ ವಿಜೃಂಭಿಸುತ್ತಿದ್ದಾನೆ. ವ್ಯವಹಾರಕ್ಕಾಗಿ ಆ ನಿಯಮ ನಿರ್ಬಂಧಗಳು ಪರಿಗ್ರಾಹ್ಯವಲ್ಲವೆಂದು ಸೋರಹುವ ಗಾಳುಗಂಡಿಕೆಗಳೂ, ಕುತರ್ಕಗಳೂ, ಒದವಿ ಬರುತ್ತಿವೆ. ಅದು ಸಲ್ಲ. ಅದು ಹಾಗಿರಲು, ಇನ್ನು, ರಾಗ ಮೋಹಗಳನ್ನುಳಿದು ಲೋಕ ಕಲ್ಯಾಣಕ್ಕಾಗಿ ಶ್ರಮಿ ಸುವ ಮಾತು ನಮಗೆ ಸ್ವಪ್ನಸ್ಥವಾದ ಕೈಗಂಟು ಎಂದೆನ್ನೋಣ. ನಮ್ಮ ಹಿರಿಯರು ಬ್ರಾಹ್ಮಣ್ಯದ ಆ ಸತ್ವಸಿದ್ಧಿಯಲ್ಲಿ ಹಾಗೆ ಬಾಳಿದರುಂಟು. ತಂದೆ ಯಾರ್ಜಿಸಿದ ಅಷ್ಟೈಶ್ವರ್ಯವನ್ನು ಮಗನು ಅನುಭವಿಸುವಂತೆ ತಂದೆಯ ಸಿದ್ಧಿ ಯನ್ನೂ ವಂಶ ಪಾರಂಪರ್ಯವಾಗಿ ಅನುಭವಿಸಬೇಕೆಂಬ ಎಗ್ಗತನ, ಸೋಂಬತನ, ನಮ್ಮದು. ಹೇಳು ಅಯ್ಯಣ, ನಿನ್ನ ಮೈಯ ಈ ಚೆಲುವು ವೀರ್ಯಗಳು ನಿನ್ನ ತಂದೆ ತಾಯಿಗಳಿಂದ ಬಂದುದು ನಿಜವಾದುದಾದರೂ, ಏನನ್ನೂ ಉಣ್ಣದೆ ಅವರ ತನುವಿನೈಶ್ವರ್ಯವನ್ನೇ ನಂಬಿ ಕುಳಿತೆಯಾದರೆ ಇದು ಹೀಗೆ ತುಂಬಿ ನಿಂತಿರು ತ್ತಿತ್ತೇನು?

ಅಯ್ಯಣ: (ಕಿವಿದೆರೆದು ಕೇಳುತ್ತಿರುವನು)

ಕೇಶವದೇವ: ಮೈಯ್ಯ ಈ ಮಿರುಗನ್ನು ಮಾಂಸ ಮಜ್ಜೆಗಳ ಈ ಸುಂದರ ಸೌಷ್ಠವವನ್ನು ಪ್ರತಿಷ್ಠಾಪಿಸಲು ಸತ್ವಯುಕ್ತ ಆಹಾರವನ್ನು ನೀನೇ ಸೇವಿಸಿ, ಜೀರ್ಣಿಸಿ, ರಸವಾಗಿಸಿ, ನೀನೇ ರಕ್ತಗತ ಮಾಡಿಕೊಳ್ಳಲೇ ಬೇಕು ಅಲ್ಲವೆ?

ಅಯ್ಯಣ: ದಿಟ.

ಕೇಶವದೇವ: ಬ್ರಾಹ್ಮಣನಾಗಬಯಸುವ ನಾನು ಆ ಗುಣಗಳನ್ನು ನಾನೇ ಬಳೆಸಿ ಪೋಷಿಸಿಕೊಳ್ಳಬೇಕು. ನನಗಾ ಬಯಕೆಯುಂಟಾದರೂ, ಅದು ಇನ್ನೂ ಮೈಗೂಡದಿರುವಾಗ, ನಾನು ಬ್ರಾಹ್ಮಣನೆಂದು ಹೇಗೆ, ಆವ ಆತ್ಮಸ್ಥೈರ್ಯ ದಿಂದ ಹೇಳಿಕೊಳ್ಳಲಿ?

ಅಯ್ಯಣ: (ಬಗೆದುಂಬಿ ಬಂದಿರಲು) ಓ, ಏನೆಂತಹ ಉದಾತ್ತರು ನೀವು!

ಕೇಶವದೇವ: ನೀನು ನಡೆ ಅಯ್ಯಣ. ಅರಸಿತಿಯರನ್ನು ಕಾಣುವಾಸೆಯುಂಟಾದ್ದರಿಂದ ಇಂದು ನಾನು ನಿಮ್ಮ ಅತಿಥಿಯೇ ಆಗಿ, ಪಾವನನಾಗಲೇ ಬೇಕಾಗಿದೆ. ಮನದೀ ಉದ್ರೇಕವಣಗುವನಕ ಇಲ್ಲಿದ್ದು, ಆ ನಂತರ ನಿಮ್ಮ ಘಳಿಸಾಸರನ್ನು ಕಾಣುತ್ತೇನೆ. ನೀನು ಹೋಗು.

ಅಯ್ಯಣ: (ಕತ್ತು ಬಗ್ಗಿಸಿ ಯೋಚಿಸುತ್ತ ನಿಷ್ಕ್ರಮಿಸುವನು).

ಕೇಶವದೇವ: (ಮತ್ತೆ ಅನ್ಯಮನಸ್ಕನಾಗಿರುವನು)

ಶಾಂತಲಾದೇವಿ: (ಲೆಂಕಿತಿಯೊಬ್ಬಳು ಮುಂದೆ ನಡೆದು ದಾರಿದೋರುತ್ತಿರಲು ಪ್ರವೇಶಿಸುವಳು)

ನಾಗವ್ವೆ: (ಮಹಾರಾಣಿಯ ಹಿಂದಣಿಂದ ಪ್ರವೇಶಿಸುತ್ತಿರುವಂತೆಯೇ) ಓ, ಏನು ಚೆಲುವನ್ನು ಹೊದೆದು ನಿಂತಿರುವುದವ್ವಾ, ಈ ಸುರಗಿಯ ಮರ!

ಶಾಂತಾಲಾದೇವಿ: ಊಂ. ಬಹು ಚೆನ್ನು.

ನಾಗವ್ವೆ: ಅದೂ ಕೂಡ ನೆಟ್ಟು ನಿಲ್ಲಿಸಿದ ಜೀವದ ಸೌಂದರ್ಯ ಮತ್ತು ಹಿರಿತನಗಳನ್ನೇ ತನ್ನಲ್ಲಿಯೂ ತುಂಬಿಕೊಂಡು ನಿಂತಿದೆ. ಈ ನೋಟ ನೋಡುವ ನಮಗೆ ಸೊಗಸು! (ಕೇಶವದೇವನನ್ನು ನೋಡಿ) ಯಾರು ನೀವು?

ಕೇಶವದೇವ: (ಎಚ್ಚರಾಗಿ, ಮಹಾರಾಣಿಯನ್ನು ನೋಡಿ ಕರವೆತ್ತಿ ಜೋಡಿಸುವನು)

ಶಾಂತಲಾದೇವಿ: (ಪ್ರತಿ ನಮಸ್ಕರಿಸುವಳು)

ನಾಗವ್ವೆ: ನಮ್ಮ ಈ ಯಾಗಭೂಮಿಯ ಯಾಜಕ ಉದ್ಗಾತೃ ಅಧ್ವರ್ಯು ಹೋತಾರರಲ್ಲೊಬ್ಬರಾಗಿರಬೇಕು ನೀವು.

ಕೇಶವದೇವ: ಅಂತಹ ಗೌರವಾದರಣೀಯನು ನಾನಲ್ಲ. ಪಾಂಥನೊಬ್ಬನು ನಾನು; ಮರದ ಸೊಬಗನ್ನು ನೋಡುತ್ತ ನಿಂತವನು.

ಶಾಂತಲಾದೇವಿ: (ಸಂಶಯದಿಂದ ಅವನನ್ನೇ ಅವಲೋಕಿಸುತ್ತಿರುವಳು)

ನಾಗವ್ವೆ: ಮರದ ಇರವನ್ನು ಅರಿತುದು ಹೇಗೆ?

ಕೇಶವದೇವ: ಹೂವರಳಿದಾಗ ಪರಮೆಗಳನ್ನಾಹ್ವಾನಿಸುವವರಾರೋ! ಅಲ್ಲದೆ ಅವ್ವ, ಗಿಡವನ್ನು ನೆಡುವಂದು ನಾನಿಲ್ಲಿಯೆ ನಿಂತಿದ್ದೆನು. ಗಿಡದ ತುಂಬ ಈ ಹೂ ಹೀಗೆ ಅರಳಿ ಸೊಬಗನ್ನು ಹೊದೆದು ನಿಂತಂತೆ, ಅದನ್ನು ನೆಟ್ಟ ಆ ಹಿರಿಯ ಜೀವದ ಬಾಳ ಸೌರಭವೂ ಲೋಕದ ತುಂಬ ಹರಡಿ ನಿಂತಿದೆ. ಆ ಇಕ್ಕೂಡಲನ್ನು ಇಲ್ಲಿ ಕಂಡ ಪುಣ್ಯ ನನ್ನದು.

ಶಾಂತಲಾದೇವಿ: (ಸುಳಿದಾಡುತ್ತಿದ್ದ ಸ್ಮೃತಿಯನ್ನು ನೆಲೆ ನಿಲ್ಲಿಸಿಕೊಂಡು) ನೀನು ಕೇಶವದೇವನಲ್ಲವೇನು?

ಕೇಶವದೇವ: (ಮತ್ತೆ ಕರಮುಗಿದು) ಅಹುದು ತಾಯಿ.

ಶಾಂತಲಾದೇವಿ: ಮತ್ತೆ ನಾಡಿನಾಜ್ಞೆಯನ್ನುಲ್ಲಂಘಿಸಿ, ನಾಡಿನೊಳಹೊಕ್ಕು ಶಾಸನ ಮಾಡಿರುವ ಶಾಸಕ ಶಕ್ತಿಯನ್ನರಸಿಯೇ ಪರಿದಾಡುತ್ತಿರುವ ನಿನ್ನ ಈ ಉದ್ದೇಶ, ಶಾಸನ ವ್ಯಾಪ್ತಿಯನ್ನು, ಅದರ ಬಲ ವೀರ್ಯಗಳನ್ನು, ಅಣಕವಾಡುವ ಸಾಹಸ ದಾಟವಾಗಿದೆಯಲ್ಲವೆ?

ಕೇಶವದೇವ: ಅದು ಖಂಡಿತಕು ಅಲ್ಲ ತಾಯಿ.

ಶಾಂತಲಾದೇವಿ: ಹಾಗಿದ್ದರೆ ಅಂದು ಆಳ್ವ ಶ್ರೀಮದ್ವಿಷ್ಣುವರ್ಧನ ಹೊಯ್ಸಳದೇವನು ಸೋಗೆವೀದಿ ನಾಡಿನ ಪುಂಡ ಕೇಶವದೇವನ ನಾಡಿಗಮಂಗಲಕಾರಕ ನಡವಳಿಯನ್ನು ಕಂಡು, ವಿಚಾರಿಸಿ, ನಿರ್ಧಾರಿತಗೊಂಡು, ಆ ಅನಿಷ್ಟವನ್ನು ಎಂದೆಂದಿಗೂ ನಿವಾರಿಸಿರಿಸಿರುವ ಪರಮೋದ್ದೇಶದಿಂದ, ದೇಶಭ್ರಷ್ಟನೆಂದು ತುಂಬಿದ ರಾಜಸಭೆಯಲ್ಲಿ ಹೊರಡಿಸಿದ ನಿರೂಪವದು ನಿರರ್ಥಕ, ನಿರ್ವ್ಯಾಜ, ಎಂದೆಂಬೆಯೇನು?

ಕೇಶವದೇವ: ತಾಯಿ, ನನ್ನದಾ ದುರುದ್ದೇಶವಲ್ಲ.

ಶಾಂತಲಾದೇವಿ: ಮತ್ತೆ ಅರಸಾಳ್ಕೆಯಾಣತಿಯ ಈ ಅವಜ್ಞೆಗೇನೆಂದೆನ್ನಬೇಕು?

ಕೇಶವದೇವ: ಇದು ಸೀಮೋಲ್ಲಂಘನೆಯಾದರೂ ಅಪರಾಧಿಯ ಔದ್ಧತ್ಯವಾಗಲಾರದು.

ಶಾಂತಲಾದೇವಿ: ಹೇಗೆ?

ಕೇಶವದೇವ: ಶಾಸನೋದ್ದೇಶದ ಮೂಲವನ್ನು ಬೆದಕುವೆವಾದರೆ ಅದು ಲೋಕ ಜೀವನದ ಪರಮ ಮಂಗಲವನ್ನು ತಂದುಕುಡುವುದೆಷ್ಟೋ ಅಷ್ಟೆ ಅದರ ತಾತ್ಪರ್ಯ.

ಶಾಂತಲಾದೇವಿ: ಆಯ್ತು.

ಕೇಶವದೇವ: ಇನ್ನು ದಣ್ಡಣೆಯ ಮಾತು, ಅದು ಅಕೃತ್ಯಕಾರನ ಮೇಲಣ ಸೇಡಿನಿಂದಲೂ ಕೂಡಿಲ್ಲವೆಂಬುದನ್ನೂ ಮಹಾರಾಣಿಯವರು ಬಲ್ಲರು.

ಶಾಂತಲಾದೇವಿ: ಸರಿ.

ಕೇಶವದೇವ: ಅಪರಾಧಿಯವನು ತನ್ನಾ ಹಿಂದಣ ಗೆಯ್ಮೆಗಳ ಕೇಡನ್ನರಿತುಕೊಂಡು, ಶುದ್ಧನಾಗಿ, ಮುಂದಣ ಬಾಳಿನ ಸುಗಮ ನಡೆಗನುವಾಗಲಿ ಎಂಬುದೇ ದಣ್ಡಣೆಯ ಪರಮೋದ್ದೇಶ.

ಶಾಂತಲಾದೇವಿ: ಅಂದರೆ ಅಣತಿಯದು ನಿನ್ನನ್ನು ಸಂಪೂರ್ಣವಾಗಿ ವ್ಯಾಪಿಸಿ, ಪರಿವರ್ತಿಸಿ, ಪರಿಶುದ್ಧವಾಗಿಸಿದೆಯೆಂದೆಂಬ ಮನದ ನೆಮ್ಮದಿಯೇನು ನಿನಗೆ?

ಕೇಶವದೇವ: ಅರಸಾಳ್ಕೆಯದನ್ನು ಒರೆಗಲ್ಲಿಗಿಕ್ಕಿ, ತಿಕ್ಕಿ, ಅದರ ಬಣ್ಣ ಬಲುಹುಗಳನ್ನಳೆದು ತೂಗಿ ನೋಡಬೇಕು.

ಶಾಂತಲಾದೇವಿ: ಅದರಾವಶ್ಯಕತೆಯಿಲ್ಲ ಕೇಶವದೇವ.

ಕೇಶವದೇವ: ಏಕೆ ತಾಯಿ?

ನಾಗವ್ವೆ: ನಿನ್ನನ್ನಾವ ನಾಡು ಶಾಸನ ಮಾಡಿತೋ, ಅದರ ಪಟ್ಟದರಸಿಯರ ಮುಂದೆ ನಿಂತು, 'ಏಕೆ' 'ಏನು' ಎಂದೆಲ್ಲ ಅವರ ಅಧಿಕಾರ ವ್ಯಾಪ್ತಿಯನ್ನೇ ಕುರಿತು ಕೇಳುತ್ತಿರುವ ನಿನ್ನ ಅವಿಧೇಯತೆಯೇ ಹೇಳುತ್ತಿದೆ, ಅದರ ಆವಶ್ಯಕತೆಯುದ್ಭವಿಸದು ಎಂದು.

ಕೇಶವದೇವ: (ನಾಗವ್ವೆಯನ್ನವಲೋಕಿಸುವನು)

ಶಾಂತಲಾದೇವಿ: ನಾಗವ್ವೆ ತಪ್ಪಿದಳೆಂದೇನು ?

ಕೇಶವದೇವ: ಆಕೆ ತಪ್ಪಲಿಲ್ಲವಾದರೂ, ಅಪರಾಧಿ ಎಂದು ಪರಿಗಣಿಸಲ್ಪಟ್ಟಿರುವ ನನಗೆ ನನ್ನಾತ್ಮರಕ್ಷಣೆಗಾಗಿ ಹಾಗೆ ಪ್ರಶ್ನಿಸಿ ಬೆಳಕನ್ನು ಪಡೆವ ಸ್ವಾತಂತ್ರ್ಯವುಂಟು ತಾಯಿ. ಇಲ್ಲಿ ಪ್ರಶ್ನೆ ಅವಿಧೇಯತೆಯ ಚಿಹ್ನೆಯಲ್ಲ.

ಶಾಂತಲಾದೇವಿ: ನೀನಾ ಸ್ವಾತಂತ್ರ್ಯವನ್ನು ಕಳೆದುಕೊಂಡಿರುವೆ ಕೇಶವದೇವ. ನೀನು ನಿನ್ನ ವಯಸ್ಸಿನ ಕೆಚ್ಚಿನಲ್ಲಿ ಎಂದೆಂದಿಗೂ ಮಾಸದಂತಹ ಕ್ರೌರ್ಯದ ಸಾಹಸಗಳನ್ನೆಸಗಿದೆ. ನಿನ್ನ ಹೆಸರನ್ನುಚ್ಚರಿಸಿದರೂ ಸಾಕು, ಹೆಣ್ಣುಮಕ್ಕಳು ಗಡಗಡನೆ ನಡುಗುತ್ತಿದ್ದರು.

ಕೇಶವದೇವ: ಅಹುದು. ನಾನು ಅಂತಹ ಪಾಪಿಯೇ ಆದೆ.

ಶಾಂತಲಾದೇವಿ: ಜನಪದದ ಭತ್ತ, ಬಿತ್ತು, ಹೊನ್ನು, ಒಡವೆ, ಮರ ಮುಟ್ಟುಗಳನ್ನು ನೀನು ಅದೆಷ್ಟು ಅಪಹರಿಸಿದೆ ಎಂದೆಂಬುದನ್ನು ಲೆಕ್ಕಹಾಕಲು, ಲೆಕ್ಕಿಗರ ಅದೊಂದು ದಂಡನ್ನೇ ಅಂದು ಮಹಾಪ್ರಭುಗಳು ನಿಯಮಿಸಿ ನಿರ್ಧರಿಸಬೇಕಾಯಿತು. ಜೀವ ಜೀವಗಳನ್ನೇ ಒಡಲಿನಿಂದ ಕಳಚ್ಚಿ, ತಿರಿಕಲ್ಲಾಡುವಂತಹ ಕಲ್ಲಾಯ್ತುನಾದೆ.

ಕೇಶವದೇವ: (ಸುಮ್ಮನೆ ಕೇಳುತ್ತಿರುವನು)

ಶಾಂತಲಾದೇವಿ: ನೀನು ಉಡೆ ಉರ್ಚಲು ಅಸುನೀಗಿದ ಹೆಮ್ಮಕ್ಕಳು, ಅವರ ಹೆಣ್ತನವನ್ನು ರಕ್ಷಿಸಿಡಲೆಂದು ನಿನ್ನೊಡನೆ ಹೋರಾಡಿ ಮಡಿದ ಹುಡುಗರು—ಅವರೆಲ್ಲರ ಲೆಕ್ಕ ಆರಿಗಳವು ?

ಕೇಶವದೇವ: ಅಂತಹ ಅರಗುಲಿಯೆ ಆದೆ ಮಹಾರಾಣಿ.

ಶಾಂತಲಾದೇವಿ: ಅಂತಹ ನಿನ್ನನ್ನಾವ ನಾಡೂ ಮನ್ನಿಸದು.

ಕೇಶವದೇವ: ನಿಜ ತಾಯಿ. ಆದರೀಗ ನೀವೆಲ್ಲ ನನ್ನನ್ನು ಕ್ಷಮಿಸಿ ಬಿಟ್ಟುಕುಡುವ ಕೃಪೆ ಮಾಡಬೇಕು ; ನನ್ನ ಬಾಳಿಗೊಂದಾಸರೆಯಾಗಬೇಕು.

ಶಾಂತಲಾದೇವಿ: ಏಕೆ ? ಕೊಂಬೆಯೊಂದರಿಂದಾಯ್ದುಕೊಂಡ ಕಾವೊಂದು ಕೊಡಲಿಗಳವಟ್ಟು ಬುಡಕ್ಕೆ ಮಿಳ್ತುವಾಗುವಂತೇನು ?

ಕೇಶವದೇವ: ಅದು ನೀರನ್ನು ಹೊರುವ ಅಡ್ಡೆಯಾದರೂ ಆಗಬಹುದಲ್ಲ ?

ಶಾಂತಲಾದೇವಿ: ಆಗಬಹುದಾದರೂ ಕೇಶವದೇವ, ನಿನ್ನ ಶಕ್ತಿಯನ್ನಂತು ನೀನು ಪರಿವರ್ತಿಸಿಕೊಂಡು ಪ್ರಯೋಜನಕಾರಿಯಾಗಬಲ್ಲೆಯೆಂದೆಂಬ ನೆಚ್ಚುಗೆ ನಮಗೆಲ್ಲ ನಚ್ಚಳಿದು ಹೋಗಿದೆ.

ಕೇಶವದೇವ: ಅಂದರೆ, ನಾನಿಂತೇ ಜನುಮಕೊಟ್ಟ ತಾಯ್ನಾಡಿನಿಂದ ದೂರನಾಗಿದ್ದು

ಕೊಂಡು ಯಾವಜ್ಜೀವವೂ ಕೊರಕೊರಗಿ ಸಾಯಬೇಕು ಎಂಬ ಅಭೀಷ್ಟವೇನು ಇಲ್ಲಿನವರದೆಲ್ಲ.

ಶಾಂತಲಾದೇವಿ: ಅದು ಸುಸ್ಪಷ್ಟ.

ಕೇಶವದೇವ: ಅಂದಮೇಲೆ ಮಹಾರಾಣಿ, ಅಪರಾಧಿಯೊಬ್ಬನ ಕ್ರೂರ ಮಾಳ್ಕೆಗಳೆಲ್ಲದರ ಪ್ರತೀಕಾರವನ್ನು ಹೀಗೆ ಒಟ್ಟಾರೆ ಸೇರಿಸಿ, ಸಂಕಟಕ್ಕೀಡು ಮಾಡಿ, ಅವನ ಸಂಕಟದಲ್ಲಿ ನಲಿವ ಹಂಬಲವಿದು ಎಂದಂಪಾರು ಅರಿತ ಮಂದಿ.

ನಾಗವ್ವೆ: ಎಚ್ಚರಿಕೆ ಕೇಶವದೇವ!

ಕೇಶವದೇವ: (ನಕ್ಕು) ಇಲ್ಲವಾದರೆ?

ನಾಗವ್ವೆ: ಇಲ್ಲವಾದರೆ! ಇಲ್ಲವಾದರೆ, ಸೆರೆಯಾಗಿ ಸಾಯ್ವುತನಕ ಕಳ್ತಲೆಯ ಕೋಣೆಯಲ್ಲಿ ಸೊರಗಿ ಸೊರಗಿ ನವೆಯುತ್ತಿರಬೇಕಾಗುತ್ತದೆ.

ಕೇಶವದೇವ: ನೀನು ತಪ್ಪಿರುವೆ ನಾಗವ್ವೆ. ನನ್ನ ನಾಡಿನ ಮಣ್ಣ ಕಣದ ಮೇಲೆ ವಾಸಿಸುತ್ತ, ಅಲ್ಲಿನ ಗಿಡುಮರ ಬಳ್ಳಿಗಳು ಕುಡಿದುಬಿಟ್ಟ ಉಸಿರನ್ನಾಸ್ವಾದಿಸುತ್ತ, ಆ ಜನ ತಮ್ಮ ಬಾಳನ್ನು ಒಂದುಗೂಡಿಸಿ ಹಸನಾಗಿಸಿಕೊಳ್ಳುತ್ತಿರುವ ಆ ಮಂಗಲ ಗೀತೆಯನ್ನು ಕಿವಿದುಂಬಿ ಕೇಳುತ್ತ, ಪೊಂಗಿ ಪೊರೆಯೇರಿ ಹೋಗುವೆನು.

ಶಾಂತಲಾದೇವಿ-ನಾಗವ್ವೆ: (ದಿಜ್ಮೂಢರಾಗಿ ನೋಡುತ್ತಿರುವರು)

ಕೇಶವದೇವ: ಆಗಳ್ಗಿ ನನ್ನ ಆ ಸೌಭಾಗ್ಯವನ್ನೂ ಕಸಿದುಕೊಂಡು ಒಂದು ಕಲ್ಲಾಲೆಗಿತ್ತೋ, ಇಲ್ಲ ನೇಣೆತ್ತಿಯೋ, ಅಥವಾ ಕಾಲಿನತ್ತಣಿಂದ ಇನಿತಿನಿತಾಗಿ ಖಂಡಖಂಡಗಳನ್ನು ತುಂಡುತುಂಡಾಗಿ ಕೊಚ್ಚಿ ಕೆಡಹುತ್ತಲೋ ತೀರಿಸಿಬಿಡಬಹುದು.

ಶಾಂತಲಾದೇವಿ: (ಅಸಂತುಷ್ಟಿಯಿಂದ) ಸಾಕು! ಸಾಕು, ಕೇಶವದೇವ!

ಕೇಶವದೇವ: ಮನ್ನಿಸಬೇಕು ಒಡತಿ. ಕನ್ನಡದ ನಾಡ ಜನ ಅಂತಹ ಕ್ರೂರ ಕರ್ಮಿಗಳಲ್ಲವೆಂಬುದನ್ನರಿತಿರುವೆನಾದರೂ, ನನ್ನ ಈ ಕಲ್ಪನೆಯೇನಾದರೂ ನಿಜವಾಯಿತೆಂದೇ ಎಂದೆನ್ನೋಣ. ಆಗಲೂ ನನಗೆ ನನ್ನ ನಾಡಿನಲ್ಲಿ ಅಸು ನೀಗಿದ ಪರಮ ಸನ್ತೋಷವಾದರೂ ಲಭಿಸುವುದು.

ಶಾಂತಲಾದೇವಿ: (ಮೂಕಳಾಗಿರುವಳು)

ಭರತ: (ತನ್ನ ದಣಾಯಕನ ಕುಡುತೆಯಲ್ಲಿ ಅಧಿಕಾರ ದರ್ಪದಿಂದ ಪ್ರವೇಶಿಸಿ, ಮಹಾರಾಣಿಯನ್ನು ಕಂಡು, ಸೌಮ್ಯನಾಗಿ, ವಿನೀತನಾಗಿ ಸಾರ್ಕೆಗೆಯ್ದು, ಒರೆಯಿಂದ—ಲಗನ್ನೆಳೆದು ಮೊಳಕಾಲೂರಿ ವೀರವನ್ದನವನ್ನೊಪ್ಪಿಸಿ, ಎದ್ದುನಿಂತು, ಹಿಡಿಯನ್ನೊರೆಗೆ ನೂಂಕಿ ನಿಲ್ಲುವನು)

ಶಾಂತಲಾದೇವಿ: ಏನು ಡಣಾಯಕ?

ಕೇಶವದೇವ: ದೇಶಭ್ರಷ್ಟನೀ ಪಾಪಿಯನ್ನು ಎಳೆದೊಯ್ವ ಕಟ್ಟವಸರವಿರಬೇಕು.

ಭರತ: (ಅವನನ್ನೊಮ್ಮೆ ನಿಡುಗಣ್ಣಿನಿಂದವಲೋಕಿಸಿ, ಮಹಾರಾಣಿಗೆ) ಅಹುದು ತಾಯಿ, ಆ ಅವನನ್ನೆಳೆದೊಯ್ವಾತುರದಿಂದಲೇ ಬಂದೆನಹುದು.

ಶಾಂತಲಾದೇವಿ: ಆಗಲಿ.

ಭರತ: (ತನ್ನನುಚರರತ್ತ ತಿರುಗಿ, ತಲೆವೀಸುವನು)

ಅವನನುಚರರು: (ಕೈಕೋಳಗಳನ್ನು ಹಿಡಿದು ಕೇಶವದೇವನ ಬಳಿಸಾರುವರು).

ಕೇಶವದೇವ: (ತನ್ನದೇ ಆದ ಸಿಂಗದಂಗದ ವೀರ ನಿಲುವಿನಲ್ಲಿ ನಿಮಿರಿ ನಿಂತು, ತನ್ನ ಆಜಾನುಬಾಹುಗಳನ್ನು ವೈಯಾರ್ಪಿನೊಂದು ಲೀಲೆಯಿಂದ ಚಲಿಸಿ ಮುಷ್ಟಿ ಗಟ್ಟುತ್ತಿರುವನು).

ಆ ಸೈನಿಕರು: (ಬೆಚ್ಚಿ ನಿಲ್ವರು)

ಕೇಶವದೇವ: (ಮಂದಸ್ಮೇರದಿಂದ ನೋಡುವನು)

ಶಾಂತಲಾದೇವಿ-ಭರತ: (ಕೇಶವದೇವನ ವೀರಲೀಲೆಯನ್ನು ಕಟ್ಟಚ್ಚರಿಯಿಂದ ನೋಡುತ್ತಿರುವರು)

ಕೇಶವದೇವ: ಭಯಗೊಂಡರೇನು, ವೀರ್ಯವರ್ಧಕರೀ ಹೊಯ್ಸಳ ಸೇನೆಯ ಪಟುಭಟರು? ಕೇಳು ಭರತ, ನಿನ್ನೀ ಪಡೆಬಂಟರ ಈಯಂಜುಗುಳಿತನವಾರಿಗೂ ಗೌರವ ತರುವಂತಹುದಲ್ಲ.

ಭರತ: ನಿನ್ನ ಮೆಯ್ಯ ಮೃಗ ಬಲಕ್ಕಂಜಿ ಅವರು ಹಿಂಜರಿದರೆಂದಲ್ಲ, ಕೇಶವದೇವ. ನಿನ್ನ ಕಣ್ಣುಗಳಲ್ಲಿನ ಅದಾವುದೋ ಮಾದಕದೃಷ್ಟಿ ಅವರ ಶಕ್ತಿಯನ್ನನಿತುಕಾಲ ಉಡುಗಿಸಿಟ್ಟಿರಬೇಕು.

ಕೇಶವದೇವ: (ಗಟ್ಟಿಯಾಗಿ ಗೊಳ್ಳೆಂದು ನಕ್ಕುಬಿಡುವನು)

ಭರತ: ನಿನ್ನೀ ಬಿನದವೇಕೋ ನಮಗರ್ಥವಾಗಲಿಲ್ಲ.

ಕೇಶವದೇವ: ನೀನದನ್ನು ಅರಿಯಲಾರೆಯಣ್ಣ.

ಎಲ್ಲರೂ: (ಅವನು ನಿಂತಿರುವ ವೀರ ನಿಲುವನ್ನೂ, ವೈಮನಸ್ಸುಗಳಲ್ಲಿ ಮೆರೆಯುತ್ತಿರುವ ಸ್ಥೈರ್ಯ, ಸಾಹಸ, ಸೌಷ್ಠವಗಳನ್ನೂ ಕಟ್ಟಚ್ಚರಿವಟ್ಟು ನೋಡುತ್ತಿರುವರು)

ಕೇಶವದೇವ: ಆಯಿತು ಭರತ. ನನ್ನ ಕಣ್ಣುಗಳಲ್ಲಿ ಕಾಂತಿಯೊಂದುಂಟೆಂಬುದನ್ನು ಒಪ್ಪಿಕೊಂಡಿರುವೆಯಲ್ಲ?

ಭರತ: ನಿಜ.

ಕೇಶವದೇವ: ಕಣ್ಣ ಕಾಂತಿ ಮನಸಿನಾಳದಿಂದ ಉಕ್ಕಿ ಬಂದ ಅಂತರ್ಯದ ಮೆರುಗೋ, ಮಾದಕವೋ, ಅಥವಾ ಮಾರಕ ಪ್ರೇರಕಶಕ್ತಿಯೋ ಆಗಿರುತ್ತದೆಂಬುದನ್ನೂ ನೀನು ಬಲ್ಲೆಯಲ್ಲವೆ?

ಭರತ: ಬಲ್ಲೆ.

ಕೇಶವದೇವ: ನೀನೆಂದಂತೆ ನನ್ನ ಕಣ್ಣುಗಳು ಮುತ್ತಿ ಬಂದ ಮತ್ತೊಂದು ಶಕ್ತಿಯನ್ನು ಅಂದರೆ ಸುತೀಕ್ಷ್ಣ ಅಗ್ನಿಯನ್ನೂ ಆರಿಸಿ, ತಣ್ಣಗಾಗಿಸಿರಬೇಕಾದರೆ ಅವುಗಳಲ್ಲೊಂದು ದಿವ್ಯ ಚೇತನವೇ ಮನೆಮಾಡಿಕೊಂಡಿರಬೇಕಲ್ಲಾ ?

ಭರತ: (ಮಿಣ್ಣನಿರುವನು)

ಕೇಶವದೇವ: ನೀನದನ್ನೊಪ್ಪಿಕೊಳ್ಳಲು ಸ್ವಾಭಿಮಾನದಿಂದ ಸಾಧ್ಯವಾಗಲಿಲ್ಲ. ಅದು ನನಗೆ ತಿಳಿಯುತ್ತಿದೆ. ಇರಲಿ ದಣ್ಣನಾಯಕ. ನಾನು ಮೊದಲೇ ನುಡಿದಂತೆ ಕಣ್ಣಿಗಾಧಾರವಾಗಿ ನಿಂದಿರುವ ಆ ಮನಸ್ಸೂ ಕೂಡ ಅಂಥದೇ ಕಲ್ಯಾಣ ಶಕ್ತಿಯನ್ನು ತುಂಬಿಕೊಂಡಿದೆ ಎಂದಂತಾಗುವುದಿಲ್ಲವೆ? ಮನಸ್ಸು ಅದನ್ನು ತುಂಬಿಕೊಂಡಿರಬೇಕಾದರೆ, ನನ್ನ ಬಾಳಿನ ನಡೆನುಡಿಗಳು ಅಂತಹ ಸಂಪತ್ಸಾಧನವನ್ನು ಆರ್ಜಿಸುವ ಸಂನ್ಯಾಸವನ್ನೂ ಸಾಕಷ್ಟು ಅಭ್ಯಸಿಸಿರಬೇಕೆಂದೆಂಬುದು ತಾನಾಗಿ ಸ್ಪಷ್ಟವಾಗುತ್ತದೆ.

ಶಾಂತಲಾದೇವಿ: ನಿನ್ನ ಈ ವಾಕ್ಚಾತುರ್ಯದರ್ಥವೇನು ?

ಕೇಶವದೇವ: ಮಹಾರಾಣಿಯವರು ಕ್ಷಮಿಸಬೇಕು. ಇದರಲ್ಲಿ ನುಡಿ ಬೆಡಗಿನ ನಿರಿಗೆಯಿಲ್ಲ ತಾಯಿ. ಇಂದು ಲೋಕ ನನ್ನನ್ನು ಕಡೆಗಣಿಸುವಷ್ಟು ದುಟ್ಟನಲ್ಲವೆಂದೆಂಬುದನ್ನು ನಿರ್ಣಯಿಸಿ ಕುಡುವ ಅಪರಾಧಿಯ ಆತ್ಮರಕ್ಷಣೆ ಮಾತ್ರವಷ್ಟೆ.

ಶಾಂತಲಾದೇವಿ: ನಾಡಿನ ಪರಮಾಧಿಕಾರವೊಂದು ನಿಯಮಾವಳಿಯಂತೆ ನಿರ್ಧಾರಿತಗೊಂಡಿರುವೊಂದು ಪ್ರಶ್ನೆಯನ್ನು ಕುರಿತು ಮತ್ತೆ ಚರ್ಚಿಸುವುದಾದರೂ ಅಪರಾಧವಾಗುತ್ತದೆ.

ಕೇಶವದೇವ: ನಿಜ ತಾಯಿ. ಆದರೆ ಅಂತಹ ಶಿಕ್ಷೆಗೆ ಬಲಿಯಾದ ಜೀವಿ ಪುನರ್ವಿಮರ್ಶೆಯನ್ನು ಬೇಡಲು ಸ್ವಾತಂತ್ರ್ಯವನ್ನುಳ್ಳವನು.

ಶಾಂತಲಾದೇವಿ: ನೀನು ನಿರಪರಾಧಿಯೆಂದೆಂಬುದನ್ನು ಸಾಧಿಸ ಹೊರಡುವೆಯಾದರೆ ಅದು ಅವಿವೇಕವಾದೀತು.

ಕೇಶವದೇವ: (ಆತ್ಮಸ್ಥೈರ್ಯದ ದೃಢತೆಯಿಂದ) ನಾನು ನಿರಪರಾಧಿ ಎಂದೆಂಬುದನ್ನು ಸಾರಿ ಸಾರಿ ಹೇಳುತ್ತಿದ್ದೇನೆ ಒಡತಿ. ವೇದವಿದ್ಯಾದೇವತೆಯನ್ನು ಸಾಕ್ಷಾತ್ಕರಿಸಿಕೊಂಡು, ಆ ಮಹಿಮಾನ್ವಿತಳ ಮಾರ್ಗದರ್ಶನದಿಂದ ಅಖಂಡ ಕೀರ್ತಿಯನ್ನೂ, ಅರ್ತಿಯನ್ನೂ ಸಂಪಾದಿಸಿ ಬಾಳಿದ, ಬೆಳಗಿದ, ಸತ್ಕುಲ ನಮ್ಮದು. ಅಂತಹ ಹಾಲ್ಗಡಲಲ್ಲಿ ದುಟ್ಟರು ಹುಟ್ಟರು.

ಶಾಂತಲಾದೇವಿ: ಆದರೆ ನೀನು ಮಹಾ ದುಟ್ಟನೆಂಬುದನ್ನು ಹೊಯ್ಸಳ ರಾಯನಾಸ್ಥಾನದಲ್ಲಿ ನೆರೆದಿದ್ದ ಪಂಚಪ್ರಧಾನರೂ ದಣ್ಣನಾಯಕರೂ ಹಿರಿಯರೂ ನಿರ್ಣಯಿಸಿದರಲ್ಲಾ ?

ಕೇಶವದೇವ: ನಿರ್ಣಯಿಸಿದರು ನಿಜ.

ಶಾಂತಲಾದೇವಿ: ನೀನದನ್ನೊಪ್ಪಬೇಕು.

ಕೇಶವದೇವ: (ನಕ್ಕುಬಿಡುವನು)

ಶಾಂತಲಾದೇವಿ: ಒಂದು ನಾಡಿನ ಪರಮಾಧಿಕಾರವನ್ನೇ ನಕ್ಕು ತೇಲಿಸಿಬಿಡುವ ಈ ಔದ್ಧತ್ಯ!

ಕೇಶವದೇವ: (ಶಾಂತ ಸ್ಥಿರತೆಯಿಂದ) ಔದ್ಧತ್ಯವಲ್ಲ ಮಹಾರಾಣಿ. ಆ ಅಂಥ ನಿರ್ಣಯವನ್ನು ಒಪ್ಪಿಕೊಳ್ಳದ ಸತ್ಯ ಸ್ಥಿರತೆಯಷ್ಟೆ.

ಶಾಂತಲಾದೇವಿ: ನಿನ್ನ ಕೇಡಿಗತನವನ್ನು ಅಂದು ಲೋಕವೇ ಕಂಡಿತು.

ಕೇಶವದೇವ: ಲೋಕ ಅಂದು ಕಂಡುದೊಂದನ್ನೇ ತಾಯಿ. ಅದೆಂದರೆ ಅಧಿಕಾರ ಐಶ್ವರ್ಯಗಳು ಬಡವನ ಸತ್ಯ ಮತ್ತು ನಿಷ್ಠೆಗಳನ್ನು ಕಬಳಿಸಿ, ತನ್ನ ಗಾಳುಗಂಡಿಕೆಯನ್ನು ಹೇಗೆ ಮೆರೆದು ವಿಜೃಂಭಿಸುತ್ತದೆಂಬುದನ್ನು.

ಶಾಂತಲಾದೇವಿ: ಅದರಿಂದೀಗಳೇನಾಗಬೇಕು?

ಕೇಶವದೇವ: ಪ್ರಭು ದಣ್ಡಣೆಯುದರ ಪುನರ್ಪರಿಶೀಲನ.

ಶಾಂತಲಾದೇವಿ: ಅದು ಸಾಧ್ಯವಾಗದು.

ಕೇಶವದೇವ: ಬೇಡ ತಾಯಿ, ನಾನು ಹೊರಟು ಹೋಗುತ್ತೇನೆ. ಆದರೆ ನನ್ನದೊಂದ-ರಿಕೆಯನ್ನು ತೂರದೆ ಸಲಿಸಿ ಕೊಡುವ ಕೃಪೆದೋರಬೇಕು.

ಭರತ: ಅದು ಲಕುಮವ್ವೆಯರನ್ನು ನೋಡುವ ಬಯಕೆಯಾಗಿರಬೇಕು.

ಶಾಂತಲಾದೇವಿ: (ಕರುಣೆದುಂಬಿ) ಪಾಪ! ಆ ಹೆಮ್ಮಗಳು ನೊಂದ ನೋವು ಬಹು ದೊಡ್ಡದು. ನಾಗವ್ವೆ.

ನಾಗವ್ವೆ: ಅವ್ವ,

ಶಾಂತಲಾದೇವಿ: ಹೋಗು. ಲಕುಮವ್ವೆಗೆ ಇಂದಿನ ಸಂಜೆಯ ನೃತ್ಯೋತ್ಸವದ ಹೊಸ ಗೀತೆಗೆ ರಾಗ ಸಂಯೋಜನೆಯನ್ನಳವಡಿಸಲೆಂದು ನಿಯೋಜಿಸಿ ಇತ್ತ ಬಂದೆವು. ಈಗ ಹೋಗು, ನಾವು ಬರಹೇಳಿದೆವೆಂದು ಹೇಳು.

ನಾಗವ್ವೆ: (ಹೊರಟಿರುವಳು)

ಕೇಶವದೇವ: (ಕೈಯೆತ್ತಿ ನಿವಾರಿಸುತ್ತ) ತಡೆ! ನಿಲ್ಲು ನಾಗವ್ವೆ!

ನಾಗವ್ವೆ: (ನಿಂತು ಮಹಾರಾಣಿಯ ಮೊಗವನ್ನವಲೋಕಿಸುತ್ತಿರುವಳು)

ಕೇಶವದೇವ: ನಾನವಳನ್ನು ನೋಡುವ ಇಚ್ಛೆಯಿಂದಲ್ಲ ಇಲ್ಲಿಗೆ ಬಂದುದು ಮಹಾರಾಣಿ.

ಶಾಂತಲಾದೇವಿ: ಅಷ್ಟೊಂದು ನಿಷ್ಕರುಣೆಯೂ ಆದೆಯೇನು?

ಕೇಶವದೇವ: ನನ್ನಿನ್ನೀಯೊಡಲನ್ನು ಬಳೆಸಿದ ನಾಡಿನ ಕೇಡನ್ನು ಬಗೆದೆನೆಂದೆಂಬ ಅಪರಾಧಿ

ನಾನು. ನಾನಂತಹವನಲ್ಲವೆಂದು ಸಾಕ್ಷಾತ್ಕರಿಸಿ ಕುಡುವ ಧೀರೋದ್ದೇಶದಿಂದ ಬಂದ ನನಗೆ ಮಿಕ್ಕವು ಗೌಣ. ಅಂದು ನನ್ನನ್ನು ಲೋಕದೆದುರು ಸಾಯಿರ ಸಾಯಿರ ಸಾಕ್ಷ್ಯ ಸಾಹಿತ್ಯಗಳನ್ನೊದಗಿಸಿ ಪಗಲ್ಗಳ್ಳನೆಂದು, ಪರಸ್ತ್ರೀ ಪೀಡಕನೆಂದು ಸಾಧಿಸಿ ಸಿದ್ಧಿವಡೆದ ಸಂಗರಸನನ್ನು ಸನ್ನಿಧಾನದೆದುರು ಒಂದೇ ಒಂದು ಪ್ರಶ್ನೆಯನ್ನು ಕೇಳುವ ಅವಕಾಶ ಮಾಡಿ ಕೊಡಬೇಕು.

ಒಬ್ಬ ದಣಾಯಕ: (ಕಳವಳ ಕಳೇವರನಾಗಿ ಪ್ರವೇಶಿಸಿ ಮಹಾರಾಣಿಗೆ ವೀರ ವಂದನವನ್ನರ್ಪಿಸಿ, ಎದ್ದು, ತಂದಿದ್ದ ಓಲೆಯನ್ನೂ ಎರಡೂ ಕೈಗಳಲ್ಲಿ ಭಕ್ತಿಯಿಂದರ್ಪಿಸಿ, ಮೊಗ ತಗ್ಗಿಸಿ ನಿಲ್ಲುವನು).

ಶಾಂತಲಾದೇವಿ: (ಓಲೆಯನ್ನೊಪ್ಪಿಕೊಂಡು) ಏನದು?

ದಣಾಯಕ: (ಶೋಕ ವಿಹ್ವಲನಾಗಿ) ಸಂಗರ–ಸ–ರು........

ಶಾಂತಲಾದೇವಿ: ಏನಾಯಿತವರಿಗೆ?

ದಣಾಯಕ: ನೆಲದ ಮೇಲೆ ನೆಟ್ಟ ಇರ್ಬಾಯ ಖಡ್ಗದ ಮೇಲೆ ಎದೆಯೊಡ್ಡಿ ಹಾಯ್ದು ಸ್ವರ್ಗಸ್ಥರಾದರು!

ನಾಗವ್ವೆ: ಅಯ್ಯೋ!

ಕೇಶವದೇವ: (ಗಂಭೀರನಾಗುವನು.)

ಶಾಂತಲಾದೇವಿ: ನಾವಿಲ್ಲಿಗೆ ಬರುವ ಮೊದಲು ಯಾಗ ಸಂಭಾರಗಳನ್ನು ಅಣಿಗೊಳಿಸಿ ಕುಡುವುದರಲ್ಲಿ, ಆಚಾರ್ಯ ಪುರೋಹಿತರ ಆಣತಿಗಳಂತೆ ಶಾಸ್ತ್ರ ವಿಧಿಗಳನ್ನು ಆಯಾಯ ಮುಹೂರ್ತಗಳಲ್ಲಿ ಶ್ರದ್ಧಾನ್ವಿತವಾಗಿ ಆಗ ಮಾಡಿಸುವುದರಲ್ಲಿ, ಅವರು ತೋರಿದ ಭಕ್ತ್ಯುತ್ಸಾಹಗಳನ್ನು ಕಂಡ ನಮಗೆ, ಈ ದುಟ್ಟ ಸುದ್ದಿ ಬರಸಿಡಿಲಿನಂತೆರಗಿದೆ.

ಭರತ: ಏನನ್ಯಾಯವಾಗಿ ಹೋಯಿತು.

ಶಾಂತಲಾದೇವಿ: (ದಣಾಯಕನಿಗೆ) ಈ ಓಲೆಯೇನು?

ದಣಾಯಕ: ಸನ್ನಿಧಾನವನ್ನುದ್ದೇಶಿಸಿ ಅವರೇ ಬರೆದಿರಿಸಿದ, ಮುದ್ರೆಯೊಡನಿರುವ ವಿಜ್ಞಾಪನೆ ಇರಬೇಕು.

ಶಾಂತಲಾದೇವಿ: ನಾವೀಗ ದಿಕ್ಕು ತೋಚದವರಾಗಿದ್ದೇವೆ. ಪ್ರಭುಗಳಲ್ಲಿ ಸುದ್ದಿಯನ್ನರಿಕೆ ಮಾಡಿಕೊಂಡಾಯ್ತೆ?

ದಣಾಯಕ: ಇಲ್ಲ ತಾಯಿ. ಓಲೆಯೊಡನೆ ಇಲ್ಲಿಗೇ ಮೊದಲು ಓಡಿ ಬಂದೆನು.

ಶಾಂತಲಾದೇವಿ: ಓದಿಬಿಡು ನಾಗವ್ವೆ, ಕೇಳಿಬಿಡೋಣ.

ನಾಗವ್ವೆ: (ಮುದ್ರೆಯನ್ನೊಡೆದು ಓದುವಳು) 'ಹೊಯ್ಸಳ ನಾಡಿನ ಸತ್ಯದೇವತೆಯೂ, ಧರ್ಮದೇವತೆಯೂ ಆದ ಪಟ್ಟದರಸಿ ಶಾಂತಲಾ ಮಹದೇವಿಯರಲ್ಲಿ ದುಟ್ಟನೂ

ಪಾಪಿಯೂ ಆಗಿಯೇ ಬಾಳಿ ಅಳಿದು ಹೋಗುತ್ತಿರುವ ಸಂಗರಸನ ಭಕ್ತಿ ಪೂರ್ವಕ ಪ್ರಣಾಮುಗಳು. ತಾಯಿ, ಹೊಯ್ಸಳ ಪ್ರಭುವು ಶ್ರೀಮದ್ವಿಷ್ಣು ವರ್ಧನ ದೇವರೂ, ಪಿರಿಯರಸಿಯರಾದ ತಾವೂ, ಹೊಯ್ಸಳ ನಾಡ ಹಿರಿಯರೂ ನನ್ನನ್ನು ಇದುವರೆಗೂ ನಂಬಿಕಸ್ತನೆಂದೇ ಬರೆದು ಕಾಪಿಟ್ಟರಿ. ನನ್ನ ಕಲಂಕ ವನ್ನಾರೂ ಶಂಕಿಸಲಿಲ್ಲ. ಆದರೆ ನಾನು ಪರಮ ಪಾಪಿ. ಎಲ್ಲ ವಿಷಯ ಗಳಲ್ಲಿಯೂ ನಾನು ಪ್ರಭು ಪ್ರೀತಿಗೆ ತಕ್ಕಂತೆ ನಡೆದುಕೊಂಡೆನಾದರೂ, ಈ ಬೆಳಿಗ್ಗೆ ಪ್ರಕಟಗೊಂಡ ಕೇಶವದೇವರಿಗೆ ಮಾಡಬಾರದ ಅನ್ನೆಯವನ್ನು ಮಾಡಿ ಮಹಾ ದ್ರೋಹಿಯಾದೆ—'

ಕೇಶವದೇವ: (ಧ್ಯಾನಾಸಕ್ತ ಚಿತ್ತನಾಗಿರುವನು)

ಭರತ: (ಗೌರವ ಭಾವದಿಂದ ಕೇಶವದೇವನನ್ನವಲೋಕಿಸಿರುವನು)

ಶಾಂತಲಾದೇವಿ: ಓದು.

ನಾಗವ್ವೆ: 'ಲೋಕ ಸಮಸ್ತವೂ ಕೇಶವದೇವನನ್ನು ನಾಡದ್ರೋಹಿ ಎಂದು ಸಾರಿ ಹೇಳುವಂತಹ ಸಾಕ್ಷ್ಯ ಸಾಹಿತ್ಯವನ್ನು ನನ್ನ ಅಷ್ಟೈಶ್ವರ್ಯವನ್ನೂ, ಬುದ್ಧಿ ಶಕ್ತಿಯನ್ನೂ ವಿನಿಯೋಗಿಸಿ ಜಯಿಸಿದೆನಾದರೂ ನಾನು ಕುರಿತ ಉದ್ದೇಶ ಸಾಧನೆಯಾಗಲಿಲ್ಲ. ಹತಾಶನಾದೆನು. ನಿಮ್ಮಂತಹ ಭವ್ಯ ಪ್ರದೀಪೆಯ ಮುಂದೆ ನನ್ನ ಆ ಬಹುದುಟ್ಟ ಆಸೆಯೇನು ಎಂಬುದನ್ನು ನಾನು ನಿವೇದಿಸ ಬಾರದು. ಆದರೆ ಹೇಳದಿದ್ದರೆ ತಪ್ಪೊಪ್ಪಿಗೆಯ ವಿಧಿ ಪೂರ್ಣವಾಗದಾದ್ದ ರಿಂದ ಹೇಳಿ ಬಿಡುತ್ತೇನೆ. ನನ್ನೀ ಅರಗುಲಿತನಕ್ಕೆಲ್ಲ ಕಾರಣಳೆಂದರೆ ಲಕು ಮವ್ವೆಯೇ—' (ಶಂಕಾತುರಳಾಗಿ ನಿಲ್ಲಿಸುವಳು)

ಶಾಂತಲಾದೇವಿ: ನಿಲ್ಲಿಸಬೇಡ ಓದು.

ನಾಗವ್ವೆ: 'ಅಸಾಧಾರಣವಾದ ಅವಳ ರೂಪ ಸಂಪತ್ತು, ತನು ಸಂಪತ್ತು, ಎಲ್ಲಕ್ಕೂ ಮೇಲಾಗಿ ಅವಳ ಗುಣ ಸಂಪತ್ತುಗಳವೆಲ್ಲ ನನ್ನ ಸತ್ವ ಸಂಯಮಗಳನ್ನು ಶೂನ್ಯ ವಾಗಿಸಿ ಅವಳನ್ನು ಹೊಂದುವ ಒಂದೇ ಒಂದು ನೀಚಶಕ್ತಿ ಮೈ ಮನಗಳನ್ನು ತುಂಬಿಕೊಂಡಿತು. ಅವನನ್ನು ದೇಶಭ್ರಷ್ಟನನ್ನಾಗಿಸಿ ನನ್ನ ದುಟ್ಟ ಚಾಪಲ್ಯ ವನ್ನಣಗಿಸಿಕೊಳ್ಳಲನುವಾದೆನು. ಪೂರ್ವ ಸಿದ್ಧತೆಯಲ್ಲಿ ಸಫಲನಾದೆನಾದರೂ ಮುಂದಿನದು ನಾನೂಹಿಸಿದಷ್ಟು ಸುಲಭವಾಗಲಿಲ್ಲ. ಲಕುಮವ್ವೆ ಮಹಾಸಾಧ್ವಿ. ನನ್ನಾವುದೇ ಪ್ರಲೋಭನೆಗೂ ಅವಳು ಒಳಗಾಗಲಿಲ್ಲ. ಅವಳೆನಗೊಲಿಯಲೆಂದು ಅವಳಿಗೆ ಕೊಡಬಾರದ ಕಷ್ಟಗಳಡಸುವಂತೆ ಮಾಡಿದೆನಾದರೂ ಆ ತಾಯಿ ಜಗ್ಗಲಿಲ್ಲ. ಸತ್ಯ ಧರ್ಮಗಳಿಗೇ ಗೆಲುವು ಸಿದ್ಧವೆನ್ನುವಂತೆ, ನನ್ನ ಕ್ರೂರವಾದಡ ಚಣೆಗಳನ್ನೂ ದಾಟಿಕೊಂಡು ತಮ್ಮ ಕರುಣಾಮಯ ದೃಷ್ಟಿ ಅವಳ ಮೇಲೂ, ಅವಳ ಆಗತಾನೆ ಹುಟ್ಟಿದ ಹಸುಗೂಸಿನ ಮೇಲೂ ಬಿದ್ದಿತು. ಅವಳು ಉದ್ಧಾರ

ವಾವಳು! ನಾನು ಪತಿತನೇ ಆದೆ! ನನಗೀಗ ಅನ್ನಿಸುತ್ತಿದೆ, ಸಹ್ಯಾದ್ರಿಯನ್ನೋ ಮೇರುಗಿರಿಯನ್ನೋ ಬೇಕಾದರೆ ಚೂರ್ಣಮಾಡಿ ಕಡಲಿನಲ್ಲಿ ಕದಡಿಬಿಡಬಹುದು. ಆದರೆ ನಿಷ್ಠಾವಂತ ಮಹಿಳೆಯ ಪಾವಿತ್ರ್ಯತೆಯನ್ನು ನನ್ನಂತಹ ಅಳಿಮನದ ನೀಚನು ಮಲಿನಗೊಳಿಸಲಾರನು. ಆ ತಾಯಿಗೆ ನೂರು ಸಾಯಿರ ನಮಸ್ಕಾರಗಳು. ಇನ್ನು ಕೇಶವದೇವನು! ಅವನನ್ನು ನೋಡುವಷ್ಟರ ಕಸುವಾದರೂ ನನ್ನಲ್ಲುಳಿಯಲಿಲ್ಲವಾದ್ದರಿಂದ ನನ್ನ ಈ ಪಾಪಿ ದೇಹವನ್ನು ಕೊನೆಮಾಡಿ ಮುಗಿಸುತ್ತಿದ್ದೇನೆ. ಮುಂದಿನ ನೂರು ಜನ್ಮಗಳಲ್ಲಿ ನನ್ನನ್ನು ಹುಳುವಾಗಿಸಿ ಈ ಪಾಪದ ಪ್ರಾಯಶ್ಚಿತ್ತವನ್ನು ವಿಧಿಸಬೇಕೆಂದು ಅವನಲ್ಲಿ ಬೇಡುತ್ತಿದ್ದೇನೆ. ಆದರೆ ನಾನು ಏನಾಗಿ ಜನ್ಮವೆತ್ತಿದರೂ ಸರಿಯೆ, ನನ್ನ ಕನ್ನಡ ತಾಯ್ನಾಡಿನಲ್ಲಿಯೇ ಜನಿಸುವಂತೆಸಗಬೇಕೆಂಬುದೊಂದು ಭಿಕ್ಷೆಯನ್ನು ಮಾತ್ರ ಅವನಲ್ಲಿ ಬೇಡುತ್ತೇನೆ. ಇಂತು ವಿಜ್ಞಾಪನಾ'

ಶಾಂತಲಾದೇವಿ: (ನಿಟ್ಟುಸಿರ್ಗರೆದು) ಆಯ್ತು!

ಭರತ: (ಭಕ್ತಿ ಭಾವದಿಂದ ಕೇಶವದೇವನ ಬಳಿಸಾರಿ ಕಾಲು ಮುಟ್ಟಿ ನಮಸ್ಕರಿಸುವನು)

ಕೇಶವದೇವ: (ಭಾವಾವಿಷ್ಟನಾಗಿ ನಿಂತೇ ಇರುವನು)

ಅಯ್ಯಣ: (ಸಂತೋಷಾಧಿಕ್ಯದಿಂದ ಓಡಿಬಂದು) ನೀವು ದಯಮಾಡಿಸಬೇಕು ಆರ್ಯ! ನಮ್ಮ ಘಳಿಸಾಸರು—(ಮಹಾರಾಣಿಯೇ ಮುಂತಾದವರನ್ನು ಕಂಡು ಅವಾಕ್ಕಾಗಿ, ರಾಣಿಗೆ ನಮಿಸಿ ನಿಲ್ಲುವನು)

ಶಾಂತಲಾದೇವಿ: ನೀನು ಕೇಶವದೇವನನ್ನು ಕರೆದೊಯ್ಯಲು ಬಂದೆಯೇನು?

ಅಯ್ಯಣ: ನೀವು ಅವರನ್ನು ಬಲ್ಲಿರೇನು ತಾಯಿ?

ಶಾಂತಲಾದೇವಿ: ನಾವು ಬಲ್ಲೆವು ಅಯ್ಯಣ. ನೀನು?

ಅಯ್ಯಣ: ಈ ಗೊಂದುಗಳಿಗೆಯ ಮುಂಚೆ ಇಲ್ಲಿ ಇವರ ದರ್ಶನವಾಯಿತು. ವರ್ಚಸ್ಸಿಗೆ ಬೆರಗಾಗಿ ಗುರುಗಳಲ್ಲಿ ನಿವೇದಿಸಿದೆನು. ಕರೆದು ತರಲೆಂದು ನನ್ನನ್ನಟ್ಟಿದರು.

ಶಾಂತಲಾದೇವಿ: ಕರೆದೊಯ್ವೆಯೇನು?

ಅಯ್ಯಣ: ಅದು ಗುರುಗಳಪ್ಪಣೆ.

ಶಾಂತಲಾದೇವಿ: ಎಲ್ಲಿಗೆಂದು ಕರೆದುಯ್ವೆ?

ಅಯ್ಯಣ: ಜನ್ನ ಮಂಟಪಕ್ಕೆ

ಶಾಂತಲಾದೇವಿ: ಅಲ್ಲ, ನಿನ್ನ ಮನೆಗೆ ಎಂದೆನ್ನು.

ಅಯ್ಯಣ: (ಪ್ರಶ್ನಾರ್ಥಕಮುನನಾಗಿ ನೋಡುವನು)

ಶಾಂತಲಾದೇವಿ: ಅವರು ನಿನ್ನ ತಂದೆ ಅಯ್ಯಣ.

ಕೇಶವದೇವ: (ಉರ್ಕಿದಭಿಮಾನದಿಂದ ಅಯ್ಯಣನನ್ನು ಈಕ್ಷಿಸುವನು)

ಶಾಂತಲಾದೇವಿ: ಸಂದೇಹವೇ ಅಯ್ಯಣ?

ಅಯ್ಯಣ: ಇಲ್ಲ ತಾಯಿ. (ಸನ್ತೋಷಾತಿಶಯದಿಂದ ಕೇಶವದೇವನ ಬಳಿಗಾಗಿ ಕುಂಬಿಡುವನು)

ಕೇಶವದೇವ: (ಹಿಡಿದೆತ್ತಿ ತಬ್ಬಿ ಸುರಿವಶ್ರುಧಾರೆಯಿಂದ ಮಗನ ಮಸ್ತಕವನ್ನಭಿಷೇಕಿಸುತ್ತ, ಮೌನವಾಗಿ ತಲೆದಡಹುವನು)

ಶಾಂತಲಾದೇವಿ: ಸಂತೋಷ! ನೀವಿನ್ನು ಬರಬೇಕು ಕೇಶವದೇವ. ಪ್ರಭು ಸನ್ನಿಧಿಯಲ್ಲಿ ಋತ್ವಿಕ್ ಪುರೋಹಿತರ ಮುಂದೆ ಲಕುಮವ್ವೆಯರನ್ನು ನೋಡುವುದಾಗುತ್ತದೆ.

ಕೇಶವದೇವ: ಅಪ್ಪಣೆ ತಾಯಿ.

ಶಾಂತಲಾದೇವಿ: ದಣಾಯಕ,

ದಣಾಯಕ: ಒಡತಿ,

ಶಾಂತಲಾದೇವಿ: ನೀನು ಸಂಗರಸನ ದುರಂತ ಮರಣವನ್ನು ಪ್ರಭುಗಳಲ್ಲಿ ನಿವೇದಿಸು; ಆಣತಿಯನ್ನು ಬೇಡು.

ದಣಾಯಕ: ಅಪ್ಪಣೆ.

ಶಾಂತಲಾದೇವಿ: ಈಗ ಹೋಗು.

ದಣಾಯಕ: ಅಪ್ಪಣೆ.

ಶಾಂತಲಾದೇವಿ: ನೀವಿನ್ನು ಬನ್ನಿ ಕೇಶವದೇವ (ಹೊರಡುವಳು)

ಕೇಶವದೇವ: (ಮಗನ ಮುಯ್ಪಿನ ಮೇಲೆ ಕೈಯನ್ನಿರಿಸಿ, ಕರೆದುಕೊಂಡು ಹೋಗುವನು.)

ಭರತ: (ಅವರನ್ನು ಹಿಂಬಾಲಿಸುವನು)

ಉಳಿದವರು: (ಹಿಂದಿನಿಂದ ನಡೆವರು)

ತೆರೆ

ಪಲವುಂ ನಾಲಗೆಯುಳ್ಳವಂ ಬಗೆವೊಡೆಂದುಂ ಬಣ್ಣಿಸಲ್ಕಾಱನಾ
ನೆಲನಂ ಮತ್ತಿನ ಮಾನಿಸರ್ ಪೊಗೞಲೇನಂ ಬಲ್ಲರೆಂಬೊಂದು ಬ
ಲ್ಲುಲಿಯಂ ನೆಟ್ಟನೆ ತಾಳ್ದು ಕನ್ನಡಮೆನಿಪ್ಪಾನಾಡು ಚೆಲ್ವಾಯ್ತು ಮೆ
ಲ್ಲೆಲರಿಂ ಪೂತಕೊಳಂಗಳಿಂ ಕೆಱೆಗಳಿಂ ಕಾಲೂರ್ಗಳಿಂ ಕಯ್ಗಳಿಂ

—ಆಂಡಯ್ಯ

ರಾ. ಕು.

ಸಿಗಾರೆಟ್ ಸಂನ್ಯಾಸ

ನನ್ನ ಮಿತ್ರನೊಬ್ಬನು ಸಿಗರೇಟು ಬಿಟ್ಟನೆಂದು ಕೇಳಿದೆ. ತಕ್ಷಣ ಓಡಿಹೋಗಿ ಅವನನ್ನು ಅಭಿನಂದಿಸಿ ಬಂದಿದ್ದೇನೆ. ಇಂತಹ ಪ್ರಸಂಗಗಳಲ್ಲಿ ತಡಮಾಡಿದರೆ ಅಭಿನಂದನೆಗೆ ಅವಕಾಶವೆ ಉಳಿದಿರುವುದಿಲ್ಲ. ಆದರೆ ಅದು ಮುಖ್ಯಕಾರಣವಲ್ಲ. ಈ ಮಿತ್ರನು ತನ್ನನ್ನು ತಾನೆ ಗೆಲ್ಲುವ ನಿರ್ಧಾರಮಾಡಿದ್ದಾನೆ. ಅಭಿನಂದನೆಗೆ ಇದು ಬಹು ಯೋಗ್ಯವಾದ ಸಂದರ್ಭವೆಂದು ನಾನು ತಿಳಿದಿದ್ದೇನೆ. ಸಿಗರೇಟನ್ನು ಬಿಡುವುದು ಅಷ್ಟೇನು ಕಷ್ಟದ ಕೆಲಸವಲ್ಲ. ನಾನೆ ಅನೇಕ ಸಲ ಬಿಟ್ಟದ್ದುಂಟು. ಹಾಗೆ ಬಿಟ್ಟ ಕ್ಷಣದಲ್ಲಿಯೆ ನನ್ನ ಇಷ್ಟಮಿತ್ರರಾಗಲಿ, ಪ್ರಿಯ ಬಂಧುವಾಗಲಿ ಬಂದು, ನನ್ನ ಬೆನ್ನು ತಟ್ಟಿ, ಎರಡು ಒಳ್ಳೆಯ ಮಾತು ಆಡಿದ್ದರೆ, ನನ್ನ ಜೀವನದಲ್ಲಿ ಚಾರಿತ್ರಿಕವಾದ ಒಂದು ಘಟನೆ ಎಂದೊ ನಡೆದುಹೋಗುತ್ತಿತ್ತು. ನಾನೊಬ್ಬ ಶಕಪುರುಷನೊ ಸಾಮ್ರಾಟನೊ ಆಗುತ್ತಿದ್ದಿಲ್ಲ, ನಿಜ. ಆದರೆ ಅವರ ಪ್ರಸಂಗೋಚಿತವಾದ ಒಂದು ಅಭಿನಂದನೆಯಿಂದ ನನಗೆ ಎಂತಹ ನೈತಿಕ ಬಲ ಬರುತ್ತಿತ್ತು! ಒಂದು ಮಹತ್ ಸಾಧನೆ ಮಾಡಿದೆನೆಂಬ ಹೆಮ್ಮೆಯಿಂದ ನನ್ನ ಸಂಕಲ್ಪಬಲದ ಕ್ಷೇತ್ರವನ್ನು ಇನ್ನಷ್ಟು ವಿಸ್ತರಿಸಬಹುದಾಗಿತ್ತು. ನನ್ನ ಆಂತರಿಕ ನಿರ್ಧಾರಕ್ಕೊಂದು ಬಹಿರಂಗ ಸ್ವರೂಪ ಬಂದು, ಅದನ್ನು ನಿರ್ವಹಿಸಿ ಕೊಂಡು ಹೋಗುವ ಆವಶ್ಯಕತೆಯಾದರೂ ನನಗೆ ತೋರಬಹುದಿತ್ತು. ಆದರೆ ಹೀಗೆ ಯಾರೂ ನನಗೆ ಉಪಕಾರಮಾಡಲಿಲ್ಲ. ಸಿಗರೇಟು ಬಿಟ್ಟದ್ದೇನೆಂದು ನಾನು ಯಾರಿಗೂ ಹೇಳಿರಲಿಲ್ಲ. ಇದನ್ನು ಒಪ್ಪಿಕೊಳ್ಳುತ್ತೇನೆ. ಹೇಳಬೇಕೆಂದು ಎನಿಸಲಿಲ್ಲ. ಇವೊತ್ತು ಹೆಂಡತಿಯ ಸಂಗಡ ಮಾತು ಬಿಟ್ಟಿದ್ದೇನೆ ಎಂದು ಇನ್ನೊಬ್ಬರಿಗೆ ಏಕೆ ಹೇಳಬೇಕು.? ಸಿಗರೇಟನ್ನು ಸೇದುವುದೊ ಬಿಡುವುದೊ ತೀರ ವೈಯಕ್ತಿಕವಾದ ವಿಷಯ. ಅಲ್ಲದೆ, ಧೂಮಪಾನದ ವಿಷಯವಾಗಿ ನನಗೆ ಹುಟ್ಟಿದ ವೈರಾಗ್ಯ, ನನ್ನ ಚಿತ್ತದ ಒಂದು ಲಹರಿ ಮಾತ್ರವೆಂಬ ಗ್ರಹಿಕೆಯೂ ಒಂದು ಕಾರಣ. ಇದೆಲ್ಲ ಏಕೆ, ನಿಜವಾದ ಸಂಗತಿಯನ್ನು ನಿಮಗೆ ಹೇಳಿಬಿಡುತ್ತೇನೆ. ಕೆಲಸಮಯ ಬಿಟ್ಟುಕೊಟ್ಟು ಪುನಃ ಸಿಗರೇಟು ಸೇದಿದಾಗ ಏನು ರುಚಿ ಬರುತ್ತದೆಂತೀರಿ? ಆ ಅನುಭವ

> "ಕಾಮುರತಿಯೊ ರಾಮುಸೀತೆಯೊ ನರಳಿ ನಕ್ಕಹಾಂಗ
> ಸತಿಗೆ ಪತಿ ಮರಳಿ ಸಿಕ್ಕಹಾಂಗ."

ಇಂತಹ ಅದ್ಭುತವಾದ ಸ್ವಾರಸ್ಯ ಅದರಲ್ಲಿ ಇದ್ದದ್ದೇ ಆದರೆ, ಆದನ್ನು ಕೆಡಿಸುವುದಾದರೂ ಏಕೆ? ಸಮೃದ್ಧ ಸಂಸಾರವಿದ್ದಾಗಲೆ ಸಂನ್ಯಾಸಕ್ಕೆ ಜೆಲೆ ಬರುತ್ತದೆ. ಸಿಗರೇಟನ್ನು ಬಿಡುವುದಕ್ಕೆ ಈ ನನ್ನ ಮಿತ್ರನು ಇದಕ್ಕೂ ಮುಂಚೆ ಪ್ರಯತ್ನಿಸಿದವನೆ ಆಗಿದ್ದರೆ ಈ ಸುಖ ಅವನಿಗೆ ಹೊಸದೇನೂ ಅಲ್ಲ. ಇದು ಮೊದಲನೆಯ ಪ್ರಯೋಗವಾಗಿದ್ದರೆ ಅದರ ರುಚಿ ತಿಳಿಯುವುದರೊಳಗಾಗಿ ಇವನನ್ನು ನಾವು ಸಿಗರೇಟಿನ ಸೀಮೆಯಿಂದ ಆಚೆಗೆ ದಾಟಿಸತಕ್ಕದ್ದು. ಚಟಗಾರನ ಜೀವನದಲ್ಲಿ ಇದು ಅತ್ಯಂತ ಸೂಕ್ಷ್ಮವಾದ ಪರೀಕ್ಷಾ ಕಾಲ. ಅಡವಿಯ ಮೃಗ ತನ್ನ ಬೇಟೆಯ ಮೇಲೆ ಜಿಗಿಯಲು ಜಪ್ಪಿಸಿಕೊಂಡು ಕುಳಿತಂತೆ, ಅವನ ಚಟ ಈಗ ಸಮಯ ನೋಡುತ್ತಾ ಇರುತ್ತದೆ. ನೀವು ಪಾರುಮಾಡಿದಿರೋ—ಅವನು ಉಳಿಯುತ್ತಾನೆ; ಬಿಟ್ಟಿರೋ-ಬಲಿಯಾಗಿ ಹೋಗುತ್ತಾನೆ. ಸಿಗರೇಟು ಬಿಟ್ಟವನು ಮತ್ತೆ ಸೇದತೊಡಗಿದನೆಂದರೆ ಜಗತ್ತೇನು ಮುಳುಗಿಹೋಗುವುದಿಲ್ಲ. ಆದರೆ ನಿರ್ಧಾರದ ಈ ಸೋಲು ಅವನ ಸಂಕಲ್ಪ ಶಕ್ತಿಗೆ ಕೊಟ್ಟ ಹೊಡೆತ ಮಾತ್ರ ಸಾಮಾನ್ಯವಾಗುವುದಿಲ್ಲ. ತನ್ನ ಇಚ್ಛಾಶಕ್ತಿಯ ನಡುವನ್ನೆ ಮುರಿಸಿಕೊಂಡರೆ ಅವನ ಶೀಲದ ಭವಿಷ್ಯ ಏನು?

ಇನ್ನೊಬ್ಬನ ಮನೋಬಲವನ್ನು ವರ್ಧಿಸುವುದಕ್ಕೆ ನಾವು ಯಾರು? ಮನಸ್ಸಿಗೆ ಬಲವನ್ನು ಮಂದಿ ತಂದುಕೊಡುವುದಿಲ್ಲ. ಇದು ನಿಜ. ಆದರೆ ನಮ್ಮ ಕಣ್ಣೆದುರಿಗೇ ಒಬ್ಬ ಮನುಷ್ಯ ಹೊಸ ಹಾದಿ ಹಿಡಿದು, ಮುಂದೆ ಸಾಗಲು ಅನುಮಾನ ಪಡುತ್ತಿರುವಾಗ, ಆ ದಾರಿ ಸರಿಯಾಗಿದ್ದರೆ, "ಈ ದಾರಿ ಸರಿಯಾದದ್ದೆ. ನೀನು ಮುಂದೆ ಸಾಗು" ಎಂದು ತಿಳಿಸುವುದು ನಮ್ಮ ಧರ್ಮ, ಅಷ್ಟೆ ಏಕೆ, ಅವಿಲಂಬ್ಯಾಕರ್ತವ್ಯವೂ ಹೌದು. ಈ ನಮ್ಮ ಮಿತ್ರನು ಸಿಗರೇಟಿನ ಗುಲಾಮನಾದದ್ದಾಗಲಿ, ಈಗ ಅದರಿಂದ ಮುಕ್ತನಾಗುವುದಾಗಲಿ, ಸಂಪೂರ್ಣವಾಗಿ ಅವನದೆ ಹೊಣೆಗಾರಿಕೆಯಲ್ಲ. ಅವನ ಚಟವನ್ನು ಬಿಡಿಸುವ ಭಾರ ನಮ್ಮ ಮೇಲಿದೆ. ಏಕೆಂದರೆ ಆ ಚಟಕ್ಕೆ ಅವನನ್ನು ಬಲಿಕೊಟ್ಟವರು ನಾವೇ. ಯಾರ ಮೇಲಾದರೂ ತಪ್ಪು ಹೊರಿಸುವುದು ಬಲು ಸುಲಭ. ನಾವೇ ತಪ್ಪುಗಾರರೆಂದು ಒಪ್ಪಿಕೊಳ್ಳುವುದು ಅಷ್ಟು ಸುಖವಲ್ಲ. ಸಾಕಷ್ಟು ಸಮರ್ಥವಾದ ಆಧಾರಗಳಿದ್ದಾಗ ಮಾತ್ರ ನಾವು ಆರೋಪವನ್ನು ಒಪ್ಪಿಕೊಳ್ಳದೆ ಗತ್ಯಂತರವಿಲ್ಲ. ಆತನ ಬಾಯಲ್ಲಿ ಬಿಳಿಬತ್ತಿಯಿಟ್ಟು ಕಡ್ಡಿ ಕೊರೆದವರು ನಾವೆ ಆಗಿರಲಿಕ್ಕಿಲ್ಲ. ಸೇದುವ ಶೈಲಿಯನ್ನೊ, ಸೊಗಸಿನ ರಹಸ್ಯವನ್ನೊ ತಿಳಿಸಿಕೊಟ್ಟವರೂ ನಾವಲ್ಲವೆಂದು ನಮಗೆ ಗೊತ್ತಿದೆ. ಆದರೂ ಕೂಡ ಆ ಚಟದ ಸಂವರ್ಧನೆಗೆ ನಾವು ಕಾರಣರಾಗಿದ್ದೇವೆ.

ಈ ಆರೋಪವನ್ನು ಅಲ್ಲಗಳೆಯಲು ನಿಮ್ಮಷ್ಟೆ ನಾನೂ ಉತ್ಸುಕನಾಗಿದ್ದೇನೆ. ಧೂಮಪಾನ ಒಬ್ಬನಿಗೆ ಅಪರಿತ್ಯಾಜ್ಯ ಅಭ್ಯಾಸವಾಗಿದ್ದರೆ, ಅದರ ಶ್ರೇಯಸ್ಸೆಲ್ಲ ಅವನಿಗೇ ಸಲ್ಲಬೇಕು. ಆದರೆ ನಾವು ಅದರಿಂದ ಅವನನ್ನೂ ಉಳಿಸಬಹುದಾಗಿತ್ತೆಂಬುದನ್ನು ಮರೆಯುತ್ತೇವೆ. ಸಿಗರೇಟು ಸೇದುವುದು ಶ್ರೇಯಸ್ಕರವೆಂದು ನಾವು ಅವನಿಗಾಗಲಿ, ಇನ್ನಾರಿಗೇ ಆಗಲಿ ಹೇಳಲಿಲ್ಲವೆಂಬುದು ನಿಜ. ಆದರೆ ಅದು ಒಳ್ಳೆಯದಲ್ಲವೆಂದೂ ಹೇಳ

ಲಿಲ್ಲ. ನಮಗೇನು ಸಂಬಂಧವೆಂದೂ ಉದಾಸೀನರಾಗಿ ಉಳಿದೆವು. ಸಾಮಾಜಿಕವಾಗಿ ನಮ್ಮ ಹೊಣೆಯನ್ನು ನಾವು ಸರಿಯಾಗಿ ನಿರ್ವಹಿಸಲಿಲ್ಲ. ಸಾರ್ವತ್ರಿಕವಾಗಿ, ಸ್ವೈರ ವಾಗಿ ಈ ಚಟವನ್ನು ಬೆಳೆಯಗೊಟ್ಟು, ಆ ಮೇಲೆ ಸೇದುವವರನ್ನು ಹೀಯಾಳಿಸುವುದು ಯಾವ ನ್ಯಾಯ? ಸೇದುವುದು ತಪ್ಪಾಗಿದ್ದರೆ, ತಿದ್ದುವ ದಾರಿ ಇದಲ್ಲ. ಆದರೆ ಅಪ ಮಾನವನ್ನು ಆಮಂತ್ರಿಸುವುದಕ್ಕೆ ಮಾತ್ರ ಇದು ಬಹು ಸಮರ್ಪಕವಾದ ಉಪಕ್ರಮ ವಾಗುತ್ತದೆ. "ಕತ್ತೆಯಂತಹ ಪ್ರಾಣಿ ಕೂಡ ತಂಬಾಕನ್ನು ಮುಟ್ಟುವುದಿಲ್ಲ" ಎಂದು ಅಕಬರನೆಂದರೆ, "ಕತ್ತೆಯಂತಹ ಜನರು ಮಾತ್ರ ತಂಬಾಕನ್ನು ಮೆಚ್ಚುವುದಿಲ್ಲ"ವೆಂದು ಬೀರಬಲ್ಲನು ಉತ್ತರಿಸಿದನಂತೆ. ಈ ಉತ್ತರವನ್ನು ಬಾದಶಹನು ಹೇಗೆ ಸಹಿಸಿದನೊ ತಿಳಿಯದು. ಅನವಶ್ಯಕವಾಗಿ ಚಟಗಾರನನ್ನು ಕೆರಳಿಸುವುದೆಂದರೆ ಕೆದರಿ ಕೇರು ಹಾಕಿ ಕೊಂಡಂತೆಯೆ ಸೈ. ಸಿಗರೇಟು ಸೇದುವುದು ಸರಿಯಲ್ಲವೆಂದೇ ನಮ್ಮ ನಿಶ್ಚಿತ ಮತ ವಾಗಿದ್ದರೆ, ಅದನ್ನು ನಿಲ್ಲಿಸುವುದಕ್ಕೆ ಸರಿಯಾದ ಮಾರ್ಗದಿಂದ ನಾವು ಶ್ರಮಿಸಬೇಕು. ತಾನಾಗಿ ಚಟವನ್ನು ಬಿಡುವೆನೆಂದು ಒಬ್ಬನು ಪ್ರಯತ್ನಿಸುತ್ತಿದ್ದರೆ ಅವನಿಗೆ ಸಹಾನು ಭೂತಿ ತೋರುವಷ್ಟು ಒಳ್ಳೆಯತನವಾದರೂ ನಮಗೆ ಇರಬೇಡವೆ?

ಒಂದು ಮಾತನ್ನು ನಾನಿಲ್ಲಿ ಸ್ಪಷ್ಟಗೊಳಿಸುವುದು ಅವಶ್ಯ. ಸಿಗರೇಟು ತುಚ್ಛ ವೆಂದು ನಾನು ಭಾವಿಸಿಲ್ಲ. ಅದು ಶ್ರೇಷ್ಠವೆಂದೂ ನಾನು ತಿಳಿದಿಲ್ಲ. ನನ್ನ ಮಿತ್ರನನ್ನು ನಾನು ಅಭಿನಂದಿಸುತ್ತಿರುವುದಕ್ಕೆ ಸಿಗರೇಟಿನ ಗುಣಾವಗುಣಗಳ ಸಂಬಂಧವೆ ಇಲ್ಲ. ತನ್ನ ಮನಸ್ಸಿನ ಒಂದು ದೌರ್ಬಲ್ಯವನ್ನು ಗೆದ್ದು, ಸಂಕಲ್ಪ ಶಕ್ತಿಯ ಪ್ರಭುತ್ವವನ್ನು ಕಂಡುಕೊಳ್ಳಲು ಅವನೀಗ ಹೊರಟಿದ್ದಾನೆ. ಚಟವನ್ನು ಆರಂಭಿಸಲಿಕ್ಕೆ ಯಾವ ಪ್ರಯತ್ನವೂ ಬೇಕಾಗುವುದಿಲ್ಲ. ಅನೇಕ ಕನ್ಯೆಯರಲ್ಲಿ ಒಬ್ಬಳನ್ನು ಆರಿಸಿಕೊಂಡು ಮದುವೆಯಾಗುವಂತೆ, ಚಟಗಳಲ್ಲಿ ಯಾವುದು ಯೋಗ್ಯವೆಂದು ಆಯ್ಕೆಮಾಡಿ ಯಾರೂ ಆರಂಭಿಸುವುದಿಲ್ಲ. ತನಗೊಂದು ಚಟವಿರಲೇಬೇಕೆಂಬ ಗ್ರಹಿಕೆಯೂ ಮೂಲತಃ ಇರಲಾರದು. ಸಿಗರೇಟಿನ ಶ್ರೇಷ್ಠಭಕ್ತರು ಕೂಡ ಇದನ್ನು ಒಪ್ಪುವರೆಂದು ನಂಬು ತ್ತೇನೆ. ದುರ್ಬಲವಾದ ಒಂದು ಕ್ಷಣದಲ್ಲಿ ಅಂಟಿಕೊಂಡ ಚಟ (ಅದು ಯಾವುದೆ ಇರಲಿ) ದಿನಗಳೆದಂತೆ ಆ ಮನುಷ್ಯನ ಜೀವಿತದಲ್ಲಿ ಒಂದು ಅನಿವಾರ್ಯ ಘಟಕವಾಗಿ ನಿಲ್ಲುತ್ತದೆ. ಅವನು ಅದರ ಅಸಹಾಯ ದಾಸನಾದರೂ ದಾಸ್ಯವೆಂಬ ಮಾತನ್ನು ಮಾತ್ರ ಅವನ ಅಭಿಮಾನ ಒಪ್ಪಿಕೊಳ್ಳುವುದಿಲ್ಲ. ಇದು ದಾಸ್ಯವೆಂದು ತಿಳಿದುಕೊಂಡು, ಇದರಿಂದ ಮುಕ್ತನಾಗುವುದಕ್ಕೆ ಹೊರಟವನು ಬುದ್ಧಿವಂತನಷ್ಟೆ ಅಲ್ಲ, ಶಕ್ತಿವಂತನೂ ಹೌದು. ಹಣದಕೊರತೆಯಿಂದ, ಹೆಂಡತಿಯ ಒತ್ತಾಯದಿಂದ, ಅಥವಾ ಅನಿಶ್ಚಿತವಾದ ರೋಗದ ಹೆದರಿಕೆಯಿಂದ ಸಿಗರೇಟನ್ನು ಬಿಟ್ಟು ದೂರ ಸರಿಯಲು ಕೆಲವರು ಹವಣಿಸುವುದುಂಟು. ಯಾರನ್ನು ಬಿಟ್ಟರೂ ಸಿಗರೇಟು ಇವರನ್ನು ಮಾತ್ರ ಎಂದಿಗೂ ಬಿಡಲಾರದು. ನನ್ನ ಮಿತ್ರನಿಗೆ ಇಂತಹ ಯಾವ ಒತ್ತಾಯವೂ ಇಲ್ಲವೆಂದು ನಾನು ಬಲ್ಲೆ. ಅವನನ್ನು ಅಭಿನಂದಿಸುವುದಕ್ಕೆ ಇರುವ ಮುಖ್ಯ ಕಾರಣವೆಂದರೆ ಅವನ ವಿವೇಕಪೂರ್ಣವಾದ

ನಿರ್ಧಾರ. ಹೊಳೆಯ ಸೆಳವಿಗೆ ಎದುರಾಗಿ ಆತನು ಈಸುವುದಕ್ಕೆ ಆರಂಭಿಸಿದ್ದಾನೆ. ಇದು ಅವನಿಗೂ ತಿಳಿದಿದೆ.

ಸುತ್ತಲಿನ ಜಗತ್ತು ಅವನ ನಿರ್ಧಾರಕ್ಕೆ ಎಷ್ಟು ಅನುಕೂಲವಾಗಿದೆ? ತಮ್ಮ ಸಾಮ್ರಾಜ್ಯದಲ್ಲಿ ಸೂರ್ಯನಿಗೆ ಅಸ್ತವೆ ಇಲ್ಲವೆಂಬ ಪ್ರಖ್ಯಾತಿಯನ್ನು ಬ್ರಿಟಿಷರು ತಾವು ಉಳಿಸಿಕೊಳ್ಳದೆಹೋದರೂ, ಸಿಗರೇಟಿಗೆ ಅದನ್ನು ದತ್ತಾಗಿ ಕೊಟ್ಟುಹೋಗಿದ್ದಾರೆ. ಸಿಗರೇಟಿನ ಜಾಹಿರಾತಿಗೆ ಜಗತ್ತಿನಲ್ಲಿ ಜಾಗ ಸಾಲದಾಗಿದೆ. ತನ್ನಲ್ಲಿ ಮಾರಾಟವಾದ ಸಿಗರೇಟುಗಳನ್ನೆಲ್ಲ ತುದಿಗೆ ತುದಿಹೊಂದಿಸುತ್ತ ಹೋದರೆ, ಅದರ ಸಾಲು ಚಂದ್ರಲೋಕ ವನ್ನು ನಿಲುಕುವಷ್ಟು ಆಗುವುದೆಂದು ಒಂದು ಕಂಪನಿ ಜಾಹಿರಾತುಮಾಡಿದೆ. ಸದ್ಯೋ ಭವಿಷ್ಯದಲ್ಲಿ ನಾವು ಚಂದ್ರಲೋಕಕ್ಕೆ ಕಾಲಿಡುವವರಿದ್ದೇವೆ. ಅಲ್ಲಿ ಹೋದಾಗ ಮೊದಲು ನಮ್ಮಕಣ್ಣಿಗೆ ಬೀಳತಕ್ಕದ್ದು ಬಹುಶಃ ಸಿಗರೇಟಿನ ಜಾಹಿರಾತುಗಳೆ ಎಂದು ತೋರುತ್ತದೆ. ದಿನದಿನಕ್ಕೆ ನವೋನವಶೈಲಿಗಳಲ್ಲಿ ನಡೆಯುತ್ತಿರುವ ಪ್ರತ್ಯಕ್ಷಪ್ರಚಾರಕ್ಕಿಂತ ಬಲಿಷ್ಠವಾಗಿ ಅಪ್ರತ್ಯಕ್ಷ ಪ್ರೇರಣೆ ಪ್ರಭಾವಗಳು ಸಿಗರೇಟಿನ ಸಾಮ್ರಾಜ್ಯವನ್ನು ವಿಸ್ತರಿಸುತ್ತಲಿವೆ. ಒಂದು ಕಾಲದಲ್ಲಿ ಕೇವಲ ಫ್ಯಾಶನ್ ಎಂದು ಅಥವಾ ನಾವೀನ್ಯದ ಮೋಹವೆಂದು ಆರಂಭವಾದ ಸಿಗರೇಟ್ ಸೇವನೆ ಇಂದು ನಾಗರಿಕತೆಯ ನಿಶ್ಚಿತಲಕ್ಷಣ ಎನಿಸುವಂತಾ ಗಿದೆ. ಧುರೀಣರು, ಕ್ರೀಡಾಪಟುಗಳು, ಪ್ರಾಧ್ಯಾಪಕರು, ಸಿನೆಮಾ-ನಕ್ಷತ್ರಗಳು, ನಾಮಾಂಕಿತಲೇಖಕರು-ಯಾರು ಯಾರನ್ನು ಜನತೆ ಮೆಚ್ಚಿ ಗೌರವಿಸುವುದೊ ಅವರು (ಕನಿಷ್ಠ ಮುಕ್ಕಾಲುಪಾಲು ಜನರು) ಅನಿರ್ಬಂಧವಾಗಿ ಸಿಗರೇಟು ಎಳೆವುದನ್ನು ನಾವು ಕಾಣುತ್ತೇವೆ. "ಧೂಮದೆ ಕರಿದು ಮಾಡಿದಂ ನಿಜಯಶಮಂ" ಎಂದು ಆಕ್ಷೇಪಿಸುವ ಪಂಪ ಯಾರು? ಸಿನೆಮಾ-ನಾಟಕಗಳಲ್ಲಾಗಲಿ ಕಥೆ-ಕಾದಂಬರಿಗಳಲ್ಲಾಗಲಿ ಬರತಕ್ಕ ಪಾತ್ರಗಳು ಉಸಿರಾಡಿಸಿದಷ್ಟೇ ಸ್ವಾಭಾವಿಕ ಹೊಗೆಸೇದಿ ಬಿಡುತ್ತಿರುತ್ತವೆ. ಉಪಾಹಾರ ವನ್ನೂ ಭೋಜನಕೂಟವನ್ನೂ ಏರ್ಪಡಿಸಿದವನು ಕೊನೆಗೆ ಒಂದೊಂದು ಸಿಗರೇಟನ್ನು ಪ್ರತಿಯೊಬ್ಬನಿಗೂ ಸಮರ್ಪಿಸದೆಹೋದರೆ ಅವನಂತಹ ಅನಾಗರಿಕ ಶಿಖಾಮಣಿ ಇನ್ನೊಬ್ಬನಿಲ್ಲವೆಂಬಂತೆ ಅತಿಥಿಗಳು ಅವನನ್ನು ಕಾಣತೊಡಗುತ್ತಾರೆ. ಮಕ್ಕಳ ಕೈಯಿಂದ ಸಿಗರೇಟು (ಅಥವಾ ಬೀಡಿ) ತರಿಸಿ, ಅವರ ಎದುರಿಗೇ ಸ್ವಚ್ಛಂದವಾಗಿ ಸೇದುವ ಹಾಗು ಅದರಿಂದ ತಮಗೆ ಸಂತೋಷವಾಯಿತೆಂದು ಪ್ರಕಟಿಸುವ ಹಿರಿಯರಿದ್ದಾರೆ. ಇದೆಲ್ಲದರ ಸಮಷ್ಟಿಪ್ರಭಾವವೇನೆಂದು ಹೇಳಬೇಕಾಗಿಲ್ಲ.

ಸೇದುವುದು ಒಳಿತಲ್ಲವೆಂದು ತಿಳಿಸುವ ತಂದೆಗಳು ಕೆಲವರಾದರೂ ಇರಬಹುದು. ಪ್ರೋಚ್ಛಂಡವಾಗಿ ಉಕ್ಕಿಹರಿಯುತ್ತಿರುವ ಮಹಾಪೂರವನ್ನು ಬೊಗಸೆಯಿಂದ ಮೊಗೆ ಮೊಗೆದು ತೆರವು ಮಾಡುತ್ತೇನೆಂದು ಹೊರಟ ಹಾಗೆ ಇದು. ಕೈಯಲ್ಲಿ ಸಿಗರೇಟು ಹಿಡಿದು ಕೊಂಡ ತಂದೆಯೆ ಇಂತಹ ಉಪದೇಶಕ್ಕೆ ನಿಂತರಂತೂ ಪರಿಣಾಮ ಕಂಡದ್ದೆ ಇದೆ. ನಿಷೇಧಗಳನ್ನು ಘೋಷಿಸುವುದು ಈ ಯುಗದ ಲಕ್ಷಣವಾಗಿದೆಯಷ್ಟೆ. ಮದ್ಯವನ್ನು ಬಹಿಷ್ಕರಿಸಿರಿ, ಸಂತಾನವನ್ನು ನಿಯಂತ್ರಿಸಿರಿ, ವಾರಕ್ಕೊಂದು ಊಟ ಬಿಡಿರಿ,-ಎಂದು

ಮುಂತಾಗಿ ಆವೇಶದಿಂದ, ಅಧಿಕಾರದಿಂದ ಕೂಡ ನಿಷೇಧಗಳನ್ನು ಸಾರಿಸಾರಿ, ಜನರ ಮೇಲೆ ಹೇರುವಂತೆ, "ಸಿಗರೇಟನ್ನು ಮುಟ್ಟಬೇಡಿರಿ" ಎಂದು ಯಾರೂ ಹೊರಟಿಲ್ಲ. ನಾಟಕಗೃಹಗಳ ಒಳಗೆ ಸೇದಕೂಡದು ಎಂದಿದೆ. ಹೊರಗೆ ಬಂದು ಸೇದಬಹುದು. ಉಗಿಬಂಡಿಗಳಲ್ಲಿ "ಸಹಪ್ರಯಾಣಿಕರಿಗೆ ಮೆಚ್ಚಿಗೆಯಾಗದಿದ್ದ ಪಕ್ಷದಲ್ಲಿ ಸೇದಕೂಡದು." ಸೇದುವುದೆ ಆಕ್ಷೇಪಾರ್ಹವೆಂಬ ಮಾತಿಲ್ಲ. ಈ ವಿಷಯದಲ್ಲಿ ಸರಕಾರವನ್ನು ನಾವು ಟೀಕಿಸುವಂತಿಲ್ಲ. ಸಿಗರೇಟಿನಿಂದ ಬರುವ ಆದಾಯವನ್ನು ಸರಕಾರ ಕಳೆದುಕೊಳ್ಳಲಾರ ದೆಂಬುದು ತರ್ಕವಲ್ಲ. ಸೇದುವುದು ಅನಿಷ್ಟವೆಂದು ಇನ್ನೂ ಸಿದ್ಧವಾಗಿಲ್ಲ. ವೈದ್ಯಶಾಸ್ತ್ರ ವಿಚಾರದಲ್ಲಿಯೆ ಈ ವಿಷಯವಾಗಿ ಮತೈಕ್ಯವಿಲ್ಲ.

ಸೇದುವ ಚಟ ಒಮ್ಮೆ ಅಂಟಿಕೊಂಡಿತೆಂದರೆ, ಅದನ್ನು ಬಿಟ್ಟುಕೊಡುವುದು ಕಷ್ಟ ಸಾಧ್ಯ ಎಂಬ ಪ್ರಚಾರ ಅಯಾಚಿತವಾಗಿ ನಡೆಯುತ್ತಲಿದೆ. ಬಿಟ್ಟೆನೆಂದು ಹೇಳಿಕೊಳ್ಳುವ ಮಹಾನುಭಾವರು ಮನಃಸ್ಥೈರ್ಯ, ಆತ್ಮಸಂಯಮ ಮೊದಲಾದ ತತ್ವಗಳಿಂದ ಮುಗಿಸಿ ಬಿಡುವರೆ ಹೊರತು, ನಿರ್ದಿಷ್ಟವಾದ ಮಾರ್ಗದರ್ಶನಕ್ಕೆ ಹೊರಡುವುದಿಲ್ಲ. ಬಿಡದವರ ಮಾತಂತೂ ಕೇಳುವುದೆ ಬೇಡ. ಬಿಡಿಸುತ್ತೇವೆಂದು ಸಕಲ ಸನ್ನಾಹದಿಂದ ಹೊರಟ ನಿಪುಣರ ಅನುಭವ ಕೂಡ ಉತ್ತೇಜಕವಾಗಿಲ್ಲ. ಅಮೆರಿಕದಲ್ಲಿ ವೈದ್ಯಕೀಯ ಹಾಗು ಮಾನಸಿಕ ಚಿಕಿತ್ಸೆಯಿಂದ ಸಿಗರೇಟಿನ ಚಟವನ್ನು ಬಿಡಿಸುವ ವಿವಿಧ ಪ್ರಯೋಗಮಾಲೆ ನಡೆಯಿತು. ಅದನ್ನೆಲ್ಲ ವಿಶ್ಲೇಷಿಸಿ ಡಾ. ಸ್ಟಾರ್‌ಫೋರ್ಡ್ ಎಂಬ ನಿಷ್ಣಾತರು ಇತ್ತೀಚೆಗೆ ಪ್ರಕಟಿಸಿದ ನಿರ್ಣಯ ಹೀಗಿದೆ.

"ಸೇದುವುದನ್ನು ಬಿಡಿಸುವ ಯಾವ ಒಂದು ಪ್ರಯೋಗವೂ ಪರಿಣಾಮಕಾರಿ ಯಾಗಿಲ್ಲ. ವೈದ್ಯಕೀಯ ಪ್ರಯೋಗಗಳಂತೂ ಸಂಪೂರ್ಣ ನಿರಾಶಾದಾಯಕವೆನಿಸಿವೆ. ಸಿಗರೇಟಿನ ಚಟ ಸೇದಿ ಸೇದಿ ಪ್ರರೂಢವಾಗಿದ್ದು, ಮಿತಿಮೀರಿದ ಮದ್ಯಪಾನ ಅಥವಾ ಕೂಳಬಕ್ಕತನದಷ್ಟೆ ಬಿಡಲಾಗದ ಚಟವಾಗಿದೆ."

ತಮ್ಮ ನಿರ್ಣಯದ ಕೊನೆಯಲ್ಲಿ "ಈ ಚಟಕ್ಕೆ ಮಾನಸಿಕ ಹಾಗು ಸಾಮಾಜಿಕ ಪ್ರಭಾವಗಳೆ ಮೂಲ ಕಾರಣ"ವೆಂದು ಹೇಳುವುದು ಗಮನಾರ್ಹವಾಗಿದೆ.

ಅನಿರ್ಬಂಧವಾದ ಪ್ರಲೋಭನೆ, ಸಾಮಾಜಿಕ ಸಂಮತಿ, ಚಟದಿಂದ ಮುಕ್ತನಾಗು ವುದೆ ಅಸಾಧ್ಯವೆಂಬ ಪ್ರತೀತಿ–ಇಂತಹ ಸನ್ನಿವೇಶದಲ್ಲಿಯೂ ನನ್ನ ಮಿತ್ರನು ಸಿಗರೇಟನ್ನು ಬಿಡುವುದಕ್ಕೆ ಹೊರಟಿದ್ದಾನೆ. ಎಂದಮೇಲೆ ಅವನ ಸಾಹಸವನ್ನು ಮೆಚ್ಚಿ ಹೊಗಳ ತಕ್ಕದ್ದೆ. ಮನುಷ್ಯನ ಪರಮೋಚ್ಚಸತ್ವವನ್ನು ಅವನೀಗ ಪ್ರಕಟಿಸುತ್ತಿದ್ದಾನೆ. ಅವನಿಗೆ ನೈತಿಕ ಬೆಂಬಲವನ್ನು ಒದಗಿಸುವುದು ನನ್ನ ಕರ್ತವ್ಯವಾಗಿದೆ. ಸಿಗರೇಟಿನ ರುಚಿಯನ್ನು ಹೊಗಳಿದವನೂ, ಅನೇಕಸಲ ಬಿಟ್ಟುಬಿಟ್ಟು ಅದಕ್ಕೇ ಮರಳಿದವನೂ ಎಂದು ಹೇಳಿ ಕೊಂಡ ನಾನು ಅವನನ್ನು ಅಭಿನಂದಿಸಿದರೆ ಅದಕ್ಕೆ ಯಾವ ನೈತಿಕಬೆಲೆ ಎಂದು ನೀವು ಕೇಳಬಹುದು. ನಿಮಗೆ ಈ ಮೊದಲು ಹೇಳದೆ ಇದ್ದ ಸಂಗತಿಯನ್ನು ಈಗ ಹೇಳಿಬಿಡು ತ್ತೇನೆ. ನಾನು ಸಿಗರೇಟಿನ ಚಟವನ್ನು ಗೆದ್ದು ಬಹಳ ದಿನಗಳಾಗಿವೆ. ಸಿಗರೇಟಿಗೆ

ಹೆದರಿ ಓಡಿಹೋಗುವ ಪುಕ್ಕತನ ನನ್ನಲ್ಲಿಲ್ಲ. ಪ್ರಾಸಂಗಿಕವಾಗಿ ಒಮ್ಮೊಮ್ಮೆ ಅದನ್ನು ಎಳೆಯುವುದುಂಟು. ಆದರೆ ಅದನ್ನು ಎಳೆಯಲೇಬೇಕೆಂಬ ಪ್ರವೃತ್ತಿಯಾಗುವುದಿಲ್ಲ. ಹಿಡಿದರೆ ಎಲ್ಲಿ ಮೈಮೇಲೆ ಬಂದೀತೊ ಎಂಬ ಹೆದರಿಕೆಯಿದ್ದರೆ ಆ ಮನುಷ್ಯ ಚಟದಿಂದ ಸಂಪೂರ್ಣ ಮುಕ್ತನಾಗಿಲ್ಲವೆಂದೇ ಅರ್ಥ.

ನನ್ನ ಮಿತ್ರನು ಸಿಗರೇಟನ್ನು ಗೆದ್ದರೆ ಹೀಗೆ ಗೆಲ್ಲುವನೆಂದು ನಾನು ಹಾರೈಸಿದ್ದೇನೆ. ನಾನು ಅನುಕರಣೀಯ ವ್ಯಕ್ತಿಯೆಂದು ಹೇಳಲಾರೆ. ಆದರೂ ತನ್ನ ಗೆಲುವಿನ ಪರೀಕ್ಷೆ ಮಾಡಲು ಮುಂದೆ ಎಂಪಾದರೊಮ್ಮೆ ಆತನು ಒಂದು ಸಿಗರೇಟನ್ನು ಎಳೆದು ನೋಡಬಹುದು. ಹೀಗೆ ನೋಡುವ ನೆವದಿಂದಲೆ ಮತ್ತೆ ಅವನು ಚಟಕ್ಕೆ ಸಿಕ್ಕುಬಿದ್ದರೆ ಏನು ಗತಿ? ನನಗೆ ಹಾಗೆ ಎನಿಸುವುದಿಲ್ಲ. ಹಾವನ್ನು ಹೊಡೆದು ಕೊಂದಮೇಲೆ, ಅದು ಸತ್ತಿತೇ ಇಲ್ಲವೇ ಎಂದು ಒಂದೆರಡುಸಲ ತಿವಿದು ನೋಡಬಹುದು. ಮತ್ತೆ ಮತ್ತೆ ತಿವಿಯುವ ಅಗತ್ಯವಿಲ್ಲ. ಹಾಗೆ ತಿವಿದಾಗ ಕೂಡ ಅದು ಎದ್ದು ಬಂದು ಕಚ್ಚೀತೆಂಬ ಭಯವಂತೂ ಇಲ್ಲವಲ್ಲ.

ನಾನು ಚಟವನ್ನು ಹೇಗೆ ಗೆದ್ದೆನೆಂದು ಹೇಳುವುದು ಯೋಗ್ಯವಾದರೂ ಪ್ರಶಸ್ತವಲ್ಲ. ನಾನು ಅನುಕರಣೀಯ ಮಾದರಿಯಲ್ಲವೆಂದು ಆಗಲೆ ಹೇಳಿದ್ದೇನೆ. ಮಾರ್ಗದರ್ಶಕರನ್ನು ಅಪೇಕ್ಷಿಸದೆ, ವಿವಿಧ ಪ್ರಯೋಗಗಳಲ್ಲಿ ವೈಫಲ್ಯವನ್ನು ಸಾಧಿಸಿ, ಸರಿಯಾದ ಮಾರ್ಗವನ್ನು ಕೊನೆಗೆ ಕಂಡುಗೊಂಡೆ. ಆ ಇತಿಹಾಸವನ್ನೆಲ್ಲ ಬಹಿರಂಗಗೊಳಿಸಿ ನನ್ನ ಮಿತ್ರನ ಉತ್ಸಾಹಕ್ಕೆ ಭಂಗವೊದಗಿಸುವ ಇಚ್ಛೆಯಿಲ್ಲ. ನನ್ನ ವಿಜಯವನ್ನು ಮಾತ್ರ ಎತ್ತಿ ಹಿಡಿದು ಮಿತ್ರನನ್ನು ಪ್ರೋತ್ಸಾಹಿಸುತ್ತೇನೆ. ಸಿಗರೇಟನ್ನು ಬಿಡುವ ಸಾಹಸದಲ್ಲಿ ಬರಬಹುವಾದ ಒಂದೆರಡು ಪ್ರಚ್ಛನ್ನ ಛಿದ್ರಗಳನ್ನು ಮಾತ್ರ ಇಲ್ಲಿ ಸೂಚಿಸುವುದು ಅಗತ್ಯವೆನಿಸುತ್ತದೆ. ಮನುಷ್ಯನ ದೌರ್ಬಲ್ಯವು ವೇಷಬದಲಿಸಿ, ಆತನನ್ನು ಮೋಸಗೊಳಿಸುವ ಸಂಭವವಿದೆ. ಗಯಾವಾಳರ ಮುಂದೆ ಸಿಗರೇಟು ಬಿಡುತ್ತೇನೆಂದು ಪ್ರಮಾಣ ಮಾಡಿ ಬಂದ ವಕೀಲರೊಬ್ಬರು ಪೈಪ್ ಸೇದಲು ಆರಂಭಿಸಿದರು. ಪ್ರಮಾಣವಚನದಲ್ಲಿ “ ಪೈಪ್ ” ಎಂಬ ಶಬ್ದವಿದ್ದಿಲ್ಲವೆಂದು ಅವರ ಚಟವು ತರ್ಕ ಹೂಡಿತ್ತು. ಸೇದುವುದನ್ನು ಕ್ರಮೇಣವಾಗಿ ಕಡಮೆಮಾಡುತ್ತೇನೆಂಬುದು ದೊಡ್ಡ ಭ್ರಮೆ. ಸೇದಿದ ಸಿಗರೇಟುಗಳ ಸಂಖ್ಯೆಯನ್ನು ಸರಿಯಾಗಿ ಇಡುವುದು ಅಸಾಧ್ಯ. ಮಿತ್ರರೂ, ಪ್ರಸಂಗಗಳೂ ಮಾನಸಿಕ ಕ್ಷೋಭೆಯೂ ಕ್ರಮವನ್ನು ವ್ಯತ್ಯಸ್ತಗೊಳಿಸುತ್ತವೆಯೆಂದು ಚಟಗಾರನು ಆಕ್ಷೇಪಿಸುತ್ತಲೆ ಇರುತ್ತಾನೆ. ತಂಬಾಕಿಗೊ, ನಸ್ಯಕ್ಕೊ ಶರಣು ಹೋಗಿ ಸಿಗರೇಟನ್ನು ಮರೆಯುವುದಕ್ಕೆ ಕೆಲವರು ಪ್ರಯತ್ನಿಸುತ್ತಾರೆ. ಇದು ದೌರ್ಬಲ್ಯವನ್ನು ಗೆದ್ದಹಾಗಾಗಲಿಲ್ಲ, ಇದ್ದೂರಲ್ಲಿ ಸಂನ್ಯಾಸ ಸ್ವೀಕರಿಸಿ ಪರಸ್ಥಳದಲ್ಲಿ ಸಂಸಾರ ಹೂಡಿದಂತೆ ಆಗುತ್ತದೆ. ಚಟ ಬಿಡುವುದೆಂದರೆ ಅದೊಂದು ಸಂನ್ಯಾಸವೆ. ಈ ಸಂನ್ಯಾಸಕ್ಕೆ ಆರಂಭದಲ್ಲಿರುವ ಆವೇಶ ಬಲು ಹೊತ್ತು ಉಳಿಯದೆಂಬುದನ್ನು ತಿಳಿದು, ಸಿದ್ಧಿಯಾಗುವವರೆಗೆ ಸಿಗರೇಟಿನ ದರ್ಶನವಾಗದಂತೆ ದೂರ ಉಳಿಯುವುದು ಅವಶ್ಯವಾಗಿದೆ. ಒಂದು ಕೋಣೆಯಲ್ಲಿ

ಬಾಗಿಲು ಇಕ್ಕಿಕೊಂಡು ಇದ್ದುಬಿಡಬಹುದು. (ಒಳಗೆ ಸಿಗರೇಟಿನ ಸಂಗ್ರಹ ಮಾತ್ರ ಇರಬಾರದು.)

ನನ್ನ ಮಿತ್ರನು ಇಂತಹ ಯಾವ ಸೋಲಿಗೂ ಒಳಗಾಗದೆ, ದೃಢವಾಗಿ ಮುಂದೆ ಸಾಗುವನೆಂದು, ಹಾರೈಸುತ್ತೇನೆ. ಅದಕ್ಕಿಂತ ಹೆಚ್ಚಾಗಿ ತನ್ನ ಬಲವನ್ನು ತಾನೆ ಗುರುತಿಸಿಕೊಳ್ಳುವನೆಂದು ನಾನು ಆಶಿಸಿ, ಅವನನ್ನು ಪುನಃ ಅಭಿನಂದಿಸುತ್ತೇನೆ.

ಬೆಂಗಳೂರು-19

ತೆಂಕಣಗಾಳಿ ಸೋಂಕಿದೊಡಮೊಳ್ನುಡಿಗೇಳ್ದೊಡಮಿಂಪನಾಳ್ದ ಗೇ
ಯಂ ಕಿವಿವೊಕ್ಕೊಡಂ, ಬಿರಿದ ಮಲ್ಲಿಗೆಗಂಡೊಡಮಾದ ಕೆಂದಲಂ
ಪಂ ಗೆಡೆಗೊಂಡೊಡಂ, ಮಧುಮಹೋತ್ಸವಮಾದೊಡಮೇನನೆಂಬೆನಾ
ರಂಕುಸವಿಟ್ಟೊಡಂ ನೆನೆವುದೆನ್ನಮನಂ ಬನವಾಸಿ ದೇಶಮಂ

ಅಮರ್ದಂ ಮುಕ್ಕುಳಿಪಂತುಟಪ್ಪ ಸುಸಿಲೊಂದಿಂಪುಂ ತಗುಳ್ದೊಂದು ಗೇ
ಯಮುಮಾದಕ್ಕರಗೊಟ್ಟಿಯುಂ ಚದುರರೊಳ್ಪಾತುಂ ಕುಳಿರ್ಕೊಟ್ಟಿಜೊಂ
ಪಮುವೇವೇಟ್ಟಿದನುಳ್ಳ ಮೆಯ್ಸುಕಮುಮಿಂತೆನ್ನಂ ಕರಂ ನೋಡಿ ನಾ
ಡೆ ಮನಂಗೊಂಡಿರೆ ತೆಂಕನಾಡ ಮಱೆಯಲ್ಕಿನ್ನೇಂ ಮನಂಬರ್ಕುಮೇ

—ಪಂಪ

ಗೊರೂರು ರಾಮಸ್ವಾಮಿ ಅಯ್ಯಂಗಾರ್

ಮಹತ್ ಸಾನ್ನಿಧ್ಯದಲ್ಲಿ

೧

೧೯೨೧ನೆಯ ಇಸವಿ, ನವಂಬರ್ ಇರಬಹುದು. ಆಗ ನಾನು ಹಾಸನದ ಹೈಸ್ಕೂಲಿನಲ್ಲಿ ವಿದ್ಯಾರ್ಥಿಯಾಗಿದ್ದೆ. "ಒಂದು ವರ್ಷದೊಳಗೆ ಸ್ವರಾಜ್ಯ" ಎಂದು ಮಹಾತ್ಮ ಗಾಂಧಿಯವರು ಪ್ರಕಟಿಸಿದ್ದ ಮೊದಲನೆಯ ಅಸಹಕಾರದ ಕಾಲ ಅದು. "ಸರ್ಕಾರಿ ನೌಕರರು ಕೆಲಸಕ್ಕೆ ರಾಜೀನಾಮೆ ಕೊಡಿ; ವಕೀಲರು ಕೋರ್ಟಿಗೆ ಹೋಗುವುದನ್ನು ನಿಲ್ಲಿಸಿ; ಸೈನಿಕರೂ ಪೋಲೀಸಿನವರೂ ರಾಜೀನಾಮೆ ಕೊಡಿ; ಮದ್ಯಪಾನವನ್ನು ಬಿಡಿ; ಖಾದಿ ಧರಿಸಿ; ವಿಧಾಯಕ (ರಚನಾತ್ಮಕ) ಕಾರ್ಯವನ್ನು ಕೈಕೊಳ್ಳಿ, ಗುಲಾಮರನ್ನು ತಯಾರುಮಾಡುತ್ತಿರುವ ಸರ್ಕಾರಿ ಪಾಠಶಾಲೆಗಳನ್ನು ತೊರೆದು, ಎಲ್ಲೆಲ್ಲಿಯೂ ರಾಷ್ಟ್ರೀಯ ಶಿಕ್ಷಣ ಶಾಲೆಗಳನ್ನು ಸ್ಥಾಪಿಸಿ" ಎಂಬ ಮಹಾತ್ಮರ ಸಂದೇಶ, ಭಾರತದ ಮೂಲೆ ಮೂಲೆಗಳಲ್ಲಿಯೂ ಮೊಳಗಿತ್ತು. ದೇಶದಲ್ಲೆಲ್ಲಾ ರಾಷ್ಟ್ರೀಯ ಶಾಲೆಗಳು ಸ್ಥಾಪನೆಯಾಗಿ ವಿದ್ಯಾರ್ಥಿಗಳು ಅವುಗಳನ್ನು ಸೇರುತ್ತಿದ್ದರು. ಅಹಮ್ಮದಾಬಾದಿನಲ್ಲಿ ಗಾಂಧಿಯವರ ನೇತೃತ್ವದಲ್ಲಿಯೇ ಗುಜರಾತ್ ವಿದ್ಯಾಪೀಠ, ಸ್ಥಾಪನೆಯಾಗಿತ್ತು. ಅಲ್ಲಿ ಪ್ರೊ|| ವಾಸ್ವಾನಿ, ಗಿದ್ವಾನಿ, ಜೆ. ಬಿ. ಕೃಪಲಾನಿ ಇವರೆಲ್ಲ ಉಪಾಧ್ಯಾಯರಾಗಿದ್ದರು. ನಾನು ಯಾರಿಗೂ ಹೇಳದೆ (ಮನೆಯವರಿಗೆ ಸಹ) ಹೈಸ್ಕೂಲನ್ನು ಬಿಟ್ಟು ಅಹಮ್ಮದಾಬಾದಿಗೆ ಹೊರಟುಬಿಟ್ಟೆ.

ಅಸಹಕಾರ ಚಳುವಳಿಯಲ್ಲಿ ಧಾರವಾಡಕ್ಕೆ ಒಂದು ಹೆಚ್ಚಿನ ಪ್ರಾಶಸ್ತ್ಯ ದೊರೆತಿತ್ತು. ಧಾರವಾಡದಲ್ಲಿ ಶಾಂತಿಯುತವಾದ ಸಾರ್ವಜನಿಕಸಭೆ ನಡೆಯುತ್ತಿದ್ದಾಗ, ಪೋಲೀಸರು ಅಲ್ಲಿ ಗುಂಡುಹಾರಿಸಿ, ಧಾರವಾಡ ರಾಷ್ಟ್ರಸೇವಕ ಬಲಿದಾನ ಪೀಠವಾಗಿತ್ತು. ಅಲ್ಲಿ ಅಸಹಕಾರ ಚಳವಳಿಯೂ ಪ್ರಬಲವಾಗಿತ್ತು. ವಿದ್ಯಾರ್ಥಿಯಾಗಿದ್ದ ನನಗೆ, ಧಾರವಾಡದಲ್ಲಿ ಒಂದು ಭಾಷಣ ಮಾಡಬೇಕೆನಿಸಿತು. ನಾನು ಧಾರವಾಡದಲ್ಲಿ ಇಳಿದೆ; ಆಗ ಶ್ರೀ ಹುಕ್ಕೇರಿಕರ್‌ರವರು ಕರ್ಮವೀರ ಪತ್ರಿಕೆಯ ಸಂಪಾದಕರಾಗಿದ್ದರೆಂದು ನೆನಪು. (ಕರ್ಮವೀರ ಅಂದಿನಿಂದಲೂ ಇದೆ. ಅಸಹಕಾರ ಮತ್ತು ಸ್ವಾತಂತ್ರ್ಯ ಚಳುವಳಿಯ ಪ್ರಚಾರಕ್ಕಾಗಿಯೇ ಅದು ಜನ್ಮತಾಳಿತು) ನಾನು ಹೋಗಿ ಶ್ರೀಮಾನ್

ಹುಕ್ಕೇರಿಕರ್ ಅವರನ್ನು ಕಂಡು "ನಾನು ಚಳುವಳಿಯ ಮೇಲೆ ಒಂದು ಭಾಷಣ ಮಾಡು ತ್ತೇನೆ. ನೀವು ಸಭೆ ಕೂಡಿಸಬೇಕು. ಅಧ್ಯಕ್ಷರಾಗಬೇಕು" ಎಂದು ಕೇಳಿಕೊಂಡೆ. ಶ್ರೀಮಾನ್ ಹುಕ್ಕೇರಿಕರ್‌ರು "ಸಭೆ ಕೂಡಿಸಲು ಪ್ರತಿಬಂಧಕವಿದೆ. ಸಭೆಸೇರುವ ಹಸ್ತ ಪತ್ರಿಕೆಯನ್ನು ಯಾವ ಮುದ್ರಣಕಾರರೂ ಅಚ್ಚುಹಾಕುವುದಿಲ್ಲ ಹಾಕಿದರೆ ಸರ್ಕಾರ ಮುದ್ರಣಾಲಯವನ್ನು ಮಟ್ಟಗೋಲು ಹಾಕಿಕೊಳ್ಳುತ್ತಾರೆ. ಆದರೆ ಸ್ವಯಂಸೇವಕರು ಕಲ್ಲಚ್ಚಿನ ಮುದ್ರಣ ಯಂತ್ರವಿಟ್ಟುಕೊಂಡಿದ್ದಾರೆ; ಅದರಲ್ಲಿ ಹಸ್ತಪ್ರತಿ ಅಚ್ಚುಹಾಕು ತ್ತೇವೆ. ಜನ ಸೇರುವುದರಲ್ಲಿ ಸಂದೇಹವಿಲ್ಲ ಸುದ್ದಿ ತಿಳಿದಕೂಡಲೇ ಪ್ರತಿಬಂಧಕಾಜ್ಞೆ ಯನ್ನೂ ಉಲ್ಲಂಘಿಸಿ ಜನ ಗೇರಾಯಿಸುತ್ತಾರೆ" ಎಂದರು. ಆದರೆ ಪ್ರತಿಬಂಧಕಾಜ್ಞೆ ಯನ್ನು ಮೀರಿ, ಭಾಷಣಮಾಡಿದರೆ ನನ್ನನ್ನೂ ಹಿಡಿಯುಬಹುದೆ? ಎಂಬ ಪ್ರಶ್ನೆ ಬಂತು. ಶ್ರೀ ಹುಕ್ಕೇರಿಕರ್‌ರು "ನೀವು ಇನ್ನೂ ವಿದ್ಯಾರ್ಥಿಗಳು ಆ ಸಂಭವವಿಲ್ಲ; ಅಲ್ಲದೆ ನೀವು ರಾತ್ರಿ, ಇಲ್ಲಿಂದ ಮುಂದೆ ಪ್ರಯಾಣಮಾಡುತ್ತೀರಿ" ಎಂದರು. ಅಂತೂ ಶ್ರೀ ಹುಕ್ಕೇರಿಕರ್‌ರವರ ಅಧ್ಯಕ್ಷತೆಯಲ್ಲಿ ಮೈಸೂರು ಜಿ. ಕೆ. ರಾಮರಾವ್‌ರವರ ಭಾಷಣ ನಡೆಯುತ್ತದೆಂದು ಕಲ್ಲಚ್ಚಿನ ಹಸ್ತಪತ್ರಿಕೆ ಹೊರಬಿತ್ತು (ಆಗ ನಾನು ಜಿ. ಕೆ. ರಾಮಸ್ವಾಮಿ ಎಂದು ಹೆಸರಿಟ್ಟುಕೊಂಡಿದ್ದೆ. ಕಲ್ಲಚ್ಚಿನ ಸ್ವಯಂಸೇವಕರು ಅದನ್ನು ರಾಮರಾವ್ ಎಂದು ಮಾಡಿಬಿಟ್ಟಿದ್ದರು.)

ನಾನು ಭಾಷಣದಲ್ಲಿ ಏನುಹೇಳಿದೆನೆಂಬುದು ಜ್ಞಾಪಕವಿಲ್ಲ. ಬಹುಶಃ ಆಗಿನ ಪದ್ಧತಿಯಂತೆ ಬ್ರಿಟಿಷ್ ಸರ್ಕಾರವನ್ನು ಚೆನ್ನಾಗಿ ಬೈದಿರಬೇಕು. ಒಂದಂಶ ಜ್ಞಾಪಕ ವಿದೆ; ಬ್ರಿಟಿಷ್ ಸರ್ಕಾರವನ್ನು ರಾವಣನಿಗೆ ಹೋಲಿಸಿ, ಅದರ ನಾಶಕ್ಕೆ ರಾಮಾವತಾರ, ಗಾಂಧಿಜಿ, ಆಗಿದೆ ಎಂಬುದು ನನ್ನ ಭಾಷಣದ ಸೂತ್ರವಾಗಿತ್ತು. ಆ ಪೌರಾಣಿಕ ದೃಷ್ಟಿಯನ್ನು ಅಂಗೀಕರಿಸಿದ ನಂತರ ನನ್ನ ಭಾಷಣ ಸರಾಗವಾಗಿ ಸಾಗಿತು.

೨

ಬೊಂಬಾಯಿನಿಂದ ಆಚೆಗೆ ಅಹಮದಾಬಾದಿಗೆ ಹೋಗುತ್ತಿರುವಾಗ ನನಗೆ ರೈಲಿನಲ್ಲಿ ಇನ್ನೂ ಇಬ್ಬರು ವಿದ್ಯಾರ್ಥಿಗಳ ಪರಿಚಯವಾಯಿತು. ಒಬ್ಬರು ಶ್ರೀ ರಾಮಚಂದ್ರವಡವಿ. (ಇವರು ಕರ್ಣಾಟಕ ಮತ್ತು ಬೆಂಗಳೂರು ಗಾಂಧಿಸ್ಮಾರಕನಿಧಿ ಕಛೇರಿಯಲ್ಲಿ ಬಹಳ ವರುಷಗಳಿಂದ ಸಂಚಾಲಕರಾಗಿದ್ದಾರೆ) ಎರಡನೆಯವರು ಆಂಧ್ರದಿಂದ ಬಂದಿದ್ದ ಒಬ್ಬ ಮುಸಲ್ಮಾನ ವಿದ್ಯಾರ್ಥಿ. ನಾವು ಮೂರು ಜನರೂ ಮನೆಗಳಿಂದ ಸ್ಕೂಲುಬಿಟ್ಟು ಓಡಿಬಂದಿದ್ದವರು. ಜೇಬಿನಲ್ಲಿ ದುಡ್ಡು ಇರಲಿಲ್ಲ ಟಿಕೆಟ್ ಪಡೆದು ನಾವು ರೈಲು ಹತ್ತಿರಲಿಲ್ಲ (ನಾನಂತೂ ಪಡೆದಿರಲಿಲ್ಲ.) ಅವರಿಬ್ಬರೂ ಸಹ ಗುಜರಾತ್ ವಿದ್ಯಾಪೀಠವನ್ನು ಸೇರುವುದಕ್ಕಾಗಿಯೇ ಬಂದಿದ್ದವರು. ನಾವು ಮೂರು ಜನರೂ ಸಾಬರಮತಿ ಆಶ್ರಮಕ್ಕೆ ನೆಟ್ಟಗೆ ಹೋದೆವು.

ಅಲ್ಲಿ ಹೋಗಿ ನೋಡುವಲ್ಲಿ, ನಮ್ಮ ಹಾಗೆ ಇನ್ನೂ ಅನೇಕರು (ವಿದ್ಯಾರ್ಥಿಗಳೂ

ಸಾರ್ವಜನಿಕರೂ) ತಮ್ಮ ತಮ್ಮ ಊರುಗಳಿಂದ ಬಂದು ಆಶ್ರಮದ ಆವರಣದಲ್ಲಿ ಗಾಂಧೀಜಿಯವರ ದರ್ಶನಕ್ಕಾಗಿ ಕಾದಿದ್ದರು. ಅವರೆಲ್ಲರಿಗೂ ಮಹಾತ್ಮರಲ್ಲಿ ಏನೋ ಕೆಲಸವಿತ್ತು ಎಂದಲ್ಲ. ದೇಶದಲ್ಲಿ ಮಹಾತ್ಮರು ಎಬ್ಬಿಸಿದ್ದ ಅಭೂತಪೂರ್ವ ನಿರ್ಭಯ ವಾತಾವರಣ ಶಾಂತಿಯುತ ಆಂದೋಳನದಿಂದ ಜನ, ಆಕರ್ಷಿತರಾಗಿ ಮಹಾತ್ಮರ ಸಾನ್ನಿಧ್ಯಕ್ಕೆ ಧಾವಿಸುತ್ತಿದ್ದರು. ಆಗ ಎಲ್ಲರಿಗೂ ಆಶ್ರಮದಲ್ಲಿಯೇ ಅಹಮದಾಬಾದಿನಲ್ಲಿಯೇ ಇರಬೇಕೆಂಬ ಕಾತರ. ಎಲ್ಲ ವಿದ್ಯಾರ್ಥಿಗಳಿಗೂ ಗುಜರಾತ್ ವಿದ್ಯಾಪೀಠವನ್ನು ಸೇರುವ ಆತುರ. ಗಾಂಧೀಜಿಯವರು ಎಲ್ಲರಿಗೂ ಸಮಾಧಾನ ಹೇಳಿ, ಎಲ್ಲರನ್ನೂ ಅವರು ಬಂದಿದ್ದ ಸ್ಥಳಗಳಿಗೇ ಹಿಂದಕ್ಕೆ ಕಳುಹಿಸುತ್ತಿದ್ದರು. ನಾವು ಹೋಗಿದ್ದ ದಿನವಂತೂ, ಒಬ್ಬರಿಗಾಗಲೀ ಆಶ್ರಮದಲ್ಲಿರುವುದಕ್ಕೂ ವಿದ್ಯಾಪೀಠವನ್ನು ಸೇರುವುದಕ್ಕೂ ಅನುಮತಿ ದೊರಕಲಿಲ್ಲ. "ನಮ್ಮ ಹಣೆ ಬರಹವೇನೋ" ಎಂದುಕೊಂಡು ನಮ್ಮ ಸರದಿಯನ್ನು ಕಾಯುತ್ತಾ ನಾವು ನಿಂತಿದ್ದೆವು. ಕೊನೆಗೆ ನಮಗೂ ಒಳಕ್ಕೆ ಕರೆ ಬಂದಿತು.

ದಿನಕ್ಕೆ ನಾಲ್ಕಾಣೆ ಕೂಲಿ

ನಾವು ಒಳಕ್ಕೆ ಹೋದಾಗ ಗಾಂಧೀಜಿ ಒಂದು ಬಿಳಿಯ ಬಟ್ಟೆಯ ಅರುಗನ್ನು ಹೊಲಿಯುತ್ತಿದ್ದರು. ಅವರು ಏನು ಪ್ರಶ್ನೆ ಕೇಳುವರೋ, ಪ್ರತ್ಯುತ್ತರ ಹೇಗೆ ಕೊಡಬೇಕು ಎಂದು ನಾನಂತೂ ಹೆದರಿದ್ದೆ. ಗಾಂಧೀಜಿ ಹಿಂದಿಯಲ್ಲಿ ಮಾತನಾಡಿಸಿದರು. ನನಗೆ ಹಿಂದಿ ಬರುತ್ತಿರಲಿಲ್ಲ. ಶ್ರೀ ರಾಮಚಂದ್ರ ವಡವಿಯವರಿಗೆ ಆಗ ಬರುತ್ತಿತ್ತೋ ಇಲ್ಲವೋ ನನಗೆ ತಿಳಿಯದು. ಗಾಂಧೀಜಿಯವರಿಗೆ ಉತ್ತರ ಕೊಡುವ ಹೊಣೆಗಾರಿಕೆ ಸ್ವಾಭಾವಿಕವಾಗಿಯೇ, ಉರ್ದುವನ್ನು ಅರಿತ ನಮ್ಮ ಮುಸಲ್ಮಾನ ಗೆಳೆಯನ ಪಾಲಿಗೆ ಬಿತ್ತು. ಆದರೆ ಸಂಭಾಷಣೆ ನನಗೂ ಉದ್ದಕ್ಕೂ ಅರ್ಥವಾಗುತ್ತಿತ್ತು. ನಮ್ಮ ಉರ್ದು ಮಿತ್ರರು ನಾವು ಮೂರು ಜನರೂ ಗುಜರಾತ್ ವಿದ್ಯಾಪೀಠವನ್ನು ಸೇರಲು ಹೇಳದೆ ಕೇಳದೆ ಓಡಿಬಂದಿದ್ದೇವೆ ಎಂದರು. ಗಾಂಧೀಜಿಯವರು ನಮ್ಮನ್ನು ಪೂರ್ಣವಾಗಿ ಕೂಲಂಕಷವಾಗಿ ವಿಚಾರಿಸಿದರು. ನಾವು ಅಹಮದಾಬಾದಿಗೆ ಹೋದುದರಿಂದ ಅವರಿಗೆ ದೇಶಸೇವೆಗೆ ಸೇರಿದೆವು ಎಂದು ಎನಿಸಲೇ ಇಲ್ಲ. "ನಿಮ್ಮ ಊರುಗಳಲ್ಲಿ ರಚನಾತ್ಮಕ ಕಾರ್ಯಕ್ರಮಗಳಿಲ್ಲವೆ? ಖಾದಿ ಕೆಲಸ ಇಲ್ಲವೆ? ಹಳ್ಳಿಗಳ ಸೇವೆಮಾಡಿ ಬೀದಿಗುಡಿಸಿ; ದನಕಾಯಿರಿ; ಗೋ ಶಾಲೆಗಳನ್ನು ನಿರ್ಮಿಸಿ, ವಯಸ್ಕರ ವಿದ್ಯಾಭ್ಯಾಸದಲ್ಲಿ ತೊಡಗಿ; ಇಲ್ಲಿಗೆ ಯಾಕೆ ಬಂದಿರಿ? ಅವರವರು ಇರುವ ಸ್ಥಳದಲ್ಲಿಯೇ ಅವರವರು ಸೇವೆಮಾಡಬೇಕು. ಯಾವ ವಿದ್ಯಾಭ್ಯಾಸಕ್ಕಾಗಿ ನಿಮ್ಮೂರಿನಿಂದ ಇಲ್ಲಿಗೆ ಬಂದಿರಿ? ದೇಶಸೇವೆ ದೈವಭಕ್ತಿ ಇವೇ ವಿದ್ಯಾಭ್ಯಾಸ. ನೀವು ಹೈಸ್ಕೂಲು ವಿದ್ಯಾರ್ಥಿಗಳೆನ್ನುತ್ತೀರಿ. ಯೋಗ್ಯನಾಗಿ ಜೀವಿಸಲು ಅಷ್ಟು ವಿದ್ಯೆ ಸಾಲದೆ? ಈ ಬಡದೇಶದಲ್ಲಿ ಹೈಸ್ಕೂಲು ವಿದ್ಯಾಭ್ಯಾಸ ಸಹ ಒಂದು ಸುಖಸಾಮಗ್ರಿ. ನಿಮ್ಮ ಹಳ್ಳಿಯಲ್ಲಿ ನೀವೇ

ಒಂದು ರಾಷ್ಟ್ರೀಯ ಶಿಕ್ಷಣ ಶಾಲೆಯನ್ನು ಸ್ಥಾಪಿಸಿ; ನೀವು ಚಳುವಳಿಗೆ ಸಹಾಯ ಮಾಡಬೇಕಾದುದು ಆ ರೀತಿ. ಕೆಲಸಗಾರರೆಲ್ಲ ಬಂದು ಇಲ್ಲಿ ಸೇರಿದರೆ ನಿಮಗೆಲ್ಲ ಅನ್ನ ಹಾಕಲು ನನಗೆ ಹಣ ಕೊಡುವವರು ಯಾರು? ಈ ಆಶ್ರಮ ಅನ್ನ ಛತ್ರವೆ?" ಎಂದರು. ಕೊನೆಗೂ ನಮ್ಮ ಆಂಧ್ರದ ಮಿತ್ರ, ಸಮಂಜಸವಾದ ಉತ್ತರಗಳನ್ನು ಕೊಟ್ಟರೂ, ಗಾಂಧೀಜಿ ತೃಪ್ತರಾಗಲಿಲ್ಲ. "ನೀವು ಆಂಧ್ರ ಮೈಸೂರು ಧಾರವಾಡ ಮುಂತಾದ ದಕ್ಷಿಣ ದೇಶದ ದೂರ ಪ್ರಾಂತಗಳಿಂದ ಬಂದಿದ್ದೀರಿ. ನಿಮ್ಮನ್ನು ಹಿಂದಕ್ಕೆ ಕಳುಹಿಸಲು ಮನಸ್ಸು ಬಾರದು" ಎಂದು ನಮ್ಮನ್ನು ಆಶ್ರಮದಲ್ಲಿ ಅಂಗೀಕರಿಸಿದರು. ಆಶ್ರಮದ, ಉಗ್ರಾಣದಿಂದ ನಮಗೆ ಹಿಟ್ಟು ಬೆಲ್ಲ ಮುಂತಾದ ಆಹಾರ ಸಾಮಗ್ರಿ ಸಿಕ್ಕುತ್ತಿತ್ತು. ನಾವೇ ಅದನ್ನು ಅಡಿಗೆ ಮಾಡಿಕೊಳ್ಳಬೇಕಾಗಿತ್ತು. ಜತೆಗೆ ಗಾಂಧೀಜಿ ಯಂಗ್ ಇಂಡಿಯ ಆಫೀಸ್ ಮ್ಯಾನೇಜರ್ ಸ್ವಾಮಿ ಆನಂದರಿಗೆ ಒಂದು ಚೀಟಿ ಬರೆದು ನಮ್ಮ ಕೈಯಲ್ಲಿಯೇ ಕೊಟ್ಟರು. ಆ ಚೀಟಿಯನ್ನು ಅವರು ಹಿಂದಿಯಲ್ಲಿ ಬರೆದಿದ್ದರು. ಅದು ಎರಡೇ ವಾಕ್ಯಗಳಿದ್ದ ಒಂದುಸಣ್ಣ ಚೀಟಿ (ಲಕ್ಕೋಟೆ ಅಲ್ಲ) ರಾಮಚಂದ್ರ ವಡವಿಯವರು ಅದನ್ನು ಓದಿದರು. "ಇವರು ಊರುಗಳಿಂದ ಓಡಿ ಬಂದಿದ್ದಾರೆ (ಭಾಗ್) ಗುಜರಾತ್ ವಿದ್ಯಾಪೀಠ ಸೇರುತ್ತಾರೆ. ಯಂಗ್ ಇಂಡಿಯ ಆಫೀಸಿನಲ್ಲಿ ಏನಾದರೂ ಕೆಲಸ ಕೊಡಿ. ದಿನಕ್ಕೆ ನಾಲ್ಕಾಣೆ ಕೊಡಿ" ಎಂದು ಅದರಲ್ಲಿ ಬರೆದಿತ್ತು. ರಾಮಚಂದ್ರ ವಡವಿ ಮತ್ತು ಆಂಧ್ರದ ಸಾಹೇಬರು "ಭಾಗ್" ಓಡಿ ಬಂದಿದ್ದಾರೆ ಎಂದು ಬರೆದು ಬಿಟ್ಟಿದ್ದಾರೆ. ನಮ್ಮನ್ನು ನಿಜವಾಗಿ ಯಂಗ್ ಇಂಡಿಯಾ ಆಫೀಸಿಗೆ ಸೇರಿಸುತ್ತಾರೆಯೇ?" ಎಂದು ಹೆದರಿದರು. ಆದರೆ ಸ್ವಾಮಿ ಆನಂದರು ನಮ್ಮನ್ನು ನೋಡಿ ನಕ್ಕು ನಮ್ಮನ್ನು ಯಂಗ್ ಇಂಡಿಯ ಆಫೀಸಿಗೆ ಸೇರಿಸಿಕೊಂಡರು. ಶ್ರೀ ರಾಮಚಂದ್ರ ವಡವಿಯವರು ಯಂಗ್ ಇಂಡಿಯ ಪುಟಗಳನ್ನು ಜೋಡಿಸುವ ಕಾರ್ಯವನ್ನು ತಗೆದುಕೊಂಡರು. ಸ್ವಲ್ಪ ಕಾಲದೊಳಗೇ ಅವರು ಆ ವಿದ್ಯೆಯಲ್ಲಿ ನುರಿತವ ರಾದರು. ನಾನು ಪತ್ರಿಕೆಗೆ ವಿಳಾಸದ ಚೀಟಿಗಳನ್ನು ಅಂಟಿಸುವುದು, ಮೊದಲನೆಯ ಪ್ರೂಫ್‌ನ್ನು ನೋಡುವುದು, ಎಲ್ಲ ವಿಳಾಸಕ್ಕೂ ಸರಿಯಾಗಿ ಕಳುಹಿಸಲ್ಪಟ್ಟಿದೆಯೆ? ಎಂಬುದನ್ನು ನೋಡುವುದು ಈ ಕೆಲಸಕ್ಕೆ ನಿಯಮಿಸಲ್ಪಟ್ಟೆ. ಆಂಧ್ರದ ಮಿತ್ರರು ಮೊಳೆ ಜೋಡಿಸುವ ಭಾಗಕ್ಕೆ ಸೇರಿದರು. ಹೀಗೆ ಅಂದು ನಮ್ಮ ಭಾಗ್ಯದಬಾಗಿಲು ತೆರೆಯಿತು. ಗಾಂಧೀಜಿ ನಮ್ಮನ್ನು ಸೇರಿಸಿಕೊಳ್ಳದೆ ಹೋಗಿದ್ದರೆ ನಾನಂತೂ ದಿಕ್ಕೆಟ್ಟು ಹೋಗುತ್ತಿದ್ದೆ. ಹೇಳದೆ ಕೇಳದೆ ಮನೆಬಿಟ್ಟು ಶಾಲೆಬಿಟ್ಟು ಓಡಿ ಬಂದಿದ್ದುದರಿಂದ ಇನ್ನು ಹಿಂದಿರುಗುವಂತೆ ಇರಲಿಲ್ಲ. ಎಲ್ಲಿಯೋ ಪೋಲಿಬಿದ್ದು ಹೋಗಬೇಕಾಗಿತ್ತು. ವಿಭೀಷಣನಿಗೆ ರಾಮನಲ್ಲಿ ಶರಣಾಗತಿ ದೊರಕದಿದ್ದರೆ ಅವನಗತಿ ಏನಾಗುತ್ತಿತ್ತೋ ಹಾಗಾಗುತ್ತಿತ್ತು ನನ್ನ ಗತಿ. ಆದರೆ ವಿಭೀಷಣನ ಮಹಿಮೆಯೂ ಭಕ್ತಿಯೂ ದೈತ್ಯ ಸಂಪತ್ತು ಸಹ ನನ್ನಲ್ಲಿರಲಿಲ್ಲ.

ದಿನಕ್ಕೆ ನಾಲ್ಕಾಣೆ ಸಂಬಳವೆ? ನಾಲ್ಕು ರುಪಾಯಿಯಲ್ಲ, ನಲವತ್ತು ರುಪಾಯಿ

ಯಲ್ಲ ಎನ್ನಬೇಡಿ. ದಿನಕ್ಕೆ ನಲವತ್ತು ರುಪಾಯಿಯನ್ನು ಸಂಪಾದಿಸುವವರಿದ್ದಾರೆ. ಆಗ (೧೯೨೧) ಭಾರತದಲ್ಲಿ ಸಾಮಾನ್ಯನ ದಿನದ ಉತ್ಪತ್ತಿ ನಾಲ್ಕಾಣೆಗಿಂತ ಹೆಚ್ಚಾಗಿರಲಿಲ್ಲ. ಆದರೆ ಗಾಂಧೀಜಿಯವರ ಕೈಯಿಂದ ದಿನಕ್ಕೆ ನಾಲ್ಕಾಣೆ ಸಂಬಳ ಪಡೆಯುವ ಪುಣ್ಯ ಎಷ್ಟು ಜನಕ್ಕೆ ದೊರೆತಿದೆ!

೩

ಅಹಮದಾಬಾದ್ ಕಾಂಗ್ರೆಸ್

ಅದೇ ಡಿಸೆಂಬರ್‌ನಲ್ಲಿ ಕಾಂಗ್ರೆಸ್ ಮಹಾಧಿವೇಶನ ಅಹಮ್ಮದಾಬಾದ್‌ನಲ್ಲಿ ಸೇರಿತು. ಅದು ಅತ್ಯಂತ ಮಹತ್ವದ ಅಧಿವೇಶನ? ಒಂದು ವರುಷದಲ್ಲಿ ಸ್ವರಾಜ್ಯ ಎಂದು ಮಹಾತ್ಮರು ಘೋಷಿಸಿದ ಕಾಲ ಆಗ ತಾನೇ ಪೂರ್ತಿಯಾಗುವುದರಲ್ಲಿತ್ತು. ಗಾಂಧೀಜಿ ಮುಂದೇನು ಮಾಡುತ್ತಾರೆ; ಸರ್ಕಾರ ಮುಂದೇನು ಮಾಡುತ್ತದೆ ಎಂಬ ಊಹನೆಗಳಿಂದ ದೇಶದ ವಾತಾವರಣದಲ್ಲಿ ಅನಿರೀಕ್ಷಿತ ಚುರುಕು ಮೂಡಿತ್ತು. ಆ ಕಾಂಗ್ರೆಸ್‌ನಲ್ಲಿ ನಾನೂ ಸ್ವಯಂ ಸೇವಕನಾಗಿ ಸೇರಿದೆ. ಆಗ ಸ್ವಯಂ ಸೇವಕರ ಕ್ಯಾಪ್ಟನ್ ದಿವಾಣಜಿ ಎಂಬುವರು. ಆಗಿನ ಸ್ವಯಂ ಸೇವಕರಿಗೆ, ಈಚಿನ ಕಾಲದ ಸ್ವಯಂ ಸೇವಕರಂತೆ ಡ್ರಿಲ್ ಕವಾಯಿತು ಹೆಚ್ಚಾಗಿರಲಿಲ್ಲ. ಮುಖ್ಯವಾಗಿ ಆವರಣದ ಸ್ವಚ್ಛತೆ, ಅತಿಥಿಗಳ ಊಟ ಉಪಚಾರದ ಸೇವೆ, ಸ್ನಾನದ ಮನೆ ಪಾಯಖಾನೆ ಮನೆ ಅಡಿಗೆ ಮನೆಗಳ ಶುದ್ಧೀಕರಣ, ಇವು ಸ್ವಯಂ ಸೇವಕರ ಕೆಲಸಗಳಾಗಿದ್ದವು, ಇವುಗಳಿಗಾಗಿ ಸಂಬಳದ ಆಳುಗಳನ್ನು ನಿಯಮಿಸುತ್ತಿರಲಿಲ್ಲ. ಸ್ವಾಗತ ಸಮಿತಿಯ ಅಧ್ಯಕ್ಷರಾದ ವಲ್ಲಭಾಯಿ ಪಟೇಲರೇ ಸ್ವಯಂ ಸೇವಕರ ಶಿಸ್ತನ್ನು ಗಮನಿಸುತ್ತಿದ್ದರು.

ಅಹಮ್ಮಾದಾಬಾದ್ ಕಾಂಗ್ರೆಸ್, ಅನೇಕ ವಿಷಯಗಳಲ್ಲಿ ದೇಶದ ಚರಿತ್ರೆಯಲ್ಲಿ ಪ್ರಮುಖವಾದುದು. ಅಧ್ಯಕ್ಷರಾದ ಸಿ. ಆರ್. ದಾಸ್‌ರನ್ನು ಸರ್ಕಾರ ಬಂಧಿಸಿದುದರಿಂದ, ಕೊನೆಯ ಗಳಿಗೆಯಲ್ಲಿ ಹಕಿಂ ಅಜಮಲ್‌ಖಾನರನ್ನು ಅಧ್ಯಕ್ಷರನ್ನಾಗಿ ಆರಿಸಲಾಯಿತು. ಅಂದಿನ ಹಿಂದು ಮುಸಲ್ಮಾನರ ಐಕ್ಯ, ಅದ್ಭುತವಾಗಿತ್ತು. ಅಹಮದಾಬಾದ್ ಕಾಂಗ್ರೆಸ್‌ನಲ್ಲಿ ಮುಸ್ಲಿಂ ಉಲೇಮಾಗಳೇ ಪ್ರಮುಖ ಪಾತ್ರವನ್ನು ವಹಿಸಿದ್ದರು. ಡಿಲ್ಲಿಯಲ್ಲಿ ಒಂದು ಹಿಂದು ಮಹಾ ಸಭೆಗೆ ಹಕಿಂ ಅಜಮಲ್‌ಖಾನರು ಅಧ್ಯಕ್ಷರಾಗಿದ್ದರು. ಡಿಲ್ಲಿಯ ಜಮ್ಮಾ ಮಸೀದಿಯಲ್ಲಿ ಸ್ವಾಮಿ ಶ್ರದ್ಧಾನಂದರು ಭಾಷಣ ಮಾಡಿದ್ದರು.

ಅಹಮ್ಮದಾಬಾದ್ ಕಾಂಗ್ರೆಸ್‌ನ ಎಲ್ಲ ವ್ಯವಸ್ಥೆಗಳೂ ಗಾಂಧೀಜಿಯವರ ನೇರ ಸಲಹೆಯಂತೆ ನಡೆದವು. ಅದೇ ಮೊದಲನೆಯ ಸಲವಾಗಿ ಕಾಂಗ್ರೆಸ್‌ನಲ್ಲಿ ಕುರ್ಚಿ ಮೇಜುಗಳು ಮರೆಯಾಗಿ ಪ್ರೇಕ್ಷಕರೆಲ್ಲ ನೆಲದ ಮೇಲೆ ಕೂರುವ ಏರ್ಪಾಡಾಗಿತ್ತು. ವೇದಿಕೆಯ ಮೇಲೆ ಸಹ ಮೆತ್ತೆ ಮತ್ತು ಒರಗುದಿಂಬು. ಹಿಂದಲ ವರುಷ ನಾಗಪುರದ ಕಾಂಗ್ರೆಸ್‌ನಲ್ಲಿ, ಕುರ್ಚಿ ಮೇಜುಗಳಿಗಾಗಿಯೇ ಎಪ್ಪತ್ತು ಸಾವಿರ ರುಪಾಯಿಗಳನ್ನು ದಂಡ ತೆತ್ತುದಾಗಿತ್ತು. ಎರಡನೆಯದಾಗಿ ಕಾಂಗ್ರೆಸ್ ಮಂಟಪವನ್ನು ಖಾದಿಯಲ್ಲಿ

ನಿರ್ಮಿಸುವ ಪದ್ಧತಿ ಪ್ರಾರಂಭವಾದುದೂ ಅಹಮ್ಮದಾಬಾದ್ ಕಾಂಗ್ರೆಸ್‌ನಲ್ಲಿಯೇ, ಮತ್ತು ಪ್ರಸಿದ್ಧವಾದ ಖಾದಿ ಕೈಚೀಲ ಕಾಂಗ್ರೆಸ್‌ನವರ ಕೈಗೆಲ್ಲ ಬಂದುದು ಅಹಮ್ಮದಾಬಾದಿನಲ್ಲಿಯೇ.

ಕೊನೆಯ ಸಂಗತಿಯನ್ನು ಕುರಿತು ಮುಂದಲ ಕಥೆ, ಅಹಮದಾಬಾದ್ ಕಾಂಗ್ರೆಸ್ ನಲ್ಲಿ ಪ್ರಚಾರವಾಗಿತ್ತು. ಸಾಧಾರಣವಾಗಿ ಕಾಂಗ್ರೆಸ್ ಮಂಟಪದೊಳಕ್ಕೆ ಹೋಗುವಾಗ, ಜನ ಚಪ್ಪಲಿಗಳನ್ನು ಬಾಗಿಲಲ್ಲಿ ಬಿಟ್ಟುಹೋಗಬೇಕಾಗಿತ್ತು. ಅಲ್ಲಿ ಬಿಟ್ಟರೆ ಹಿಂದಿರುಗಿದನಂತರ ಅದನ್ನು ಗುರುತಿಸುವುದು ಕಷ್ಟವಾಗುತ್ತಿತ್ತು (ಲಕ್ಷಾಂತರ ಜತೆಗಳು) ಗಾಂಧೀಜಿಯವರೂ ಎಲ್ಲರಂತೆ ಕಾಂಗ್ರೆಸ್ ದ್ವಾರಕ್ಕೆ ಬಂದರು. ಕಾಂಗ್ರೆಸ್ ಭವನದ ನಿರ್ಮಾಣದಲ್ಲಿ ತೊಡಗಿದ್ದ ಒಬ್ಬ ದರ್ಜಿಗೆ ಒಂದು ಕೈಚೀಲ ಹೊಲಿದು ಕೊಡುವಂತೆ ಹೇಳಿದರು. ಅವನು ಹೊಲಿದುಕೊಟ್ಟಕೂಡಲೇ ಅದರಲ್ಲಿ ತಮ ಚಪ್ಪಲಿಯನ್ನು ಹಾಕಿಕೊಂಡು ಒಳಕ್ಕೆ ಹೋದರು. ಅಲ್ಲಿಂದ ಮುಂದೆ ಅಲ್ಲಿ ಬಂದವರಿಗೆಲ್ಲ ಕೈಚೀಲಗಳನ್ನು ಹೊಲಿದುಕೊಡುವುದೇ ಆ ಎಲ್ಲ ದರ್ಜಿಗಳಿಗೂ ಕೆಲಸ ವಾಯಿತು.

ಅಹಮ್ಮದಾಬಾದ್ ಕಾಂಗ್ರೆಸ್ಸಿನಲ್ಲಿ ನಡೆದ ಎರಡು ವಿಶೇಷ ಸಂಗತಿಗಳು ನನಗೆ ಚೆನ್ನಾಗಿ ಕಣ್ಣುಕಟ್ಟಿದಂತೆ ನೆನಪಿವೆ. ಅವುಗಳಲ್ಲಿ ಮೊದಲನೆಯದು ರೆವರೆಂಡ್ ದೀನಬಂಧು ಸಿ. ಎಫ್. ಆಂಡ್ರೂಸ್‌ರ ಭಾಷಣ. ಸಿ ಎಫ್ ಆಂಡ್ರೂಸ್‌ರು ಮಹಾತ್ಮ ಗಾಂಧೀಜಿಯ ರಾಜಕೀಯ ಚಳುವಳಿಯ ನೈತಿಕ ಮತ್ತು ಧಾರ್ಮಿಕ ಪ್ರಾಮುಖ್ಯತೆ ಯನ್ನು ಕುರಿತು ಮಾತನಾಡುವವರಾಗಿದ್ದರು. (ಇಂಗ್ಲಿಷಿನಲ್ಲಿ). ಸಿ. ಎಫ್ ಆಂಡ್ರೂಸ್ ರವರು (ಖಾದಿಯನ್ನೂ ಧರಿಸುವವರಾದರೂ) ಪರದೇಶಿ ಶರಾಯಿಕೋಟು ಮೊದಲಾದು ವನ್ನು ಧರಿಸಿ ಸಭೆಗೆ ಬಂದರು. ಆಗಿನ ಕಾಲದಲ್ಲಿ ಪರದೇಶಿ ವಸ್ತ್ರಗಳನ್ನು ಧರಿಸಿಕೊಂಡು ಕಾಂಗ್ರೆಸ್ ಸಭೆಗೆ ಬರುತ್ತಿದ್ದವರು ಇರಲೇ ಇಲ್ಲವೆಂದು ಹೇಳಬಹುದು. ಗಾಂಧೀಜಿ ಪರದೇಶಿವಸ್ತ್ರಗಳ ಪರ್ವತಗಳನ್ನು, ಆಂಜನೇಯ ಲಂಕೆಯನ್ನು ಸುಟ್ಟಂತೆ ಸುಟ್ಟಿದ್ದ ವರುಷ ಅದು. ಈ ಪರದೇಶಿ ವಸ್ತ್ರದಹನಕ್ಕೆ ಆಂಡ್ರೂಸ್‌ರು ಪ್ರಾರಂಭದಿಂದಲೂ ವಿರೋಧಿಗಳೇ ಆಗಿದ್ದರು "ನಾನು ಇದಕ್ಕೆ ವಿರೋಧಿ" ಎಂಬುದು ಜನಗಳಿಗೆ ಚೆನ್ನಾಗಿ ಗೊತ್ತಾಗಲಿ ಎಂದೇ ನಾನು ಪರದೇಶಿವಸ್ತ್ರ ಧರಿಸಿ ಇಂದು ಬಂದಿದ್ದೇನೆ ಎಂದು ಹೇಳಿ ಅವರು ತಮ್ಮ ಭಾಷಣವನ್ನು ಪ್ರಾರಂಭಿಸಿದರು. ಅಂದಿನ ಕಾಲದಲ್ಲಿ ಎಷ್ಟರಮಟ್ಟಿಗೆ ಅಹಿಂಸೆ ನಮ್ಮ ಜನಕ್ಕೆ ಮೈಗೂಡಿದ್ದಿತೆಂದರೆ, ಬಹಿರಂಗ ಕಾಂಗ್ರೆಸ್ ಅಧಿವೇಶನದಲ್ಲಿ ಕುಳಿತಿದ್ದ ಲಕ್ಷಾಂತರ ಶ್ರೋತೃಗಳ ಪೈಕಿ, ಒಬ್ಬರಾದರೂ ಗದ್ದಲಮಾಡದೆ, ಛೀ ಗುಟ್ಟದೆ ಆಂಡ್ರೂಸ್‌ರ ಇಂಗ್ಲಿಷ್ ಭಾಷಣವನ್ನು ಮೌನವಾಗಿ ಕೇಳಿದರು. ಆಗ ಯಾವ ಕಾಂಗ್ರೆಸ್ ಅಧಿವೇಶನದ ಒಳಕ್ಕೂ ಪೋಲೀಸರು ಪ್ರವೇಶಿಸುತ್ತಿರಲಿಲ್ಲ. ಜನರ ಸಂಯಮವರ್ತನೆ ಆದರ್ಶವಾಗಿತ್ತು.

ಎರಡನೆಯ ಸಂಗತಿ ಶ್ರೀಮತಿ ಸರೋಜಿನಿ ದೇವಿಯವರ ಭಾಷಣ. ಅವರ

ಭಾಷಣವನ್ನು ಕೇಳಿದವರಿಗೆ, ಅವರಿಗೆ ಯಾಕೆ ಭಾರತದ ಕೋಗಿಲೆ ಎಂದು ಹೆಸರಾಗಿದ್ದಿತೆಂಬುದು ಗೊತ್ತಾಗುತ್ತಿದ್ದಿತು ಸರೋಜಿನಿ ದೇವಿಯವರು ರಕ್ತವರ್ಣದ ಖಾದಿ ಸೀರೆಯನ್ನು ಧರಿಸಿ ವೇದಿಕೆಯ ಮೇಲೆ ದುರ್ಗಿಯಂತೆ ಕಂಗೊಳಿಸಿದರು. ಶುಭ್ರವಾದ ಬಿಳಿಯ ಖಾದಿಯ ವೇದಿಕೆ; ಅದರ ನಡುವೆ ಇಳಿಬಿಟ್ಟದ್ದ ನಾನಾ ವರ್ಣದ ಖಾದಿ ಅರಿವೆಗಳ ನಿರಿಗೆಗಳು; ಅಲ್ಲಲ್ಲಿ ಚೆಲ್ಲಿದಂತಿದ್ದ ಕೆಂಪು ನೀಲಿ ಹಸಿರು ಹಳದಿ ವರ್ಣದ ದಿಂಬುಗಳು, ಲೋಡುಗಳು, ಎಲ್ಲೆಲ್ಲಿಯೂ ಎದ್ದು ಕಾಣುತ್ತಿದ್ದ ರಾಷ್ಟ್ರೀಯ (ಕಾಂಗ್ರೆಸ್) ಪತಾಕೆಗಳು ಇವುಗಳಿಂದ ವೇದಿಕೆ ದೇವಸ್ಥಾನದಂತೆ ತೋರಿ ಸರೋಜಿನಿ ದೇವಿ ಚಂಡಿ ಚಾಮುಂಡಿಯಂತೆ ಕಂಡರು. ಅವರು ಮಾತನಾಡಲು ಎದ್ದ ಕೂಡಲೇ ವೇದಿಕೆಯಲ್ಲಿಯೂ ಸಭೆಯಲ್ಲಿಯೂ ಒಂದು ವಿದ್ಯುತ್ ತೇಜಸ್ಸು ಪ್ರವಹಿಸಿದಂತೆ ಜನ ಉತ್ಸಾಹಿತರಾದರು. ಅವರ ಇಂಗ್ಲಿಷ್ ಭಾಷಣ ಒಂದು ವೀರಗಾಥಾ. ಆಗ್ಗೆ ಎರಡು ವರುಷಗಳ ಕೆಳಗೆ ಮೊದಲನೆಯ ಮಹಾಯುದ್ಧ ಮುಗಿದಿತ್ತು. ಸರೋಜಿನಿದೇವಿ ಹೇಳಿದ ಮುಂದಲವಾಕ್ಯ ಈಗಲೂ ನನ್ನ ಕಿವಿಯಲ್ಲಿ ಪ್ರತಿಧ್ವನಿಸುತ್ತಿದೆ. ಅಂದಿನಿಂದಲೂ ನಾನು ಆ ಮಾತನ್ನು ಮರೆತೇ ಇಲ್ಲ "In Europe when war thunder broke out and the August sky was red with blood, did I not see thousands of young men rushing forward to the battle field amidst deafening war drums..." ಆ ಭಾಷಣ ಉದ್ದಕ್ಕೂ ಕಾವ್ಯಮಯವಾಗಿ ರೋಮಾಂಚಕಾರಿಯಾಗಿತ್ತು. ಕವಿ ಬೇಂದ್ರೆಯವರು ಈಚೆಗೆ ಬರೆದಿರುವ

> ಚಂಡಿ ಚಾಮುಂಡಿ ಪೇಳ್ ಬೇಕಾದುದೇನು ?
> ಗಂಡಸಾದರೆ ನಿನ್ನ ಬಲಿಕೊಡುವೆಯೇನು ?

ಈ ಸಾಲುಗಳ ಪ್ರತ್ಯಕ್ಷ ಮೂರ್ತಿಯಾಗಿ ಸರೋಜನಿದೇವಿ ನಿಂತಿದ್ದರು. ಶ್ರೋತೃಗಳ ಪೈಕಿ ಅನೇಕರಿಗೆ ಇಂಗ್ಲಿಷು ತಿಳಿಯದಿದ್ದರೂ ಅವರು ಮುಗ್ಧರಾಗಿ ಆ ವಾಣಿಯ ಮಾಟದಲ್ಲಿ ಸಿಕ್ಕಿಕೊಂಡು, ಅರ್ಥತಿಳಿಯದಿದ್ದರೂ ಭಾಷಣದ ಸ್ಫೂರ್ತಿಯನ್ನು ಹೊಂದಿದರು. ಸಿ. ಎಫ್ ಆಂಡ್ರೊಸ್‌ರವರು ಕಾಂಗ್ರೆಸ್ ಭವನದಿಂದಲೇ, ಮಾಪ್ಲಾ ದಂಗೆಯ ಪರಿಸ್ಥಿತಿಯನ್ನು ಅರಿಯಲು ಮಲಬಾರ್‌ಗೆ ಹೋಗುವವರಾಗಿದ್ದರು. ಅವರು ವೇದಿಕೆಯ ಮೇಲೆ, ಶ್ರೀಮತಿ ಸರೋಜಿನಿ ನಾಯ್ಡುರವರಿಗೆ, ಭಾರತೀಯರಂತೆ ಸಾಷ್ಟಾಂಗ ನಮಸ್ಕಾರಮಾಡಿ ಹೊರಟರು.

೪

ಸನ್ಯಾಸಿ, ಝಾಡಮಾಲಿಯಾಗಲಾರ

ಸ್ವಾಮಿ, ಸತ್ಯದೇವರು, ಗಾಂಧಿಜಿಯನ್ನು ನೋಡಲು ಅಹಮ್ಮದಾಬಾದಿಗೆ ಬಂದರು. ಗಾಂಧಿಯವರೊಂದಿಗೆ ಮಾತನಾಡಿ ತಾವೂ ಸಾರ್ವಜನಿಕ ಸೇವಕರಾಗ

ಬೇಕೆಂಬುದು ಅವರ ಇಚ್ಛೆಯಾಗಿತ್ತು. ಅವರು ಊರೊಳಗಿನ ಒಂದು ಧರ್ಮಶಾಲೆಯಲ್ಲಿ ಇಳಿದುಕೊಂಡರು. ಅವರ ಸೇವೆಗೆ ನನ್ನನ್ನು ಗಾಂಧಿಜಿಯವರು ನಿಯಮಿಸಿದರು. ಸ್ವಾಮಿ ಸತ್ಯದೇವರು ದಪ್ಪವಾದ ಪುಷ್ಟರಾದ ಕೆಂಪನೆಯ ಆಳು. ಅವರು ದೊಡ್ಡ ಹಿಂದಿ ವಿದ್ವಾಂಸರು ಲೇಖಕರು ಮತ್ತು ಭಾಷಣಕಾರರು. ಕಾವಿಯ ಖಾದಿಯನ್ನು ಧರಿಸುತ್ತಿದ್ದರು. ಅವರಿಗೆ ಸ್ವಚ್ಛತೆಯ ಕಡೆಗೆ ಅತಿಲಕ್ಷ್ಯ. ಕೊಠಡಿ, ಅಡಿಗೆಮನೆ ಮೂತ್ರಿ ಪಾಯಖಾನೆ ಗೃಹ ಪಾತ್ರೆಗಳು ಇವುಗಳನ್ನು ನಾನು ಎಷ್ಟು ತೊಳೆದರೂ ಅವರಿಗೆ ತೃಪ್ತಿಯಿರಲಿಲ್ಲ. ಅವರು ತಮ್ಮ ಮೈಯನ್ನೂ ಹಾಗೆಯೇ, ಕಲ್ಲಿನಮೇಲೆ ಮೀನನ್ನು ಉಜ್ಜುವಂತೆ ಉಜ್ಜಿ ಉಜ್ಜಿ ಸ್ವಚ್ಛಮಾಡಿಕೊಳ್ಳುತ್ತಿದ್ದರು. ಶುದ್ಧಿಮಾಡಿ ಮಾಡಿ ನನಗೆ ಬಹಳ ಆಯಾಸವಾದರೂ ಅವರ ಸ್ವಚ್ಛತಾಪ್ರಿಯತೆ ನನಗೆ ಒಪ್ಪಿಗೆಯಾಯಿತು.

ಸ್ವಾಮಿ ಸತ್ಯದೇವರ ತಲೆ ಅವರ ದೇಹಕ್ಕೆ ತಕ್ಕಂತೆ ಹುಲಿಯ ತಲೆಯಂತೆ ದಪ್ಪವಾಗಿತ್ತು. ಅವರನ್ನು ನೋಡಿದರೆ "ಇವರು ಜಟ್ಟಿದಂತಹ ಆಳು" ಎಂಬ ಭಾವನೆ ಬರುತ್ತಿದ್ದಿತು. ತೇಜಸ್ವೀ ವ್ಯಕ್ತಿ. ಅವರು ತಾವೇ ಪೇಟೆಗೆ ಹೋಗಿ ಹೆಗಲಿನ ಮೇಲೆ ಕಟ್ಟಿಗೆ ಹೊರೆಯಂತಹ ದೊಡ್ಡ ಹೊರೆ ಕಬ್ಬಿನ ಜಲ್ಲೆಗಳನ್ನು ತಂದು, ನನ್ನ ಕಡೆಗೆ ನಾಲ್ಕು ಜಲ್ಲೆ ಒಗೆದು, ಉಳಿದವನ್ನೆಲ್ಲ ಆನೆಯಂತೆ ಹಲ್ಲಿನಿಂದಲೇ ಸಿಗಿದು ತಿಂದು ಒಂದು ಮಕ್ಕರಿ ಸಿಪ್ಪೆಯನ್ನು ಕೆಡವಿಬಿಟ್ಟರು. ಆ ದಿನವೆಲ್ಲ ಮತ್ತೇನನ್ನೂ ತಿನ್ನಲಿಲ್ಲ.

ಮಹಾತ್ಮ ಗಾಂಧೀಯವರ ಆಶ್ರಮದಲ್ಲಿಯೇ ಇದ್ದುಕೊಂಡು ಅವರಂತೆ ಜನಸೇವೆ ಸಾರ್ವಜನಿಕಸೇವೆ ಮಾಡಬೇಕೆಂಬುದು ಸ್ವಾಮಿ ಸತ್ಯದೇವ್‌ರ ಇಷ್ಟವಾಗಿತ್ತು. ಆ ಅಭಿಪ್ರಾಯವನ್ನು ಗಾಂಧೀಜಿ ಒಪ್ಪಲಿಲ್ಲ. ಗಾಂಧೀಜಿಯವರ ಅಭಿಪ್ರಾಯ ಹೀಗಿತ್ತು. "ನೀವು ಸನ್ಯಾಸಿಗಳು. ಸನ್ಯಾಸಿಗಳಿಗೆ ಗೊತ್ತುಮಾಡಿರುವ ಕಾವಿ ವಸ್ತ್ರವನ್ನು ನೀವು ಧರಿಸುತ್ತೀರಿ. ಸನ್ಯಾಸಾಶ್ರಮಕ್ಕೆ ಗೊತ್ತಾಗಿರುವ ನಿಯಮಗಳೂ ಉಂಟು. ಅಲ್ಲದೆ ನಮ್ಮ ಜನರಿಗೆ ಸನ್ಯಾಸಿಗಳನ್ನು ಕಂಡರೆ ತುಂಬ ಗೌರವ. ಅವರಿಂದ ಕೀಳು-ದರ್ಜೆಯ ಕೆಲಸವನ್ನು ಮಾಡಿಸಿಕೊಳ್ಳಲು ನಮ್ಮ ಜನ ಒಪ್ಪುವುದಿಲ್ಲ. ನಮ್ಮ ಆಶ್ರಮದ ನಿಯಮದಂತೆ ಯಾವ ಕಾರ್ಯವೂ ಕೀಳೂ ಅಥವ ನೀಚವೂ ಅಲ್ಲ. ಅತ್ಯಂತ ಕೀಳು ಕಾರ್ಯವೆಂದು ಪರಿಗಣಿತವಾದ ಝಾಡಮಾಲಿ ಕಾರ್ಯಸಹ, ನಮ್ಮ ನಿಯಮದಂತೆ ಪವಿತ್ರ ಕಾರ್ಯವೇ. ಹೀಗಿರುವುದರಿಂದ ನೀವು ಸನ್ಯಾಸಾಶ್ರಮದ ಉಡುಪನ್ನು ಧರಿಸಿದರೆ ಜನ, ನಿಮ್ಮಿಂದ ಸೇವೆ ಕೈಗೊಳ್ಳುವುದಿಲ್ಲ. ನೀವೂ ಖಾದಿಯನ್ನು ಧರಿಸಿದರೆ ನಿಮ್ಮ ಕಾರ್ಯ ಸುಗಮವಾಗುವುದು."

ಗಾಂಧೀಜಿಯವರ ವಾದ ಸರಣಿಯನ್ನು ಸ್ವಾಮಿ ಸತ್ಯದೇವರು ಒಪ್ಪಲಿಲ್ಲ. ಬಾಹ್ಯವೇಷಕ್ಕೆ ಅಷ್ಟು ಪ್ರಾಮುಖ್ಯತೆಯನ್ನು ಕೊಡಬಾರದೆಂದು ಅವರು ಗಾಂಧಿಯವರೊಡನೆ ವಾದಿಸಿದರು. ಮಹಾತ್ಮಗಾಂಧೀಯವರು ಆ ಅಭಿಪ್ರಾಯವನ್ನು ಒಪ್ಪಲಿಲ್ಲ. ಆದುದರಿಂದ ಸಾಬರ್‌ಮತಿ ಆಶ್ರಮದಲ್ಲಿ ಸ್ವಾಮಿ ಸತ್ಯದೇವ್ ಸೇರಲಿಲ್ಲ.

ಇಷ್ಟಾದರೂ ಗಾಂಧೀಜಿ ಮತ್ತು ಸತ್ಯದೇವ್‌ರಲ್ಲಿ ಸ್ವಲ್ಪವೂ ವಿರಸವುಂಟಾಗಲಿಲ್ಲ. ಗಾಂಧೀಜಿಯ ವಾಕ್‌ಕೌಶಲ್ಯ ಮತ್ತು ಉದಾರಬುದ್ಧಿ ಆ ಬಗೆಯದಾಗಿತ್ತು. ಅವರು ಹೇಳುವುದಕ್ಕಿಂತ ಹೆಚ್ಚಾಗಿ ಕೇಳುವುದರಲ್ಲಿ ಉತ್ಸುಕರಾಗಿರುತ್ತಿದ್ದರು. ತಮ್ಮ ವಾದ ಗೆಲ್ಲಬೇಕೆಂಬ ಹಠ ಯಾವಾಗಲೂ ಅವರಲ್ಲಿ ಇರಲಿಲ್ಲ. ತಮ್ಮ ಅಭಿಪ್ರಾಯವನ್ನು ನಮ್ರವಾಗಿ ಸೂಚಿಸುವುದು ; ಎದುರಾಳಿಯ ವಾದದಲ್ಲಿ ಒಪ್ಪಬಹುದಾದುದನ್ನು ಒಪ್ಪು ವುದು ; ಅನವಶ್ಯಕವಾದ ಶುಷ್ಕವಾದ ತರ್ಕ ಇಲ್ಲ. ಸರಳ ಸಂಭಾಷಣೆ. ಹಾಸ್ಯ, ಆಹಾರ ವಿಷಯ ಆರೋಗ್ಯ ವಿಷಯಗಳಿಂದ ಸಂಭಾಷಣೆಯಲ್ಲಿ ಆತ್ಮೀಯತೆಯನ್ನುಂಟು ಮಾಡುವುದು ಇವು ಗಾಂಧೀಜಿಯವರ ಪದ್ಧತಿ. ಸತ್ಯದೇವರೊಂದಿಗೆ ಮಾತನಾಡುವಾಗ ಗಾಂಧೀಜಿ "ನನ್ನಂತಹ ನಾಲ್ಕು ಜನರನ್ನು ಹಾಕಿದರೆ ನೀವು ಒಬ್ಬರು ; ನಿಮ್ಮಮೇಲೆ ಅವಲಂಬಿಸಿ ನಾವೆಲ್ಲ ನಿಶ್ಚಿಂತೆಯಿಂದ ಇರಬಹುದು" ಎಂದರು. ಸತ್ಯದೇವ್ ನಗುತ್ತಾ ತಮ್ಮ ಸ್ಥೂಲದೇಹವನ್ನು ನೋಡಿಕೊಂಡು "ಇದು ದೇವರು ಕೊಟ್ಟವರ. ನೀವು ಎಷ್ಟು ತಪಸ್ಸು ಮಾಡಿದರೂ ನನ್ನಂತೆ ಆಗಲಾರಿರಿ!" ಎಂದರು. ಅನಂತರವೂ ಸ್ವಾಮಿ ಸತ್ಯದೇವ್‌ರೊಂದಿಗೆ ಗಾಂಧೀಜಿಯ ಸ್ನೇಹ ಗಾಢವಾಗಿಯೇ ಇತ್ತು. ಅನಂತರ ಸ್ವಾಮಿ ಸತ್ಯದೇವ್ ಯೂರೋಪ್ ಪ್ರವಾಸವನ್ನು ಸಹ ಕೈಕೊಂಡರು.

ಮೊಹಾನಿಯವರಿಗೆ ಮೂಗುದಾರ

ಅಹಮ್ಮದಾಬಾದ್ ಕಾಂಗ್ರೆಸ್‌ನ ಘಟನೆಗಳ ಪೈಕಿ, ಹಜರತ್ ಮೊಹಾನಿ ಯವರು ಸಭೆಯ ಮುಂದೆ ಇಟ್ಟ ಪೂರ್ಣ ಸ್ವಾತಂತ್ರ್ಯದ ನಿರ್ಣಯ ಸಹ ಮುಖ್ಯ ವಾದುದು. ಅಂದು ಹಜರತ್ ಮೊಹಾನಿ, ಗಾಂಧೀಜಿಯ ಅತ್ಯಂತ ನಿಕಟ ಅನುಯಾಯಿಗಳ ಪೈಕಿ ಒಬ್ಬರಾಗಿದ್ದರು. ಅವರು ಸಾಬರ್‌ಮತಿ ಆಶ್ರಮದಲ್ಲಿ ಗಾಂಧೀಜಿಯವರ ಸಾನ್ನಿಧ್ಯದಲ್ಲಿ ಹೆಚ್ಚು ಕಾಲವನ್ನು ಕಳೆದಿದ್ದರು. ಮೊಹಾನಿ ಯವರು ಸತ್ಯವಾದ ನಡವಳಿಕೆಯ ವಿಷಯದಲ್ಲಿ ಒಂದುಸಲ ತಮ್ಮ ತಪ್ಪನ್ನು ಒಪ್ಪಿ ಸರ್ಕಾರಕ್ಕೆ ಪಶ್ಚಾತ್ತಾಪವನ್ನು ಸೂಚಿಸಿದುದರಿಂದ ಅವರಲ್ಲಿ ಗಾಂಧಿಯವರ ಪ್ರೇಮ ಅಧಿಕವಾಗಿತ್ತು. ಆಗಿನ ಕಾಲದಲ್ಲಿ ಯಾವ ರಾಜಕೀಯ ಹಸ್ತಪತ್ರಿಕೆಗಳನ್ನು ಮಾಡ ಬೇಕಾದರೂ ಭಾರತ (ಬ್ರಿಟಿಷ್) ಸರ್ಕಾರಕ್ಕೆ ಅದರ ನಕಲನ್ನು ಕೊಟ್ಟು ಸರ್ಕಾರ ಅನುಮತಿಕೊಟ್ಟಮೇಲೆ, ಎಷ್ಟು ಪ್ರತಿ ಮಾಡಬೇಕೆಂದು ಅವರು ಅನುಮತಿಕೊಡು ತ್ತಿದ್ದರೋ ಅಷ್ಟನ್ನು ಮಾತ್ರ ಮಾಡಬೇಕಾಗಿತ್ತು. ಒಂದುಸಲ ಹಜರತ್ ಮೊಹಾನಿ ಅಂತಹ ಒಂದು ಹಸ್ತಪತ್ರಿಕೆಗೆ, ಕಲೆಕ್ಟರರ ಅನುಮತಿ ಪಡೆದು ಅಚ್ಚು ಹಾಕಿಸಿದರು. ಹಜರತ್ ಮೊಹಾನಿ ಬಹಳ ಜೋರಾದ ಆಸಾಮಿ ; ನೋಡುವುದಕ್ಕೆ ಸಹ ಕೆಂಪಗೆ ತೇಜಸ್ವಿಯಾಗಿದ್ದರು. ವಿಶಾಲವಾದ ಸಿಂಹದಂತಹ ಮುಖ, ತೀಕ್ಷ್ಣವಾದ ಕಣ್ಣು ಗಳು ಪರಾಕ್ರಮವನ್ನೇ ಕಾರುತ್ತಿದ್ದ ಮೀಸೆಗಳು ; ಅವರು ಯಾವಾಗಲೂ "ಪಾರ ತಂತ್ರದ ಸಂಕೋಲೆಯನ್ನು ಇನ್ನು ಒಂದುಗಳಿಗೆಯೂ ಸಹಿಸಲಾರೆ" ಎಂದು ಹೇಳುತ್ತಿ

ದ್ದರು. ಅಂಥವರಿಗೆ ಕಲೆಕ್ಟರರನ್ನು ಹೋಗಿ ಅನುಮತಿ ಕೇಳುವುದೆಂದರೇ ಇಷ್ಟವಿಲ್ಲ. "ಆಂಗ್ಲೇಯರು ಈ ದೇಶಕ್ಕೆ ಬಂದಿರುವ ದಸ್ಯುಗಳು ಕೊಳ್ಳೆಗಾರರು. ಇವರನ್ನು ಕೇಳಬೇಕಾದುದಿಲ್ಲ ಎಂಬುದೇ ಅವರ ವಾದವಾಗಿತ್ತು. ಆದರೆ ಕಾಂಗ್ರೆಸ್ಸೂ ಗಾಂಧೀಜಿ ಯವರು ಇನ್ನೂ ಆ ನಿಲುವನ್ನು ತೆಗೆದುಕೊಂಡಿರಲಿಲ್ಲ. ಆದುದರಿಂದ ಹಜರತ್ ಮೊಹಾನಿ ಮಂತ್ರಮುಗ್ಧವಾದ ಹಾವಿನಂತೆ ಕಲೆಕ್ಟರ ಅನುಮತಿ ಪಡೆದು ಬಂದಿದ್ದರು. ಕಲೆಕ್ಟರು ಐದು ಸಾವಿರ ಹಸ್ತಪ್ರತಿಗಳಿಗೆ ಅನುಮತಿ ಕೊಟ್ಟಿದ್ದರು. ಮೊಹಾನಿಯವರು "ನಮ್ಮ ದೇಶದಲ್ಲಿ ನಾವೇ ಯಜಮಾನರು" ಎಂದುಕೊಂಡು ಐವತ್ತು ಸಾವಿರ ಪ್ರತಿಗಳನ್ನು ಮಾಡಿಸಿ ದೇಶದ ಮೇಲೆಲ್ಲ ಹಂಚಿಸಲು ಏರ್ಪಾಡು ಮಾಡುವುದರಲ್ಲಿ ದ್ದರು.

ಸಂಗತಿ ಗಾಂಧೀಜಿಗೆ ಹೇಗೋ ಗೊತ್ತಾಯಿತು. ಅವರು ಹಜರತ್‌ರನ್ನು ಕರೆಸಿ "ನೀವು ನಿಮ್ಮ ಒಡಂಬಡಿಕೆಗೆ ವಿರೋಧವಾಗಿ ನಡೆದಿದ್ದೀರಿ. ನಾವು ಜಗತ್ತಿನಲ್ಲೆಲ್ಲ ಅತಿ ಪ್ರಬಲವಾದ ಸಾಮ್ರಾಜ್ಯವನ್ನು ಎದುರಿಸುತ್ತಿದ್ದೇವೆ. ಇದನ್ನು ಸತ್ಯ ಮತ್ತು ಪ್ರಾಮಾಣಿಕ ನಡತೆಯಿಂದ ಮಾತ್ರ ಎದುರಿಸಲು ಸಾಧ್ಯ. ನೀವು ಮಾಡಿದ ತಪ್ಪನ್ನು ನೀವು ಒಪ್ಪಲೇ ಬೇಕು. ಕಲೆಕ್ಟರಲ್ಲಿ ಹೋಗಿ ವಿಷಯವನ್ನು ತಿಳಿಸಿ, ಅನುಮತಿಯನ್ನು ಮೀರಿ ಅಚ್ಚು ಮಾಡಿಸಿರುವ ನಲವತ್ತೈದು ಸಾವಿರ ಪ್ರತಿಗಳನ್ನೂ ಹಿಂದಿರುಗಿಸಿ ನಿಮ್ಮ ಪಶ್ಚಾತ್ತಾಪವನ್ನು ವ್ಯಕ್ತಪಡಿಸಿ ಬನ್ನಿ" ಎಂದು ಹೇಳಿದರು. ಹಜರತ್ ಮೊಹಾನಿ ಯವರು ಪ್ರಾರಂಭದಲ್ಲಿ ಏನು ಮಾಡಿದರೂ ಕಲೆಕ್ಟರಲ್ಲಿ ಹೋಗಲು ಒಪ್ಪಲಿಲ್ಲ, "ಈ ಸರ್ಕಾರವನ್ನು ನಾನು ಸರ್ಕಾರವೆಂದೇ ಭಾವಿಸುವುದಿಲ್ಲ. ಅದನ್ನು ನಾಶ ಮಾಡಲು ಬೇಕಾದುದನ್ನು ಮಾಡುತ್ತೇನೆ; ಬಂದುದನ್ನು ಅನುಭವಿಸುತ್ತೇನೆ. ಸತ್ಯವಂತ ರೊಂದಿಗೆ ಸತ್ಯ; ಕಳ್ಳರೊಂದಿಗೆ ಸತ್ಯವಿಲ್ಲ" ಎಂದು ವಾದಿಸಿದರು. ಆದರೆ ಗಾಂಧೀಜಿ ಯವರ ವಾದದ ನ್ಯಾಯಕ್ಕೆ ಅವರು ತಲೆಬಾಗಬೇಕಾಯಿತು. ಬಲಾತ್ಕಾರಕ್ಕೆ ಸಿಕ್ಕಿ ಕೊಂಡಂತೆ ತಮ್ಮ ಮುಂದೆ ಬಂದು ನಿಂತು ಪಶ್ಚಾತ್ತಾಪವನ್ನು ವ್ಯಕ್ತಪಡಿಸಿದ ಧೀರ ವ್ಯಕ್ತಿಯ ಸಂದಿಗ್ಧ ಪರಿಸ್ಥಿತಿಯನ್ನು ಕಂಡು ಕಲೆಕ್ಟರನಿಗೆ ವಿನೋದವಾಯಿತು. ಇಂತಹ ಪರಾಕ್ರಮಿಗಳನ್ನು ಪಳಗಿಸಿದ ಗಾಂಧಿಯವರ ಶಕ್ತಿಯನ್ನು ಕಂಡು ಅವನಿಗೆ ಭಯವೂ ಆಯಿತು. ತನ್ನ ರಾಕ್ಷಸೀ ಕಾರ್ಯಗಳೆಲ್ಲ ಪ್ರಹ್ಲಾದನಲ್ಲಿ ನಿರುಪಯೋಗಿಯಾದುದನ್ನು ಕಂಡು, ಹಿರಣ್ಯಕಶಿಪುವಿಗೆ ಮಗನ ಸಾತ್ವಿಕ ಸ್ವಭಾವದಿಂದಲೇ ತನ್ನ ನಾಶವಾಗುವು ದೆಂಬ ಭಯ ವುಂಟಾಯಿತೆಂದು ಶುಕ ಮಹರ್ಷಿಗಳು ಭಾಗವತದಲ್ಲಿ ಹೇಳಿದ್ದಾರೆ.

ಅಹಮದಾಬಾದ್ ಕಾಂಗ್ರೆಸ್‌ನಲ್ಲಿ ಹಜರತ್ ಮೊಹಾನಿಯವರು "ಭಾರತವು ಪೂರ್ಣವಾಗಿ ಸ್ವತಂತ್ರವಾಗಬೇಕೆಂಬ" ಠರಾವನ್ನು ಮಂಡಿಸಿ "ಅಗದಿ ಭಯಂಕರ ವಾದ" ಭಾಷಣವನ್ನು ಮಾಡಿದರು. ಮಾತುಗಳು ಉರ್ದುವಿನಲ್ಲಿ ಫಿರಂಗಿ ಗುಂಡು ಪಟಾಸ್‌ಗಳಂತೆ ರಣವಾದ್ಯ ರಮಘೋಲುಗಳಂತೆ ಹಾರಿದವು. ಅವರ ವಾಗ್‌ಝರಿಗೆ ಮರುಳಾಗದವೇ ಇರಲಿಲ್ಲ. ಹೀಗೆ ರಪರಪನೆ ಸಿಡಿಲು ಗುಡುಗು ಅಡ್ಡಮಳೆ ರಾಚಿದ

ಮೇಲೆ ನಿಧಾನವಾಗಿ ಮಹಾತ್ಮ ಗಾಂಧಿಜಿ ಠರಾವಿಗೆ ತಮ್ಮ ವಿರೋಧವನ್ನು ವ್ಯಕ್ತಪಡಿಸ ತೊಡಗಿದರು. "ನಮಗೆ ಬೇಕಾದುದು ಸ್ವರಾಜ್ಯ; ಸ್ವರಾಜ್ಯದ ತಿರುಳು ಬ್ರಿಟಿಷರ ಸಂಬಂಧ ಬೇಕೇ ಬೇಡವೇ ಎಂಬುದಲ್ಲ ಈಗಿನ ಪ್ರಶ್ನೆ. ಸ್ವರಾಜ್ಯವನ್ನು ನಾವು ತೆಗೆದು ಕೊಳ್ಳುವಾಗ ಆ ಪ್ರಶ್ನೆಯನ್ನು ತೀರ್ಮಾನಿಸೋಣ" ಎಂಬುದು ಗಾಂಧೀಜಿಯ ವಾದ ವಾಗಿತ್ತು. ತುಂಬ ಸಣ್ಣ ಧ್ವನಿಯಲ್ಲಿ ಪ್ರಾರಂಭವಾದ ಗಾಂಧೀಜಿಯ ಭಾಷಣಕ್ಕೆ ಬರಬರುತ್ತಾ ಕಾವು ಏರತೊಡಗಿ ಶ್ರೋತೃಗಳು ಪೂರ್ಣವಾಗಿ ಅವರ ಭಾಷಣದಲ್ಲಿ ತಲ್ಲೀನರಾಗಿ ಆಲಿಸಿದುದಲ್ಲದೆ ಗಾಂಧೀಜಿಯೊಂದಿಗೆ ಸಹಮತವುಳ್ಳವರೂ ಆದರು. ಗಾಂಧೀಜಿ, ನಿರ್ದಾಕ್ಷಿಣ್ಯವಾಗಿ ಸ್ಪಷ್ಟವಾಗಿ ಮೊಹಾನಿಯವರ ನಿಲುವಿನಲ್ಲಿದ್ದ ಪೂರ್ವಾಪರ ವಿರುದ್ಧತೆಯನ್ನೂ ಮೊಂಡು ಧೈರ್ಯದ ಅಪಾಯವನ್ನೂ ತೋರಿಸಿದರು. ಸಭೆ, ಠರಾವನ್ನು ಅಂಗೀಕರಿಸಲಿಲ್ಲ. ಆದರೆ ಏಳು ವರುಷಗಳ ನಂತರ (೧೯೨೮ರಲ್ಲಿ) ಅದೇ ಪೂರ್ಣ ಸ್ವಾತಂತ್ರ್ಯದ ಠರಾವು, ಗಾಂಧೀಜಿಯ ಪೂರ್ಣ ಬೆಂಬಲದಿಂದಲೇ ಕರಾಚಿ ಕಾಂಗ್ರೆಸ್ ನಲ್ಲಿ ಅಂಗೀಕೃತವಾಯಿತು.

೪

ಕಿಟಕಿಯ ಪ್ರಸಂಗ

ಸಾಬರಮತಿ ಆಶ್ರಮದಲ್ಲಿ ಪ್ರತಿದಿನ ಸಂಧ್ಯಾಕಾಲ ಪ್ರಾರ್ಥನೆ ನಡೆಯುತ್ತಿದ್ದಿ ತಷ್ಟೆ. ವರಾಂಡದಲ್ಲಿ ಗಾಂಧೀಜಿ ಕುಳಿತುಕೊಳ್ಳುತ್ತಿದ್ದರು. ನಾವುಗಳೆಲ್ಲ ಅವರ ಸುತ್ತ ಕುಳಿತುಕೊಳ್ಳುತ್ತಿದ್ದೆವು. ವರಾಂಡಕ್ಕೆ ಮರದ್ದೋ ಅಥವ ಬಿದುರು ಚಾಪೆಯದೋ ಒಂದು ಆವರಣವಿದ್ದು, ಅದರ ನಡುವೆ ಗಾಳಿಗಾಗಿ ಒಂದು ಸಣ್ಣ ಕಿಟಕಿಯಾಕಾರದಷ್ಟು ಸ್ಥಳವನ್ನು ಬಿಟ್ಟಿದ್ದರು. ಸಂಧ್ಯಾಕಾಲದ ಪ್ರಾರ್ಥನೆಗೆ ಗಾಂಧಿಜಿ ಕುಳಿತಾಗ, ಕೆಲವು ವೇಳೆ ಅದರ ಕಿಂಡಿಯಿಂದ ಗಾಂಧೀಜಿಯ ಮುಖದ ಮೇಲೆ ಸರಿಯಾಗಿ ಬಿಸಿಲು ಬೀಳು ತ್ತಿತ್ತು. ಒಂದು ದಿನ ಬಿಸಿಲು ಸ್ವಲ್ಪ ಪ್ರಖರವಾಗಿಯೇ ಕಣ್ಣು ಚುಚ್ಚಿದಾಗ ಗಾಂಧಿಜಿ ಮಹದೇವ ದೇಸಾಯರಿಗೆ "ಬಿಸಿಲು ಬಂದಂತೆ ಏನಾದರೂ ಸ್ವಲ್ಪ ಮರೆ ಮಾಡಿ" ಎಂದು ಹೇಳಿದರು.

ಮರುದಿನ ಬೆಳಿಗ್ಗೆ ದೇಸಾಯಿ ಒಬ್ಬ ಬಡಗಿಯನ್ನು ಕರೆತಂದರು. ಅವನ ಸಲಹೆ ಯಂತೆ ಅಲ್ಲಿಗೊಂದು ಮರದ ಚೌಕಟ್ಟನ್ನು ನಿಲ್ಲಿಸಿ ಕಿಟಕಿಯಂತೆ ಬಾಗಿಲು ಮಾಡಿಸಿದರು. ಬಿಸಿಲು ಬಂದಾಗ ಬಾಗಿಲು ಹಾಕಿರಬಹುದು; ಇಲ್ಲದಾಗ ತೆರೆದಿರಬಹುದು. ಆಗಿನ ಕಾಲದಲ್ಲಿ ಅದಕ್ಕೆ ನಾಲ್ಕು ಐದು ರುಪಾಯಿ ಖರ್ಚಾಗಿರಬಹುದು. ತಮ್ಮ ಕಾರ್ಯದಲ್ಲಿ ಏಕಾಗ್ರ ಚಿತ್ತರಾಗಿ ತಮ್ಮ ಕೊಠಡಿಯಲ್ಲಿದ್ದ ಗಾಂಧಿಜಿ ಇದೊಂದನ್ನು ಗಮನಿಸಿರಲಿಲ್ಲ. ಆದರೆ ನಿತ್ಯದಂತೆ ಸಂಧ್ಯಾಕಾಲದ ಪ್ರಾರ್ಥನೆಗೆ ಬಂದಾಗ ಅದು ಅವರ ಕಣ್ಣಿಗೆ ಬಿತ್ತು. ಖರ್ಚು ಎಷ್ಟು ಎಂದು ಮಹದೇವರನ್ನು ಕೇಳಿದ ಮೇಲೆ "ಆ ಖರ್ಚು ಮಾಡಿದುದು ತಪ್ಪು" ಎಂದು ಅವರಿಗೆ ಹೇಳಿದರು. "ಮರದ ತುಂಡುಗಳು ಹಲಗೆ ಚೂರುಗಳು

ಆಶ್ರಮದ ಯಾವುದೋ ಮೂಲೆಯಲ್ಲಿ ಬಿದ್ದಿತ್ತು" ಎಂದೆಲ್ಲ ಮಹದೇವ್ ಹೇಳಿದುದೂ ಪ್ರಯೋಜನವಾಗಲಿಲ್ಲ. ಪ್ರಾರ್ಥನೆಯಾದ ನಂತರ ಗಾಂಧಿಜಿ ತುಂಬ ಭಾವನಾಪರರಾಗಿ ಹೀಗೆ ಹೇಳಿದರು "ಸಂಧ್ಯಾಕಾಲದಿಂದಲೂ ನನ್ನ ಮನಸ್ಸನ್ನು ಕೊರೆಯುತ್ತಿರುವ ಒಂದು ಸಂಗತಿಯನ್ನು, ಮುಂದಲ ಮಾರ್ಗದರ್ಶನಕ್ಕಾಗಿ ನಿಮ್ಮ ಮುಂದೆ ಹೇಳಲು ನನ್ನ ಮನಸ್ಸು ಆತುರಗೊಳ್ಳುತ್ತಿದೆ. ನಾವು ಇಲ್ಲಿ ಸಾರ್ವಜನಿಕ ಹಣದಿಂದ ಜೀವಿಸುತ್ತಿದ್ದೇವೆ. ಇಲ್ಲಿ ಒಂದು ಕಾಸೂ ಪೋಲಾಗುವುದು ಸಲ್ಲದು. ಇದಕ್ಕೆ (ಕಿಟಕಿಗೆ) ಇಷ್ಟು ರುಪಾಯಿ ಖರ್ಚಾಯಿತೆಂದು ಕೇಳಿ ನನಗೆ ಬಹಳ ದುಃಖವಾಗಿದೆ. ಹೀಗೆ ಖರ್ಚು ಮಾಡಲು ಇದು ಯಾರ ಗಂಟು? ಮುಖ್ಯ ತಪ್ಪು ನನ್ನದು. ನಾನು ಈ ಕಾರ್ಯವನ್ನು ಮಹದೇವ್‌ಗೆ ಹೇಳಬಹುದೆ? ನನಗೆ ಸ್ವಲ್ಪ ಕಷ್ಟವಾದರೂ ಅದನ್ನು ಪರಿಹರಿಸಲು ಅವನು ಏನನ್ನು ಬೇಕಾದರೂ ಮಾಡಿಬಿಡುತ್ತಾನೆ. ಸ್ವಲ್ಪ ಬಿಸಿಲು ನನ್ನ ಮುಖದ ಮೇಲೆ ಬಿದ್ದಿದ್ದರೆ ತಾನೇ ಏನಾಗುತ್ತಿತ್ತು. ಅಥವಾ ಸಂಧ್ಯಾಕಾಲದ ಸಮಯದಲ್ಲಿ ಬಿಸಿಲು ಬೀಳುವ ರಂಧ್ರಕ್ಕೆ ಒಂದು ಗೋಣಿಚೀಲ ತುರುಕಿ ಮರೆ ಮಾಡಿದ್ದರೂ ಸಾಕಾಗುತ್ತಿತ್ತು. ಇದಕ್ಕೆ ಮರ, ಬಡಗಿಯ ಕಾಲ ಹಣ ಎಲ್ಲ ಎಷ್ಟು ಖರ್ಚು! ನನ್ನೊಬ್ಬನ ಸೌಕರ್ಯಕ್ಕಾಗಿ ಇಷ್ಟು ಹಣ ವೆಚ್ಚವಾದುದರಿಂದ ನನಗೆ ತುಂಬ ನೋವಾಗಿದೆ. ಪ್ರಜೆಗಳ ಪ್ರತಿನಿಧಿಗಳು ಅತ್ಯಂತ ಬಡಪ್ರಜೆಗಳಿಗಿಂತಲೂ ಬಡವರಾಗಿ ಜೀವಿಸಬೇಕು." ಗಾಂಧೀಜಿ, ತಮ್ಮ ಮೇಲೆಯೇ ಯಾವುದೋ ಶಿಕ್ಷೆ ವಿಧಿಸಿಕೊಂಡಂತೆ ನೆನಪು. ಅನಂತರ ಗಾಂಧೀಜಿ, ಸಾರ್ವಜನಿಕ ಹಣವನ್ನು ಹೇಗೆ ವೆಚ್ಚಮಾಡಬೇಕು, ಲೆಕ್ಕಪತ್ರಗಳನ್ನು ಹೇಗೆ ಇಡಬೇಕು ಈ ವಿಚಾರವಾಗಿ ೧೫ ನಿಮಿಷ ಬೋಧನೆಮಾಡಿದರು.

೫

ಗುಜರಾತ್ ವಿದ್ಯಾಪೀಠ

ಗುಜರಾತ್ ವಿದ್ಯಾಪೀಠದ ಪ್ರಾರಂಭವು ಮಹಾತ್ಮಗಾಂಧೀಜಿಯವರ ದಿವ್ಯ ಹಸ್ತದಿಂದ ನೇರವೇರಿತು. ಅಂದಿನ ವಾತಾವರಣದಲ್ಲಿ ಪಾವಿತ್ರ್ಯತೆಯೂ ಋಷಿಗಳ ಆಶ್ರಮದಲ್ಲಿರುವಂತಹ ಅಧ್ಯಾತ್ಮ ತೇಜಸ್ಸೂ ತುಂಬಿತ್ತು. ಸತತವಾದ ಸೂತ್ರಯಜ್ಞ, ರಾಮಧುನ್ ಇವುಗಳನಂತರ, ಉಪನಿಷತ್ ವಾಕ್ಯಗಳ ಉಚ್ಚಾರಣೆಯ ನಂತರ ಮಹಾತ್ಮಜಿ, ತುಂಬ ಕಳಕಳಿಯಿಂದ ಹೇಳಿದ ಭಾಷಣದಲ್ಲಿ ಈ ಕೆಳಗಿನ ಅಂಶಗಳಿದ್ದವು.

"ಇಲ್ಲಿ ಸೇರಿರುವ ಸ್ತ್ರೀಪುರುಷರು ಈ ಸಂಸ್ಥೆಗೆ ಸಹಾಯಮಾಡಬೇಕು; ಬರಿಯ ಮಾತಿನ ಸಹಾಯವಲ್ಲ; ತಮ್ಮ ಹೆಣ್ಣುಮಕ್ಕಳು ಗಂಡುಮಕ್ಕಳನ್ನು ಈ ಸಂಸ್ಥೆಗೆ ಕಳುಹಿಸಬೇಕು. ಭಾರತ ದೇಶದಲ್ಲಿ ಇಂತಹ ಸಂಸ್ಥೆಗಳಿಗೆ ಯಾವಾಗಲೂ ಧನಸಹಾಯ ಒದಗಿಯೇ ಇದೆ. ಹಣ ಸಿಕ್ಕಲಿಲ್ಲ ಎಂಬ ಕಾರಣಕ್ಕಾಗಿ ಇಂತಹ ಸಂಸ್ಥೆಗಳು ಯಾವಾಗಲೂ ನಶಿಸಲಿಲ್ಲ. ಆದರೆ ಕಾರ್ಯಕರ್ತರಿಲ್ಲದೆ ಉಪಾಧ್ಯಾಯರಿಲ್ಲದೆ

ಸರಿಯಾದ ವ್ಯವಸ್ಥೆಯಿಲ್ಲದೆ ಇಂತಹ ಸಂಸ್ಥೆಗಳ ಕೆಲಸ ನಿಂತುಹೋಗಿರಬಹುದು. ಅಶಕ್ತನಾದ ಕೆಲಸಗಾರ ಮಾತ್ರ ಉಪಕರಣಗಳು ಸರಿಯಾಗಿಲ್ಲವೆಂಬ ನೆಪವನ್ನು ಹೇಳುತ್ತಾನೆ. ಇರುವ ಪರಿಸ್ಥಿತಿಯಲ್ಲಿ ಉತ್ತಮ ಫಲಗಳನ್ನು ತೋರಿಸುವವನೇ ನಿಜವಾದ ಕೆಲಸಗಾರ. ಇಲ್ಲಿ ಪ್ರಿನ್ಸಿಪಾಲರೂ ಸಹಪ್ರೊಫೆಸರ್‌ರೂ ಸ್ವಾತಂತ್ರ್ಯದ ಪಾಠಗಳನ್ನು ಕಲಿಯಬೇಕಾಗಿದೆ; ಕಲಿಸಬೇಕಾಗಿದೆ. ತಮ್ಮ ಪಾಂಡಿತ್ಯದಿಂದ ಮಾತ್ರವಲ್ಲದೆ ಪ್ರಾಮಾಣಿಕವಾದ ಚಾರಿತ್ರ್ಯದಿಂದಲೂ ಅವರು ಸಕಾರದ ಹೋರಾಟದ ಶಕ್ತಿಗಳನ್ನು ತಮ್ಮ ದೈವಿಕ ಶಾಂತಿ ಅಸ್ತ್ರಗಳಿಂದ ಎದುರಿಸಬೇಕಾಗಿದೆ. ಸ್ವಾತಂತ್ರ್ಯದ ವೊಳಕೆಯನ್ನು ನಾವು ಸ್ವರಾಜ್ಯವೃಕ್ಷವಾಗಿ ಬೆಳೆಸಬೇಕಾಗಿದೆ. ನಿಮ್ಮಲ್ಲಿ ನಾನು ಇಟ್ಟಿರುವ ನಂಬಿಕೆಯನ್ನು ದೇವರು ಸತ್ಯವಾಗಿಸಲಿ. ವಿಶ್ವವಿದ್ಯಾಲಯದ ಕುಲಪತಿಯಲ್ಲಿ ಇರಬೇಕಾದ ವಿದ್ವತ್ತು ನನ್ನಲ್ಲಿ ಇಲ್ಲವೆಂದು ನನಗೆ ಗೊತ್ತು. ಆದರೆ ನನ್ನಲ್ಲಿ ಶ್ರದ್ಧೆಯಿದೆ. ಆದುದರಿಂದ ನಾನು ಈ ವಿದ್ಯಾಲಯದ ಕುಲಪತಿಯ ಸ್ಥಾನವನ್ನು ಅಂಗೀಕರಿಸಿದ್ದೇನೆ. ಇದಕ್ಕಾಗಿ ಬಾಳುವುದಕ್ಕೂ ಸಾಯುವುದಕ್ಕೂ ನಾನು ಸಿದ್ಧನಾಗಿದ್ದೇನೆ. ನೀವೂ ಅದೇ ಭಾವನೆಯಿಂದ ಪ್ರೇರಿತರಾಗಿರುವುದರಿಂದ ನಾನು ಈ ಉನ್ನತಾಧಿಕಾರವನ್ನು ವಹಿಸಿಕೊಳ್ಳುತ್ತೇನೆ.

"ಇನ್ನು ವಿದ್ಯಾರ್ಥಿಗಳ ವಿಷಯ; ಅವರನ್ನು ದೂಷಿಸುವುದು ಪಾಪ. ಇಂದಿನ ಪರಿಸ್ಥಿತಿಯನ್ನು ಪ್ರಾಮಾಣಿಕವಾಗಿ ಪ್ರತಿಬಿಂಬಿಸುವ ಒಂದು ಕನ್ನಡಿ ಮಾತ್ರ ಅವರು. ಅವರು ಸರಳವ್ಯಕ್ತಿಗಳು; ಅವರನ್ನು ಅರಿಯುವುದು ಸುಲಭ. ಅವರಲ್ಲಿ ಸುಗುಣಗಳಿಲ್ಲದಿದ್ದರೆ ತಪ್ಪು ಅವರದಲ್ಲ; ತಪ್ಪು ಅವರ ಪೋಷಕರದು ಉಪಧ್ಯಾಯರದ್ದು ಸರ್ಕಾರದ್ದು. (ರಾಜರದು) ಸರ್ಕಾರದಲ್ಲಿ ನಾನು ಯಾಕೆ ತಪ್ಪನ್ನು ಕಂಡುಹಿಡಿಯುತ್ತೇನೆ? "ಯಥಾ ರಾಜಾ ತಥಾ ಪ್ರಜಾಃ" ಎಂಬುದು ಎಷ್ಟು ನಿಶ್ಚಯವೋ "ಯಥಾ ಪ್ರಜಾ ತಥಾ ರಾಜಾ" ಎಂಬುದೂ ಅಷ್ಟೇ ನಿಶ್ಚಯ. ಎಲ್ಲಿಯವರೆಗೆ ರಾಜನ ಅಧಿಕಾರಕ್ಕೆ ಮನ್ನಣೆ ಇದೆಯೋ ಅಲ್ಲಿಯವರೆಗೆ ಆತ ರಾಜ. ಜನತೆ ದೋಷಪೂರ್ಣವಾಗಿದೆ, ವಿದ್ಯಾರ್ಥಿಗಳು ಅದನ್ನು ಪ್ರತಿಬಿಂಬಿಸುತ್ತಾರೆ. ಆದುದರಿಂದ ನಾವು ಪೋಷಕರನ್ನೂ ಉಪಾಧ್ಯಾಯರನ್ನೂ ರಾಜರನ್ನೂ ತಿದ್ದಲು ಯತ್ನಮಾಡಬೇಕು. ಪ್ರತಿಯೊಂದು ಮನೆಯೂ ಒಂದು ವಿಶ್ವವಿದ್ಯಾಲಯ, ಪೋಷಕರೇ ಉಪಾಧ್ಯಾಯರು. ಇಂದು ಭಾರತದ ಪೋಷಕರು ಈ ಕರ್ತವ್ಯದಿಂದ ಬಾಹಿರರಾಗಿದ್ದಾರೆ. ಪರದೇಶದ ಸಂಸ್ಕೃತಿಯನ್ನು ಅದರ ಸರಿಯಾದ ಮೌಲ್ಯವನ್ನು ಅರಿತು ಅಂಗೀಕರಿಸುವುದು ನಮಗೆ ಸಾಧ್ಯವಾಗಿಲ್ಲ. ಈಗ ಈ ಎರವು ತಂದ ಸಂಸ್ಕೃತಿಯಿಂದ ನಾವು ಉನ್ನತಿ ಹೊಂದುವುದು ಹ್ಯೇಗೆ ಸಾಧ್ಯ?

"ಈ ವಿಶ್ವವಿದ್ಯಾಲಯವನ್ನು ನಾವು ಪ್ರಾರಂಭಿಸುವುದು ವಿದ್ಯಾಸಂಸ್ಥೆ ಎಂದಲ್ಲ ರಾಷ್ಟ್ರೀಯ ಸಂಸ್ಥೆ ಎಂದು. ವಿದ್ಯಾರ್ಥಿಗಳಲ್ಲಿ ಸಚ್ಚಾರಿತ್ರ್ಯವನ್ನೂ ಧೈರ್ಯವನ್ನೂ ತುಂಬುವುದಕ್ಕಾಗಿ ನಾವು ಈ ಸಂಸ್ಥೆಯನ್ನು ಪ್ರಾರಂಭಿಸುತ್ತಿದ್ದೇವೆ.

"ಇನ್ನು ವಿದ್ಯಾರ್ಥಿಗಳಿಗೆ ಕೆಲವು ಮಾತು. ಅವರು ಜವಾಬ್ದಾರಿಯಿಲ್ಲದ

ಬರಿಯ ವಿದ್ಯಾರ್ಥಿಗಳೆಂದು ನಾನು ಭಾವಿಸುವುದಿಲ್ಲ. ಈ ಸಂಸ್ಥೆಯನ್ನು ಸೇರುವ ವಿದ್ಯಾರ್ಥಿಗಳು, ಇತರರಿಗೆ ಆದರ್ಶರಾಗುವರೆಂದು ನಾನು ಭಾವಿಸುತ್ತೇನೆ. ಈ ದೃಷ್ಟಿಯಿಂದ ಅವರೂ ಸ್ವಲ್ಪಮಟ್ಟಿಗೆ ಉಪಾಧ್ಯಾಯರೇ. ಈ ಮಹಾವಿದ್ಯಾಲಯವನ್ನು ಪ್ರಾರಂಭಿಸುವುದು ಅವರ ಆಧಾರದಿಂದ. ಇದನ್ನು ಅವರು ಸರಿಯಾಗಿ ಅರ್ಥ ಮಾಡಿಕೊಳ್ಳದಿದ್ದರೆ ಉಪಾಧ್ಯಾಯರು ಎಷ್ಟೇ ಪ್ರಯತ್ನಪಟ್ಟರೂ ನಿರೀಕ್ಷಿಸಿದ ಫಲ ದೊರೆಯುವುದಿಲ್ಲ. ವಿದ್ಯಾರ್ಥಿಗಳ ಸಂಖ್ಯೆಯಿಂದಲಲ್ಲ, ಈ ದೃಢಶ್ರದ್ಧೆಯಿಂದ ಮಾತ್ರ ಈ ಸಂಸ್ಥೆ, ಜಯಹೊಂದಿ ಭಾರತಕ್ಕೆಲ್ಲ ಮೇಲುಪಂಗ್ತಿಯಾಗಬಲ್ಲದು. ಕುಲಪತಿಯಾದ ನಾನು ಯಾವಾಗಬೇಕಾದರೂ ಬಿದ್ದು ಹೋಗುವ ಶರದೃತುವಿನ ಎಲೆ; ಉಪಾಧ್ಯಾಯರು ಹೆಚ್ಚುಕಾಲ ಇರುವ ಚಿಗರುಗಳು; ಆದರೆ ಅವರ ಕಾಲ ಬಂದಾಗ ಅವರೂ ಬಿದ್ದು ಹೋಗುತ್ತಾರೆ. ಆಗ ನೀವು ಎಂದರೆ ವಿದ್ಯಾರ್ಥಿಗಳು ಹೊಸ ಎಲೆಗಳನ್ನು ಬೆಳೆಸುವ ಕೊಂಬೆಗಳು. ವಿದ್ಯಾರ್ಥಿಗಳಿಗೆ ನನ್ನಲ್ಲಿ ಯಾವಭಕ್ತಿ ಇದೆಯೋ, ಉಪಾಧ್ಯಾಯರಲ್ಲಿಯೂ ಅದೇ ಭಕ್ತಿ ನಂಬಿಕೆ ಇರಲಿ " [ದಂಡಿಉಪ್ಪಿನ ಸತ್ಯಾಗ್ರಹದಲ್ಲಿ ಭಾಗವಹಿಸಿದವರ ಪೈಕಿ, ಹೆಚ್ಚುಮಂದಿ,ಗುಜರಾತ್ ವಿದ್ಯಾಪೀಠದ ವಿದ್ಯಾರ್ಥಿ ವಿದ್ಯಾರ್ಥಿನಿಯರಾಗಿದ್ದರು].

೬

ನಿಜವಾದ ಅಹಿಂಸೆ

ಒಂದು ಸಲ ಆಶ್ರಮದಲ್ಲಿ ಮಹದೇವ್ ದೇಸಾಯ್‌ರಿಗೂ ಅವರಂತೆಯೇ ಗಾಂಧಿಜೀಯ ಅವಿಚ್ಛಿನ್ನ ಭಕ್ತನಾಗಿದ್ದ ಮತ್ತೊಬ್ಬ ಕೆಲಸಗಾರನಿಗೂ, ಯಾವುದೋ ವಿಷಯದಲ್ಲಿ ವಾಗ್ವಾದವುಂಟಾಗಿ ಚರ್ಚೆಗೆ ಕಾವು ಏರಿ, ವಿರಸದಲ್ಲಿ ಮುಕ್ತಾಯ ವಾಯಿತು. ಅನಂತರ ಮಹದೇವ್ ಚರ್ಚೆಯ ಬಿಸಿಯನ್ನು ಮರೆತು, ಸ್ನೇಹಿತನೊಂದಿಗೆ ವಿಶ್ವಾಸದಿಂದಿರಲು ಎಷ್ಟೇ ಪ್ರಯತ್ನಿಸಿದರೂ ಸ್ನೇಹಿತನ ಕೋಪ ಅಡಗಲಿಲ್ಲ. ಆತ ಮಹದೇವನೊಂದಿಗೆ ಮಾತನಾಡುವುದನ್ನೂ ಬಿಟ್ಟುಬಿಟ್ಟ. ಮಹದೇವ್ ಇರುವ ಕಡೆ ಅವನು ಇರುತ್ತಿರಲಿಲ್ಲ. ಮಹದೇವ್ ಗಾಂಧೀಜಿಯ ಜತೆ ಇರುವಾಗ, ಅವನು ಅಲ್ಲಿಗೂ ಬರುತ್ತಿರಲಿಲ್ಲ.

ಕೆಲವು ದಿನಗಳೊಳಗಾಗಿ ಇವರಿಬ್ಬರಲ್ಲಿಯೂ ತೀವ್ರ ಭೇದವುಂಟಾಗಿದೆ ಎಂಬ ಅಂಶ ಗಾಂಧೀಜಿಗೆ ಮನವರಿಕೆಯಾಯಿತು. ಅವರು ಇಬ್ಬರನ್ನೂ ಕರೆಸಿ, ವಿಚಾರಗಳನ್ನೆಲ್ಲ ತಿಳಿದುಕೊಂಡು, " ಮಹದೇವನದು ತಪ್ಪಿಲ್ಲ, ಆ ಇನ್ನೊಬ್ಬರದೇ ತಪ್ಪು " ಎಂಬುದು ತಮಗೆ ಖಾತರಿಯಾದಮೇಲೆ ಆ ಇನ್ನೊಬ್ಬನಿಗೆ " ನೀನು ಮಹದೇವನ ಕ್ಷಮೆಯನ್ನು ಕೇಳು. ನಡೆದುದನ್ನು ಮರೆತು, ಅವನೊಂದಿಗೆ ಹಿಂದಲಂತೆ ಸ್ನೇಹದಿಂದಿರು " ಎಂದು ಹೇಳಿದರು. ಹೀಗೆ ಇನ್ನೂ ಕೆಲವು ದಿನ ಕಳೆಯಿತು. ಆದರೂ ಆ ಇನ್ನೊಬ್ಬ, ಮಹದೇವನಿಗೆ ಏನನ್ನೂ ಹೇಳಲೂ ಇಲ್ಲ. ಅವನೊಂದಿಗೆ ಮಾತನಾಡಲೂ ಇಲ್ಲ, ಸ್ನೇಹವನ್ನೂ ತೋರಿಸ ಲಿಲ್ಲ. ಗಾಂಧೀಜಿ ಅದನ್ನು ಅರಿತು ಮಹದೇವ ದೇಸಾಯಿಯನ್ನು ಕರೆದು " ಅವನಿಗೆ

ಇನ್ನೂ ಕೋಪ ಹೋಗಿಲ್ಲ, ನೀನೇ ಹೋಗಿ ನೀನು ಮಾಡಿದುದೆಲ್ಲ ತಪ್ಪೆಂದೂ ಅವನು ನಿನ್ನನ್ನು ಮನ್ನಿಸಿ ಮೊದಲಿನಂತೆ ನಿನ್ನೊಂದಿಗೆ ಸ್ನೇಹದಿಂದಿರಬೇಕೆಂದೂ ಕೇಳಿಕೊ" ಎಂದು ಹೇಳಿದರು.

ಮಹದೇವ, ಸ್ವಲ್ಪ ಹೊತ್ತು ಹಿಂದು ಮುಂದು ನೋಡಿ ಯೋಚಿಸಿ "ಆದರೆ ನನ್ನದೇನೂ ತಪ್ಪು ಇಲ್ಲವಲ್ಲ. ತಪ್ಪು ಅವನದೇ ಎಂದು ನೀವೇ ಹೇಳಿದಿರಲ್ಲ?" ಎಂದು ಕೇಳಿದನು. ಗಾಂಧೀಜಿ "ಹೌದು ಈಗಲೂ ಹಾಗೆಯೇ ಹೇಳುತ್ತೇನೆ. ಆದರೆ ತಾನು ಮಾಡಿದುದು ಸರಿ ಎಂದು ಅವನು ತಿಳಿದುಕೊಂಡಿದ್ದಾನೆ. ಆದುದರಿಂದ ನಿನ್ನ ಮೇಲೆ ಅವನ ಸಿಟ್ಟು ಇಳಿದಿಲ್ಲ. ಇಂತಹ ಸಮಯಗಳಲ್ಲಿ ಬರಿಯ ಒಂದು ಮಾತಿಗಾಗಿ ನೀವಿಬ್ಬರೂ ಒಂದೇ ಆಶ್ರಮದಲ್ಲಿದ್ದು 'ನಿನ್ನ ದಾರಿ ನಿನಗೆ, ನನ್ನ ದಾರಿ ನನಗೆ' ಎಂದು ಹಠ ಹಿಡಿದರೆ ಸಹಜೀವನವನ್ನು ನಡೆಸುವುದು ಹೇಗೆ ಸಾಧ್ಯ? ನಿನ್ನದು ತಪ್ಪು ಇಲ್ಲದುದರಿಂದ ನೀನು ಸೋತುಹೋಗುವುದು ನಿನಗೆ ಭೂಷಣ. ಇಬ್ಬರ ನಡುವೆ ಸ್ವಲ್ಪವೂ ವಿರಸವಿರಬಾರದು. ವಿರಸ ಸ್ವಲ್ಪ ತೋರಿದರೂ, ಆದಷ್ಟು ಬೇಗ ಪ್ರಯತ್ನಿಸಿ ಆ ನೆರಳನ್ನು ಚದುರಿಸಬೇಕು. ನೀನು ಸೋತರೇನು? ಅವನು ಸೋತರೇನು? ಮಧುರ ವಾತಾವರಣ ಸ್ಥಾಪನೆ ಮುಖ್ಯ. ಆ ಗುರಿಯನ್ನು ಸಾಧಿಸುವಲ್ಲಿ ನೀನು ಸೋತು ನಡೆದರೂ ಅದೇ ನಿನಗೆ ಜಯ. ನೀನು ಹೀಗೆ ಮಾಡುವುದೇ ಅಹಿಂಸೆಯ ಅನುಯಾಯಿಗಳಿಗೆ ಸರಿಯಾದ ಮಾರ್ಗ" ಎಂದು ಹೇಳಿದರು. ಮಹದೇವ್, ಹಾಗೆಯೇ ಮಾಡಿದನು. ಆಶ್ರಮಜೀವನದಲ್ಲಿದ್ದ ಕರಿಯಮೋಡ ಮಾಯವಾಯಿತು. ಅವನ ಸ್ನೇಹಿತನು ಮೊದಲಿನಂತೆ ಅವನಲ್ಲಿ ವಾತ್ಸಲ್ಯವುಳ್ಳವನಾದನು.

೭

ಸ್ವಿಸ್ ಗಡಿಯಾರ

ಗಾಂಧೀಜಿ ಸಮಯನಿಷ್ಠೆಯನ್ನು ಪಾಲಿಸುವುದರಲ್ಲಿ ಅತಿ ಕಠಿಣರು. ಯಂತ್ರಗಳ ಪೈಕಿ ಗಡಿಯಾರವಂತೂ ಅವರ ಮೆಚ್ಚುಗೆಗೆ ಪಾತ್ರವಾಗಿತ್ತು. ಗಡಿಯಾರವಿಲ್ಲದೆ ಇರಲು ಅವರಿಗೆ ಸಾಧ್ಯವೇ ಇರಲಿಲ್ಲ. ಅವರು ಯಾವ ಕಾರ್ಯವನ್ನೂ ಹೊತ್ತುಮೀರಿ ಮಾಡಿದವರೇ ಅಲ್ಲ. ಯಂಗ್ ಇಂಡಿಯ ನವಜೀವನ ಹರಿಜನ್ ಪತ್ರಿಕೆಗಳು ಮೂವತ್ತು ವರುಷ ನಡೆದರೂ, ಅವು ಒಂದು ದಿನವೂ ಕಾಲಮೀರಿ ಬರಲೇ ಇಲ್ಲ. ಒಂದು ಸಲ ಗಾಂಧೀಜಿಯ ಫೌಂಟನ್‌ಪೆನ್ ಮತ್ತು ಗಡಿಯಾರ ಎರಡೂ ಕಳವಾದವು. ಆ ಪೆನ್ ಸ್ವಲ್ಪ ಬೆಲೆಯುಳ್ಳದುದಾಗಿದ್ದಿತು. "ಇನ್ನು ಮುಂದೆ ಬೆಲೆಯಾದ ಪೆನ್ ಇಡುವುದಿಲ್ಲ" ಎಂದು ಗಾಂಧೀಜಿ ನಿರ್ಣಯಿಸಿದರು. ಆದರೆ ಗಡಿಯಾರದ ವಿಷಯಕ್ಕೆ ಮಾತ್ರ "ನಾನು ಈಗಿನಂತೆ ಸಾರ್ವಜನಿಕ ಜೀವನದಲ್ಲಿರುವವರೆಗೆ ಗಡಿಯಾರವನ್ನು ಬಿಡುವುದು ಸಾಧ್ಯವಿಲ್ಲ" ಎಂದು ಮತ್ತೊಂದು ಗಡಿಯಾರವನ್ನು ಇಟ್ಟುಕೊಂಡರು. ಒಂದು ಸಲ ರೈಲಿಗೆ ಹೊತ್ತಾದಾಗ ಗಾಂಧೀಜಿ, ತಮ್ಮ ೬೦ನೆಯ ವಯಸ್ಸಿನಲ್ಲಿ

೧೨ ಮೈಲಿ ಬೈಸಿಕಲ್ ಸವಾರಿಮಾಡಿ ರೈಲು ಸ್ಟೇಷನನ್ನು ಮುಟ್ಟಿದರು. ಇನ್ನೊಂದು ಸಲ ಹದಿನಾರು ಮೈಲಿ ನಡೆದು ರೈಲನ್ನು ಹಿಡಿದರು. ಅವರಿಗೆ ಯಾವಾಗಲೂ ರೈಲು ತಪ್ಪಿದುದೇ ಇಲ್ಲ; ಅವರು ಪ್ರಯಾಣದಲ್ಲಿಸ್ದಾಗಲೂ ತಮ್ಮ ಬರವಣಿಗೆಯನ್ನು ಮಾಡಿ ಕಾಲಕ್ಕೆ ಸರಿಯಾಗಿ ಮುಗಿಸುತ್ತಿದ್ದರು. ಮಹದೇವ ದೇಸಾಯಿ, ಪ್ಯಾರಿಲಾಲ್ ಅವರೂ ಕಾಲಕ್ಕೆ ಸರಿಯಾಗಿ ತಮ್ಮ ತಮ್ಮ ಕೆಲಸಗಳನ್ನು ಮಾಡಬೇಕಿತ್ತು. ರೈಲು ಪ್ರಯಾಣಮಾಡುತ್ತಿರುವಾಗ, ದೀಪ ಹೋಗಿ ಕೆಲಸಕ್ಕೆ ಅಡಚಣೆಯಾಗಬಹುದಾದುದ ರಿಂದ ಪ್ರಯಾಣ ಕಾಲದಲ್ಲಿ ಗಾಂಧೀಜಿಯೂ ಅವರ ಕಾರ್ಯದರ್ಶಿಗಳೂ ಜತೆಯಲ್ಲಿ "ಲ್ಯಾಂಪು"ಗಳನ್ನು ಸಿದ್ಧವಾಗಿಟ್ಟುಕೊಂಡಿರುತ್ತಿದ್ದರು. ಗಾಂಧೀಜಿಯ ಮರಣಾ ನಂತರ, ಅವರು ಉಪಯೋಗಿಸುತ್ತಿದ್ದ "ಸ್ವಂತ ವಸ್ತು"ಗಳ ಪೈಕಿ, ಉಳಿದಿರುವುದು ಅವರ ಗಡಿಯಾರವೂ ಸಹ.

ಒಂದು ದಿನ ಸ್ವಿಸ್ ಗಡಿಯಾರ ಕಂಪನಿಯ ಮಾಲಿಕರು ಇಬ್ಬರು ಸಹೋದ್ಯೋಗಿ ಗಳೊಂದಿಗೆ, ಆಶ್ರಮದಲ್ಲಿ ಗಾಂಧೀಜಿಯ ದರ್ಶನಕ್ಕೆ ಬಂದರು. ಪ್ರಾರಂಭದ ಔಪಚಾರಿಕ ಸಂಭಾಷಣೆಗಳಾದನಂತರ ಅವರು ಮೂರು ಗಡಿಯಾರಗಳನ್ನು ಗಾಂಧೀಜಿಗೆ ತೋರಿಸಿ ದರು; ಗಾಂಧೀಜಿಯ ಸೊಂಟದಲ್ಲಿ ಯಾವಾಗಲೂ ನೇತಾಡುತ್ತಿದ್ದಂತಹ ಸೊಗಸಾದ ಪಾಕೆಟ್ ವಾಚ್ ಇತ್ತು. ಆದರೆ ಅವರು ತಂದಿದ್ದ ವಾಚ್‌ಗಳು ಗಾಂಧೀಜಿಯ ಗಡಿಯಾರ ಕ್ಕಿಂತ ಹೆಚ್ಚು ನಾಜೋಕಾಗಿದ್ದವು. ಅವುಗಳ ಮೇಲೆ "ಗಾಂಧೀವಾಚ್, ಸ್ವಿಸ್ ಮೇಡ್" ಎಂದು ಬರೆದಿದ್ದಿತು. ಕಂಪನಿಯ ಮಾಲಿಕರು "ನಮ್ಮ ಕಂಪನಿಯಲ್ಲಿ ಈ ಗಡಿಯಾರಗಳನ್ನು ನಿಮ್ಮ ಅಂಕಿತದಲ್ಲಿ ಮಾಡಬೇಕೆಂದು ನಿರ್ಣಯಿಸಿದ್ದೇವೆ. ಇವು ಯಾವ ಹವಾಮಾನದಲ್ಲಿಯೂ ಕಾಲವನ್ನು ಕ್ಲಪ್ತವಾಗಿ ಒಂದು ವಿನಾಡಿಯೂ ಹೆಚ್ಚು ಕಡಿಮೆ ಇಲ್ಲದಂತೆ ತೋರಿಸುತ್ತವೆ. ಇದರಲ್ಲಿ ಎರಡು ದೃಷ್ಟಿಯಿಂದ ಕಂಪನಿ ನಿಮಗೆ ಗೌರವವನ್ನು ಸಲ್ಲಿಸಬಯಸುತ್ತದೆ. ಮೊದಲನೆಯದು ಸಮಯನಿಷ್ಠೆಯನ್ನು ಚಾಚೂ ತಪ್ಪದೆ ಕಾಯುತ್ತಿರುವ ನಿಮ್ಮ ವ್ಯಕ್ತಿತ್ವಕ್ಕೆ ಅರ್ಹವಾದ ಗಡಿಯಾರ ಇದು. ಎರಡನೆ ಯದು ಇದು ನಮ್ಮ ದೇಶದಲ್ಲಿ (ಸ್ವಿಟಸರ್‌ಲೆಂಡ್) ಗುಡಿಕೈಗಾರಿಕೆ ಗೃಹಕೈಗಾರಿಕೆ ಯಾಗಿ ತಯಾರಾಗುತ್ತಿದೆ. ನಾವು ನಿಮ್ಮ ಗ್ರಾಮೋದ್ಯೋಗ ಗೃಹ ಉದ್ಯೋಗಗಳ ಪುನರುಜ್ಜೀವನದ ಮಾದರಿಯಲ್ಲಿ ಹಿಂಬಾಲಿಸುತ್ತಿದ್ದೇವೆ. ನಿಮ್ಮ ಹೆಸರನ್ನಿಟ್ಟು ಈ ಗಡಿಯಾರಗಳನ್ನು ತಯಾರಿಸಲು ನಮಗೆ ಅನುಮತಿನೀಡಬೇಕು" ಎಂದು ಕೇಳಿದರು.

ಗಾಂಧೀಜಿ ಗಡಿಯಾರವನ್ನು ನೋಡಿ ಸಂತೋಷಪಟ್ಟು "ಇದು ನಿಜವಾಗಿ ಕಲಾ ಕೃತಿಯಾಗಿದೆ" ಎಂದರು. ಅನಂತರ ಒಂದು ಗಳಿಗೆ ಯೋಚಿಸಿ ಕಂಪನಿ ಮಾಲಿಕರಿಗೆ ಹೀಗೆ ಹೇಳಿದರು: "ಗಡಿಯಾರಕ್ಕೆ ನನ್ನ ಹೆಸರನ್ನಿಡಲು ನಾನು ನಿಮಗೆ ಅನುಮತಿ ಈಯಲಾರೆ. ಯಾವ ರೀತಿಯಿಂದಲೂ ಸದ್ಯದಲ್ಲಿ ಪರದೇಶದ ವಸ್ತುಗಳ ಆಮದಿಗೆ ನನ್ನ ಒಪ್ಪಿಗೆಯಿಲ್ಲ. ಈ ದೇಶದ ಜನತೆ, ಬಹಳ ಸರಳಹೃದಯದವರು. ಗಾಂಧಿ ಗಡಿಯಾರ ಎಂಬುದಾಗಿ ಅದನ್ನು ಕೊಳ್ಳುವ ಹುಚ್ಚು—ಎಲ್ಲರಿಗಲ್ಲದಿದ್ದರೂ—ಕೆಲವರಿ

ಗಾದರೂ ಉಂಟಾಗಬಹುದು. ನಮ್ಮ ದೇಶದ ಇಂದಿನ ಸ್ಥಿತಿಯಲ್ಲಿ ಯಾರೂ ಪರದೇಶ ದಿಂದ ಭೋಗವಸ್ತುಗಳನ್ನು ಕೊಳ್ಳುವುದನ್ನು ನಾನು ಸಹಿಸಲಾರೆ. ನಿಮ್ಮ ದೇಶದಲ್ಲಿ ಇದನ್ನು ಗೃಹಕೈಗಾರಿಕೆಯಾಗಿ ನಡೆಸುತ್ತಿರುವುದನ್ನು ಕೇಳಿ ಸಂತೋಷಗೊಂಡೆ. ನಾವೂ ನಿಮ್ಮಿಂದ ಆ ಭಾಗದಲ್ಲಿ ಒಂದು ಪಾಠ ಕಲಿತಂತೆ ಆಯಿತು. ನಿಮ್ಮ ಕೆಲಸ ಗಾರರಿಗೆಲ್ಲ ನನ್ನ ಸಂತೋಷವನ್ನು ವ್ಯಕ್ತಪಡಿಸಿ."

ಮಾಲಿಕರು ಗಾಂಧಿಯವರಿಗೆ ತಾವು ತಂದಿದ್ದ ಒಂದು ಗಡಿಯಾರವನ್ನು ಅರ್ಪಿಸಲು ಪ್ರಯತ್ನಿಸಿದರು. ಗಾಂಧೀಜಿ, ತಮ್ಮ ಗಡಿಯಾರದ ಕಡೆ ಕೈತೋರಿಸಿ "ಇದು ಇದೆ. ತನ್ನ ಕೆಲಸವನ್ನು ಪ್ರಾಮಾಣಿಕವಾಗಿ ಮಾಡುತ್ತಿದೆ" ಎಂದು ಹೇಳಿ ವಿನಯದಿಂದಲೇ ನಿರಾಕರಿಸಿದರು.

* * * *

"ಒಂದು ವರುಷದೊಳಗೆ ಸ್ವರಾಜ್ಯ" ಎಂದು ಗಾಂಧೀಜಿ ಪ್ರಕಟಿಸಿದ್ದ ಗಡು, ೧೯೨೧ನೆ ಡಿಸೆಂಬರ್ ಅಹಮ್ಮದಾಬಾದ್ ಕಾಂಗ್ರೆಸ್‌ನೊಂದಿಗೆ ಮುಕ್ತಾಯವಾಯಿತು. ಸರ್ಕಾರದ ದೃಷ್ಟಿಯಿಂದಲೂ ವಿರೋಧಿಗಳ ದೃಷ್ಟಿಯಿಂದಲೂ ಕಾಂಗ್ರೆಸ್‌ನ ಜಂಭದ ಮಾತು, ಫಲಿಸಿರಲಿಲ್ಲ. "ಗಾಂಧೀಜಿಯ ಬಂದೂಕ ಬರಿಯ ಹುಸಿಮದ್ದು" ಎಂದು ಬ್ರಿಟಿಷ್ ಸರ್ಕಾರ ಸ್ವಲ್ಪ ಸಮಾಧಾನಗೊಂಡಿತು. ಆದರೆ ಭಾರತೀಯರು "ಗಾಂಧೀಜಿ ಒಂದು ಮುಗಿದುಹೋದ ಶಕ್ತಿ" ಎಂದು ಭಾವಿಸಲಿಲ್ಲ. ಸರ್ಕಾರವನ್ನು ಜನತೆ ಎದುರಿಸಿದ ರೀತಿ ಭಾರತೀಯರಿಗೆಲ್ಲ ಹೆಮ್ಮೆಯ ವಿಷಯವಾಗಿತ್ತು. ೧೫೦ ವರುಷಗಳಿಂದ ಗುಲಾಮಗಿರಿಯಲ್ಲಿದ್ದ ನಮ್ಮ ರಾಷ್ಟ್ರ, ಇಂತಹ ತ್ಯಾಗ, ವೀರ್ಯ ಶೌರ್ಯ ಆತ್ಮಾರ್ಪಣೆ ಗಳನ್ನು ಪ್ರಕಟಿಸುವುದೆಂದು ಯಾರೂ ಕನಸಿನಲ್ಲಿಯೂ ಭಾವಿಸಿರಲಿಲ್ಲ. ಬೃಹತ್ ಭಾರತ ಒಂದು ಸಲ ಮೈ ಕುಲುಕಿದುದರಿಂದಲೇ ಬ್ರಿಟಿಷ್ ಚಕ್ರಾಧಿಪತ್ಯ ಅಲುಗಾಡಿತ್ತು. ೧೯೨೧ನೆ ಅಸಹಕಾರ ಚಳುವಳಿಯಲ್ಲಿ ಎರಡು ಲಕ್ಷಕ್ಕೂ ಹೆಚ್ಚು ಅಹಿಂಸಾ ಸತ್ಯಾಗ್ರಹಿ ಗಳು ಸೆರೆ ಸೇರಿದರು. ಪ್ರಬಲರಾದ ವಕೀಲ್ ಬ್ಯಾರಿಸ್ಟರ್‌ಗಳ ಬಹುಭಾಗ, ವಕೀಲಿ ಸನ್ನದನ್ನು ಸರ್ಕಾರಕ್ಕೆ ಹಿಂದಿರುಗಿಸಿತು. "ಸರ್" ಮುಂತಾದ ಪ್ರಶಸ್ತಿವಿಜೇತರೆಲ್ಲ ಪ್ರಶಸ್ತಿಗಳನ್ನು ಹಿಂದಕ್ಕೆ ಕೊಟ್ಟುಬಿಟ್ಟರು. ಭಾರತೀಯರಿಗೆ ತಮ್ಮ ನಿಜವಾದ ಸತ್ವ ಮತ್ತು ಶಕ್ತಿಯ ಅರಿವುಂಟಾಗಿತ್ತು.

ಇಪ್ಪತ್ತೆರಡನೆಯ ಇಸ್ವಿ ಮಾರ್ಚಿ ೧೦ರ ರಾತ್ರಿ, ಸರ್ಕಾರ ಗಾಂಧಿಯವರನ್ನು ಸೆರೆ ಹಿಡಿಯಲು ಆಶ್ರಮಕ್ಕೆ ಬಂದರು. ತಮ್ಮನ್ನೂ ಸಹ ಹಿಡಿಯುವುದು ಗೊತ್ತಾಗಿದ್ದುದ ರಿಂದ ಶ್ರೀ ಶಂಕರಲಾಲ್ ಬ್ಯಾಂಕರ್‌ರು ಸ್ವಲ್ಪ ಹೊತ್ತಿಗೆಮುಂಚೆಯೇ ಆಶ್ರಮಕ್ಕೆ ಬಂದಿದ್ದರು. ಅದು ಶುಕ್ರವಾರವಿರಬಹುದೆಂಬ ಜ್ಞಾಪಕ. ರಾತ್ರಿ ಹತ್ತು ಗಂಟೆ ಯಾಗಿತ್ತು. ಪೋಲೀಸಿನವರು ಗಾಂಧೀಜಿಯನ್ನು ಆತುರಪಡಿಸದಿದ್ದರೂ ಗಾಂಧೀಜಿಯೇ ಬೇಗ ಸಿದ್ಧರಾದರು. ಗಾಂಧೀಜಿ ಆಶ್ರಮದಲ್ಲಿ ಪ್ರಾರ್ಥನಾ ಸ್ಥಳದಲ್ಲಿ ಕುಳಿತರು. ಆಶ್ರಮ ವಾಸಿಗಳೆಲ್ಲ ಹೋಗಿ ಅವರ ಸುತ್ತಾ ಕುಳಿತಮೇಲೆ ಗಾಂಧೀಜಿ "ವೈಷ್ಣವ ಜನತೋ"

ಎಂಬ ಹಾಡನ್ನು ಹೇಳುವಂತೆ ಆಶ್ರಮವಾಸಿಗಳಿಗೆ ಸೂಚಿಸಿದರು. ಹಾಡನ್ನು ಹಾಡಿದ ಮೇಲೆ ಆಶ್ರಮವಾಸಿಗಳೆಲ್ಲ ಗಾಂಧೀಜಿಗೆ ನಮಸ್ಕರಿಸಿದೆವು. ಗಾಂಧೀಜಿ ಎಲ್ಲರನ್ನೂ ಆಶೀರ್ವದಿಸಿ ಹಜರತ್ ಮೊಹಾನಿಯವರನ್ನು ಆಲಂಗಿಸಿಕೊಂಡರು.

ಅನಂತರ ಗಾಂಧೀಜಿ ತಮ್ಮ ಸಾಮಾನುಗಳ ಒಂದು ಸಣ್ಣ ಗಂಟನ್ನು ಮಾಡಿಕೊಂಡರು. ಒಂದೇ ಒಂದು ಹೆಚ್ಚು ತುಂಡುಪಂಚೆ, ಎರಡು ಕಂಬಳಿ (ಹೊದೆಯಲು ಒಂದು ಹಾಸಲು ಒಂದು) ಐದು ಪುಸ್ತಕಗಳು (ಗೀತಾ, ರಾಮಾಯಣ, ಆಶ್ರಮ ಭಜನಾವಳಿ, ಅನುವಾದ ಸಹಿತವಾದ ಕೊರಾನ್ ಮತ್ತು ಕ್ಯಾಲಿಫೋರ್ನಿಯದ ಶಾಲಾಬಾಲಕರು ಕಳುಹಿಸಿದ್ದ ಪರ್ವತದ ಮೇಲಿನ ಪ್ರವಚನ–Sermon on the Mount). ಗಾಂಧೀಜಿಯನ್ನು ಆ ರಾತ್ರಿಯೇ ಸಾಬರಮತಿ ಸೆರೆಮನೆಗೆ ಸಾಗಿಸಿದರು. ಶ್ರೀಮತಿ ಕಸ್ತೂರಿಬಾರವರು ಸೆರೆಮನೆ ಬಾಗಿಲಿನವರೆಗೆ ಹೋಗಿದ್ದು ಆಶ್ರಮಕ್ಕೆ ಹಿಂತಿರುಗಿದರು.

ಮರುದಿನ (ಮಾರ್ಚ್ ೧೧ ರಂದು) ಪೋಲೀಸರು ಗಾಂಧೀಜಿಯನ್ನು ಜಡ್ಜ್ ಬ್ರೌನ್‌ರ ಎದುರಿಗೆ ಹಾಜರುಪಡಿಸಿದರು. ಜಡ್ಜ್ ಬ್ರೌನ್‌ರ ಕೋರ್ಟು ಕಂಟೋನ್ಮೆಂಟಿನಲ್ಲಿತ್ತು. ೧೮ನೆಯ ತಾರೀಜಿನವರೆಗೆ ವಾಯಿದೆ ಪಡೆದ ಸರ್ಕಾರ, ಗಾಂಧೀಜಿಯನ್ನು ಆದಿನ ಜಡ್ಜ್ ಬ್ರೂಮ್‌ಫೀಲ್ಡ್ ಐ.ಸಿ.ಎಸ್.ರವರ ಮುಂದೆ ಹಾಜರುಪಡಿಸಿದರು. ಕೋರ್ಟು, ಪ್ರಾರಂಭವಾಗುವುದಕ್ಕೆ ಬಹಳ ಹೊತ್ತಿಗೆ ಮುಂಚೆಯೇ ಕೋರ್ಟಿನ ಸುತ್ತ ಬಹಳ ದೂರದವರೆಗೆ ಪೋಲೀಸ್ ಬಂದೋಬಸ್ತು ಇತ್ತು. ಮಹಾತ್ಮ ಗಾಂಧೀಜಿಯನ್ನು ಕೋರ್ಟಿಗೆ ಕರೆದುಕೊಂಡು ಬಂದಕೂಡಲೇ ಕೋರ್ಟಿನಲ್ಲಿದ್ದವರೆಲ್ಲ ಎದ್ದುನಿಂತರು. ಜಡ್ಜ್‌ರ ಮುಖದ ಮೇಲೆ ತಾನೇ ಅಪರಾಧಿಯೋ ಎಂಬ ಭಾವನೆ ಇತ್ತು. ವಿಚಾರಣೆ ಬಹಳ ದಿನ ಎಳೆಯಲೇ ಇಲ್ಲ. ಗಾಂಧೀಜಿ ತಪ್ಪನ್ನು ಒಪ್ಪಿ ತಮ್ಮ ಹೇಳಿಕೆಯನ್ನು ಓದಿಹೇಳಿ ಕುಳಿತರು. ಜಡ್ಜ್‌ರು ಅವರಿಗೆ ಆರು ವರುಷ ಕಾರಾಗೃಹವನ್ನು ವಿಧಿಸಿದರು. ಶಂಕರ್‌ಲಾಲ್ ಬ್ಯಾಂಕರರು, ಗಾಂಧೀಜಿಯ ಯಾವ ಲೇಖನಗಳಿಗಾಗಿ ಗಾಂಧೀಜಿಗೆ ಶಿಕ್ಷೆಯಾಯಿತೋ ಆ ಲೇಖನಗಳನ್ನು ಯಂಗ್ ಇಂಡಿಯದಲ್ಲಿ ಪ್ರಕಟಿಸಿದುದರಿಂದ ಅವರಿಗೂ (ಬ್ಯಾಂಕರ್‌ರಿಗೂ) ಅದೇ ಶಿಕ್ಷೆಯಾಯಿತು. ಶ್ರೀ ಜವಹರ್‌ಲಾಲ್ ನೆಹರು ಅಂದು ಕೋರ್ಟಿಗೆ ಬಂದಿದ್ದ ನೆನಪು.

ಹೀಗೆ ಭಾರತದ ಆತ್ಮವನ್ನು ಸರ್ಕಾರ, ಹಾರಿಸಿಕೊಂಡು ಹೋಗಿ ಸೆರೆಮನೆಯಲ್ಲಿಟ್ಟರು; ಸದ್ಯಕ್ಕೆ ಚಳುವಳಿ ನಿಂತಂತಾಯಿತೆಂದು ನೆಮ್ಮದಿಯ ಉಸಿರು ಬಿಟ್ಟರು. ಪ್ರವಾಹ, ದೊಡ್ಡ ಬೆಟ್ಟದ ಮೇಲಿನಿಂದ ಜಲಪಾತವಾಗಿ ಸಾವಿರಾರು ಅಡಿ ಕೆಳಕ್ಕೆ ಬಿದ್ದು ಮರೆಯಾಗುತ್ತದೆ. ಮುಂದಲ ದೃಷ್ಟಿ ಇಲ್ಲದವರಿಗೆ, ಇಲ್ಲಿಗೆ ಪ್ರವಾಹದ ಅಂತ್ಯ ಎಂದು ತೋರುತ್ತದೆ. ಆದರೆ ಪಾತಾಳದಲ್ಲಿ ಬಿದ್ದು ಕಣ್ಮರೆಯಾದ ನೀರು, ಮತ್ತೆ ಪ್ರವಾಹವಾಗಿ ಮೊದಲಿಗಿಂತ ಹೆಚ್ಚಾಗಿ ಭೋರ್ಗರೆಯುತ್ತಾ ಮುಂದೆ ಸಾಗುತ್ತದೆ.

"ಜೈ ಹಿಂದ್"

ವಿ. ಸೀ.

ನಮ್ಮ ಅಜ್ಜಿಯ ಅಡಿಗೆ

ಅಡಿಗೆ, ಊಟ, ಯಾರಿಗೆ ಬೇಡ? ಚೆನ್ನಾಗಿ ಮಾಡಿದ ಅಡಿಗೆ, ತೃಪ್ತಿತರುವ ಊಟ ಬಾಳಲ್ಲಿ ತುಂಬಾ ಸುಖತರುವಂಥವು. ಮಾಡಿದವರಿಗೆ ಹೆಸರು; ನಾಲ್ಕು ಜನಕ್ಕೆ ಸಂತೋಷ ಬಡಿಸಿದರು ಎಂದು; ತಿಂದವರಿಗೆ ಆ ದಿನದ ಪುಣ್ಯ ಫಲಿಸಿತು ಎಂದು ತುಷ್ಟಿ. ಊಟದ ವಿಚಾರ ಹಾಗಿರಲಿ. ಅದು ಭೋಗಭಾಗ. ನೆನಸಿಕೊಳ್ಳುತ್ತ ಹೋದರೆ ಯುಗ ಯುಗಗಳು ಸಾಕಾದಾವೆ? ಅಲ್ಲದೆಯೆ, ಅದು ಮನಸ್ಸನ್ನು ಎಲ್ಲೆಲ್ಲಿಗೆ ಒಯ್ಯುತ್ತದೆಯೊ? ಆನಂದದಲ್ಲಿ ಪರಿಸಮಾಪ್ತವಾಗುವುದಾದರೆ ಮುಂದಿನ್ನೇನುಬೇಕು? ನಿದ್ರೆ ಮಾತ್ರ ಎಂದೀರಿ. ಸಹಜವೇ. ಚೆನ್ನಾಗಿ ಊಟಮಾಡುವುದು ಎಂದರೆ ಕೂಡಲೆ ನಿದ್ರೆ ಬೇಡುವುದು ಎಂದರ್ಥ. ದೇಹದ ಎಲ್ಲ ತೃಪ್ತಿಗೂ ಉತ್ತರಕ್ರಿಯೆ ನಿದ್ರೆ ಎನ್ನುವುದು ಪ್ರಾಣಿಶಾಸ್ತ್ರದ ರೂಢಿ. ಶಾಸ್ತ್ರವನ್ನು ಅಲ್ಲಗಳೆದು ಎಲ್ಲಿ ಹೋಗಬಲ್ಲೆವು? ಆ ವಿಶ್ರಾಂತಿಯಿಲ್ಲದೆ ನೆಮ್ಮದಿಬಾರದು. ನೆಮ್ಮದಿಗೋಸ್ಕರ ತಾನೆ ಎಲ್ಲ ಯತ್ನ? ....ಅಡಿಗೆ, ಅಡಿಗೆ ಮನೆ, ಅಡಿಗೆಯವರು ಎಂಬುದನ್ನು ಪಾಕ, ಪಾಚನ, ಪಾಚಕ ಮುಂತಾದ ಮಾತುಗಳಿಗೆ ಪ್ರತಿಯಾಗಿ ಬಳಸುವುದುಂಟು. ಆಗಬಹುದು. ಆದರೆ ಆ ಮಾತುಗಳ ಹಿಂದೆ ಬಗೆ ಬಗೆಯ ಪೂರ್ವರಂಗಗಳೇನು – ಪೂರ್ವಗ್ರಹಗಳೇ ಉಂಟು. ಅವಕ್ಕೇ ಹೊಂದುವ, ಬೇರೆಯವಕ್ಕೆ ಹೊಂದದ ರಹಸ್ಯ ಸಂಬಂಧ ಇದೆ. ಪಾಕವೆಂದರೆ ಪುನಃ ಇನ್ನಾವುದೊ ಪ್ರಪಂಚಕ್ಕೆ ಹೋಗಿ ಆಲಂಕಾರಿಕವಾಗಿ ತಲೆಕೆಡಿಸಿ ಕೊಳ್ಳುವಂತಾಗಬಾರದು. ಪಾಕವೂ ಬೇಡ ಶಯ್ಯೆಯೂ ಬೇಡ, ಸದ್ಯ. ವಯಸ್ಸಾದ ಮೇಲೆ ಶಯ್ಯೆಯ ಹಂಬಲ ತಪ್ಪು. ಕಾವ್ಯಮೀಮಾಂಸೆಯಲ್ಲಿ ಅವೆಲ್ಲ ಅಧಿಕರಣಗಳೆಂದು ಗೊತ್ತು. ಅವು ಹದಗಳು ಎನ್ನುತ್ತಾರೆ. ಒಗ್ಗರಣೆ, ಪರಿಮಳಗಳಿಗೆ ಹತ್ತಿರದವು ಅವು. ಆ ಪ್ರಕರಣಗಳೂ ಗೋಜಿನವೇ. ಅಲ್ಲಿಯೂ ಸಿಕ್ಕುಗಳಿಗೆ ಸಿಕ್ಕಿಹಾಕಿಕೊಂಡರೆ ಸುಲಭ ನಿಸ್ತಾರವಿಲ್ಲ. ಅಡಿಗೆ ಎಂದರೆ ದಿನ ನಿತ್ಯದ ಊಟಕ್ಕೆ ಅಟ್ಟು ಮಾಡಿದ ಪದಾರ್ಥ, ಅದರ ಬಗೆ ಬಗೆಯ ರುಚಿ; ಆವೊತ್ತಿನ ಊಟದಲ್ಲಿ ಸುಳಿದ, ಹಿತಗೊಳಿಸಿದ ಯಾವುದೇ ಸಂಮಿತಿ ಎಂದಿಟ್ಟುಕೊಂಡರಾಯಿತು. ಅರ್ಥಶುದ್ಧಿ, ಪ್ರಕರಣ ಸಿದ್ಧಿ ಆದಲ್ಲದೆ ಯಾವುದರಲ್ಲಿಯೂ ತೊಡಗಬಾರದೆನ್ನುತ್ತಾರಾಗಿ ಈ ಪ್ರಸಂಗವನ್ನು ಬೆಳಸಿದ್ದಾಯಿತು.

ಅಡಿಗೆಗೆ ಬಿದ್ದ ಸಾಮುಗ್ರಿ, ಅನ್ನ ಬೆಂದ ರೀತಿ, ಅದು ಪಕ್ವವಾದ ಪ್ರಕಾರ, ಇವುಗಳಿಂದ ಅಂದಿನ ಆಹಾರ ಆಪ್ಯಾಯಕರವಾದರಾಯಿತು. ಅದರ ಹಿಂದಿನ ಕೈವಾಡದ ಪ್ರಭಾವ ಅದು. ಸಂಬಳಕ್ಕೆ ದುಡಿಯುವವರದಲ್ಲ; ಮನೆಯ ಆಪ್ತರದು. ಸಂಬಳಕ್ಕೆ ದುಡಿವವನು ರುಚಿಯಾಗಿ ಮಾಡಿಹಾಕಲೇ ಬೇಕು. ಅವನನ್ನಿಟ್ಟುಕೊಂಡಿರುವುದೇತಕ್ಕೆ ಇಲ್ಲವಾದರೆ? ಆದರೂ ಅಂಥವರು ಹೊರಗಿನವರು; ಅವರದು ವೃತ್ತಿ. ನಮ್ಮ ಮರ್ಜಿ ಅನುಸರಿಸಿ ಬೇಯಿಸಿದರೆ ಅವರು ಒಪ್ಪೇ ಆದರೂ ಅಲ್ಲಿನ ಮೆಚ್ಚಿಕೆ ಬೇರೆ. ಮನೆಯವರು ಅಟ್ಟಾಗ ಅದರಲ್ಲಿ ಅಡಗಿರುವ ಪ್ರೀತಿ ಬೇರೆ. ಹದಗಳಲ್ಲಿ ವ್ಯತ್ಯಾಸ ಉಂಟು.

ಮನೆಯ ಆಪ್ತವರ್ಗವನ್ನೇ ನಾನಿಲ್ಲಿ ಎಣಿಸುತ್ತಿರುವುದು. ಅಜ್ಜಿ, ತಾಯಿ, ಹೆಂಡತಿ, ಅಕ್ಕ, ತಂಗಿ, ಮಗಳು ಇವರಿಗೆ ಸಂಬಂಧಿಸಿದ ಪ್ರಪಂಚ ಇದು. ಮಗಳು ಇನ್ನೂ ಕಿರಿಯಳು; ಅಕ್ಕತಂಗಿಯರು ನಾಲ್ಕು ದಿನ ಮನೆಗೆ ಬಂದು ಹೋಗುವವರು; ಅವರಿಗೆ ಗಾಸಿ ಕೊಡಬಾರದಾಗಿ ಅವರಿಂದ ನಿತ್ಯ ಅಡಿಗೆ ಮಾಡಿಸಬಾರದು; ಹೆಂಡತಿಯ ಕೈಅಡಿಗೆ, ರುಚಿಯೇ, ಹೇಗೇ ಮಾಡಿದರೂ. ಅಲ್ಲವೆಂದರೆ ಸುಮ್ಮನೆ ಬಿಟ್ಟಾಳೆ? ಆದರೆ ಅತ್ತೆಯ ಎದುರು ಆಕೆಯ ಕೈ ಕೆಳಗೇ ಕೆಲಕಾಲವಾದರೂ. ಉಳಿದವರು ಅಜ್ಜಿ, ತಾಯಿ. ತಾಯಿ ಮಗಳ ಕೈಯಲ್ಲಿ ಅಡಿಗೆಮಾಡಿಸುವುದಿಲ್ಲವಾಗಿ ಅಜ್ಜಿಯದೇ ಪ್ರಾಧಾನ್ಯ,—ಅವಳ ಕೈ ನಡೆಯುವವರೆಗೂ. ಅವಳು ದುರ್ಬಲಳಾದರೆ ಆ ಸ್ಥಾನ ತಾಯಿಯದು. ಇದು ಸಂಪ್ರದಾಯ. ಹಾಗೆ ಸಂಪ್ರದಾಯಬದ್ಧವಾದ್ದು ನಮ್ಮ ಅಜ್ಜಿಯ ಹಿರಿಮೆ. ನಡೆದೇ ನಡೆದದ್ದು ನಮ್ಮ ಮನೆಯಲ್ಲಿ. ಆಕೆಯ ಮೈ ಕೈ ಗಟ್ಟಿಯಾಗಿರುವವರೆಗೂ ಅಥವಾ ಇದೆಯೆಂದು ಆಕೆ ತಿಳಿದಿರುವವರೆಗೂ ಆಕೆಯ ಅಡಿಗೆಗೆ ಚ್ಯುತಿಯಿಲ್ಲ. ಇನ್ನೊಬ್ಬರು ಬೇಯಿಸಿದ್ದು ಆಕೆಗೆ ರುಚಿಸುವುದೂ ಕಷ್ಟವೇ. ತಾನು ತಿನ್ನಬೇಕಾಗಿರುವ ಒಂದು ಹೊತ್ತಿನ ಊಟ ಆಕೆಯದೇ ಆಗಬೇಕೆಂಬುದು ಆಕೆಯ ಹಟವೂ ಆಗಿರುತ್ತದಾಗಿ ಅದು ಹಾಗೆಯೇ ಸರಿ. ಆಕೆ ತನಗೆ ಬೇಕಾದಂತೆ ಶುಚಿ, ರುಚಿ ಕಟ್ಟಿಕೊಳ್ಳುತ್ತಾಳೆ. ಆದ್ದರಿಂದ ಆಕೆ ಇರುವಾಗ ಅಡಿಗೆಯ ಮನೆಯಲ್ಲಿ ನನ್ನ ತಾಯಿಗೇ ಎರಡನೆಯ ಸ್ಥಾನ. ಪರಿಚಾರಿಕೆ ಮಾಡಬಹುದು. ಕುಟ್ಟಿ, ರುಬ್ಬಿ ಕಾಯಿಪಲ್ಲೆ ಹೆಚ್ಚಿಕೊಟ್ಟು ಪಾತ್ರೆಪರಟಿ ತೊಳೆದುತಂದು ಸೇವೆಸಲ್ಲಿಸಬಹುದು. ಭಾಂಡವನ್ನು ಬೇಕಾದರೆ ಇಳಿಸಿಕೊಡಬಹುದು. ಅಷ್ಟೇಹೊರತು ವಿಧಿವಿಧಾನದ ಸಮಸ್ತ ಕ್ರಿಯೆಯೂ ಅಜ್ಜಿಯದೇ. ಅಜ್ಜಿ ತನ್ನ ಮಗಳನ್ನು ದುಡಿಸಳು: ಈ ಮಗಳು ತನ್ನ ಸೊಸೆಗೆ ಅವಕಾಶ ಕೊಡಳು. ತಾವಿಬ್ಬರೂ ಇರುವಾಗ ಸೊಸೆಯ ನೆಳಲು ಒಳಗೆ ಸುಳಿದರೂ ಅಡಿಗೆಗೆ ದೃಷ್ಟಿಯಾಗುತ್ತದೆ ಎಂಬುದು ಕೂಡ ಸಿದ್ಧಾಂತ. ದೊಡ್ಡವರು ಅನುಭವಸ್ಥರು ಇರುವಾಗ ಹೆಂಡತಿ ಏಕೆ ಕಷ್ಟಪಡಬೇಕು ಎಂಬ ದೃಷ್ಟಿ ಹೆಂಡತಿಯ ಪರವಾದ ಒಂದು ಚಿಂತನೆ. ಆದ್ದರಿಂದ ಅಜ್ಜಿ ಅಜ್ಜಿ; ತಾಯಿ, ತಾಯಿ. ಅವರದೇ ಅಡಿಗೆಮನೆಯ ಆಧಿಪತ್ಯ ಸಾಮಾನ್ಯವಾಗಿ.

ನಮ್ಮ ಅಜ್ಜಿಯಂತೂ ಅನನ್ಯ ಸಾಧಾರಣಳು. ಆಕೆಗೆ ಗಂಡು ಮಕ್ಕಳಿಲ್ಲದ್ದರಿಂದ ಮಗಳ ಹೊಟ್ಟೆಯಲ್ಲಿ ಹುಟ್ಟಿದ ನಮ್ಮಲ್ಲಿ ಆಕೆಗೆ ಪ್ರಾಣ. ಆಕೆ ನಮಗೆ ಮಾಡದ

ಉಪಚಾರವಿಲ್ಲ; ತಿನ್ನಿಸದ ಪಕ್ವಾನ್ನವಿಲ್ಲ. ತಾನು ಕಲಿತದ್ದೆಲ್ಲಾ ನಮಗೆ ವಿಾಸಲು. ನಮಗೆ ರುಚಿಯಾದರೆ ಸಾಕೆಂದು ತಾನು ಮೂಗು ಮುಚ್ಚಿಕೊಂಡು ಏಕಾದಶಿ ಪರ್ವಕಾಲಗಳಲ್ಲಿ ನಮಗೆ ಈರುಳ್ಳಿ ಹುಳಿಮಾಡಿ ಹಾಕುವುದುಂಟು. ಆ ಪ್ರೀತಿಗೆ, ಸ್ವಸುಖ ನಿರಭಿಲಾಷೆಗೆ ಏನು ಪಡಿ ಕೊಟ್ಟೇವು. ಒಂದು ದಿನವಿದ್ದ ಹಾಗೆ ಇನ್ನೊಂದು ದಿನದ ತೆರನಿಲ್ಲ ಆಕೆಯ ಅಡಿಗೆಯಲ್ಲಿ. ಇದು ಆಕೆ ಅಟ್ಟುದು ಎಂಬ ಮುದ್ರೆ ಇರುತ್ತದೆಯಾದರೂ ದಿನವೂ ಯಾವುದೋ ಹೊಸರುಚಿ, ರೀತಿ, ಬಣ್ಣ. ಎಂತಹ ರಹಸ್ಯವೊ, ಎಲ್ಲಿ ಕಲಿತರೊ ಈ ನೂರು ಬಗೆಯ ರುಚಿ ಕಟ್ಟನ್ನು? ನಿಮ್ಮ ಅಜ್ಜಿ ಇವಳ ತಾತನ ಹಾಗೆ ಮಾಡುತ್ತಾಳೆ ಎಂದೀರಿ ನೀವು. ನಿಮಗೇನು ಗೊತ್ತು. ನಿಮ್ಮ ಅಜ್ಜಿ ಅಡಿಗೆ ನೋಡಿಲ್ಲ; ನಾವೂ ಒಪ್ಪಬೇಕಲ್ಲ. ಆದರೆ ಆ ಇಬ್ಬರಿಗೆ ನಾನು ಸ್ಪರ್ಧೆ ಹೂಡಲು ತಯಾರಿಲ್ಲ. ಸಮದೊಡನೆ ಜೊತೆ ಕಟ್ಟಬಹುದು. ಒಂದು ಪಾಯಿಂಟ್ ಕೊಡದೆ ೬೦೦ ಗೆಲವು ಪಡೆಯಬಲ್ಲ ಈಕೆಯ ಇದಿರಿಗೆ ಇನ್ನೊಬ್ಬರನ್ನು ಸರಿಗಟ್ಟಿಯೇನೆ? ಈ ಶಕ್ಯವೂ ಇಲ್ಲ. ನಿಮ್ಮ ಪುಣ್ಯದಿಂದ ನಿಮ್ಮಜ್ಜಿ ಬದುಕಿದ್ದರೂ ಅವರಮೇಲೆ ಇವಳನ್ನು ಛೂ ಬಿಟ್ಟು ನಿಮ್ಮವರಿಗಿಂತ ಒಂದುಮೊಳ ಎತ್ತರದ ಯೋಗ್ಯತೆಯವರು ನಮ್ಮಜ್ಜಿ ಎಂದು ಸೂಚಿಸಲು ನನ್ನ ದುರದೃಷ್ಟದಿಂದ ಈಕೆ ಬದುಕಿಲ್ಲ. ಇಲ್ಲವಾದರೆ ತೋರಿಸುತ್ತಿದ್ದೆ.

ಸಾಮಾನ್ಯವಾಗಿ ಎಲ್ಲರ ಅಜ್ಜಿಯೂ ಒಳ್ಳೆಯ ಅಡಿಗೆಯವರೇ ಆಗಿರುತ್ತಾರೆ. ಆದ್ದರಿಂದ ಅವರವರ ಮನೆಗೆ ಅವರು ಅಡುವುದು, ಬಡಿಸುವುದು ಪಂಚಾಮೃತವಾಗುವುದರಿಂದ ಆ ಮನೆಯವರೆಲ್ಲರ ರುಚಿಯ ಪ್ರಕಾರವೂ ಬೆಲೆಗಳೂ ಅವರ ಅಡಿಗೆಯಿಂದಲೇ ರೂಢಿಸಿರುತ್ತವೆ. ಎಷ್ಟು ಸುಖಕ್ಕೆ ಅವರು ಕಾರಣರೋ, ಅಷ್ಟೇ ರುಚಿಗಳು ಹುಟ್ಟಿ ಅವುಗಳಿಂದ ಜಗಳ ಹುಟ್ಟಲು, ಹಟ ಬೆಳೆಯಲು ಅವರು ಕಾರಣರಾಗುತ್ತಾರೆ. ಸಾತ್ವಿಕರಾದ ಉಪಕಾರಿಗಳಾದವರಿಂದ ಈ ದುಷ್ಪರಿಣಾಮ ಉಂಟಾಗುವುದು ಚೋದ್ಯ–ತಮ್ಮದೇ ಪರಮ ರುಚಿಯಲ್ಲವೇ. ಅದಕ್ಕೆ ಇನ್ನೊಬ್ಬರದು ಸಮವಾಗುವುದು ಹೇಗೆ ಶಕ್ಯ? ಪ್ರಮಾಣ ಅದೇ. ಪ್ರಕಾರ ಅದೇ. ಎಲ್ಲಕ್ಕೂ ಸಾಧನ, ಸಿದ್ಧಿ ಎಲ್ಲ ಅಲ್ಲಿಯೇ ಆಗಿ—ಇಲ್ಲಿ ಯಾವ ಮಧ್ಯಸ್ಥಿಕೆ ಒಡಂಬಡಿಕೆಗಳೂ ಸಾಮಾನ್ಯವಾಗಿ ಆಗವು. ಅಜ್ಜಿಯವರು ಸೋಲುವುದೂ ಅಡಿಗೆ ಕೆಡಿಸುವುದೂ ಅಶಕ್ಯವಾದ್ದರಿಂದ ಈ ವಿವಾದ ಬಗೆ ಹರಿವ ಉಪಾಯವೂ ಇಲ್ಲ. ಅರ್ಥಶಾಸ್ತ್ರಗಳು ಹೇಳುವಂಥ Non-Competing Groups ಇವರದು. ಪರಸ್ಪರ ಸ್ಪರ್ಧಾರಹಿತವಾದ ಪ್ರಪಂಚ ಇದು.

ಒಮ್ಮೆ ಒಬ್ಬರ ಮನೆಯಲ್ಲಿ ನಾಲ್ಕೈದು ಮಂದಿ ಊಟಕ್ಕೆ ಕುಳಿತಿದ್ದೆವು. ಮಜ್ಜಿಗೆ ಪಳಿದ್ಯ ಮಾಡಿದ್ದರು. ಹದವಾಗಿ ಪಾಕ ಇಳಿದಿತ್ತು. ಚೆನ್ನಾಗಿತ್ತು ಎಂದರೆ ಚೆನ್ನಾಗಿತ್ತು. ಒಮ್ಮೆಗೇ ಒಬ್ಬರು ಇದು ಸೌತೆಕಾಯಿ ಹಾಕಿದ್ದು ನೋಡಿ. ಬೂದಿ ಗುಂಬಳದ್ದು ಮಾರ್ತಾಂಡರಾಯರ ಮನೆಯಲ್ಲಿ ಅಟ್ಟಿದ್ದರು. ಅಂಥದನ್ನು ನಾನು ಜನ್ಮೇಪಿ ತಿಂದಿಲ್ಲ ಎಂದು ಹೇಳಿ ವಿರಸವಾಡಿದರು. ಹೀಗೆ ಹಿಡಿಯುವುದಕ್ಕಿಂತ ನಾಲಿಗೆ ಕಿತ್ತುಕೊಂಡು ಸಾಯುವುದು ಮೇಲು. ಅಷ್ಟು ಕೆಡಕುತನ ಬರ್ಬರತೆ ಅದು.

ಅಂಥವರನ್ನು ಸಭ್ಯ ಪ್ರಪಂಚದಿಂದ ಗಡಿಪಾರುಮಾಡಬೇಕು. ಇವರಿಗೆ ಯಾರು ಮರ್ಯಾದೆ ಕಲಿಸಿದರೊ! ಇವರು ಕಲಿಯಬೇಕಲ್ಲ.—ವಕ್ರ ಸುಳಿಜನ. ಮಾಡಿದವರಿಗೆ, ಜೊತೆಗೆ ಊಟ ಮಾಡುವ ಇತರರಿಗೆ, ತಕ್ಷಣದ ಸುಖಾನುಭವಕ್ಕೆ ಒಟ್ಟಿಗೆ ಕಶಾಪ್ರಹಾರ ಇಂಥ ಮಾತು. ಅಲ್ಲಿಗೂ ಅದು ಹೇಗಿತ್ತೊ. ಈ ಎರಡನ್ನೂ ಒಟ್ಟಿಗೆ, ತಿಂದಿದ್ದರೆ ಈತನ ರುಚಿ ಎಂಥ ದನದ ರುಚಿ ಎಂದು ಕಾಣುತ್ತಿತ್ತೊ! ನೆನಪಿನಲ್ಲಿ ಸವಿಯಾದ ಪದಾರ್ಥ ಸದ್ಯದ ಸುಖಕ್ಕಿಂತ ಏಕೆ ವಾಸ್ತವವಾಗಿ ಮೇಲಾಗಬೇಕೊ ಅರಿಯೆ....ಇವರ ನಡವಳಿಕೆ ನೋಡಿ: ಬೇರೆಯವರ ಮನೆಯಲ್ಲಿ ಈ ಆಸ್ವಾದನೆಯ ನಡುವೆ ಎಂದಿನ ದನ್ನೊ ಎತ್ತಿ ಹೇಳಿ ಹೀಗೆ ಅವಿವೇಕಮಾಡಬಾರದು ಎಂಬುದು ತಿಳಿಯಲಿಲ್ಲ ಆತನಿಗೆ. ಕೆಲವೇಳೆ ತಾವು ಸತ್ಯ ನುಡಿಯುತ್ತಿದ್ದೇವೆ ಎನ್ನುತ್ತ ಇಂಥ ರೂಕ್ಷತೆಯನ್ನು ಜನ ಬೆಳಸುತ್ತಾರೆ. ಇಂಥವರದೇ ಬಹು ಸಂಖ್ಯೆಯಾದ್ದರಿಂದ ಯಾರಿಗೆ ಹೇಳಿ ತೀರೀತು.

ಪ್ರಕೃತ ಮನುಸರಾಮಃ. ಸಣ್ಣ ಹುಡುಗರಾಗಿದ್ದಾಗ ಬೆಳಗ್ಗೆ ಏಳುವ ಹೊತ್ತಿಗೆ ಒಲೆಯ ಕೆಂಡದಲ್ಲಿ ಹಿಟ್ಟು ತಟ್ಟಿ, ಎರಡೂಕಡೆ ಎಲೆಮುಚ್ಚಿ ಕಡ್ಡಿ ಹೊಲಿದ ಕೆಂಡದ ರೊಟ್ಟಿ ನಮಗೆ ಕೊಡುತ್ತಿದ್ದರು ಒಂದೊಂದು ದಿನ ನಮ್ಮ ಅಜ್ಜಿ. ಅಡಿಗೆ ಮಾಡುತ್ತ ಮಾಡುತ್ತ ಪಳಿದ್ಯಕ್ಕೆ ಅರೆಯುವ ಯಾವುದೊ ಹಸಿ ಅಕ್ಕಿ, ಜೀರಿಗೆ, ತೆಂಗಿನಕಾಯಿ, ಕಡಲೆಯದೊ ಉದ್ದಿನದೊ ಬೇಳೆ, ಇನ್ನೂ ಏನೇನೊ ಸೇರಿಸಿ, ಚೆನ್ನಾಗಿ ಅರೆದ ಆ ಹಿಟ್ಟಲ್ಲಿ ಸ್ವಲ್ಪ ತೆಗೆದು, ಸೌಟಿಗೆ ತುಪ್ಪ ಸುರಿದು ಬಟ್ಟಲಂತೆ ತಟ್ಟಿ ಅದು ಬೇಯುತ್ತಿರುವಾಗ ಇನ್ನಷ್ಟು ತುಪ್ಪವೆರೆದು ಗರಿಗರಿ ಬೇಯಿಸಿ ಆ ಸೌಟಿನ ರೊಟ್ಟಿಯನ್ನೇ ತಿನ್ನಲು ಕೊಡುತ್ತಿದ್ದ ಆ ವಾತ್ಸಲ್ಯ ಅಮೃತಕಲ್ಪ.

ಬಹುದಿನ ಪಳಗಿದ, ಸುಖಸಂತೋಷ ಅನುಭೋಗಿಸಿದ್ದ ಅವರಿಗೆ ನೂರಾರು ಬಗೆಯ ಅಡಿಗೆ ಗೊತ್ತು; ತಮ್ಮ ತಾಯಿ, ಅತ್ತೆ, ನೆರೆಯವರು ಕಲಿಸಿದ್ದು, ಹೇಳಿದ್ದು, ತಾನು ಕಂಡದ್ದು, ತಾನೇ ಪ್ರಯೋಗ ನಡಸಿದ್ದು—ಹೀಗೆ ಸಂಪ್ರದಾಯ ಪ್ರತಿ ದಿನದ ಸುಭೋಜ್ಯಕ್ಕೆ ಸೇರುತ್ತಿತ್ತು. ಇದೇನು ಒಂದು ವರ್ಷ, ಒಂದು ಶತಮಾನದ ಸಂಸ್ಕಾರವೆ? ಪದಾರ್ಥ ವಿಜ್ಞಾನದ ಒಂದು ಶಕಲವೆ ಖಂಡವೆ? ಎಷ್ಟು ತಲೆ ತಲಾಂತರದ ರುಚಿಗಳ ಸಾಮರಸ್ಯ ಇಲ್ಲಿ? ಇದಕ್ಕೂ ಈಕೆಯೇ, ಈಕೆಯ ಪಕ್ಷವಾದ ವಾತ್ಸಲ್ಯಗಳೇ ಬೀಳುತ್ತಿದ್ದವಾಗಿ ಇದರ ಅಖಂಡತೆಗೆ ಯಾವುದು ಸಾರಲಕ್ಷಣ? ಇನ್ನಾವುದು ಸಾಟಿ? ಅಡಿಗೆಗೆ ಅಜ್ಜಿಯೇ ಬೀಳುತ್ತಿದ್ದಳಾಗಿ ಆಕೆ ಅಜ್ಜಿ ನನ್ನವಳಾದ್ದರಿಂದ ಆಕೆಯ ಅಡಿಗೆ ಪರಮಾನ್ನ. ಅವರ ಮನಸ್ಸಿನಲ್ಲಿ ಕೈಯಲ್ಲಿ ನೂರಾರು ವಿಧಾನಗಳ ರಹಸ್ಯ ಆಳಾಗಿ ದುಡಿಯುತ್ತಿತ್ತಾಗಿ ಒಂದೊಂದುದಿನ ಮಾಡಿದ ಸಾರು, ಹುಳಿ, ಪಲ್ಯ, ಚಟ್ನಿ ಒಂದೊಂದು ರೀತಿ. ಆಕೆ ಕುಚ್ಚಲು ಕಡುಬು ಮಾಡಬೇಕು. ಯಾವ ಚಟ್ಟಲಿಮಿನು ಹಾಗೆ ಹೊಳೆದೀತು? ಬಳುಕೀತು? ಹಾಗಲದ, ಬೇವಿನ ಹುವ್ವಿನ ಗೊಜ್ಜು ಮಾಡಿದರೆ ಹೀಗೆ ಒಡ ಒಡಕಲು ನೀರು ನೀರು ಆಗಿ ಅದರಮೇಲೆ ಅರೆ ಅಂಗುಲ ಎಣ್ಣೆ ತೇಲುತ್ತಿತ್ತೆ ಎಂದರೆ ಈಗ ಪಕ್ಕದಲ್ಲಿರುವವರಿಗೆ ನಿಜವಾಗಿ ರುಚಿಸದಾಗುತ್ತದೆ.

ಅಥವಾ ಇಂಥ ರಾವಣ ಗೊಜ್ಜಾಗುತ್ತಿರಲಿಲ್ಲ. 'ಹೌದು, ನಿಜ. ನಿಮ್ಮ ಅಜ್ಜಿ ಮಾಡಿದ ಗೊಜ್ಜಿಗೆ ಸಮನಾಗುವುದಿಲ್ಲ ಬಿಡಿ' ಎಂದು ತಮ್ಮ ಸಮೆತಕ್ಕೆ ಮೊದಲೇ ವಿಮಾ ಕ್ರಿಯೆ ಮಾಡಿ ಅವರು ಪಾರಾದರೆ ಅದು ಪುಣ್ಯವೇ. ಒಂದು ಗಂಡಾಂತರದಿಂದ ಪಾರಾದಷ್ಟು ಸದ್ಯೋಮುಕ್ತಿ. ನನಗೊ ನೆನಸಿಕೊಂಡಾಗಲೆ ಹದ, ಸುವಾಸನೆ, ಆ ರುಚಿ ನಾಲಗೆಗೆ ಬರುತ್ತದೆ; ಒಂದು ಪುಳಕ ಹೊಸತಾಗಿ ಮೂಡಿ ಸುಖ ತರುತ್ತದೆ.

ಒಂದುಸಲ ಮೈಸೂರಲ್ಲಿ ಹಟಮಾಡಿ ಮದುವೆಯ ಮನೆಯಿಂದ ಅಡಿಗೆಯವರಾದ ದೊರೆಸ್ವಾಮಯ್ಯ ಹೊರಟುಹೋದರು. ಇನ್ನೊಂದುದಿನ ತಡೆದಿದ್ದರೆ ಆಗುತ್ತಿತ್ತು. ಅವರಿಗೆ ಬೇರೆಲ್ಲಿಯೊ ಒಪ್ಪಂದ; ಯಾವುದೊ ಬೇರೆ ಪ್ರಸ್ಥ, ಪ್ರಯೋಜನ. ತಮ್ಮಂತಹ ಇನ್ನಿಬ್ಬರ ಸಹಾಯ ತೆಗೆದುಕೊಂಡು ನಮ್ಮ ಅಜ್ಜಿಯೇ ಅಟ್ಟರು. ತಿಂಗಳು ನಾಗವಲ್ಲಿಯ (ನಾಕಬಲಿ ಎನ್ನಿ) ದಿನ. ದೊರೆಸ್ವಾಮಿ ೪-೫ ದಿನಗಳಿಂದ ಮೃಷ್ಟಾನ್ನ ಭೋಜನ ಮಾಡಿಸಿ ಮನೆಯ ಯಜಮಾನರಿಗೆ ಕೀರ್ತಿ ತಂದಿದ್ದ. ಆ ಅರಮನೆ ಗುರುಮನೆಗಳಲ್ಲಿ ಪ್ರಶಸ್ತಿ ಪಡೆದಿದ್ದವನು ಆತ. ಆಕಾಲದಲ್ಲಿ-ನಾನು ಹೇಳುತ್ತಿರುವುದು ಈಗ್ಗೆ ಅರ್ಧ ಶತಮಾನದ ಹಿಂದಿನಮಾತು—ದಿನಕ್ಕೆ ತನ್ನೊಬ್ಬನಿಗೇ ೧೦-೧೫ ರೂಪಾಯಿ ತೆಗೆದು ಕೊಳ್ಳುತ್ತಿದ್ದ. ನಮ್ಮ ಅಜ್ಜಿಯ ಧಾರ್ಷ್ಟ್ಯವನ್ನು ಕಂಡು ಯಜಮಾನರಿಗೆ, ಸಂದೇಹ ವೇನು, ಶಂಕೆಯೇ ಆಗಿತ್ತು. ಆದರೂ ಆಕೆ ವಯಸ್ಸಾದವಳು; ನಾವು ಗಂಡಿನ ಕಡೆಯವರು. ಅವರನ್ನು ತೆಗೆದುಹಾಕುವ ಹಾಗಿರಲಿಲ್ಲವಾಗಿ ಹೇಗೋ ಒಪ್ಪಿಕೊಂಡರು. ಮೈಸೂರಿನ ನಯದಮಾತು ಒಳ ಅಸಮಾಧಾನ ಅತೃಪ್ತಿಗಳನ್ನು ಕಾಣಿಸದಂತೆ ನುಡಿಯುತ್ತದಂತೆ. ಅವೊತ್ತಂತೂ ಹಾಗಾಗಿರಬೇಕು. ಆವೂರ ಸಾಮಾಜಿಕರಲ್ಲಿ ನಾಯಕ ವ್ಯಕ್ತಿಗಳ ವರ್ಗಕ್ಕೆ ಸೇರಿದವರು ಆತ. ಸಕಾಲಾರ್ಥದಲ್ಲಿ ರಸಿಕ. ವಾರಕ್ಕೆ ಎರಡುಸಲ ಭೃಂಗಾಮಲಕವಿಟ್ಟು ಅಭ್ಯಂಜನ ಸ್ನಾನಮಾಡಿಕೊಳ್ಳುತ್ತಿದ್ದರು. ಜಟ್ಟಿಯೊಬ್ಬ ಎಣ್ಣೆಒತ್ತಿ ಸಂವಾಹಾನಕ್ರಿಯೆ ನಡಸಿ, ಇಬ್ಬರು ಎರಡುಕಡೆಯಿಂದ ಸುಡುವ ನೀರನ್ನು ಎರೆಯಬೇಕಿತ್ತು. ಆ ಅಭ್ಯಂಜನ ಇತಿಹಾಸಕಾಲದ ಒಂದು ಪುಣ್ಯ. ಆ ರಂಗು ಆ ಸೇವೆ ಆ ಬಾದಾಮಿ ಕೇಸರಿ ಹಾಲುಗಳ ಉಪಚಾರ, ಉತ್ತರಕ್ಷಣದ ವಿಶ್ರಾಂತಿ, ಆ ಕಾಲಕ್ಕೇ ನಿಂತುಹೋದ ಸಂಸ್ಕಾರ. ಕ್ರಾಪ್‌ತಲೆಗೆ ಷಾಂಪುಕೂಡ ಬೇಡವೆನ್ನುತ್ತಾರೆ. ಹೊಸ ಹೋರಿ ಇದ್ದ ಹಾಗೆ ಇದ್ದರು. ಮಾತು ಒಂದು ಗುಟುರೇ. ಆ ದಿನದ ಅಡಿಗೆ ಆತನಿಗೆ ಎಷ್ಟು ರುಚಿಸಿತು ಎನ್ನುವುದಕ್ಕೆ ಒಂದು ಪ್ರಮಾಣ ಸಾಕು. ದೊನ್ನೆಯಲ್ಲಿ ಹಾಕಿದ ತಿಳಿಸಾರನ್ನು ಕುಡಿದವರೇ ತೀರ ಮೇಲಕ್ಕೆದ್ದರು. ಬ್ರಾಹ್ಮಣ ಪರಿಷೇಚನೆ ಮಾಡಿದ ಎಲೆಯಿಂದ ಹಾಗೆ ಏಳಬಾರದು – ಆದರೆ ಇದು ಅಸಾಧಾರಣ ಸಂದರ್ಭ !–ಬಡಿಸುವವರ ಮೇಲ್ವಿಚಾರಣೆ ನಡಸುತ್ತಿದ್ದ ನಮ್ಮ ಅಜ್ಜಿಯ ಬಳಿಗೆಹೋಗಿ ಮೂರುಸಲ ಪ್ರದಕ್ಷಿಣೆ ಮಾಡಿ, ಊಟಕ್ಕೆ ಕುಳಿತಿದ್ದ ೧೦೦-೧೫೦ ಜನರಿದಿರಿಗೆ ಉದ್ದಂಡ ನಮಸ್ಕಾರ ಹಾಕಿದರು. ಆ ಸಾರಿಗೆ ಸಾಷ್ಟಾಂಗ ನಮಸ್ಕಾರ ಒಂದು ಅತಿಶಯ ಕೃತಜ್ಞತೆಯೇನಲ್ಲ. ನಾನಿನ್ನೂ ಮುಂಜಿಯಾಗದ ಹುಡುಗ; ಆತನನ್ನು ಕಂಡರೆ ಭಯಭರಿತಭಕ್ತಿ.

ಅಂಥವರಿಂದ ನಮ್ಮಜ್ಜಿಗೆ ಹೀಗೆ ಮರ್ಯಾದೆ ನಡೆಯುತ್ತಿದ್ದುದನ್ನು ಕಂಡು ನಿಜವಾಗಿ ಹಿಗ್ಗಿದ ನೆನಪಿದೆ.

ಉಳಿದವರಿಗೆ ಮಾಡಿ ಹಾಕಲಿ, ತಾವೊಬ್ಬರೇ ಇರಲಿ, ಆಕೆ ಕದನ್ನ ತಿನ್ನುವವರಲ್ಲ. ಮೊದಲ ಮಹಾಯುದ್ಧದ ಕಾಲ. ಬೇಸಗೆಯರಜ ಬಂದು ಬೆಂಗಳೂರಿಂದ ನಾನು ನಮ್ಮತಾಯಿಯ ತವರು ಹಳ್ಳಿಗೆ ಹೋದೆ. ಮನೆಗೆಲ್ಲ ಆಕೆ ಆಗ ಇದ್ದವರು ಒಬ್ಬರೇ. ೧೫ ಮೈಲಿ ರೈಲಲ್ಲಿ; ೭ ಮೈಲಿ, ಅಲ್ಲಾಡುವ ಕುಲುಕಿ ಮೈಯೊಡಲು ಲಟಕಟಿಸುವ ಜಟಕಾದಲ್ಲಿ; ೫ ಮೈಲಿ ಕಾಲ್ನಡಿಗೆಯಲ್ಲಿ. ದಕ್ಷಿಣ ಪಿನಾಕಿನಿ ದಾಟಿ ಊರು ಸೇರಿದ್ದೆ ಸುಮಾರು ನಡುಹಗಲಿಗೆ. ಅಜ್ಜಿ ಇನ್ನೇನು ಊಟಕ್ಕೆ ಕುಳಿತುಕೊಳ್ಳುವವರಿದ್ದರು. ನಾನು ಬರುವೆನೆಂಬ ಸಂದು ಸೂಚನೆ ಇರಲಿಲ್ಲ. ಅಂದಿನ ಅಡಿಗೆಯ ಪರುಠವಣೆ ನೋಡುವಂತಿತ್ತು. ಒಗ್ಗರಣೆಹಾಕಿ ಹೊಸಪಾಗಿ ಅರೆದಿದ್ದ ಹುಣಿಸೆಯ ತೊಕ್ಕು; ನಿಂಬೆಯ ಎರಡು ಹೋಳು ಉಪ್ಪಿನಕಾಯಿ; ಪಡವಲದ ಹಸಿಎಳೆ; ಚಪ್ಪರದವರೆಯ ಪಲ್ಯ; ಹುರಿದ ಬೆಂಡೆಯ ಹುಳಿ; ಸಾರು; ೪-೬ ಕರಿದು ದುಂಡಗೆ ಉಬ್ಬಿದ ಅರಳ ಸಂಡಿಗೆ; ಬೂದಿಗುಂಬಳದ 'ಒರುಗು' ಬಾಳಕ; ಹುರಿದ ಉಪ್ಪುಮೆಣಸಿನಕಾಯಿ, ಮೊಸರು, ಮಜ್ಜಿಗೆ. ಇನ್ನೇನು ಕಾಕಬಲಿ ಹಾಕಲು ಅಂಗಳಕ್ಕೆ ಬರುವುದರಲ್ಲಿದ್ದರು. ನಾನು ಬೇಕೆಂದು ಇದನ್ನು ವರ್ಣಿಸುತ್ತಿಲ್ಲ; ನನ್ನ ಮುಕ್ತಿಯ ಬೆಲೆಕೊಟ್ಟು ನುಡಿಯುತ್ತಿದ್ದೇನೆ. ನೂರಕ್ಕೆ ನೂರು ಪೈಸೆ ನಿಜ ಮಾತು. ಆಣೆ ಇಟ್ಟುಕೊಂಡೇನೆಂದರೆ ಆಣೆಯ ಕಾಲ ಮುಗಿದಿದೆಯಾದ್ದರಿಂದ ಅದಕ್ಕೆ ಬೆಲೆ ಬಾರದಾದೀತೆಂದು ಪೈಸೆ ಲೆಕ್ಕಾಚಾರ ಮಾಡುತ್ತಿದ್ದೇನೆ. ತಮ್ಮೊಬ್ಬರಿಗೆ ಇಷ್ಟು ಅಡಿಗೆ ಮಾಡಿಕೊಂಡದ್ದು ನಮ್ಮನ್ನೂ ಅವರು ಬೆಳಸಿ ಕಾಪಾಡಿದ ಲಕ್ಷಣ. ಹೊತ್ತೂ ಹೋಗಬೇಡವೇನಪ್ಪ. ಹಾಲು ಬೆಂಡೆಯಕಾಯಿ ಯಾರೊ ತಂದುಕೊಟ್ಟರು; ಪಡವಲ, ಚಪ್ಪರದವರೆ ಅಂಗಳದಲ್ಲಿ, ಹಿತ್ತಿಲಲ್ಲಿ ಬೆಳೆಯುತ್ತಿವೆ. ದಿನಾ ಅವರಿಗೆ ಇವರಿಗೆ ಬೇಕಾದಷ್ಟೂ ಕೊಡುವುದಾಗುತ್ತದೆ. ಕಾವೇರಿ ಮೂರುಪಾವು ಹಾಲುಕರೆಯುತ್ತದೆಯಾಗಿ ಹಾಲು ಮೊಸರಿಗೆ ಚ್ಯುತಿ ಇಲ್ಲ. ನನ್ನೊಬ್ಬಳಿಗೆ ಸಾಕು. ಹಪ್ಪಳ ಸಂಡಿಗೆ ಮನೆಯಲ್ಲಿವೆ. ಅವು ಏಕೆ ಪೋಲಾಗಬೇಕು. ಬಳಸದಿದ್ದರೆ ಸುಮ್ಮನೆ ಮಗ್ಗಿಹೋಗುತ್ತವೆ. ಮಕ್ಕಳು ನೀವಾರಾದರೂ ಮನೆಯಲ್ಲಿದ್ದರೆ ಇನ್ನೇನಾದರೂ ಮಾಡಬಹುದಿತ್ತು; ಒಬ್ಬಳಿಗೆ ಇನ್ನೇನು ಬೇಕು; ಏಳು, ಕಾಲ ತೊಳೆದು ಬಾ; ಊಟಮಾಡುವೆಯಂತೆ ಅಂದರು. ಇದು ಆಕೆಯ ಅಚ್ಚುಕಟ್ಟು.

ಅವರು ಓದಿದವರಲ್ಲ. ಸ್ನಾನ, ಉಡಿಗೆ, ತೊಡಿಗೆ, ಊಟ, ಬಂದವರಿಗೆ ಮಾಡುವ ಉಪಚಾರ ಲಾಗಾಯ್ತಿನಿಂದ ಮನೆಗೆ ಬಂದದ್ದು. ಮಕ್ಕಳಿಗೆ ಪ್ರೋತ್ಸಾಹನ; ಬಂದವರು ಹುಟ್ಟಿತುಂಬ ತಿನ್ನಲಿ ಎಂಬ ಆಸೆ. ಒಂದಕ್ಕೆ ನಾಲ್ಕು ತಿನ್ನಲಿ, ತೇಗಲಿ ಎಂಬಂತೆ ಆಡುವಮಾತು—ಜೀವನದಲ್ಲಿ ಒಂದು ವಿಶಿಷ್ಟ ಲಕ್ಷಣ ಆಕಾಲದ್ದು. ನಾಡಿಗೆ ಕ್ರಾಂತಿ ತಂದಿರುವ ಇಂಥಕಾಲ ಅಲ್ಲ ಅದು. ಹೊತ್ತಿಗೆ ಬಂದವರಿಗೆ ಮಾಡಿದ್ದ ಅಂಬಲಿ ಗಂಜಿ

ಕೊಟ್ಟು ಜನವನ್ನು ತೃಪ್ತಿಪಡಿಸುವುದು ಈ ನಾಡಿನ ಮನೆ ಮನೆಯ ಚಾರಿತ್ರ. ಹಸಿದವರಿಗೆ ಹೊಟ್ಟೆ ತುಂಬುವಂತೆ, ರುಚಿಯಲ್ಲಿ ಪಳಗಿದವರಿಗೆ ಮೆಚ್ಚಿಕೆಯಾಗುವಂತೆ, ಪುಷ್ಟಿ ತರುವಂತೆ, ಅಜೀರ್ಣವಾಗದಂತೆ ನಾಲ್ಕು ಬೇರೆ ಬೇರೆ ಬಗೆಯ, ಹಸಿ, ಬಿಸಿ, ಕರಿ, ಹುರಿ, ನಂಚು ಸೇರಿಕೊಂಡ ಅಡಿಗೆಮಾಡಿ ಬಡಿಸುವುದು ರೂಢಿ. ಇಲ್ಲಿ ದ್ವೈತಾ ದ್ವೈತಗಳ ಕಾಟ ಕಷಾಯಗಳಿಲ್ಲ. ಇದ್ದುದರಲ್ಲಿ ಸಮೃದ್ಧಿ. ಪದಾರ್ಥ ಎರಡಾಗಲಿ ನಾಲ್ಕಾಗಲಿ. ಮತ್ತೆಯೊ ಎಲ್ಲಕ್ಕೂ ಆ ಕಾಲದಲ್ಲಿ ತಿನ್ನುವಪದಾರ್ಥದ್ದೇ ಆಕೆಯಂಥವರ ರೀತಿ. ಹಸಿವಾಗಲೆಂದು ಒಂದು ತಿಂಡಿ; ಪುಷ್ಟಿಯೆಂದು ಒಂದು. ರುಚಿಗೇ ಬೇರೊಂದು. ಜೀರ್ಣಕಾರಿಯೆಂದು ಮಗುದೊಂದು. ಆದುದರಿಂದಲೇ ಅವರಿಗೆ ಅಡಿಗೆ ಆಯುರ್ವೇದದ ಒಂದು ಜೀವಾಂಗ. ಹೀಗೆ ಬಡಿಸಿದ ಎಲೆಯು ಮುಂದೆ ಇಂದಿನ ಕಾರ್ಪಣ್ಯ ಬಡಕಲು; ಬಿಕ್ಕನಾಸಿ; ಪರದೇಸಿ. ಅಂಥಲ್ಲಿಯೆ ಎಲ್ಲ ಅನೇಕಾಂತ. ರಸದ ವೈವಿಧ್ಯ—ನಡುವೆ ಪೀಠಸ್ಥವಾದ ಒಂದು ಪ್ರೀತಿಯ ಸತ್ವ, ಸಂಸಾರವನ್ನು ಸುಖದಲ್ಲಿ ಸಂತುಷ್ಟಿಯಲ್ಲಿ ನಡಸಿಕೊಂಡು ಹೋಗುವ ತಾಯಿಶಕ್ತಿಗಳ ಅನ್ನಪೂರ್ಣಾ ವಿಲಾಸದಲೋಕ ಅದು. ಪ್ರಪಂಚಕ್ಕೆ ವಿಸ್ತಾರವನ್ನೂ ಸಂಪನ್ನತೆಯನ್ನೂ ತೋರಿಸುವ ಸಂಗತಿ ಇದೇಹೊರತು ವೈರಾಗ್ಯವೆ? ಉಪವಾಸವೆ? ತೆ!

ಅವರ ಕಾಲ ತೀರಿ ಅವರ ಮಗಳು ನಮ್ಮತಾಯಿ ತನ್ನರೀತಿಯಲ್ಲಿ ಈ ರಸವಿಧಾನವನ್ನು ಬೆಳಸಿದ ಜೊತೆಗೆ ನಮ್ಮನ್ನೂ ಬೆಳಸಿದರು. ಆ ರಕ್ಷಣೆ ಪೋಷಣೆ, ಆ ಮಧುರಿಮೆ, ಪರಿಮಳ, ಮನೆಯ ಎಲ್ಲವನ್ನೂ ವಿಚಕ್ಷಣೆಯಿಂದ ನಡಸಬೇಕೆಂಬ ಪ್ರವೃತ್ತಿ ನಮ್ಮ ಅಜ್ಜಿಯಿಂದಲೇ ಬಂದುದು. ಏನಿಂದ್ರಜಾಲವೊ ನೋಡಿ. ಬೆಳಗ್ಗೆ ಬಾಯಿ ಏಕೊ ಅರೋಚಿಕನಾಯಿತೆನ್ನಿ. ಮನೆಯಲ್ಲಿ ಸೇವಿಗೆಯೊ ಮೆಣಸುಕೂಟೊ, ಮೇಲೋಗರವೊ, ಕಾಳುಹಾಕಿ ಬಸಿದ ಸಾರೊ, ಮಾಡಿದ್ದರಾಗುತ್ತಿತ್ತು ಎನ್ನಿಸಿತೆನ್ನಿ; ಮಧ್ಯಾಹ್ನ ಮನೆಗೆ ಊಟಕ್ಕೆ ಕುಳಿತರೆ ಯಾವ ದೂರಾಂತರ ಹೃದಯಸಂವಾದದ ಲಹರಿಯೊ (Telepathic Transference) ಅವುಗಳಲ್ಲಿ ಒಂದೊ ಎರಡೊ ಎಲೆಯಲ್ಲಿ ಕಾಣುತ್ತಿದ್ದವು. ಒಂದು ಜೀವದ ಆಸೆಗೆ ಇನ್ನೊಂದು ಭಾವ, ಇನ್ನೊಂದು ನೆರವೇರಿಕೆಯ ಕ್ರಿಯೆ ಕೂಡಿಬರುವಂತೆ ಇಂಗಿತದ ಸಾಧನೆ ಆಗುತ್ತಿದ್ದುದು ತಲೆತಲಾಂತರದಿಂದ ಬಂದುದೇ ಇರಬೇಕು. ಒಂದು ಮನೆಯ ಲಕ್ಷಣ ಹೀಗೆ ರಕ್ತದಲ್ಲಿ ಆಚರಣೆಯಲ್ಲಿ ನಡೆದುಕೊಂಡು ಬಂದೇ ಈ ದೇಶ, ಯಾವದೇಶವೂ ಹಾಗೆಯೇ ಇರಬೇಕು, ಸಂಸ್ಕಾರ ಸಂಪ್ರದಾಯಗಳನ್ನು ಉಳಿಸಿಕೊಂಡು ಬೆಳಸಿಕೊಂಡು ಬಂದಿರುವುದು. ಆಯಾ ಗಿಡದ ಹೂ ಹಣ್ಣು, ಆಯಾ ಜಾತಿಗೆ ಸಫಲತೆ ತರುವಂತೆ ವಿಶಿಷ್ಟತೆಯಲ್ಲಿ, ವಿಲಾಸದಲ್ಲಿ ಬೆಳೆಯುತ್ತವೆ. ತಾಯಿ ಮಗಳಲ್ಲಿ, ಮಗಳು ಮೊಮ್ಮಗಳಲ್ಲಿ ಈ ಹಾಲು ಹರಿದುಬರುತ್ತದೆ. ಈ ಪ್ರವೃತ್ತಿಯಂಥಲ್ಲಿ ರೂಪಗೊಳ್ಳುವುದು ಪ್ರೀತಿಯೊಂದಕ್ಕೇ ಶಕ್ಯ. ಆದರೆ ನಮ್ಮ ತಾಯನ್ನು ಕುರಿತು, ನಾನು ಬರೆಯುತ್ತಿರುವುದು, ಆಕೆಯ ಮಾತು ನಾಳೆಗಿರಲಿ.

ನನ್ನ ಅಜ್ಜಿ ಉಪಾಧ್ಯಾರ ಹೆಂಡತಿ. ಜಾತಿ ವೃತ್ತಿಗಳಲ್ಲಿ ಪುರೋಹಿತರ ವಂಶಕ್ಕೆ ಸೇರಿದವರು ನಾವು. ೨ ರೂಪಾಯಿ ಸಂಬಳದಿಂದ ೫೦ ರೂಪಾಯಿಯೊ ೬೦ ಗಳಿಸುವ ವರೆಗೂ ಬಡತಿ ಹೊಂದಿ ನಮ್ಮ ಅಜ್ಜ ನಲವತ್ತು ವರ್ಷ ಕೆಲಸಮಾಡಿ ನಿವೃತ್ತರಾಗಿದ್ದವರು. ಕೇಳಿಕೆಗಳನ್ನು ಬರೆದು ಆಡಿಸುತ್ತಿದ್ದರಂತೆ. ಭಾಗವತದ ಯಾವುದೊ ತೋರ ಹಸ್ತಪ್ರತಿಯಲ್ಲಿ ಅವರ ಆಣಿಮುತ್ತಿನ ಸರದಂಥ ಬರವಣಿಗೆಯನ್ನು ನೋಡಿದ್ದ ನೆನಪು. ಅದೆಲ್ಲ ಮಾಯವಾಗಿಬಿಟ್ಟಿತು. ಯಾರದೊ ಪ್ರಯೋಜನಕ್ಕೆ ದುಡಿದಿದ್ದರಾಯಿತು. ಆದರೆ ನಾನು ಅದನ್ನು ಹೇಗೆ ಬಯಸಬಹುದು. ಯಾರ ಕೈಸೇರಿತೊ ಏನಾಯಿತೊ ! ಮೃದಂಗದಲ್ಲಿ ಅವರು ನಿಷ್ಣಾತರಂತೆ ಕೂಡ. ಈ ಗುರುಪತ್ನಿಯನ್ನು ಕಂಡರೆ ಆ ಗಡ್ಡೆಯವರಿಗೆಲ್ಲಾ ತುಂಬಾ ಪ್ರೀತಿ. ಅವರನ್ನು ೮-೧೦ ಮೈಲಿ ದೂರದ ಊರುಗಳಿಗೆ ಕುದುರೆಯ ಮೇಲೆ ಕೂಡಿಸಿಕೊಂಡು ಕೇಳಿಕೆಗಳಿಗೆ ಒಯ್ಯುತ್ತಿದ್ದರು. ಆಕೆಗೆ ಮೆಚ್ಚಿಕೆಯಾದರೆ ಗುರುದಕ್ಷಿಣೆ ಸಲ್ಲಿಸಿದಂತೆ ಆಡುವವರಿಗೆ. ಒಮ್ಮೆ ಇಮ್ಮೆ ನಾನು ಹುಣಸೂರಿಗೆ ಬಾಗಲೂರಿಗೆ ಹೋಗಿರಬೇಕು. ಆಕೆ ಇಟ್ಟ ಅನ್ನದಿಂದ, ಎರೆದ ಗಂಜಿಯಿಂದ, ಧಾತು ಈಶ್ವರದ ಬರಗಳಲ್ಲಿ ನಾವು ಬದುಕಿದೆವು ಎನ್ನುತ್ತಿದ್ದವರು ಬಹುಮಂದಿ ಇದ್ದರು. ಆದ್ದರಿಂದ ಆಕೆ ಎಲ್ಲಿಗೆ ಹೋಗಲಿ ಕಾಯಿ, ಪಲ್ಲೆಯ, ತೆನೆ, ಬಾಳೆ, ಕಬ್ಬು, ತೆಂಗು, ತುಪ್ಪ, ಬೆಲ್ಲ ಕೊಡುತ್ತಿದ್ದರು. ಉಪಾಧ್ಯಾಯರ ಪತ್ನಿಗೆ ಸಂತೆಯದಿನ ಪಸಿಗೆ ದೊರೆಯುತ್ತಿತ್ತು. ಹೊಸ ತೆನೆ ಪೂರ್ತ ಬಲಿತಕಾಲದಲ್ಲಿ ಅದನ್ನು ಸಮ ಬೆಲ್ಲ, ಕೊಬ್ಬರಿ, ಹಾಕಿ ಬೆಳಸಿತಿನ್ನುವುದು, ಮೊಸರನ್ನ ಅಂಬೊಡೆ ಸೇವೆ ಸಲ್ಲಿಸುವುದು ಈ ಅರುವತ್ತು ವರ್ಷದ ಹಣ್ಣು ನೆನಪು. ತನ್ನ ರೈತರು ತಾವು ಬೆಳೆದುದನ್ನು ತಂದು ಕೊಡುವುದಂತೂ ಸರಿಯೇ. ಮನೆಯಲ್ಲಿ ಕುಂಬಳ, ಸೌತೆ, ಹೀರೆ, ಸೀಮೆಬದನೆ, ಪಡವಲ, ಚಪ್ಪರದವರೆ ಆಯಾ ಕಾಲಗಳಲ್ಲಿ ಸುಲಭವಾಗಿ ಚಪ್ಪರದ ಮೇಲೆಯೊ ಹರಡಿಯೊ ಬೆಳೆಯುತ್ತಿದ್ದವಲ್ಲವೆ. ಸೌತೆಯ ಕೋಸುಂಬರಿ, ಅದರ ತಿರುಳನ್ನೊ ಬೂದಿಗುಂಬಳದ ತಿರುಳನ್ನೊ ರುಬ್ಬಿ ಮಾಡಿದ ದೋಸೆಗೆ ಬೀಳುತ್ತಿದ್ದ ಹುದುಗು ಈ ನಾಲಗೆಗೆ ಇರಬಲ್ಲ ಅಲ್ಪ ಸ್ವಲ್ಪ ಮಿದುತೆಯನ್ನು ತಂದಿದೆ ಎನ್ನಿಸಿದೆ. ಹೀರೆ ಸೀಮೆಬದನೆಗಳ ಹುಳಿತೊವ್ವೆ, ಹೀರೆಯ ಬೋಂಡ ಚಪ್ಪರದವರೆಯ ಕೂಟುಗಳ ಪರಿಮಳ ಆರುದಶಕಗಳ ಗಾಳಿಯಲ್ಲಿ ತೇಲಿ, ಬಾಹ್ಯಾಕಾಶದಲ್ಲಿ, ಚಂದ್ರಮಂಡಲದಲ್ಲಿ, ಮಂಗಳಗ್ರಹದಲ್ಲಿ ಈಚೆಗೆ ರಷ್ಯನ್ನರಿಗೆ ಅಮೇರಿಕದವರಿಗೆ ಕಂಡಿದೆಯಂತೆ. ನಾಳೆ ಅಲ್ಲಿಂದ ಬಾನುಲಿ ಅಲೆಯಲ್ಲಿಂದ ನಾನು ಎಚ್ಚರವಿದ್ದರೆ ಕಿವಿಗೆ ಬಿದ್ದೀತು ಕೂಡ. ಏನು ತರತೀಪು, ಏನು ಸಹಜ ಪ್ರೇಮಲತೆ ! ಬೆಳಗಾಗುವ ಮುಂಚೆ ನನ್ನನ್ನು ಕರೆದುಕೊಂಡು ಜ್ಯೋತಿಪುರ, ಸೋಮನಹಳ್ಳಿ, ಹಂದರಹಳ್ಳಿಗಂತೂ ಸರಿಯೇಸರಿ; ಕಮ್ಮಸಂದ್ರಕ್ಕೆ ಜನ್ನಹಳ್ಳಿಗೆ ಹೊರಟಳನ್ನಿ. ದಯ ಮಾಡಿಸೋಣಾಯಿತು ಅಮ್ಮ, ಎಂದವರೇ ಮೂರು ನಾಲ್ಕು ರೈತಾಪಿ ಮಂದಿ ಅವರ ಹಿಂದೆ ತೆಂಗು, ಹಲಸಂದೆ ಕಾಯಿ ಹಲವಾದಿ ಹೊತ್ತುತರುತ್ತಿದ್ದರು. ಇವರ ಕೈಗೆ ೨-೩ ಸೊಲಿಗೆ ಹಚ್ಚನ್ನ ಹೆಪ್ಪುಕಟ್ಟಿದ ಹಸುವಿನ ತುಪ್ಪದಕುಡಿಕೆ ಬರುತ್ತಿತ್ತು.

ನಾನು ಅಲ್ಲಿಗೆ ಹಿಂದಕ್ಕೆ ಬರುವಾಗ್ಗೆ ಮೊದಲು ಈ ಪರಿಯಸೊಬಗಾವ ಎಂಬ ಶಾರದೆ, ನಾಲಗೆಯೊಳಿರಬಾರದೆ? ಮೇಲುಕೋವೆ ಕೃಷ್ಣತುಲಸಿ, ಮೇಲುಕೋವೆ ರಾಮತುಲಸಿ ಎಂಬುದೋ, ಎಂತದಯೊ ದಾಸುಲಪ್ಪೆ ಎಂಬುದೊ, ಯಾವ್ಯಾವುದು—ನಮ್ಮ ಕಡೆ ತೆಲುಗಿನ ಭಾಗವತ ಮುಂತಾದವಕ್ಕೆ ಹೆಚ್ಚು ಬಳಕೆಯಿತ್ತಾದ್ದರಿಂದ ಅದಾವ ಭಾಷೆಯೊ ಎಂಬುದು ಕೂಡ ತಿಳಿಯದ ಕಾಲದಲ್ಲಿ ಅವು ಕಿವಿಗೆ ಅಮೃತವಾದ್ದು—ಹೇಳಿ ಕೊಡುತ್ತಿದ್ದರು. ನಡೆಯುತ್ತ ನಡೆಯುತ್ತ ಮುಂದಿನ ಗಿಡಮರ ನಮಗೆ ಹಿಂದಾಗುತ್ತಿದ್ದವು. ಚಂದ್ರ ಮಾತ್ರ ಹಿಂದೆ ಹಿಂದೆಯೇ ಬರುತ್ತಿದ್ದ—ನಮ್ಮಜ್ಜಿಯ ಹಾಡು ಕೇಳಬೇಕೆಂದೊ ಏನೊ. ಆಕೆಯ ಮಹಿಮೆ ಅಷ್ಟೆಂದು ತಿಳಿದದ್ದು ನನಗೆ ಹಾಗೆ.

ಒಂದು ಸಂಗತಿಯನ್ನು ಮಾತ್ರ ತಿಳಿಸಲೇಬೇಕು. ಅವರೆಯಕಾಯಿ ಕಾಲ ನಮಗೆ ಅತಿಶಯ. ಈ ಕಾಲದವರಿಗೆ ಅದರಷ್ಟು ನಿಕೃಷ್ಟ ಬೇರೆ ಯಾವುದೂ ಇಲ್ಲ. ಆಕೆಗೆ ಅತಿಶಯ ಆದ್ದರಿಂದ ನನಗೆ ಅತಿಶಯವೇ. ಈ ಅಧ್ವಾನ್ನ ಕಾಲದಲ್ಲಿ ಯಾವು ಯಾವುದೋ ಪರದೇಶಿ ಪಕ್ವಾನ್ನ ಬಾಯಿಗೆ ಬೆರಕೆ ಬೆರಸಿ ಹೊಲಸು ಮಾಡಿದೆ. ಶುಚಿಯಿಲ್ಲದವನ ಗಂಡೇಂ ತೊಂಡೇಂ—ಎಂಬಂತೆ ರುಚಿಶುದ್ಧಿ ಇಲ್ಲದವರದು ಒಂದು ನೇರವೆ? ಗೊತ್ತೆ? ಗೈಮೆಯೆ? ಇದರ ಖ್ಯಾತಿ ಕಟ್ಟಿಕೊಂಡು ನನಗೇನಾಗಬೇಕಾಗಿದೆ ಬಿಡಿ. ನಮ್ಮ 'ವೋಲ್ಡ್' ರುಚಿಗಳಿಂದ ಇಂದು ನಮಗೆ ಅಪಖ್ಯಾತಿ ಬಂದಿದೆ. ಮುಖ್ಯ ರುಚಿಗಿಂತ ಹೆಚ್ಚಾಗಿ-ಅಷ್ಟಾದರೂ ಎನ್ನಿ-ಇವರ ಜೀರ್ಣಶಕ್ತಿ ಮಂದವಾಗಿದೆಯಾಗಿ ಇದು ಬೇಕಿಲ್ಲ. ನನಗೆ ಗೊತ್ತು. ಹಿಡಿದು ಒಂದಷ್ಟು ಸೇರಿಸಿಕೊಂಡು ತಿನ್ನಲಾರದವರು ಹೇಗೆ ಸಂಸಾರ ಮಾಡಬಲ್ಲರೊ ಕಾಣೆ ಎನ್ನುತ್ತಿದ್ದರು ಅಜ್ಜಿ, ನಿಜ. ಆಕೆಗೆ ಅವರೆಯ ಕಾಲದಲ್ಲಿ ಅದೇ ಬೇಕು. ಒಂದೊಂದು ದಿನವೂ ಅದರಿಂದ ಒಂದೊಂದು ಬಗೆಯ ಅಡಿಗೆ, ಒಪ್ಪ ಎಷ್ಟು ತರ ಹದ, ರುಚಿ! ತಟ್ರೆ ತಬಣರು, ಕಾಳು, ಹಿದಕು, ಹುರಿ, ಬೇಸು, ಕಾರ, ಸಪ್ಪೆ. ಇವರಿಗೇನು ತಿಳಿದೀತು, ಎಂಟಕ್ಕೆ ಹತ್ತಕ್ಕೆ ತನ್ನ ಹೊಲದಿಂದ ಮಡಿಲು, ಮಕ್ಕರಿ, ಚೀಲಕಾಯಿ ಬರುತ್ತಿತ್ತು. ಆ ಕಾಲದ ಸಮೃದ್ಧಿ ಕೈ ತೆರೆದು ಕೊಡುತ್ತಿದ್ದ ಧೋರಣೆಯದು. ತಂದವರನ್ನು ಊಟಕ್ಕೆ ಉಳಿಸಿಕೊಂಡು ಅಂದಿನ ಅಡಿಗೆಯನ್ನು ಅವರಿಗೆ ಊಡಿ ಅವರನ್ನು ತಣಿಸುತ್ತಿದ್ದುದು ಮನೆಯ ವಾಡಿಕೆ. ಅಥವಾ ಅವರೇ ಯಾರೊ, ಅಮ್ಮ ಬಾಯಿ ಕೆಟ್ಟದೆ, ನಿಮ್ಮ ಕೈ ಬೋಜಣ ಮಾಡಿ ವರ್ಸ ಆರು ತಿಂಗಳಾಯಿತು, ಎಳೆ ಕುಂಬಳ ತಂದಿದ್ದೀನಿ. ಕುಡಿ ತಂದಿದ್ದೀನಿ. ಈ ಕಾಳು ಹಿದಿಕಿ ಅಡಿಗೆ ಮಾಡಿ ಬಡಿಸಿದರೆ ಸಂತೋಸಾಗಿ ಓಗ್ತೀವಿ ಎನ್ನುತ್ತಿದ್ದುದುಂಟು.

ನಾನು ಅದನ್ನೂ ಅಲ್ಲ ಈಗ ಹೇಳುತ್ತಿರುವುದು. ಬೆಳಗ್ಗೆ ಸೂರ್ಯ ಮೂಡುವ ಹೊತ್ತಿಗೆ ಆಕೆ ಯಾರ ಹೊಲಕ್ಕಾದರೂ ಹೋಗುವ ರಹದಾರಿ ಪಡೆದವರು. ಯಾವ ಅಡ್ಡಿಯೂ ಇರುತ್ತಿರಲಿಲ್ಲ. ಹೊಲ ಸುತ್ತಿ ಒಂದು ಸಾಲಿಗೆ ಒಂದು, ಎರಡು ಗಿಡದ ತೆನೆಯಲ್ಲಿ ಒಂದೊಂದೊ ಎರಡೆರಡೊ ಕಾಯಿ ಬಿಡಿಸಿಕೊಂಡು—ಅವರು ಎಂದಿಗೂ ತೆನೆ ಕಾಯಿ ತರಚಿ ಗಿಡವನ್ನು ಬಡವು ಮಾಡಿದವರಲ್ಲ—ಆ ದಿನ, ತಮಗೆ ಏತಕ್ಕೆ

ಎಷ್ಟು ಬೇಕೊ ಅಷ್ಟರಲ್ಲಿ ಸೊಗಡು ಸೊಗಡಾಗಿ, ಎಳಸಾಗಿ, ಹಣ್ಣಾಗಿ ಯಾವುದಿರುತ್ತಿತ್ತೊ ಅವುಗಳನ್ನು ಮಾತ್ರ ಆಯ್ದು ತರುತ್ತಿದ್ದರು. ಅದಕ್ಕೆ ಬೇಕಾದ ಎಲ್ಲ ಸಂಸ್ಕಾರ ವಿಧಾನ ನಡೆದ ಮೇಲೆ–ಸಂಭಾರಗಳನ್ನೆಲ್ಲ ವರ್ಷಕ್ಕೊಮ್ಮೆ ಕೊಂಡಿಡುವುದು ಆ ಕಾಲದ ರೂಢಿಯಾದ್ದರಿಂದ ಉಳಿದೆಲ್ಲವೂ ಸುಮಾರು ಮನೆಯಲ್ಲಿರುತ್ತಿತ್ತು—ಬಸಿದ ಸಾರು, ಗೊಡ್ಡು ಹುಳಿ, ಬೇಳೆಯೊಡನೆ ಬೆಂದದ್ದೊ; ತಾಳ್ದ, ಕೂಟು, ತೊವ್ವೆ, ಹಿದುಕಿದ್ದು, ಸಪ್ಪೆಯದು ಕಾರಕ್ಕೆ ಮಾಡುತ್ತಿದ್ದರು. ಸಿಕ್ಕಿಸಿಕ್ಕಿದ ಕಾಯಿ ಪಲ್ಲೆಯ ಕಾಳೊಡನೆ, ಕಾಯೊಡನೆ ಸೇರಿಸುತ್ತಿರಲಿಲ್ಲ, ಕೆಲವಕ್ಕೆ ನೆಲಗಡಲೆ ಸೇರದು; ಕೆಲವಕ್ಕೆ ಬೇಕು; ಕೆಲವು ದಿನ ಬದನೆ ಮಾತ್ರ; ಚಪ್ಪರದವರೆಯ ಸಾಂಗತ್ಯ ನಿತ್ಯ ಸೂಕ್ತ. ಅವರೆಕಾಳಿನ ಜೊತೆಗೆ ಹಾಕಿ ಬೇಯಿಸಿದ ಜೊತೆಗೆ ಆಲೂ, ಸೊಪ್ಪು. ಅರೆ ಕಸಬಿನ ಅಡಿಗೆ ಎಂದಿಗೂ ಇಲ್ಲ. ಯಾವುದಕ್ಕೂ ಒರೆದೊರೆ ಎಂಬುದಿಲ್ಲವೆ; ಹೊಂದ ಬೇಡವೆ; ಮಿತ್ರಗಣ ವೈರಿಗಣ ಇಲ್ಲವೆ? ಅವುಗಳಲ್ಲಿ ಯಾವುದರ ವಿಧಾನವನ್ನಾಗಲಿ ಕಂಪನ್ನಾಗಲಿ ತುಟಿ ರುಚಿಯನ್ನಾಗಲಿ ಹೊಗಳಿ ಈಗ ಅದಿಲ್ಲದ ಘಾಸಿ ಶಿಕ್ಷೆಯನ್ನು ಅನುಭವಿಸುತ್ತಿರುವ ಭವಿ ನಾನು. ಕೆಲವಂತೂ ಹಸಿ ಕೊಬ್ಬರಿ ರುಬ್ಬಿ ಮಾತ್ರ ಬಳಸ ಬೇಕು. ಕೆಲವಕ್ಕೆ ಕೊಬ್ಬರಿ ಪಚ್ಚಡಿ. ತೆಂಗಿನದು ಕೆಲವಕ್ಕೆ. ಹುರಿದ ಒಣ ಕೊಬ್ಬರಿ ಯದು ಕೆಲವಕ್ಕೆ. ಜೀರಿಗೆ ಸಂಭಾರ ಇನ್ನುಕೆಲವಕ್ಕೆ ಹುಚ್ಚೆಳ್ಳು ಪುಡಿ; ರೊಟ್ಟಿ, ದೋಸೆ, ತೊಟ್ಟಿಲುಕಡುಬು, ಗುಗ್ಗರಿ ಅಕ್ಕಿ ತರಿ ಉಪ್ಪಿಟ್ಟು. ಇಂದೆಲ್ಲಿ ತರಲಿ? ಅದನ್ನು ಯಾರು ಹಾಗೆ ಮಾಡಿಕೊಡುವವರು? ಒಂದೇ ಎರಡೇ–ಹಿಂದೂಪುರದ್ದೊ, ಹೈದರಾಬಾದಿನದೊ ಹತ್ತು ದಿನದ ಒಣ ಗಡಂಗು ಕಾಯಿ ತಿನ್ನಬೇಕಾದ ಈಗ ಆ ಹಚ್ಚ ಹೊಸ ಸೊಗಡು ಬಂದೀತು ಹೇಗೆ? ಆಮ್ಲೆಟ್, ಕಟ್ಲೆಟುಗಳ ಕೋಚು ವಾಸನೆಗೆ ಮೂಗನ್ನು ತಿದ್ದಿದ ಕಾಲದಲ್ಲಿ ಗಂ ಎಂದು ಕಾಲದ ಆ ದೂರದಿಂದ, ಕರೆನಾಡಲ್ಲಿ ಕುಳಿತ ಇಲ್ಲಿಗೆ ಆಕೆ ಅಡುತ್ತಿದ್ದ ಆ ಜೀರಗೆ ಕೊತ್ತುಂಬರಿಗಳ ಹಸವಾಸನೆ ತೇಲಿ ತೇಲಿ ಹಾಯೆನಿಸಿ ಅತ್ತರಿನಂತೆ ಬರುತ್ತಿದೆ. ಈ ಹುಡುಗರ ಆಕಾಂಕ್ಷೆಯ ದಾರಿದ್ರ್ಯ ಆ ಒಗ್ಗರಣೆಯ ವಿಶೇಷಕ್ಕೆ ಲಗ್ನವಾಗ ಬೇಕಿರುವ ಸಮಾಧಿಯನ್ನು ಕೆಡಿಸಿ ಮನಸ್ಸನ್ನು ವ್ಯಸ್ತಗೊಳಿಸುತ್ತಿದೆ. ನಮ್ಮ ದೇಶದ ಗತಿಯೇನು ನಾಳೆ ಎಂದು ಚಿಂತೆ ತರಿಸಿತ್ತು, ಏತಕ್ಕೆ ಬದುಕಬಲ್ಲರು ಇವರು ಎಂದು.

ಅವರೆ ಎಂಬಾಗ ಇನ್ನೊಂದು ನೆನಪಿಗೆ ಬಂದಿತು. ಕಾಳಿನ, ಕಾಯಿನ ಕಾಲವೆಲ್ಲ ಮುಗಿದು ಗಿಡಗಳನ್ನು ಇನ್ನೇನು ಕುಯ್ಯಬೇಕೆನ್ನುವಾಗ ತಳಲುಕಾಯಿ, ತಳಲುಕಾಳು ಸಿಕ್ಕುತ್ತದೆ. ದನದ ಮೇವಿಗೆ, ತಿಪ್ಪೆಗೆ-ಗಿಡ, ಹಣ್ಣೆಲೆ; ಕಾಳು–ಹುರಿದು ಕಾರವಿಡುವುದು. ಊರಬೇಕಾದ್ದು. ಅದರ ಜೊತೆ ನೆಲೆಗಡಲೆ ಕುಸುಬೆ, ಒಣಕೊಬ್ಬರಿ ಸೇರಿತೆಂದರೆ ಆ ಗರಗು ಇನ್ನು ಯಾತಕ್ಕೆ ಬಂದೀತು. ಆಕೆ ಮಾಡುತ್ತಿದ್ದ ಹುರಿಗಾಳುಗಳ ವಿವಿಧತೆ ಲೆಕ್ಕ ವನ್ನು ಮೀರಿದ್ದು. ಸೀಮಂತದ ಹುರಿಗಾಳು ಒಂದನ್ನು ತಿಂದು ಒಬ್ಬ ವಜೀರರೆಂದರು· ತನಗೇ ಸೀಮಂತ ಮಾಡುತ್ತಿದ್ದಾರೇನೊ ಎನ್ನಿಸಿದೆ ಇದನ್ನು ತಿಂದು ಎಂದು. ಇವರಲ್ಲಿ ಸ್ಮಾರ್ತ, ಮಾಧ್ವ, ಶ್ರೀವೈಷ್ಣವ ಸಂಪ್ರದಾಯಗಳು ಬೇರೆ; ಅಲ್ಲಿ ಶಾಖೆ ಉಪಶಾಖೆ

ಗಳೂ ಇವೆ. ದಕ್ಷಿಣಕ್ಕೆ ಹತ್ತಿರದ ಕೊಳ್ಳೆಗಾಲ ಯಳಂದೂರು ಕಡೆಯವಿವೆ; ತೆಲುಗರಾದ ಹತ್ತಿರದ ಗೌರಿಬಿದನೂರು ಶ್ರೀನಿವಾಸಪುರದವಿವೆ; ಇತ್ತ ಸಿರಸಿ ಸಿದ್ದಾಪುರ ಕಾರ್ಕಳದವಿವೆ; ಉಡುಪಿಯದಿದೆ; ಗದಗ್, ಬಿಜಾಪುರ, ಹೊಸಪೇಟೆ, ಮರೆತೆ, ಹರಪನಹಳ್ಳಿ, ಕೊಪ್ಪಳದವು. ನಾನಾ ಖಾದ್ಯ ವಿಜೃಂಭಣೆಗಳು ನಯನಾಜೂಕುಗಳು ಇವೆ; ಒಂದೇ ಸರಿ, ಸಾಕು ಎಂಬುದು ಪ್ರಪಂಚಕ್ಕೆ ಸಲ್ಲದ ದಾರಿದ್ರ್ಯ; ಎರಡಲ್ಲ ಎಂಬ ಅದ್ವೈತ ಅಡುಗೆಗೆ ಅಜ್ಜಿಯರಿಗೆ ಅಪಚಾರ ಎನ್ನಿಸುತ್ತದೆ ನನಗೆ; ನಿಮ್ಮ ಅಭಿಪ್ರಾಯ ಬೇರೆ ಇದ್ದಿದ್ದಾದರೆ ನಿಮ್ಮ ಸ್ವರ್ಗ, ನರಕ ನಿಮಗೆ; ಅಂಥಲ್ಲಿಗೆ ನಾವು ಪ್ರವೇಶ ಬೇಡುವವರಲ್ಲ.

ಹಿಂದಿನ ಅಚ್ಚುಕಟ್ಟು ಸಡಿಲವಾಗುತ್ತಿರುವ ಈ ಕಾಲದಲ್ಲಿ ಇದನ್ನು ಸ್ವಲ್ಪವಾದರೂ ನೆನಸಿಕೊಂಡಲ್ಲದೆ ಮಾತೃಋಣ ತೀರದೆಂದು ಕರ್ತವ್ಯಬುದ್ಧಿಯಿಂದ ಇದನ್ನು ಹೇಳುತ್ತಿದ್ದೇನೆ; ಎಂಥದಕ್ಕೆ ನಾವು ವಿಮುಖರಾಗುತ್ತಿದ್ದೇವೆ ಎಂಬುದನ್ನು ತಿಳಿಸಲು. ಆ ಕೋಡುಬಳೆ, ಚಕ್ಕುಲಿ, ಮುಚ್ಚೋರೆ, ತೇಂಗೊಳಲು, ಅಂಬೊಡೆ, ಕರಿಗಡಬು ಸವಿಯದೆ ಅಹಮಿಂದ್ರತ್ವವೇ ಸಿದ್ಧಿಸದೆಂದಾಗ ಚರಮದೇಹಕ್ಕೆ ಆಗಲಿ ಸಿದ್ಧಿಗೆ ಆಗಲಿ ಇನ್ನೂ ಒಂದು ಜನ್ಮ ಸವೆಯಬೇಕಿದೆ ಎಂದೇ ಅರ್ಥವಾಗದೆ? ಕರ್ಮಪರಿಪಾಕ ಮುಗಿಯದೆ ಭವಾವಳಿ ಹೇಗೆ ತೀರಬೇಕು? ಹುರಿದು ಬೆಂದು ಪಕ್ವವಾದರೆ ತಾನೆ ಅಪುನರ್ಭವಕ್ಕೆ ಪ್ರಾರ್ಥನೆ.

ಸಿಹಿತಿಂಡಿಗಳು ನಮ್ಮಲ್ಲಿ ಕಡಮೆ. ಪಾಯಸ, ಕಡುಬು, ಹೂರಣ, ಒತ್ತು ಸೇವಗೆ ಉಂಡೆಗಳು ನಮ್ಮವು. ಲಾಡು, ಕೇಸರಿಭಾತು, ಜಿಲೇಬಿ, ನಮ್ಮವಲ್ಲ; ಮಂಡಿಗೂಳೂರಿಗೆ ಹೇಗೊ! ಒಬ್ಬಟ್ಟು–ಒಬ್ಬಿಟ್ಟು–ನಮ್ಮವೇ: ಹೋಳಿಗೆ? ಸಜ್ಜಪ್ಪ, ತಂಬಿಟ್ಟು ಮಾಡಿ ಬಾಳೆಹಣ್ಣು ಹಾಕಿಯೊ ಹಾಕದೆಯೊ ಅಪ್ಪಟ ತುಪ್ಪದಲ್ಲಿ ಕರಿದ ಅತಿರಸ ನೂರು ಬಗೆಯ ದೋಸೆ ನಮ್ಮವು. ಉತ್ತರದ ಸಿಹಿಗಳು ಅವರ ವಿಶೇಷ. ಆ ಬಾದಾಮಿ, ಕೇಸರಿ, ಯಾಲಕ್ಕಿ, ಪಿಸ್ತ, ಆ ಮಲಾಯಿ, ಖೋವ, ಆ ರಸಗುಲ್ಲ, ಸಂದೇಶ್, ಘೀವರ್ ಭಾರತದ ಇತರ ಪ್ರಾಂತಗಳ ಭಾಗ್ಯಗಳು, ಭೋಜ್ಯಗಳು. ಅವರ ಸಂತೋಷ ಅವರಿಗೆ; ನಮ್ಮದು ನಮಗೆ. ನಮ್ಮ ಹೆಸರುಂಡೆ ಪುಳ್ಳಂಗಾಯಿಉಂಡೆ ಅವರೆಲ್ಲಿ ತಂದಾರು? ಒಮ್ಮೆ ಫಿರಂಗಿ ಗುಂಡುಗಳಿಗೆ ಬದಲು ಪ್ರಸ್ತದ ಮನೆಯ ಪುಳ್ಳಂಗಾಯಿಗಳನ್ನು ಎಸೆದು ಬ್ರಿಟಿಷರನ್ನು ನಮ್ಮದೇಶದಿಂದ ಹೆಚ್ಚು ಬೇಗ, ಹೆಚ್ಚು ಸವಿಯಾಗಿ ಸುಲಭವಾಗಿ ಓಡಿಸಿ ಬಿಡಬಹುದು ಎಂದು ನಾವು ವಿಧಾನ ಕ್ರಿಯೆಯನ್ನು ರಚಿಸಿಕೊಂಡದ್ದುಂಟು. ಗಾಂಧಿ ಎಲ್ಲವನ್ನೂ ಕೆಡಿಸಿಬಿಟ್ಟರು. ಅವಿಯಲ್, ಉದ್ದಿನ ಕೊಳಕಟ್ಟೆ, ಥಪ್ಪಳ ನಮ್ಮವಲ್ಲ, ಬಹುಶಃ ತುಣಿ ತೇಂಗೊಳಲು ಕಂಚಿಯದೊ ಮಧುರೆಯದೊ ಕರ್ನಾಟಕಕ್ಕೆ ಬಂದಿರಬೇಕು. ನಮ್ಮ ಸವಿ ನಮ್ಮದು. ನಮ್ಮನ್ನು ಬೆಳಸಿತು. ನಮ್ಮಲ್ಲಿ ಇಳಿಯಿತು. ನಮ್ಮ ಅಜ್ಜಿಯ ಕೈಗೆ ಹದ ತಂದಿತು. ಆಕೆ ಮಾಡಿದ ಪ್ರತಿಯೊಂದಕ್ಕೂ ಸಿದ್ಧಿ ಪರಮ ಪಕ್ವತೆ ತಂದುಕೊಟ್ಟಂತಾಗಿ ಆ ಮೂಲಕ ನಮಗೆ ಚರಮ ಸೌಖ್ಯವನ್ನೂ ದಯಮಾಡಿತೆಂದು ನೆನೆದು ನನ್ನ ಮನಸ್ಸು ತೃಪ್ತವಾಗಿದೆ. ಬಡಿಸುವಾಗಲೂ ಅದೇ ವಿಚಕ್ಷಣೆ! ಯಾವುದಕ್ಕೆ ಹಾಲು ಎರೆಯಬೇಕೊ, ಯಾವುದಕ್ಕೆ ಹೆತ್ತುಪ್ಪ, ಯಾವುದಕ್ಕೆ ಕಾಯಿಸಿದ ತುಪ್ಪ

ಹಾಕಬೇಕೊ ಹಾಗೆಯೇ ಹಾಕಿಯಾಳು; ಯಾವುದಕ್ಕೆ ಬೆಣ್ಣೆಯೊ ಯಾವುದಕ್ಕೆ ಎಣ್ಣೆಯೊ ಅದನ್ನೇ ಬಡಿಸಿಯಾಳು; ಇದು ಸೂತ್ರನಿಷ್ಠೆ. ಅದರದರ ಇಯತ್ತೆಯಲ್ಲಿ ಅದಕ್ಕೆ ಮುಕ್ತಿ ಸಿದ್ಧಿಸಬೇಕೆಂದಿರುವಾಗ ಬೆರಕೆ, ಬೇರೆ ಅಲ್ಲಿಗೆ ನೆಳಲು ಹಾಯಿಸಬಾರದು ಎಂಬುದು ಆಕೆಯ ಜೀವನದ ಒಂದು ವಿಶೇಷ ಸಾಧನ.

ಕಾಳುಗಳದು ಬೇರೆ. ಬೇಳೆಗಳದು ಬೇರೆ; ಅಕ್ಕಿಪುರಿಯದು, ಬುರುಗಲದು ಬೇರೆ; ಅವಲಕ್ಕಿಯದು ಬೇರೆ. ಕುಂಬಳ ಬಿತ್ತಿದೆ, ಎಳ್ಳು ಹುಚ್ಚೆಳ್ಳು ಬೆರಸದೆ ಒಂದು ಸಲ ಹುರಂತೆ ಇನ್ನೊಂದು ಸಲ; ಉಂಡ ಬಾಯ ಒಗ್ಗರಣೆ ಎಂದರೆ ಅದು ನೆನೆದ ಕಾಳು ಬೇಳೆ ನೆರಳಲ್ಲಿ ಹರವಿ ಒಣಗಿಸಿ ಬಾಣಲೆಯಲ್ಲಿ ಅವನ್ನು ಹುರಿಯುತ್ತಾ ಹುರಿಯುತ್ತಾ ಕೈಗೆ ಕಾವು ತಾಕದಿರಲೆಂದು ಮುಂಗೈಗೆ ಬಟ್ಟೆ ಸುತ್ತಿಕೊಂತ ಆಗಾಗ ಕಾಳನ್ನು ಈಚೆಗೆ ಎತ್ತಿಹಾಕಿ ನೆಲಕ್ಕೆ ಜಜ್ಜಿ ಹದವಾಗಿ ಹುರಿದಂತೆಯೊ ಇಲ್ಲವೆ ಮರು ಪರೀಕ್ಷೆ ಮಾಡುತ್ತ ಎದುರಿಗೆ ಹೋದರೆ ಪರೀಕ್ಷೆಗೆಂದು ನನಗೆ, ತಂಗಿಗೆ ಕೊಡುತ್ತ ಆಗಿದೆಯೆ ಎಂದು ಕೇಳುತ್ತ ಎಷ್ಟು ಪರೀಕ್ಷೆ, ಎಷ್ಟು ಬಗೆಯ ತೇರ್ಗಡೆ ಆಕೃತಿಗೆ! ಅವಕ್ಕೆ ಕಾರವಿರುವ ಹದ! ನನಗೆ ಹಿಂಗು ಸುತರಾಂ ಸೇರದೆಂಬುದು ಗೊತ್ತಿದ್ದು ಆ ಪದಾರ್ಥಕ್ಕೆ ಅದರ 'ವಾಸನೆ' ಕೆಟ್ಟದೆ ಅದರ ಜನ್ಮ ಸಾರ್ಥಕವಾಗದು; ಅದಕ್ಕೆ ಸಲ್ಲುವ ಮರ್ಯಾದೆಗೆಊನ ಎಂದುಕೊಂಡವರೇ ನಿಂಬೆ, ಕೊತ್ತುಂಬರಿಸೊಪ್ಪುಗಳ ಜೊತೆಗೆ ಅದನ್ನು ರವೆಯಷ್ಟು ಸೇರಿಸಿ ಹಾಕಿಯೇ ಬಿಡುತ್ತಿದ್ದು ಅವರ ವಸ್ತುನಿಷ್ಠೆ ಗುಣನಿಷ್ಠೆ ಸರ್ವಥಾ ಆರಾಧ್ಯವೇ. ಕೆಲವಕ್ಕೆ ಉಪ್ಪು ಮಾತ್ರ. ಕೆಲವಕ್ಕೆ ಕಾಳು ಮೆಣಸಿನಕಾಯಿಪುಡಿ; ಇನ್ನು ಕೆಲವಕ್ಕೆ ಹಣ್ಣು, ಹಸಿರು ಮೆಣಸಿನಕಾಯಿ ಅರೆದು ಮಾಡಿದುದು. ಕೆಲವಕ್ಕೆ ಅರಶಿನ ಹಾಕಿ; ಕೆಲವಕ್ಕೆ ಊಹುಂ ಕೂಡದು ಎನ್ನುತ್ತಿದ್ದರು. ನಮಗೇನು ಗೊತ್ತು-ಏಕೆ ಎಂದು, ಅವರು ಹಾಕದಿದ್ದುದು ನಮಗೇನಿಲ್ಲ; ಬೇಡ, ಅಷ್ಟೇ. ರುಚಿ ಯಾರದಾಯಿತು. ಅಲ್ಲವೆ?

ಇದು ಕನ್ನಡನಾಡಿಗೆ ಒಂದು ಸಂಪ್ರದಾಯ; ಅದರಲ್ಲಿ ಒಂದು ಕಡೆಯದು ಮನೆ ಯದು, ಕೈಮಾಡಿದ್ದು. ಬೇರೆ ಇನ್ನಷ್ಟೆ. ಎಲ್ಲಾ ಮನೆಯ ಅಜ್ಜಿಗಳಿದ್ದಾರೊ ಅಷ್ಟು ಬಗೆಯ ವ್ಯಕ್ತಗುಣ ಈ ರುಚಿ, ಸಂಭಾರ, ಹದಗಳಲ್ಲಿದ್ದುಕೊಂಡು ನುಡಿವ ಸಂಪನ್ನ ತೆಯ ಜೀವವನ್ನು ಉಳಿಸಿವೆ.

ಎಷ್ಟು ಹೇಳಿದರೂ ಇನ್ನಷ್ಟೇ ಉಳಿದು ಬಿಡುವುದರಿಂದ ಪಾರವೆಲ್ಲಿ: ಇದನ್ನು ಮುಗಿಸುತ್ತೇನೆ. ಆಕೆಯ ಇತಿಹಾಸ ನಮ್ಮ ಮನೆಯ ಪುರಾಣದ ಒಂದು ಸಂತೋಷಾಂಶ. ಆಕೆಯನ್ನು ನೆನೆಪಾಗಲೆಲ್ಲ ಆ ೫-೫.೫ ಅಡಿ ಎತ್ತರದ 'ಸಮವಿಭಕ್ತಾಂಗ' ಕಣ್ಣೆದಿರಿಗೆ ನಿಲ್ಲುತ್ತದೆ. ಸುತರಾಂ ಕಪ್ಪಲ್ಲದ ತುಂಬಾ ಕೆಂಪೂ ತುಂಬಾ ಬಿಳುಪೂ ಅಲ್ಲದ ಒಂದು ಬಗೆಯ ಹೊಳೆವ ಬಲಿತ ಜಂತದ ಮೈಗಾಂತಿ ಅವರದು. ಸುಕ್ಕದ ಮೈ. ಒಪ್ಪ ವಾಗಿ ನಿರಿಹಿಡಿದು ಉಡುವ ಒಂಬತ್ತು ಗಜದ ಉಡೆ; ತಾನೇ ಅರಿಸಿ ತರಬೇಕೇ ಹೊರತು ಇನ್ನೊಬ್ಬರು ತಂದುಕೊಟ್ಟುದನ್ನು ಅವರು ಎಂದಿಗೂ ಉಡರು; ಸ್ನಾನಮಾಡಿ ಮಡಿಯನ್ನುಟ್ಟು ಬೆರಳಿಗೆ ತೆಳ್ಳಗೆ ವಿಭೂತಿ ಸವರಿ ಹದಮಾಡಿಕೊಂಡು ಹಣೆಗೆ ಹಚ್ಚಿ

ಕೊಂಡು ಆಕೆ ನಡೆದಾಡಿದಾಗ ಬೀಗಲ್ಲದ, ಸಡಿಲವಲ್ಲದ, ಸೆಡೆತವಲ್ಲದ ಅತಿ ಧಾರಾಳವಲ್ಲದ, ಅಗ್ಗವಲ್ಲದ, ಶ್ರೀಮಂತವಲ್ಲದ ಆ ನಡೆ ನೋಡಲು ಎರಡು ಕಣ್ಣು ಸಾಲದು. ನಮ್ಮ ತಾತನಿಗೆ ಆಕೆ ಎರಡನೆಯ ಹೆಂಡತಿಯಂತೆ. ಆದ್ದರಿಂದ ಆಕೆಗೆ ತುಂಬಾ ಗೌರವ ಪ್ರೀತಿ. ಇರುವವರೆಗೂ ಇನ್ನೊಬ್ಬರಿಗೆ ಅಧೀನವಾಗಬಾರದು ಕಾಟವಾಗಬಾರದು, ಯಾರ ಹಂಗಿಗೂ ಸಿಕ್ಕಿಕೊಳ್ಳಬಾರದು ಎಂದು ಮನಸ್ಸನ್ನೂ ಮೈ ಆರೋಗ್ಯವನ್ನೂ ಕಾಪಾಡಿಕೊಂಡು ಬಂದವರು ಆಕೆ. ಆ ಸ್ನಾನ, ಕುಂಭ ಶಾಖಗಳು, ಅಳಲೆ, ಅತಿ ಮಧುರ, ಕಜೋರದ ಪಟ್ಟು, ಪಥ್ಯಗಳು, ಗರಗದ ಸೊಪ್ಪು, ಒಂದೆಲಗ, ಹೇರಳೆಯ ಸಪ್ಪೆ ಚಿಕಿತ್ಸೆ, ಎಷ್ಟು ಎಚ್ಚರ, ಏರ್ಪಾಡು ಆರೋಗ್ಯಕ್ಕೆ. ಅನುಪಾನಗಳು–ಆಯಾ ಅನಾರೋಗ್ಯಕ್ಕೆ ಏನು ಕಾರಣ, ಏನು ಚಿಕಿತ್ಸೆ, ಏನು ಪಥ್ಯ, ಸಸಾರ ಗುಂಜಿ ಅಡಿಗೆ, ಕಾರ ಹುಳಿ, ಎಂಬುದು ಆಕೆಗೆ ತಿಳಿದಿದ್ದಷ್ಟು ಯಾವ ಆಯುರ್ವೇದ ವಿದ್ವಾಂಸನಿಗೂ ತಿಳಿದಿದೆಯೊ ಇಲ್ಲವೊ ನಾನರಿಯೆ. ಆಕೆ ಕಟ್ಟುಪವಾಸ, ಜಾಗರಣೆಗಳಲ್ಲಿ ಎಂದೂ ಮೈ ಒಣಗಿಸಿಕೊಂಡವರಲ್ಲ. ಒಮ್ಮೆ ಅವೆಲ್ಲ ನಿಮ್ಮಮ್ಮನಿಗೆ ಬಿಟ್ಟಿದ್ದೇನಪ್ಪ; ನನ್ನ ಭಾಗವನ್ನೂ ಅವಳೇ ಸಾಧಿಸುತ್ತಾಳೆ. ಅವಳ ಹೆಸರಿನಲ್ಲಿ ನನಗೆ ಕ್ಷಾಮ ತರಬೇಡ. ಕಾಶಿಗೆ ಹೋಗಿ ತನ್ನ ಗಂಡ ಬಿಟ್ಟರೆಂದು ಅವಳು ಕಿತ್ತಿಳೆ ತಿನ್ನಳೆಂದು ನನಗೇಕೆ ಬೇಡವೆಂದೀಯೆ ಎನ್ನುತ್ತಿದ್ದರು. ತಮ್ಮ ಉಪಚಾರ ಎಚ್ಚರಿಕೆ ತಮ್ಮ ತಮ್ಮವು. ಆಕೆಯ ನಡತೆಯಿಂದಲೇ ನನಗೆ ಅಣ್ಣನವರ ಮಾತು ಸತ್ಯವೆನ್ನಿಸಿತ್ತು; ಹುತ್ತವನ್ನು ಬಡಿದರೆ ಹಾವು ಸಾಯುಬಲ್ಲದೇ ಅಯ್ಯಾ ಎಂದು : ಬಹು ಹಿಂದೆ ೪೦-೫೦ ವರ್ಷಗಳ ಹಿಂದೆಯೇ. ಈ ಉಪಕಾರ ಅದರ ಉಪದೇಶ ಅಷ್ಟಿಷ್ಟಲ್ಲ. ಆದ್ದರಿಂದಲೇ ನನಗೆ ಬೇಕಾದುದೆಲ್ಲವನ್ನೂ ನಾನು ಸಂಕೋಚವಿಲ್ಲದೆ ಮಾಡಿಕೊಳ್ಳುತ್ತಿರುವುದು. ಈಗ ಅವಕ್ಕೆ ಸೊನ್ನೆ ಹಾಕಿಕೊಂಡು ಆಸೆ ಅಡಗಿಸಿದರೆ ಇನ್ನೊಂದು ಜನ್ಮವೆತ್ತಬೇಕಾದರೆ ನನ್ನ ಗತಿ? ಆದ್ದರಿಂದಲೇ ನನಗಿನ್ನೂ ಏತರಲ್ಲಿಯೂ ತೃಪ್ತಿ, ವಿರಕ್ತಿ ಬಂದಿಲ್ಲ.

ನಾನು ಮೈಸೂರಲ್ಲಿ ಸಾಹುಕಾರ್-ಅಯ್ಯಾನವರ ಮನೆಗೆ ಪಾಠಕ್ಕೆ ಹೋಗುತ್ತಿದ್ದೆ. ಅವರು ದಿನಕ್ಕೆ ಕಾಲುಹಣ-ಹಿಂದಿನ ಕಾಲದ ೧೪ ಕಾಸು-ಕೂಲಿಗೆ ಮೂಟೆ ಹೊರುತ್ತಿದ್ದವರಂತೆ. ಕಾಲಕ್ರಮದಲ್ಲಿ ಲಕ್ಷ್ಮಿ ಒಲಿದು ದಾನಧರ್ಮಕ್ಕೆ ಹೆಸರಾಗಿ ಅರಮನೆಗೆ ಸಜ್ಜು ಸಂಭಾರ ಒದಗಿಸುವ ಶ್ರೀಮಂತರಾಗಿದ್ದರು. ಒಮ್ಮೆ ಅವರ ಮಹಡಿಯ ಒಂದು ದೊಡ್ಡ ಕೋಣೆಯಲ್ಲಿ ಅಕ್ಕಿ ಹರವಿದ್ದರು. ೧೫ × ೨೦ ಅಡಿ ಉದ್ದಗಲದ ಕೋಣೆಯ ತುಂಬಾ ೪–೫ ಅಂಗುಲ ಆಳವಾಗಿ ಒಂದೇ ಸಮನೆ ಗಾಳಿ ಆಡಲೆಂದು ಹರವಿದ್ದರು. ಒಂದೊಂದು ಕಾಳೂ ಅಮೃತ ಶಿಲೆಗಳಶಕಲ. ಮುಂದಕ್ಕಿಲ್ಲ, ಹಸಿಯಿಲ್ಲ ಬಿಳಿ ಹೊಡೆದ ಭಾಗವಿಲ್ಲ; ನುಚ್ಚಿಲ್ಲ,ಕಲ್ಲಿಲ್ಲ; ಕಸವಿಲ್ಲ, ಮಣ್ಣಿಲ್ಲ, ಬತ್ತದ ಹೊಟ್ಟಿಲ್ಲ; ಅವನ್ನೆಲ್ಲಾ ಈ ಕಾಲದ ಬಳಕೆಗೆ ಉಳಿಸಿದ್ದರಾದೀತು. ಅದನ್ನು ನನಗೆ ತೋರಿಸಿದರು. ಅರಮನೆಯ ಮೋತೀಖಾನೆಗೆ ನಾಳೆ ಕಳಿಸಬೇಕಾಗಿದೆ ಎಂದರು. ಆ ಸಲಪಟ್ಟಸಾಮಾನ

ಹಳ್ಳಿ ಸಣ್ಣದ ಅತ್ಯುತ್ತಮ ಬತ್ತದಿಂದ ಕುಟ್ಟಿಸಿದ್ದು ಎಂದರು. ಹೇಗೆ ಎಂದು ಕೇಳಿದೆ. ನಿಮಗೆ ಬೇಕೇನು ಎಂದರು; ಹಣದ ಮಾತು ಬೇಡವೆಂದರು. ನಾನು ಬೇಡವೆಂದರೂ ನಾನು ಮನೆಗೆ ಹೋಗುವ ಹೊತ್ತಿಗೆ ೫೦ ಸೇರು ಕಳಿಸಿದ್ದರು. ಕಾಸು ತೆಗೆದುಕೊಂಡು ಅವರ ಮಗನಿಗೆ ಪಾಠ ಹೇಳಿಕೊಡುತ್ತಿದ್ದ ನನಗೆ ಪುಕ್ಕಟೆಯಾಗಿ ಅದನ್ನು ತೆಗೆದು ಕೊಳ್ಳಲು ಇಷ್ಟವಿಲ್ಲವಾಗಿ ಬಲಾತ್ಕಾರದಿಂದ ಅದರ ಬೆಲೆ ಪಲ್ಲಾಕ್ಕೆ ಮೂವತ್ತು ಎಂದು ಅರಿತು, ಹದಿನೈದು ರೂಪಾಯಿ ಲೆಕ್ಕಕ್ಕೆ ಇನ್ನೈವತ್ತು ಸೇರು ಅಳಸಿಕೊಂಡು ಅದನ್ನು ಬೆಂಗಳೂರಿಗೆ ಕಳಿಸಿಕೊಟ್ಟೆ. ಆ ರಾತ್ರಿ ನಮ್ಮಜ್ಜಿಗೆ ಆ ಅಕ್ಕಿ ತುಂಬಾ ಹಿಡಿಸಿರಬೇಕು. ನಾಳೆ ಸ್ವಲ್ಪ ಗೋಡಂಬಿ ಕೊಂಡು ತರುತ್ತೀಯ, ಕಂಠಿ ಎಂದರು. ಆಗ ೨ ಆಣೆಗೆ ಒಂದು ಬೊಗಸೆ ಗೋಡಂಬಿ ಬರುತ್ತಿದ್ದ ಕಾಲ. ನಮ್ಮ ಕಡೆ ಕರಿದ ಕಾರದ ಅವಲಕ್ಕಿಯ ಜೊತೆಗೆ ಹೊರತು ಬೇರೆ ತಿಂಡಿಗೆ ಅದನ್ನು ಬಳಸುತ್ತಿರಲಿಲ್ಲ. ಏಕೊ ಎಂದುಕೊಂಡವನೇನೇ ಬೆಳಗ್ಗೆ ಅದನ್ನು ತಂದು ಕೊಟ್ಟೆ. ಊಟದ ಹೊತ್ತಿಗೆ ತುಪ್ಪಾನ್ನಮಾಡಿ ಬಡಿಸಿದರು. ಅದು ಈಗ ಕಣ್ಣಿಗೆ ಕಾಣುತ್ತಿದೆ. ಒಂದೊಂದು ಕಾಳೂ ಉದುರುದುರಾಗಿ ಅಟ್ಟ ಅನ್ನದಗುಳು. ರಂಗಳಿಸಿದಂತೆ ಒಂದೊಂದು ಅಗುಳಿಗೂ ಸುತ್ತ ಕಾಯಿಸಿದ ತುಪ್ಪ ಬೇಳೆಗಳ ಒಗ್ಗರಣೆ, ಉದ್ದ ತುರಿದ ಒಣಕೊಬ್ಬರಿ, ಎಷ್ಟು ಹುಕರಿ ಸಾಕಾದರೆ ಹಲ್ಲಿಗೆ ಕಡಿಯಲು ಹಿತವೊ ನಾಲಗೆಗೆ ರುಚಿಯೊ ಅಷ್ಟೇ ಗಾತ್ರದ ಗೋಡಂಬಿ ಚೂರು ಕರಿದು ಹಾಕಿ ಮಾಡಿದ್ದರು. ಬಿಸಿಯಾಗಿ ಬಡಿಸಿದರು. ನಾನು ಹಿಂದೆಂದೂ—ಈಚೆಗೆ ಇನ್ನೂ ಇಲ್ಲ—ಅಂಥ ತುಪ್ಪಾನ್ನ ತಿಂದಿಲ್ಲ; ಕಂಡದ್ದಿಲ್ಲ. ಎಷ್ಟೋಕಡೆ ತಿಂದಿದ್ದೇನೆ. ಆ ಹದ, ರುಚಿ, ಆ ನೋಟದ ಅರೆವಾಸಿಗು, ರುಚಿ ಕಂಡಿಲ್ಲ. ತನ್ನಗಂಡನ ನೆನಪು ಬಂದಿತಂತೆ: ನೋಡು, ಮಗು; ನನಗಾಗಿ ನಿಮ್ಮ ತಾತ ಎರಡೆಕರೆ ಗದ್ದೆಯಲ್ಲಿ ಜೀರಿಗೆ ಸಣ್ಣ ಇಡಿಸುತ್ತಿದ್ದರು. ಆ ಅಕ್ಕಿಯ ನೆನಪು ಬಂತು. ಈ ಅಕ್ಕಿ ತುಂಬಾ ಚೆನ್ನಾಗಿದೆಯಪ್ಪ. ನಮ್ಮ ಕಾಲದಲ್ಲಿ ಗೇರುಬಿತ್ತ ಸಿಕ್ಕುತ್ತಿರಲಿಲ್ಲ. ಈಗ ಇದು ಚೆನ್ನಾಗಿರುವುದೆಂದು ಹಾಕಿದೆ. ಬಾಯಿಗೆ ಹೇಗಿದೆಯೊ ಎಂದರು. ಹೇಗಿದೆ ಎಂದಳಲ್ಲವೆ! ಆ ಸನ್ನಿವೇಶ ಸಂತೋಷದ ತುಂಬು ಹೊನಲು. ಹೊಟ್ಟೆ ಹೃದಯ ತುಂಬಿದಾಗ ಆಡಲು ಬಾಯೆಲ್ಲಿರುತ್ತದೆ; ನಾನು ಆಗ ಮೂಕ; ಮಾತು ಆ ಸಂತೃಪ್ತಿಯನ್ನು ಹೇಗೆ ನುಡಿದೀತು. ಆದರೂ ಇವೊತ್ತು ಅಡಿಗೆ ತುಂಬಾ ಚೆನ್ನಾಗಿದೆ ಅಜ್ಜಿ ಎಂದೆ.

ನೀನು ಚೆನ್ನಾಗಿದೆ ಎಂದರೆ ಸಂತೋಷ ಎಂದರು. ಆಕೆ ತೀರಿಕೊಂಡ ದಿನದ ನೆನಪಿದೆ. ಸುಮಾರು ಮಧ್ಯಾಹ್ನ ನಾಲ್ಕರ ಸಮಯ. ಕಾಲು ತೊಳೆದುಕೊಂಡು ಬಂದು ಹಾಸಿಗೆಯಲ್ಲಿ ಮಲಗಿದರು. ಆ ಮುಂಚೆ ಬೇರೆ ಒಗೆದ ವಸ್ತ್ರವನ್ನುಟ್ಟು ಮಕ್ಕಳನ್ನೆಲ್ಲ ಕರೆದರು. ಇಬ್ಬರು ಹೆಣ್ಣು ಮಕ್ಕಳಿಗೂ ಹೇಳಿ ಕಲಶದಲ್ಲಿದ್ದ ಗಂಗೆ ತರಿಸಿದರು. ನಾನು ಆಗ ತಾನೇ ಆಕೆಗೆಂದು ಸ್ವಲ್ಪ ಹಾಲು ಕಾಯಿಸಿಟ್ಟಿದ್ದೆ. ಅದರಲ್ಲಿ ಒಣ ಅಂಜೂರ ಬೇಯಿಸಿ ಅದರ ಸಾರಮಾತ್ರ ಇತ್ತು. ನಾಲ್ಕುಚಂಚ ತೆಗೆದುಕೊಂಡರು ಔಷಧಿಯ ಜೊತೆಗೆ. ಮಕ್ಕಳು ಗಂಗೆ ಕೊಟ್ಟರು. ಇದೇನು ಏಕೆ ಹೀಗೆ ಎಂದು

ಇನ್ನೊಬ್ಬರು ಅಂದರು. ಅಯ್ಯೋ ಈ ಕರಿ ಕಂಬಳಿಯನ್ನೇಕೆ ಹಾಸುವಿರಿ ಎಂದರು ಇನ್ನೊಬ್ಬರು. ಆಕೆ ಅವರಿಗೆ ಸನ್ನೆಮಾಡಿ ಸುಮ್ಮನಿರೆಂದರು. ನನ್ನನ್ನು ಕರೆದು ನನ್ನ ಕೈಯಲ್ಲಿ ನಮಸ್ಕಾರಮಾಡಿಸಿಕೊಂಡು ಹರಸಿದರು. ಎಲ್ಲರೂ ಎದುರಿಗಿರಲು ರಾಮ, ನಾರಾಯಣ ಎಂದುಕೊಂಡವರೇ ಕಣ್ಣು ಮುಚ್ಚಿಕೊಂಡರು. ಆ ಮುಖದ ಶಾಂತಿ ಪ್ರಸನ್ನತೆ ಕಣ್ಣಿಗೆ ಕಟ್ಟಿದೆ. ತುಂಬಿದ ಜೀವ. ಹಣ್ಣು, ಕಾವಿಂದ ಕಳಚಿಕೊಂಡು ನೆಮ್ಮದಿಯಿಂದ ಉದುರಿಬಿತ್ತು. ಏನೇ ಚಿಂತೆ, ಕಷ್ಟ, ಇದ್ದರೂ ಲಕ್ಷಿಸದೆ ತನ್ನ ಮನಸ್ಸನ್ನು ತನ್ನ ವಶದಲ್ಲಿಟ್ಟುಕೊಂಡು ನಾಲ್ವರಿಗೆ ನೆರವಾಗಿದ್ದ ಜೀವ ಅದು; ಕೊಟ್ಟು ಇಟ್ಟು ತಣಿದದ್ದು—ಆ ತಣಿವಿನಲ್ಲಿಯೇ ತೀರಿಕೊಂಡಿತು.

ಸೊಕ್ಕಿನಲಿ ತಲೆಯೆತ್ತಿ ಜೊತೆಯವರ ಕೂಟದಲಿ
        ನಾವು ಸಮ ನಿಮಗೆಂದು ನುಡಿವ ಬಲವಿಲ್ಲ !
ವಿಕ್ಕವರು ಕಡೆಗಣಿಸಿ ನೂಕಿದಾಕಡೆ ಬಿದ್ದು,
        ಯಾವ ಮಂಕೋ ಕವಿದು ಹುದುಗಿರುವೆವಲ್ಲ ?
ರೊಕ್ಕ ಕೈಯೊಳಗಿಲ್ಲ, ಹುರುಡು ಮೈಯೊಳಗಿಲ್ಲ
        ಹೆಮ್ಮೆಯೊಂದನು ನೆಚ್ಚಿ ದೆಸೆಗೆಟ್ಟೆವಲ್ಲ !
ಅಕ್ಕತಂಗಿಯರೆಲ್ಲ ಮುಂದುಮುಂದಾಗಿರಲು
        ನಮ್ಮ ತಾಯೊಬ್ಬಳೇ ಸೊರಗಿರುವಳಲ್ಲ !

ಅಮ್ಮನನು ಕೈಬಿಡದೆ ಇನ್ನು ಮೆರೆಸುವೆವೆ ?
ಹಿರಿಯ ಹೆಸರನು ತಿರುಗಿ ಗಳಿಸಿಕೊಳ್ಳುವೆವೆ ?
ಸರಿಯವರ ತಲೆಮೆಟ್ಟಿ ಮುಂದೆ ನಿಲ್ಲುವೆವೆ ?
ನೆಮ್ಮದಿಯ ಬೆಳಕಿನಲಿ ನಾವು ಬಾಳುವೆವೆ ?

—ತೀ. ನಂ. ಶ್ರೀಕಂಠಯ್ಯ

ನಾಡಿಗ ನೀಲಕಂಠಪ್ಪ

ಸವಿನೆನಪು

ನನ್ನ ಸನ್ಮಾನ್ಯ ಮಿತ್ರರಾದ ಎಸ್. ವಿ. ರಂಗಣ್ಣನವರು ಹಿಂದೊಮ್ಮೆ, ನಾನು ಈಗ ಒಪ್ಪಿಕೊಂಡಿರುವ ಸಾಹಸಕ್ಕೆ ಕೈ ಹಾಕುವಂತೆ ಪ್ರೇರಣೆ ನೀಡಿದ್ದರು. ಬಹು ಕಾಲ ಸಾಹಿತ್ಯ ಸೇವೆಯಿಂದ ದೂರ ನಿಂದವನ ಬರಹ ಬೇಸರ ತರಬಹುದೆಂಬ ಭಯ, ಮರ ವೆಯ ಅಡ್ಡಿ, ಸೂಕ್ತ ವಿಷಯಾಭಾವ ನನ್ನನ್ನು ಸುಮ್ಮನಿರಿಸಿತ್ತು. ಆದರೆ ಈಗಿನ ಪ್ರಜಾ ಸಾಮ್ರಾಜ್ಯದಲ್ಲಿ "ನಾಯಕ"ರ ಪರಮಾದರದ ಆಣತಿ ಅನುಲ್ಲಂಘನೀಯವಾಗಿ ಕಂಡು ಬಂದಿತು. ವಿದ್ಯಾಸಂಸ್ಥೆಗಳ ವಾರ್ಷಿಕೋತ್ಸವದ ಕ್ರೀಡಾಂಗಣದಲ್ಲಿ, ಹಳೆಹುಡುಗರ ಪಾತ್ರ ವಿನೋದಕರವಾದರೂ ಹಾಸ್ಯಾಸ್ಪದವೆನಿಸದಷ್ಟೆ? ಆದರೂ ನಾ ಕಂಡ ಸ್ಫೂರ್ತಿ ಗೊಂಡ ವಿಷಯ ನಿರೂಪಣೆ ಕೇವಲ ಆತ್ಮ ಪುರಾಣ ಅಥವಾ ಆತ್ಮ ಪ್ರಶಂಸೆಯಾಗುವುದು ಅನಿವಾರ್ಯವೇನೋ ಎಂಬ ಅಳುಕು ತಪ್ಪಿಲ್ಲ.

ಪ್ರಬುದ್ಧ ಕರ್ಣಾಟಕದ ಉದಯಕಾಲ ನನ್ನ ಸೆಂಟ್ರಲ್ ಕಾಲೇಜಿನ ವ್ಯಾಸಂಗ ಮುಗಿಯುತ್ತಿದ್ದ ಸಮಯ. ಅಷ್ಟರಲ್ಲಿ ನಮ್ಮ ಪೂಜ್ಯ ಗುರುಗಳೂ, ಪತ್ರಿಕೆಯ ಜನ್ಮ ದಾತರೂ ಆದ ದಿವಂಗತ ಎ. ಆರ್. ಕೃಷ್ಣಶಾಸ್ತ್ರಿಗಳವರು ಕಾಲೇಜಿನ ಅಧ್ಯಾಪಕ ವರ್ಗ ವನ್ನು ಸೇರಿ ಸ್ವಲ್ಪ ಕಾಲವಾಗಿತ್ತು. ಆಟ, ಪಾಟಗಳಲ್ಲಿ ಮುಂದಿದ್ದ, ಕಡುಬಡವರಾಗಿದ್ದ ವಿದ್ಯಾರ್ಥಿಗಳಿಗೆ ಸಹಾಯ ನೀಡುವುದರಲ್ಲಿ ಹೆಸರಾಂತ "ಉದಾರತಾ ಜನ್ಮಗೃಹಂಚ ಯಸ್ಟೇಟ್" ಎಂದು ಶಿಷ್ಯರಿಂದ ಹೊಗಳಿಸಿಕೊಂಡ ಟೇಟ್ ಸಾಹೇಬರು ಆಗ ಪ್ರಿನ್ಸಿ ಪಾಲರಾಗಿದ್ದರು. ಸುಮಾರು ನೂರಿಪ್ಪತ್ತು ವಿದ್ಯಾರ್ಥಿಗಳಿದ್ದ ತರಗತಿಯಲ್ಲಿ ಅವರು ಇಂಗ್ಲಿಷ್ ಕಲಿಸುತ್ತಿದ್ದ ಕ್ರಮ, ವಹಿಸುತ್ತಿದ್ದ ಶ್ರಮ, ಗುರುಶಿಷ್ಯ ಸಂಖ್ಯಾಪ್ರಮಾ ಣಕ್ಕೆ ಶರಣು ಬಂದ ಈಗಿನ ಗುರುಗಳಿಗೆ ನಂಬಲು ಕಷ್ಟವಾದೀತು.

ಪಾಶ್ಚಾತ್ಯ ಸಂಸ್ಕೃತಿಯ ಸೆಳೆತ ಹೆಚ್ಚುತ್ತಿದ್ದ ಆ ಕಾಲದಲ್ಲಿಯೂ ದಿನದ ಪಾಠದ ಪ್ರಾರಂಭದಲ್ಲಿ, ಸರ್ವರಿಗೂ ಮೊದಲು ಸುಪ್ರಭಾತವನ್ನು ಕೋರಿ "ಸರ್ವಲೋಕಾಯ ಮಂಗಳಂ" ಎಂದು ಮುಗಿಯುತ್ತಿದ್ದ ಪ್ರಾರ್ಥನೆ ತಪ್ಪದೆ ನಡೆಯುತ್ತಿತ್ತು. ಅದೂ ಇಂಗ್ಲಿಷರ ನೇತೃತ್ವದಲ್ಲಿ. ಅಲ್ಲಿ ಈಗ ಹೇಗಿದೆಯೋ ನಾನರಿಯೆ. ಈಗ ಕೆಲವೆಡೆಗಳ ಲ್ಲಂತೂ ಮುಷ್ಕರದಿಂದ ಮೊದಲಾಗಿ ಲಾಠೀ ಛಾರ್ಜಿನಲ್ಲಿ ಪರ್ಯವಸಾನವಾಗುವ

ಪಾತಗಳು ನಿತ್ಯ ವಿಧಿಯಾಗುವ ಸೂಚನೆಗಳಿವೆ. ಈ ಛಾರ್ಜನ್ನು ಹಿಂದಿನ ಕಾಲದಲ್ಲಿ ಮಾಸ್ತರೇ ವಹಿಸುತ್ತಿದ್ದುದನ್ನು ಸ್ಮರಿಸಬಹುದು. "ಚೈತ್ರದ ಬಿಸಿ ಬೆನ್ನಲ್ಲಿ ಮೂಡದೆಯೇ ಹತ್ತದು ಓದೂ ಹನುಮಣ್ಣ" ಎಂದು ಗೇಲಿಮಾಡಿ ಲಾಠಿಛಾರ್ಜು ಮಾಡಿಸಿಕೊಂಡದ್ದನ್ನೂ ಮರೆಯಲಾದೀತೆ?

ನಾನು ಪ್ರೌಢಶಾಲೆಯಲ್ಲಿ ಓದುತ್ತಿದ್ದಾಗಲೇ ಕನ್ನಡಮಾತೆಯ ಕರುಣೆ ಲಭಿಸಿತ್ತು. ನನ್ನ ಪರಮಪೂಜ್ಯ ಗುರುಗಳಾಗಿದ್ದ ದಿವಂಗತ ಕುಕ್ಕೆ ಸುಬ್ರಹ್ಮಣ್ಯಶಾಸ್ತ್ರಿಗಳವರ ಉಪದೇಶ, ಆಶೀರ್ವಾದಗಳನ್ನು ಪಡೆವ ಪುಣ್ಯ ನನಗೆ ಒದಗಿತ್ತು. ಮಲೆನಾಡಿನ ಮೂಲೆಯಿಂದ ಬಂದ ನಾನು ಮರೆಯಲ್ಲಿಯೇ ಇದ್ದು ಮುಂದುವರಿಯುತ್ತಿದ್ದ ಮೌನೋಪಾಸಕನಾಗಿದ್ದೆ. ಒಮ್ಮೆ ಎಸ್.ಎಸ್.ಎಲ್.ಸಿ. ಪರೀಕ್ಷೆ ೭-೮ ತಿಂಗಳು ಮಾತ್ರವಿದ್ದಾಗ ಕನ್ನಡ ಪಂಡಿತರಾದ ಅವರು ನನ್ನನ್ನು ಕರೆಯಿಸಿಕೊಂಡರು. ಅವರೊಂದಿಗೆ ಅದಕ್ಕೆ ಮುಂಚೆ ಮಾತನಾಡಿದ ನೆನಪಿಲ್ಲ. ಅವರು "ಕನ್ನಡ ಕಲಿತದ್ದು ಸಾಕು. ಪರೀಕ್ಷೆಗೆ ಸಂಸ್ಕೃತ ತೆಗೆದುಕೋ. ನಾನು ಕಲಿಸುತ್ತೇನೆ. ಇದರಿಂದ ಬಹಳ ಪ್ರಯೋಜನವಿದೆ—ಕನ್ನಡಕ್ಕೂ" ಎಂದರು. ಅವರು ತೋರಿದ ಪ್ರೇಮಮಯ ಪ್ರೋತ್ಸಾಹ ಎಂದಿಗೂ ಅವಿಸ್ಮರಣೀಯ.

ಇದೇ ಬಗೆಯ ಉತ್ತೇಜನ ಮತ್ತೆ ನನಗೆ ಲಭಿಸಿದುದು ಕಾಲೇಜು ವ್ಯಾಸಂಗದ ಕಡೆಯ ದಿನಗಳಲ್ಲಿ. ಪೂಜ್ಯ ಶಾಸ್ತ್ರಿವರ್ಯರ ಕೃಪಾಶ್ರಯದಲ್ಲಿ. ಅವರು ನನ್ನನ್ನು ಹರಸಿದ ರೀತಿ ಹಲವು ತೆರ. ನಮ್ಮಿಂದ ಪ್ರಬಂಧಗಳನ್ನೂ, ಇಂಗ್ಲಿಷ್ ಕಾವ್ಯಾನುವಾದಗಳನ್ನೂ ಬರೆಯಿಸಿದಾಗ ಕೆಲವು ವೇಳೆ ನಾನು ಬರೆದದ್ದನ್ನೇ ಕ್ಲಾಸಿನಲ್ಲಿ ಓದಿಬಿಡುತ್ತಿದ್ದರು. "ವಿಷವೃಕ್ಷ"ದ ಮೇಲೆ ಬರೆದ ಪ್ರಬಂಧದ ಕೊನೆಯಲ್ಲಿ ಸೇರಿಸಿದ್ದ ಪದ್ಯವನ್ನು ಕುರಿತು "ನಿಮಗೆ ಗದ್ಯಕ್ಕಿಂತಲೂ ಪದ್ಯದ ಮೇಲೆ ಮಮತೆ ಹೆಚ್ಚಿದ್ದು ಹೇಗೆ?" ಎಂದಾಗ ಅದು "ಹುಡುಗಾಟದಿಂದ ಹರಿದುಬಂದ ಹುಚ್ಚು ಚೇಷ್ಟೆ" ಎಂದಿದ್ದೆ. ಕಾಲೇಜು ಬಿಡುವಾಗ ಗುರುಗಳು ನನ್ನನ್ನು ಹರಸಿ ಕಳಿಸಿದಾಗ ಅವರು ಆಡಿದ ಮಾತು ಹೇಳಿದ ನೀತಿ ಇವನ್ನು ಕೃತಜ್ಞತೆಯಿಂದ ನೆನೆಯುತ್ತಿರುತ್ತೇನೆ.

ವಿಧಿವಿಲಾಸ ಎಂದಿಗೂ ವಿಚಿತ್ರವೇ. ಶಾರದಾ ಪ್ರಸಾದಾಕಾಂಕ್ಷಿಯಾದ ನನ್ನನ್ನು ವಿಶ್ವಕರ್ಮಾಶ್ರಿತ ಪ್ರಾಸಾದರಚನಾಕ್ಷೇತ್ರಕ್ಕೆ ನೂಕಿದ ದೈವಬಲ ಸಾಮಾನ್ಯವೇ? "ತಾನೊಂದು ನೆನೆದರೆ ದೈವ ತಾ ಬೇರೊಂದ ನೆನೆದುದು! ದೈವಗತಿಗೀ ಕೈಕೆಯನುಸಾರಿ" ಎಂದು ಬರೆದರು ಕುಮಾರವಾಲ್ಮೀಕಿಗಳು. ದೈವಗತಿಯನುಸರಣೆ ಕೈಕೆಯೊಬ್ಬಳಿಗೇಕೆ? ಮುದ್ರಣದ ಮಹಾಮಂತ್ರೋಪಾಸಕರು, ಈ ಕಸಬು ತಮಗೆ ಮೀಸಲೆನ್ನಬಹುದು. ಅದರಲ್ಲಿ ನನಗೊಂದಿಷ್ಟು ಪಾಲು ಬಿಟ್ಟಿದ್ದರೋ ಏನೋ? ಅಂತೂ ನನ್ನ ಕನ್ನಡ ಸೇವಾಸಕ್ತಿಗೆ ಎಳೆಯತನದಲ್ಲಿಯೇ ಬಾಲಾರಿಷ್ಟ ಬಡಿಯ ಬೇಕೆ? ಪುನಃ ನಾನು ಶಿಶು (BA BE) ವಾಗುವ ವೇಳೆಗಂತೂ ಕಾವ್ಯ ಪ್ರಪಂಚದಿಂದ ಬಹುದೂರ ಪ್ರಯಾಣ ಮಾಡಿದ್ದೆ.

ಆದರೆ ಹುಟ್ಟುಗುಣ ಆಗಾಗ್ಗೆ ಹೊರ ಹೊಮ್ಮುವುದನ್ನು ತಡೆಯಲಾಗುತ್ತಿರಲಿಲ್ಲ. ಆತ್ಮತೃಪ್ತಿಗೆ ಏನೇನೋ ಬರೆದು ಹರಿದು ಹಾಕುತ್ತಿದ್ದೆ (ವೇದಾಂತ ಪಂಚದಶಿಯ ಪದ್ಯಾನುವಾದ ಸಹ) ಒಮ್ಮೆ ಕೆಮ್ಮಣ್ಣು ಗುಂಡಿಯ ಮೇಲೆ ಹುಟ್ಟಿದ್ದು ಬರೆದಿಟ್ಟುಕೊಂಡಿದ್ದ ಪದ್ಯಮಾಲೆ ಅನೈಚ್ಛಿಕವಾಗಿ ಹಿಂದಿನ ಮಹಾಪ್ರಭುಗಳ ಕೈ ಸೇರಿಬಿಟ್ಟಿತು. ಅಲ್ಪವನ್ನು ಅನಂತವನ್ನಾಗಿಸಬಲ್ಲ ಅವರು "ನೀವು ಕವಿಗಳ ವಂಶದವರೋ ?" ಎಂದು ಕೇಳಿದಾಗ ನಾನು "ಕವಿಯಂತೂ ಅಲ್ಲವೇ ಅಲ್ಲ–ಬರಿಯ ಕಂಪೋಸರ್–ಹಳೆಯ ಶಾನುಭೋಗರ ಮಗ" ಎಂದು ಹೇಳಿ ಅವರ ಮೆಚ್ಚುಗೆ ಪಡೆದಿದ್ದೆ. ಅದು ಆಕಸ್ಮಿಕವಾಗಿ ನಡೆದ ದೈವ ಲೀಲೆ.

ಅಂತೂ ಹಳೆಯ ಕೊರಕಲು ಜಾಡಿನಲ್ಲಿಯೆ ನಡೆದು ತೃಪ್ತಿ ಕಾಣುತ್ತಿದ್ದ ಹಳಬರನ್ನು ಹುಡುಕಿ ಅಳಿದುಳಿದ ಹುಳುಕು ಥಳುಕುಗಳನ್ನು ಬಯಲಿಗೆಳೆಯಲು ಸಮರ್ಥರಾದ ನನ್ನ ಸನ್ಮಾನ್ಯ ಮಿತ್ರ ಹಾ. ಮಾ. ನಾಯಕರನ್ನು ಹೃತ್ಪೂರ್ವಕವಾಗಿ ವಂದಿಸಿ, ಅವರ ಮುದ್ದುಗುವರಿ "ರಮಾ" ಳ ಮೇಲೆ ಅವರು ಬೀರಿದ ಒಲುಮೆಯ ಮಾತಿನ ಸುರಿಮಳೆಯ ಹನಿ ಒಂದೆರಡು ನನ್ನ ಮೇಲೂ ಬಿದ್ದುದಕ್ಕಾಗಿ ಆನಂದಿಸುತ್ತೇನೆ. ನಮ್ಮ ಪ್ರಬುದ್ಧ ಕರ್ನಾಟಕವು ಕನ್ನಡ ತಾಯಿಯ ಕೀರ್ತಿ. ಅದು ಪ್ರತಿಭಾವಂತ ಪುತ್ರರ ಸತತ ಪ್ರಯತ್ನದ ಮೂಲಕ ವಿಶ್ವತೋಮುಖವಾಗಿ ಹರಡಲು ನೆರವಾಗಲೆಂದು ಹಾರೈಸುತ್ತೇನೆ.

ಯೆಂಡ ಯೆಡ್ತಿ ಕನ್ನಡ್ ಪದಗೊಳ್
    ಅಂದ್ರೆ ರತ್ನಂಗ್ ಪ್ರಾಣ !
ಬುಂಡೇನ್ ಎತ್ತಿ ಕುಡದ್ಬುಟ್ಟಾಂದ್ರೆ
    ತಕ್ಕೊ ಪದಗೊಳ್ ಬಾಣ !

* * * *

ನರಕಕ್ಕ್ ಇಳ್ಸಿ ನಾಲ್ಗೆ ಸೀಳ್ಸಿ
    ಬಾಯ್ ಒಲಿಸಾಕಿದ್ರೂನೆ—
ಮೂಗ್ನಲ್ ಕನ್ನಡ್ ಪದವಾಡ್ತೀನಿ !
    ನನ್ನ ಮನಸನ್ ನೀ ಕಾಣೆ !
ಯೆಂಡ ಓಗ್ಲಿ ! ಯೆಡ್ತಿ ಓಗ್ಲಿ,
    ಎಲ್ಲಾ ಕೊಚ್ಕೊಂಡ್ ಓಗ್ಲಿ !
ಪರ್ಪಂಚ್ ಇರೋತನಕ ಮುಂದೆ
    ಕನ್ನಡ ಪದ್ಗೋಳ್ ನುಗ್ಲಿ !

—ಜಿ. ಪಿ. ರಾಜರತ್ನಂ

ಎನ್. ಪ್ರಹ್ಲಾದರಾವ್

ಜೀವನ ಕಲಿಸಿದ ಪಾಠ

ಮಾನವಲೋಕಕ್ಕಿಂತ ಪ್ರಾಣಿಲೋಕದ ಕಡೆಗೇ ನನ್ನ ಒಲವು ಹೆಚ್ಚು. ಅದಕ್ಕೆ ಪ್ರಬಲವಾದ ಕಾರಣಗಳಿಲ್ಲದಿಲ್ಲ. ಅವುಗಳಲ್ಲಿ ಕೆಲವಂತೂ ಎಲ್ಲರಿಗೂ ತಿಳಿದಂಥವೇ ಆಗಿವೆ. ಮನುಷ್ಯ ಮನುಷ್ಯನನ್ನು ನೋಡುವ ಸಂದರ್ಭ ಬೇಡವೆಂದರೂ ಒದಗುತ್ತಲೇ ಇರುತ್ತದೆ. ಬೆಳಗಾದರೆ ನಮ್ಮ ವ್ಯವಹಾರವೆಲ್ಲ ಮನುಷ್ಯರೊಂದಿಗೇ ನಡೆಯಬೇಕು ತಾನೆ. ಮನುಷ್ಯನನ್ನು ಸಂಘಜೀವಿ ಸಮಾಜಜೀವಿ ಎಂದು ಹೇಳುವ ಮಾತನ್ನು ಒಂದು ಪರಿಮಿತಿಯಲ್ಲಿ ಬಳಸಿದಂತೆ ತೋರುತ್ತದೆ. ಅವನು ಹೆಚ್ಚಾಗಿ ಬಯಸುವುದು ತನ್ನಂತೆ ಇರುವ ಇತರ ಮನುಷ್ಯರ ಸಂಘವನ್ನು; ತನ್ನಂಥವರೇ ಇರುವ ಸಮಾಜವನ್ನು. ದಿನವಹಿ ನಾವು ನಡೆಸುವ ವ್ಯಾಪಾರ ವ್ಯವಹಾರ ಉದ್ಯೋಗ ವಹಿವಾಟು ಸಂಬಂಧ ಮಾತುಕತೆ ಆಟಪಾಠಗಳು—ಎಲ್ಲ ಮನುಷ್ಯರೊಂದಿಗೇ ನಡೆಯುತ್ತವಲ್ಲವೆ! ಇದು ಮಾನವ ಇತಿಹಾಸಾವಲೋಕನದಿಂದ ಕಂಡುಬರುವ ಸಂಗತಿ. ಮನುಷ್ಯ ಪ್ರಗತಿಹೊಂದುತ್ತ ನಾಗರಿಕತೆಗೆ ಹೊಂದಿಕೊಳ್ಳತೊಡಗಿದ ಅಂದಿನಿಂದ ಅಂದರೆ ಅವನ ಜೀವನ ಸಂಕೀರ್ಣವೂ ಜಟಿಲವೂ ಆದಂತೆಲ್ಲ ಮನುಷ್ಯ ಮೊದಲಿನ ಹಾಗೆ ಮನುಷ್ಯ ಸಂಘವನ್ನೂ ಬಯಸುತ್ತಿಲ್ಲ. ಆ ಸೂತ್ರಕ್ಕೂ ಒಂದು ಮಿತಿಯನ್ನು ಕಲ್ಪಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾನೆ. ಈಗ ಅವನ ವ್ಯವಹಾರ ಏನಿದ್ದರೂ ಕೇವಲ ಕೆಲವೇ ಜನರೊಂದಿಗೆ. ತಾನಾಯಿತು ತನ್ನ ಕೆಲಸವಾಯಿತು. ಬೃಹನ್ನಗರಗಳ ಬೆಳವಣಿಗೆಯ ಫಲವಿದೆಂದು ಯಾರಿಗಾದರೂ ಹೊಳೆಯುತ್ತದೆ. ನಗರಗಳೆಲ್ಲ ಜನನಿಬಿಡವಾಗಿ ಗಿಜಿಗಿಜಿ ಅನ್ನುತ್ತಿರುತ್ತದಾದರೂ ಒಬ್ಬರ ಪರಿಚಯ ಮತ್ತೊಬ್ಬರಿಗಿರುವುದಿಲ್ಲ. ಎಲ್ಲರೂ ಅವರವರ ಪಾಡಿಗೆ ತಮ್ಮತಮ್ಮ ಕೆಲಸದಲ್ಲಿ ನಿರತರಾಗಿರುತ್ತಾರೆ. ಸಂತೆಯಲ್ಲಿ ಸೇರಿದ ಜನರ ಹಾಗೆ. ಬಸ್ಸಿನಲ್ಲಿ ರೈಲಿನಲ್ಲಿ ಸಿನಿಮಾ ಮತ್ತು ನಾಟಕ ಮಂದಿರಗಳಲ್ಲಿ ಗುಂಪುನೆರೆದ ಹಾಗೆ. ಕ್ಯೂನಲ್ಲಿ ಯಾರು ನಿಂತಿದ್ದರೆ ನಮಗೇನು? ನಮಗೆ ಬಸ್ಸಿನಲ್ಲಿ ಸೀಟುಸಿಕ್ಕರಾಯಿತು, ನಿಜ. ನಮ್ಮ ಹಿಂದೆ ಮುಂದೆ ಸುತ್ತಮುತ್ತ ಜನ ನಿಂತಿದ್ದಾರೆ, ಓಡಿಯಾಡುತ್ತಿದ್ದಾರೆ. ಆದರೆ ನಮ್ಮ ಪರಿಚಯ ಅವರಿಗಿಲ್ಲ, ಅವರ ಪರಿಚಯ ನಮಗಿಲ್ಲ. ಇರಬೇಕಾದುದೂ ಇಲ್ಲ, ಅನ್ಯೋನ್ಯ. ಏಕೆಂದರೆ ಪರಸ್ಪರ

ಪರಿಚಯದಿಂದ ಯಾರಿಗೂ ಲಾಭವಿಲ್ಲ. ಎಲ್ಲರಿಗೂ ಈ ಬಾಳಿನ ಪಂದ್ಯದಲ್ಲಿ ಓಡುವ, ಓಡಿ ಗೆಲ್ಲುವ ಕೆಲಸ ಗಂಟುಬಿದ್ದಿದೆ. ಅದರ ನಿರ್ವಹಣೆಗೆ ಎಷ್ಟುಬೇಕೋ ಅಷ್ಟೇ ಪರಿಚಯವಿದ್ದರೆ ಸಾಕು.

ಹಾಗಾದರೆ ಮನುಷ್ಯನಿಗೂ ಪ್ರಾಣಿಗಳಿಗೂ ಏನೂ ಸಂಬಂಧವಿಲ್ಲವೇ ಎಂದು ಕೇಳಬಹುದು. ಸಂಪೂರ್ಣವಾಗಿ ಇಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಇದೆ. ಆದರೆ ಅದು ಒಂದು ವಿಚಿತ್ರ ರೀತಿಯ ಸಂಬಂಧ. ಅಷ್ಟೇನೂ ಸಹಜವಾದುದಲ್ಲ. ಇಲ್ಲೂ ಮನುಷ್ಯನ ಉಪಯೋಗದೃಷ್ಟಿಯೇ ಮುಂದಾಗಿರುವಂತೆ ತೋರುತ್ತದೆ. ಅನಾದಿ ಕಾಲದಿಂದಲೂ ಆತ ಹಸು ಎಮ್ಮೆ ಕುದುರೆ ಕುರಿ ಆಡು ನಾಯಿ ಕತ್ತೆ ಕೊನೆಗೆ ಆನೆ ಇವನ್ನೆಲ್ಲ ಸಾಕುತ್ತ ಬಂದಿದ್ದಾನೆ. ಅವುಗಳ ಮೇಲಿನ ಮಮತೆಯಿಂದಲ್ಲ, ತನ್ನ ಅನುಕೂಲದ ದೃಷ್ಟಿಯಿಂದ. ಹಸು ಎಮ್ಮೆಗಳೆಂದರೆ ಕೇವಲ ಹಾಲು ಕರೆಯುವ ಯಂತ್ರ ಗಳು. ಕುದುರೆ ಗಾಡಿಯನ್ನೆಳೆಯುವ ಸಾಧನ. ಕುರಿ ಆಡುಗಳು ತನಗೆ ಬೇಕಾಗುವ ಉಣ್ಣೆಯನ್ನೂ ಆಹಾರವನ್ನೂ ಕೊಡುವ ಸಾಧನಗಳು. ನಾಯಿ ತನ್ನ ಪ್ರಾಣವನ್ನೂ ಆಸ್ತಿಯನ್ನೂ ರಕ್ಷಿಸುವ ಮತ್ತೊಂದು ಸಾಧನ. ಪ್ರಾಣಿಗಳ ವಿಷಯದಲ್ಲಿ ಇದಕ್ಕಿಂತ ಉದಾತ್ತವಾದ ದೃಷ್ಟಿ ಹೆಚ್ಚಿನ ಪ್ರೇಮ ಕೆಲವರಲ್ಲಿ ಕಂಡುಬಂದರೆ ಅದನ್ನು ದೈವೀ ಪ್ರಭಾವವೆಂದು ಭಾವಿಸಬಹುದು.

ಏಕೆಂದರೆ ನಿಜವಾದ ಮಮತೆ ಇದ್ದ ಪಕ್ಷದಲ್ಲಿ ಮನುಷ್ಯ ಅವನ್ನು ಸಾಕುವ ರೀತಿಯೇ ಬೇರೆಯಾಗಬೇಕಾಗಿತ್ತು. ಹಳ್ಳಿಯಜನ ಈ ಹೊತ್ತಿಗೂ ತಮ್ಮ ದನ ಕರುಗಳನ್ನು ತಮ್ಮಂತೆಯೇ ನೋಡಿಕೊಳ್ಳುತ್ತಾರೆ. ಅವನ್ನು ಮನೆಯ ಒಳಗೇ ಕಟ್ಟಿ ಹಾಕುತ್ತಾರೆ. ಅವುಗಳ ಪಕ್ಕದಲ್ಲೇ ಕೂತು ಊಟಮಾಡುತ್ತಾರೆ. ಅವರ ಶ್ವಪಚ ತನವೇ ಅದರ ಮೂಲವಲ್ಲ. ಅವರ ದೃಷ್ಟಿಯಲ್ಲಿ ತಾವು ಬೇರೆ ಅಲ್ಲ, ಪ್ರಾಣಿಗಳು ಬೇರೆ ಅಲ್ಲ. ತಮಗಿಂತ ಮೊದಲು ಅವಕ್ಕೆ ಆಹಾರ, ಶುಶ್ರೂಷೆ. ದೇವರಿಗೆ ತಪ್ಪಿದರೂ ಅವಕ್ಕೆ ದಿನದಿನದ ಪೂಜೆ ತಪ್ಪಬಾರದು. ದನದ ಹಣೆಗೆ ಕುಂಕುಮವಿಟ್ಟು ಪ್ರದಕ್ಷಿಣೆ ನಮಸ್ಕಾರ ಹಾಕುವವರನ್ನು ಕಂಡು ನಮಗೆ ನಗು ಬರಬಹುದು. ಆದರೆ ನನಗೇನೋ ಅದು ಅಂಧಶ್ರದ್ಧೆ ಎನ್ನಿಸದು. ಪ್ರೀತಿಯಿಂದ ಸಾಕಿದ ನಾಯಿ ಬೆಕ್ಕುಗಳನ್ನು ನೋಡಿ ದಾಗ ದನಕರುಗಳನ್ನು ಕಂಡಾಗ ನನಗೆ ಅನಿರ್ವಚನೀಯವಾದ ಸುಖದ ಅನುಭವ ವಾಗುತ್ತದೆ. ಮಕ್ಕಳುಮರಿಯನ್ನು ಲಾಲಿಸಿ ಪಾಲಿಸುವಾಗ ಮನುಷ್ಯ ಯಾವ ಸಂತೃಪ್ತಿಯನ್ನು ಕಾಣುತ್ತಾನೋ ಅದಕ್ಕಿಂತ ಮಿಗಿಲಲ್ಲದಿದ್ದರೂ ಅಷ್ಟೇ ಮತ್ತು ಅಂಥದೇ ತೃಪ್ತಿಯನ್ನು ಪಶುಪಾಲನೆಯಲ್ಲೂ ಕಾಣಬಹುದು. ಮನೆಗೊಂದು ತೋಟ ವಿರುವಂತೆ ಮನೆಗೊಂದು ಪ್ರಾಣಿ ಇದ್ದರೆ ಮಾನವಜೀವನ ಇನ್ನಷ್ಟು ಹಸನಾಗ ಬಲ್ಲುದು. ಮನುಷ್ಯಸಹಜವಾದ ಓರೆಕೋರೆಗಳನ್ನು ತಿದ್ದಲು ಅದರಿಂದ ಹೆಚ್ಚಿನ ಸಹಾಯವಾದಂತಾಗುತ್ತವೆ.

ನನಗೆ ಕಡೆಯಪಕ್ಷ ಒಂದು ನಾಯನ್ನೋ ಬೆಕ್ಕನ್ನೋ ಸಾಕಬೇಕೆಂಬ ಹಂಬಲ

ಬಹಳ ಕಾಲದಿಂದ ಇತ್ತಾದರೂ ಕಾರಣಾಂತರಗಳಿಂದ ಅಂಥ ಅವಕಾಶ ಸಿಕ್ಕಿರಲಿಲ್ಲ. ತುಮಕೂರಿನಲ್ಲಿರುವಾಗ ಒಮ್ಮೆ ಅಂಥ ಸಂದರ್ಭ ಒದಗಿಬಂತು. ನನ್ನ ಹೆಂಡತಿಯ ಶ್ರೀಮಂತ ಅವಜ್ಞೆಯಿಂದಾಗಿ ಬೀದಿಯ ಬೆಕ್ಕೊಂದು ಇದ್ದಬದ್ದ ಹಾಲನ್ನೆಲ್ಲ ಕುಡಿದು ಹೋಯಿತು. ಕಣ್ಣುತಪ್ಪಿಸಿ ಅಡುಗೆಯ ಮನೆಗೆ ನುಗ್ಗುವ ಜಾಣತನವನ್ನು ಅದು ಅನುಭವದಿಂದ ಕಲಿಯುತ್ತದೆ. ಜೀವನ ಜೀವಿಗೆ ಕಲಿಸುವ ಪಾಠಗಳಲ್ಲಿ ಅದೂ ಒಂದು. ಮನೆಯಾಕೆ ಎಲ್ಲಿದ್ದಾಳೆ, ಸಾಮಾನ್ಯವಾಗಿ ಆಕೆ ಎಲ್ಲಿರುತ್ತಾಳೆ, ಹಾಲನ್ನು ಇಡುವ ಜಾಗ ಯಾವುದು, ಯಾವಾಗಬಂದರೆ ಅದು ತನಗೆ ಸಿಕ್ಕೀತು, ಅದು ಯಾವಾಗ ಎಲ್ಲ ಖರ್ಚಾಗಿಹೋಗುತ್ತದೆ, ಮನೆಯ ಇತರರ ಮನೋಧರ್ಮವೇನು, ಅವರೇನು ದುಷ್ಟರೇ, ಸಾಧುಸ್ವಭಾವದವರೇ, ತನ್ನನ್ನು ಕಂಡರೆ ಏನುಮಾಡಿಯಾರು—ಎಂಬೆಲ್ಲ ಅಂಶಗಳನ್ನು ಪರೀಕ್ಷಿಸಿ ಅನಂತರ ಬೆಕ್ಕು ತನ್ನ ದರೋಡೆಗೆ ಪ್ರಾರಂಭಿಸುತ್ತದೆ. ಹಾಲು ಗಿಟ್ಟಲಿ ಗಿಟ್ಟದಿರಲಿ ದಿನಕ್ಕೊಂದು ಬಾರಿ ಮಾಮೂಲಿನಂತೆ ಮನೆಮನೆಗೆ ಬಂದು ಹೋಗುತ್ತದೆ, ಮನೆಯ ವೈದ್ಯರ ರೀತಿಯಲ್ಲಿ. ಅಂತೂ ನಾವು ಎಷ್ಟೇ ಎಚ್ಚರಿಕೆಯಿಂದಿರಲಿ, ಒಂದಲ್ಲ ಒಂದುದಿನ ಅದು ತನ್ನ ವರ್ಷದ ಪಾಲೆಲ್ಲವನ್ನೂ ಗಿಟ್ಟಿಸಿಬಿಡುತ್ತದೆ. ಬೆಕ್ಕಿನ ಮೋಜನ್ನು ಕಂಡರೆ ನನಗೆ ಒಂದುರೀತಿಯ ಹೊಟ್ಟೆಕಿಚ್ಚು. ಅದಕ್ಕೆ ಹಾಲು ಮೊಸರು ಬೆಣ್ಣೆ ಹೊಸಾ ಇಲಿ—ಇವೇ ಆಗಬೇಕು. ತನ್ನ ಆಹಾರ ಹೇಗಿರಬೇಕು, ಮೈಗೆ ಯಾವುದು ಒಳ್ಳೆಯದು ಎಂಬ ವಿಚಾರದಲ್ಲಿ ಅದಕ್ಕೆ ಯಾವ ಆಹಾರಸಂಶೋಧ ನಾಲಯದ ಸಲಹೆಗಳ ಅಗತ್ಯವಿಲ್ಲ. ಬೆಕ್ಕಿಗೆ ಪ್ರಕೃತಿಯೇ ಪಾಠಶಾಲೆ. ಹೊಟ್ಟೆಯೇ ಗುರು. ಜೀವನವೇ ಪಠ್ಯಪುಸ್ತಕ. ಸ್ವಾನುಭವವೇ ಪರೀಕ್ಷೆ, ಏಕಲವ್ಯನಂತೆ. ಆಹಾರವನ್ನು ಗಿಟ್ಟಿಸುವುದೇ ದಿಗ್ವಿಜಯ, ತೇರ್ಗಡೆ.

ಅಂದು ಹಾಲುಗಿಟ್ಟಿಸಿದ ಮೇಲೆ ಆ ಬೆಕ್ಕು ಅಶ್ವತ್ಥಾಮನ ಆತ್ಮದಂತೆ ಮಿಯಾವ್ ಮಿಯಾವ್ ಎನ್ನುತ್ತ ಮನೆಯ ಸುತ್ತ ಸುಳಿದಾಡುತ್ತಲೇ ಇತ್ತು. ನಾನು ಹುಶ್ಶೆಂದು ಅದನ್ನು ಅಟ್ಟಿದರೂ ನನ್ನ ಮಕ್ಕಳು ಅದನ್ನು ಬಾ ಬುಶ್ ಎಂದು ಆಹ್ವಾನಿಸಿದರು. ಮೆಲ್ಲ ಮೆಲ್ಲಗೆ ಅದು ಮನೆಯಲ್ಲಿ ಕಾಲಿಟ್ಟಿತು. ನನ್ನ ಹೆಂಡತಿಯ ಒಡನಾಡಿಯಾಯಿತು. ಯಾರೊಂದಿಗೂ ಮಾತನಾಡದ ಆಕೆ ಅದರೊಂದಿಗೆ ಸಂಭಾಷಿಸಲು ಪ್ರಾರಂಭಿಸಿದಳು. ಅವಳು ಊಟಕ್ಕೆ ಕೂತಳೆಂದರೆ ಬೆಕ್ಕು ಅವಳ ಮುಂದೆ ಹಾಜರಾಗುತ್ತಿತ್ತು. ಅವಳಿಗೆ ಅಕ್ಕಿಯ ಮೇಲೆ ಆಶೆ ಎಷ್ಟೋ ನೆಂಟರ ಮೇಲಿನ ಪ್ರೀತಿಯೂ ಅಷ್ಟೆ. ಹಾಲು ಖರ್ಚಾಗ ಬಾರದು ಆದರೆ ಬೆಕ್ಕು ನಮ್ಮ ಮನೆಯಲ್ಲೇ ಇರಬೇಕು. ಹಾಗೂ ಹೀಗೂ ಸುಧಾರಿಸಿ ಕೊಂಡು ಮಕ್ಕಳ ಮಧ್ಯೆ ಬೆಕ್ಕು ಬೆಳೆಯತೊಡಗಿತು. ಒಂದು ದಿನ ನನ್ನ ಚಿಕ್ಕ ಮಗಳು ಓಡಿಬಂದು ಆಶ್ಚರ್ಯದಿಂದ "ಅಣ್ಣ, ಬರ್ತಾ ಬರ್ತಾ ನಮ್ಮ ಬೆಕ್ಕಿನ ತಲೆ ನೋಡಿ ಹೇಗೆ ಚಿಕ್ಕದಾಗ್ತಾ ಇದೆ. ಏಕಣ್ಣ ಹಾಗೆ ಆಗ್ತಾ ಇದೆ?" ಎಂದು ಕೇಳಿದಳು. ನನಗೆ ನಗು ಬಂತು. ಅದಾದ ಒಂದು ತಿಂಗಳಲ್ಲಿ ಬೆಳಗ್ಗೆ ಎದ್ದು ನೋಡಿದಾಗ ಸ್ನಾನದ ಮನೆಯಲ್ಲಿಟ್ಟ ಇದ್ದಲು ಮೂಟೆಯ ಮೇಲೆ ನಮ್ಮ ಬೆಕ್ಕು ನಾಲ್ಕು ಮರಿ ಹಾಕಿತ್ತು.

ಅಲ್ಲಿಗೆ ಇತ್ಯರ್ಥವಾದಹಾಗಾಯಿತು, ನಾವೆಲ್ಲ ಒಳ್ಳೆಯ ಜನ ಎಂಬುದು. ಏಕೆಂದರೆ ಯಾರ ಮನೆಯದೂ ಅಲ್ಲದ ಬೆಕ್ಕು ನಮ್ಮ ಮನೆಯಲ್ಲಿ ಒಗತನ ಮಾಡ ಬೇಕಾದರೆ ನಿಜಕ್ಕೂ ನಾವು ಒಳ್ಳೆಯವರಿರಬೇಕಲ್ಲವೆ! ಮಕ್ಕಳಿಗಂತೂ ಪುಟ್ಟ ಮರಿಗಳನ್ನು ಕಂಡು ತುಂಬಾ ಹಿಗ್ಗು. ಆಗಲೇ ಅವನ್ನು ಎತ್ತಿಕೊಂಡು ಮುದ್ದಿಸಬೇಕೆಂಬ ಆಶೆ. ಆದರೆ ತಾಯಿಬೆಕ್ಕು ಬಿಡಬೇಕಲ್ಲ. ತಮ್ಮ ಕಾಲುಗಳಿಗೆ ಮೈ ಉಜ್ಜುತ್ತ ಹಿಂದೆ ಮುಂದೆ ಸುತ್ತಾಡುತ್ತಿದ್ದ ಬೆಕ್ಕು, ಮರಿ ಹಾಕಿದ ಗಳಿಗೆಯಿಂದ ಯಾರು ಹತ್ತಿರ ಹೋದರೂ ಸಿಡಿಮಿಡಿಗೊಂಡು ಗುರ್ ಎಂದು ಗದರಿಸುತ್ತಿದ್ದುದನ್ನು ಕಂಡು ನನಗಂತೂ ಪರಮಾಶ್ಚರ್ಯ. ನಾವೇನೂ ಅದರ ಮರಿಗಳನ್ನು ಲಪಟಾಯಿಸಿಕೊಂಡು ಹೋಗುವು ದಿಲ್ಲ. ನಮಗೇಕೆ ಅವುಗಳ ಹವ್ಯಾಸ. ಯಾವ ಪ್ರತಿಫಲಾಪೇಕ್ಷೆಯನ್ನೂ ಇಟ್ಟುಕೊಳ್ಳದೆ ನಾವದನ್ನು ಮನೆಗೆ ಬರಮಾಡಿಕೊಂಡಿಲ್ಲವೆ. ನ್ಯಾಯವಾಗಿ ನೋಡಿದರೆ ಬೆಕ್ಕೇ ಹಾಲಿನ ಆಶೆಯಿಂದ ನಮ್ಮನ್ನು ಆಶ್ರಯಿಸಿದೆ. ಅಂಥದರಲ್ಲಿ ಅದೇಕೆ ಅದಕ್ಕೆ ನಮ್ಮ ವಿಷಯದಲ್ಲಿ ಅಷ್ಟು ಸಂದೇಹ. ಮನುಷ್ಯಮಾತ್ರದವರಲ್ಲಿ ಈ ಪ್ರಾಣಿಗಳಿಗೆ ನಂಬಿಕೆ ಸಾಲದೆಂದೇ ಕಾಣುತ್ತದೆ. ಅವನ ಸುತ್ತ ನಿತ್ಯ ಸುಳಿದಾಡುವ ಗುಬ್ಬಿ ಕಾಗೆಗಳು ಸಹ ಬೆಕ್ಕಿಗೆ ಹೆದರು ವಂತೆ ಮನುಷ್ಯನಿಗೂ ಹೆದರುತ್ತವೆ.

ಹೆದಹೆದರಿಸುತ್ತಲೆ ಬೆಕ್ಕು ತನ್ನ ಮರಿಗಳನ್ನು ಸಾಕಿ ದೊಡ್ಡದುಮಾಡಿತು. ಪುಟ್ಟನಾಗಿದ್ದಾಗ–ಅದು ಕತ್ತೆಯ ಮರಿಯೇ ಆಗಿರಲಿ–ನೋಡಲು ಬಹು ಮುದ್ದಾಗಿರು ತ್ತದೆ. ಇನ್ನು ಬೆಕ್ಕಿನ ಮರಿಗಳನ್ನು ಕೇಳಬೇಕೆ. ನನ್ನ ನಾಲ್ಕು ಜನ ಹೆಣ್ಣು ಮಕ್ಕಳೂ ತಲಾ ಒಂದೊಂದರಂತೆ ಹಂಚಿಕೊಂಡು ಮರಿಗಳನ್ನು ಸಾಕತೊಡಗಿದರು. ಅವೆಲ್ಲದರ ಥಾಂದಲೆ ಬರಬರುತ್ತ ಬಹಳವಾದ್ದರಿಂದ ಎರಡು ಮರಿಗಳನ್ನು ಕೇಳಿದವರಿಗೆ ದಾನಮಾಡಿ ಆಯಿತು. ಉಳಿದ ಎರಡು ಮರಿಗಳು—ಅವುಗಳಲ್ಲಿ ಒಂದು ತಾಯಿಯಂತೆ ಬಿಳಿಯ, ಮತ್ತೊಂದು ತಂದೆಯಂತೆ ಕರಿಯ–ನಮ್ಮ ಮನೆಯವಾಗಿ ಬೆಳೆಯತೊಡಗಿದವು. ಮಗುವಿ ಗಾದರೆ ಒಂದು ಶಿಶುವಿಹಾರವಿದೆ. ಬೆಕ್ಕಿನ ಮಗುವಿಗೆ ಅದಾವ ಶಿಶುವಿಹಾರವಿದೆ? ಇಲ್ಲವೆಂದು ನಮ್ಮ ಭಾವನೆ. ಇದೆ ಎಂದು ಬೆಕ್ಕು ಸಾಕಿದವರಿಗೆಲ್ಲ ಗೊತ್ತು. ಅವಕ್ಕೆ ಮನೆಯ ಹಿತ್ತಲೇ ಶಾಲೆ. ತಾಯಿಯೇ ಗುರು. ನೋಡನೋಡುತ್ತಿದ್ದಂತೆ ತಾಯಿ ಮರಿಗಳಿಗೆ ಜೀವನಸಂಗ್ರಾಮದ ವಿವಿಧ ವರಸೆಗಳನ್ನು ಕಲಿಸತೊಡಗಿತು. ಅದನ್ನು ನಿಂತು ಗಂಟೆ ಗಟ್ಟಲೆ ನೋಡಲು ನಮಗೆ ತುಂಬ ಇಷ್ಟವಾಗುತ್ತಿತ್ತು. ಆದರೆ ಕೆಲವೇ ದಿನಗಳಲ್ಲಿ ತಾಯಿಬೆಕ್ಕು ತನ್ನ ಮರಿಗಳಿಗಾಗಿ ತಾನು ಹಿಡಿದುತಂದ ಗುಬ್ಬಿಯನ್ನೋ ಇಲಿಯನ್ನೋ ಅವುಗಳ ಮುಂದೆ ಎಸೆದಾಗ ನಿಜಕ್ಕೂ ನಮ್ಮ ಕಷ್ಟ ಮೊದಲಾಯಿತು. ಬೆಕ್ಕಿನ ಮರಿಗೆ ಇಲಿಯ ರುಚಿಯನ್ನು ಕಲಿಸಿದವರಾರು? ಏನೂ ತಿಳಿಯದ ಮರಿ ಮೊಟ್ಟ ಮೊದಲಿಗೆ ಇಲಿಯನ್ನು ಕಂಡಾಗ ಎಲ್ಲ ತಿಳಿದ ಪ್ರೌಢನಂತೆ ಇಲಿಗೆ ಬಾಯಿಹಾಕಿ ಹುಲಿಯಂತೆ ಹಾವಭಾವಗಳನ್ನು ಪ್ರದರ್ಶಿಸುತ್ತ ಕ್ಷಣಕ್ಷಣಕ್ಕೂ ಗುರ್ ಗುರ್ ಎಂದು ಸುಖದ ಮತ್ತಿನ ಸ್ವರಗೈಯುತ್ತ ಯಾರನ್ನೂ ಹತ್ತಿರ ಬಿಡದೆ ಸಾಯುವ ಇಲಿಯೊಡನೆ ತೃಪ್ತಿಯಾಗುವಷ್ಟು

ಚೆನ್ನಾಟವಾಡಿ ಅದನ್ನು ಕೊಂದು ತಿನ್ನುವುದನ್ನು ನೋಡಿ ನಾನು ಬೆರಗಾಗಿ ಹೋದೆ. ಜೊತೆಗೆ ಜುಗುಪ್ಸೆಯೂ ಆಯಿತು. ನಮ್ಮಲ್ಲಿ ನೋಡಿ. ಮಗು ಬೆಳೆದು ದೊಡ್ಡದಾಗಿ ಜೀವನ ನಿರ್ವಹಣೆಗೆ ಅಣಿಯಾಗುವುದಕ್ಕೆ ಕಡೆಯಪಕ್ಷ ಇಪ್ಪತ್ತೈದು ವರ್ಷಗಳಾದರೂ ಬೇಕು. ಅಷ್ಟಾದರೂ ಎಷ್ಟೋವೇಳೆ ಎಷ್ಟೋ ಮಂದಿಗೆ ಆ ಸಾಮರ್ಥ್ಯ ಬಾರದೆ ಹೋಗ ಬಹುದು. ಅಲ್ಲದೆ ಮಕ್ಕಳೊಂದಿಗೆ ತಂದೆ ತಾಯಿಯರೂ ಕೂಡ ಆ ಇಪ್ಪತ್ತೈದು ವರ್ಷ ಹೆಣಗಬೇಕಾಗುತ್ತದಲ್ಲ. ಈ ದೃಷ್ಟಿಯಿಂದ ನೋಡಿದಲ್ಲಿ ನಮಗಿಂತ ಬೆಕ್ಕೇ ಮೇಲು. ಮರಿ ಹುಟ್ಟಿದ ಒಂದು ವಾರದಲ್ಲಿ ಓಡಾಡಿತು. ಎರಡು ತಿಂಗಳಲ್ಲಿ ಇಲಿ ಗುಬ್ಬಿಗಳ ರುಚಿ ನೋಡಿತು. ಕೆಲವೇ ತಿಂಗಳಲ್ಲಿ ತಾನೇ ಬೇಟೆಯಾಡಲು ಹೊರಟಿತು. ಹಾಗಾದರೆ ವಿಕಾಸಪಥದ ತುತ್ತತುದಿಗೋಡನ್ನು ಮುಟ್ಟಿರುವ ಮನುಷ್ಯನಲ್ಲಿ ಈ ಬಗೆಯ ವಿಕಾಸ ವೇಕಾಗಿಲ್ಲ? ಶಾಲೆ ಕಲಿಸುವ ಪಾಠಕ್ಕಿಂತ ಜೀವನ ಕಲಿಸುವ ಪಾಠ ಹೆಚ್ಚು ಮೌಲ್ಯ ವುಳ್ಳದ್ದು. ಜೀವನಕಲೆಯನ್ನು ಕಲಿಸದ ವಿದ್ಯೆ ವಿದ್ಯೆಯೇ ಅಲ್ಲ. ನಾನು ಸಾಕಿದ ಬೆಕ್ಕು ನನಗದನ್ನು ತೋರಿಸಿಕೊಟ್ಟಿತು. ಇಷ್ಟು ನನಗಾದ ಆಶ್ಚರ್ಯಕ್ಕೆ ಇರುವ ಕಾರಣಗಳು. ಇನ್ನು ನನಗಾದ ಜುಗುಪ್ಸೆಯ ಕಾರಣವನ್ನು ಬಿಡಿಸಿ ಹೇಳಬೇಕಾದ್ದಿಲ್ಲ. ಮರಿಗೇನೋ ಇಲಿ ರುಚಿಯಾಗಿರಬಹುದು. ಅದು ಬಹು ಚೆನ್ನಾಗಿರುತ್ತದೆಂದು ಹೇಳಲು ಮತ್ತೊಂದು ಬೆಕ್ಕಿಗೆ ಮಾತ್ರ ಸಾಧ್ಯ. ರುಚಿಯ ಮಾತು ಹಾಗಿರಲಿ. ನಮ್ಮೆದುರಿಗೆ ಮೂಷಭೋಜನದ ವ್ಯಾಪಾರ ನಡೆದಾಗ ಅಸಹ್ಯ ಎನಿಸುವುದು ತಪ್ಪೆ? ಏನು ಮಾಡುವುದು! ಪ್ರಕೃತಿಯಲ್ಲಿ ಯಾವುದು ತುಂಬ ಸಹಜವೋ ಅದು ನಮಗೆ ಅಸಹಜ. ಅದು ನಾವು ರೂಢಿಸಿಕೊಳ್ಳು ತ್ತಿರುವ ನವನಾಗರಿಕತೆಯ ಫಲ. ಬೆಕ್ಕಿಗೆ ತನ್ನ ಊಟದ ವಿಚಾರದಲ್ಲಿ ಯಾವ ಸಂಕೋಚವೂ ಇಲ್ಲ. ಇತರರು ಏನೆನ್ನುತ್ತಾರೋ ಎಂಬ ಭೀತಿಯೂ ಕಾಣದು. ಸುಮ್ಮನೆ ಕಣ್ಣುಮುಚ್ಚಿಕೊಂಡು, ಹಾಲು ಕುಡಿಯುತ್ತದೆ, ಇಲಿಯನ್ನು ತಿನ್ನುತ್ತದೆ.

ತರ್ಕ ಏನೇ ಹೇಳಲಿ ಬೆಕ್ಕನ್ನು ಸಾಕುವ ಹವ್ಯಾಸ ನನಗೆ ಸರಿಗಾಣಲಿಲ್ಲ. ಅದು ನಮ್ಮೆದುರಿಗೇ ಸುಡುಗಾಡು ಇಲಿಯನ್ನು ತಿನ್ನುತ್ತದೆಯಲ್ಲದೆ ಪ್ರತಿದಿನ ಬೆಳಗ್ಗೆ ಸುಮಾರು ಅರ್ಧಗಂಟೆಯ ಹೊತ್ತು ತನ್ನ ಎಂಜಲನ್ನು ಕೈಗೆ ಸವರಿಕೊಂಡು ಮುಖತೊಳೆಯುತ್ತ ಕೂಡುತ್ತದೆ. ಅದರ ಹಲ್ಲುಗಳು ನಮ್ಮ ಹಲ್ಲುಗಳಿಗಿಂತ ಹೆಚ್ಚು ಗಡುಸಾಗಿರಬಹುದು, ಸ್ವಚ್ಛವಾಗಿರಬಹುದು. ಮುಖವೂ ಅಷ್ಟೇ. ಶುಭ್ರವಾಗಿದ್ದಂತೆ ತೋರಬಹುದು. ಆದರೆ ಆ ಎಂಜಲು ಮುಖವನ್ನು ಮುದ್ದಿಸುವುದು ಹೇಗೆ? ಅದಕ್ಕೆ ನಾನು ಹೇಳುವು ದೇನೆಂದರೆ ಬೆಕ್ಕನ್ನು ಪ್ರೀತಿಸಲು ಇನ್ನೊಂದು ಬೆಕ್ಕಿಗೆ ಮಾತ್ರ ಸಾಧ್ಯ.

ಆಯಿತು. ಅಂದಿನಿಂದ ಬೆಣ್ಣೆಯಾಗಿದ್ದ ನನ್ನ ಹೃದಯ ಕಲ್ಲಾಯಿತು. ಎರಡು ಮರಿಗಳನ್ನೂ ಹಿಡಿದು ಗೋಣೀಚೀಲಕ್ಕೆ ತುಂಬಿ ಊರ ಹೊರಕ್ಕೆ ಸಾಗಿಸಬೇಕೆಂದು ನಿರ್ಧರಿಸಿದೆ. ಆದರೆ ನನ್ನ ನಿರ್ಧಾರವನ್ನು ಒಮ್ಮೆಲೇ ನನ್ನ ಮಕ್ಕಳಿಗೆ ತಿಳಿಸಲು ಧೈರ್ಯ ಸಾಲದೆ ಹೋಯಿತು. ಹಾಗೆಯೇ ಕೆಲವು ದಿನ ತಳ್ಳಿದ್ದಾಯಿತು. ಒಂದು ದಿನ ಮರಿಯೊಂದು ತಾಯಿಯಂತೆ ಇದ್ದ ಹಾಲನ್ನೆಲ್ಲಾ ಕುಡಿದು ಬರಿದುಮಾಡಿತು.

ಮತ್ತೊಂದು ಮರಿ ಹಾಡೇ ಹಗಲಿನಲ್ಲಿ ಇಲಿಯೊಂದನ್ನು ಎಳೆದು ತಂದು ಪಡಸಾಲೆ ಯಲ್ಲಿಯೇ ಕುಳಿತು ತಿನ್ನತೊಡಗಿತು. ಅಲ್ಲಿಗೆ ನನ್ನ ತಾಳ್ಮೆ ಮೀರಿತು. ನೇರ ಮಕ್ಕಳಿಗೆ ನನ್ನ ನಿರ್ಧಾರವನ್ನು ತಿಳಿಸಿಬಿಟ್ಟೆ. ಅದನ್ನು ಕೇಳಿದ ಒಡನೆಯೇ ಅವರು ಬೆಚ್ಚಿಬಿದ್ದರು. ಕ್ಷಣಕಾಲ ಛಿದ್ರವಾಗಿ ಬಿದ್ದಿದ್ದ ಇಲಿಯ ಕಡೆಗೆ ನೋಡಿ, 'ಹು ಆಗಲಿ' ಎಂದರು. ಮರುಕ್ಷಣದಲ್ಲಿಯೇ ಮರಿಯ ಕಡೆಗೆ ದೃಷ್ಟಿ ಹಾಯಿಸಿ 'ಉಹೂ ಬೇಡ' ಎಂದೂ ಅಂದರು. ಅವರ ಸಂಕಟ ನನಗೆ ಅರ್ಥವಾಗದಿರಲಿಲ್ಲ. ಪ್ರಾಣಿಗಳನ್ನು ಸಾಕುವುದು ಸುಲಭ. ಆದರೆ ಸಾಕಿದ ಪ್ರಾಣಿಗಳನ್ನು ಮನೆಯಿಂದ ಹೊರದೂಡುವುದಂತೂ ಕಷ್ಟ. ಮನಸ್ಸೊಂದನ್ನು ಕಲ್ಲು ಮಾಡಿಕೊಂಡುಬಿಟ್ಟರೆ ಯಾವುದೂ ಅಸಾಧ್ಯವಲ್ಲ. ಆ ಮಾತು ಬೇರೆ. ಆದರೆ ಎಲ್ಲರಿಗೂ ಅದು ಸಾಧ್ಯವಿಲ್ಲದ್ದರಿಂದ ಇಷ್ಟೆಲ್ಲಾ ತೊಂದರೆ.

ನಮ್ಮ ಎದರು ಮನೆಯವರು ಬಂದು ನಾಯಿಯನ್ನು ಸಾಕಿ ಅದನ್ನು ಹೊರ ದೂಡಲು ಪಟ್ಟ ಶ್ರಮ ಇನ್ನೂ ನನ್ನ ಕಣ್ಣಿಗೆ ಕಟ್ಟಿದಂತಿದೆ. ಅದು ಆದದ್ದು ಹೀಗೆ. ಮನೆಯ ಎದುರಿಗೆ ಬಂದ ಯಾವುದೋ ಬಡಕಲು ನಾಯಿಯ ಎದುರು ತಟ್ಟೆಯ ಎಂಜ ಲನ್ನವನ್ನು ಕೇವಲ ಒಂದೇ ಒಂದು ದಿನ ಅವರು ಚೆಲ್ಲಿದರು. ಸರಿ ಆ ಘಳಿಗೆಯಿಂದ ಆ ನಾಯಿ ಅವರ ಬಾಗಿಲಮುಂದೆ ಮಲಗಿಬಿಟ್ಟಿತು. ಏನು ಮಾಡಿದರೂ ಹೋಗಲೊಲ್ಲದು. ಜೊತೆಗೆ ಅದಕ್ಕೆ ಏನೋ ಕಾಯಿಲೆ ಇದ್ದ ಹಾಗಿತ್ತು. ಸಾಲದ್ದಕ್ಕೆ ಮೈತುಂಬ ಕಜ್ಜಿ ಬೇರೆ. ಬಡಕಲು ಎಂದರೆ ಬಡಕಲು. ಸಾಯುವ ಹಾಗಾಗಿದೆ, ಆದರೆ ಸಾಯಲೊಲ್ಲದು. ಮನೆಯವರು ಎರಡು ಏಟು ಬಿಗಿದು ನೋಡಿದರು. ನಾಯಿ ಅದಕ್ಕೂ ಜಗ್ಗಲಿಲ್ಲ. ಕುಯ್, ಕುಯ್ ಎಂದು ಅಳುತ್ತಾ ಮತ್ತೆ ಅವರ ಮನೆಯ ಮುಂದೆ ಬಂದು ಮಲಗಿತು. ಏನು ಮಾಡಿದರೂ ಅದು ಅವರ ಆಶ್ರಯದಿಂದ ಹೋಗಲೊಲ್ಲದು. ವಿಷ ಹಾಕಿ ಕೊಲ್ಲಲು ಅವರಿಗೆ ಮನಸ್ಸಿಲ್ಲ. ನನಗೂ ಅದು ಒಪ್ಪದು. ಅಂಥ ಕೆಲಸಕ್ಕೆ ಪುರ ಸಭೆಯವರೇ ಸರಿ ಎಂದು ನನಗನ್ನಿಸುತ್ತದೆ. ಅಷ್ಟರಲ್ಲಿ ನಮ್ಮ ಮನೆಯ ಹಾಲಿನವನು ಒಂದು ಸಲಹೆಯನ್ನು ಕೊಟ್ಟ. "ಸ್ವಾಮಿ, ಒಂದು ದಿನ ನಿಮ್ಮ ಅನ್ನ ತಿಂದಮೇಲೆ ಅದು ನಿಮ್ಮ ಮನೆಬಿಟ್ಟು ಹೋಗುವುದಿಲ್ಲ, ಸುಮ್ಮನೆ ಏಕೆ ಹೊಡೆಯುತ್ತೀರಿ. ಅದೆಲ್ಲಾ ಉಪಯೋಗವಿಲ್ಲ. ಅದರ ತಲೆಯಮೇಲೆ ಒಂದು ಬಕೆಟ್ ತಣ್ಣನೆಯ ನೀರನ್ನು ಸುರಿಯಿರಿ. ತನಗೆ ತಾನೇ ಓಡಿಹೋಗುತ್ತೆ." ಎಂದು ಅವನು ಹೇಳಿದಾಗ ನನಗೂ ಎದುರು ಮನೆ ಯವರಿಗೂ ಒಪ್ಪಿಗೆಯಾಯಿತು. ನೀರು ಸುರಿದದ್ದೇ ತಡ, ಕುಂಟುತ್ತಾ ನರಳುತ್ತಾ ಬಿದ್ದಿದ್ದ ನಾಯಿ ಆವೇಶಬಂದವರ ಹಾಗೆ ಎದ್ದು ನಾಗಾಲೋಟದಿಂದ ಓಡಿಹೋಯಿತು. ಅದು ಎಲ್ಲಿಗೆ ಹೋಯಿತೋ ತಿಳಿಯದು. ಮತ್ತೆ ಅದನ್ನು ನಮ್ಮ ಮೊಹಲ್ಲಾದಲ್ಲಿ ಇಂದಿಗೂ ನಾನು ನೋಡಿಲ್ಲ.

ಬೆಕ್ಕನ್ನು ಚೀಲಕ್ಕೆ ತುಂಬಲು ಮತ್ತೆ ನಮ್ಮ ಮನೆಯ ಹಾಲಿನವನನ್ನೇ ಕರೆಯ ಬೇಕಾಯಿತು. ಹರಿಸಾಹಸಪಟ್ಟು ಆತ ಎರಡು ಮರಿಗಳನ್ನು ಚೀಲಕ್ಕೆ ತುಂಬಿ ಚೀಲ ವನ್ನು ತನ್ನ ಸೈಕಲ್ಲಿಗೆ ಹಾಕಿಕೊಂಡು ತನ್ನ ಹಳ್ಳಿಯ ಕಡೆಗೆ ಹೊರಟ.

ಬೆಕ್ಕು ಹೋದರೂ ಬೆಕ್ಕಿನ ನೆನಪು ಹೋಗಲಿಲ್ಲ. ಮಕ್ಕಳಂತೂ ಭಣಗುಟ್ಟು ತ್ತಿದ್ದ ಮನೆಯನ್ನು ಕಂಡು ಬಹಳ ಪೇಚಾಡಿದುವು. ಮನೆತುಂಬ ಎಲ್ಲಂದರಲ್ಲಿ ಓಡಾ ಡುತ್ತಾ ಕುಯ್‍ಗುಡುತ್ತಿದ್ದ ಮರಿಗಳಿಲ್ಲದೆ ನನ್ನ ಹೆಂಡತಿ ತನ್ನ ಊಟದಲ್ಲೂ ತಾತ್ಸಾರ ತೋರಲಾರಂಭಿಸಿದಳು. ರಾತ್ರಿ ಅವೆರಡೂ ಆಕೆಯ ಹಾಸಿಗೆಯ ಕಾಲಂಚಿನಲ್ಲಿ ಮಲಗು ತ್ತಿದ್ದುವು. ಅದರಲ್ಲಿ ಒಂದು ನಮ್ಮ ಬಲವಂತದಿಂದ ಸ್ವಲ್ಪ ಕಾಫೀ ಕುಡಿಯುವುದನ್ನು ಕಲಿತಿತ್ತು. ಅವೆರಡರ ಆಟವನ್ನು ನೋಡುತ್ತಾ ನನ್ನ ಕಿರಿಯ ಮಗ ಊಟಮಾಡುವು ದನ್ನು ಬಿಟ್ಟು ಆಟವಾಡುತ್ತಿದ್ದ. ಅವನೊಂದಿಗೆ ಅವೂ ಚಿಣ್ಣಾಟವಾಡುತ್ತಿದ್ದುವು. ಮರಿಗಳಿಂದಾಗಿ ತಾಯಿ ಬೆಕ್ಕಿಗೂ ಆಗಾಗ ಸ್ವಲ್ಪ ಹಾಲು ಗಿಟ್ಟುತ್ತಿತ್ತು. ಅದು ರಾತ್ರಿ ಯಾವಾಗಲೋ ಬಂದು ಮರಿಗಳನ್ನು ಬೇಟೆಗೆ ಕರೆದೊಯ್ಯುತ್ತಿತ್ತು. ನಿಜ ಹೇಳುವು ದಾದರೆ ಆ ಎರಡೂ ಮರಿಗಳೂ ಮನೆಯನ್ನು ಸ್ವಚ್ಛವಾಗಿಟ್ಟಿದ್ದುವು. ಅವು ಇರುವವರೆಗೆ ಒಂದು ಜಿರಲೆಯಾಗಲೀ ಅಥವಾ ಒಂದು ಚೇಳಾಗಲೀ ಕಣ್ಣಿಗೆ ಬಿದ್ದಿರಲಿಲ್ಲ. ಒಮ್ಮೊಮ್ಮೆ ಎರಡು ಮರಿಗಳೂ ಒಟ್ಟಾಗಿ ಮನೆಯಿಂದ ಮಾಯವಾಗುತ್ತಿದ್ದುವು. ಹುಡುಕಿ ಕರೆ ತರುವ ಕುತೂಹಲದಿಂದ ಮಕ್ಕಳು ಸುತ್ತಮುತ್ತಣ ಎಂಟು ಮನೆಗಳಿಗೆ ಹೋಗಿ ಅಲೆ ದಾಡಿ ಬರುತ್ತಿದ್ದರು. ಮರಿಗಳಾದರೋ ತಮ್ಮ ಮನಸ್ಸಿಗೆ ಬಂದ ಒಂಬತ್ತನೆಯ ಮನೆಗೆ ನುಗ್ಗಿ ಅಲ್ಲಿನ ಮಕ್ಕಳನ್ನು ಮರುಳುಮಾಡಿ ಹುಸಿಯೊಲುಮೆಯನ್ನು ತೋರಿಸಿ ಹಾಲು ಗಿಟ್ಟಿಸಿ ಮನೆಗೆ ಬರುತ್ತಿದ್ದುವು. ಚಳಿಗಾಲ ಬಂತೆಂದರೆ ಎರಡೂ ಬಿಸಿಲು ಮಹಡಿ ಯನ್ನು ಸೇರಿ ಬೆಳಗಿನ ಹೂಬಿಸಿಲಲ್ಲಿ ದೇಹವನ್ನು ಸಿಂಬೆಸುತ್ತಿ ಮಲಗುತ್ತಿದ್ದುವು. ಮಳೆ ಗಾಲದಲ್ಲಿ ಎರಡೂ ಒಟ್ಟಾಗಿ ನೀರೊಲೆಯ ಬಿಸಿಯನ್ನು ಆಶ್ರಯಿಸುತ್ತಿದ್ದುವು. ಬೇಕೆಂದಾಗಲೆಲ್ಲ ಮಕ್ಕಳು ಅವನ್ನು ಎತ್ತಿ ತಮ್ಮ ತೊಡೆಯಮೇಲೆ ಕೂಡಿಸಿಕೊಳ್ಳುತ್ತಿ ದ್ದರು. ಅವಕ್ಕೂ ಮನುಷ್ಯ ದೇಹದ ಬಿಸಿ ಪ್ರಿಯವೆಂದು ತೋರುತ್ತದೆ. ಕಯ್- ಕುಯ್ ಎನ್ನದೆ ಸಾಕಷ್ಟು ಹೊತ್ತು ಅವು ತೊಡೆ ಏರಿ ಕುಳಿತು ಗುರುಗುರು ಎಂದು ಸುಖದ ಶಬ್ದವನ್ನು ಮಾಡುತ್ತಿದ್ದುವು. ಅಂಥ ಪುಟಾಣಿಗಳನ್ನು ಸಾಕಿದ್ದಾಯಿತು. ಹೊರದೂಡಿದ್ದೂ ಆಯಿತು. ಈಗ ನನಗೆ ಅನ್ನಿಸುತ್ತದೆ, ನಾನು ಮಾಡಿದ್ದು ಸರಿಯಲ್ಲ ಎಂದು. ಸಾಕೆದ್ದೇನೋ ಸರಿ. ಬೆಕ್ಕಿನಿಂದ ನಮಗೆ ಅನಾನುಕೂಲಕ್ಕಿಂತ ಅನುಕೂಲವೇ ಹೆಚ್ಚು. ಬೆಕ್ಕು ಹಾಲಿಗಾಗಿ ಹೊಂಚುಹಾಕುತ್ತದೆ ಮತ್ತು ಸಿಕ್ಕರೆ ಬಿಡುವುದಿಲ್ಲ. ಅದಕ್ಕಾಗಿ ಹಾಲನ್ನು ಭದ್ರವಾಗಿ ಮುಚ್ಚಿಟ್ಟರಾಯಿತು. ಎಲ್ಲಿಯವರೆಗೆ ಬೆಕ್ಕು ಕೆಚ್ಚಲಿಗೆ ಬಾಯಿ ಹಾಕಿ ಹಾಲು ಕುಡಿಯುವುದಿಲ್ಲವೋ ಅಲ್ಲಿಯವರೆಗೆ ಅವುಗಳಿಂದ ನಮಗೆ ತೊಂದರೆಯೇನೂ ಇಲ್ಲ. ನಮ್ಮ ಮಕ್ಕಳಿಗೂ ಬೆಕ್ಕಿಗೂ ಇರುವ ವ್ಯತ್ಯಾಸ ಅದೊಂದೇ! ಇನ್ನು ಇಲಿಗಳ ವಿಚಾರ. ಬೆಕ್ಕು ತನಗೆ ಬೇಕಾದಷ್ಟು ಇಲಿಗಳನ್ನು ತಿನ್ನಲಿ. ಬೇಡ ವೆನ್ನುವವರಾರು? ಆದರೆ ಅವನ್ನು ಹಿಡಿದು ತಂದು ನಮ್ಮೆಲ್ಲರೆದುರಿಗೇ ಕೊಂದು ತಿನ್ನು ವುದೆಂದರೆ ಅಸಹ್ಯವಲ್ಲವೇ? ಅದೊಂದೇ ಕಾರಣಕ್ಕಾಗಿ ಮುದ್ದಿನಿಂದ ಸಾಕಿದ ಮರಿಗಳನ್ನು ಮನಸ್ಸಿಲ್ಲದಿದ್ದರೂ ಹೊರದೂಡಬೇಕಾಯಿತು.

ಇಷ್ಟಾದ ಮೇಲೆ ದಿನಕ್ಕೆ ಒಮ್ಮೆಯಾದರೂ ಯಾರಾದರೊಬ್ಬರು ಬೆಕ್ಕಿನ ಮರಿಗಳನ್ನು ನೆನಪುಮಾಡದೇ ಬಿಡುತ್ತಿರಲಿಲ್ಲ. ಹಾಗೆ ಹೀಗೆ ಆಗಿ ಇಪ್ಪತ್ತು ಇಪ್ಪತ್ತೈದು ದಿನಗಳು ಕಳೆಯುವ ಹೊತ್ತಿಗೆ ಮನಸ್ಸು ಮತ್ತೆ ಕಲ್ಲಾಗಿ ಮರಿಗಳ ಸವಿನೆನಪು ಮಾಸಿ ಹೋಯಿತು.

ಒಂದು ದಿನ ಬೆಳಗಿನ ಐದು ಗಂಟೆಗಾಗಲೇ ಮಿಯಾವ್ ಮಿಯಾವ್ ಎಂದು ಅರಚುವುದನ್ನು ಕೇಳಿ ನನ್ನ ಹಿರಿಯ ಮಗಳು ಬಾಗಿಲು ತೆರೆದು ನೋಡಿದಾಗ ನಾವು ಹೊರದೂಡಿದ ಎರಡು ಮರಿಗಳಲ್ಲಿ ಒಂದು ಮತ್ತೆ ಹಾಜರಾಗಿತ್ತು. "ಅಣ್ಣಾ, ಕರಿಯ ಮತ್ತೆ ಬಂದುಬಿಟ್ಟಿತು. ಪಾಪ, ಎಲ್ಲೆಲ್ಲಿ ಅಲೆದಾಡಿತೋ ಏನೋ. ಎಷ್ಟು ದಿನ ಆಹಾರವಿಲ್ಲದೆ ಬಳಲಿತೋ? ಅಯ್ಯೋ ಪಾಪ, ಬಡವಾಗಿ ಹೋಗಿದೆ. ಬಾ ಪುಟ್ಟು. ಬಾ. ಸ್ವಲ್ಪ ಹಾಲು ಕೊಡುತ್ತೇನೆ, ಬಾ. ಇನ್ನು ನಿನ್ನ ನಾವು ಮನೆಬಿಟ್ಟು ಕಳುಹಿಸುವುದಿಲ್ಲ. ಬಾಯಿಲ್ಲಿ. ನಮ್ಮ ಮನೆಯನ್ನು ಹೇಗೆ ಪತ್ತೆ ಹಚ್ಚಿದೆ ಹೇಳು. ನಿನಗೆ ನಮ್ಮ ಗುರುತು ಸಿಕ್ಕಿತೇ? ಅಣ್ಣಾ ನೀವಿದನ್ನು ಮತ್ತೆ ದೂಡಬಾರದು. ಇದು ನಮ್ಮಲ್ಲೇ ಇರಲಿ. ನೋಡಿ ದೂಡಿದವರ ಮನೆಗೆ ಮತ್ತೆ ಓಡಿಬಂದಿದೆ." ಎಂದು ಮುಂತಾಗಿ ಆಕೆ ಪ್ರಲಾಪ ಮಾಡುವುದನ್ನು ಕಂಡು ನನ್ನ ಎದೆ ಥಟ್ ಎಂದು ಅಳುಕಿತು. ಗಂಟಲು ಕಟ್ಟಿಬಂತು. ನಾನು ಮಾಡಿದ್ದು ತಪ್ಪು ಎನಿಸಿತು.

ಮರಿಯಾದರೋ ನನ್ನನ್ನು ಸಂಪೂರ್ಣವಾಗಿ ಕ್ಷಮಿಸಿತ್ತು. ಏನೂ ಆಗಿಲ್ಲವೇನೋ ಎಂಬಂತೆ ಮೊದಲಿನ ಸಲಿಗೆಯಿಂದಲೇ ಬಾಲವನ್ನು ಎತ್ತಿಕೊಂಡು ಮನೆಯೆಲ್ಲಾ ಓಡಾಡಿತು. ನನ್ನ ಹೆಂಡತಿಯ ಹತ್ತಿರ ಹೋಗಿ ಮೈಗೆ ಮೈ ಸವರಿತು. ಅಡುಗೆಯ ಒಲೆಯ ಹತ್ತಿರ ನುಗ್ಗಿ ಬರಿದಾದ ಹಾಲಿನ ಪಾತ್ರೆಯನ್ನು ನೆಕ್ಕಿ ನೋಡಿತು. ಮಕ್ಕಳು ಕೈಗೆತ್ತಿಕೊಂಡಾಗ ಸುಮ್ಮನಿತ್ತು. ಕೊಟ್ಟ ಹಾಲನ್ನು ಕುಡಿಯಿತು. ಚಂಗ್ ಎಂದು ಹಾರಿ ಹಾಸಿಗೆಗಳ ರಾಶಿಯನ್ನು ಹತ್ತಿ ಆರಾಮವಾಗಿ ಮಲಗಿತು.

ಹಾಲಿನವನು ಮರಿಗಳನ್ನು ಎತ್ತಿಕೊಂಡು ಹೋಗಿ ಊರ ಹೊರಗೆ ಎರಡು ಮೈಲು ಆಚೆಯ ಒಂದು ಹಳ್ಳಿಯ ಹತ್ತಿರ ಬಿಟ್ಟು ತನ್ನ ಊರಿಗೆ ಹೋದನಂತೆ. ಆಮೇಲೆ ಈ ಮರಿಗಳು ಏನೇನು ಮಾಡಿರಬಹುದು? ಅದೇ ನನಗೂ ಆಶ್ಚರ್ಯ. ಕಣ್ಣುಕಟ್ಟಿ ಕಾಡಿನಲ್ಲಿ ಬಿಟ್ಟಾಗಲೂ ಅವು ಬದುಕಿ ಬಂದಿವೆ. ಮತ್ತೆ ತಮ್ಮ ತವರುಮನೆಗೆ ಬಂದಿರುವ ಮರಿ ಎಷ್ಟುಕಾಲ ಯಾರಯಾರ ಮನೆಯಲ್ಲಿ ಸುಳಿದಾಡಿತೋ! ಕೊನೆಗೆ ಯಾರ ಮನೆಯೂ ಒಗ್ಗದೆ ಅದು ನಮ್ಮ ಮನೆಗೇ ಬಂದಿರಬೇಕಲ್ಲವೆ? ಆಶ್ಚರ್ಯ! ಮನುಷ್ಯನ ಪ್ರೀತಿಗೂ ಪ್ರಾಣಿಯ ಪ್ರೀತಿಗೂ ಅದೆಷ್ಟು ಅಂತರ! ನಮ್ಮದು ಸ್ವಾರ್ಥ ಮೂಲವಾದದ್ದು, ಅಸಹಜವಾದದ್ದು, ನಮ್ಮ ಸುಖದುಃಖಗಳಿಂದ ಸೀಮಿತವಾದದ್ದು. ಮಕ್ಕಳ ಆಟಕ್ಕೆಂದು ಅದನ್ನು ನಾವು ಸಾಕಿದ್ದೆವು, ಅಷ್ಟೇ. ಅದು ಕದ್ದು ಹಾಲು ಕುಡಿದರೆ, ಎದುರಿಗೆ ಇಲಿಯನ್ನು ತಿಂದರೆ ನಮಗಾಗದು. ಕ್ಷಣದಲ್ಲಿ ನಮ್ಮ ಪ್ರೀತಿ ಅಸಹ್ಯವಾಗಿ ದ್ವೇಷವಾಗಿ ಪರಿವರ್ತನಗೊಂಡು ಮರಿ ಮನೆಬಿಟ್ಟು ಹೊರಡಬೇಕಾಯಿತು. ಆದರೆ ಮರಿಗೆ ಹಾಗಲ್ಲ.

ಅದರ ಪ್ರೀತಿ, ನಂಟು ನಮ್ಮಷ್ಟು ಸ್ವಾರ್ಥಮೂಲವಾದದ್ದಲ್ಲ. ನಾವು ಅದನ್ನು ಹೊಡೆದರೂ ಬಡಿದರೂ ತಳ್ಳಿದರೂ ಅದು ನಮ್ಮನ್ನು ಬಿಟ್ಟು ಹೋಗದು. ಎದುರು ಮನೆಯ ನಾಯಿ ಹಾಗೇ ಮಾಡಿತು. ಇವತ್ತು ನಮ್ಮ ಮನೆಯ ಬೆಕ್ಕಿನಮರಿ ಹಾಗೆ ಮಾಡಿದೆ.

೨

ಆದ್ದರಿಂದ ನನಗೆನಿಸುವುದಿಷ್ಟು. ಪ್ರಾಣಿಲೋಕದ ಕಡೆಗೆ ನನ್ನ ಒಲವು ಎಷ್ಟೇ ಇರಲಿ ನಾನು ಮಾತ್ರ ಪ್ರಾಣಿಗಳನ್ನು ಸಾಕಬಾರದು. ಆ ಯೋಗ್ಯತೆ ನನಗಿಲ್ಲ. ಹಾಗೆ ಸಾಕಲು ಪ್ರಯತ್ನಪಟ್ಟರೆ ನನ್ನ ಸಣ್ಣತನ ಬಯಲಿಗೆ ಬರುತ್ತದೆ. ಪ್ರಾಣಿಗಳನ್ನು ಸಾಕ ಬಲ್ಲ ಸರಿಯಾದ ಸಂಸ್ಥೆಯೆಂದರೆ ಸರ್ಕಾರ ಒಂದೇ !

ಮೊನ್ನೆ ಭಾನುವಾರ ಮಕ್ಕಳೊಂದಿಗೆ ಪ್ರಾಣಿಸಂಗ್ರಹಾಲಯಕ್ಕೆ ಹೋಗಿಬಂದೆ. ಅಲ್ಲಿ ನನಗೆ ಪರಮಾಶ್ಚರ್ಯವನ್ನುಂಟುಮಾಡಿದ ಪ್ರಾಣಿಗಳೆಂದರೆ, ಕೋತಿಗಳು-ಅದರಲ್ಲೂ ದೊಡ್ಡ ಕೋತಿಗಳು. ಹತ್ತಾರು ವರ್ಷಗಳಿಂದ ಕಬ್ಬಿಣದ ಸಲಾಕಿಗಳ ಹಿಂದೆ ಕುಳಿತು ಅವು ಮಾನವ ಲೋಕವನ್ನು ಸಮೀಕ್ಷೆ ಮಾಡುತ್ತಿವೆ; ನಾವು ಅವುಗಳನ್ನು ಸಮೀಕ್ಷೆ ಮಾಡುತ್ತಿದ್ದೇವೆ. ನಮ್ಮನ್ನು ಕಂಡಕೂಡಲೇ ದೊಡ್ಡ ಕೋತಿಯೊಂದು ನಮ್ಮ ಕಡೆ ಓಡಿ ಬಂದು ಸೆರೆಮನೆಯ ಸರಳುಗಳ ಮಧ್ಯದಿಂದ ತನ್ನ ಉದ್ದವಾದ ಕೈಯನ್ನು ಚಾಚಿತು, ತಿಂಡಿಯ ಆಸೆಯಿಂದ. ನನ್ನ ಹಿರಿಯ ಮಗಳು ಅದರ ಕೈಗೆ ಎರಡು ಕಡಲೆಕಾಯಿಗಳನ್ನು ಸ್ವಲ್ಪ ದೂರದಿಂದ ಇಟ್ಟಳು. ಕೋತಿ ಬಹುನಯವಾಗಿ ಅವುಗಳನ್ನು ಎತ್ತಿಕೊಂಡು ತಿಂದಿತು. ನನ್ನ ಎರಡನೆಯ ಮಗಳು, ಒಡ್ಡಿದ ಕೈಗೆ ಮತ್ತೆರಡು ಕಾಯಿಗಳನ್ನು ಹಾಕಿದಳು. ಕೋತಿ ಅದನ್ನೂ ತಿಂದಿತು. ನನ್ನ ಪುಟ್ಟ ಮಗ ಹೆದರಿಕೆಯಿಂದ ಎರಡು ಕಾಯಿಗಳನ್ನು ಕೋತಿಯ ಕಡೆಗೆ ಎಸೆದ. ಕೋತಿಗೆ ಕಾಯಿ ಎಟುಕಲಿಲ್ಲ. ಆಗ ಅದು ಓಡಿ ಹೋಗಿ ತನ್ನ ಗುಹೆಯಿಂದ ಒಂದು ಗೋಣೀಚೀಲವನ್ನು ತಂದು ಕಂಬಿಯಿಂದ ತೂರಿಸಿ ಅದರ ಸಹಾಯದಿಂದ ದೂರ ಬಿದ್ದಿದ್ದ ಕಾಯಿಗಳನ್ನು ತನ್ನ ಹತ್ತಿರ ಎಳೆದುಕೊಂಡು ತಿಂದಿತು. ಅದನ್ನು ನೋಡಿ ನಾನು ಬೆರಗು ಹೊಡೆದವನಂತೆ ನಿಂತೆ. ಬೆಕ್ಕಿಗಿಲ್ಲದ ಒಂದು ಜಾಣತನವನ್ನು ಈ ಕೋತಿ ಸಂಪಾದಿಸಿದೆಯಲ್ಲವೇ. ಅದು ಜೀವನದಿಂದ ನೇರವಾಗಿ ಕಲಿತಿರುವ ಪಾಠ; ಹೊಟ್ಟೆ ಕಲಿಸಿರುವ ಪಾಠ. ಕೋತಿ ಮತ್ತೆ ಕೈಯೊಡ್ಡಿತು, ಅಷ್ಟೇ ದೈನ್ಯದಿಂದ. ಅದರ ಮುಖ ನೋಡಿದೆ. ಮುಖದಲ್ಲಿ ಒಳಗಿನ ಜಾಣತನದ ಲವಲೇಶವೂ ಕಾಣುವಂತಿರಲಿಲ್ಲ. ಮೈ ಹೇಗೋ ಮೂತಿಯೂ ಹಾಗೆ. ಯಾವ ಸೂಕ್ಷ್ಮ ಸಂವೇದನೆಯನ್ನೂ ವ್ಯಕ್ತಪಡಿಸಲಾರದ ಬರಡುತನ ಎದ್ದು ಕಾಣುತ್ತಿದೆ. ಚಾಚಿದ ಕೈಯಲ್ಲಿ ಅಸಹಾಯಕತೆ ತುಂಬಿತುಳುಕುತ್ತಿದೆ. ಆಗ ನಾನು ಮುಂದೆ ನುಗ್ಗಿ "ರಮಾ, ಇಲ್ಲಿ ನನಗೆರಡು ಕಾಯಿಕೊಡು. ನಾನು ಅದರ ಕೈಗೆ ಕೊಡುತ್ತೇನೆ." ಎಂದವನೇ ಎರಡು ಕಾಯಿಗಳನ್ನು ತೆಗೆದುಕೊಂಡು ಕೊಡಲು ಕೈಚಾಚಿದೆ. ಕೋತಿ ಸ್ವಲ್ಪ ಮುಂದಕ್ಕೆ ಸರಿದು ಸರಳುಗಳಿಗೆ ಹತ್ತಿದಂತೆ ಕೂತು ಎಡಗೈಯಿಂದ ಒಂದು ಸರಳನ್ನು ಹಿಡಿದು ಬಲಗೈಯನ್ನು

ನನ್ನ ಕಡೆಗೆ ಚಾಚಿತು. ಇನ್ನೇನು ನಾನು ನನ್ನ ಕೈಯ ಕಾಯನ್ನು ಸರಿಯಾಗಿ ಅದರ ಅಂಗೈಗೆ ಹಾಕಬೇಕು ಎನ್ನುವಷ್ಟರಲ್ಲಿ ಕೋತಿ ಮಿಂಚಿನ ವೇಗದಿಂದ ತನ್ನ ಎಡಗೈ ಪಂಜದಿಂದ ನನ್ನ ಕೈಗೆ ರಪ್ ಎಂದು ಒಂದು ಏಟು ಬಾರಿಸಿತು. ಸರಕ್ಕನೆ ನನ್ನ ಕೈಯನ್ನು ಹಿಂದಕ್ಕೆ ಎಳೆದುಕೊಂಡೆ. ಕಾಯಿ ಚಿಮ್ಮಿ ದೂರಹೋಗಿ ಬಿದ್ದುವು. ಕೋತಿ ಮಾತ್ರ ತನ್ನ ಬರಡು ಮುಖವನ್ನು ನನ್ನ ಕಡೆ ತಿರುಗಿಸಿ ಮಿಕಿಮಿಕಿ ನೋಡಿತು. ನನ್ನ ಕೈಗೇನೋ ಬಲವಾದ ಪೆಟ್ಟೇ ಬಿದ್ದಿತ್ತು. ಆದರೂ ನಾನದನ್ನು ತೋರಗೊಡದೆ ದೂರದಿಂದಲೇ ಹತ್ತು ಕಾಯಿಗಳನ್ನು ಅದರ ಜೋನಿನೊಳಗೆ ಎಸೆದು ಮುಂದಕ್ಕೆ ನಡೆದೆ. ಬಲಗೈಯ ಹಿಂಬದಿಗೆ ಏಟುಬಿದ್ದು ಒಂದು ನರ ಕತ್ತರಿಸಿ ಹೋದುದರಿಂದ ಆ ಜಾಗದಲ್ಲಿ ಕೆನ್ನೆತ್ತರು ಚಿಮ್ಮುತ್ತಿತ್ತು. ಸಾಕಷ್ಟು ನೋವೂ ಆಗುತ್ತಿತ್ತು.

ನೋವಿಗಿಂತ ನನಗಾದ ಅಪಮಾನ ಹೆಚ್ಚೆಂದು ನನಗನ್ನಿಸಿತು. ಮಕ್ಕಳ ಕೈಯಿಂದ ವಿನಯವಾಗಿ ಕಾಯಿಗಳನ್ನು ತೆಗೆದುಕೊಂಡ ಕೋತಿ ನಾನು ಕೈಚಾಚಿದಾಗ ಸಮಯಕಾದು ಸುಳುವುಕೊಡದೆ ಹೀಗೆ ಅಪ್ಪಳಿಸಿದ್ದೇಕೆ? ಸ್ವಭಾವತಃ ಪ್ರಾಣಿಗಳ ವಿಷಯದಲ್ಲಿ ನನಗೆ ಬಹಳ ಮಮತೆ, ಕನಿಕರ. ಹಾಗಿದ್ದರೂ ನನಗೇಕೆ ಈ ಶಿಕ್ಷೆ? ಬಹುಶಃ ಕೋತಿಗೆ ಜೀವನ ಕಲಿಸಿದ ಪಾಠದ ಪ್ರಕಾರ ಈ ಮನುಷ್ಯನೆನ್ನುವ ಪ್ರಾಣಿ ತೀರ ಅಯೋಗ್ಯನೆಂದು ಕಾಣುತ್ತದೆ. ಅವನು ಎಂದಿದ್ದರೂ ಪಕ್ಕಾ ಮೋಸಗಾರ. ಅದರ ಅನುಭವ ಕೋತಿಗೆ ಸಾಕಷ್ಟು ಇದ್ದಿರಬೇಕು. ಮನುಷ್ಯವರ್ಗದಲ್ಲಿ ಗಂಡಸರಿಗಿಂತ ಹೆಂಗಸರು ನಂಬಿಕೆಗೆ ಹೆಚ್ಚು ಅರ್ಹರು. ಮಕ್ಕಳು ಇನ್ನೂ ಉತ್ತಮ. ಹೆಂಗಸರು ಮಕ್ಕಳು ಕೋತಿಗೆ ಎಂದೂ ಮೋಸಮಾಡಿಲ್ಲವೆಂದು ತೋರುತ್ತದೆ. ಅದಕ್ಕೆ ಅದು ಅವರೊಂದಿಗೆ ಅಷ್ಟು ಮಮತೆಯಿಂದ ವರ್ತಿಸಿತು. ಆದರೆ ಬೆಳೆದ ಗಂಡಸಿನ ವಿಷಯದಲ್ಲಿ ಅದಕ್ಕೆ ಸುತರಾಂ ನಂಬಿಕೆಯಿಲ್ಲ. ಅಂಥ ಎಷ್ಟೋ ಜನರ ಮುಂದೆ ಅದು ಕೈ ಒಡ್ಡಿರಬೇಕು. ಕಡಲೆಕಾಯಿಯ ಆಸೆ ತೋರಿಸಿ ಕೆಲವರು ಅದರ ಕೈಗೆ ಸಿಪ್ಪೆ ಕೊಟ್ಟಿರಬೇಕು. ಕಲ್ಲುಮುಳ್ಳುಗಳನ್ನು ಕೊಟ್ಟಿರಬೇಕು. ಸೂಜಿಯಿಂದ ಚುಚ್ಚಿರಬೇಕು. ಕೈಹಿಡಿದು ತಿರುಚಿರಬೇಕು. ಈ ಬಗೆಯ ಕಹಿ ಅನುಭವ ಕೋತಿಯ ನಿರ್ಧಾರಕ್ಕೆ ಕಾರಣವಾಗಿರಬೇಕು. ಪಾಪ ಮೂಕ ಪ್ರಾಣಿ. ಬೇರೆ ಇನ್ನಾವರೀತಿಯಲ್ಲೂ ತನ್ನ ಉಗ್ರ ಜುಗುಪ್ಸೆಯನ್ನು ತೋರಿಸಲಾರದು. ಅದಕ್ಕಿರುವುದು ಒಂದೇಮಾರ್ಗ, ಏಟಿಗೆಏಟು. ಮುಯ್ಯಿಗೆಮುಯ್ಯಿ. ಅದರ ಬಿಸಿ ನನಗೆ ತಟ್ಟಿತು ಅಷ್ಟೇ. ನಾನೂ ಮೋಸಗಾರರ ಗುಂಪಿನಲ್ಲಿ ಒಬ್ಬ ತಾನೇ.

ಇದಾವುದನ್ನೂ ನಾನು ಮಕ್ಕಳಿಗೆ ಬಿಡಿಸಿ ಹೇಳಲಿಲ್ಲ. ಇತರ ಪ್ರಾಣಿಗಳನ್ನು ನೋಡುವ ಸಂಭ್ರಮದಲ್ಲಿ ಅವರು ಈ ಕೋತಿಯ ವಿಷಯವನ್ನು ಮರೆತುಬಿಟ್ಟರು. ಆದರೆ ನನ್ನನ್ನು ಮಾತ್ರ ಆ ಸಂಗತಿ ಎಡೆಬಿಡದೆ ಕಾಡುತ್ತಿದೆ. ನನ್ನ ಹೃದಯವನ್ನು ಹುಳದಂತೆ ಹೊಕ್ಕು ಕೊರೆಯುತ್ತಿದೆ. ಗಂಡಸರಿಗಿಂತ ಹೆಂಗಸರು ಮೋಸಗಾರರು ಎನ್ನುತ್ತೇವೆ. ಸಾಹಿತ್ಯದಲ್ಲಿ ಆ ಧೋರಣೆಯನ್ನು ಉದಾಹರಿಸಿ ತೋರಿಸುತ್ತೇವೆ.

ಆದರೆ ಹೆಂಗಸರಿಗಿಂತ ಗಂಡಸರೇ ಹೆಚ್ಚು ಕಪಟಿಗಳೆಂದು ಈ ಕೋತಿ ಸ್ವಾನುಭವದಿಂದ ತಿಳಿಸುತ್ತಲಿದೆ. ನಮ್ಮ ವ್ಯವಹಾರದಲ್ಲಿ ನಾವು ಎಷ್ಟು ಮುಚ್ಚುಮರೆ, ಮೋಸ, ತಟವಟ ಮಾಡುತ್ತೇವೆ. ಎಷ್ಟೋವೇಳೆ ನಮ್ಮಮಾತಿಗೂ ಆಚರಣೆಗೂ ಸಂಬಂಧ ವಿರುವುದಿಲ್ಲ. ಪ್ರಯತ್ನಪೂರ್ವಕವಾಗಿ ಅದನ್ನು ಮರೆಮಾಚುವುದನ್ನು ಕಲಿತಿದ್ದೇವೆ. ಹಾಗೆ ಮಾಡುವುದೇ ಸಭ್ಯವ್ಯವಹಾರವೆಂದೂ ಚತುರತೆಯೆಂದೂ ನಮ್ಮ ನಾಗರಿಕತೆ ಸಾರಿ ಹೇಳುತ್ತಿದೆ. ನಿಜವಾದ ನಮ್ಮ ಯೋಗ್ಯತೆ ಏನು ಎಂದು ತಿಳಿಯಲು ನಾವು ಪ್ರಾಣಿಗಳನ್ನು ಮರೆಹೋಗಬೇಕು. ಅಲ್ಲಿ ನಮ್ಮ ಯೋಗ್ಯತೆಗೆ ಒರೆಹಚ್ಚಿದಂತಾಗುತ್ತದೆ. ಮಾತನಾಡಲು ಬಂದಿದ್ದರೆ ನಾನು ಸಾಕಿದ ಬೆಕ್ಕಿನಮರಿ ಏನನ್ನುತ್ತಿತ್ತೋ. ನೆನೆದರೆ ಭಯವಾಗುತ್ತದೆ. ಕೋತಿಯಷ್ಟು ಬುದ್ಧಿ ಅದಕ್ಕಿದ್ದಿದ್ದರೆ ಅದು ನನ್ನನ್ನು ಪರಚುತ್ತಿತ್ತು, ಕಡಿಯುತ್ತಿತ್ತು. ಮುಖದಮೇಲೆ ಉಗಿಯುತ್ತಿತ್ತು. ಜೀವನ ಕಲಿಸುವ ಪಾಠ ಹೀಗಾಗಿ ನನಗೆ ಕೋತಿಯಿಂದ ಬಂತು. ನಾವು ಸಾಕುವ ಕೋಳಿ ಕುರಿ ಹಸು ಎಮ್ಮೆ ಕುದುರೆ ಕತ್ತೆ ಗಿಳಿ ಗೊರವಂಕಗಳು ನಮ್ಮ ಮನೋಧರ್ಮಕ್ಕೆ ಸಜೀವ ಸಾಕ್ಷಿಗಳಾಗಿರುವುದರಿಂದಲೇ ಜೀವನದ ನಿಸ್ಪೃಷ್ಟ ವಿಮರ್ಶೆ ಬೇಕಾದಾಗಲೆಲ್ಲಾ ನಾನು ಮಾನವಲೋಕಕ್ಕಿಂತ ಹೆಚ್ಚಾಗಿ ಪ್ರಾಣಿ ಲೋಕವನ್ನೇ ಆಶ್ರಯಿಸುತ್ತೇನೆ.

ಎಲ್ಲಾದರು ಇರು ; ಎಂತಾದರು ಇರು ;
ಎಂದೆಂದಿಗು ನೀ ಕನ್ನಡವಾಗಿರು.
ಕನ್ನಡ ಗೋವಿನ ಓ ಮುದ್ದಿನಕರು
ಕನ್ನಡತನವೊಂದಿದ್ದರೆ ನೀನಮ್ಮಗೆ ಕಲ್ಪತರು !

ನೀ ಮೆಟ್ಟುವ ನೆಲ—ಅದೆ ಕರ್ನಾಟಕ ;
ನೀನೇರುವ ಮಲೆ—ಸಹ್ಯಾದ್ರಿ.
ನೀ ಮುಟ್ಟುವ ಮರ—ಶ್ರೀಗಂಧದ ಮರ ;
ನೀ ಕುಡಿಯುವ ನೀರ್—ಕಾವೇರಿ.

ಪಂಪನನೋದುವ ನಿನ್ನಾ ನಾಲಗೆ
    ಕನ್ನಡವೇ ಸತ್ಯ,
ಕುಮಾರವ್ಯಾಸನನಾಲಿಪ ಕಿವಿಯದು
    ಕನ್ನಡವೇ ನಿತ್ಯ.

—ಕುವೆಂಪು

ನಮ್ಮ ಸಾಹಿತ್ಯ

ಇಪ್ಪತ್ತೈದು ವರ್ಷಗಳು

ಎಚ್ಚೆಸ್ಕೆ

ಪ್ರಬಂಧಸಾಹಿತ್ಯ

ಕಳೆದ ಇಪ್ಪತ್ತೈದು ವರ್ಷಗಳ ಕನ್ನಡದ ಪ್ರಬಂಧಸಾಹಿತ್ಯವನ್ನು ಕುರಿತು ಬರೆಯುವಾಗ ಈ ಕ್ಷೇತ್ರದಲ್ಲಿ ಈ ಅವಧಿಯಲ್ಲಾಗಿರುವ ಸೃಷ್ಟಿಕಾರ್ಯವನ್ನು ಸಮರ್ಪಕವಾದ ಬೆಳವಣಿಗೆಯೆಂದು ಭಾವಿಸಬಹುದೇ ? —ಎಂಬ ಪ್ರಶ್ನೆ ಉದ್ಭವಿಸುವುದು ಸಹಜ. ಈ ಇಪ್ಪತ್ತೈದು ವರ್ಷಗಳಲ್ಲಿ ಕನ್ನಡ ಸಾಹಿತ್ಯದ ಇತರ ಪ್ರಕಾರಗಳಲ್ಲಿ ಆಗಿರುವ ಬೆಳವಣಿಗೆಯೊಂದಿಗೆ ಹೋಲಿಸಿದರೆ ಪ್ರಬಂಧಸಾಹಿತ್ಯದಲ್ಲಿ ಆಗಿರುವ ಕೆಲಸ ಸ್ವಲ್ಪವೆಂದು ತೋರಬಹುದು. ಈ ಕಾಲದಲ್ಲಿ ಕನ್ನಡಕಾವ್ಯ ಹೊಸ ಹೊಸದಾಗಿ ಕವಲೊಡೆದಿದೆ ; ಕಾದಂಬರಿಯಂತೂ ರಾಶಿ ರಾಶಿಯಾಗಿ ಸೃಷ್ಟಿಯಾಗಿದೆ. ಸಣ್ಣಕತೆಗಳಿಗೆ ಮನಸ್ಸು ತೆತ್ತುಕೊಂಡ ತರುಣಪೀಳಿಗೆಯ ಪ್ರಯತ್ನ ಆಶಾದಾಯಕವಾಗಿದೆ. ನಾಟಕಕ್ಷೇತ್ರದಲ್ಲಿ ಹಲವಾರು ಮಂದಿ ಪ್ರಯೋಗಪ್ರಿಯರು ಕಾಣಿಸಿಕೊಳ್ಳಹತ್ತಿದ್ದಾರೆ. ನಡುವೆ ನಿಂತ ಪ್ರಬಂಧ ಸಾಹಿತ್ಯಕಾರನಾದರೋ, ಯಾರ ಗಮನವನ್ನೂ ಹೆಚ್ಚಾಗಿ ಸೆಳೆಯಲಾರದೆ ಇನ್ನೂ ಹಿಂದಿನ ಸ್ಥಿತಿಯಲ್ಲೇ ಇದ್ದಾನೆ.

ಎಲ್ಲಕ್ಕಿಂತ ಮುಖ್ಯವಾಗಿ ಈ ಸಾಹಿತ್ಯಪ್ರಕಾರಕ್ಕೆ ಕನ್ನಡದಲ್ಲಿ ಸರ್ವಜನ ಸಮ್ಮತವಾದ ಹೆಸರೂ ಕೂಡ ಇಲ್ಲವಾಗಿದೆ. ಇಂಗ್ಲಿಷಿನಲ್ಲಿ ' ಎಸ್ಸೆ ' ಎಂಬುದಾಗಿ ಕರೆಯುವ ಈ ಸಾಹಿತ್ಯಪ್ರಕಾರವನ್ನು ಕನ್ನಡದಲ್ಲಿ ಏನೆಂದು ಕರೆಯಬೇಕೆಂಬ ವಿಚಾರದಲ್ಲಿ ಒಮ್ಮತ ಇಲ್ಲವಾಗಿದೆ. ' ಹರಟೆ 'ಯೆಂಬ ಹೆಸರು ಬಲು ಹಗುರ. ಪ್ರಬಂಧವೆಂದರೆ ಬಲು ಭಾರ, ಗಂಭೀರ. ಇನ್ನು ಇದನ್ನು ಲಲಿತಪ್ರಬಂಧವೆನ್ನೋಣವೆ ? ಇದು ' ಲಲಿತ 'ವಾಗಿಯೇ ಇರಬೇಕೆಂಬ ಕಡ್ಡಾಯವೇಕೆ ? ವೀರ, ರೌದ್ರ, ಭೀಭತ್ಸಗಳಿಗೆ ಇಲ್ಲಿ ಎಡೆಯಿಲ್ಲವೆ ? ಪ್ರಬಂಧಕಾರನಿಗೇಕೆ ಈ ಬಗೆಯ ಕಟ್ಟು ? ಲಘುಪ್ರಬಂಧಗಳೆನ್ನುವುದಾದರೆ, ಬೇಂದ್ರೆಯವರು ಹೇಳುವ ಹಾಗೆ ಇವೆಲ್ಲವೂ ಲಗುಬಗೆಯಿಂದ ಬರೆದವುಗಳಲ್ಲ ; ಅಷ್ಟು ಲಘುವಾಗಿ ಅವುಗಳನ್ನು ಬಳಸಲು ಬಾರದು. ಆದರೂ, ಬೇಂದ್ರೆಯವರೇ ಹೇಳುವ ಹಾಗೆ, ಈ ಬಗೆಯ ಸಾಹಿತ್ಯದಲ್ಲಿ ಲಾಘವವಿದ್ದರೂ ಲಘುತ್ವವಿಲ್ಲ. ದುಷ್ಯಂತ ಶಕುಂತಲೆಗೆ ಕೊಟ್ಟ ' ಹಸ್ತಲಾಘವ 'ದ ರೀತಿಯೂ ಇದಲ್ಲ. ರಘುವಂಶ ಕಾವ್ಯದಲ್ಲಿ ಕಾಲಿದಾಸ ' ಲಘು ' ಶಬ್ದಕ್ಕೆ ತಂದುಕೊಟ್ಟಿರುವ ಗೌರವಕ್ಕೆ ಈ ಸಾಹಿತ್ಯಪ್ರಕಾರವೂ

ಸಂಪೂರ್ಣ ಅರ್ಥ. ಇದು 'ರಿಕ್ತತೆಯ ಲಘುವೃತ್ತಿಯಲ್ಲ'. 'ಗಂಗಾ ಮೂಲದಂತೆ' ಲಘುವಾಗಿರುವ ಈ ಸಾಹಿತ್ಯಕ್ಕೆ ಗಂಗೆಯದೇ ಗುಣ. ಬೆಟ್ಟದಿಂದ ಧುಮ್ಮಿಕ್ಕಿ, ಅಂಕು-ಡೊಂಕಾಗಿ ಅಡ್ಡಾಡಿ, ಹಲವು ಪ್ರವಾಹಗಳನ್ನೊಳಗೊಂಡು, ಬಳಸಿ ಹರಿದು ಕಡಲು ಸೇರುವ ಲೀಲಾವಿಲಾಸ.

ಈ ಸಾಹಿತ್ಯಕ್ಕೆ ಒಪ್ಪುವ ಹೆಸರು ಕೊಡುವಲ್ಲಿ ವೈಫಲ್ಯ ಕಂಡುಬಂದಿರುವಂತೆಯೇ, ಇದರ ಲಕ್ಷಣಗಳನ್ನು ವಿವರಿಸುವ ವಿಚಾರದಲ್ಲೂ ಒಮ್ಮತವೇನೂ ಕಂಡುಬಂದಿಲ್ಲ. 'ಹರಟೆಗಾರನೂ ಒಬ್ಬ ಕವಿ. ಆದರೆ ಅವನ ಕೈಯಲ್ಲಿ ಕಿಂದರಿಯಿಲ್ಲ. ಅದನ್ನು ಬದಿಗಿರಿಸಿ, ಚಿಲಿಮೆ ಹೊತ್ತಿಸಿ ವಿಚಾರಮಗ್ನನಾಗಿ ನೆಮ್ಮದಿಯಾಗಿ ಹೊಗೆ ಉಗುಳುತ್ತ ಆರಾಮವಾಗಿ ಜೆಂಕಿಯ ಮುಂದೆ ಚಳಿಕಾಯಿಸುತ್ತ ಕೂತ ದಾರ್ಶನಿಕನಿವನು,' ಎಂಬುದು ಪ್ರೀಸ್ಟ್ಲಿ ಎಂಬ ಲೇಖಕನ ಮತವಂತೆ. 'ಗೀತೆಯಂತೆ ಮಿತಿಮೀರಿ ಹೊಮ್ಮುವ ಉತ್ಕಟ ರಸೋದ್ರೇಕದಿಂದ ಅದು ಬಂದುದಲ್ಲ; ವಿಶ್ರಾಂತಿಪೂರ್ಣವಾದ ಮನಃಸ್ಥಿತಿಯಲ್ಲಿ ಲಹರಿ ಲಹರಿಯಾಗಿ ಸಾವಕಾಶವಾಗಿ ವ್ಯಕ್ತವಾಗುವುದು', ಎಂಬುದು ಗೋಕಾಕರ ವ್ಯಾಖ್ಯಾನ. 'ಒಳ್ಳೆಯದಾದ ಹರಟೆಯು ಅನಂತಕಾಲದಷ್ಟು ಅಪಾರವಾದ ನಿಮಿಷದಲ್ಲಿ ಹುಟ್ಟಿ ಅದರಲ್ಲಿಯೇ ಮುಗಿಯುತ್ತದೆ. ಜೀವನದಂತೆ ಅದು ಬರಿ ಲೀಲೆ, ಆದರೆ ಜೀವನಕ್ಕಿರುವಂತೆ ಒಂದು ಗೂಢವಾದ ಉದ್ದೇಶವೂ ಅದಕ್ಕಿರುತ್ತದೆ.' ಇಂಥ ಹರಟೆಗೆ ವಿಷಯದ ಕಟ್ಟಿಲ್ಲ. 'ಯಾವ ದಿಕ್ಕಿನಿಂದಲೂ ಅವನು (ಹರಟೆಗಾರ) ತನ್ನ ವಸ್ತುಗಳನ್ನು ಆರಿಸಿಕೊಳ್ಳಬಹುದು. ಪರಮಾನ್ನದಿಂದ ಪರಮಾರ್ಥದವರೆಗಿನ ಪ್ರಪಂಚ ಅವನಿಗೆ ತೆರೆದಿಟ್ಟಿದೆ.' 'ಕುವೆಂಪು' ಅವರು ಹೇಳುವಂತೆ 'ಹರಟೆಗೆ ತುದಿಯಿಲ್ಲ, ಬುಡವಿಲ್ಲ, ಗೊತ್ತಿಲ್ಲ, ಗುರಿಯಿಲ್ಲ. ಜಗತ್ತಿನಲ್ಲಿ ದೇವರಿಗೆ ಸರಿಸಮವಾಗಿರುವುದೆಂದರೆ ಹರಟೆಯೊಂದೇ! ಹರಟೆಯೆಂದರೆ ಬೇಜಾರಿಗೆ ಭೇಷಜವಿದ್ದ ಹಾಗೆ. ಪೂರ್ವಾನುಭವಗಳೆಂಬ ಸ್ವಪ್ನಾರಣ್ಯದಲ್ಲಿ ಪೋಲಿಪೋಲಿಯಾಗಿ ಅಲೆಯುವುದೇ ಹರಟೆ.'

ಏಳು ವರ್ಷಗಳ ಹಿಂದೆ ಹೊಸದಿಲ್ಲಿಯ ಸಾಹಿತ್ಯ ಅಕಾದೆಮಿಯ ಆಶ್ರಯದಲ್ಲಿ ಪ್ರಕಟವಾದ 'ಹೊಸಗನ್ನಡ ಪ್ರಬಂಧ ಸಂಕಲನ'ದ ಪ್ರಸ್ತಾವನೆಯಲ್ಲಿ ಕನ್ನಡದ ಹಿರಿಯ ಪ್ರಬಂಧಕಾರರಲ್ಲೊಬ್ಬರಾದ ಗೊರೂರು ರಾಮಸ್ವಾಮಿ ಐಯಂಗಾರ್ಯರು ಹೇಳಿರುವ ಮಾತಿನಲ್ಲಿ ಈ ಸಾಹಿತ್ಯಪ್ರಕಾರದ ಲಕ್ಷಣಗಳು ಚೆನ್ನಾಗಿ ವ್ಯಕ್ತವಾಗುತ್ತವೆ: 'ಕಟ್ಟುನಿಟ್ಟಾದ ಗೂಳಿಹೆಜ್ಜೆಯ ಗಂಭೀರ ಶಾಸ್ತ್ರೀಯ ಚಾರಿತ್ರಿಕ ವಿಮರ್ಶಾತ್ಮಕ ತರ್ಕವಿಜ್ಞಾನ ನಿಬಂಧಗಳಿಗೂ ಎಸ್ಸೆಗಳಿಗೂ ಒಂದು ವ್ಯತ್ಯಾಸವಿದೆ. ಲಘುಪ್ರಬಂಧ, ಹೆಚ್ಚು ಹೆಚ್ಚಾಗಿ ವ್ಯಕ್ತಿಗತ, ಆತ್ಮಾನುಭವ, ಆತ್ಮಚರಿತ್ರೆ. ಇದರಲ್ಲಿ ಲೇಖಕ, ವಾಚಕನನ್ನು ಚಿರಪರಿಚಿತನಂತೆ ಭಾವಿಸಿ, ಅವನೆದುರು ತನ್ನ ಸ್ನೇಹದ ಬಗೆಯನ್ನು ಬಿಚ್ಚುವನು. ಇದರಲ್ಲಿ ವಾಚಕನಿಗೂ ಲೇಖಕನಿಗೂ ಆತ್ಮೀಯತೆ ಬೆಳೆಯುವುದು. ಪ್ರಬಂಧಕಾರನಿಗೆ ತನ್ನ ಮಾತೇ ಸರಿ ಎಂಬ ಹಠವಿಲ್ಲ. ತಾನು ಹೇಳಿದುದೇ ನಡೆಯಬೇಕೆಂಬ ಚಟವಿಲ್ಲ. ಅವನ ಮಾತುಗಳಲ್ಲಿ ಆತ್ಮಪ್ರತ್ಯಯವಿದ್ದರೂ ಕಪಿಮುಷ್ಟಿ ಇಲ್ಲ.

ಲಘುಪ್ರಬಂಧಕಾರ ಮತ್ತು ವಾಚಕನ ಈ ಬಗೆಯ ಆತ್ಮೀಯತೆಯಿಂದ, ನಿಜವಾದ ನಿರ್ದುಷ್ಟವಾದ ಪೂರ್ಣತೆ ಪಡೆದ ಎಸ್ಸೆ ಹುಟ್ಟುವುದು. ಅದು ಆತ್ಮವಿನೋದಿ ಯಾದುದರಿಂದ, ಭಾವಗೀತದಂತೆ, ಮನಸ್ಸಿನ ಸ್ವಚ್ಛಂದ ಲಹರಿಯ ಪ್ರತೀಕವಾಗುವುದು. ಲಘುಪ್ರಬಂಧಕಾರನಲ್ಲಿ ಅತಿಯಾದ ರಸೋದ್ರೇಕವಿಲ್ಲ. ಭಾವನಾಲಹರಿಗಳೂ, ವಿಚಾರ ಲಹರಿಗಳೂ, ಹೃದಯದ ಬುಗ್ಗೆಯಿಂದ ಶಬ್ದವಿಹಾರ ವಿಲಾಸವಾಗಿ ಹೊರಹೊಮ್ಮುವುವು'.

ಆದ್ದರಿಂದ ನೋಟಕ್ಕೆ ಲಘುವಾದರೂ ಕಲಾತ್ಮಕವೂ ಆಕರ್ಷಕವೂ ಆದ ಈ ಬಗೆಯ ಸಾಹಿತ್ಯವನ್ನು ಸೃಷ್ಟಿಸುವುದು ಸುಲಭವಲ್ಲ. ಸಂಗೀತ ಕಛೇರಿಯಲ್ಲಿ ಶಾಸ್ತ್ರೀಯ ಸಂಗೀತವನ್ನು ಸವಿಸ್ತಾರವಾಗಿ ಹಾಡಿದಮೇಲೆ, ಮನಸ್ಸೂ ಗಂಟಲೂ ಹದವಾಗಿರುವಾಗ, ಕೊನೆಕೊನೆಗೆ ಬರುವ ರಮ್ಯವಾದ ಲಘುಗೀತೆಗಳಂತೆ ಉತ್ತಮ ಪ್ರಬಂಧಗಳು ಕಲಾಭಿಜ್ಞನೂ ಅನುಭವಿಯೂ ಜೀವನವೇದಾಂತಿಯೂ ಆದವನಿಂದ ಮಾತ್ರವೇ ಹೊಮ್ಮಬಲ್ಲುವು. 'ನಿಜವಾಗಿ, ಉತ್ತಮವೂ ಸರ್ವಾಂಗ ಸಂಪೂರ್ಣವೂ ಆದ ಎಸ್ಸೆ, ಯಾವ ಭಾಷೆಯಲ್ಲಿಯೂ ವಿರಳವೇ,' ಎಂಬ ಗೊರೂರರ ಅಭಿಪ್ರಾಯ ಮನನೀಯ. ಫ್ರಾನ್ಸಿನ ಪ್ರಸಿದ್ಧ ಲೇಖಕನಾದ ಮಾಂಟೇನನೇ ಈ ಸಾಹಿತ್ಯಪ್ರಕಾರದ ಪ್ರವರ್ತಕ. ಅನಂತರ ಬಂದವರು ಬೇಕನ್, ಕೌಲಿ, ಡಿಫೋ, ಸ್ಟೀಲ್, ಅಡಿಸನ್, ಗೋಲ್ಡ್‌ಸ್ಮಿಥ್, ಲ್ಯಾಂಬ್, ಹ್ಯಾಜ್ಲಿಟ್, ಜೆಸ್ಟರ್‌ಟನ್, ಗಾರ್ಡಿನರ್, ಲಿಂಡ್, ಲೂಕಾಸ್ ಇತ್ಯಾದಿ.

ಕನ್ನಡದಲ್ಲಿ ಎಸ್ಸೆಯ ಯುಗ ಆರಂಭವಾದದ್ದು ಕೇವಲ ಮೂವತ್ತೇಳು ವರ್ಷ ಹಿಂದೆ. 'ಗೆಳೆಯರ ಗುಂಪಿ'ನ ಹರಟೆಗಳೂ, ಎಂ.ಜಿ.ವಿ. ಅವರ 'ಪುಲ್ಲಯ್ಯನ ಪ್ರಬಂಧ ಗಳೂ', ಪು.ತಿ.ನ. ಅವರು ಬರೆದ 'ರಾಮಾಚಾರಿಯ ನೆನಪೂ' ಈ ಸಾಹಿತ್ಯದ ಮೊದಲ ಗೊಂಚಲುಗಳು. ಈ ಮೂರೂ ಮೂರು ತೆರ. ಗೆಳೆಯರ ಗುಂಪಿನ ಹರಟೆ ಗಳಲ್ಲಿ ಹಾಸ್ಯದ ಹೊನಲಿನ ಹೊಸ ಜೀವವಿದೆ. ಜೀವನವನ್ನು ನೋಡುವ ವಿನೂತನ ದೃಷ್ಟಿಯಿದೆ. ಸಾಮಾನ್ಯವಿಷಯಗಳನ್ನೇ ಆಯ್ದುಕೊಂಡು ನೇದ ಪ್ರಬಂಧದ ಚಮತ್ಕಾರವನ್ನು ಎಂ.ಜಿ.ವಿ.ರವರ ಕೃತಿಗಳಲ್ಲಿ ಕಾಣಬಹುದಾಗಿದೆ. ಪು.ತಿ.ನ.ರವರಂತೂ ತಮ್ಮ ಜೀವನದರ್ಶನವನ್ನೇ ತಮ್ಮ ಪ್ರಬಂಧಗಳಲ್ಲಿ ಮೃದುವಾಗಿ ಎರಕಹೊಯ್ದಿದ್ದಾರೆ. ಪ್ರಬಂಧಗಳಿಗೂ ಕತೆಗಳಿಗೂ ನಡುವಣ ಗಡಿರೇಖೆಯ ಮೇಲೆ ನಿಂತು ಆಚೀಚೆ ಸುಳಿದಾಡಿ ದ್ದಾರೆ.

೧೯೩೧ರಷ್ಟು ಹಿಂದೆ ಪ್ರಕಟವಾದ ಈ ಮೂರು ಕೃತಿಗಳನ್ನು ಇಲ್ಲಿ ಉಲ್ಲೇಖಿ ಸುವುದರಲ್ಲಿ ಹೆಚ್ಚಿನ ಔಚಿತ್ಯವಿದೆ. ಏತಕ್ಕೆಂದರೆ ಕನ್ನಡ ಪ್ರಬಂಧಸಾಹಿತ್ಯಕ್ಕೆ ಮೂಲ ಪುರುಷರಂತಿರುವ ಈ ಮೂರೂ ಕೃತಿಗಳು ಇಂದಿಗೂ ನಮಗೆ ಮೂರು ಮಾದರಿಗಳಾಗಿವೆ. ಈ ಕೃತಿಗಳು ಪ್ರಕಟಿಸುವುದಕ್ಕೂ ಹಿಂದಿನಿಂದಲೇ ಈ ಬಗೆಯ ಕೃತಿಗಳು ಕನ್ನಡದಲ್ಲಿ ಸೃಷ್ಟಿಯಾದದ್ದುಂಟು. ಆದರೆ ಅವು ಅಲ್ಲಲ್ಲಿ ಚೆದುರಿಹೋಗಿದ್ದುವು. ಸಂಕಲನರೂಪ ದಲ್ಲಿ ಪ್ರಕಟವಾದ ಸ್ವತಂತ್ರ ಪ್ರಬಂಧಗಳಲ್ಲಿ ಇವೇ ಮೊದಲಾದ್ದರಿಂದ ಇವಕ್ಕೆ ಅಗ್ರ ಮರ್ಯಾದೆ. ವಯಸ್ಸಿನ ಹಿರಿತನಕ್ಕೆ ಸರಿಸಮನಾಗಿ ಗುಣದ ಹಿರಿತನವೂ ಇವಕ್ಕೆ ಉಂಟು.

ದ್ವಿತೀಯ ಮಹಾಯುದ್ಧದ ಪೂರ್ವಕಾಲದಲ್ಲಿ ಸಾಹಿತ್ಯವ್ಯವಸಾಯನಿರತರಾಗಿದ್ದ ಎಲ್ಲ ದೊಡ್ಡ ಸಾಹಿತಿಗಳೂ ಪ್ರಬಂಧಗಳನ್ನೂ ಕೂಡ ಬರೆದಿದ್ದಾರೆಂಬುದನ್ನು ನಾವು ಮರೆಯುವಂತಿಲ್ಲ. 'ಮಲೆನಾಡಿನ ಚಿತ್ರಗಳ' ಕರ್ತರಾದ ಕುವೆಂಪುರವರು ಮತ್ತೆ ಈ ಬಗೆಯ ಪ್ರಬಂಧಗಳನ್ನು ಬರೆಯಲು ಏಕೆ ಮನಸ್ಸುಮಾಡಲಿಲ್ಲವೋ, ಎಂಬುದಾಗಿ ಇವನ್ನೋದಿದವರಿಗೆ ದುಃಖವಾಗದೆ ಇರುವುದು ಅಸಾಧ್ಯ. ಇವರೂ, ಸಮಾಜದ ಹತ್ತು ಸಮಸ್ತರ ಗ್ನಾನವನ್ನು ಪರಿಶೀಲಿಸಿದ ಶಿವರಾಮ ಕಾರಂತರೂ, ನಗೆಯ ಅಲ್ಲೋಲ ಕಲ್ಲೋಲದ ಉಪಾಯ ವೇದಾಂತ ಪ್ರವರ್ತಕರಾದ ನಾ. ಕಸ್ತೂರಿಗಳೂ, ತಮ್ಮ ಊರಿನ ರಸಿಕರ ಸುರಸಪ್ರಸಂಗಗಳನ್ನು ಬಿತ್ತರಿಸಿದ ಗೊರೂರರೂ, 'ನಿರಾಭರಣ ಸುಂದರಿ'ಯ ದರ್ಬಾರಿನಲ್ಲಿ ಮನೋಜ್ಞವಾದ ಹರಟೆಗಳಿಗೂ ಗೌರವದ ಸ್ಥಾನ ದೊರಕಿಸಿಕೊಟ್ಟ ಬೇಂದ್ರೆಯವರೂ, ತಮ್ಮ ಸಣ್ಣಕತೆಗಳ ಸಂಕಲನಗಳಲ್ಲಿ ಅಲ್ಲಲ್ಲಿ ಲಲಿತಪ್ರಬಂಧಗಳನ್ನು ಪನ್ನೀರಿನಂತೆ ಚಿಮುಕಿಸಿದ ಶ್ರೀನಿವಾಸರೂ, ತುಟಿಮೀರದ ತುಂಟ ಹಾಸ್ಯವನ್ನು ಬಡಿಸಿದ ರಾ.ಶಿ.ಯವರೂ, ಹಾಸ್ಯಕ್ಷೇತ್ರದಲ್ಲೂ ಗಂಡುಗೊಡಲಿ ಬೀಸಿ, ಮಹಾಕವಿ ಪುರುಷಸರಸ್ವತಿಯ ಒಡ್ಡೋಲಗದಲ್ಲಿ ವಿನೂತನ ವ್ಯಂಗ್ಯಪ್ರಬಂಧಗಳನ್ನು ಸೃಷ್ಟಿಸಿದ ಆಧುನಿಕ ವಿಶ್ವಾಮಿತ್ರರಾದ ರಾಜರತ್ನಂ ಅವರೂ ಎಲ್ಲ ಕಾಲಕ್ಕೂ ಪ್ರಬಂಧ ಕ್ಷೇತ್ರದಲ್ಲಿ ಉಳಿಯುವಂಥವರು. ಇವರಲ್ಲಿ ಹಲವರು ಕಳೆದ ಕಾಲುಶತಮಾನದಲ್ಲೂ ಒಳ್ಳೆಯ ಪ್ರಬಂಧಗಳನ್ನು ಸೃಷ್ಟಿಸಿದರು. 'ಕುವೆಂಪು' ಅವರಂತೆ ಬೇಂದ್ರೆಯವರೂ ಈ ಕ್ಷೇತ್ರದಲ್ಲಿ ಇನ್ನೂ ಕೃತಿಗಳನ್ನು ಸೃಷ್ಟಿಸಬಹುದಾಗಿದ್ದೂ ಅಷ್ಟಕ್ಕೇ ಬಿಟ್ಟದ್ದು ದೊಡ್ಡ ನಷ್ಟ.

ಕನ್ನಡದ ಕಸ್ತೂರಿಗಳೂ ಕಳೆದ ಕಾಲುಶತಮಾನದಲ್ಲಿ ಈ ಕ್ಷೇತ್ರದಿಂದ ಹೆಚ್ಚು ಕಡಿಮೆ ನಿರ್ಗಮಿಸಿದರು. ಉಪ್ಪಿನಕಾಯಿಯ ಹಾಗೆ ಚಪ್ಪರಿಸುತ್ತಾ, ಜೀವನದ ಉಪ್ಪು ಹುಳಿ ಖಾರವನ್ನೂ ಅನುಭವಿಸಬಹುದಾಗಿದ್ದ ಅವರ ಹಳೆಯ ಚುಟಕಗಳು ಇಂದಿಗೂ ನಮಗೆ ಮಾನ್ಯ. ಜೀವನದ ಡೊಂಕನ್ನು ನಿರ್ಯೋಚನೆಯಿಂದ ಗೇಲಿಮಾಡುವ ಅವರ ಶುದ್ಧ ಹಾಸ್ಯದ ಟಾನಿಕ್ಕು ನಮಗೆ ಇಂದಿಗೂ ಅಗತ್ಯ.

ಇಪ್ಪತ್ತೈದು ವರ್ಷಗಳ ಕಾಲ ಕಳಕಳಿಸಿ ನಲಿದು, ಕಾಡಿಗೆ ನಡೆದು ಕಣ್ಮರೆಯಾದ 'ಕೊರವಂಜಿ'ಯನ್ನು ತಾವು ಮರೆಯುವಂತೆಯೇ ಇಲ್ಲ. ಸಮಾಜದ ಬಗೆ ಬಗೆಯ ವ್ಯಾಧಿಗಳಿಂದ ಅನ್ನದ್ವೇಷಕ್ಕೆ ತುತ್ತಾಗಿದ್ದವರಿಗೆ ಮಜ್ಜಿಗೆ ಹುಳಿಯನ್ನೂ, ಉರಿಗಾಳನ್ನೂ ಆರೋಗ್ಯಕರವಾದ ಗೊಜ್ಜು ಕಷಾಯ ಲೇಹ್ಯಗಳನ್ನೂ ವಿಧ ವಿಧವಾದ ಅಡಿಗೆ ಭಟ್ಟರಿಂದ ತಯಾರಿಸಿ ಬಡಿಸುತ್ತಿದ್ದ 'ಕೊರವಂಜಿ'ಗೆ ಕನ್ನಡ ನಾಡಿನಲ್ಲಿ, ಅಂಗೈ ಅಗಲದ ಜಾಗವೂ ಇಲ್ಲವಾದ ಸ್ಥಿತಿಯನ್ನು ನೆನೆದಾಗ ದುಃಖ ಉಮ್ಮಳಿಸಿಬಾರದಿರದು. 'ಕೊರವಂಜಿ'ಯ ಬಳಗದಲ್ಲಿ ಮೊಳೆತು ಚಿಗಿತು ಹೂಬಿಟ್ಟ ಲೇಖಕರದು:ಬಹು ದೊಡ್ಡ ಬಳಗ. ದಾಶರಥಿ ದೀಕ್ಷಿತ್, ಸುನಂದಮ್ಮ, ಅ.ರಾ.ಸೇ., ಹಾ.ರಾ. ಮುಂತಾದ ಉತ್ತಮ ಹಾಸ್ಯಪ್ರಬಂಧ ಕಾರರು ತಮ್ಮ ವರಸೆಯನ್ನು ಕಲಿತದ್ದೂ, ಪ್ರಯೋಗಿಸಿದ್ದೂ ಕೊರವಂಜಿಯ ಗರಡಿ ಯಲ್ಲಿ.

ಈ ಇಪ್ಪತ್ತೈದು ವರ್ಷಗಳಲ್ಲಿ ಒಳ್ಳೆಯ ಪ್ರಬಂಧಗಳನ್ನು ಕೊಟ್ಟು, ಇನ್ನೂ ಒಳ್ಳೆಯವನ್ನು ಕೊಡಬಹುದೆಂಬ ಆಸೆ ಹುಟ್ಟಿಸಿ, ಅಷ್ಟರಲ್ಲೇ ಕಣ್ಮರೆಯಾದ ಇಬ್ಬರು ಪ್ರಬಂಧಕಾರರನ್ನು ಇಲ್ಲಿ ನೆನೆಯಬೇಕು. 'ಸಾವಧಾನ'ದ ದ. ಬಾ. ಕುಲಕರ್ಣಿಯವರೂ, 'ಆಳು-ಕಾಳಿ'ನ 'ಅಷ್ಟಾವಕ್ರ'ರೂ ಈ ಇಬ್ಬರು. ಕತೆ, ವಿನೋದ, ಕಲ್ಪನೆ, ಆತ್ಮೀಯತೆ, ಸರಳ ನಿರೂಪಣೆ—ಇವು ದ. ಬಾ. ಕುಲಕರ್ಣಿಯವರ ಪ್ರಬಂಧಗಳ ಲಕ್ಷಣಗಳು. 'ಅಷ್ಟಾವಕ್ರ'ರು ಜೀವನದ ವಕ್ರತೆಯಲ್ಲಿ ದೃಷ್ಟಿನೆಟ್ಟ ಹಾಸ್ಯಶೀಲರು. ಕಸ್ತೂರಿಯವರ ಮಾರ್ಗದಲ್ಲಿ ನಡೆದು, ತಮ್ಮದೇ ಆದ ಶೈಲಿಯನ್ನೂ ದೃಷ್ಟಿಕೋನವನ್ನೂ ಕುದುರಿಸಿಕೊಂಡಿದ್ದವರು. ಇವರಿಬ್ಬರೂ ಈಗಲೂ ಇದ್ದಿದ್ದರೆ ಚೆನ್ನಾಗಿರುತ್ತಿತ್ತು. ಪ್ರಬಂಧಸಾಹಿತ್ಯ ಇನ್ನಷ್ಟು ಸುಪುಷ್ಟವಾಗಿ ಬೆಳೆಯುತ್ತಿತ್ತು.

ಕವಿಗಳಾದ ಪು.ತಿ.ನ. ಅವರ ಒಲುಮೆ ಬಹುಶಃ ಪ್ರಥಮತಃ ಕಾವ್ಯಕ್ಕೇ ಆದರೂ ಅವರು ಪ್ರಬಂಧಸಾಹಿತ್ಯವ್ಯವಸಾಯವನ್ನೂ ಕೂಡ ತುಂಬಾ ಶ್ರದ್ಧೆಯಿಂದ ಬೆಳಸಿಕೊಂಡು ಬಂದಿದ್ದಾರೆ. ಈಚೆಗೆ ಅವರ ಲೇಖನಿಯಿಂದ ಬಂದ ಪ್ರಬಂಧಗಳಲ್ಲಿ 'ರಾಮಾಚಾರಿಯ ನೆನಪಿ'ನ ಸರಳತೆಯಿಲ್ಲವಾದರೂ, ಈ ಪ್ರಬಂಧಗಳು ಸುಂದರವಾಗಿಯೂ ಗಂಭೀರವಾಗಿಯೂ ಇವೆ; ನವಿರಾದ ಹಾಸ್ಯದಿಂದ ಕೂಡಿವೆ. ಪು.ತಿ.ನ.ರ ಪ್ರಬಂಧಗಳ ಮುಖ್ಯಲಕ್ಷಣವೆಂದರೆ ಸಜ್ಜನಿಕೆ, ಆತ್ಮೀಯರಾದ ಓದುಗರ ಮುಂದೆ ಬಿಚ್ಚಿಟ್ಟ ಪೃಷ್ಟಾನ್ನದ ಬುತ್ತಿ. ಅವರ ಪ್ರಬಂಧಗಳೆಲ್ಲವೂ ಸಾಮಾನ್ಯವಾಗಿ ಪರಮಾನ್ನದ ಸೀಮೆಯಿಂದ ಪರಮಾರ್ಥದ ಲೋಕವನ್ನು ತಲಪುತ್ತವೆ. ಸಹಾನುಭೂತಿಯ ರಸವನ್ನೊಸರುತ್ತವೆ. ಕಾವ್ಯದ ಬಂಧನವಿಲ್ಲದ ಭಾವನಾವಿಲಾಸವಾಗಿ ಪರಿಮಳಿಸುತ್ತವೆ.

ಕನ್ನಡದ ಪ್ರಬಂಧಸಾಹಿತ್ಯದ ಇತಿಹಾಸಕಾರನಾದವನು ಮರೆಯಲಾಗದ ಇನ್ನೆರಡು ಹೆಸರುಗಳೆಂದರೆ ಎ. ಎನ್. ಮೂರ್ತಿರಾವ್ ಹಾಗೂ ವಿ.ಸೀ. ಈ ಇಬ್ಬರೂ ಕಳೆದ ಕಾಲುಶತಮಾನದಲ್ಲಿ ಕೆಲವು ಒಳ್ಳೆಯ ಪ್ರಬಂಧಗಳನ್ನು ಬರೆದಿದ್ದಾರೆ. 'ಹಗಲುಗನಸಿ'ನ ಮೂರ್ತಿರಾಯರು 'ಅಲೆಯುವ ಮನ'ದಲ್ಲಿ ಸಾಮಾನ್ಯವಾದ ವಸ್ತುಗಳ ಸುತ್ತಲೂ ಕನಸು ಕಟ್ಟಿದ್ದಾರೆ. ತಮ್ಮ ರಸಿಕ ಜೀವನಾನುಭವವನ್ನು ತುಂಬಿದ್ದಾರೆ. ಸಹೃದಯಿ ಸುಸಂಸ್ಕೃತ ವ್ಯಕ್ತಿಯ ತಿಳಿಮನಸ್ಸನ್ನಿಲ್ಲಿ ಕಾಣಬಹುದಾಗಿದೆ.

'ಪಂಪಾಯಾತ್ರೆ'ಯ ವಿ.ಸೀ. ಅವರ ಪ್ರಬಂಧಗಳೂ ಬಹಳ ಮೇಲುಮಟ್ಟದವು. 'ಬೆಳುದಿಂಗಳು' ಅವರ ಪ್ರಬಂಧಗಳ ಈಚಿನ ಸಂಕಲನ. 'ಬಂಧಕ್ಕಿಂತ ಅನಿರ್ಬಂಧ ಇಲ್ಲಿ ಹೆಚ್ಚಾಗಿ ಕಾಣುವ ಲಕ್ಷಣ—ಮನಸ್ಸು ಯಾವ ರೀತಿಯೋ ಒಂದು ವಿಷಯದಲ್ಲಿ ಆಡಲು ತೊಡಗಿ ಎಲ್ಲೆಲ್ಲಿಗೋ ಇಚ್ಛೆ ಬಂದಂತೆ ನಡೆಯುವುದು ಇಲ್ಲಿನ ರೀತಿ........ ಎದುರಿನ ಪ್ರಪಂಚದಿಂದ ಕಲ್ಪನೆಗೆ, ಇಂದಿನಿಂದ ಎಂದಿನದೋ ಘಟನೆಗೆ, ಸಾಮಾನ್ಯದಿಂದ ವಿಶೇಷಕ್ಕೆ, ಚಪಲತೆಯಿಂದ ಗಂಭೀರತೆಗೆ ದಾಟಿ ಹೋಗುವುದೂ, ಅಲ್ಲಿ ಇಲ್ಲಿ ಲೋಕಜೀವನಕ್ಕೂ ನಮ್ಮ ಅನುಭವಕ್ಕೂ ಸಂಬಂಧಿಸಿದ ಸಂಗತಿಗಳನ್ನು ಇವುಗಳೊಡನೆ

ಬೆರೆಸುವುದೂ ಭ್ರಮಿಸುವುದೂ ಇಲ್ಲಿ ಕಾಣುವ ನೋಟ.' ವಿ.ಸೀ. ಅವರ ರುಮಾಲನ್ನೂ, ಶಿಸ್ತನ್ನೂ, ದೋಸೆಯ ಚಪಲವನ್ನೂ, ಹೆಣ್ಣಿನ ಬಣ್ಣಸೆಯನ್ನೂ, ಮಳೆಯ ಹೊಡೆತಕ್ಕೆ ಸಿಕ್ಕಾಗ ಹೊರಬರುವ ವೇದಾಂತವನ್ನೂ ಅರ್ಥಮಾಡಿಕೊಳ್ಳ ಬಹುದು. ಖಾಯಿಲೆಯನ್ನೂ ಕೂಡ ಅವರು ಚಮತ್ಕಾರದಿಂದ ಮೆಚ್ಚಿ ಹೊಗಳಲು ಹೊರಟಾಗ ಅದನ್ನು ಸುಳ್ಳೆನ್ನಲು ಯಾರಿಗೂ ಸಾಧ್ಯವಿಲ್ಲ. ಬಾಯಿ ಮುಚ್ಚಿಸುವಂಥ ಕಲಾತ್ಮಕವಾದ ವಾದವೈಖರಿ ಇದು.

ಕನ್ನಡದ ಪ್ರಬಂಧಕಾರರನ್ನು ನೆನೆಸಿಕೊಳ್ಳುವಾಗ ಇನ್ನೂ ಅನೇಕ ಹೆಸರುಗಳು ತಲೆಯ ಕಣಜದಲ್ಲಿ ಕಿಕ್ಕಿರಿದು ತುಂಬುವುದು ಅನಿವಾರ್ಯ. ದಿವಂಗತ ಗೋವಿಂದ ಪೈ ಅವರ 'ಬರಹಗಾರನ ಹಣೆಬರಹ'ದಂಥ ಆತ್ಮಕಥನಗಳೂ, ಎ. ಆರ್. ಕೃಷ್ಣಶಾಸ್ತ್ರಿಗಳು ಆಗಿಂದಾಗ್ಗೆ ರಚಿಸಿದ 'ಲಘುಬರಹ'ಗಳೂ, ಕತೆಗಾರ ಆನಂದರು ಹರಿಯಬಿಟ್ಟ 'ಆನಂದ ಲಹರಿ'ಯೂ, ತೀ.ನಂ.ಶ್ರೀ. ಅವರ 'ನೆಗಡಿಯ ಅವಾಂತರ'ವೂ, ವಾಡಪ್ಪಿಯವರ 'ಗಾಳಿ ಗುದರಿ'ಯೂ, ಡಾ|| ಕರ್ಕಿಯವರ 'ನಾಲ್ದೆಸೆಯ ನೋಟ'ವೂ, ಮಂಜುನಾಥರ 'ಪುಸ್ತಕ ವನ್ನು ಬಿಡಿ' ಎಂಬ ವಿಚಿತ್ರಪ್ರಚಾರವೂ, ಎನ್. ಪ್ರಹ್ಲಾದರಾಯರ 'ರಥರಥಿಕ'ವೂ, ರಾಮಕೃಷ್ಣ ಉಡುಪರ 'ನಾಮಬಲ'ವೂ, ಎಂ. ರಾಮರಾಯರ 'ಅರಣ್ಯಯಾತ್ರೆ'ಯೂ, 'ರಾ.ಕು.' ಅವರ ಸಂಸ್ಕೃತ ವಾಕ್ಯಗಳ ಕುಚ್ಚಿನಿಂದ ಕೂಡಿದ 'ಗಾಳಿಪಟ'ವೂ, ಕೆ.ಎಸ್.ನ. ಅವರ 'ಉಪವನ'ವೂ, ಗೊರೂರರ 'ತಿಳಿಹಾಸ್ಯದ ಬುಗ್ಗೆ'ಗಳೂ, ಅ.ನ.ಕೃ. ಅವರ 'ಪೊರಕೆ'ಯೂ ಈ ಕಾಲದ ಕೆಲವು ಉತ್ತಮ ಕೃತಿಗಳು. ನಯ–ವಿನಯ ಸಂಪನ್ನವಾದ ಆತ್ಮೀಯ ಲೇಖನಗಳು.

ನಗೆಯೂ ವಿಡಂಬನವೂ ಚೇಷ್ಟೆಯೂ ಅಧಿಕವಾದ, ಕೆಲವುವೇಳೆ ತೀರ ಹಗುರವೂ ಆಗಬಹುದಾದ, ಆದರೂ ಬಹುಜನಪ್ರಿಯವಾದ, ಬರಹಗಳಲ್ಲಿ ಸಿದ್ಧಹಸ್ತರಾದ ಅನೇಕ ಪ್ರಬಂಧಕಾರರು ಕಳೆದ ಇಪ್ಪತ್ತೈದು ವರ್ಷಗಳಲ್ಲಿ ಅನೇಕ ಕೃತಿಗಳನ್ನು ರಚಿಸಿದ್ದಾರೆ. ತಮ್ಮಷ್ಟೇ ಆದರೂ ಹಾಸ್ಯಕ್ಕೆ ಒಡ್ಡಿಕೊಂಡು ಓದುಗರನ್ನು ಹುಚ್ಚು ಹಾಸ್ಯದಲ್ಲಿ ಅದ್ದಿ ವಿಲಿವಿಲಿ ಒದ್ದಾಡಿಸುವ ನಾಡಿಗೇರ ಕೃಷ್ಣರಾಯರೂ, ಸಮಾಜದಲ್ಲಿ ತುಂಬಿ ಹೋಗಿರುವ ತಿಮ್ಮಂದಿರ ತಲೆಗಳನ್ನು ತೆರೆದು ತೋರಿಸಿರುವ ಬೀಚಿಯವರೂ, 'ಕನ್ನಡದ ಗಾಡಿ'ಯಲ್ಲಿ ಕೂತ ಆಂಗ್ಲಪ್ರಿಯರ ಪೆದ್ದಟೋಪಿಯನ್ನು ಹಾರಿಸಿ ಕೆಡಹುವ ದಾಶರಥಿ ದೀಕ್ಷಿತರೂ, ಮುಂಗಾಲ್‌ಪುಟಿಗೆಯ 'ಎನ್ಕೆ'ಯವರೂ, 'ಕಬ್ಬು–ಕುಡುಗೋಲಿ'ನ ಹಾ.ರಾ. ಅವರೂ ಹಾಸ್ಯ ಸಾಹಿತ್ಯಲೋಕದಲ್ಲಿ ಶಾಶ್ವತವಾದ ಗೂಡುಕಟ್ಟಿದ್ದಾರೆ. 'ವರ್ತು ನೋಟೀಸಿಂಗು, ನಗಿಸುವ ಮರ್ತಿಗೆ ಈ ಕನ್ನಡದೊಳು ಆ ಫುಲ್ ಡರ್ತು! ಮೈ ಗಾಡ್!' ಎಂಬುದಾಗಿ ರಾಜರತ್ನಂರವರು ಉದ್ಗರಿಸಿ ತೋರಿಸಿದ ಕೊರತೆಯನ್ನು ಸ್ವಲ್ಪಮಟ್ಟಿಗಾದರೂ ತುಂಬಲು ಇವರು ಯತ್ನಿಸಿದ್ದಾರೆ, 'ಕೊರವಂಜಿ'ಯ 'ರಾ.ಶಿ.' ಯವರ ಕೊಡುಗೆಯಂತೂ ವಿಶಿಷ್ಟವಾದದ್ದಾಗಿದೆ. 'ಅರವಾ ವೊದ್ದು'ವಿನಿಂದ ಹಿಡಿದು 'ಹೆಬ್ಬಿಗುಬ್ಬಾಲೆ'ಯ ಜನರವರೆಗೆ ಹಲವರನ್ನು ಕುರಿತು ಬರೆದಿರುವ ಪ್ರಬಂಧಗಳು

ಎಂದಿಗೂ ಹಸುರಾಗಿರುವಂಥವು. ಎಲ್ಲಿಯೂ ಮರ್ಯಾದೆ ಕೆಡದೆ, ಸಹಾನುಭೂತಿ ಬೆರೆತ ಹಾಸ್ಯದ ಚಿಮುಟದಿಂದ ಹಲವರ ಅವಲಕ್ಷಣಗಳನ್ನು ಕಿತ್ತು ಬಿಸಾಡಿದ ರಾ.ಶಿ.ಯವರ ಬರಹಗಳನ್ನೆಲ್ಲಾ ಆರಿಸಿ ರಾಶಿ ಹಾಕಿದರೆ ಬಹುಶಃ ಹಲವಾರು ಸಂಪುಟಗಳಷ್ಟಾಗಬಹುದು.

ಕಾರಂತ, ಶ್ರೀರಂಗ ಇವರ ಪ್ರಬಂಧಗಳಲ್ಲಿ ವಿಡಂಬನೆಯದೇ ಮೇಲುಗೈ. ಹಾಸ್ಯವಾದರೂ ವಿಡಂಬನೆಗೆ ಚಾಮರ ಬೀಸುವುದಾದರೆ ಮಾತ್ರವೇ ಅದಕ್ಕೆ ಇಲ್ಲಿ ಸ್ಥಾನ. ಹಳ್ಳಿಯ ಹತ್ತು ಸಮಸ್ತರನ್ನು ಸೃಷ್ಟಿಸಿ, ಮೈಲಿಕಲ್ಲಿನೊಡನೆ ಮಾತುಕತೆ ನಡಸಿ, ಅಬುವಿಂದ ಬರಾಮಾಕ್ಕೂ ಅಪೂರ್ವ ಪಶ್ಚಿಮಕ್ಕೂ ಯಾತ್ರೆ ನಡೆಸಿರುವ ಕಾರಂತರ ಪ್ರಬಂಧಗಳು ವಿಲಕ್ಷಣ ವಾತಾವರಣವನ್ನು ಸೃಷ್ಟಿಸುವ ಅದ್ಭುತ ಶಕ್ತಿಯನ್ನು ಹೊಂದಿವೆ. ವಸ್ತುವಿನ ಹಾಗೂ ಅನುಭವದ ಹೊಸತನದ ವಿಶೇಷ ಕಳೆಯಿಂದ ಕೂಡಿವೆ.

ಶ್ರೀರಂಗರ ಪ್ರಬಂಧಗಳಲ್ಲಿ ಸಮಾಜಸುಧಾರಕನ ತೀವ್ರತೆಯೂ, ವಿಡಂಬನದ ಮೊನೆಯಿಂದ ಕೂಡಿದ ವಿಚಾರಲಹರಿಯೂ ಪ್ರಧಾನಲಕ್ಷಣಗಳು. 'ಜಯಂತಿ'ಯಲ್ಲಿ ಪ್ರಕಟವಾಗುತ್ತಿದ್ದ 'ಮಂಗನ ಮಲ್ಲಿನಾಥತನ'ದಂಥ ಹರಟೆಗಳು ಸಾಮಯಿಕವೂ ಚುರುಕಾದವೂ ಆಗಿದ್ದುವು. 'ಗಪ್‌ಚಿಪ್' ರಚಿಸಿರುವ ಎಂ. ಎಸ್. ಸುಂಕಾಪೂರರ ಪ್ರಬಂಧಗಳಲ್ಲೂ ವಿಡಂಬನದ ಚುಚ್ಚುಮಾತೇ ಪ್ರಧಾನಗುಣ.

ರಾಜಕೀಯ ಹಾಗೂ ಇತರ ಪ್ರಚಲಿತ ವಿಚಾರಗಳನ್ನು ಕುರಿತು ಆಗಿಂದಾಗ್ಗೆ ಪತ್ರಿಕೆಗಳಲ್ಲಿ ಪ್ರಕಟವಾಗುವ ಬರಹಗಳಲ್ಲೂ ಲಘುಪ್ರಬಂಧಗಳ ಜಾತಿಗೆ ಸೇರಿದ ಅನೇಕ ಲೇಖನಗಳನ್ನು ಗುರುತಿಸಬಹುದು. 'ಲಾಂಗೂಲಾಚಾರ್ಯ', 'ನಿರಂಜನ' ಮುಂತಾದವರು ವಾರವಾರವೂ ಬರೆಯುವ ಲೇಖನಗಳಲ್ಲಿ ಸಾಹಿತ್ಯದ ಸವಿಯೂ, ಮನ ಸೆಳೆಯುವ ವಿಚಾರ ಧಾಟಿಯೂ ಕೂಡಿಯೇ ಇವೆ. 'ಲಾಂಗೂಲಾಚಾರ್ಯ'ರ ಬರವಣಿಗೆ ಯಲ್ಲಿ ನಗೆ-ವಿಡಂಬನಗಳು ಪ್ರಮುಖವಾಗಿವೆ.

ಕವಿಗಳೂ ಕಾದಂಬರಿಕಾರರೂ ಆದ ಡಾ. ಗೋಕಾಕ್, ಅವರೂ ಅನೇಕ ಪ್ರಬಂಧ ಗಳನ್ನು ಬರೆದಿದ್ದಾರೆ. ಪತ್ರರೂಪದಲ್ಲಿರುವ 'ಜೀವನ ಪಾಠ'ಗಳೂ 'ಸಮುದ್ರದೀಚೆ ಯಿಂದ' ಎಂಬ ಲೇಖನಗಳೂ ಅಪೂರ್ವ ತೇಜಸ್ಸಿನಿಂದ ಕೂಡಿವೆ. ಸಿಂಪಿ ಲಿಂಗಣ್ಣ, ವೆಂಕಟ ಶೆಟ್ಟಿ, 'ಶಿವನ ಬುಟ್ಟಿ'ಯ ಹಿರೇಮಲ್ಲೂರ ಈಶ್ವರನ್, ಇವರುಗಳು ಆಳವಾದ ಅನುಭವದಿಂದ ಹೊಮ್ಮಿಬಂದ ಗಂಭೀರ ವಿಚಾರಗಳಿಂದ ಕೂಡಿದ ಲಲಿತ ಬಂಧಗಳನ್ನು ರಚಿಸಿದ್ದಾರೆ. ಎಸ್. ವಿ. ಪರಮೇಶ್ವರ ಭಟ್ಟರ ಹೆಸರನ್ನು ಈ ಸಂದರ್ಭದಲ್ಲಿ ನೆನೆಯ ಬಹುದಾಗಿದೆ. ಕೆ. ವೆಂಕಟರಾಮಪ್ಪನವರೂ ಇನಾಂದಾರರೂ, ಸೂರ್ಯನಾಥ ಕಾಮತರೂ ಆಗಿಂದಾಗ್ಗೆ ಪತ್ರಿಕೆಗಳಲ್ಲಿ ಆತ್ಮಾನುಭವದ ಬಾಣಬಿರುಸುಗಳನ್ನು ಪ್ರಯೋಗಿಸಿದ್ದಾರೆ. ಡಾ. ಹಾ. ಮಾ. ನಾಯಕರ 'ಸಂಕೀರ್ಣ'ವೇ ಮುಂತಾದ ಸಂಕಲನಗಳಲ್ಲಿ ಲಘು ಪ್ರಬಂಧಗಳ ಜಾತಿಯ ಕೆಲವು ಉತ್ತಮ ಬರಹಗಳನ್ನು ಕಾಣಬಹುದು. (ನನ್ನವೂ ಕೆಲವು ಲಘುಪ್ರಬಂಧಗಳು ಸಂಕಲನಗಳ ರೂಪದಲ್ಲಿ ಪ್ರಕಟವಾಗಿವೆ.)

ಈ ಲಘುಪ್ರಬಂಧಗಳನ್ನು ಸಾಮಾನ್ಯವಾಗಿ ಮೂರು ಗುಂಪುಗಳಾಗಿ ವಿಂಗಡಿಸಬಹುದು. ಶುದ್ಧಹಾಸ್ಯವನ್ನೇ ಗುರಿಯಾಗಿಟ್ಟುಕೊಂಡವುಗಳದು ಒಂದು ಜಾತಿ. ಹಾಸ್ಯವೆಂದು ನಂಬಿ ಒಳಹೊಕ್ಕರೆ ನೋವಿನ ಅನಂತ ದರ್ಶನ ಮಾಡಿಸಬಲ್ಲವು ಇನ್ನೊಂದು ಜಾತಿ. ಒಂದು ಸಣ್ಣ ವಿಚಾರ ಹೊಳೆದರೆ ಅದರ ಬೆನ್ನೇರಿ ನಡೆದು ವಿಚಾರಪ್ರವಾಹದ ಹಿರಿ ಸುಳಿಯಲ್ಲಿ ಸಿಲುಕಿಸುವುದು ಮತ್ತೊಂದು ಜಾತಿ. ಇಂಥ ಹರಟೆ ಹೇಗೆ ಅನಿರೀಕ್ಷಿತವಾಗಿ ಪ್ರಾರಂಭವಾಯಿತೋ ಹಾಗೆಯೇ ತಟ್ಟನೆ ಕೊನೆಗೊಳ್ಳುವುದೂ ಉಂಟು. ಹೀಗೇ ಮುಗಿಯಬೇಕು, ಇದೇ ಛಂದಸ್ಸಿರಬೇಕು, ಇದೇ ಪ್ರಾಸ ಬರಬೇಕು—ಎಂಬ ಕವಿಯ ಹಠವಾಗಲಿ, ಕಥಾಕಾರನ ಛಲವಾಗಲಿ ಹರಟೆಗಾರನಿಗೆ ಇಲ್ಲ. ಈ ಮೂರು ಬಗೆಯ ಪ್ರಬಂಧಗಳನ್ನೂ ಕನ್ನಡದಲ್ಲಿ ಕಾಣಬಹುದಾಗಿದೆ.

ಈಚೆಗೆ ಹೆಚ್ಚು ಜನಪ್ರಿಯವಾಗುತ್ತಿರುವ ವ್ಯಕ್ತಿಚಿತ್ರಗಳನ್ನೂ ಲಘುಪ್ರಬಂಧಗಳ ಜಾತಿಗೆ ಸೇರಿಸಬಹುದು. ವ್ಯಕ್ತಿಯ ಜೀವನಸಾಧನೆಗಳನ್ನು ಕುರಿತ ನೇರವಾದ ಹಾಗೂ ಕ್ರಮವಾದ ವಿವರಣೆಗಿಂತ, ಆತನ ಸುತ್ತಲೂ ಭಾವನೆಗಳನ್ನು ಸ್ವತಂತ್ರವಾಗಿ ಹರಿಯ ಬಿಟ್ಟು, ಒಂದು ವಿಶಿಷ್ಟ ಪರಿಣಾಮವನ್ನುಂಟುಮಾಡುವ ಆತ್ಮೀಯತೆಯ ಬರಹಗಳನೇಕವನ್ನು ಉದಾಹರಣೆಗಳಾಗಿ ಕೊಡಬಹುದು. ಸಿದ್ದವನಹಳ್ಳಿ ಕೃಷ್ಣಶರ್ಮರ ಪರ್ಣಕುಟಿ, ವಾರ್ಧಾಯಾತ್ರೆ, ಕನ್ನಡದ ಕಿಡಿಗಳು, ದೇಜಗೌ ಅವರ ‘ ಸಾಹಿತಿಗಳ ಸಂಗದಲ್ಲಿ,’ ಹಾ. ಮಾ. ನಾಯಕರ ಕೆಲವು ಲೇಖನಗಳು—ಇವು ಈ ಬಗೆಯವು.

ಶಾಸ್ತ್ರವಿಚಾರಗಳ ಮಂಥನವೇ ಆದರೂ, ಲಲಿತವಾದ ಶೈಲಿಯಲ್ಲಿ, ಆತ್ಮೀಯತೆಯ ಬಣ್ಣಹಚ್ಚಿ ಬಡಿಸಿದ ಪ್ರಬಂಧಗಳನ್ನೂ ಈ ಪ್ರಕಾರದಲ್ಲಿ ಸೇರಿಸಬಹುದು. ಕುವೆಂಪು, ಶಂ. ಬಾ. ಜೋಶಿ, ಮಾಸ್ತಿ, ಬೇಂದ್ರೆ, ಡಿ.ವಿ.ಜಿ., ಎಸ್. ವಿ. ರಂಗಣ್ಣ, ರಾ. ಯ. ಧಾರವಾಡಕರ, ಡಾ|| ಸದಾನಂದ ನಾಯಕ ಮುಂತಾದ ಅನೇಕರು ಈ ಬಗೆಯ ಸಾಹಿತ್ಯವನ್ನು ರಚಿಸಿ ಪ್ರಬಂಧಕ್ಷೇತ್ರದ ಬೆಳಸಿಗೆ ವೈವಿಧ್ಯವನ್ನು ತಂದುಕೊಟ್ಟಿದ್ದಾರೆ. ಡಾ. ಪದ್ಮನಾಭ ಪುರಾಣಿಕ, ಪ್ರೊ. ಕೆ. ಎಸ್. ಸವಣೂರ, ಮುಂತಾದವರ ವಿಜ್ಞಾನ ಪ್ರಬಂಧಗಳೂ, ಡಿ.ವಿ.ಜಿ. ಅವರ ರಾಜಕೀಯ ಪ್ರಸಂಗಗಳೂ, ರಾಜಗೋಪಾಲರಾವ್ ಹಾಗೂ ಹಾಲಪ್ಪನವರ ಲೇಖನಗಳೂ ವಿಶಿಷ್ಟವಾದಂಥವು. ರಾಜರತ್ನಂ ಅವರ ವಿಚಾರ ಸರಣಿಯೂ ಅವರು ತಮ್ಮ ಶಿಷ್ಯಮಿತ್ರರಿಂದ ಬರೆಯಿಸಿದ ಲೇಖನಗಳೂ ಒಳ್ಳೆಯ ಮಾದರಿಗಳು. ಇತರ ಲೇಖನಗಳ ಜತೆಗೆ ವಿಜ್ಞಾನ ಹಾಗೂ ಮಾನವಿಕ ಶಾಸ್ತ್ರಗಳ ವಿಷಯಗಳನ್ನು ಕುರಿತು ಬರೆದ ಲಘುಪ್ರಬಂಧಗಳನ್ನೂ ಪ್ರಕಟಿಸುತ್ತಿರುವ ‘ ಪ್ರಬುದ್ಧ ಕರ್ಣಾಟಕ ’ದ ಕೆಲಸ ತುಂಬಾ ಅಮೂಲ್ಯವಾದದ್ದು.

ಕಳೆದ ಇಪ್ಪತ್ತೈದು ವರ್ಷಗಳ ಕನ್ನಡ ಪ್ರಬಂಧಸಾಹಿತ್ಯವನ್ನು ಕುರಿತ ಈ ಲೇಖನದಲ್ಲಿ ಈ ಕಾಲದಲ್ಲಿ ಬಂದ ಎಲ್ಲ ಲೇಖನಗಳನ್ನೂ, ಬರೆದ ಎಲ್ಲ ಲೇಖಕರನ್ನೂ ಹೆಸರಿಸಲು ಸಾಧ್ಯವಾಗಿಲ್ಲ. ಇದು ಒಂದು ಸ್ಥೂಲ ವಿವೇಚನೆ ಮಾತ್ರ. ಪ್ರಬಂಧದ ವ್ಯಾಪ್ತಿ ವಿಶಾಲವಾದದ್ದು. ನಾನಾ ಪತ್ರಿಕೆಗಳಲ್ಲಿ ಪ್ರಕಟವಾಗಿ ಮರೆಯಾಗುತ್ತಿರುವ ಅಸಂಖ್ಯಾತ ಲೇಖನಗಳನ್ನೆಲ್ಲಾ ಒಟ್ಟೈಸಿ ಕ್ರಮವಾಗಿ ವಿಂಗಡಿಸುವುದು ಕಷ್ಟ.

ಕನ್ನಡದಲ್ಲಿ ಪ್ರಕಟವಾಗಿರುವ ಕತೆ ಕವನ ಕಾದಂಬರಿಗಳೊಂದಿಗೆ ಹೋಲಿಸಿದರೆ ಪ್ರಬಂಧದ ಪ್ರಗತಿ ಅತೃಪ್ತಿ ಹುಟ್ಟಿಸುವುದು ಸಹಜ. ದಿನದಿನವೂ ಪತ್ರಿಕೆಗಳಲ್ಲಿ ಪ್ರಕಟವಾಗುವ ಅವಸರದ ಬರೆವಣಿಗೆಗಳಿಂದ ಹಿಡಿದು, ತೂಗಿ ಬರೆದ ಪ್ರಸಂಗಗಳವರೆಗೆ ಸೃಷ್ಟಿಯಾಗುತ್ತಿರುವ ಪ್ರಬಂಧಗಳ ರಾಶಿಯಲ್ಲಿ ಎಷ್ಟೋ ಲೇಖನಗಳು ಕಾಲರಾಯನ ಜರಡಿಗೆ ಸಿಕ್ಕಿ ಸಾಯಬಹುದು. ಆದರೆ ಸಾಹಿತ್ಯದ ಮುದ್ರೆಯ ಬಲದಿಂದಲೂ, ಅಪರಂಜಿಯ ಗುಣದಿಂದಲೂ ಉಳಿಯಬಹುದಾದ ಪ್ರಬಂಧಗಳೂ ಈ ಕಾಲದಲ್ಲಿ ಬಂದಿವೆಯೆಂಬುದನ್ನೂ ಮರೆಯುವಂತಿಲ್ಲ. ಇವು ನಾವು ಬಯಸಿದಷ್ಟು ಪ್ರಮಾಣದಲ್ಲಿ ಇಲ್ಲವಾದರೂ ಅಷ್ಟಿಷ್ಟಾದರೂ ಬಂದಿವೆಯೆಂಬುದೇ ಸಮಾಧಾನ. ಈ ಬಗೆಯ ಸಾಹಿತ್ಯಕ್ಕೆ ಇನ್ನೂ ಹೆಚ್ಚಿನ ಪ್ರೋತ್ಸಾಹ ಅವಶ್ಯ.

ನಿಮ್ಮನುಡಿ ನಿಮ್ಮ ಗಂಡಸುತನಕೆ ಹಿರಿಸಾಕ್ಷಿ;
ಗೆಲವಿದ್ದರದಕೆ ನಿಮಗಿಹುದು ಶಕ್ತಿ,
ನುಡಿಮಡಿದರೆಲ್ಲರೂ ಮೂಕ ಜಂತುಗಳಂತೆ;
ಬಾಲವಲ್ಲಾಡಿಪುದೆ ಪರಮ ಭಕ್ತಿ!
ಉತ್ತರದಕಾಶಿಯಲಿ ಕತ್ತೆ ಮಿಂದೈತರಲು
ದಕ್ಷಿಣದ ದೇಶಕದು ಕುದುರೆಯಹುದೆ?
ತಾಯಿತ್ತ ಮೊಲೆಹಾಲೆ ನಿಮ್ಮ ವೈಗಾಗದಿರೆ
ಹೊತ್ತ ಹೊರೆ ಬಲಕಾರಿ ನೆತ್ತರಹುದೆ?

—ಕುವೆಂಪು

ಎಂ. ವಿ. ಸೀತಾರಾಮಯ್ಯ

ಕಥಾಸಾಹಿತ್ಯ

ಹೊಸಗನ್ನಡ ಸಾಹಿತ್ಯದ ಇತಿಹಾಸದಲ್ಲಿ ಕಾಲು ಶತಮಾನದ ಹಿಂದಿನ ಘಟ್ಟ ಎಂದರೆ ೧೯೪೨; ಕನ್ನಡ ಸಣ್ಣಕಥೆಗಳ ಮುನ್ನಡೆಯ ದೃಷ್ಟಿಯಿಂದ ಅದು ನಿಜವಾಗಿ ಒಂದು ಘಟ್ಟ, ಒಂದು ಪರ್ವಕಾಲ; 'ಕ್ವಿಟ್ ಇಂಡಿಯಾ' ಚಳವಳಿ ನಾಡಿನ ಜನಜೀವನದಲ್ಲಿ ಒಂದು ಹೊಸ ತೇಜಸ್ಸನ್ನು ತಂದುಕೊಟ್ಟ ವರ್ಷ. ಅಂದು, ಬ್ರಿಟನ್ನಿಗೂ ರಷ್ಯಕ್ಕೂ ಆಪದ್ಬಾಂಧವ್ಯ ಬೆಳೆದದ್ದರ ಪರಿಣಾಮವಾಗಿ, ಅದುವರೆಗೂ ಪರೋಕ್ಷಪ್ರಭಾವವನ್ನು ತಕ್ಕಮಟ್ಟಿಗೆ ಗಮನಾರ್ಹವಾಗಿಯೆ ಬೀರಿದ್ದ ರಷ್ಯನ್ ಕಮ್ಯುನಿಸಮ್ಮು ಭಾರತದ ರಾಜಕೀಯಕ್ಕೂ ಜನಜೀವನಕ್ಕೂ ಪ್ರತ್ಯಕ್ಷವಾಗಿ ಪ್ರವೇಶಿಸಿತು; ಕನ್ನಡ ಸಾಹಿತ್ಯದಲ್ಲಿಯೂ 'ಪ್ರಗತಿಶೀಲವಾದ' ತಲೆಹಾಕಿ, ವಿಶೇಷವಾಗಿ ಕನ್ನಡ ಕಥಾಸಾಹಿತ್ಯ ವಾಹಿನಿಗೆ ಕೆನ್ನೀರನ್ನು ಕಾರತೊಡಗಿತು; ಅದರ ಗತಿಗೆ ಒಂದು ಹೊಸ ತಿರುವನ್ನು ಕೊಟ್ಟಿತು. ಈ ತರುಣದಲ್ಲಿ, ಎಂದರೆ ೧೯೪೩ರಲ್ಲಿ, 'ಪ್ರಬುದ್ಧ ಕರ್ಣಾಟಕ'ದ 'ಬೆಳ್ಳಿಯ ಸಂಚಿಕೆ' ಪ್ರಕಟವಾಯಿತು. ಅದರಲ್ಲಿ, ಆ ಹಿಂದಿನ ಕಾಲು ಶತಮಾನದ ಕನ್ನಡ ಸಣ್ಣಕಥೆಗಳ ಬೆಳವಣಿಗೆಯನ್ನು ಸಮೀಕ್ಷೆಮಾಡಿರುವ ಗೊರೂರು ರಾಮಸ್ವಾಮಿಯ್ಯಂಗಾರರು 'ಪ್ರಗತಿಶೀಲ ಕಥೆ'ಗಳನ್ನು ಕುರಿತು ತಮ್ಮ ಪ್ರತಿಕ್ರಿಯೆಯನ್ನು ಪರ್ಯಾಯವಾಗಿ ಹೀಗೆ ವ್ಯಕ್ತಪಡಿಸಿದ್ದರು:

> "ಯುವಕ ಸಾಹಿತಿಗಳು ಮುಖ್ಯವಾಗಿ ನಮ್ಮ ದೇಶದ ಜನರ ಬಾಳಿನಿಂದ ಸ್ಫೂರ್ತಿಯನ್ನು ಹೊಂದಬೇಕು. ನಮ್ಮ ಜನರ ಜೀವನದಲ್ಲಿ ಅವರ ಸಾಹಿತ್ಯ ಬೇರು ಬಿಡಬೇಕು. ಸಮತೆಯ ದೃಷ್ಟಿಯಿಲ್ಲದೆ ಯಾವ ಪರಸಂಸ್ಕೃತಿಯನ್ನೂ ಬಲಾತ್ಕಾರವಾಗಿ ನಮ್ಮ ಜನರ ಮೇಲೆ ಹೇರಲು ಪ್ರಯತ್ನಿಸಬಾರದು. ಸಂಸ್ಕೃತಗೊಡ್ಡು ಹೇಗೆ ಒಂದು ವಿಧವಾದ ಪಿತ್ಥವೋ, ಇಂಗ್ಲಿಷ್‌ಗೊಡ್ಡು ಹೇಗೆ ಒಂದು ವಿಧವಾದ ಪಿತ್ಥವೋ, ರಷ್ಯಗೊಡ್ಡೂ ಹಾಗೆಯೇ ಒಂದು ವಿಧವಾದ ಪಿತ್ಥ. ಭಾರತದ ಸಾಹಿತ್ಯಸಾಮ್ರಾಜ್ಯದಲ್ಲಿ ಇಂಗ್ಲೆಡನ್ನು ಸ್ಥಾಪಿಸುವುದು ಹೇಗೆ ಸಾಧ್ಯವಿಲ್ಲವೋ ಹಾಗೆಯೇ ರಷ್ಯವನ್ನು ಸ್ಥಾಪಿಸುವುದೂ ಸಾಧ್ಯವಿಲ್ಲ...."

೧೯೪೨ಕ್ಕೆ ಪೂರ್ವದ ಸಣ್ಣಕಥೆಗಳು ಇಂಗ್ಲಿಷು ಭಾಷೆಯ ಮೂಲಕ ಅಮೆರಿಕ, ಇಂಗ್ಲೆಂಡ್, ಫ್ರಾನ್ಸ್, ರಷ್ಯ ಮುಂತಾದ ಪಾಶ್ಚಾತ್ಯ ದೇಶಗಳ ಪ್ರತಿಷ್ಠಿತ ಕಥೆಗಾರರಾದ

ಪೋ, ಓ. ಹೆನ್ರಿ, ಹಾತಾರ್ನ್, ಸ್ಟಿವನ್‌ಸನ್, ಮೋಪಸಾ, ಟಾಲ್‌ಸ್ಟಾಯ್ ಮುಂತಾದವರ ಕೃತಿಗಳ ಪ್ರೇರಣೆ ಪ್ರಭಾವಗಳಿಂದ ಮೂಡಿದ ಕಥೆಗಳು. ಕನ್ನಡ ಭಾವಗೀತೆಯೊಂದಿಗೆ ಜನ್ಮತಾಳಿದ ಕನ್ನಡ ಸಣ್ಣಕಥೆ ಸಹಜವಾಗಿಯೆ ಪೌರಾಣಿಕ ಕಾಲ್ಪನಿಕ ಪ್ರಪಂಚದಿಂದ ಜನಜೀವನದ ವಾಸ್ತವಿಕ ಪ್ರಪಂಚಕ್ಕೆ ಕಾಲಿಟ್ಟು, ಕಥೆಗಾರನ ಸ್ವಾನುಭವ ಪ್ರಕಾಶಕ್ಕೆ ಮಾಧ್ಯಮವಾಗಿ ಪರಿಣಮಿಸಿತ್ತು. ಅಂದವಾಗಿ ಕಥೆಕಟ್ಟಿ, ಓದುಗರನ್ನು ರಸಾನುಭವ ಪ್ರಪಂಚದಲ್ಲಿ ವೈಮರೆಸುವುದಷ್ಟೆ ಅವುಗಳ ಪ್ರಧಾನ ಉದ್ದೇಶವಾಗಿತ್ತು ; ಕಥೆಗಳು ಕಾಲ್ಪನಿಕವಾದರೂ ಓದುಗರಿಗೆ ಪರಿಚಿತವಾದ ಸಮಕಾಲೀನ ಜನಜೀವನದ ಸ್ವೈಜ ಚಿತ್ರಣ ಆ ಕಥೆಗಳ ಹಾಸುಹೊಕ್ಕು. ಅವುಗಳ ಸ್ಥೂಲಸ್ವರೂಪವನ್ನು ಗೊರೂರರ ಮಾತಿನಲ್ಲಿಯೆ ಪರಿಚಯಮಾಡಿಕೊಡಬಹುದು :

> "ಈಗ ಕನ್ನಡದಲ್ಲಿ ಬಂದಿರುವ ಸಣ್ಣಕತೆಗಳಲ್ಲಿ ಅತ್ಯುತ್ತಮವಾದುವು ಭಾರತದ ಇತರ ಭಾಷೆಗಳ ಉತ್ತಮ ಕತೆಗಳಿಗೂ, ಅನೇಕ ಪಾಶ್ಚಾತ್ಯ ಉತ್ತಮ ಕತೆಗಳಿಗೂ ಯಾವ ವಿಧದಲ್ಲಿಯೂ ಕಡಮೆ ಇಲ್ಲ. ಈ ಕತೆಗಳಲ್ಲಿ ನಮ್ಮ ಜನರ ಬಾಳ್ವೆಯನ್ನು ವ್ಯಕ್ತಿತ್ವದೃಷ್ಟಿಯಿಂದ ಚಿತ್ರಿಸಿರುವ ಕತೆಗಳು–ಉದಾ. ರಂಗಪ್ಪನ ಮದುವೆ, ದೀಪಾವಳಿ, ಪ್ರೇಮ, ನಮ್ಮ ಮೇಷ್ಟು ; ನಮ್ಮ ಜನರ ಬಾಳುವೆಯನ್ನು ಸಮೂಹದೃಷ್ಟಿಯಿಂದ ವರ್ಣಿಸಿರುವವುಗಳು— ಉದಾ. ಮೊಸರಿನ ಮಂಗಮ್ಮ, ಮೇಲೂರು ಲಕ್ಷಮ್ಮ, ಉಗ್ರಪ್ಪನ ಯುಗಾದಿ, ನಾನು ಕೊಂದ ಹುಡುಗಿ ; ಪ್ರೇಮದ ವಿಧ ವಿಧವಾದ ಸೂಕ್ಷ್ಮರೇಖೆಗಳನ್ನು ಕೌಶಲ್ಯದಿಂದ ಚಿತ್ರಿಸಿರುವ ಆನಂದರ ಕತೆಗಳು ; ಇತಿಹಾಸದ ಸಂಗತಿಯನ್ನು ಆಧಾರವಾಗಿಟ್ಟುಕೊಂಡು ಬರೆದಿರುವ 'ನಿಜಗಲ್ಲಿನ ರಾಣಿ' ಮತ್ತು 'ಆಲಂಗಿರಿ' ; ಪಾತ್ರರಚನೆಯನ್ನೇ ಪ್ರಧಾನವಾಗಿಟ್ಟುಕೊಂಡಿರುವ 'ಮೋಚಿ' ; ಆವರಣಪ್ರಧಾನವಾದ 'ಇಂದಿರೆಯೋ ಅಲ್ಲವೋ', 'ವೈಣಿಕ' ; ಊಹನಾಶಕ್ತಿಪ್ರಧಾನವಾದ 'ಹೇಮಕೂಟದ ಆಶ್ರಮದಿಂದ ಬಂದಮೇಲೆ', 'ಆಚಾರ್ಯರ ಪತ್ನಿ', 'ಗಯಟೆ ಕವಿಯ ಅಂತ್ಯದಿನಗಳು' ; ಒಂದೇ ಪಾತ್ರ ಕಥೆ ಹೇಳುವ 'ಮುಟ್ಟದ್ದೆಲ್ಲ ಚಿನ್ನ', ಹಾಸ್ಯಪ್ರಧಾನವಾದ 'ನನ್ನ ಭಾವ', 'ಕರ್ಣಪಿಶಾಚ'........ ಬೇಂದ್ರೆ, ಕೆ. ವಿ. ಪುಟ್ಟಪ್ಪ, ಮುಗಳಿ, ಕಾರಂತ್, ಗೋಪಾಲಕೃಷ್ಣರಾಯರು, ಅ. ನ. ಕೃಷ್ಣರಾಯರು, ಸಿ. ಕೆ. ವೆಂಕಟರಾಮಯ್ಯ, ಕಲ್ಲೂರ, ರಾಜರತ್ನಂ, ಶ್ರೀಮತಿ ಜಯಲಕ್ಷ್ಮಿ ಶ್ರೀನಿವಾಸನ್, ಹ. ಪಿ. ಜೋಷಿ, ಕ್ಷೀರಸಾಗರ, ಕಲ್ಯಾಣಮ್ಮ ಇವರು ಸಣ್ಣಕತೆಗಳಲ್ಲಿ ವಿಧವಿಧಗಳಾದ ಪ್ರಯೋಗಗಳನ್ನು ನಡೆಸಿದ್ದಾರೆ. ಸೌ. ಶ್ಯಾಮಲೆ, ಬಿ. ಟಿ. ಜಿ. ಕೃಷ್ಣ, ಕುಮಾರಿ ಪದ್ಮಾವತಿ, ಲೀಲಾಕಾರಂತ್ ಇವರ ಸಣ್ಣಕತೆಗಳು—ಹೀಗೇ ಈ ಪಟ್ಟಿ ಬಲವಾಗಿಯೇ ಇದೆ. ಸಂಖ್ಯೆಯಲ್ಲಿಯಾಗಲಿ ವಿವಿಧತೆಯಲ್ಲಾಗಲಿ ಯಾವ ಸಾಹಿತ್ಯಕ್ಕೂ ಬೀಳುವಂತೆ ಇಲ್ಲ."

ಹೊಸಕನ್ನಡ ಸಾಹಿತ್ಯದ ನವೋದಯದ ಈ ಕಾಲಾವಧಿಯಲ್ಲಿ ಭಾವಗೀತೆಗಿಂತ ಸಣ್ಣಕಥೆಯೇ ಹೆಚ್ಚು ಜನಪ್ರಿಯವಾದ ಸಾಹಿತ್ಯಪ್ರಕಾರವಾಗಿ ಪರಿಣಮಿಸಿತ್ತು. 'ಪ್ರಬುದ್ಧ ಕರ್ಣಾಟಕ', 'ಜಯಕರ್ನಾಟಕ', 'ಜೀವನ', 'ಜಯಂತಿ' ಮುಂತಾದ ತ್ರೈಮಾಸಿಕ—ಪತ್ರಿಕೆಗಳು ಉತ್ತಮ ಅಭಿರುಚಿಯಿಂದ ಆಯ್ದು ಹಲವಾರು ಶ್ರೇಷ್ಠ ಕಥೆಗಳನ್ನು ಪ್ರಕಟಿಸಿದುವು. ಈ ಅವಧಿಯಲ್ಲಿ 'ಪ್ರಬುದ್ಧ ಕರ್ಣಾಟಕ' ವೊಂದೇ ಸುಮಾರು ೫೦ ಉತ್ತಮ ಕತೆಗಳನ್ನು ಪ್ರಕಟಿಸಿದೆ. ಎ. ಆರ್. ಕೃಷ್ಣಶಾಸ್ತ್ರಿ,

ನವರತ್ನ ರಾಮರಾವ್ ಮತ್ತು ಎಸ್. ಜಿ. ಶಾಸ್ತ್ರಿ ಇವರ ಕಥಾ ಸಂಕಲನಗಳು ಈಚಿನ ದಿನಗಳಲ್ಲಿ ಬೆಳಕಿಗೆ ಬಂದರೂ ಅವರ ಕಥೆಗಳೂ 'ಪ್ರಬುದ್ಧ ಕರ್ಣಾಟಕ'ದ ಮೂಲಕ ಕಥಾ ಪ್ರಪಂಚದಲ್ಲಿ ತಮ್ಮ ವಿಶಿಷ್ಟಸ್ಥಾನಗಳನ್ನು ಆಗಲೇ ಗಳಿಸಿಕೊಂಡಿದ್ದುವು. 'ನವಿಲುಗರಿ' ಮತ್ತು 'ಕಾಮನಬಿಲ್ಲು' ಎಂಬ ಪ್ರಾತಿನಿಧಿಕ ಕಥಾಸಂಕಲನಗಳು ಕನ್ನಡ ಸಣ್ಣಕಥೆಯ ವೈವಿಧ್ಯವನ್ನೂ ವಿಪುಲತೆಯನ್ನೂ ಗುಣವಿಶಿಷ್ಟತೆಯನ್ನೂ ಪರಿಚಯಮಾಡಿಕೊಟ್ಟದ್ದುವು. 'ಕಥಾಂಜಲಿ', 'ಕತೆಗಾರ', 'ಕಥಾಕುಂಜ' ಮುಂತಾದ ಕೆಲವು ಮಾಸಪತ್ರಿಕೆಗಳು ಕಥೆಗಳ ಪ್ರಕಟನೆಗಾಗಿಯೇ ಮೀಸಲಾಗಿ, ಹೊಸ ಹೊಸ ಕಥೆಗಾರರನ್ನು ಬೆಳಕಿಗೆ ತರಲು ನೆರವಾದುವು. ಇವುಗಳ ಪೈಕಿ, ಹೇಗೋ ಉಳಿದುಕೊಂಡು 'ಕಥಾಕಾಲಕ್ಷೇಪ' ಮಾಡುತ್ತಿರುವುದು 'ಕತೆಗಾರ' ಒಂದೇ. ಸಣ್ಣಕಥೆಗಳ ಸ್ಪರ್ಧೆ ಮೊದಲಾದದ್ದೂ ಆಗಲೇ : ಸುಮಾರು ೪೦ ವರ್ಷಗಳ ಹಿಂದೆಯೇ ಬೆಂಗಳೂರು ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘ 'ಮುದ್ದಣ ಸ್ಮಾರಕ ಸ್ವರ್ಣಪದಕ' ಸ್ಪರ್ಧೆಯಲ್ಲಿ ಪ್ರಾರಂಭಿಸಿ, ಕೆಲವು ವರ್ಷ ನಡಸಿತು; ಪದಕ ಪಡೆದವರಲ್ಲಿ ಪ್ರಸಿದ್ಧಿಗೆ ಬಂದವರು 'ಆನಂದ'ರೊಬ್ಬರೇ. ೧೯೩೫ರ ಸುಮಾರಿನಲ್ಲಿ ಕಥೆಗಾರ ದಿವಂಗತ ಇ. ಎ. ಭಾಸ್ಕರರಾಯರ ಹೆಸರಿನಲ್ಲಿ ಸಾಹಿತ್ಯಪರಿಷತ್ತು ಪ್ರಾರಂಭಿಸಿದ ಸಣ್ಣಕಥೆಗಳ ಸ್ಪರ್ಧೆಯ ಮೂಲಕ ಬೆಳಕಿಬಂದು ಪ್ರಸಿದ್ಧರಾದವರಲ್ಲಿ ಕತೆಗಾರ್ತಿ 'ವಾಣಿ' ಒಬ್ಬರು; ದಿವಂಗತ ದ. ಬಾ. ಕುಲಕರ್ಣಿ ಇನ್ನೊಬ್ಬರು. ಈ ವಿವರಗಳ ಒಕ್ಕಣಿಕೆಯ ಉದ್ದೇಶ,—ಪ್ರಾರಂಭದ ಎರಡು ದಶಕಗಳಲ್ಲಿ ಸಣ್ಣಕತೆಯ ಬೆಳವಣಿಗೆಗೆ ಬಗೆಬಗೆಯಲ್ಲಿ ಉತ್ತೇಜನ ದೊರೆಯಿತು; ಸಣ್ಣಕಥೆ ಜನಪ್ರಿಯವಾದ ಸಾಹಿತ್ಯ ಪ್ರಕಾರವೆನಿಸಿತು; ಜನಪ್ರಿಯವಾದರೂ ತನ್ನ ಉತ್ತಮಿಕೆಯ ನಿಟ್ಟಿನಲ್ಲಿ ಜನರ ರುಚಿಯನ್ನು ಹದಗೆಡಿಸದೆ, ತನ್ನ 'ಅಭಿಜಾತ ಸಂಪ್ರದಾಯ'ವನ್ನು ಕಾಯ್ದುಕೊಂಡು, ಮುಮ್ಮುಂದಿನ ಪೀಳಿಗೆಗಳ ಕಥೆಗಾರರಿಗೂ ತನ್ನ ವಂಶಗುಣವನ್ನು ಧಾರೆಯೆರೆದುಕೊಟ್ಟು ಕೃತಾರ್ಥವಾಯಿತು—ಎಂಬುದನ್ನು ಮನವರಿಕೆಮಾಡಿಕೊಡುವುದು.

ಹೀಗೆ ಹೇಳಿದ ಮಾತ್ರಕ್ಕೆ, ಆ ಸಂಪ್ರದಾಯದಲ್ಲಿ ರಚನೆಗೊಂಡು ಬೆಳಕುಕಂಡ ಕತೆಗಳೆಲ್ಲವೂ ಉತ್ತಮವಾಗಿದ್ದುವು ಎಂದು ಅರ್ಥವಲ್ಲ. 'ಮುದ್ದಣ' ಸ್ಪರ್ಧೆಗೆ ಬರುತ್ತಿದ್ದ ಕಥೆಗಳ ಸಂಬಂಧವಾಗಿ 'ಪ್ರಬುದ್ಧ ಕರ್ಣಾಟಕ'ದಲ್ಲಿ ಸಂಪಾದಕೀಯವನ್ನು ಬರೆಯುತ್ತ ೧೯೨೮ರಲ್ಲಿಯೆ ಎ. ಆರ್. ಕೃಷ್ಣಶಾಸ್ತ್ರಿಗಳು ತರುಣ ಕಥೆಗಾರರನ್ನು ಕುರಿತು ಈ ರೀತಿ ಎಚ್ಚರಿಕೆ ನೀಡಿದ್ದರು:

"....ಇದುವರೆಗೆ ನಾಲ್ಕಾರು ವರ್ಷಗಳಿಂದ ಸ್ಪರ್ಧೆಗೆ ಬಂದ ನೂರಾರು ಕಥೆಗಳಲ್ಲಿ ಹತ್ತಕ್ಕೆ ಎಂಟರೊಳಗೆ ಇರತಕ್ಕ ವಸ್ತುವು ಮದುವೆ–ಪಾಶ್ಚಾತ್ಯ ರೀತಿಯಲ್ಲಿ 'ಕೋರ್ಟ್ಶಿಪ್' ಬೆಳಸಿ ಪ್ರಣಯವನ್ನೂ ಭ್ರಮೆಯನ್ನೂ ಸೂಸಿ ಅದ್ಭುತ ಸುಖದಲ್ಲಿಯೋ ಹುಚ್ಚಿನಲ್ಲಿಯೋ ಮರಣದಲ್ಲಿಯೋ ಮುಗಿಯುವ ಮದುವೆ,—ಮತ್ತು ಇದಕ್ಕೆ ಸಂಬಂಧಪಟ್ಟ ಹಾಗೆಯೋ ಸ್ವತಂತ್ರವಾಗಿಯೋ ಪರೀಕ್ಷೆಗಳಲ್ಲಿ ಪ್ಯಾಸುಮಾಡುವುದು....ಈ ಕಥೆಗಳನ್ನು

ಬರೆಯುವವರು ಕಾಲೇಜಿನ ವಿದ್ಯಾರ್ಥಿಗಳು; ಇವೊತ್ತು ವಿದ್ಯಾರ್ಥಿಗಳಾಗಿದ್ದು ನಾಳೆ ಕುಟುಂಬಿಗಳೂ ಪ್ರಜೆಗಳೂ ಅಧಿಕಾರಿಗಳೂ ಆಗತಕ್ಕವರು. ಇಂಥವರಿಗೆ ಮತ್ತಾವ ಅನುಭವವೂ ಇಲ್ಲವೆ? ಕಣ್ಣೀರು ಬರುವ, ಹೃದಯ ಉಬ್ಬುವ, ಆವೇಶ ಹುಟ್ಟಿಸುವ ಮತ್ತಾವ ಸಂಗತಿಗಳೂ ಕಣ್ಣಿಗೇ ಬೀಳುವುದಿಲ್ಲವೆ? ಯಾವುದನ್ನೂ ಯೋಚಿಸಲಾದರೂ ಬೇಡವೆ?" ('ಭಾಷಣಗಳು ಮತ್ತು ಲೇಖನಗಳು'; ಎರಡನೆಯ ಮುದ್ರಣ, ಪು. ೪೨೯–೩೦).

ಸುಮಾರು ೧೫ ವರ್ಷಗಳು ಕಳೆದ ತರುವಾಯವೂ ಪರಿಸ್ಥಿತಿ ಸುಧಾರಿಸಿದಂತೆ ಕಂಡುಬರುವುದಿಲ್ಲ. ಗೊರೂರು ರಾಮಸ್ವಾಮಯ್ಯಂಗಾರರು ತಮ್ಮ ನಿರಾಶೆಯನ್ನು ಹೀಗೆ ತೋಡಿಕೊಂಡರು :

"ಸಾಧಾರಣವಾಗಿ ಮೇಲು ನೋಟಕ್ಕೆ ನೋಡಿದರೆ ಕನ್ನಡ ಸಾಹಿತ್ಯಪ್ರಪಂಚದಲ್ಲಿ ಕೊರತೆ ಇಲ್ಲವೆಂಬಂತೆ ಕಾಣುತ್ತದೆ. ಯಾವ ಪತ್ರಿಕೆ ನೋಡಲಿ ಒಂದು ಕತೆ ಇದ್ದೇ ಇರುತ್ತದೆ. ಪತ್ರಿಕೆಗಳೂ ಅನೇಕವಾಗಿವೆ. ಆದರೆ ಸಾಧಾರಣವಾಗಿ ಕತೆಗಳಲ್ಲಿ ವಿಷಯ ಪುಷ್ಟತೆ ಇರುವುದಿಲ್ಲ . . . . . ಈವರೆಗೆ ನಮ್ಮಲ್ಲಿ ಬೆಳೆದಿರುವ ಅನೇಕ ಸಣ್ಣ ಕತೆಗಳು ಶ್ರೇಷ್ಠವರ್ಗಕ್ಕೆ ಸೇರಿದುವಾದರೂ ನಮ್ಮ ಬಾಳಿನ ಅನೇಕ ಸಮಸ್ಯೆಗಳನ್ನು ಅವು ಮುಟ್ಟಿಯೇ ಇಲ್ಲ. ನಮ್ಮ ದಾರಿದ್ರ್ಯ, ರೈತನ ಅಜ್ಞಾನ, ಅವನ ಮೇಲೆ ದಬ್ಬಾಳಿಕೆ, ಕೂಲಿಗಾರರ ಸಮಸ್ಯೆ, ಭಂಡವಾಳದ ಬಡಾಯಿ, ಅವಿಭಕ್ತ ಕುಟುಂಬದ ನಾನಾ ಬಗೆಯ ಕಷ್ಟಗಳು, ಸ್ತ್ರೀಯರ ಸಮಸ್ಯೆಗಳು ಇವುಗಳನ್ನೆಲ್ಲಾ ಪರಿಣಾಮಕಾರಿಯಾಗುವಂತೆ ಚಿತ್ರಿಸುವ ಸಣ್ಣ ಕತೆಗಾರರು ನಮ್ಮಲ್ಲಿ ಇನ್ನೂ ಬರಬೇಕಾಗಿದೆ."

ಈ ಬಗೆಯ ಕೊರಗಿಗೆ, ನಿರಾಶೆಗೆ, ಹಂಬಲಿಕೆಗೆ, ಅವಕಾಶವಿಲ್ಲವೆಂಬಂತೆ ಕನ್ನಡ ಸಾಹಿತ್ಯಪ್ರಪಂಚದಲ್ಲಿ ಈ ಮೊದಲೇ ಸೂಚಿಸಿರುವಂತೆ—೧೯೪೦ರ ಈಚಿನ ದಶಕದಲ್ಲಿ, 'ಪ್ರಗತಿಶೀಲ ವಾದ'ದ ಬಿರುಗಾಳಿ ಬೀಸತೊಡಗಿತು; ಸಾಹಿತ್ಯವನ್ನು ರಾಜಕೀಯ ಉದ್ದೇಶಕ್ಕೆ ಬಳಸಿಕೊಂಡು ಅದನ್ನು ಒಂದು ಪ್ರಚಾರ ಸಾಧನವನ್ನಾಗಿ ಮಾಡಿಕೊಳ್ಳುವುದೇ ಪ್ರಗತಿಶೀಲ ಸಾಹಿತ್ಯ ಪಂಥದವರ ಗುರಿಯಾಗಿದ್ದದ್ದರಿಂದ, ಆಗ ಜನಪ್ರಿಯವಾಗಿದ್ದ ಸಣ್ಣಕಥೆಯ ಮೇಲೆ ಆ ಪಂಥದ ಪ್ರಭಾವ ವಿಶೇಷವಾಗಿ ಬಿದ್ದಿತು. ಕಥಾವಾಹಿನಿಗೆ ಹೊಸನೀರು ಬಂದು ಕೂಡಿಕೊಂಡು, ಕೆಡುಕಿನೊಂದಿಗೆ ಒಳಿತೂ ಆಯಿತು; ಕಥಾಪಾತ್ರ ವಿಸ್ತಾರವಾಯಿತು. ಪ್ರವಾಹದ ನೀರಿನ ಪ್ರಮಾಣ ಹೆಚ್ಚುವುದರೊಂದಿಗೆ, ನೀರು ತಿಳಿದ ಮೇಲೆ, ಪ್ರವಾಹಕ್ಕೆ ಒಂದು ವೇಗದ ಗತಿಯೂ ಹೊಸಶಕ್ತಿಯೂ ಬಂದುವು.

ದೇಶಕ್ಕೆ ಸ್ವಾತಂತ್ರ್ಯ ಬಂದಮೇಲೆ, ಎಂದರೆ ೧೯೫೦ರ ಈಚಿನ ದಶಕದಲ್ಲಿ, ಕನ್ನಡ ಸಾಹಿತ್ಯದಲ್ಲಿ 'ನವ್ಯಪಂಥ'ದ ಆವಾಹನೆಯಾಗಿ, ಕವಿತಾಪ್ರಪಂಚದಲ್ಲಿ ಅದು ಮೊದಲು ಪ್ರತಿಷ್ಠಿತವಾಯಿತು; ಬಹುಬೇಗನೆಯೆ, ಅದು ಕಥಾಲೋಕದಲ್ಲಿಯೂ ಅವತರಿಸಿ, 'ನವ್ಯಕತೆ' ಈಗ ಕಥಾಪ್ರಪಂಚದಲ್ಲಿ ತನ್ನದೇ ಆದ ಒಂದು ವಿಶಿಷ್ಟ ಸ್ಥಾನವನ್ನು ಪಡೆದಿದೆ. ಕನ್ನಡ ಸಣ್ಣಕಥೆಯ ಈ ಎರಡು 'ಹೊಸಮುಖ'ಗಳನ್ನು

ಅವಲೋಕಿಸುವ ಮುನ್ನ, ಸಂಖ್ಯಾಪ್ರಮಾಣ ದೃಷ್ಟಿಯಿಂದ ಅದರ ಬೆಳವಣಿಗೆ ಹೇಗೆ ಸಾಗಿಬಂದಿದೆಯೆಂಬುದರ ಒಂದು ಸ್ಥೂಲ ಕಲ್ಪನೆ ಮಾಡಿಕೊಳ್ಳುವುದು ಈ ಐತಿಹಾಸಿಕ ಸಮೀಕ್ಷೆಯಲ್ಲಿ ಪ್ರಯೋಜನಕಾರಿಯೆಂದು ಕಂಡುಬರುತ್ತದೆ.

೨

'ಪ್ರಗತಿಶೀಲ ವಾದ' ಹುಟ್ಟಿಕೊಂಡ ಸಮಯದಲ್ಲಿ ಜನ್ಮತಾಳಿದ 'ವಾಹಿನಿ' ಎಂಬ ವಾರಪತ್ರಿಕೆ ಪ್ರಕಟಿಸತೊಡಗಿದ ವಾರ್ಷಿಕ ವಿಶೇಷ ಸಂಪುಟಗಳಲ್ಲಿ, ಸಾಹಿತ್ಯ ಪ್ರಕಾರಗಳ ವಾರ್ಷಿಕ ಸಮೀಕ್ಷೆಗಳನ್ನು ಪ್ರಕಟಿಸುವ ಒಂದು ಸ್ತುತ್ಯಕಾರ್ಯ ಪ್ರಯತ್ನ ವನ್ನು ಆ ಪತ್ರಿಕೆ ಕೈಗೊಂಡು, ಎರಡು ಮೂರು ವರ್ಷಕಾಲ ಅದನ್ನು ನಡಸಿಕೊಂಡು ಬಂದಿತು. ೧೯೪೭ರಲ್ಲಿ ಪ್ರಕಟವಾದ ಸಣ್ಣಕಥೆಗಳ ಪರಿಶೀಲನೆ ನನ್ನ ಪಾಲಿಗೆ ಬಂದಿತು. ೨೦ ವರ್ಷಗಳ ಹಿಂದಿನ ಸಮೀಕ್ಷೆಯಲ್ಲಿ ನಡಸಿದ ಅಂಕಿ ಅಂಶಗಳ ಸಂಗ್ರಹಣ ಇಂದಿನ ಬೆಳವಣಿಗೆಯನ್ನು ಪ್ರತಿಬಿಂಬಿಸಲಾರದು; ಆದರೂ, ಇದನ್ನು ಗುರುತಿಸಿ ಕೊಳ್ಳಲು ಅಗತ್ಯವಾದ ಒಂದು ಪೂರ್ವ ನಕ್ಷೆ ಅಲ್ಲಿ ದೊರಕುವುದರಿಂದ, ಪ್ರಸಕ್ತವಾದ ಲೇಖನಭಾಗವನ್ನು ಇಲ್ಲಿ ಉದ್ಧರಿಸಬಹುದು :

"ಆಧುನಿಕ ಕನ್ನಡ ಸಾಹಿತ್ಯಕ್ಷೇತ್ರದಲ್ಲಿ ಸಣ್ಣಕಥೆಗಳ ಭಾಗ ಎಲ್ಲಕ್ಕಿಂತ ದೊಡ್ಡದು; ದಿನ ದಿನಕ್ಕೆ ಬೆಳೆಯುತ್ತ ಬರುತ್ತಿದೆ. ಈಗಿರುವ ಪ್ರಮಾಣದಲ್ಲಿ ಪ್ರಕಟವಾದ ಎಲ್ಲ ಕತೆ ಗಳನ್ನೂ ಪರಿಶೀಲನೆಮಾಡುವುದು ಒಬ್ಬನ ಕೆಲವು ದಿನಗಳ ಪರಿಶ್ರಮಕ್ಕೆ ಮೀರಿದ ಕೆಲಸ. ಆದ್ದರಿಂದ, ವಾರಪತ್ರಿಕೆಗಳಲ್ಲೂ ಮಾಸಪತ್ರಿಕೆ ಮೊದಲಾದವುಗಳಲ್ಲೂ ಕಳೆದ ವರ್ಷ ಪ್ರಕಟವಾಗಿರುವ ಕಥೆಗಳನ್ನು ಸಹಜವಾಗಿಯೆ ಗಮನಕ್ಕೆ ತೆಗೆದುಕೊಂಡಿಲ್ಲ. ಆದರೂ, ಈ ಸಂದರ್ಭದಲ್ಲಿ ಅವುಗಳ ಬಗೆಗೆ ಎರಡು ಮಾತು ಹೇಳುವುದು ಅಪ್ರಕೃತವಾಗ ಲಾರದು. ಪತ್ರಿಕೆಗಳಲ್ಲಿ ಪ್ರಕಟವಾಗುವ ಕಥೆಗಳೆಲ್ಲವೂ ಕಳಪೆ ಎಂಬ ಭಾವನೆ ತಪ್ಪಾದೀತು. ಹಿಂದಿನ ವರ್ಷಗಳಲ್ಲಿ ಪತ್ರಿಕೆಗಳಲ್ಲಿ ಪ್ರಕಟವಾದ ಕಥೆಗಳಲ್ಲಿ ಹಲವು ಕಥಾಸಂಕಲನಗಳಲ್ಲಿ ಸೇರ್ಪಡೆಯಾಗಿವೆ, ಉದಾ., ಶ್ರೀನಿವಾಸರ ಕಥೆಗಳು ಬಹುಶಃ ಎಲ್ಲವೂ 'ಜೀವನ'ದಲ್ಲಿ ಪ್ರಕಟವಾಗಿದ್ದುವು; ಹೊಯಿಸಳರ ಕತೆಗಳಲ್ಲಿ ಕೆಲವು 'ಕತೆಗಾರ'ನಲ್ಲಿ ಪ್ರಕಟವಾಗಿದ್ದುವು; ಹಿರೇಮಲ್ಲೂರ ಈಶ್ವರನ್ ಅವರ ಕೆಲವು ಕಥೆಗಳು ಬೇರೆ ಬೇರೆ ಪತ್ರಿಕೆಗಳ ವಿಶೇಷ ಸಂಚಿಕೆಗಳಲ್ಲಿ ಮೊದಲು ಬೆಳಕು ಕಂಡುವು. ಹೀಗೆ, ಸಣ್ಣಕಥೆಗಳ ಬೆಳವಣಿಗೆಯಲ್ಲಿ ಪತ್ರಿಕೆಗಳ ಪ್ರೋತ್ಸಾಹ, ನೆರವು ವಿಶೇಷ ವಾಗಿದೆ. ಅಂತೆಯೇ, ಹೆಸರು ಮಾತ್ರದ ಕಥೆಗಳಿಗೂ ಪತ್ರಿಕೆಗಳಲ್ಲಿ ಸಲ್ಲಬಾರದ ಅವಕಾಶ ಸಿಕ್ಕುತ್ತಲಿದೆ. ಮೇಲುಮಟ್ಟದ ಕತೆಗಳನ್ನೆ ಪ್ರಕಟಿಸಲು ಪತ್ರಿಕೆಗಳು ಹೆಚ್ಚಿನ ಶ್ರಮವಹಿಸಬೇಕು. ಆದರೂ, ಪತ್ರಿಕೆಗಳಲ್ಲಿ ವಾರ ವಾರವೂ ತಿಂಗಳು ತಿಂಗಳೂ ಪ್ರಕಟ ವಾಗುವ ಕಥೆಗಳು ಒಟ್ಟಿನಮೇಲೆ ಆಶಾದಾಯಕವಾಗಿದೆಯೆಂದು ಆ ಸಂಬಂಧದಲ್ಲಿ ಪ್ರಕಟ ವಾಗುತ್ತಿರುವ ಅವಲೋಕನಗಳಿಂದ ವ್ಯಕ್ತಪಡುತ್ತದೆ. 'ಕರ್ಮವೀರ'ದಲ್ಲಿ ಬೆಳಗಾಮಿನ 'ಕಲಾಮಂಟಪ'ದವರೂ 'ಕತೆಗಾರ'ರಲ್ಲಿ ಶ್ರೀ ಎಲ್. ಎಸ್. ಶೇಷಗಿರಿರಾಯರೂ ಶ್ರದ್ಧೆಯಿಂದ ಈ ಕಥಾವಲೋಕನದ ಕಾರ್ಯಮಾಡಿದ್ದಾರೆ; ಇದು ಸ್ತುತ್ಯವಾದ ಕಾರ್ಯ. 'ಕರ್ಮವೀರ'ದಲ್ಲಿ ಕಾರ್ತಿಕಮಾಸದ ಕಥೆಗಳ ಅಂಕಿ ಅಂಶ ಹೀಗಿವೆ:

'ಅನುವಾದ: ೧೧; ಪ್ರೇಮ, ಕಾಮ : ೨೭ ; ಧ್ಯೇಯವಾದಿ: ೨೬; ಇತರ ೨೧. ಉತ್ತಮ ಕತೆಗಳು: ೧೪. ಒಟ್ಟು ೯೯.

"ಈ ಪಟ್ಟಿಯಿಂದ, ತಿಂಗಳಿಗೆ ೮೦ ಕಥೆಗಳಾದರೂ ಬೇರೆ ಬೇರೆ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿವೆಯೆಂದು ಇಟ್ಟುಕೊಂಡರೂ ವರ್ಷದಲ್ಲಿ ೯೬೦ (ಹತ್ತಿರ ಹತ್ತಿರ ೧,೦೦೦) ಕಥೆಗಳು ಹೊರಬಿದ್ದಿವೆಯೆಂಬು ಅಂದಾಜುಮಾಡಬಹುದು. ಮೇಲಿನ ಎಣಿಕೆಯಲ್ಲಿ ಕಾರ್ತಿಕಮಾಸಕ್ಕೆ ೧೪ ಉತ್ತಮ ಕಥೆಗಳು; ವರ್ಷದಲ್ಲಿ ಕನಿಷ್ಠಪಕ್ಷ ೧೦೦ ಉತ್ತಮ ಕಥೆಗಳಾದರೂ ಪ್ರಕಟವಾಗಿರಬೇಕು. ಎಂದಮೇಲೆ, ಶೇಕಡ ೮೦–೯೦ ಭಾಗದಲ್ಲಿ ಸಾಮಾನ್ಯವಾದುವು, ಕಳಪೆಯಾದವು, ವರ್ಜ್ಯವಾದವು ಎಲ್ಲ ಸೇರಿವೆಯೆಂದಾಯಿತು. ಸಂಖ್ಯಾದೃಷ್ಟಿಯಿಂದ ಆಶಾದಾಯಕವಾದ ಪರಿಸ್ಥಿತಿ ಗುಣದ ದೃಷ್ಟಿಯಿಂದ ಅಷ್ಟು ಆಶಾದಾಯಕವಾಗಿರುವಂತೆ ಕಂಡುಬರುವುದಿಲ್ಲ.

"ಇನ್ನು ಪ್ರಕಟವಾದ ಸಂಕಲನಗಳ ಕಡೆಗೆ ಹೊರಳೋಣ. ನನ್ನ ಗಮನಕ್ಕೆ ಬಂದ ಮಟ್ಟಿಗೆ ಸುಮಾರು ೩೦–೩೫ ಕಥಾಸಂಗ್ರಹಗಳು ಪ್ರಕಟವಾಗಿವೆ. ಗಮನಕ್ಕೆ ಬಾರದವೂ ಕೆಲವಾದರೂ ಇದ್ದಾವು. ಒಟ್ಟು ४೦–४೫ ಎಂದು ಎಣಿಸಬಹುದು. ಇವುಗಳಲ್ಲಿ ಸೇರ್ಪಡೆಯಾದ ಕಥೆಗಳು ಸುಮಾರು ೨೦೦. ಕೆಲವು ಹೊರತಾಗಿ, ಎಲ್ಲವೂ ತೃಪ್ತಿಕರವಾಗಿ ಮುದ್ರಿತವಾಗಿವೆ. ಸಚಿತ್ರವಾದ ಒಂದೂ ಸಂಗ್ರಹವಿಲ್ಲದಿರುವುದು ಆಶ್ಚರ್ಯಕರ.

[ಒಟ್ಟು ಸಂಖ್ಯೆಯಲ್ಲಿ ಕಾಲುಭಾಗ 'ಪ್ರೇಮ–ಕಾಮ'ಕ್ಕೆ ಸಂಬಂಧಪಟ್ಟಿವೆ. ಇದು ಗಮನಾರ್ಹ. ಎಲ್ಲವೂ ಹಾಗಾಗದಿದ್ದುದು ಸಂತೋಷಕರ!]

೧೯೪೭ರ ಈ ಅಂಕಿ ಅಂಶವು ಈ ಸಮೀಕ್ಷೆಯ ಕಾಲಾವಧಿಯ ದಶಕಾರ್ಧದ (ಎಂದರೆ, ೧೯೪೨–೪೭ರ ಐದು ವರ್ಷಗಳ) ಬೆಳವಣಿಗೆಯಲ್ಲಿ ಶಿಖರಪ್ರಾಯವಾಗಿದೆ ಎಂದು ಧಾರಾಳವಾಗಿ ಹೇಳಬಹುದು. ಮಾತ್ರವಲ್ಲ, ಆ ಕಾಲದ ಕೆಲವು ಸಂಕಲನಗಳನ್ನು ಪರಿಶೀಲಿಸಿದರೆ, ಕನ್ನಡ ಸಣ್ಣಕಥೆ ಹೇಗೆ ಹೊಸ ಪ್ರಭಾವಗಳಿಗೆ ಒಳಗಾಗಿ, ಒಂದು ಸಂಧಿಕಾಲದ ಸತ್ವಪರೀಕ್ಷೆಗೆ ಸಿಲುಕಿ, ತನ್ನ ಜೀವಂತ 'ಪ್ರಗತಿಪರ' ('ಪ್ರಗತಿಶೀಲ'ವೂ ಕೂಡ) ಲಕ್ಷಣಗಳನ್ನು ಮೆರೆಯುತ್ತಿತ್ತು ಎಂಬುದು ಮನವರಿಕೆಯಾಗುತ್ತದೆ.

ಸಣ್ಣಕಥೆಯ 'ಮಾರ್ಗ'ವನ್ನು ತೆರೆದು, ಆ ವೇಳೆಗಾಗಲೆ ಕಥಾಲೋಕದ ಸೀಮಾಪುರುಷರೆನಿಸಿದ್ದ ಶ್ರೀನಿವಾಸರು ಈ ಅವಧಿಯಲ್ಲಿ ಎರಡು ಸಂಕಲನಗಳನ್ನು ಪ್ರಕಟಿಸಿದರು. 'ವೆಂಕಟಿಗನ ಹೆಂಡತಿ' ಮತ್ತು 'ಗೌತಮಿ ಹೇಳಿದ ಕತೆ' ಇವೆರಡನ್ನು ಹೊರತುಪಡಿಸಿದರೆ, ಇನ್ನುಳಿದವು ಸತ್ತ್ವದಲ್ಲಿ ಅವರ ಹಿಂದಿನ ಕತೆಗಳನ್ನು ಸರಿಗಟ್ಟಿ ನಿಲ್ಲಲಾರವು. 'ವೆಂಕಟಿಗನ ಹೆಂಡತಿ' ಒಂದು ಸಮಸ್ಯೆಯನ್ನು ಪ್ರತಿಪಾದಿಸುತ್ತಿದ್ದು ಮೇಲ್ಮಟ್ಟದ ಕಥೆ ಎನ್ನಬಹುದಾದರೂ 'ವೆಂಕಟಶಾಮಿಯ ಪ್ರಣಯ'ದ ಜೀವಂತ ಸ್ಪಂದನ ಇಲ್ಲಿ ಮಂದವಾಗಿದೆ. 'ಗೌತಮಿ ಹೇಳಿದ ಕತೆ', ಶಕುಂತಲೆಯ ಸಾಕುತಂದೆ ಕಣ್ವರು ಮತ್ತು ಗೌತಮಿ–ಇವರಿಗೆ ಸಂಬಂಧಪಟ್ಟ ಕತೆ; ತರುಣ ತಾಪಸದತ್ತನ (ಆಮೇಲೆ ಕಣ್ವ) ಸಂಯಮಶೀಲದಿಂದ ತರುಣಿ ಮಾಲಿನಿ (ಗೌತಮಿ) ಉದ್ಧಾರವಾಗಿ ತಾಪಸಿಯಾಗಿ ನಿಂತ ವೃತ್ತಾಂತ. ಕಥಾವಸ್ತುವಿನ ಅಪೂರ್ವತೆಯೊಂದಿಗೆ ತಂತ್ರ ಕೌಶಲವೂ ಕೂಡಿಕೊಂಡು ಕತೆ ವಿಶೇಷ ಮನೋಹರವಾಗಿದೆ. ಅಲ್ಲಿಂದೀಚೆಗೆ

ಶ್ರೀನಿವಾಸರು ಹೆಚ್ಚು ಸಂಖ್ಯೆಯಲ್ಲಿ ಕಥೆಗಳನ್ನು ಬರೆದಿಲ್ಲವಾದರೂ, ಕಥೆಗಾರಿಕೆಗೆ ಅವರು ಕೈ ಮುಗಿದಿಲ್ಲ ಎನ್ನುವುದು ನಮ್ಮ ಪುಣ್ಯ. ಹಲವಾರು ವರ್ಷಗಳಾದಮೇಲೆ ('ಜೀವನ' ಹಾಗೂ, 'ನಡೆದು ಬಂದ ದಾರಿ'ಗಳಲ್ಲಿ) ಪ್ರಕಟವಾದ 'ಮಂತ್ರೋದಯ', ತೀರ ಇತ್ತೀಚೆಗೆ (ಅಕ್ಟೋಬರ್ ೧೯೬೭) ಆಕಾಶವಾಣಿಯಲ್ಲಿ ಪ್ರಸಾರವಾದ 'ಇರುವೆ ಗಳ ಕಥೆ', 'ಪ್ರಜಾವಾಣಿ'ಯ ೧೯೬೭ರ ದೀಪಾವಳಿ ಸಂಚಿಕೆಯಲ್ಲಿ ಬಂದಿರುವ 'ಚಟ್ಟೀಗಾರ ತಾಯಿ'—ಜೀವನ ಮತ್ತು ಸಾಹಿತ್ಯಗಳ ನೆಲೆ-ಬೆಲೆಗಳ ವಿಚಾರದಲ್ಲಿ ಅವರು ತಳೆದಿರುವ ಅವಿಚಲವಾದ ನಿಲುವನ್ನು ಮತ್ತೆ ಮತ್ತೆ ಸ್ಪಷ್ಟಪಡಿಸುತ್ತವೆ. ದೇಶ ಕಾಲ ವರ್ತಮಾನಗಳ ಸೀಮಾರೇಖೆಗಳನ್ನು ದಾಟಿ, ಜೀವನವನ್ನೂ ಸಾಹಿತ್ಯ ವನ್ನೂ ಪಂಥ ಪಕ್ಷಗಳ ಉಪಾಧಿಗಳಿಂದ ಬೇರ್ಪಡಿಸಿ, ಅವುಗಳಲ್ಲಿನ ಸಾರ್ವಕಾಲಿಕ ಮೌಲ್ಯಗಳನ್ನು ಗುರುತಿಸುವ ದ್ರಷ್ಟಾರನ ದೃಷ್ಟಿ ಅವರದ್ದು. ಅವರ ದೃಷ್ಟಿಗೆ ಪುರಾಣ ಕಾಲದ ಗೌತಮಿಯೂ ಒಂದೆ, ಈಗಿನ ಕಾಲದ 'ಚಟ್ಟೀಗಾರ ತಾಯಿ'ಯೂ ಒಂದೆ. ಹೆಣ್ಣಿನ ಬಗೆಗೆ ಮರುಕಕ್ಕಿಂತ ಹೆಚ್ಚಾಗಿ ಅಭಿಮಾನಪೂರ್ವಕವಾದ ಗೌರವ ಓದುಗನಲ್ಲಿ ಮೂಡುವಂತೆ ಚಿತ್ರಿಸುವ ಹಿರಿಯತನ ಶ್ರೀನಿವಾಸರದ್ದು.

ಈ ಅವಧಿಯಲ್ಲಿ ಪ್ರಕಟವಾದ, ಸೌಕರ್ಯಕ್ಕಾಗಿ ಶ್ರೀನಿವಾಸರ 'ಮಾನವೀಯ ಸಂಪ್ರದಾಯ' ಎಂದು ಕರೆಯಬಹುದಾದ ಸಂಪ್ರದಾಯದಲ್ಲಿ ಬರೆದ ಕಥೆಗಳನ್ನೊಳ ಗೊಂಡ ಕೆಲವು ಕಥಾಸಂಕಲನಗಳನ್ನು ಗಮನಿಸದೆ ಮುಂದುವರಿಯುವಂತಿಲ್ಲ. ಇದ್ದರೂ ಇರಬಹುದು ಎಸ್.ಜಿ. ಶಾಸ್ತ್ರಿಗಳು ಬಹು ಹಿಂದೆಯೆ ಬರೆದ ಎಂಟು ಕಥೆಗಳ ಸಂಕಲನ. "ಅವರ ಕತೆಗಳು ಯಾವುದೋ ಒಂದು ಕಾಲದ ಸಮಾಜದ ಯಾವುದೋ ಒಂದು ಭಾಗದ ವ್ಯಕ್ತಿಗಳನ್ನು ಕುರಿತವುಗಳಾಗಿದ್ದರೂ ನಿತ್ಯನೂತನವಾಗಿ ಮೆರೆಯುತ್ತಿವೆ. ಅವರು ತಮ್ಮ ಕತೆಗಳಲ್ಲಿ ಪತಿಯ ಧರ್ಮ, ಪತ್ನಿಯ ಧರ್ಮ, ನಿಷ್ಕಳಂಕವಾದ ಪ್ರೇಮದ ಧರ್ಮ, ವೃತ್ತಿಯ ಧರ್ಮ—ಇವುಗಳನ್ನು ತಮ್ಮದೇ ಆದ ರೀತಿಯಲ್ಲಿ ಚಿತ್ರಿಸಿ ದ್ದಾರೆ." ನಡೆದ ಸಂಗತಿಗಳ ಸುತ್ತ ಹೆಣೆದಿರುವುದು ಈ ಕಥೆಗಳ ವೈಶಿಷ್ಟ್ಯ. ಹಳ್ಳಿಯ ಚಿತ್ರಗಳನ್ನೂ ಹಳ್ಳಿಯ ರಸಿಕರನ್ನೂ ಹಾಸ್ಯದ ಬಣ್ಣದಲ್ಲಿ ಚಿತ್ರಿಸಿ ಪ್ರಸಿದ್ಧರಾಗಿದ್ದ ಗೊರೂರು ರಾಮಸ್ವಾಮಿ ಅಯ್ಯಂಗಾರರು ಕಥಾಪ್ರಪಂಚಕ್ಕೆ ಕಾಲಿಟ್ಟದ್ದು ಈ ಕಾಲ ದಲ್ಲಿಯೆ. ೧೨ ಕಥೆಗಳನ್ನು ಒಳಗೊಂಡ ಅವರ ಶಿವರಾತ್ರಿ ಇಂದಿಗೂ ಅವರ ಪ್ರಾತಿ ನಿಧಿಕ ಸಂಕಲನವಾಗಿಯೆ ಉಳಿದುಕೊಂಡಿದೆ. 'ಚಿತ್ರ'ಲೇಖನದಲ್ಲಿ ಪಳಗಿದ ಕೈಯೆ ಕಥೆಗಳನ್ನೂ ಬರೆದಿರುವುದರಿಂದ, ಕಥಾಬಂಧದಲ್ಲಿ ಅಲ್ಲಲ್ಲಿ ಕಂಡುಬರುವ ಶೈಥಿಲ್ಯವು ಅವರ ಕಥನ ಕಲೆಯ ದೋಷ ಎನ್ನುವುದಕ್ಕಿಂತ ವೈಶಿಷ್ಟ್ಯ ಎನ್ನುವುದು ನ್ಯಾಯ; ಶಿಥಿಲವಾಗಿ ಕಥೆ ಬರೆಯುವ ಎಲ್ಲರ ವಿಚಾರವಾಗಿ ಈ ಮಾತನ್ನು ಹೇಳಲಾಗುವುದಿಲ್ಲ. 'ಶಿವರಾತ್ರಿ'ಯ ಕಥೆಗಳಲ್ಲಿ ಕಥನಕಲೆಯ ಜಾಣ್ಮೆ ಕಂಡು ಬರದಿರಬಹುದು. ಅದರ "ಕಥೆಗಳೆಲ್ಲ ನಮಗೆ ಸೊಗಸುವುದು ಅವುಗಳ ಅನುಭವ ಸಂಪತ್ತಿನ ಪ್ರದರ್ಶನದಿಂದ, ಜೀವನ ದರ್ಶನದಿಂದ, ಹಾಸ್ಯ ವೈಖರಿಯಿಂದ, ಇಲ್ಲವೆ ಕರುಳು ಮಿಡಿಯುವಂತಹ ಸ್ವಾರಸ್ಯ ಸನ್ನಿವೇಶಗಳಿಂದ."

ಅಂದು ಪ್ರಕಟವಾದ 'ಭಾರತೀಪ್ರಿಯ'ರ ರುದ್ರವೀಣೆ ಇಂದಿಗೂ ಅವರ ಏಕಮಾತ್ರ ಕಥಾಸಂಕಲನವಾಗಿ ಉಳಿದುಬಂದಿರುವುದು ಒಂದು ಸೋಜಿಗ. 'ಹತ್ತು ಕಟ್ಟುವಕಡೆ ಒಂದು ಮುತ್ತು ಕಟ್ಟು' ಎಂಬ ಕನ್ನಡ ನುಡಿಮುತ್ತಿಗೆ ಇದು ನಿರ್ದಶನ ವಾಗಿ ನಿಂತಿದೆ. ಈ ಸಂಕಲನದ 'ಮೋಚಿ' ಎಂಬ ಕಥೆಯನ್ನು ಅನೇಕ ವಿಮರ್ಶಕರು ಮುಕ್ತಕಂಠದಿಂದ ಹೊಗಳಿದ್ದಾರೆ; ವಿಶ್ವಸಾಹಿತ್ಯದ ಕತೆಗಳಲ್ಲಿ ಸೇರಲು ಯೋಗ್ಯ ವಾದುದು ಎಂದಿದ್ದಾರೆ. ಪಾತ್ರದ ಸೂಕ್ಷ್ಮತಮವಾದ ನಿರೂಪಣೆಗೆ ಈ ಕತೆ ಉತ್ಕೃಷ್ಟ ವಾದ ನಿದರ್ಶನ. ಕಥಾನಿರೂಪಣೆಯಲ್ಲಿ ಸಂಭಾಷಣೆಯನ್ನೆ ಸರ್ವಸಾಧನವಾಗಿ, ಚಿತ್ರಣದ ಏಕೈಕವರ್ಣವಾಗಿ, ಬಳಸಿಕೊಂಡಿರುವ ರೀತಿ ವಿಸ್ಮಯಕರವಾಗಿದೆ. 'ಪ್ರಗತಿ ಶೀಲ ವಾದ'ದ ಆಕ್ರೋಶ ಆವೇಶಗಳು ಕಥಾಪ್ರಪಂಚಕ್ಕೆ ದಾಳಿಯಿಡುವ ಮುನ್ನ ಶ್ರೀನಿವಾಸ, ಆನಂದ, ಮುಂತಾದವರು ಸಮಾಜದ ಕೆಳವರ್ಗದ ಜನರ ಚಿತ್ರಣವನ್ನು ವ್ಯಕ್ತಿನಿಷ್ಠವಾಗಿ, ಸಹಾನುಭೂತಿಯಿಂದ, ಕಲಾತ್ಮಕವಾಗಿ, ಕರುಣರಸ ಭೂಯಿಷ್ಠವಾಗಿ ಚಿತ್ರಿಸುತ್ತಿದ್ದ ವಿಧಾನಕ್ಕೆ 'ಮೋಚಿ'ಯನ್ನು ಪ್ರಾತಿನಿಧಿಕವಾದ ಕಥೆ ಎಂದು ಪರಿಗಣಿಸಬಹುದು. ಬಡವನಾದರೂ ತನ್ನ ಬಡತನದ ಬಾಳಿನಲ್ಲಿ ತೃಪ್ತನಾದ ಮೋಚಿ ರಾಚ ತನಗೆ ಸಲ್ಲಬೇಕಾದ ಕೂಲಿಗಿಂತ ಬಹುಪಾಲು ಹೆಚ್ಚಿನ ರೂಪಾಯಿಯನ್ನು ಉದಾರ ಹೃದಯದ ತರುಣನು ನೀಡಬಂದಾಗ, ಆ ಉಪಕಾರದ ಹೊರೆಯನ್ನು ನಿರಾಕರಿಸುತ್ತಾನೆ, ಇವನ ನಡವಳಿಕೆ ಆ ತರುಣ ಮತ್ತು ಆತನ ಕೋಮಲಮನಸ್ಸಿನ ಪತ್ನಿಯ ನಡುವಣ ಮರುಕದ ಪ್ರತಿಕ್ರಿಯೆಗೆ ಪ್ರೇರಕವಾಗುತ್ತದೆ. ಅವರ ಕರುಣಾ ಪೂರ್ಣ ಸಂಭಾಷಣೆಯಲ್ಲಿ, "ದೈವ ನೀಡಿದುದರಲ್ಲಿ ತೃಪ್ತಿಕಂಡು, ಯಾವ ಪ್ರತಿಭಟನೆ ಯಿಲ್ಲದೆ, ಆತ್ಮಮರುಕವಿಲ್ಲದೆ, ಆತ್ಮಗೌರವದ ಬೆಳಕಿನಲ್ಲಿ ನಡೆಯುವ ಸ್ವತಂತ್ರ ಜೀತನದ ಚಿತ್ರ ಸ್ಫುಟವಾಗಿ ನಿಲ್ಲುತ್ತದೆ." ಮೋಚಿಯ ಕರುಣಾಜನಕ ಕಥೆಯನ್ನು ಕೇಳಿ, "ಕಮಲು ಮಂಚವನ್ನು ಒರಗಿನಿಂತು ಬಾಷ್ಪಪೂರಿತ ಲೋಚನಳಾಗಿದ್ದಳು, ಅಂತಃಕರಣ ಕರಗಿತು. ಒಳಗೊಂದು ಚಿತ್ರ, ಹೊರಗೊಂದುಚಿತ್ರ; ಒಂದಕ್ಕೊಂದು ವಿರುದ್ಧ ಅವಳನ್ನು ನೋಡುತ್ತ ಮೆಲ್ಲನೆ ನುಡಿದೆ: ಅವನ ಲೀಲೆ!'" ಅವನ ಲೀಲೆ—ಇದು ಬಡವರ ಬಗೆಗೆ, ದೀನದಲಿತರ ಬಗೆಗೆ ಅಂದಿನ ಕಥೆಗಾರರ ದೃಷ್ಟಿ. ಒಂದಕ್ಕೊಂದು ವಿರುದ್ಧವಾದ 'ಎರಡು ಚಿತ್ರ'ಗಳ ಅರಿವು ಅಂದಿನ ಕಥೆಗಾರರಿಗೆ ನಿಚ್ಚಳವಾಗಿತ್ತು. ಸಮಾಜದ ಈ ವೈಷಮ್ಯದ ಚಿತ್ರ ಮಾತ್ರವಲ್ಲ, ಸಮಾಜದ ಇತರ ಕುಂದುಕೊರತೆಗಳು, ಪರಿಹಾರವನ್ನಪೇಕ್ಷಿಸುತ್ತಿದ್ದ ವಿಧವಾಸಮಸ್ಯೆ ವೇಶ್ಯಾಸಮಸ್ಯೆ ಭಿಕ್ಷುಕಸಮಸ್ಯೆ ಮುಂತಾದ ಸಾಮಾಜಿಕ ಸಮಸ್ಯೆಗಳು—ಇವೆಲ್ಲವನ್ನೂ ಅವರು ಮಾನವೀಯ ದೃಷ್ಟಿಯಿಂದ ಅವಲೋಕಿಸಿ, ಸಮಾಜದ ವಾಸ್ತವಿಕ ಚಿತ್ರವನ್ನು ಬಿಡಿ ಬಿಡಿಯಾಗಿ ಓದುಗರ ಮುಂದೆ ಇಡುತ್ತಿದ್ದರು. ಅಂದಿನ ಕತೆಗಾರರಿಗೆ ಸಮಾಜ ಸುಧಾರಣೆಯ ದೃಷ್ಟಿ ಇರಲಿಲ್ಲವೆಂದಲ್ಲ; ಅದೇನಿದ್ದರೂ, ಆರುವ ದೀಪದ ನೀಲಿಮೆಯಂತೆ ಕಥೆಯ ಸಮಾಪ್ತಿಯಲ್ಲಿ ಸೂಚ್ಯವಾಗಿ, ಸಾಹಿತ್ಯ ಮಾರ್ಗದಲ್ಲಿ, ತೇಲಿಬರುತ್ತಿತ್ತು; ಪರಿಹಾರದ

ಬಗೆಗೆ ಕಾತರ ಕಳವಳ ಆಕ್ರೋಶ ಆವೇಶಗಳು ಕಥನಕಲೆಗೆ ಅನಾವಶ್ಯಕವಾದ ವರ್ಣಲೇಪವನ್ನು ಹಾಕುತ್ತಿರಲಿಲ್ಲ. ಈಗ ನಾವು ವಿಮರ್ಶೆಯಲ್ಲಿ ಧಾರಾಳವಾಗಿ ಬಳಸುವ ವಾಸ್ತವಪ್ರಜ್ಞೆ, ಸಾಮಾಜಿಕಪ್ರಜ್ಞೆ, ಸಮಕಾಲೀನಪ್ರಜ್ಞೆ ಮುಂತಾದ ಎಲ್ಲಾ ಪ್ರಜ್ಞಾವಿಶೇಷಗಳನ್ನೂ, ಒಳಗೊಂಡ ಒಂದು 'ಮಾನವೀಯಪ್ರಜ್ಞೆ' ಅವರ ಅನುಭವದ ಅವಿಭಾಜ್ಯ ಅಂಶವಾಗಿ ಅವರಲ್ಲಿ ಮೈಗೂಡಿಕೊಂಡಿತ್ತೆ ಹೊರತು, ಕೃತ್ರಿಮವಾದ ಒಂದು ಕಲಾಪ್ರಜ್ಞೆಯಾಗಿ ಅವರ ಕೃತಿರಚನೆಯನ್ನು ಅವು ಪ್ರೇರಿಸುತ್ತಿರಲಿಲ್ಲ. ಇದೇ ಸಂಪ್ರದಾಯದಲ್ಲಿ ಕಥಾನಿರ್ಮಾಣಮಾಡಿದ ಆ ಕಾಲದ ಕೆಲವು ಲೇಖಕರ ಕೃತಿಗಳನ್ನು ಈ ಸಂದರ್ಭದಲ್ಲಿ ಸ್ಮರಿಸಬಹುದು. ಕಡೆಂಗೋಡ್ಲು ಶಂಕರಭಟ್ಟರ ಗಾಜಿನ ಬಳೆ ಮತ್ತು ಇತರ ಕಥೆಗಳು, ಹಿಂದಿನ ಕಥೆಗಳು ಈ ಅವಧಿಯಲ್ಲಿ ಪ್ರಕಟವಾದರೂ, ಅವರು ಬಹಳ ಹಿಂದೆಯೇ ಬರೆದ ಕಥೆಗಳು ಅವು. ಆದ್ದರಿಂದ, ಇವರನ್ನು ಆದ್ಯರ ಪಂಕ್ತಿಯಲ್ಲೇ ನಿಲ್ಲಿಸಬೇಕು. ನಾಟಕ ಪ್ರಪಂಚದಿಂದ ಬಿ. ಪುಟ್ಟಸ್ವಾಮಯ್ಯನವರೂ, ಶಿಶು ಸಾಹಿತ್ಯ ಪ್ರಪಂಚದಿಂದ ಹೊಯಿಸಳರೂ ಕಥಾಪ್ರಪಂಚಕ್ಕೆ ಪ್ರವೇಶಿಸಿದರು. ಬಿ. ಪುಟ್ಟಸ್ವಾಮಯ್ಯನವರ ನಾಟ್ಯಮೋಹಿನಿಯ ಮೂರು ನಾಲ್ಕು ಪ್ರಣಯ ಕಥೆಗಳಲ್ಲಿ ವ್ಯಕ್ತಪಟ್ಟಿರುವ ಲೇಖಕರ ಕಾಮುಕ ಪ್ರವಣತೆ ಅಂದು ವಿಮರ್ಶಕರ ಕಣ್ಣುತಪ್ಪಿಸಿ ಕೊಂಡಿರಬಹುದಾದರೂ ಇಂದು ಗಮನಾರ್ಹವಾಗಿದೆ. ಇದೇ ಸುಮಾರಿನಲ್ಲಿ ಪ್ರಕಟವಾದ ಅ. ನ. ಕೃ. ಅವರ ಅಗ್ನಿಕನ್ಯೆಯಲ್ಲಿನ 'ಮಧುರಸ್ವಪ್ನ' ಎಂಬ ಕತೆಯ ವಿಕೃತ ಕಾಮವ್ಯಾಪಾರ ನಿರೂಪಣೆ, ಇಂದಿನ ಕೆಲವು ನವ್ಯಕತೆಗಳ ಲೈಂಗಿಕ ವಿಷಯ ಬಂಡವಾಳದ ಅಭಿವೃದ್ಧಿಗೆ ಅಂದು ಹಾಕಿದ ಠೇವಣಾತಿಯ ಮೊದಲ ಕಂತು. ಈ ಅವಧಿಯ ಇನ್ನೊಬ್ಬ ಪ್ರಮುಖ ಕಥೆಗಾರರು ತ. ರಾ. ಸು. ಅವರ ರೂಪಸಿ (೧೯೪೬) ಶೃಂಗಾರರಸ ಪ್ರಧಾನವಾದ ಕಥೆಗಳ ಸಂಕಲನ. ಇದರಲ್ಲಿ ಪ್ರಕಟಗೊಂಡ ಅವರ ತಾರುಣ್ಯ ಸಹಜವಾದ ಬಿಸಿ ಬಿಸಿಯಾದ ಪ್ರಣಯೋತ್ಸಾಹ ಬಹುಬೇಗನೆಯೆ ಮಾರ್ಪಟ್ಟು, ಹೊಸ ಹೊಸ ಕಥಾರೂಪ ರಚನೆಗಳಲ್ಲಿ ಹರಿಯತೊಡಗಿತು; ತೊಟ್ಟಿಲು ತೂಗಿತು ಎಂಬ ವೈವಿಧ್ಯ ಪೂರ್ಣ ಸಂಕಲನ ಮರುವರ್ಷ (೧೯೪೭) ಪ್ರಕಟವಾಯಿತು. ಕಥಾವಸ್ತು ಯಾವುದೇ ಆಗಲಿ, ರಂಜಕಗುಣ ತ. ರಾ. ಸು. ಅವರ ಕಥನ ಶೈಲಿಯ ವೈಶಿಷ್ಟ್ಯ. "'ತೊಟ್ಟಿಲು ತೂಗಿತು' ಕತೆಯಲ್ಲಿನ ಬಡತನದ ಚಿತ್ರ, 'ಲೂಸಿಯ ಪ್ರಯಾಣ'ದಲ್ಲಿನ ದುರಂತ ಚಿತ್ರ, 'ಕಲಾವಿದ'ನ ದಾರಿದ್ರ್ಯದ ಚಿತ್ರ, 'ಹೆಣ್ಣು ಮಣ್ಣು' ಕತೆಯಲ್ಲಿ ಹೆಣ್ಣಿಗಾಗಿ ಸರ್ವತ್ಯಾಗ—ಇವೆಲ್ಲಾ ಕರುಣಾಜನಕವಾದ ಪ್ರಸಂಗಗಳು."

೩

ಸುಮಾರು ೧೯೪೨ ರಿಂದ ೧೯೫೦ರ ವರೆಗೆ ಆರೇಳು ವರ್ಷಗಳ ಅವಧಿಯಲ್ಲಿ ಭಾರತೀಯ ಸಾಹಿತ್ಯದ ಮೇಲೆ ರಾಜಕೀಯ ಪ್ರಭಾವದ ಮುದ್ರೆ ಸ್ಪಷ್ಟವಾಗಿ

ಗೋಚರವಾಯಿತು. ಕನ್ನಡ ಸಾಹಿತ್ಯ ಇದಕ್ಕೆ ಹೊರತಾಗಿರಲಿಲ್ಲ. ಈ ಪ್ರಭಾವ ಇತ್ತೆರನಾಗಿತ್ತು : ಒಂದು, ಗಾಂಧಿಯವರ ನೇತೃತ್ವದಲ್ಲಿ ಮೊದಲಾದ ಸ್ವಾತಂತ್ರ್ಯ ಸಂಗ್ರಾಮ ಲೇಖಕರಲ್ಲಿ ಉಕ್ಕಿಸಿದ ಉತ್ಕಟ ದೇಶಾಭಿಮಾನ. ಇದು ಭಾರತದ ಪ್ರೇಮವಾಗಿಯೂ ಕನ್ನಡ ನಾಡು ನುಡಿಗಳ ಪ್ರೇಮವಾಗಿಯೂ ವಿಶೇಷವಾಗಿ ಕವಿವಾಣಿಯಲ್ಲಿ ಹೊರಹೊಮ್ಮಿತು. ಇನ್ನೊಂದು, ರಷ್ಯದ ಕ್ರಾಂತಿಯನ್ನು ಸಾರಿ ತಂದ ಮಾರ್ಕ್ಸ್‌ವಾದ. ಸ್ವದೇಶಾಭಿಮಾನ, ಸ್ವಾತಂತ್ರ್ಯಪ್ರೇಮ ಇವು ಸಹಜವಾಗಿಯೇ ಕನ್ನಡ ಸಾಹಿತ್ಯದ ಮೇಲೆ ದೀರ್ಘಕಾಲಿಕವಾದ ಪ್ರಭಾವವನ್ನು ಬೀರಿದುವು; ಮಾರ್ಕ್ಸ್‌ವಾದದಿಂದ ಸ್ಫೂರ್ತಿಪಡೆದ ಸಾಹಿತ್ಯದ ' ಪ್ರಗತಿಶೀಲ 'ವಾದ ಮೊದಮೊದಲು ವಿಶೇಷವಾಗಿ ಸಣ್ಣಕಥೆಗಳಲ್ಲಿ ಮೈದೋರಿ, ಯಾವ ಉರುಬಿನಿಂದ ಬೀಸಿಬಂತೋ ಅದೇ ಉರುಬಿನಲ್ಲಿ ಬೇಗನೆ ಕಣ್ಮರೆಯಾಯಿತು ; ತಾನು ಸುತ್ತಿಸುಳಿದ ಜಾಡಿನ ಹೆಗ್ಗುರುತನ್ನು ಬಿಟ್ಟುಹೋಯಿತು.

' ಪ್ರಗತಿಶೀಲ 'ವಾದದ ಅಧ್ವರ್ಯು ಅ. ನ. ಕೃ., ಅವರ ' ಪ್ರಗತಿಶೀಲ ' ಮೊದಲು ರಾಜಕೀಯ ಧೋರಣೆಯಿಂದ ಪ್ರೇರಿತವಾದರೂ, ಅದು ಕಡೆಗೆ ಕಾಮಜೀವನದ ಚಿತ್ರಣದಲ್ಲಿ ಕೊನೆಗಂಡಿತು. ಅವರ ದೃಷ್ಟಿಯಲ್ಲಿ ಇದು ಸಹಜವಾದ ಬೆಳೆವಣಿಗೆ. ಅವರು ಬಡತನಕ್ಕೂ ವ್ಯಭಿಚಾರಕ್ಕೂ ತಳಕು ಹಾಕಿದರು. ಸಮಾಜದ ನಗ್ನಸತ್ಯವನ್ನು ಬಹಿರಂಗಪಡಿಸುವುದೇ ಸಾಹಿತ್ಯದ ಗುರಿ ಎಂದು ಸಾರಿದರು, ಸಮರ್ಥಿಸಿದರು. ಇದಕ್ಕೆಂದೇ ' ಕಾಮಪ್ರಚೋದನೆ ಮತ್ತು ಸಾಹಿತ್ಯ ' ಎಂಬ ಸಮರ್ಥನಾಪರ ಗ್ರಂಥವನ್ನು ಪ್ರಕಟಿಸಿದರು. ಸಾಹಿತ್ಯದ ವಾಸ್ತವಿಕತೆಗೆ ಹೊಸ ವ್ಯಾಖ್ಯಾನವನ್ನು ನೀಡಿದರು. ಈ ಲಕ್ಷಣ ನಿರೂಪಣೆಗೆ ತಮ್ಮ ಅಗ್ನಿಕನ್ಯೆ ಹಾಗೂ ಕಾಮನಸೋಲು ಕಥಾಸಂಕಲನಗಳಲ್ಲಿ ಕೆಲವು ಲಕ್ಷ್ಯಗಳನ್ನೂ ಮುಂದಿಟ್ಟರು. ಎಮಿಲಿ ಜೋಲಾ, ಡಿ. ಎಚ್. ಲಾರೆನ್ಸ್ ಮುಂತಾದ ಪಾಶ್ಚಾತ್ಯ ಲೇಖಕರಿಂದ ಪ್ರಭಾವಿತವಾದ ಅವರ ಈ ' ವಾಸ್ತವಿಕ ಲೈಂಗಿಕ ವ್ಯಾಪಾರ ಚಿತ್ರಣ ವ್ಯಾಮೋಹ ' ಅಥವಾ ' ಕಾಮಲೋಲುಪತೆ ' ಕಥೆಗಳಿಗಿಂತ ಹೆಚ್ಚಾಗಿ ಅವರ ಕೆಲವು ಕಾದಂಬರಿಗಳಲ್ಲಿ ಸುಪ್ರಕಟವಾಯಿತು.

' ಪ್ರಗತಿಶೀಲ 'ವಾದದ ' ತತ್ತ್ವದೀಕ್ಷೆ 'ಯನ್ನು ನಿಷ್ಠೆಯಿಂದ ಕೈಗೊಂಡವರೆಂದರೆ ಬಸವರಾಜ ಕಟ್ಟೀಮನಿ ಮತ್ತು ಕುಳಕುಂದ ಶಿವರಾಯ (ಈಗ ' ನಿರಂಜನ ') ಕಟ್ಟೀಮನಿಯವರ ' ಕಾರವಾನ್ ', ' ಜೀವನ ಕಲೆ ' ಎಂಬ ಕಥಾಸಂಕಲನದಲ್ಲಿ ಪ್ರಕಟವಾದ ಅವರ ಐದು ಕತೆಗಳು, ಸಮಾಜದಲ್ಲಿನ ಅನ್ಯಾಯಗಳ ವಿರುದ್ಧ ಅವರು ಎತ್ತಿದ ಖಡ್ಗದ ಝಳಪನ್ನು ನಿಶಿತವಾದ ಶೈಲಿಯಲ್ಲಿ ಪ್ರತಿಫಲಿಸುವಂತೆ ಮಾಡಿದುವು. ' ಕಾರವಾನ್ ' ಸಂಕಲನದಲ್ಲಿ ಕಲೆಯನ್ನು ಹಿಂದಿಕ್ಕಿ ಎದ್ದು ಕಾಣುತ್ತಿದ್ದ ಅವರ ರಾಜಕೀಯದ ಒಲವು ' ಜೀವನಕಲೆ 'ಯ ಕಥೆಗಳಲ್ಲಿ ತೀವ್ರ ಸಾಮಾಜಿಕ ಪ್ರಜ್ಞೆಯಾಗಿ ಮಾರ್ಪಟ್ಟು, ಅವರ ಬರವಣಿಗೆಯ ಉದ್ದೇಶದ ಬಣ್ಣಮಾತ್ರ ಬದಲಾಯಿತು. ಇಲ್ಲಿ ಅವರು ಸಮಾಜವನ್ನು ಇನ್ನೂ ಸುಧಾರಕನ ದೃಷ್ಟಿಯಿಂದ ನೋಡುತ್ತಿದ್ದರೇ ಹೊರತು

ಕಲೆಗಾರನ ದೃಷ್ಟಿಯಿಂದಲ್ಲ. ಈ ದೃಷ್ಟಿಯಿಂದ, 'ಜೀವನಕಲೆ' ಎಂಬ ಅವರ ಕಥೆಯನ್ನು ಪ್ರಾತಿನಿಧಿಕವಾಗಿ ಪರಿಗಣಿಸಬಹುದು. "ಜೀವಕಳೆ ತುಂಬಿ ಮೆರೆಯುವ 'ಭಿಕಾರಿ'ಯ ಚಿತ್ರಕ್ಕೆ ಐದುನೂರು ರೂಪಾಯಿ ಬೆಲೆಕೊಟ್ಟು ಭಿಕ್ಷೆಬೇಡಲು ಬಂದ ನಿಜವಾದ ಭಿಕಾರಿಗೆ ಬಿಡಿಕಾಸೂ ಕೊಡದ ಕಲಾಪ್ರೇಮಿ ರಾಯರ ಪಾತ್ರ"ದ ಚಿತ್ರಣದಲ್ಲಿ ಜೀವಂತ ವ್ಯಕ್ತಿಯ ಪಾತ್ರ ಚಿತ್ರಣಕ್ಕಿಂತ ಹೆಚ್ಚಾಗಿ ಡಾಂಭಿಕತೆಯ ಕಲಾಪ್ರೇಮದ ವಿಡಂಬನೆಯೇ ಮೇಲುಗೈಯಾಗಿದೆ. ಏಕಕಾಲದಲ್ಲಿ ಪ್ರಕಟವಾದ ಕುಳಕುಂದ ಶಿವರಾಯರ ಸಂಧಿಕಾಲ ಮತ್ತು ರಕ್ತಸರೋವರ ಎಂಬೆರಡು ಸಂಕಲನಗಳು, "ಕಮ್ಯೂನಿಸ್ಟ್ ಪಕ್ಷದ ವಿಚಾರ ಧೋರಣೆಯ ಪ್ರಚಾರದ ಹೆಸರು ಹಲಗೆಯನ್ನು ಹೆಗಲ ಮೇಲೆ ಹೊತ್ತುಕೊಂಡೇ" ರಷ್ಯದ ತಾಳಕ್ಕೆ ಹೆಜ್ಜೆಹಾಕುತ್ತ ನಡೆದ ಧ್ಯೇಯ ನಿಷ್ಠೆಯುಳ್ಳ ತರುಣ ಕಥೆಗಾರನೊಬ್ಬನ ಪ್ರಾಮಾಣಿಕ ಅಭಿವ್ಯಕ್ತಿಯ ಪ್ರಯತ್ನಗಳು. ಈ ಸಂಕಲನಗಳಲ್ಲಿ ಕುಳಕುಂದ ಶಿವರಾಯರು ಕಮ್ಯುನಿಸಮ್ಮಿನ ಕೈವಾರಿಗಳಾಗಿದ್ದರೂ, ಮುಂದೆ ಒಳ್ಳೆಯ ಕಥೆಗಾರರಾಗುವ ಭರವಸೆಯನ್ನು ನೀಡಿದ್ದರು. ಕುಳಕುಂದ ಶಿವರಾಯರು 'ನಿರಂಜನ'ರಾಗಿ ಆ ಭರವಸೆಯನ್ನು ಬಹುಮಟ್ಟಿಗೆ ನೆರವೇರಿಸುತ್ತ ಬಂದಿದ್ದಾರೆ. ಅವರ 'ಕೊನೆಯ ಗಿರಾಕಿ' ಅವರ ಹೊಸ ಸಾಮಾಜಿಕ ಸಂವೇದನೆಯನ್ನು ಚೆನ್ನಾಗಿ ಪ್ರತಿಬಿಂಬಿಸುವ ಪ್ರಾತಿನಿಧಿಕ ಕಥೆ. "ಹೆಣ್ಣನ್ನು ಭೋಗದ ವಸ್ತುವಾಗಿ, ಅಸಹ್ಯವಾಗಿ, ಕ್ರೂರವಾಗಿ ಬಳಸಲೆಳಸುವ ಜಗತ್ತು ಹೆಣ್ಣಿನ ಸುತ್ತ ಸುತ್ತುವ ಭೀಭತ್ಸ ರುದ್ರ ವಾಸ್ತವಿಕತೆಯೆ ಮೂಡಿಬರುತ್ತದೆ ಈ ಚಿತ್ರದಲ್ಲಿ."

ಕನ್ನಡ ಕಥಾ ಕ್ಷೀರಸಾಗರದಲ್ಲಿ ಅಂದು ಮೂಡಿಬಂದ, ಗಮನ ಸೆಳೆಯುವ ಕಥಾ ಸಂಕಲನ ಎಂದರೆ ಹಿರೇಮಲ್ಲೂರ್ ಈಶ್ವರನ್ ಅವರ ಹಾಲಾಹಲ. "ಈಶ್ವರನ್ ಅವರ ಕಥಾಪ್ರಪಂಚದ ಪ್ರಧಾನ ವ್ಯಕ್ತಿಗಳು ಹಳ್ಳಿಯ ಮುಗುದೆಯರು, ಕಪಟವರಿಯದ ಸರಳಜೀವಿಗಳು, ವಿಧಿಯ ವಿಲಾಸಕ್ಕೋ ಸಮಾಜದ ಸುಳಿಗೋ ಸಿಲುಕಿ ನಗೆಮೊಗ ತಳೆದು ಕಣ್ಣುಮುಚ್ಚಿದ ಕನ್ನೆಯರು, ಚೆನ್ನೆಯರು........ಲೇಖಕರ ನೋಟಕ್ಕೆ ಕಾಣುವುದೆಲ್ಲ ದುಃಖವೆ, 'ಹಾಲಾಹಲ'ವೆ........ಬರಿಯ ದುಃಖದ ತಂತಿಯ ಮಿಡಿತದ ಏಕನಾದ ತುಸ ಬೇಸರ ಹಿಡಿಸುತ್ತದೆ. ಆದರೆ ಹಳ್ಳಿಯ ಹೆಣ್ಣು ಮಕ್ಕಳ ಹೂಬಾಳಿಗೆ ತಕ್ಕ ಹೂವಿನಂತಹ ಸಹಜ ಸುಂದರವಾದ, ಹಗುರವಾದ ಶೈಲಿ ಇವರ ಕತೆಗಳಿಗೆ ಕವಿತೆಯ ಮೆರುಗುಕೊಟ್ಟಿದೆ." ಈಶ್ವರನ್ ಅವರನ್ನು ಪ್ರಗತಿಶೀಲ ಕಥೆಗಾರರ ಪಂಗಡಕ್ಕೆ ಸೇರಿಸಲಾಗದಿದ್ದರೂ, ಅವರಲ್ಲಿ ವ್ಯಕ್ತವಾಗುವ ಭಾವಾವೇಶವೇ ನಿರ್ಲಕ್ಷ್ಯಕ್ಕೆ ಗುರಿಯಾದ ಹಳ್ಳಿಯ ಜನರ—ಅವರಲ್ಲಿಯೂ ಹೆಣ್ಣುಮಕ್ಕಳ—ಬಗೆಗೆ ತೀವ್ರ ಅನುಕಂಪೆಯಾಗಿ ಮಾರ್ಪಟ್ಟಿದೆ. ಕೋ. ಚೆನ್ನಬಸಪ್ಪನವರು ಕೂಡ ಮುಖ್ಯವಾಗಿ ಹಳ್ಳಿಯ ಒಕ್ಕಲುಮಕ್ಕಳ ಸರಳಜೀವನದಿಂದ ಸ್ಫೂರ್ತಿ ಪಡೆದು ಕಲಾವಂತಿಕೆಯಿಂದ ಕಥೆ ಬರೆಯಬಲ್ಲವರಾದರೂ, ಸಮಾಜದ ಬಲಿಷ್ಠರ ಶೋಷಣೆಗೆ ಒಳಗಾದ ದೀನದಲಿತರ ಜೀವನವನ್ನು ಚಿತ್ರಿಸುವಾಗ ಪ್ರಗತಿಶೀಲ ತತ್ತ್ವ ಪ್ರಣಾಲಿ ಅವರ ಕಥೆಗಳಿಗೆ ಕೆಲವೊಮ್ಮೆ

ಕೃತ್ರಿಮತೆಯ ಬಣ್ಣ ಕೊಡುವುದುಂಟು. ಆದರೆ, ಅವರ ಕಲಾಪ್ರಜ್ಞೆ ಜಾಗೃತವಾದಾಗ 'ಆ ಕಥೆಯ ಹಿಂದೆ'ಯಂಥ ಪರಿಣಾಮಕಾರಿ ಕಥೆಯನ್ನು ಬರೆಯಬಲ್ಲರು.

೪

ಸ್ವಾತಂತ್ರ್ಯೋತ್ತರ ಕಾಲದ—ಎಂದರೆ ೧೯೪೭ರಿಂದ ಈಚಿನ—ಎರಡು ದಶಕಗಳಲ್ಲಿ ಕನ್ನಡ ಸಣ್ಣಕಥೆಯ ಬೆಳವಣಿಗೆಯಲ್ಲಿ ಕೆಲವು ಸ್ಪಷ್ಟವಾದ ಲಕ್ಷಣಗಳನ್ನೂ ಪ್ರವೃತ್ತಿಗಳನ್ನೂ ಗುರುತಿಸಬಹುದು. (೧) ಸ್ವಾತಂತ್ರ್ಯಪೂರ್ವದಲ್ಲಿಯೇ ಸಂಪ್ರದಾಯದ ಮಾರ್ಗದಲ್ಲಿ ಕಥೆಗಳನ್ನು ರಚಿಸತೊಡಗಿ ಕಥೆಗಾರರೆಂದು ಬೆಳಕಿಗೆ ಬಂದಿದ್ದರೂ, ಹೆಚ್ಚಿನ ಸಂಖ್ಯೆಯ ಕಥೆಗಳನ್ನು ಈ ಎರಡು ದಶಕಗಳಲ್ಲಿಯೆ ರಚಿಸಿ, ಅತ್ತ ಸಂಪ್ರದಾಯ ಮಾರ್ಗಕ್ಕೂ ಕಟ್ಟುಬೀಳದೆ ಇತ್ತ ಹೊಸ ಹೊಸದಾಗಿ ಒಂದಾದಮೇಲೆ ಒಂದರಂತೆ ತಲೆದೋರಿದ ಪ್ರಗತಿಶೀಲಪಂಥ ಮತ್ತು ನವ್ಯಪಂಥಗಳ ಪ್ರಭಾವಕ್ಕೂ ಮಣಿಯದೆ, 'ಸ್ವತಂತ್ರಮಾರ್ಗ'ದಲ್ಲಿ ಮುಂದುವರಿಯುತ್ತಿರುವ ಕಥೆಗಾರರ ಕಥೆಗಳಲ್ಲಿ ಕಂಡುಬರುತ್ತಿರುವ ಸಂಯಮಶೀಲ ಕಲಾಪ್ರಜ್ಞೆ. ಈ ಪಂಗಡದ ಕಥೆಗಾರರು ಯಾವುದೇ ಪಂಥದ ಒಳ್ಳೆಯ ಗುಣಗಳನ್ನು ಸ್ವೀಕರಿಸಿ ಮೈಗೂಡಿಸಿಕೊಳ್ಳಲು ಹಿಂದೆಗೆಯುವುದಿಲ್ಲ. ಇದರಿಂದಾಗಿ, "ಜೀವನದ ವೈವಿಧ್ಯವೈಚಿತ್ರ್ಯದ ಆಕರ್ಷಣೆ ಇವರಿಗೆ ಶಕ್ತಿಯುತವಾಗಿದೆ; ಆದರೆ ಸಮಕಾಲೀನ ಸಮಾಜಸಾಹಿತ್ಯಗಳ ರೀತಿ—ವಾದಗಳ ಪ್ರಜ್ಞೆಯೂ ಉಂಟು. ಇವರಿಗೆ ಸಮಾಜಸುಧಾರಣೆಯ ಬಯಕೆಯುಂಟು, ಈ ಆದರ್ಶ ಇವರ ಬಗೆಹಗಳಲ್ಲಿ ಹಾಡಿಗೆ ಶ್ರುತಿಯಿದ್ದಂತೆ"ಎಂದು ಒಬ್ಬ ವಿಮರ್ಶಕರು ಅಭಿಪ್ರಾಯಪಟ್ಟು, ಎಂ. ವಿ. ಸೀತಾರಾಮಯ್ಯ, ನರೇಂದ್ರಬಾಬು, ಚದುರಂಗ, ವ್ಯಾಸರಾಯಬಲ್ಲಾಳ ಇವರುಗಳನ್ನು ಈ ಪಂಗಡದ ಪ್ರತಿನಿಧಿಗಳಾಗಿ ಹೆಸರಿಸಿದ್ದಾರೆ. ಇವರಲ್ಲಿ, ಚದುರಂಗರು ಸ್ವಲ್ಪಮಟ್ಟಿಗೆ ಪ್ರಗತಿಶೀಲ ಪಂಥದ ಧ್ಯೇಯಧೋರಣೆಗಳನ್ನು ಸ್ಪಷ್ಟವಾಗಿ ತಳೆದವರೆಂದು ಭಾವಿಸಬಹುದು. ಅವರ 'ನಾಲ್ಕುಮೊಳ ಭೂಮಿ', 'ತುಚೀಪ್—ತುದಾಂಡ್—ತುಬದ್ರೆಡೀ' ಮುಂತಾದ ಕೆಲವು ಕತೆಗಳಲ್ಲಿ ಈ ಪ್ರವೃತ್ತಿ ಸುವ್ಯಕ್ತವಾಗಿದೆ. ಅವರ 'ಶವದಮನೆ'ಯಲ್ಲಿ, ಆಸ್ಪತ್ರೆಗಳಲ್ಲಿ ಬಡವರ ಬಗೆಗೆ ತೋರುವ ದುರ್ಲಕ್ಷ್ಯವನ್ನು ಪ್ರಖರವಾದ ವಿಡಂಬನೆಯಿಂದ, ಅಪೂರ್ವವಾದ ತಂತ್ರಕೌಶಲದಿಂದ, ಟೀಕಿಸಿದೆ. (೨) ಸಂಪ್ರದಾಯ ಮಾರ್ಗದಲ್ಲಿಯೇ ಬರೆಯತೊಡಗಿದರೂ, ತಮ್ಮ ಕೆಲವು ವಿಶಿಷ್ಟ ಲಕ್ಷಣಗಳಿಂದ ಒಂದು ಪ್ರತ್ಯೇಕ ಮುದ್ರೆಯನ್ನು ಹೊಂದಿರುವ ಕಥೆಗಾರರ ವರ್ಗವೊಂದುಂಟು. 'ಅಶ್ವತ್ಥ,' ಬಾಗಲೋಡಿ ದೇವರಾಯ, 'ಭಾರತೀಸುತ,' ಕುಲಕರ್ಣಿ ಬಿಂದುಮಾಧವ, ಯಶವಂತಚಿತ್ತಾಲ, ಜೀ. ಶಂ. ಪರಮಶಿವಯ್ಯ, 'ತ್ರಿವೇಣಿ,' ವೆಂ. ಮು. ಜೋಷಿ ಮುಂತಾದ ಕೆಲವರನ್ನು ಈ ವರ್ಗದವರೆಂದು ಹೆಸರಿಸಬಹುದು. 'ಅಶ್ವತ್ಥ,' ದೇವರಾಯ, ಮತ್ತು ವೆಂ. ಮು. ಜೋಷಿ ಇವರ ಕೆಲವು ಕಥೆಗಳಲ್ಲಿ ಸಂಪ್ರದಾಯಮಾರ್ಗದ ಆದರ್ಶನಿಷ್ಠ ವಾಸ್ತವಿಕತೆ ನಿಷ್ಠುರ ಸಾಮಾಜಿಕ ಪ್ರಜ್ಞೆಯ

ಸ್ವರೂಪವನ್ನು ತಳೆದು, ವಿಡಂಬನಾತ್ಮಕ ಇಲ್ಲವೆ ವಿಶ್ಲೇಷಣಾತ್ಮಕ ವಿಧಾನದಲ್ಲಿ, ವಿಶಿಷ್ಟ ವ್ಯಕ್ತಿ ಚಿತ್ರಣದಲ್ಲಿ ಸಾರ್ಥಕತೆಯನ್ನು ಪಡೆಯುತ್ತವೆ. ಜೋಷಿಯವರ ಕೆಲವು ಕಥೆಗಳಲ್ಲಿ ಯೋಧರ ಜೀವನದ ಪ್ರತ್ಯಕ್ಷಾನುಭವದ ಸತ್ತ್ವ ಮೈಗೂಡಿಕೊಂಡಿರುವುದರಿಂದ, ಅವಕ್ಕೊಂದು ವಿಶಿಷ್ಟತೆ ಲಭಿಸಿದೆ. ಭಾರತೀಸುತರ ಕತೆಗಳಿಗೆ ಪಾತ್ರಗಳ ಹಾಗೂ ವಾತಾವರಣದ ಪ್ರಾದೇಶಿಕತೆಯಿಂದಾಗಿ ಕಾರಂತರ ಕಾದಂಬರಿಗಳಲ್ಲಿ ಕಂಡುಬರುವ ಜೀವಂತ ವೈಲಕ್ಷಣ್ಯದ ಮೆರುಗು ದೊರೆಕೊಂಡಿದೆ. ಬಿಂದುಮಾಧವ, ಚಿತ್ರಾಲ, ಪರಮಶಿವಯ್ಯ ಇವರ ಕಥೆಗಳಿಗೂ ಗ್ರಾಮಜೀವನದ ಗಾಳಿಯೇ ಉಸಿರು. ತ್ರಿವೇಣಿಯವರ ಕಾದಂಬರಿಗಳಲ್ಲಿ ಕಂಡುಬರುವ ಮನೋವಿಶ್ಲೇಷಣೆಯ ವಿಧಾನ ಅವರ ಕೆಲವು ಕಥೆಗಳಿಗೆ ಸ್ಪಷ್ಟ ವೈಶಿಷ್ಟ್ಯವನ್ನು ನೀಡಿದೆ; (೩) ಪ್ರಗತಿಶೀಲ ಕಥೆಗಾರರ 'ವಾಸ್ತವಿಕ ಮಾರ್ಗ' ಬೇರೊಂದು ರೀತಿಯ 'ವಾಸ್ತವಿಕ ಮಾರ್ಗ'ಕ್ಕೆ ದಾರಿಮಾಡಿಕೊಟ್ಟಿತು; ಇದೇ ನವ್ಯಮಾರ್ಗ. ಈ ನವ್ಯಮಾರ್ಗದ ಕತೆಗಳ ಬೆಳವಣಿಗೆಗೆ ನವ್ಯಕಾವ್ಯದ ಪ್ರಭಾವವೂ ಒಂದು ಮುಖ್ಯಕಾರಣ. ಪ್ರಗತಿಶೀಲಮಾರ್ಗ ಕವಲೊಡೆದು ಕಾಮಜೀವನ ಚಿತ್ರಣಕ್ಕೆ ಎಡೆಮಾಡಿಕೊಟ್ಟಿತ್ತು; ಈ ಬಗೆಯ ಚಿತ್ರಣದಲ್ಲಿ ಕಾಮಜೀವನದ ಬಹಿರಂಗ ಸ್ವರೂಪಕ್ಕೆ ಪ್ರಾಧಾನ್ಯವಿತ್ತು. ಅದು, ನವ್ಯಮಾರ್ಗದ ಕೆಲವು ಕಥೆಗಾರರಲ್ಲಿ ಕಾಮಜೀವನದ ಅಂತರಂಗಸ್ವರೂಪ ಅಥವಾ ಲೈಂಗಿಕ ಪ್ರಜ್ಞೆಯಾಗಿ ಮಾರ್ಪಟ್ಟಿತು. (೪) ಸಂಪ್ರದಾಯ ಮಾರ್ಗದಲ್ಲಿ ಇಲ್ಲವೆ ಪ್ರಗತಿಶೀಲಮಾರ್ಗದಲ್ಲಿ ಇಲ್ಲವೆ ಎರಡೂ ಮಾರ್ಗಗಳಲ್ಲಿ, ವಿಪುಲ ಸಂಖ್ಯೆಯಲ್ಲಿ ಕಥೆಗಳನ್ನು ಬರೆಯುತ್ತಿದ್ದವರು ಕಾದಂಬರೀ ರಚನೆಯ ಕಡೆಗೆ ಹೊರಳಿದ್ದು ಒಂದು ಗಮನಾರ್ಹ ಸಂಗತಿ. (ಉದಾ., ತ್ರಿವೇಣಿ, ಅ. ನ. ಕೃ, ಬಸವರಾಜ ಕಟ್ಟೀಮನಿ, ನಿರಂಜನ, ತ. ರಾ. ಸು.).

ಈಚಿನ ಎರಡು ದಶಕಗಳಲ್ಲಿ ಹಲವು ಪ್ರಾತಿನಿಧಿಕ ಕಥಾಸಂಕಲನಗಳು ಪ್ರಕಟವಾಗಿವೆ. ಇವುಗಳ ಒಂದು ಸ್ಥೂಲವಾದ ಅವಲೋಕನವೇ ಇಲ್ಲಿ ಅಸಾಧ್ಯವಾಗಿರುವಾಗ, ಈ ಅವಧಿಯಲ್ಲಿ ಬರೆಯುತ್ತಿರುವ ಇಲ್ಲವೆ ಬರೆಯತೊಡಗಿರುವ ಎಲ್ಲ ಕಥೆಗಾರರನ್ನೂ ಅವರ ಕಥಾರಚನಾ ಸಾಮರ್ಥ್ಯವನ್ನೂ ವಿವೇಚಿಸುವ ಮಾತು ಹಾಗಿರಲಿ, ಎಲ್ಲ ಪ್ರಾತಿನಿಧಿಕ ಕಥೆಗಾರರ ಮತ್ತು ಕಥೆಗಳ ಹೆಸರುಗಳನ್ನು ಉಲ್ಲೇಖಿಸುವುದು ಕೂಡ ಅಸಾಧ್ಯವೆಂದು ಹೇಳಬೇಕಾದ್ದು ಅನಿವಾರ್ಯವಾಗಿದೆ. ಆದ್ದರಿಂದ, ಆ ಪ್ರಾತಿನಿಧಿಕ ಕಥಾಸಂಕಲನಗಳನ್ನು ಹೆಸರಿಸಿ, ಅವುಗಳ ಬಗೆಗೆ ಸಂಬಂಧಪಟ್ಟ ಸಂಪಾದಕರು ಹೇಳಿರುವ ಪ್ರಕೃತೋಚಿತವಾದ ಮಾತು ಏನಾದರೂ ಇದ್ದರೆ ಅದನ್ನು ತಿಳಿಸಿ, ಈ ಎರಡು ದಶಕಗಳಲ್ಲಿ ಸಣ್ಣಕಥೆ 'ನಡೆದುಬಂದ ದಾರಿ'ಯನ್ನು ನಿರ್ದೇಶಿಸಿ ತೃಪ್ತಿಪಡಬೇಕಾಗಿದೆ.[1]

1 'ಮೈಸೂರು ರಾಜ್ಯ' (೧೯೫೬–೧೯೬೬) ಎಂಬ, ಮೈಸೂರು ರಾಜ್ಯದ ಸರ್ವತೋಮುಖ ಪ್ರಗತಿಯನ್ನು ಕುರಿತ ಹೆಬ್ಬೊತ್ತಗೆಯಲ್ಲಿ ೧೯೫೬–೬೬ರ ದಶಕದ ಕನ್ನಡ ಸಾಹಿತ್ಯದ ಬೆಳವಣಿಗೆ

೧. **ಕನ್ನಡದ ಅತ್ಯುತ್ತಮ ಸಣ್ಣ ಕತೆಗಳು** (೧೯೫೮) (ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಕಟನೆ) : ಪ್ರಾರಂಭ ಕಾಲದಿಂದ ಹಿಡಿದು ೧೯೩೬ರ ವರೆಗಿನ ಅವಧಿಯಲ್ಲಿ ಬಂದ ಅತ್ಯುತ್ತಮವಾದ ಕಥೆಗಳಲ್ಲಿ ೪೦ನ್ನು ಮೊದಲ ಸಂಪುಟದಲ್ಲಿಯೂ, ಆ ಮುಂದಿನ ದಶಕದಲ್ಲಿ ಬಂದವುಗಳಲ್ಲಿ ಅತ್ಯುತ್ತಮವಾದ ೨೦ನ್ನು ೨ನೆಯ ಸಂಪುಟದಲ್ಲಿಯೂ, ಆ ತರುವಾಯದ ಎಂದರೆ ೧೯೪೬ ರಿಂದ ಈಚಿನ ದಶಕದಲ್ಲಿ ಬಂದವುಗಳಲ್ಲಿ ಅತ್ಯುತ್ತಮವಾದ ೪೦ನ್ನು ಮೂರನೆಯ ಸಂಪುಟದಲ್ಲಿಯೂ ಪ್ರಕಟಿಸಬೇಕೆಂಬುದು ಪರಿಷತ್ತಿನ ಆಶಯವಾಗಿತ್ತು. ಈ ಸಂಪುಟ ಮೂರನೆಯದು; ಮೊದಲ ಎರಡನ್ನು ಪ್ರಕಟಿಸದೆ ಕೈಬಿಟ್ಟು, ಮೂರನೆಯದನ್ನು ಮಾತ್ರ ಸಲ್ಲದ ಆತುರದಿಂದ ಹೊರತಂದ ಕ್ರಮವನ್ನು ಅದರ ಸಂಪಾದಕರಾದ ಕೆ. ನರಸಿಂಹಮೂರ್ತಿಯವರು ಹೀಗೆ ಸಮರ್ಥಿಸಿಕೊಂಡಿದ್ದಾರೆ :

> " ಮೂರನೆ ಸಂಪುಟವೇ ಮೊದಲು ಹೊರಬೀಳುತ್ತಿರುವುದರಲ್ಲಿಯೂ ಅರ್ಥವಿದೆ, ನಮ್ಮಲ್ಲಿ ಪಲವರು ಸಣ್ಣಕತೆಯ ಕಾಲ ಆಗಿಹೋಯಿತೆಂದು ಅಭಿಪ್ರಾಯಪಡುತ್ತಿದ್ದಾರೆ. ಅವರ ದೃಷ್ಟಿಯಲ್ಲಿ ಇದು ಕಾದಂಬರಿಯ ಯುಗ . . . . ಈಗ ಕಾದಂಬರಿಗಳು ವಿಪುಲವಾಗಿ ಬರುತ್ತಿವೆ. ಆದರೆ ಇವುಗಳ ಜೊತೆಗೆ ಸಣ್ಣಕತೆಗಳೂ ಹೆಚ್ಚಾಗಿ ಬರುತ್ತಿವೆ. ಈ ಸಂಪುಟದ ನಲವತ್ತು ಕತೆಗಳನ್ನು ಓದಿದವರಿಗೆ ಕನ್ನಡ ಸಣ್ಣಕತೆ ಜೀವಂತವೂ ಪ್ರಗತಿಪರವೂ ಆದ ಸಾಹಿತ್ಯರೂಪ ಎಂಬ ಸತ್ಯ ವಿದಿತವಾಗದಿರದು".

ಸಂಪುಟದ ತಿರುಳು—ಹುರುಳನ್ನು ಕುರಿತು ಸಂಪಾದಕರ ಸಮತೂಕದ ಮಾತುಗಳಿವು :

ಯನ್ನು ಸಮೀಕ್ಷಿಸುತ್ತ, ಡಾ. ಹಾ. ಮಾ. ನಾಯಕರು ಆ ದಶಕದಲ್ಲಿ ಸಣ್ಣಕಥೆ ಬೆಳೆದುಬಂದ ಬಗೆಗೆ ಈ ಅಂಕಿಅಂಶಗಳನ್ನು ನೀಡಿದ್ದಾರೆ:

" ಈ ದಶಕದ ಸಣ್ಣಕಥೆಗಳನ್ನು ಅವಲೋಕಿಸುವಾಗ ಕೆಲವು ವಿಶೇಷ ಅಂಶಗಳು ನಮ್ಮ ಗಮನಕ್ಕೆ ಬಾರದೆ ಹೋಗುವುದಿಲ್ಲ. ನವಪಂಥದ ಧ್ಯೇಯಧೋರಣೆಗಳೇನೇ ಇರಲಿ, ನಾವು ಅದನ್ನು ಒಪ್ಪಲಿ ಬಿಡಲಿ, ಈ ಪಂಥ ಸಣ್ಣಕಥೆಯನ್ನು ತನ್ನ ಹಿಡಿತಕ್ಕೆ ಎಳೆದುಕೊಂಡಿದೆ; ಹಿಂದೆಂದೂ ಕಾಣದಷ್ಟು ದೊಡ್ಡ ಸಂಖ್ಯೆಯಲ್ಲಿ ಹೊಸಲೇಖಕರು ಕಥೆಗಳನ್ನು ಬರೆದಿದ್ದಾರೆ; ನಮಗೆ ತಿಳಿದಂತೆ ಸುಮಾರು ಎಂಬತ್ತಕ್ಕೂ ಮಿಕ್ಕಿದ ಲೇಖಕರ ನೂರಮೂವತ್ತರಷ್ಟು ಸಂಕಲನಗಳು ಪ್ರಕಟವಾಗಿದ್ದು, ಈ ಕಥೆಗಾರರಲ್ಲಿ ಹೆಚ್ಚು ಕಡಮೆ ಕಾಲುಭಾಗ ಮಹಿಳೆಯರೇ ಆಗಿದ್ದಾರೆ; ಎಂದಿಗಿಂತ ಹೆಚ್ಚಾಗಿ ಈ ದಶಕದಲ್ಲಿ ಮಹತ್ವದ ಪ್ರಾತಿನಿಧಿಕ ಸಂಕಲನಗಳು ಪ್ರಕಟವಾಗಿವೆ.

" ನಾಡಿನ ಪ್ರಮುಖ ದಿನಪತ್ರಿಕೆಯಾದ ' ಪ್ರಜಾವಾಣಿ ' ಪ್ರತಿವರ್ಷ ದೀಪಾವಳಿಯ ಸ್ಪರ್ಧೆಯೊಂದನ್ನು ನಡೆಸಿ ಯೋಗ್ಯ ಕಥೆಗಳಿಗೆ ದೊಡ್ಡ ಮೊತ್ತದ ಬಹುಮಾನಗಳ ಏರ್ಪಾಡುಮಾಡಿರುವುದು ಈ ದಶಕದ ಒಂದು ವಿಶೇಷವಾಗಿದೆ. ಕಾಲೇಜು ವಿದ್ಯಾರ್ಥಿಗಳಿಗಾಗಿಯೇ ವಿಶೇಷ ಅವಕಾಶವೂ ಇರುವ ಈ ಸ್ಪರ್ಧೆಯಿಂದ ಸ್ಫೂರ್ತಿಗೊಂಡು ಸಣ್ಣಕಥೆಗಳ ಕ್ಷೇತ್ರಕ್ಕೆ ಬಂದು ಯಶಸ್ಸುಗಳಿಸಿದ ಲೇಖಕರೂ ಕೆಲವರಿದ್ದಾರೆ.

" ನಮ್ಮ ಗಮನಕ್ಕೆ ಬಂದಂತೆ ಹದಿನೆಂಟುಜನ ಲೇಖಕಿಯರು ಮಾತ್ರ ತಮ್ಮ ಸಂಕಲನಗಳನ್ನು ಪ್ರಕಟಿಸಿದ್ದಾರೆ."

" ಈ ಸಂಪುಟದ ದಶಕದ ಮೊದಲ ಅರ್ಧದಲ್ಲಿ ಪ್ರಗತಿಶೀಲ ಸಾಹಿತ್ಯ ದೃಷ್ಟಿಯಲ್ಲಿ, ವಸ್ತುವಿನಲ್ಲಿ ಕ್ರಾಂತಿಯನ್ನುಂಟುಮಾಡಿತು. ಎರಡನೆ ಅರ್ಧದಲ್ಲಿ ನವ್ಯಸಾಹಿತ್ಯದರ್ಶನದಲ್ಲಿ, ಕಥನಕಲೆಯಲ್ಲಿ ಕ್ರಾಂತಿಯನ್ನುಂಟುಮಾಡಿದೆ. ಹೀಗೆ ಹೊಸ ಪ್ರಯೋಗಗಳು ಯಶಸ್ವಿಯಾಗಿ ನಡೆಯುತ್ತಿದ್ದರೂ ಶ್ರೀನಿವಾಸರಿಂದ ಬೆಳಸಲ್ಪಟ್ಟ ಕಥನಕಲೆ ಇನ್ನೂ ಜೀವಂತವಾಗಿದೆ, ಪ್ರಬಲವಾಗಿದೆ. ಅವರ ಸಂಪ್ರದಾಯದಲ್ಲಿ ಹಲವರು ಬರೆಯುತ್ತಿದ್ದಾರೆ, ಉತ್ತಮ ಕತೆಗಳನ್ನು ಕೊಡುತ್ತಿದ್ದಾರೆ. ಈ ಸಂಪುಟದಲ್ಲಿ ಈ ಸಂಪ್ರದಾಯದ ಕತೆಗಳೇ ಹೆಚ್ಚಾಗಿವೆ. ಮೊದಲಿನಲ್ಲಿ ೧೦ ಪ್ರಗತಿಶೀಲ ಕತೆಗಳೂ ಕಡೆಯಲ್ಲಿ ೫ ನವ್ಯಕತೆಗಳೂ ಇದ್ದರೆ ಇವುಗಳ ನಡುವೆ ೨೫ ' ಸಾಂಪ್ರದಾಯಿಕ ' ಕತೆಗಳಿವೆ. ....೧೯ನೆ ಶತಮಾನದಲ್ಲಿ ಪಾಶ್ಚಾತ್ಯರಲ್ಲಿಯೂ ಭಾರತದಲ್ಲಿಯೂ ಬೆಳೆದ ಮಾನನೀಯತಾವಾದ ಶ್ರೀನಿವಾಸರ ಸಂಪ್ರದಾಯದ ಕತೆಗಳಲ್ಲಿಯೂ ಮಾರ್ಕ್ಸ್, ಎಂಜೆಲ್ಸ್ ಅವರ ಆರ್ಥಿಕ ಸಿದ್ಧಾಂತ ಪ್ರಗತಿಶೀಲಕತೆಗಳಲ್ಲಿಯೂ ಫ್ರಾಯ್ಡ್, ಯುಂಗ್ ಅವರ ಮನೋವಿಜ್ಞಾನ ಸಿದ್ಧಾಂತಗಳು ನವ್ಯಕತೆಯಲ್ಲಿಯೂ ಸ್ಪಷ್ಟವಾಗಿಯೇ ಕಂಡುಬರುತ್ತದೆ."

೨. ನಡೆದುಬಂದ ದಾರಿ (ಏಪ್ರಿಲ್ ೧೯೬೦) : (ಮನೋಹರಗ್ರಂಥಪ್ರಕಾಶನ ಸಮಿತಿ, ಧಾರವಾಡ, ಇವರ ಪ್ರಕಟನೆ; ಸಂಪಾದಕರು : ಜಿ. ಬಿ. ಜೋಶಿ, ಕೆ. ಡಿ. ಕುರ್ತಕೋಟಿ). ಈ ಸಂಪುಟದಲ್ಲಿ, ಆರಂಭಕಾಲದಿಂದ ಹಿಡಿದು ನವ್ಯಪಂಥವನ್ನೂ ಒಳಗೊಂಡ ಕಥಾಸಾಹಿತ್ಯದ ವಿಸ್ತಾರವಾದ ಬೆಳವಣಿಗೆಯನ್ನು ತೋರಿಸುವ ೩೫ ಕಥೆಗಳಿವೆ. " ಕನ್ನಡ ಸಾಹಿತ್ಯದ ಎಲ್ಲ ಪ್ರಯೋಗಗಳನ್ನೂ ಸಾಧ್ಯವಿದ್ದಷ್ಟು ಮಟ್ಟಿಗೆ, ಆನೆಯನ್ನು ಕನ್ನಡಿಯಲ್ಲಿ ಹಿಡಿದಂತೆ ಬಿತ್ತರಿಸುವುದು " ಸಂಪಾದಕರ ಉದ್ದೇಶ. ಸಣ್ಣಕತೆಯ ಮೂರೂ ಸಂಪ್ರದಾಯಗಳ ಕೆಲವು ಪ್ರಮುಖ ಕಥೆಗಾರರ ಕಥೆಗಳು ಈ ಸಂಪುಟದಲ್ಲಿ ಸೇರಿಲ್ಲವಾಗಿ (ಉದಾ., ಆನಂದ, ಬಸವರಾಜ ಕಟ್ಟೀಮನಿ, ತ್ರಿವೇಣಿ, ಯು. ಆರ್. ಅನಂತಮೂರ್ತಿ, ಶಾಂತಿನಾಥ ದೇಸಾಯಿ) ಇದನ್ನು ಸಂಪೂರ್ಣವಾಗಿ ಪ್ರಾತಿನಿಧಿಕ ಎನ್ನುವಂತಿಲ್ಲ. ಕನ್ನಡ ಸಣ್ಣಕಥೆಯನ್ನು ಕುರಿತು ಕೆ. ಡಿ. ಕುರ್ತಕೋಟಿಯವರು ಪ್ರಸ್ತಾವನೆಯಾಗಿ ಬರೆದಿರುವ ಬೆಲೆಯುಳ್ಳ ವಿಮರ್ಶಾತ್ಮಕ ಹಾಗೂ ಐತಿಹಾಸಿಕ ಪ್ರಬಂಧದಲ್ಲಿ ಇವರ ಮತ್ತು ಇನ್ನಿತರ ಪ್ರಮುಖ ಕಥೆಗಾರರ ಕಥನಕಲೆಯನ್ನು ಕುರಿತ ವಿಮರ್ಶೆ ಮೇಲ್ಕಂಡ ಲೋಪವನ್ನು ಕೆಲಮಟ್ಟಿಗೆ ಮರಸಿದೆ. ಆದರೆ, ಕಥೆಯ ಬೆಳವಣಿಗೆಯ ಸಂಬಂಧವಾಗಿ ಅವರು ಹೇಳಿರುವ ಕೆಲವು ಮಾತನ್ನು ಒಪ್ಪುವಮುನ್ನ ವಿಚಾರಮಾಡಬೇಕಾಗಿದೆ. ಉದಾಹರಣೆಗಾಗಿ,—ನಾನಾ ಬಗೆಯ ಪ್ರೇರಣೆಗಳಿಂದ ಸಣ್ಣಕಥೆಗಳ ಬೆಳವಣಿಗೆ ಸಮೃದ್ಧವಾಗಿದ್ದರೂ, " ಈ ಸಾಹಿತ್ಯ ಪ್ರಕಾರಕ್ಕೆ ಕ್ರಮಬದ್ಧವಾದ ಬೆಳವಣಿಗೆ ಇಲ್ಲವೆಂದೇ ಹೇಳಬಹುದು " ಎಂಬ ಅವರ ಹೇಳಿಕೆ ಅವರ ಲೇಖನದಿಂದಲೇ ನಿಷೇಧಿಸಲ್ಪಟ್ಟಿದೆ. ಏಕೆಂದರೆ, ಸಣ್ಣಕಥೆ ಕ್ರಮಬದ್ಧವಾಗಿಯೆ ಬೆಳೆದುಬಂದಿರುವುದು ಅವರ ಲೇಖನದಿಂದಲೇ ಹೊರಪಡುತ್ತದೆ ಪ್ರಗತಿಶೀಲ ಕತೆಗಳು ಕಥಾಸಾಹಿತ್ಯದ ಮೇಲೆ ಉಂಟುಮಾಡಿದ ಪರಿಣಾಮವನ್ನು ವಿವೇಚಿಸುತ್ತ—

" ಆದರೆ ಈ ಹೊಸ ಮನೋಧರ್ಮದಿಂದ ಸಣ್ಣಕತೆಗಳಲ್ಲಿ ಬದಲಾವಣೆ ಬಂದಿತು. ಕಥಾವಸ್ತುವಿನಲ್ಲಿ ಹಾಗೂ ಮನೋವೃತ್ತಿಯಲ್ಲಿ ಮೂಡಿದ ಬದಲಾವಣೆ ಬರವಣಿಗೆಯನ್ನೂ

ಬದಲುಮಾಡಿತು. ಹೊಸ ಕತೆಗಳು ಹಳೆಯ ಕತೆಗಳಿಗಿಂತ ಹೆಚ್ಚು ವೇಗವನ್ನು ಪಡೆದುವು; ಸಂಭಾಷಣೆ ಹೆಚ್ಚು ಚುರುಕಾಯಿತು; ಮುಗಿತಾಯ ಹೆಚ್ಚು ಅನಿರೀಕ್ಷಿತವಾಯಿತು. ಮತ್ತು ಕತೆಗಳ ಒಳನ್ಮೈಯಾಗಿ, ಪಾತ್ರಸೃಷ್ಟಿಯು ಮನೋಲೋಕವಾಗಿ ಒಂದು ಆತಪ್ತವಾತಾವರಣ ಹಬ್ಬಿಕೊಂಡಿತು. ಮುಖ್ಯವಾಗಿ ಕತೆಗಳೆಲ್ಲ ಸಮಸ್ಯೆಗಳ ಚರ್ಚೆ, ಪರಿಹಾರಗಳಿಗೆ ತೊಡಗಿದವು. ಪ್ರತಿಯೊಂದು ಹೊಸ ಕತೆಯಲ್ಲಿಯೂ ಒಂದು ಸಮಸ್ಯೆ ಚಿಗುರಲಾರಂಭಿಸಿತು."

ಎಂದು ಅಭಿಪ್ರಾಯಪಟ್ಟು, ನವ್ಯಕತೆಯ ಬಗೆಗೆ ವಿಚಾರ ವಿಮರ್ಶೆಮಾಡುತ್ತ,

"ಅದೇನೇ ಇದ್ದರೂ ಈ ನವ್ಯತೆಯು ಸಣ್ಣಕತೆಯ ವಸ್ತು, ಶೈಲಿಗಳಲ್ಲಿ ನಿಶ್ಚಿತವಾಗಿ ಬದಲಾವಣೆಯನ್ನುಂಟುಮಾಡಿದೆ."

—ಎಂದು ತೀರ್ಪುಕೊಟ್ಟಿದ್ದಾರೆ. ಸಾಹಿತ್ಯದಲ್ಲಿ ಒಂದೇ ಪರಂಪರೆ ಅಥವಾ ಸಂಪ್ರದಾಯ ಒಂದು ನಿರ್ದಿಷ್ಟ ಮಟ್ಟದಲ್ಲಿ ಮುಂದುವರಿದರೂ ಅದು ಬೆಳವಣಿಗೆ; ಅಥವಾ, ಒಂದು ಸಂಪ್ರದಾಯ ಮುಂದುವರಿಯುತ್ತಿದ್ದು ಅದು ದುರ್ಬಲವಾಗ ತೊಡಗಿದಾಗ ಅದರೊಂದಿಗೆ ಬೇರೆ ಸಂಪ್ರದಾಯಗಳು ಬಂದು ಕೂಡಿಕೊಂಡು, ಒಟ್ಟಿನ ಮೇಲೆ ಸಾಹಿತ್ಯ ಮುಂದುವರಿಯುತ್ತಿದ್ದರೆ, ಅದೂ ಬೆಳವಣಿಗೆಯೆ. ಮುಂದುವರಿಯುವುದು, ಮತ್ತು ಮಾರ್ಪಾಟಿನ ಪರಿಣಾಮವಾಗಿ ಹೊಸತನ ಕಂಡುಬರುವುದು—ಇವು 'ಕ್ರಮವಾದ ಬೆಳವಣಿಗೆ'ಯ ಲಕ್ಷಣಗಳು. ಕನ್ನಡ ಸಣ್ಣಕಥಾ ಪ್ರಪಂಚದಲ್ಲಿ ಈ ಲಕ್ಷಣಗಳು ಕಂಡುಬಂದಿವೆ. 'ಸಾಂಪ್ರದಾಯಿಕ' ಸಣ್ಣಕಥೆ 'ಪ್ರಗತಿಶೀಲ ಕಥೆ'ಯ ಧಾತುಗುಣವನ್ನು ಸ್ವೀಕರಿಸಿ ಮುಂದುವರಿಯಿತು; ಈಗ 'ನವ್ಯಕಥೆ'ಯ ಧಾತುಗುಣವನ್ನು ವೈಗೂಡಿಸಿಕೊಂಡು ಮುಂದುವರಿಯುವ ಲಕ್ಷಣಗಳು ಆಗಲೇ ಕಂಡುಬರುತ್ತಿವೆ. ಹೀಗಿರುವಲ್ಲಿ, ಆರೇಳು ವರ್ಷಗಳ ಹಿಂದೆ "ಈಗಿನ ಮಟ್ಟಿಗಂತೂ 'ಸಣ್ಣಕತೆ'ಯ ಪರಿಸ್ಥಿತಿ ಆಶಾದಾಯಕವಾಗಿಲ್ಲ" ಎಂದ ವಿಮರ್ಶಕರ ಉಕ್ತಿ ಈಗ ಊರ್ಜಿತವಾಗದು. ಏಕೆಂದರೆ, ಎಂದೇ ಆಗಲಿ, ಮುಂದುವರಿಯುವುದು ಬೆಳೆಯುವುದು 'ಸಾಂಪ್ರದಾಯಿಕ ಕಥೆ'ಯೂ ಅಲ್ಲ, 'ನವ್ಯಕಥೆ'ಯೂ ಅಲ್ಲ; 'ಕಥೆಯ ಸಂಪ್ರದಾಯ.' ಕಥೆ ಕಥೆಯಾಗಿರುವವರೆಗೆ, ಕಥೆಗೆ ಸೋಲಿಲ್ಲ, ಸಾವಿಲ್ಲ. "ಸಾಹಿತ್ಯದ ಈ ಒಂದು ಪ್ರಕಾರ ಲೇಖಕರ ದುರ್ಲಕ್ಷ್ಯಕ್ಕೀಡಾಗಿದೆ" ಎಂದು ಆಗ ಹೇಳಬಹುದಾಗಿತ್ತೇನೊ. ಅಲ್ಲದೆ, "ಸಣ್ಣಕತೆಗೆ ರಕ್ತದಾನ ಮಾಡಬಲ್ಲಂಥ ಸಮರ್ಥ ಲೇಖಕನೊಬ್ಬ ಬರಬೇಕಾಗಿದೆ" ಎಂಬ ಸಮರ್ಥನೀಯವಲ್ಲದ ಮಾತಿಗೆ ಉತ್ತರವಾಗಿ, ಒಬ್ಬನಲ್ಲ ಹತ್ತುಮಂದಿ ಬರಲಿದ್ದಾರೆ ಎಂದು ಹೇಳಬೇಕಾಗುತ್ತದೆ. ಒಂದು ಕೋಗಿಲೆಯಿಂದ ವಸಂತೋದಯವಾದೀತೆ?

೩. ನವಕಥಾ ಗುಚ್ಛ (೧) (ಆಗಸ್ಟ್ ೧೯೬೧) : 'ದಕ್ಷಿಣ ಭಾಷಾ ಪುಸ್ತಕ ಸಂಸ್ಥೆಯ ಕೋರಿಕೆಯ ಮೇಲೆ ಪ್ರಸಿದ್ಧ ಲೇಖಕರಿಂದ ಕಳಿಸಲ್ಪಟ್ಟ ಸುಮಾರು ೬೦ ಕತೆಗಳಲ್ಲಿ ಆಯ್ದು ಪ್ರಕಟಿಸಿದ ಹನ್ನೆರಡು ಕತೆಗಳ ಸಂಕಲನ.'

ಆಧುನಿಕ ಸಣ್ಣಕತೆಗಳ ಪ್ರಸಿದ್ಧ ಲೇಖಕರಾದ ಅಶ್ವತ್ಥ, ನಿರಂಜನ, ಅನಂತಮೂರ್ತಿ, ಶ್ರೀಕಾಂತ, ಸುಶೀಲಾಕೊಪ್ಪರ, ಗೀತಾಕುಲಕರ್ಣಿ ಮುಂತಾದ ಹನ್ನೆರಡು ಮಂದಿ ಲೇಖಕರ ಕತೆಗಳನ್ನು ಆಯ್ದು ಇಲ್ಲಿ ಪ್ರಕಟಿಸಿದೆ. "ಕಥಾ ರಚನೆಯಲ್ಲಿ ನೂತನದೃಷ್ಟಿ, ವೈವಿಧ್ಯ, ನವ್ಯ ಕಥಾತಂತ್ರ ಮತ್ತು ಭಿನ್ನ ಭಿನ್ನ ಮನೋ ಧರ್ಮಗಳನ್ನು ಪ್ರತಿಬಿಂಬಿಸುವ ಈ ಸಣ್ಣಕತೆಗಳು, ಕನ್ನಡದಲ್ಲಿ ಸಣ್ಣಕತೆಗಳ ಬೆಳವಣಿಗೆಯಲ್ಲಿ ಕಂಡುಬರುವ ಆಶಾದಾಯಕ ಪ್ರಗತಿಯ ಕುರುಹುಗಳಾಗಿ ಬೆಳಗಿವೆ."

ನವಕಥಾ ಗುಚ್ಛ (೨) (ಡಿಸೆಂಬರ್ ೧೯೬೧) : 'ಸಂಸ್ಥೆಯ ಕೋರಿಕೆಯ ಮೇಲೆ ೩೦ ಪ್ರಸಿದ್ಧ ಕತೆಗಾರರು ಕಳಿಸಿದ ೮೦ ಸಣ್ಣಕತೆಗಳಲ್ಲಿ ಆಯ್ದ ಒಂಬತ್ತು ಸಣ್ಣ ಕತೆಗಳ ಸಂಕಲನ.' ಈ ಸಂಕಲನದ ಲೇಖಕರು : ರಾಮಚಂದ್ರಶರ್ಮ, ಸದಾಶಿವ, ಟಿ. ಜಿ. ರಾಘವ, ಸುಮತೀಂದ್ರನಾಡಿಗ್, ಚದುರಂಗ, ಕೆ. ಗೋಪಾಲಕೃಷ್ಣರಾವ್, ಎಂ. ವಿ. ಸೀತಾರಾಮಯ್ಯ, ಜಯಲಕ್ಷ್ಮಿ ಆರ್. ಶ್ರೀನಿವಾಸನ್, ಸೂರ್ಯನಾರಾಯಣ ಚಡಗ.

ಮೊದಲ ಸಂಪುಟದ ಬಗೆಗೆ ಹೇಳಿರುವ ಪರಿಚಯದ ಮಾತುಗಳೆ ಇದಕ್ಕೂ ಅನ್ವಯಿಸುತ್ತದೆ.

೪. ಕನ್ನಡ ಸಣ್ಣ ಕಥೆಗಳು (೧೯೬೨) (ದೆಹಲಿಯ ಕೇಂದ್ರ ಸಾಹಿತ್ಯ ಅಕಡೆಮಿ ಗಾಗಿ ಎಲ್. ಎಸ್. ಶೇಷಗಿರಿರಾಯರು ಸಂಕಲಿಸಿದ್ದು). ಈ ಸಂಕಲನದಲ್ಲಿ ೨೨ ಮಂದಿ ಪ್ರಸಿದ್ಧ ಕಥೆಗಾರರ ಸಣ್ಣಕತೆಗಳು ಸೇರಿವೆ. ಇದರಲ್ಲಿ ಪ್ರಾರಂಭದ ಕಾಲದ ಶ್ರೀನಿವಾಸರಿಂದ ತೊಡಗಿ ಇಂದಿನ ನವ್ಯಪಂಥದ ಸದಾಶಿವರ ವರೆಗೂ ಕಥಾಸಾಹಿತ್ಯ ವಾಹಿನಿ ಬಹುಮಟ್ಟಿಗೆ ಎಲ್ಲ ನಿಟ್ಟು–ನಿಲುವುಗಳನ್ನು ಮುಟ್ಟಿಬಂದಿರುವುದರಿಂದ, ಸಣ್ಣ ಕಥೆಯ ಈ ವರೆಗಿನ ಬೆಳವಣಿಗೆಯನ್ನು ಆದ್ಯಂತವಾಗಿ ಪ್ರತಿನಿಧಿಸುತ್ತದೆ ಎನ್ನಬಹುದು.

ಈ ಸಂಕಲನಕ್ಕೆ ಸಂಕ್ಷೇಪವಾದರೂ ಸಮರ್ಥವಾದ 'ಪ್ರಸ್ತಾಪನೆ'ಯನ್ನು ಬರೆದಿರುವ ಸಂಪಾದಕ ಎಲ್. ಎಸ್. ಶೇಷಗಿರಿರಾಯರ ಈ ಕೆಲವು ವಾಕ್ಯಗಳಲ್ಲಿ ಈಚಿನ ಕಾಲು ಶತಮಾನದ ಸಣ್ಣ ಕಥೆಯ ಬೆಳವಣಿಗೆಯ ಒಂದು ಇಣಿಕುನೋಟ ದೊರಕುತ್ತದೆ. ನಾವು ಹೇಳಬೇಕೆಂದಿರುವುದನ್ನೇ ಇನ್ನೊಬ್ಬರು ಹೇಳಿರುವಾಗ, ಅವರ ಮಾತನ್ನು ಉದ್ಧರಿಸುವುದೇ ಸೂಕ್ತ:

> "ಸ್ವಾತಂತ್ರ್ಯೋತ್ತರದ ಅವಧಿಯಲ್ಲಿ ರಚಿತವಾದ ಉತ್ತಮ ಕತೆಗಳ ಸಂಖ್ಯೆ ಸಾಧನೆ ಕನ್ನಡದಲ್ಲಿ ಸಣ್ಣಕತೆಗೆ ದಾರಿದ್ರ್ಯ ಪ್ರಾಪ್ತವಾಗಿಲ್ಲ ಎನ್ನುವುದನ್ನು ತೋರಿಸುತ್ತವೆ. ಇತ್ತೀಚೆಗಿನ ವರ್ಷಗಳಲ್ಲಿ ಹಲವರು ಲೇಖಕಿಯರು ತಮ್ಮ ಕೃತಿಗಳ ಸತ್ವದಿಂದ ಉತ್ತಮ ಕತೆಗಾರರ ಪಂಗ್ತಿಗೆ ಬಂದಿರುವುದೂ ಗಮನಾರ್ಹ. ವಾಣಿ, ತ್ರಿವೇಣಿ, ಅನುಪಮಾ, ಗೀತಾಕುಲಕರ್ಣಿ, ಹೆಚ್. ವಿ. ಸಾವಿತ್ರಮ್ಮ, ಹೆಚ್. ಎಸ್. ಕಾತ್ಯಾಯಿನಿ, ರಾಜಲಕ್ಷ್ಮಿ ಎನ್. ರಾವ್ ಇವರೆಲ್ಲ ಇಂದು ಸೊಗಸಾದ ಕತೆಗಳನ್ನು ರಚಿಸಿದ್ದಾರೆ. ಎಲ್ಲ ದೃಷ್ಟಿಗಳಿಂದ, ಕನ್ನಡ ಸಣ್ಣಕತೆಯ ಈ ವರೆಗಿನ ಬೆಳೆಯ ಸಂಪತ್ತು ಹೆಮ್ಮೆಪಡಬಹುದಾದಂತಹದು, ಅದರ ಭವಿಷ್ಯ ಆಶಾದಾಯಕವಾದುದು. ಕನ್ನಡ ಸಣ್ಣಕತೆಗಳ ಬರಹಗಾರರು ಸಮ

ಕಾಲೀನ ಸಮಾಜಪ್ರಜ್ಞೆ, ಹಲವು ದೇಶಗಳ ಸಾಹಿತ್ಯಗಳ ಅಭ್ಯಾಸ, ಹೊಸ ಪ್ರಯೋಗಗಳನ್ನು ಮಾಡುವ ಕೆಚ್ಚು, ಇವುಗಳೊಡನೆ ತಮ್ಮ ದೃಷ್ಟಿ, ತಂತ್ರಗಳ ಸ್ವಾತಂತ್ರ್ಯ ಇವೆಲ್ಲವುಗಳನ್ನೂ ಬೆಳೆಸಿಕೊಳ್ಳುತ್ತಿರುವುದು ಈ ಆಸೆ ನಿರಾಧಾರವಾದುದಲ್ಲ ಎನ್ನುವುದನ್ನು ತೋರಿಸಿಕೊಡುತ್ತದೆ."

೫. ಹೊಸಕ್ಷಿತಿಜ (ಜನವರಿ ೧೯೬೫) : ಸಂಪಾದಕ ಜಿ. ಬಿ. ಜೋಶಿಯವರ ಮಾತಿನಲ್ಲಿ, "ಈಗ ನವೀನ ಪ್ರಜ್ಞೆಯಲ್ಲಿ ಬರೆದ ಈ ಕತೆಗಳ ಸಂಕಲನವು ಶ್ರೇಷ್ಠ ಕತೆಗಳ ಪ್ರಾತಿನಿಧಿಕ ಸಂಗ್ರಹವಲ್ಲದಿದ್ದರೂ ಆ ದಿಕ್ಕಿನಲ್ಲಿ ಇದೊಂದು ಪ್ರಯೋಗವಾಗಿ ಮೊದಲನೆಯದಾಗಿದೆ." ಕೀರ್ತಿನಾಥಕುರ್ತಕೋಟಿಯವರು ಕತೆಗಳನ್ನೆಲ್ಲ ಪರಿಶೀಲಿಸಿ, 'ಹೊಸ ಸಂವೇದನೆ ಮತ್ತು ಸಣ್ಣಕತೆ' ಎಂಬ ವಿವೇಚನಾತ್ಮಕ 'ಹಿನ್ನುಡಿ'–ಬರಹದಿಂದ ಸಂಕಲನದ ಕತೆಗಳನ್ನು ಓದಿ ಸವಿಯಲು, ಅರ್ಥಮಾಡಿಕೊಳ್ಳಲು, ಅವುಗಳ ಬಗೆಗೆ ಮೆಲುಕುಹಾಕಲು ಉಪಯುಕ್ತವಾದ ನೆರವು ನೀಡಿದ್ದಾರೆ. ಇಲ್ಲಿನ ಕತೆಗಳನ್ನು 'ಹೊಸ ಸಂವೇದನೆಯ ಕತೆಗಳು' ಎಂದೂ, 'ನವೀನಪ್ರಜ್ಞೆ'ಯಲ್ಲಿ ಬರೆದವು ಎಂದೂ ಕರೆದಿರುವುದರಿಂದ, 'ನವ್ಯ' ಎಂಬುದಕ್ಕೆ ಹೊಸ ವ್ಯಾಖ್ಯಾನದ ಪರ್ಯಾಯಪದಗಳು ದೊರಕಿದಂತಾಗಿದೆ. ಈ ನವೀನಪ್ರಜ್ಞೆ, ಹೊಸ ಸಂವೇದನೆ ಎಂದರೇನು? 'ಹೊಸ ಕ್ಷಿತಿಜ'ದ ಪ್ರಸ್ತಾಪವನ್ನು ಎತ್ತಿರುವಾಗಲೇ ಈ 'ನವ್ಯಪ್ರಜ್ಞೆ' ಅಥವಾ 'ಹೊಸ ಸಂವೇದನೆ'ಯ ಬಗೆಗೆ ನಾಲ್ಕುಮಾತು ಹೇಳಿದರೆ ಅಪ್ರಸಕ್ತವೆನಿಸದು. ನವ್ಯವಿಧಾನದ ಬರಹಗಳನ್ನು ಚೆನ್ನಾಗಿ ಅಭ್ಯಾಸಮಾಡಿ, ಆ ಕುರಿತು ವಿವೇಚನೆ ನಡಸಿರುವ ಕುರ್ತಕೋಟಿಯವರಂತಹ ದಕ್ಷ ವಿಮರ್ಶಕರ ಮತ್ತು ನವ್ಯಲೇಖಕರ ಬರಹಗಳಿಂದ ನವ್ಯ ಕತೆಯ ಸ್ಥೂಲಸ್ವರೂಪವನ್ನು ಅರಿಯಲು ನಮಗೆ ಸಹಾಯ ದೊರೆಯುತ್ತದೆ. ನಾವು ಆ ಬರಹಗಳಿಂದ ಅರಿತಮಟ್ಟಿಗೆ ಆ ಕತೆಯ ಕೆಲವು ಮುಖ್ಯ ಲಕ್ಷಣಗಳನ್ನು ಹೀಗೆ ಸಂಗ್ರಹಿಸಬಹುದು.

(೧) ನವೋದಯ ಅಥವಾ ಸಂಪ್ರದಾಯ ಕಾಲದ ಕಥೆಗಾರರು ಸಾಮಾಜಿಕ ಪ್ರಜ್ಞೆಗೆ ಒಳಗಾಗಿ, ಬಹಿರ್ಮುಖರಾಗಿ, ಕಥಾ ರಚನೆಮಾಡುತ್ತಿದ್ದರು. ವಾಸ್ತವವಾದದ ಗಟ್ಟಿ ನೆಲದಮೇಲೆ ನಿಂತು ಆದರ್ಶವಾದದ ಫಲಗಳನ್ನು ಕೊಯ್ಯುತ್ತಿದ್ದರು. "ಕನಸುಗಾರಿಕೆ, ಹದಮೀರದ ಶೃಂಗಾರ, ದೀನದಲಿತರ ಬಗ್ಗೆ ಕರುಣೆ, ದೇಶಾಭಿಮಾನದ ವೀರ, ಸಾಮಾಜಿಕ ವಿಷಮತೆಗಳ ಬಗ್ಗೆ ರೌದ್ರ ಹೀಗೆ ನವರಸಗಳನ್ನೂ ಪುನರ್ವಿಮರ್ಶಿಸಿ ಆಗಿನ ಲೇಖಕರು ತಮ್ಮ ಕತೆ–ಕಾದಂಬರಿಗಳಲ್ಲಿ ಎರಕಹೊಯ್ದರು. ಆದರೆ, ಈಗ ಮೊದಲಿನ ಆದರ್ಶವಾದ ಇಲ್ಲದ್ದರಿಂದ ಲೇಖಕರು ಹೊಸ ವೈಚಾರಿಕತೆಗಾಗಿ ಹುಡುಕಾಡುತ್ತಿದ್ದಾರೆ" ('ಹೊಸಕ್ಷಿತಿಜ': ಕುರ್ತಕೋಟಿ). ಇದರಿಂದಾಗಿ ನವ್ಯಕತೆಗಾರರು (ಸ್ವೇಚ್ಛೆಯಿಂದ, ಅನಿವಾರ್ಯತೆಯಿಂದಲ್ಲ) ಅಂತರ್ಮುಖಿಗಳಾಗಿದ್ದಾರೆ. ಸಮಾಜಜೀವನ ರಾಜಕೀಯ, ಆರ್ಥಿಕ, ವೈಜ್ಞಾನಿಕ, ಧಾರ್ಮಿಕ ಮುಂತಾದ ಹಲವು ಕಾರಣಗಳಿಂದ ಎಂದಿಗಿಂತ ಇಂದು ಹೆಚ್ಚು ಸಂಕೀರ್ಣವಾಗಿದೆ, ಜಟಿಲವಾಗಿದೆ, ಆದ್ದರಿಂದ, ನವ್ಯಲೇಖಕನ ಸಂವೇದನೆ ಅನುಭವಗಳೂ ಸಂಕೀರ್ಣ, ಜಟಿಲ. ಅಂತರ್ಮುಖಿಯಾದ ನವ್ಯಲೇಖಕ ಬಾಹ್ಯ ಸಂಗತಿಗಳನ್ನು 'ವಸ್ತುನಿಷ್ಠ'ವಾಗಿ ನೋಡದೆ 'ವ್ಯಕ್ತಿನಿಷ್ಠ'ವಾಗಿ ನೋಡುತ್ತಾನೆ. ತನ್ನ

ಕಥಾವಸ್ತುವಿಗಾಗಿ, ಸಾಮಾಜಿಕ ಸಮಸ್ಯೆ ಅಥವಾ ಘಟನೆಯ ಕಡೆಗೆ ದೃಷ್ಟಿ ಹೊರಳಿಸದೆ, ತನ್ನ "ಸ್ವಂತ ಅನುಭವದ ಗುಪ್ತನಿಧಿಗೆ ಕೈಹಾಕುತ್ತಾನೆ." (೨) ತಾನು ಪಡೆದುಕೊಂಡ ಸಂಕೀರ್ಣಾನುಭವವನ್ನು, ಸಂವೇದನೆಗಳ ಜಾಲವನ್ನು, ತನ್ನವೇ ಆದ (ನೈತಿಕ ಇತ್ಯಾದಿ) ಮೌಲ್ಯಗಳ ಬೆಳಕಿನಲ್ಲಿಟ್ಟು ಪರೀಕ್ಷಿಸುತ್ತಾನೆ. ಒಂದು ವಿಧದಲ್ಲಿ, ಇದು ಸ್ವಾನುಭವ ಪರೀಕ್ಷೆ, ಸ್ವಾನುಭವ ಸಾಗರದಲ್ಲಿ ಕೈಗೊಂಡ ಪ್ರಯಾಣ (೩) ಈ ಸ್ವಾನುಭವ ಪ್ರಯಾಣ ಪ್ರಜ್ಞಾಲೋಕದ (World of Consciousness) ಬೇರೆ ಬೇರೆ ಸ್ತರಗಳಲ್ಲಿ ನಡೆಯಬಹುದು. ಇಂತಹ ಪ್ರಯಾಣವನ್ನು ಕೈಗೊಂಡ ಈ ನವ್ಯಲೇಖಕ—ನಾವಿಕರಿಗೆ ಫ್ರಾಯ್ಡ್, ಯುಂಗ್, ಆ್ಯಡ್ಲರ್ ಮುಂತಾದ ಮನಶ್ಶಾಸ್ತ್ರಜ್ಞರೇ ಅಂಬಿಗರು. ಇದರಿಂದಾಗಿ, ಹೊಸ ವಿಚಾರಗಳ ಮೂಸೆಗೆ ಬಿದ್ದ ಲೇಖಕನ ಸಂವೇದನೆ—ಅನುಭವಗಳು ವಿಚಾರಸಂಪರ್ಕವಿಲ್ಲದಿದ್ದ ಹಿಂದಿನ ಸಂಪ್ರದಾಯದ ಕತೆಗಾರರ ಭಾವುಕತೆಯನ್ನು ಬಹುಮಟ್ಟಿಗೆ ಕಳೆದುಕೊಂಡು, ವೈಚಾರಿಕ ರಸಕ್ರಿಯೆಯಲ್ಲಿ ಕಾದ ಒಂದು ಮಿಶ್ರಲೋಹವಾಗಿ ಪರಿಣಮಿಸುತ್ತದೆ. ಇದಕ್ಕೆ ಕವಿತೆಯ ಆಕಾರ ಕೊಟ್ಟರೆ ನವ್ಯಕಾವ್ಯ, ಕತೆಯ ಆಕಾರ ಕೊಟ್ಟರೆ ನವ್ಯಕತೆ. 'ರೊಮ್ಯಾಂಟಿಕ್ ಕಾವ್ಯ' ಹಾಗೂ 'ಸಾಂಪ್ರದಾಯಿಕ ಕಥೆ' ಜೊತೆ ಜೊತೆಯಲ್ಲಿ ಬೆಳೆದುಬಂದಂತೆ ನವ್ಯಕಾವ್ಯ ನವ್ಯಕತೆಗಳೂ ಬಹುಮಟ್ಟಿಗೆ ಜೊತೆ ಜೊತೆಯಾಗಿ ರೂಪಗೊಂಡು ಬೆಳೆದುಬಂದಿರುವುದು ಗಮನಾರ್ಹ. (೪) ಸಂಕೀರ್ಣವಾದ ಅನುಭವವನ್ನು 'ಸಮನ್ವಯ' ದೃಷ್ಟಿಯಿಂದ ಇಲ್ಲವೆ 'ಸರಳ'ವಾದ ರೀತಿಯಲ್ಲಿ ನೋಡುವುದು ಅಸಾಧ್ಯ ಇಲ್ಲವೆ ಕೃತಕ ಎಂಬುದು ನವ್ಯಲೇಖಕರ ನಿಲುವು. ಆದರಿಂದಾಗಿ, ಇವರ ಅನುಭವದ ಅಭಿವ್ಯಕ್ತಿಯಲ್ಲಿ 'ಶಬಲಪರಿಣಾಮ' (Mosaic Effect) ಅನಿವಾರ್ಯವಾಗುತ್ತದೆ. (೫) ಈ ಶಬಲಪರಿಣಾಮದ ಅಭಿವ್ಯಕ್ತೀಕರಣ ಸಾಂಪ್ರದಾಯಿಕ ಕಥನ ವಿಧಾನದಲ್ಲಿ ಅಸಾಧ್ಯವಾದುದರಿಂದ ಅಭಿವ್ಯಕ್ತಿಗೆ ಹೊಸ ವಿಧಾನಗಳನ್ನು ಇಲ್ಲವೆ ತಂತ್ರಗಳನ್ನು ಕಂಡುಹಿಡಿದುಕೊಳ್ಳಬೇಕಾಗುತ್ತದೆ. (೬) ಮನಶ್ಶಾಸ್ತ್ರದ ಮನೋವಿಶ್ಲೇಷಣೆಯ ಪ್ರಕ್ರಿಯೆಯ ಪ್ರಭಾವವು ನವ್ಯಸಾಹಿತ್ಯದಲ್ಲಿ 'ಪ್ರಜ್ಞಾಪ್ರವಾಹ' (Stream of Consciousness) ತಂತ್ರವಾಗಿ ಸಿದ್ಧಿಸಿತು. ಈ 'ಪ್ರಜ್ಞಾಪ್ರವಾಹ'ದ ಕಲ್ಪನೆಯಲ್ಲಿ ಅನುಭವದ ಸಾತತ್ಯಕಲ್ಪನೆಯೂ (ಎಂದರೆ ತ್ರಿಕಾಲಗಳ ಅನುಭವವೂ ವಾಸ್ತವವಾಗಿ ಏಕಕಾಲಿಕ ಎಂಬ 'ಸಾಪೇಕ್ಷ ಕಾಲಪ್ರಜ್ಞೆ') ಬೇರ್ಪಡಿಸಲಾಗದಂತೆ ಹೆಣೆದುಕೊಂಡಿರುತ್ತದೆ. (೭) ಈ 'ಪ್ರಜ್ಞಾಪ್ರವಾಹ' ನಿಷ್ಠವಾದ ಅನುಭವದ ಸಂಕೀರ್ಣತೆಯ ಸಾರ್ಥಕ ಅಭಿವ್ಯಕ್ತಿಗೆ ರೂಢಿಯ ನಿರೂಪಣಶೈಲಿ ಅಸಮರ್ಥವೆನಿಸಿ, ಚಲನಚಿತ್ರದ 'Flash-back' (ಹಿನ್ನೋಟದ ತಂತ್ರ) ವಿಧಾನ ಮುಂತಾದ ತಂತ್ರಗಳೂ, ಚಿತ್ರಕಲೆಯ 'ಅಮೂರ್ತವಿಧಾನ'ವೂ (Abstract Art), ಸಾಹಿತ್ಯದಲ್ಲಿ ಪುರಾತನ ಕಾಲದಿಂದಲೂ ಬಳಕೆಯಲ್ಲಿರುವ ಸಂಕೇತ ಪದ್ಧತಿಯೂ ನವ್ಯಲೇಖಕನಿಗೆ ಆವಶ್ಯವೆನಿಸಿವೆ.

ನವ್ಯಸಾಹಿತ್ಯದ ಎಲ್ಲ ಪ್ರಕಾರಗಳಿಗೂ ಅನ್ವಯಿಸುವ ಮೇಲ್ಕಂಡ ವಿಧಿವಿಧಾನಗಳು ನವ್ಯಕಥೆಗಳಿಗೂ ಅನ್ವಯಿಸುತ್ತವೆ. ತತ್ತ್ವಶಃ ಇವುಗಳನ್ನು ನಿರಾಕರಿಸಲು ಕಾರಣವಿಲ್ಲ. ಆದರೆ, ಇವುಗಳ ಅನ್ವಯಾನುಸಾರ ಕಥೆ ರಚಿತವಾದಾಗ ಅದು ಎಷ್ಟರ ಮಟ್ಟಿಗೆ 'ಸಾಹಿತ್ಯಕೃತಿ'ಯಾಗಿ ರೂಪಗೊಂಡು ಬೇರೆ ಬೇರೆ ಮಟ್ಟದ ಓದುಗರನ್ನು ತಣಿಸುತ್ತದೆ, ಯಾವ ದೃಷ್ಟಿಯಿಂದ ಅದು 'ನವ್ಯ', ಅದರಲ್ಲಿನ 'ನವ್ಯತೆ'ಯ ಭಾಗ ಎಷ್ಟು ಎಂಬೀ ಪ್ರಶ್ನೆಗಳಿಗೆ ಆಯಾ ಕೃತಿಯನ್ನು ಪರಿಶೀಲಿಸಿಯೇ ಉತ್ತರಕೊಡಬೇಕು.

ಮೊದಲ ಪ್ರಶ್ನೆಗೆ ಒಬ್ಬ ನವ್ಯಲೇಖಕರೇ ಕೊಟ್ಟಿರುವ ಉತ್ತರ ಇದು:

" ಕೇವಲ ವಿರಾಮಕ್ಕೆಂದು, ಬದುಕಿನ ಜಂಜಾಟವನ್ನು ಮರೆಯುವುದಕ್ಕೆಂದು, ಮನರಂಜನೆಗೆಂದು ಕಥೆಯನ್ನೋದಬಯಸುವವರಿಗೆ ಈ ಕಥೆಗಳು ಖಂಡಿತವಾಗಿಯೂ ಅಲ್ಲ. ಬದುಕಿನ ಬಗೆಗೆ, ಸಾಹಿತ್ಯದ ಬಗೆಗೆ ಜೀವಂತಶ್ರದ್ಧೆ, ಆಸಕ್ತಿಗಳಿಲ್ಲದವರಿಗೆ ಇಲ್ಲಿ ಏನೂ ಸಿಕ್ಕುವುದಿಲ್ಲ. ಬದುಕಿನ ನಿಜವಾದ ಅರ್ಥವಾದರೂ ಏನೆಂದು ತಿಳಿಯಲು ತಲ್ಲಣಿಸುವ ಪ್ರಬುದ್ಧರಿಗೆ ಮಾತ್ರ ಇಲ್ಲಿ ಪ್ರವೇಶ" (ಗಿರಡ್ಡಿಗೋವಿಂದರಾಜ : 'ಸಣ್ಣಕತೆಯ ಹೊಸ ಒಲವುಗಳು', ಪು. ೨೪).

'ನವ್ಯ'ವೆಂಬ 'ಹಣೆಬರಹ'(Label)ವನ್ನು ಕಟ್ಟಿಕೊಂಡಿಲ್ಲದ ಕಥಾ ಸಾಹಿತ್ಯವೆಲ್ಲವನ್ನೂ ಅಲ್ಲಗಳೆಯುವ ಮಾತು ಇದು. ಶ್ರೇಷ್ಠ ಸಾಹಿತ್ಯವು ಒದಗಿಸುವ ರಸಾನುಭವದ ಅಲೌಕಿಕ ಆನಂದವನ್ನು 'ಮನರಂಜನೆ' ಎಂದು ತಪ್ಪಾಗಿ ಅರ್ಥಯಿಸುವುದು ಸಲ್ಲದು. ಅಲ್ಲದೆ, 'ರಂಜನೆ' ಆನಂದಾನುಭೂತಿಯ ಮೊದಲ ಹಂತ ಎಂಬುದನ್ನು ಮರೆಯಲಾಗದು. ನವ್ಯಕಥೆ ಇಂತಹ ಆನಂದವನ್ನು ನೀಡಿದರೆ ಅದೂ ಸಾಹಿತ್ಯ ಕೃತಿಯೆ. ಇಂತಹ ಆನಂದಾನುಭೂತಿಗೆ 'ನವ್ಯತಂತ್ರ' ಬಹುವೇಳೆ ಕೃತಿಗೂ ಓದುಗನಿಗೂ ಅಡ್ಡಗೋಡೆಯಾಗಿರುತ್ತದೆ.

ಇನ್ನು, 'ಹೊಸಕ್ಷಿತಜ'ದ ಕತೆಗಳ ಬಗೆಗೆ ನಾಲ್ಕು ಮಾತು :

"ಈ ಸಂಗ್ರಹದಲ್ಲಿಯ ಮೊದಲಿನ ನಾಲ್ಕು ಕತೆಗಳಲ್ಲಿಯ ಕಥನಕ್ರಮ ಒಳ್ಳೆಯ ಅರ್ಥದಲ್ಲಿ ಸಾಂಪ್ರದಾಯಿಕವಾಗಿದೆ. ಅಂದರೆ ಈ ಕತೆಗಳ ಹೊಸತನವೆಲ್ಲ ಪ್ರಕೃತಿಯ ಹೊಸತನದಂತೆ ವ್ಯಕ್ತಿಗತವಾದದ್ದು. ಇವುಗಳಲ್ಲಿ ನವ್ಯತೆ ಏನಾದರೂ ಇದ್ದರೆ ಅದು ಕೊಸರು ಮಾತ್ರ," ಇನ್ನುಳಿದ ಕತೆಗಳು ಮೇಲೆ ಒಕ್ಕಣಿಸಿದ ನವ್ಯಲಕ್ಷಣಗಳ ದೃಷ್ಟಿಯಿಂದ, ಒಂದಲ್ಲ ಒಂದು ರೀತಿಯಲ್ಲಿ 'ನವ್ಯ'ವಾಗಿವೆ. "ವ್ಯಕ್ತಿವ್ಯಕ್ತಿಗಳ ನಡುವಿನ ಸಂಬಂಧ, ವ್ಯಕ್ತಿ ಹಾಗೂ ಜಗತ್ತಿನ ನಡುವಿನ ಸಂಬಂಧ, ದೇಹ ಆತ್ಮಗಳ ಸಂಬಂಧ—ಇವುಗಳಲ್ಲಿ ಉದ್ಭವಿಸಬಹುದಾದ ಸಮಸ್ಯೆಗಳು ಈ ಕತೆಗಳ ವಸ್ತುಗಳಾಗಿವೆ." ಒಟ್ಟಿನ ಮೇಲೆ, ಇಲ್ಲಿನ ಹಲವು ಕಥೆಗಳ (ಇಲ್ಲಿಲ್ಲದ ಬೇರೆಯ ನವ್ಯಕಥೆಗಳ) ವಸ್ತುವಾದ ಈ 'ಸಂಬಂಧ ಸಮಸ್ಯೆ'ಯನ್ನು ಲಂಕೇಶರ ಕಥೆಯ ಹೆಸರಿನಿಂದ ನಿರ್ದೇಶಿಸಬಹುದಾಗಿದೆ: 'ಪ್ರೇಮ–ಗೀಮ ಮದುವೆ–ಗಿದುವೆ ಇತ್ಯಾದಿ.' ನವ್ಯಪ್ರಜ್ಞಾವಂತರಿಗೆ ಪ್ರೇಮ–ಮದುವೆ ಇವು ಅರ್ಥವಿಲ್ಲದ ಮಾತುಗಳು. ಗೀಮ–ಗಿದುವೆ–ಇತ್ಯಾದಿ ಅವರಿಗೆ ಮುಖ್ಯ; ಅದೆಂದರೆ, 'ಪಚ್ಚಪಸಿಯ' ಲೈಂಗಿಕ ಅನುಭವದ ಜಾಡು ಹಿಡಿದು, ಜೀವನದ ಪುರುಷಾರ್ಥದ ಶೋಧನೆಮಾಡುವುದು. ಸದ್ಯದಮಟ್ಟಿಗೆ, ನವ್ಯಸಾಹಿತಿಗೆ 'ಪುರುಷಾರ್ಥ'ವೇನೋ ದಕ್ಕಿದೆ ; ಅದನ್ನೇ ಪರಮಪುರುಷಾರ್ಥ ಎಂದು ಆತ ಕೃತಾರ್ಥನಾದರೆ, ಆತನ ಸಂತೋಷ. ಆಚಾರ್ಯ ಫ್ರಾಯ್ಡ್‌ನ ಸಂದೇಶ ಅದು.

ಇದರ ಪರಿಣಾಮವಾಗಿ, ನವ್ಯಕಥೆಗಳಲ್ಲಿ ತಂತ್ರನಾವಿನ್ಯ, ವಸ್ತುನಾವಿನ್ಯ ಕಂಡು ಬಂದರೂ ವಸ್ತುವೈವಿಧ್ಯಕ್ಕೆ ಭಂಗಬಂದಿದೆ. ಇನ್ನು ಕೆಲವು ಅಂಶಗಳಲ್ಲಿ 'ನವ್ಯ ಕಥೆ'ಯ, ಸ್ವರೂಪದಲ್ಲಿ ಕಂಡುಬಂದಿರುವ 'ಲೋಪ–ದೋಷ'ಗಳನ್ನು ನವ್ಯಕತೆಗಾರರೇ ಗಮನಿಸಿದ್ದಾರೆ:

"ಕನ್ನಡ ಕತೆಗಳಲ್ಲಿ ಆವಿಷ್ಕಾರಹೊಂದುತ್ತಿರುವ ನವ್ಯತೆ ಇನ್ನೂ ಸಾಕಷ್ಟು ರೀತಿಯಲ್ಲಿ, ಸಾಕಷ್ಟು ಶ್ರೀಮಂತವಾಗಿ ರೂಪುಗೊಳ್ಳಬೇಕಾಗಿದೆ."—ಶಾಂತಿನಾಥ ದೇಸಾಯಿ.

"ವಸ್ತುಪ್ರತಿರೂಪಗಳನ್ನು ಯೋಜಿಸುವುದೇ ಒಂದು ಉದ್ಯೋಗವಾಗಿ ಪರಿಣಮಿಸಿದ್ದರಿಂದ ಕಥೆಗಳಲ್ಲಿ ಕೃತ್ರಿಮ ಸಂಯೋಜನೆಗಳಿಗೆ ಎಡೆಮಾಡಿಕೊಟ್ಟಿತು"—ಯು. ಆರ್. ಅನಂತಮೂರ್ತಿ.

ಇಷ್ಟು ಹೇಳಿಯಾದಮೇಲೆ, ಒಂದು ವಸ್ತುಸ್ಥಿತಿಯನ್ನು ನಾವು ನಿಸ್ಸಂದಿಗ್ಧವಾಗಿ ಗ್ರಹಿಸಬೇಕು. ಅದೇನೆಂದರೆ, ನಾವು ಒಪ್ಪಲಿ ಬಿಡಲಿ, ನವ್ಯಕಥಾ ಪ್ರಕಾರವು ಸ್ಥಿರವಾಗಿ ನೆಲಸಿ ಬೇರುಬಿಟ್ಟಿದೆ. ಪ್ರಗತಿಶೀಲವಾದವು ಕಥೆಯ ಪಾತ್ರವನ್ನು ವಿಸ್ತಾರಗೊಳಿಸಿದಂತೆ ನವ್ಯಪ್ರಕಾರವು ಕನ್ನಡ ಕಥೆಗೆ ಒಂದು 'ಆಳ'ವನ್ನೂ ಕೊಟ್ಟೀತು. ನವ್ಯಕಥೆ ಇನ್ನೂ ಪ್ರಯೋಗಾವಸ್ಥೆಯಲ್ಲಿಯೇ ಇದೆ. ಸಂಪ್ರದಾಯ ಮಾರ್ಗದಮೇಲೆ 'ನವ್ಯ'ದ ಪ್ರಭಾವ ಏನಾದರೂ ಆಗುವುದಿದ್ದರೆ ಈ ಕಾಲದಲ್ಲಿಯೆ ಆಗಬೇಕು.

೬. ಇಂದಿನ ಕಥೆಗಳು : (೧೯೬೬) : (ದಕ್ಷಿಣ ಭಾಷಾ ಪುಸ್ತಕ ಸಂಸ್ಥೆಯ ಪ್ರಕಟನೆ: ಸಂಗ್ರಹಿಸಿದವರು ಕತೆಗಾರ್ತಿ ಉಷಾದೇವಿ) "೧೯೬೪–೬೫ ರ ಸಾಲಿನಲ್ಲಿ ಪ್ರಸಿದ್ಧ ವಾರಪತ್ರಿಕೆ 'ಸುಧಾ' ಪ್ರಕಟಿಸಿದ ಸಣ್ಣಕಥೆಗಳನ್ನಾಯ್ದು ಒಂದು ಸಂಗ್ರಹವನ್ನಾಗಿ ಪ್ರಕಾಶಿಸಬೇಕೆಂಬ ಹೊಸ ಉದ್ದೇಶದಿಂದ ಆರಂಭವಾದ ಹೊಸ ಹೆಜ್ಜೆ ಇದು. ಈ ಸಂಗ್ರಹದ ಹದಿನೈದು ಕಥೆಗಳೂ ಅವುಗಳ ಕಲಾತ್ಮಕ ಭಾವ, ಶೈಲಿ ಮತ್ತು ವಸ್ತು ವೈವಿಧ್ಯದಿಂದ ಓದುಗರನ್ನು ಆಕರ್ಷಿಸಬಲ್ಲವು." ಈ ಸಂಗ್ರಹದ ಕಥೆಗಳನ್ನು ಬರೆದಿರುವ ಲೇಖಕ ಲೇಖಿಕೆಯರಲ್ಲಿ ಬಹುಮಟ್ಟಿಗೆ ಎಲ್ಲರೂ ಕಥಾಲೋಕದಲ್ಲಿ ಹೆಸರು ಮಾಡಿರುವ ಹಳಬರೂ ಹೊಸಬರೂ ಆಗಿದ್ದಾರೆ. ವಾರಪತ್ರಿಕೆಗಳಲ್ಲಿ ಪ್ರಕಟವಾಗುವ ಕಥೆಗಳೆಲ್ಲವೂ ಸಾಧಾರಣ ಇಲ್ಲವೆ ಕೀಳು ಮಟ್ಟದವವು, ಬರೆಯುವವರೆಲ್ಲ ಕೈಪಳಗಿಲ್ಲದ ಹೊಚ್ಚಹೊಸಬರು ಎಂಬ ತಪ್ಪುಕಲ್ಪನೆಯನ್ನು ನಿವಾರಿಸುವಲ್ಲಿ ಇಂಥ ಸಂಕಲನಗಳು ನೆರವಾಗುತ್ತವೆ; ಹಾಗೂ, ಸುಪ್ರತಿಷ್ಠಿತ ಕಥೆಗಾರರು ವಾರಪತ್ರಿಕೆಗಳಲ್ಲಿ ತಮ್ಮ ಕಥೆ ಪ್ರಕಟವಾಗುವುದು ಪ್ರತಿಷ್ಠೆಗೆ ಕುಂದು ಎಂಬ ಭಾವನೆಯನ್ನಿಟ್ಟುಕೊಂಡಿದ್ದರೆ, ಅದನ್ನೂ ಹೋಗಲಾಡಿಸಬಹುದು. ಇಂಥ ಒಂದು ಆರೋಗ್ಯಕರವಾದ ವಾತಾವರಣವನ್ನು ಸೃಷ್ಟಿಸುವಲ್ಲಿ ಈ ಬಗೆಯ ಸಂಕಲನಗಳು ಪರಿಣಾಮಕಾರಿಯಾದರೆ, ಸಣ್ಣಕಥೆಯ ಬೆಳವಣಿಗೆಯಲ್ಲಿ ಪತ್ರಿಕೆಗಳೂ ಇನ್ನೂ ಹೆಚ್ಚು ಮಹತ್ತ್ವದ ಪಾತ್ರವನ್ನು ವಹಿಸಬಲ್ಲವು.

೭. ದಿಗಂತ (ಅಕ್ಟೋಬರ್ ೧೯೬೭): ಮಾವಿನಕೆರೆ ರಂಗನಾಥನ್ (ಸಂಪಾದಕರು), ಸೂರ್ಯನಾರಾಯಣ ಚಡಗ ಮತ್ತು ಎನ್. ನಾರಾಯಣ ಬಲ್ಲಾಳ (ಸಹ ಸಂಪಾದಕರು)—ಹೊಸ ಪೀಳಿಗೆಯ ತರುಣ ಕಥೆಗಾರರಾದ ಈ ಮೂವರ ಸಾಹಸದ ಫಲ, ೮೫ ಕಥೆಗಳ ಈ ಬೃಹತ್ ಕಥಾಮಂಜರಿ. ಎಲ್ಲ ದೃಷ್ಟಿಗಳಿಂದಲೂ ಪ್ರಾತಿನಿಧಿಕವಾದ ಸಂಕಲನವಿದು. ಶ್ರೀರಂಗ, ಅ.ನ.ಕೃ., ವಿ. ಕೃ. ಗೋಕಾಕ್, ರಂ. ಶ್ರೀ. ಮುಗಳಿ ಮುಂತಾದ ಹಿರಿಯರು ಅಭಿಪ್ರಾಯಪಟ್ಟಿರುವಂತೆ—

"ಇಂದಿನ ಕನ್ನಡ ಸಾಹಿತ್ಯದಲ್ಲಿ ಕಥನಕಲೆ ಬೆಳೆದುದನ್ನು ಐತಿಹಾಸಿಕ ದೃಷ್ಟಿಯಿಂದ ನೋಡಬೇಕೆನ್ನುವ ಅಭ್ಯಾಸಿಗಳಿಗೂ ಇದು ಅಗತ್ಯವಾದ ಸಾಮಗ್ರಿಯಾಗಿದೆ. ಒಂದು ದೃಷ್ಟಿಯಿಂದ ಇದು ಕನ್ನಡಕ್ಕೆ ಅಭೂತಪೂರ್ವವಾದ ಕೊಡುಗೆ."—"ಭವ್ಯದಿಂದ ನವ್ಯ ಸಂಪ್ರದಾಯದವರೆಗಿನ ಎಲ್ಲ ಸಂಪ್ರದಾಯಗಳ ಕಥೆಗಳೂ 'ದಿಗಂತ'ದಲ್ಲಿ ಅಡಕವಾಗಿದೆ. ಭಾರತೀಯ ಭಾಷೆಗಳಲ್ಲಿ ಈ ಪ್ರಮಾಣದ ಸಣ್ಣ ಕಥಾಸಂಕಲನ ಬಂದಿಲ್ಲ."—"ಈ ಸಣ್ಣ ಕಥೆಗಳ ಸಂಗ್ರಹ ಇಂದಿನ ಜೀವನದ ವಿವಿಧ ಮುಖಗಳನ್ನು ಯಶಸ್ವಿಯಾಗಿ ಚಿತ್ರಿಸಿ ತೋರಿಸುತ್ತದೆ."

ಎಲ್ಲಕ್ಕಿಂತ ಮುಖ್ಯವಾಗಿ, ಮಾವಿನಕೆರೆ ರಂಗನಾಥನ್, ನಾರಾಯಣ ಬಲ್ಲಾಳ, ಚಡಗ, ಹಾ. ಮಾ. ನಾಯಕ, ಪಿ. ವಿ. ನಂಜರಾಜ ಅರಸು, ವಿಶುಕುಮಾರ್, ಉಷಾದೇವಿ, ಮುಂತಾದ ಅನೇಕ ಹೊಸಪೀಳಿಗೆಯ ನವೋನವ ಕಥಾಲೇಖಕರು—ಕನ್ನಡ ಸಣ್ಣಕಥೆಯ ಇತಿಹಾಸದ ಮುಂದಿನ ಅಧ್ಯಾಯಗಳನ್ನು ಬರೆಯುವವರು—ಈ ಸಂಕಲನದಲ್ಲಿ ಪ್ರಾತಿನಿಧ್ಯ ಪಡೆದಿರುವುದು ಸಂತೋಷದ ವಿಷಯ.

ಈ ವರೆಗಿನ ಸಮೀಕ್ಷೆಯಿಂದ, ನಾಲ್ಕೈದು ದಶಕಗಳ ಹಿಂದೆ ಪ್ರಾರಂಭವಾದ ಸಣ್ಣಕಥೆಯ ಪರಂಪರೆ ಜೀವನದಿಯಂತೆ ನಿರಂತರವಾಗಿ ಹರಿದುಬರುತ್ತಿದೆ, ವಿಶೇಷವಾಗಿ ಈಚಿನ ಎರಡು ಮೂರು ದಶಕಗಳಲ್ಲಿ ಅದರ ಪಾತ್ರ ದಿನ ದಿನಕ್ಕೆ ಆಳ–ಅಗಲಗಳನ್ನು ಹೊಂದಿ ಗತಿವಿಲಾಸ ವೈವಿಧ್ಯದಿಂದ ಶೋಭಿಸುತ್ತಿದೆ, ಜನಪ್ರಿಯತೆಯ ದೃಷ್ಟಿಯಿಂದ ಲಾಗಲಿ ಪ್ರಮಾಣ ದೃಷ್ಟಿಯಿಂದಲಾಗಲಿ ಗುಣಸಾಂದ್ರತೆಯ ದೃಷ್ಟಿಯಿಂದಲಾಗಲಿ ಸಾಹಿತ್ಯದ ಇತರ ಯಾವುದೇ ಪ್ರಕಾರದೊಂದಿಗೆ ಹೋಲಿಸಿದಾಗ ಸರಿಸಮವಾಗಿ ನಿಲ್ಲುವ ಸತ್ತ್ವವನ್ನು ಹೊಂದಿದೆ—ಎಂಬ ಒಂದು ಸ್ಥೂಲಕಲ್ಪನೆ ಓದುಗರ ಮನಸ್ಸಿನಲ್ಲಿ ಮೂಡಿದರೆ, ಈ ಲೇಖನದ ಉದ್ದೇಶ ನೆರವೇರಿದಂತೆ.

ಸಣ್ಣಕಥೆಯನ್ನು ಕುರಿತ ಕೆಲವು ಲೇಖನಗಳು

೧. ಅ. ನ. ಕೃಷ್ಣರಾವ್: ಸಣ್ಣಕಥೆಯನ್ನು ಕುರಿತು ಮುನ್ನುಡಿ ಬರಹ (' ಕಾಮನಬಿಲ್ಲು ': ೧೯೩೩).

೨. ಎಸ್. ವಿ. ರಂಗಣ್ಣ: ' ಸಣ್ಣಕಥೆಯ ಸ್ವರೂಪ ' (ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ: ೧೯೩೬).

೩. ಕೆ. ಗೋಪಾಲಕೃಷ್ಣರಾವ್: ' ಸಣ್ಣಕಥೆ ' (' ಸಂಭಾವನೆ ': ೧೯೪೧).

೪. ಗೊರೂರು ರಾಮಸ್ವಾಮಿ ಅಯ್ಯಂಗಾರ್ (' ಪ್ರಬುದ್ಧ ಕರ್ಣಾಟಕ '-ಬೆಳ್ಳಿಯ ಸಂಚಿಕೆ: ೧೯೪೫).

೫. ಎಂ. ವಿ. ಸೀತಾರಾಮಯ್ಯ:

(i) ' ೧೯೪೭ರ ಸಣ್ಣ ಕಥೆಗಳು ' (' ವಾಹಿನಿ ' ವಿಶೇಷ ಸಂಚಿಕೆ: ೧೯೪೭).

(ii) ' ಸಣ್ಣಕಥೆಗಳ ಸುರಚಾಪ ' (' ನವರತ್ನ ').

೬. ಡಾ. ರಂ. ಶ್ರೀ. ಮುಗಳಿ: ' ಕನ್ನಡ ಸಾಹಿತ್ಯದ ಇತಿಹಾಸ 'ದಲ್ಲಿ ಸಣ್ಣಕಥೆಯನ್ನು ಕುರಿತ ಪ್ರಕರಣ.

೭. ಕೆ. ನರಸಿಂಹಮೂರ್ತಿ: ' ಅತ್ಯುತ್ತಮ ಸಣ್ಣಕತೆಗಳು ' ಸಂಕಲನದ ಮುನ್ನುಡಿ (೧೯೫೮)

೮. ಕೆ. ಡಿ. ಕುರ್ತಕೋಟಿ: (i) ' ನಡೆದು ಬಂದ ದಾರಿ 'ಯಲ್ಲಿನ ಸಣ್ಣಕತೆಯನ್ನು ಕುರಿತ ' ಇತಿಹಾಸ ಪ್ರಬಂಧ ' (೧೯೬೦).

(ii) ' ಹೊಸಕ್ಷಿತಿಜ ' ಸಂಕಲನಕ್ಕೆ (೧೯೬೫) ಬರೆದ ' ಹಿನ್ನುಡಿ '.

೯. ಎಲ್. ಎಸ್. ಶೇಷಗಿರಿರಾವ್: 'ಕನ್ನಡ ಸಣ್ಣಕಥೆಗಳು' (ದೆಹಲಿ ಸಾಹಿತ್ಯ ಅಕಡೆಮಿಯ ಪ್ರಕಟಣೆ: (೧೯೬೨) ಪ್ರಸ್ತಾವನೆ.

೧೦. ಯು. ಆರ್. ಅನಂತಮೂರ್ತಿ: ' ೧೫ ವರ್ಷಗಳ ನವ್ಯ ಗದ್ಯಸಾಹಿತ್ಯ ' (' ಕರ್ಮವೀರ' ದೀಪಾವಳಿ ಸಂಚಿಕೆ: ೧೯೬೭).

೧೧. ಶಾಂತಿನಾಥ ದೇಸಾಯಿ: ' ಕನ್ನಡ ಸಣ್ಣಕತೆಗಳಲ್ಲಿ ನವ್ಯತೆ ' (' ಪ್ರಜಾವಾಣಿ ' ದೀಪಾವಳಿ ಸಂಚಿಕೆ: ೧೯೬೭).

೧೨. ಡಾ. ಹಾ. ಮಾ. ನಾಯಕ: ' ಕಳೆದ ದಶಕದ ಕನ್ನಡ ಸಾಹಿತ್ಯ 'ದಲ್ಲಿ ಸಣ್ಣಕಥೆಯನ್ನು ಕುರಿತ ಭಾಗ (' ಮೈಸೂರು ರಾಜ್ಯ ', ೧೯೫೬-೧೯೬೬).

೧೩. ಗಿರಡ್ಡಿ ಗೋವಿಂದರಾಜ: ಸಣ್ಣಕತೆಯ ಹೊಸ ಒಲವುಗಳು (೧೯೬೫).

ನಾನಿದನೇ ಹಾಡುವೆ ಹಾಡು :
‘ ನನ್ನದು ಈ ಕನ್ನಡನಾಡು ’

ಕನ್ನಡ ನಾಡಿನ ಹಾಡನು ಬರೆಯುವುದಕೆ ಸಾಲದು ಮುಗಿಲು
ಶ್ರೀವ್ಯಾಸ ಶುಕಾದಿ ಕವಿಗಳು ಬೇಸರಿಯುವರಿದನು ಬರೆಯಲು ;
ಹಾಡುವುದಕೆ ಹದನಾದವರು ಆ ನಾರದ ತುಂಬರರುಗಳು
ಈ ನಾಡಿನ ಹಾಡೆಮಗಿಂದು
ಒಳುದಾರಿಯ ತೋರುವುದೆಂದು
ಬಲುಬೆಳಕನು ಬೀರುವುದೆಂದು
ಹಾಡುವೆ ಸಂತತವೀ ಹಾಡು : ‘ ನನ್ನದು ಈ ಕನ್ನಡನಾಡು ’

—ಆನಂದಕಂದ

ಎಲ್. ಎಸ್. ಶೇಷಗಿರಿರಾವ್

ನಾಟಕಗಳು

೧೯೨೫ರ ಹೊತ್ತಿಗೆ 'ಶ್ರೀ'ಯವರ "ಗದಾಯುದ್ಧ ನಾಟಕ" ಮತ್ತು ಕೈಲಾಸಂ ಅವರ "ಟೊಳ್ಳುಗಟ್ಟಿ" ಪ್ರಕಟವಾಗಿದ್ದುವೆಂಬುದನ್ನು ಸ್ಮರಿಸಿಕೊಂಡಾಗ, ಆಗಲೇ ಪ್ರಕಟವಾಗಿದ್ದ ಭಾಷಾಂತರಗಳ ಸಂಖ್ಯೆಯನ್ನೂ ಬಸಪ್ಪಶಾಸ್ತ್ರಿಗಳು, ಡಿ.ವಿ.ಜಿ., ಎಸ್. ಜಿ. ಶಾಸ್ತ್ರಿಗಳು ಮೊದಲಾದವರ ಭಾಷಾಂತರಗಳ ಸೊಗಸನ್ನು ಗಮನಿಸಿದಾಗ, ಕನ್ನಡ ನಾಟಕ ತನ್ನ ಭರವಸೆಯನ್ನು ಯಥಾರ್ಥಗೊಳಿಸಲಿಲ್ಲ ಎನ್ನಿಸುತ್ತದೆ. ಇದೇ ಅವಧಿಯಲ್ಲಿ ಕಾವ್ಯ, ಕಾದಂಬರಿ ಮತ್ತು ಸಣ್ಣಕಥೆಗಳು ಸಾಧಿಸಿರುವುದನ್ನು ನಾಟಕದ ಸಾಧನೆಯೊಂದಿಗೆ ಹೋಲಿಸಿದರೆ, ಈ ಒಂದು ಕ್ಷೇತ್ರ ತಕ್ಕಷ್ಟು ಶ್ರೀಮಂತವಾಗಲಿಲ್ಲ ಎನ್ನಿಸುತ್ತದೆ. ೧೯೪೨ರ ಹೊತ್ತಿಗೆ ಇನ್ನೂ ಪ್ರಾರಂಭದ ಭರವಸೆ ಮಾಯವಾಗಿರಲಿಲ್ಲ. ಆದರೆ ಕಳೆದ ಇಪ್ಪತ್ತೈದು ವರ್ಷಗಳಲ್ಲಿ ಕೆಲವು ಶ್ರೇಷ್ಠ ಕೃತಿಗಳು ಸೃಷ್ಟಿಯಾಗಿದ್ದರೂ ಕನ್ನಡಾಭಿಮಾನಿ ಹೆಮ್ಮೆಪಡುವುದಿರಲಿ, ಸಮಾಧಾನ ತಳೆಯುವಷ್ಟೂ ಸಾಧನೆಯಾಗಿಲ್ಲ.

೧೯೪೨ರ ಹೊತ್ತಿಗೆ ಕನ್ನಡನಾಟಕದ ಕ್ಷೇತ್ರದಲ್ಲಿ ಭಾಷಾಂತರ, ಅನುಕರಣೆಗಳ ಕಾಲಮುಗಿದು, ಅವನ್ನು ಜನ ಮರೆಯುವಂತೆ ಸ್ವತಂತ್ರಕೃತಿಗಳು ಸೃಷ್ಟಿಯಾಗಿದ್ದುವು. ಕೈಲಾಸಂ ಅವರ ಕೃತಿರಚನೆಯ ಕಾಲ ಮುಗಿಯುತ್ತ ಬಂದಿತ್ತು (೧೯೪೨ರಲ್ಲಿ ಅದು ಇನ್ನೂ ಗೋಚರವಾಗದಿದ್ದರೂ). ಅವರ ರೀತಿ ಎನ್ನುವುದರ ಲಕ್ಷಣಗಳು ಸ್ಪಷ್ಟವಾಗಿದ್ದುವು. ಗೋವಿಂದ ಪೈ, 'ಶ್ರೀ', ಸಂಸ ಮೊದಲಾದವರ ನಾಟಕಗಳು ಪ್ರಕಟವಾಗಿದ್ದುವು. ಆಗಲೆ ನಾಟಕರಚನೆ ಮಾಡಿದ್ದವರಲ್ಲಿ ಶ್ರೀರಂಗ, ಶಿವರಾಮ ಕಾರಂತ್, ಬೇಂದ್ರೆ, ಶ್ರೀನಿವಾಸ, ಬಿ. ಪುಟ್ಟಸ್ವಾಮಯ್ಯ, ಕುವೆಂಪು ಇವರೆಲ್ಲ ಇನ್ನೂ ನಮ್ಮೊಡನಿರುವುದು ನಮ್ಮ ಭಾಗ್ಯ.

ಸಂಸ್ಕೃತ ಕೃತಿಗಳ ಭಾಷಾಂತರ, ಅನಂತರ ಇಂಗ್ಲಿಷ್ ಕೃತಿಗಳ ಭಾಷಾಂತರ ಇವುಗಳಿಂದ ಪ್ರಾರಂಭವಾಯಿತು ಕನ್ನಡನಾಟಕ ಸಾಹಿತ್ಯ. ಗ್ರೀಕ್ ರುದ್ರನಾಟಕಗಳ ಮಾದರಿಯನ್ನನುಸರಿಸಿದ "ಅಶ್ವತ್ಥಾಮನ್" ಸ್ವತಂತ್ರಕೃತಿಗಳ ಮೊದಲ ಪಂಕ್ತಿಗೆ ಸೇರಿದುದು—ಎಲ್ಲ ರೀತಿಗಳಲ್ಲಿ. ಇತರ ಭಾಷೆಗಳಿಂದ ಭಾಷಾಂತರಗಳು, ಇತರ ಭಾಷೆ

ಗಳ ಕೃತಿಗಳ ಆಧಾರದಮೇಲೆ ರಚಿತವಾದ ನಾಟಕಗಳು ಕನ್ನಡ ಸಾಹಿತ್ಯವನ್ನು ಇಂದಿಗೂ ಶ್ರೀಮಂತಗೊಳಿಸುತ್ತಿವೆ. ಷೇಕ್ಸ್‌ಪಿಯರ್‌ನ 'ಹ್ಯಾಮ್‌ಲೆಟ್', 'ಲಿಯರ್' ಮೊದಲಾದ ಗಂಭೀರಕೃತಿಗಳೊಂದಿಗೆ 'ಶ್ರೀನಿವಾಸ'ರು ವಿನೋದ ದೃಶ್ಯಗಳನ್ನೂ ಕನ್ನಡಕ್ಕೆ ಭಾಷಾಂತರಿಸಿ, ಫಾಲ್ಸ್‌ಟಾಫ್‌ನನ್ನು ಕನ್ನಡ ಓದುಗರಿಗೆ ಪರಿಚಯಮಾಡಿಕೊಟ್ಟಿರುವುದು ಗಮನಾರ್ಹ. ಗೋಪಾಲಕೃಷ್ಣ ಅಡಿಗರು ಮತ್ತು ಶ್ರೀರಂಗರು ಇಬ್ಸನ್‌ನ ನಾಟಕಗಳನ್ನು ಭಾಷಾಂತರಿಸಿದ್ದಾರೆ; ಈ ಭಾಷಾಂತರಗಳಲ್ಲಿ ಪದಗಳನ್ನು ಅರ್ಥವತ್ತಾಗಿ ಬಳಸುವ ಸಾಹಿತಿಯ ನಿಷ್ಠೆ ಕಾಣುತ್ತದೆ. 'ಸುಜನಾ' ಅವರ 'ಏಜಾಕ್ಸ್' ಈ ಶ್ರದ್ಧೆಯನ್ನು ಇನ್ನೂ ದೂರಕ್ಕೆ ಕೊಂಡೊಯ್ದಿದೆ. ಮೂಲದ ಭಾಷೆಯ ಪರಿಚಯವಿಲ್ಲದಿರುವುದರಿಂದ ಮೂರು–ನಾಲ್ಕು ಭಾಷಾಂತರಗಳನ್ನು ಹೋಲಿಸಿ ಪದ ಪದವನ್ನೂ ಎಚ್ಚರಿಕೆಯಿಂದ ಆರಿಸುವ ಶ್ರದ್ಧೆ ಇಲ್ಲಿ ಕಾಣುತ್ತದೆ. ಮೋಲಿಯೆರ್, ಗೋಲ್ಡ್‌ಸ್ಮಿತ್, ಷೆರಿಡನ್ ಹಾಪ್ಟ್‌ಮನ್, ಚೆಕೊವ್, ಎಲ್ಲರ ಕೃತಿಗಳು ರೂಪಾಂತರಗೊಂಡು ಕನ್ನಡದಲ್ಲಿ ಅವತರಿಸಿವೆ. ಆದರೆ ಜರ್ಮನಿ, ಜಪಾನ್ ಮೊದಲಾದ ಹಲವು ದೇಶಗಳ ಕೃತಿಗಳತ್ತ ನಮ್ಮ ನಾಟಕಕಾರರ ಕಣ್ಣು ಹರಿಯದಿರುವುದು ವಿಷಾದದ ಸಂಗತಿ.

ಈ ಅವಧಿಯಲ್ಲಿ ಬಹುಮಟ್ಟಿಗೆ ರಾರಾಜಿಸಿರುವುದು ಸಾಮಾಜಿಕ ನಾಟಕ. ಇಂದು 'ಸಾಮಾಜಿಕ' ಎಂಬ ವಿಶೇಷಣವನ್ನು ಪೌರಾಣಿಕ, ಐತಿಹಾಸಿಕ ಅಲ್ಲದಿರುವ ಎಲ್ಲ ಕೃತಿಗಳಿಗೆ ಬಳಸಲಾಗುತ್ತಿದೆ. 'miscellaneous' ಎನ್ನುವ ಇಂಗ್ಲಿಷ್ ಪದಕ್ಕೆ ಸಮಾನವಾಗಿ! ಈ ಸಾಮಾಜಿಕ ನಾಟಕಗಳು ಸುಲಭವಾಗಿ ನಗೆಯನ್ನೆಬ್ಬಿಸಿ ತೃಪ್ತಿ ಪಡೆಯುತ್ತವೆ. ಈ ದುರವಸ್ಥೆಗೆ ಸ್ವಲ್ಪಮಟ್ಟಿಗೆ ಕೈಲಾಸಂ ಅವರನ್ನು ಅನುಕರಿಸುವ ಪ್ರಯತ್ನವೂ ಕಾರಣ. ಕೈಲಾಸಂ 'ಬಂಡ್ವಾಳ್ವಿಲ್ಲದ ಬಡಾಯಿ'ಯಂತಹ ವಿಡಂಬನೆಯಲ್ಲಿಯೂ, ಪ್ರಾತಿನಿಧಿಕ ಪಾತ್ರಗಳನ್ನೆ ಸೃಷ್ಟಿಸಿದರೂ, ಪಾತ್ರಗಳಿಗೆ ಜೀವಕಳೆ ನೀಡಬಲ್ಲರು. ಗೊಂಬೆಗಳೂ ಕೆಲವು ಕ್ಷಣಕಾಲ ಮನುಷ್ಯರೆಂದು ತೋರುವಂತೆ ಮಾಡಬಲ್ಲರು. ಅವರ ನಾಟಕಗಳಲ್ಲಿ ಬೌದ್ಧಿಕ ಅಂಶ ಕಡಿಮೆ. ಪ್ರಥಮವಾಗಿ ವಿಡಂಬನಕಾರರಾಗಿದ್ದರೂ ಅವರಲ್ಲಿ ಆಳವಾದ ವಿಚಾರದ ಅಭಾವ ಕಾಣುತ್ತದೆ. ಇದನ್ನು 'ಟೊಳ್ಳು–ಗಟ್ಟಿ'ಯಲ್ಲಿ ಕಿಟ್ಟು–ಪುಟ್ಟು ಇವರ ಪಾತ್ರಗಳ ನಿರೂಪಣೆಯ ಅತಿರೇಕ, ನಾವು ಆರಿಸಿಕೊಂಡ ಅವಧಿಯಲ್ಲಿ ಪ್ರಕಟವಾದ, 'ಸೂಳೆ'ಯಲ್ಲಿನ ಸಮಸ್ಯೆಯ ವಿಶ್ಲೇಷಣೆ ಇಂತಹವುಗಳಲ್ಲಿ ಕಾಣಬಹುದು. ಸೂಳೆಯ ಘೋರಸ್ಥಿತಿಗೆ ಸಮಾಜ ಕಾರಣವೆ, ವೈಯಕ್ತಿಕ, ದೌರ್ಬಲ್ಯ ಕಾರಣವೆ ಎಂದು ನಿರ್ಧರಿಸಲಾರರು; ಇದರಿಂದ ಆವಳ ಮಗಳ ಸಾವೂ ಅನಿವಾರ್ಯ ಎನ್ನುವಂತೆ ಮಾಡಲಾರರು. ಲೇಡಿ ಸದಾಶಿವ ಅಯ್ಯರ್ ಭಾಷಣಗಳೂ ಅಸಹಜ. ಆದರೆ ಈ ಎಲ್ಲ ದೋಷಗಳನ್ನು ಮೆಟ್ಟಿ ಅವರು ಯಶಸ್ಸನ್ನು ಸಾಧಿಸಿದರು. ಅವರ ಪ್ರಾಸವ್ಯಾಮೋಹ ('ಸಾಕೋದ್ನರಿತಾತ ಸಾವಿರ ಜನಕ್ತಾತ', 'ಬೀದೀಲೇನಾದ್ರೂ ಬಿದ್ದಿದೇಯೇನೋಂತ ಬಗ್ಗಿ ನೋಡ್ತಾ ಬರ್ತಿದೀ

ಯೇನೊ ಬಕ್ವೇ?') ಇಂಗ್ಲಿಷ್–ಕನ್ನಡಗಳ ಬೆರಕೆ, ಕೆಲವು ಕಷ್ಟವಾದ ಪದಪುಂಜಗಳು ('ನಾಯಿಗ್ನಾಕಿದ್ನಿನ್‌ಜನ್ಮದುಚ್ಚಿಷ್ಟಾನ್ನರೀಗ್ನಾಕಾ') ಮೆಚ್ಚುವ ಅಂಶಗಳಲ್ಲ. ಅವರ 'ಜೋಕು'ಗಳೂ ಇದೇ ಮಾದರಿಯವು. ಅವರ ಮಾತಿನ ಲಹರಿಯ ಅಸಾಧಾರಣ ಓಜಸ್ಸು, ಅವರ ನಗೆಯ ಹಿಂದೆ ಅಡಗಿದ್ದ ಅನುಕಂಪ ಇವನ್ನು ಪಡೆಯದ ಇತರರ ಅನುಕರಣೆ ಬಾಲಿಶ ಹಾಸ್ಯದಲ್ಲಿ ಮುಕ್ತಾಯವಾಗುತ್ತಿದೆ. ಇದರೊಂದಿಗೆ ಪಿತೂರಿಗಳ ಚಮತ್ಕಾರದ ಅಂಶ ಸೇರಿದೆ. ಇದು ಕೈಲಾಸಂ ಅವರ ಕೃತಿಗಳಲ್ಲಿ ಕಾಣುವುದೇ ಇಲ್ಲವೆಂಬುದು ವಿಸ್ಮಯದ ಸಂಗತಿ. ಅವರು ಇದನ್ನು ಸ್ವಲ್ಪಮಟ್ಟಿಗೆ ಬಳಸಿದುದು "ಹುತ್ತದಲ್ಲಿ ಹುತ್ತ"ದಲ್ಲಿ. ಷೆರಿಡನ್, ಮೋಲಿಯೆರ್ ಇವರ ಕೃತಿಗಳ ರೂಪಾಂತರಗಳು ಈ ಚಮತ್ಕಾರದ ಅಂಶವನ್ನು ಕನ್ನಡ ಸಾಮಾಜಿಕ ನಾಟಕಕ್ಕೆ ತಂದಿತ್ತುವು. ಕೈಲಾಸಂ ನಾಟಕಗಳು ನಿಜವಾಗಿಯೂ ಸಾಮಾಜಿಕ ನಾಟಕಗಳು. ಇವರ ನಗುವಿನ ಉಗಮದಲ್ಲಿ ಮೆದುಳು ಹೃದಯಗಳೆರಡರ ಪ್ರಭಾವವಿದೆ. ನಾಟಕವನ್ನು ಸಾಮಾನ್ಯ ಜನರ ಜೀವನಕ್ಕೆ ಹತ್ತಿರ ತಂದವರು. ವಿನೋದದುರಂತಗಳು ಜೀವನದಲ್ಲಿ ಬೆರೆತಂತೆ ನಾಟಕದಲ್ಲಿ ಬೆರೆಯಲು ಸಾಧ್ಯ ಎಂದು ತೋರಿಸಿದವರು, ನಾಗತ್ತೆ, ರಾಮಣ್ಣನ ವಿಧವೆ ತಾಯಿ, ಬೋರ, ಬಡ ಲಾಯರು ಇಂತಹ ಪಾತ್ರಗಳನ್ನು ರಂಗಭೂಮಿಯ ಮೇಲೆ ತಂದವರು, ಕಾಲೇಜಿನ ವಿದ್ಯಾರ್ಥಿಗಳು ಮತ್ತು ಕಲಾವಿಲಾಸಿಗಳು ನಾಟಕವನ್ನು ಅಭಿನಯಿಸಲು ಸಾಧ್ಯವಾಗುವಂತೆ ನಾಟಕದ ಪ್ರದರ್ಶನವನ್ನು ಸರಳಗೊಳಿಸಿದವರು ಕೈಲಾಸಂ; ಇವರು ೧೯೪೬ರಲ್ಲಿ ತೀರಿಕೊಂಡರು.

ಈ ಅವಧಿಯ ಇನ್ನೊಬ್ಬ ಅಸಾಧಾರಣ ವ್ಯಕ್ತಿ ಶ್ರೀರಂಗ. ಇಬ್ಸನ್‌ನ ನಾಟಕಗಳನ್ನು ಭಾಷಾಂತರಿಸಿ, ಕನ್ನಡ ಏಕಾಂಕನಾಟಕಗಳ ಸಂಗ್ರಹ ಒಂದನ್ನು ಸಂಪಾದಿಸಿರುವುದಲ್ಲದೆ, ಶ್ರೀರಂಗ ಈ ಅವಧಿಯಲ್ಲಿ ರಚಿಸಿದ ಕೃತಿಗಳ ಸಂಖ್ಯೆಯನ್ನು ನಿರ್ಧರಿಸುವುದೆ ಕಷ್ಟವಾಗಿದೆ. ಏಕಾಂಕನಾಟಕಗಳನ್ನೂ ದೀರ್ಘ ನಾಟಕಗಳನ್ನೂ ಕೊಟ್ಟಿದ್ದಾರೆ. ಮೊದಲು ನಾವು ಗಮನಿಸಬಹುದಾದುದು ಅವರ ವಸ್ತು (plot) ವಿನ್ಯಾಸದ ರೀತಿ. ಸಾಂಪ್ರದಾಯಿಕ ರೀತಿಯಲ್ಲಿ ಪ್ರಾರಂಭ, ಬೆಳವಣಿಗೆ, ಮುಕ್ತಾಯ ಇವನ್ನು ಕಾಣುವಂತಿಲ್ಲ. 'ನಾಟಕದ ಕಥೆ ಏನು?' ಎಂಬ ಪ್ರಶ್ನೆಗೆ ಉತ್ತರ ಹೇಳುವುದೆ ಸಾಧ್ಯವಿಲ್ಲವಾಗುತ್ತದೆ. ಒಮ್ಮೊಮ್ಮೆ (ಉದಾ.: 'ರಂಗಭಾರತ') 'ಹುಟ್ಟಿದ್ದು ಹೊಲೆಯೂರಿ'ನಂತಹ ನಾಟಕಗಳಲ್ಲಿ ಸ್ವಲ್ಪಮಟ್ಟಿಗೆ 'ಕಥೆ'ಯ ಅಂಶ ಕಾಣಬಹುದು. ನಮ್ಮ ಹಲವು ಸಾಮಾಜಿಕನಾಟಕಗಳ ಉಸಿರಾದ ಚಮತ್ಕಾರದ ಪಿತೂರಿಗಳಿಗೆ ಇಲ್ಲಿ ಅವಕಾಶವೇ ಇಲ್ಲ. ಎರಡನೆಯದಾಗಿ ಅವರ ಪ್ರಯೋಗಪ್ರಿಯತೆ ಕಡಿಮೆಯಾಗಿಲ್ಲ. ಆದರೆ ತಂತ್ರಕ್ಕಾಗಿ ತಂತ್ರ, ಪ್ರಯೋಗಕ್ಕಾಗಿ ಪ್ರಯೋಗ ಇಲ್ಲಿಲ್ಲ. 'ಅಮೃತರಂಗ'ದಲ್ಲಿ ಮೂರು ನಾಟಕಗಳಿವೆ: 'ಸಿರಿಪುರಂದರ', 'ಸಂಜೀವಿನೀ', 'ಸಾವಿತ್ರೀ'. ಮೂರರಲ್ಲಿಯೂ ಸೂತ್ರಧಾರನುಂಟು. 'ಸಂಜೀವಿನೀ', 'ಸಾವಿತ್ರೀ'ಗಳ ಪಾತ್ರಗಳಲ್ಲದೆ ನಟನಟಿಯರುಂಟು. ಇವರ ಪಾತ್ರವನ್ನು ವಿ.ಸೀ. ಹೀಗೆ ಸಂಗ್ರಹಿಸಿದ್ದಾರೆ: "ಪಾತ್ರಗಳ

ಗತಿ ಪರಿಣಾಮಗಳಲ್ಲಿ ಕೈಹಾಕುವುದೊಂದನ್ನು ಬಿಟ್ಟು, ಅವರಿಗೆ ತಮ್ಮ ಸಾಕ್ಷಿಗಳನ್ನು ತಿಳಿಸಿ ಅವರನ್ನೇ ನೇರವಾಗಿ ಮಾತನಾಡಿಸುವುದನ್ನು ಬಿಟ್ಟು, ಉಳಿದುದೆಲ್ಲವನ್ನೂ ಮಾಡುತ್ತವೆ: ಸಾಮಾನ್ಯ ಸ್ಥಾಪಕ-ಪಾರಿ ಪಾರ್ಶ್ವಕರ ಕೆಲಸ; ಸೂತ್ರಧಾರ-ನಟಿಯರ ಕಾರ್ಯ; ರಂಗನಿರ್ದೇಶನ, ದೃಶ್ಯಗಳ ಪೂರ್ವಸಿದ್ಧತೆ; ಪ್ರವೇಶಕ-ವಿಷ್ಕಂಭಕಾದಿಗಳ ಕೆಲಸ; ಬಯಲುನಾಟಕಗಳ ಹನುಮನಾಯಕನಂಥವರ ಕೆಲಸ; ವ್ಯಾಖ್ಯಾನ, ಟೀಕೆ, ಬೆಲೆಗಾಣ್ಕೆ; ಗ್ರೀಕ್ ನಾಟಕಗಳಲ್ಲಿನ ಮೇಳದವರ ಒಂದೆರಡು ಕೆಲಸ; ಪ್ರೇಕ್ಷಕರ ಪ್ರತಿನಿಧಿಯಾಗಿ ಮತ್ತು ಪ್ರೇಕ್ಷಕರನ್ನು ಸಂಬೋಧಿಸಿ ನುಡಿಯುವ ಕೆಲಸ; ಈಚೆಗೆ ಒಂದು ಇಂಗ್ಲಿಷ್ ಕಂಪೆನಿಯವರು 'Mirror of the time' ಎಂಬ ಪ್ರಯೋಗದಲ್ಲಿ ಬ್ರಿಟಿಷ್ ನಾಟಕದ ಚರಿತ್ರೆಯನ್ನು ರೂಪಿಸುತ್ತ ಮುಂದಿನ ಪ್ರಕರಣಗಳಿಗೆ ರಂಗಪರಿಕರಗಳನ್ನು ಸಿದ್ಧಪಡಿಸುವ ರೀತಿಯನ್ನು ಕೂಡ ಶ್ರೀರಂಗರು ಇಲ್ಲಿ ತಂದುಕೊಳ್ಳುತ್ತಾರೆ"[1] 'ಕೇಳು ಜನಮೇಜಯ'ದಲ್ಲಿ "ಭಾರತದ ಯಾವ ಭಾಷೆಯಲ್ಲಿಯೂ ಕಂಡು ಬಾರದ ತಂತ್ರ"ವಿದೆ ಎಂದು ಶ್ರೀರಂಗರೇ ನುಡಿದಿದ್ದಾರೆ. ಮುಂದಾಳು, ಅನುಭವಿಕ, ಯುವಕ ಯುವತಿ, ಸಾಮಾನ್ಯಪ್ಪ ಇವರ ಜೀವನದ ಗತಿಯನ್ನು ಚಿತ್ರಿಸುವ ಕೃತಿಯುದ್ದಕ್ಕೂ ಸೂತ್ರಧಾರನಿದ್ದಾನೆ, 'ಅಂತರಂಗ', 'ಬಹಿರಂಗ', 'ರಣರಂಗ'ಗಳ ಮೂರು ಅಂಕಗಳಲ್ಲಿ ಈ ಗತಿಯನ್ನು ನಿರ್ದೇಶಿಸುವುದಲ್ಲದೆ ವಿಚಾರಶಕ್ತಿಯನ್ನು ಕೆಣಕುತ್ತಾನೆ. 'ದಾರಿ ಯಾವುದಯ್ಯಾ ವೈಕುಂಠಕೆ?' ನಾಟಕದಲ್ಲಿ ನಾಟಕಕಾರ ಮತ್ತು ವಿಮರ್ಶಕರೂ ಪಾತ್ರಗಳು. ತಂತ್ರ ನಾಟಕದ ಜೀವಾಳವಾಗಿರುವುದನ್ನು 'ಕತ್ತಲೆ-ಬೆಳಕಿ'ನಲ್ಲಿ ಕಾಣಬಹುದು. ನಾಟಕವನ್ನೂ ಹಣದ ಗಳಿಕೆಗೆ ವ್ಯಾಪಾರಮಾಡಿಕೊಂಡ ಇಬ್ಬರು ನಾಟಕಕಾರನಿಗೆ ಉಪದೇಶಮಾಡುತ್ತಿದ್ದಾರೆ. 'ಯಶಸ್ವಿ' ನಾಟಕವನ್ನು ರಚನೆಮಾಡಲು ಎಂತಹ ಕಥೆಯನ್ನಾರಿಸಬೇಕು, ಎಂತಹ ದೃಶ್ಯವನ್ನಳವಡಿಸಬೇಕು ಎಂದು; ಅವರು ಮಾತನಾಡುತ್ತಿದ್ದಂತೆ ಅವರ ಸುತ್ತುಮುತ್ತ ಜೀವನದ ರೌದ್ರ ಹಾಸ್ಯಗಳು ಚೆಲ್ಲಾಟವಾಡುತ್ತಿವೆ. ಎಷ್ಟೋ ಜೀವಗಳ ಎಳೆಗಳು ಸಿಕ್ಕಾಗುತ್ತಿವೆ, ಅದರತ್ತ ಅವರ ಗಮನವೇ ಇಲ್ಲ. ಇಲ್ಲಿ ಪೋಲೀಸ್ ಕಾನ್ಸ್‌ಟೇಬಲ್-ನಾಗರಿಕನ ಸಂಭಾಷಣೆಯ ಹಾಸ್ಯ ಗಂಭೀರ ವಾತಾವರಣದಲ್ಲಿ ಅಸಾಧಾರಣ ಪರಿಣಾಮವನ್ನುಂಟುಮಾಡಬಲ್ಲದು. ಮೂರನೆಯದಾಗಿ, ಶ್ರೀರಂಗರ ದೃಷ್ಟಿ ವ್ಯಾಪಕವಾಗುತ್ತಿದೆ. ಸಮಾಜದಲ್ಲಿನ ದೋಷಗಳಿಗೆ ಅಗ್ನಿಚಿಕಿತ್ಸೆ ಮಾಡಿ ಕೂಡಲೆ ಪರಿಣಾಮವನ್ನು ಸಾಧಿಸಿಬಿಡುವ ಆತುರ, ಭರವಸೆ ಎರಡೂ ಕಡಮೆಯಾಗುತ್ತಿವೆ. 'ಕತ್ತಲೆ-ಬೆಳಕು', 'ದಾರಿಯಾವುದಯ್ಯಾ ವೈಕುಂಠಕೆ?' ಎರಡರಲ್ಲಿಯೂ ಇದನ್ನು ಕಾಣಬಹುದು. ದೃಷ್ಟಿಯ ವೈಶಾಲ್ಯದೊಂದಿಗೆ ವಿಷಾದದ ಛಾಯೆ ಮುಸುಕುತ್ತದೆ-ನಾಟಕಕಾರರಿಗೆ ಮನುಷ್ಯ ತನ್ನ ವಿವೇಚನಾಶಕ್ತಿಯನ್ನು ಬಳಸಿಕೊಂಡು ಎಂದಾದರೂ ಉದ್ಧಾರವಾದಾನು ಎನ್ನುವ ಭರವಸೆ ಕುಂದುತ್ತಿರುವುದೋ ಎಂಬಂತೆ.

1 "ಒಡನುಡಿ" –ವಿ. ಸೀ.

ನಾಲ್ಕನೆಯದಾಗಿ, ಭಾಷೆಯ ಸತ್ವ ಶಕ್ತಿಗಳನ್ನು ಅರ್ಥಮಾಡಿಕೊಂಡು ಬಳಸಿಕೊಳ್ಳ ಬಲ್ಲರು ಶ್ರೀರಂಗರು. ಮಾತೇ ಕ್ರಿಯೆಯಾಗಿ ರೂಪತಾಳುವುದನ್ನು 'ಕೇಳು ಜನಮೇಜಯ 'ದಂತಹ ನಾಟಕಗಳಲ್ಲಿ ಕಾಣುತ್ತೇವೆ. ಒಂದು ಪಾತ್ರದ ಮಾತು, ಅದಕ್ಕೆ ಇನ್ನೊಂದರ ಉತ್ತರ, ಅದಕ್ಕೆ ಪ್ರತ್ಯುತ್ತರ ಇವುಗಳಿಂದ ಎರಡು ಪಾತ್ರಗಳ ಮನಸ್ಸು ಅತ್ತ ಹೊರಳಿ ಇತ್ತ ಉರುಳಿ ಹೊಸದೊಂದು ದಾರಿಯಲ್ಲಿ ನಡೆದು ಮತ್ತೆ ಹಿನ್ನೋಟ ಬೀರಿ ಇತ್ತ ಹುಡುಕಿ ಅತ್ತ ಕಣ್ಣಾಡಿಸಿ ಮುಂದೆ ಸಾಗುವುದನ್ನು ಹೊಸ ಅರಿವನ್ನು ತಂದುಕೊಳ್ಳುವುದನ್ನು ಕಾಣುತ್ತೇವೆ.

ಶ್ರೀರಂಗರ ನಾಟಕಗಳಲ್ಲಿ ಬೌದ್ಧಿಕಶಕ್ತಿ ಮುಂದಕ್ಕೆ ಸಾಗುತ್ತದೆ, ಭಾವನೆಗಳು (emotions) ಅತೃಪ್ತವಾಗಿ ಉಳಿಯುತ್ತವೆ ಎಂಬ ಮಾತು ಮತ್ತೆ ಮತ್ತೆ ಕೇಳಿ ಬಂದಿದೆ. 'ಶೋಕಚಕ್ರ'ದಂತಹ ನಾಟಕ ಈ ಆಕ್ಷೇಪಣೆಗೆ-ಅಪವಾದ; ಜಯರಾಯ, ರಂಗಮ್ಮ ಇವರು ನಮ್ಮ ಅಂತಃಕರಣವನ್ನು ಸೆಳೆದುಕೊಳ್ಳದಿರರು. ಅಲ್ಲದೆ ಶ್ರೀರಂಗರ ರೋಷದ ಬೆನ್ನಿನಲ್ಲೆ ಅನುಕಂಪ ನಿಂತಿದೆ; ಈ ಅನುಕಂಪವನ್ನು ರೋಷ ಪ್ರತ್ಯಕ್ಷವಾಗಗೊಳಿಸದಿದ್ದರೂ, ತನ್ನ ಬುದ್ಧಿಯನ್ನು ಬಳಸದೆ ಮೂರ್ಖತನದಿಂದ ನರಳುವ ಮನುಷ್ಯನನ್ನು ಕಂಡ ಅನುಕಂಪ 'ರಂಗ ಭಾರತ'ದಲ್ಲಿ ಪ್ರಕಟವಾಗಿದೆ, ಹಲವು ತೀಕ್ಷ್ಣ ವಿಡಂಬನೆಗಳಲ್ಲಿ ಗುಪ್ತಗಾಮಿನಿಯಾಗಿದೆ. ಆದರೂ 'ತೇಲಿಸೊ ಇಲ್ಲ ಮುಳುಗಿಸೊ'ದಂತಹ ನಾಟಕಗಳಲ್ಲಿ ಬುದ್ಧಿಶಕ್ತಿಯೆ ಮುಂದಾಗಿ ರಸಾತ್ಮಕ ಅನುಭವವಿಲ್ಲದ ಅತೃಪ್ತಿ ಮೂಡುವುದೆನ್ನುವುದು ನಿಜ. ಎರಡನೆಯದಾಗಿ, ಸಂಭಾಷಣೆಯಲ್ಲಿ ಮಾತಿಗೆ ಮಾತು ಹೊಡೆದು ಹೊಸ ವಿಚಾರಗಳ ಕಿಡಿ ಏಳುವಾಗ ಕಣ್ಣು ಕೋರೈಸುವುದುಂಟು. ನಾಟಕಮಂದಿರದಲ್ಲಿ ರಂಗಸ್ಥಳದಲ್ಲಿ ಸಾಗಿರುವ ವಿಚಾರನೈಖರಿಯನ್ನು ಹಿಂಬಾಲಿಸುವುದು ಕಷ್ಟವಾಗುತ್ತದೆ. ನಾವೇ ಕೊಠಡಿಯಲ್ಲಿ ಕುಳಿತು ನಮಗೆ ಬೇಕಾದ ವೇಗದಲ್ಲಿ ಓದಿಕೊಂಡು ಭಾಷೆಯ ಸರಿಪಾಟ ಸೆಣಸಾಟಗಳನ್ನು ವಿಶ್ಲೇಷಿಸುತ್ತ ಸಾಗಿದರೆ ಅದರ ಸೊಗಸು ಅರಿವಾದೀತು. ಆದರೆ ನಾಟಕಮಂದಿರದಲ್ಲಿ ಇದಕ್ಕೆ ವ್ಯವಧಾನವಿಲ್ಲ.

೧೯೪೬ರಲ್ಲಿ ಪರ್ವತವಾಣಿಯವರ 'ಉಂಡಾಡಿಗುಂಡ' ಪ್ರಕಟವಾಯಿತು. ಇದಕ್ಕೆ ಮೊದಲೆ ನಾಟಕ ಪ್ರದರ್ಶಿತವಾಗಿತ್ತು. ಗೋಲ್ಡ್‌ಸ್ಮಿತ್‌ನ 'ಷಿ ಸ್ಟೂಪ್ಸ್‌ಟು ಕಾನ್‌ಕರ್'ನ ಆಧಾರದಮೇಲೆ ಸೃಷ್ಟಿಯಾದ ಈ ಕೃತಿ ಕನ್ನಡದ ಜಾಯಮಾನಕ್ಕೆ ಸೊಗಸಾಗಿ ಹೊಂದಿಕೊಂಡು ಸ್ವತಂತ್ರರಚನೆ ಎನ್ನುವಷ್ಟು ಮೂಲಕೃತಿಯನ್ನು ಮರೆಸಿತು. ಈ ನಾಟಕವೇ ಪರ್ವತವಾಣಿಯವರ ವಿಶಿಷ್ಟ ಶಕ್ತಿಗಳನ್ನು ತೋರಿಸಿ ಕೊಟ್ಟಿತು. ಅವರ ರಂಗಸ್ಥಳದ ಪ್ರಜ್ಞೆ ಅಪೂರ್ವವಾದುದು. ರಂಗಭೂಮಿಯಮೇಲೆ ಎಂತಹ ದೃಶ್ಯ ಯಶಸ್ವಿಯಾಗುತ್ತದೆ ಎನ್ನುವುದನ್ನು ತಪ್ಪದೆ ನಿರ್ಧರಿಸಬಲ್ಲರು. ಮುಖ್ಯ ಪಾತ್ರಗಳ "ಪ್ರವೇಶ"ವನ್ನು ಬಹು ಯಶಸ್ವಿಯಾಗಿ ನಿರ್ವಹಿಸಬಲ್ಲರು. ಪಾತ್ರಗಳು ವೈಶಿಷ್ಟ್ಯವನ್ನು ಪಡೆಯದೆ ಪ್ರಾತಿನಿಧಿಕವಾಗಿ ಅಥವಾ ಕ್ರಿಯೆಯ ಆವಶ್ಯಕತೆಯನ್ನು ಪೂರೈಸುವ ಸಾಧನವಾಗಿ ಉಳಿದಾಗಲೂ-ಕೈಲಾಸಂ ಅವರಂತೆ-ಅವಕ್ಕೆ ಮುದ್ದಿನ

ಹೂಬಾಣ ಸುರಿಸುವ ಹೂವಿನಂತಹ ಅಥವಾ ಸಿಡಿಯುವ ಮದ್ದಿನಂತಹ ಪರಿಣಾಮ ವನ್ನುಂಟುಮಾಡುವ ಸಂಭಾಷಣೆಯನ್ನು ಒದಗಿಸಿ ಅವು ಸೂತ್ರದಬೊಂಬೆಗಳು ಎನ್ನುವುದನ್ನು ಮರೆಸಬಲ್ಲರು. ಶ್ರೀರಂಗರ ಸಂಭಾಷಣೆಯ ವೈಚಾರಿಕತೆ ಇಲ್ಲಿ ಇಲ್ಲದಿದ್ದರೂ ಅದಕ್ಕಿಲ್ಲದ ಓಘ ಮತ್ತು ಲವಲವಿಕೆಗಳುಂಟು. ಕೃತಿಯಲ್ಲಿ ಕಥೆಯ ಅಂಶವೂ ಆಸಕ್ತಿಯನ್ನು ಉಳಿಸಿಕೊಂಡು ಬರುತ್ತದೆ. ಹೊರದೇಶಗಳ ಹಲವಾರು ನಾಟಕಗಳ ಸ್ವಾರಸ್ಯ ಕೆಡದಂತೆ ರೂಪಾಂತರಿಸಿದ ಕೀರ್ತಿ ಪರ್ವತವಾಣಿಯವರದು. 'ಹಣಹದ್ದು', 'ಸತ್ಯಮೇವ ಜಯತೆ', 'ಪ್ರತ್ಯಕ್ಷ ಪ್ರಮಾಣ' (ಕ್ರಮವಾಗಿ ಮೋಲಿಯೆರ್‌ನ 'ದಿ ಮೈಸರ್', 'ದಿ ಮಿಸಾಂಥ್ರೋಪ್' ಮತ್ತು 'ಸಿಗ್‌ಕನ್ ರೇಲ್', 'ಗೀತಾನಾಟಕ' (ಷೆರಿಡನ್‌ನ 'ದಿ ಸ್ಕೂಲ್‌ಫರ್ ಸ್ಕ್ಯಾಂಡ್ಲ್'); 'ವಿಶ್ವರಂಗ' (ಗರ್‌ಹಾರ್ಟ್ ಹಾಪ್‌ಟ್‌ಮನ್‌ನ 'ದಿ ರ್‍ಯಾಟ್ಸ್') ಇವು ಇಂತಹ ರೂಪಾಂತರಗಳಲ್ಲಿ ಕೆಲವು. ಪರ್ವತವಾಣಿ ತಮಗೆ ಅಗತ್ಯ ಕಂಡಂತೆ ಮೂಲದ ಕಥೆಯಲ್ಲಿ ಮಾರ್ಪಾಡುಗಳನ್ನು ಮಾಡಿಕೊಳ್ಳುತ್ತಾರೆ ('ದಿ ಸ್ಕೂಲ್ ಫರ್ ಸ್ಕ್ಯಾಂಡ್ಲ್'ನಲ್ಲಿ ನಿಂದೆಯ ಅಂಶವನ್ನೆ ಬಿಟ್ಟಿದ್ದಾರೆ). ಅಷ್ಟೇನೂ ಚೈತನ್ಯವಿಲ್ಲದ 'ಪ್ರತ್ಯಕ್ಷ ಪ್ರಮಾಣ'ದಂತಹ ಕೃತಿಯಲ್ಲಿ ಸಹ ಅವರ ರಂಗಭೂಮಿಯ ಪ್ರಜ್ಞೆ ಮತ್ತು ಸಂಭಾಷಣೆಯ ನಿರ್ವಹಣೆ ಇವನ್ನು ಪ್ರಾರಂಭದಲ್ಲಿಯೆ ಕಾಣಬಹುದು. 'ವಿಶ್ವರಂಗ' ಕನ್ನಡದಲ್ಲಿ ಹೊಸಬಗೆಯ ಕೃತಿ. ಮೂಲಕೃತಿ ಹಲವು ರೀತಿಗಳಲ್ಲಿ ಅತೃಪ್ತಿಕರ. ರಾಜಾಚಾರ್ಯರು, ಅವರ ಪ್ರೇಯಸಿ ಭೇಟಿಮಾಡುವ ಸ್ಥಳ ಒಂದು ಮಳಿಗೆ; ಅಲ್ಲಿ ಒಂದು ಕಡೆ ಹಳೆಯ ಭೀಮನ ಗದೆ, ಮತ್ತೊಂದು ಕಡೆ ತೂಗಿ ಬಿದ್ದಿರುವ ಪಾರ್ಥನ ಗಾಂಡೀವ, ಹಳೆಯದೊಂದು ಸಿಂಹಾಸನ. ರಂಗಸ್ಥಳದ ಪರಿಕರಗಳು ತುಂಬಿಹೋಗಿವೆ. ನಾಟಕದ ಪ್ರಾರಂಭದ ದೃಶ್ಯ ಗಂಭೀರವಾದುದು, ತಾನೇ ಒಂದು ಸಮಸ್ಯೆಯನ್ನು ಎದುರಿಸುತ್ತಿರುವ ಜಾನಕಿ, ತಾನು ಆತ್ಮಹತ್ಯೆಯಿಂದ ಉಳಿಸಿದ–ಅತ್ಯಾಚಾರಕ್ಕೊಳಗಾಗಿ ಗರ್ಭಿಣಿಯಾದ–ಜಮುನಳ ಕಥೆ ಕೇಳುತ್ತಿದ್ದಾಳೆ. ಇದರ ಮುಂದಿನ ದೃಶ್ಯ ದುಷ್ಯಂತನ ಪಾತ್ರ ಮಾಡಿ ಮಾಡಿ ತಾವೇ ದುಷ್ಯಂತನಾಗಿ ಹೋದ ರಾಜಾಚಾರ್ಯರು ತಮ್ಮ 'ಶಕುಂತಳೆ' ಚಂದ್ರಮತಿಯನ್ನು ಭೇಟಿಮಾಡುವ ದೃಶ್ಯ. ನಾಟಕದುದ್ದಕ್ಕೂ ನಾಟಕ ಕರ್ತೃ ಬಲಪ್ರಯೋಗದಿಂದ ಕಥೆಗೆ ತಿರುವುಗಳನ್ನು ಕೊಡುತ್ತಿರುವಂತೆ ಭಾಸ ವಾಗುತ್ತದೆ. ಪರ್ವತವಾಣಿ ಇಂದಿನ ನಾಟಕಕಾರರಲ್ಲಿ ಅಸಮಾನ ಮನರಂಜಕರು—ಈ ಮಾತಿನ ಉತ್ತಮ ಅರ್ಥದಲ್ಲಿ. ಪ್ರೇಕ್ಷಕರ ಆಸಕ್ತಿಯನ್ನು ಉಳಿಸಿಕೊಳ್ಳಲು ಇತರ 'ನಗೆನಾಟಕ'ಗಳ ಕರ್ತೃಗಳು ಪಡುವ ಪ್ರಯಾಸವನ್ನು ಗಮನಿಸಿದಾಗ ಪರ್ವತವಾಣಿಯವರ ಈ ಸಾಧನೆಯೂ ಸಾಮಾನ್ಯವಾದುದಲ್ಲ ಎಂಬುದು ವಿದಿತ ವಾಗುತ್ತದೆ. ಅವರು ಹಾಡುಗಳನ್ನು ಬಳಸಿಕೊಳ್ಳುವ ರೀತಿಯೂ ವಿಶಿಷ್ಟವಾದುದು. ಕೈಲಾಸಂ ಅವರ 'ನಂಕಂಪ್ನಿ' ರಂಗಭೂಮಿಯಿಂದ ಹಾಡುಗಳನ್ನು ಬಹಿಷ್ಕರಿಸಿತ್ತೆಂದೇ ಹೇಳಬಹುದು. ಪರ್ವತವಾಣಿ ಸಂಗೀತವನ್ನು ವಾತಾವರಣದ ಭಾಗವಾಗಿ ಮಾಡಿ

ಬಿಡಬಲ್ಲರು. ಹಲವಾರು ಪ್ರಯೋಗಗಳನ್ನು ಮಾಡಿದ್ದಾರೆ ಪರ್ವತವಾಣಿ. 'ಮಂಗಮಾಯ'ದಲ್ಲಿ ರೇಡಿಯೊನಾಟಕ–ರಂಗನಾಟಕ ಎರಡನ್ನೂ ಕೂಡಿಸುವ ಪ್ರಯತ್ನ ಮಾಡಿದ್ದಾರೆ. 'ಪಿಂಡಕ್ಕಾಗಿ'ಯಲ್ಲಿ ಸೂತ್ರಧಾರ ಪ್ರವೇಶಿಸಿ ಒಂದು ತುಳಸಿಯ ಬೃಂದಾವನವನ್ನು ರಂಗಸ್ಥಳದ ಮಧ್ಯೆ ಇಡುತ್ತಾನೆ, ತೆಗೆಯುತ್ತಾನೆ, ತಾನೇ ಬುಡಬುಡಿಕೆಯವನಾಗುತ್ತಾನೆ. ಜಾಫರ್ ಆಗುತ್ತಾನೆ, ನಾಟಕದಲ್ಲಿ ಕೊಲೆಯಾದ ನಂತರ ಆಚಾರ್ರ ಜೊತೆಗೆ ವಾದಿಸುತ್ತಾನೆ, ನಾಟಕವನ್ನು ಮುಕ್ತಾಯಗೊಳಿಸುತ್ತಾನೆ. ಆದರೆ ಪರ್ವತವಾಣಿ ಶ್ರೀರಂಗರಂತೆ ಸಂಕೀರ್ಣವಾದ ಪ್ರಯೋಗಗಳನ್ನು ಮಾಡಿಲ್ಲ; ತಂತ್ರಕ್ಕೆ ಅಷ್ಟು ಪ್ರಾಧಾನ್ಯನೀಡುವುದೂ ಇಲ್ಲ. ಹಲವು ನಾಟಕಗಳಲ್ಲಿ ಅವರು ಗಂಭೀರ ಸಮಸ್ಯೆಗಳನ್ನು ಆರಿಸಿಕೊಂಡಿದ್ದಾರೆ—'ಹಗ್ಗದ ಕೊನೆ'ಯಲ್ಲಿ ಮರಣದಂಡನೆ ವಿಧಿಸುವುದು ನ್ಯಾಯವೆ ಎನ್ನುವ ಪ್ರಶ್ನೆ, 'ಪಿಂಡಕ್ಕಾಗಿ'ಯಲ್ಲಿ ಬಹುಪತ್ನಿತ್ವವನ್ನು ನಿಷೇಧಿಸುವ ಕಾನೂನು ಪ್ರಾಮಾಣಿಕವಾಗಿ ಧಾರ್ಮಿಕ ನಂಬಿಕೆಗಳನ್ನುಳ್ಳವರಿಗೆ ಸೃಷ್ಟಿಸಬಹುದಾದ ಧರ್ಮ ಸಂದಿಗ್ಧದ ಪ್ರಶ್ನೆ, ಹೀಗೆ ಈ ಪ್ರಯತ್ನಗಳು ಅಷ್ಟೇನೂ ಯಶಸ್ವಿಯಲ್ಲ; ಸಮಸ್ಯೆಯ ಹಲವು ಮುಖಗಳು ಇಲ್ಲಿ ಪ್ರತಿಬಿಂಬಿತವಾಗುವುದಿಲ್ಲ. ಸಮಸ್ಯೆ ತರ್ಕದ ಕ್ಷೇತ್ರದಲ್ಲಿಯೆ ನಿಂತಿತೆಂದು ಭಾವನೆ ಬರುತ್ತದೆ. ಪರ್ವತವಾಣಿಯವರ ವ್ಯಕ್ತಿತ್ವದ ಅಸಾಧಾರಣ ಓಜಸ್ಸು ಮನಸ್ಸಿನ ಲವಲವಿಕೆ ಅವರ ಕೃತಿಗಳನ್ನು ಜೀವಂತವಾಗಿಡುತ್ತವೆ.

ಹಿಂದೆ ಸೊಗಸಾದ ಸಾಮಾಜಿಕ ನಾಟಕಗಳನ್ನು ರಚಿಸಿದ ಹಲವರು ಈ ಕ್ಷೇತ್ರದಲ್ಲಿ ಮುಂದುವರೆಯಲಿಲ್ಲ. 'ನಗೆಯ ಹೊಗೆ' 'ಉದ್ಧಾರ' ಮತ್ತು 'ಹೊಸ ಸಂಸಾರ'ಗಳನ್ನು ನೀಡಿದ ಬೇಂದ್ರೆಯವರು ನಮ್ಮ ಅತಿ ಶ್ರೇಷ್ಠ ನಾಟಕಕಾರರಲ್ಲಿ ಒಬ್ಬರಾಗಬಹುದಾಗಿತ್ತು. ಸಮಸ್ಯೆಯೇ ಸನ್ನಿವೇಶ ವಾತಾವರಣಗಳಾಗಿ ಮೈತಾಳುವಂತೆ ನಾಟಕವನ್ನು ರಚಿಸುವ ಕಲೆ ಅವರಿಗೆ ಸಾಧಿಸಿದೆ; ಯಾವುದೊಂದು ಪಾತ್ರ ಅಥವಾ ನಿಲುವಿಗೆ ಮುಡಿಪಾಗದ ನಾಟಕಕಾರರು ಹಲವೆಡೆ ದೃಷ್ಟಿಯನ್ನು ಹರಿಸಬಲ್ಲರು. ಆಳವಾದ ಅರ್ಥವನ್ನು ಧ್ವನಿಸಬಲ್ಲರು. ಕಥೆಯ ತೊಡಕುಗಳು ಚಮತ್ಕಾರದ ವ್ಯಾಯಾಮವಾಗದೆ ಕಣ್ಣೆದುರಿಗೆ ನೇಯುತ್ತಿರುವ ಬಟ್ಟೆಯ ಎಳೆಗಳಂತೆ ಹೊಸ ಹೊಸ ಮಾದರಿ (Patterns)ಗಳನ್ನು ನಿರ್ಮಿಸುತ್ತ ಹೋಗುತ್ತವೆ. "ಗರ್ಭಗುಡಿ'ಯಲ್ಲಿಯೂ ಹಲವಾರು ಏಕಾಂಕ ನಾಟಕಗಳಲ್ಲಿಯೂ ಮಿಂಚಿದ ಕತ್ತಿಯಲುಗಿನ ವಿಚಾರಶಕ್ತಿಯನ್ನು ಶಿವರಾಮ ಕಾರಂತರು, ಕಾದಂಬರಿಗಳು ಮತ್ತು ವಿಚಾರ ಸಾಹಿತ್ಯದತ್ತ ಹರಿಸಿದ್ದಾರೆ. 'ಎತ್ತಿದ ಕೈ'ಯ ರಂ. ಶ್ರೀ. ಮುಗಳಿಯವರು ವಿಮರ್ಶಾಕ್ಷೇತ್ರದ ವ್ಯವಸಾಯದಲ್ಲಿ ತೊಡಗಿದ್ದಾರೆ. ಅವರ 'ನಾಮಧಾರಿ' ಮತ್ತು 'ಧನಂಜಯ' ಗಮನಾರ್ಹ ಕೃತಿಗಳಾಗಿವೆ. 'ಯುಗಾಂತರದ' ವಿನಾಯಕ ಕೃಷ್ಣ ಗೋಕಾಕರೂ ನಾಟಕಕ್ಷೇತ್ರಕ್ಕೆ ಹಿಂದಿರುಗುವ ಮನಸ್ಸು ಮಾಡಿಲ್ಲ. ಶ್ರೀನಿವಾಸರು 'ಮಂಜುಳಾ' ಅಂತಹ ನಾಟಕವನ್ನು ಮತ್ತೆ ನೀಡಲಿಲ್ಲ. ಇವರಲ್ಲಿ ಹಲವರು ಆಗಾಗ ರೇಡಿಯೋ ಪ್ರಸಾರಕ್ಕೆಂದು

ನಾಟಕಗಳನ್ನು ಬರೆಯುವುದುಂಟು; ಇವು ಇನ್ನೂ ಪ್ರಕಟವಾಗಬೇಕಾಗಿವೆ. ವಿ. ಸೀ. ಅವರ 'ಶ್ರೀಶೈಲ ಶಿಖರ' ಒಂದು ಉತ್ತಮ ನಾಟಕ; ಪಾವಿತ್ರ್ಯವಿರುವುದು ಮನುಷ್ಯದ ಒಳಜಗತ್ತಿನಲ್ಲಿ, ತುಳಿಯುವ ನೆಲ ಸುರಿದುಕೊಂಡ ಜಲಗಳಲ್ಲಲ್ಲ ಎನ್ನುವ ತತ್ವ ಸುಂದರವಾಗಿ ಪ್ರತಿಪಾದಿತವಾಗಿದೆ. ಗೋಪಾಲಕೃಷ್ಣರಾವ್, ಲಕ್ಷ್ಮಣರಾವ್, ಬೇಂದ್ರೆ, ಎಸ್. ಅನಂತನಾರಾಯಣ, ಎಂ. ವಿ. ಸೀತಾರಾಮಯ್ಯ–ಹೀಗೆ ಹಲವರು ಈ ಅವಧಿಯಲ್ಲಿ ನಾಟಕರಚನೆ ಮಾಡಿದ್ದಾರೆ. ಹಿಂದಿನ ತಲೆಮಾರಿನವರಲ್ಲಿ ಕ್ಷೀರಸಾಗರ, ಕೈವಾರ ರಾಜಾರಾವ್ ನಾಟಕರಚನೆಯನ್ನು ಮುಂದುವರಿಸಿದ್ದಾರೆ. ಕ್ಷೀರಸಾಗರರ ಹಾಸ್ಯ ಸ್ವಲ್ಪ ಶ್ರಮದಿಂದ 'ಚಿಕ್ಕಮಗಳೂರು–ದೊಡ್ಡಮಗಳೂರು' 'ಹಿಂದ್ಲೂರಯ್ಯ–ಮುಂದ್ಲೂರಯ್ಯ–ಹಿಂದ್ಮುಂದ್ಲೂರಯ್ಯ' ಮೊದಲಾದ ಹೆಸರುಗಳ ಆಟದಿಂದ ಸೃಷ್ಟಿಯಾದುದು. ಈ ಇಬ್ಬರು ನಾಟಕಕಾರರ ನಾಟಕಗಳಲ್ಲಿಯೂ ಸತ್ಯ ಕಡಮೆ. ಜೆ. ಎಂ. ಬ್ಯಾರಿಯ "The Twelve-Pound Look"ನ್ನು ಸ್ವಾರಸ್ಯವನ್ನು ಉಳಿಸಿಕೊಳ್ಳುವಂತೆ ರಾಜಾರಾಯರು ರೂಪಾಂತರಿಸಿದ್ದಾರೆ; ಆದರೆ 'ವಾಸಂತಿಯ ತಂತ್ರ' ಎನ್ನುವುದು ಉಚಿತವಾದ ಹೆಸರಲ್ಲ.

ಸುಮಾರು ಮೂವತ್ತು ವರ್ಷಗಳ ಹಿಂದೆ ಅ.ನ.ಕೃ. ಸಾಹಿತ್ಯದಲ್ಲಿ ಸಮಾಜ ಸುಧಾರಣೆಯ ಉದ್ದೇಶವನ್ನು ಪ್ರತಿಪಾದಿಸಿದರು. ನವ್ಯ ಸಾಹಿತಿಗಳು, ಸಾಹಿತ್ಯ ಬರಿಯ ಮನರಂಜನೆಗೆ ಮಾತ್ರವಲ್ಲ ಎಂಬುದನ್ನು ಅಂಗೀಕರಿಸಿ, ವಿಚಾರಸ್ವಾತಂತ್ರ್ಯವನ್ನು ಸಮಾಜದ ಆವರಣದಲ್ಲಿ ವ್ಯಕ್ತಿಯ ಜೀವನದ ಪೃಥಕ್ಕರಣೆಯತ್ತ ತಿರುಗಿಸಿದರು. ಇವರ ಬರಹಗಳಲ್ಲಿ ಸಾಹಿತ್ಯ ಅಭಿವ್ಯಕ್ತಿ ಮಾತ್ರವಲ್ಲ, ಅನ್ವೇಷಣೆಯ ಸಾಧನವೂ ಹೌದು. ಆತ್ಮಶೋಧನಕ್ಕೆ ಭಾಷೆಯೂ ಒಂದು ಸಾಧನ. ಪ್ರಾಮಾಣಿಕತೆಯ ಪ್ರಾಮುಖ್ಯತೆಯನ್ನು ಘೋಷಿಸಿದ ಈ ಪಂಥದವರು, ಅನ್ವೇಷಣೆಗೂ ಸತ್ವರಹಿತ ಪದಪುಂಜಗಳಿಗೂ ಸಾಮರಸ್ಯವಿಲ್ಲವೆಂದು ಗುರುತಿಸಿ, ಶಬ್ದಶಬ್ದವನ್ನೂ ಎಚ್ಚರಿಕೆಯಿಂದ ಆರಿಸುವುದರ ಅಗತ್ಯವನ್ನೂಗುರುತಿಸಿದರು. ಇದರಿಂದ ಭಾಷೆಯ ಸಂಪನ್ಮೂಲಗಳನ್ನು ಬಳಸಿಕೊಳ್ಳುವ ಪ್ರಯತ್ನ ಪ್ರಯೋಗದಲ್ಲಿ ದಿಟ್ಟತನ ಇವು ಬೆಳೆದುವು. ಬಿ. ಎಸ್. ರಾಮಚಂದ್ರಶರ್ಮರ 'ಸೆರಗಿನ ಕೆಂಡ' ಒಂದು ಅಸಾಧಾರಣ ಪ್ರಯೋಗ ಮತ್ತು ಸಾಧನೆ. ಈ ಕೃತಿಯನ್ನು ರಚಿಸುವ ಮೊದಲೆ ಅವರು ರಚಿಸಿದ 'ನೀಲಿಯ ಕಾಗದ' ೧೯೫೩ರ ಪ್ರಕಟವಾಯಿತು. ತಕ್ಕಷ್ಟು ದೀರ್ಘವಾದ 'ಹಿನ್ನುಡಿ' ಅವರ ಗುರಿಯನ್ನು ವಿವರಿಸುತ್ತದೆ. ಸಮಸ್ಯಾತ್ಮಕವಾದ ಈ ನಾಟಕದಲ್ಲಿ ವೃದ್ಧನೊಬ್ಬನ ಎರಡನೆ ಹೆಂಡತಿ ಅವನ ಮಲಮಗನಿಗೊಲಿದು, ಅವನಿಗಾಗಿ ಬುದ್ಧಿವಂತಿಕೆಯಿಂದ ಗಂಡನನ್ನು ಕೊಲೆಮಾಡಿ, ಅವನ ಪ್ರೇಮ ಬರಿಯ ಕಾಮತೃಪ್ತಿಎಂದು ಕಂಡು ಭ್ರಾಂತಿನಿರಸನ ಪಡೆದ ಹೆಣ್ಣು ಕೇಂದ್ರವ್ಯಕ್ತಿ. ಹಿನ್ನುಡಿಯಲ್ಲಿಯೂ ಸಂಭಾಷಣೆಯಲ್ಲಿಯೂ ಬರ್ನಾರ್ಡ್‌ಷಾನ ಪ್ರಭಾವ ಎದ್ದು ಕಾಣುತ್ತದೆ. ಇದು ಪ್ರಯೋಗವೆಂದು ಮಾತ್ರ ಆಸಕ್ತಿಯನ್ನುಂಟುಮಾಡುವ ಕೃತಿ. ಕಥೆಯ ಕ್ರಿಯೆ ಸಮಸ್ಯೆಯ ಪ್ರತಿಪಾದನೆಯಾಗಿಲ್ಲ ಇಲ್ಲಿ. ಈ ಕೃತಿಯನ್ನು ರಚಿಸಿದ ಕೆಲವೇ ದಿನಗಳಲ್ಲಿ ರಚಿತವಾದ 'ಸೆರಗಿನ ಕೆಂಡ'

ದಲ್ಲಿ ಅವರ ಕೈ ಎಷ್ಟು ಪಳಗಿದೆ ಎನ್ನುವುದು ವಿಸ್ಮಯಕರ. ಇಲ್ಲಿನ ಜಗತ್ತಿನಲ್ಲಿ ನಾಟಕಕಾರನ ಕೈ ಕಾಣುವುದೇ ಇಲ್ಲ. ಕ್ರಿಯೆಯು ಕ್ರಮೇಣ ಹೇಗೆ ವೇಗವನ್ನು ಪಡೆಯುತ್ತ ಹೋಗುತ್ತದೆ, ಭೂತ ವರ್ತಮಾನಗಳನ್ನು ಹೇಗೆ ನಾಯಕಿಯ ಮನಸ್ಸಿನಲ್ಲಿ ಸೇತುವೆ ನಿರ್ಮಿಸಿ ಒಟ್ಟುಗೂಡಿಸುತ್ತಾರೆ–ಈ ಅಂಶಗಳು ಅವರ ತಂತ್ರ ಪರಿಪೂರ್ಣವಾಗಿರುವುದನ್ನು ತೋರಿಸುತ್ತವೆ. ಇಂದಿನ ನವ್ಯನಾಟಕಕಾರರ ಭಾಷೆಯ ಜಾಗೃತ ಕಲಾದೃಷ್ಟಿಯ ಬಳಕೆಯ ಮೂಲಪ್ರಯತ್ನವನ್ನು ಇಲ್ಲಿ ಕಾಣಬಹುದು. ನವ್ಯನಾಟಕಕಾರರಲ್ಲಿ ಈಚೆಗೆ ಗಮನವನ್ನು ಸೆಳೆದಿರುವವರು ಪಿ. ಲಂಕೇಶ್ ಮತ್ತು ಪೂರ್ಣಚಂದ್ರತೇಜಸ್ವಿ. ಲಂಕೇಶರ 'ಟಿ. ಪ್ರಸನ್ನನ ಗೃಹಸ್ಥಾಶ್ರಮ' ಮತ್ತು 'ನನ್ನ ತಂಗಿಗೊಂದು ಗಂಡುಕೊಡಿ' ಎರಡೂ ಪ್ರಯೋಗಗಳು. ಅವರ ಎರಡನೆ ನಾಟಕದ ಪ್ರಾರಂಭದಲ್ಲಿ ಲಂಕೇಶ್ ಈ ಮಾತನ್ನು ಉದ್ಧರಿಸಿದ್ದಾರೆ: "The equivalent of a sudden sharp blow is called for if we are to be freed from every day things and routines, from the mental laziness which conceals the strangeness of the world from us." (Eugene Ionesco) ಆದರೆ ಈ ' 'sudden sharp blow' ಗುರಿಯನ್ನ ಮುಟ್ಟಲಾರದೆ ಹೋದರೆ ಸಾರ್ಥಕವೇನು? ಗಂಭೀರಕ್ರಿಯೆಯಲ್ಲಿ ಹಾಸ್ಯವನ್ನು ಸೇರಿಸಬಾರದೆಂದೇನೂ ಇಲ್ಲ, ಇವೆರಡನ್ನೂ ಸಮನ್ವಯಗೊಳಿಸುವ ಅಗತ್ಯ ನಾಟಕಕಾರನಿಗೊಂದು ಸವಾಲು. ಯಜಮಾನರ ಮಗ ಜಗನ್ನಾಥ ಸೇವಕ ನಂಜ ಇವರ ಸಂಭಾಷಣೆ ಪ್ರಹಸನಕ್ಕೆ ಉಚಿತವಾದುದು ಎನ್ನಿಸಿ, ನಾಟಕದ ಸತ್ವ ಕುಂದುತ್ತದೆ; ನಾಟಕದ ಪ್ರಾರಂಭದಲ್ಲಿಯೆ ಇದು ಬರುವುದರಿಂದ ತಪ್ಪುಸ್ವರ (tone) ವನ್ನೇ ನುಡಿಸುತ್ತದೆ. ಮಗಳು ನೋಡಿಯೇ ಇಲ್ಲದಿರುವಾತನನ್ನು ಮದುವೆಮಾಡಿಕೊ ಎಂದು ಇಪ್ಪತ್ತನೆ ಶತಮಾನದಲ್ಲಿ–ತಕ್ಕಷ್ಟು ಬಾಳಿನ ಅನುಭವವಿರುವ–ತಾಯಿ ಬಲಾತ್ಕಾರ ಮಾಡುತ್ತಾಳೆಂದು ನಂಬುವುದೂ ಕಷ್ಟ. ಹೀಗೆಂದು ನಾಟಕ ಕಳಪೆ ಎನ್ನುವಂತಿಲ್ಲ. ಅಲ್ಲಲ್ಲಿ ಸಂಭಾಷಣೆ ಹರಿತವಾಗಿದೆ. ತಂಗಿಗೆ ದಾರಿ ತೋರಿಸುವೆನೆಂದೂ ತಾನೇ ಅವಳ ದೈವವೆಂದು ಬಾಗುವ ಜಗನ್ನಾಥನಿಗೆ, ಅನಿರೀಕ್ಷಿತವಾಗಿ ತಂಗಿ: "ನಿನ್ನ ಮಾತು ನಂಬೋಕೆ ನಾನೇನೂ ಚಿಕ್ಕ ಪಿಳ್ಳೆ ಅಲ್ಲ. ಬದುಕಿನ ಕೊಳಕನ್ನೆಲ್ಲ ನನ್ನೆದೇಲಿ ಹಾಕಿ, ಅಪ್ಪನ ಡೊಂಕನ್ನೆಲ್ಲ ನನಗೆ ಇಕ್ಕಿ, ನನ್ನ ಸುತ್ತ ಸಂಶಯದ ಚಿತ್ರವ್ಯೂಹ ಕಟ್ಟಿ ನನ್ನನ್ನು ನಿರುಪಯುಕ್ತಕ್ರಿಮಿ ಮಾಡಿದೆ, ಅಣ್ಣ", ಎಂದು ನಿಚ್ಚಳದೃಷ್ಟಿಯಿಂದ ತಿರುಗಿಬೀಳುವುದಂತೂ ಸೊಗಸಾದ ಕ್ಷಣ. ತೇಜಸ್ವಿ ಅವರ 'ಯಮಳ ಪ್ರಶ್ನೆ' ಗಹನತೆ ಅಗತ್ಯವಾದ ಪ್ರಮಾಣದ ಕ್ರಿಯೆಯನ್ನು ಪಡೆದಿಲ್ಲ. ಆದರೆ ತೆರೆ ತೆರೆಯಾಗಿ ಕ್ರಿಯೆ ಹರಡಿಕೊಳ್ಳುವ ರೀತಿ ಗಮನಾರ್ಹ.

ಈ ಇಪ್ಪತ್ತೈದು ವರ್ಷಗಳಲ್ಲಿ ಪ್ರಕಟವಾದ 'ನಗೆನಾಟಕ'ಗಳ ಸಂಖ್ಯೆ ವಿಪುಲ. ನವರತ್ನ ರಾಮ್, ದಾಶರಥಿದೀಕ್ಷಿತ್, ಎಂ. ಎಸ್. ಮೂರ್ತಿ ಇವರು ಗಮನಾರ್ಹ ಸಂಖ್ಯೆಯಲ್ಲಿ ಕೃತಿಗಳನ್ನು ರಚಿಸಿದ್ದಾರೆ. ಮೂರ್ತಿಯವರು ಹೊಸತಂತ್ರಗಳ ಬಳಕೆಯಲ್ಲಿ ಕೆಲವು ಪ್ರಯೋಗಗಳನ್ನೂ ಮಾಡಿದ್ದಾರೆ. ಇತರ ಭಾಷೆಗಳ ಕೃತಿಗಳನ್ನು ಮನರಂಜನೆ

ಯನ್ನು ಸಾಧಿಸುವಂತೆ ರೂಪಾಂತರಿಸಿ 'ಗಗ್ಗಯ್ಯನ ಗಡಿ-ಬಿಡಿ' 'ವರಪರೀಕ್ಷೆ' ಮತ್ತು 'ಕಾಡಾನೆ'ಗಳನ್ನು ಕನ್ನಡ ರಂಗಭೂಮಿಗೆ ಕೊಟ್ಟ ಕಸ್ತೂರಿ ಈಚೆಗೆ ನಾಟಕಗಳನ್ನು ಬರೆಯದಿರುವುದು ಒಂದು ನಷ್ಟ.

ಕನ್ನಡ ನಾಟಕ ಚರಿತ್ರೆಯಲ್ಲಿ ಸಂಸರೊಂದು ವಿಶಿಷ್ಟ ಅವತಾರ. ಬಳಕೆಯ ಮಾತಿನ ರೀತಿಗಿಂತ ತೀರ ಭಿನ್ನವಾದರೂ ಕ್ರಿಯೆಗೆ ಸಹಜವೆನ್ನಿಸಿ ವಿಶಿಷ್ಟ ವಾತಾವರಣ ವನ್ನು ಸಾಧಿಸುವ ಗಂಡುಶೈಲಿ ಅವರದು. ವಿ. ಸೀ. ಅವರು ಹೇಳುವಂತೆ, "ಬೆಂಕಿ ಯಿಂದ, ಸಿಡಿಲ ಕಿಡಿಯಿಂದ ಬರೆದಂತಿವೆ ಆ ನಾಟಕಗಳು." 'ಶ್ರೀನಿವಾಸ'ರ ತಾಳೀ ಕೋಟೆ' ಸುಂದರ ಕೃತಿಯಾದರೂ ಕಳೆದುಹೋದ ಯುಗಕ್ಕೆ ಮತ್ತೆ ಜೀವಕೊಡುವ ಕೃತಿಯಲ್ಲ; ಅವರ 'ಕಾಕನ ಕೋಟೆ'ಯಲ್ಲಿ ಕಾಡುಕುರುಬರ ಜೀವನ ಸೊಗಸಾಗಿ ಚಿತ್ರವಾಗಿದೆ. ಆದರೆ ಇದನ್ನು ಐತಿಹಾಸಿಕ ನಾಟಕ ಎನ್ನುವಂತಿಲ್ಲ. 'ರಣಧೀರ ಕಂಠೀರವ' ರಚಿಸಿದ್ದ ಎಂ. ಆರ್. ಶ್ರೀ. 'ಧರ್ಮದುರಂತ'ವನ್ನು ರಚಿಸಿದರು. ಟೀಪೂವಿನ ಕಾಲದಲ್ಲಿ ಜಾತಿಗೆಟ್ಟು ಮಹಮದೀಯನಾಗಿ ಮತ್ತೆ ಬ್ರಾಹ್ಮಣ ಮತಕ್ಕೆ ಸೇರಲೆಳಸಿ, ಬ್ರಾಹ್ಮಣರ ವಾದವಿವಾದಗಳಿಗೆ ಬೇಸತ್ತಾಗಲೆ ತನ್ನ ಇಬ್ಬರು ಹೆಂಡತಿಯ ರನ್ನೂ ಕಳೆದುಕೊಂಡ ಖಾನ್ ಜಹಾನ್‌ಖಾನ್ (ರಾಮರಾಯ)ನ ದುರಂತ ಕಥೆ ಇದು. ಎಂ. ಆರ್. ಶ್ರೀ. ಗದ್ಯಪದ್ಯಗಳೆರಡನ್ನೂ ಇಲ್ಲಿ ಬಳಸಿದ್ದಾರೆ. ಪಾತ್ರ ಗಳು ನಮ್ಮ ಅನುಕಂಪಕ್ಕೆ ಪಾತ್ರವಾದರೂ "ಕೃತಿ ಗಹನವಾದ ಮಾನಸಿಕ ಅನುಭವ ವನ್ನು ಸೃಷ್ಟಿಸಲಾರದೆ ಹೋಗಿದೆ. ನಾಟಕದ ಎಲ್ಲ ಸಾಧನಗಳ ಮೇಲೆಯೂ ಹೆಜ್ಜೆ ಹೆಜ್ಜೆಯಲ್ಲಿಯೂ ಸ್ವಾಮ್ಯವನ್ನಿಟ್ಟುಕೊಂಡು ಭಾಷೆಯನ್ನು ರಸಾನುಭವದ ಸೃಷ್ಟಿಯ ಮಾಧ್ಯಮವನ್ನಾಗಿ ಬಳಸಿಕೊಂಡು ಕೃತಿಯನ್ನು ನಿರ್ವಹಿಸುವ ಶಕ್ತಿ ಇಲ್ಲದಿರುವುದು 'ಧರ್ಮದುರಂತ' ಶ್ರೇಷ್ಠ ನಾಟಕವಾಗದೆ ಒಳ್ಳೆಯ ನಾಟಕದ ಮಟ್ಟದಲ್ಲಿ ನಿಲ್ಲುವಂತೆ ಮಾಡಿದೆ. ಐತಿಹಾಸಿಕ ನಾಟಕಗಳ ಕ್ಷೇತ್ರದಲ್ಲಿ ಗಮನಾರ್ಹವಾದ ಈಚೆಗಿನ ಸೃಷ್ಟಿ ಎಂದರೆ ಗಿರೀಶ ಕಾರ್ನಾಡರ "ತುಘಲಕ" "ಇತ್ತೀಚೆಗಿನವರೆಗೆ ಐಲುದೊರೆ ಎನ್ನಿಸಿ ಕೊಂಡಿದ್ದ ಮಹಮ್ಮದ್ ಬಿನ್ ತೊಘಲಖ್ ಇದರ ಕೇಂದ್ರವ್ಯಕ್ತಿ. ಅವನ ಆಳ್ವಿಕೆಯ ಅವಧಿಯ ಮುಖ್ಯ ಘಟನೆಗಳನ್ನು ಕ್ರಿಯೆಯ ವೃತ್ತಕ್ಕೆ ಯಶಸ್ವಿಯಾಗಿ ಸೆಳೆದುಕೊಂಡ ಕೃತಿ ಅವೆಲ್ಲವನ್ನೂ ಅವನ ಒಳತೋಟೆಯ ಚಿತ್ರಣಕ್ಕೆ ಸಾರ್ಥಕವಾಗಿ ಬಳಸಿಕೊಳ್ಳು ತ್ತದೆ. ಆದರೆ ಒಟ್ಟಿನಲ್ಲಿ ಗಮನ ಅತ್ತ ಇತ್ತ ಹೊರಳಿ ಕೃತಿ ಸಾಮರಸ್ಯವನ್ನು ಪೂರ್ಣವಾಗಿ ಸಾಧಿಸದೆ ಉಳಿಯುತ್ತದೆ. ಕೃತಿಯ ಪ್ರಾರಂಭದಲ್ಲಿಯೆ ಸಾಮಾನ್ಯ ಜನರಿಬ್ಬರ ಸಂಭಾಷಣೆಯಲ್ಲಿ ಬರುವ ಕೆಲವು ಮಾತುಗಳು ಅದರ ಜೀವಾಳವನ್ನು ಧ್ವನಿಸುತ್ತವೆ. "ತನ್ನ ಪ್ರಜೆಗಳಲ್ಲಿ ಯಾರನ್ನೂ ತನ್ನ ಸುತ್ತು ಒಂದು ಹರವಾರಿಯ ಒಳಗೆ ಬಿಡಿಸಿದ್ದ ಅರಸರದೇನು ದೊಡ್ಡಸ್ತಿಕೆ? ನಿಜವಾದ ಅರಸು ಮನುಷ್ಯನಾಗಿದ್ದೇ ದೊಡ್ಡವನಾಗಬೇಕು." 'ಯಯಾತಿ'ಯಲ್ಲಿನ ಪುರುವಿನಂತೆ ತುಘಲಖನೂ ತನ್ನನ್ನು ತಾನೆ ಕಾಣುವ ಪ್ರಯತ್ನದಲ್ಲಿದ್ದಾನೆ; ಆದರೆ ಅವನಿಗೆ ಕತೆಗಾಗುವುದು ತನ್ನೊಳಗಿನ

ಪಿಶಾಚಿಯ ದರ್ಶನ ಈ ಕೃತಿ 'ಯಯಾತಿ'ಯ ಸಮನ್ವಯವನ್ನು ಸಾಧಿಸಿಲ್ಲ ಭಾಷೆಯೂ ಅಲ್ಲಲ್ಲಿ ನಾಟಕಕಾರರ ಕಡಿವಾಣಕ್ಕೆ ಬಾಗದೆ ಬರಿಯ ಉಬ್ಬಟೆಯ ಭಾಷೆ (Rhetoric) ಆಗುತ್ತದೆ. ಇಷ್ಟಾದರೂ ಇದೊಂದು ಗಣನೀಯ ಪ್ರಯೋಗ ನಿಸ್ಸಂಶಯ.

೧೯೪೨ರ ರಾಷ್ಟ್ರೀಯ ಚಳುವಳಿ ಹಲವು ಉತ್ತಮ ನಾಟಕಗಳನ್ನು ಬರೆಯಿಸ ಬೇಕಾಗಿತ್ತು. ಯಾವ ಕಾರಣದಿಂದಲೋ ಹಾಗಾಗಲಿಲ್ಲ. ಕೃಷ್ಣಕುಮಾರ ಕಲ್ಲೂರರ 'ಜಾಗೃತ ರಾಷ್ಟ್ರ'ವೊಂದು ವಿಶೇಷಕೃತಿ. ಈ ಚಾರಿತ್ರಿಕ ಹಿನ್ನೆಲೆಯಲ್ಲಿ ಅದ್ಭುತವಾದ ವಾತಾವರಣವನ್ನು ಸೃಷ್ಟಿಸಿ ರಂಗದಮೇಲೆ ಕಣ್ಣೆದುರಿಗೆ ಕಾಣದ ಹೋರಾಟವನ್ನು ಕಾಣುವ ವ್ಯಕ್ತಿಗಳಿಗಿಂತ ಸ್ಪಷ್ಟಗೊಳಿಸುತ್ತಾರೆ. ಮುದುಕಿಯಮಗ ಹೆಂಡತಿಯನ್ನು ಕಾಣಬರುವ ಸನ್ನಿವೇಶವಂತೂ ಅತಿ ಪರಿಣಾಮಕಾರಿಯಾಗಿದೆ. ಈ ನಾಟಕ ಒಂದು ಅಸಾಧಾರಣ ಸಾಧನೆ. ಒಂದು ಸಂಸ್ಥಾನದಲ್ಲಿ ಪ್ರಜಾಸರ್ಕಾರದ ಸ್ಥಾಪನೆಗಾಗಿ ನಡೆದ ಹೋರಾಟ ಪುತಿನ ಅವರ 'ವಿಕಟಕವಿ ವಿಜಯ'ಕ್ಕೆ ಸಾಮಗ್ರಿಯನ್ನೂ ಹಿನ್ನೆಲೆ ಯನ್ನೂ ಒದಗಿಸಿದೆ. ಇದು ಬಹು ಕುತೂಹಲಕಾರಿಯಾದ ಕೃತಿ. ಬೌದ್ಧಿಕತೆ ಇಲ್ಲಿ ಮಿಂಚಿನಂತೆ ಸಂಚರಿಸುತ್ತದೆ. ಆದರೆ ಕೃತಿಯಲ್ಲಿ ನಾಟಕ ಸಾಧಿಸಬೇಕಾದ ಭಾವೈಕ್ಯ ಕಂಡುಬರುವದಿಲ್ಲ. ಅಲ್ಲವೆ ಪದ್ಯಮಾಧ್ಯಮ ಸಂಪೂರ್ಣಕೃತಿಗೆ ಹೊಂದಿಕೊಳ್ಳದು.

ಚೀನಾ ಭಾರತದಮೇಲೆ ನಡೆಸಿದ ಆಕ್ರಮಣದ ಹಿನ್ನೆಲೆಯಲ್ಲಿ ದೇಶಪ್ರೇಮ ವನ್ನು ಉಕ್ಕಿಸುವ ಉದ್ದೇಶದಿಂದ ರಚಿತವಾದ ಐತಿಹಾಸಿಕ ನಾಟಕಗಳು ಎರಡು. ಎರಡು ನಾಟಕಗಳು ಗುಪ್ತಸಾಮ್ರಾಜ್ಯದ ನರಸಿಂಹ ಬಾಲಾದಿತ್ಯ ಹೂಣರ ದೊರೆ ಯನ್ನು ಸೋಲಿಸಿದ ಸಂಗತಿಯನ್ನು ಬಳಸಿಕೊಂಡಿವೆ. ಒಂದು, ಸಿದ್ದಯ್ಯ ಪುರಾಣಿಕರ 'ಭಾರತವೀರ,' ಇನ್ನೊಂದು ಆರ್. ಎಸ್. ರಾಮರಾಯರ 'ಕುಲಭೂಷಣೆ' ಇಬ್ಬರೂ ಲಘುದೃಶ್ಯಗಳನ್ನು ಬಳಸಿ ವೈವಿಧ್ಯವನ್ನು ಸಾಧಿಸಲು ಯತ್ನಿಸಿದ್ದಾರೆ. ಮಂಗೋಲರ ಪ್ರಭು ತೈಮೂರ್, ಅವನ ಸಾಮ್ರಾಜ್ಞಿ ಹಾನಿವ್ ಬೀಬಿ ಇವರ ಸುತ್ತ 'ನಿರಂಜನ'ರು ಸುಂದರವಾದ ನಾಟಕವೊಂದನ್ನು—'ಸಮ್ರಾಜ್ಞಿ'—ಹೆಣೆದಿದ್ದಾರೆ ಮೊದಲ ದೃಶ್ಯದಲ್ಲಿ ತೈಮೂರ್, ಹಾನೀವ್ ಬೀಬಿ ಇವರ ಪಾತ್ರಗಳ ಚಿತ್ರಣದಲ್ಲಿ ಅಸ್ಪಷ್ಟತೆ ಕಾಣುತ್ತದೆ. ಆದರೂ ನಾಟಕದಲ್ಲಿ ತೈಮೂರ್ ಮಾನವನಾಗುತ್ತಾನೆ. ಚಿಕ್ಕಮ್ಮನ ಕಾಮಕ್ಕೆ ಮಣಿಯದೆ ಹೋದನೆಂದು ಆಹುತಿಯಾದ ಕುಮಾರ ರಾಮನನು ಮರಿ-ನಾಯಕನನ್ನಾಗಿ ಮಾಡಿಕೊಂಡು ಚದುರಂಗರು 'ಕುಮಾರರಾಮ' ಎನ್ನುವ ಸುಂದರ ನಾಟಕವನ್ನು ರಚಿಸಿದ್ದಾರೆ. ಭಾರತಿಯವರ 'ಮಹಾಸತಿ', ಸಮೇತನಹಳ್ಳಿ ರಾಮರಾಯರ 'ತಲಕಾಡುಗೊಂಡ,' ದೇವೀರಪ್ಪನವರ 'ತುಂಗಭದ್ರ,' ಇತರ ಗಮನಾರ್ಹ ಐತಿಹಾಸಿಕ ನಾಟಕಗಳು.

ಆಧುನಿಕ ಕನ್ನಡ ನಾಟಕದಲ್ಲಿ ಸ್ವತಂತ್ರ ಸೃಷ್ಟಿ ಪ್ರಾರಂಭವಾದುದೇ ಪೌರಾಣಿಕ ನಾಟಕದಿಂದ. ಬೆಳ್ಳಾವೆ ನರಹರಿ ಶಾಸ್ತ್ರಿಗಳು ಪೌರಾಣಿಕ ಕಥೆಗಳನ್ನು ಬಳಸಿಕೊಂಡು,

ಗಹನತೆ ಇಲ್ಲದಿದ್ದರೂ ರಂಗಭೂಮಿಗೆ ಹೊಂದಿಕೊಂಡ ಮತ್ತು ಮನರಂಜನೀಯವಾದ ಸ್ವತಂತ್ರ ಕೃತಿಗಳನ್ನು ರಚಿಸಿದರು. ಪೌರಾಣಿಕ ಅಥವಾ ಧಾರ್ಮಿಕ ಸಾಮಗ್ರಿಯನ್ನು ಬಳಸಿಕೊಂಡು ರಚಿಸಿದ ಕೃತಿಗಳು ಎರಡು ಬಗೆಯವು. ಮೊದಲನೆ ವರ್ಗಕ್ಕೆ ಸೇರಿದುವು. ಪೌರಾಣಿಕ ವ್ಯಕ್ತಿಗಳ ಕಥೆಯನ್ನು ರಸಾತ್ಮಕವಾಗಿ ಬಿತ್ತರಿಸಿ ಧರ್ಮ ಶ್ರದ್ಧೆಯನ್ನು ಬೆಳೆಸುವ ಇಲ್ಲವೇ ಮಾನವ ಯಾವ ಎತ್ತರಕ್ಕೆ ಏರಬಲ್ಲನೆಂಬುದನ್ನು ಚಿತ್ರಿಸುವ ಉದ್ದೇಶ ವನ್ನು ಹೊಂದಿದುವು. 'ಶ್ರೀನಿವಾಸ'ರ 'ಯಶೋಧರಾ' ಈ ಬಗೆಯ ಕೃತಿಗಳಲ್ಲಿ ಒಂದು ಉತ್ತುಂಗ ಶಿಖರ. ನಾಟಕದುದ್ದಕ್ಕೂ ಕಾಣಬರುವ ಸಂಯಮ ಅಸಾಧಾರಣ ವಾದುದು. ಶ್ರೀನಿವಾಸರು ಭಾಷೆಯನ್ನು ಹಲವು ಅಭಿವ್ಯಕತೆಗಳಿಗೆ–ಬಾಲಕರ ಜಗಳ ದಿಂದ ಯಶೋಧರೆಯ ಸಾಗರದಾಳದ ನೋವಿನ ಮತ್ತು ಬುದ್ಧನ ಜೀವನದರ್ಶನದ ನಿರೂಪಣೆಯವರೆಗೆ-ಹೇಗೆ ಹೊಂದಿಸಿಕೊಳ್ಳುತ್ತಾರೆ ಎನ್ನುವುದು ಗಮನಿಸಬೇಕಾದ ಸಂಗತಿ. ಬಿ. ಪುಟ್ಟಸ್ವಾಮಯ್ಯ, ಸಿ. ಕೆ. ವೆಂಕಟರಾಮಯ್ಯ, 'ಮಹಾರಾತ್ರಿ' ಯಂತಹ ಕೃತಿಯಲ್ಲಿ ಕುವೆಂಪು, ಇದೇ ಉದ್ದೇಶವನ್ನು ಹೊಂದಿದ್ದರು. ಇತ್ತೀಚಿಗಿನ ವರ್ಷಗಳಲ್ಲಿ ವೆಂಕಟರಾಮಯ್ಯನವರು ಋಷಿಕುಮಾರಿಯೊಬ್ಬಳ ಉದಾತ್ತ ಜೀವನವನ್ನು ಚಿತ್ರಿಸುವ 'ಬ್ರಹ್ಮವಾಹಿನಿ' ನಾಟಕವನ್ನು ಪ್ರಕಟಿಸಿದ್ದಾರೆ; ಸಾಹಿತ್ಯದ ದೃಷ್ಟಿಯಿಂದ ಅಷ್ಟೇನೂ ಸತ್ವಶಾಲಿಯಾದ ಕೃತಿಯಲ್ಲ. ಬುದ್ಧನ ಕಾರುಣ್ಯ ಸಾಧಿಸುವ ಪವಾಡವನ್ನು ಕಲಾತ್ಮಕವಾಗಿ ಚಿತ್ರಿಸುವ ಕೃತಿ ಪ್ರಭುಶಂಕರರ 'ಅಂಗುಲೀ ಮಾಲ'.

ಶ್ರೀನಿವಾಸರು ಪುರಂದರದಾಸ ಮತ್ತು ಕನಕದಾಸರನ್ನು ನಾಯಕರನ್ನಾಗಿ ಆರಿಸಿ ಕೊಂಡು ಎರಡು ನಾಟಕಗಳನ್ನು ರಚಿಸಿದ್ದಾರೆ. ಪವಾಡದ ಅಂಶಕ್ಕೆ ಹೆಚ್ಚು ಪ್ರಾಧಾನ್ಯ ನೀಡದೆ ತಮ್ಮ ನಾಯಕರ ವ್ಯಕ್ತಿತ್ವದ ಹಿರಿಮೆಯನ್ನು ನಿರೂಪಿಸುವುದು ಇವರ ಗುರಿ. ಪವಾಡಗಳನ್ನು ನಾವು ತಿರಸ್ಕರಿಸಬೇಕಾಗಿಲ್ಲ, ದೈವದಲ್ಲಿ ನಂಬಿಕೆ ಇಟ್ಟರೆ ದೈವದ ಅಮಿತ ಶಕ್ತಿಯಲ್ಲಿ ನಂಬಿಕೆ ಸಹಜ, ಪವಾಡವೆನ್ನುವುದು ಭಗವತ್ಕೃಪೆ ಅಮಿತ ಶಕ್ತಿಯಿಂದ ತಾಳುವ ರೂಪ ಮಾತ್ರ ಎನ್ನುವ ದೃಷ್ಟಿಯಿಂದ ಪರ್ವತವಾಣಿ ಪುರಂದರದಾಸರ ಜೀವನ ವನ್ನು ನಿರೂಪಿಸಿದ್ದಾರೆ.

ಪೌರಾಣಿಕ ಸಾಮಗ್ರಿಯನ್ನು ಮತ್ತೊಂದು ಬಗೆಯಲ್ಲಿ 'ಶ್ರೀ'ಯವರು 'ಅಶ್ವತ್ಥಾಮನ್'ನಲ್ಲಿ ಬಳಸಿ ಹೊಸ ಪ್ರಯೋಗವನ್ನು ಮಾಡಿದರು. ಪೌರಾಣಿಕ ಸಾಮಗ್ರಿಗೆ ಹೊಸ ವ್ಯಾಖ್ಯಾನ (interpretation) ನೀಡುವುದು ಇಲ್ಲಿ ಗುರಿ. ಹಳೆಯ ಕಥೆಯ ಚೌಕಟ್ಟಿನಲ್ಲಿ ಹೊಸ ಚಿತ್ರವನ್ನು ನಿರ್ಮಿಸುತ್ತಾರೆ. ಸಾಮಾನ್ಯವಾಗಿ ಕ್ರಿಯೆಯನ್ನು ಹಾಗೆಯೇ ಉಳಿಸಿಕೊಂಡು (ಇದು ನಿಷ್ಠುರವಾದ ನಿಯಮವೇನೂ ಅಲ್ಲ) ಆ ಕ್ರಿಯೆಯ ಸುಳಿಗೆ ಸಿಕ್ಕ ಪಾತ್ರಗಳ ವ್ಯಕ್ತಿತ್ವದ ಪೃಥಕ್ಕರಣೆಯನ್ನು ಮಾಡುತ್ತಾನೆ ನಾಟಕಕಾರ. ಹಳೆಯ ಸಾಮಗ್ರಿಗೆ ಹೊಸ ಅರ್ಥವನ್ನು ನೀಡಬಹುದು ಇಲ್ಲವೆ ಚಿರ ಪರಿಚಿತ ವ್ಯಕ್ತಿಗಳನ್ನು ಮನುಷ್ಯಸ್ವಭಾವದ ಹಲವು ಮುಖಗಳ ಸಂಕೇತಗಳನ್ನಾಗಿ ನಿರ್ಮಿಸಿ ನಿಲ್ಲಿಸಬಹುದು. ಈಸ್ಕಿಲಸ್, ಸಫೋಕ್ಲೀಸ್, ಯೂರಿಪಿಡೀಸ್‌ರು ಇಪ್ಪತ್ತೈದು

ಶತಮಾನಗಳ ಹಿಂದೆ ಇದನ್ನು ಸಾಧಿಸಿದರು. ಶ್ರೀಯವರು 'ಅಶ್ವತ್ಥಾಮನ್'ನಲ್ಲಿ ಇದನ್ನು ಮಾಡಿದರು. ಈ ಬಗೆಯ ನಾಟಕಗಳು ಅನಗತ್ಯ ವಾದ ವಿವಾದಗಳಿಗೆ ಗುರಿಯಾಗುವುದುಂಟು, ನಾಟಕವನ್ನು ಕಲಾತ್ಮಕ ಸೃಷ್ಟಿ ಎಂದು ಭಾವಿಸಿ ಅಭ್ಯಾಸ ಮಾಡದೆ ತಮ್ಮ ಧಾರ್ಮಿಕ ಒಲವುಗಳಿಗೆ ಘಾಸಿಯಾಯಿತೆಂದು ಆಕ್ಷೇಪಿಸುವವರಿಂದ ಅನಗತ್ಯ ಧೂಳು ಏಳಬಹುದು. ಇದನ್ನು ಪ್ರಾಚೀನ ಗ್ರೀಸ್‌ನಲ್ಲಿ ಕಾಣುತ್ತೇವೆ. 'ಅಶ್ವತ್ಥಾಮನ್' ನಮ್ಮಲ್ಲಿ ಇಂತಹ ವಾದವಿವಾದಕ್ಕೆ ವಸ್ತುವಾಯಿತು. ಪೌರಾಣಿಕ ವ್ಯಕ್ತಿಯನ್ನು ಹೊಸ ದೃಷ್ಟಿಯಿಂದ ನಿರೂಪಿಸುವ ಸಾಹಸವನ್ನು ಕೈಲಾಸಂ 'ಕೀಚಕ'ದಲ್ಲಿ ಮಾಡಿದರು (ಇದು ಅವರ ಮರಣಾನಂತರ ಪ್ರಕಟವಾದ ಕೃತಿ). ಇಲ್ಲಿ ಕೀಚಕ ಜಯುವಧುವಿನ ಒಲವಿಗೆ ಬೇಸರಿಸಿದ್ದಾನೆ. ದ್ರೌಪದಿಯಲ್ಲಿ ಅವನದು ಆದರ್ಶ ಪ್ರೇಮ. ಪೌರಾಣಿಕ ಸಾಮಗ್ರಿಯಲ್ಲಿ ಮಹತ್ತರವಾದ ಮಾರ್ಪಾಟುಗಳನ್ನು ಮಾಡುವುದನ್ನು ಭಾಸನೇ ಕಲಿಸಿದ್ದಾನೆ. ಆದರೆ ಪಾತ್ರಗಳ ಸ್ವಭಾವವನ್ನು ಹೊಸ ದೃಷ್ಟಿಯಿಂದ ಕಾಣುವ ಪ್ರಯತ್ನದಲ್ಲಿ ಪಾತ್ರದ ಸ್ವಭಾವವನ್ನು ಸಂಪೂರ್ಣವಾಗಿ ಮಾರ್ಪಡಿಸುವುದಾದರೆ–ಅದು ಹೊಸ ದೃಷ್ಟಿ ಮಾತ್ರವಲ್ಲದೆ ಹೊಸ ಸೃಷ್ಟಿ ಆಗುವುದಾದರೆ–ಹಳೆಯ ಚೌಕಟ್ಟು ಏಕೆ, ಹಳೆಯ ಹೆಸರಿನ ಪಟ್ಟಿಯನ್ನು ಹಣೆಗೆ ಅಂಟಿಸಬೇಕೇಕೆ? ಹೊಸ ನೈತಿಕ ಮೌಲ್ಯಗಳನ್ನು ಪ್ರತಿಪಾದಿಸುವ ಕ್ರಾಂತಿಕಾರಕ ಮನೋಭಾವವನ್ನೇನೂ ಕೈಲಾಸಂ ತೋರಿಸಿಲ್ಲ. ಕೃತಿಯಲ್ಲಿ ಅಂತರ್ಗತವಾಗಿರುವ ಮೌಲ್ಯಗಳ ದೃಷ್ಟಿಯಿಂದಲೇ ಕೀಚಕನನ್ನು ಅಂತಹ ಉದಾತ್ತ ವ್ಯಕ್ತಿ ಎನ್ನುವಂತಿಲ್ಲ. ವಿಶಿಷ್ಟ ವಾತಾವರಣವನ್ನು ನಿರ್ಮಿಸುವುದಕ್ಕೂ ಅವರು ಶಕ್ತರಾಗಿಲ್ಲ. ಕಡೆಯ ಭಾಗದಲ್ಲಿ ವಸ್ತುವನ್ನು ಹಿಂಜಿದಂತೆ ಭಾಸವಾಗುತ್ತದೆ.

ಜನಸಾಮಾನ್ಯದ ಮಾನಸಿಕ ಜೀವನದ ಭಾಗವಾದ ಪೌರಾಣಿಕ ಕಥಾಸಾಮಗ್ರಿ ಸಾಹಿತಿಗಳಿಗೆ ಒಂದು ಆಸ್ತಿ. ಕ್ರಿಶ್ಚಿಯನ್ ದೇಶಗಳಲ್ಲಿ ಈ ಬಗೆಯ ಸಂಪತ್ತು ಲಭ್ಯವಾಗದಿರುವುದರಿಂದ ಆ ದೇಶದ ಸಾಹಿತಿಗಳು ಪ್ರಾಚೀನ ಗ್ರೀಸ್‌ನ ಪೌರಾಣಿಕ ಸಾಮಗ್ರಿಯನ್ನು ಬಳಸಿಕೊಳ್ಳಬೇಕಾಯಿತು, ಇಂತಹ ಸಾಮಗ್ರಿ ಇರುವಲ್ಲಿ ಸಾಹಿತಿಗೆ ಕಥೆಯ ರೂಪರೇಖೆ ದೊರೆಯುತ್ತದೆ, ಕಥೆ ಎಲ್ಲರಿಗೂ ಪರಿಚಿತವಾದುದರಿಂದ, ಮುಂದೆ ನಡೆಯುವುದು ಪ್ರೇಕ್ಷಕ ವರ್ಗಕ್ಕೆ ತಿಳಿದಿರುವ ಅನುಕೂಲ್ಯವನ್ನು ಬಳಸಿಕೊಂಡು ಕೃತಿಯ ಪ್ರಾರಂಭದಿಂದ ಸಾಹಿತಿ ಆಳವಾದ ಅರ್ಥವನ್ನು ಧ್ವನಿಸಬಹುದು, ನಾಟಕೀಯ ವ್ಯಂಗ್ಯ (dramatic irony) ಯನ್ನು ಬಳಸಬಹುದು (ಕುವೆಂಪು 'ಬೆರಳ್-ಗೆ-ಕೊರಳ್'ನಲ್ಲಿ ಮಾಡುವಂತೆ). ಎಂತಹ ಗಹನತೆಯನ್ನಾದರೂ ಅರಗಿಸಿಕೊಳ್ಳಬಲ್ಲ ಸಾಮಗ್ರಿ ಸಿದ್ಧವಾಗಿ ದೊರೆಯುತ್ತದೆ ಸಾಹಿತಿಗೆ. ಭವ್ಯ ಪಾತ್ರಗಳು ಆಗಲೇ ಜನದ ಕಲ್ಪನೆಯ ಸಾಮ್ರಾಜ್ಯದಲ್ಲಿ ಸ್ಥಿರವಾಗಿ ನೆಲೆಸಿರುವುದರಿಂದ, ಪ್ರತಿಮಾವಿಧಾನಕ್ಕೆ ಈ ಸಾಮಗ್ರಿ ಸೊಗಸಾಗಿ ಹೊಂದಿಕೊಳ್ಳುತ್ತದೆ. ('ಕುವೆಂಪು' ಅವರ ವಿಧಾನದಿಂದ ತೀರ ಭಿನ್ನವಾದ ವಿಧಾನವನ್ನನುಸರಿಸುವ ಶ್ರೀರಂಗರ 'ರಂಗಭಾರತ'ದಲ್ಲಿಯೂ ಧೃತರಾಷ್ಟ್ರನ ಪಾತ್ರವನ್ನು ಗಮನಿಸಬಹುದು).

ಪೌರಾಣಿಕ ಕಥೆಗಳು ನಾಟಕಕಾರನಿಗೆ ಎಂತಹ ಮೂಲಧನವಾಗಬಹುದೆಂಬುದನ್ನು ಕುವೆಂಪು ಅವರ 'ಬೆರಳ್-ಗೆ-ಕೊರಳ್'ನಲ್ಲಿ ಕಾಣಬಹುದು. ದ್ರೋಣನ ಪಾತ್ರವನ್ನು ನಾಟಕಕಾರ ನಿರೂಪಿಸುವ ಬಗೆ, ಪ್ರತಿಭೆ ಜನಮನದ ಚಿತ್ತದಲ್ಲಿ ನೆಲಸಿದ ಭವ್ಯಾಕೃತಿಗೆ ರಕ್ತಮಾಂಸಗಳನ್ನು ತುಂಬಿ ಮಾನವೀಯಗೊಳಿಸಬಲ್ಲುದು ಎನ್ನುವುದಕ್ಕೆ ನಿದರ್ಶನ ಕುವೆಂಪು ಅವರ ಹಲವು ಕೃತಿಗಳಲ್ಲಿ ತೋರಿಬರುವ ಆದರ್ಶಪ್ರಿಯತೆ-ವಾಸ್ತವಿಕತೆಗಳ ಅನುದ್ದೇಶಿತ ಘರ್ಷಣೆಗೆ ಇಲ್ಲಿ ಎಡೆಯಿಲ್ಲ. ಕಳೆದುಹೋದ ಯುಗವೊಂದನ್ನು ನಾವು ಹೊಗುವುದರಿಂದ ಭವ್ಯವ್ಯಕ್ತಿಗಳನ್ನೂ ಮಾನವೀಯಗೊಳಿಸಿಯೂ ಇದ್ದಾರೆ ಕುವೆಂಪು. ಕಲೆಯ ದೃಷ್ಟಿಯಿಂದ ಕೃತಿಯ ಪ್ರಾರಂಭದಲ್ಲಿನ ಏಕಲವ್ಯ-ಅವನ ತಾಯಿಯ ಸಂಭಾಷಣೆ ಈ ಜಗತ್ತಿಗೂ, ಅಶ್ವತ್ಥಾಮ, ದ್ರೋಣ, ಅರ್ಜುನರು ನಿವಾಸಿಗಳಾದ ಜಗತ್ತಿಗೂ ಇರುವ ಅಂತರವನ್ನು ಮನಸ್ಸಿನ ಮೇಲೆ ಮೂಡಿಸಲು ಶಕ್ತವಾಗುತ್ತದೆ ಏಕಲವ್ಯನ ಕನಸಿಗೆ ಧ್ವನಿ ಏನೇ ಇರಲಿ, ಕಲೆಯ ದೃಷ್ಟಿಯಿಂದ ಅದು ಹೆಚ್ಚಿನದೇನನ್ನೂ ಸಾಧಿಸದು. 'ಬೆರಳ್-ಗೆ-ಕೊರಳ್'ನಲ್ಲಿ ಕುವೆಂಪು ಅವರ ದರ್ಶನ ಪೌರಾಣಿಕ ಸಾಮಗ್ರಿಯನ್ನು ಸಾರ್ಥಕವಾಗಿ ಬಳಸಿಕೊಂಡಿದೆ.

ಪೌರಾಣಿಕ ಸಾಮಗ್ರಿಯನ್ನು ವಿಶಿಷ್ಟರೀತಿಯಲ್ಲಿ ಬಳಸಿಕೊಂಡಿರುವವರೆಂದರೆ ಶ್ರೀರಂಗ. ಎಂದೋ ಕಳೆದುಹೋಗಿರಬಹುದಾದ ಯುಗದ ಕಥೆಗಳನ್ನು ಸಮಕಾಲೀನ ಜೀವನಕ್ಕೆ ಹೊಂದಿಸಿಕೊಂಡು ಆ ಕಥೆಗಳ ಮೇಲೂ ಈ ಯುಗದ ಜೀವನದ ಮೇಲೂ ಹೊಸ ಬೆಳಕು ಚೆಲ್ಲುವಂತೆ ಅಲ್ಲಲ್ಲಿ ಹೊಸ ದೀಪಗಳನ್ನು ನಿಲ್ಲಿಸುತ್ತಾರೆ. ಸಾಮಾಜಿಕ ನಾಟಕಗಳಲ್ಲಿ ಕಂಡಂತೆ ಇಲ್ಲಿಯೂ ಮಾತಿನ ವೇಗ, ಚಕಮಕಿಗಳನ್ನು ಕಾಣುತ್ತೇವೆ. 'ಅಮೃತ ರಂಗ'ದ ಮೂರು ನಾಟಕಗಳಲ್ಲಿ ಪುರಂದರದಾಸರು, ಯಯಾತಿ ಮತ್ತು ಸಾವಿತ್ರಿಯರ ಕಥೆಗಳ ಹೊಸ ನಿರೂಪಣೆಯುಂಟು. ಇಲ್ಲಿ ಕಥೆಯ ಬೆಳವಣಿಗೆಗಿಂತ ಜೀವನದ ಅನುಭವಗಳ ಅರ್ಥದ, ಜೀವನದ ಅರ್ಥದ ಅನ್ವೇಷಣೆಯುಂಟು. ಇದು ಸ್ಪಷ್ಟವಾಗಿ ಕಾಣುವುದು "ಸಂಜೀವಿನೀ"ಯಲ್ಲಿ. ನಾಟಕದ ಕಡೆಯ ಭಾಗದಲ್ಲ ದೇವಯಾನಿ ಎನ್ನುತ್ತಾಳೆ: "ತಾನು ನಷ್ಟವಾಗಿ ಹೊಸ ಯೌವನವನ್ನು ಹುಟ್ಟಿಸುವ ಮುಪ್ಪು ಸಂಜೀವಿನೀ." ಶರ್ಮಿಷ್ಠೆ ಎನ್ನುತ್ತಾಳೆ: "ತಾನು ಭೋಗವಾಗಿ ಅಂಕುರಿಸಿ ತ್ಯಾಗವಾಗಿ ಹುಟ್ಟಿಬರುವ ಸೃಷ್ಟಿಯ ನೀತಿಯೇ ಪ್ರೀತಿ, ಪ್ರೀತಿಯೇ ಸಂಜೀವಿನೀ." ಯಯಾತಿ ಹೇಳುತ್ತಾನೆ: "ಈಗ ಅನುಭವದಿಂದ ಹೇಳುವೆನು ಕೇಳಿರಿ. ತಾನು ತಾನಲ್ಲ ಎಂಬಂತೆ ನಡೆಯುವುದೇ ಸಂಜೀವಿನಿ," ಕ್ರಿಯೆ ಒಂದು ಸ್ಪಷ್ಟ ಗುರಿಯತ್ತ ಸಾಗುವುದಿಲ್ಲ ಎನ್ನುವುದೊಂದು ಕೊರತೆ ಈ ನಾಟಕದಲ್ಲಿ. ಶ್ರೀರಂಗರ ವಿಶಿಷ್ಟ ಯಶಸ್ಸನ್ನು ಕಾಣಬೇಕಾದರೆ 'ರಂಗಭಾರತ', 'ಸಂಪದ್ಧರ್ಮ' ಮೊದಲಾದ ಕೃತಿಗಳಿಗೆ ಹೋಗಬೇಕು. ಈಚೆಗಿನ ಅವರ ಸಾಮಾಜಿಕ ನಾಟಕಗಳಲ್ಲಿ ಕಾಣುವ ವಿಷಾದದ ಛಾಯೆ ಇಲ್ಲಿಯೂ ಕಾಣುತ್ತದೆ. ಧೃತರಾಷ್ಟ್ರ ಎನ್ನುತ್ತಾನೆ. "ಇಂದಿನವರು, ಹಿಂದಿನವರು! ಎಲ್ಲಾ ಒಂದೇ! ದೇವರು ಹೇಳಿದ್ದಂತೆ ಪ್ರತಿಯೊಂದು ಯುಗಕ್ಕೆ ತಾನು ಹುಟ್ಟಿ ಬರ್ತೇನೆ ಅಂತ? ಅದೇನು ದೊಡ್ಡ

ಕೆಲಸವೂ ? ನಾವೂ ಹುಟ್ಟಿ ಬರ್ತೀವಿ....ಹುಟ್ಟಿ ಬರ್ತೀವಿ ಅಂದ್ರೆ ಅವನ ಹಾಗಲ್ಲ. ಬೇರೆ ಬೇರೆ ಅವತಾರದೊಳಗೆ ! ಬೇಕಾದ ಯುಗ ಬರಲಿ ನಮ್ಮ ಅವತಾರ ಇದ್ದಕ್ಕಿದ್ದ ಹಾಗೇ !" ಯುಧಿಷ್ಠಿರನ "ಪರೈಃ ಪರಿಭವೇ ಪ್ರಾಪ್ತೇ ವಯಾಂ ಪಂಚೋತ್ತರಂ ಶತಂ ! ಪರಸ್ಪರ ವಿರೋಧೇತು ವಯಂ ಪಂಚೈವ ತೇಶತಂ !" (ಇತರರು ನಮ್ಮನ್ನು ಎದುರಿಸಿದಾಗ ನಾವು ನೂರೈವರು, ನಮ್ಮ ನಮ್ಮಲ್ಲಿ ವಿರೋಧ ಬಂದಾಗ ನಾವು ಐವರು ಅವರು ನೂರು ಮಂದಿ–ಚಿತ್ರಸೇನನಿಗೆ ದುರ್ಯೋಧನ ಸೆರೆ ಸಿಕ್ಕಾಗ ಆಡುವ ಮಾತು) ಎನ್ನುವ ಮಾತಿಗೆ ಧೃತರಾಷ್ಟ್ರ (ಇಪ್ಪತ್ತನೆ ಶತಮಾನದ ಧೃತರಾಷ್ಟ್ರ) ಎನ್ನುತ್ತಾನೆ, "ಇದೊಂದು ಹೊಸ ರೀತಿ, ರಾಜ್ಯ ನಡೆಸುವವರದು. ತಮ್ಮ ಪಕ್ಷದ ಅಭಿಮಾನಕ್ಕೆ ತಮ್ಮ ಮಾನ ಕಳೆದುಕೊಳ್ಳೋದು ತಮ್ಮವರು ಕೆಟ್ಟುದನ್ನು ಮಾಡಿದರೂ ಅವರನ್ನು ಎತ್ತಿ ಹಿಡಿಯೋದು." ಭಾರತದ ಧೃತರಾಷ್ಟ್ರ ಕಣ್ಣಿಲ್ಲದ ಕುರುಡ ; ನಾಟಕದಲ್ಲಿ ಸಂಜಯ ಧೃತರಾಷ್ಟ್ರನಿಗೆ ಹೇಳುತ್ತಾನೆ, ಅವನು ಕಣ್ಣಿಲ್ಲದ ಕುರುಡನಾಗಿದ್ದ ರಾಜ, ಕಣ್ಣಿದ್ದೂ ಕುರುಡರು ಇಂದಿನ ರಾಜರಾದ ಪ್ರಜಾ ಎಂದು ನಾಟಕ ನೋಡುವಾಗ ಬೆಳಕು ಇತ್ತ ಲಿಂದ ಅತ್ತ ಸರಿದಂತೆ ಮಹಾಭಾರತದ ಯುಗದಿಂದ ಸ್ವತಂತ್ರ ಭಾರತದ ಯುಗಕ್ಕೆ ತಿರುಗುತ್ತೇವೆ, ಮಾನಸಿಕವಾಗಿ ಎರಡೂ ಯುಗಗಳ ನಿವಾಸಿಗಳಾಗುತ್ತೇವೆ.

ಗಿರೀಶ ಕಾರ್ನಾಡರ 'ಯಯಾತಿ' ಈ ಯುಗದ ಅತಿ ಯಶಸ್ವಿ ನಾಟಕಗಳಲ್ಲಿ ಒಂದು. ತಮ್ಮ ಪ್ರಾರಂಭದ ನಾಟಕದಲ್ಲಿಯೆ ಮಾಧ್ಯಮದ ಮೇಲೆ ಅವರು ಸಾಧಿಸಿದ ಸ್ವಾಮ್ಯ ಮೆಚ್ಚುವಂತಹುದು. ಭಾಷೆಯ ಬಳಕೆಯಲ್ಲಿ ನಾಟಕೀಯತೆ ಸ್ವಲ್ಪ ಹೆಚ್ಚಾಯಿ ತೆನ್ನಿಸುತ್ತದೆ. ಅಲ್ಲದೆ ಉತ್ತರಾರ್ಧದಲ್ಲಿ ಲಕ್ಷ್ಯವನ್ನು ಸೆಳೆಯುವ ಪುರು ತೀರ ನಿಷ್ಕ್ರಿಯತೆಯ ಮೂರ್ತಿಯಾಗುವುದೊಂದು ದೋಷ. ಆದರೆ ಚಿತ್ರಲೇಖೆಯ ಪಾತ್ರವನ್ನು ಸೇರಿಸಿರುವುದು ತುಂಬ ಸಾರ್ಥಕವಾಗಿದೆ. ಅವಳು ವಿಷ ಕುಡಿದಳೆಂದು ಯಯಾತಿ, ಹೇಳಿದಾಗ ಶರ್ಮಿಷ್ಠೆ, "ಮಹಾರಾಜರ ಪುನರುಜ್ಜೀವನದ ಪ್ರಥಮ ವಿಜಯ !" ಎನ್ನುವ ಮಾತು ಛಾಟಿಯಂತೆ ತಾಗುತ್ತದೆ. ಕೃತಿಯ ಕಡೆಯ ಮಾತುಗಳು ಪುರು ವಿನ : "ಸಾಯಲಿಕ್ಕಷ್ಟೆ ನಿನ್ನನ್ನು ಕರೆತಂದಂತಾಯಿತು....ನಿನ್ನ ಆತ್ಮಘಾತದ ಅರ್ಥ ಮಾತ್ರ ನಮಗಾಗುವುದಿಲ್ಲ....ಇದೆಲ್ಲದರ ಅರ್ಥವೇನು ದೇವರೆ ? ಇದರ ಅರ್ಥವೇನು ?"– ಆ ಸನ್ನಿವೇಶದಲ್ಲಿ ಸ್ವಲ್ಪ ಬರಡಾಯಿತು. ಆದರೂ ಇಲ್ಲಿನ ಪಾತ್ರಗಳು ಜೀವಂತ ಸಂಕೇತ ಗಳಾಗುತ್ತವೆ, ವ್ಯಕ್ತಿತ್ವದೊಡನೆ ಸಾಂಕೇತಿಕ ಗಹನತೆಯನ್ನು ಪಡೆದುಕೊಳ್ಳುತ್ತವೆ.

ಪು. ತಿ. ನ. ಅವರ 'ಅಹಲ್ಯೆ' ಮತ್ತು 'ಗೋಕುಲ ನಿರ್ಗಮನ' ನಾಟಕ ಗಳನ್ನು ಸಾಮಾನ್ಯವಾಗಿ 'ಅಪೇರಾ'ಗೆ ಹೋಲಿಸಿ, ಗೀತನಾಟಕಗಳೆಂದು ಕರೆಯು ವುದು ಸಂಪ್ರದಾಯವಾಗಿದೆ. ಎರಡು ಕೃತಿಗಳಲ್ಲಿನ ವಿಚಾರದ ಗಾಂಭೀರ್ಯ 'ಅಪೆರಾ' ದಲ್ಲಿ ಸಾಮಾನ್ಯವಾಗಿ ಕಾಣುವ ವಿಚಾರದ ಗಾಂಭೀರ್ಯವನ್ನು ಮೀರಿದುದು. 'ಅಹಲ್ಯೆ' ಯಲ್ಲಿ ಒಂದು ಸೂಕ್ಷ್ಮ ಚೇತನ ದಾರಿತಪ್ಪಿ ಮತ್ತೆ ಭಗವತ್ಕೃಪೆಯಿಂದ ಮಾನವತೆ ಯನ್ನು ಪಡೆದ ಚಿತ್ರವಿದೆ. 'ಗೋಕುಲ ನಿರ್ಗಮನ'ದ ಮುಕ್ತಾಯ ಭಾಗದಲ್ಲಿ

ಕೃಷ್ಣ 'ಕೊಳಲು ಬನದೊಳಿರಲಿ' ಎನ್ನುತ್ತ, "ಮಿಕ್ಕ ಜಗಕಿದರ ಮಧುರ ಭಾವಗಳ್ ತಕ್ಕುವಲ್ಲವೇಸೊ ಅಹಂ ಮದ ಉಕ್ಕ ಸೊಕ್ಕಿದರ್ಗುಕ್ಕೆ ತಕ್ಕುದೇನೊ!" ಎನ್ನುವ ಮಾತುಗಳು ನಾಟಕದ ಜಗತ್ತಿನ ಕಡೆ ಮತ್ತೆ ಹೊಸ ಬೆಳಕಿನಲ್ಲಿ ನಾವು ಕಣ್ಣು ಹರಿಸು ವಂತೆ ಮಾಡಬೇಕು. ಪು. ತಿ. ನ. ಅವರ ಗೀತೆಗಳು ಮನಮೋಹಕವಾದುವು, "ಎಚ್ಚರೆಚ್ಚರು ಮಾರ" "ನಿಲ್ಲಿಸದಿರು ವನಮಾಲಿ" "ಕೃಷ್ಣನ ಕೊಳಲಿನ ಕರೆ" "ಎಲ್ಲವಳೆಲ್ಲವಳೆಲ್ಲವಳು ?", "ಬರುತಿಹನೇ ನೋಡೆ", "ಕೊಳಲು ಬನದೊಳಿರಲಿ" ಇಂತಹ ಗೀತೆಗಳನ್ನು ಕೊಟ್ಟ ಕವಿಗೆ ನಾವು ಕೃಜ್ಞರಾಗಿರಬೇಕು. ನಾಟಕದ ಚೌಕಟ್ಟಿನಲ್ಲಿ ಸೊಗಸಾಗಿ ಅಡಕವಾಗುತ್ತವೆ ಇವು. 'ಒಲಿದ ಮುನ್ನ ಜಗವೆಲ್ಲವು ನಾ' ಅಂತಹ ಕೆಲವು ಗೀತಗಳು ನೀರಸವಾದರೂ ಇಂತಹವು ಕೆಲವೇ. ಪ್ರಕೃತಿಯನ್ನು ಜೀವಂತಗೊಳಿಸ ಬಲ್ಲರು ಪು.ತಿ.ನ. ಇವರ 'ಹಂಸ ದಮಯಂತಿ' 'ಅಪೆರಾ'ದ ಮಾದರಿಯಲ್ಲಿದೆ ಎನ್ನ ಬಹುದು.

ಗಮನಾರ್ಹವಾದ ಗೀತರೂಪಕಗಳ ಸಂಕಲನವೊಂದನ್ನು ಗೌರೀಶ ಕಾಯ್ಕಿಣಿ ಹೊರತಂದಿದ್ದಾರೆ. ಇವರ 'ಕ್ರೌಂಚಧ್ವನಿ'ಯಲ್ಲಿ ಆರು ಗೀತ ರೂಪಕಗಳಿವೆ. ಪು.ತಿ.ನ. ಅವರ ಉತ್ತಮ ಗೀತೆಗಳಿರುವ, ಭಾವವೇ ನಿರಾಯಾಸವಾಗಿ ಶಬ್ದರೂಪ ಪಡೆದಿದೆ ಎನ್ನುವ ಪವಾಡ ಸದೃಶ ಪರಿಪೂರ್ಣತೆ ಇಲ್ಲಿ ಕಾಣದಿದ್ದರೂ ಲಾಲಿತ್ಯ ಮಾಧುರ್ಯ ಗಳಿವೆ, ಚಿತ್ರಮಯ ಶೈಲಿ ಇದೆ ಎನ್ನುವುದು ನಿಜ.

ಈ ಅವಧಿಯ ನಾಟಕಗಳಲ್ಲಿ ಇನ್ನೆರಡು ಕೃತಿಗಳಿಗೆ ಅಗತ್ಯವಾಗಿ ಪ್ರಶಂಸೆ ಸಲ್ಲಬೇಕು. ಕನ್ನಡ ನಾಟಕದಲ್ಲಿ ಸಾಮಾನ್ಯವಾಗಿ ಸಾಧಿಸಿರುವುದನ್ನು ಇವು ಸಾಧಿಸಿವೆ. ಇವೆರಡೂ ವಾತಾವರಣ ಪ್ರಧಾನವಾದ ಕೃತಿಗಳು. ಜಡಭರತರ "ಮೂಕಬಲಿ" ಯನ್ನು ಒಂದು ಮಗುವಿನ ಜನನ, ಕಾಯಿಲೆ ಮತ್ತು ಸಾವುಗಳ ಸುತ್ತ ಹೆಣೆದಿದೆ. ಹಲವರು ವ್ಯಕ್ತಿಗಳ ಮತ್ತು ಎರಡು ಸಂಸಾರಗಳ ಭಾಗ್ಯ ಈ ಎಳೆಯ ಮಗುವಿನ ಜೀವನದ ನೂಲಿನ ಕೊನೆಯಲ್ಲಿ ತೂಗಾಡುತ್ತಿದೆ. ಹಾಲಳ್ಳಿಯೇ ದುರಂತಕ್ಕೆ ಆವರಣ ವಾಗಿ ತನ್ನನ್ನು ತಾನೇ ಮಾರ್ಪಡಿಸಿಕೊಂಡಂತೆ ಭಾಸವಾಗುತ್ತದೆ. ಕೀರ್ತಿನಾಥರ 'ಆ ಮನೆ'ಯಲ್ಲಿ ಆಲದ ಮರ, ಅದರ ಹಿಂದೆ ಮನೆ; ಹೊರಗೆ ತೊಂಭತ್ತು ವರ್ಷದ ಮುದುಕ, ನಲವತ್ತೈದರ ಹಣ್ಣು ಮಾರುವವಳು ಬೇರೆ ಕೆಲಸವಿಲ್ಲವಾಗಿ ಹರಟೆಯಲ್ಲಿ ತೊಡಗುತ್ತಾರೆ. ಹಳೇ ಮನೆಯತ್ತ ಮಾತು ಹೊರಳುತ್ತದೆ. ಆ ಹೊತ್ತಿಗೆ ಹುಡುಗರ ತಂಡ ಪ್ರತ್ಯಕ್ಷವಾಗುತ್ತದೆ. ಆಟಕ್ಕೆಂದು ಮನೆಯನ್ನು ಹೊಗುತ್ತದೆ. ಹುಡುಗರ ಮಾತು, ಆಟ, ಜಗಳ ಎಲ್ಲವನ್ನೂ ಸಹಜವಾಗಿ ಉಳಿಸಿಕೊಂಡು ಗಂಭೀರತೆಯನ್ನು ಸೃಷ್ಟಿಸಿರುವ ಕಲೆ ಅಸಾಧಾರಣವಾದುದು. ಅತಿ ಮಾನುಷ ಜಗತ್ತಿನ ನಿವಾಸಿ ತಾಯಿ ಕಣ್ಣಿಗೆ ಕಾಣುವಂತೆ ಪ್ರವೇಶಿಸುವುದು ಆವರೆಗೆ ಸಾಧಿಸಿದ ಪರಿಣಾಮವನ್ನು ದುರ್ಬಲ ಗೊಳಿಸುತ್ತದೆ.

ಕನ್ನಡ ನಾಟಕಗಳ ಕ್ಷೇತ್ರದಲ್ಲಿ ಏಕಾಂಕ ನಾಟಕ ಮತ್ತು ಪ್ರಸಾರ ನಾಟಕಗಳು

ಸಂಖ್ಯೆಯಲ್ಲಿ ವಿಪುಲವಾಗಿ ಬೆಳೆದಿವೆ. ನಮ್ಮ ನಟರು ಬಹುಮಟ್ಟಿಗೆ ಕಲಾವಿಲಾಸಿಗಳು ಅಭಿನಯವನ್ನೆ ವೃತ್ತಿಯನ್ನಾಗಿ ಮಾಡಿಕೊಂಡವರಲ್ಲ. ದೀರ್ಘ ನಾಟಕಗಳನ್ನು ಮಾಡಲು ವ್ಯವಧಾನವಿಲ್ಲದವರು ಇವರು. ಅಲ್ಲದೆ ನಮ್ಮಲ್ಲಿ ಬಹುಮಟ್ಟಿಗೆ ನಾಟಕ ಅಭ್ಯಾಸಗಳು ಬೇರೊಂದು ಕಾರ್ಯಕ್ರಮದ ಭಾಗ ಮಾತ್ರ, ಒಮ್ಮೊಮ್ಮೆ ಕಾರ್ಯಕ್ರಮಕ್ಕೆ ಸಭಿಕರನ್ನು ಆಕರ್ಷಿಸಲು ತಯಾರಿಸುವ ಬೋನಿನೊಳಗಿನ ಕೊಬ್ಬರಿಚೂರು. ಈ ಕಾರಣಗಳಿಂದ ಏಕಾಂಕ ನಾಟಕದ ಸಂಖ್ಯೆ ಬೆಳೆದಿದೆ. ಸುಮಾರು ಮುಕ್ಕಾಲು ಗಂಟೆ ಒಂದು ಗಂಟೆ ಹೇಗೊ ಜನರನ್ನು ನಗಿಸಿ ಕೃತಕೃತ್ಯವಾಗುತ್ತವೆ. ಶ್ರೀರಂಗರೊಬ್ಬರು ಈ ಮಾಧ್ಯಮವನ್ನು ‘ ಯಮುನ ಸೋಲು ’, ‘ ಅಶ್ವಮೇಧ ’, ‘ ಕತ್ತಲೆ-ಬೆಳಕು ’ ಅಂತಹ ಕೃತಿಗಳಲ್ಲಿ ಬಳಸಿಕೊಂಡರು. ಹೀಗೆಯೇ ಬಳಸಿಕೊಳ್ಳಲು ಶಕ್ತರಾಗಿದ್ದ ಕಾರಂತರು ಹೆಚ್ಚಾಗಿ ಬರೆಯಲಿಲ್ಲ. ಬೇಂದ್ರೆಯವರ ‘ ಜಾತ್ರೆ ’, ವಿನಾಯಕರ “ ವಿಮರ್ಶಕ ವೈದ್ಯ ” ಇಂತಹವು ಹೆಚ್ಚು ಬಾರಲಿಲ್ಲ. ಬಾನುಲಿ ಕೇಂದ್ರಗಳು ಹಲವು ಉತ್ತಮ ಕೃತಿಗಳ ಸೃಷ್ಟಿಗೆ ಪ್ರೇರಕವಾದುವು. ರಾಮಚಂದ್ರಶರ್ಮರ ‘ ಸೆರಗಿನ ಕೆಂಡ ’ ಬಾನುಲಿ ಪ್ರಸಾರಕ್ಕಾಗಿಯೆ ಬರೆದುದು. ಎಚ್. ಕೆ. ರಂಗನಾಥರು ಕೆಲವು ಒಳ್ಳೆಯ ನಾಟಕಗಳನ್ನಿತ್ತಿದ್ದಾರೆ. ‘ ರಜತರೇಖೆ ’ ಸಿದ್ಧಯ್ಯ ಪುರಾಣಿಕರ ಬಾನುಲಿ ರೂಪಕಗಳ ಸಂಗ್ರಹ. ಕಲಾತ್ಮಕವಾಗಿ ನೋಡಿದರೆ ‘ ಷಾನಿಗೆ ಶ್ರದ್ಧಾಂಜಲಿ ’, ‘ ದುಃಖಸೇತು ’ ಇಂತಹವು ಸೋಲುತ್ತವೆ. ಆದರೆ ಪದ್ಯಮಾಧ್ಯಮದ ಮತ್ತು ಗೀತೆಯ ಬಳಕೆಯಲ್ಲಿ ಯಶಸ್ಸನ್ನು ಸಾಧಿಸುತ್ತಾರೆ ಪುರಾಣಿಕರು. ‘ ರಜತರೇಖೆ ’, ‘ ಗಿರಿಜೆಯ ಗೆಲವು ’ ಇವು ಸುಂದರ ಕೃತಿಗಳು, ಛಾಯಾ ನಾಟಕದ ಮಾಧ್ಯಮವಲ್ಲಿ ಶಿವರಾಮ ಕಾರಂತರು ಪ್ರಯೋಗ ಮಾಡಿದ್ದಾರೆ. ಕುವೆಂಪು ಅವರ ‘ ಬಲಿದಾನ ’ “ ಬಲಿದಾನಕುಂಟೆ ಕೊನೆ? ಬಲಿಪರಂಪರೆಯಲ್ತೆ ಸ್ವಾತಂತ್ರ್ಯಜೀವನಂ ! ” ಮತ್ತು “ ಅಂತರಂಗದ ಶೃಂಖಲೆಗಳವು ವಜ್ರೋಪಮಂ ”—ಈ ಪಂಕ್ತಿಗಳಲ್ಲಿ ರೂಪಿತವಾದ ದರ್ಶನದ ಅಭಿವ್ಯಕ್ತಿ.

ಸುಮಾರು ನಲವತ್ತೈದು ವರ್ಷಗಳ ಹಿಂದೆ ಉತ್ತಮ ನಾಟಕಗಳನ್ನು ಕಂಡ ಕನ್ನಡ ತನ್ನ ಭರವಸೆ ಸಾರ್ಥಕವಾದುದನ್ನು ಕಂಡಿಲ್ಲ ಎಂದು ಆಗಲೆ ಹೇಳಿದೆ. ‘ ಶ್ರೀ ’, ಕೈಲಾಸಂ, ಶ್ರೀರಂಗರು ಆಧುನಿಕ ಕನ್ನಡನಾಟಕದ ಯುಗದ ಪ್ರಾರಂಭದಲ್ಲಿಯೆ ಗಳಿಸಿದ ಸಾಧನೆ ವಿಸ್ಮಯಕರವಾದುದು. ‘ ಅಶ್ವತ್ಥಾಮನ್ ’ ಅಂತಹ ಕೃತಿಯಲ್ಲಿ ‘ ಶ್ರೀ ’. ಅವರು ಕ್ರಿಯೆ-ಭಾವನೆ-ಚಿಂತನೆ(reflection) ಗಳ ಸಾಮರಸ್ಯವನ್ನು ಸಾಧಿಸಿದರು; ಇದನ್ನು ಅನಂತರದ ನಾಟಕಗಳಲ್ಲಿ—ಕೆಲವು ಅಪವಾದಗಳನ್ನು ಹೊರತಾಗಿ—ನಾವು ಕಾಣುವುದಿಲ್ಲ. ಪದ್ಯಮಾಧ್ಯಮದ ಬಳಕೆಯಲ್ಲಿಯೂ ಅವರು ಯಶಸ್ವಿಯಾದರು. ಪದ್ಯ ಮತ್ತು ಗದ್ಯಮಾಧ್ಯಮಗಳನ್ನು ಅಲಂಕಾರದ ದೃಷ್ಟಿಯಿಂದ ಮಾತ್ರ ಆರಿಸಿಕೊಳ್ಳುವುದಲ್ಲ. ಭಾವತೀವ್ರತೆ ಇದ್ದೆಡೆಯಲ್ಲಿ ಪದ್ಯಮಾಧ್ಯಮ ಅಪೇಕ್ಷಣೀಯ. ಪದ್ಯದಲ್ಲಿ ಅಂತರ್ಗತವಾದ ಲಯ ಕ್ರಿಯೆಯಲ್ಲಿನ ಲಯವನ್ನು ಪ್ರತಿಧ್ವನಿಸುವಂತಾಗಬೇಕು. (‘ ಯಯಾತಿ ’ಗೆ ಗದ್ಯಮಾಧ್ಯಮಕ್ಕಿಂತ ಪದ್ಯಮಾಧ್ಯಮ

ಉಚಿತವಾಗಿರುತ್ತಿತ್ತೇನೊ!) ಈ ದಿಕ್ಕಿನಲ್ಲಿ ತಕ್ಕಷ್ಟು ಪ್ರಯೋಗ ನಡೆಯಲಿಲ್ಲ. ಕನ್ನಡದಲ್ಲಿ ನಾಟಕ ಸಂಪ್ರದಾಯ ಬೆಳೆಯುವುದಂತೂ ದುಸ್ಸಾಧ್ಯವಾಗಿದೆ. ಇಪ್ಪತ್ತು ವರ್ಷಗಳ ಹಿಂದೆ ಕೆಲವು ಕಲಾವಿದರುಗಳ ಗುಂಪುಗಳು ಉತ್ಸಾಹದಿಂದ ನಾಟಕಗಳ ಅಭಿನಯವನ್ನು ಕೈಗೊಳ್ಳುತ್ತಿದ್ದುವು. ಈಗ ಅಂತಹ ಗುಂಪುಗಳೂ ಕಡಿಮೆಯಾಗಿವೆ. ದೂರದ ದೆಹಲಿಯಲ್ಲಿ ಕನ್ನಡ-ಭಾರತೀ ಸಂಘದ ಸದಸ್ಯರು ಕೆಲವು ಅಭಿನಂದನೀಯ ಪ್ರಯೋಗಗಳನ್ನು ಕೈಗೊಂಡಿದ್ದಾರೆ. ನಾಡಿನಲ್ಲಿ ಸುಸಜ್ಜಿತ ನಾಟಕಮಂದಿರಗಳು ಅಲ್ಲಲ್ಲಿ ಬೆಳೆಯದಿದ್ದರೆ ನಾಟಕದಲ್ಲಿ ಸಂಪ್ರದಾಯವೂ ಬೆಳೆಯಲು ಸಾಧ್ಯವಾಗ ಲಾರದು. ಕಾದಂಬರಿ, ಕಾವ್ಯ, ಸಣ್ಣಕಥೆಗಳು ಕೊಠಡಿಗಳಲ್ಲಿ ಸಿದ್ಧವಾಗಬಹುದು. ನಾಟಕಕಾರನಿಗೇ ತಾನು ರಚಿಸಿದ ಕೃತಿ ಸಜೀವವಾಗುವುದು ಅದನ್ನು ರಂಗಭೂಮಿಯ ಮೇಲೆ ಕಂಡಾಗ. ಬೇಂದ್ರೆಯವರ ನಾಟಕಗಳು ರಂಗಭೂಮಿಯಮೇಲೆ ಬರಲಿಲ್ಲ. 'ಶ್ರೀರಂಗ'ರ ಎಷ್ಟು ನಾಟಕಗಳು ಪುಟಗಳಲ್ಲಿಯೇ ಸೆರೆಯಾಗಿವೆಯೊ? 'ಕತ್ತಲೆ-ಬೆಳಕು', 'ದಾರಿ ಯಾವುದಯ್ಯಾ ವೈಕುಂಠಕೆ', 'ರಂಗಭಾರತ' ಇಂತಹವು ರಂಗ ಮಂದಿರವನ್ನು ಸ್ಪರ್ಶಿಸುವುದು ದಶಕಕ್ಕೊಮ್ಮೆ. ಸಭೆಗಳಿಗಾಗಿ ಸಿದ್ಧವಾದ ವೇದಿಕೆಯೆ ರಂಗಭೂಮಿಯಾಗಬೇಕಾದ ಆವಶ್ಯಕತೆಯೇ ಬಹಳವಾಗಿರುವಾಗ ಪ್ರಯೋಗಗಳಿಗೂ ಅವಕಾಶ ಕಡಿಮೆ. ಈ ಎಲ್ಲ ಕಷ್ಟಗಳೊಡನೆ ಸ್ವತಂತ್ರ ಭಾರತಕ್ಕೆ ಬಂದಿರುವ ಬೌದ್ಧಿಕ ಸೋಮಾರಿತನದ ಶಾಪಬೇರೆ. ಹೀಗಾಗಿ ಕೆಲವರು ಹಠವಾದಿಗಳ ಸೇವೆ ಮಾತ್ರ ಸಲ್ಲಬಹುದು ಕನ್ನಡನಾಟಕಕ್ಕೆ. 'ಶ್ರೀ'ಯವರು ದುರಂತನಾಟಕವನ್ನು ರಚಿಸಿದರು. ಕೈಲಾಸಂ, ಶ್ರೀರಂಗ, ಬೇಂದ್ರೆ ದುರಂತ—ಹಾಸ್ಯಗಳ ಮಧ್ಯದ ಗೋಡೆ ಯನ್ನು ಕೆಡವಿ, ಒಂದನ್ನೊಂದು ಬೆಳೆಸುವಂತೆ ಬೆರೆಸುವುದನ್ನು ತೋರಿಸಿದರು. ಒಂದು ಜೀವನ ದರ್ಶನ ನಾಟಕವನ್ನೆಲ್ಲ ಬೆಳಗುವಂತೆ ಶ್ರೀನಿವಾಸರು 'ಯಶೋಧರಾ' ರಚಿಸಿ ದರು, ಸರಳವೂ ಲಲಿತವೂ ಆದರೂ ಹಲವು ಶಿಖರಗಳನ್ನು ಮುಟ್ಟಬಲ್ಲ ಶೈಲಿಯನ್ನು ಸಾಧಿಸಿದರು. ತಂತ್ರದತ್ತ ಹೆಚ್ಚು ಗಮನ ಹರಿಸದಿದ್ದರೂ ಮಾಧ್ಯಮದಲ್ಲಿ ಹಲವು ಪ್ರಯೋಗಗಳನ್ನು ನಡೆಸಿದ ಕುವೆಂಪು 'ಬೆರಳ್-ಗೆ-ಕೊರಳ್'ನಲ್ಲಿ ಶ್ರೀನಿವಾಸರಂತೆ ಜೀವನ ದರ್ಶನದ ಅಭಿವ್ಯಕ್ತಿಯನ್ನು ಸಾಧಿಸಿದರು, ಪದ್ಯಮಾಧ್ಯಮಕ್ಕೆ ಭವ್ಯಶೈಲಿ ಯನ್ನು ತಂದಿತ್ತರು. ಪ್ರಾರಂಭದ ವರ್ಷಗಳಲ್ಲಿಯೆ ಇಂತಹ ಕೃತಿಗಳನ್ನು ಕಂಡ ನಾಟಕ ಎಷ್ಟು ಶ್ರೀಮಂತವಾಗಬೇಕಾಗಿತ್ತು, ಎಂತಹ ಸಾಹಸೀ ಪ್ರಯೋಗಗಳನ್ನು ಕಾಣಬೇಕಾಗಿತ್ತು! ಎಷ್ಟು ಸಂಪ್ರದಾಯಗಳು, ಪಂಥಗಳು ಜೀವಂತವಾಗಿರಬೇಕಾ ಗಿತ್ತು! ತರುಣವರ್ಗದ ನಾಟಕಕಾರಲ್ಲಿ ಕೆಲವರು ಚಲನಚಿತ್ರದ ತಂತ್ರಗಳನ್ನು ತಕ್ಕಷ್ಟು ವಿಮರ್ಶೆ ಇಲ್ಲದೆ ಬಳಸಲು ಪ್ರಯತ್ನಿಸುತ್ತಿರುವುದು ವ್ಯರ್ಥ ಪ್ರಯತ್ನ. ಚಲನಚಿತ್ರದ 'ಕ್ಯಾಮರ' ವೇಗವನ್ನು ಅನಿವಾರ್ಯಗೊಳಿಸುತ್ತದೆ. ವೇಗವಾಗಿ ಚಲಿಸುವ ಬೆಳಕು, ಒಮ್ಮೆ ಒಂದು ಪಾತ್ರದ ಮುಖದಮೇಲೆ, ಮತ್ತೊಮ್ಮೆ ಇನ್ನೊಂದು ಪಾತ್ರದ ತುಟಿಗಳಮೇಲೆ, ಮರುಕ್ಷಣ ಮತ್ತೊಂದು ಪಾತ್ರದ ಪಾದಗಳಮೇಲೆ, ಅನಂತರ

ದೂರದಲ್ಲಿರುವ ಒಂದು ಮನೆ ಅಥವಾ ವಾಹನ ಅಥವಾ ತೋಟದಮೇಲೆ ಪ್ರೇಕ್ಷಕರ ಗಮನ ವನ್ನು ಹರಿಸಿ ಒಂದು ಉದ್ದೇಶಿತ ಪರಿಣಾಮವನ್ನು ಸಾಧಿಸುವಂತೆ ನಾಟಕದಲ್ಲಿ ಸಾಧಿಸುವುದು ಅಸಾಧ್ಯ. "ಫ್ಲಾಷ್ ಬಾಕ್" ತಂತ್ರವೂ ನಮ್ಮ ರಂಗಭೂಮಿಯಮೇಲೆ ಅಷ್ಟು ಪರಿಣಾಮ ಕಾರಿಯಾಗಲಾರದು. ಸಾಮಾನ್ಯವಾಗಿ ಪೌರಾಣಿಕ ಸಾಮಗ್ರಿ ಇಂದಿನ ಮಧ್ಯಮವರ್ಗದ ಜೀವನ ಇವು ನಾಟಕಕಾರರ ಗಮನವನ್ನು ಸೆಳೆದಿವೆ. ಉಳಿದ ವರ್ಗಗಳಲ್ಲಿ ಹುದುಗಿರುವ ಸಾಮಗ್ರಿಯ ಸಂಪತ್ತು ಹಾಗೆಯೆ ಉಳಿದಿದೆ. ಮನೋವಿಶ್ಲೇಷಣೆ ಶ್ರೀರಂಗರಲ್ಲಿ ಪ್ರಾರಂಭ ವಾಗಿ ಕರ್ನಾಡರ ಕೃತಿಗಳಲ್ಲಿ ಅಷ್ಟೇ ಪರಿಣಾಮಕಾರಿಯಾಗಿ ಕಂಡುಬಂದರೂ, ಒಟ್ಟಿನಲ್ಲಿ ನಮ್ಮ ನಾಟಕಕಾರರಿಗೆ ಮಾನವ ಸ್ವಭಾವದ ಪೃಥಕ್ಕರಣೆಯಲ್ಲಿ ಆಸಕ್ತಿ ಕಡಮೆ ಎಂದು ತೋರುತ್ತದೆ. ಒಂದು ಜೀವನ ದರ್ಶನದ ಅಭಿವ್ಯಕ್ತಿ ಇಲ್ಲವೆ ಸ್ವಾರಸ್ಯವಾದ ಕಥೆಯ ನಿರೂ ಪಣೆ-ಇದಕ್ಕಾಗಿಯೆ ಬಹುಮಂದಿ ನಾಟಕಕಾರರು ಈ ಮಾಧ್ಯಮವನ್ನು ಬಳಸಿಕೊಳ್ಳುತ್ತಿ ದ್ದಾರೆ. ಸಂಕೀರ್ಣಭಾವಗಳ ಅತಿ ತೀವ್ರತೆಯ ನಿರೂಪಣೆಯೂ ನಮ್ಮಲ್ಲಿ ಕಾಣ ಬರುತ್ತಿಲ್ಲ. ಸಾಮಾನ್ಯವಾಗಿ ಪಾತ್ರಗಳು ಕಥೆಯ ಆವಶ್ಯಕತೆಯನ್ನು ಪೂರಯಿಸುವುವು. ನಾಟಕ ಮುಗಿದನಂತರವೂ ಶಕಾರನಂತೆ, ಶಕುಂತಳೆಯಂತೆ, ಹ್ಯಾಮ್‌ಲೆಟ್‌ನಂತೆ, ನಮ್ಮ ಮನಸ್ಸಿನಲ್ಲಿ ನಿಂತು ಮತ್ತೆಮತ್ತೆ ನಮ್ಮ ಲಕ್ಷ್ಯವನ್ನು ಸೆಳೆಯುವ ಪಾತ್ರಗಳು ಆಧುನಿಕ ಕನ್ನಡ ನಾಟಕಗಳಲ್ಲಿ ಎಷ್ಟಿವೆ? ಭಾವಪರವಶತೆಯಿಂದ (sentimentality) ಕಣ್ಣೀರು ಕರೆಯಿಸುವ ಪಾತ್ರಗಳುಂಟು. ಪತಿಭಕ್ತಿ, ಮಾತೃಪ್ರೇಮ, ಆದರ್ಶಪ್ರೇಮ ಇಂತಹ ಆದರ್ಶಗಳನ್ನು ಬಳಸಿಕೊಂಡು ಸುಲಭವಾಗಿ ನಮ್ಮನ್ನು ಮೆಚ್ಚಿಸಿಬಿಡುವ ಪಾತ್ರಗಳುಂಟು. ಆದರೆ ನಾಟಕಕಾರನ ವಿಶಿಷ್ಟ, ಜೀವಂತಸೃಷ್ಟಿ ಎಂದು ಮನಸ್ಸಿನಲ್ಲಿ ನಿಲ್ಲುವ ಪಾತ್ರಗಳು—?

ಭಾರತಕ್ಕೆ ಸ್ವಾತಂತ್ರ್ಯ ಬಂದ ತರುಣದಲ್ಲಿ, ಗುಪ್ತರ ಕಾಲದಲ್ಲಿ ಭಾರತದಲ್ಲಿ, ಪೆರಿಕ್ಲೀಸ್‌ನ ಕಾಲದಲ್ಲಿ ಗ್ರೀಸ್‌ನಲ್ಲಿ, ಎಲಿಸಬೆತ್‌ಳ ಕಾಲದಲ್ಲಿ ಇಂಗ್ಲೆಂಡಿನಲ್ಲಿ ಬಂದಂತೆ ಚೈತನ್ಯದಿಂದ ತುಂಬಿತುಳುಕುತ್ತಿರುವ ಸಾಹಿತ್ಯ ಸೃಷ್ಟಿಯಾಗಬೇಕಾಗಿತ್ತು. ಭ್ರಮ ನಿರಸನವಾದ ಈ ವರ್ಷಗಳಲ್ಲಿ ರೋಷ, ಸಾಹಿತ್ಯಕ್ಕೆ ಪ್ರಚೋದನೆಯಾಗ ಬೇಕಾಗಿತ್ತು. ಲಂಕೇಶ್‌ರ ಕೃತಿಗಳಲ್ಲಿ ಮಾತ್ರ ಈ ಭ್ರಮನಿರಸನ ಸ್ವಲ್ಪ ರೂಪ ತಾಳಿವೆ.

ಪ್ರಾಯಶಃ, ನಮ್ಮ ಬೌದ್ಧಿಕ ವಾತಾವರಣವನ್ನೂ ನಾಟಕಗಳ ಪ್ರಕಟಣೆಗಳು ಮತ್ತು ಪ್ರದರ್ಶನಗಳಿಗಿರುವ ಸೌಕರ್ಯ—ಇವನ್ನು ಗಮನಿಸಿದರೆ ಶ್ರೀ ಅವರಿಂದ ಗಿರೀಶ ಕಾರ್ನಾಡರವರೆಗೆ ಕೆಲವರು ವ್ಯಕ್ತಿಗಳು ಸಾಹಸದಿಂದ ಮಾಡಿರುವ ಸಾಧನೆಗೆ ನಾವು ಕೃತಜ್ಞರಾಗಿರಬೇಕು. 'ಪ್ರಬುದ್ಧ ಕರ್ಣಾಟಕ'ದ ವಜ್ರಮಹೋತ್ಸವದ ಹೊತ್ತಿ ಗಾದರೂ ಕನ್ನಡ ಪ್ರೇಮಿಗಳು, ನಾಟಕ ಪ್ರೇಮಿಗಳು ಇನ್ನೂ ಸಂತೋಷದಿಂದ ಈ ಕ್ಷೇತ್ರವನ್ನು ವೀಕ್ಷಿಸುವಂತಾಗಲಿ!

[ಈ ಲೇಖನವನ್ನು ಸಿದ್ಧಗೊಳಿಸುವುದರಲ್ಲಿ ಮುಖ್ಯವಾಗಿ 'ನಡೆದು ಬಂದ

ದಾರಿ'ಯ ಮೊದಲ ಸಂಪುಟದಲ್ಲಿ ಶ್ರೀ ಕೆ. ಡಿ. ಕುರ್ತುಕೋಟಿ ಅವರ ಪ್ರಬಂಧ, ಶ್ರೀ ತ. ಸು. ಶಾಮರಾಯರ 'ಕನ್ನಡ ನಾಟಕ' ಮತ್ತು ಶ್ರೀ ಹಾ. ಮಾ. ನಾಯಕರ 'ಸಮೀಕ್ಷೆ' ಹಲವು ಕೃತಿಗಳತ್ತ ನನ್ನ ಗಮನವನ್ನು ಸೆಳೆದಿವೆ. ಈ ಲೇಖಕರಿಗೆ ನಾನು ಋಣಿ.]

ಜಿ. ಎಸ್. ಶಿವರುದ್ರಪ್ಪ

ಕಾವ್ಯಮೀಮಾಂಸೆ

೧

ಕಾವ್ಯಮೀಮಾಂಸೆ ಎಂದರೆ ಕಾವ್ಯವನ್ನು ಕುರಿತ ಚರ್ಚೆ ಎಂದು ಅರ್ಥ. ಕಾವ್ಯವೆಂದರೆ ಏನು? ಅದು ಏಕೆ ನಿರ್ಮಿತವಾಗುತ್ತದೆ? ಹೇಗೆ ನಿರ್ಮಿತವಾಗುತ್ತದೆ? ಅದರ ಉದ್ದೇಶ, ವ್ಯಾಪ್ತಿ, ಪ್ರಯೋಜನಗಳೇನು? ಎನ್ನುವ ಸಂಗತಿಗಳನ್ನು ಕುರಿತ ಚರ್ಚೆಯೆ ಕಾವ್ಯಮೀಮಾಂಸೆ. ಕಾವ್ಯ ನಿರ್ಮಿತಿಯನಂತರ ಅದನ್ನು ಆಸ್ವಾದಿಸುವ ಸಹೃದಯರ ಶುಚಿ ಸಾಮರ್ಥ್ಯಗಳನ್ನು ಕುರಿತ ವಿಚಾರ, ಕೃತಿಯನ್ನು ಕುರಿತ ಅಭಿಪ್ರಾಯ, ಟೀಕೆ, ಚರ್ಚೆ, ಗುಣಾವಗುಣ ವಿವೇಚನೆ ಮೌಲ್ಯ ನಿರ್ಧಾರ—ಇವುಗಳು ಕಾವ್ಯವಿಮರ್ಶೆಯ ವಲಯಕ್ಕೆ ಸೇರುತ್ತವೆ. ಆದರೆ ಈ ಎರಡೂ ಮುಖಗಳು ಒಂದಕ್ಕೊಂದು ಪೂರಕವಾಗಿ, ಒಂದರ ವಿಚಾರವನ್ನು ಚರ್ಚಿಸುವಾಗ ಮತ್ತೊಂದರ ಸಂಬಂಧ ಸಹಜವಾಗಿಯೆ ಗಮನಿಸುವಂಥದ್ದಾಗಿದ್ದರೂ, ಪ್ರಕೃತ ಪ್ರಬಂಧದ ಉದ್ದೇಶಕ್ಕಾಗಿ ಕಾವ್ಯ ಮೀಮಾಂಸೆಯ ವಿಷಯವನ್ನು ಮೇಲೆ ಹೇಳಿದ ಪರಿಧಿಯೊಳಗೆ ಬೇಕೆಂತಲೇ ಅಳವಡಿಸಿಕೊಂಡು ವಿವೇಚಿಸಲಾಗಿದೆ. ಅದರಲ್ಲಿಯೂ ಕಳೆದ ಇಪ್ಪತ್ತೈದು ವರ್ಷಗಳ—ಅಂದರೆ ೧೯೪೭ ರಿಂದ ಇತ್ತೀಚಿನ—ಅವಧಿಯಲ್ಲಿ ಕನ್ನಡದಲ್ಲಿ ಕಾವ್ಯ ಮೀಮಾಂಸೆ ಬೆಳೆದು ಬಂದ ರೀತಿಯನ್ನು ಕುರಿತದ್ದು.

ಕಾವ್ಯವೆಂದರೆ ಏನು?—ವಿಶಾಲವಾದ ಅರ್ಥದಲ್ಲಿ ಸಾಹಿತ್ಯವೆಂದರೇನು?—ಎಂಬ ಪ್ರಶ್ನೆಗೆ ಸರಳ ಸಾಧಾರಣವಾದ ಮೊದಲ ಉತ್ತರ ಅದು ಶಬ್ದಾರ್ಥಸಹಿತವಾದದ್ದು ಎನ್ನುವುದು. ಮನುಷ್ಯ ಎಂದರೆ ಎರಡು ಕಾಲುಗಳುಳ್ಳ ಒಂದು ಪ್ರಾಣಿ ವಿಶೇಷ ಎಂದು ಹೇಳುವುದು ಹೇಗೋ, ಹಾಗೆ 'ಕಾವ್ಯ ಶಬ್ದಾರ್ಥಸಹಿತವಾದದ್ದು' ಎನ್ನುವ ಈ ಪ್ರಾಥಮಿಕ ಸೂತ್ರ. ನಿಜ, ಕಾವ್ಯ ಶಬ್ದಾರ್ಥ ಸಹಿತವಾದದ್ದು; ಹಾಗೆಯೆ ನಮ್ಮ ದೈನಂದಿನ ವ್ಯವಹಾರದ ಸಾಮಗ್ರಿಯಾದ ಭಾಷೆಯೂ ಶಬ್ದಾರ್ಥ ಸಹಿತವಾದದ್ದೆ. ಆದ್ದರಿಂದ ಕಾವ್ಯದ ಶಬ್ದಾರ್ಥ ಸ್ವರೂಪದ, ವಿಶೇಷತೆಯನ್ನು ಕುರಿತ ಚರ್ಚೆಯೆ ಕಾವ್ಯ ಮೀಮಾಂಸೆಯ ಮೊದಲ ಹೆಜ್ಜೆ. ಕಾವ್ಯ ಅಥವಾ ಸಾಹಿತ್ಯದಲ್ಲಿ ನಮ್ಮ ಲೋಕ ವ್ಯವಹಾರದ ಮಾತುಗಳೆ, ಪದಗಳೆ ಇದ್ದರೂ, ಅವು ಲೋಕ ಹಾಗೂ ಶಾಸ್ತ್ರಗಳಲ್ಲಿ ಕಂಡು

ಬರುವ ಶಬ್ದಾರ್ಥಗಳಿಂದ ಭಿನ್ನವಾದ, ವಿಶಿಷ್ಟವಾದ ಒಂದು ಉಕ್ತಿ ವೈಚಿತ್ರ್ಯ, ರಮಣೀಯಾರ್ಥ ಪ್ರತಿಪಾದಕ ಶಕ್ತಿಯನ್ನು ಹೊಂದಿವೆಯಲ್ಲ! ಇದಕ್ಕೆ ಕಾರಣವೇನು? ಯಾವ ಕಾರಣದಿಂದ ಮತ್ತು ಯಾವ ರೀತಿಯಿಂದ ಕಾವ್ಯದ ಶಬ್ದಾರ್ಥಗಳು ಲೋಕ ವ್ಯವಹಾರದ ಶಬ್ದಾರ್ಥಗಳಿಂದ ಬೇರೆಯಾದ ನಿಲುವನ್ನು ಪಡೆಯುತ್ತವೆ ಎನ್ನುವ ರಹಸ್ಯ ಶೋಧನೆಯನ್ನು ಕುರಿತ ಚರ್ಚೆಯೆ ಕಾವ್ಯ ಮೀಮಾಂಸೆ ಎನ್ನಿಸಿಕೊಂಡಿತು. ಹೀಗೆ ಶಬ್ದಾರ್ಥ ಸಹಿತವಾದ ಕಾವ್ಯದ ಸ್ವರೂಪವನ್ನು ಕುರಿತು ಹಿಂದಿನಿಂದ ಇಂದಿನ ತನಕ ಸೂತ್ರಗಳ ಮೇಲೆ ಸೂತ್ರಗಳು, ವ್ಯಾಖ್ಯಾನಗಳ ಮೇಲೆ ವ್ಯಾಖ್ಯಾನಗಳು ಬಂದಿವೆ, ಬರುತ್ತಲೇ ಇವೆ. ಒಂದೊಂದು ಕಾಲದಲ್ಲಿಯೂ, ಅಂದಂದಿನವರು ಕಾವ್ಯದ ಯಾವುದೋ ಒಂದು ಲಕ್ಷಣವನ್ನು ಎತ್ತಿ ಹಿಡಿದು ಅದೇ ಕಾವ್ಯದ ಆತ್ಮವೆಂಬಂತೆ ಹೇಳುತ್ತಾ ಬಂದಿದ್ದಾರೆ. ಕಾವ್ಯಮೀಮಾಂಸೆಯ ಇತಿಹಾಸವನ್ನು ನೋಡಿದರೆ ಈ ಮಾತಿನ ಅರ್ಥ ತಿಳಿಯುತ್ತದೆ. ಆದರೂ ಇದುವರೆಗೂ ಕಾವ್ಯವನ್ನು ಕುರಿತು ಸರ್ವ ಸಮರ್ಪಕವಾದ ಕೊನೆಯ ಸೂತ್ರವನ್ನು ಹೇಳಲು ಸಾಧ್ಯವಾಗಿಲ್ಲ; ಸಾಧ್ಯವಾಗುವುದೂ ಇಲ್ಲ. ಏಕೆಂದರೆ ಜೀವನವನ್ನು ಕುರಿತು ಹೇಗೆ ಒಂದು ಸೂತ್ರದಲ್ಲಿ ಹೇಳಿ ಮುಗಿಸುವುದು ಸಾಧ್ಯವಾಗುವುದಿಲ್ಲವೊ ಹಾಗೆಯೆ ಜೀವನದ ಅಭಿವ್ಯಕ್ತಿಯಾದ, ವ್ಯಾಖ್ಯಾನವಾದ ಕಾವ್ಯದ ಸ್ವರೂಪವನ್ನು ಹೇಳಿ ಮುಗಿಸಲು ಆಗದೆ ಇರುವುದು ಆಶ್ಚರ್ಯವೇನಲ್ಲ.

ಇಂಥ ಅಗಮ್ಯವಾದ ವಿಚಾರವನ್ನು ಬುದ್ಧಿಗಮ್ಯವನ್ನಾಗಿಸುವ ಪ್ರಯತ್ನ ನಮ್ಮಲ್ಲಿ ಭರತಮುನಿಯ ನಾಟ್ಯಶಾಸ್ತ್ರದ ಕಾಲದಿಂದಲೂ ನಡೆದಿದೆ. ಕವಿಗಳೂ, ತಾರ್ಕಿಕರೂ ತತ್ವವೇತ್ತರೂ ಆದ ಆಲಂಕಾರಿಕರಿಂದ ಸಂಸ್ಕೃತದಲ್ಲಿ ಕಾವ್ಯ ಮೀಮಾಂಸೆ ವಿಪುಲ ವಾಗಿಯೂ ವೈವಿಧ್ಯಮಯವಾಗಿಯೂ ಕೋಲಾಹಲಕಾರಕವಾಗಿಯೂ ನಿರೂಪಿತ ವಾಗಿದೆ. ಭರತಖಂಡದ ಯಾವ ಭಾಷೆಯಲ್ಲಾದರೂ ಕಾವ್ಯ ಮೀಮಾಂಸೆಯನ್ನು ಕುರಿತು ವಿಚಾರ ಮಾಡುವವರಿಗೆ ಈ ಭಾರತೀಯ ಕಾವ್ಯ ಮೀಮಾಂಸೆಯ ಪರಿಚಯ ತಕ್ಕಮಟ್ಟಿಗಾದರೂ ಇರಬೇಕಾದದ್ದು ಆವಶ್ಯಕ. ಕನ್ನಡದಲ್ಲಿ ಈ ಇಪ್ಪತ್ತೈದು ವರ್ಷ ಗಳಿಂದ ನಡೆದಿರುವ ಕಾವ್ಯ ಮೀಮಾಂಸೆಯನ್ನು ಗಮನಿಸಿದರೆ ಪ್ರತಿಯೊಬ್ಬ ಲೇಖಕರಿಗೂ ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಈ ಹಿನ್ನೆಲೆಯ ಅರಿವಿರುವುದು ಕಂಡುಬರುತ್ತದೆ. ಕವಿಗಳು, ವಿದ್ವಾಂಸರು, ವಿಮರ್ಶಕರು, ಅನುವಾದಕರು ಕನ್ನಡದಲ್ಲಿ ಕಾವ್ಯ ಮೀಮಾಂಸೆಯನ್ನು ಬೆಳೆಯಿಸಿದ್ದಾರೆ. ಸಂಭಾವನಾ ಗ್ರಂಥಗಳಲ್ಲಿ, ವಿಶ್ವ ವಿದ್ಯಾಲಯದವರು ಪ್ರಕಟಿಸುವ ಪತ್ರಿಕೆಗಳಲ್ಲಿ, ಬಿಡಿ ಹೊತ್ತಗೆಗಳಲ್ಲಿ, ಸಾಹಿತ್ಯವನ್ನು ಕುರಿತು ಪ್ರಕಟವಾಗುವ ಬೇರೆ ಬೇರೆಯ ಪತ್ರಿಕೆಗಳಲ್ಲಿ, ಕವನ ಸಂಗ್ರಹಗಳಿಗೆ, ಇನ್ನಿತರ ಪುಸ್ತಕಗಳಿಗೆ ಕವಿಗಳು ವಿಮರ್ಶಕರು ಬರೆದ ಮುನ್ನುಡಿ-ಹಿನ್ನುಡಿಗಳಲ್ಲಿ ಕಾವ್ಯ ವನ್ನು ಕುರಿತ ಚರ್ಚೆ ಪ್ರತಿಚರ್ಚೆಗಳು ಮೂಡಿಬಂದಿವೆ. ಭಾರತೀಯ ಕಾವ್ಯ ಮೀಮಾಂಸೆಯನ್ನು ವಿದ್ವತ್ ಪೂರ್ಣವಾಗಿ ರೂಪಿಸುವ, ಅನುವಾದಿಸಿಕೊಡುವ, ಪುನರ್ ವ್ಯಾಖ್ಯಾನಿಸುವ, ಪಾಶ್ಚಾತ್ಯ ಕಾವ್ಯ ಮೀಮಾಂಸೆಯ ತತ್ವಗಳೊಂದಿಗೆ ತೌಲನ

ಕ್ರಮದಲ್ಲಿರಿಸಿ ವಿವೇಚಿಸುವ ಪ್ರಯತ್ನಗಳು ಗಣನೀಯವಾದ ಪ್ರಮಾಣದಲ್ಲಿ ನಡೆದಿವೆ.

ಈ ಕಾವ್ಯಮೀಮಾಂಸೆಗೆ ಹಿನ್ನೆಲೆಯಾಗಿ ಕನ್ನಡ ಕಾವ್ಯದಲ್ಲಿ ನವೋದಯ ಕಾವ್ಯದಿಂದ ನವ್ಯಕಾವ್ಯದತನಕ ಆದ ಪರಿವರ್ತನೆಗಳೂ ಅತ್ಯಂತ ಪ್ರಭಾವಶಾಲಿಯಾಗಿ ಕನ್ನಡ ಕಾವ್ಯಮೀಮಾಂಸೆಯ ಮೇಲೆ ಪರಿಣಾಮ ಮಾಡಿವೆ. ಏಕೆಂದರೆ ಕಾವ್ಯಮೀಮಾಂಸೆಯು ಮೂಲತಹ ಅಂದಂದಿನ ಕಾವ್ಯದಲ್ಲಿ, ಕವಿ ಮನೋಧರ್ಮದಲ್ಲಿ ಆದ ಬದಲಾವಣೆಗಳನ್ನು ಅವಲಂಬಿಸಿದೆ. ಜೊತೆಗೆ ನಮ್ಮ ಸಾಹಿತ್ಯದ ಮೇಲೆ ಪ್ರಭಾವವನ್ನು ಬೀರಿದ ಪಾಶ್ಚಾತ್ಯ ಕಾವ್ಯಪರಂಪರೆ ಮತ್ತು ಕಾವ್ಯ ಮೀಮಾಂಸೆಗಳಿಂದ ನಮ್ಮ ಕಾವ್ಯ ಹಾಗೂ ಕಾವ್ಯ ಮೀಮಾಂಸೆಯ ರೂಪರೇಖೆಗಳು ಬದಲಾಗಿವೆ. ಜೊತೆಗೆ ಯೋಗವಿಜ್ಞಾನ, ರಾಜಕಾರಣ, ತತ್ವಶಾಸ್ತ್ರ, ಆಧುನಿಕ ಧಾರ್ಮಿಕ ವಿಚಾರಗಳು ಎಲ್ಲಕ್ಕೂ ಮಿಗಿಲಾಗಿ ಮನಸ್ ಶಾಸ್ತ್ರ— ಇವುಗಳಿಂದ ಇಂದಿನ ಕಾವ್ಯಮೀಮಾಂಸೆ ಹಿಂದಿನ ಕಾವ್ಯಮೀಮಾಂಸೆಗಿಂತ ಸುಪುಷ್ಟವೂ, ವೈವಿಧ್ಯಮಯವೂ ಆಗಿದೆ. ಕಾವ್ಯ ಮೀಮಾಂಸೆ ಮತ್ತು ಕಾವ್ಯ ವಿಮರ್ಶೆ ಈ ಎರಡೂ ಒಂದಕ್ಕೊಂದು ಪೂರಕವಾದ ವಿಷಯಗಳಾದದ್ದರಿಂದ, ಕಾವ್ಯಮೀಮಾಂಸೆಯನ್ನು ಕುರಿತ ವಿಚಾರ ಕಾವ್ಯ ವಿಮರ್ಶೆಯಿಂದ ಹೊರತಾದ ರೀತಿಯಲ್ಲಿ ನಿರೂಪಿತವಾಗಿರುವ ಗ್ರಂಥಗಳು ಕಡಮೆ. ಕಾವ್ಯವಿಮರ್ಶೆಯನ್ನು ಕುರಿತ ವಿಪುಲವಾದ ಗ್ರಂಥಗಳಿಂದ, ಕಾವ್ಯಮೀಮಾಂಸೆಯನ್ನು ಕುರಿತ ವಿಚಾರಗಳನ್ನು ಸಾಧ್ಯವಾದಷ್ಟು ಪ್ರತ್ಯೇಕಿಸಿ ಈ ಲೇಖನದಲ್ಲಿ ಅಳವಡಿಸಿಕೊಳ್ಳಲಾಗಿದೆ. ಹೀಗೆ ಮಾಡುವಲ್ಲಿ ಈ ವಿಷಯಕ್ಕೆ ಸಂಬಂಧಿಸಿದ ಎಲ್ಲ ಗ್ರಂಥಗಳನ್ನೂ ನೋಡಿದ್ದೇವೆಂಬ ನಂಬಿಕೆಯಿಲ್ಲ ; ಎಷ್ಟೋ ಲೇಖನಗಳೂ ಕೃತಿಗಳೂ ನಮ್ಮ ಕಣ್ ತಪ್ಪಿಸಿಕೊಂಡಿರಬಹುದು. ಆದರೆ ಈ ಲೇಖನವನ್ನು ಸಿದ್ಧಪಡಿಸಲು ಉಪಲಬ್ಧವಾಗಿರುವ ಸಾಮಗ್ರಿಗಳು ಕನ್ನಡದ ಕಾವ್ಯಮೀಮಾಂಸೆಯನ್ನು ಪ್ರಾತಿನಿಧಿಕವಾಗಿ ನಿರೂಪಿಸಲು ಸಾಕಷ್ಟಿವೆ ಎಂಬುದು ತೃಪ್ತಿಯ ವಿಷಯ.

೨

ಕನ್ನಡ ಕಾವ್ಯ ಮೀಮಾಂಸೆಯ ವಿಚಾರವನ್ನು ಕುರಿತು ಹೇಳುವಲ್ಲಿ ಮೊಟ್ಟಮೊದಲು ಗಮನಿಸಬೇಕಾದದ್ದು ಶ್ರೀ. ತೀ. ನಂ. ಶ್ರೀಕಂಠಯ್ಯನವರ 'ಭಾರತೀಯ ಕಾವ್ಯ ಮೀಮಾಂಸೆ'ಯನ್ನು. ಸಂಸ್ಕೃತ ಭಾಷೆಯಲ್ಲಿರುವ ಕಾವ್ಯಲಕ್ಷಣ ಗ್ರಂಥಗಳನ್ನೆ ಪ್ರಧಾನವಾಗಿ ಅವಲಂಬಿಸಿ ಇದು ರಚಿತವಾಗಿದೆ. ಕನ್ನಡದಲ್ಲಿ ದೊರೆಯುವ ಲಕ್ಷಣ ಗ್ರಂಥಗಳನ್ನು ಕುರಿತು ಪರಿಶಿಷ್ಟದಲ್ಲಿ ಒಂದು ಅಧ್ಯಾಯವನ್ನು ಕೊಡಲಾಗಿದೆ. ಈ ಗ್ರಂಥ ಮೂರುಭಾಗಗಳಲ್ಲಿ ವಿಸ್ತೃತವಾಗಿದೆ: ಮೊದಲ ಭಾಗದಲ್ಲಿ ಅಲಂಕಾರ ಶಾಸ್ತ್ರದ ಬೆಳವಳಿಗೆ, ಎರಡನೆಯದರಲ್ಲಿ ಕವಿ–ಕಾವ್ಯ–ಸಹೃದಯ ವಿಚಾರ, ಮೂರನೆಯದರಲ್ಲಿ ರಸ–ಧ್ವನಿ ವಿಚಾರ ನಿರೂಪಿತವಾಗಿದೆ. ಐನೂರಕ್ಕೂ ಮೀರಿರುವ ಪುಟಗಳಲ್ಲಿ,— ಆಗಲೇ ಎರಡನೆಯ ಮುದ್ರಣವನ್ನು ಕಂಡಿರುವ ಈ ಗ್ರಂಥ–ಭಾರತೀಯ ಕಾವ್ಯ

20

ಮೀಮಾಂಸೆಯ ಎಲ್ಲ ಮುಖ್ಯ ವಿಚಾರಗಳನ್ನೂ[1] ಮೂಲಲಾಕ್ಷಣಿಕರ ಹೇಳಿಕೆಗಳಿಗೆ ವಿರೋಧವಾಗದ ರೀತಿಯಲ್ಲಿ, ಅತ್ಯಂತ ಪ್ರಾಮಾಣಿಕವಾಗಿ, ಸರಳವಾಗಿ ಹಾಗೂ ಸರಸ ವಾಗಿ ನಿರೂಪಿಸುತ್ತದೆ. ತೀ. ನಂ. ಶ್ರೀಯವರ ಅಗಾಧವಾದ ವಿದ್ವತ್ತು, ಸೂಕ್ಷ್ಮ ಸಂವೇದನಾಶೀಲವಾದ ಕವಿಹೃದಯ, ಸತ್ಯ ಪಕ್ಷಪಾತಿಯಾದ ವಿಮರ್ಶನ ದೃಷ್ಟಿ, ಅಕೃತಕವಾದ ನಿರೂಪಣಾಸಾಮರ್ಥ್ಯ ಇವುಗಳಿಗೆ ಈ ಗ್ರಂಥ ಸಾಕ್ಷಿಯಾಗಿದೆ. ವಿಷಯ ವಿಂಗಡಣೆ, ವಿಷಯ ಪ್ರತಿಪಾದನೆ, ಮೂಲದಲ್ಲಿ ಸೂಚನೆಯ ರೂಪದಲ್ಲಿರುವ ಸಂಗತಿ ಗಳನ್ನು ಸ್ಫುಟವಾಗಿ ವಿವರಿಸುವ ಸೊಗಸು, ಮೂಲ ಲಾಕ್ಷಣಿಕರ ಮತ ತಮಗೆ ಒಪ್ಪಿಗೆ ಯಾಗದೆ ಇದ್ದಲ್ಲಿ ತಾವು ಅದರಿಂದ ಭಿನ್ನವಾಗಿ ನಿಲ್ಲುವ ಸೌಜನ್ಯಯುತವಾದ ನಿಲುವು, ನಿದರ್ಶನಕ್ಕಾಗಿ ಎತ್ತಿಕೊಳ್ಳುವ ದೃಷ್ಟಾಂತ ಕಾವ್ಯಭಾಗಗಳ ಆಯ್ಕೆಯಲ್ಲಿ ಕಂಡುಬರುವ ಅಭಿರುಚಿ ಮತ್ತು ರಸಿಕತೆ, ಸಂಸ್ಕೃತ ಕಾವ್ಯಲಕ್ಷಣಗಳನ್ನೂ, ಕವಿಸೂಕ್ತಿಗಳನ್ನೂ ಕನ್ನಡಿಸುವ ಸಾಮರ್ಥ್ಯ,—ಇಲ್ಲಿ, ಅವರು ದೃಷ್ಟಾಂತಕ್ಕೆಂದು ಪ್ರಾಕೃತ ಹಾಗೂ ಸಂಸ್ಕೃತ ಕವಿಗಳಿಂದ ಅನುವಾದಮಾಡಿರುವ ಕಾವ್ಯಭಾಗಗಳನ್ನು ಪ್ರತ್ಯೇಕಿಸಿ ಪ್ರಕಟಿಸಿದರೆ ಸೊಗಸಾದ ಕವನಸಂಗ್ರಹವಾಗುತ್ತದೆ—ಭಾರತೀಯ ಕಾವ್ಯಮೀಮಾಂಸೆಯೊಂದಿಗೆ ಸಂವಾದಿಯಾಗಬಹುದಾದ ಪಾಶ್ಚಾತ್ಯತತ್ವಗಳನ್ನು ಸೂಕ್ಷ್ಮವಾಗಿ ಸೂಚಿಸುವ ವಿಧಾನ, ಕನ್ನಡಕಾವ್ಯಗಳಿಂದಲೂ—ಪಂಪನಿಂದ ಹಿಡಿದು ಜನಪದಸಾಹಿತ್ಯದತನಕ—ನಿದರ್ಶನ ಗಳನ್ನು ಕೊಟ್ಟು ವಿಷಯದೊಂದಿಗೆ ಆತ್ಮೀಯತೆಯನ್ನು ಹೆಚ್ಚಿಸುವ ವಿಧಾನ, ಅತ್ಯಂತ ಗಹನವಾದ ತತ್ವಾಂಶಗಳನ್ನು ಸಂದೇಹಕ್ಕೆಡೆಯಿಲ್ಲದಂತೆ ರಮ್ಯವಾಗಿ ತಿಳಿಯಪಡಿಸುವ ಜಾಣ್ಮೆ ಇವುಗಳಿಂದ ಈ ವಿದ್ವತ್‌ಕೃತಿ ಓದುವವರ ಮನಸ್ಸಿಗೆ ಆಯಾಸವಾಗದೆ, ಬುದ್ಧಿ–ಮನಸ್ಸುಗಳ ವಿಕಾಸೋಲ್ಲಾಸಗಳನ್ನು ಸಾಧಿಸುತ್ತದೆ. ಭಾರತೀಯ ಲಾಕ್ಷಣಿಕರ ಅಭಿಪ್ರಾಯಗಳನ್ನು ಪುನರನುಭವಿಸಿ ತಿಳಿಯಪಡಿಸುವ ಇಂಥ ಪ್ರಮಾಣಗ್ರಂಥ ಬಹುಶಃ ಇತರ ಭಾರತೀಯ ಭಾಷೆಗಳಲ್ಲಿ ಬಂದಿರಲಾರದು; ಇಂಗ್ಲಿಷ್‌ನಲ್ಲಂತೂ ಈ ವಿಷಯವನ್ನು ಕುರಿತು ಇಂಥ ಕೃತಿ ಬಂದಿಲ್ಲವೆಂದರೆ ತಪ್ಪಾಗಲಾರದು. ಬರೆವಣಿಗೆಯಲ್ಲಿ ಸರಳತೆ ಸಂಯಮಗಳನ್ನು ಪ್ರಕಟಿಸುವ ಆಧಾರಭೂತವಾದ ಈ ಗ್ರಂಥ ಶ್ರೀ ಕುವೆಂಪು ಅವರು ಹೇಳುವಂತೆ, ಮುಂಬರಲಿರುವ ಕಾವ್ಯಮೀಮಾಂಸೆ ಮತ್ತು ಸಾಹಿತ್ಯವಿಮರ್ಶೆಯ ಸಾಹಸಕ್ಕೆ "ಸುಸಮರ್ಥವೂ ಮಾರ್ಗದರ್ಶಕವೂ ಆಗಿರುವ ಒಂದು ಆಚಾರ್ಯಕೃತಿ".[2]

ಭಾರತೀಯ ಕಾವ್ಯಮೀಮಾಂಸೆಯ ಮುಖ್ಯ ವಿಚಾರಗಳನ್ನು ಸರಳವಾಗಿ ಮತ್ತು ಸಾರವತ್ತಾಗಿ ತೀ. ನಂ. ಶ್ರೀಯವರು ಕೊಟ್ಟರೆ, ಭಾರತೀಯ ಕಾವ್ಯಮೀಮಾಂಸೆಯ ಯಥಾವತ್ತಾದ ಪರಿಚಯವನ್ನು ಅನುವಾದಗಳ ಮೂಲಕ ಮತ್ತು ಸಂಗ್ರಹ ರೂಪದಲ್ಲಿ

---

1 ಅಲಂಕಾರ, ಮತ್ತು ರೀತಿ ತತ್ವಗಳ ವಿಚಾರ ಪ್ರಮುಖವಾಗಿ ಪ್ರತಿಪಾದಿತವಾಗದೆ ಇರುವುದು ಒಂದು ಕೊರತೆಯಾಗಿದೆ.

2 ತೀ. ನಂ. ಶ್ರೀಕಂಠಯ್ಯ : ಭಾರತೀಯ ಕಾವ್ಯಮೀಮಾಂಸೆ. ಮುನ್ನುಡಿ. ಪು. IX.

ಕೊಟ್ಟವರು ಡಾ. ಕೆ. ಕೃಷ್ಣಮೂರ್ತಿಯವರು, ಕೆ. ವಿ. ಸುಬ್ಬಣ್ಣ, ಕೌಲಗಿ ಶೇಷಾಚಾರ್ಯರು ಮತ್ತು ಬಿ. ಕೆ. ಶಿವರಾಮಯ್ಯನವರು. ಶ್ರೀ ಬಿ. ಕೆ. ಶಿವರಾಮಯ್ಯನವರ "ಅಲಂಕಾರಶಾಸ್ತ್ರ", ಸಂಸ್ಕೃತ ಲಾಕ್ಷಣಿಕರ ಅಭಿಪ್ರಾಯಗಳನ್ನು ಅಲಂಕಾರ ಶಾಸ್ತ್ರದ ವಿದ್ಯಾರ್ಥಿಗಳಿಗಾಗಿ ಅಚ್ಚುಕಟ್ಟಾಗಿ ನಿರೂಪಿಸುವ ಒಂದು ಪಠ್ಯಪುಸ್ತಕ ಎನ್ನಬಹುದು. ಶ್ರೀ ಕೌಲಗಿ ಶೇಷಾಚಾರ್ಯರ "ಅಲಂಕಾರಶಾಸ್ತ್ರ" ಎನ್ನುವುದು ಮಹಾಮಹೋಪಾಧ್ಯಾಯ ಡಾ. ಪಿ. ವಿ. ಕಾಣೆಯವರ ಅಲಂಕಾರಶಾಸ್ತ್ರದ ಇತಿಹಾಸ ಎಂಬ ಇಂಗ್ಲಿಷ್ ಪ್ರಬಂಧವನ್ನು ಆಧಾರವಾಗಿರಿಸಿಕೊಂಡು ಶ್ರೀ ಕೇಶವಲಕ್ಷ್ಮಣಓಗ್ಲೆಯವರು ಮರಾಠೀ ಭಾಷೆಯಲ್ಲಿ ಬರೆದ "ಸಂಸ್ಕೃತಸಾಹಿತ್ಯ ಶಾಸ್ತ್ರಾಚೆ ಇತಿಹಾಸ" ಎಂಬ ಪುಸ್ತಕದ ದ್ವಿತೀಯಾರ್ಧಭಾಗದ ಕನ್ನಡ ಅನುವಾದ. ಇದರಲ್ಲಿ ಕಾವ್ಯಲಕ್ಷಣ, ರಸ, ರೀತಿ, ವಕ್ರೋಕ್ತಿ, ಧ್ವನಿ ಈ ವಿಷಯಗಳನ್ನು ಕುರಿತು ವಿವೇಚಿಸಲಾಗಿದೆ. ಬರೆವಣಿಗೆ ಶಾಸ್ತ್ರೀಯವೂ ಪಾರಿಭಾಷಿಕವೂ ಆಗಿದೆ. ಶ್ರೀ ಕೆ. ವಿ. ಸುಬ್ಬಣ್ಣನವರು ಧನಂಜಯನ ದಶರೂಪಕವನ್ನು ವ್ಯಾಖ್ಯಾನ ಮತ್ತು ಟಿಪ್ಪಣಿಗಳ ಸಮೇತ ಸಂಪಾದಿಸಿ ಅನುವಾದಿಸಿ ಅತ್ಯಂತ ಆಕರ್ಷಕವಾದ ರೀತಿಯಲ್ಲಿ ಪ್ರಕಟಿಸಿದ್ದಾರೆ. ಇತರ ಅಲಂಕಾರ ಗ್ರಂಥಗಳಲ್ಲಿ ಈ ಕೃತಿಯ ವಿಷಯಗಳಿಗೆ ಅಲ್ಲಲ್ಲಿ ಕಂಡುಬರುವ ಸಾಮ್ಯವನ್ನು ಉದ್ಧಕ್ಕೂ ತೋರಿಸಿದ್ದಾರೆ. ಸಂಸ್ಕೃತ ನಾಟ್ಯಶಾಸ್ತ್ರದಲ್ಲಿ ಮುಖ್ಯವಾದ ಸ್ಥಾನವನ್ನು ಗಳಿಸಿರುವ ಧನಂಜಯನ ದಶರೂಪಕದ ಕನ್ನಡ ಅನುವಾದ ನಾಟಕ ಲಕ್ಷಣವನ್ನು ಮತ್ತು ಕಾವ್ಯ ಮೀಮಾಂಸೆಯನ್ನು ಅಭ್ಯಾಸಮಾಡತಕ್ಕವರಿಗೆ ಉಪಯುಕ್ತವಾದ ಗ್ರಂಥವಾಗಿದೆ.

ಭಾರತೀಯ ಕಾವ್ಯಮೀಮಾಂಸೆಯ ಕೆಲವು ಮೂಲಕೃತಿಗಳನ್ನು ಅನುವಾದ ಮಾಡಿ ಕನ್ನಡದ ಶಾಸ್ತ್ರಸಾಹಿತ್ಯ ಸಂಪತ್ತನ್ನು ಹೆಚ್ಚಿಸಿರುವ ಡಾ. ಕೃಷ್ಣಮೂರ್ತಿಗಳ ಕೊಡುಗೆ ಸ್ಮರಣೀಯವಾದದ್ದು. ಭಾಮಹನ ಕಾವ್ಯಾಲಂಕಾರ, ಮಮ್ಮಟನ ಕಾವ್ಯ ಪ್ರಕಾಶ, ಆನಂದವರ್ಧನನ ಧ್ವನ್ಯಾಲೋಕ ಮತ್ತು ಲೋಚನಸಾರ, ಕ್ಷೇಮೇಂದ್ರನ ಔಚಿತ್ಯ ವಿಚಾರಚರ್ಚೆ ಇವು ಅನುವಾದ ಗ್ರಂಥಗಳಾದರೆ, 'ರಸೋಲ್ಲಾಸ' ಮತ್ತು 'ಕನ್ನಡದಲ್ಲಿ ಕಾವ್ಯತತ್ತ್ವ' ಇವು ಸ್ವತಂತ್ರವಾದ ಕೃತಿಗಳು. ಭಾರತೀಯ ಲಾಕ್ಷಣಿಕ ಗ್ರಂಥಗಳ ಮೂಲವನ್ನೆ ಕನ್ನಡದಲ್ಲಿ ಕಾಣುವಂತಾದುದು ಕೃಷ್ಣಮೂರ್ತಿಯವರ ಸಾಹಸದ ಪರಿಣಾಮ. ಪ್ರತಿಯೊಂದು ಕನ್ನಡ ಅನುವಾದಗಳಿಗೂ ಕೃಷ್ಣಮೂರ್ತಿಯವರು ಪ್ರೌಢವಾದ ಮುನ್ನುಡಿಯನ್ನು ಬರೆದು ಸಂಸ್ಕೃತ ಅಲಂಕಾರ ಶಾಸ್ತ್ರದಲ್ಲಿ ಆಯಾ ಕೃತಿಕಾರರ ಸ್ಥಾನವೇನು ಕಾವ್ಯಮೀಮಾಂಸೆಗೆ ಅವರ ಕೊಡುಗೆಯೇನು ಎಂಬುದನ್ನು ವಿದ್ವತ್ ಪೂರ್ಣವಾಗಿ ಚರ್ಚಿಸಿದ್ದಾರೆ. ಕೆಲವರೇ ಸಂಸ್ಕೃತದಲ್ಲಿ ಓದಿ ಅರ್ಥಮಾಡಿಕೊಳ್ಳಬೇಕಾಗಿದ್ದ ಈ ಶಾಸ್ತ್ರ ಗ್ರಂಥಗಳನ್ನು ಕನ್ನಡ ಲಿಪಿಯಲ್ಲಿ—ವ್ಯಾಖ್ಯಾನ ಸಹಿತ ಪ್ರಕಟಿಸಿ ಕಾವ್ಯಮೀಮಾಂಸೆಯ ವಿದ್ಯಾರ್ಥಿಗಳಿಗೆ ಉಪಕಾರ ಮಾಡಿದ್ದಾರೆ. ಭಾಷಾಕ್ಲೇಶವನ್ನು ನಿವಾರಿಸಿ, ಸಾಮಾನ್ಯ ಸಹೃದಯರ ಪಾಲಿಗೂ ಪೂರ್ವದ ಮಹಾಮೇಧಾವಿಗಳ ವಿಚಾರ ಸರಣಿಯನ್ನು ಕನ್ನಡದಲ್ಲಿ ತಂದು ನಿಲ್ಲಿಸಿದ್ದು

ಕನ್ನಡ ಕಾವ್ಯಮೀಮಾಂಸೆಯಲ್ಲಿ ಮೊದಲ ಪ್ರಯತ್ನವಾಗಿದೆ. ಈ ದಿಕ್ಕಿನಲ್ಲಿ ಇವರು ಇನ್ನು ಸಂಸ್ಕೃತದ ಅಲಂಕಾರ ಶಾಸ್ತ್ರದ ಮುಖ್ಯ ಗ್ರಂಥಗಳನ್ನೆಲ್ಲಾ ಕನ್ನಡಕ್ಕೆ ತರುವ ಭಗೀರಥ ಯೋಗವನ್ನು ಮುಂದುವರಿಸುವುದು, ಕಾವ್ಯಮೀಮಾಂಸೆಯ ದೃಷ್ಟಿಯಿಂದ ಅಗತ್ಯವಾಗಿದೆ. ಈ ಅನುವಾದ ಕಾರ್ಯ ಸುಲಭವಲ್ಲ; ಅದಕ್ಕೆ ಪಾಂಡಿತ್ಯ ಸಹೃದಯತೆ ಉದಾರತೆ ಮೂರೂಬೇಕು. ಈ ಮೂರೂ ಡಾ. ಕೃಷ್ಣಮೂರ್ತಿಗಳಲ್ಲಿವೆ. ಅವರ ಅನುವಾದಗಳು ವಿದ್ವಾಂಸರ ಮತದಲ್ಲಿ ಬಹುಮಟ್ಟಿಗೆ ನಿರ್ದುಷ್ಟವಾಗಿವೆ.

ಡಾ. ಕೃಷ್ಣಮೂರ್ತಿಗಳ 'ರಸೋಲ್ಲಾಸ' ಮತ್ತು 'ಕನ್ನಡದಲ್ಲಿ ಕಾವ್ಯತತ್ವ' ಇವೆರಡೂ ಅವರ ಆಳವಾದ ವ್ಯಾಸಂಗಕ್ಕೂ ವಿಮರ್ಶನ ಶಕ್ತಿಗೂ ಸಾಕ್ಷಿಯಾಗಿವೆ. 'ರಸೋಲ್ಲಾಸ' ಕೆಲವು ಹೊಸ ಪ್ರಶ್ನೆಗಳನ್ನು ಕಾವ್ಯಮೀಮಾಂಸೆಯ ಬಗ್ಗೆ ಎತ್ತಿ ಕೊಂಡು ಚರ್ಚಿಸಿರುವ ಪುಸ್ತಕ. ಹಿಂದಿನವರು ಹೇಳಿದರು ಎಂಟು ಸ್ಥಾಯಿಭಾವ ಗಳಿಂದಲೇ ರಸನಿಷ್ಪತ್ತಿ ಎಂದು. ಡಾ. ಕೃಷ್ಣಮೂರ್ತಿಗಳು ಹೇಳುತ್ತಾರೆ ಎಂಟು ಸ್ಥಾಯಿ ಭಾವಗಳಿಂದಲೆ ರಸ ಎನ್ನುವುದು ನಿಯತವಲ್ಲ—ಎಂದು. ಇದು ಬಹು ಮುಖ್ಯವಾದ ಮಾತು. ಸ್ಥಾಯಿತ್ವಕ್ಕೆ ಬರುವ ಯಾವ ಒಂದು ಭಾವ (ಸಂಚಾರಿಯೂ) ದಿಂದಲೂ ರಸಾನುಭವ ಸಾಧ್ಯ ಎಂಬುದಕ್ಕೆ ಆಧುನಿಕ ಭಾವಗೀತಾ ಸಾಹಿತ್ಯವೇ ಸಾಕ್ಷಿ. ಈ ಪುಸ್ತಕದಲ್ಲಿ ಅವರು ಹೇಳುವ ಇನ್ನೆರಡು ವಿಷಯಗಳು ಗಮನಾರ್ಹವಾಗಿವೆ. ಒಂದು ಕಾವ್ಯದ ಅನುಭೂತಿಗೆ ಷಡ್‌ದರ್ಶನಗಳ ಪ್ರಕಾರ ವಿಷಯ ಸುಖಕ್ಕಿಂತ ಹೆಚ್ಚಿನ ಸ್ಥಾನವಿಲ್ಲ; ಎರಡನೆಯದು ವೇದಾಂತ ಗ್ರಂಥಗಳಲ್ಲಿ ಎಲ್ಲಿಯೂ ಬ್ರಹ್ಮಾನಂದ ಮತ್ತು ಕಾವ್ಯಾನಂದಗಳ ಸಮೀಕರಣ ಸ್ಪಷ್ಟವಿಲ್ಲ, ಆದಕಾರಣ ಬ್ರಹ್ಮಾನಂದದ ವ್ಯಾಖ್ಯ ನಿಷ್ಪ್ರಯೋಜಕ. ಈ ಎರಡೂ ವಿಚಾರಮಾಡಬೇಕಾದವುಗಳು. ಷಡ್‌ದರ್ಶನಕಾರರು ತತ್ವಶಾಸ್ತ್ರಜ್ಞರು, ವೇದಾಂತಿಗಳು. ಅವರಿಗೆ ಪ್ರಕೃತವಾದದ್ದು ಬ್ರಹ್ಮ ಸಾಕ್ಷಾತ್ಕಾರದ ವಿಷಯ, ಕಾವ್ಯಮೀಮಾಂಸೆ ಅಲ್ಲ. ಅವರ ಪಾಲಿಗೆ ಬ್ರಹ್ಮಾನಂದವೊಂದನ್ನು ಹೊರತು ಉಳಿದುದೆಲ್ಲವೂ ವಿಷಯಾನಂದವೆ. ಇಂಥವರು ಕಾವ್ಯದ ಅನುಭೂತಿಗೆ ವಿಷಯ ಸುಖ ಕ್ಕಿಂತ ಹೆಚ್ಚಿನ ಸ್ಥಾನವನ್ನು ಕೊಡದೆ ಇದ್ದುದು ಆಶ್ಚರ್ಯವಲ್ಲ. ಅವರು ಕಾವ್ಯಾನು ಭೂತಿಗೆ ವಿಷಯ ಸುಖಕ್ಕಿಂತ ಹೆಚ್ಚಿಗೆ ಸ್ಥಾನವನ್ನು ಕೊಡದ ಕಾರಣದಿಂದಲೇ ಕಾವ್ಯಾನುಭೂತಿ ವಿಷಯ ಸುಖವೇ ಎಂದು ಹೇಳಲು ಬರುವುದಿಲ್ಲ. ಎರಡನೆಯದಾಗಿ ನಮ್ಮ ಬಹು ದೊಡ್ಡ ಆಲಂಕಾರಿಕರಾದ ಭಟ್ಟಲೊಲ್ಲಟ, ಆನಂದವರ್ಧನ, ಅಭಿನವಗುಪ್ತ ಮೊದಲಾದವರು ದಾರ್ಶನಿಕರೂ ಆಗಿದ್ದರು. ಆದಕಾರಣ ಅವರು ಅನಿವಾರ್ಯವಾಗಿ ತಮ್ಮ ತಾತ್ವಿಕ, ದಾರ್ಶನಿಕ ಜ್ಞಾನದ ಹಿನ್ನೆಲೆಯಿಂದಲೆ ಕಾವ್ಯವನ್ನು ಕುರಿತು ಚರ್ಚೆ ನಡೆಸಿದರು. ಅಲ್ಲದೆ ಧರ್ಮವೇ ಜೀವನದ ಉಸಿರಾದ ಈ ದೇಶದಲ್ಲಿ ಈ ಬಗೆಯ ತಾತ್ವಿಕ ಪ್ರಜ್ಞೆಯಿಲ್ಲದೆ ಯಾವಕಲೆ ತಾನೇ ನಿರ್ಮಿತವಾಗಿದೆ? ಆದ್ದರಿಂದ ತತ್ವ-ದರ್ಶನಾದಿಗಳಿಗೂ ಕಲೆ, ಕಲಾಮೀಮಾಂಸೆಗಳಿಗೂ ಯಾವತ್ತೂ ಸಂಬಂಧವಿದ್ದೇ ಇದೆ. ಈ ಎಲ್ಲ ಆಲಂಕಾರಿಕರ ಪ್ರಕಾರ ಕಾವ್ಯದ ಆನಂದ ಲೌಕಿಕ ಅಥವಾ ವಿಷಯ

ಸುಖವಂತೂ ಅಲ್ಲ. ಅದು ವಿಷಯಾನಂದವೇ ಆಗಿದ್ದರೆ ಪ್ರತ್ಯೇಕವಾಗಿ ಕಾವ್ಯ ಕಲೆಗಳ ನಿರ್ಮಿತಿಯ ಅಗತ್ಯವೇ ಇರುತ್ತಿರಲಿಲ್ಲ. ಕಾವ್ಯದಿಂದ ದೊರೆಯುವ ಆನಂದ, ಲೋಕಾನುಭವವೆನ್ನಲಾಗದ ಅನುಭವ; ಕಾವ್ಯಾನುಭವ ಅಲೌಕಿಕ ಎಂದುದರ ಅರ್ಥ ಇದು. ಅದು ಬ್ರಹ್ಮಾನಂದ ಸದೃಶ ಎಂದುದು ಕಾವ್ಯಕ್ಕೂ ಸಹೃದಯನಿಗೂ ಆಸ್ವಾದ ಕಾಲದಲ್ಲಿ ಇರಬೇಕಾದ ಸಂಬಂಧಾಂತರಗಳನ್ನು ಕುರಿತ ಪರಿಕರಗಳನ್ನು ದೃಷ್ಟಿಯಲ್ಲಿರಿಸಿ ಕೊಂಡು ಹೇಳಿದ್ದು. ಇದನ್ನು ಒಪ್ಪುವುದು ಬಿಡುವುದು ಅಷ್ಟು ಮುಖ್ಯವಲ್ಲ. ಆದರೆ ವೇದಾಂತ, ಯೋಗವಿಜ್ಞಾನಗಳ ಸಹಾಯದಿಂದ ಕಾವ್ಯದ ಸ್ವರೂಪವನ್ನು ಚರ್ಚಿಸು ವುದರಲ್ಲಿ ಹೆಚ್ಚಿನ ಲಾಭವಿಲ್ಲ ಎಂಬ ಮಾತನ್ನು ಒಪ್ಪಲಾಗುವುದಿಲ್ಲ. ಅನೇಕ ಸ್ತರದ ಅನುಭೂತಿಗಳಿಂದ ಹೊಮ್ಮಿದ ಕಾವ್ಯಾಭಿವ್ಯಕ್ತಿಯನ್ನು ಅರ್ಥಮಾಡಿಕೊಳ್ಳಲು, ವ್ಯಾಖ್ಯಾನಿಸಲು ಇದರಿಂದ ಸಾಧ್ಯವಿದೆ ಎಂಬ ಮಾತನ್ನು ನೆನೆಯಬೇಕು.

ಅಂತೂ 'ರಸೋಲ್ಲಾಸ'ವು ಅನೇಕ ಹೊಸ ಪ್ರಶ್ನೆಗಳನ್ನೆತ್ತಿ ಚರ್ಚಿಸುತ್ತದೆ; ಚರ್ಚಾಸ್ಪದವಾದ ಸಂಗತಿಗಳನ್ನು ಮುಂದಿರಿಸಿದೆ. ಅವರ 'ಕನ್ನಡದಲ್ಲಿ ಕಾವ್ಯ ತತ್ವ' ಎಂಬ ಪುಸ್ತಕವು, ತೀ. ನಂ. ಶ್ರೀಯವರು 'ಭಾರತೀಯ ಕಾವ್ಯಮೀಮಾಂಸೆ'ಯ ಪರಿಶಿಷ್ಟದಲ್ಲಿ ಒಂದು ಅಧ್ಯಾಯ ರೂಪದಲ್ಲಿ ಪ್ರಸ್ತಾಪಿಸಿದ 'ಕನ್ನಡದಲ್ಲಿ ಕಾವ್ಯ ಲಕ್ಷಣ ಗ್ರಂಥಗಳು' ಎಂಬ ವಿಷಯದಿಂದ ಪ್ರಚೋದಿತವಾದ ವಿಮರ್ಶಾತ್ಮಕ ಹಾಗೂ ಸಂಶೋಧನಾತ್ಮಕ ಬರವಣಿಗೆಯಾಗಿದೆ. ಕನ್ನಡದಲ್ಲಿ ಕಾವ್ಯತತ್ವದ ಬೆಳವಣಿಗೆಯನ್ನು ಐತಿಹಾಸಿಕವಾಗಿ ಅವಲೋಕಿಸುವ ಪುಸ್ತಕ ಇದೊಂದೇ. ನೃಪತುಂಗನಿಂದ ಹಿಡಿದು ೧೯ನೆಯ ಶತಮಾನದ ತನಕ ಕನ್ನಡ ಆಲಂಕಾರಿಕ ಹಾಗೂ ಕಾವ್ಯಗ್ರಂಥಗಳಲ್ಲಿ ನಿರೂಪಿತವಾಗಿರುವ ಕಾವ್ಯಮೀಮಾಂಸೆಯನ್ನು ಪರಿಶೀಲಿಸಿ "ಕನ್ನಡ ಕಾವ್ಯಮೀಮಾಂಸೆ ಸಂಸ್ಕೃತದ ಛಾಯಾನುವರ್ತಿಯಾಗಿಯೇ ನಡೆದ ಅಂಶ ವೇದ್ಯವಾಗುತ್ತದೆ" (ಪು. ೭೧) ಎಂಬ ತೀರ್ಮಾನಕ್ಕೆ ಬಂದಿದ್ದಾರೆ. ತೀ. ನಂ. ಶ್ರೀಯವರ ಒಂದೆರಡು ಅಭಿಪ್ರಾಯ ಗಳನ್ನು ಈ ಪುಸ್ತಕದಲ್ಲಿ ವಿಮರ್ಶಿಸಿದ್ದಾರೆ. ಅವುಗಳಲ್ಲಿ "ರೀತಿ ವಿನೂತವಸ್ತು ಕೃತಿಗೊಪ್ಪುವ ಮೆಯ್" ಎಂಬ ನಾಗವರ್ಮನ ಸೂತ್ರವನ್ನು ಕುರಿತದ್ದು. 'ರೀತಿ ವಿನೂತವಸ್ತು ಕೃತಿಗೆ ಒಪ್ಪುವ ಮೆಯ್' ಎಂಬ ಪದವಿಭಾಗವನ್ನು ಮೂರ್ತಿಯವರು ಒಲ್ಲದೆ 'ರೀತಿ ವಿನೂತ'ವಸ್ತು, (ಅದು) ಕೃತಿಗೆ ಒಪ್ಪುವ ಮೆಯ್ (ಪು. ೪೭) ಎಂದು ವಿಂಗಡಿಸುವುದಾಗಲೀ; ವಸ್ತುಕ ವರ್ಣಕಗಳನ್ನು ಕುರಿತು "ಪುರಾಣಪ್ರಸಿದ್ಧವಾದ ನೀತಿಬೋಧಕ ಕಥಾವಸ್ತುವಿನ ವರ್ಣನೆಗೆ ಹೊರಟ ಪುರಾಣಕಾವ್ಯವೇ ವಸ್ತುಕ ಕಾವ್ಯ. ಲೌಕಿಕವಾದ ಶೃಂಗಾರಾದಿ ನವರಸಗಳ ಆಲಂಕಾರಿಕ ವರ್ಣನೆ ವರ್ಣಕ ಕಾವ್ಯವೆಂದು ತಿಳಿಯುತ್ತಿದ್ದಿರಬಹುದು" (ಪು. ೧೬) ಎಂಬ ಹೇಳಿಕೆಯಾಗಲೀ; ಶಾಸ್ತ್ರಪಾಂಡಿತ್ಯವನ್ನು ಆಧಾರವಾಗಿ ಉಳ್ಳ ಕವಿಯ ಸಾಮರ್ಥ್ಯ ವಸ್ತುಕಕ್ಕೆ, ಸ್ವಪ್ರತಿಭೆ ಯೊಂದೇ ಆಲಂಬನೆಯಾದ ಕವಿಯ ಸಾಮರ್ಥ್ಯ ವರ್ಣಕಕ್ಕೆ ಯಥಾವತ್ತಾಗಿ ಅನ್ವಯ ವಾಗುತ್ತದೆಂದು (ಪು. ೪೪) ಭಾವಿಸುವುದಾಗಲಿ; ಕನ್ನಡ ವಿಮರ್ಶಕರು "ಭಾರತೀಯ

ಕಾವ್ಯಮೀಮಾಂಸೆಗೆ ಸಲ್ಲಿಸಿದ ಕಾಣಿಕೆಗಳಲ್ಲಿ ಈ ವಸ್ತುಕ—ವರ್ಣಕ ವಿಚಾರವೂ ಗಣನೀಯ "(ಪು. ೯೬)ವೆನ್ನುವುದಾಗಲೀ, ಇನ್ನೂ ವಿಮರ್ಶಾರ್ಹವಾದ ವಾದಗಳಾಗಿವೆ ಎನ್ನಿಸುತ್ತದೆ. ಆದರೆ ವಸ್ತುಕ-ವರ್ಣಕಗಳ ಬಗ್ಗೆ ಕೃಷ್ಣಮೂರ್ತಿಯವರು ಇಲ್ಲಿ ಕೂಡಿಸಿ ಹಾಕಿರುವ ಸಾಮಗ್ರಿ ಅಭಿನಂದನೀಯವಾಗಿದೆ. ಕನ್ನಡ ಆಲಂಕಾರಿಕರಲ್ಲಿ ಸಂಸ್ಕೃತದ ಅನುಕರಣವೆಷ್ಟು, ಅನುರಣನವೆಷ್ಟು ಅನುವಾದವೆಷ್ಟು ಎಂಬುದನ್ನು ಲೇಖಕರು ಈ ಕೃತಿಯಲ್ಲಿ ಸಮರ್ಥವಾಗಿ ಪ್ರತಿಪಾದಿಸಿದ್ದಾರೆ. ಡಾ. ಕೃಷ್ಣಮೂರ್ತಿಯವರ ಈ ಬರವಣಿಗೆಗಳಲ್ಲಿ ಅವರ ವಿದ್ವತ್ತು, ನಿಶಿತವಾದ ತಾರ್ಕಿಕತೆ, ಗಡುಸಾದ ಸೂತ್ರಪ್ರಾಯವಾದ ಶೈಲಿ ಇವುಗಳಿಂದ ಶಾಸ್ತ್ರೀಯವಾದ ಭಾಷಾ ರೂಪವೊಂದರ ನಿದರ್ಶನವಾಗಿದೆ.

೩

ಕಳೆದ ಐವತ್ತು ವರ್ಷಗಳಿಂದ ಹೊಸಗನ್ನಡ ಕಾವ್ಯದ ಸ್ವರೂಪವೇ ಬದಲಾದದ್ದು ಎಲ್ಲರಿಗೂ ಗೊತ್ತಿರುವ ಸಂಗತಿ. ಆಚಾರ್ಯ ಬಿ.ಎಂ. ಶ್ರೀಯವರ ಕಾಲದಿಂದ ಮೊದಲಾದ ಆಧುನಿಕ ಕಾವ್ಯಪರಂಪರೆ ೧೯೫೦ರ ತನಕ ವೈವಿಧ್ಯಮಯವಾದ ಕವಿ-ಕಾವ್ಯ ನಿರ್ಮಿತಿಯನ್ನು ತಂದಿತು. ಈ ಕಾಲವನ್ನು ನವೋದಯ ಕಾವ್ಯ ಎಂದು ಕರೆಯುವುದು. ಮುಖ್ಯವಾಗಿ ಇದು ಇಂಗ್ಲಿಷ್ ರೊಮ್ಯಾಂಟಿಕ್ ಸಂಪ್ರದಾಯದಿಂದ ಪ್ರಚೋದನೆಯನ್ನು ಪಡೆಯಿತು. ಆಗ ಕನ್ನಡಕಾವ್ಯ ತನ್ನ ಅಂತರಂಗದ ಭಾರತೀಯ ಸತ್ವಕ್ಕೆ ಹೊಸ ಹೊಸ ಆಕಾರಗಳನ್ನು ನೀಡಿತು. ಈ ಕಾವ್ಯದ ಧ್ಯೇಯ-ದೃಷ್ಟಿಗಳು ಕಳೆದ ಇಪ್ಪತ್ತೈದು ವರ್ಷಗಳ ಕಾವ್ಯಮೀಮಾಂಸೆಯ ಮೇಲೂ ಪರಿಣಾಮಮಾಡಿವೆ. ಅಲ್ಲದೆ ರೊಮ್ಯಾಂಟಿಕ್ ಕವಿಗಳಾದ ಷೆಲ್ಲಿ, ವರ್ಡ್ಸ್‌ವರ್ತ್, ಕೋಲ್‌ರಿಜ್, ಕೀಟ್ಸ್ ಮೊದಲಾದ ಕವಿಗಳು, ಕಾವ್ಯಮೀಮಾಂಸೆಯ ಬಗ್ಗೆ ವ್ಯಕ್ತಪಡಿಸಿರುವ ವಿಚಾರಧಾರೆಗಳನ್ನು ನಮ್ಮವರು ಸ್ವೀಕರಿಸಿದರು. ಹಾಗೆಯೆ ವಿಮರ್ಶಕರಾದ, ಐ.ಎ. ರಿಚರ್ಡ್ಸ್, ಅಬರ್ ಕ್ರೋಂಬಿ, ಅರ್ನಾಲ್ಡ್, ಎ. ಸಿ. ಬ್ರಾಡ್ಲೆ, ಅಲೆಗ್ಸಾಂಡರ್, ಎಸ್ರಾಪೌಂಡ್, ಇಲಿಯಟ್ ಮತ್ತು ಮನಸ್‌ಶಾಸ್ತ್ರಜ್ಞರಾದ ಫ್ರಾಯ್ಡ್, ಯೂಂಗ್ ಇವರ, ಭಾರತೀಯ ಕವಿಗಳಾದ ರವೀಂದ್ರರು, ಅರವಿಂದರ ಕಾವ್ಯಮೀಮಾಂಸೆಗೆ ಸಂಬಂಧಿಸಿದ ವಿಚಾರಗಳನ್ನು, ಚರ್ಚೆಗಳನ್ನು ನಮ್ಮ ಕವಿಗಳು ವಿಮರ್ಶಕರು ತಮಗೆ ಪರಿಚಿತವಾದ ಭಾರತೀಯ ಕಾವ್ಯಮೀಮಾಂಸೆಯ ತಿಳವಿಸೊಳಕ್ಕೆ ಅಳವಡಿಸಿಕೊಂಡು, ಒಂದು ಬಗೆಯ ಸಮನ್ವಯ ದೃಷ್ಟಿಯನ್ನು ರೂಪಿಸಿಕೊಂಡು ಕಾವ್ಯಮೀಮಾಂಸೆಯನ್ನು ಕಟ್ಟಿದ್ದಾರೆ. ಕವಿ-ಕಾವ್ಯ, ಕಾವ್ಯಪ್ರಯೋಜನ ಇತ್ಯಾದಿಗಳ ವಿಚಾರದಲ್ಲಿ ಸಾಂಪ್ರದಾಯಿಕವಾದ ಮತ್ತು ಧ್ಯೇಯಾತ್ಮಕವಾದ ಮಾತುಗಳನ್ನೆ ಹೇಳಿದರೂ, ನಮ್ಮ ಕಾವ್ಯಮೀಮಾಂಸೆಯ ತತ್ವಗಳನ್ನು ಪಾಶ್ಚಾತ್ಯ ಕಾವ್ಯಮೀಮಾಂಸೆಯ ತತ್ವಗಳೊಂದಿಗೆ ಇರಿಸಿ ತೌಲನ ಕ್ರಮದಲ್ಲಿ ವಿಚಾರಮಾಡುವ, ಭಾರತೀಯ ಕಾವ್ಯಮೀಮಾಂಸೆಯ ಕೆಲವು ಮೂಲತತ್ವಗಳನ್ನು

ಆಧುನಿಕ ರೀತಿಯಲ್ಲಿ ವ್ಯಾಖ್ಯಾನಿಸುವ ಬರೆವಣಿಗೆಗಳಿಂದ ಕನ್ನಡ ಕಾವ್ಯಮೀಮಾಂಸೆ ಬೆಳೆದುಬಂದಿದೆ. ಈ ಒಂದು ಕಾರ್ಯವನ್ನು ಮಾಡಿದವರಲ್ಲಿ ಮುಖ್ಯವಾಗಿ ಡಿ.ವಿ.ಜಿ., ಮಾಸ್ತಿಯವರು, ಕುವೆಂಪು, ಬೇಂದ್ರೆ, ಪು.ತಿ.ನ. ಗೋಕಾಕ್, ವಿ..ಸೀ ಮತ್ತು ಮುಗಳಿ ಇವರನ್ನು ಹೆಸರಿಸಬಹುದು. ಆದರೆ ಇವರೆಲ್ಲರ ಬರವಣಿಗೆ ಕಾವ್ಯಮೀಮಾಂಸೆ ಮತ್ತು ಕಾವ್ಯವಿಮರ್ಶೆಯನ್ನು ಸಮಗ್ರವಾಗಿ ವಸ್ತುವನ್ನಾಗಿ ಉಳ್ಳದ್ದಾದರೂ, ನಮ್ಮ ಲೇಖನದ ಸೌಕರ್ಯಕ್ಕಾಗಿ ವಿಭಾಗಿಸಿಕೊಂಡಿರುವ 'ಕಾವ್ಯಮೀಮಾಂಸೆ'ಗೆ ಸಂಬಂಧಿಸಿದ ಅಂಶಗಳನ್ನು ಅವುಗಳಿಂದ ಬೇರ್ಪಡಿಸಿಕೊಂಡು ನೋಡಲು ಸಾಧ್ಯವಿದೆ. ಹಾಗೆ ನೋಡಿದರೆ ಈ ಲೇಖಕರಲ್ಲಿ ಸಂಪೂರ್ಣ ಕಾವ್ಯಮೀಮಾಂಸೆಯ ಬರಹಗಳಿಂದ ಕೂಡಿದ ಪುಸ್ತಕಗಳೆಂದರೆ ಕುವೆಂಪು ಅವರ 'ರಸೋವೈಸಃ' ಮತ್ತು ಪು. ತಿ. ನ ಅವರ "ಕಾವ್ಯ ಕುತೂಹಲ" ಈ ಎರಡೇ ಎನ್ನಬೇಕು.[1]

ಡಿ.ವಿ.ಜಿ.ಯವರ 'ಸಾಹಿತ್ಯಶಕ್ತಿ' ಸೂತ್ರಸದೃಶವಾದ ರೀತಿಯಲ್ಲಿ ಕವಿ ಕಾವ್ಯ ವಿಚಾರವನ್ನು ನಿರೂಪಿಸುವ ಪುಸ್ತಕ. "ಪ್ರತಿಯೊಬ್ಬ ಮನುಷ್ಯನಿಗೂ ಒಂದು ವ್ಯಕ್ತಿ ವೈಶಿಷ್ಟ್ಯವಿರುತ್ತದೆ. ಅದು ರಹಸ್ಯ. ಕವಿ ಅಸಾಧಾರಣ ಮನುಷ್ಯ; ಆದ್ದರಿಂದ ಅವನದು ಅಸಾಧಾರಣ ವ್ಯಕ್ತಿತ್ವ, ಅದು ಅಂತರ್ಮುಖ ವ್ಯಕ್ತಿತ್ವ. ಆ ವ್ಯಕ್ತಿ ವೈಶಿಷ್ಟ್ಯದ ಬಹಿಃ ಪ್ರಾಕಟ್ಯವೇ ಕಾವ್ಯ" (ಪು. ೧೭೬-೧೭೭) "ಸೂಕ್ಷ್ಮಾನುಭವ ಘಟ್ಟ, ಧ್ಯಾನಕಲ್ಪನಘಟ್ಟ, ವಾಕ್ಪ್ರಭಾವಘಟ್ಟ ಎಂಬ ಮೂರು ಘಟ್ಟಗಳಲ್ಲಿ ನಡೆಯುತ್ತದೆ ಕವನಕರ್ಮ. ಅದರ ಫಲಿತಾಂಶ ಕಾವ್ಯ" (ಪು. ೧೩) "ಕಾವ್ಯಕರ್ಮವು ಶಬ್ದಾರ್ಥ ಪ್ರಪಂಚದ ನಾನಾ ಧಾತುಗಳ ಸಮ್ಮಿಳಿತ ಪಾಕ" (ಪು ೧೭೯) ಕವಿ "ಸ್ವಪ್ರತಿಭಾ ಶಕ್ತಿಯಿಂದ ನಮಗಾಗಿ ರಚಿಸುತ್ತಾನೆ ನೂತನ ಲೋಕಭ್ರಾಂತಿಯನ್ನು" (ಪು. ೧೬) "ಕಾವ್ಯದಿಂದ ನಮಗೆ ಲಭ್ಯವಾಗುವುದು ಈ ಒಂದು ಜೀವದ ಅಥವಾ ಆ ಒಂದು ಜೀವದ ಪ್ರತಿಬಿಂಬವಲ್ಲ; ಅದು ವಿಶ್ವಜೀವನದ ಪ್ರತಿಬಿಂಬ" (ಪು. ೧೮) "ವಿಶ್ವಸಂಬೋಧನೆಯೇ ಕಾವ್ಯದ ಮಹತ್ವ" (ಪು. ೨೦೧) "ಜೀವನದ ಕೊಳೆ ಕಲ್ಮಷಗಳನ್ನು ತೊಳೆಯಬಲ್ಲ ತೀರ್ಥವೆಂದರೆ ಕಾವ್ಯತೀರ್ಥ" (ಪು. ೧೧)—ಈ ಕೆಲವು ಮಾತುಗಳು ಸಾಕು, ಡಿ.ವಿ.ಜಿ.ಯವರ ಅಭಿವ್ಯಕ್ತಿಯ ತುಂಬ ಎಷ್ಟೊಂದು ವಿಚಾರಗಳು ಘನೀಭವಿಸಿವೆ ಎನ್ನುವುದನ್ನು ತೋರಿಸಲು. ಈ ಪುಸ್ತಕದ ತುಂಬ ಇಂಥ ಚಿಂತನೆಯಲ್ಲಿ ಹರಳುಗೊಂಡ ಮಾತುಗಳು ಸುಸಂಬದ್ಧವಾಗಿ, ವಿಚಾರಪ್ರಚೋದಕವಾಗಿ ತುಂಬಿಕೊಂಡು ಬರುತ್ತವೆ. ಭಾರತೀಯ ಕಾವ್ಯಮೀಮಾಂಸೆ ಮತ್ತು ತತ್ವಶಾಸ್ತ್ರದ ವಿಚಾರಗಳು ಇವರ ಕಾವ್ಯಮೀಮಾಂಸೆಯ ತಳಹದಿಯಾಗಿವೆ. ಜೊತೆಗೆ ಬೇರೆ ಬೇರೆಯ ಸಾಹಿತ್ಯ ಸಂಪ್ರದಾಯದ ಮಾತುಗಳೂ ಇವರ ಆಲೋಚನೆಯಿಂದ ಸ್ಫುಟಗೊಳ್ಳುತ್ತವೆ.

---

[1] ತೀ. ನಂ. ಶ್ರೀಯವರ ಭಾರತೀಯ ಕಾವ್ಯಮೀಮಾಂಸೆ, ಡಾ. ಕೃಷ್ಣಮೂರ್ತಿಗಳ 'ರಸೋಲ್ಲಾಸ' ಮತ್ತು 'ಕನ್ನಡದಲ್ಲಿ ಕಾವ್ಯತತ್ವ'—ಈ ಎರಡೂ ಈ ವಿಭಾಗಕ್ಕೆ ಸೇರುತ್ತವೆ.

ಪೂರ್ವ ಹಾಗೂ ಪಶ್ಚಿಮದ ಕಾವ್ಯತತ್ತ್ವಾಧ್ಯಯನಗಳಿಂದ ರೂಪುಗೊಂಡ ಡಿ.ವಿ.ಜಿ.ಯವರ ಕಾವ್ಯಮೀಮಾಂಸೆಯಲ್ಲಿ ಪರಂಪರೆಯ ಸತ್ವದಿಂದ ಪುಷ್ಟವಾದ, ನಾವೀನ್ಯಮಾತ್ರದಿಂದ ಭಾವವಶವಾಗದ, ಪಾಂಡಿತ್ಯಪೂರ್ಣವಾದ ಗಂಭೀರ ವಿಚಾರ ಸರಣಿಯನ್ನು ಗುರುತಿಸಬಹುದು. ಉತ್ತಮ ಅಭಿರುಚಿ, ಬುದ್ಧಿಯ ಸಮತೂಕ, ಬಾಳಿನ ಶ್ರೇಯಸ್ಸು ಇವುಗಳನ್ನೆ ಗುರಿಯಾಗಿರಿಸಿಕೊಂಡ ಡಿ.ವಿ.ಜಿ.ಯವರ ಕಾವ್ಯಮೀಮಾಂಸೆ ಹಳೆಯದನ್ನೆ ಹೊಸ ರೀತಿಯಲ್ಲಿ ಸ್ಫುಟವಾಗಿ ಪ್ರಕಟಿಸುತ್ತದೆ.

ಕಾವ್ಯಮೀಮಾಂಸೆಯ ಕ್ಷೇತ್ರದಲ್ಲಿಯೂ ತಮ್ಮ ಪ್ರತಿಭೆಯನ್ನು ಪ್ರಕಟಪಡಿಸಿ ಅನೇಕ ಹೊಸ ವಿಚಾರಗಳನ್ನು ಕೊಟ್ಟವರಲ್ಲಿ ಕುವೆಂಪು ಮತ್ತು ಪು.ತಿ.ನ. ಅವರು ಪ್ರಮುಖರು. ಕುವೆಂಪು ಅವರ ಕಾವ್ಯಮೀಮಾಂಸೆಯ ಲೇಖನಗಳು ಪು.ತಿ.ನ. ಅವರದ್ದಕ್ಕಿಂತ ಮಿಗಿಲಾಗಿವೆ. ಅವರ ವಿಭೂತಿಪೂಜೆ, ತಪೋನಂದನ, ದ್ರೌಪದಿಯ ಶ್ರೀಮುಡಿ, ಸಾಹಿತ್ಯಪ್ರಚಾರ ಮತ್ತು ಇತರ ಭಾಷಣಗಳು, ಈ ಕೃತಿಗಳಲ್ಲಿ ಕಾವ್ಯ ವಿಮರ್ಶೆಯೊಂದಿಗೆ ಕಾವ್ಯಮೀಮಾಂಸೆಯ ಪ್ರಬಂಧಗಳೂ ಸೇರಿಕೊಂಡಿವೆ. ಆದರೆ ಅವರ "ರಸೋವೈಸಃ" ಮಾತ್ರ ಸಂಪೂರ್ಣವಾಗಿ ಕಾವ್ಯಮೀಮಾಂಸೆಯ ಪ್ರಬಂಧಗಳನ್ನು ಒಳಗೊಂಡಿದೆ.

ಕುವೆಂಪು ಅವರ ಕಾವ್ಯಮೀಮಾಂಸೆಯನ್ನು ಎರಡು ಭಾಗಗಳನ್ನಾಗಿ ವಿಭಾಗಿಸಿಕೊಂಡು ನೋಡಬಹುದು: ಒಂದು ಕವಿ-ಕಾವ್ಯ, ಕಾವ್ಯಪ್ರಯೋಜನದ ವಿಚಾರ. ಮತ್ತೊಂದು, ಕಾವ್ಯಮೀಮಾಂಸೆಯ ಕೆಲವು ತತ್ವಗಳನ್ನು, ಸಮಸ್ಯೆಗಳನ್ನು ಎತ್ತಿಕೊಂಡು ವ್ಯಾಖ್ಯಾನಿಸುವ ಚರ್ಚಿಸುವ ವಿಚಾರ. ಇವುಗಳಲ್ಲಿ ಮೊದಲನೆಯದರಲ್ಲಿ ಭಾವುಕತೆ, ಸಾಂಪ್ರದಾಯಿಕತೆ, ಆದರ್ಶಮಯತೆ ಕಾಣಿಸಿಕೊಂಡರೆ, ಎರಡನೆಯದರಲ್ಲಿ ವಸ್ತುನಿಷ್ಠತೆ. ವಿಚಾರಪ್ರಖರತೆ, ವ್ಯಾಖ್ಯಾನನೈಪುಣ್ಯ, ಬಹುಶ್ರುತತೆ ಮತ್ತು ತಾರ್ಕಿಕ ಪ್ರತಿಭೆ ಇವುಗಳು ಗೋಚರಿಸುತ್ತವೆ.

ಕುವೆಂಪು ಅವರ ಪಾಲಿಗೆ ಕಾವ್ಯ ಒಂದು ರಸತಪಸ್ಸು; ಕವಿ ಒಬ್ಬ ರಸಋಷಿ; ಕವಿಯೊಬ್ಬ ವಿಭೂತಿ. ಕಾವ್ಯ ಆತ್ಮಸಾಕ್ಷಾತ್ಕಾರಕ್ಕೆ ಒಂದು ಮಾರ್ಗ. ಕಾವ್ಯ ಒಂದು ರಸಯೋಗ; ರಸಾನುಭವವೆ ಸಿದ್ಧಿ ಇತ್ಯಾದಿ ಮಾತುಗಳು ಕಂಡುಬರುತ್ತವೆ. ಪಾಶ್ಚಾತ್ಯ ರೊಮ್ಯಾಂಟಿಕ್ ಕವಿಗಳ ಮತ್ತು ಭಾರತೀಯ ವೇದ ವೇದಾಂತಗಳ ಸಂಯೋಗದಿಂದ ರೂಪುಗೊಂಡದ್ದು ಈ ಅತಿರಂಜಿತ ಆದರ್ಶದ ಕವಿ-ಕಾವ್ಯವಿಚಾರ. "ಕಲಾಸುಂದರಿ ಬಹಿರಂಗದಲ್ಲಿ ತೇಜಸ್ವಿನಿ; ಅಂತರಂಗದಲ್ಲಿ ತಪಸ್ವಿನಿ. ಲಘುಜೀವನದಿಂದ ಕಲಾಸುಂದರಿ ಸಾಕ್ಷಾತ್ಕಾರವಾಗಲಾರಳು. ಅನೀತಿ, ಕಳಂಕ, ಅನುದಾರತೆಗಳಿಂದ ತಾತ್ಕಾಲಿಕ ಸುಖದಾಯಕಗಳಾದ ಪದ್ಯಗಳು ಹುಟ್ಟಬಲ್ಲವೇ ಹೊರತು ಸರ್ವಕಾಲದೇಶಸಮ್ಮತವಾದ ಆತ್ಮೋದ್ಧಾರಕ, ಆನಂದದಾಯಕವಾದ ಕವನಗಳು ಲಭಿಸುವುದಿಲ್ಲ. ಆದ್ದರಿಂದ ಕವಿ ತನ್ನ ಜೀವನವನ್ನು ಸರ್ವವಿಧದಲ್ಲಿಯೂ ಪರಿಷ್ಕರಿಸಿಕೊಳ್ಳುವುದು ಅತ್ಯಾವಶ್ಯಕ. ಭಾವ ಕಲ್ಪನೆ ಆಲೋಚನೆ ಎಲ್ಲದರಲ್ಲಿಯೂ ಆತನು ಸಮುದೂರವಾಗಿ, ಬಹುದೂರ ಮುಂದು

ವರಿದು ಪ್ರತಿಭಾಶಾಲಿಯಾಗಿ ರಸಋಷಿಯಾಗಬೇಕು. ‘ದರ್ಶನ’ ಸಂಪಾದನೆ ಮಾಡಬೇಕು ”.[2] ಇದು ಕುವೆಂಪು ಅವರ ಕವಿ-ಕಾವ್ಯವಿಚಾರ. ಇದು ಅವರ ಕೆಲವು ಕವನಗಳಲ್ಲಿಯೂ ಪ್ರಕಟವಾಗಿದೆ. “ದ್ರೌಪದಿಯ ಶ್ರೀಮುಡಿ” ಎಂಬ ಪುಸ್ತಕದಲ್ಲಿರುವ ‘ಕವಿಯ ಜೀವನದೃಷ್ಟಿ ಮತ್ತು ಕಾವ್ಯಸೃಷ್ಟಿ” ಎಂಬ ಪ್ರಬಂಧದಲ್ಲಿ ಕವಿ ವ್ಯಕ್ತಿತ್ವದ ಮುಹತಿಯ ವರ್ಣನೆಯಿದೆ. ಇದೊಂದು ರೀತಿಯಲ್ಲಿ ಆದರ್ಶೀಕೃತ ಕಾವ್ಯಮೀಮಾಂಸೆ. ಎಲ್ಲಕ್ಕಿಂತ ಮಿಗಿಲಾಗಿ ಇದು ಕವಿಯ ಕಾವ್ಯಶ್ರದ್ಧೆಯನ್ನು ಸೂಚಿಸುತ್ತದೆ ಎಂದು ಭಾವಿಸಬಹುದು.

ಇನ್ನು ಎರಡನೆಯದಾದ ಅವರ ಕಾವ್ಯಮೀಮಾಂಸೆಯ ಪ್ರಬಂಧಗಳಲ್ಲಿ ಕಾಣುವ ನಿಲುವೇ ಬೇರೆ. ಸುಮಾರು ಹದಿನೈದರಷ್ಟು ಕಾವ್ಯಮಿಮಾಂಸೆಯನ್ನು ಕುರಿತು ಬರೆದಿರುವ ಲೇಖನಗಳಲ್ಲಿ ನಾಲ್ಕು ರೀತಿಯ ವಿವೇಚನೆಯನ್ನು ಗುರುತಿಸಬಹುದು : ಇದರಲ್ಲಿ ಮೊದಲನೆಯದು ಪ್ರಾಚೀನ ಭಾರತೀಯ ಆಲಂಕಾರಶಾಸ್ತ್ರದ ಕೆಲವು ವಿಷಯಗಳನ್ನು ಹೊಸ ದೃಷ್ಟಿಯಿಂದ ಪರಿಶೀಲಿಸಿ, ಪುನರ್‌ವ್ಯಾಖ್ಯಾನಿಸಿ ಅವುಗಳನ್ನು ಸಮರ್ಪಕವಾದ ರೀತಿಯಲ್ಲಿ ಸುಭದ್ರಗೊಳಿಸುವ ರೀತಿ. ಇದಕ್ಕೆ ನಿದರ್ಶನವಾಗಿ ‘ರಸೋವೈಸಃ’ ಎಂಬ ಪುಸ್ತಕದಲ್ಲಿರುವ “ರಸಾನುಭವದ ಅಲೌಕಿಕತೆ” ಎಂಬ ಪ್ರಬಂಧವನ್ನು ನೋಡಬಹುದು. “ಯಾವ ಅನುಭವವನ್ನು ಪ್ರಾಚೀನ ಕಾವ್ಯಮಿಮಾಂಸಕರು ಸೌಂದರ್ಯ ಎಂಬ ಹೆಸರಿನಿಂದ ಗುರುತಿಸಿದರೋ ಅದನ್ನೆ ನವೀನರು ರಸ ಎಂಬ ಸಂಕೇತದಿಂದ ಕರೆದಿದ್ದಾರೆ. ಸೌಂದರ್ಯಾನುಭವ ಎಂದು ಸಹೃದಯರು ಗುರುತಿಸುವ ಪ್ರಜ್ಞಾವಸ್ಥೆಯನ್ನು ಶಾಸ್ತ್ರೀಯವಾಗಿ ಪರ್ಯಾಲೋಚಿಸಲು ಹೊರಟ ಕಾವ್ಯಮಿಮಾಂಸಕರು ಶಾಸ್ತ್ರಭಾಷೆಯ ಪ್ರಕ್ರಿಯಾ ಸೌಕರ್ಯಕ್ಕಾಗಿ ‘ಅಲಂಕಾರ’ ಎಂದು ಕರೆದರು.” (ಪು. ೧೮)....“ಪ್ರಾಚೀನರ ದೃಷ್ಟಿಯಲ್ಲಿ ಸೌಂದರ್ಯಾನುಭವವೆ ಸರ್ವಗ್ರಾಸಿಯಾಗಿತ್ತು. ಆ ದೃಷ್ಟಿ ರಸಾನುಭವವನ್ನು ತಿರಸ್ಕರಿಸಿರಲಿಲ್ಲ. ಅದನ್ನು ಒಳಗೊಂಡಿತ್ತು” (ಪು. ೨೦). “ಮನುಷ್ಯನ ಸ್ಥಾಯಿಭಾವ ವ್ಯಾಪಾರ ಮತ್ತು ನಿಸರ್ಗದ ರಮಣೀಯ ವ್ಯಾಪಾರ ಎರಡರ ಆಹ್ಲಾದವನ್ನೂ ಸೌಂದರ್ಯಾನುಭವ ಎಂಬ ಶಬ್ದ ಒಳಕೊಳ್ಳುತ್ತದೆ. ಆದ್ದರಿಂದಲೆ ಸೌಂದರ್ಯಾನುಭವವು ರಸಾನುಭವವನ್ನು ತನ್ನೊಂದು ಅಂಗವಾಗಿ ಸ್ವೀಕರಿಸುತ್ತದೆ. ಸೌಂದರ್ಯವನ್ನೆ ಅಲಂಕಾರ ಎಂಬ ಪರಿಭಾಷೆಯಿಂದ ಕರೆದ ಕಾವ್ಯಮಿಮಾಂಸಕರು ರಸಾನುಭವವನ್ನು ಆ ಅಲಂಕಾರದ ಒಂದಂಗವನ್ನಾಗಿ ಪರಿಗಣಿಸಿದುದು ಅತ್ಯಂತ ತರ್ಕಬದ್ಧವಾಗಿದೆ” (ಪು. ೨೧). ಈ ಒಂದು ವ್ಯಾಖ್ಯಾನ ಭಾರತೀಯ ಕಾವ್ಯಮಿಮಾಂಸೆಯನ್ನು ಕುರಿತ ವಿಚಾರಗಳಲ್ಲಿ ತೀರಾ ವಿನೂತನವಾದದ್ದೆಂದು ಹೇಳಬೇಕು. ಮತ್ತೊಂದು ನಿದರ್ಶನ ಶಾಂತರಸವನ್ನು ಕುರಿತದ್ದು. ‘ರಸೋವೈಸಃ’ ಎಂಬ ಪುಸ್ತಕದಲ್ಲಿ ‘ಭೂಮಾನುಭೂತಿ’ಯನ್ನು ಕುರಿತ ಪ್ರಬಂಧದಲ್ಲಿ “ರತಿಭಾವಕ್ಕಿಂತ ಶೃಂಗಾರರಸ ಶ್ರೇಷ್ಠವಾದಂತೆ ಶಮಕ್ಕಿಂತ ಶಾಂತರಸ ಶ್ರೇಷ್ಠವಾಗು

---

[2] ಕುವೆಂಪು : ಸಾಹಿತ್ಯ ಪ್ರಚಾರ ಮತ್ತು ಇತರ ಭಾಷಣಗಳು. ಪು. ೩೨–೩೩.

ತ್ತದೆಯೆ?" ಎಂಬ ಪ್ರಶ್ನೆಯನ್ನೆತ್ತಿಕೊಂಡು "ಭಾವಗಳಿಗೆ ಶಮತ್ವದ ಸಂಸ್ಕಾರ ಒದಗುವುದರಿಂದಲೆ ರಸತ್ವವುಂಟಾಗುತ್ತದೆ. ಅಂದರೆ ಭಾವವನ್ನು ರಸವನ್ನಾಗಿ ಪರಿವರ್ತಿಸುವ ಸ್ಪರ್ಶಮಣಿಯೆ ಶಮ. ಅಂದರೆ ಶಮ ಇತರ ಭಾವಗಳಂತೆ ಭಾವವಲ್ಲ; ಅದು ಭಾವವನ್ನು ರಸಗೊಳಿಸುವ ಭಾವೋಪಶಮನ ಶಕ್ತಿ. ಶಮ ಕಲಾರಂಗದಲ್ಲಿ ಪ್ರತಿಬಿಂಬಿತವಾದಾಗ ಅದರ ಲೋಕರಂಗದ ಸ್ಥಿತಿಗಿಂತಲೂ ಮೇಲುಮಟ್ಟದ್ದಾಗುವುದಿಲ್ಲ. ಲೋಕರಂಗದಲ್ಲಿ ಸಿದ್ಧವಾದ ನಿಜವಾದ ಶಾಂತಿ ಕಲಾರಂಗದ ಶಾಂತರಸಕ್ಕಿಂತಲೂ ಸರ್ವಥಾ ಮೇಲುಮಟ್ಟದ ಪುರುಷಾರ್ಥ ವಸ್ತು" (ಪು. ೯೧–೯೨) ಎಂಬ ಈ ವಿವರಣೆ ಭಾರತೀಯ ಕಾವ್ಯಮಿಮಾಂಸೆಗೆ ಹೊಸಮಾತಾಗಿದೆ. ಹೀಗೆಯೆ "ಭಾಷೆ ಭಾವೋಪಯೋಗಿ, ಲೋಕೋಪಯೋಗಿ" ಎನ್ನುವ ಪ್ರಬಂಧ ಪ್ರಾಚೀನ ಧ್ವನಿತತ್ವದ ಪುನರ್‌ವ್ಯಾಖ್ಯಾನವಾಗಿದೆ.

ಎರಡನೆಯದು ಕಾವ್ಯಸತ್ಯ, ಕಾವ್ಯಸ್ವರೂಪಗಳನ್ನು ಕುರಿತು ಭಾರತೀಯ ಮತ್ತು ಪಾಶ್ಚಾತ್ಯ ಕಾವ್ಯಮಿಮಾಂಸೆಯ ತತ್ವಗಳನ್ನು ತೌಲನ ಕ್ರಮದಲ್ಲಿ ಚರ್ಚಿಸಿ ಭಾರತೀಯ ಕಾವ್ಯಮೀಮಾಂಸೆಯ ತತ್ವಗಳ ಮಹತ್ತನ್ನು ಸ್ಥಾಪಿಸುವುದು. ಇದಕ್ಕೆ ನಿದರ್ಶನವಾಗಿ "ಕವಿಕೃತಿಯಲ್ಲಿ ನಿಯತಿಕೃತ ನಿಯಮರಾಹಿತ್ಯ" (ರಸೋವೈಸಃ, ಪು. ೧) ಮತ್ತು "ಕವಿಕೃತಿಯ ಅನನ್ಯ ಪರತಂತ್ರತೆ" (ದ್ರೌಪದಿಯ ಶ್ರೀಮುಡಿ, ಪು. ೬೧)– ಈ ಲೇಖನಗಳನ್ನು ನೋಡಬಹುದು. ಈ ಎರಡು ಪ್ರಬಂಧಗಳಲ್ಲಿರುವ ತೌಲನ ವಿಮರ್ಶೆ ಆಶ್ಚರ್ಯಕರವಾಗಿದೆ.

ಮೂರನೆಯದು, ಪಾಶ್ಚಾತ್ಯ ಕಾವ್ಯಮೀಮಾಂಸೆಯ ಕೆಲವು ಪ್ರಚಾರವೈಖರಿಗಳನ್ನು ನಮ್ಮವರು ಹಸಿಹಸಿಯಾಗಿ ನುಂಗಿ ಅನಾರೋಗ್ಯಕರವಾಗಿ ಕೂಗಾಡಬಹುದಾದ "ಕಾವ್ಯಕ್ಕಾಗಿ ಕಾವ್ಯ; ಕಲೆಗಾಗಿ ಕಲೆ" "ಕಾವ್ಯಾನುಭವಕ್ಕೂ ಲೋಕಾನುಭವಕ್ಕೂ ಅಂತಹ ವ್ಯತ್ಯಾಸವೇನಿಲ್ಲ"—ಎಂಬಂಥ ವಾದಗಳನ್ನು ತಾರ್ಕಿಕವಾದ ರೀತಿಯಲ್ಲಿ ವಿಚಿಕಿತ್ಸೆಗೆ ಗುರಿಪಡಿಸಿ ಅವುಗಳ ಬೆಲೆಯನ್ನು ತೋರಿಸಿದ್ದು. ಇದಕ್ಕೆ ನಿದರ್ಶನವಾಗಿ 'ರಸೋವೈಸಃ'ದಲ್ಲಿರುವ "ರಸಾನುಭವದ ಅಲೌಕಿಕತೆ" (ಪು. ೧೮) ಎಂಬ ಪ್ರಬಂಧವನ್ನು ನೋಡಬಹುದು. "ಕವಿಕೃತಿಯಲ್ಲಿ ನಿಯತಿಕೃತ ನಿಯಮರಾಹಿತ್ಯ" ಎಂಬ ಪ್ರಬಂಧದಲ್ಲಿ ಐ. ಎ. ರಿಚರ್ಡ್ಸ್ ಅವರ ಕೆಲವು ಅಭಿಪ್ರಾಯಗಳನ್ನು ವಿಮರ್ಶಿಸಿರುವ ರೀತಿಯನ್ನು (ರಸೋವೈಸಃ, ಪು. ೧೦–೧೨) ಕುತೂಹಲವುಳ್ಳವರು ನೋಡಬಹುದು.

ನಾಲ್ಕನೆಯದಾಗಿ ಕುವೆಂಪು ಅವರ ಕಾವ್ಯಮೀಮಾಂಸೆಯ ವೈಶಿಷ್ಟ್ಯವೆಂದರೆ ತಮ್ಮದೇ ಆದ ಹೊಸ ಪರಿಭಾಷೆಗಳನ್ನು ಕಾವ್ಯಮೀಮಾಂಸೆಯ ಭಾಷೆಗೆ ನೀಡಿರುವುದಲ್ಲದೆ, ಭವ್ಯತೆ, ಮಹೋಪಮೆ, ಭೂಮಾನುಭೂತಿ ಮತ್ತು ಕಾವ್ಯಪ್ರತಿಮೆ—ಈ ನಾಲ್ಕು ವಿಷಯಗಳನ್ನು ವಿಸ್ತರಿಸಿ ಕನ್ನಡ ಕಾವ್ಯಗಳಿಂದ ನಿದರ್ಶನಗಳನ್ನೆತ್ತಿ ವಿವರಿಸಿರುವುದು. ಪ್ರತಿಮಾ, ಪ್ರತಿಕೃತಿ, ಲೋಕೋಪಯೋಗಿ, ಭಾವೋಪಯೋಗಿ, ದರ್ಶನಧ್ವನಿ,

ಭವ್ಯತೆ, ಮಹೋಪಮೆ, ಇಂಥ ಮಾತುಗಳೆಲ್ಲಾ ಕನ್ನಡ ಕಾವ್ಯಮೀಮಾಂಸೆಗೆ—ಭಾರತೀಯ ಕಾವ್ಯಮೀಮಾಂಸೆಗೂ—ಹೊಸ ಪರಿಭಾಷೆಗಳೆಂದು ಹೇಳಬೇಕಾಗಿಲ್ಲ. 'ಪ್ರತಿಮಾ ಮತ್ತು ಪ್ರತಿಕೃತಿ' (ತಪೋನಂದನ, ಪು. ೨೬) ಸಾಹಿತ್ಯದ ಸ್ವರೂಪವನ್ನು ವ್ಯಾಖ್ಯಾನಿಸುವ ಹೊಸ ವಿಧಾನವಾಗಿದೆ. 'ಭವ್ಯತೆ' ಎಂಬ ಪದವನ್ನು Sublime ಎಂಬುದಕ್ಕೆ ಸಂವಾದಿಯಾಗಿ ಮೊಟ್ಟಮೊದಲು ಬಳಸಿ, 'ಪಂಪನಲ್ಲಿ ಭವ್ಯತೆ' (ತಪೋನಂದನ, ಪು. ೩೭) ಎಂಬ ಲೇಖನದಲ್ಲಿ ನಿದರ್ಶನಸಹಿತವಾಗಿ ವ್ಯಾಖ್ಯಾನಿಸಿದವರು ಕುವೆಂಪು. 'ಮಹೋಪಮೆ'ಯ ವಿಷಯವೂ (ತಪೋನಂದನ, ಪು. ೬೦) ಅಷ್ಟೆ. ಪಾಶ್ಚಾತ್ಯ ಮಹಾಕಾವ್ಯಗಳಲ್ಲಿ Homeric Simile ಎಂದು ಕರೆಯಿಸಿಕೊಳ್ಳಲ್ಪಡುವ ಈ ಒಂದು ಉಪಮಾ ಪ್ರಕಾರಕ್ಕೆ 'ಮಹೋಪಮೆ' ಎಂದು ಕರೆದು, ಮಹೋಪಮೆಯ ಅಂಶಗಳು ನಮ್ಮ ಹಳೆಯ ಕವಿಗಳ ಕೃತಿಗಳಲ್ಲಿ ಇರುವುವೆಂಬುದನ್ನು ಸೂಚಿಸಿ, ತಾವೇ ತಮ್ಮ ಕೃತಿಗಳಲ್ಲಿ ಮಹೋಪಮೆಗಳನ್ನು ನಿರ್ಮಿಸಿ ಈ ಮಹೋಪಮೆಯ ಲಕ್ಷ್ಯ-ಲಕ್ಷಣ ನಿರ್ಮಾತೃವಾಗಿದ್ದಾರೆ. ಉಪಮಾಲಂಕಾರವನ್ನು ಕುರಿತು "ರೂಪೋಪಮೆ, ಗುಣೋಪಮೆ, ಭಾವೋಪಮೆ, ಮಿಶ್ರೋಪಮೆ" (ಪು. ೬೧) ಎಂಬ ಅನುಕೂಲ ವಿಭಾಗಗಳು ಕಾವ್ಯಮೀಮಾಂಸೆಗೆ ಹೊಸ ಭಾವನೆಗಳಾಗಿವೆ. 'ಭೂಮಾನುಭೂತಿ' (ರಸೋವೈಸಃ, ಪು. ೭೭) ಎಂಬ ಪ್ರಬಂಧದಲ್ಲಿ ಹೇಗೆ ಈ ಭೂಮಾನುಭೂತಿ ಭವ್ಯತಾ ಅನುಭವಕ್ಕೆ ವಸ್ತುವಾಗುತ್ತದೆಂಬುದನ್ನು ಸಾಧಾರವಾಗಿ ತೋರಿಸಿದ್ದಾರೆ. 'ಕಾವ್ಯದಲ್ಲಿ ಪ್ರತಿಮಾ' (ರಸೋವೈಸಃ, ಪು. ೩೩) ಎಂಬ ಸುದೀರ್ಘವಾದ ಲೇಖನವು ಪಾಶ್ಚಾತ್ಯ Poetic Image ಅನ್ನು ಕುರಿತು ಕನ್ನಡದಲ್ಲಿ ಮೊಟ್ಟಮೊದಲು ಬಂದಿರುವ ಲೇಖನ. 'ಪ್ರತಿಮಾ' ಎಂಬ ಮಾತು ಹೊಸತಾದರೂ ಈ ಒಂದು ತತ್ವಕ್ಕೆ ಅಳವಡುವ ಅನೇಕ ನಿದರ್ಶನಗಳನ್ನು ನಮ್ಮ ಹಳಗನ್ನಡ ಕಾವ್ಯಗಳಿಂದ ಎತ್ತಿತೋರಿಸಿ, ಈ ದಿಕ್ಕಿನಲ್ಲಿ ಕಾವ್ಯದ ಅಭಿವ್ಯಕ್ತಿಗಳನ್ನು ಗುರುತಿಸುವುದರಿಂದಾಗುವ ಲಾಭವನ್ನು ಸ್ಪಷ್ಟಪಡಿಸಿದ್ದಾರೆ. ಕುವೆಂಪು ಅವರು ತಮ್ಮ ಕಾವ್ಯನಿರ್ಮಿತಿಯಲ್ಲಿ ಪಾಶ್ಚಾತ್ಯ ಕಾವ್ಯದ ಸಮಸ್ತ ಪ್ರಕಾರಗಳನ್ನೂ ಕನ್ನಡಕ್ಕೆ ತರುವ ಸಾಹಸ ಸಂಕಲ್ಪದಲ್ಲಿ ಹೇಗೆ ಯಶಸ್ವಿಯಾದರೋ, ಹಾಗೆ ಕಾವ್ಯಮೀಮಾಂಸೆಯ ಕ್ಷೇತ್ರದಲ್ಲಿಯೂ ಅಲ್ಲಿನ ಮುಖ್ಯವಾದ ಕಾವ್ಯಮೀಮಾಂಸೆಯ ತತ್ವಗಳನ್ನು ಕನ್ನಡಕ್ಕೆ ತರುವ ಸಾಹಸದಲ್ಲಿ ಯಶಸ್ವಿಯಾಗಿದ್ದಾರೆ. ಕುವೆಂಪು ಅವರ ಕಾವ್ಯಮೀಮಾಂಸೆ ಭಾರತೀಯ ದರ್ಶನಗಳ ಹಿನ್ನೆಲೆ, ಕನ್ನಡ ಕಾವ್ಯಪರಂಪರೆಯ ಪ್ರಜ್ಞೆ, ಪಾಶ್ಚಾತ್ಯ ಕವಿಗಳ, ವಿಮರ್ಶಕರ, ಮನಸ್‌ಶಾಸ್ತ್ರದ, ತತ್ವಶಾಸ್ತ್ರದ ಅಧ್ಯಯನದ ಪರಿಣಾಮ, ಶ್ರೀ ಅರವಿಂದರ ಕಾವ್ಯಯೋಗದ ಬೆಂಬಲ—ಈ ಎಲ್ಲಾ ಶಕ್ತಿಗಳ ಸಂಚಯನದಿಂದ ನವನವೋನ್ಮೇಷಶಾಲಿನಿಯಾಗಿದೆ. ಅವರ ವಿಷಯಪ್ರತಿಪಾದನೆ, ದೃಷ್ಟಾಂತಮಾಲಿಕೆ, ಸಾಲಂಕೃತ ರೂಪಕಶೈಲಿ ಇವುಗಳಲ್ಲಿ ವಿಚಾರದ ವಿದ್ಯುತ್ ಸಂಚಾರವಿದೆ. ಕಾವ್ಯಮೀಮಾಂಸೆಯಂಥ ಶಾಸ್ತ್ರನಿರೂಪಣೆಗೆ ಇಂಥ ಸಾಲಂಕೃತೋಜ್ವಲ ಶೈಲಿ ಅಗತ್ಯವೆ. ಇದು ಒಂದು

ರೀತಿಯಲ್ಲಿ 'ಅಶಾಸ್ತ್ರೀಯ'ವಾಗುವುದಿಲ್ಲವೆ ಎಂಬ ಆಕ್ಷೇಪಣೆಗಳೂ ಎದ್ದಿವೆ. ಇವರ ಶೈಲಿ ಅಶಾಸ್ತ್ರೀಯವಾಗಿಲ್ಲ; ಇನ್ನೂ ಕೊಂಚ ಸರಳವಾಗಿರಬಹುದಾಗಿತ್ತು ಎಂದೆನ್ನಿಸುತ್ತದೆ. ಆದರೆ ಸ್ವತಃ ಕವಿಯಾದವನು ಕಾವ್ಯವಿಷಯಕವಾಗಿ ಬರೆದ ಮೀಮಾಂಸೆಗೂ, ಕೇವಲ ಶಾಸ್ತ್ರಕಾರನ ಕಾವ್ಯಮೀಮಾಂಸೆಗೂ ಅಭಿವ್ಯಕ್ತಿಯ ರೀತಿಯಲ್ಲಿ ವ್ಯತ್ಯಾಸವಿರುತ್ತದೆ ಎಂಬುದನ್ನು ಮರೆಯಬಾರದು. ಇದು ಕವಿಯ ಕಾವ್ಯಮೀಮಾಂಸೆ; ಕವಿಯ ವ್ಯಕ್ತಿವೈಶಿಷ್ಟ್ಯ ಇಲ್ಲಿಯೂ ತನ್ನ ಹೊಳಪನ್ನು ಬೇರೊಂದು ನಿಲುವಿನಲ್ಲಿ ಉಳಿಸಿಕೊಂಡಿದೆ.

ಕನ್ನಡದ ಪ್ರಮುಖ ಕವಿಗಳಲ್ಲಿ ಒಬ್ಬರಾದ ಪು.ತಿ.ನ. ಅವರ "ಕಾವ್ಯ ಕುತೂಹಲ" ಕನ್ನಡ ಕಾವ್ಯಮೀಮಾಂಸೆಯಲ್ಲಿ ಒಂದು ಮಹತ್ವದ ಗ್ರಂಥ. ಪು.ತಿ.ನ. ಅವರು ಮೂಲತಹ ಜಿಜ್ಞಾಸುವಾದ ಕವಿ. ಅವರ ಕಾವ್ಯಮೀಮಾಂಸೆ ಗದ್ಯಪದ್ಯಗಳೆರಡರಲ್ಲಿಯೂ ಹರಿದಿದೆ. ಅವರ ಕಾವ್ಯಮೀಮಾಂಸೆಯನ್ನು ಕುರಿತ ಪದ್ಯಗಳು 'ಸೂತ್ರ'ಗಳಾದರೆ, ಕಾವ್ಯಮೀಮಾಂಸೆಯನ್ನು ಕುರಿತ ಅವರ ಗದ್ಯ ಲೇಖನಗಳು ಅದರ 'ವೃತ್ತಿ'ಯಂತೆ ತೋರುತ್ತವೆ. ಅವರ 'ರಸಸರಸ್ವತಿ' ಎಂಬ ಕವಿತೆ, ಕವಿತೆಗಿಂತ ಕಾವ್ಯಮೀಮಾಂಸೆಯ ಪದ್ಯರೂಪವೆನ್ನಬಹುದು. ಅವರ 'ಕವಿ' 'ದಾಳಿಂಬೆ' 'ಬಿಡುವು' ಮತ್ತು 'ಮಲೆದೇಗುಲ'ದ ಕೆಲವು ಭಾಗಗಳು, ಕವಿತೆಗಳಲ್ಲಿ ಹರಳುಗೊಂಡ ಕಾವ್ಯಮೀಮಾಂಸೆಯ ನಿದರ್ಶನಗಳಾಗಿವೆ.[1] ಅವರ 'ಕಾವ್ಯ ಕುತೂಹಲ' ಎಂಬ ಪುಸ್ತಕ ಕೂಡ, ಅವರು ತಮ್ಮ ಹಾಗೂ ಇತರ ಲೇಖಕರ ಕೃತಿಗಳಿಗೆ ಬರೆದ ಮುನ್ನುಡಿಗಳ (ಕೆಲವು ಬೇರೆಯಾಗಿ ಬರೆದ ಲೇಖನಗಳೂ ಇವೆ) ಸಂಕಲನವಾಗಿದೆ. ಹೀಗಾಗಿ ಕಾವ್ಯಾಸ್ವಾದ ಮಾಡುತ್ತಾ ಮಾಡುತ್ತಾ, ಆ ಸೊಗಸನ್ನು ಸವಿಯುತ್ತ ಆ ಸೊಗಸನ್ನು ತಟಕ್ಕನೆ ಬೇರ್ಪಡಿಸಿ ವಸ್ತುನಿಷ್ಠತೆಯ ನೆಲೆಗೇರಿಸಿ ಚಿಂತನೆಗೆ ಒಳಗುಪಡಿಸಿದ್ದರಿಂದ ಹೊಮ್ಮಿದೆ ಪು.ತಿ.ನ. ಅವರ ಕಾವ್ಯಮೀಮಾಂಸೆ. ಅವರ 'ಕಾವ್ಯ ಕುತೂಹಲ'ದಲ್ಲಿ ಓದುಗರ ಕುತೂಹಲವನ್ನು ಕೆರಳಿಸುವ ಅನೇಕ ವಿಷಯಗಳಿವೆ. ಕಾವ್ಯದ ಉಗಮದ ಕಾರಣವನ್ನು ಕುರಿತು "ಕವಿಗೆ ಹುಟ್ಟಿನಿಂದಲೇ ಪ್ರಾಪ್ತವಾದ ಎರಡು ಗುಣಗಳಿರಬೇಕೆಂದು ತೋರುತ್ತದೆ: ಭವದ ತೀವ್ರಸಂವೇದನಾರೂಪದ ಪ್ರಜ್ಞೆ—ಇದನ್ನು ಬೇಕಾದರೆ ಭವನಿಮಜ್ಜನ ಚಾತುರ್ಯ ಎಂದು ಕರೆಯಬಹುದು—ಮತ್ತು ಆ ನಿಮಗ್ನತೆಯಿಂದ ಪಾರಾಗಿ ಬೇರೆಯಾಗಿ ನಿಲ್ಲುವ ಲಘಿಮಾಕೌಶಲ. ಈ ಎರಡು ಗುಣಗಳು ಕವಿಗಿದ್ದ ಹೊರತು ಕಾವ್ಯ ಸಿದ್ಧಿಸಲಾರದು" (ಪು. ೧) ಎಂಬ ಈ ವಿವರಣೆಯ ಭಾಷೆ ಮತ್ತು ಪರಿಭಾಷೆಗಳು ತೀರಾ ಹೊಸವು. ಈ ಒಂದು ಲಘಿಮಾಕೌಶಲ ಅಥವಾ "ಮುಕ್ತಿಯ, ಪ್ರಾಚುರ್ಯವಿಲ್ಲದಿದ್ದರೆ ಲಭಿಸುವುದು ಪ್ರಚಾರಸಾಹಿತ್ಯ, ಪ್ರಚೋದಕ ಸಾಹಿತ್ಯ, ಪ್ರಬೋಧನ ಸಾಹಿತ್ಯ" (ಪು. ೨) "ಕವಿ ಒಂದು ಜನಾಂಗದ ಭವ ಪ್ರವೃತ್ತಿ

[1] ಜಿ. ಎಸ್. ಶಿವರುದ್ರಪ್ಪ: ಪು.ತಿ.ನ. ಅವರ ಕಾವ್ಯಜಿಜ್ಞಾಸೆ: ಪ್ರಬುದ್ಧ ಕರ್ಣಾಟಕ: ೪೦-೨ (೧೯೫೮-೫೯).

ಶಕ್ತಿಯ ಪ್ರತೀಕವಲ್ಲ; ಅದರಲ್ಲಿ ನಿವೃತ್ತಿ ಶಕ್ತಿ ಪ್ರಚುರವಾಗುವ ಕಾಲದಲ್ಲಿ ಆ ಪ್ರವೃತ್ತಿ ಮತ್ತು ನಿವೃತ್ತಿ ಶಕ್ತಿಗಳ ಸಾಮರಸ್ಯದ ಪ್ರತೀಕ" (ಪು. ೩). "ಮೊದಲು ಭವದನುಭವ, ನಡುವೆ ಬಿಡುಗಡೆ, ಮತ್ತೆ ಪುನರ್ಭವ; ಈ ಭವಪುನರ್ಭವಗಳ ಮಧ್ಯದಲ್ಲಿ ಈ ಬಿಡುಗಡೆ ತನ್ನ ಪ್ರಶಾಂತ ತೇಜಸ್ಸನ್ನು ಮೆರೆಸುತ್ತಿದ್ದರೆ ಅದು ಕಾವ್ಯ" (ಪು. ೫)—ಇದು ಕಾವ್ಯವನ್ನು ಕುರಿತು ಆವೇಶರಹಿತವಾದ ಖಚಿತ ವಿಚಾರಪ್ರತಿಪಾದನೆ. ರಸವನ್ನು ಕುರಿತು ಹೇಳುತ್ತಾರೆ: "ರಸವೆನ್ನುವುದೇನು? ಇದೊಂದು ಮನಃಸ್ಥಿತಿ. ಮನಸ್ಸನ್ನು ಒಂದು ತೆರದ ಸ್ವಾಸ್ಥ್ಯಕ್ಕೆ ತರುವುದು, ಆ ಹದದಲ್ಲಿ ನಿಲ್ಲುವಂತೆ ಮಾಡುವುದು. ಅದರ ಆಳ ವಿಸ್ತಾರಗಳನ್ನು ಹೆಚ್ಚಿಸುವುದು....ಚಲಿಸುವ ಮನಸ್ಸಿನ ಚಲನವನ್ನು ಪಳಗಿಸಿ ಸ್ತಿಮಿತಕ್ಕೆ ತಂದು ಮಡುಗಟ್ಟುವಂತೆ ನಿಲ್ಲಿಸುವ ಕುಶಲಿಯನ್ನು ಮನುಷ್ಯವರ್ಗವೇ ಆದರಿಸುತ್ತದೆ. ಇಂಥ ಕುಶಲಶಿಲ್ಪಿಗಳ ವರ್ಗಕ್ಕೆ ಸೇರಿದವನು ಕವಿ"...."ನಮ್ಮ ಮನಸ್ಸನ್ನು ನಮಗೆ ತಂದೊಪ್ಪಿಸಿ ಚಂದಗೊಳಿಸುವುದಕ್ಕೆ ಕವಿ ಹುಡುಕುವ ವಿಷಯತಂತ್ರಗಳೇ ಆತನ ಕಾವ್ಯ" (ಪು. ೮). ಈ ವಿವರಣೆ ಕುತೂಹಲಕಾರಿಯಾಗಿದೆ. ಇನ್ನೊಂದೆಡೆ ಪ್ರತಿಭೆಯನ್ನು ಕುರಿತು ಪು.ತಿ.ನ. ಅವರು ಕೊಡುವ ವಿವರಣೆ ಗಮನಾರ್ಹವಾಗಿದೆ: ನಮ್ಮ ಆಲಂಕಾರಿಕರು ಪ್ರತಿಭೆ ನವನವೋನ್ಮೇಷಶಾಲಿನಿಯಾದ ಪ್ರಜ್ಞೆ ಎಂದು ಕರೆದರು. ಹಾಗಾದರೆ ಪ್ರಜ್ಞೆ ಎಂದರೇನು? ಪು.ತಿ.ನ. ಹೇಳುತ್ತಾರೆ—"ಅರಿವಿನ ಸಂವೇದನಾರೂಪವನ್ನು 'ಪ್ರಜ್ಞೆ' ಎನ್ನಬಹುದಲ್ಲವೆ? ಸಂವೇದನೆಯಿಲ್ಲದೆ ಯಾವುದರ ನಿಜವಾದ ಅರಿವೂ ನಮಗಾಗದು. ಮಗು ಅಳುತ್ತಿದ್ದರೆ ಮಲತಾಯಿಗೆ ಅದರ ಅಸುಖದ ಅರಿವು ಮಾತ್ರ ಆಗುತ್ತದೆ. ತಾಯಿಗೋ ಆ ಅಸುಖದ 'ಪ್ರಜ್ಞೆ' ಮೂಡುತ್ತದೆ" (ಪು. ೧೪) ಎನ್ನುವಲ್ಲಿ 'ಪ್ರಜ್ಞೆ'ಯನ್ನು ಕುರಿತು ಇಷ್ಟು ಸಮರ್ಪಕವಾದ ವಿವರಣೆಯನ್ನು ಹೀಗೆ ಯಾರು ಕೊಟ್ಟಿರಲಿಲ್ಲ. ಪ್ರಜ್ಞೆ ಎಂದರೆ ಕೇವಲ ಲೋಕಾನುಭವಗಳ ಹೊರವಲಯದ ಅರಿವಲ್ಲ; ಲೋಕ ವಿಷಯಗಳಿಗೂ ತನಗೂ ಸ್ಥಾಪಿತವಾಗಬೇಕಾದ ಪ್ರಾಣಸಂಬಂಧದ ಅನುಭವ. ಕವಿಗೆ ಈ ಪ್ರಜ್ಞೆ ಇರಬೇಕು. "ಕವಿ ತನ್ನ ಆತ್ಮ ಸಂಸ್ಕಾರದಿಂದ 'ಪ್ರತಿಭೆ'ಗೆ ಎಂದರೆ ಉದಯೋನ್ಮುಖ ಪ್ರಜ್ಞೆಗೆ ಮಿಕ್ಕವರಿಗಿಂತ ಹೆಚ್ಚು ಪಾತ್ರವಾಗುವಂತೆ ಮಾಡಿಕೊಳ್ಳುವುದು. ಇದರಲ್ಲಿ ಒಂದು ಅಂಶ. ಮತ್ತೊಂದಂಶ, ಹೀಗೆ ಪ್ರಾಪ್ತವಾದ ಪ್ರತಿಭಾಪುರಸ್ಕೃತ ಪ್ರಜ್ಞೆಯನ್ನು ಎಲ್ಲೂ ಪೋಲಾಗದಂತೆ ಕಾವ್ಯಕಾರ್ಯದಲ್ಲಿ ಪ್ರವಹಿಸುವಂತೆ ಮಾಡುವ ಪರಿಕರ್ಮ ಕೌಶಲವನ್ನು ಪಡೆಯುವುದು" (ಪು. ೧೫). ಇದು ಕವಿಕರ್ಮದ ವಿವರಣೆ. ಪು.ತಿ.ನ. ಅವರ ಇನ್ನೊಂದು ಲೇಖನ 'ಅಸಂಭಾವ್ಯತೆಯಿಂದ ಕಾವ್ಯಕ್ಕೆ ಬರುವ ರಮ್ಯತೆ' (ಪು. ೭೩) ಎನ್ನುವುದು. ಭಾರತೀಯ ಕಾವ್ಯಮೀಮಾಂಸೆಯ ಪ್ರಕಾರ 'ಅಸಂಭಾವ್ಯತೆ' ಕಾವ್ಯಾಸ್ವಾದಕ್ಕೆ ಒಂದು ವಿಘ್ನ ಎಂದು ಹೇಳಲಾಗಿದೆ. ಆದರೆ ಪು.ತಿ.ನ. ಅವರು 'ಅಸಂಭಾವ್ಯತೆಯಿಂದ ಕಾವ್ಯಕ್ಕೆ ಬರುವ ರಮ್ಯತೆ'ಯನ್ನು ನಿದರ್ಶನಪೂರ್ವಕವಾಗಿ ವಿವರಿಸಿದ್ದಾರೆ. ಭಾರತೀಯ ಲಾಕ್ಷಣಿಕರ ಪ್ರಕಾರ 'ಅಸಂಭಾವ್ಯತೆ' ಒಂದು ವಿಘ್ನ ಎಂದರೆ, ಕಾವ್ಯದಲ್ಲಿ

ಚಿತ್ರಿತವಾದ ಘಟನೆಗಳು ಸಹೃದಯರಲ್ಲಿ ಇದು ಹೀಗೆ ನಡೆಯಿತೆ, ಇದು ಅಸಂಭವ ವಲ್ಲವೆ ಎಂಬ ಶಂಕೆಯನ್ನುಂಟುಮಾಡುವಂತೆ ಚಿತ್ರಿತವಾಗಿರಬಾರದು. ಹಾಗೆ ಅಸಂಭಾವ್ಯವೆನ್ನಿಸದಂತೆ ಚಿತ್ರಿತವಾಗಿರುವುದು ಕಲಾವಿದನ ಸಾಮರ್ಥ್ಯವನ್ನು ಅವಲಂಬಿ ಸಿದೆ. ಹಾಗೆಯೆ ಸಹೃದಯನ ಅಸಾಮರ್ಥ್ಯದಿಂದಲೂ 'ಅಸಂಭಾವ್ಯತೆ' ಅವನ ಪಾಲಿಗೆ ರಸವಿಘ್ನವಾಗಬಹುದು. ಪು.ತಿ.ನ. ಅವರು ಹೇಳುವಂತೆ ಕಾವ್ಯದ ತುಂಬ ಅಸಂಭಾವ್ಯ ಪ್ರಸಂಗಗಳೇನೋ ಇವೆ; ಆದರೆ ರಮ್ಯತೆ ಬರುವುದು, ಅವು 'ಅಸಂಭಾವ್ಯ'ವಾಗಿವೆ ಎಂಬ ಕಾರಣದಿಂದಲೋ, ಅಥವಾ ಅವುಗಳ ಸಂಭಾವ್ಯತೆಯ ಬಗ್ಗೆ ಓದುಗರಲ್ಲಿ ಶಂಕೆಯನ್ನು ಮೂಡಿಸದಷ್ಟು ಕಲಾತ್ಮಕವಾಗಿರುವುದರಿಂದಲೋ ಎಂಬ ಪ್ರಶ್ನೆಯನ್ನು ಇಲ್ಲಿ ಎತ್ತಬೇಕಾಗುತ್ತದೆ. ಪು.ತಿ.ನ. ಅವರ 'ಕಾವ್ಯ ಕುತೂಹಲ'ದಲ್ಲಿರುವ ಇಪ್ಪತ್ತೆರಡು ಗದ್ಯಭಾಗಗಳಲ್ಲಿ ಇನ್ನೂ ಕೆಲವು ಜಿಜ್ಞಾಸೆಗಳಿವೆ. ಆ ಎಲ್ಲದರ ಪರಿಚಯ, ವಿಮರ್ಶೆ ಇಲ್ಲಿ ಸಾಧ್ಯವಿಲ್ಲ. ಈ ಕೃತಿಯಲ್ಲಿ ಉದ್ದಕ್ಕೂ 'ಸೂತ್ರ'ದಂಥ ಎಷ್ಟೋ ಮನನೀಯವಾದ ಮಾತುಗಳಿವೆ. "ಇಲ್ಲಿ 'ಪ್ರತಿಭೆ'ಯಂತೆ ಆಗಮನ, ಅಲ್ಲಿ 'ಧ್ವನಿ'ಯಂತೆ ನಿರ್ಗಮನ. ನಡುವೆ ಮಹತ್ತರವಾದ ಕಾವ್ಯ ಕೋಲಾಹಲ" (ಪು. ೧೨); "ಅದು ಮುಕ್ತನಿಂದ ಮುಮುಕ್ಷುವಿಗೆ ಹರಿಯುವ ಸಮ್ಮೋದಲಹರಿ" (ಪು. ೧೮) "ಗುಣಾತೀತನಾದ ಸಮರ್ಥನಿಂದ ಮಾತ್ರ ಸತ್ಕಾವ್ಯ" (ಪು. ೪೩); "ಕಾವ್ಯವೊಂದು ಶಾಬ್ದಕಲ್ಪ (Ritual of words)" (ಪು. ೯೮).

ಪು.ತಿ.ನ. ಅವರ ಕಾವ್ಯಮೀಮಾಂಸೆಗೆ ಕಾವ್ಯವನ್ನು ಕುರಿತು ತಮ್ಮದೇ ಆದ ರೀತಿಯಲ್ಲಿ ನಡೆಯಿಸಿದ ಚಿಂತನೆಯೇ ಕಾರಣವಾಗಿದೆ. ಇವರ ಈ ಚಿಂತನೆಗೆ ಹಿನ್ನೆಲೆ ಯಾಗಿ ಸಂಸ್ಕೃತಲಾಕ್ಷಣಿಕರ, ಸಂಸ್ಕೃತ ಸಾಹಿತ್ಯದ ಮತ್ತು ವೇದಾಂತದ, ಪಾಶ್ಚಾತ್ಯ ಕಾವ್ಯಮೀಮಾಂಸೆಯ ತಿಳಿವೂ ಒದಗಿಬಂದಿದೆ. ಭಾರತೀಯ ಕಾವ್ಯಮೀಮಾಂಸೆಯ 'ಸಾಧಾರಣೀಕರಣ ತತ್ತ್ವ,' ಪಾಶ್ಚಾತ್ಯ ಕಾವ್ಯಮೀಮಾಂಸೆಯ 'Psychical distance', ಇವುಗಳು ಪು.ತಿ.ನ. ಅವರ ಜಿಜ್ಞಾಸೆಯಲ್ಲಿ ಹೊಸ ಹೆಸರಿನಿಂದ ಕಾಣಿಸಿಕೊಳ್ಳುತ್ತವೆ. ಅವರ ಬರೆವಣಿಗೆಯಲ್ಲಿ ಅಲಂಕಾರ ವೈಭವವಿಲ್ಲ; ರೀತಿಯಲ್ಲಿ ಸಾಂಪ್ರದಾಯಿಕತೆ ತೋರಿದರೂ ವಿಚಾರಗಳು ನೂತನವಾಗಿವೆ. ಒಂದು ರೀತಿಯ ಅವ್ಯಗ್ರ, ವಸ್ತುನಿಷ್ಠತೆ ಇವರ ಚಿಂತನೆಯ ಮೂಲಭಿತ್ತಿಯಾಗಿರುವುದರಿಂದ ಅವರ ಕಾವ್ಯಮೀಮಾಂಸೆ ಸಾವಧಾನ ವಾಗಿ, ಅನೇಕ ಉಜ್ವಲ ಚಿಂತನೆಗಳನ್ನು ಹರಳುಗೊಳಿಸುತ್ತಾ ಕುತೂಹಲಕಾರಿಯಾಗಿದೆ.

ಕನ್ನಡದ ಮತ್ತೊಬ್ಬ ಶ್ರೇಷ್ಠ ಕವಿಯಾದ ಬೇಂದ್ರೆಯವರು ಕಾವ್ಯಮೀಮಾಂಸೆ ಯನ್ನು ಕುವೆಂಪು, ಪು.ತಿ.ನ, ಗೋಕಾಕ ಇವರ ಹಾಗೆ ಪ್ರತ್ಯೇಕವಾಗಿ ಗದ್ಯರೂಪದಲ್ಲಿ ಬರೆದದ್ದು ಕಡಮೆ.[1] ಅವರ ಕಾವ್ಯಮೀಮಾಂಸೆಯ ಬಹುಭಾಗ ಅವರ ಕವಿಸಹಜ

---

[1] ಬೇಂದ್ರೆಯವರ "ಸಾಹಿತ್ಯ ಹಾಗೂ ವಿಮರ್ಶೆ" ಮತ್ತು "ಸಾಹಿತ್ಯ ಸಂಶೋಧನ" ೧೯೪೩ಕ್ಕೆ ಹಿಂದೆಯೇ ಬಂದವು. ಶ್ರೀ ಮಾಸ್ತಿಯವರ ಪುಸ್ತಕ "ಸಾಹಿತ್ಯ" ಎಂಬುದೂ ಹಿಂದಿನದು. ೧೯೪೩ ರಿಂದ ಈಚೆಗೆ ಈ ವಿಷಯದ ಮೇಲೆ ಪುಸ್ತಕ ಬಂದಂತಿಲ್ಲ.

ಮಾಧ್ಯಮವಾದ ಪದ್ಯದಲ್ಲೇ ನಡೆದಿದೆ. "ಭೃಂಗದ ಬೆನ್ನೇರಿ ಬಂತು ಕಲ್ಪನಾವಿಲಾಸ" ಎಂದು ಬಹು ಹಿಂದೆಯೆ ಬಂದ ಅವರ 'ಭಾವಗೀತ' ಪದ್ಯವೆ ಸೊಗಸಾದ ಕಾವ್ಯ ಮೀಮಾಂಸೆಯಾಗಿದೆ. ಅವರ ಕವಿ-ಕಾವ್ಯಮೀಮಾಂಸೆಯ ಪದ್ಯಗಳು ಅವರ ಕವನ ಸಂಗ್ರಹದ ಅನೇಕ ಕವಿತೆಗಳಲ್ಲಿ ಮಿನುಗುತ್ತಾ ಚದುರಿನಿಂತಿದೆ. ಈ ಕವಿತೆಗಳ ಪದರ ಪದರಗಳಲ್ಲಿ ಅಡಗಿರುವ ಕಾವ್ಯಮೀಮಾಂಸೆಯನ್ನು ಕುರಿತು ಶಿವರುದ್ರಪ್ಪನವರ "ಕಾವ್ಯ ಸೃಷ್ಟಿ ಬೇಂದ್ರೆಯವರ ದೃಷ್ಟಿ"[1] ಎಂಬ ಲೇಖನವೂ, ಶಂಕರ ಮೊಖಾಶಿಯವರ "ಶ್ರೀ ಬೇಂದ್ರೆಯವರ ಕಾವ್ಯಮೀಮಾಂಸೆ" ಎಂಬ ಪುಸ್ತಕವೂ ಪ್ರಕಟವಾಗಿವೆ. ಬೇಂದ್ರೆ ಯವರ ಪ್ರಕಾರ ಕಾವ್ಯ "ಭವಮಂಥನ ತಂತ್ರ"; ಅದು "ಓಂಕಾರದ ಶಂಖನಾದ ಕ್ಕಿಂತ ಕಿಂಚಿದೂನ" ಈ ಮಾತೆಲ್ಲ ಇಪ್ಪತ್ತೈದು ವರ್ಷಗಳ ಹಿಂದಿನದು. ಆದರೆ ೧೯೬೨ರಲ್ಲಿ "ಮನೋಹರ ಗ್ರಂಥಮಾಲೆ"ಯವರು ಪ್ರಕಟಿಸಿರುವ "ಮನ್ವಂತರ-೧" ರಲ್ಲಿ ಬೇಂದ್ರೆಯವರೆ ತಮ್ಮ ಕವಿ-ಕಾವ್ಯ ಜೀವನವನ್ನು "ಕಾವ್ಯೋದ್ಯೋಗ" ಎಂಬ ಶೀರ್ಷಿಕೆಯಡಿಯಲ್ಲಿ ವಿಸ್ತಾರವಾಗಿ ಬರೆದಿದ್ದಾರೆ. ದ. ರಾ. ಬೇಂದ್ರೆಯೊಳಗಿನ ಕವಿ "ಅಂಬಿಕಾತನಯದತ್ತ" ಈ ಭವದ ಯಾವ ಯಾವ ಕುದಿತಗಳೊಳಗಿಂದ ಹಾಯ್ದು ಪಾಕವಾಗಿ ಹೊಮ್ಮಿದ ಎಂಬುದನ್ನು ಅದ್ಭುತ ರಮ್ಯವಾಗಿ ಅವರು ನಿರೂಪಿಸಿರುವ ರೀತಿಯೆ ಒಂದು ಬಗೆಯ ಕಾವ್ಯಮೀಮಾಂಸೆಯಾಗಿದೆ. ಕವಿ 'ಅಂಬಿಕಾತನಯದತ್ತ' ನನ್ನು ರೂಪಿಸಿದ, ನಿರೂಪಿಸಿದ ವ್ಯಕ್ತಿಗಳೂ ಶಕ್ತಿಗಳೂ ಇವುಗಳ ಕಥನವನ್ನು ನೋಡಿ ದರೆ ಕವಿ ಹೇಗೆ ಒಂದು ಅಸಾಧಾರಣ ಪರಿಸರದ ಪ್ರಭಾವದಿಂದ ರೂಪಿತನಾಗಿದ್ದಾನೆ ಅಥವಾ ರೂಪಿತನಾಗುತ್ತಾನೆ ಎಂಬ ಕವಿ ಸಂಭವರಹಸ್ಯ ಇಲ್ಲಿ ಸ್ಫುಟವಾಗಿದೆ. ಬೇಂದ್ರೆ ಯವರು ಈ ವಿಚಾರದ ನಿಲುವಿನಿಂದ ಕವಿ ಜೀವನದ, ಕವಿವ್ಯಕ್ತಿ-ಲೋಕವ್ಯಕ್ತಿ ಈ ಎರಡರ ದ್ವಂದ್ವವನ್ನು ತೆರೆದು ತೋರಿದ್ದಾರೆ.[2] ಈ ಕಾವ್ಯೋದ್ಯೋಗದಲ್ಲಿ ಒಂದೆಡೆ ಕಾವ್ಯವನ್ನು ಕುರಿತು "ಕಾವ್ಯವೆಂದರೆ ವಿಷಯ ಚಿಂತನವಲ್ಲ, ಶಬ್ದಾರ್ಥದಲ್ಲಿ ಎತ್ತಿದ ವಿಷಯಾನಂದ; ವೈಷಯಿಕ ಆನಂದವಲ್ಲ. ಈ ಶಬ್ದಾರ್ಥವು ಅಂತರಂಗದಲ್ಲಿ ರಸ- ರೂಪ ಪದಾರ್ಥವಾಗಿ, ಸಂಕೇತಾರ್ಥಗಳ ಮುಖವಾಡ ತೊಟ್ಟು, ಭಾವಾರ್ಥಗಳನ್ನು ವ್ಯಂಜಿಸುವಾಗ ಆನಂದ ಲೀಲಾನಾಟಕ ನಡೆಯುವುದು; ಆದರಿಂದ ಸಹೃದಯರಲ್ಲಿ ಯಾವ ರಸ ಪರಿಪಾಕ ಪರಿಣತವಾಗುವುದು ಇದು ಸಂಗತವಾದ ವಿಮರ್ಶೆಯ ಕಾರ್‍ಯ" (ಪು. ೨೯) "ಕಾವ್ಯವು ಜೀವ-ಜೀವ ಸಂಪರ್ಕದ ಭಾಷೆ" (ಪು. ೯೮) ಎಂದು ಹೇಳು ತ್ತಾರೆ. ಬೇಂದ್ರೆಯವರ ಕಾವ್ಯಮೀಮಾಂಸೆ ಅನುಭಾವಿಕ ವ್ಯಾಖ್ಯಾನ ರೂಪವಾದದ್ದು ಎಂದಲ್ಲದೆ ಹೆಚ್ಚೇನನ್ನೂ ಹೇಳಲು ಸದ್ಯಕ್ಕೆ ಸಾಧ್ಯವಾಗುವುದಿಲ್ಲ.

---

[1] ಪ್ರಬುದ್ಧ ಕರ್ಣಾಟಕ : ೩೮–೪ (೧೯೫೬–೫೭)

[2] ಈ ವಿಷಯಕ್ಕೆ ನೋಡಿ : ಶಿವರುದ್ರಪ್ಪ : "ವಿಮರ್ಶೆಯ ಪೂರ್ವ-ಪಶ್ಚಿಮ" : "ಕವಿ- ವ್ಯಕ್ತಿ" ಎಂಬ ಅಧ್ಯಾಯ.

ಕನ್ನಡ ಕಾವ್ಯದ ಪ್ರಯೋಗ ಪರಿಣತಮತಿಗಳಾದ ಗೋಕಾಕ್ ಅವರ ಕಾವ್ಯ ಮೀಮಾಂಸೆ ಅವರ ವಿಮರ್ಶೆಯ ಲೇಖನಗಳೊಂದಿಗೆ ಬೆರೆತುಕೊಂಡಿದೆ. ಅವರ 'ಸಾಹಿತ್ಯ ದಲ್ಲಿ ಪ್ರಗತಿ' 'ಇಂದಿನ ಕನ್ನಡ ಕಾವ್ಯದ ಗೊತ್ತುಗುರಿಗಳು' ಮತ್ತು 'ನವ್ಯತೆ ಹಾಗು ಕಾವ್ಯಜೀವನ' ಇವು ಈ ಇಪ್ಪತ್ತೈದು ವರ್ಷಗಳಲ್ಲಿ ಬಂದ ಕಾವ್ಯಮೀಮಾಂಸೆಯನ್ನು ಗುರುತಿಸಬಹುದಾದ ಕೆಲವು ಪ್ರಬಂಧಗಳನ್ನುಳ್ಳ ಪುಸ್ತಕಗಳು. ಅದರ ವ್ಯಕ್ತಿತ್ವದಲ್ಲಿ ಪರಂಪರೆಯ ಸತ್ವ ಹಾಗೂ ಪ್ರಯೋಗ ಶೀಲತೆಯ ಹಂಬಲ ಈ ಎರಡೂ ಸಮ್ಮಿಶ್ರವಾಗಿರು ವುದರಿಂದ ಕಾವ್ಯಮೀಮಾಂಸೆಯನ್ನು ಕುರಿತ ಅವರ ವ್ಯಾಖ್ಯಾನಗಳಲ್ಲೆಲ್ಲಾ ವೇದಾಂತ ದಿಂದ ವಿಜ್ಞಾನದವರೆಗೆ, ಪುರಾಣಗಳಿಂದ ಹಿಡಿದು ಮನಸ್‌ಶಾಸ್ತ್ರದವರೆಗೆ, ಇಲಿಯಟ್ ನಿಂದ ಹಿಡಿದು ಅರವಿಂದರವರೆಗೆ ಹರಡಿಕೊಂಡ ವಿಚಾರಗಳ ಒಂದು ಸಂಕೀರ್ಣ ಬಂಧವನ್ನು ಕಾಣುತ್ತೇವೆ.

ಗೋಕಾಕ್ ಅವರ ದೃಷ್ಟಿಗೆ ಕಾವ್ಯ ವ್ಯಕ್ತಿತ್ವ ನಿರ್ಮಾಣದ ಒಂದು ಸಾಧನ. "ಕಾವ್ಯದಲ್ಲಿ ಒಂದು ವಿಶಿಷ್ಟವಾದ, ಅದ್ವಿತೀಯವಾದ ಕಾರ್ಯವೆಂದರೆ ವ್ಯಕ್ತಿತ್ವದ ನಿರ್ಮಾಣ ಇಲ್ಲವೆ ಸ್ವಯಂ ಸ್ವರೂಪ ದರ್ಶನವಾಗಿದೆ."[1] ಈ ವ್ಯಕ್ತಿತ್ವವೆಂಬುದು ಅವನ ಸಂಸ್ಕಾರ, ಅವನ ಪರಿಸರ ಮತ್ತು ಈ ಪರಿಸರದ ಸಂವೇದಾನುಭವಗಳನ್ನು ಜೀರ್ಣಿಸಿ ತನ್ನದನ್ನಾಗಿ ಮಾಡಿಕೊಳ್ಳುವ ಪ್ರಜ್ಞೆ–ಇವುಗಳಿಂದ ರೂಪುಗೊಳ್ಳುತ್ತದೆ. "ಜನಾಂಗ (race), ಯುಗ, ಆವರಣ ಹಾಗೂ ವ್ಯಕ್ತಿತ್ವ—ಈ ನಾಲ್ಕು ಮಾತುಗಳು ಸಾಹಿತಿಯ ಗುಣದೋಷಗಳನ್ನು ಸಿದ್ಧಪಡಿಸುತ್ತವೆ."[2] "ಕಾವ್ಯದಲ್ಲಿ ಮಹೋನ್ನತಿ ಇರಬೇಕು. ಮಹೋನ್ನತಿ ಎಂಬುದು ದೊಡ್ಡ ಕವಿಗಳ ಬರೆಹದಲ್ಲಿ ಗುರುತಿಸಬಹುದಾದ ಒಂದು ಲಕ್ಷಣ ಈ ಮಹೋನ್ನತಿಯಾದರೋ ಕವಿಯ ಕಾಲಮಾನ ಜೀವಮಾನಗಳ ಮೇಲೆ ಅವಲಂಬಿಸಿದೆ."[3] ಇಂದು ಜಗತ್ತು ಮಾನವನ ವೈಚಾರಿಕ, ವೈಜ್ಞಾನಿಕ ಪ್ರಗತಿಯಿಂದ ಹಿಂದಿಗಿಂತ ಸಂಕೀರ್ಣವಾಗಿದೆ. ಬದುಕಿನ ಏರು-ಪೇರುಗಳ ನಡುವೆ ಒಂದು ನವಮಾನವತಾದೃಷ್ಟಿ ಸಾಹಿತ್ಯದ ನವ್ಯಜೀವನ ದೃಷ್ಟಿಯಾಗಬೇಕಾಗಿದೆ. ಅದರ ಧ್ರುವಗಳನ್ನು ನಂಬಿ ಇಂದು ನಮ್ಮ ಜೀವನ ನೌಕೆ ಸಾಗಬೇಕಾಗಿದೆ. ಈ ಸಮಗ್ರ ದೃಷ್ಟಿಯೇ ಸಾರಸ್ವತ ಪ್ರಪಂಚದ ಸರಸ್ವತಿ."[4] ಈ ನವಮಾನವತಾ ವಾದವೇ ಗೋಕಾಕರ ಕಾವ್ಯಮೀಮಾಂಸೆಯ ಲೇಖನಗಳ ತುಂಬ ವ್ಯಾಖ್ಯಾನಿತವಾಗಿದೆ.

ಗೋಕಾಕರ ಕಾವ್ಯಮೀಮಾಂಸೆಯಲ್ಲಿ ವಿಷಯಗಳನ್ನು ಕೆಲವು ವಿಭಾಗಗಳಲ್ಲಿ ಅಡಕ ಮಾಡಿ ಹೇಳುವ ಹವ್ಯಾಸವೊಂದು ಕಾಣಿಸುತ್ತದೆ. 'ಸಾಹಿತ್ಯ ಮತ್ತು ಪ್ರಗತಿ'

---

[1] ವಿ. ಕೃ. ಗೋಕಾಕ: ಇಂದಿನ ಕನ್ನಡ ಕಾವ್ಯದ ಗೊತ್ತುಗುರಿಗಳು. ಪು ೨೧.

[2] ವಿ. ಕೃ. ಗೋಕಾಕ: ಸಾಹಿತ್ಯದಲ್ಲಿ ಪ್ರಗತಿ. ಪು ೪೬.

[3] ಅಲ್ಲೇ. ಪು. ೨೪.

[4] ಗೋಕಾಕ್: ನವ್ಯತೆ ಹಾಗೂ ಕಾವ್ಯಜೀವನ. ಪು. ೯.

ಎಂಬ ಪುಸ್ತಕದಲ್ಲಿ ಅವರು ನಿರೂಪಿಸುವ “ಕಾವ್ಯದ ದ್ವಾದಶ ಸೂತ್ರಗಳು” (ಪು. ೧೯) ‘ನವ್ಯತೆ ಹಾಗೂ ಕಾವ್ಯಜೀವನ’ದಲ್ಲಿ ಅವರು ಹೇಳುವ “ಕಾವ್ಯದ ಅಷ್ಟಾಂಗ”ಗಳು (ಪು. ೭೫), ಮತ್ತು ಕೋಲ್‌ರಿಜ್, ಅರವಿಂದರು, ವಚನಕಾರರು ಇವರ ಮತಗಳನ್ನು ಹೊಂದಿಸಿ ಮಾಡಿರುವ “ಕಾವ್ಯಯೋಗದ ಷಟ್‌ಸ್ಥಲಗಳು” (ಪು. ೮೭)—ಇವು ಇದಕ್ಕೆ ನಿದರ್ಶನವಾಗಿವೆ. ಹೀಗೆ ಒಂದು ಮತ್ತೊಂದಕ್ಕೆ ಸಂಬಂಧವಿದೆಯೆಂದು ಅನ್ನಿಸದ ಸಂಗತಿಗಳಿಗೆ ಸಂಬಂಧವನ್ನು ಕಾಣುವ, ಕಾಣಿಸುವ ಒಂದು ಕೌಶಲ ಇವರಲ್ಲಿದೆ. ಅಲ್ಲದೆ “ಕಾವ್ಯದ ಅಷ್ಟಾಂಗಗಳು” “ಕಾವ್ಯದ ದ್ವಾದಶ ಸೂತ್ರಗಳು” “ಕಾವ್ಯ ಯೋಗದ ಷಟ್‌ಸ್ಥಲಗಳು”—ಈ ರೀತಿಯ ಹೊಂದಾಣಿಕೆಯಲ್ಲಿ ಇವರಿಗೆ ವಿಶೇಷ ಕುತೂಹಲ. ಆದರೆ ಇವು ತತ್ಕಾಲದಲ್ಲಿ ಆದ ಅನಿಸಿಕೆಗಳ ಒಂದು ವಿನ್ಯಾಸವೇ ಹೊರತು, ಹೆಚ್ಚಿನ ದೇನನ್ನೂ ಇವುಗಳಿಂದ ನಿರೀಕ್ಷಿಸುವಂತಿಲ್ಲ. ಅದು ಅವರಿಗೂ ಗೊತ್ತು “ಕಾವ್ಯದ ವ್ಯಾಖ್ಯೆಗಳೇನೋ ಅಸಂಖ್ಯಾತವಾಗಿವೆ: ಅದರ ಸ್ವರೂಪವು ಅನಂತವಾಗಿದೆ”[1] ಎಂಬುದು.

ಕಾವ್ಯದ ಗುರಿಯನ್ನು ಕುರಿತು “ಆನಂದವೇ ಕಾವ್ಯದ ಗುರಿ” ಎಂಬ ನೆಲೆಗೇ ಬರುತ್ತಾರೆ. “ಕವಿಯ ವಿಷಯವೇನೇ ಇರಲಿ, ಅದರೊಳಗಿಂದ ಅವನು ಮಥಿಸಿ ತೆಗೆಯುವ ಸಾರವೇ ಇದು—ಅನಂತ ಹಾಗೂ ಸಾರ್ವತ್ರಿಕ ಆನಂದ ದರ್ಶನ.”[2] ಇದಕ್ಕೆ ಪೂರಕವಾಗಿ ಅರವಿಂದರ ಕಾವ್ಯದೃಷ್ಟಿಯನ್ನು ಗೋಕಾಕರು ಸಂಗ್ರಹಿಸಿ ಕೊಟ್ಟಿದ್ದಾರೆ: “ಕಾವ್ಯವೆಂಬುದು ಸಚ್ಚಿದಾನಂದದ ಮಂತ್ರ. ಆಧ್ಯಾತ್ಮಿಕ ಮಹಾ ತತ್ವದ ಅವತಾರ; ಲಯ, ರೀತಿ, ವಿಚಾರಗಳ ಸಾಂದ್ರತೆಯುಳ್ಳ ಶಕ್ತ ಶಬ್ದದಲ್ಲಿ ಆವಿರ್ಭವಿಸುವ ಆಧ್ಯಾತ್ಮಿಕ ದರ್ಶನ.”[3]

ಗೋಕಾಕರು ಐತಿಹಾಸಿಕವಾಗಿ ನವ್ಯಕಾವ್ಯದ ಪ್ರವರ್ತಕರಾದ್ದರಿಂದ ಮೊಟ್ಟ ಮೊದಲು ನವ್ಯ ಕಾವ್ಯಮೀಮಾಂಸೆಯನ್ನು ಮಾಡಿದ್ದಾರೆ. ಆದರೆ ನವ್ಯ ಕಾವ್ಯವೆಂದರೇನು? ಎನ್ನುವ ಬಗ್ಗೆ “ವ್ಯಕ್ತಿ ನಿಷ್ಠವಾಗಿ ಅದು ನಿರೂಪಿತವಾಗಿದ್ದರೆ ಕಾವ್ಯವು ರೊಮ್ಯಾಂಟಿಕ್ ಮಾದರಿಯದಾಗುತ್ತದೆ; ವಸ್ತುನಿಷ್ಠವಾಗಿ, ನಿರಾಭರಣವಾಗಿ, ನೇರವಾಗಿ ಅದು ವ್ಯಕ್ತವಾಗಿದ್ದರೆ ಕಾವ್ಯವು ನವ್ಯವಾಗುತ್ತದೆ”[4] ಎಂದು ಹೇಳುವ ಈ ಮಾತುಗಳು ನವ್ಯ ಕಾವ್ಯದ ವಿಶಿಷ್ಟ ಲಕ್ಷಣವೆಂದು, ನವ್ಯ ಕಾವ್ಯವನ್ನು ಬಲ್ಲ ಯಾರಾದರೂ ಒಪ್ಪುವುದು ಕಷ್ಟವಾಗಿದೆ.

ಗೋಕಾಕರ ಕಾವ್ಯಮೀಮಾಂಸೆಯಲ್ಲಿ ಒಂದು ಬಗೆಯ ಸಂಕೀರ್ಣತೆಯಿದೆ. ವಿಷಯ ನಿರೂಪಣೆಯಲ್ಲಿ ವಿಷಯಾಂತರದ ವಿಸ್ತಾರದಿಂದ ಪ್ರಸ್ತುತ ವಸ್ತು ಕೇಂದ್ರವೇ

[1] ಅಲ್ಲೇ. ಪು. ೭೪.
[2] ಅಲ್ಲೇ. ಪು. ೭೩.
[3] ಅಲ್ಲೇ. ಪು. ೧೧೧–೧೧೨.
[4] ಅಲ್ಲೇ. ಪು. ೫೧.

ಒಮ್ಮೊಮ್ಮೆ ಕಾಣಬಾಗುತ್ತದೆ. ವಿಶ್ವಮಾನವತಾ ನಿರ್ಮಾಣದ ಕಣಸನ್ನು ಕಣ್ಣ ಮುಂದಿರಿಸಿಕೊಂಡಿರುವುದರಿಂದಲೋ ಏನೋ, ಯಾವ ಒಂದು ವಿಷಯವನ್ನೆತ್ತಿಕೊಂಡರೂ, ಅದಕ್ಕೆ ಹಿನ್ನೆಲೆಯಾದ ವಿಶ್ವಭೂಮಿಕೆಯಗಲಕ್ಕೂ ಅವರು ತಮ್ಮ ಸ್ಮರಣಾನುಭವಗಳನ್ನು, ಘಟನಾಪರಂಪರೆಗಳ ಸಂಗತಿಯನ್ನು ಹಾಸುಹೊಕ್ಕಾಗಿ ನೇಯುತ್ತಾರೆ. ಮೂಲತಃ ಅವರ ಕಾವ್ಯಮೀಮಾಂಸೆ ಆದರ್ಶದ, ಶ್ರೇಯಸ್ಸಿನ, ತಾತ್ವಿಕತೆಯ ವಿಶ್ವಮಾನವತಾಭಿವ್ಯಕ್ತಿಯ ಅಂಶಗಳಿಂದ ಕೂಡಿದೆ.

ವಿ. ಸೀತಾರಾಮಯ್ಯನವರ "ಕವಿಕಾವ್ಯದೃಷ್ಟಿ" ಮತ್ತು "ಸಾಹಿತ್ಯ ವಿಮರ್ಶೆಗಳಲ್ಲಿ ಅರ್ಥ ಮತ್ತು ಮೌಲ್ಯ" ಎಂಬ ಎರಡು ಕೃತಿಗಳಲ್ಲಿ ಅವರ ವಿಸ್ತಾರವಾದ ವಿಷಯ ಪರಿಚಯ ಗೋಚರವಾಗುತ್ತದೆ. ಕಾವ್ಯಮೀಮಾಂಸೆಯ ಬಗೆಗೆ ಅವರದು ಬಹುಮಟ್ಟಿಗೆ ಮನಸ್ ಶಾಸ್ತ್ರೀಯ ವಿಧಾನ. ಕವಿ, ಕವಿಯ ವ್ಯಕ್ತಿತ್ವ, ಕವಿಯ ಮನಸ್ಸು, ಅವನ ಕಾಲ-ದೇಶ-ವಿಚಾರ ಇತ್ಯಾದಿಗಳಿಂದ ಕಾವ್ಯ ಹೇಗೆ ರೂಪುಗೊಳ್ಳುವುದೆಂಬ ಸಂಗತಿಯನ್ನು ಆತ್ಯಂತ ಚಟುವಟಿಕೆಯಿಂದ ವಿವರಿಸುತ್ತಾರೆ. 'ಸ್ಫೂರ್ತಿ'ಯ ವಿಚಾರದಲ್ಲಿ ಬಹುಶಃ ಮೊಟ್ಟಮೊದಲು ವಿ. ಸೀ. ಯವರು ವಿಚಾರಮಾಡಿದ್ದಾರೆ. "ಕೃತಿರಚನೆ. ಮಾಡಿಸುವವರೆಗೂ ಎಲ್ಲಿ ಆವೇಶ ಮುಗಿಯದೆ ಮಾಟ ನಡೆಯುತ್ತಲೇ ಇರುವುದೋ ಅಲ್ಲಿ ಮಾತ್ರ ಕಲಾ ಕಲ್ಪಕ್ಕೆ ಆಧಾರವಾದ ಸ್ಫೂರ್ತಿಯಿದೆ ಎನ್ನಬೇಕು" (ಪು. ೬೫) "ಕೃತಿಕಾರನ ಮನಸ್ಸು ಒಂದು ಕುಲುಮೆ, ತಾಯೊಡಲು, ಸ್ಫೂರ್ತಿ ಬೆಂಕಿ; ಆಗಿನ ಸನ್ನಿವೇಶ ಮೂಷೆ (ಪು. ೬೬)" ಎಂದು "ಕವಿಕಾವ್ಯದೃಷ್ಟಿ"ಯಲ್ಲಿ ವಿವರಿಸುತ್ತಾರೆ. "ಸಾಹಿತ್ಯ ವಿಮರ್ಶೆಯಲ್ಲಿ ಅರ್ಥ ಮತ್ತು ಮೌಲ್ಯ" ಎಂಬ ಪುಸ್ತಕದಲ್ಲಿ ಸ್ಫೂರ್ತಿಗೂ (Inspiration) ಕಲೆಗಾರಿಕೆಗೂ (Artistry) ಇರುವ ಸಂಬಂಧವನ್ನು ವಿವರಿಸುತ್ತಾರೆ. 'ಕವಿಯ ಅರ್ಥ ಮತ್ತು ಮೌಲ್ಯ' ಎಂಬ ಅಧ್ಯಾಯ ಕವಿ ಮೀಮಾಂಸೆಯ ದೃಷ್ಟಿಯಿಂದ ವಿಶೇಷವಾದದ್ದು. ಅದು ಕವಿ ಮನೋಮಂದಿರದ ಪ್ರಯೋಗಶಾಲೆಯ ಚಿತ್ರವೊಂದನ್ನು ಕೊಡುತ್ತದೆ. ಕಾವ್ಯ ಪ್ರಯೋಜನ ಮಾತು ಬಂದಾಗ "ಭಾವೋನ್ನತಿಯನ್ನು, ಸತ್ವದ ಉದ್ರೇಕವನ್ನು ತಂದುಕೊಡುವುದು. ಎಷ್ಟೆ ಸ್ವಸಂಪೂರ್ಣವಾದರೂ ಸಾಹಿತ್ಯವು ಉತ್ತಮ ಜೀವನಕ್ಕೆ ಸಾಧಕ; ಬಾಳಿಗೆ ಬೆಳಕು; ಆತ್ಮಶಕ್ತಿಯನ್ನು ಪೋಷಿಸುವ ಸಾರ ವಸ್ತು" (ಪು. ೨೫) ಎಂಬ ಪಲ್ಲವಿಯನ್ನು ಹೇಳಿದ್ದಾರೆ "ಕವಿಕಾವ್ಯದೃಷ್ಟಿ"ಯಲ್ಲಿ. ಪರಂಪರೆಯ ಬಗ್ಗೆ ಗೌರವ, ಹೊಸತರ ಬಗ್ಗೆ ಆಸಕ್ತಿ ಈ ಎರಡರ ತುಡಿತವಿದೆ ಅವರ ವಿಚಾರಗಳಲ್ಲಿ. ವಿಷಯ ನಾವೀನ್ಯತೆಗಿಂತ ವಿಷಯ ನಿರೂಪಣೆಯ ನಾವೀನ್ಯತೆಯೆ ಪ್ರಧಾನ. ಹೇಳುವಲ್ಲಿ ವಾಗ್ಮಿತೆ ಹೆಚ್ಚು; ಹತ್ತು ಇಪ್ಪತ್ತು ಕಡೆಯಿಂದ ಕಂಡದ್ದರ, ಕೇಳಿದ್ದರ, ಉಂಡದ್ದರ ನೆನೆಕೆಯ ನೂಲು ವಿಶೇಷವಾಗಿದೆ. ಸಂಸ್ಕೃತ–ಇಂಗ್ಲೀಷ್–ಕನ್ನಡ ಎಲ್ಲಾ ಕಡೆಯಿಂದ ಸಾಮಗ್ರಿಗಳು ಮಾತಿನ ನೆಯ್ಗೆಗೆ ಸಲೀಸಾಗಿ ಒದಗಿ ಬರುತ್ತವೆ. ಅವರ ಕಾವ್ಯಮೀಮಾಂಸೆಯ ಲೇಖನಗಳು ಅವರ ವಿಸ್ತಾರವಾದ ಕಾವ್ಯ-ಕಲಾ ಮೀಮಾಂಸೆಯ ತಿಳಿವಿಗೂ, ವಿಶ್ಲೇಷಣ ಸಾಮರ್ಥ್ಯಕ್ಕೂ ಕನ್ನಡಿ ಹಿಡಿಯುತ್ತವೆ.

ಮುಗಳಿಯವರ ಕೃತಿಗಳಲ್ಲಿ ದೊರೆಯುವ ಕಾವ್ಯಮೀಮಾಂಸೆ ಅವರ ವಿಮರ್ಶೆಯ ಬರೆವಣಿಗೆಗಳೊಂದಿಗೆ ಬೆರೆತುಹೋಗಿದೆ. 'ಸಾಹಿತ್ಯೋಪಾಸನೆ' ಎಂಬ ಪುಸ್ತಕದ "ಸಾಹಿತ್ಯೋಪಾಸನೆ", "ವಾಙ್ಮಯ ತಪಸ್ಸು" ಎಂಬ ಅಧ್ಯಾಯಗಳಲ್ಲಿ "ಮಾತೆಂಬುದು ಜ್ಯೋತಿರ್ಲಿಂಗ"ವೆಂಬ ಪುಸ್ತಕದಲ್ಲಿ ಅದೇ ಹೆಸರಿನ ಮತ್ತು 'ಕಲೆಗಾಗಿಯೆ ಕಲೆ' ಎಂಬ ಭಾಗಗಳಲ್ಲಿ, 'ಕನ್ನಡ ಸಾಹಿತ್ಯದಲ್ಲಿ ಸರಸ್ವತಿಯ ದರ್ಶನ' ಎಂಬ ಪುಸ್ತಕದಲ್ಲಿ ಉದ್ದಕ್ಕೂ ಕಾವ್ಯಮೀಮಾಂಸೆಯ ಕೆಲವು ವಿಷಯಗಳನ್ನು ಗುರುತಿಸಬಹುದು. ಕಾವ್ಯಕಾರಣಗಳಲ್ಲಿ ಒಂದಾದ 'ವ್ಯುತ್ಪತ್ತಿ'ಯನ್ನು ಕುರಿತು ಜ್ಞಾನ ಮತ್ತು ವಿವೇಕ (Knowledge and Wisdom) ಗಳ ಪರಿಪಾಕದಿಂದಾದ ಸಂಸ್ಕೃತಿ ಎಂಬ ವಿಶಾಲಾರ್ಥವನ್ನು ಕೊಟ್ಟು ಅವರು ವ್ಯಾಖ್ಯಾನಿಸಿರುವ ರೀತಿ ಗಮನಾರ್ಹವಾಗಿದೆ.[1] "ಕಲೆಗಾಗಿಯೆ ಕಲೆ" ಎಂಬ ಸೂತ್ರವನ್ನು ಸಾವಧಾನವಾಗಿ ವಿಶ್ಲೇಷಿಸಿ, ಆ ಮಾತಿನ ಪೂರ್ವೋತ್ತರಗಳನ್ನು ವಿವರಿಸಿ "ಕಲೆಗಾಗಿ ಕಲೆ" ಬೇರೆ, "ಕಲೆಗಾಗಿಯೆ ಕಲೆ" ಬೇರೆ ಎಂದು ಹೇಳಿ, "ಕಲೆಗಾಗಿ ಕಲೆ" ಎಂಬ ಮಾತು "ಜೀವನಕ್ಕಾಗಿ ಕಲೆ" ಎಂಬ ಮಾತಿನೊಂದಿಗೆ ಹೇಗೆ ಅವಿರೋಧವಾಗಿ ನಿಲ್ಲಬಹುದೆಂಬುದನ್ನು ತೋರಿಸಿರುವ ರೀತಿ ಹೊಸದಾಗಿದೆ.[2] "ವಾಙ್ಮಯ ತಪಸ್ಸು" ಎಂಬ ಲೇಖನದಲ್ಲಿ "ಭಗವದ್ಗೀತೆ"ಯ ಶ್ಲೋಕವೊಂದರ (ಗೀತೆ ೧೭-೧೫) ವ್ಯಾಖ್ಯಾನವನ್ನು ಮಾಡಿ ವಾಙ್ಮಯ ತಪಸ್ಸಿನ ನಾಲ್ಕು ಲಕ್ಷಣಗಳೂ ಸಾಹಿತಿಯಾದವನಿಗೆ ಹೇಗೆ ಮಾರ್ಗದರ್ಶನವಾಗಬಲ್ಲುದೆಂಬುದನ್ನು ಸ್ಪಷ್ಟಪಡಿಸಿದ್ದಾರೆ.[3] "ಕನ್ನಡ ಕಾವ್ಯದಲ್ಲಿ ಸರಸ್ವತಿಯ ದರ್ಶನ" ಎಂಬ ಪುಸ್ತಕದಲ್ಲಿ ಕನ್ನಡ ಕವಿಗಳು,—ಹಳಗನ್ನಡದಿಂದ ಹೊಸಗನ್ನಡದ ತನಕ—ಸರಸ್ವತಿಯನ್ನು ಕುರಿತು ಸ್ತುತಿಸಿದ ವರ್ಣಿಸಿದ, ಕಲ್ಪಿಸಿದ ಮಾತುಗಳಲ್ಲಿ ಭಾವನೆಗಳಲ್ಲಿ ಹೇಗೆ ಒಂದು ಪರೋಕ್ಷವಾದ ಕಾವ್ಯಮೀಮಾಂಸೆಯೆ ನಡೆದಿದೆ, ಕಾವ್ಯದ ಸ್ವರೂಪದ ಬಗ್ಗೆ ಆಯಾ ಕವಿಗಳು ತಾಳುವ ನಿಲುವೇನು ಎನ್ನುವುದನ್ನು ತುಂಬ ಮಾರ್ಮಿಕವಾಗಿ ತೋರಿಸಿದ್ದಾರೆ. ಮುಗಳಿಯವರ ಈ ಕಾವ್ಯಮೀಮಾಂಸೆಯಲ್ಲಿ ಪರಂಪರೆಯ ಮಾತುಗಳಲ್ಲಿ ಹೊಸ ಅರ್ಥವನ್ನು ಹುಡುಕುವ, ಇವತ್ತಿನ ಕಾಲಕ್ಕನುಗುಣವಾಗಿ ಹೊಂದಾಣಿಕೆಯಾಗುವಂತೆ ವ್ಯಾಖ್ಯಾನಿಸುವ, ಪರಂಪರೆಯ ತತ್ವಗಳನ್ನು ಶ್ರದ್ಧೆಯಿಂದ ತಿಳಿಯುವ ಮತ್ತು ತಿಳಿಯಪಡಿಸುವ ಪ್ರಯತ್ನವಿದೆ. ಸಾಹಿತ್ಯ ಅವರ ಪಾಲಿಗೆ ಒಂದು ಉಪಾಸನೆ. ಕವಿ "ಜಗತ್ತೆಂಬ ಕಾವ್ಯದ ರಸಿಕ" ಅವನು ಹೊಸ ಬೆಳಕೊಂದರ ಅನ್ವೇಷಕ. ಸಾಹಿತ್ಯದಿಂದ ರಸಿಕತೆ, ಸದಭಿರುಚಿ ಮತ್ತು ಬಾಳಿನ ಶ್ರೇಯಸ್ಸು ಹೆಚ್ಚುತ್ತದೆಂಬ ಆದರ್ಶ ಪರವಾದ ಕಾವ್ಯಮೀಮಾಂಸೆ ಅವರದು.

---

[1] ಮುಗಳಿ: ಸಾಹಿತ್ಯೋಪಾಸನೆ, ಪು. ೧೨.

[2] ಮುಗಳಿ: ಮಾತೆಂಬುದು ಜ್ಯೋತಿರ್ಲಿಂಗ. ೫೦.

[3] ಮುಗಳಿ: ಸಾಹಿತ್ಯೋಪಾಸನೆ. ಪು. ೧೯.

ಶ್ರೀ ರಾಳ್ಳಪಳ್ಳಿ ಅನಂತಕೃಷ್ಣ ಶರ್ಮ ಅವರ "ಸಾಹಿತ್ಯ ಮತ್ತು ಜೀವನಕಲೆ", ಉಮಾಪತಿಯವರ "ಸಾಹಿತ್ಯ ಸ್ವರೂಪ" ಶಿವರುದ್ರಪ್ಪನವರ "ಸೌಂದರ್ಯ ಸಮೀಕ್ಷೆ", ಪ್ರಭುಶಂಕರ್ ಅವರ "ಕನ್ನಡದಲ್ಲಿ ಭಾವಗೀತೆ." ಎಸ್. ಎಲ್. ಭೈರಪ್ಪನವರ "ಸಾಹಿತ್ಯದಲ್ಲಿ ಪ್ರತೀಕ"—ಇವು ಗಮನಿಸಬೇಕಾದ ಕೆಲವು ಕೃತಿಗಳು. ಶ್ರೀ ಶರ್ಮರ ಪುಸ್ತಕ ಮೂಲತಃ ಕಲಾಮೀಮಾಂಸೆಯಾಗಿದೆ. ಆರಾಧಕ, ಭಾವುಕ ದೃಷ್ಟಿಯಿಂದ ಕಲೆಯನ್ನು ಕುರಿತು ಅವರು ಹೇಳುವ ಮಾತುಗಳು ಕಾವ್ಯಮೀಮಾಂಸೆಗೂ ಅನ್ವಯಿಸುತ್ತವೆ. ಉಮಾಪತಿಯವರ "ಸಾಹಿತ್ಯ ಸ್ವರೂಪ" ಸಾಹಿತ್ಯದ ಆರಂಭದೆಸೆಯ ವಿದ್ಯಾರ್ಥಿಗಳಿಗೆ ಉಪಯುಕ್ತವಾಗಬಹುದಾದ ಪಠ್ಯಪುಸ್ತಕದಂತಿದೆ. ಇಂಗ್ಲಿಷ್ ಪುಸ್ತಕಗಳ ಮಾದರಿಯಲ್ಲಿ, ಅನೇಕ ಇಂಗ್ಲಿಷ್ ಪುಸ್ತಕಗಳಿಂದ ಎತ್ತಿಕೊಂಡು ತಿಳಿಯಾದ ಕನ್ನಡದಲ್ಲಿ ಬರೆದಿರುವ ಸಾಹಿತ್ಯದ ಪ್ರಾಥಮಿಕ ವಿಚಾರಗಳನ್ನು ಹೇಳುವ ಅಪಕ್ವವಾದ ಪುಸ್ತಕ ಇದು. ಶಿವರುದ್ರಪ್ಪನವರ "ಸೌಂದರ್ಯ ಸಮೀಕ್ಷೆ", ಸೌಂದರ್ಯ ಮೀಮಾಂಸೆಯನ್ನು ಕುರಿತ, ಕವಿಗಳ ಸೌಂದರ್ಯಾಭಿವ್ಯಕ್ತಿಯನ್ನು ಪರಿಚಯ ಮಾಡಿಕೊಡುವ ಗ್ರಂಥ. ಇದರಲ್ಲಿ ಕವಿ ಅಥವಾ ಕಲಾವಿದನ ಮನಸ್ಸಿನ ವ್ಯಾಪಾರದ ವಿವರಗಳು ಸಚಿತ್ರವಾಗಿ ನಿರೂಪಿತವಾಗಿವೆ. ಕಾವ್ಯಮೀಮಾಂಸೆಗೆ ಸಂಬಂಧಿಸಿದ ಹಾಗೆ "ಅಲಂಕಾರ" ಮತ್ತು "ರಸ" ಈ ಎರಡರ ಸಂಬಂಧವನ್ನೂ, ಆಧುನಿಕ ಭಾವಗೀತೆಗಳಲ್ಲಿ ವ್ಯಕ್ತವಾಗಿರುವುದು ಭಾವವೋ ರಸವೋ ಎಂಬ ಸಮಸ್ಯೆಯನ್ನು ಚರ್ಚಿಸಲಾಗಿದೆ; ಪಾಶ್ಚಾತ್ಯರ ಭವ್ಯತೆ (Sublime) ಗೂ ನಮ್ಮವರ ಅದ್ಭುತ ರಸಕ್ಕೂ, ಪಾಶ್ಚಾತ್ಯರ ವಿಕೃತಿ ತತ್ವಕ್ಕೂ (Theory of ugly) ನಮ್ಮವರ ಬೀಭತ್ಸರಸಕ್ಕೂ ಇರುವ ಸಾಮ್ಯವನ್ನೂ, ತೌಲನ ಕ್ರಮದಲ್ಲಿ ಚರ್ಚಿಸಲಾಗಿದೆ. ಇಂಥ ಕೆಲವು ಕಾವ್ಯಮೀಮಾಂಸೆಯ ವಿಶೇಷಾಂಶಗಳು ಮೊಟ್ಟಮೊದಲಿಗೆ ಈ ಗ್ರಂಥದಲ್ಲಿ ಪ್ರತಿಪಾದಿತವಾಗಿವೆ. ಪ್ರಭುಶಂಕರ ಅವರ "ಕನ್ನಡದಲ್ಲಿ ಭಾವಗೀತೆ" ಎಂಬ ಗ್ರಂಥವು ಕಾವ್ಯಮೀಮಾಂಸೆಯ ಬಗ್ಗೆ ಹೊಸತೇನನ್ನೂ ಹೇಳುವುದಿಲ್ಲವಾದರೂ ಭಾವಗೀತವನ್ನು ಕುರಿತ ಚರ್ಚೆಯಲ್ಲಿ ಮುಖ್ಯವಾಗಿ ಪಾಶ್ಚಾತ್ಯ ರೊಮ್ಯಾಂಟಿಕ್ ಕಾವ್ಯ ತತ್ವಗಳನ್ನೂ, ಕನ್ನಡದ ನವೋದಯ ಸಾಹಿತಿಗಳ ಕವಿ-ಕಾವ್ಯ ವಿಚಾರಗಳನ್ನು ಸಮರ್ಪಕವಾಗಿ ಸಂಗ್ರಹಿಸಿ ಕೊಡುತ್ತದೆ. ಎಸ್. ಎಲ್. ಭೈರಪ್ಪನವರ "ಸಾಹಿತ್ಯದಲ್ಲಿ ಪ್ರತೀಕ" ಎಂಬುದು ಅವರು ಬರೆದ ಕಾದಂಬರಿಯೊಂದಕ್ಕೆ ಹಿನ್ನುಡಿಯಾಗ ಹೊರಟು, ಕಡೆಗೆ ಪುಸ್ತಕ ರೂಪವನ್ನು ತಾಳಿದ ಕೃತಿ. ಅವರು 'ಪ್ರತೀಕ' ಎಂಬುದಕ್ಕೆ ಸಮಾನವಾದ ಇಂಗ್ಲಿಷ್ ಪದವನ್ನು ಕೊಡದೆ ಉದ್ದಕ್ಕೂ ವಿಷಯ ಪ್ರತಿಪಾದನೆ ಮಾಡಿರುವ ರೀತಿ ವಿಚಾರದ ಗೊಂದಲಕ್ಕೆ ಅವಕಾಶಮಾಡಿಕೊಡುತ್ತದೆ. "ಕಲಾವಿದನು ಸಂಕೇತಕ್ಕೆ—ಕಲೆಯ ಸಂದರ್ಭದಲ್ಲಿ ಹೇಳುವುದಾದರೆ ಪ್ರತೀಕಕ್ಕೆ—ಪ್ರಾಮುಖ್ಯತೆಯನ್ನು ಕೊಡಬಾರದೆಂಬುದು...." (ಪು. ೩) ಎಂಬಲ್ಲಿ ಇವರು 'ಸಂಕೇತ' ಮತ್ತು 'ಪ್ರತೀಕ'ಗಳನ್ನು ಸಮಾನಾರ್ಥವಾಗಿ ಬಳಸುತ್ತಾರೆಯೆ ಎಂಬ ಸಂದೇಹ ಬರುತ್ತದೆ. ಮುಂದೆ 'ಪ್ರತೀಕ,

ಬಿಂಬ, ಚಿನ್ಹೆ' ಎಂಬ ಅಧ್ಯಾಯದಲ್ಲಿ 'ಪ್ರತೀಕ'ವೆಂದರೆ Image ಎಂಬ ಅರ್ಥದಲ್ಲಿ ಬಳಸುತ್ತಿದ್ದಾರೆಯೆ ಎಂದು ಹಿಂದಿನ ಸಂದೇಹ ಮುಂದುವರಿಯುತ್ತದೆ. ಮುಂದೊಮ್ಮೆ "ಮಾನವನ ಇತಿಹಾಸದಲ್ಲಿ ಮೊಟ್ಟಮೊದಲಸಲ ಸೃಷ್ಟಿಯಾದ ಪ್ರತೀಕವೆಂದರೆ ಭಾಷೆಯೇ" (ಪು. ೨೨) ಎಂದು ಹೇಳಿದಾಗ ಪ್ರತೀಕ ಎಂಬುದು Symbol ಎಂದು ನಾವು ಊಹಿಸಬೇಕಾಗುತ್ತದೆ. ಕಡೆಯಲ್ಲಿ ಪ್ರತಿಮೆಗೂ ಸಂಕೇತಕ್ಕೂ ಇರುವ ವ್ಯತ್ಯಾಸವನ್ನು ಹೇಳುತ್ತಾ ಪ್ರತಿಮೆ "ಸಾಹಿತ್ಯದಲ್ಲಿ ಹೆಚ್ಚೆಂದರೆ ಉಪಮೆಯ ಸ್ಥಾನವನ್ನು ಪಡೆಯಬಹುದು ಅದಕ್ಕಿಂತ ಮೇಲೇರುವ ಶಕ್ತಿಯು ಅದಕ್ಕಿಲ್ಲ" ಎಂಬ ವಿಚಿತ್ರವಾದ ಹೇಳಿಕೆಯಿಂದ "ಪ್ರತೀಕವು ತಾನೇ ಒಂದು ಮೌಲಿಕ ಸರೋವರದಂತೆ ಕಾಣಿಸಿಕೊಳ್ಳುವುದರ ಜೊತೆಗೆ ತನಗಿಂತ ಆಚೆಗೆ ಪಸರಿಸಿರುವ ಒಂದು ಮೌಲಿಕ ಸಾಗರವನ್ನೇ ಧ್ವನಿಸುತ್ತದೆ" (ಪು. ೫೬)—ಎಂಬ ಮುಕ್ತಾಯಕ್ಕೆ ಬರುವಲ್ಲಿ ಪ್ರತಿಮೆಗಿಂತ ಸಂಕೇತಕ್ಕೆ ಹೆಚ್ಚು ವ್ಯಾಪಕ ಸ್ಥಾನವನ್ನು ಕೊಟ್ಟಿರುವುದು ವಿಚಿತ್ರವಾಗಿದೆ.

ಈ ಕೃತಿಯಲ್ಲಿ ಚಿನ್ಹೆ, ಪ್ರತೀಕ, ಬಿಂಬ, ಪ್ರತಿಮೆ ಎಂಬ ಪಾರಿಭಾಷಿಕ ಪದಗಳು ಕಾಣಿಸಿಕೊಂಡರೂ ಯಾವ ಒಂದಕ್ಕೂ ಸಮಾನಾರ್ಥಕವಾದ ಇಂಗ್ಲಿಷ್ ಪದವನ್ನು ಕೊಡದಿರುವುದರಿಂದ, ಲೇಖಕರು ತಮ್ಮದೇ ಆದ ಜಟಿಲವಾದ ರೀತಿಯಲ್ಲಿ ತಮಗೆ ತಾವೇ ಮಾತಾಡಿಕೊಂಡ ಹಾಗಿದೆ ಈ ಪುಸ್ತಕ. ಕಾದಂಬರಿಕಾರರಾಗಿರುವ ಹೊತ್ತಿನಲ್ಲಿ ಈ ಲೇಖಕರಿಗಿರುವ ಆ ಸರಳತೆ, ಸೌಂದರ್ಯ ದೃಷ್ಟಿಗಳು ಇಂಥ ಶಾಸ್ತ್ರೀಯವಾದ ವಿಷಯವನ್ನೆತ್ತಿಕೊಂಡಾಕ್ಷಣ ಇಂಥದೊಂದು ಅತಿ ಬೌದ್ಧಿಕ ಆರೋಪಿತ ನಿಲುವಿಗೇರಿ ಶೈಲಿ ಯಾಕೆ ಇಷ್ಟು 'ಪಾಂಡಿತ್ಯಮಯ'ವಾಗುತ್ತದೋ ತಿಳಿಯದು. ಇಂಥ ವಿಷಯವನ್ನು ಹೇಳುವಲ್ಲಿ ಇದು ಓದಿದವರಿಗೆ ತಿಳಿಯಬೇಕೆಂಬ ವಿಚಾರವನ್ನು ಇಂಥ "ಹಿನ್ನುಡಿ"ಗಳಲ್ಲಿ, ಅಥವಾ ಹಿನ್ನುಡಿಯಾಗಲು ಹೊರಟು ಕೃತಿಯಾದ ಬರೆಹಗಳಲ್ಲಿ ಲೇಖಕರು ಮರೆತ ಹಾಗೆ ತೋರುತ್ತದೆ. 'ಸಾಹಿತ್ಯದಲ್ಲಿ ಪ್ರತೀಕ' ಎಂಬ ಈ ಕೃತಿಯಿಂದಾಗುವ ಗೊಂದಲದ ಪರಿಹಾರಕ್ಕೆ ಕುವೆಂಪು ಅವರ "ಸಾಹಿತ್ಯದಲ್ಲಿ ಪ್ರತಿಮಾ" ಎಂಬ ಲೇಖನವನ್ನೋದಬೇಕು.

೪

ಕಾವ್ಯಮೀಮಾಂಸೆಯನ್ನು ಕುರಿತು ಬಂದಿರುವ ಕೆಲವು ಬಿಡಿ ಲೇಖನಗಳೂ ಗಮನಿಸಬೇಕಾದವುಗಳಾಗಿವೆ. ಮೊದಲು ಬಿಡಿ ಲೇಖನಗಳಾಗಿ ಪ್ರಕಟಗೊಂಡು, ಅನಂತರ ಪುಸ್ತಕರೂಪವನ್ನು ತಾಳಿದ ಲೇಖನಗಳನ್ನು ಬಿಟ್ಟರೂ, ಉಳಿದ ಬಿಡಿ ಲೇಖನಗಳ ಸಂಖ್ಯೆ ಇಪ್ಪತ್ತೈದಕ್ಕು ಮೀರಿರುವುದು ಕಂಡುಬರುತ್ತದೆ. ಅವುಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಪ್ರಸ್ತಾಪಿಸಲಾಗಿದೆ.

"ಜನಜೀವನವನ್ನು ಪ್ರತಿಬಿಂಬಿಸುವ ಸಾಹಿತ್ಯವೇ ಉತ್ತಮ ಸಾಹಿತ್ಯ" ಎಂಬ ಒಂದು ವಿಚಾರಮಾಲೆ ಗಮನಾರ್ಹವಾಗಿದೆ. ೧೯೪೫ರಲ್ಲಿ ಮದರಾಸ್ ಬಾನುಲಿ

ಕೇಂದ್ರದವರು ಏರ್ಪಡಿಸಿದ ಈ ವಿಚಾರ ಸಂಕಿರಣದಲ್ಲಿ ಶ್ರೀ ಬೇಂದ್ರೆ, ರಾ. ಶಿ. ಕೈಲಾಸಂ, ರಾಜರತ್ನಂ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ನಾ. ಕಸ್ತೂರಿ, ವಿ. ಸೀ, ಸಿ. ಕೆ. ವೆಂಕಟರಾಮಯ್ಯ, ಚಕ್ರವರ್ತಿ ರಂಗಾಚಾರ್ ಇವರು ಭಾಗವಹಿಸಿದ್ದರು. ಈ ಲೇಖನಮಾಲೆ ಅನಂತರ ಪ್ರಬುದ್ಧ ಕರ್ಣಾಟಕ (೨೯-೧ ; ೧೯೪೭)ದಲ್ಲಿ ಪ್ರಕಟವಾಗಿದೆ. ಈ ಒಂದು ಸೂತ್ರವನ್ನು ಅದರಲ್ಲಿಯೂ 'ಪ್ರತಿಬಿಂಬ' ಎಂಬ ಮಾತನ್ನು ಅದರ ವಾಚ್ಯಾರ್ಥದಲ್ಲಿ ಯಾರೂ ಒಪ್ಪಿಕೊಂಡಿಲ್ಲ. 'Literature is the reflection of Life'-ಎಂಬ ಸೂತ್ರದ ಕನ್ನಡಾನುವಾದವಾಗಿರುವ "ಜನಜೀವನವನ್ನು ಪ್ರತಿಬಿಂಬಿಸುವ ಸಾಹಿತ್ಯ" ಎಂಬ ವಾಕ್ಯದಲ್ಲಿ, 'ಪ್ರತಿಬಿಂಬ' ಎನ್ನುವ ಮಾತು ಇಂಗ್ಲಿಷಿನ 'reflection' ಎನ್ನುವ ಮಾತು ಏನೆಲ್ಲವನ್ನೂ ಸೂಚಿಸುತ್ತದೆಯೋ, ಅದೆಲ್ಲವನ್ನೂ ಸೂಚಿಸಲು ಸಮರ್ಥವಾಗಿಲ್ಲ ಎನ್ನುವ ಮಾತು ಒಂದು, ಜೀವನವನ್ನು ಪ್ರತಿಬಿಂಬಿಸಲು ಸಾಹಿತ್ಯವೆನ್ನುವುದು ನಿರ್ಜೀವವಾದ ಕನ್ನಡಿಯಲ್ಲ ಎನ್ನುವುದು ಇನ್ನೊಂದು—ಹೀಗೆ ಈ ಎರಡೂ ಈ ಚರ್ಚೆಯಲ್ಲಿ ಹೊರಟಿವೆ.[1] ಇದೇ ಸೂತ್ರವನ್ನು ಕುರಿತು ಶಿವರುದ್ರಪ್ಪನವರು ಪ್ರಬುದ್ಧ ಕರ್ಣಾಟಕದ, ೩೭–೪ (೧೯೫೬) ಸಂಚಿಕೆಯಲ್ಲಿ ಪ್ರಕಟಿಸಿದ ಪುಟ್ಟ ಲೇಖನ "ಸಾಹಿತ್ಯ ಜೀವನದ ಗತಿಬಿಂಬ" ಎಂಬುದು ಯಾರ ಗಮನಕ್ಕೂ ಬಾರದಿರುವುದು ಸೋಜಿಗವಾಗಿದೆ. ಈ ಹೊಸ ಸೂತ್ರದ ಪ್ರಕಾರ 'ಗತಿಬಿಂಬ' ಎನ್ನುವಲ್ಲಿ, 'ಗತಿ' ಎಂದರೆ (೧) ಚಲನೆ ನಡಿಗೆ (movement) (೨) ಗತಿ ಎಂದರೆ ದಿಕ್ಕು, ಗುರಿ, ಉದ್ದೇಶ (Direction, Purpose) (೩) ಗತಿ ಎಂದರೆ ಸಧ್ಯದಸ್ಥಿತಿ, ಅವಸ್ಥೆ (The State of life, Condition) ಎಂಬ ಮೂರು ವಿವರಣೆಗಳನ್ನು ಕೊಟ್ಟು ಜನಜೀವನದ ಈ 'ಗತಿ'ಯ ಬಿಂಬವಾಗಿ ಸಾಹಿತ್ಯ ಹೇಗೆ ಪ್ರಕಟವಾಗಿದೆ ಎಂಬುದು ನಿರೂಪಿತವಾಗಿದೆ. ಹಾಗೆಯೆ 'ಬಿಂಬ' ಎಂದರೆ, ಬಿಂಬನಕ್ರಿಯೆ ಎಂದರೆ ಇದ್ದುದನ್ನು ಇದ್ದಹಾಗೆ ಪಡಿಮೂಡಿಸುವ ಕ್ರಿಯೆ ಅಲ್ಲ ; ಇದ್ದುದನ್ನು ತನ್ನತನದ ಮಾಧ್ಯಮದ ಮೂಲಕ ಅದು ಬೇರೊಂದೆಂಬಂತೆ ಅಭಿವ್ಯಕ್ತಪಡಿಸುವುದು, ಸೂರ್ಯರಶ್ಮಿಯನ್ನು ಪ್ರತಿಫಲಿಸುವ 'ಚಂದ್ರಬಿಂಬ'ದ ಹಾಗೆ ಎಂಬ ವ್ಯಾಖ್ಯಾನವಿದೆ. ಇದೇ ಲೇಖಕರ 'ಸ್ವಭಾವೋಕ್ತಿ'[2] ಮತ್ತು 'ಕವಿಸಮಯ'[3] ಎಂಬ ಎರಡು ಲೇಖನಗಳಲ್ಲಿ 'ಸ್ವಭಾವೋಕ್ತಿ' ಆಲಂಕಾರಿಕರ ಮತದ ಸಂಗ್ರಹವಾದರೆ, 'ಕವಿಸಮಯ' ವೆಂಬುದು ಈ ವಿಷಯವನ್ನು ಕುರಿತು ಸಮಗ್ರವಾದ ವಿಶ್ಲೇಷಣೆಯನ್ನೊಳಗೊಂಡ ಲೇಖನ. 'ಕವಿಸಮಯ' 'ಕವಿ ಸಂಪ್ರದಾಯ' ಎರಡೂ

---

[1] ದೇ. ಜವರೇಗೌಡರ 'ಸಾಹಿತ್ಯ ಮಾರ್ಗ' ಎಂಬ ಪುಸ್ತಕದಲ್ಲಿ ಇದೇ ಸೂತ್ರವನ್ನು ಕುರಿತ ವಿಶ್ಲೇಷಣೆ 'ಸಾಹಿತ್ಯ ಜನಜೀವನದ ಪ್ರತಿಬಿಂಬ' ಎಂಬ ಲೇಖನದಲ್ಲಿವೆ. ಈ ಮೇಲೆ ಹೇಳಿದ ವಿಚಾರಸಂಕಿರಣದಲ್ಲಿ ಇಲ್ಲದ ವಿಷಯವೇನೂ ಇದರಲ್ಲಿಲ್ಲ.

[2] ಪ್ರಬುದ್ಧ ಕರ್ಣಾಟಕ: ೩೩–೧: ೧೯೫೩.

[3] ಉಪಾಯನ; ಡಿ.ಎಲ್.ನ. ಸಂಭಾವನಾಗ್ರಂಥ. ಪು. ೩೬೫.

ಸಮಾನಾರ್ಥಕಗಳಲ್ಲವೆಂದೂ, ಕವಿ ಸಮಯಗಳು ಕವಿ ಸಂಪ್ರದಾಯದಲ್ಲಿ ಅಲ್ಪಸಂಖ್ಯಾತವಾದ ಒಂದು ಅಂಗವೆಂದೂ, ಎಷ್ಟೋ ಕವಿಸಮಯಗಳು ಲಾಕ್ಷಣಿಕರ ಮತಕ್ಕೆ ಹೊರತಾಗಿವೆಯೆಂದೂ ಈ ಲೇಖನದಲ್ಲಿ ತೋರಿಸಲಾಗಿದೆ.

ಇನ್ನೊಂದು ವಿಶಿಷ್ಟವಾದ ಲೇಖನ 'ಸುಜನಾ' ಅವರ "ಕವಿಯಲ್ಲಿ ಆಗಂತುಕ ಪ್ರಜ್ಞೆ ಹಾಗೂ ಅನಿಕೇತನ ಪ್ರಜ್ಞೆ" ಎಂಬುದು.[1] ಈ ಲೇಖನ ಕವಿಯ ಸಹಜ ಸ್ವಭಾವ ಹಾಗೂ ಕಾವ್ಯ ನಿರ್ಮಿತಿಯ ರಹಸ್ಯವನ್ನು ಕುರಿತದ್ದು. "ಆಗಂತುಕ ಪ್ರಜ್ಞೆ ಎಂದರೆ ಪರಿಚಿತೆಯಲ್ಲಿ ಅಪೂರ್ವತೆಯನ್ನು ಕಾಣುವ, ವಿಸ್ಮಯವನ್ನುಂಟುಮಾಡುವ (ಪಡೆಯುವ) ಶಕ್ತಿ. ಕವಿಯಲ್ಲಿ ಈ ಆಗಂತುಕ ಪ್ರಜ್ಞೆ ಇರುವುದರಿಂದಲೇ ಅವನಿಗೆ ವಸ್ತುವಿನಲ್ಲಿ ಲೌಕಿಕವಾದ ಅನುಭವಕ್ಕಿಂತ ಮಿಗಿಲಾದ ರಸಾನುಭವ ಉಂಟಾಗುತ್ತದೆ........ಕವಿ ವ್ಯಕ್ತಿನಿಕೇತನದಿಂದ ಅನಿಕೇತನಗೊಳಿಸಿಕೊಂಡು ಅನ್ಯಜೀವನಿಕೇತನವಾಗಬೇಕಾಗುತ್ತದೆ, ಅನ್ಯಭಾವನಿಕೇತನವಾಗಬೇಕಾಗುತ್ತದೆ. ಎಷ್ಟರಮಟ್ಟಿಗೆ ತಮ್ಮನ್ನು ತಾವು ತಮ್ಮಿಂದ ಬೇರಾಗಿಸಿಕೊಂಡು ಬೇರೆಯದರಲ್ಲಿ ಒಂದಾಗುವ ಶಕ್ತಿ ಕವಿಗಳಿಗಿದೆಯೋ ಅಷ್ಟು ಅನಿಕೇತನ ಪ್ರಜ್ಞೆ ಅವರಲ್ಲಿದೆ ಎಂದು ಒಪ್ಪಬೇಕು"—ಇದು ಈ ಲೇಖನದ ಸಾರಾಂಶ. ಕೀಟ್ಸ್, ಟಿ. ಎಸ್. ಇಲಿಯಟ್, ಸ್ಟೀಫನ್ ಸ್ಪೆಂಡರ್, ಅಭಿನವಗುಪ್ತ, ಪು.ತಿ.ನ. ಕುವೆಂಪು—ಇವರಿಷ್ಟೂ 'ಸುಜನಾ' ಅವರ ಚಿಂತನೆಯಲ್ಲಿ ಮೇಳವಿಸಿ ಹುಟ್ಟಿಕೊಂಡಿದೆ ಈ ನೂತನ ಪಾರಿಭಾಷಿಕ ನಿರ್ಮಿತಿಯ ಈ ಲೇಖನ.

'ನಿರಂಜನ' ಅವರ 'ಬೆಲ್ಸಿಂಕಿಯ ಕಾವ್ಯಮೀಮಾಂಸೆ' (ಪ್ರ.ಕ. ೩೭–೨ ; ೧೯೫೫–೫೬), ರಾಜಪುರೋಹಿತರ 'ರಸ ಅದರ ವ್ಯಾಪ್ತಿ' [ಪ್ರ.ಕ. ೪೧–೩ ; ೧೯೬೦], ಬಾಲಸುಬ್ರಮಣ್ಯ ಅವರ 'ರುದ್ರಸಾಹಿತ್ಯದಲ್ಲಿ ಆನಂದಾಸ್ವಾದ [ಪ್ರ. ಕ. ೩೩–೧ ; ೧೯೫೩], ಟಿ. ವಿ. ವೆಂಕಟಾಚಲಶಾಸ್ತ್ರಿಯವರ 'ಮಹಾಕಾವ್ಯಲಕ್ಷಣ [ಪ್ರ.ಕ. ೪೮–೨ ಮತ್ತು ೩. ೧೯೬೬], ಇವು ಹೆಸರಿಸಬೇಕಾದ ಲೇಖನಗಳು : ಬೆಲ್ಸಿಂಕಿ ೧೮೧೧ ರಿಂದ ೧೮೪೮ರ ವರೆಗಿದ್ದ ರಷ್ಯನ್ ಸಾಹಿತಿ. ಅವನದು ವಾಸ್ತವವಾದ ; ಬದುಕಿಗಾಗಿ ಕಲೆ ಎಂಬ ದೃಷ್ಟಿ. 'ವಾಸ್ತವ ಮತ್ತು ನೈಜವಿಚಾರಗಳ ಕಲೆಯೆ ಕಾವ್ಯ, ಸಲ್ಲದ ಭಾವ ವೈಪರೀತ್ಯವಲ್ಲ'. ಇದು ಈ ಲೇಖನದ ಸಾರ. ರಾಜಪುರೋಹಿತರ "ರಸ ಹಾಗೂ ಅದರ ವ್ಯಾಪ್ತಿ" ಎನ್ನುವುದು ಗೋಕಾಕರು ಇಂಗ್ಲಿಷಿನಲ್ಲಿ ಬರೆದ Rasa, its meaning and Scope ಎಂಬ ಲೇಖನದ ಅನುವಾದ. 'ರಸ'ವನ್ನು ಕುರಿತು ಮನಸ್ ಶಾಸ್ತ್ರೀಯವಾದ ಒಂದು ವಿವೇಚನೆ ಇದು. ಬಾಲಸುಬ್ರಮಣ್ಯ ಅವರ "ರುದ್ರಸಾಹಿತ್ಯದಲ್ಲಿ ಆನಂದಾಸ್ವಾದ" ಎಂಬುದು, ಭಾರತೀಯ ರಸತತ್ವವನ್ನು ಹಿನ್ನೆಲೆಯಾಗಿರಿಸಿಕೊಂಡು ಅರಿಸ್ಟಾಟಲನ ಕಾವ್ಯತತ್ವವನ್ನು ಪ್ರೌಢವಾದ ರೀತಿಯಲ್ಲಿ ನಡೆಯಿಸಿದ ಅಭ್ಯಾಸದ ಪರಿಣಾಮ. ಶಾಸ್ತ್ರಿಯವರ 'ಮಹಾಕಾವ್ಯಲಕ್ಷಣ' ಸಂಸ್ಕೃತ ಕನ್ನಡ

[1] ಪ್ರಬುದ್ಧ ಕರ್ಣಾಟಕ : ೩೯–೪ (೧೯೫೮)

ಆಲಂಕಾರಿಕ ಗ್ರಂಥಗಳಲ್ಲಿ ಬಂದಿರುವ ಮಹಾಕಾವ್ಯಲಕ್ಷಣವನ್ನು ಕುರಿತ ವಿವರವಾದ ವಿಷಯ ಸಂಗ್ರಹದ ಶಾಸ್ತ್ರೀಯವಾದ ನಿರೂಪಣೆ. ಒಂದೊಂದು ಲಕ್ಷಣಕ್ಕೂ ಶಾಸ್ತ್ರಿಯವರು ತಮ್ಮದೇ ಆದ ವ್ಯಾಖ್ಯಾನವನ್ನು ಬರೆದಿದ್ದಾರೆ. ಶ್ರಮ-ಸಾಹಸ-ತಾಳ್ಮೆಗಳ ಪ್ರತೀಕದಂತಿರುವ ಈ ಲೇಖನ ಮಹಾಕಾವ್ಯವನ್ನು ಕುರಿತು ಅಭ್ಯಾಸಮಾಡತಕ್ಕವರು ಅಗತ್ಯವಾಗಿ ನೋಡಬೇಕಾದುದಾಗಿದೆ.

ಕಲ್ಪನೆ ಮತ್ತು ಸ್ಫೂರ್ತಿ ಈ ಎರಡು ತತ್ತ್ವಗಳನ್ನು ಕುರಿತು ಮೂರು ಲೇಖನಗಳು ಪ್ರಕಟವಾಗಿವೆ; Imagination ಮತ್ತು Inspirationಗೆ ಸಂವಾದಿಯಾಗಿ ಈ ಮಾತುಗಳನ್ನು ಬಳಸಲಾಗಿದೆ. ಕೆ. ನರಸಿಂಹಮೂರ್ತಿಯವರ ಕಲ್ಪನಾ, ಎಸ್. ವಿ. ರಂಗಣ್ಣನವರ 'ಇಮ್ಯಾಜಿನೇಷನ್' ಎಂಬ ಎರಡು ಲೇಖನಗಳು ಒಂದೇ ವಿಷಯವನ್ನು ಕುರಿತವು.[1] ಕೆ. ನರಸಿಂಹಮೂರ್ತಿಯವರು Imagination ಅನ್ನು ಕಲ್ಪನಾ ಎಂದು ಅನುವಾದ ಮಾಡಿಕೊಂಡರೆ, ರಂಗಣ್ಣನವರು ಅದರ ಅನುವಾದದ ಬಗೆಗೆ ತಮಗೊದಗಿದ ಸಂದಿಗ್ಧತೆಯನ್ನು ಸೂಚಿಸಿ 'ಇಮ್ಯಾಜಿನೇಷನ್' ಎಂಬ ಲಿಪ್ಯಂತರದಲ್ಲಿ ಇಂಗ್ಲಿಷಿನ ಪದವನ್ನೇ ಉಳಿಸಿಕೊಂಡಿದ್ದಾರೆ. ಈ ಎರಡೂ ಪಾಶ್ಚಾತ್ಯ ಕಾವ್ಯಮೀಮಾಂಸೆಯಲ್ಲಿ Imagination ತತ್ತ್ವದ ಐತಿಹಾಸಿಕ ಬೆಳವಣಿಗೆಯನ್ನು, ವಿವರಣೆಯನ್ನೂ ಕೊಡುತ್ತವೆ. ಈ ವಿಷಯದ ಬಗ್ಗೆ ನರಸಿಂಹಮೂರ್ತಿಯವರದ್ದು ವಿವರಣಾತ್ಮಕ ಹಾಗೂ ದೃಷ್ಟಾಂತ ಮಾರ್ಗದ ಲೇಖನ; ರಂಗಣ್ಣನವರದು ವಿಮರ್ಶಾತ್ಮಕ ವಿಧಾನದ್ದು. ಆದರೆ ಈ ಎರಡೂ ಭಾರತೀಯ 'ಪ್ರತಿಭಾ' ತತ್ತ್ವಕ್ಕೂ ಪಾಶ್ಚಾತ್ಯರ Imaginationಗೂ ಇರುವ ಸಾಮ್ಯಾಂತರಗಳನ್ನು ಪ್ರಸ್ತಾಪಿಸುವುದಿಲ್ಲ. ಶಿವರುದ್ರಪ್ಪನವರ 'ಸ್ಫೂರ್ತಿ' ಎಂಬ ಪ್ರಬಂಧ[2] Inspiration ಅನ್ನು ಕುರಿತ ತೌಲನಿಕ ವಿವೇಚನೆ. ಸ್ಫೂರ್ತಿಗೂ ಪ್ರತಿಭೆಗೂ (Inspiration and Imagination) ಸಂಬಂಧವೇನು, ವ್ಯತ್ಯಾಸವೇನು, ಭಾವಗೀತೆ ಹ್ರಸ್ವವಾಗಿರಬೇಕು ಎಂಬ ಅಂಗೀಕೃತ ಸಿದ್ಧಾಂತದೊಂದಿಗೆ ಸ್ಫೂರ್ತಿಯ ಸಂಬಂಧವೇನು, ಭಾರತೀಯ 'ರಸಾವೇಶ'ದ ಕಲ್ಪನೆಗೂ, ಪಾಶ್ಚಾತ್ಯ 'ಸ್ಫೂರ್ತಿ' ತತ್ತ್ವಕ್ಕೂ ಸಾಮ್ಯವಿದೆಯೆ ಎಂಬ ವಿಷಯಗಳನ್ನು ವಿಶೇಷವಾದ ರೀತಿಯಲ್ಲಿ ಇಲ್ಲಿ ಚರ್ಚಿಸಲಾಗಿದೆ.

೫

ಸಂಸ್ಕೃತದಿಂದ, ಇಂಗ್ಲಿಷಿನಿಂದ, ಗ್ರೀಕ್‌ನಿಂದ, ಬಂಗಾಳಿಯಿಂದ, ಮರಾಠಿಯಿಂದ, ಹಿಂದಿಯಿಂದ ಅನುವಾದಗೊಂಡಿರುವ ಕಾವ್ಯಮೀಮಾಂಸೆಗೆ ಸಂಬಂಧಪಟ್ಟ ಲೇಖಗಳೂ ಪುಸ್ತಕಗಳೂ ತಕ್ಕಮಟ್ಟಿನ ಪ್ರಮಾಣದಲ್ಲಿ ಬಂದಿರುವುದು ವಿಶೇಷದ ಸಂಗತಿ.

---

1 ಅಭಿವಂದನೆ: ಎ. ಆರ್. ಕೃಷ್ಣಶಾಸ್ತ್ರಿಗಳಿಗೆ ಅರ್ಪಿಸಿದ ಸಂಭಾವನಾ ಗ್ರಂಥ ಪು. ೩೨೪-೪೦೫.

2 ಪ್ರಬುದ್ಧ ಕರ್ಣಾಟಕ: ೪೫-೩: ೧೯೬೩.

ಡಾ. ಕೆ. ಕೃಷ್ಣಮೂರ್ತಿಗಳ, ಕೆ. ವಿ. ಸುಬ್ಬಣ್ಣನವರ ಅನುವಾದದ ವಿಷಯವನ್ನೂ, ಕೌಲಗಿ ಶೇಷಾಚಾರ್ಯರು ಮರಾಠಿಯಿಂದ "ಸಂಸ್ಕೃತ ಸಾಹಿತ್ಯಾಚ ಇತಿಹಾಸ" ಎಂಬ ಪುಸ್ತಕವನ್ನು "ಅಲಂಕಾರಶಾಸ್ತ್ರ" ಎಂಬ ಹೆಸರಿನಲ್ಲಿ ಕನ್ನಡಕ್ಕೆ ಅನುವಾದಿಸಿರುವ ವಿಷಯವನ್ನೂ ಆಗಲೇ ಪ್ರಸ್ತಾಪಿಸಲಾಗಿದೆ. ಹಡ್ಸನ್ನನ 'An Introduction to the Study of Literature' ಅನ್ನು, ಅಬರ್ ಕ್ರೊಂಬಿಯ 'Principle of Literary Criticism' ಅನ್ನೂ ಸಿ.ಪಿ.ಕೆ.ಯವರು "ಸಾಹಿತ್ಯ ಪ್ರವೇಶ" ಮತ್ತು "ಸಾಹಿತ್ಯ ವಿಮರ್ಶೆಯ ತತ್ವಗಳು" ಎಂಬ ಹೆಸರಿನಲ್ಲಿ ಅನುವಾದ ಮಾಡಿದ್ದಾರೆ. ಸಿ. ಮಹಾದೇವಪ್ಪನವರು ಷೆಲ್ಲಿಯ 'Defence of Poetry' ಯನ್ನು "ಷೆಲ್ಲಿಯ ಕಾವ್ಯಸಮರ್ಥನೆ ಎಂಬ ಹೆಸರಿನಲ್ಲಿ ಅನುವಾದ ಮಾಡಿದ್ದಾರೆ. ಈ ಮೂರು ಬಹು ಉಪಯುಕ್ತವಾದ ಅನುವಾದ ಕೃತಿಗಳಾಗಿವೆ. ಸಿ.ಪಿ.ಕೆ.ಯವರ ಎರಡೂ ಅನುವಾದಗಳೂ ಸರಳವಾಗಿ, ಸುಲಲಿತವಾಗಿ, ನಿರ್ದುಷ್ಟವಾಗಿವೆ. ಹಡ್ಸನ್ ಬರೆದ ಪುಸ್ತಕ ಇಂಗ್ಲಿಷಿನಲ್ಲಿ ಅದು ಮೊದಲು ಪ್ರಕಟವಾದ ಕಾಲ ೧೯೧೦ ಎಂದಮೇಲೆ, ಈ ಐವತ್ತು ವರ್ಷಗಳ ನಂತರ ಬದಲಾದ ಕಾವ್ಯಪರಂಪರೆಯ ವಿಮರ್ಶನ ಪ್ರಜ್ಞೆಗೆ ಅಗತ್ಯವಾದ ವಿಷಯಗಳನ್ನು ಈ ಪುಸ್ತಕವಾಗಲಿ, ಅದರ ಅನುವಾದವಾಗಲಿ ಒದಗಿಸಲಾರದೆಂಬುದನ್ನು ಒಪ್ಪಿಕೊಂಡು, ಸಾಹಿತ್ಯದಲ್ಲಿ ಪ್ರವೇಶಿಸುವ ವಿದ್ಯಾರ್ಥಿಗೆ ಪ್ರಾಥಮಿಕ ಮೂಲತತ್ವಗಳ ತಿಳಹದಿಯನ್ನು ಇದು ಸಮರ್ಥವಾಗಿ ಕೊಡುವಷ್ಟು ಪ್ರಯೋಜನಕಾರಿಯಾಗಿದೆಯೆಂದು ಹೇಳಬಹುದು. ಎರಡನೆಯದಾಗಿ ಹಡ್ಸನ್ ಬರೆದ ಈ ಪುಸ್ತಕ ರಚಿತವಾಗಿರುವುದು ಇಂಗ್ಲಿಷ್ ಸಾಹಿತ್ಯ ಚರಿತ್ರೆಯ ಬೆಳವಣಿಗೆ ಮತ್ತು ಆ ಕಾವ್ಯಪರಂಪರೆಯಿಂದ ಎತ್ತಿಕೊಂಡ ದೃಷ್ಟಾಂತಗಳಿಂದ ಪುಷ್ಟವಾಗಿ. ಸಿ.ಪಿ.ಕೆ. ಅವರು ಆ ಕೃತಿಯಲ್ಲಿರುವ ಸಾಹಿತ್ಯ ತತ್ವಗಳನ್ನು ಮಾತ್ರ ಅನುವಾದ ರೂಪದಲ್ಲಿ ಕೊಟ್ಟಿದ್ದರೆ, ಅಥವಾ ಸಂದರ್ಭೋಚಿತವಾಗಿ ಬರುವ ಇಂಗ್ಲಿಷ್ ಕಾವ್ಯಗಳ ನಿದರ್ಶನಗಳನ್ನು ಯಥಾವತ್ತಾಗಿ ಕೊಡದೆ, ಆ ಸಂದರ್ಭಗಳಲ್ಲಿ ಭಾರತೀಯ ಕವಿಕಾವ್ಯಗಳಿಂದ ನಿದರ್ಶನಗಳನ್ನು ಕೊಟ್ಟಿದ್ದರೆ, ಅಥವಾ ಕಡೆಯ ಪಕ್ಷ ಅಡಿಟಿಪ್ಪಣಿಗಳಲ್ಲಾದರೂ ನಮ್ಮ ಸಾಹಿತ್ಯ ಪರಂಪರೆಯ ಘಟ್ಟಗಳನ್ನೋ ಸಂಗತಿಗಳನ್ನೊ, ನೆನಕೆಯನ್ನೋ ಸಂವಾದಿಯಾಗಿ ಸೂಚಿಸಿದ್ದರೆ ಈ ಪುಸ್ತಕದ ಅರ್ಥವೌಲ್ಯ ಇನ್ನೂ ಹೆಚ್ಚಾಗಬಹುದಾಗಿತ್ತು. ಯಾವ ಪುಸ್ತಕವನ್ನಾದರೂ ಅನುವಾದಮಾಡುವುದು, ಇಂಗ್ಲಿಷ್‌ನಿಂದ ನೇರವಾಗಿ ಆ ಪ್ರಯೋಜನವನ್ನು ಪಡೆಯಲಾರದವರಿಗಾಗಿ; ಆದ್ದರಿಂದ ಅನುವಾದಗಳಲ್ಲಿ ಸಾಮಾನ್ಯ ಓದುಗನಿಗೆ ಅದರ ತತ್ವಾಂಶಗಳು ಅರ್ಥವಾಗುವಂತಿದ್ದು, ಅದರ ಸಮರ್ಥನೆಗೆಂದು ಬಳಸಿದ ನಿದರ್ಶನಗಳು ಅರ್ಥವಾಗದಂತಿದ್ದರೆ ಅಥವಾ ಅಪರಿಚಿತವಾದರೆ, ಅನುವಾದದಂತಹ ಸಾಹಸಕಾರ್ಯದ ಪ್ರಯೋಜನದಲ್ಲಿ ಎಷ್ಟು ಕೊರತೆಯಾಗುವುದೆಂಬುದನ್ನು ಹೇಳಬೇಕಾಗಿಲ್ಲ. ಹಡ್ಸನ್ನನ ಈ ಕೃತಿಗಿಂತ ಅಬರ್ ಕ್ರೋಂಬಿಯ 'ಸಾಹಿತ್ಯ ವಿಮರ್ಶೆಯ ಮೂಲತತ್ವಗಳು' ಹೆಚ್ಚು ಪ್ರೌಢವಾದ, ಉಪಯುಕ್ತವಾದ ಗ್ರಂಥ.

ಈ ಎರಡು ಅನುವಾದ ಕೃತಿಗಳಿಂದ ಕಾವ್ಯಮೀಮಾಂಸೆಯ ಸಾಹಿತ್ಯಕ್ಕೆ ವಿಶೇಷ ಲಾಭ ವಾಗಿದೆ. ಸಿ.ಪಿ.ಕೆ.ಯವರು ಸಮರ್ಥರಾದ ಅನುವಾದಕರೆಂಬುದನ್ನು ಈ ಎರಡೂ ಪುಸ್ತಕದ ಭಾಷೆ–ಶೈಲಿಗಳು ಪ್ರಕಟಪಡಿಸುತ್ತವೆ.

ಸಿ. ಮಹಾದೇವಪ್ಪನವರ 'ಷೆಲ್ಲಿಯ ಕಾವ್ಯಸಮರ್ಥನೆ' Defence of Poetryಯ ಅನುವಾದ. ಷೆಲ್ಲಿ ಕೇವಲ ವಿಮರ್ಶಕನಲ್ಲ; ಅವನಂತ ಶಕ್ತನಾದ ಕವಿ. ಆದ್ದರಿಂದ ಆತನ ಕಾವ್ಯಮಯವಾದ ಈ ಬರವಣಿಗೆಯನ್ನು ಅನುವಾದಿಸುವುದು ಸುಲಭವಲ್ಲ. ಮಹಾದೇವಪ್ಪನವರ ಅನುವಾದದ ಮೊದಲ ವಾಕ್ಯವೇ ಹೀಗಿದೆ: "ಚಿದ್ ವ್ಯಾಪಾರಗಳನ್ನು ಬುದ್ಧಿ, ಪ್ರತಿಭೆಗಳೆಂದು ಎರಡು ಬಗೆಯಾಗಿ ಪರಿಗಣಿಸುವ ಒಂದು ವಿಧಾನದ ರೀತ್ಯಾ ಬುದ್ಧಿ ಒಂದು ಭಾವಕ್ಕೂ ಮತ್ತೊಂದು ಭಾವಕ್ಕೂ ಇರುವ ಸಂಬಂಧವನ್ನು, ಅದು ಹೇಗಾದರೂ ಉಂಟಾಗಿರಲಿ, ಅದನ್ನು ಕುರಿತು ಆಲೋಚನೆ ಮಾಡುವ ಒಂದು ಚಿಂತನೆಯೆಂದೆಣಿಸಬಹುದು." ಈ ಕನ್ನಡ ಅನುವಾದ ಅರ್ಥವಾಗ ಬೇಕಾದರೆ Defence of Poetryಯ ಇಂಗ್ಲಿಷ್ ಮೂಲದ ಮೊದಲ ವಾಕ್ಯವನ್ನು ಓದುವ ಪ್ರಸಂಗ ಬರಬಹುದು. ಅನುವಾದದ ಭಾಷೆ ಕ್ಲೇಶರಹಿತವಾಗಿ ಇರಬೇಕಾ ದದ್ದು ಅಗತ್ಯ. ಈ ಪುಸ್ತಕವನ್ನು ಮುನ್ನುಡಿ ಮತ್ತು ಸಹಾಯಕ ವಿವರಣೆಗಳೊಂದಿಗೆ ಅನುವಾದಮಾಡಿಕೊಟ್ಟಿರುವ ಮಹಾದೇವಪ್ಪನವರ ಶ್ರಮ ಮತ್ತು ಉದ್ದೇಶಗಳನ್ನು ಮೆಚ್ಚಬೇಕು.

ಬಾಲಸುಬ್ರಹ್ಮಣ್ಯ ಅವರು ಗ್ರೀಕ್ ಮೂಲದಿಂದ ಅನುವಾದಮಾಡಿರುವ "ಅರಿಸ್ಟಾಟಲನ ಕಾವ್ಯಮೀಮಾಂಸೆ" ಎಂಬ ಗ್ರಂಥ, ಮತ್ತು "ಹೊರೇಸನ ಸಾಹಿತ್ಯ ವಿಮರ್ಶೆ"ಯನ್ನು ಕುರಿತು ಪ್ರಬುದ್ಧ ಕರ್ಣಾಟಕ(೪೨–IV; ೪೩–II, ೧೯೬೧-೧೯೬೨)ದಲ್ಲಿ ಪ್ರಕಟವಾದ ಎರಡು ಲೇಖನಗಳು ಪ್ರಶಂಸನೀಯವಾಗಿವೆ. 'ಇಗ್ರಾಂ ಬೈವಾಟರ್ ಅವರು ಸಂಪಾದಿಸಿರುವ ಅರಿಸ್ಟಾಟಲಿನ ಕಾವ್ಯಮೀಮಾಂಸೆಯ ಗ್ರೀಕ್ ಮೂಲ ಈ ಅನುವಾದಕ್ಕೆ ಆಧಾರ ಎಂದು ಲೇಖಕರು ಹೇಳಿಕೊಂಡಿದ್ದಾರೆ. ಭಾರತೀಯ ಕಾವ್ಯಸಿದ್ಧಾಂತಕ್ಕೂ ಅರಿಸ್ಟಾಟಲ್‌ನ ಕಾವ್ಯಸಿದ್ಧಾಂತಕ್ಕೂ ಇರುವ ಸಾಮ್ಯವನ್ನು ಉದ್ದಕ್ಕೂ ಸ್ಥೂಲವಾಗಿ ಸೂಚಿಸಿದ್ದಾರೆ. ಕಾವ್ಯಮೀಮಾಂಸೆಯ ತೌಲನ ಅಧ್ಯಯನ ದಲ್ಲಿ ಈ ಗ್ರಂಥದಿಂದಾಗುವ ಪ್ರಯೋಜನವು ಅಷ್ಟಿಷ್ಟಲ್ಲ. ಭಾರತೀಯ ಕಾವ್ಯ ಮೀಮಾಂಸೆಗೆ ಭರತಮುನಿ ಹೇಗೋ, ಪಾಶ್ಚಾತ್ಯ ಕಾವ್ಯಮೀಮಾಂಸೆಗೆ ಅರಿಸ್ಟಾಟಲ್ ಹಾಗೆ—ಆದ್ಯಪ್ರವರ್ತಕರು. ಇಂಥ ಕೃತಿಯನ್ನು ಸುಬ್ರಮಣ್ಯ ಅವರು ಅನುವಾದಿ ಸಿರುವ ರೀತಿ ಅತ್ಯಂತ ಖಚಿತವೂ, ನಿರ್ದುಷ್ಟವೂ ಆಗಿ ಮೂಲಕೃತಿಯ (ಅದರ ಭಾಷೆ ನಮಗೆ ಗೊತ್ತಿಲ್ಲದಿದ್ದರೂ) ಅಭಿಪ್ರಾಯವೇನೆಂಬುದನ್ನು ತಿಳಿಯಪಡಿಸುತ್ತದೆ. ಬರವಣಿಗೆಯ ಶೈಲಿ ಸಂಸ್ಕೃತ–ಇಂಗ್ಲಿಷ್–ಮತ್ತು ಗ್ರೀಕ್ ಸಂಸ್ಕಾರದಿಂದಾಗಿ ಪಾರಿ ಭಾಷಿಕವಾಗಿ ಶಾಸ್ತ್ರೀಯ ಶೈಲಿಯ ಸಮರ್ಪಕವಾದ ಒಂದು ನಿದರ್ಶನದಂತಿದೆ. 'ಹೊರೇಸನ ಸಾಹಿತ್ಯ ವಿಮರ್ಶೆ'ಯನ್ನು ಕುರಿತ ಅನುವಾದ ಈ ಮೇಲಿನದಕ್ಕೆ ಭಿನ್ನ ವಾಗಿ, ತಿಳಿಯಾಗಿ ವಿನೋದಶೀಲವಾಗಿ, ವಿನೂತನವಾಗಿದೆ.

ಹಿಂದಿ ಭಾಷೆಯಿಂದ ಕಾವ್ಯಮೀಮಾಂಸೆಗೆ ಸಂಬಂಧಪಟ್ಟ ಎರಡು ಪುಸ್ತಕಗಳು ಬಂದಿವೆ. ಒಂದು "ಡಾ. ನಗೇಂದ್ರರ ಶ್ರೇಷ್ಠ ಪ್ರಬಂಧಗಳು", ಇದನ್ನು ವೇ. ರಾಜೇಶ್ವರಯ್ಯ ಮತ್ತು ಪ್ರಧಾನ್ ಗುರುದತ್ ಇವರು ಅನುವಾದಿಸಿದ್ದಾರೆ. ಇನ್ನೊಂದು ವಿನೋಬಾ ಅವರ 'ಸಾಹಿತ್ಯ ಮತ್ತು ಸಾಹಿತಿ' ಎಂಬ ಕಿರುಕೃತಿ. ಇದನ್ನು ಅನುವಾದ ಮಾಡಿದವರಾರೋ ತಿಳಿಯದು. "ಡಾ. ನಗೇಂದ್ರರ ಶ್ರೇಷ್ಠ ಪ್ರಬಂಧಗಳು" ಎಂಬ ಪುಸ್ತಕದಲ್ಲಿ ಕಾವ್ಯ ಎಂದರೇನು, 'ರಸಸ್ವರೂಪ' 'ಕರುಣರಸಾಸ್ವಾದನೆ' ಮತ್ತು 'ಸಾಹಿತ್ಯದಲ್ಲಿ ಆತ್ಮಾಭಿವ್ಯಕ್ತಿ'—ಈ ಲೇಖನಗಳು ನೇರವಾಗಿ ಕಾವ್ಯಮೀಮಾಂಸೆಗೆ ಸಂಬಂಧಿಸಿದವುಗಳು. ಈ ಪ್ರಬಂಧಗಳಲ್ಲಿ ಪ್ರತಿಪಾದಿತವಾಗಿರುವ ವಿಷಯವ್ಯಾಪ್ತಿಯಲ್ಲಿ ಡಾ. ನಗೇಂದ್ರರು ಪಾಶ್ಚಾತ್ಯ ಮತ್ತು ಭಾರತೀಯ ಕಾವ್ಯಮೀಮಾಂಸೆಯನ್ನು ತೌಲನ ಕ್ರಮದಲ್ಲಿ ಮನಸ್‌ಶಾಸ್ತ್ರೀಯವಾದ ಅರಿವಿನ ಹಿನ್ನೆಲೆಯಲ್ಲಿ ಸಮರ್ಥವಾಗಿ ವ್ಯಾಖ್ಯಾನಿಸಿದ್ದಾರೆ ಎನಿಸುತ್ತದೆ. 'ರಸಸ್ವರೂಪ' ಎಂಬ ಪ್ರಬಂಧದಲ್ಲಿ ರಸಾನುಭವದ 'ಅಲೌಕಿಕತೆ'ಯನ್ನು ಎತ್ತಿಹಿಡಿಯುವಲ್ಲಿ, ಐ. ಎ. ರಿಚರ್ಡ್ಸ್ ಅವರ ಮತವನ್ನು ಕೂಲಂಕಷವಾಗಿ ವಿಮರ್ಶಿಸಿ ಭಾರತೀಯ ಕಾವ್ಯಮೀಮಾಂಸೆ ರಸಾನುಭವದ 'ಅಲೌಕಿಕತೆ'ಯ ಬಗ್ಗೆ ಹೇಳಿರುವ ಮಾತುಗಳು ಎಷ್ಟು ಮಹತ್ವದವುಗಳೆಂಬುದನ್ನು ಸ್ಥಾಪಿಸಿದ್ದಾರೆ. ಕಾವ್ಯಮೀಮಾಂಸೆಯ ಈ ಪ್ರಬಂಧಗಳ ಜೊತೆಗೆ ಹಿಂದೀ ಸಾಹಿತ್ಯದಲ್ಲಿ ಬಂದ ಸಾಹಿತ್ಯಿಕ ಚಳುವಳಿಗಳಾದ 'ಛಾಯಾವಾದ' 'ಪ್ರಯೋಗವಾದ'ಗಳನ್ನು ಕುರಿತ ಲೇಖನಗಳೂ ಇಲ್ಲಿವೆ. ಡಾ. ನಗೇಂದ್ರರು ನಿದರ್ಶನಕ್ಕಾಗಿ ಕೊಡುವ ಹಿಂದೀ ಕವಿಗಳ ಕೃತಿಗಳ ಬಗೆಗೆ ಅಡಿಟಿಪ್ಪಣಿಯಲ್ಲಿ ವಿವರಣಾತ್ಮಕ ಸೂಚನೆಗಳನ್ನು ಅನುವಾದಕರು ನೀಡಿದ್ದಾರೆ. ಕಾವ್ಯಮೀಮಾಂಸೆಯಲ್ಲಿ ಪರಿಚಿತವಾದ ಪರಿಭಾಷೆಯನ್ನೇ ಬಳಸಿರುವುದರಿಂದ ವಿಷಯನಿರೂಪಣೆ ಅಕ್ಲಿಷ್ಟವಾಗಿ, ಅರ್ಥವ್ಯಕ್ತಿಯುಳ್ಳದ್ದಾಗಿದೆ. ಅನುವಾದದ ಭಾಷೆ ಈ ಕೃತಿ ಬೇರೊಂದು ಭಾಷೆಯ ಅನುವಾದವೆಂದು ತೋರದಷ್ಟು ಸೊಗಸಾಗಿದೆ.

ವಿನೋಬಾರವರ 'ಸಾಹಿತ್ಯ-ಸಾಹಿತಿ' ಎಂಬ ಚಿಕ್ಕ ಕೃತಿಯಲ್ಲಿ "ಜೀವನ ನಿಷ್ಠೆಯ ಪ್ರಕಾಶನಾರ್ಥ ಸಾಹಿತ್ಯ. ಜೀವನನಿಷ್ಠೆ ಸಾಹಿತ್ಯ ಎರಡೂ ಏಕರೂಪವಾಗಬೇಕು........ಅರ್ಥ ಎಂದರೆ ಜೀವನ, ವಾಕ್ ಎಂದರೆ ಸಾಹಿತ್ಯ"—ಹೀಗೆ ಸಾಹಿತ್ಯವನ್ನು ಕುರಿತ ವಿನೋಬಾ ವಿಚಾರಲಹರಿ ಮಡುಗಟ್ಟಿದೆ. ಸಾಹಿತ್ಯದ ವಿಚಾರದಲ್ಲಿ ಸೂಕ್ತಿ ಸದೃಶವಾದ ಅನೇಕ ಮಾತುಗಳು ಇದರಲ್ಲಿವೆ.

ಎ. ಆರ್. ಕೃಷ್ಣಶಾಸ್ತ್ರಿಗಳು ಬಂಗಾಳಿಯಿಂದ ಅನುವಾದಿಸಿರುವ "ರವೀಂದ್ರನಾಥ್ ಠಾಕೂರ್ ನಿಬಂಧ ಮಾಲಾ"ದ ಎರಡನೆಯ ಭಾಗದಲ್ಲಿ 'ಸಾಹಿತ್ಯ'ವನ್ನು ಕುರಿತ ಪ್ರಬಂಧದಲ್ಲಿ ಠಾಕೂರರ ಕಾವ್ಯಮೀಮಾಂಸೆಯನ್ನು ಗುರುತಿಸಬಹುದು.*

* ಡಾ. ಎ. ಎನ್. ನರಸಿಂಹಯ್ಯನವರು ೧೯೪೦ ರಲ್ಲಿ ಪ್ರಕಟಿಸಿದ "ಸಾಹಿತ್ಯ" ರವೀಂದ್ರರ ಸಾಹಿತ್ಯ ವಿಚಾರಗಳನ್ನು ಕುರಿತ ಪುಸ್ತಕ, ಕೃಷ್ಣಶಾಸ್ತ್ರಿಗಳ ಅನುವಾದದಲ್ಲಿರುವುದಕ್ಕಿಂತ ಹೆಚ್ಚು ಸಂಗತಿಗಳನ್ನುಳ್ಳದ್ದಾಗಿದೆ. ೧೯೪೫ ರಿಂದ ಬಂದ ಕೃತಿಗಳನ್ನು ಮಾತ್ರ ಗಮನದಲ್ಲಿರಿಸಿಕೊಂಡಿರುವುದರಿಂದ ಆ ವಿಚಾರವನ್ನು ಇಲ್ಲಿ ಪ್ರಸ್ತಾಪಿಸಿಲ್ಲ.

"ಸಾಧಾರಣರ ವಸ್ತುವನ್ನು ವಿಶೇಷ ಭಾವದಲ್ಲಿ ತನ್ನದನ್ನಾಗಿ ಮಾಡಿಕೊಂಡು, ಅದೇ ಸಾಧನದಿಂದಲೇ ಅದನ್ನು ಮತ್ತೆ ವಿಶೇಷ ಭಾವದಲ್ಲಿ ಸಾಧಾರಣವ್ನಾಗಿ ಮಾಡಿಬಿಡುವುದು ಸಾಹಿತ್ಯದ ಕೆಲಸ" (ಪು. ೨೬೪)–ಎಂಬ ಈ ಮಾತಿನಲ್ಲಿ ಕಾವ್ಯಮೀಮಾಂಸೆಯೆಲ್ಲ ಅಡಕವಾಗಿದೆ. 'ಸಾಹಿತ್ಯದ ದಾರಿಯಲ್ಲಿ' ಮತ್ತು 'ಸಾಹಿತ್ಯದ ಸ್ವರೂಪ' ಎಂಬ ಎರಡು ಭಾಗಗಳಲ್ಲಿ ಕವಿ ರವೀಂದ್ರರ ಕಾವ್ಯಮೀಮಾಂಸೆಯನ್ನು ಕಾಣಬಹುದು. ಹೊಸಗನ್ನಡ ಗದ್ಯ ಶಿಲ್ಪಿವರೇಣ್ಯರಾದ ಎ. ಆರ್. ಕೃಷ್ಣಶಾಸ್ತ್ರಿಗಳ ಈ ಅನುವಾದದ ವಿಚಾರದಲ್ಲಿ ಯಾವ ಪ್ರಶಂಸೆಯ ಮಾತುಗಳನ್ನು ಆಡುವುದು ಅನಾವಶ್ಯಕ.

ಮೇಲೆ ಅವಲೋಕಿಸಿದ ಈ ಅನುವಾದ ಲೇಖನ-ಕೃತಿಗಳನ್ನು ನೋಡಿದರೆ ಎಷ್ಟೊಂದು ಕಡೆಯಿಂದ ಕಾವ್ಯಮೀಮಾಂಸೆಯ ಸಾಹಿತ್ಯ ಕನ್ನಡಕ್ಕೆ ಬಂದಿದೆ ಎನ್ನುವ ಸಂಗತಿ ಕುತೂಹಲಕಾರಿಯಾಗಿದೆ.

೬

ಇತ್ತೀಚೆಗೆ 'ಚಂಡೆ-ಮದ್ದಳೆ'ಯೊಂದಿಗೆ ಬಂದ ನವ್ಯ ಕಾವ್ಯ ಕನ್ನಡ ಕಾವ್ಯ ಮೀಮಾಂಸೆಗೆ ತಂದಿರುವ ರಂಗು-ರೂಪಗಳು ಅತ್ಯಂತ ಗಮನಾರ್ಹವಾಗಿವೆ. ಯಾವ ಒಂದು ಸಾಹಿತ್ಯಕ ಚಳುವಳಿ ಬಂದರೂ ಅದು ತನ್ನ ಅಂತರಂಗದಿಂದಲೇ ತನಗೆ ಸಮರ್ಥನೀಯವಾದ ಕಾವ್ಯ ತತ್ವಗಳನ್ನು ಆವಿಷ್ಕಾರ ಮಾಡಿಕೊಳ್ಳುತ್ತದೆ. ನವ್ಯಕಾವ್ಯಕ್ಕೂ ಈ ಮಾತು ಒಪ್ಪುತ್ತದೆ. ಕನ್ನಡಕ್ಕೆ ಉದ್ದಕ್ಕೂ ಬಂದ ಪ್ರೇರಣೆಗಳ ಹಾಗೆ ನವ್ಯ ಕಾವ್ಯಕ್ಕೂ ಪಶ್ಚಿಮದಿಂದಲೆ ಪ್ರೇರಣೆ ಬಂದಿದೆ. ಈ ಕಾವ್ಯದ ಮೀಮಾಂಸೆಯ ಬಹುತೇಕ ಅಂಶಗಳೂ ಅಲ್ಲಿಂದಲೇ ಬಂದಿವೆ. ಎಜ್ರಾಪೌಂಡ್, ಇಲಿಯಟ್, ಯೇಟ್ಸ್, ಇತ್ಯಾದಿಯವರ ಕಾವ್ಯ ಸಂಪ್ರದಾಯದಿಂದ ಪ್ರೇರಿತವಾದ ಕವಿತೆ, ಆಯಾ ಕವಿಗಳು ತಮ್ಮ ಪರಂಪರೆಯನ್ನು ತಾವೇ ಅರ್ಥಮಾಡಿಕೊಳ್ಳಲೋ, ಅರ್ಥಮಾಡಿಕೊಡಲೋ ನಡೆಸಿದ ಕಾವ್ಯಮೀಮಾಂಸೆಯ ವಿಚಾರಗಳು ನಮ್ಮ ನವ್ಯ ಕವಿಗಳಲ್ಲೂ ಪ್ರತಿಫಲಿತವಾಗಿವೆ. ಗೋಪಾಲಕೃಷ್ಣ ಅಡಿಗ, ಗೋಕಾಕ್, ಕುರ್ತುಕೋಟಿ, ಯು. ಆರ್. ಅನಂತಮೂರ್ತಿ, ಕೆ. ನರಸಿಂಹಮೂರ್ತಿ, ರಾಮಚಂದ್ರಶರ್ಮ ಮತ್ತು ಎಸ್. ಬಿ. ಮಿಣಜಗಿ ಇವರ ಲೇಖನಗಳಲ್ಲಿ ಮತ್ತು ಪುಸ್ತಕಗಳಲ್ಲಿ ಈ ನವ್ಯ ಕಾವ್ಯಮೀಮಾಂಸೆಯನ್ನು ಗುರುತಿಸಬಹುದಾಗಿದೆ.

ಕಾವ್ಯವೆಂದರೇನು? ಕಾವ್ಯ ಹೇಗಿರಬೇಕು ಎನ್ನುವ ಬಗೆಗೆ ಎಸ್ರಾಪೌಂಡ್ ಹೇಳುವ ಈ ಎರಡು ಮಾತುಗಳು ಗಮನಾರ್ಹವಾಗಿವೆ: "ಮೊದಲನೆಯದಾಗಿ ಕವಿಯಲ್ಲಿ ಸಮಕಾಲೀನ ಪ್ರಜ್ಞೆ ಇರಬೇಕೆಂಬುದು. ಎರಡನೆಯದಾಗಿ ಕಾವ್ಯದಲ್ಲಿ ಗದ್ಯದ ಸತ್ವವಿರಬೇಕೆಂಬುದು."[1] ಈ ಹೇಳಿಕೆಯ ಪ್ರಕಾರ ಕಾವ್ಯವೆಂಬುದು ಕವಿಯ ವಾಸ್ತವ ಜೀವನದ

[1] ಕೆ. ಡಿ. ಕುರ್ತುಕೋಟಿ : ಮನ್ವಂತರ—೨. ನವ್ಯಕಾವ್ಯ ಪ್ರಯೋಗ. ಪು. ೧೪.

ವೈಯಕ್ತಿಕಾನುಭವದ ತೀವ್ರತೆಯ ಅಭಿವ್ಯಕ್ತಿ. ಗತಕಾಲದ ಸ್ಮರಣೆಯಿಂದಲೋ ಭವಿಷ್ಯದ ಕನಸಿನಿಂದಲೋ ಸ್ಫೂರ್ತಿ ಪಡೆದು ನಿರ್ಮಿತವಾಗುವ ಭಾವಾವೇಶಗಳ ಉದ್ಗಾರ ವಲ್ಲ. ಹಾಗೆಂದ ಮಾತ್ರಕ್ಕೆ ನವ್ಯಕವಿಗೆ ಭೂತ ಹಾಗೂ ಭವಿಷ್ಯಗಳು ನಿರ್ಲಕ್ಷ್ಯದ ವಸ್ತುಗಳೆಂದು ಅರ್ಥವಲ್ಲ. ಯಾವುದು ಸಮಕಾಲೀನವೋ ಅಥವಾ ವರ್ತಮಾನವೋ ಅದು ಭೂತ-ಭವಿಷ್ಯಗಳನ್ನು ಒಳಗೊಳ್ಳುವ ಒಂದು ಅಖಂಡ ಮಧ್ಯಬಿಂದು ಎಂಬುದು ಅವನ ಪ್ರಜ್ಞೆಗೆ ಗೋಚರಿಸುತ್ತದೆ. ಇದನ್ನೇ ಎಲಿಯಟ್ ಚಾರಿತ್ರಿಕ ಪ್ರಜ್ಞೆ (Historical sense) ಅಥವಾ ಪರಂಪರೆಯ ಅರಿವು ಎನ್ನುತ್ತಾನೆ. "ಪರಂಪರೆಯೆಂದರೆ ತಲೆ ತಲಾಂತರದಿಂದ ಆನುವಂಶಿಕವಾಗಿ ಬಂದ ಆಸ್ತಿಯಲ್ಲ; ಭೂತದ ಕೈಯಿಂದ ಅಷ್ಟು ಸಲೀಸಾಗಿ ವರ್ತಮಾನದ ಕೈಗೆ ಎಟುಕುವ ಅಜ್ಜ ನಟ್ಟ ಮಾವಿನಮರದ ಹಣ್ಣಲ್ಲ. ಕವಿಯಾದವನು ಅತ್ಯಂತ ಶ್ರಮದಿಂದ ಮನನಮಾಡಿ ಸಾಧಿಸಿಕೊಳ್ಳಬೇಕಾದ ಜವಾಬ್ದಾರಿಯಿಂದ ಕೂಡಿದ ಅರಿವು".[1] ಹೀಗಾಗಿ "ಎಲ್ಲ ಕಲೆಯ ಮೂಲದ್ರವ್ಯವೂ ಕಲೆಗಾರನ ವೈಯಕ್ತಿಕ ಅನುಭವವೇ ಹೊರತು ಬೇರೆ ಅಲ್ಲ. ಈ ಅನುಭವಗಳನ್ನು ಪಡೆಯುವುದು ಇಂದ್ರಿಯಗಳ ಮನಸ್ಸಿನ ಕೆಳಪದರುಗಳಿಗಿಳಿದು ಅಲ್ಲಿ ತುಂಬಿಕೊಂಡಿರುವ ವ್ಯಕ್ತಿ ಮತ್ತು ಅವನ ಜನಾಂಗದ ಅರ್ಧಸ್ಮೃತ ಅಥವಾ ವಿಸ್ಮೃತ ಭಾವಾನುಭವ ಸಂವೇದನೆಗಳೊಡನೆ ಸಮರಸಗೊಂಡು ಮಾಗಿ ಸ್ವಪ್ರದರ್ಶನಕ್ಕೆ ತಕ್ಕ ನಿಮಿಷವನ್ನು ಕಾಯುತ್ತಿರುತ್ತದೆ....ಕವಿಯ ಮನಸ್ಸಿನೊಳಗೇ ಇರುವಾಗ ಈ ಅನುಭವ ಅಮೂರ್ತ, ಅಸ್ತವ್ಯಸ್ತ, ರೂಪಹೀನ. ಅದಕ್ಕೆ ತಕ್ಕ ಶರೀರವನ್ನು ಸೃಷ್ಟಿಸಿ ಅದನ್ನು ಕಲೆಯಾಗಿ ಮಾರ್ಪಡಿಸುವುದು ಕಲೆಗಾರನ ಕೆಲಸ....ಈ ಶರೀರವನ್ನು ಕವಿ, ಸಾಹಿತಿ ತನ್ನ ಮನಸ್ಸಿಗಿಂತ ಭಿನ್ನವಾದ ಹೊರಜಗತ್ತಿನ ವಸ್ತುಗುಚ್ಛಗಳಲ್ಲಿ, ಘಟನಾ ಸರಣಿಯಲ್ಲಿ, ಕ್ರಿಯಾ ಪರಂಪರೆಯಲ್ಲಿ, ವಿಶಿಷ್ಟ ಸನ್ನಿವೇಶಗಳಲ್ಲಿ ಸೃಷ್ಟಿಸುತ್ತಾನೆ. ಹೀಗೆ ಕವಿಯ ಅನುಭವ ಅಥವಾ ಭಾವ ಯಾವ ಯಾವ ವಸ್ತುರೂಪದಲ್ಲಿ ಮೈತಳೆಯುತ್ತದೆಯೋ ಅದನ್ನು ಆ ಆ ಭಾವದ, ಅನುಭವದ ವಸ್ತು ಪ್ರತಿರೂಪ ಅಥವಾ ವಸ್ತು ವ್ಯತಿಕರ ಎನ್ನಬಹುದು ಎಂಬ ಎಲಿಯಟ್ಟನ ಅಭಿಪ್ರಾಯವನ್ನು ಇಲ್ಲಿ ನೆನೆಯಬಹುದು."[2] ಕವಿಯ ಅನುಭವಕ್ಕೆ ಇನ್ನೂ ಮುಖ್ಯವಾದದ್ದು ಪ್ರಾಮಾಣಿಕತೆ. ತನ್ನ ಅನುಭವಕ್ಕೆ ಬಾರದ, ಬೇರೆ ಯಾರದೋ ಯಾವುದೋ ಆದ ಭಾವನೆ—ಆಲೋಚನೆಗಳನ್ನು ತನ್ನದೆಂದು ಭ್ರಮಿಸದ ಸ್ವಾತ್ಮಪರೀಕ್ಷಾನಿಷ್ಠವಾದ ಒಂದು ಪ್ರಾಮಾಣಿಕತೆ. "ಸ್ವಾನುಭವಕ್ಕೆ ಪ್ರಾಮಾಣಿಕವಾಗಿರುವುದು ಸಾಹಿತ್ಯದ ಅತ್ಯಂತ ಅವಶ್ಯವಾದ ಮೂಲಾಂಶ ಎಂಬುದೊಂದು; ಹೀಗೆ ಪ್ರಾಮಾಣಿಕನಾಗಬೇಕಾದರೆ ಲೌಕಿಕವಾದ ಅಥವಾ ಆಧ್ಯಾತ್ಮಿಕ

---

[1] ಎಸ್. ಬಿ. ಮಿಣಜಗಿ : ಮನ್ವಂತರ–೩. ಟಿ. ಎಸ್. ಎಲಿಯಟ್ ಕವಿಯ ವಿಮರ್ಶೆಯ ವಿಚಾರಗಳು. ಪು. ೧೪.

[2] ಗೋಪಾಲಕೃಷ್ಣ ಅಡಿಗ : ಮಣ್ಣಿನ ವಾಸನೆ ಪು. ೧೨೧–೧೨೨.

ವಾದ ಯಾವುದೇ ಹೊರಗಡೆಯ ಪ್ರಭುಶಕ್ತಿ ಇರಲಿ ಅದರಿಂದಲೂ, ಮನಸ್ಸಿನಲ್ಲಿ ಪ್ರತಿಫಲಿತವಾಗುವ ಜೀವನದ ಪ್ರತಿಮೆಯನ್ನು ವಿಕೃತಗೊಳಿಸುವ ಎಲ್ಲ ಭಾವೋದ್ರೇಕ ಪೂರ್ವ ಗ್ರಹಗಳಿಂದಲೂ ಕವಿ ಸ್ವತಂತ್ರನಾಗಿರುವುದು ಅತ್ಯಾವಶ್ಯಕವಾದ ಪೂರ್ವಭಾವಿ ಅಗತ್ಯ".[1] ಈ ಪ್ರಜ್ಞೆಯುಳ್ಳ ಕವಿಗೆ ಕಾವ್ಯಕ್ಕೆ ಇದು ವಸ್ತು, ಇದು ವಸ್ತುವಲ್ಲ, ಇದು ಸುಂದರ, ಇದು ಸುಂದರವಲ್ಲ ಎನ್ನುವ ಪಕ್ಷಪಾತ ಉಳಿಯುವುದಿಲ್ಲ. "ರೊಮ್ಯಾಂಟಿಕ್ ಕವಿಗಳು ಹೆಚ್ಚಾಗಿ ಸುಂದರ ದಿವ್ಯ ದೃಶ್ಯಗಳನ್ನು ವರ್ಣಿಸಿದರೆ ಎಲಿಯಟ್ ಸೌಂದರ್ಯ ಅಸೌಂದರ್ಯಗಳ ಕೆಳಗಿರುವ ಅತೃಪ್ತಿ ನಿರಾಶೆ ಭಯ ಪಶ್ಚಾತ್ತಾಪ ದೈವಿಕತೆಯ ಕಣಸು ಇವುಗಳನ್ನು ಚಿತ್ರಿಸುತ್ತಾನೆ",[2] ಎಂಬ ನವ್ಯ ಕಾವ್ಯದ ವಸ್ತು ವಿಮರ್ಶೆಯನ್ನು ಇಲ್ಲಿ ನೆನೆಯಬಹುದು. ಹೀಗೆ ಕವಿ ಮನೋಧರ್ಮ ಮತ್ತು ಕಾವ್ಯವಸ್ತುವಿನ ವಿಚಾರದಲ್ಲಿ ಪ್ರಾಮಾಣಿಕತೆ ಮತ್ತು ಸಾಮಾಜಿಕ ಪ್ರಜ್ಞೆಯನ್ನು ಈ ಕಾವ್ಯಮೀಮಾಂಸೆ ಎತ್ತಿ ಹಿಡಿಯುತ್ತದೆ.

ಇನ್ನು ಕಾವ್ಯದ ಅಭಿವ್ಯಕ್ತಿ ಅಥವಾ ಭಾಷಾರೂಪ ಹೇಗಿರಬೇಕು ಎಂಬುದನ್ನು ಕುರಿತು ಕೆಲವು ಮಾತುಗಳನ್ನು ನೋಡಬಹುದು. ಯಾವುದೋ ಒಂದು ವಸ್ತುವನ್ನು ಕುರಿತು ಕೇವಲ ವಿಸ್ಮಯದ ನೆಲೆಯಲ್ಲಿ ಉದ್ದುದ್ದನೆಯ ಉಪನ್ಯಾಸ ಕೊಡುವುದು ಕಾವ್ಯವಲ್ಲ. "ಕಾವ್ಯವೆಂಬುದು ಅನುಭವಕ್ಕೆ ಆಕಾರ ಕೊಡುವ ಕೆಲಸ; ಅದು ಅವನ (ಕವಿಯ) ಭಾಷಣವಲ್ಲ."[3] ಎಸ್ರಾಪೌಂಡ್ "ಕಾವ್ಯದಲ್ಲಿ ಗದ್ಯದ ಸತ್ವವಿರಬೇಕು" ಎಂದು ಹೇಳಿದ್ದರ ಅರ್ಥ ಅದು ಗದ್ಯದ ಅರ್ಥವ್ಯಕ್ತಿಯನ್ನು ಅಳವಡಿಸಿಕೊಳ್ಳಬೇಕು ಎನ್ನುವ ಅರ್ಥದಲ್ಲಿ. ನವ್ಯ ಕವಿಗಳಿಗಿಂತ ಹಿಂದಿನ ರೊಮ್ಯಾಂಟಿಕ್ ಕವಿಗಳು "ಬುದ್ಧಿ ಭಾವನೆಗಳನ್ನು, ಕಲ್ಪನೆ ವಿಚಾರಗಳನ್ನು ಗದ್ಯ ಪದ್ಯಗಳ ಪ್ರತ್ಯೇಕ ಉದ್ಯಮಗಳೆಂದು ಭಾವಿಸಿದ್ದರು. ಗದ್ಯದ ಅನೇಕ ಗುಣಗಳಿಂದ ಪದ್ಯ ಅಲಿಪ್ತವಾಗಿಯೇ ಉಳಿಯಬೇಕಾಯಿತು.....ಆದರೆ ಪೌಂಡ್ ಗದ್ಯದ ಅರ್ಥವ್ಯಕ್ತಿಯನ್ನೂ ಸಂಭಾಷಣೆಗಳ ಚಾತುರ್ಯವನ್ನೂ ಕವಿತೆಯಲ್ಲಿ ನಿರೀಕ್ಷಿಸಿ ಒಂದು ಹೊಸ ಸಂಭಾವನೆಯನ್ನು ಸೂಚಿಸಿದ."[4] ಎಂದರೆ ಕಾವ್ಯದ ಭಾಷೆ ಸಂಗೀತದ ಪಾರವಶ್ಯ ಹಾಗೂ ಗೇಯತೆಯಿಂದ ತಪ್ಪಿಸಿಕೊಂಡು ದಿನಬಳಕೆಯ ಆಡುಮಾತಿಗೆ ಸಮೀಪವಾಯಿತು. ನವ್ಯ ಕಾವ್ಯದ ಪ್ರಕಾರ ಕಾವ್ಯದ ಭಾಷೆ ಎಂದರೆ ಆಡುಮಾತಿಗೆ ಸಮೀಪವಾದದ್ದು ಅಥವಾ ಮಾತಾಡಿಕೊಂಡಹಾಗಿರುವ ಭಾಷೆಯೆ. "ಆಡುವ ಮಾತಿನ ಪರಿಪಾಕದ ಮಿತಿಯಲ್ಲಿ ತಮ್ಮ ಅನುಭವದ ಪರಿಪೂರ್ಣಾವತಾರಕ್ಕೆ ಈ ಕವಿ ನಡೆಸುವ ಪ್ರಯತ್ನ ಸದ್ಯದ ಕನ್ನಡ ಸಾಹಿತ್ಯದಲ್ಲಿ

---

1 ಅಲ್ಲೇ ಪು. ೭೬

2 ಕೆ. ನರಸಿಂಹಮೂರ್ತಿ ಅಡಿಗರ 'ಚಂಡೆ–ಮದ್ದಳೆ'ಯ ಹಿನ್ನುಡಿಯಲ್ಲಿ ಪು. ೬೦.

3 ಗೋಪಾಲಕೃಷ್ಣ ಅಡಿಗ. ಮಣ್ಣಿನವಾಸನೆ. ಪು. ೧೨೧.

4 ಕೆ. ಡಿ. ಕುರ್ತುಕೋಟಿ. ಮನ್ವಂತರ–೨. ನವ್ಯಕಾವ್ಯ ಪ್ರಯೋಗ. ಪು. ೧೪–೧೫.

ಅನನ್ಯರೀತಿಯದು "[1] ಎಂದು ಅಡಿಗರ ಕಾವ್ಯವನ್ನು ಕುರಿತ ಈ ವಿಮರ್ಶೆ ನವ್ಯಕಾವ್ಯದಲ್ಲಿ ಕಾವ್ಯದ ಭಾಷೆ ಹೇಗಿರಬೇಕೆಂಬುದರ ವ್ಯಾಖ್ಯಾನವಾಗಿದೆ. ಇಂಥ ಮಾತಿನ ಸಾರಾಂಶ "ಭಾಷೆಯಲ್ಲಿ ಸಂಭವಿಸದುದು ಕಾವ್ಯವಲ್ಲ"[2] ಎಂಬುದು. ಹಾಗಾದರೆ ಇದು ಹೊಸ ಸೂತ್ರವೇನು? ಎಲ್ಲ ಕಾವ್ಯವೂ ಭಾಷೆಯಲ್ಲಿ ಅಲ್ಲದೆ ಇನ್ನಾವುದರಲ್ಲಿ ಸಂಭವಿಸುತ್ತದೆ ಎನ್ನಬಹುದು. ಅದಕ್ಕೆ ಉತ್ತರ ಇದು "ಉತ್ತಮ ಕಾವ್ಯದಲ್ಲಿ ಕವಿ ತನಗೆ ತಾನೆ ಮಾತನಾಡಿಕೊಳ್ಳುತ್ತಿದ್ದಾನೆ ಎನ್ನಿಸುತ್ತದೆ. ಅಥವಾ ತನ್ನಂಥವರ ಜೊತೆ ಮಾತನಾಡುತ್ತಿದ್ದಾನೆ ಎನ್ನಿಸುತ್ತದೆ. ಇನ್ನೂ ಉತ್ತಮ ಕಾವ್ಯದಲ್ಲಿ, ಇಲ್ಲಿ ಈ ಕವನದಲ್ಲಿಯೇ ಕವಿ ತಾನು ಭಾವಿಸುವ ಕ್ರಮವನ್ನು ಅಭಿನಯಿಸಿ ತೋರಿಸುತ್ತಿದ್ದಾನೆ ಎನ್ನಿಸುತ್ತದೆ. ಕವಿ ತನ್ನ ಅಂತರಂಗವನ್ನು, ಜೀವನದ ಅಂತರಾಳಗಳಲ್ಲಿ ಹುದುಗಿರುವ ಸತ್ಯವನ್ನು ಅನ್ವೇಷಿಸುವ, ಬಗೆಯುವ, ರೀತಿಯಿದು. ಭಾಷೆಯಲ್ಲಿ ಭಾವಾಭಿನಯವಾಗಬೇಕು ಎನ್ನುವ ಮಾತಿನ ಅರ್ಥ ಇದು."[3] "ಈ ರೀತಿಯ ಬದಲಾವಣೆ ಭಾಷೆಯಲ್ಲಿ ತನ್ನೆಲ್ಲ ಪಾರಂಪಾರಿಕ ಹಾಗೂ ಅಜ್ಞಾತ ಆಳ-ಸ್ತರಗಳನ್ನೆಲ್ಲ ಒಳಗೊಂಡು ಸಂಭವಿಸಬೇಕು. ಇಂಥ ಎಚ್ಚರವೇ ನವ್ಯಕಾವ್ಯದ ಜೀವಾಳವಾಗಿದೆ."[4] ಅಲ್ಲದೆ ಕವಿಗೆ "ಬೇರೆ ಬೇರೆ ಸ್ಥಳ ಹಾಗೂ ಕಾಲಗಳಲ್ಲಿ ಬೇರೆ ಬೇರೆಯವರು ಪಡೆದ ಅನುಭವಗಳ ಸಂದರ್ಭದಲ್ಲಿ ತನ್ನದೇ ಅನುಭವದ ಒಂದು ಸುಸಂಬದ್ಧ ರಚನೆಯನ್ನು ಕಾಣುವ ವೈಯಕ್ತಿಕ ತೀವ್ರತೆ"[5]ಯಿರುವುದರಿಂದ ಕವಿಭಾಷೆಯಲ್ಲಿ ಬಳಸುವ ಸಂಕೇತ-ಪ್ರತೀಕ-ಪ್ರತಿಮೆಗಳ ಸಂಯೋಜನೆಯಿಂದ ಒಂದು ರೀತಿಯ ಸಂಕೀರ್ಣತೆ ಕಂಡು ಬರುತ್ತದೆ. ನವ್ಯಕವಿ ವಾಸ್ತವವಾಗಿ ಬದುಕಿನ ಸಂಕೀರ್ಣತೆಯನ್ನು—ಏಕೆಂದರೆ, ಇಂದಿನ ಬದುಕು ಹಿಂದಿನದಕ್ಕಿಂತ ಸಂಕೀರ್ಣವಾಗಿರುವುದರಿಂದ—ಪ್ರಕಟಿಸುತ್ತಾನೆ. ಅಲ್ಲದೆ ಈ ಕಾವ್ಯ ಬದುಕಿನ ಬಗ್ಗೆ ಯಾವ ತಾತ್ವಿಕ ಉಪದೇಶಗಳನ್ನಾಗಲಿ, ನಿರ್ದೇಶನಗಳನ್ನಾಗಲಿ ನೀಡುವ ಹವ್ಯಾಸದ್ದಲ್ಲ; ಬದುಕಿನ ಬಗ್ಗೆ ಸಂವೇದನೆಗಳನ್ನು ತೀವ್ರಗೊಳಿಸಿ ಹೊಸ ಎಚ್ಚರವನ್ನು ಹುಟ್ಟಿಸುವ ಉದ್ದೇಶ ಉಳ್ಳದ್ದು. "ಪೂರ್ಣತೆಯ, ಪ್ರಗತಿಯ, ಭ್ರಮೆಯನ್ನು ಹುಟ್ಟಿಸಿ ಬದುಕನ್ನು ಸರಳಮಾಡಿಸುವ ಕಾವ್ಯಕ್ಕಿಂತ, ಅಪೂರ್ಣತೆಯ ಪ್ರಜ್ಞೆಯನ್ನು ಉಳಿಸಿ, ನೋಯಿಸಿ, ಕುದಿಸಿ, ಬೆಳಕನ್ನು ಕಾಣಲು ಕತ್ತಲಲ್ಲೇ

---

1 ಯು. ಆರ್. ಅನಂತಮೂರ್ತಿ. ಅಡಿಗರ 'ಭೂಮಿಗೀತ'ದ ಮುನ್ನುಡಿಯಲ್ಲಿ. ಪು. ೫.

2 ಅಲ್ಲೇ. ಪು. ೫.

3 ಯು. ಆರ್. ಅನಂತಮೂರ್ತಿ: ಅಡಿಗರ 'ಭೂಮಿಗೀತ'ದ ಮುನ್ನುಡಿಯಲ್ಲಿ ಪು. ೭. [ನೋಡಿ. Three Voices of Poetry : T. S. Eliot].

4 ಗೋಪಾಲಕೃಷ್ಣ ಅಡಿಗ: 'ನವ್ಯಕಾವ್ಯದಲ್ಲಿ ವಿಚಾರ ಪ್ರಣಾಲಿ' ಸಂಕ್ರಮಣ-೧೩ (೧೯೬೬) ಪು. ೩೪.

5 ಅಲ್ಲೇ ಪು. ೩೭.

ತಡಕುತ್ತ ನಡೆಯಬೇಕಾದ ಅನಿವಾರ್ಯತೆಯನ್ನು ಜೀವಕ್ಕೆ ಕಲಿಸುವ ಕಾವ್ಯ ಶ್ರೇಷ್ಠವಾದುದು"[1]—ಎಂಬುದೆ ಇದರ ವಾದ. ಒಂದು ಮಾತಿನಲ್ಲಿ ಹೇಳುವುದಾದರೆ "ಬಳಕೆ ಮಾತು, ಛಂದಸ್ಸಿನಲ್ಲಿಯ ನವೀನ ಪ್ರಯೋಗ, ಪ್ರತಿಮಾ ಪ್ರಧಾನತೆ, ವಾಸ್ತವಿಕ ಚಿತ್ರಸೃಷ್ಟಿ; ಪಾರಿಭಾಷಿಕ ಶೈಲಿ,—ಈ ಎಲ್ಲ ಮಾತಿನಲ್ಲಿಯೂ ಆಧುನಿಕ ಕಾವ್ಯವು ಕ್ರಮೇಣ ಆಸ್ಥೆ ವಹಿಸಿದ್ದನ್ನು ನಾವು ಕಾಣಬಹುದಾಗಿದೆ. ಇವೆಲ್ಲವುಗಳ ಸಮಯೋಚಿತ ಪ್ರಜ್ಞೆಯನ್ನೆ ನಾವು 'ನವ್ಯಪ್ರಜ್ಞೆ' ಎಂದು ಕರೆಯಬಹುದು."[2]

ಇದು ಸಂಗ್ರಹವಾಗಿ ಹೇಳಬಹುದಾದ ನವ್ಯ ಕಾವ್ಯಮೀಮಾಂಸೆ. ಇಲ್ಲಿ ಪ್ರಧಾನ ಗಮನ 'ಸಾಮಾಜಿಕ ಪ್ರಜ್ಞೆ' ಮತ್ತು 'ಆಡುಮಾತಿನ ಬಳಕೆ' ಈ ಎರಡೂ ಒಂದಕ್ಕೊಂದು ಪೂರಕವಾದ ಅಂಶಗಳು. ಕಾವ್ಯದ ವಸ್ತು ಭಾಷೆಗಳನ್ನು ಇಷ್ಟರಮಟ್ಟಿಗೆ ಮಣ್ಣಿನ ಹತ್ತಿರಕ್ಕೆಳೆದು ತಂದು 'ಮಣ್ಣಿನ ವಾಸನೆ' ಹೊಡೆಯಬೇಕೆಂಬ ತೀವ್ರವಾದ ಹಂಬಲ ಪ್ರಕಟವಾದದ್ದು ಇದರ ವಿಶೇಷತೆ. ಬಹು ಮುಖ್ಯವಾದ ವ್ಯತ್ಯಾಸವೆಂದರೆ ಭಾಷೆಯ ಬಗ್ಗೆ ಕವಿಗಿರಬೇಕಾದ ಪ್ರಜ್ಞೆಯನ್ನು ಕುರಿತದ್ದು. ಬಹುಶಃ ಹಿಂದಿನ ಕವಿಗಳಿಗೂ, ಈ ಕವಿಗಳಿಗೂ ಇರುವ ಮುಖ್ಯವಾದ ಅಂತರ ಇಲ್ಲಿಯೇ ಎಂದು ತೋರುತ್ತದೆ—ಭಾಷೆಯ ವಿಚಾರಕ್ಕೆ ಕೊಟ್ಟ ಪ್ರಾಮುಖ್ಯತೆಯಲ್ಲಿ. ಏಕೆಂದರೆ ಕಾವ್ಯ ಮೂಲತಹ ಭಾಷೆ; ಈ ಭಾಷೆ ಅಂತರನುಭವಕ್ಕೆ ಕೊಟ್ಟ ಆಕಾರ. ಆದ್ದರಿಂದ ಅನುಭವದ ಪ್ರಾಮಾಣಿಕತೆ, ವಿಶಿಷ್ಟತೆ ವ್ಯಕ್ತವಾಗುವುದು ಕವಿ ಎಷ್ಟರಮಟ್ಟಿಗೆ ಭಾಷೆಯೊಂದಿಗೆ ಹೋರಾಡಿ ತನ್ನದೇ ಆದ ಅಭಿವ್ಯಕ್ತಿಯನ್ನು ನಿರ್ಮಿಸಿಕೊಂಡಿದ್ದಾನೆ ಎನ್ನುವುದರ ಮೇಲೆ. ಪ್ರಾಚೀನಾಲಂಕಾರಿಕನಾದ ವಾಮನನು ಹೇಳಿದ "ರೀತಿರಾತ್ಮಾ ಕಾವ್ಯಸ್ಯ" ಎಂಬ ಕಾವ್ಯತತ್ವದ ಒಂದು ಪುನರವತಾರ ಅಥವಾ ಪುನರ್‌ವ್ಯಾಖ್ಯಾನ ಇಂದಿನ ಬದಲಾದ ಪರಿಸರದ ಹಿನ್ನೆಲೆಯಲ್ಲಿ ಆದ ಹಾಗೆ ತೋರುತ್ತದೆ. ಒಟ್ಟಿನಲ್ಲಿ ನವ್ಯಕಾವ್ಯ ಹಿಂದಿನ ಕಾವ್ಯತತ್ವಗಳಾದ ಸೌಂದರ್ಯ, ಆದರ್ಶ, ವ್ಯಕ್ತಿ ನಿಷ್ಠತೆ, ಗೇಯತೆ, ಇವುಗಳ ವಿರುದ್ಧ ಉದ್ದೇಶಪೂರ್ವಕವಾಗಿ ಬೇರೆ ದಾರಿ ಹಿಡಿದು, ವಾಸ್ತವತೆ, ಸಂಕೀರ್ಣತೆ, ವಸ್ತುನಿಷ್ಠತೆ, ಪ್ರಾಮಾಣಿಕತೆ, ಗದ್ಯಾತ್ಮಕತೆ ಮತ್ತು ಬದುಕಿನ ಬಗ್ಗೆ ತಾಳಿದ ಹೊಸ ಎಚ್ಚರ ಇವುಗಳನ್ನು ಮೂಲಸಾಮಗ್ರಿಯನ್ನಾಗಿ ಮಾಡಿಕೊಂಡಿತು. ಇದರಿಂದಾದ ಲಾಭವೆಷ್ಟು, ಹಾನಿಯೆಷ್ಟು ಎಂಬುದು ಕಾವ್ಯವಿಮರ್ಶೆಗೆ ಸಂಬಂಧಿಸಿದ ಪ್ರಶ್ನೆಯೆ ಹೊರತು, ಕಾವ್ಯಮೀಮಾಂಸೆಗಲ್ಲ. ಈ ನವ್ಯ ಕಾವ್ಯಮೀಮಾಂಸೆ ತುಂಬ ಕುತೂಹಲಕರವಾಗಿದೆ, ವಿಚಾರ ಪ್ರಚೋದಕವಾಗಿದೆ.

---

1 ಯು. ಆರ್. ಅನಂತಮೂರ್ತಿ : ಅಡಿಗರ 'ಭೂಮಿಗೀತ'ದ ಮುನ್ನುಡಿಯಲ್ಲಿ ಪು. ೧೦.

2 ಗೋಕಾಕ್ : ನವ್ಯತೆ ಹಾಗು ಕಾವ್ಯಜೀವನ : ಪು. ೪೬.

೭

ಕಾಲದಿಂದ ಕಾಲಕ್ಕೆ ಕಾವ್ಯದಲ್ಲಿ ಆಗುವ ಬದಲಾವಣೆಗಳು ಕಾವ್ಯಮೀಮಾಂಸೆಯ ಮೇಲೂ ಪರಿಣಾಮ ಮಾಡುತ್ತವೆ. ಯಾಕೆಂದರೆ ಕಾವ್ಯದಲ್ಲಾಗುವ ಬದಲಾವಣೆಗಳು ಕವಿ ಮನೋಧರ್ಮದಲ್ಲಾಗುವ ಬದಲಾವಣೆಗಳು ; ಕವಿ ಮನೋಧರ್ಮದಲ್ಲಾಗುವ ಬದಲಾವಣೆಗಳು ಆ ಕಾಲಧರ್ಮದಲ್ಲಾಗುವ ಬದಲಾವಣೆಗಳು. ಈ ಕಾಲ ಎನ್ನುವುದು ಅಂದಂದಿನ ಜನಸಮಷ್ಟಿಯಲ್ಲಿ ಮೂಲಭೂತವಾಗಿ ಆದ ನಂಬಿಕೆಗಳ, ಮೌಲ್ಯಗಳ, ಸಂಸ್ಕಾರಗಳನ್ನವಲಂಬಿಸಿದೆ. ಹೀಗೆ ಕಾಲ ಅಥವಾ ಯುಗಧರ್ಮ ಅಂದಂದಿನ ಕಾವ್ಯ ಮೀಮಾಂಸೆಯನ್ನು ರೂಪಿಸುತ್ತದೆ.

ಕಾವ್ಯ ಎಂಬುದು ಕವಿಯ ಕರ್ಮ ; ಕವಿ ಉಳಿದವರಿಗಿಂತ ವಿಶೇಷ ಸಂವೇದನಾ ಶೀಲನಾದವನು ; ಅವನು ತನ್ನ ಪ್ರತಿಭಾಬಲದಿಂದ ತನ್ನ ಸುತ್ತಣ ಲೋಕದ ಸಂವೇದನಾ ರೂಪವಾದ ಅನುಭವಗಳಿಗೆ ಶಬ್ದಾರ್ಥರೂಪದಲ್ಲಿ ಅಭಿವ್ಯಕ್ತಿಯನು ಕೊಡುತ್ತಾನೆ. ಈ ಕಲಾರೂಪವಾದ ಅಭಿವ್ಯಕ್ತಿ ಸಹೃದಯರಲ್ಲಿ ಅಥವಾ ಓದುಗರಲ್ಲಿ ಒಂದು ಬಗೆಯ ರಸಾನುಭವವನ್ನುಂಟುಮಾಡುವುದರ ಮೂಲಕ ಆಸ್ವಾದ್ಯವಾಗುತ್ತದೆ. ಸ್ಥೂಲವಾಗಿ ಹೇಳುವುದಾದರೆ ಇದಿಷ್ಟೆ ಕಾವ್ಯಮೀಮಾಂಸೆ ; ಕವಿ–ಕಾವ್ಯ–ವಿಚಾರ. ಈ ವಿಚಾರದಲ್ಲಿ ಪ್ರಾಚೀನರಿಂದ ಆಧುನಿಕರ ತನಕ ಭಿನ್ನಾಭಿಪ್ರಾಯವಿಲ್ಲ ; ದಿವ್ಯರಿಂದ ಹಿಡಿದು ನವ್ಯರ ತನಕ ಇದು ಅಂಗೀಕೃತವಾಗುವ ಅಭಿಪ್ರಾಯ.

ಆದರೆ ಭಿನ್ನಾಭಿಪ್ರಾಯ ತಲೆದೋರುವುದು, ಕಾವ್ಯದ ಪ್ರಯೋಜನವನ್ನು ಕುರಿತ ಪ್ರಶ್ನೆ ಬಂದಾಗ, ಕಾವ್ಯಕ್ಕೆ ಜೀವನದೊಂದಿಗೆ ಇರಬೇಕಾದ ಸಂಬಂಧಗಳ ಮಾತು ಬಂದಾಗ. ಯಾವ ಕಾಲದ ಕಾವ್ಯನಿರ್ಮಿತಿಯೂ ಮೂಲತಹ ಅಂದಂದಿನ 'ಕಾವ್ಯ ಪ್ರಯೋಜನ'ವನ್ನು ಕುರಿತ ಜನದ ನಂಬಿಕೆ ಕಲ್ಪನೆಗಳ ಮೇಲೆ ನಿಂತಿದೆಯೆಂಬುದು ಸ್ವಾರಸ್ಯವಾಗಿದೆ. ನಿದರ್ಶನಕ್ಕೆ ನಮ್ಮ ಪ್ರಾಚೀನಾಲಂಕಾರಿಕರ ಪ್ರಕಾರ ಮತ್ತು ಕವಿಗಳ ಪ್ರಕಾರ ಕಾವ್ಯ ಎಂಬುದು ಚತುರ್ವಿಧ ಫಲಪ್ರಾಪ್ತಿಗೆ ಸಾಧಕವಾದದ್ದು. ಅದರಲ್ಲಿಯೂ ಮೋಕ್ಷವೇ ಪರಮಫಲ ಎಂದು ತಿಳಿದದ್ದು. ಹೀಗೆ ಆಧ್ಯಾತ್ಮಿಕ ಪ್ರಯೋಜನವನ್ನೆ ಯಾವಾಗ ಕಾವ್ಯಗುರಿಯಾಗಿ ಇರಿಸಿಕೊಂಡಿತೋ, ಧರ್ಮಪ್ರಸಾರಕ್ಕೆ, ತತ್ವಬೋಧೆಗೆ ಕಾವ್ಯ ಒಂದು ಮಾಧ್ಯಮವಾಗಬೇಕಾಯಿತು. ಕಾವ್ಯದಲ್ಲಿ ರಸವೊಂದೇ ಪ್ರಧಾನವಲ್ಲವೆ, ನೀತಿ, ತತ್ವ, ಧರ್ಮಗಳು ಇರಬೇಕೇ ಇರಬಾರದೆ, ಇದ್ದರೆ ಹೇಗಿರಬೇಕು ಎನ್ನುವ ಪ್ರಶ್ನೆಗಳು ಪ್ರಾಚೀನಾಲಂಕಾರಿಕರಲ್ಲಿ ಎದ್ದರೂ, ಅದೂ ಗೌಣವಾಗಿ, ಧರ್ಮವೇ ಕಲಾಸ್ಫೂರ್ತಿಯಾದ ಈ ದೇಶದಲ್ಲಿ, ಧರ್ಮವನ್ನೆ ಕಾವ್ಯದ ಗುರಿಯನ್ನಾಗಿ ಹೇಳುವ ಅಭ್ಯಾಸ ಮುಂದಾಯಿತು. ಇದರಿಂದ ಕವಿ, ಕವಿಯ ವ್ಯಕ್ತಿತ್ವಗಳನ್ನು ಕುರಿತು ಕಾವ್ಯಮೀಮಾಂಸೆ ಹೇಳಿತು—ಕವಿ ಶುಚಿಯಾಗಿರಬೇಕು, ನಿಷ್ಠಾವಂತನಾಗಿರಬೇಕು, ಇತ್ಯಾದಿ ಇತ್ಯಾದಿ. ಹೀಗಾಗಿ ಕವಿ ಒಬ್ಬ ಸಾಧಕ, ದಿವ್ಯವಾಣಿಯ ಉಪಾಸಕ, ಮಾಧ್ಯಮ, ಲಿಪಿಕಾರ. ಕಾವ್ಯವೆಂಬುದೊಂದು ದಿವ್ಯಕೃಪಾರೂಪವಾದುದು ; ಪ್ರತಿಭೆ

ಎಂಬುದೊಂದು ದೈವಕೃಪೆ. ಅದರ ಮಾಧ್ಯಮವಾಗಿ ಕವಿ, ಸ್ಫೂರ್ತಿಯ ಕ್ಷಣಗಳಲ್ಲಿ ಕಾವ್ಯವನ್ನು ರಚಿಸುತ್ತಾನೆ. ಇಂಥ ಕಾವ್ಯನಿರ್ಮಿತಿಗೆ ವಸ್ತು ಉದಾತ್ತವಾಗಿರಬೇಕು; ಉದಾತ್ತನ ಚಾರಿತ್ರ್ಯವೇ ಉಳಿದವರಿಗೆ ಮಾರ್ಗದರ್ಶನವಾದೀತು. ಹೀಗಾದಾಗ ಕಾವ್ಯ ಧರ್ಮಾರ್ಥಕಾಮ ಮೋಕ್ಷಗಳನ್ನು ಸಾಧಿಸುತ್ತದೆ. ಕಾವ್ಯಪಾರಾಯಣದಿಂದ ವೇದ ಪಾರಾಯಣದ ಫಲ, ಗಂಗಾದಿ ತೀರ್ಥಸ್ನಾನ ಫಲ ಇತ್ಯಾದಿಗಳು ಲಭಿಸುತ್ತವೆ.

ಈ ಶತಮಾನದ ಹೊತ್ತಿಗೆ ಬಂದ ನವೋದಯ ಕವಿಗಳ ಕಾಲಕ್ಕೆ ಆಗಲೇ ಕಾವ್ಯ ವಸ್ತುವಿನಲ್ಲಿ, ಕವಿಯ ರೀತಿಯಲ್ಲಿ ಬದಲಾವಣೆಯಾಯಿತು. ಸಾಮಾನ್ಯವಾದ ವಸ್ತು, ಸಾಮಾನ್ಯವಾದ ಭಾಷೆ ಇದು ಕಾವ್ಯದ ಮೂಲಸಾಮಗ್ರಿ. ಒಗಟು, ಬೆಡಗು, ಚಮತ್ಕಾರ, ಪಾಂಡಿತ್ಯ ಕಡಮೆಯಾಯಿತು. ದೈನಂದಿನ ಸರಳಸಾಧಾರಣ ಬದುಕೂ, ಸಂಗತಿಯೂ ಕಾವ್ಯವಾಗಬಲ್ಲುದು; ದೈನಂದಿನ ಸಾಮಾನ್ಯ ಜನದ ಭಾಷೆಯೂ ಕಾವ್ಯಭಾಷೆಯಾಗಬಲ್ಲುದು. ಇದು ನವೋದಯ ಕನ್ನಡ ಕವಿಗಳ-ಅವರಿಗೆ ಪ್ರಚೋದನೆ ಯಾದ ಇಂಗ್ಲಿಷ್ ರೊಮ್ಯಾಂಟಿಕ್ ಕವಿಗಳ-ಕಾವ್ಯಮೀಮಾಂಸೆ. ಕಾವ್ಯಕ್ಕೆ ಏನು ಬೇಕಾದರೂ ವಸ್ತುವಾಗಬಲ್ಲುದು ಎಂದು ಪ್ರಾಚೀನಾಲಂಕಾರಿಕರು ಘೋಷಿಸಿದ್ದರೂ, ಕಾವ್ಯಕ್ಕೆ ವಸ್ತುವಾಗತಕ್ಕವು ಕೆಲವೇ ಎಂಬಂತೆ ನಮ್ಮ ಹಳೆಯ ಕವಿಗಳು ನಡೆದು ಕೊಂಡರು. ಇದಕ್ಕೆ ಅಪವಾದರೂಪವಾದ ಕವಿಗಳೂ ಕೃತಿಗಳೂ ಇಲ್ಲವೆಂದಲ್ಲ; ಇದ್ದರೂ ವಿರಳ. ಆದರೆ ನವೋದಯ ಕವಿಗಳು ಕಾವ್ಯವಸ್ತುವಿನ ಬಗ್ಗೆ ಮತ್ತು ಅಭಿವ್ಯಕ್ತಿಯ ರೀತಿಯ ಬಗ್ಗೆ ತಾಳಿದ ಎಚ್ಚರ, ಮಾಡಿತೋರಿಸಿದ ರಚನೆ ತೀರಾ ಭಿನ್ನವಾಗಿದೆ. ವಸ್ತು-ರೀತಿಯಲ್ಲಿ ವೈವಿಧ್ಯವನ್ನು ತಂದರೂ ಈ ಕಾಲದ ಕವಿಗಳು ಒಂದು ರೀತಿಯ ಆದರ್ಶವಾದಿಗಳೇ. ಕಾವ್ಯ ಎಂಬುದೊಂದು ಅಪೌರುಷೇಯವಾದ ಕ್ರಿಯೆ ಎಂಬ ಹಿಂದಿನ ನಂಬಿಕೆಯನ್ನು ಇವರು ಪೋಷಿಸಿಕೊಂಡರು. ಪ್ರಕೃತಿಯಲ್ಲಿ ಪರಾಶಕ್ತಿಯನ್ನು ಸೌಂದರ್ಯದ ಮೂಲಕ ದರ್ಶಿಸುವ, ಕಾವ್ಯವೆಂಬುದು ಸೌಂದರ್ಯೋ ಪಾಸನೆ ಎನ್ನುವ, ಒಂದು ನವೀನ ಧಾರ್ಮಿಕತೆ ಇವರಲ್ಲಿ ಬಂದಿತು. ಹಿಂದಿನ ಕವಿಗಳ ಧಾರ್ಮಿಕತೆ ಬಹುಮಟ್ಟಿಗೆ ಅವರವರು ಹುಟ್ಟಿಬಂದ ಮತ-ಧರ್ಮ ಸಂಬಂಧಿಯಾದ ದ್ದಾದರೆ, ನವೋದಯ ಕವಿಗಳಿಗೆ ಸೌಂದರ್ಯ ಧರ್ಮಪ್ರಧಾನವಾಯಿತು. ಪ್ರಕೃತಿ ಸೌಂದರ್ಯಾರಾಧನೆ, ಯಾವ ಧಾರ್ಮಿಕ ಪೂಜಾವಿಧಿಗಿಂತಲೂ ಕಡಮೆಯಾದುದಲ್ಲ ಎಂಬ ಶ್ರದ್ಧೆ ಪ್ರಧಾನವಾಯಿತು. ಹಿಂದಿನ ಹಾಗೆ, ಕಾವ್ಯಗಳಿಂದಲೆ ಕವಿಯ ಜಾತಿ ಮತ ದೇಶಗಳನ್ನು ಗುರುತಿಸುವುದು ಈ ಕವಿಗಳಲ್ಲಿ ಸಾಧ್ಯವಿಲ್ಲವೆಂಬಷ್ಟರಮಟ್ಟಿಗೆ ಈ ಕವಿಗಳ ಮನೋಧರ್ಮ ಸಾರ್ವತ್ರಿಕವಾದದ್ದು, ಇಲ್ಲಿನ ವಿಶೇಷ. ಇದರ ಜೊತೆಗೆ ಭಾರತೀಯ ಪರಂಪರೆಯ ಹಿನ್ನೆಲೆ, ಅರವಿಂದರು, ವಿವೇಕಾನಂದರು, ಗಾಂಧಿ, ಮೊದಲಾದ ವಿಭೂತಿ ಪುರುಷರ ತಾತ್ವಿಕ ಪುಷ್ಟಿಯಲ್ಲಿ ಮತ್ತು ಪಾಶ್ಚಾತ್ಯ ರೊಮ್ಯಾಂಟಿಕ್ ಕವಿಗಳಾದ ಷೆಲ್ಲಿ, ಕೀಟ್ಸ್, ವರ್ಡ್ಸ್‌ವರ್ತ್ ಮೊದಲಾದ ಕವಿಗಳ ಕಾವ್ಯಧರ್ಮದ ರುಚಿಯಲ್ಲಿ ಈ ನವೋದಯ ಕವಿಗಳ ಕಾವ್ಯಮೀಮಾಂಸೆ ಬಹುಮಟ್ಟಿಗೆ ತಾತ್ವಿಕವಾಯಿತು. ಕವಿಯ

ಸೌಂದರ್ಯಾನುಭವ ಒಂದು ರಸತಪಸ್ಸು; ಕವಿ ಒಬ್ಬ ವಿಭೂತಿ; ಕಾವ್ಯ ಕವಿಯ ದರ್ಶನದ ಅಭಿವ್ಯಕ್ತಿ; ಕವಿಯ ದರ್ಶನದಲ್ಲಿ ಅಲೋಕಸತ್ಯಗಳೂ ಪ್ರಕಟವಾಗುತ್ತವೆ; ಕಾವ್ಯ ಎಂಬುದು ಸಚ್ಚಿದಾನಂದ ಮಂತ್ರ; ಕಾವ್ಯ ಆತ್ಮಶ್ರೀಯನ್ನೂ ಸಾಮಾಜಿಕಕಲ್ಯಾಣವನ್ನೂ, ಎಲ್ಲರಲ್ಲಿಯೂ ರಸದರ್ಶನವನ್ನುಂಟುಮಾಡುವುದರ ಮೂಲಕ ಜಡತೆಯನ್ನು ಹೋಗಲಾಡಿಸಿ ಚೈತನ್ಯವನ್ನೂ ಆತ್ಮಸಂಸ್ಕಾರವನ್ನೂ ಪ್ರಚೋದಿಸುತ್ತದೆ—ಎಂಬುದು ಈ ಕಾವ್ಯಮೀಮಾಂಸೆಯ ಮುಖ್ಯಾಂಶಗಳು. ಹೀಗಾಗಿ ಕವಿ ಮತ್ತು ಕಾವ್ಯ ಪ್ರಯೋಜನದ ವಿಚಾರವಾಗಿ ನವೋದಯ ಕವಿಗಳ ವಿಚಾರಗಳು ಪರಂಪರಾಗತವಾಗಿವೆ; ಧ್ಯೇಯಾತ್ಮಕವಾಗಿವೆ. ಜೊತೆಗೆ ಮನಸ್‌ಶಾಸ್ತ್ರದ ಪರಿಚಯದಿಂದ ಎಷ್ಟೇ ಹೊಸ ಕೀಲಿಕೈಗಳು ಇವರಿಗೆ ದೊರೆತರೂ, ಅದರಿಂದಲೂ ಸಹ ಇವರು ಅಪೌರುಷೇಯಾಂಶಗಳ ನಂಬಿಕೆಯನ್ನೆ ಪೋಷಿಸಿಕೊಂಡರು. ಕಾವ್ಯ ಎಂಬುದು ವಿರಾಡ್ ಮನಸ್ಸಿನ ಅಭಿವ್ಯಕ್ತಿ; ಅದರಲ್ಲಿ ವ್ಯಕ್ತವಾಗುವುದು 'ಸಮಷ್ಟಿ ಚಿತ್' ಇತ್ಯಾದಿ ಮಾತುಗಳಲ್ಲಿ ಅವರು ಮನಸ್‌ಶಾಸ್ತ್ರದ ಮಾತುಗಳಿಗೂ ಯೌಗಿಕ ಪರಿಭಾಷೆಯ ಬಣ್ಣ ಬರುವಂತೆ ಮಾಡಿದರು. ಇಲ್ಲಿ ಯೋಗವಿಜ್ಞಾನಕ್ಕೆ ಮನೋವಿಜ್ಞಾನ ನೆರವಾಯಿತು. ಕವಿಯ ವಿಚಾರದಲ್ಲಿಯೂ, ಅದೇ ಶುಚಿಯ, ಧ್ಯಾನದ, ತಪಸ್ಸಿನ ಮಾತು ಪ್ರಧಾನವಾಯಿತು. ಆತ್ಮೋದ್ಧಾರವೆ ಕಾವ್ಯ ಪ್ರಯೋಜನದ ಪಲ್ಲವಿಯಾಯಿತು. ಆದರೆ ಈ ನವೋದಯ ಕಾಲದ ಕವಿಗಳು, ಕಾವ್ಯ ವಿಮರ್ಶಕರು ಪ್ರಾಚೀನಾಲಂಕಾರಿಕರ ಅಭಿಪ್ರಾಯಗಳನ್ನೂ ತತ್ವಗಳನ್ನೂ ಪುನರ್ ಪರಿಶೀಲಿಸಿ, ಅವು ಇಂದಿಗೂ ಸಾರ್ವಕಾಲಿಕವಾದವುಗಳೆಂದು ಅಂಗೀಕರಿಸಿದರು. ಈ ಪರಂಪರೆಯ ಪ್ರಜ್ಞೆ ಕವಿಗೆ, ಕಾವ್ಯಕ್ಕೆ, ಕಾವ್ಯಮೀಮಾಂಸೆಗೆ ಅಗತ್ಯವಾದದ್ದು, ಸತ್ವದಾಯಕವಾದದ್ದು ಎಂಬ ವಿಷಯವನ್ನು ಎತ್ತಿಹಿಡಿದರು. ಪ್ರಾಚೀನದ್ದು ಮಾತ್ರವಲ್ಲ, ಪಾಶ್ಚಾತ್ಯರಿಂದ ಬಂದ ಹೊಸ ಹೊಸ ಆಲೋಚನೆಗಳನ್ನೂ ಭಾವನೆಗಳನ್ನೂ ಅನುದ್ವಿಗ್ನರಾಗಿ ಎತ್ತಿಕೊಂಡು ಪರಿಶೀಲಿಸಿ ತೌಲನಕ್ರಮದಲ್ಲಿ ಅಭ್ಯಾಸಮಾಡಿ, ಭಾರತೀಯ ಕಾವ್ಯಮೀಮಾಂಸೆ ಪಾಶ್ಚಾತ್ಯ ಕಾವ್ಯಮೀಮಾಂಸೆಗಿಂತ ಯಾವ ಯಾವ ದಿಕ್ಕುಗಳಲ್ಲಿ ಮುಂದುವರಿದಿದೆ ಎಂಬುದನ್ನೂ, ಪಾಶ್ಚಾತ್ಯ ಕಾವ್ಯಮೀಮಾಂಸೆಯ ಸಹಾಯದಿಂದ, ಮತ್ತು ನಮ್ಮದರೊಂದಿಗೆ ಅದನ್ನು ಸಮನ್ವಯಿಸಿಕೊಂಡು ನೋಡುವುದರಿಂದ ಎಂಥ ಲಾಭವಿದೆ ಎಂಬುದರ ನಿರ್ದೇಶನವನ್ನೂ ನೀಡಿ ಕಾವ್ಯಮೀಮಾಂಸೆಯ ಕ್ಷೇತ್ರವನ್ನು ಫಲವತ್ತಾಗಿ ಮಾಡಿದರು.

ಕನ್ನಡ ಕಾವ್ಯದಲ್ಲಿ ಮೂರನೆಯದೊಂದು ಘಟ್ಟ ನವ್ಯಕವಿಗಳ ಕಾಲದ್ದು. ಈ ನವ್ಯಕಾವ್ಯ ಪಾಶ್ಚಾತ್ಯ ಪ್ರೇರಣೆಯಿಂದ, ಕಾವ್ಯದ ರೂಪ-ಸ್ವರೂಪದ ಬಗ್ಗೆ ಹೇಗೋ ಹಾಗೆ ಕಾವ್ಯಮೀಮಾಂಸೆಯನ್ನೂ ರೂಪಿಸಿಕೊಂಡಿತು. ನವೋದಯ ಕವಿತೆಯಂತೆ, ಇದರ ಬದಲಾವಣೆಯೂ ಕಾವ್ಯದ ವಸ್ತು—ರೀತಿಗಳನ್ನು ಕುರಿತದ್ದೇ. ಆದರೆ ನವೋದಯ ಕವಿಗಳು ಸರಳ ಸಾಧಾರಣತೆಯ ಕಡೆಗೆ ತಮ್ಮ ಗಮನವನ್ನು ತಿರುಗಿಸಿದ್ದರೂ ಮುಖ್ಯವಾಗಿ ಅವರದು ಸೌಂದರ್ಯಪರವಾದ ದೃಷ್ಟಿಯಾಗಿತ್ತು. ನವ್ಯಕವಿಗಳು

ಆ ಸೌಂದರ್ಯ ಪ್ರಿಯತೆಯನ್ನು ನಿರಾಕರಿಸಿ ಜೀವನದ ಅತೃಪ್ತಿಯ, ನಿರಾಶೆಯ, ಬೇಸರದ, ಬೀಭತ್ಸದ ಕಡೆಗೆ ಕಣ್ಣುಹಾಯಿಸಿದರು. ಕಾವ್ಯ ಕೇವಲ ಸುಂದರಾ ಸುಂದರಗಳನ್ನು ಕುರಿತದ್ದಲ್ಲ; ಈ ಎರಡರ ಹಿಂದಿರುವ ಅತೃಪ್ತಿ, ಭಯ, ನಿರಾಶೆಗಳನ್ನು ತೆರೆದು ತೋರತಕ್ಕದ್ದು ಎನ್ನುವುದು ಈ ಕಾವ್ಯಮೀಮಾಂಸೆಯ ಪಲ್ಲವಿಯಾಗಿದೆ. ಕಾವ್ಯ ವಾಸ್ತವ ಹಾಗೂ ಸಂಕೀರ್ಣವಾದ ಬದುಕಿನ ಅಭಿವ್ಯಕ್ತಿ. ಅನುಭವದ ಸರಳ ಮುಖವನ್ನು ಅಥವಾ ಸರಳಗೊಳಿಸಿದ ಅನುಭವವನ್ನು ವ್ಯಕ್ತಪಡಿಸಿದರೆ ಕಾವ್ಯ ಸಾರ್ಥಕ ವಾಗುವುದಿಲ್ಲ. ಅಥವಾ ಅನುಭವಕ್ಕೆ ಒಗ್ಗದ, ಬಾರದ ತತ್ವಗಳನ್ನೋ ವೇದಾಂತವನ್ನೋ ಕುರಿತು, ಅದೇ ತನ್ನ ಅನುಭವವೆಂದು ಭ್ರಮೆಗೊಂಡು ಉಜ್ವಲವಾದ ಮಾತುಗಳಲ್ಲಿ ನೆಯ್ಯುವುದು ಕಾವ್ಯವಲ್ಲ. ಜೀವನದ ತೀವ್ರವಾದ ತುಡಿತವನ್ನು ಅದು ಇದ್ದಂತೆಯೇ ಒಪ್ಪಿಕೊಂಡು ಅಪ್ಪಿಕೊಂಡು ಅದರ ಪದರ ಪದರಗಳನ್ನೂ ಅನುಭವಿಸಿ, ಆ ಸಂಕೀರ್ಣಾನು ಭವವನ್ನು ಆಡುಮಾತಿಗೆ ಸಮೀಪವಾದ ಭಾಷೆಯಲ್ಲಿ ಹಿಡಿದು, ಕವಿ ಮಾತಾಡಿದ ಹಾಗಿರುವ ರೀತಿಯಲ್ಲಿ ಅಭಿವ್ಯಕ್ತಪಡಿಸಿದರೆ ಅದು ನಿಜವಾದ ಕಾವ್ಯವಾಗುತ್ತದೆ. ಇದು ನವ್ಯ ಕಾವ್ಯಮೀಮಾಂಸೆ. ಇದರ ಪ್ರಕಾರ ಕಾವ್ಯ ಬದುಕಿನ ಬಗ್ಗೆ ಹೊಸ ಸಂವೇದನೆಗಳನ್ನೂ ದೃಷ್ಟಿಕೋನಗಳನ್ನೂ ತೆರೆದು ಓದುಗನ ತಿಳಿವಿನ ಪರಿಧಿಯನ್ನು ವಿಸ್ತರಿಸಬೇಕು. ಇನ್ನೊಂದು ವಿಚಾರವೆಂದರೆ, ಈ ಕಾವ್ಯಮೀಮಾಂಸೆ ಕವಿಯ ವ್ಯಕ್ತಿತ್ವದ ಬಗೆಗೂ ಕಾವ್ಯ ನಿರ್ಮಿತಿಯ ಬಗೆಗೂ ಕೆಲವು ಅಂಶಗಳನ್ನು ಹೇಳುತ್ತದೆ. ಕಾವ್ಯೋದ್ದೇಶ ವಾಸ್ತವ ಪ್ರಜ್ಞೆಯ ಪ್ರಚೋದನೆಯಾದ್ದರಿಂದ ಹಿಂದಿನಂತೆ ಕವಿಗೆ, ಕಾವ್ಯಕರ್ಮಕ್ಕೆ ಅಂಟಿಕೊಂಡ ಆದರ್ಶದ, ಆಧ್ಯಾತ್ಮಿಕವಾದ ನಂಬಿಕೆಗಳು ಇಲ್ಲಿ ಉದುರಿ ಹೋದುವು. ಕವಿ ಒಬ್ಬ ಮನುಷ್ಯ, ಅವನು ದೈವೀಕೃಪೆಗೆ ಒಳಗಾದವನೆಂದು ತಿಳಿಯುವ ಅಗತ್ಯವಿಲ್ಲ; ಅವನು ಸೂಕ್ಷ್ಮ ಸಂವೇದನಾಶೀಲನೆಂಬುದಷ್ಟೇ ನಿಜ. ಅವನು 'ಮಡಿ'ಯಾಗಿರಬೇಕು, ಶುಚಿಯಾಗಿರಬೇಕು ಎಂಬ ಮಾತುಗಳಿಗೆ ಇಲ್ಲಿ ಸ್ಥಳವಿಲ್ಲ. ಅವನ ವ್ಯಕ್ತಿಜೀವನಕ್ಕೂ, ಕಾವ್ಯಜೀವನಕ್ಕೂ ಸಂಬಂಧ ಕಲ್ಪಿಸಬಾರದು. ವ್ಯಕ್ತಿಯ ಶೀಲಾಶ್ಲೀಲ, ನೈತಿಕ ಅನೈತಿಕ ಭಾವನೆಗಳಿಗೂ 'ಕವಿ'ಗೂ ಸಂಬಂಧವಿಲ್ಲ. ಕವಿ ವ್ಯಕ್ತಿಯ ಮಡಿ—ಮೈಲಿಗೆಗಳು ಅವನ ಕಾವ್ಯಶಕ್ತಿಯನ್ನು ನಿರ್ಣಯಿಸಲಾರವು. ಕಾವ್ಯ ಎನ್ನುವುದು ಕವಿ ಬದುಕನ್ನು ಜೀವಂತವಾಗಿ, ತೀವ್ರವಾಗಿ ಅನುಭವಿಸಿದ್ದರ ಅಭಿವ್ಯಕ್ತಿ. ಅಲ್ಲಿ ಅಪೌರುಷೇಯವಾದದ್ದೇನೂ ಇಲ್ಲ; ಕವಿ ಸ್ಫೂರ್ತಿಯಿಂದಲೂ ಬರೆಯಬಹುದು. ಆದರೆ ಕವಿ ಕೇವಲ ಸ್ಫೂರ್ತಿಯಿಂದಲೇ ಕಾವ್ಯ ಬರೆಯುವುದಿಲ್ಲ; ಅಲ್ಲದೆ ಸ್ಫೂರ್ತಿ ಎಂಬುದು ನವ್ಯಕವಿಗೆ ಹಿಂದಿನವರು ಭಾವಿಸಿದಂತೆ ದೈವಿಕವಾದದ್ದಲ್ಲ; ಅದೊಂದು ಮಾನಸಿಕ ಚಟುವಟಿಕೆಯಲ್ಲದೆ ಹೆಚ್ಚೇನಲ್ಲ. ಕಾವ್ಯ ಸುಪ್ತ ಪ್ರಜ್ಞೆಯಲ್ಲಿ ಹೊಯ್ದಾಡುತ್ತಿರುವ ಭಾವನೆಗಳಲ್ಲಿ ಆಕಾರ ನೀಡುವ 'ಸಾವಯವ ಶಿಲ್ಪದ ಸಾಮಗ್ರೀ ಕರಣ' ಶಕ್ತಿ. ಅದೊಂದು ವಿಶೇಷ ಶ್ರಮದಿಂದ, ನಿರಂತರ ಚಿಂತನೆಯಿಂದಾದ ಶಿಲ್ಪ. ಯಾವುದೋ ಒಂದು ಸಲೀಸಾದ, ತನಗಿಂತ ಹಿಂದಿನವರು ಸಿದ್ಧಪಡಿಸಿದ ಅಥವಾ

ತಾನೇ ಸಿದ್ಧಪಡಿಸಿಟ್ಟುಕೊಂಡ ಪಡಿಯಚ್ಚಿನಲ್ಲಿ ಹರಿದುಬರತಕ್ಕದ್ದಲ್ಲ; ಒಂದೊಂದು ಕವಿತೆಯೂ, ಕವಿ ಭಾಷೆಯೊಂದಿಗೆ ನಡೆಯಿಸಿದ ಹೋರಾಟದ ಪರಿಣಾಮ.

ಈ ನವ್ಯ ಕಾವ್ಯಮೀಮಾಂಸೆ ಸ್ವಾರಸ್ಯವಾಗಿದೆ; ಪೌರುಷೇಯವಾಗಿದೆ. ಆದರೆ ಹಿಂದಿನವರ ಕಾವ್ಯತತ್ವಗಳ ಬಗೆಗೆ ಒಂದು ಬಗೆಯ ಸ್ಪರ್ಧೆಯಿಂದಲೆಂಬಂತೆ, ಕಾವ್ಯ ಹಾಗೂ ಕಾವ್ಯಮೀಮಾಂಸೆಯ ದಿಕ್ಕು ಬದಲಾಗಿದೆ; ಹಿಂದಿನವರ ಎಷ್ಟೋ ಭಾವನೆಗಳಿಗೆ ಅಪಾರ್ಥ ಕಲ್ಪಿಸುವ, ಲಘುವಾಗಿ ಟೀಕಿಸುವ ಮಾತುಗಳೂ ಇದರಲ್ಲಿ ಬಂದಿವೆ. ಆದರೂ ನಿಚ್ಚಳವಾದ ಬುದ್ಧಿಯ ನೆಲೆಗಟ್ಟಿನ ಮೇಲೆ ವಾಸ್ತವ ಪ್ರಜ್ಞೆಯಿಂದ ಕಟ್ಟಿ ನಿಲ್ಲಿಸಿದ ಈ ಕಾವ್ಯಮೀಮಾಂಸೆ ತನ್ನ ನಾವೀನ್ಯತೆಯಿಂದಲೂ, ಪೌರುಷದಿಂದಲೂ ತುಂಬ ವಿಚಾರಪ್ರದವಾಗಿದೆ.

೮

ಕಳೆದ ಕಾಲುಶತಮಾನದಲ್ಲಿ ಬೆಳೆದಿರುವ ಕನ್ನಡದ ಕಾವ್ಯಮೀಮಾಂಸೆಯನ್ನು ಗಮನಿಸಿದರೆ, ಈ ವಿಚಾರ ಸಾಹಿತ್ಯ ತಕ್ಕಮಟ್ಟಿಗೆ ಬೆಳೆದಿದೆ ಎನ್ನುವುದು ಕಾಣುತ್ತದೆ. ಕಾವ್ಯಮೀಮಾಂಸೆಯ ಸಾಹಿತ್ಯದ ಅನುವಾದ ಆಶಾದಾಯಕವಾಗಿದ್ದರೂ ತೃಪ್ತಿಕರ ವಾಗಿಲ್ಲ. ಪಾಶ್ಚಾತ್ಯ ಕಾವ್ಯಮೀಮಾಂಸೆಯ ಕೃತಿಗಳ ಅನುವಾದ ಏನೇನೂ ಸಾಲದು. ಆ ದಿಕ್ಕಿನಲ್ಲಿ ಪ್ರಮುಖ ವಿಚಾರವಂತರ ಸಾಹಿತ್ಯ ಮೀಮಾಂಸೆಯನ್ನು ಕುರಿತ ಗ್ರಂಥಗಳು ಇನ್ನೂ ಹೆಚ್ಚಾಗಿ ಅನುವಾದವಾಗಬೇಕಾಗಿದೆ. ಕಡೆಯಪಕ್ಷ ಸಾಹಿತ್ಯ ಮೀಮಾಂಸೆಯ ಅತ್ಯುತ್ತಮವಾದ ಲೇಖನಗಳನ್ನಾದರೂ ಅನುವಾದಮಾಡಿ ಸಂಗ್ರಹ ರೂಪದಲ್ಲಿ ತರಬೇಕು. ಇದರ ಜೊತೆಗೆ ಭಾರತೀಯ ಕಾವ್ಯಮೀಮಾಂಸೆಯನ್ನು ಕುರಿತು, ಅನುವಾದವಾಗದೆ ಇರುವ ಮುಖ್ಯ ಲಕ್ಷಣ ಗ್ರಂಥಗಳೆಲ್ಲದರ ಅನುವಾದ ನಡೆಯಬೇಕು. ಭರತಮುನಿಯ ನಾಟ್ಯಶಾಸ್ತ್ರ ಇನ್ನೂ ಕನ್ನಡಕ್ಕೆ ಬಂದಿಲ್ಲ. ಭಾರತೀಯ ಕಾವ್ಯಮೀಮಾಂಸೆಯನ್ನು ಕುರಿತು ಭಾರತೀಯ ಮಹಾ ವಿದ್ವಾಂಸರು ಇಂಗ್ಲಿಷಿನಲ್ಲಿ ರಚಿಸಿರುವ ಗ್ರಂಥಗಳ ಕನ್ನಡ ಅನುವಾದವೂ ನಡೆಯಬೇಕು; ಹಾಗೆಯೆ ಕುವೆಂಪು ಅವರ "ರಸೋವೈಸಃ", ಪು.ತಿ.ನ ಅವರ "ಕಾವ್ಯ ಕುತೂಹಲ" ತೀ. ನಂ. ಶ್ರೀಯವರ 'ಭಾರತೀಯ ಕಾವ್ಯಮೀಮಾಂಸೆ' ಇಂಥ ಗ್ರಂಥಗಳು ಇತರ ಭಾರತೀಯ ಭಾಷೆಗಳಿಗೂ, ಇಂಗ್ಲಿಷಿಗೂ ಸಮರ್ಥರಾದವರಿಂದ ಅನುವಾದವಾಗಬೇಕು. ಭಾರತೀಯ ಹಾಗೂ ಪಾಶ್ಚಾತ್ಯ ಕಾವ್ಯಮೀಮಾಂಸೆಯನ್ನು ತೌಲನ ಕ್ರಮದಲ್ಲಿ ವಿವೇಚಿಸುವ ಪ್ರಮಾಣ ಗ್ರಂಥ ಇನ್ನೂ ಬರಬೇಕಾಗಿದೆ. ಮನಸ್ಶಾಸ್ತ್ರದ ಸಹಾಯದಿಂದ ಭಾರತೀಯ ಕಾವ್ಯಮೀಮಾಂಸೆಯ ಎಷ್ಟೋ ಸಂಗತಿಗಳ ವಿವರವಾದ ಪರಿಶೀಲನೆ ನಡೆಯಬೇಕಾಗಿದೆ. ಇದಕ್ಕಿಂತ ಮಿಗಿಲಾಗಿ ಸಾಹಿತ್ಯ ಮತ್ತು ವಿಮರ್ಶಾ ಕ್ಷೇತ್ರದಲ್ಲಿ ತೊಡಗಿರುವ ಸೃಜನಶೀಲ ಸಾಹಿತಿಗಳಿಗೆ ಪಾಶ್ಚಾತ್ಯ ಕಾವ್ಯಮೀಮಾಂಸೆಯ ಜೊತೆಗೆ ಭಾರತೀಯ ಕಾವ್ಯಮೀಮಾಂಸೆಯ ಪರಿಚಯವೂ ಸಮರ್ಪಕವಾಗಿ ಆಗಿ, ಪಶ್ಚಿಮದಿಂದ

ಎರವಲುತಂದ ಮಾತಿನಲ್ಲೋ, ಅನುವಾದಮಾಡಿಕೊಂಡ ಮಾತಿನಲ್ಲೋ ವಿಮರ್ಶೆಯ ಪರಿಭಾಷೆಗಳನ್ನು ನಿರ್ಮಿಸುವ ಹವ್ಯಾಸ ತಪ್ಪಿ, ಎಷ್ಟೋ ಭಾರತೀಯ ಕಾವ್ಯ ಮೀಮಾಂಸೆಯ ಮಾತುಗಳನ್ನೆ ಕಾವ್ಯಮೀಮಾಂಸೆ ಮತ್ತು ಕಾವ್ಯ ವಿಮರ್ಶೆಯಲ್ಲಿ ಬಳಸುವ ಪರಿಣತಿ ಬರಬೇಕು. ಹಾಗಾದಾಗ ಇವತ್ತು ಒಂದೊಂದು ಭಾವನೆ, ಕಲ್ಪನೆ ಗಳಿಗೆ ಬಳಸಲಾಗುತ್ತಿರುವ ಸಾಹಿತ್ಯಮೀಮಾಂಸೆಯ ಪದಗಳಲ್ಲಿ ಒಂದು ಏಕರೂಪತೆ ಯಿರುವಂತಾಗಿ, ಅವರವರು ತಮಗೆ ಮನಸ್ಸಿಗೆ ಬಂದ ಪದವನ್ನುಪಯೋಗಿಸುವುದರಿಂದಾ ಗುವ ಗೊಂದಲ ತಪ್ಪೀತು. ಇದುವರೆಗೂ ಕನ್ನಡದ ಕಾವ್ಯಮೀಮಾಂಸೆಯ ವಲಯದಲ್ಲಿ ಆಗಬೇಕಾಗಿರುವ ಕೆಲಸದ ಮುಂದೆ, ಇದುವರೆಗೂ ಆಗಿರುವ ಕೆಲಸ ಏನೇನೂ ಅಲ್ಲ, ಎಂಬಂತೆ ತೋರುತ್ತದೆ. "ಆ ಕೆಲಸದಲ್ಲಿ ಭಾರತೀಯ ಕಾವ್ಯಮೀಮಾಂಸೆ ನಮ್ಮ ರಸ ಚೇತನದ ಗುಡಿಗೆ ಅಡಿಗಲ್ಲಾಗಿ ನಿಲ್ಲಬೇಕಾಗುತ್ತದೆ. ಏಕೆಂದರೆ ಭಾರತೀಯ ಕಾವ್ಯ ಮೀಮಾಂಸೆಯ—ಕವಿ, ಸಹೃದಯ, ಕಾವ್ಯಸ್ವರೂಪ, ಉದ್ದೇಶ, ಪ್ರಯೋಜನ, ಅಲಂಕಾರ, ರೀತಿ, ಧ್ವನಿ, ರಸ ಇತ್ಯಾದಿಗಳ—ಕೂಲಂಕಷವೂ ಹೃದಯಸ್ಪರ್ಶಿಯೂ ಆದ ಪರಿಚಯವಿಲ್ಲದೆ ನಮ್ಮ ಮುಂದಣ ಉತ್ತಮ ಕಾವ್ಯ ವಿಮರ್ಶೆ ಸಂಭವಿಸಲಾರದು. ಸಾಹಿತ್ಯಸೃಷ್ಟಿಯಲ್ಲಿ ಹೇಗೋ ವಿಮರ್ಶೆದೃಷ್ಟಿಯಲ್ಲಿಯೂ ಹಾಗೆಯೆ ಪಾಶ್ಚಾತ್ಯದ ಅಂಧಾನುಕರಣವಾಗಲಿ ಭಾರತೀಯತೆಯ ಅಂಧಾನುಕರಣವಾಗಲಿ ಉತ್ತಮ ಸೃಷ್ಟಿಗೆ ಕಾರಣವಾಗದು....ನಮ್ಮ ಮುಂದಿನ ಕಾವ್ಯಮೀಮಾಂಸೆ ಮತ್ತು ಸಾಹಿತ್ಯವಿಮರ್ಶೆಗಳು ಪಾಶ್ಚಾತ್ಯ ಮತ್ತು ಭಾರತೀಯ ಕಾವ್ಯಮೀಮಾಂಸೆಗಳಿಂದ ಮಾತ್ರವಲ್ಲದೆ ತತ್ವಶಾಸ್ತ್ರ, ಯೋಗವಿಜ್ಞಾನ, ಸೌಂದರ್ಯಮೀಮಾಂಸೆ ಮತ್ತು ಮನಸ್‌ಶಾಸ್ತ್ರ—ಇವುಗಳಿಂದಲೂ ಬೆಳಕು ಪಡೆದು ಧೀರವಾಗಿ ಸ್ವತಂತ್ರವಾಗಿ ಪೂರ್ಣದೃಷ್ಟಿಯಕಡೆಗೆ ಮುನ್ನಡೆಯ ಬೇಕಾಗುತ್ತದೆ. ಬಹುಶಃ ಆ ಹೊಸ ಬೆಳಕಿನಲ್ಲಿ ಹಳೆಯ ತತ್ವಗಳು ತಮ್ಮ ನಿಗೂಢ ರಹಸ್ಯಗಳನ್ನೆಲ್ಲ ಬಿಚ್ಚಿಕೊಟ್ಟು ನಮ್ಮನ್ನು ಹೊಸ ಹೊಸ ರಸಾನುಭವಗಳಿಗೂ ಹೊಸ ಹೊಸ ತುಷ್ಟಿಪುಷ್ಟಿಗಳಿಗೂ ಕೊಂಡೊಯ್ಯಬಹುದು."[1]

---

1 ಕುವೆಂಪು: ತೀ. ನಂ. ಶ್ರೀ.ಯವರ ಭಾರತೀಯ ಕಾವ್ಯಮೀಮಾಂಸೆಯ ಮುನ್ನುಡಿ ಯಲ್ಲಿ. ಪು. IX.

ಕಾವ್ಯಮೀಮಾಂಸೆಯ ವಿಚಾರದ ಆಕರಗಳು :

1 ತೀ.ನಂ.ಶ್ರೀ., ಭಾರತೀಯ ಕಾವ್ಯಮೀಮಾಂಸೆ, ೧೯೫೩–೧೯೬೧
2 ಕುವೆಂಪು, ಸಾಹಿತ್ಯಪ್ರಚಾರ ಮತ್ತು ಇತರ ಭಾಷಣಗಳು, ೧೯೪೪
3 ಕುವೆಂಪು, ತಪೋನಂದನ, ೧೯೫೦–೧೯೫೯
4 ಕುವೆಂಪು, ದ್ರೌಪದಿಯ ಶ್ರೀಮುಡಿ
5 ಕುವೆಂಪು, ವಿಭೂತಿ ಪೂಜೆ, ೧೯೫೩–೧೯೫೭
6 ಕುವೆಂಪು, ರಸೋವೈಸಃ, ೧೯೬೨
7 ಡಿ. ವಿ. ಗುಂಡಪ್ಪ, ಸಾಹಿತ್ಯಶಕ್ತಿ, ೧೯೫೦
8 ಪು. ತಿ. ನರಸಿಂಹಾಚಾರ್, ಕಾವ್ಯಕುತೂಹಲ, ೧೯೬೬
9 ಬೇಂದ್ರೆ, ಕಾವ್ಯೋದ್ಯೋಗ (ಸಮನ್ವಯ–೧), ೧೯೬೨
10 ಗೋಕಾಕ್, ಸಾಹಿತ್ಯದಲ್ಲಿ ಪ್ರಗತಿ, ೧೯೪೪
11 ಗೋಕಾಕ್, ಇಂದಿನ ಕನ್ನಡ ಕಾವ್ಯದ ಗೊತ್ತುಗುರಿಗಳು, ೧೯೪೭
12 ಗೋಕಾಕ್, ನವ್ಯತೆ ಹಾಗೂ ಕಾವ್ಯಜೀವನ, ೧೯೫೫–೧೯೫೯
13 ವಿ. ಸೀತಾರಾಮಯ್ಯ, ಕವಿ ಕಾವ್ಯದೃಷ್ಟಿ, ೧೯೫೫
14 ವಿ. ಸೀತಾರಾಮಯ್ಯ, ಸಾಹಿತ್ಯವಿಮರ್ಶೆಗಳಲ್ಲಿ ಅರ್ಥ ಮತ್ತು ಮೌಲ್ಯ, ೧೯೬೧
15 ರಂ. ಶ್ರೀ. ಮುಗಳಿ, ಸಾಹಿತ್ಯೋಪಾಸನೆ, ೧೯೫೫
16 ರಂ. ಶ್ರೀ. ಮುಗಳಿ, ಕನ್ನಡ ಸಾಹಿತ್ಯದಲ್ಲಿ ಸರಸ್ವತಿಯ ದರ್ಶನ, ೧೯೫೭
17 ರಂ. ಶ್ರೀ. ಮುಗಳಿ, ಮಾತೆಂಬುದು ಜ್ಯೋತಿರ್ಲಿಂಗ, ೧೯೫೮
18 ಕೆ. ಕೃಷ್ಣಮೂರ್ತಿ, ರಸೋಲ್ಲಾಸ, ೧೯೫೮
19 ಕೆ. ಕೃಷ್ಣಮೂರ್ತಿ, ಕನ್ನಡದಲ್ಲಿ ಕಾವ್ಯತತ್ವ, ೧೯೬೪
20 ಬಿ. ಕೆ. ಶಿವರಾಮಯ್ಯ, ಅಲಂಕಾರಶಾಸ್ತ್ರ, ೧೯೬೬
21 ರಾಳ್ಳಪಲ್ಲಿ ಅನಂತಕೃಷ್ಣಶರ್ಮ, ಸಾಹಿತ್ಯ ಮತ್ತು ಜೀವನಕಲೆ, ೧೯೫೪–೧೯೫೮
22 ಉಮಾಪತಿ, ಸಾಹಿತ್ಯಸ್ವರೂಪ, ೧೯೫೭
23 ದೇ. ಜವರೇಗೌಡ, ಸಾಹಿತ್ಯಮಾರ್ಗ, ೧೯೬೪
24 ಎಸ್. ಎಲ್. ಭೈರಪ್ಪ, ಸಾಹಿತ್ಯದಲ್ಲಿ ಪ್ರತೀಕ, ೧೯೬೭
25 ಜಿ. ಎಸ್. ಶಿವರುದ್ರಪ್ಪ, ಸೌಂದರ್ಯ ಸಮೀಕ್ಷೆ, ೧೯೬೫
26 ಜಿ. ಎಸ್. ಶಿವರುದ್ರಪ್ಪ, ವಿಮರ್ಶೆಯ ಪೂರ್ವಪಶ್ಚಿಮ, ೧೯೬೨–೧೯೬೬
27 ಪ್ರಭುಶಂಕರ, ಕನ್ನಡದಲ್ಲಿ ಭಾವಗೀತೆ, ೧೯೬೬
28 ಗೋಪಾಲಕೃಷ್ಣ ಅಡಿಗ, ಮಣ್ಣಿನ ವಾಸನೆ, ೧೯೬೬
29 ಕೆ. ಡಿ. ಕುರ್ತುಕೋಟಿ, ನವ್ಯಕಾವ್ಯಪ್ರಯೋಗ (ಮನ್ವಂತರ–೨, ೧೯೬೩), ೧೯೬೩
30 ಎಸ್. ಬಿ. ಮಿಣಜಗಿ, ಟಿ. ಎಸ್. ಎಲಿಯಟ್ ಕವಿಯ ವಿಮರ್ಶೆಯ ವಿಚಾರಗಳು (ಮನ್ವಂತರ–೩, ೧೯೬೪), ೧೯೬೪
31 ಶಂಕರಮೊಕಾಶಿ, ಕವಿ ಬೇಂದ್ರೆಯವರ ಕಾವ್ಯಮೀಮಾಂಸೆ, ೧೯೬೨

ಅನುವಾದಿತ ಕೃತಿಗಳು :

1 ಕೆ. ಕೃಷ್ಣಮೂರ್ತಿ, ಕನ್ನಡ ಕಾವ್ಯಾಲಂಕಾರ, ೧೯೫೫
2 ಕೆ. ಕೃಷ್ಣಮೂರ್ತಿ, ಕನ್ನಡ ಕಾವ್ಯಪ್ರಕಾಶ, ೧೯೫೬

3 ಕೆ. ಕೃಷ್ಣಮೂರ್ತಿ, ಕನ್ನಡ ಧ್ವನ್ಯಾಲೋಕ ಮತ್ತು ಲೋಚನಸಾರ, ೧೯೬೧

4 ಕೆ. ಕೃಷ್ಣಮೂರ್ತಿ, ಕನ್ನಡ ಔಚಿತ್ಯ ವಿಚಾರ ಚರ್ಚೆ, ೧೯೬೦

5 ಕೆ. ವಿ. ಸುಬ್ಬಣ್ಣ, ದಶರೂಪಕ

6 ಕೌಲಗಿ ಶೇಷಾಚಾರ್ಯ, ಅಲಂಕಾರಶಾಸ್ತ್ರ, ೧೯೪೮

7 ಬಾಲಸುಬ್ರಮಣ್ಯ, ಅರಿಸ್ಟಾಟಲ್‌ನ ಕಾವ್ಯಮೀಮಾಂಸೆ, ೧೯೫೯

8 ಎ. ಆರ್. ಕೃಷ್ಣಶಾಸ್ತ್ರೀ, ರವೀಂದ್ರನಾಥ ಠಾಕೂರ್ ನಿಬಂಧಮಾಲಾ-ಭಾಗ ೨, ೧೯೬೩

9 ಸಿ.ಪಿ.ಕೆ., ಸಾಹಿತ್ಯಪ್ರವೇಶ, ೧೯೬೫

10 ಸಿ.ಪಿ.ಕೆ., ಸಾಹಿತ್ಯವಿಮರ್ಶೆಯ ತತ್ವಗಳು, ೧೯೬೪

11 ಸಿ. ಮಹಾದೇವಪ್ಪ, ಷೆಲ್ಲಿಯ ಕಾವ್ಯಸಮರ್ಥನೆ, ೧೯೫೬

12 ರಾಜೇಶ್ವರಯ್ಯ ಮತ್ತು ಪ್ರಧಾನ್ ಗುರುದತ್ತ, ಡಾ. ನಗೇಂದ್ರರ ಶ್ರೇಷ್ಠ ಪ್ರಬಂಧಗಳು, ೧೯೬೫

13 ವಿನೋಬಾ, ಸಾಹಿತ್ಯ-ಸಾಹಿತಿ, ೧೯೫೭

ಬಿಡಿ ಲೇಖನಗಳು :

1 ಎಂ. ವಿ. ಇನಾಂದಾರ್, ಸಾಹಿತ್ಯಸ್ವರೂಪ ಮತ್ತು ವಿಮರ್ಶೆ (ಅಭಿವಂದನೆ ಗ್ರಂಥದಲ್ಲಿ), ೧೯೫೬

2 ವಿ. ಕೆ. ಗೋಕಾಕ್, ಸಾಹಿತ್ಯಸಂಬೋಧನೆ ಹಾಗೂ ಕನ್ನಡಸಾಹಿತ್ಯ (ಅಭಿವಂದನೆ ಗ್ರಂಥದಲ್ಲಿ), ೧೯೫೬

3 ಕೆ. ನರಸಿಂಹಮೂರ್ತಿ, ಕಲ್ಪನಾ (ಅಭಿವಂದನೆ ಗ್ರಂಥದಲ್ಲಿ), ೧೯೫೬

4 ಎಸ್. ವಿ. ರಂಗಣ್ಣ, ಇಮ್ಯಾಜಿನೇಷನ್ (ಅಭಿವಂದನೆ ಗ್ರಂಥದಲ್ಲಿ), ೧೯೫೬

5 ಎನ್. ಬಾಲಸುಬ್ರಮಣ್ಯ, ಜೀವನದಲ್ಲಿ ಸಾಹಿತ್ಯ (ಬಾಗಿನ-ಗ್ರಂಥದಲ್ಲಿ), ೧೯೫೪

6 ಜಿ. ಎಸ್. ಶಿವರುದ್ರಪ್ಪ, ಸಾಹಿತ್ಯದಲ್ಲಿ ವಾಸ್ತವಿಕತೆ ಮತ್ತು ನವ್ಯತೆ (ಬಾಗಿನ-ಗ್ರಂಥದಲ್ಲಿ), ೧೯೫೪

7 ಎಸ್. ರತ್ನಮ್ಮ, ಭಾವಿಕಾ [ಅ]ಲಂಕಾರ (ಬಾಗಿನ-ಗ್ರಂಥದಲ್ಲಿ), ೧೯೫೪

8 ಬೇಂದ್ರೆ-ಮಾಸ್ತಿ, ರಾಜರತ್ನಂ ಇತ್ಯಾದಿ, ಜನಜೀವನವನ್ನು ಪ್ರತಿಬಿಂಬಿಸುವ ಸಾಹಿತ್ಯವೆ ಉತ್ತಮ ಸಾಹಿತ್ಯ, ಪ್ರಬುದ್ಧ ಕರ್ಣಾಟಕ ೨೯-೧, ೧೯೪೭

9 ಯು. ಕೆ. ಸುಬ್ಬರಾಯಾಚಾರ್, ಕಾವ್ಯ ಮತ್ತು ನೀತಿಬೋಧೆ, ಪ್ರ.ಕ. ೩೫-೧, ೧೯೫೩

10 ಜಿ. ಎಸ್. ಶಿವರುದ್ರಪ್ಪ, ಸ್ವಭಾವೋಕ್ತಿ, ಪ್ರ.ಕ. ೩೫-೧, ೧೯೫೩

11 ಎನ್. ಬಾಲಸುಬ್ರಮಣ್ಯ, ರುದ್ರನಾಟಕದಲ್ಲಿ ಆನಂದಾಸ್ವಾದ, ಪ್ರ.ಕ. ೩೬-೪, ೧೯೫೫

12 ನಿರಂಜನ, ಬೆಲ್ಯಂಕಿಯ ಕಾವ್ಯಮೀಮಾಂಸೆ, ಪ್ರ.ಕ. ೩೭-೨, ೧೯೫೫

13 ಜಿ. ಎಸ್. ಶಿವರುದ್ರಪ್ಪ, ಸಾಹಿತ್ಯಜೀವನದ ಗತಿಬಿಂಬ, ಪ್ರ.ಕ. ೩೭-೪, ೧೯೫೬

14 ಜಿ. ಎಸ್. ಶಿವರುದ್ರಪ್ಪ, ಕಾವ್ಯಸೃಷ್ಟಿ ಬೇಂದ್ರೆಯವರ ದೃಷ್ಟಿ, ಪ್ರ.ಕ. ೩೮-೪, ೧೯೫೭

15 ಸುಜನಾ, ಕವಿಯಲ್ಲಿ ಆಗಂತುಕ ಪ್ರಜ್ಞೆ ಹಾಗೂ ಅನಿಕೇತನ ಪ್ರಜ್ಞೆ, ಪ್ರ.ಕ. ೩೯-೪, ೧೯೫೮

16 ಜಿ. ಎಸ್. ಶಿವರುದ್ರಪ್ಪ, ಪು.ತಿ.ನ. ಅವರ ಕಾವ್ಯಜಿಜ್ಞಾಸೆ, ಪ್ರ.ಕ. ೪೦-೨, ೧೯೫೯

17 ಬಿ. ಬಿ. ರಾಜಪುರೋಹಿತ (ಅನು), ರಸ ಮತ್ತು ಅದರ ವ್ಯಾಪ್ತಿ, ಪ್ರ.ಕ. ೪೧-೩, ೧೯೬೦

18. ಟಿ. ವಿ. ಅಮೃತಾ, ಸಾಹಿತ್ಯದಲ್ಲಿ ನೀತಿಯ ಮೌಲ್ಯಗಳು, ಪ್ರ.ಕ. ೪೧-೪, ೧೯೬೦

19 ಎನ್. ಬಾಲಸುಬ್ರಮಣ್ಯ (ಅನು), ಹೊರೇಸನ ಸಾಹಿತ್ಯ ವಿಮರ್ಶೆ, ಪ್ರ.ಕ. ೪೨–೪, ೧೯೬೧
ಪ್ರ.ಕ. ೪೩–೨, ೧೯೬೨

20 ಜಿ. ಎಸ್. ಶಿವರುದ್ರಪ್ಪ, ಸ್ಫೂರ್ತಿ, ಪ್ರ.ಕ. ೪೫–೩, ೧೯೬೩

21 ಟಿ.ವಿ. ವೆಂಕಟಾಚಲಶಾಸ್ತ್ರೀ, ಮಹಾಕಾವ್ಯ ಲಕ್ಷಣ, ಪ್ರ.ಕ. ೪೮–೨, ೩, ೧೯೬೬

22 ಸಿ.ಪಿ.ಕೆ. (ಅನುವಾದ), ಷೇಕ್ಸ್‌ಪಿಯರ್ ಅಥವಾ ಕವಿ, ಪ್ರ.ಕ. ೪೮–೪, ೧೯೬೭

23 ಸಿ.ಪಿ.ಕೆ. (ಅನುವಾದ), ಕಾವ್ಯಕ್ಕಾಗಿ ಕಾವ್ಯ, ಪ್ರ.ಕ. ೪೯–೩, ೧೯೬೭

24 ಗೋಪಾಲಕೃಷ್ಣ ಅಡಿಗ, ನವ್ಯಕಾವ್ಯದಲ್ಲಿ ವಿಚಾರಪ್ರಣಾಲಿ, ಸಂಕ್ರಮಣ-೧೩, ೧೯೬೬

[ಪ್ರಬುದ್ಧ ಕರ್ಣಾಟಕದಲ್ಲಿ ಪ್ರಕಟವಾಗಿ ಅನಂತರ ಪುಸ್ತಕ ರೂಪದಲ್ಲಿ ಬಂದ ಲೇಖನಗಳನ್ನು ಇಲ್ಲಿ ಹೆಸರಿಸಿಲ್ಲ].

ಮುನ್ನುಡಿಗಳಲ್ಲಿ :

1 ಕೆ. ನರಸಿಂಹಮೂರ್ತಿ, ಹಿನ್ನುಡಿ, ಚಂಡೆಮದ್ದಳೆ, ಗೋಪಾಲಕೃಷ್ಣ ಅಡಿಗ, ೧೯೫೪

2 ಯು. ಆರ್. ಅನಂತಮೂರ್ತಿ, ಮುನ್ನುಡಿ, ಭೂಮಿಗೀತ, ಗೋಪಾಲಕೃಷ್ಣ ಅಡಿಗ, ೧೯೫೯

3 ಕುವೆಂಪು, ಮುನ್ನುಡಿ, ಭಾರತೀಯ ಕಾವ್ಯಮೀಮಾಂಸೆ, ತೀ. ನಂ. ಶ್ರೀಕಂಠಯ್ಯ, ೧೯೫೩

4 ಗೋಪಾಲಕೃಷ್ಣ ಅಡಿಗ, ಮುನ್ನುಡಿ, ನಡೆದು ಬಂದ ದಾರಿ, ೧೯೫೨

ಚೆಲುವೆಯರ, ಚೆನ್ನಿಗರ, ಹಿರಿಯತಾಯ್ ಮಕ್ಕಳಿರ, ಒಡಹುಟ್ಟಿದವರಾ
ಒಸಗೆನುಡಿ ಕೇಳಿದಿರ, ತಾಳಿದಿರ ಎದೆಯಲ್ಲಿ, ತಾಳಿ ಬಾಳುವಿರಾ,
ನಾಡುನುಡಿ ನಡೆಗಳನು ಮುನ್ನಡೆಗೆ ನಡಸುತ್ತ ಮುಂದೆ ಸಾಗುವಿರಾ?
ಭಾರತದ, ಲೋಕದಾ ಮಕ್ಕಳಲಿ ಹಿರಿದಾಗಿ ತೂಕ ತೂಗುವಿರಾ?
ಬನ್ನಿ, ಓ ಮಕ್ಕಳಿರ,

ಒಕ್ಕೊರಲಲೆಲ್ಲರೂ ಕೂಗಿ ಈ ಒಕ್ಕೂಗ—ಈ ಹಿರಿಯಕೂಗ—
'ಸಿರಿಗನ್ನಡಂ ಗೆಲ್ಗೆ, ಹಿರಿಗನ್ನಡಂ ಗೆಲ್ಗೆ, ಸಿರಿಗನ್ನಡಂ ಗೆಲ್ಗೆ, ಬಾಳ್ಗೆ—
- ಕನ್ನಡದ ತಾಯ್ ಗೆಲ್ಗೆ, ಬಾಳ್ಗೆ.'

—ಶ್ರೀ

ವರದರಾಜ ಹುಯಿಲಗೋಳ

ಪ್ರವಾಸ ಸಾಹಿತ್ಯ

ಪ್ರವಾಸ ಸಾಹಿತ್ಯದಲ್ಲಿ ಕನ್ನಡದಲ್ಲಿ ಹಿಂದಕ್ಕೆ ಬೆರಳಿನ ಮೇಲೆ ಎಣಿಸುವಷ್ಟು ಪುಸ್ತಕಗಳಿದ್ದರೆ, ಇದೀಗ ಬೆರಳು ಕಚ್ಚುವಷ್ಟು ಗ್ರಂಥಗಳು ಪ್ರಕಟವಾಗಿವೆ! ೧೯೪೫ರಿಂದ ಈಚೆಗೆ ಇಪ್ಪತ್ತೈದು ವರುಷಗಳಲ್ಲಿ ಪ್ರಸಿದ್ಧವಾದ ಪುಸ್ತಕಗಳನ್ನು ಅವಲೋಕಿಸಿದಾಗ ಈ ಸತ್ಯಸಂಗತಿ ಹೊಳೆಯದೆ ಇರದು. ಇಂಥ ಗ್ರಂಥಗಳ ಮೊತ್ತವನ್ನು ಕಾದಂಬರಿ, ಸಣ್ಣಕಥೆ ಈ ಜನಪ್ರಿಯ ಸಾಹಿತ್ಯ ಪ್ರಕಾರಗಳ ದೃಷ್ಟಿಯಿಂದ ಗಣಿಸಕೂಡದು. ಆದರೆ ಅತಿವಿರಲವಾದ ಪ್ರವಾಸ ಸಾಹಿತ್ಯದ ಬೆಳವಣಿಗೆಯ ಅಳತೆಗೋಲಿನಿಂದಲೇ ತೂಗಿ ನೋಡಬೇಕು. ಹಾಗೆ ನಿರೀಕ್ಷಿಸಿದಾಗ ಪ್ರವಾಸ ಸಾಹಿತ್ಯ ಸಂಖ್ಯೆಯಲ್ಲಿ ಹುಲುಸಾಗಿ ಬೆಳೆದುದು ಕಂಡುಬರುವುದಲ್ಲದೇ, ಗುಣಾಂಶದಿಂದಲೂ ಸತ್ವಶಾಲಿಯಾಗಿದೆಯೆಂಬುದನ್ನು ಮನಗಾಣದೆ ಇರಲಾರೆವು.

'ದೇಶ ತಿರುಗಬೇಕು, ಕೋಶ ಓದಬೇಕು' ಎಂಬ ನಾಣ್ಣುಡಿಯಿದೆ. ಪ್ರವಾಸವು ಪ್ರತಿಯೊಬ್ಬರಿಗೂ ಪ್ರಿಯವಾದುದು. ಜೀವನವೇ ಒಂದು ಪಯಣವಾದ ಈ ಜಗತ್ತಿನಲ್ಲಿ, ದೇಶವಿದೇಶಗಳ ಪ್ರವಾಸ ಕೈಕೊಳ್ಳಬೇಕೆಂಬ ಹಂಬಲ ಪ್ರತಿಯೊಬ್ಬರಲ್ಲಿಯೂ ಪ್ರಬಲವಾಗಿರುತ್ತದೆ. ಪ್ರವಾಸಕ್ಕೆ ಪ್ರಥಮವಾಗಿ ಬೇಕು ಸಂಪತ್ತಿನ ಅನುಕೂಲತೆ. ಶ್ರೀಮಂತಿಕೆಯಿರದಿದ್ದರೂ ತಮ್ಮ ಪ್ರವಾಸದ ಹುಚ್ಚುಹಂಬಲದಿಂದ ಧೀರೋದಾತ್ತತೆ ತೋರಿಸಿ ತಿರುಗಿದವರೂ ಇರುವರು. ಅಧಿಕಾರದ ಸ್ಥಾನದಲ್ಲಿದ್ದು, ಕಚೇರಿಯ ಕೆಲಸಕ್ಕಾಗಿ ಪ್ರವಾಸ ಮಾಡಿದವರೂ ಉಂಟು. ಅಲ್ಲದೇ ಉಚ್ಚ ವ್ಯಾಸಂಗಕ್ಕಾಗಿ ದೇಶಾಂತರ ಪ್ರವಾಸ ಕೈಕೊಂಡವರೂ ಇರುವರು. ಭಾರತದ ಸ್ವಾತಂತ್ರ್ಯದ ನಂತರ ಪ್ರವಾಸಿಗರು ಸಾಕಷ್ಟು ಬೆಳೆದಿರುವರು. ಈಗ ಪ್ರವಾಸಿಗಳಿಗೆ ಧಾರ್ಮಿಕ ಆ 'ಬಹಿಷ್ಕಾರ'ವೇನಿಲ್ಲ! ಕರ್ನಾಟಕದಲ್ಲಿ ಈ ಎಲ್ಲ ರೀತಿಯ ಪ್ರವಾಸಿಕರು ಕಂಡುಬಂದಿದ್ದಾರೆ.

ಪ್ರವಾಸದ ಪ್ರಥಮೋದ್ದೇಶ ಮನರಂಜನೆ ಇರಬಹುದು. ಅದರ ಕೂಡ ಅನುಭವ, ಜ್ಞಾನ ಇವೂ ತಾನಾಗಿಯೆ ಸಂಪಾದನೆಯಾಗುತ್ತವೆ. ಪ್ರವಾಸದಲ್ಲಿ ಬಂದಷ್ಟು ಅನುಭವ ಮತ್ತು ಜ್ಞಾನ ಎಷ್ಟೇ ಹೊತ್ತು ಯಾವ ಹೊತ್ತಗೆಯನ್ನು ಅಭ್ಯಸಿಸಿದರೂ ಲಭಿಸುವುದು ಸಾಧ್ಯವಿಲ್ಲ. ವಿಶ್ವದಲ್ಲಿಯ ಜೀವನ ಹೇಗಿದೆಯೆಂಬುದನ್ನು ಪ್ರವಾಸ

ಮಾಡಿಯೇ ತಿಳಿದುಕೊಳ್ಳಬೇಕು. ಆದರೆ ಎಲ್ಲರಿಗೂ 'ನಾರದ ಸಂಚಾರಿ'ಗಳಾಗಲು ಹೇಗೆ ಸಾಧ್ಯ? ಆ ಯೋಗವಿಲ್ಲದವರು ಪ್ರವಾಸ ಸಾಹಿತ್ಯವನ್ನಾದರೂ ಓದಿ ತೃಪ್ತರಾಗಬೇಕು. ಪಂಡಿತ ಜವಾಹರಲಾಲ ನೆಹರು ಅವರು ಕೆ.ಪಿ.ಎಸ್. ಮೆನನ್‌ರು ಬರೆದ ಪ್ರವಾಸ ಗ್ರಂಥಕ್ಕೆ ಮುನ್ನುಡಿಯನ್ನು ಬರೆಯುತ್ತ "ಪ್ರವಾಸ ಮಾಡುವುದು ಒಳ್ಳೆಯದು. ಹಾಗೆ ಪ್ರವಾಸ ಮಾಡಲಾರದೇ ಹೋದಾಗ ಪ್ರವಾಸದ ಬಗೆಗೆ ಬಂದಿರುವ ಸಾಹಿತ್ಯವನ್ನಾದರೂ ಓದುವುದು ಉತ್ತಮ ಹವ್ಯಾಸ"[1] ಎಂದು ಅಭಿಪ್ರಾಯವನ್ನು ವ್ಯಕ್ತ ಮಾಡಿರುವರು.

ಹಾಗಾದರೆ ಆ ಪ್ರವಾಸ ಸಾಹಿತ್ಯ ಯಾವುದು? ನಾವು ಯಾವುದಕ್ಕೆ ಪ್ರವಾಸ ಸಾಹಿತ್ಯವೆನ್ನಬೇಕು? ಪ್ರತಿಯೊಬ್ಬ ಪ್ರವಾಸಿ ತನ್ನ ಅನುಭವಗಳನ್ನು ಹೇಳಬಹುದು. ಆದರೆ ಆ ಎಲ್ಲ ಅನುಭವಗಳೂ ಸರಿಯಾದ ರೀತಿಯಲ್ಲಿ ಪ್ರಕಟವಾಗಿವೆಯೆಂದು ತಿಳಿಯುವಂತಿಲ್ಲ. ಪ್ರವಾಸಿಯು ಮಾರ್ಗಗಳ, ಪಟ್ಟಣಗಳ, ಕಟ್ಟಡಗಳ ಹೆಸರುಗಳನ್ನು ಉಸಿರಿದರೆ ಸಾಹಿತ್ಯವಾಯಿತೇ? ಅನುಭವಗಳನ್ನು ಸ್ವಾರಸ್ಯವಾಗಿ ಹೇಳುವವರೆಲ್ಲ ಅವುಗಳನ್ನು ಬರೆಹರೂಪದಲ್ಲಿ ಯಥೋಚಿತವಾಗಿ ಅಭಿವ್ಯಕ್ತಗೊಳಿಸಲು ಸಾಧ್ಯವೇ?.... 'ಸಾಹಿತ್ಯವೆಲ್ಲರಿಗೂ ಇಲ್ಲ' ಎಂದು ಸರ್ವಜ್ಞನು ಹೇಳಿದ್ದಾನೆ. ಪ್ರವಾಸವನ್ನು ಕುರಿತು ಪ್ರಕಟವಾದ ಗ್ರಂಥಗಳನ್ನು ಅವಲೋಕಿಸುವಾಗ, ಎಷ್ಟರ ಮಟ್ಟಿಗೆ ಅವುಗಳಲ್ಲಿ ಸಾಹಿತ್ಯವಿದೆಯೆಂಬುದನ್ನು ನಾವು ನಿರ್ಣಯಿಸುವುದು ಅವಶ್ಯವಿದೆ.

ಪ್ರವಾಸಿಕನಿಗೆ ಮಾರ್ಗಗಳ ಮತ್ತು ಸ್ಥಳಗಳ ಪರಿಚಯ ಅಗತ್ಯ. ಕ್ಷೇತ್ರ ಯಾತ್ರೆಗೆಂದು ಹೊರಟವರಿಗೆ ಸ್ಥಳಗಳ ಮಹಾತ್ಮೆಗಳೂ ಬೇಕಾಗುತ್ತವೆ. ಇಂಥ ಸಂಗತಿಗಳನ್ನು ಒದಗಿಸುವ ಅನೇಕ ಗ್ರಂಥ ಕನ್ನಡದಲ್ಲಿ ಪ್ರಕಟವಾಗಿವೆ. 'ಶ್ರೀ ಹೊಂಬುಜ ಕ್ಷೇತ್ರ', 'ಕಾರ್ಕಳದ ಚರಿತ್ರೆ', 'ಕೈಲಾಸ ಮಾನಸ ಸರೋವರ ಯಾತ್ರೆ' ಮುಂತಾದವು ಇದೇ ರೀತಿಯವಾಗಿವೆ. ಇವು ಪ್ರವಾಸಿಕರಿಗೆ ಬೇಕಾದ ಸಾಹಿತ್ಯವಾದರೂ, ಪ್ರವಾಸ ಸಾಹಿತ್ಯವಲ್ಲ. ಈ ಪ್ರಕಟಣೆಗಳಲ್ಲಿ ಸಾಹಿತ್ಯದ ಅಂಶ ಕಡಿಮೆ ಇರುತ್ತದೆ.

ಅನುಭವಗಳನ್ನು ರಸವತ್ತಾಗಿ ತಿಳಿಸುವುದೇ ಸಾಹಿತ್ಯ. ಪ್ರವಾಸಮಾಡಿದವನಿಗೆ ತಾನು ಕಂಡದ್ದನ್ನೆಲ್ಲ ಸವಿಸ್ತರವಾಗಿ ಹೇಳಬೇಕೆಂಬ ಅಂತಃಸ್ಫೂರ್ತಿ ಇರುತ್ತದೆ. ಪ್ರವಾಸದಲ್ಲಿಯ ತನ್ನ ಸುಖದುಃಖಗಳನ್ನು ಇನ್ನೊಬ್ಬರ ಎದುರು ಹೇಳಿದರೇನೆ ಅವನಿಗೆ ಸಂಪೂರ್ಣ ಸಮಾಧಾನ, ತೃಪ್ತಿ. ಸಾಹಿತ್ಯದ ಅಂತಃಸ್ಫೂರ್ತಿ ಇದೇ ಅಲ್ಲವೇ? ಅರ್ನೆಸ್ಟ ರಾಯಮಂಡ ಎಂಬ ಇಂಗ್ಲಿಷ್ ವಿಮರ್ಶಕನು 'ಸಾಹಿತ್ಯವು ಆತ್ಮದ ಕೂಗು'[2] ಎಂದು ಹೇಳಿರುವರು. ಪ್ರವಾಸದ ವಿವರಣೆ ಕೊಡುವಾಗ ಪ್ರವಾಸಿಯ ಆತ್ಮವೇ ಮಾತನಾಡಿದರೆ, ಆ ವಿವರಣೆ ಸಾಹಿತ್ಯದ ಮಟ್ಟವನ್ನು ಮುಟ್ಟುತ್ತದೆ. ಆಗ ಪ್ರವಾಸಿಕನು ನುಡಿದ ಮಾತು ಶಶಿಯುದಿಸಿ ಬಂದಂತಾಗುತ್ತದೆ.

ಪ್ರವಾಸಿಕನಿಗೆ ಕುತೂಹಲವಿರಬೇಕು; ನೋಡುವುದಕ್ಕೆ ವಿಶಾಲದೃಷ್ಟಿ ಇರಬೇಕು; ಅನುಭವಿಸುವುದಕ್ಕೆ ವಿಶಾಲ ಹೃದಯವಿರಬೇಕು. ಇವೆಲ್ಲವುಗಳಿಂದ ಪ್ರವಾಸದ

ವಿವರಣೆಗೆ ಒಂದು ಅರ್ಥ ಉತ್ಪನ್ನವಾಗುವುದು. ವಿಶ್ವವನ್ನು ನೋಡುವ ಬರಿ ಜ್ಞಾನ ಲಾಲಸೆಯು ಉತ್ತಮ ಪ್ರವಾಸ ಸಾಹಿತ್ಯ ನಿರ್ಮಿತಿಗೆ ಅನುಕೂಲವಿಲ್ಲ. ಅದರ ಜೊತೆಗೆ ಅನುಭವದ ಅಭಿವ್ಯಕ್ತಿಗೂ ಪ್ರಾಮುಖ್ಯವಾಗಿರಬೇಕು. ಅಂದರೆ ಪ್ರವಾಸ ಸಾಹಿತ್ಯಕ್ಕೆ ಒಂದು ಅರ್ಥವಿದೆ. ಶ್ರೀ. ವಿ. ಎಂ. ಇನಾಮದಾರ ಅವರು ಇದರ ಬಗ್ಗೆ 'ಮುಕ್ಕಣ್ಣನ ಯಾತ್ರೆ' ಎಂಬ ಗ್ರಂಥಕ್ಕೆ ಮುನ್ನುಡಿ ಬರೆಯುತ್ತ ಹೀಗೆ ಹೇಳಿರುವರು– "ವಿವರಣೆ ಸರ್ವಸಾಮಾನ್ಯವಾದ ಪ್ರವಾಸದ್ದಾದರೂ, ಅದು ಸಾಹಿತ್ಯವೆನಿಸಿಕೊಳ್ಳ ಬೇಕಾಗಿದ್ದಲ್ಲಿ ಅದಕ್ಕೊಂದು 'ರೂಪ'ಬೇಕು. ಅದರಲ್ಲಿ ಓದುಗರಿಗೆ ಏನಾದರೊಂದು 'ಅರ್ಥ' ಕಾಣಬೇಕು. ಈ ರೂಪ ಅರ್ಥಗಳನ್ನು ತಮ್ಮ ಬರವಣಿಗೆಗೆ ಒದಗಿಸಿ ಕೊಡಲಾಗದ್ದಕ್ಕಾಗಿಯೇ ಎಷ್ಟೋ ಪ್ರವಾಸ ವಿಷಯದ ಬರವಣಿಗೆ ಸಾಹಿತ್ಯದ ಮಟ್ಟಕ್ಕೆ ತಲುಪದೆ ಕಾಲಾವಕಾಶದಲ್ಲಿ ಕಣ್ಮರೆಯಾಗಿ ಹೋಗುತ್ತದೆ"[3]

ಕನ್ನಡದಲ್ಲಿ ಪ್ರವಾಸ ಸಾಹಿತ್ಯವು ಬಹುದಿನಗಳಿಂದ ಬೆಳೆಯುತ್ತ ಬಂದಿದೆ. ಇದರಲ್ಲಿ ಕೆಲವು ಭಾಷಾಂತರಿತ ಕೃತಿಗಳೂ ಇವೆ. ಶ್ರೀ ಬಿ. ಪುಟ್ಟಯ್ಯನವರ 'ಅಭಿವೃದ್ಧಿ ಸಂದೇಶ'ವು ಪಶ್ಚಿಮ ದೇಶದಲ್ಲಿಯ ಪ್ರವಾಸವನ್ನು ಕುರಿತು ಕನ್ನಡದಲ್ಲಿ ಪ್ರಕಟವಾದ ಮೊದಲನೆಯ ಪುಸ್ತಕವೆಂದು ಹೇಳಬಹುದು.[4] ಕೀರ್ತಿಶೇಷ ಭಾಸ್ಕರರಾವ್ ಮಾಲೂರಕರ್, ಮಂಡ್ಯದ ತಿರುಮಲಾಚಾರ್ಯ ಮತ್ತು ಕೆಲವರು ತಮ್ಮ ವಿದೇಶದ ಅನುಭವಗಳನ್ನು ವಿವರಿಸಿ ಲೇಖನಗಳನ್ನು ಪ್ರಕಟಿಸಿರುವರು. ಆದರೆ ಪ್ರವಾಸ ಸಾಹಿತ್ಯದಲ್ಲಿ ಯೋಗ್ಯವಾದ ಪುಸ್ತಕವಿರುವುದು ವಿ. ಸೀ. ಯವರ 'ಪಂಪಾಯಾತ್ರೆ' ಎಂಬುದು. ೧೯೨೬ ರಲ್ಲಿಯೇ ಪ್ರಕಟವಾದ ಈ ಗ್ರಂಥವು ಅತ್ಯುತ್ತಮ ಪ್ರವಾಸ ಸಾಹಿತ್ಯವಾಗಿದೆಯೆಂದು ನಿಃಸಂಶಯವಾಗಿ ಹೇಳಬೇಕು.

ಕನ್ನಡದಲ್ಲಿರುವ ಪ್ರವಾಸ ಸಾಹಿತ್ಯದ ಗ್ರಂಥಗಳನ್ನು ಅಭ್ಯಾಸದ ದೃಷ್ಟಿಯಿಂದ ವರ್ಗೀಕರಿಸಬಹುದು. ಪ್ರವಾಸ ಸಾಹಿತ್ಯದ ಬಗ್ಗೆ ಶ್ರೀ ಸಾ. ಶಿ. ಮರುಳಯ್ಯ ಅವರು ಬರೆಯುತ್ತ, ಪ್ರವಾಸ ಸಾಹಿತ್ಯದಲ್ಲಿ ಸ್ಥೂಲವಾಗಿ ಐದು ಭಾಗಗಳನ್ನು ಮಾಡಿರುವರು.

(೧) ತೀರ್ಥಯಾತ್ರಾ ಪ್ರವಾಸ ಸಾಹಿತ್ಯ (೨) ಸಾಂಸ್ಕೃತಿಕ ಪ್ರವಾಸ ಸಾಹಿತ್ಯ (೩) ಶೈಕ್ಷಣಿಕ ಪ್ರವಾಸ ಸಾಹಿತ್ಯ (೪) ವ್ಯಾವಹಾರಿಕ ಪ್ರವಾಸ ಸಾಹಿತ್ಯ (೫) ಪ್ರವಾಸ ಪ್ರೇಮಿ ಪ್ರವಾಸ ಸಾಹಿತ್ಯ.[5]

ಪ್ರವಾಸಿಯ ಉದ್ದೇಶವೇನಿದೆ ಯೆಂಬುದನ್ನು ಇಟ್ಟುಕೊಂಡೇ ಈ ವಿಭಾಗಗಳನ್ನು ಶ್ರೀ ಮರುಳಯ್ಯ ಅವರು ಮಾಡಿರುವರು. ಈ ಪ್ರತಿಯೊಂದು ವಿಭಾಗದಲ್ಲಿ ಕನ್ನಡ ಪುಸ್ತಕ ಸಿಗುವುದು ದುರ್ಲಭ. ಅಲ್ಲದೇ ಒಂದು ವಿಭಾಗದ ಪುಸ್ತಕ ಮತ್ತೊಂದು ವಿಭಾಗಕ್ಕೂ ಬರಬಹುದು.

ಸಾಹಿತ್ಯದ ರೂಪದಿಂದಲೂ ನಾವು ವಿಭಾಗಗಳನ್ನು ಮಾಡಬಹುದು. (೧) ಪತ್ರ ರೂಪದಲ್ಲಿ ಪ್ರವಾಸ ಸಾಹಿತ್ಯ (೨) ದಿನಚರಿಯಲ್ಲಿ ಪ್ರವಾಸ ಸಾಹಿತ್ಯ (೩) ಕಥಾ

ರೂಪದಲ್ಲಿ ಪ್ರವಾಸ ಸಾಹಿತ್ಯ. ಈ ಮೂರು ಪ್ರಕಾರಗಳ ಪ್ರವಾಸ ಸಾಹಿತ್ಯದ ಗ್ರಂಥಗಳು ಕನ್ನಡದಲ್ಲಿ ಈ ಇಪ್ಪತ್ತೈದು ವರುಷಗಳಲ್ಲಿ ಪ್ರಕಟವಾಗಿವೆ.

ಆದರೆ ಗ್ರಂಥಗಳನ್ನು ಅವಲೋಕಿಸುವ ದೃಷ್ಟಿಯಿಂದ ನಾವು ಮೂರು ವಿಭಾಗ ಗಳನ್ನು ಮಾಡಬೇಕೆಂದು ತೋರುತ್ತದೆ–(೧) ಕರ್ನಾಟಕದಲ್ಲಿಯ ಪ್ರವಾಸದ ಪುಸ್ತಕ ಗಳು (೨) ಭಾರತ ಯಾತ್ರೆಯ ಪ್ರವಾಸದ ಪುಸ್ತಕಗಳು (೩) ವಿದೇಶಯಾತ್ರೆಯ ಪ್ರವಾಸದ ಪುಸ್ತಕಗಳು. 'ಕನ್ನಡಿಗ ವಿಶ್ವಮಾನವನಾಗಬೇಕು' ಎಂದು ವಿ. ಕೃ. ಗೋಕಾಕ ಅವರು ಬಳ್ಳಾರಿ ಸಾಹಿತ್ಯ ಸಮ್ಮೇಲನದ ಅಧ್ಯಕ್ಷ ಭಾಷಣದಲ್ಲಿ ಘೋಷಿಸಿ ದರು. ಪ್ರವಾಸ ಸಾಹಿತ್ಯದಲ್ಲಿ ಕನ್ನಡಿಗ ನಿಜವಾಗಿಯೂ ವಿಶ್ವಮಾನವನಾಗಿದ್ದಾನೆ. ಕರ್ನಾಟಕದ ಯಾತ್ರೆಯಿಂದ ಆರಂಭಿಸಿ ವಿಶ್ವಪರ್ಯಟನ ಕನ್ನಡಿಗ ಹೇಗೆ ಮಾಡಿದ್ದಾ ನೆಂಬುದನ್ನು ನಾವು ನಿರೀಕ್ಷಿಸಬಹುದು.

೧. ಕರ್ನಾಟಕದ ಬಗ್ಗೆ ಇದ್ದ ಪ್ರವಾಸ ಸಾಹಿತ್ಯ.

ಕರ್ನಾಟಕದ ಪುಣ್ಯಕ್ಷೇತ್ರಗಳ ಮತ್ತು ಐತಿಹಾಸಿಕ ಸ್ಥಳಗಳ ಸಂಗತಿಗಳನ್ನು ತಿಳಿಸಿ ಸಾಕಷ್ಟು ಗ್ರಂಥಗಳು ಪ್ರಕಟವಾಗಿವೆ. ಇವುಗಳಲ್ಲಿ ಕೆಲವು ಸಾಮಾನ್ಯ ಪ್ರವಾಸಿಕನಿಗೆ ಅವಶ್ಯವಾಗಿ ಬೇಕಾದ ಮಾಹಿತಿಗಳಿಂದ ಕೂಡಿಕೊಂಡಿವೆ. ಸ್ಥಳ ಮಾಹಾತ್ಮ್ಯವು ಅವುಗಳಿಂದ ತಿಳಿದುಬರುವುದು. ಅವು ಸಚಿತ್ರವಾಗಿರುವುದರಿಂದ ಆಕರ್ಷಣೀಯವಾಗಿಯೂ ಇರುವವು. ಇವುಗಳಲ್ಲಿ ಸಾಹಿತ್ಯದ ಅಂಶ ತೀರ ಕಡಿಮೆ ಯಿದ್ದರೂ, ಈ ಗ್ರಂಥಗಳಲ್ಲಿ ಬಂದಿರುವ ಸ್ಥಳ ಮಹಾತ್ಮೆಯ ಹಾಡುಗಳು ಸಾಹಿತ್ಯದ ದೃಷ್ಟಿಯಿಂದ ಮಹತ್ವದ್ದಾಗಿವೆ. ರಾಯಚೂರ ಜಿಲ್ಲೆಯಲ್ಲಿಯ 'ಶ್ರೀಕ್ಷೇತ್ರ ಕುರವಪುರ ಕುರುಗಡ್ಡಿಯ ಪರಿಚಯ', 'ಸವದತ್ತಿಯ ಎಲ್ಲಮ್ಮಾ' 'ಸಂಪೂರ್ಣ ಶ್ರೀಶೈಲ ಮಹಾಕ್ಷೇತ್ರ ದರ್ಶನ' ಮುಂತಾದ ಗ್ರಂಥಗಳಲ್ಲಿ ಈ ಸಾಂಸ್ಕೃತಿಕ ಹಾಡುಗಳನ್ನು ಓದಿ ನಾವು ಆನಂದಪಡಬಹುದು.

ಐತಿಹಾಸಿಕ ಸಂಶೋಧನೆಯ ದೃಷ್ಟಿಯಿಂದಲೂ ಬರೆದ ಕೆಲವು ಗ್ರಂಥಗಳಿವೆ. ಶ್ರೀ ಎ. ಎಂ. ಅಣ್ಣೀಗೇರಿಯವರು ಬರೆದ 'ಕರ್ನಾಟಕ ಸಾಂಸ್ಕೃತಿಕ ಸ್ಥಳಗಳು' ಮತ್ತು ಇಂಥ ಇನ್ನಿತರ ಗ್ರಂಥಗಳು ಆ ಸ್ಥಳಗಳ ಇತಿಹಾಸವನ್ನು ಅಪೂರ್ವವಾಗಿ ಚಿತ್ರಿಸಿವೆ. ಪ್ರವಾಸಿಯ ಜ್ಞಾನಭಂಡಾರಕ್ಕೆ ಇವು ಉತ್ತಮ ರತ್ನಗಳು.

ಪ್ರವಾಸದ ಅನುಭವಗಳನ್ನು ಕುರಿತು ಬರೆದ ಗ್ರಂಥಗಳಲ್ಲಿ ಹಿರೇಮಲ್ಲೂರ ಈಶ್ವರನ್ ಅವರು ಬರೆದ 'ಕವಿ ಕಂಡ ನಾಡು' ಶ್ರೀ ಮಾನ್ವಿ ನರಸಿಂಗರಾಯರ 'ಕನ್ನಡ ಯಾತ್ರೆ', ಶ್ರೀ ವೀ. ಚ. ಹಿತ್ತಲಮನಿಯವರ 'ಶರಾವತಿಯಿಂದ ಸಾಬರಮತಿ', ಶ್ರೀ–ರಂಗ–ಮಂಗರ 'ಮುಕ್ಕಣ್ಣ ಯಾತ್ರೆ' ಮುಂತಾದವುಗಳನ್ನು ನಾವು ಸ್ಮರಿಸಿಕೊಳ್ಳ ಬಹುದು.

೧೯೫೬ರಲ್ಲಿ ಶಿವಮೊಗ್ಗೆಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಲನಕ್ಕೆ ಕೆಲವು

ಗೆಳೆಯರಿಂದೊಡಗೂಡಿ ಪ್ರವಾಸ ಮಾಡಿದ ಕಥನವೇ ಶ್ರೀ ಮಾನ್ವಿ ನರಸಿಂಗರಾಯರ 'ಕನ್ನಡ ಯಾತ್ರೆ'ಯಲ್ಲಿ ಬರುತ್ತದೆ. ಕನ್ನಡದ ಬಗ್ಗೆ ಇರುವ ಲೇಖಕರ ಅಭಿಮಾನ ಮತ್ತು ಅವರ ವಿವಿಧ ಅನುಭವ ಇವು ಗ್ರಂಥದಲ್ಲಿ ರಸವತ್ತಾಗಿ ಬಂದಿವೆ. ವೀ. ಚ. ಹಿತ್ತಲಮನಿಯವರು ಕಾರವಾರದ ಸೃಷ್ಟಿಸೌಂದರ್ಯವನ್ನು ಸವಿದು ಅದನ್ನು 'ಗಂಧರ್ವ ಲೋಕ' ಎಂದು ಕರೆದಿರುವರು; ಅದಕ್ಕೆ 'ಕನ್ನಡ ಕಾಶ್ಮೀರ' ಎಂದಿರುವರು. 'ಶರಾವತಿ ಯಿಂದ ಸಾಬರಮತಿ' ಗ್ರಂಥದಲ್ಲಿ ಮಹಾರಾಷ್ಟ್ರದ ವರ್ಣನೆಯೂ ಬಂದಿದೆ.

ವಿದೇಶದಲ್ಲಿದ್ದರೂ ಹಿರೇಮಲ್ಲೂರ ಈಶ್ವರನ್ ಅವರ ಆತ್ಮ ತಾಯ್ನಾಡಾದ ಕನ್ನಡನಾಡನ್ನು ಬಲವಾಗಿ ನೆನೆಸುತ್ತದೆ. 'ಕವಿ ಕಂಡ ನಾಡು' ಎಂಬ ಅವರ ಗ್ರಂಥದಲ್ಲಿ ಅವರ ಕವಿ ಹೃದಯ ವ್ಯಕ್ತವಾಗಿದೆ. ಹಳೆಯಬೀಡು, ಬೇಲೂರು, ತಳಕಾಡು, ಐಹೊಳೆ ಎಲ್ಲ ಪವಿತ್ರ ಸ್ಥಳಗಳ ಪ್ರವಾಹದಲ್ಲಿ ಅವರ ಜೀವ ತೇಲಾಡಿದೆ. ಅವರು ಪ್ರವಾಸ ಮಾಡಿ ದಲ್ಲೆಲ್ಲಾ 'ಕೂಗುತಿವೆ ಕಲ್ಲು' ಎಂಬ ಕುವೆಂಪು ಅವರ ನುಡಿ ಅವರಿಗೆ ಕೇಳಿಬಂದಿದೆ. ಕಲ್ಪನೆ ಮತ್ತು ಭಾವನಾವೇಶ ಇವುಗಳಿಂದ ಈ ಪುಸ್ತಕ ಚೆನ್ನಾಗಿದೆ.

ಶ್ರೀ–ರಂಗ–ಮುಂಗರು ಬರೆದ 'ಮುಕ್ಕಣ್ಣ ಯಾತ್ರೆ' ಎಂಬುದು ಉತ್ತಮ ಪ್ರವಾಸ ಪ್ರಬಂಧವಾಗಿದೆ. ಈ ಪುಸ್ತಕದಲ್ಲಿ ಒಂದು ಒಳ್ಳೇ ಪ್ರಯೋಗವಿದೆ. ಹಳೆಬೀಡು ಮತ್ತು ಬೇಲೂರುಗಳಿಗೆ ಶ್ರೀರಂಗ, ನೆಗಳೂರು ರಂಗನಾಥ, ಎಚ್. ಎಸ್. ಪಾಟೀಲ ಈ ಮೂವರು ಲೇಖಕರು ಪ್ರವಾಸ ಮಾಡಿಬಂದ ವರ್ಣನೆಯಿದೆ. ಪ್ರತಿಯೊಬ್ಬರೂ ಒಂದೇ ವಿಷಯದ ಮೇಲೆ ತಮ್ಮ ಪ್ರವಾಸದ ಅನುಭವಗಳನ್ನು ಬರೆದಿರುವರು. ಪ್ರವಾಸದಲ್ಲಿ ಅವರವರ ದೃಷ್ಟಿ ಅವರವರಿಗೆ ಎಂಬುದು ಈ ಪ್ರಬಂಧಗಳಲ್ಲಿ ತಿಳಿದುಬರುವುದು. ಇದರಲ್ಲಿ ಮೊದಲನೆಯ ಪ್ರಬಂಧವಾದ ಶ್ರೀರಂಗ 'ಜಕ್ಕಣ್ಣನ ಜಾತ್ರೆ' ಶ್ರೇಷ್ಠವಾದ ಪ್ರವಾಸ ಸಾಹಿತ್ಯವಾಗಿದೆ. ವಿಡಂಬನಾತ್ಮಕ ಅವರ ಶೈಲಿ ಬಲು ಹರಿತವಾಗಿದೆ. ಇವರ ಪ್ರಬಂಧ ದಲ್ಲಿ ಹರಟೆಯ ಶ್ರೇಷ್ಠ ಗುಣವಿದೆ. ಶ್ರೀರಂಗರು ಬರೆದ 'ಋತುಸಂಹಾರ'ವೆಂಬ ಪ್ರವಾಸ ಗ್ರಂಥದಲ್ಲಿಯೂ ನಾವು ಈ ವೈಶಿಷ್ಟ್ಯಗಳನ್ನು ಕಾಣಬಹುದು.

೨. ಭಾರತ ಯಾತ್ರೆಯ ಪ್ರವಾಸದ ಪುಸ್ತಕಗಳು

ಈ ವಿಭಾಗದಲ್ಲಿ ಸಾಕಷ್ಟು ಪುಸ್ತಕ ಕನ್ನಡದಲ್ಲಿ ಪ್ರಕಟವಾಗಿವೆ. ಕನ್ನಡ ನಾಡನ್ನು ಬಿಟ್ಟು ದೂರ ಹೋಗಿ ಬರುವುದೇ ಕನ್ನಡಿಗನಿಗೆ ನಿಜವಾದ ಪ್ರವಾಸವಲ್ಲವೇ? ಅಂತೆಯೇ ವಿವಿಧ ರೀತಿಯ ಗ್ರಂಥಗಳನ್ನು ನಾವು ನೋಡಬಹುದಾಗಿದೆ. ಪ್ರಾಮುಖ್ಯ ವಾಗಿ ಕ್ಷೇತ್ರ ಯಾತ್ರೆಗಳ ಗ್ರಂಥಗಳೇ ಬಹಳ. ಭಾರತೀಯ ಜೀವವಿರುವಾಗಲೇ ಕಾಶಿ ಮತ್ತು ರಾಮೇಶ್ವರಗಳ ಯಾತ್ರೆ ಮಾಡಬೇಕಂತೆ. ಅದೊಂದು ಪುಣ್ಯದ ಕೆಲಸ! ಪ್ರವಾಸ ಸಾಹಿತ್ಯ ಇಂಥ ಪುಣ್ಯವನ್ನು ಓದುಗರಿಗೆ ಒದಗಿಸಿಕೊಡುತ್ತದೆ.

ಶ್ರೀ ಗೋಸಾವಿಯವರು ಭಾರತ ಸಂಚಾರಿ ಎಂದು ಪ್ರಸಿದ್ಧಿಯನ್ನು ಪಡೆದಿ ದ್ದಾರೆ. ಅವರ ಪ್ರವಾಸ ಜ್ಞಾನೋದಯಕ್ಕಾಗಿಯೂ ಇದೆ. ಶ್ರೀ ಗೋಸಾವಿಯವರ

'ಹಿಮಾಲಯ ದರ್ಶನ', 'ಕೈಲಾಸ ಮಾನಸ ಸರೋವರ ಯಾತ್ರೆ' ಇವು ಸಚಿತ್ರ ವಾಗಿದ್ದು, ಆ ಕ್ಷೇತ್ರಗಳ ಅಧ್ಯಾತ್ಮಿಕ ಹಿನ್ನೆಲೆಯನ್ನು ಸರಿಯಾಗಿ ಕೊಡುತ್ತವೆ. ಈ ಗ್ರಂಥಗಳಲ್ಲಿ ಭೌಗೋಲಿಕ ಅಂಶಗಳೂ ಸಾಕಷ್ಟು ಉಂಟು. ಅಧ್ಯಾತ್ಮವೂ ಸಾಹಿತ್ಯದ ಒಂದು ಅಂಗ! ಅದನ್ನು ಈ ಗ್ರಂಥಗಳಲ್ಲಿ ಕಾಣಬಹುದು. ಶ್ರೀ ಹ. ರಾ. ಪುರೋಹಿತ ಅವರ 'ರಾಮೇಶ್ವರ ಕನ್ಯಾಕುಮಾರಿ ದರ್ಶನ'ವು ಅತ್ಯಂತ ಭಕ್ತಿಯಿಂದ ಬರೆದ ಪ್ರವಾಸ ಸಾಹಿತ್ಯವಾಗಿದೆ. ಇವರು ಬರೆದ 'ಬದರೀ-ಕೇದಾರನಾಥ ದರ್ಶನ' ಎಂಬ ಪುಸ್ತಿಕೆಯೂ ಇದೇ ರೀತಿಯಾಗಿದೆ. ಇವರಿಗೆ ಸಂಸ್ಕೃತ ಅಭ್ಯಾಸದ ಬಲವಿದೆ. ಆದ್ದರಿಂದ ಪ್ರತಿಯೊಂದು ಕ್ಷೇತ್ರದ ಪೂರ್ವ ಪರಂಪರೆಯನ್ನು ಸಂಸ್ಕೃತ ಶ್ಲೋಕಗಳ ಆಧಾರದಿಂದ ಹೇಳಿರುವರು. ಈ ಗ್ರಂಥಗಳು ಸಚಿತ್ರವಾಗಿದ್ದು, ಓದುವವರ ಕಣ್ಣಿಗೆ ಹಬ್ಬವಾಗಿವೆ.

ಸೋಮನಾಥಾನಂದ ಅವರು ಬರೆದ 'ಹೈಮಾಚಲ ಸಾನ್ನಿಧ್ಯದಲ್ಲಿ' ಮತ್ತು 'ಅಮರನಾಥ ಯಾತ್ರೆ' ಬಹು ಸರಳವಾದ ಶೈಲಿಯಿಂದ ಕೂಡಿಕೊಂಡಿದ್ದು, ಮನಂಬುಗುವಂತೆ ಅವರು ತಮ್ಮ ಅನುಭವಗಳನ್ನು ಹೇಳಿರುವರು. ದೃಶ್ಯಗಳ ಭವ್ಯತೆಯನ್ನು ಹೇಳುವಲ್ಲಿ ಇವರ ಸರಲತೆ ಮತ್ತು ಕಥಾಸರಣಿ ಮೆಚ್ಚತಕ್ಕ ಗುಣಗಳಾಗಿವೆ.

ಪಿ. ಆರ್. ಲಕ್ಷ್ಮಮ್ಮ ಅನರು ಬರೆದ 'ಬದರೀ ಯಾತ್ರೆ', ಡಿ. ಪಿ. ರಂಗಸ್ವಾಮಿಯವರು ಬರೆದ 'ಭಾರತ ಯಾತ್ರೆ', ಯು. ರಾಘವೇಂದ್ರಕೃಷ್ಣ ಅವರು ಬರೆದ 'ರಜತಪೀಠದಿಂದ ರಜತಾದ್ರಿಗೆ', ಹೆಚ್. ಆರ್. ನಾಗರಾಜ್ ಅವರ 'ಹಿಮಾಚಲ ಪ್ರದೇಶ', ಜಿ. ಎ. ನರಸಿಂಹಮೂರ್ತಿಯವರ 'ಆಸೇತು ಹಿಮಾಚಲ ಯಾತ್ರೆ', ಎಂ. ವೆಂಕಟಾಚಲ ಭಟ್ಟ ಅವರ 'ಕಾಶ್ಮೀರ-ಅಮರನಾಥ ಯಾತ್ರೆ' ಇವೆಲ್ಲವುಗಳು ಪ್ರವಾಸಿಕರಿಗೆ ಬೇಕಾಗುವ ಸಿದ್ಧತೆ ಮಾಡಿಕೊಳ್ಳಲು ಅನುಕೂಲ ಸಾಹಿತ್ಯವಾಗಿವೆ. ಕ್ಷೇತ್ರಗಳ ಸತ್ಯಸಂಗತಿಗಳನ್ನು ಇವು ತಿಳಿಸಿಕೊಡುತ್ತವೆ.

ಕ್ಷೇತ್ರ ಯಾತ್ರೆಗಳ ಪ್ರವಾಸ ಸಾಹಿತ್ಯದಲ್ಲಿ ಕೆ. ಬಿ. ಪ್ರಭುಪ್ರಸಾದ ಅವರ 'ದೇಗುಲಗಳ ದಾರಿಯಲ್ಲಿ' ಅತ್ಯುತ್ತಮ ಗ್ರಂಥವಾಗಿದೆಯೆಂದು ಹೇಳಬೇಕು. ಇವರ ಪ್ರವಾಸದ ವರ್ಣನೆ ವಿ.ಸೀ.ಯವರ 'ಪಂಪಾಯಾತ್ರೆ'ಯನ್ನು ನೆನಪಿಗೆ ತರುತ್ತದೆ. ಪ್ರವಾಸ ಸಾಹಿತ್ಯದಲ್ಲಿರಬೇಕಾದ 'ದೃಷ್ಟಿ' ಮತ್ತು 'ರೂಪ' ಈ ಗ್ರಂಥದಲ್ಲಿದೆ. ಬಹು ಸಹಜವಾಗಿ, ನೇರವಾಗಿ, ಸರಸವಾಗಿ ತಮ್ಮ ಅನುಭವಗಳನ್ನು ಅವರು ಹೇಳಿದ್ದಾರೆ. ಈ ಗ್ರಂಥವನ್ನು ಓದುತ್ತಿರುವಾಗ ಸುಂದರ ಹೂವಿನ ತೋಟದಲ್ಲಿ ವಿಹರಿಸಿದಷ್ಟು ಆನಂದವಾಗುತ್ತದೆ. ನಾವೇ ಪ್ರವಾಸಮಾಡುತ್ತಿರುವಂತೆ ಅನುಭವವಾಗುತ್ತದೆ. ಅದೇ ಶ್ರೇಷ್ಠ ಸಾಹಿತ್ಯದ ಲಕ್ಷಣ.

ಇದೇ ವಿಭಾಗದಲ್ಲಿ ಇನ್ನೊಂದು ಉತ್ತಮ ಗ್ರಂಥವೆಂದರೆ 'ಮಹಾಪ್ರಸ್ಥಾನದ ಪಥದಲ್ಲಿ' ಎಂಬುದು. ಇದು ಮೂಲ ಬಂಗಾಳಿಯಲ್ಲಿದ್ದು ಎಂ. ಕೆ. ಭಾರತೀರಮಣಾಚಾರ್ಯ ಎಂಬವರಿಂದ ಕನ್ನಡದಲ್ಲಿ ಭಾಷಾಂತರವಾಗಿದೆ. ಪ್ರವಾಸವೂ ಉತ್ತಮ

ಕಾದಂಬರಿಯಾಗಬಲ್ಲುದು ಎಂಬುದನ್ನು ನಾವಿಲ್ಲಿ ಮನಗಾಣುವೆವು. ಈ ಗ್ರಂಥದಲ್ಲಿಯ ಶೈಲಿ ಸರಳವಾಗಿದ್ದು, ಕಥೆ ಹೇಳುವ ರೀತಿ ಆಕರ್ಷಕವಾಗಿದೆ.

ಕ್ಷೇತ್ರಯಾತ್ರೆ ಉದ್ದೇಶವನ್ನುಳಿದು ಕಲಾದೃಷ್ಟಿಯಿಂದ ಅಥವಾ ಬೇರೆ ಉದ್ದೇಶ ದಿಂದ ಭಾರತದಲ್ಲಿ ಪ್ರವಾಸಮಾಡಿದ ಕನ್ನಡಿಗರೂ ಇರುವರು. ಇವರಲ್ಲಿ ಶಿವರಾಮ ಕಾರಂತ, ಕೋ. ಚೆನ್ನಬಸಪ್ಪ, ಎಚ್. ಜಿ. ಜೋಶಿ ಮುಂತಾದವರು ಇರುವರು.

ಎಚ್. ಜಿ. ಜೋಶಿಯವರು ಬರೆದ 'ಶಿಲಾಹೃದಯ'ವು ಪತ್ರರೂಪದಲ್ಲಿದೆ. ಅಜಂತಾ ಮತ್ತು ಎಲ್ಲೋರ ಇವುಗಳ ಪ್ರವಾಸ ವರ್ಣನೆ ಈ ಗ್ರಂಥದಲ್ಲಿ ಬರುತ್ತದೆ. ಸ್ಥಳಗಳ ಕುತೂಹಲ ಹುಟ್ಟಿಸುವ ಆತ್ಮೀಯತೆ ಈ ಪತ್ರಗಳಲ್ಲಿದೆ. ಕಲಾವೈಭವ ವರ್ಣಿಸುವ ರೀತಿಯೂ ಚೆನ್ನಾಗಿದೆ. ಆದರೆ ಪ್ರಬಂಧದಲ್ಲಿ ಅವಶ್ಯವಾದ ಅನುಭವದ ನಿರೂಪಣೆ ಶ್ರೇಷ್ಠವಾಗಿಲ್ಲ. ಕೋ. ಚೆನ್ನಬಸಪ್ಪ ಅವರು ಬರೆದ 'ದಕ್ಷಿಣೇಶ್ವರ ದರ್ಶನ'ವೂ ಪತ್ರರೂಪದಲ್ಲಿ ಪ್ರಕಟವಾಗಿದೆ. ಪ್ರವಾಸಮಾರ್ಗದಲ್ಲಿ ಯೋಗಮಾರ್ಗವನ್ನು ನಿರೂಪಿಸುವ ಗ್ರಂಥ. ಅನುಭವದ ತೀಕ್ಷ್ಣತೆ ಕಡಿಮೆ. ಪ್ರವಾಸದಲ್ಲಿ ಪತ್ರಗಳನ್ನು ಬೇರೆ ಬೇರೆಯವರಿಗೆ ಬರೆದದ್ದರಿಂದ ವಿಚಾರಗಳ ಕೇಂದ್ರೀಕರಣಕ್ಕೆ ವ್ಯತ್ಯಯ ಬಂದಿದೆ. 'ದಕ್ಷಿಣೇಶ್ವರ ದರ್ಶನ'ದಲ್ಲಿ ಅರವಿಂದ ಯೋಗಿಗಳ ಪಾಂಡೀಚೇರಿ ದರ್ಶನವೂ ಬಂದಿವೆ. ಹೀಗಾಗಿ ಒಂದೇ ದಾರಿಯಲ್ಲಿ ಸಾಗಿದ ರೀತಿ ಈ ಗ್ರಂಥದಲ್ಲಿಲ್ಲ. ಆದರೆ ಕೆಲಕೆಲವು ಪುಟಗಳಲ್ಲಿ ಇವರ ಕವಿಹೃದಯ ಮಾತನಾಡಿದಾಗ, ಇವರ ಪ್ರವಾಸದ ವರ್ಣನೆ ಆಕರ್ಷಕವಾಗಿ ಬರುತ್ತದೆ.

ಶಿವರಾಮ ಕಾರಂತರ 'ಆಬೂವಿಂದ ಬರಾಮಕ್ಕೆ' ಒಳ್ಳೇ ಪ್ರವಾಸಸಾಹಿತ್ಯ ಗ್ರಂಥವಾಗಿದೆ. ಉತ್ತರ ಭಾರತದ ಅನೇಕ ಸ್ಥಳಗಳ ವರ್ಣನೆ ಈ ಗ್ರಂಥದಲ್ಲಿ ಬಂದಿದೆ. ನೃತ್ಯ, ನಾಟಕ, ಸಂಗೀತ, ಚಿತ್ರ, ಶಿಲ್ಪಶಾಸ್ತ್ರ ಈ ಕಲೆಗಳ ದೃಷ್ಟಿಯಿಂದ ಕಾರಂತರು ತಮ್ಮ ಅನುಭವಗಳನ್ನು ವ್ಯಕ್ತಮಾಡಿ ಬರೆದಿದ್ದಾರೆ. ಓದುಗರ ಕುತೂಹಲವನ್ನು ಕೆರಳಿಸುವ ಗ್ರಂಥ ಇದಾಗಿದೆ. ನಡುನಡುವೆ ಬರುವ ಹಾಸ್ಯ ಮನಸ್ಸಿಗೆ ಸಂತೋಷ ವನ್ನುಂಟುಮಾಡುತ್ತದೆ.

ಕನ್ನಡಿಗ ಭಾರತದ ಪ್ರವಾಸದ ಬಗ್ಗೆ ಬರೆದ ಗ್ರಂಥಗಳಿವು. ಆದರೆ ವಿದೇಶೀಯರು ಭಾರತಕ್ಕೆ ಪೂರ್ವಕಾಲದಿಂದಲೂ ಬಂದಿರುವರಷ್ಟೇ? ಎಷ್ಟೋ ಪ್ರವಾಸಿಗಳು ಭಾರತದ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಮಾಡಿರುವರಷ್ಟೇ? ಹೆರೊಡೊಟಸ್, ಟಾಲೆಮಿ ಫಾಹಿಯಾನ್, ಹೂಯನ್–ತ್ಸಾಂಗ್–ಭಾರತಕ್ಕೆ ಬಂದ ಇಂಥ ಪ್ರವಾಸಿಗರು ಒಬ್ಬರೇ, ಇಬ್ಬರೇ? ನೂರಾರು!! ಭಾರತದ ಬಗ್ಗೆ ಅವರು ಬರೆದಿಟ್ಟ ಪ್ರವಾಸದ ಕಥನಗಳನ್ನೆಲ್ಲಾ ಶ್ರಮಪಟ್ಟು ಸಂಕಲಿಸಿ ಎಚ್. ಎಲ್. ನಾಗೇಗೌಡ ಅವರು ಇದೀಗ 'ಪ್ರವಾಸಿ ಕಂಡ ಇಂಡಿಯಾ' ಎಂಬ ಗ್ರಂಥವನ್ನು ಪ್ರಕಟಿಸಿರುವರು. ಎರಡು ಸಂಪುಟಗಳಷ್ಟು ಅದು ಪ್ರಕಟವಾಗಿದ್ದು, ಇನ್ನೂ ಮೂರು ಸಂಪುಟ ಪ್ರಕಟವಾಗಲಿವೆ. ಎಚ್. ಎಲ್. ನಾಗೇಗೌಡ ಅವರ ಈ ಗ್ರಂಥ ಅಪೂರ್ವವಾಗಿದ್ದು, ಅಸಂಖ್ಯ ಸಂಗತಿ

ಗಳಿಂದ ತುಂಬಿಕೊಂಡಿದೆ. ವಿದ್ವತ್‌ಪೂರ್ಣವಾದ ಈ ಗ್ರಂಥ ಪ್ರವಾಸ ಸಾಹಿತ್ಯದಲ್ಲಿ ಅತ್ಯುತ್ಕೃಷ್ಟ ಕೃತಿಯಾಗಿದೆ. ಕನ್ನಡದಲ್ಲಿಯ ಪ್ರವಾಸಸಾಹಿತ್ಯಕ್ಕೆ ಇದು ಅತ್ಯುತ್ತಮ ಕಾಣಿಕೆಯೆಂದು ನಿಃಸಂಶಯವಾಗಿ ಹೇಳಬಹುದು.

೩. ಸಾಗರದಾಚೆಯ ಪ್ರವಾಸ ಸಾಹಿತ್ಯ

ಭಾರತದ ಸ್ವಾತಂತ್ರ್ಯದ ಪರ್ವಕಾಲದಿಂದ ದೇಶ ವಿದೇಶಗಳ ಪ್ರವಾಸಕ್ಕೆ ಸಾಕಷ್ಟು ಪ್ರಚೋದನೆ ದೊರೆತಿದೆ. ಈ ದೇಶ ವಿದೇಶಗಳಿಂದ ದೊರೆಯುವ ಶಿಷ್ಯವೇತನಗಳಿಂದಲೋ, ಸರಕಾರದ ರಾಯಭಾರಕ್ಕಾಗಿಯೋ ಪೂರ್ವ ಮತ್ತು ಪಶ್ಚಿಮದ ಜನ ಅಪೂರ್ವವಾಗಿ ಬೆರೆಯುತ್ತಿದ್ದಾರೆ. ವಿದೇಶಿ ಪ್ರವಾಸಿಕರ ಸಂಖ್ಯೆ ಪ್ರತಿಯೊಂದು ದೇಶದಲ್ಲಿಯೂ ಊರ್ಜಿತವಾಗುತ್ತಿದೆ.

ಯಾವುದೇ ಕಾರಣಗಳಿಂದ ಸಾಗರದಾಚೆ ಪ್ರವಾಸ ಕೈಕೊಂಡ ಕನ್ನಡಿಗರು ತಮ್ಮ ವಿಶೇಷ ಅನುಭವಗಳನ್ನು ಬರೆಹಗಳಲ್ಲಿ ವ್ಯಕ್ತಮಾಡಿದ್ದಾರೆ. ಆ ಬರೆಹಗಳು ಲೇಖನ ಮಾಲೆಗಳಲ್ಲಿ ಮೊದಲು ಪತ್ರಿಕೆಗಳಲ್ಲಿ ಪ್ರಕಟವಾಗಿ, ತದನಂತರ ಪುಸ್ತಕರೂಪದಲ್ಲಿ ಪ್ರಸಿದ್ಧವಾದುದು ಉಂಟು. ಇನ್ನು ಹಲವರ ಲೇಖನಗಳು ಪುಸ್ತಕರೂಪದಲ್ಲಿ ಪ್ರಕಟ ವಾಗದೆಯೆ ಹಾಗೆಯೇ ಉಳಿದಿವೆ.

ಸಾಗರದಾಚೆಯ ಪ್ರವಾಸಸಾಹಿತ್ಯದಲ್ಲಿ ಗ್ರಂಥಗಳು ತಮ್ಮ ಮೇಲ್ಮೆಯನ್ನು ಒಂದಕ್ಕೊಂದು ಸ್ಪರ್ಧಿಸುವಂತೆ ಬೆಳೆದಿವೆ. ಇವುಗಳಲ್ಲಿ ಯೂರೋಪ ದೇಶಗಳ ಬಗ್ಗೆ ಬರೆದ ಪುಸ್ತಕಗಳು ಸಾಕಷ್ಟಿವೆ. ಹಿಂದಕ್ಕೆ ವಿ. ಕೃ. ಗೋಕಾಕರು 'ಸಮುದ್ರದಾಚೆ ಯಿಂದ' ಎಂಬ ಗ್ರಂಥವನ್ನು ಬರೆದು ಪ್ರವಾಸಸಾಹಿತ್ಯಕ್ಕೆ ಶ್ರೇಷ್ಠ ಸ್ಥಾನವನ್ನು ಒದಗಿಸಿಕೊಟ್ಟರು. ಈ ಇಪ್ಪತ್ತೈದು ವರುಷಗಳಲ್ಲಿ ಪ್ರಕಟವಾದ ಗ್ರಂಥಗಳಲ್ಲಿ ಶಿವರಾಮ ಕಾರಂತ, ಬಿ. ಜಿ. ಎಲ್. ಸ್ವಾಮಿ ಮುಂತಾದವರು ಶ್ರೇಷ್ಠ ಕೃತಿಗಳನ್ನು ರಚಿಸಿದ್ದಾರೆ.

ಪ್ರವಾಸವೆಂದರೆ ಹುಚ್ಚು ಶಿವರಾಮ ಕಾರಂತರಿಗೆ. 'ಮೊದಲಿನಿಂದಲೂ ನಾನು ಸಂಚಾರಿ ಪ್ರೇಮಿ '[6] ಎಂದು ಶಿವರಾಮ ಕಾರಂತರು ತಮ್ಮ ಆತ್ಮಚರಿತ್ರೆಯಾದ 'ಹುಚ್ಚು ಮನಸ್ಸಿನ ಹತ್ತು ಮುಖಗಳು' ಅದರಲ್ಲಿ ನುಡಿದಿರುವರು. ದ. ಬಾ. ಕುಲಕರ್ಣಿಯವರು ಅವರನ್ನು 'ತಿರುಗಲ ತಿಪ್ಪ '[7] ಎಂದು ಕರೆದದ್ದು ಯೋಗ್ಯವೇ ಆಗಿದೆ. ಹೆರವರ ಹಣದಿಂದ ಸುಖಪ್ರವಾಸವನ್ನು ಕೈಕೊಂಡವರು ಅನೇಕರಿರುವರು. ಆದರೆ ಪ್ರವಾಸ ಮಾಡಬೇಕೆಂಬ ಒಂದೇ ಒಂದು ಹುಚ್ಚು ಮನಸ್ಸಿನಿಂದ ವಿದೇಶ ಪ್ರವಾಸವನ್ನು ಮಾಡಿದ ಕನ್ನಡಿಗರು ತೀರ ವಿರಲ. ಶಿವರಾಮ ಕಾರಂತರು ಯುರೋಪದ ಅನೇಕ ದೇಶಗಳಲ್ಲಿ ಪ್ರವಾಸಮಾಡಿ, ತಮ್ಮ ಅನುಭವಗಳನ್ನು 'ಅಪೂರ್ವ ಪಶ್ಚಿಮ'ದಲ್ಲಿ ಬರೆದಿರುವರು. ನಿಜವಾಗಿಯೂ ಈ ಗ್ರಂಥ ಅಪೂರ್ವವೇ ಆಗಿದೆ. ತಮ್ಮ ಪ್ರವಾಸದಲ್ಲಿ ನೃತ್ಯಕಲೆ, ಚಿತ್ರಕಲೆ, ಸಾಹಿತ್ಯ ಇವುಗಳಿಗೆ ಹೆಚ್ಚು ಪ್ರಾಧಾನ್ಯ ಕೊಟ್ಟಿದ್ದಾರೆ ಶಿವರಾಮ ಕಾರಂತರು. ವಿದೇಶಿ ಜನರ ರೀತಿನೀತಿಗಳನ್ನು ಕೂಲಂಕಷವಾಗಿ ತಿಳಿದು

ಕೊಂಡು, ಕೆಲವೊಂದು ಕಡೆಗೆ ತಮ್ಮ ತೀಕ್ಷ್ಣವಾದ ಅನುಭವದ ಮಾತುಗಳನ್ನು ಹೇಳಿರುವರು. ಪ್ರವಾಸದ ಕೊನೆಗೆ ಶಿವರಾಮ ಕಾರಂತರು ಕೇಳುತ್ತಾರೆ "ಅಲ್ಲಿ ಕಂಡ ನೋಟ, ಜನಗಳ ಸಾಹಸ, ಸಂಸ್ಕೃತಿ ಪ್ರೇಮ, ಬಾಳಬೇಕೆಂಬ ಹಟ ನಿನ್ನ ಜನ ತಾಳಿಯಾರೇ ? ಅಥವಾ ತಾವೇನೇ ಆತ್ಮಜ್ಞಾನಿಗಳಾದ ಮಹಾ ಜನಗಳು, ಲೌಕಿಕದಲ್ಲಿ ಮುಳುಗಿದ ಪಾಶ್ಚಾತ್ಯ ಪ್ರಪಂಚವನ್ನು ಎತ್ತಿ ಉಳಿಸುವ ಹೊಣೆಯನ್ನು ಹೊತ್ತವರು ಎಂದು ಕೂಗಿಯಾರೇ ? "[8] ಉತ್ತರ ಸಿಗಲಾರದ ಸಮಸ್ಯೆಯಿದು !

ಕೆ. ಆರ್. ಕಾರಂತ ಅವರೂ ಯರೋಪ ಪ್ರವಾಸವನ್ನು ಮಾಡಿ, 'ಪ್ರವಾಸಿಯ ಪತ್ರಗಳು' ಎಂಬ ಗ್ರಂಥದಲ್ಲಿ ತಮ್ಮ ಅನುಭವದ ವಿವರಗಳನ್ನು ಕೊಟ್ಟಿರುವರು. ಐರೋಪ್ಯ ಜನರ ಜನಜೀವನವನ್ನು ತಿಳಿದುಕೊಳ್ಳಲು ಈ ಗ್ರಂಥವು ಉಪಯುಕ್ತವಾಗಿದೆ. ಬಹು ಸರಳವಾದ ಶೈಲಿಯಲ್ಲಿ ತಮ್ಮ ಅನುಭವಗಳನ್ನು ವಿವರಿಸಿರುವರು. ಯುರೋಪ ದಲ್ಲಿಯ ವಿವಿಧ ದೇಶಗಳನ್ನು ಕುರಿತು ದಿನಕರ ದೇಸಾಯಿ ಅವರು 'ನಾ ಕಂಡ ಪಡುವಣ'ವನ್ನು ಬರೆದಿರುವರು. 'ನಡೆದುಬಂದ ದಾರಿ'ಯ ಮೂರನೆಯ ಸಂಪುಟದಲ್ಲಿ ಇದು ಪ್ರಕಟವಾಗಿದೆ. ದಿನಕರ ದೇಸಾಯಿ ಸಮಾಜ ಸೇವೆಗಾಗಿ ಹೆಣಗಾಡಿದವರು; ಕೂಲಿಕಾರರ ಮುಖಂಡರು. ಹೀಗಾಗಿ ಕೂಲಿಕಾರರ ಜೀವನದ ಬಗ್ಗೆ ಅನೇಕ ಮಾತು ಈ ಗ್ರಂಥದಲ್ಲಿ ಬರುತ್ತವೆ. ನಡು ನಡುವೆ ಕೂಲಿಕಾರರ ಸಂಘಟನೆಯ ಬಗ್ಗೆ ವಿವರ ಕೊಡುವುದರಿಂದ, ಕಥನ ಕಲೆಯಲ್ಲಿರಬೇಕಾದ ಸ್ವಾರಸ್ಯ ಕಡಿಮೆಯಾಗುತ್ತದೆ. ಇವರ ಕರ್ನಾಟಕ ಏಕೀಕರಣದ ಅಭಿಮಾನ ಹೆಚ್ಚಿನದು. ಇಂಗ್ಲೆಂಡಿನಲ್ಲಿದ್ದಾಗಲೂ ಪೆಥಿಕ್ ಲಾರೆನ್ಸರ ಕೂಡ ಮಾತನಾಡಿದರಂತೆ ಇದರ ಬಗ್ಗೆ ! ಸಾರಿಗೆ ವ್ಯವಸ್ಥೆ, ಪಾಕಶಾಸ್ತ್ರ, ಶಿಸ್ತು ಮುಂತಾದವುಗಳ ಬಗ್ಗೆ ಕಥಾರೂಪವಾಗಿ ಕುತೂಹಲಕಾರಿಯಾದ ಸಂಗತಿಗಳನ್ನು ಇವರು ಕೊಟ್ಟಿರುವರು.

ನವರತ್ನ ರಾಮ್ ಅವರು ಬರೆದ 'ಪ್ಯಾರಿಸ್ಸಿನಿಂದ ಪ್ರೇಯಸಿಗೆ' ಎಂಬ ಗ್ರಂಥವು ಆಕರ್ಷಕವಾದ ಸಂಗತಿಗಳಿಂದ ಮತ್ತು ಶೈಲಿಯಿಂದ ಒಡಗೂಡಿದೆ. ಇದು ಪತ್ರ ರೂಪದಲ್ಲಿರುವುದೂ ವಿಶಿಷ್ಟವಾಗಿದೆ. ಜಗತ್ತಿನಲ್ಲಿಯೇ ಮೋಹಕ ಪಟ್ಟಣವಾದ ಪ್ಯಾರಿಸ್ಸಿನಿಂದ ಮನದನ್ನ ಮನದಣಿ ತನ್ನ ಪ್ರೇಯಸಿಗೆ ಪತ್ರ ಬರೆಯದೆ ಮತ್ತೆ ಎಲ್ಲಿಂದ ಬರೆಯಬೇಕು ? 'ಅವರವರ ದೃಷ್ಟಿ ಅವರವರಿಗೆ' ಎಂದು ಹೇಳುತ್ತಾರೆ. ನವರತ್ನರಾಮ್ ಅವರು ಆದೇ ಮದುವೆಯಾದ ಯುವಕರು. ಪ್ಯಾರಿಸದಲ್ಲಿಯ ಯಾವ ಕಾಮುಕ ದೃಶ್ಯಗಳನ್ನು ಕಂಡು ಕಣ್ಣು ಮುಚ್ಚಿಕೊಳ್ಳಬೇಕೆಂದು ಶಿವರಾಮಕಾರಂತರು ಬಯಸಿರು ವರೋ, ಅವುಗಳನ್ನು ಪ್ರೀತಿಯಿಂದಲೇ ಕಣ್ದೆರೆದು ಈ ಪ್ರವಾಸಿಗರು ನೋಡಿರುವರು. ತಮ್ಮ ಒಲವಿನ ಸಂಗಾತಿಗೆ ಸರಿಹೋಗುವಂತೆ ತಮ್ಮ ಅನುಭವದ ವಿವರಗಳನ್ನು ಕೊಟ್ಟಿರುವರು. ಪ್ಯಾರಿಸ್ಯದಲ್ಲಿಯ ಜನರ ವಿಲಾಸ ಭೋಗಗಳ ಚಿತ್ರಗಳನ್ನು ಚೆನ್ನಾಗಿ ಬಣ್ಣಿಸಿರುವರು. ಆ ಜನರ ಕೆಲವು ವಿಚಿತ್ರ ರೀತಿಗಳನ್ನು ವಿವರಿಸಿರುವರು. ಇವರ ಪ್ರವಾಸ ಕಥನದಲ್ಲಿ ಮೋಹಕತೆಯಿದೆ. ಪ್ಯಾರಿಸ್ಸಿನ ಸವಿನೆನಹು ನಮ್ಮ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿಯುವಂತೆ ಇವರು ಬರೆದಿರುವರು.

ಜಪಾನದ ಪ್ರವಾಸವನ್ನು ಕುರಿತು ವಿ.ಕೃ. ಗೋಕಾಕ ಅವರು 'ಸಮುದ್ರದೀಚೆಯಿಂದ' ಎಂಬ ಗ್ರಂಥವನ್ನು ಬರೆದಿರುವರು. ಟೋಕಿಯೋಕ್ಕೆ ಪೆನ್ ಕಾಂಗ್ರೆಸಿಗೆ ಹೋದ ಗೋಕಾಕ ಅವರು ತಮ್ಮ ಜಪಾನದ ಅನುಭವಗಳನ್ನು ಮಾರ್ಮಿಕವಾಗಿ ಚಿತ್ರಿಸಿದ್ದಾರೆ. ವಿಮಾನ ಬಂದರಗಳಲ್ಲಿ ಭಾರತೀಯರು ಮತ್ತು ಉಳಿದವರು ಪ್ರವಾಸಿಕರ ಕೂಡ ನಡೆದುಕೊಳ್ಳುವ ರೀತಿಯ ವೈಷಮ್ಯ ಚೆನ್ನಾಗಿ ಚಿತ್ರಿತವಾಗಿದೆ. ಈ ಗ್ರಂಥದಲ್ಲಿ ಜಪಾನಿ ನಾಟಕ, ಕಾವ್ಯ ಮತ್ತು ಇನ್ನಿತರ ಸಾಹಿತ್ಯ ಬಗ್ಗೆ ಒಳ್ಳೆ ಮಾಹಿತಿ ಸಿಗುತ್ತದೆ. ಪಾಂಡೀಚೇರಿ ಆಶ್ರಮದ ಮಾತಾಜಿಯವರು ಜಪಾನದಲ್ಲಿ ಇದ್ದ ಬಗ್ಗೆಯೂ ಕೆಲವು ವಿಶೇಷ ಸಂಗತಿಗಳು ಬಂದಿವೆ. ಆದರೆ ಜಪಾನದಲ್ಲಿ ಏನು ತಿಳಿದುಕೊಳ್ಳಬೇಕೆಂಬುದರ ಬಗ್ಗೆ ಕುತೂಹಲವಿರುತ್ತದೆಯೋ ಅಂಥ ಸಂಗತಿಗಳ ವಿಶೇಷ ವಿವರಗಳು ಈ ಗ್ರಂಥದಲ್ಲಿ ಬರುವುದಿಲ್ಲ. ಪ್ರವಾಸದ ಈ ಗ್ರಂಥವು ಹೆಚ್ಚಾಗಿ ಸಾಹಿತ್ಯಕ ಮತ್ತು ಆಧ್ಯಾತ್ಮಿಕ ವಿಚಾರಗಳಿಂದ ಕೂಡಿಕೊಂಡಿದೆ. 'ಸಮುದ್ರದಾಚೆಯಿಂದ' ಬರೆದಾಗ ವಿ.ಕೃ. ಗೋಕಾಕರು ಯೌವನಸ್ಥರಾಗಿದ್ದರು; ತಮ್ಮ ಧರ್ಮಪತ್ನಿಗೆ ಬರೆದ ಪತ್ರಗಳನ್ನೇ ಪ್ರಕಟಿಸಿದರು. ಆ ಗ್ರಂಥದಲ್ಲಿ ಇರುವ ವಿಚಾರಗಳ ಧೋರಣೆಗೂ, 'ಸಮುದ್ರದೀಚೆಯಿಂದ' ಗ್ರಂಥದಲ್ಲಿರುವ ವಿಚಾರಸರಣಿಗೂ ಪ್ರವಾಸ ಕಥನದ ದೃಷ್ಟಿಯಿಂದ ಅಪಾರ ಭೇದವಿದೆ.

ಭಾರತದ ಪೂರ್ವಕ್ಕಿರುವ ಜಪಾನ, ಹಾಂಗ್‌ಕಾಂಗ ಮುಂತಾದವುಗಳ ಬಗ್ಗೆ ಮತ್ತು ಅಮೇರಿಕೆಯ ಬಗ್ಗೆ ಬರೆದ 'ವಿಶ್ವ ಪರ್ಯಟಣೆ' ಎಂಬ ಗ್ರಂಥ ಇದೀಗ ಪ್ರಕಟವಾಗಿದೆ. ಇದನ್ನು ಕೆ.ಪಿ.ಎಸ್. ಮೆನನ್ ಅವರು ಇಂಗ್ಲೀಷಿನಲ್ಲಿ ಬರೆದದ್ದು, ಅದರ ಕನ್ನಡ ಅನುವಾದವನ್ನು ಮಾ.ಭೀ. ಶೇಷಗಿರಿರಾವ್ ಅವರು ಮಾಡಿರುವರು. ಇದು ಅನುವಾದ ಮಾಡಲ್ಪಟ್ಟ ಗ್ರಂಥವಾದರೂ, ಕನ್ನಡಕ್ಕೆ ಅತ್ಯುಪಯುಕ್ತವಾದ ಹೊತ್ತಗೆಯಾಗಿದೆ. ಕೆ.ಪಿ.ಎಸ್. ಮೆನನ್ ಅವರು ವಿಶ್ವವ್ಯಾಪಕತೆಯ ಅನುಭವವುಳ್ಳವರು. ಜಗತ್ತಿನ ತುಂಬಾ ಅವರು ಪ್ರವಾಸಮಾಡಿರುವರು—ಭಾರತ ಸರಕಾರದ ಉನ್ನತ ಅಧಿಕಾರದ ಸ್ಥಾನದಲ್ಲಿದ್ದು! ಅವರ ಅನುಭವ ಮಾತು ಅಮೃತದಂತೆ! ಓದುಗರಿಗೆ ರುಚಿಕಟ್ಟಾಗುವಂತೆ ತಮ್ಮ ಪ್ರವಾಸ ಕಥನವನ್ನು ಅವರು ಕೊಟ್ಟಿರುವರು. 'ಎಷ್ಟು ಊರು! ಏನು ಜನ? ಎಂಥೆಂಥ ಸಾಮಾಜಿಕ ರೀತಿ ನೀತಿಗಳು!!' ಎಂದು ಉದ್ಗಾರ ತೆಗೆಯುತ್ತ ಈ ಗ್ರಂಥವನ್ನು ಓದುತ್ತೇವೆ. ಈ ಗ್ರಂಥವು ದಿನಚರಿಯ ರೂಪದಲ್ಲಿದೆ. ಪ್ರವಾಸ ಸಾಹಿತ್ಯದಲ್ಲಿ ದಿನಚರಿಯ ರೂಪ ಬಹಳ ಯೋಗ್ಯವಾಗಿ ಹೊಂದಿಕೊಳ್ಳುತ್ತದೆ.

ಅಮೇರಿಕೆಯ ಪ್ರವಾಸದ ಕಥನಗಳು ಬಹಳಷ್ಟು ಪತ್ರಿಕೆಗಳಲ್ಲಿ ಬಂದಿವೆ. ಸ.ಸ. ಮಾಳವಾಡರು 'ಪ್ರಪಂಚ' ಪತ್ರಿಕೆಯಲ್ಲಿ ತಮ್ಮ ಅಮೇರಿಕೆಯ ಪ್ರವಾಸವನ್ನು ಕುರಿತು ಲೇಖನಮಾಲೆ ಕೊಟ್ಟಿರುವರು. ಬಿ.ವಿ. ರಾಮನ್ ಅವರು ಸುಪ್ರಸಿದ್ಧ ಜ್ಯೋತಿಷಿಗಳು. ಇವರೂ ತಮ್ಮ ವಿದೇಶಿ ಪ್ರವಾಸದಲ್ಲಿ ಬಂದ ಅನುಭವಗಳನ್ನು 'ಸಂಯುಕ್ತ ಕರ್ಣಾಟಕ' ಸಾಪ್ತಾಹಿಕದಲ್ಲಿ ಪ್ರಕಟಿಸಿರುವರು. ಶ್ರೀಮತಿ ಶಾಂತಿ ಶಹಾ ಅವರು 'ಕರ್ಮವೀರ'ದಲ್ಲಿ ಬರೆದಿರುವರು. ಇವೂ ಅಲ್ಲದೇ ತೀ.ನಂ. ಶ್ರೀಕಂಠಯ್ಯನವರು,

ರಾ.ಯ. ಧಾರವಾಡಕರ ಅವರು, ರಂ. ಶ್ರೀ ಮುಗಳಿಯವರು ತಮ್ಮ ವಿದೇಶ ಪ್ರವಾಸಗಳ ಬಗ್ಗೆ ಬಿಡಿ ಲೇಖನಗಳನ್ನು ಬೇರೆ ಬೇರೆ ಪತ್ರಿಕೆಗಳಲ್ಲಿ ಪ್ರಸಿದ್ಧಿಸಿರುವರು. ಇವರೆಲ್ಲರ ಅನುಭವದ ಕಥನಗಳು ಪುಸ್ತಕ ರೂಪದಲ್ಲಿ ಇನ್ನು ಪ್ರಕಟವಾಗಬೇಕಾಗಿದೆ.

'ಸಾಗರದಾಚೆ'ಯಲ್ಲಿ ಪತ್ರಿಕೋದ್ಯಮಿಯಾದ ನಾಡಿಗ ಕೃಷ್ಣಮೂರ್ತಿಯವರು ಅಮೇರಿಕೆಯನ್ನು ಕಂಡ ರೀತಿಯನ್ನು ನಾವು ನೋಡಬಹುದು. ಕೃಷ್ಣಮೂರ್ತಿಯವರು ತಮ್ಮ ಬಹುದಿನದ ಕನಸನ್ನು ಹೇಗೆ ನನಸಾಗಿ ಮಾಡಿಕೊಂಡರು ಎಂಬುದು ಈ ಪ್ರವಾಸ ಪುಸ್ತಕದಲ್ಲಿ ಚಿತ್ರಿತವಾಗಿದೆ. ಹಡಗಿನ ಪ್ರವಾಸದ ವರ್ಣನೆ, ಅಮೇರಿಕೆಯಲ್ಲಿಯ ಪತ್ರಿಕೋದ್ಯಮ, ಅಮೇರಿಕೆಯ ವಿದ್ಯಾರ್ಥಿ ಸಂಘಗಳು ಇಂಥ ವಿಷಯಗಳ ವಿವೇಚನೆ ಈ ಪುಸ್ತಕದಲ್ಲಿ ಬಂದಿದೆ. ನಾಡಿಗ ಕೃಷ್ಣಮೂರ್ತಿಯವರ ಸಾಹಸ ಹೆಚ್ಚಿನದು. ಇಂಥ ಸಾಹಸಿ ಪ್ರವಾಸಿಗರು ಕನ್ನಡದಲ್ಲಿ ವಿರಳ. ಇಂಥ ಮನೋವೃತ್ತಿಯ ಹೆಮ್ಮೆ ಈ ಪುಸ್ತಕದ ತುಂಬಾ ವ್ಯಕ್ತವಾಗಿದೆ. ಆದರೆ ಅಮೇರಿಕೆಯಲ್ಲಿ ಕಂಡ ಸನ್ನಿವೇಶಗಳ ರಸವತ್ತಾದ ವಿವರಣೆಯಾಗಲಿ, ಕುತೂಹಲ ಕೆರಳಿಸುವ ವಿಶೇಷ ಸಂಗತಿಗಳಾಗಲಿ ಈ ಪುಸ್ತಕದಲ್ಲಿ ಕಂಡುಬಂದಿಲ್ಲ. ಪತ್ರಿಕೋದ್ಯಮ ದೃಷ್ಟಿಯಿಂದ ವಿಷಯಗಳನ್ನು ಸಂಗ್ರಹಿಸುವ ಪ್ರವೃತ್ತಿ ಮಾತ್ರ ಕಂಡುಬಂದಿದೆ.

ಅಮೇರಿಕೆಯನ್ನು ಕುರಿತು ಬರೆದ ಅತ್ಯುತ್ತಮ ಗ್ರಂಥವೆಂದರೆ ಬಿ. ಜಿ. ಎಲ್. ಸ್ವಾಮಿ ಅವರು ಬರೆದ 'ಅಮೇರಿಕದಲ್ಲಿ ನಾನು' ಎಂಬುದು. ಪ್ರವಾಸ ಸಾಹಿತ್ಯದಲ್ಲಿ ಇದಕ್ಕೆ ಒಳ್ಳೇ ಸ್ಥಾನವಿದೆ. ಸ್ವಾಮಿಯವರು ಸನ್ನಿವೇಶಗಳನ್ನು ವಿವರವಾಗಿ ಮತ್ತು ಮಾರ್ಮಿಕವಾಗಿ ಬಣ್ಣಿಸಿರುವರು. ಭಾರತೀಯ ಮತ್ತು ಅಮೇರಿಕೆಯ ಜನಜೀವನದಲ್ಲಿ ಏನೇನು ವ್ಯತ್ಯಾಸಗಳಿವೆ–ಯೆಂಬುದನ್ನು ಪ್ರತಿಯೊಂದು ಸನ್ನಿವೇಶದಲ್ಲಿ ನಿರೂಪಿಸಿದ್ದಾರೆ. ಅನುಭವ ತೀಕ್ಷ್ಣತೆಯಿದ್ದರೆ ಉತ್ತಮ ಸಾಹಿತ್ಯ ನಿರ್ಮಾಣವಾಗಬಲ್ಲುದೆಂಬುದನ್ನು ಈ ಪ್ರವಾಸ ಸಾಹಿತ್ಯದ ಗ್ರಂಥದಲ್ಲಿ ನೋಡಿಕೊಳ್ಳಬಹುದು. ಕೆಲವು ಹಾಸ್ಯಾಸ್ಪದ ವರ್ಣನೆಗಳೂ, ಸಂಭಾಷಣೆಗಳೂ ಬಂದಿವೆ. ಅತ್ಯಂತ ಸಹಜವಾದ ರೀತಿಯಲ್ಲಿ ಎಲ್ಲವನ್ನು ಸ್ವಾಮಿಯವರು ಹೇಳುತ್ತ ಹೋಗುತ್ತಾರೆ. ಅವರು ಅಮೇರಿಕನ್ನ ನಾಣ್ಯದ ಎರಡೂ ಮುಖ ತಿಳಿದುಕೊಂಡಿರುವರು. ಗುಣದೋಷಗಳೆರಡೂ ಅವರಿಗೆ ಗೊತ್ತಿವೆ. ಆದರೂ ಸ್ವಾಮಿಯವರು ಗುಣಗ್ರಾಹಿಗಳು. ತಮ್ಮ ಪ್ರವಾಸ ಕಥನದಲ್ಲಿ ಸ್ವಾರಸ್ಯ ಕೆಡದಂತೆ ಎಲ್ಲವನ್ನು ಹೇಳಿರುವರು. ಪ್ರವಾಸ ಸಾಹಿತ್ಯದಲ್ಲಿ ಇದು ಶ್ರೇಷ್ಠವಾದ ಕೃತಿಯೆಂದು ನಿಃಸಂಶಯವಾಗಿ ಹೇಳಬಹುದು.

ಹೀಗೆ ಪ್ರವಾಸ ಸಾಹಿತ್ಯದಲ್ಲಿ ಕನ್ನಡಿಗ ವಿಶ್ವಮಾನವನಾಗಿದ್ದಾನೆ!

ಈ ಪ್ರವಾಸ ಸಾಹಿತ್ಯದ ಪ್ರಭಾವ ಉಳಿದ ಸಾಹಿತ್ಯ ಪ್ರಕಾರಗಳಿಗೂ ಬಿದ್ದಿದೆ. ಕನ್ನಡಿಗ ಬೇರೆ ಬೇರೆ ದೇಶಗಳಿಗೆ ಪ್ರವಾಸಮಾಡಿದ್ದರಿಂದ ಅವನ ಅನುಭವ ವಿಶಾಲವಾಗುತ್ತ ನಡೆದಿದೆ. ಅವನ ದೃಷ್ಟಿಯೂ ವಿಶಾಲವಾಗುತ್ತಿದೆ. ಭಾರತದ ತುಂಬಾ ಪ್ರವಾಸಮಾಡಿದ ಸನ್ನಿವೇಶಗಳನ್ನು ಪೋಣಿಸಿ 'ಅಳ–ಸಿರಾಳ' ಎಂಬ ಕಾದಂಬರಿಯನ್ನು

ಶಿವರಾಮ ಕಾರಂತರು ಬರೆದಿರುವರು. ಸ್ವತಂತ್ರ ಸಾಮಾಜಿಕ ಕನ್ನಡ ಕಾದಂಬರಿಯಾದ 'ಸಮರಸವೇ ಜೀವನ' ಎಂಬ ಬೃಹತ್ ಕಾದಂಬರಿಯಲ್ಲಿ ವಿ. ಕೃ. ಗೋಕಾಕ ಅವರು ಕೆಲವು ಸನ್ನಿವೇಶಗಳನ್ನು ಇಂಗ್ಲೆಂಡದಿಂದಲೇ ಕೊಟ್ಟಿರುವರು. ಯು. ಆರ್. ಅನಂತ ಮೂರ್ತಿ, ರಾಮಚಂದ್ರಶರ್ಮಾ ಮುಂತಾದ ಕೆಲವು ನವ್ಯಲೇಖಕರು ವಿದೇಶಗಳ ವಾತಾವರಣದ ಹಿನ್ನೆಲೆಯಲ್ಲಿಯೇ ತಮ್ಮ ಕಥೆಗಳನ್ನು ಬರೆದಿರುವರು. ಹೀಗೆ ಕನ್ನಡಿಗರ ದೇಶ ವಿದೇಶಗಳ ಸಂಚಾರವು ಹೊಸ ಹೊಸ ಸಾಹಿತ್ಯ ನಿರ್ಮಿತಿಗೆ ಆಧಾರವಾಗಿದೆ. ಪ್ರವಾಸ ಸಾಹಿತ್ಯದಲ್ಲಿಯ ಎಷ್ಟೋ ಮಾತುಗಳು, ಸನ್ನಿವೇಶಗಳು, ಜೀವನ ಚಿತ್ರಗಳು ಕೆಲವು ಹೊಸ ಕಥಾವಸ್ತುಗಳಿಗೆ ಪ್ರೇರಣೆ ಕೊಡುವಂತಿವೆ.

ಆದ್ದರಿಂದ ಕನ್ನಡದಲ್ಲಿಯ ಪ್ರವಾಸ ಸಾಹಿತ್ಯ ಕನ್ನಡ ಸಾಹಿತ್ಯಕ್ಕೇನೆ ಸಂಪತ್ತು ಇದ್ದಂತೆ. ಈ ಸಾಹಿತ್ಯವು ಬೆಳೆದಂತೆ ನಮ್ಮಲ್ಲಿ ಹೊಸ ಚೇತನ, ಹೊಸ ದೃಷ್ಟಿ ಇವೂ ಸಹ ಉದಯವಾದಾವು ಎಂದು ಎನಿಸುತ್ತದೆ.

ಅಡಿ ಟಿಪ್ಪಣಿ

1 ಕೆ.ಪಿ.ಎಸ್. ಮೆನನ್ ಅವರ 'ವಿಶ್ವ ಪರ್ಯಟಣೆ' ಪುಟ ೧೧

2 Earnest Raymond 'Through Literature to Life'

3 ಶ್ರೀ-ರಂಗ-ಮಂಗರ 'ಮುಕ್ಕಣ್ಣಯಾತ್ರೆ'ಯಲ್ಲಿಯ ಮುನ್ನುಡಿ

4 ಆದೇ

5 'ಕನ್ನಡ ನುಡಿ' ಬೆಳ್ಳಿಯ ಸಂಚಿಕೆಯಲ್ಲಿ (ಸಂಪುಟ ೨೬ ಸಂಚಿಕೆ ೧೨ ; ಕ್ರಿ.ಶ. ೧೯೬೩) ಇದರಲ್ಲಿ ಶ್ರೀ ಸಾ. ಶಿ. ಮರುಳಯ್ಯ ಅವರ 'ಪ್ರವಾಸ ಸಾಹಿತ್ಯ' ಎಂಬ ಲೇಖನದಲ್ಲಿ

6 ಶಿವರಾಮ ಕಾರಂತರ 'ಹುಚ್ಚು ಮನಸ್ಸಿನ ಹತ್ತು ಮುಖಗಳು' ಎಂಬ ಗ್ರಂಥದಲ್ಲಿ, ಪುಟ ೧೪೦

7 ದ. ಬಾ. ಕುಲಕರ್ಣಿಯವರ 'ಹಕ್ಕಿನೋಟ'ದಲ್ಲಿ ಶಿವರಾಮ ಕಾರಂತರ ಬಗ್ಗೆ ಇರುವ ಲಲಿತಪ್ರಬಂಧದಲ್ಲಿ

8 ಶಿವರಾಮ ಕಾರಂತರ 'ಅಪೂರ್ವ ಪಶ್ಚಿಮ'ದಲ್ಲಿ, ಪುಟ ೩೫೦

ಸಹಾಯಕ ಪ್ರಬಂಧಗಳು

1 'ಪ್ರವಾಸ ಸಾಹಿತ್ಯ'—ಶ್ರೀ ಸಾ. ಶಿ. ಮರುಳಯ್ಯ ಅವರಿಂದ ('ಕನ್ನಡ ನುಡಿ' ಬೆಳ್ಳಿ ಸಂಚಿಕೆ. ಸಂಪುಟ ೨೬ ; ಸಂಚಿಕೆ ೧೨)

2 'ಮುಕ್ಕಣ್ಣಯಾತ್ರೆ' ಪುಸ್ತಕದಲ್ಲಿಯ 'ಮುನ್ನೋಟ'—ಬರೆದವರು ವಿ. ಎಂ ಇನಾಮದಾರ ಅವರು.

ಎಚ್. ಜೆ. ಲಕ್ಕಪ್ಪಗೌಡ

ಕಾದಂಬರಿಗಳು*

೧

ಕನ್ನಡ ಕಾದಂಬರಿಕ್ಷೇತ್ರದಲ್ಲಿ ಕಳೆದ ಇಪ್ಪತ್ತೈದು ವರ್ಷಗಳಲ್ಲಿ ನಡೆದಿರುವ ಕೃಷಿಯನ್ನು ನಿರುಕಿಸುವಾಗ ಸಂತೋಷ ವಿಷಾದಗಳೆರಡೂ ಒಡನೊಡನೆಯೇ ಉದ್ಭವಿಸುತ್ತವೆ. ಈ ಅವಧಿಯಲ್ಲಿ ಸುಮಾರು ನೂರಐವತ್ತಕ್ಕೂ ಹೆಚ್ಚುಮಂದಿ ಲೇಖಕರು ಸುಮಾರು ಸಾವಿರದ ಇನ್ನೂರಕ್ಕಿಂತಲೂ ಹೆಚ್ಚು ಕಾದಂಬರಿಗಳನ್ನು ಸೃಷ್ಟಿಸಿದ್ದಾರೆ, ಕಡೆದಿದ್ದಾರೆ, ಕೊರೆದಿದ್ದಾರೆ. ಸುಲಭ ಕೀರ್ತಿಕಾಮನೆಯಿಂದ, ಪ್ರಕಟಿಸುವವರಿದ್ದಾರೆಂಬ ಬಂಡಧೈರ್ಯದಿಂದ ಚಲನಚಿತ್ರದಲ್ಲಿ ಕಂಡ, ಪತ್ರಿಕೆಯಲ್ಲಿ ಓದಿದ, ಯಾರಿಂದಲೋ ಕೇಳಿದ, ಎಲ್ಲಿಂದಲೋ ಕದ್ದ ತಲೆಬುಡವಿಲ್ಲದ ಘಟನೆಗಳನ್ನು ಅಭ್ಯಾಸ ಅನುಭವ ಆಲೋಚನೆಗಳ ಬಂಡವಾಳವೇ ಇಲ್ಲದೆ ಕ್ಷಯಗ್ರಸ್ತಶೈಲಿಯಲ್ಲಿ ಕಾಗದದ ಮೇಲೆ ಕಕ್ಕಿ ಮಾಡಿದ ಅಕ್ಷರ ವ್ಯಭಿಚಾರಗಳೆಲ್ಲವನ್ನೂ ಗಣನೆಗೆ ತೆಗೆದುಕೊಂಡರೆ ಈ ಸಂಖ್ಯೆ ದ್ವಿಗುಣವಾದರೂ ಆಶ್ಚರ್ಯವಿಲ್ಲ. ಈ ಸಂಖ್ಯಾಬಾಹುಳ್ಯವನ್ನು ಗಮನಿಸುವಾಗ ಬೇಂದ್ರೆಯವರ 'ಮೂವತ್ತು ಮೂರುಕೋಟಿ' ಕವನ ತಪ್ಪದೆ ನೆನಪಿಗೆ ಬರುತ್ತದೆ. ಯಾವನೇ ಲೇಖಕ ಇಷ್ಟೆಲ್ಲವನ್ನೂ ಅಭ್ಯಾಸ ಮಾಡುವುದು ಆಗದ ಮಾತು. ಅದಕ್ಕೆ ತಕ್ಕ ಅನುಕೂಲವೂ ಇಲ್ಲ,[1] ಅದು ಅಗತ್ಯವೂ ಅಲ್ಲ; ಈ ಸಮೀಕ್ಷೆಯ ಪರಿಮಿತ ಚೌಕಟ್ಟಿನಲ್ಲಿ ಅಭ್ಯಸಿಸಿದ ಕೃತಿಗಳ ಸವಿವರ ವಿವೇಚನೆಯೂ ಸಾಧ್ಯವಿಲ್ಲ.

ಅವಾಸ್ತವ ಪ್ರಣಯ, ಅಪಕ್ವ ಆದರ್ಶವಾದ, ಹಸಿಹಸಿ ಭಾವನೆಗಳ ಶಿಥಿಲನೆಯ್ಗೆ, ಕಥಾ ಸಂವಿಧಾನದ ಸಡಿಲತೆ, ಅನುಭವದ ತೇಲುತನ, ಸತ್ವರಹಿತ ಉತ್ಸಾಹಾಧಿಕ್ಯ, ನಿಷ್ಕಾರಣ ರೊಚ್ಚು, ಸುಲಭೋಪದೇಶಚಾಪಲ್ಯ, ಅಗ್ಗದ ಸುಧಾರಣಾವಾದ,

---

* ಈ ಪ್ರಬಂಧವನ್ನು ಸಿದ್ಧಪಡಿಸುವ ಕಾಲಕ್ಕೆ ಹಲವು ಉಪಯುಕ್ತಗ್ರಂಥಗಳನ್ನಿತ್ತು ಸಹಾಯಮಾಡಿದ ಪ್ರೊ. ಎಸ್. ವಿ. ಪರಮೇಶ್ವರಭಟ್ಟ, ಅಮ್ಮೆಂಬಳ ವಾಸುದೇವ ನಾವಡ ಮತ್ತು ಬಿ. ಜೆ. ಹಿರೇಮಠ ಅವರಿಗೆ ನಾನು ಕೃತಜ್ಞನಾಗಿದ್ದೇನೆ.

1. ಡಾ. ಹಾ. ಮಾ. ನಾಯಕ–'ಒಂದು ದಶಕದ ಕನ್ನಡ ಸಾಹಿತ್ಯ' ಸಮೀಕ್ಷೆ–ಪು. ೩೮. ಈ ಕೃತಿಯಿಂದ ಹೆಚ್ಚಿನ ಪ್ರಯೋಜನವನ್ನು ನಾನು ಪಡೆದುಕೊಂಡಿದ್ದೇನೆ.

ಎರವಲು ಬಂಡವಾಳ, ಅತಿರೇಕದ ಭಾವನಾವಶತೆ, ಪ್ರತಿಭಾದಾರಿದ್ರ್ಯ, ಪರಿಶ್ರಮ ವಿಹೀನತೆ, ವಿಚಾರಶೂನ್ಯತೆ, ಹಳಸಲು ಭಾಷೆ, ಅಸ್ಪಷ್ಟೋದ್ದೇಶ, ಸಂಖ್ಯಾರತಿ–ಇವೇ ನಮ್ಮ ಬಹುಪಾಲು ಕಾದಂಬರಿಗಳಿಗೆ ಬಡಿದಿರುವ ಬಾಲಗ್ರಹಪೀಡೆಗಳು. ಇದರಿಂದಾಗಿ ಕೇವಲ ಮನರಂಜನೆಯ ಮೂರನೆಸ್ತರದಲ್ಲೇ ವಿಹರಿಸಬಯಸುವ ಲಘುಪ್ರವೃತ್ತಿಯ ಅಲಸ ವಿಲಾಸಿಗಳಿಗೆ ವಿಪುಲಗ್ರಾಸವನ್ನೊದಗಿಸುವ ಲೇಖಕರೇ ನಮ್ಮಲ್ಲಿ ಅಧಿಕ ಸಂಖ್ಯೆಯಲ್ಲಿ ಅಣಬೆಗಳಂತೆ ಹುಟ್ಟಿಕೊಂಡಿದ್ದಾರೆಯೇ ಹೊರತು, ನೈಜಕಲಾ ಪ್ರಜ್ಞೆ ಯಿಂದ ತೊಡಗುವ, ಗಂಭೀರ ವಿಚಾರವಂತ ವ್ಯಾಸಂಗಿಯ ಮನೋಭಿತ್ತಿಯಮೇಲೆ ಅಚ್ಚಳಿಯದ ಮುದ್ರೆಯನ್ನೊತ್ತುವ, ಕಾದಂಬರಿಗಳ ಜನಕರು ಕೇವಲ ಬೆರಳೆಣಿಕೆಯಷ್ಟು ಮಂದಿ ಮಾತ್ರವೆಂಬುದು ಮರೆಯಲಾಗದ ವಿಷಾದನೀಯ ಸತ್ಯಸಂಗತಿಯಾಗಿದೆ. ಆದರೂ ಇತರ ಭಾರತೀಯ ಭಾಷೆಗಳ ಶ್ರೇಷ್ಠತಮ ಕಾದಂಬರಿಗಳಿಗೆ ಹೊಯ್‌ಕಯ್ಯಾಗಿ ನಿಲ್ಲುವಂತಹ ಕೆಲವಾದರೂ ಚಿರಕಾಲಿಕ ಮಹತ್ವದ ಕಲಾಕೃತಿಗಳು ನಮ್ಮಲ್ಲಿ ಮೂಡಿವೆ ಯೆಂಬುದೂ ಅಷ್ಟೇ ಸತ್ಯವಾದ ಸ್ಮರಣೀಯವಾದ ಅಭಿಮಾನಾಸ್ಪದವಾದ ವಿಚಾರ ವಾಗಿದೆ.

೨

ಕನ್ನಡ ಕಾದಂಬರಿ ಲೋಕದ ಎತ್ತರಬಿತ್ತರಗಳನ್ನು ಹಾಸುಬೀಸುಗಳನ್ನು ಶ್ರದ್ಧಾಪೂರ್ವಕವಾಗಿ ಕಲಾತ್ಮಕವಾಗಿ ಉಚ್ಚಮಟ್ಟಕ್ಕೆ ವಿಸ್ತರಿಸಿ ಇತರ ಸಮಕಾಲೀನ ಭಾರತೀಯ ಸಾಹಿತ್ಯದ ಈ ಪ್ರಕಾರಕ್ಕೆ ಹೆಗಲೆಣೆಯಾಗಿ ಮೆರೆಸಿದವರಲ್ಲಿ ಪ್ರಾತಃ ಸ್ಮರಣೀಯವಾದ ಹೆಸರು ಕಾರಂತರದು. ಈ ಇಪ್ಪತ್ತೈದು ವರ್ಷಗಳಲ್ಲಿ ಅವರು ಬರೆದಿರುವ ಕಾದಂಬರಿಗಳು ಇತರರಿಗೆ ಹೋಲಿಸಿದಾಗ ಸಂಖ್ಯಾಬಾಹುಳ್ಯದಿಂದ ಕಡಮೆ ಯೆನ್ನಿಸಿದರೂ ಗುಣವೌಲ್ಯದಿಂದ ಗಮನಾರ್ಹವಾದವುಗಳಾಗಿವೆ. ವಿಶಾಲವೂ ವೈವಿಧ್ಯ ಭರಿತವೂ ಆದ ಲೋಕಾನುಭವ ಜೀವನಾನುಭವಗಳು ಅವರ ಕೃತಿಗಳಲ್ಲಿ ಮಡುಗಟ್ಟಿವೆ. ಅವರ ಯಾವುದೇ ಕಾದಂಬರಿಯನ್ನು ತೆರೆದರೂ ವ್ಯಾಪಕವೂ ಸಾಂದ್ರವೂ ಸಂಕೀರ್ಣವೂ ಆದ ಬದುಕು ತನ್ನ ನೂರುಮುಖಗಳಲ್ಲಿ ಗಹನಗಂಭೀರವಾಗಿ ಸಹಜರಮ್ಯವಾಗಿ ಕುತೂ ಹಲಕಾರಿಯಾಗಿ ತೆರೆದುಕೊಳ್ಳುತ್ತಾ ಹೋಗುತ್ತದೆ. ಅನುಭವದ ಗಟ್ಟಿತನ, ಆರ್ದ್ರವಾದ ಆತ್ಮೀಯತೆ, ಪ್ರಖರವೂ ಪರಿಣಾಮಕಾರಿಯೂ ಆದ ವೈಚಾರಿಕತೆ, ಸಮಸ್ಯೆಗಳ ಶ್ರದ್ಧಾಪೂರ್ವಕ ಅಭ್ಯಾಸ, ತಾಯ್ನೆಲದ ಸಹಜೋಗ್ರಕಂಪು, ಜೀವಂತ ಪಾತ್ರ ನಿರ್ಮಾಣ, ಕಣ್ಕಟ್ಟುವ ಪರಿಸರಸೃಷ್ಟಿ, ಪ್ರಾಮಾಣಿಕ ಕಲೆಗಾರಿಕೆ–ಇವು ಅವರ ಕಾದಂಬರಿಗಳ ಪ್ರಮುಖಲಕ್ಷಣಗಳು. ಭೂತ, ನೃತ್ಯ, ಸಂಗೀತ, ಸಾಹಿತ್ಯ, ಯಕ್ಷಗಾನ, ಸಮಾಜಸುಧಾರಣೆ, ಶಿಕ್ಷಣ, ರಾಜಕೀಯ, ಕೃಷಿ, ವ್ಯಾಪಾರ, ವಿಜ್ಞಾನ, ರೂಢಿವೌಢ್ಯ, ಡಂಭಾಚಾರ, ದೈವಶ್ರದ್ಧೆ, ಪ್ರಣಯ, ವಾತ್ಸಲ್ಯ, ಸಮಾಜವಾದ, ಆಷಾಢಭೂತಿತನ, ಕಪಟ, ಸ್ವಾರ್ಥ–ಹೀಗೆ ಬಾಳಿನ ಅನಂತಮುಖಗಳನ್ನು ತಬ್ಬಿನಿಂತ

ವಸ್ತುಸಮುದಾಯ ಅವರ ಕೃತಿಗಳ ಅಂತರಂಗಸಂಪತ್ತು. ಚಿತ್ರಿತವಾಗಿರುವ ಬದುಕಿನ ಅಂಗುಲ ಅಂಗುಲದಲ್ಲೂ ಓದುಗ ಸಕ್ರಿಯವಾಗಿ ಭಾಗವಹಿಸಿದಂಥ ದಟ್ಟವಾದ ಅನುಭವ ಪರಿಣಾಮವನ್ನುಂಟುಮಾಡುವ ಹಿರಿಯಗುಣ ಅವರ ಕಾದಂಬರಿಗಳ ವೈಶಿಷ್ಟ್ಯ.

ಈ ಅವಧಿಯಲ್ಲಿ ಸುಮಾರು ಹದಿನೇಳು ಕಾದಂಬರಿಗಳನ್ನು ಕಾರಂತರು ಬರೆದಿದ್ದಾರೆ. 'ಮರಳಿ ಮಣ್ಣಿಗೆ', 'ಬೆಟ್ಟದ ಜೀವ,' 'ಚೋಮನ ದುಡಿ'ಯಂತಹ ಸರ್ವಶ್ರೇಷ್ಠ ಕೃತಿಗಳಲ್ಲಿ ಅವರು ನಿಸರ್ಗವನ್ನು ಒಂದು ಜೀವಂತ ಹಿನ್ನೆಲೆಯಾಗಿ ವರ್ಣಿಸಿದ್ದಾರೆ; 'ಕುಡಿಯರ ಕೂಸು' ಕೃತಿಯಲ್ಲಿ ಅದೇ ಪ್ರಧಾನರಂಗವಾಗಿದೆ. ಪ್ರಕೃತಿಯ ಮಕ್ಕಳಾದ ಮಲೆಯ ಕುಡಿಯರ ಸಾಹಸಭರಿತವೂ ಶ್ರದ್ಧಾನ್ವಿತವೂ ಮುಗ್ಧವೂ ಆದ ಬದುಕಿನ ರುದ್ರರಮ್ಯ ವಾಸ್ತವ ಚಿತ್ರಣವಿಲ್ಲಿದೆ. ಇಲ್ಲಿಯ ಪಾತ್ರಗಳ ನಾಡಿನಾಡಿಯಲ್ಲಿ ಕಾಡಿನ ಹಾಡು ಹರಿಯುವಂಥ ಸತ್ವಪೂರ್ಣ ಬರವಣಿಗೆ ಇದು. ನಿಷ್ಠಾವಂತ ಕೃಷಿಗಾರನೊಬ್ಬನ ಜೀವನದ ಏರಿಳಿತವನ್ನು ಹೃದಯಂಗಮವಾಗಿ ನಿರೂಪಿಸುತ್ತದೆ, 'ಚಿಗುರಿದ ಕನಸು.' ಇಲ್ಲಿ 'ಪೌರ್ವಾತ್ಯ ಪಾಶ್ಚಾತ್ಯ ಸಂಸ್ಕೃತಿಗಳೆರಡರ ಮಧುರ ಸಂಮಿಲನವನ್ನು, ಅದರ ಅಮೃತಫಲವನ್ನೂ ಕಾಣಬಹುದು.'[1] ಎರಡನೆ ಮಹಾಯುದ್ಧ ಒಂದು ಹಳ್ಳಿಯ ಜೀವನದ ಮೇಲೆ ಬೀರಿದ ಪರಿಣಾಮ, ನೈತಿಕ ಅಧಃಪತನ, ಅಂಥ ವಿಷದ ಕಡಲಲ್ಲೂ ದೃಢವಾಗಿ ಪ್ರಾಮಾಣಿಕವಾಗಿ ಜನಸೇವಕರಾಗಿ ನಿಂತ ನಿಸ್ವಾರ್ಥಿವೈದ್ಯ–ಇವರಸುತ್ತ ಹೆಣೆಯಲಾದ ಕೃತಿ 'ಜಾರುವ ದಾರಿಯಲ್ಲಿ.' ಇಲ್ಲಿನ ಕಾರಂತರ ಕಟುವಿಡಂಬನೆ ತುಂಬ ಪರಿಣಾಮಕಾರಿಯಾಗಿದೆ. ಕಲೆ ಕೇವಲ ಅಭ್ಯಾಸದಿಂದ ಬರುವಂಥದಲ್ಲ, ಅಂತರಂಗಿಕ ಭಾವನೆಗಳ ಒತ್ತಡದ ಅನಿವಾರ್ಯ ಅಭಿವ್ಯಕ್ತಿಯಾಗಿ ಅದು ಮೂಡಿರಬೇಕು. ಅದನ್ನು ಬದುಕಿ ತೋರಿಸಬೇಕು. ಹೀಗೆ ಬದುಕಿ ತೋರಿಸ ಹೊರಟ ನೃತ್ಯಕಲಾವಿದನೊಬ್ಬನ ಬಾಳಿನ ಸಿಹಿ—ಕಹಿ ಸಾಧನೆ-ಸಿದ್ಧಿಗಳನ್ನು ಸುಂದರವಾಗಿ ಕಲಾಪೂರ್ಣವಾಗಿ ಕುಂಚಿಸಿದ ಕೃತಿ 'ಮೊಗ ಪಡೆದ ಮನ.' 'ಮುಗಿದ ಯುದ್ಧ' ಶಾಲಾ ಶಿಕ್ಷಕನೊಬ್ಬ ದಾರುಣ ಬಡತನದ ಕರಾಳದವಡೆಗೆ ಸಿಕ್ಕು ತನ್ನ ಶ್ರದ್ಧೆ ಸಂಸ್ಕಾರ ಆದರ್ಶಗಳ ಬಲಿತೆತ್ತು ಪತನೋನ್ಮುಖನಾದ ಕರುಣಪೂರ್ಣಕತೆ. ಗಾಂಧೀಜಿ ಕಂಡ ಆದರ್ಶ ರಾಜಕೀಯವನ್ನು ನನಸಾಗಿ ಮಾಡಿ, ಬಾಳಲು ಪಣತೊಟ್ಟು ಕ್ಷುದ್ರರಾಜಕಾರಣಿಗಳ ಕೈತವಕ್ಕೆ ಬಲಿಯಾದ ಯುವಕನೊಬ್ಬನ ಕತೆ 'ಔದಾರ್ಯದ ಉರುಳಲ್ಲಿ.' ಮನುಷ್ಯ ಸ್ವಭಾವದ ವಿವಿಧ ಸ್ವರೂಪಗಳ ಪೃಥಕ್ಕರಣೆ ಇಲ್ಲಿ ತುಂಬ ಶಕ್ತಿವತ್ತಾಗಿ ಮೂಡಿಬಂದಿದೆ. ಮೂವರು ಹೆಣ್ಣುಮಕ್ಕಳ ವಿಭಿನ್ನ ಜೀವನದೃಷ್ಟಿಗಳು, ಅವುಗಳಿಗೆ ಅವರು ತಂದುಕೊಂಡ ಪರಿಹಾರಗಳು ಇವುಗಳ ಸುತ್ತ ಹಬ್ಬಿದ ಕೃತಿ 'ಬತ್ತದ ತೊರೆ.' 'ಕರುಳಿನಕರೆ,' ಒಡಹುಟ್ಟಿದವರು' ಮಾತೃಪ್ರೇಮದ ಮಹತಿಯನ್ನು ರಕ್ತ ಬಾಂಧವ್ಯದ ಶಕ್ತಿಯನ್ನು ಮನೋಜ್ಞವಾಗಿ ವರ್ಣಿಸುತ್ತವೆ. 'ಜಗದೋ

---

1. ಪ್ರೊ. ದೇ. ಜವರೇಗೌಡ–'ಚಿಗುರಿದ ಕನಸು', ಸಾಹಿತ್ಯಮಾರ್ಗ, ಪು. ೧೨೨.

ದ್ಧಾರಿಣಾ' ಮೂಢನಂಬಿಕೆಗಳ ವರ್ತುಲದಲ್ಲಿ ಸುತ್ತುತ್ತಿರುವ ಮುಗ್ಧಮನಸ್ಸಿನ ಜನರನ್ನು ತನ್ನ ವೇಷ ಆಡಂಬರಗಳ ಅದ್ದೂರಿಯ ಮೋಸಜಾಲದಲ್ಲಿ ಸಿಕ್ಕಿಸಿ, ಭೋಗ ವೈಭವಗಳಲ್ಲಿ ಬಾಳುವೆ ನಡೆಸಿ ಕೊನೆಗೆ ನಿರ್ಗತಿಕನಾದ ಟೊಳ್ಳುವ್ಯಕ್ತಿಯೊಬ್ಬನನ್ನು ಕುರಿತ ಕರುಳು ಚುಚ್ಚುವ ವ್ಯಂಗ್ಯಾತ್ಮಕ ಬರೆಹ. ಆದರೆ ಇಲ್ಲಿ ಕಲೆಗಾರಿಕೆಗಿಂತ ಲೇಖಕರ ಚಾಪಲ್ಯವೇ ಹೆಚ್ಚು ಮೆರೆದಿದೆ. ಆಧುನಿಕತೆ, ಆನುವಂಶಿಕತೆ, ದುರಾಶೆ, ವಂಚಕತನ, ಶ್ರದ್ಧೆ ಹಾಗೂ ಮೌಢ್ಯಗಳ ಆವರಣವನ್ನುಳ್ಳ ಸತ್ವಪೂರ್ಣಕೃತಿ 'ನಂಬಿದವರ ನಾಕ ನರಕ.' ವ್ಯಕ್ತಿಗಳು ಬೆಳೆದ ಸಂಪ್ರದಾಯಕ್ಕನುಗುಣವಾಗಿ ಮೂಡಿದ ನಂಬಿಕೆಗಳು ಹೇಗೆ ಅವರ ಬಾಳನ್ನು ರೂಪಿಸುವ ಶಕ್ತಿಗಳಾಗುತ್ತವೆಂಬುದನ್ನು ಮನಶ್ಶಾಸ್ತ್ರ ಮತ್ತು ಮಾನವಶಾಸ್ತ್ರದ ಹಿನ್ನೆಲೆಯಲ್ಲಿ ತುಂಬ ಸ್ವಾಭಾವಿಕವಾಗಿ ಸೂಕ್ಷ್ಮವಾಗಿ ವಿಶ್ಲೇಷಿಸುವ ಕಲೆ, ವಿಚಾರ ಹಾಗೂ ವಸ್ತುಸಾಂದ್ರತೆಗಳ ಸಮರಸ ಸಂಗಮದ ವಿಶಿಷ್ಟ ಕೃತಿಯಿದು. ಕಾರಂತರ ಶ್ರೇಷ್ಠ ಕಾದಂಬರಿಗಳಲ್ಲಿ ಇದು ಒಂದು. ಹಾಗೆಯೇ ಅವರ 'ಸಮೀಕ್ಷೆ'ಯೂ ಗಮನಾರ್ಹವಾದುದು. ಹಲವು ಹತ್ತು ಜನರ ಜೀವನ ವಿಧಾನಗಳನ್ನು ವೈಚಾರಿಕತೆಯ ಮಾನದಂಡದಿಂದ ಒರೆಹಚ್ಚಿ ನೋಡುವ ಒಂದು ಸುಂದರ ಪ್ರಯತ್ನವಿದು. ಪಾತ್ರಗಳ ವಿಶಿಷ್ಟ ಸ್ವರೂಪ ಚಿತ್ರಣದಲ್ಲಿ ಅದರ ಸ್ವಂತಿಕೆ ಎದ್ದು ಕಾಣುತ್ತದೆ. ಪ್ರವಾಸಕ್ಕಾಗಿ ರೈಲೊಂದರಲ್ಲಿ ಕಲೆತ ಬಗೆಬಗೆಯ ಜನರ ಶ್ರದ್ಧೆ, ನಂಬಿಕೆ, ಆಚಾರ, ವಿಚಾರ, ಧ್ಯೇಯ, ಧೋರಣೆಗಳನ್ನು ತುಂಬ ರಸವತ್ತಾಗಿ ಔಚಿತ್ಯಪೂರ್ಣವಾಗಿ ವಾಸ್ತವರಮ್ಯವಾಗಿ ನಿರೂಪಿಸುತ್ತದೆ 'ಆಳ–ನಿರಾಳ.' ಇಲ್ಲಿ ವಿಚಾರ ಮುಂದಾಗಿದ್ದರೂ ಕಲೆಗಾರಿಕೆ ಹಿಂದಾಗಿಲ್ಲ; ಕತೆಯ ಅಂತಃಸೂತ್ರ ಪದಭ್ರಾಂತವಾಗಿಲ್ಲ. ಸಾಂದ್ರವಾದ ಮಾನವೀಯ ಅಂತಃಕರಣದ ಕಂಪು ಕೃತಿಯತುಂಬೆಲ್ಲಾ ಆವರಿಸಿ ಆವರಣವನ್ನು ನಮ್ಮದಾಗಿಸುತ್ತದೆ. ಇದು ಕಾರಂತರ ತೀಕ್ಷ್ಣವಾದ ಪ್ರಾಮಾಣಿಕವಾದ ಬಹುಮುಖ ವಿಚಾರ ಪ್ರಣಾಲಿಯನ್ನೂ ಸೂಕ್ಷ್ಮಸಂವೇದನಾಶಕ್ತಿಯನ್ನೂ ಕಾದಂಬರಿ ಶಿಲ್ಪದ ಪಕ್ವವಾದ ನಿರ್ವಹಣಾ ಸಾಮರ್ಥ್ಯವನ್ನೂ ಅಭಿವ್ಯಂಜಿಸುತ್ತದೆ. 'ಇದ್ದರೂ ಚಿಂತೆ' ವ್ಯಾಪಾರೋದ್ಯಮದಲ್ಲಿ ತೊಡಗಿ ಶ್ರೀಮಂತಿಕೆಯ ಶಿಖರಕ್ಕೇರಿದರೂ ಮನೋನೆಮ್ಮದಿಯನ್ನು ಪಡೆಯದ ಇಬ್ಬರು ವ್ಯಕ್ತಿಗಳ ಸುತ್ತ ಹೆಣೆದ ಕೃತಿ. ಆದರೆ ಏಕೋ ಏನೋ ಕಾರಂತರ ಉಳಿದ ಕೃತಿಗಳಲ್ಲಿ ಕಾಣುವಂತಹ ಗಾಢಪರಿಣಾಮಕಾರಿಯಾದ ಜೀವನದ ಆಳ ವಿಸ್ತಾರಗಳಿಲ್ಲದೆ ಮೂಗಿಗೆ ಹೊಡೆಯುವಂತಹ ವಾಸ್ತವತೆಯ ಸೊಗಡಿಲ್ಲದೆ ಕೃತಿ ಹಗುರವಾಗಿ ತೋರುತ್ತದೆ. 'ಅಳಿದಮೇಲೆ' ಹಲವು ದೃಷ್ಟಿಗಳಿಂದ ಮಹತ್ವದ ಕೃತಿಯಾಗಿದೆ. ಅಳಿದಮೇಲೆ ಬಾಳಿನಲ್ಲಿ ಉಳಿಯುವುದೇನು ಎಂಬುದರ ವೈಜ್ಞಾನಿಕ ಶೋಧನೆ ಹಾಗೂ ಅದರ ಸರ್ವ ಸಮರ್ಥನಿರೂಪಣೆ ಇಲ್ಲಿದೆ. 'ಕಾದಂಬರಿಕಾರರಿಗೆ ಆಕಸ್ಮಿಕವಾಗಿ ಗೆಳೆಯರಾಗಿ ತೀರಿಕೊಂಡ ಯಶವಂತರಾಯರ ದಿನಚರಿಯಿಂದ, ಅವರ ಚಿತ್ರಗಳಿಂದ, ಅವರು ಹಿಂದೆ ಬಿಟ್ಟ ಬಂಧುಗಳಿಂದ ಅವರ ವ್ಯಕ್ತಿತ್ವವನ್ನು ಪುನರ್ರಚಿಸಿದ್ದಾರೆ.'[1] ಹಂತಹಂತವಾಗಿ

1. ಡಾ. ಪ್ರಭುಶಂಕರ–'ಭಾಷೆ, ಶೈಲಿ ಮತ್ತು ತಂತ್ರ', ಸುವರ್ಣ ಸಂಚಯ ಪು. ೧೫೧.

ಸಂಕೀರ್ಣವಾಗಿ ಬೆಳೆಯುತ್ತಾ ಅಪೂರ್ವ ಸಂಯಮದ ಕಲಾಪ್ರಜ್ಞೆಯಿಂದ ರಕ್ತ ಮಾಂಸಗಳನ್ನು ತುಂಬಿಕೊಳ್ಳುತ್ತಾ ಬೆರಗುಗೊಳಿಸುವ ಸುಂದರ ಸುಸಂಬದ್ಧತೆಯಲ್ಲಿ ಮೂಡಿ ನಿಂತಿರುವ ಈ ಕೃತಿ ತಂತ್ರನಾವೀನ್ಯತೆಯಿಂದ ಜೀವಂತ ಪಾತ್ರಪೋಷಣೆಯಿಂದ ಧ್ವನಿಪೂರ್ಣ ಭಾಷಾ ಪ್ರಯೋಗದಿಂದ ಕನ್ನಡದ ಅತಿ ಶ್ರೇಷ್ಠ ಕಾದಂಬರಿಗಳಲ್ಲೊಂದಾಗಿ ನಿಲ್ಲುತ್ತದೆ. ಕನಸುಗಾರನೊಬ್ಬನ ಮನಸ್ಸಿನ ಹರಿಯುವಿಕೆಯನ್ನು, ಕನಸಿಗೂ ಬದುಕಿನ ಘಟನೆಗಳಿಗೂ ಇರುವ ನೈಜ ಸಂಬಂಧವನ್ನು ನಿರೂಪಿಸುವ ಕೃತಿ 'ಸ್ವಪ್ನದ ಹೊಳೆ.' ಪೂರ್ವಭಾಗದಲ್ಲಿ ಗಂಭೀರವಾಗಿ ನಿಧಾನವಾಗಿ ಸಜೀವವಾಗಿ ಹರಿಯುವ ಕತೆ ಉತ್ತರ ಭಾಗದಲ್ಲಿ ಅನಾವಶ್ಯಕ ಆತುರದಿಂದ ಹರಿದು ಕಲಾತ್ಮಕ ಅಂತ್ಯವನ್ನು ಕಾಣದೆ ಬಸವಳಿಯುತ್ತದೆ, ನಿರಾಶೆಯನ್ನುಂಟುಮಾಡುತ್ತದೆ. 'ನಾಲಿಗೆ ಮತ್ತು ಕಿವಿಗಳ ನಡುವೆ, ಕಣ್ಣು ಕಿವಿ ಮತ್ತು ಮನಸ್ಸುಗಳ ನಡುವೆ ವಿಚಾರ, ವಿವೇಕ, ಸಹಾನುಭೂತಿಗಳ ಸೇತುವೆಯೊಂದು ರಚನೆಗೊಳ್ಳಬೇಕು'[1] ಎಂಬ ಅಭಿಪ್ರಾಯದ ಆಧಾರದ ಮೇಲೆ ರೂಪುಗೊಂಡ ಕಾದಂಬರಿ 'ಒಂಟಿ ದನಿ.' ವಿವಿಧ ಸರಣಿಯ, ಮುಖ್ಯವಾಗಿ ಕಲಾ ಮಾಧ್ಯಮದ, ವಿಚಾರ ಲಹರಿಯನ್ನು ಬಿಂಬಿಸುವ ಈ ಕೃತಿ ಕೇವಲ ಚರ್ಚೆ ತರ್ಕಗಳ ಗೊಂದಲದ ಸಮುದಾಯವಾಗಿ ಒಟ್ಟಂದದಲ್ಲಿ ಯಾವ ನಿಶ್ಚಿತ ಪರಿಣಾಮವನ್ನು ಬೀರದೆ ಅಸಫಲವಾಗುತ್ತದೆ. ಇತ್ತೀಚಿನ ಕಾದಂಬರಿಗಳಲ್ಲಿ ಕಾರಂತರ ಕಲೆಗಾರಿಕೆ ಕಡಿಮೆಯಾಗಿ ಅವರು ತರ್ಕನಿಪುಣರಾಗುತ್ತಿದ್ದಾರೇನೋ ಎನ್ನಿಸುತ್ತದೆ. 'ವ್ಯಕ್ತಿಯ ಬೆಳವಣಿಗೆಗೆ ಅಂಧಪರಂಪರೆಯ ಹಾದಿಗಿಂತ ಪ್ರಜ್ಞಾಬದ್ಧ ಜೀವನ ಇನ್ನಷ್ಟು ನೆರವಾಗಬಲ್ಲುದು'[2] ಎಂಬ ತತ್ವದ ರಸಮಯವ್ಯಾಖ್ಯಾನ 'ಇನ್ನೊಂದೇ ದಾರಿ.' ಅಂಧಶ್ರದ್ಧಾ ಮೂಲವಾದ ಪರಂಪರಾಗತ ನಂಬಿಕೆಯ ನೆರಳಿನಲ್ಲಿ, ಜೀವನ ಸಮಸ್ಯೆಗಳನ್ನು ಬುದ್ಧಿಮೂಲವಾಗಿ ವಿವೇಚಿಸದೆ, ಎಲ್ಲಕ್ಕೂ ಅರ್ಥವರಿಯದ ಅರ್ಥವಿಲ್ಲದ ಸಂಪ್ರದಾಯದೆಡೆಗೆ ಬೆರಳು ಮಾಡಿ ಅದರ ಭಯದಿಂದ ಭ್ರಮಾತ್ಮಕವೂ ದುಃಖದಾಯಕವೂ ಆದ ಬದುಕನ್ನು ನಡೆಸುವ ಹಳೆಯ ತಲೆಮೊರೆ; ವೈಜ್ಞಾನಿಕ ಸಮರ್ಥನೆಯಿಲ್ಲದೆ ಯಾವುದನ್ನೂ ಒಪ್ಪಲಾರದ, ಎಲ್ಲವನ್ನೂ ಬುದ್ಧಿಯ ಬೆಳಕಿನಲ್ಲಿ ತೀಕ್ಷ್ಣವಾಗಿ ವಿಶ್ಲೇಷಿಸಿ ವಿಮರ್ಶಿಸಿ ಅದರಿಂದ ಉದ್ಬೋಧವಾಗುವುದನ್ನು ಮಾತ್ರವೇ ಸ್ವೀಕರಿಸುವ ಸ್ವತಂತ್ರ ಪ್ರಜ್ಞೆಯುಳ್ಳ ಆಧುನಿಕ ಮನಸ್ಸು–ಇವುಗಳ ಸಂಘರ್ಷವನ್ನು ಸಮರ್ಥವಾಗಿ ಮನೋಜ್ಞವಾಗಿ ಕಲಾಪೂರ್ಣವಾಗಿ ಚಿತ್ರಿಸುತ್ತದೆ ಈ ಕೃತಿ. ದಿನದಿನವೂ ಬೆಳೆಯುತ್ತಿರುವ ಕಾರಂತರ ಜೀವಂತ ವಿಚಾರಮತಿಯನ್ನು, ಬದುಕಿನ ಬಗ್ಗೆ ಅವರಿಗಿರುವ ಪ್ರಾಮಾಣಿಕ ಕಳಕಳಿಯನ್ನು ಇದು ಸೊಗಸಾಗಿ ಸೂಚಿಸುತ್ತದೆ; ಹಿಂದಿನ ಕಾದಂಬರಿ ಮೂಡಿಸಿದ್ದ ನಿರಾಶೆಯನ್ನು ತೊಡೆದು ಹಾಕುತ್ತದೆ. 'ಮೂಕಜ್ಜಿಯ ಕನಸುಗಳು' ಈಗತಾನೇ ಪ್ರಕಟವಾಗಿದೆ. ಇತಿಹಾಸ,

1. ಶಿವರಾಮ ಕಾರಂತ–'ಮುನ್ನುಡಿ', ಒಂಟಿದನಿ, ಪುಟ. iv,
2. ಶಿವರಾಮ ಕಾರಂತ –'ಎರಡು ಮಾತು', ಇನ್ನೊಂದೇ ದಾರಿ.

ಧರ್ಮ, ಸಂಸ್ಕೃತಿ, ಭಕ್ತಿ, ಲೈಂಗಿಕತೆ, ಮಾನವೀಯತೆ, ಮತಾಚಾರ ಮುಂತಾದ ಮೂಲ ಭೂತ ತತ್ವಗಳ ಬಗ್ಗೆ ಅಂಧಶ್ರದ್ಧೋತ್ಪಾಟನಶೀಲವೂ ವೈಜ್ಞಾನಿಕವೂ ಕ್ರಾಂತಿಕಾರಕವೂ ಆದ ವಿವೇಚನಾದೃಷ್ಟಿ ಹರಿಸುವ ವಿನೂತನ ಕಾದಂಬರಿಯಿದು. ಕಾರಂತರ ಸದಾ ಎಚ್ಚತ್ತಿರುವ ಚಿಂತನಶೀಲತೆಗೆ ನಿರ್ಭೀತ ಮನೋಧರ್ಮಕ್ಕೆ ಇದೊಂದು ಪ್ರೋಜ್ವಲ ಸಾಕ್ಷಿ. ಆದರೆ ಈ ವಿಚಾರಗಳ ನಿರೂಪಣೆಗೆಂದೇ ಕೃತಿ ಸೃಷ್ಟಿಯಾದಂತಾಗಿರುವುದರಿಂದ ಬಂಧ ಸಡಿಲವಾಗಿ, ಭಾವಗಳು ಹರಿಹಂಚಾಗಿ, ನಿರೂಪಣೆ ಪೇಲವವಾಗಿ ಪರಿಣಾಮದಲ್ಲಿ ಕೃತಿ ವಿಫಲವಾಗುತ್ತದೆ. ಕೆಲವು ಕಡೆ ಬರುವ ವಿಡಂಬನತೀಕ್ಷ್ಣತೆ ಜವಾಬ್ದಾರಿಯುತ ವಾದ ಸಮರ್ಥವಿವೇಚನೆಯ ತಳಹದಿಯ ಮೇಲೆ ನಿಂತಿಲ್ಲ. ಅಲ್ಲಲ್ಲಿ ಅಸಹಜತೆ ಹಣುಕಿ ಹಾಕಿದೆ. ಮುಕ್ತಾಯ ಕಲಾಪೂರ್ಣವಾಗಿಲ್ಲ. ಆದುದರಿಂದ ಇದು ಹೊಸದಾರಿಯ ಕೃತಿಯೇ ಹೊರತು ಹೊಸವಿಕ್ರಮ ಸ್ಥಾಪಿಸುವಂಥ ಕಲಾಕೃತಿಯಲ್ಲ. ಬುದ್ಧಿ ಪ್ರಖರತೆ, ಅನುಭವ ವೈಶಾಲ್ಯ, ಅದಮ್ಯವಾದ ಜೀವನ ಶ್ರದ್ಧೆ, ನವಾನ್ವೇಷಕ ಪ್ರತಿಭೆ, ಕಲಾತ್ಮಕ ನಿರೂಪಣೆ ಮತ್ತು ಸಂಯಮ ಪೂರ್ಣರಚನೆ–ಇವುಗಳಿಂದಾಗಿ ಕಾರಂತರು ಈ ಕಾಲು ಶತಮಾನದ ಸರ್ವಶ್ರೇಷ್ಠ ಕಾದಂಬರಿಕಾರರಾಗಿ ನಿಲ್ಲುತ್ತಾರೆ.

ಎರಡನೆಯದಾಗಿ ನಾವು ನೆನೆಯಲೇಬೇಕಾದ ಹೆಸರು ಶ್ರೀ ಅ.ನ. ಕೃಷ್ಣರಾಯ ಅವರದು. ಕನ್ನಡ ಓದುಗಬಳಗದ ಹಸಿವನ್ನು ಕೆರಳಿಸಿ ಆಸಕ್ತಿಯನ್ನು ಅರಳಿಸಿ ಕಾದಂಬರಿಯನ್ನು ಅತ್ಯಂತ ಜನಪ್ರಿಯ ಪ್ರಕಾರವನ್ನಾಗಿಮಾಡಲು ಹಗಲಿರುಳೂ ಶ್ರದ್ಧೆ ಯಿಂದ ಶ್ರಮಿಸಿದವರಲ್ಲಿ ಅ.ನ.ಕೃ. ಅವರು ಅದ್ವಿತೀಯರು; ಬಹುಶಃ ಇಡೀ ಭಾರತದಲ್ಲೇ ಅತ್ಯಧಿಕ ಸಂಖ್ಯೆಯ ಕೃತಿನಿರ್ಮಾಣ ಮಾಡಿದವರಲ್ಲೂ ಅವರು ಅದ್ವಿತೀಯರು. ಸುಪ್ರಸಿದ್ಧ ವಿಮರ್ಶಕರೊಬ್ಬರು ಹೇಳುವಂತೆ 'ಜನಪ್ರಿಯತೆ ಎನ್ನುವ ಗುಣವನ್ನು ಕನ್ನಡಕ್ಕೆ ತಂದವರೇ ಅ.ನ. ಕೃಷ್ಣರಾಯರು[1].' 'ಸಮಸ್ತ ಜನಸ್ತೋಮ ನನ್ನ ಶ್ರಾವಕ ರಾಗಬೇಕೆಂದು ಬಯಸುವ ನಾನು ಕಾದಂಬರಿಗಳನ್ನೆ ಹೆಚ್ಚಾಗಿ ಬರೆಯುತ್ತಿದ್ದೇನೆ'[2] ಎನ್ನುವ ಅ.ನ.ಕೃ. ಸುಮಾರು ನೂರಹದಿನೈದು ಕಾದಂಬರಿಗಳನ್ನು ಬರೆದಿದ್ದಾರೆ. ಅವು ಗಳಲ್ಲಿ ಸುಮಾರು ತೊಂಬತ್ತು ಕೃತಿಗಳು ೧೯೪೭ ರಿಂದ ಈಚೆಗೆ ರಚಿತವಾಗಿವೆ. ಅವು ಗಳ ವಸ್ತು ವೈವಿಧ್ಯ ಬೆರಗುಗೊಳಿಸುವಂಥದು; 'ಪಾನನಿರೋಧ, ಅವಿಭಕ್ತ ಕುಟುಂಬ, ಆಧುನಿಕ ವಿದ್ಯಾಭ್ಯಾಸ, ಸ್ತ್ರೀ ಸ್ವಾತಂತ್ರ್ಯ, ದಾಂಪತ್ಯ ವಿಚ್ಛೇದನ, ಜೈಲುಗಳ ದುರವಸ್ಥೆ, ಬಣ್ಣದ ಚಿಟ್ಟೆಯಾದ ಹೆಣ್ಣು, ತಾಯಿಯಾದ ಹೆಣ್ಣು, ಸೂಳೆಯಾದ ಹೆಣ್ಣು, ಹಾದಿ ತಪ್ಪಿದ ಶ್ರೀಮಂತ ಗೃಹಿಣಿ, ಪ್ರೇಮದ ಪವಿತ್ರತೆ, ಕಾಮದ ಕೊಳೆ, ಕಿಚ್ಚು,

---

1. ಡಾ. ಹಾ. ಮಾ. ನಾಯಕ–'ಒಂದು ದಶಕದ ಕನ್ನಡ ಸಾಹಿತ್ಯ', ಸಮೀಕ್ಷೆ, ಪು. ೯೨.

2. ಅ. ನ. ಕೃಷ್ಣರಾಯ–'ಕಾದಂಬರಿ ಮತ್ತು ಕಾದಂಬರಿಕಾರ', ಸಾರ್ಥಕ ಸಾಹಿತ್ಯ, ಪು. ೩೫.

ರಾಜಕೀಯದ ಸಮಸ್ಯೆಗಳು, ಗ್ರಾಮಜೀವನದ ಅವನತಿ, ಜಾತೀಯತೆಯ ಭೂತ'[1]–ಇಂತಹ ಸುವಿಶಾಲ ಹರಹು. ಆದರೆ ಅವುಗಳ ನಿರೂಪಣೆಯಲ್ಲಿ ವೈಶಿಷ್ಟ್ಯವಿಲ್ಲ, ಗುರುತ್ವವಿಲ್ಲ. ಅವರು ಸೃಜಿಸುವ ಪಾತ್ರಗಳಿಗೆ ಕಪ್ಪು–ಬಿಳುಪು ಎರಡೇ ಮುಖ. ಕಪ್ಪು ಹಠಾತ್ತನೆ ಬಿಳುಪಾಗುತ್ತದೆ; ಬಿಳುಪು ಕಪ್ಪಾಗುತ್ತದೆ. ಅವುಗಳಿಗೆ ಸುಸಮರ್ಥವಾದ ಮನೋವೈಜ್ಞಾನಿಕ ಹಿನ್ನೆಲೆಯಿಲ್ಲ. ರಮ್ಯಾಕರ್ಷಕವೂ ಸರಳ ನಿರರ್ಗಳವೂ ಚಾತುರ್ಯ ಪೂರ್ಣವೂ ಆದ ಸಂಭಾಷಣೆ ಅ.ನ.ಕೃ. ಕಾದಂಬರಿಯ ಪ್ರಧಾನ ಲಕ್ಷಣ; ಅದೇ ಅವುಗಳ ಜನಪ್ರಿಯತೆಗೆ ಮೂಲಕಾರಣ. ಬರೀ ಸಂಭಾಷಣೆಯಲ್ಲೇ ಇಡೀ ಕೃತಿಯ ಕಟ್ಟಡವನ್ನು ಕಟ್ಟಿ ನಿಲ್ಲಿಸುವ ಅಸಾಧಾರಣ ಕಲೆ ಅವರಿಗೆ ಸಿದ್ಧಿಸಿದೆ. ಕುತೂಹಲಕರವಾಗಿ ಮನೋರಂಜಕವಾಗಿ ಕಥೆ ಹೇಳುವ ಕಲೆ ಅವರಿಗೆ ಸಾಧಿಸಿದ್ದರೂ ಆದರ ಚರ್ವಿತ ಚರ್ವಣದಿಂದಾಗಿ ಪ್ರಜ್ಞಾವಂತ ಓದುಗ ನಿರಾಶೆಗೊಳ್ಳಬೇಕಾಗುತ್ತದೆ. ಆದರೂ 'ಯಾವ ಲೇಖಕನೂ ಚರ್ವಿತ ಚರ್ವಣಮಾಡಲು ಸಾಧ್ಯವೇ ಇಲ್ಲ'[2] ಎನ್ನುವ ಮೊಂಡವಾದ ಅವರದು. ವಿಪುಲವಾದ ವಿಚಾರಗಳು ಸಮಸ್ಯೆಗಳು ಅವರ ಕಾದಂಬರಿಗಳಲ್ಲಿ ಮೂಡಿಬರುವುದುಂಟು. ಆದರೆ ಅವು ವಾಸ್ತವವೂ ಕಲಾತ್ಮಕವೂ ಆದ ಪರಿಹಾರಗಳನ್ನು ಕಂಡುಕೊಳ್ಳದೆ ಸತ್ವಹೀನವಾಗಿ ತೀರ ಲಘುವಾಗಿ ಪರ್ಯವಸಾನವಾಗುತ್ತವೆ. ಹಲವೊಮ್ಮೆ ಮೂಲಶಿಲ್ಪಕ್ಕೆ ಸಾವಯುವ ಸಂಬಂಧ ಹೊಂದಿರದ ವಿಚಾರಗಳು ಬಂದು ತೇಪೆಹಾಕಿದಂತಾಗುತ್ತವೆ; ಚರ್ಚೆಗೋಸ್ಕರ ಚರ್ಚೆ, ಕೇವಲ ಪುಟ ಬೆಳೆಯುವುದಕ್ಕೆಂಬಂತೆ, ಬರುತ್ತದೆಯೇ ಹೊರತು ಪಾತ್ರಾಂತರಂಗದ ನೈಜಾಭಿವ್ಯಕ್ತಿಗಾಗಿ ಬರುವಂತೆ ಕಾಣುವುದಿಲ್ಲ. ಹೀಗಾಗಿ ಅವರ ಕೃತಿಗಳು ನರಚಲು ವೈಯ್ಯ ನರೆಗೂದಲಿನ ಬಾಲಕರಂತಾಗಿ ಬಿಟ್ಟವೆ.

'ನಟಸಾರ್ವಭೌಮ' ಅವರ ಬೃಹದ್ಗಾತ್ರದ ಕಾದಂಬರಿ, ವರನಟ ವರದಾಚಾರ್ಯರ ಬದುಕಿನ ಮೇಲೆ ಬೆಳಕು ಚೆಲ್ಲುವ ಈ ಕೃತಿ ಅವರ ಕಲಾವಿದಗ್ಧತೆಗೆ ಮಸಿಬಳಿದಿದೆ. ಇಲ್ಲಿಯ ನಾಯಕ ಆದಿಯಿಂದ ಅಂತ್ಯದವರೆಗೂ ಎಳಕನಾಗಿಯೇ ಉಳಿಯುತ್ತಾನೆ. ಅವನ ಅಂತರಂಗ ಜೀವನದ ಸೂಕ್ಷ್ಮಸಂವೇದನೆಗಳಿಗೆ ಯಾವ ಬೆಲೆಯನ್ನು ಕೊಡದೆ ಕೇವಲ ಬಹಿರಂಗದ ಸಿನಿಮೀಯ ಘಟನೆಗಳ ಸೃಷ್ಟಿಯಿಂದಲೇ ಅವನನ್ನು ದೊಡ್ಡವನೆಂದು ಲೇಖಕರು ಸಾರುತ್ತಾರೆ. ಅವನ ವಿಶೃಂಖಲ ಪ್ರಣಯ, ಅಸಮರ್ಥನೀಯ ಬಾಲಿಶ ಔದಾರ್ಯ ಅಪ್ರಬುದ್ಧತೆಯ ಕುರುಹಾಗಿದೆ. ಅಭಿನಯದ ಬಗ್ಗೆ ನಾಟಕ ಸಾಹಿತ್ಯದ ಬಗ್ಗೆ ಅವನಾಡುವಮಾತುಗಳು ಕೃತಕವಾಗಿ ಕಾಣುತ್ತವೆ. ಕನ್ನಡನಾಡಿನ ನಾಟಕ ರಂಗದ ವಿಶಿಷ್ಟತೆಯನ್ನು ಇತಿಹಾಸವನ್ನು ಪ್ರತಿನಿಧಿಸುವ ಮಹತ್ತರ ಕಲಾ ಕೃತಿಯಾಗ

---

1. ಡಾ. ಹಾ. ಮಾ. ನಾಯಕ–'ಒಂದು ದಶಕದ ಕನ್ನಡ ಸಾಹಿತ್ಯ', ಸಮೀಕ್ಷೆ, ಪು. ೯೨.

2. ಅ. ನ. ಕೃಷ್ಣರಾಯ–'ಕಾದಂಬರಿ ಮತ್ತು ಕಾಂದಬರಿಕಾರ'. ಸಾರ್ಥಕ ಸಾಹಿತ್ಯ, ಪು. ೨೨.

ಬಹುವಾಗಿದ್ದ ವಸ್ತು ಅ.ನ.ಕೃ. ಅವರ ಅಸಡ್ಡೆಯಿಂದಾಗಿ, ಬಾಳಿನ ಮೇಲ್ಮೈ ವಿವರಗಳಲ್ಲೇ ತೃಪ್ತವಾಗುವ ಲಘುದೃಷ್ಟಿ ಕೋನದಿಂದಾಗಿ, 'ಒಂದು ದಂತ ಕಥೆಯಂತೆ ಮನೋರಂಜಕವಾಗಿದೆ, ಅಷ್ಟೇ ಹಗುರವೂ ಆಗಿದೆ.'[1]

ವೇಶ್ಯಾ ಸಮಸ್ಯೆಯನ್ನೆತ್ತಿಕೊಂಡು 'ನಗ್ನಸತ್ಯ' 'ಶನಿಸಂತಾನ' 'ಸಂಜೆಗತ್ತಲು' ಮುಂತಾಗಿ ಹಲವು ಕಾದಂಬರಿಗಳನ್ನು ಅ.ನ.ಕೃ. ಹೆಣೆದಿದ್ದಾರೆ. ವೇಶ್ಯೆಯರ ಮಾನಸಿಕ ಸಂವೇದನೆಗಳ ಚಿತ್ರಣಕ್ಕಿಂತ, ಅವುಗಳಿಗೆ ಕಾರಣವಾದ ಪರಿಸರಣದ ಘಟನೆಗಳ ವೈಜ್ಞಾನಿಕ ವಿಶ್ಲೇಷಣೆಗಿಂತ, ಬಹಿರಂಗದ ರಂಗು ರುಚಿಗಳ ವರ್ಣಮಯ ವಿವರಗಳನ್ನು ಪುಂಖಾನುಪುಂಖವಾಗಿ ಕೊಟ್ಟು ಯುವ ಓದುಗರ ಮನಸ್ಸನ್ನು ಕೆರಳಿಸಿ ಅಸ್ತವ್ಯಸ್ತಗೊಳಿಸುವುದರಲ್ಲಿ ಮಾತ್ರ ಇವು ಸಾರ್ಥಕ್ಯವನ್ನು ಪಡೆಯುತ್ತವೆ. ಕೇವಲ ವಿಸ್ಕಿ ಸೋಡಾ ಬಾಟಲುಗಳ ಓಡಾಟ, ನೋಟುಗಳ ತೂರಾಟ, ಸೆರಗಿನ ಹಾರಾಟ, ದೀಪದ ಆರಾಟಗಳಲ್ಲೇ ಈ ಕೃತಿಗಳ ವಾಸ್ತವತಾವಾದ ಮುಕ್ತಿ ಹೊಂದುತ್ತದೆ.

ಸಾಹಿತಿಯ ಜೀವನವನ್ನ ಕುರಿತ 'ಸಾಹಿತ್ಯ ರತ್ನ,' 'ಗಾಜಿನ ಮನೆ,' 'ಕನ್ನಡಮ್ಮನ ಗುಡಿಯಲ್ಲಿ' ಮತ್ತು 'ದೀಪಾರಾಧನೆ' ಕಾದಂಬರಿ ಮಾಲೆ ಲೇಖಕರ ವೈಯಕ್ತಿಕ ವಿಚಾರಗಳ ಪ್ರಚಾರ ಮಾಧ್ಯಮವಾಗಿ ಮಾತ್ರ ಉಳಿದಿವೆ. ಅಸಮರ್ಪಕ ಪಾತ್ರ ಪೋಷಣೆ, ಅಸಹಜ ಸನ್ನಿವೇಶಗಳು, ಲಘುವಾದ ಜೀವನದೃಷ್ಟಿ–ಇವುಗಳು ರಾಹುವಾಗಿ ಈ ಕೃತಿಗಳನ್ನು ಕಾಡಿವೆ.

ಹೆಣ್ಣೆಂದರೆ ಅ.ನ.ಕೃ. ಅವರಿಗೆ ಅಪಾರ ಗೌರವ, ಅಭಿಮಾನ. ಆ ಮಾತೃಭಾವದ ಹಿರಿಮೆಯನ್ನು ಸಾರುವ ಕೃತಿಗಳು 'ಗೃಹಲಕ್ಷ್ಮಿ,' 'ರುಕ್ಮಿಣಿ,' 'ತಾಯಿ ಮಕ್ಕಳು.' ಹಾಗೆಯೇ ನಮ್ಮ ಧರ್ಮ ಸಂಸ್ಕೃತಿಗಳ ಮಹತ್ವವನ್ನು ಕುರಿತು ಬರೆದವುಗಳು 'ಆಶೀರ್ವಾದ' ಮತ್ತು 'ಅನುಗ್ರಹ.' ಜಟಕಾ ಸಾಬಿಯ ಮಗನೊಬ್ಬ ಘನ ಸಂಗೀತ ವಿಂದ್ವಾಂಸನಾಗಿ ಹೆಣ್ಣು ಹೊನ್ನುಗಳ ಮೋಹಕ್ಕೊಳಗಾಗಿ ಪತಿತನಾಗಿ ಕೊನೆಗೆ ಜಟಕಾ ಬಂಡಿಯನ್ನೇ ಆಶ್ರಯಿಸುವ ಕತೆ 'ಮಿಯಾ ಮಲ್ಹಾರ್,' ಮೊದಲಿನಿಂದ ಕೊನೆಯ ವರೆಗೂ ಅಸಹಜತೆಯ ಆತಿರೇಕ. ಸಮಾಜದಲ್ಲಿ ಸರಿಯಾದ ಸ್ಥಾನಮಾನ ಗೌರವ ಗಳಿದ್ದರೂ ಅಡ್ಡಹಾದಿ ತುಳಿದ ಹೆಣ್ಣು ಮತ್ತು ಅವಳ ಸುತ್ತಲಿನ ಸ್ವಾರ್ಥಸಾಧಕ ವಿಷಕ್ರಿಮಿಗಳನ್ನು ಕುರಿತ ಕೃತಿ 'ಪಂಕಜ.' ಇಲ್ಲಿಯೂ ಸಹಜತೆಗಾಗಲೀ ವಿವೇಚನೆಗಾಗಲೀ ಜೆಲೆಯಿಲ್ಲ. ಒಂದಾದ ಮೇಲೊಂದರಂತೆ ಸಂಸಾರದಲ್ಲಿ ಬಂದೊದಗಿದ ಆಘಾತಗಳಿಂದಾಗಿ ಬೇಸತ್ತು ಕ್ರಿಸ್ತಮತವನ್ನವಲಂಬಿಸಿದ ಯುವಕನೊಬ್ಬನ ಬಾಳಕತೆ 'ದೇವಪ್ರಿಯ,' ಜವಾಬ್ದಾರಿಯುತವಾದ ಕಲಾಪ್ರಜ್ಞೆ ಇದ್ದಿದ್ದರೆ ಉತ್ತಮ ಮನೋವಿಶ್ಲೇಷಣಾತ್ಮಕ ಕಾದಂಬರಿಯಾಗಬಹುದಾಗಿದ್ದ ವಸ್ತು ಅ.ನ.ಕೃ. ಕೈಯ್ಯಲ್ಲಿ ಆರಾಮ ಕುರ್ಚಿಯ ರಸವಿಹೀನವಾದ ಗರಿಹಗುರ ಕೃತಿಯಾಗಿದೆ. ಸ್ವಾರ್ಥ, ಮತ್ಸರ, ಅಜ್ಞಾನ

1. ಕೆ. ಡಿ. ಕುರ್ತಕೋಟಿ–'ಕಾದಂಬರಿ', ಯುಗಧರ್ಮ ಹಾಗೂ ಸಾಹಿತ್ಯದರ್ಶನ, ಪು. ೧೯೪.

ಮೂಲವಾದ ಹುಚ್ಚು ದುರಭಿಮಾನಗಳಿಂದ ಹಗರಣದ ಬೀಡಾಗಿರುವ ಇಂದಿನ ಹಳ್ಳಿಗಳ ಸಹಜ ಚಿತ್ರಗಳು 'ಕುಲಪುತ್ರ' ಮತ್ತು 'ಭೂಮಿತಾಯಿ.' ಗ್ರಾಮಜೀವನದ ಗಾಢಾನುಭವ ಮತ್ತು ಪಾತ್ರಾಂತರಂಗದ ಸೂಕ್ಷ್ಮ ವಿಶ್ಲೇಷಣೆಗಳಿದ್ದು, ಕಲೆಗಾರಿಕೆಯಲ್ಲಿ ಸ್ವಲ್ಪ ಹೆಚ್ಚಿನ ಸಂಯಮವನ್ನು ತೋರಿದ್ದರೆ ಇವುಗಳು ಉತ್ಕೃಷ್ಟ ಕಲಾ ಕೃತಿಗಳಾಗುವ ಸಾಧ್ಯತೆಯಿತ್ತು. ನಾಟಕೋಪಜೀವಿಗಳ ಕಥೆಯನ್ನೊಳಗೊಂಡ 'ಅಭಿಮಾನ,' ಕೀರ್ತಿ ಕಾಂಚನಗಳಿಗಾಗಿ ಭ್ರಮಿಸಿ ಪಾತರಗಿತ್ತಿಯಾದ ನೃತ್ಯ ಕಲಾವಿದೆಯೊಬ್ಬಳನ್ನು ಕುರಿತ 'ಭುವನ ಮೋಹಿನಿ' ತೀರ ಸಾಮಾನ್ಯ ಕೃತಿಗಳು. ಉದಾತ್ತ ಬಾಳಿನ ಹಂಬಲದಿಂದ ಕಷ್ಟದ ಕುಲುಮೆಯಲ್ಲಿ ಬೇಯುತ್ತಿರುವ ಮತ್ತು ಉದಾತ್ತತೆಯನ್ನು ಧಿಕ್ಕರಿಸಿಯೂ ನೆಮ್ಮದಿಯಿಲ್ಲದೆ ತೊಳಲಾಡುವ ಇಬ್ಬಗೆಯ ಜೀವನ ವಿಧಾನವನ್ನು ಕುರಿತದ್ದು 'ಅಪರಾಜಿತೆ.' ಮುದ್ರಣ ವೃತ್ತಿಯ ಜನಜೀವನದ ಒಂದು ಕರುಣಕತೆ 'ಶುಭಸಮಯ.' ಪುಡಾರಿಗಳಿಂದ ನಮ್ಮ ನಾಡಿನ ರಾಜಕೀಯ ಹಾಗೂ ಸಾಮಾಜಿಕ ಜೀವನದ ಮೇಲೆ ಆಗುತ್ತಿರುವ ದುಷ್ಪರಿಣಾಮಗಳ ನಿರೂಪಣೆ 'ಆದಾರಿ–ಈದಾರಿ.' ಪೌರಾಣಿಕವಾದ ಸಮುದ್ರ ಮಥನವನ್ನು ಸಾಂಕೇತಿಕವಾಗಿಟ್ಟುಕೊಂಡು ನಾಲ್ಕು ಸಂಸಾರಗಳ ಜೀವನ ಮಾರ್ಗವನ್ನು ಚಿತ್ರಿಸುವ ಕೃತಿ 'ಅಮೃತ ಮಂಥನ.' ಅ.ನ.ಕೃ. ಅವರ ನೂರನೇ ಕೃತಿ 'ಗರುಡಮಚ್ಚೆ' ಹಾವಾಡಿಗನೊಬ್ಬನ ಬದುಕನ್ನು ಕುರಿತ ಸಾಮಾನ್ಯ ರಚನೆ. ನಮ್ಮ ದೇಶಕ್ಕೆ ಬಂದ ರಾಜಕೀಯ ಸ್ವಾತಂತ್ರ್ಯ ನಮ್ಮ ಧರ್ಮ ಸಂಸ್ಕೃತಿಗಳ ವಿನಾಶಕ್ಕೆ ಹೇಗೆ ಕಾರಣವಾಗಿದೆಯೆಂಬುದನ್ನು ಚಿತ್ರಿಸುವ ಕೃತಿ 'ಮನೆಯಲ್ಲಿ ಮಹಾಯುದ್ಧ.'

ವಿಜಯನಗರ ಸಾಮ್ರಾಜ್ಯದ ಉನ್ನತಿ ಅವನತಿಗಳನ್ನು ಕುರಿತ ಒಂಬತ್ತು ಐತಿಹಾಸಿಕ ಕಾದಂಬರಿಗಳನ್ನೂ ಅ.ನ.ಕೃ. ಬರೆದಿದ್ದಾರೆ, ಶೈಲಿಯ ಮೋಹಕತೆ, ವೇಗಗಾಮಿಯಾದ ಕಥನಕಲೆಯ ರೋಚಕತೆ ಮತ್ತು ಅತಿಯಾದ ಭಾವನಾವಶತೆಗಳಿಂದ ಇವು ಓದಿಸಿಕೊಂಡು ಹೋಗುತ್ತವೆಯೇ ಹೊರತು, ಎತ್ತಿ ಹೇಳುವಂಥ ವಿಶಿಷ್ಟತೆಯೇನೂ ಕಾಣುವುದಿಲ್ಲ. ಈ ಒಂಬತ್ತು ಕೃತಿಗಳಲ್ಲಿ ಒಂದಾದರೂ ಹೆಮ್ಮೆಯಿಂದ ಉದಾಹರಿಸುವಂಥ ಮಹತ್ವದ ಕೃತಿಯಿಲ್ಲದಿರುವುದು ಬೆರಗಿನ ಹಾಗೆಯೇ ಕೊರಗಿನ ಸಂಗತಿಯಾಗಿದೆ. ಪ್ರತಿಭಾಸಂಪನ್ನರೂ ಸುಸಮರ್ಥರೂ ಸಾಹಸಿಗಳೂ ಆದ ಅ.ನ.ಕೃ. ಅವರ ಕಲಾಶಕ್ತಿ ಹಾಗೂ ಬುದ್ಧಿಶಕ್ತಿಗಳು ಹೀಗೆ ಪತನೋನ್ಮುಖವಾಗಿ ಗುಂಡಿಗೊಸರುಗಳಲ್ಲಿ ಹರಿದು ನಾತಗಟ್ಟಿ ನಿಷ್ಪ್ರಯೋಜಕವಾಗುತ್ತಿರುವುದು ಒಂದು ವಿಷಾದನೀಯ ದುರಂತ. 'ಒಬ್ಬ ಕಾದಂಬರಿಕಾರ ಬರೆದ ಹಲವಾರು ಕಾದಂಬರಿಗಳಲ್ಲಿ ಎಲ್ಲವೂ ಅತಿಶ್ರೇಷ್ಠವಾಗಿರಬೇಕೆಂದು ನಾನು ನಿರೀಕ್ಷಿಸುವುದಿಲ್ಲ. ಅದು ಸಾಧ್ಯವೂ ಅಲ್ಲ. ಅದರಲ್ಲೂ ಕಾದಂಬರಿಕಾರರ ಕಲೆಗೂ ಉದರಕ್ಕೂ ನಂಟಸ್ಥಿಕೆ ಬೆಳೆದಾಗ, ಎಷ್ಟೋವೇಳೆ ಕಲೆ ಹಿಂದೆ ನಿಲ್ಲುತ್ತದೆ[1]' ಎಂಬುದನ್ನು ಒಪ್ಪಿಕೊಂಡಾಗಲೂ ಈ ಕಾಲು ಶತಮಾನದ

1. ಎಂ. ಗೋಪಾಲಕೃಷ್ಣ ಅಡಿಗ–ತರಾಸು ಉದ್ಧರಣೆ, 'ಮೊದಲ ಮಾತು', ಚದುರಂಗದ ಮನೆ.

ಅವಧಿಯ ಕಾದಂಬರಿ ಸೃಷ್ಟಿಯಲ್ಲಿ ಅ.ನ.ಕೃ. ಸಾಧಿಸಿದ್ದೇನು? ಎಂಬ ಪ್ರಶ್ನೆ ಹಾಗೆಯೇ ಉಳಿಯುತ್ತದೆ.

ಅ. ನ. ಕೃ. ಅವರ ಗರಡಿಯಲ್ಲೇ ಸಾಮುಮಾಡಿ ಅಧಿಕ ಜನಪ್ರಿಯತೆಯನ್ನು ಗಳಿಸಿದ ಮತ್ತೊಬ್ಬ ಪ್ರಸಿದ್ಧ ಕಾದಂಬರಿಕಾರರೆಂದರೆ ತ. ರಾ. ಸು. ಅವರು. ಆದರೆ ಅವರು ಬಹು ಬೇಗ ಗುರುವನ್ನು ಹಿಂದೆ ಹಾಕಿ ಮಿಂಚಿನಂತೆ ಮುನ್ನಡೆದರು. ಮೊದ ಮೊದಲಿನ ಕಾದಂಬರಿಗಳಲ್ಲಿ ಅಸಹಜ ಆದರ್ಶವಾದ ಸತ್ವರಹಿತ ಸುಧಾರಣೋತ್ಸಾಹ ಅತಿಯಾದ ಭಾವನಾವಶತೆಗಳ ಅ. ನ. ಕೃ. ಅಚ್ಚು ಕಣ್ಣಿಗೆ ಬಡಿಯುವಂತೆ ಕಾಣಿಸಿ ಕೊಳ್ಳುತ್ತದೆಯಾದರು ಕಾಲಸರಿದಂತೆ ತಮ್ಮದೇ ಆದ ವ್ಯಕ್ತಿತ್ವವನ್ನೂ ಶೈಲಿಯನ್ನೂ ನಿರೂಪಣಾನಾವೀನ್ಯತೆಯನ್ನೂ ಅವರು ರೂಪಿಸಿಕೊಂಡರು; ಕಾದಂಬರಿ ಪ್ರಪಂಚದ ನವದಿಗಂತಗಳ ಅನ್ವೇಷಣೆಮಾಡಿದರು; ಸಮಕಾಲೀನ ಸಮಾಜದ ವಿವಿಧ ಮುಖಗಳ ಅನಾವರಣ ಮಾಡಿದ್ದಲ್ಲದೆ ಪುರಾಣ ಇತಿಹಾಸಗಳ ಆಳಕ್ಕೂ ಇಳಿದು ಶ್ರದ್ಧೆಯಿಂದ ಅಭ್ಯಸಿಸಿ ಅವುಗಳನ್ನು ತಮ್ಮ ಲೇಖನಿಯಿಂದ ಪುನಃ ಸೃಷ್ಟಿಸಿದರು. ಪ್ರಯೋಗ ಪ್ರಿಯತೆ ತ. ರಾ. ಸು. ಅವರ ರಕ್ತಗುಣ. ಅವರ ಕೃತಿಗಳಲ್ಲಿ ವಿಪುಲವಾದ ವಸ್ತು ವೈವಿಧ್ಯವಿರುವಂತೆಯೇ ತಂತ್ರವೈವಿಧ್ಯವೂ ಇದೆ. ಓದುಗರನ್ನು ಉಸಿರುಕಟ್ಟಿಸುವಂಥ ಓಟದಲ್ಲಿ ಕಥೆ ಹೇಳುವ ಕಲೆ ಅವರಿಗೆ ಸಿದ್ಧಿಸಿದೆ; 'ಹೊಸಗನ್ನಡದ ಗದ್ಯಶಿಲ್ಪಿಗಳಲ್ಲಿ ತ. ರಾ. ಸು. ಒಬ್ಬರು. ಇದು ತ. ರಾ. ಸು. ಅವರದೇ ಬರವಣಿಗೆ ಎಂದು ಖಚಿತವಾಗಿ ಗುರುತಿಸಲು ಸಾಧ್ಯವಾಗುವಷ್ಟು ಮಟ್ಟಿಗೆ ಅವರ ವಿಶಿಷ್ಟತೆಯಿದೆ.'[1] ಅವರ 'ಲೇಖನಿ ಹೆಚ್ಚು ಪ್ರಖರ. ಕುಂಚದ ಬಣ್ಣದ ಹೆಚ್ಚಳ. ನಿರೂಪಣೆ ಹೆಚ್ಚು ದಾರುಣ. ಹೇಳ ಬೇಕಾದುದನ್ನು ಎಷ್ಟು ಬಗೆಯಲ್ಲಿ ಒತ್ತಿ ಹೇಳಿದರೂ ಅವರಿಗೆ ತೃಪ್ತಿಯಿಲ್ಲ. ರಸಾತಳಕ್ಕೆ ಚಿಮ್ಮುವ ಸೀಸದ ಗುಂಡಿನಂತೆ ಮುಂದೆ ಸಾಗಿದಂತೆಲ್ಲಾ ಅವರ ಲೇಖನಿಗೆ ಹೆಚ್ಚಿನವೇಗ ಉದ್ವೇಗ'.[2] ಕೆಲವೇಳೆ ಇದು ಅವಗುಣವೂ ಆಗುತ್ತದೆ. ಸನ್ನಿವೇಶಗಳನ್ನು ಸೋಜ್ವಲ ವಾಗಿ ಕಣ್ಣಿಗೆ ಕಟ್ಟುವಂತೆ ವರ್ಣಿಸಬಲ್ಲ ಶಕ್ತಿ ಅವರಿಗಿದೆ; ಅಂತೆಯೇ ಪಾತ್ರಾಂತರಂಗ ವನ್ನು ಪ್ರವೇಶಿಸಿ ಅಲ್ಲಿನ ಸೂಕ್ಷ್ಮತಮ ಸಂವೇದನೆಗಳನ್ನು ಅರಿತು ಅರಗಿಸಿಕೊಂಡು ಅವುಗಳನ್ನು ಮರಳಿ ವಿವರವಿವರವಾಗಿ ಚಿತ್ರಿಸಬಲ್ಲ ಅಭಿವ್ಯಕ್ತಿಕೌಶಲವೂ ಇದೆ. ಬಿರುಗಾಳಿಯ ವೇಗದಲ್ಲಿ ಓಡುವ ಓಜಸ್ವೀ ಶೈಲಿ, ಹರಿತವಾದ ಮೊನೆಯಾದ ಸಂಭಾಷಣೆ ಸಹಜ ಸಜೀವಪರಿಸರ ಸೃಷ್ಟಿ, ಸದೃಢ ಪಾತ್ರಕಲ್ಪನೆ ಮತ್ತು ಅಭ್ಯಾಸಪೂರ್ಣವಾದ ವೈಚಾರಿಕತೆ—ಇವು ತ.ರಾ.ಸು ಕಾದಂಬರಿಗಳ ಪ್ರಧಾನ ಲಕ್ಷಣಗಳಾಗಿವೆ.

ಸುಮಾರು ನಲವತ್ತಕ್ಕಿಂತ ಹೆಚ್ಚು ಕಾದಂಬರಿಗಳನ್ನು ತರಾಸು ಬರೆದಿದ್ದಾರೆ. ಅವುಗಳಲ್ಲಿ ಕೆಲವಾದರೂ ಒಂದಲ್ಲ ಒಂದು ರೀತಿಯಿಂದ ಗಮನ ಸೆಳೆಯುವ ಕೃತಿಗಳಾಗಿವೆ.

---

1. ಡಾ. ಹಾ. ಮಾ. ನಾಯಕ–'ಒಂದು ದಶಕದ ಕನ್ನಡ ಸಾಹಿತ್ಯ', ಸಮೀಕ್ಷೆ, ಪು. ೬೩.

2 ಎಚ್ಚೆಸ್ಕೆ–'ಪ್ರತಿಭಾ ಸಂದರ್ಶನ'–ಮಯೂರ, ಅಕ್ಟೋಬರ್ ೧೯೬೮, ಪು. ೧೫.

ಹೆಣ್ಣಿನ ಸ್ವಾತಂತ್ರ್ಯದ ಬಯಕೆಯನ್ನು ಸೂಕ್ಷ್ಮವಾಗಿ ವಿಶ್ಲೇಷಿಸುವ 'ಬಿಡುಗಡೆಯ ಬೇಡಿ' ಒಂದು ಉತ್ತಮ ಕೃತಿ. ಅದರ ತಂತ್ರ ಮೆಚ್ಚುವಂಥದು. 'ಮಸಣದ ಹೂವು' ವೇಶ್ಯಾ ಸಮಸ್ಯೆಯ ಬಹುಮುಖತೆಯನ್ನು ತುಂಬ ಪರಿಣಾಮ ಕಾರಿಯಾಗಿ ಚಿತ್ರಿಸುತ್ತದೆ. ಅ.ನ. ಕೃ. ಅವರು ಹತ್ತು ಕಾದಂಬರಿಗಳಲ್ಲಿ ಹೇಳಿದ್ದನ್ನು ತರಾಸು ಒಂದು ಕೃತಿಯಲ್ಲಿ ಹೇಳಿದ್ದಾರೆ. ಅಲ್ಲಿಗಿಂತ ಆಳವೂ ದಾರುಣವೂ ಸೂಕ್ಷ್ಮವೂ ತೀಕ್ಷ್ಣವೂ ಆದ ಹೃದಯವಂತ ಚಿತ್ರಣವಿಲ್ಲಿದೆ. ಅನಾಥ ಬಾಲಕನೊಬ್ಬನ ಕರುಣಾ ಜನಕ ಕಥೆ 'ಪುರುಷಾವತಾರ.' ನಮ್ಮ ಇಂದಿನ ರಾಜಕೀಯರಂಗದಲ್ಲಿ ತುಂಬಿರುವ ಪರಪೀಡಕ ಸ್ವಾರ್ಥಿಪುಡಾರಿಗಳ ಕಾರ್ಯರಂಗದ ವಿಷವರ್ತುಲವನ್ನು ಪರಿಚಯಿಸುವ ಶಕ್ತ ಕೃತಿ 'ಕಾರ್ಕೋಟಕ.' ನಾಗರಿಕ ಸಮಾಜದಲ್ಲಿ ಭದ್ರವಾಗಿ ಬೇರೂರುತ್ತಿರುವ ಅತಿ ಸಂತಾನ ಸಮಸ್ಯೆ, ಪ್ರೇಮದ ಫಲವಾದ ಮಕ್ಕಳನ್ನು ಪಡೆಯದೆಯೇ ಲೈಂಗಿಕ ಭೋಗತೃಷೆಯನ್ನು ತಣಿಸಿಕೊಳ್ಳುವ ಆಧುನಿಕ ಮನೋವೃತ್ತಿ–ಇವುಗಳ ವಿವಿಧಮುಖ ಪರಿಣಾಮಗಳನ್ನು ತುಂಬ ಸಮರ್ಥವಾಗಿ ಕಲಾತ್ಮಕವಾಗಿ ವಿವೇಚಿಸುವ ಸಾರ್ಥಕ ಕೃತಿ 'ಬೇಡದ ಮಗು.' 'ಹಂಸಗೀತೆ' ಸಂಗೀತಗಾರನೊಬ್ಬನ ಬಾಳಿನ ಹಂದರದ ಮೇಲೆ ಹಿಂದಿನ ಮತ್ತು ಇಂದಿನ ಸಂಸ್ಕೃತಿಯನ್ನು ವಿಶಿಷ್ಟ ತಂತ್ರದಲ್ಲಿ ಕುಶಲವಾಗಿ ಮನೋಜ್ಞ ವಾಗಿ ಚಿತ್ರಿಸುತ್ತದೆ. ಕೃತಿಯಲ್ಲಿ ಬಂದಿರುವ ಚಿತ್ರದುರ್ಗದ ಪರಿಸರ ತುಂಬ ಸಹಜವಾಗಿದೆ ಜೀವಂತವಾಗಿದೆ. ನೆಮ್ಮದಿಯ ನೆಲೆಯಾಗಿ ಭಕ್ತಿಗೌರವಗಳ ಬೀಡಾಗಿ ಅತಿಥಿಗಳ ಆಶ್ರಯವಾಗಿ ಇದ್ದ ಕುಟುಂಬವೊಂದು ಸ್ವಾರ್ಥಿಗಳೂ ವಿಘ್ನಸಂತೋಷಿಗಳೂ ಕಿಡಿಗೇಡಿ ಗಳೂ ಆದ ಅನ್ಯರ ಪ್ರವೇಶದಿಂದ ಅಂತಃಕಲಹದ ಅಗ್ನಿಕುಂಡವಾಗಿ ದಹಿಸಿಹೋದ ಕರುಳು ಹಿಂಡುವ ಪರಮ ದಾರುಣಚಿತ್ರ 'ಚೆಂದವಳ್ಳಿಯ ತೋಟ'. ನೈಜವೂ ಸತ್ವಪೂರ್ಣವೂ ಆದ ಗ್ರಾಮಪರಿಸರ, ಹರಿತವೂ ಅರ್ಥಪೂರ್ಣವೂ ಭೂವಾಸನಾ ಯುಕ್ತವೂ ಆದ ಸಂಭಾಷಣೆ, ಪ್ರಮಾಣಬದ್ಧವಾಗಿ ಮೂಡಿನಿಂತಿರುವ ಪಾತ್ರಗಳು, ಸಂಯಮಪೂರ್ಣವಾದ ನಿರೂಪಣೆ ಇದನ್ನೊಂದು ಉತ್ಕೃಷ್ಟ ಕಾದಂಬರಿಯನ್ನಾಗಿ ಮಾಡಿವೆ. ದೈವನಿಷ್ಠೆ, ವ್ಯಕ್ತಿನಿಷ್ಠೆ, ಸಮಾಜನಿಷ್ಠೆ ಎಂಬ ಮೂರು ಮುಖಗಳನ್ನು ಪ್ರತಿನಿಧಿಸುವ ಕಾದಂಬರಿಗಳು 'ಮೊದಲ ನೋಟ,' 'ಗೃಹ ಪ್ರವೇಶ' ಮತ್ತು 'ರಾಜೇಶ್ವರಿ.' 'ಕೇದಿಗೆ ವನ' ಮತ್ತು 'ಕಣ್ಣು ತೆರೆಯಿತು' ವೈದ್ಯಕೀಯ ಜೀವನದ ಚೌಕಟ್ಟಿನಲ್ಲಿ ಪ್ರೇಮ–ಕಾಮ, ಸೇವೆ–ಸ್ವಾರ್ಥ, ರಾಜಕೀಯಗಳ ಸಂಘರ್ಷಣೆಯನ್ನು ಕುರಿತ ಆಕರ್ಷಕ ಕೃತಿಗಳು. 'ನಾಗರ ಹಾವು', 'ಎರಡು ಹೆಣ್ಣು ಒಂದು ಗಂಡು' ಮತ್ತು 'ಸರ್ಪ ಮತ್ಸರ' ತಮ್ಮ ಭಾವೋತ್ಕಟತೆಯಿಂದ ರೋಚಕಶೈಲಿಯಿಂದ ರಮ್ಯವಾಗಿವೆ. ಆದರೆ ಸಂಯಮ ಮತ್ತು ವೈಚಾರಿಕತೆಗಳು ಜೊತೆಗೂಡಿದ್ದಲ್ಲಿ ಇವು ಉತ್ತಮ ಮನೋವಿಶ್ಲೇಷಣಾತ್ಮಕ ಕಾದಂಬರಿಗಳಾಗುವ ಸಾಧ್ಯತೆಯಿತ್ತು. ಧರ್ಮ ನಮಗೆ ಆಪದ್ಧರ್ಮವಾಗಿ ಸ್ವಾರ್ಥಸಾಧನವಾಗಿದ್ದು ಅದರಪರಿಣಾಮ ಹೇಗೆ ಮನುಷ್ಯ ನನ್ನು ದುರ್ಬಲಗೊಳಿಸುತ್ತದೆಯೆಂಬುದನ್ನು ಕುರಿತ ಕೃತಿ, 'ಮರಳು ಸೇತುವೆ.'

ಸಹಜತೆ ಮತ್ತು ಸರಸತೆ ಇದರ ಜೀವಾಳ. ಮಧ್ಯಮವರ್ಗದ ಸಮಾಜದ ಹೆಣ್ಣೊಬ್ಬಳ ಸುಪ್ತ ಆಸೆ ಅಭೀಪ್ಸೆಗಳ ಸುತ್ತ ಹೆಣೆಯಲಾದ ಪರಿಣಾಮಕಾರೀ ಕೃತಿ 'ಪಂಜರದ ಪಕ್ಷಿ'. ಪ್ರಜ್ಞಾ ಪ್ರವಾಹದ ನೂತನ ತಂತ್ರವನ್ನು ತುಂಬ ಸಮರ್ಥವಾಗಿ ಬಳಸಿಕೊಂಡು ವೈಚಾರಿಕ ಹಿನ್ನೆಲೆಯಲ್ಲಿ ಸಮಸ್ಯೆಯನ್ನು ಪದರಪದರವಾಗಿ ಬಿಡಿಸಿ ನೋಡುವ ಈ ಪ್ರಯತ್ನ ನಿಜಕ್ಕೂ ಅಭಿನಂದನೀಯ. 'ಶಿಪುದೈತ್ಯ' ಒಂದು ಉತ್ತಮ ಪ್ರಯತ್ನ. ಮೆಚ್ಚಿಬಂದ ಹೆಣ್ಣು ಮನೆಗೆ ಮಂಗಳ ಲಕ್ಷ್ಮಿಯಾಗುವ ಬದಲು ಮಹಾಮಾರಿಯಾಗಿ ಕುಟುಂಬದ ವಿನಾಶಕ್ಕೆ ಕಾರಣವಾದ ದುರಂತ ಸಾಂಸಾರಿಕ ಕೃತಿ 'ಶುಕ್ರವಾರದ ಲಕ್ಷ್ಮಿ'. ಸಹಜವಾಗಿಯೇ ಬಡತನದ ರಾಕ್ಷಸದವಡೆಗೆ ಸಿಕ್ಕಿ ಜೀವನವಿಡೀ ದುಃಖಸಂಕಷ್ಟಗಳ ಕೆಂಡದುಂಡೆಗಳನ್ನೇ ನುಂಗಿದ ಪ್ರಾಥಮಿಕ ಶಾಲಾ ಉಪಾಧ್ಯಾಯನೊಬ್ಬನ ಕುಟುಂಬದ ಹೃದಯವಿದ್ರಾವಕ ಚಿತ್ರಣ 'ಜೆಂಕಿಯ ಬಲೆ', ಭಾವೋದ್ವೇಗಕ್ಕೆ ಉಪನ್ಯಾಸಕ್ಕೆ ಸುಲಭವಾಗಿ ಎಡೆಗೊಡಬಹುದಾದ ವಸ್ತುವಾದರೂ ತುಂಬುಸಹಜತೆಯಿಂದ ಸಮರ್ಥ ನಿರೂಪಣೆಯಿಂದ ಮನಸೆಳೆಯುತ್ತದೆ. ಪ್ರಕೃತಿ ಸಹಜವಾದ ಅದಮ್ಯ ಬಯಕೆ ಮತ್ತು ಪರಿಣಾಮ ಭೀತಿ–ಇವುಗಳ ನಡುವೆ ಸಿಕ್ಕಿದ ಆಧುನಿಕ ನಾಗರಿಕ ಯುವಕನೊಬ್ಬನ ಸಮಸ್ಯಾಗ್ರಸ್ತ ಬಾಳಿನ ಸುತ್ತ ನಿರ್ಮಿಸಲಾದ ಕೃತಿಗಳು 'ಆಕಸ್ಮಿಕ' ಮತ್ತು 'ಅಪರಾಧಿ'. ಮಹಾಭಾರತದ ಘಟನೆಯೊಂದನ್ನು ಸಾಂಕೇತಿಕವಾಗಿಟ್ಟುಕೊಂಡು ಮನುಷ್ಯನ ಬಾಳಿನ ಬಹು ಪ್ರಬಲವೃತ್ತಿಯಾದ ಲೈಂಗಿಕತೆಯನ್ನು ಕುರಿತು ವಿಶ್ಲೇಷಣಾತ್ಮಕವಾಗಿ ಬರೆದ ಕೃತಿ 'ಯಕ್ಷ ಪ್ರಶ್ನೆ'. ಕೃತಿಯ ಸೂಚ್ಯವೂ ಹರಿತವೂ ಧ್ವನಿಪೂರ್ಣವೂ ಆದ ಶೈಲಿ ತುಂಬ ಮೆಚ್ಚುವಂಥದು. ಮತೋದ್ಧಾರದ ಹೆಸರಿನಲ್ಲಿ ಸ್ವಾರ್ಥದ ಡೊಳ್ಳು ಬೆಳೆಸುವ ಜನರ ಆಚಾರ ವಿಚಾರಗಳಿಗಿರುವ ವಿಷಮದ್ವಂದ್ವವನ್ನು ಬಣ್ಣಿಸುತ್ತದೆ 'ಎಲ್ಲಾ ಅವನ ಹೆಸರಿನಲ್ಲೇ'. ಗ್ರಾಮೋದ್ಧಾರದ ಆದರ್ಶವನ್ನು ತಲೆಯಲ್ಲಿ ಹೊತ್ತ ಯುವಕ ಎದುರಾದ ಎಡರುತೊಡರುಗಳನ್ನು ನಿಷ್ಠೆಯಿಂದ ಗೆದ್ದು ತನ್ನ ಉದ್ದೇಶದಲ್ಲಿ ಸಫಲನಾದ ಸ್ವಾರಸ್ಯ ಕಾರೀ ಚಿತ್ರಣ 'ಮಾರ್ಗದರ್ಶಿ', 'ಭಾಗ್ಯಶಿಲ್ಪಿ' ಮತ್ತು 'ಬೆಳಕಿನ ಬೀದಿ'ಗಳಲ್ಲಿದೆ. ಗ್ರಾಮಜೀವನದ ಬಹುಮುಖಗಳನ್ನು ತುಂಬ ಸಹಜವಾಗಿ ರಸವತ್ತಾಗಿ ಶಕ್ತಿವತ್ತಾಗಿ ಈ ಕಾದಂಬರಿ ಮಾಲೆ ಬಣ್ಣಿಸುತ್ತದೆ. ಆದರೆ ತರಾಸು ಕುತೂಹಲ ಕೆರಳುವ ಮನಂಬುಗುವ ಭಾವೋತ್ಕಟತೆಯಿಂದ ಹೇಳುತ್ತಿದ್ದರೂ ಅದನ್ನೂ ತುಂಡರಿಸಿ ಬೇರೆಬೇರೆ ಭಾಗವಾಗಿ ಮಾಡಿ ಹೇಳುವ ಅಪಾಯಕಾರೀ ಚಟವನ್ನೇ ಬೆಳೆಸಿಕೊಂಡಿರುವುದು ರಸಭಂಗಕ್ಕೆ ಒಟ್ಟಂದದ ಪರಿಣಾಮರಾಹಿತ್ಯಕ್ಕೆ ಕಾರಣವಾಗುತ್ತದೆ. 'ಚಕ್ರತೀರ್ಥ', 'ಮುಂಜಾವಿನಿಂದ ಮುಂಜಾವು' ಮತ್ತು 'ಚಂದನದಗೊಂಬೆ' ಸ್ಮರಣೀಯ ಕೃತಿಗಳು. 'ಚಂದನದ ಗೊಂಬೆ' ಯಂತೂ ಸಹಜತಂತ್ರದ ಸೊಗಸಿನಿಂದ ಸಂಕೀರ್ಣತೆಯ ಸತ್ವದಿಂದ ಸಂವಿಧಾನದ ಅರ್ಥವಂತಿಕೆಯಿಂದ ಸಂಯಮಪೂರ್ಣವೂ ಗಂಭೀರವೂ ಆದ ನಿರೂಪಣೆಯಿಂದ ಮಹತ್ವ ದ್ದಾಗಿದೆ.

ಕನ್ನಡದ ಹೆಮ್ಮೆಯ ದೊರೆ ನೃಪತುಂಗನನ್ನು ಮತ್ತು ಬೆಳ್ಗೊಳದ ಜಗದ್ಭವ್ಯ

ಗೊಮ್ಮಟನನ್ನು ನಿರ್ಮಾಣ ಮಾಡಿಸಿದ ಚಾವುಂಡರಾಯನನ್ನು ಕುರಿತ ಕಾದಂಬರಿಗಳು ತರಾಸು ಅವರ ಮೌಲಿಕ ಐತಿಹಾಸಿಕ ಕಾದಂಬರಿಗಳಾಗಿವೆ. ಇತಿಹಾಸ ಜೀವದುಂಬಿ ಎದುರು ನಿಲ್ಲುತ್ತದೆ. ಐತಿಹಾಸಿಕ ಕಾದಂಬರಿಗೇ ಹೇಳಿ ಮಾಡಿಸಿದಂತಿರುವ ಓಜೋಪೂರ್ಣವೂ ಅದ್ಭುತಶಕ್ತಿ ಸಂಪನ್ನವೂ, ಅತಿಶಯೋಕ್ತಿ ಸಮನ್ವಿತವೂ ನಾಟಕೀಯವೂ ಮೊನಚೂ ಆದ ಅವರ ಶೈಲಿಯಿಂದ ಮೂಡಿಬಂದಿರುವ ಚಿತ್ರದುರ್ಗ ಮತ್ತು ಹೊಯ್ಸಳ ರಾಜ್ಯಗಳ ಇತಿಹಾಸವನ್ನು ಕುರಿತ ಕಾದಂಬರಿಗಳು ತುಂಬ ಜನಪ್ರಿಯತೆಯನ್ನು ಪಡೆದಿವೆ. 'ಬೆಳಕು ತಂದ ಬಾಲಕ' ನಚಿಕೇತನನನ್ನು ಕುರಿತ ಒಂದು ಕಲಾತ್ಮಕ ಪೌರಾಣಿಕ ಕಾದಂಬರಿ. ನಚಿಕೇತನ ಜ್ಞಾನದಾಹದ ತೀವ್ರತೆ, ಯಮನ ಕಠಿಣ ಪರೀಕ್ಷೆ, ಪೌರಾಣಿಕ ವಾತಾವರಣ ತುಂಬ ಜೀವಂತಾಭಿವ್ಯಕ್ತಿಯನ್ನು ಪಡೆದಿವೆ. ಪ್ರಭುದೇವರನ್ನು ಕುರಿತ 'ಅಗ್ನಿರಥ–ಮುಕ್ತಿಪಥ' ಪವಾಡಗಳ ಕಣ್ಣಿನಿಂದ ಕಂಡ, ಐತಿಹಾಸಿಕ ದೃಷ್ಟಿಯಿಲ್ಲದ ನಿಷ್ಪರಿಣಾಮಕಾರಿಯಾದ ಕೃತಿ. ಅತಿಶಯೋಕ್ತಿಯ ದೌರ್ಬಲ್ಯ, ಅತ್ಯುತ್ಕಟತೆ, ಅವಸರದ ಮುಕ್ತಾಯಗಳಿಂದ ತರಾಸು ಅವರ ಬಹುಕೃತಿಗಳು ನರಳಿದರೂ, ನಮ್ಮ ಸಾಹಿತ್ಯವನ್ನು ಶ್ರೀಮಂತಗೊಳಿಸುವ ಕೆಲವಾದರೂ ಉತ್ತಮ ಕಾದಂಬರಿಗಳು ಅವರಿಂದ ನಿರ್ಮಿತವಾಗಿವೆ ಎಂಬುದು ಸಂತಸದ ಸಂಗತಿ.

'ಮುಗಿಲ ಮಲ್ಲಿಗೆ'ಯನ್ನು ಅರಳಿಸುತ್ತಾ ೧೯೪೪ರಲ್ಲಿ ಕನ್ನಡ ಕಾದಂಬರಿ ಲೋಕಕ್ಕೆ ಕಾಲಿಟ್ಟ ಕೃಷ್ಣಮೂರ್ತಿ ಪುರಾಣಿಕರು ಈ ಇಪ್ಪತ್ತು ವರ್ಷಗಳ ಅವಧಿಯಲ್ಲಿ ಅರುವತ್ತಕ್ಕೂ ಹೆಚ್ಚು ಕಾದಂಬರಿಗಳನ್ನು ಹೆಣೆದಿದ್ದಾರೆ. ಬಹುಮಟ್ಟಿಗೆ ಮಧ್ಯಮ ವರ್ಗದ ಕುಟುಂಬಜೀವನದ ಸುತ್ತ ಇವರ ಬರವಣಿಗೆಯ ಗಾಣ ಸುತ್ತುತ್ತದೆ. 'ಅತ್ತೆ ಸೊಸೆಯ ಪ್ರಶ್ನೆ, ಅಣ್ಣ ತಮ್ಮಂದಿರ ಪ್ರಶ್ನೆ, ಅತ್ತಿಗೆ ಮೈದುನರ ಪ್ರಶ್ನೆ. ಮಾವ ಅಳಿಯ, ಅಕ್ಕ–ತಂಗಿ ಈ ಮನೆತನದ ಸಂಬಂಧಗಳು ಎಷ್ಟೋ ಅಷ್ಟು ಸಮಸ್ಯೆಗಳು ಅಂತಲೇ ಹೇಳಬೇಕು. ಹೀಗೆ ನಾನು ನನ್ನ ಸುತ್ತಲಿನ ಸಾಂಸಾರಿಕ ಚಿತ್ರಗಳನ್ನೆ ನನ್ನ ಕಾದಂಬರಿ ಸೃಷ್ಟಿಗೆ ಮೂಲ ದ್ರವ್ಯವಾಗಿ ಆಯ್ದುಕೊಂಡೆ'[1] ಎಂದು ಅವರು ಹೇಳುತ್ತಾರೆ. ಮೆದುಳಿಗೆ ಸ್ವಲ್ಪವೂ ಶ್ರಮನೀಡದೆ ಅವರು ಬಹು ಸುಲಭವಾಗಿ ಸರಾಗವಾಗಿ ಕಥೆ ಹೇಳಿಕೊಂಡು ಹೋಗುತ್ತಾರೆ. ಅಜ್ಜಿಯ ಕತೆಗಳಂತೆ ಅವು ಮನೋರಂಜಕವಾಗಿಯೂ ಇವೆ. ಆದುದರಿಂದ ಬುದ್ಧಿ ಬಲಿಯದ ಸಾಮಾನ್ಯವಾಚಕ ವರ್ಗಕ್ಕೆ ಅವು ಅಚ್ಚು ಮೆಚ್ಚು. ಸಮಸ್ಯೆಗಳನ್ನೆತ್ತಿಕೊಂಡರೂ ಅವಕ್ಕೆ ಬಲು ಸರಳ ಪರಿಹಾರ ಅವರ ಬತ್ತಳಿಕೆಯಲ್ಲಿದೆ. 'ಜೀವನದ ಸವಿ ಕಹಿಗಳು ದೇವದೇವನ ಕೊಡುಗೆಯಾಗಿರುತ್ತದೆ'[2] ಎಂಬ ಮನೋಧರ್ಮದಿಂದ ಹೊರಟ ಲೇಖಕರಿಂದ ನಾವು ವೈಚಾರಿಕತೆಯನ್ನು ಸಂಕೀರ್ಣತೆಯನ್ನು ನಿರೀಕ್ಷಿಸುವುದಂತೂ ಸಾಧ್ಯವಿಲ್ಲದ ಮಾತು. ಕೃತಕ

---

1. ಎನ್ಕೆ–'ಪ್ರತಿಭಾ ಸಂದರ್ಶನ'–ಮಯೂರ, ಜುಲೈ ೧೯೬೮, ಪು. ೧೩.
2. ಕೃಷ್ಣಮೂರ್ತಿ ಪುರಾಣಿಕ–'ಆರಿಕೆ' ಮದುವೆಯ ಹಾಡು.

ಸನ್ನಿವೇಶಗಳು, ಅಪಕ್ವ ವಿಚಾರ ಅತಿ ತೆಳುವಾದ ಅನುಭವ. ನಿರ್ಜೀವ ಸಂಭಾಷಣೆ, ಅಪ್ರಬುದ್ಧ ಪಾತ್ರ ಕಲ್ಪನೆ, ಅತಿಯಾದ ಆದರ್ಶ–ಇವು ಅವರ ಕಾದಂಬರಿಗಳಲ್ಲಿ ಅಸಂಬದ್ಧವಾಗಿ ತುಂಬಿಕೊಂಡಿದೆ. 'ಮಡಿವಂತಿಕೆಯ ಮನೋಭಾವ ಅವರ ಕಾದಂಬರಿಗಳಲ್ಲಿ ಪ್ರಭೂತವಾಗಿ ಪ್ರತಿಬಿಂಬಿತವಾಗಿದೆ'[1] ಈ ಕಾರಣಗಳಿಂದಾಗಿ ಅವು ಆಕಾಶ ಪುರಾಣಗಳಾಗುತ್ತವೆಯೇ ಹೊರತು ನೆಲದಲ್ಲಿ ಬೇರುಬಿಟ್ಟ ಜೀವನದ ಪ್ರಾಮಾಣಿಕ ಪೃಥಕ್ಕರಣೆಯಾಗುವುದಿಲ್ಲ. ವಿಶಿಷ್ಟಶೈಲಿಯೂ ಅವರಿಗೆ ಸಿದ್ಧಿಸಿಲ್ಲ. ಅವರ 'ಭಾಷೆ ಸವೆದ ನಾಣ್ಯದಂತೆ ತನ್ನ ಪೇಟೆಯ ಬೆಲೆಯನ್ನು ಕೂಡ ಕಳೆದುಕೊಂಡುಬಿಟ್ಟಿದೆ.'[2]

ರಾಷ್ಟ್ರೋನ್ನತಿಯ ಜೀವನಾಡಿಗಳಾದ ವಿದ್ಯಾರ್ಥಿಗಳ ಅಂತರಂಗ ಸಂಸ್ಕರಣ ಕಾರ್ಯದಲ್ಲಿ ಶಿಕ್ಷಕರ ಮತ್ತು ಪೋಷಕರ ಹೊಣೆಗಾರಿಯೇನೆಂಬುದನ್ನು ಕುರಿತದ್ದು 'ರಂಗರೋಹಿಣಿ'. ಮಾನವ ಜೀವಿತದಲ್ಲಿನ ದೈವೀ ಕೈವಾಡವನ್ನು ಅದನ್ನು ಸಹಿಸಬೇಕಾದ ಬಗೆಯನ್ನು ನಿರೂಪಿಸುವ ಕೃತಿ 'ಮದುವೆಯ ಹಾಡು'. ಚಿತ್ರಕಲಾವಿದನೊಬ್ಬನ ಬಾಳನ್ನು ತುಂಬ ಸಿನಿಮೀಯ ರೀತಿಯಲ್ಲಿ ಹೇಳುತ್ತದೆ 'ಕೊನ್ನಾರ ಕಿಂಕಿಣಿ.' 'ಮಂಜುಳಾ' ಧ್ಯೇಯಸಾಧನೆಗೆ ಹೋರಾಟ ಅನಿವಾರ್ಯವೆಂಬುದನ್ನು ಚಿತ್ರಿಸುತ್ತದೆ. ಒಂದಾದಮೇಲೊಂದರಂತೆ ತನ್ನ ಮದುವೆಗೆ ಬಂದ ಅಡ್ಡಿಗಳಿಂದಾಗಿ ಮನೋವಿಭ್ರಮಕ್ಕೊಳಗಾದ ಹೆಣ್ಣು ತರುಣ ಡಾಕ್ಟರರ ಸಾಹಚರ್ಯದಿಂದಾಗಿ ಆರೋಗ್ಯ ಮನಸ್ಕಳಾಗಿ ಅವರನ್ನೇ ಕೈ ಹಿಡಿದದ್ದು 'ಮಂಗಲಾಕ್ಷತೆ'ಯ ವಸ್ತು. ಸುಂದರ ಮನೋವಿಶ್ಲೇಷಣಾತ್ಮಕ ಸತ್ವಶಾಲೀ ಕೃತಿಯಾಗಬಹುದಾಗಿದ್ದ ವಸ್ತು ಪುರಾಣಿಕರ ಲಘು ದೃಷ್ಟಿಯಿಂದಾಗಿ ಜಾಳಾಗಿ ಕೃತಕವಾಗಿ ಸಪ್ಪೆಯಾಗಿಬಿಟ್ಟಿದೆ. ಯುದ್ಧದಿಂದಾಗುವ ಅನಾಹುತ ಪರಂಪರೆಯನ್ನು ಆಧಾರವಾಗುಳ್ಳ ಕೃತಿ 'ವಸುಂಧರಾ'. ವಸ್ತು ಒಳ್ಳೆಯದು; ನಿರೂಪಣೆ ಹಳಸಲು; ಕಲೆಗಾರಿಕೆ ಕಳಪೆ. ತನ್ನ ತಮ್ಮ ತಂಗಿಯರನ್ನು ಸಂತೋಷವಾಗಿಡಲು ಕಳ್ಳತನ ಕೈಗೊಂಡು ಜೈಲುವಾಸ ಕಂಡು ಮರಳಿ ಬಂದು ಬವಣೆಯ ಬಾಳನ್ನೆದುರಿಸಿದ ವ್ಯಕ್ತಿಯೊಬ್ಬನ ಕರುಣಾಜನಕ ಕಥೆ 'ವಸಂತಲಕ್ಷ್ಮಿ'. ಆಸ್ಪತ್ರೆಯ ಜೀವನವನ್ನು ಹಿನ್ನೆಲೆಯಾಗುಳ್ಳ ಕೃತಿಗಳು 'ಕಲ್ಯಾಣಧಾಮ' ಮತ್ತು 'ಸರಿತಾ ಸತ್ಯವತಿ'. ಕಷ್ಟಪರಂಪರೆಗಳಿಂದ ತುಂಬಿದ ಬದುಕಿನಲ್ಲಿ ತಾಳ್ಮೆ ಸಹಕಾರ ಶ್ರದ್ಧೆ ಧ್ಯೇಯಗಳಿದ್ದರೆ ಹೊಸ ಬಾಳು ಮೂಡುವುದು ಅಸಾಧ್ಯವಲ್ಲವೆಂಬುದನ್ನು ಸೂಚಿಸುತ್ತದೆ, 'ಹೊಸಬಾಳು'. ಇಂದಿನ ಹಳ್ಳಿಯ ಬಾಳಿನ ಒಂದು ಸುರಸ ಚಿತ್ರಣ 'ಮಂದಾರ ಮಂದಾಕಿನಿ'. ವರದಕ್ಷಿಣೆಯ ಅನಾಹುತಕ್ಕೆ ಬಲಿಯಾದ ಹೆಣ್ಣೊಬ್ಬಳ ಕರುಳು ಮಿಡಿಯುವ ಕಥೆ 'ಕುಲವಧು'. ಅವಿಭಕ್ತ ಕುಟುಂಬದ ಏಳುಬೀಳಿನ ರಮ್ಯವೂ ಕರುಣಾಪೂರ್ಣವೂ ಆದ ಚಿತ್ರಗಳು 'ತುಂಬಿದ ಮನೆ', 'ಬೀರಿದ ಭೂಮಿ' ಮತ್ತು 'ಹಸಿರು ನೆಲ'.

---

1. ಎನ್ಕೆ–'ಪ್ರತಿಭಾ ಸಂದರ್ಶನ'–ಮಯೂರ, ಜುಲೈ ೧೯೬೮, ಪು. ೧೪.
2. ಕೆ. ಡಿ. ಕುರ್ತಕೋಟಿ– 'ಕಾದಂಬರಿ', ಯುಗಧರ್ಮ ಹಾಗೂ ಸಾಹಿತ್ಯ ದರ್ಶನ, ಪು. ೨೪೦.

ಆದರ್ಶ ಶಿಕ್ಷಕನೊಬ್ಬನ ಉದಾತ್ತಬಾಳುವೆಯ ಕೌಟುಂಬಿಕ ಕೃತಿ 'ತಂಪುನೆಳಲು'. 'ಮುತ್ತೈದೆ', 'ಮನೆ ತುಂಬಿದ ಹೆಣ್ಣು', 'ಧರ್ಮದೇವತೆ', 'ಭಾಗೀರಥಿ', 'ಮಣ್ಣಿನ ಮಗಳು'-ಹೆಸರುಗಳೇ ಸೂಚಿಸುವಂತೆ ಪುರಾಣಿಕರು ಕಂಡ ಆದರ್ಶ ನಾರೀಮಣಿಯರ ಮಾದರಿ ಚಿತ್ರಗಳು.

ತಮ್ಮ ಕೃತಿಗಳಲ್ಲಿ ಸಾಕಷ್ಟು ಗಟ್ಟಿತನವನ್ನೂ ಸ್ವಂತಿಕೆಯನ್ನೂ ಮೆರೆದ ನಮ್ಮ ಪ್ರಸಿದ್ಧ ಕಾದಂಬರಿಕಾರರಲ್ಲಿ ಮತ್ತೊಬ್ಬರು ನಿರಂಜನ ಅವರು. ಅ. ನ. ಕೃ. ಅವರ ಶಿಷ್ಯ ಮಂಡಲಿಯಲ್ಲಿ ಒಬ್ಬರಾಗಿದ್ದು ಬಹು ಬೇಗ ಅವರ ಪ್ರಭಾವದಿಂದ ತಪ್ಪಿಸಿಕೊಂಡವರಿವರು. ಸಾಮಾಜಿಕ ಅವ್ಯವಸ್ಥೆಗಳನ್ನು ಕಂಡು ಅವರು ರೊಚ್ಚಿಗೇಳುತ್ತಾರೆ. ಆದರೆ ಅಷ್ಟೇ ಸಂಯಮವೂ ವೈಚಾರಿಕತೆಯೂ ಸೂಕ್ಷ್ಮವಿಶ್ಲೇಷಣಾ ಶಕ್ತಿಯೂ ಅವರಿಗಿದೆ. ಇತ್ತೀಚಿನ ಕಾದಂಬರಿಗಳಲ್ಲಿ ಅವರ ವಾಸ್ತವಿಕದೃಷ್ಟಿ ಮತ್ತಷ್ಟು ಪಕ್ವವಾಗಿದೆ. ಶಕ್ತಿಯುತವಾದ ಸಂಭಾಷಣೆ, ಕುತೂಹಲಕರವೂ ಸಹಜ ಸುಂದರವೂ ಆದ ನಿರೂಪಣೆ ಮತ್ತು ಪ್ರಧಾನ ವಾಗಿ, ನೆಲದಿಂದ ಮೂಡಿ ಮೇಲೆದ್ದಂತಹ ಸದೃಢ ಪಾತ್ರಸೃಷ್ಟಿ-ಅವರ ವೈಶಿಷ್ಟ್ಯಗಳಾಗಿವೆ. ನಮ್ಮ ನಾಡಿನ ಶಿಕ್ಷಕರ ಬವಣೆ ಬಡತನಗಳ ಸಹಜವೂ ಸಹಾನುಭೂತಿಯುತವೂ ಆದ ಚಿತ್ರಣ 'ದೂರದ ನಕ್ಷತ್ರ' ಮತ್ತು 'ನವೋದಯ'ಗಳಲ್ಲಿದೆ. ಮಾನವೀಯ ಅಂತಃಕರಣದ ಪ್ರಭಾವೀ ಚಿತ್ರಣವಾಗಿದೆ, 'ಅಭಯಾಶ್ರಮ'. ಸೆರೆಯಲ್ಲಿದ್ದ ವ್ಯಕ್ತಿ ಯೊಬ್ಬನ ದಿನಚರಿಯ ರೂಪದಲ್ಲಿರುವ 'ವಿಮೋಚನೆ'ತನ್ನ ಹಿನ್ನೋಟ ತಂತ್ರದಿಂದಾಗಿ, ಘಟನೆಗಳ ಸುಸಂಬದ್ಧತೆಯಿಂದಾಗಿ, ನಿರೂಪಣೆಯ ಸೊಗಸಿನಿಂದಾಗಿ ಮನ ಸೆಳೆಯುತ್ತದೆ. 'ರಂಗಮ್ಮನ ವಠಾರ' ಅವರ ಒಂದು ಮಹತ್ವದ ಕೃತಿ. ಒಂದು ವಠಾರದಲ್ಲಿರುವ ಹಲವು ಕುಟುಂಬಗಳ ಹಲವು ಮುಖದ ಜೀವನವನ್ನು ಈ ಕೃತಿ ತುಂಬ ರಸವತ್ತಾಗಿ ಅರ್ಥವ ತ್ತಾಗಿ ನೈಜವಾಗಿ ಚಿತ್ರಿಸುತ್ತದೆ. ರಂಗಮ್ಮನ ಪಾತ್ರ ಕಲ್ಪನೆಯಂತೂ ಅದ್ಭುತ ವಾದದ್ದು. ಜೀವನದ ಅಂತರಂಗದ ಅರಿವನ್ನೇ ಪಡೆಯದೆ ಶ್ರೀಮಂತಿಕೆಯ ತೊಟ್ಟಿಲಲ್ಲಿದ್ದು ಕ್ರಮೇಣ ಅದರ ನೈಜ ಮೌಲ್ಯಗಳನ್ನು ಅರ್ಥಮಾಡಿಕೊಂಡ ತಂದೆ ಮಕ್ಕಳಿಬ್ಬರ ಕತೆ 'ಬಂಗಾರದ ಜಿಂಕೆ'. ಕಯ್ಯೂರಿನ ಹುತಾತ್ಮರ ಆದರ್ಶವೂ, ನಿಸ್ವಾರ್ಥವೂ ಆದ ಹೋರಾಟವನ್ನು ಅತ್ಯಂತ ಶಕ್ತಿವತ್ತಾಗಿ ಪ್ರಾಮಾಣಿಕವಾಗಿ ಸ್ಫೂರ್ತಿಯುತವಾಗಿ ಬಣ್ಣಿಸುತ್ತದೆ 'ಚಿರಸ್ಮರಣೆ'. ಮುಗ್ಧವೂ ಶಾಂತವೂ ಉದಾರವೂ ಆದ ಜೀವನ ನಡೆಸುತ್ತಿದ್ದ ಹಳ್ಳಿಯಲ್ಲಿ ನಾಗರಿಕತೆಯ ಪದಾರ್ಪಣದಿಂದ ಉಂಟಾದ ಪರಿಣಾಮವನ್ನು ಕಾದಂಬರಿಸುತ್ತದೆ, 'ನೂರು ಜುಟ್ಟು ಮೂರು ಜಡೆ'. ಅವರ 'ಬನಶಂಕರಿ' 'ಹೆಣ್ಣಾಗಿ ಕಾಡಿತ್ತು ಮಾಯೆ', 'ಅಂಜನ'ಗಳೂ ಹೆಸರಿಸಬೇಕಾದ ಕೃತಿಗಳು: 'ಕಲ್ಯಾಣಸ್ವಾಮಿ' ಮತ್ತು 'ಸ್ವಾಮಿ ಅಪರಂಪಾರ' ಎಂಬೆರಡು ಐತಿಹಾಸಿಕ ಕಾದಂಬರಿ ಗಳನ್ನೂ ನಿರಂಜನರು ಬರೆದಿದ್ದಾರೆ. ಹತ್ತೊಂಬನೇ ಶತಮಾನದ ಕೊಡಗಿನ ರಾಜ ಚಿಕವೀರ ರಾಜನ ಕಾಲದ ಇತಿಹಾಸ 'ಅಪರಂಪಾರ'ದ ವಸ್ತು. ೧೯ನೇ ಶತಮಾನಕ್ಕೆ ನಮ್ಮನ್ನು ಕರೆದೊಯ್ಯುವಂತಹ ಪರಿಸರಣ ನಿರ್ಮಾಣ, ಸತ್ವಭರಿತವಾದ ಪಾತ್ರ ಸೃಷ್ಟಿ,

ಪ್ರಾಮಾಣಿಕವಾದ ಐತಿಹಾಸಿಕ ದೃಷ್ಟಿ ಇವು ಈ ಕೃತಿಯನ್ನು ಒಂದು ಉತ್ತಮ ಐತಿಹಾಸಿಕ ಕಾದಂಬರಿಯನ್ನಾಗಿ ಮಾಡಿವೆ.

ಕ್ರಾಂತಿಕಾರವಾದ ರೀತಿಯಲ್ಲಿ ಸಮಾಜದ ಕೊಂಕು ಡೊಂಕುಗಳನ್ನು ಅನ್ಯಾಯ ಅನಾಚಾರಗಳನ್ನೂ ಅಸಹನೆ ಅಸಮತೆಗಳನ್ನು ಟೀಕಿಸಿ ಉಗ್ರವಾಗಿ ವಿಡಂಬಡಿಸಿ ಕೃತಿ ರಚನೆ ಮಾಡಿದವರು ಬಸವರಾಜ ಕಟ್ಟೀಮನಿಯವರು. ಅಲ್ಲದುದನ್ನು ಹೊಲ್ಲದುದನ್ನು ಕಂಡಾಗ ಅವರು ಕೆಣಕಿದ ಫಣಿಯಾಗುತ್ತಾರೆ. ನೇರ ನಿರ್ದಾಕ್ಷಿಣ್ಯ ಪರಿಣಾಮ ಕಾರಕ ಮಾತು ಬರೆಹ ಹುಟ್ಟುಗುಣ. 'ಮೋಹದ ಬಲೆಯಲ್ಲಿ' ಜರತಾರಿ ಜಗದ್ಗುರು ಗಳಲ್ಲಿ ಕಪಟ ಸ್ವಾಮಿಗಳ ಸೋಗಿನ ವೈರಾಗ್ಯವನ್ನೂ ಆಂತರಿಕ ಅವ್ಯವಹಾರವನ್ನೂ ಕೆಂಗೆಂಡದ ಕಾವಿನಿಂದ ವಿಡಂಬಡಿಸಿದ್ದಾರೆ. ಅವರ ನೈತಿಕ ಪ್ರಜ್ಞಾಮೂಲವಾದ ರೋಷ ಕೆಲವೇಳೆ ಕಲೆಯನ್ನು ಹಿಮ್ಮುಖಮಾಡಿರುವುದೂ ಉಂಟು. 'ಜ್ವಾಲಾ ಮುಖಿಯ ಮೇಲೆ' ಶ್ರಮಜೀವಿಗಳ ಹೋರಾಟವನ್ನು ತುಂಬ ತೀಕ್ಷ್ಣವಾಗಿ ಅಭಿ ವ್ಯಕ್ತಿಸುವ ಕೃತಿ. ಅದರ ನೈಜತೆ ನಿರ್ದಿಷ್ಟತೆಗಳು ಮುಟ್ಟಿದರೆ ಸುಡುವಷ್ಟು ತೀವ್ರ ವಾಗಿವೆ. 'ಬೀದಿಯಲ್ಲಿ ಬಿದ್ದವಳು', ವೇಶ್ಯಾಜೀವನವನ್ನು ಕುರಿತದ್ದು. 'ಶಿವದಾರ ಜನಿವಾರ' ಮತ್ತು 'ನೀ ನನ್ನ ಮುಟ್ಟಬೇಡ' ಕೃತಿಗಳು ನಮ್ಮ ಸಮಾಜವನ್ನು ಶಾಪವಾಗಿ ಕಾಡುತ್ತಿರುವ ಜಾತಿ ಭೂತವನ್ನು ವಿಶ್ಲೇಷಿಸುತ್ತವೆ. ಮಡಿವಂತಿಕೆಯ ಆಂತರ್ಯದಲ್ಲಿ ಹೊಲಸಿನ ಹೊಂಡವನ್ನು ನಿರ್ಮಿಸಿಕೊಂಡಿರುವ ಆಷಾಢಭೂತಿಗಳ ವ್ಯವಹಾರಗಳನ್ನು ಇವು ಸೂಚ್ಯವಾಗಿ ಮನಮುಟ್ಟುವಂತೆ ನಿರೂಪಿಸುತ್ತವೆ. ಸುಸಂಸ್ಕೃತರೆನ್ನಿಸಿಕೊಂಡವರಲ್ಲೂ ಮನೆಮಾಡಿರುವ ಅಂಧಶ್ರದ್ಧೆಯನ್ನು ಬಯಲಿಗೆಳೆ ಯುವ ಕೃತಿ 'ಸಾಕ್ಷಾತ್ಕಾರ'. 'ನಾನು ಪೋಲೀಸನಾಗಿದ್ದೆ' ವಸ್ತುವಿನ ನಾವೀನ್ಯತೆ ಯಿಂದ ಮೆರಗು ಪಡೆದಿದೆ. 'ಬೆಳಗಿನ ಗಾಳಿ' ಒಂದು ನಗರದ ಹಲವು ಮುಖದ ಸಮಾಜಘಾತಕ ಸಂಗತಿಗಳ ಮೇಲೆ ಬೆಳಕು ಚೆಲ್ಲುತ್ತದೆ. 'ಪ್ರಿಯಬಾಂಧವಿ'ಯದೂ ಅದೇ ಥಾಟಿ. 'ಖಾನಾವಳಿಯ ನೀಲಾ' ವಾಸ್ತವ ರಮ್ಯವೂ ಮರ್ಮಭೇದಕವೂ ಆದ ಕೃತಿ. ಹಳ್ಳಿಯ ಸೊಗಡನ್ನುಳ್ಳ ಸಹಜ ಸಜೀವ ಕೃತಿ 'ಹೆಂಡತಿ'. ದುರಂತ ಪ್ರಣಯದ ಹೃತ್ಸ್ಪರ್ಶಿಯೂ ಸತ್ವಭರಿತವೂ ಆದ ಕಾದಂಬರಿ 'ಪ್ರಪಾತ'. 'ಜಲತರಂಗ' ಯೌವನ ಪೂರ್ವ ವಯಸ್ಸಿನ ಒಂದು ಸುಂದರ ಚಿತ್ರಣ.[1] 'ಸ್ವಾತಂತ್ರ್ಯ ದೆಡೆಗೆ' ಮತ್ತು 'ಮಾಡಿಮಡಿದವರು' ಸ್ವಾತಂತ್ರ್ಯ ಚಳುವಳಿಯ ಹೋರಾಟದಲ್ಲಿ ಹುತಾತ್ಮರಾದವರ ಸ್ಫೂರ್ತಿದಾಯಕವೂ ಸಹಜವೂ ತೇಜಸಂಪನ್ನವೂ ಆದ ಕಣ್ಕಟ್ಟು ವಂಥ ಕೃತಿಗಳು. ಸ್ವತಃ ಸ್ವಾತಂತ್ರ್ಯ ಚಳುವಳಿಯ ಕಾವನ್ನು ಕಂಡುಂಡ ಲೇಖಕರು ತುಂಬ ಪ್ರಭಾವಕಾರಿಯಾಗಿ ಅದರ ವಿವರಗಳನ್ನು ಚಿತ್ರಿಸಿದ್ದಾರೆ. ಐತಿಹಾಸಿಕ

---

1. ಡಾ. ಹಾ. ಮಾ. ನಾಯಕ–'ಒಂದು ದಶಕದ ಕನ್ನಡ ಸಾಹಿತ್ಯ', ಸಮೀಕ್ಷೆ, ಪು. ೯೫.

ಕಾದಂಬರಿಗಳ ರಚನೆಯಲ್ಲೂ ಕಟ್ಟೀಮನಿಯವರು ಸಿದ್ಧಹಸ್ತರಾಗಿದ್ದಾರೆ. 'ರಾಯನಾಯಕ' 'ಪೌರುಷ ಪರೀಕ್ಷೆ' ಮತ್ತು 'ಸಮರಭೂಮಿ' ಅವರ ಚಾರಿತ್ರಿಕ ಕಾದಂಬರಿಗಳು, ಮೂರರಲ್ಲೂ ವೀರರಸನೊರೆಗಟ್ಟಿ ಹರಿಯುತ್ತಿದೆ. ಮಲ್ಲಸರ್ಜ, ಸಂಗೊಳ್ಳಿರಾಯಣ್ಣ ಮುಂತಾದವರು ನಮ್ಮೆದುರು ಜೀವತಳೆದು ನಿಲ್ಲುತ್ತಾರೆ. 'ಗಿರಿಯ ನವಿಲು' ಮಹಾದೇವಿಯಕ್ಕನನ್ನು ಕುರಿತ ಕೃತಿ. ಹಳ್ಳಿಯ ರಕ್ತಮಾಂಸ ತುಂಬಿದ ಗಂಡು ಭಾಷೆ, ಜ್ವಲಂತ ಪಾತ್ರ ನಿರ್ಮಿತಿ, ಅನುಭವಸಾಂದ್ರತೆ, ಸಾತ್ವಿಕ ರೋಷ ಕಟ್ಟೀಮನಿಯವರ ಕಾದಂಬರಿಗಳ ಪ್ರಮುಖ ಲಕ್ಷಣಗಳಾಗಿವೆ.

೩

ಜೀವನದ ಬಹುವಿಸ್ತಾರವಾದ ನೆಲೆಗಟ್ಟಿನ ಮೇಲೆ ನಿಂತ ಬೃಹತ್‌ಕಾದಂಬರಿ ವಿನಾಯಕರ 'ಸಮರಸವೇ ಜೀವನ'. ೧೯೩೦ರಲ್ಲಿ ಪ್ರಾರಂಭವಾದ ಅದರ ರಚನೆ ೧೯೫೩ರಲ್ಲಿ ಪೂರ್ಣಗೊಂಡಿದೆ. ಈ ಮಧ್ಯದ ಇಪ್ಪತ್ತೆರಡು ವರ್ಷಗಳ ಅಂತರ, ಗುಣಾವಗುಣಗಳೆರಡನ್ನೂ ಒಟ್ಟಿಗೇ ಅದಕ್ಕೆ ತಂದು ಕೊಟ್ಟಿದೆ. ಎರಡು ಕುಟುಂಬಗಳ ವಿರಸ ಘರ್ಷಣೆಯನ್ನು ಕೇಂದ್ರವಾಗಿಟ್ಟುಕೊಂಡು ಆರಂಭವಾದ ಕೃತಿ ಬಹುಬೇಗನೆ ತನ್ನ ಕ್ಷೇತ್ರವನ್ನು ವಿಸ್ತರಿಸಿಕೊಂಡು ವ್ಯಾಪಕವಾಗಿ ಪ್ರಾದೇಶಿಕವಾಗಿ ರಾಷ್ಟ್ರೀಯವಾಗಿ ಅಂತರ ರಾಷ್ಟ್ರೀಯವಾಗಿ ಬೆಳೆದುಬಿಡುತ್ತದೆ. ವಿನೋದ, ವಿಚಾರ, ತರ್ಕ, ತತ್ವ, ಧರ್ಮ, ಸಂಸ್ಕೃತಿ, ಪ್ರೇಮ, ಕಾಮ, ಆದರ್ಶ, ನಿಸರ್ಗ, ಶ್ರದ್ಧೆ, ಸಂಪ್ರದಾಯ, ಶಿಕ್ಷಣ, ಸಂಸ್ಕಾರ, ಮುಂತಾದ ಹಲವು ಹನ್ನೊಂದು ವಿಚಾರಗಳು ಇದರಲ್ಲಿ ಮೇಳವಿಸಿವೆ. ಹಲವು ಪಾತ್ರಗಳು ತುಂಬ ಸದೃಢವಾಗಿ ಸಬಲವಾಗಿ ಮೂಡಿಬಂದಿದ್ದರೆ ಕೆಲವು ನಿಷ್ಕಾರಣವಾಗಿ ಮೊಟಕಾಗಿಬಿಟ್ಟಿವೆ. ಹಲವೆಡೆ ಆಶ್ಚರ್ಯಗೊಳಿಸುವಂಥ ಅದ್ಭುತ ವಾಸ್ತವಿಕ ಚಿತ್ರಣ ವಿದ್ದರೆ ಮತ್ತೆ ಕೆಲವೆಡೆ ಅತಿಶಯೋಕ್ತಿ ಅತಿವರ್ಣನೆ ಭಾವಾತಿರೇಕ ತುಂಬಿಕೊಂಡಿವೆ. ಭಾಷಾ ಶೈಲಿಯಲ್ಲಿಯೂ ಇದೇ ರೀತಿ ವಿಷಮತೆ ಕಣ್ಣಿಗೆ ಬಡಿಯುತ್ತದೆ. ಆಡು ನುಡಿ ತತ್‌ಕ್ಷಣ ಗ್ರಾಂಥಿಕವಾಗುತ್ತದೆ. ಕೆಲವು ಪಾತ್ರಗಳ ಬಗ್ಗೆ ಲೇಖಕರು ಪಕ್ಷಪಾತವಹಿಸಿ ಬಿಡುವುದರಿಂದ ಉಳಿದವು ಛಾಯಾಪಾತ್ರಗಳಾಗಿ ಬಿಡುತ್ತವೆ. ಆದರೂ ಒಟ್ಟಂದದಲ್ಲಿ ನೋಡುವಾಗ ಈ ದೋಷಗಳು ಪ್ರಖರವಾಗಿ ಕಾಣಿಸದೆ ಕಾದಂಬರಿಯಲ್ಲಿ ಜೀವಂತವಾಗಿ ಉಸಿರಾಡುವ ವೈವಿಧ್ಯಮಯವೂ ಅದ್ಭುತ ವಾಸ್ತವವೂಆದ ಬದುಕು ನಮ್ಮ ಮನಸ್ಸನ್ನು ತುಂಬುತ್ತದೆ. ಉತ್ತರ ಕರ್ನಾಟಕದ ಜನಜೀವನ ತನ್ನೆಲ್ಲಾ ಸಮಗ್ರತೆಯೊಡನೆ ಸಂಕೀರ್ಣತೆಯೊಡನೆ ಇಲ್ಲಿ ವ್ಯೈವೆತ್ತಿದೆ. ಕಥಾ ಸನ್ನಿವೇಶಗಳಂತೂ ತುಂಬ ಸತ್ವ ಪೂರ್ಣವಾಗಿ ಸಾಕಾರವಾಗಿ ಸೃಷ್ಟಿಗೊಂಡಿವೆ. ಪಾತ್ರಗಳು ಘಟನೆಗಳು ವಿಚಾರಗಳು ಇಲ್ಲಿ ಇಡಕಿರಿದಿದ್ದರೂ ಅವೆಲ್ಲ ಬಹುಮಟ್ಟಿಗೆ ಸಮನ್ವಯಗೊಂಡು ಸಮರಸಗೊಂಡು ಒಮ್ಮುಖವಾಗಿ ನಡೆದು ಕಾದಂಬರಿಯ ಮಹಾಸೌಧವನ್ನು ಶಿಲ್ಪಿಸಿವೆ.

'ಕಾನೂರು ಹೆಗ್ಗಡಿತಿ'ಯನ್ನು ಬರೆದ ಕುವೆಂಪು ಇತ್ತೀಚೆಗೆ 'ಮಲೆಗಳಲ್ಲಿ

ಮದುಮಗಳು' ಕಾದಂಬರಿಯನ್ನು ಸೃಷ್ಟಿಸಿದ್ದಾರೆ. ಗಾತ್ರ ಪಾತ್ರಗಳೆರಡರಲ್ಲೂ ಇದು ನಿಸ್ಸಂದೇಹವಾಗಿ ದೊಡ್ಡದು. ಮಲೆನಾಡಿನ ಮಹಾಭಿತ್ತಿಯ ಮೇಲೆ ರೂಪುಗೊಂಡಿರುವ ಈ ಕೃತಿ 'ಹುಲಿಯ' ತೆರೆದಹಾದಿಯಲ್ಲಿ ತನ್ನ ಅಂತರಂಗದ ಎಳೆ ಎಳೆಯನ್ನೂ ನಿಷ್ಕಪಟವಾಗಿ ಸಹಜರಮ್ಯವಾಗಿ ಸಾಂದ್ರವಾಗಿ ಬಿಡಿಬಿಡಿಸಿ ಪ್ರದರ್ಶಿಸುತ್ತಾ ನಡೆಯುತ್ತದೆ. ಪ್ರಕೃತಿಯ ಮಡಿಲಲ್ಲಿ ಹುದುಗಿದ ನಾಲ್ಕಾರು ಹಳ್ಳಿಗಳ ವಿವಿಧ ಜಾತಿಯ ವಿವಿಧ ವರ್ಗದ ಮನೋಧರ್ಮದ ವಿವಿಧ ಸಂಪ್ರದಾಯದ ಜನಜೀವನವನ್ನು ಅತ್ಯುಜ್ವಲವೂ ಅನ್ಯಾದೃಶವೂ ಆದ ರೀತಿಯಲ್ಲಿ ನಗ್ನವಾಗಿ ಬಣ್ಣಿಸುತ್ತದೆ ಈ ಕೃತಿ. ಮದುವೆ ಇಲ್ಲಿನ ವಿವಿಧಾಂಗಗಳನ್ನು ಜೆಸೆಯುತ್ತದೆ. ಇದರಲ್ಲಿ ಕಥಾನಾಯಕನಿಲ್ಲ, ನಾಯಕಿಯಿಲ್ಲ. ಮಲೆನಾಡಿನ ಇಡೀ ಬದುಕಿಗೇ ಇಲ್ಲಿ ನಾಯಕಪಟ್ಟ; ಅದ್ಭುತ ವಾಸ್ತವತೆಗೇ ನಾಯಕಿಯ ಕಿರೀಟ. ಇಲ್ಲಿ ಅವಸರವಿಲ್ಲ, ಅತಿಶಯೋಕ್ತಿಯಿಲ್ಲ, ಅತಿಪ್ರಧಾನತೆಯಿಲ್ಲ, ಅವಜ್ಞೆಯಿಲ್ಲ. ಎಲ್ಲವೂ ವಿಶಿಷ್ಟ, ಎಲ್ಲವೂ ಪ್ರಧಾನ, ಎಲ್ಲವೂ ಸುಸ್ಪಷ್ಟ. ಕುವೆಂಪು ಅವರ ಪ್ರಗಾಢವಾದ ಅನನ್ಯ ಸದೃಶವಾದ ಕಾಡಿನ ನಾಡಿನ ಜೀವನಾನುಭವ, ಸೂಕ್ಷ್ಮತಮಸಂವೇದನೆಗಳನ್ನೂ ಸಶಕ್ತವಾಗಿ ಸೆರೆಹಿಡಿಯಬಲ್ಲ ಸೆಲಗಂಪಿನ ವಿಧೇಯಶೈಲಿ, ಸ್ವೋಪಜ್ಞಶೀಲವಾದ ಕಲಾಪ್ರಜ್ಞೆ, ಬೌದ್ಧಿಕ ಎಚ್ಚರ ಇವುಗಳೆಲ್ಲವೂ ಪ್ರಮಾಣಬದ್ಧವಾಗಿ ಸಮ್ಮಿಲನಗೊಂಡಿರುವ ಮಹತ್ಕೃತಿಯಿದು. 'ಕಥಾ ಸಂವಿಧಾನದಲ್ಲಿ, ವಸ್ತು ನಿರೂಪಣೆಯಲ್ಲಿ, ಪಾತ್ರರಚನೆಯಲ್ಲಿ, ಶೈಲಿಯಲ್ಲಿ ಹಳೆಯ ಜಾಡನ್ನುಳಿದು ಹೊಸದಾರಿಯನ್ನು ತುಳಿದು ವಿಶಿಷ್ಟ ಲಕ್ಷಣಗಳನ್ನೊಳಗೊಂಡ ಸಂಕೀರ್ಣ ಕಾದಂಬರಿಯಿದು.'[1]

೪

ಇಟಲಿಯ ಸುಪ್ರಸಿದ್ಧ ಕಲಾಸಾರ್ವಭೌಮ ಮೈಕೆಲ್ ಏಂಜಲೋವಿನ ಸುತ್ತ ರಮ್ಯವಾದ ಕಲಾತ್ಮಕ ಕಾದಂಬರಿಯೊಂದನ್ನು ಹೆಣೆದಿದ್ದಾರೆ ಕೆ. ವಿ. ಅಯ್ಯರ್. ಬಾಲ ಏಸುವಿಗೆ 'ರೂಪದರ್ಶಿ'ಯಾದಂಥ ವ್ಯಕ್ತಿ, ಸೈತಾನನ ಸ್ವರೂಪನಾದ 'ಜುದಾಸ್'ಗೂ ರೂಪದರ್ಶಿಯಾಗಬೇಕಾಗಿ ಬಂದ ಜೀವನವನ್ನು ಹೃದಯವೇಧಕವಾಗಿ ಹೇಳುವ ಕೃತಿಯಿದು. ಕೃತಿಯಲ್ಲಿ ಪಡಿಮೂಡಿಸಿರುವ ಇಟಲಿಯ ಪರಿಸರ ತುಂಬಿ ಸಹಜವೂ ಶಕ್ತಿಯುತವೂ ಆಗಿದ್ದು, ಪಾತ್ರಗಳೂಕೂಡ ಮಿಡಿದರೆ ರಕ್ತಹನಿಯುವಂತಿವೆ. ಹೊಯ್ಸಳ ಸಾಮ್ರಾಜ್ಯ ಶಾಂತಲಾದೇವಿಯನ್ನು ಕುರಿತ ಅವರ ಐತಿಹಾಸಿಕ ಕಾದಂಬರಿ ಶೈಲಿಯ ಚಿತ್ತಾಕರ್ಷತೆಯಿಂದ ಕಲ್ಪನೆಯ ಶ್ರೀಮಂತಿಕೆಯಿಂದ ತುಂಬಿಕೊಂಡಿದೆ. ನಿರ್ಜೀವ ಇತಿಹಾಸದ ಪರಿಸರಣಕ್ಕೆ ಜೀವದುಂಬುವ ಪ್ರಯತ್ನ ಸಾರ್ಥಕವಾಗಿದೆಯಾದರೂ ಚಾರಿತ್ರಿಕ ಕಾದಂಬರಿಕಾರನಿಗಿರಬೇಕಾದ ನಿರ್ಲಿಪ್ತತೆ ಇಲ್ಲವಾಗಿ ಅತಿಯಾದ ಆದರ್ಶ

1. ದೇಜಗೌ–'ಮಹಾನ್ ಕಾದಂಬರಿ ಮಲೆಗಳಲ್ಲಿ ಮದುಮಗಳು', ಕರ್ಮವೀರ, ೨೯–೧೨–೬೮, ಪು. ೧೪.

ಪ್ರಿಯತೆ, ಕೆಲವೆಡೆ ತೀರ ಅಸಹಜವೆನ್ನಿಸುವಷ್ಟು, ಹರಡಿಕೊಂಡು ಕೃತಿಯ ಮೌಲ್ಯವನ್ನು ಕುಗ್ಗಿಸಿಬಿಟ್ಟಿದೆ.

'ಚಿಕವೀರ ರಾಜೇಂದ್ರ' ಕೊಡಗಿನ ಇತಿಹಾಸದ ಮೇಲೆ ರಚಿತವಾದ ಮಾಸ್ತಿಯವರ ಶ್ರೇಷ್ಠ ಐತಿಹಾಸಿಕ ಕಾದಂಬರಿ. ಹತ್ತೊಂಬತ್ತನೆ ಶತಮಾನದ ಜನಜೀವನವನ್ನು ಸಂಸ್ಕೃತಿಯನ್ನು ಪಾತ್ರಗಳನ್ನು ಅತ್ಯಂತ ಸಮರ್ಥವಾಗಿ ಅವರು ಪುನರ್ನಿರ್ಮಿಸಿದ್ದಾರೆ. ಅವರ ಸರಳಗಂಭೀರ ಶೈಲಿ ಕಾದಂಬರಿಯ ಮೌಲ್ಯವನ್ನು ಉತ್ಕರ್ಷಿಸಿದೆ. 'ಚಿಕ್ಕವೀರರಾಜನ ಪಾತ್ರದ ಬೆಳವಣಿಗೆಯಲ್ಲಿ ಪೋಷಿತವಾಗಿರುವ ಪಾಪಪ್ರಜ್ಞೆ ವಿನೂತನವಾದುದು ; ಸಮರ್ಥವಾದುದು'[1] 'ಚೆನ್ನಬಸವನಾಯಕ' ಕೂಡ ಅದೇ ಎರಕದ ಸರಳ ನಿರಾಡಂಬರ ಮೌಲಿಕ ಕಾದಂಬರಿ.

ಹಿರಿಯ ಲೇಖಕರಾದ ದೇವುಡು ಅವರು 'ಮಹಾಬ್ರಾಹ್ಮಣ', 'ಮಹಾಕ್ಷತ್ರಿಯ' ಮತ್ತು 'ಮಹಾದರ್ಶನ' ಎಂಬ ಮೂರು ಪೌರಾಣಿಕ, 'ಅವಳ ಕತೆ' ಎಂಬ ಐತಿಹಾಸಿಕ, 'ಅಂತರಂಗ', 'ಮಲ್ಲಿ', 'ಡಾ. ವೀಣಾ' ಎಂಬ ಸಾಮಾಜಿಕ ಕೃತಿಗಳನ್ನು ರಚಿಸಿದ್ದಾರೆ. ವಿಶ್ವಾಮಿತ್ರನ ಮಹಾಸಾಧನೆ, ನಹುಷ ಚಕ್ರವರ್ತಿಯ ಉದಾತ್ತವಾದ ದಾನ ಹಾಗೂ ವೀರಗುಣಗಳು, ಯಾಜ್ಞವಲ್ಕ್ಯ ಮಹರ್ಷಿಯ ಜ್ಞಾನ ತಪಸ್ಸುಗಳು ಪೌರಾಣಿಕ ಕೃತಿಗಳಲ್ಲಿ ಜೀವದಳೆದಿವೆ. ತಮ್ಮ ಕಲ್ಪನೆಯನ್ನು ಪೌರಾಣಿಕ ಯುಗಕ್ಕೆ ಹರಿಸಿ ಅದನ್ನು ಸಹಜ ಸಂಪನ್ನವಾಗಿ ಮೇಲೆತ್ತಿತಂದು ಸಮರ್ಥವಾಗಿ ರೂಪಿಸಿರುವ ಅವರ ಕಲಾಶಕ್ತಿ ಅದ್ಭುತವಾದುದು. ಅವರ ಭಾರತೀಯ ಧರ್ಮ ಹಾಗೂ ಸಂಸ್ಕೃತಿಗಳ ಗಾಢಜ್ಞಾನ ಇಲ್ಲಿ ಮಡುಗಟ್ಟಿದೆ. 'ಅವಳಕತೆ' ವಿಜಯನಗರದ ಇತಿಹಾಸವನ್ನು ಭಿತ್ತಿಯಾಗುಳ್ಳ ಒಂದು ಶೃಂಗಾರ ಕಥೆ. ಸಾಮಾಜಿಕ ಕಾದಂಬರಿಗಳಲ್ಲಿ ಅವರ ಸೂಕ್ಷ್ಮದೃಷ್ಟಿ, ಸಾಂದ್ರವಾದ ಅನುಭವ ಕುಸುರಿಕಲೆ ಮತ್ತು ನವೀನವೂ ಹರಿತವೂ ಆದ ವೈಚಾರಿಕತೆ ಅಭಿವ್ಯಕ್ತಿಗೊಂಡಿದೆ.

ವಿನೋದ ವಿಚಾರಗಳ ಸಮ್ಮಿಳನವನ್ನು ತಮ್ಮ ಕಾದಂಬರಿಗಳಲ್ಲಿ ಸಾಧಿಸಿದವರು ಗೊರೂರ್ ಅವರು. 'ಹೇಮಾವತಿ' ಮತ್ತು 'ಊರ್ವಶಿ' ಹಳ್ಳಿಯ ಬಾಳಿನ ರಸಪೂರ್ಣ ಚಿತ್ರಗಳಾಗಿವೆ. ಅವರ 'ನಮ್ಮೂರಿನ ರಸಿಕರು' ಸಹಜ ಸುಂದರವಾದ ರಸಿಕ ಹಾಸ್ಯದ ತುಂಬು ಪ್ರವಾಹ. ಅವರ ಜೀವನಶ್ರದ್ಧೆ, ಸುಸಂಸ್ಕೃತಿ ಮತ್ತು ಸೀಳು ನೋಟಗಳು ಇಲ್ಲಿ ಶಕ್ತಿವತ್ತಾಗಿ ಆವಿರ್ಭವಿಸಿವೆ.

ವೀರಕೇಸರಿ ಸೀತಾರಾಮಶಾಸ್ತ್ರಿ ಮತ್ತು ಶ್ರೀನಿವಾಸರಾವ್ ಕೊರಟಿ ಅವರು ಬಹುದೊಡ್ಡ ಸಂಖ್ಯೆಯಲ್ಲಿ ಐತಿಹಾಸಿಕ ಕಾದಂಬರಿಗಳನ್ನು ಬರೆದಿದ್ದಾರೆ. ವೀರಕೇಸರಿಯವರು ಮೊಗಲರ ಇತಿಹಾಸವನ್ನು ಆಧರಿಸಿ 'ಫಕೀರರ ವಿದ್ರೋಹ', 'ರಾಣಿ

---

1. ಡಾ. ಹಾ. ಮಾ. ನಾಯಕ–'ಒಂದು ದಶಕದ ಕನ್ನಡ ಸಾಹಿತ್ಯ' ಸಮೀಕ್ಷೆ, ಪು. ೯೬.

ರೂಪಮತಿ' 'ಸುಲ್ತಾನ ರಜಿಯಾ', 'ಜಹನಾರಾ', 'ಮೊಗಲ್ ಸಾಮ್ರಾಜ್ಯ', ಮುಂತಾದ ಕೃತಿಗಳನ್ನೂ, ಮೈಸೂರು ಇತಿಹಾಸವನ್ನು ಆಧರಿಸಿ 'ಟೀಪು ಪೈಗಂಬರ್' 'ದೌಲತ್'ಗಳನ್ನೂ, ವಿಜಯನಗರದ ಇತಿಹಾಸವನ್ನು ಆಧರಿಸಿ 'ಧರ್ಮಗ್ಲಾನಿ' 'ಗೋಲ್ಕೊಂಡ ಪತನ' ಮುಂತಾದ ಕಾದಂಬರಿಗಳನ್ನೂ ರಚಿಸಿದ್ದಾರೆ. ಕಲ್ಪನೆಯ ಹೆಚ್ಚಳದಿಂದ, ಶಿಥಿಲವಾದ ಬಂಧದಿಂದ, ಶುಷ್ಕವಾದ ಸಂವಾದದಿಂದ ಇವು ನಿರೀಕ್ಷಿಸಿದ ಪರಿಣಾಮವನ್ನು ಬೀರದೆ ಹೋಗುತ್ತವೆ. 'ದೌಲತ್' ಮಾತ್ರ ಪಕ್ವವಾದ ಪಾತ್ರ ಕಲ್ಪನೆಯಿಂದ ಸಮರ್ಥವಾದ ಪರಿಸರಣ ನಿರ್ಮಾಣದಿಂದ, ಬಂಧ ಶೈಥಿಲ್ಯವಿದ್ದರೂ, ಮನಸೆಳೆಯುತ್ತದೆ. ವಿಜಯನಗರ ಹಾಗೂ ಮೈಸೂರು ಇತಿಹಾಸದ ಮೇಲೆ ಹತ್ತಾರು ಕಾದಂಬರಿಗಳನ್ನು ಕೊರಟಿ ಅವರು ಬರೆದಿದ್ದಾರೆ. 'ವ್ಯಾಘ್ರನಖ' ಮತ್ತು 'ಪರಮೇಶ್ವರ ಪುಲಿಕೇಶಿ' ಅವರ ಉತ್ತಮ ಕಾದಂಬರಿಗಳು. ಉತ್ತಮ ಪರಿಸರ ಸೃಷ್ಟಿ ಇದ್ದರೂ ಪಾತ್ರಗಳು ಲೇಖಕರ ಸೂತ್ರದಲ್ಲೇ ಯಾಂತ್ರಿಕವಾಗಿ ಆಡುತ್ತವೆ. ವೇಗಯುತವಾದ ಕಥನ ಕಲೆ ಇವರ ವೈಶಿಷ್ಟ್ಯ. 'ಮಿಸ್ ಲೀಲಾವತಿ' 'ಊರು ಕವಲೊಡೆದಾಗ' ಎಂಬ ಅವರ ಸಾಮಾಜಿಕ ಕಾದಂಬರಿಗಳು ಹೆಸರಿಸಬೇಕಾದ ಕೃತಿಗಳು.

ಶ್ರೀರಂಗರು ನಮ್ಮ ಗಮನಾರ್ಹ ಕಾದಂಬರಿಕಾರರಲ್ಲಿ ಒಬ್ಬರು. 'ಪ್ರಕೃತಿ,' 'ಪುರುಷ,' 'ಅನಾದಿ,' 'ಗೌತಮನಶಾಪ,' 'ಪುರುಷಾರ್ಥ' ಇವು ಅವರ ಕಾದಂಬರಿಗಳಲ್ಲಿ ಕೆಲವು. 'ಪ್ರಕೃತಿ' ಮತ್ತು 'ಪುರುಷ' ಪರಂಪರಾಗತವಾಗಿ ಬಂದಂತಹ ಯಜಮಾನ ಮತ್ತು ಆಳಿನ ಸಂಬಂಧವನ್ನು ಕುರಿತ ಜಾತಿಭೇದವನ್ನು ಕುರಿತ ವಿಚಾರ ಪೂರ್ಣ ಕಾದಂಬರಿಗಳಾಗಿವೆ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪಾಲ್ಗೊಂಡನಂತರ ತಮ್ಮ ಆದರ್ಶಗಳನ್ನು ತೊರೆದು ಸ್ವಾರ್ಥಸಾಧನೆಯ ಬೇರೆ ಬೇರೆ ಮಾರ್ಗಗಳನ್ನವಲಂಬಿಸಿದ ಯುವಕರ ಕತೆ 'ಪುರುಷಾರ್ಥ'. ಮಾನವಜೀವನದ ಮೂಲಭೂತವಾದ ಕಾಮ ಪ್ರವೃತ್ತಿಯನ್ನು ಸೂಕ್ಷ್ಮವಾಗಿ ಗಂಭೀರವಾಗಿ ವಿವೇಚಿಸುವ ವೈಚಾರಿಕ ಕಾದಂಬರಿ 'ಗೌತಮನಶಾಪ.' ಈಚೆಗೆ 'ವಿಷಚಕ್ರವ್ಯೂಹ' 'ಸೌಜನ್ಯದ ಬೆಲೆ'ಗಳನ್ನು ಬರೆದಿದ್ದಾರೆ. ಪೌರಾಣಿಕಯುಗದ ಘಟನೆಗಳನ್ನು ಆಧುನಿಕ ಸಮಸ್ಯೆಗಳಿಗೆ ಸಂಕೇತವಾಗಿಟ್ಟುಕೊಂಡು ಸಮರ್ಥವಾಗಿ ನಿರ್ವಹಿಸುವುದರಲ್ಲಿ ಶ್ರೀರಂಗರು ನಿಪುಣರು.

ಹನ್ನೆರಡನೆಶತಮಾನದ ಶರಣಕ್ರಾಂತಿಯನ್ನು ಸವಿವರವಾಗಿ ಸುಂದರವಾಗಿ ತಮ್ಮ 'ಕ್ರಾಂತಿಕಲ್ಯಾಣ' ಕಾದಂಬರಿ ಮಾಲೆಯಲ್ಲಿ ಚಿತ್ರಿಸಿದ್ದಾರೆ ಬಿ. ಪುಟ್ಟಸ್ವಾಮಯ್ಯನವರು. ಶರಣಯುಗ ಸಂಕೀರ್ಣಯುಗವೂ ಹೌದು. ಧರ್ಮ, ಸಂಸ್ಕೃತಿ, ಸಾಹಿತ್ಯ, ರಾಜಕಾರಣ ಮುಂತಾಗಿ ಹಲವುರೂಪದಲ್ಲಿ ನಡೆದ ಆ ಮಹಾಕ್ರಾಂತಿಯನ್ನು ಕಾದಂಬರಿಯ ಮೂಲಕ ಪುನಃ ಸೃಷ್ಟಿಸುವಲ್ಲಿ ಐತಿಹಾಸಿಕ ಸತ್ಯಕ್ಕೆ ಸಂಪೂರ್ಣನಿಷ್ಠರಾಗಿ ನಡೆಯದಿದ್ದರೂ, ನಿರೂಪಣೆ ಹಲವು ವೇಳೆ ನೀರಸವಾಗಿದ್ದರೂ, ಪಾತ್ರಕಲ್ಪನೆಯಲ್ಲಿ ವಿಸಂಗತಿ ತಲೆದೋರಿದ್ದರೂ, ಅವರು ಮಾಡಿರುವ ಅಭ್ಯಾಸ ಪೂರ್ಣವಾದ ಪ್ರಯತ್ನ ನಿಜಕ್ಕೂ ಅಭಿನಂದನೀಯ. ಅಲ್ಲಮಪ್ರಭುವನ್ನು ಕುರಿತು, ವಿಜಯನಗರ ಇತಿಹಾಸವನ್ನು ಕುರಿತು

ಅವರು ಕಾದಂಬರಿಗಳನ್ನು ರಚಿಸಿದ್ದಾರೆ. 'ಚಹಕಟ್ಟೆದ ಸಾಮ್ರಾಜ್ಯ' ಕುತೂಹಲ ಕೆರಳಿಸುತ್ತದೆ. 'ಮಲ್ಲಮ್ಮನ ಪವಾಡ' ಮುಗ್ಧನಾದ ಗಂಡನನ್ನು ಬುದ್ಧಿವಂತನನ್ನಾಗಿ ಮಾಡಿದ ಹೆಣ್ಣೊಬ್ಬಳ ಶ್ರದ್ಧಾಪೂರ್ವಕ ಸಾಹಸ ನಿಷ್ಠೆಗಳನ್ನು ಚಿತ್ರಿಸುತ್ತದೆ. ಇದರ ಮತ್ತೊಂದುರೂಪ 'ಅರ್ಧಾಂಗಿ.'

ಕನ್ನಡದ ಶ್ರೇಷ್ಠ ಕಾದಂಬರಿಗಳಲ್ಲೊಂದು 'ರಾವ್‌ಬಹದ್ದೂರ್' ಅವರ 'ಗ್ರಾಮಾಯಣ.' ಶಾಂತಿ ಸಂತೃಪ್ತಿ ಶ್ರದ್ಧೆಗಳ ಬೀಡಾಗಿ ಬಾಳುತ್ತಿದ್ದ ಹಳ್ಳಿಯೊಂದು ಸ್ವಾರ್ಥ ಪಿಶಾಚಿಗಳ ಕುಟಿಲ ಕಾರಸ್ಥಾನದಿಂದ ನರಕ ಸದೃಶವಾದ ದುರಂತಗಂಭೀರ ಕೃತಿಯಿದು. ಜೀವದುಂಬಿ ಕಳಕಳಿಸುವ ಪ್ರಾದೇಶಿಕತೆ, ಬಹುಸಂಖ್ಯೆಯ ಪಾತ್ರ ಗಳಿಂದ ತುಂಬಿದ್ದರೂ ಅವುಗಳಲ್ಲಿರುವ ಅನನ್ಯ ವಿಶಿಷ್ಟತೆ, ಸಂಕೀರ್ಣವೂ ಸಮೃದ್ಧವೂ ಸಮರ್ಥವೂ ಆದ ಕಥಾಸಂವಿಧಾನ, ವಿಶಿಷ್ಟವಾದ ಆಡುನುಡಿಗಳಿಂದ ತುಂಬಿದ ಧ್ವನಿ ಪೂರ್ಣ ಸಂಭಾಷಣೆ, ಅನುಭವ ಶ್ರೀಮಂತಿಕೆ, ಬೌದ್ಧಿಕತೆಯ ಹೊಳಪು ಮತ್ತು ಅನಿವಾರ್ಯವಾದ ಸಹಜದುರಂತ–ಇವು ಈ ಕಾದಂಬರಿಯ ಮಹತ್ವಕ್ಕೆ ಮೂಲಕಾರಣ ಗಳಾಗಿವೆ.

ಇದೇ ಜಾತಿಗೆ ಸೇರಿದ ಮತ್ತೊಂದು ಕೃತಿ ಚದುರಂಗರ 'ಸರ್ವಮಂಗಳಾ.' ಹುಣಸೂರು ತಾಲ್ಲೂಕಿನ ಹಳ್ಳಿಯೊಂದರ, ಕೌಟುಂಬಿಕ ಕತೆ ಇದಾದರೂ ಆ ಪರಿಧಿ ಯನ್ನು ಮೀರಿ ಕತೆ ವಿಜೃಂಭಿಸುತ್ತದೆ. ಆ ಹಳ್ಳಿಯ ಜನರ ನಂಬಿಕೆ, ಸಂಸ್ಕಾರ, ಸಂಸ್ಕೃತಿ, ಜೀವನ ವಿಧಾನ, ಪ್ರೀತಿ, ಪ್ರೇಮ, ಸರಳತೆಗಳು ಮಣ್ಣಿನವಾಸನೆಯೊಡನೆ ಸಶಕ್ತವಾಗಿ ಮೂಡಿಬಂದಿವೆ. ಪರಿಸರವೂ ಅಷ್ಟೇ ಮಧುರ ಸುಂದರವಾಗಿದೆ. ಕಾದಂಬರಿಯ ಕೊನೆ ಕೊನೆಗೆ ರಾಜಕೀಯದ ಗಾಳಿಯೂ ಬೀಸುತ್ತದೆ. ಇಲ್ಲಿನ ಪಾತ್ರಗಳಂತೂ ನಮ್ಮ ಮನೆಯಲ್ಲಿ ಸುತ್ತಮುತ್ತ ಸುಳಿದಾಡುವ ವ್ಯಕ್ತಿಗಳಷ್ಟು ಸತ್ಯವಾಗಿ ಜೀವಂತವಾಗಿ ಕಂಗೊಳಿಸುತ್ತವೆ. ಬಳಸಿರುವ ಭಾಷೆ ಕೃತಿಯ ಸಹಜತೆಗೆ ಮತ್ತಷ್ಟು ಮೆರಗು ನೀಡುತ್ತದೆ. ಕಾದಂಬರಿಯ ದುರಂತ ಕರುಳನ್ನು ಹಿಂಡುತ್ತದೆ. ಅವರದೇ ಆದ 'ಉಯ್ಯಾಲೆ' ಆಧುನಿಕ ನಾಗರಿಕ ಗಂಡುಹೆಣ್ಣುಗಳ ಮನೋಘರ್ಷಣೆಯನ್ನು ವಿಶ್ಲೇಷಿಸುವ ಒಂದು ಗಮನಾರ್ಹ ಪ್ರಯತ್ನ.

ಆನಂದಕಂದರು 'ಮಲ್ಲಿಕಾರ್ಜುನ' ಮತ್ತು 'ಮಗಳ ಮದುವೆ' ಎಂಬೆರಡು ಕಾದಂಬರಿಗಳನ್ನು ಈ ಅವಧಿಯಲ್ಲಿ ಬರೆದಿದ್ದಾರೆ. ಮೊದಲನೆಯದು ವಿಜಯನಗರದ ಪ್ರೌಢದೇವರಾಯನ ಕಾಲದ ಇತಿಹಾಸವನ್ನು ಕುರಿತ ಮನೋಜ್ಞ ಕಾದಂಬರಿ; ಎರಡನೆಯದು ಭಾರತದ ಸ್ವಾತಂತ್ರ್ಯ ಸಮರದ ಹಿನ್ನೆಲೆಯುನ್ನುಳ್ಳ ವಾಸ್ತವರಮ್ಯವಾದ ಕೌಟುಂಬಿಕ ಕೃತಿ. ಶಾಂತಲಾ ದೇವಿಯನ್ನು ಕುರಿತ ಸಮೇತನಹಳ್ಳಿ ರಾಮರಾಯರ 'ಸವತಿ ಗಂಧವಾರಣೆ' ಈಚೆಗೆ ಬಂದ ಒಂದು ಉತ್ತಮ ಐತಿಹಾಸಿಕ ಕೃತಿ. ಸಂವಾದಗಳು ಮತ್ತು ಸನ್ನಿವೇಶಗಳು ಸಚಿತ್ರವೂ ಶಕ್ತಿಪೂರ್ಣವೂ ಆಗಿವೆ. ಶಿವಾಜಿಯ ಆಶ್ರಿತನಾದ ಸಾಹಸಿ ಯೊಬ್ಬನನ್ನು ಕುರಿತ ಕೃತಿ ಸಿ.ಕೆ. ವೆಂಕಟರಾಮಯ್ಯನವರ 'ರಘುನಾಥನ ಸಾಹಸ.'

ಎಂ. ಆರ್. ಶ್ರೀ. ಅವರೂ 'ಸಾವಿತ್ರಿ' ಹಾಗೂ 'ಮಹಾತ್ಯಾಗ' ಕಾದಂಬರಿಗಳನ್ನು ಬರೆದಿದ್ದಾರೆ. ಹಲವು ದೋಷಗಳಿದ್ದರೂ, 'ಮಹಾತ್ಯಾಗ' ಮನರಂಜಿಸುತ್ತದೆ.

೫

ಈ ಕಾಲುಶತಮಾನದಲ್ಲಿ ಬಹುಮಂದಿ ಲೇಖಕಿಯರು ಕಾದಂಬರಿ ಲೋಕವನ್ನು ಪ್ರವೇಶಿಸಿರುವುದು ಒಂದು ಸಂತಸದ ಸಂಗತಿ. ಇವರಲ್ಲಿ ಅಗ್ರಗಣ್ಯರು ದಿ. ತ್ರಿವೇಣಿ ಅವರು. ಇಪ್ಪತ್ತೆರಡು ಕಾದಂಬರಿಗಳನ್ನು ಅವರು ರಚಿಸಿದ್ದಾರೆ. ಮಧ್ಯಮ ವರ್ಗದ ಕುಟುಂಬಗಳು ಹೆಚ್ಚಾಗಿ ಸತಿಪತಿ ಸಂಬಂಧವಾದ-ಜೀವನದ ಲಲಿತ ಸುಂದರ ಅಭಿವ್ಯಕ್ತಿ ಇವರ ಕೃತಿಗಳಲ್ಲಿ ಪ್ರಧಾನವಾಗಿ ಕಾಣುತ್ತದೆ. ಹೆಣ್ಣಿನ ಮನಸ್ಸಿನ ಬಹುಮುಖಗಳನ್ನು ಸೂಕ್ಷ್ಮ ಸಂವೇದನೆಗಳನ್ನು ಸಹಜವಾದ ಆತ್ಮೀಯತೆಯಿಂದ ಅವರು ಚಿತ್ರಿಸುತ್ತಾರೆ. ಮನಶ್ಶಾಸ್ತ್ರದ ಅಧ್ಯಯನ ಕೆಲವು ಕೃತಿಗಳ ಬೆನ್ನೆಲುಬಾಗಿದೆ. ಸರಳ ಶೈಲಿ, ಮಧುರ ಸಂಭಾಷಣೆ, ವಸ್ತುನಿಷ್ಠತೆ ಅವರ ಕಾದಂಬರಿಗಳ ಜೀವಾಳ, ಆದರೆ ಆಳವಾದ ವಿಶಾಲವಾದ ಅನುಭವ ಸಂಪತ್ತಾಗಲೀ ಸ್ಪಷ್ಟ ವೈವಿಧ್ಯತೆಯಾಗಲೀ ಕಾಣುವುದಿಲ್ಲ. ವಿಷಮದಾಂಪತ್ಯದ ವಿವಿಧಸ್ತರಗಳನ್ನು ಮನೋವಿಜ್ಞಾನದ ಬೆಳಕಿನಲ್ಲಿ ರಮ್ಯವಾಗಿ ನಿರೂಪಿಸುವ ಕೃತಿ 'ಕೀಲುಗೊಂಬೆ.' ಹೆಣ್ಣಿನ ಮನಸ್ಸಿನಲ್ಲಿ ಮೂಡಿದ ಸಂಶಯಕೀಟ ಹೇಗೆ ಬೃಹದಾಕಾರವಾಗಿ ಬೆಳೆದು ಜೀವನವನ್ನು ದಾರುಣವನ್ನಾಗಿ ಮಾಡಿ ದುರಂತಕ್ಕೆ ನೂಕುತ್ತದೆ ಎಂಬುದರ ಸುಂದರ ವಿಶ್ಲೇಷಣೆ 'ಶರಪಂಜರ.' ಸಂಪ್ರದಾಯಬದ್ಧ ಕುಟುಂಬದ ರೀತಿನೀತಿಗಳನ್ನು ಹಳೆಯ ಹೊಸ ತಲೆಮೊರೆಗಳ ನಡುವೆ ನಡೆದ ಸಹಜ ಘರ್ಷಣೆಯನ್ನು ಸಾರ್ಥಕವಾಗಿ ಸಮರ್ಥವಾಗಿ ಮೂಡಿಸಿರುವ ಕೃತಿ 'ಹಣ್ಣೆಲೆ ಚಿಗುರಿದಾಗ'; ಅವರ 'ಬೆಕ್ಕಿನ ಕಣ್ಣು' 'ಬೆಳ್ಳಿಮೋಡ' 'ದೂರದ ಬೆಟ್ಟ' ಮತ್ತು 'ಮುಚ್ಚಿದ ಬಾಗಿಲು' ಹೆಸರಿಸಬೇಕಾದ ಕೃತಿಗಳು. ಸ್ತ್ರೀ ಸ್ವಾತಂತ್ರ್ಯದ ಸಮಸ್ಯೆಯನ್ನು ವಿವಿಧ ದೃಷ್ಟಿಕೋನಗಳಿಂದ ನಿರೂಪಿಸುವ ಕೃತಿ ಅನುಪಮಾ ನಿರಂಜನ ಅವರ 'ಸಂಕೋಲೆಯೊಳಗಿಂದ.' ಹಳ್ಳಿಯ ನೇಕಾರ ಕುಟುಂಬದ ಕಷ್ಟನಿಷ್ಠುರಗಳನ್ನು ಅವರ 'ನೂಲು ನೆಯ್ದ ಚಿತ್ರ' ತುಂಬ ಚಿತ್ತಸ್ಪರ್ಶಿಯಾಗಿ ಚಿತ್ರಿಸುತ್ತದೆ. ವೈದ್ಯಕೀಯ ಕ್ಷೇತ್ರದ ಹೊರಗೊಳಗುಗಳನ್ನು ಸತ್ವಪೂರ್ಣವಾಗಿ ಬಣ್ಣಿಸುವ ಕಲಾತ್ಮಕ ಕೃತಿ 'ಶ್ವೇತಾಂಬರಿ' ಅವರ ಶ್ರೇಷ್ಠ ಕಾದಂಬರಿ. ಅಕ್ಕತಂಗಿಯರ ಜೀವನ ಪ್ರವಾಹವನ್ನು ಕುರಿತ 'ಸ್ನೇಹಪಲ್ಲವಿ' ಮತ್ತು 'ಹೃದಯವಲ್ಲಭ'ಗಳೂ ಅವರವೇ. ಎಂ. ಕೆ. ಇಂದಿರಾ ಅಲ್ಪಕಾಲದಲ್ಲಿ ಸಮೃದ್ಧಬರೆಹ ಸೃಷ್ಟಿಸಿದ್ದಾರೆ. 'ತುಂಗಭದ್ರ' 'ಸದಾನಂದ' 'ಗೆಜ್ಜೆಪೂಜೆ' 'ಕಲಾದರ್ಶಿ' ಮುಂತಾದ ಕಾದಂಬರಿಗಳ ಕರ್ತೃ ಅವರು. ಸರಳ ನಿರರ್ಗಳ ನಿರೂಪಣೆ ಅವರ ಸ್ವತ್ತು. 'ಕಲಾದರ್ಶಿ'ಯ ಮಲೆನಾಡಿನ ಪರಿಸರ ರಮ್ಯವಾಗಿದೆ. ವಾಣಿ ಅವರ 'ಬಿಡುಗಡೆ,' 'ಎರಡು ಕನಸು,' 'ಮನೆ ಮಗಳು,' 'ಶುಭಮಂಗಳ,' 'ಕಾವೇರಿಯ ಮಡಿಲಲ್ಲಿ' ಮುಂತಾದುವನ್ನು ಕೇವಲ ಮನರಂಜನೆಗಾಗಿ ಓದಬಹುದು. ವೇಗಶಾಲಿ

ಯಾದ ಬರವಣಿಗೆ ಅವರಿಗೆ ವಶವಾಗಿದೆ. ಉಷಾದೇವಿಯವರು 'ಮೊಗ್ಗಿನಜಡೆ,' 'ಧೂಮಕೇತು,' 'ಮುರಿದ ಸರಪಳಿ' ಮುಂತಾಗಿ ಸುಮಾರು ಹತ್ತು ಕಾದಂಬರಿಗಳನ್ನು ಬರೆದಿದ್ದಾರೆ. ಮನಸ್ಸಿನ ವಿವಿಧ ವಿಕಾರಗಳನ್ನು ಇವರು ಸಮರ್ಥವಾಗಿ ಚಿತ್ರಿಸಬಲ್ಲರು. ದಿ. ಎಂ. ಕೆ. ಜಯಲಕ್ಷ್ಮಿಯವರು 'ಸಂಸಾರ ಸಮರ,' 'ಬಾಳುಬೆಳಗಿತು,' 'ಕನಸಿನ ಕಡೆ' ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಕುಟುಂಬ ಜೀವನದ ಹಲವು ಮುಖಗಳ ಪರಿಚಯವಿಲ್ಲದೆ, ಆವಶ್ಯಕತೆಗಿಂತ ಹೆಚ್ಚಿನ ಪಾತ್ರಗಳನ್ನು ಘಟನೆಗಳನ್ನು ಅಡುಕುವುದ ರಿಂದ ಕಥೆ ಹೊಲಬುದಪ್ಪುತ್ತದೆ. ಕೆ. ಶಾರದ, ಎನ್. ಶಾರದ, ಎಚ್. ಆರ್. ಇಂದಿರಾ, ಆರ್ಯಾಂಬ ಪಟ್ಟಾಭಿ, ಪಂಕಜ, ಲಲಿತಾಂಬಾ ಚಂದ್ರಶೇಖರ್, ನೀಳಾದೇವಿ, ತಪಸ್ವಿನಿ, ಮಲ್ಲಿಕಾ, ವೈ. ಸೀ. ನಳಿನಿ, ಛಾಯಾದೇವಿ ನಂಜಪ್ಪ, ಎಂ. ಸಿ. ಪದ್ಮಾ ಮುಂತಾಗಿ ಇನ್ನೂ ಹಲವು ಲೇಖಕಿಯರು ಕಾದಂಬರಿಗಳನ್ನು ಬರೆದಿದ್ದಾರೆ. ಅಭ್ಯಾಸ ಅನುಭವಗಳ ಕೊರತೆ ಇವುಗಳ ಸರ್ವಸಾಮಾನ್ಯ ದೋಷವಾಗಿದೆ. ಪ್ರಶಾಂತವಾದ ತಿಳಿಯಾದ ಭಾವ ಗಳಿಗೆ ಸನ್ನಿವೇಶಗಳಿಗೆ ಇವುಗಳಲ್ಲಿ ಬರವಿಲ್ಲ.

ವಿ. ಎಂ. ಇನಾಂದಾರ್ ಅವರು 'ಶಾಪ', 'ಮೂರಾಬಟ್ಟೆ', 'ಕನಸಿನಮನೆ' 'ಈ ಪರಿಯಸೊಬಗು', 'ಸ್ವರ್ಗದ ಬಾಗಿಲು', 'ಚಿತ್ರಲೇಖೆ', 'ಊರ್ವಶಿ' ಮುಂತಾದ ಕಾದಂಬರಿಗಳನ್ನು ರಚಿಸಿದ್ದಾರೆ. ಬಂಜೆ ಬಾಳಿನ ಬವಣೆಯನ್ನೂ ಅದರಿಂದ ಮೂಡುವ ಸಮಸ್ಯೆಗಳನ್ನೂ ಸಾಕಷ್ಟು ಸಮರ್ಥವಾಗಿ ಚಿತ್ರಿಸುತ್ತದೆ 'ಸ್ವರ್ಗದ ಬಾಗಿಲು' 'ಶಾಪ'–ಆನುವಂಶಿಕತೆಯ ದುರಂತವನ್ನು ಹೃತ್ಸ್ಪರ್ಶಿಯಾಗಿ ಹೇಳುತ್ತದೆ. ಅವರ 'ಚಿತ್ರಲೇಖೆ' ಹೆಣ್ಣು ಗಂಡುಗಳ ಸಂಬಂಧದ ಸಮಸ್ಯೆಯನ್ನು ಸೂಕ್ಷ್ಮವಾಗಿ ವಿಶ್ಲೇಷಿಸುತ್ತದೆ. 'ನಿಸರ್ಗ', 'ರಾಮಣ್ಣಮಾಸ್ತರು', 'ಅಶೋಕ ಚಕ್ರ', 'ಶ್ರೇಯಾಂಸ' 'ರಾಷ್ಟ್ರಪುರುಷ' 'ಹದಗೆಟ್ಟಹಳ್ಳಿ' ಮುಂತಾದ ಹಲವು ಕಾದಂಬರಿಗಳ ಕರ್ತೃ ಮಿರ್ಜಿ ಅಣ್ಣಾರಾಯರು. ನಿರುದ್ವಿಗ್ನವಾಗಿ ಕಥೆಹೇಳುವ ಕಲೆ ಅವರಿಗೆ ಸಾಧಿಸಿದೆ. 'ನಿಸರ್ಗ' ಅವರ ಕಲಾಪೂರ್ಣ ಕಾದಂಬರಿ. ಬರಗಾಲದ ಬವಣೆಯನ್ನು ಪ್ರಾದೇಶಿಕತೆಯ ಸಹಜ ಹಿನ್ನೆಲೆಯೊಡನೆ ಮುಗಳಿಯವರು 'ಅನ್ನ'ದಲ್ಲಿ ಕರುಣಪೂರ್ಣವಾಗಿ ಚಿತ್ರಿಸಿ ದ್ದಾರೆ. ಎಂ. ವಿ. ಸೀತಾರಾಮಯ್ಯನವರ 'ಜೀವನದ ಜೊತೆಗಾತಿ', 'ತಾಯಬಯಕೆ' 'ಕುಂಕುಮ ಭಾಗ್ಯ', 'ಮಾದನ ಮಗಳು' ಕಾದಂಬರಿಗಳು ಒಂದಲ್ಲ ಒಂದುಬಗೆಯಲ್ಲಿ ಗಮನಾರ್ಹವಾಗಿವೆ. ಸರಳಸುಂದರವಾದ ರಸವತ್ತಾದ ಬರವಣಿಗೆ ಅವರದು. 'ಓದಿದ ಹುಡುಗಿ', 'ಅವಳ ತಂಗಿ', 'ನಾಲ್ಕನೆಯ ಮನೆ', 'ಸತ್ಯಭಾಮೆ' ಕಾದಂಬರಿಗಳ ರಚಕರು ನರೇಂದ್ರಬಾಬುರವರು. 'ನಾಲ್ಕನೆಯ ಮನೆ'ಯ ದುರಂತಚಿತ್ರ ತುಂಬ ಪರಿಣಾಮಕಾರಿಯಾಗಿದೆ. ಗೃಹಜೀವನದ ಸೂಕ್ಷ್ಮಚಿತ್ರ 'ಸತ್ಯಭಾಮು'. ಹೇಮಂತರ 'ಭಗ್ನಮಂದಿರ' ಕಾಲೇಜುಜೀವನದ ಹಿನ್ನೆಲೆಯುಳ್ಳ ಕೃತಿ. ಮ.ನ. ಮೂರ್ತಿ ಅವರು ಟೀಪೂವಿನ ಜೀವನದ ಸಮಗ್ರ ಇತಿಹಾಸವನ್ನು 'ಸಂಧಾನ', 'ಸಂವಿಧಾನ' ಮತ್ತು 'ಸಂಹಾರ' ಎಂಬ ಮೂರುಕೃತಿಗಳಲ್ಲಿ ಚಿತ್ರಿಸಿದ್ದಾರೆ. 'ನಾಟ್ಯರಾಣಿ ಶಾಂತಲಾ'

ಅವರ ಈಚಿನ ಐತಿಹಾಸಿಕ ಬರೆಹ. ಸಂಗೀತ ಕಲಾವಿದನೊಬ್ಬನ ಬಾಳನ್ನು ಕುರಿತದ್ದು, —'ಗಾಯನ ಚಕ್ರವರ್ತಿ' ಅವರ 'ಚಿತ್ರ ನಾಯಕಿ', 'ಮಿೂನಾ' ಮೆಚ್ಚಬಹುದಾದ ಕೃತಿಗಳು. ಮಧ್ಯಮವರ್ಗದ ಸಮಾಜಜೀವನದ ಆಗುಹೋಗುಗಳನ್ನು 'ವಾತ್ಸಲ್ಯ ಪಥ', 'ಹೇಮಂತಗಾನ', 'ಅನುರಕ್ತೆ' ಕೃತಿಗಳಲ್ಲಿ ವ್ಯಾಸರಾಯ ಬಲ್ಲಾಳರು ಲಲಿತವಾಗಿ ಸುಂದರವಾಗಿ ನಿರೂಪಿಸಿದ್ದಾರೆ. ನವಭಾರತದ ಸರ್ವತೋಮುಖ ಬೆಳವಣಿಗೆಗಾಗಿ ಟೊಂಕಕಟ್ಟನಿಂತ ಆದರ್ಶವಾದಿ ಯುವಕನೊಬ್ಬನ ಬಾಳಕಥೆ ಅಶ್ವತ್ಥರ 'ಹಂಬಲ' ಎಂಬ ದೊಡ್ಡ ಕಾದಂಬರಿಯ ವಸ್ತು. ಘಟನಾವಳಿಗಳ ಚಿತ್ರಣ, ಸನ್ನಿವೇಶ ಸೃಷ್ಟಿ ತುಂಬ ಶಕ್ತಿವತ್ತಾಗಿವೆ. ಎನ್ಕೆಯವರು 'ಸಾವಿನ ಉಡಿಯಲ್ಲಿ', 'ಎರಡನೆ ಸಂಬಂಧ' 'ಗೌರೀಶಂಕರ' ಕಾದಂಬರಿಗಳನ್ನು ಬರೆದಿದ್ದಾರೆ. 'ಗೌರೀಶಂಕರ' ಅರವಿಂದರ ಅಧ್ಯಾತ್ಮನನ್ನು ಹಿನ್ನೆಲೆಯುಳ್ಳದಾದರೆ 'ಸಾವಿನ ಉಡಿಯಲ್ಲಿ' ದಾಂಪತ್ಯ ಜೀವನದ ಸಿಹಿಕಹಿಗಳನ್ನು ಸುರಸವಾಗಿ ಪ್ರತಿಬಿಂಬಿಸುತ್ತದೆ. ಭಾರತೀಸುತರು 'ಸಂತಾನ ಭಿಕ್ಷೆ', 'ಕೊಳಲಿನ ಕರೆ'. 'ಹುಲಿಯಬೋನು', 'ಚಿಗುರುಹಾಸಿಗೆ', 'ಎಡಕಲ್ಲು ಗುಡ್ಡದಮೇಲೆ', 'ವೈದ್ಯನ ಮಗಳು' ಮುಂತಾದ ಕಾದಂಬರಿಗಳ ಕರ್ತೃಗಳು. ಬಂಜೆತನದಲ್ಲಿ ಬೆಂದು ಬೇರೊಬ್ಬನಿಂದ ಮಗುವನ್ನು ಪಡೆದ ಕತೆ 'ಸಂತಾನ ಭಿಕ್ಷೆ.' ಪಣಿಯರ ಜೀವನದ ಹಿನ್ನೆಲೆಯಲ್ಲಿ ಶ್ರೀಮಂತ ಕೂಲಿಕಾರರ ಸಮಸ್ಯೆಯನ್ನು ವಿಶ್ಲೇಷಿಸುವ ಕೃತಿ 'ಕೊಳಲಿನ ಕರೆ'. 'ಹುಲಿಯಬೋನು' ಮತ್ತು 'ಚಿಗುರು ಹಾಸಿಗೆ'ಗಳೂ ಗಡಿನಾಡಿನ ಪರಿಶಿಷ್ಟ ವರ್ಗದ ಜೀವನ ಚಿತ್ರಗಳು. ವೈದ್ಯನ ಮಗಳು 'ಐತಿಹಾಸಿಕ.' ಉತ್ತಮ ಚಿತ್ರಣ ಶಕ್ತಿ ಹಾಗೂ ಅನುಭವ ಇರುವ ಭಾರತೀಸುತರು ಇನ್ನು ಹೆಚ್ಚು ಸತ್ವಪೂರ್ಣ ಕೃತಿಗಳನ್ನು ನೀಡಬೇಕು. ಎಸ್. ಅನಂತನಾರಾಯಣ ಅವರು ಹಲವು ಕಾದಂಬರಿಗಳ ತಂದೆಯಾಗಿದ್ದರೂ 'ಅತ್ತಿಗೆ' ಅವರ ಉತ್ತಮಕೃತಿ. ಶ್ರೀನಿವಾಸ ಉಡುಪ ಮತ್ತು ಸೂರ್ಯನಾರಾಯಣ ಚಡಗ ಅವರು ಹೆಚ್ಚುಸಂಖ್ಯೆಯ ಕಾದಂಬರಿಗಳನ್ನು ಬರೆದ ಯುವಕಲೇಖಕರಾಗಿದ್ದಾರೆ. ಪುರಾಣಿಕರಂತೆ ಮಧ್ಯಮವರ್ಗದ ಕುಟುಂಬದ ಹೆಣ್ಣಿನ ಬಾಳಿನ ಶಿಥಿಲ ಚಿತ್ರಗಳಲ್ಲೇ ಅವರ ಪ್ರತಿಭೆ ವ್ಯಯವಾಗುತ್ತಿದೆ.

ಕಡಿದಾಳ್ ಮಂಜಪ್ಪನವರು 'ಪಂಜರವಳ್ಳಿಯ ಪಂಜು' ಮತ್ತು 'ನಾಳೆಯ ನೆಳಲು' ಎಂಬೆರಡು ಕಾದಂಬರಿಗಳನ್ನು ಬರೆದಿದ್ದಾರೆ. ಎರಡೂ ರಾಜಕೀಯಕ್ಕೆ ಸಂಬಂಧಿಸಿದವುಗಳೇ. ಮೊದಲನೆಯದು ರಾಷ್ಟ್ರದಸೇವೆಗೆ ಕಂಕಣಕಟ್ಟಿ ನಿಂತ ಆದರ್ಶಯುವಕನೊಬ್ಬನ ಸಾಹಸಚಿತ್ರವಾದರೆ, ಎರಡನೆಯದು ನಾಳೆ ರೂಪಗೊಳ್ಳಬಹುದಾದ ರಾಷ್ಟ್ರದ ಕನಸನ್ನು ಕುರಿತದ್ದು. ಎರಡರಲ್ಲೂ ದಟ್ಟವಾದ ಅನುಭವದ ಹಾಸಿದೆಯಾದರೂ ಕಲೆಗಾರಿಕೆಯಿಲ್ಲವಾಗಿದೆ. ಕೋ. ಚೆನ್ನಬಸಪ್ಪನವರು 'ಹಿಂತಿರುಗಿ ಬರಲಿಲ್ಲ' 'ಪೂರ್ಣವತಿ' ಕಾದಂಬರಿಗಳ ಕರ್ತೃ. ಶರಣಸಾಹಿತ್ಯದ ಪ್ರಾಮಾಣಿಕವೂ ವಿಪುಲವೂ ಆದ ಜ್ಞಾನಾನುಭವಗಳಿಂದ ಮೂಡಿಬಂದಿವೆ, ಎಚ್. ತಿಪ್ಪೇರುದ್ರಸ್ವಾಮಿಯವರ 'ಪರಿಪೂರ್ಣದೆಡೆಗೆ' 'ಕದಳಿಯ ಕರ್ಪುರ' ಮತ್ತು 'ಜ್ಯೋತಿ ಬೆಳಗುತಿದೆ'

ಕೃತಿಗಳು. ಇವು ಕ್ರಮವಾಗಿ ಪ್ರಭುದೇವ, ಮಹಾದೇವಿಯಕ್ಕ ಮತ್ತು ನಿಜಗುಣ ಶಿವಯೋಗಿಗಳ ಬದುಕನ್ನು ಕುರಿತವುಗಳಾಗಿವೆ. ಇವುಗಳ ಬಗ್ಗೆ ತಾತ್ವಿಕ ಭಿನ್ನಾಭಿಪ್ರಾಯಗಳಿರಬಹುದಾದರೂ ಇತಿಹಾಸದಿಂದೆತ್ತಿತಂದ ಜೀವಂತ ಪರಿಸರಣಗಳ ಸುಂದರ ಸೃಷ್ಟಿಯಿಂದ, ಕಾವ್ಯಮಯ ಶೈಲಿಯಿಂದ ಇವು ರಮ್ಯವಾಗಿವೆ. ಅವರ 'ಸತ್ಯಾಶ್ರಯ ಸಾಮ್ರಾಜ್ಯ' ಪುಲಿಕೇಶಿಯನ್ನು ಕುರಿತದ್ದು. ದೇಜಗೌ ಅವರ 'ಕಡುಗಲಿ ಕುಮಾರರಾಮ' ಕನ್ನಡ ವೀರನೊಬ್ಬನನ್ನುಕುರಿತ ಪ್ರಭಾವಕಾರೀ ಚಿತ್ರಣ. 'ಅತ್ತಿಮಬ್ಬೆ', 'ಚೇಳಿನಿ', 'ರತ್ನಾಕರ' ಜೈನ ಧರ್ಮದ ಆವರಣವನ್ನು ಪರಿಚಯಿಸುತ್ತವೆ. ಹಂಪನಾ ಅವರ 'ನಾಗಶ್ರೀ' ಈ ದೃಷ್ಟಿಯಿಂದ ಒಂದು ಉತ್ತಮಕೃತಿ. ದೇವೇಂದ್ರಕುಮಾರ ಹಕಾರಿಯವರ 'ಚೆಲ್ವಕೋಗಿಲೆ' ನಿಜಗುಣರನ್ನು ಕುರಿತಕೃತಿ. ಅವರ ಮತ್ತೊಂದು ಕಾದಂಬರಿ 'ಕೂಗುತಿವೆ ಕಲ್ಲು' ಅಜಂತ ಮತ್ತು ಎಲ್ಲೋರಗಳ ಕಲಾಸ್ಫೂರ್ತಿಯಿಂದ ಮೂಡಿದ ಕಾಲ್ಪನಿಕ ಕೃತಿ. ಉಳ್ಳಾಲದ ರಾಣಿ ಅಬ್ಬಕ್ಕನ ವೀರಜೀವನವನ್ನು ಚಿತ್ರಿಸುವ ರಾ. ವೊ. ವಿಶ್ವಾಮಿತ್ರರ 'ಅಭಯಾರಾಣಿ' ನೆನಪಿಡುವ ಕೃತಿ. 'ಹೊಯ್ಸಳ ವೀರಬಲ್ಲಾಳ'ನನ್ನು ಕುರಿತು ಜಿ. ಎ. ರೆಡ್ಡಿಯವರೂ ಭಗತ್‌ಸಿಂಗನನ್ನು ಕುರಿತು ಪ. ಸು. ಭಟ್ಟ ಅವರೂ ಕಾದಂಬರಿ ರಚನೆಮಾಡಿದ್ದಾರೆ.

ನಾಗರಿಕತೆಯ ನಂಜುಸೋಂಕದ ಗಿರಿಜನವರ್ಗದ ಮುಗ್ಧಮಧುರವೂ ದುಃಖದಾಯಕವೂ ಆದ ಬದುಕನ್ನು ಸಾಕಷ್ಟು ಸಮರ್ಥವಾಗಿ ಪರಿಸರ ಜೀವಂತಿಕೆಯೊಡನೆ ಕುಲಕರ್ಣಿ ಬಿಂದುಮಾಧವರು ಚಿತ್ರಿಸಿಕೊಟ್ಟಿದ್ದಾರೆ, ತಮ್ಮ 'ಬಲಿಪೀಠ' ಮತ್ತು 'ಬನವಾಸಿ'ಗಳಲ್ಲಿ. ಹಿಂದೂಮುಸ್ಲಿಂ ಬಾಂಧವ್ಯದ ಹಿನ್ನೆಲೆಯುಳ್ಳ ಪ್ರಣಯಕಥೆ ಅಕ್ಬರ್‌ಅಲಿಯವರ 'ನಿರೀಕ್ಷೆಯಲ್ಲಿ'. ಸೂರ್ಯನಾಥಕಾಮತರ 'ಥೇಮ್ಸ್‌ನಿಂದ ಗಂಗೆಗೆ' ವಿದೇಶದಿಂದ ಭಾರತಕ್ಕೆ ಬಂದ ಹೆಣ್ಣೊಬ್ಬಳು ಇಲ್ಲಿನ ರೀತಿನೀತಿಗಳನ್ನು ಮೈಗೂಡಿಸಿಕೊಂಡ ಸ್ವಾರಸ್ಯವಾದ ಕಥೆ. ವಸ್ತು ಹೊಸದು; ಕಲೆಗಾರಿಕೆ ಕಡಮೆ. ತಾಯಿಯ ಅತಿಮುದ್ದಿನಿಂದ ಹಾಳಾದ ಮಕ್ಕಳಿಬ್ಬರ ಉತ್ತಮ ರಸಪೂರ್ಣಕಾದಂಬರಿ ಎಂ. ಎಸ್. ಅನಂತರಾವ್ ಅವರ 'ಪಾರ್ವತಿಯಭಾಗ್ಯ'. ಇಲ್ಲಿನ ಸಂಕೀರ್ಣತೆಯ ಸೂಕ್ಷ್ಮಚಿತ್ರಣ ತುಂಬ ಪರಿಣಾಮಕಾರಿಯಾಗಿದೆ. ವಿಶುಕುಮಾರ್ ಅವರು 'ಭಗವಂತನ ಆತ್ಮಕಥೆ', 'ಗಗನಗಾಮಿಗಳು' ಮತ್ತು 'ನೇತ್ರರಗಾನ'ಗಳನ್ನು ಬರೆದಿದ್ದಾರೆ. ಎರಡನೆಯದು ವೈಜ್ಞಾನಿಕವಾದ ವಸ್ತುವಿನ ದೃಷ್ಟಿಯಿಂದ ಗಮನಾರ್ಹ. ಕೊನೆಯದು ಯಕ್ಷಗಾನ ಕಲಾವಿದನ ಬಾಳನ್ನು ಚಿತ್ರಿಸುತ್ತದೆ. 'ಹೇಮಂತ' ಮತ್ತು 'ಪಥಭ್ರಾಂತ' ಪ್ರಿಯದರ್ಶಿಯವರ ಲೇಖನದ ಫಲಗಳು. ಬೃಹತ್‌ಗಾತ್ರದ 'ಪಥಭ್ರಾಂತ' ಚಿತ್ರಕಲಾವಿದನೊಬ್ಬನ ವರ್ಣಮಯ ಜೀವಿತಕಥೆ. ಪ್ರಮಾಣಪರಿಜ್ಞಾನ ಮತ್ತು ಹೆಚ್ಚಿನ ಸಂಯಮಗಳಿದ್ದರೆ ಇದೊಂದು ಉತ್ಕೃಷ್ಟ ಕಾದಂಬರಿಯಾಗಬಹುದಾಗಿತ್ತು. ಜಿ. ವೆಂಕಟಯ್ಯನವರು 'ನೊಂದಜೀವ', 'ಮುರಿದಮದುವೆ' 'ಚಂದನದಕೊರಡು' ಮುಂತಾದ ಕಾದಂಬರಿಗಳನ್ನು ಬರೆದಿದ್ದಾರೆ. 'ಚಂದನದ ಕೊರಡು' ಆದರ್ಶವೈದ್ಯ

ನೊಬ್ಬನನ್ನು ಕುರಿತ ಸುರಸಬರವಣಿಗೆ. ನಾ. ರಾಜಣ್ಣ ಅವರು 'ನಾ ಸಾಯಲಾರೆ' 'ವಜ್ರಮುಂಗುರ', 'ಮುಗಿಲಮಾಲೆ'ಗಳನ್ನು ರಚಿಸಿದ್ದಾರೆ. ಮೊದಲೆರಡು ಕೌಟುಂಬಿಕ ಚಿತ್ರುಗಳು; ಕೊನೆಯದು ಕಲಾವಿದನೊಬ್ಬನ ಜೀವನಚಿತ್ರಣ. ಶೇಷನಾರಾಯಣ ಅವರು 'ಮೂಲಾನಕ್ಷತ್ರ', 'ಕಪಿಲೆ', 'ಪದ್ಮರಂಗು' ಮತ್ತು 'ನೊರೆ' ಎಂಬ ನಾಲ್ಕು ಕಾದಂಬರಿಗಳನ್ನು ನಿರ್ಮಿಸಿದ್ದಾರೆ. ಪ್ರಾಣಿಜೀವನವನ್ನು ತುಂಬ ಸ್ವಾಭಾವಿಕ ವಾಗಿ ಕೃತಿಗಳಲ್ಲಿ ತರಬಲ್ಲ ಶಕ್ತಿ ಅವರಿಗಿದೆ. 'ಕಪಿಲೆ'ಯಲ್ಲಿ ಹಸು, 'ಪದ್ಮರಂಗು'ವಿನಲ್ಲಿ ಹಾವು ಪ್ರಧಾನಪಾತ್ರಗಳು. ಹಳ್ಳಿಯ ರೈತನ ದುಃಖದಾಯಕ ಜೀವನದ ದಾರುಣ ಚಿತ್ರ 'ನೊರೆ'. ಎಚ್ಕೆಸ್ಕೆಯವರು 'ಬಯಕೆಯಬೆಲೆ', 'ಮುಕ್ತಿಮಾರ್ಗ', 'ಕುರುಕ್ಷೇತ್ರ'ಗಳ ಕರ್ತೃ. ಮೊನಚಾದಶೈಲಿ, ರಸವತ್ತಾದನಿರೂಪಣೆ ಅವರ ಕೃತಿಗಳ ವೈಶಿಷ್ಟ್ಯ. 'ರಾಜಬಲಿ', 'ತಣ್ಣಗಿನಜೆಂಕಿ', 'ಉತ್ತರಾಯಣ' ಮುಂತಾದ ಪೌರಾಣಿಕಕಾದಂಬರಿಗಳನ್ನು ರಚಿಸಿದ್ದಾರೆ ಸತ್ಯಕಾಮ ಅವರು. ಬಿ. ಮಲ್ಲರಾಜ ಅರಸ್ ಅವರ 'ಗ್ರಾಮಸೇವಕ ರಾಮಚಂದ್ರ', 'ರಾಮನಹಳ್ಳಿಯ ಹೊಸ ಬಾಳು' ಗ್ರಾಮಸುಧಾರಣ ಪ್ರಚಾರದ ನೀರಸಕೃತಿಗಳು. ಕೃ. ನ. ಮೂರ್ತಿಯವರು 'ಹೂವಿನಸೆರೆ'. 'ಗ್ರಾಮಸೇವಕ', 'ಸರ್ವೋದಯ' ಮುಂತಾದ ಕೃತಿಗಳನ್ನು ಬರೆದಿದ್ದಾರೆ. ವಸ್ತುದೃಷ್ಟಿಗಳಲ್ಲಿ ಹೊಸತನವಿದ್ದರೂ ನಿರೂಪಣೆ ಸವಕಲು.

ಗೊರೂರರನ್ನು ಬಿಟ್ಟರೆ ಈ ಅವಧಿಯಲ್ಲಿ ಚೇತೋಹಾರಿಯಾದ ಹಾಸ್ಯವನ್ನು ತಮ್ಮ ಕಾದಂಬರಿಗಳಲ್ಲಿ ತಂದವರು ಇಲ್ಲವೆನ್ನುವಷ್ಟು ಕಡಮೆ. ಚತುರಮತಿಗಳಾದ 'ಬೀಚಿ'ಯವರು ತಮ್ಮ 'ದಾಸಕೂಟ', 'ಸತೀಸೂಳೆ', 'ಸರಸ್ವತೀಸಂಹಾರ', 'ಖಾದಿಸೀರೆ' ಮುಂತಾದ ಕೃತಿಗಳಲ್ಲಿ ಹಾಸ್ಯವನ್ನು ತರಲು ಯತ್ನಿಸಿದ್ದರೂ ಅದು ಕಲಾತ್ಮಕವಾಗಿ ಅಭಿವ್ಯಕ್ತಿಗೊಳ್ಳದೆ ವಿಕೃತಹಾಸ್ಯವಾಗಿ ಚುಚ್ಚುಕಾಯಕ ಮಾಡು ತ್ತದೆ. ನಾಡಿಗೇರ್ ಕೃಷ್ಣರಾಯರ ಹೆಸರನ್ನು ಈ ಸಂದರ್ಭದಲ್ಲಿ ಹೇಳದಿರುವುದೇ ಒಳ್ಳೆಯದು. ದಾಶರಥಿದೀಕ್ಷಿತರ 'ಗಂಡಾಗಿಕಾಡಿದ್ದ ಗುಂಡ' ಈ ದೃಷ್ಟಿಯಿಂದ ಒಂದು ಸ್ಮರಣೀಯ ಕೃತಿ. ನಾಟಕಕಾರ ಎ. ಎಸ್. ಮೂರ್ತಿ ಅವರು ಕಾದಂಬರಿ ರಂಗಕ್ಕೆ ಕಾಲಿಟ್ಟು ಹಾಸ್ಯಭರಿತವಾದ 'ನಾನೂ ನೀನೂ ಜೋಡಿ' ಮತ್ತು 'ಕಳ್ಳರ ಸಂತೆ' ಕೃತಿಗಳನ್ನು ರಚಿಸಿದ್ದಾರೆ. ಹಳೆಯ ತಲೆ ಮೊರೆಯ ಶ್ರೇಷ್ಠ ಹಾಸ್ಯ ಬರೆಹಗಾರರಲ್ಲೊಬ್ಬರಾದ ಕಸ್ತೂರಿಯವರು 'ರಂಗನಾಯಕಿ'ಯನ್ನು ಕರೆತಂದಿದ್ದಾರಾದರೂ ಅದರಲ್ಲಿ ಹಿಂದಿನ ಹೊಳಪು ಕಿಡಿ ಸತ್ವ ಇಲ್ಲ.

ಬಿ. ಜಿ. ಸತ್ಯಮೂರ್ತಿ, ದಯಾನಂದತೊರ್ಕೆ, ಎಂ. ಶಿವಾಜಿರಾವ್, ರಘುಸುತ, ವಿ. ಜಿ. ಕೃಷ್ಣಮೂರ್ತಿ, ಮಾ. ರಾ. ಶೇಷಗಿರಿ, ಗಿರಿಜಾನಂದನ, ರಮಾಕಾಂತ, ಜ್ಞಾನಾನಂದ ಮುಂತಾದ ತರುಣರು ಕಾದಂಬರಿಯ ವ್ಯವಸಾಯಕ್ಕೆ ಕೈಇಟ್ಟಿದ್ದಾರೆ. ಅನುಭವ ಅಭ್ಯಾಸಗಳನ್ನು ಬೆಳೆಸಿಕೊಂಡು ಕಲಾದೃಷ್ಟಿಯನ್ನು ಮೊನೆಗೊಳಿಸಿಕೊಂಡರೆ ಅವರು ಉತ್ತಮಕೃತಿನಿರ್ಮಾಣಮಾಡುವುದು ಸಾಧ್ಯ.

ಇತ್ತೀಚಿನವರ್ಷಗಳಲ್ಲಿ ಬೆಳಕಿಗೆ ಬಂದು ತುಂಬ ಭರವಸೆಯನ್ನು ಮೂಡಿಸುತ್ತಿರುವ ಮತ್ತೊಂದು ಪ್ರಮುಖ ಹೆಸರು ಎಸ್. ಎಲ್. ಭೈರಪ್ಪ ಅವರದು. 'ಭೀಮಕಾಯ'ದಿಂದ ಹಿಡಿದು 'ತಬ್ಬಲಿಯು ನೀನಾದೆ ಮಗನೆ'ವರೆಗಿನ ಕಾದಂಬರಿಗಳನ್ನು ನೋಡಿದಾಗ ಕೃತಿಯಿಂದ ಕೃತಿಗೆ ಅವರ ಲೇಖನಕಲೆ ಸತ್ವಶಾಲಿಯಾಗಿ ಬೆಳೆಯುತ್ತಾ ಹೋಗುತ್ತಿರುವುದು ಕಾಣಿಸುತ್ತದೆ. ಕಾರಂತರಂತೆ ನಿಗೂಢವೂ ಆಳವೂ ಸಂಕೀರ್ಣವೂ ಸುವಿಶಾಲವೂ ಆದ ಜೀವನವೃಕ್ಷದ ಬೇರುಗಳನ್ನು ಅದರೆಲ್ಲಾ ಶಕ್ತಿಯೊಡನೆ ಭದ್ರವಾಗಿ ಅಪ್ಪಿ ಹಿಡಿದಿರುವುದರಿಂದ ಅವರ ಕೃತಿಗಳ ಓದು ನಿರರ್ಥಕವಾಗುವುದಿಲ್ಲ. ವಸ್ತುವಿನ ಘನತ್ವ, ನಿರೂಪಣೆಯ ಸೊಗಸು, ಸಬಲವಾದ ವೈಚಾರಿಕತೆ ಅವರ ಕಾದಂಬರಿಯ ಲಕ್ಷಣಗಳು. ನೆಲಗಂಪಿನಿಂದ ಕಳಕಳಿಸುವ ಪಾತ್ರಾನುಸಾರಿಯಾದ ಸಜೀವಸಂಭಾಷಣೆ ಅವರ ಕಾದಂಬರಿಗಳ ಮತ್ತೊಂದು ಮೆಚ್ಚಬೇಕಾದಗುಣ. ಅಂಧಾಭಿಮಾನ ಮೂಲವಲ್ಲದ ಭಾರತೀಯ ಧರ್ಮ ಮತ್ತು ಸಂಸ್ಕೃತಿಗಳ ಬಗೆಗಿನ ಗಾಢವೂ ಶ್ರದ್ಧಾನ್ವಿತವೂ ಆದ ಬುದ್ಧಿಪೂರ್ವಕ ಅಭ್ಯಾಸ ಅವರ ಕಾದಂಬರಿ ಕಲೆಗೆ ಒಂದು ವಿಶಿಷ್ಟತೆಯನ್ನು ತಂದುಕೊಟ್ಟಿದೆ. ಅವರ ಪ್ರಾಥಮಿಕ ಕೃತಿ 'ಭೀಮಕಾಯ' ಗರಡಿಯಾಳುಗಳ ಜೀವನವನ್ನು ಕುರಿತದ್ದು. ವಸ್ತು ಹೊಸದು ; ನಿರೂಪಣೆ ನೀರಸ. ಸ್ವಾತಂತ್ರ್ಯದತ್ತವಾದ ಚುನಾವಣೆಗಳು, ಒಲಿದು ಒಂದಾಗಿದ್ದ ಮುಗ್ಧ ಹೃದಯದ ಹಳ್ಳಿಗರ ಮೇಲೆ ಬೀರಿದ ದುಷ್ಪರಿಣಾಮಗಳ ವಾಸ್ತವಿಕ ಚಿತ್ರ 'ಮತದಾನ,' ಭಾಷೆಯಲ್ಲಿ ಹಳ್ಳಿಯ ಸಹಜತೆಯ ಸೊಗಡಿದೆ, ಶಕ್ತಿಯಿದೆ. ಆದರೆ ಕಾದಂಬರಿಗೆ ಮೂಲವಾದ ಸಂವೇದನೆ ತೀರ ಆಳವಾದದ್ದಲ್ಲ ಎನ್ನಿಸುತ್ತದೆ. ಪ್ರಾಚೀನಕಾಲದಿಂದಲೂ ಹಲವಾರು ಕಾರಣಗಳಿಂದ ತಂಡತಂಡವಾಗಿ ಭಾರತಕ್ಕೆ ಬಂದ ಭಿನ್ನಭಿನ್ನ ಸಂಸ್ಕೃತಿಯ ಜನರು ಹಿಂದೂ ಸಂಸ್ಕೃತಿಯ ಉದಾರ ಗರ್ಭದಲ್ಲಿ ಲೀನವಾದರು. ಆದರೆ ನಮ್ಮ ಸಂಸ್ಕೃತಿಗೆ ಶರಣಾಗದೆ ಪ್ರತ್ಯೇಕ ದ್ವೀಪವಾಗಿಯೇ ಇರುವ ಕ್ರಿಸ್ತಧರ್ಮ ತನ್ನ ಬೇರುಗಳನ್ನು ಮುಗ್ಧಜನಗಳ ಹೃದಯದಲ್ಲಿ ಬಿಡಲು ತೊಡಗಿದಾಗ ಉಂಟಾಗುವ ಸಾಂಸ್ಕೃತಿಕ ಘರ್ಷಣೆಯನ್ನು ತುಂಬ ಸಾರ್ಥಕವಾಗಿ ಶಕ್ತಿವತ್ತಾಗಿ ಸ್ವಾಭಾವಿಕವಾಗಿ ಚಿತ್ರಿಸಿದ್ದಾರೆ 'ಧರ್ಮಶ್ರೀ'ಯಲ್ಲಿ. ನೂತನ ಸಮಸ್ಯೆಯನ್ನೆತ್ತಿಕೊಂಡು ಬರೆದ ಈ ಕೃತಿ ನಿಜಕ್ಕೂ ವಿಶಿಷ್ಟವಾಗಿದೆ. ಪ್ರೇಮಜಗತ್ತಿನ ಮೂರು ಪ್ರಧಾನ ಮುಖಗಳನ್ನು ತುಂಬ ಸದೃಢವಾಗಿ ಜೀವಂತವಾಗಿ ಅರ್ಥಪೂರ್ಣವಾಗಿ ಶಿಲ್ಪಿಸಿರುವ ಕೃತಿ 'ದೂರ ಸರಿದರು.' ತುಸು ಎಚ್ಚರದಪ್ಪಿದ್ದರೆ ಹಳಸಲಾಗಬಹುದಾಗಿದ್ದ ವಸ್ತು ಈ ಲೇಖನಿಯಲ್ಲಿ ಸ್ಮರಣೀಯ ರೂಪಧಾರಣೆಮಾಡಿದೆ. ಶ್ರದ್ಧಾನ್ವಿತವೂ ಸುಸಂಸ್ಕೃತವೂ ಸೂಕ್ಷ್ಮವೂ ವಿಚಾರಶೀಲವೂ ಆದ ಜೀವನದೃಷ್ಟಿ ಮತ್ತು ಅನುಭವ ತೀವ್ರತೆ ಇಲ್ಲಿ ಹರಡಿದೆ. ಕೃತಿಯನ್ನು ಓದಿ ಮುಗಿಸಿದಾಗ ಪಾಶ್ಚಾತ್ಯ ದುರಂತ ನಾಟಕವೊಂದನ್ನು ನೋಡಿದ ಅನುಭವ ಮನಸ್ಸನ್ನು ತುಂಬುತ್ತದೆ. ಅಧಿಕ ಸಂಖ್ಯೆಯ ಘಟನೆಗಳು ಮತ್ತು ಅಧಿಕ ಸಂಖ್ಯೆಯ ಪಾತ್ರಗಳಿಂದ ತುಂಬಿ ಹೆಜ್ಜೆ ಹೆಜ್ಜೆಗೂ ಕುತೂಹಲಕರವಾಗಿ ಸಮರ್ಥವಾಗಿ ಬೆಳೆಯುತ್ತಾ ಹೋಗುವ 'ವಂಶವೃಕ್ಷ' ಕನ್ನಡದ

ಶ್ರೇಷ್ಠ ಕಾದಂಬರಿಗಳ ಸಾಲಿನಲ್ಲಿ ನಿಸ್ಸಂದೇಹವಾಗಿ ಗಣನೀಯಸ್ಥಾನ ಪಡೆದುಕೊಳ್ಳುತ್ತದೆ. ಪಾಪ–ಪುಣ್ಯ, ಸ್ವರ್ಗ–ನರಕ, ಸನಾತನ–ವಿನೂತನ, ಶ್ರದ್ಧೆ–ಸಂಶಯ, ಪ್ರೇಮ ಕಾಮ, ಆಚಾರ–ವಿಚಾರ ಮುಂತಾದ ಬದುಕಿನ ಮೂಲದ್ವಂದ್ವಗಳ ವಿಶಾಲ ಹಾಸುಳ್ಳ ಈ ಕೃತಿ ಸಹಜರಮ್ಯವಾಗಿ ಪ್ರಮಾಣಬದ್ಧವಾಗಿ ಅರಳುತ್ತಾ ಅತ್ಯಂತ ಉಚಿತವೂ ಕಲಾಪೂರ್ಣವೂ ಆದ ಮುಕ್ತಾಯವನ್ನು ಪಡೆಯುತ್ತದೆ. ತುಸು ಹದತಪ್ಪಿದರೂ ಅಸಹಜವೂ ಕೃತಕವೂ ಅಗಬಹುದಾಗಿದ್ದ ಪಾತ್ರಗಳನ್ನು ಕಡೆಯುವಲ್ಲಿ ಲೇಖಕರು ತುಂಬುಕೌಶಲವನ್ನು ವ್ಯಕ್ತಪಡಿಸಿದ್ದಾರೆ. ಜನ್ಮಾಂತರ, ಆತ್ಮದ ಅಮರತ್ವ, ದೈವಶ್ರದ್ಧೆ ಮೌಢ್ಯ, ವಾತ್ಸಲ್ಯಬಲ, ಬೌದ್ಧಿಕ ಜಿಜ್ಞಾಸೆ ಮುಂತಾದ ಹಲವು ಘಟಕಗಳನ್ನು ಒಮ್ಮುಖವಾಗಿ ಸಂಯೋಜಿಸಿ ನಿರ್ಮಿಸಿದ ವಿಚಾರ ಪ್ರಚೋದಕ ಕೃತಿ 'ನಾಯಿ–ನೆರಳು.' ಮೂಲಭೂತವಾಗಿ ಏಳುವ ಸಹಜತೆಯ ಪ್ರಶ್ನೆಯನ್ನು ಕ್ಷಣಕಾಲ ಮರೆತಲ್ಲಿ ಈ ಕೃತಿ ನೀಡುವ ಅನುಭವ ಸೃಷ್ಟಿಸುವ ಆವರಣ ತುಂಬ ಪ್ರಭಾವಕಾರಿಯೂ ಆನಂದದಾಯಕವೂ ಆದದ್ದು. ಅವರ ಇತ್ತೀಚಿನ ಕೃತಿ 'ತಬ್ಬಲಿಯುನೀನಾದೆ ಮಗನೆ' ಹಳ್ಳಿಯ ಬಾಳಿನ ಒಂದು ರುದ್ರರಮ್ಯ ಅಧ್ಯಾಯ. 'ಗೋವಿನ ಹಾಡ'ನ್ನು ಸಾಂಕೇತಿಕ ಹಿನ್ನೆಲೆಯಾಗಿಟ್ಟುಕೊಂಡು ರಚಿತವಾದ ಈ ಕೃತಿಯಲ್ಲಿ ಪರಂಪರೆಯ ಪ್ರಜ್ಞೆ, ಮೌಗ್ಧ್ಯಮೂಲವಾದ ದೃಢ ಸಂಕಲ್ಪ, ದೈವಭಕ್ತಿ, ಸಾತ್ವಿಕತಾದತ್ತವಾದ ಮನಶ್ಶಾಂತಿ, ಪಾರಮಾರ್ಥಿಕ ದೃಷ್ಟಿ ಒಂದೆಡೆ; ವಿವೇಕ, ವಿಚಾರ, ವೈಜ್ಞಾನಿಕತೆ, ವಿಶ್ವಭ್ರಾತೃತ್ವ, ಅತಿಲೌಕಿಕತಾದತ್ತವಾದ ಪ್ರಯೋಜನ ದೃಷ್ಟಿ ಮತ್ತೊಂದೆಡೆ–ಇವುಗಳ ಅನಿವಾರ್ಯ ಘರ್ಷಣೆಯನ್ನು ತತ್ಫಲವಾಗಿ ಇಬ್ಬಣದಲ್ಲೂ ಉದಿಸುವ ಮಾನಸಿಕ ವಿಪ್ಲವವನ್ನು ಕಣ್ಣಿಗೆ ಕಟ್ಟುವಂತೆ, ಮನಸ್ಸಿಗೆ ತಟ್ಟುವಂತೆ ಚಿತ್ರಿಸಲಾಗಿದೆ. ಹಳ್ಳಿಯ ರಕ್ತತುಂಬಿದ ಭಾಷೆ, ಹಳ್ಳಿಯ ಮನಸು ಮಾಂಸಗಳನ್ನು ಹೊತ್ತು ಧುತ್ತೆಂದು ಎದ್ದುನಿಲ್ಲುವ ಪರಿಸರ, ಸಾಲು ಸಾಲಿನಲ್ಲೂ ಹರಿಯುವ ಸತ್ವಶಾಲಿಯಾದ ಜೀವಂತಾನುಭವ, ಮನಸ್ಸಿನ ಎಳೆ ಎಳೆಯನ್ನು ಬಿಡಿ ಬಿಡಿಸಿ ನೋಡುವ ವಿಶ್ಲೇಷಕ ಪ್ರಜ್ಞೆ, ಆದಿಯಿಂದ ಅಂತ್ಯದವರೆಗೂ ಕಾವುಗೊಂಡು ಪ್ರಜ್ವಲಿಸುವ ಕಲಾತ್ಮಕ ಎಚ್ಚರ–ಇವು ಈ ಕೃತಿಯನ್ನು ಒಂದು ಮಹತ್ವದ ಕಾದಂಬರಿಯನ್ನಾಗಿ ಮಾಡಿವೆ.

೭

ಎಂದಿಗಿಂತ ಹೆಚ್ಚಾಗಿ ಇಂದು ಕಾದಂಬರಿ ರಂಗದಲ್ಲಿ ಹೊಸ ಹೊಸ ಪ್ರಯೋಗಗಳು ನಡೆಯುತ್ತಿವೆ. ಅವು ಸಾರ್ಥಕವಾಗಿರಲಿ ಬಿಡಲಿ, ಆ ಪ್ರಯತ್ನ ಆ ಪ್ರಾಮಾಣಿಕತೆ ಮೆಚ್ಚಲೇಬೇಕಾದಂಥವುಗಳು. ಮನೋಹರ ಗ್ರಂಥಮಾಲೆಯವರು ನಡೆಸಿದ ಒಂದು ನೂತನ ಪ್ರಯೋಗದ ಫಲವಾಗಿ 'ಝೋ' ಕಾದಂಬರಿ ಮೂಡಿಬಂದಿದೆ. ಇದರ ಹನ್ನೊಂದು ಅಧ್ಯಾಯಗಳನ್ನು ಹನ್ನೊಂದು ಜನ ಲೇಖಕರು ಬರೆದಿದ್ದಾರೆ. ಇದರಿಂದಾಗಿ ವಸ್ತುನಿರ್ವಹಣೆಯಲ್ಲಿ ನಿರೂಪಣೆಯಲ್ಲಿ ಶೈಲಿಯಲ್ಲಿ ವಿಚಾರದಲ್ಲಿ ಶೈಥಿಲ್ಯ ಅಸಮತೆ

ಉಂಟಾಗಿರುವುದು ನಿಜ. ಆದರೂ ಒಂದು ವಸ್ತುವನ್ನು ವಿವಿಧ ಜನರ ಬುದ್ಧಿಶಕ್ತಿ ಕಲ್ಪನಾಶಕ್ತಿಗಳು ವಿವಿಧ ದೃಷ್ಟಿಗಳಿಂದ ಕಂಡು ಅವುಗಳೆಲ್ಲವನ್ನೂ ಒಮ್ಮುಖವಾಗಿ ಹರಿಸುವ ಸಾಧ್ಯತೆಯಿದೆ ಎಂಬ ಸಂಗತಿಯೇ ತುಂಬ ಮಹತ್ವದ್ದಾಗಿದೆ. ಶಂಕರ ಮೊಕಾಶಿಯವರ 'ಗಂಗವ್ವ ಮತ್ತು ಗಂಗಾಮಾಯಿ' ಈ ಕಾಲಮಾನದ ಸಮರ್ಥ ಕೃತಿಗಳಲ್ಲೊಂದಾಗಿದೆ. ಗತಕಾಲದ ಶಕ್ತಿಗಳಿಂದ ತನ್ನನ್ನು ತಾನು ಸಂರಕ್ಷಿಸಿಕೊಂಡು ಹೊಸದಾದ ಸೋಲರಿಯದ ಸತ್ವಪೂರ್ಣವಾದ ಸರ್ವಬಂಧನವಿಮುಕ್ತವಾದ ಬಾಳನ್ನು ಬಾಳಬೇಕೆಂಬ ಪ್ರಯತ್ನ, ಅದಕ್ಕಾಗಿ ನಡೆಸುವ ಹೋರಾಟ ಈ ಕಾದಂಬರಿಯ ಕೇಂದ್ರ ವಸ್ತು. ಇಲ್ಲಿಯ ಪಾತ್ರಗಳ ಘನಗಟ್ಟಿತನ ಇದರ ಸಫಲತೆಗೆ ಪ್ರಧಾನ ಕಾರಣ. ನೈತಿಕ ದೃಷ್ಟಿ ಇದ್ದರೂ ಅದು ದಟ್ಟವಾದ ಬದುಕಿನ ತೀವ್ರತೆಯಲ್ಲಿ ವಾಸ್ತವತೆಯಲ್ಲಿ ಕಲೆಗಾರಿಕೆಯಲ್ಲಿ ಸಮರ್ಪಿತವಾಗುತ್ತದೆ. ಇದರ ತಂತ್ರದಲ್ಲಿ ನಾವೀನ್ಯತೆಯೇನೂ ಇಲ್ಲ. ರಾಮಚಂದ್ರ ಕೊಟ್ಟಲಗಿಯವರ 'ದೀಪಹತ್ತಿತು' ಮೂರು ತಲೆಮೊರೆಗಳ ಜೀವನಕಥೆ. ಇದರ ವಿಶಿಷ್ಟತೆಯೆಲ್ಲಾ ಇದರ ಭಾಷೆಯಲ್ಲಿದೆ. ಕನ್ನಡ ಸಂಸ್ಕೃತ ಮರಾಠಿ ಮುಂತಾದ ಬೇರೆ ಬೇರೆ ಭಾಷೆಗಳ ಪದಗಳನ್ನು ಧೈರ್ಯವಾಗಿ ಸಂದರ್ಭೋಚಿತವಾಗಿ ಸಮರ್ಥವಾಗಿ ಬಳಸಿ ಒಂದು ನೂತನ ಪ್ರಯೋಗಮಾಡಿದ್ದಾರೆ. ಶಾಂತಿನಾಥ ದೇಸಾಯಿ ಅವರ 'ಮುಕ್ತಿ' ಪ್ರಜ್ಞಾಪ್ರವಾಹದ ತಂತ್ರವನ್ನು ಸಾರ್ಥಕವಾಗಿ ಅಳವಡಿಸಿಕೊಂಡ ಸತ್ವಶಾಲೀ ಕೃತಿ. ತನ್ನನ್ನು ಸುತ್ತಮುತ್ತ ಕಾಡುತ್ತಿದ್ದ ಈ ನೆಲಕ್ಕಂಟಿದ ಭಾವನೆಗಳಿಂದ ಪಾರಾಗಲು ಇವುಗಳ ಸೋಂಕಿಲ್ಲದ ಬೇರೊಂದು ಪ್ರದೇಶಕ್ಕೆ–ಆಫ್ರಿಕೆಗೆ–ಹೋಗಲು ಬಯಸಿದ ಯುವಕನೊಬ್ಬನ ಭಾವಲಹರಿಯಿದು. ತನ್ನನ್ನು ಕಿತ್ತುತಿನ್ನುತ್ತಿದ್ದ ಅನುಭವಗಳ ತೀವ್ರತೆಯನ್ನು ಕಡಮೆಮಾಡಿಕೊಳ್ಳುವುದಕ್ಕಾಗಿ ಅವುಗಳನ್ನು ಹೊರಹಾಕಲು ಪ್ರಯತ್ನಿಸಿದಾಗ ತನ್ನೊಳಗೆ ತಾನು ಪ್ರವೇಶಿಸಿ ಹುಡುಕಾಟವಾಡಿದಾಗ ಮೂಡಿದ ಸ್ವಾಂತರಂಗದರ್ಶನವಿದು. ಬಳಸಿರುವ ಭಾಷೆ, ಹೇಳಿರುವ ರೀತಿ ತುಂಬ ಸ್ವೋಪಜ್ಞವೂ ಶಕ್ತಿಸಂಪನ್ನವೂ ಆಗಿದೆ. ಯಶವಂತ ಚಿತ್ತಾಲರ 'ಮೂರು ದಾರಿಗಳು' ಮತ್ತೊಂದು ಗಮನಾರ್ಹ ಸಾಧನೆ. ಸಾರ್ವತ್ರಿಕವಾಗಿ ಎದುರಿಸಬೇಕಾಗಿ ಬಂದ ಸಮಸ್ಯೆಯನ್ನು ಮೂರು ಜನರು ಮೂರು ವಿಧವಾದ ದೃಷ್ಟಿಕೋನಗಳಿಂದ ಬಿಡಿಸುವುದೇ ಇಲ್ಲಿಯ ವಸ್ತು. ಈ ಹೊಸ ಬಗೆಯ ತಂತ್ರಪ್ರಯೋಗದಲ್ಲಿ ಮತ್ತು ಅದರ ನಿರ್ವಹಣೆಯಲ್ಲಿ ಕೃತಕತೆ ತಲೆಹಾಕದೆ ಅರ್ಥಸಂಪನ್ನತೆ ತುಂಬಿಕೊಂಡಿರುವುದೇ ಅದರ ಯಶಸ್ಸಿಗೆ ಸಮರ್ಥಸಾಕ್ಷಿಯಾಗಿದೆ. ಕುಸುಮಾಕರ ದೇವರಗಣ್ಣೂರ ಅವರ 'ನಾಲ್ಕನೆಯ ಆಯಾಮ' ಮತ್ತೊಂದು ಸ್ಮರಣೀಯ ಕೃತಿ. ಮಧ್ಯಮವರ್ಗದ ಕುಟುಂಬದಲ್ಲಿ ಹುಟ್ಟಿದ ತರುಣನೊಬ್ಬನ ಮನೋವಿಶ್ಲೇಷಣೆಯಿದು. ವಾಸವಾಗಿದ್ದ ಮನೆಯ ಸನ್ನಿವೇಶ, ತಂದೆ ತಾಯಿಗಳ ಪರಸ್ಪರ ವಿರುದ್ಧಸ್ವಭಾವ, ಬಾಲ್ಯದ ಅನುಭವಗಳು, ದೊರೆತ ಸಹವಾಸಗಳು, ಬೆಳೆದ ಬಂಡುಕೋರತನ, ಆತ್ಮಾವಹೇಳನ ಮುಂತಾದುವುಗಳನ್ನು ಅವನ ಭಾವನಾಲಹರಿಯ ಹಂದರದ ಮೇಲೆ ಹಬ್ಬಿಸಿ ತನ್ನತನಕ್ಕಾಗಿ ಆತ ನಡೆಸುವ ತೀವ್ರಹೋರಾಟದ

ಸಜೀವ ಸಶಕ್ತ ಚಿತ್ರವನ್ನು ಮುಂದಿಡುತ್ತದೆ ಈ ಕಾದಂಬರಿ. ಸಂಪ್ರದಾಯವನ್ನು ಒದ್ದು ಸೂಳೆಯ ಜೊತೆಯಲ್ಲಿ ಸಂಸಾರಮಾಡಿದ ವ್ಯಕ್ತಿಯೊಬ್ಬ ಸತ್ತಾಗ, ಅವನ ಶವಸಂಸ್ಕಾರ ಮಾಡಲು ಹಿಂದೆ ಮುಂದೆನೋಡಿದ ಬ್ರಾಹ್ಮಣ ಮುಖಂಡರುಗಳು ಸ್ವಬಾಳಿನ ವಿಮರ್ಶೆ ನಡೆಸಿ ಸತ್ತವನಿಗಿಂತ ತಾವು ಮೇಲಲ್ಲವೆಂದು ಅರಿತುದು ಯು. ಆರ್. ಅನಂತಮೂರ್ತಿಯವರ 'ಸಂಸ್ಕಾರ'ದ ವಸ್ತು. 'ಹೊರ ಸಂಸ್ಕಾರಗಳು ಒಳಗಿನ ಸಂಸ್ಕಾರಗಳನ್ನು ಎಷ್ಟೇ ಭದ್ರವಾಗಿ ಅದುಮಿಟ್ಟರೂ ಒಂದು ಸಲ ಒಳಸಂಸ್ಕಾರಗಳು ಹುತ್ತದೊಳಗಿನ ಹಾವಿನಂತೆ ಹೊರಬರುವುದನ್ನು ಇಲ್ಲಿ ಚೆನ್ನಾಗಿ ಪ್ರತಿಪಾದಿಸಲಾಗಿದೆ.'[1] ಕಾದಂಬರಿಯ ಪರಿಸರ ಅತ್ಯಂತ ಸಶಕ್ತವಾಗಿ ತನ್ನೆಲ್ಲಾ ವಿಶಿಷ್ಟತೆಯೊಡನೆ ಸಹಜವಾಗಿ ಮೂಡಿಬಂದಿದೆ. ತೀಕ್ಷ್ಣವೈಚಾರಿಕತೆಯೊಡನೆ ಮಿಳಿತವಾದ ನೆಲಗಟ್ಟಿನ ತಾಯಿಭಾಷೆಯ ಬಿಗಿ ಬಿಗಿದನಿ ಮಹತ್ವದ ಪರಿಣಾಮವನ್ನುಂಟುಮಾಡುತ್ತವೆ. ಭಾಷೆಯನ್ನು ಇಷ್ಟು ಚೈತನ್ಯಪೂರ್ಣವಾಗಿ ಸಮುಚಿತವಾಗಿ ಬಳಸಬಲ್ಲ ಲೇಖಕರು ಅತಿ ವಿರಳ. "ನನ್ನ ಯೋಗ್ಯತೆ ಏನೆಂದು ನಾನು ಕಂಡುಕೊಳ್ಳಬೇಕಾಗಿದೆ. ಘಟನೆ ಘಟನೆಗಳನ್ನೇ ಹಿಡಿದೆತ್ತಿ ನನ್ನ ಸ್ವರೂಪವನ್ನು ನಾನು ನಿರ್ಮಾಣಮಾಡಬೇಕಾಗಿದೆ"[2] ಎಂಬ ಮನೋಧರ್ಮವುಳ್ಳ ಯುವಕನ ಸ್ವಸ್ವರೂಪದರ್ಶನ ಪೂರ್ಣಚಂದ್ರತೇಜಸ್ವಿ ಅವರ ಕಿರುಕಾದಂಬರಿ 'ಸ್ವರೂಪ.' ನಾಯಕನ ಅಂತರಂಗದ ಸೂಕ್ಷ್ಮ ಪ್ರತಿಕ್ರಿಯೆಗಳ ಶಕ್ತಾಭಿವ್ಯಕ್ತಿ ಇದರ ಪ್ರಧಾನಗುಣ. ಇದೊಂದು ವೈಚಾರಿಕ ಕೃತಿ. ನೀರಸವೂ ಸಂಪ್ರದಾಯ ಜಡವೂ ಕೃತಕವೂ ಅಪ್ರಾಮಾಣಿಕವೂ ಸತ್ವಹೀನವೂ ಮೌಲ್ಯರಹಿತವೂ ಆದ ಒಂದು ವಾತಾವರಣದಿಂದ ತನ್ನನ್ನು ತಾನು ಬಿಡಿಸಿಕೊಂಡು ಸರ್ವಪ್ರಭಾವದೂರವಾದ ಸ್ವತಂತ್ರವೂ ಜೀವಂತವೂ ತೀವ್ರವೂ ಪ್ರಾಮಾಣಿಕವೂ ಆದ ಬದುಕನ್ನು ಬಾಳಲು ತನ್ನ ಅನಿಸಿಕೆಗಳೊಡನೆ ತಾನೇ ಹೋರಾಡುವ ಯುವಕನೊಬ್ಬನ ಮನೋಘರ್ಷಣೆಯ ಸಾಂಕೇತಿಕ ಹಾಗೂ ಪರಿಣಾಮಕಾರೀ ಚಿತ್ರಣ ಲಂಕೇಶರ 'ಬಿರುಕು.' ಅನಿಸಿಕೆಗೂ ಆಚರಣೆಗೂ ಇರುವ ಬಿರುಕು ಇಲ್ಲಿ ಅಭಿವ್ಯಕ್ತಿ ಪಡೆದಿದೆ. ಲಂಕೇಶರ ತೀವ್ರತೆ ಮೊನಚಾದ ಬೌದ್ಧಿಕತೆಯನ್ನು ಒಮ್ಮೊಮ್ಮೆ ಅವರ ಶೈಲಿ ಹೊರಲಾರದೆಹೋಗಿದೆಯೆನಿಸಿದರೂ ಒಟ್ಟಿನಲ್ಲಿ ತುಂಬ ಕಸುವುಳ್ಳ ಭಾಷಾ ಪ್ರಯೋಗ ಈ ಕೃತಿಯಲ್ಲಿದೆ.

೮

ಅನುವಾದಿತ ಹಾಗೂ ಪತ್ತೇದಾರಿ ಕಾದಂಬರಿಗಳನ್ನು ಕುರಿತು ನಾನಿಲ್ಲಿ ಪ್ರಸ್ತಾಪಿಸಿಲ್ಲ; ಅವು ಸಮೀಕ್ಷಣೀಯವಲ್ಲವೆಂದು ನನ್ನ ಅಭಿಪ್ರಾಯವಲ್ಲ. ಗೊರೂರ್, ಆನಂದ, ದೇಜಗೌ, ನಿರಂಜನ, ತರಾಸು, ಕಟ್ಟೀಮನಿ, ನಾರಾಯಣ ಸಂಗಮ,

---

1. ಅದೇ. ಪು. ೧೦೫.
2. ಪೂರ್ಣಚಂದ್ರ ತೇಜಸ್ವಿ–ಸ್ವರೂಪ, ಪು. ೧೯.

ಅಹೋಬಲ ಶಂಕರ, ಗೋಪಾಲಕೃಷ್ಣ ಅಡಿಗ, ಎಂ. ವಿ. ಸೀತಾರಾಮಯ್ಯ, ಕೆ. ವೆಂಕಟರಾಮಪ್ಪ, ಮತ್ತೂರು ಕೃಷ್ಣಮೂರ್ತಿ, ಮ. ಸು. ಕೃಷ್ಣಮೂರ್ತಿ, ಬಿ. ಪುಟ್ಟಸ್ವಾಮಯ್ಯ, ಎಸ್. ಅನಂತನಾರಾಯಣ, ಎಚ್. ಎಲ್. ನಾಗೇಗೌಡ, ವೀರಭದ್ರ, ಡಿ. ವಿ. ರಾಘವೇದ್ರ, ಎಂ. ಕೇಶವಭಟ್, ಎಚ್. ವಿ. ಸಾವಿತ್ರಮ್ಮ, ಚಿ. ನ. ಮಂಗಳ ಮುಂತಾದ ವಿದ್ವಾಂಸರು ಭಾರತೀಯ ಹಾಗೂ ಭಾರತೇತರ ಭಾಷೆಗಳ ಸುಪ್ರಸಿದ್ಧ ಕಾದಂಬರಿಗಳನ್ನು ಅನುವಾದಿಸಿ ಕನ್ನಡದ ಕಣಜವನ್ನು ಶ್ರೀಮಂತಗೊಳಿಸಿದ್ದಾರೆ. ಆದರೆ ಇದೇ ಮಾತನ್ನು ಪತ್ತೇದಾರಿ ಕಾದಂಬರಿಗಳ ಬಗ್ಗೆ ಹೇಳುವುದು ಸಾಧ್ಯವಿಲ್ಲ. ಸ್ವತಂತ್ರ ವಿಶಿಷ್ಟತೆಯಿಂದ ಕೂಡಿದ ಸಮರ್ಥ ಹಾಗೂ ಕಲಾಪೂರ್ಣ ಪತ್ತೇದಾರಿ ಕೃತಿ ಒಂದೇ ಒಂದಾದರೂ ನನಗೆ ತಿಳಿದಮಟ್ಟಿಗೆ ಇಲ್ಲ. ದಿವಂಗತ ರಾಮಮೂರ್ತಿಯವರು ಈ ಬಗ್ಗೆ ಸ್ವಲ್ಪ ಪ್ರಯತ್ನ ನಡೆಸಿದ್ದುಂಟು. ಉಳಿದವರ ಕೃತಿಗಳಲ್ಲಿ ನಮಗೆ ಕಾಣುವುದು ಕೇವಲ ಅಶ್ಲೀಲ ಮೀಮಾಂಸೆ; ಕಳ್ಳ ಸರಕುಗಳ ಕಲಾರಹಿತಪ್ರದರ್ಶನ.

ಮೇಲಿನ ಸಮೀಕ್ಷೆ ಸುಸಂಪೂರ್ಣವಲ್ಲ ಎಂಬುದರ ನಿಚ್ಚಳ ಅರಿವು ನನಗಿದೆ. ಕೆಲವು ಲೇಖಕರ ಹಾಗೂ ಕೃತಿಗಳ ಸಾಫಲ್ಯ ವೈಫಲ್ಯಗಳ ಬಗ್ಗೆ ನಿರ್ದಿಷ್ಟವಾಗಿ ಸ್ಪಷ್ಟವಾಗಿ ಏನನ್ನೂ ಹೇಳುವುದು ಸಾಧ್ಯವಾಗಿಲ್ಲ. ವಿಸ್ತಾರಭಯದಿಂದ ಕೆಲವನ್ನು ಹೆಸರಿಸಿಯೇ ತೃಪ್ತಿಗೊಳ್ಳಬೇಕಾಗಿದೆ. ಕೊನೆ ಕೊನೆಯ ಭಾಗ ಕೇವಲ ಹೆಸರಿನ ಪಟ್ಟಿಯಂತೆ ಕಾಣಲೂಬಹುದು. ಅಂಥವರಿಗೆ ಸರಿಯಾದ ನ್ಯಾಯ ದೊರೆತಿಲ್ಲವೆಂದು ಅನ್ನಿಸಲೂ ಬಹುದು. ಆದರೂ ಚಿರಂತನ ಮೌಲ್ಯವುಳ್ಳವುಗಳೆಂದು ನನಗೆ ಅನ್ನಿಸಿದ ಪ್ರಮುಖ ಕೃತಿಗಳನ್ನು ಈ ಪ್ರಬಂಧದ ಹಾಗೂ ನನ್ನ ಇತಿಮಿತಿಯಲ್ಲಿ ಕೆಲಮಟ್ಟಿಗಾದರೂ ವಿವೇಚಿಸಲು ಪ್ರಯತ್ನಿಸಿದ್ದೇನೆ. ಇದರಿಂದ ಧ್ವನಿತವಾಗುವುದು ಇಷ್ಟು : ಮೊದಲೇ ಹೇಳಿದ ಮಾತನ್ನು ಕೊನೆಯಲ್ಲೂ ಹೇಳುವುದಾದರೆ, ಸಂಖ್ಯಾಬೃಹತ್ತಿಗೆ ತಕ್ಕಂತೆ ಗುಣಮಹತ್ವದ ಕಾದಂಬರಿಗಳು ಅಧಿಕ ಸಂಖ್ಯೆಯಲ್ಲಿ ಬೆಳೆಯಲಿಲ್ಲವಾದರೂ ಇರುವಷ್ಟರ ಮಟ್ಟಿಗೂ ನಾವು ಯಾರಿಗೂ ತಲೆ ತಗ್ಗಿಸಬೇಕಾಗಿಲ್ಲ. 'ಮಲೆಗಳಲ್ಲಿ ಮದುಮಗಳು', 'ಗ್ರಾಮಾಯಣ', 'ಅಳಿದಮೇಲೆ', 'ಆಳ ನಿರಾಳ', 'ಸಂಸ್ಕಾರ', 'ವಂಶವೃಕ್ಷ', 'ತಬ್ಬಲಿಯು ನೀನಾದೆ ಮಗನೆ' ಮುಂತಾದ ಕಾದಂಬರಿಗಳು ನಮ್ಮ ಹೆಮ್ಮೆಗೆ ಕೋಡು ಮೂಡಿಸುತ್ತವೆ. ವಸ್ತುವಿನ ಆಯ್ಕೆಯಲ್ಲಿ, ತಂತ್ರದಲ್ಲಿ, ನಿರೂಪಣೆಯ ನಾವೀನ್ಯತೆಯಲ್ಲಿ ಭಾಷೆಯ ಬಳಕೆಯಲ್ಲಿ, ಬುದ್ಧಿಶಕ್ತಿ ಮತ್ತು ಪ್ರತಿಭಾಶಕ್ತಿಗಳ ಸಮ್ಮಿಲನದಲ್ಲಿ ಇಂದಿನ ಹೊಸಪೀಳಿಗೆ ಹೊಸ ಹೊಸ ಪ್ರಯೋಗಗಳನ್ನು ಶ್ರದ್ಧಾಪೂರ್ವಕವಾಗಿ ಮಾಡುತ್ತಿದ್ದಾರಾದ್ದರಿಂದ ಕನ್ನಡ ಕಾದಂಬರಿಯ ಭವಿಷ್ಯ ಇನ್ನು ಮುಂದೆಯೂ ಆಶಾದಾಯಕವಾಗಿಯೇ ಇದೆಯೆಂಬುದರಲ್ಲಿ ಯಾವ ಸಂಶಯವೂ ಇಲ್ಲ.

ನಾಡವರು ನಾವು ಕರುನಾಡವರು
ನಾವು ಹಿರಿನಾಡವರು !

*   *   *   *

ಕಲ್ಲಮೇಣವಗೈದು ಬೆಳ್ವಬಸದಿಯ ಕೊರೆದು
ಭೂಕಿರೀಟಗಳೆನಿಪ ಗುಡಿಗೋಪುರವ ನಿಲಿಪ.

ಮನೆಮನೆಯ ದೀಪದೊಲು ಬೆಳಗಿ ವಚನದ ಸಾಲು
ಮುಗಿಲದೀವಿಗೆ ಹೋಲ್ವ ಹಿರಿಹಾಡು ಕತೆ ಹೇಳ್ವ.

ವಿಶ್ವಮಾತೆಗೆ ಮಣಿದು ಭಾರತಕೆ ಕೈಮುಗಿದು
ಹೆತ್ತಾಯಿ ಕನ್ನಡಕೆ ಬಾಳಕಾಣಿಕೆಯೀವ.

—ರಸಿಕರಂಗ

ಮಿರ್ಜಿ ಅಣ್ಣಾರಾಯ

ಮಕ್ಕಳ ಸಾಹಿತ್ಯ

೧

'ಪ್ರಬುದ್ಧ ಕರ್ಣಾಟಕ'ವು ಕ್ರಿ.ಶ. ೧೯೪೩ರಲ್ಲಿ ತನ್ನ ಬೆಳ್ಳಿಯ ಸಂಚಿಕೆಯನ್ನು ಕನ್ನಡ ನಾಡಿಗೆ ನೀಡಿತು. ಆಗ ಕನ್ನಡ ಸಾಹಿತ್ಯದ ವಿವಿಧ ಮುಖಗಳ ಸಮೀಕ್ಷೆಯನ್ನು ವಿದ್ವಾಂಸರಿಂದ ಮಾಡಿಸಲಾಯಿತು. ಅಂದು ಏಕಾಂಕ ನಾಟಕ, ಹೊಸಗನ್ನಡ ಗದ್ಯ, ಕಾದಂಬರಿಗಳು, ಸಣ್ಣ ಕತೆಗಳು, ನಾಟಕಗಳು, ಜೀವನ ಚರಿತ್ರೆ–ಹೀಗೆ ಕೆಲವು ವಿಭಾಗಗಳ ಸಮಾಲೋಚನೆಯು ನಡೆಯಿತು. ಆದರೆ ಈ ಚಿನ್ನದ ಸಂಚಿಕೆಯ ಪ್ರಕಟಣೆಯ ಕಾಲದಲ್ಲಿ ಅಂದಿನ ಗಾತ್ರದಲ್ಲಿ ಕನ್ನಡ ಸಾಹಿತ್ಯದೇವಿಯ ಅಂಗಗಳು ಬಡಕಲಾಗಿ ಉಳಿದಿಲ್ಲ. ಅವು ಪರಿಪುಷ್ಟವಾಗಿ, ಸುಂದರವಾಗಿ ಬೆಳೆದಿವೆ. ಇಂದು ಕನ್ನಡ ಸರಸ್ವತಿ ಚಿನ್ನದ ತೇರನ್ನೇರಿದ್ದಾಳೆ, ರಾಜ್ಯಲಕ್ಷ್ಮಿಯೊಡನೆ ಪಟ್ಟವನ್ನೇರಲು ಮುನ್ನಡೆದಿದ್ದಾಳೆ. ಅಂದು ಸಮೀಕ್ಷೆಗೂ ಒಳಪಡದ ಹೊಸಗನ್ನಡ ಕಾವ್ಯಶ್ರೀಯು ಭಾರತ ಮಾತೆಯ ಸಿರಿಮುಡಿಯನ್ನಲಂಕರಿಸಿ, ಭಾರತೀಯ 'ಜ್ಞಾನ ಪೀಠ'ದಲ್ಲಿ ಐಶ್ವರ್ಯದಿಂದ ಪೂಜೆಗೊಳ್ಳುತ್ತಿದ್ದಾಳೆ; ಕನ್ನಡನಾಡ ರಾಣಿಗೆ ಸುವರ್ಣ ಕಿರೀಟವನ್ನು ತೊಡಿಸಿದ್ದಾಳೆ. ಈ ಎಲ್ಲ ವೈಭವದ, ರಾಷ್ಟ್ರಮನ್ನಣೆಯ, ಜಗನ್ಮಾನ್ಯತೆಯ ಸ್ಥಾನವನ್ನು ಕನ್ನಡ ರಸದಧಿದೇವಿಯು ಪಡೆಯಲು, ಪಟ್ಟ ಕಷ್ಟ ಎಷ್ಟು? ಮಾಡಿದ ತಪಸ್ಸು ಎಂಥದು? ನೀಡಿದ ಕಾಣಿಕೆ ಏನು? ಇವೆಲ್ಲವುಗಳ ಚಿತ್ರವನ್ನು ಇಂದಿನ ಈ ಪ್ರಬುದ್ಧ ಕರ್ಣಾಟಕದ ಚಿನ್ನದ ಸಂಪುಟವು ವ್ಯಕ್ತಗೊಳಿಸಲಿದೆ. ಆ ಚಿತ್ರದ ಒಂದು ರೇಖೆಯಿದು: ಕಳೆದ ಇಪ್ಪತ್ತೈದು ವರ್ಷಗಳ ಕನ್ನಡ ಮಕ್ಕಳ ಸಾಹಿತ್ಯದ ಸಮೀಕ್ಷೆಯು.

ಲೋಕದಲ್ಲಿ ಸಾಹಿತ್ಯ ಮೊಟ್ಟ ಮೊದಲು ಜನಿಸಿದ್ದು, ಕಾವ್ಯರೂಪದಲ್ಲಿ. ಅದೂ ಮಕ್ಕಳ ಲಾಲಿಯ ರೂಪದಲ್ಲಿ. ಅದರಿಂದ ಸಾಹಿತ್ಯ ಪ್ರಾರಂಭವಾದುದು ಮಕ್ಕಳ ಸಾಹಿತ್ಯದಿಂದಲೇ ಎಂದು ಹೇಳಿದರೆ ಅತಿಶಯೋಕ್ತಿಯೇನಲ್ಲ. ಬಾಯಿ ಮಾತಿನಲ್ಲಿಯೇ ಇನ್ನೂ ವಾಙ್ಮಯದ ಅವಸ್ಥೆಯಿದ್ದಾಗ ಅಜ್ಜಿ–ಅಜ್ಜಂದಿರ ಕಥೆ–ಹಾಡುಗಳೇ ಸಾಹಿತ್ಯ ತಾನೆ? ಅವೇ ಮುಂದೆ ಜಾನಪದ ಕಥೆ, ಲೋಕಗೀತಗಳೆಂದು ಪ್ರಸಿದ್ಧವಾದುವು. ಇವು ಮುಂದೆ ಪಂಚತಂತ್ರದಂಥ ಕಥಾಸಂಕಲನಗಳಿಗೆ ಮೂಲವೆನಿಸಿದುವು. ಮುಂದಿನ

ಕಾಲದಲ್ಲಿ ತತ್ವ, ಶಾಸ್ತ್ರ, ಕಾವ್ಯ, ನಾಟಕಗಳ ರೂಪದಲ್ಲಿ ಸಾಹಿತ್ಯವು ವಿಕಸಿತ ಗೊಳ್ಳುತ್ತ ನಡೆದಾಗ ಮಕ್ಕಳ ಸಾಹಿತ್ಯದ ಕಡೆಗೆ ಜನಾಂಗದ ದೃಷ್ಟಿಯು ಹರಿಯಲಿಲ್ಲ. ಆಗ ಅಜ್ಜಿಯ ಕಥೆ–ಹಾಡುಗಳ ರೂಪದಲ್ಲಿಯೇ ಅವರ ಸಾಹಿತ್ಯ ಉಳಿದು ಬಂತು.

ಮುಂದೆ ಮಕ್ಕಳೇ ಭಾವೀ ಜನಾಂಗ; ರಾಷ್ಟ್ರದ ಆಧಾರ–ಎಂಬ ವಿಚಾರ ಕ್ರಾಂತಿಯು ಉದ್ಭವಿಸಿದಾಗ ಸಾಹಿತ್ಯದಲ್ಲಿ ಅವರಿಗಾಗಿಯೂ ಒಂದು ವಿಭಾಗ ಅವಶ್ಯ ವೆಂದು ವಿಚಾರವಂತರಿಗೆ ತೋರಿತು. ಅದರಿಂದ ಮಕ್ಕಳ ಸಾಹಿತ್ಯ ಮತ್ತೆ ತಲೆಯೆತ್ತಿತು. ಮಕ್ಕಳ ಸಾಹಿತ್ಯ ನಿರ್ಮಾಣವಾಯಿತು. ಅದರಲ್ಲೂ ಶಿಕ್ಷಣಕ್ಷೇತ್ರದಲ್ಲಿ ಹೊಸ ಹೊಸ ಶೋಧಗಳು ನಡೆದುವು. ಮಕ್ಕಳ ಮನೋವೃತ್ತಿಯ ಅಭ್ಯಾಸ, ವ್ಯಾಸಂಗಗಳು ಮುಂದರಿದವು. ಶಿಕ್ಷಣ ತತ್ವಗಳು ಪಲ್ಲಟಗೊಂಡುವು. ಇವೆಲ್ಲವುಗಳ ಪರಿಣಾಮವೂ ಮಕ್ಕಳ ಸಾಹಿತ್ಯದ ಮೇಲೆ ಆಗದೆ ಇರಲಿಲ್ಲ. ಈ ಒಂದು ಸಂಕ್ರಮಣಾವಸ್ಥೆಯು ಕಳೆದ ಇಪ್ಪತ್ತೈದು ವರ್ಷಗಳಲ್ಲಿಯೇ ಉಂಟಾದುದು ಹೆಚ್ಚಾಗಿ ನಮ್ಮ ಅರಿವಿಗೆ ಬರುತ್ತದೆ.

ಇತ್ತಿತ್ತಲಾಗಿ ಪಠ್ಯಪುಸ್ತಕಗಳ ರಾಷ್ಟ್ರೀಕರಣ ವಿಚಾರವೊಂದು ತಲೆಯೆತ್ತಿತು. ಅದರ ಪರಿಣಾಮವಾಗಿ ಮೈಸೂರು ರಾಜ್ಯದಲ್ಲಿ ರಾಜ್ಯ ಶಿಕ್ಷಣ ಸಂಶೋಧನ ಸಂಸ್ಥೆಯು ರೂಪುಗೊಂಡಿತು. ಅದು ಶಾಸ್ತ್ರೀಯ ರೀತಿಯಿಂದ ಮಕ್ಕಳಿಗೆ ಪಠ್ಯಪುಸ್ತಕಗಳನ್ನು ರಚಿಸಲು ಪ್ರಾರಂಭಿಸಿತು. ಅದರ ಜೊತೆಗೇನೇ ಭಾರತ ಸರಕಾರದ ನೆರವಿನಿಂದ ಕನ್ನಡ ಮಕ್ಕಳ ಸಾಹಿತ್ಯ ರಚನೆಗೂ ಕೈಹಾಕಿತು. ಅದನ್ನು ಯಶಸ್ವಿಯಾಗಿ ಸಾಧಿಸಲೆಂದು ಈ ಹತ್ತು ವರ್ಷಗಳ ಅವಧಿಯಲ್ಲಿ ಅದು ಮೂರು ಮಕ್ಕಳ ಸಾಹಿತ್ಯ ರಚನಾಲಯ ಗಳನ್ನೂ ನಡೆಯಿಸಿತು. ಅವು ಕ್ರಿ. ಶ. ೧೯೬೦, ೬೧, ೬೨ ಈ ವರ್ಷಗಳಲ್ಲಿ ನಡೆದುವು. ಬೆಂಗಳೂರಿನಲ್ಲಿ, ನಾಡಿನ ವಿವಿಧ ಭಾಗಗಳಿಂದ ಲೇಖಕರನ್ನು–ಹೆಚ್ಚಾಗಿ ಪ್ರಾಥಮಿಕ ಶಿಕ್ಷಣಕ್ಷೇತ್ರದಲ್ಲಿ ದುಡಿಯುತ್ತಿರುವವರನ್ನು–ತಿಂಗಳೊಪ್ಪತ್ತು ಇಟ್ಟುಕೊಂಡು ಈ ಸಾಹಿತ್ಯ ರಚನೆಯ ಸ್ವರೂಪವನ್ನು ಚರ್ಚಿಸಲಾಯಿತು. ಈ ಮೊದಲು ಮಕ್ಕಳ ಸಾಹಿತ್ಯದಲ್ಲಿ ಕೆಲಸ ಮಾಡಿದ ಹಿರಿಯ ಸಾಹಿತಿಗಳನ್ನೂ ಮನೋವಿಜ್ಞಾನಿಗಳನ್ನೂ ಆ ರಚನಾಕೂಟಗಳಿಗೆ ಸಂದರ್ಶನಕ್ಕೆಂದು ಕರೆಯಲಾಯಿತು. ವಿಚಾರವಿನಿಮಯವನ್ನು ಏರ್ಪಡಿಸಿತು. ಅಲ್ಲಿಯೇ ಇದ್ದು ಮಕ್ಕಳ ಸಾಹಿತ್ಯ ರಚನೆಗೆ ಒಂದು ತಳಪಾಯವನ್ನು ನಿರ್ಮಿಸಲು ಸೂಚಿಸಿತು. ಅದರಂತೆ ಆಯಾ ಲೇಖಕರು ಆ ಅವಧಿಯಲ್ಲಿ ಮಕ್ಕಳ ಸಾಹಿತ್ಯವನ್ನು ನಿರ್ಮಿಸಿದರು; ಅದನ್ನು ವಿದ್ಯಾ ಸಂಶೋಧನ ಸಂಸ್ಥೆಯು ಪ್ರಕಟಿಸುತ್ತ ಬಂತು. ಹೀಗೆ ಕನ್ನಡ ನಾಡಿನಲ್ಲಿ ಮಕ್ಕಳ ಸಾಹಿತ್ಯ ರಚನೆಗೆ ಒಂದು ಪ್ರೇರಣೆಯು ಈ ಅವಧಿಯಲ್ಲಿಯೇ ದೊರೆಯಿತು.

ಈ ರಚನಾಲಯಗಳಲ್ಲಿ ಮಕ್ಕಳ ಸಾಹಿತ್ಯ ರಚನೆಯನ್ನು ಮಾಡುವವರ ಜೊತೆಗೆ ಮಕ್ಕಳ ಸಾಹಿತ್ಯ ರಚನೆಗೆ ಬೇಕಾಗುವ ಮೂಲ ಸಾಮಗ್ರಿಯನ್ನು ಕೆಲಮಟ್ಟಿಗೆ ಸಿದ್ಧ ಗೊಳಿಸಿಕೊಳ್ಳಲಾಯಿತು. ಮಕ್ಕಳೆಂದರೆ ಯಾರು? ಹುಟ್ಟಿದಾಗಿನಿಂದ ಹದಿನೈದು ಹದಿನಾರು ವರ್ಷಗಳ ವರೆಗೆ ಇರುವವರೆಲ್ಲರೂ ಮಕ್ಕಳೇ ಅಲ್ಲವೆ? ಇಂಥವರಲ್ಲಿ, ನಾವು

ರಚಿಸುವ ಮಕ್ಕಳ ಸಾಹಿತ್ಯ ಯಾರಿಗಾಗಿ?—ಇತ್ಯಾದಿ ಪ್ರಶ್ನೆಗಳು ಉದ್ಭವಿಸುವುದು ಸ್ವಾಭಾವಿಕ. ಆಗ ಮಕ್ಕಳ ವಯೋವಾರ ವರ್ಗೀಕರಣದ ಆವಶ್ಯಕತೆಯು ಕಂಡು ಬಂದಿತು. ಅದರಂತೆ ೩ರಿಂದ ೫, ೫ರಿಂದ ೭, ೭ರಿಂದ ೯, ೯ರಿಂದ ೧೩ ಮತ್ತು ಹದಿನಾಲ್ಕರಿಂದ ಮುಂದಿನವರು ಎಂದು ಸಾಮಾನ್ಯವಾಗಿ ಐದು ಗುಂಪುಗಳಾಗುವವು. ಇನ್ನು ಆಯಾ ವಯಸ್ಸಿನ ಮಕ್ಕಳ ಮಾನಸಿಕ ಸ್ಥಿತಿಯೂ ಭಿನ್ನ ಭಿನ್ನವಾದುದು. ಅವರ ಭಾವನೆ, ಕಲ್ಪನೆಗಳ ತರಗತಿಗಳು ಬೇರೆ ಬೇರೆಯಾಗುತ್ತವೆ. ಶಬ್ದ ಸಂಪತ್ತು, ಭಾಷೆಯ ಅವಸ್ಥೆಗಳಲ್ಲಿಯೂ ತರ-ತಮ ಅಂಶಗಳಿರುತ್ತವೆ. ಇವೆಲ್ಲವುಗಳನ್ನು ಗಮನಕ್ಕೆ ತಂದು ಮಕ್ಕಳ ಸಾಹಿತ್ಯಕ್ಕೆ ಆವಶ್ಯಕವಾದ ವಸ್ತುಗಳ ಆಯ್ಕೆ ಆಯಾ ವಯೋಮಿತಿಗೆ ಅನುಗುಣವಾದುದು—ಅದರಂತೆ ಪದಪಟ್ಟಿಗಳ ಸಿದ್ಧತೆ ಇವೆಲ್ಲ ಕಾರ್ಯಗಳು ಪ್ರಾರಂಭವಾದುವು. ಅವುಗಳಿಗೆ ತಕ್ಕ ಚಿತ್ರ ಸಂಯೋಜನೆಯ ಕಾರ್ಯವೂ ನಡೆಯಿತು. ಹೀಗಾಗಿ ಮಕ್ಕಳ ಸಾಹಿತ್ಯ ರಚನೆಗೆ ಕನ್ನಡ ನಾಡಿನಲ್ಲಿ ಒಂದು ಶಾಸ್ತ್ರೀಯ ಅಭ್ಯಾಸ ಕೂಟಗಳಾಗಿ ಆ ರಚನಾಲಯಗಳು ಪರಿಣಮಿಸಿದುವು. ಅವುಗಳಲ್ಲಿ ಭಾಗವಹಿಸಿ, ತಮ್ಮ ತಮ್ಮ ಸ್ಥಳಗಳಿಗೆ ಹೋದ ಲೇಖಕ ಶಿಕ್ಷಕರು ಮಕ್ಕಳ ಸಾಹಿತ್ಯ ರಚನೆಗೂ ತೊಡಗಿದರು. ಅವರ ಕೆಲಸಕ್ಕೆ ಕೇಂದ್ರ ಸರಕಾರದ ಮಕ್ಕಳ ಸಾಹಿತ್ಯ ಸ್ಪರ್ಧೆಯು ಇನ್ನಿಷ್ಟು ಪೋಷಕವೆನಿಸಿತು, ಪ್ರೋತ್ಸಾಹ ನೀಡಿತು.

ಇಲ್ಲಿ ಕನ್ನಡ ಮಕ್ಕಳ ಸಾಹಿತ್ಯರಚನೆಯಲ್ಲಿ ನಡೆದ ಇನ್ನೊಂದು ಚಟುವಟಿಕೆಯನ್ನೂ ನಾವು ಗಮನದಲ್ಲಿಡಬೇಕು. ಮೈಸೂರು ರಾಜ್ಯ ವಿದ್ಯಾಸಂಶೋಧನ ಸಂಸ್ಥೆಯು, ಹೀಗೆ ಮಕ್ಕಳ ಸಾಹಿತ್ಯರಚನೆಯಲ್ಲಿ ತರಬೇತಿ ಹೊಂದಿದ ಹಾಗೂ ಅನುಭವ ಪಡೆದ ಲೇಖಕರನ್ನು ಭಾರತದ ಬೇರೆ ಬೇರೆ ರಾಜ್ಯಗಳಿಗೂ ಪ್ರಮುಖ ಪಟ್ಟಣಗಳಿಗೂ ಕಳಿಸಿತು. ಅಲ್ಲಿ ಅವರು ಒಂದು ವಾರ ಇದ್ದು, ಸಂಚರಿಸಿ ಆಯಾ ಪ್ರದೇಶಗಳ ಬಗ್ಗೆ ಇಲ್ಲವೆ ಪಟ್ಟಣದ ಬಗ್ಗೆ ಕನ್ನಡ ಮಕ್ಕಳಿಗಾಗಿ ಒಂದು ಗ್ರಂಥವನ್ನು ರಚಿಸಿಕೊಡುವ ಯೋಜನೆಯನ್ನು ರೂಪಿಸಿತು. ಆ ಕೃತಿಗಳು ಸಾಮಾನ್ಯವಾಗಿ ೯ ರಿಂದ ೧೩ ವರ್ಷದ ವಯೋಮಿತಿಯವರಿಗಾಗಿ ಇರಬೇಕು. ಆ ಆ ಸ್ಥಳದ ಅಥವಾ ಪ್ರದೇಶದ ಬಾಲಕನಾಗಲಿ, ಬಾಲಿಕೆಯಾಗಲಿ ಅದನ್ನು ಹೇಳಿದಂತೆ ಇರಬೇಕು–ಎನ್ನುವ ತಂತ್ರವನ್ನು ಪಾಲಿಸಲಾಯಿತು. ಇದರಿಂದ ಮಕ್ಕಳ ಸಾಹಿತ್ಯರಚನೆಯ ಜೊತೆಗೆ ರಾಷ್ಟ್ರದಲ್ಲಿ ಭಾವೈಕ್ಯವನ್ನೂ ಕುದುರಿಸುವ ಕಾರ್ಯಕ್ಕೂ ಪ್ರೇರಣೆಯು ಉಂಟಾಯಿತು. ಇದು ಕ್ರಿ. ಶ. ೭೨-೭೩ನೆಯ ಶೈಕ್ಷಣಿಕ ವರ್ಷದಲ್ಲಿ ನಡೆಯಿತು. ಹೀಗಾಗಿ ಕನ್ನಡ ಮಕ್ಕಳ ಸಾಹಿತ್ಯದಲ್ಲಿ ಕೆಲವು ಒಳ್ಳೆಯಕೃತಿಗಳು ನಿರ್ಮಾಣವಾದುವು.

ಕನ್ನಡ ನಾಡಿನಲ್ಲಿ ಈ ಅವಧಿಯಲ್ಲಿ ಉಂಟಾದ ನವ ಜಾಗೃತಿ, ಶೈಕ್ಷಣಿಕ ಪ್ರಗತಿ, ಸಾಹಿತ್ಯಿಕ ಚಟುವಟಿಕೆಗಳಿಂದಾಗಿ ಅಲ್ಲಲ್ಲಿ ಮಕ್ಕಳ ಮಂಟಪಗಳೂ ಶಿಶುಸಾಹಿತ್ಯ ಮಾಲೆಗಳೂ ತಲೆಯೆತ್ತಿದುವು. ಹಲ-ಕೆಲವು ಪ್ರಕಾಶಕರೂ ಮಕ್ಕಳ ಸಾಹಿತ್ಯ ಪ್ರಕಟಣೆಗೆ ಮುಂದೆ ಬಂದರು. ಕೆಲವು ವಿದ್ಯಾಲಯಗಳು ಮಕ್ಕಳ ಸಾಹಿತ್ಯ

ಸಮ್ಮೇಳನ, ಮಕ್ಕಳ ಕೂಟಗಳನ್ನೂ ಏರ್ಪಡಿಸಿದರು. ಇವೆಲ್ಲ ಚಟುವಟಿಕೆಗಳಿಂದಾಗಿ ಕನ್ನಡ ಮಕ್ಕಳ ಸಾಹಿತ್ಯಕ್ಕೆ ಒಂದು ಸ್ವರೂಪ ನಿರ್ಮಾಣವಾಗುತ್ತ ಬಂತು ; ಆಗುತ್ತಲಿದೆ. ಅದಕ್ಕೆ ಕನ್ನಡ ಪತ್ರಿಕಾ ಪ್ರಪಂಚವೂ ಇತ್ತೀಚೆಗೆ ನೆರವಾಗಿದೆ. ಕೆಲವು ವಾರಪತ್ರಿಕೆ, ಮಾಸಪತ್ರಿಕೆಗಳು ಮಕ್ಕಳ ಸಾಹಿತ್ಯಕ್ಕಾಗಿ ಮಕ್ಕಳೇ ರಚಿಸಿದ ಕೃತಿಗಳ ಪ್ರಕಟಣೆಗಾಗಿ ಕೆಲವೊಂದು ಪುಟಗಳನ್ನು ಒದಗಿಸುತ್ತಲಿವೆ. ಇದರಿಂದ ಕನ್ನಡ ಮಕ್ಕಳ ಸಾಹಿತ್ಯ ರಚನೆಗೆ ಒಂದು ನವಚೈತನ್ಯವು ಉಂಟಾಗಿದೆ.

ಮಕ್ಕಳ ಸಾಹಿತ್ಯವು ಕನ್ನಡದಲ್ಲಿ ಪ್ರಾರಂಭದ ಅವಸ್ಥೆಯಲ್ಲಿರುವಾಗ ಅದನ್ನು ಶಿಶುಸಾಹಿತ್ಯ, ಬಾಲಸಾಹಿತ್ಯ, ಕಂದನ ಕಥೆಗಳು ಮೊದಲಾದ ಹೆಸರುಗಳಿಂದ ಕರೆಯುತ್ತ ಬಂದರು. ಈಗ ಈ ಕ್ಷೇತ್ರದಲ್ಲಿ ತಕ್ಕಷ್ಟು ಕೃಷಿಯಾಗಿರುವುದರಿಂದ ಈ ವಾಙ್ಮಯಕ್ಕೆ ಮಕ್ಕಳ ಸಾಹಿತ್ಯ ಎಂಬ ಹೆಸರು ಸ್ಥಿರವಾಗಿ ನಿಂತಿದೆ. ಅದರಂತೆ ಮಕ್ಕಳ ಸಾಹಿತ್ಯದ ಸ್ವರೂಪ, ಲಕ್ಷಣಗಳ ವಿಷಯದಲ್ಲಿಯೂ ವಿದ್ವಾಂಸರಲ್ಲಿ ಕೆಲವೊಂದು ನಿಶ್ಚಿತ ಕಲ್ಪನೆಗಳುಂಟಾಗುತ್ತಿವೆ. ಕನ್ನಡ ಮಕ್ಕಳ ಸಾಹಿತ್ಯದ ಜನಕರಲ್ಲೊಬ್ಬರಾದ ದಿ. ಪಂಜೆ ಮಂಗೇಶರಾಯರು ತಮ್ಮ ಒಂದು ಭಾಷಣದಲ್ಲಿ* "ಬಾಲ ಸಾಹಿತ್ಯ, ಈ ಪದವು ಕನ್ನಡದಲ್ಲಿ ತೀರ ಹೊಸದು ; ಅದು ಹುಟ್ಟಿ ಇನ್ನೂ ಹದಿನೈದು ವರ್ಷ ಕಳೆಯ ಲಿಲ್ಲ. ಆದರೂ ಕನ್ನಡ ಬಾಲ ಸಾಹಿತ್ಯವು ಕನ್ನಡ ಭಾಷೆಯ ಬೆಳವಣಿಗೆಯ ಬೆನ್ನು ಹಿಡಿದು ಬಹುಕಾಲದ ಹಿಂದಿನಿಂದ ಬಂದಿದೆ. ಮಕ್ಕಳಿಗೆ ಕಾಗೆ ಗುಬ್ಬಕ್ಕನ ಕಥೆ ಹೇಳದ ಕನ್ನಡ ತಾಯಿ ಇದ್ದಾಳೆ? ಗೋವಿನ ಹಾಡು ಕೇಳದ ಕನ್ನಡ ಮಗು ಉಂಟೆ? ಡೊಂಬತಿಯ ಲಾವಣಿ, ಎಲ್ಲಮ್ಮನ ಹಾಡು, ಚೆನ್ನಯ್ಯನ ಜಗಳ ಮೊದಲಾದ ಕಥೆಗಳಿಂದ ಎಷ್ಟು ಮಂದಿ ಕನ್ನಡಿಗರ ಬಾಲ್ಯ ಆಹ್ಲಾದಕರವೆನಿಸಲಿಲ್ಲ? ಇಂಥ ಅಜ್ಜಿ ಕಥೆಗಳು, ಪುಡಿ ಕಥೆಗಳು, ಪುಟ್ಟ ಕವನಗಳು, ತುಂಡು ಪದಗಳು, ಮುಖ್ಯವಾಗಿ ೪ ವರ್ಷಕ್ಕೆ ಮೇಲ್ಪಟ್ಟ ಮತ್ತು ೧೪ ವರ್ಷದ ಒಳಗಿನ ಮಕ್ಕಳಿಗೆ ಬೋಧಪ್ರದವಾಗುವಂತೆಯೂ ಮನೋರಂಜಕವಾಗುವಂತೆಯೂ ರಚಿತವಾದ ಸಾಹಿತ್ಯಭಾಗವು ಬಾಲಸಾಹಿತ್ಯವೆಂಬ ಹೆಸರಿನಿಂದ ಇತ್ತಲಾಗಿ ಪ್ರಸಿದ್ಧವಾಗಿದೆ." ಎಂದು ಕನ್ನಡ ಮಕ್ಕಳ ಸಾಹಿತ್ಯದ ಉಗಮದ ವಿಷಯದಲ್ಲಿ ಹೇಳಿದ್ದಾರೆ.

ಅದೇ ಸಂದರ್ಭದಲ್ಲಿ ಅವರು ಮಕ್ಕಳ ಕಥಾಸಾಹಿತ್ಯದ ಸ್ವರೂಪವನ್ನು ಕುರಿತು ಕೆಲವು ಮನನೀಯ ಮಾತುಗಳನ್ನು ಆಡಿರುವರು. ಅವುಗಳನ್ನು ಎರಡು ವಿಧವಾಗಿ ವಿಂಗಡಿಸಬಹುದಾಗಿದೆ. (೧) ಕಥೆಯ ವಿಷಯಕ್ಕೆ ಸಂಬಂಧಿಸಿದುದು. (೨) ಕಥೆ ಯನ್ನು ಹೇಳುವ ರೀತಿಗೆ ಸಂಬಂಧಿಸಿದುದು. ಕಥೆಯ ವಿಷಯವನ್ನು ಕುರಿತು ಹೇಳು ವುದಾದರೆ ಅದು ಮಕ್ಕಳ ಪ್ರಪಂಚಕ್ಕೆ ಒಳಪಟ್ಟುದಾಗಿರಬೇಕು. ಹೆಚ್ಚಾಗಿ ಅವರ

---

* ೧೯೩೪ರಲ್ಲಿ ಹೈದರಾಬಾದ ನಾಡಹಬ್ಬದಲ್ಲಿ ಮಾಡಿದ ಭಾಷಣ: 'ಬಾಲಸಾಹಿತ್ಯ' 'ಪಂಜೆಯವರ ನೆನಪಿಗಾಗಿ' ಪುಟ ೫೯, ಹರ್ಷ ಮುದ್ರಣ ಪ್ರಕಟಣಾಲಯ, ಪುತ್ತೂರು-೧೯೫೨.

ಇಂದ್ರಿಯಗಳಿಗೇ ಗ್ರಹಣವಾಗುವ ವಿಷಯಗಳಿರಬೇಕು. ಅದರ ಜೊತೆಗೆ ಮಕ್ಕಳ ಕಥೆಗಳಲ್ಲಿ ಒಂದಿಷ್ಟು ಅದ್ಭುತ ರಸವಿರಬೇಕು. ಮಕ್ಕಳಲ್ಲಿ ಕಲ್ಪನಾಶಕ್ತಿ ಹೆಚ್ಚು, ಆದನ್ನು ಹತೋಟಿಯಲ್ಲಿ ಇಡುವಷ್ಟು ಬುದ್ಧಿಯು ಬೆಳೆದಿರುವುದಿಲ್ಲ. ಅದ್ಭುತ ಕಥೆಯಿಂದ ಅವರ ಕಲ್ಪನಾಶಕ್ತಿಯು ಕಳೆಗೊಳ್ಳುತ್ತದೆ. ಅದರಿಂದ ಅವರು ಆನಂದವನ್ನು ಅನುಭವಿಸುತ್ತಾರೆ. ಹನುಮಂತ ಸಮುದ್ರ ಹಾರಿದ್ದು, ಕೃಷ್ಣ ಬೆಟ್ಟ ಎತ್ತಿದ್ದು ಇವು ಅವರಿಗೆ ಬಹು ಮೆಚ್ಚಿಗೆಯಾಗುತ್ತವೆ. ಮಕ್ಕಳ ಕಥೆಗಳಲ್ಲಿ ಧರ್ಮಬೋಧೆಯು ಸ್ಪಷ್ಟವಾಗಿರಕೂಡದು, ಅವು ಮಕ್ಕಳ ಮನಸ್ಸನ್ನೂ ರಂಜಿಸುವುದಿಲ್ಲ. ಈ ಕಾರಣದಿಂದಲೇ ಇಸೊಪನ ನೀತಿ ಕಥೆಗಳು ಮಕ್ಕಳಿಗೆ ಪ್ರಿಯವೆನಿಸುವುದಿಲ್ಲ. ಸದ್ಗುಣಗಳನ್ನು ಕಾರ್ಯರೂಪದಲ್ಲಿಯೇ ಪ್ರದರ್ಶಿಸುವ ವಸ್ತು ಸನ್ನಿವೇಶಗಳಿಂದ ಮಕ್ಕಳ ಕಥೆಗಳು ಕೂಡಿರಬೇಕು.

ಇನ್ನು ಮಕ್ಕಳ ಸಾಹಿತ್ಯದಲ್ಲಿ ಪ್ರಯೋಗಿಸತಕ್ಕ ಭಾಷೆಯು ಸುಲಭವಾಗಿರಬೇಕು, ಶಬ್ದಗಳು ಅವರ ಮನೆ ಮಾತುಗಳಾಗಿರಬೇಕು. ವಾಕ್ಯಗಳು ಉದ್ದವಾಗಿರದೆ ಚಿಕ್ಕ ಚಿಕ್ಕವಾಗಿರಬೇಕು. "ಸುಲಭ ಭಾಷೆ ಎಂದರೆ ಮಕ್ಕಳು ಮನಸ್ಸಿನಿಂದ ಚಿತ್ರಿಸತಕ್ಕ ಭಾಷೆ: 'ಸೀತೆ ದುಃಖಿಸಿದಳು'–ಎಂದು ಹೇಳುವುದಕ್ಕಿಂತ 'ಆಕೆ ಅಂಗೈಯ ಮೇಲೆ ಗಲ್ಲವನ್ನಿಟ್ಟು, ಮೂಗಿನಿಂದ ನಿಟ್ಟುಸುರು ಬಿಡುತ್ತ, ಕಣ್ಣೀರು ತುಂಬಿ ದುಃಖಿಸಿದಳು' ಎಂದು ವಿಸ್ತರಿಸಿದರೆ ದುಃಖದ ಚಿತ್ರವು ಮಕ್ಕಳ ಮನಸ್ಸಿಗೆ ಹೊಳೆಯುವುದು ಶಕ್ಯವಿದೆ." ಇನ್ನು ಮಕ್ಕಳ ಸಾಹಿತ್ಯದಲ್ಲಿ ಹೇಳಿಕೆಗಿಂತ ಸಂಭಾಷಣೆಯು ಅಧಿಕವಿರಬೇಕು. ಅದರಿಂದ ಮಕ್ಕಳು ಕಥೆಯ ಸನ್ನಿವೇಶದೊಡನೆ ಸಮರಸಗೊಳ್ಳುವರು. ಪಾತ್ರಗಳು ಜೀವಕಳೆ ತುಂಬಿ ಅವರ ಬಗೆಗಣ್ಣಿನೆದುರಿಗೆ ಕುಣಿಯುವವು. ಅದರಂತೆ ಮಕ್ಕಳ ಕಥೆಗಳಲ್ಲಿ ಪುನರುಕ್ತಿಯೂ ಆವಶ್ಯಕವಾಗಿದೆ. ಅದು ಅವರಿಗೆ ರೋಚಕವೆನಿಸುತ್ತದೆ. ಈ ಸಾಹಿತ್ಯದಲ್ಲಿ ವಿನೋದ, ಹಾಸ್ಯ, ಜಗಳ, ಕಾರ್ಯ, ಚಲನ ಇಷ್ಟು ಇರುವುದು ವಿಹಿತವಾಗಿದೆ. ಅದರಿಂದ ಅವರ ಸ್ವಾಭಾವಿಕ ಪ್ರವೃತ್ತಿಗಳು ಚೇತರಿಸುತ್ತವೆ, ಅರಳುತ್ತವೆ.

ಮಕ್ಕಳ ಸಾಹಿತ್ಯದಿಂದ ಇದನ್ನು ಸಾಧಿಸಬೇಕಾದರೆ ಅದರ ಲೇಖಕನಿಗೆ ಮಗುವಿನ ಮನಸ್ಸಿನ ಪರಿಜ್ಞಾನವಿರಬೇಕು. ಮಕ್ಕಳ ಮಾನಸಿಕ ವಿಕಾಸವನ್ನು ಅವನು ನಿರೀಕ್ಷಿಸಿರಬೇಕು. ಸಾಮಾನ್ಯವಾಗಿ ೨ ರಿಂದ ೫ ವರ್ಷ ಅವಧಿಯ ಮಕ್ಕಳನ್ನು ನಿರೀಕ್ಷಿಸಿದರೆ ಅವು ಹೆಚ್ಚಾಗಿ ಕ್ರಮದಿಂದ ತಂದೆಯನ್ನು ನೆಚ್ಚುತ್ತ ಹೋಗುವವು. ವಿವಿಧ ವಸ್ತುಗಳನ್ನು ನಿರೀಕ್ಷಿಸುವ ಪ್ರವೃತ್ತಿಯು ಉಂಟಾಗಿರುತ್ತದೆ. ಚಂದ್ರ, ಸೂರ್ಯ, ಹೂವುಗಳನ್ನು ಪ್ರೀತಿಸುತ್ತವೆ. ಮೂರನೆಯ ವರ್ಷಕ್ಕೆಂದರೆ, ಊಟದಲ್ಲಿ ಅಭಿರುಚಿಯು ಹುಟ್ಟಿ, ಎಲ್ಲವೂ ತನಗೇ ಬೇಕೆಂಬ ಅಭಿಲಾಷೆಯು ಇರುವುದು. ಮನೆಯಲ್ಲಿ ಹೊಸದಾಗಿ ಹುಟ್ಟಿದ ಕಿರಿಯ ಮಗುವಿನ ಮೇಲೆ ಆಸೂಯೆ, ಮುಂದಾಳಾಗುವ ಇಚ್ಛೆ, ಚಿತ್ರ ಪುಸ್ತಕದಲ್ಲಿ ಪ್ರೀತಿ, ಅಕ್ಕ–ಅಣ್ಣಂದಿರ ಅನುಕರಣೆ, ಸ್ವಂತ ಕೆಲಸ ಮಾಡಿಕೊಳ್ಳುವ ಆತುರ,

ಬೆಕ್ಕು ನಾಯಿಮರಿಗಳ ಕೂಡ ಆಟ, ಸಾಂಘಿಕ ಜೀವಿಯಾಗಲೂ ಸಹಜ ಪ್ರಯತ್ನ, ಅಕ್ಕನನ್ನು ಹೊಡೆದರೆ ಅವಳೊಡನೆ ತಾನೂ ಅತ್ತು ದುಃಖದಲ್ಲಿ ಸಮಪಾಲುಗೊಳ್ಳು ವುದು, ಉಣ್ಣುವವರ ಕೂಡ ಉಣ್ಣಲಿಕ್ಕೆ ಬರುವುದು, ಅವರಂತೆಯೇ ಕೂಡಲಿಕ್ಕೆ ಯತ್ನಿಸು ವುದು; ತನ್ನ ಕೂಡ ಬೇರೆಯುವವರನ್ನೇ ಪ್ರೀತಿಸುವುದು, ತಂದೆ-ತಾಯಿಗಳಿಗಿಂತ ಅಜ್ಜ-ಅಜ್ಜಿಯರನ್ನೇ ನೆಚ್ಚಿಕೊಂಡಿರುವುದು; ಓದು-ಬರೆಯುವ ನಟನೆ ಮಾಡುವುದು; ಅಕ್ಕನ ಕೂಡ ಶಾಲೆಗೆ ಹೋಗುವೆನೆಂದು ಅರ್ಧದಾರಿ ಹೋಗಿ ತಿರುಗಿ ಬರುವುದು; ಹಿರಿಯರು ಹೆದರಿಸುವುದರಿಂದ ಅಂಜುಗುಳಿಯಾಗುವುದು; ಅದರಿಂದ ಯಾವುದಕ್ಕೂ ಸಂಗಾತಿ ಬೇಕೆಂದು ಬಯಸುವ ಪ್ರವೃತ್ತಿ ಇರುವುದು; ಜೊತೆಯಲ್ಲಿ ನಡೆಯುವಾಗ ನಮ್ಮಷ್ಟು ಒತ್ತಡದಿಂದ ನಡೆಯಲು ಆಗದೆ ಅಳುತ್ತ ನಿಲ್ಲುವುದು; ಮನಬಿಚ್ಚಿ ಹೇಳಲಿಕ್ಕೆ ಧೈರ್ಯ ಸಾಲದು; ಹಿರಿಯರಲ್ಲಿ ಸ್ವಲ್ಪ ಬೇಸರ ಕಂಡರೂ ಹತ್ತಿರ ಹೋಗದೆ ಇರುವುದು— ಇವು ಸ್ಥೂಲವಾಗಿ ಈ ವಯೋಮಾನದ ಮಕ್ಕಳ ಮಾನಸಿಕ ಪ್ರವೃತ್ತಿಗಳಾಗಿವೆ. ಇವು ಗಳನ್ನು ಗಮನಿಸಿ ಆ ವಯಸ್ಸಿನವರಿಗಾಗಿ ಲೇಖಕರು ಕೃತಿಗಳನ್ನು ರಚಿಸಬೇಕಾಗುವುದು.

ಇದರಂತೆಯೇ ಆರು-ಏಳು ವರ್ಷ ವಯಸ್ಸಿನ ಮಕ್ಕಳಲ್ಲಿ ಬೇಡವೆಂದು ಹೇಳಿದ ಕೆಲಸಮಾಡುವ ಹಟವು ಕಂಡುಬರುವುದು. ಅದರಂತೆ ತಂಗಿ, ತಮ್ಮಂದಿರನ್ನು ಆಳುವ ಪ್ರವೃತ್ತಿ, ಅವರ ದೋಷಗಳನ್ನು ಎತ್ತಿ ಹೇಳುವ ಚಟ, ಹತ್ತರ ಇದ್ದೂ ಓಗೊಡದೆ ಇರುವ ತನ್ಮಯತೆ, ಉಡಿಗೆತೊಡಿಗೆಗಳಲ್ಲಿ ಓರಣವಿರದಿರುವ ಸ್ವಭಾವಗಳು ಇರುವು ದುಂಟು. ಮುಂದೆ ಏಳು-ಎಂಟನೆಯ ವಯಸ್ಸಿನ ಮಕ್ಕಳಲ್ಲಿ ತನ್ನದೇ ಆದ ವಸ್ತುವು ಇರಬೇಕೆಂಬ ಲವಲವಿಕೆಯು ಕಂಡುಬರುತ್ತದೆ. ಅವುಗಳ ಪ್ರವೃತ್ತಿಯು ಓದು-ಬರೆಹ ಕ್ಕಿಂತ ಕಾರ್ಯದಲ್ಲಿ ಹೆಚ್ಚಾಗುತ್ತದೆ. ಆಗ ಮಾನಸಿಕ ಚಂಚಲತೆಯು ಉಂಟಾಗಿ, ಅದನ್ನು ಪೂರೈಸಿಕೊಳ್ಳಲು ಸುಳ್ಳು ಹೇಳುವುದಕ್ಕೆ ಆರಂಭಿಸುವವು. ಈ ಕಾಲದಲ್ಲಿ ಮಕ್ಕಳಮೇಲೆ ಮನೆಯ ವಾತಾವರಣದ ಪ್ರಭಾವ ಬಿದ್ದದ್ದು ಕಂಡುಬರುತ್ತದೆ. ಏನಿದ್ದರೂ ಮಗುವು ಜಗತ್ತಿಗೆ ಹೊಸದು ಅಥವಾ ಅದಕ್ಕೆ ಹೊರಗಿನ ಜಗತ್ತು ಹೊಸದು. ಅದರಿಂದ ಮಗುವಿನ ಆತ್ಮಕ್ಕೂ ಬಾಹ್ಯಜಗತ್ತಿಗೂ ವ್ಯಾಪಾರ ನಡೆಯುತ್ತದೆ. ಮಕ್ಕಳ ಅಂತರಂಗವು ಹೊರಜಗತ್ತನ್ನು ಅರ್ಥಮಾಡಿಕೊಳ್ಳಲಿಕ್ಕೆ ಪ್ರಯತ್ನಿಸುತ್ತದೆ. ಇದೇ ಅದರ ಬೆಳವಣಿಗೆಯು. ಈ ಬೆಳವಣಿಗೆಯ ಕಾಲದ ಮಗುವಿನ ವರ್ತನೆಯ ಕಲ್ಪನೆಯು ಮಕ್ಕಳ ಸಾಹಿತ್ಯ ನಿರ್ಮಾತೃವಿಗೆ ಇರಬೇಕಾಗುತ್ತದೆ. ಕಟ್ಟಡ ಕಟ್ಟು ವವನಿಗೆ ಇಟ್ಟಿಗೆಯು ಇದ್ದಂತೆ ಮಕ್ಕಳಸಾಹಿತ್ಯ ರಚನೆಗೆ ಮಗುವಿನ ವರ್ತನೆಗಳು ಗಳು-ನಡೆವಳಿಕೆಗಳು-ಇರುತ್ತವೆ. ಈ ವರ್ತನೆಗಳು ಸ್ವಯಂಭುವಲ್ಲ; ಅದಕ್ಕೆ ಬೇರೆ ಸಂಗತಿಗಳೂ ಸುತ್ತಲಿನ ಸನ್ನಿವೇಶಗಳೂ ಕಾರಣವಾಗಿರುತ್ತವೆ. ಅದರಿಂದ ಅವು ಶಾಸ್ತ್ರೀಯವಾಗಿ ಹೀಗೆಯೇ ನಡೆಯುತ್ತವೆಂದು ನಿರ್ಧರಿಸಿ ಹೇಳಲಿಕ್ಕಾಗದು. ಆದರೂ ಮಕ್ಕಳಸಾಹಿತ್ಯ ನಿರ್ಮಿತಿಗೆ ಪಾರ್ಶ್ವಭೂಮಿಯೆಂದು ಕೆಲವು ಸಂಗತಿಗಳನ್ನು ಮಕ್ಕಳ ನಿರೀಕ್ಷಣೆಯಿಂದ ಕಲಿಹಾಕಬಹುದಾಗಿದೆ.

ಇಷ್ಟಾದಮೇಲೆ ಲೇಖಕನು ಮಕ್ಕಳ ಅನುಭವಕ್ಕೆ ಬರುವ ಪ್ರಸಂಗ, ಭಾವ, ವಸ್ತುಗಳಿಗೇನೇ ಪ್ರಾಮುಖ್ಯತೆಯನ್ನು ಕೊಟ್ಟು ಕೃತಿರಚನೆಗೆ ತೊಡಗುವನು. ಅದನ್ನು ಓದುವುದರಿಂದ ಮಗುವಿನ ಮನರಂಜನೆಯಾಗಬೇಕು; ಮಗುವು ನಾಗರಿಕ ನಡೆ–ನುಡಿಗಳನ್ನನುಸರಿಸಲು ನೆರವಾಗಬೇಕು; ಅದು ಮಗುವಿನ ಕುತೂಹಲಕ್ಕೆ ಅವಕಾಶವನ್ನು ಕೊಟ್ಟು, ಅವನ ವಿಚಾರಶಕ್ತಿಯನ್ನು ಬೆಳೆಯಿಸುವಂತಿರಬೇಕು. ಅದರಂತೆ ಸೌಂದರ್ಯಾಭಿರುಚಿಯನ್ನು ಹೆಚ್ಚಿಸುವ ಆವಶ್ಯಕತೆಯಿದೆ. ಈ ಸಾಹಿತ್ಯವು ದೇಶಾಭಿಮಾನ, ಸಮಾಜನಿಷ್ಠೆಗಳನ್ನು ಉಂಟುಮಾಡಿ ಬೆಳೆಯಿಸಬೇಕು. ಸೃಷ್ಟಿಕರ್ತನ ಅರಿವು ಹುಟ್ಟಬೇಕು. ಮಕ್ಕಳಲ್ಲಿ ಧೈರ್ಯ, ಸಾಹಸ, ಆತ್ಮವಿಶ್ವಾಸಗಳನ್ನು ಮೂಡಿಸಿ ಪೋಷಿಸಬೇಕು. ಅದರೊಡನೆಯೇ ಮಕ್ಕಳ ಭಾಷಾಶಕ್ತಿ, ರಚನಾತ್ಮಕಶಕ್ತಿಗಳನ್ನು ವಿಕಾಸಗೊಳಿಸಬೇಕು. ಮಕ್ಕಳ ಮಾನಸಿಕ ಒತ್ತಡವನ್ನು ಪರಿಹರಿಸಿ, ಸಮತೂಕದ ಮನಸ್ಸನ್ನು ನಿರ್ಮಿಸುವುದೂ ಸಹ ಮಕ್ಕಳಸಾಹಿತ್ಯದ ಗುರಿಗಳಲ್ಲಿಯೇ ಒಂದಾಗಿದೆ.

ಮಕ್ಕಳಸಾಹಿತ್ಯ ನಿರ್ಮಾತೃವು ತಾನು ಬರೆಯಬೇಕೆಂದಿರುವ ವಿಷಯದಲ್ಲಿ ಸಾಕಷ್ಟು ತಜ್ಞನಿರಬಹುದು. ಅಲ್ಲದೆ ವಿಷಯಸಂಗ್ರಹವನ್ನೂ ಬಹಳಷ್ಟು ಮಾಡಿಯಾನು. ಆದರೆ ತಾನು ಹೇಳುವ ಮಗುವಿಗೆ ಯಾವುದನ್ನೂ ಎಷ್ಟು ಹೇಳಿದರೆ ಸಾಕು–ಎನ್ನುವ ಪರಿಜ್ಞಾನವಿರದೆಹೋದರೆ ಆಗದು. ಅದಕ್ಕಾಗಿ ಲೇಖಕನು ಮಗುವನ್ನೇ ಕೇಂದ್ರವೆಂದು ತಿಳಿಯಬೇಕಾಗುತ್ತದೆ. ಅವನ ದೃಷ್ಟಿಯಿಂದ ಯಾವುದು ಮಹತ್ವ? ತಾನು ಹೇಳುವುದು ಅವನಿಗೆ ತಿಳಿದೀತೊ? ಹೇಳುವ ಕ್ರಮವೂ ಆಕರ್ಷಕವಾಗಿದೆಯೋ?–ಇವೆಲ್ಲ ಪ್ರಶ್ನೆಗಳಿಗೆ ಸಮರ್ಪಕವಾದ ಸಮಾಧಾನ ಲೇಖಕನಿಗೆ ಆಗುವಂತಿರಬೇಕು. ಆಗ ಅವನೂ ತತ್ವನಿರೂಪಣೆಗಿಂತ ಕಾರ್ಯದ ವಿವರಣೆಯೇ ತನ್ನ ಕೃತಿಯ ಜೀವಾಳವೆಂದು ಅರಿಯುವನು. ಕುತೂಹಲಕಾರಿಯಾಗಿ ಆರಂಭಿಸಿ ಸ್ವಾಭಾವಿಕರೀತಿಯಲ್ಲಿ–ನೈಸರ್ಗಿಕವಾಗಿ–ಮುಗಿಸುವನು.

ಇಷ್ಟಾಗಿಯೂ ಲೇಖಕನ ಮುಂದೆ ಮಕ್ಕಳಸಾಹಿತ್ಯದಲ್ಲಿ ಮಕ್ಕಳೇ ಪಾತ್ರವಾಗಿರಬೇಕೆ? ಪಶು-ಪಕ್ಷಿಗಳ ಪಾತ್ರದ ಸ್ವರೂಪವೆಂತಿರಬೇಕು? ಹಿರಿಯರ ಪಾತ್ರಗಳು ಬಂದರೆ ಹೇಗೆ ಬರಬೇಕು?–ಇವೇ ಮೊದಲಾದ ಪ್ರಶ್ನೆಗಳೂ ಸಹ ಉದ್ಭವಿಸುತ್ತವೆ. ಏನಿದ್ದರೂ ವಾಸ್ತವಿಕತೆಯನ್ನೂ ಮರೆಯದೆ, ಎದುರಿಗೆ ಮಕ್ಕಳಿದ್ದಾರೆಂದು ಭಾವಿಸಿಯೇ ಕೃತಿರಚನೆಗೆ ಕೈಯಿಕ್ಕಬೇಕಾಗುತ್ತದೆ. ಅದನ್ನು ತಾನೇ ಗಟ್ಟಿಯಾಗಿ ಕೆಲವು ಸಲವಾದರೂ ಓದಬೇಕು. ಬರೆದಿಟ್ಟು ಕೆಲವುದಿನಗಳ ಮೇಲೆ ತಿರುಗಿ ಓದಬೇಕು. ಅನೇಕಸಲ ಓದಿ, ಪ್ರತಿಮಾಡಬೇಕು. ಆಮೇಲೆ ಅದು ಪ್ರಕಟಣೆಗೆ ತಕ್ಕುದಾಗುವುದು. ಚಿಕ್ಕವಾಕ್ಯ, ಚಿಕ್ಕವಾಕ್ಯ ವೃಂದಗಳು ಮಕ್ಕಳ ಸಾಹಿತ್ಯದ ಲಕ್ಷಣವಾಗಿವೆ. ಮಕ್ಕಳಿಗೆ ತಾಳ–ಲಯಗಳಲ್ಲಿ ಹೆಚ್ಚಿನ ಪ್ರೀತಿಯೆಂಬುದೂ ಗಮನಾರ್ಹವಾದುದು. 'ಸಮಯ ಸಿಕ್ಕಾಗ ಬರೆಯುವೆ' ಎನ್ನುವ ನಿರಾಸಕ್ತ ಸಾಹಿತಿಯ ಕಾರ್ಯವಿದಲ್ಲ. ಸತತ ಅಭ್ಯಾಸ, ಮಕ್ಕಳ ಸಹವಾಸ, ಮನನಗಳು ಇದಕ್ಕೆ ಬೇಕು. ಅದನ್ನೆಲ್ಲ ಅಳವಡಿಸಿಕೊಂಡು, ಮಕ್ಕಳಸಾಹಿತ್ಯ ನಿರ್ಮಿತಿಗೆ ತೊಡಗಬೇಕು.

ಸ್ಥೂಲವಾಗಿ, ಮಕ್ಕಳ ಸಾಹಿತ್ಯ ಸ್ವರೂಪದ ಈ ಕಲ್ಪನೆಯನ್ನು ಇಟ್ಟುಕೊಂಡು, ನಮ್ಮ ಕಳೆದ ಇಪ್ಪತ್ತೈದು ವರ್ಷಗಳ ಮಕ್ಕಳ ಸಾಹಿತ್ಯವನ್ನು ಸಮಾಲೋಚಿಸಲು ತೊಡಗೋಣ. ಈ ಅವಧಿಯಲ್ಲಿ ಕನ್ನಡನಾಡಿನಲ್ಲಿ ಮಕ್ಕಳ ಸಾಹಿತ್ಯವೂ ಹುಲುಸಾಗಿ ಬೆಳೆದಿದೆ. ಅದನ್ನೆಲ್ಲ ಒಬ್ಬ ಲೇಖಕನು ಅವಲೋಕಿಸಿ, ಸಮಾಲೋಕನ ಮಾಡುವುದು ಕಷ್ಟಸಾಧ್ಯವೇ ಸರಿ. ಆದರಿಂದ ಇದರಲ್ಲಿ ಕೊರತೆಯಿರುವುದು ಸ್ವಾಭಾವಿಕವೇ ಆಗಿದೆ. ಅದನ್ನು ಬಲ್ಲವರು ಮನಗಂಡು ಮುಂದಿನ ವಿಷಯವನ್ನು ಅವಲೋಕಿಸ ಬೇಕೆಂದು ಕೋರುವೆ.

೩

ಕನ್ನಡ ಮಕ್ಕಳ ಸಾಹಿತ್ಯವು ಕನ್ನಡಸಾಹಿತ್ಯದ ಒಂದಂಗವಲ್ಲ; ಅದೊಂದು ಸ್ವತಂತ್ರಸೃಷ್ಟಿ. ಹೊಸಗನ್ನಡ ಸಾಹಿತ್ಯದಲ್ಲಿರುವಂತೆಯೇ ಈ ಮಕ್ಕಳ ಸಾಹಿತ್ಯ ದಲ್ಲಿಯೂ ಕಾವ್ಯ, ನಾಟಕ, ಕಥೆ, ಕಾದಂಬರಿ, ವಿಚಾರಸಾಹಿತ್ಯ ಇವೇ ಮೊದಲಾದ ವಿವಿಧ ಅಂಗಗಳಿವೆ. ಈ ಎಲ್ಲ ಅಂಗಗಳು ಸುಪುಷ್ಟವಾಗಿಯೂ ಸುಂದರವಾಗಿಯೂ ಬೆಳೆದಿರಲಿಕ್ಕಿಲ್ಲ, ಆ ಮಾತು ಬೇರೆ. ಆದರೆ ಈ ಎಲ್ಲ ಅಂಗಗಳ ಸಮಾಲೋಚನೆಯೂ ಇಲ್ಲಿ ಆಗುವ ಆವಶ್ಯಕತೆಯು ಇದೆ. ಅದರೊಡನೆಯೇ ಕನ್ನಡಮಕ್ಕಳ ಸಾಹಿತ್ಯದ ಕಳೆದ ಕಾಲುಶತಮಾನದ ಸಮಗ್ರಬೆಳವಣಿಗೆ, ಅದು ನಡೆದುಬಂದ ದಾರಿ, ಅದು ಇಟ್ಟುಕೊಂಡ ದೃಷ್ಟಿ, ಅದರ ಮುನ್ನೋಟಗಳ ಮೇಲೆಯೂ ಬೆಳಕನ್ನು ಬೀರಬೇಕಾಗಿದೆ. ಆದರೆ ಇದಕ್ಕಿರುವ ಕೊರತೆಗಳೂ ತೊಂದರೆಗಳೂ ಬಹಳ. ಸಮಸ್ತ ಕನ್ನಡನಾಡಿನ ಮಕ್ಕಳ ಸಾಹಿತ್ಯ ಕೃತಿಗಳನ್ನೆಲ್ಲ ಕೂಡಿಹಾಕುವುದು ಬಹುಕಷ್ಟ ಸಾಧ್ಯ. ಅದೂ ಇಪ್ಪತ್ತೈದು ವರ್ಷಗಳಲ್ಲಿ—ಸುಮಾರು ಕ್ರಿ. ಶ. ೧೯೪೦ರಿಂದ ಈಚೆಗೆ ಪ್ರಕಟವಾದ—ಎಲ್ಲ ಗ್ರಂಥಗಳೂ ಒಂದೆಡೆಗೆ ಸಿಗುವುದು ಸಾಧ್ಯವಿಲ್ಲ. ಅವುಗಳ ಸಮಾಲೋಚನೆಯಂತೂ ದೂರವೇ ಉಳಿಯಿತು. ಆದರೂಕೂಡ ಪ್ರಬುದ್ಧಕರ್ಣಾಟಕ ತನ್ನ ಈ ಹೆಜ್ಜೆಗಳನ್ನು ಗುರುತಿಸಲು ಯತ್ನಿಸುವ ಕಾರ್ಯವೇನೋ ಸ್ತುತ್ಯವೇ ಆಗಿದೆ. ಅದನ್ನು ಕನ್ನಡನಾಡಿನ ಮೂಲೆಯಲ್ಲಿ ಕುಳಿತು, ಸಾಧ್ಯವಿದ್ದಷ್ಟು ಪೂರೈಸುವ ಪ್ರಯತ್ನವಿದಾಗಿದೆ. ಇದರಲ್ಲಿ ಕಂಡುಬರುವ ಕುಂದು—ಕೊರತೆಗಳು ನಮ್ಮ ಪ್ರಯತ್ನದಲ್ಲಿ ವ್ಯಕ್ತವಾದ ಕೊರತೆಗಳೇ ಹೊರತಾಗಿ, ಕನ್ನಡಮಕ್ಕಳ ಸಾಹಿತ್ಯದ ಕೊರತೆಗಳಲ್ಲವೆಂಬುದನ್ನು ಬಲ್ಲವರು ಗಮನಿಸಬೇಕು. ಅಂಥ ಸಹಾನುಭೂತಿಯನ್ನಿಟ್ಟು ಈ ಸಮಾಲೋಚನೆಯನ್ನು ಸ್ವೀಕರಿಸಬೇಕೆಂದು ಮತ್ತೊಮ್ಮೆ ಬೇಡಿಕೊಳ್ಳುವೆ.

ಇನ್ನು ಕಳೆದ ಇಪ್ಪತ್ತೈದು ವರ್ಷಗಳ ಕನ್ನಡಮಕ್ಕಳ ಸಾಹಿತ್ಯದ ಸಮಾಲೋಚನೆಯಲ್ಲಿ ಮೊದಲಸ್ಥಾನವು ಕನ್ನಡಮಕ್ಕಳ ಕಾವ್ಯಕ್ಕೆ ಮೀಸಲಾಗಿರು ವುದು ಸಮರ್ಪಕವಾಗಿದೆ. ಯಾಕೆಂದರೆ ಈ ಮಕ್ಕಳ ಸಾಹಿತ್ಯಸೃಷ್ಟಿಯಲ್ಲಿ ಸ್ವತಂತ್ರ ಪ್ರಜ್ಞೆಯನ್ನೂ ಅಭಿವ್ಯಕ್ತಿಯನ್ನೂ ವ್ಯಕ್ತಪಡಿಸಿದ ಅಂಗವು—ಇದಾಗಿದೆ. ಅದರಿಂದ

ಕನ್ನಡ ಹೃದಯದ ವಾಣಿಯು ಇಲ್ಲಿ ಮೂಡಿದೆ, ಮಿಡಿದಿದೆ. ಈ ವಿಭಾಗದಲ್ಲಿ ರಾಷ್ಟ್ರಕವಿ ಮೊದಲುಗೊಂಡು ಹಳ್ಳಿಯ ಹದಿನೈದು ವರ್ಷದ ಬಾಲಕನವರೆಗೂ ಎಲ್ಲಾ ಹಂತದ ಕವಿಗಳೂ ಮಕ್ಕಳಿಗಾಗಿ ಕವನಗಳನ್ನು ಈ ಅವಧಿಯಲ್ಲಿ ರಚಿಸಿದವರುಂಟು. ತಮ್ಮ ತಮ್ಮ ಹೃದಯವೀಣೆಯನ್ನು ನುಡಿಸಿದವರುಂಟು. ನಮ್ಮ ಕೈಗೆ ಸಿಕ್ಕ ಸುಮಾರು ಐವತ್ತು ಕವನಸಂಗ್ರಹಗಳಲ್ಲಿಯೇ ಅದೆಷ್ಟು ವೈವಿಧ್ಯವಿದೆ ! ಸ್ವಾರಸ್ಯವಿದೆ ! ಕನ್ನಡ ಮಕ್ಕಳ ಸಾಹಿತ್ಯದ ಸುವರ್ಣಯುಗದ ಸೂಚನೆಯೂ ಇದೆ.

ಕಳೆದ ಇಪ್ಪತ್ತೈದು ವರ್ಷಗಳಲ್ಲಿ ನಮ್ಮ ಭರತಖಂಡವೂ ಅದರೊಡನೆಯೇ ನಮ್ಮ ಕನ್ನಡನಾಡೂ ಅನೇಕ ಸ್ಥಿತ್ಯಂತರಗಳನ್ನು ಹೊಂದಿದೆ. ಮೊದಮೊದಲು ನಾವು ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದೆವು. ಅದನ್ನು ಪಡೆದೆವು. ಪಡೆದೆವೆನ್ನು ವಷ್ಟರಲ್ಲಿಯೇ ನಮ್ಮ ರಾಷ್ಟ್ರಪಿತನನ್ನು ಇಲ್ಲದಂತೆ ಮಾಡಿದೆವು. ಸ್ವಾತಂತ್ರ್ಯ ಸ್ವರಾಜ್ಯವಾಗಲೆಂದು ಪ್ರಜಾರಾಜ್ಯವನ್ನು ರೂಪಿಸಿಕೊಂಡುದೂ ಆಯಿತು. ಅದರಲ್ಲಿ ಕನ್ನಡನಾಡು ಒಂದಾಯಿತು. ನಾಡನ್ನೂ ರಾಷ್ಟ್ರವನ್ನೂ ಸಮೃದ್ಧಗೊಳಿಸುವ ಯತ್ನವು ನಡೆಯಿತು. ಅದರ ಮಧ್ಯದಲ್ಲಿಯೇ ನಮ್ಮ ನಾಯಕರನ್ನು ಅಗಲಿದೆವು. ನೆರೆ ಹೊರೆಯವರೊಡನೆ ಹೋರಾಡುವ ಪ್ರಸಂಗವೂ ಬಂತು. ಶಾಂತಿ ಬಂತು, ಶಾಂತಿದೂತ ಕಣ್ಮರೆಯಾದ. ಹೀಗೆ ಒಂದೋ ಎರಡೋ ಹಲವಾರು ಘಟನೆಗಳು ದೇಶದಲ್ಲಿ ಸಂಭವಿಸಿದುವು. ಅವೆಲ್ಲವೂ ನಮ್ಮ ಕವಿಗಳ ಹೃದಯಸಮುದ್ರವನ್ನು ಅಲ್ಲಕಲ್ಲೋಲ ಗೊಳಿಸಿದುವು. ಆಯಾಕಾಲದಲ್ಲಿ ಅದರ ತೆರೆಗಳು ಕನ್ನಡ ಮಕ್ಕಳಿಗೂ ಕೇಳಿಸುವಂತೆ ಮೂಡಿಬಂದುವು, ಧ್ವನಿಗೈದುವು. ಕನ್ನಡ ಮಕ್ಕಳಕಾವ್ಯ ಸೃಷ್ಟಿಯಾಯಿತು.

ನಮ್ಮ ರಾಷ್ಟ್ರಕವಿ ಕುವೆಂಪು ಅವರು ಕನ್ನಡಮಕ್ಕಳ ಸಾಹಿತ್ಯಕ್ಕೂ ತಮ್ಮ ಅಮೂಲ್ಯ ಕೊಡುಗೆಯನ್ನಿತ್ತಿದ್ದಾರೆ. ಅವರ ನನ್ನ ಗೋಪಾಲ, ಬೊಮ್ಮನ ಹಳ್ಳಿಯ ಕಿಂದರಿಜೋಗಿ, ಮೋಡಣ್ಣನ ತಮ್ಮ, ನನ್ನ ಮನೆ, ಮರಿವಿಜ್ಞಾನಿ ಮತ್ತು ಮೇಘಪುರ ಇವು ಶಿಶುಸಾಹಿತ್ಯದಲ್ಲಿ ಸಮಾವೇಶವಾಗುವ ಕೃತಿಗಳು. ಇವುಗಳಲ್ಲಿ ಕೊನೆಯ ಮೂರು ಕೃತಿಗಳು ನಮ್ಮ ಕಾಲಾವಧಿಯಲ್ಲಿ ರಚಿತವಾದ ಮಕ್ಕಳ ಪುಸ್ತಕಗಳಾಗಿವೆ. ಇವು ಮೂರೂ ಈ ಮಹಾಕವಿಯ ಭಾವಗೀತೆಗಳ ಸಂಗ್ರಹಗಳಾಗಿವೆ. ಬಹು ಮೇಲ್ಮಟ್ಟದ ಪ್ರತಿಭೆಯುಳ್ಳ ಉದ್ದಾಮ ಕವಿವರರಾಗಿಯೂ ಮಕ್ಕಳ ಮನೋಭಾವವನ್ನು ಅರಿತು ಅನುಭವಿಸಿದ ಸ್ಥಿತಿಯನ್ನು ನಾವಿಲ್ಲಿ ಕಾಣುತ್ತೇವೆ. ಕವಿಯ ಪ್ರಕೃತಿಪ್ರೇಮ, ನಾಡೊಲುಮೆ, ಸೂಕ್ಷ್ಮ ಸಂವೇದನಾಶಕ್ತಿಗಳೆಲ್ಲ ಇಲ್ಲಿ ವ್ಯಕ್ತವಾಗಿವೆ; ಮಕ್ಕಳಲ್ಲಿ ಸ್ಫೂರ್ತಿಯನ್ನು ತುಂಬುವಂತಿವೆ. ಆಕಾಶದಲ್ಲಿರುವ ಚಂದ್ರ–ಅಲ್ಲ–'ಮೂರ್ತಿಯ ಚಂದ್ರ' 'ದೇವರ ಪೆಪ್ಪರಮೆಂಟಾಗಿ' ಕವಿಗೆ ಕಂಡಿದ್ದಾನೆ. ಪೆಪ್ಪರಮೆಂಟು ಮಕ್ಕಳಿಗೆ ಬಹು ಪ್ರಿಯವಾದ ತಿಂಡಿ. ಅದನ್ನವರು ಅಕ್ಕರೆಯಿಂದ ಕುಣಿಕುಣಿದಾಡಿ ತಿನ್ನುವರು. ಅಂತೆಯೇ ಈ ಕವಿಯ ಕವನಗಳಲ್ಲಿಯೂ ಕೂಡ ಕನ್ನಡಕಂದರಿಗೆ ಅಷ್ಟೇ ಪ್ರೀತಿ; ಪೆಪ್ಪರಮೆಂಟು ಸವಿಯುವಂಥ ಸ್ಫೂರ್ತಿ. ಕನ್ನಡ ನಾಡಿನ ಮಕ್ಕಳು ಇವರ 'ಬಣ್ಣದ

ಚುಕ್ಕಿ 'ಯ ಬೆನ್ನುಹತ್ತಿ 'ಬಾರೆಲೆಹಕ್ಕಿ, ಬಣ್ಣದಚುಕ್ಕಿ ?' ಎಂದು ಕುಣಿಕುಣಿದಾಡದೆ ನಿಲ್ಲುವುದಿಲ್ಲ. ಹಕ್ಕಿ ?, ಹಕ್ಕಿ, ಹಾರುವಹಕ್ಕಿ,....ಬಾ, ಬಾ, ನನಗೂ ಹಾರಲು ಕಲಿಸು ; ಬಾ, ಬಾ, ನನಗೂ ಹಾಡಲು ಕಲಿಸು....' ಎಂದು ದುಂಬಾಲು ಬೀಳದೆ ಇರುವುದಿಲ್ಲ. ಇಲ್ಲಿ ಮಗುವು ಹಕ್ಕಿಗೆ ಬೇಕಾದುದನ್ನೆಲ್ಲ ಕೊಡಲು ಸಿದ್ಧ. ಹೂವಿನ ರಸ, ಸುಗ್ಗಿಯ ಕಾಳು. ಇವೆಲ್ಲವನ್ನೂ ಆತ ನೀಡಬಲ್ಲ, ಇದರಲ್ಲಿ ಹಕ್ಕಿಗಳಿಗೆ ಏನೇನು ರುಚಿಸುತ್ತದೆಂಬುದರ ತಿಳಿವನ್ನೂ ಬೀರುವ ಜೊತೆಗೇನೇ ತ್ಯಾಗಭಾವನೆಯ ಬೀಜವನ್ನೂ ಕವಿಯು ಮಕ್ಕಳಲ್ಲಿ ಬಿತ್ತುವುದು ಬಹು ಮನೋಜ್ಞವಾಗಿದೆ. ಇಷ್ಟಕ್ಕೇ ಈ ಕವಿಯ ಕಾವ್ಯ ಸೀಮಿತವಾಗಿಲ್ಲ, ಸೃಷ್ಟಿಯೊಳಗಿನ ಟುವ್ವಿ! ಟುವ್ವಿ ! ಎನ್ನುವ ಹಕ್ಕಿಯ ಕೂಗು ಎದೆಯಗೂಡನ್ನು ತಾಗುವುದು. ಅದರಿಂದ ನನ್ನ ಹೃದಯದಲ್ಲಿಯೂ ಒಂದು ಹಕ್ಕಿ ಇದೆ-ಎಂದರಿವಾಗುವುದು ಇನ್ನೂ ಹೆಚ್ಚಿನ ಮಹಿಮೆಯಾಗಿದೆ. ಇದು ಮಕ್ಕಳ ಮನೋಲೋಕವನ್ನು ಮುಗಿಲೆತ್ತರಕ್ಕೂ ಎತ್ತುವ ಬಗೆಯಾಗಿದೆ. ಇದರ ಮುಂದೆ 'ಕನ್ನಡ ಎನೆ ಕುಣಿದಾಡುವುದೆನ್ನೆದೆ, ಕನ್ನಡ ಎನೆ ಕಿವಿ ನಿಮಿರುವುದು' ಎನ್ನುವದೇನು ಕನ್ನಡ ಕಂದರಿಗೆ ಅಸಹಜ ಭಾವವೇನಲ್ಲ.

ಈ ಮಹಾಕವಿಯು ಮಕ್ಕಳನ್ನು ಕೇವಲ ಕಲ್ಪನಾಲೋಕದಲ್ಲಿ ವಿಹರಿಸ ಹಚ್ಚಿ ಕೈ ಬಿಡುವ ವ್ಯಕ್ತಿಯಲ್ಲ. 'ಮರಿವಿಜ್ಞಾನಿ'ಯ ರೂಪದಲ್ಲಿ ಮಕ್ಕಳಿಗೆ ವೈಜ್ಞಾನಿಕ ದೃಷ್ಟಿಯನ್ನು ನೀಡುವ ಮಹಾನುಭಾವನಾಗಿದ್ದಾನೆ. 'ಮೂರ್ತಿಯ ವಿಜ್ಞಾನ'ದಲ್ಲಿ ಮಳೆ, ಗುಡುಗು, ಮಿಂಚು, ಮುಗಿಲುಗಳ ಕಲ್ಪನೆಯನ್ನು ಮಗುವಿನ ತಿಳುವಳಿಕೆಯ ಮೋರೆಯಲ್ಲಿ ವಿವರಿಸಲು ಯತ್ನಿಸಲಾಗಿದೆ. 'ದೇವರ ಲೋಕದ ಬಾಲಕರಾಡುವ ಉಕ್ಕಿನ ಚೆಂಡದು, ಕೇಳಮ್ಮಾ!' ಎಂದು ಗುಡುಗನ್ನು ಮಗುವು ಇಲ್ಲಿ ಅರ್ಥಮಾಡಿಕೊಂಡ ಬಗೆಯಾಗಿದೆ. ಇಲ್ಲಿ ಮುಂದೆ ಬಾಲಕನ ಭಾವನಾತರಂಗಗಳು ಪರಿಪರಿಯಾಗಿ ಹರಿಯುತ್ತವೆ. ಅಣ್ಣ, ಅಕ್ಕ ತಮ್ಮಂದಿರನ್ನು ಸಾಕ್ಷಿಯಾಗಿ ತರುತ್ತವೆ, ಹೀಗೆ ಈ ಕವಿಯ ಮಕ್ಕಳ ಭಾವಗೀತೆಗಳ ಹಿನ್ನೆಲೆಯಲ್ಲೆಲ್ಲ ತಾಯಿ, ಅಕ್ಕ, ತಂಗಿ, ತಮ್ಮ ಇತ್ಯಾದಿ ವಾತ್ಸಲ್ಯಭಾವದ ನೆಲಗಟ್ಟಿದೆ. ಅದರಿಂದ ಮಕ್ಕಳಿಗೆ ಅವು ಇನ್ನಷ್ಟು ಪ್ರಿಯವಾಗುತ್ತವೆ. ಈ ನಿರೂಪಣೆಯ ರೀತಿಯು ಶಿಶುಸಾಹಿತ್ಯಕ್ಕೆ ಅತ್ಯಮೂಲ್ಯವಾದುದು. ಅದನ್ನು ಈ ಮಹಾಕವಿ ಇಲ್ಲಿ ಸಾಧಿಸಿ ತೋರಿಸಿದ್ದಾರೆ. ಮಕ್ಕಳ ಮನಸ್ಸಿಗೆ ಹಿತವಾದ ಗೀತೆಗಳನ್ನು ರಚಿಸುವುದರಲ್ಲಿ ಸಿದ್ಧಿಯನ್ನು ಪಡೆದಿದ್ದಾರೆ.

ಕನ್ನಡ ಮಕ್ಕಳ ಸಾಹಿತ್ಯ ಎಂದೊಡನೆ ನಮ್ಮ ಕಣ್ಣುಮುಂದೆ ನಿಲ್ಲುವ ಇನ್ನೆರಡು ಹಿರಿಯ ವ್ಯಕ್ತಿಗಳೆಂದರೆ ಶ್ರೀ ಜಿ. ಪಿ. ರಾಜರತ್ನಂ ಹಾಗೂ ಹೊಯಿಸಳರು. ಇವರಿಬ್ಬರೂ ಕನ್ನಡದಲ್ಲಿ ಶಿಶುಸಾಹಿತ್ಯವನ್ನು ವಿಪುಲವಾಗಿ ರಚಿಸಿದ್ದಾರೆ. 'ರತ್ನನ ಶಿಶು ಸಾಹಿತ್ಯ' ಎನ್ನುವ ಒಂದು ಮಕ್ಕಳ ಪುಸ್ತಕ ಪ್ರಪಂಚವೇ ರೂಪು ಪಡೆದಿದೆ. ಅವರು 'ಚುಟುಕ' ಗಳನ್ನು ಚಟಾಕಿಯಂತೆ ಹಾರಿಸಿದ್ದಾರೆ; ಬಣ್ಣದ ತಗಡಿನ ತುತ್ತೂರಿಯನ್ನು ಊದಿ, ಕನ್ನಡ ಕುವರರನ್ನು ಕುಣಿಸಿದ್ದಾರೆ. 'ಝುಣ! ಝುಣ! ಝುಣ! ಜೇಬು ತುಂಬ

ಹಣ! ಮೇಲಕೆತ್ತಿ ಬಿಡಲು ಸದ್ದು ಠಣ್! ಠಣ! ಠಣ!' ಮಕ್ಕಳ ಮನದ ತಾಳ, ಕುಣಿತಗಳನ್ನು ಅರಿತು ಹೇಳಿದ ಬಗೆಯಿದು. ಇವರ 'ಟಗರಿನ ಢಿಕ್ಕಿ', 'ರೊಟ್ಟಿಯಂಗಡಿಯ ಕಿಟ್ಟಪ್ಪ' 'ಹುಲಿ ಬೇಟೆ'ಗಳು ಮನೋಹರವಾದ ಚುಟುಕಗಳಾಗಿವೆ. ಇವುಗಳಂತೆಯೇ ಇವರ ಮಕ್ಕಳ ಹಾಡುಗಳು ಸಹ ಬಾಲಮನೋವೃತ್ತಿಯನ್ನು ಪ್ರತಿಬಿಂಬಿಸುವ ಶ್ರೇಷ್ಠ ಕೃತಿಗಳಾಗಿವೆ. ಇವರ ಕವನಗಳ ಜೊತೆಯಲ್ಲಿಯೇ ಹೊಯಿಸಳರ 'ಚಂದುಮಾಮ'ವನ್ನು ಕೂಡ ಇಲ್ಲಿ ಉಲ್ಲೇಖಿಸಬಹುದಾಗಿದೆ. ಇದರಲ್ಲಿ 'ಚಂದುಮಾಮ', 'ಹೆಜ್ಜೆ ಹೆಜ್ಜೆ ಹದಿನೆಂಟೆಜ್ಜೆ' 'ರೈಲು ಬಂತು ರೈಲು', 'ಎಲ್ಲರೂ ಒಂದೆ' ಇತ್ಯಾದಿ ನಲವತ್ತೈದು ಮಕ್ಕಳ ಪದ್ಯಗಳಿವೆ. ಇಲ್ಲಿ ಮಗುವು ಮುತ್ತು ಕೊಡಲಿಕ್ಕೆ ಚಂದ್ರನನ್ನು ಕರೆಯುವ ರೀತಿಯು ಮನೋಜ್ಞವಾಗಿದೆ. ಗುಣ, ಕಾರ್ಯಗಳಿಂದ ಮನುಷ್ಯನು ದೊಡ್ಡವನಾಗುತ್ತಾನೆಯೇ ಹೊರತಾಗಿ, ದುಡ್ಡು ಬಟ್ಟೆಯಿಂದಲ್ಲ, ಮೈಯ ಬಣ್ಣದಿಂದಲ್ಲವೆಂದು ಇವರ 'ದೊಡ್ಡವರು' ಕವಿತೆ ಬೋಧಿಸ ಹೊರಟಿದೆ. ಹೀಗೆ ವಿವಿಧರೀತಿಯಲ್ಲಿ ಮಕ್ಕಳಿಗೆ ಬುದ್ಧಿಗಲಿಸುವ ಯತ್ನದಲ್ಲಿ ಹಲವೆಡೆಗೆ ಕಾವ್ಯಗುಣ ಮಸುಳಿಸಿದ್ದನ್ನು ಇಲ್ಲಿ ನಾವು ಕಾಣಬಹುದಾಗಿದೆ. ಆದರೆ 'ತಾವರೆ', 'ಬೆಳ್ಳಕ್ಕಿ', 'ನಾಯಿ'ಗಳಂಥ ಒಳ್ಳೆಯ ಪದ್ಯಗಳೂ ಹೊಯಿಸಳರಿಂದ ಕನ್ನಡ ಮಕ್ಕಳಿಗೆ ಲಭಿಸದೆ ಇಲ್ಲ. ಹೊಯಿಸಳರ ಮಕ್ಕಳ ಪದ್ಯಗಳಿಗಿಂತ ಕಥೆಗಳು ಮನೋಹರವಾಗಿವೆ. ವಿಪುಲವೂ ಆಗಿವೆ.

'ಕಾವ್ಯಾನಂದ'ರ 'ವಿಕಾಸವಾಣಿ'ಯನ್ನು ಕುರಿತು ಶ್ರೀ ನರಸಿಂಗರಾವ್ ಮಾನ್ವಿಯವರು "ಭಾರತ ಪ್ರಭುತ್ವವು ವಿಕಾಸಯೋಜನೆಗಳನ್ನು ಕೈಗೊಂಡಿದೆ.... ಇಂದಿನ ಕವಿ ದೇಶದ ಈ ಆವಶ್ಯಕತೆಗಳನ್ನು ಕಡೆಗಣಿಸುವಂತಿಲ್ಲ. ಆತನ ಪ್ರತಿಭೆಯೂ ದೇಶಭಕ್ತಿಯಿಂದ ಪ್ರೇರಿತವಾಗದೆ ಹೋಗದು. ಇಂಥ ಸನ್ನಿವೇಶಗಳಲ್ಲಿ ರಚಿತವಾದ ಪದ್ಯಗಳೇ 'ವಿಕಾಸವಾಣಿ'ಯ ದ್ಯೋತಕಗಳು. ಜನ ಜಾಗೃತಿಗಾಗಿ ಕವಿ ಕಾವ್ಯ ಶಿಖರದಿಂದ ಕೆಳಕ್ಕಿಳಿದು ತಪ್ಪಲಿಗೆ ಬರಬೇಕಾಗುತ್ತದೆ...." ಎಂದು ಮುನ್ನುಡಿಯಲ್ಲಿ ನುಡಿದಿದ್ದಾರೆ. ಆದರೆ ನಿಜವಾದ ಪ್ರತಿಭಾವಂತ ಕವಿಯು ಕಾವ್ಯಗುಣವನ್ನು ಕಾಯ್ದುಕೊಂಡು ಪ್ರಚಾರವನ್ನು ಸಾಧಿಸಬಲ್ಲನು. ಅದನ್ನಿಲ್ಲಿ ನಾವು ಕಾಣುತ್ತೇವೆ. ಇದರಲ್ಲಿ 'ಮುಂದಕ್ಕೆ ಸಾಗು!', 'ನವ್ಯ ಭಾರತ', 'ಕೋಲಾಟ', 'ನಿರ್ಭಯದಲಿ ಉಳುಭೂಮಿಯ!', 'ಸಾವಿರ ಕುದುರೆಯ ಸರದಾರ', 'ಲಾವಣಿ', 'ವಿಕಾಸವಾಣಿ' ಇಷ್ಟು ಪದ್ಯಗಳಿವೆ. ಇದರಲ್ಲಿ 'ಕೋಲಾಟ'ವು ಅಭಿನಯಗೀತವಾಗಿದೆ. ಮಕ್ಕಳಿಗೆ ಸ್ವಲ್ಪ ದೀರ್ಘವೂ ಆಗಿದೆ. "ಮುಂದಕ್ಕೆ ಮುಂದಕ್ಕೆ ಮುಂದಕ್ಕೆ ಸಾಗು! ಭಾರತದ ನಿರ್ಮಾಣದಲಿ ಭಾಗಿಯಾಗು" ಎನ್ನುವ ಪಲ್ಲವಿಯಿಂದ ರಾಷ್ಟ್ರನಿರ್ಮಾಣದ ಬೋಧೆಯು ಪ್ರಾರಂಭವಾಗುತ್ತದೆ. "ಇದನು ಕೇಳಿ ಏಳಿರಿ, ಹೊಸ ಜನ್ಮ ತಾಳಿರಿ, ನಾಡ ಕಟ್ಟಿ ಆಳಿರಿ, ಅಶುಭವನ್ನು ಹೂಳಿರಿ, ವೀರರಾಗಿ ಬಾಳಿರಿ" ಎಂಬ ಸಂದೇಶವನ್ನು ಕೊನೆಯಲ್ಲಿ ಸಾರುವುದು.

'ತುಪ್ಪಾ ರೊಟ್ಟಿ ಗೇ ಗೇ ಗೇ!' ಎಂಬುದು 'ಕಾವ್ಯಾನಂದ'ರಿಗೆ ೧೯೬೪ರಲ್ಲಿ ರಾಷ್ಟ್ರೀಯ ಬಹುಮಾನವನ್ನು ಒದಗಿಸಿದ ಮಕ್ಕಳ ಪದಗಳ ಸಂಗ್ರಹವಾಗಿದೆ. ಇದರಲ್ಲಿ ಇಪ್ಪತ್ತು ಮಕ್ಕಳಗೀತಗಳಿವೆ. 'ವಿಕಾಸವಾಣಿ'ಯಂತೆ ಇಲ್ಲಿಯ ಕವನಗಳು ಪ್ರಚಾರಕ್ಕೆಂದೇ ರೂಪುಗೊಂಡವುಗಳಲ್ಲ. ಇಷ್ಟೇ ಅಲ್ಲ, ಇವುಗಳನ್ನು ಸ್ವತಃ ಕವಿಗಳು ಮಕ್ಕಳಿಂದ ಓದಿಸಿ, ಅವರು ಮೆಚ್ಚಿದವುಗಳನ್ನೇ ಇಲ್ಲಿ ಸಂಗ್ರಹಿಸಿಕೊಟ್ಟಿದ್ದಾರೆ. ಇವರ 'ನನ್ನ ಕುದುರೆ'ಯಂತೂ ಕರ್ನಾಟಕದ ಮನೆ ಮನೆಗಳಲ್ಲಿಯೂ ಮಕ್ಕಳು ಕುಣಿ ಕುಣಿದು "ಅಜ್ಜನ ಕೋಲಿದು ನನ್ನಯ ಕುದುರೆ, ಹೆಜ್ಜೆಗೆ ಹೆಜ್ಜೆಗೆ ಕುಣಿಯುವ ಕುದುರೆ" ಎಂದು ಹಾಡಿಕೊಳ್ಳುವ ಪದ್ಯವಾಗಿದೆ. 'ಚೆಂದಪ್ಪ ಚೆಂದಪ್ಪ ಚೌರೀಕಾಯಿ', 'ದೋಸೆ', 'ಇವರ ಬಿಟ್ಟು ಇವರ್‍ಯಾರು?' ಮೊದಲಾದ ಹಾಡುಗಳು ಮಕ್ಕಳ ಮನಸ್ಸನ್ನು ಸೂರೆಗೊಳ್ಳುವಂತಿವೆ. ಒಟ್ಟಿನಲ್ಲಿ ಮಕ್ಕಳ ಭಾವ, ಬುದ್ಧಿ, ಕಲ್ಪನೆಗಳಿಗೆ ತಕ್ಕ ಪದ್ಯಗಳಿವೆಂದು ಧಾರಾಳವಾಗಿ ಹೇಳಬಹುದಾಗಿದೆ.

ಇನ್ನು ಶ್ರೀ. ಬಿ. ಎ. ಸನದಿಯವರು 'ಗುಲಾಬಿ ಗೊಂಚಲು', 'ಗೃಹಪಂಚಮಿ', 'ಜಿಲೇಬಿ ಝುಣ್ ಝುಣ್', ಎಂಬ ಮೂರು ಶಿಶುಗೀತಗಳ ಸಂಗ್ರಹಗಳನ್ನು ನೀಡಿದ್ದಾರೆ. ಗುಲಾಬಿ ಗೊಂಚಲಿನ ವಿಷಯದಲ್ಲಿ ಮುನ್ನುಡಿಯುತ್ತ ಡಾ. ಡಿ. ಎಸ್. ಕರ್ಕಿಯವರು "ಮಕ್ಕಳಿಗಾಗಿ ಕವಿತೆ ಬರೆಯುವವರಲ್ಲಿ ಮುಖ್ಯವಾಗಿ ಇರಬೇಕಾದ ಮನೋಧರ್ಮ ಎಂದರೆ ಸಹಾನುಭೂತಿ. 'ನನ್ನ ಆಸ್ತಿ', 'ಸುನಂದಾ' ಎಂಬ ಗೀತಗಳಲ್ಲಿ ಇದು ಸಹಜವಾದ ರೀತಿಯಲ್ಲಿ ಪ್ರಕಟವಾಗಿದೆ." ಎಂದಿದ್ದಾರೆ. ಈ ಸಂಗ್ರಹದಲ್ಲಿ ಸನದಿಯವರು ಹಾಗೂ ಶ್ರೀಕಾಂತ ಸೇರಿ ಹದಿನಾರು ಕವನಗಳನ್ನು ಮಕ್ಕಳಿಗೆ ನೀಡಿದ್ದಾರೆ. ಆಮೇಲೆ ಬಂದುದು ಸನದಿಯವರ 'ಗೃಹಪಂಚಮಿ'ಯು. ಇದರಲ್ಲಿ ಇಪ್ಪತ್ತು ಶಿಶುಗೀತಗಳಿವೆ. 'ಮಕ್ಕಳೊಡನಾಟದಿಂದ ದೊರೆತ ಆನಂದಾನುಭವದ ಅಭಿವ್ಯಕ್ತಿಯೇ ಈ ಗೀತಗಳ ಮೂಲ ಎಂಬ ಸಂಗತಿಯು. ಅವುಗಳನ್ನು ಓದುವವರಿಗೆ ತಿಳಿದುಬರುವಂತಿದೆ' ಎಂದು ಮುನ್ನುಡಿಯಲ್ಲಿ ಶ್ರೀ ಎಸ್. ಡಿ. ಇಂಚಲ ಅವರು ನುಡಿದಿದ್ದಾರೆ. ಇಲ್ಲಿಯ 'ಗೃಹಪಂಚಮಿ'ಯು ಸಂವಾದಗೀತವಾಗಿದೆ. ಜಾನಪದ ರೀತಿಯಲ್ಲಿ ನಡೆದ ಸಂವಾದವು ಹಾಸ್ಯದ ಚಿಲುಮೆಯಾಗಿದೆ. ಈ ಸಂಗ್ರಹದಲ್ಲಿ 'ಹುಗ್ಗಿ, ಸರಿದಾರಿ, ಬಿರುಗಾಳಿ, ಸುಗ್ಗಿ, ಮಳೆ' ಮೊದಲಾದವು ಚುಟುಕುಗಳಾಗಿವೆ. 'ನಮ್ಮ ಬಾಪು' ಎಂಬುದು ಮಗುವಿನ ತುಂಟತನವನ್ನು ವ್ಯಕ್ತಪಡಿಸಿದರೆ 'ನಾಯಿಯ ಕೊಡೆ'ಯು ಹೆಣ್ಣು ಮಗುವಿನ ಮುಗ್ಧಭಾವ, ಸಹಾನುಭೂತಿ, ಅನುಕಂಪವನ್ನು ಅರಳಿಸಿದೆ. ಇವರದೇ ಆದ 'ಜಿಲೇಜಿ ಝುಣ್ ಝುಣ್' ಎಂಬುದು ಮಕ್ಕಳ ಕಥನ ಕವನಗಳ ಸಂಗ್ರಹವಾಗಿದೆ. ಇದರಲ್ಲಿ ಏಳು ಕಥನ ಕವನಗಳಿವೆ. ಮಕ್ಕಳ ಸಹಜ ಪ್ರವೃತ್ತಿಗಳಿಗೆ ಅನುಗುಣವಾಗಿ ರಚಿಸಿದ ಕಥನ ಕವನಗಳಿವು. ಒಟ್ಟಿನಲ್ಲಿ ಸನದಿಯವರ ಈ ಸಂಗ್ರಹಗಳು 'ಪಂಚ್ಮಿ ಹಬ್ಬ ಸನೇತ ಬಂದೈತಿ ಜಾಣಾ, ಹಿಂಗ್ಯಾಕ ಸುಮ್ಮನ ಕುಂತೀಯೋ ನೀನಾ?' ಎನ್ನುವ ರೀತಿಯಲ್ಲಿ ಬೆಳಗಾಂವಿ ನಾಡಿನ ಕನ್ನಡ ನುಡಿಯ ಬೆಡಗನ್ನೂ ಪ್ರತಿಫಲಿಸುತ್ತಿವೆ.

'ಕಂದನ ಕೊಳಲು' 'ಡೊಂಬನ ಡೋಲು', 'ತಮ್ಮನ ತಂಬೂರಿ'ಗಳು ಶ್ರೀ ಪಳಕಳ ಸೀತಾರಾಮಭಟ್ಟರ ಕವನ ಸಂಗ್ರಹಗಳಾಗಿವೆ. ಸೀತಾರಾಮಭಟ್ಟರು ಮೈಸೂರು ರಾಜ್ಯಸರಕಾರವು ಏರ್ಪಡಿಸಿದ ಮಕ್ಕಳಸಾಹಿತ್ಯ ರಚನಾಲಯವನ್ನು ಪ್ರವೇಶಿಸಿ ಅನುಭವ ಪಡೆದ ಕವಿಗಳು, ಅದರಂತೆ ಪಠ್ಯಪುಸ್ತಕ ಸಮಿತಿಯಲ್ಲಿಯೂ ಕೆಲಸ ಮಾಡಿ, ಕನ್ನಡ ಮಕ್ಕಳ ಭಾಷಾಶಕ್ತಿಯ ಇತಿ–ಮಿತಿಗಳನ್ನು ಅರಿತವರು. ಮಕ್ಕಳ ಸಾಹಿತ್ಯ ರಚನೆಗೆ ಕೇವಲ ಸ್ಫೂರ್ತಿಯೊಂದೇ ಸಾಲದೆಂಬುದನ್ನು ಮನಗಂಡವರು. ಅದರಿಂದ ಶ್ರೀ ವಿ. ತಿಮ್ಮಪ್ಪಶೆಟ್ಟಿಯವರು ಮುನ್ನುಡಿಯಲ್ಲಿ 'ಕಂದನ ಕೊಳಲಿ'ನ ಬಗ್ಗೆ 'ಚಟುವಟಿಕೆಗಳಿಗೆ ಸಂಬಂಧಿಸಿ ಬರೆದ ಈ ಕವನ ಸಂಕಲನವು ಮಕ್ಕಳ ವಯೋಭಿರುಚಿಗಳಿಗೆ ಹೊಂದುವಂತಿದೆ' ಎಂದು ಹೇಳಿದ ಮಾತು ಸರಿಯೆನಿಸುವಂತಿದೆ. ನಲವತ್ತು ಪುಟಗಳ ಪರಿಮಿತಿಯಲ್ಲಿ ಮೂವತ್ತಾರು ಕವನಗಳನ್ನು ದಪ್ಪಕ್ಷರಗಳಲ್ಲಿ ಮುದ್ರಿಸಿ, ಅಳವಡಿಸಿದುದನ್ನು ಆ ಕವನಗಳ ಅಳತೆಯನ್ನು ಸೂಚಿಸುವುದಕ್ಕೆಂದು ಇಲ್ಲಿ ಎತ್ತಿ ಹೇಳಬಹುದಾಗಿದೆ. 'ಜಗಕೆ ಸೇವೆ ಸಲ್ಲಲಿ' ಎಂಬ ಗೀತವನ್ನು 'ನೋಡು ನೋಡು ಕಂದ ಗಿಡದಲಿರುವ ಹೂವನು! ತನ್ನಲಿರುವ ಪರಿಮಳವನು ಬೀರುತಿರುವ ಪರಿಯನು!' ಎಂದು ಆರಂಭಿಸುತ್ತಾರೆ. ಹೂವಿನಂತೆ ನಮ್ಮ ಬಾಳು ಸಫಲವಾಗಲೆಂದು ಹತ್ತೆಂಟು ಸಾಲುಗಳಲ್ಲಿ ಮಕ್ಕಳನ್ನು ಪ್ರಚೋದಿಸುತ್ತಾರೆ. 'ರೈತ, ತೋಟದ ಕೆಲಸ, ಮಳೆಯ ಕಥೆ, ಕನ್ನಡ, ದೀವಳಿಗೆ' ಇಂಥ ಹಲವಾರು ಕವನಗಳನ್ನು ಈ ಕೊಳಲಿನಿಂದ ನುಡಿಸಿದ್ದಾರೆ. ಇವರ ಇನ್ನೊಂದು ಸಂಗ್ರಹವಾದ 'ಡೊಂಬನ ಡೋಲು' ಅಭಿನಯ ಗೀತಗಳ ಸಂಗ್ರಹ ವಾಗಿದೆ. 'ಪಾಪನು ಒಂದು, ಪೀಪಿಯು ತಂದು, ಊದಿದನಂದು ಪೀ ಪೀ ಪೀ' ಎಂದು 'ಪಾಪನ ಪೀಪಿ'ಯಿಂದ ಈ ಡೋಲು ಆರಂಭವಾಗುತ್ತದೆ. 'ರಂಗನ ಬುಗುರಿ, ಬೆಕ್ಕಿನ ಬೇಟೆ, ನಾನೇ ನಾಯಿಮರಿ, ಗಾಳಿಪಟ'; ಇತ್ಯಾದಿ ಮಕ್ಕಳ ಅನುಭವದಲ್ಲಿ ಬರುವ ವಿಷಯಗಳನ್ನೇ ಆಯ್ದುಕೊಂಡು ಕವನಗಳನ್ನು ರಚಿಸಿದ್ದಾರೆ. 'ತನ್ನ ತಾನು ಸುಡಿಸಿ ಕೊಂಡು ಉರಿಯುತಿಹುದು ಬತ್ತಿ! ಸೇವೆಗೈವ ಹರುಷದಿಂದ ಮೊಗವ ಮೇಲಕೆತ್ತಿ' ಎಂದು ಬೋಧಿಸಿದ್ದಾರೆ. 'ತಮ್ಮನ ತಂಬೂರಿ'ಯು ಇವರ ಹದಿನೆಂಟು ಗೀತಗಳ ಇನ್ನೊಂದು ಸಂಗ್ರಹವಾಗಿದೆ. ಇದರಲ್ಲಿ ವಿದ್ಯೆ, ಹಳ್ಳಿಗೆ ಬನ್ನಿರಿ, ರೈತ ಜನರು, ಕುಣಿಯೋಣ ಬನ್ನಿರಿ' ಮೊದಲಾದ ಪದ್ಯಗಳು ಸೇರಿವೆ. ಶಿಶುಸಾಹಿತ್ಯಕ್ಕೆ ಶ್ರೀಯುತರ ಏಳನೆಯ ಕಾಣಿಕೆಯು ಇದಾದುದರಿಂದಲೋ ಏನೋ ಮೊದಲಿನ ಸಂಗ್ರಹಗಳಷ್ಟು ಸರಸವಾಗಿ ಇಲ್ಲಿಯ ಪದ್ಯಗಳು ಮೂಡಿ ಬಂದಂತಿಲ್ಲ. ಗಾಂಭೀರ್ಯ ಹೆಚ್ಚಿದೆ. ಆದರೂ ಸೀತಾರಾಮಭಟ್ಟರ ಕೊಡುಗೆ ಕನ್ನಡ ಮಕ್ಕಳ ಸಾಹಿತ್ಯದಲ್ಲಿ ಗಣ್ಯವಾದುದಾಗಿದೆ.

ಈ ಕಾಲಾವಧಿಯಲ್ಲಿ ಶ್ರೀ ದಿನಕರ ದೇಸಾಯಿಯವರು 'ಮಕ್ಕಳ ಗೀತಗಳು' ಎಂಬ ನಲವತ್ತನಾಲ್ಕು ಕವನಗಳಿಂದ ಕೂಡಿದ ಸಂಗ್ರಹವನ್ನು ನೀಡಿದ್ದಾರೆ. ಮಕ್ಕಳ ಅಭಿರುಚಿಗೆ ತಕ್ಕ ಪದ್ಯಗಳಿವು. 'ಇಣಚಿಗೆ,–ಕುಂಬಾರನ ತಿಗರಿ, ನಮ್ಮ ಹಳ್ಳಿ, ಜೋಕಾಲಿ, ಮೈಸೂರಿನ ತಿಂಡಿಗಳು,' ಇಂಥ ಕವನಗಳಿಲ್ಲಿವೆ. ಈ ಸಂಗ್ರಹದಲ್ಲಿ ಕೆಲವು

ಚುಟುಕಗಳೂ ಸಹ ಸೇರಿವೆ, ಮಕ್ಕಳಿಗೆ ಪ್ರಿಯವಾಗಿವೆ. ಶ್ರೀ ಉಡುಪಿ, ಭೀ, ಬೀಡಿಯವರು 'ಬೆಳಗಾಗಿದೆ ಏಳೆಲೊ ಕಂದ | ಬಾನಲಿ ಥಳ ಥಳ ರವಿ ಬಂದ' ಎಂದು ಹಾಡಿ 'ಮಕ್ಕಳಿಗೆ ಮಿಠಾಯಿ' ಹಂಚಿವ್ದಾರೆ. ಡಾ. ಕರ್ಕಿ, ಕನ್ನಡ ಮಕ್ಕಳಿಗಾಗಿ 'ಬಣ್ಣದ ಚೆಂಡ'ನ್ನು ಪುಟಿಸಿದ್ದಾರೆ. ಶ್ರೀ ಕೆ. ತಿಮ್ಮಣ್ಣ ಆಳ್ವರು 'ಉಯ್ಯಾಲೆ'ಯನ್ನು ತೂಗು ಬಿಟ್ಟಿದ್ದಾರೆ. ಇದರಲ್ಲಿ 'ಪ್ರಾರ್ಥನೆ, ಧ್ವಜ, ಸಹೋದರರು, ಕನ್ನಡನಾಡು' ಮೊದಲಾದ ಪದ್ಯಗಳಿವೆ. ಇಲ್ಲಿಯ ಮಕ್ಕಳ ಕಾವ್ಯವು 'ಉಡುಪಿ ನಮ್ಮ ನಾಡಿನ ದೊಡ್ಡದೊಂದು ಪಟ್ಟಣ, ಹಿಂದೆ ಅಲ್ಲಿ ಬಂದನೊಬ್ಬ ಕನಕನೆಂಬ ಸಜ್ಜನ' ಎಂಬ ರೀತಿಯಲ್ಲಿ ಗದ್ಯಕ್ಕೆ ತಿರುಗಿದುದನ್ನು ಗುರುತಿಸಬಹುದಾಗಿದೆ. ಶ್ರೀ. ವೈ. ಜಿ. ಶಾಂತರಾಜಯ್ಯನವರ 'ಸಿದ್ದನ ತಮಟೆ,'ಯನ್ನು ಕುರಿತು ಶ್ರೀ ಎಂ.ಆರ್. ಶ್ರೀನಿವಾಸಮೂರ್ತಿಯವರು 'ಚಿಕ್ಕ ಮಕ್ಕಳು ಯಾವುದನ್ನು ಪ್ರೀತಿಯಿಂದ ಕಲಿಯುವರೊ, ಕಲಿತು ಹಾಡುವರೊ, ಹಾಡಿ ಕುಣಿ ಕುಣಿದಾಡುವರೊ, ಆ ಕವಿತೆಗಳು ಚೆನ್ನಾಗಿವೆಯೆಂದು ಹೇಳಲೇಬೇಕು.' ಎಂದು ನುಡಿದಿದ್ದರೂ ಎಲ್ಲರೂ ಇದನ್ನು ಒಪ್ಪಲೇಬೇಕೆಂದೇನಲ್ಲವಲ್ಲ. ಆದರೂ ಇಷ್ಟರಲ್ಲಿ ನಾಲ್ಕಾರು ಮುದ್ರಣವನ್ನು ಕಂಡ ಕೃತಿಯಿದಾಗಿದೆ. ಇದರಲ್ಲಿ ಕನ್ನಡ ತಾಯಿ, ಶಾಮನ ಬುಗರಿ'ಯಂಥ ಪದ್ಯಗಳನ್ನು ಮಕ್ಕಳು ಮೆಚ್ಚಿಯಾರು. ಶ್ರೀ ಕುಪ್ಪೇರಾವ ಉಕ್ಲಿ ಅವರು ರಚಿಸಿದ 'ನೀತಿಮಾರ್ಗ' ಎಂಬ ಕವನ ಸಂಗ್ರಹಕ್ಕೆ 'ಮಕ್ಕಳಿಗಾಗಿ ಬರೆದುದು' ಎಂದು ಲೇಖಕರು ವಿಶೇಷಿಸಿದ್ದರೂ 'ಸರಸಿಜಾಕ್ಷನೆ ನಿನ್ನ ಚರಣಕೆ ಶಿರವನೊಡ್ಡುವೆ ತರುಣದಲಿ ನೀ | ವರವನೀವುದು ಬರೆಯಲೆನಗೆ ಭೀಷ್ಮ ಶಪಥದ ಕಥೆಯನು' ಎಂಬುದನ್ನು ಮಕ್ಕಳು ಹೇಗೆ ಅರಿತುಕೊಂಡಾರು? ಇದರಂತೆಯೇ ಶ್ರೀ ಚಿರಂತನರ "ಹಾಲು–ಜೇನು" ಕೂಡ ಕನ್ನಡ ಮಕ್ಕಳಿಗೆ ಸ್ವಲ್ಪ ಅರಗದ ಪೌಷ್ಟಿಕ ವಸ್ತುವೇ ಆಗಿದೆ. ಆದರೂ ಇದರಲ್ಲಿ 'ನಮ್ಮ ದೇಶ ಭಾರತ, ದೀವಳಿಗೆ ಹಬ್ಬಕ್ಕೆ, ಕಿರಿಯ ರೈತ' ಇವೇ ಮೊದಲಾದ ಕವನಗಳನ್ನು ಮಕ್ಕಳು ಮೆಚ್ಚಿ ಹಾಡಿಕೊಳ್ಳಬಲ್ಲರು. ಶ್ರೀ ಬಿ. ಬಿ. ಹಿಂಗಮಿರೆಯವರ 'ಗುಬ್ಬಿಯ ಹಾಡು' ಇಪ್ಪತ್ತಮೂರು ಕವನಗಳ ಸಂಗ್ರಹವಾಗಿದೆ. 'ಗೊಂಬಿಗೆ, ಬಚ್ಚ, ರೊಕ್ಕದ ಗಿಡ, ಜಾಣನರಿ, ಮಂಗನ ಫಜೀತಿ' ಮೊದಲಾದ ಕವನಗಳು ಮಕ್ಕಳ ಭಾವಜೀವನಕ್ಕೆ ಹೊಂದುವಂತಿವೆ. ಭಾಷೆ ಸರಳವಾಗಿದೆ. ಆದರೆ ಇವರಾಗಲಿ, 'ಚಿಗುಕಿಮುರಿ'ಯ ಅಕ್ಕಿವಾಟದ ಶಶಿಕುಮಾರನಾಗಲಿ, 'ಆಶಾವಾದಿ'ಯನ್ನು ನೀಡಿದ ಮಠಪತಿಯೇ ಆಗಲಿ ಮಹಾರಾಷ್ಟ್ರದ ಸೀಮೆಯಲ್ಲಿ ವಾಸಿಸುವವರಾದದ್ದರಿಂದ–ಒಂದು ಕಾಲದಲ್ಲಿ ಅಲ್ಲಿ ಬೆಳೆದವರಾದುದರಿಂದ–ಅವರ ಭಾಷೆಯ ಮೇಲೆ ಮರಾಠಿಯ ಪ್ರಭಾವವನ್ನು ಕಾಣುತ್ತೇವೆ. 'ಪೇಡೇರ ಲಾಡೂರ ತಿನ್ನೋನ್ ನಡೀ; ಸೋಡಾವಾಟರ್ ಕುಡಿಯೋನ್‌ನಡೀ!' ಎಂದು ಹಿಂಗಮಿರೆಯವರು 'ಜಾತ್ರೆಗೆ' ಮಕ್ಕಳನ್ನು ಕರೆದೊಯ್ಯುತ್ತಾರೆ. ಇವರಂತೆಯೇ ದಕ್ಷಿಣ ಕನ್ನಡ ಜಿಲ್ಲೆಯ ಶ್ರೀ ದಾಮೋದರ ಬಾಳಿಗರು 'ದೇವರ ಮಕ್ಕಳು' ಎಂಬ ಕವನಸಂಗ್ರಹಕ್ಕೆ ಬಳಸಿದ ಭಾಷೆಯು ಅವರ ಭಾಗದ್ದೇ ಆಗಿದೆ. ಆದರೂ ಅವರು ಇಲ್ಲಿ ನೀಡಿದ ಪದ್ಯಗಳನ್ನು

ಕನ್ನಡ ನಾಡಿನ ಮಕ್ಕಳು ಸಂತೋಷದಿಂದ ಹಾಡಿಕೊಳ್ಳುವರು. ಅಂಥವೊಂದು ಕುಣಿತ, ಪ್ರಾಸಗಳು ಇಲ್ಲಿ ವ್ಯಕ್ತವಾಗಿವೆ. ಮಕ್ಕಳ ಮನೋವೃತ್ತಿಗೆ ಹೊಂದುವ ವಸ್ತುಗಳಿವೆ. ಇನ್ನು ಶ್ರೀ ರಾಘವೇಂದ್ರ ಇಟಗಿಯವರ 'ವಸುಂಧರಾ ಗೀತಗಳು' ಹನ್ನೆರಡು ಕವನಗಳ ಸಂಗ್ರಹವು. ಇದರಲ್ಲಿ 'ಎಳೆಯ ಗೆಳೆಯರಿಗೆ–' ಕವಿಯು 'ನನ್ನ ನಾಡಿನ ಎಳೆಯ ಗೆಳೆಯರೆ! ಹೊಳೆವ ವಜ್ರದ ಕಿಡಿಗಳೆ' ಎಂದು ಸಂಬೋಧಿಸಿ 'ಅವರು ನಾಳಿನ ನಾಯಕ ಮಣಿಗಳು' ಎಂದು ಉಬ್ಬಿಸಿ ನುಡಿಯುತ್ತಾನೆ. ಆ ಮೇಲೆ 'ನಮ್ಮ ಬಾವುಟ', 'ತಕಲಿ, ತಕ್ಕಡಿ, ನೇಗಿಲಾ' ಇತ್ಯಾದಿ ಪದ್ಯಗಳಿಂದ ನಾಡೊಲುಮೆಯನ್ನು ತುಂಬುತ್ತಾನೆ. 'ಓಕುಳಿಯಾಟ, ನರಿಯ ಮದುವೆ, ಬನದಲಾಲಿ'ಗಳನ್ನು ಮಕ್ಕಳು ಮೆಚ್ಚುವರು. ಶ್ರೀ ಹೊಸಮನಿ ಸಂಗಮೇಶರ 'ಬೋಲ ಬಗರಿ', ಶ್ರೀ ಗುರುಪಾದಸ್ವಾಮಿ ಹಿರೇಮಠರ 'ಹಾಲಿನಗಿಂಡಿ'ಗಳು ಉದಯೋನ್ಮುಖ ಕವಿಗಳ ಮಕ್ಕಳ ಕವನ ಸಂಗ್ರಹಗಳಾಗಿವೆ. ಶ್ರೀ ಸಿದ್ಧಯ್ಯ ಪುರಾಣಿಕರು ಹೇಳುವಂತೆ 'ಇವುಗಳಲ್ಲಿ ಕೆಲವು ವಿಷಯಗಳ ಮೇಲೆ ಈಗಲೇ ಒಳ್ಳೆಯ ಮಕ್ಕಳ ಪದ್ಯಗಳು ಬೇರೆಯವರಿಂದ ಬಂದಿವೆ. ಆದರೂ ಹೊಸಮನಿ ಯವರ ಪದ್ಯದಲ್ಲಿ ಹೊಸತನವಿದೆ' ಎಂದು ನಾವು ಹೇಳಬಹುದಾಗಿದೆ.

ವಿಜಾಪುರದ ಭಾರತೀ ಸಾಹಿತ್ಯ ಭಂಡಾರದವರು ಕನ್ನಡ ನಾಡಿನ ವಿವಿಧ ಭಾಗದ ಕವಿಗಳಿಂದ ಮಕ್ಕಳ ಪದ್ಯಗಳನ್ನು ಕಲೆಹಾಕಿ, ಎರಡು ಭಾಗಗಳಲ್ಲಿ 'ಪುಟಿ ಚೆಂಡು' ಎಂಬ ಕವನ ಸಂಗ್ರಹಗಳನ್ನು ಇತ್ತಿದ್ದಾರೆ. ಇವುಗಳಲ್ಲಿ ಸುಮಾರು ಇನ್ನೂರಕ್ಕೂ ಮಿಕ್ಕಿ ಕವನಗಳು ಶೇಖರಗೊಂಡಿವೆ. ವಿಷಯ ವೈವಿಧ್ಯ, ಶೈಲಿಯ ವೈವಿಧ್ಯಗಳಿಗೆ ಪುಟಿದ ಚಂಡುಗಳಾಗಿವೆ, ಈ ಸಂಗ್ರಹಗಳು. ಒತ್ತಟ್ಟಿಗೆ ಇಟ್ಟು ಇವುಗಳನ್ನು ನಿರುಕಿಸುವುದರಿಂದ ಮಕ್ಕಳ ಕಾವ್ಯದ ವೈಶಾಲ್ಯದ ಅರಿವು ಉಂಟಾಗುವಂತಿದೆ. ಕನ್ನಡ ಮಕ್ಕಳಿಗಿಂತ ಮಕ್ಕಳ ಸಾಹಿತ್ಯದ ಅಭ್ಯಾಸಿಗಳಿಗೆ ಉಪಯುಕ್ತ ಸಂಗ್ರಹಗಳಿವೆಂದು ಹೇಳಬಹುದಾಗಿದೆ. ಇದೇ ಭಂಡಾರದ ಬಳಗಕ್ಕೆ ಸೇರಿದ ಶ್ರೀ ಪಿ. ಎಸ್. ಗಣಪಯ್ಯರ 'ಚೌತಿ ಗಣಪ' ಎಂಬ ಕವನ ಸಂಗ್ರಹವನ್ನು ಇಲ್ಲಿ ಉಲ್ಲೇಖಿಸಿ ಬಿಡಬಹುದು. ಮಕ್ಕಳ ಸುತ್ತಲಿರುವ ಶಾಲೆ, ಹಸು, ಅಜ್ಜಿ ಮೊದಲಾದ ವಸ್ತುಗಳನ್ನು ಆಯ್ದುಕೊಂಡು, ಇಲ್ಲಿ ಕವನಗಳನ್ನು ಕಟ್ಟಿದ್ದಾರೆ, ಲೇಖಕರು. 'ದಾದಿ ರನ್ನೆ'ಯ ಕಥೆಯನ್ನು ಶ್ರೀ ರಾಘವರು ಸರಳ ರಗಳೆಯ ರೂಪದಲ್ಲಿ ಹೇಳಿದ್ದಾರೆ. 'ಕೆಂಪು ತಿರುಗಲು ಪಡು ದೆಸೆಯ ಮೊಗ ಹಕ್ಕಿಗಳು ಹಾರಿದುವು ಹಾಡುತ, ಸಂಜೆಗೆಂಪಿನ ಸೊಬಗ ಸಾರುತ ದಿಕ್ಕು ದಿಕ್ಕಿನಲಿ;' ಎಂದು ಮೊದಲಾಗಿ ಸುಂದರ ಸೃಷ್ಟಿಯ ವರ್ಣನೆಯಿಂದ ಕಥೆಯ ಆರಂಭ ವಾಗುತ್ತದೆ. ಮಕ್ಕಳಲ್ಲಿ ಸೌಂದರ್ಯದ ಬಗ್ಗೆ ಒಲವನ್ನು ಹುಟ್ಟಿಸುತ್ತದೆ. ಸುಸಂಸ್ಕೃತ ಮಕ್ಕಳು ಇದನ್ನು ಓದಿ ಆನಂದಿಸಬಲ್ಲರು.

ಶ್ರೀ ಬಿ. ರಾಮಚಂದ್ರ ಭಟ್ಟರು 'ಶಿಶು ವಿಹಾರ' ಮತ್ತು 'ಪುಟ್ಟನ ಪಿಟೀಲು' ಎಂಬ ಎರಡು ಕವನಸಂಗ್ರಹಗಳನ್ನು ಕನ್ನಡ ಮಕ್ಕಳಿಗೆ ನೀಡಿದ್ದಾರೆ. ಈಗಾಗಲೇ ಇವು ಮೂರು ನಾಲ್ಕು ಮುದ್ರಣಗಳನ್ನು ಕಂಡು, ಜನರ ಮೆಚ್ಚುಗೆಯನ್ನು ಪಡೆದಿವೆ.

ಹಿರಿಯರಾದ ಗೋವಿಂದ ಪೈ ಅವರು 'ಶಿಶು ವಿಹಾರ'ವನ್ನು ಕುರಿತು 'ಈ ಕವಿತೆಗಳೆಲ್ಲವೂ ಬಹಳ ಸುಲಭವಾಗಿವೆ,–ಸೊಗಸಾಗಿ ಅದರಲ್ಲಿಯೂ 'ಹುಚ್ಚು', 'ಎಳೆಯ ಕೊರಗು', 'ಮಡಿವಾಳ', 'ಮಗು ಇರುವೆಗಳ ಸಂವಾದ' ಮುಂತಾದುವು ಬಹಳ ಚೆನ್ನಾಗಿವೆ' ಎಂದು ಮುನ್ನುಡಿಯಲ್ಲಿ ಹೇಳಿದ್ದಾರೆ. ಇದರಂತೆಯೇ 'ಪುಟ್ಟನ ಪಿಟೀಲು' ಕೂಡ ಭಾಷೆಯ ದೃಷ್ಟಿಯಿಂದ ಸ್ವಲ್ಪ ಮೇಲ್ಮಟ್ಟದ್ದಾದರೂ ಒಳ್ಳೆಯ ಕವನಗಳ ಸಂಕಲನ ವಾಗಿದೆ. ಇಲ್ಲಿಯ ಕವಿತೆಗಳಲ್ಲಿ 'ಬಾ ಬಾ ರಣ್ಣ ! ಓ ಮಗುವಣ್ಣ ! ಬುದ್ಧಿಯ ಮಾತಿದು ಕೇಳಣ್ಣ' ಎಂಬ ಒಂದು ರೀತಿಯ ಗತ್ತಿದೆ. ಮಕ್ಕಳ ಮನಸ್ಸನ್ನು ಅರಿತು ಕಾವ್ಯ ರಚಿಸುವ ಕಲೆಯು ಇಲ್ಲಿ ವ್ಯಕ್ತವಾಗಿದೆ.

ಇನ್ನು ಶ್ರೀ ಶಾಂತಿರಾಂರ 'ಬೆಳುದಿಂಗಳು', ಶ್ರೀ ನಾರಾಯಣರಾವ್ ಸಿಂಧೆ ಯವರ 'ಪ್ರಭಾತ ಕಾಲ'. ಶ್ರೀ ಈಶ್ವರ ಕಮ್ಮಾರರ 'ಮಕ್ಕಳ ಲೋಕ', ಶ್ರೀ ಕೃಷ್ಣ ಕುಲಕರ್ಣಿಯವರ 'ಹಾಡೋಣ ಬಾ' ಇವು ಕೆಲವು ಕವನ ಸಂಗ್ರಹಗಳಾಗಿವೆ. ಬೆಳುದಿಂಗಳಲ್ಲಿ ವ್ಯಕ್ತವಾದ ಭಾವನೆ, ಕಲ್ಪನೆಗಳು ಮಕ್ಕಳಿಗೆ ಸ್ವಲ್ಪ ಎತ್ತರದ ಮಟ್ಟದು ವೆನಿಸುತ್ತವೆ. 'ನಮಗೇಕಿಲ್ಲವೊ ಆ ಸ್ವರ್ಗ !', 'ಭಾರತಾಂಬೆಯ ಕರೆ'ಗಳಲ್ಲಿ ಇಂಥ ವಿಚಾರಗಳನ್ನು ಕಾಣುತ್ತೇವೆ. ಉಳಿದ ಅನೇಕ ಪದ್ಯಗಳು ಸುಲಭವಾಗಿದ್ದರೂ ಹೊಸತನವು ಕಂಡುಬರುವುದಿಲ್ಲ. ಗೊಂಬೆ, ಚಂದ್ರ, ಗಾಳೀಪಟ ಇವೇ ಮೊದಲಾದ ವಿಷಯಗಳನ್ನು ಕುರಿತು ಇಲ್ಲಿ ಪದ್ಯಗಳಿವೆ. ಇದೇ ಮಾತನ್ನು 'ಮಕ್ಕಳ ಲೋಕ'ಕ್ಕೂ ಅನ್ವಯಿಸಬಹುದಾಗಿದೆ. ಇಲ್ಲಿಯೂ ಚರ್ವಿತ ಚರ್ವಣವನ್ನೇ ಹೆಚ್ಚಾಗಿ ಕಾಣುತ್ತೇವೆ. ಇನ್ನು 'ಪ್ರಭಾತ ಕಾಲ' ಮತ್ತು 'ಹಾಡೋಣ ಬಾ' ಈ ಸಂಕಲನಗಳು ಒಳ್ಳೆಯವೆಂದು ಹೇಳೋಣ. 'ಪ್ರಭಾತಕಾಲ'ದಲ್ಲಿ 'ಪಾತರಗಿತ್ತಿ', 'ಕುಣಿಯೋಣ ಬಾ', 'ಭೀರಂಗಿ' ಮೊದಲಾದ ಕವನಗಳು ಮಕ್ಕಳಿಗೆ ಹಿಡಿಸುವಂತಿವೆ. 'ಅಮರ್ ರಹೇ ನೆಹರು', 'ಶಾಸ್ತ್ರೀಜೀ, ಬೆಳಗುವೆ ನಿನಗಾರತಿ' ಎಂಬ ಪದ್ಯಗಳು ನಮ್ಮ ಮುಖಂಡರ ಅಗಲುವಿಕೆಯನ್ನು ಕುರಿತು ಇವೆ. ಅಲ್ಲದೆ ಇಂಗ್ಲಿಷ್ ಕವನಗಳ ಕೆಲವು ಭಾವಾನುವಾದ ಗಳೂ ಸಹ ಇದರಲ್ಲಿ ಸೇರಿವೆ. ಹೀಗಾಗಿ ಇದೊಂದು ಕಲಬೆರೆಕೆಯಾದ ಕವನ ಸಂಗ್ರಹವು. ಆದರೆ 'ಹಾಡೋಣ ಬಾ' ಎಂಬುದು ಹೀಗಿಲ್ಲ. ಇದರಲ್ಲಿ ಬರುವ ಹದಿನೈದು ಕವನ ಗಳು ಮಕ್ಕಳ ಮನೋಭಾವವನ್ನು ಪ್ರತಿಬಿಂಬಿಸುತ್ತವೆ. 'ಮಿಠಾಯಿ, ಸಕ್ಕರೆಯ ಗಿಳಿ, ಗುಲಾಬಿ, ಬೆಕ್ಕಿನ ಸೊಕ್ಕು, ಕೋಳಿಯ ಕಾಳಿ, ಮಗು–ಗಳಿ' ಮೊದಲಾದವು ಇದರಲ್ಲಿಯ ಒಳ್ಳೆಯ ಮಕ್ಕಳ ಕವಿತೆಗಳೆನ್ನಲಡ್ಡಿಯಿಲ್ಲ. ಇಲ್ಲಿಯೇ ಶ್ರೀ ಬಿ. ಬಿ. ಬಡಿಗೇರ– ಇವರು ನಿಲ್ಲಿಸಿದ 'ಬಣ್ಣದ ಬಾವುಟ'ವನ್ನೂ ಕೈಮಾಡಿ ತೋರಿಸಬೇಕು. ಇದರಲ್ಲಿ ಇಪ್ಪತ್ತೆರಡು ಕವನಗಳಿವೆ. ಮಕ್ಕಳಲ್ಲಿ ಬೆರೆತು ಆಡಿ, ಹಾಡಿದ ಪ್ರಾಥಮಿಕ ಶಿಕ್ಷಕ ರೊಬ್ಬರ ಕವನಗಳಿವು. ಮಕ್ಕಳ ಕವಿತೆಗಳನ್ನು ರಚಿಸಿ, ಸರಕಾರದಿಂದ ಬಹುಮಾನಿತ ರಾದ ಶ್ರೀ ಎಸ್. ಡಿ. ಇಂಚಲ ಅವರು 'ಬಣ್ಣದ ಬಾವುಟ'ವನ್ನು ಕುರಿತು 'ಮಕ್ಕಳ ಮನವನ್ನು ಮೋಹಿಸುವ ಭಾವ ಸೌಂದರ್ಯವನ್ನು ಇಲ್ಲಿ ಕಾಣಬಹುದೆಂದು ಮೆಚ್ಚಿ ನುಡಿದಿದ್ದಾರೆ.

'ಕಾರಂಜಿ'ಯು ಅಜಿತಕುಮಾರ ಮಿರ್ಜಿಯ ಹತ್ತು ಕವನಗಳ ಸಂಕಲನವು. ಇದೊಂದು ಬಾಲಕನೇ ಬಾಲಕರಿಗಾಗಿ ರಚಿಸಿದ ಕವನಗಳ ಗುಚ್ಛವಾಗಿದೆ. ಇಲ್ಲಿ ಅರಳಿದ ಕವನಗಳ ವಿಷಯದಲ್ಲಿ ಶ್ರೀ ಸಿದ್ಧಯ್ಯ ಪುರಾಣಿಕರು 'ಅಜಿತ' ಕಾರಂಜಿಯ ಮೇಲೆ ಕವನ ಕಟ್ಟಿ ಕವಿಯಾದ ದಿನ ಅವನಿಗೆಷ್ಟು ಆನಂದವಾಗಿದ್ದಿತೋ ಅಷ್ಟೇ ಆನಂದ ನನಗೂ ಆಗಿದ್ದಿತು' ಎಂದು ಮುನ್ನುಡಿಯಲ್ಲಿ ಹೇಳಿ 'ಇಲ್ಲಿಯ 'ಕಾಮನಬಿಲ್ಲು' 'ಚಂದಿರ' 'ಸಾಗರ' 'ಉಪವನ' ಇತ್ಯಾದಿ ರಮಣೀಯ ವಸ್ತುಗಳನ್ನು ಕಂಡಾಗ ಬಾಲ ಹೃದಯದಲ್ಲಿ ಯಾವ ಭಾವತರಂಗಗಳೇಳುತ್ತವೆ, ಎಂಥ ಹಿಗ್ಗು ಹಾಡಾಗಿ ಹೊಮ್ಮುತ್ತದೆ-ಎಂಬುದನ್ನು ಅರಿತುಕೊಳ್ಳಬೇಕೆನ್ನುವವರು ಅಜಿತಕುಮಾರನ ಈ ಕವಿತೆಗಳನ್ನು ಓದಬೇಕು' ಎಂದು ಸೂಚಿಸುವರು, ಈ ಬಾಲದೃಷ್ಟಿಗೆ ವಿಮಾನವು 'ಬಣ್ಣದ ಚಂದದ ಮೀನಾಗಿ ಗೋಚರಿಸುವುದೂ, ಮೋಟಾರಿನ ಮುಂದಿನ ದೀಪಗಳು 'ಬೆಳಕನು ಬೀರುವ' ಕಣ್ಣುಗಳಾಗಿ ಕಾಣುವುದೂ ಸ್ವಾಭಾವಿಕವೆನಿಸುವುದು, ಹೀಗಾಗಿ ಇದೊಂದು ಮಕ್ಕಳ ಕವನ ಸಂಕಲನವು ಕನ್ನಡಕ್ಕೆ ಈ ಕಾಲದ ವಿಶಿಷ್ಟ ಕಾಣಿಕೆಯಾಗಿದೆ.

ಹೀಗೆ ಮಕ್ಕಳ ಕಾವ್ಯ ಗಂಗೆಯು ಕಳೆದ ಇಪ್ಪತ್ತೈದು ವರ್ಷಗಳಲ್ಲಿ ದಡದುಂಬಿ ಹರಿದಿದೆ. ಹಾಗೆ ಹರಿಯುವಾಗ ಕಸ, ಕೊಳೆ, ಕಡ್ಡಿಗಳು, ತೇಲಿ ಬರುವುದು ಸಹಜವಾಗಿದೆ. ಅವುಗಳನ್ನು ಬದಿಗೆ ಸರಿಸಿದಾಗ ತಿಳಿಜಲದ ರಾಶಿಯೇ ನಮಗೆ ಗೋಚರಿಸದೆ ಇರದು. ಅದು ಕನ್ನಡ ಮಕ್ಕಳ ಹೃದಯದ ಹೊಲವನ್ನು ನೆನೆಯಿಸಿ, ಫಲವತ್ತಾದ ಭೂಮಿಯನ್ನು ಸಿದ್ಧಪಡಿಸುವುದರಲ್ಲಿ ಸಂದೇಹವಿಲ್ಲ. ಈ ಗಂಗೆಗೆ ಗಂಗೋತ್ರಿಯಾಗಿ ನಮ್ಮ ರಾಷ್ಟ್ರಕವಿ ಕುವೆಂಪು ಅವರು ನಿಂತಿದ್ದಾರೆ. ಅಲ್ಲಿ ಅವರ ಅಜೇಯ ಕಾವ್ಯ ಶಕ್ತಿಯು ಅಜಿತನ 'ಕಾರಂಜಿ'ಯಲ್ಲಿ ಬಣ್ಣ ಬಣ್ಣದ ಹನಿಯಾಗಿ ನೆನೆಯುತ್ತಿದೆ ಇಲ್ಲಿ! ಇದು ಕನ್ನಡ ಮಕ್ಕಳ ಕಾವ್ಯದ ಬೆಳವಣಿಗೆಯ ದಿಕ್‌ಸೂಚಿಯಾಗಿದೆ.

೪

ತೊಟ್ಟಿಲಲ್ಲಿ ಇರುವಾಗ ಮಗುವು ತಾಯಿಯ ಲಾಲಿಗಳಿಂದ ಸಂತಸಗೊಳ್ಳುವುದು. ಆ ರಾಗವೇ ಅದರ ಕಾವ್ಯ. ಮುಂದೆ ಬುದ್ಧಿ ತಿಳಿದಮೇಲೆ ಮಗುವು ತಾಯಿಯಿಂದ ಅಜ್ಜಿ-ಅಜ್ಜಂದಿರನ್ನು ಆಶ್ರಯಿಸುವುದು. ಆಗ ಅದಕ್ಕೆ ಕಥೆಗಳೇ ಅಚ್ಚು-ಮೆಚ್ಚಿನವಾಗುತ್ತವೆ. ಅದರಲ್ಲಿ ಕಥೆಗಳೆಂದರೆ ಎಲ್ಲರಿಗೂ ಪ್ರೀತಿ. ಹೀಗಾಗಿ ಮಕ್ಕಳ ಸಾಹಿತ್ಯದಲ್ಲಿಯೂ ಕಥೆಗೇ ಪ್ರಾಧಾನ್ಯ ಪಟ್ಟ. ಈ ಕಳೆದ ಇಪ್ಪತ್ತೈದು ವರ್ಷಗಳಲ್ಲಿಯಂತೂ ಕನ್ನಡ ಮಕ್ಕಳ ಸಾಹಿತ್ಯದಲ್ಲಿ ಕಥಾ ವಿಭಾಗವು ವಿಸ್ತಾರವಾಗಿಯೂ ಸುಪುಷ್ಟವಾಗಿಯೂ ಬೆಳೆದಿದೆ. ಈ ಸಮಾಲೋಚನೆಗೇನೇ ಸುಮಾರು ಇನ್ನೂರು ಐವತ್ತಕ್ಕೂ ಮಿಕ್ಕಿ ಮಕ್ಕಳ ಕಥಾ ಪುಸ್ತಕಗಳು ಲಭಿಸಿವೆ. ನಾವು ನೋಡದೆ ಇದ್ದ ಮಕ್ಕಳ ಕಥಾಪುಸ್ತಕಗಳು ಇನ್ನೆಷ್ಟಿವೆಯೋ ಹೇಳಲು ಬರುವಂತಿಲ್ಲ. ಅಂದ ಮೇಲೆ ಈ ಕಥಾಸಾಹಿತ್ಯ ಸೃಷ್ಟಿಯ ವಿಸ್ತಾರದ ಕಲ್ಪನೆಯು ಯಾರಿಗೂ ಉಂಟಾಗುವಂತಿದೆ. ಅದರೊಡನೆಯೇ,

ಈ ಎಲ್ಲ ಕಥೆಗಳ ಸಮಾಲೋಚನೆಯನ್ನು ಪರಿಮಿತವಾದ ಈ ಲೇಖನದಲ್ಲಿ ಮಾಡುವುದು ಅಷ್ಟೇ ಕಷ್ಟಕರವೆಂಬುದನ್ನು ಮರೆಯುವಂತಿಲ್ಲ.

ಇನ್ನು ಈ ಕನ್ನಡ ಮಕ್ಕಳ ಸಾಹಿತ್ಯಸೃಷ್ಟಿಯಲ್ಲಿ ವಿವಿಧ ರೂಪುಗಳನ್ನು ನಾವು ಕಾಣುತ್ತೇವೆ. ಇಲ್ಲಿ ವಸ್ತುಗಳ ವೈವಿಧ್ಯವಿದೆ, ತರತರದ ಭಾಷೆಗಳ ವೈಷಮ್ಯವಿದೆ, ಪ್ರಾದೇಶಿಕತೆಯಿದೆ, ಮಕ್ಕಳ ವಯೋವಾರ ವಿಭಜನೆಯೂ ಇದೆ, ಅನುವಾದಿತ ಸಾಹಿತ್ಯ ವಿದೆ, ಸಂಗ್ರಹಿತವೂ ಇದೆ, ಸಂಪಾದಿತವೂ ಇದೆ, ಸ್ವತಂತ್ರ ರಚನೆಯೂ ಇದೆ. ಹೀಗೆ ಹಲವಾರು ರೀತಿಯಲ್ಲಿ ಮಕ್ಕಳ ಕಥಾ ಸಾಹಿತ್ಯವು ಬೆಳೆದುಬಂದಿದೆ. ಮೊದಲು ಸಾಹಿತ್ಯರಚನೆ, ಆಮೇಲೆ ಅದಕ್ಕೆ ಸಂಬಂಧಿಸಿದ ಶಾಸ್ತ್ರದ ರಚನೆ-ಎನ್ನುವಂತೆ ಇನ್ನು ಮುಂದಿನ ಪ್ರೌಢ ದೆಸೆಯಲ್ಲಿ ನಾವು ಮಕ್ಕಳ ಸಾಹಿತ್ಯವನ್ನು ಶಾಸ್ತ್ರಿಯ ದೃಷ್ಟಿಯಿಂದ ಬೆಳೆಯಿಸಬೇಕಾಗಿದೆ. ಅದಕ್ಕೊಂದು ನಿಯಮ ನಿರ್ಬಂಧಗಳನ್ನು ರೂಪಿಸಿಕೊಳ್ಳ ಬೇಕಾಗಿದೆ. ಈಗಿದ್ದ ಸಾಹಿತ್ಯವನ್ನು ವಿಭಜಿಸಿ, ವಿಂಗಡಿಸಿ ಶಾಸ್ತ್ರೀಯ ದೃಷ್ಟಿಯಿಂದ ಅಭ್ಯಸಿಸಲೂಬೇಕು. ಇವೆಲ್ಲ ಇನ್ನು ಮುಂದೆ ನಡೆಯಬೇಕಾದ ಕೆಲಸಗಳಾಗಿವೆ. ಆದರೆ ಇಲ್ಲಿ ಈಗ ಮಾಡುತ್ತಿರುವುದು ತೀರ ಸ್ಥೂಲವಾದ ಸಮಾಲೋಚನೆಯಾಗಿದೆ.

ದಿ. ಪಂಜೆ ಮಂಗೇಶರಾಯರು ಕನ್ನಡ ಮಕ್ಕಳ ಸಾಹಿತ್ಯ ರಚನೆಯಲ್ಲಿ ಮೊದಲ ನೆಯ ಪಂಕ್ತಿಯಲ್ಲಿ ನಿಲ್ಲುವಂಥವರಲ್ಲಿ ಒಬ್ಬರು. ಅವರು ಶಾಲಾ ಗುರುಗಳಾಗಿ ಕೆಲಸ ಮಾಡಿದವರು. ಮಕ್ಕಳ ಸಹವಾಸವನ್ನು ಹೊಂದಿ, ಅವರ ಭಾವನೆ, ಕಲ್ಪನೆ, ಅಭಿರುಚಿಗಳನ್ನು ಅರ್ಥಮಾಡಿಕೊಂಡವರು. ಮಕ್ಕಳ ಭಾಷಾ ಶಕ್ತಿಯನ್ನೂ ಅರಿತು ಕೃತಿಗಳನ್ನು ರಚಿಸಿದವರು. ಅವರ 'ಮೆಣಸಿನ ಕಾಳಪ್ಪ', 'ಅಗೊಳಿ ಮಂಜಣ್ಣ', 'ಒಡ್ಡನ ಓಟ' ಈ ಮೂರು ಕೃತಿಗಳು ನಮ್ಮ ಕೈಗೆ ದೊರೆತಿವೆ. ಇವು ಮೂರೂ ಸ್ವತಂತ್ರ ರಚನೆಗಳಾಗಿವೆ. ಮಕ್ಕಳಿಲ್ಲದ ಜವಳಿ ಅಂಗಡಿಕಾರನಿಗೆ ಮೆಣಸಿನಕಾಳು ಮಗನಾಗಿ ನಿಂತು ಸಲ್ಲಿಸಿದ ಸೇವೆಯೇ 'ಮೆಣಸಿನಕಾಳಪ್ಪ'ದ ಕಥಾವಸ್ತುವಾಗಿದೆ. ಮಕ್ಕಳಿಗೆ ಬೇಕೆನಿಸುವ ಇಲಿ, ಬೆಕ್ಕು, ಏಡಿ, ಹುಲಿ ಇತ್ಯಾದಿ ಪ್ರಾಣಿಗಳ ಪ್ರವೇಶವೂ ಕಥೆಯಲ್ಲಿದೆ. ಅದರಂತೆ ಪುನರುಕ್ತಿಯ ಗತ್ತು ಇದ್ದು, ಕಥೆ ಕುತೂಹಲಕಾರಿಯಾಗಿದೆ. ಅದರಿಂದ ಮಕ್ಕಳು ಸಹಜವಾಗಿಯೇ ಇದನ್ನು ಮೆಚ್ಚಿಕೊಳ್ಳುತ್ತಾರೆ. ಇನ್ನು ಇವರ 'ಅಗೊಳಿ ಮಂಜಣ್ಣ'ವು ಇನ್ನಿಷ್ಟು ಬೆಳೆದ ಮಕ್ಕಳು ಓದಿಕೊಳ್ಳಬಲ್ಲ ಕಥೆಯಾಗಿದೆ. 'ಒಡ್ಡನ ಓಟ'ದಲ್ಲಿ ಮೂವರು ಹೆಡ್ಡ ಮಕ್ಕಳ ಕಥೆಯಿದೆ. ಅದರಲ್ಲಿ ಒಡ್ಡ ರಾಜನಾಗಿ, ರಾಜನ ಮಗಳನ್ನು ಮದುವೆಯಾದ ಕಥೆಯು ಸ್ವಾರಸ್ಯಕರವಾಗಿ ಮೂಡಿಬಂದಿದೆ. ಮಕ್ಕಳಿಗೆ ತಕ್ಕ ಭಾಷೆಯೂ ಇದೆ. ಲೇಖಕರಲ್ಲಿ ಮಕ್ಕಳ ಸಾಹಿತ್ಯರಚನೆಯ ವಿಷಯ ದಲ್ಲಿ ಶಾಸ್ತ್ರೀಯ ಪ್ರಜ್ಞೆಯೂ ಇದೆ. ಅವೆಲ್ಲವೂ ಈ ಕೃತಿಗಳಲ್ಲಿ ವ್ಯಕ್ತವಾಗಿವೆ. ಅದರಿಂದ ಸುಂದರವಾಗಿವೆ, ಸಫಲವಾಗಿವೆ.

ಕನ್ನಡ ಮಕ್ಕಳ ಸಾಹಿತ್ಯದಲ್ಲಿ ತುಂಬ ಕೃಷಿಮಾಡಿದವರು ಶ್ರೀ ಜಿ. ಪಿ. ರಾಜರತ್ನಂ ಅವರು. ಅವರು ಮಕ್ಕಳ ಕಥೆ, ಕವನ, ಚುಟುಕಗಳನ್ನು ವಿಪುಲವಾಗಿ ರಚಿಸಿದ್ದಾರೆ.

ಆದರೆ ಇಲ್ಲಿ ನಮ್ಮ ಅವಲೋಕನೆಗೆ ನಿಲುಕಿದುವು ಅವರ ಮೂರು ಕೃತಿಗಳು ಮಾತ್ರ. ಅವು 'ಅಣ್ಣ-ತಮ್ಮ' 'ಮೆರವಣಿಗೆ', 'ಕಣ್ಣಿಗೆ ಹಬ್ಬ' ಎಂದು ಇವೆ. 'ಅಣ್ಣ-ತಮ್ಮ' ದಲ್ಲಿ ಶ್ರೀಯುತರು ಇಂಗ್ಲಿಷಿನಿಂದ ಎರಡು ಕಥೆಗಳನ್ನು ಅನುವಾದಿಸಿಕೊಟ್ಟಿದ್ದಾರೆ. ಇಲ್ಲಿ ಬರುವ ಕಥೆಗಳು ಸ್ವಲ್ಪ ಉದ್ದವಾದ ಕಥೆಗಳೇ. ಅನೇಕ ಘಟನೆ, ಅನೇಕ ವಿಭಾಗ ಗಳಿಂದ ಕೂಡಿದುವು. ಆದರೂ ಕಥೆಗಳು ಮಕ್ಕಳಿಗೆ ಮೋಹಕವಾಗಿವೆ. ಹೇಳುವಿಕೆಯಲ್ಲಿ ಸರಳತೆಯಿದೆ, ಸ್ಪಷ್ಟತೆಯಿದೆ. ಚಿಕ್ಕ ಚಿಕ್ಕ ವಾಕ್ಯಗಳಿಂದ ಕಥೆಯು ಘಟ್ಟಘಟ್ಟವಾಗಿ ಮುಂದೆ ಸಾಗುತ್ತದೆ. 'ಅಣ್ಣ-ತಮ್ಮ'ದಲ್ಲಿ 'ಹರಿಣೀ' ಎಂಬುದು ಇನ್ನೊಂದು ಕಥೆ ಸೇರಿದೆ. 'ಮೆರವಣಿಗೆ'ಯಲ್ಲಿ ನಯಸೇನನ 'ಧರ್ಮಾಮೃತ'ದಿಂದ ಹನ್ನೆರಡನೆಯ ಕಥೆಯನ್ನು ಮಕ್ಕಳ ಶೈಲಿಯಲ್ಲಿ ಸಂಗ್ರಹಿಸಿಕೊಟ್ಟಿದ್ದಾರೆ. 'ಕಣ್ಣಿಗೆ ಹಬ್ಬ'ದಲ್ಲಿ ಶ್ರೀರಾಮ, ಬುದ್ಧ, ಗಾಂಧೀಜಿಯವರ ಜೀವನದೊಳಗಿನ ಕೆಲವು ಘಟನೆಗಳನ್ನೂ ಆಯ್ದುಕೊಂಡು, ಮಕ್ಕಳಿಗಾಗಿ ಕಥನರೂಪದಲ್ಲಿ ಹೇಳಿದ್ದಾರೆ. ಇವು ಮೂರೂ ಕೃತಿಗಳು ಸುಂದರ ಶೈಲಿಯಲ್ಲಿದ್ದು, ಮಕ್ಕಳ ಅಭಿರುಚಿಗೆ ತಕ್ಕಂತೆ ವಸ್ತು ಹಾಗು ನಿರೂಪಣೆಯಿಂದ ಕೂಡಿವೆ.

ಹೊಯಿಸಳರು ಕನ್ನಡದಲ್ಲಿ ಮಕ್ಕಳ ಕಥೆಗಳನ್ನು ಬರೆಯುವುದರಲ್ಲಿ ಹೆಸರಾದವರು. ಅವರು ಕೆಲವು ಕಥಾ ಸಂಗ್ರಹಗಳನ್ನೂ ಕನ್ನಡ ಕಂದರಿಗೆ ನೀಡಿದ ಜನಪ್ರಿಯ ಲೇಖಕರು. ಅವರ ಎಂಟು ಕಥಾ ಸಂಕಲನಗಳು ಇಲ್ಲಿ ವಿವೇಚನೆಗೆ ಇವೆ. ಇವೆಲ್ಲವುಗಳಲ್ಲಿ ಸೇರಿ ಸುಮಾರು ಎಪ್ಪತ್ತೈದು ಕಥೆಗಳು ನಮ್ಮ ಮುಂದೆ ಇವೆ. ಹೊಯಿಸಳರ 'ಹೂವಿನ ಹಾಸಿಗೆ'ಗೆ ಮುನ್ನುಡಿಯನ್ನು ಬರೆಯುತ್ತ ಪ್ರಾ. ರಂ. ಶ್ರೀ ಮುಗಳಿಯವರು 'ಶ್ರೀ ಹೊಯಿಸಳರಿಗೆ ಮಕ್ಕಳ ಲೋಕದಲ್ಲಿ ಸಹಜ ಪ್ರವೇಶವಿದೆ. ಅವರ ಜೀವನದೊಡನೆ ಅವರು ಒಂದಾಗಬಲ್ಲರು. ಮಕ್ಕಳೊಡನೆ ಆಟವಾಡಿ ಅವರ ಆಟ ನೋಟಗಳನ್ನು ಬಹು ಚೆನ್ನಾಗಿ ನಿರೀಕ್ಷಿಸಿದ್ದಾರೆ. ಹೀಗಾಗಿ ಅವರ ಬರವಣಿಗೆಯು ಮಕ್ಕಳ ಚಮತ್ಕೃತಿ ಪ್ರಿಯವಾದ ಕಲ್ಪನಾವಿಲಾಸವನ್ನೂ ತನ್ನಲ್ಲಿ ಅಳವಡಿಸಿಕೊಂಡಿದೆ; ಮಕ್ಕಳ ಚಂಚಲ ವೃತ್ತಿಯನ್ನು ತೊಡೆದು ಕಲೆಯ ಪರಿಪೂರ್ಣ ಸಂಯೋಜನೆಯನ್ನು ಸಾಧಿಸಿದೆ. ಇಂಥ ಬರವಣಿಗೆಯಿಂದ ಮಕ್ಕಳ ಸಹಜ ಪ್ರವೃತ್ತಿಗಳಿಗೆ ಸಮಾಧಾನವು ದೊರೆವುದಲ್ಲದೆ, ಅವರ ಸಂಸ್ಕೃತಿ ಹೆಚ್ಚುತ್ತದೆ, ಮನಸ್ಸು ಮಾಗುತ್ತದೆ.' ಎಂದು ಹೇಳಿದ್ದಾರೆ. ಈ ಮಾತುಗಳನ್ನು ಹೊಯಿಸಳರು ಮುಂದೆಯೂ ತಮ್ಮ ಕಥಾ ಸಾಹಿತ್ಯದಲ್ಲಿ ನಡೆಯಿಸಿಕೊಟ್ಟಿದ್ದಾರೆ. ಹೊಯಿಸಳರು ಕಥೆ ಹೇಳುವ ರೀತಿ ಬಹು ಮುದ್ದಾಗಿದೆ. ಆದರ ವಸ್ತುವು ಎಲ್ಲಿಂದಲೇ ಬಂದಿರಲಿ. 'ಹೂವಿನ ಹಾಸಿಗೆ'ಯನ್ನು ಬಿಡಿಸುತ್ತ ಅವರು 'ಬಹಳ ಹಿಂದಿನಕಾಲ. ಆಗ ಅರಬ್ಬಿದೇಶದಲ್ಲಿ ಒಬ್ಬ ರಾಜ ಇದ್ದ. ಆ ರಾಜನ ಹೆಸರು ಅಬು ಬಿನ್ ಆಧಂ. ಎರಡೆರಡು ಸಾರಿ ಹೇಳಿಕೊಳ್ಳಿ ಈ ಹೆಸರು. ಅಬು ಬಿನ್ ಆಧಂ ! ಅಬು ಬಿನ್ ಆಧಂ ! ಎಲ್ಲಿ ? ಅರೇಬಿಯಾ ದೇಶದಲ್ಲಿ.' ಎಂದು ಕಥೆಯನ್ನು ಆರಂಭಿಸುತ್ತಾರೆ. ಇಲ್ಲಿ ವಾಕ್ಯಗಳು ಚಿಕ್ಕವು ಪದಗಳೂ ಸಹ ಚಿಕ್ಕವು.

ಪ್ರಶ್ನ ಪದ್ಧತಿಯಿದೆ. ಪುನರುಕ್ತಿಯ ಬಲವಿದೆ. ಒಟ್ಟಿನಲ್ಲಿ ತಾಯಿ ತುತ್ತುಮಾಡಿ ಮಗುವಿಗೆ ತಿನ್ನಿಸುವಂತಿದೆ, ಈ ರೀತಿ. ಇದನ್ನವರು ತಮ್ಮ 'ಪೋರಿ, ಬದುಕುವ ಮಂತ್ರ, ಪುಟ್ಟು ತಮ್ಮ ಯಾರು? ರಾಜನ ಬುದ್ಧಿವಂತಿಕೆ, ವೀರಕುಮಾರ, ಅದಕ್ಕೇ ಆ ಹೆಸರು, ಆನೆ ಇರುವೆ' ಇವೇ ಮೊದಲಾದ ಕಥಾಸಂಗ್ರಹಗಳಲ್ಲಿ ವ್ಯಕ್ತಪಡಿಸಿದ್ದಾರೆ. ಅದರಿಂದ ಕನ್ನಡನಾಡಿನ ಮಕ್ಕಳಿಗೆ ಅಚ್ಚು–ಮೆಚ್ಚಿನವರಾಗಿದ್ದಾರೆ.

ಶ್ರೀ ಬಿ. ಶ್ರೀ. ಪಾಂಡುರಂಗರಾಯರು ಬೆಂಗಳೂರಿನಲ್ಲಿ ತಮ್ಮ ಮನೆಯನ್ನೇ 'ಮಕ್ಕಳ ಮಂಟಪ'ವನ್ನಾಗಿ ರೂಪಿಸಿ ಮಕ್ಕಳ ಸಹವಾಸದಲ್ಲಿಯೇ ಕಾಲ ಕಳೆಯುವ ಸಹೃದಯರು. ಇವರು ಆದರ್ಶ ಶಿಕ್ಷಕರೆಂದೂ ಭಾರತ ಸರಕಾರದಿಂದ ಗೌರವಾನ್ವಿತರಾಗಿದ್ದಾರೆ. ಇಂಥವರು ಮೊದಲಿನಿಂದಲೂ ಮಕ್ಕಳ ಸಾಹಿತ್ಯರಚನೆ, ಪ್ರಕಟಣೆ, ಪ್ರಚಾರಗಳಲ್ಲಿ ನಿರತರಾಗಿರುವುದು ಸ್ವಾಭಾವಿಕವಷ್ಟೆ? ಅವರ 'ಜಾನುಶ್ರುತಿ–ಸತ್ಯಕಾಮ', 'ಮುದ್ದು ಸಿಂಗಾರಿ', 'ತುಂಟರ ಗುರು' ಇವು ಇಲ್ಲಿ ಸಮಾಲೋಚಿಸತಕ್ಕ ಕೃತಿಗಳಾಗಿವೆ. ಜಾನುಶ್ರುತಿ–ಸತ್ಯಕಾಮ ಉಪನಿಷತ್ತಿನಿಂದ ಆಯ್ದ ಕಥೆಯಾಗಿದೆ. ಸುಮಾರು ಹನ್ನೆರಡು–ಹದಿಮೂರು ವರ್ಷ ವಯಸ್ಸಿನ ಮಕ್ಕಳು ಓದಬಹುದಾದ ಕೃತಿಯಾಗಿದೆ. ಗಂಭೀರ ಶೈಲಿಯಲ್ಲಿದೆ. ಇವರ 'ಮುದ್ದುಸಿಂಗಾರಿ' ಬಹು ಮುದ್ದಾದ ಮಕ್ಕಳ ಕಥೆ. ಆ ಚಿಕ್ಕ ಹುಡಿಗೆ ಹೊರಗೆ ಅಡ್ಡಾಡಿಕೊಂಡು ಬರುವುದೇ ವಸ್ತು. ಆಗ ಅವಳು ದಾರಿಯಲ್ಲಿ ಕೋಳಿ, ಬೆಕ್ಕು, ನಾಯಿಗಳನ್ನು ಸಂಧಿಸಿ, ಮಾತು–ಕತೆ ನಡೆಯಿಸುವಳು. ಅವುಗಳನ್ನು ಜೊತೆಯಲ್ಲಿ ಕರೆದುತರುವಳು. ಮಕ್ಕಳಿಗೆ ರುಚಿಸುವ ಕೃತಿಯಿದು. 'ತುಂಟರ ಗುರು' ಎಂಬುದೂ ಇಂಥದೇ. ಮೋಹನ ಎಂಬ ಹುಡುಗನ ಕಥೆಯಾಗಿದೆ. ಅವನ ಗೆಳೆಯರು ಬೆಕ್ಕು, ನಾಯಿ, ಮೊಲ, ಕರು, ಹುಂಜ ಮತ್ತು ಪಾರಿವಾಳಗಳಾಗಿದ್ದಾರೆ. ಅವೆಲ್ಲ ಪ್ರಾಣಿಗಳ ತುಂಟತನ ಇಲ್ಲಿ ಪ್ರಕಟವಾಗಿದೆ. ಅವುಗಳಿಗೆ ಈ ಮೋಹನ ಗುರುವೆಂದು ಚಿತ್ರಿಸಿದೆ. ಮಕ್ಕಳು ಓದಬಹುವಾದ ಸಾಮಾನ್ಯ ಕಥೆಗಳಿವು. ಶೈಲಿಯು ಸರಳವಾಗಿದೆ.

ಶ್ರೀ ದಾಮೋದರ ಬಾಳಿಗರು 'ಸೀನಿನ ಶೀನ', 'ಗೋವಿನ ಕತೆ', 'ಚಾಡಿ ಮೈನ', 'ಅಳಿಲಸೇವೆ' ಎಂಬ ನಾಲ್ಕು ಮಕ್ಕಳ ಕಥಾ ಪುಸ್ತಕಗಳನ್ನು ನೀಡಿದ್ದಾರೆ. ಇವುಗಳಲ್ಲಿ ಸೀನ ಎಂಬ ರೈತನು ದುಡ್ಡಿನ ಬೆಳೆಯನ್ನು ಬೆಳೆಯುವ ಹವ್ಯಾಸದಲ್ಲಿದ್ದು, ಶೀನಿನ ರೋಗಕ್ಕೆ ತುತ್ತಾಗುತ್ತಾನೆ. ಅದರಿಂದ ಬಿಡುಗಡೆಹೊಂದಿ, ಜನರಿಗೆ ಬೇಕಾಗುವ ಗೆಣಸನ್ನು ಬೆಳೆಯುವ ಪಾಠ ಕಲಿತ ಕಥೆ 'ಸೀನಿನ ಶೀನ'ದಲ್ಲಿದೆ. ಆಹಾರ ಪದಾರ್ಥಗಳನ್ನು ಹೆಚ್ಚಾಗಿ ಬೆಳೆಯಬೇಕೆಂಬ ವಿಚಾರಕ್ಕೆ ಪ್ರಚೋದನೆಯು ಇಲ್ಲಿದೆ. ಆದರೆ ಅದು ಕೇವಲ ಪ್ರಚಾರ ಕಥೆಯಾಗದಂತೆ ಕಲಾತ್ಮಕವಾಗಿ ಹೆಣೆದ ರೀತಿಯು ಚೆನ್ನಾಗಿದೆ. 'ಗೋವಿನ ಕತೆ'ಯಂತೂ ಪ್ರಸಿದ್ಧ ಜಾನಪದ ಕಾವ್ಯ ಕಥೆಯ ಸರಳ ಗದ್ಯರೂಪವಾಗಿದೆ. 'ಅಳಿಲ ಸೇವೆ'ಯಲ್ಲಿ ಅಳಿಲಸೇವೆ ಮತ್ತು ಹುಚ್ಚುನಾಯಿ ಎಂಬ ಎರಡು ಪ್ರಾಣಿ ಕಥೆಗಳಿವೆ. 'ಚಾಡಿ ಮೈನ'ವೂ ಕೂಡ ಇಂತಹವೇ ಆದ ನಾಲ್ಕು ಕಥೆಗಳ ಸಂಗ್ರಹವಾಗಿದೆ.

ನಮಗೆ ದೊರೆತ ಈ ನಾಲ್ಕು ಮಕ್ಕಳ ಪುಸ್ತಕಗಳಿಂದ ಬಾಳಿಗರಲ್ಲಿ ಕಥನ ಕಲೆಯು ಚೆನ್ನಾಗಿದೆ–ಎಂಬುದು ಗೊತ್ತಾಗುತ್ತದೆ. ಮಕ್ಕಳ ಭಾವನೆ, ಕಲ್ಪನೆಗಳನ್ನು ಅರಿತು ಕಥೆಗಳನ್ನು ಬರೆಯಬಲ್ಲರು. ಶೈಲಿಯು ವಸ್ತು, ಪ್ರಸಂಗಗಳಿಗೆ ಅನುಸರಿಸಿ ಮಿಡಿದಿದೆ. ಅದರಲ್ಲಿ ಪ್ರಾದೇಶಿಕತೆಯೂ ಇಲ್ಲದೆ ಇಲ್ಲ.

ಮಕ್ಕಳಿಗೆ ಮನೋಹರವಾದ ಕಥೆಗಳನ್ನು ಹೇಳುವುದರಲ್ಲಿ ಕೊಡಗಿನ 'ಭಾರತೀ ಸುತ'ರು ಹೆಸರಾದವರು. ಇವರು ಎರಡು ಮೂರು ಮಕ್ಕಳ ಸಾಹಿತ್ಯ ರಚನಾಲಯ ಗಳಲ್ಲಿ ಇದ್ದು, ಮಾದರಿಯ ಕೃತಿಗಳನ್ನೂ ರಚಿಸಿದವರು. ಇವರು ಇತ್ತೀಚೆಗೆ ಹತ್ತಾರು ಮಕ್ಕಳ ಕಥಾಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಇವರ ಪ್ರತಿಯೊಂದು ಪುಸ್ತಕವು ಒಂದೇ ಕಥೆಗೆ ಮೀಸಲಾಗಿರುತ್ತದೆ. ೧೯೫೭ರಿಂದ ಈಚೆಗೆ ಪ್ರಕಟವಾದ ಹತ್ತು ಮಕ್ಕಳ ಕಥೆಗಳು–ಹತ್ತು ಪುಸ್ತಕಗಳೇ ಅವು–ನಮ್ಮೆದುರಿಗೆ ಇವೆ. ಇವರ 'ಮರಿಯಾನೆ'ಯ ಕಥೆಯು ಅಜ್ಜ ಮೊಮ್ಮಕ್ಕಳಿಗೆ ಕಥೆ ಹೇಳುವ ಕ್ರಮದಲ್ಲಿ ಇದೆ. ಅದರ ಪ್ರಾರಂಭ ಬಹು ಮೋಜಿನದಾಗಿದೆ. ಮಳೆಗಾಲದಲ್ಲಿ ಊಟಮಾಡಿ, ಮಧ್ಯಾಹ್ನ ಮಲಗಿದ ಅಜ್ಜನನ್ನು ಎಚ್ಚರಿಸಿ ಶೀನಿಯ ಚಟುವಟಿಕೆಯು ತುಂಬ ಚಮತ್ಕಾರದಿಂದ ಕೂಡಿದುದು. ಅವನು ಬೆಕ್ಕಿನಂತೆ ಒದರಿದ ರೀತಿಯು ಮಕ್ಕಳ ಮನಸ್ಸಿಗೆ ಹಿಡಿಸು ವುದು. ಕ್ಷೌರಿಕ ದಂಪತಿಗಳು ಕಳ್ಳರನ್ನು ಫಜೀತಿಗೊಳಿಸಿದ ಹಾಸ್ಯರಸಭರಿತ ಕಥೆಯೇ 'ಕಳ್ಳರ ಫಜೀತಿ!'ಯಲ್ಲಿದೆ. 'ಕಿಲಾಡಿ ಗವುಜಿಗ' ಅಡವಿಯ ಹಕ್ಕಿಯ ಚತುರ ತನದ ಕಥೆಯಾಗಿದೆ. 'ಬೇಸ್ತು ಬಿದ್ದ ನರಿಯು' ಕೂಡ ಇಂಥ ತುಂಟತನಕ್ಕೆ ಒಳ ಗಾದುದು. ಪ್ರಾಣಿ ಕಥೆಯಾಗಿದೆಯಿದು. 'ಗೆಳೆಯ ಮೊಲರಾಯ' 'ಹುಲಿಗಳ ದಿಬ್ಬಣ', 'ಕೊಪ್ಪರಿಗೆ ಚಿನ್ನ' ಇವು ಕ್ರಮವಾಗಿ ಮೊಲ, ಹುಲಿ, ಹಾವುಗಳು ಮನುಷ್ಯರಿಗೆ ಉಪಕಾರ ಮಾಡಿದ ಕಥೆಗಳಾಗಿವೆ. ಮನುಷ್ಯನಿಂದ ಆದ ಸ್ವಲ್ಪ ಸಹಾಯ ವನ್ನೇ ಇವು ದೊಡ್ಡದೆಂದು ತಿಳಿದ ಕೃತಜ್ಞ ಪ್ರಾಣಿಗಳೆಂದು ಲೇಖಕರು ಇಲ್ಲಿ ಕಥೆ ಕಟ್ಟಿ ಹೇಳಿದ್ದಾರೆ. 'ಹನ್ನೊಂದು ಹಂಸಗಳು' ಎಂಬುದು ಎಲಿಜ ಎಂಬ ರಾಜಕುಮಾರಿಯ ಕಥೆಯಾಗಿದೆ. 'ಕಾಣೆಯಾದ ಕಬ್ಬಿಣರಾಯ!' ಲೋಹಗಳಲ್ಲಿ ಕಬ್ಬಿಣ ಮಹತ್ವ ದ್ದೆಂದು ಸಾರುವ ಕಥೆಯಾಗಿದೆ. 'ಹೊನ್ನಪ್ಪ ಹೆಗ್ಗಡೆಯ ಮನೆಯ ಚಾವಡಿಯಲ್ಲಿ ಬೆಳ್ಳಿಯಕ್ಕ, ತವರಣ್ಣ, ತಾಮ್ರಯ್ಯ ಮೊದಲಾದವರು ಸೇರಿದ್ದರು. ಗಂಟೆಯ ಕಂಚಣ್ಣ ಕಥೆ ಹೇಳುತ್ತಿದ್ದ. ಕಬ್ಬಿಣರಾಯ ನಿದ್ರಿಸುತ್ತಿದ್ದ'. ಎಂದು ಸ್ವಾರಸ್ಯವಾಗಿ 'ಭಾರತೀಸುತ'ರು ಈ ಕಥೆಯನ್ನು ಪ್ರಾರಂಭಿಸುತ್ತಾರೆ. ಇವರ 'ಸಿಗೋರ'ವಂತೂ ಆಫ್ರಿಕದ ಸಿಂಹದ ಕಥೆಯಾಗಿದೆ. ಹೀಗೆ ವಸ್ತುಗಳ ವೈವಿಧ್ಯದಿಂದ, ಕಥನ ಚಮತ್ಕೃತಿಯಿಂದ 'ಭಾರತೀಸುತ'ರ ಕಥೆಗಳು ಮಕ್ಕಳಿಗೆ ಪ್ರಿಯವಾಗಿವೆ. ಆದರೆ ಒಂದೆರಡು ಕಥೆಗಳಲ್ಲಿ ಒಂದೇ ವಸ್ತುವು ಬೇರೆ ಬೇರೆ ರೂಪುವಡೆದು ವ್ಯಕ್ತಗೊಳ್ಳುವುದೂ ಉಂಟು. ಅಲ್ಪಾವಧಿಯಲ್ಲಿ ರಚಿಸಿದ ಕೃತಿಗಳ ಸಂಖ್ಯಾಬಾಹುಳ್ಯದಿಂದ ಹೀಗಾಗು ವುದು ಅಸಹಜವೇನಲ್ಲ. ಅಂದರೂ ಮಕ್ಕಳ ಮನೋವೃತ್ತಿಯನ್ನು ಗಮನಿಸಿ ಕಥೆ ಕಟ್ಟಿ

ಹೇಳುವ ಕಥೆಗಾರಿಕೆಯು 'ಭಾರತೀಸುತ'ರಿಗೆ ಕೈವಶವಾಗಿದೆ. ಇವರಿಂದ ಇನ್ನೂ ಅನೇಕ ಕಥೆಗಳನ್ನು ಕನ್ನಡ ಮಕ್ಕಳು ನಿರೀಕ್ಷಿಸುವಂತಿದೆ.

ಮಕ್ಕಳ ಪುಸ್ತಕಗಳ ಸುಗ್ಗಿಯೇ ಒಮ್ಮೆ ಬರುವುದೇನೊ. ಶ್ರೀ ಎಮ್. ಎಸ್. ರಾಮರಾವ್ ಅವರು ೧೯೫೪ನೆಯ ವರ್ಷ ಒಂದರಲ್ಲಿಯೇ ಏಳು ಮಕ್ಕಳ ಕಥಾಪುಸ್ತಕಗಳನ್ನು ನೀಡಿದ್ದಾರೆ. ಅವುಗಳಲ್ಲಿ ಮಂತ್ರ, ತಂತ್ರ, ಮಾಟಗಳನ್ನು ಮಾಡುವ ಕಾಳಜ್ಜಿಯ ಕಥೆಗೆ ಸಂಬಂಧಿಸಿದುವು. 'ಬುದ್ಧಿಯ ಕಲಿತನು ಜಂಬಣ್ಣ', 'ಕಾಳಜ್ಜಿಯ ಭೂತರಾಯ' ಎಂದು ಎರಡು ಪುಸ್ತಕಗಳು. ಅವಳು ಭೂತದ ಸಹಾಯದಿಂದ ಹೇಗೆ ಕೆಲಸ ಸಾಧಿಸಿಕೊಳ್ಳುತ್ತಿದ್ದಳೆಂಬುದು ಕಥಾವಸ್ತುವು. ಇವು ಮಕ್ಕಳಿಗೆ ಅದ್ಭುತವೆನಿಸಿ ಮನೋರಂಜನೆಯನ್ನು ಉಂಟುಮಾಡುತ್ತವೆ. ಮಕ್ಕಳು ಒಳ್ಳೆಯ ಕನಸುಗಾರರೆಂದು ಅರಿತು ಲೇಖಕರು 'ಮುಕುಂದ ಕಂಡ ಕನಸು' ಎಂಬುದನ್ನು ರಚಿಸಿದ್ದಾರೆ. ಇಲ್ಲಿಯ ಕಲ್ಪನೆಯು ಮನೋಹರವಾಗಿದೆ. ಇನ್ನುಳಿದ 'ಕೊಳಲನು ಊದಿದ ಸಂತೋಷಿ'ಯು ಕಿನ್ನರಿಯರ ದಾರದ ಸಹಾಯದಿಂದ ತನ್ನ ಕೊಳಲನ್ನು ಸರಿಪಡಿಸಿಕೊಂಡ ಕಥೆಯು ಮಕ್ಕಳ ಕುತೂಹಲಕ್ಕೆ ಕಾರಣವಾಗುವಂತೆ ಬೆಳೆದು ಬಂದಿದೆ. 'ಬೆಳೆಯಿತು ಮೂಗು ನೋಡಣ್ಣ!', 'ನಗೆಮುದ್ದ ಸಿಡುಕಣ್ಣ!', 'ಗೂ ಗೂ ಗೊಗ್ಗಯ್ಯ!' ಈ ಕಥೆಗಳೂ ಸಹ ಇಂಥ ಚಮತ್ಕೃತಿಗಳಿಂದ ಕೂಡಿವೆ. ಕಥನ ಕಲೆಯು ಸರಳವಾಗಿದೆ, ಪರಿಣಾಮಕಾರಿಯಾಗಿದೆ. ಆದರೆ ಮಕ್ಕಳ ಸಾಹಿತ್ಯದ ಗುರಿಯು ಕೇವಲ ಮನರಂಜನೆಯೊಂದೇ ಅಲ್ಲವಷ್ಟೆ?

ಮಕ್ಕಳ ಮನರಂಜನೆಯೊಡನೆಯೇ ಅವರಿಗೆ ಅರಿವಾಗದಂತೆ ನೀತಿಯನ್ನು ಬೋಧಿಸುವುದರಲ್ಲಿ ಶ್ರೀ ಗೋಪಾಲಕೃಷ್ಣ ಪಾಲೆಪ್ಪಾಡಿ ಅವರ ಪುಸ್ತಕಗಳು ಹೆಸರಾಗಿವೆ. ಅವರು ರಚಿಸಿದ 'ಕಟ್ಟು ಬಳ್ಳಿ ಕುಟ್ಟು ದೊಣ್ಣೆ'ಯಲ್ಲಿ ಭಟ್ಟರ ಮನೆಯ ದನಕಾಯಲು ಇದ್ದ ಸಂಕನೆಂಬ ಪರದೇಶಿ ಹುಡುಗನ ಕಥೆಯಿದೆ. ಅವನು ಒಳ್ಳೆಯ ಗುಣದಿಂದ, ಭೂತಗಳ ನೆರವನ್ನು ಪಡೆದ; ಸ್ವಾವಲಂಬಿಯಾಗಿ ಬಾಳಿದ. ಆದರೂ ಆಶ್ರಯದಾತರಾದ ಭಟ್ಟರನ್ನು ಮರೆಯಲಿಲ್ಲ. ಇದೇ ಲೇಖಕರ 'ಪುಟ್ಟು ಮಾಣಿ', 'ಚೆಂಬಿನ ಭೂತ'ಗಳು ಸಹ ಇಂಥ ಮನೋಹರ ಕಥೆಗಳೇ ಆಗಿವೆ. 'ಡೊಳ್ಳುಂ ಬಟ್ಟ' ಎಂಬುದರಲ್ಲಿ ಚತುರನಾದ ಭಟ್ಟನೊಬ್ಬ ತನ್ನ ಹೆಂಡತಿಗೆ ಹೇಳಿದ ಭವಿಷ್ಯದಿಂದ ಊರಲ್ಲಿ ಪ್ರಸಿದ್ಧನಾಗಿ, ರಾಜನಿಗೂ ಭವಿಷ್ಯ ಹೇಳಿ ಸುಖವನ್ನು ಹೊಂದಿದ ಕಥೆಯಿದೆ. ಇದು ಕನ್ನಡ ನಾಡಿನಲ್ಲಿ ಎಲ್ಲಕಡೆಗೂ ಪ್ರಚಾರದಲ್ಲಿರುವ ಜಾನಪದ ಕಥೆಯೊಂದರ ಸ್ವಲ್ಪ ವ್ಯತ್ಯಸ್ತ ರೂಪವಾಗಿದೆ. 'ತಪ್ಪಿಸಿಕೊಂಡ ತ್ಯಾಪಣ್ಣ'ನು ತನ್ನ ಕಿಡಿಗೇಡಿತನಕ್ಕೆ ತಕ್ಕ ಪ್ರಾಯಶ್ಚಿತ್ತವನ್ನು ಹೊಂದಿ ಬುದ್ಧಿಯನ್ನು ಕಲಿತಿದ್ದಾನೆ. ಇವೈದೂ ಪುಸ್ತಕಗಳು ಚೆನ್ನಾಗಿವೆ. ಕಿರಿದರಲ್ಲಿ ಹಿರಿಯ ಗುಣವನ್ನು ವ್ಯಕ್ತಪಡಿಸಿವೆ.

ಶ್ರೀ ಬಿ. ಎಸ್. ರಾಮಸ್ವಾಮಿ ಅಯ್ಯಂಗಾರ್ ಅವರ ಕಿರುಹೊತ್ತಿಗೆಗಳು ಮಕ್ಕಳಿಗೆಂದೇ ರಚಿಸಿದಂತೆ ಕಂಡುಬರುವುದಿಲ್ಲ. ಅವರ 'ತಿರುಪೆಯ ಮುದುಕಿ'

ಎಂಬುದು ಅವರ 'ರಾಯರ ಮದುವೆ' ಎಂಬ ಕಾದಂಬರಿಯಿಂದ ಉದ್ಧೃತವಾದ ಒಂದು ಪ್ರಕರಣವಾಗಿದೆ. ಅದರಿಂದ ಮಕ್ಕಳ ಭಾಷೆ, ಭಾವನೆಗಳಿಗೆ ಇದು ಅನುಗುಣವಾಗದು. ಇವರ 'ಕಳ್ಳನ ಕಣ್ಣೀರು' ಅರಬ್ಬೀಯರ ಜಾನಪದ ಕಥೆಯಾಗಿದೆ. ನೀತಿಯನ್ನು ಬೋಧಿಸುವುದು ಇದರ ಉದ್ದೇಶ. ಇಂಥದೇ ಒಂದು ಅರೇಬಿಯಾ ದೇಶದ ಗುಲಾಮನಾದ ರಹೀಮನ ಕಥೆಯು 'ಬಡವರ ಬಂಧು'ವಿನಲ್ಲಿ ರೂಪುಗೊಂಡಿದೆ. ಇವರ 'ಬಾಳ ಬೆಳಕು', 'ಕೊಟ್ಟು ಕೆಟ್ಟವರಿಲ್ಲ' ಎಂಬ ಪುಸ್ತಕಗಳು ಮಕ್ಕಳ ಕಥೆಗಳಾಗಿವೆ. ವಸ್ತುಗಳು ಚೆನ್ನಾಗಿದ್ದರೂ ಭಾಷೆಯಲ್ಲಿ ಮಕ್ಕಳಮಟ್ಟ ವ್ಯಕ್ತವಾಗುವ ಆವಶ್ಯಕತೆಯು ಈ ಕಿರಿಯರ ಸಾಹಿತ್ಯಕ್ಕೆ ಇರುತ್ತದೆ. ಮುದ್ರಣವೂ ಅವರ ಓದಿಗೆ ಅನುಗುಣವಾಗಿದ್ದರೆ ಇನ್ನೂ ಉಪಯುಕ್ತವು.

'ಗುರುವಾಕ್ಯ', 'ಜಾಣ ಕತ್ತೆ' ಎಂದು ಶ್ರೀ ಮತಿಘಟ್ಟ ಕೃಷ್ಣಮೂರ್ತಿಯವರು ಎರಡು ಮಕ್ಕಳ ಕೃತಿಗಳನ್ನು ನೀಡಿದ್ದಾರೆ. ಅವರ 'ನೊಣ ಹೆಸರು ಕೇಳಿದ್ದು' ಮೊದಲಾದ ಕೃತಿಗಳು ನಮಗೆ ದೊರೆತಿಲ್ಲ. ಗುರುವಾಕ್ಯದಲ್ಲಿ, ಗುರುವಾಕ್ಯ, ಚಂದ್ರಕಾಂತೆ ಎಂಬ ಎರಡು ಚಿಕ್ಕ ಚಿಕ್ಕ ಕಥೆಗಳಿವೆ. ಮಕ್ಕಳ ಕಲ್ಪನೆಗೆ ತಕ್ಕ ವಸ್ತುಗಳಿಂದ ಕೂಡಿವೆ. 'ಜಾಣಕತ್ತೆ'ಯ ಕಥೆಯಂತೂ ಕತ್ತೆಗೂ ಹುಲಿಗೂ ನಡೆದ ಕುಸ್ತಿಯ ಕಥೆಯಾಗಿದೆ. ಈ ಕುಸ್ತಿಯನ್ನು ಕಂಡ ರಂಗ, ಸಂಕಟಕ್ಕೆ ಸಿಕ್ಕ ಸಂಗತಿಯು ಇನ್ನೂ ಮೋಜಿನದಾಗಿದೆ. ಕಥೆಯಲ್ಲಿ ಓಟ ಚೆನ್ನಾಗಿದೆ. ಸಂವಾದದಲ್ಲಿ ಸ್ವಾರಸ್ಯವಿದೆ. ಶೈಲಿ ಸುಲಭವಿದೆ. ಅದರಿಂದ ಮಕ್ಕಳಿಗೆ ಇಂಥ ಕಥೆಗಳು ಸೇರುತ್ತವೆ.

ಇನ್ನು ಶ್ರೀ ಎಂ. ರಾಮರಾವ್ ಅವರು 'ಸೋಮಾರಿ ಸಿದ್ದ', 'ಅನ್ನ ಕೊಡುವ ಹಕ್ಕಿ, ಚಿನ್ನ ಕೊಡುವ ಮರ' ಎಂಬ ಎರಡು ಪುಸ್ತಕಗಳಲ್ಲಿ ನಾಲ್ಕು ಚಿಕ್ಕ ಕಥೆಗಳನ್ನು ಮಕ್ಕಳಿಗೆ ಒದಗಿಸಿದ್ದಾರೆ. ಇವರ 'ಉಪ್ಪಿಲ್ಲದ ಊಟ'ದಲ್ಲಿಯೂ ಸಹ ಎರಡು ಕಥೆಗಳಿವೆ. ಇದರಲ್ಲಿ 'ದನಕಾಯುವ ಹುಡುಗ'ನ ಕಥೆಯು ಚೆನ್ನಾಗಿದೆ. 'ಸೋಮಾರಿ ಸಿದ್ದ'ನ ಕಥೆಯು ತಾಯಿಗೆ ಸಾಕಲು ಭಾರವಾದ ಹೆಡ್ಡ ಹುಡುಗನ ಕಥೆಯಾಗಿದೆ. ಅವನ ಆ ಹೆಡ್ಡತನದ ವರ್ತನೆಗಳು ಕೂಡ ಕೊನೆಯಲ್ಲಿ ಫಲಕಾರಿಯಾಗಿ ಅವನನ್ನು ಸಿರಿವಂತನನ್ನಾಗಿ ಮಾಡುತ್ತವೆ. ಇಂಥ ವಿಚಿತ್ರವಸ್ತುಗಳಿಂದ ಕೂಡಿದ ಕಥೆಗಳು, ಅವರಿಗೆ ಅರ್ಥವಾಗುವ ಭಾಷೆಯಲ್ಲಿದ್ದರೆ ಅವುಗಳನ್ನವರು ಮೆಚ್ಚಿಕೊಳ್ಳುವರು. ಹಾಗೆ ಮಕ್ಕಳನ್ನು ಮೆಚ್ಚಿಸುವ ಕತೆಯು ಇಲ್ಲಿ ವ್ಯಕ್ತವಾಗಿದೆ.

ಶ್ರೀ ಬಿ. ಶಂಕರಭಟ್ಟರೂ ಅವರ ಸ್ನೇಹಿತರಾದ ಶ್ರೀ ಬಿ. ಎಸ್. ಶರ್ಮಾ ಅವರು ಸೇರಿ ಈ ಕಾಲಾವಧಿಯಲ್ಲಿ ಪ್ರಕಟಿಸಿದ ಮೂವತ್ತೈದು ಕಥಾಸಂಗ್ರಹಗಳು ಇಲ್ಲಿ ಸಮಾಲೋಚಕರ ಎದುರಿಗೆ ಇವೆ. ಇವುಗಳಲ್ಲೆಲ್ಲ ಸೇರಿ ನೂರಿನ್ನೂರು ಕಥೆಗಳಾದರೂ ಮಕ್ಕಳಿಗೆ ಓದಲು ಲಭಿಸಿವೆ. ಇಲ್ಲಿಯ ಕಥೆಗಳಲ್ಲಿ ಲೇಖಕರು ನಾಲ್ಕು ಹಂತಗಳನ್ನು ಕಲ್ಪಿಸಿಕೊಂಡಿದ್ದಾರೆ. ಮೊದಲನೆಯ ಹಂತದ ಕಥೆಗಳ ಭಾವ, ಭಾಷೆಗಳನ್ನು ಚಿಕ್ಕಮಕ್ಕಳು ಸುಲಭವಾಗಿ ಅರ್ಥಮಾಡಿಕೊಳ್ಳಬಲ್ಲರು. ಮುಂದೆ ಮಕ್ಕಳು

ಬೆಳೆದು ಅವರ ಭಾಷಾ ಶಕ್ತಿಯು ಹೆಚ್ಚಿದಂತೆಯೂ ಲೋಕಪರಿಜ್ಞಾನವು ಬೆಳೆದಂತೆಯೂ ಮುಂದಿನ ಹಂತದ ಕಥೆಗಳನ್ನು ಓದಿ ಅರ್ಥಮಾಡಿಕೊಳ್ಳಲು ಶಕ್ತರಾಗುವರು. ಸಾಮಾನ್ಯವಾಗಿ ಇವರ ಕಥಾವಸ್ತುಗಳು ಹೆಚ್ಚಾಗಿ ವಿವಿಧ ದೇಶಗಳ ಸಾಹಿತ್ಯದಿಂದ ಸರಕಾಗಿ ಬಂದವುಗಳು. ಆದರೂ ಭಾಷೆಯು ಹಿತಮಿತವಾಗಿದೆ. ಕಥನ ಕಲೆಯು ಸರಳವಾಗಿದೆ. ಅದರಿಂದ ಮಕ್ಕಳು ಕಥೆಗಳನ್ನು ಮೆಚ್ಚಿಕೊಳ್ಳುವರು. ಬಾಲಕರ ಬುದ್ಧಿಯ ವೈಶಾಲ್ಯಕ್ಕೂ ಇವು ಸಾಕಷ್ಟು ಅನ್ನವನ್ನು ಒದಗಿಸುವವು. ಇಲ್ಲಿಯ ಹಲವಾರು ಕಥೆಗಳನ್ನು ಹೆಸರೆತ್ತಿ ಹೇಳಿ, ವಿಮರ್ಶಿಸುವುದಕ್ಕೆ ಇಲ್ಲಿ ಅವಕಾಶ ಸಾಲದು. 'ಮಕ್ಕಳ ಮಂಟಪ'ವನ್ನು ನಿರ್ಮಿಸಿಕೊಂಡು, ಹೀಗೆ ಸತತವಾಗಿ ಕೃತಿಗಳನ್ನು ಪ್ರಕಟಿಸುವ ಪ್ರಯತ್ನವು ಸ್ವಾಗತಾರ್ಹವಾಗಿದೆ. ಇವರ ಕಥೆಗಳನ್ನು ಕುರಿತು ಮಂಜೇಶ್ವರದ ಶ್ರೀ ಗೋವಿಂದ ಪೈ ಅವರು "ಕಥೆಗಳು ಬಲು ಸೊಗಸಾಗಿವೆ. ಇಷ್ಟು ಚಲೋದಾದ ಆಯ್ಕೆಯ ಬಗ್ಗೆ ತಮ್ಮನ್ನೂ ಅಭಿನಂದಿಸುತ್ತೇನೆ." ಎಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಮೊದಲಿನಿಂದಲೂ ಶ್ರೀ ಮಲ್ಲಾರಿಯವರು ಮಕ್ಕಳಿಗೆ ಮುದ್ದು ಮುದ್ದಾದ ಕಥೆಗಳನ್ನು ನೀಡುತ್ತ ಬಂದಿದ್ದಾರೆ. ಅವರು ಅಜ್ಜಿಯ ಕಥೆಯನ್ನು 'ಜಾಣಗುಬ್ಬಿ'ಯಲ್ಲಿ ಸಂಗ್ರಹಿಸಿಕೊಟ್ಟಿದ್ದರೆ ಹಿತೋಪದೇಶದ ಕಥೆಗಳನ್ನು 'ಮಂಗ ಎಂದರೆ ಮಂಗ' ಎಂಬುದರಲ್ಲಿ ಹೇಳಿದ್ದಾರೆ. ಇವರ 'ಹೊಟ್ಟೆಡುಮ್ಮ' ಎಂಬುದು ಸಚಿತ್ರ ನಗೆ ಕಥೆಯಾಗಿದೆ. ಸ್ವಲ್ಪ ಬೆಳೆದ ಬಾಲಕರಿಗಾಗಿ 'ಅವಿವೇಕಿ ಅರಸ'ನ ಕಥೆಯನ್ನು ಕಟ್ಟಿ ಹೇಳಿದ್ದಾರೆ. 'ಗುಬ್ಬಚ್ಚಿ ಗೂಡು' ಮಡ್ಡಮ್ಮನ ಸಂಸಾರದ ಕಥೆಯಾದರೆ 'ರೆಕ್ಕೀ ನಕ್ರಪ್ಪ' ಎಂಬುದು ಮೊಸಳೆಯ ಕಥೆಯಾಗಿದೆ. 'ಕೆಂಪು ಮೋತಿ ಹಂಪಣ್ಣ', 'ಚಿಕ್ಕ ಹುಡುಗಿ ಪುಟ್ಟತಮ್ಮ' ಇವು ಮಕ್ಕಳ ಮುದ್ದು ಕಥೆಗಳಾಗಿವೆ. ಇವಲ್ಲದೆ ಇನ್ನೂ ಕೆಲವು ಪುಸ್ತಕಗಳನ್ನು ಮಲ್ಲಾರಿಯವರು ಪ್ರಕಟಿಸಿದ್ದಾರೆ. ಇವರ ಭಾಷೆ ಸರಳ. ಮಕ್ಕಳಿಗೆ ಅರ್ಥವಾಗಲು ಸುಲಭ. ಕಥೆಗಳು ಕೂಡ ಅಷ್ಟೇ ಸ್ವಾರಸ್ಯವಾದುವುಗಳು. ಗಾತ್ರದಲ್ಲಿ ಚಿಕ್ಕವಾಗಿದ್ದು, ಮಕ್ಕಳು ನೋಡು ನೋಡುವಷ್ಟರಲ್ಲಿ ಓದಿ ಮುಗಿಸಲು ತಕ್ಕುವಾದುವುಗಳು. ಅದರಿಂದ ಮಕ್ಕಳ ಪ್ರೀತಿಯನ್ನು ಸಂಪಾದಿಸುತ್ತವೆ.

ಇನ್ನು ಮಂಗಳೂರಿನ ನವನಿಧಿ ಕಾರ್ಯಾಲಯದವರೂ ಬಾಲಸಾಹಿತ್ಯ ಮಂಡಲದವರೂ ಮೊದಲಿನಿಂದಲೂ ಹಲವಾರು ಮಕ್ಕಳ ಪುಸ್ತಕಗಳನ್ನು ಪ್ರಕಟಿಸುತ್ತ ಬಂದಿದ್ದಾರೆ. 'ಬೆಲ್ಲದ ಮಲ್ಲ', ಉಂಡಾಡಿ ತೋಳ', 'ಇಲಿಮನೆ ಗಲಿಬಿಲಿ'ಗಳಂಥ ನವನಿಧಿಯ ಪ್ರಕಟಣೆಗಳು ಒಳ್ಳೆಯ ಕಥೆಗಳಾಗಿವೆ. ಬಾಲಸಾಹಿತ್ಯದವರ 'ಮೂರು ಕರಡಿಗಳು', 'ಅಜ್ಜಿ ಸಾಕಿದ ಮಗು', ಬೆಕ್ಕಿನ ಬಿಡಾರ ಬೇರೆ' ಇವೇ ಮೊದಲಾದ ಹತ್ತಾರು ಕಥಾ ಪುಸ್ತಕಗಳನ್ನು ಕಾಣುತ್ತೇವೆ. ಆದರೆ ಯಾವ ಪುಸ್ತಕಕ್ಕೂ ಲೇಖಕರ ಹೆಸರು ಇಲ್ಲ. ಅದರಿಂದ ಒಳ್ಳೆಯ ಪುಸ್ತಕಗಳನ್ನು ತಂದ ಶ್ರೇಯವನ್ನು ಪ್ರಕಾಶಕರೇ ಪಡೆಯಬಲ್ಲರು.

ಧಾರವಾಡದ ಸಮಾಜ ಪುಸ್ತಕಾಲಯದ ಶ್ರೀ ಮನೋಹರ ಘಾಣೇಕರರು ಮಕ್ಕಳ ಪುಸ್ತಕಗಳನ್ನು ಪ್ರಕಟಿಸುವುದರ ಜೊತೆಗೆ ತಾವೂ ಒಳ್ಳೆಯ ಪುಸ್ತಕಗಳನ್ನು ಬರೆದು ಮಕ್ಕಳಿಗೆ ನೀಡಿದ್ದಾರೆ. ಅವರ 'ಠಕ್ಕರಗುರು', 'ಬಂಗಾರದ ಹೆಜ್ಜೆ', 'ಮಾತಾಡುವ ಕುದುರೆ', 'ಆದರ್ಶದ ಕತೆಗಳು,' 'ಮಹಾ ಪ್ರವಾಸಿ ಮಾರ್ಕೋಪೋಲೊ' ಇವೇ ಮೊದಲಾದವುಗಳನ್ನು, ಇಲ್ಲಿ ಎತ್ತಿ ಹೇಳಬಹುದಾಗಿದೆ. ಇವುಗಳಲ್ಲಿ 'ಬಂಗಾರದ ಹೆಜ್ಜೆ'ಯು ಇಂಗ್ಲಿಷ ಜಾನಪದ ಕಥೆಯನ್ನು ಆಧರಿಸಿ ಬರೆದದ್ದಾಗಿದೆ. 'ಮಾತಾಡುವ ಕುದುರೆ'ಯಲ್ಲಿ ಆರು ಚಿಕ್ಕ ಚಿಕ್ಕ ಕಥೆಗಳಿವೆ. 'ಆದರ್ಶದ ಕತೆಗಳು' ಸಹ ಇಂಥದೇ ಒಂದು ಒಂಭತ್ತು ಕಥೆಗಳ ಗುಚ್ಛವಾಗಿದೆ. ಮಕ್ಕಳ ಮನಸ್ಸಿಗೆ ಒಗ್ಗುವಂತೆ ಮನೋಹರರು ಕಥೆಗಳನ್ನು ಹೇಳಬಲ್ಲರೆಂಬುದಕ್ಕೆ ಇಲ್ಲಿ ನಿದರ್ಶನಗಳಿವೆ.

ಈ ಒಂದು ವರ್ಷದಲ್ಲಿಯೇ ಶ್ರೀ ಕುಮಾರ ವೆಂಕಣ್ಣನವರು ನೀಡಿದ ನಾಲ್ಕು ಮಕ್ಕಳ ಪುಸ್ತಕಗಳು ನಮ್ಮ ಮುಂದಿವೆ. 'ತಂದೆ ಹೇಳಿದ ಬುದ್ಧಿ', 'ನ್ಯಾಯಶೀಲ ಗೆಲ್ಲುತ್ತಾನೆ', 'ಜಾಣರು ತೋಡಿದ ಬಾವಿ', 'ಮಂತ್ರಿಯಾದ ಬುದ್ಧಿವಂತ' ಇವು ನಾಲ್ಕೂ ಚಿಕ್ಕ ಚಿಕ್ಕ ಕಥೆಗಳಿಂದ ಕೂಡಿದ ಸಂಗ್ರಹಗಳಾಗಿವೆ. ವೆಂಕಣ್ಣನವರಿಗೆ ಕಥೆ ಹೇಳುವ ಕಲೆಯು ಸಾಧಿಸಿದೆ. ಪುಟ್ಟ ಪುಟ್ಟ ಮಾತುಗಳಿಂದ ಕಥೆಗಳನ್ನು ಹೆಣೆಯುತ್ತಾರೆ. ಮಕ್ಕಳಿಗೆ ಏನು ಬೇಕು? ಯಾವುದು ರುಚಿಸುತ್ತದೆಂಬುದನ್ನು ಇವರು ಬಲ್ಲರು. ಮೂರು ನಾಲ್ಕು ಪುಟಗಳಲ್ಲಿಯೇ ಮುಗಿಯುವ ಕಿರುಗತೆಗಳಾದುದರಿಂದ ಮಕ್ಕಳು ಅಕ್ಕರೆಯಿಂದ ಓದಿ ಮುಗಿಸುವ ಕಥೆಗಳಿವು.

ಇವರಂತೆಯೇ ಶ್ರೀ ಎಸ್. ಅನಂತನಾರಾಯಣರೂ ನಾಲ್ಕು ನಾಲ್ಕು ಕಥೆಗಳುಳ್ಳ ಎರಡು ಸಂಗ್ರಹಗಳನ್ನು ನೀಡಿದ್ದಾರೆ. ಒಂದು 'ಹುಲಿ ಪಟ್ಟಿ' ಇನ್ನೊಂದು 'ಮೊಲದ ನ್ಯಾಯ'. ಇವರು ಹುಲಿ, ಮೊಲ, ಎಮ್ಮೆ, ಮೊಸಳೆಗಳನ್ನೇ ಪಾತ್ರಗಳನ್ನಾಗಿ ಇಟ್ಟುಕೊಂಡು ಕಥೆಗಳನ್ನು ಕಟ್ಟಿದ್ದಾರೆ. ಅದರಿಂದ ಮಕ್ಕಳಿಗೆ ಪ್ರಿಯವಾಗುತ್ತವೆ. ಹೇಳುವ ರೀತಿಯು ಸರಾಗವಾಗಿದೆ. ಆದರೆ ಅಲ್ಲಲ್ಲಿ ಮಕ್ಕಳ ಮಟ್ಟಕ್ಕೆ ಮೀರಿದ ಪದ ಪ್ರಯೋಗಗಳನ್ನೂ ಕಾಣಬಹುದಾಗಿದೆ.

ಇನ್ನು ಬಹುದಿನಗಳಿಂದ ಬೆಳಗಾಂವಿಯ ಶ್ರೀ ಚಿ. ಶ್ರೀ ಕುಲಕರ್ಣಿಯವರು ಮಕ್ಕಳ ಕಥೆಗಳನ್ನು ಬರೆದು ಪ್ರಕಟಿಸುತ್ತ ಬಂದಿದ್ದಾರೆ. ಮಕ್ಕಳ ಸಾಹಿತ್ಯದ ಸ್ವರೂಪವೇನೆಂಬುದನ್ನು ಅರಿತಿರಲಿ, ಅರಿಯದಿರಲಿ ಹಲವು ಪುರಾಣಿಕ ಕಥೆಗಳನ್ನು ಮಕ್ಕಳಿಗಾಗಿ ಸುಲಭ ಭಾಷೆಯಲ್ಲಿ ಬರೆದಿದ್ದಾರೆ. ಇವರ 'ಕುಮಾರ ಕಿಟ್ಟಣ್ಣ', 'ಸತ್ಯವಾನ ಸಾವಿತ್ರಿ', 'ಭಕ್ತ ಧ್ರುವರಾಜ', 'ಜಯ ಬಲಭೀಮ', 'ಲವ-ಕುಶ', 'ಮಹಾಶ್ವೇತೆ', 'ಛತ್ರಪತಿ ಶಿವಾಜಿ' ಮೊದಲಾದವುಗಳನ್ನು ಇಲ್ಲಿ ಉಲ್ಲೇಖಿಸಬಹುದಾಗಿದೆ. ಪುಸ್ತಕದ ಹೆಸರುಗಳೇ ಅವುಗಳ ವಿಷಯಗಳನ್ನು ಸ್ಪಷ್ಟಪಡಿಸುತ್ತವೆ. ಕಥನದ ರೀತಿಯಲ್ಲಿ ಹೊಸತನವನ್ನಾಗಲಿ, ಶೈಲಿಯ ಸರಳತೆಯನ್ನಾಗಲಿ ಇಲ್ಲಿ ಅಪೇಕ್ಷಿಸುವಂತಿಲ್ಲ. ಆದರೂ ಆದಷ್ಟು ಸುಲಭ ಭಾಷೆಯಲ್ಲಿ ಕಥೆಗಳನ್ನು ನಿರೂಪಿಸಿದ್ದಾರೆ.

ಸಚಿತ್ರ ಕಥೆಗಳಾದುದರಿಂದ ಬಾಲಕರೂ ಬಾಲಬುದ್ಧಿಯ ಹಿರಿಯರೂ ಸಹ ಇವುಗಳನ್ನು ಅಕ್ಕರೆಯಿಂದ ಓದುತ್ತಾರೆ. ಈಗೀಗ ಪ್ರಕಟವಾಗುತ್ತಿರುವ ಪ್ರೊ. ವನಮಾಲಾ ಆಚಾರ್ ಅವರ 'ರಂಜನೆಯ ರಾಮಾಯಣ' 'ಮಹಾಭಾರತ ಕಥಾಕಿರಣ'ಗಳ ಸ್ಥಿತಿಯೂ ಇದೇ ಆಗಿದೆ. ಇದೇ ವರ್ಗದಲ್ಲಿ ಶ್ರೀ ಪಿ. ಕೆ. ನಾರಾಯಣರಾಯರ 'ವಾಲ್ಮೀಕಿ ರಾಮಾಯಣದ ಕಥೆ', ಶ್ರೀ ಬಿ. ಕೆ. ಸುಂದರರಾಜರು ಕನ್ನಡಿಸಿದ 'ಸಚಿತ್ರ ಬಾಲ ಭಾರತ', ಶ್ರೀ ನಾಗೇಶರು ರಚಿಸಿದ 'ಸಚಿತ್ರ ಮಕ್ಕಳ ಭಾಗವತ'ಗಳು ಸೇರುತ್ತವೆ. ಇಂಥ ಪುಸ್ತಕಗಳು ಭಗವದ್ ಭಕ್ತಿಯನ್ನೂ ಪುರಾಣ ಪ್ರಿಯತೆಯನ್ನೂ ಎಂದಿನಿಂದಲೂ ಪೋಷಿಸುತ್ತ ಬಂದಿವೆ.

ಇನ್ನು ಕಳೆದ ಇಪ್ಪತ್ತೈದು ವರ್ಷಗಳಲ್ಲಿ ಕನ್ನಡದ ಕೆಲವು ಲೇಖಕರು ತಮಗೆ ತೋಚಿದಾಗ ಮಕ್ಕಳಿಗಾಗಿ ಒಂದೋ ಎರಡೋ ಪುಸ್ತಕಗಳನ್ನು ಬರೆದುಕೊಟ್ಟುದು ಉಂಟು. ಅಂಥ ಮಕ್ಕಳ ಕಥಾ ಪುಸ್ತಕಗಳನ್ನು ಒತ್ತಟ್ಟಿಗೆ ಕೂಡಿಸಿ, ಇಂದು ನೋಡಿದಾಗ ಅವುಗಳ ಸಂಖ್ಯೆಯೂ ತಕ್ಕಷ್ಟು ಪ್ರಮಾಣದಲ್ಲಿ ಇದ್ದುದು ಕಂಡು ಬರುತ್ತದೆ. ಒಟ್ಟು ನೋಟದಲ್ಲಿ ಆ ಕೆಲಸವೂ ಗಣ್ಯವೇ ಆಗಿದೆ. ಅವುಗಳನ್ನು ಸಮಾಲೋಚಿಸುವಾಗ ಇಂದು ವಿವಿಧ ದೃಷ್ಟಿಯಿಂದ ವಿಭಾಗಿಸಿಕೊಳ್ಳುವುದೂ, ಸಾಧ್ಯವಿದೆ. ಕೆಲವರು ತೀರ ಪ್ರಾರಂಭದ ಅವಸ್ಥೆಯಲ್ಲಿರುವ ಮಕ್ಕಳಿಗಾಗಿ ಕೆಲವು ಕಥೆ ಗಳನ್ನು ರಚಿಸಿದ್ದಾರೆ. ಇಂಥವರಲ್ಲಿ ಶ್ರೀ ಅನಂತರಾವ್ ಕೆ. ಭೋಸಗೆಯವರೊಬ್ಬರು. ಅವರು 'ಕೆನೆಮೊಸರು' ಸಂಗ್ರಹದಲ್ಲಿ ದ್ವಿತ್ವಾಕ್ಷರವಿಲ್ಲದ ಆರು ಕಥೆ ಗಳನ್ನು ರಚಿಸಿಕೊಟ್ಟಿದ್ದಾರೆ. ಕಥೆಗಳು ತಕ್ಕಮಟ್ಟಿಗೆ ಚೆನ್ನಾಗಿವೆ. ಪ್ರಾಥಮಿಕ ಶಿಕ್ಷಕರಾದುದರಿಂದ ಮಕ್ಕಳ ಮನೋವೃತ್ತಿಯನ್ನೂ ಕೂಡ ಅರಿತವರಾಗಿದ್ದಾರೆ. ಅದರಿಂದ ಅವರಿಗೆ ರುಚಿಸುವ ವಸ್ತುಗಳನ್ನೇ ಕಲ್ಪಿಸಿಕೊಂಡಿದ್ದಾರೆ. ಇವರದೇ ಆದ ಇನ್ನೊಂದು ಕೃತಿಯು 'ಚಂದ್ರನ ಕಡೆಗೆ' ಎಂಬುದು ಬೆಂಗಳೂರಿನ ಮಕ್ಕಳ ಸಾಹಿತ್ಯ ರಚನಾಲಯದಲ್ಲಿ ಇದ್ದು ರಚಿಸಿದುದು. ಇದನ್ನು ಆರೇಳು ವಯಸ್ಸಿನ ಮಕ್ಕಳು ಓದಲೆಂದು ಬರೆದುದು. ಒಳ್ಳೆಯ ಕಥೆಯಾಗಿದೆ. ಪದಪಟ್ಟಿ ಮೊದಲಾದವುಗಳಿಂದ ಕೂಡಿದುದಾಗಿದೆ. ಇದೇ ರೀತಿ ಶ್ರೀ ಪಳಕಳ ಸೀತಾರಾಮ ಭಟ್ಟರೂ 'ಕುಣಿಕುಣಿದಾಡಿದ ಅಳಿಲಣ್ಣ' 'ಬೆಕ್ಕಿನಮರಿ ಹಕ್ಕಿಯಾಯಿತೇ' ಎಂಬೆರಡು ಕಿರುಹೊತ್ತಿಗೆಗಳನ್ನು ನೀಡಿದ್ದಾರೆ. ಮಕ್ಕಳ ಓದಿಗೆ ಒಳ್ಳೆಯ ಪುಸ್ತಕ ಗಳಿವು. ಇದೇ ವರ್ಗಕ್ಕೆ ಸೇರಬಹುದಾದ ಕಥೆಗಳು ಶ್ರೀ ಪ್ರ. ಗೋ. ಕುಲಕರ್ಣಿ ಯವರ 'ಹಾಲು ಅನ್ನದ ಗಿಡ' 'ಸಿಸು' ಸಂಗಮೇಶರ 'ನರಿಯ ಫಜೀತಿ' ಶ್ರೀ ಮ.ಗ. ಶೆಟ್ಟಿ ಅವರ 'ಸೇರಿಗೆ ಸವ್ವಾಸೇರು' ಶ್ರೀ ದೇವುಡು ಸಂಪಾದಿಸಿಕೊಟ್ಟ 'ಸ್ನೇಹಿತರು' ಶ್ರೀ ಡಿ. ಟಿ. ರಂಗಸ್ವಾಮಿಯವರ 'ಗಜರಾಜ' ಇವಾಗಿವೆ. ಇವು ಮಕ್ಕಳ ಭಾಷೆ, ಮನೋವೃತ್ತಿಗಳನ್ನು ಅರಿತು, ಅವುಗಳಿಗೆ ಅನುಗುಣವಾಗಿ ರಚಿಸಿದ ಕಥೆಗಳು.

ಕೆಲವು ಜನ ಲೇಖಕರು ನಮ್ಮ ಪುರಾಣಗಳಿಂದ ವಸ್ತುಗಳನ್ನು ಆಯ್ದು ಕೊಂಡು, ಮಕ್ಕಳಿಗಾಗಿ ಕಥೆ ರಚಿಸಿಕೊಟ್ಟುದುಂಟು. ಅಂಥವುಗಳಲ್ಲಿ ಶ್ರೀ ಕೌಜಲಗಿ

ಬಂಡಾಚಾರ್ಯರ 'ದಮಯಂತಿ' ಶ್ರೀ ಬಾಲಮುಕುಂದರ 'ಏಕಲವ್ಯ' ಶ್ರೀ ಡಿ. ಕೃಷ್ಣಯ್ಯಂಗಾರ್‌ರ 'ಶ್ರೀಕೃಷ್ಣನ ಕತೆಗಳು' ಶ್ರೀ ಪಂಡಿತ ಕವಲಿಯವರ 'ಅಳಿವಿಲ್ಲದ ಅಭಿಮನ್ಯು' ಶ್ರೀ ರಮಾನಂದರ 'ಬೈಬಲ್ಲಿನ ಕತೆಗಳು' ಇವೇ ಮೊದಲಾದವುಗಳನ್ನು ಇಲ್ಲಿ ಉಲ್ಲೇಖಿಸಬಹುದು. ಇದೇ ಸಂದರ್ಭದಲ್ಲಿ ನಮ್ಮ ಹಿಂದಿನ ಕಾವ್ಯ, ನಾಟಕಗಳ ಕಥೆಗಳನ್ನೂ ಸಂಗ್ರಹಿಸಿ, ಮಕ್ಕಳಿಗೆಂದು ನೀಡಿದ್ದನ್ನೂ ಗಮನಿಸಬೇಕು. ಅಂಥವುಗಳಲ್ಲಿ, ಶ್ರೀ ಕೋ. ನಾ. ಕಾರಂತರ 'ಹರ್ಷನ ರತ್ನಾವಲಿ' 'ಕಾಳಿದಾಸನ ಮಾಲವಿಕಾಗ್ನಿಮಿತ್ರ' 'ರಾಜಶೇಖರನ ಕರ್ಪೂರ ಮಂಜರಿ'ಗಳಾಗಿವೆ. ಇದೇ ರೀತಿ ಶ್ರೀ ಎಸ್. ರಮಾನಂದರು 'ಷೇಕ್ಸ್‌ಪಿಯರನ ಕಥೆಗಳ'ನ್ನೂ ಮಕ್ಕಳಿಗಾಗಿ ಸಂಗ್ರಹಿಸಿಕೊಟ್ಟಿದುಂಟು. ಇವೆಲ್ಲ ಆಯಾ ವಸ್ತುಗಳನ್ನು ಎತ್ತಿಕೊಂಡು, ಮಕ್ಕಳ ಮಾತಿನಲ್ಲಿ ಬರೆದ ಕೃತಿಗಳಾಗಿವೆ.

ಇದರಂತೆಯೇ ಭಾರತೀಯರ ಇತಿಹಾಸದ ಘಟನೆಗಳನ್ನಾಗಲಿ, ಐತಿಹಾಸಿಕ ವ್ಯಕ್ತಿಗಳನ್ನಾಗಲಿ ಆಯ್ದುಕೊಂಡು, ಮಕ್ಕಳ ಕಥೆಗಳನ್ನು ಹೆಣೆದುದೂ ಆಗಿದೆ. ಅಂಥವುಗಳಲ್ಲಿ ಶ್ರೀ ಭಾಗೋಜಿಯವರ 'ಕನ್ನಡ ಕಥಾವಳಿ'ಯು ಪೌರಾಣಿಕ ಹಾಗೂ ಐತಿಹಾಸಿಕ ವ್ಯಕ್ತಿ ಕಥೆಗಳನ್ನು ಕೊಡುತ್ತದೆ. ಶ್ರೀ ಕೆ. ಗುಂಡಪ್ಪನವರ 'ಚಿತ್ತೂರ ಪದ್ಮಿನಿ' ಅಕಬರ ಬೀರಬಲ್ಲರ ಪ್ರಸಂಗ ಕಥನವಾದ ಶ್ರೀ ಕುಂದಾನಿ ಸತ್ಯನ್‌ರ 'ಮೂರ್ಖಕುಳ್ಳ' ಶ್ರೀ ನಾಗೇಶರ 'ಕಿತ್ತೂರ ಚೆನ್ನಮ್ಮರಾಣಿ'ಗಳು ಇಲ್ಲಿ ಉಲ್ಲೇಖನೀಯವಾಗಿವೆ. ಇದೇ ವಿಭಾಗದಲ್ಲಿ ಸೇರಬಹುದಾದರೂ ಪ್ರೊ. ಜವರೇಗೌಡರ ಸಮರ್ಥ ಕುಂಚದಿಂದ ಕಲಾತ್ಮಕವಾಗಿ ರೂಪುಗೊಂಡ 'ಕನ್ನಡ ನಾಡಿನ ಕಲಿ' ಎಂಬುದು–ಕುಮಾರ ರಾಮನ ಕಥೆಯನ್ನು ಒಳಗೊಂಡ–ಮಕ್ಕಳ ಕಥಾ ಪುಸ್ತಕವಾಗಿದೆ; ವಿಶೇಷ ಎತ್ತಿ ಹೇಳುವಂಥ ರಚನೆಯಾಗಿದೆ. ಹದಿನಾಲ್ಕನೆಯ ಶತಮಾನದ ಕುಮಾರ ರಾಮು ಕನ್ನಡದ ಅಭಿಮನ್ಯುವು, ತನ್ನ ಬಿಸಿರಕ್ತದಿಂದ ಕನ್ನಡ ನಾಡಿನ ಇತಿಹಾಸವನ್ನು ಉಜ್ವಲಗೊಳಿಸಿದ ಧೀರ. ಇಂಥವನ ಚರಿತ್ರೆಯನ್ನೂ ಬಹು ಸುಂದರವಾಗಿ ಕಥೆಕಟ್ಟಿ ಹೇಳಿದ್ದಾರೆ ಇಲ್ಲಿ. ಮಕ್ಕಳ ಮೈನವಿರೇಳುವಂಥ ನಿರೂಪಣೆಯು ಇಲ್ಲಿದೆ. ಶೈಲಿಯಂತೂ ಬಹು ಸೊಗಸಾದುದು. 'ಇದೊಂದು ಹಳೆಯ ಕಥೆ; ಆದರೆ ಕಟ್ಟುಕಥೆಯಲ್ಲ–ನಡೆದ ಕಥೆ. ನಡೆದದ್ದು ಕನ್ನಡ ನಾಡಿನಲ್ಲಿ ಆರುನೂರ ನಲವತ್ತು ವರ್ಷಗಳ ಹಿಂದೆ.' ನಿರರ್ಗಳವಾಗಿ ಪ್ರವಹಿಸುವ ಮಕ್ಕಳಿಗೆ ಹಿಡಿಸುವ ಸರಳ ಶೈಲಿಯಿದು, ಜವರೇಗೌಡರದು. ಇದರಲ್ಲಿ ಅಡೆ ತಡೆಯಿಲ್ಲ; ಕಷ್ಟ ಕಾರ್ಪಣ್ಯವಿಲ್ಲ; ಕೃತ್ರಿಮತೆಯ ಸುಳುವಿಲ್ಲ. ಇದು ಶ್ರೀಯುತರಿಗೆ ಕಥಾವಸ್ತುವಿನ ಮೇಲಿರುವ ಪ್ರಭುತ್ವ, ಆತ್ಮೀಯತೆ, ಅಭಿಮಾನಗಳಿಗೆ ಸಂಕೇತನಾಗಿದೆ. ಮೊದಲ ಮಾತಿನಲ್ಲಿ ಶ್ರೀ ನಿರಂಜನರು ಹೇಳುವಂತೆ ಈ ಕೃತಿಯು 'ಮೈನವಿರೇಳುವ ಈ ಸಾಹಸ ಕಥೆ, ನಿತ್ಯ ಪಠನಕ್ಕೆ ಅರ್ಹವಾಗಿದೆ.'

ಈಸೋಪನ ಕತೆಗಳು ಬಹು ಹಿಂದಿನ ಕಾಲದಿಂದ ಪ್ರಚಾರದಲ್ಲಿ ಇದ್ದ ಮಕ್ಕಳ ಕತೆಗಳು. ಇವು ನೇರವಾಗಿ ನೀತಿಯನ್ನು ಬೋಧಿಸುವುದರಿಂದ ಈಗಿನ ಮಕ್ಕಳ ಮಾನಸಶಾಸ್ತ್ರದ ಅಭ್ಯಾಸಿಗಳಿಗೆ ರುಚಿಸದ ಸಾಹಿತ್ಯವೆನಿಸಿವೆ. ಆದರೂ ಕನ್ನಡ ನಾಡಿನಲ್ಲಿ

ಆಗಾಗ ಈ ಕಥಾಗುಚ್ಛಗಳು ಪ್ರಕಟವಾಗದೆ ಇಲ್ಲ. ಶ್ರೀ ರಾ. ನ. ಮಳಗಿಯವರು 'ಇಸೋಪನ ನೀತಿ ಕತೆಗಳು' ಎಂಬ ಸಂಗ್ರಹದಲ್ಲಿ ಕೆಲವು ಕಥೆಗಳನ್ನು ಕನ್ನಡಿಗರಿಗೆ ಕೊಟ್ಟಿದ್ದಾರೆ. ಇದಕ್ಕೆ ಚಿಕ್ಕವಾದರೂ ಅಭ್ಯಾಸಾತ್ಮಕ ಮುನ್ನುಡಿಯೊಂದನ್ನೂ ಅವರು ಬರೆದು, ಓದುಗರಿಗೆ ಮಾರ್ಗದರ್ಶನ ಮಾಡಿದುದುಂಟು. ಆಮೇಲೆ ಶ್ರೀ ಉ. ಕಾ. ಸುಬ್ಬರಾಯಾಚಾರ್ ಅವರು 'ಈಸೋಪನ ಕೆಲವು ನೀತಿ ಕಥೆಗಳು' ಎಂಬ ಸಂಗ್ರಹದಲ್ಲಿ ಚಿತ್ರಗಳೊಡನೆ ಕೆಲವು ಕಥೆಗಳನ್ನು ನೀಡಿದ್ದಾರೆ. ಇತ್ತೀಚೆಗೆ ಮೈಸೂರಿನ ಕಾವ್ಯಾಲಯ ದಲ್ಲಿ ಶ್ರೀ ಕೊಡಲಿ ಚಿದಂಬರಂ ಅವರು ಮೂರು ಭಾಗಗಳಲ್ಲಿ ಕೂಡಿ ಈಸೋಪನ ಹನ್ನೆರಡು ನೀತಿ ಕಥೆಗಳನ್ನು ಕನ್ನಡ ಮಕ್ಕಳಿಗಾಗಿ ನೀಡಿದ್ದಾರೆ. ಇವುಗಳನ್ನು ಯಾರು ಸಂಗ್ರಹಿಸಿದರೂ ನೀತಿ ಕಥೆಗಳೆಂದೇ ಹೇಳುವುದುಂಟು. ಆದರೂ ಮಕ್ಕಳ ಭಾಷೆಗೆ ತಕ್ಕಂತೆ ಪರಿಷ್ಕರಿಸುವ ಕಾರ್ಯವು ಮಾತ್ರ ನಡೆಯಬೇಕು. ಅದು ಕಾವ್ಯಾಲಯದ ಪ್ರಕಟಣೆಗಳಲ್ಲಿ ನಡೆದಿದೆ.

ಇನ್ನು ಕಳೆದ ಇಪ್ಪತ್ತೈದು ವರ್ಷಗಳಲ್ಲಿ ಪ್ರಕಟವಾದ ಕನ್ನಡ ಮಕ್ಕಳ ಕಥಾ ಸಾಹಿತ್ಯದ ವಿಪುಲತೆ ಹಾಗೂ ವೈವಿಧ್ಯತೆಗಳನ್ನು ದಿಗ್ದರ್ಶಿಸುವದಕ್ಕಾಗಿ ಕೆಲವು ಕೃತಿ ಗಳನ್ನು ಇಲ್ಲಿ ಉಲ್ಲೇಖಿಸುವ ಆವಶ್ಯಕತೆಯು ಇದೆ. ಹಿರಿಯರಾದ ಶ್ರೀ ಸಾಲಿ ರಾಮಚಂದ್ರರಾಯರು 'ಐದು ಜಾಣ ಪ್ರಾಣಿಗಳು' 'ಸಿಪಾಯಪ್ಪ' ಎಂಬ ಎರಡು ಚಿಕ್ಕ ಕೃತಿಗಳನ್ನು ಇಂದಿಗೆ ಇಪ್ಪತ್ತು ವರ್ಷಗಳ ಹಿಂದೆಯೇ ನೀಡಿದ್ದಾರೆ. ಇವರಲ್ಲಿ ಸಾಹಿತ್ಯದ ದೃಷ್ಟಿಗಿಂತ ಶೈಕ್ಷಣಿಕ ದೃಷ್ಟಿಯೇ ಪ್ರಧಾನವಾಗಿದೆ. ಸ್ವಲ್ಪ ಬೆಳೆದ ಮಕ್ಕಳಿಗಾಗಿ ಶ್ರೀ ಕಾವ್ಯಾನಂದರು 'ತುಷಾರಹಾರ' ವನ್ನಿತ್ತಿದ್ದಾರೆ. ಶ್ರೀ ಮಾದರಬೆಟ್ಟು ರಂಗರಾಯರ ಹತ್ತು ಕಥೆಗಳ ಸಂಗ್ರಹವಾದ 'ಎರಡು ಮುಷ್ಟಿ ಕಥೆಗಳು' ಮಕ್ಕಳ ಸುಲಭ ಭಾಷೆಯಲ್ಲಿದೆ. ಶ್ರೀ ರಮಾನಂದರು ದೇಶ ವಿದೇಶಗಳಿಂದ 'ಅಲ್ಲಿ–ಇಲ್ಲಿಯ ಕಥೆ ಗಳ'ನ್ನು ಸಂಗ್ರಹಿಸಿಕೊಡುವುದರಲ್ಲಿ ಪಳಗಿದವರು. ಅವರ 'ಅರೇಬಿಯದ ಇರುಳು' 'ರಾಬಿನ್‌ಹುಡ್' 'ರಾಬಿನ್‌ಸನ್ ಕ್ರೂಸೋ,' ಇವೆಲ್ಲವೂ ಇಂಥ ಸಂಗ್ರಹಿತ ಕಥೆಗಳೇ ಆಗಿವೆ; ಮಕ್ಕಳ ಸಾಹಸ ಪ್ರವೃತ್ತಿಯನ್ನು ಪೋಷಿಸುವಂತಿವೆ. ವಾಲ್ಮೀಕಿ ಮಹರ್ಷಿ ಯನ್ನು ಕುರಿತು ಶ್ರೀ ಚಿದಾನಂದ ಹಾಗೂ ಶ್ರೀ ನಾಗೇಶ ಇವರು ಬೇರೆ ಬೇರೆಯಾಗಿ ಎರಡು ಕಥೆಗಳನ್ನು ರಚಿಸಿಕೊಟ್ಟಿದ್ದಾರೆ. ಆದಿಕವಿಯ ಪರಿಚಯವನ್ನು ಮಕ್ಕಳಿಗೆ ಮಾಡಿಕೊಟ್ಟಿದ್ದಾರೆ. ಶ್ರೀ ಬಿ. ಎ. ಸನದಿಯವರ 'ಬಹುಮಾನ'ದಲ್ಲಿ ಮೂರು ಕಥೆ ಗಳಿವೆ. ಇವು ೯-೧೪ರ ವಯೋಮಾನದ ಮಕ್ಕಳಿಗಾಗಿ ಬರೆದುವು. 'ಮಕ್ಕಳಿಗಾಗಿ ಬರೆದಿರುವ ಈ ಕಥೆಗಳಲ್ಲಿ ದೊಡ್ಡವರಿಗೆ ಹೇಳುವ 'ಸಣ್ಣ ಕತೆ'ಯ ಶೈಲಿಯನ್ನೂ, ಮಕ್ಕಳಿಗೆ ತಿಳಿಯುವಂಥ ತಿಳಿಯಾದ ಭಾಷೆಯನ್ನು ಬಳಸಲಾಗಿದೆ.' ಶ್ರೀ ವರದರಾಜ ಹುಯಿಲಗೋಳರು ವಿವಿಧ ದೇಶಗಳ ಆರು 'ಜನಪದ ಕಥೆಗಳ'ನ್ನು ಮಕ್ಕಳಿಗಾಗಿ ಸಂಗ್ರಹಿಸಿಕೊಟ್ಟಿದ್ದಾರೆ. ಪರಿಷ್ಕೃತವಾದ ಭಾಷೆಯು ಇವರದಾಗಿದೆ.

ಇನ್ನು ಸ್ತ್ರೀಯರೂ ಮಕ್ಕಳ ಕಥೆಗಳನ್ನು ಕೊಡುವುದರಲ್ಲಿ ಮುಂದಾಗಿರುವುದನ್ನು

ನಾವು ಇಲ್ಲಿ ಗಮನಿಸಬಹುದಾಗಿದೆ. 'ಮಂದಾರ ಮಾಲೆ'ಯನ್ನು ನೀಡಿದ ಶ್ರೀ ವನಮಾಲಾ ಅವರೇ 'ಬುದ್ಧಿ ಬಲದ ಕಥೆಗಳು' ಎಂದು ಸಂಸ್ಕೃತ–ಪ್ರಾಕೃತ ಭಾಷೆಗಳಿಂದ ಒಂಭತ್ತು ಕಥೆಗಳನ್ನು ಸಂಗ್ರಹಿಸಿಕೊಟ್ಟಿದ್ದಾರೆ. ಬೇತಾಳ ಪಂಚವಿಂಶತಿ ಕಥೆಗಳೆಂದು ಕನ್ನಡ ನಾಡಿನಲ್ಲಿ ಮೊದಲಿನಿಂದ ಪ್ರಚಾರದಲ್ಲಿದ್ದ ಕಥೆಗಳೇ ಇವಾಗಿವೆ. ಹಿರಿಯರಿಂದ ತಾವು ಕೇಳಿದ ಕಥೆಗಳನ್ನು ಶ್ರೀಮತಿ ರತ್ನಾದೇವಿ ಸಿಗ್ಗಾವ ಅವರು 'ಟಗರಂ ಟಾಣ್ಯ'ದಲ್ಲಿ ಸಂಗ್ರಹಿಸಿದ್ದಾರೆ. ಇದರಂತೆಯೇ ಶ್ರೀ ಉಮಾದೇವಿಯವರ 'ಕುಂಬಾರನ ಅದೃಷ್ಟ'ವು ಐದು ಕಥೆಗಳ ಸಂಗ್ರಹವಾಗಿದೆ. ಮಕ್ಕಳಿಗೆ ರುಚಿಸುವ ವಿವಿಧ ವಸ್ತುಗಳಿಂದ ಸುಲಭ ಭಾಷೆಯಲ್ಲಿ ಹೆಣೆದ ಕಥೆಗಳಿವಾಗಿವೆ. 'ತುಂಟರ ತೇರು' ಎಂಬುದು ಶ್ರೀ ಎಲ್. ಜೆ. ವಿಮಲಾ ಅವರ ಮೂರು ಕಥೆಗಳ ಸಂಗ್ರಹವಾಗಿದೆ. ಇದರೊಳಗೆ ಕೆಲವು ತುಂಟ ಹುಡುಗ ಹುಡುಗಿಯರ ನಿತ್ಯಜೀವನದ ನಿತ್ಯವಾದ ಸೊಗಸುಗಳ ನಿರೂಪಣೆಯು ಇದೆ. ನುರಿತ ಮಕ್ಕಳಸಾಹಿತ್ಯಿಕರಾದ ಶ್ರೀ ರಾಜರತ್ನಂ ಅವರು ಈ ಕಥೆಗಳನ್ನು ಕುರಿತು ಈ 'ತುಂಟರ ತೇರು' ದುಡುಕದೆ ಸಾವಧಾನದಿಂದ ಬಂದಿದೆ. ಮುದ್ದಾದ ಮಕ್ಕಳು, ಮೋಹಕವಾದ ತುಂಟತನ, ನೇರವಾದ ನಿರೂಪಣೆ, ಪುಟ್ಟವಾಕ್ಯಗಳು, ತಿಳಿಯಾದ ಬಳಕೆಗನ್ನಡ ಇವುಗಳಿಂದ ಈ 'ತೇರು' ಮಕ್ಕಳಿಗೆ ಮೆಚ್ಚಿಕೆಯಾಗುತ್ತದೆಂದು 'ತೇರಿಗೆ ಮಿಣಿ'ಯನ್ನು ಜೋಡಿಸಿದ್ದಾರೆ. 'ಬುದ್ಧಿವಂತರು' ಶ್ರೀ ಬಿ. ಭಾರತಿ ದೇವಿಯವರಿತ್ತ ಐದು ಕಥೆಗಳ ಸಂಗ್ರಹವಾಗಿದೆ. ಇದು ಸರಳ ಸುಂದರ ಬರವಣಿಗೆಯಾಗಿದೆ. ಕನ್ನಡ ಮಕ್ಕಳ ಸಾಹಿತ್ಯಕ್ಕೆ ಬೆಲೆಬಾಳುವ ಕಾಣಿಕೆಯಾಗಿದೆ. ಇಲ್ಲಿ ಸೌಭಾಗ್ಯವತಿ ಉಷಾದೇವಿಯು ಸಂಗ್ರಹಿಸಿಕೊಟ್ಟ 'ಜಾನಪದ ಕಥೆಗಳ'ನ್ನೂ ಕೂಡ ಸೇರಿಸಬೇಕು. ಇದು ಅಜ್ಜಿಯ ಕಥೆಗಳ ಸಂಗ್ರಹವಾಗಿದೆ. ಇದೇ ಸಂದರ್ಭದಲ್ಲಿ ಶ್ರೀ ಬನಶಂಕರಮ್ಮನವರು ಕನ್ನಡಿಸಿಕೊಟ್ಟ 'ನಂಬಿ ನಡೆದರೆ ಭಯವಿಲ್ಲ' ಎಂಬ ವಯೋಲೆಟ್ ಸೆರ್‌ನೋಸೆಕ್ ಇವರ ಕಥೆಯನ್ನೂ ಸೂಚಿಸಬೇಕು. ಇದು ಮಕ್ಕಳಿಗೆ ಅರಿವನ್ನೂ ನಲಿವನ್ನೂ ನೀಡುವಂಥ ಪುಸ್ತಕವಾಗಿದೆ.

ಕನ್ನಡ ಮಕ್ಕಳ ಕಥೆಗಳ ಭಂಡಾರವನ್ನು ಅನುವಾದಗಳಿಂದ ಹೆಚ್ಚಿಸುವುದಕ್ಕೆ ಹಲವರು ಪ್ರಯತ್ನಿಸಿದ್ದಾರೆ. ಅಂಥ ಪ್ರಯತ್ನದಲ್ಲಿ ಶ್ರೀ "ಭಾ.ಸು." ಅವರ 'ಹೊನ್ನಹೊಳೆಯ ಅರಸು' ಎಂಬ ಪುಸ್ತಕದಲ್ಲಿ ಜಾನ್ ರಸ್ಕಿನ್‌ನ ಕಿಂಗ್ ಆಫ್ ಗೋಲ್ಡನ್‌ರಿವರಿನ ರೂಪಾಂತರಿಸಿದುದೂ ಒಂದು ಸೇರುತ್ತದೆ. ಇದರಂತೆಯೆ ಶ್ರೀ ಕೆ. ಎಸ್. ಕರುಣಾಕರನ್ ಅವರು ಅನುವಾದಿಸಿದ ಪಾವುಣ್ಣಿ ತೈಕ್ಕಾಡ್ ಅವರ 'ವಿಚಿತ್ರ ಪಂದ್ಯ' ಎಂಬುದೂ ಇಲ್ಲಿ ಉಲ್ಲೇಖನೀಯವಾಗಿದೆ. ಇವು ಕೌತುಕದ ವಸ್ತುಗಳಿಂದ ಕೂಡಿದ ಕಥೆಗಳಾದರೂ ಗಂಭೀರ ಶೈಲಿಯಲ್ಲಿ ಹೇಳಿದ ಕಥೆಗಳಾಗಿವೆ. ಆದರೂ ದೇಶ–ವಿದೇಶಗಳ ಜೀವನಪರಿಚಯಕ್ಕೆ ಉಪಯುಕ್ತವಾದ ಪುಸ್ತಕವಿದಾಗಿದೆ.

'ಬಡಗಿಗಳ ಬಂಡಾಟ', ಶ್ರೀ ಮಳಗಿಯವರ 'ನಾಲ್ವರು ಮಹಾಶೂರರು' ಶ್ರೀ ವಿಶ್ವಾಮಿತ್ರರ 'ವೀರ ವಿರೋಚನ', ಶ್ರೀ ಎಚ್. ಎಂ. ಶಂಕರನಾರಾಯಣರಾಯರ

'ಆಲಿಬಾಬ ಮತ್ತು ನಲವತ್ತು ಜನ ಕಳ್ಳರು' ಕನ್ನಡ ಮಕ್ಕಳ ಕಥೆಗಳಲ್ಲಿ ವೈಶಿಷ್ಟ್ಯತೆಯನ್ನು ಪ್ರದರ್ಶಿಸದಿದ್ದರೂ ವಿಪುಲತೆಗೆ ಸಾಕ್ಷಿಯಾಗಿವೆ. ಜೆ. ಮಲ್ಲಾರಿಭಟ್ಟರ 'ತಮ್ಮನ ಕಥೆಗಳು' ಚಿಕ್ಕ ಚಿಕ್ಕ ಕಥೆಗಳ ಸಂಗ್ರಹವಾಗಿದೆ. ಹನಿಕಥೆಗಳು, ಪುಡಿ ಕಥೆಗಳೆಂದು ಇವುಗಳನ್ನು ಕರೆಯಬಹುದಾಗಿದೆ. ಮಾತಿನ ಅಗತ್ಯ, ಶುದ್ಧಭಕ್ತಿ, ಸ್ಥಿರತೆಯ ಶಕ್ತಿಗಳು ಇಲ್ಲಿಯ ಕೆಲ ಕಥೆಗಳು. ಶ್ರೀ 'ಚಾಲುಕ್ಯ'ರ 'ಪಾದ್ರಿಯ ಅಡಿಗೆಯವ' ಆರು ಕಥೆಗಳ ಸಂಗ್ರಹವಾಗಿದೆ. ಇವುಗಳನ್ನು 'ಹೀಂಗೊಬ್ಬ ರಾಜನಿದ್ದ. ಅವನಿಗೆ ಅನೇಕ ರಾಣಿಯರಿದ್ದರು....' ಎಂಬ ಕಥನರೀತಿಯಲ್ಲಿ ಹೇಳಿದಂತೆ ರಚಿಸಿದ್ದಾರೆ. ಭಾಷೆ ಸುಲಭವಾಗಿದೆ. ಶ್ರೀ ವಸಂತರ 'ಅದ್ಭುತ ಚಹಾ ಪಾತ್ರೆ!'ಯು ಜಪಾನ ದೇಶದಲ್ಲಿ ನಡೆದ ಕತೆಯಾಗಿದೆ. ಸೊಗಸಾಗಿದೆ. ಇತ್ತೀಚೆಗೆ ಶ್ರೀ ಪರಮೇಶ್ವರರು ನೀಡಿದ 'ಮಾತನಾಡಿದ ಗಿಳಿ'ಯು ಮೂರು ಕಥೆಗಳನ್ನು ಒಳಗೊಂಡಿದೆ. ದುಷ್ಟತನ, ಸ್ವಾರ್ಥಗಳ ಫಲಗಳನ್ನು ಹೇಳುವ ಕಥೆಗಳಿವು. ಇದರಲ್ಲಿಯ 'ಹೊಗಳಿಕೆಯ ಬೆಲೆ' ರಾಜ ನೈತಿಕ ಕಥೆಯಾಗಿದೆ. ಇಲ್ಲಿಯ ಕಥೆಗಳ ಭಾಷೆಯು ಸರಳವಾಗಿದೆ. ಕಥನ ಕಲೆಯು ಮನೋಹರವಾಗಿದೆ. ಇವಲ್ಲದೆ ಮುಂಬೈಯಿಯ ಇಂಡಿಯಾ ಬುಕ್ ಹೌಸಿನವರು ಅಮರ ಚಿತ್ರಕಥೆಗಳೆಂದು ಹಲವಾರು ಚಿತ್ರಕಥೆಗಳ ಪುಸ್ತಕಗಳನ್ನು—ರಾಜು ಮತ್ತೂ ಅವರೆಗಿಡ, ಮಾಯೆಯ ಕಾರಂಜಿ, ಪುಟ್ಟ ಕೆಂಚಮ್ಮ ಇತ್ಯಾದಿ—ಪ್ರಕಟಿಸಿದ್ದಾರೆ. ಆದರೆ ಇವುಗಳಲ್ಲಿ ಸಾಹಿತ್ಯಿಕ ದೃಷ್ಟಿಯು ಇರುವುದಿಲ್ಲ. ನಮ್ಮ ಮಕ್ಕಳ ಮನೋಭಾವಕ್ಕೂ ಇಲ್ಲಿಯ ಕಥೆಗಳೂ ಚಿತ್ರಗಳೂ ಹೊಂದುವುದಿಲ್ಲ. ಎಲ್ಲ ಭಾಷೆಯ ಎಲ್ಲ ಕಥೆಗಳಿಗೂ ಅವೇ ಪರದೇಶದ ಚಿತ್ರಗಳ ಪಡಿಯಚ್ಚನ್ನೇ ಬಳಸಲಾಗುತ್ತದೆ.

ಕನ್ನಡ ಮಕ್ಕಳ ಕಥಾಸಾಹಿತ್ಯದ ಈ ದೀರ್ಘವಾದ ಸಮಾಲೋಚನೆಯಿಂದ ಕೆಲವು ಮಾತುಗಳನ್ನು ನಾವು ತಿಳಿದುಕೊಳ್ಳಬಹುದಾಗಿದೆ: ಕಥಾ ಸಾಹಿತ್ಯವು ಹುಲುಸಾಗಿ ಸಮೃದ್ಧವಾಗಿ ಬೆಳೆದಿದೆ. ವಿಷಯವೈವಿಧ್ಯವೂ ಸಾಕಷ್ಟಿದೆ. ಆದರೆ ಕಥನ ಕಲೆಯ ತಂತ್ರದಲ್ಲಿ ನೈಪುಣ್ಯತೆಯಾಗಲಿ, ಹೊಸ ಹೆಜ್ಜೆಯಾಗಲಿ ಕಂಡುಬರುವುದು ವಿರಳ. ಅಲ್ಲದೆ ಮಕ್ಕಳ ಶಬ್ದ ಸಂಪತ್ತನ್ನು, ಅಳೆದು ಅದಕ್ಕನುಗುಣವಾದ ಭಾಷೆಯಲ್ಲಿ ಕಥೆಗಳ ರಚನೆಯಾದುದೂ ಇಲ್ಲ, ಅದರಿಂದ ಈ ಸಾಹಿತ್ಯಕ್ಕೆ ಶಾಸ್ತ್ರೀಯವಾಗಿ ಬೆಳೆದು ಬಂದ ಶ್ರೇಯಸ್ಸಿಲ್ಲ. ಬಾಲ್ಯಕಾಲ ಕಳೆದಮೇಲೆ ಅಂಥ ದೃಷ್ಟಿಯು ಮೂಡೀತೆಂಬ ಭರವಸೆಯೂ ಶುಭ ಸೂಚನೆಯೂ ಮಾತ್ರ ಇವೆ. ನಮ್ಮ ಮಕ್ಕಳ ಕಥಾಸಾಹಿತ್ಯದ ಭವಿಷ್ಯ ಉಜ್ವಲವಾಗಿದೆಯೆಂಬುದಕ್ಕೆ ಇವೇ ಸಾಕ್ಷಿಯಾಗಿವೆ.

೫

ಮಕ್ಕಳ ಸಾಹಿತ್ಯದ ಇನ್ನುಳಿದ ಅಂಗಗಳಲ್ಲಿ ನಾಟಕ ಹಾಗೂ ಕಾದಂಬರಿಗಳು ಬರುತ್ತವೆ. ಇವೂ ಲಲಿತಸಾಹಿತ್ಯ ವಿಭಾಗಗಳೇ. ಆದರೆ ಅಷ್ಟು ವಿಸ್ತಾರವಾಗಿ ಈ ವಿಭಾಗಗಳು ಕನ್ನಡ ಮಕ್ಕಳ ಸಾಹಿತ್ಯದಲ್ಲಿ ಬೆಳೆದು ಬಂದಂತಿಲ್ಲ. ಅದರಿಂದ ಇವೆರಡು ವಿಭಾಗಗಳನ್ನು ಸೇರಿಸಿಯೇ ಇಲ್ಲಿ ಸಮಾಲೋಚಿಸಲಿಕ್ಕೆ ಯತ್ನಿಸಲಾಗಿದೆ.

ಕಳೆದ ಇಪ್ಪತ್ತೈದು ವರ್ಷಗಳಲ್ಲಿ ಮಕ್ಕಳಿಗಾಗಿ ರಚಿತವಾದ ಕನ್ನಡ ನಾಟಕಗಳು ಏಕಾಂಕಗಳು ಹಲವು ಪ್ರಕಟವಾಗಿರಬೇಕು. ಅಲ್ಲಲ್ಲಿ ಶಾಲೆಗಳ ವಾರ್ಷಿಕೋತ್ಸವಗಳಲ್ಲಿ, ಸಮಾರಂಭಗಳಲ್ಲಿ ಮಕ್ಕಳ ನಾಟಕ ಪ್ರದರ್ಶನಗಳು ನಡೆಯುತ್ತಿವೆ. ಆದರೆ ಈ ಸಮಾಲೋಚನೆಯ ಕಾಲಕ್ಕೆ ನಮಗೆ ಲಭಿಸಿದ ನಾಟಕಗಳು ಹತ್ತೆಂಟು ಮಾತ್ರ. ಅವೂ ಶ್ರೇಷ್ಠ ಕಲೆಗಾರಿಕೆಯನ್ನು ವ್ಯಕ್ತಪಡಿಸಿದ ಕೃತಿಗಳೇನಲ್ಲ. ಶ್ರೀ ಸಿಂಪಿ ಲಿಂಗಣ್ಣನವರು ಬಹುದಿನಗಳವರೆಗೆ ಆದರ್ಶ ಶಿಕ್ಷಕರಾಗಿ ಪ್ರಾಥಮಿಕ ಶಾಲೆಯಲ್ಲಿ ಸೇವೆ ಸಲ್ಲಿಸಿದುದರಿಂದ ಅವರು ಮಕ್ಕಳಿಗಾಗಿ ನಾಟಕಗಳನ್ನು ಬರೆದು, ಆಡಿಸಿದ ಹಿರಿಯರು. ಅವರ 'ಸಪ್ತಪದಿ'ಯು ಇಂಥ ಏಳು ಏಕಾಂಕಗಳ ಸಂಗ್ರಹವಾಗಿದೆ. ಇದರೊಳಗಿನ ನಾಟಕಗಳಲ್ಲಿ ಹಳ್ಳಿಯ ಜೀವನವು ಹೆಚ್ಚಾಗಿ ಚಿತ್ರಿತವಾದ ನೆನಪಿದೆ. ಅದರಲ್ಲಿಯ ಒಂದೆರಡು ನಾಟಕಗಳ ಅಭಿನಯವೂ ಮಕ್ಕಳಿಂದ ಯಶಸ್ವಿಯಾದುದನ್ನು ಶ್ರೀ ಲಿಂಗಣ್ಣನವರ ಶಾಲೆಯಲ್ಲಿಯೇ ನೋಡಿದ್ದೇವೆ. ಆದರೆ ಈಗ ಆ ಪುಸ್ತಕ ಕೈಯಲ್ಲಿ ಇಲ್ಲ. ಅಂದರೂ ಒಳ್ಳೆಯ ಮಕ್ಕಳ ನಾಟಕಗಳ ಸಂಗ್ರಹ ಇದೆಂದು ಹೇಳಬಹುದಾಗಿದೆ. ಇನ್ನೂ ಕನ್ನಡ ನಾಡಿನ ಶ್ರೇಷ್ಠ ಸಾಹಿತಿಗಳೂ ಮಕ್ಕಳ ಸಾಹಿತ್ಯರಚನೆಯಲ್ಲಿ ಶ್ರಮಿಸಿದವರೂ ಆದ ಶ್ರೀ ಶಿವರಾಮಕಾರಂತರ 'ವಿಜಯಾ' ಎಂಬ ಮಕ್ಕಳ ನಾಟಕವೊಂದಿದೆ. ಅದು ಭರತ-ಬಾಹುಬಲಿಗಳ ಯುದ್ಧವನ್ನು ಕುರಿತು ರಚಿಸಿದ ಸುಂದರ ನಾಟಕವಾಗಿದೆ. ಭಾಷೆಯಲ್ಲಿ ಸರಳತೆಯಿದೆ, ಸಂವಾದದಲ್ಲಿ ಚುರುಕಿದೆ. ಇದರಂತೆಯೇ ಶ್ರೀ 'ಉಳುವೀಶ'ರು ರಚಿಸಿದ 'ಬಾಲ ತಪಸ್ವಿ'ಯು ಧ್ರುವನ ಕಥೆಯನ್ನು ನಾಟಕರೂಪಕ್ಕೆ ತಿರುಗಿಸಿದ ಕೃತಿಯಾಗಿದೆ. ಇನ್ನು ಶ್ರೀ ಟಿ. ಕೆ. ಪಾಟೀಲರು ನೀಡಿರುವ 'ಹಳ್ಳಿಯ ಗ್ಯಾನಪ್ಪ' ಐದು ಶೈಕ್ಷಣಿಕ ದೃಶ್ಯಗಳಿಂದ ಕೂಡಿದ ನಾಟಕವಾಗಿದೆ. ಈ ದೃಶ್ಯಗಳನ್ನು ಒಂದೊಂದನ್ನಾಗಿಯೂ ಅಭಿನಯಿಸಬಹುದು. ಒಟ್ಟಾಗಿಯೂ ಅಭಿನಯಿಸಲು ಬರುತ್ತದೆ. ಹೇಗೆ ಅಭಿನಯಿಸಿದರೂ ಪರಿಣಾಮ ಫಲಪ್ರದವೇ ಆಗುವಂಥ ರಚನೆಯಿದೆ. 'ಹೊಲಸೇ ಬಡತನ', 'ಹಕ್ಕು ಹೊಣೆ', 'ದೈವುಳ್ಳ ಹಳ್ಳಿ' ಇವೇ ಮೊದಲಾದವು ಇಲ್ಲಿಯ ದೃಶ್ಯಗಳಾಗಿವೆ. ಇವುಗಳ ರಚನೆಯ ಮೇಲೆ BRAYNE (ಬ್ರೇನ್) ಅವರ 'Socratis in an Indian School' ಮತ್ತು 'Socratis Persists in India' ಗ್ರಂಥಗಳು ಪ್ರಭಾವಬೀರಿದುದನ್ನು ಕಾಣಬಹುದಾಗಿದೆ ಶ್ರೀಕೃಷ್ಣ ಪಾಟೀಲರ 'ಪ್ರಾತರ್ವಿಧಿ'ಯು ಒಂದು ಚಿಕ್ಕ ಚಿಕ್ಕ ನಾಟಕಗಳ ಸಂಗ್ರಹವಾಗಿದೆ. ಇದರಲ್ಲಿ ಹಾಸ್ಯ, ಕನ್ನಡ ಅಭಿಮಾನಗಳ ಪ್ರದರ್ಶನವು ಚೆನ್ನಾಗಿದೆ. ಇವರದೇ ಆದ 'ಹಳ್ಳಿಯ ನೋಟ'ವು ರೈತರ ಜೀವನವನ್ನು ಚಿತ್ರಿಸುವ ಒಂದು ಕಿರುನಾಟಕವಾಗಿದೆ. ಶ್ರೀ ಹೊಯಿಸಳರು ರಚಿಸಿದ 'ಪ್ರಸಾದ' ಎಂಬುದೊಂದು ಚಿಕ್ಕ ನಾಟ್ಯ ಕೃತಿಯಾಗಿದೆ. ಇದರಲ್ಲಿ ಕೃಷ್ಣ, ಅರ್ಜುನ, ಕುಬೇರ ಮೊದಲಾದ ಪೌರಾಣಿಕ ವ್ಯಕ್ತಿಗಳು ಬರುತ್ತವೆ. ಇದೊಂದು ವಿಡಂಬನ ದೃಶ್ಯವಾಗಿದೆ. ಮಕ್ಕಳನ್ನು ವಿನೋದಗೊಳಿಸುವುದೇ ಮುಖ್ಯ ಗುರಿಯಾಗಿರುವ 'ಮುದ್ಮಣಿ' ಎಂಬ ಪ್ರಹಸನವನ್ನು ಶ್ರೀ ನ. ಸುಬ್ರಹ್ಮಣ್ಯಂ ಅವರು ರಚಿಸಿ ಮಕ್ಕಳ ಕೈಗೆ ಇತ್ತಿದ್ದಾರೆ.

ಇದು ಸಾಮಾಜಿಕ ವಸ್ತುವಿನಿಂದ ಕೂಡಿದುದಾಗಿದೆ. ಇವರೇ ರಚಿಸಿರುವ 'ಉದರ ನಿಮಿತ್ತಂ' ಮತ್ತು 'ಮಂತ್ರಕ್ಕೆ ಮಾವಿನಕಾಯಿ'ಗಳೂ ಸಹ ಜನಪ್ರಿಯ ಪ್ರಹಸನಗಳಾಗಿವೆ. ಇನ್ನು ಶ್ರೀ ವೈ. ಕೆ. ತಿಮ್ಮರಸಯ್ಯನವರ 'ತರಕಾರಿ ತಂಟೆ'ಯು ಒಂದು ಹೊಸಬಗೆಯ ಮಕ್ಕಳ ನಾಟಕವು. ಇದರಲ್ಲಿ ಬದನೆಕಾಯಿ, ಮೂಲಂಗಿ, ಕುಂಬಳಕಾಯಿ, ಮೆಣಸಿನಕಾಯಿ ಇತ್ಯಾದಿ ತರಕಾರಿಗಳೇ ಪಾತ್ರಗಳು. ಸುಲಭ ಭಾಷೆಯಲ್ಲಿದೆ. ಈಗಾಗಲೇ ಮಕ್ಕಳು ಅಭಿನಯಿಸಿ ಸಂತೋಷಪಟ್ಟ ಕೃತಿಯಿದಾಗಿದೆ. ನಮಗೆ ದೊರೆತ ಕೃತಿಗಳು ಸ್ವಲ್ಪವಾದರೂ ಗುಣದಲ್ಲಿ ಒಳ್ಳೆಯವಾಗಿವೆ. ಅಗುಳಿನ ಮೇಲಿಂದ ಅನ್ನದ ಪರೀಕ್ಷೆ ಎನ್ನುವಂತೆ ಈ ಸಮೀಕ್ಷೆಯನ್ನು ನಡೆಯಿಸಲಾಗಿದೆ.

ಇನ್ನು ಕನ್ನಡ ಮಕ್ಕಳ ಕಾದಂಬರಿಗಳತ್ತ ಹೊರಳಿದರೂ ಅಲ್ಲಿಯೂ ಕೊರತೆಯೇ ಎದ್ದು ಕಾಣುತ್ತದೆ. ನಮಗೆ ಒದಗಿದ ನಾಲ್ಕು ಕೃತಿಗಳಲ್ಲಿ ಮೂರು ಅನುವಾದಿತ ಕಾದಂಬರಿಗಳು; ಒಂದು ಮಾತ್ರ ಸ್ವತಂತ್ರ ಕೃತಿ. ಅದನ್ನು ಪ್ರಯತ್ನ ಎಂದು ಕರೆಯಬಹುದಾದ ಪ್ರಮೇಯ. ಕನ್ನಡ ಬಾಲಕರಿಗಾಗಿ ಶ್ರೀ ಎಸ್. ರಮಾನಂದರು ಚಾರ್ಲ್ಸ್ ಡಿಕೆನ್ಸ್ ಅವರ 'ಡೇವಿಡ್ ಕಾಪರ್ ಫೀಲ್ಡ್' ಕಾದಂಬರಿಯನ್ನು ಸಂಗ್ರಹಿಸಿಕೊಟ್ಟಿದ್ದಾರೆ. ಆತ್ಮಕಥೆಯ ರೀತಿಯಲ್ಲಿರುವ ಕೃತಿಯಿದು. ಸುಲಭ ಭಾಷೆಯಲ್ಲಿಯೇನೋ ಇದೆ. ಆದರೆ ಆ ಪರದೇಶದ ಸನ್ನಿವೇಶಗಳಲ್ಲಿ ತನ್ಮಯರಾಗಿ ನಮ್ಮ ಮಕ್ಕಳು ಸಂತೋಷಪಡುವುದು ಸುಲಭಸಾಧ್ಯವೇನಲ್ಲ. ಆದರೂ ಪ್ರಯತ್ನ ಒಳ್ಳೆಯದೆಂದು ಹೇಳಬಹುದು. ಇದರಂತೆಯೇ ಇನ್ನೊಂದು ಅನುವಾದಿತ ಕೃತಿ "ಮುಂದೇನು ರಾಮನ್" ಎಂಬುದು. ಇದು ಷೆರ್ಲಿ ಎಲ್. ಅರೋರ ಎಂಬವರು ಇಂಗ್ಲಿಷಿನಲ್ಲಿ ಬರೆದು ಅಮೇರಿಕದಲ್ಲಿ ಮೊದಲು ಪ್ರಕಟಿಸಿದರು. ಇದನ್ನು ಶ್ರೀ ವೈ. ಎನ್. ಕೃಷ್ಣಮೂರ್ತಿಯವರು ಕನ್ನಡಿಸಿದ್ದಾರೆ. ಇಂಗ್ಲಿಷಿನಿಂದ ಅನುವಾದಗೊಂಡ ಕೃತಿಯಾದರು ಕನ್ನಡ ನಾಡಿನ ವಾತಾವರಣ, ಸನ್ನಿವೇಶಗಳಿಗೆ ಹೊಂದಿಕೊಳ್ಳುವಂತಿದೆ. ಒಳ್ಳೇ ಕಲಾತ್ಮಕವಾಗಿಯೂ ಇದರ ನಿರೂಪಣೆಯು ಇದೆ. ರಾಮನ್ ಎಂಬ ಶಾಲಾ ಬಾಲಕನ ಕಥೆಯಿದು. ಓದುಗುಳಿಯಾದ ಆತ ಹಿರಿಯರು ಹಬ್ಬಗಳಲ್ಲಿ ಮಿಠಾಯಿಗಾಗಿ ಕೊಟ್ಟ ದುಡ್ಡನ್ನು ಪುಸ್ತಕ ಕೊಳ್ಳಲು ವಿನಿಯೋಗಿಸುವ ವಿದ್ಯಾರ್ಥಿ. ಅವನು ಬಡ ಕೂಲಿಕಾರನ ಮಗ. 'ರಾಮಾಯಣ'ವನ್ನು ತಂಬುಸ್ವಾಮಿಯ ಪುಸ್ತಕ ಅಂಗಡಿಯಿಂದ ಕೊಳ್ಳಬೇಕೆಂದು ಬಹು ಕಷ್ಟಪಟ್ಟು, ಆರು ರೂಪಾಯಿಗಳನ್ನು ಕೂಡಹಾಕಿದ. ಆದರೆ ಮನೆಯಲ್ಲಿ ಪುಟ್ಟ ತಂಗಿಗೆ ಚಳಿಯಲ್ಲಿ ಹೊದಿಸಲು ಕಂಬಳಿ ಇಲ್ಲದುದರ ಕಲ್ಪನೆಯಿಂದ ಪುಸ್ತಕ ಕೊಳ್ಳುವುದನ್ನು ಬಿಟ್ಟು, ಕಂಬಳಿಯನ್ನು ಕೊಂಡ. ಈ ಕಥೆಯನ್ನು ಬಹು ಸ್ವಾರಸ್ಯವಾಗಿ ಚಿತ್ರಿಸಿದ್ದಾರೆ ಲೇಖಕರು. ತನ್ನ ಒಲವಿನ ಪುಸ್ತಕ ಕೊಳ್ಳಲು ರಾಮನ್‌ನು ಹಣ ಸಂಗ್ರಹಿಸುವಾಗ ಪಟ್ಟ ಕಷ್ಟ ಎಂಥದು? ಅವನ ಪಾಡು ಏನು? ಅದೆಲ್ಲವನ್ನು ಅವನಲ್ಲಿರುವ ಕರುಣೆ, ಮಾನವತೆಗಳು ಗೆದ್ದ ರೀತಿಯ ನಿರೂಪಣೆ ಎಂಥದು? ಬಹು ಸೊಗಸಾದ ಚಿತ್ರ. ಭಾಷೆಯು ಸರಳವಾಗಿದೆ, ಸುಲಭವಾಗಿದೆ. ಇಂಥ ಕೃತಿಗಳು ಕನ್ನಡಕ್ಕೆ ಎಷ್ಟು ಬಂದರೂ ಸಾಲದು; ಮತ್ತೆ ಬೇಕು.

ಶ್ರೀ ಹರಿಕೃಷ್ಣ ದೇವಸತಿಯವರೂ ಹಿಂದಿಯಲ್ಲಿ ಬರೆದ ಕಾದಂಬರಿಯೊಂದನ್ನು ಶ್ರೀ ಪಂಚಾಕ್ಷರಿ ಹಿರೇಮಠ ಅವರು "ದರೋಡೆಗಾರನ ಮಗ" ಎಂಬ ಹೆಸರಿನಲ್ಲಿ ಕನ್ನಡಿಸಿಕೊಟ್ಟಿದ್ದಾರೆ. ಇದು ಸಚಿತ್ರ ಮಕ್ಕಳ ಕಾದಂಬರಿಯು. ಅನುವಾದಕರು ಹೇಳುವಂತೆ ಕನ್ನಡದಲ್ಲಿ ಪ್ರಥಮ ಮಕ್ಕಳ ಕಾದಂಬರಿಯೇನಲ್ಲ. ದರೋಡೆಗಾರನ ಮಗನಾದ ಚಂದನ ಎಂಬ ಬಾಲಕನು ಅದ್ಭುತ ಜೀವನವನ್ನು ಸಾಗಿಸಿ, ತಂದೆಯನ್ನು ಪಾಪಜೀವನದಿಂದ ಪರಾವೃತ್ತಗೊಳಿಸಿದ ವಸ್ತುವೇ ಇಲ್ಲಿಯ ಕಥೆಯಾಗಿದೆ. ಸಾಮಾಜಿಕ ಜೀವನದ ಒತ್ತಡದಿಂದ ನೊಂದು ಮನ್ನಾ ದರೋಡೆಗಾರನಾಗಿರುತ್ತಾನೆ. ಕೊನೆಗೆ ತನ್ನ ಮಗನಿಂದಲೇ ಪಾಪಜೀವನದಿಂದ ಮುಕ್ತನಾಗುತ್ತಾನೆ. ಕಥೆಯ ಉದ್ದಕ್ಕೂ ಚಂದನನ ಸುಗುಣದ ಆಳ, ಮನ್ನಾನ ಪುಂಡಾಟಿಕೆಯ ವಿಸ್ತಾರ ಇವೆರಡೂ ಸಮಾಜ ಜೀವನದ ಎರಡು ಹೊನಲಾಗಿ ಪ್ರವಹಿಸುತ್ತವೆ. 'ಮೆಚ್ಚಿಕೆ'ಯ ಮಾತಿನಲ್ಲಿ ಹಿರಿಯ ರಾದ ಶ್ರೀ ಮ. ಗು. ಹಂಪ್ರಾಳ ಅವರು 'ಕಥಾವಸ್ತುವು ಎಷ್ಟು ಸರಲವೂ ಸುಂದರವೂ ಆಗಿದೆಯೋ ಅಷ್ಟೇ ಅದರ ನಿರೂಪಣೆಯು ಸುಲಭವೂ ಸುಲಲಿತವೂ ಆಗಿ ಹೆಣೆದು ಕೊಂಡಿದೆ........ಇದೊಂದು ಅನುವಾದಿತ ಕಥೆ ಎಂಬ ಭಾಸವು ಯಾವ ಕಾಲಕ್ಕೂ ಅನಿಸುವುದಿಲ್ಲ.' ಎಂದು ಹೇಳಿದ್ದಾರೆ.

ಇನ್ನು ಶ್ರೀ ಅನಂತರಾವ ಕೆ. ಭೋಸಗೆ ಅವರ 'ನಡೆಮುಂದೆ ಗೋವಿಂದ' ಸ್ವತಂತ್ರವಾದ ಕನ್ನಡ ಮಕ್ಕಳ ಕಾದಂಬರಿಯಾಗಿದೆ. ಪ್ರಾಥಮಿಕ ಶಾಲಾ ಬಾಲಕನಾದ ಗೋವಿಂದ ಬಡ ಕೂಲಿಕಾರನ ಮಗ. ಆದರ್ಶ ಶಿಕ್ಷಕರಾದ ಶಾಂತಪ್ಪ ಗುರುಗಳ ಸಹವಾಸದಲ್ಲಿ ಅರಳುವ ಜೀವ. ಗುರುಗಳ ಕೃಪೆಯಿಂದ ವಿವಿಧ ಮಕ್ಕಳ ಪುಸ್ತಕಗಳನ್ನು ಓದಿದ, ರಾಮಚಂದ್ರ, ಏಕಲವ್ಯರಂತೆ ತಾನೂ ಆದರ್ಶ ಜೀವನವನ್ನು ಬಾಳುವ ಕನಸು ಗಾರನಾದ. ಅವನು ಬಡತನ, ಸಾಮಾಜಿಕ ಕಟು ಜೀವನಗಳೊಡನೆ ನಡೆಯಿಸಿದ ಹೋರಾಟದ ಚಿತ್ರವೇ ಕಾದಂಬರಿಯ ವಸ್ತುವು. ಉತ್ತರ ಕರ್ನಾಟಕದ ಹಳ್ಳಿಯ ಜೀವನದ ಹಿನ್ನೆಲೆಯಲ್ಲಿ ಕಥೆಯು ಬೆಳೆದುಬಂದಿದೆ. ಸೊಗಸಾದ ಹಳ್ಳಿಯ ಕೃಷಿಕ ಜೀವನದ ಚಿತ್ರಗಳನ್ನೂ ಒದಗಿಸುತ್ತದೆ. ಪಾತ್ರಸೃಷ್ಟಿ, ಸನ್ನಿವೇಶ ರಚನೆಗಳಲ್ಲಿ ಇನ್ನೂ ಕುಶಲತೆಯು ಹೆಚ್ಚಬೇಕು. ಆದರೂ ಕನ್ನಡ ಮಕ್ಕಳ ಸಾಹಿತ್ಯದಲ್ಲಿ ಕಾದಂಬರಿ ವಿಭಾಗದಲ್ಲಿ ಮೊದಲನೆಯದೆಂದು ಹೇಳುವ ಸ್ವತಂತ್ರ ಕೃತಿ ಇದಾಗಿದೆ. ಈ ಕೃತಿಯನ್ನು ಕುರಿತು ಶ್ರೀ ರೋಹಿಡೇಕರ ಶಾಮರಾಯರು ಮುನ್ನುಡಿಯಲ್ಲಿ 'ಲೇಖಕರ ಶೈಲಿಯು ಸುಲಭವಾಗಿದೆ; ನೈಜ ಚಿತ್ರಗಳಿಂದ ಕೂಡಿದೆ........ಭಾವಪೂರ್ಣ ಪ್ರಸಂಗಗಳು ಅಲ್ಲಲ್ಲಿ ಚಲ್ಲುವರಿದಿವೆ. ಅವುಗಳನ್ನು ಓದುವಾಗ ನನ್ನ ಕಣ್ಣಲ್ಲಿ ನೀರೂರಿತು....' ಎಂದು ಹೇಳಿದ್ದಾರೆ. ಡಾ. ಸದಾನಂದ ನಾಯಕರು ಅಂದಂತೆ 'ಮಕ್ಕಳ ಸಾಹಿತ್ಯ ಮಾರ್ಗದಲ್ಲಿ ಇದಕ್ಕೆ ಒಂದು ಹೆಚ್ಚಿನ ಸ್ಥಾನವನ್ನು ನಾವು ಗುರುತಿಸಬೇಕು.' ಈ 'ನಡೆಮುಂದೆ ಗೋವಿಂದ' ಎಂಬ ಮಕ್ಕಳ ಕಾದಂಬರಿಯು ಕನ್ನಡ ಮಕ್ಕಳ ಸಾಹಿತ್ಯದಲ್ಲಿ ಸ್ವತಂತ್ರ ಕಾದಂಬರಿಗಳ ನಿರ್ಮಾಣಕ್ಕೆ ನಾಂದಿಯಾಗಲೆಂದು ನಾವು ಹಾರೈಸುತ್ತೇವೆ.

೬

ಕನ್ನಡ ಮಕ್ಕಳ ಸಾಹಿತ್ಯದ ವೈವಿಧ್ಯಮಯ ವಿಚಾರ ಸಾಹಿತ್ಯವನ್ನು ಅವಲೋಕಿಸುವ ಪೂರ್ವದಲ್ಲಿ ಮೈಸೂರು ವಿದ್ಯಾಭ್ಯಾಸ ಇಲಾಖೆಯ ವಿದ್ಯಾ ಸಂಶೋಧನ ಶಾಖೆಯವರು ಕನ್ನಡ ಮಕ್ಕಳಿಗಾಗಿ ಪ್ರಕಟಿಸಿದ ವಿಚಾರ ಸಾಹಿತ್ಯದ ಬಗ್ಗೆ ನಾಲ್ಕು ಮಾತುಗಳನ್ನು ಇಲ್ಲಿ ಹೇಳಬೇಕು. ಶ್ರೀ ಟಿ. ವಿ. ತಿಮ್ಮೇಗೌಡ ಅವರು ವಿದ್ಯಾಸಂಶೋಧನ ಶಾಖೆಯ ಡಾಯರೆಕ್ಟರರಾಗಿದ್ದಾಗ ಮಕ್ಕಳ ಸಾಹಿತ್ಯ ರಚನೆಯ ವಿಷಯದಲ್ಲಿ ಅನೇಕ ಚಟುವಟಿಕೆಗಳು ನಡೆದುವು. ಅಂಥವುಗಳಲ್ಲಿ 'ನನ್ನಮನೆ ಮಾಲೆ'ಯ ಯೋಜನೆಯೂ ಒಂದು. ಈ ಯೋಜನೆಯಂತೆ ಪ್ರತಿಯೊಬ್ಬ ಶಿಕ್ಷಕ, ಲೇಖಕರು ತಮಗೆ ನಿಯಮಿಸಿದ ರಾಜ್ಯ ಇಲ್ಲವೆ ನಗರದಲ್ಲಿ ಪ್ರವಾಸಮಾಡಿ, ತಮ್ಮ ಪ್ರತ್ಯಕ್ಷ ಅನುಭವದ ಆಧಾರದ ಮೇಲೆ ಅಲ್ಲಿಯ ಭೌಗೋಲಿಕ, ಸಾಮಾಜಿಕ, ಆರ್ಥಿಕ ಹಾಗು ಸಾಂಸ್ಕೃತಿಕ ಜೀವನವನ್ನು ಆ ರಾಜ್ಯ ಅಥವಾ ನಗರದಲ್ಲಿ ವಾಸಿಸುವ ಒಂದು ಚಿಕ್ಕ ಮಗುವೇ ಹೇಳುವಂತೆ ನೈಜ ರೀತಿಯಲ್ಲಿ ಬರೆದಿದ್ದಾಗಿದೆ. ಭಾರತದ ಹದಿನೈದು ರಾಜ್ಯ ಮತ್ತು ಐದು ಮುಖ್ಯ ನಗರ (ದೆಹಲಿ, ಕಲಕತ್ತ, ಮುಂಬಯಿ, ಮದ್ರಾಸು ಮತ್ತು ಬೆಂಗಳೂರು ನಗರ) ಇವುಗಳನ್ನು ಕುರಿತು ಇಪ್ಪತ್ತು ಪುಸ್ತಕಗಳು ಸಿದ್ಧವಾಗಿವೆ. ಅವೆಲ್ಲ ಯೋಗ್ಯ ಚಿತ್ರಗಳಿಂದ ಕೂಡಿದ್ದು, ವಿದ್ಯಾ ಸಂಶೋಧನ ಶಾಖೆಯಿಂದ ಇತ್ತೀಚೆಗೆ ಪ್ರಕಟವಾಗಿವೆ. ಈ ಎಲ್ಲಾ ಪುಸ್ತಕಗಳನ್ನು ೯ ರಿಂದ ೧೩ ವಯಸ್ಸಿನ ಮಕ್ಕಳ ಭಾಷೆ, ಮನೋವೃತ್ತಿಗಳಿಗೆ ಹೊಂದುವಂತೆ ರಚಿಸಲಾಗಿದೆ. ಇದೊಂದು ಸಾಹಿತ್ಯ ರಚನೆಯಲ್ಲಿ ಮೈಸೂರು ಸರಕಾರದ ಸ್ತುತ್ಯಕ್ರಮವಾಗಿದೆ. ಇದರಿಂದ ಭಾರತದಲ್ಲಿ ಭಾವೈಕ್ಯವನ್ನು ಸಾಧಿಸುವ ವಿಚಾರಕ್ಕೆ ತಳಹದಿಯನ್ನು ಹಾಕಲಾಗಿದೆ. ಮಕ್ಕಳಲ್ಲಿ ಈ ಮನೋಭಾವವು ಉಂಟಾಗಲು ಈ ಸಾಹಿತ್ಯವು ಕಾರಣವಾಗುತ್ತದೆ.

ಸಾಮಾನ್ಯವಾಗಿ ಈ ಇಪ್ಪತ್ತು ಪುಸ್ತಕಗಳನ್ನೂ ರಚಿಸುವಾಗ ಸ್ಥೂಲವಾದ ಪದಪಟ್ಟಿಯೊಂದು ಲೇಖಕರ ಎದುರಿಗೆ ಇತ್ತು. ಅದನ್ನು ಮೈಸೂರು ರಾಜ್ಯದ ಎಲ್ಲಾ ಭಾಗಗಳಿಂದ ಇದಕ್ಕಾಗಿ ಬಂದ ಶಿಕ್ಷಕರೇ ಕೂಡಿ ಸಿದ್ಧಪಡಿಸಿಕೊಂಡಿದ್ದರು. ಆ ಪದಪಟ್ಟಿಯು ೯ರಿಂದ ೧೩ ವಯಸ್ಸಿನ ಮಕ್ಕಳ ಭಾಷಾಶಕ್ತಿಯನ್ನು ಅವಲಂಬಿಸಿ ರೂಪುಗೊಳಿಸಿದ್ದಾಗಿತ್ತು. ಈ ಪದಪಟ್ಟಿಯ ಬಂಧನಕ್ಕೊಳಗಾಗಿಯೂ ಆಯಾ ರಾಜ್ಯ, ನಗರಗಳಿಗೆ ಸಂಬಂಧಿಸಿದ ವಿಶಿಷ್ಟ ಪದಗಳನ್ನೂ ಪ್ರಯೋಗಿಸುವ ಸ್ವಾತಂತ್ರ್ಯವೂ ಇತ್ತು. ಅದರಿಂದ ಈ ಕೃತಿಗಳು ಸುಂದರವಾಗಿಯೂ ಶಾಸ್ತ್ರೀಯ ದೃಷ್ಟಿಯನ್ನು ಹೊಂದಿಯೂ ರೂಪುಗೊಂಡವುಗಳಾಗಿವೆ.

ಈ ನನ್ನಮನೆ ಮಾಲೆಯಲ್ಲಿ 'ಮೈಸೂರು ರಾಜ್ಯ' ಎಂಬುದು ಮೊದಲನೆಯ ಪುಸ್ತಕವು. ಇದನ್ನು ಶ್ರೀ ಕೆ. ಆರ್. ರಂಗಾಚಾರ್ ಅವರು ರಚಿಸಿದ್ದಾರೆ. ಹತ್ತು ವರ್ಷದ ಬಾಲಕ ಹೇಳಿದ ರೀತಿಯಲ್ಲಿ ಪುಸ್ತಕವು ಆರಂಭವಾಗುತ್ತದೆ. 'ಆವರಗೆರೆ ನಮ್ಮ ಹಳ್ಳಿ. ದಾವಣಗೆರೆಗೆ ಸುಮಾರು ಎರಡು ಕಿ. ಮೀ. ದೂರದಲ್ಲಿದೆ, ನನ್ನ ಹೆಸರು

ಬಸಪ್ಪ. ನಮ್ಮ ತಂದೆ ಶರಣಪ್ಪನವರು. ತಾಯಿ ಮಹಾದೇವಿ. ನಮ್ಮ ಮನೆ ಒಂದು ದೊಡ್ಡ ಸಂಸಾರ.' ಎಂದು ಸುಲಭ ಭಾಷೆಯಲ್ಲಿ ವಿಷಯವು ಮುಂದರಿಯುತ್ತದೆ. ಮುಂದಿನ ಪುಸ್ತಕ ಶ್ರೀ ಜಿ. ಎಸ್. ಹಿರೇಮಠರು ಬರೆದ 'ಮದ್ರಾಸ ರಾಜ್ಯ' ಎಂಬುದು. ಇದೂ ಬಾಲಕನ ಕಥನವೇ. ಅವನು ತನ್ನ ಜೀವನದ ರೀತಿಯನ್ನು ಹೇಳುತ್ತ "ತಾಯಿಯೂ ಕೆಲಸಮಾಡುತ್ತ 'ಭಕ್ತವತ್ಸಲ, ಏಳು ಬೆಳಗಾಯಿತು ಏಳು,–' ಎಂದು ನನ್ನನ್ನೂ ಎಬ್ಬಿಸಿದಳು. ನಾನು ಎದ್ದು ಮುಖ ತೊಳೆದುಕೊಂಡು, ಓದುತ್ತ ಕುಳಿತು ಕೊಂಡೆ," ಎಂದು ವಿವರಿಸುವನು. ಶ್ರೀ ಕೆ. ಸಚ್ಚಿದಾನಂದಯ್ಯನವರು 'ಕೇರಳ'ವನ್ನು ಕುರಿತು ಬರೆದಿದ್ದಾರೆ. ಇದು ಕೇರಳದ ಹುಡುಗಿ ಲಕ್ಷ್ಮಿ ಹೇಳಿದ ರೀತಿಯಲ್ಲಿದೆ, ಅವಳು ತನ್ನ ಮನೆಯ ಸನ್ನಿವೇಶವನ್ನು ಹೀಗೆ ವಿವರಿಸುತ್ತಾಳೆ. 'ನಮ್ಮ ಮನೆಯ ಸುತ್ತಲೂ ತೆಂಗಿನ ಮರಗಳಿವೆ. ಮನೆಯ ಮುಂಭಾಗದಲ್ಲಿ ಭತ್ತದ ಗದ್ದೆಗಳಿವೆ. ಗದ್ದೆಗಳ ನಡುವೆ ಚಿಕ್ಕದಾದ ನಾಲೆಯಿದೆ, ಗದ್ದೆಯ ಒಂದೂ ಬದಿನೇಂದ್ರಫಲದ ತೋಟವಿದೆ. ಮತ್ತೊಂದೆಡೆ ಮರಗೆಣಸಿನ ಗಿಡಗಳಿವೆ.' ಇನ್ನು 'ಆಂಧ್ರ ಪ್ರದೇಶ' ವನ್ನು ಕುರಿತು ಶ್ರೀ ಎಂ. ಕೆ. ಅಶ್ವತ್ಥನಾರಾಯಣಸ್ವಾಮಿಯವರು ಬಾಲಕನು ಹೇಳಿದ ಕ್ರಮದಲ್ಲಿ ಪುಸ್ತಕ ರಚಿಸಿದ್ದಾರೆ. ಆ ಬಾಲಕನು 'ನಮ್ಮ ಗದ್ದೆಯಲ್ಲಿ ಬೆಳೆದ ಅಕ್ಕಿಗೆ "ಬೆಜವಾಡ ಅಕ್ಕಿ" ಎಂದು ಹೆಸರು. ಇದನ್ನು ಲಾರಿಗಳಲ್ಲಿ ತುಂಬಿ ಕೊಂಡು ತಂದೆಯವರು ವಿಜಯವಾಡದಲ್ಲಿ ಮಾರಿ ಬರುತ್ತಾರೆ.' ಎಂದು ಹೇಳು ತ್ತಾನೆ. ಶ್ರೀ ಜಿ. ಮಹಾಬಲಶೆಟ್ಟಿಯವರು ತಂದ 'ಮಹಾರಾಷ್ಟ್ರ'ದ ಹುಡಿಗೆಯು 'ಅಣ್ಣನು ಪುಣೆಯ ತಿಲಕ್ ವ್ಯಾಯಾಮ ಶಾಲೆಯಲ್ಲಿ ಕುಸ್ತಿಮಾಡಲು ಕಲಿತಿರುತ್ತಾನೆ. ನಮ್ಮ ಸಾಂಗ್ಲಿಯಲ್ಲಿಯೂ ಒಂದು ವ್ಯಾಯಾಮ ಶಾಲೆಯನ್ನು ತೆರೆಯಬೇಕೆಂದು ಅವನಿಗೆ ಆಶೆ ಇದೆ' ಎಂದು ಹೇಳುತ್ತಾಳೆ. ಶ್ರೀ ಎಸ್. ಜಿ. ಸಂಗಮರ 'ಗುಜರಾತ'ದ ಹುಡುಗನು 'ನನ್ನ ತಂದೆಯವರು ಒಂದು ನೆಹರು ಶರ್ಟ್ ಹಾಕಿ, ಚುಂಗು ಧೋತರ ವನ್ನು ಉಟ್ಟುಕೊಳ್ಳುತ್ತಾರೆ, ನನ್ನ ತಾಯಿಯು ಸೀರೆಯ ಸೆರಗನ್ನು ತಲೆಯಮೇಲೆ ಹೊದ್ದುಕೊಳ್ಳುತ್ತಾಳೆ. ಮೂಗಿನಲ್ಲಿ ಹರಳಿನ ಮೂಗುತಿ, ಕಿವಿಯಲ್ಲಿ ಬಂಗಾರದ ಓಲೆ, ಕಾಲುಗಳಲ್ಲಿ ಬೆಳ್ಳಿಯ ಸರಪಳಿ ಧರಿಸುತ್ತಾಳೆ, ಕೈತುಂಬ ಗಾಜಿನ ಬಳೆಗಳಿವೆ.' ಎಂದು ತನ್ನ ತಂದೆ–ತಾಯಂದಿರ ಚಿತ್ರವನ್ನು ಕೊಡುತ್ತಾನೆ. ಶ್ರೀ ಮಿರ್ಜಿ ಅಣ್ಣಾರಾಯರ 'ರಾಜಸ್ಥಾನ'ದ ಭೋಟಿದೇವಿಯು ತಮ್ಮೂರ 'ಗಣಗೋರ' ಹಬ್ಬದ ಸಂಗತಿಯನ್ನು ಹೇಳುತ್ತ 'ಸಾಯಂಕಾಲದ ಘುಮ್ಮರ ನೃತ್ಯದಲ್ಲಿ ನಮ್ಮ ತಾಯಿಯು ಎಷ್ಟು ಕುಣಿದು ಹಾಡಿ ದಣಿದರೂ ಬೆಳಗಿನಲ್ಲಿ ಬೇಗನೆ ಏಳುವಳು. ನಾವು ಹಾಸಿಗೆಯಿಂದ ಏಳುವಷ್ಟರಲ್ಲಿ ಒಬ್ಬಳೇ ಮನೆಗೆ ಬೇಕಾಗುವ ನೀರನ್ನೆಲ್ಲಾ ತಂದುಬಿಡುವಳು. ನಮಗೆಲ್ಲ ತಿನ್ನ ಲಿಕ್ಕೆಂದು ಹಲವಾ, ಲಪಸಿ, ಜಿಲೇಬಿಗಳನ್ನು ಮಾಡುವಳು.' ಎಂದು ವಿವರಣೆಯನ್ನು ಪೂರೈಸುವಳು. ಶ್ರೀ ಉಳುವೀಶರು ಕರೆದುತಂದ 'ಮಧ್ಯಪ್ರದೇಶ'ದ ಗುಲಾಬ ಚಂದನು 'ನಮ್ಮ ರಾಜ್ಯದಲ್ಲಿ ಭೂಮಿಯ ಪ್ರಮಾಣ ಹೆಚ್ಚಾಗಿಲ್ಲ. ಆದರೆ ಇರುವ

ಭೂಮಿ ಚಿನ್ನಬಿತ್ತಿ ಚಿನ್ನ ಬೆಳೆಯುವ ಹಾಗಿದೆ. ಕಸುವಿನ ಕಪ್ಪನೆಯ ನೆಲ ಗೋದಿಯ ಬೆಳೆಗೆ ಹೆಸರಾಗಿದೆ' ಎಂದು ಹೇಳುತ್ತಾನೆ. ಶ್ರೀ ವೀರಭದ್ರಶೆಟ್ಟರ 'ಪಂಜಾಬ'ದ ಬಾಲಕನು 'ಅಮ್ಮ ರೇಗಿದಂತೆ ಮಾಡಿ, "ಹಾಡು ಬಿಮ್ಲಾ, ಎಷ್ಟು ಹೇಳಿಸಿಕೊಳ್ಳು ವುದು?" ಎಂದಾಗ ಅಕ್ಕ ನಾಚುತ್ತಲೇ ಹಾಡಲು ಒಪ್ಪಿದಳು. ನಾನು ಕೂಡಲೇ ಅವಳ ಕೈಗೆ ಢೋಲಕ ತಂದುಕೊಟ್ಟೆ, ಅದನ್ನು ಬಾರಿಸುತ್ತ ಅವಳು ಹಾಡ ತೊಡಗಿದಳು'–ಎಂದು ತನ್ನ ಮನೆಯೊಳಗೆ ನಡೆದ ಒಂದು ಪ್ರಸಂಗವನ್ನು ಹೇಳುವನು. ಶ್ರೀ ಪಾಂಡುರಂಗರಾಯರ 'ಕಾಶ್ಮೀರ'ದ ಹುಡುಗ ರತನಲಾಲಕೌಲನು 'ದೋಣಿಮನೆ ಆಗಲೇ ಕಟ್ಟಿ ಪೂರೈಸಿತ್ತು. ಮೈಸೂರಿನ ಪ್ರವಾಸಿಯೊಬ್ಬರು ಬಾಡಿಗೆಗೆ ಸಿಕ್ಕಿದರು.' ಎನ್ನುವನು. 'ಉತ್ತರ ಪ್ರದೇಶ'ವನ್ನು ಕಂಡು ಚಿತ್ರಿಸಿದ ಶ್ರೀ ಎಂ. ವಿರೂಪಾಕ್ಷಯ್ಯ ನವರು ಅಲ್ಲಿಯ ಬಾಲಕ ಛೋಟೇಲಾಲನಿಂದ 'ಮದುವೆಯ ದಿನ ಮದುಮಗಳಾಗಿದ್ದ ಲಾಲಮಣಿಯನ್ನು ಜರದಂಚಿನ ರೇಶಿಮೆಯ ಘಾಗರಾ ಉಡಿಸಿ ಸಿಂಗರಿಸಿದ್ದರು. ಅವಳ ಕೊರಳಲ್ಲಿ ಬಂಗಾರದ ಹಸಲಿ, ಕೈಯಲ್ಲಿ ಬಂಗಾರದ ಬಳೆ ತೊಡಿಸಿದ್ದರು. ಮೂಗಿನಲ್ಲಿ ಬಂಗಾರದ ನಲ್ಕಿ ಇಟ್ಟಿದ್ದಳು. ಕಾಲಬೆರಳಿಗೆ ಬೀಛಿಯಾ ಧರಿಸಿದ್ದಳು. ಅವಳ ಅಂಗೈ, ಅಂಗಾಲುಗಳಿಗೆ ಮೆಹಂದಿಯಿಂದ ತರ–ತರದ ಚಿತ್ರಗಳನ್ನೂ ಬರೆದಿದ್ದರು. ಅವಳ ತಲೆಯ ಬೈತಲೆಯಲ್ಲಿ ಬಿಂದಿಯಾ ಹೊಳೆಯುತ್ತಿತ್ತು.' ತಮ್ಮ ಅಕ್ಕನ ಮದುವೆಯ ಸಡಗರವನ್ನು ಹೇಳಿಸುವರು. 'ಬಿಹಾರ'ವನ್ನು ರೂಪಿಸಿದ ಶ್ರೀ ಕೆ. ವೆಂಕಟಾಚಾರ್ (ಸವ್ಯಸಾಚಿ) ಅವರು ಅಲ್ಲಿಯ ಬಾಲಕ ಓಂಪ್ರಕಾಶ್‌ನಿಂದ 'ಗದ್ದೆಗೆ ನೀರು ಹಾಯಿಸಲು ಕಪಿಲೆಬಾವಿ ತೆಗೆದಿರುವೆವು. ಬಾವಿ ಅಗಲವಾಗಿರುವುದು' ಎಂದು ಕೃಷಿಯ ವಿಷಯ ಹೇಳಿಸಿದ್ದಾರೆ. ಶ್ರೀ ಪೆರೋಡಿ ಪುಟ್ಟಪ್ಪಯ್ಯ ಕಾರಂತರ 'ಒರಿಸ್ಸಾ' ವಿದ್ಯಾರ್ಥಿನಿಧಿ ಶಾಂತಾರಾಮನು 'ನಮಗೆ ಮಗ್ಗ ನೆಯ್ಗೆಯಲ್ಲದೆ ಹತ್ತು ಎಕರೆ ಜಮೀನು ಇದೆ' ಎಂದು ಹೇಳುತ್ತಾನೆ. 'ಪಶ್ಚಿಮ ಬಂಗಾಳ'ದ ಚಿತ್ರವನ್ನು ನೀಡಿದ ಶ್ರೀ ಗುರುನಾಥಜೋಶಿಯವರು ಅಲ್ಲಿಯ ಜಯದೇವನಿಂದ 'ನಮ್ಮ ಮನೆಯು ಹಂಚಿನದು; ಮಣ್ಣಿನ ಇಟ್ಟಿಗೆಗಳಿಂದ ಕಟ್ಟಿದುದು. ಮನೆಯ ಹಿತ್ತಲಲ್ಲಿ ಒಂದು ಪುಕುರ (ಹೊಂಡ) ಇದೆ. ಅದರಲ್ಲಿ ನಮ್ಮ ನಿತ್ಯ ಆಹಾರಕ್ಕೆ ಬೇಕಾದ ಮೀನು ಗಳನ್ನು ಬೆಳಸುತ್ತೇವೆ' ಎಂದು ವಿವರ ಕೊಡಿಸುವರು. ಶ್ರೀ ಈಶ್ವರಚಂದ್ರ ಚಿಂತಾ ಮಣಿಯವರು 'ಅಸ್ಸಾಮ್'ದ ಚಿತ್ರವನ್ನು ಕೊಡುತ್ತ ಅಲ್ಲಿಯ ಬಾಲಕ ಅಭಿಜಿತ್ ನಿಂದ 'ಮನೆಯ ಹಿಂದೆಯೇ ಬ್ರಹ್ಮಪುತ್ರಾನದಿ. ನದಿಯ ದಂಡೆಯಲ್ಲಿ ನಿಂತಿರುವ ಸಾರಿಗೆಯ ಹಡಗುಗಳನ್ನು ದಿನಾಲು ನೋಡುತ್ತೇವೆ' ಎಂದು ಸೂಚಿಸಿದ್ದಾರೆ. ಹೀಗೆ ಈ ಮಕ್ಕಳ ಪುಸ್ತಕಗಳಲ್ಲಿ ಭಾರತದ ವಿವಿಧ ಪ್ರಾಂತಗಳ ಜನಜೀವನದ ಚಿತ್ರವು ಮನೋಹರವಾಗಿ ಮೂಡಿಬಂದಿದೆ. ಇಂಥ ಮಕ್ಕಳ ಪುಸ್ತಕ ರಚನೆಯ ಚಟುವಟಿಕೆ ಯಿಂದ ಸ್ಫೂರ್ತಿಯನ್ನು ಹೊಂದಿದ ಶ್ರೀ ಚಿರಂತನ ಅವರು 'ಕೊಡವ ನಾನು, ಕೊಡಗು ನಾಡು' ಎಂಬ ಕಿರುಹೊತ್ತಿಗೆಯನ್ನು ಇದೇ ಮಾದರಿಯಲ್ಲಿ ಬರೆದು ಸ್ವತಃ ಪ್ರಕಟಿಸಿ

ದ್ದಾರೆ. ಇದೂ ಒಳ್ಳೆಯ ಕೃತಿಯಾಗಿ ಬಂದಿದೆ. ಇನ್ನು ಹಿಂದೆ ಹೈದರಾಬಾದಿನ ವಿದ್ಯಾ ಇಲಾಖೆಯು ಶಿಶುಸಾಹಿತ್ಯಕ್ಕೆ ಪ್ರೋತ್ಸಾಹ ಕೊಡುತ್ತಿದ್ದಾಗ ಶ್ರೀ ಹ. ಕೃ. ಕಮತಗಿಯವರು 'ನಮ್ಮ ಹೈದರಾಬಾದು' ಎಂಬ ಮಕ್ಕಳ ಪುಸ್ತಕವೊಂದನ್ನು ಬರೆದು ಪ್ರಕಟಿಸಿದ್ದುಂಟು. ಅದು ಸುಲಭ ರೂಪದಲ್ಲಿ, ಭೌಗೋಳಿಕ ವಿವರಗಳನ್ನು ಪೂರೈಸುವ ಕೃತಿಯಾಗಿದೆ. ಹೈದರಾಬಾದ ಪ್ರದೇಶದ ಜನಜೀವನ, ಕಲೆಗಳ ಬಗ್ಗೆಯೂ ಕೆಲವು ಸಂಗತಿಗಳು ಇದರಲ್ಲಿವೆ. ಕಲಾತ್ಮಕತೆಗಿಂತ ಸರಳ ನಿರೂಪಣೆಯ ಕಡೆಗೆ ಲೇಖಕರ ಗಮನವಿದೆ.

ಇದೇ ಸಂದರ್ಭದಲ್ಲಿ, ಮೈಸೂರಿನ ವಿದ್ಯಾ ಸಂಶೋಧನ ಸಂಸ್ಥೆಯು ಪ್ರಕಟಿಸಿದ ಬೆಂಗಳೂರು, ಮದ್ರಾಸ್‌ನಗರ, ಬೊಂಬಾಯಿನಗರ, ದೆಹಲಿ, ಕಲಕತ್ತಗಳನ್ನು ಕುರಿತ ಮಕ್ಕಳ ಪುಸ್ತಕಗಳೂ ಸಹ ಆಯಾ ನಗರಗಳಲ್ಲಿ ವಾಸಿಸುವ ಬಾಲ-ಬಾಲಿಕೆಯರೇ ವಿವರಿಸುವ ರೀತಿಯಲ್ಲಿಯೇ ಇವೆಯೆಂಬುದನ್ನು ಗಮನಿಸಬೇಕು. ಇವು ಸುಲಭ ಭಾಷೆಯಲ್ಲಿ ರಚಿಸಿದ ಸಚಿತ್ರ ಪುಸ್ತಕಗಳು. ಮಕ್ಕಳ ಮನಸ್ಸನ್ನು ಸೆಳೆಯುತ್ತವೆ. ವಿಷಯದ ವಿವರವನ್ನೂ ಪೂರೈಸುತ್ತವೆ. ಆದರೆ ಒಂದೇ ರೀತಿಯಲ್ಲಿ ಇಪ್ಪತ್ತು ಪುಸ್ತಕ ಗಳನ್ನು ಬರೆಯುವ ಕಟ್ಟನ್ನು ಪಾಲಿಸುವುದರಿಂದ ಸ್ವಲ್ಪ ಕೃತ್ರಿಮತೆಯು ಅಲ್ಲಲ್ಲಿ ವ್ಯಕ್ತ ವಾಗದೆ ಹೋಗುವುದಿಲ್ಲ. ಆದರೂ ಕನ್ನಡ ಮಕ್ಕಳ ಸಾಹಿತ್ಯರಚನೆಯಲ್ಲಿ ಇದೊಂದು ಸ್ತುತ್ಯ ಪ್ರಯತ್ನವಾಗಿದೆ.

ಶ್ರೀ ಸುಬೋಧರಾಮರಾಯರು, ಪಂ. ಕವಲಿಯವರು ಭಾರತದ ರಾಷ್ಟ್ರೀಯ ಮಹಾಪುರುಷರ ಚರಿತ್ರೆಗಳನ್ನೂ ಇತರ ವ್ಯಕ್ತಿಗಳ ಚಿತ್ರಗಳನ್ನೂ ಮಕ್ಕಳಿಗಾಗಿ ನೀಡಿದುದುಂಟು. ಕನ್ನಡ ಮಕ್ಕಳ ವಿಚಾರ ಸಾಹಿತ್ಯದಲ್ಲಿ ಇಂಥ ಚರಿತ್ರೆಗಳೇ ಹೆಚ್ಚು ಸಂಖ್ಯೆಯಲ್ಲಿ ಬಂದಿವೆ. ಲೋಕಮಾನ್ಯ ತಿಲಕ, ಸ್ವಾಮಿ ವಿವೇಕಾನಂದ, ರಾಮಕೃಷ್ಣ ಪರಮಹಂಸ, ಸರದಾರ ವಲ್ಲಭಭಾಯಿ ಪಟೇಲ್, ವಿನೋಬಾ, ದಾದಾಭಾಯಿ ನೌರೋಜಿ, ವೀರನಾರೀ ಲಕ್ಷ್ಮೀಬಾಯಿ, ಪಂ. ಜವಹರಲಾಲ ನೆಹರು, ಸರ್ವಪಲ್ಲಿ ರಾಧಾಕೃಷ್ಣನ್, ಮಹಾತ್ಮಾ ಗಾಂಧೀಜಿ, ಕಸ್ತೂರಬಾ ಗಾಂಧಿ, ರಮಣಮಹರ್ಷಿ, ರವೀಂದ್ರ ಈ ಮಹಾ ಪುರುಷರನ್ನು ಕುರಿತು ಹಲವಾರು ಮಕ್ಕಳ ಪುಸ್ತಕಗಳ ರಚನೆಯಾಗಿದೆ. ಹಲವರ ವಿಷಯದಲ್ಲಿ ಒಬ್ಬರನ್ನೇ ಕುರಿತು ಎರಡು ಮೂರು ಪುಸ್ತಕಗಳೂ ಕೂಡ ಬಂದಿವೆ. ಇವೆಲ್ಲವೂ ಕಲಾತ್ಮಕವಾದ ರಚನೆಗಳೆಂದೇನೂ ಹೇಳಲಿಕ್ಕೆ ಬರುವುದಿಲ್ಲ. ಆದರೂ ಕನ್ನಡ ಮಕ್ಕಳ ಸಾಹಿತ್ಯದ ಸಮೃದ್ಧಿಯನ್ನು ಇವು ಸೂಚಿಸುತ್ತವೆ. ಈ ವಿಭಾಗದಲ್ಲಿ ಭಾರತ ಸರಕಾರದ ಬಹುಮಾನವನ್ನು ಪಡೆದ 'ಮಕ್ಕಳ ರವೀಂದ್ರರು' ಎಂಬ ಪುಸ್ತಕ ವನ್ನು ಎತ್ತಿ ಹೇಳಬೇಕು. ಇದನ್ನು ತಮಿಳಿನಲ್ಲಿ ಶ್ರೀ ಅ. ತಿಲಕವತಿಯವರು ರಚಿಸಿ ದ್ದಾರೆ. ಅದನ್ನು ಕನ್ನಡಿಸಿ ಶ್ರೀ ಎಲ್. ಗುಂಡಪ್ಪನವರು ನಮ್ಮ ಮಕ್ಕಳಿಗೆ ನೀಡಿ ದ್ದಾರೆ. ಕಥೆಮಾವ ಈ ಕವಿಕಥೆಯನ್ನು ಬಾಲಕರಿಗೆ ಹೇಳಿದ ರೀತಿಯಲ್ಲಿ ಬರೆಯ ಲಾಗಿದೆ. ರವೀಂದ್ರರು 'ಕವಿರಾಜ' ಎಂದು ಪ್ರಾರಂಭದಲ್ಲಿ ಹೇಳಿ, ಮುಂದೆ

'ವಿಜ್ಞಾನಿ ಠಾಕೂರ್', 'ಎಂಜಿನಿಯರ್ ಠಾಕೂರ್', 'ಅಳಲಿನ ಗೆಳೆಯ ಠಾಕೂರ್', 'ದೇಶಭಕ್ತ ಠಾಕೂರ್' ಇತ್ಯಾದಿ ವಿಭಾಗಗಳಿಂದ ಕವೀಂದ್ರರ ಜೀವನದ ವಿವಿಧ ಮೈಗಳನ್ನು ಲೇಖಿಕೆಯವರು ವಿವರಿಸುತ್ತ ಹೋಗಿದ್ದಾರೆ. ಭಾಷೆ ಸುಲಭವಿದೆ. ಕವಿಯ ವ್ಯಕ್ತಿತ್ವದ ಚಿತ್ರವನ್ನು ಮಕ್ಕಳ ಮನಸ್ಸಿನಲ್ಲಿ ಮೂಡಿಸುವಂತಿದೆ.

ಶ್ರೀ ತಿಲಕವತಿಯವರ ತಮಿಳು 'ಮಕ್ಕಳ ರವೀಂದ್ರರು' ಬರುವ ಪೂರ್ವದಲ್ಲಿಯೇ ಕನ್ನಡ ಮಕ್ಕಳಿಗೆ ಪ್ರೊ. ದೇ. ಜವರೇಗೌಡರು 'ಋಷಿಕವಿ ರವೀಂದ್ರರ'ನ್ನು ಕಾಣಿಕೆಯಾಗಿ ನೀಡಿದ್ದಾರೆ. ಭಾರತದ ರಾಷ್ಟ್ರಗೀತೆಯಾದ 'ಜನಗಣಮನ' ಪಲ್ಲವಿಯಿಂದ ಈ ವ್ಯಕ್ತಿಚಿತ್ರವು ಪ್ರಾರಂಭವಾಗುತ್ತದೆ. ಕವಿ ಜೀವನದ 'ಅಂಕುರ'ದಿಂದ ಮೊದಲುಗೊಂಡು ಸಾಧನೆ, ವಿಕಾಸ, ಸಿದ್ಧಿಯ ಮಾರ್ಗದಲ್ಲಿ ವಿಸ್ತಾರಗೊಂಡಿದೆ ಇದು. ಮಕ್ಕಳಿಗೆ ಮಹಾಕವಿ ಜೀವನದ ಸ್ಪಷ್ಟ ಚಿತ್ರವನ್ನೂ ಇದು ಕೊಡುತ್ತದೆ. ಅವರ ಭಾಷೆಯಲ್ಲಿಯೇ ಮನೋಹರವಾಗಿ ರೂಪುಗೊಂಡಿದೆ. ಇದನ್ನು ರಚಿಸಿ 'ದೇಜಗೌ' ಅವರು ರವೀಂದ್ರರ ರಾಷ್ಟ್ರೀಯ ಮಹೋತ್ಸವದಲ್ಲಿ ಸಕ್ರಿಯ ಪಾಲುಗಾರರಾಗಲು ಸುಯೋಗವನ್ನೂ ಪಡೆದರು. ಅದು ಕನ್ನಡ ಮಕ್ಕಳ ಸುಯೋಗವೂ ಆಯಿತು.

ಕನ್ನಡ ಮಕ್ಕಳಿಗೆ ವಿಜ್ಞಾನಿಯ ವ್ಯಕ್ತಿಚಿತ್ರವನ್ನು ನೀಡಿದ ಶ್ರೇಯಸ್ಸೂ ಕೂಡ ಪ್ರೊ. ದೇ. ಜವರೇಗೌಡರಿಗೆ ಸಲ್ಲುತ್ತದೆ. ಅದಕ್ಕೆ ಅವರ 'ಆಲ್‌ಬರ್ಟ್ ಐನ್‌ಸ್ಟೀನ್' ಎಂಬ ಮಕ್ಕಳ ಪುಸ್ತಕವೇ ಕಾರಣವಾಗಿದೆ. 'ಆಟಂಬಾಂಬ್'ದಿಂದ ಆರಂಭವಾಗುವ ಈ ಕುತೂಹಲಕಾರಿಯಾದ ವ್ಯಕ್ತಿಚಿತ್ರವು 'ಅಮೇರಿಕೆಯಲ್ಲಿ ವಿಜ್ಞಾನ ಮಹರ್ಷಿ'ಯ ರೂಪದಲ್ಲಿ ಕೊನೆಗೊಳ್ಳುವುದು. ಇಷ್ಟರಿಂದ ಲೇಖಕರ ವ್ಯಕ್ತಿಚಿತ್ರಣದ ದೃಷ್ಟಿಯು ಸ್ಪಷ್ಟವಾಗುವಂತಿದೆ. ಕನ್ನಡ ಮಕ್ಕಳ ಸಾಹಿತ್ಯದಲ್ಲಿ ಈ ವ್ಯಕ್ತಿಚಿತ್ರಕ್ಕೊಂದು ವಿಶಿಷ್ಟ ಸ್ಥಾನವಿದೆ.

ಇಲ್ಲಿಯೇ ಇನ್ನೊಂದು ಬಗೆಯ ವ್ಯಕ್ತಿಚಿತ್ರ ಸಂಕಲನಗಳೆನಿಸುವ ಶ್ರೀ ಬಿ. ಶಂಕರ ಭಟ್ಟರ 'ಗ್ರೀಕವೀರರು' ಮತ್ತು ಶ್ರೀ ವರದರಾಜ ಹುಯಿಲಗೋಳರ 'ಸಾಹಸ ಜೀವಿಗಳು' ಎಂಬ ಪುಸ್ತಕಗಳನ್ನು ಎತ್ತಿಕೊಳ್ಳಬೇಕು. 'ಗ್ರೀಕವೀರರು' ಎಂಬುದರಲ್ಲಿ ಪುರಾತನ ಗ್ರೀಸ್ ದೇಶದ ಹೆರಾಕ್ಲಿಸ್, ಧೀರ ಪರ್ಸಿವ; ವೀರ ಜಾಸನ್ ಈ ಮೂವರ ಸಾಹಸಚರಿತ್ರೆಗಳನ್ನು ಮಕ್ಕಳಿಗೆ ತಿಳಿಯುವಂತೆ ವಿವರಿಸಿದ್ದಾರೆ. ಇವರದು ವ್ಯಕ್ತಿ ಚರಿತ್ರೆಯನ್ನು ಕ್ರಮಬದ್ಧವಾಗಿ ಹೇಳುವ ರೀತಿಯಾಗಿದೆ. ಆದರೆ ಹುಯಿಲಗೋಳರು ಕೊಡುವ ಕ್ಯಾಪ್ಟನ್ ಸ್ಕಾಟ್, ಡೇವಿಡ್ ಲಿವಿಂಗಸ್ಟನ್, ಶೇರ್ಪಾ ತೇನಸಿಂಗ ಇವರ ವ್ಯಕ್ತಿಚಿತ್ರಗಳು ಕಲಾತ್ಮಕ ರೀತಿಯಲ್ಲಿ ಅರಳಿದುದನ್ನು ಕಾಣಬಹುದು. "ಧೈರ್ಯವನ್ನು ತೋರಿಸಬೇಕು, ಕಾರ್ಯವನ್ನು ಮಾಡಬೇಕು, ಇಂಥವರಿಗೇ ಜಯವು ಲಭಿಸುವುದು. ಅಂಜುಬುರುಕರಿಗೆ ಯಶವು ಸಿಗಲಾರದು "ಪಂಡಿತ ಜವಹರಲಾಲ ನೆಹರು ಅವರು ಈ ಮಾತುಗಳನ್ನು ಹೇಳಿದ್ದಾರೆ. ತೇನಸಿಂಗನ ಜೀವನವು ಈ ಮಾತುಗಳಿಗೆ ಒಂದು ಶ್ರೇಷ್ಠ ಉದಾಹರಣೆಯಾಗಿದೆ." ಹೀಗೆ ತೇನಸಿಂಗನ ವ್ಯಕ್ತಿಚಿತ್ರವನ್ನು

ಚಿತ್ರಿಸಲು ಪ್ರಾರಂಭಿಸುತ್ತಾರೆ. ಮಕ್ಕಳನ್ನು ಪರಿಚಿತ ಇರುವ ಹಿರಿಯರ ಮಾತುಗಳಿಂದ ಅಪರಿಚಿತ ವ್ಯಕ್ತಿಯ ಪರಿಚಯಕ್ಕೆ ಕೊಂಡೊಯ್ಯುವ ಕ್ರಮವಿದು. ನುರಿತ ಶಿಕ್ಷಕರಾದ ಲೇಖಕರು ಈ ತಂತ್ರವನ್ನು ಬಳಸಿದುದರಲ್ಲಿ ಸೋಜಿಗವೇನಲ್ಲ. ಇವರ ವ್ಯಕ್ತಿಚಿತ್ರಗಳು ಕನ್ನಡ ಮಕ್ಕಳ ಮನಸ್ಸನ್ನು ಅರಳಿಸಬಲ್ಲುವು, ವಿಚಾರಶಕ್ತಿಯನ್ನು ಕುದುರಿಸಬಲ್ಲುವು, ಜ್ಞಾನದ ಕ್ಷೇತ್ರವನ್ನು ವಿಸ್ತರಿಸಲೂ ಬಲ್ಲುವು.

ಕನ್ನಡ ನಾಡಿನ ಮಕ್ಕಳ ವಿಚಾರಶಕ್ತಿಯನ್ನು ಬೆಳೆಯಿಸಲು, ಶ್ರೀ ಭಾಲಚಂದ್ರ ಘಾಣೇಕರರು ಸುಮಾರು ಇನ್ನೂರಕ್ಕೂ ಹೆಚ್ಚಾದ ಸಂಖ್ಯೆಯಲ್ಲಿ ' ಮಕ್ಕಳ ಒಡಪುಗಳ 'ನ್ನು ಸಂಗ್ರಹಿಸಿಕೊಟ್ಟಿದ್ದಾರೆ. ಬೆಂಗಳೂರಿನ ಸಾಹಿತ್ಯ ಮಂದಿರದವರು ' ವಿನೋಬಾ ವಾಣಿ 'ಯ ಪರಿಚಯ ಮಾಡಿಸಿದ್ದಾರೆ. ಶ್ರೀಮತಿ ಗಿರಿಜಾಬಾಯಿಯವರು ' ನಮ್ಮ ನದಿಗಳು ' ಎಂಬ ಪುಸ್ತಕವನ್ನು ನೀಡಿದ್ದಾರೆ. ಇವೆಲ್ಲ ಮಕ್ಕಳಿಗೆ ಉಪಯುಕ್ತವಾದ ಕೃತಿಗಳು. ಶ್ರೀ ಶಂ. ಬಾ. ಜೋಶಿಯವರು ಬೆಳೆಯುವ ಮಕ್ಕಳ ಜೀವನ ಮಾರ್ಗಕ್ಕೆ ಆವಶ್ಯಕವಾದ ' ದಾರಿಯ ಬುತ್ತಿ 'ಯನ್ನು ಕಟ್ಟಿಕೊಟ್ಟಿದ್ದಾರೆ. ಶ್ರೀ ಹಾರನಹಳ್ಳಿ ಅನಂತರಾಯರು ಹೇಳುವಂತೆ ಮಕ್ಕಳಿಗೆ ಇದು ' ಸತ್ವಶಾಲಿಯಾದ ಆಹಾರ. ಇದು ವಚನ ಕವಿತೆ, ಅನುಭವದ ಸೂಕ್ತಿಸುಧೆ. ಒಂದೊಂದು ವಚನ ಜಾಣ್ನುಡಿ; ನಾಣ್ನುಡಿ; ಜೀವಾಳದ ನುಡಿಯಾಗಿದೆ. ಮಕ್ಕಳು ಇದನ್ನು ನಿಧಾನವಾಗಿ ಮೆಲ್ದಂತೆ ಇದರ ರುಚಿ ಹೆಚ್ಚು. ಇದರಂತೆಯೇ ಶ್ರೀಮತಿ ಕೆ. ವಾರಿಜಾ ಉಡುಪ ಅವರ ' ನಮ್ಮ ಮನಸ್ಸು ' ಬಹು ಉಪಯುಕ್ತ ಪುಸ್ತಕವಾಗಿದೆ. ಇದು ಭಾರತ ಸರಕಾರದಿಂದ ಅತ್ಯುತ್ತಮ ಪುಸ್ತಕವೆಂದು ಬಹುಮಾನಿತ ಕೃತಿ. ಮನುಷ್ಯನ ಮನಸ್ಸಿನ ಸ್ಥಿತಿಗತಿಗಳನ್ನೂ ಸುಲಭ ಭಾಷೆಯಲ್ಲಿ, ಚಿತ್ರಗಳನ್ನೂ ಕೊಟ್ಟು ತಿಳಿಸುವ ಕ್ರಮವು ಬಹು ಮನೋರಂಜಕವಾಗಿದೆ. ಇಂಥ ಪುಸ್ತಕಗಳಿಂದ ಮಕ್ಕಳ ಮನಸ್ಸು ಪರಿಪಕ್ವಗೊಳ್ಳುತ್ತ ಹೋಗುತ್ತದೆ.

ಶ್ರೀ ಭಾರತೀಸುತರ ' ಸೊಳ್ಳೆ ಹರಡುವ ರೋಗಗಳು ' ಡಾ. ಅನುಪಮಾ ನಿರಂಜನರ ' ಕೆಂಪಮ್ಮನ ಮಗು ', ಶ್ರೀ ಕುಮಾರ ವೆಂಕಣ್ಣನವರ ' ಕೂಡಿ ದುಡಿಯೋಣ ' ಈ ಮೂರು ಪುಸ್ತಕಗಳು ಮಕ್ಕಳಿಗೇ ಎಂದೇನೂ ನಿರ್ಮಾಣವಾಗಿಲ್ಲ. ಆದರೆ ಮಕ್ಕಳು ಓದಿ ಆನಂದಿಸಬಹುದು. ಹೊಸ ವಿಷಯಗಳನ್ನು ತಿಳಿದುಕೊಳ್ಳಬಲ್ಲರು. ಆರೋಗ್ಯ, ಸಹಕಾರಿ ಬೇಸಾಯಕ್ಕೆ ಸಂಬಂಧಿಸಿದ ವಿಷಯಗಳನ್ನು ಈ ಪುಸ್ತಕಗಳು ಪ್ರತಿಪಾದಿಸುತ್ತಿದ್ದರೂ ಇಲ್ಲಿಯ ವಿವರಣೆಯು ಕಲಾತ್ಮಕವಾಗಿಯೂ ಲಾಲಿತ್ಯಪೂರ್ಣವಾಗಿಯೂ ಕಥನ ಕ್ರಮದಲ್ಲಿಯೂ ಇರುವುದರಿಂದ ಬಾಲಕರಾದಿಯಾಗಿ ಎಲ್ಲರೂ ಓದಿ ಆನಂದಪಡಬಹುದಾಗಿದೆ. ಇದೇ ತಂತ್ರವನ್ನುಪಯೋಗಿಸಿ ' ನಮ್ಮೂರು ' ಎಂಬ ಮಕ್ಕಳ ಪುಸ್ತಕವನ್ನು ರಚಿಸಿದ ಶ್ರೀ ಅನಂತರಾವ ಭೋಸಗೆಯವರು ಭಾರತ ಸರಕಾರದ ಬಹುಮಾನವನ್ನು ಪಡೆದವರಾಗಿದ್ದಾರೆ. ಇದರಲ್ಲಿ ಆದರ್ಶ ಹಳ್ಳಿಯ ಶಾಲೆ, ಚಾವಡಿ, ಆಸ್ಪತ್ರೆ, ಸಮಾಜಮಂದಿರ, ಮಹಿಳಾ ಮಂಡಳ ಮುಂತಾದ ಸಾಮಾಜಿಕ ಸಂಸ್ಥೆಗಳ

ಪರಿಚಯವು ಇದೆ. ಇದರ ಭಾಷೆಯು ಮಕ್ಕಳ ಶಬ್ದ ಸಂಪತ್ತಿನ ಅಳವಿನಲ್ಲಿದೆ. ಹಳ್ಳಿಯ ಮಕ್ಕಳಾದ ರವಿ, ಶಾರದೆ, ವಿಜಯಾ ಇವರೇ ಈ ಕಥನದಲ್ಲಿ ಬರುವ ಮುಖ್ಯ ಪಾತ್ರಗಳು. ಅಕ್ಕ-ತಮ್ಮರ ಈರ್ಷೆ, ಗಂಡು-ಹೆಣ್ಣಿನ ಹೀಯಾಳಿಕೆ, ದೊಡ್ಡ ಹಳ್ಳಿಯ ರವಿಯ ಜಂಭ, ಚಿಕ್ಕ ಹಳ್ಳಿಯ ವಿಜಯನ ಕುತೂಹಲ ಮೊದಲಾದ ರಸನಿಮಿಷಗಳು ಕಥನಕ್ಕೆ ಸಹಜತೆಯನ್ನು ನೀಡಿವೆ. ಶ್ರೀ ಎನ್. ಆರ್. ಹಿರೇಮಠರು ಮುನ್ನುಡಿಯಲ್ಲಿ ಹೇಳುವಂತೆ 'ನಿತ್ಯಜೀವನಕ್ಕೆ ಸಂಬಂಧಿಸಿದ ವಿವಿಧ ವಿಷಯುಗಳನ್ನೊಳಗೊಂಡ ವಿಚಾರಸಾಹಿತ್ಯ ಮಕ್ಕಳಿಗೆ ಬೇಕು. ಅದನ್ನು ಅವರು ಓದಿ ಆನಂದಿಸಿ, ಸತ್ಪ್ರಜೆಗಳಾಗಿ ರೂಪುಗೊಳ್ಳಬೇಕಾಗಿದೆ. ಅದಕ್ಕಾಗಿ ಮಕ್ಕಳ ಅಭಿರುಚಿ, ಅನುಭವ, ಆಶೆ-ಆಕಾಂಕ್ಷೆ ಹಾಗೂ ಕಲ್ಪನೆಗಳಿಗೆ ಅನುಗುಣವಾದ ಸಾಹಿತ್ಯ ಬೇಕು. ಅದನ್ನು ಪೂರೈಸಲು ಶ್ರೀ ಭೋಸಗೆಯವರು ಇಲ್ಲಿ ಪ್ರಯತ್ನಿಸಿದ್ದಾರೆ.' ಇಂಥ ವಿಚಾರ ಸಾಹಿತ್ಯವು ಕನ್ನಡದಲ್ಲಿ ಇನ್ನೂ ಹೆಚ್ಚಬೇಕಾಗಿದೆ.

ಶ್ರೀ ದಾಮೋದರ ಬಾಳಿಗ ಅವರ 'ನಮ್ಮ ಭೂಮಿ', ಶ್ರೀ ಎನ್. ಪ್ರಹ್ಲಾದ ರಾವ್ ಅವರ 'ಮಿಂಚುಳ್ಳಿ' ಮತ್ತು ಶ್ರೀಮತಿ ಮೃಣಾಲಿನಿ ಸಾರಾಭಾಯ್ ಅವರ 'ಮಕ್ಕಳಿಗೆ ನೃತ್ಯಕಲೆ' ಇವು ಮೂರೂ ಮಕ್ಕಳ ವಿಚಾರ ಸಾಹಿತ್ಯಕೃತಿಗಳಾಗಿವೆ. ಭೂಮಿಯ ಬಗ್ಗೆ ನಮ್ಮಲ್ಲಿ ರೂಢವಾಗಿರುವ ಹಳೆಯ ಕಲ್ಪನೆಗಳನ್ನು ಕಿತ್ತುಹಾಕಿ, ಭೂಮಿಯ ಆಕಾರ, ಅದರ ಉರುಳಾಟ, ತಿರುಗಾಟಗಳ ಪರಿಚಯವನ್ನು ಮಾಡಿಕೊಡುವ ಪುಸ್ತಕ ನಮ್ಮ ಭೂಮಿ. ಇದನ್ನು ಪುಟ್ಟಪ್ಪ ಕಿಟ್ಟಣ್ಣರ ಸಂವಾದ ರೂಪದಲ್ಲಿ ಹೆಣೆಯಲಾಗಿದೆ. ನಮ್ಮ ಸುತ್ತಮುತ್ತಲಿನ ಪಶು ಪ್ರಾಣಿಗಳು, ಹಕ್ಕಿ ಪಕ್ಷಿಗಳು, ಗಿಡ ಮರಗಳು ಹಾಗು ನಮ್ಮ ಜನರ ಜೀವನಕ್ರಮದ ವಿಶೇಷ ಸಂಗತಿಗಳು—ಇವೆಲ್ಲವನ್ನೂ ಮಕ್ಕಳಿಗೆ ಪರಿಚಯ ಮಾಡಿಕೊಡುವ ಹುಮ್ಮಸ್ಸಿನಲ್ಲಿ ಮೊದಲ ಕೃತಿಯಾಗಿ 'ಮಿಂಚುಳ್ಳಿ'ಯು ರೂಪುಗೊಂಡಿದೆ. 'ಮಕ್ಕಳಿಗೆ ನೃತ್ಯಕಲೆ'ಯನ್ನು ಇಂಗ್ಲಿಷ ಮುಖದಿಂದ ಶ್ರೀ ಅನುಪಮಾ ನಿರಂಜನರು ಕನ್ನಡಕ್ಕೆ ತಂದಿದ್ದಾರೆ. ಇವೆಲ್ಲ ಮಕ್ಕಳಿಗೆಂದು ಬರೆದ ಪುಸ್ತಕಗಳಾದರೂ ಮಕ್ಕಳ ಬುದ್ಧಿಮಟ್ಟಕ್ಕೆ ಹೆಚ್ಚಾದ ವಿಷಯಗಳನ್ನು ಒದಗಿಸುತ್ತವೆ. 'ಮಿಂಚುಳ್ಳಿ'ಯೇನೋ ಮಕ್ಕಳಿಗೆ ಪರವಾಗಿಲ್ಲ ಎನ್ನಬಹುದು. ಆದರೆ ಉಳಿದ ಎರಡು ಕೃತಿಗಳು ಮಕ್ಕಳ ಸಾಹಿತ್ಯವೆಂದು ಹೇಳುವುದು ಕಷ್ಟಸಾಧ್ಯ. ಈ ಪುಸ್ತಕಗಳು ಪ್ರಾರಂಭದಲ್ಲೇನೋ ಮಕ್ಕಳಿಗೆ ಉದ್ದೇಶಿಸಿ ವಿವರಿಸುವ ರೀತಿಯಲ್ಲಿ ಆರಂಭವಾಗುತ್ತವೆ. ಮುಂದೆ ವಿಷಯನಿರೂಪಣೆಯು ಬಿಗಿಯಾಗುತ್ತ ಹೋಗುತ್ತದೆ. ಇಂಥ ಪುಸ್ತಕಗಳಲ್ಲಿ ಬರುವ ಎಲ್ಲ ವಿಷಯಗಳನ್ನೂ ಒಂದೇ ಕಂತಿನಲ್ಲಿ ಒದಗಿಸುವ ಹಂಬಲವನ್ನು ಲೇಖಕರು ಇಟ್ಟುಕೊಳ್ಳುವುದು ಉಚಿತ ಕಾಣದು. ಹಂಚಿ, ವಿಂಗಡಿಸಿ, ಎರಡು ಮೂರು ಪುಸ್ತಕಗಳ ರೂಪದಲ್ಲಿ ಮಕ್ಕಳಿಗೆ ನೀಡಿದರೆ ಅನುಕೂಲವಾದೀತು. ಈ ದೃಷ್ಟಿಯನ್ನು ಸೂಚಿಸುವುದಕ್ಕೆಂದೇ ಈ ಮೂರು ಕೃತಿಗಳನ್ನು ಒಟ್ಟಿಗೆ ಇಲ್ಲಿ ಸಮಾಲೋಚನೆಗೆ ಎತ್ತಿಕೊಳ್ಳಲಾಗಿದೆ. ವಿಷಯದೃಷ್ಟಿಯಿಂದ ಇವುಗಳನ್ನು ಒಂದು ಗುಂಪಿಗೆ ಸೇರಿಸಲಿಕ್ಕೆ ಮತ್ತಾವ

ಕಾರಣವೂ ಇಲ್ಲ. ಆದರೂ ಈ ಕೃತಿಗಳಿಂದ ನಮ್ಮ ಮಕ್ಕಳ ಸಾಹಿತ್ಯವು ಹೇಗೆ ವಿವಿಧ ಮುಖಗಳಲ್ಲಿ ಬೆಳೆಯುತ್ತಿದೆಯೆಂಬುದನ್ನು ಕಲ್ಪಿಸಿಕೊಳ್ಳಬಹುದಾಗಿದೆ.

ಇನ್ನು ಕನ್ನಡ ಮಕ್ಕಳ ಸಾಹಿತ್ಯದಲ್ಲಿ ರೂಪುಗೊಂಡ ಪ್ರವಾಸ ಸಾಹಿತ್ಯದ ಸ್ವರೂಪವನ್ನಿಷ್ಟು ಗಮನಿಸಬೇಕು. ಇಲ್ಲಿ ಒದಗಿದ ಮೂರು ಕೃತಿಗಳನ್ನು 'ನನ್ನ ಪ್ರವಾಸ ಕಥನ', 'ಎವರೆಸ್ಟ್ ಆರೋಹಣ', 'ಕಾಗದದ ಪಾಪಚ್ಚಿ' ಎಂಬ ಕ್ರಮದಲ್ಲಿ ಹೊಂದಿಸಿಟ್ಟು ಅವಲೋಕಿಸಬೇಕು. ಶ್ರೀ ಅಜಿತ ಕುಮಾರ ಮಿರ್ಜಿಯು ವಿದ್ಯಾರ್ಥಿ ದೆಸೆಯಲ್ಲಿ ತಾನು ಮಾಡಿದ ಪ್ರವಾಸಕಥೆಯನ್ನು ತನ್ನ ಸ್ನೇಹಿತರಿಗಾಗಿ ಹೇಳಿದ್ದಾನೆ. ಅದರಲ್ಲಿ ಶ್ರೀರಂಗಪಟ್ಟಣ, ಮೈಸೂರು, ಮದ್ರಾಸ, ಅಡಿಯಾರ, ಶ್ರವಣಬೆಳ್ಗೊಳ ಮೊದಲಾದ ಸ್ಥಳಗಳಲ್ಲಿ ತಾನು ಕಂಡ ರಸಸೃಷ್ಟಿಯನ್ನು ಸ್ವಾಭಾವಿಕವಾದ ಬಾಲ ಭಾಷೆಯಲ್ಲಿ ನಿರೂಪಿಸಿದ್ದಾನೆ. ಎಳೆಯ ಮನಸ್ಸು ವಸ್ತುಸಂಗ್ರಹಾಲಯದ ವೈವಿಧ್ಯ, ವಿಪುಲತೆ, ಸಾಗರದ ಅಗಾಧತೆಗಳಿಗೆ ಹೇಗೆ ಪ್ರತಿಸ್ಪಂದಿಸುತ್ತದೆಂಬುದನ್ನು ಚೆನ್ನಾಗಿಯೇ ವ್ಯಕ್ತಪಡಿಸಿದ್ದಾನೆ. ತಾನು ಕವಿಯಾದೆನೆಂದು ಭಾವುಕನಾಗಿ ಹಿಗ್ಗಿ ಕುಣಿದಿದ್ದಾನೆ. ಅಡಿಯಾರದ ಆಲದ ಮರವೂ ಸಹ ಅವನ ಮನಸ್ಸನ್ನು ಸೆಳೆದಿದೆ. ಅವೆಲ್ಲವನ್ನು ನುಡಿ ಚಿತ್ರದಲ್ಲಿ ಹಿಡಿದಿಟ್ಟು, ತನ್ನ ಸ್ನೇಹಿತರಿಗೆ ತೋರಿಸಿದ್ದಾನೆ. ಇದು ಮಕ್ಕಳಿಗೆ ಸಹಜವಾಗಿ ಮೆಚ್ಚುಗೆಯಾಗುವ ಕೃತಿಯಾಗಿದೆ. ಇನ್ನು 'ನ.ಭ.' ಅವರ 'ಎವರೆಸ್ಟ್ ಆರೋಹಣ'ವು ಇನ್ನೊಂದು ಹಂತದ ಪ್ರವಾಸ ಸಾಹಿತ್ಯವಾಗಿದೆ. ಇದು ಗಿರಿಶಿಖರವನ್ನು ಹತ್ತಿ, ಅದರ ತುದಿಯನ್ನು ಮೆಟ್ಟಿನಿಲ್ಲಲು ಸಾಹಸಿಗಳು ಆಗಾಗ ಯತ್ನಿಸಿದ ಕಥೆಯಾಗಿದೆ. ಅಜಿತನಲ್ಲಿ ಕಂಡುಬರುವ ಅನುಭವದ ಗಾಢತೆಯು ಇಲ್ಲಿ ಕಂಡುಬರುವುದು ಸಾಧ್ಯವಿಲ್ಲ. ಆದರೂ ಮಕ್ಕಳ ಭಾವಲೋಕಕ್ಕೆ ಹೊಸ ವಿಷಯವನ್ನು ತಂದೀಯುತ್ತದೆ. 'ಕಾಗದದ ಪಾಪಚ್ಚಿ'ಯು ಇನ್ನೊಂದು ಮಾದರಿಯ ಕೃತಿಯು. ಮೂಲದಲ್ಲಿ ಶ್ರೀ ಕಲ್ವಿ ಗೋಪಾಲ ಕೃಷ್ಣನ್‌ರು ತಮಿಳಿನಲ್ಲಿ ಬರೆದು ಭಾರತ ಸರಕಾರದಿಂದ ಬಹುಮಾನವನ್ನು ಇದಕ್ಕೆ ಪಡೆದರು. ಅಂಥ ಒಳ್ಳೆಯ ಕೃತಿಯನ್ನು ಶ್ರೀ ಮತ್ತೂರ ಕೃಷ್ಣಮೂರ್ತಿಯವರು ಕನ್ನಡಕ್ಕೆ ತಂದಿದ್ದಾರೆ. ಈ ಕಾಗದದ ಪಾಪಚ್ಚಿ ಪ್ರಪಂಚವನ್ನೆಲ್ಲ ಸುತ್ತಿಕೊಂಡು ಬಂದಿದ್ದಾನೆ, ಮಂಜಿನ ಮನೆ, ಬಗೆ ಬಗೆಯ ಜಂತುಗಳು, ಚಿತ್ರವಿಚಿತ್ರ ಮನುಷ್ಯರು, ಅದ್ಭುತ ದೇಶಗಳು, ದೃಶ್ಯಗಳನ್ನೂ ಈತ ನೋಡಿದ್ದಾನೆ. ಗೋರಿಲ್ಲಾನ ಕೈಗೆ ಸಿಕ್ಕಿದ್ದಾನೆ, ಖಡ್ಗಮೃಗದ ಮೇಲೆ ಸವಾರಿ ಮಾಡಿದ್ದಾನೆ. ಇಂಥ ಎಷ್ಟೋ ಅದ್ಭುತ ಸಂಗತಿಗಳು ಇದರಲ್ಲಿವೆ, ಅದರಿಂದ ಮಕ್ಕಳಿಗೆ ಮೆಚ್ಚಿಗೆಯಾಗುತ್ತವೆ. ಹೀಗೆ ಕನ್ನಡ ಮಕ್ಕಳ ಪ್ರವಾಸ ಸಾಹಿತ್ಯವು ತನ್ನ ಸುತ್ತಲಿನ ಪ್ರದೇಶದ ಪ್ರತ್ಯಕ್ಷ ಸಂದರ್ಶನದ ಅನುಭವ ಕಥನದಿಂದ ಪ್ರಾರಂಭವಾಗಿ ಪ್ರಪಂಚ ಪ್ರದರ್ಶನದವರೆಗೆ ವ್ಯಾಪಿಸುವ ಗಮಕದಲ್ಲಿದೆ. ಅದಿನ್ನು 'ಚಂದ್ರನ ಕಡೆಗೆ' ಸಾಗುವ ಮಾರ್ಗದಲ್ಲಿ ಮುನ್ನಡೆಯ ಬಲ್ಲುದು. 'ಕೃತಕ ಚಂದ್ರನ ಕತೆ'ಯನ್ನೂ ಕನ್ನಡ ಮಕ್ಕಳ ಭಾವಲೋಕದಲ್ಲಿ ಮೂಡಿಸಲು ಸಿದ್ಧವಾದೀತು. ವಿಜ್ಞಾನ ಪ್ರಪಂಚದಲ್ಲಿ ಇಂದು ಯಾವುದು ಅಸಾಧ್ಯ ವಾಗಿದೆ?

ಮಕ್ಕಳ ಸಾಹಿತ್ಯದ ಈ ವೈಚಾರಿಕ ವಿಭಾಗದ ಸಮಾಲೋಚನೆಯಿಂದ 'ಕನ್ನಡ ಮಕ್ಕಳ ಜ್ಞಾನದ ಕ್ಷಿತಿಜವು ಇಷ್ಟೇ ತಾನೆ?'–ಎಂದು ಕೇಳಿ ಅಸಮಾಧಾನಗೊಳ್ಳಲು ಕಾರಣವು ತೋರುವುದಿಲ್ಲ ಅದು ತನ್ನ ಮಾರ್ಗದಲ್ಲಿ ತಕ್ಕಷ್ಟು ಪ್ರಗತಿಯನ್ನು ಸಾಧಿಸಿದೆ; ವೈವಿಧ್ಯವನ್ನೂ ಪ್ರದರ್ಶಿಸಿದೆ. ಇಲ್ಲಿ ಪೂರಕ ವಾಚನಗಳನ್ನಾಗಲಿ, ಪಠ್ಯ ಪುಸ್ತಕಗಳನ್ನಾಗಲಿ ಸಮೀಕ್ಷೆಗೆ ಸೇರಿಸಿಲ್ಲ. ಸಾಹಿತ್ಯ ಕೃತಿಗಳನ್ನಷ್ಟೇ ಗಮನಿಸಿದೆ. ಅಂದರೂ ಸಮೃದ್ಧಿ ಸಮಾಧಾನಕರವಾಗಿದೆ. ಇನ್ನು ಗುಣದ ಹೆಚ್ಚಳ ಮುಂದೆ ಮುಂದೆ ಹೆಚ್ಚೀತು.

೭

ಈ ದೀರ್ಘವಾದ ಮಕ್ಕಳಸಾಹಿತ್ಯದ ಸಮಾಲೋಚನೆಯನ್ನು ಸಮಾಪ್ತಿಗೊಳಿಸುವ ಪೂರ್ವದಲ್ಲಿ ಕನ್ನಡ ಮಕ್ಕಳ ಸಾಹಿತ್ಯವನ್ನು ಶಾಸ್ತ್ರೀಯ ದೃಷ್ಟಿಯಿಂದ ಬುದ್ಧಿಪೂರ್ವಕವಾಗಿ ರಚಿಸಲು ನಾಡಿನಲ್ಲಿ ನಡೆದಿರುವ ಪ್ರಯತ್ನವನ್ನು ಇಲ್ಲಿ ಗಮನದಲ್ಲಿ ತರಬೇಕಾದುದು ಸಯುಕ್ತಿಕವಾಗಿದೆ. ಮೈಸೂರ ರಾಜ್ಯ ಸರಕಾರವು ಭಾರತ ಸರಕಾರದ ಆರ್ಥಿಕ ನೆರವಿನಿಂದ ೧೯೬೦ ರಿಂದ ಈಚೆಗೆ ಮೂರು-ನಾಲ್ಕು ಮಕ್ಕಳ ಸಾಹಿತ್ಯ ರಚನಾಲಯಗಳನ್ನು ನಡೆಯಿಸಿತು. ಆಗ ಸುಮಾರು ಇಪ್ಪತ್ತು ಜನ ಶಿಕ್ಷಕ ವೃತ್ತಿಯಲ್ಲಿದ್ದ ಲೇಖಕರನ್ನು ತಿಂಗಳೊಪ್ಪತ್ತು ಬೆಂಗಳೂರಿನಲ್ಲಿ ಒತ್ತಟ್ಟಿಗೆ ಇಡಲಾಯಿತು. ಅವರಿಗೆ ವಿದ್ವಾಂಸರಿಂದ ಮಾರ್ಗದರ್ಶನವನ್ನೂ ಮಾಡಿತು. ದೇಶ–ವಿದೇಶಗಳ ಮಕ್ಕಳ ಸಾಹಿತ್ಯಾವಲೋಕನಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟಿತು. ಅಲ್ಲಿಯೇ ಇದ್ದು ಸಾಹಿತ್ಯ ರಚನೆಯನ್ನು ಮಾಡಲು ಪ್ರೋತ್ಸಾಹಿಸಲಾಯಿತು. ಇಂಥ ರಚನಾಲಯಗಳಲ್ಲಿ ನಿರ್ಮಾಣವಾದ ಕೃತಿಗಳನ್ನು ಓದಿ ಚರ್ಚಿಸಿ, ತಿದ್ದುಪಡಿಯನ್ನು ಮಾಡಿತು. ಆಮೇಲೆ ವಿದ್ವಾಂಸರಿಂದ ಮತ್ತೆ ಪರಿಷ್ಕರಣಗೊಳಿಸಿದ ತರುವಾಯ ಅವುಗಳನ್ನು ಪ್ರಕಟಿಸಿದೆ. ಇಂಥ ಮಾದರಿಯ ಮಕ್ಕಳ ಸಾಹಿತ್ಯವೆಂದು ಪ್ರಕಟವಾದ 'ಮಕ್ಕಳ ಮುತ್ತು' 'ಮಕ್ಕಳ ಮಲ್ಲಿಗೆ' 'ಮಕ್ಕಳ ನಾಟಕ', 'ಮಕ್ಕಳ ಮಾತು'ಗಳೆಂಬ ನಾಲ್ಕು ಪುಸ್ತಕಗಳನ್ನು ಇಲ್ಲಿ ಅವಲೋಕಿಸಬೇಕು. ಇವುಗಳಲ್ಲಿ ಹತ್ತಾರು ಜನರ ಬರಹಗಳು ಸೇರಿವೆ. ಕಥೆ, ನಾಟಕ, ಕವನ, ಚುಟುಕ, ವಿಚಾರ ಸಾಹಿತ್ಯಗಳೆಲ್ಲವೂ ಸಮಾವೇಶವಾಗಿವೆ. ಅಲ್ಲದೆ ೫ ರಿಂದ ೧೪ ವರ್ಷ ವಯಸ್ಸಿನ ಬಾಲಕರಿಗೆಂದು–ವಯೋವಾರದ ಹಂತ ಹಂತಗಳಲ್ಲಿ ಓದಲು ಅರ್ಹವಾದ ವಿಭಜನೆಯೊಡನೆ-ಅವರವರ ಶಬ್ದ ಸಂಪತ್ತಿಯನ್ನು ಲಕ್ಷದಲ್ಲಿಟ್ಟುಕೊಂಡು ಇವುಗಳನ್ನು ರಚಿಸಲಾಗಿದೆ. ಅದರಿಂದ ಇಲ್ಲಿ ವ್ಯಕ್ತವಾದ ಸಾಹಿತ್ಯಕ ಕಲೆಗೆ ಪಾರ್ಶ್ವ–ಭೂಮಿಯಾಗಿ ಮಕ್ಕಳ ಸಾಹಿತ್ಯ ಶಾಸ್ತ್ರ ದೃಷ್ಟಿಯು ಕಾರ್ಯವೆಸಗಿದೆ.

ಮೊದಲ ಸಲ ಈ ರಚನಾಲಯದ ಕಾರ್ಯದಲ್ಲಿ ತೊಡಗಿದಾಗ ಸಂಚಾಲಕರಾದ ಶ್ರೀ ಎಂ. ಆರ್. ರಾಮಯ್ಯ ಮತ್ತು ಎಸ್. ಆರ್. ಹಿರೇಮಠ ಅವರಿಗೆ ಎರಡು ಕೊರತೆಗಳು ಎದ್ದುಕಂಡುವು. ಮೊದಲನೆಯದು, ಮಕ್ಕಳ ವಯಸ್ಸಿಗೆ ಅನುಗುಣ

ವಾದ ಶಬ್ದ ಮತ್ತು ನುಡಿಗಟ್ಟುಗಳ ಸಂಶೋಧಿತ ಪಟ್ಟಿ. ಎರಡನೆಯದು, ನಮ್ಮ ದೇಶದ ಮಕ್ಕಳ ಸ್ವಭಾವ, ಆಸಕ್ತಿ, ಆಕಾಂಕ್ಷೆಗಳ ವಿಷಯದ ಸಂಶೋಧಿತ ಸಾಮಗ್ರಿ. "ಮಕ್ಕಳ ಸಾಹಿತ್ಯವು ಶಾಸ್ತ್ರೀಯವಾಗಿ ರಚನೆಯಾಗಬೇಕಾದರೆ ಈ ಎರಡು ಕೊರತೆಗಳು ನಿವಾರಣೆ ಯಾಗಬೇಕು. ಈ ಬಗೆಯ ಸಂಶೋಧನಾ ಕಾರ್ಯವು ನಮ್ಮ ದೇಶದಲ್ಲಿ ಇನ್ನು ಮುಂದೆ ಯಾದರೂ ವಿಪುಲವಾಗಿ ಆಗಲೆಂದು ಹಾರೈಸುತ್ತೇವೆ*" ಎಂದರು. ತಾತ್ಪೂರ್ತಿಕವಾಗಿ ರಚನಾಲಯದಲ್ಲಿ ಇದ್ದ ಸದಸ್ಯರಿಂದ ಈ ಕೊರತೆಗಳನ್ನು ಪೂರೈಸಿಕೊಂಡು ಕೆಲಸವನ್ನು ಮುಂದರಿಸಲಾಯಿತು. ೫೩ ಮಕ್ಕಳ ಸಾಹಿತ್ಯ ಕೃತಿಗಳಿಂದ ಕೂಡಿದ 'ಮಕ್ಕಳ ಮುತ್ತು' ರೂಪುಗೊಂಡಿತು. ಇದನ್ನು ಪ್ರಕಟಿಸುವ ಪೂರ್ವದಲ್ಲಿ ಮಕ್ಕಳ ಮೇಲೆ ಪ್ರಯೋಗಿಸಿ ನೋಡಿ, ಆಗ ಕಂಡುಬಂದ ಕೊರತೆಗಳ ದೃಷ್ಟಿಯಿಂದ ಅವುಗಳನ್ನು ತಿದ್ದಿ ಬರೆಯಲಾಗಿದೆ. ಇದರಲ್ಲಿ ಮೂರರಿಂದ ಹನ್ನೆರಡು ವರ್ಷ ವಯಸ್ಸಿನ ಮಕ್ಕಳು ಓದಲು ಯೋಗ್ಯವಾದ ಬರಹಗಳನ್ನು ಮೆಟ್ಟಲು ಮೆಟ್ಟಲಾಗಿ ಹೊಂದಿಸಿ ಸಿದ್ಧಗೊಳಿಸಿದೆ.

'ಮಕ್ಕಳ ಮುತ್ತಿ'ನಲ್ಲಿ ಪ್ರಾರಂಭದ ಆರು ಕೃತಿಗಳು ಮೂರರಿಂದ ಐದು ವರ್ಷ ವಯಸ್ಸಿನ ಮಕ್ಕಳಿಗೆಂದು ರಚಿಸಿದವುಗಳು. ಇವುಗಳನ್ನು ಶಿಶುಗಳಿಗಾಗಿ ವಿಶಿಷ್ಟ ಶಿಕ್ಷಣ ಸಂಸ್ಥೆಗಳಿರುವ ನಗರಗಳಲ್ಲಿ, ಶಿಶುವಿಹಾರಗಳಲ್ಲಿ ತರಬೇತುಹೊಂದಿದ ಮೂರು ನಾಲ್ಕು ವಯಸ್ಸಿನ ಮಕ್ಕಳು ಓದಿ, ಹಾಡಿ ಆನಂದಿಸಬಹುದಾಗಿದೆ. ಇಂಥ ವ್ಯವಸ್ಥೆ ಏನೂ ಇಲ್ಲದ ಹಳ್ಳಿಗಾಡಿನಲ್ಲಿ ಐದಾರು ವರ್ಷ ವಯಸ್ಸಿನ ಮಕ್ಕಳು ಇವುಗಳನ್ನು ಓದಿ ಕೊಂಡಾರು. ಇಂಥವುಗಳಲ್ಲಿ 'ಪುಟ್ಟನ ದೋಣಿ' ಎಂಬುದು ಒಂದು ಹಾಡು. ಅದು ಹೀಗಿದೆ:

ಪುಟ್ಟನು ಒಂದು
ಕಾಗದ ತಂದು
ಚಂದದ ದೋಣಿಯು ಮಾಡಿದನು.
ನೀರಿನ ಮೇಲೆ
ದೋಣಿಯು ತೇಲೆ
ಕೇಕೆಯ ಹಾಕುತ ಓಡಿದನು.

ಹೀಗೆಯೇ ಮುಂದಿನ ವಯಸ್ಸಿನ ಮಕ್ಕಳಿಗಾಗಿ ಕವನ, ಕಥೆ, ನಾಟಕ ಸಂವಾದ ಗಳನ್ನೂ, ವಿಜ್ಞಾನಕ್ಕೆ ಸಂಬಂಧಪಟ್ಟ ಕೃತಿಗಳನ್ನೂ ಈ ಪುಸ್ತಕದಲ್ಲಿ ಸೇರಿಸಿದೆ. ಸಂಪಾದಕರು ಹೇಳುವಂತೆ 'ಮಕ್ಕಳ ಸಾಹಿತ್ಯ ದೇವಿಗೆ ಅರ್ಪಿತವಾಗಿರುವ ಬಿಡಿ ಮುತ್ತು' ಇದಾಗಿದೆ.

ಮುಂದಿನ ಮಕ್ಕಳ ಸಾಹಿತ್ಯ ರಚನಾಲಯದಲ್ಲಿ–೧೯೬೨ರಲ್ಲಿ ಬೆಂಗಳೂರಿನಲ್ಲಿ ಶ್ರೀ ಟಿ. ವಿ. ತಿಮ್ಮೇಗೌಡ ಹಾಗೂ ಶ್ರೀ ಎನ್. ಆರ್. ಹಿರೇಮಠ ಇವರ ಮಾರ್ಗದರ್ಶನದಲ್ಲಿ

* 'ಮಕ್ಕಳ ಮುತ್ತು' ವಿದ್ಯಾಸಂಶೋಧನ ಶಾಖೆಯ ಪ್ರಕಟಣೆ–೧೯೬೦ ಇದರ ಮುನ್ನುಡಿಯಲ್ಲಿ.

ನಡೆದುದು–ಇನ್ನಿಷ್ಟು ಪ್ರಗತಿಯಾದುದು ಕಂಡುಬರುತ್ತದೆ. ಈ ಸಂದರ್ಭದಲ್ಲಿ ೫ ರಿಂದ ೭ ವರ್ಷ ವಯಸ್ಸಿನ ಮಕ್ಕಳಿಗಾಗಿ ' ಮಕ್ಕಳ ಮಾತು ' ಎಂಬ ಪುಸ್ತಕವನ್ನೂ, ೮ ರಿಂದ ೧೦ ವರ್ಷ ವಯಸ್ಸಿನ ಮಕ್ಕಳಿಗೆಂದು 'ಮಕ್ಕಳ ಮಲ್ಲಿಗೆ' ಎಂಬುದನ್ನೂ ೧೧ ರಿಂದ ೧೪ ವಯೋಮಿತಿಯುಳ್ಳವರಿಗೆ 'ಮಕ್ಕಳ ನಾಟಕ'ವೆಂದೂ ಮೂರು ಪುಸ್ತಕಗಳನ್ನು ಪ್ರಕಟಿಸಲಾಗಿದೆ. ಇವುಗಳಲ್ಲಿ 'ಮಕ್ಕಳ ಮಾತಿ'ನಲ್ಲಿ ಹನ್ನೆರಡು ಕೃತಿಗಳಿವೆ. ಎಲ್ಲಕ್ಕೂ ಸಾಕಷ್ಟು ಚಿತ್ರಗಳಿವೆ. ಅವುಗಳಲ್ಲಿ ' ಸಾಲೆಗೆ ಬಾ ' ಎಂಬ ಗದ್ಯಬರಹ ಹೀಗಿದೆ:

" ಸರಳಾ ಸರಳಾ ಸಾಲೆಗೆ ಬಾ.
ಗಿಳಿಗೆ ಹಣ್ಣು ತಿನಿಸಿಬರುವೆನು ತಡೆ.

ಸರಳಾ ಸರಳಾ ಸಾಲೆಗೆ ಬಾ.
ಕೋಳಿಗೆ ಕಾಳು ಹಾಕಿ ಬರುವೆನು ತಡೆ.

ಸರಳಾ ಸರಳಾ ಸಾಲೆಗೆ ಬಾ.
ಟಾಮಿಗೆ ರೊಟ್ಟಿಕೊಟ್ಟು ಬರುವೆನು ತಡೆ.

ಸರಳಾ ಸರಳಾ ಸಾಲೆಗೆ ಬಾ.
" ಬೆಳಗಿನ ಕೆಲಸ ಮುಗಿಯಿತು."
ಸಾಲೆಗೆ ಬರುವೆನು ನಡೆ.

ಈ ಬರಹದಲ್ಲಿ ಚಿಕ್ಕಮಕ್ಕಳ ಸಾಹಿತ್ಯದಲ್ಲಿ ಇರಬೇಕಾದ ಸರಳತೆ, ಪುನರುಕ್ತಿ, ಪುನಃ ಪುನಃ ಬಳಸುವ ಪದಕ್ರಮ ಅವರ ಅನುಭವದಲ್ಲಿ ಬರುವ ಪ್ರಸಂಗ, ಪಕ್ಷಿ ಪ್ರಾಣಿಗಳ ಪರಿಚಯ ಕರ್ತವ್ಯಪಾಲನೆಯ ಸಂದೇಶ ಸಹ ಸೇರಿವೆ–ಎಂಬುದನ್ನು ಗಮನಿಸಬಹುದಾಗಿದೆ.

ಇದರಂತೆಯೇ 'ಮಕ್ಕಳ ಮಲ್ಲಿಗೆ'ಯಲ್ಲಿ ಇಪ್ಪತ್ತು ಕೃತಿಗಳನ್ನು ಕೂಡಿಸಿ ಪ್ರಕಟಿಸಲಾಗಿದೆ. ಇದರಲ್ಲಿ ಕಥೆ, ಕವನ, ಸಂವಾದ, ವಿಚಾರ ಸಾಹಿತ್ಯಗಳೆಲ್ಲ ಸೇರಿವೆ. ವಿಚಾರಸಾಹಿತ್ಯವನ್ನು ಸಹ ಮಕ್ಕಳಿಗೆ ರುಚಿಸುವ ಕಥನರೂಪದಲ್ಲಿಯೇ ರಚಿಸಿದ್ದನ್ನು ಇಲ್ಲಿ ಕಾಣಬಹುದು. ಇನ್ನೊಂದು ಪುಸ್ತಕವಾದ ' ಮಕ್ಕಳ ನಾಟಕ'ದಲ್ಲಿ ' ನ್ಯಾಯದಾನ ' ' ಶಿಲ್ಪಿಗಳ ಸಮಾಗಮ.' ' ನಾಡಿನ ಕರೆ ' ಎಂಬ ಮೂರು ನಾಟಕಗಳಿವೆ. ಮೊದಲಿನವೆರಡು ಐತಿಹಾಸಿಕ ವಸ್ತುಗಳಿಂದ ಕೂಡಿವೆ. ಮೂರನೆಯದು ದೇಶಭಕ್ತಿಯನ್ನು ಪ್ರೇರಿಸುವ ಕಲ್ಪಿತ ವಸ್ತುವಿನಿಂದ ಕೂಡಿದ್ದು, ಸರಳ ರಗಳೆಯ ರೂಪದಲ್ಲಿ ಹೆಣೆದುದಾಗಿದೆ. ಈ ಎರಡೂ ಪುಸ್ತಕಗಳಲ್ಲಿ ಸಂಗ್ರಹಗೊಂಡ ಕೃತಿಗಳು ಮಕ್ಕಳ ಸಾಹಿತ್ಯದಲ್ಲಿ ಮಾದರಿಗೆಂದೇ ರಚಿಸಿದ ಕೃತಿಗಳು. ಕನ್ನಡ ಮಕ್ಕಳ ಸಾಹಿತ್ಯರಚನೆಯ ಶಾಸ್ತ್ರವನ್ನೂ ಅಳವಡಿಸಿಕೊಂಡು ರೂಪುಗೊಂಡ ಪುಸ್ತಕಗಳು. ಅದರಿಂದ ಒಳ್ಳೆಯ ಕೃತಿಗಳಾಗಿವೆ. ಇಂಥ ಪ್ರಯತ್ನ, ಕನ್ನಡ ನಾಡಿನಲ್ಲಿ ನಡೆದಷ್ಟೂ ಬೇಕು.

ಇನ್ನು ಮುಂದಿನ ರಚನಾಲಯದಲ್ಲಿ ಒಬ್ಬೊಬ್ಬರಿಂದ, ಒಂದೊಂದು ಮಕ್ಕಳ

ಪುಸ್ತಕವನ್ನೇ ಬರೆಯಿಸಲಾಗಿದೆ. ಸುಮಾರು ೪೦–೫೦ ಮಕ್ಕಳ ಪುಸ್ತಕಗಳು ಸಿದ್ಧವಾಗಿವೆ. ಅವುಗಳಲ್ಲಿ ಕಥೆ, ಕವನ, ನಾಟಕ, ವಿಚಾರಸಾಹಿತ್ಯ ಕೃತಿಗಳೆಲ್ಲವೂ ಇವೆ. ಅವು ಪ್ರಕಟವಾಗಿ ಇನ್ನೂ ನಮ್ಮ ಕೈಗೆ ಬಂದಿಲ್ಲ. ಕೆಲವು ಪ್ರಕಟವಾಗಿವೆಯೆಂದು ತಿಳಿಯುತ್ತದೆ. ನೋಡಲು ಲಭಿಸಿಲ್ಲ. ಆದರೂ ಅದರ ಸದಸ್ಯರಲ್ಲಿ ನಾನೂ ಒಬ್ಬನಾಗಿದ್ದುದರಿಂದ ಅವು ಕನ್ನಡ ಮಕ್ಕಳ ಸಾಹಿತ್ಯದಲ್ಲಿ ಒಳ್ಳೆಯ ಕೃತಿಗಳೆಂದು ಪರಿಗಣಿಸಲ್ಪಡುತ್ತವೆಂದು ಹೇಳಬಹುದಾಗಿದೆ. ಈ ಕೃತಿಗಳಿಗೆ ಕಳೆದ ಇಪ್ಪತ್ತೈದು ವರ್ಷಗಳಲ್ಲಿ ರೂಪುಗೊಂಡ ಕನ್ನಡ ಮಕ್ಕಳ ಸಾಹಿತ್ಯದಲ್ಲಿ ಒಂದು ಗಣ್ಯವಾದ, ವಿಶಿಷ್ಟಸ್ಥಾನವಿದೆ.

ಇದು ನಮ್ಮ ಮಕ್ಕಳ ಸಾಹಿತ್ಯದ ಸಮಾಲೋಚನೆ. ಕ್ರಿ. ಶ. ೧೯೪೦ ರಿಂದ ಇಲ್ಲಿಯವರೆಗೆ ಅದು ನಡೆದುಬಂದ ದಾರಿಯಮೇಲೆ ಬೀರಿದ ಹಕ್ಕಿ ನೋಟವಿದು. ಇಲ್ಲಿ ಎಷ್ಟು ಕಂಡಿತೋ, ಅದೆಷ್ಟು ಕಾಣದೆ ಹೋಯಿತೋ! ಇದು ಪರಿಮಿತ ಕಾಲಾವಕಾಶಗಳಲ್ಲಿ ನಡೆಯಿಸಿದ ಸಮೀಕ್ಷೆಯಾಗಿದೆ. ಅದರಿಂದ ಇಲ್ಲಿ ಎಲ್ಲ ದೃಷ್ಟಿಯಿಂದಲೂ ಇದು ಅಪೂರ್ಣವು, ನಾವು ಕಂಡ ಮಕ್ಕಳ ಸಾಹಿತ್ಯದಲ್ಲಿ ಕಾವ್ಯ, ಕಥೆ, ನಾಟಕ, ಕಾದಂಬರಿ, ವಿಚಾರಸಾಹಿತ್ಯಗಳೆಲ್ಲವೂ ಇವೆ. ಹಲವು ಕೃತಿಗಳು ಅನ್ಯ ಭಾಷೆಗಳಿಂದ ಅನುವಾದವಾಗಿ ಬಂದು ಕನ್ನಡ ಮಕ್ಕಳ ಸಾಹಿತ್ಯವನ್ನು ಪುಷ್ಟಗೊಳಿಸಿವೆ, ಸಮೃದ್ಧಗೊಳಿಸಿವೆ. ಈ ಸಾಹಿತ್ಯ ವಿಭಾಗವನ್ನು ಶಾಸ್ತ್ರೀಯ ದೃಷ್ಟಿಯಿಂದ ಬೆಳೆಯಿಸುವ ಪ್ರಯತ್ನವೂ ನಾಡಿನಲ್ಲಿ ನಡೆದಿದೆ. ಇವೆಲ್ಲವೂ ಶುಭ ಲಕ್ಷಣಗಳಾಗಿವೆ. ಇನ್ನು ಮುಂದೆ ಬರಲಿರುವ ಪ್ರಬುದ್ಧ ಕರ್ಣಾಟಕ ಕಾಲದಲ್ಲಿ ಈಗ ರಚನೆಯಾಗಿರುವ ಮಕ್ಕಳ ಸಾಹಿತ್ಯದ ಗುಣದ ಮಟ್ಟ ನಿರ್ಣಯವಾದೀತು. ವ್ಯಕ್ತಿಗಿಂತ ಕಾಲವೇ ಹಿರಿಯ ವಿಮರ್ಶಕನಲ್ಲವೆ? ಅವನ ವಿಮರ್ಶೆಯೇ ಮುಂದಿನ ಮಕ್ಕಳ ಸಾಹಿತ್ಯಕ್ಕೆ ಒಂದು ಮಾರ್ಗದರ್ಶನವನ್ನು ಮಾಡಬಲ್ಲುದು. ಇದು ಈಗ ಮಕ್ಕಳ ಸಾಹಿತ್ಯದಲ್ಲಿ ಆಸ್ಥೆಯಿದ್ದ ಸಹೃದಯಿಯೊಬ್ಬನ ಸ್ಥೂಲನೋಟ ಮಾತ್ರವಾಗಿದೆ; ಕನ್ನಡ ಮಕ್ಕಳ ಸಾಹಿತ್ಯಾವಲೋಕನವಾಗಿದೆ.

ತಾರೆಗಳು ಮೇಳವಿಸಿ ಬಂದುಬಿಟ್ಟಿಹ ಬೀಡು ಕನ್ನಡದ ನಾಡು
ತಾರೆಗಳ ಒಡಹುಟ್ಟು, ತಾರೆಗಳ ಒಡನಾಡಿ, ನಮ್ಮ ಕನ್ನಡದ ನಾಡು
ಭೂಪತಿಯು ಕವಿಯಾಗಿ ಕವಿಚಮೂಪತಿಯಾಗಿ ಮೆರೆದಿರುವ ನಮ್ಮನಾಡು

*   *   *   *

ಬಾಳೋಣ ಏಳಿನ್ನು ! ಅರಸಾಗಿ ಆಳೋಣ ಮನೆಮುರುಕರನ್ನು ಮುರಿದು
ನಿನ್ನ ನಗೆಯೇ ಬೆಳ್ಳಿ, ನಿನ್ನ ಮೊಗ ಚಂದ್ರಮನು, ನಿನ್ನಮಗ ಸೂರ್ಯನಿರಲಿ !
ನಿನ್ನವರನುದ್ಧರಿಸಿ ಮನುವಂಶವನು ಹರಸಿ ಬೆಳಗುತಿಹ ಆರ್ಯನಿರಲಿ !

—ವಿನಾಯಕ

ಎಸ್. ಅನಂತನಾರಾಯಣ

ಕನ್ನಡ ಕಾವ್ಯ

೧೯೪೩ರಲ್ಲಿ ಪ್ರಬುದ್ಧ ಕರ್ಣಾಟಕದ ಬೆಳ್ಳಿಯ ಸಂಚಿಕೆಯ ಕವಿತಾವಿಭಾಗವಾದ 'ಮುತ್ತುಹವಳ'ದಲ್ಲಿ ಪ್ರಕಟವಾದ ಕವಿತೆಗಳಲ್ಲಿ ಎರಡು ಕುವೆಂಪು ಅವರ ಪ್ರಾರ್ಥನಾ ರೂಪದವು, ಒಂದು ಗೋವಿಂದಪೈ ಅವರದು, ಎರಡನೆಯ ಮಹಾಯುದ್ಧದ ಬಗ್ಗೆ ಸಾನೆಟ್ ರೂಪ ಹೋಲುವಂತಹ ಪದ್ಯ, ಬೆಳ್ಳಿ ಹಬ್ಬವನ್ನಾಚರಿಸುತ್ತಿದ್ದ ಪ್ರಬುದ್ಧ ಕರ್ಣಾಟಕಕ್ಕೆ ಗೌರವ ಸಲ್ಲಿಸುವ ಬಿ. ಎಚ್. ಶ್ರೀಧರ ಅವರ ಕವಿತೆಯೊಂದು, ಕವಿ ಬೇಂದ್ರೆಯವರನ್ನು ಕುರಿತು ಗೌರವಾದರ ಸೂಚಿಸುವ ಪು. ತಿ. ನ. ಅವರ ಸಾನೆಟ್, ಅಲ್ಲದೆ 'ಅನ್ನಪೂರ್ಣೆಗೆ', ಕೆ. ಎಸ್. ನರಸಿಂಹಸ್ವಾಮಿ ಅವರ ಆರ್ತಸ್ವರದ ಪ್ರಾರ್ಥನೆ. ಕೊನೆಯ ಕವಿತೆ ಎಂ. ಗೋಪಾಲಕೃಷ್ಣ ಅಡಿಗರ 'ಇದು ಬಾಳು' ಎಂಬುದು ನಿರಾಶೆಯ ನಿಟ್ಟುಸಿರೇ ಕವಿತಾ ರೂಪದಲ್ಲಿ ಇಳಿದು ಬಂದುದು.

ಇದನ್ನು ಇಲ್ಲಿ ನೆನೆಯುವುದರ ಕಾರಣ ಇಷ್ಟೇ. ಇಪ್ಪತ್ತೈದು ವರ್ಷಗಳ ಹಿಂದೆ ಬರೆಯುತ್ತಿದ್ದ ಕವಿಗಳು (ಗೋವಿಂದಪೈಯವರು ದಿವಂಗತರಾಗಿದಾರೆ) ಇಂದೂ ಬರೆಯುತ್ತಿದ್ದಾರೆ. ಕುವೆಂಪು ಮತ್ತು ಪು. ತಿ. ನ. ಅವರು ಆವೇಳೆಗಾಗಲೇ ಪ್ರಸಿದ್ಧ ರಾಗಿದ್ದರು. ಕೆ. ಎಸ್. ನ. ಅವರ 'ಮೈಸೂರ ಮಲ್ಲಿಗೆ'ಯ ಕೆಲವು ಕವಿತೆಗಳು ಮಾತ್ರ ಪ್ರಬುದ್ಧ ಕರ್ಣಾಟಕದಲ್ಲಿ ಪ್ರಕಟವಾಗಿದ್ದು, ಅದೇತಾನೇ ಪುಸ್ತಕರೂಪದಲ್ಲಿ ಬಂದಿದ್ದುವು. ಅಂತೆಯೇ ಅಡಿಗರ ಕವಿತೆಗಳು ಕೂಡ ಅಲ್ಲೊಂದು ಇಲ್ಲೊಂದು ಪ್ರಕಟ ವಾಗಿದ್ದುವು. ಕೆ. ಎಸ್. ನರಸಿಂಹಸ್ವಾಮಿಯವರ 'ಮೈಸೂರು ಮಲ್ಲಿಗೆ' ಮತ್ತೆ ಕೆಲವು ಸಂಗ್ರಹಗಳು, ಅಡಿಗರ 'ಭಾವತರಂಗ' ಮತ್ತು 'ಕಟ್ಟುವೆವು ನಾವು' ಇವುಗಳಂತೆಯೇ ಕುವೆಂಪು ಅವರ 'ಕಿಂಕಿಣಿ' 'ಕೃತ್ತಿಕೆ' ಮುಂತಾದ ಕವನ ಸಂಕಲನಗಳೂ ಅಂದಿನ ಕಾವ್ಯಪದ್ಧತಿಯು ಒಂದು ಪರಿಣತ ಘಟ್ಟವನ್ನು ಮುಟ್ಟಿತ್ತೆಂದು ಸೂಚಿಸುತ್ತವೆ. ನವೋದಯದ ಕಾಲದಲ್ಲಿ ಹಲವಾರು ಬಗೆಯ ಹೊಸ ಪ್ರಯೋಗಗಳನ್ನು ಅಳವಡಿಸಿ ಕೊಂಡು, ಹೊಸ ಛಂದಸ್ಸು, ಹೊಸ ಭಾವಲಹರಿ, ವಿಚಾರಗಳನ್ನು, ಹೊಸ ರೀತಿಯಲ್ಲಿ, ಹೊಸ ಹೊಸ ಪದಗಳಲ್ಲಿ ಅಭಿವ್ಯಕ್ತಿಗೊಳಿಸುವ ಹೊಸ ಕವಿತೆ ಹುಟ್ಟಿತು. ಈ ಹೊಸ ಕವಿತೆಯು ತನ್ನ ಮೊದಲ ಬೀಜಫಲ ಕಂಡುದು ಬಿ. ಎಂ. ಶ್ರೀ, ಯವರ 'ಇಂಗ್ಲಿಷ್

ಗೀತೆಗಳು' (೧೯೨೧) ಎಂಪಾದರೆ, ಅದರ ಪರಿಪಕ್ವಫಲ ಕಂಡುದು ಶ್ರೀಯವರ ಶಿಷ್ಯರಾದ ಶ್ರೀ ಕುವೆಂಪು ಅವರ 'ಶ್ರೀರಾಮಾಯಣ ದರ್ಶನಂ' ಮಹಾಕಾವ್ಯದಲ್ಲಿ (೧೯೪೯). ಸುಮಾರು ೧೯೫೦ರ ವರೆಗಿನ ಕಾಲವನ್ನು ನಾವು ಹಳೆಯ ತಲೆಮಾರಿನ, ಹಿಂದಿನಿಂದಲೂ ಕಾವ್ಯರಚನೆ ಮಾಡುತ್ತಿದ್ದವರ ಪರಿಣತಿಯ ಕಾಲವೆಂದು ಪರಿಗಣಿಸಬಹುದು. ಅಂದರೆ ಈ ಸಂಪ್ರದಾಯದ ಕಾವ್ಯ-ಅದನ್ನು ಈಚಿನ ಕವಿಗಳು ತಮ್ಮ ಪಂಥವಾದ 'ನವ್ಯ'ದಿಂದ ಬೇರೆ ಎಂದು ತೋರಿಸಲೆಂದು ರೊಮ್ಯಾಂಟಿಕ್ ಸಂಪ್ರದಾಯವೆಂದು ಹೆಸರಿಸಿದ್ದಾರೆ-೧೯೫೦ಕ್ಕೆ ಮುಕ್ತಾಯವಾಯಿತೆಂದು ಅರ್ಥವಲ್ಲ. ಅನಂತರ ಬಂದ ಪೀಳಿಗೆಯ ಕವಿಗಳು ಈ ರೊಮ್ಯಾಂಟಿಕ್ ಸಂಪ್ರದಾಯವನ್ನು ಸಂಪೂರ್ಣವಾಗಿ ಬಿಟ್ಟು ಹೊಸದೊಂದು ರೀತಿಯನ್ನೇ ರೂಪಿಸಿಕೊಂಡು ಪ್ರಯೋಗ ನಡೆಸಿದರೆಂಪಾಗಲಿ ಅರ್ಥವಲ್ಲ. ರೊಮ್ಯಾಂಟಿಕ್ ಸಂಪ್ರದಾಯದ ಹಳೆಯ ಕವಿಗಳೂ ಕೂಡ ಹೊಸ ರೀತಿಯನ್ನು ಕಂಡುಕೊಂಡು 'ನವ್ಯ' ತಂತ್ರವನ್ನು ಬಳಸಿಕೊಂಡುದೂ ಉಂಟು. ಆದುದರಿಂದ ಈ ಕಾಲವಿಭಜನೆ ಕೇವಲ ಸ್ಥೂಲವಾಗಿ, ವಿಮರ್ಶೆಯ ಅನುಕೂಲಕ್ಕಾಗಿ ಮಾಡಿಕೊಂಡುದು. ಅಲ್ಲದೆ ಸಾಹಿತ್ಯ, ಅದರಲ್ಲಿಯೂ ಕಾವ್ಯ, ಸದಾಕಾಲದಲ್ಲಿಯೂ ಪ್ರಯೋಗವೇ ಅಲ್ಲವೇ? "The intolerable wrestle with words and meaning-ಪದಗಳು ಮತ್ತು ಅರ್ಥಗಳೊಂದಿಗೆ ಅಸಹನೀಯವಾದ ಹೋರಾಟ" ವೆಂದು ಟಿ. ಎಸ್. ಎಲಿಯೆಟ್ ಹೇಳಿರುವ ಸಾಹಿತ್ಯ ಕ್ರಿಯೆ ಸದಾ ಪ್ರಯೋಗಶೀಲವೇ ಎನ್ನಬಹುದು. ಆದುದರಿಂದ ಒಂದು ಸಂಪ್ರದಾಯ ದಲ್ಲಿಯೇ ಪ್ರಯೋಗಶೀಲತೆ ಇದೆ - ಮುಂದೆ ಅದು ಗಟ್ಟಿಯಾಗಿ, ಕೆಲವುವೇಳೆ ತನ್ನ ನವುರನ್ನು, ಮಾರ್ಪಾಡಾಗುವ ಸಪುರತೆಯನ್ನು ಕಳೆದುಕೊಂಡು ಗಡುಸಾದಾಗ, ಮತ್ತೆ ಇನ್ನೊಂದು ಪ್ರಯೋಗ ಸಫಲವಾಗಿ ತಲೆ ಎತ್ತಿ ನಿಲ್ಲುತ್ತದೆ. ಈ ಸಂಪ್ರದಾಯದ ಕಾಲ ಮುಗಿದು ಬೇರೊಂದು ಸಂಪ್ರದಾಯದ ಪ್ರಾರಂಭವಾಗುತ್ತದೆ. ಹಿಂದಿನದರ ನೆರಳಿನಲ್ಲಿಯೇ ಮುಂದಿನ ಬಗೆ ಬೆಳೆದಿರುತ್ತದೆ. ಇದು ಎಲ್ಲಿ ಮುಗಿಯುತ್ತದೆ, ಅದು ಎಲ್ಲಿ ಪ್ರಾರಂಭವಾಗುತ್ತದೆ ಎಂದು ನಿಷ್ಕರ್ಷೆಯಾಗಿ ಹೇಳುವುದು ಸಾಧ್ಯವಿಲ್ಲ. ಸ್ಥೂಲವಾಗಿ ೧೯೫೦ರ ವರೆಗಿನ ಕಾಲವನ್ನು ಪರಿಣತಿಯ ಕಾಲವೆನ್ನಬಹುದು. ಅನಂತರದ ನಾಲ್ಕಾರು ವರ್ಷಗಳನ್ನು ಪರ್ವಕಾಲವೆಂದರೆ ಸಲ್ಲುತ್ತದೆ. ಯಾವ ಹೆಜ್ಜೆಯಿಟ್ಟರೆ ಎಲ್ಲಿ ಎಂದು ಹುಡುಕಾಡುತ್ತಿದ್ದ ಕಾಲ ಅದು. ೧೯೫೭ರ ಅನಂತರ ಬಂದು ಈಗಿನ್ನೂ ಮುಂದುವರಿಯುತ್ತಿರುವುದು ಪ್ರಯೋಗದಕಾಲ, ಇದನ್ನು ನವ್ಯ ಕವಿತೆಯ ಕಾಲವೆಂದೂ ಕರೆಯಬಹುದು.

೨

"ಎಲ್ಲರಿಗೆ ಮೊದಲು ಹಿರಿಯಣ್ಣನವರನು ಬಿಟ್ಟು
ಬೇರೆ ಯಾರನು ಹೇಳಲಾದೀತು? ಕನ್ನಡದ
ಹೊಸ ನಡೆಯ ಹೆಜ್ಜೆಗಳನಿಡಲು ಕಲಿಸಿದ ನಮ್ಮ
ಗುರುಗಳಲಿ ಇವರ್ ಮುಖ್ಯರು. ಎಳೆಯ ದಿವಸದಲಿ

ಇಂಗ್ಲೀಷ ಕಲಿತು ಒಳ್ಳೆಯ ಕವಿತೆ ಕತೆಗಳನು
ಸವಿವಂದು ನಮ್ಮ ಜನರಿಗೆ, ನಮ್ಮ ಭಾಷೆಯಲಿ
ಇಂಥ ಕೃತಿಗಳ ರಚಿಸಿ ಒದಗಿಸುವುದೇ ತಮ್ಮ
ಮೊದಲ ಕರ್ತವ್ಯ............

....

...............ಕನ್ನಡದ ನುಡಿಯೆನಲು
ಇವರ ಭಕ್ತಿಯ ಮೊದಲ ದೈವ,"

ತಮ್ಮ ಕಥನ ಕವನಗಳ ಮಾಲೆಯಾದ 'ನವರಾತ್ರಿ'ಯ ಮೊದಲಭಾಗದಲ್ಲಿ (೧೯೫೩) ಮಾಸ್ತಿಯವರು ಆಚಾರ್ಯ 'ಶ್ರೀ'ಯವರ ಬಗ್ಗೆ ೭೨ ಸಾಲುಗಳಷ್ಟು ವರ್ಣನೆ ಮಾಡಿ, ಅವರ ವ್ಯಕ್ತಿತ್ವ, ಕನ್ನಡಪ್ರೇಮ, ಸಾಧನೆ, ಜ್ಞಾನಸಂಪತ್ತು ಮತ್ತು ಕನ್ನಡದ ಬೆಳವಣಿಗೆಯ ಬಗ್ಗೆ ಅವರಿಗಿದ್ದ ಕಳಕಳಿ, ಕಾರ್ಯತತ್ಪರತೆ ಇವುಗಳನ್ನೆಲ್ಲ ಕಣ್ಣಿಗೆ ಕಟ್ಟುವಂತೆ ಬಣ್ಣಿಸಿದ್ದಾರೆ. ಹೊಸ ಛಂದಸ್ಸು, ಹೊಸ ಭಾಷೆ ಇವುಗಳನ್ನು ಒಲಿಸಿಕೊಂಡ 'ಶ್ರೀ' ಯವರು ಕನ್ನಡದಲ್ಲಿ ಹೊಸ ಪ್ರಯೋಗಗಳನ್ನು ನಡೆಸಿದರು. ಅವರು ಅಂದು ಪ್ರಾರಂಭಿಸಿದ ಪರಂಪರೆಯಲ್ಲಿ ಮಾಸ್ತಿಯವರು, ಕುವೆಂಪು, ಪು. ತಿ. ನ., ವಿ. ಸೀ., ಜಿ. ಪಿ. ರಾಜರತ್ನಂ, ಮುಂತಾದ ಹಿರಿಯ ಕವಿಗಳೆಲ್ಲ ಸೇರಿದರು. ಧಾರವಾಡದ ಕಡೆಯಲ್ಲಿ ದ. ರಾ. ಬೇಂದ್ರೆಯವರ ನೇತೃತ್ವದಲ್ಲಿ ಗೆಳೆಯರ ಗುಂಪು ಅದ್ಭುತ ಸಾಧನೆಗಳನ್ನು ಮಾಡಿತು. ದಕ್ಷಿಣ ಕನ್ನಡದಲ್ಲಿ ಪಂಜೆ ಮಂಗೇಶರಾಯರು, ಅನಂತರ ಮಂಜೇಶ್ವರದ ಗೋವಿಂದ ಪೈ ಯವರು ಬೇಕಾದಷ್ಟು ಪ್ರಯೋಗಗಳನ್ನು ನಡೆಸಿ ಸಫಲರಾದರು. 'ಶ್ರೀ' ಅವರು ಪ್ರಾರಂಭಿಸಿದ ಹೊಸಯುಗ ಹೆಚ್ಚಿನ ಮಟ್ಟಿಗೆ ಇಂಗ್ಲಿಷ್ ರೊಮ್ಯಾಂಟಿಕ್ ಕವಿಗಳ ಪ್ರಭಾವದಲ್ಲಿಯೇ, ಅಥವಾ ಅದರ ನೆರಳಿನಲ್ಲಿಯೇ ಬೆಳೆಯಿತು ಎಂಬುದು ನಿರ್ವಿವಾದ. ಆದರೆ ಈ ರೊಮ್ಯಾಂಟಿಕ್ ಕಾವ್ಯವನ್ನು–ಅದರ ಸಾಧನೆಗಳನ್ನು–ಈಗಿನ ಕೆಲವು ಕವಿಗಳು ತಾತ್ಸಾರದಿಂದ, ತಿರಸ್ಕಾರದಿಂದ ನೋಡುತ್ತಿರುವುದು ತುಂಬಾ ವಿಷಾದನೀಯ. ಶ್ರೀ ಗೋಪಾಲಕೃಷ್ಣ ಅಡಿಗರು ಹೇಳಿರುವ ಮಾತನ್ನು ಇಲ್ಲಿ ಎತ್ತಿ ಹೇಳುವುದು ಉಚಿತವೆನಿಸುತ್ತದೆ. "ಒಂದು ಸಂಪ್ರದಾಯದ (ರೊಮ್ಯಾಂಟಿಕ್) ಸತ್ವ ತೀರಿತೆಂದರೆ ಆ ಸಂಪ್ರದಾಯದಲ್ಲಿ ಇನ್ನು ಮುಂದೆ ಉತ್ತಮಕಾವ್ಯ ಬರುವ ಸಂಭವ ಕಡಿಮೆ ಎಂಬಷ್ಟು ಅರ್ಥವಲ್ಲದೆ, ಆ ಸಂಪ್ರದಾಯ ಸತ್ವಶಾಲಿಯಾಗಿದ್ದಾಗ ಅದರಲ್ಲಿ ರಚಿತವಾಗಿದ್ದ ಉತ್ತಮ ಕೃತಿಗಳಿಗೆ ಈಗ ಬೆಲೆಯಿಲ್ಲ ಎಂದು ಅರ್ಥವಲ್ಲ. ಇದೇ ರೊಮಾಟಿಂಕ್ ಸಂಪ್ರದಾಯದ ಪುನರವತಾರ ಮತ್ತೆ ಇನ್ನು ಮುಂದೆ ಆಗಿ ಹೊಸ ಕೃತಿಗಳು ಹುಟ್ಟಲಾರವು ಎಂತಲೂ ಅರ್ಥವಲ್ಲ." ಅದೇ ಮಾತು ಮುಂದುವರಿಸಿ ಅಡಿಗರು "ಯಾವ ಸಂಪ್ರದಾಯದ್ದೇ ಆಗಲಿ, ಉತ್ತಮ ಕವಿತೆ ಯಾವಾಗಲೂ ಉತ್ತಮ ಕವಿತೆಯೇ" ಎಂದು ಸ್ಪಷ್ಟವಾಗಿ ಸಾರಿದ್ದಾರೆ. (ಒತ್ತು ನನ್ನದು). ನವ್ಯ ಕವಿತೆಯೆಂದು ಹೊರಟುದೆಲ್ಲವೂ ಅದ್ಭುತವಲ್ಲ, ಹಿಂದಿನದೆಲ್ಲವೂ ಜಳ್ಳಲ್ಲ–ಎಂಬ ಅವರ

ಮಾತನ್ನು ಈಚಿನ ನವ್ಯ ವಿಮರ್ಶಕರು ನೆನೆಯುವುದು ಅಗತ್ಯ. ಹೊಸದಾಗಿ ಬರುತ್ತಿರುವ ಕಾವ್ಯದ ಬಗ್ಗೆ "ಸಹಾನುಭೂತಿಯಿಂದ ನೋಡುವ, ಅದರ ಗುರಿಯನ್ನು ಅರಿಯುವ ಶಕ್ತಿಯೂ, ಅದರ ಸಾಧನೆಗಳನ್ನು ಅಳೆಯಲು ತಕ್ಕ ಮನಸ್ಸಿನ ಔದಾರ್ಯ" ಎಷ್ಟರ ಮಟ್ಟಿಗೆ ಅಗತ್ಯವೋ, ಅಷ್ಟರ ಮಟ್ಟಿಗೆ ಹಳೆಯ ಪರಂಪರೆಯ ಕಾವ್ಯವನ್ನು ವಿಮರ್ಶಿಸುವ ಕಾಲದಲ್ಲಿ, ಪುನರ್ಪರಿಶೀಲನೆ ನಡೆಸುವಲ್ಲಿ ಕೂಡ, ಯಾವ ಪೂರ್ವಗ್ರಹ, ತಾತ್ಸಾರದ ಭಾವನೆಗಳನ್ನೂ, ಇಟ್ಟುಕೊಳ್ಳದೆ, ಅದನ್ನು ಅಭ್ಯಾಸಮಾಡಲು ಪ್ರಯತ್ನಿಸ ಬೇಕಾದುದೂ ಅಷ್ಟೇ ಅಗತ್ಯ. ಹಳೆಯದೆಲ್ಲವೂ ಹೊಲ್ಲವಲ್ಲ. ಹೊಸದೂ ಹೊಲ್ಲವಲ್ಲ–ಎರಡನ್ನೂ ಅದರ ಗುರಿ ಮತ್ತು ಸಿದ್ಧಿಯ ದೃಷ್ಟಿಯಿಂದ ನೋಡುವುದೇ–ಸಮತೋಲವಾದ ವಿಮರ್ಶೆಯ, ಕಾವ್ಯದ ಅಭ್ಯಾಸದ ರೀತಿ. ಆ ದಾರಿಯನ್ನು ಇಲ್ಲಿ ನಿಸ್ಪೃಹತೆಯಿಂದ ತುಳಿಯಲು ಪ್ರಯತ್ನಿಸಿದೇನೆಂದು ಸೂಚಿಸಬಯಸುತ್ತೇನೆ. ಅಂತೆಯೇ ಎಲ್ಲ ಕವಿಗಳನ್ನು ಹೆಸರಿಸಿ ಉದಾಹರಣೆಗಳನ್ನು ಕೊಡುವುದು ಇಂತಹ ಲೇಖನದ ಪರಿಜಿಗೆ ಅಸಾಧ್ಯ. ಹೆಜ್ಜೆಗುರುತುಗಳನ್ನು ಜಾಡನ್ನು ಮಾತ್ರ ಇಲ್ಲಿ ಗುರುತಿಸುವುದು ಸಾಧ್ಯ.

ಸರಳರಗಳೆಯನ್ನು ಕನ್ನಡಕ್ಕೆ ಹೊಸದಾಗಿ ತಂದುಕೊಟ್ಟ ಮಾಸ್ತಿಯವರು ಅದನ್ನು ಪರಿಣತವಾಗಿ ಬಳಸಿರುವುದು ಮೇಲೆ 'ಶ್ರೀ'ಯವರ ಬಗ್ಗೆ ಅವರು ಬರೆದ ಸಾಲುಗಳಿಂದಲೇ ತಿಳಿಯುತ್ತದೆ. ಸರಳರಗಳೆಯನ್ನು ಇಂಗ್ಲಿಷಿನ ಬ್ಲಾಂಕ್‌ವರ್ಸ್ (Blank Verse) ಪ್ರಕಾರಕ್ಕೆ ಸಮರೂಪವಾಗಿ ಕನ್ನಡದಲ್ಲಿ ರೂಪಿಸಿದ ಮಾಸ್ತಿಯವರ 'ನವರಾತ್ರಿ'ಯ ಕಥನ ಕವನಗಳಲ್ಲಿ ಅದರ ವೈವಿಧ್ಯಪೂರ್ಣ ಬಳಕೆಯನ್ನು ಕಾಣ ಬಹುದು. 'ಸೋಜಿಗದ ಹೊಳಲು'ವಿನಲ್ಲಿ ಬರುವ ವರ್ಣನೆ ಮಾಯಾಜಾಲದ ವಾತಾವರಣವನ್ನು ನೈಜ ಜುಮ್ಮೆನಿಸುವಂತೆ ಸೃಷ್ಟಿಸುತ್ತದೆ. ಜೇಡನಬಲೆ ನೇದಂತೆ, ಬೆಳುದಿಂಗಳ ನವುರಾದ ತೆರೆಯೆಳೆದಂತೆ ಕೌತುಕವನ್ನು, ಮಾಯೆಯನ್ನು ಹಾಸುತ್ತದೆ. ಅದೂ ಎಷ್ಟು ಸರಳವಾದ ಮಾತುಗಳಲ್ಲಿ!

" ಕೊನೆಯಲಿ ತನ್ನ ಕೈಯಿಂದ
ನನ್ನ ಗಲ್ಲವನು ಸೋಕಿದಳು
ಅಷ್ಟೇ ನನಗೆ
ಈಗ ನೆನವಿಹುದು. ಗಲ್ಲವ ಬೆರಳು ಸೋಕಿತು;
ಸೋಕಿನಾನಂದದುಬ್ಬರಕೆ ಒಡಲಿನ ಪರಿವೆ
ಮರೆತುಹೋಯಿತು; ಸುಖಕೆ ಜೀವಾಳ ಸೊಕ್ಕಿತು.
ಪಾರಿಜಾತದ ಹೂವ ಮೆದು; ತಾಯ ಎದೆಹಾಲ
ನಸುಬಿಸುಪು; ಕರುವ ನೆಕ್ಕುವ ಹಸುವ ನಾಲಗೆಯ
ನೇಹ; ಬಹು ಮಾತಿಂದ ಏನು, ಕಣ್ಣಲಿ ಮಿನುಗಿ
ಮಾಯವಾಡುತಲಿರುವ ಇನಿಯೊಲವು ಎದೆತುಂಬಿ
ನಳಿತೋಳಿನಲಿ ಹರಿದು ಬೆರಳಿಂದ ಸೂಸಿತೆನೆ,
ಹೇಳಲಾಗದ ಒಂದು ಆನಂದ........
........ಆ ಸುಖ

ಸುಖವಲ್ಲ, ನೋವೆ, ಎಂಬಂತೆ ಆ ಕ್ಷಣದಲ್ಲಿ
ಯಾತನೆಯೆ ಆಗಿ ಎನ್ನೊಡಲರಿವು ತಪ್ಪಿತು."

ಒಲವಿನ ಆನಂದದಲ್ಲಿ ಮೈಮರೆಯುವ ಮನಸ್ಸಿನ ಸ್ಥಿತಿಯನ್ನು ಪದರ ಪದರವಾಗಿ ಬಿಡಿಸಿ ತೋರಿಸಿರುವ ಈ ಭಾಗ ಉತ್ತಮ ಕಾವ್ಯಭಾಗವೆನ್ನಲಡ್ಡಿಯಿಲ್ಲ. ಪ್ರಾಯಶಃ ಇಲ್ಲಿಯ ಒಂದು ದೌರ್ಬಲ್ಯವೆಂದರೆ ಓದುಗನ ಕಲ್ಪನಾಶಕ್ತಿಗೆ ತಾಕುವಂತೆ, ಧ್ವನಿಸುವ ಪ್ರತಿಮೆಗಳಾಗಲಿ, ಚಿತ್ರಗಳಾಗಲಿ ಇಲ್ಲದಿರುವುದು. ಸೂಚ್ಯಾರ್ಥಕ್ಕಿಂತ ಇಲ್ಲಿ ಬಿಡಿಸಿ ಹೇಳಿರುವುದೇ ಹೆಚ್ಚು ಎನ್ನಿಸಬಹುದು. ಆದರೆ ತನ್ನ ಪರಿಸರದಲ್ಲಿ ಈ ಕಾವ್ಯಭಾಗವು ತನ್ನ ಗುರಿ ಸಾಧಿಸಿದೆ ಎಂಬುದನ್ನು ಅಲ್ಲಗಳೆಯುವಂತಿಲ್ಲ.

ಸರಳರಗಳೆಯ ಛಂದಸ್ಸನ್ನು ತನಗೆ ಬೇಕಾದ ರೀತಿಯಲ್ಲಿ ಹಿಗ್ಗಿಸಿ, ಕುಗ್ಗಿಸಿ, ಕುಣಿಸಿ, ನಲಿಸಿ–ಮೇಣದಂತೆ ಬೇಕು ಬೇಕೆನಿಸಿದ ಕಡೆಗೆ ಬಾಗಿಸಿ ಸಿದ್ಧಿಪಡೆದಿದ್ದಾರೆ ಮಾಸ್ತಿಯವರಂತೆಯೇ ಬೇರೆ ಕನ್ನಡ ಕವಿಗಳು ಕೂಡ. ಆದರೆ ಸರಳರಗಳೆಯನ್ನೇ ಆಧಾರವಾಗಿಟ್ಟುಕೊಂಡು, ಅದರ ಹಂದರದ ಮೇಲೆಯೇ ಬೇರೊಂದು ಛಂದಸ್ಸಿನ ರೂಪವನ್ನು ಸೃಷ್ಟಿಸಿಕೊಂಡವರು ಶ್ರೀ ಕುವೆಂಪು ಅವರು. 'ಶ್ರೀರಾಮಾಯಣ ದರ್ಶನಂ'ನ ಛಂದಸ್ಸು–ಮಹಾಛಂದಸ್ಸು–ನಿಜವಾಗಿ ಒಂದೇ ಒಂದು ಛಂದಸ್ಸಲ್ಲ, ಅದು ಹಲವಾರು ಛಂದೋರೂಪಗಳ ಸಮ್ಮಿಲಿತ ಛಂದಸ್ಸು. ಸರಳರಗಳೆ, ಷಟ್ಪದಿ, ತ್ರಿಪದಿ–ಅಲ್ಲದೆ ಅಲ್ಲಲ್ಲಿ ಮುಕ್ತಛಂದಸ್ಸು ಇವೆಲ್ಲವುಗಳನ್ನೂ ಮೈಗೂಡಿಸಿಕೊಂಡ ಕೃತಿ ಅದು. 'ಶ್ರೀರಾಮಾಯಣ ದರ್ಶನಂ' ಮಹಾಕಾವ್ಯದಲ್ಲಿ ಹಲವಾರು ಛಂದೋ ಶೈಲಿಗಳಿವೆ. ಈ ಸಂಪುಟದಲ್ಲಿಯೇ ಆ ಕೃತಿಯ ಬಗ್ಗೆ ಬೇರೆ ವಿಸ್ತಾರ ಲೇಖನವೇ ಇರುವುದರಿಂದ ನಾನು ಆ ಬಗ್ಗೆ ಇಲ್ಲಿ ಹೆಚ್ಚಿಗೆ ಹೇಳುವುದಿಲ್ಲ. "Poetry is vision in rhythm" 'ಕಾವ್ಯವು ಲಯಬದ್ಧವಾದ ದರ್ಶನ' ಎಂಬ ಮಾತನ್ನು ಶ್ರೀನಿವಾಸರ ಹಾಗೂ ಕುವೆಂಪು ಅವರ ಈ ಸುದೀರ್ಘ ಕೃತಿಗಳಿಗೆ ಅನ್ವಯಿಸಬಹುದು.

ಹಿಂದೆ ಕನ್ನಡದಲ್ಲಿ ಮಹಾಕಾವ್ಯಗಳು ಕಥನ ಕವನಗಳು ಇದ್ದುವಾದರೂ ಅವುಗಳಲ್ಲಿ ಹದಿನೆಂಟು ವರ್ಣನೆಗಳು, ಯಮಕಗಳು, ಗಮಕಗಳು, ಅಲಂಕಾರಗಳು, ಪ್ರಾಸಗಳು ಮುಂತಾದ ಸಂಪ್ರದಾಯದ ಕಟ್ಟುಕಟ್ಟಲೆಗಳಿದ್ದುವು. ಆ ಹಳೆಯ ಜಾಡನ್ನು ಬಿಟ್ಟು ಹೊಸ ಜಾಡನ್ನು ರೂಪಿಸಿಕೊಂಡು ಸಿದ್ಧಿಪಡೆದಿರುವುದು ಕಥನ ಕವನಗಳ ಒಂದು ಹಿರಿಯ ಸಾಧನೆ ಎಂದು ಹೇಳಬಹುದು. ಸರಳರಗಳೆಯ ಮಣಿತದಿಂದಲೇ–ಸಾಮಾನ್ಯಜನರ ಭಾಷೆಯ ಬಳಕೆಯ ರೀತಿಯಿಂದಲೇ–ಪ್ರಾಯಶಃ ಮುಕ್ತಛಂದಸ್ಸು ಹುಟ್ಟಿತೆಂದು ಹೇಳಬಹುದು. ಭಾವಕ್ಕೆ ತಕ್ಕಂತೆ, ವಿಚಾರಕ್ಕೆ ಹೊಂದುವಂತೆ ಮಾತು ಬಳುಕುವುದು ಸರಳರಗಳೆಯಲ್ಲಿ ಸಾಧ್ಯವೆಂದು ಕಂಡ ಕವಿಗಳು–ಅದರಿಂದ ಮುಂದೆ ಹೋಗಿ ಹೊಸ ರೀತಿಯ ಮುಕ್ತ ಛಂದಸ್ಸನ್ನೇ ರೂಪಿಸಿಕೊಂಡರೆನ್ನಬಹುದು. ಇದಕ್ಕೆ ನಾವು ವಿ. ಕೃ. ಗೋಕಾಕರ 'ಸಮುದ್ರ ಗೀತೆ'ಗಳನ್ನು ನೋಡಬಹುದು. ಆದರೆ ಮುಕ್ತ ಛಂದಸ್ಸನ್ನು ೧೯೩೭–೩೮ರ ವೇಳೆಗೆ ಪರಿಣತವಾಗಿ ವಿ. ಕೃ. ಗೋಕಾಕರು ಬಳಸಿಕೊಂಡಿದ್ದರೂ,

ಮೊತ್ತಮೊದಲ ಬಾರಿಗೆ ಅದನ್ನು ರೂಪಿಸಿ ಬಳಸಿದವರು, ಅಮೆರಿಕದಲ್ಲಿ ವಿದ್ಯಾಭ್ಯಾಸಕ್ಕೆ ಈ ಶತಮಾನದ ಪ್ರಾರಂಭಕಾಲದಲ್ಲಿಯೇ ಹೋಗಿದ್ದ ಹುಚ್ಚೇಶ್ವರ ಮುದ್ಗಲ್ ಅವರೆಂಬುದನ್ನು ಇಲ್ಲಿ ಪ್ರಾಸಂಗಿಕವಾಗಿ ನೆನೆಯುವುದು ಉಚಿತ.

೩

ಹೊಸ ಕಾವ್ಯದ ಇನ್ನಿತರ ರೂಪಗಳಲ್ಲಿಯೂ ತುಂಬಾ ಸೊಗಸಾದ ಸಿದ್ಧಿಯನ್ನು ನಾವು ಕಾಣಬಹುದು. ಕನ್ನಡಕ್ಕೆ ಸಾನೆಟ್ ರೂಪವನ್ನು ತಂದ ಕೀರ್ತಿ ಗೋವಿಂದ ಪೈ ಅವರದು. ಸಾನೆಟ್ ರೂಪದಲ್ಲಿ ಹಲವಾರು ರೀತಿಯ ಪ್ರಯೋಗಗಳನ್ನು ಬೇಂದ್ರೆ, ಪು. ತಿ. ನ. ಮಾಸ್ತಿ, ಕುವೆಂಪು ಮುಂತಾದವರು ಮಾಡಿ ಸಿದ್ಧಿಪಡೆದಿದ್ದಾರೆ. ಇಂಗ್ಲಿಷಿನಿಂದ ತಂದ ಈ ರೂಪದಲ್ಲಿ, ಇಂಗ್ಲಿಷಿನಲ್ಲಿಯೇ ಇಲ್ಲದಂತಹ ಹಲವಾರು ಸಫಲ ಪ್ರಯೋಗಗಳನ್ನು ಮಾಡಿಸ್ತಾರೆ ಕನ್ನಡದಲ್ಲಿ. 'ಕೃತ್ತಿಕೆ'ಯಲ್ಲಿಯೇ ೨೦ ಬೇರೆ ಬೇರೆ ಸಾನೆಟ್ ರೂಪಗಳನ್ನು ಕಾಣಬಹುದು. ಅಂತ್ಯಪ್ರಾಸವಿಲ್ಲದೆ ಸಾನೆಟ್‌ಗಳನ್ನು ಮಾಸ್ತಿಯವರೂ, ಬೇಂದ್ರೆಯವರೂ ರಚಿಸಿದರು. ಹನ್ನೆರಡು ಸಾಲುಗಳಲ್ಲಿ ಅಂತ್ಯ ಪ್ರಾಸದ ಸೋಂಕು ಕೂಡ ಇಲ್ಲದೆ ಆದಿಪ್ರಾಸ ಬಳಸಿ ಕೊನೆಯೆರಡು ಸಾಲುಗಳಲ್ಲಿ ಅಂತ್ಯಪ್ರಾಸದ ಬಿಗುಪನ್ನು ಕೊಟ್ಟು ಹೊಸತೊಂದು ಸಾಧನೆಮಾಡಿ ತೋರಿಪ್ದಾರೆ ಪು. ತಿ. ನ. ಅವರು. 'ರಸಸರಸ್ವತಿ' (೧೯೫೪) ಯಲ್ಲಿನ 'ಪುಣ್ಯಕ್ಷೇತ್ರಗಳಲ್ಲಿ ಕಂಡುಬರುವ ಜೀವಕಾಮುವನ್ನು ಕುರಿತು', ಮುಂತಾದುವು ಈ ಅಚ್ಚುಕಟ್ಟಾದ ರೂಪದಲ್ಲಿವೆ. ಈ ಉದಾಹರಣೆ ನೋಡಿ :

ಮಳೆ

" ಅದಿಗೊ ದೆಸೆ ಕೂಡುವೆಡೆ ತಿರೆಗೂರುತಿದೆ ಮುಗಿಲು
    ಹೆಬ್ಬೆದಿರ ಮಳೆಯ ಚೆಲುವನು ತೋರಿ, ಬಿಳಲೂರಿ
    ಹಬ್ಬಿರುವ ಮಹಾ ವಟವೃಕ್ಷವೊಲು ಹಸರಿಸುತ
ಇದೆ ಕೊ ಎನುತಿವೆ ನನಗೆ ಮೈಬಿಡವ ಮಿಂಚಿನೊಲು
ಕಾರೊಡಲ ಬಣ್ಣದೊಳು ತನ್ನ ಪನ್ನತಿಕೆಯನು
    ಮೆರೆವ ಗುಡುಗಿನೊಳು ಗಿರಿ ಮೈತ್ರಿಯೊಳು ಸರ್ವಾತ್ರಿ-
    ಹರಕ್ಷೀರ ಧಾರೆಯೊಳು ಹಿಂದೆ ತಾ ಹಿಡಿದಿಟ್ಟ
ನೂರಾರು ಕನಿಮುದಗಳೈಸಿರಿಯ ತೆರುವಂತೆ !
ಸನಿಯಕೈದಿತು ಮಳೆ, ನೆನೆನೆನೆದುದೆನ್ನಮೈ,
    ಕುಳಿತೆಡೆಯೆ ಕುಳಿತಿಹೆನು ಚಿರಕಾಲದಭಿಲಷಿತ
    ಸಲುವ ತೆರ. ಅರಿತರಾರೀ ಮೇಘವಾವ ಪಾ-
ವನ ನದೀತೀರ್ಥವನು ತಂದಿಹುದೊ, ವೇಂಗಡದ
ಮಲೆಮುಟ್ಟಿ ಬಂದಿಹುದೊ ಸೇಚನವೊಳೆನ್ನ ಹರಸೆ,
ಕರುಣೆಯೊಳು ನಿಂತೆಡೆಯೆ ಅವಭೃತಸ್ನಾನನೆನಿಸೆ ?"

ಆದಿ ಪ್ರಾಸವಿರುವ ಮೂರು ಚೌಪದಿ ಮತ್ತು ಅಂತ್ಯ ಪ್ರಾಸವಿರುವ ದ್ವಿಪದಿಯ ಕಟ್ಟು ಇರುವ ಇದು ಪು. ತಿ. ನ. ಅವರಿಗೆ ಪ್ರಿಯವಾದ ರೂಪ. ಇದು ಅವರ ವಿಶಿಷ್ಟ ಕೊಡುಗೆ. ಇಲ್ಲಿಯೂ ನಾವು ಸೊಗಸಾದ ಚಿತ್ರಣವನ್ನು ಕಾಣುತ್ತೇವೆ. ನಿಸರ್ಗದ ರಮಣೀಯತೆಯು ಅವರಿಗೆ ದೈವದ ಹರಕೆಯಾಗಿ ಕಾಣುತ್ತದೆ. ಆದರೆ ಇಲ್ಲಿಯೂ ಅರ್ಥವು ವಿವರವಾಗಿ ಬಂದುದರಿಂದ ಧ್ವನಿ ಇಲ್ಲದಂತಾಗಿದೆ. ದೈವದ ಕರುಣೆಯ ಪ್ರತಿಮೆಯಾಗಬೇಕಾಗಿದ್ದ ಮಳೆ, ಕೇವಲ ಪ್ರಕೃತಿಚಿತ್ರವಾಗಿ ನಿಂತಿದೆ ಎನಿಸುತ್ತದೆ. ಭಾಷೆ ಕೂಡ ಅತಿ ಸಂಸ್ಕೃತಮಯವಾಗಿ ಧ್ವನಿಗೊಳ್ಳದೆ ದುರ್ಬಲವಾಗಿದೆ.

ಏಳು ದ್ವಿಪದಿಗಳನ್ನುಳ್ಳ ಸಾನೆಟ್ ಇಂಗ್ಲಿಷಿನಲ್ಲಿಯೂ ಅಪರೂಪ. ಆದರೆ ತರುಣ ಕವಿ ಶ್ರೀ ಜಿ. ಎಸ್. ಶಿವರುದ್ರಪ್ಪ 'ಸಾಮಗಾನ' (೧೯೫೧) ದಲ್ಲಿ 'ಸಂದೇಶ' ಎಂಬ ಸಾನೆಟ್ಟಿನಲ್ಲಿ ಈ ರೂಪವನ್ನು ಸಫಲವಾಗಿ ಪ್ರಯೋಗಿಸಿದ್ದಾರೆ. ಶಿವರುದ್ರಪ್ಪನವರ 'ಹೊಸಿಲು ದಾಟಿತು ಹಸುಳೆ' ಎಂಬ ಈ ಸಾನೆಟ್ಟನ್ನು ನೋಡಿ.

"ಹೊಸಿಲುದಾಟಿತು ಹಸುಳೆ; ನಡುಮನೆಯ ಬಿತ್ತರದ
ಬಯಲುನಾಡನು ಕಳೆದು, ಹೊರಜಗಕು ಒಳಜಗಕು
ಕೋಟೆಗಟ್ಟದ ಹೊಸಿಲ ಪರ್ವತಶ್ರೇಣಿಯನು
ದಾಟಬಿಟ್ಟಿತು ಹಸುಳೆ! ಓ, ಅಲ್ಲಿ, ಹಿಮಗಿರಿಯ
ಶಿಖರದಲಿ ವಿಜಯಿಯಾದನು ವೀರ ತೇನ್ಸಿಂಗ್!
ಇದೊ ಇಲ್ಲಿ, ಅದಕಿಂತಲೂ ಮಿಗಿಲು ಹಬ್ಬವಾ
ಯಿತು ಮನೆಗೆ! ಕಾಯೊಡೆದು, ಕರ್ಪೂರದಾರತಿಯ
ಬೆಳಗಿ, ಸಕ್ಕರೆ ಹಂಚಿ ನಲಿಯಿತೀ ಮನೆಯ ಜನ-
ಲೋಕ! ಕತ್ತಲೆಯ ಬಸಿರಿಂದ ಮೆಲ್ಲಡಿಯಿಟ್ಟು
ನೀರಾಗಿ, ಹಸಿರಾಗಿ, ಖಗವಾಗಿ, ಮಿಗವಾಗಿ
ಕಡೆಗೆ ಮಾನವನಾಗಿ, ಕಾಲದುಸುಬನು ತುಳಿದು
ಪ್ರಗತಿಯನು ಸಾಧಿಸಿದ ಮಾನವ ಚರಿತ್ರೆಯಲಿ
ಹೊಸಲುದಾಟದ ಹಸುಳೆಯೀ ಲೀಲೆಯೊಂದು ಪುಟ!
ಅದನು ತಿರುವಿತು ಹಸುಳೆ; ಏನಿದದ್ಭುತ ಮಾಟ!"

ಈ ಸಾನೆಟ್ಟಿನ ಮೊದಲ ಹನ್ನೆರಡು ಸಾಲುಗಳಲ್ಲಿ ಆದಿಪ್ರಾಸವೂ ಇಲ್ಲ, ಅಂತ್ಯಪ್ರಾಸವೂ ಇಲ್ಲ. ಕೊನೆಯೆರಡು ಸಾಲುಗಳಲ್ಲಿ ಮಾತ್ರ ಅಂತ್ಯಪ್ರಾಸವಿದ್ದು ಸೊಗಸಾದ ಬಂಧ ವನ್ನು ಕಲ್ಪಿಸಿದೆ.

ಈ ಸಾನೆಟ್ಟನ್ನು ರೊಮ್ಯಾಂಟಿಕ್ ರೀತಿಯ ಬರವಣಿಗೆಯ ಒಳ್ಳೆಯ ಉದಾಹರಣೆ ಯಾಗಿ ತೆಗೆದುಕೊಳ್ಳಬಹುದು. ಬಹು ಸ್ಪಷ್ಟವಾಗಿ, ವಿವರವಾಗಿ ಹೊಸಲುದಾಟದ ಮಗುವಿನ ಚಿತ್ರಣವಿದೆ. ತೇನ್ಸಿಂಗ್ ಮಹಾವೀರ ಹಿಮಾಲಯವನ್ನು ಗೆದ್ದ ಚಿತ್ರ ಬಂದು—ಅದರಷ್ಟೇ ಇದೂ ಅದ್ಭುತವೆನ್ನುವ ರೂಪಕ ಚಿತ್ರವೂ ಇದೆ. ಆ ಗಳಿಗೆಯಲ್ಲಿ ಕವಿ

ಮನಸ್ಸಿಗೆನ್ನಿಸಿದ ಈ ಅದ್ಭುತದ ಬಗೆಗಿನ ಆಶ್ಚರ್ಯ, ಆನಂದಗಳು ಯಾವ ಆರ್ಭಟವೂ ಇಲ್ಲದೆ, ಸರಾಗವಾಗಿ, ಲಲಿತವಾಗಿ ಹರಿದು ಈ ಸಾನೆಟ್ಟಿನಲ್ಲಿ ಕಾಣಿಸಿಕೊಂಡಿವೆ.

ಇದೇ ಬಗೆಯಲ್ಲಿ ಕನ್ನಡದ ಅನೇಕ ಕವಿಗಳು ಉತ್ತಮವಾದ ಸಾನೆಟ್‌ಗಳನ್ನು ಬರೆದಿದ್ದಾರೆ. ರೊಮ್ಯಾಂಟಿಕ್ ಸಂಪ್ರದಾಯದ ಅತ್ಯುನ್ನತ ಕೊಡುಗೆಗಳಲ್ಲೊಂದಾದ ಸಾನೆಟ್ ರೂಪದಲ್ಲಿ ಈ ಕವಿಗಳ ಸಿದ್ಧಿಯೇನೂ ತಳ್ಳಿಹಾಕುವಂತಹುದಲ್ಲ.

೪

'ಪ್ರಗಾಥ'ದ ರೂಪವಂತೂ ಕುವೆಂಪು, ಪು. ತಿ. ನ. ಮತ್ತು ಕೆ. ಎಸ್. ನರಸಿಂಹಸ್ವಾಮಿ ಅವರ ಕೈಯಲ್ಲಿ ತನ್ನ ಅತ್ಯುನ್ನತಸ್ಥಾನ ಮುಟ್ಟಿತೆಂದು ಹೇಳಲಡ್ಡಿಯಿಲ್ಲ. 'ಶ್ರೀ'ಯವರ 'ಕನ್ನಡ ತಾಯ್ ನೋಟ,' 'ರಜತಮಹೋತ್ಸವ ಪ್ರಗಾಥ' ಇವುಗಳಲ್ಲಿನ ಗಾಂಭೀರ್ಯ, ಹಿರಿತನ ಮೆಚ್ಚುವಂತಹದು. ಇಲ್ಲಿ ಕಾವ್ಯದ ಛಂದಸ್ಸು ವಸ್ತುವಿನಿಂದ ಹೊರತಾದುದಲ್ಲ. 'ಶ್ರೀ'ಯವರ ಅನಂತರ ಪು. ತಿ. ನ. ಅವರ 'ಗಣೇಶದರ್ಶನ', ಕೆ. ಎಸ್. ನ. ಅವರ 'ಡೊಮಿನಿಯನ್ ಜನನ' ಮತ್ತು ಕುವೆಂಪು ಅವರ 'ಸ್ವಾತಂತ್ರ್ಯೋತ್ಸವ ಮಹಾಪ್ರಗಾಥಾ'ಗಳು ಅಪೂರ್ವವಾದುವು.

ಕೆ. ಎಸ್. ನ. ಅವರ 'ಡೊಮಿನಿಯನ್ ಜನನ' ೧೪-೮-೧೯೪೭ರ ಮಧ್ಯರಾತ್ರಿ ಬ್ರಿಟನ್ ತನ್ನ ಸ್ವಾಮ್ಯವನ್ನು ಪರಿತ್ಯಜಿಸಿ, ಭಾರತ ಮತ್ತು ಪಾಕಿಸ್ತಾನಗಳೆಂಬ ಎರಡು ಡೊಮಿನಿಯನ್‌ಗಳಿಗೆ ಜನ್ಮವಿತ್ತುದರ ಬಗ್ಗೆ, ಬ್ರಿಟನ್ನನ್ನು ಕುರಿತಂತೆ ಬರೆದ ಪ್ರಗಾಥ. (ಉಂಗುರ, ೧೯೪೯). ನಿಯತಪ್ರಾಸವೂ, ನಿಯತ ಗಣಮಾತ್ರೆಗಳ ಸಾಲುಗಳೂ ಇಲ್ಲದೆ ಸ್ವಚ್ಛಂದವಾಗಿ ಹರಿಯುವ ಈ ಪ್ರಗಾಥ ತುಂಬಾ ಸರಳವಾಗಿದ್ದು, ಅಷ್ಟೇ ಗಂಭೀರ ನಡೆಯನ್ನೂ ಪಡೆದಿದೆ, ಅಲ್ಲಲ್ಲಿ ಸೊಗಸಾದ ಚಿತ್ರಗಳು ಮನಮುಟ್ಟುವಂತೆ ಎದ್ದುನಿಲ್ಲುತ್ತವೆ. ಭಾರತದ ಮಕ್ಕಳು ಬರಿಗೈಯಲ್ಲಿ ದಬ್ಬಾಳಿಕೆಯನ್ನೆದುರಿಸುವಾಗ

"ಹೂ ಬಳ್ಳಿಯೆಲ್ಲ ಉಕ್ಕಾಗಿ ಸತ್ಯಾಗ್ರಹದ
ನವ್ಯ ಮಾರ್ಗದಲಿ ಸಂಗ್ರಾಮವನು"

ನಡೆಸಿಕೊಂಡು ಬಂದುದರ ಚಿತ್ರಣ ಸ್ಪಷ್ಟವಾಗಿ ಪ್ರಭಾವಶಾಲಿಯಾಗಿದೆ. ಬ್ರಿಟನ್ನಿನ ಚಿತ್ರವಂತೂ ಕುಸುರಿಕೆಲಸದಂತೆ ಅದ್ಭುತವಾಗಿ, ಅಪೂರ್ವ ಸೊಬಗಿನಿಂದ ಕೂಡಿದೆ.

"   ದೂರ ಯೂರೋಪಿನ
ನೀಲಜಲದಲಿ ನಕ್ಕ ಅಚ್ಚರಿಯ ನೆಲವೆ
'ಎದೆ ತುಂಬ ಹೊಂಬಣ್ಣ ತುಂಬಿ ತೂಗುವ ಬಯಲೆ
ವರ್ತಕರ ಸಿರಿಮೆರೆವ ನಾಡೆ', ಬ್ರಿಟಾನಿಯಾ
ಬಿತ್ತರದ ಬಾನಿಗೆ ವಿಮಾನ ಮಾಲೆಯನೆಸೆದು
ಎತ್ತರದ ನೌಕೆಗಳ ಮೇಲೆ ಬಾವುಟ ತೆರೆದು
ರಾಜ್ಯಧರ್ಮದ ಹಿರಿಯ ಸಂಪ್ರದಾಯದ ಬಾಳಿ

ಕಾವ್ಯ ಸಾಗರದ ಅಧಿದೇವತೆಯೆ ಆಗಿ
'ಆಳೌ, ಬ್ರಿಟಾನಿಯಾ, ಆಳು ತೆರೆಗಳನು—
ಸಾಮ್ರಾಜ್ಯಮುಕ್ತಿ ನಿನಗಿಂದು ಲಭಿಸಿಹುದು."

ಈ ಕೆಲವೇ ಸಾಲುಗಳಲ್ಲಿ ಬ್ರಿಟನ್ನಿನ ಸೌಂದರ್ಯ, (ಮೊದಲ ನಾಲ್ಕು ಸಾಲುಗಳು ಇಂಗ್ಲಿಷ್ ಕಾವ್ಯವೊಂದರಿಂದ ಅನುವಾದಿತವಾದುವೆಂದು ಪ್ರಾಸಂಗಿಕವಾಗಿ ಸೂಚಿಸಬಹುದು). ಅಲ್ಲಿನ ವಿಮಾನ ಮತ್ತು ಹಡಗುಗಳ ಪ್ರತೀಕದ ಮೂಲಕ ಆಧುನಿಕ ಯಂತ್ರಬಲ, ಸೈನ್ಯಬಲ, ಜಗತ್ತಿಗೆಲ್ಲ ಅದು ರಾಜ್ಯಧರ್ಮದ ಬಗ್ಗೆ ಕಲಿಸಿರುವ ಪ್ರಜಾಪ್ರಭುತ್ವದ ಸತ್ವದ ಪಾಠ ಇವುಗಳೇ ಅಲ್ಲದೆ–ವಿಶ್ವಸಾಹಿತ್ಯದಲ್ಲಿ, ಅತ್ಯುಚ್ಚಸ್ಥಾನಗಳಿಸಿ ಸಾಹಿತ್ಯದ ರಾಣಿಯಾಗಿ–ಅದರಲ್ಲಿಯೂ ಮುಖ್ಯವಾಗಿ ಕಾವ್ಯಸಾಗರದ ಅಧಿದೇವತೆಯಾಗಿ ಇರುವ ಚಿತ್ರವೆಲ್ಲ ಸಂಕೀರ್ಣವಾಗಿ ಮೂಡಿಬಂದಿದೆ. ಕೊನೆಯ ಮೂರುಸಾಲುಗಳಲ್ಲಿ ಧ್ವನಿಪೂರ್ಣವಾಗಿ ಬ್ರಿಟನ್ನಿಗೆ ಬಿಡುಗಡೆ ದೊರೆತುದು ಹೃದಯಂಗಮವಾಗಿದೆ. ಬ್ರಿರ್ಟ ಭಾರತಕ್ಕೆ ಸ್ವಾತಂತ್ರ್ಯ ಕೊಟ್ಟುದು ನಿಜವಾಗಿ ಬ್ರಿಟನ್ನಿನ ಬಿಡುಗಡೆಯೇ! ಸಾಮ್ರಾಜ್ಯದ ಹೊರೆಹೊತ್ತು ತನ್ನ ಮತ್ತು ಇತರರ ದೃಷ್ಟಿಯಲ್ಲಿ ಕುಗ್ಗಿದ ಬ್ರಿಟನ್ನಿಗೆ ಈಗ 'ಸಾಮ್ರಾಜ್ಯಮುಕ್ತಿ' ಲಭಿಸುತ್ತದೆ ಎಂಬ ಮಾತು, ತುಂಬಾ ಧ್ವನಿಪೂರ್ಣವಾಗಿದೆ. ಅಂತೆಯೇ ಬ್ರಿರ್ಟ ಇನ್ನುಮೇಲೆ ಬರಿಯ ಕಾವ್ಯಸಾಗರದ ತೆರೆಗಳಮೇಲೆ ಆಳುತ್ತಾಳೆ. ನಿಜವಾಗಿ

"ನೀನಿಂದು ಗ್ರೇಟ್‌ಬ್ರಿರ್ಟ" ಎಂದು ಕವಿ ಘೋಷಿಸುವುದು ಸೂಕ್ತವಾಗಿದೆ. ಈ ಪ್ರಗಾಥದಲ್ಲಿ ಸುಂದರವಾದ, ಧ್ವನಿಪೂರ್ಣವಾದ ಚಿತ್ರಣವಿದೆ. ಇದು ಉತ್ತಮ ಪ್ರಗಾಥಗಳಲ್ಲೊಂದೆಂದು ಹೇಳಬಹುದು. ಆದರೆ ಅಲ್ಲಲ್ಲಿ ಬಹು ಸಪ್ಪೆಯಾದ ಸಾಲುಗಳೂ ಕಾಣಿಸಿ ಉತ್ಸಾಹಕ್ಕೆ ಬದಲು ರಸಭಂಗ ಆಗುತ್ತದೆ. ತುಂಬಾ ಉತ್ಸಾಹ, ಗಾಂಭೀರ್ಯ ಪಡೆದು, ಬ್ರಿಟನ್ನಿಗೆ ಬೀಳ್ಕೊಡುವ ಸಾಲುಗಳು ಬರುತ್ತವೆ. ಅನಂತರ ತುಂಬಾ ಗದ್ಯತಾನದ ಈ ಸಾಲುಗಳು ಬಂದುಬಿಡುತ್ತವೆ. ಇವು bathetic ರಸಾಭಾಸ ಎನ್ನದೆ ವಿಧಿಯಿಲ್ಲ.

"ರವಿರಥದ ಮೇಲೆ ಬರುತಿಹಳು. ಧನ್ಯ ಆಶೋಕ
ಕಾಣಿಸಿದ ಚಕ್ರ ನೆಲಸಿಹುದು ಬಾವುಟದಲ್ಲಿ;
ಹೂ ಮಳೆಯನು ಸುರಿಸಿದರು ಹುತಾತ್ಮರಾಗಸದಲ್ಲಿ!"

ಕುವೆಂಪು ಅವರ 'ಶ್ರೀ ಸ್ವಾತಂತ್ರ್ಯೋದಯ ಮಹಾಪ್ರಗಾಥಾ' ಇದೇ ಮಹತ್ತರ ಘಟನೆಯ ಬಗ್ಗೆ ಬಂದ ಪ್ರೌಢ ಶೈಲಿಯ ಪ್ರಗಾಥ. ಪ್ರಾಸದ ಕಟ್ಟು, ಪ್ರತಿನುಡಿಯಲ್ಲಿಯೂ ಛಂದಸ್ಸಿನ ತಿರುವು, ಪ್ರತಿಮಾ ಪ್ರೌಢಿಮೆ, ಸಾಧಾರಣ ಪದ ಪುಂಜಗಳನ್ನು ಸಂಸ್ಕೃತ ವ್ಯಾಕರಣ ಸೂತ್ರದಂತೆ ಬಳಸುವ ತಾಂತ್ರಿಕ ಪ್ರಜ್ಞೆ, ಇತಿಹಾಸ, ಪುರಾಣ ಇವುಗಳನ್ನೆಲ್ಲ ಅಳವಡಿಸಿಕೊಳ್ಳುವ ಚಾತುರ್ಯ ಇವೆಲ್ಲದರ ಜತೆಗೆ ದೈವಭಕ್ತಿ,

ದೇಶಪ್ರೇಮ ಇವು ಕುವೆಂಪು ಅವರ ಈ ಪ್ರಗಾಥದಲ್ಲಿ ತುಂಬಿ ತುಳುಕುತ್ತಿವೆ, ಅಲ್ಲಲ್ಲಿ ಮನಮುಟ್ಟುವ ಪ್ರತಿಮೆಗಳು, ಚಿತ್ರಗಳು ನಿಂತಿವೆ.

"ಬಾನಿಳಿದು ನಿಲ್ವ, ಬುವಿ ಏರಿಸೋಲ್ವ, ಆ ಮಲೆಯ ತಲೆಗೆ
ಅನ್ನಮಯದಾಚೆ, ತನ್ನತನದೀಚೆ ಚಿನ್ಮಯದ ಶಿಲೆಗೆ"

ಎಂಬಲ್ಲಿಯ ಚಿತ್ರಣ ಸುಂದರವಾಗಿದೆ. ಸ್ವಾತಂತ್ರ್ಯದಿನದಂದು ಬೆಳಗುವೈಯ್ಯ ಪುಣ್ಯಮೂರ್ತಿಗಳೆಲ್ಲರೂ ಹರಸಲು ನಿಂದಿದ್ದಾರೆ. ಅವರ ಜತೆಗೆ

"ಇತ್ತ ಕೈಮುಗಿದು ಕಾಣ ನಿಂತಿಹನು ಉರಿವ ದೀಪವರ್ತಿ:
ಹೆಸರ ಮೆರೆಯದೆಯೆ ಉಸಿರನಿತ್ತವನು ಬಾಳ್ಗೆಗುಸಿರ್ ಸ್ಫೂರ್ತಿ
ಹೊಲವನುತ್ತವನು, ಹೊರೆಯ ಹೊತ್ತವನು, ದುಡಿವ ದೈವ ಮೂರ್ತಿ!"

ದುಡಿಯುವವನು, ರೈತ ಇವರ ಮೂರ್ತಿ ನಿಂತಿದೆಯೆಂಬುದು ತುಂಬಾ ಧ್ವನಿಪೂರ್ಣ ವಾಗಿದೆ. ಅನಂತರ ಭಾರತದ ಸ್ವಾತಂತ್ರ್ಯದ ಹರ್ಷಘೋಷದ ಚಿತ್ರ, ಅದಕ್ಕೇ ತಕ್ಕ ಛಂದಸ್ಸು ಓಟಗಳಲ್ಲಿ, ಭಾಷೆಯ ಓಘದಲ್ಲಿ ಮೂಡಿಬಂದಿದೆ. ಕೊನೆಯಲ್ಲಿ ಬರುವ ಗಾಂಧಿಜಿಯ ಚಿತ್ರವಂತೂ ಅದ್ಭುತವಾಗಿದೆ. ಆತ ದಿನವೂ ನಮ್ಮ ಹೃದಯದ ವಿಷ ಕುಡಿಯುವ ನೀಲಕಂಠ–

"ಮರೆವುದೆಂತಾ ನಮ್ಮ ಸ್ವಾತಂತ್ರ್ಯ ಶಿಲ್ಪಿಯಂ
ದಿವ್ಯದಿನದೀ ಶುಭಮುಹೂರ್ತದಲ್ಲಿ"

ಅಂತೆಯೇ ಆತ ಶಾಂತಿಭಿಕ್ಷು–ಆತನ ಹೆಸರೇ ನಮ್ಮ ಸ್ವಾತಂತ್ರ್ಯಕ್ಕೆ ರಕ್ಷೆಯಾಗಲಿ ಎಂದು ಕವಿ ಹೇಳಿ ಮುಂದೆ ಈ ಸ್ವಾತಂತ್ರ್ಯವನ್ನು ದೇವದೇವತೆಯರಿಗೆ, ಅರ್ಪಿಸಿ ದೇವದೇವತೆಯರೂ ಋಷಿ ಮುನಿಗಳೂ ಶ್ರೀ ಅರವಿಂದರೂ ಶ್ರೀ ರಾಮಕೃಷ್ಣ ಪರಮ ಹಂಸರೂ ಈ ಸ್ವಾತಂತ್ರ್ಯಕ್ಕೆ ರಕ್ಷೆಯಾಗಲಿ ಎಂದು ಬೇಡಿಕೊಳ್ಳುತ್ತಾರೆ.

೨೪೪ ಸಾಲುಗಳ ಈ ಪ್ರಗಾಥದಲ್ಲಿ ಉತ್ಸಾಹ, ಉದ್ರೇಕ, ಉದ್ಘೋಷಗಳೇ ಹೊರತು ವಿಚಾರಕ್ಕೆಡೆಯಿಲ್ಲ. ಸ್ವಾತಂತ್ರ್ಯದ ಉತ್ಸಾಹ, ಉದ್ರೇಕಗಳು ಬಹಳ ತೀವ್ರವಾಗಿ ಚಿತ್ರಿತವಾಗಿವೆ. "ಭರತಖಂಡದಗ್ನಿಕುಂಡದಿಂದ ಸಿಡಿದಕೆಂಡ" ಈ ತ್ರಿವರ್ಣಧ್ವಜವೆನ್ನುವಲ್ಲಿ ಪದಗಳ ಆಧಿಪತ್ಯವೇ ಹೆಚ್ಚಾಗಿ ಅಲ್ಲಿ ಸರಿಯಾಗಿ ಅರ್ಥಸಲ್ಲದ ಉಪಮೆಯೂ ಬಂದಿದೆ. ಈ ಪ್ರಗಾಥದ ಮುಖ್ಯ ದೌರ್ಬಲ್ಯವೆಂದರೆ ಪದಗಳಲ್ಲಿ ವಾಚ್ಯಾರ್ಥವೇ ಹೆಚ್ಚಾಗಿ–ಪ್ರತಿಯೊಂದನ್ನೂ ಬಿಡಿಸಿ ಬಿಡಿಸಿ ಹೇಳುವ ಪ್ರವೃತ್ತಿ, ಶಬ್ದಮಾಧುರ್ಯವೆಷ್ಟೇ ಇದ್ದರೂ ಶಬ್ದಸಂಪತ್ತಿ ಹೆಚ್ಚಾಗಿ ಅತಿರೇಕ ಮುಟ್ಟಿ ಶಬ್ದಾ ಡಂಬರವಾಗಿದೆ ಎಂದೂ ಎನ್ನಿಸಿದರೆ ಆಶ್ಚರ್ಯವಿಲ್ಲ.

ಈ ಪ್ರಗಾಥಗಳಂತೆಯೇ ಬೇರೆ ಕವಿಗಳ ಪ್ರಗಾಥಗಳಲ್ಲಿಯೂ ಸಾಧನೆಯಿದೆ, ಅದೇಮಟ್ಟಿಗೆ ದೌರ್ಬಲ್ಯವೂ ಇದೆ ಎಂದು ಹೇಳಬಹುದು.

೫

ರೊಮ್ಯಾಂಟಿಕ್ ಸಂಪ್ರದಾಯದ ಬಹುಮುಖ್ಯ ಸಿದ್ಧಿ ಭಾವಗೀತೆಯಲ್ಲಿ. ಆ ಕಾಲದ ಕವಿಗಳು ಹೃದಯಂಗಮವಾದ ಸೊಗಸಾದ ಭಾವಗೀತೆಗಳನ್ನು ರಚಿಸಿದರು. ಕೆಲವು ಉದಾಹರಣೆಗಳನ್ನು ಇಲ್ಲಿ ನೋಡಬಹುದು.

" ಮೇಲೊಂದು ಗರುಡ ಹಾರುತಿಹುದು
ಕೆಳಗದರ ನೆರಳು ಓಡುತಿಹುದು
ಅದಕೊ ಅದರಿಚ್ಛೆ ಹಾದಿ
ಇದಕೊ ಹರಿದತ್ತ ಬೀದಿ.
....
ಗಾಳಿ ಬೆರಗಿದರ ನೆಲದೊಳೋಟ !
ವೇಗಕಡ್ಡಬಹುದಾವ ಹೂಟ ?
ಸಿಕ್ಕು ದಣಿವಿಲ್ಲದಂತೆ
ನಡೆಯಿದಕೆ ನಿಲ್ಲದಂತೆ."

ಮೇಲೆ ಹಾರುವ ಗರುಡನ ನೆರಳು ಮನೆ, ಕೊಳ, ಬೀದಿ, ನದಿ, ಕಾಡು, ಮರಳು—ಯಾವುದನ್ನೂ ಲೆಕ್ಕಿಸದೆ ಹಾರುತ್ತಾ ನಡೆಯುತ್ತದೆ. ಅದರ ನೆಲದೋಟ ಕಂಡು ಗಾಳಿಕೂಡ ಬೆರಗಾಗುತ್ತದೆಂದ ಕವಿ—ಕೊನೆಯ ಚರಣದಲ್ಲಿ ಇದ್ದಕ್ಕಿದ್ದಂತೆ ಹೊಸದೊಂದು ವಿಚಾರವನ್ನೇ ತಂದಿಟ್ಟು ನಮ್ಮನ್ನು ಬೆಕ್ಕಸ ಬೆರಗಾಗಿಸುತ್ತಾರೆ. ಹಾರುತ್ತಿರುವ ಗರುಡ ಒಂದು ಸಂಕೇತವಾದರೆ, ಅದರೊಂದಿಗೇ ನಡೆಯುವ ನೆರಳು—ದೈವಭಕ್ತಿಯ ಪ್ರತಿಮೆಯಾಗಿ ತೋರುತ್ತದೆ. ಮೊದಲ ಮೂರು ನುಡಿಗಳ ಒಂದು ಅನುಭವ, ಮನಸ್ಸಿನಲ್ಲಿ ಮತ್ತೊಂದನ್ನು ಮೂಡಿಸುತ್ತದೆ. ಗಾಂಧಿಯ ವ್ಯಕ್ತಿತ್ವದ ಪ್ರತಿಮಾ ಚಿತ್ರಣ ಅದ್ಭುತವಾಗಿದೆ.

" ಇದ ನೋಡಿ ನಾನು ನೆನೆವೆನಿಂದು—
ಇಂಥ ನೆಳಲೇನು ಗಾಂಧಿಯೆಂದು !
ಹರಿದತ್ತ ಹರಿಯ ಚಿತ್ತ
ಈ ಧೀರ ನಡೆವನತ್ತ !"

ಗರುಡ ಶ್ರೀಹರಿಯ ವಾಹನವೆಂದರೆ ಹರಿಯ ಚಿತ್ತದಂತೆ ನಡೆಯುವವನು, ಅವನ ನೆರಳು ಅವನನ್ನೇ ಅನುಸರಿಸಿದಂತೆ, ದೇವರ ಚಿತ್ತದ ನೆರಳಿನಂತೆ ಗಾಂಧೀಜಿ ನಡೆಯುವರೆನ್ನುವ ಮಾತು ಎಷ್ಟು ಧ್ವನಿಪೂರ್ಣವಾಗಿದೆ! ಗಾಂಧೀಜಿಯ ಬಗ್ಗೆ ಹೇಳುವಾಗ 'ಧೀರ' ಎಂಬ ಮಾತೂ, ಧೈರ್ಯಕ್ಕೆ ಸಂಕೇತವಾದ 'ಗರುಡ' ಎಂಬ ಪದವೂ, ಸಂಪೂರ್ಣ ಸ್ವಾರ್ಪಣೆಯನ್ನೇ ಸೂಚಿಸುವ 'ನೆರಳು' ಎಂಬ ಮಾತೂ ಧ್ವನಿತುಂಬಿವೆ. ಇಲ್ಲಿಯ ಅನುಭವ ಅಭಿವ್ಯಕ್ತಿಗಳು ಬುದ್ಧಿಭಾವಗಳ ಸಂಕೀರ್ಣತೆಯಲ್ಲದಿದ್ದರೆ ಮತ್ತಾವುದನ್ನು ಸಂಕೀರ್ಣವೆನ್ನಬೇಕೋ ತಿಳಿಯದು !

> " ಮಿತ್ರರಿರ, ಮಾತಿಲ್ಲಿ ಮೈಲಿಗೆ; ಸುಮ್ಮನಿರಿ :
> ಮೌನವೆ ಮಹತ್ತಿಲ್ಲಿ, ಈ ಬೈಗು ಹೊತ್ತಿನಲಿ,
> ಕವಿಶೈಲದಲಿ.
> ....
> ಆನಂದವೇ ಪೂಜೆ ; ಮೌನವೆ ಮಹಾಸ್ತೋತ್ರ !"

ಕುವೆಂಪು ಅವರ 'ಕೃತ್ತಿಕೆ' (೧೯೪೬) ಯಲ್ಲಿ ಬರುವ ಈ ಕವಿತೆಯಲ್ಲಿ ಮೊದಲಸಾಲಿನಲ್ಲಿ ಬರುವ 'ಮಾತಿಲ್ಲಿ ಮೈಲಿಗೆ' ಎಂಬ ಪದಗಳು ಮುಂದಿನ 'ಮೌನ'ದ ಮಾತುಗಳಿಗಿಂತ ಸರಳವಾಗಿವೆ. ದಿನಬಳಕೆಯ ಮಾತಿನಲ್ಲಿ ಈ ಮಾತುಗಳು ಬೆರೆತು ಹೋಗಿವೆ. ಆದರೂ, ಸೌಂದರ್ಯದ ಸಾಕ್ಷಿಯಲ್ಲಿ ಪ್ರಕೃತಿಯೆಲ್ಲವೂ ಮಗ್ನವಾಗಿರುವಾಗ ಬೆಟ್ಟವೇ ಯೋಗಿಯ ಮುದ್ರೆಧರಿಸಿ ಧ್ಯಾನಮಗ್ನವಾಗಿರುವಾಗ, ಎಲ್ಲವೂ ಪುಣ್ಯಮಯ ವಾಗಿರುವಾಗ, ಕವಿಗೆ ಮೌನವೇ ಹಿರಿಯಪೂಜೆಯೆಂಬ ಅನುಭವವುಂಟಾಗುತ್ತದೆ. ಈ ಪರಿಶುದ್ಧತೆಯನ್ನು ಮಾತು ಹೊಲಗೆಡಿಸಬಹುದೆಂಬ ಭಾವನೆ ಆತನಿಗೆ ಬರುತ್ತದೆ. ನಿಸರ್ಗದ ಗುಡಿಯಲ್ಲಿ ಸೌಂದರ್ಯದ ಎದುರಿನಲ್ಲಿ ಧ್ಯಾನಮಗ್ನಗಿರಿಯ ಎದುರಿಗೆ ಮಾತಿನ ಮೈಲಿಗೆ ಬೇಡವೆನ್ನುತ್ತಾನೆ ಕವಿ. 'ಮಾತಿಲ್ಲಿ ಮೈಲಿಗೆ' ಎಂಬ ಪದಪುಂಜವು ತನ್ನ ಧ್ವನಿಯನ್ನು ಚಾಚಿ ಇಡೀ ಕವಿತೆಯನ್ನು ತಬ್ಬಿಕೊಂಡಿದೆ. ಇಲ್ಲಿಯ ಅನುಭಾವ 'ಪೊಳ್ಳುವೇದಾಂತ'ವೆಂದು ಅನ್ನಿಸಿದರೆ, 'ಮಲೆದೇಗಲ'ದ ಭಕ್ತಿಯು ಪಲಾಯನವಾದ ಎಂದೆನಿಸಿದರೆ, ಅದು ಅನುಭವಿಸಿದ ಕವಿಯದಲ್ಲ, ನೋಡುವವರ ನೋಟದ ಕಿಸುರು ಅಷ್ಟೇ !

> " ಮೌನ ತಬ್ಬಿತು ನೆಲವ; ಜುಮ್ಮೆನೆ ಪುಳಕಗೊಂಡಿತು ಧಾರಿಣಿ ;
> ನೋಡಿ ನಾಚಿತು ಬಾನು ; ಸೇರಿತು ಕೆಂಪು ಸಂಜೆಯ ಕದಪಲಿ.
> ಹಕ್ಕಿಗೊರಲಿನ ಸುರತಗಾನಕೆ ಬಿಗಿಯು ನಸುವೇ ಸಡಿಲಿತು ;
> ಬೆಚ್ಚ ಬೆಚ್ಚನೆಯುಸಿರಿನಂದದಿ ಗಾಳಿ ಮೆಲ್ಲನೆ ತೆವಳಿತು.
> ಇರುಳ ಸೆರಗಿನ ನೆಳಲು ಚಾಚಿತು, ಬಾನು ತೆರೆಯಿತು ಕಣ್ಣನು ;
> ನೆಲವು ತಣಿಯಿತು. ಬೆವರು ಹನಿಯಿತು ; ಬಾಷ್ಪ ನನೆಸಿತು ಹುಲ್ಲನು.
> ಮೌನ ಉರುಳಿತು, ಹೊರಳಿ ತೆದ್ದಿತು ; ಗಾಳಿ ಭೋರನೆ ಬೀಸಿತು,
> ತೆಂಗುಗರಿಗಳ ಚಾಮರಕೆ ಹಾಯೆಂದು ಮೌನವು ಮಲಗಿತು "

ಗೋಪಾಲಕೃಷ್ಣ ಅಡಿಗರ 'ಒಂದು ಸಂಜೆ' ಎಂಬ ಈ ಕವಿತೆ 'ಕಟ್ಟುವೆವು ನಾವು' (೧೯೪೮) ಸಂಗ್ರಹದಲ್ಲಿ ಬರುವ ಉತ್ತಮ ಕವಿತೆಗಳಲ್ಲಿ ಒಂದು. "ಮುಗಿಲ ಮೋರೆಗೆ ರಾಗರತಿಯ ರಂಗು ಏರಿತ್ತ" ಎಂದು ಬೇಂದ್ರೆಯವರು ಒಮ್ಮೆ ಧ್ವನಿಪೂರ್ಣ ವಾಗಿ ಹೇಳಿದುದು ಇಲ್ಲಿ ವಿಸ್ತಾರಗೊಂಡು ಆದರೂ ತುಂಬಾ ಧ್ವನಿಪೂರ್ಣವಾಗಿ ಬಂದಿದೆ. ಕಾಮತೃಪ್ತಿಯ, ರತಿಕ್ರೀಡೆಯ ವರ್ಣನೆ ನೆಲ, ಮೌನಗಳ ಸಂಕೇತದಲ್ಲಿ ಅದ್ಭುತವಾಗಿ ರೂಪುಗೊಂಡಿದೆ. ಗಾಂಭೀರ್ಯ ತಪ್ಪದೆ ಈ ಬಗೆಯ ವರ್ಣನೆ–ಅದೂ

ಬಿಚ್ಚುಮಾತಿನಲ್ಲಿಯೇ ಬಂದಿರುವ ಈ ಕವಿತೆ ರೊಮ್ಯಾಂಟಿಕ್ ಸಂಪ್ರದಾಯದ ಉತ್ತಮ ಉದಾಹರಣೆಗಳಲ್ಲೊಂದು. ಅಂತೆಯೇ 'ಮೈಸೂರು ಮಲ್ಲಿಗೆ' 'ದೀಪದಮಲ್ಲಿ' ಇವುಗಳಲ್ಲಿ ಕೆ. ಎಸ್. ನ. ಅವರ ಹೆಣ್ಣು ಗಂಡುಗಳ ಸಂಬಂಧದ ಗೀತಗಳೂ ಲಲಿತವಾಗಿ, ಸುಕುಮಾರವಾಗಿವೆ. ಸತ್ವಶಾಲಿಯೂ ಆಗಿವೆ.

"ಆಕಾಶವೆಲ್ಲ ಅವಕಾಶವಾಗಿ ನಕ್ಷತ್ರ ರಾಶಿರಾಶಿ
ಆ ಲಕ್ಷಲಿಂಗ ನಾ ಕೊರೆಯಬೇಕೆ? ನಿಂತಲ್ಲೆ ವಾರಣಾಶಿ.
ಮೂರುಲೋಕಗಳ ಹೊಲಿದ ಗಂಗೆ ನನ್ನುಸಿರ ಅಂತರಂಗ
ಅಂದು ಇಂದು ಮುಂದೊಂದೆ ಜ್ಯೋತಿ ಉದ್ಭವಿಸಿತೀಗ ಭಂಗ"

ಬೇಂದ್ರೆಯವರ 'ಯಕ್ಷಯಕ್ಷಿ'ಯಲ್ಲಿ ಬರುವ ಈ ವೇದಾಂತದ ಪದ್ಯದಲ್ಲಿ ಸರಳ ನುಡಿಯಲ್ಲಿ ಅನುಭವ ಸಾಮಾನ್ಯದೃಷ್ಟಿಯನ್ನು ಬೀರಿ ಅಧ್ಯಾತ್ಮವನ್ನುಮುಟ್ಟ ಅನುಭಾವದ ಮೇರೆಯೊಳಗೆ ಮರೆಯಾಗುತ್ತದೆ. ಇಲ್ಲಿನ ವೇದಾಂತ ಬುದ್ಧಿ ಭಾವ ಗಳೆರಡೂ ಅರಗಿಸಿಕೊಂಡು, ಚೈತನ್ಯಕ್ಕಿಳಿದುದು ಎಂಬುದು ಅರ್ಥವಾಗುತ್ತದೆ.

"ಗಾಳಿಯಿಂದ್ರಧನು ಬಾನಯಾನದಲಿ
ಬಯಕೆ ತೇಲಿಬಿಟ್ಟೆ
ಮರುಳು ಮೋಹದಲಿ ಒಡೆದ ಸರಸದಲಿ
ಹುರುಳು ಕರಗಿತಿಷ್ಟೇ"

ಎಂದು ಹೇಳಿದ ಪತ್ನಿ ತನ್ನ ಗಂಡ ತನ್ನ ಬದುಕಿನಲ್ಲಿ ಒಮ್ಮೆಯೂ ಕೆಳಗೆ ತಿರುಗಲಿಲ್ಲವಲ್ಲ ಎಂಬ ಹೆಪ್ಪುಗೊಂಡ ದುಃಖದಿಂದ 'ಬಿಟ್ಟುಕೊಡಿ' ಎಂದು ಆತನನ್ನು ಕೇಳುತ್ತಾ, ತನ್ನ ಕಷ್ಟವನ್ನೆಲ್ಲಾ ತೋಡಿಕೊಳ್ಳುತ್ತಾಳೆ. ವಿ. ಸೀ. ಯವರ ಈ ಕವನದಲ್ಲಿ (ಹೆಜ್ಜೆ ಪಾಡು, ೧೯೩೮) ಆ ದುಃಖ, ಒಳತೋಟಿ ಇವೆಲ್ಲ ಹೃದಯಸ್ಪಂದಿಯಾಗುವಂತೆ ಒಡಮೂಡಿವೆ.

೬

ಈ ಕಾಲದ ಕವಿಗಳಿಗೆ ಸಾಮಾಜಿಕ ಪ್ರಜ್ಞೆಯಿರಲೇ ಇಲ್ಲ. ಬರಡು ವೇದಾಂತ, ಒಣ ಅಧ್ಯಾತ್ಮ, ಅರಗಿಸಿಕೊಳ್ಳದ ಅನುಭಾವದ ಸೋಗು, ಆದರ್ಶದ ಕವಚತೊಟ್ಟ ಶೃಂಗಾರ, ಪ್ರೇಮ-ಇವುಮಾತ್ರ ಇದ್ದುವೆಂದು ಹೇಳುವುದೂ ತಪ್ಪಾದೀತು. ಸಮಕಾಲೀನ ಪ್ರಜ್ಞೆ ಈ ಕವಿಗಳಲ್ಲಿಯೂ ತುಂಬಿತುಳುಕಿದೆಯೆನ್ನಲು ಅವರು ತಮ್ಮ ಸಮಾಜದ ಊನಗಳನ್ನು ಎತ್ತಿ ಆಡಿ, ಓರೆಕೋರೆಗಳನ್ನು ವ್ಯಂಗ್ಯಕ್ಕೆ ಗುರಿಯಾಗಿಸಿರುವ ಪದ್ಯಗಳೇ ಸಾಕ್ಷಿ. ಗೋವಿಂದ ಪೈಯವರು, ಎರಡನೆಯ ಮಹಾಯುದ್ಧ ನಡೆಯುತ್ತಿರುವಾಗಲೇ, ಅದರಲ್ಲಿ ಮಡಿದ ಭಾರತೀಯ ಯೋಧರ ಬಗ್ಗೆ ಬರೆದ ಕವಿತೆ-'ಪ್ರಬುದ್ಧ ಕರ್ಣಾಟಕ'ದ ಬೆಳ್ಳಿಯ ಸಂಚಿಕೆಯಲ್ಲಿ ಬಂದಿದೆ. ತಮಗೆ ಸ್ವಾತಂತ್ರ್ಯವಿಲ್ಲದಿದ್ದರೂ ಬೇರೆಯವರ

ನಾಡುಗಳನ್ನಾಳಿಸಲು ಮಡಿಯುವ ಸೈನಿಕರ ಬಗ್ಗೆ ತುಂಬಾ ಕಳಕಳಿ, ಸಂತಾಪ ಇಲ್ಲಿದೆ. ದೇವಸ್ಥಾನ, ಮಠ ಮುಂತಾದೆಡೆಗಳಲ್ಲಿ ಕಾಣುವ ಸೋಗಲಾಡಿತನ, ದರ್ಪಗಳನ್ನು, ಸಾಮಾಜಿಕ ಅನ್ಯಾಯವನ್ನು ಮಾಸ್ತಿಯವರು 'ಮಲಾರ'ದ ಸಾನೆಟ್ಟುಗಳಲ್ಲಿಯೂ ಬೇರೆ ಪದ್ಯಗಳಲ್ಲಿಯೂ ಟೀಕಿಸಿದ್ದಾರೆ. ನೊಂದು ನುಡಿದಿದ್ದಾರೆ, ರೋಷಾವೇಶದಿಂದ ಖಂಡಿಸಿದ್ದಾರೆ. ಬೇಂದ್ರೆಯವರ 'ಕುರುಡು ಕಾಂಚಾಣ ಕುಣಿಯುತಲಿತ್ತ'ದಂತಹ ಪದ್ಯ ಸಾಮಾಜಿಕ ಪ್ರಜ್ಞೆಯಿಂದ ಕೆರಳಿದ ಕೆಂಡದುಂಡೆ. ಗಾಂಧೀಜಿಯ ಸಾವಿನ ಬಗ್ಗೆ ಅವರ ಈ ಕವಿತೆ ನೋಡಿ :

"ಗಾಂಧಿ ದೇಹ ಬಿಟ್ಟರಂತೆ
ಜನರು ಅದನು ಸುಟ್ಟರಂತೆ
ಹೌದು, ಗಾಂಧಿ ಸತ್ತರಂತೆ
ಜನರು, ನಿಜವೆ, ಅತ್ತರಂತೆ!
ಹೀಗು ಉಂಟು, ಈ ಜಗ, ಕೇಳಿರೊಂದು ಸೋಜಿಗ!"

'ಕೇಳಿರೊಂದು ಸೋಜಿಗ' ಎಂಬ ಈ ಕವಿತೆಯಲ್ಲಿ (ಸೂರ್ಯಪಾನ, ೧೯೫೭) ಮೇಲೊಂದು ಒಳಗೊಂದು ಇರುವ ಇಮ್ಮುಖದ ಸಮಾಜದ ಸೋಗಲಾಡಿತನವನ್ನು ಮೊನಚಾಗಿ ಚುಚ್ಚಿದಾನೆ ಕವಿ.

"ಗಾಂಧೀಜಯಂತಿ ದಿನ ಸತ್ಯವನ್ನಾಡೋಣ
ಸುಳ್ಳಿಗೋ ಇಡಿವರುಷ ತೆರವಿಹುದು"

ಎಂದಾರಂಭವಾಗುವ "ದರಿದ್ರನಾರಾಯಣ" ಇಂತಹುದೇ ಮತ್ತೊಂದು ನಿದರ್ಶನ.

"ತಮ್ಮುಚ್ಚಿಗೆ ಮುಳುಗುವರೇ ಇವರು
ತೇಲಬಲ್ಲ ಜನ, ತೇಲಿಗರಿವರು
ಮ್ಲೇಚ್ಛರ ಕಾಲನೊಳೂ ತೇಲಿದರು
ಕಾಂಗ್ರೆಸ್ ಕಾಲದೊಳೂ ತೇಲುವರು"

ಎಂದು ಪು. ತಿ. ನ. ಅವರು 'ವಿಕಟಕವಿ ವಿಜಯ' (೧೯೪೯) ದಲ್ಲಿ ರಾಜಕೀಯ ಪುಢಾರಿಗಳ ಬದುಕಿನ ತತ್ವವನ್ನು ನಾಲ್ಕುಸಾಲಿನಲ್ಲಿ ಹಿಡಿದು ತೋರಿದ್ದಾರೆ. "ಸತ್ತೇನೆಂಬುವ ಆಗ್ರಹ ಸತ್ಯಾಗ್ರಹ"ವೆಂದು ಮೂದಲಿಸಿದ್ದಾರೆ. ಇದೇ ಬಗೆಯಲ್ಲಿ ಕೆ. ಎಸ್. ನ. ಕುವೆಂಪು ಇವರಲ್ಲಿಯೂ ಸಮಕಾಲೀನ ಪ್ರಜ್ಞೆಯಿದ್ದು ಸಮಾಜದ ಕೋರೆಗಳನ್ನು, ಕೊರೆಗಳನ್ನು ಬಿರುಸಾಗಿ ಅಪನಿಂದೆಗೆ, ಮೂದಲಿಕೆಗೆ ಗುರಿಮಾಡಿ ಅದನ್ನು ತಿದ್ದಲು ಯತ್ನ ನಡೆದಿದೆ. ಜಿ. ಪಿ. ರಾಜರತ್ನಂ ಅವರ 'ರತ್ನನ ಪದಗಳು' ಜಾನಪದ ಜಾಡನ್ನು ಕ್ರಿಯಾತ್ಮಕವಾಗಿ ಬಳಸಿಕೊಂಡಿತು. ಅಲ್ಲಿಯ ಈ ಸಾಲುಗಳನ್ನು ನೋಡಿದರೆ 'ಗಂಡುಗೊಡಲಿ'ಯಲ್ಲಿ ಭುಗಿಲೆದ್ದ ಸಿಟ್ಟು, ಸಾಮಾಜಿಕ ಅನ್ಯಾಯಗಳ ಮೇಲಿನ ರೊಚ್ಚು ಇಲ್ಲಿಯೂ ಸೆಟೆದುನಿಂತಿದೆ.

“ ನಾಡಿನ್ ಬಡ್ವ ಸರ್ಕಸ್ ಸಿಮ್ಮ !
ಕಮ್ತಿ ಇಡ್ಪೋರ್ ಬೆಪ್‌ನನ್ತಮ್ಮ !”

ಎಂದಾರಂಭವಾಗುವ ಆ ಕವಿತೆಯ ಪೂರ್ತಿ ಸಾಮಾಜಿಕ ಅನ್ಯಾಯದ ಬಿರುಖಂಡನೆಯಿದೆ. ಸರ್ಕಸ್ ಸಿಂಹವು ಎಷ್ಟೇ ಶಕ್ತವಾಗಿದ್ದರೂ ಚಾವಟಿ ಹಿಡಿದ ಬೆಪ್ಪನಾದರೂ ಬೆದರಿಕೆ ಹಾಕುವ ರಿಂಗ್‌ಮಾಸ್ತರನ ಕೈಲಿ ನುಲಿಯುವುದಿಲ್ಲವೇ ಅಂತೆಯೇ ಬಡವನೂ ದುಡಿದು ದುಡಿದು, ಚಾವಟಿ ಹಿಡಿದಿರುವ ಕೆಲವರ ದಬ್ಬಾಳಿಕೆಗೆ ಗುರಿಯಾಗುತ್ತಾನೆಂಬ ಚಿತ್ರಣ ತುಂಬಾ ಅರ್ಥಪೂರ್ಣವಾಗಿದೆ. ಅಂತೆಯೇ ಚಿಕ್ಕಹುಡುಗಿಗೆ ಮದುವೆಯಾಗುವುದೆಂಬ ಮಾತು ಕೇಳಿ ಸಿಡಿಮಿಡಿಗೊಂಡ ಕೆ. ಎಸ್. ನ. ಅವರ ಪದ್ಯದ ಈ ಸಾಲು “ತಾಳಿಯ ತೂಕವ ತಾಳದ ಹುಡುಗಿ” ಎಂಬುದು ಎಷ್ಟು ಧ್ವನಿಪೂರ್ಣವಾಗಿದೆ. ಕುವೆಂಪು ಅವರ ‘ಕೋಗಿಲೆ ಮತ್ತು ಸೋವಿಯೆತ್ ರಷ್ಯಾ’ದ ಹಲವಾರು ಕವಿತೆಗಳಲ್ಲಿ ಈ ಸಾಮಾಜಿಕ ಪ್ರಜ್ಞೆ ಸ್ಪಷ್ಟವಾಗಿ ಕಾಣಿಸುತ್ತದೆ.

ಈ ಸಂಪ್ರದಾಯದ ಕವಿಗಳ ಸಾಧನೆ, ಸಿದ್ಧಿ ಎರಡೂ ಹಿರಿಯದೆಂದು ಒಪ್ಪಿದರೂ, ಅವರಲ್ಲಿ ಬರವಣಿಗೆ ಕೆಲವುಬಾರಿ ಯಾಂತ್ರಿಕವಾಗಿ ಹೋಗಿದೆ. ಪದೇ ಪದೇ ಒಂದೇ ಬಗೆಯಲ್ಲಿ ಬಳಸಿದ ಪದಗಳು ಸವಕಲು ನಾಣ್ಯಗಳಾಗಿವೆ ಎಂಬುದೂ ಕೆಲಮಟ್ಟಿಗೆ ನಿಜ. ಬೇಂದ್ರೆಯವರ ಈ ಸಾಲುಗಳನ್ನು ಕವಿತೆಯೆಂದು ಹೇಗೆತಾನೇ ಕರೆಯುವುದು? (ಯಕ್ಷ–ಯಕ್ಷಿ, ೧೯೬೨)

“ ಅನ್ನದ ಮೇಲೆ ಅನ್ಯರ ಅಧಿಕಾರ ಬೇಡ ;
ಅನ್ನವು ಸ್ವತಂತ್ರವಾಗಲಿ.
ತನ್ನ ಅನ್ನವ ಪಡೆಯುವದೇ
ಒಕ್ಕಲು ಧರ್ಮ !
ಜೀವದ ಮೇಲೆ ಮುಪ್ಪಿನ ಒತ್ತಾಯಬೇಡ ;
ಜೀವನ ಸ್ವತಂತ್ರವಾಗಲಿ
ಇಚ್ಛೆಯ ಮರಣ ಹೊಂದುವರೇ
ಇಕ್ಕಾಲು ಧರ್ಮ ! ”

ಕುವೆಂಪು ಅವರ ‘ಅನುತ್ತರಾ’ (೧೯೬೫) ಇಂತಹ ನೀರಸ ಪದ್ಯಗಳಿಂದ ತುಂಬಿದೆ. ಪು. ತಿ. ನ. ಅವರಲ್ಲಿಯೂ ಈ ಬಗೆಯ ಬರಡು ಸಾಲುಗಳು ಹೆಚ್ಚು ಹೆಚ್ಚಾಗಿ ಕಾಣಬಂದಿವೆ. ೧೯೫೦ರ ವೇಳೆಗೆ ಪರಿಣತಿಯನ್ನು ಸಾಧಿಸಿದ ಈ ಸಂಪ್ರದಾಯದ ಕವಿಗಳು ಈಚೆಗೆ ಬರೆಯುತ್ತಿರುವುದು ಹುರುಳು ಸಾಲದ, ಒಳಗೆ ತುಂಬಿಕೊಂಡಿಲ್ಲದ ಬಡಕಲು ಆತ್ಮದ ಕಾವ್ಯವೆಂದು ಟೀಕೆ ಬರುತ್ತಿರುವುದು ಬಹುಪಾಲು ಸಹಜವೂ ಹೌದು ; ಕೆಲಮಟ್ಟಿಗೆ ಸಕಾರಣವೂ ಹೌದು.

೭

ಈ ಇಪ್ಪತ್ತೈದು ವರ್ಷಗಳಲ್ಲಿ ಗೀತರೂಪಕಗಳೂ ಮೈತುಂಬಿಕೊಂಡು ಬಂದಿವೆ.

ಆದರೆ ಇಲ್ಲಿ ಬರೆಯುವವರ ಸಂಖ್ಯೆ ಬಹುಕಡಮೆ. ಪು. ತಿ. ನ. ಅವರ 'ಗೋಕುಲ ನಿರ್ಗಮನ', 'ಹರಿಣಾಭಿಸರಣ', 'ವಸಂತ ಚಂದನ', 'ಶ್ರೀರಾಮ ಪಟ್ಟಾಭಿಷೇಕ', 'ಹಂಸದಮಯಂತಿ' ಮುಂತಾದ ಗೀತರೂಪಕಗಳು ಕಾವ್ಯಗುಣ ಮತ್ತು ಸಂಗೀತಗಳ ಸಮಿಸಮ್ಮೇಳನಗಳಾಗಿವೆ. ಲಾಲಿತ್ಯವೇ ಮುಖ್ಯಗುಣವಾದ ಪು. ತಿ. ನ. ಅವರ ಈ ಗೀತನಾಟಕಗಳಲ್ಲಿನ ಕವಿತೆಗಳು ತುಂಬಾ ಸುಂದರವಾಗಿದ್ದು, ಸಂಗೀತ ರೂಪಕಗಳಾಗಿ ಕೇಳಿದಾಗ ಮನತುಂಬುತ್ತವೆ. ಮಾಸ್ತಿಯವರೂ ತಮ್ಮ ಎಂದಿನ ಸರಳತೆ ಮತ್ತು ಭಾವಗಾಢತೆಯೊಂದಿಗೆ ಒಂದೆರಡು ಗೀತರೂಪಕಗಳನ್ನು ರಚಿಸಿದ್ದಾರೆ. ಕೀರ್ತಿನಾಥ ಕುರ್ತುಕೋಟಿಯವರ 'ಸ್ವಪ್ನದರ್ಶಿ' ಮತ್ತಿತರ ಗೀತರೂಪಕಗಳು ಯಶಸ್ವೀ ಪ್ರಯೋಗಗಳು.

೮

ವಿಡಂಬನ ಮತ್ತು ಅಣಕುವಾಡಿಗೆ, ಚುಟಕಗಳಿಗೆ ಈ ೨೫ ವರ್ಷಗಳು ಸುಗ್ಗಿಯ ಕಾಲ. ನಿರರ್ಥ ಪದ್ಯಗಳು (Nonsense Poems) ಕನ್ನಡದಲ್ಲಿ ಇಲ್ಲವೆಂದಾಗ ಕೈಲಾಸಂ ಅವರು "ಬರ್ಕೊಳ್ಳೋ ಹಾಗಾದ್ರೆ" ಅಂತ ಹೇಳಿ ಬರೆಸಿದ್ದನ್ನು, ರಾ. ಶಿ. ಯವರು 'ಥಳುಕು–ತುಣುಕು' (೧೯೬೨) ವಿನಲ್ಲಿ ಕೊಟ್ಟಿದ್ದಾರೆ :

"ಕಾಶೀಗ್ಹೋದ ನಂಭಾವ, ಕಬ್ಬಿಣದ್ ದೋಣೀಲಿ
ರಾಶೀರಾಶೀ ಗಂಗೇತರೋಕ್, ಸೊಳ್ಳೆಪರದೇಲಿ"

ಇಂತಹ ನಿರರ್ಥ ಕವಿತೆಗಳನ್ನೂ, ವಿಡಂಬನಗಳನ್ನೂ ರಚಿಸಿದವರಲ್ಲಿ ಹಳೆಯ ತಲೆಮಾರಿನ ನಾ. ಕಸ್ತೂರಿ ಮತ್ತು ಬಡಾಯಿ ಬುಳ್ಳ (ವಿ. ಕೆ. ಶ್ರೀನಿವಾಸ್) ಅಗ್ರಗಣ್ಯರು. ನಾ. ಕಸ್ತೂರಿಯವರ 'ಅನಾಮಧೇಯರು' ನಿರರ್ಥ ಪದ್ಯಕ್ಕೆ ಒಂದು ಉತ್ತಮ ಉದಾಹರಣೆ :

"ಗಣಿತದ ಪುಸ್ತಕ ತೆರೆಯಲು ನಾನು
ಪುಟ ಪುಟ ಪುಟದಲು ಮೆರೆಯುವಿರಿ !
ಏಸೀ ಮಾಡುವ ಕೆಲಸದ ನಡುವೆ
ಬೀನೂ ಬಂದರೆ ಮುಗಿಯುವುದಾಗ !
ಏಬೀಸೀಗಳು ಒಟ್ಟಿಗೆ ಸೇರೆ
ಬೀಸೀಗಿಂತಲೂ ಬಹು ಚುರುಕು !" (ಅಣುಕು–ಮಿಣುಕು, ೧೯೪೭)

ನಾ. ಕಸ್ತೂರಿಯವರಿಗಿಂತಲೂ ಎಷ್ಟೋ ಮೊದಲೇ ಜಿ. ಪಿ. ರಾಜರತ್ನಂ ಅವರು (೧೯೩೧–೩೨ರಲ್ಲೇ.) ಬಹುಸುಂದರವಾದ ನಿರರ್ಥ ಪದ್ಯಗಳನ್ನೂ, ಕನ್ನಡದಲ್ಲಿ ಏಕಮೇವಾದ್ವಿತೀಯವಾದ "ಓಬೀರಾಯನ ಕಾಲದಲಿ" ಎಂಬ ನಿರರ್ಥ ಕಥನಕವನವನ್ನೂ ಕೊಟ್ಟಿದ್ದರೆಂಬುದನ್ನು ಇಲ್ಲಿ ನೆನೆಯುವುದು ಉಚಿತ. 'ಬುಳ್ಳನ ಬುರುಡೆಗಳು,

ಏಳು ಮತ್ತೊಂದು' ಮಹಾಗ್ರಂಥ (೧೯೪೫) ದಲ್ಲಿ ಬರುವ 'ಅವತಾರಪುರುಷನ ಅವಸ್ಥಾಶತಕ' ಇಂತಹ ಸಾರ್ಥಕವಾದ ನಿರರ್ಥಪದ್ಯ. ಅವರದೇ ಆದ "ಭಟ್ಟ ನಿನ್ನ ಮಾತ ಕೇಳದೆ ಪುಟ್ಟದೊಂದು ದಾಡಿ ಬೆಳೆಸಿದೆ" ಎಂಬ "ದಾಡೀಮಹಾತ್ಮೆ" ಉತ್ತಮ ಅಣಕವಾಡು.

ಅಣಕವಾಡಿನ ಸಾಹಿತ್ಯ ಪ್ರಕಾರದಲ್ಲಿ ವಿ. ಜಿ. ಭಟ್ಟ, ಕಸ್ತೂರಿ, ರಾಜರತ್ನಂ ಮುಂತಾದವರು ತುಂಬಾ ಒಳ್ಳೆಯ ಸಿದ್ಧಿ ಪಡೆದಿದ್ದಾರೆ. ಪುಟ್ಟಪ್ಪನವರ 'ಕಲ್ಕಿ'ಯನ್ನು 'ಘುಂಕಿ'ಯನ್ನಾಗಿಸಿದ್ದಾರೆ ನಾ. ಕಸ್ತೂರಿ. "ನಮ್ಮ ಮನೆಯಂಗಳದಿ ಬೆಳೆದಿರುವ ಹೂವೊಂದ" ಎಂದು ವಿ. ಸೀ. ಯವರು ಮನೆತುಂಬಿಸುವ ಹಾಡನ್ನು ಬರೆದಿದ್ದಾರೆ. ಈ ಸುಂದರವಾದ, ಕರುಳು ಮಿಡಿಸಿ, ಕಣ್ಣೀರು ತರಿಸುವ ಭಾವಗೀತೆಗೆ ನಾ. ಕಸ್ತೂರಿ "ನಮ್ಮ ಮನೆ ತಂಗಳಲಿ ಬೆಳೆದಿರುವ ಹುಡುಗನನು, ನಿಮ್ಮ ಮಡಿಲಿಗೆ ಒಪ್ಪಿಸುವೆ ನಮ್ಮ" ಎಂದು ಅಣಕವಾಡನ್ನು ಸೃಜಿಸಿದ್ದಾರೆ. (ಕೊರವಂಜಿ ೧೯೪೬). ಈ ಪದ್ಯಕ್ಕೇ ಇನ್ನೂ ಕೊಂಚ ಕಟುವಾದ ಅಣಕವಾಡು ವಿ. ಜಿ. ಭಟ್ಟರ 'ಕಾವ್ಯ ವೇದನೆ' (೧೯೫೧) ಯಲ್ಲಿ ಬಂದಿದೆ. 'ಮಗಳನ್ನು ಗಂಡನ ಮನೆಗೆ ದಬ್ಬುವಾಗಿನ ಹಾಡು', ಸಾಮಾಜಿಕ ಟೀಕೆಗಳನ್ನೂ ಒಳಗೊಂಡಿದೆ. ತಂದೆ ಮಗಳಿಗೆ ಬುದ್ಧಿ ಹೇಳುತ್ತಾನೆ.

"ಇದು ಮಹತ್ವದ ವಿಷಯ–ನಿನ್ನ ತಾಯಿಯಹಾಗೆ
ಹೆರಬೇಡ ಪ್ರತಿವರುಷ ಬಿಡದೆ ನೀನು,
ಇನ್ನು ವರುವರುಷವೂ ದೇವರೇ ಕಳಿಸಿದರೆ
ಹೇಳಿರುವೆ ಮೊನ್ನೆ–ನೆನಪಿಟ್ಟಯೇನು ?"

ಕುಟುಂಬ ನಿಯಂತ್ರಣಕ್ಕೆ ಮಗಳಿಗೆ ತಂದೆ ಸೂಚನೆಕೊಟ್ಟು, ಮಕ್ಕಳಾಗದಂತೆ ನೋಡಿಕೊಳ್ಳಲು ಎಚ್ಚರಿಕೆ ಕೊಟ್ಟು, ಅವಳು ಹೋದಮೇಲೆ ತಲೆಯ ಮೇಲೆ ಕೈಯಿಟ್ಟು ಸಮಾಧಾನದ ನಿಟ್ಟುಸಿರು ಬಿಡುತ್ತಾನೆ.

"ನಾಲ್ಕೈದರಲ್ಲೊಂದು ಪೀಡೆ ಕಳೆಯಿತು ಇಂದು
ಇಪ್ಪತ್ತು ವರುಷ ಈಜೀವ ತಿಂದು.
ಅಪ್ಪಪ್ಪ ಗೆದ್ದೆ"

ಹೆಣ್ಣು ಹೆತ್ತು, ಅವಳ ಮದುವೆಗೆ ಪಡಬಾರದ ಪಾಡುಪಟ್ಟು ಕೊನೆಗೂ ಮದುವೆ ಮಾಡಿ ಮನೆಬಿಟ್ಟು ಕಳಿಸುವ ತಂದೆಯ ಬವಣೆಯನ್ನು ವರ್ಣಿಸುವ ಈ ಅಣಕವಾಡು ಮೊದಲು ನಗಿಸಿ, ಅನಂತರ ವಿಕಟವಾಗಿ ಕೆಣಕಿ, ಕೊನೆಯಲ್ಲಿ ಕಣ್ಣೀರು ತರಿಸುತ್ತದೆ.

"ಬಡಾಯಿ ಬುಳ್ಳನು ಬುರುಡೆಯ ಹೊಡೆದರೆ
ಕೃತಯುಗ ಕಲಿಯುಗವಾಗುವುದು"

ಎಂಬ ಅಣಕವಾಡು ಪುಟ್ಟಪ್ಪನವರ "ಕುಮಾರವ್ಯಾಸನು ಹಾಡಿದನೆಂದರೆ" ಎಂಬುದರಿಂದ ಸ್ಫೂರ್ತಿಪಡೆದು, ಅದನ್ನೇ ಎಲ್ಲ ವಿವರಗಳಲ್ಲಿಯೂ ಅನುಕರಿಸಿ ಸಾರ್ಥಕತೆ ಪಡೆದಿದೆ, ಮೂಲದಷ್ಟೇ ರಮ್ಯವಾಗಿದೆ.

ಈ ಬಗೆಯ ಅಣಕವಾಡುಗಳು ಕೆಲವುಬಾರಿ ಕಟುವಾಗಿ ಟೀಕೆಗಾಗಿ ಬಳಕೆಯಾಗಿರುವುದೂ ಉಂಟು. ಉದಾಹರಣೆಗೆ 'ಮತಾಂತರ'ವೆಂಬ ಅ. ರಾ. ಸೇ. ಅವರ ಈ ಪದ್ಯ (ಕೊರವಂಜಿ ೧೯೫೬):

"ಸೆಂಟಿಮೆಂಟ್ಯಾಲಿಟಿಯ ಒಂಟಿಕೊಪ್ಪಲಿನಲ್ಲಿ ಬಿದ್ದಿದ್ದೆ!
ಕಟ್ಟಕಟ–ಕಟಕಟ್ಟಿ–ಹೋಯ್! ಬಾಜು ಬಾಜು!
ತೂರಿಸಿಟ್ಟು ಜಟಕದಿ ನವ್ಯಕಾವ್ಯ ಮಾರ್ಕೆಟ್ಟಂಗೆ ತಂದುಬಿಟ್ಟ,
ಅಯ್ಯಲಾರೆನ್ಸ್, ಸಿರಿಂಜ್,–ಅಲ್ಲಿ
ಹರಕೋಪಾನಲ ಧೂಮಕೇವಲಂ–
ಹೊಗೆಬೆಂಕಿ, ಆಯ್ಯೊ ಹಾಳಾಗ
....
"Saul, Saul, why Perescutest thou me?
"ಯಾರುಪ್ರಭು ನೀನು?"
"ನಾನು Even ಅಡಿಗ whom thou persecutest"
"Thy will be done, my Lord"
ಭಗ್ನಸೇತುವೆಮೇಲೆ ರೈಲು ಬಂದು
ಸೀಟಿಹಾಕಿತು ಮೂರುಬಾರಿ ಹೊಡೆಯಿತು ಪಲ್ಟಿ
ಬಿದ್ದ ಬೈರನ್
ಬಿದ್ದ ಕೀಟ್ಸನ್,
ಬಿದ್ದರಾ ಟೆನ್ನಿಸನ್, ಕುವೆಂಪು, ಟಾಗೋರ್"

ಇಲ್ಲಿ ನವ್ಯಕವಿಗಳು ಉಪಯೋಗಿಸುವ ಎಲ್ಲ ತಂತ್ರಗಳನ್ನೂ ಪ್ರಜ್ಞಾಪೂರ್ವಕ ಉಪಯೋಗಿಸಿಕೊಂಡು ಅವರನ್ನು 'ತಿರುಮಂತ್ರಿಸಿ'ದಾರೆ. ಅಡಿಗರ ಹೆಸರು ಸೂಚಿತವಾಗಿದೆ, ಅವರ ಕವಿತೆಗಳ ಒಂದೆರಡುಸಾಲುಗಳೂ ಉದ್ಧೃತವಾಗಿವೆ. ಅವರಲ್ಲಿ ಸಾಮಾನ್ಯವಾಗಿ ಬರುವ ಮುರುಕುಜಟಕದ ಲಟಕಪಟಕ, ಮುರಿದ ಸೇತುವೆ, ಹೊಗೆ ಮುಂತಾದ ರೂಪಕಗಳೂ ಇಲ್ಲಿ ಬಳಕೆಯಾಗಿವೆ. ಈ ಕವಿತೆಯ ಮುಖ್ಯಉದ್ದೇಶ ನವ್ಯಕವಿಗಳನ್ನು "ಲೇವಡಿಮಾಡುವುದೇ" ಎಂದು ಹೇಳಬಹುದು–ಇದನ್ನು ಲೇವಡಿಗವಿತೆ ಎನ್ನಬಹುದೇನೋ!

ಸಂಸ್ಕೃತದಲ್ಲಿ ಚುಟಕಾಗಳಿದ್ದುವನ್ನು ಜಿ. ಪಿ. ರಾಜರತ್ನಂ ಅವರೂ, ತೀ. ನಂ. ಶ್ರೀ ಅವರೂ ಹಿಂದೆಯೇ ಕನ್ನಡಕ್ಕೆ ತಂದುತೋರಿದ್ದರು. ಸ್ವಂತವಾಗಿಯೂ ರಾಜರತ್ನಂ ಅವರು ಚುಟಕಾಗಳನ್ನು ಬರೆದಿದ್ದರು. ಆದರೆ ಈ ೨೫ ವರ್ಷಗಳು ಅದರಲ್ಲಿಯೂ ಕಳೆದ ಹತ್ತುವರ್ಷಗಳು ಚುಟಕಾಗಳ ಸ್ವರ್ಣಯುಗವಾಗಿವೆ. ವಾಮನ ರೂಪವಾದರೂ

ತ್ರಿವಿಕ್ರಮನ ಬಲುಮೆಯುಳ್ಳ ಈ ಚುಟಕಾಗಳು ಮೊದಲು ಮೊದಲು ಕೇವಲ ನಗೆಗಾಗಿ, ತಿಳಿಹಾಸ್ಯಕ್ಕಾಗಿ ಬಂದುವು. ಲಿಮರಿಕ್ ರೂಪದ ಚುಟಕಾಗಳೂ ಅದೇ ತರಹ ಜನಪ್ರಿಯವಾದುವು. ಆದರೆ ಈರೂಪ "ಕಿರಿದರೊಳ್ ಪಿರಿದರ್ಥಮಂ" ಸೂಚಿಸುವುದಾದುದರಿಂದ, ಸಾಮಾಜಿಕ ಟೀಕೆ, ರಾಜಕೀಯ ವಿಡಂಬನೆಗಳಿಗೆ ಬಹಳ ಬಿಗುಪಾದ, ಕೈಅಳವಿಗೆ ಸಿಕ್ಕುವ ಸಾಧನವೆಂಬುದನ್ನು ಕಂಡ ಕವಿಗಳು ಇಂದು ಶುದ್ಧ ಚುಟಕಾಗಳ ಕೈಬಿಟ್ಟಿದ್ದಾರೆ. ಇಂದಿನದೆಲ್ಲ–ಪತ್ರಿಕೆಗಳಲ್ಲಿ ಪ್ರತಿಯೊಂದರಲ್ಲೂ ಇವನ್ನು ಕಾಣಬಹುದು–ರಾಜಕೀಯ, ಸಾಮಾಜಿಕ ಬಣ್ಣ ತಾಳಿದವು. ವಿ. ಜಿ. ಭಟ್ಟ, ಶ್ರೀನಿವಾಸ ತೋಫಖಾನೆ, ಅಕಬರ ಅಲಿ ಮುಂತಾದವರೇ ಅಲ್ಲದೆ ದೇವಾನಾಂಪ್ರಿಯ, ಲಂಕೇಶ ಮತ್ತು ಅನೇಕರು ಈ ಬಗೆಯ ಚುಟಕಾಗಳನ್ನು ಹೆಣೆದಿದ್ದಾರೆ. ಆದರೆ ಈ ರೂಪದಲ್ಲಿ ಅಪೂರ್ವ ಸಿದ್ಧಿ ದಿನಕರ ದೇಸಾಯಿ ಅವರದು. ಇಲ್ಲಿ ಕೆಲವು ಉದಾಹರಣೆ ನೋಡಬಹುದು.

ಬೆಂಗಳೂರು ಕನ್ನಡನಾಡಿನ ರಾಜಧಾನಿ ಆದರೆ ಅಲ್ಲಿ ಕನ್ನಡಕ್ಕೇ ಸ್ಥಾನವಿಲ್ಲದೆ, ತಮಿಳರದೇ ಆಡಳಿತವಾಗಿರುವ ದುಸ್ಥಿತಿಯನ್ನು 'ದೇವಾನಾಂಪ್ರಿಯ' ಹೀಗೆ ವರ್ಣಿಸಿದಾರೆ.

"ಬೆಂಗಳೂರಿನ ಕಥೆಯ ಕೇಳಬಲ್ಲೆಯ, ಗೆಳೆಯ
ಇದು ನಮ್ಮ ಕನ್ನಡದ ಗಂಡುಮೆಟ್ಟು !
ಬಸ್ಸು, ಹೋಟಲು; ಬೀದಿ—ಎಲ್ಲು ನಮಗಿಂಬಿಲ್ಲ,
ತಮಿಳರಾ ಕೈಯಲಿದೆ ನಮ್ಮ ಜುಟ್ಟು !"

ದಿನಕರ ದೇಸಾಯಿಯವರು ಹಲವಾರು ಬಗೆಯ ಚುಟಕಗಳನ್ನು, ಎಲ್ಲ ವಿಷಯಗಳ ಬಗ್ಗೆಯೂ ರಚಿಸಿದ್ದಾರೆ. ಅವರಲ್ಲಿ ಕೂರಲಗಿನ ಹರಿತವಾದ ಟೀಕೆ ಕಾಣುತ್ತದೆಂಬುದನ್ನು ಈ ಉದಾಹರಣೆಗಳಲ್ಲಿ ನೋಡಬಹುದು. ರಾಜಕೀಯ ಚುನಾವಣೆಯ ಮಹತ್ವದ ವರ್ಣನೆ—

"ಈ ಚುನಾವಣೆಯಲ್ಲಿ ನಾನಾ ನಮೂನೆ
ಕತ್ತೆ ಅರಿಸಿ ಬಂತು, ಬಿತ್ತು ಮುದ್ದಾನೆ !
ಮತ್ತೆ ನಮ್ಮೂರಿನಲಿ ಇನ್ನೊಂದು ಚೋದ್ಯ,
ಸಂಪೂರ್ಣ ಜಯಶಾಲಿ ಆಯ್ತಂತೆ ಮದ್ಯ !"

ಹಿಂದಿಯನ್ನು ಒತ್ತಾಯ ಮಾಡುವುದರ ಬಗ್ಗೆ ಈ ಕುಹಕ ನೋಡಿ :

"ಜನರ ಭುಜಗಳ ಮೇಲೆ ಹೇರಿದರೆ ಹಿಂದಿ
ಅರಗಳಿಗೆಯಲಿ ಇಲ್ಲವಾಗುವುದು ಚಿಂದಿ
ಯಾರ ಮೇಲೂ ಬೇಡ ಯಾರ ಒತ್ತಾಯ
ಎನ್ನುವುದು ಭಾರತಾಂಬೆಯ ಅಭಿಪ್ರಾಯ"

ಇಲ್ಲಿ ಒತ್ತಾಯವೇ ಬೇಡವೆಂಬ ಹೆಸರಿನಲ್ಲಿಯೇ ಹಿಂದಿಯನ್ನು ಎಲ್ಲರ ಮೇಲೆಯೂ ಹೇರಿ, ಚಿಂದಿ ಚಿಂದಿಯಾಗಿರುವ ದೇಶವನ್ನು ಒಂದುಮಾಡುವ ಸೋಗನ್ನು, ಠಕ್ಕನ್ನು ಗೇಲಿಮಾಡಿದ್ದಾರೆ ಕವಿಗಳು.

ದಿನಕರ ದೇಸಾಯಿಯವರ 'ದೇಶಭಕ್ತನ ಆತ್ಮಕಥನ' ಅದ್ಭುತವಾಗಿದೆ. ಪ್ರಾಯಶಃ ನಮ್ಮ ನಾಡಿನ ದೇಶಭಕ್ತರ ೨೦ ವರ್ಷಗಳ ಜೀವನವನ್ನು ಒಂದೇ ಹಿಡಿಯಲ್ಲಿಟ್ಟು ತೋರಿಸುವ ಈ ಚುಟಕದಂತಹುದು ಮತ್ತೊಂದಿಲ್ಲ.

"ಹತ್ತು ವರುಷದ ಹಿಂದೆ ಸೆರೆಮನೆಗೆ ಹೋದೆ
ಆ ಪರಾಕ್ರಮದಿಂದ ಈಗಾಯ್ತು ಫಾಯ್ದೆ
ಎಂದಿಗೂ ಶೌರ್ಯವಾಗುವುದಿಲ್ಲ ಗೊಡ್ಡು
ಸಚಿವ ಸಂಪುಟ ಸೇರಿ ಗಳಿಸಿದೆನು ದುಡ್ಡು"

ಆಧುನಿಕ ತರುಣ ತರುಣಿಯರು ದೇವಸ್ಥಾನಕ್ಕೆ ಹೋದರೂ ಅದು ಫ್ಯಾಷನ್ನಿಗಾಗಿಯೇ, ಆ ದೇವಸ್ಥಾನವೇ ಅವರ ಕಾಮಕ್ಕೆ ಕಾರಸ್ಥಾನವೆಂದು ಟೀಕಿಸುವ 'ದೇವಾನಾಂಪ್ರಿಯ' ಅವರ ಈ ಚುಟಕ ತುಂಬಾ ಧ್ವನಿಪೂರ್ಣವಾಗಿದೆ: "ಗುಡಿಯ ಕೃಷ್ಣ, ರಾಧೆಗೆ ಹೇಳಿದ ಕಿವಿ ಮಾತು" ಬಹು ಪ್ರಭಾವಶಾಲಿಯಾದ ಕೂರ್ಗಣೆಯಾಗಿದೆ.

"ನಿನಗೆ ನೈಲೋನ್ ಸೀರೆ, ನನಗೆ ಟೆರಿಲೀನ್ ಚೇರೆ
ತೊಡಿಸಿರುವ, ಎಲೆ ರಾಧೆ, ನನ್ನ ಪೂಜಾರಿ!
ದಿವ್ಯಭಕ್ತರ ದೃಷ್ಟಿ ನಿನ್ನಲ್ಲೆ ನಟ್ಟಹುದು
ಬಹುಜೋಕೆ, ಸರಿದೀತು ಎದೆ ಸೆರಗು ಜಾರಿ!"

ಇಂತಹ ಸಾರ್ಥಕವಾದ ಚುಟಕಗಳನ್ನು 'ಎಮ್‌ಟಿ' ಎಂಬ ಸಮ್ಮಿಲಿತ ಹೆಸರಿಂದ ಶ್ರೀನಿವಾಸ ತೋಫಖಾನೆ ಹಾಗೂ ಅಕಬರ ಅಲಿಯವರೂ ಬರೆದಿದಾರೆ. ವಿ. ಜಿ. ಭಟ್ಟರ ಚುಟಕಾಗಳೂ ಅಷ್ಟೇ ಪ್ರಭಾವಶಾಲಿಯಾಗಿವೆ. ಎಂ. ಅಕಬರ ಅಲಿಯವರ ಈ ಕುಹಕದ ಚುಟಕ ನೋಡಿ.

ವಂಕಿಯ ಪ್ರಚಾರ

ಮದುವೆಯೆ ಆಗದ ಗ್ರಾಮಸೇವಿಕೆಯು
ತಿಳಿಸಲು 'ವಂಕಿಯ' ಲಾಭವನು,
ಹಳ್ಳಿಯ ಹೆಂಗುಸೊಬ್ಬಳು ಕೇಳಿದಳೈ
'ನಿಮಗಿದರನುಭವವಿದೆಯೇನು?'

ನಾಲ್ಕು ಕವಿಗಳು ಪ್ರತಿಭಾಯುತರಾಗಿ ಬಳಸಿದ ಈ ಚುಟಕದ ರೂಪ ಪತ್ರಿಕೆಗಳಿಗೆ ಬಹಳ ಪ್ರಿಯವಾದಂತೆ, ಅನುಕರಣಿಗಳೂ ಬಹು ಮಂದಿ ಹುಟ್ಟಿಕೊಂಡು ಈ ರೂಪವನ್ನು ಈಗ ಹೊಲಗೆಡಿಸಿದಾರೆನ್ನದೆ ವಿಧಿಯಿಲ್ಲ. ಈಗ ವಾರಪತ್ರಿಕೆಗಳಲ್ಲಿ ಮಾಸಪತ್ರಿಕೆಗಳಲ್ಲಿ ಮತ್ತು ಕೆಲವು ದಿನ ಪತ್ರಿಕೆಗಳಲ್ಲಿ ಕೂಡ ಈ ಚುಟಕಗಳ ಹಾವಳಿ

ಹೆಚ್ಚಾಗಿದೆ. ಸತ್ವವಿಲ್ಲದ ಜೊಳ್ಳೇ ಹೆಚ್ಚು—ಇದು ಬಹು ಸುಲಭವಾಗಿ ಹೊಸೆಯಬಹುದೆಂಬುದೊಂದು ಈ ರೀತಿಯ ಕವಿಗಳಿಗೆ ಪ್ರಚೋದನೆಯಿರಬೇಕು. ಈಗ ಅದು ಸಾಗುತ್ತಿರುವ ದಾರಿಯಲ್ಲಿ ಬಹುಸಂಖ್ಯೆಯಲ್ಲಿ ಚುಟಕಗಳು ಬಂದರೂ ಮನಸ್ಸಿಗೆ ತಾಕುವಂತಹುವು ನೆನಪಿನಲ್ಲುಳಿಯುವಂತಹವು ಬಹು ಅಲ್ಪ !

೬

ನವೋದಯದ ಕಾಲದ ಒಂದು ಮುಖ್ಯ ಲಕ್ಷಣ—ಹಳೆಯ ಸಾಹಿತ್ಯದ ಬಗ್ಗೆ ಆಸಕ್ತಿ ತಳೆದು ಜಾನಪದ ಕಾವ್ಯಗಳನ್ನು ಸಂಗ್ರಹಿಸಿದ್ದು. ಮೇವುಂಡಿ ಮಲ್ಲಾರಿ, ಈಶ್ವರ ಸಣಕಲ್ಲ, ಸಿಂಪಿಲಿಂಗಣ್ಣ, ಮತಿಘಟ್ಟ ಕೃಷ್ಣಮೂರ್ತಿ ಮುಂತಾದ ಹಿರಿಯರು ೧೯೩೦ರ ತರುಣರಲ್ಲಿ ಜಾನಪದ ಸಾಹಿತ್ಯವನ್ನು ಕಲೆಹಾಕಿ, ಸಂಪಾದಿಸಿ ಪ್ರಕಟಿಸಿದರು. ನಮ್ಮ ಜನಜೀವನದಿಂದ ಹೊರಹೊಮ್ಮಿದ ಹಾಡಿನ ಸಂಪತ್ತು ಎಷ್ಟು ಅಗಾಧ, ಅಮೂಲ್ಯ ವೆಂಬುದನ್ನು ಅವರು ತೋರಿಕೊಟ್ಟರು. ಆಗ ಅವರು ನಡೆಸಿದ ಕೆಲಸವನ್ನು ಗದ್ದಗೀಮಠ ಮುಂತಾದವರು ಮುಂದುವರಿಸಿಕೊಂಡು ಬಂದರು. ಸುವ್ಯವಸ್ಥಿತವಾಗಿ ಉತ್ತರ ಕರ್ನಾಟಕದ ಜಾನಪದ ಸಾಹಿತ್ಯವನ್ನು ಕೇರಿ, ತೂರಿ, ಒಟ್ಟುಮಾಡಿದ ಇವರು ಜಾನಪದ ಗೀತಗಳ ಬಗ್ಗೆ ಪ್ರೌಢವಾದ ಡಾಕ್ಟರೇಟ್ ಪ್ರಬಂಧವನ್ನೂ ರಚಿಸಿದರು. ವ್ಯಾಪಕವಾಗಿ ಈ ಕೆಲಸವನ್ನು ಮುಂದುವರಿಸಿಕೊಂಡು ಬಂದವರು ಕ. ರಾ. ಕೃ (ಕ. ರಾ. ಕೃಷ್ಣಸ್ವಾಮಿ) ಮತ್ತು ಜೀ. ಶಂ. ಪರಮಶಿವಯ್ಯ. ಹಾಗೂ ಪಿ. ಆರ್. ತಿಪ್ಪೇಸ್ವಾಮಿಯವರು ಇವರಿಗೆ ನೆರವಾಗಿ ಚಿತ್ರಬರೆದರು, ಜನಜೀವನದ ವರ್ಣ ಶಿಲ್ಪವನ್ನು ರಚಿಸಿದರು. ಜಾನಪದ ಸಾಹಿತ್ಯ ಅಕಾಡೆಮಿಯನ್ನು ಇದಕ್ಕಾಗಿಯೇ ಸ್ಥಾಪಿಸಿದರು. ಇಂದು ಜಾನಪದ ಸಾಹಿತ್ಯವು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪಠ್ಯವಿಷಯವಾಗಿದೆ ಎಂಬುದು ಗಮನಾರ್ಹ. ಜಾನಪದ ಸಾಹಿತ್ಯದ ಬಗ್ಗೆ ಆಳವಾದ ಸಂಶೋಧನೆ ನಡೆಸಲು ಈಗ ಕನ್ನಡವಿಭಾಗದಲ್ಲಿ ಒಂದು ವಿಶಿಷ್ಟಸ್ಥಾನವೇರ್ಪಟ್ಟಿದೆ. ಜಾನಪದ ಸಾಹಿತ್ಯವನ್ನು ಸಂಗ್ರಹಿಸುವುದರ ಜತೆಗೆ ಜಾನಪದ ಕಲೆಗಳ ಸಂಬಂಧವಾಗಿ ಎಲ್ಲ ವಸ್ತುಗಳನ್ನೂ ಸಂಗ್ರಹಮಾಡಿ ವಸ್ತುಸಂಗ್ರಹಾಲಯವನ್ನೂ ಸ್ಥಾಪಿಸಲಾಗಿದೆ. ಕಾರಂತರು, ಬಡೆಕ್ಕಿಲ್ಲ ಕೃಷ್ಣ ಭಟ್ಟ ಮುಂತಾದವರು ದಕ್ಷಿಣ ಕನ್ನಡಜಿಲ್ಲೆಯ ಯಕ್ಷಗಾನ ಕಲೆಯ ಬಗ್ಗೆ ಹೆಚ್ಚಿನ ಸಂಶೋಧನೆ ನಡೆಸಿದಾರೆ. ಅಲ್ಲದೆ ಯಕ್ಷಗಾನ ಕಲೆಯ ಪುನರುತ್ಥಾನಕ್ಕಾಗಿ ಹಲವಾರು ಹೊಸಪ್ರಯೋಗಗಳನ್ನು ಕಾರಂತರು ನಡೆಸಿದಾರೆ. ಹೀಗೆ ಜಾನಪದ ಸಾಹಿತ್ಯದ ಬಗ್ಗೆ ಜನಕ್ಕೆ ಹೆಚ್ಚಿನ ಆಸಕ್ತಿಉಂಟಾಗುತ್ತಿರುವುದು—ನೆಲದಲ್ಲಿ ಸಾಹಿತ್ಯದ ಬೇರು ಎಷ್ಟು ಆಳಕ್ಕೆ ಇಳಿದಿದೆ ಎಷ್ಟು ಹರಹು ಪಡೆದಿದೆ ಎಂಬುದರ ಅರಿವಿಗಾಗಿ ಎಂಬುದು ಸ್ಪಷ್ಟ, ಅದರ ಪ್ರಭಾವವೂ ಹಿರಿದು.

ಬೇಂದ್ರೆಯವರಂತೂ ಜಾನಪದದ ಜಾಡನ್ನು ತಮ್ಮದಾಗಿಸಿಕೊಂಡು ಬೇಂದ್ರೆ ಜಾನಪದವೆಂಬ ಹೊಸ ಪ್ರಕಾರವನ್ನೇ ಸೃಷ್ಟಿಸಿಕೊಂಡರು. ಜಿ. ಪಿ. ರಾಜರತ್ನಂ

ಅವರ 'ರತ್ನನ ಪದಗಳು' ಕುಡುಕನೊಬ್ಬನ ಪದಗಳಂತೆ ಗ್ರಾಮ್ಯಪದಗಳಲ್ಲಿಯೇ ಹೊಸತನವನ್ನು ಸೃಜಿಸಿತು; ಗ್ರಾಮ್ಯಪದಗಳ ವೋಡಿಯನ್ನು ತೋರಿಕೊಟ್ಟಿತು.

"ನರ್ಕಕ್ಕಿಳ್ಸಿ ನಾಲ್ಗೆಸೀಳ್ಸಿ
ಬಾಯೊಲ್ಸಾಕಿದ್ರೂನೆ
ಮೂಗ್ನಾಗ್ಕನ್ನಡ್ ಪದ್ಗೋಳಾಡ್ತೀನ್
ನನ್ಮನ್ಸನ್ನೀ ಕಾಣೆ!"

ರತ್ನನ ಪದಗಳಲ್ಲಿ ಹೊಸ ರೀತಿಯನ್ನು (ದೇಸಿಯ ರೂಪವನ್ನು) ಸೃಷ್ಟಿಸಿ ಭಾಷಾ ಪ್ರಯೋಗದ ಕ್ರಾಂತಿಯನ್ನು ಮಾಡಿದ ಜಿ. ಪಿ. ರಾಜರತ್ನಂ ಅವರು 'ನಾಗನ ಪದಗಳ'ಲ್ಲಿ (೧೯೫೭) ಅದನ್ನು ಮುಂದುವರಿಸಿದಾರೆ. ಆದರೆ ರತ್ನ ಹಳ್ಳಿಯವನು—ನಾಗ ನಗರದವನು. ರತ್ನನ ಭಾಷೆ ನೆಲದ ವಾಸನೆಯುಳ್ಳ ಗ್ರಾಮ್ಯ. ನಾಗನದಾದರೋ ಪಟ್ಟಣದ ಜೀವನದಿಂದ ಸ್ವಲ್ಪಮಟ್ಟಿಗೆ ಹೊಲಗೆಟ್ಟ ಗ್ರಾಮ್ಯ. ಬಾಯಿಮಾತಿನ ಬಿಗಿ, ಓಟ, ಹರಿತ ಇಲ್ಲಿಯೂ ಕಾಣಿಸಿದರೂ ರತ್ನನಲ್ಲಿರುವ ಪ್ರಾಮಾಣಿಕತೆ, ಹಸಿರುತನ ಇಲ್ಲಿ ಮಾಸಿಹೋದಂತೆ ಕಾಣುತ್ತದೆ. ಹಳ್ಳಿಯ ರತ್ನ ನಾಗರಿಕನಾಗಿ ನಾಗನಾಗಿ ಹೀಗೂ ಇಲ್ಲ, ಹಾಗೂ ಇಲ್ಲದೆ ಇಬ್ಬಂದಿಯಾಗಿ ಕುಳಿತಂತೆ ತೋರುತ್ತದೆ. ಈ ಎರಡು ಉದಾಹರಣೆಗಳನ್ನು ಹೋಲಿಸಿದರೆ ವ್ಯತ್ಯಾಸ ಸ್ಪಷ್ಟವಾಗುತ್ತದೆ.

ಕೆಲಸ ಮಾಡುತ್ತಿದ್ದ ರತ್ನ ದಾರಿಯ ಗಿಡದಲ್ಲಿ ಹೂವನ್ನುಕುಯ್ದು ಗುಡಿಸಲಿಗೆ ಬರುತ್ತಾನೆ. ಆದರೆ

"ಗುಡಿಸಲ್ ಬೀಗ ತುಕ್ಕ್ ಇಡ್ದೈತೆ
ನಂಜಿ ಅಲ್ಲಿಲ್ಲ!
ಕಣ್ಣೀರ್ ತುಂಬ್ಕೊಂಡ್ ನೋಡ್ತೀನಾಗ
ಮನೆ ಮೇಲ್ ಮಳೆಬಿಲ್ಲ!
ರತ್ನ್ನ ನಂಜೀಗ್ ಮುಡಿಸ್ಬೇಕಂತ
ತಂದಿದ್ ಊನೆಲ್ಲ
ನಾವಿದ್ ಗುಡ್ಸಲ್ ಮುಂದಾಕ್ತೀನಿ—
ಬೇರೆ ತಾವಿಲ್ಲ.
ಇಂಗ್ ಊ ಮುಡ್ಸಿ ಪೋಯ್ತಾನಂಗೇ
ಒಕ್ಕೊಂಡ್ ಮೊಕ ಮರ್ಸಿ"

ಇದನ್ನೋದುವಾಗ ಭಾವಉಮ್ಮಳಿಸಿ ಗಂಟಲಲ್ಲಿ ಸಿಕ್ಕಿಕೊಂಡು ಹೃದಯ ಬಿಗಿಯುತ್ತದೆ. ಭಾಷೆ ಮರೆಯುತ್ತದೆ. ನಾಗನ ಪದಗಳಲ್ಲಿ ನಗರೀಕರಣ (Urbanisation) ಆಗಿ ಭಾವತೀವ್ರತೆ ಕಡಿಮೆಯಾಗಿ, ಭಾಷೆಗೆ ಪ್ರಾಮುಖ್ಯ ಬಂದು ಕೊಂಚ ಕೃತಕತೆಯೂ ಕಾಣಿಸಿಕೊಳ್ಳುತ್ತದೆ. ನಾಗ ಪುರಾಣಗಳನ್ನೂ ತಿಳಿದವನು ವಿದ್ಯಾವಂತನಲ್ಲದಿದ್ದರೂ ವಿಷಯಗಳನ್ನು ತಿಳಿದ ಜ್ಞಾನವಂತನೆಂಬುದೂ ಒಂದು ಬೆಳವಣಿಗೆಯೇ!

" ಛಪ್ಪರೇ ರುರುರುಸಿ ! ನಿನಮಾತು ಮಾತ್ರಲ್ಲ—
ಮನಸೂನೂ ಬಲ್ಲೆ ;
ಗಂಡುಸಾವಿತ್ರಿ ನೀ, ಅವಳಂಗೆ ದಾಟದೇ
ಸಾವಿನಾ ಎಲ್ಲೆ ;
ಹೃದಯ ನನಗೂ ಐತೆ—ಅದು ಏನು ಗೋಳಿಗೆ
ಕರಗದಾ ಕಲ್ಲೆ ?"

ನಾಗನ ಪದಗಳ ಇಲ್ಲಿನ ಭಾಷೆ ಆಡುಮಾತಿಗೆ ಪ್ರಾಕೃತದ ದೀಕ್ಷೆ ಕೊಟ್ಟಂತಿದೆ. ರತ್ನನಮಟ್ಟ ನಾಗನಲ್ಲಿ ಇಳಿದುಹೋಗಿರುವುದು ಸ್ಪಷ್ಟ, ಇದು ಸಾಚಾನಾಣ್ಯದ ನಾದಕ್ಕೆ ಬದಲು ಅಲ್ಲಲ್ಲಿ ಖೋಟಾಸದ್ದನ್ನು ಕೊಡುತ್ತದೆ ಎನ್ನಿಸುತ್ತದೆ. ಹೇಗೂ ಜಾನಪದ ಬಗೆಯ ಈ ಸಫಲಪ್ರಯೋಗ ಮಾಡಿದವರು ರಾಜರತ್ನಂ ಅವರೊಬ್ಬರೇ ಎನ್ನುವುದು ಅವರ ಹಿರಿಮೆಯ ಸಾಕ್ಷಿ. ಅಡಿಗರು ಅಲ್ಲಲ್ಲಿ ಯಕ್ಷಗಾನದ ತಂತ್ರ ಮತ್ತು ತುಣುಕುಗಳನ್ನುಪಯೋಗಿಸಿಕೊಂಡಿರುವುದು ಸಂಕೇತವಾಗಿ, ಮತ್ತು ನವ್ಯಕವಿತೆಯಲ್ಲಿ ಅತ್ಯಗತ್ಯವಾಗಿ ಬೇಕಾದ ನಾಟಕೀಯತೆಯನ್ನು ತರಲಿಕ್ಕಾಗಿ ಎಂದು ಇಲ್ಲಿ ಪ್ರಾಸಂಗಿಕವಾಗಿ ಸೂಚಿಸಬಹುದು.

ಜಾನಪದ ಸಾಹಿತ್ಯದ ಬಗ್ಗೆ ಆಸಕ್ತಿ ಬಂದಂತೆಯೇ ಹಿಂದಿನ ಕಾವ್ಯಗಳ ಅಭ್ಯಾಸ ಅವುಗಳನ್ನು ಸಂಶೋಧಿಸಿ ಪ್ರಕಟಿಸುವ ಕೆಲಸ ಇವೂ ನವೋದಯದ ಕಾಲದಲ್ಲಿ ಉತ್ತಮವಾಗಿ ವ್ಯವಸ್ಥಿತವಾಗಿ ನಡೆದುವು. ಇದರ ಒಂದು ಮುಖ್ಯಫಲ–ಹಳೆಯ ಕಾಲದ ಕವಿಗಳು ಬಳಸಿಕೊಂಡ ಭಾಷಾತಂತ್ರ, ಉಕ್ತಿಮಾರ್ಗ, ದೇಸಿಯ ಚಂದ, ಮತ್ತು ಛಂದೋರೂಪಗಳ ಬಗ್ಗೆ ಆಳವಾದ ಅಭ್ಯಾಸ; ವಚನಗಳು, ತ್ರಿಪದಿ, ಏಳೆ, ಸಾಂಗತ್ಯ ಮುಂತಾದ ಶುದ್ಧ ದೇಸಿ ರೂಪಗಳಲ್ಲಿ ಹೆಚ್ಚಿನ ಗಮನ ಕೇಂದ್ರಗೊಂಡುದು. ಸಂಸ್ಕೃತ ಇಂಗ್ಲಿಷುಗಳಿಂದ ತೆಗೆದುಕೊಂಡ ವಿಚಾರಗಳನ್ನು ಈ ದೇಸಿ ರೂಪಗಳಲ್ಲಿ ಅಳವಡಿಸುವ ತಾಂತ್ರಿಕ ಸಿದ್ಧಿಯನ್ನು ಕೆಲವರು ಪಡೆದುಕೊಂಡರು. ವಚನರೂಪದಲ್ಲಿ ತಮ್ಮ ಭಾವ, ವಿಚಾರ, ಅನುಭವ ಇವುಗಳನ್ನು ಬಿಡಿಸಿದವರು ಎಸ್. ವಿ. ರಂಗಣ್ಣನವರು. ಅವರ 'ರಂಗಯ್ಯನ ವಚನಗಳು' ಕಳೆದ ೩೩ ವರ್ಷಗಳಲ್ಲಿ 'ರಂಗಬಿನ್ನಪ'ವಾಗಿ ಬೆಳೆದು ಅಕಡೆಮಿಯಿಂದ ಪ್ರಶಸ್ತಿಗಳಿಸಿವೆ. (ಅದರ ಬಗ್ಗೆ ಬೇರೆಯೇ ಲೇಖನವಿರುವುದರಿಂದ ಹೆಚ್ಚು ಬರೆಯುವ ಅಗತ್ಯವಿಲ್ಲ).

ಹಳೆಯ ರೂಪವನ್ನು ಸುಂದರವಾಗಿ, ಚೊಕ್ಕವಾಗಿ ಬಳಸಿಕೊಂಡು ಅದರಲ್ಲಿಯೇ ಹೆಚ್ಚಿನ ಸಾಹಿತ್ಯ ರಚಿಸಿ ಯಶಸ್ವಿಯಾಗಿರುವವರು ಎಸ್. ವಿ. ಪರಮೇಶ್ವರಭಟ್ಟರು. ಸಂಸ್ಕೃತದಿಂದ ಗಾಥಾಸಪ್ತಶತಿ ಮುಂತಾದ ಕೃತಿಗಳನ್ನು ಕಾಳಿದಾಸನ ಸಮಗ್ರ ಕೃತಿಗಳನ್ನು ಕನ್ನಡಕ್ಕೆ ತಂದ ಹಿರಿಯರು ಇವರು. 'ಚಂದ್ರವೀಧಿ' 'ಇಂದ್ರಚಾಪ' 'ಸುರಗಿ ಸುರಹೊನ್ನೆ' ಮತ್ತು 'ತುಂಬೆ ಹೂವು' ಈ ನಾಲ್ಕು ಕೃತಿಗಳು ಅಪೂರ್ವವಾದುವು.

" ಬಾಳಿನ ಹಾಳೆಯ ಹಿಂದಿನ ಪುಟಗಳು
ಅಚ್ಚಾಗಿ ಸ್ಮೃತಿಪಟಲದೊಳು
ಏಳು ಬಣ್ಣಗಳಾಗಿ ಮೂಡಿತು ಕೃತಿ ಹೀಗೆ
ಮುದ್ದಾಗಿ ಹೃನ್ಮನಗಳಿಗೆ "

ಸಾಂಗತ್ಯವನ್ನು 'ಇಂದ್ರಚಾಪ'ದಲ್ಲಿ ಪುನಃ ಸೃಷ್ಟಿಸಿದ್ದರ ಉದಾಹರಣೆ. ೧೨೦೦ ಮುಕ್ತಕರೂಪದ ಬಿಡಿಬಿಡಿಯಾದ ಪದ್ಯಗಳಲ್ಲಿ ತಮ್ಮ ಬದುಕಿನ ಅನುಭವದ ಕತೆಯನ್ನು ವಿಚಾರಗಳನ್ನು ಸುಭಾಷಿತಗಳನ್ನು ಮೂಡಿಸಿದ್ದಾರೆ ಪರಮೇಶ್ವರಭಟ್ಟರು.

" ನಮ್ಮಿಬ್ಬರೊಳಗಿಂದು ಒಮ್ಮನವಿದ್ದರೆ
ನೆಮ್ಮದಿ ತಾನೆ ನಿಲ್ಲುವುದು–ಮನೆಯೊಳು
ಸುಮ್ಮನವಹುದು ಸರಸಿಯೆ "

'ಸುರಗಿ–ಸುರಹೊನ್ನೆ'ಯಲ್ಲಿ ಬರುವ ಏಳುನೂರು ತ್ರಿಪದಿಗಳಲ್ಲೊಂದು. 'ಚಂದ್ರವೀಧಿ'ಯಲ್ಲಿಯೂ ಸಾಂಗತ್ಯದ ಛಂದೋರೂಪದ ಏಳುನೂರು ಮುಕ್ತಕಗಳು ಇವೆ. ಸುತ್ತಣ ಸಮಾಜದ ಬದುಕಿನ ಅನುಭವದಿಂದ ಲೋಕೋಕ್ತಿ, ಅನ್ಯೋಕ್ತಿ, ಅಣಕು, ಹಾಸ್ಯ, ಮತ್ತು ಕೆಲವುಬಾರಿ ಲೇವಡಿಮಾಡುವಂತಹ ವಸ್ತು ವೈವಿಧ್ಯ ಈ ಮೂರು ಸಂಗ್ರಹಗಳಲ್ಲಿವೆ. 'ತುಂಬೆ ಹೂವು' ನಮ್ಮ ಸಾಹಿತ್ಯದಲ್ಲಿ ಹಿಂದೆ ಇದ್ದಿತೆಂಬುದೂ ಮರೆತೇ ಹೋಗಿದ್ದ ಏಳೆ ರೂಪದ್ದು.

" ಬಡಲೆಕ್ಕಣಿಕೆಯೆಂದು ಕಡೆಗಣಿಸುವುದುಂಟೆ
ಖಡುಗಕೆ ಇದರ ಕೂರ್ಪುಂಟೆ ? "

ಇಂತಹ ಸಣ್ಣ ರೂಪದಲ್ಲಿ ಒಂದೊಂದು ಪುಟ್ಟನೀತಿಯ ಮಾತನ್ನೋ, ಸ್ವಾನುಭವದ ತುಣುಕನ್ನೋ, ವಿಡಂಬನೆಯ ಝಳಕನ್ನೋ ನಾವು ಕಾಣಬಹುದು. ಹೀಗೆ ಹಳೆಯ ರೂಪಗಳಿಗೆ ಹೊಸಜೀವ ಕೊಟ್ಟ ಕೀರ್ತಿ, ಅಪೂರ್ವಸಿದ್ಧಿ ಶ್ರೀ ಎಸ್. ವಿ. ಪರಮೇಶ್ವರಭಟ್ಟರದು.

ಜಾನಪದ ಬಗೆಯನ್ನು ಕೂಡ ಈ ಕಳೆದ ಇಪ್ಪತ್ತೈದು ವರ್ಷಗಳಲ್ಲಿ ಬೆಳಸಿಕೊಂಡು ಬಂದಿದೇನೆನ್ನಲು ಸಿ. ಪಿ. ಕೆ. ಮುಂತಾದವರೂ ವಚನದ ರೂಪದಲ್ಲಿ ಬರೆಯುತ್ತಿರುವುದೂ ಒಂದು ಸಾಕ್ಷಿ. ಈ ರೂಪಗಳಲ್ಲಿ ಕೂಡ ಇನ್ನೂ ಕೃಷಿಯಾಗಬೇಕಾಗಿದೆ.

೧೦

ಹಳೆಯ ತಲೆಮಾರಿನವರ ಸಾಧನೆ, ಸಿದ್ಧಿ ಎಷ್ಟೇ ಆದರೂ, ಐತಿಹಾಸಿಕವಾಗಿ ಬರಲೇಬೇಕಾದ ಪ್ರತಿಭಟನೆ, ಹಳೆಯದರ ಬಗ್ಗೆ ಅಸಂತುಷ್ಟಿ, ಹೊಸದೊಂದನ್ನು ಸೃಷ್ಟಿಸಿಕೊಳ್ಳುವುದು ತಮ್ಮ ಹೊಸ ವಿಚಾರಗಳ ಭಾವಗಳ ಅಭಿವ್ಯಕ್ತಿಗೆ ಅಗತ್ಯವೆನ್ನುವ

ಭಾವನೆ, ಇವೆಲ್ಲ ಸಹಜವಾಗಿಯೇ ಮೂಡಿಬಂದುವು. ಇದು ನವ್ಯಕಾವ್ಯದ ಉಗಮದ ಕಾಲ. ಈ ಕಾಲದಲ್ಲಿ ಕಾವ್ಯಸೃಷ್ಟಿಗಿಂತಲೂ, ಉದ್ರೇಕದ ಪ್ರತಿಭಟನೆ, ಹಳೆಯದನ್ನು ಟೀಕಿಸುವ ಪ್ರಚಾರ, ಇವುಗಳೇ ಹೆಚ್ಚಾಗಿದ್ದುವು. ಇದೂ ಸಹಜವೇ ಹೌದು, ಏಕೆಂದರೆ ಈ ಹೊಸ ಪೀಳಿಗೆಯ ಕಾವ್ಯವನ್ನು ರೂಪಿಸುವ ಮೊದಲು ಅದರ ರೂಪರೇಷೆಗಳು ಏನಿರಬೇಕೆಂಬ ಬಗ್ಗೆ ವಿಪುಲವಾಗಿ ಚರ್ಚೆ, ವಾಗ್ವಾದಗಳು ನಡೆದು, ಅದರ ಸ್ಪಷ್ಟವಾದ ಚಿತ್ರಣ ಮಾಡಿಕೊಳ್ಳಬೇಕಾಗಿತ್ತು. ಇದರಿಂದಾಗಿ ಆ ಕಾಲದಲ್ಲಿ ಹೊಸರೀತಿಯ ಕಾವ್ಯದ ಅಗತ್ಯವನ್ನು ಒತ್ತಿಹೇಳುವುದು ಬಹು ಮುಖ್ಯವಾಯಿತು. ಜೊತೆಗೆ ಹಳಬರು ಈ ಹೊಸತನ್ನು ಮೊದಲು ಅಸಡ್ಡೆಯಿಂದ, ಅನಂತರ ಅನುಮಾನದಿಂದ, ಆ ಮೇಲೆ ಗಾಬರಿ ಯಿಂದ ನೋಡಿ, ಅದು ಅಸಹನೀಯ ದಿಟ್ಟತನವೆಂದು ತಿಳಿದು, ಅದನ್ನು ಕುಡಿಯಲ್ಲೇ ಚಿವುಟಿಹಾಕುವ ಪ್ರತಿಕ್ರಿಯೆಯನ್ನು ಬೆಳಸಿಕೊಂಡರು. ಇದೂ ಸಹಜವೇ—ಯಾವ ಪಟ್ಟಭದ್ರಹಿತವೂ ತನ್ನ ಸ್ಥಾನವನ್ನು ಬಿಟ್ಟುಕೊಡಲು ಸುಲಭವಾಗಿ ಒಪ್ಪುವುದಿಲ್ಲ ವೆನ್ನುವುದೂ, ಅದನ್ನು ಕೆಳಗಿಳಿಸಲು ಪ್ರಯತ್ನಿಸುವುದು ಹೊಸತನದ ಲಕ್ಷಣವೂ ಹೌದೆನ್ನುವುದೂ ಐತಿಹಾಸಿಕ ಸತ್ಯ. ಬಿ. ಎಂ. ಶ್ರೀಯವರು ಹೊಸಗನ್ನಡದ ನವೋದಯದ ಕಾಲದಲ್ಲಿ ಹಳೆಯ ಸಂಪ್ರದಾಯಗಳನ್ನು ಮುರಿದರೆಂದು ಪಂಡಿತರೆಲ್ಲರೂ ಅವರನ್ನು ಕನ್ನಡದ ಕೊಲೆಗಡುಕ ಎನ್ನಲಿಲ್ಲವೇ? ಮೊತ್ತಮೊದಲಬಾರಿಗೆ ಪ್ರಾಸಬಿಟ್ಟು ಕನ್ನಡದಲ್ಲಿ ಬರೆಯಲಾರಂಭಿಸಿದ ಗೋವಿಂದಪೈಯವರನ್ನು ತಾಯಿಯ ಕೊಲೆಮಾಡಲೂ ಹೇಸದ ಪಾಪಿಯೆಂದು ಸಾಂಪ್ರದಾಯಿಕ ಪಂಡಿತರು ಹೀಗಳಿಸಲಿಲ್ಲವೇ? ಅಂಥವರಿ ಗೆಂದೇ ಜಿ. ಪಿ. ರಾಜರತ್ನಂ ಅವರು ಬರೆದ ಈ ಮಾತನ್ನು ಇಲ್ಲಿ ಹೇಳುವುದು ಉಚಿತ.

> "ಅರ್ತ ಮಾಡ್ಕಂಡ್ ಇಂಗ್ಲಿಂಗೆ
> ಅನ್ನೋರ್ಮಾತು ಗಂಗೆ ;
> ಅರ್ತಾಗ್ದಿದ್ರು ಸಿಕ್ದಂಗ್ ಅನ್ನಾದ್
> ಚಂದ್ರ್ರ ಮೊಕ್ಕುಗ್ದಂಗೆ !"

ಆದುದರಿಂದ ಹೊಸ ಚಳುವಳಿಯ ಬಗ್ಗೆ ಸಹಾನುಭೂತಿ, ಹೊಸಬರ ಬಗ್ಗೆ ಔದಾರ್ಯ ಇವು ಅಗತ್ಯವಾಗಿದ್ದುವು. ಯುವಜನಾಂಗವು ಹಳಬರನ್ನು 'ಮುದಿ ಗೊಡ್ಡು', 'ಮಡಿ' ಎಂದು ಹೀಯಾಳಿಸುವುದು, ಹಳಬರು ಅವರನ್ನು "ಅವಿವೇಕಿ" "ಅಪ್ರಬುದ್ಧ" "ಕ್ಷಣಪಿತ್ತಚಿತ್ತ" ಎಂದು ಹೀಗಳೆಯುವುದೂ ಇಬ್ಬರಿಗೂ ಒಳಿತಲ್ಲ, ಸಾಹಿತ್ಯಕ್ಕಂತೂ ಅಪಚಾರ. ಉದ್ದೇಶ, ಗುರಿಸಾಧನೆಯ ರೀತಿ ಇವುಗಳನ್ನು ಅರಿತುಕೊಂಡು ಹೊಸತನ್ನು ಸ್ವಾಗತಿಸಬೇಕಾದುದು ಐತಿಹಾಸಿಕ ಅಗತ್ಯ; ಅಂತೆಯೇ ಇಂದು ನಿನ್ನೆಯ ಸಂಪ್ರದಾಯದಿಂದಲೇ ಬೆಳೆದುಬಂದಿದೆ ಎಂದು ಅರಿಯುವುದೂ ಹೊಸ ತನದ ಉದ್ರೇಕಕ್ಕೆ ಹಾಕಲೇಬೇಕಾದ ಸಾಹಿತ್ಯಕ ಕಡಿವಾಣ. ಒಂದೊಂದು ಕಾಲಕ್ಕೂ ತನ್ನದೇ ಆದ ಸಾಮಾಜಿಕ ಪ್ರಜ್ಞೆ, ನಿಷ್ಠೆ, ಆದರ್ಶಗಳಿರುತ್ತವೆ. ಬದುಕು ಬದಲಾದಂತೆ,

ಸಮಾಜದಲ್ಲಿ ಸ್ಥಿತಿಗತಿಗಳು ವ್ಯತ್ಯಾಸವಾದಂತೆ ಈ ನಿಷ್ಠೆ, ಆದರ್ಶ, ಗುರಿಗಳು ಸಹಜವಾಗಿಯೇ ಬದಲಾಗುತ್ತವೆ. ಅಂತೆಯೇ ಸಾಹಿತ್ಯವೂ ಬದಲಾಗುತ್ತದೆ.

ಪ್ರಾಸ್ತಾವಿಕವಾದ ಈ ನಾಲ್ಕು ಮಾತುಗಳನ್ನು ನೆನಪಿನಲ್ಲಿಟ್ಟು ಹೊಸ ಪ್ರಯೋಗಗಳನ್ನು ಗಮನಿಸೋಣ. ೧೯೩೦ರ ವೇಳೆಗೆ ನವೋದಯದ ಕಾಲದಲ್ಲಿ ನಡೆದ ನಾನಾ ಪ್ರಯೋಗಗಳು ಕೃತಾರ್ಥವಾದುವು. ಅನಂತರ ಈ ಕಾವ್ಯ ಜನಜೀವನದಿಂದ ದೂರವಾಗುತ್ತಾ ಬಂತು. ಕ್ರಮೇಣ ಇದರಲ್ಲಿ ಕೃತಕತೆ ಬಂದಿತು. "ಕಾವು ಕ್ರಮೇಣ ಕಡಿಮೆಯಾಗಿ, ನವ್ಯಪ್ರಯೋಗವಾಗಿ ಹರಿದದ್ದು ಜಡ ಸಂಪ್ರದಾಯವಾಗಿ ರೂಢವಾಗುತ್ತದೆ." [ಬಿ.ಸಿ. ರಾಮಚಂದ್ರಶರ್ಮ; 'ನವ್ಯಕಾವ್ಯ'; ಜನಪ್ರಗತಿ, ೧೮-೧೦-೧೯೫೩] ಆಗ ಅನುಕರಣೆ, ಪುನರುಚ್ಚಾರಣೆ ಆರಂಭವಾಗಿ ಕಾವ್ಯ ತನ್ನ ಸತ್ವ ಕಳೆದುಕೊಳ್ಳುತ್ತದೆ. ನಿಃಸತ್ವವಾದ ಈ ಕಾವ್ಯ ಕೇವಲ ಶಬ್ದಚೇಷ್ಟೆಯಾಗಿರುತ್ತದೆ. ಅರ್ಥಕ್ಕಿಂತ ಶಬ್ದವೇ ಹಿರಿದಾಗುತ್ತದೆ. "ಭಾವಾತಿರೇಕದ ವ್ಯರ್ಥಕೋಲಾಹಲ; ಅನುಭವಗಳನ್ನು ಅತಿ ಸರಳ ಮಾಡುವ ಮನಸ್ಸಿನ ಪಕ್ಷಪಾತ, ಶಬ್ದಜಾಲದ ಕಣ್ಣುಕಟ್ಟು, ಸಂಗೀತ ಪಾರವಶ್ಯದಿಂದ ಬರುವ ಗದ್ಯತ್ವ, ಅರ್ಥಶೂನ್ಯತೆ; ಸೋಗಿನ ಅಧ್ಯಾತ್ಮದ ಆತ್ಮವಂಚನೆ; ಪರವಂಚನೆಯ ಪ್ರಯತ್ನ—ಈ ಎಲ್ಲ ದೋಷಗಳೂ ರೋಗಗಳಂತೆ ಪ್ರಬಲಿಸಿ ಕಾವ್ಯ ಸೃಷ್ಟಿಗೆ ಮಾರಕವಾಗುತ್ತವೆ" ಎಂದು ಅಡಿಗರು 'ಇಂದಿನ ಕಾವ್ಯದ ಹಿನ್ನೆಲೆ' (ಕರ್ಮವೀರ ೧೦-೧೧-೧೯೫೨) ಯನ್ನು ವಿವರಿಸಿದ್ದಾರೆ. ೧೯೪೭ ರಿಂದೀಚೆಗೆ ಸ್ವಾತಂತ್ರ್ಯ ಬಂದ ಕಾಲದಲ್ಲಿ "ನೀತಿ ಸಂಸ್ಕೃತಿಗಳ ನೆಲಗಟ್ಟೇ ಕಳಚುತ್ತಿರುವುದು ಎಲ್ಲರ ಮನಸ್ಸಿನಲ್ಲಿಯೂ ನಿರಾಶೆ, ಅಶಾಂತಿ, ದುಃಖ, ಕಟುತ್ವ ಹುಟ್ಟಿಸುತ್ತಿದೆ" ಎಂದಿದ್ದಾರೆ ಕೆ. ನರಸಿಂಹಮೂರ್ತಿ, ಶರ್ಮರ 'ಏಳು ಸುತ್ತಿನಕೋಟೆ' (೧೯೫೩) ಯನ್ನು ಪರಿಚಯ ಮಾಡಿಕೊಡುವ ಮುನ್ನುಡಿಯಲ್ಲಿ. ಬಾಳಿನಲ್ಲಿ ಸಡಿಲತೆ, ವಿಚಾರಗಳ ಸಂಕರ, ತುಮುಲ ಹೆಚ್ಚಿದ್ದೂ ಅಲ್ಲದೆ ಜಡಸ್ವಾರ್ಥ, ಕಪಟ, ಲಾಭಬಡಕತನ, ಅಶಾಂತಿ, ಬಡತನ, ಅಸತ್ಯ, ವಿರಸ ಇವು ತಾಂಡವವಾಡತೊಡಗಿದುವು. ಇದು ಸಮಾಜದಲ್ಲಿನ ದುಃಸ್ಥಿತಿಯಾದುದರಿಂದ ಕವಿಯ ಮನಸ್ಸಿನಲ್ಲಿಯೂ—ಸಾಮಾಜಿಕ ಪ್ರಜ್ಞೆಯುಳ್ಳವನಾದುದರಿಂದ—ಇವುಗಳೆಲ್ಲದರ ಬಗ್ಗೆ ಪ್ರತಿಕ್ರಿಯೆ ಉಂಟಾಯಿತು. ಹಳೆಯದರ ಹುಳುಕು ಕಂಡರೂ, ಹೊಸದನ್ನು ಸೃಷ್ಟಿಸಲು ಇನ್ನೂ ತ್ರಾಣವಿಲ್ಲದೆ ವಿಚಾರತುಮುಲದಲ್ಲಿ, ಅಶಾಂತಿಯಲ್ಲಿ, ನಿರಾಶೆಯಲ್ಲಿ ಕವಿ ಮುಳುಗುತ್ತಾನೆ. ಇಂಗ್ಲೆಂಡಿನಲ್ಲಿ ಮೊದಲನೆಯ ಮಹಾಯುದ್ಧ ಕಳೆದನಂತರ ಬಂದ ವಾತಾವರಣವೇ ನಮ್ಮಲ್ಲಿ ಬಿಡುಗಡೆಯನಂತರದ ವಾತಾವರಣವೆಂದು ನವ್ಯಕವಿಗಳ ಅಭಿಪ್ರಾಯ. ನಿರಾಸೆ ತುಂಬಿ, ಶೂನ್ಯತೆಯ ಅರಿವಾಗಿ, ಹಳೆಯದರ ಬಗ್ಗೆ ತೀವ್ರ ಅತೃಪ್ತಿ ತುಂಬಿದ ಇಂದಿನ ಕವಿಗಳು ತಮ್ಮ ಸಂಕೀರ್ಣವಾದ ಅನುಭವಕ್ಕೆ ತಕ್ಕ ಉಕ್ತಿಕ್ರಮವನ್ನು ಕಂಡುಹಿಡಿಯಲು, ಹೊಸ ಅನುಭವದ ಸಮಗ್ರತೆಯನ್ನು ವ್ಯಕ್ತಪಡಿಸಲು ಹೊಸ ಭಾಷಾತಂತ್ರವನ್ನೇ ರೂಪಿಸಿಕೊಳ್ಳಬಯಸಿದರು. "ಕನ್ನಡದ ಹೊಸಕವಿತೆ ಈಗ ಇಂಗ್ಲೆಂಡಿನ ಈ ತಲೆಮಾರಿನ ಅತ್ಯುತ್ತಮ ಕವಿಗಳಾದ

ಟಿ. ಎಸ್. ಈಲಿಯಟ್, ಡೇಲೂಯಿ, ಆರ್ಡೆ ಮೊದಲಾದವರ ಕಾವ್ಯಮಾರ್ಗದಲ್ಲಿ ತನ್ನ ಮಾರ್ಗವನ್ನು ಕಂಡುಕೊಳ್ಳಬಯಸುವುದು ಸಹಜವೇ ಆಗಿದೆ'' ಎಂದು ಅಡಿಗರು ಹೇಳಿದ ಮಾತನ್ನೇ (ಧಾರವಾಡ ಆಕಾಶವಾಣಿ, ಅಕ್ಟೋಬರ್ ೧೯೫೨) ಶರ್ಮರೂ ಒಪ್ಪಿ "ಅಭಿವ್ಯಕ್ತಿ ಸಾಧನೆಯಾಗುವುದಾದರೆ ಇಂಗ್ಲಿಷ್ ಕಾವ್ಯದ ಹೆಜ್ಜೆಯ ಹಿಂದೆ ಹೆಜ್ಜೆ ಇಡುವುದರಲ್ಲಿ ಏನೂ ಅವಮಾನವಿಲ್ಲವೆಂಬುದೇ ನನ್ನ ನಂಬಿಕೆ'' ಎಂದು ಸಾರಿದರು. (ಜನಪ್ರಗತಿ ೨೫. ೧೦. ೫೩–'ನವ್ಯಕಾವ್ಯ ಅಂಧಾನುಕರಣೆಯೇ?') ಅದೇ ಲೇಖನದಲ್ಲಿಯೇ ಅವರು 'ನವ್ಯಕಾವ್ಯದ ಸ್ಫೂರ್ತಿಮೂಲ ಇಲಿಯೆಟ್, ಆರ್ಡೆ ಅವರ ಕಾವ್ಯದಲ್ಲಿ ನಿಜ' ಎಂದು ಒಪ್ಪಿಕೊಂಡಿದಾರೆ. "ಕಾವ್ಯದಲ್ಲಿ ನಿಜವಾದ ಪ್ರಗತಿ ಎಂದರೆ ಅದರ ಕಾವ್ಯಗುಣ ಹೆಚ್ಚುವುದಲ್ಲದೆ ಬೇರೆ ಅಲ್ಲ. ಈ ದೃಷ್ಟಿಯಲ್ಲಿ ಇಂದಿನ ಪಾಶ್ಚಾತ್ಯ ಕವಿತೆಯ ಮಾದರಿಯು ನವ್ಯಕವಿಯ ಮುಂದಿದೆ", ಮನಸ್ಸಿನ ಪದರ ಪದರಗಳಲ್ಲಿರುವ "ಅನುಭವದ ಭೂತ ವರ್ತಮಾನ ಭವಿಷ್ಯದ್ರೂಪಗಳನ್ನು ಅಳವಡಿಸಿ ಏಕೋದ್ದೇಶವನ್ನು ಸಾಧಿಸುವುದು–ಇದೇ ನವ್ಯಕವಿಯು ದಾಟಿ ಗೆಲ್ಲಬೇಕಾದ ಬೆಂಕಿಯ ಹೊಳೆ" ಎಂದು ಅಡಿಗರು 'ಹೊಸದಿನದ ಆಹ್ವಾನ' (ಜಯಕರ್ನಾಟಕ. ೧೧-೧೨-೫೨) ವನ್ನು ವರ್ಣಿಸಿದರು. ಈ ಮಾನಸಿಕ ಆವಶ್ಯಕತೆಗೆ, ತನ್ನ ಅನುಭವವನ್ನು ಅದಕ್ಕೆ ಸರಿಯಾದ ವಸ್ತು, ಲಯ, ಶೈಲಿ ಮತ್ತು ಪ್ರತಿಮೆ, ಇವುಗಳಲ್ಲಿ ಅಭಿವ್ಯಕ್ತಿಗೊಳಿಸುವುದೇ ಈಗಿನ ಕವಿಗಳ ಮುಂದಿರುವ ಮುಖ್ಯ ಸಮಸ್ಯೆ ಎಂಬರ್ಥದ ಮಾತನ್ನು ವಿ. ಕೃ. ಗೋಕಾಕರು ಆಡಿದಾರೆ. (Summing up at Delhi Sahitya Samaroh. 1956). ಹಿಂದಿನ ಕವಿಗಳು ಬಳಸಿದ ಮಾತುಗಳು ಹೊಸ ಭಾವನೆಗಳನ್ನು ವ್ಯಕ್ತಗೊಳಿಸಲು ಅಸಮರ್ಥವಾಗಿವೆ. ಆದುದರಿಂದ ನವ್ಯಕವಿಯು ತನ್ನ ಕೆಲಸಕ್ಕೆ ಯೋಗ್ಯವಾದ ಹೊಸ ಹೊಸ ಶಬ್ದಗಳನ್ನು ಜನಬಳಕೆಯ ಜೀವಂತಭಾಷೆಯಿಂದ ಹುಡುಕಿಕೊಳ್ಳುತ್ತಾನೆ. ಮನಸ್ಸಿನ ಆಳದಿಂದ ಸಂಕೇತಗಳನ್ನು ಬಳಸುತ್ತಾನೆ. ಈ ಸಂಕೇತಗಳು ತಾರ್ಕಿಕ ವಾದಸರಣಿಯಂತೆ ಬೆಳೆಯುವುದಿಲ್ಲ. ಸಾದೃಶ್ಯ ವೈದೃಶ್ಯಗಳ ತಾಕಲಾಟದಲ್ಲಿ ಒಂದರಿಂದೊಂದು ಸೂಚಿತವಾಗಿ ಸಂಕೇತಮಾಲೆ ಹೆಣೆದುಕೊಳ್ಳುತ್ತದೆ ಎಂದು ಆಗ (೧೯೫೦ರಲ್ಲಿ) ವಿಮರ್ಶಕರೂ ಕವಿಗಳೂ ಅಭಿಪ್ರಾಯಪಟ್ಟರು.

ಸಿದ್ಧಾಂತವೇನೋ ಐತಿಹಾಸಿಕವಾಗಿ ರೂಪಿತವಾಗಿದೆ; ಅದರಲ್ಲಿ ಹುರುಳಿದೆ. ಆದರೆ ಈ ಸಿದ್ಧಾಂತವನ್ನು ಸ್ಪಷ್ಟಪಡಿಸಿಕೊಳ್ಳುವ ಕಾಲದಲ್ಲಿ ವಿಚಾರಗಳ ಸುಳಿಯಲ್ಲಿ ನವ್ಯಕವಿಗಳು ತೊಳಲಾಡಿದರೆಂಬುದು ಅವರ ವಿರೋಧಾಭಾಸದ ಅಭಿಪ್ರಾಯಗಳಲ್ಲಿ ಚೆನ್ನಾಗಿ ಕಾಣಿಸಿಕೊಂಡಿದೆ. ಒಬ್ಬರೊಬ್ಬರ ವಿಚಾರಗಳಲ್ಲಿ ಭಿನ್ನತೆಯ ಜತೆಗೆ, ಒಬ್ಬರೇ ತಮ್ಮ ಅಭಿಪ್ರಾಯಗಳನ್ನೇ ಖಂಡಿಸಿಕೊಂಡ ಕಾಲ ಇದು, ಎಂದರೆ ಸಿದ್ಧಾಂತದ ಬಗ್ಗೆಯೂ ನವ್ಯಕವಿಗಳು ತಡಕಾಟ ನಡೆಸಿದ್ದರೆಂಬುದು ಈ ಕಾಲಕ್ಕಂತೂ ನಿಜ, ಸ್ಪಷ್ಟ. ಸಿದ್ಧಾಂತವು ಕಾವ್ಯರೂಪದಲ್ಲಿ ಬರುವಾಗಿನ ಮಾತು ಇನ್ನೂ ಜಟಿಲ!

ಈ 'ನವ್ಯಕಾವ್ಯ' ಎಂಬ ಪದವನ್ನು ಆಧುನಿಕ ಕನ್ನಡ ಕಾವ್ಯದಲ್ಲಿ ಮೊತ್ತ

ಮೊದಲಬಾರಿಗೆ ವಿ. ಕೃ. ಗೋಕಾಕರು ಡಿಸೆಂಬರ್ ೧೯೫೦ ರಲ್ಲಿ ಮುಂಬಯಿಯ ಸಾಹಿತ್ಯ ಸಮ್ಮೇಳನದಲ್ಲಿನ ಕವಿಗೋಷ್ಠಿಯ ಅಧ್ಯಕ್ಷ ಭಾಷಣದಲ್ಲಿ ಉಪಯೋಗಿಸಿದರು. "ಬಳಕೆಗನ್ನಡದ ಪ್ರೀತಿ, ಛಂದಸ್ಸಿನಲ್ಲಿ ಹೆಚ್ಚಿನ ಸ್ವಾತಂತ್ರ್ಯ, ಪ್ರತಿಮಾಪ್ರಧಾನತೆ, ವಾಸ್ತವಿಕ ಚಿತ್ರಸೃಷ್ಟಿ, ಪಾರಿಭಾಷಿಕ ಶೈಲಿ, ಕಾವ್ಯಕ್ಕೆ ಅಸಮರ್ಪಕವೆಂದು ತೋರಿಬರುವ ವಸ್ತುವಿನ ಆಯ್ಕೆ" ಈ ಆರು ಲಕ್ಷಣಗಳನ್ನು ಹೆಸರಿಸಿ "ಬುದ್ಧಿ ಪ್ರಧಾನತೆಯನ್ನು ನವ್ಯತೆಯ ಏಳನೆಯ ಲಕ್ಷಣವೆಂದು" ಹೇಳಿದಾರೆ ಗೋಕಾಕರು. ಎಂಟನೆಯ ಲಕ್ಷಣ ವಾಗಿ ನವ್ಯಕಾವ್ಯದಲ್ಲಿ "ವ್ಯಕ್ತ್ಯತೀತ ಮೌಲ್ಯಗಳಿಗೇ ಪ್ರಧಾನತೆಯುಂಟಾಗುವುದೆಂದು ತೋರುತ್ತದೆ" ಎಂದು 'ನವ್ಯಕಾವ್ಯದ ರೀತಿ'ಯನ್ನು 'ನವ್ಯತೆ ಹಾಗೂ ಕಾವ್ಯ ಜೀವನ' ಪುಸ್ತಕದಲ್ಲಿ (೧೯೫೫) ವಿವರಿಸಿದ್ದಾರೆ. ಆದರೆ ಗೋಕಾಕರು ಹೇಳಿರುವ ಮೇಲಿನ ಲಕ್ಷಣಗಳು ಅಷ್ಟಾಗಿ ಸ್ಪಷ್ಟವಾಗಿಲ್ಲ. ಅಲ್ಲದೆ ಇವುಗಳಲ್ಲಿ ಪ್ರತಿಯೊಂದನ್ನೂ ಹಿಂದಿನ ಕಾವ್ಯಗಳಿಗೂ ಅನ್ವಯಿಸಬಹುದೆಂದು ಅವರೇ ಹೇಳಿ, ಹಿಂದಿನ ಕವಿಗಳಿಗೆಲ್ಲ 'ನವ್ಯತೆ'ಯ ಚೀಟಿ ಅಂಟಿಸಿಬಿಟ್ಟಿದ್ದಾರೆ. ಇದರಿಂದಾಗಿ ಅವರ ವಿಚಾರ ಸ್ಪಷ್ಟವಾಗಿಲ್ಲ, ನಿಕರವಾಗಿಲ್ಲವೆಂಬುದು ಖಚಿತವಾಗುತ್ತದೆ. ಮುಕ್ತ ಛಂದಸ್ಸಿನಲ್ಲಿ ೧೯೩೦ರಷ್ಟು ಹಿಂದೆಯೇ ಪ್ರಯೋಗ ನಡೆಸಿದ್ದ ಗೋಕಾಕರು (ಸಮುದ್ರ ಗೀತೆಗಳು), ನವ್ಯಪಂಥವನ್ನು ಪ್ರಾರಂಭಿಸಿದವರೆಂದು ಖಂಡಿತವಾಗಿ ಹೇಳಬಹುದು. ಆದರೆ ಅವರ ಕವಿತೆಗಳಲ್ಲಿ ಇನ್ನೂ ಹಿಂದಿನ ಮತ್ತು ಇಂದಿನ ರೀತಿಗಳ ಸಂಘರ್ಷ ತುಂಬಾ ಸ್ಪಷ್ಟವಾಗಿ ಕಾಣುತ್ತದೆ. 'ನವ್ಯ ಕವಿತೆಗಳು' ಎಂಬಲ್ಲಿಯ ಕವಿತೆಗಳಲ್ಲಿ ಈ ಗೊಂದಲ ಚೆನ್ನಾಗಿ ಕಾಣಿಸುತ್ತದೆ. ಅವರ ಈಚಿನ 'ದ್ಯಾವಾ ಪೃಥಿವೀ'ಯಲ್ಲಿಯೂ ಇದೇ ಗೊಂದಲ ಕಾಣಬಹುದಾಗಿದೆ. 'ನವ್ಯ ಧ್ವನಿ'ಯ ಮುನ್ನುಡಿಯೂ ಅವರು ಇದೇ ಗೊಂದಲದಲ್ಲಿರುವುದನ್ನು ಖಚಿತಪಡಿಸುತ್ತದೆ. "ನವ್ಯ ಕಾವ್ಯದಲ್ಲಾದ ವಿಶೇಷ ಛಂದೋಪ್ರಯೋಗವೆಂದರೆ ಶ್ಲೋಕಗಳ ಅನಿಯ ಮಿತತೆ ಹಾಗು ನಿರ್ಬಂಧದ ಉಲ್ಲಂಘನ" ಎಂದಿದ್ದಾರೆ. ಅವರ ವಾದವನ್ನು ಒಪ್ಪಿದರೆ 'ಡೊಮಿನಿರ್ಯ ಜನನ' 'ಬೆಳ್ಳಿಹಬ್ಬದ ಕಬ್ಬದ ಬಳ್ಳಿ' 'ಶ್ರೀ'ಯವರ 'ಕನ್ನಡ ತಾಯ್‌ನೋಟ' ಇವುಗಳನ್ನು ನವ್ಯಕಾವ್ಯವೆಂದು ಒಪ್ಪಬೇಕಾಗುತ್ತದೆ. ಪ್ರತೀಕ ನಿಷ್ಠೆಯೇ ಈ ನವ್ಯಕಾವ್ಯದ ಮಾರ್ಗವೆಂದು ಸೂಚಿಸಿದಾರೆ. ಕೆಲ ಪ್ರತಿಮೆಗಳನ್ನು ನವ್ಯಕಾವ್ಯ ಬಳಸುತ್ತದೆಂದು ಹೇಳಿ, ಅವು ಬಂದಮಾತ್ರಕ್ಕೇ ಅದು ನವ್ಯಕಾವ್ಯವಲ್ಲವೆಂದೂ ಅದನ್ನೇ ವಿರೋಧಿಸಿದ್ದಾರೆ. ಅವರು ಕೊಟ್ಟಿರುವ ಬೇಂದ್ರೆಯವರ ಪದ್ಯಗಳ ಸಾಲುಗಳು :

"ಸಕಲಾಽ ಸಿದ್ಧಾಽ ಸರಸ್ವತಿ ವೀಣಾಪಾಣಿ
ಪಶ್ಯಂತಿಯ ವಾಣಿ
ಛಂದಾರೂಢಾ ನವೋಢಾ
ಮುಗ್ಧಾ, ರಸಿಕಾ, ಅನೂನಾ
ಧ್ವನಿತ ಪ್ರಾಣಾ"

"ಛಂದದಲ್ಲಿಯಷ್ಟೇ ಪ್ರತಿಮೆಯಲ್ಲಿಯೂ ನವ್ಯವಾಗಿದೆ" ಎಂದು ಹೊಗಳಿದಾರೆ.

ಆದರೆ ಈ ಸಾಲುಗಳು ಹಳೆಯ ರೀತಿಯಷ್ಟೇ ಅಲ್ಲ, ಕೇವಲ ಶಬ್ದಾಡಂಬರವೆಂದೇ ನಮಗೆ ತೋರುತ್ತದೆ. ಮುಂದೆ ಗೋಕಾಕರು "ಸರಲಾರ್ಥವಿರುವ ಪದ್ಯದ ಅರ್ಥವನ್ನೇ ಕವಿತೆಯೆಂದು ಓದುಗ ತಿಳಿಯುತ್ತಾನೆ. ಈ ಭ್ರಮೆಯನ್ನು ನಿರಸನಗೊಳಿಸಲು ಕಾವ್ಯದ ಆತ್ಮದೆಡೆಗೇ ನೇರವಾಗಿ ಓದುಗನ ಚಿತ್ತವನ್ನು ಸೆಳೆಯಲು ನವ್ಯಕವಿಯು ಅರ್ಥದ ನಿಚ್ಚಣಿಕೆಯನ್ನೇ ನೂಕಿಬಿಡುತ್ತಾನೆ. ಆದರೆ ಆಳವಾದ ಧ್ವನಿಯಿಂದ ತುಂಬಿದ ಪ್ರತೀಕಗಳಿರದಿದ್ದರೆ, ಅವು ಸ್ಫುಟವಾಗಿ ಓದುಗನ ಕಣ್ಣೆದುರು ನಿಲ್ಲದಿದ್ದರೆ ಅರ್ಥವನ್ನು ಗೌರವಿಸದ ನವ್ಯಕವಿ ತನ್ನ ಕಾವ್ಯದಲ್ಲಿ ಸಫಲನಾಗುವುದಿಲ್ಲ" ಎಂದೂ ಸಾರಿದ್ದಾರೆ. ಅವರ ಮನಸ್ಸಿನಲ್ಲಿರುವ ಗೊಂದಲ ಇಲ್ಲಿ ಚೆನ್ನಾಗಿ ಗೊತ್ತಾಗುತ್ತದೆ. ಡಿಲಾರ್ನ್ ಟಾಮಸ್ (Dylan Thomas)ನ ಕವಿತೆಗಳ ಬಗ್ಗೆ ಹೇಳಿದ ಮಾತನ್ನೇ ಈ ನವ್ಯಕವಿಗಳ, ಆ ಕಾಲದ ವಿಚಾರದ ಬಗ್ಗೆ ಹೇಳಬಹುದೆನಿಸುತ್ತದೆ. They "appear to be flawed through obscurity, confusion or straining after effect" (Stansford on Dylan Thomas: what then is the meaning of the poem?) ಈ ಕವಿತೆಯ ಅರ್ಥ, ಹಾಗಾದರೆ, ಏನು? ಎಂದು ಕೇಳುವ ಸ್ಥಿತಿ ಓದುಗನಿಗೆ ಇದರಲ್ಲಿನ ಅರ್ಥನಿಗೂಢತೆ, ಗೊಂದಲ ಅಥವಾ ತೋರಿಕೆಗಾಗಿ ಪ್ರಯತ್ನ–ಇವುಗಳಿಂದ ಉಂಟಾಗುತ್ತದೆ.

ಇಷ್ಟೆಲ್ಲ ವಿವರವಾಗಿ ಈ ವಿಷಯ ಹೇಳುವ ಉದ್ದೇಶವಿಷ್ಟೇ: ನವ್ಯತೆಯೆಂದು ಕರೆದರೇ ಹೊರತು, ಆ ಕಾಲದಲ್ಲಿ ನವ್ಯಕವಿತೆ ಹೇಗಿರಬೇಕೆಂಬ ಬಗ್ಗೆ ಅವರಾರಿಗೂ ಸ್ಪಷ್ಟವಾದ ವಿಚಾರವಿರಲಿಲ್ಲ. ಬರೆದುದೆಲ್ಲ ಹಳೆಯ ತೆರದಲ್ಲಿಲ್ಲದಿದ್ದರಾಯಿತು-ನವ್ಯವೆಂಬ ಭಾವನೆಯಿದ್ದುದು, ವಿಚಾರಗೊಂದಲವಿದ್ದುದು–ಆಗ ಅವರ ಲೇಖನಗಳಿಂದ 'ನವ್ಯ ಧ್ವನಿ' 'ಏಳುಸುತ್ತಿನಕೋಟೆ' 'ಚಂಡೆ ಮದ್ದಳೆ' ಮುಂತಾದ ಸಂಕಲನಗಳಿಂದ ಸ್ಪಷ್ಟವಾಗಿ ತಿಳಿಯುತ್ತದೆ. ಆಗಿನ್ನೂ ಹೆಜ್ಜೆ ಹೆಜ್ಜೆಗೂ ಮುಂದೆ ಹೇಗೆಂಬ ತಡಕಾಟ, ಪ್ರತಿಯೊಂದು ಹೆಜ್ಜೆಯೂ ಒಂದು ಹೊಸ ಸಾಹಸ, ಹೊಸ ಸಾಧನೆ ಎಂಬ ಭಾವನೆ ಇತ್ತು. ಪ್ರತಿ ಸಾಧನೆಯೂ ಒಂದೊಂದು ವೈಫಲ್ಯ, ಮುಂದಿನದನ್ನು ಪ್ರಾರಂಭಿಸಲು ಉತ್ತೇಜನವೆಂದು ನಾವು ಭಾವಿಸಿ ಆ ಕಾಲದ ಕವಿತೆಗಳನ್ನು ನೋಡಬೇಕು.

ಶ್ರೀ ಬಿ. ಸಿ. ರಾಮಚಂದ್ರ ಶರ್ಮರ 'ತಾಯಿ–ಮಗ' ಎಂಬ ಕವಿತೆ 'ಸುಡು–ಮಸಾಲೆ'ಯಲ್ಲಿ ಪ್ರಾರಂಭವಾಗಿ ಪರಮಾಣು ಸಿಡಿತದವರೆಗೂ ಬೆಳೆಯುತ್ತದೆ. (ಏಳು ಸುತ್ತಿನ ಕೋಟೆ ೧೫೩)

"ಸುಡುಮಸಾಲೆಯ ಕಂಪು ಅವನ ಕೊರಳುರುಲಾಯ್ತು;
ಜೋಡಿ ಕಣ್ಣನು ಕಿಟಕಿ ಬಳಿಗೆಳೆಯಿತು
ಕಂಡಕನಸಿನ ಸವಿಗೆ ದೀನಮನ ಮರುಳಾಯ್ತು"

ಇಲ್ಲಿ ಅವನು ಮನಸ್ಸಿನಲ್ಲಿಯೇ ದೋಸೆಯ ಸವಿಯನ್ನು ಚಪ್ಪರಿಸುತ್ತಾನೆ. ಅವನ ಮನಸ್ಸು ಆಸೆ ಸತ್ತು ಕೆಳಗೆ ಬೀಳುತ್ತದೆ. ಹೊರಗೆ ಭಿಕ್ಷುಕ ಯಾರೆಂದು ಅರಿಯುವ

ಪ್ರಯತ್ನ–ಭಿಕ್ಷುಕನಿಗೂ ಅವನಿಗೂ ನಡುವೆ ಮಾತು–ಬಹಳ ನಾಟಕೀಯವಾಗಿ ಮನ ಸೆಳೆಯುತ್ತದೆ!

" ಕಲಕತ್ತ, ಪ್ಯಾರಿಸ್ಸು, ಲಂಡನ್ನು, ನ್ಯೂಯಾರ್ಕು
ಕಡಲವಿಸ್ತರದಲ್ಲಿ ಹನಿಯೊಂದ ಹುಡುಕಲೇ ?
ನಿನ್ನ ಮನೆಯ ವಿಳಾಸ ? "
" ಶೆಟ್ಟಿಯಂಗಡಿ ಜಗುಲಿ, ಪಾರ್ಕಿನೊಳಗಿನ ಬೆಂಚು
ಬೀದಿಯಂಚು :
....
ಜಗದಗಲ ಯುಗದಗಲ ನಮ್ಮದೇ ಸಂತಾನ
ಕಾಣಸಿಗುವುದು ನಿನಗೆ ಅಲ್ಲಿ, ಇಲ್ಲಿ "

ಭಿಕ್ಷುಕನ ವಿಳಾಸದಿಂದ ಪ್ರಾರಂಭವಾಗಿ ವಿಶ್ವವ್ಯಾಪಿಯತನಕ ಏರಿದ ಇಲ್ಲಿ ರೋಗ, ಭಿಕ್ಷೆ, ಜೊಳ್ಳುತನ, ಹಲ್ಲಿಯಬಾಲ ಮುಂತಾದ ಸಂಕೇತಗಳೂ ಬರುತ್ತವೆ. ವಿಶ್ವ ವ್ಯಾಪಿತ್ವದ ಶ್ಲೋಕವೂ ಒಂದು ಸಂಕೇತವಾಗಿ ಬಳಕೆಯಾಗಿದೆ. ಅನಂತರ ಪುರಭವನ ದಲ್ಲಿ ಕ್ಷಾಮ ಪರಿಹಾರ ನಿಧಿಗಾಗಿ ವೈಜಯಂತಿಯ ನೃತ್ಯ ನೋಡಲು ಹತ್ತು ರೂಪಾಯಿಗಳ ಟಿಕೆಟ್ ಕೊಂಡ ಇವನಿಗೆ

" ನನ್ನೆದೆಯ ಮರುಕ
ನೈವೇದ್ಯ ಬಡಜನಕೆ "

ಎಂಬ ಹೆಮ್ಮೆ. ಅಂತೆಯೇ ಅವನು

" ಯಾರಿವನು ತಿರುಕ ? "

ಎಂದು ತಾತ್ಸಾರ, ಬೇಸರಗಳಿಂದ ಕೇಳುತ್ತಾನೆ, ತಾನು ನಿಜವಾಗಿ ದೀನಬಂಧು ಎಂದು ಕೊಂಡ ಅವನು ಇಂತಹ ನೊಂದವರಿಗಾಗಿಯೇ ತನ್ನ ಮರುಕ ಎಂದು ಆತ್ಮವಂಚನೆ ಮಾಡಿಕೊಳ್ಳುತ್ತಾನೆ. ಇಲ್ಲಿ ವೈಜಯಂತಿಯ ರೂಪ, ನೃತ್ಯ ಕಾರಣವೆಂದು ಹತ್ತು ರೂಗಳನ್ನು ತೆತ್ತ ಅವನ ಒಳಮನಸ್ಸಿಗೂ, ರೋಗಿನ ಕರುಣೆಯನ್ನು ತೋರುವ ಹೊರ ನಡವಳಿಕೆಗೂ ವೈದೃಶ್ಯ ಚೆನ್ನಾಗಿ ಬಂದಿದೆ. ಇಲ್ಲಿಯೇ ಸಾಮಾಜಿಕ ಟೀಕೆ, ಇವನ್ನೈ ಜೀವನದ ಮೇಲಿನ ವಿಡಂಬನ ಇಲ್ಲಿ ಹಾಸುಹೊಕ್ಕಾಗಿದೆ. ಕವಿಯು ಕೊನೆಗೆ ಆ ಭಿಕ್ಷುಕ ನನ್ನು ತನ್ನ ಸಹಪಾಠಿಯೆಂದು ಗುರುತಿಸುತ್ತಾನೆ. ಅವರಿಬ್ಬರಿಗೂ ತಾಯಿಯಾದ 'ನೆಲವಾಯಿ'ಯನ್ನು ಹರಸೆಂದು ಕೇಳಿದಾಗ–ಆಕೆ.

" ದೂರವಿರು ದಮ್ಮಯ್ಯ
ನೀ ನನ್ನ ಮಗುವಲ್ಲ
ಹಡೆದೊಡಲು ಬಂಜೆಯಾಯ್ತು, ಬಾಳ್ಮೊದಲು ಸಂಜೆಯಾಯ್ತು."

ಎಂದು ತನ್ನ ಅಳಲನ್ನು ತೋಡಿಕೊಂಡು ದೇವರನ್ನು ತನ್ನ ಬಿಡುಗಡೆಗಾಗಿ ಬೇಡಿಕೊಳ್ಳುತ್ತಾಳೆ.

> " ಬಾ ಬಂಧು !
> ಬಂದು ಉದ್ಧರಿಸು ಬಾರ,
> ಅಣುಬಾಂಬಿನವತಾರ ತಳೆದು ಬಾರ !
> ಅಂತವಿರದಾನಂದವಿರುವ ಆ ಮಂದಿರಕೆ
> ಹಿಮಗಿರಿಯ ಕಂದರಕೆ
> ಕರೆದೊಯ್ಯು ಬಾರ ! "

ಎಂದು ಅಣುಬಾಂಬಿನಿಂದ ಜಗತ್ತಿನ ನಿರ್ನಾಮಕ್ಕಾಗಿ ಬೇಡಿಕೊಳ್ಳುತ್ತಾಳೆ. 'ಹಡೆದೊಡಲು ಬಂಜೆಯಾಯ್ತು !' ಎಂಬ ಸಾಲು 'ಶ್ರೀ'ಯವರ 'ಕನ್ನಡ ತಾಯ್ ನೋಟ' ಮತ್ತು ಬೇಂದ್ರೆಯವರ 'ಮೂವತ್ತು ಮೂರುಕೋಟಿ' ಪದ್ಯಗಳ ಸಾರಪೂರ್ಣ ಸಂಕೇತವಾಗಿ ನೆಲದ ಮಕ್ಕಳ ಅಸಾರತೆ, ನೆಲದಾಯಿಯ ಹೆತ್ತೊಡಲಿನ ಕರುಣಾಜನಕ ದುಃಖ–ಇವುಗಳ ಸಂಕೇತವಾಗಿ ನಿಂತಿದೆ. ಹಾಗೆಯೇ 'ಹಿಮಗಿರಿಯ ಕಂದರ' ಸುಖದ ಸಂಕೇತವಾಗುತ್ತದೆ. ಅಡಿಗರಂತೂ 'ಹಿಮಗಿರಿಯ ಕಂದರ'ವೆಂದೇ ಬೇರೆ ಕವಿತೆ ಬರೆದರು–ಈ ಎರಡೂ ಕವಿತೆಗಳಲ್ಲಿ ಇಲಿಯಟ್ಟನ 'The Waste Land' (ಬರಡು ನೆಲ) ಕವಿತೆಯ ಸಂಕೀರ್ಣ ಪ್ರಭಾವ ಎದ್ದು ಕಾಣುತ್ತದೆ.

'ತಾಯಿ–ಮಗ' ಕವಿತೆಯಲ್ಲಿರುವ ಛಂದಸ್ಸು ಹೊಸದರಂತೆ ಕಾಣಿಸುತ್ತದೆ. ಆದರೆ ಇಲ್ಲಿ ಬಳಕೆಯಾಗಿರುವುದು ೧೦ + ೧೦ = ೨೦ ಮಾತ್ರೆಗಳ ಸರಳರಗಳೆ ಮತ್ತು ೧೦+೬=೧೬ ಮಾತ್ರೆಗಳ ಎರಡನೆಯ ಸಾಲು ; ಈ ಛಂದಸ್ಸಿನ ಹಂದರದ ಮೇಲೆ ಅಲ್ಲಲ್ಲಿ ಸಾಲುಗಳನ್ನೊಡೆದು, ಎರಡು, ಮೂರು ಸಾಲುಗಳನ್ನಾಗಿಸಿರುವುದು ಸ್ಪಷ್ಟವಾಗಿದೆ. ಅಷ್ಟೇ ಅಲ್ಲದೆ ಇಲ್ಲಿಯ ಆಂತರಿಕ ಬೆಳವಣಿಗೆಯು ಕೂಡ ಹಳೆಯ ರೀತಿಯಲ್ಲಿಯೇ, ಭಾವಗಳ ಸಂಯೋಗದಿಂದ ಒಂದಾದ ಮೇಲೊಂದರಂತೆ, ಅರ್ಥಕೊಡುತ್ತಲೇ ಸಂಕೇತಗಳೂ ಕೂಡುತ್ತಾ ಬರುತ್ತವೆ. ಆದರೆ ಇವುಗಳೆಲ್ಲ ಸಾಮಾನ್ಯವಾಗಿ ಆಳವಾದ ಹರಹಿಲ್ಲದ, ಧ್ವನಿಯಿಲ್ಲದ 'ಸುಲಭ ಸಂಕೇತಗಳು' ಎನ್ನದೆ ವಿಧಿಯಿಲ್ಲ. ಇಲಿಯಟ್ ಅಡಿಗ ಮತ್ತಿತರರ ಕವಿತೆಗಳಲ್ಲಿ ಕಾಣುವ ಸಂಕೀರ್ಣತೆ ಇಲ್ಲಿ ಕಾಣುವುದೇ ಇಲ್ಲ. ಕೊಂಚ ಮಟ್ಟಿಗೆ ನಾವೀನ್ಯ ಕಾಣಿಸಿದರೂ (ಅದೂ ಕನ್ನಡದ ಮಟ್ಟಿಗೆ ಮಾತ್ರ) ಪ್ರತಿಭಾಯುತ ಪ್ರತಿಮೆಯಾಗಿ ಯಾವುದೂ ಎದ್ದು ನಿಲ್ಲುವುದಿಲ್ಲ. ಇದು ನವ್ಯತೆಯ ಪ್ರಾರಂಭದ ಕೃತಿಯೆಂದು ಪರಿಗಣಿಸಬೇಕು, ಅಷ್ಟೇ ! ಮುಂದೆ ಭೂತಾಕಾರವಾಗಿ ನವ್ಯತೆಯನ್ನು ಆಕ್ರಮಿಸಿಕೊಂಡು ಲೈಂಗಿಕತೆಯೇ ನವ್ಯವೆಂಬ ಭಾವನೆ ಬರುವಷ್ಟು ಮಟ್ಟಿಗೆ ಕವಿಗಳ ಮನಸ್ಸಿನ ರೂಢವಿಚಾರ, obsession ಆದ ಲೈಂಗಿಕ ಬಿಡುಬೀಸು–ಇಲ್ಲಿ ಕೊಂಚಮಟ್ಟಿಗೆ ಕಾಲಿಟ್ಟಿದೆಯೆಂಬುದು ಗಮನಾರ್ಹ, ಅದು ಇಲ್ಲಿ ಸೂಚ್ಯವಾಗಿದೆಯೆಂಬುದೂ ಗಮನಿಸ

ಬೇಕಾದುದೇ! ಅರ್ಥದ ಸರಳತೆಯಿಲ್ಲದಿದ್ದರೂ, ಸುಲಭವಾಗಿಯೇ ಅರ್ಥವಾಗುವಂತಿರುವ ಈ ಕವಿತೆಯಲ್ಲಿ ನವ್ಯಕಾವ್ಯದ ಒಂದು ಮುಖ್ಯ ಲಕ್ಷಣವಾದ ಬುದ್ಧಿಯ, ವಿಚಾರಗಳ ಪ್ರಾಬಲ್ಯ ಜೋರಾಗಿದೆ. ಆದರೆ ಅದಷ್ಟು ಮಾತ್ರಕ್ಕೇ ಅದನ್ನು ನವ್ಯವೆಂದು ಕರೆಯುವುದು ಸಾಧ್ಯವೇ? ಹಿಂದಿನ ಕೆಲವು ಕವಿತೆಗಳ ಮೇಲೆ ಅವುಗಳಲ್ಲಿ ಭಾವಹೀನತೆಯಿಂದ ಗದ್ಯತನ ಬಂದಿದೆಯೆಂದು ಆರೋಪಿಸಿ, ಈಗ ಅದೇ ತಮ್ಮ ಕಾವ್ಯದ ವಿಶೇಷಗುಣವೆಂದು ಕರೆದುಕೊಳ್ಳುವ ವಿಮರ್ಶಕ ಕವಿಗಳಿಗೇನೆನ್ನೋಣ. "ಈಗ ಕವನ ಬರೆಯುತ್ತಿರುವ ಮಿಕ್ಕೆಲ್ಲರಿಗಿಂತ ಆಡುಮಾತಿನ ಲಯಕ್ಕೆ ಮತ್ತು ನುಡಿಗಳಿಗೆ ಅಥವ ಉತ್ತಮ ಗದ್ಯಕ್ಕೆ ಹತ್ತಿರವಾಗಿದ್ದು ತಮ್ಮ ಅನುಭವಕ್ಕೆ ಸಮಾಧಾನಕರವಾದ ತಕ್ಕ ಭಾಷಾ ಶರೀರವನ್ನು ಪಡೆದಿರುವವರು ಲಂಕೇಶರೊಬ್ಬರೇ. ವಾಗ್ಮಿಕಲೆಯ ಘಾತ, ಧಾಟಿಯ ಏರಿಳಿವು, ಖಚಿತವಾದ ಧೋರಣೆ, ಸ್ಪಷ್ಟತೆ-ಇವುಗಳನ್ನೊಳಗೊಂಡಿರುವುದು" ಈ ಕವಿಗಳ ಕಾವ್ಯದ ಸಮರ್ಥತೆಯ ಸೂಚನೆ ಎಂದು ನವ್ಯಕವಿಗಳಲ್ಲೊಬ್ಬರಾದ ಲಂಕೇಶರನ್ನು ಹೊಗಳಿದ್ದಾರೆ. ಗದ್ಯದ ಘಾತ, ಆಡುಮಾತಿನ ಲಯ ಇವು ಜಿ. ಪಿ. ರಾಜರತ್ನಂ ಅವರ 'ರತ್ನನ ಪದಗಳು' ಮತ್ತು 'ನಾಗನ ಪದಗಳು', ಬೇಂದ್ರೆಯವರ ಜಾನಪದಗೀತಗಳು, ವಿ. ಸೀ. ಯವರ "ಅಭೀ:"–ಮತ್ತಿತರ ಕವಿತೆಗಳಲ್ಲಿ, ಸರಳರಗಳೆಯಲ್ಲಿ, ರಂ. ಶ್ರೀ. ಮುಗಳಿಯವರ "ಓಂ ಅಶಾಂತಿಃ"ಯಲ್ಲಿ ಬರುವ ಮುಕ್ತ ಛಂದದ ಕವಿತೆಗಳಲ್ಲಿ ಚೆನ್ನಾಗಿಯೇ ಕಾಣಬರುತ್ತವೆ. ಉತ್ತಮ ಗದ್ಯಕ್ಕೆ ತನ್ನದೇ ಆದ ಲಯವಿದೆ ಎನ್ನುವುದು ಸಾಹಿತ್ಯಾಭ್ಯಾಸಿಗಳೆಲ್ಲರಿಗೂ ಗೊತ್ತು. ಕಾವ್ಯವು ತನ್ನ ಲಯದಲ್ಲಿ ಸಹಜವಾಗಿಯೇ ಅತ್ಯುತ್ತಮ ಗದ್ಯದ ಲಯದ ಹತ್ತಿರ ಬರುತ್ತದೆ ಎಂಬುದೂ ಟಿ. ಎಸ್. ಇಲಿಯಟ್, ಕೋಲ್‌ರಿಜ್ ಮುಂತಾದ ವಿಚಾರಶೀಲ ವಿಮರ್ಶಕ–ಕವಿಗಳ ಮತ. ಅಲ್ಲದೆ ಇದು ಕೇವಲ ತಾಂತ್ರಿಕ ಪ್ರಜ್ಞೆಯ ಮಾತಾಯಿತು. ನಿಜಕ್ಕೂ ನವ್ಯಕವಿಗಳು ಕೇವಲ ತಾಂತ್ರಿಕತೆಯ ಬಗ್ಗೆಯೇ ಹೆಚ್ಚು ಹೆಚ್ಚುಗಮನ ಕೇಂದ್ರೀಕರಿಸುತ್ತಿದಾರೆ ಎಂದು ತೋರುತ್ತದೆ. ಕೇವಲ ತಂತ್ರದ ದಾಸ್ಯವೇ ಇಂದಿನ ಪರಿಯಾಗಿದೆ. (ಕಾವ್ಯದ ಒಳಸತ್ವದಿಂದಲೇ ತಂತ್ರ ರೂಪಿತವಾಗ ಬೇಕೆಂಬ ನವ್ಯಸಿದ್ಧಾಂತವನ್ನೇ ಇವರು ಮರೆತಂತಿದೆ! Ultimately technique is a problem of sincerity–ತಂತ್ರವು ಪ್ರಾಮಾಣಿಕತೆಯ ಸಮಸ್ಯೆ ಕೊನೆಗೆ ಎಂದು ಟಿ. ಎಸ್. ಇಲಿಯಟ್ ಹೇಳಿದುದನ್ನು ನೆನೆಯಬೇಕು.) ಆದರೆ ತಾಂತ್ರಿಕತೆಯೊಂದೇ ಕಾವ್ಯದ ಗುಣ ಬದಲಾಯಿಸಲಾರದೆಂಬುದನ್ನು ಮರೆಯುವಂತಿಲ್ಲ. ಸರಳರಗಳೆಯ ಅಥವಾ ಬೇರೊಂದು ಛಂದಸ್ಸಿನ ಸಾಲುಗಳನ್ನು ತೆಗೆದುಕೊಂಡು ಅಲ್ಲಲ್ಲಿ ತುಂಡು ತುಂಡುಮಾಡಿ, ಸಾಲುಗಳ ಸಂಖ್ಯೆಯನ್ನು ಹೆಚ್ಚಿಸಿದ ಮಾತ್ರಕ್ಕೇ ಹೊಸತನ ತಂದಂತಾಗಲಿಲ್ಲ. ಅಥವಾ ಕನ್ನಡ ಭಾಷೆಗೆ ಒಗ್ಗದಂತಹ ಘಾತ, ನಿರ್ಘಾತ (Stress and unstress) ಪದಗಳನ್ನು ಬಳಸುವ ವ್ಯರ್ಥ ಪ್ರಯತ್ನವೂ, ಕನ್ನಡದಲ್ಲಿ ಇಲ್ಲದ ದೊಡ್ಡಕ್ಷರ (Capital Letters) ಗಳನ್ನು ಬಳಸಿಕೊಂಡು ಹೊಸ ಮೂಡಿಕೆ ನೀಡುವ ಯತ್ನವೂ ಹಾಸ್ಯಾಸ್ಪದವಾಗುತ್ತವೆ.

" ನೀಲಿಮದ ಇಂದ್ರನೀಲದಲ್ಲಿ
ಅಸಹ್ಯ ಅಸಾಧ್ಯ ಬಿಳಿಬೆಳಕಿನ
ಕಠಾರಿ ಇರಿದ ನಂಜು ಪಸರಿಸಿದೆ "

ಎಂಬಲ್ಲಿನ ಅ ಗಳು ದಪ್ಪಕ್ಷರದಲ್ಲಿ ಅಚ್ಚಾಗಿವೆ. ಅಲ್ಲಿಗೆ ಅಚ್ಚುಕೂಟದ ನೆರವಿನಿಂದಲೇ ಕಾವ್ಯದ ಗುಣ ಬದಲಾಯಿಸುತ್ತದೆ ಎಂಬ ತೀರ್ಮಾನಕ್ಕೆ ಬಂದರೆ ಅದು ಲೇವಡಿಯಾಗುತ್ತದೆ! ರಾಮಚಂದ್ರಶರ್ಮರ ಕವಿತೆಗಳೂ, ವಿನಾಯಕರ ಹಾಗೂ ಮುಗಳಿಯವರ ಕವಿತೆಗಳೂ ರೊಮ್ಯಾಂಟಿಕ್ ಸಂಪ್ರದಾಯದ ಗುಣಗಳನ್ನೇ ಪಡೆದಿವೆ—ತೊಟ್ಟ ಕವಚ ಬೇರೆ ಎಂದು ಹೇಳಬೇಕಾಗುತ್ತದೆ.

" ಆಂಜನೇಯನಂತೆ
ಶಿಲ್ಪಿ ತಂದಿಟ್ಟ ಕಲಾನೀಲಗಿರಿಯದು
ಗೋಪುರ !
ಭವ್ಯ, ಅದ್ಭುತರಮ್ಯ !
ಬಯಲೇ ಆಲಯವಾದ ಪ್ರಾಕಾರಗಳು
ಅತಿಮಾನವರ ಮಂಟಪಗಳು
ಇಂದ್ರನರಮನೆಯ ಕುಸಿರಿನ ಸ್ತಂಭಗಳು "

ಮುಂತಾಗಿ ಮಧುರೆಯ ಮೀನಾಕ್ಷಿ ದೇವಾಲಯವನ್ನು (ಪುಣ್ಯಭೂಮಿ : ೧೯೬೭) ವರ್ಣಿಸುವಲ್ಲಿ ಗೋಕಾಕರು ಗದ್ಯವನ್ನೇ ಲಯಬದ್ಧವಾಗಿ ಬರೆದು ಪದ್ಯವೆಂದು ಕರೆದುದು ಸ್ಪಷ್ಟ. ಅವರ ಈಚಿನ ' ಕವಿತೆ 'ಗಳಲ್ಲಿ ಹೆಚ್ಚು ಪಾಲಿನವೆಲ್ಲ ಈ ಬಗೆಯವೇ ಆಗಿದೆಯೆಂದು ಹೇಳಬೇಕಾಗಿದೆ. ಕವಿಯೇ ಪದ್ಯವನ್ನು ಓದುವಾಗ, ಬಾನುಲಿಯ ಮೇಲೆ ಬಿತ್ತರಿಸಿದಾಗ ಆಲಿಸುವಾಗ, ಈ ಮಾತುಗಳಿಗೆ ಕವಿಯ ದನಿಗೂಡಿ ಜೀವಕಳೆ ಬರುತ್ತದೆ. ಆದರೆ ಪದ್ಯವೆಂದು ನಾವೇ ಓದಿಕೊಳ್ಳುವಾಗ ಅವು ಸತ್ವಹೀನವಾಗಿಬಿಡುತ್ತವೆ. ಈ ಮಾತನ್ನು ನಾವು ನಾಟಕೀಯತೆಯೇ ಮುಖ್ಯ ಲಕ್ಷಣವಾಗುಳ್ಳ ಕೆಲವಾರು ನವ್ಯ ಕವಿತೆಗಳ ಬಗ್ಗೆಯೂ ಹೇಳಬಹುದು. ಹಳೆಯ ರೀತಿಯ ಕವಿತೆಗಳಲ್ಲಿ ' ಹಾಡುತನ 'ವಿದ್ದಂತೆ ನವ್ಯ ಕವಿತೆಗಳಲ್ಲಿ ' ನಾಟಕೀಯತೆ '. ಈ ಎರಡು ಗುಣಗಳೂ ಕಾವ್ಯಗುಣದಿಂದ ಹೊರತಾದುವೆನ್ನದೆ ವಿಧಿಯಿಲ್ಲ.

೧೧

ಈ ದಶಕದ ಅತಿ ಪ್ರಮುಖ ಮತ್ತು ಶ್ರೇಷ್ಠಕವಿ ಎಂ. ಗೋಪಾಲಕೃಷ್ಣ ಅಡಿಗ ಅವರು. ಅಡಿಗರ ಕಾವ್ಯ ಬೆಳೆದುಬಂದ ಹಾದಿಯೇ ಅದ್ಭುತ. ಬೇಂದ್ರೆ ಮತ್ತು ಪು.ತಿ.ನ. ಅವರ ಕಾವ್ಯಪ್ರಭಾವದಲ್ಲಿ ಸಸಿಗೊಂಡ ಇವರ ಕಾವ್ಯ ತನ್ನದೇ ಆದ ನಿಲುಮೆಯನ್ನು ಅರಸಿಕೊಂಡು ಕೊಂಬೆ ಚಾಚಿತು. ಹೊಸ ಪ್ರಯೋಗದ ಕಡೆಗೆ ಬೇರು ಚಾಚಿದ ಅವರ ಕಾವ್ಯ—ನವ್ಯಕಾವ್ಯದ ಹೆಮ್ಮರವಾಗಿ ನಿಂತಿದೆ. ರೊಮ್ಯಾಂಟಿಕ್ ಸಂಪ್ರದಾಯದಲ್ಲಿ

ಪದ್ಯ ಬರೆಯಲಾರಂಭಿಸಿದ ಅಡಿಗರು–ಅದರಲ್ಲಿಯೂ ತಮ್ಮ ಹಿರಿಮೆಯನ್ನು ಸಾಧಿಸಿದರು. ಅನಂತರ ಆ ಜಾಡನ್ನು ತೊರೆಯುವ ಆಂತರಿಕ ಒತ್ತಡದ ಫಲವಾಗಿ ನವ್ಯ ರೀತಿಯಲ್ಲಿ ಪ್ರಯೋಗಶೀಲರಾದರು.–ಈ ಪ್ರಯೋಗಗಳಲ್ಲಿ ಸಾಫಲ್ಯ ಪಡೆದು ಶ್ರೇಷ್ಠ ಕವಿಗಳಾಗಿ ವಾರೆ. ನವ್ಯಕವಿತೆಯಲ್ಲಿ ಅಡಿಗರಂತೆ ಸಫಲರಾದವರು ಬೇರೊಬ್ಬರಿಲ್ಲವೆಂಬುದು ಖಂಡಿತ ವಾದ ಮಾತು. ಅಡಿಗರನ್ನು ಅನುಕರಿಸಿಯೋ, ಅವರ ಹಾದಿಯನ್ನು ಅನುಸರಿಸಿಯೋ ಬರೆಯಲು ಯತ್ನಿಸಿದ 'ನವ್ಯಕವಿಗಳು' ವಿಫಲರಾಗಿದ್ದಾರೆಂಬುದೂ ಸ್ಪಷ್ಟ. ಪ್ರಾಯಶಃ ಅಡಿಗರ ವ್ಯಕ್ತಿತ್ವದ ಪ್ರಖರತೆ, ಪ್ರತಿಭೆ ಇಲ್ಲದ ಈ ಕವಿಗಳಲ್ಲಿ ಕೆಲವರಾದರೂ "ಅಡಿಗ ರೊಂದಿಗೆ ನಮ್ಮನ್ನು ಹೋಲಿಸುವುದು ತಪ್ಪು–ನಾವು ಅಡಿಗರಿಗಿಂತ ಬೇರೆಯೇ ವ್ಯಕ್ತಿತ್ವ ವನ್ನು ಬೆಳಸಿಕೊಳ್ಳಲು ಯತ್ನಿಸುತ್ತಿದೇವೆ. ಅಡಿಗರ ಕಾವ್ಯದ ಪ್ರಭಾವದ ವಿರುದ್ಧ ಹೋರಾಡಬೇಕು....ಅದು ಇಲ್ವಲ ವಾತಾಪಿಯರ ಭ್ರಾತೃತ್ವದ ಹಾಗೆ ವಿನಾಶಕಾರಿ ಯಾದುದು." ಎಂಬ ಮಾತನ್ನಾಡಿದರೆ ಸೋಜಿಗವೇನೂ ಇಲ್ಲ. ಈ ಮಾತನ್ನು ಎಲ್ಲ ದೊಡ್ಡ ಕವಿಗಳ ಬಗ್ಗೆಯೂ ಹೇಳಬಹುದು. ನಮ್ಮ 'ಸ್ವಂತಿಕೆ'ಯನ್ನುಳಿಸಿಕೊಳ್ಳಲು ಎಲ್ಲ ಪ್ರಭಾವಗಳನ್ನೂ ಜೀರ್ಣಿಸಿಕೊಂಡು ಅವುಗಳಿಂದ ಹೊರತಾಗಿ ನಿಲ್ಲುವುದು ಅಗತ್ಯ ವೆಂಬುದು ಸ್ಪಷ್ಟವೇ ಇದೆ. ಅಡಿಗರಾದರೂ ಸಂಪ್ರದಾಯದ ಸತ್ವವನ್ನು ಅರಗಿಸಿಕೊಂಡು, ಅದರಿಂದಲೇ ಬೆಳೆದು, ಅದರ ಹೊರತಾಗಿ ನಿಂತು, ಹೊಸದನ್ನು ಸೃಷ್ಟಿಸಿಕೊಂಡು ತಮ್ಮ ಸ್ವಂತಿಕೆಯನ್ನು ಸ್ಥಾಪಿಸಿದರೆಂಬುದು ಅವರ ಕವಿತೆಗಳನ್ನು ಅಭ್ಯಾಸ ಮಾಡಿದರೆ ಸ್ಪಷ್ಟ ವಾಗುತ್ತದೆ. 'ಹಿಮಗಿರಿಯ ಕಂದರ' ಮತ್ತು 'ಗೊಂದಲಪುರ' ಕವಿತೆಗಳಲ್ಲಿ ಅಡಿಗರು ತಮ್ಮ ಹಳೆಯ ರೊಮ್ಯಾಂಟಿಕ್ ಕಾವ್ಯದ ಮುಖ್ಯಗುಣ-ದೌರ್ಬಲ್ಯ ಎಂದರೂ ಸಲ್ಲುತ್ತದೆ- ವಾದ 'ಸ್ವ-ಆಸಕ್ತಿ'ಯಿಂದ ಪಾರುಗೊಳ್ಳಲು ಪ್ರಯತ್ನಿಸಿದ್ದಾರೆಂಬುದು ಸ್ಪಷ್ಟವಾಗಿದೆ. "Man is the subject centre of poetry, A Man is the subject centre of Romantic Poetry" ಎಂದು ಹೇಳಬಹುದು. ಕಾವ್ಯದ ಕೇಂದ್ರವಸ್ತು ಮಾನವ ನಾದರೆ, ರೊಮ್ಯಾಂಟಿಕ್ ಕಾವ್ಯದ ಕೇಂದ್ರವಸ್ತು ಒಬ್ಬ ಮಾನವ. ಆ ಒಬ್ಬ ಮಾನ ವನು ಸಹಜವಾಗಿಯೇ ಕವಿಯೇ ಆಗಿರುತ್ತಾನೆ ಎಂದು ಹೇಳಬಹುದು. ಈ ಸ್ವಆಸಕ್ತಿ ಯನ್ನು ನಾವು ವ್ಯಕ್ತಿಕ (Subjective) ಕಾವ್ಯದ ಮುಖ್ಯ ಗುಣವೆನ್ನುವುದಾದರೆ, ವಸ್ತುಕತೆ (Objectiveness) ನವ್ಯಕಾವ್ಯದ ಮುಖ್ಯ ಗುಣವೆಂದು ಸೂಚಿಸುವುದು ಸರಿ ಹೋಗುತ್ತದೆ. ಇಲ್ಲಿ ಪ್ರಾಸಂಗಿಕವಾಗಿ ಟಿ. ಎಸ್. ಇಲಿಯಟ್, ಆಡೆನ್, ಸೆಸಿಲ್ ಡೇಲೂಯಿ ಮುಂತಾದವರಿಗೆ ಇಂಗ್ಲೆಂಡಿನ ೧೭ ಮತ್ತು ೧೮ನೆ ಶತಮಾನದ ಕವಿಗಳ ಬಗ್ಗೆ ಪ್ರೀತಿ ಹೆಚ್ಚಿದ್ದುದನ್ನು ನೆನೆಯಬಹುದು. "What oft was said, but never so well expressed"–ಹಲವಾರು ಬಾರಿ ಹೇಳಿದ್ದರೂ, ಇಷ್ಟು ಸೊಗಸಾಗಿ ಎಂದೂ ಹೇಳಿದ್ದಿಲ್ಲವೆಂಬ ಪೋಪ್ ಕವಿಯ ಕಾವ್ಯಸೂತ್ರವನ್ನು ನವ್ಯಕವಿಗಳು ಒಪ್ಪಿಕೊಂಡಂತಿದೆ. ೧೯೬೭ರ ಸಾಮರ್ಸೆಟ್ ಮಾಹಮ್ ಪ್ರಶಸ್ತಿಯನ್ನು ತನ್ನ ನವ್ಯ ಕಾದಂಬರಿಗೆ ಪಡೆದ ಇಂಗ್ಲೆಂಡಿನ ನವ್ಯಕವಿ, ನವ್ಯವಿಮರ್ಶಕ ಮತ್ತು ನವ್ಯ ಕಾದಂಬರಿ ಕಾರ ಬಿ. ಎಸ್. ಜಾನ್ಸನ್ (B. S. Johnson) ಹೇಳುವ ಈ ಮಾತು ನೋಡಿ:

"We recognise that it is both conceited and ignorant to think that we (or anyone else) can have anything new to say about humanity and human activity, and that therefore, the only honest approach is to say whatever it is we choose to say in a NEW MANNER, in a way which has not been done before....of course there is a drive on the part of all writers to write about some experience new to them, because it means something exceptional to them ; but it is obviously mistaken to think that because they have learnt it for the first time, that it is the first time it has been learnt by anyone" (B.B.C. Broadcast, November 1967).

ತಾವು ಹೇಳಬೇಕಾದುದರಲ್ಲಿ ಮಾನವ ಸಮೂಹದ ಬಗ್ಗೆ ಮತ್ತು ಮಾನವ ಚಟುವಟಿಕೆಗಳ ಬಗ್ಗೆ, ಹಿಂದೆ ಇಲ್ಲದ ಹೊಸದು ಇದೆಯೆಂದು ತಿಳಿದುಕೊಳ್ಳುವುದು ಉದ್ಧಟ ಅಹಂಕಾರ ಹಾಗೂ ಅಜ್ಞಾನವಾಗುತ್ತದೆ ಎಂದು ಜಾನ್ಸನ್ ಎಚ್ಚರಿಸಿದಾನೆ. ಒಬ್ಬ ಕವಿಗೆ ಯಾವುದೋ ಒಂದು ಹೊಸ ಅನುಭವ ಮೊತ್ತಮೊದಲಬಾರಿಗೆ ಆಯಿತೆಂದ ಮಾತ್ರಕ್ಕೆ ಪ್ರಪಂಚಕ್ಕೇ ಅದು ಮೊತ್ತಮೊದಲ ಅನುಭವವೆಂದು ತಿಳಿದುಕೊಳ್ಳುವುದು ಮೂರ್ಖತನವಾದೀತು. ಪ್ರೇಮ, ನಿರಾಸೆ, ಗಾಢವಾದ ದುಃಖ, ಸುಖ ಇವೆಲ್ಲ ಮಾನವರೆಲ್ಲರಿಗೂ ಮೊದಲಿಂದಲೂ ಬಂದ ಅನುಭವಗಳೇ ಆದ್ದರಿಂದ ಈ ಅನುಭವಗಳು ಹೊಸತಲ್ಲ–ಹೊಸತಿರುವುದು ಅದನ್ನು ಹೇಳುವ ರೀತಿಯಲ್ಲಿ ಎಂದ ಜಾನ್ಸನ್ನನ ಮಾತಿನಂತೆ, ನವ್ಯತೆಯು ತಾಂತ್ರಿಕ ಪ್ರಜ್ಞೆಯಲ್ಲಿದೆ ಎಂದು ಅರ್ಥವಾಗುತ್ತದೆ. ಟಿ. ಎಸ್. ಇಲಿಯಟ್ ಕೂಡ ತನ್ನ The Waste Land ಕವಿತೆಯಲ್ಲಿ ಹಿಂದಿನ ಕವಿಗಳು ಹೇಳದೇ ಇದ್ದುದನ್ನೇನೂ ಹೇಳಿಲ್ಲ. ಆದರೆ ಆತ ಕಾವ್ಯ ಭಾಷಾಪ್ರಯೋಗ (Poetic Diction)ಕ್ಕೆ ಹೊಸ ಜೀವಕೊಟ್ಟನೆಂಬ ಮಾತನ್ನು (F. R. Leavis) ಎಫ್. ಆರ್. ಲೀವಿಸ್ ಮುಂತಾದ ವಿಮರ್ಶಕರೂ, ಸ್ವಯಂ ಇಲಿಯಟ್ ಕೂಡ ಹೇಳಿದಾನೆ. ಅಂತೆಯೇ ಟಿ. ಎಸ್ ಇಲಿಯಟ್ ಹೊಸ ಕಾವ್ಯದಲ್ಲಿ-ಹೊಸ ತಾಂತ್ರಿಕ ಪ್ರಯೋಗ ನಡೆಸಿ ಸಫಲನಾದ. ಹೊಸ ಮಾರ್ಗವೊಂದರ ಪ್ರವರ್ತಕನಾದ. ಕನ್ನಡದಲ್ಲಿ ಅಡಿಗರು ಈ ರೀತಿಯ ತಾಂತ್ರಿಕ ಪ್ರಯೋಗವನ್ನು 'ಗೊಂದಲಪುರ'ದಲ್ಲಿ ಮಾಡಿದ್ದಾರೆ. ಹೊಸ ಕಾವ್ಯರೀತಿಗೆ ಮೂಲ ಸ್ಫೂರ್ತಿಯಾಗಿದ್ದಾರೆ. ಸಹಜವಾಗಿಯೇ ಈ ಪ್ರಯತ್ನ ನಡೆಸುವ ಮೊದಲು ಮೊದಲಿನಲ್ಲಿ ಆರ್ಭಟ ಹೆಚ್ಚಾಗಿರುತ್ತದೆ. ಇದನ್ನು ನಾವು 'ಗೊಂದಲಪುರ'ದಲ್ಲಿ ಬರುವ ಭೀಭತ್ಸ ವರ್ಣನೆಗಳಲ್ಲಿ ಚೆನ್ನಾಗಿ ಕಾಣಬಹುದು. ಆದರೂ ಆ ಭೀಭತ್ಸ "ಅನಾವಶ್ಯಕವೆನ್ನಿಸುವಷ್ಟು" ಇದೆಯೆಂಬ ಯು. ಆರ್. ಅನಂತಮೂರ್ತಿಯವರ ಮಾತನ್ನು ಒಪ್ಪಲಾಗುವುದಿಲ್ಲ (ಭೂಮಿಗೀತ, ಮುನ್ನುಡಿ ೧೯೫೯). ಭೀಭತ್ಸವೇ ಅಲ್ಲಿನ ಮುಖ್ಯ ಅಂಶವಾಗಿದ್ದು–ಕೊನೆಯಭಾಗದಲ್ಲಿ ಬರುವ "ರಕ್ಷಮಾಂ ಪುರುಷೋತ್ತಮ" ಎಂಬ ಪ್ರಾರ್ಥನೆಯ ಆರ್ತತೆಗೆ ಅರ್ಥಕೊಡುತ್ತದೆ.

"ಪರಂಪರಾನುಗತವಾದ ಜಡತೆಗೆ Shock ಕೊಡಲು ಅಡಿಗರು, ಹೀಗೆ ಮಾಡಿದರೋ ಏನೋ, ಈ ಭೀಭತ್ಸ" ದೋಷಪೂರಿತವಾದುದು ಎಂದು ಅನಂತಮೂರ್ತಿಯವರು ಹೇಳಿದ್ದಾರೆ. ಆದರೆ ಈ ಭೀಭತ್ಸ ಅಲ್ಲಿನ ವಸ್ತುವಿನ ಭೀಭತ್ಸ. ಗಾಢವಾದ ನಿರಾಸೆಯ ಕತ್ತಲೆ, ಕತ್ತುಹಿಸುಕುವಂತಹ ವಾತಾವರಣದ ವರ್ಣನೆಯಲ್ಲಿ ಅಡಿಗರು ಚಮತ್ಕಾರದಿಂದ ಉಪಯೋಗಿಸಿಕೊಂಡಿರುವ ಯಕ್ಷಗಾನದ ತಂತ್ರ, ಮತ್ತು ಅವರಿಗಿರುವ ಪದಗಳ ಮೇಲಿನ ಪ್ರಾಬಲ್ಯ ಇವುಗಳಿಂದ ಆ ಭಾಗ ಭೀಭತ್ಸದ ತೀವ್ರ ಮೂಡನ್ನು ಅದ್ಭುತವಾಗಿ ಚಿತ್ರಿಸಿದೆ. ಹಾಗಿಲ್ಲದಿದ್ದಲ್ಲಿ ಮುಂದಿನ ಪ್ರಾರ್ಥನೆಗೇನೂ ಅರ್ಥವೇ ಇರುತ್ತಿರಲಿಲ್ಲ-ಸಾರ್ಥಕತೆಯೂ ಬರುತ್ತಿರಲಿಲ್ಲ. ಮಾತಿನ ದುಂದುಗಾರಿಕೆಯು ಇಲ್ಲಿ ಅಡಿಗರಲ್ಲಿರುವ ಮುಖ್ಯ ದೋಷ. ಇದು ಪ್ರಾಯಶಃ ಅವರು ರೊಮ್ಯಾಂಟಿಕ್ ಸಂಪ್ರದಾಯದ ಕಾಲದಲ್ಲಿಯೂ ಮುಖ್ಯ ಕವಿಗಳಾಗಿದ್ದುದರ ಫಲವಾಗಿದ್ದು-ಅದರಿಂದ ಬಿಡುಗಡೆ ಪಡೆಯಲಾಗದೆ ಹೋಗಿದ್ದಾರೆಂಬುದರ ಸೂಚನೆ. ಅಡಿಗರು ಈ ಪದ್ಯದಲ್ಲಿ "ತನ್ಮೃತನದ ಚರ್ಮದಿಂದ ಹೊರಬರುವ" (Jumping out of one's own skin) ಕಾರ್ಯದಲ್ಲಿಯೂ ವಿಫಲರಾಗಿರುವುದೇ ಈ ಕವಿತೆಗಳ ದೋಷ. ಕವಿಯು ತನ್ನನ್ನು ಮರೆಯುವುದು ಇಲ್ಲಿ ಸಾಧ್ಯವಾಗಿಲ್ಲದುದರಿಂದ ಅಡಿಗರ ಕೃತಿಯಲ್ಲಿ ಅಡಿಗರೇ ನಾಯಕನಂತೆ ತೋರಿಬರುತ್ತಾರೆ-ಅದೇ ಇಲ್ಲಿಯ ದೌರ್ಬಲ್ಯ. ಇಲ್ಲಿ ಆರ್ಭಟದ ಜತೆಗೆ ಕೈಲಾಗದೆ ಮೈ ಪರಚಿಕೊಳ್ಳುವ ಹಿಂಸ್ರತನವೂ ಕಾಣುತ್ತದೆ. ಈ ದೌರ್ಬಲ್ಯವನ್ನು ಅಡಿಗರ ಹಿಂದಿನ ಮತ್ತು ಇಂದಿನ ಕವಿತೆಗಳನ್ನು ಐತಿಹಾಸಿಕವಾಗಿ ಅಭ್ಯಾಸಮಾಡಿದವರು ಮೊದಲ ಕವಿತೆಗಳಲ್ಲಿ ('ಒಳ ತೋಟ'ಯ 'ಮಧುರ', ಕಲ್ಲಾಗು, 'ಮೋಹನ ಮುರಲಿ') ಸ್ಪಷ್ಟವಾಗಿ ಕಾಣಬಹುದು-ಅದು ಕ್ರಮೇಣ ಕಡಿಮೆಯಾಗುತ್ತಿದೆ ಎಂಬುದಕ್ಕೆ 'ನೆನೆ, ನೆನೆಯೋ ಆ ದಿನವ', 'ಏನನಾದರೂ ಮಾಡುತಿರು' ಮುಂತಾದ ಕವಿತೆಗಳೇ ಸಾಕ್ಷಿ. ಈ "ಸ್ವ-ಆಸಕ್ತಿ" ಕಡಿಮೆಯಾಗಿ, ಅತ್ಯಂತ ಹೆಚ್ಚು ಸಾಫಲ್ಯ ಪಡೆದಿರುವುದೆಂದರೆ ಅಡಿಗರ 'ಭೂಮಿಗೀತ' ಮತ್ತು ಈಚಿನ 'ಶ್ರೀರಾಮನವಮಿಯ ದಿವಸ.' ಇವು ಪ್ರಾಯಶಃ ಅಡಿಗರ ಕಾವ್ಯಸೃಷ್ಟಿಯಲ್ಲೇ ಅತ್ಯುಚ್ಚ ಮಟ್ಟದ ಕೃತಿಗಳೆನ್ನಬಹುದು. "ತನ್ನೊಂದಿಗೆ ತಾನು ನಡೆಸುವ ಹೋರಾಟದಿಂದ ಕಾವ್ಯ ರೂಪಿಸುತ್ತೇವೆ" Out of our Quarrels with ourselves we make poetry ಎಂದು ಡಬ್ಲ್ಯು. ಬಿ. ಯೇಟ್ಸ್ ಹೇಳಿದ ಮಾತು ಅಡಿಗರ ಈ ಕವಿತೆಗಳಿಗೆ ಎಷ್ಟು ಸೂಕ್ತವಾಗಿ ಒಪ್ಪುತ್ತದೆ! ಇಲ್ಲಿಯ ಆಂತರಿಕ ಬೆಳವಣಿಗೆ, ಹಂತ ಹಂತವಾಗಿ ಬೆಳೆದಿರುವ ವಿಚಾರ, ಅವುಗಳನ್ನು ತೋರಿಕೊಡುವ ಪ್ರತಿಮೆಗಳ ಮಾಲೆ-ಮೇಲಿನ ಅರ್ಥ ಮಸಕಾಗಿದ್ದರೂ ಭಾಷಾಭಿನಯ (Language as Gesture) ದಿಂದ ತಿಳಿಯುವ ಅಂತರ್ವಿಚಾರ ಇವುಗಳಿಂದ, ಕಾವ್ಯದ ಅಂತರಾಳ ತಿಳಿಯುತ್ತದೆ. ಪದಗಳ ಅರ್ಥ ತಿಳಿಯದಿದ್ದರೆ ಚಿಂತೆಯಿಲ್ಲ, ಅಂತರಾಳ ತಿಳಿಯುತ್ತದೆ-ಅದೇ ಮುಖ್ಯ. "A poem that means nothing to anyone would not be a poem....The reader should let the poem pass direct to his

imagination, by passing his initial controls. For myself, I wish the poem to move me" ಎಂದಿದಾನೆ Cecil Day-Lewis ಸೆಸಿಲ್ ಡೇ ಲೂಯಿ ಎಂಬ ಪ್ರಖ್ಯಾತ ನವ್ಯಕವಿ. ಕಾವ್ಯದ ಅರ್ಥ ನೇರವಾಗಿ ಕಲ್ಪನೆಗೆ ಮುಟ್ಟಿ ಓದುಗನನ್ನು ಪುನರುಜ್ಜೀವನಗೊಳಿಸಬೇಕೆಂದು ಹೇಳಬಹುದಾದರೆ ಅಡಿಗರ 'ಭೂಮಿಗೀತ' ಅಂತಹ ಉತ್ತಮ ಕಾವ್ಯಗಳಲ್ಲೊಂದು ಎಂದು ನಿಸ್ಸಂದೇಹವಾಗಿ ಹೇಳಬಹುದು. ಆ ಪದ್ಯವನ್ನು ಸಮಗ್ರವಾಗಿಯೇ ಅಭ್ಯಾಸ ಮಾಡಬೇಕಾದರೂ ಉದಾಹರಣೆಗಾಗಿ ನಾಲ್ಕಾರು ಸಾಲುಗಳನ್ನು ಮಾತ್ರ ಇಲ್ಲಿ ಕೊಡುತ್ತೇನೆ.

ನೆಲತಾಯ ಮಾಯಕದ ಅರಗಿನರಮನೆಯಲ್ಲಿ
ಹಸ್ತಿನಾಪುರದ ಸ್ಮೃತಿ ಹೊತ್ತ ಲಿಲ್ಲ.
ಮಯ ನಿರ್ಮಿತವೊ, ಸುಯೋಧನರಚಿತವೋ ಅಂತು ಕಡ್ಡಿಗೀರುವತನಕ ಶಂಕೆ ಇಲ್ಲ

ನಾನಲ್ಲಿ ನಲಿವೆ ; ನುಣ್ಣನೆ ನೆಲದಿ ಜಾರಿವೆನು ;—
ಹೊರಜಗಲಿಯಿಂದ ಒಳಮನೆಯ ಕತ್ತಲೆವರೆಗೆ.

"ಯಾರು ನಿಂದವರಲ್ಲಿ ? ತಾಯೆ ?" ಎಂದೆ
"ತಾಯಿ ? ಏನೀ ಭ್ರಾಂತಿ ? ಹೋಗು, ಪೆದ್ದ !"
"ಚಂಡಿ, ಚಾಮುಂಡಿ ಪೇಳ್, ಬೇಕಾದುದೇನು ?"
"ಗಂಡುಸಾದರೆ ನನ್ನ ಬಲಿಕೊಡುವೆಯೇನು ?"
ಇವಳ ಹೊಟ್ಟೆ ಚರಂಡಿಗಾರುಕುಕ್ಕಿದರಯ್ಯ, ಕಳ್ಳಬಸುರಿನ ಯಾವ ಜಾಣರಂಭೆ ?

ಇಲ್ಲಿನ ಪುರಾಣೇತಿಹಾಸ ಮತ್ತು ಹಳೆಯಕಾವ್ಯ (ಬೇಂದ್ರೆಯವರ 'ಕಣಸಿನೊಳಗೊಂದು ಕನಸು' ಕಾವ್ಯದ ಸಾಲುಗಳನ್ನು ಅದ್ಭುತವಾಗಿ ಬದಲಾಯಿಸಿಕೊಂಡಿದಾರೆ) ಇವುಗಳ ಪ್ರಜ್ಞೆ, ಅವುಗಳನ್ನು ಪ್ರತಿಮೆಗಳನ್ನಾಗಿ ಬಳಸಿ ಧ್ವನಿಸುವ ವಿಚಾರ ಇವು ಉದ್ರೇಕ, ಆರ್ಭಟಗಳಿಲ್ಲದೆ ಬಂದಿವೆ ಎಂಬುದು ಯಾರಿಗಾದರೂ ಸ್ಪಷ್ಟವಿದೆ. 'ಗೊಂದಲಪುರ'ದ ಆವುಟ ಇಲ್ಲಿಲ್ಲ. ಇಲ್ಲಿ ಈಡಿಪಸ್ (ತಾಯಿಗಂಡ) ತನದ ಸಂಕೇತ ಎಷ್ಟು ನವುರಾಗಿ ಸೂಚಿತವಾಗಿದೆಯೆಂದರೆ ಆತುರದಲ್ಲಿ ಓದಿದಾಗ ಅದು ಕಣ್ತಪ್ಪುತ್ತದೆ. ರಾಮಚಂದ್ರಶರ್ಮರ ತಾಯಿ-ಮಗನಲ್ಲಿ ಇದು ಎದ್ದು ಕಾಣುವುದನ್ನು ಇಲ್ಲಿ ನೆನೆಯಬಹುದು. ಅಡಿಗರ ಬೇರೆ ಕವಿತೆಗಳಲ್ಲಿರುವಂತೆಯೇ ಇಲ್ಲಿಯೂ ಅತೃಪ್ತಕಾಮದ ಭಿತ್ತಿಚಿತ್ರವಿದೆ. ಆದರೆ ಇದು ಅಸಭ್ಯತೆಯ ಸಾಮಾಜಿಕ ಸಭ್ಯತೆಯಲ್ಲ—ಕವಿಯ ಆತ್ಮದ ಸಂಸ್ಕಾರದ ಸಭ್ಯತೆಯನ್ನು ಒಡೆಯುವುದಿಲ್ಲ, ಮೀರುವುದಿಲ್ಲವೆಂಬುದೂ ಗಮನಾರ್ಹ. ಅಡಿಗರು ಈ ಪೀಳಿಗೆಯ ಅತಿ ಶ್ರೇಷ್ಠ ಕವಿ ಎಂಬುದನ್ನು 'ಭೂಮಿಗೀತ' ಶ್ರುತಪಡಿಸುತ್ತದೆ.

'ಗೊಂದಲಪುರ' ಮತ್ತು 'ಹಿಮಗಿರಿಯ ಕಂದರ' ಈ ಕವಿತೆಗಳಲ್ಲಿ ಟಿ. ಎಸ್. ಇಲಿಯಟ್ಟನ 'The Waste Land' ಪ್ರಭಾವ ಸ್ಪಷ್ಟವಾಗಿ ಕಾಣಸಿಗುತ್ತದೆ. ಅಲ್ಲದೆ ಅಲ್ಲಿ ಅಡಿಗರ ಆಳವಾದ ನಿರಾಸೆಯನ್ನು ಪ್ರಜ್ಞಾಪೂರ್ವಕವಾಗಿ ಕಾವ್ಯದಲ್ಲಿ ಅಳವಡಿಸಿ

ಕೊಳ್ಳುವ ಪ್ರಯತ್ನ ಸ್ಪಷ್ಟವಾಗಿದೆ. ಅಲ್ಲಿ ಇನ್ನೂ ತಡಕಾಟ, ಗೊಂದಲ ಕಾಣುತ್ತದೆ. ಜೊತೆಗೆ ಹಿಂಸ್ರ ಪ್ರವೃತ್ತಿ, ಕೂಗಾಟ, ರಂಪ್ರಮಾಡುವುದು, ಅರ್ಭಟ, ಮೈ ಕೈ ಪರಚಿಕೊಂಡು ತಮ್ಮಮೇಲೆಯೇ ಹಿಂಸೆ ನಡೆಸಿಕೊಳ್ಳುವ ಪ್ರವೃತ್ತಿ ಎದ್ದು ಕಾಣುತ್ತದೆ. 'ಭೂಮಿಗೀತ'ದಲ್ಲಿ ಅಡಿಗರ ಈ ಅರ್ಭಟ, ಹಿಂಸ್ರತನ ಕಡಿಮೆಯಾಗಿದೆ. 'ಪ್ರಾರ್ಥನೆ' 'ಕೂಪಮಂಡೂಕ' ಇವುಗಳಲ್ಲಿ ಇನ್ನೂ ತಗ್ಗಿದ್ದು, ಅವರ ಇತ್ತೀಚಿನ ಕವಿತೆ "ಶ್ರೀರಾಮನವಮಿಯ ದಿವಸ" (ಕವಿತಾ : ಏಪ್ರಿಲ್ ೧೯೬೮) ಎಂಬಲ್ಲಿ ಪ್ರಶಾಂತಿ ಮೂಡಿಬಂದಿದೆ. 'ಶ್ರೀರಾಮನವಮಿಯ ದಿವಸ'ದಲ್ಲಿ ಅಡಿಗರು ಬಳಸಿಕೊಂಡಿರುವ ಛಂದೋರೂಪ ಬಹಳ ಹಳೆಯದು. ಅವರು 'ಒಳತೋಟಿ'ಯಲ್ಲಿ (೧೯೪೩ ರಲ್ಲಿ) ಬಳಸಿದುದು. ಆದರೆ ಈ ೨೫ ವರ್ಷಗಳ ತಮ್ಮ ಬೆಳವಣಿಗೆಯಲ್ಲಿ ಛಂದಸ್ಸಿಗೇ ಮಾತುಗಳಿಗೇ ಹೊಸತನವನ್ನು ಕೊಡಿಸಿಕೊಟ್ಟಿದ್ದಾರೆ ಅಡಿಗರು. ಶುದ್ಧ ಕಾವ್ಯವೆಂದರೆ ಇದು ಎಂದು ಹೇಳುವಂತಹ ಅದ್ಭುತ ಕೃತಿ 'ಶ್ರೀರಾಮನವಮಿಯ ದಿವಸ'. ಸಂಕೀರ್ಣ ಪ್ರತಿಮೆಗಳು ಕೇವಲ ಪ್ರತಿಮೆಗಳಾಗಿಯೇ ಉಳಿಯದೆ "ಊರ್ಧ್ವಗಾಮಿತ್ವದ" ಸೂಚಕಗಳಾಗಿ ಮೆರೆಯುತ್ತವೆ ಇಲ್ಲಿ :

> "ಶ್ರೀರಾಮನವಮಿಯ ದಿವಸ ರಾಮನಾಮಾಮೃತವೆ
> ಪಾನಕ, ಪನಿವಾರ, ಕೋಸಂಬರಿ;
> ಕರಬೂಜ ಸಿಪ್ಪೋಟೆಗಳ ಹೋಳು, ಸೀಕರಣೆ;
> ವ್ಯಕ್ತಮಧ್ಯಕ್ಕೆ ಬಂದುರಿವ ಶಬರಿ
> ....
> ಷಟ್ಚಕ್ರ ರಾಕೆಟ್ಟುಗಳ ಹಂತ ಹಂತಕ್ಕೆ
> ಅಂಟಿ ತಲುಪೀತೇ ಸಹಸ್ರಾರಕೆ ?
> ಹುತ್ತಗಟ್ಟದೆ ಚಿತ್ರ ಮತ್ತೆ ಕೆತ್ತೀತೇನು
> ಪುರುಷೋತ್ತಮನ ಆ ಅಂಥ ರೂಪ-ರೇಖೆ ?"

'ಗೊಂದಲಪುರ'ದ 'ರಕ್ಷಮಾಂ ಪುರುಷೋತ್ತಮ' ವಿಫಲವಾದ ಒಂದು ಮಜಲು-ಇಲ್ಲಿಯ ಸಫಲತೆಗೆ ಎನ್ನಲಡ್ಡಿಯಿಲ್ಲ. 'ಗೊಂದಲಪುರ' ಒಂದು ಪ್ರಚಾರತತ್ವದ ಕಿಡಿಗಾರಿದರೆ, ಈ ಕವಿತೆಯು 'ವ್ಯಕ್ತಮಧ್ಯಕೆ ಬಂದುರಿವ ಶಬರಿ' ಪ್ರಶಾಂತಿಯ ಚೇತನದ ಬೆಳಕನ್ನು ಚೆಲ್ಲುತ್ತಾಳೆ. ಅಧ್ಯಾತ್ಮಕೂಡ (ಈ ಮಾತು ಇಲ್ಲಿ ಸರಿಯಾಗಿ ಹೊಂದುತ್ತದೆ) ಇಲ್ಲಿ ಜೀವಂತರೂಪ ಪಡೆದಿದೆ. ಈ ಕವಿತೆ ಈ ದಶಕದ ಅತಿ ಹಿರಿಯ ಸಾಧನೆಯೆಂದಷ್ಟು ಮಾತ್ರ ಹೇಳಿ (ಸ್ಥಳ ಸಂಕೋಚದಿಂದ ಇನ್ನೂ ವಿಸ್ತಾರವಾಗಿ ಹೇಳಲು ಸಾಧ್ಯವಿಲ್ಲ) ಮುಗಿಸುತ್ತೇನೆ.

ಗೋಪಾಲಕೃಷ್ಣ ಅಡಿಗರ ಕಾವ್ಯ ತನ್ನತನವನ್ನು ಸಾಧಿಸಿಕೊಂಡಿದೆ, ನವ್ಯ ಮಾರ್ಗವನ್ನು ರೂಪಿಸಿಕೊಂಡು ಅದಕ್ಕೊಂದು ಸ್ಥಿರರೂಪ ಕೊಟ್ಟಿದ್ದಾರೆ ಅಡಿಗರು. ಇದಕ್ಕಾಗಿ ಹತ್ತಾರು ವರ್ಷಗಳಕಾಲ ತಮ್ಮ ಕಾವ್ಯಜೀವನದಲ್ಲಿ ಅವಿರತ ಹೋರಾಟ

ನಡೆಸಿ, ಗೊಂದಲದಲ್ಲಿ ಸಿಲುಕಿ ತೊಳಲಾಡಿ 'ಏನನೂ ಮಾಡಲಿಲ್ಲ'ವೆಂಬ ವ್ಯೈ ಪರಚಿಕೊಳ್ಳುವ, 'ಕಟಕಿ ಬೆವರು' ಸುರಿಸಿ ಹಿಂಸ್ರತನದ ಆರ್ಭಟನಡೆಸಿ, 'ಪ್ರಾರ್ಥನೆ'ಯಲ್ಲಿ ಒಂದು ಸಮಾಧಾನದ ನಿಲುಗಡೆಗೆ ಬಂದು 'ಶ್ರೀರಾಮನವಮಿಯ ದಿವಸ'ದಲ್ಲಿ ಶುದ್ಧ ಕಾವ್ಯದ ಪ್ರಶಾಂತಿಯನ್ನು ಸಾಧಿಸಿಕೊಂಡ ಅಡಿಗರು ಈ ದಶಕದ ಅತಿ ಶ್ರೇಷ್ಠಕವಿ ಎಂಬುದು ನಿಸ್ಸಂದೇಹ. ಅವರ ಕಾವ್ಯದ ಸಂಶ್ಲಿಷ್ಟತೆಯು (Complexity) ಈಗ ಪರಿಪೂರ್ಣ ಸಂಕೀರ್ಣ ಸಂವೇದನೆ (Unified Sensiblity) ಯಾಗಿ ಪರಿಪಕ್ವಗೊಂಡಿರುವುದು ಹದಿನೈದುವರ್ಷಗಳ ಅವರ ಕಾವ್ಯದ ಅಭ್ಯಾಸಮಾಡಿದರೆ ಸ್ಪಷ್ಟವಾಗುತ್ತದೆ. ಸಂಪ್ರದಾಯದಲ್ಲಿ ಬೆಳೆದು, ಅದನ್ನರಗಿಸಿಕೊಂಡು ಅದನ್ನು ಮೀರಿ, ಅದರ ಹೊರತಾಗಿ ನಿಂತು, ಹೊಸದನ್ನು ಸೃಷ್ಟಿಸಿ ಸಿದ್ಧಿಪಡೆದ ಅಡಿಗರ ಕಾವ್ಯವನ್ನು ಪರಂಪರೆಯ ಹಿನ್ನೆಲೆಗೆ ಇಟ್ಟು ಅಭ್ಯಾಸಮಾಡುವ ಅಗತ್ಯವಿದೆ. ಅವರು ಹಳೆಯ ಛಂದಸ್ಸಿಗೆ ಹಿಂದಿರುಗಿ ಅದಕ್ಕೆ ಹೊಸತನ ಕೊಟ್ಟುದೂ, ಆಧ್ಯಾತ್ಮಕ್ಕೆ ಜೀವಂತಿಕೆಯನ್ನು ತಂದುಕೊಟ್ಟಿರುವುದೂ ('ಶ್ರೀರಾಮನವಮಿಯ ದಿವಸ' ಕವಿತೆಯಲ್ಲಿ) ಈ ಅಭ್ಯಾಸ ಅತ್ಯಾವಶ್ಯಕವೆಂದು ಸಾರುತ್ತಿವೆ. "ಸಂವೇದನೆಯು ತಲೆಮಾರಿನಿಂದ ತಲೆಮಾರಿಗೆ, ಬದಲಾಯಿಸುತ್ತದೆ; ಆದರೆ ಅಭಿವ್ಯಕ್ತಿ (ಉಕ್ತಿಮಾರ್ಗ) ಬದಲಾಯಿಸಬಲ್ಲವನು ಪ್ರತಿಭೆಯುಳ್ಳ ವ್ಯಕ್ತಿ ಮಾತ್ರ" ಎಂದು ಟಿ. ಎಸ್. ಇಲಿಯಟ್ ಹೇಳಿದ್ದಾನೆ. (Sensibility alters from generation to generation, but expression is altered only by a man of genius-T. S. Eliot) ಅಡಿಗರು ತಾವು ಅಂತಹ ಮಹತ್ತರ ಪ್ರತಿಭೆಯ ಕವಿ ಎಂದು ಈ ಕವಿತೆಗಳಲ್ಲಿ ತೋರಿಸಿದ್ದಾರೆ. ಮಹತ್ತರ ಪ್ರತಿಭೆಯ ಕವಿ ಮಾತ್ರ ಹಳೆಯ ಮಾತುಗಳಿಗೆ ಹೊಸ ಜೀವಕೊಡಬಲ್ಲ. ಹಳೆಯ ಛಂದಸ್ಸಿಗೆ, ಮಾತುಗಳಿಗೆ ಹೊಸ ಬದುಕನ್ನೇ ಕೊಟ್ಟಿದ್ದಾರೆ ಅಡಿಗರು. ಅಡಿಗರ ಈಚಿನ ಈ ಕವಿತೆಗಳ ಸಿದ್ಧಿಯ ಫಲವಾಗಿ ನವ್ಯಕಾವ್ಯಕ್ಕೆ ಒಂದು ನಿಲುವು ಬಂದಿದೆ. ಮುಂದೆ ಇದು ಉತ್ತಮ ನವ್ಯಕಾವ್ಯಕ್ಕೆ ಹಾದಿತೋರುತ್ತದೆ. ಆದರೆ ನವ್ಯಕಾವ್ಯದ ಬಗ್ಗೆ ಎಷ್ಟೇ ಭರವಸೆಯನ್ನು ಅಡಿಗರ ಈ ಕವಿತೆಗಳು ಕೊಟ್ಟರೂ-ಅಡಿಗರ ನಂತರದ ನವ್ಯಕವಿಗಳ ಸಾಧನೆಯತ್ತ ಗಮನಹರಿಸಿದಾಗ ನಮಗೆ ನಿರಾಸೆಯೇ ಕಾದ ಹಾಗಿದೆ.

೧೨

ಅಡಿಗರಿಗಿಂತ ಹಿಂದಿನ ತಲೆಮಾರಿನ ಡಾ. ರಂ. ಶ್ರೀ. ಮುಗಳಿ ಅವರು ಮುಕ್ತ ಛಂದದಲ್ಲಿ ಹಿಂದೆಯೇ ನಡೆಸಿದ ಪ್ರಯೋಗಗಳನ್ನು ಬಹಳ ಯಶಸ್ವಿಯಾಗಿ ಅನಂತರವೂ ನಡೆಸಿಕೊಂಡು ಬಂದರು. ಅವರ 'ಓಂ ಅಶಾಂತಿಃ' ಈ ರೀತಿಯಲ್ಲಿನ ಸಫಲಕೃತಿ. ಅಡಿಗರಿಗಿಂತ ಕೊಂಚವೇ ಹಿರಿಯರಾದ ಶ್ರೀ ಕೆ. ಎಸ್. ನರಸಿಂಹಸ್ವಾಮಿಯವರು ನವ್ಯಕಾವ್ಯದಲ್ಲಿ ಪ್ರಯೋಗಗಳನ್ನು ನಡೆಸಿದುದು ಒಂದು ಸೋಜಿಗವೇ ಸರಿ. 'ಮೈಸೂರು ಮಲ್ಲಿಗೆ'ಯಂತಹ, ಕಾವ್ಯಗುಣ ಹೆಚ್ಚಿಲ್ಲದಿದ್ದರೂ, ಹೆಣ್ಣು-ಗಂಡಿನ

ಮಧುರ ಒಲವಿನ ರೀತಿಯನ್ನು ಸಾಂಸಾರಿಕ ಬದುಕಿನ ಆವರಣದಲ್ಲಿ ಭಾವಪೂರ್ಣವಾಗಿ, ಮೃದುರೀತಿಯಲ್ಲಿ ತೋರಿಕೊಟ್ಟ, ಲಲಿತಶೃಂಗಾರ ಕೃತಿ ಬರೆದ ಕೆ. ಎಸ್. ನ. ಅವರೂ ನವ್ಯತೆಯತ್ತ ಒಲಿದು ಕೆಲವು ಪ್ರಯೋಗ ನಡೆಸಿವಾರೆ. ಬಿ. ಎಚ್. ಶ್ರೀಧರ ಕುಹಕವಾಗಿ ಸಮಾಜವನ್ನು ಟೀಕಿಸಿ ಕೆಲವು 'ನವ್ಯ' ಕವಿತೆ ಬರೆದಿದ್ದಾರೆ. ಅಡಿಗರ ನಂತರದ ಹತ್ತಿರದ ಪೀಳಿಗೆಯವರಾದ ಜಿ. ಎಸ್. ಶಿವರುದ್ರಪ್ಪ, ಚನ್ನವೀರಕಣವಿ ಇವರೂ ಹಳೆಯ ಸಂಪ್ರದಾಯದಲ್ಲಿ ಕವಿತೆಗಳನ್ನು ಯಶಸ್ವಿಯಾಗಿ ರಚಿಸಿದ್ದವರು ನವ್ಯಪಥವನ್ನು ತುಳಿದಿದ್ದಾರೆ. ಅವರೇ ಅಲ್ಲದೆ ಈಚಿನ ಪೀಳಿಗೆಯ ಕವಿಗಳಾದ ಚಂದ್ರಶೇಖರ ಕಂಬಾರ, ನಿಸಾರ್ ಅಹಮದ್, ಚಂದ್ರಶೇಖರ ಪಾಟೀಲ, ಸಿದ್ಧಲಿಂಗ ಪಟ್ಟಣಶೆಟ್ಟಿ, ಎಚ್. ಎಂ. ಚನ್ನಯ್ಯ, ಆಲನಹಳ್ಳಿ ಕೃಷ್ಣ, ಲಂಕೇಶ್, ಸುಮತೀಂದ್ರನಾಡಿಗ ಮುಂತಾದವರೂ ಬರೆಯುತ್ತಿದ್ದಾರೆ. ಇವರೇ ತಮಗಾಗಿಯೇ 'ಲಹರಿ' 'ಸಂಕ್ರಮಣ', 'ಕವಿತಾ' ಮುಂತಾದ ಕಾವ್ಯಕ್ಕೇ ಮೀಸಲಾದ ಪತ್ರಿಕೆಗಳನ್ನು ಪ್ರಕಟಿಸಲಾರಂಭಿಸಿದರು. ಇಂದು 'ಕವಿತಾ' ಮತ್ತು 'ಸಂಕ್ರಮಣ' ಮಾತ್ರ ಇನ್ನೂ ನಡೆಯುತ್ತಿವೆ. ಇದು ಕೂಡ ಒಂದು ಸಾಹಸ ಸಾಧನೆಯೇ ಸರಿ. ಅಡಿಗರ ಸಂಪಾದಕತ್ವದ 'ಸಾಕ್ಷಿ' ಆರಂಭವಾಗಿ ನಿಂತು ಮತ್ತೆ ಬರುತ್ತಿದೆ. ಅದು ತೂಕವಾದ ವಿಮರ್ಶೆಯನ್ನು ಒಳಗೊಂಡಿರುತ್ತದೆ.

ಕೆ. ಎಸ್. ನರಸಿಂಹಸ್ವಾಮಿಯವರ ಬರವಣಿಗೆ ಮುಖ್ಯವಾಗಿ ನಗರ ಜೀವನದ ಹಿನ್ನೆಲೆಯನ್ನು, ನಗರದ ಸಂಸ್ಕಾರಗೊಂಡ ಭಾಷೆಯಲ್ಲಿ ಚಿತ್ರಿಸುತ್ತದೆ. ಆದರೆ ಅವರು ನವ್ಯ ಕಾವ್ಯ ಬರೆಯುವಲ್ಲಿ ಸಹಜವಾಗಿಯೇ ಬೆಳೆದು ಬಂದ ಹೊಸತನವನ್ನು ಅಭಿವ್ಯಕ್ತಿಗೊಳಿಸಿರುವರೇ ಎಂಬುದೊಂದು ಪ್ರಶ್ನೆ ಏಳುವುದು ಸಹಜ. ಅಡಿಗರಿಗಿರುವ ಭಾಷೆಯ ವೈವಿಧ್ಯದ ಸಂಪತ್ತು ಕೆ. ಎಸ್. ನರಸಿಂಹಸ್ವಾಮಿ, ಜಿ. ಎಸ್. ಶಿವರುದ್ರಪ್ಪ ಮತ್ತು ಚೆನ್ನವೀರ ಕಣವಿ ಮುಂತಾದವರಾರಿಗೂ ಇಲ್ಲ. ಅಡಿಗರ ಕವಿತೆಯಲ್ಲಿರುವ ಭಾಷೆಗೆ ನೆಲದ ಸೊಗಡಿದೆ. ಕೆ. ಎಸ್. ನರಸಿಂಹಸ್ವಾಮಿಯವರ ಕವಿತೆ ಲಾಲಿತ್ಯ ಮತ್ತು ನೆಲದಿಂದ ದೂರವಿರುವ ಹೂವಿನ ಕಂಪು ಪಡೆದಿದೆ. ಇಷ್ಟಾದರೂ ಕೆ. ಎಸ್. ನ.ಅವರು ನವ್ಯ ಕವಿತೆಯಲ್ಲಿ ಅಷ್ಟಿಷ್ಟು ಸಫಲ ಪ್ರಯೋಗ ನಡೆಸಿದ್ದಾರೆನ್ನಬಹುದು. ಜಿ. ಎಸ್. ಶಿವರುದ್ರಪ್ಪ, ಕಣವಿ ಇವರೂ ಮುಖ್ಯವಾಗಿ ಲಲಿತ ಕವಿಗಳೇ. ಈ ಮೂವರ ನವ್ಯ ಪ್ರಯೋಗಗಳು ಸಾಫಲ್ಯ ಕಂಡಿರುವುದು, ಅವರು ಸಮಾಜದ ರೋಗ ರುಜಿನಗಳನ್ನು, ತೊಡಕುಗಳನ್ನು ಜನ ಜೀವನಕ್ಕೆ ಮಾರಕವಾದ ಇಮ್ಮೈ ಬದುಕಿನ ಸೋಗಲಾಡಿತನವನ್ನು ರೊಚ್ಚಿನಿಂದ ಕೆದಕಿ, ವಿಡಂಬನೆಗೊಳಿಸಿವಾಗ; ಕಟಕಿಯಿಂದಲೋ ತೀವ್ರವಾದ ಚುಚ್ಚು ಮಾತುಗಳಿಂದಲೋ ಮೂದಲಿಕೆಯಿಂದಲೋ ಸಮಾಜದ ವಿಚ್ಛಿದ್ರ ಪ್ರವೃತ್ತಿಗಳನ್ನು, ವ್ಯಕ್ತಿಯ ಬದುಕನ್ನು ಹೊಲಗೆಡಿಸುವ ಸಮಾಜದ ಸಂಪ್ರದಾಯ, ಕಟ್ಟಳೆಗಳನ್ನು ಹೀಗಳಿಯುವಾಗ ಇವರ ನವ್ಯಕಾವ್ಯ ಅಭಿವ್ಯಕ್ತಿಯು ಸಾಫಲ್ಯ ಪಡೆದಿದೆಯೆನ್ನುವುದನ್ನು ನಾವು ನೆನೆಯಬೇಕು. ಅವರ ಹಿಂದಿನ ಅನುಭವವೇ ಬೇರೆ; ಈಚೀಚಿನ ಅನುಭವವೇ ಬೇರೆ ಎಂಬುದು ಈ ಕವಿತೆಗಳಿಂದ ಸ್ಪಷ್ಟವಾಗುತ್ತದೆ. ಅವರ

ಭಾಷೆಯಲ್ಲಿ ನಾಗರಿಕತನದ ಜತೆಗೇ ಹೆಚ್ಚಿನದೊಂದು ಸೂಚ್ಯದ ಅರ್ಥ ಬೆರೆತು ಬಂದಂತೆ ತೋರುತ್ತದೆ. ಆದರೂ ಆ ಭಾಷೆ ಸಮಗ್ರತೆಯನ್ನು ಸಾಧಿಸಿದೆಯೆಂಬ ಭಾವನೆ ಬರುವುದಿಲ್ಲ. ಎಲ್ಲೋ ಏನೋ ಕೊರೆಯಿದೆ, ಆದ್ದರಿಂದ ಇದು ಅಪೂರ್ಣ ಎನ್ನಿಸುತ್ತದೆ. ಅಡಿಗರ ಕಾವ್ಯದ ಭಾಷೆಯ ಬಗ್ಗೆ ಅದು ಸಹಜವಾಗಿಯೇ ಬೆಳೆದುದು-ಮಣ್ಣಿನ ವಾಸನೆ ಪಡೆದು ಪರಿಪುಷ್ಟವಾದುದೆನ್ನಿಸಿದಂತೆ ಇವರ ಭಾಷೆಯ ಬಗ್ಗೆ ಅನ್ನಿಸುವುದಿಲ್ಲ. ಅಲ್ಲದೆ, ಇವರ ನವ್ಯ ಕವಿತೆಯು ಸಾಫಲ್ಯಗಳಿಸಿರುವುದು ಅವರು ಸಾಮಾಜಿಕ ಟೀಕೆ, ವಿಡಂಬನದ ಮಾತು ಆಡುವಾಗ ಮಾತ್ರ ಎಂಬುದನ್ನು ಗಮನಿಸಬೇಕು. ಸಾಮಾಜಿಕ ಪ್ರಜ್ಞೆ ಹಿಂದಿನ ಕವಿಗಳಿಗೂ ಇತ್ತು ಎಂಬ ಮಾತನ್ನು ಹಿಂದೆಯೇ ಹೇಳಲಾಗಿದೆ. ಸಾಮಾಜಿಕ ಪ್ರಜ್ಞೆಯಿಲ್ಲದಿದ್ದಲ್ಲಿ ಉತ್ತಮ ಕವಿಯಾಗಲಾರ ಎಂಬ ಕೆಲವು ವಿಮರ್ಶಕರ ಮಾತಿನಲ್ಲಿ ಏನೂ ಹುರುಳಿಲ್ಲ. ಸಾಮಾಜಿಕ ಪ್ರಜ್ಞೆಯಿಲ್ಲದಿದ್ದರೆ ಕವಿತೆಯೇ ಅಲ್ಲವೆಂಬುವರಿಗೆ ಪರಂಪರೆಯೂ ತಿಳಿಯದು, ಕಾವ್ಯವೂ ತಿಳಿಯದು. ಕೇವಲ ಅಪ್ರಬುದ್ಧವಾದ, ಸಂಕುಚಿತವಾದ, ಅಜ್ಞಾನದ ಟೀಕೆ ಅದು ಅಷ್ಟೇ. ಇಂಗ್ಲೆಂಡಿನ ಅತಿ ಶ್ರೇಷ್ಠ ಕವಿಗಳಲ್ಲೊಬ್ಬನಾದ ಕೀಟ್ಸನ ಕವಿತೆಗಳಲ್ಲಿ ಈ ಜನ ಹೇಳುವಂತಹ ಸಮಾಜ ಪ್ರಜ್ಞೆಯ ಸೋಂಕು ಕೂಡ ಇಲ್ಲವಲ್ಲ. ಜಾನ್‌ಡನ್, ಷೇಕ್ಸ್‌ಪಿಯರ್ ಇವರಲ್ಲಿ ಸಮಾಜ ಪ್ರಜ್ಞೆ ಹುಡುಕಲು ಹೊರಟರೆ ಮೂರ್ಖತನವಾದೀತು. ಆದರೆ ಅವರು ಶ್ರೇಷ್ಠಕವಿಗಳಲ್ಲವೆಂದು ಹೇಳಲು ಸಾಧ್ಯವೇ? ಅಂತೆಯೇ ಸಮಾಜಪ್ರಜ್ಞೆಯಿಟ್ಟುಕೊಂಡ ವರ್ಡ್ಸ್‌ವರ್ತ್ ಹಾಗೂ ಶೆಲ್ಲಿ ಇವರನ್ನು ಆ ಪ್ರಜ್ಞೆಯಿಲ್ಲದ ಕೀಟ್ಸನಿಗಿಂತ ಹಿರಿಯ ಕವಿಗಳೆಂದು ಕಾವ್ಯಾಭ್ಯಾಸಿಗಳಲ್ಲಿ ಬಹುಮಂದಿ ಒಪ್ಪಲಾರರು. ಸಾಮಾಜಿಕ ಪ್ರಜ್ಞೆ ಮಾತ್ರವೇ ಕವಿಯನ್ನು ಒಂದು ಬಗೆಯ ಪಂಥಕ್ಕೆ ಸೇರಿಸಲಾರದೆಂಬುದು ಖಚಿತವೆನ್ನಲು ಪ್ರಾಸಂಗಿಕವಾಗಿ ಇಲ್ಲಿ ಈ ಮಾತನ್ನು ಹೇಳಿದ್ದೇನೆ. ಕಣವಿ, ಶಿವರುದ್ರಪ್ಪ, ಕೆ. ಎಸ್. ನ. ಅವರು ಉತ್ತಮ ಕವಿತೆಗಳನ್ನು ರಚಿಸಿದಾರೆ. ಹೊಸ ತಂತ್ರವನ್ನು ತುಂಬಾ ಸಾಮರ್ಥ್ಯದಿಂದ ಬಳಸಿಕೊಂಡಿವಾರೆ ಎನ್ನಲು ಅಡ್ಡಿಯಿಲ್ಲ. ಆದರೆ ಅವರು ಮೂಲತಃ ಹಿಂದಿನ ಸಂಪ್ರದಾಯ, ಪರಂಪರೆಗೇ ಸೇರಿದವರೆಂಬುದನ್ನು ಅವರ ಕವಿತೆಗಳು ಮರೆಸುವುದಿಲ್ಲ. ಅಡಿಗರಲ್ಲಿ ಸರಳತೆಯು ಎಂದೂ ಪೂರ್ತಾ ಇರಲಿಲ್ಲವಾದರೂ ಮೊದಲಿದ್ದ ಸರಳತೆಯು ಕ್ರಮೇಣ ಸಂಶ್ಲಿಷ್ಟತೆಯಾಯಿತು. (Complexity) ಆಗ ತಡಕಾಡುತ್ತಿದ್ದ ಕಾಲದಲ್ಲಿ ಸಂಕ್ಲಿಷ್ಟತೆಯೂ ಕಾಣಿಸಿಕೊಂಡು ಕೊನೆಯಲ್ಲಿ ಸಮಗ್ರತೆ, ಸಂಕೀರ್ಣತೆ (Unity-in Variety ಅಥವಾ Harmony) ಉಂಟಾಗಿದೆ ಎಂದು ಹೇಳಬಹುದು. ಆದರೆ ಕೆ. ಎಸ್. ನ. ಮತ್ತು ಕಣವಿಯವರಲ್ಲಿ ಸರಳತೆ ಹಾಗೆಯೇ ಉಳಿದಿದೆ. ಶಿವರುದ್ರಪ್ಪನವರಲ್ಲಿ ಸಹಜವಾಗಿಯೇ ಇರುವ ಸಂಶ್ಲಿಷ್ಟತೆ ಇನ್ನೂ ಸಂಕೀರ್ಣಾನುಭವದಲ್ಲಿ ಮಾಗಿಲ್ಲ.

೧೩

ಕವಿತೆಯನ್ನು ಬರೆಯಲು ಹೊರಡುವವರು ಬಹಳ ಮಂದಿ; ಕವಿತೆಯನ್ನು ಬರೆಯಲು ಕಾರಣಗಳೂ ಬಹಳವಿವೆ ಎನ್ನಬಹುದು. ಅವರಿವರು ಬರೆದುದನ್ನು ಓದಿದ

ನಂತರ ತಾನೂ ಏಕೆ ಬರೆಯಬಾರದು ಎಂಬ ಒಂದೇ ಭಾವನೆಯಿಂದ (ಕವಿತೆಯೆಂಬುದು ಬಹಳ ಸುಲಭವಾಗಿ ಉತ್ಪನ್ನವಾಗುವ ಸರಕು ಎಂಬ ತಾತ್ಸಾರದಿಂದ) ಬರೆಯಲು ಹೊರಡುವುದು ಒಂದು ಬಗೆ. ತಮ್ಮ ಅನುಭವವನ್ನು ಹೇಗೋ ಹೊಸೆದು ಅದಕ್ಕೆ ಛಂದಸ್ಸಿನ ದೀಕ್ಷೆಯನ್ನು, ಅದು ಸಾಗದಿದ್ದರೆ, ದೀಕ್ಷೆಯ ಸೋಗನ್ನು ತಂದುಕೊಡುವ ಪ್ರಯತ್ನ ನಡೆಸುವವರು ಇನ್ನೊಂದು ಬಗೆ. ಹೊಸ ರೀತಿಯಲ್ಲಿ ಬರೆದರೆ ಬಹುಬೇಗ ಹೆಸರು ಮಾಡಿಕೊಳ್ಳಬಹುದೆಂಬ ಹೆಸರಿನ ಆಸೆಯಿಂದ ಬರೆಯುವವರದೂ ಒಂದು ರೀತಿ. ಇಲ್ಲೆಲ್ಲ ಆತ್ಮವಂಚನೆಯ ಜತೆಗೆ ಉಳಿದವರನ್ನೂ ವಂಚಿಸುವ ಪ್ರವೃತ್ತಿ ಕಾಣುತ್ತದೆ. ಒಳಗಿನ ನಿಜವಾದ ಒತ್ತಡದಿಂದ ಬರೆಯುವ ಕವಿಗಳೇ ನಿಜವಾದ ಕವಿಗಳು—ಅಂತಹ ಕವಿಗಳು ಬಹಳ ಕಡಿಮೆ. ಈ ಮಾತನ್ನು ಇಲ್ಲಿ ನಾವು ನೆನೆದಾಗ ನವ್ಯಕವಿಗಳೆಂಬ ಹೆಸರಿಸ ಪಟ್ಟಿಯನ್ನು ತಗುಲಿಸಿಕೊಂಡು ಕೆಟ್ಟ ಗದ್ಯವನ್ನೇ ಲಯಕ್ಕೆ ಸರಿಯಾಗುವಂತೆ ತಿದಿಕಿ ಹೊಸೆಯುವ ಸಂಖ್ಯೆಯೇ ಹೆಚ್ಚು ಎಂಬುದು ಏಕೆಂಬುದು ಸ್ಪಷ್ಟವಾಗುತ್ತದೆ. ಅಡಿಗರು ಪ್ರಾರಂಭಿಸಿದ ನವ್ಯಪಂಥಕ್ಕೆ ಹೆಚ್ಚು ಪ್ರಚಾರ ಸಿಕ್ಕಿದೊಡನೆ ಎಷ್ಟೋ ಜನ ಪದ್ಯ ಬರೆಯದಿದ್ದವರು ಕೂಡ "ಇಂಚುಪಟ್ಟಿ ಪದ್ಯ" ಬರೆದು ನವ್ಯಕವಿಗಳೆನ್ನಿಸಿಕೊಳ್ಳುವ ಪ್ರಯತ್ನ ನಡೆಸಿದರು. ನವೋದಯದ ಕಾಲದಲ್ಲಿಯೂ ಇಂತಹ ಕುಕವಿಗಳು ಪ್ರಾಸಬದ್ಧವಾಗಿ ಪದ ಜೋಡಿಸಿದ್ದರು. ಈಗ ಪ್ರಾಸವಾಗಲಿ, ಛಂದಸ್ಸಿನ ನಿಯಮ ವಾಗಲಿ ಏನೂ ಇಲ್ಲದೆಯೇ ಬರೆದರೆ ಅದೇ ನವ್ಯಕವಿತೆಯೆಂಬ ಹುಚ್ಚು ಕಲ್ಪನೆಯಲ್ಲಿ ಇಂತಹವರು ಪದ್ಯಕಟ್ಟಲು ಹೊರಟರು. ಹಿಂದಿನವರನ್ನು ಬೈಯುವುದು ಒಂದು ಫ್ಯಾಶನ್ನಾಯಿತು. ಸಂಪ್ರದಾಯವೆಂದರೇ ಮೂಗುಮುರಿಯುವುದು, 'ಪ್ರಾಮಾಣಿಕತೆ' 'ಸಾಮಾಜಿಕ ಪ್ರಜ್ಞೆ' 'ಸ್ವಂತಿಕೆಯ ಅಭಿವ್ಯಕ್ತಿ' ಮುಂತಾದ ನವ್ಯಪಂಥದ ತಾತ್ವಿಕ ಪದಗಳನ್ನು ಪದೇ ಪದೇ ಬಳಸಿ ಅವು ಕೂಡ ಈಗ 'ಕ್ಲೀಷೆ'ಗಳಾಗಿ ಸವಕಲು ನಾಣ್ಯ ಗಳಾಗುವಂತೆ ಮಾಡಿರುವವರು ಈ ಕೆಲವು ಜನ. ಇವರು ಕಾವ್ಯದ ಅಭ್ಯಾಸಕ್ಕೆ ಹಿಂದಿನ ಪರಂಪರೆಯ ಮಾತಿರಲಿ, ಈಗಿನ ಕವಿಗಳನ್ನೂ ಓದುವುದಿಲ್ಲ. "ಅಡಿಗರಿಂದಲೇ ತಮ್ಮ ಕಾವ್ಯಾಭ್ಯಾಸವನ್ನು ಪ್ರಾರಂಭಿಸಿದ" (ಅದೂ ಅನುಮಾನವೇ) ಇವರಿಗೆ ಪರಂಪರೆಯ ಪ್ರಜ್ಞೆ, ಐತಿಹಾಸಿಕವಾಗಿ ಸಂಸ್ಕೃತಿ, ಕಾವ್ಯಬೆಳೆದುಬಂದುದು ಒಂದೂ ಅರಿವಿಲ್ಲ. ಇಂತಹ ಅನುಕರಣಶೀಲ ಕವಿಗಳು ಅಲ್ಲೊಂದು ಇಲ್ಲೊಂದು ಪ್ರತಿಮೆ (ತಮಗೆ ಚೆನ್ನವೆಂದು ತೋರಿ ದುದನ್ನು) ಗುರುತಿಟ್ಟುಕೊಂಡು, ಅದರ ಸುತ್ತಲೂ ಅವರಿವರಿಂದ ಎರವಲು ತೆಗೆದುಕೊಂಡ ವಿಚಾರಗಳನ್ನೋ, ಸಾಲುಗಳನ್ನೋ ಸೇರಿಸಿ ಒಂದುಸಾಲಿಗೆ ಮತ್ತೊಂದನ್ನು ಪೇರಿಸಿ ಕವಿತೆ ಸೃಷ್ಟಿಮಾಡುವ 'ನವ್ಯಕವಿ ಬ್ರಹ್ಮ'ರೆನಿಸಿಕೊಂಡಿವಾರೆ. ಇಂತಹ ಅನುಕರಣೆ ಮಾಡುವವ ರಿಂದಲೇ ನವ್ಯಕಾವ್ಯಕ್ಕೆ ಹೆಚ್ಚು ಕೆಡುಕಾಗಿದೆಯೇ ಹೊರತು, ನವ್ಯಕಾವ್ಯವನ್ನು ಪ್ರಾಮಾಣಿಕವಾಗಿ ಓದಿ, ಅದು ಅರ್ಥವಾಗಲಿಲ್ಲವೆಂದು ಅದನ್ನು ಖಂಡಿಸುವ ವಿಮರ್ಶಕ ರಿಂದಲ್ಲ. ಇಂದು ನವ್ಯಕಾವ್ಯ ಬಹುಕಡೆಗಳಲ್ಲಿ ಲೇವಡಿಗೆ, ಅಪಹಾಸ್ಯಕ್ಕೆ ಗುರಿಯಾಗಿ ದ್ದರೆ ಅದು ಇಂತಹ ಹೆಸರು ಸಲ್ಲದ ಅನುಕರಣೆಗಳಿಂದ ಎಂಬುದು ಸ್ಪಷ್ಟಸತ್ಯ. ಮುಕ್ತ ಛಂದಸ್ಸೆಂದರೆ ಲಂಗುಲಗಾಮುಗಳಿಲ್ಲದ ಅಸಂಬದ್ಧ ಪ್ರಲಾಪವೇ ಅವರ ದೃಷ್ಟಿಯಲ್ಲಿ–

"೧+೧=೧—ನಿಜ—ಹಾಹಾ, ಹಾ, ನೇ—
೧—೧=೨—ಖಿಖಿಖಿಖೀ...
ತಿಳಿದಿದ್ದರೆ ಹೇಳಿ—
ತಿಳಿಯದಿದ್ದರೆ ಸುಮ್ಮನಿರಿ—
....
ಧೀ—ಎಂಡ್—
THE—END
DNE—EHT
—ಖಲಾಸ=ಲಾಸ—
ಮುಗಿಯಿತು.
—ದೇವರು. God
—ರುದೇವ. Dog.
ODG—ON—NO"

ಇಂತಹ ಅಸಂಬದ್ಧ ಪ್ರಯೋಗಗಳು ನವ್ಯಕಾವ್ಯವನ್ನು ನಗೆಪಾಟಲಾಗಿ ಮಾಡಿದರೆ ಯಾರೂ ಆಶ್ಚರ್ಯಪಡಬೇಕಾಗಿಲ್ಲ. ಆದರೆ ಇದನ್ನು 'ಪ್ರಾಮಾಣಿಕ ಅಭಿವ್ಯಕ್ತಿ' 'ಸಾರಸ್ವತ ಪ್ರಪಂಚದಲ್ಲಿ ಇದುವರೆಗೂ ನಡೆದಿಲ್ಲ'' ದಂತಹ ಪ್ರಯೋಗವೆಂದು ಹೊಗಳಿಕೊಳ್ಳುವುದು ಇನ್ನೂ ನಗೆಪಾಟಲು! ಇವರ "ಸಾಮಾಜಿಕ ಪ್ರಜ್ಞೆ"ಯೂ ತುಂಬಾ ಹೊಗಳಿಕೆಗೆ ಪಾತ್ರವಾದುದೇ!

ಈ ಸಾಮಾಜಿಕ ಪ್ರಜ್ಞೆಯ ಮಾತು ಅತಿಯಾಗಿ ಕೆಲವುವೇಳೆ ನಗೆಪಾಟಲಾಗುತ್ತದೆ. ಯಾವುದೋ ಒಂದು ನವ್ಯನಾಟಕದಲ್ಲಿ ೧೩ ಬಾರಿಯೋ ೧೭ ಬಾರಿಯೋ ಹೂಸುಬಿಡುವ ಪ್ರಸಂಗಗಳು ಬಂದುದು ಆ ನಾಟಕಕಾರನಿಗಿರುವ ಸಾಮಾಜಿಕ ಪ್ರಜ್ಞೆ, ಸಂವೇದನೆಯ ಕುರುಹೆಂದು ನವ್ಯವಿಮರ್ಶಕರೆನ್ನಿಸಿಕೊಳ್ಳುವವರೊಬ್ಬರು ಹೇಳಿದರೆ, ಅದಕ್ಕೆ ನಗಬೇಕೋ, ಅಳಬೇಕೋ ತಿಳಿಯದು. ಅದು ಕೇವಲ ಅಂಗಪ್ರಜ್ಞೆಯೇ ಹೊರತು, ದೈಹಿಕ ಕ್ರಿಯೆಯ ಪ್ರಜ್ಞೆಯೇ ಹೊರತು, ಸಂವೇದನೆಯೂ ಅಲ್ಲ, ಸಾಮಾಜಿಕ ಪ್ರಜ್ಞೆಯೂ ಅಲ್ಲ. ಬಹುವಿಷಾದದ ಸಂಗತಿಯೆಂದರೆ ಈಗಿನ ಕೆಲವರು ನವ್ಯವೆಂದೊಡನೆ ತಮಗೆ ಅದು ಅರ್ಥವಾಗದಿರಲಿ ಆಗಲಿ, ಅದು ಭವ್ಯವಾಗಿದೆ, ಅದ್ಭುತವಾಗಿದೆ ಎಂಬ ಸೋಗಿನ ಪ್ರಶಂಸೆಯನ್ನು ಹರಿಯಕೊಡುತ್ತಾರೆ. ಅದನ್ನು ಅರ್ಥಮಾಡಿಕೊಳ್ಳದೆ ಅಥವಾ ಓದದೆಯೇ ಖಂಡಿಸುವುದು ಎಷ್ಟು ಅತಿರೇಕದ ಮೂರ್ಖತನವೋ, ಅರ್ಥವಾಗದಿದ್ದರೂ, ಓದದಿದ್ದರೂ ಅದನ್ನು ಪ್ರಶಂಸೆಗೆ ಗುರಿಮಾಡುವುದು ಅಷ್ಟೇ ಅತಿರೇಕದ ಮೌಢ್ಯ, ವಂಚನೆ. ಆದರೆ ಈಗಿನ ಪ್ರಯೋಗಕಾಲದ ಕವಿಗಳು—ನವ್ಯಕವಿಗಳು ತಾವು ಅಡಿಗರಿಂದ ಭಿನ್ನರೆಂದು ಹೇಳಿಕೊಳ್ಳುವುದೇ ಅಲ್ಲದೆ, ಅಡಿಗರ ಪ್ರಭಾವದಿಂದ ತಾವು ಮುಕ್ತರಾಗಿದೇವೆಂದೂ ಈಗ ಸಾರತೊಡಗಿದಾರೆ. ಅಡಿಗರ ಪರಂಪರೆಯ ಜ್ಞಾನ, ಆಳವಾದ ಅನುಭವ, ಸಂಕೀರ್ಣ ಅಭಿವ್ಯಕ್ತಿಗೆ ಸಲ್ಲುವ

ಪದಪ್ರಮಾಣ, ಸಂಪದ್ಯುಕ್ತ ಭಾಷೆ-ಇವರಿಗಿಲ್ಲವೆಂಬುದು ಸ್ಪಷ್ಟ. ಅಷ್ಟೇ ಅಲ್ಲದೆ ಅಡಿಗರಲ್ಲಿ ಭೀಭತ್ಸ ಕಾಣಿಸಿತು–ಒಂದು ಸಮಗ್ರಕೃತಿಯ ಅಂಗವಾಗಿ. ಅವರನ್ನು ಅರ್ಥಮಾಡಿಕೊಳ್ಳದೆ ಅನುಕರಿಸಿ ಹೊರಡುವ ಇವರಲ್ಲಿ ಆ ಭೀಭತ್ಸವೇ ದೊಡ್ಡದಾಗಿ ವಿಕೃತಿಯಾಗುತ್ತದೆ. ವಿಕೃತಿಯೇ ಇವರಿಗೆ ಪ್ರಕೃತಿ–ವಿಕೃತಕಾಮವೇ ಗಂಡು ಹೆಣ್ಣುಗಳ ನಡುವೆ ಇರಬಹುದಾದ ಸಂಬಂಧ. "ನನ್ನ ಮಟ್ಟಿಗೆ ಕಾಮ, ವಿಕೃತಿ ತಂದುಕೊಟ್ಟಂಥ ಭಾವತೀವ್ರತೆಯನ್ನು ಸಹಜವಾಗಿ ಬೇರೆ ವಸ್ತು ತಂದುಕೊಟ್ಟಿಲ್ಲ" ಎಂದು ಶ್ರೀಕೃಷ್ಣ ಆಲನಹಳ್ಳಿಯವರು ಹೇಳಿಕೊಂಡಿರುವುದನ್ನು ಗಮನಿಸಿದರೆ ಅವರ ಕವಿತೆಗಳ ಸೂತ್ರ ವಿಕೃತಕಾಮವೆಂದು ಸ್ಪಷ್ಟವಾಗುತ್ತದೆ! ಅದು ಹೆಚ್ಚು ಬಾರಿ ಪ್ರತಿಮೆಗಳ ಮೂಲಕ ಸೂಚಿತವಾಗಿ ಧ್ವನಿಸದೆ ಕೇವಲ ಬಿಚ್ಚುಮಾತಿನ ಅಸಭ್ಯ ಚಿತ್ರಗಳಾಗುತ್ತವೆ! ಕಾಮದ ಬಗ್ಗೆಯಾಗಲಿ, ಮತ್ತೊಂದು ವಿಷಯದ ಬಗ್ಗೆಯಾಗಲಿ ಬಿಚ್ಚುಮಾತುಗಳಲ್ಲಿ ಹೇಳಬೇಕು, ಒತ್ತಾಯದ ನಿಯಂತ್ರಣ (Inhibition) ಇರಬಾರದೆಂಬುದನ್ನು ಒಪ್ಪಿದರೂ ತಮ್ಮ ಮನಸ್ಸಾಕ್ಷಿಯ ಸಭ್ಯತೆಯನ್ನೇ ಬಲಿಗೊಟ್ಟು ಇದು ಉತ್ತಮ ಕಾವ್ಯವೆಂದು ಬರೆಯುವುದು, ಜಾಣತನವಂತೂ ಇಲ್ಲ. ಮಡಿವಂತಿಕೆಯಲ್ಲಿ ಕಾಮದ ಬಗ್ಗೆ ಮಾತನಾಡದೇ ಇರುವ ಅತಿಸಯದ ವಂಚನೆಯಿದ್ದರೆ, ಅದನ್ನು ಬಿಚ್ಚಿಹೇಳುವಾಗಿನ ಅತಿರೇಕತೆಯಲ್ಲಿ ರಸ್ತೆಯಂಚಿನಲ್ಲಿಯೇ ಮಂಚಹಾಕಿಕೊಂಡು ಕಾಮಕ್ರಿಯೆ ನಡೆಸಿ Shock ಕೊಟ್ಟು ಹಿಗ್ಗುವ, ಮಡಿವಂತಿಕೆಯ ಮೇಲೆ ಸೇಡು ತೀರಿಸಿಕೊಳ್ಳುವ ಕೀಳು ಪ್ರವೃತ್ತಿಯಿದೆ ಎನ್ನದೆ ವಿಧಿಯಿಲ್ಲ. ವಿಕೃತಿಯೇ ತಮ್ಮ ಉಪಾಸಕ ದೈವವೆಂದು ಹೊರಟು, ಕುರೂಪವೇ ಸೌಂದರ್ಯವೆಂದ ಒಂದು ಗುಂಪು—ಇಂಗ್ಲೆಂಡಿನಲ್ಲಿಯೂ ಇತ್ತು. ಅಂತೆಯೇ ವಿಕೃತಕಾಮ, ಸಭ್ಯತೆ (ಮಡಿಯಲ್ಲ)ಯನ್ನು ಮೀರಿ ಬರೆಯುವ ಪ್ರವೃತ್ತಿ ನಮ್ಮಲ್ಲಿಯೂ ಬಂದಿದೆ. ಇದು ಖಂಡಿತವಾಗಿ ಅಡಿಗರಿಂದ ಭಿನ್ನವಾದುದು! ಪ್ರಾಮಾಣಿಕತೆಯು ಅತಿರೇಕಕ್ಕೆ ಬಲಿಯಾದ ದುರಂತ!

" ಏ ಮಗನೆ, ಬಲ್ಲೆಯೇನಲೆ—
ನಿನ್ನ ಖಾಸಾಪುತ್ರಿ ಇನ್ಷೂರೆನ್ಸ್ ಏಜೆಂಟ್
ಅಪ್ಯಾನ ಕೆಳಗೆ ಜೊಕ್ಕುಬೋರಲಾಗಿ ಬಿದ್ದು
ತಿಕ್ಕಿಸಿಕೊಂಡು ಹಾ ನರಳಿದ್ದು ? "

ಅಥವಾ " ಏ ಬೋಳೀಮಗನೆ—ಬಲ್ಲೆಯೇನೋ—
ಸೂಳೆಮನೆಯಲ್ಲ ಸರಕಾರೀ ಆಸ್ಪತ್ರೆಯಲ್ಲಿ ನಾನಿದ್ದದ್ದು"

ಅಥವಾ " ಥು ಸ್ಸೂಳೇಮಗನೆ !
ನನ್ನಲ್ಲೆಂಥ ಮತ್ಸರ ಹುಟ್ಟುವುದು ಬಲ್ಲೆಯಾ ? "

ಎಂಬ ಸಾಲುಗಳಲ್ಲಿ ಅಸಭ್ಯತೆಯನ್ನು ಬಿಟ್ಟರೆ ಯಾವ ಧ್ವನಿಯಿದೆ! ನಿಜವಾಗಿ ಇಲ್ಲಿ ಎಲ್ಲವೂ ವಿವರವಾಗಿಯೇ ಬಂದಿದೆಯೇ ಹೊರತು ಸೂಚ್ಯಾರ್ಥ, ಪ್ರತಿಮೆ ಯಾವುದೂ ಇಲ್ಲ!

ಹೊಸ ಶಿಲ್ಪದ ಫ್ಯಾಷನ್ನಿನಲ್ಲಿ ಮನೆಯ ಹೊರ ಗೋಡೆಯನ್ನು ಅಲ್ಲಲ್ಲಿ ಬಿರುಕು ಬಿಡುವಂತೆ ಮಾಡುವುದೊಂದು ರೀತಿ. ಗಾರೆ, ಸಿಮೆಂಟುಗಳ ಗಿಲಾವು ಮಾಡದೆ ಕಲ್ಲುಗಳನ್ನು ಸಹಜ ಸ್ಥಿತಿಯಲ್ಲಿಯೇ ಬಿಟ್ಟುಬಿಡುವ Disjointed Architecture (ಭಗ್ನ ಶಿಲ್ಪ) ಇಲ್ಲಿ ಕಾಣುತ್ತದೆ. ಭಗ್ನವಾಗಿರುವಂತೆ, ಬಿರುಕು ಕಾಣುವಂತೆ ಮಾಡಲು ಪ್ರಜ್ಞಾಪೂರ್ವಕವಾಗಿ ಬಹಳ ಕಷ್ಟದಿಂದ ಪ್ರಯತ್ನ ನಡೆಸಬೇಕಾಗುತ್ತದೆ. ಕಾವ್ಯ ಶಿಲ್ಪಕ್ಕೂ ಈ ರೀತಿಯ ಪ್ರಜ್ಞಾಪೂರ್ವಕ ಪ್ರಯತ್ನದ ತಾಂತ್ರಿಕರೂಪ ಅಂಟಿಕೊಂಡು ಬಂದಿದೆ. ಈ ಬಗೆಯ ಛಂದಸ್ಸನ್ನು ತರಲು ಬಹು ಕಷ್ಟದಿಂದ ಪ್ರಯತ್ನಿಸಿ ವಿಫಲರಾಗಿದ್ದಾರೆ ಕೆಲವು ನವ್ಯ ಕವಿಗಳು ಎಂಬುದು ಸಹಜ. ಛಂದಸ್ಸು, ಹೇಳಬೇಕಾದುದರ ಅನಿವಾರ್ಯವಾದ ರೂಪವಾಗದೆ, ಕೇವಲ ಅನುಕರಣೆಯಾಗಿಯೇ, ಅನುಕರಣೆಯ ಫಲವಾಗಿಯೇ ಮೂಡಿ ಬಂದಾಗ ಅದಕ್ಕೆ ಎಂತಹ ಸತ್ವ ತಾನೇ ಇದ್ದೀತು?

ಇ. ಇ. ಕಮಿಂಗ್ಸ್ (E. E. Cummings) ಎಂಬಾತ ಒದೊಂದು ಅಕ್ಷರ ಅಥವಾ ಪದವನ್ನು ಒಂದೊಂದು ಸಾಲನ್ನಾಗಿ ಮಾಡಿದಾನೆ. ಅಂದಮೇಲೆ 'ನವ್ಯ ಕವಿ'ಗಳೆಂದು ತಮ್ಮನ್ನು ತಾನೇ ಕರೆದುಕೊಳ್ಳುವ ಈ ಇವರೂ ಅದನ್ನು ಮಾಡಲೇ ಬೇಕಲ್ಲವೇ? ಕನ್ನಡಕ್ಕೆ ಅದು ಒಗ್ಗುತ್ತದೆಯೇ, ಕನ್ನಡ ಭಾಷೆಯ ಜಾಯಮಾನಕ್ಕೆ ಅದು ಸರಿಯಾಗಿದೆಯೇ, ತಾವು ನಡೆಸಿದ ಈ ಪ್ರಯೋಗದಿಂದ ಭಾಷೆಯ ಮತ್ತು ಕಾವ್ಯದ ಮುನ್ನಡೆ ಆಗಿದೆಯೇ—ಅಭಿವ್ಯಕ್ತಿ ಹೆಚ್ಚು ಸಂಕೀರ್ಣವಾಗಿದೆಯೇ ಎಂಬೆಲ್ಲ ಪ್ರಶ್ನೆಗಳ ಗೊಡವೆಯೇ ಇವರಿಗಿಲ್ಲ. ನಿರರ್ಥಕವಾದ ಶಬ್ದ, ಅಕ್ಷರಗಳನ್ನು ಮನಸ್ಸಿಗೆ ಬಂದ ಹಾಗೆ ಜೋಡಿಸಿಟ್ಟು ಅದೇ ನವ್ಯ ಕಾವ್ಯ. ಇದರಲ್ಲಿ 'ನವ್ಯ ಸಂವೇದನೆ' ತುಂಬಿದೆ ಎಂದು ಹೇಳಿಕೊಳ್ಳುವ ಇವರ ಧಾರ್ಷ್ಟ್ಯವಂತೂ ಮೆಚ್ಚಬೇಕಾದುದೇ! ಅವರಲ್ಲಿಯೇ ಒಬ್ಬರು ಹೇಳಿಕೊಂಡಿರುವಂತೆ ಇದು "ಫ್ಯಾಶನ್ನಿಗಾಗಿ ಹುಟ್ಟಿಕೊಂಡಿರುವ ಅಪ್ರಾಮಾಣಿಕ ಆಕ್ರೋಶ" ಎಂದು ಹೇಳದೆ ವಿಧಿಯಿಲ್ಲ.

gr EEn'sd

an
cing on hollow was

Young up

floatingly Clothes tumble dish
olD (with

sprouts o
ver and) a–
live
wanders remembe
r

ing per
F
ectl
Y ”

Poem 46

ಮುಂತಾಗಿ ಇ. ಇ. ಕಮಿಂಗ್ಸ್ ಬರೆದಿದಾನೆ. ಈ ಕವಿತೆಗೆ ಈ ರೂಪ ಕೊಡಲು ಆತನಿಗೇನು ಕಾರಣವಿದ್ದಿತೆಂಬುದು ಇಲ್ಲಿ ಅಪ್ರಸ್ತುತ. ಆದರೆ ಅದನ್ನು ಅನುಕರಣೆ ಮಾಡುವುದಷ್ಟೇ ನವ್ಯವೆಂದು ತಿಳಿದು (ಅಡಿಗರು ಹೇಳಿರುವ ಪಾಶ್ಚಾತ್ಯೀಕರಣ ‘ ಪರಂಗಿ ರೋಗ’ ಇಲ್ಲಿ ಸ್ಪಷ್ಟವಾಗಿ ಕಾಣುತ್ತದೆ!) ಅಸಂಬದ್ಧವಾಗಿ ಪದಗಳನ್ನು ಜೋಡಿಸಿ ಬಿಟ್ಟರಾಯಿತು. ಛಂದಸ್ಸಿಗೂ ಕವಿತೆಯ ಒಳಗಿಗೂ ಒಂದು ಸಂಬಂಧ ಬೇಕೆನ್ನುವ ಪರಿವೆಯೂ ಇಲ್ಲದ ಇಂತಹ ಪ್ರಯೋಗಗಳ ಬೆಲೆಯಾದರೂ ಏನೆಂಬುದನ್ನು ವಿವೇಚಿಸ ಬೇಕಾಗಿದೆ. ಪ್ರಾಯಶಃ ಇವೆಲ್ಲ ಪ್ರಯೋಗಕ್ಕಾಗಿಯೇ ಪ್ರಯೋಗ ನಡೆಸುವ ವಿಧಾನ ವಿರಬೇಕು.

“ ಮುಗು
ತಗ್ಗುನೀರಲ್ಲಿ ಪೆಟ್ರೋಲ ಹನಿಬಿದ್ದು
ಬಣ್ಣ ಬಣ್ಣದ ಕುಸುರು ಬಿಡಿಸಿದನುಭವ ಕಣ್ಣಾರೆ
ಕಂಡ ನನಗೆ—
ನನಗೆ :
ಮೊದಲು ಆನಂದ,
ಆ ಮೇ–
ಲೆ ಆಶ್ಚರ್ಯ, ಆ
ಮೇ
ಲೆ
ಇತ್ತೊ ಇಲ್ಲವೊ ಅನ್ನುವಷ್ಟು ಹೊಟ್ಟೆಯ ಕಿಚ್ಚು. ”

ಇದನ್ನು ಬರೆದ ಕವಿಯು ನವ್ಯ ಕವಿಗಳಲ್ಲಿ ಕಾವ್ಯಗುಣದ ಬಗ್ಗೆ ಭರವಸೆ ಹುಟ್ಟಿಸು ವಂತಹ ಉತ್ತಮ ಕವಿತೆಗಳನ್ನು ಬರೆದಿರುವ ಚಂದ್ರಶೇಖರ ಪಾಟೀಲರು ಎಂದರೆ ನಂಬುವುದೇ ಕಷ್ಟವಾದೀತು! ಮೊದಲು ಸೊಗಸಾದ ಪ್ರತಿಮಾಚಿತ್ರ ಕೊಟ್ಟ ಅವರು ‘ನನಗೆ’ ಪದವನ್ನು ಬೇರೆಯಾಗಿಯೇ ಬಳಸಿ–ಒತ್ತಿದಾರೆ ಅಲ್ಲಿನ ಸಂಕೋಚ, ಹಿಂದೇಟುಗಳ ಗಳಿಗೆಯ ವ್ಯಕ್ತಿತ್ವವನ್ನು. ಆದರೆ ‘ಆಮೇಲೆ’ ಪದವನ್ನು ಅವರು ಕಿತ್ತು ಚೂರು ಚೂರು ಮಾಡಿದುದು ಯಾವ ಔಚಿತ್ಯವೆಂದೇ ತಿಳಿಯುವುದಿಲ್ಲ. ಅದು

ಕೇವಲ ಅನುಕರಣವಾಗಿಯೇ ಉಳಿದಿದೆ. ಚಂದ್ರಶೇಖರ ಪಾಟೀಲರಾದರೋ ಇಲ್ಲಿ ಪ್ರಯೋಗ ನಡೆಸಿ ವಿಫಲರಾಗಿದಾರೆಂದು ಹೇಳದೆ ವಿಧಿಯಿಲ್ಲ. ಎ. ಕೆ. ರಾಮಾನುಜರ ಅವರ ಈ ಪದ್ಯಪ್ರಯೋಗ ನೋಡಿ!

"ಎಲೆ ಮಿಕ
ವೆ, ಇದು ಅಮೆರಿಕ:
ಕಾಕ
ಶುಕ
ಪಿಕ
ಸೀರೆ ಕುಪ್ಪಸ ಚಪ್ಪಲಿ, ಸಂಸ್ಕೃತ ನಾಟಕ—
ದ ಕಂಚುಕ,
ಕಡೆಗೆ ಬೆರಳ ಭಕ್ಷಕ
ಹಲ್ಲಿ
ಎಲ್ಲ ಮೈಸೂರು ಹೆಂಚಿನ ಮನೆಯಲ್ಲಿ,
ಇಲ್ಲೆಲ್ಲಿ! "

ಇದರ ಬಗ್ಗೆ ಏನು ಹೇಳುವುದೂ ಸಲ್ಲದು! ರಾಮಾನುಜನ್ ಅವರ ಸಹಜ ಹಾಸ್ಯ ಪ್ರವೃತ್ತಿಯೇ ಇದನ್ನು 'ಕವಿತೆ'ಯೆಂದು ಅವರು ಕರೆಯುವಲ್ಲಿ ತೋರಿರಬಹುದೆನ್ನಿಸುತ್ತದೆ.! ಇದೆಲ್ಲ ಕೇವಲ ಪರಿಣಾಮ (effect) ಕ್ಕಾಗಿ ಬರೆದ ಕವಿತೆಯ ಸಾಲಿಗೆ ಸೇರುತ್ತದೆ. ಹೀಗೆ ಬರೆಯುವವರಿಗೆ ನವ್ಯಕಾವ್ಯವೇ ಒಂದು ಕವಿಸಮಯವಾಗಿದ್ದು 'ಕ್ಲೀಷೆ'ಯಾಗಿದ್ದರೂ ಆಶ್ಚರ್ಯವೇನೂ ಇಲ್ಲ. ಆದರೆ ಈ ಹೊಸ ಕವಿಗಳೂ ತಾವು ಹೇಳಿದ್ದನ್ನೇ ಮತ್ತೆ ಮತ್ತೆ ಹೇಳುತ್ತಲೇ ತಮ್ಮನ್ನು ತಾವೇ ಈ 'ಕ್ಲೀಷೆ'ಯಲ್ಲಿ ಕಟ್ಟಿಕೊಂಡು ತೊಳಲಾಡುತ್ತಿರುವರೋ ಏನೋ ಎಂಬ ಸಂಶಯವೂ ಬರುವುದು ಸಹಜ. 'ಕಾಮ, ರೋಗ, ಹೆಣ್ಣು' ಇವಷ್ಟೇ ಇವರಲ್ಲಿ ಬಹುಮಂದಿಯ ಕಾವ್ಯವಸ್ತುವಾಗಿದ್ದು–ಅವರು ಇದರಿಂದ ಬೇರೇನನ್ನೂ ಅರಿತಿಲ್ಲ. ಅದೇ obsession 'ಭೂತ'ವಾಗಿ ಅವರಿಗೆ ಬಡಿದಿದೆಯೇನೋ ಎನ್ನಿಸುತ್ತದೆ.

"ಗುರ್..ಟೈಗರ್
ಎಂಬ ಹೆಸರಿನಲೆ ಒಂದು ಕಾವ್ಯವಿದೆ
. . . .
ಟೈಗರ್ ವೇದವ್ಯಾಸ
ಹರಿಸುತ್ತೇನೆ ಕಾವ್ಯ"

ಇತ್ಯಾದಿ ಬರೆಯುವಲ್ಲಿ "ಸ್ವಗತಃ ಟೈಗರ್ ಎಂಬ (ಹುಚ್ಚು) ನಾಯಿ" ಎಂಬ ಹೆಸರಿನ ಅಗತ್ಯವೇ ಕಾಣದು. ಅದನ್ನೋದಿದಾಗಲೇ ಅದರ (ಹುಚ್ಚುನಾಯಿ)

ಗುಣ ಸ್ಪಷ್ಟವಾಗುತ್ತದೆ! ಹಾಗೆಯೇ ಅತೃಪ್ತ ಕಾಮದ, ಅಪ್ರಬುದ್ಧ ಯೌವನದ ಬಯಕೆಗಳ ತೀಟೆಯನ್ನು ಪದಗಳ ಮೂಲಕವೇ ತೀರಿಸಿಕೊಳ್ಳುವ ಚಟ ಈಗಿನ ಪ್ರಯೋಗ ಕವಿಗಳಲ್ಲಿ ಬಹುಮಂದಿಗೆ ಮುಖ್ಯ ಪ್ರವೃತ್ತಿಯಾಗಿದೆ. ಇದು ಬಹು ಸುಲಭವಾಗಿ ಛಂದಸ್ಸನ್ನು ಮುರಿದು, ಯಾವ ಲಯವನ್ನೂ ಅರಿಯದೆಯೇ ಬರೆಯುವ ಕೆಲವರ ಮಾತಾದುದರಿಂದ ಇದನ್ನು ವಿಕೃತಿಯೆಂದು ಮಾತ್ರ ಹೆಸರಿಸಿ, ಇವರ ಕವಿತೆಗಳಲ್ಲಿ ಹೂವಿಗಿಂತಲೂ ಸೊಪ್ಪು ಹೆಚ್ಚು ಈ ಕುಚ್ಚಿನಲ್ಲಿ,—ಜೊತೆಗೆ ಕಾಡು ಮುಳ್ಳನ್ನೇ ಹೂವೆಂದು ಭ್ರಮಿಸುವ ಕೆಚ್ಚು ಕೂಡ ಇದೆಯೆಂದು ಹೇಳಬಹುದು. ಈ ಕವಿಗಳು ಕನ್ನಡ ಕಾವ್ಯಸಂಪ್ರದಾಯವನ್ನು (ಅಡಿಗರಿಂದ ಪ್ರಾರಂಭಿಸಿ ಅಲ್ಲ—ಹಿಂದಿನಿಂದ ಬಂದ ಸಾವಿರ ವರ್ಷಗಳ ಸಾಹಿತ್ಯಸಂಪ್ರದಾಯವನ್ನು), ಈಚೆಗೆ ಅದಕ್ಕೆ ಕೂಡಿಕೊಂಡು ನವೋದಯವನ್ನು ತಂದ ಇಂಗ್ಲಿಷ್ ಕಾವ್ಯಪ್ರಭಾವವನ್ನು ತಿಳಿದು ಅಭ್ಯಾಸ ಮಾಡಬೇಕಾದುದು ಮೊದಲ ಅಗತ್ಯ. ಕಾವ್ಯಗುಣವನ್ನು ಗುರುತಿಸಿಕೊಳ್ಳುವ ಚೈತನ್ಯ ಬೆಳಸಿಕೊಂಡು, ತಾವು ಹೇಳಬೇಕಾದ ಅನುಭವವೇನಾದರೂ ಇದೆಯೇ ಎಂದು ಪ್ರಾಮಾಣಿಕವಾಗಿ ತಮ್ಮನ್ನೇ ಪ್ರಶ್ನಿಸಿ, ಅನಂತರ ಛಂದಸ್ಸು, ಭಾಷೆ ಇವುಗಳ ಅಭ್ಯಾಸ ಮಾಡಿ ಕವಿತೆ ಬರೆಯಲು ತೊಡಗಿದರೆ ನವ್ಯಕಾವ್ಯಕ್ಕೆ ಕ್ಷೇಮ!

೧೩

ಪ್ರಯೋಗಶಾಲಿಯಾಗಿ ಸತ್ವವುಳ್ಳ ಕವಿಗಳು, ನಮ್ಮಲ್ಲಿ ಅತ್ಯಂತ ಹೆಚ್ಚಿನ ಆಸೆ, ಭರವಸೆ ಹುಟ್ಟಿಸುವವರೆಂದರೆ ನಿಸಾರ್ ಅಹ್ಮದ್, ಚಂದ್ರಶೇಖರ ಪಾಟೀಲ್ ಹಾಗೂ ಲಂಕೇಶ್ ಅವರು. ನಿಸಾರ್ ಅಹ್ಮದ್ ಮತ್ತು ಲಂಕೇಶ್ ಅವರು ಕನ್ನಡ ಕಾವ್ಯಕ್ಕೆ ಅಗತ್ಯವಾಗಿ ಬರಲೇಬೇಕಾಗಿದ್ದು, ಹಿಂದೆ ಬಾರದಿದ್ದ, ಪಶ್ಚಿಮ ಯೂರೋಪಿನ ಕವಿಗಳ ಕೆಲವು ಉತ್ತಮ ಕವಿತೆಗಳನ್ನು ಚೊಕ್ಕವಾಗಿ ಕನ್ನಡಕ್ಕೆ ತಂದುಕೊಟ್ಟಿದಾರೆ. ಈ ಅನುವಾದಗಳ ಸೊಗಸಿಗೆ ಎರಡು ಉದಾಹರಣೆಗಳನ್ನು ನೋಡಬಹುದು.

> "ನನ್ನ ಗೀತವೆ, ಹೋಗು, ಅತೃಪ್ತ ಒಬ್ಬಂಟಿ ವ್ಯಕ್ತಿಗಳ ಬಳಿಗೆ;
> ಹೋಗು, ನರಕುಸಿದವರ, ಪದ್ಧತಿಯ ಪಾದಕ್ಕೆ ಸಿಕ್ಕವರ ಬಳಿಗೆ;
> ತುಳಿವವರ ಬಳಿ ಹೋಗು ನನ್ನ ಕೋಪವ ಹೊತ್ತು;
> ಹೋಗು ಸಂತೋಷಕರ ತಣ್ಣನೆಯ ಅಲೆಯು ಹಾಗೆ;
> ನನ್ನ ತಿರಸ್ಕಾರವನ್ನಿಕ್ಕು ತುಳಿವ ಎಲ್ಲರಿಗೆ,
>
> ....
>
> ಹೋಗು, ಸಿದ್ಧಾಂತಗಳ ಎದುರಿಸು,
> ಹೋಗು, ಹಳೆ ಸಂಬಂಧಗಳ ಚೆದುರಿಸು
> ದತ್ತಿ ದಾನಗಳನ್ನು ಅತ್ತ ಒತ್ತರಿಸು"

ಎಜ್ರಾ ಪೌಂಡನ ಕವಿತೆ ಲಂಕೇಶರ ಅನುವಾದದಲ್ಲಿ ಜೀವಂತವಾಗಿ ಕಳಕಳಿಸುತ್ತಿದೆ. ಅದೇ ಬಗೆಯಲ್ಲಿ ಸಫಲವಾದುದು ನಿಸಾರ್ ಅಹ್ಮದ್ ಅವರು ಮಾಡಿರುವ ಅನುವಾದಗಳು. ಅವುಗಳಲ್ಲೊಂದರ ಕೆಲವು ಸಾಲುಗಳು :

"ಸದಾ ತಿರುಗುತಿರುವ ಕೆಲಸ
ಇಂದು ಇಲ್ಲಿ ನಾಳೆ ಅಲ್ಲಿ
ಊರೂರನು ಅಲೆವೆವು ;
ಹತ್ತು ಹೂವಿಗೊಲೆವೆವು,
ಗೋತ್ರವಿರದ ಪುತ್ರರು,
ನಾವು ಬುದ್ಧಿಮಾತ್ರರು
ನಮ್ಮ ಗೊಡ್ಡು ತತ್ವಗಳಿಗೆ ಕಡ್ಡಿಕೂಡ ಕದಲದು
ಗುಬ್ಬಚ್ಚಿಯು ತೊದಲದು
ನವವಿಚಾರವಂತರು ;
ನಮಗೆ ನಾವೆ ಸಂತರು !"

ಲಂಕೇಶ್ ಅವರ ಮಾರ್ಗವೇ ಬೇರೆ. ಕವಿತೆ, ವಿಮರ್ಶೆ ಎಲ್ಲದರಲ್ಲಿಯೂ ಬಿರುಸು ಹೆಚ್ಚು. ಜಟಿಲತೆ ಅವರ ಕಾವ್ಯದಲ್ಲಿಯೂ ಮುಖ್ಯ ಲಕ್ಷಣವಾಗಿದೆ. ಭಾಷೆಯನ್ನು ಬಿರುಸಿನಿಂದ, ಆಡುಮಾತಿನ ಲಯದಲ್ಲಿ ಬಳಸಿ ಪ್ರತಿಮೆಗಳನ್ನು ಜೀವಂತವಾಗಿ ಸೃಷ್ಟಿಸಬಲ್ಲರು. ಹೊಸ ಹೊಸ ಪ್ರಯೋಗಗಳಲ್ಲಿಯೂ ತಮ್ಮದೇ ವಿಶಿಷ್ಟವಾದ ಹಾದಿಯನ್ನು ಹಿಡಿದಿದ್ದಾರೆ.

ಹೊರಗೆ ಬೊಕ್ಕತಲೆ, ಒಳಗಿನ ಮಾತು ಬೇರೆ, ಮಾತಿನಮಾತು ಬೇರೆ ಈ
ಬುಡಕ್ಕೆ ಈ ಬೇರೇ, ಇದು ಬೇರೇ ?
ಈ ಸೂಟನೊಳಗಿನ ಸಮಶೀತೋಷ್ಣವಲಯದ ಗಿಳಿಯ
ಅದು ಉಲಿವ ಪರಿಯ
ಈ ಶೂದ್ರ ಹೇಗೆ ಬಗೆವುದು ಗೆಳೆಯ ?
………………
ಆದರೆ ಇವರ ಬಿಚ್ಚುಗತ್ತಿಯು ಬಿಚ್ಚು
ಬಿಚ್ಚುಗಳನ್ನು ಬಿಟ್ಟು
………………
ಇವರ ಮಾತನ್ನು ಗುದ್ದಿ ಸುದ್ದಿಯಾಗಲೆ ?
………………
ಹಳೆಯ ಪ್ರಭಾವಗಳ, ಭಾವಗಳ, ಕಳಸಗಳ ಕಾಯುತ್ತ ಕೂರಲೆ ?
ಇವರ ಹಳಿಗಳ ಹತ್ತಿ ತೆಪ್ಪಗೆ ಓಡಲೆ ?
ಹಲ್ಲು ಕಡಿವ ಈ ಬುದ್ಧಿಜೀವಿಯ ಶ್ರದ್ಧೆ ನಗೆ ತರುತ್ತದೆ...
ನಕ್ಕರೆ, ಅನುಮಾನಕ್ಕೆ ಜೀವ ಅಲ್ಲಾಡುತ್ತದೆ.
ಕೋಪಗೊಂಡರೆ ಅದೇ, ವ್ಯಂಗ್ಯವಾದರೆ ಅದೇ, ಭೂಮಿ ಆಕಾರಕ್ಕೆ ಪುಟಿದರೆ ಅದೇ!
ಗೊಡ್ಡಾದರೆ ಅದೇ, ಹೆತ್ತರೆ ಅದೇ
ಅದೇ ಅಡಿಗತ್ತ ಹೊಡೆಯುತ್ತದೆ.
ಯಾವುದದು ? ಯಾವುದದು ? ಅಂತ ಕೇಳುವ ನಾವು ಕಾಫಿ ಹಿಗ್ಗುವುದು ;
ಹಿಗ್ಗುವುದೆ ಬಾಕಿ, ಕಡಲ ನೆನಪಿನ ಇವರ ಥಿಕ್ಕಿ ಕಂಡು ;
ಜಾಗವಿಲ್ಲದ ರಸ್ತೆಯ ಮೇಲೆ ವಾಹನ ಮರೆತು ಕೂತುಕೊಂಡು"

ಗೋಪಾಲಕೃಷ್ಣ ಅಡಿಗರ ವ್ಯಕ್ತಿತ್ವ (ಅಡಿಗತ್ವ)ದ ಸಮಗ್ರ ಚಿತ್ರಣ ಇಲ್ಲಿ ಬಂದಿದೆ ಯಾದರೂ ಅದು ಕೇವಲ Impressionist ಮೂಡಿಕೆಯಾಗಿ ಕಾಣುತ್ತದೆ. ಆದರೂ ವ್ಯಕ್ತಿಚಿತ್ರಣಕ್ಕಿಂತ ವ್ಯಕ್ತಿತ್ವದ ಚಿತ್ರಣವೇ ಈ ಕವಿತೆಯ ಪ್ರಯೋಗದಲ್ಲಿದ್ದು ಅದು ಬಹುಮಟ್ಟಿಗೆ ಸಫಲವಾಗಿದೆ. ಅಡಿಗರ ಪ್ರತಿಭೆಯನ್ನು ಅರಿಯಲು ಯತ್ನಿಸಿ ಮತ್ತೆ ಮತ್ತೆ ಕಾಫಿಹೀರಿ, ಹರಟೆಹೊಡೆದು, ಅರಿವು ಅಪೂರ್ಣವಾಗಿ ಪ್ರಯತ್ನಿಸುವ ಸಂಕೇತ ಇಲ್ಲಿ ಸೊಗಸಾಗಿ ಬಂದಿದೆ. ಆದರೆ ಲಂಕೇಶರ ಎಲ್ಲ ಕವಿತೆಗಳಲ್ಲಿಯೂ ಈ ಸಫಲ ಪ್ರಯೋಗ ಕಾಣಬರುವುದಿಲ್ಲ. ಅವರ ಜಾಯಮಾನವೇ ಕೊನೆಸೊಡ್ಡು, ಅಡ್ಡದಾರಿ ಹಿಡಿಯುವುದೆಂದು ಅವರ ಕವಿತೆಗಳು ಸ್ಪಷ್ಟಪಡಿಸುತ್ತವೆ. ಆದರೆ ಅವರಲ್ಲಿ ಬೆಳವಣಿಗೆಯೂ ಇದೆ, ಈಗ ಇಲ್ಲದಿದ್ದರೂ ಮುಂದೆ ಈ ಪ್ರಯೋಗಗಳಲ್ಲಿ ಸಿದ್ಧಿಪಡೆಯಬಹುದೆನ್ನುವ ಭರವಸೆ ಹುಟ್ಟಿಸುತ್ತವೆ.

“ ಕುರಿಗಳು, ಸಾರ್, ಕುರಿಗಳು :
ಸಾಗಿದ್ದೇ
ಗುರಿಗಳು
ಮಂದೆಯಲ್ಲಿ ಒಂದಾಗಿ, ಸ್ವಂತತೆಯೇ ಬಂದಾಗಿ
ಇದರ ಬಾಲ ಅದು ಮತ್ತೆ ಅದರ ಬಾಲ ಇದು ಮೂಸಿ,
ದನಿಕುಗ್ಗಿಸಿ, ತಲೆತಗ್ಗಿಸಿ
ಹುಡುಕಿ ಹುಲ್ಲುಕಡ್ಡಿಮೇವು, ಅಂಡಲೆಯುವ ನಾವು, ನೀವು
ಕುರಿಗಳು, ಸಾರ್, ಕುರಿಗಳು :
ನಮಗೋ ನೂರು ಗುರಿಗಳು ”

ನಿಸಾರ್ ಅಹಮದ್ ಅವರ ಈ ಪದ್ಯದಲ್ಲಿ ಛಂದಸ್ಸು ಭಾವವಿಚಾರಗಳ ಮೂಸೆಯಲ್ಲಿ ಎರಕ ಬಂದಂತಿದೆ. ಈಗಿನ ಜನಜೀವನದ ಅಸಹಾಯಕತೆ, ‘ ಮಂದೆತನ ’ವನ್ನು ಎಷ್ಟು ಸರಳವಾದರೂ ಅಚ್ಚುವಾದ ಪ್ರತಿಮೆಯಲ್ಲಿ ಅಚ್ಚೊತ್ತಿದ್ದಾರೆ ಕವಿಗಳು. ಇಲ್ಲಿಯ ಸಮಕಾಲೀನ ಪ್ರಜ್ಞೆಯು ಈ ಕಾಲದ ಪರಿಮಿತಿಯನ್ನು ಮೀರಿ ಎಲ್ಲ ಕಾಲಕ್ಕೂ ಅನ್ವಯಿಸುವ ಸಾರ್ಥಕತೆಯನ್ನು ಪಡೆದುಕೊಳ್ಳುತ್ತದೆ. ಅದೇ ಸಾಮಾಜಿಕ ಕಾವ್ಯದ ಗೆಲುವು. ಒಂದು ಕಾಲಕ್ಕೆ ಸಲ್ಲುವ ಟೀಕೆಯು, ಕಾವ್ಯಕ್ಕೆ ಸ್ಫೂರ್ತಿಯಾಗಿ ಒದಗುತ್ತದೆ. ಆದರೆ ಅದು ತನ್ನನ್ನು ಬಂಧಿಸುವ ಕಾಲದ ಶೃಂಖಲೆಯನ್ನು ಕಿತ್ತು ಮೇಲೇರಿ ಸದಾ ಕಾಲಕ್ಕೂ ಅನ್ವಯಿಸುವಂತಾದರೆ ಅದು “ ಕ್ಷಣಭಂಗುರವಾದ ” ಕಾವ್ಯವಾಗದೆ, ಜೀವಂತ ಕಾವ್ಯವಾಗುತ್ತದೆ. ಅಡಿಗರ ‘ ಏನೊಂದನು ಮಾಡಲಿಲ್ಲ ’ ಎಂಬುದೇ ತಿರುಳಾಗುಳ್ಳ ‘ ನನ್ನ ಅವತಾರ ’ ಅಂತಹ ಒಂದು ಕವಿತೆ. ಅದೇ ಬಗೆಗೆ ಸೇರಿದೆ ನಿಸಾರ್ ಅಹಮದರ ಕವಿತೆ. ಅವರ ‘ ಶ್ರೀ ಸಾಮಾನ್ಯನ ಪ್ರತಿನಿಧಿ ’ ಕೂಡ ಜನತೆಯ ದೌರ್ಬಲ್ಯಗಳ ಸೆಳಕನ್ನು ಪ್ರತಿಮಿಸುವ ಕವಿತೆ. ನಿಸಾರ್ ಅಹಮದ್ ಅವರು ನಿಜಕ್ಕೂ ಬೆಳೆಯುತ್ತಿರುವ, ಇನ್ನೂ ಬೆಳೆಯಬಲ್ಲರೆಂಬ ಭರವಸೆ ಹುಟ್ಟಿಸುವ ಕವಿ.

ಚಂದ್ರಶೇಖರ ಪಾಟೀಲರ 'ಬಾನುಲಿ'ಯಿಂದ 'ಮಧ್ಯಬಿಂದು' ಮತ್ತು ಈಗಿನ 'ಹತ್ತೊಂಬತ್ತು ಕವನಗಳು'ವರೆಗೆ ಸತತ ಬೆಳವಣಿಗೆ ಕಾಣುತ್ತದೆ. "ಬಸವಣ ಶರಣು, ಶರಣು"ವಿನ ವ್ಯಂಗ್ಯವಂತೂ ಬುದ್ಧಿಗೆ ಮಾಟುಗೋಲಾಗುತ್ತದೆ "ಇಪ್ಪತ್ತೆಂಟರಲ್ಲಿ" ಕವಿತೆಯಲ್ಲಿ ಬರುವ ಈ ಸಾಲುಗಳು ಎಷ್ಟು ಧ್ವನಿಪೂರ್ಣವಾಗಿವೆ ಯೆಂದು ನೋಡಬಹುದು:

"ನನಗೀಗ ಇಪ್ಪತ್ತೆಂಟು, ಮುಖದಲ್ಲೆರಡುಕಣ್ಣು
ಆದರಿಪ್ಪತ್ತೆಂಟು ಕಣ್ಣು ಬೆನ್ನಿನಮೇಲೆ
. . . .
ನೆನಪ ಝುರಿ ಹರಿದಾಗ ಮೈತುಂಬ ಕಚಗುಳಿ.
ಝುರಿ ಬತ್ತಿದಾಗ ಥತ್ತೇರಿ ಎನಿಸುವುದು"

ಅಲ್ಲಲ್ಲಿ ಮಿಂಚುವ ಪ್ರತಿಮೆಗಳು ಚಂದ್ರಶೇಖರಪಾಟೀಲರು ಒಳ್ಳೆಯ ಕವಿಗಳಾಗುವ ರೆನ್ನುವ ಭರವಸೆ ನೀಡುತ್ತವೆ. ಇದೇ ಬಗೆಯಲ್ಲಿಯೇ ಪ್ರಯೋಗಗಳನ್ನು ನಡೆಸು ತ್ತಿರುವ ಪೂರ್ಣಚಂದ್ರತೇಜಸ್ವಿಯ 'ಬೃಹನ್ನಳೆಸೋಮುವಿನ ಸ್ವಗತಲಹರಿ'ಯಲ್ಲಿ "ಸಾಲುಮರದಡಿಯಲ್ಲಿ ಚಿಮುಕಿಸಿದ ನೆರಳು" ಎಂಬ ಸುಂದರ ಚಿತ್ರ ಒಂದೇ ಹಿಡಿಯಲ್ಲಿ ಬರುವಂತೆಯೇ.

"ದಿಗ್ಗನೆ ಪಂಚಿತುದಿ ಕೆದರಿ ನೆರಿಗೆ ಬಿಚ್ಚಿದ ನವಿಲಥರ
ಸಾವಿರಾಲಿಯ ಇಂದ್ರ ನಿಂತೆ ನಾನಹಲ್ಯೆಯ ಮುಂದೆ!"

ಎಂಬ ಸಂಕೀರ್ಣ ಪ್ರತಿಮಾ ಚಿತ್ರಣವೂ ಬರುತ್ತದೆ. ಅಂತೆಯೇ 'ಕಾಮಿ'ಯ ಕವಿ ಎಚ್. ಎಂ. ಚನ್ನಯ್ಯನವರಲ್ಲಿಯೂ ಅಲ್ಲಲ್ಲಿ ಸಾಲುಗಳು ಮಿಂಚಿ ಫಳಿಸುತ್ತವೆ.

"ಕಿಟಕಿಯಿಂದಾಚೆ ಬೆಳಕಾಕರಿತ್ತಲೆ ಘನಿಸಿದೆ
ಮೈತಿರುವು ಮುರಿದು ಬೆನ್ನಹುರಿ ಲಟಿಕೆ ಮುರಿದಾಗ
ನಗರಕ್ಕೆ ನಗರವೇ ಕಣ್ಣು ಕತ್ತಲಿಸಿ ಬಂತು
. . . .
ಕತ್ತಲಂಜೂರ ಸೀಳಿ ತುಟಿಯಿಟ್ಟು
ಚಪ್ಪರಿಸಿ ಕತ್ತಲನುಭವಿಸಿ"

ಮುಂತಾಗಿ ವರ್ಣಿಸುವಲ್ಲಿ ಕಾಮದಾಸೆಯ ಸಂಕೀರ್ಣ ಚಿತ್ರಣ ಮೂಡಿಬಂದಿದೆ. ನಮ್ಮಲ್ಲಿ ಇದೇ ರೀತಿ ಆಸೆ ಹುಟ್ಟಿಸುವ ಕವಿಗಳಲ್ಲಿ ಸಿದ್ಧಲಿಂಗಪಟ್ಟಣಶೆಟ್ಟಿ 'ವೃತ್ತ'ದ ಲಕ್ಷ್ಮೀನಾರಾಯಣಭಟ್ಟ, 'ಪ್ರಕೃತಿ'ಯ ಸಿ. ಪಿ. ಕೆ. ಹಾಗೂ 'ಸಂಕ್ರಮಣ' ಮತ್ತು 'ಕವಿತಾ'ದ ಈಚಿನ ಕೆಲವು ಕವಿಗಳೆಂದು ಹೇಳಬಹುದು.

ಆದರೂ ಈ ಪ್ರಯೋಗಕಾಲದ ಕವಿಗಳಲ್ಲಿ ಸತ್ವ ಸಾಲದು. ಹೆಚ್ಚಿನವರು ಕೇವಲ ಕಾವ್ಯದ ಹೊಸೆತ ನಡೆಸುತ್ತಿದಾರೆ. ಇನ್ನೂ ಅವರಿಗೆ ಪರಂಪರೆಯ ದೀರ್ಘವೂ

ಗಾಢವೂ ಆದ ಅನುಭವವಾಗಿಲ್ಲ. (Tradition comes by hard work) ಎಂಬ ಟಿ. ಎಸ್. ಇಲಿಯಟ್ ಮಾತಿನಂತೆ ಇವರು ಕನ್ನಡದ ಹಿಂದಿನ ಎಂದರೆ ಕೇವಲ ಅಡಿಗರ, ಅದಕ್ಕೆ ಹಿಂದಿನ ಹೊಸ ಕವಿಗಳ ಎಂದಷ್ಟೇ ಅಲ್ಲ, ಕನ್ನಡನಾಡಿನ ಕಾವ್ಯವನ್ನು ಅಭ್ಯಾಸ ಮಾಡಬೇಕಾದುದು ತುಂಬಾ ಅಗತ್ಯವಿದೆ. ಅವರ ಬತ್ತಿದ, ಕೃಶಗೊಂಡ ಕಾವ್ಯ, ಆಗ ಕೃಷಿಗೊಂಡು ಉತ್ತಮವಾಗಲು ಸಾಧ್ಯ ಎಂದು ಸೂಚಿಸುವುದು ಅಗತ್ಯ. ಕೇವಲ ಪರಸ್ಪರ ಪ್ರಶಂಸೆಯಲ್ಲಿಯೇ ಮುಳುಗಿದರೆ ಸಾಲದು. ತಮ್ಮ ಬೆನ್ನು ತಾವು ಚಪ್ಪರಿಸಿ ಕೊಳ್ಳುವ ಹೇಯಪ್ರವೃತ್ತಿಯು ಕಾವ್ಯಕ್ಕೆ ಬೆಳವಣಿಗೆಗೆ ಮಾರಕವಾಗುತ್ತದೆಂದು ಅರಿಯಬೇಕು.

ಇಂದಿನ ೨೫ ವರ್ಷಗಳ ಕವಿಗಳೆಲ್ಲರೂ ಸಮಾನವಾಗಿ ಎದುರಿಸಬೇಕಾಗಿರುವ ಒಂದು ಸಮಸ್ಯೆ ಈಗಂತೂ ತುಂಬಾ ದೊಡ್ಡದಾಗಿದೆ. ಅದು ಮೂಲತಃ ಕವಿಗಳ ಸಂಸ್ಕಾರಕ್ಕೆ ಸಂಬಂಧಿಸಿದ್ದು. ನಮ್ಮ ಕವಿಗಳಿಗೂ ಜನಸಾಮಾನ್ಯಕ್ಕೂ ನಡುವೆ ಒಂದು ದೊಡ್ಡ ಕಂದರವೇ ಇರುವುದು ಈಗ ಹೆಚ್ಚು ಹೆಚ್ಚು ವಿಶಾಲವಾಗುತ್ತಿದೆ. ಇದಕ್ಕೆ ಕಾರಣ, ಈಗ ಬರೆಯುತ್ತಿರುವ ಕವಿಗಳೆಲ್ಲರೂ ಪಾಶ್ಚಾತ್ಯ ವಿದ್ಯಾಭ್ಯಾಸ ಪಡೆದವರು, ಆಧುನಿಕ ಕವಿತೆಯೆಲ್ಲ ಪಾಶ್ಚಿಮಾತ್ಯ ಕಾವ್ಯದ ಸ್ಫೂರ್ತಿಯಿಂದ ಬಂದುದು. ಅಂದು "ಶ್ರೀ"ಯವರು ಹೇಗೋ ಇಂದು ಅಡಿಗರೂ ತಮ್ಮ ಹೊಸ ಪಂಥಕ್ಕೆ ಇಂಗ್ಲಿಷ್ ಹಾಗೂ ಪಾಶ್ಚಾತ್ಯ ಕಾವ್ಯವನ್ನೇ ಸ್ಫೂರ್ತಿಗಾಗಿ ಮರೆಹೊಕ್ಕರು. ಸಂಕೀರ್ಣತೆ ಹೆಚ್ಚಾದಾಗಲಂತೂ ಜನರಿಗೆ ಕಾವ್ಯ ಅರ್ಥವೇ ಆಗುವುದಿಲ್ಲ. ಅಲ್ಲದೆ ಬರೆಯುವವನು ಕೇವಲ ಮಧ್ಯಮವರ್ಗಕ್ಕೆ ಸೇರದೆ, ಉಚ್ಚ ಮಧ್ಯಮ ವರ್ಗಕ್ಕೇರಿದ್ದಾನೆ (Upper Middle Class). ಅವನ ವಿಚಾರಗಳು, ಅನುಭವಗಳು ಇವೆಲ್ಲವೂ ಇಂಗ್ಲಿಷ್ ಕಾವ್ಯದ ಅಭ್ಯಾಸ, ತಾನು ಕಂಡ ನಗರಜೀವನದ ಹವ್ಯಾಸ, ತನ್ನ ಸುತ್ತಲಿನ ವಿಕೃತ ಸಂಸ್ಕಾರದ ಪಟ್ಟಣದ ಬದುಕು ಇವುಗಳಿಗೇ ಸಂಬಂಧಪಟ್ಟವು. ಹೀಗಾಗಿ ಈಗ ಬರೆಯುತ್ತಿರುವವರು ಬಳಸುವ ಮಾತುಗಳು, ಭಾಷೆ, ಸಂಕೇತ ಇವೆಲ್ಲವೂ ನಾಗರಿಕ ಜೀವನದ ಮೇಲ್ಮೈಗೇ ಸಂಬಂಧಿಸಿದುವು. ಹೀಗಾಗಿ ಈ ಕಾವ್ಯದ ಮಿತಿಯು ಕುದುರೆಗೆ ಕಣ್ಣಿನ ಕಪ್ಪಡದಂತೆ ದೃಷ್ಟಿಯನ್ನು ಪರಿಮಿತಿಗೊಳಿಸಿದೆ. ಅಂತೆಯೇ ಇವರ ಬದುಕು ಕೂಡ ಪಟ್ಟಣದ ಬದುಕಿನ ಉಸುಬಿನ ಸಂಸ್ಕಾರದ ಮೇಲೆಯೇ ಇದ್ದು, ಕೇವಲ ಅಲ್ಲಿ ಬದುಕಿರುವ ಜನರಿಗಾಗಿಯೇ ಬರೆದು ನೊರೆಯುಂತಾಗಿದೆ. ಇದು ವಿದ್ಯಾವಂತ ಕವಿಗಳು, ತಮ್ಮ ಪರಿಮಿತಿಯ ಅನುಭವವನ್ನು ಅದೇ ಪರಿಮಿತಿಯಲ್ಲಿಯೇ ಇರುವ, ಅಷ್ಟೇಮಟ್ಟನ ವಿದ್ಯೆಯರಿತ, ತಮ್ಮಂತೆಯೇ ಉನ್ನತ ಮಧ್ಯಮ ವರ್ಗದವರಿಗಾಗಿ ಮಾತ್ರವೇ ಬರೆಯು ತ್ತಿರುವ ಕಾವ್ಯವಾಗಿಬಿಟ್ಟಿದೆ. ಇದು ಸ್ವಯಂಕೃತಾಪರಾಧ-ಎಂದರೆ ಅವರಿಗೆ ಅವರೇ ಹಾಕಿಕೊಂಡ ಕಬ್ಬಿಣದ ಸರಪಳಿ. ಹೊಸ ಲೇಖಕರು ಈ ಕಪ್ಪಡ ಕಿತ್ತೊಗೆಯಬೇಕು-ಪರಂಪರೆಯಿಂದ ಬಂದ ಭಾರತೀಯ ಸಂಸ್ಕೃತಿಯನ್ನು ಅರಿಯಲು ಪ್ರಯತ್ನಿಸಬೇಕು ಎನ್ನುವುದು ಮುಖ್ಯವಾದ ಅಗತ್ಯ. ಆದರೆ ಭಾವಾತಿರೇಕದಲ್ಲಿ ಮುಳುಗಬೇಕೆಂದರ್ಥವಲ್ಲ.

ಕವಿಯು ಭಾವಾತಿರೇಕ, ಬುದ್ಧಿಯ ಅತಿರೇಕ ಇವೆರಡನ್ನೂ ಮೀರಿ ನಿರ್ಲಿಪ್ತತೆಯನ್ನು ಪಡೆಯಬೇಕಾದಲ್ಲಿ (Detachment), ಇವೆರಡರ ಅರಿವೂ ಅಗತ್ಯ. ಒಂದನ್ನು ಬಿಟ್ಟು ಮತ್ತೊಂದಿದ್ದರೆ ಬರಡುತನವೋ, ಮುರುಟುತನವೋ ಉಂಟಾಗುತ್ತದೆ. ವಿದ್ಯಾವಂತರಾದ ಕವಿಗಳು ಸಾಮಾನ್ಯ ಜನರಿಂದ ತಮ್ಮನ್ನು ದೂರೀಕರಿಸಿಕೊಳ್ಳುವ ಕಂದರದ ಮನೋಭಾವವನ್ನು ತೊರೆದುಬಿಡಬೇಕು ; ಆದರೆ ಎಲ್ಲವನ್ನು ಅಳೆದು ತೂಗಿ ನೋಡುವ ವಿಶ್ಲೇಷಣೆಯ ಬುದ್ಧಿಯನ್ನು ಬಿಡಬಾರದು. ಆಗ ಮಾತ್ರ ಕಾವ್ಯಕ್ಕೆ ವಿಸ್ತಾರವಾದ, ಗಾಢವಾದ ಅನುಭವವೂ, ವಿಚಾರವೂ ಮೈತುಂಬಿ ಬರುತ್ತವೆ. ಆಗಲೀಗ ನಿಜವಾದ ಕಾವ್ಯ ಮತ್ತೆ ಬರುತ್ತದೆ. ಸಾಂದ್ರೀಕೃತ ಸಂಕೀರ್ಣ ವ್ಯಕ್ತಿತ್ವವು ಕವಿಯದಾಗುತ್ತದೆ. ಸಹಜವಾಗಿಯೇ ಕಾವ್ಯವೂ ಸಂಕೀರ್ಣವೂ, ಸಮಗ್ರವೂ ಆಗುತ್ತದೆ. ಇದಕ್ಕಾಗಿ ಈಗ ನಾವು ಕಾಯಬೇಕಾಗಿದೆ. ಈಗ ಪ್ರಾಯಶಃ ಮತ್ತೊಂದು ಪರ್ವಕಾಲ ಮಾಗಿ ಬರುವುದೊ ಏನೋ ನೋಡಬೇಕು.*

* ಈ ಲೇಖನಕ್ಕೆ ಬಳಸಿಕೊಂಡಿರುವ ಸುಮಾರು ೪೬೦ ಕವನ ಸಂಗ್ರಹಗಳ ಮತ್ತು ೧೦೦ಕ್ಕೂ ಹೆಚ್ಚಿನ ಪತ್ರಿಕೆಗಳ ಮತ್ತಿತರ ಪುಸ್ತಕಗಳ ವಿವರ ಕೊಡುವುದು ಸಾಧ್ಯವಿಲ್ಲದುದರಿಂದ ಆಕರಗಳ ಪಟ್ಟಿಯನ್ನು ಕೊಡದೆ ಹಾಗೆಯೇ ಬಿಟ್ಟಿದೆ.

ಉನ್ನತಿವೆತ್ತ ದೇಶಮಿದು ಭಾರತವರ್ಷದ ನೂರು ದೇಶದೊಳ್
ಮನ್ನಣೆಯಿಂದೆ ಬಾಳ್ದ ನುಡಿಯೆಮ್ಮಯ ಕನ್ನಡಮಾತು ಭಾವಿಸಲ್
ಚೆನ್ನಿಗರಾಯನೊಲ್ಮೆಯಲಿ ಸುಂದರಕಾವ್ಯ ಸುಶಿಲ್ಪ ಚಿತ್ರಮಂ
ಮುನ್ನ ನೆಗಳ್ದರಾ ಸದಮಲ ಪ್ರತಿಭಾಂಚಿತರ್ ಎಮ್ಮ ನಾಡವರ್

—ಶ್ರೀನಿವಾಸ

ಜೀ. ಶಂ. ಪರಮಶಿವಯ್ಯ

ಜಾನಪದ ಅಧ್ಯಯನ

ಪ್ರವೇಶ

೧

ಕನ್ನಡ ಜಾನಪದ[1] ಸಂಗ್ರಹ ಹಾಗೂ ಅಧ್ಯಯನಗಳ ಐತಿಹಾಸಿಕ ವಿವೇಚನೆಯನ್ನು ನಡೆಸುವಾಗ ಸ್ವಾತಂತ್ರ್ಯಪೂರ್ವ ಹಾಗೂ ಸ್ವಾತಂತ್ರ್ಯೋತ್ತರ ಎಂದು ಎರಡು ಪ್ರಮುಖ ವಿಭಾಗಗಳನ್ನಾಗಿ ಮಾಡಿಕೊಳ್ಳುವುದನ್ನು ಕಾಣಬಹುದು[2]. ಇಲ್ಲಿ 'ಸ್ವಾತಂತ್ರ್ಯ', ಕಾಲವನ್ನು ನಿರ್ದೇಶಿಸುವ ಒಂದು ಗಡಿಯ ಗೆರೆ ಮಾತ್ರ. ಏಕೆಂದರೆ ಕನ್ನಡ ಜಾನಪದ ಕ್ಷೇತ್ರದ ಯಾವುದೇ ಪ್ರಮುಖವಾದ ಘಟ್ಟವನ್ನೂ ಅದು ಗುರುತಿಸುವುದಿಲ್ಲ. ಸ್ವಾತಂತ್ರ್ಯಕ್ಕೆ ಮೊದಲು ಹಾಗೂ ಅನಂತರದ ದಿನಗಳ ಸಂಗ್ರಹ ಹಾಗೂ ಅಧ್ಯಯನಗಳನ್ನು ಗಮನಿಸಿದಾಗ ಅಂಥ ಮಹತ್ವಪೂರಿತ ಬದಲಾವಣೆಯೂ ಎದ್ದು ತೋರುವುದಿಲ್ಲ. ಜನಪದ ಸಾಹಿತ್ಯಕ್ಕೆ, ವಿಶೇಷವಾಗಿ ಗೀತ ಸಾಹಿತ್ಯಕ್ಕೆ ಸೀಮಿತವಾದಂತೆ ನಡೆದ ಕಾರ್ಯವನ್ನು ಗಮನಿಸಿದಾಗ ಕನ್ನಡದಲ್ಲಿ 'ಜಾನಪದ ಅಧ್ಯಯನ' ಎನ್ನುವುದು ಇನ್ನೂ ತನ್ನ ಶೈಶವದ ದಿನಗಳನ್ನು ದಾಟಿಲ್ಲ ಎನ್ನುವ ಮಾತು ನೆನ್ನೆ ಮೊನ್ನೆಯವರೆಗೂ ಅನ್ವಯವಾಗುತ್ತಿತ್ತು.[3] ನಮ್ಮಲ್ಲಿ 'ಜಾನಪದ'ದ ಸಮಗ್ರ

---

[1] 'Folk lore' ಎಂಬ ಇಂಗ್ಲಿಷ್ ಪದಕ್ಕೆ ಸಂವಾದಿಯಾಗಿ ಡಾ. ಹಾ. ಮಾ. ನಾಯಕರು ಸೂಚಿಸಿರುವ 'ಜಾನಪದ'ವನ್ನು ಈ ಲೇಖನದಲ್ಲಿ ಬಳಸಲಾಗಿದೆ.

[2] ಚೆನ್ನವೀರ ಕಣವಿ–'ಸ್ವಾತಂತ್ರ್ಯಪೂರ್ವದ ಕನ್ನಡ ಜನಪದ ಸಾಹಿತ್ಯ', ಸಾಹಿತ್ಯ ಚಿಂತನ, ಪುಟ: ೬೩.

ಜೀ. ಶಂ. ಪರಮಶಿವಯ್ಯ–'ಸ್ವಾತಂತ್ರ್ಯಪೂರ್ವ ಕನ್ನಡ ಜನಪದ ಸಾಹಿತ್ಯ ಸಂಗ್ರಹ' ಹೊನ್ನ ಬಿತ್ತೇವು ಹೊಲಕೆಲ್ಲ, ಪುಟ ೩೯.

ಸಿ. ಪಿ. ಕೃಷ್ಣಕುಮಾರ್–'ಸ್ವಾತಂತ್ರ್ಯೋತ್ತರ ಜನಪದ ಸಾಹಿತ್ಯ ಸಂಗ್ರಹ' ಅದೇ, ಪುಟ: ೫೧.

[3] 'ಜನಪದ ಸಾಹಿತ್ಯವೆನ್ನುವುದು ಜಾನಪದ ಚಕ್ರದ ಒಂದು ಪುಟಿ; ಜನಪದ ಕಲೆ, ಜನಪದ ನೃತ್ಯ, ಜನಪದ ವೈದ್ಯ, ಜನಪದ ಉಡುಗೆ, ಜನಪದ ಸಂಗೀತ ಮೊದಲಾದುವು ಮಿಕ್ಕ ಪುಟಿಗಳು'

–ಡಾ. ಹಾ. ಮಾ. ನಾಯಕ

'ಜನಪದ ಸಾಹಿತ್ಯ ಅದರ ಸ್ವರೂಪ' ಸುವರ್ಣಸಂಚಯ, ಪು. ೨೨

ಕಲ್ಪನೆ, ಆ ವಿಷಯುದ ಬಗ್ಗೆ ವೈಜ್ಞಾನಿಕ ದೃಷ್ಟಿ ಮೂಡಿದುದು ತೀರ ಇತ್ತೀಚೆಗೆ ಎಂದ ಮೇಲೆ ಹಿಂದಿನ ಕಾರ್ಯದ ಅರಕೆಗಳೇನು ಎನ್ನುವುದು ಸ್ಪಷ್ಟವಾಗುತ್ತದೆ.[4]

ಕಾಲ ದೃಷ್ಟಿಯಿಂದ ವಿಭಜಿಸಿಕೊಂಡು ಹೆಮ್ಮೆಪಡಬಹುದಾದಷ್ಟು ವಿಪುಲ ಸಾಹಿತ್ಯ ಇನ್ನೂ ಬೆಳಕು ಕಾಣಬೇಕು. ಜಾನಪದದ ಒಂದು ಶಾಖೆಯನ್ನು ಮಾತ್ರ ಪ್ರತಿನಿಧಿಸುವ ಗೀತಸಂಕಲನಗಳು ಅಷ್ಟಿಷ್ಟು ಪ್ರಕಟವಾಗಿದ್ದರೂ ಸುಸಂಬದ್ಧತೆ, ಶಾಸ್ತ್ರೀಯ ದೃಷ್ಟಿ, ದಕ್ಷ ಸಂಪಾದನೆ ಎಷ್ಟು ಕೃತಿಗಳಲ್ಲಿ ಕಂಡುಬರುತ್ತದೆ ಎನ್ನುವುದು ದೊಡ್ಡ ಸಮಸ್ಯೆ. ಸಂಗ್ರಹ ಕಾರ್ಯದಲ್ಲಿ, ಪ್ರಕಟಣೆಯಲ್ಲಿ, ಪ್ರಸಾರದಲ್ಲಿ ಅನೇಕ ನ್ಯೂನತೆಗಳನ್ನು ಬಹುಪಾಲು ಕೃತಿಗಳಲ್ಲಿ ತೋರುವ ಸಾಧ್ಯತೆ ಇದ್ದೂ ಕೆಲವು ಉತ್ತಮ ಸಂಕಲನಗಳನ್ನು, ಕೆಲವರ ಸಾಧನೆ, ಸಾಹಸಗಳನ್ನು ಮರೆಯುವಂತಿಲ್ಲ. ನವೋದಯ ದಿನಗಳ ಕೆಲವು ಅತ್ಯುತ್ತಮ ಎನ್ನಬಹುದಾದ ಜನಪದ ಗೀತ ಸಂಕಲನ ಗಳನ್ನು ಇಲ್ಲಿ ಪ್ರಸ್ತಾಪಿಸದೆ, ಕಳೆದ ಇಪ್ಪತ್ತೈದು ವರ್ಷಗಳಲ್ಲಿ ನಮ್ಮ 'ಜಾನಪದ ಯಾತ್ರೆ' ಎಲ್ಲಿ ಮುಗ್ಗರಿಸಿದೆ, ಎಲ್ಲಿ ಚೇತರಿಸಿಕೊಳ್ಳುತ್ತಿದೆ ಎಂಬ ಸ್ಥೂಲ ವಿವೇಚನೆ ಯನ್ನು ಮಾತ್ರ ಮಾಡಲಾಗಿದೆ.

೨

'ಜಾನಪದ' ಸಂಗ್ರಹಕಾರ್ಯದಂತೆಯೇ ಅದರ ಅಧ್ಯಯನವೂ ಮುಖ್ಯ ವಾದುದು. ಪಾಶ್ಚಾತ್ಯರಲ್ಲಿ Folklore ಪದ ಜಾನಪದ ವಸ್ತು ಹಾಗೂ ಅಧ್ಯಯನ ಎಂಬ ಎರಡು ಅರ್ಥದಲ್ಲೂ ಬಳಕೆಯಲ್ಲಿದ್ದಂತೆ ತೋರುತ್ತದೆ.[5] ಸಂಗ್ರಹಿತವಾದ ಜಾನಪದ ವಸ್ತು ಶಾಸ್ತ್ರೀಯ ಅಧ್ಯಯನಕ್ಕೆ ಒಳಗಾಗದಿದ್ದರೆ ಅದರ ಸಾರ್ಥಕತೆಯಿಲ್ಲ.[6]

---

[4] 'ನಮ್ಮಲ್ಲಿ ಆರಂಭದಿಂದಲೂ ಜಾನಪದಕ್ಕೂ, ಜನಪದ ಸಾಹಿತ್ಯಕ್ಕೂ ಇರುವ ವ್ಯತ್ಯಾಸ ವನ್ನು ಗಮನಕ್ಕೆ ತೆಗೆದುಕೊಂಡಿಲ್ಲ'.

—ಡಾ. ಹಾ. ಮಾ. ನಾಯಕ

'ಜಾನಪದ ಅಧ್ಯಯನ ವೈಜ್ಞಾನಿಕ ದೃಷ್ಟಿ' ಹೊನ್ನ ಬಿತ್ತೇವು ಹೊಲಕೆಲ್ಲ, ಪುಟ : ೪೯೮–

[5] "The Word Folklore is used both for the body of tradition and the science of studying it"

Charles Francis Potter : The Standard Dictionary of folk lore, Mythology and legend, p : 401.

[6] "The collection work isa most important job no doubt. But if that collection does not come to proper utilisation, What is the use then of collecting raw materials for years of strenuous work!"

Dr. B. Rama Raju : Folklore re-search in India, p 98

ಸಂಗ್ರಹ ಅಧ್ಯಯನ ಎರಡೂ ಜೊತೆ ಜೊತೆಯಲ್ಲಿಯೇ ಒಂದಕ್ಕೊಂದು ಪೂರಕ ವಾಗಿಯೇ ನಡೆಯಬೇಕು.

ಕನ್ನಡ ಜಾನಪದವನ್ನು ಪರಿಲಕ್ಷಿಸಿದಾಗ ಸಂಗ್ರಹಿತವಾದ ಸಾಹಿತ್ಯ ಯಾವ ರೀತಿಯ ವಿಚಾರ ವಿಮರ್ಶೆಗೆ ಒಳಗಾಗಿದೆ, ಆ ಸಾಹಿತ್ಯದ ವಿವಿಧ ಮುಖಗಳು ತಮ್ಮ ಪರಿಮಿತಿಯಲ್ಲಿ ಎಷ್ಟರಮಟ್ಟಿನ ಪ್ರಭಾವವನ್ನು ಸಂಶೋಧನಾಂಗದ ಮೇಲೆ ಬೀರಿವೆ ಎಂಬುದನ್ನೂ ನೋಡಬೇಕಾದುದು ಅಗತ್ಯ. ಅಂತೆಯೇ ವಿಸ್ತಾರವಾದ 'ಜಾನಪದ' ಕ್ಷೇತ್ರದ ಇತರ ಚಟುವಟಿಕೆಗಳನ್ನೂ ಗುರುತಿಸಿದ ಹೊರತು ಆ ವಿಷಯ ಸಮಗ್ರತೆಯನ್ನು ಮುಟ್ಟಲಾರದು. ಎಂತಲೇ ಪ್ರಕೃತ ಪ್ರಬಂಧದಲ್ಲಿ ಈ ಮೂರು ಮುಖ್ಯ ವಿಷಯ ಗಳತ್ತಲೂ ದೃಷ್ಟಿಯನ್ನು ಹರಿಸಲಾಗಿದೆ. ಕಳೆದ ಇಪ್ಪತ್ತೈದು ವರ್ಷಗಳಲ್ಲಿ ಸಾಧ್ಯ ವಾದಮಟ್ಟಿಗೂ ಪ್ರಕಟಿತ ಹಾಗೂ ಅಪ್ರಕಟಿತ ಸಾಹಿತ್ಯವನ್ನು ಆಧರಿಸಿ ಒಂದು ಸಮೀಕ್ಷೆಯನ್ನು ನಡೆಸಲಾಗಿದೆ.

ಕನ್ನಡದಲ್ಲಿ ಜಾನಪದ ಸಂಗ್ರಹ ಆರಂಭವಾದುದು ಗೀತೆಗಳಿಂದಲೇ. ೧೮೭೧ರ ವೇಳೆಗೇ ಚಾರ್ಲ್ಸ್ ಇ. ಗೋವರ್ ಅವರು ಇಪ್ಪತ್ತೆಂಟು ಜನಪದ ಗೀತೆಗಳನ್ನು ಸಂಗ್ರಹಿಸಿ ಅವುಗಳನ್ನು ಇಂಗ್ಲಿಷಿಗೆ ಅನುವಾದ ಮಾಡಿ ಪ್ರಕಟಿಸಿದರು[7]. ಇವುಗಳಲ್ಲಿ ಬಹುಪಾಲು ದಾಸರ ಕೀರ್ತನೆಗಳೇ ಸೇರಿರುವುದನ್ನು ಗಮನಿಸಿದಾಗ ಜನಪದ ಗೀತೆಗಳೆಂದು ಖಚಿತವಾಗಿ ಹೇಳುವುದು ಕಷ್ಟವಾಗುತ್ತದೆ. ಅಲ್ಲಿಂದ ಮುಂದೆ ೧೮೮೫ರ ವೇಳೆಗೆ ಜೆ. ಎಫ್. ಫ್ಲೀಟರು ಉತ್ತರ ಕರ್ಣಾಟಕದಲ್ಲಿ ಆರೇಳು ಲಾವಣಿಗಳನ್ನು ಸಂಗ್ರಹಿಸಿ ಇಂಗ್ಲಿಷ್ ಅನುವಾದದೊಡನೆ ಇಂಡಿಯನ್ ಆಂಟಿಕ್ವೆರಿಯಲ್ಲಿ ಪ್ರಕಟಿಸಿದರು.[8] ಮುಂದೆ ಸುಮಾರು ಎರಡು ಮೂರು ದಶಕಗಳವರೆಗೆ ಈ ಕ್ಷೇತ್ರದಲ್ಲಿ ಯಾವ ಸಂಗ್ರಹ ಕಾರ್ಯವೂ ಆಗಲಿಲ್ಲ. ಇಪ್ಪತ್ತನೆಯ ಶತಮಾನದ ಆದಿಭಾಗವನ್ನು ಈ ದೃಷ್ಟಿಯಿಂದ ಕನ್ನಡ ಜಾನಪದ ಸಂಶೋಧನೆಯ ಇತಿಹಾಸದಲ್ಲಿ ಬರಡುಗಾಲ ಎಂದು ಕರೆಯಬಹುದು.

ಕನ್ನಡ ಜನಪದ ಸಾಹಿತ್ಯದಲ್ಲಿ ನಿಜವಾದ ಆಸಕ್ತಿಮೂಡಿ, ಅದರ ಕಾವ್ಯ ಮೌಲ್ಯವನ್ನು ಅರಿತುಕೊಂಡು ದೇಶೀಯ ವಿದ್ವಾಂಸರು ಸಂಗ್ರಹ ಕಾರ್ಯಕ್ಕೆ ತೊಡಗಿ ದುದು ೧೯೩೦ರ ವೇಳೆಗೆ. ಗರತಿಯ ಹಾಡು ಕನ್ನಡದ ಪ್ರಪ್ರಥಮ ಜನಪದ ಗೀತ ಸಂಕಲನವಾಗಿ ೧೯೩೧ರ ವೇಳೆಗೆ ಬೆಳಕು ಕಂಡಿತು. ಅಲ್ಲಿಂದೀಚೆಗೆ ಒಂದು ದಶಕದ

[7] Charles E. Gover : Canarese songs, Folk songs of southern India P. 17-58

[8] J. F. Fleet : A collection of canarese ballads, Indian Antiquairy, Vol xv nov. 1885 pp. 293-303 ; Vol xv, Dec. 1886, pp 349-353; Vol xvi Dec. 1887 pp 356-361 ; Vol xviii Dec. 1889, pp. 353-362 ; Vol xix, Dec. 1890 pp 413-423

ಅವಧಿಯಲ್ಲಿ ಕೆಲವು ಉತ್ತಮ ಸಂಗ್ರಹಗಳು ಹೊರಬಂದು ಒಂದು ಪರ್ವಕಾಲವೇ ಜನಪದ ಗೀತೆಗಳ ಚರಿತ್ರೆಯಲ್ಲಿ ಆಗಿ ಹೋಯಿತು. ಅರ್ಚಕ ರಂಗಸ್ವಾಮಿಯವರ 'ಹುಟ್ಟಿದ ಹಳ್ಳಿ ಹಳ್ಳಿಯ ಹಾಡು', ಹಲಸಂಗಿ ಸೋದರರ ಸಂಕಲನಗಳು, ಗೊರೂರ, ಬಿ. ಎನ್. ರಂಗಸ್ವಾಮಿಯವರ, ತೋರ್ಕೆಯವರ ಸಂಕಲನಗಳು ಈ ಅವಧಿಯಲ್ಲಿ ಮೇಲಿಂದ ಮೇಲೆ ಪ್ರಕಟವಾಗಿ ಕನ್ನಡದಲ್ಲಿ ಜನಪದ ಸಾಹಿತ್ಯದ ಬಗ್ಗೆ ತೀವ್ರವಾದ ಆಸಕ್ತಿಯನ್ನು ಮೂಡಿಸಿದವು. ಅಲ್ಲದೆ ಮುಂದಿನ ಸಂಗ್ರಹ ಕಾರ್ಯಕ್ಕೆ ಉತ್ತಮ ಸ್ಫೂರ್ತಿಯನ್ನು, ಉತ್ಸಾಹವನ್ನೂ ತುಂಬಿದವು. ಸಮಗ್ರ ಕರ್ನಾಟಕದವ್ಯಾಪ್ತಿಗೆ ಒಳಪಡುವಂತೆ ಕನ್ನಡ ಜನಪದ ಗೀತಸಾಹಿತ್ಯದ ನಿಜವಾದ ಸತ್ವವನ್ನು ಪರಿಚಯ ಮಾಡಿಕೊಡಲು ಸಮರ್ಥವಾಗುವ ವೈಶಿಷ್ಟ್ಯವನ್ನು ಈ ಕೃತಿಗಳು ಪಡೆದವು.

ಗೀತೆ, ಕಥನ ಗೀತೆ

೧

ಕನ್ನಡದಲ್ಲಿ ಜಾನಪದ ಸಂಗ್ರಹ ಆರಂಭವಾದುದು ಗೀತೆಗಳಿಂದಲೇ. ಉತ್ತಮ ವಿದ್ವಾಂಸರು, ಸಾಹಿತ್ಯಜ್ಞರು ಆ ಕ್ಷೇತ್ರವನ್ನು ಪ್ರವೇಶಿಸಿ ಜನಪದ ಸಾಹಿತ್ಯವನ್ನು ಕೇವಲ ಕಾವ್ಯದೃಷ್ಟಿಯಿಂದಲೇ ಪರಿಶೀಲಿಸುವ ಪರಿಪಾಠ ನಮ್ಮಲ್ಲಿ ಬೆಳೆದು ಬಂದಿತು. ಈ ದೃಷ್ಟಿ ಮುಂದಿನ ಸಂಗ್ರಹಕರಲ್ಲಿ ನಿಚ್ಚಳವಾಗಿ ಉಳಿದುಬಂದಿತು. ಜನಪದ ಗೀತೆಗಳನ್ನು 'ಪಾಮರ ಸಾಹಿತ್ಯ', 'ಗ್ರಾಮ ಸಾಹಿತ್ಯ', 'ಹಳ್ಳಿಯ ಹಾಡು' ಎಂಬೆಲ್ಲ ಹೆಸರುಗಳಲ್ಲಿ ಕರೆದು ಅದರ ಸೆಲೆಬೆಲೆಗಳನ್ನು ಚರ್ಚಿಸಿ ಶಿಷ್ಟ ಕಾವ್ಯದೊಡನೆ ಹೋಲಿಸಿನೋಡುವ ದೃಷ್ಟಿಯೂ ಮೊಳೆಯಿತು. ಜನಪದ ಸಾಹಿತ್ಯವೂ ಸರ್ವಶ್ರೇಷ್ಠ ಕಾವ್ಯಗುಣಗಳಿಂದ ರಂಜಿಸ ಬಲ್ಲುದು ಎಂಬ ಸದಭಿರುಚಿ ತಲೆದೋರಿತು. ಇಂಥ ಒಂದು ವಿಶಿಷ್ಟ ವಾತಾವರಣದಲ್ಲಿ 'ನಾಡಪದಗಳು' ಪ್ರಕಟಗೊಂಡು ಕನ್ನಡ ಜನಪದ ಸಾಹಿತ್ಯ ಪ್ರೇಮಿಗಳ ಅಚ್ಚುಮೆಚ್ಚಿನ ಕೃತಿಯಾಯಿತು.

'ನಾಡಪದಗಳು' ಪ್ರಕಟವಾದ ಮೇಲೆ ಕನ್ನಡ ಜನಪದ ಸಾಹಿತ್ಯದ ಹೊಸ ಅಧ್ಯಾಯವೊಂದು ಆರಂಭವಾಯಿತು ಎಂದು ಹೇಳಬಹುದು. ೧೯೪೩ರಲ್ಲಿ ಅಚ್ಚಿಗೆ ಸಿದ್ಧವಾಗಿ, ೧೯೪೭ಕ್ಕೆ ಹೊರಬಂದ ಈ ಕೃತಿ ಅನೇಕ ದೃಷ್ಟಿಗಳಿಂದ ಗಣನೀಯ ವಾದುದು. ಆಚಾರ್ಯ ಶ್ರೀಯವರು 'ಇದುವರೆಗೆ ನಾನು ನೋಡಿರುವ ಸಂಗ್ರಹ ಗಳಲ್ಲೆಲ್ಲ ಈಗಿನ ಸಂಗ್ರಹವೇ ಸರ್ವೋತ್ತಮವಾದುದು ಮತ್ತು ಅತ್ಯಂತ ಸ್ವಾರಸ್ಯ ವಾದುದು' ಎಂದು ಈ ಕೃತಿಯ ಮೌಲ್ಯವನ್ನು ಎತ್ತಿ ಆಡಿದ್ದಾರೆ.

ಶ್ರೀ ಮತಿಘಟ್ಟ ಕೃಷ್ಣಮೂರ್ತಿಯವರೂ ಅವರ ಸೋದರರೂ ಕಲೆತು ಹೊರ ತಂದ ಈ ಕೃತಿಯಲ್ಲಿ ಮೊಟ್ಟಮೊದಲ ಬಾರಿಗೆ ಕನ್ನಡ ಜನಪದ ಗೀತೆಗಳ ಒಂದು ಕ್ರಮಬದ್ಧ ವಿಭಜನೆಯ ಪ್ರಯತ್ನ ನಡೆದಿರುವುದು ಗಮನಾರ್ಹ ವಿಷಯ. ಶ್ರೀ

ಎಲ್. ಗುಂಡಪ್ಪನವರಂಥ ಅನುಭವಿ ವಿದ್ವಾಂಸರು ಈ ಸಂಕಲನವನ್ನು ಸಂಪಾದಿಸಿದ್ದಾರೆ.

ನಾಡ ಪದಗಳಲ್ಲಿ ಎಂಟು ತೆನೆಗಳಾಗಿ ವಿಭಾಗಗಳನ್ನು ಮಾಡಿ ಒಂದೊಂದು ತೆನೆಯಲ್ಲಿಯೂ ಒಂದೊಂದು ವರ್ಗದ ಹಾಡುಗಳನ್ನೋ, ಲಾವಣಿಗಳನ್ನೋ ಕುರಿತು ಸಂಕ್ಷೇಪವಾಗಿ ಚರ್ಚೆಮಾಡಿ ಅದಕ್ಕೆ ಪೂರಕವಾಗಿ ಸಾಹಿತ್ಯವನ್ನು ಅಳವಡಿಸಿರುವ ರೀತಿ ಸ್ತುತ್ಯವಾದುದು. ಕೋಲಾಟದ ಪದಗಳು, ತಿಂಗಳ ಮಾವನ ಪದಗಳು, ರಾಗಿಯ ಕಲ್ಲಿನ ಪದಗಳು, ಕಥೆ ಮತ್ತು ಶಾಸ್ತ್ರದ ಹಾಡುಗಳು, ಸಂಕೀರ್ಣ ಪದಗಳು, ಚರಿತ್ರೆಗೆ ಸಂಬಂಧಿಸಿದ ಪದಗಳು, ಬ್ರಾಹ್ಮಣರ ಹಾಡುಗಳು, ಬಸವನ ಅಷ್ಟಮಿಯ ಹಾಡುಗಳು— ಹೀಗೆ ಒಂದೊಂದು ಪ್ರಮುಖ ವಿಭಾಗಗಳನ್ನೂ ಕಾಣಬಹುದು. ಕೆಲವು ಜನಪದ ಸಂಪ್ರದಾಯಗಳನ್ನು ಸವಿವರವಾಗಿ ಚರ್ಚೆ ಮಾಡಿರುವುದರ ಜೊತೆಗೆ ಹಾಡುಗಳ ಹಿನ್ನೆಲೆ, ಸೂಕ್ತ ಟಿಪ್ಪಣಿ ಮುಂತಾದುವನ್ನು ಒದಗಿಸಿರುವುದು ಕೃತಿಯ ಅಭ್ಯಾಸಕ್ಕೆ ಆಸ್ವಾದಕ್ಕೆ ತುಂಬ ಸಹಕಾರಿಯಾಗಿದೆ. 'ಉತ್ತರ ದೇವಿ', 'ಲಕ್ಕಣ್ಣ ಈರಣ್ಣ' ಮೊದಲಾದ ಪ್ರಸಿದ್ಧ ಜನಪದ ಕಥನ ಗೀತೆಗಳ ಜೊತೆಗೆ ಅತ್ಯಂತ ಜನಪ್ರಿಯವಾಗಿರುವ ಏಳಯ್ಯ ಏಳು ಏಳು ಚಿನ್ನದ ಗಿರಿ, ಬಿಳಿಗಿರಿರಂಗ, ಮೂಡಲ್ ಕುಣಿಗಲ್ ಕೆರೆ, ಉಯ್ಯಾಲೆ ಬಣ್ಣದುಯ್ಯಾಲೆ, ಅರಸನೂರ ಮನೆಯ ಮುಂದೆ, ಜವರಾಯ ಬಂದರೆ, ಎಲೆಯೊ ಎಲೆಯೊ ಎಲ್ತಂದೆ ಭಾವ, ಚೆಲುವಯ್ಯ ಚೆಲುವೊ ಮುಂತಾದ ಗೀತೆಗಳು ಈ ಸಂಕಲನದ ಆಕರ್ಷಣೆಗೆ ಸಾಕ್ಷಿಯಾಗಿವೆ. ಚಾರಿತ್ರಿಕ ಲಾವಣಿಗಳಲ್ಲಿ 'ಶ್ರೀರಂಗಪಟ್ಟಣದ ಲಾವಣಿ'ಯನ್ನು ಇಂಗ್ಲಿಷ್ ಮೂಲದಿಂದ ಮತ್ತೆ ಕನ್ನಡಕ್ಕೆ ಅನುವಾದಿಸಿಕೊಟ್ಟಿರುವುದರ ಜೊತೆಗೆ ಸರ್ಜಪ್ಪನಾಯ್ಕನ ಲಾವಣಿ, ಪಿರಿಯಾಪಟ್ಟಣದ ಲಾವಣಿ ಮುಂತಾದ ಕನ್ನಡದ ಅಪೂರ್ವ ಐತಿಹಾಸಿಕ ಲಾವಣಿಗಳ ಬಗ್ಗೆ ಸೂಚನೆಯನ್ನೂ ಈ ಕೃತಿಯಲ್ಲಿ ಕಾಣಬಹುದಾಗಿದೆ.

ನಾಡ ಪದಗಳ ಮತ್ತೊಂದು ಪ್ರಮುಖ ಅಂಶ ಬ್ರಾಹ್ಮಣರ ಹಾಡುಗಳನ್ನು ಪ್ರತ್ಯೇಕವಾಗಿ ಸಂಗ್ರಹಿಸಿ ನೀಡಿರುವುದು. ದ್ವಿಪದಿ, ತ್ರಿಪದಿ, ಚೌಪದಿ, ಷಟ್ಪದಿ, ಸಾಂಗತ್ಯ ಹೀಗೆ ವೈವಿಧ್ಯಮಯವಾದ ಛಂದಸ್ಸಿನಲ್ಲಿ ಹಾಡುಗಳೂ, ಕಥೆಗಳೂ ಸ್ವಲ್ಪ ಸುಧಾರಿಸಿದ ಶೈಲಿಯಲ್ಲಿ ಈ ವಿಭಾಗದಲ್ಲಿ ಲಭ್ಯವಾಗುತ್ತವೆ. 'ನಂಜುಂಡ ಜೋಗಿ' ಎಂಬ ಸುಂದರ ಕಥನಗೀತೆಯೂ ಇಲ್ಲಿದೆ.

ಹೇಮಗಿರಿರಾಯನು ಮಗಳಾದ
ಭಾಮೆ ಪಾರ್ವತ ದೇವಿಗೆ–ನಂಜುಂಡ
ಪ್ರೇಮದಿಂ ಪತಿಯಾದನು

ಹೀಗೆ 'ಅರ್ಜುನ ಜೋಗಿ' ಹಾಡಿನ ಧಾಟಿಯಲ್ಲೇ ರಚಿತವಾಗಿರುವ ಈ ಕೃತಿ ಒಕ್ಕಲುಮಕ್ಕಳ ಹಾಡಿಗಿಂತ ಸ್ವಲ್ಪ ಭಿನ್ನ, ವಿಶಿಷ್ಟ.

'ನಾಡ ಪದಗಳು' ಸಂಕಲನದಲ್ಲಿ ಹಾಡುಗಳ ಮೂಲ ಸ್ವರೂಪವನ್ನು ಕಾಪಾಡಿಕೊಳ್ಳಲು ಸಂಗ್ರಹಕರು, ಸಂಪಾದಕರು, ಮಾಡಿರುವ ಪ್ರಯತ್ನ ಸ್ತುತ್ಯವಾದುದು ಮೂಲದ ಧಾಟಿ, ಭಾಷೆ ಎಲ್ಲೂ ಮುಕ್ಕಾಗದಂತೆ ಎಚ್ಚರವಹಿಸಿ, ತಿದ್ದುವ ಸಾಹಸಕ್ಕೆ ತೊಡಗದಿರುವುದು ನಿಜಕ್ಕೂ ಅಭಿನಂದನೀಯ.

ಬಿದರೂರಿಗ್ ಹೋಗ್ವಾಗ ಉದುರಾವೆ ಮಲ್ಲಿಗೆ
ಬಿದರೂರಿಗ್ ಹೋಗಿ ಬsರುವೋನೇ–ಕೋಲು
ಬಿದರೂರಿಗ್ ಹೋಗಿ ಬರುವೋ ಚೆನ್ನಯ್ಯನ
ಕುದುರೆಗೆ ಧೂಳು ಗsನಿದsವೆ–ಕೋಲು

ಜನಪದ ತ್ರಿಪದಿಯೊಂದು ಕೋಲಾಟದವರ ಬಾಯಲ್ಲಿ ಯಾವ ಮಟ್ಟಿಗೆ ಹೊಂದಿಕೊಂಡು ಸಹಜ ಸುಂದರವಾಗಿ ಮೂಲದ ಧ್ವನಿಯನ್ನು ಕಿವಿಗೆ ತಟ್ಟಿಸಬಲ್ಲುದು ಎಂಬುದನ್ನ ಇಲ್ಲಿ ಗಮನಿಸಬಹುದು.

ಮತಿಘಟ್ಟ ಸೋದರರಲ್ಲಿ ಶ್ರೀ ಕೃಷ್ಣಮೂರ್ತಿಯವರು ಸಂಗ್ರಹ ಕಾರ್ಯವನ್ನು ಮುಂದುವರಿಸಿಕೊಂಡು ಬಂದರು. ಆಗಾಗ ಅವರು ಪ್ರಕಟಿಸುತ್ತ ಬಂದಿರುವ 'ಕಿರು ಹೊತ್ತಗೆಗಳು' ಗಮನಾರ್ಹವಲ್ಲದಿದ್ದರೂ 'ಏಳುಕೊಳ್ಳದ ಎಲ್ಲಮ್ಮ' ಮುಂತಾದ ಕೆಲವು ಉತ್ತಮ ಕೃತಿಗಳು ಉಲ್ಲೇಖನಾರ್ಹ.

೨

೧೯೪೦ ರಿಂದ ೧೯೫೦ರ ವರೆಗೆ ಪ್ರಕಟವಾದ ಜನಪದ ಗೀತ ಸಂಗ್ರಹಗಳಲ್ಲಿ ಶ್ರೀ ಎನ್. ಅನಂತರಂಗಾಚಾರ್ಯರು ಸಂಪಾದಿಸಿ ಪ್ರಕಟಿಸಿದ 'ಮಾನವಮಿಯ ಚೌಪದ' ಕರ್ಣಾಟಕದ ಒಂದು ಪ್ರಸಿದ್ಧ ಜಾನಪದ ಸಂಪ್ರದಾಯವನ್ನು ಅತ್ಯಂತ ಸಮರ್ಥವಾದ ರೀತಿಯಲ್ಲಿ ಪರಿಚಯಮಾಡಿಕೊಡುವ ಕೃತಿಯಾಗಿದೆ. ತಮಗೆ ಗ್ರಂಥರೂಪದಲ್ಲಿ ದೊರೆತ ಈ ಕೃತಿ, ಯಾರೋ ನಿರ್ದಿಷ್ಟ ಕವಿಯಿಂದ ಕ್ರಿ. ಶ. ೧೭೩೦ರಲ್ಲಿ ರಚಿತವಾಗಿರಬೇಕು ಎಂಬ ತೀರ್ಮಾನಕ್ಕೆ ಶ್ರೀಯುತರು ಬಂದರೂ...."ಬಹಳ ಕಾಲದಿಂದ ಬಳಕೆಯಲ್ಲಿದ್ದ ಇಂತಹ ಬಿಡಿ ಪದಗಳನ್ನು ಈ ಗ್ರಂಥಕರ್ತನು ಆರಿಸಿಕೊಂಡು ಈ ರೂಪವಾಗಿ ಮಾರ್ಪಡಿಸಿದನೊ ಅಥವಾ ಸ್ವತಂತ್ರವಾಗಿ ಈ ಗ್ರಂಥಕರ್ತನಿಂದ ರಚಿತವಾದ ಈ ಪೂರ್ಣ ಗ್ರಂಥದಿಂದ ಬೇರೆ ಬೇರೆ ಕಡೆಯವರು ತಮಗೆ ಬೇಕಾದ ಭಾಗಗಳನ್ನು ಆರಿಸಿಕೊಂಡು ಬಳಕೆಯಲ್ಲಿಟ್ಟುಕೊಂಡರೋ ನಿರ್ದಿಷ್ಟವಾಗಿ ಹೇಳುವುದು ಕಷ್ಟವಾಗಿದೆ" ಎಂದು ತಮ್ಮ ಸಂದೇಹವನ್ನು ವ್ಯಕ್ತಪಡಿಸಿದ್ದಾರೆ. ಗ್ರಂಥಕಾರನು ಬಳಕೆಯ ಹಾಡುಗಳನ್ನು ಆಯ್ದು ಒಂದು ಗ್ರಂಥದ ಸ್ವರೂಪವನ್ನು ಕೊಟ್ಟಿರುವ ಸಾಧ್ಯತೆಯೇ ಹೆಚ್ಚು; ಏಕೆಂದರೆ, ಕರ್ಣಾಟಕದ ಅನೇಕ ಕಡೆಗಳಲ್ಲಿ ಈ ಸಂಪ್ರದಾಯ ಬಳಕೆಯಲ್ಲಿತ್ತು.

ಈ ದಶಕದಲ್ಲಿ ಇನ್ನಾವ ಮಹತ್ವದ ಕೃತಿಯೂ ಪ್ರಕಟವಾಗದೆ ಜನಪದ

ಸಾಹಿತ್ಯ ಸಂಗ್ರಹ, ಪ್ರಕಟಣೆ ಕೆಲವು ಕಾಲ ಸ್ಥಗಿತಗೊಂಡಂತೆ ಗೋಚರವಾಗುತ್ತದೆ. ಈ ಮಧ್ಯೆ ತೀ.ನಂ.ಶ್ರೀ. ಯವರ 'ಹೆಣ್ಣು ಮಕ್ಕಳ ಪದಗಳು' ಆ ಹಿಂದೆ ಪ್ರಕಟವಾದ ಸಂಕಲನಗಳಿಂದ ಆಯ್ದು ಕೆಲವು ಅಪೂರ್ವ ತ್ರಿಪದಿಗಳ ರಸನಿರೂಪಣೆಯನ್ನು ನೀಡುವ ವಯಸ್ಕರ ಶಿಕ್ಷಣ ಸಮಿತಿಯ ಜನಪ್ರಿಯ ಮಾಲೆಯ ಪುಸ್ತಕ. ಎಂ. ಎಸ್. ಗೋಪಾಲ್ ಅವರ 'ಹಳ್ಳಿಯ ಹಾಡು', ಕೆ. ಆರ್. ಲಿಂಗಪ್ಪನವರ 'ಮಾನವಮಿಯ ಪದಗಳು' ಇದೇ ಮಾಲೆಯ ಸ್ವತಂತ್ರ ಸಂಗ್ರಹಗಳು. ಸ್ವತಂತ್ರ ಸಂಗ್ರಹ ಎಂದು ಕರೆಯಲಾಗದ ಮತ್ತೊಂದು ಜನಪ್ರಿಯ ಹಾಡ್ಗತೆ 'ಗೋವಿನ ಹಾಡು', ಆಚಾರ್ಯ ಡಿ. ಎಲ್. ಎನ್. ಅವರಿಂದ ಸಂಪಾದಿತವಾಗಿ ಕನ್ನಡ ಜಾನಪದ ಕಾವ್ಯಮಾಲೆಯ ಮತ್ತೊಂದು ಮುತ್ತಾಗಿ ೧೯೪೯ರಲ್ಲಿ ಬೆಳಕು ಕಂಡಿತು. 'ಈ ಹಾಡನ್ನು ಕಟ್ಟಿದ ಕವಿ ಯಾರೆಂದು ತಿಳಿಯದು. ಅವನು ಯಾವಾಗ ಇದ್ದನೋ ಅದೂ ಗೊತ್ತಿಲ್ಲ. ಹಾಡಿನ ಕೊನೆಯಲ್ಲಿ ಮದ್ದೂರಿನ ನರಸಿಂಹದೇವರ ಹೆಸರು ಇರುವುದರಿಂದ ಅದನ್ನು ಬರೆದಾತ ಆ ಊರಿಗೆ ಸೇರಿದವನೋ ಇಲ್ಲವೇ ಆ ದೇವರ ಒಕ್ಕಲಿನವನೋ ಆಗಿರಬೇಕೆಂದು ತೋರುತ್ತದೆ' ಎಂದು ಶ್ರೀ ಡಿ. ಎಲ್. ಎನ್. ಅವರು ಕವಿಯ ಬಗ್ಗೆ ಕೆಲವು ಊಹೆಗಳನ್ನು ಮಾಡಿದ್ದಾರೆ. ತನ್ನದೇ ಆದ ವಿಶಿಷ್ಟ ಜಾನಪದ ಮಟ್ಟಿನ ಈ ಹಾಡು ಗ್ರಂಥಸ್ತವಾಗಿ ಉಳಿದು ಬಂದಿದ್ದರೂ ಜನಜನಿತವಾದ ಹಾಡುಗಬ್ಬವೊಂದಕ್ಕೆ ಈ ದೀಕ್ಷೆ ಆಗಿರಲೂಬಹುದು. ಹಲಸಂಗಿ ಸೋದರರು ಈ ಕಥೆಯ ಮತ್ತೊಂದು ಬಗೆಯನ್ನು 'ಆಕಳ ಹಾಡು' ಎಂಬ ಹೆಸರಿನಲ್ಲಿ ಸಂಗ್ರಹಿಸಿಕೊಟ್ಟಿದ್ದಾರೆ. ಪ್ರಕೃತ ಗೋವಿನ ಹಾಡಿಗೂ, ಆ ಆಕಳ ಹಾಡಿಗೂ ಕಥಾಸ್ವರೂಪದಲ್ಲಿ, ಮಟ್ಟಿನಲ್ಲಿ, ವಿಸ್ತಾರದಲ್ಲಿ ಎದ್ದುತೋರುವ ವ್ಯತ್ಯಾಸಗಳಿದ್ದರೂ ಗೋವಿನ ಹಾಡು ಕಂಠಸ್ಥ ಸಂಪ್ರದಾಯದ ಕಥನಗೀತೆಯೇ ಆಗಿತ್ತು ಎನ್ನುವುದಕ್ಕೆ ಆಧಾರಗಳು ಇನ್ನೂ ಸಾಲದಾಗಿದೆ.

೩

೧೯೫೦ರ ಈಚೆಗೆ ಕನ್ನಡ ಜನಪದ ಸಾಹಿತ್ಯ, ಸಂಗ್ರಹ ಹಾಗೂ ಅಭ್ಯಾಸದ ದೃಷ್ಟಿಯಿಂದ ಚೇತರಿಸಿಕೊಳ್ಳತೊಡಗಿತು. ದಿ. ಡಾ. ಗದ್ಗೀಮಠರ ಪ್ರವೇಶದಿಂದ ಆ ಕಾರ್ಯಕ್ಷೇತ್ರ ಹೆಚ್ಚು ಸತ್ವಪೂರ್ಣವಾಗತೊಡಗಿತು. ಉತ್ತರ ಕರ್ನಾಟಕದ ಜನಪದ ಗೀತೆಗಳ ಅಪಾರ ಸಂಗ್ರಹ ಕಾರ್ಯವನ್ನು ವ್ಯವಸ್ಥಿತ ರೂಪದಲ್ಲಿ, ಶಾಸ್ತ್ರೀಯವಾಗಿ, ವ್ಯಾಪಕವಾಗಿ ಮಾಡಿದ ಕೀರ್ತಿ ಡಾ. ಗದ್ಗೀಮಠ ಅವರದು. ಜನಪದ ಸಾಹಿತ್ಯಕ್ಕೆ ವಿದ್ವತ್ತಿನ ಗದ್ದಿಗೆಯನ್ನು ಒದಗಿಸಿದವರೂ ಅವರೇ. ಸ್ವತಃ ಸಂಗ್ರಹಕರಾಗಿ, ಜಾನಪದ ವಿದ್ವಾಂಸರಾಗಿ, ಲೇಖಕರಾಗಿ ಶ್ರೀ ಗದ್ಗೀಮಠ ಅವರು ಕನ್ನಡ ಜಾನಪದ ಅಧ್ಯಯನಕ್ಕೆ ಹೊಸ ಆಶೆ, ಭರವಸೆಗಳನ್ನು ನೀಡಿದ ಸಾಹಸಿಗರಾದರು. ಉತ್ತರ ಕರ್ನಾಟಕದ ಅನೇಕ ಜನಪದ ಸಂಪ್ರದಾಯಗಳನ್ನೂ ಅಜ್ಞಾತ ಕಥನ ಗೀತೆಗಳನ್ನೂ, ಅಪಾರ ಸಂಖ್ಯೆಯ ಹಾಡುಗಳನ್ನೂ ಕುರಿತು ಅಭ್ಯಾಸಮಾಡಿ, ವಿಷಯಗಳನ್ನು ಸಂಗ್ರಹಿಸಿ,

ಸಾಹಿತ್ಯವನ್ನು ಕಲೆಹಾಕಿ ಒಂದು ಉತ್ತಮ ವಿಕ್ರಮವನ್ನೇ ಅವರು ಸಾಧಿಸಿದರು. ಆದರೂ ಅವರು ಸಂಗ್ರಹಿಸಿದ ಅಪಾರ ಸಾಹಿತ್ಯದಲ್ಲಿ ಪ್ರಕಟವಾದುದು ಎಲ್ಲೋ, ಸ್ವಲ್ಪ ಭಾಗ ಮಾತ್ರ. ಡಾ. ಗದ್ದಿಗೆಮಠರು ತರುಣವಯಸ್ಸಿನಲ್ಲಿಯೇ ಕಣ್ಮರೆಯಾಗಿ ಆ ನಷ್ಟವನ್ನು ಉತ್ತರಕರ್ಣಾಟಕದ ಜಾನಪದ ಕ್ಷೇತ್ರ ಇನ್ನೂ ತುಂಬಿಕೊಳ್ಳಬೇಕಾಗಿದೆ. ಕನ್ನಡ ಜಾನಪದ ವೃಕ್ಷದ ಪ್ರಬಲವಾದೊಂದು ಶಾಖೆ ಕುಸಿದು, ದುರ್ಬಲವಾಯಿತು ಎಂಬುದು ಎಲ್ಲರಿಗೂ ಗೊತ್ತಾದ ವಿಚಾರ.

ಡಾ. ಗದ್ದಿಗೆಮಠರು ಅನೇಕ ವರ್ಷಗಳಿಂದ ಸಂಗ್ರಹಕಾರ್ಯವನ್ನು ನಡೆಸಿಕೊಂಡು ಬಂದಿದ್ದರೂ ಅವರ ಪ್ರಥಮ ಜಾನಪದ ಸಂಕಲನ 'ನಾಲ್ಕು ನಾಡ ಪದಗಳು' ಪ್ರಕಟವಾದುದು ೧೯೩೨ರಲ್ಲಿ. ಉತ್ತರ ಕರ್ನಾಟಕದಲ್ಲಿ ಪ್ರಚಲಿತವಾಗಿರುವ ಹಂತಿಯ ಕಥೆಗಳ ಸೊಗಸನ್ನು, ಸ್ವರೂಪವನ್ನು ಈ ಕೃತಿ ಪರಿಚಯ ಮಾಡಿಕೊಡುತ್ತದೆ. ಬಿಜ್ಜಮಹಾದೇವಿ, ಬೇಡರ ಕನ್ನಯ್ಯ, ಕೋಳೂರು ಕೊಡಗೂಸು, ಹಾಗೂ ಗೊಲ್ಲಾಳ ಮುಂತಾದ ಶರಣರ ಕಥೆಗಳನ್ನು ಮನೋಜ್ಞವಾದ ರೀತಿಯಲ್ಲಿ ಅಜ್ಞಾತ ಜಾನಪದ ಕವಿಗಳು ಹಾಡಿಕೊಂಡಿದ್ದಾರೆ. ಇಲ್ಲಿನ ಕಥನ ಗೀತೆಗಳು ಚಿಕ್ಕವಾದರೂ ಚೊಕ್ಕ ರಚನೆಗಳು. ಸುಂದರ ತ್ರಿಪದಿಯಲ್ಲಿ ಶರಣರ ಕಥೆಗಳನ್ನು ಆಕರ್ಷಕವಾಗಿ, ಸತ್ವಪೂರ್ಣವಾಗಿ ನೀಡುವ ಈ ಹಂತಿಯ ಪದಗಳು ನಿಸ್ಸಂಶಯವಾಗಿ ಉತ್ತಮ ಕಾವ್ಯದ ಸೆಲೆಯನ್ನು ಪಡೆದು ರಂಜಿಸುತ್ತವೆ.

ಡಾ. ಗದ್ದಿಗೆಮಠ ಅವರ 'ಕಂಬಿಯ ಹಾಡುಗಳು' ಪ್ರಕಟವಾದುದು ೧೯೩೭ರಲ್ಲಿ. ಕನ್ನಡ ಜನಪದ ಗೀತೆಗಳ ವೈವಿಧ್ಯಕ್ಕೆ ಈ ಕೃತಿ ಒಂದು ಹೊಸ ಜೋಡಣೆ. ಕಂಬಿಯ ಸಂಪ್ರದಾಯವನ್ನು ಗುರುತಿಸಿ ಅದನ್ನು ಸವಿವರವಾಗಿ ಶ್ರೀಯುತರು ಪರಿಚಯ ಮಾಡಿಕೊಟ್ಟಿದ್ದಾರೆ. ಶ್ರೀ ಶೈಲದ ಯಾತ್ರೆಯಲ್ಲಿ ಕಂಬಿಯ ಅಯ್ಯಗಳು ಹೇಗೆ ಹಾಡಿಕೊಂಡು ಹೋಗುತ್ತಾರೆ ಆ ಹಾಡುಗಳ ಬಗೆಗಳೇನು, ಕೆಲವು ಉರ್ದು ಮಿಶ್ರಿತ ಹಾಡುಗಳು ಹೇಗೆ ಬಂದಿರಬಹುದು ಎಂಬೆಲ್ಲ ವಿಚಾರಗಳನ್ನೂ, ಸಮರ್ಪಕವಾಗಿ ಚರ್ಚೆ ಮಾಡಿದ್ದಾರೆ.

'ಜನತಾ ಗೀತೆಗಳು' ಡಾ. ಗದ್ದಿಗೆಮಠ ಅವರ ಉತ್ತಮ ಸಂಕಲನಗಳಲ್ಲಿ ಒಂದು. ಗರತಿಯ ಹಾಡು, ಮಲ್ಲಿಗೆ ದಂಡೆ, ನಾಡ ಪದಗಳು ಈ ಕೃತಿಗಳ ಶ್ರೇಣಿಯಲ್ಲಿ ನಿಲ್ಲಬಹುದಾದ ಸುಂದರ ಗೀತೆಗಳ ಸಂಕಲನ. ಸಂಕೀರ್ಣ ಗೀತೆಗಳನ್ನು ಕಲೆಹಾಕಿ ಡಾ. ಗದ್ದಿಗೆಮಠ ಅವರು ಉತ್ತರ ಕರ್ನಾಟಕದ ಜನಪದ ಭಾವಗೀತೆಗಳ ಮತ್ತೊಂದು ಪ್ರಾತಿನಿಧಿಕ ಕೃತಿಯನ್ನು ಈ ಮೂಲಕ ನೀಡಿದ್ದಾರೆ ಎನ್ನಬಹುದು. ಯಾವುದೇ ಗೀತ ಸಂಪ್ರದಾಯವನ್ನು ಪರಿಚಯಿಸುವಾಗ ಡಾ. ಗದ್ದಿಗೆಮಠ ಅವರು ನೀಡುವ ಟಿಪ್ಪಣಿಗಳು ಹೆಚ್ಚು ಉಪಯುಕ್ತವಾದುವು. ಶ್ರೀಯುತರ ಆಳವಾದ ಅನುಭವಕ್ಕೆ ಈ ಕೃತಿಗಳು ಸಾಕ್ಷಿ. ಸ್ವತಃ ಉತ್ತಮ ವಿದ್ವಾಂಸರಾದ ಅವರು ಜನಪದ ಸಂಸ್ಕೃತಿಯನ್ನು ಚೆನ್ನಾಗಿ ಜೀರ್ಣಿಸಿಕೊಂಡವರು. ಎಂತಲೇ ಅವರ ಯಾವುದೇ ಸಂಕಲನವನ್ನು ಕೈಗೆತ್ತಿಕೊಂಡರೂ

ಎರಡು ಮುಖ್ಯ ವೈಶಿಷ್ಟ್ಯಗಳನ್ನು ಗುರುತಿಸಬಹುದು: ಯಾವುದೇ ಸಂದರ್ಭದ ಹಾಡುಗಳನ್ನು ಸಂಕಲಿಸಿಕೊಟ್ಟರೂ ಅವುಗಳಲ್ಲಿ ಕಂಡುಬರುವ ಉತ್ತಮ ಶಾಸ್ತ್ರೀಯ ದೃಷ್ಟಿ, ಜೊತೆಗೆ ಅನೇಕ ಜನಪದ ಸಂಪ್ರದಾಯಗಳನ್ನೂ ಹಾಡುಗಳ ಹಿನ್ನೆಲೆಗಳನ್ನೂ ಪರಿಚಯಿಸುವಾಗ ತೋರುವ ಶ್ರದ್ಧೆ, ನೀಡುವ ವಿಷಯಗಳ ಹೊಸತನ ಇವು ಗಮನಾರ್ಹವಾದುವು.

'ಲೋಕಗೀತೆಗಳು' ಶ್ರೀಯುತರ ಮತ್ತೊಂದು ಶ್ರೇಷ್ಠ ಸಂಕಲನ. ವಿಸ್ತಾರದ ದೃಷ್ಟಿಯಿಂದಲೂ, ಹಾಡುಗಳ ಸಮಗ್ರತೆಯ ದೃಷ್ಟಿಯಿಂದಲೂ ಈ ಕೃತಿಗೆ ಒಂದು ಮಹತ್ವದ ಸ್ಥಾನವನ್ನೇ ಕೊಡಬೇಕು. ಮದುವೆ ಹಾಗೂ ಕೋಲಾಟಗಳಿಗೆ ಸಂಬಂಧಪಟ್ಟ ಉತ್ತರ ಕರ್ನಾಟಕದ ಹಾಡುಗಳ ಜೊತೆಗೆ ಉತ್ತಮ ಪ್ರಸ್ತಾವನೆಯನ್ನೂ ಶ್ರೀಯುತರು ಈ ಕೃತಿಯಲ್ಲಿ ದೊರಕಿಸಿಕೊಟ್ಟಿದ್ದಾರೆ.

'ಕುಮಾರ ರಾಮನ ದುಂದುಮೆ,' ಮತ್ತು 'ಕನ್ನಡ ಜನಪದ ಗೀತೆಗಳು' ನಿಬಂಧದೊಡನೆ ಪ್ರಕಟವಾಗಿರುವ ಶಿವಶರಣರ ಹಾಗೂ ಇತರ ಸುದೀರ್ಘ ಕಥನ ಗೀತೆಗಳು ಮೊದಲಬಾರಿಗೆ ಉತ್ತರ ಕರ್ನಾಟಕದ ಜನಪದ ಕಾವ್ಯಗಳ ಹಿರಿಮೆಯನ್ನು ಪರಿಚಯ ಮಾಡಿಕೊಡುತ್ತವೆ.

ಡಾ. ಗದ್ಗೀಮಠ ಅವರು ಸಂಗ್ರಹಿಸಿದ ಜನಪದ ಸಾಹಿತ್ಯದಲ್ಲಿ ಇನ್ನೂ ಬಹುಪಾಲು ಪ್ರಕಟವಾಗಬೇಕಾಗಿದೆ. ಒಂದು ಲಕ್ಷಕ್ಕೂ ಹೆಚ್ಚು ಹಾಡುಗಳನ್ನು ಕಲೆಹಾಕಿರುವ ಅವರ ಸಾಹಸ ಅದ್ವಿತೀಯವೇ ಆದರು ಆ ಸಾಹಿತ್ಯ ರಾಶಿಯನ್ನು ಹೊರತರುವ ಸಾಹಸವನ್ನು ಯಾರಾದರೂ ಮಾಡಬೇಕು. ಜನಪದ ಸಾಹಿತ್ಯದಲ್ಲಿ ಆಸಕ್ತಿ ಹೊಂದಿರುವ ಪ್ರತಿಯೊಬ್ಬ ವಿದ್ವಾಂಸನೂ ಡಾ. ಗದ್ಗೀಮಠರು ಸಂಗ್ರಹಿಸಿಟ್ಟಿರುವ ಸಾಹಿತ್ಯದ ಪ್ರಯೋಜನವನ್ನು ಪಡೆಯಬೇಕಾದರೆ ಅದರ ಸಂರಕ್ಷಣೆಯತ್ತ ಮೊದಲು ಗಮನಕೊಡಬೇಕು.

೪

ಉತ್ತರ ಕರ್ನಾಟಕದ ಕೃತಿಗಳಲ್ಲಿ ಶ್ರೀ ಈಶ್ವರ ಚಂದ್ರ ಚಿಂತಾಮಣಿಯವರ 'ಗರತಿಯರ ಮನೆಯಿಂದ' ೧೯೫೫ರಲ್ಲಿ ಪ್ರಕಟವಾಗಿ ಮತ್ತಷ್ಟು ವೈವಿಧ್ಯಮಯ ಸಾಹಿತ್ಯವನ್ನು ಜಾನಪದ ಭಂಡಾರ ಪಡೆದುಕೊಂಡಿತು. ಹೆಣ್ಣು ಮಕ್ಕಳ ಹಾಡಿನ ಜೊತೆಯಲ್ಲಿ ಮಕ್ಕಳ ಹಾಡುಗಳನ್ನೂ, ಒಗಟುಗಳನ್ನೂ ಸಂಕಲಿಸಿ ನೀಡಿರುವುದು ಈ ಕೃತಿಯ ಹೆಚ್ಚಳ. ಶ್ರೀ ಆರ್. ಎಸ್. ಪಂಚಮುಖಿಯವರ 'ಕರ್ನಾಟಕ ಜಾನಪದ ಗೀತೆಗಳು' ಮತ್ತೊಂದು ಗಮನಾರ್ಹ ಕೃತಿ. ೧೯೫೩ರಲ್ಲೇ ಪ್ರಕಟವಾದ ಈ ಸಂಗ್ರಹದಲ್ಲಿ ಹಂತಿಯ ಪದಗಳು, ಡೊಳ್ಳಿನ ಪದಗಳು, ಬೀಸುವ ಪದಗಳು ಸ್ತುತಿಪದಗಳು ಮುಂತಾದ ವಿಭಜನೆಗಳನ್ನು ಕಾಣಬಹುದು. ಧಾರವಾಡ, ಬೆಳಗಾಂ ಮತ್ತು ಕಾರವಾರ ಜಿಲ್ಲೆಗಳ ಹಾಡುಗಳನ್ನು ಒಂದು ಕಡೆ ಕಲೆಹಾಕಿ ಇಲ್ಲಿ ನೀಡಲಾಗಿದೆ. ಎಂ. ಜೀವನ ಅವರ 'ಜಾನಪದ ಗೀತೆಗಳು' ೧೯೫೫ರಲ್ಲಿ ಪ್ರಕಟವಾದ ಇನ್ನೊಂದು ವಿಸ್ತಾರವಾದ

ಕೃತಿ. ನಾನ್ನೂರಕ್ಕೂ ಹೆಚ್ಚು ಪುಟಗಳಲ್ಲಿ ಕನ್ನಡ ಜನಪದ ತ್ರಿಪದಿಗಳನ್ನು ಒಂದೆಡೆ ಸಂಕಲಿಸಿರುವ ಸಾಹಸ ಮೆಚ್ಚುವಂಥದೇ ಆದರೂ ಹಾಡುಗಳ ವಿಭಜನೆಯಲ್ಲಿ ಸರಿಯಾದ ಕ್ರಮವನ್ನು ಅನುಸರಿಸದೆ, ಪುನರುಕ್ತಿಗಳನ್ನು ನಿವಾರಿಸದೆ ಹೊರತಂದಿರುವ ಈ ಕೃತಿಯಲ್ಲಿ ಜಯದೇವಿ ತಾಯಿ ಲಿಗಾಡೆಯವರ ಕೆಲವು ತ್ರಿಪದಿಗಳನ್ನು ಸೇರಿಸಿರುವುದರ ಔಚಿತ್ಯ ತಿಳಿಯುವುದಿಲ್ಲ.

ಉತ್ತರ ಕರ್ನಾಟಕದ ಜನಪದ ಸಾಹಿತ್ಯ ಸಂಕಲನಗಳಲ್ಲಿ ಶ್ರೀ ದೊಡ್ಡಭಾವೆಪ್ಪ ಮೂಗಿಯವರ 'ಕಿತ್ತೂರು ಕಾಳಗ' ಒಂದು ಶ್ರೇಷ್ಠ ಕೃತಿ. ಐತಿಹಾಸಿಕ ಸಂಶೋಧನೆಯಲ್ಲಿ ಹೆಸರಾಗಿರುವ ಶ್ರೀ ಮೂಗಿಯವರು ಕಿತ್ತೂರಿಗೆ ಸಂಬಂಧಪಟ್ಟ ಅಪಾರ ಜನಪದ ಸಾಹಿತ್ಯವನ್ನು ಸಂಗ್ರಹಿಸಿ ಇತಿಹಾಸ-ಹಾಗೂ ಜನಪದ ಸಾಹಿತ್ಯದ ಸಂಬಂಧವನ್ನು ಸ್ಥಾಪಿಸಲು ಸ್ತುತ್ಯವಾದ ಪ್ರಯತ್ನವನ್ನು ಮಾಡಿಸ್ದಾರೆ. 'ಕಿತ್ತೂರು ಕಾಳಗ'ದಲ್ಲಿ ಆಕರ್ಷಕವಾದ ಸುದೀರ್ಘವಾದ ಐತಿಹಾಸಿಕ ಲಾವಣಿಗಳು ಬೆಳಕು ಕಂಡಿವೆ. ಪ್ರಥಮ ಬಾರಿಗೆ ಉತ್ತರ ಕರ್ನಾಟಕದ ವಿಶಿಷ್ಟ ಐತಿಹಾಸಿಕ ಲಾವಣಿಗಳನ್ನು ನಾವು ಎದುರುಗೊಳ್ಳುವುದು ಈ ಕೃತಿಯಲ್ಲೇ. ಕೈ. ಶಿವೇಶ್ವರ ದೊಡ್ಡಮನಿಯವರ 'ನವಿಲೂರು ಮನೆಯಿಂದ' ಕವನ ಸಂಕಲನದಲ್ಲಿ ಅವರೇ ಸಂಗ್ರಹಿಸಿದ ಕೆಲವು ಜನಪದ ಗೀತೆಗಳಿವೆ.

ಉತ್ತರ ಕರ್ನಾಟಕದ ಜಾನಪದ ವಿದ್ವಾಂಸರಲ್ಲಿ ಶ್ರೀ ತಲ್ಲೂರು ರಾಯನಗೌಡ ಪಾಟೀಲರ ಹೆಸರು ಮರೆಯುವಂಥದಲ್ಲ. ಅಪಾರ ಸಂಗ್ರಹಕಾರ್ಯವನ್ನು ಎಸಗಿರುವ ಅವರಲ್ಲಿ ಅಪ್ರಕಟಿತ ಸಾಹಿತ್ಯ ವಿಶೇಷವಾಗಿ ಉಳಿದಿದೆ.

೫

ದಕ್ಷಿಣ ಕರ್ಣಾಟಕದಲ್ಲಿ ೧೯೫೦ರಿಂದೀಚೆಗೆ ಜನಪದ ಗೀತೆಗಳ ಪ್ರಸಾರ ಕಾರ್ಯ ನಾನಾ ರೂಪಗಳಲ್ಲಿ ನಡೆಯತೊಡಗಿತು. ಶ್ರೀ ಕಾಳಿಂಗರಾಯರಂಥ ಪ್ರಸಿದ್ಧ ಗಾಯಕರು ಕೆಲವು ಹಾಡುಗಳನ್ನು ಜನಪ್ರಿಯಗೊಳಿಸಿದಂತೆಯೇ ಸ್ವತಃ ಸಂಗ್ರಹಕರೇ 'ಜನಪದ ಗೀತ' ಸಂಕಲನಗಳನ್ನು ಕೈಯಲ್ಲಿ ಹಿಡಿದು ನಾಡಿನ ಮೂಲೆ ಮೂಲೆಗೆ ಸಂದೇಶವನ್ನು ಒಯ್ದರು. ಶ್ರೀ ಮತಿಘಟ್ಟ ಕೃಷ್ಣಮೂರ್ತಿಯವರು ಸಂಗ್ರಹ, ಹಾಗೂ ಪ್ರಸಾರ ಕಾರ್ಯವನ್ನು ಏಕಕಾಲದಲ್ಲಿಯೇ ನಡೆಸಿದವರು.

ಜನಪದ ಗೀತೆಗಳನ್ನು ಹಾಡಿ ಜನಪ್ರಿಯಗೊಳಿಸಿದವರಲ್ಲಿ ಜನಾಬ್ ಕರೀಂಖಾನರ ಹೆಸರು ಪ್ರಮುಖವಾದುದು. ಹಾಸನ, ತುಮಕೂರು, ಕೊಡಗು ಜಿಲ್ಲೆಗಳ ಸಾಹಿತ್ಯವನ್ನು ಸ್ವತಃ ಸಂಗ್ರಹಿಸಿದ ಕರೀಂಖಾನರು ಹಲವುಮಿತ್ರರು ಸಂಗ್ರಹಿಸಿದ ಸಾಹಿತ್ಯವನ್ನೂ ಪಡೆದುಕೊಂಡು 'ಜನಪದ ಪ್ರಕಾಶನ'ವೆಂಬ ಪುಸ್ತಕ ಮಾಲೆಯನ್ನೇ ಆರಂಭಿಸಿ ಜನಪ್ರಿಯ ಆವೃತ್ತಿಗಳನ್ನು ಹೊರತಂದರು. ಜನಪದ ಸಾಹಿತ್ಯವನ್ನು ಕುರಿತು ಪ್ರೌಢ ಸರಣಿಯಲ್ಲಿ ಆಕರ್ಷಕ ಉಪನ್ಯಾಸವನ್ನು ನೀಡುತ್ತಿದ್ದ ಕರೀಂಖಾನರು, ಜನಪದ ಗೀತೆಗಳನ್ನು ಹಾಡುವುದಕ್ಕೆ ಹೆಸರಾದವರು. ಅವರ ಉಪನ್ಯಾಸ, ಗಾಯನಗಳನ್ನು ಕೇಳದ

ಶಾಲೆಗಳೇ ದಕ್ಷಿಣ ಕರ್ನಾಟಕದಲ್ಲಿ ವಿರಳ ಎನ್ನುವಷ್ಟರಮಟ್ಟಿಗೆ ಜನಪ್ರಿಯತೆಯನ್ನು ಸಾಧಿಸಿದವರು. ನೂರಾರು ಕೋಲಾಟದ ಪದಗಳನ್ನೂ, ಬೀಸುವ ಪದಗಳನ್ನೂ, ಉತ್ತಮ ಕಥನ ಗೀತೆಗಳನ್ನೂ ಅವರು ತಮ್ಮ ಸಂಕಲನಗಳಲ್ಲಿ ನೀಡಿದ್ದಾರೆ. ೧೯೫೫ರಲ್ಲಿ ಪ್ರಕಟವಾದ 'ಜನಪದಗೀತೆ,' ಮತ್ತೆ ಅದೇ ಶೀರ್ಷಿಕೆಯಲ್ಲಿ ೧೯೫೮, ೧೯೬೦ರಲ್ಲಿ ಪ್ರಕಟವಾದ ವಿಸ್ತೃತ ಭಾಗಗಳು ಬಯಲುಸೀಮೆ ಹಾಗೂ ಮಲೆಸೀಮೆಗಳ ಸುಂದರ ಜನಪದ ಭಾವಗೀತೆಗಳನ್ನೊಳಗೊಂಡಿವೆ.

ಜನಾಬ್ ಕರೀಂಖಾನರು ತಮ್ಮ ಕೃತಿಗಳ ಮುನ್ನುಡಿಗಳಲ್ಲಿ ಅನೇಕ ಸಂಗ್ರಹಕರ ಹೆಸರನ್ನು ಹೇಳಿದ್ದಾರೆ. ಸ್ವಾಮಿಗೌಡರು, ಶೆ. ವೆಂ. ವೆಂಕಟಾಚಲಂ ಅವರು, ಟಿ. ಎನ್. ಕೃಷ್ಣಮೂರ್ತಿಯವರು, ಕೊಡಗಿನ ಭಾಗದಲ್ಲಿ ಜಾನಪದ ಸಂಗ್ರಹಕ್ಕಾಗಿ ತಮ್ಮ ಜೀವಿತವನ್ನೇ ಮುಡಿಪಿಟ್ಟ ಕೆ. ಎಸ್. ರಮೇಶ್ ಅವರೂ, ಶಿಡಿಗಳಲೆ ಪಟೇಲ್ ಪುಟ್ಟಸ್ವಾಮಿಗೌಡ, ಎ. ಎ. ಬಸವರಾಜ್, ಕಾಶಿ ವಿಶ್ವನಾಥರಾವ್ ಮುಂತಾದವರ ಹೆಸರು ಅಲ್ಲಿ ಪ್ರಸ್ತಾಪಿಸಲ್ಪಟ್ಟಿದ್ದರೂ ಈವರೆಗೆ ಈ ಯಾರ ಒಂದು ಸಂಕಲನವೂ ಬೆಳಕು ಕಾಣದಿರುವುದು ವಿಷಾದನೀಯ. ಅಲ್ಲದೆ ತಮ್ಮ ಮುಂದಿನ ಸಂಕಲನಗಳಲ್ಲಿ ಕೊಡಗಿನ ಎಸ್. ಬಿ. ಪುಟ್ಟಸ್ವಾಮಿ, ಅಜ್ಜಂಪುರದ ವೆಂಕಟರಾಮಯ್ಯ, ಹಾಸನದ ಹೆಚ್. ಎಲ್. ಹನುಮಂತಯ್ಯ, ಶಾಂತಿ ಗ್ರಾಮದ ಶ್ರೀ ಶ್ರೀನಿವಾಸ್, ಹರೀಹಳ್ಳಿಯ ಹೆಚ್. ನಾರಾಯಣ್, ಮುಂತಾದವರು ತಮ್ಮ ಸಂಗ್ರಹಗಳನ್ನು ಉದಾರವಾಗಿ ಶ್ರೀಯುತರಿಗೆ ನೀಡಿದುದಾಗಿ ಹೇಳಿದ್ದಾರೆ. ಎಂದಾಗ ಬಹುಮಂದಿ ಸಂಗ್ರಹಕರ ಸಂಪರ್ಕವನ್ನು ಪಡೆದಿದ್ದ ಕರೀಂಖಾನರ ಜನಪದ ಸಾಹಿತ್ಯ ಸಂಕಲನಗಳು ವೈವಿಧ್ಯಪೂರ್ಣವಾಗಿರುವುದರ ಜೊತೆಗೆ ಅವರ ಬಳಿ ಅಪ್ರಕಟಿತ ಸಾಹಿತ್ಯ ರಾಶಿಯೂ ವಿಶೇಷವಾಗಿ ಉಳಿದಂತೆ ತೋರುತ್ತದೆ. ಶ್ರೀಯುತರು ಹೆಸರಿಸಿರುವ ಅನೇಕ ಸಂಗ್ರಹಕರು ಅಜ್ಞಾತವಾಗಿ ಉಳಿದು ಹೋಗಿರುವುದರ ಬಗ್ಗೆ ಸಾಕಷ್ಟು ವಿವರಗಳನ್ನು ಸಂಗ್ರಹಿಸಬೇಕಾದ ಅಗತ್ಯವೂ ಇದೆ.

'ಬಾಗೂರು ನಾಗಮ್ಮ,' 'ಮೈದುನ ರಾಮಣ್ಣ' ಹಾಗೂ 'ಜೋಗದ ಝೋಕ್ ಮತ್ತು ಇತರ ಹಾಡುಗಳು' ಸಂಕಲನಗಳನ್ನು ಹೊರತಂದ ಗೊ. ರು. ಚೆನ್ನಬಸಪ್ಪನವರು ಮತ್ತೊಬ್ಬ ಉತ್ತಮ ಜನಪದ ಸಾಹಿತ್ಯ ಪ್ರೇಮಿ. ೧೯೫೩ರ ವೇಳೆಗೇ 'ಬಾಗೂರು ನಾಗಮ್ಮ' ಪ್ರಕಟವಾಯಿತು. ಜನಪದ ಕಥೆಯೊಂದನ್ನು ಜಾನಪದ ಧಾಟಿಯಲ್ಲಿ ನಿರೂಪಿಸುವ 'ಬಾಗೂರು ನಾಗಮ್ಮ' ಶ್ರೀ ಚೆನ್ನಬಸಪ್ಪನವರ ಸ್ವಂತರಚನೆ. ಕೆಲವು ಉತ್ತಮ ಜನಪದ ಗೀತೆಗಳನ್ನೂ ಇದರಲ್ಲಿ ಅಳವಡಿಸಿಕೊಡಲಾಗಿದೆ. 'ಜೋಗದ ಝೋಕ್' ಸಹ ಇಂಥದೇ ಒಂದು ಸಂಕಲನ. ಶಿರಿಯಾಳಕೊಪ್ಪದ ಕೈ. ಮೂಗೂರು ಮಲ್ಲಪ್ಪನವರ ಸುಪ್ರಸಿದ್ಧ ಜೋಗದ ಗುಂಡಿಯ ಲಾವಣಿಯ ಜೊತೆಯಲ್ಲಿ ಅಜ್ಜಂಪುರ ಸುತ್ತಿನ ಕೆಲವು ಜನಪದ ಗೀತೆಗಳೂ ಈ ಸಂಕಲನದಲ್ಲಿ ಸೇರಿವೆ. ಗೊ. ರು ಚೆ.ಯವರ 'ಮೈದುನ ರಾಮಣ್ಣ' ಹೆಚ್ಚು ಗಮನಾರ್ಹ ಕೃತಿ. ಬಾಲ ಶಿವಶರಣ ಶಿವ-ಪಾರ್ವತಿಯರನ್ನೇ 'ಭಾವ-ಅಕ್ಕ' ಎಂದು ಭಾವಿಸಿ ತನ್ನ ನಿಷ್ಠೆಯಿಂದ

ಅವರನ್ನು ಭೂಲೋಕಕ್ಕೆ ಕರೆತಂದ ಒಂದು ಅಪೂರ್ವ ಜನಪದ ಕಥೆಯಿದು. ಈ ಕಥೆ ಗ್ರಂಥರೂಪದಲ್ಲಿಯೂ ಅಲ್ಲಲ್ಲಿ ಲಭ್ಯವಾಗುತ್ತದೆ. ಕನ್ನಡ ಜನಪದ ಕಾವ್ಯಗಳಲ್ಲಿ ಮೈದುನ ರಾಮಣ್ಣನ ಕಥೆಗೆ ಒಂದು ಮುಖ್ಯ ಸ್ಥಾನವಿದೆ. ಉತ್ತಮ ಮಾರ್ಗ ಕಾವ್ಯದ ಸ್ವರೂಪವನ್ನು ಪಡೆದ ಈ ಕಾವ್ಯವನ್ನು ಜನಪದ ಕವಿ ತ್ರಿಪದಿಗಳಲ್ಲಿ ಹಾಡಿದ್ದಾನೆ. ಶ್ರೀಯುತ ಗೊ. ರು. ಚೆ. ಅವರು 'ಮೈದುನ ರಾಮಣ್ಣ ಸಾಂಗತ್ಯ' ಎಂದು ಈ ಕೃತಿಯನ್ನು ಕರೆದಿರುವುದರ ಬಗ್ಗೆ ವಿವರಣೆಯನ್ನು ನೀಡಿಲ್ಲ. ಕನ್ನಡ ನಾಡಿನ ಎಲ್ಲ ಕಡೆಗಳಲ್ಲೂ ದೊರೆಯುವ ಈ ಜನಪದ ಕಾವ್ಯವನ್ನು ಮೊದಲು ಸಂಗ್ರಹಿಸಿ ಪ್ರಕಟಿಸಿದ ಕೀರ್ತಿ ಶ್ರೀ ಚನ್ನಬಸಪ್ಪನವರದು.

ಶ್ರೀ ಚೆನ್ನಬಸಪ್ಪನವರ ಮತ್ತೊಂದು ಜಾನಪದ ಸಂಕಲನ 'ಗ್ರಾಮಗೀತೆಗಳು' ೧೯೬೨ರಲ್ಲಿ ಪ್ರಕಟವಾಯಿತು. ೩೯೪ ತ್ರಿಪದಿಗಳನ್ನೊಳಗೊಂಡ ಈ ಕೃತಿ ಅವರ ಸಂಕಲನಗಳಲ್ಲಿ ತುಸು ವಿಸ್ತಾರವಾದುದು.

೬

ಮೈಸೂರು ಜಿಲ್ಲೆಯ ದಕ್ಷಿಣಭಾಗದಲ್ಲಿ ಅಪಾರ ಜನಪದ ಗೀತೆಗಳನ್ನು ಸಂಗ್ರಹಿಸಿದ ಕೀರ್ತಿ ಶ್ರೀ ಸ. ಚ. ಮಹಾದೇವ ನಾಯಕರದು. ೧೯೫೮ರಲ್ಲಿ ಅವರ ಪ್ರಥಮ ಸಂಕಲನ 'ಹಳ್ಳಿಯ ಹಾಡುಗಳು' ಪ್ರಕಟವಾಯಿತು. ಅಲ್ಲಿಂದೀಚೆಗೆ 'ಜಾನಪದ ರಸಗಂಗೆ' ಮತ್ತು 'ಸಂಪಿಗೆ ಅರಳ್ಯಾವೆ' ಎಂಬ ಕೃತಿಗಳು ಹೊರಬಂದಿವೆ. ದಕ್ಷಿಣ ಕರ್ನಾಟಕದ ತೆಂಕಣಗಡಿಯ ಎಲ್ಲ ಜನಪದ ಗೀತ ಸಂಪ್ರದಾಯಗಳನ್ನೂ ಶ್ರೀ ಮಹದೇವನಾಯಕರು ಸ್ಪರ್ಶಿಸಿದ್ದಾರೆ. ಆದರೆ ಅವರ ಸಂಕಲನಗಳಲ್ಲಿ ಕ್ರಮಬದ್ಧತೆಯಿಲ್ಲ. ಅಪೂರ್ಣ ಗೀತೆಗಳು ಹೆಚ್ಚು. ವ್ಯವಸ್ಥಿತವಾದ ಯಾವುದೇ ವರ್ಗೀಕರಣದ ಹಿನ್ನೆಲೆಯನ್ನೂ ಅವರು ಪಾಲಿಸಿದಂತಿಲ್ಲ. ಭಕ್ತಿಗೀತೆಗಳು, ಕಥನಗೀತೆಗಳು ಹೇರಳವಾಗಿ ಅವರ ಸಂಕಲನಗಳಲ್ಲಿ ಕಂಡುಬರುತ್ತವೆ. ಪಿರಿಯಾಪಟ್ಟಣದ ಕಾಳಗದ ಒಂದು ತುಣುಕನ್ನು ಮಾತ್ರ ನೀಡಿ 'ಮೈಸೂರು ದೊರೆಯ ಕಥೆ' ಎಂದು ತಪ್ಪಾಗಿ ಹೆಸರಿಸಲಾಗಿದೆ. ಅದು ವಾಸ್ತವವಾಗಿ ಪಿರಿಯಾಪಟ್ಟಣದ ವೀರರಾಜನ ಕಥೆ. ಮೈಸೂರಿನ ದಳವಾಯಿ ಪಿರಿಯಾಪಟ್ಟಣಕ್ಕೆ ಮುತ್ತಿಗೆ ಹಾಕಿದ್ದನ್ನು ಬಿಟ್ಟರೆ, ಮೈಸೂರು ದೊರೆಯ ಪ್ರಸ್ತಾಪಕ್ಕೆ ಅಲ್ಲಿ ಪ್ರಾಶಸ್ತ್ಯ ಕಡಮೆ. ಘನಪತಿರಾಯ, ಮಾದೇಶ್ವರರನ್ನು ಕುರಿತ ಕಥೆಗಳೂ ಅಪೂರ್ವವಾಗಿವೆ. ಆದರೂ ಶ್ರೀ ಸ. ಚ. ಮಹಾದೇವನಾಯಕರ ಸಂಕಲನಗಳನ್ನು ಕೈಗೆತ್ತಿಕೊಂಡಾಗ ಮೈಸೂರು ಜಿಲ್ಲೆಯ ದಕ್ಷಿಣ ಭಾಗದ ಹೊಸ ಸಾಹಿತ್ಯದ ಸೊಗಡು ಮೊದಲ ಬಾರಿಗೆ ನಮ್ಮನ್ನು ಆಕರ್ಷಿಸಿ ಅಲ್ಲಿರಬಹುದಾದ ವಿಪುಲ ಸಾಹಿತ್ಯದತ್ತ ನಮ್ಮ ದೃಷ್ಟಿಯನ್ನು ಸೆಳೆಯುತ್ತವೆ.

ಜೀಶಂಪ ಅವರ ಜೀವನಗೀತ ಕವನಸಂಕಲನದಿಂದ ಒಂದುವರೆ ದಶಕದ ಹಿಂದೆ ಆರಂಭವಾದ ಮೈಸೂರಿನ ಕಾವ್ಯೋದಯ ಮಾಲೆ ಕ್ರಮೇಣ ಜನಪದ ಸಾಹಿತ್ಯ

ಪ್ರಕಟಣೆಗೆ ಹೆಚ್ಚು ಗಮನವನ್ನು ನೀಡಿತು. ಮುಂದೆ ಜನಪದ ಸಾಹಿತ್ಯ ಅಕಾಡಮಿ ಎಂದು ತನ್ನ ಹೆಸರನ್ನು ಮಾರ್ಪಡಿಸಿಕೊಂಡರೂ ಶಿಷ್ಟ ಸಾಹಿತ್ಯ ಕೃತಿಗಳಿಗೂ ಆ ಮಾಲೆಯಲ್ಲಿ ಅಷ್ಟೇ ಮಹತ್ವ ಲಭ್ಯವಾಯಿತು. ಧಾರವಾಡದ ಕಡೆ ಡಾ. ಗದ್ದಿಗೆಮಠ ಅವರೂ, ಮೈಸೂರು ಕಡೆ ಶ್ರೀಮತಿಘಟ್ಟ ಕೃಷ್ಣಮೂರ್ತಿಗಳೂ ಅಪಾರ ಸಾಹಿತ್ಯವನ್ನು ಸಂಗ್ರಹಿಸಿದರೂ ಪ್ರಕಟಣೆಯ ಸೌಭಾಗ್ಯ ಹೆಚ್ಚಾಗಿ ಅವರ ಹಸ್ತಪ್ರತಿಗಳಿಗೆ ಲಭ್ಯವಾಗಲಿಲ್ಲ. ಹೀಗಾಗಿ ಅವರ ಸಾಹಿತ್ಯ ಇನ್ನೂ ಅಜ್ಞಾತವಾಗಿಯೇ ಉಳಿದು ಹೋಗಿದೆ. ಕನ್ನಡ ನಾಡಿನ ಅನೇಕ ಮಂದಿ ಸಂಗ್ರಾಹಕರ ಬಳಿ ವಿಪುಲಸಾಹಿತ್ಯ ಪ್ರೋತ್ಸಾಹದ ಅಭಾವದಿಂದಲೋ, ಪ್ರಕಟಣೆಯ ಅಸೌಕರ್ಯದಿಂದಲೋ, ಹಾಗೆಯೇ ಉಳಿದು ಹೋಗಿದೆ. ಆದರೆ ಶ್ರೀ ಕರಾಕೃ ಅವರು ತಮ್ಮ ಪ್ರಕಟಣ ಮಾಲೆಯನ್ನು ಬೆಳೆಸಿ ತಮಗೆ ಬೆನ್ನೆಲುಬಾಗಿ ನಿಂತ ಕೆಲವು ಮಿತ್ರರ ನೆರವಿನಿಂದ, ಪ್ರೋತ್ಸಾಹ, ಸಹಕಾರಗಳಿಂದ ಜನಪದ ಸಾಹಿತ್ಯ ಸಂಗ್ರಹ, ಪ್ರಕಟಣೆಗಳಲ್ಲಿ ಉತ್ತಮ ಪ್ರಗತಿಯನ್ನು ಸಾಧಿಸಿದರು. ಇಂದು ಮೈಸೂರಿನ ಜನಪದ ಸಾಹಿತ್ಯ ಅಕಾಡಮಿ ಸಂಗ್ರಹಿಸಿದ ಬಹುಪಾಲು ಸಾಹಿತ್ಯ ಗ್ರಂಥರೂಪದಲ್ಲಿ ಲಭ್ಯವಾಗುತ್ತಿರುವುದು ಗಮನಾರ್ಹ ವಿಷಯ.

ಜನಪದ ಸಾಹಿತ್ಯ ಅಕಾಡಮಿಯ ಸಂಗ್ರಹವೂ ಸಮಗ್ರ ಜಾನಪದದ, ಅದರ ಅಂಗವಾದ ಜನಪದ ಸಾಹಿತ್ಯದ ಎಲ್ಲ ಶಾಖೆಗಳಿಗೂ ವ್ಯಾಪಿಸದೆ ಕೇವಲ ಗೀತ ಸಾಹಿತ್ಯಕ್ಕೇ ಮೀಸಲಾದುದು ಎಂಬುದನ್ನು ಪರಿಲಕ್ಷಿಸಿದಾಗ ಅಲ್ಲಿನ ಪ್ರಕಟಣೆಗಳು, ಸೀಮಿತವಾದ ಒಂದು ವರ್ಗಕ್ಕೆ ಬಂದುಬಿಡುತ್ತವೆ. ಹೀಗಾಗಿ ಹೆಚ್ಚು ಸಂಖ್ಯೆಯ ಕೃತಿಗಳನ್ನು ಪ್ರಕಟಿಸಿದ ಅಂಶವೊಂದನ್ನು ಹೊರತು, ಇತರ ಸಂಗ್ರಾಹಕರಿಗಿಂತ ಹೆಚ್ಚಿನ ದೇನನ್ನೂ ಇಲ್ಲಿನ ಸಂಗ್ರಾಹಕರು ಸಾಧಿಸಲಿಲ್ಲ ಎಂಬುದನ್ನು ಯಾರೂ ಮರೆಯುವಂತಿಲ್ಲ. ಶಿವಮೊಗ್ಗ, ಚಿತ್ರದುರ್ಗ, ಮಂಡ್ಯ ಜಿಲ್ಲೆಗಳ ಕೆಲವು ತಾಲ್ಲೂಕುಗಳಲ್ಲಿ ಮಾತ್ರ ಇಲ್ಲಿನ ಸಂಗ್ರಹಕರು ಸಂಚರಿಸಿದ್ದಾರೆ; ಅಲ್ಲಿಯೂ ಕೆಲವು ಹಳ್ಳಿಗಳಲ್ಲಿ ಮಾತ್ರ ಸಂಗ್ರಹಕಾರ್ಯ ನಡೆಸಿದ್ದಾರೆ ಎಂದಾಗ ಆಯಾಪ್ರದೇಶದ ಸಾಹಿತ್ಯವೂ ಸಮಗ್ರವಾಗಿ ಇಲ್ಲಿ ಲಭ್ಯವಾಗುತ್ತದೆ ಎಂದು ಹೇಳುವುದು ಕಷ್ಟವಾಗುತ್ತದೆ. 'ನಾಡ ಪದಗಳು', 'ಗರತಿಯ ಹಾಡು', 'ಮಲ್ಲಿಗೆ ದಂಡೆ'ಗಳಂತೆ ಜನಪದ ಸಾಹಿತ್ಯ ಅಕಾಡಮಿಯ ಯಾವ ಕೃತಿಯೂ ಹೆಚ್ಚು ಜನಪ್ರಿಯತೆಯನ್ನು ಸಾಧಿಸಿಕೊಳ್ಳದಿರುವುದು ಆಶ್ಚರ್ಯದ ವಿಷಯವಾಗಿದೆ. ಸಂಕಲನಗಳಲ್ಲಿ ಕಂಡುಬರುವ ಅಶಾಸ್ತ್ರೀಯ ದೃಷ್ಟಿಯೋ, ಸಂಗ್ರಹಗಳಲ್ಲಿ ತೋರಿಬರುವ ಅಸಮಗ್ರತೆಯೋ, ಸೂಕ್ತ ವಿವರಗಳನ್ನೂ, ಟೀಕೆ ಟಿಪ್ಪಣಿಗಳನ್ನೂ ಕೊಡುವಲ್ಲಿ ತೋರಿರುವ ಅಲಕ್ಷ್ಯವೊ ಕೃತಿಗಳನ್ನು ಅವಸರವಸರವಾಗಿ ಪ್ರಕಟಿಸಿಬಿಡುವ ಕಾತುರವೋ ಇದಕ್ಕೆ ಬಹುಮಟ್ಟಿಗೆ ಕಾರಣವಿರಬಹುದು. ಹೀಗಾಗಿ ಜನಪದ ಸಾಹಿತ್ಯ ಅಕಾಡಮಿಯ ಪ್ರಕಟಣೆಗಳಲ್ಲಿ ನಾವು ಸಫಲತೆಗಿಂತ ವಿಫಲತೆಯನ್ನೇ ಹೆಚ್ಚಾಗಿ ಎದುರುಗೊಳ್ಳುತ್ತೇವೆ.

ಮುಖ್ಯ ಸಂಗ್ರಹಕರ ಜೊತೆಯಲ್ಲಿ ನಿಷ್ಠೆಯಿಂದ ದುಡಿದವರೂ, ಸಂಗ್ರಹ ಕಾರ್ಯದಲ್ಲಿ ಸಹಯಾತ್ರಿಯಾಗಿ ಹೋಗಿ ನೆರವಾದವರೂ ಆದ ಶ್ರೀ ಪಿ. ಆರ್.

ತಿಪ್ಪೇಸ್ವಾಮಿಯವರು ಆಗಾಗಿನ ಪ್ರವಾಸಗಳನ್ನು ಕುರಿತು ಕೆಲವು ಸ್ವಾರಸ್ಯವಾದ ಲೇಖನಗಳನ್ನು ಬರೆದು ಈ ಸಾಹಿತ್ಯದ ಮೇಲೆ, ಹಾಡುಗಾರರ ಮೇಲೆ, ಹಾಡುಗಾರಿಕೆಯ ಸಂಪ್ರದಾಯಗಳ ಮೇಲೆ ವಿಶೇಷ ಬೆಳಕನ್ನು ಚೆಲ್ಲಿದ್ದಾರೆ. ಈ ಲೇಖನಗಳೂ ನಮ್ಮ ಪಾಲಿಗೆ ಲಭ್ಯವಾಗದಿದ್ದರೆ ಬಹುಮಟ್ಟಿನ ಸಾಹಿತ್ಯ ಮುಂದಿನ ಸಂಶೋಧಕರಿಗೆ ಹೆಚ್ಚು ಸಮಸ್ಯೆಗಳನ್ನು ತಂದೊಡ್ಡುತ್ತಿದ್ದುದರಲ್ಲಿ ಸಂಶಯವಿಲ್ಲ. ಆದರೆ, ಈ ಪ್ರಬಂಧಗಳಲ್ಲಿ ವಿಷಯ ನಿಷ್ಠತೆಗಿಂತ ಆತ್ಮಕಥನವೇ ಹೆಚ್ಚಾಗಿ ಇವೂ ಕೆಲವು ಸಂದರ್ಭಗಳಲ್ಲಿ ಕೇವಲ ಉಲ್ಲಾಸಕ್ಕಾಗಿ ಓದಬಹುದಾದ ಲಲಿತ ಪ್ರಬಂಧಗಳಾಗಿಬಿಡುತ್ತವೆ. ಹೀಗಾಗಿ ಜನಪದ ಸಾಹಿತ್ಯ ಅಕಾಡಮಿಯ ಪ್ರಕಟಣೆಗಳು ರಸದೃಷ್ಟಿ, ಶಾಸ್ತ್ರದೃಷ್ಟಿ ಎರಡನ್ನೂ ಕಳೆದುಕೊಂಡು ಉದ್ದೇಶಿತ ಫಲವನ್ನು ಹೆಚ್ಚು ಪರಿಣಾಮಕಾರಿಯಾಗಿ ನೀಡಲಾರವೇನೋ ಎಂಬ ಶಂಕೆ ಯಾರಿಗಾದರೂ ಮೂಡಿದರೆ ಆಶ್ಚರ್ಯವೇನೂ ಇಲ್ಲ.

ಶ್ರೀ ಕಾರಾಕೃ ಅವರೂ ಜೀಶಂಪ ಅವರೂ ಬಯಲು ಸೀಮೆಯ ಹಳ್ಳಿಗಳಲ್ಲಿ ಕೆಲವು ಅಪೂರ್ವ ಕಥನಗೀತೆಗಳನ್ನೂ, ಸಂಪ್ರದಾಯದ ಹಾಡುಗಳನ್ನೂ, ಮೇಳಗಳನ್ನೂ ಧ್ವನಿಮುದ್ರಣ ಮಾಡಿಪ್ಪಾರೆ. ಶ್ರೀ ತಿಪ್ಪೇಸ್ವಾಮಿಯವರೊಡಗೂಡಿ ಕರಾಕೃ ಅವರು ಚಿತ್ರದುರ್ಗ ಜಿಲ್ಲೆಯ ಕೆಲವು ಸುಂದರ ಗೀತೆಗಳನ್ನು ಧ್ವನಿಮುದ್ರಣ ಮಾಡಿದ್ದಾರೆ. ಮಲೆನಾಡಿನ ಹಾಡುಗಳ ಧ್ವನಿಮುದ್ರಿಕೆಯೂ ಅವರಲ್ಲಿದೆ. ಆದರೆ ಅವುಗಳ ಕ್ರಮಬದ್ಧತೆ ಇನ್ನೂ ಸಾಲದಾಯಿತೇನೋ ಎನಿಸಿ ಯಾವ ಬಗೆಯ ಸಾರ್ಥಕತೆಯೂ ಅದರಿಂದ ಕೈಗೂಡದಾಗಿದೆ. ಧ್ವನಿಮುದ್ರಿಕೆಗಳ ವಿಭಜನೆ ಆಗಬೇಕು; ನಕಲುಗಳು ಸಿದ್ಧವಾಗಬೇಕು; ವಿಶಿಷ್ಟ ಮಾದರಿಗಳನ್ನು ಶಾಶ್ವತವಾಗಿ ಕಾಪಾಡಿಕೊಳ್ಳುವ ವ್ಯವಸ್ಥೆಯಾಗಬೇಕು; ಹಾಗಾಗದಿದ್ದರೆ ಈ ಕಾರ್ಯವೆಲ್ಲವೂ ವ್ಯರ್ಥವಾಗುತ್ತದೆ. ಅಲ್ಲದೆ ಇಲ್ಲಿ ಪ್ರಕಟವಾದುದೆಷ್ಟು, ಆಗದಿರುವುದೆಷ್ಟು, ಎಂಬುದನ್ನು ನಿರ್ಧರಿಸುವುದರ ಜೊತೆಗೆ, ಭಾಷಾಶಾಸ್ತ್ರದ ದೃಷ್ಟಿಯಿಂದ, ಸಂಗೀತ ದೃಷ್ಟಿಯಿಂದ ಅವುಗಳ ಅಭ್ಯಾಸ ಆಗಬೇಕು. ಆದರೆ ಕುತೂಹಲಕ್ಕಾಗಿ ಅಲ್ಲಿಷ್ಟು ಇಲ್ಲಿಷ್ಟು ಮಾದರಿಗಳನ್ನು ಧ್ವನಿಮುದ್ರಿಸಿಕೊಂಡಾಗ ಈ ಕಾರ್ಯ ಎಷ್ಟರಮಟ್ಟಿಗೆ ಯಶಸ್ವಿಯಾಗುತ್ತದೆ ಎಂದು ಹೇಳುವುದು ಕಷ್ಟ.

ಶ್ರೀ ಕರಾಕೃ ಅವರು ಅಪರಿಮಿತ ಉತ್ಸಾಹದಿಂದ ಜನಪದ ಸಾಹಿತ್ಯ ಕ್ಷೇತ್ರವನ್ನು ಪ್ರವೇಶಿಸಿದರು. ಬಹುಮಟ್ಟಿಗೆ ಇದಕ್ಕೆ ಪ್ರೇರಕರಾದ ಮಿತ್ರರೂ, ಹಿರಿಯರೂ ಅವರನ್ನು ಬೆನ್ನುತಟ್ಟಿ ಮುಂದೆ ನಡೆಸಿದರು. ಇಪ್ಪತ್ತೈದು ಸಂಕಲನಗಳನ್ನು ಹೊರ ತಂದು ಅಪಾರ ಸಾಮಗ್ರಿಯನ್ನು ಅವರು ದೊರಕಿಸಿದರು. ಅವುಗಳ ಕೊರತೆ ಏನಿದ್ದರೂ ವೈವಿಧ್ಯಮಯ ಗೀತೆಗಳನ್ನೂ, ಕಥನ ಗೀತೆಗಳನ್ನೂ ಹೆಚ್ಚು ಸಂಖ್ಯೆಯಲ್ಲಿ ಪ್ರಕಟಿಸಿದ ಕೀರ್ತಿ ಅವರದಾಗಿದೆ. ಅವುಗಳಲ್ಲಿ ಕೆಲವನ್ನಾದರೂ ಇಲ್ಲಿ ಪರಿಶೀಲಿಸಬಹುದು.

ಕರಾಕೃ ಅವರ ಮೊಟ್ಟಮೊದಲ ಕೃತಿ ‘ ಜೇನ ಹನಿಗಳು ’ ಪ್ರಕಟವಾದುದು ೧೯೫೦ರಲ್ಲಿ. ಮುಂದೆ ಅಂಬಿಗರ ಗಂಗ, ಜನಪದ ಪ್ರೇಮಗೀತೆಗಳು, ಮಲ್ಲಿಗೆ ನಗುತಾವೆ ಈ ಸಂಕಲನಗಳು ಪ್ರಕಟಗೊಂಡವು.

'ಮಲ್ಲಿಗೆ ನಗುತಾವೆ' ಗಾತ್ರದೃಷ್ಟಿಯಿಂದಲೂ, ವೈವಿಧ್ಯ ದೃಷ್ಟಿಯಿಂದಲೂ ಮೊದಲ ಸಂಕಲನಗಳಿಗಿಂತ ಉತ್ತಮವೆನಿಸಿ ಕರಾಕೃ ಅವರಿಗೆ ಒಳ್ಳೆಯ ಯಶಸ್ಸನ್ನು ತಂದುಕೊಟ್ಟಿತು. ಬಯಲು ಸೀಮೆಯ ತಮ್ಮ ಮೊದಮೊದಲ ಸಂಗ್ರಹವನ್ನೆಲ್ಲ ಅಳವಡಿಸಿ ಆಕರ್ಷಕವಾಗಿ ಈ ಕೃತಿಯನ್ನು ಹೊರತಂದರು. ಆರಂಭದಲ್ಲಿ ಹತ್ತು ಹಲವು ದೈವಗಳಿಗೆ ಸಂಬಂಧಿಸಿದ ಸ್ತುತಿ ಗೀತೆಗಳು ಸುಮಾರು ಅರವತ್ತೆರಡು ಪುಟಗಳಷ್ಟು ವಿಸ್ತಾರವಾಗಿ ಈ ಕೃತಿಯಲ್ಲಿ ಹರಡಿಕೊಂಡಿವೆ. ಇವುಗಳಲ್ಲಿ ಕೆಲವು ಕೋಲಾಟದ ಪದಗಳು, ಕೆಲವು ಬೀಸುವ ಪದಗಳು ಮತ್ತೆ ಕೆಲವು ಜಾತ್ರೆ, ಉತ್ಸವಕ್ಕೆ ಸಂಬಂಧಪಟ್ಟ ಹಾಡುಗಳು, 'ಕೆಂಪವ್ವನ ನೆನೆದು', 'ಮಾರಮ್ಮ ಹಾಡುಗಳು', 'ಮುಳಕಟ್ಟೆ ಹುಚ್ಚಮ್ಮ ಹಾಡುಗಳು', 'ನಾರಾಯಣ ಸ್ವಾಮಿಯ ನೆನೆದು', 'ಪುಟ್ಟಮಾರಿ ಕುರಿತು' 'ಸರಸ್ವತಿ' ಮುಂತಾದ ಕೆಲವು ಅಪೂರ್ವ ಭಾವಗೀತೆಗಳು ಕೃತಿಯ ಸೊಗಸನ್ನು ಹೆಚ್ಚಿಸುವಂತಿವೆ.

ಕೌಟುಂಬಿಕ ಗೀತೆಗಳು ಮತ್ತು ಬಿಡಿಹಾಡುಗಳಲ್ಲಿ ಪುನರುಕ್ತಿಗಳು ಹೆಚ್ಚು. ಆದರೂ ಕರಾಕೃ ಅವರ ಆರಂಭದ ಸಂಕಲನಗಳಲ್ಲಿ 'ಮಲ್ಲಿಗೆ ನಗುತಾವೆ' ಒಂದು ಪ್ರಮುಖ ಸ್ಥಾನವನ್ನು ಪಡೆದುಕೊಳ್ಳುತ್ತದೆ.

ಕರಾಕೃ ಅವರಿಗೆ ಹೆಚ್ಚು ಕೀರ್ತಿಯನ್ನು ತಂದುಕೊಟ್ಟ ಕೃತಿ 'ಜಾನಪದ ಕಥನ ಗೀತೆಗಳು'. ಸಿಂಪಿಯವರ ಜೀವನ ಸಂಗೀತವನ್ನು ಬಿಟ್ಟರೆ, ಡಾ. ಗದ್ದಿಗೆಮಠರ ಒಂದೆರಡು ಕೃತಿಗಳನ್ನು ಬಿಟ್ಟರೆ ಕಥನಗೀತೆಗಳಿಗಾಗಿಯೇ ಮೀಸಲಾದ ಕೃತಿಗಳಲ್ಲಿ ಇದು ವಿಸ್ತಾರವಾದುದು. ಮೂವತ್ತೈದು ಸುದೀರ್ಘ ರಚನೆಗಳ ಹೆಬ್ಬೊತ್ತಗೆಯಲ್ಲಿ ಕರಾಕೃ ಅವರ ಸಂಗ್ರಹದ ಜೊತೆಗೆ ಜೀಶಂಪ, ಎನ್. ಆರ್. ರಂಗಯ್ಯ ಮುಂತಾದವರ ಕೆಲವು ಕಥನ ಗೀತೆಗಳೂ ಸೇರಿ ಕೃತಿಸಾಕಷ್ಟು ಗಾತ್ರವನ್ನು ಪಡೆದುಕೊಂಡಿದೆ. ಇದರಲ್ಲಿ ಎರಡು ಮೂರು ಭಾವಗೀತಾತ್ಮಕ ಗೀತೆಗಳ ಜೊತೆಗೆ ಉಳಿದ ಕಥನ ಗೀತೆಗಳಲ್ಲಿ 'ಪಿರಿಯಾಪಟ್ಟಣದ ಕಾಳಗ' ಮುಂತಾದ ಕೆಲವು ಅಪೂರ್ಣ ಲಾವಣಿಗಳೂ ಸೇರಿಕೊಳ್ಳುತ್ತವೆ. ದೊಂಬಿದಾಸರ ಪ್ರಸಿದ್ಧ ಲಾವಣಿಗಳಾದ 'ಗಂಗೆಗೌರಿ ಜಗಳ', 'ಕಲಿಯುಗದ ಬಾಲೆ', 'ಕೃಷ್ಣ ಕೊರವಂಜಿ', 'ಬಾಲನಾಗಮ್ಮ' ಮುಂತಾದುವು ಮೊದಲ ಬಾರಿಗೆ ಕರಾಕೃ ಅವರ ಈ ಸಂಕಲನದಲ್ಲಿ ಬೆಳಕುಕಂಡವು. ಕಾಡುಗೊಲ್ಲರ, ಹರಿಜನರ, ಒಕ್ಕಲುಮಕ್ಕಳ ಉತ್ತಮ ಕಥನ ಗೀತೆಗಳಲ್ಲಿ 'ಗಿರಿಜಾ ಕಲ್ಯಾಣ', 'ಹೊಂಗೇಲಿ ಈರಣ್ಣ ಮಡಿಬಾನೆ' 'ಮಳೆರಾಯ ಮಾರ್ಥೆಣ್ಣು' ಮುಂತಾದುವು ಗಮನಾರ್ಹ ಹಾಡ್ಗತೆಗಳು.

ಕರಾಕೃ ಅವರು ಪ್ರಕಟಿಸಿರುವ ಕೃತಿಗಳಲ್ಲಿ ಶ್ರೀ ಆದಿಚುಂಚನಗಿರಿ ಹೆಚ್ಚು ಕಲಾತ್ಮಕವಾಗಿ ಪ್ರಕಟವಾಗಿದೆ. ಇದೊಂದು ಪ್ರಸಿದ್ಧ ಕ್ಷೇತ್ರಕ್ಕೆ ಸೀಮಿತವಾದ ಕೃತಿಯಾಗಿದ್ದು ಈ ನೆಲೆಯ ಒಂದೊಂದು ಆಕರ್ಷಕ ದೃಶ್ಯವನ್ನೂ ರೇಖಾ ಚಿತ್ರಗಳಲ್ಲಿ, ವರ್ಣಚಿತ್ರಗಳಲ್ಲಿ ಸೆರೆಹಿಡಿದು ಕಲಾವಿದ ತಿಪ್ಪೇಸ್ವಾಮಿಯವರು ದೊಡ್ಡ ಸಾಧನೆಯನ್ನೇ

ಮಾಡಿದ್ದಾರೆ. ಶ್ರೀ ಆದಿ ಚುಂಚನಗಿರಿಗೆ ಸಂಬಂಧಿಸಿದ ವಿಶಿಷ್ಟ ಗೀತೆಗಳನ್ನು ಕರಾಕೃ ಇಲ್ಲಿ ಸಂಕಲಿಸಿಕೊಟ್ಟಿದ್ದಾರೆ. ಶ್ರೀ ಜೀಶಂಪ ಅವರ ಪರಿಚಯ ಲೇಖನಗಳು ಸಾಹಿತ್ಯದ ಅಭ್ಯಾಸಕ್ಕೆ ಪೂರಕವಾಗಿವೆ. ನಿಸರ್ಗರಮಣೀಯತೆಯಿಂದ ಕೂಡಿದ ಶ್ರೀ ಚುಂಚನಗಿರಿಯ ಭವ್ಯದೃಶ್ಯಗಳ ಅನೇಕ ಛಾಯಾಚಿತ್ರಗಳನ್ನೂ ಇಲ್ಲಿ ಪ್ರಕಟಿಸ ಲಾಗಿದೆ. ಹೀಗಾಗಿ ಶ್ರೀ 'ಆದಿ ಚುಂಚನಗಿರಿ' ಆ ಸ್ಥಳಕ್ಕೆ ಸಂಬಂಧಪಟ್ಟ ಒಂದು ಉತ್ತಮ ಕೈಪಿಡಿಯೇ ಆಗಿಹೋಗಿದೆ. ಸ್ಥಳದ ಮೇಲಿನ ಅಭಿಮಾನ ಶ್ರೀ ಕರಾಕೃ ಅವರು ಈ ಕೃತಿಯಲ್ಲಿ ಅಪಾರ ದುಂದುಗಾರಿಕೆಯನ್ನು ಮೆರೆಯುವಂತೆ ಮಾಡಿ ಇದೊಂದು 'ಹುಚ್ಚುಸಾಹಸ' ಎನಿಸಿಬಿಡುತ್ತದೆ. ಪುಟಕ್ಕೆ ನಾಲ್ಕೇ ತ್ರಿಪದಿಗಳನ್ನು ನೀಡುವುದು ಕಲಾತ್ಮಕತೆಯ ದೃಷ್ಟಿಯಿಂದ ಅಗತ್ಯವೆನಿಸಿದ್ದರೂ ಗಾತ್ರವನ್ನು ನೋಡಿ ಅಪಾರ ಹಣಸುರಿದುಕೊಂಡ ಓದುಗ ಸಾಹಿತ್ಯದ ಕುಗ್ಗಿದ ವಿಸ್ತಾರವನ್ನು ಕಂಡು ನಿರಾಶನಾಗದಿರ.

ಭಕ್ತಿಗೀತೆಗಳ ಮಾಲೆಯಲ್ಲಿ ಒಂದೊಂದು ಸ್ಥಳಕ್ಕೆ ಸಂಬಂಧಿಸಿದಂತೆ ಹೊರತಂದ ಕೃತಿಗಳಲ್ಲಿ ಮೇಲುಕೋಟೆಗೆ ಸಂಬಂಧಿಸಿದ 'ಚೆನ್ನಿಗ ಚೆಲುವಯ್ಯ'ಕೂಡ ಒಂದು ಉತ್ತಮ ಸಂಕಲನ. ಆದರೆ 'ಮಲೆಮಾದೇಶ್ವರ', 'ಗಿರಿಕಾಣೆ ಮೂಡಲಗಿರಿ' ತುಂಬ ಅಸಮಗ್ರ ಸಂಕಲನಗಳು.

'ಕಾಳಿಂಗರಾಯ', 'ಹಾಡಿನಲ್ಲಿ ನಾಡಕಥೆಗಳು', 'ಗುಡ್ಡಾಗಿಡಿನ ಹಾಡ್ಗತೆ ಗಳು', 'ಮೈಲಾರಲಿಂಗ ಈರಬಡಪ್ಪ,' 'ಪಾಳೆಯಗಾರರ ಪದಗಳು', ಮುಂತಾದವು ಕಥನಗೀತೆಗಳಿಗೆ ಮೀಸಲಾದ ಸಂಕಲನಗಳು. ಕಾಳಿಂಗರಾಯ ಅತ್ಯಂತ ವಿಸ್ತಾರವಾದ ಮಾರ್ಗಕಾವ್ಯಗಳ ವ್ಯಾಪ್ತಿಯನ್ನೂ ಸುಸಂಬದ್ಧತೆಯನ್ನೂ ಪಡೆದುಕೊಂಡ ಸುದೀರ್ಘ ಕೃತಿ. ಉಳಿದ ಸಂಕಲನಗಳಲ್ಲಿ ಕೆಲವು ಅಪೂರ್ಣ ಗೀತೆಗಳೂ, ಕುಣಿಗಲ ಕೆರೆಯಂಥ ಅಸಂಬದ್ಧ ಗೀತೆಗಳೂ ಮಾಲೆಗೊಂಡಿವೆ. ಮದಕರಿ ನಾಯಕನನ್ನು ಕುರಿತ ಸಾಹಿತ್ಯದಲ್ಲಿ ಕಥೆಯ ಅಂಶವೇ ಇಲ್ಲವಾಗಿದೆ. ಗುಣಸಾಗರಿ ಕಥೆಯ ಪೀಠಿಕಾ ಭಾಗಮಾತ್ರ ಉಳಿದಿದೆ. ಇವೆಲ್ಲವನ್ನೂ ಸರಿಯಾಗಿ ವಿಂಗಡಿಸಿ, ಅನಗತ್ಯವಾದುವನ್ನು ಕೈಬಿಟ್ಟು ಒಂದೇ ಶೀರ್ಷಿಕೆಯಲ್ಲಿ ಅಳವಡಿಸಿದ್ದರೆ 'ಜಾನಪ ಕಥನಗೀತೆಗಳು' ಪ್ರಕಟವಾದ ತರುವಾಯ ಮತ್ತೊಂದು ದೊಡ್ಡ ಸಂಕಲನ ಹಲವು ಕಥೆಗಳನ್ನು ಒಂದೇಕಡೆ ದೊರಕಿಸುವ ಸಾಧ್ಯತೆಯನ್ನು ನೀಡುತಿತ್ತು.

'ಕೋಲುಮಲ್ಲಿಗೆ ಕೋಲೆ' 'ಹೆಣ್ಣು ಕೊಟ್ಟೇವು' 'ಸಂಪಿಗೆ ಅರಳ್ಯಾವೆ' 'ಹಚ್ಚ ಪೊಂಬಾಳೆ ಕುಣಿದಾವೆ' 'ನಾಡ ಮೇಲೆಲ್ಲ ಹರಿದಾವೆ', ಮುಂತಾದವು ಕರಾಕೃ ಅವರ ಇತ್ತೀಚಿನ ಸಂಕಲನಗಳು.

ಕರಾಕೃ ಅವರು ಸಂಗ್ರಹಿಸಿರುವ ಬಹುಪಾಲು ಸಾಹಿತ್ಯ ಈಗಾಗಲೇ ಬೆಳಕು ಕಂಡಿದೆ. ಅವರ ಬಳಿ ಇರಬಹುದಾದ ಬಯಲು ನಾಡಿನ ಸಾಹಿತ್ಯ, ಮಲೆನಾಡಿನ ಸಾಹಿತ್ಯ ಆದಷ್ಟು ಬೇಗ ಬೆಳಕು ಕಾಣಬೇಕಾಗಿದೆ. ಕರಾಕೃ ಅವರ ಇಪ್ಪತ್ತೈದು

ಸಂಕಲನಗಳ ಸಾಹಿತ್ಯವನ್ನೂ ಸರಿಯಾಗಿ ವಿಭಜಿಸಿಕೊಂಡು, ಪರಿಷ್ಕರಿಸಿ ಪುನಃ ಸಂಪಾದಿಸಿ ಪ್ರಕಟಿಸುವ ಅವಶ್ಯಕತೆಯೂ ಇದೆ. ಅವರ ಮೊದಲನೆಯ ಆವೃತ್ತಿಗಳಲ್ಲೂ ದ್ವಿತೀಯ ಹಾಗೂ ತೃತೀಯ ಆವೃತ್ತಿಗಳಲ್ಲೂ ಸಾಕಷ್ಟು ಬದಲಾವಣೆಗಳು ಬಹಳ ಕಡೆ ಕಾಣಬರುವುದರಿಂದ ಇವುಗಳ ಪರಿಶೀಲನೆಯೂ ಆಗಬೇಕಾಗಿದೆ. ಅಪೂರ್ಣ ಗೀತೆಗಳನ್ನು ಬಿಟ್ಟು ಸ್ಥಳಗೀತೆಗಳು, ಭಾವಗೀತೆಗಳು, ಕಥನಗೀತೆಗಳು ಹೀಗೆ ಪ್ರಧಾನ ವಿಭಾಗಗಳಲ್ಲಿ ಮೂರು ನಾಲ್ಕು ಸಂಪುಟಗಳಲ್ಲಿ ಪ್ರಕಟಿಸಬಹುದು.

ಮೈಸೂರಿನ ಜನಪದ ಸಾಹಿತ್ಯ ಅಕಾಡಮಿ ತನ್ನ ಸಂಗ್ರಹಕಾರ್ಯದಲ್ಲಿ, ಪ್ರಕಟಣೆಯಲ್ಲಿ, ಧ್ವನಿಮುದ್ರಣ ಕಾರ್ಯದಲ್ಲಿ ಒಂದು ಕ್ರಮಬದ್ಧತೆಯನ್ನು ಅನುಸರಿಸಿದ್ದರೆ, ತನ್ನ ಪೂರ್ಣ ಕಾಲವನ್ನು ಜಾನಪದ ಕಾರ್ಯಕ್ಕಾಗಿಯೇ ಮೀಸಲಿರಿಸಿದ್ದರೆ, ಜಾನಪದ ಕ್ಷೇತ್ರದಲ್ಲಿ ಕೈಯಾಡಿಸಿದ ವಿದ್ವಾಂಸರ ಸಲಹೆ ಸಹಕಾರಗಳನ್ನು ಸರಿಯಾದ ರೀತಿಯಲ್ಲಿ ಪಡೆದುಕೊಂಡಿದ್ದರೆ ಅತ್ಯುತ್ತಮ ಕಾರ್ಯವನ್ನು ಸಾಧಿಸಬಹುದಿತ್ತು ; ಹಾಗಾಗಲಿಲ್ಲವೆಂಬುದು ದುರದೃಷ್ಟಕರ !

೭

ಮಲೆನಾಡಿನ ಭಾಗದಲ್ಲಿ ಶ್ರೀ ಕೆ.ವಿ. ಲಿಂಗಪ್ಪನವರೂ ಶ್ರೀ ಕೆ.ವಿ. ಸುಬ್ಬಣ್ಣನವರೂ ತಕ್ಕಮಟ್ಟಿನ ಸಾಹಿತ್ಯವನ್ನು ಸಂಗ್ರಹಿಸಿದ್ದಾರೆ. ಶ್ರೀ ಸುಬ್ಬಣ್ಣನವರ 'ಅವರು ನೀಡಿದ ದೀಪ' ಮಲೆನಾಡಿನ ಅಂಟಿಕೆ ಪಂಟಿಕೆ ಸಂಪ್ರದಾಯದ ಹಿನ್ನೆಲೆಯಲ್ಲಿ ರಚಿತವಾದ ಕೃತಿ. ಅಂಟಿಕೆ ಪಂಟಿಕೆ ಸಂಪ್ರದಾಯದ ಜೊತೆಗೆ ಆ ಸಂದರ್ಭದಲ್ಲಿ ಹಾಡಬಹುದಾದ ಸುಂದರ ಕಥನ ಗೀತೆಗಳ ಹಾಗೂ ಬಿಡಿಹಾಡುಗಳ ಸವಿವರ ಪರಿಚಯವನ್ನು ಹೃದಯಂಗಮವಾದ ಶಬ್ದ ಚಿತ್ರಗಳಲ್ಲಿ ಕಡೆದಿದ್ದಾರೆ ಶ್ರೀ ಸುಬ್ಬಣ್ಣನವರು. ಶಿವಗಿರಿಜೆಯರ ಕಥೆ, ಕಲಸೆ ದೇಗುಲಕೆ ಕದನಾಗು ಮುಂತಾದ ಕಥನಗೀತೆಗಳು ಅಪೂರ್ವವಾದುವು.

ಶ್ರೀ ಲಿಂಗಪ್ಪನವರ ಎರಡು ಸಂಕಲನಗಳು, 'ಮಲೆನಾಡಿನಲ್ಲಿ ಮದುವೆ' ಮತ್ತು 'ಮಲೆನಾಡಿನ ಮಡಿಲಲ್ಲಿ' ಮೈಸೂರಿನ ವಯಸ್ಕರ ಶಿಕ್ಷಣ ಮಾಲೆಯವರು ಹೊರತಂದ ಕಿರುಹೊತ್ತಗೆಗಳು. ಮಲೆನಾಡಿನ ಜನಪದ ಗೀತೆಗಳನ್ನು ಮೊದಲಬಾರಿಗೆ ಸಂಕಲನಗಳಲ್ಲಿ ಅಳವಡಿಸಿಕೊಟ್ಟ ಶ್ರೀ ಲಿಂಗಪ್ಪನವರು ಅಭಿನಂದೀಯರು. ಮಲೆನಾಡಿನಲ್ಲಿ ಪ್ರಸಿದ್ಧವಾಗಿರುವ 'ಅರ್ಜುನ ಸ್ವಾಮಿ ಹಾಡು' ಮತ್ತು 'ಉತ್ತರ ದೇವಿ ಹಾಡು' ಗಮನಾರ್ಹ ಕಥನಗೀತೆಗಳು. ಶ್ರೀ ಲಿಂಗಪ್ಪನವರು ಸಂಗ್ರಹಿಸಿಕೊಟ್ಟಿರುವ ಉತ್ತರ ದೇವಿ ಕಥೆ ಈವರೆಗೆ ದೊರೆತಿರುವ ಎಲ್ಲ ಬಗೆಗಳಿಗಿಂತ ಭಿನ್ನವಾದುದು, ಸರ್ವೋತ್ತಮವಾದುದು. ಅಲ್ಲದೆ ಇತರ ಕಥೆಗಳ ಮೇಲೆ ಹೊಸಬೆಳಕು ಚೆಲ್ಲುವ ವಿರಳ ಕಥನಗೀತೆ. ಉತ್ತರ ದೇವಿಯ ಪತಿ ತನ್ನ ತೌರಿಗೆ ಹೋದ ನಲ್ಲೆಯನ್ನು ನೆನೆಸಿಕೊಂಡು ಹಂಬಲಿಸಿ ಅವಳನ್ನು ಹುಡುಕಿಕೊಂಡು ಹೋಗುವ ಬಗೆ, ಅಲ್ಲಿ ದನದ ಹುಡುಗರ ಮಾತನ್ನು ಕೇಳಿ ಉತ್ತರದೇವಿ ಮಡಿದಳೆಂದು ತಿಳಿದು ತನ್ನ ಪ್ರಾಣವನ್ನೂ ಕಳೆದುಕೊಳ್ಳುವ

ಸನ್ನಿವೇಶ, ಪತಿಯ ಮರಣದ ಹಿನ್ನೆಲೆಯಲ್ಲಿ ಉತ್ತರದೇವಿಯ ಮರಣ, ಎಲ್ಲದರ ಅಂತರಂಗದಲ್ಲಿ ಉತ್ಕಟ ಪ್ರೇಮದ ಸೆಲೆಚಿಮ್ಮಿ ಹರಿದಿರುವುದನ್ನು ಕಾಣಬಹುದು.

ಶ್ರೀ ಸುಬ್ಬಣ್ಣನವರ ಕೃತಿ ೧೯೫೮ರಲ್ಲೂ, ಶ್ರೀ ಲಿಂಗಪ್ಪನವರ ಕೃತಿಗಳು ೧೯೫೮ರ ಈಚೆಗೂ ಪ್ರಕಟವಾದುವು.

೧೯೫೮ರ ವೇಳೆಗೇ ಚೆನ್ನಗಿರಿ ಸುತ್ತಿನ ಕೆಲವು ಮನೋಜ್ಞ ಗೀತೆಗಳನ್ನು ಸಂಕಲಿಸಿ 'ಗೌರಮ್ಮನ ಪದಗಳು' ಎಂಬ ಶೀರ್ಷಿಕೆಯಲ್ಲಿ ಶ್ರೀ ಕು.ಮು.ಶಿ. ಚಂದ್ರಶೇಖರಯ್ಯನವರು ಪ್ರಕಟಿಸಿದರು. ಭಕ್ತಿಗೀತೆಗಳು ಹಾಗೂ ಬಾಂಧವ್ಯ ಗೀತೆಗಳ ಈ ಪುಟ್ಟ ಕೃತಿಯಲ್ಲಿ ಕ.ಮು.ಶಿ. ಯವರು ಅತ್ಯುತ್ತಮ ತ್ರಿಪದಿಗಳನ್ನು ಆಯ್ದು ತಮ್ಮ ಸಂಕಲನದ ಹಿರಿಮೆಯನ್ನು ಕಾಪಾಡಿಕೊಂಡಿದ್ದಾರೆ.

ಶ್ರೀ ಕ.ಮು.ಶಿ. ಚಂದ್ರಶೇಖರಯ್ಯ, ಕೆ. ವಿ. ಲಿಂಗಪ್ಪ ಹಾಗೂ ಗೊ. ರು. ಚೆನ್ನಬಸಪ್ಪನವರು ಸಂಗ್ರಹ ಕಾರ್ಯವನ್ನು ವಿಸ್ತರಿಸಿಕೊಳ್ಳದೇ ಹೋದುದು ದುರದೃಷ್ಟಕರ.

೮

ಕೈ. ಜಗದ್ಗುರು ಶ್ರೀ ಚಂದ್ರಶೇಖರ ನಾಥರು 'ಶ್ರೀ ಆದಿ ಚುಂಚನಗಿರಿ ಜನಪದ ಗೀತೆಗಳು' ಎಂಬ ಒಂದು ಶ್ರೇಷ್ಠ ಸಂಕಲನವನ್ನು ೧೯೬೯ರಲ್ಲಿ ಪ್ರಕಟಿಸಿದರು. ಒಂದು ಪ್ರಸಿದ್ಧ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಎಷ್ಟೆಲ್ಲ ಸುಂದರ ಜನಪದ ಸಾಹಿತ್ಯ ಇರಬಲ್ಲುದು ಎಂಬುದನ್ನು ಈ ಕೃತಿಯಲ್ಲಿ ಗಮನಿಸಬಹುದು. ಕ್ಷೇತ್ರಕ್ಕೆ ಸಂಬಂಧಿಸಿದಂತೆ, ಹರ, ಗುರುವಿಗೆ ಸಂಬಂಧಿಸಿದಂತೆ, ಭಕ್ತಾದಿಗಳ ನಾನಾ ರೀತಿಯ ಸೇವೆಗಳಿಗೆ ಸಂಬಂಧಿಸಿದಂತೆ ಅಪಾರ ಸಂಖ್ಯೆಯ ತ್ರಿಪದಿಗಳನ್ನು ನಾನಾ ಕಡೆಗಳಲ್ಲಿ ಮಠಾಧಿಪತಿಗಳೊಬ್ಬರು ಸಂಗ್ರಹಿಸಿ ಸುಂದರವಾಗಿ ಸಂಪಾದಿಸಿ ಪ್ರಕಟಿಸಿದುದು ಕುತೂಹಲದ ಸಂಗತಿ.

ಆ ಬೆಟ್ಟ ಈ ಬೆಟ್ಟ ನಡುವೆ ತಾವರೆ ಕೊಳ
ತಾವರೆ ಹೂವ ಕೊಯಬಂದ ಭೈರುವ
ತಾವೊಳ್ಳೆದೆಂದು ನೆಲೆಗೊಂಡ
ಆರೆಮೇಲೆ ಅಂದಾನಿ ಗಿರಿಮೇಲೆ ಭೈರುವ
ಕೊಡುಗಲ್ಲ ಮೇಲೆ ಗವಿಸಿದ್ಧ | ಕೂತುಕೊಂಡು
ಚೋಳೂರಿಗೋಲೆ ಬರೆದ್ಯನು

ಇಂಥ ಬಂಧುರಗೀತೆಗಳನೇಕವನ್ನು ಈ ಸಂಕಲನದಲ್ಲಿ ಕಾಣಬಹುದು. ಕನ್ನಡ ಜನಪದ ಭಕ್ತಿಗೀತೆಗಳ ಹಿರಿಮೆಯನ್ನು ಕಾಣಬಯಸುವವರು ಒಮ್ಮೆಯಾದರೂ ಈ ಸುಂದರ ಸಂಕಲನವನ್ನು ತಿರುವಿಹಾಕ ಬೇಕು.

೧೯೫೮ರಲ್ಲಿ ಶ್ರೀ ಶೇಷಭಟ್ಟ ಹಾಗೂ ಶ್ರೀ ಸುಂದರೇಶ್ವರರು 'ಕೊಣವೇಗೌಡ

ಮತ್ತು ಇತರ ಪದಗಳು' ಎಂಬ ಕಿರುಹೊತ್ತಗೆಯೊಂದನ್ನು ಪ್ರಕಟಿಸಿದ್ದಾರೆ. ಹಾಸನ ಜಿಲ್ಲೆಯಲ್ಲಿ ಪ್ರಸಿದ್ಧವಾಗಿರುವ ಹಾಸ್ಯಪೂರ್ಣ ಕಥನಗೀತೆ ಕೋಣವೇಗೌಡ. ಇದರ ಜೊತೆಗೆ ಕೆಲವು ಬಿಡಿಹಾಡುಗಳನ್ನೂ, 'ತತ್ವದ ಪದ'ಗಳನ್ನೂ ಸೇರಿಸಿ ಪರಿಮಿತ ಅವಕಾಶದಲ್ಲಿ ಉತ್ತಮ ವೈವಿಧ್ಯವನ್ನು ತರಲು ಸಂಪಾದಕರು ಮಾಡಿರುವ ಪ್ರಯತ್ನ ಸ್ತುತ್ಯವಾದುದು.

ಸ್ವತಃ ಜಾನಪದ ಗಾಯಕರಾದ ಶ್ರೀ ಎಲ್. ಆರ್. ರಂಗಯ್ಯ ಹಾಗೂ ಹಾಸನದ ಶ್ರೀ ಎಲ್. ಎಸ್. ರಾಮಸ್ವಾಮಿಯವರು ಒಂದೊಂದು ಕಿರುಹೊತ್ತಗೆಗಳನ್ನೂ ಪ್ರಕಟಿಸಿದ್ದಾರೆ. ಶ್ರೀವರ್ಮಾ ರಂಗಯ್ಯನವರು ಚೆನ್ನಪಟ್ಟಣ ಸುತ್ತಿನಲ್ಲಿ ವಿಶೇಷವಾಗಿ ಸಂಗ್ರಹ ಕಾರ್ಯವನ್ನು ನಡೆಸಿದ್ದಾರೆ. ೧೯೫೫ರಲ್ಲಿ 'ಅರುಂಧತಿ' ಎಂಬ ಜಾನಪದ ಪೌರಾಣಿಕ ಕಥೆಯೊಂದನ್ನು ಪ್ರಕಟಿಸಿದ ಶ್ರೀ ಎಲ್. ಗುಂಡಪ್ಪನವರು, ಬಳ್ಳಾರಿ ಜಿಲ್ಲೆಯ ಪ್ರಥಮ ಸಂಕಲನವೊಂದನ್ನು ಇತ್ತೀಚೆಗೆ ಪ್ರಕಟಿಸಿರುವ ಶ್ರೀ ವಿರೂಪಾಕ್ಷ ಗೌಡರು, 'ಶ್ರೀಶೈಲ ಚರಿತ್ರೆ ಮತ್ತು ಜನಪದ ಸಾಹಿತ್ಯ' ಎಂಬ ಕೃತಿಯನ್ನು ೧೯೬೦ರಲ್ಲಿ ಪ್ರಕಟಿಸಿದ ಶ್ರೀ ಆರ್. ಜಿ. ಮುಳ್ಳೂರರು, 'ಹಂತಿಯ ಪದಗಳು' ಸಂಕಲನವನ್ನು ಪ್ರಕಟಿಸಿರುವ ಹಾಲೇಶ ಮೇಟಿಯವರೂ ಇಲ್ಲಿ ಉಲ್ಲೇಖನಾರ್ಹರು. ತರುಣಕವಿ ಚಂದ್ರಶೇಖರ ಕಂಬಾರರ 'ಬಣ್ಣಿಸಿ ಹಾಡೇನ ನಿನ ಬಳಗ', ಶ್ರೀ ಜಿ.ಎಸ್. ಭಟ್ಟರ 'ಸಿರಿಗಂಧ, ಸೂಸ್ಯಾವೆ, ಶ್ರೀ ನಾರಾಯಣ ಹಾಗೂ ಲಕ್ಷ್ಮೀನಾರಾಯಣ ಅವರ 'ತುಂಬೆ ಹೂವಿಟ್ಟು ಶರಣೆನ್ನಿ' ಮುಂತಾದ ಇತ್ತೀಚಿನ ಕೃತಿಗಳು ಕಾವ್ಯಮಯ ವಾದ ಶೀರ್ಷಿಕೆಯಂತೆಯೇ ಅತ್ಯುತ್ತಮ ಗೀತೆಗಳನ್ನೂ ಒಳಗೊಂಡು ಪ್ರಕಟಗೊಂಡಿವೆ. ಶ್ರೀ ಡಿ. ಲಿಂಗಯ್ಯನವರ 'ಕೊಂತಿಯ ಪದಗಳು' ಕುಂತಿಪೂಜೆಯ ಸಂಪ್ರದಾಯದ ಹಿನ್ನೆಲೆಯಲ್ಲಿ ಪ್ರಚಲಿತವಿರುವ ಮನೋಜ್ಞ ಗೀತೆಗಳನ್ನೂ ಆ ಸಂಪ್ರದಾಯದ ಪರಿಚಯವನ್ನೂ ಒಳಗೊಂಡಿದೆ.

ಕೃತಿ ಪ್ರಕಟಣೆಗೆ ಹೆಚ್ಚು ಮಹತ್ವವನ್ನು ಕೊಡದೆ ಜಾನಪದದ ಹಲವು ಪ್ರಮುಖ ಶಾಖೆಗಳ ಶೋಧನೆಯಲ್ಲಿ ತೊಡಗಿ ಸಂಗ್ರಹಕಾರ್ಯವನ್ನು ನಡೆಸಿದವರು ಜೀ. ಶಂ. ಪರಮಶಿವಯ್ಯ. ಆಗಾಗ ಪರಿಚಯಾತ್ಮಕ ಲೇಖನಗಳ ಮೂಲಕ, ಹೊಸ ಸಂಪ್ರದಾಯಗಳನ್ನು ಬೆಳಕಿಗೆ ತಂದು ವಿಸ್ತಾರ ಸಾಹಿತ್ಯವನ್ನು ಅವರು ಕಲೆಹಾಕಿದರು. ಜನಪದ ಕಥೆಗಳು, ಲಾವಣಿಗಳು, ಗಾದೆಗಳು, ಒಗಟುಗಳು, ಐತಿಹ್ಯಗಳು, ಕಲೆಗಳು ಹಬ್ಬ ಹರಿದಿನಗಳು, ವೈದ್ಯ-ಹೀಗೆ ಹಲವು ಮುಖದ ಸಂಗ್ರಹಕಾರ್ಯವನ್ನು ನಡೆಸಿದವರು. ವೃತ್ತಿಗಾಯಕರ ಬಹುದೊಡ್ಡ ಪರಂಪರೆಯನ್ನು ಮೊದಲು ಗುರುತಿಸಿ ಅವರ ಸಮಗ್ರ ಸಾಹಿತ್ಯವನ್ನು ಸಂಗ್ರಹಿಸಿ ಪ್ರಕಟಣೆಯ ದಿನವನ್ನು ನಿರೀಕ್ಷಿಸುತ್ತಿರುವವರು. ಜೀಶಂಪ ಅವರ ಪ್ರಥಮ ಜನಪದ ಗೀತೆಗಳ ಸಂಕಲನ 'ಅವರ ನೆನೆದೇವು' ಒಂದು ದಶಕದ ಹಿಂದೆಯೇ ಪ್ರಕಟವಾಯಿತು. 'ಜನಪದ ಖಂಡ ಕಾವ್ಯಗಳು' ಇತ್ತೀಚೆಗೆ ಪ್ರಕಟ ವಾಗಿದೆ. 'ಪಿರಿಯಾಪಟ್ಟಣದ ಲಾವಣಿ', 'ಮಾಗಡಿ ಕೆಂಪೇಗೌಡ', 'ತರೀಕೆರೆಯ

ಸರ್ಜಪ್ಪನಾಯಕ’ ಮುಂತಾದ ಅಪೂರ್ವ ಐತಿಹಾಸಿಕ ಲಾವಣಿಗಳನ್ನು ಮೊದಲ ಬಾರಿಗೆ ಸಮಗ್ರವಾಗಿ ಸಂಗ್ರಹಿಸಿದ ಇವರು ಅಪಾರ ಸಂಖ್ಯೆಯ ಧಾರ್ಮಿಕ ಹಾಗೂ ಲೌಕಿಕ ಸಂಪ್ರದಾಯಗಳ ಲಾವಣಿಗಳನ್ನೂ ಕಲೆಹಾಕಿದ್ದಾರೆ. ಪ್ರೊ. ದೇ. ಜವರೇಗೌಡರು ಇವರ ಜಾನಪದ ಕ್ಷೇತ್ರದ ಬೇಸಾಯವನ್ನು ಕುರಿತು ಒಂದು ಕಡೆ ಹೀಗೆ ಹೇಳಿದ್ದಾರೆ: “ಈ ದಶಕದ ಸಂಗ್ರಹಕರಲ್ಲಿ ಅವರು ಅಗ್ರಗಣ್ಯರಾಗಿದ್ದಾರೆ.... ಹಿಂದಿನವರು ಬಿಟ್ಟಿದ್ದನ್ನು ಇವರು ಪೂರೈಸುತ್ತಿದ್ದಾರೆ. ನೂರಾರು ಜಾನಪದ ಕತೆಗಳನ್ನು ಸಂಕಲಿಸಿ ಆ ಕ್ಷೇತ್ರದಲ್ಲಿದ್ದ ದೊಡ್ಡ ಪಿಗ್ಗವನ್ನು ತುಂಬಿದ್ದಾರೆ....ಗೊರೂರು, ಬೇಟಗೇರಿ, ಗದ್ದಗಿಮಠ, ಸಿಂಪಿಯವರಂತೆ ಜಾನಪದ ಸಾಹಿತ್ಯದ ಗೊತ್ತುಗುರಿಗಳನ್ನು ನೀತಿತತ್ವಗಳನ್ನೂ ವ್ಯಾಖ್ಯಾನದ ಮೂಲಕ ಸ್ಪಷ್ಟಪಡಿಸಿದ್ದಾರೆ.”*

ಜನಪದ ಗೀತೆಗಳ ಸಂಗ್ರಹ ಕಾರ್ಯದಲ್ಲಿ ಅಪಾರವಾಗಿ ಶ್ರಮಿಸುತ್ತಿರುವವರ ವಿರಳ ಪಂಕ್ತಿಯಲ್ಲಿ ಶ್ರೀ ಎಚ್. ಎಲ್. ನಾಗೇಗೌಡರ ಹೆಸರು ವಿಶೇಷ ಮನ್ನಣೆಗೆ ಪಾತ್ರವಾದುದು. ಅವರ ಇತ್ತೀಚಿನ ಕೃತಿ ‘ನನ್ನೂರು’ ಒಂದು ಜಾನಪದ ವಿಶ್ವಕೋಶವೇ ಆಗಿದೆ. ಗ್ರಾಮಾಂತರ ಬದುಕಿನ ಸಮಸ್ತ ಸ್ತರಗಳನ್ನೂ ಎಳೆ ಎಳೆಯಾಗಿ ಬಿಡಿಸಿ ನೋಡಿರುವುದರ ಜೊತೆಗೆ ಶ್ರೀ ಗೌಡರು ಅಪಾರ ‘ಜಾನಪದ’ ವಿಷಯಗಳನ್ನೂ, ಸಾಹಿತ್ಯವನ್ನೂ ಆ ಕೃತಿಯಲ್ಲಿ ಸಂದರ್ಭಾನುಸಾರವಾಗಿ ತಂದಿದ್ದಾರೆ. ಎಲ್ಲದಕ್ಕಿಂತ ಮಿಗಿಲಾಗಿ ಅವರು ಮಂಡ್ಯ ಜಿಲ್ಲೆಯ ಹಾಗೂ ತುಮಕೂರು ಜಿಲ್ಲೆಯ ಕೆಲವು ಜಾನಪದ ಕಲಾವಿದರಿಂದ ಹೇರಳವಾದ ಸಾಹಿತ್ಯವನ್ನು ಕ್ರಮಪೂರ್ಣವಾಗಿ ಧ್ವನಿಮುದ್ರಣ ಮಾಡಿಕೊಂಡಿದ್ದಾರೆ. ಜನಪದ ಸಾಹಿತ್ಯದ ಬಗ್ಗೆ, ಅದರ ಸಂವರ್ಧನೆಯ ಬಗ್ಗೆ ವಿಶೇಷವಾದ ಒಲವು ಶ್ರೀ ಗೌಡರಿಗೆ. ಎಂತಲೇ ತಮ್ಮ ವಿರಾಮದ ವೇಳೆಯನ್ನು ಜಾನಪದ ಸಂಗ್ರಹಕ್ಕೆ ಅವರು ವಿನಿಯೋಗಿಸುತ್ತಿದ್ದಾರೆ. ಹೆಳವರ ಪದಗಳು, ಮದುವೆಯ ಪದಗಳು, ಕೋಲಾಟದ ಪದಗಳು ಹೊಗಳುವ ಪದಗಳು ಕಥನಗೀತೆಗಳು ಹೀಗೆ ಅಪಾರ ವೈವಿಧ್ಯದ ಸಾಹಿತ್ಯ ರಾಶಿಯನ್ನು ಈಗ ಪ್ರಕಟಣೆಗೆ ಸಿದ್ಧಗೊಳಿಸುತ್ತಿದ್ದಾರೆ.

ಶ್ರೀ ಕೆ.ಟಿ. ವೀರಪ್ಪನವರು ಮಂಡ್ಯ ಸುತ್ತಿನ ಜನಪದ ಗೀತೆಗಳನ್ನು ಅಪಾರವಾಗಿ ಸಂಗ್ರಹಸಿರುವುದರ ಜೊತೆಗೆ ಧ್ವನಿಮುದ್ರಣವನ್ನೂ ಮಾಡಿದ್ದಾರೆ. ಶ್ರೀ ರಾಗೌ ಅವರು ಮಂಡ್ಯ ಹಾಗೂ ಮೈಸೂರು ಜಿಲ್ಲೆಗಳಲ್ಲಿ ವೈವಿಧ್ಯಮಯವಾದ ಸಾಹಿತ್ಯವನ್ನು ಸಂಗ್ರಹಿಸಿ ಉತ್ತಮ ಸಂಕಲನಗಳನ್ನು ಸಿದ್ಧಗೊಳಿಸಿದ್ದಾರೆ. ಶ್ರೀ ನಂ. ತಪಸ್ವೀ ಕುಮಾರ್ ಅವರು ಮಾಯಸಂದ್ರ ಸುತ್ತಿನ ಹಾಡುಗಳನ್ನೂ ಕಲೆಹಾಕಿದ್ದಾರೆ. ಶ್ರೀ ಸುಧಾಕರ, ಬಿ. ಕೆ. ತಿಮ್ಮಪ್ಪ, ಮುಂತಾದವರ ಬಳಿಯೂ ಉತ್ತಮ ಸಂಗ್ರವಿದೆ. ಬಳ್ಳಾರಿ ಸುತ್ತಿನಲ್ಲಿ ಶ್ರೀ ಕೆ. ವಿರೂಪಾಕ್ಷಗೌಡರೂ, ಮಂಗಳೂರು ಕಡೆ ಶ್ರೀ

---

* ಮುನ್ನುಡಿ: ಜನಪದ ಸಾಹಿತ್ಯ ಸಮೀಕ್ಷೆ.

ಲಕ್ಷ್ಮೀನಾರಾಯಣ ಆಳ್ವ, ಅಮೃತ ಸೋಮೇಶ್ವರ, ಚಂದ್ರಶೇಖರ ಐತಾಳರೂ ಸಂಗ್ರಹ ಕಾರ್ಯದಲ್ಲಿ ತೊಡಗಿದ್ದಾರೆ.

ಇತ್ತೀಚೆಗೆ ಜಾನಪದ ಕ್ಷೇತ್ರದಲ್ಲಿ ಉತ್ಸಾಹಿ ತರುಣರ ದೊಡ್ಡ ತಂಡವೇ ಸಂಗ್ರಹಕಾರ್ಯದಲ್ಲಿ ತೊಡಗಿರುವ ಅಂಶವನ್ನು ಅಭಿಮಾನದಿಂದ ಗಮನಿಸಬಹುದಾಗಿದೆ. ಬನ್ನೂರಿನ ಶ್ರೀ ಚೌಡೇಗೌಡರು ಗಾದೆಗಳನ್ನೂ, ಗೀತೆಗಳನ್ನೂ, ಜನಪದ ವೈದ್ಯ ಮುಂತಾದುವಕ್ಕೆ ಸಂಬಂಧಿಸಿದ ಅಪಾರ ಸಾಹಿತ್ಯವನ್ನು ಕಲೆಹಾಕಿದ್ದಾರೆ. ಹಾಸನ ಜಿಲ್ಲೆಯ ಶ್ರೀ ವಸಂತಕುಮಾರ್ ಅವರು ಅಪಾರ ಗೀತೆಗಳನ್ನು ಸಂಗ್ರಹಿಸಿ 'ಮಳಲಿ ಗಿಡ್ಡಮ್ಮ' ಎಂಬ ಕೃತಿಯನ್ನು ಅಚ್ಚಿಗೆ ಸಿದ್ಧಮಾಡಿದ್ದಾರೆ. ಬೆಂಗಳೂರಿನ ಜನಾರ್ಧನ ಅವರು ದಂಡಿನ ಗಡಿಗಳಲ್ಲಿ ಸಂಚರಿಸಿ ಹೊಸ ಹೊಸ ಕಥನ ಗೀತೆಗಳನ್ನು ಗುರುತಿಸಿದ್ದಾರೆ. ನಾಗವಾರ ಕಾಳೇಗೌಡರು ಬೆಂಗಳೂರು ಹಾಗೂ ಮಂಡ್ಯ ಜಿಲ್ಲೆಯ ಅನೇಕ ಪ್ರದೇಶಗಳಲ್ಲಿ ಪ್ರವಾಸಮಾಡಿ ಗೀತೆ, ಕಥನಗೀತೆ, ಕಥೆ ಹೀಗೆ ಹಲವು ಬಗೆಯ ವಿಶಿಷ್ಟ ಸಾಹಿತ್ಯವನ್ನು ಸಂಗ್ರಹಿಸಿದ್ದಾರೆ. ಚಿತ್ರದುರ್ಗದ ಜಿ. ಪಿ. ಬಸವರಾಜು ಅವರು ಒಂದು ಸಾವಿರಕ್ಕೂ ಹೆಚ್ಚು ಜನಪದ ಗೀತೆಗಳನ್ನು ಸಂಕಲಿಸಿದ್ದಾರೆ. ಮಂಡ್ಯ ಜಿಲ್ಲೆಯ ಕೆ. ಜವರೇಗೌಡರೂ ಪೀಹಳ್ಳಿ ಮುಂತಾದ ಕಡೆಗಳಲ್ಲಿನ ಸಾಹಿತ್ಯವನ್ನು ಕಲೆಹಾಕಿ ಸಂಗ್ರಹಗಳನ್ನು ಸಿದ್ಧಗೊಳಿಸಿದ್ದಾರೆ. ಶಿವಮೊಗ್ಗೆಯ ವಿ. ಎಂ. ಜಗದೀಶ್ ಅವರು ಅತ್ಯುತ್ತಮ ಸಂಪ್ರದಾಯದ ಹಾಡುಗಳನ್ನೂ ಕಥನಗೀತೆಗಳನ್ನೂ ಸಂಗ್ರಹಿಸಿ ತರುತ್ತಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ಜಾನಪದ ವಿಭಾಗ ಜಾನಪದ ವಸ್ತುಸಂಗ್ರಹದಲ್ಲಿಯೂ, ಜನಪದ ಸಾಹಿತ್ಯ ಸಂಗ್ರಹದಲ್ಲಿಯೂ, ಧ್ವನಿಮುದ್ರಣ ಕಾರ್ಯದಲ್ಲಿಯೂ ವಿಶೇಷ ಪ್ರಗತಿಯನ್ನು ತೋರಿದೆ. ಈ ವಿಭಾಗದಿಂದ ಹೊರಬಂದ ತೀ. ನಂ. ಶಂಕರನಾರಾಯಣ, ದ. ಕೆಂ. ರಾಜೇಂದ್ರ, ಕೃ. ಯ. ಶಿವ ಕುಮಾರ, ಅಣ್ಣಯ್ಯನಾಯಕ್, ಸರೋಜಮ್ಮ ಮುಂತಾದವರು ಜಾನಪದ ಕ್ಷೇತ್ರದಲ್ಲಿ ಆಶೆ ಭರವಸೆಗಳನ್ನು ಮೂಡಿಸಿರುವ ಉತ್ಸಾಹಿಗಳಾಗಿದ್ದಾರೆ. ಅಪಾರ ಸಂಗ್ರಹ ಕಾರ್ಯವನ್ನು ಅವರು ನಡೆಸುತ್ತಿದ್ದಾರೆ. ಜಾನಪದ ವಿದ್ಯಾರ್ಥಿಗಳಾದ ಜಿ. ವಿ. ದಾಸೇ ಗೌಡ, ಈರೇಗೌಡ, ದೊಡ್ಡಬಸವಯ್ಯ, ಕೊಣಂದೂರು ವೆಂಕಪ್ಪ, ದೊರೆಸ್ವಾಮಿ, ಸ್ವರಸ್ವತಿ, ಮಂಗಳೆ, ದೇವಮ್ಮ, ಶಾರದಮ್ಮ, ರಾಮಚಂದ್ರಾಚಾರ್ ಮುಂತಾದವರೂ ಸಂಗ್ರಹಕಾರ್ಯದಲ್ಲಿ ವಿಶೇಷ ಆಸಕ್ತಿಯನ್ನು ಮೆರೆದು ಕಾರ್ಯಮಗ್ನರಾಗಿದ್ದಾರೆ. ಉತ್ತರ ಕನ್ನಡ, ಉತ್ತರ ಕರ್ನಾಟಕ, ದ. ಕನ್ನಡ, ಕೊಡಗು ಹಾಗೂ ಹಳೆಯ ಮೈಸೂರು ಭಾಗಗಳಲ್ಲಿ ಈ ಲೇಖಕನಿಗೆ ಪರಿಚಿತವಲ್ಲದ, ಅಥವಾ ನೆನಪಿಗೆ ಬಾರದೆ ಕೈಬಿಟ್ಟುಹೋಗಿರುವ ಅನೇಕ ಹೆಸರುಗಳೂ ಇರಲು ಸಾಧ್ಯ. ಹೀಗೆ ೧೯೬೦ರ ಈಚಿನ ಒಂದು ದಶಕವನ್ನು ಕನ್ನಡ ಜಾನಪದ ಕ್ಷೇತ್ರದ ಒಂದು ಸುವರ್ಣಯುಗ ಎಂದು ಕರೆಯಬಹುದು.

ವಿಶ್ವವಿದ್ಯಾನಿಲಯಗಳಲ್ಲಿ ಅದರ ಅಧ್ಯಯನ ಶಾಸ್ತ್ರೀಯ ದೃಷ್ಟಿಗೆ ಹೊಸ ನಾಂದಿ

ಯನ್ನು ಹಾಡಿದರೆ, ಜಾನಪದ ಸಮ್ಮೇಳನ, ಜಾನಪದ ಪರಿಷತ್ತು, ಮುಂತಾದವು ಹೊಸ ಸ್ಫೂರ್ತಿಯನ್ನು, ಹೊಸ ಚೈತನ್ಯವನ್ನು ಈ ಕ್ಷೇತ್ರದಲ್ಲಿ ಹರಿಸಿವೆ. ಆದರೆ ಸಂಗ್ರಹಕರು ಇನ್ನೂ ಸಂಘಟಿತರಾಗಬೇಕು, ಅವರ ಸಂಗ್ರಹದಲ್ಲಿ ಒಂದು ಕ್ರಮಬದ್ಧತೆ ಬೇಕು.

ಪಶ್ಚಿಮ ಕರ್ನಾಟಕ ದಕ್ಷಿಣ ಕನ್ನಡ ಜಿಲ್ಲೆ ಹಾಗೂ ಉತ್ತರ ಕನ್ನಡ ಜಿಲ್ಲೆ ಎರಡನ್ನೂ ಒಳಕೊಳ್ಳುತ್ತದೆ. ಈ ಎರಡು ಜಿಲ್ಲೆಗಳಲ್ಲೂ ಜನಪದ ಸಾಹಿತ್ಯ ಸಂಗ್ರಹ ಸಾಕಷ್ಟು ವಿಪುಲವಾಗಿಯೇ ನಡೆಯುತ್ತಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಪ್ರಮುಖ ಜಾನಪದ ಸಂಗ್ರಹಕರಲ್ಲಿ ಡಾ. ಶಿವರಾಮ ಕಾರಂತ, ಪಡಾರು ಮಹಾಬಲೇಶ್ವರ ಭಟ್ಟ, ಯಂ. ಬಿ. ಮರಕ್ಕಿಣಿ, ಅಮೃತ ಸೋಮೇಶ್ವರ ಮುಂತಾದವರ ಕೃತಿಗಳು ಈಗಾಗಲೆ ಪ್ರಕಟವಾಗಿವೆ. ಪಡಾರು ಮಹಾಬಲೇಶ್ವರ ಭಟ್ಟರ 'ಜಾನಪದ ಸಾಹಿತ್ಯ' ೧೯೫೫ರಲ್ಲಿ ಪ್ರಕಟವಾಯಿತು. ೧೯೫೬ರಲ್ಲಿ ಹೆಮ್ಮಕ್ಕಳ ಹಾಡುಗಳು ಹೊರಬಂದಿತು. ಎರಡೂ ಕಿರುಹೊತ್ತಿಗೆಗಳೇ ಆದರೂ ತುಳುನಾಡಿನ ಕನ್ನಡ ಹಾಡುಗಳಲ್ಲಿ ಸುಗ್ಗಿಯ ಹಾಡುಗಳ ಹಾಗೂ ಮದುವೆಯ ಹಾಡುಗಳ ವೈಶಿಷ್ಟ್ಯವೇನೆಂಬುದನ್ನು ಕಾಣಬಹುದು. ಮರಕ್ಕಿಣಿಯವರ 'ದಕ್ಷಿಣ ಕನ್ನಡ ಜನಪದ ಗೀತೆಗಳು' ಮತ್ತೊಂದು ಪ್ರಾತಿನಿಧಿಕ ಕೃತಿ. "ಈ ಬಹುಪಾಲು ಮುಕ್ತಕಗಳನ್ನು ಯಾವ ಕನ್ನಡ ಹಳ್ಳಿಗಳಿಂದ ಸಂಗ್ರಹಿಸಿದೆನೊ ಆ ಕುಂಬಳೆ ಕೊಳ್ಳೂರು ಸೀಮೆ ಇಂದು ಕನ್ನಡ ನಾಡಿನಿಂದ ಕಡಿದುಹೋಗಿ ಕೇರಳದ ಮರೆಯಲ್ಲಿ ಜನ್ಮಬಿಡುತ್ತಿದೆ" ಎಂದು ನೋವಿನಿಂದ ನುಡಿದಿರುವ ಶ್ರೀಯುತರು ತಾವು ಹಾಡನ್ನು ಆಯ್ದ ನೆಲವನ್ನೂ ನಿರ್ದೇಶಿಸಿದ್ದಾರೆ. ಕೇವಲ ನೂರು ತ್ರಿಪದಿಗಳ ಸಂಕಲನ ಇವಾದರೂ ಒಪ್ಪವಾಗಿ ಕೃತಿಯನ್ನು ಹೊರತಂದಿದ್ದಾರೆ.

ಕುಂದಾಪುರದ ಸುತ್ತಣ ಜನಪದ ಗೀತೆಗಳ ಸಂಗ್ರಹ ಕಾರ್ಯವನ್ನು ನಡೆಸಿ ಶ್ರೀ ಸಿರಿಪತಿಯವರು 'ಕೋಕಿಲವಾಣಿ' ಎಂಬ ಹೆಸರಿನಲ್ಲಿ ಒಂದು ಸುಂದರ ಸಂಗ್ರಹವನ್ನೂ ಪ್ರಕಟಿಸಿದ್ದಾರೆ. "ಸಹೋದರತೆ, ರಸಿಕತೆ, ನೈತಿಕತೆ, ಸಮಾಜಧರ್ಮ"— ಹೀಗೆ ವಿಷಯವನ್ನು ಹಂಚಿಕೊಂಡು ಹಾಡುಗಳನ್ನು ಶ್ರೀಯುತರು ಅಳವಡಿಸಿದ್ದಾರೆ. ಅಮೃತಸೋಮೇಶ್ವರರ 'ತುಳುಪಾಡ್ದನ ಕಥೆಗಳು' ದಕ್ಷಿಣ ಕನ್ನಡ ಜಿಲ್ಲೆಯ ಪಾಡ್ದನ ಸಂಪ್ರದಾಯದ ಹಲವು ಕಥೆಗಳನ್ನು ತಿಳಿಗನ್ನಡದಲ್ಲಿ ಪರಿಚಯಮಾಡಿಕೊಡುವ ಕೃತಿ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇತ್ತೀಚೆಗೆ ಶ್ರೀ ಜಿ. ಎಸ್. ಭಟ್ಟರು ವಿಶೇಷ ಸಂಗ್ರಹ ಕಾರ್ಯದಲ್ಲಿ ತೊಡಗಿದ್ದಾರೆ. ಶ್ರೀ ನಂ. ತಪಸ್ವಿಕುಮಾರ್ ಅವರೂ ಪಾಡ್ದನ ಸಂಗ್ರಹದಲ್ಲಿ ವಿಶೇಷ ಆಸಕ್ತಿಯನ್ನು ತೋರಿದ್ದಾರೆ.

ಉತ್ತರ ಕನ್ನಡ ಜಿಲ್ಲೆಯ ಪ್ರಾತಿನಿಧಿಕ ಕೃತಿ ಇನ್ನೂ ಪ್ರಕಟವಾಗಬೇಕಾಗಿದೆ. ಡಾ. ಎಲ್. ಆರ್. ಹೆಗ್ಗಡೆ, ಜಿ. ಆರ್. ಹೆಗ್ಗಡೆ ಮುಂತಾದ ವಿದ್ವಾಂಸರು ಇಲ್ಲಿನ ಸಂಗ್ರಹ ಕಾರ್ಯದಲ್ಲಿ ಉತ್ತಮ ಸಾಧನೆಯನ್ನೂ ತೋರಿದ್ದಾರೆ.

೧೯೩೩ರಲ್ಲಿ ಪ್ರಕಟವಾದ ವಿ. ವೆ. ತೋರ್ಕೆಯವರ ಒಂದು ಸಣ್ಣ ಸಂಕಲನ,

೧೯೩೩ರಲ್ಲಿ ಪ್ರಕಟವಾದ ಮ. ಗ. ಶೆಟ್ಟಿ ಬಂಕಿಮ ಕೊಡ್ಲರ 'ಒಕ್ಕಲಿಗರ ಹಾಡು', ಈ ಎರಡು ಸಂಕಲನಗಳನ್ನು ಹೊರತು ಈ ಲೇಖಕನಿಗೆ ತಿಳಿದಂತೆ ಇನ್ನಾವ ಗೀತಸಂಕಲನವೂ ಪ್ರಕಟವಾಗಿಲ್ಲ. ಡಾ. ಎಲ್. ಆರ್. ಹೆಗ್ಗಡೆಯವರ ಅಪಾರ ಸಂಗ್ರಹ ರಾಶಿಯಲ್ಲಿ 'ತಿಮ್ಮಕ್ಕನ ಪದಗಳು' ಎಂಬ ಕಥನಗೀತೆಗಳ ಸಂಕಲನವೊಂದನ್ನು ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ಜಾನಪದ ವಿಭಾಗ ಪ್ರಕಟಿಸಿದೆ. ಕನ್ನಡ ಜನಪದ ಕಥನಕವನಗಳ ಸಾಲಿನಲ್ಲಿ ಇದೊಂದು ಅಪೂರ್ವ ಸಂಕಲನ ಎಂಬುದರಲ್ಲಿ ಸಂದೇಹವಿಲ್ಲ.

ಉತ್ತರ ಕನ್ನಡ ಜಿಲ್ಲೆಯ ಅನೇಕ ಸಂಪ್ರದಾಯದ ಹಾಡುಗಳನ್ನು ಇತ್ತೀಚೆಗೆ ಡಾ. ಎಲ್. ಆರ್. ಹೆಗ್ಗಡೆಯವರು ಅಪಾರವಾಗಿ ಸಂಗ್ರಹಿಸಿದ್ದಾರೆ. ಮದುವೆಯ ಹಾಡು, ಸುಗ್ಗಿಯ ಹಾಡು, ಗುಮ್ಮಟಿ ಪದ, ಬತ್ತ ಮೆರಿವ ಹಾಡು ಮುಂತಾದ ನಾನಾ ಬಗೆಯ ಹಾಡುಗಳ ಐದು–ಆರು ಸಂಕಲನಗಳನ್ನು ಸಿದ್ಧಗೊಳಿಸಿದ್ದಾರೆ. ಶ್ರೀ ಗೌರೀಶ ಕಾಯ್ಕಿಣಿ, ಕೆ. ಜಿ. ಶಾಸ್ತ್ರಿ ಮುಂತಾದವರೂ ಸಂಗ್ರಹ ಕಾರ್ಯವನ್ನು ನಡೆಸಿದ್ದಾರೆ. ಜಿ. ಆರ್. ಹೆಗ್ಗಡೆಯವರ ಸಂಗ್ರಹವೂ ಅಪಾರವಾಗಿದ್ದು ಸಂಕಲನಗಳಿನ್ನೂ ಪ್ರಕಟವಾಗಬೇಕಾಗಿದೆ.

ಕೊಡಗಿನ ಜನಪದ ಗೀತೆಗಳ ಬಗ್ಗೆ ಕೆಲವು ಲೇಖನಗಳನ್ನು ಹೊರತು ಸಂಗ್ರಹಗಳನ್ನು ಇನ್ನೂ ನಿರೀಕ್ಷಿಸಬೇಕಾಗಿದೆ.

ಸಮಗ್ರ ಕರ್ನಾಟಕದಲ್ಲಿ ಜನಪದ ಗೀತೆಗಳ ಸಂಗ್ರಹ ಕಾರ್ಯ ವಿಶೇಷವಾಗಿ ನಡೆದಂತೆ, ಪ್ರಕಟವಾಗಿರುವ ಅಪಾರ ಸಂಖ್ಯೆಯ ಕೃತಿಗಳನ್ನು ಕಂಡಾಗ ಭಾಸವಾಗುವುದು ಸಹಜ. ಅಪಾರ ಮಂದಿ ಸಂಗ್ರಹಕರ ಹೆಸರುಗಳನ್ನು ಪಟ್ಟಿಮಾಡುವ ಸಾಧ್ಯತೆಯನ್ನು ಕಂಡಾಗ ನಿಜಕ್ಕೂ ಅಭಿಮಾನವೆನಿಸುತ್ತದೆ. ಇಂಥ ಸಂಗ್ರಹಕರಲ್ಲಿ ಪ್ರಧಾನವಾಗಿ ಮೂರು ವರ್ಗಗಳನ್ನು ಮಾಡಿಕೊಳ್ಳಬಹುದು.

(೧) ಸಂಗ್ರಹಿಸಿದ ಸಾಹಿತ್ಯವನ್ನು ಕೃತಿರೂಪದಲ್ಲಿ ಪ್ರಕಟಿಸಿರುವವರು

(೨) ಸಂಗ್ರಹಿಸಿರುವ ಸಾಹಿತ್ಯವನ್ನು ಅಲ್ಲಲ್ಲಿ ಲೇಖನಗಳ ಮೂಲಕ ಪರಿಚಯಿಸಿರುವವರು

(೩) ಸಂಗ್ರಹಿಸಿರುವ ಸಾಹಿತ್ಯವನ್ನು ಲೇಖನ ರೂಪದಲ್ಲಾಗಲೀ, ಕೃತಿ ರೂಪದಲ್ಲಾಗಲೀ ಪ್ರಕಟಿಸದಿರುವವರು.

ಡಾ. ಗದ್ದಿಗೀಮಠ, ಮತಿಘಟ್ಟ ಕೃಷ್ಣಮೂರ್ತಿ, ಜೀ. ಶಂ. ಪರಮಶಿವಯ್ಯ, ಡಾ. ಎಲ್. ಆರ್. ಹೆಗ್ಗಡೆ ಮುಂತಾದ ಹೆಸರಾಂತ ಕಾರ್ಯಕರ್ತರ ಅಪಾರ ಸಾಹಿತ್ಯ ಪ್ರಕಟಣೆಗೊಳ್ಳುವ ಸುಯೋಗ ಒದಗಿದಾಗ, ಹಾಗೂ ಇತರ ಸಂಗ್ರಹಕರ ಸಾಹಿತ್ಯ ಬೆಳಕು ಕಂಡಾಗ ಕನ್ನಡ ಜನಪದ ಗೀತೆಗಳ ಕಣಜ ಹೊನ್ನ ಕಣಜವಾಗುತ್ತದೆ.

ಜನಪದ ಕಥೆ

ವಿಶ್ವದ ಜಾನಪದ ಅಧ್ಯಯನದಲ್ಲಿ ಜನಪದ ಕಥೆಗಳಿಗೆ ಅಗ್ರಸ್ಥಾನ ದೊರೆತಿದೆ. ಪಾಶ್ಚಾತ್ಯ ದೇಶಗಳಲ್ಲಿ ಮೂಲೆ ಮೂಲೆಯ ಕಥೆಗಳನ್ನೆಲ್ಲ ಹುಡುಕಿ ಅವುಗಳ ಮಾದರಿಯನ್ನು ಗೊತ್ತುಪಡಿಸಿ, ವರ್ಗೀಕರಣವನ್ನು ಮಾಡಲಾಗಿದೆ. ಯೂರೋಪಿನ ಕಥೆಗಳ ವಿಶೇಷ ಅಧ್ಯಯನವನ್ನೇ ನಡೆಸಿ ಆರ್ನೆ ಆಂಟಿ ಮತ್ತು ಸ್ಟಿತ್ ಥಾಮ್ಸನರು ಕಥಾವರ್ಗಗಳು ಇಂತಿಷ್ಟೇ ಎಂದು ನಿರ್ಧರಿಸಿ ಒಂದೊಂದಕ್ಕೂ ನಿರ್ದಿಷ್ಟ ಸಂಖ್ಯೆಯನ್ನು ಕೊಟ್ಟಿದ್ದಾರೆ. ಆಶಯಗಳ (Motifs) ಅಭ್ಯಾಸವೂ ಅಷ್ಟೇ ಕ್ರಮಬದ್ಧವಾಗಿ ನಡೆದಿದೆ. ಪೂರ್ವದೇಶಗಳಾದ ಜಪಾನ್ ಮತ್ತು ಬರ್ಮಾಗಳಲ್ಲೂ ಸಹ ಜನಪದ ಕಥೆಗಳ ತೀವ್ರ ಸಂಶೋಧನೆ ನಡೆದಿದೆ. ಭಾರತದಲ್ಲಿ ಬಂಗಾಳ, ಅಸ್ಸಾಮ್, ಕಾಶ್ಮೀರ, ಗುಜರಾತ್ ಮುಂತಾದ ರಾಜ್ಯಗಳಲ್ಲಿ ಅಷ್ಟಿಷ್ಟು ಸಂಗ್ರಹಕಾರ್ಯ ನಡೆದಿದ್ದರೂ ದಕ್ಷಿಣ ಭಾರತ ಮಾತ್ರ ಈ ಸ್ಪರ್ಧೆಯಲ್ಲಿ ಹಿಂದಾಯಿತು ಎಂದೇ ಹೇಳಬೇಕು. ಜನಪದ ಕಥೆಗಳ ಸಂಗ್ರಹ ಕರ್ನಾಟಕದಲ್ಲಿ ಒಂದು ಅರ್ಥದಲ್ಲಿ ಇದೀಗ ಆರಂಭವಾಗಬೇಕಾಗಿದೆ. ಈಗ ಮುಖ್ಯ ಗಮನ ಕೊಡಬೇಕಾದುದು ಈ ಕಥಾಕ್ಷೇತ್ರಕ್ಕೇ. ಸ್ವಲ್ಪಮಟ್ಟಿಗೆ ಸಂಗ್ರಹ ಕಾರ್ಯವನ್ನು ನಡೆಸಿರುವ ನಾಲ್ಕಾರು ಮಂದಿಯ ಹೆಸರು ಇಲ್ಲಿ ಉಲ್ಲೇಖನಾರ್ಹ.

ಜನಪದ ಕಥೆಗಳ ಸಂಗ್ರಹದಲ್ಲಿ ಹೆಚ್ಚಿನ ಆಸಕ್ತಿಯನ್ನು ತೋರಿದವರಲ್ಲಿ ಜೀ. ಶಂ. ಪರಮಶಿವಯ್ಯ, ಎಚ್. ಜೆ. ಲಕ್ಕಪ್ಪಗೌಡ, ರಾಗೌ, ಧವಳಶ್ರೀ, ಡಾ. ಎಲ್. ಆರ್. ಹೆಗ್ಗಡೆ, ಡಿ. ಲಿಂಗಯ್ಯ, ನಾಗವಾರ ಕಾಳೇಗೌಡ ಮುಂತಾದವರನ್ನು ಹೆಸರಿಸಬಹುದು. ಶ್ರೀ ಜೀಶಂಪ ಅವರು ಮಂಡ್ಯ, ತುಮಕೂರು, ಬೆಂಗಳೂರು, ಚಿತ್ರದುರ್ಗ, ಮೈಸೂರು ಜಿಲ್ಲೆಗಳ ಸುಮಾರು ಇನ್ನೂರಕ್ಕೂ ಹೆಚ್ಚು ಕಥೆಗಳನ್ನು ಸಂಗ್ರಹಿಸಿದ್ದಾರೆ. ಲಕ್ಕಪ್ಪಗೌಡರು ಹಾಸನ ಜಿಲ್ಲೆಯ ತಮ್ಮ ಊರೂರಿನ ಸುತ್ತ ಕಥೆಗಳನ್ನು ಆಯ್ದಿದ್ದಾರೆ. ಮತಿಘಟ್ಟ ಕೃಷ್ಣಮೂರ್ತಿಗಳು ತಾವು ಹೋದ ಕಡೆಗಳಲ್ಲೆಲ್ಲ ಸಾಕಷ್ಟು ಸಂಖ್ಯೆಯ ಕಥೆಗಳನ್ನು ಸಂಗ್ರಹಿಸಿ ತಂದಿದ್ದಾರೆ. ಡಿ. ಲಿಂಗಯ್ಯನವರು ಮಂಡ್ಯ ಜಿಲ್ಲೆಯಲ್ಲೂ, ಧವಳಶ್ರೀಯವರು ತುಮಕೂರು ಜಿಲ್ಲೆಯಲ್ಲೂ, ಕಾಳೇಗೌಡರು ಬೆಂಗಳೂರು ಜಿಲ್ಲೆಯಲ್ಲೂ, ರಾಗೌ ಅವರು ಮೈಸೂರು ಮಂಡ್ಯ ಜಿಲ್ಲೆಗಳಲ್ಲೂ, ಡಾ. ಎಲ್. ಆರ್. ಹೆಗ್ಗಡೆಯವರು ಉತ್ತರ ಕನ್ನಡ ಜಿಲ್ಲೆಯಲ್ಲೂ ಸಂಗ್ರಹ ಕಾರ್ಯವನ್ನು ನಡೆಸಿದ್ದಾರೆ. ಆದರೂ ತೃಪ್ತಿಕರವಾದ ಸಂಗ್ರಹ ಆಗಿದೆ ಎಂದು ಹೇಳಲು ಸಾಧ್ಯವಾಗದು. ಸಂಗ್ರಹಕರಲ್ಲಿ ಕೆಲವರು ನಾಲ್ಕೇ ಕಥೆಗಳನ್ನು ಸಂಗ್ರಹಿಸಿರಬಹುದು, ಕೆಲವರು ನಲವತ್ತು ಕಥೆಗಳನ್ನು ಸಂಗ್ರಹಿಸಿರಬಹುದು. ಇಲ್ಲಿ ಸಂಖ್ಯೆ ಪ್ರಧಾನವಾಗದೆ ಕಂಠಸ್ಥ ಸಂಪ್ರದಾಯದ ಒಂದು ಕಥೆಯನ್ನು ಸಂಗ್ರಹಿಸಿ ಉಳಿಸಿದರೂ ಅದಕ್ಕೆ ತನ್ನದೇ ಆದ ಮೌಲ್ಯ ಇದ್ದೇ ಇದೆ.

ಸ್ವತಂತ್ರ ಸಂಗ್ರಹಗಳನ್ನು ತಂದವರಲ್ಲಿ 'ಧವಳಶ್ರೀ'ಯವರ ಹೆಸರನ್ನು ಪ್ರಮುಖವಾಗಿ ನೆನೆಯಬೇಕು. ಅವರ ಜಾನಪದ ಕಥಾಮೃತ (ಭಾಗ ೧ ಮತ್ತು ೨)

ಸಂಪುಟಗಳು ನಲವತ್ತು ಜನಪದ ಕಥೆಗಳನ್ನು ಒಳಗೊಂಡಿವೆ. ಧವಳಶ್ರೀ ಅವರು ಸಾಧ್ಯವಾದ ಮಟ್ಟಿಗೂ ನಿರೂಪಣೆಯಲ್ಲಿ ಮೂಲದ ಸೊಗಡನ್ನು ಉಳಿಸಿಕೊಳ್ಳುವ ಪ್ರಯತ್ನ ಮಾಡಿದ್ದಾರೆ. ಆದರೂ ಇತ್ತೀಚೆಗೆ ಭಾಷೆಯ ಅನಿವಾರ್ಯತೆಯಿಂದಲ್ಲದಿದ್ದರೂ ಆಡಂಬರಕ್ಕಾಗಿ ಬೆರೆಸುವ ಕೆಲವು ಇಂಗ್ಲಿಷ್ ಪದಗಳನ್ನು ಕಥೆಗಾರರ ನೆರವಿನಿಂದಲೇ ನಿವಾರಿಸಬಹುದಿತ್ತು. 'ಫೋಟೋ', 'ದಿರುಸು', 'ಸಾರೋಟು' ಮುಂತಾದ ಪದಗಳು ತಿಳಿಗನ್ನಡದ ಸಹಜಶೈಲಿಯಲ್ಲಿ ಬೆರೆತು ಬಂದಾಗ ಹೆಚ್ಚು ಕೃತಕವಾಗಿಬಿಡುತ್ತವೆ. 'ರತ್ನಪಾಲಕಿ', 'ದಾಳಿಂಬೆ ಚೆದ್ರೆ' 'ಪದ್ಮಾವತಿ' ಮುಂತಾದ ಅತ್ಯುತ್ತಮ ಕಥೆಗಳನ್ನು ಜಾನಪದ ಕಥಾಮೃತದ ಮೊದಲನೆಯ ಸಂಪುಟ ಒಳಗೊಂಡಿದ್ದರೂ, ಎರಡನೆಯ ಸಂಪುಟ ಇನ್ನೂ ವಿಶಿಷ್ಟವಾದ ಕಥೆಗಳನ್ನೊಳಗೊಂಡ, ಒಂದು ಅಪೂರ್ವ ಕೃತಿ ಎನ್ನಿಸಿ ಬಿಡುತ್ತದೆ. 'ರತ್ನಹಾರ', 'ಹೂವಿನ ಗಿಡದ ಕಥೆ', 'ಗಾಜಿನ ಕಂಬದ ರಾಜ ಕುಮಾರಿ', 'ಏಡಿಕಾಯಿರಾಜ', ಮುಂತಾದುವು ಸ್ವಾರಸ್ಯಪೂರ್ಣವಾಗಿ, ಕನ್ನಡ ಜನಪದ ಕಥೆಗಳ ಕಲ್ಪನಾರಮ್ಯತೆಗೆ ಉತ್ತಮ ನಿದರ್ಶನಗಳಾಗಿ ನಿಲ್ಲುತ್ತವೆ. ಧವಳಶ್ರೀ ಯವರ ಪ್ರಥಮ ಸಂಕಲನ ೧೯೬೭ರಲ್ಲಿ ಪ್ರಕಟವಾದ ತರುಣದಲ್ಲೇ ಎರಡನೆಯ ಸಂಪುಟ ೧೯೬೮ಲಕ್ಕೆ ಹೊರಬಂದು ಆ ಕ್ಷೇತ್ರದಲ್ಲಿ ಅವರಿಗಿರುವ ಆಸಕ್ತಿಯನ್ನು ಸಾರುತ್ತವೆ.

ಧವಳಶ್ರೀಯವರ ಕೃತಿಗಳಿಗೆ ಮೊದಲೇ ಕನ್ನಡದಲ್ಲಿ ಕೆಲವು ಸಂಕಲನಗಳನ್ನು ಕಾಣಬಹುದು. ಇವುಗಳಲ್ಲಿ ಅನುವಾದಿಕ ಕೃತಿಗಳೇ ಹೆಚ್ಚು. ವರದರಾಜ ಹುಯಿಲಗೋಳರ 'ವಿವಿಧ ದೇಶದ ಜನಪದ ಕಥೆಗಳು' ೧೯೪೭ರಲ್ಲೇ ಪ್ರಕಟವಾಯಿತು. ಜಿ. ಪಿ. ರಾಜರತ್ನಂ ಅವರ 'ಚಿನ್ನದ ದೋಸೆ', 'ಕಾಶ್ಮೀರದ ಜನಪದ ಕಥೆಗಳು', ಶ್ರೀಮತಿ ಉಷಾ ಮತ್ತು ಕಾವೇರಿಯ.ರ 'ಜನಪದ ಕಥೆಗಳು', ಗೌರಮ್ಮ ಕೆ.ಬಸವಯ್ಯ ನವರ "ದೇಶವಿದೇಶದ ಜನಪದ ಕಥೆಗಳು" ಅನ್ಯಭಾಷಾ ಕಥಾಸಾಹಿತ್ಯಕ್ಕೆ ಉತ್ತಮ ಪ್ರವೇಶವನ್ನು ಒದಗಿಸುತ್ತವೆ.

ಸ್ವತಂತ್ರ ಸಂಕಲನಗಳಲ್ಲಿ ರಂಗನಾಥ ಗಂಗಾಧರವಾಡೇದ ಅವರ ವಿಸ್ತಾರವಾದ ಸಂಕಲನವೊಂದು 'ಜನಪದ ಕಥೆಗಳು' ಎಂಬ ಶೀರ್ಷಿಕೆಯಲ್ಲಿ ಪ್ರಕಟವಾಗಿದೆ. ಆದರೆ ಇದು ಎಷ್ಟರ ಮಟ್ಟಿಗೆ ಜಾನಪದ ಅಂಶವನ್ನು ಒಳಗೊಂಡಿದೆ ಎನ್ನುವುದು ಮುಖ್ಯ ಪ್ರಶ್ನೆ. "ಬಹುಕಾಲದ ಹಿಂದೆ ಪಾಂಡ್ಯ ದೇಶದಲ್ಲಿ ವಿಧುರಾಜನೆಂಬ ಕವಿಯು ವಾಸ ವಾಗಿದ್ದ. ಅವನು ಲೆಕ್ಕಣಿಕೆ ಹಿಡಿದು ನವರಸಗಳನ್ನು ಉಕ್ಕಿಸುವಂತೆ ಖಡ್ಗ ಹಿಡಿದು ಜೀವರಸವೆನಿಸುವ ರಕ್ತವನ್ನು ಹರಿಸಬಲ್ಲ. ಅವನ ವೀರ್ಯರಸಭರಿತ ಗೀತಗಳು ಜನರಲ್ಲಿ ವೀರ್ಯ, ಧೈರ್ಯಗಳನ್ನು ತುಂಬಬಲ್ಲುವು. ಅದರಂತೆ ಶೋಕಗೀತೆಗಳು ಅಳಿಸಬಲ್ಲುವು, ಶೃಂಗಾರ ಗೀತೆಗಳು ನಿರುತ್ಸಾಹದಲ್ಲಿಯೂ ಶೃಂಗಾರ ಪ್ರವೃತ್ತಿ ಹುಟ್ಟಿಸಬಲ್ಲುವು" ಹೀಗೆ ಪ್ರೌಢಸರಣಿಯಲ್ಲಿ ಸಾಗುವ ಈ ಕಥೆಗಳನ್ನೆಲ್ಲ ಶ್ರೀ ವಾಡೇದ ಅವರು ಜನಪದ ಕಥೆ ಗಳೆಂದು ಕರೆದಿರುವುದು ಹಾಸ್ಯಾಸ್ಪದ. ವಸ್ತು ದೃಷ್ಟಿಯಿಂದಲೂ ಇಲ್ಲಿನ ಕಥೆಗಳಲ್ಲಿ ಜಾನಪದ ದೃಷ್ಟಿ ವಿರಳ.

ಎಂ. ಚಂದ್ರಶೇಖರ ಅವರ 'ಬೆಪ್ಪುತಕ್ಕಡಿ ಬೆಳವ', ಉಷಾದೇವಿ ಮಿರ್ಜಿಯವರ 'ಜಾನಪದ ಕಥೆಗಳು' ೧೯೬೦ರ ಈಚೆಗೆ ಪ್ರಕಟವಾದ ಮತ್ತೆರಡು ಸಂಕಲನಗಳು. ಜಿ. ಆರ್. ಹೆಗ್ಗಡೆಯವರ 'ಲೋಕಪ್ರಿಯ ಕಥೆಗಳು' ಉತ್ತರ ಕನ್ನಡ ಜಿಲ್ಲೆಯ ಜನಪದ ಕಥೆಗಳ ಸಂಕಲನ. ಡಿ. ಲಿಂಗಯ್ಯನವರ 'ಮಣ್ಣಿನ ಮಿಡಿತ' ಇತ್ತೀಚೆಗೆ ಪ್ರಕಟವಾಗಿದೆ.

ಎಲ್. ಆರ್. ಹೆಗ್ಗಡೆ, ಲಕ್ಕಪ್ಪಗೌಡ, ರಾಜಗೋಪಾಲ ಇವರ ಕಥೆಗಳು ಪತ್ರಿಕೆಗಳಲ್ಲಿ ಮಾತ್ರ ಬೆಳಕು ಕಂಡಿವೆ. ಇನ್ನೂ ಅನೇಕ ಸಂಗ್ರಹಕರ ಅಪಾರ ಸಂಖ್ಯೆಯ ಕಥೆಗಳು ಎಲ್ಲೂ ಬೆಳಕು ಕಂಡಿಲ್ಲ. ಆದಷ್ಟು ಬೇಗ ಇವರೆಲ್ಲ ತಮ್ಮ ಸಂಕಲನಗಳನ್ನು ಹೊರತಂದರೆ ಕನ್ನಡ ಜನಪದ ಕಥೆಗಳ ಸ್ವರೂಪ ನಿರ್ಣಯಕ್ಕೆ ಉತ್ತಮ ತಳಹದಿ ಒದಗುತ್ತದೆ.

ಗಾದೆ ಒಗಟು

ಜನಪದ ಸಾಹಿತ್ಯದಲ್ಲಿ ಗಾದೆಗಳ ಸ್ಥಾನವೂ ಪ್ರಮುಖವಾದುದೇ. ಬಹುಶಃ ಮೊಟ್ಟಮೊದಲು ಸಂಗ್ರಹಿತವಾದ ಜಾನಪದ ಪ್ರಕಾರ ಇದೊಂದೇ ಎಂದು ತೋರುತ್ತದೆ. ಭಾರತದಲ್ಲಿ ವಿವಿಧ ಭಾಷೆಗಳಲ್ಲಿ ಹತ್ತೊಂಬತ್ತನೆಯ ಶತಮಾನದ ಆದಿಭಾಗದಿಂದಲೂ ಪಾಶ್ಚಾತ್ಯ ಮಿಷನರಿಗಳಿಂದ, ಭಾರತೀಯ ವಿದ್ವಾಂಸರಿಂದ ಸಾಕಷ್ಟು ಗಾದೆಗಳ ಸಂಕಲನ ನಡೆದಿದೆ. ಕನ್ನಡದಲ್ಲಿ ಕಿಟ್ಟೆಲ್‌ರವರ ಅರ್ಥಕೋಶ ಪ್ರಕಟವಾಗುವ ಪೂರ್ವದಲ್ಲೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಲ್ಲಚ್ಚಿನ ಗಾದೆಗಳ ಸಂಕಲನವೊಂದು ಪ್ರಕಟವಾಗಿತ್ತು ಎಂದು ಇತ್ತೀಚೆಗೆ ತಿಳಿದುಬಂದಿದೆ. ೧೯೧೭ರ ವೇಳೆಗೆ ಬಾಸೆಲ್ ಮಿಷನ್ ಪ್ರೆಸ್ಸಿನವರು ಪ್ರಕಟಿಸಿದ Canarese Proverbs ಎಂಬ ಕಿರು ಹೊತ್ತಗೆ ಮುನ್ನೂರಕ್ಕೂ ಹೆಚ್ಚು ಗಾದೆಗಳನ್ನೊಳಗೊಂಡು ಕನ್ನಡ ಮೂಲ ಹಾಗೂ ಇಂಗ್ಲಿಷ್ ಅನುವಾದವನ್ನು ಹೊಂದಿರುವ ಕೃತಿ. ಮತ್ತೆ ೧೯೧೯ರಲ್ಲಿ ಪ್ರಕಟಿಸಿದ 'ಕರ್ಣಾಟಕ ಲೋಕೋಕ್ತಿ ನಿಧಾನ' ಒಂದು ಅತ್ಯುತ್ತಮ ಸಂಗ್ರಹ. ಈ ಶತಮಾನದ ಆದಿಭಾಗದಲ್ಲಿ ಇಷ್ಟನ್ನು ಹೊರತು ಗಾದೆಗಳಿಗೆ ಸಂಬಂಧಿಸಿದಂತೆಯಾಗಲೀ, ಇನ್ನಾವುದೇ ಜನಪದ ಸಾಹಿತ್ಯ ಪ್ರಕಾರಕ್ಕೆ ಸಂಬಂಧಿಸಿದಂತೆಯಾಗಲೀ ಕೆಲಸ ನಡೆದಂತೆ ತೋರುವುದಿಲ್ಲ.

೧೯೪೪ರಲ್ಲಿ ಶ್ರೀ ಅಚ್ಚಪ್ಪನವರ 'ಕನ್ನಡ ಗಾದೆಗಳು' ಪ್ರಕಟವಾಯಿತು. ಕನ್ನಡದ ಅನೇಕ ಜನಪ್ರಿಯ ಗಾದೆಗಳನ್ನು ಒಳಗೊಂಡಿರುವ ಈ ಕೃತಿ ಗಾದೆಗಳ ಇತಿಹಾಸದಲ್ಲಿ ಒಂದು ಮೈಲಿಗಲ್ಲು. ಗ್ರಂಥಸ್ಥ ಗಾದೆಗಳನ್ನೆಲ್ಲ ಒಂದೆಡೆ ಕಲೆಹಾಕಿ ಒಂದು ದೊಡ್ಡ ಸಂಕಲನವನ್ನು ಶ್ರೀ ಅಚ್ಚಪ್ಪನವರು ಇತ್ತೀಚೆಗೆ ಪ್ರಕಟಿಸಿದ್ದಾರೆ. ಗಾದೆಗಳ ಕ್ಷೇತ್ರದಲ್ಲಿ ಈ ಕೃತಿ ನಿಜಕ್ಕೂ ಅತ್ಯಂತ ಮಹತ್ವದ ಸಾಧನೆ.

೧೯೫೬ರಲ್ಲಿ ಪ್ರಕಟವಾದ ಶ್ರೀ ಕೃಷ್ಣಶಾಸ್ತ್ರಿ ಜಂಗಮಕೋಟೆಯವರ 'ಗಾದೆಗಳ ಭಂಡಾರ', ೧೯೬೩ರಲ್ಲಿ ಪ್ರಕಟವಾದ ಟಿ. ವಿ. ವೆಂಕಟರಮಣಯ್ಯ ಅವರ 'ಕನ್ನಡ

ಗಾದೆಗಳ ಕೋಶ' ಗಮನಾರ್ಹ ಕೃತಿಗಳು. ದಕ್ಷಿಣ ಭಾಷಾ ಪುಸ್ತಕ ಸಂಸ್ಥೆಯವರು ಪ್ರಕಟಿಸಿರುವ 'ನಲ್ನುಡಿ ನಾಣ್ಣುಡಿ' ಕನ್ನಡ, ತಮಿಳು, ತೆಲುಗು, ಮಲೆಯಾಳಂ ಭಾಷೆಗಳ ಕೆಲವು ಗಾದೆಗಳ ತೌಲನಿಕ ಸಂಕಲನ.

ಕನ್ನಡ ಗಾದೆಗಳ ಇತಿಹಾಸದಲ್ಲಿ ಅತ್ಯಂತ ಮಹತ್ವದ ಕೃತಿ ಇನ್ನೂ ಪ್ರಕಟವಾಗ ಬೇಕಾಗಿದೆ. ಈ ನಡುವೆ ಇತ್ತೀಚೆಗೆ ಬಂದ ರಾಗೌ ಅವರ 'ನಮ್ಮ ಗಾದೆಗಳು' ಆ ಕ್ಷೇತ್ರದ ಬಹುಪಾಲು ಕೊರತೆಯನ್ನು ತುಂಬಿಕೊಳ್ಳಲು ಸಮರ್ಥವಾಗಿದೆ. ಸುಮಾರು ಎರಡು ಸಾವಿರ ಪ್ರಾದೇಶಿಕ ಗಾದೆಗಳನ್ನು ಶೀಲ-ಅಶ್ಲೀಲ ಎಂಬ ಮಡಿವಂತಿಕೆಯನ್ನು ಪಾಲಿಸದೆ ಶ್ರೀ ರಾಗೌ ಅವರು ಸಂಪಾದಿಸಿ ಒಂದುಕಡೆ ಸಂಚಯಿಸಿದ್ದಾರೆ. ಪ್ರಾದೇಶಿಕ ಭಾಷೆಯ ಸೊಗಸು, ಕನ್ನಡ ಗಾದೆಗಳ ಶ್ರೀಮಂತಿಕೆ, ಜೀವನಾನುಭವದ ಹರಹು, ಭಾವದ ಬಳುಕು, ರಚನೆಯ ಚಾತುರ್ಯಗಳನ್ನು ಕಾಣಬೇಕಾದರೆ ಶ್ರೀ ರಾಗೌ ಅವರ ಈ ಕೃತಿಗೆ ಶರಣುಹೋಗಬೇಕು. ವಿಸ್ತಾರವಾದ, ಅಭ್ಯಾಸಪೂರ್ಣವಾದ ಉಪಯುಕ್ತ ಪ್ರಸ್ತಾವನೆ, ಸಾಕಷ್ಟು ದೀರ್ಘವಾದ ಅರ್ಥಕೋಶ ಇವನ್ನು ಕೃತಿಯಲ್ಲಿ ನೀಡಿ ಅದರ ಮೌಲ್ಯವನ್ನು ಶ್ರೀಯುತರು ಮತ್ತೂ ಹೆಚ್ಚಿಸಿದ್ದಾರೆ. ಅಲ್ಲಲ್ಲಿ ಕೆಲವು ಗಾದೆಗಳ ಧ್ವನಿಶಕ್ತಿಯನ್ನು ಗುರುತಿಸಲು ಸಹಾಯಕವಾಗುವಂತೆ ಸಂದರ್ಭೋಚಿತ ಟಿಪ್ಪಣಿ ಗಳನ್ನೂ ನೀಡಿದ್ದರೆ ಹೆಚ್ಚು ಉಪಕಾರವಾಗುತ್ತಿತ್ತು. ಗಾದೆಗಳ ಆಯ್ಕೆಯಲ್ಲಿ ಕೆಲವು ಕಡೆ ಹೆಚ್ಚು ಎಚ್ಚರದ ಅಗತ್ಯವೂ ಇತ್ತು. ಕೆಲವು ಒಗಟುಗಳೂ, ತ್ರಿಪದಿಯ ಕೆಲವು ಸಾಲುಗಳೂ, ಕಥನಗೀತೆಗಳ ಪಲ್ಲವಿಗಳೂ ಗಾದೆಗಳ ಹೆಸರಿನಲ್ಲಿ ಹೇಗೋ ನುಸುಳಿ ಕೊಂಡಿವೆ.* ಅರ್ಥಕೋಶ ಇನ್ನೂ ಪರಿಷ್ಕಾರವಾಗಬೇಕಿದ್ದಿತು. ಜಾನಪದ ಸಂಕಲನ ಗಳಲ್ಲಿ 'ಅಜ', 'ಅಂಗನೆ', 'ಅಂತಕ', 'ಅಂತ್ಯಜ', 'ಅಂಬರ' 'ಕಠಾರಿ', ಮುಂತಾದ ಶಿಷ್ಟ ಶಬ್ದಗಳಿಗೆ ಅರ್ಥವನ್ನು ಕೊಡುವ ಅಗತ್ಯ ಅಷ್ಟಾಗಿ ಇರದು. ಒಟ್ಟಿ ನಲ್ಲಿ ಸಣ್ಣಪುಟ್ಟ ದೋಷಗಳಿದ್ದರೂ 'ನಮ್ಮ ಗಾದೆಗಳು' ಗಣನೀಯ ಕೃತಿಯಾಗಿದೆ. ಶ್ರೀ ರಾಗೌ ಅವರ ಎರಡನೆಯ ಗಾದೆಗಳ ಸಂಕಲನ 'ಕಿಟ್ಟಲ್ ಕೋಶದ ಗಾದೆಗಳು' ಇತ್ತೀಚೆಗೆ ಪ್ರಕಟವಾಗಿದೆ. ಕಿಟ್ಟಲ್ ಅವರ ಅರ್ಥಕೋಶದ ಎಲ್ಲ ಗಾದೆಗಳನ್ನೂ ಒಂದೆಡೆಯಲ್ಲಿ ಸಂಗ್ರಹಿಸಿ, ಆಕರ್ಷಕವಾಗಿ ಕೃತಿಯನ್ನು ಹೊರತಂದ ಶ್ರೀ ರಾಗೌ ಅವರು ಅಭಿನಂದನೀಯರು.

ಗಾದೆಗಳ ಸಂಗ್ರಹ ಕಾರ್ಯವನ್ನು ನಡೆಸಿರುವವರಲ್ಲಿ ಶ್ರೀ ಎಚ್. ಎಂ. ರಾಮಾ

---

*ಕೊಣ್ಣೂರು ಬೊಮ್ಮಣ್ಣನ ಹೆಂಡ್ತಿ
ಹೊಗೆಸೊಪ್ಪಿನ ಬೆಮಕಾತಿ

(—ಒಂದು ಹಾಸ್ಯಪೂರ್ಣ ಲಾವಣಿ)

ಕೊಟ್ಟ ಭಾಷೆಗೆ ತಪ್ಪಬೇಡ
ಕೆಟ್ಟ ಯೋಚನೆ ಮಾಡಬೇಡ

(—ಗೋವಿನ ಹಾಡಿನ ಪದಗಳು)

ರಾಧ್ಯ ಹಾಗೂ ಶ್ರೀ ಜೀಶಂಪ ಅವರ ಹೆಸರುಗಳೂ ಪ್ರಮುಖವಾದುವು. ಶ್ರೀ ರಾಮಾರಾಧ್ಯರು ಕನ್ನಡದ ಸಮಗ್ರ ಗಾದೆಗಳನ್ನೆಲ್ಲ ಸೂರೆಮಾಡುವ ಅಪೂರ್ವ ಸಾಹಸಿಗರೆನಿಸಿದರೆ ಶ್ರೀ ಜೀಶಂಪ ಗ್ರಾಮಾಂತರ ಗಾದೆಗಳ ಆಯ್ಕೆಯತ್ತಲೇ ಹೆಚ್ಚು ಲಕ್ಷ್ಯವನ್ನು ನೀಡಿದ್ದಾರೆ. ಶ್ರೀ ರಾಮಾರಾಧ್ಯರು ಬಹುಶಃ ಕನ್ನಡ ಗಾದೆಗಳ ಸಂಗ್ರಹಕರಲ್ಲಿ ಅಗ್ರಗಣ್ಯರು. ಸುಮಾರು ಹದಿನೈದು ಸಾವಿರಕ್ಕೂ ಹೆಚ್ಚು ಗಾದೆಗಳ ಭಂಡಾರ ಅವರಲ್ಲಿದೆ. ಕಳೆದ ಮೂವತ್ತು ವರ್ಷಗಳ ಸತತವಾದ ಸಂಗ್ರಹಕಾರ್ಯ ಅವರದು. ಆದರೂ ಈವರೆಗೆ ಒಂದು ಸಂಕಲನವನ್ನೂ ಅವರು ಪ್ರಕಟಿಸಲು ಸಾಧ್ಯವಾಗದಿರುವುದು ದುರ್ದೈವದ ಸಂಗತಿ.

ಶ್ರೀ ರಾಮಾರಾಧ್ಯರು ಗಾದೆಗಳನ್ನು ಆಧರಿಸಿ ಅನೇಕ ಹೊಸ ಪ್ರಯೋಗಗಳನ್ನು ಮಾಡಿದ್ದಾರೆ. ಆಡುಮಾತಿನಲ್ಲಿ ಹರಡಿಕೊಂಡಿರುವ ಗಾದೆಗಳನ್ನು ಒಂದು ವಿಷಯದ ಸೂತ್ರಕ್ಕೆ ಒಳಪಡಿಸಿ ಸಾಹಿತ್ಯ ಕೃತಿಗಳನ್ನು ರಚಿಸುವ ಪ್ರಯತ್ನದಲ್ಲಿ ಅವರು ಯಶಸ್ವಿಯಾಗಿದ್ದಾರೆ. ಇಂಥ ಒಂದು ಪ್ರಯೋಗ ಬಹುಶಃ ಕನ್ನಡದಲ್ಲಿ ಮಾತ್ರ ನಡೆದಿದೆ ಎಂದರೂ ಅತಿಶಯೋಕ್ತಿಯಲ್ಲ. ಅವರ 'ಗಾದೆಗಳ ಗೀತೆಗಳು' ಗಾದೆಗಳನ್ನು ಜೋಡಿಸಿಯೇ ರಚಿಸಿದ ಹಾಡುಗಳು. ಗಾದೆಗಳಲ್ಲಿ ನಾಟಕ, ರಾಮಾಯಣ, ಮಹಾಭಾರತ ಮುಂತಾದುವನ್ನೂ ರಚಿಸುವ ಆಳವಾದ ಅಭ್ಯಾಸವನ್ನು ಗಾದೆಗಳ ಕ್ಷೇತ್ರದಲ್ಲಿ ಅವರು ನಡೆಸಿದ್ದಾರೆ. ರಾಮಾರಾಧ್ಯರು ಇತ್ತೀಚೆಗೆ ಸಿದ್ಧಗೊಳಿಸುತ್ತಿರುವ ಗಾದೆಗಳ ಬೃಹತ್ ಸಂಪುಟ ಪ್ರಕಟವಾದರೆ ಕನ್ನಡದಲ್ಲಿ ಅದೊಂದು ಅದ್ವಿತೀಯ ಸಂಕಲನವೇ ಆಗುತ್ತದೆ.

ಗಾದೆಗಳಂತೆ ಒಗಟುಗಳ ಸಂಗ್ರಹ ಕಾರ್ಯವೂ ನಮ್ಮಲ್ಲಿ ಸಮರ್ಪಕವಾಗಿ ಇನ್ನೂ ಆಗಬೇಕಾಗಿದೆ. ಒಗಟುಗಳ ಸಂಗ್ರಹ ಕಾರ್ಯದಲ್ಲಿ ವಿಶೇಷವಾದ ಉತ್ಸಾಹವನ್ನು ತೋರಿದ ಶ್ರೀ ಜೀಶಂಪ ಅವರು ಸಾವಿರಾರು ಒಗಟುಗಳನ್ನು ನಾಡಿನ ನಾನಾ ಕಡೆಗಳಲ್ಲಿ ಸಂಗ್ರಹಿಸಿದ್ದಾರೆ. ಅವರ ಇತ್ತೀಚಿನ ಸಂಕಲನ 'ಕನ್ನಡ ಒಗಟುಗಳು' ಕೇವಲ ಮುನ್ನೂರು ಒಗಟುಗಳನ್ನು ಮಾತ್ರ ಒಳಗೊಂಡು ಆ ನಿಟ್ಟಿನಲ್ಲಿ ಒಂದು ಉತ್ತಮ ಪ್ರಯತ್ನವಾಗಿದೆ. ಶಂ. ಬ. ಜೋಷಿಯವರ 'ಮಕ್ಕಳ ಒಡಪುಗಳು' ೧೯೪೬ರ ವೇಳೆಗೇ ಪ್ರಕಟವಾಗಿ ಆ ಕ್ಷೇತ್ರದ ಆದ್ಯ ಕೃತಿಯಾಯಿತು. ಇನ್ನೂರಕ್ಕೂ ಹೆಚ್ಚು ಒಗಟುಗಳನ್ನು ಶ್ರೀಯುತರು ಈ ಪುಟ್ಟ ಕೃತಿಯಲ್ಲಿ ನೀಡಿದ್ದಾರೆ. ಇತ್ತೀಚೆಗೆ ಇದರ ಎರಡನೆಯ ಆವೃತ್ತಿಯೂ ಪ್ರಕಟವಾಗಿದೆ. ರಾ. ನಿ. ರಂಗಣ್ಣನವರ 'ಒಗಟುಗಳು' ಹಾಗೂ ಈಶ್ವರಚಂದ್ರ ಚಿಂತಾಮಣಿಯವರ 'ಗರತಿಯರ ಮನೆಯಿಂದ' ಸಂಕಲನದ ಒಗಟುಗಳನ್ನೂ ಸಹ ಇಲ್ಲಿ ನೆನೆಯಬಹುದು. ಶ್ರೀ ರಾಗೌ ಅವರು ಒಗಟುಗಳ ಉತ್ತಮ ಸಂಕಲನ ಒಂದನ್ನು ಇತ್ತೀಚೆಗೆ ಸಿದ್ಧಗೊಳಿಸುತ್ತಿದ್ದಾರೆ.

ಜಾನಪದದ ಇತರ ಶಾಖೆಗಳು

ಜನಪದ ಸಾಹಿತ್ಯದಂತೆಯೇ 'ಜಾನಪದ'ದಲ್ಲಿ ಜನಪದ ಕಲೆಗಳಿಗೂ ಮಹತ್ವದ

ಸ್ಥಾನವಿದೆ. ಜಾನಪದ ಕಲೆಗಳನ್ನು ಕುರಿತು ವಿಶೇಷ ವಿಷಯಗಳನ್ನು ಸಂಗ್ರಹಿಸಿದವರಲ್ಲಿ ಡಾ. ಶಿವರಾಮ ಕಾರಂತ ಹಾಗೂ ಶ್ರೀ ಜೀಶಂಪ ಅವರ ಹೆಸರು ಮುಖ್ಯವಾದುವು. ಡಾ. ಕಾರಂತರು ಯಕ್ಷಗಾನ ಸಾಹಿತ್ಯವನ್ನು ಕುರಿತು ದೊಡ್ಡ ಗ್ರಂಥವೊಂದನ್ನು ರಚಿಸಿದ್ದಾರೆ. ದಕ್ಷಿಣ ಕನ್ನಡದ ಯಕ್ಷಗಾನ ಸಾಹಿತ್ಯದ ಬಗ್ಗೆ ಸಾಕಷ್ಟು ಅಭ್ಯಾಸ ಪೂರ್ಣ ಲೇಖನಗಳೂ ಪ್ರಕಟವಾಗಿವೆ. ಜನಪದ ನೃತ್ಯಗಳಿಗೆ ಸಂಬಂಧಿಸಿದಂತೆ ಕಾರಂತರ 'ಕರ್ನಾಟಕದ ಜಾನಪದ ಕಲೆಗಳು' ಒಂದು ಉತ್ತಮ ಪ್ರಯತ್ನ. ಆದರೆ ಬಹುಪಾಲು ಜನಪದ ಕಲೆಗಳ ಪ್ರಸ್ತಾಪ ಆ ಕೃತಿಯಲ್ಲಿ ಬರುವುದಿಲ್ಲ. ನ. ಭದ್ರಯ್ಯನವರ 'ಗ್ರಾಮಕಲೆಗಳು' ತಕ್ಕಮಟ್ಟಿಗೆ ಬಯಲುಸೀಮೆಯ ಕುಣಿತಗಳ ಬಗ್ಗೆ ಪರಿಚಯಾತ್ಮಕ ಕೃತಿ. ಬಯಲುಸೀಮೆಯ ಅನೇಕ ಅಜ್ಞಾತ ಜಾನಪದ ಕಲೆಗಳನ್ನು ಗುರುತಿಸಿ, ಅವುಗಳ ಪ್ರದರ್ಶನಗಳನ್ನು ಅಲ್ಲಲ್ಲಿ ನಡೆಸಿರುವ ಜೀಶಂಪ ಅವರು ಡೊಳ್ಳು ಕುಣಿತ, ವೀರಗಾಸೆ ಕುಣಿತ, ಪಟಾ ಕುಣಿತ, ಕುರುಬರ ಕುಣಿತ, ಗೊರವರ ಕುಣಿತ, ಸೋಮನ ಕುಣಿತ, ಕರಪಾಲ ಕುಣಿತ, ಚೌಡಿಕೆ ಕುಣಿತ, ಭಾಗವಂತಿಕೆ ಮೇಳ, ಚಿಟ್ ಮೇಳ, ಲಿಂಗದ ಬೀರರ ಕುಣಿತ, ಬೀಸು ಕಂಸಾಲೆ ಕುಣಿತ, ಪೂಜಾ ಕುಣಿತ ಮುಂತಾದುವುಗಳ ಬಗ್ಗೆ ಸಾಕಷ್ಟು ವಿಷಯಗಳನ್ನು ಸಂಗ್ರಹಿಸಿದ್ದಾರೆ. ಕರ್ನಾಟಕ ಜಾನಪದ ಕಲೆಗಳ ಪ್ರಸಾರ ಕಾರ್ಯದಲ್ಲಿ ಶ್ರೀ ಎಂ. ಎಸ್. ನಟರಾಜ್ ಅವರ ಪಾತ್ರವೂ ಪ್ರಮುಖವಾದುದೇ. ಬೀಸುಕಂಸಾಳೆ, ಪೂಜಾ ಕುಣಿತ, ಕರಗ ಕುಣಿತ, ಕರಡೇಮೇಳ, ಕೀಲುಕುದುರೆ ಕುಣಿತ ಮುಂತಾದ ಕರ್ನಾಟಕದ ಜನಪದ ಕಲೆಗಳನ್ನು ಸಮಗ್ರ ಭಾರತಕ್ಕೆ ಪರಿಚಯಮಾಡಿಕೊಟ್ಟ ಕೀರ್ತಿ ಅವರದು. ಜನಪದ ಕಲಾವಿದರ ತಂಡದೊಡನೆ ಅವರು ಆಗಾಗ ಕೈಗೊಳ್ಳುವ ಕಲಾಪ್ರವಾಸ ಈ ರೀತಿಯಲ್ಲಿ ಅತ್ಯಂತ ಗಮನಾರ್ಹವಾದುದು.

ಕರ್ನಾಟಕ ಜಾನಪದ ಕಲೆಗಳ ಸಂಘಟನೆಯ ಒಂದು ಯಶಸ್ವೀ ಪ್ರಯತ್ನ ಕಳೆದ ವರ್ಷ ನಡೆಯಿತು. ಅನೇಕ ಅಜ್ಞಾತ ಜಾನಪದ ಕಲೆಗಳೂ, ಕಲಾವಿದರೂ ಅಪಾರ ಸಂಖ್ಯೆಯಲ್ಲಿ ಮೊದಲಬಾರಿಗೆ ನಾಡಿನ ಕಲಾರಸಿಕರಿಗೆ ಪರಿಚಯವಾಗುವ ಅಪೂರ್ವ ಸುಯೋಗವೊಂದನ್ನು ಕಲ್ಪಿಸಿದವರು ಶ್ರೀ ಎಚ್. ಎಲ್. ನಾಗೇಗೌಡರು. ಜನಪದ ಕಲೆಗಳಿಗೆ ಹೆಚ್ಚು ಮಾನ್ಯತೆ ಇರುವ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕರ್ನಾಟಕದ ಮೂಲೆ ಮೂಲೆಯ ಜನಪದ ಕಲೆಗಳ ಪ್ರದರ್ಶನದ ವ್ಯವಸ್ಥೆ ಮಾಡಿ ಕಲಾವಿದರಿಗೆ ಉತ್ತಮ ರೀತಿಯ ಪುರಸ್ಕಾರ ಪ್ರೋತ್ಸಾಹವನ್ನೂ ದೊರಕಿಸಿಕೊಟ್ಟರು. ಜೀ. ಶಂ. ಪರಮಶಿವಯ್ಯ ಹಾಗೂ ಪಿ. ಆರ್. ತಿಪ್ಪೇಸ್ವಾಮಿ ಇವರ ನೇತೃತ್ವದಲ್ಲಿ ಇಪ್ಪತ್ತಕ್ಕೂ ಹೆಚ್ಚು ವೈವಿಧ್ಯದ ಈ ಕಲಾವಿದರ ದೊಡ್ಡ ತಂಡ ಕಲಾಯಾತ್ರೆಯನ್ನು ಕೈಗೊಂಡು ತಮ್ಮ ಅಜ್ಞಾತ ಕಲೆಗಳನ್ನು ಪ್ರದರ್ಶಿಸಿ ಅಪಾರ ಜನಮೆಚ್ಚಿಗೆಯನ್ನು ಪಡೆದುಕೊಂಡಿತು. ಅರವತ್ತಕ್ಕೂ ಹೆಚ್ಚುಮಂದಿ ಇದ್ದ ಆ ಕಲಾವಿದರ ತಂಡದಲ್ಲಿ ಸೌಮ್ಯ ಹಾಗೂ ರೌದ್ರ ನೃತ್ಯಗಳ ಕಲಾವಿದರ ಜೊತೆಗೆ ವಿವಿಧ ಸಂಪ್ರದಾಯದ ಹಾಡುಗಾರರೂ ಇದ್ದರು.

ದಿನಾಂಕ ೨೬-೧-೧೯೬೮ರಂದು ಪ್ರಸಿದ್ಧ ಸಾಹಿತಿ ಡಾ. ಶಿವರಾಮ ಕಾರಂತರ ಅಧ್ಯಕ್ಷತೆಯಲ್ಲಿ ಜನಪದ ಕಲಾವಿದರ ಈ ತಂಡ ಮಂಗಳೂರಿನ ಪುರಭವನದಲ್ಲಿ ಅಮೋಘ ಪ್ರದರ್ಶನ ನೀಡಿತು. ಅನೇಕರು ಕಂಡರಿಯದ, ಕೇಳರಿಯದ ಜನಪದ ಕಲೆಗಳು ಮೊದಲಬಾರಿಗೆ ಶಿಷ್ಟ ಪ್ರೇಕ್ಷಕರ ಒಲವನ್ನು ಸೆಳೆದುಕೊಂಡವು. ವೈವಿಧ್ಯ ಮಯವಾದ ಕನ್ನಡ ನಾಡಿನ ಜನಪದ ಕಲೆಗಳನ್ನು ಡಾ. ಕಾರಂತರು ಮನಸಾರೆ ಕೊಂಡಾಡಿದರು.

ಈ ತಂಡ ಉಡುಪಿ ಮತ್ತು ಪುತ್ತೂರುಗಳಲ್ಲೂ ಪ್ರದರ್ಶನವನ್ನು ನೀಡಿತು. ಕರ ಪಾಲದ ಸಿದ್ಧಯ್ಯ, ಚೌಡಿಕೆ ಎಲ್ಲಯ್ಯ, ಸೋಬಾನೆ ಚಿಕ್ಕಮ್ಮ, ನೀಲಗಾರ ರಾಚಯ್ಯ, ಕಂಸಾಳೆ ಮರಿಯಯ್ಯ ಮೊದಲಾದ ಮೇಧಾವಿ ಜನಪದ ಕಲಾವಿದರು ಈ ತಂಡದಲ್ಲಿದ್ದರು. ಸೋಮನ ಕುಣಿತ, ಡೊಳ್ಳು ಕುಣಿತ, ವೀರಗಾಸೆ ಕುಣಿತ, ಪಟಾ ಕುಣಿತ ಹಾಗೂ ಕರಪಾಲ ಮೇಳಗಳು ವಿಶೇಷ ಮನ್ನಣೆಗೆ ಪಾತ್ರವಾದವು.

ಇದೇ ವರ್ಷ ಮೈಸೂರಿನಲ್ಲಿ ನಡೆದ ಜಾನಪದ ಮೇಳಗಳು ಗಣನೀಯವಾದುವು. ಶ್ರೀ ಲಕ್ಷ್ಮೀನಾರಾಯಣ ಆಳ್ವ ಅವರ ನೇತೃತ್ವದಲ್ಲಿ ದಕ್ಷಿಣ ಕನ್ನಡದ ಅಪಾರ ಸಂಖ್ಯೆಯ ಕಲಾವಿದರು ಕಲಾಪ್ರದರ್ಶನವನ್ನು ನೀಡಿದರು. ಆಟಿಕೊಡಂಜ, ಭೂತಕೋಲ, ಭೂತನೇಮ, ದುಡಿಕುಣಿತ, ಡೋಲು ಕುಣಿತ, ಹೋಲಿ ಕುಣಿತ, ಯಕ್ಷಗಾನ ಇತ್ಯಾದಿ ಕಲೆಗಳ ಪರಿಚಯ ಬಯಲು ಸೀಮೆಯ ಕಲಾಭಿಮಾನಿಗಳಿಗೆ ಲಭ್ಯವಾಯಿತು. ಅದೇ ಸಂದರ್ಭದಲ್ಲಿ ಜೀ. ಶಂ. ಪರಮಶಿವಯ್ಯ ಹಾಗೂ ಶ್ರೀ ಪಿ. ಆರ್. ತಿಪ್ಪೇಸ್ವಾಮಿ ಅವರ ನಿರ್ದೇಶನದಲ್ಲಿ ಮೈಸೂರಿನ ಪುರಭವನದಲ್ಲಿ ನಡೆದ ಕರ್ನಾಟಕ ವ್ಯಾಪ್ತಿಯ ಜಾನಪದ ಕಲಾಮೇಳ ಹೆಚ್ಚು ಆಕರ್ಷಕವಾದುದು; ವ್ಯಾಪಕವಾದುದು. ನೂರಾರು ಮಂದಿ ಜನಪದ ಕಲಾವಿದರು ತಮ್ಮೆಲ್ಲ ವೇಷಭೂಷಣಗಳೊಡನೆ ರಾಜಮಾರ್ಗಗಳಲ್ಲಿ ಮೆರವಣಿಗೆ ಹೊರಟು ನಾಗರಿಕರನ್ನು ಸೋಜಿಗಗೊಳಿಸಿದಂತೆಯೇ ಪ್ರದರ್ಶನವೂ ವೈವಿಧ್ಯಮಯವಾಗಿ ರಂಜಿಸಿತು.

ಉತ್ತರ ಕನ್ನಡ ಜಿಲ್ಲೆಯ ಹಾಲಕ್ಕಿಗೌಡರ ಸುಗ್ಗಿಯ ಕುಣಿತ, ಕೊಡಗಿನವರ ಹುತ್ತರಿ ಕುಣಿತ, ಉತ್ತರ ಕರ್ನಾಟಕದ ಕರಡೇ ಹಾಗೂ ಗೀಗೀ ಮೇಳ, ದಕ್ಷಿಣ ಕರ್ನಾಟಕದ ಪೂಜಾಕುಣಿತ, ಬೀಸುಕಂಸಾಳೆ ಕುಣಿತ, ರಂಗದ ಕುಣಿತಗಳು ವಿಶೇಷ ಮೆಚ್ಚಿಗೆಯನ್ನು ಗಳಿಸಿಕೊಂಡವು.

ಬೆಂಗಳೂರಿನಲ್ಲಿ ನಡೆದ ಯುವಜನ ಮೇಳದಲ್ಲಿ ಜನಪದ ಮೇಳಗಳ ವೈಭವ ಯುತ ಪ್ರದರ್ಶನ ಎರಡು ದಿನಗಳವರೆಗೆ ನಡೆದು ಈ ಎಲ್ಲ ಕಲಾವಿದರೂ ಅಪಾರ ಸಂಖ್ಯೆಯ ಇತರ ಕಲಾವಿದರೂ ಅಲ್ಲಿ ಭಾಗವಹಿಸಿದ್ದರು. ಶ್ರೀ ಗೊ. ರು. ಚೆನ್ನ ಬಸಪ್ಪನವರು ಬಹುಮಟ್ಟಿಗೆ ಬೆಂಗಳೂರಿನ ಈ ಅಪೂರ್ವ ಜಾನಪದ ಮೇಳ ಅಪಾರ ವೆಚ್ಚದಲ್ಲಿ ನಡೆಯಲು ಕಾರಣಕರ್ತರು.

ಕರ್ನಾಟಕ ಜಾನಪದ ಮೇಳಗಳ ಸಕ್ರಮ ಅಭ್ಯಾಸ ಕಲಾವಿದರ ಪುರಸ್ಕಾರ, ಕಲೆಗಳಿಗೆ ಪ್ರೋತ್ಸಾಹ ಇನ್ನೂ ವ್ಯವಸ್ಥಿತವಾಗಿ ಆಗಬೇಕಾಗಿದೆ.

ಜಾನಪದದ ಇತರ ವಿಷಯುಗಳಿಗೆ ಸಂಬಂಧಪಟ್ಟಂತೆ ಹೆಚ್ಚು ಸಂಗ್ರಹಕಾರ್ಯ ಇನ್ನೂ ಆಗಬೇಕಾಗಿದೆ. ವಿವಿಧ ವಿಷಯುಗಳಿಗೆ ಸಂಬಂಧಪಟ್ಟಂತೆ ಆಗಾಗ ಪತ್ರಿಕೆಗಳಲ್ಲಿ ಪ್ರಕಟವಾದ ಕೆಲವು ಲೇಖನಗಳೂ ಇಲ್ಲಿ ಉಲ್ಲೇಖಾರ್ಹವಾಗಿವೆ. ಕಮಲ ಅವರ 'ದಂಡಿನ ಮಾರಮ್ಮನ ಜಾತ್ರೆ', ಡಾ. ಗದ್ಗೀಮಠರ 'ಕರ್ನಾಟಕದ ಗೊಂದಲಿಗರು', ಎಲ್. ಗುಂಡಪ್ಪನವರ 'ಲಾವಣಿ ಅಥವಾ ವೀರಕಥೆ', ಗೋವಿಂದಪೈಗಳ 'ದಕ್ಷಿಣ ಕನ್ನಡ ಜಿಲ್ಲೆಯ ಜಾನಪದ ಕಲಾವೈಭವ', ಕಣವಿಯವರ 'ಜಾನಪದ ಗೀತೆಗಳಲ್ಲಿ ನಾಗಪಂಚಮಿ', ಡಾ. ಚಿದಾನಂದ ಮೂರ್ತಿಯವರ 'ಜೋಕುಮಾರ', ದೇವಂಗಿ ಟಿ. ಚಂದ್ರಶೇಖರ ಅವರ ಹಾಗೂ ಡಾ. ಹಾ. ಮಾ. ನಾಯಕರ ಅಂಟಿಕೆ ಪಂಟಿಕೆ ಸಂಪ್ರದಾಯವನ್ನು ಕುರಿತ ಲೇಖನಗಳು, ಪ್ರೊ. ದೆ. ಜ. ಗೌ ಅವರ 'ಊರ ಹೆಸರುಗಳು', ಮಿರ್ಜಿಯವರ 'ಜನಪದ ಕಥೆಗಳು', ಸಿಂಪಿಯವರ 'ಲಾವಣಿ ಸಾಹಿತ್ಯ', ಡಾ. ಜಿ. ವರದರಾಜರಾಯರ 'ಕನ್ನಡ ಕವಿಗಳ ಮೇಲೆ ಜನಪದ ಸಾಹಿತ್ಯದ ಪ್ರಭಾವ', ಜೀಶಂಪ ಅವರ 'ಹಳ್ಳಿಯ ಬದುಕಿನಲ್ಲಿ ವಿಜಯದಶಮಿ', 'ಜನಪದ ಜೀವನದಲ್ಲಿ ದೀವಳಿಗೆ', 'ತೌರೂರ ಯುಗಾದಿ', 'ಇವು ಕೇವಲ ದಂತಕಥೆಗಳೆ!', 'ಗ್ರಾಮಾಂತರ ಗಾದೆಗಳು', 'ಕಂಸಾಳೆಯ ಸಿರಿಯ ದೇವರ ಗುಡ್ಡರು', 'ಅಪೂರ್ವ ಜನಪದ ಕಲೆ ಕರಪಾಲ ಮೇಳ', 'ತಮಿಳುನಾಡಿನ ಜನಪದ ಕಲೆಗಳು', 'ಜನಪದ ಸಾಹಿತ್ಯ ಮತ್ತು ಕಲೆಗಳ ಸಂರಕ್ಷಣೆ'* ಪರಮೇಶ್ವರಪ್ಪನವರ 'ಜನಪದ ಕಲೆ', ಜಿ. ಆರ್. ಪಾಂಡೇಶ್ವರ ಅವರ 'ನಮ್ಮ ನಾಡಿನ ಜಾನಪದ ನೃತ್ಯ ಸೌಂದರ್ಯ', 'ಉತ್ತರ ಕನ್ನಡ ಯಕ್ಷಗಾನ ಮೇಳಗಳು', ಮರಿದುಂಬಿಯವರ 'ಕೆಲವು ದಂತಕಥೆಗಳು', ನಾ. ಶ್ರೀ. ರಾಜಪುರೋಹಿತರ 'ಪುರಾಣಗಳು ಮತ್ತು ದಂತಕಥೆಗಳು', ಬಿ. ರಾಮಚಂದ್ರರಾಯರ 'ಕರ್ನಾಟಕಾಂಧ್ರ ಯಕ್ಷಗಾನಗಳು', ಎಂ. ಆರ್. ಲಕ್ಷ್ಮಮ್ಮನವರ 'ಕೊಂತೆಮ್ಮನ ಪದಗಳು', ತೀನಂಶ್ರೀ ಅವರ 'ಮಕ್ಕಳಿಗೆ ಹೇಳುವ ಕಥೆಗಳು'––ಹೀಗೆ ಸುಮಾರು ಇನ್ನೂರಕ್ಕೂ ಹೆಚ್ಚು ಲೇಖನಗಳು ನಾಡಿನ ನಾನಾ ಸಂಶೋಧಕರಿಂದ ರಚಿತವಾಗಿ ಹಲವು ಪತ್ರಿಕೆಗಳಲ್ಲಿ ಚೆದುರಿಹೋಗಿವೆ. ಇವುಗಳನ್ನೆಲ್ಲ ಒಂದೆಡೆ ಕಲೆಹಾಕಿ ಪ್ರಕಟಿಸುವುದರ ಮೂಲಕ ಜಾನಪದ ವಿದ್ಯಾರ್ಥಿ ಹೆಚ್ಚು ಪ್ರಯೋಜನವನ್ನು ಪಡೆದುಕೊಳ್ಳುವಂತೆ ಮಾಡುವುದು ಅತ್ಯಗತ್ಯ.

ಕನ್ನಡ ವಿಶ್ವಕೋಶ ಮೈಸೂರು ವಿಶ್ವವಿದ್ಯಾನಿಲಯದ ವಶಕ್ಕೆ ಬಂದಮೇಲೆ ಅನೇಕ ಹೊಸ ವಿಷಯುಗಳಿಗೆ ಉಪಸಮಿತಿಗಳನ್ನು ರಚಿಸಲಾಯಿತು. ಜಾನಪದ ಉಪಸಮಿತಿಯೊಂದು ಡಾ. ಹಾ. ಮಾ. ನಾಯಕರ ನೇತೃತ್ವದಲ್ಲಿ ರಚಿತವಾಗಿ ಆ ವಿಷಯಕ್ಕೆ ಸಂಬಂಧಿಸಿದ ಸಮಗ್ರ ವಿಷಯಗಳನ್ನೂ ಕುರಿತು ಪಟ್ಟಿಯೊಂದನ್ನು ತಯಾರಿಸಿದ್ದಾರೆ. ನಾಡಿನ ಜಾನಪದ ವಿದ್ವಾಂಸರೆಲ್ಲರೂ ಅನೇಕ ಜಾನಪದ ವಿಷಯುಗಳನ್ನು ಕುರಿತು ಲೇಖನ

*ಈ ಲೇಖನಗಳು ಇತ್ತೀಚೆಗೆ 'ಜನಪದ ಸಾಹಿತ್ಯ ಸಮೀಕ್ಷೆ'ಯಲ್ಲಿ ಸಂಚಯುಗೊಂಡಿವೆ.

ಗಳನ್ನು ಬರೆಯುವ ಅವಕಾಶ ಕಲ್ಪಿತವಾಗಿ ಕನ್ನಡ ವಿಶ್ವಕೋಶದಲ್ಲಿ 'ಜಾನಪದ'ವೂ ಒಂದು ಪ್ರಮುಖ ಸ್ಥಾನವನ್ನು ಪಡೆದುಕೊಂಡುದರ ಜೊತೆಗೆ, ಕನ್ನಡದಲ್ಲಿ ಜಾನಪದ ಅಧ್ಯಯನದ ಕ್ರಮಬದ್ಧವಾದ ಮೊದಲ ಹೆಜ್ಜೆ ಇದೆನ್ನಬಹುದು. ವಿಶ್ವದ ಜಾನಪದ ವಿದ್ವಾಂಸರ ಅನೇಕ ಸಿದ್ಧಾಂತಗಳ ಜೊತೆಗೆ, ವಿಶ್ವದ ಜಾನಪದ, ಕರ್ನಾಟಕದ ಜಾನಪದದ ಸಕ್ರಮ ಪರಿಚಯ ಒದುಗುವಂತೆ ವಿಷಯವನ್ನು ಅಳವಡಿಸಲಾಗಿದೆ. ಹಿಂದಿಯನ್ನುಳಿದು ಬಹುಶಃ ಭಾರತದ ಇನ್ನಾವ ಭಾಷೆಯಲ್ಲೂ ಜಾನಪದ ಈ ವ್ಯಾಪ್ತಿಯಲ್ಲಿ ವಿಶ್ವಕೋಶದಲ್ಲಿ ಸ್ಥಾನವನ್ನು ಪಡೆದುಕೊಂಡಿರಲಾರದು. ಮುಂದೆ ಜಾನಪದ ವಿಶ್ವಕೋಶವೊಂದು ಕನ್ನಡದಲ್ಲಿ ರಚಿತವಾಗುವ ಸೌಭಾಗ್ಯವೂ ಒದಗುವ ದಿನಗಳನ್ನು ನಿರೀಕ್ಷಿಸಲು ಇದು ಉತ್ತಮ ಆರಂಭವಾಗಿದೆ.

ವಿಚಾರ ವಿಮರ್ಶೆ

ಜಾನಪದ ಸಂಗ್ರಹ, ಸಂಪಾದನೆ, ಪ್ರಕಟಣೆಗಳು ಒಂದು ಕಡೆ ಸಾಗಿದಂತೆ ಅದರ ವಿಶ್ಲೇಷಣೆ, ವಿವೇಚನೆಗಳನ್ನು ನಾನಾ ಮುಖಗಳಲ್ಲಿ ನಡೆಸಿ ಜಾನಪದದ ಹಿರಿಮೆಗರಿಮೆಗಳನ್ನು ಸ್ಥಾಪಿಸುವುದರಲ್ಲಿ ಸ್ತುತ್ಯವಾದ ಕಾರ್ಯ ನಮ್ಮಲ್ಲಿ ನಡೆದಿದೆ. ಸ್ವತಃ ಸಂಗ್ರಾಹಕರಂತೆಯೇ ಸಾಹಿತಿಗಳೂ, ಪ್ರಸಿದ್ಧ ವಿದ್ವಾಂಸರೂ ಜನಪದ ಸಾಹಿತ್ಯದ ಸತ್ವವನ್ನು ಬಹಳ ಹಿಂದೆಯೇ ಮನಗಂಡು ಅದರ ಸೌಂದರ್ಯದ ನೆಲೆಬೆಲೆಗಳನ್ನು ಮನೋಜ್ಞವಾಗಿ ಬಿತ್ತರಿಸಿದರು. ಆ ಸಾಹಿತ್ಯದ ಸಂರಕ್ಷಣೆಯ ಅಗತ್ಯವನ್ನು ಒತ್ತಿ ಹೇಳಿದರು. ಮಾಸ್ತಿಯವರು, ಮಧುರ ಚೆನ್ನರು, ಬಿ. ಎಂ. ಶ್ರೀಯವರು, ಬೇಂದ್ರೆಯವರು ಈ ಬಗ್ಗೆ ನವೋದಯ ಕಾಲದಲ್ಲಿ ಆಡಿರುವ ಮಾತುಗಳು ಮನನೀಯವಾಗಿವೆ. 'ಜಾನಪದ'ವನ್ನು ಆಧರಿಸಿ ನಮ್ಮ ಸಂಸ್ಕೃತಿಯ ಜಿಜ್ಞಾಸೆ ನಡೆಸಿದ ದೇವುಡು ಅವರ 'ಕರ್ನಾಟಕ ಸಂಸ್ಕೃತಿ' ಒಂದು ಪ್ರಶಂಸಾರ್ಹ ಕೃತಿಯಾಗಿದೆ.

ಕಳೆದ ಇಪ್ಪತ್ತೈದು ವರ್ಷಗಳಲ್ಲಿ 'ಜಾನಪದ ವಿಚಾರ ವಿಮರ್ಶೆ ಸಾಕಷ್ಟು ಪ್ರಮಾಣದಲ್ಲಿ ನಡೆಯುತ್ತ ಬಂದರೂ ಅದರ ವ್ಯಾಪ್ತಿ ಕೇವಲ ಸಾಹಿತ್ಯಕ್ಕೆ, ಹೆಚ್ಚಾಗಿ ಗೀತಸಾಹಿತ್ಯಕ್ಕೇ ಮಿಾಸಲಾಗಿತ್ತು ಎಂಬುದನ್ನು ಮರೆಯಬಾರದು. ಈ ಬಗೆಯ ವಿಮರ್ಶೆಯಲ್ಲಿ ರಸದೃಷ್ಟಿಯೇ ಪ್ರಧಾನವಾಗಿದ್ದರೂ ಕೆಲವು ಕಡೆಯಾದರೂ ಶಾಸ್ತ್ರದೃಷ್ಟಿ ಕಂಡುಬರದಿರದು. ಒಟ್ಟಿನಲ್ಲಿ ನಮ್ಮ ಜಾನಪದ ವಿಚಾರ ವಿಮರ್ಶೆ ನಡೆದುಬಂದ ದಾರಿಯನ್ನು ನಾಲ್ಕು ಭಾಗಗಳಾಗಿ ವಿಂಗಡಿಸಿಕೊಳ್ಳಬಹುದು—

(೧) ಜಾನಪದದ ನಾನಾ ಮುಖಗಳನ್ನು ಕುರಿತ ಕೃತಿಗಳು
(೨) ಜಾನಪದದ ಹಲವು ವಿಷಯಗಳನ್ನು ಆಧರಿಸಿದ ಬಿಡಿ ಲೇಖನಗಳು
(೩) ಗ್ರಂಥಗಳ ಪ್ರಸ್ತಾವನೆ ಹಾಗೂ ಮುನ್ನುಡಿಗಳು
(೪) ಜಾನಪದ ಕೃತಿಗಳ ಉತ್ತಮ ವಿಮರ್ಶೆಗಳು

ಪ್ರಸಿದ್ಧ ಸಾಹಿತಿ ಹಾಗೂ ಜಾನಪದ ವಿದ್ವಾಂಸರಾದ ಗೊರೂರರ 'ಹಳ್ಳಿಯ ಬಾಳು' ೧೯೪೩ರಲ್ಲಿ ಪ್ರಕಟವಾಗಿ ಜನಪದ ಸಾಹಿತ್ಯದ ಅಧ್ಯಯನಕ್ಕೆ ನಾಂದಿಯನ್ನು ಹಾಡಿತು. ಜನಪದ ಸಾಹಿತ್ಯ, ರೈತನ ಬದುಕಿನೊಡನೆ ಅದರ ನಿಕಟ ಸಂಬಂಧ, ಆ ಸಾಹಿತ್ಯ ಬೆಳಗುವ ಸಂಸ್ಕೃತಿ, ಸೌಂದರ್ಯದ ನಾನಾ ಮುಖಗಳು ಹೀಗೆ ವಿಷಯದ ಹರಹನ್ನು ಪಡೆದ ಶ್ರೀ ಗೊರೂರ ಕೃತಿ ಜನಪದ ಸಾಹಿತ್ಯ ಕ್ಷೇತ್ರದಲ್ಲಿ ಅವರ ಆಳವಾದ ಅನುಭವವನ್ನು ವ್ಯಕ್ತಪಡಿಸುವುದಲ್ಲದೆ, ಅವರು ಮಾತ್ರ ಸಮರ್ಥವಾಗಿ ಚಿತ್ರಿಸಬಲ್ಲ ಗ್ರಾಮಸಂಸ್ಕೃತಿಯ ಹೆಚ್ಚುಗಾರಿಕೆಗೂ ಉತ್ತಮ ನಿದರ್ಶನವಾಗಿದೆ. ತಮ್ಮ ಈ ಕೃತಿಗೆ ಅಪಾರವಾದ ಮೂಲ ಸಾಹಿತ್ಯವನ್ನೂ, ಗಾದೆಗಳನ್ನು ಶ್ರೀ ಗೊರೂರು ಬಳಸಿಕೊಂಡು ಆಕರ್ಷಕ ರೀತಿಯಲ್ಲಿ ತಮ್ಮ ಪ್ರಬಂಧವನ್ನು ಬೆಳಸಿದ್ದಾರೆ.

"ನಮ್ಮ ರೈತನ ಬಾಳನ್ನು ಬೆಳಗುವ ಸಾಹಿತ್ಯ ವಿದ್ಯೆ ಸಂಸ್ಕೃತಿ ಎಲ್ಲಾ ಇದೇಯೆ. ಇದೇ ಅವನ ಸಂಸ್ಕೃತಿಯ ಮೂಲ. ರೈತ ಈ ಸಾಹಿತ್ಯದಲ್ಲಿ ತನ್ನ ಬಾಳಿನ ಬಗೆಬಗೆಯ ಅವಸ್ಥೆಗಳನ್ನು ಹಾಡಿಕೊಂಡಿದ್ದಾನೆ. ಮಾತುಗಳು ಸೂಕ್ಷ್ಮವಾದರೂ ಸ್ಪಷ್ಟವಾಗಿವೆ. ಹೇಳಬೇಕಾದ ಭಾವಗಳೆಲ್ಲಾ ಆ ಮಾತುಗಳಲ್ಲಿ ಅಡಕವಾಗಿವೆ"—ಹೀಗೆ ಜನಪದ ಸಾಹಿತ್ಯದ ಬಗ್ಗೆ ಅನುಭವಪೂರ್ಣ ನುಡಿಗಳನ್ನು ಶ್ರೀ ಗೊರೂರರು ತಮ್ಮ ಕೃತಿಯ ಉದ್ದಕ್ಕೂ ಆಡಿ ಆ ಸಾಹಿತ್ಯದ ಹಿರಿಮೆಯನ್ನು ಎತ್ತಿ ಹಿಡಿದಿದ್ದಾರೆ.

೧೯೫೪ರಲ್ಲಿ ಪ್ರಕಟವಾದ ಸಿಂಪಿಯವರ 'ಗರತಿಯ ಬಾಳು' ಹಲವು ಸಾಹಿತ್ಯದ ಆಧಾರದ ಮೇಲೆ ಕನ್ನಡನಾಡಿನ ಹೆಣ್ಣುಮಕ್ಕಳ ದಿವ್ಯ ಸಂಸ್ಕೃತಿಯನ್ನು ಸ್ಥಾಪಿಸುವ ಒಂದು ಸುಂದರ ರಸವಿವೇಚನೆ. ಇದರಲ್ಲಿ ವಿಶೇಷವಾಗಿ ಸ್ತ್ರೀಯ ಅಂತರಂಗದ ಸಾಹಿತ್ಯವಾದ ಜನಪದ ಗೀತೆಗಳನ್ನೇ ಶ್ರೀ ಸಿಂಪಿಯವರು ಬಳಸಿಕೊಂಡಿರುವುದು ಹೆಚ್ಚು ಉಚಿತವಾಗಿದೆ. ಸ್ತ್ರೀಯ ತ್ಯಾಗ, ಭಕ್ತಿ, ಶೀಲ, ಸಂಯಮ, ಪ್ರೀತಿ, ಪ್ರೇಮ ಮುಂತಾದ ಉದಾತ್ತ ಗುಣಗಳನ್ನು ಚಿತ್ರಿಸುವ ತ್ರಿಪದಿಗಳೂ, ಕೆರೆಗೆ ಹಾರ ಮುಂತಾದ ಮನೋಜ್ಞ ಕಥನಗೀತೆಗಳೂ ಈ ಕೃತಿಯಲ್ಲಿ ಹೇರಳವಾಗಿ ಉದ್ಧರಿಸಲ್ಪಟ್ಟಿವೆ.

೧೯೫೭ರಲ್ಲಿ ಪ್ರಕಟವಾದ ಮಾಸ್ತಿಯವರ 'ಕರ್ಣಾಟಕದ ಜನಪದ ಸಾಹಿತ್ಯ' ಈ ಸಾಲಿನಲ್ಲಿ ಮತ್ತೊಂದು ಶ್ರೇಷ್ಠ ಕೃತಿ. ಮಾಸ್ತಿಯವರು ಗರತಿಯ ಹಾಡು, ಜಯಕರ್ನಾಟಕ ಮುಂತಾದ ಮೂಲಗಳಿಂದಲೂ, ಹೊಸ ಸಂಗ್ರಹದಿಂದಲೂ ಸಾಹಿತ್ಯವನ್ನು ಆಯ್ದು ಒಂದು ಉತ್ತಮ ಪ್ರಬಂಧವನ್ನು ರಚಿಸಿದ್ದಾರೆ. ಜನಪದ ಸಾಹಿತ್ಯದ ಬಗ್ಗೆ ಅಪಾರ ಆಸಕ್ತಿಯನ್ನು ತುಂಬಿಕೊಂಡ ಶ್ರೀಯುತರು ಆ ಸಾಹಿತ್ಯದ ಶ್ರೇಷ್ಠತೆಯನ್ನು ತಮ್ಮದೇ ಆದ ಸರಳವೂ, ನೇರವೂ ಆತ್ಮೀಯವೂ ಆದ ಶೈಲಿಯಲ್ಲಿ ನಿರೂಪಿಸಿಕೊಂಡು ಹೋಗಿದ್ದಾರೆ.

'ಅದು ಜನತೆಯ ಸಹಜವಾದ ನುಡಿ; ಜನದ ಕ್ಷೇಮವನ್ನು ಬಯಸುವವರೆಲ್ಲ ಈ ಕವಿತೆಯನ್ನು ದೃಷ್ಟಿಯಿಟ್ಟು ನೋಡಬೇಕು, ಮನಸ್ಸು ಕೊಟ್ಟು ತಿಳಿಯಬೇಕು, ಎಂಬ ಬಿಚ್ಚು ಮನಸ್ಸಿನ ನುಡಿಗಳು ಜನಪದ ಸಾಹಿತ್ಯದ ಬಗೆಗೆ ಅವರ ಅಪಾರ ಅಭಿಮಾನವನ್ನು ಸಾರುತ್ತವೆ.

ಜನತೆಯ ಕಾವ್ಯ ಯಾವುದು? ಅದರ ಸ್ವಾರಸ್ಯಗಳೇನು? ಅದರಲ್ಲಿ ಅಭಿವ್ಯಕ್ತ ವಾಗಿರುವ ನಮ್ಮ ಜನತೆಯ ಆಶೋತ್ತರಗಳೇನು ಎನ್ನುವುದನ್ನು ಉತ್ತಮ ನಿದರ್ಶನ ಗಳೊಡನೆ ಚರ್ಚಿಸುತ್ತ—

'ಈ ಸಾಹಿತ್ಯ ನಮ್ಮ ಜನದ ವಿನಯದ ಚಿತ್ರ, ನಮ್ಮ ನುಡಿಯ ಗೆಲವಿನ ಕಳ, ನಮ್ಮ ಹೊಸ ಕವಿತೆಯ ಪೈರಿಗೆ ರಸ'

ಎಂದು ಜನಪದ ಸಾಹಿತ್ಯದ ಮಹತ್ವವನ್ನು ಮುಕ್ತ ಕಂಠದಲ್ಲಿ ಮೆರೆಸಿದ್ದಾರೆ.

ಸಿಂಪಿ ಲಿಂಗಣ್ಣನವರ ಜನಪದ ಸಾಹಿತ್ಯಕ್ಕೆ ಮೀಸಲಾದ ಕೃತಿ 'ಜನಾಂಗದ ಜೀವಾಳ' ೧೯೬೦ರಲ್ಲಿ ಪ್ರಕಟವಾಯಿತು. ದೇವುಡು, ಗೊರೂರರು, ಮಾಸ್ತಿಯವ ರಂತೆಯೇ ಸಿಂಪಿಯವರು ಜನಪದ ಸಾಹಿತ್ಯದ ಹಿರಿಮೆಯನ್ನೂ, ವಸ್ತು ವೈವಿಧ್ಯವನ್ನೂ ಕುರಿತು ವಿವರವಾಗಿ ತಮ್ಮ ಕೃತಿಯಲ್ಲಿ ಚರ್ಚಿಸಿದ್ದಾರೆ. ಜನಪದ ಸಾಹಿತ್ಯ ಜನಾಂಗದ ಜೀವಾಳ, ಜನಪದ ಸಾಹಿತ್ಯ ಮತ್ತು ಅದರ ಸ್ಥಾನ, ಜನಪದ ಸಾಹಿತ್ಯದಲ್ಲಿ ಕಂಡು ಬರುವ ಜನಜೀವನ, ಹಳ್ಳಿಯ ಹಾಡುಗಳಲ್ಲಿ ದೇಶಾಭಿಮಾನ, ಜಾನಪದ ಜೀವನದಲ್ಲಿ ಹಾಸ್ಯ, ಒಡಗತೆಗಳ ಸ್ವಾರಸ್ಯ, ನಿತ್ಯಜೀವನದಲ್ಲಿ ಹಳ್ಳಿಯ ಹೆಣ್ಣುಮಕ್ಕಳ ಹಾಡುಗಳು, ಗರತಿಯ ಹಾಡು, ಮಕ್ಕಳನ್ನು ಆಡಿಸುವ ಹಾಡು, ಮದುವೆಯ ಹಾಡುಗಳು, ಜನಪದ ಸಾಹಿತ್ಯದಲ್ಲಿ ಅದ್ಭುತ ಕಥೆಗಳು, ಬಯಲಾಟದ ಪದಗಳು, ಲಾವಣಿ ಹಾಡುಗಳು, ಜನ ಪದ ಸಾಹಿತ್ಯದಲ್ಲಿ ಶಿವಾನುಭವ—ಹೀಗೆ ಜನಪದ ಸಾಹಿತ್ಯದ ಯಾವ ಪ್ರಮುಖ ಅಂಗವನ್ನೂ ಬಿಡದೆ ವಿಷಯ ವಿಶ್ಲೇಷಣೆ ಮಾಡಿಕೊಂಡು ಶ್ರೀ ಸಿಂಪಿಯವರು ಕನ್ನಡ ಜನಪದ ಸಾಹಿತ್ಯದ ವಿಸ್ತಾರ, ವೈವಿಧ್ಯ ಹಾಗೂ ಅದರ ಸಂದೇಶಗಳನ್ನು ಸಾರವತ್ತಾಗಿ ಬಣ್ಣಿಸಿದ್ದಾರೆ. ಒಗಟುಗಳು, ಕತೆಗಳು, ಲಾವಣಿಗಳು, ಮಕ್ಕಳ ಆಟಗಳು ಮುಂತಾದ ಹೊಸ ಪ್ರಕಾರಗಳ ಮೇಲೂ ತಮ್ಮ ದೃಷ್ಟಿಯನ್ನು ಹರಿಸಿರುವುದು ಪ್ರಶಂಸನೀಯ. ಜನಪದ ಸಾಹಿತ್ಯದ ಶಾಸ್ತ್ರೀಯವಾದ ಅಭ್ಯಾಸಕ್ರಮವನ್ನೂ ಈ ಕೃತಿಯಲ್ಲಿ ನಾವು ಕಾಣಬಹುದು.

ಡಾ. ಗದ್ದಿಗೆಮಠ ಅವರ ಮಹಾಪ್ರಬಂಧ 'ಕನ್ನಡ ಜನಪದ ಗೀತೆಗಳು' ೧೯೬೩ ರಲ್ಲಿ ಪ್ರಕಟವಾಯಿತು. ಕನ್ನಡ ಜನಪದ ಸಾಹಿತ್ಯದ ವಿಶ್ಲೇಷಣೆಯನ್ನು ಡಾ. ಗದ್ದಿಗೆಮಠ ಅವರು ತಮ್ಮ ಪ್ರಬಂಧದಲ್ಲಿ ವ್ಯಾಪಕವಾಗಿ ನಡೆಸಿದ್ದಾರೆ. ಶ್ರೀಯುತರಿಗೆ ಪಿ.ಎಚ್‌ಡಿ. ಪ್ರಶಸ್ತಿಯನ್ನು ತಂದುಕೊಟ್ಟ ಈ ನಿಬಂಧ ಸಹಜವಾಗಿ ಆಳವಾದ ಅಭ್ಯಾಸ, ಅಪಾರ ಶ್ರಮ, ಪ್ರಖರವಾದ ಪಾಂಡಿತ್ಯಗಳ ಒಂದು ಉತ್ತಮ ಫಲ. ಕನ್ನಡ ಜನಪದ ಸಾಹಿತ್ಯದ ಉನ್ನತಿಯನ್ನು ಸ್ಥಾಪಿಸುವುದರಲ್ಲಿ ಈ ಕೃತಿ ಮಹತ್ವದ ಪಾತ್ರವನ್ನೂ ವಹಿಸುತ್ತದೆ.

ದೇವುಡು ಅವರ ಅನಂತರ ಮೊದಲಬಾರಿಗೆ ಪಾಶ್ಚಾತ್ಯದೇಶಗಳ ಜಾನಪದ ಸಂಶೋಧನೆಯತ್ತ ಕಣ್ಣು ಹರಿಸಿದ ಕೀರ್ತಿ ಡಾ. ಗದ್ದಿಗೆಮಠ ಅವರದೇ. ಆದರೂ ಸಮಗ್ರ 'ಜಾನಪದ' ಕಲ್ಪನೆ ಸ್ಪಷ್ಟವಾಗಿ ಇಂಥ ಒಂದು ಪ್ರಬಂಧದಲ್ಲೂ ಬರದಿರುವುದು

ಆಶ್ಚರ್ಯಕರ. ಡಾ. ಗದ್ಗೀಮಠ ಅವರು 'ಜಾನಪದ ಸಾಹಿತ್ಯ' ಎಂಬ ಮಾತಿಗೆ Folklore ಪದವನ್ನು ಸಂವಾದಿಯೆಂದು ಭಾವಿಸಿದಂತೆ ತೋರುತ್ತದೆ.* ಜಿ. ಎಲ್. ಗೊಮ್ಮೆಯವರ 'Hand book of folklore' ನೋಡಿಯೂ, ಅನೇಕ ವಿಶ್ವಕೋಶಗಳ 'ಜಾನಪದ' ವಿಷಯವನ್ನು ಪರಿಲಕ್ಷಿಸಿಯೂ Folklore ನ ವ್ಯಾಪ್ತಿಯನ್ನು ಸ್ಪಷ್ಟಪಡಿಸಿಲ್ಲ. ತೀರ ಅಸಮರ್ಪಕವಾದ ಪ್ರಸ್ತಾವನೆಯ ಪುಟಗಳನ್ನು ಧಾಟಿ ಮುಂದೆ ಹೋದರೆ ಉತ್ತರ ಕರ್ನಾಟಕದ ಜನಪದ ಗೀತೆಗಳ ದೊಡ್ಡ ಸಾಗರವನ್ನೇ ನಾವು ಎದುರುಗೊಳ್ಳುತ್ತೇವೆ. ಅಪಾರ ಸಾಹಿತ್ಯವನ್ನು ಸಂಗ್ರಹಿಸಿರುವ ಡಾ. ಗದ್ಗೀಮಠ ಅವರು ಅದಷ್ಟು ವಿವರವಾಗಿ 'ಸ್ತುತಿಪದಗಳು,' 'ಹಳ್ಳಿಯ ಕುಣಿತಗಳು,' 'ಮಕ್ಕಳ ಆಟದ ಹಾಡುಗಳು' 'ಹಾಸ್ಯದ ಹಾಡುಗಳು' 'ಸುಗ್ಗಿಯ ಸಂಪ್ರದಾಯ' 'ಹಳ್ಳಿಯ ಹಬ್ಬಗಳು' 'ಹಂತಿಯ ಹಾಡುಗಳು' ಹೀಗಿ ಹಲವು ವೈವಿಧ್ಯವಾದ ಕುತೂಲಜನಕ ಪ್ರಪಂಚವೊಂದನ್ನು ಪರಿಚಯ ಮಾಡಿಕೊಡುತ್ತಾರೆ. ಕೆಲವು ಸಂದಿಗ್ಧ ವಿಷಯಗಳಿಗೆ ವಿವರಣೆಗಳನ್ನು ನೀಡುವುದರಲ್ಲಿ, ಕೆಲವು ಸಂಪ್ರದಾಯಗಳ ಹಿನ್ನೆಲೆಗಳನ್ನು ಚರ್ಚಿಸುವುದರಲ್ಲಿ ಶ್ರೀಯುತರ ಸೂಕ್ಷ್ಮ ವಿಮರ್ಶಾಶಕ್ತಿಯೊಡನೆ, ಸಂಶೋಧನಾ ದೃಷ್ಟಿಯನ್ನೂ ಕಾಣಬಹುದು. ಜನಜೀವನವನ್ನು ಹತ್ತಿರದಿಂದ ಕಂಡು, ಅದರ ರಸಪಾನವನ್ನು ಉಂಡು ರಕ್ತಗತಗೊಳಿಸಿಕೊಂಡು ನಿರರ್ಗಳವಾಗಿ ಅನೇಕ ಅಪೂರ್ವ ವಿಷಯಗಳನ್ನು ಅವರು ಹೇಳುತ್ತಾ ಹೋಗಿದ್ದಾರೆ. ಡಾ. ಗದ್ಗೀಮಠರ ಪ್ರಬಂಧವನ್ನು ಓದುವುದು ಉತ್ತರ ಕರ್ನಾಟಕದ ಜನಪದ ಸಾಹಿತ್ಯ ಪ್ರಪಂಚದ ರಸಯಾತ್ರೆಯನ್ನು ಕೈಗೊಂಡಂತೆಯೇ ಸರಿ.

೧೯೬೭ರಲ್ಲಿ ಡಾ. ಶಿವರಾಮ ಕಾರಂತರ 'ಜಾನಪದ ಗೀತೆಗಳು' ಪ್ರಕಟವಾಗಿ ಜನಪದ ಗೀತೆಗಳ ಬಗ್ಗೆ ಇನ್ನೂ ವಿಶಿಷ್ಟವಾದ ವಿವೇಚನೆಯನ್ನು ಒದಗಿಸಲು ಸಹಾಯಕವಾಯಿತು. ಡಾ. ಕಾರಂತರು ತಮ್ಮದೇ ಆದ ವಿಚಾರಸರಣಿಯಲ್ಲಿ ಜನಪದ ಗೀತೆಗಳ ವಸ್ತು, ಪ್ರಕಾರಗಳನ್ನು ಪ್ರಸ್ತಾಪಿಸುತ್ತ ಹೊರಟು 'ಜಾನಪದ' ಎಂದರೇನು, 'ದೇಸಿ' ಹಾಗೂ 'ಮಾರ್ಗ'ಗಳ ನಡುವಿನ ಅಂತರವೇನು, ಜಾನಪದ ವೈಸಿಷ್ಟ್ಯವೇನು ಎಂದೆಲ್ಲ ವಿವೇಚಿಸಿ ಜನಪದ ಗೀತ ಸೃಷ್ಟಿಯ ಅನೇಕ ಹಿನ್ನೆಲೆಗಳನ್ನು ಚರ್ಚಿಸುತ್ತಾರೆ. ಜನಪದ ಗೀತೆಗಳನ್ನು ಅನೇಕ ಒರೆಗಲ್ಲಿಗೆ ಹಚ್ಚಿ ನೋಡುತ್ತಾರೆ; ವಿಶಿಷ್ಟವಾದ ಅರ್ಥವನ್ನೂ ಹಾರೈಸುತ್ತಾರೆ. ಆದರೆ ಪಾಡ್ದನಗಳು, ಕಥಾನಕಗಳು, ಕೆಲಸದ ಹಾಡುಗಳು, ಭಾವಗೀತೆಗಳು, ಮುಂತಾದ ವಿಭಜನೆಯನ್ನು ಕಂಡರೂ ವಿಶೇಷವಾಗಿ ಪಶ್ಚಿಮ ಕರಾವಳಿಯ ಜನಪದ ಸಾಹಿತ್ಯವನ್ನೇ ಅವರು ಲಕ್ಷಿಸಿದ್ದಾರೆ. ಸಮಗ್ರ ಕರ್ನಾಟಕದ ಪ್ರಕಟಿತ ಜಾನಪದ ಕೃತಿಗಳನ್ನು ಪರಿಶೀಲಿಸಿದ್ದರೆ ಅವರ ಪ್ರಬಂಧಕ್ಕೆ ಹೆಚ್ಚು ಪರಿಪೂರ್ಣತೆ ಬರುತ್ತಿತ್ತು. ಅಲ್ಲೊಮ್ಮೆ ಇಲ್ಲೊಮ್ಮೆ ಒಂದೊಂದು ನಿದರ್ಶನಗಳನ್ನು

---

* ಡಾ. ಗದ್ಗೀಮಠ: ಕನ್ನಡ ಜನಪದ ಗೀತೆಗಳು ಪುಟ: iv

ಕಂಡರೂ ಕರ್ನಾಟಕದ ಜನಪದ ಗೀತೆಗಳ ಒಂದು ಸ್ಥೂಲ ಕಲ್ಪನೆಯೂ ಇಲ್ಲಿ ಮೂಡದಂತಾಗಿಬಿಡುತ್ತದೆ. 'ಜಾನಪದ ಗೀತೆಗಳು' ಎಂಬಷ್ಟೇ ಅರ್ಥದಲ್ಲಿ ಡಾ. ಕಾರಂತರು ತಮ್ಮ ಪ್ರಬಂಧವನ್ನು ಸೀಮಿತಗೊಳಿಸಿಕೊಂಡಿರುವುದರಿಂದ, ಅದರ ಕೆಲವು ವೈಲಕ್ಷಣ್ಯಗಳನ್ನು ಚರ್ಚಿಸಿ ವಿಷಯವನ್ನು ಕೈಬಿಡುತ್ತಾರೆ. ಬಹುಶಃ ಕನ್ನಡ ಜನಪದ ಗೀತೆಗಳ ವಿಶ್ಲೇಷಣೆ ಅವರ ದೃಷ್ಟಿಯಲ್ಲವಾದ್ದರಿಂದ ಡಾ. ಕಾರಂತರು ವಿಷಯವನ್ನೂ ಹೀಗೆ ಸೀಮಿತಗೊಳಿಸಿಕೊಂಡಿರಬಹುದು.

'ನಮ್ಮ ಜನಪದ ಸಾಹಿತ್ಯ' ಹಾಗೂ 'ಜನಪದ ಸಾಹಿತ್ಯ ಸಮೀಕ್ಷೆ' ೧೯೬೭ರಲ್ಲಿ ಪ್ರಕಟವಾದ ಜೀಶಂಪ ಅವರ ಎರಡು ಕೃತಿಗಳು. 'ನಮ್ಮ ಜನಪದ ಸಾಹಿತ್ಯ' ಸಾಮಾನ್ಯ ಜನತೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ರಚಿಸಿದ ಒಂದು ಕೃತಿ. ಜನಪದ ಸಾಹಿತ್ಯ ಯಾರದೋ ಅವರಿಗೇ ಅರ್ಪಿಸುವ ಒಂದು ವಿನೂತನ ರಚನೆ. ಒಂದು ಹೊಸ ಪ್ರಯೋಗ. ಜನಪದ ಸಾಹಿತ್ಯವನ್ನು ನಾವು ಏಕೆ ರಕ್ಷಿಸಿಕೊಡಬೇಕು, ಅದರ ಮೌಲ್ಯವೇನು, ಸಂದೇಶವೇನು ಎಂದು ಸಾರುವ ಕಿರುಹೊತ್ತಗೆ. ಕನ್ನಡ ಜನಪದ ಸಾಹಿತ್ಯದ ಎಲ್ಲ ಮುಖಗಳ ಪರಿಚಯವನ್ನು ಮಾಡಿಕೊಡುವ ಪ್ರಯತ್ನವಲ್ಲದಿದ್ದರೂ ಅದರ ಪ್ರಮುಖವಾದ ಅಂಗಗಳ ರಸಮೌಲ್ಯವನ್ನೇ ದೃಷ್ಟಿಯಲ್ಲಿಟ್ಟುಕೊಂಡು ಬರೆದ ಒಂದು ಪ್ರಬಂಧ. ಕನ್ನಡದಲ್ಲಿ ಪ್ರಕಟವಾದ ಬಹುಪಾಲು ಜನಪದಗೀತಸಂಗ್ರಗಳನ್ನು ಪರಿಲಕ್ಷಿಸಿ ಮಾಡಿಕೊಂಡಿರುವ ವಿಭಜನೆ ಇಲ್ಲಿ ಗಮನಾರ್ಹ. 'ಜನಪದ ಸಾಹಿತ್ಯ ಸಮೀಕ್ಷೆ' ನಿಜವಾದ 'Folklore' ಅರ್ಥದಲ್ಲಿ ಪ್ರಬಂಧಗಳನ್ನೊಳಗೊಂಡ ಒಂದು ಕೃತಿ. ಜಾನಪದದ ಅನೇಕ ಶಾಖೆಗಳ ದಾರಿಯಲ್ಲಿ ನಡೆದು ಅಲ್ಲಲ್ಲಿನ ಸಾಹಿತ್ಯದ ಸ್ವಾರಸ್ಯವನ್ನು ವಿವರಿಸುವುದೇ ಕೃತಿಯ ಮೂಲೋದ್ದೇಶ. ಎಂತಲೇ ಇಲ್ಲಿ ಕರಪಾಲ, ಕಂಸಾಳೆ ಮುಂತಾದ ಮೇಳಗಳ ಮೇಲೂ, ದಂತಕಥೆ, ಗಾದೆ, ಗೀತೆ ಮುಂತಾದ ಸಾಹಿತ್ಯಾಂಗಗಳ ಮೇಲೂ, ಹಬ್ಬ ಹರಿದಿನಗಳ ಮೇಲೂ ಕೆಲವು ಪ್ರಬಂಧಗಳನ್ನು ಕಾಣಬಹುದು. ಜನಪದ ಸಾಹಿತ್ಯ ಸಂಗ್ರಹಣೆಯಲ್ಲಿ ನಮ್ಮ ಹೊಣೆ, ಜನಪದ ಸಾಹಿತ್ಯ ಮತ್ತು ಕಲೆಗಳ ಸಂರಕ್ಷಣೆ ಎಂಬ ಎರಡು ಪ್ರಬಂಧಗಳಲ್ಲಿ 'ಜಾನಪದ'ದ ವಿವಿಧ ಮುಖಗಳನ್ನು ಪರಿಚಯಮಾಡಿ ಕರ್ನಾಟಕದಲ್ಲಿ ನಡೆದಿರುವ ಸಂಶೋಧನೆ, ಮತ್ತು ಮುಂದೆ ಅದರ ಸಂರಕ್ಷಣೆ ಎಂತು ಎಂಬ ಬಗ್ಗೆ ವಿವೇಚಿಸಲಾಗಿದೆ. ಈ ಕೃತಿಯನ್ನು ಕುರಿತು ತಮ್ಮ ಅಮೂಲ್ಯ ಮುನ್ನುಡಿಯಲ್ಲಿ ಪ್ರೊ ದೇ. ಜವರೇಗೌಡರು–

"ಜನಪದ ಸಾಹಿತ್ಯ ಸಮೀಕ್ಷೆ ಅವರ ಆಳವಾದ ಅಭ್ಯಾಸದ ವಿಶೇಷ ಪರಿಶ್ರಮದ ಪಕ್ವಾನುಭವದ ಸುಂದರ ಫಲ....ಇಲ್ಲಿಯ ಲೇಖನಗಳು ಲೇಖಕರ ಸೂಕ್ಷ್ಮ ಸಂವೇದನೆಗೂ ಸೌಂದರ್ಯ ಪ್ರಜ್ಞೆಗೂ ದ್ಯೋತಕವಾಗಿವೆ" ಎಂದಿದ್ದಾರೆ.

ಜೀಶಂಪ ಅವರ ಮತ್ತೊಂದು ಕೃತಿ 'ಕನ್ನಡ ಜನಪದ ಸಾಹಿತ್ಯದ ಸಾಹಸ ಯಾತ್ರಿ' ಜಾನಪದ ಸಂಶೋಧನೆಯ ಮೇಲೆ ಬೆಳಕು ಚೆಲ್ಲುವ ಮತ್ತೊಂದು ಕೃತಿ.

ಜನಪದ ಸಾಹಿತ್ಯವನ್ನು ಕುರಿತ ಗ್ರಂಥಗಳ ಸಂಖ್ಯೆ ನಮ್ಮಲ್ಲಿ ಹೇಳಿಕೊಳ್ಳು

ವಂತಿಲ್ಲದಿದ್ದರೂ ಆ ಕುರಿತ ಅಪಾರ ಸಂಖ್ಯೆಯ ಲೇಖನಗಳು ಆಗಾಗ ನಾಡಿನ ನಾನಾ ಪತ್ರಿಕೆಗಳಲ್ಲಿ ಪ್ರಕಟವಾಗುತ್ತ ಬಂದಿವೆ. ಸಾಹಿತ್ಯ ಸಮ್ಮೇಳನಗಳಲ್ಲಿ ಒಂದೆರಡು ಬಾರಿ ಮಾತ್ರ ಜನಪದ ಸಾಹಿತ್ಯ ಗೋಷ್ಠಿ ನಡೆದು ಮುಂದೆ ಆ ವಿಷಯಕ್ಕೆ ಸಂಬಂಧಿಸಿದಂತೆ ಹೆಚ್ಚು ಗಮನವನ್ನು ನೀಡದೆ, ಸಾಹಿತ್ಯ ಪರಿಷತ್ತು ಜನಪದ ಸಾಹಿತ್ಯದ ಬಗ್ಗೆ ಹೆಚ್ಚು ನಿರ್ಲಕ್ಷ್ಯವನ್ನೇ ಮೆರೆದಿದೆ. ಹೀಗಾಗಿ ಕೆಲವು ಪ್ರೌಢ ಲೇಖನಗಳು ಸೃಷ್ಟಿಯಾಗುವ ಅವಕಾಶಗಳು ಇಲ್ಲವಾದವು. ೧೯೬೩ರಲ್ಲಿ ಬೆಂಗಳೂರಿನ ಆಕಾಶವಾಣಿ ಕೇಂದ್ರದಲ್ಲಿ ಉನ್ನತ ಮಟ್ಟದ ಜನಪದ ಸಾಹಿತ್ಯ ಗೋಷ್ಠಿಯೊಂದು ನಡೆಯಿತು. ಡಾ. ಮಾಸ್ತಿ ಯವರ ಅಧ್ಯಕ್ಷತೆಯಲ್ಲಿ ನಡೆದ ಆ ಗೋಷ್ಠಿ ಅನೇಕ ದೃಷ್ಟಿಗಳಿಂದ ಗಣನೀಯವಾದುದು. ಜನಪದ ಸಾಹಿತ್ಯದಲ್ಲಿ ಕೆಲಸಮಾಡಿದ ಸಂಗ್ರಹಕರನ್ನು, ವಿದ್ವಾಂಸರನ್ನು ಒಂದೆಡೆ ಕಲೆಹಾಕುವ ಮೊದಲ ಪ್ರಯತ್ನ ಅಲ್ಲಿ ನಡೆಯಿತು. ಗೊರೂರು ರಾಮಸ್ವಾಮಿ ಅಯ್ಯಂಗಾರ್, ಬೇಟಗೇರಿ ಕೃಷ್ಣಶರ್ಮ, ತಲ್ಲೂರು ರಾಯನಗೌಡ ಪಾಟೀಲ, ಜೀ. ಶಂ. ಪರಮಶಿವಯ್ಯ, ಮುಂತಾದವರೆಲ್ಲ ಭಾಗವಹಿಸಿದ್ದ ವಿಚಾರಗೋಷ್ಠಿಯಲ್ಲಿ ಸಮಗ್ರ ಕರ್ನಾಟಕದ ಜನಪದ ಸಾಹಿತ್ಯದ ಪರಿಚಯಾತ್ಮಕ ಪ್ರಬಂಧಗಳನ್ನು ಆಯಾ ಪ್ರಾದೇಶಿಕ ಹಿನ್ನೆಲೆಯಲ್ಲಿ ಕೆಲವು ವಿದ್ವಾಂಸರು ಓದಿದರು. ಅಲ್ಲದೆ ಎಸ್. ವಿ. ರಂಗಣ್ಣ, ವಿ. ಸೀತಾರಾಮಯ್ಯ ಮುಂತಾದ ಹಿರಿಯ ವಿದ್ವಾಂಸರೂ ಭಾಗವಹಿಸಿದ್ದು ಜನಪದ ಸಾಹಿತ್ಯದ ವಿವಿಧ ಮುಖಗಳನ್ನು ಕುರಿತು ಮಾತನಾಡಿದರು. ಜನಪದ ಸಾಹಿತ್ಯದ ವಸ್ತು, ಜನಪದ ಕಲಾವಿದರ ವೇಷಭೂಷಣಗಳು, ಹೀಗೆ ಅನೇಕ ರೀತಿಯ ಉಪ ಗೋಷ್ಠಿಗಳು ನಡೆದು ಆ ಸಂಬಂಧವಾದ ಚರ್ಚೆ, ಭಾಷಣ, ಪ್ರಬಂಧವಾಚನಗಳು ನಡೆದವು. ದುರ್ದೈವದ ಸಂಗತಿಯೆಂದರೆ ಕ್ರಮಬದ್ಧವಾದ ಉಪಯುಕ್ತವಾದ ಒಂದು ಗೋಷ್ಠಿಯನ್ನು ನಡೆಸಿಯೂ ಅಲ್ಲಿ ಓದಲಾದ ಪ್ರಬಂಧಗಳನ್ನು ಬೆಳಕಿಗೆ ತರದೆ ಕೇವಲ ಕೆಲವು ನಿಮಿಷಗಳ ಪ್ರಸಾರದಲ್ಲಿಯೇ ಆಕಾಶವಾಣಿ ತೃಪ್ತಿಗೊಂಡಿತು. ಪುಸ್ತಕ ರೂಪದಲ್ಲಿ ಇಂಥ ಗೋಷ್ಠಿಯ ಪ್ರಬಂಧಗಳು ಒಂದೆಡೆ ದೊರೆಯದೆ ಹೋದರೆ ಸಾರಸ್ವತ ಪ್ರಪಂಚಕ್ಕೆ ದೊಡ್ಡ ನಷ್ಟವೇ ಆಗುತ್ತದೆ.

ಈ ನಿಟ್ಟಿನಲ್ಲಿ ಒಂದು ಉತ್ತಮ ಮೇಲ್ಪಂಕ್ತಿಯನ್ನು ಹಾಕಿಕೊಟ್ಟ ಮತ್ತೊಂದು ಯಶಸ್ವಿಯಾದ ಜನಪದ ಸಾಹಿತ್ಯ ಗೋಷ್ಠಿ ಮೈಸೂರಿನಲ್ಲಿ ೧೯೬೬ರಲ್ಲಿ ನಡೆಯಿತು. ಮೈಸೂರು ವಿಶ್ವವಿದ್ಯಾನಿಲಯದ ಸುವರ್ಣ ಮಹೋತ್ಸವದ ಅಂಗವಾಗಿ ಕನ್ನಡ ಅಧ್ಯಯನ ಸಂಸ್ಥೆಯ ನೇತೃತ್ವದಲ್ಲಿ ನಡೆದ ಕನ್ನಡ ಲೇಖಕರ ಸಮ್ಮೇಳನದ ಮೂರು ಸಾಹಿತ್ಯ ಗೋಷ್ಠಿಗಳಲ್ಲಿ ಅಗ್ರ ತಾಂಬೂಲ ಜನಪದ ಸಾಹಿತ್ಯ ಗೋಷ್ಠಿಗೆ ದೊರೆತದ್ದು ಪ್ರಶಂಸನೀಯ.

ಡಾ. ಹಾ. ಮಾ. ನಾಯಕ, ಸಿಂಪಿಲಿಂಗಣ್ಣ, ಮಿರ್ಜಿ ಅಣ್ಣಾರಾಯ, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಡಾ. ಜಿ. ವರದರಾಜರಾವ್ ಮುಂತಾದ ಗಣ್ಯ ವಿದ್ವಾಂಸರು ಭಾಗವಹಿಸಿದ್ದ ಈ ಗೋಷ್ಠಿಯ ಅಧ್ಯಕ್ಷತೆಯನ್ನು ಶ್ರೀ. ಶಿವರಾಮಕಾರಂತರು

ವಹಿಸಿದ್ದುದು ಉಚಿತವೇ ಆಗಿತ್ತು. ಮೊದಲಬಾರಿಗೆ ಜನಪದ ಸಾಹಿತ್ಯವನ್ನು ಕುರಿತ ವಿನೂತನ ವಿಚಾರಗಳು ಈ ವಿಚಾರ ಗೋಷ್ಠಿಯಲ್ಲಿ ಕಾಣಿಸಿಕೊಂಡವು. ಜನಪದ ಸಾಹಿತ್ಯದ ಸೀಮಿತಾರ್ಥದಿಂದ 'ಜಾನಪದ'ದ ಎತ್ತರದಲ್ಲಿ ವಿಷಯವನ್ನು ಆಧುನಿಕ ವಾಗಿ ವಿಶ್ಲೇಷಣೆ ಮಾಡಿದ ಈ ಮೊಟ್ಟಮೊದಲ ಗೋಷ್ಠಿಗೆ ಖಂಡಿತವಾಗಿ ಐತಿಹಾಸಿಕ ಮಹತ್ವವಿದೆ. 'ಜನಪದ ಸಾಹಿತ್ಯ ಮತ್ತು ಅದರ ಸ್ವರೂಪ' ಎಂಬ ವಿಷಯದ ಮೇಲೆ ಡಾ. ಹಾ. ಮಾ. ನಾಯಕರು ಓದಿದ ಪ್ರಬಂಧ ಅನೇಕರಿಗೆ ಆಶ್ಚರ್ಯವನ್ನು, ಜನಪದ ಸಾಹಿತ್ಯ ಸಂಗ್ರಹಕರಿಗೆ ಕುತೂಹಲವನ್ನು, ಜಾನಪದ ವಿದ್ವಾಂಸರಿಗೆ ಅಭಿಮಾನವನ್ನು ಮೂಡಿಸುವಷ್ಟು ಪ್ರಮುಖ ವಿಷಯಗಳನ್ನೊಳಗೊಂಡು ನಮ್ಮ ಜಾನಪದ ಅಧ್ಯಯನದ ಮೇಲೆ ಹೊಸಬೆಳಕನ್ನು ಚೆಲ್ಲುವ ಮಹತ್ವವನ್ನು ಪಡೆದುಕೊಂಡಿತು.

ಡಾ. ಹಾ. ಮಾ. ನಾಯಕರು 'ಜಾನಪದ'ವನ್ನು ಕುರಿತು ಅಧಿಕಾರಿ ವಾಣಿ ಯಿಂದ ಮಾತನಾಡಬಲ್ಲ ಭಾರತದ ಕೆಲವೇ ಮಂದಿ ವಿದ್ವಾಂಸರಲ್ಲಿ ಒಬ್ಬರಾಗಿದ್ದಾರೆ. ಅವರಷ್ಟು ಆಳವಾಗಿ, ಆಧುನಿಕ ಜಾನಪದದ ಅಧ್ಯಯನ ನಡೆಸಿದವರು ಕರ್ನಾಟಕದಲ್ಲಿ ಇನ್ನೊಬ್ಬರಿಲ್ಲ ಎಂದೇ ಹೇಳ ಬೇಕು. ಜನಪದ ಸಾಹಿತ್ಯದ ಸ್ವರೂಪವನ್ನು, ಜಾನಪದ ವಿಶಾಲ ಗರ್ಭದಲ್ಲಿ ಅದರ ಸ್ಥಾನವನ್ನು, 'ಜಾನಪದ'ದ ಸರಿಯಾದ ವಿವರಣೆಯನ್ನು ನೀಡಿ ಡಾ. ನಾಯಕರು ಆ ಬಗ್ಗೆ ವಿಶ್ವದ ವಿದ್ವಾಂಸರು ದೃಷ್ಟಿ ಎಷ್ಟು ವೈಜ್ಞಾನಿಕವಾಗಿ ಹರಿದಿದೆ ಎಂಬುದನ್ನು ಈ ಗೋಷ್ಠಿಯಲ್ಲಿ ಶ್ರುತಪಡಿಸಿದರು. 'ಜಾನಪದ'ದ ಅಧ್ಯಯನ ಎಷ್ಟು ಪ್ರಮುಖವಾದುದು, ಯಾವ ಯಾವ ನಿಟ್ಟಿನಲ್ಲಿ ಅದರ ಅಭ್ಯಾಸ ಸಾಗಿದೆ, ಜನಪದ ಕತೆ, ಗೀತೆ, ಲಾವಣಿ, ಗಾದೆ, ಒಗಟುಗಳ ಸ್ಥಾನಗಳೇನು ಎಂಬ ಅಂಶವನ್ನು ಸ್ಪಷ್ಟಪಡಿಸಿ ಜನಪದ ಸಾಹಿತ್ಯದ ಬಹುಮುಖ್ಯ ಅಳತೆಗೋಲುಗಳಾದ Type ಮತ್ತು Motif ಗಳನ್ನು ಕುರಿತು ಅವರು ಪ್ರಸ್ತಾಪಿಸಿದುದು ಅವರ ಅಭ್ಯಾಸ ಶೀಲತೆಗೆ ಸಾಕ್ಷಿಯಾಗಿದ್ದಿತು. ಆ ಗೋಷ್ಠಿಯಲ್ಲಿ ಓದಲಾದ ಉಳಿದ ಪ್ರಬಂಧಗಳು ಅಷ್ಟೇನು ಗಮನಾರ್ಹವಲ್ಲದಿದ್ದರೂ ಡಾ. ಕಾರಂತರ ಅಧ್ಯಕ್ಷ ಭಾಷಣ ವಿಚಾರ ಪ್ರಚೋದಕವಾಗಿತ್ತು.

ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆ ಈ ಪ್ರಬಂಧಗಳನ್ನೆಲ್ಲ ಕೃತಿರೂಪದಲ್ಲಿ ಪ್ರಕಟಿಸಿ ಆ ವಿಚಾರಗೋಷ್ಠಿಗೆ ಸಾರ್ಥಕತೆಯನ್ನು ತಂದುಕೊಟ್ಟಿತು. ಸಿಂಪಿಯವರ 'ಜನಪದ ಗೀತೆಗಳು, ಲಾವಣಿಗಳು', ಮಿರ್ಜಿಯವರ 'ಜಾನಪದ ಕಥೆಗಳು' ಗೊರೂರರ 'ಗಾದೆಗಳು ಒಗಟುಗಳು', ಡಾ. ಜಿ. ವರದರಾಜರಾಯರ 'ಕನ್ನಡ ಕವಿಗಳ ಮೇಲೆ ಜನಪದ ಸಾಹಿತ್ಯದ ಪ್ರಭಾವ' ಮುಂತಾದ ಶೀರ್ಷಿಕೆಗಳು ವಿಷಯದ ಆಯ್ಕೆಯಲ್ಲಿ ವ್ಯಕ್ತವಾಗಿರುವ ಜಾಣ್ಮೆಯನ್ನು ಸಾರುತ್ತವೆ.

ಕರ್ನಾಟಕದಲ್ಲಿ ಪ್ರಪ್ರಥಮವಾಗಿ ಜನಪದ ಸಾಹಿತ್ಯ ಸಮ್ಮೇಳನವೊಂದು ತರೀಕೆರೆಯಲ್ಲಿ ನಡೆದದ್ದು ಹೆಮ್ಮೆಯ ವಿಷಯ. ಜಾನಪದ ವಿದ್ವಾಂಸರೆಲ್ಲ ಒಂದೆಡೆ ಕಲೆತು ವಿಚಾರವಿನಿಮಯ ಮಾಡಿಕೊಂಡುದರ ಜೊತೆಗೆ, ಅಪಾರ ಸಂಖ್ಯೆಯ ಜನಪದ

ಕಲಾವಿದರೂ ಈ ಸಮ್ಮೇಳನದಲ್ಲಿ ಭಾಗವಹಿಸಿದ್ದುದು ಅಭಿನಂದನೀಯ. ಪ್ರಸಿದ್ಧ ಸಾಹಿತಿಗಳಾದ ಗೊರೂರು ರಾಮಸ್ವಾಮಿ ಅಯ್ಯಂಗಾರ್ಯರ ಅಧ್ಯಕ್ಷತೆ ಈ ಸಮ್ಮೇಳನಕ್ಕೆ ಹೆಚ್ಚು ಔಚಿತ್ಯವನ್ನು ತಂದುಕೊಟ್ಟಿತು. ಜನಪದ ಸಾಹಿತ್ಯ ಸೇವೆಯಲ್ಲಿ ತಮ್ಮದೇ ಆದ ಗಣ್ಯಸ್ಥಾನವನ್ನು ಪಡೆದುಕೊಂಡಿರುವ ಗೊರೂರರು ಆ ಸ್ಥಾನಕ್ಕೆ ವಿಶೇಷ ಅರ್ಹತೆ ಪಡೆದುಕೊಂಡಿದ್ದುದೇ ಇದಕ್ಕೆ ಮುಖ್ಯ ಕಾರಣ. ಜನಪದ ಸಾಹಿತ್ಯ ಸಂಗ್ರಹಕರೂ, ಉತ್ಸಾಹಿಗಳೂ ಆದ ಗೊ. ರು. ಚೆನ್ನಬಸಪ್ಪ ಮತ್ತು ಕೆ. ಆರ್. ಲಿಂಗಪ್ಪನವರ ಅಪಾರ ಶ್ರಮದ ಫಲವಾಗಿ ಇಂಥದೊಂದು ಸಮ್ಮೇಳನ ನಡೆದು ಅಮೂಲ್ಯ ಗ್ರಂಥವೊಂದು ಪ್ರಕಟವಾಗುವ ಸೌಭಾಗ್ಯ ಒದಗಿತು. ಸಮ್ಮೇಳನದ ಹಿನ್ನೆಲೆಯಲ್ಲಿ ಪ್ರೊ. ದೇ. ಜವರೇಗೌಡ, ಡಾ. ಹಾ. ಮಾ. ನಾಯಕ, ಜೀ. ಶಂ. ಪರಮಶಿವಯ್ಯ, ಪಿ. ಆರ್. ತಿಪ್ಪೇಸ್ವಾಮಿ ಮುಂತಾದವರ ಶ್ರದ್ಧಾಸಕ್ತಿಗಳೂ ಸಮ್ಮೇಳನದ ಯಶಸ್ಸಿಗೆ ಕಾರಣವಾದವು. ಅಲ್ಲದೆ ತರೀಕೆರೆಯ ಜನಪದ ಸಾಹಿತ್ಯ ಪ್ರೇಮಿಗಳು ಅವಿರತವಾಗಿ ಅನೇಕ ತಿಂಗಳಕಾಲ ಇದಕ್ಕಾಗಿ ಶ್ರಮಿಸಿ ಸಮ್ಮೇಳನ ಹೆಚ್ಚು ವೈಭವದಿಂದ ನಡೆಯುವಂತೆ ನೋಡಿಕೊಂಡರು.

ತರೀಕೆರೆ ಸಮ್ಮೇಳನದ ಮೂರು ಗೋಷ್ಠಿಗಳಲ್ಲಿ ಎರಡು ಸಾಹಿತ್ಯಕ್ಕೆ ಸಂಬಂಧಿಸಿದಂತೆಯೂ ಮತ್ತೊಂದು ಕಲೆಗೆ ಸಂಬಂಧಿಸಿದಂತೆಯೂ ನಡೆದು ಕೆಲವು ಅತ್ಯುತ್ತಮ ಪ್ರಬಂಧಗಳನ್ನು ಅಲ್ಲಿ ಓದಲಾಯಿತು. ಮುಖ್ಯವಾಗಿ ಪ್ರೊ. ದೇ. ಜವರೇಗೌಡರು 'ಜಾನಪದ ವೈದ್ಯ'ವನ್ನು ಕುರಿತೂ, ಸುಜನಾ ಅವರು 'ಜಾನಪದ ವಾಙ್ಮಯ' ಎಂಬ ವಿಷಯದ ಮೇಲೂ, ಚೆನ್ನವೀರ ಕಣವಿಯವರು 'ಜಾನಪದ ಸಾಹಿತ್ಯದಲ್ಲಿ ಪ್ರತಿಮಾ ವಿಧಾನ' ಎಂಬ ಶೀರ್ಷಿಕೆಯಲ್ಲೂ, ಡಾ. ಹಾ. ಮಾ. ನಾಯಕರು 'ಜನಪದ ಸಾಹಿತ್ಯ ಮತ್ತು ಭಾಷಾಶಾಸ್ತ್ರ' ಎಂಬ ವಿಷಯದ ಮೇಲೂ, ಎಸ್. ಅನಂತನಾರಾಯಣ ಅವರು ಲಾವಣಿಗಳ ಮೇಲೂ, ಪ್ರೊ. ಎಸ್. ವಿ. ಪರಮೇಶ್ವರ ಭಟ್ಟರು ಜಾನಪದ ಛಂದಸ್ಸಿನ ಮೇಲೂ, ಮತಿಘಟ್ಟ ಕೃಷ್ಣಮೂರ್ತಿಯವರು ಜಾನಪದ ಕಥೆಗಳನ್ನು ಕುರಿತೂ, ಡಾ. ಜಿ. ಎಸ್. ಶಿವರುದ್ರಪ್ಪನವರು 'ಜನಪದ ಸಾಹಿತ್ಯ ಮತ್ತು ಆಧುನಿಕ ಕಾಲ' ಎಂಬ ವಿಷಯದ ಮೇಲೂ, ಜೀ. ಶಂ. ಪರಮಶಿವಯ್ಯನವರು 'ಜನಪದ ಸಾಹಿತ್ಯ ಸಂರಕ್ಷಣೆ'ಯನ್ನು ಕುರಿತೂ, ಟಿ. ಕೇಶವಭಟ್ಟರು 'ಜನಪದ ಸಾಹಿತ್ಯ ಮತ್ತು ಜನಜೀವನ' ಎಂಬ ವಿಷಯದ ಮೇಲೂ ಪ್ರಬಂಧಗಳನ್ನು ಓದಿದರು. ಈ ಪ್ರಬಂಧಗಳೆಲ್ಲವೂ ಕೃತಿರೂಪದಲ್ಲಿ ಸಂಕಲಿತವಾಗಿ ಪ್ರಕಟಗೊಂಡರೆ ಜನಪದ ಸಾಹಿತ್ಯಾಭ್ಯಾಸಿಗಳಿಗೆ ಮತ್ತೊಂದು ಉತ್ತಮ ಕಾಣಿಕೆ ಲಭ್ಯವಾಗುತ್ತದೆ.

ತರೀಕೆರೆಯ ಸಮ್ಮೇಳನದ ನೆನಪಿಗಾಗಿ ಉಳಿದ 'ಹೊನ್ನ ಬಿತ್ತೇವು ಹೊಲಕೆಲ್ಲ' ತನ್ನ ಗಾತ್ರದಿಂದಲೂ, ವಿಷಯ ವೈವಿಧ್ಯದಿಂದಲೂ ಒಂದು ಅಪೂರ್ವ ಜಾನಪದ ವಿಶ್ವಕೋಶವೇ ಆಗಿದೆ. ಒಂಬತ್ತು ಪ್ರಮುಖ ವಿಭಾಗಗಳನ್ನೊಳಗೊಂಡ ಈ ಕೃತಿಯಲ್ಲಿ ಸುಮಾರು ಅರವತ್ತು ವಿಸ್ತಾರವಾದ ಲೇಖನಗಳಿದ್ದು ಎಂಟುನೂರಕ್ಕೂ ಹೆಚ್ಚು

ಪುಟಗಳ ವ್ಯಾಪ್ತಿಯಲ್ಲಿ ಈ ಕೃತಿ ಹೊರಬಂದಿದೆ. ಪ್ರಾದೇಶಿಕ ಜಾನಪದ ವಿಭಜನೆ ಹಾಗೂ ಪರಿಚಯ, ನೆರೆರಾಜ್ಯದ ಜಾನಪದ ಪರಿಚಯ, ಜಾನಪದ ನಾನಾ ಮುಖಗಳು ಸಂಶೋಧನಾತ್ಮಕ ಪ್ರಬಂಧಗಳು, ಅಭ್ಯಾಸಸೂಚಿ ಇವುಗಳಿಂದ ಕೂಡಿ ಕೃತಿ ಕರ್ನಾಟಕ ಜನಪದ ಸಾಹಿತ್ಯದ ಸ್ವರೂಪವನ್ನು ಆದಷ್ಟು ವಿಸ್ತಾರವಾಗಿ ಮಾಡಿಕೊಡುವ ಪ್ರಥಮ ಪ್ರಯತ್ನವಾಗಿದೆ. 'ಜನಪದ ಸಾಹಿತ್ಯದಲ್ಲಿ ಮೋಹರಂ ಹಾಡುಗಳು', 'ಮಕ್ಕಳ ಜನಪದ ಸಾಹಿತ್ಯ', 'ಜಾನಪದ ಸಂಗೀತ', 'ಜಾನಪದ ಸಾಹಿತ್ಯದಲ್ಲಿ ಸಮಾಜ ದರ್ಶನ', 'ಜಾನಪದ ಗೀತೆಗಳಲ್ಲಿ ಪಾಠ ಭೇದಗಳು', 'ಜಾನಪದ ಅಧ್ಯಯನ—ವೈಜ್ಞಾನಿಕ ದೃಷ್ಟಿ', 'ಜನಪದ ಸಾಹಿತ್ಯದ ಪುನರುಜ್ಜೀವನ', 'ಜನಪದ ಸಾಹಿತ್ಯ ಸಂಗ್ರಹಣೆ ಒಂದು ಕಲೆ', 'ಕನ್ನಡ ಜಾನಪದ ವಾಙ್ಮಯದ ಅಭ್ಯಾಸ ಸೂಚಿ', ಮುಂತಾದ ವೈವಿಧ್ಯಮಯ ಲೇಖನಗಳ ಜೊತೆಗೆ ಪಾದ್ರೇಶಿಕ ಜನಪದ ಸಾಹಿತ್ಯದ ಪರಿಚಯಾತ್ಮಕ ಲೇಖನಗಳೂ ಹೆಚ್ಚು ಮಹತ್ವಪೂರಿತವಾದುವು. ಜನಪದ ಸಾಹಿತ್ಯದ ವಿದ್ಯಾರ್ಥಿ ಅನೇಕ ಅಮೂಲ್ಯ ವಿಷಯಗಳನ್ನು ಎದುರುಗೊಳ್ಳುವುದು ಹತ್ತು ಸಮೀಕ್ಷಾಲೇಖನಗಳಲ್ಲಿ. ಕಾಸರಗೋಡು, ಕೊಡಗು, ದಕ್ಷಿಣ ಕನ್ನಡ, ಉತ್ತರ ಕನ್ನಡ, ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕ ಮುಂತಾದ ಪ್ರದೇಶಗಳ ಜನಪದ ಸಾಹಿತ್ಯವನ್ನು ಕುರಿತ ಲೇಖನಗಳ ಜೊತೆಗೆ, ಈವರೆಗೆ ನಡೆದ ಜಾನಪದ ಸಂಗ್ರಹವನ್ನು ಪರಿಚಯಮಾಡುವ ಎರಡು ಬರಹಗಳೂ ಆರಂಭದಲ್ಲಿ ಬಂದಿವೆ.

ಒಟ್ಟಿನಲ್ಲಿ 'ಹೊನ್ನಬಿತ್ತೇವು ಹೊಲಕೆಲ್ಲ' ಕನ್ನಡ ಜಾನಪದ ಅಧ್ಯಯನದ ಒಂದು ಘಟ್ಟವನ್ನು ಸಮರ್ಪಕವಾಗಿ ಪರಿಚಯಿಸಿ ಡಾ. ಹಾ. ಮಾ. ನಾಯಕರ 'ಜಾನಪದ ಅಧ್ಯಯನ ವೈಜ್ಞಾನಿಕ ದೃಷ್ಟಿ' ಎಂಬ ಲೇಖನದ ಮೂಲಕ ಮುಂದಿನ ವಿಸ್ತಾರ ಕ್ಷೇತ್ರದ ಕಾರ್ಯಬಾಹುಳ್ಯವನ್ನು, ಸಂಶೋಧನಾವಿಧಾನವನ್ನೂ ಅಭ್ಯಾಸ ದೃಷ್ಟಿಯನ್ನೂ ಹೊಸದಿಕ್ಕಿನಲ್ಲಿ ನಡೆಸುವ ಸೂಚನೆಯನ್ನು ನೀಡುತ್ತದೆ.

ಜನಪದ ಸಾಹಿತ್ಯವನ್ನು ವಿಶೇಷವಾಗಿ ಅಭ್ಯಾಸಮಾಡಿ ಮೇಲಿಂದ ಮೇಲೆ ಕೆಲವು ಕೃತಿಗಳನ್ನೂ, ಲೇಖನಗಳನ್ನೂ ನೀಡುತ್ತಿರುವ ಕೆಲವು ವಿದ್ವಾಂಸರ ಹೆಸರು ಇಲ್ಲಿ ಉಲ್ಲೇಖಾರ್ಹವಾಗಿದೆ. ಪ್ರೊ. ಎಲ್. ಆರ್. ಹೆಗ್ಗಡೆ ಅವರು ಉತ್ತರ ಕರ್ಣಾಟಕದ ಜಾನಪದ ಸಂಗ್ರಹಕರಲ್ಲಿ ಪ್ರಸಿದ್ಧರು. ಅಷ್ಟೇಮಟ್ಟಿಗೆ ಜಾನಪದ ಅಧ್ಯಯನವನ್ನು ಉತ್ತಮ ಮಟ್ಟದಲ್ಲಿ ನಡೆಸಿರುವವರು. ಅವರ 'ಜಾನಪದ ಕಥೆಗಳು', 'ಮೂಢ ನಂಬಿಕೆಗಳು', 'ಪುರಾಣ ಜಿಜ್ಞಾಸೆ' ಮುಂತಾದ ಕೃತಿಗಳು ಅವರ ಜಾನಪದ ಶ್ರದ್ಧೆಗೆ ವಿದ್ವತ್ತಿಗೆ ಉತ್ತಮ ನಿದರ್ಶನಗಳಾಗಿವೆ. ಕಿರುಹೊತ್ತಗೆಗಳಾದರೂ ಆಯಾ ವಿಷಯದ ಮೇಲೆ ಕನ್ನಡದಲ್ಲಿ ಮೊದಲ ಕೃತಿಗಳಾಗಿ ಅವಕ್ಕೆ ಉತ್ತಮ ಯಶಸ್ಸು ಲಭ್ಯವಾಗಿದೆ. ಎ. ಕೆ. ರಾಮಾನುಜಂ ಅವರ 'ಗಾದೆಗಳು' ಕೂಡ ಇಂಥದೇ ಕಿರುಹೊತ್ತಗೆ. ಗಾದೆಗಳ ಮೇಲೆ ತನ್ನ ಪರಿಮಿತ ವ್ಯಾಪ್ತಿಯಲ್ಲಿ ಹೆಚ್ಚು ಅಭ್ಯಾಸಪೂರ್ಣ ಕೃತಿ. ಜಾನಪದ ನೃತ್ಯಕ್ಕೆ ಸಂಬಂಧಿಸಿದಂತೆ ಶ್ರೀ ಎಂ. ರಾಮನ್ ಅವರು ಅನುವಾದಿಸಿರುವ

'ಭಾರತೀಯ ಜಾನಪದ ನೃತ್ಯಗಳು' ಕುಮಾರ ವೆಂಕಣ್ಣನವರ 'ಜಾನಪದ ನೃತ್ಯಗಳು' ಎರಡು ಕೃತಿಗಳಲ್ಲೂ ಕರ್ನಾಟಕ ಜಾನಪದ ನೃತ್ಯಗಳ ಬಗ್ಗೆ ಸಾಕಷ್ಟು ವಿವರಗಳಿಲ್ಲ.

ಜನಪದ ಸಾಹಿತ್ಯಾಭ್ಯಾಸದಲ್ಲಿ ಅವಿಚ್ಛಿನ್ನ ಶ್ರದ್ಧೆಯನ್ನು ತೋರಿ ಕೆಲವು ಅತ್ಯುತ್ತಮ ಲೇಖನಗಳ ಮೂಲಕ ಜಾನಪದ ಅಧ್ಯಯನಕ್ಕೆ ನೆರವಾಗುತ್ತಿರುವ ಕೆಲವು ವಿದ್ವಾಂಸರಲ್ಲಿ ಪ್ರೊ. ದೇ. ಜ. ಗೌ., ಡಾ. ಹಾ. ಮಾ. ನಾಯಕ, ಡಾ. ಜಿ. ವರದರಾಜರಾವ್, ಪ್ರೊ. ಎಸ್. ವಿ. ಪರಮೇಶ್ವರಭಟ್ಟ, ಡಾ. ಎಂ. ಚಿದಾನಂದಮೂರ್ತಿ, ಸುಜನಾ, ಸಿ. ಪಿ. ಕೆ., ಎಲ್. ಆರ್. ಹೆಗ್ಗಡೆ, ಜೀಶಂಪ, ಚೆನ್ನವೀರ ಕಣವಿ, ರಾಗೌ, ಸಿಂಪಿಲಿಂಗಣ್ಣ, ಸುಧಾಕರ, ಪಿ. ಆರ್. ತಿಪ್ಪೇಸ್ವಾಮಿ ಮುಂತಾದ ಕೆಲವು ಹೆಸರನ್ನಾದರೂ ಇಲ್ಲಿ ಸ್ಮರಿಸಬೇಕು. ನೂರಾರು ಮಂದಿ ಲೇಖಕರು ತಮ್ಮ ಸಂಶೋಧನಾತ್ಮಕ, ವಿಮರ್ಶಾತ್ಮಕ ಲೇಖನಗಳ ಮೂಲಕ ಕನ್ನಡ ಜಾನಪದದ ಸಂಶೋಧನೆಗೆ ಉತ್ತಮ ಕಾಣಿಕೆಯನ್ನು ಸಲ್ಲಿಸುತ್ತಿದ್ದಾರೆ.

ಜನಪದ ಸಾಹಿತ್ಯದ ರಸಮೌಲ್ಯವನ್ನು ಪ್ರಧಾನವಾಗಿ ಎತ್ತಿಹಿಡಿದು ಅಪೂರ್ವ ವಿಮರ್ಶೆಗಳ ಮೂಲಕ ಅದಕ್ಕೆ ಗಣ್ಯಸ್ಥಾನವನ್ನು ಗಳಿಸಿಕೊಡುವುದರಲ್ಲಿ ಅನೇಕ ವಿದ್ವಾಂಸರ ಪಾತ್ರ ಪ್ರಮುಖವಾದುದು. ಪ್ರೊ. ತೀನಂಶ್ರೀಯವರು ಜನಪದ ಗೀತೆಗಳ ಸೌಂದರ್ಯಕ್ಕೆ ಮಾರುಹೋಗಿ 'ಹೆಣ್ಣುಮಕ್ಕಳ ಪದಗಳು' ಎಂಬ ಪುಟ್ಟ ಕೃತಿಯಲ್ಲಿ ಕೆಲವು ತ್ರಿಪದಗಳ ಅರ್ಥ ವೈಶಾಲ್ಯವನ್ನು ಸ್ವಾರಸ್ಯವಾಗಿ ಪರಿಚಯ ಮಾಡಿಕೊಟ್ಟರು. ಅಲ್ಲದೆ ಭಾರತೀಯ 'ಕಾವ್ಯಮೀಮಾಂಸೆ'ಯಂಥ ಶ್ರೇಷ್ಠ ಕೃತಿಯಲ್ಲಿ ಕೆಲವು ಜನಪದ ಗೀತೆಗಳನ್ನು ಉದ್ಧರಿಸಿ ಶಿಷ್ಟ ಕಾವ್ಯಗಳಂತೆಯೇ ಜನಪದ ಕಾವ್ಯಗಳೂ ಉನ್ನತ ಕಾವ್ಯಸತ್ವವನ್ನ ಪಡೆದುಕೊಂಡು ರಂಜಿಸಬಲ್ಲವು ಎನ್ನುವುದನ್ನು ಪ್ರತಿಪಾದಿಸಿದ್ದಾರೆ. ಅವರ 'ಮಕ್ಕಳಿಗೆ ಹೇಳುವ ಕತೆಗಳು' ಎಂಬ ಲೇಖನ ಜನಪದ ಕತೆಗಳ ನೈಜಸ್ವಾರಸ್ಯ ವನ್ನು ಪರಿಚಯ ಮಾಡಿಕೊಡುತ್ತದೆ.

ತೀ.ನಂ.ಶ್ರೀಯವರ ಪರಂಪರೆಯಲ್ಲಿಯೇ ನಡೆದ ಇನ್ನೂ ಕೆಲವರ ಹೆಸರು ಇಲ್ಲಿ ಉಲ್ಲೇಖನಾರ್ಹವಾದುದು. ಪ್ರತಿಭಾಶಾಲಿ ತರುಣ ವಿದ್ವಾಂಸರಾದ ಸಿ.ಪಿ.ಕೆ.ಯವರು ಈ ನಿಟ್ಟಿನಲ್ಲಿ ಅಮೂಲ್ಯ ರೀತಿಯ ಕಾರ್ಯವನ್ನೆಸಗಿದ್ದಾರೆ. ಅವರ ಅಪಾರ ಸಂಖ್ಯೆಯ ಲೇಖನಗಳು ಬೇರೆ ಬೇರೆ ಕಡೆ ಪ್ರಕಟವಾಗಿವೆ. ಪ್ರಥಮ ಬಾರಿಗೆ ಜನಪದ ಸಾಹಿತ್ಯದ ಕಾವ್ಯ ಮೌಲ್ಯವನ್ನು ಸಮರ್ಥವಾದ ರೀತಿಯಲ್ಲಿ ಪ್ರತಿಪಾದಿಸಿದವರು ಶ್ರೀ ಸಿ.ಪಿ.ಕೆ. ಯವರು. ಶ್ರೀಯುತರ "ಜಾನಪದಪ್ರತಿಭೆ" ಇತ್ತೀಚೆಗೆ ಪ್ರಕಟಗೊಂಡಿದೆ. ಈ ಕ್ಷೇತ್ರದಲ್ಲಿ ಇದೊಂದು ಉಲ್ಲೇಖನಾರ್ಹ ಕೃತಿ. ತಮ್ಮ ಸೌಂದರ್ಯ ಮೀಮಾಂಸೆಯಲ್ಲಿ ಶ್ರೀ ಜಿ. ಎಸ್. ಶಿವರುದ್ರಪ್ಪನವರೂ, 'ಭಾವಗೀತೆ' ನಿಬಂಧದಲ್ಲಿ ಡಾ. ಪ್ರಭುಶಂಕರ ಅವರೂ, 'ಶರಣರ ಅನುಭಾವ ಸಾಹಿತ್ಯ' ಹಾಗೂ 'ಕರ್ನಾಟಕ ಸಂಸ್ಕೃತಿ ಸಮೀಕ್ಷೆ' ಯಲ್ಲಿ ಡಾ. ಎಚ್. ತಿಪ್ಪೇರುದ್ರಸ್ವಾಮಿಯವರೂ, 'ಕನ್ನಡ ಸಾಹಿತ್ಯದಲ್ಲಿ ಹಾಸ್ಯ'

ಎಂಬ ನಿಬಂಧದಲ್ಲಿ ಡಾ. ಸುಂಕಾಪುರ ಅವರೂ ಸಾಹಿತ್ಯದ ಒಂದು ಅಂಗವೇ ಆದ ಜನಪದ ಸಾಹಿತ್ಯವನ್ನು ನಿರ್ಲಕ್ಷಿಸದೆ ಪ್ರಸ್ತಾಪಿಸಿದ್ದಾರೆ. ಆಚಾರ್ಯ ಡಿ.ಎಲ್.ಎನ್. ಅವರು ಜಾನಪದ ಅಧ್ಯಯನ ಹಾಗೂ ಸಂರಕ್ಷಣೆಯ ಅವಶ್ಯಕತೆಯನ್ನು ಕುರಿತು ಬಿದರೆ ಸಾಹಿತ್ಯ ಸಮ್ಮೇಳನದ ತಮ್ಮ ಅಧ್ಯಕ್ಷಭಾಷಣದಲ್ಲಿ ಅತ್ಯಂತ ಉಪಯುಕ್ತವಾದ ಮಾತುಗಳನ್ನು ಆಡಿದ್ದಾರೆ. ಉಡುಪಿ ಸಮ್ಮೇಳನದಲ್ಲಿ ಶ್ರೀ ಅ. ನ. ಕೃ ಅವರೂ ಜನಪದ ಸಾಹಿತ್ಯದ ಬಗ್ಗೆ ಪ್ರಸ್ತಾಪಿಸಲು ಮರೆತಿಲ್ಲ. ಶ್ರೀ ಎಚ್.ಎಲ್. ನಾಗೇಗೌಡರು ಜೀಶಂಪ ಅವರ 'ನಮ್ಮ ಜನಪದ ಸಾಹಿತ್ಯ' ಎಂಬ ಕೃತಿಗೆ ಹಿನ್ನುಡಿಯನ್ನು ಬರೆಯುತ್ತ 'ಜಾನಪದ ಸಂರಕ್ಷಣೆ' ಎಷ್ಟು ಬೇಗ, ಹೇಗೆ ಆಗಬೇಕು ಎಂಬುದಕ್ಕೆ ಒಂದು ಉತ್ತಮ ಯೋಜನೆಯನ್ನೇ ನೀಡಿದ್ದಾರೆ. ಪ್ರೊ. ದೇ.ಜ.ಗೌ. ಅವರಂತೂ ಜಾನಪದ ಬಗ್ಗೆ ಉಜ್ವಲ ಅಭಿಮಾನವನ್ನು ತಾಳಿ ಜೀಶಂಪ ಅವರ ಮತ್ತೊಂದು ಕೃತಿ 'ಜನಪದ ಸಾಹಿತ್ಯ ಸಮೀಕ್ಷೆ'ಯ ಮುನ್ನುಡಿಯಲ್ಲಿ ಅಮೂಲ್ಯ ರೀತಿಯ ಸಲಹೆಗಳನ್ನು ನೀಡಿದ್ದಾರೆ.

ಕನ್ನಡ 'ಜಾನಪದ ಅಧ್ಯಯನ'ದ ಪುಟಗಳಲ್ಲಿ ಪ್ರೊ.ದೇ. ಜವರೇಗೌಡರ ಹೆಸರು ಅಗ್ರಪಂಕ್ತಿಯಲ್ಲಿ ನಿಲ್ಲಲು ಅರ್ಹವಾದುದು. ಜನಪದ ಸಾಹಿತ್ಯದ ಬಗ್ಗೆ ಮೊದಲು ವಿಶೇಷವಾದ ಆಸಕ್ತಿಯನ್ನು ಬೆಳೆಸಿಕೊಂಡಿರುವ ಅವರು ತಮ್ಮ ಗಾಢವಾದ ವ್ಯಾಸಂಗದಿಂದ, ಪ್ರಖರವಾದ ಬರವಣಿಗೆಗಳಿಂದ ಆ ವಿಷಯಕ್ಕೆ ಕನ್ನಡದಲ್ಲಿ ಹೆಚ್ಚು ಗೌರವ ಘನತೆಗಳನ್ನು ತಂದುಕೊಟ್ಟವರು. 'ಜನಪದ ಸಾಹಿತ್ಯಸಮೀಕ್ಷೆ'ಗೆ ಅವರು ಬರೆದಿರುವ ವಿಸ್ತಾರವಾದ ಮುನ್ನುಡಿ 'ಜಾನಪದ' ಸತ್ವವನ್ನು ಅವರು ಎಷ್ಟರಮಟ್ಟಿಗೆ ಹೀರಿ ಜೆಳೆದಿದ್ದಾರೆ, ಆ ವಿಷಯದ ಬಗ್ಗೆ ಅವರಿಗಿರುವ ಪ್ರೌಢಿಮೆಯೇನು, ಪಾಂಡಿತ್ಯವೇನು, ನಿಚ್ಚಳ ಪ್ರೇಮವೇನು ಎಂಬುದು ಸುವೇದ್ಯ. ವಿಶ್ವದ ಜಾನಪದ ಅಧ್ಯಯನದ ಜೊತೆಯಲ್ಲೇ, ಭಾರತೀಯ ಜಾನಪದವನ್ನೂ ಕರ್ನಾಟಕದ ಜಾನಪದವನ್ನೂ ಪ್ರೊ.ದೇ.ಜ.ಗೌ. ಅಭ್ಯಸಿಸಿದ್ದಾರೆ. ನೆಲದ ಮಗನಾಗಿ ಬಂದ ಅವರ ಒಲವು, ಅನುಭವ ಜಾನಪದ ಸಂಸ್ಕೃತಿಯಲ್ಲಿ ಆಳವಾಗಿ ಬೇರುಬಿಟ್ಟಿರುವುದು ಸಹಜವೆ ಆದುದು.

ಯಾವುದೇ ನಾಡಿನ ಜಾನಪದ ಅಧ್ಯಯನ ಆ ನಾಡಿನ ಸಾಂಸ್ಕೃತಿಕ ಮೌಲ್ಯದಲ್ಲಿ ಎಂಥ ಪ್ರಮುಖ ಪಾತ್ರವಹಿಸಬಲ್ಲುದು ಎಂಬುದನ್ನು ಮನಗಂಡು ಅದನ್ನು ಕಾರ್ಯರೂಪಕ್ಕೆ ತಂದ ಕೀರ್ತಿ ಅವರದು "ಲಿಂಗಭೇದವಿಲ್ಲದೆ ನಾಡಿನ ಎಲ್ಲ ಜಾತಿಯ ವಿವಿಧಾಭಿರುಚಿಯ ನಾನಾ ಜನಾಂಗಗಳ ವಿವಿಧ ವಯೋಸಂಸ್ಕಾರಗಳ ಸಾಮಾನ್ಯ ಜನ ಜಾನಪದ ಸಂಪ್ರದಾಯದ ನಿರ್ಮಾಣಕಾರ್ಯದಲ್ಲಿ ತೊಡಗಿದ್ದರಿಂದ ಅದು ರಾಷ್ಟ್ರೀಯತೆಯ ಪಟ್ಟಕ್ಕೆ ಅರ್ಹವಾಗಿದೆ. ಅದರ ಜೀವನದ ಸಮಸ್ತಮುಖಗಳೂ, ಸಕಲ ವ್ಯವಹಾರಗಳೂ ಮಾರ್ಪೊಳೆದಿವೆ . . . . . ಇಷ್ಟು ಸರ್ವವ್ಯಾಪಿಯಾದ ಸಮೃದ್ಧವಾದ ಸಂಜೀವನ ಸಮರ್ಥವಾದ ಕ್ಷೇತ್ರ, ಇತ್ತೀಚಿನ ತನಕ ಪಂಡಿತರ ಮನ್ನಣೆಗೆ ಪಾತ್ರವಾಗದೆ ತಕ್ಕಲು ಬಿದ್ದಿದ್ದರಿಂದ ಆಗಿರುವ ನಷ್ಟ ಅಪಾರ . . . . ಹಳ್ಳಿಗರು ಆಗಾಗ್ಗೆ ಕುರುಕಿಕೊಳ್ಳುವ

ಪದ, ಕಟ್ಟುವ ಕತೆ ಮಾತ್ರವಲ್ಲ, ಅವನು ನಿತ್ಯ ವ್ಯವಹಾರದಲ್ಲಿ ಬಳಸುವ ಸಾಧನ ಸಾಮುಗ್ರಿಗಳನ್ನೆಲ್ಲ ಸಂಗ್ರಹಿಸಬೇಕಾಗಿದೆ. ಈ ಮಹತ್ಕಾರ್ಯದಲ್ಲಿ ಆಯ್ಕೆಯ ವಿಧಾನ ಸಲ್ಲದು. ಕೀಳೆಂದು ಕಡೆಗಣಿಸದೆ, ಕಡ್ಡಿ ಚಿಪ್ಪು ಬಕ್ಕರೆಗಳನ್ನೂ ಕಲೆಹಾಕಬೇಕು. ಸಂಗ್ರಹ ಕಾರ್ಯದ ಜೊತೆಗೆ ಸಂಶೋಧನೆ, ಸಂಗೋಪನೆಗಳೂ ವ್ಯಾಖ್ಯಾನ ಟಿಪ್ಪಣಿಗಳೂ ಜರುಗಬೇಕು."*

ಜಾನಪದ ನಿಜವಾದ ಜೀವನಾಡಿಯನ್ನು ಹಿಡಿದು ಅನನ್ಯ ಶ್ರದ್ಧೆಯಿಂದ ಹೀಗೆ ಅದರ ಸಂರಕ್ಷಣೆಗೆ ಹಾತೊರೆಯುವ, ಆ ವಿಷಯದ ವ್ಯಾಪ್ತಿಯನ್ನೂ, ಮೌಲ್ಯವನ್ನೂ ಅರ್ಥಮಾಡಿಕೊಂಡ ಪ್ರಾಚಾರ್ಯರೊಬ್ಬರು ಜವಾಬ್ದಾರಿಯುತ ಸ್ಥಾನದಲ್ಲಿ ಇರುವುದೇ ನಾಡಿನ ಸೌಭಾಗ್ಯ. ಜಾನಪದ ಸಂರಕ್ಷಣೆಯಂತೆಯೇ ಅದರ ಅಧ್ಯಯನ ಪಾಶ್ಚಾತ್ಯ ದೇಶಗಳಲ್ಲಿನಂತೆಯೇ ನಮ್ಮಲ್ಲಿಯೂ ನಡೆಯಬೇಕು ಎಂದು ಮನಗಂಡ ಅವರು ವಿಶ್ವವಿದ್ಯಾನಿಲಯದಲ್ಲಿ ಸ್ನಾತಕೋತ್ತರ ಮಟ್ಟದಲ್ಲಿ 'ಜಾನಪದ'ವನ್ನು ಅಧ್ಯಯನ ವಿಷಯವನ್ನಾಗಿ ತಂದು ದೊಡ್ಡ ಸಾಧನೆಯನ್ನೇ ಮಾಡಿದ್ದಾರೆ. ಜಾನಪದ ಸಂವರ್ಧನೆಯ ಅವಶ್ಯಕತೆಯನ್ನು ಕಂಡುಕೊಂಡ ಅವರು ಸಂಗ್ರಹಕಾರ್ಯಕ್ಕೆ ವಿಶೇಷ ಗಮನವನ್ನು ನೀಡಿ ಸಾಹಿತ್ಯದಂತೆಯೇ ಜಾನಪದ ವಸ್ತು ವಿಶೇಷಗಳಿಗೂ ಮಾನ್ಯತೆಯನ್ನು ದೊರಕಿಸಿ ಕೊಟ್ಟು ವಿಶ್ವವಿದ್ಯಾನಿಲಯದ ಆವರಣದಲ್ಲಿ ದೊಡ್ಡ ಜಾನಪದ ವಸ್ತುಸಂಗ್ರಹಾಲಯದ ಯೋಜನೆಯನ್ನೇ ರೂಪಿಸಿದ್ದಾರೆ. ಪಾಶ್ಚಾತ್ಯ ದೇಶಗಳಲ್ಲಿ ಎಲ್ಲ ಪ್ರಮುಖ ವಿಶ್ವವಿದ್ಯಾನಿಲಯಗಳು ಇಂಥ ವಸ್ತುಸಂಗ್ರಹಾಲಯಗಳಿಗೆ ಆದ್ಯಗಮನ ನೀಡಿವೆ. ಮೈಸೂರು ವಿಶ್ವವಿದ್ಯಾನಿಲಯದ ವಸ್ತುಸಂಗ್ರಹಾಲಯ ತನ್ನ ಯೋಜಿತ ಗುರಿಯನ್ನು ಮುಟ್ಟಿದರೆ ಭಾರತದಲ್ಲಿಯೇ ಸುವ್ಯವಸ್ಥಿತವಾದ, ವೈಜ್ಞಾನಿಕ ಆಧಾರದ ಮೇಲೆ ರೂಪಿತವಾದ ಅತ್ಯುತ್ತಮ ಜಾನಪದ ವಸ್ತುಸಂಗ್ರಹಾಲಯವನ್ನು ಪಡೆದ ಕೀರ್ತಿಯನ್ನು ಪಡೆಯುತ್ತದೆ.

ಜಾನಪದ ಪ್ರಕಟಣಶಾಖೆ, ಸಂಶೋಧನಾ ಶಾಖೆಗಳೂ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ರೂಪಿತವಾಗುತ್ತಿವೆ. ಜಾನಪದ ಅಧ್ಯಯನಕ್ಕೆ ಗಣ್ಯಸ್ಥಾನ ಇಂಥ ಉನ್ನತ ಪೀಠದಲ್ಲಿ ದೊರಕುತ್ತಿರುವುದು ಪ್ರೊ.ದೇ.ಜ.ಗೌ. ಅವರ ದೂರದೃಷ್ಟಿ ಹಾಗೂ ಅನನ್ಯ ಶ್ರದ್ಧೆಗಳಿಂದಲೇ ಎಂಬುದು ಸ್ಪಷ್ಟ.

ಇತ್ತೀಚೆಗೆ ಕರ್ನಾಟಕ ವಿಶ್ವವಿದ್ಯಾನಿಲಯವೂ ಮೈಸೂರು ವಿಶ್ವವಿದ್ಯಾನಿಲಯದ ಮೇಲ್ಪಂಕ್ತಿಯನ್ನನುಸರಿಸಿ ಜಾನಪದ ಅಧ್ಯಯನ, ವಸ್ತುಸಂಗ್ರಹಾಲಯದ ಯೋಜನೆ ಜಾನಪದ ಸಂಗ್ರಹ ಮುಂತಾದುವನ್ನು ಆರಂಭಿಸಿರುವುದು ತುಂಬ ಅಭಿನಂದನೀಯವಾದ ವಿಷಯ.

ಕನ್ನಡ ನಾಡಿನ ಜಾನಪದ ವಿದ್ವಾಂಸರೆಲ್ಲ ಸಂಘಟಿತರಾಗಿ ಕರ್ನಾಟಕ ಜಾನಪದ ಪರಿಷತ್ತು ಸ್ಥಾಪಿತವಾಗಿದೆ. ಅದಕ್ಕೆ ಪ್ರೊ. ದೇ.ಜ.ಗೌ. ಅವರೇ ಪ್ರಥಮ ಅಧ್ಯಕ್ಷರಾಗಿ

---

* ಪ್ರೊ. ದೇಜಗೌ : ಮುನ್ನುಡಿ, 'ಜನಪದ ಸಾಹಿತ್ಯ ಸಮೀಕ್ಷೆ'

ಆಯ್ಕೆಯಾಗಿರುವುದು ಸಮುಚಿತವೇ ಆಗಿದೆ. ಜನಪದ ಸಾಹಿತ್ಯ ಸಂರಕ್ಷಣೆ, ಸಂವರ್ಧನೆ, ಹಾಗೂ ಪ್ರಸಾರ ಕಾರ್ಯಗಳಿಗೆ ಮೀಸಲಾದ ಪರಿಷತ್ತು ಪ್ರೊ. ದೇ. ಜ. ಗೌ. ಅವರ ನೇತೃತ್ವದಲ್ಲಿ ಉತ್ತಮ ಯೋಜನೆಯನ್ನು ಹಾಕಿಕೊಂಡಿದೆ. ಪರಿಷತ್ತಿನ ಜಾನಪದ ಎನ್ನುವ ಉನ್ನತ ಮಟ್ಟದ ಪತ್ರಿಕೆ ಈ ಕ್ಷೇತ್ರದ ಮತ್ತೊಂದು ಹೊಸ ಹೆಜ್ಜೆ.

ಕನ್ನಡ ನಾಡಿನ ಜಾನಪದ ಕ್ಷೇತ್ರ ಈಗೀಗ ಸುಪುಷ್ಟವಾಗುತ್ತಿದೆ. ಕೇವಲ ಉತ್ಸಾಹವೊಂದನ್ನೇ ಅವಲಂಬಿಸಿದ್ದ ಸಂಗ್ರಹಕರಿಂದ ಬೇರ್ಪಡಿಸಿ ವಿದ್ವಾಂಸರು ಆ ವಿಷಯವನ್ನು ಕೈಗೆತ್ತಿಕೊಳ್ಳುತ್ತಿದ್ದಾರೆ. ಅದಕ್ಕೆ ಸರ್ವರೀತಿಯ ಮನ್ನಣೆಯನ್ನು ನೀಡಲು ನಾಡಿನ ವಿಶ್ವವಿದ್ಯಾನಿಲಯವೊಂದು ಮುಂದೆ ಬಂದಿದೆ. ಪ್ರಥಮ ಜಾನಪದ ಸಮ್ಮೇಳನ ನಡೆದು ಅಖಿಲ ಕರ್ನಾಟಕ ಜಾನಪದ ಪರಿಷತ್ತು ಸ್ಥಾಪಿತವಾಗಿದೆ. ಜಾನಪದ ಪತ್ರಿಕೆಯೊಂದು ಸಕಾಲದಲ್ಲಿ ಪ್ರಕಟವಾಗಿ ಆ ಕ್ಷೇತ್ರದ ಮೇಲೆ ಬೆಳಕು ಚೆಲ್ಲುತ್ತಿದೆ. ನಾಡಿನ ಜಾನಪದ ಅಧ್ಯಯನದಲ್ಲಿ ಇದೊಂದು ಪರ್ವಕಾಲ; ಈ ದಶಕ ತನ್ನ ಸಾಧನೆಯಿಂದ ಒಂದು ಸುವರ್ಣಯುಗವಾಗಬೇಕು. ಸಂಗ್ರಹ ಕಾರ್ಯಕ್ಕೆ ಆದ್ಯ ಗಮನ ನೀಡಬೇಕು. ವ್ಯವಸ್ಥಿತವಾದ, ವೈಜ್ಞಾನಿಕವಾದ ಸಂಗ್ರಹ ಇನ್ನಾದರೂ ಆಗದಿದ್ದರೆ ಈಗಾಗಲೇ ಮುಕ್ಕಾಗುತ್ತಿರುವ ಮೂರ್ತಿ ಪೂರ್ಣಭಿನ್ನವೇ ಆಗಿಬಿಡುತ್ತದೆ. ಆದ್ದರಿಂದ ಸರಕಾರ, ಸಾರ್ವಜನಿಕರು, ವಿಶ್ವವಿದ್ಯಾನಿಲಯಗಳು ಇನ್ನಾದರೂ ಇತ್ತ ತೀವ್ರ ಗಮನ ಹರಿಸಬೇಕಾದುದು ಅಗತ್ಯ. "ಏಕೆಂದರೆ ಮುಂದೆ ಹಣಕೊಟ್ಟರೆ ಏನಾದರೂ ಸಿಕ್ಕಬಹುದು. ಆದರೆ ಜನಪದ ಸಾಹಿತ್ಯ ಸಿಕ್ಕುವುದಿಲ್ಲ. ಶರಾವತಿಯನ್ನು ಈಗ ಉಪಯೋಗಿಸಿಕೊಳ್ಳದಿದ್ದರೆ ಮುಂದೆ ಉಪಯೋಗಿಸಿಕೊಳ್ಳಬಹುದು. ಆದರೆ ಜನಪದ ಸಾಹಿತ್ಯ ಶರಾವತಿ ಒಮ್ಮೆ ಬತ್ತಿದರೆ ಮತ್ತೊಮ್ಮೆ ಹರಿಯಲಾರದು."*

* ಎಚ್. ಎಲ್. ನಾಗೇಗೌಡ: ಹಿನ್ನುಡಿ, ನಮ್ಮ ಜನಪದ ಸಾಹಿತ್ಯ, ಪು. ೫೭.

ಎಚ್. ಎಮ್. ಚನ್ನಯ್ಯ

ಸಾಹಿತ್ಯ ವಿಮರ್ಶೆ

ಇಪ್ಪತ್ತನೆ ಶತಮಾನದ ಕನ್ನಡ ವಾಙ್ಮಯ ವಿವಿಧರೂಪ ತಳೆದು ವೈವಿಧ್ಯಮಯ ವಾಗಿ ಬೆಳೆಯುತ್ತಿದೆ; ಸಾಹಿತ್ಯ ಕ್ಷೇತ್ರದಲ್ಲಿ, ಕಾವ್ಯ ಕಾದಂಬರಿ ಸಣ್ಣ ಕಥೆ ಪ್ರಕಾರಗಳಲ್ಲಿ ಬಹುಶಃ, ಎಲ್ಲ ಭಾರತೀಯ ಭಾಷೆಗಳನ್ನೂ ಮೀರಿಸುವಂತಿದೆ–ಗುಣದಲ್ಲಿ ಮತ್ತೆ ಗಾತ್ರದಲ್ಲಿ. ಹಾಗೇ ಇಪ್ಪತ್ತೈದು ವರ್ಷಗಳಿಂದೀಚೆಗೆ, ಅಂದರೆ ಮುಖ್ಯವಾಗಿ ಸ್ವಾತಂತ್ರ್ಯ ಬಂದ ನಂತರ, ಕನ್ನಡದಲ್ಲಿ ವಿಮರ್ಶೆಯೂ ಚೆನ್ನಾಗಿ ಬೆಳೆದು ಬಂದಿದೆ ; ಪಾಶ್ಚಾತ್ಯ ಸಾಹಿತ್ಯಗಳ ಜೊತೆ ಹೋಲಿಸಿದರೆ ಬರಬೇಕಾದಷ್ಟು ಬಂದಿಲ್ಲವೆನ್ನಿಸಿದರೂ, ವೈವಿಧ್ಯದಲ್ಲಿ ಗುಣದಲ್ಲಿ ಗಮನಾರ್ಹವಾಗಿದೆ.

ಬಿ. ಎಮ್. ಶ್ರೀ., ಮಾಸ್ತಿಯವರು ಪ್ರಾರಂಭದಲ್ಲಿ ಒಳ್ಳೆಯ ವಿಮರ್ಶೆಗೆ ಕಾರಣರಾದರು. ಬಿ. ಎಂ. ಶ್ರೀ. ಅವರ ಬರವಣಿಗೆಗಳಲ್ಲಿ, ಭಾಷಣಗಳಲ್ಲಿ, ಕನ್ನಡಾಭಿಮಾನ, ಪ್ರಾಚೀನ ಕನ್ನಡ ಕಾವ್ಯವನ್ನು ಕುರಿತ ಹೆಮ್ಮೆ– ಇವುಗಳನ್ನ ಹೆಚ್ಚಾಗಿ ಕಾಣುತ್ತೇವೆ; ಈ ಅಂಶಗಳು ಈಗಿನ ಸಂದರ್ಭದಲ್ಲಿ ನಿಂತು ನೋಡುವವರಿಗೆ ಭಾವಾತಿರೇಕದಿಂದ ಕೂಡಿರುವಂತೆ ಕಂಡುಬಂದರೂ, ಆಗ ಕನ್ನಡದ ಪುನರುದ್ಧಾರದ ಆ ಸಂದರ್ಭದಲ್ಲಿ ಅವು ಅತ್ಯಾವಶ್ಯಕವಾಗಿದ್ದುವು ಎನ್ನುವುದನ್ನ ಮರೆಯುವಂತಿಲ್ಲ. ಈ ತರಹದ ಬರವಣಿಗೆಗಳು, ಕನ್ನಡಿಗರಲ್ಲಿ ಜಾಗೃತಿ ಮೂಡಲು, ತಮ್ಮ ಪ್ರಾಚೀನ ಸಾಹಿತ್ಯವನ್ನು ಹೆಮ್ಮೆಯಿಂದ ಕಾಣಲು, ಅಭ್ಯಸಿಸಲು ಪ್ರಚೋದಿಸಿದವು.

ಸಾಹಿತ್ಯ ವಿಮರ್ಶೆಯೂ, ಉಳಿದ ಪ್ರಕಾರಗಳಂತೆ ಪಾಶ್ಚಾತ್ಯ ಪ್ರಚೋದನೆಯಿಂದ ಬಂದದ್ದಾದ್ದರಿಂದ, ಪಾಶ್ಚಾತ್ಯ ಕಾವ್ಯಮೀಮಾಂಸೆಯ ಅನೇಕ ಅಂಶಗಳನ್ನ ತನ್ನಲ್ಲಿ ಉಳ್ಳದ್ದಾಯಿತು. ಕು. ವೆಂ. ಪು., ಡಿ.ವಿ.ಜಿ. ಮುಂತಾದ ಹಿರಿಯರ ಸೈದ್ಧಾಂತಿಕ ಬರವಣಿಗೆಗಳಲ್ಲಿ, ಕಾವ್ಯ ವಿಮರ್ಶೆಗಳಲ್ಲಿ, ಶೆಲ್ಲಿ, ವರ್ಡ್ಸ್‌ವರ್ಥ್, ಆರ್ನಾಲ್ಡ್, ಅರಿಸ್ಟಾಟಲ್–ಇವರುಗಳ ಚಿಂತನೆಗಳು ಪ್ರಭಾವ ಬೀರಿದಂತೆ, ಭಾರತೀಯ ಕಾವ್ಯ ಮೀಮಾಂಸೆಯ ಧ್ವನಿ, ರಸಸಿದ್ಧಾಂತಗಳೂ ಸೇರಿಕೊಂಡವು. ಇವುಗಳನ್ನ ಆಗ ಬರುತ್ತಿದ್ದ ಆಧುನಿಕ ಸಾಹಿತ್ಯ ವಿಮರ್ಶೆಗೆ ಬಳಸಿಕೊಂಡಾಗ ಸ್ವಲ್ಪ ಗಲಿಬಿಲಿಯಾದಂತೆ ಕಂಡಬಂದರೂ, ಆಗಿನ ಕಾಲದ ಕಾವ್ಯವನ್ನು ಕುರಿತಾದ ಮನೋದೃಷ್ಟಿಯನ್ನು

ಪ್ರತಿಬಿಂಬಿಸುವಂತಾದುವು. ಕು.ವೆಂ.ಪು. ಬೇಂದ್ರೆ, ಹೇಗೆ ಕಾವ್ಯ ರಚಿಸುವ ಉದ್ಯೋಗ ದಲ್ಲಿ ನಿರತರಾದರೊ, ಹಾಗೆಯೇ ಆ ಕಾವ್ಯದ ಲಕ್ಷಣ ಬರೆವ, ವ್ಯಾಖ್ಯಾನಿಸುವ ಕೆಲಸವನ್ನೂ ಮಾಡಿದರು ; ಇದರಿಂದ ಆಧುನಿಕ ಕಾವ್ಯದ ಬಗ್ಗೆ ಓದುಗರಲ್ಲಿ ಅಭಿರುಚಿ ಮೂಡುವಂತಾಯಿತು. ಆ ಕಾಲದ ಆಧುನಿಕ ಕಾವ್ಯವನ್ನು ಕುರಿತಾದ ವಿಮರ್ಶೆಯಲ್ಲಿ ಕಾವ್ಯವನ್ನು ಜನಕ್ಕೆ ಅರ್ಥೈಸುವ ಕೆಲಸ ನಡೆದಷ್ಟು ಅದರ ಗುಣಾವಗುಣಗಳನ್ನ, ಕುಂದುಕೊರತೆಗಳನ್ನ ವಿಶ್ಲೇಷಿಸಿ ನೋಡಿ ತೂಗುವ ಕೆಲಸ ಅಷ್ಟಾಗಿ ನಡೆದಂತೆ ಕಂಡು ಬರುವುದಿಲ್ಲ.

ಆದರೆ, ಆಗಲೇ ನಮ್ಮ ಪ್ರಾಚೀನ ಕಾವ್ಯಗಳ ಬಗ್ಗೆ ನಿಜವಾದ ಆಸಕ್ತಿ ಮೂಡಿ, ಅವುಗಳನ್ನ ಕುರಿತಾದ ಆಳವಾದ ಅಭ್ಯಾಸದಿಂದ ಕೂಡಿದ ಉಪೋದ್ಘಾತಗಳು ಬಂದುವು ; ಹಾಗೇ ಕಾವ್ಯಪರಿಚಯ ವಿಮರ್ಶೆಯೂ ನಡೆಯಿತು.

ಆಧುನಿಕ ಕನ್ನಡ ಸಾಹಿತ್ಯದ ನವೋದಯದ ಕಾಲದಲ್ಲಿ ಬಂದ ವಿಮರ್ಶೆ ಗಾತ್ರ ದಲ್ಲಿ ಕಿರಿದಾದರೂ ತನ್ನದೇ ಆದ ವೈಶಿಷ್ಟ್ಯವನ್ನು ಪಡೆದು ಆಧುನಿಕ ಕನ್ನಡ ವಿಮರ್ಶಾ ಸಾಹಿತ್ಯಕ್ಕೆ ಭದ್ರ ತಳಹದಿ ಹಾಕಿತು.

ಈಗ ಬರೆಹಗಾರ ತುಂಬ ಸಂಶ್ಲಿಷ್ಟವಾದ ಸಾಹಿತ್ತಿಕ ಸಮಸ್ಯೆಗಳನ್ನು ಎದುರಿಸು ತ್ತಿದ್ದಾನೆ. ಸೃಷ್ಟ್ಯಾತ್ಮಕ ಬರವಣಿಗೆಗಳಲ್ಲಿ ಕಂಡುಬರುತ್ತಿರುವ ಈ ಸಂಶ್ಲಿಷ್ಟತೆ ಇತ್ತೀಚೆಗೆ ವಿಮರ್ಶೆಯ ಲೇಖನಗಳಲ್ಲೂ ತಲೆಹಾಕಿದೆ ; ಅದು ಅನಿವಾರ್ಯವೊ ಏನೊ? ಅನ್ನಿಸಿದ್ದನ್ನ ಯಾವ ಭಿಡೆಯೂ ಇಲ್ಲದೆ ಪ್ರಾಮಾಣಿಕವಾಗಿ ಹೇಳಬೇಕೆನ್ನುವ ಮಾತು ಸಾಹಿತ್ಯದ ಆರೋಗ್ಯಕ್ಕೆ ಮುಖ್ಯವಾದದ್ದಾದರೂ, ಅದು ಕೆಲವು ಸಲ ತೀರ ವೈಯಕ್ತಿಕ ಅತಿರೇಕದ ಅಭಿಪ್ರಾಯಗಳಿಗೂ ಕಾರಣವಾಗಿದೆ. ಒಂದು ಅತಿರೇಕವನ್ನು ಮುಟ್ಟಿದಾಗ ಅದನ್ನೆದುರಿಸಲು ಇನ್ನೊಂದು ಅತಿರೇಕಕ್ಕೆ ಹೋಗಬೇಕಾಗುತ್ತದೆಯೊ ಏನೊ? ಆದರೆ ಈ ಸಂದರ್ಭದಲ್ಲಿ ಟಿ. ಎಸ್. ಎಲಿಯಟ್‌ನ, ವಿಮರ್ಶೆ ಎನ್ನುವುದು "The Common pursuit of true judgement" ಎಂಬ ಮಾತನ್ನು ನೆನಪಲ್ಲಿಟ್ಟು ಕೊಳ್ಳಬೇಕಾಗುತ್ತದೆ.

ಒಂದು ಕಡೆ ಶುದ್ಧ ಸಾಹಿತ್ತಿಕ ವಿಮರ್ಶೆ ಬರುತ್ತಿದ್ದರೆ, ಇನ್ನೊಂದು ಕಡೆ ಆಧುನಿಕ ಶಾಸ್ತ್ರಗಳಾದ ಸಮಾಜ ವಿಜ್ಞಾನ, ಮನೋವಿಜ್ಞಾನ ಮತ್ತು ಅಸ್ತಿತ್ವವಾದ ಗಳಂತಹ ಶುದ್ಧ ತಾತ್ವಿಕ ವಿಚಾರ, ಮಾರ್ಕ್ಸ್‌ವಾದ–ಇವುಗಳ ಹಿನ್ನೆಲೆಯನ್ನೊಳಗೊಂಡ ಸಾಹಿತ್ಯ ವಿಮರ್ಶೆಯೂ ಬರುತ್ತಿದೆ: ಹೀಗೆ, 'non-literary technique' ಗಳನ್ನ ಸಾಹಿತ್ಯದ ಅಂತರಂಗವಾಳವನ್ನಳೆಯಲು ಬಳಸಲಾಗುತ್ತಿದೆ; ಕೆಲವರು ಆಧುನಿಕ ವಿಮರ್ಶಕರು ಉಪಯೋಗಿಸುವ ಅವರ ಕಸುಬಿನ ಉಪಕರಣಗಳು ಇವಾದ್ದರಿಂದ, ಆಳಕ್ಕೆ ಅಗೆವ, ಅಥವಾ ಮೇಲೆ ಮೇಲೆ ಜಾಲಾಡುವ ಕ್ರಿಯೆಯಾಗಿ ಪರಿಣಮಿಸುತ್ತಿದೆ. ವಿಮರ್ಶೆಯ ಈ "ಅ–ಸಾಹಿತ್ತಿಕ ತಂತ್ರ"ಗಳು, ಮನೋವಿಶ್ಲೇಷಣೆಯ "ಸುಪ್ತ ಪ್ರಜ್ಞೆಯನ್ನ, ಅದರ ಪ್ರತಿಮಾ ವಿಧಾನವನ್ನ, ಯೂಂಗನ "archetypes" ತತ್ವ

ವನ್ನ, ಮಾನವಶಾಸ್ತ್ರದ ಅನಾಗರೀಕ ಜನಾಂಗಗಳ ritual ಗಳನ್ನು—ಇತ್ಯಾದಿ ಅಂಶಗಳನ್ನು ಉಪಯೋಗಿಸಿಕೊಳ್ಳುತ್ತಿವೆ. ಹೀಗೆ ಆಧುನಿಕ ವಿಮರ್ಶೆ ವೈವಿಧ್ಯಮಯ ವಾಗಿ ಬೆಳೆಯುತ್ತಿದೆ. ಒಂದು ಕೃತಿಯನ್ನ ಹಿಂಡಿ ಅದರ ಎಲ್ಲ ಸಾರದ ಅರ್ಥಗಳನ್ನೂ ಹೊರತೆಗೆವ "Lemon Squeezing criticism" ಒಂದು ಕಡೆ ಬರುತ್ತಿದ್ದರೆ, ಮೇಲೆ ಹೇಳಿದ, ಅಲ್ಲದೇ ಇನ್ನೂ ಅನೇಕ ಬೇರೆ ಬೇರೆ ಆಧುನಿಕ ಚಿಂತನೆಗಳ ಹಿನ್ನೆಲೆಯುಳ್ಳ ವಿಮರ್ಶೆಯೂ ಬರುತ್ತಿದೆ. ಆದರೆ, ಇದೆಲ್ಲವನ್ನೂ ನಿಯಂತ್ರಿಸಿ ಸಿದ್ಧಾಂತ ಮಾಡುವ ಒಂದು ಹೊಸ ತಿರುವು ಕೊಡುವ ಮಹಾವಿಮರ್ಶಕನೊಬ್ಬ ಇನ್ನೂ ಬರಬೇಕಾಗಿದೆ. ಏಕೆಂದರೆ, ಇಂಗ್ಲಿಷ್‌ನಲ್ಲಿ, ಟಿ.ಎಸ್. ಎಲಿಯಟ್, "poetry workshop"ನ "by-product" ಎಂದು ಕರೆದುಕೊಳ್ಳುವ ಅವನ ವಿಮರ್ಶೆ ಅನೇಕ ಸಂದರ್ಭಗಳಲ್ಲಿ ಪೂರ್ವ ಗ್ರಹ ಪೀಡಿತವಾದದ್ದಾದರೂ, ಅದು ಇಡೀ ಇಂಗ್ಲಿಷ್ ಕಾವ್ಯಮಾರ್ಗ ಬದಲಾಗಲೂ, ವಿಮರ್ಶೆ ಬೇರೆ ಆಗಲೂ ಕಾರಣವಾದದ್ದನ್ನು ಇಲ್ಲಿ ಸ್ಮರಿಸಬಹುದು.

೨

ಡಿ. ವಿ. ಗುಂಡಪ್ಪನವರ 'ಜೀವನಸೌಂದರ್ಯ ಮತ್ತು ಸಾಹಿತ್ಯ, ವಾಙ್ಮಯ ವಿಚಾರದ ಕೆಲವು ವಿಚಾರಗಳು'—ಈ ಸಂಕಲನದಲ್ಲಿ 'ಸಾಹಿತ್ಯ ಮತ್ತು ವಿಜ್ಞಾನ', 'ಸಾಹಿತ್ಯ ಮತ್ತು ಜನಜೀವನ' ಎಂಬ ಪ್ರಬಂಧಗಳು ಮುಖ್ಯವಾದುವು ಗಳು. ಒಂದರಲ್ಲಿ ಸಾಹಿತ್ಯ ಮತ್ತು ವಿಜ್ಞಾನಕ್ಕಿರುವ ಸಂಬಂಧಗಳು, ಸಾಮ್ಯ ವೈಷಮ್ಯಗಳನ್ನು ಕುರಿತು, 'ವಿಜ್ಞಾನ ದೃಷ್ಟಿ'ಯನ್ನು ಕುರಿತು ವಿವೇಚಿಸಲಾಗಿದೆ. ಇನ್ನೊಂದರಲ್ಲಿ ಸಾಹಿತ್ಯ ಮತ್ತು ಜನಜೀವನದ ಸಂಬಂಧವನ್ನು ಕುರಿತು ಚಿಂತಿಸ ಲಾಗಿದೆ. 'ಸಾಹಿತ್ಯ ಶಕ್ತಿ'—ಇದೂ ಕೂಡ ಕಾವ್ಯತತ್ತ್ವವನ್ನು ಕುರಿತಾದ ಜಿಜ್ಞಾಸೆ: "ರಾಷ್ಟ್ರಕನಿಗೆ ಸಾಹಿತ್ಯ ಬೇಕೆ?", "ನವ್ಯತೆಯೇ ಜೀವನ" "ಕಾವ್ಯದಲ್ಲಿ ಜೀವನ ತತ್ತ್ವ ದರ್ಶನ" ಮುಖ್ಯವಾದುವುಗಳು. "ಕಾವ್ಯ ಸಂಸ್ಕಾರವಿಲ್ಲದವನು ಮಾಡುವ ರಾಜ್ಯ ಶಾಸನವು ಕುರುಡನು ಹಿಡಿದ ತುಪಾಕಿ. ಸಾಹಿತ್ಯವಿಲ್ಲದವನ ಸಾರ್ವಜನಿಕನ ಸೇವೆ ಕತ್ತಲು ಕೋಣೆಯಲ್ಲಿ ಮೂಗನು ಬಡಿಸಿದ ಭೋಜನ"[1] ಈ ವಾಕ್ಯ ಶೆಲ್ಲಿಯ ಮಾತುಗಳ ಛಾಯೆ. "ನವ್ಯತೆಯೇ ಜೀವನ; ಹಳಸಿಕೆಯೇ ಸಾವು. ನಮ್ಮ ತೋಟದಲ್ಲಿರುವ ಗಿಡ ಬಳ್ಳಿಗಳು ವರ್ಷವರ್ಷವೂ ಚಿಗುರಿ ವರ್ಷವರ್ಷವೂ ಹೊಸದಾಗಿ ಹೂ ಬಿಡುವ ರೀತಿಯಲ್ಲಿ ನಮ್ಮ ಸಾಹಿತ್ಯವೂ ಪದೇ ಪದೇ ಹೊಸಹೊಸ ಜೀವಕಾಂತಿ ಗಳನ್ನು ತೋರಬೇಕು"[2]—ಮಹತ್ವಪೂರ್ಣ ಮಾತು.

ಡಿ.ವಿ.ಜಿ. ಬರೆದಿರುವುದು ಹೆಚ್ಚಾಗಿ ಸೈದ್ಧಾಂತಿಕ ವಿಮರ್ಶೆ. ಅವರ ಬರವಣಿಗೆ ಪಾಶ್ಚಾತ್ಯ ಮತ್ತು ಭಾರತೀಯ ಕಾವ್ಯಮೀಮಾಂಸೆಯ ಹಿನ್ನೆಲೆಯುಳ್ಳದ್ದು.

---

1 'ಸಾಹಿತ್ಯ ಶಕ್ತಿ', ಪು. ೩೧

2 ಅವೇ, ಪು. ೭೫

ಪಾಶ್ಚಾತ್ಯ ಮತ್ತು ಪೌರ್ವಾತ್ಯ ಚಿಂತನೆಗಳಿಂದ ಪ್ರಭಾವಿತವಾದದ್ದು. ಈ ಎರಡು ಪದ್ಧತಿಗಳಲ್ಲಿನ, ಈಗಿನ ನಮ್ಮ ಪರಿಸ್ಥಿತಿಗೆ ಸರಿಹೊಂದುವಂತಹ ಚಿಂತನೆಗಳನ್ನು ತೆಗೆದುಕೊಂಡು ವಿವೇಚಿಸುವಾಗ ಡಿ.ವಿ.ಜಿ. ಸ್ವತಂತ್ರ ವಿಚಾರಶಕ್ತಿಯನ್ನು ತೋರಿದ್ದರೂ, ಅನೇಕ ಕಡೆ ಅವರ ಒಲವು ಸಾಂಪ್ರದಾಯಿಕ ಮೌಲ್ಯಗಳ ಪರವಾಗಿಯೇ ಇದೆ.

ನಮ್ಮ ಶ್ರೇಷ್ಠ ಕವಿಗಳಲ್ಲೊಬ್ಬರೂ ಚಿಂತಕರೂ ಆದ ಕು.ವೆಂ.ಪು.ರವರ 'ಕಾವ್ಯ ವಿಹಾರ', 'ತಪೋನಂದನ' 'ವಿಭೂತಿ ಪೂಜೆ' 'ರಸೋವೈಸಃ'—ಈ ವಿಮರ್ಶಾ ಲೇಖನಗಳ ಸಂಕಲನಗಳು ಹಲವು ಶ್ರೇಷ್ಠ ವಿಮರ್ಶೆಯನ್ನೊಳಗೊಂಡಿವೆ. 'ಕಾವ್ಯ ವಿಹಾರ'ದಲ್ಲಿನ 'ಕುಮಾರವ್ಯಾಸನ ಕರ್ಣ' ಪ್ರಬಂಧದಲ್ಲಿ ಕುಮಾರವ್ಯಾಸ ಚಿತ್ರಿಸಿರುವ ಪಾತ್ರದ ಪರಿಚಯವನ್ನು ಯಶಸ್ವಿಯಾಗಿ ಮಾಡಿಕೊಡಲಾಗಿದೆ. ಈ ಗ್ರಂಥದ ಲೇಖನಗಳು ಮುಖ್ಯವಾಗಿ ವಿವರಣಾತ್ಮಕವೂ ಪರಿಚಯಾತ್ಮಕವೂ ಆಗಿವೆ; ಇಲ್ಲಿ 'ವಿಮರ್ಶೆ'ಯೂ ಸೇರಿದ್ದರೆ ಇವುಗಳ ಬೆಲೆ ಇನ್ನೂ ಏರುತ್ತಿತ್ತು ಎನ್ನಿಸುತ್ತದೆ. "ತಪೋನಂದನ", ಕು.ವೆಂ.ಪು. ರವರ ಶ್ರೇಷ್ಠ ವಿಮರ್ಶೆಯನ್ನೊಳಗೊಂಡ ಪುಸ್ತಕ: "ಮಹಾಶ್ವೇತೆಯ ತಪಸ್ಸು", "ಪಂಪನಲ್ಲಿ ಭವ್ಯತೆ", "ಸರೋವರದ ಸಿರಿಗನ್ನಡಿಯಲ್ಲಿ" ಇವು ಆನ್ವಯಿಕ ವಿಮರ್ಶೆಗಳಾಗಿವೆ. "ಮಹೋಪಮೆ", "ಕಾವ್ಯ ವಿಮರ್ಶೆಯಲ್ಲಿ ಪೂರ್ಣ ದೃಷ್ಟಿ" "ಪ್ರತಿಮಾ ಮತ್ತು ಪ್ರತಿಕೃತಿ" ಇವು ಸೈದ್ಧಾಂತಿಕವಾಗಿವೆ. "ಪಂಪನಲ್ಲಿ ಭವ್ಯತೆ"–ಆದಿಪುರಾಣದಲ್ಲಿ ಬರುವ ಜಿನಶಿಶುವಿನ ಅಭಿಷೇಕ ವರ್ಣನೆಯು 'ಭವ್ಯತೆ'ಯನ್ನು ಎತ್ತಿತೋರಿಸುತ್ತದೆ; "ಸರೋವರದ ಸಿರಿಗನ್ನಡಿಯಲ್ಲಿ" ಉತ್ತಮ ಆನ್ವಯಿಕ ವಿಮರ್ಶೆಗೆ ಉದಾಹರಣೆ; ಈ ಪ್ರಬಂಧದಲ್ಲಿ ನಾಗವರ್ಮನ 'ಅಚ್ಛೋದ'ದ ವರ್ಣನೆ ಮತ್ತು ಪಂಪ ರನ್ನ ಕುಮಾರವ್ಯಾಸರ 'ವೈಶಂಪಾಯನ ಸರೋವರ'ದ ವರ್ಣನೆಗಳ ತೌಲನಿಕ ವಿಮರ್ಶೆ ಕನ್ನಡಕ್ಕೆ ಅನನ್ಯವಾದದ್ದು. 'ತಪೋನಂದನ'ದಲ್ಲಿ ವಿಮರ್ಶಕನ ಬಗ್ಗೆ ಅವರು ಬರೆದಿರುವ "ನಿಜವಾದ ವಿಮರ್ಶಕ ಮಾರ್ಗದರ್ಶಿಯೂ ಅಲ್ಲದೆ ಹೃದಯಸ್ಪರ್ಶಿಯೂ ಆಗುತ್ತಾನೆ……."; "………… ಅನುಭವಿಸುವ ಸರಸಹೃದಯದೊಂದಿಗೆ ಆಲೋಚಿಸುವ ಸೂಕ್ಷ್ಮ ಮತಿಯೂ ಆವಶ್ಯಕ[1]", ಎಂಬ ಮಾತುಗಳು, ಇಲ್ಲಿ ಸಾರ್ಥಕವಾಗುತ್ತವೆ.

"ಆಂಗ್ಲೇಯ ಭಾಷೆಯ ಮುಖಾಂತರ ನಮ್ಮ ದೇಶಕ್ಕೆ ಆಗಮಿಸಿದ ಪಾಶ್ಚಾತ್ಯ ಸಾಹಿತ್ಯ ಸಂಸ್ಕೃತಿಗಳು ಭಾರತೀಯರ ಬದುಕಿನ ಮೇಲೆ ಬೀರಿದ ಪ್ರಭಾವವೆ ಆಧುನಿಕ ನವೋದಯಕ್ಕೆ ಕಾರಣ. ಕನ್ನಡಕ್ಕೆ ಕೆಲವೆಡೆ ನೇರವಾಗಿ ಬಂದಿದೆ. ಮತ್ತೆ ಕೆಲವೆಡೆ ಉಳಿದ ದೇಶ ಭಾಷಾ ಸಾಹಿತ್ಯಗಳ ಮೂಲಕ ಬಂದಿದೆ.

"ಕವಿತೆಯನ್ನೇ ಗಮನಿಸಿ ಹೇಳುವುದಾದರೆ, ಆ ಪ್ರಭಾವ ನೇರವಾಗಿ ಬಂದಿದೆ ಎಂದೇ ಹೇಳಬೇಕು……..ಹಿಂದಿನ ನವೋದಯಗಳಿಗೆ ಸ್ವಮತಾಭಿಮಾನವೇ ಮುಖ್ಯ

---

1 ತಪೋನಂದನ, ಪುಟ. ೭೯.

ಪ್ರಚೋದನೆಯಾದಂತೆ ಇಂದಿನ ನವೋದಯಕ್ಕೆ ಸ್ವದೇಶಪ್ರೇಮ ಮತ್ತು ಸ್ವರಾಷ್ಟ್ರಾಭಿಮಾನ ಮೂಲವಾದ ಸ್ವಾತಂತ್ರ್ಯ ಸಂಗ್ರಾಮ ಭಾವನೆಯಿಂದಲೇ ಆ ಪ್ರೇರಣೆ ವಿಪುಲ ಪ್ರಮಾಣದಲ್ಲಿ ಒದಗಿತೆಂದು ಹೇಳಬೇಕಾಗುತ್ತದೆ"[1]—ಈ ಮಾತುಗಳು ಆ ಕಾಲದ ಕಾವ್ಯದ ಸ್ವರೂಪಕ್ಕೆ ಕನ್ನಡಿ ಹಿಡಿವಂತಿವೆ. "ರಸೋವೈಸಃ"ದಲ್ಲಿ 'ಸೈದ್ಧಾಂತಿಕ' ಲೇಖನಗಳಿವೆ. ಧ್ವನಿ ರಸಗಳಿಗೆ ಸಂಬಂಧಿಸಿದಂತೆ ವಿಚಾರಧಾರೆಯಿದೆ; "ದರ್ಶನ ವಿಮರ್ಶೆ" ಎಂಬ ಮಾತಿನ ಬಗ್ಗೆ "'ದರ್ಶನ ವಿಮರ್ಶೆ' ಎಂಬ ಪ್ರತ್ಯೇಕ ತಲೆಕಟ್ಟಿನ ಅಗತ್ಯವಿಲ್ಲವೆಂಬುದೇ ನಮ್ಮ ಅಭಿಪ್ರಾಯ"[2] ಎಂಬ ಹಾ.ಮಾ. ನಾಯಕರ ಮಾತು ಸಮಂಜಸವಾಗುತ್ತದೆ; ಏಕೆಂದರೆ 'ದರ್ಶನ ವಿಮರ್ಶೆ'ಯಲ್ಲಿವೆ ಎಂದು ಹೇಳಲಾದ ಅಂಶಗಳು ಶ್ರೇಷ್ಠ ವಿಮರ್ಶೆಯಲ್ಲಿ ಇರಬೇಕಾದ ಗುಣಗಳಾಗಿವೆ.

ಸೈದ್ಧಾಂತಿಕ ವಿಮರ್ಶೆಗಳಲ್ಲಿ, ಪು.ತಿ.ನ. ರವರ 'ಕಾವ್ಯಕತೂಹಲ'ಕ್ಕೆ ಮಹತ್ವದ ಸ್ಥಾನವಿದೆ: ಅದರಲ್ಲಿರುವ 'ರಸ ಸರಸ್ವತಿ'ಯು ಮುನ್ನುಡಿ ಮುಖ್ಯವಾದದ್ದು. "ಕಾವ್ಯದ ಉತ್ಪತ್ತಿಗೆ ಕವಿಗೆ ಹುಟ್ಟಿನಿಂದಲೇ ಪ್ರಾಪ್ತವಾದ ಎರಡು ಗುಣಗಳಿರಬೇಕೆಂದು ತೋರುತ್ತದೆ. ಭವದ ತೀವ್ರ ಸಂವೇದನಾರೂಪವಾದ ಪ್ರಜ್ಞೆ—ಇದನ್ನು ಬೇಕಾದರೆ ಭವನಿಮಜ್ಜನಾಚಾತುರ್ಯ ಎಂದು ಕರೆಯಬಹುದು—ಮತ್ತು ನಿಮಗ್ನತೆಯಿಂದ ಪಾರಾಗಿ ನಿಲ್ಲುವ ಲಘಿಮಾ ಕೌಶಲ. ಈ ಎರಡು ಗುಣ ಕವಿಗಿದ್ದ ಹೊರತು ಕಾವ್ಯ ಸಿದ್ಧಿಸಲಾರದು"[3]. "........ಕಾವ್ಯಭೋಗಿಗಳು ಪ್ರಚೋದಕ ಮತ್ತು ಪ್ರಚಾರಕ ಸಾಹಿತ್ಯವನ್ನು ಕವಿಯಿಂದ ಅಷ್ಟಾಗಿ ಅಪೇಕ್ಷಿಸುವುದಿಲ್ಲ. ಅವರು ಅಪೇಕ್ಷಿಸುವುದು ರಸವಹನ ಗುಣವನ್ನು; ತತ್ತ್ವಾನ್ವೇಷಣೆಯನ್ನಲ್ಲ, ತತ್ತ್ವ ಪ್ರಚಾರವನ್ನಲ್ಲ. ಅದ್ಯತನ ರಾಗದ್ವೇಷ ನ್ಯಾಯಾನ್ಯಾಯ ಸುಖ ದುಃಖ ಪ್ರಾಚುರ್ಯೋದ್ಗಾರವನ್ನಲ್ಲ—ಭಾವದ ಉಪಶಮನವನ್ನು....ಸಂಗೀತದಂತೆ ಕಾವ್ಯವೂ ವಾಸ್ತವದ ನಿರ್ಬಂಧವನ್ನು ಎಷ್ಟರಮಟ್ಟಿಗೆ ಕಳೆದುಕೊಂಡರೆ ಅಷ್ಟರಮಟ್ಟಿಗೆ ಭೋಗ್ಯವಾಗುತ್ತದೆ ದಿವ್ಯವಾಗುತ್ತದೆ"[4]—ಈ ಮಾತುಗಳು ಅವರ ಕಾವ್ಯವನ್ನು ಕುರಿತಾದ ದೃಷ್ಟಿಯನ್ನು ಹೇಳುವುದಲ್ಲದೆ ಬಹುಶಃ ಆ ತಲೆಮಾರಿನ ಕವಿಗಳ ಬಹಳ ಪ್ರಮಾಣದ ಕಾವ್ಯದ ಸ್ವರೂಪವನ್ನೂ ಹೇಳುತ್ತದೆ, ಎನ್ನಿಸುತ್ತದೆ.

ವಿ. ಸೀ. ಯವರು "ಸಾಹಿತ್ಯ ವಿಮರ್ಶೆಗಳಲ್ಲಿ ಅರ್ಥ ಮತ್ತು ಮೌಲ್ಯ" ಎಂಬ ಪುಸ್ತಕದಲ್ಲಿ, ತಮ್ಮ ಮನಸ್ಸು ಹರಿದತ್ತ ಆಲೋಚನೆಗಳನ್ನು ಹರಿದು ಬಿಡುತ್ತಾರೆ ಎನ್ನಿಸಿ, ಯಾವುದೂ ಹಿಡಿತಕ್ಕೆ ಸಿಕ್ಕುವುದಿಲ್ಲ. ಆದರೆ ಅಲ್ಲಿನ ಈ ಮಾತುಗಳು

---

1 ವಿಭೂತಿ ಪೂಜೆ

2 "ಸಮೀಕ್ಷೆ", ಪುಟ, ೧೬

3 ಕಾವ್ಯಕುತೂಹಲ, ಪು. ೧

4 ಕಾವ್ಯಕುತೂಹಲ, ಪು. ೧೦.

ಗಮನಾರ್ಹ : "........ಈ ಘರ್ಷಣೆಗೆ ಒಡ್ಡಿ ನಿಂತು ಹೊಸ ಪ್ರಕಾರ ವೀರ್ಯವಂತವಾಗಿರುವಾಗ ಅವನ್ನು ಎದುರಿಸದ ಹೊರತು ಹಳತಿಗೆ ನಿಸ್ತಾರವಿಲ್ಲ"[1] ; "ಇಂದಿನ ಕವಿ ಇಂದಿನ ಬೇರೆ ಬಗೆಯ ಬದುಕಿನ ಅಗತ್ಯಕ್ಕೆ ಮಿಡಿದ ಹೊರತು ನಿಸ್ತಾರವಿಲ್ಲ"[2]—ಈ ಮಾತುಗಳು ಅರ್ಥಪೂರ್ಣ.

ಎಸ್. ವಿ. ರಂಗಣ್ಣನವರ "ಶಾಕುನ್ತಲ ನಾಟಕ" "ಮಾಲವಿಕಾಗ್ನಿ ಮಿತ್ರ" ನಾಟಕ ವಿಮರ್ಶೆ ; ಬಿಡಿಲೇಖನಗಳ ಸಂಗ್ರಹ "ಹೊನ್ನಶೂಲ" ; "ಶೈಲಿ–೧" ; "ಶೈಲಿ–೨"—ಈ ಗ್ರಂಥಗಳು ಅವರ ಉದ್ದಾಮ ಪಾಂಡಿತ್ಯಕ್ಕೆ ನಿದರ್ಶನಗಳು ; ಅವರು ಆಧುನಿಕ ವಿಮರ್ಶೆಯ ಪಿತಾಮಹರು. ಆದರೆ, ಅವರ ಶೈಲಿ ಅನೇಕ ಕಡೆಗಳಲ್ಲಿ ಕನ್ನಡದ ಜಾಯಮಾನಕ್ಕೆ ಹೊರತಾಗಿ ಅಭಿಪ್ರಾಯಗಳು ಸ್ಪಷ್ಟವಾಗುವುದಿಲ್ಲ.

ದ. ರಾ. ಬೇಂದ್ರೆಯವರ "ಸಾಹಿತ್ಯ ಹಾಗೂ ವಿಮರ್ಶೆ" ; ಮತ್ತು "ಸಾಹಿತ್ಯ ಸಂಶೋಧನೆ" ; "ನಗೆಯ ಹೊಗೆ" "ಉದ್ಧಾರ" ನಾಟಕಗಳಿಗೆ ಬರೆದ ಮುನ್ನುಡಿಗಳು ; "ಮಲ್ಲಿನಾಥಪುರಾಣದ ಪ್ರಶಸ್ತಿಲೇಖನ" "ಕುಮಾರ ವ್ಯಾಸನ ಉತ್ತರಕುಮಾರ". ಸಾಹಿತ್ಯ ಸೃಷ್ಟಿ, ರಸೋತ್ಪಾದನೆ, ರಸಾಸ್ವಾದ ಇತ್ಯಾದಿ ವಿಷಯಗಳನ್ನು ಚರ್ಚಿಸಿದ್ದಾರೆ ; ಬೇಂದ್ರೆಯವರ ಮನಸ್ಸು ಪಂಪರನ್ನರಿಗಿಂತ ವಚನಕಾರರು ಹಾಗೂ ದಾಸಸಾಹಿತ್ಯದ ಕಡೆ ಒಲಿದಿರುವುದು ಮುಖ್ಯವಾದ ಅಂಶ. "ಬೇಂದ್ರೆಯವರ ವಿಮರ್ಶೆ ಸ್ವತಂತ್ರ ವಿಚಾರಗಳಿಂದ ಕಂಗೊಳಿಸುತ್ತಿದೆಯಾದರೂ ಅದರ ಹರವು ಸಾಕಷ್ಟಿಲ್ಲ............ಬೇಂದ್ರೆಯವರನ್ನು ಈ ಕಾಲದ ಪ್ರಾತಿನಿಧಿಕ ವಿಮರ್ಶಕರೆಂದು ಕರೆಯಲು ಸಾಧ್ಯವಿಲ್ಲ."[3] 'ಮನ್ವಂತರ'ದಲ್ಲಿ ಬೇಂದ್ರೆಯವರು ಕಾವ್ಯಸೃಷ್ಟಿಯ ಬಗ್ಗೆ ಬರೆದಿರುವ ದೀರ್ಘವಾದ ಪ್ರಬಂಧ, ಅವರೇ ಕವಿಯಾಗಿ ಎದುರಿಸಿದ ಸಮಸ್ಯೆಗಳನ್ನು ವಿವೇಚಿಸುತ್ತದೆ ; ಅದು ಒಂದು ರೀತಿಯಲ್ಲಿ ಕವಿ–ಅಂಬಿಕಾತನಯದತ್ತರ ಆತ್ಮಕಥನವಾಗಿದೆ. ಆದರೆ ಅಲ್ಲಿ ಬರುವ ಅನೇಕ ಜ್ಯೋತಿಶ್ಶಾಸ್ತ್ರದ ರೀತಿಯ ಚಿತ್ರಗಳೂ ಛಾರ್ಟ್‌ಗಳೂ 'ಗೂಢ'ವಾಗಿಬಿಡುತ್ತವೆ.

ರಂ. ಶ್ರೀ. ಮುಗಳಿಯವರ "ರನ್ನನ ಕೃತಿರತ್ನ" "ಸಾಹಿತ್ಯೋಪಾಸನೆ" "ಕನ್ನಡ ಸಾಹಿತ್ಯ ಚರಿತ್ರೆ" "ತವನಿಧಿ"–ಈ ಗ್ರಂಥಗಳಲ್ಲಿ "ಕನ್ನಡ ಸಾಹಿತ್ಯ ಚರಿತ್ರೆ" ಮುಖ್ಯವಾದದ್ದು. ಪ್ರಾಚೀನ ಕನ್ನಡ ಸಾಹಿತ್ಯ ಚರಿತ್ರೆಯನ್ನು ಸಮಗ್ರವಾಗಿ ಇಲ್ಲಿ ಬರೆಯಲಾಗಿದೆ ; ಆದರೆ ಕವಿಗಳ ಬಗ್ಗೆ ಕಾವ್ಯಗಳ ಬಗ್ಗೆ ಬರೆವಾಗ, ಗ್ರಂಥಕಾರರ ಸ್ವಂತ ಸಂಶೋಧನೆಯಿಂದ ಹುಟ್ಟಿದ ಸ್ವಂತ ಅಭಿಪ್ರಾಯಗಳಿಗಿಂತ, ಬೇರೆ ವಿದ್ವಾಂಸರ ಅಭಿಪ್ರಾಯಗಳೇ ಹೆಚ್ಚಾಗಿ ಬರುತ್ತವೆ. ಹಾಗೆ ತಾವು ಹೇಳಬೇಕಾಗಿ ಬಂದಾಗ ಸಾಮಾನ್ಯವಾಗಿ ಅಡ್ಡಗೋಡೆಯ ಮೇಲೆ ದೀಪವಿಡುವ ಕೆಲಸ ಮಾಡುತ್ತಾರೆ.

1 ಸಾ. ವಿ. ಅರ್ಥ ಮತ್ತು ಮೌಲ್ಯ, ಪು. ೯.

2 ಅದೇ, ೯೭.

3 ಯುಗಧರ್ಮ ಹಾಗೂ ಸಾಹಿತ್ಯದರ್ಶನ, ಪುಟ ೨೮೦

ತೀ. ನಂ. ಶ್ರೀಯವರ "ಕಾವ್ಯಮೀಮಾಂಸೆ" "ಕಾವ್ಯಸಮೀಕ್ಷೆ" "ಸಮಾಲೋಕನ" ಮಹತ್ವಪೂರ್ಣವಾದ ಗ್ರಂಥಗಳು. ತೀ. ನಂ. ಶ್ರೀ ಅವರ ಗದ್ಯ ಸರಳ, ಸ್ಪಷ್ಟ; ಮೊದಲನೆಯದು ಭಾರತೀಯ ಕಾವ್ಯಮೀಮಾಂಸೆ ಬೆಳೆದುಬಂದ ರೀತಿಯನ್ನು ವಿವರಿಸುವ ವಿವೇಚಿಸುವ ಶ್ರೇಷ್ಠಗ್ರಂಥ. ಭರತ ಭಾಮಹ ದಂಡಿಗಳಿಂದ ಹಿಡಿದು ಆನಂದವರ್ಧನನವರೆಗೆ ಅಲಂಕಾರ ಕಾವ್ಯ ಕಾವ್ಯಪ್ರಯೋಜನ ಧ್ವನಿ ರಸ–ಇತ್ಯಾದಿ ಸಿದ್ಧಾಂತಗಳನ್ನು ಕುರಿತಾದ ಚಿಂತನೆ ಬೆಳೆದು ಬಂದ, ವಿಕಾಸಹೊಂದಿದ, ಕ್ರಮವನ್ನು ಒಂದೆಡೆ ಹಿಡಿದಿಟ್ಟಿರುವ "ಅಧ್ವಕೃತಿ". "ಕಾವ್ಯ ಸಮೀಕ್ಷೆ" ಯಲ್ಲಿರುವ "ಜನ್ನನ ಕಾವ್ಯಗಳಲ್ಲಿ ಪ್ರಣಯ ನಿರೂಪಣೆ", "ಸಮಾಲೋಕನ"ದಲ್ಲಿರುವ "ಹೊಸಗನ್ನಡ ಕಾವ್ಯದ ಲಯಗಳು"–ವಿಶಿಷ್ಟವಾದ ಪ್ರಬಂಧಗಳು.

ಮಾಸ್ತಿಯವರ "ಸಾಹಿತ್ಯ" ೧೯೨೪ರಲ್ಲಿ ಪ್ರಕಟವಾಯಿತು; ಆಮೇಲೆ, ನನ್ನ ಸಮೀಕ್ಷೆಯ ಕಾಲಪರಿಧಿಯೊಳಗೆ ಬರುವ ಅವರ ಗ್ರಂಥ ರವೀಂದ್ರರ ಮೇಲೆ ಬರೆದಿರುವಂಥದು; ಇಲ್ಲಿ "ವಿಮರ್ಶೆಗಿಂತ ಪರಿಚಯ ಹಾಗೂ ರಸಾಸ್ವಾದಕ್ಕೆ ಹೆಚ್ಚು ಮಹತ್ವ ಸಿಕ್ಕಿದೆ". "ಮಾಸ್ತಿಯವರು ನಿರ್ಮಿಸಿದ ಸಾಹಿತ್ಯ ಹಾಗೂ ವಿಮರ್ಶೆ ಪೂರಕವಾಗಿಲ್ಲ" ಎಂಬ ಅಭಿಪ್ರಾಯವಿದ್ದರೂ, ಅವರು ನಮ್ಮ ಶ್ರೇಷ್ಠ ವಿಮರ್ಶಕರಲ್ಲೊಬ್ಬರು ಎನ್ನುವುದನ್ನ ಮರೆಯುವಂತಿಲ್ಲ.

೩

ಗೋಕಾಕರು ಪಾಶ್ಚಾತ್ಯ ಸಾಹಿತ್ಯದಲ್ಲಿ ಆದರಲ್ಲೂ ಇಂಗ್ಲಿಷ್ ಸಾಹಿತ್ಯದಲ್ಲಿ ಪಂಡಿತರು: ಕನ್ನಡದಲ್ಲಿ, ಬಹುಶಃ ಎಲ್ಲ ಸಾಹಿತ್ಯಪ್ರಕಾರಗಳಲ್ಲೂ ಕೈಯಾಡಿಸಿದವರು, ಸಣ್ಣ ಕತೆಯೊಂದನ್ನುಳಿದು. ನಮ್ಮ ಸಂಪ್ರದಾಯಗಳಿಗೂ ಚಿಂತನೆಗಳಿಗೂ ಪಾಶ್ಚಾತ್ಯ ಸಂಪ್ರದಾಯ ಚಿಂತನೆಗಳಿಗೂ ಘರ್ಷಣೆ ಬರದಂತೆ 'ಸಮನ್ವಯ' ಗೊಳಿಸುವ ಇಚ್ಛೆಯಿಂದ ಸಾಹಿತ್ಯ ನಿರ್ಮಿಸಿದವರು, ವಿಮರ್ಶೆ ಬರೆದವರು; ಹಾಗಾಗಿ ಆಂಗ್ಲಸಾಹಿತ್ಯದ ಎಲ್ಲ ಮಾದರಿಗಳನ್ನ ಕನ್ನಡಕ್ಕೆ ತಕ್ಷಣ ತರಲು ಯತ್ನಿಸಿದರು. ಆದ್ದರಿಂದ ಅವರ "ನವ್ಯತೆ ಹಾಗೂ ಕಾವ್ಯಜೀವನ" ಪ್ರಮುಖ ವಿಮರ್ಶಾಕೃತಿಯಾಗುತ್ತದೆ: "ಸಾಹಿತ್ಯ ಹಾಗೂ ನವ್ಯತೆ", "ನವ್ಯಕಾವ್ಯದ ರೀತಿ" ಈ ಪ್ರಬಂಧಗಳಲ್ಲಿ ಕಾವ್ಯದಲ್ಲಿ 'ನವ್ಯತೆ'ಯ ಬಗ್ಗೆ ಚರ್ಚಿಸಿದ್ದಾರೆ. "'ನವ್ಯಕಾವ್ಯ'ವೆಂದರೆ 'ಆಧುನಿಕ ಕಾವ್ಯ'ದಿಂದ ಬೇರೆಯಾದ ಕಾವ್ಯ, ವಿಶೇಷ ತಂತ್ರ–ವಿಧಾನಗಳನ್ನು ಪಡೆದ ಕಾವ್ಯವೆಂಬರ್ಥದಲ್ಲಿ ಈ ಶಬ್ದ ಉಪಯೋಗಿಸುತ್ತಿದ್ದೇನೆ."[1] ಅಂದರೆ ಅವರ ಅರ್ಥದಲ್ಲಿ ಎರಡೂ ಒಂದೇ ದೃಷ್ಟಿಯುಳ್ಳವು, ಎರಡರ 'ತಂತ್ರ' ಮಾತ್ರ ಬೇರೆ. ಆದರೆ, ಬರೆವ ರೀತಿ ಅಲ್ಲಿ ಅಭಿವ್ಯಕ್ತವಾಗುವ ಭಾವಕ್ಕೆ ಅನಿವಾರ್ಯವಾಗಿದ್ದಾಗಲೇ ಆ ಕಾವ್ಯ ಶ್ರೇಷ್ಠವಾಗುತ್ತದೆ; 'ತಂತ್ರ' ಮಾತ್ರ ಬೇರೆಯಾಗುವುದಾದರೆ, ಇತ್ತೀಚಿನ ಕಾವ್ಯದ

---

1 ನವ್ಯತೆ ಹಾಗೂ ಕಾವ್ಯಜೀವನ, ಪುಟ ೨೪.

ಬೆಳವಣಿಗೆ ಅರ್ಥರಹಿತವಾಗುತ್ತದೆ. ಆದರೆ ಆಗಲೇ ಬಂದಿರುವ ಸಾರ್ಥಕ ಕವನಗಳನ್ನ ಕೆಲವನ್ನ ಗಮನಿಸಿದರೆ ಸಾಕು, ಅಲ್ಲಿ 'ತಂತ್ರ' ಮಾತ್ರ ಬೇರೆಯಾಗಿರದೆ, ಪದ್ಯದಲ್ಲಿ ಸ್ಫೈತಳೆದ ಭಾವಕ್ಕೆ ಅನಿವಾರ್ಯವಾಗಿ ಬಂದಿರುವುದನ್ನ ಗಮನಿಸಬಹುದಾಗಿದೆ. ಈ ಮಾತನ್ನ ಯಾವ ಕಾವ್ಯದ ಸಾರ್ಥಕತೆಯನ್ನು ಕುರಿತು ಮಾತಾಡುವಾಗಲೂ ಹೇಳಬಹುದಾದದ್ದು, ಕಾವ್ಯಸ್ವರೂಪದ ತಪ್ಪುಗ್ರಹಿಕೆಯಿಂದಲೇ "ನವ್ಯ ಕಾವ್ಯವು ಒಂದು ವಿಧಾನ, ಒಂದು ತಂತ್ರ, ಅದು ಯಾವ ಯುಗದಲ್ಲೂ ಬಳಕೆಗೆ ಬರಬಲ್ಲದು"[1] ಎನ್ನುವಂತಹ ಮಾತುಗಳನ್ನ ಅವರು ಬರೆಯುವಂತಾಯಿತು, ಎನ್ನಿಸುತ್ತದೆ. "ಗೂಗೆ, ಜೇಡ, ಸಿಗರೇಟಿನ ತುಂಡು, ಗವಳಿಗನ ಎಮ್ಮೆ—ಇವೆಲ್ಲಾ ನವ್ಯ ಕಾವ್ಯದ ಪ್ರತಿಮೆಗಳಾಗಿವೆ."[2] ಇತ್ತೀಚಿನ ಕಾವ್ಯ ಬಹಳವನ್ನೊಳಗೊಳ್ಳುವ ಪ್ರಜ್ಞೆಯಿಂದ ಮೂಡಿ ಬರುತ್ತಿದೆ ಎಂಬ ಮಾತನ್ನು ಒಪ್ಪಿಕೊಳ್ಳಬಹುದಾದರೂ, ಕಾವ್ಯದಲ್ಲಿ ಏನು ಬಂದರೂ ಅದು ದೀಪ್ತವಾಗಿ ಬಂದರೆ ಅದು ಸಾರ್ಥಕವಾಗಬಲ್ಲುದೇ ವಿನಾ ಬರೀ ಸಿಗರೇಟು ಎಮ್ಮೆ ಫ್ಯಾಕ್ಟರಿ—ಪದಗಳನ್ನ ಕಾವ್ಯದಲ್ಲಿ ತಂದಮಾತ್ರಕ್ಕೆ ಕಾವ್ಯ ಹೊಸದಾಗಲಾರದು, ಎಂದು ಮತ್ತೆ ಹೇಳಬೇಕಾಗಿಲ್ಲ.

ನಮ್ಮ ಶ್ರೇಷ್ಠ ಕವಿಗಳಲ್ಲೊಬ್ಬರಾದ ಗೋಪಾಲಕೃಷ್ಣ ಅಡಿಗರ "ಮಣ್ಣಿನ ವಾಸನೆ" ಇತ್ತೀಚೆಗೆ ಬಂದ ಮಹತ್ವಪೂರ್ಣ ಗ್ರಂಥಗಳಲ್ಲೊಂದು; ಅಲ್ಲಿಯವರೆಗೆ ಬಿಡಿಲೇಖನಗಳಲ್ಲಿ ಅವರ ಕಾವ್ಯ ಮತ್ತು ಜೀವನವನ್ನ ಕುರಿತಾದ ಚಿಂತನೆಗಳು ಹಂಚಿಹೋಗಿದ್ದವು. ಈ ಗ್ರಂಥದಲ್ಲಿ ಅವು ಒಟ್ಟಿಗೇ ಸಿಕ್ಕುವುದು, ಆ ವಿಷಯಗಳ ಬಗ್ಗೆ ಅವರ ವಿಚಾರಗಳೇನು ಎಂಬುದನ್ನ ಸಮಗ್ರವಾಗಿ ತಿಳಿಯಲು ಸಾಧ್ಯವಾಗಿದೆ. ಅಡಿಗರಿಗೆ ಜೀವನದೃಷ್ಟಿ ಬೇರೆಯಲ್ಲ ಕಾವ್ಯದೃಷ್ಟಿ ಬೇರೆಯಲ್ಲ; ಕಾವ್ಯ, ಜೀವನವನ್ನ ಅರ್ಥಮಾಡಿಕೊಳ್ಳಲು ನಡೆಸುವ ಹೋರಾಟ. ಆದ್ದರಿಂದಲೇ ಭಾಷೆಯ ಬಳಕೆಯಲ್ಲಿ ಅವರದು ಅನ್ವೇಷಕ ದೃಷ್ಟಿ; ಭಾಷೆಯ ಸಾಧ್ಯತೆಯ ಅನ್ವೇಷಣೆಯ ಮೂಲಕವೆ, ಜೀವನದ ಅರ್ಥಪೂರ್ಣ ಅನ್ವೇಷಣೆಯಲ್ಲೂ ಅವರು ತೊಡಗುತ್ತಾರೆ. ಇಲ್ಲಿ ಕಾವ್ಯ ಸೃಷ್ಟಿಯ ಬಗ್ಗೆ ಅನೇಕ ಮಹತ್ವಪೂರ್ಣವಾದ ಮಾತುಗಳನ್ನಾಡಿದ್ದಾರೆ: "ಗದ್ಯ ವಿವರಣೆ ಜಾಗೃತ ಮನಸ್ಸಿನ ಕೆಲಸ; ಕಾವ್ಯರಚನೆ ಸುಪ್ತಚೇತನ, ಜಾಗೃತ ಮನಸ್ಸುಗಳ ಅಪೂರ್ವ ಸಹಕಾರದ, ಅಥವಾ ಸ್ವಪ್ನ, ಜಾಗೃತಿ, ಪರಿಶ್ರಮಗಳ ಏಕತ್ರಿಸಂಯೋಗದ ಫಲ."[3] "ಜೀವಪ್ರಪಂಚಕ್ಕೆ ಸೇರಿದ ಸಾಹಿತ್ಯದಲ್ಲಿ ಎಂಥೆಂಥ ಉದಾತ್ತವಾದ ವಿಚಾರಗಳೂ, ಕಲ್ಪನೆಗಳೂ ಇರಲಿ, ಅದರಲ್ಲೂ ಈ ಪಾರ್ಥಿವಲೋಕದ ವಾಸನೆ ಹೊಡೆಯುತ್ತಿದ್ದರೆ ಮಾತ್ರ ಅದು ನಿಜವಾದದ್ದೂ ಸಾರ್ಥಕವಾದದ್ದೂ ಆಗಬಲ್ಲುದು. ಈ ಮಣ್ಣಿನ ವಾಸನೆ ಇಲ್ಲದ್ದು ಅದು ಮೃತ್ಯುಲೋಕಕ್ಕೆ ಅಥವಾ ಅಮೃತಲೋಕಕ್ಕೆ

---

[1] ನವ್ಯಧ್ವನಿ, ಪುಟ ೬.

[2] ಅದೇ, ಪುಟ ೧೦.

[3] ಮಣ್ಣಿನ ವಾಸನೆ, ಪುಟ, ೧೨೪.

ಸೇರಿದ್ದಲ್ಲದೆ, ನಮ್ಮ ಈ ಬಡ ಮೃಣ್ಮಯಲೋಕಕ್ಕೆ ಸೇರಿದ್ದಂತೂ ಅಲ್ಲ''[1] ''ಕಾವ್ಯ ಎಂದರೆ ಅನೇಕ, ಪರಸ್ಪರ ವಿರುದ್ಧವೆನ್ನಿಸುವಂಥ ಮೂಲ ವಸ್ತುಗಳ ಹಠಾತ್ ಸಂಯೋಗದಿಂದ ಹುಟ್ಟುವ ಹೊಸ ವಸ್ತು. ಒಂದೊಂದು ಕಾಲದಲ್ಲಿ ಒಂದೊಂದು ಮೂಲ ವಸ್ತುವಿನ ಮೇಲೆ ಘಾತ ಬಿದ್ದು ಕಾವ್ಯಕ್ಕೆ ಸಮಕಾಲೀನತೆ ಬರುತ್ತದೆ.''[2] ''ಸಾಹಿತ್ಯಕ್ಕೆ ರಾಜ್ಯಾಶ್ರಯ'' ಎಂಬ ಪ್ರಬಂಧದಲ್ಲಿ ಕೆಲವು ಮುಖ್ಯ ಸಮಸ್ಯೆಗಳನ್ನು ಕುರಿತು ಚರ್ಚಿಸಿದ್ದಾರೆ: ಸರ್ಕಾರ ಕೊಡಬಹುದಾದ ಬಹುಮಾನದ ಪ್ರಲೋಭನೆಗೆ ಒಳಗಾದರೆ ಸಾಹಿತ್ಯ ನಿರ್ವೀರ್ಯವಾಗಬಹುದು; ಲೇಖಕ ತನ್ನತನ ಬಲಿಕೊಡುವಂತಾಗಬಹುದು; ಆದ್ದರಿಂದ ''ನಮ್ಮ ಸರಕಾರ ಸಾಹಿತ್ಯದ ಬಗ್ಗೆ ತೋರಿಸುತ್ತಿರುವ ಈ ಕಳಕಳಿ ಪ್ರಾಮಾಣಿಕವಾದದ್ದಾದರೆ ಅದು ಮಾಡಬಹುದಾದ ಅತ್ಯುತ್ತಮ ಕೆಲಸ ಎಂದರೆ ಲೇಖಕರನ್ನು ಅವರವರ ಪಾಡಿಗೆ ಬಿಟ್ಟುಬಿಡುವುದು''[3]. ಈ ಸಂದರ್ಭದಲ್ಲಿ ಲೇಖಕರಲ್ಲೇ ಏರ್ಪಡಬಹುದಾದ ಸಹಕಾರ ಸಂಘಗಳನ್ನು ಕುರಿತು ಯೋಚಿಸಿದ್ದಾರೆ: ''ಲೇಖಕರು ಸರಕಾರದ ಆಶ್ರಯ ಹುಡುಕುವುದನ್ನು ಬಿಟ್ಟು ಒಬ್ಬರೊಡನೊಬ್ಬರು ಸಹಕರಿಸುವುದನ್ನು ಕಲಿತು ತಮ್ಮ ಕಾಲ ಮೇಲೇ ತಾವು ನಿಲ್ಲಲು ಯತ್ನಿಸುವುದಾದರೆ ಆ ಸಮಸ್ಯೆಗೆ ಪರಿಹಾರ ಸಿಕ್ಕಬಹುದು.''[4] ಸಮಾಜವಾದದ ಬಗ್ಗೆ ಪ್ರಜಾಪ್ರಭುತ್ವದ ಬಗ್ಗೆ ಮಾತಾಡುವಾಗ, ಲೇಖಕನ, ಬುದ್ಧಿಜೀವಿಯ ಆರೋಗ್ಯಕರವಾದ ಬೌದ್ಧಿಕ ಬೆಳವಣಿಗೆಗೆ ಇರಬೇಕಾದ ಪರಿಸ್ಥಿತಿಯ ಬಗ್ಗೆ ಅವರಿಗಿರುವ ಕಳಕಳಿಯನ್ನು ನಾವು ಕಾಣಬಹುದು. ಆದರೆ ಹಾಗೆ ಮಾತಾಡುವಾಗ ಅವರು ಪಟ್ಟಭದ್ರ ಹಿತಾಸಕ್ತಿಗಳ ಪರವಾಗಿ ಮಾತಾಡುತ್ತಿದ್ದಾರೇನೊ ಅನ್ನಿಸಿಬಿಡುತ್ತದೆ.

ಕೆ. ಡಿ. ಕುರ್ತಕೋಟಿಯವರ ''ಯುಗಧರ್ಮ ಹಾಗೂ ಸಾಹಿತ್ಯದರ್ಶನ'' ಮತ್ತು 'ಮನ್ವಂತರ'ದ ಎರಡನೇ ಸಂಪುಟದಲ್ಲಿನ ಇತ್ತೀಚಿನ ಕಾವ್ಯದ ಬಗ್ಗೆ ಬರೆದಿರುವ ದೀರ್ಘಲೇಖನ—ಇವು ಮುಖ್ಯವಾದುವುಗಳು. ಮೊದಲನೆಯದರಲ್ಲಿ ಸಮಗ್ರ ಕನ್ನಡ ಸಾಹಿತ್ಯದ ಸಮೀಕ್ಷೆ ಇದೆ: ಕಾವ್ಯ, ಸಣ್ಣ ಕಥೆ, ಕಾದಂಬರಿ, ಸಾಹಿತ್ಯ-ವಿಮರ್ಶೆ–ಹೀಗೆ ಇಡೀ ಸಮಕಾಲೀನ ಕನ್ನಡ ಸಾಹಿತ್ಯವನ್ನ ಕುರಿತ ವಿಮರ್ಶೆ ಕುರ್ತಕೋಟಿಯವರಿಂದ ನಡೆದದ್ದೇ ಕನ್ನಡದಲ್ಲಿ ಪ್ರಥಮ ಎನ್ನಬೇಕು. ಇಲ್ಲಿ, ನಮ್ಮ ಪ್ರಮುಖ ಬರೆಹಗಾರರ ಬಗ್ಗೆ, ಕವಿಗಳ ಬಗ್ಗೆ, ವಿಮರ್ಶಕರ ಬಗ್ಗೆ, ಕನ್ನಡದಲ್ಲಿನ ಮುಖ್ಯ ಟ್ರೆಂಡ್‌ಗಳ ಬಗ್ಗೆ ಬರೆದಿದ್ದಾರೆ; ಮೌಲ್ಯವಿವೇಚನೆಯ ಪ್ರಯತ್ನ ಮಾಡಿದ್ದಾರೆ; ಇಂದಿನ ಕನ್ನಡ ಸಾಹಿತ್ಯ ಸೃಷ್ಟಿಯ ಸಂದರ್ಭದಲ್ಲಿ, ಲೇಖಕರ ಸ್ಥಾನವನ್ನ ನಿರ್ಧರಿಸಲು ಯತ್ನಿಸಿದ್ದಾರೆ. ಇಷ್ಟು ಅಗಾಧವಾದ ಕಾರ್ಯ ಮಾಡಲು ತೊಡಗಿದಾಗ, ಸಹಜವಾಗಿಯೇ ಅನೇಕ ಕಡೆಗಳಲ್ಲಿ

---

1 ಮಣ್ಣಿನ ವಾಸನೆ, ಪುಟ, ೧೨೫.

2 ಅದೇ ಪುಟ, ೧೮೯.

3 ಅದೇ, ಪುಟ ೯೦.

4 ಅದೇ, ಪುಟ ೯೩.

ಎಡವಿದ್ದಾರೆ. ಹಾಗೇ 'ಮನ್ವಂತರ'ದ ಇತ್ತೀಚಿನ ಕಾವ್ಯದ ಬಗ್ಗೆ ಬರೆದಿರುವ ದೀರ್ಘಲೇಖನವೂ ದೋಷರಹಿತವಾಗಿಲ್ಲ. ಇಷ್ಟೆಲ್ಲಾ ಹೇಳಿಯೂ ನಮ್ಮಲ್ಲಿರುವ ಶ್ರೇಷ್ಠ ವಿಮರ್ಶಕರಲ್ಲಿ ಕುರ್ತಕೋಟಿಯವರು ಒಬ್ಬರು.

ಸುಮತೀಂದ್ರನಾಡಿಗರು "ಎಂ. ಗೋಪಾಲಕೃಷ್ಣ ಅಡಿಗ: ಒಂದು ಕಾವ್ಯಾ ಭ್ಯಾಸ" ಎಂಬ ಗ್ರಂಥದಲ್ಲಿ ಅಡಿಗರ ಕಾವ್ಯವನ್ನ 'ಕೂಪಮಂಡೂಕ'ದವರೆಗೆ ಪರಿಚಯಿಸಿಕೊಟ್ಟಿದ್ದಾರೆ. 'ಕೂಪಮಂಡೂಕ'ದ ವಿಸ್ತೃತ ವಿಶ್ಲೇಷಣೆ ಸಮಗ್ರ ವಾಗಿದೆ. ಆದರೆ 'ಭೂತ'ದಂತಹ ಕನ್ನಡದ ಶ್ರೇಷ್ಠ ಕವನಗಳಲ್ಲೊಂದರ ಬಗ್ಗೆ ಬರೆದಿರುವ ಮಾತುಗಳು ಮೇಲುಮೇಲಿನವಾಗಿವೆ. ಇದೇ ಸಂದರ್ಭದಲ್ಲಿ ರಾಮದಾಸರ 'ಭೂಮಿಗೀತ'ವನ್ನ ಕುರಿತು ಬರೆದ ಹೊತ್ತಗೆಯನ್ನು ನೆನೆಯಬಹುದು. ಇಲ್ಲಿನ 'ಭೂಮಿಗೀತ'ದ ವಿಶ್ಲೇಷಣೆ ಅನೇಕ ಕಡೆ ಎಡವುತ್ತದೆ; ಅಷ್ಟೇ ಅಲ್ಲ ಓದುಗನನ್ನ ಕೆಲಸಲ ಅಡ್ಡ ಹಾದಿಗೂ ಎಳೆಯುತ್ತದೆ. ಡಾ. ತಿಪ್ಪೇರುದ್ರಸ್ವಾಮಿಯವರ ಕು.ವೆಂ.ಪು. ರವರ ನಾಟಕಗಳ ಬಗ್ಗೆ ಬರೆದಿರುವ ಗ್ರಂಥ ಕು.ವೆಂ.ಪು.ರವರ ನಾಟಕಗಳಿಗೆ ಒಂದು ಒಳ್ಳೆಯ ಪ್ರವೇಶ; ಕು.ವೆಂ.ಪು.ರವರ ಶ್ರೇಷ್ಠ ನಾಟಕಗಳಾದ, ಬೆರಳ್‌ಗೆ ಕೊರಳ್, ಸ್ಮಶಾನ ಕುರುಕ್ಷೇತ್ರ, ರಕ್ತಾಕ್ಷಿ, ಬಿರುಗಾಳಿ, ಇವುಗಳ ಬಗ್ಗೆ ಹೇಳಿರುವ ಮಾತುಗಳು ಗಮನಾರ್ಹವಾದುವುಗಳು.—ಆದರೆ, ಈ ನಾಟಕಗಳನ್ನಾದರೂ ಅವರು ಆಳವಾಗಿ ವಿಮರ್ಶಾತ್ಮಕವಾಗಿ ನೋಡಬಹುದಾಗಿತ್ತು. ಸು.ಜ.ನಾ.ರವರ "ಹೃದಯ ಸಂವಾದ" ದಲ್ಲಿರುವ "ಅವರು ಯಾರೂ ಕಾಯಲಿಲ್ಲ" ಎಂಬ ಲೇಖನ ಅನನ್ಯವಾದದ್ದು; "ಬಸವಣ್ಣನವರ ಪ್ರಾಣಿರೂಪಕಗಳು" ಉತ್ತಮ ವಿಶ್ಲೇಷಣೆ. ಜಿ. ಎಸ್. ಶಿವರುದ್ರಪ್ಪ ನವರ "ವಿಮರ್ಶೆಯ ಪೂರ್ವ ಪಶ್ಚಿಮ" ವಿಮರ್ಶೆಯ ಮೂಲತತ್ವಗಳಿಗೆ ಪ್ರವೇಶ ದಂತಿದೆ. ಅವರ ಇತ್ತೀಚಿನ "ಗತಿಬಿಂಬ"ವನ್ನೂ ಇಲ್ಲಿ ಗಮನಿಸಬಹುದು. ಎಸ್. ಅನಂತನಾರಾಯಣರ "ಹೊಸಗನ್ನಡ ಕಾವ್ಯದ ಮೇಲೆ ಇಂಗ್ಲಿಷ್ ಪ್ರಭಾವ" ಆ ವಿಷಯದ ಮೇಲೆ ಸಮಗ್ರವಾದ ಕೃತಿ. ತ. ಸು. ಶಾಮರಾಯರ "ಕನ್ನಡ ನಾಟಕ ಗಳು" ಗ್ರಂಥದಲ್ಲಿ, ಅದುವರೆಗೆ ಪ್ರಕಟವಾದ ನಾಟಕಗಳ ಪರಿಚಯಾತ್ಮಕ ವಿಮರ್ಶೆ ದೊರೆಯುತ್ತದೆ. ಗಿರಡ್ಡಿ ಗೋವಿಂದರಾಜರು "ಸಣ್ಣ ಕಥೆಯ ಹೊಸ ಒಲವುಗಳು" ಎಂಬ ಗ್ರಂಥದಲ್ಲಿ, ಇತ್ತೀಚಿನ ಕನ್ನಡದ ಸಣ್ಣ ಕಥೆಯ ಬೆಳವಣಿಗೆಯನ್ನು ಸಮೀಕ್ಷಿ ಸಿದ್ದಾರೆ. ಡಾ. ಹಾ. ಮಾ. ನಾಯಕರ "ಸಂಕೀರ್ಣ", ಅವರ ಬಿಡಿ ಲೇಖನಗಳ ಸಂಕಲನ; 'ಕು.ವೆಂ.ಪು. ಅವರ ಶಿಶುಗೀತೆಗಳು', 'ಬೆಳೆಯುತ್ತಿರುವ ಕಾದಂಬರಿ', 'ಚದುರಂಗರ ಕಾದಂಬರಿ 'ಸರ್ವಮಂಗಳ', 'ಕನ್ನಡದಲ್ಲಿ ವಿಮರ್ಶೆ'—ಈ ಲೇಖನಗಳು ಮುಖ್ಯವಾದವುಗಳು. "ಸಮೀಕ್ಷೆ"ಯಲ್ಲಿ ಹತ್ತುವರ್ಷಗಳ ಕನ್ನಡ ವಿಮರ್ಶೆ, ಕನ್ನಡ ಸಾಹಿತ್ಯ ಇತ್ಯಾದಿ ವಿಷಯಗಳ ಮೇಲೆ ಲೇಖನಗಳಿವೆ. ಅವುಗಳಲ್ಲಿ, 'ವಿಮರ್ಶೆ'ಯ ಬಗ್ಗೆ ಮಾತಾಡುವಾಗ ಕೆಲವು ಮಹತ್ವಪೂರ್ಣ ಮಾತುಗಳನ್ನಾಡಿ ದ್ದಾರೆ: "....ನಮ್ಮ ವಿಮರ್ಶಕ ಸಮಕಾಲೀನ ಪ್ರಜ್ಞೆಯನ್ನು ಬೆಳಸಿಕೊಂಡಿರುವುದು,

ಕಂಡದ್ದನ್ನು ಧೈರ್ಯವಾಗಿ ಹೇಳುವ ಮನೋಭಾವ ಅವನಲ್ಲಿ ತೋರುತ್ತಿರುವುದು, ವಿಮರ್ಶಾತ್ಮಕ ಗ್ರಂಥಗಳ ಪ್ರಕಟಣೆ ಹೆಚ್ಚಿರುವುದೂ ವಿಮರ್ಶೆಗಾಗಿಯೇ ನಿಯತ ಕಾಲಿಕೆಗಳು ಹೊರಡುತ್ತಿರುವುದೂ—ಮೊದಲಾದ ಗಮನಾರ್ಹ ಲಕ್ಷಣಗಳು ಈ ದಶಕದ ಬಗೆಗೆ ಆಶಾಭಾವನೆಯನ್ನು ಹೊಂದಿರಲು ಕಾರಣವಾಗಿದೆ. ಇದನ್ನು ಉಳಿಸಿ ಬೆಳಸಿಕೊಳ್ಳುವ ಹೊಣೆ ಹೊಸ ಪೀಳಿಗೆಯ ಲೇಖಕರದ್ದು"[1] ಇನ್ನೊಂದು ಇತ್ತೀಚಿಗೆ ಬಂದಿರುವ 'ಸಂಚಯ': ಈ ಸಂಕಲನದಲ್ಲಿ '೧೯೬೫-೬೭ರ ಕನ್ನಡ ಕಥನಸಾಹಿತ್ಯ', 'ಕನ್ನಡ ಸಾಹಿತ್ಯದ ಈಚಿನ ಪ್ರವೃತ್ತಿಗಳು', 'ಕಿಂಕಿಣಿಯನ್ನು ಕುರಿತು', —ಈ ಲೇಖನಗಳು ಮುಖ್ಯ. ಮೊದಲ ಲೇಖನದಲ್ಲಿ ಕನ್ನಡದ ಇತ್ತೀಚಿನ ಮಹತ್ವ ಪೂರ್ಣ ಕಾದಂಬರಿಗಳಲ್ಲಿ ಎರಡು ಕಾದಂಬರಿಗಳಾದ 'ಸಂಸ್ಕಾರ' ಮತ್ತು 'ವಂಶ ವೃಕ್ಷ'ದ ಬಗ್ಗೆ ಹೇಳಿರುವ ಮಾತುಗಳು ವಿಚಾರಾರ್ಹವಾಗಿವೆ; ಎರಡನೆಯದರಲ್ಲಿ, 'ವ್ಯಂಗ್ಯ'ದ ಬಗ್ಗೆ ಆಡಿರುವ ಈ ಮಾತುಗಳು "ವ್ಯಂಗ್ಯ ಕಲೆಗಾರಿಕೆಗೆ ಮೊನೆಯನ್ನೂ ಸಾರ್ಥಕತೆಯನ್ನೂ ತಂದುಕೊಡುತ್ತದೆ. ಆದರೆ ಅದೇ ಪರಮವೆಂದು ಪರಿಗಣಿತವಾದಾಗ ನಿಷ್ಪ್ರಯೋಜಕವಾಗುತ್ತದೆ; ಗುರಿ ತಪ್ಪುತ್ತದೆ" ಅರ್ಥಪೂರ್ಣವಾಗಿವೆ. ಸಿ.ಪಿ.ಕೆ. ಅವರ "ಕನ್ನಡ ಚತುರ್ಮುಖ" ಮತ್ತು "ಪರಿಭಾವನೆ"ಯಲ್ಲಿ "ವರ್ಣನಾತ್ಮಕ" ವಿಮರ್ಶೆ ಇದೆ. ವಿ.ಸೀ. ಅವರ "ಸಂಪ್ರದಾಯ ಮತ್ತು ಹೊಸ ಮಾರ್ಗ", "ಹೊಸಗನ್ನಡ ಸಾಹಿತ್ಯ ಮತ್ತು ಇತರ ಲೇಖನಗಳು" ಇತ್ತೀಚೆಗೆ ಪ್ರಕಟವಾಗಿವೆ. ದೇ.ಜ.ಗೌ.ರವರು ಸಂಪಾದಿಸಿರುವ "ಕವಿದರ್ಶನ"ದಲ್ಲಿರುವ ಕು.ವೆಂ.ಪು.ರವರ "ಪಕ್ಷಿ"ಯ ಬಗ್ಗೆ ಇರುವ ಮೂವರು ಬರೆದ ಮೂರು ಲೇಖನಗಳು ಕುತೂಹಲ ಕಾರಿಯಾಗಿವೆ. ದೇ.ಜ.ಗೌ.ರವರ "ನಂಜುಂಡ ಕವಿ"—ಕವಿ, ಕಾವ್ಯವನ್ನು ಕುರಿತಾದ ಪಾಂಡಿತ್ಯಪೂರ್ಣವಾದ ಸಮಗ್ರಕೃತಿ. ಎ. ಆರ್. ಕೃಷ್ಣಶಾಸ್ತ್ರಿಗಳ "ಬಂಕಿಮಚಂದ್ರ" —ಆ ಬಂಗಾಳಿ ಲೇಖಕನನ್ನ ಕನ್ನಡಿಗರಿಗೆ ಚೆನ್ನಾಗಿ ಪರಿಚಯಿಸಿಕೊಡುವಂಥ ಕೃತಿ. ಮಾಸ್ತಿಯವರ 'ಪೂಜನ'ದಲ್ಲಿರುವ ಅ.ನ.ಕೃ. ಅವರ 'ಕಿಡಿ'ಯ ಬಗ್ಗೆ ಬರೆದಿರುವ ಲೇಖನ ಮುಖ್ಯವಾದದ್ದು. ಕೆ. ಎಸ್. ನರಸಿಂಹಸ್ವಾಮಿಗಳ 'ಉಪವನ'ದಲ್ಲಿ "ಕನ್ನಡದಲ್ಲಿ ನವ್ಯಕಾವ್ಯ ಸ್ವರೂಪ" ಎಂಬ ಲೇಖನ ಕುತೂಹಲಕಾರಿಯಾದದ್ದು.

ಇನ್ನು ನಮ್ಮ ಅನೇಕ ಹಿರಿಯ ಲೇಖಕರಿಗೆ ಅರ್ಪಿಸಿರುವ ಸಂಭಾವನಾಗ್ರಂಥ ಗಳಲ್ಲಿ ಕೆಲವು ಒಳ್ಳೆಯ ವಿಮರ್ಶೆಯ ಲೇಖನಗಳು ಸಿಕ್ಕರೂ, ಅವುಗಳಲ್ಲಿ ಬಹಳ ಪರಿಚಯಾತ್ಮ ಲೇಖನಗಳು ಮಾತ್ರ ಅಗಿವೆ. ಮುಖ್ಯವಾಗಿ ಇತ್ತೀಚಿನ ಈ ಗ್ರಂಥಗಳನ್ನ ಇಲ್ಲಿ ಹೆಸರಿಸಬಹುದು: "ಗಂಗೋತ್ರಿ", "ಕಾರಂತ ಪ್ರಪಂಚ", "ಸಂವೇದನೆ", "ಕಟ್ಟೀಮನಿ; ಬದುಕು-ಬರಹ" "ವಿನಾಯಕ ವಾಙ್ಮಯ", "ದೇ.ಜ.ಗೌ; ವ್ಯಕ್ತಿ ಮತ್ತು ಸಾಹಿತ್ಯ" ಇತ್ಯಾದಿ; ಅಲ್ಲದೆ, ಹಿಂದೆ, "ಉಡುಗೊರೆ", "ಬಾಗಿನ", "ಅಭಿವಂದನೆ", "ಉಪಾಯನ" ಇತ್ಯಾದಿ ಗ್ರಂಥಗಳು ಬಂದಿವೆ.

[1] ಸಮೀಕ್ಷೆ, ಪುಟ ೧೩೧.

ಡಾಕ್ಟರೇಟ್ ಪ್ರಶಸ್ತಿ ಪಡೆದ ಡಾ. ಎಚ್. ತಿಪ್ಪೇರುದ್ರಸ್ವಾಮಿಯವರ "ಶರಣರ ಅನುಭಾವ ಸಾಹಿತ್ಯ", ಡಾ. ಜಿ. ಎಸ್. ಶಿವರುದ್ರಪ್ಪನವರ "ಸೌಂದರ್ಯಸಮೀಕ್ಷೆ", ಡಾ. ಜಿ. ವರದರಾಜರಾಯರ "ಕುಮಾರರಾಮನ ಸಾಂಗತ್ಯಗಳು"—ಇವು ಆಯಾ ವಿಷಯಗಳ ಮೇಲೆ ವಿದ್ವತ್‌ಪೂರ್ಣಕೃತಿಗಳು. ಡಾ. ಪ್ರಭುಶಂಕರರು "ಕನ್ನಡದಲ್ಲಿ ಭಾವಗೀತೆ"ಯಲ್ಲಿ ಕನ್ನಡ ಭಾವಗೀತೆಯ ಹುಟ್ಟು, ಬೆಳವಣಿಗೆ, ಇತ್ಯಾದಿ ವಿಷಯಗಳನ್ನು ಸಮಗ್ರವಾಗಿ ವಿವೇಚಿಸಿದ್ದಾರೆ; ಆದರೆ, ಇತ್ತೀಚಿನ ಕಾವ್ಯದ ಬೆಳವಣಿಗೆಯ ಬಗ್ಗೆ ಅವರು ತಾಳಿರುವ ನಿಲುವು ಸಂಕುಚಿತವಾದದ್ದು. ಹಾಗೇ, ಬಿ. ಸಿ. ಜವಳಿ ಅವರ "ಧರ್ಮಭಂಡಾರಿ ಬಸವಣ್ಣನವರು", ವೇದವ್ಯಾಸಾಚಾರ್ಯರ "ಕರ್ಣಾಟಕ ಹರಿದಾಸರು", ಮಹಿಷಿಯವರ "ಕರ್ಣಾಟಕದ ಕವಯಿತ್ರಿಯರು"— ಈ ಗ್ರಂಥಗಳನ್ನ ಗಮನಿಸಲೇಬೇಕು. ಡಾ. ಕೃಷ್ಣಮೂರ್ತಿಯವರು ಸಂಸ್ಕೃತದ ಅಲಂಕಾರ ಗ್ರಂಥಗಳನ್ನು ಕನ್ನಡಕ್ಕೆ ತಂದಿದ್ದಾರೆ; ಅಲ್ಲದೆ "ಸಂಸ್ಕೃತ ಕಾವ್ಯ", "ರಸೋಲ್ಲಾಸ" ಇತ್ಯಾದಿ ಗ್ರಂಥಗಳನ್ನು ರಚಿಸಿದ್ದಾರೆ. ಡಾ. ಚಿದಾನಂದಮೂರ್ತಿಗಳ "ಶೂನ್ಯಸಂಪಾದನೆಯನ್ನು ಕುರಿತು" ಮತ್ತು ಡಾ. ತಿಪ್ಪೇರುದ್ರಸ್ವಾಮಿಯವರ "ಶೂನ್ಯ ಸಂಪಾದನೆ ಮತ್ತು ಶೂನ್ಯತತ್ವ ವಿಕಾಸ" ಪರಸ್ಪರ ಪೂರಕವಾದ ಗ್ರಂಥಗಳು.

೪

ಇತ್ತೀಚಿಗೆ ಕೆಲವು ನಿಯತ ಕಾಲಿಕ ಅನಿಯತ ಕಾಲಿಕ ಸಾಹಿತ್ತಿಕ ಪತ್ರಿಕೆಗಳು ಬರುತ್ತಿವೆ: "ಲಹರಿ" "ಸಾಕ್ಷಿ" "ಸಂಕ್ರಮಣ" "ಮನ್ವಂತರ" "ಪ್ರಜ್ಞೆ" "ಪ್ರತೀಕ" "ಸಮೀಕ್ಷಕ", "ಸಮನ್ವಯ" ಇತ್ಯಾದಿ. ಅನೇಕ ಹೊಸ ಹಳೆಯ ಲೇಖಕರಿಗೆ ತಮ್ಮ ವಿಚಾರಗಳನ್ನು ಧೈರ್ಯವಾಗಿ ವ್ಯಕ್ತಪಡಿಸಲು ವೇದಿಕೆಗಳಾಗಿ ಪರಿಣಮಿಸಿವೆ. ಇಲ್ಲಿ ಅನೇಕ ಉತ್ತಮ ವಿಮರ್ಶಾಲೇಖನಗಳು ಬಂದಿವೆ; ಕೃತಿನಿಷ್ಠ ವಿಮರ್ಶೆ ಬಂದಿದೆ; "ಸಾಹಿತ್ಯದಲ್ಲಿ ವೈಚಾರಿಕತೆ"ಯ ಬಗ್ಗೆ ಪ್ರಬುದ್ಧವಾದ ಚರ್ಚೆ ನಡೆದಿದೆ; ನಾಟಕಗಳ ಬಗ್ಗೆ ಒಳ್ಳೆಯ ಕೃತಿನಿಷ್ಠ ವಿಮರ್ಶೆ ಬಂದಿದೆ; ಇಲ್ಲಿನ ಹಲವಾರು ಲೇಖನಗಳು ಪ್ರಬುದ್ಧವಾದ ವಿಮರ್ಶೆಗೆ ಉದಾಹರಣೆಗಳಾಗಿವೆ. ಇಲ್ಲಿ ಬರೆದಿರುವ ಲೇಖಕರಲ್ಲಿ ಮುಖ್ಯವಾಗಿ, ಈ ಹೆಸರುಗಳನ್ನು ಹೇಳಬಹುದು: ಡಾ. ಯು. ಆರ್. ಅನಂತಮೂರ್ತಿ, ಡಾ. ಎಂ. ಜಿ. ಕೃಷ್ಣಮೂರ್ತಿ, ಕೆ. ಡಿ. ಕುರ್ತಕೋಟಿ, ಗಿರೀಶ ಕಾರ್ನಾಡ, ಎಚ್. ಎಂ. ಚನ್ನಯ್ಯ, ಸುಮತೀಂದ್ರನಾಡಿಗ, ಲಂಕೇಶ, ರಾಜೀವ ತಾರಾನಾಥ, ಜಿ. ಎಸ್. ಆಮೂರ, ಶಾಂತಿನಾಥ ದೇಸಾಯಿ, ಬಿ. ದಾಮೋದರರಾವ್, ಗಿರಡ್ಡಿ ಗೋವಿಂದರಾಜ, ಶಂಕರ ಮೊಕಾಶಿ–ಪುಣೇಕರ, ಆರ್. ಸಿ. ಕುಲಕರ್ಣಿ, ಇತ್ಯಾದಿ. ಇವರಲ್ಲಿ ಕೆಲವರಾದರೂ, ಕನ್ನಡ ವಿಮರ್ಶೆಗೆ ಮೂರನೇ ಡೈಮೆನ್‌ಶನ್ ತಂದುಕೊಡುತ್ತಿರುವವರು; ಇವರ ಲೇಖನಗಳು ಒಟ್ಟಿಗೇ ಸಂಕಲನವಾಗಿ ಬಂದಾಗ ಅವರ ವಿಮರ್ಶೆಯ ಸ್ವರೂಪವನ್ನರಿಯಲು ಸಹಾಯಕವಾಗುತ್ತದೆ.

ಸಂಶೋಧನಾ ಸಾಹಿತ್ಯವನ್ನ ಹೆಚ್ಚಾಗಿ ನಾನಿಲ್ಲಿ ಗಮನಿಸಿಲ್ಲ ; ಸಾಹಿತ್ಯ ವಿಮರ್ಶೆಗೆ ಹೆಚ್ಚಿಗೆ ಗಮನ ಇಲ್ಲಿ ದೊರೆತಿದೆ. ಆ ಕ್ಷೇತ್ರದಲ್ಲೂ, ಡಾ. ಬಸವರಾಜು, ಡಾ. ಚಿದಾನಂದಮೂರ್ತಿ, ಡಾ. ತಿಪ್ಪೇರುದ್ರಸ್ವಾಮಿ, ಡಾ. ಆರ್. ಸಿ. ಹಿರೇಮಠ್, ಇತ್ಯಾದಿ ಇತ್ತೀಚಿನ ಸಂಶೋಧಕರೂ ; ಡಿ. ಎಲ್. ನರಸಿಂಹಾಚಾರ್, ಶಂಬಾ ಜೋಶಿ, ತೀ. ನಂ. ಶ್ರೀಕಂಠಯ್ಯನವರಂಥ ಹಿರಿಯರೂ ಬೇಕಾದಷ್ಟು ಕೆಲಸಮಾಡಿದ್ದಾರೆ.

ಹೀಗೆ ಬಂದಿರುವ ಸಾಹಿತ್ಯವಿಮರ್ಶೆಯಲ್ಲಿ ಬಹುಪಾಲು ಕಾವ್ಯವನ್ನು ಕುರಿತದ್ದೇ ಆಗಿದೆ: ಕಾದಂಬರಿಯ ಬಗ್ಗೆ, ಉಳಿದ ಸಾಹಿತ್ಯಪ್ರಕಾರಗಳ ಬಗ್ಗೆ ಹೆಚ್ಚಿನ ವಿಮರ್ಶೆ ಬರಬೇಕಾಗಿದೆ.

ಈ ಸ್ಥೂಲವಾದ 'ಸಮೀಕ್ಷೆ', ಕನ್ನಡ ವಿಮರ್ಶೆ ಬೆಳೆದು ಬಂದಿರುವ ದಾರಿಯನ್ನು ಗುರುತಿಸಲು ಯತ್ನಿಸಿದೆ; ಹೀಗೆ ಮಾಡುವಾಗ ಅನೇಕ ವಿಮರ್ಶಕರನ್ನ ಗಮನಿಸದೇ ಬಿಟ್ಟಿದ್ದರೆ, ಕಾರಣ, ಅವರು ಪ್ರಾತಿನಿಧಿಕವಾಗಿಲ್ಲವೆಂಬುದೊಂದೇ ಆಗಿದೆ. ಈ ಅರ್ಥದಲ್ಲಿ ಈ ಲೇಖನ ಅನೇಕ ಪರಿಮಿತಿಗಳುಳ್ಳದ್ದು ಎಂಬ ಪರಿವೆ ನನಗೆ ಇದ್ದೇ ಇದೆ.

ಏನಾದರೂ ಒಂದು ದುರದೃಷ್ಟದಿಂದ–ಅಂಥ ದುರದೃಷ್ಟ ಬರದಿರಲಿ– ನಮ್ಮ ದೇಶದಲ್ಲಿ ಬೌದ್ಧಧರ್ಮ ಖಿಲವಾಗಿ ನಷ್ಟವಾಗಿ ಹೋದಂತೆ ಸಂಸ್ಕೃತವೂ ಆಗಿಹೋಗುವುದಾದರೆ, ಅದು ಹೊರದೇಶಗಳಲ್ಲಿ ಬದುಕಿರುತ್ತದೆ. ಬಾಳುತ್ತಿರುತ್ತದೆ. ಆದರೆ ಕನ್ನಡ? ಕನ್ನಡಿಗರೇ, ನಿಮ್ಮ ಕನ್ನಡವನ್ನು ಇಂಡಿಯ ದೇಶದ ದಕ್ಷಿಣ ಭಾಗದಲ್ಲಿ ಒಂದು ಅಂಗೈ ಅಗಲ ಬಿಟ್ಟರೆ ಮತ್ತೆಲ್ಲಿಯೂ ನೋಡಲಾರಿರಿ. ನೀವು ಅದನ್ನು ಅಲಕ್ಷ್ಯ ಮಾಡಿದರೆ ಮಿಕ್ಕ ಯಾವ ದೇಶದ ಯಾವ ಜನರೂ ಅದನ್ನು ಎತ್ತಿ ಹಿಡಿಯಲಾರರು. ಅದು ಹೋದರೆ ಹೋಗಲಿ ಎನ್ನುವ ಹಾಗಿದ್ದರೆ ಈ ಕಡೆ ಬಂಗಾಳಾಕೊಲ್ಲಿ ಇದೆ, ಆ ಕಡೆ ಅರಬ್ಬಿ ಸಮುದ್ರ ಇದೆ; ಗುಡಿಸಿ ಹಾಕಿಬಿಡಿ. ಇತರ ಭಾಷೆಗಳು ಒತ್ತಿಕೊಂಡು ಬರಲಿ, ಆಕ್ರಮಿಸಿಕೊಳ್ಳಲಿ!

ಡಾ. ಎ. ಆರ್. ಕೃಷ್ಣಶಾಸ್ತ್ರಿ
ಭಾಷಣಗಳು ಮತ್ತು ಲೇಖನಗಳು, ಪು. ೧೩

ಡಾ. ಕೆ. ಕೃಷ್ಣಮೂರ್ತಿ

ಅನುವಾದ: ಸಂಸ್ಕೃತ ಸಾಹಿತ್ಯ

ವಾಗರ್ಥಾವಿವ ಸಂಪೃಕ್ತೌ ವಾಗರ್ಥಪ್ರತಿಪತ್ತಯೇ।
ಜಗತಃ ಪಿತರೌ ವಂದೇ ಪಾರ್ವತೀಪರಮೇಶ್ವರೌ॥

ವಾಗರ್ಥಂಗಳ ತೆರದಿಂ। ದಾಗಳುಮೊಡವೆರೆದು ತೋರ್ಪುಮಾಪರಮೇಶ॥
ಗಿರಿಜೆಗಳೆ ವಿಶ್ವಪಿತರ್ಗಾಂ। ವಾಗರ್ಥಜ್ಞಾನಕಾಗಿಯಭಿನಮಿಸಿದಪೆಂ॥[1]

ಕಾಳಿದಾಸ ಬೇಡುವ "ವಾಗರ್ಥಪ್ರತಿಪತ್ತಿ" ಅನುವಾದಕನಿಗೆ ಕವಿಗಿಂತ ಇನ್ನೂ ಸ್ವಲ್ಪ ಹೆಚ್ಚಿನ ಪ್ರಮಾಣದಲ್ಲಿಯೇ ಬೇಕು. ಕವಿಗೆ ಪ್ರತಿಭೆ ಹೇಗೋ ಅನುವಾದಕನಿಗೆ ಸಹೃದಯತೆ ಹಾಗೇ ಮೂಲಸತ್ವ. ಇವಲ್ಲದೆ ಕವಿಯ ರಸದೃಷ್ಟಿ ಅನುವಾದಕನ ಸವಿಮರ್ಶರಸಿಕತೆಯೊಡನೆ ಸ್ಪರ್ಧೆಗೊಡುತ್ತದೆ. ಕವಿಯ ಮೂಲ ಪ್ರತಿಭೆ, ವಿಶಾಲವ್ಯುತ್ಪತ್ತಿ, ಕವಿತಾಭ್ಯಾಸಗಳಿಂದ ರಸಪೂರ್ಣವೂ ಚಮತ್ಕಾರ ಪೂರ್ಣವೂ ಆದ ಕಾವ್ಯ ಹುಟ್ಟುವಂತೆ ಭಾವಯಿತ್ರೀಪ್ರತಿಭೆ, ವಾಗರ್ಥಪ್ರಭುತ್ವ, ಸಂತತಪ್ರಯತ್ನ ಮೂರು ಮುಪ್ಪುರಿಯಾದಾಗ ಒಂದು ಉತ್ತಮ ಅನುವಾದ ಮೂಡುತ್ತದೆ. ಹೊಸ ಸೃಷ್ಟಿ ಒಂದು ಸಾಹಿತ್ಯದ ಸಂಪತ್ತೆನಿಸುವಂತೆಯೇ ಉತ್ತಮ ಅನುವಾದ ಕೂಡ ಆ ಸಾಹಿತ್ಯಕ್ಕೆ ಶ್ರೀಮಂತಿಕೆಯನ್ನು ತರುವ ಒಂದು ಪ್ರಣಾಲಿಯೇ ಸರಿ.

ಉತ್ತಮ ಕಾವ್ಯಗಳು ಎಷ್ಟು ವಿರಲವೋ ಉತ್ತಮ ಅನುವಾದಗಳು ಅಷ್ಟೇ ಅಪೂರ್ವ. ಸಾಹಿತ್ಯ, ವ್ಯಾಕರಣ ಇವುಗಳಲ್ಲಿ ಕೇವಲ ಪಾಂಡಿತ್ಯವಿದ್ದರೆ ಒಂದು ಬಗೆಯ ಕವಿತ್ವ, ಒಂದು ಬಗೆಯ ಅನುವಾದ, ಎರಡೂ ಸಾಧ್ಯ, ಆದರೆ ಇವು ಅಲ್ಪಾಯುಷಿಗಳು.

ಏಕಸ್ಯ ತಿಷ್ಠತಿ ಕವೇರ್ಗೃಹ ಏವ ಕಾವ್ಯಂ
ಅನ್ಯಸ್ಯ ಗಚ್ಛತಿ ಸುಹೃದ್ಭವನಾನಿ ಯಾವತ್[2]

ಒಬ್ಬನ ರಚನೆ ಅವನ ಮನೆಯಲ್ಲಿಯೇ ನಿಲ್ಲುತ್ತದೆ; ಇನ್ನೊಬ್ಬನದು ಅವನ ಗೆಳೆಯನ

---

1 ದೊಡ್ಡಬೆಲೆ ನಾರಾಯಣಶಾಸ್ತ್ರಿಗಳ ಕನ್ನಡ ಭಾಷಾಂತರ.

2 ರಾಜಶೇಖರನ ಕಾವ್ಯಮೀಮಾಂಸೆ.

ಮನೆಯವರೆಗೆ ಹೋಗುತ್ತದೆ. ಆದರೆ ರಸಿಕರ ರಸನಾಗ್ರದಲ್ಲಿ ಚಿರಜೀವಿಯಾಗಿ ವಿಶ್ವಯಾತ್ರೆಮಾಡುವ ರಚನೆಯ ಸಂಖ್ಯೆ ಎಷ್ಟು ಸಣ್ಣದು !

ಈ ಸಮೀಕ್ಷೆಗೆ ಪ್ರಸ್ತುತವಾದ ಕಾಲಾವಧಿ–ಕಾಲು ಶತಮಾನ–ಇದಕ್ಕೆ ಪೂರ್ವದ ಕಾಲುಶತಮಾನದ ಕ್ರಿಯೆಗೆ ಪ್ರತಿಕ್ರಿಯೆ ಮಾತ್ರ. ಆದ್ದರಿಂದ ಅದನ್ನು ಸ್ವಲ್ಪ ಗಣನೆಗೆ ಗುರಿಪಡಿಸಬೇಕಾಗಿದೆ.

ಪ್ರಾಚೀನರ ಪ್ರೌಢ ಕಾವ್ಯಪರಂಪರೆ ಎಂದರೆ ಚಂಪು. ಇದು ಪಂಡಿತರ ಅಧ್ಯಯನಕ್ಕೆ, ಅನುಕರಣದಿಂದ ಪಾಂಡಿತ್ಯ ಪ್ರದರ್ಶನಕ್ಕೆ ಉಳಿದಿತ್ತೇ ಹೊರತು ಕವಿಸ್ಫೂರ್ತಿಯ ಸಹಜಾಭಿವ್ಯಕ್ತಿಗೆ ಸಾಧನವಾಗಿ ಉಳಿದಿರಲಿಲ್ಲ. ವಿವಿಧ ಷಟ್ಪದಿ, ಚೌಪದಿ ಪ್ರಕಾರಗಳು ಕಥಾನಿರೂಪಣೆ, ನೀತಿಬೋಧೆ, ಇವಕ್ಕೆ ಸೀಮಿತವಾಗಿದ್ದುವು. ಕನ್ನಡ ನಾಟಕ ಸಂಪ್ರದಾಯವೆಂಬುದೇ ಇರಲಿಲ್ಲ. ಈ ಕೊರತೆಯನ್ನು ನೀಗಿಸಲೆಂದು ಪ್ರೌಢಶಾಲೆಗಳಲ್ಲಿ ಕನ್ನಡ ಸಂಸ್ಕೃತಗಳನ್ನು ಕಲಿಸುತ್ತಿದ ಅಧ್ಯಾಪಕರೆಲ್ಲರೂ ಒಂದಿಲ್ಲೊಂದು ಸಂಸ್ಕೃತ ಕಾವ್ಯ ಇಲ್ಲವೆ ನಾಟಕವನ್ನು ಕನ್ನಡಿಸುವದರಲ್ಲಿ ಉತ್ಸಾಹ ತೋರಿಸಿದರು. ಅತ್ತ ರಾಜಾಸ್ಥಾನದಲ್ಲಿ ಪ್ರಶಂಸೆಯ ಶಕ್ಯತೆ, ಇತ್ತ ಮಿತ್ರ ಪಂಡಿತರ ಮಂಡಲಿಯಲ್ಲಿ ಮನ್ನಣೆ–ಇವೇ ಅವರ ಮುಖ್ಯ ಗುರಿಗಳು. ಪದ್ಯಗಳ ಅನುವಾದಕ್ಕೆ ಕಂದವೃತ್ತಗಳ ಶೈಲಿ, ಗದ್ಯಾನುವಾದಕ್ಕೆ ಉದ್ದುದ್ದ ವಾಕ್ಯಗಳ ಒಂದು ಕೃತಕಶೈಲಿ ಇವು ಅವರ ಮುಖ್ಯ ಅನುವಾದ ರೀತಿ. ಸಾಮಾನ್ಯ ಕನ್ನಡಿಗರಿಗೆ ಇದರಿಂದ ಮೂಲಕೃತಿಯ ರಸಾಸ್ವಾದ ಉಂಟಾಗಬೇಕು ಎಂಬ ಪರಿವೆ ಅಷ್ಟಾಗಿ ಇಲ್ಲದ ಕಾರಣ ಈ ಪಂಡಿತರ ರಚನೆಗಳು ಪ್ರಾಯಿಕವಾಗಿ ಪ್ರಚಾರಕ್ಕೆ ಬರಲಿಲ್ಲ. ಆದರೆ ಪ್ರಾಚೀನ ಕವಿ ಸಂಪ್ರದಾಯ ಗತಸತ್ವವಾಗಿ, ಪಾಶ್ಚಾತ್ಯರ ವಿಚಾರಸಂಪರ್ಕದಿಂದ ನವಯುಗದ ಸುಪ್ರಭಾತ ಬೆಳಕಾಗುವ ಮುನ್ನ, ಸುಮಾರು ಕಾಲು ಶತಮಾನ ಅವಧಿಯನ್ನು ಅನುಕರಣ ಪಂಡಿತರ ಅನುವಾದಯುಗವಂದೇ ಕರೆದರೂ ಸಲ್ಲುತ್ತದೆ. ಏಕೆಂದರೆ ಇವರ ಸಂಖ್ಯೆ ಇನ್ನೂರಕ್ಕೆ ಕಡಮೆ ಇಲ್ಲ[1]. ಸಂಸ್ಕೃತದ ಎಲ್ಲ ಮಹಾಕಾವ್ಯಗಳನ್ನೂ, ಪ್ರಸಿದ್ಧವಾದ ಎಲ್ಲ ನಾಟಕಗಳನ್ನೂ, ಈ ಯುಗದವರು ಕನ್ನಡಿಸಲು ಶ್ರಮಪಟ್ಟಿದ್ದಾರೆ.

ಆದರೆ ಈ ಒಂದು ಪೀಳಿಗೆಯವರ ಕಾರ್ಯವನ್ನು ಸಾಹಿತ್ಯ ಚರಿತ್ರಕಾರರು ಯಾರೂ ವಿವರವಾಗಿ ವಿಮರ್ಶಿಸದೆ ಕೈಬಿಟ್ಟಿರುವದು ವಿಷಾದಕರ ಸಂಗತಿಯಾಗಿದೆ. ಯಾರಾದರೂ ಉತ್ಸಾಹಿಗಳು ಈಗಲಾದರೂ ಮನಸ್ಸುಮಾಡಿ ಪ್ರೌಢವ್ಯಾಸಂಗಕ್ಕೆ ವಸ್ತುವನ್ನಾಗಿ ತೆಗೆದುಕೊಂಡರೆ ಒಂದು ಡಾಕ್ಟರೇಟ್ ಪದವಿ ಲಭಿಸಬಹುದೋ ಎನಿಸುವಷ್ಟು ವಿಸ್ತಾರವೂ ವಿಶಿಷ್ಟತೆಯುಳ್ಳದೂ ಆಗಿದೆ ಈ ಸಂಸ್ಕೃತದಿಂದಾದ ಅನುವಾದಗಳ ಆಕೃಷ್ಟ ಕ್ಷೇತ್ರ.[2] ತುರುಮುರಿಯವರ 'ಬಾಣ ಕಾದಂಬರಿ', ಬಸವಪ್ಪ

---

[1] ವಿವರಗಳನ್ನು ಬಯಸುವವರು ವೆಂಕಟೇಶ ಸಾಂಗಲಿಯವರ 'ಸಿರಿಗನ್ನಡ ಗ್ರಂಥಕರ್ತರ ಚರಿತ್ರಕೋಶ,' ಪ್ರಥಮ ಸಂಪುಟ, (೧೯೬೦)ವನ್ನು ಸಾವಧಾನವಾಗಿ ಓದಬೇಕು.

[2] ಇವುಗಳ ಒಂದು ಸಂಗ್ರಹವಾದ ವಿಮರ್ಶೆ, ತ. ಸು. ಶಾಮರಾಯರ 'ಕನ್ನಡ ನಾಟಕ'(ಮೈಸೂರು ೧೯೬೨)ದಲ್ಲಿ ಬಂದಿದೆ.

ಶಾಸ್ತ್ರಿಗಳ 'ಶಾಕುನ್ತಲ' ಥೊಂಡೋ ನರಸಿಂಹ ಮುಳಬಾಗಿಲವರ 'ಮೃಚ್ಛಕಟಿಕ'– ಇವು ಮೇಲೆ ಸೂಚಿಸಿದ ಸಾಮಾನ್ಯ ಅನಾದರಕ್ಕೆ ಅಪವಾದಗಳಂತೆ ಉಳಿದು ಬಂದಿವೆ ಎನ್ನಬಹುದು. ಅದಕ್ಕೆ ಕಾರಣ ಕನ್ನಡ ಜೀವನಾಡಿಯನ್ನು ಬಿಡದ ಅವರ ರಸಿಕತೆಯೇ ಎನ್ನಬಹುದು.

ಇಡಿಯ ಒಂದು ತಲೆಮಾರಿನ ವಿದ್ವಾಂಸರ ಅನುವಾದ–ಪರಿಶ್ರಮವೆಲ್ಲ ವ್ಯರ್ಥ ಪ್ರಾಯವಾದುದೇಕೆ? ಎಂಬ ಪ್ರಶ್ನೆಗೆ ಓದುಗರ ಅಭಿರುಚಿಯಲ್ಲಿ ನವೋದಯ ಕ್ರಾಂತಿಯಿಂದ ಒದಗಿಬಂದ ಮಾರ್ಪಾಟು ಒಂದು ಉತ್ತರವಾದರೆ, ಅಷ್ಟೇ ಮುಖ್ಯವಾದ ಇನ್ನೊಂದು ಉತ್ತರ ಪಂಡಿತರಲ್ಲಿರಬೇಕಾಗಿದ್ದ ಸಾಹಿತ್ಯವಿಮರ್ಶೆಯ ಅತ್ಯಂತಾಭಾವ. ಸಂಸ್ಕೃತದಲ್ಲಿ ಇದ್ದುದೆಲ್ಲ ಒಳ್ಳೆಯದೆ ಎಂಬ ಸಾಮಾನ್ಯ ಭಾವನೆ ವಿದ್ವಾಂಸರ ವಿಮರ್ಶೆಯನ್ನು ಮಂಕು ಮಾಡಿತು. ಕಾಳಿದಾಸನ ನಾಟಕಗಳಿಗಿಂತ ಉಳಿದ ಸಂಸ್ಕೃತ ನಾಟಕಗಳೇ ಅನುವಾದಕರ ಲಕ್ಷ್ಯವನ್ನು ಸೆಳೆದವು.

ಸಂಸ್ಕೃತದ ಪ್ರಾಚೀನ ಸಾಹಿತ್ಯವಿಮರ್ಶೆ ಕನ್ನಡದಲ್ಲಿ ಇಳಿದುಬರಲೇ ಇಲ್ಲ. ಬರೆದ ಎಲ್ಲೋ ಒಬ್ಬರು ಚಾವಲಿ ರಾಮಸ್ವಾಮಿಶಾಸ್ತ್ರಿಗಳು, ಇನ್ನೊಬ್ಬರು ಅಕ್ಕಲೆ ಲಕ್ಷ್ಮೀನರಸಿಂಹಶಾಸ್ತ್ರಿಗಳು, ಚಂದ್ರಾಲೋಕದ ಅಲಂಕಾರ ವಿಭಾಗವನ್ನೆ ಗಣನೆಗೆ ತೆಗೆದುಕೊಂಡರು. ಇದರಿಂದ ಸರ್ವತೋನ್ಮುಖವಾಗಿ ಬೆಳೆದ ಅಲಂಕಾರ ಶಾಸ್ತ್ರದ ಪ್ರಕ್ರಿಯಾಮರ್ಮ ಅನುವಾದಕರಿಗೆ ಕಾಣದ ಗಂಟಾಗಿಯೇ ಉಳಿದಿತ್ತು. ೧೯೩೩ ರಲ್ಲಿಯೂ ಹಳೆಯ ಕೃತಕ ಕನ್ನಡ ಗದ್ಯವನ್ನು ನೋಡಬಹುದಾಗಿದೆ. ಸುಲಲಿತ, ಸರಲ ಸಂಸ್ಕೃತ 'ಪಂಚರಾತ್ರ'ದ ಒಂದು ಪದ್ಯವನ್ನು ಪಾನ್ಯಂ ಸುಂದರಶಾಸ್ತ್ರಿಗಳು ಅನುವಾದಿಸಿರುವುದು ಹೀಗೆ—

> ಅರಸರ ಶಿರಸ್ತ್ರಾಣ ಪಟ್ಟವಸ್ತ್ರಗಳಿಂದ ಬರೆಸಲ್ಪಟ್ಟ
> ಚರಣಗಳಿಂದ ಒಪ್ಪುತ್ತ ಶ್ಲಾಘ್ಯವಾದ ವಿಶೇಷ
> ಖ್ಯಾತಿಸಂಪನ್ನರೆನಿಸಿ ಮುದಿತನದಲ್ಲಿಯೂ ಅಭಿವೃದ್ಧಿ
> ಯನ್ನೈದುತಲಿರುವ ನಿಯಮಭರಿತರಾಗಿ ವೇದಾ
> ಧ್ಯಯನದಲ್ಲಿ ಹಿಂದೆಗೆಯದ ಬಾಯ್ಗಳಿಂದೊಪ್ಪುತ
> ಪ್ರಾಯವು ಮೀರಿದ ಕಾರಣ ಜೀರ್ಣವಾಗಿ ಕೋಲನ್ನು
> ಮೂರನೆಯ ಕಾಲನ್ನಾಗಿ ಮಾಡಿ ಸಂಚರಿಸುತ್ತ ಮುದಿ
> ಯಾನೆಗಳಂತೆ ಶಿಷ್ಯರ ಹೆಗಲಮೇಲೆ ಕರಪ್ರಸಾದ
> ಮಾಡಿ ನಡೆಯುತ್ತಿರುವರು.[1]

ಇದು ಬರಿಯ ಕಬ್ಬಿನಸಿಪ್ಪೆ, ಇಲ್ಲಿ ಶಬ್ದದಲ್ಲಾಗಲಿ, ಅರ್ಥದಲ್ಲಾಗಲಿ ಎಳ್ಳಷ್ಟಾದರೂ ಸಾಹಿತ್ಯ ಸಂವೇದನೆ ಇಲ್ಲ; ರಸ ದೃಷ್ಟಿ ದೂರವೇ ಉಳಿಯಿತು.

೬೦೯

---

[1] ಕರ್ನಾಟಕ ಪಂಚರಾತ್ರವು ೧–೫—ಸತ್ಯಶೋಧನ ಪ್ರಕಟನಮಂದಿರ, ಬೆಂಗಳೂರು.

ಆದರೆ ಸುಮಾರು ೧೯೩೦ರ ವೇಳೆಗೆ ಹೊಸ ಸಾಹಿತ್ಯಪ್ರಜ್ಞೆ, ನಾಡಿನಲ್ಲಿ ಸ್ಪಷ್ಟವಾಗಿ ಕಾಣತೊಡಗಿತ್ತು. ಅಲಂಕಾರ ಶಾಸ್ತ್ರದ ಸುಂದರ ಪರಿಚಯವನ್ನು ಪ್ರೊ. ಎ. ಆರ್. ಕೃಷ್ಣಶಾಸ್ತ್ರಿಯವರು "ಕನ್ನಡ ಕೈಪಿಡಿ"ಯಲ್ಲಿ ಒದಗಿಸಿದ್ದಲ್ಲದೆ ತಮ್ಮ ಭಾಷಣ ಲೇಖನಗಳಿಂದ ಸಂಸ್ಕೃತದ ಸಾರಾಸಾರ ವಿವೇಕವನ್ನು ಕನ್ನಡದ ಸಾಹಿತ್ಯ ಗುಣ ವಿವೇಚನೆಯನ್ನು ಒದಗಿಸಿದ್ದರು. ಹೊಸ ಹೊಸ ಛಂದೋರಚನೆಗಳು ಪಂಡಿತ ಪ್ರಿಯವಲ್ಲದಿದ್ದರೂ ಜನಪ್ರಿಯವಾಗತೊಡಗಿದವು. ಪಾಶ್ಚಾತ್ಯ ಜ್ಞಾನವನ್ನು ವಿಶ್ವ ವಿದ್ಯಾಲಯಗಳಲ್ಲಿ ಪಡೆದ ಕನ್ನಡಿಗರೂ ಸಂಸ್ಕೃತದಿಂದ ಅನುವಾದಕ್ಕೆ ತೊಡಗಿದಾಗ ಮತ್ತೊಮ್ಮೆ ಸೀಮಿತ ಪ್ರಮಾಣದಲ್ಲಿ ಅನುವಾದಗಳು ಬಂದವು. ಇದೇ ಕಾಲಕ್ಕೆ ಪ್ರೊ. ಕೃಷ್ಣಶಾಸ್ತ್ರಿಯವರ ಭಾಸಕವಿ ಪ್ರಶಸ್ತಿಗ್ರಂಥ ಪ್ರಸಿದ್ಧವಾಗಿ, ಅನೇಕ ಅನುವಾದಕರು ಭಾಸನ ಹೊಸ ಕೃತಿಗಳಿಂದ ಆಕರ್ಷಿತರಾದರು.

ಇವರಲ್ಲಿ ಅಗ್ರಗಣ್ಯರೆಂದರೆ ಶ್ರೀ ಎಲ್. ಗುಂಡಪ್ಪನವರು. ಇವರು ಇಂಗ್ಲಿಷ್ 'ಬ್ಲಾಂಕವರ್ಸ್'ಗೆ ಸಮವಾದ ಐದು ಮಾತ್ರೆಯ ಸರಳರಗಳೆಯ ಸಾಲುಗಳನ್ನು ಪ್ರಾಸವಿಲ್ಲದೆ ಬಳಸುವ ಪ್ರಯೋಗಮಾಡಿಪ್ಪಾರೆ. ಯತಿಯು ಪಾದಾಂತ್ಯದಲ್ಲಿ ನಿಯತವಾಗಿ ನಿಲ್ಲದೆ ಮುಂದಿನ ಸಾಲಿಗೂ ಹೋಗುವದುಂಟು. ಮೇಲೆ ಭಾಸನ ಸುಂದರ ಪದ್ಯದ ಒಂದು ಕೃತಕ ಗದ್ಯ ಭಾಷಾಂತರವನ್ನು ನೋಡಿದೆವಷ್ಟೆ. ಅದೇ ಪದ್ಯ ಗುಂಡಪ್ಪನವರ ಕೈಯಲ್ಲಿ ತಳೆಯುವ ರೂಪ ಹೀಗಿದೆ—

> ಪಟ್ಟವೆರಸಿದ ಮುಡಿಯ ಪದಕೆ ಸೋಕಿಸಿ ದೊರೆಗ
> ಳೆರಗಿದರು, ಹೆಸರಾಂತ ಮಿಗಿಲರಿವ ಪಡೆದವರು,
> ಮುಪ್ಪಿನಲು ನಿಯಮಗಳ ಹೆಚ್ಚಿಸುತಲೆಡೆವರಿಯ
> ದಧ್ಯಯನ ಮಾಡುವರು, ಮುಪ್ಪಡಸಿ ನೈಸಡಿಲ
> ವಾಗಿರಲು, ಕೈಯ ಶಿಷ್ಯರ ಹೆಗಲಲಿಟ್ಟು ಕೋ
> ಲೂರಿ ಮುಕ್ಕಾಲಿಂದ ನಡೆಯುವೀ ಬ್ರಾಹ್ಮಣರು
> ಮುಪ್ಪಾಂತ ಸಲಗಗಳ ತೆರದೆ ತಾವೈದುತಿಹರು.[1]

ಇಲ್ಲಿಯ ಕಾವ್ಯತ್ವ ನಮಗೆ ತಿಳಿಯದಂಥದು. ಆಡುಮಾತಿನ ಗದ್ಯವನ್ನೇ ಪದ್ಯಾಕಾರದಲ್ಲಿ ಬರೆದಂತೆ ನಮಗೆ ತೋರುತ್ತದೆ. ಮೂಲ ನಾಟಕದಲ್ಲಿ ಯಜ್ಞಶಾಲೆಯ ಮನೋಜ್ಞ ಆವರಣವಿದೆ. ಅದಕ್ಕೆ ಉಚಿತವಾಗಿ ಬರುವ ವಿಪ್ರವರ್ಣನೆಯಲ್ಲಿ ಸ್ವಭಾವೋಕ್ತಿಯ ಆಭರಣವೂ ಇದೆ. ಪಾತ್ರಗಳು ಸಜೀವವಾಗಿ ಕಣ್ಣಮುಂದೆ ನಿಲ್ಲುತ್ತಾರೆ. ಇವೆಲ್ಲ ಅನುವಾದದಲ್ಲಿ ಮರೆಯಾಗಿದೆ. ಹಿಂದಿನ ಪಂಡಿತರ ಕಂದ ವೃತ್ತಗಳ ಪೆಡಸು ಒಂದು ಅಲೆಯಾದರೆ ಈ ಸರಳ ರಗಳೆಯ ಶೈಥಿಲ್ಯ ಇನ್ನೊಂದು ಅಲೆ, ಎರಡೂ ಸಂಸ್ಕೃತದ ಚೆಲುವಿಗೆ ದೂರ. ಸಂಸ್ಕೃತದ ಸವಿಯನ್ನು ಬಲ್ಲ ಪಂಡಿತರು

---

[1] ಪಂಚರಾತ್ರ, ಸತ್ಯಶೋಧನ ಪ್ರಕಟನಮಂದಿರ, ಬೆಂಗಳೂರು, ೧೯೪೬.

ಮಹಾಸ್ರಗ್ಧರೆಯಂತಹ ಸುದೀರ್ಘ ವೃತ್ತದಲ್ಲಿ ಮೂಲದ ಸೊಬಗನ್ನು ಹೇಗೆ ತರಬಲ್ಲರೆನ್ನುವದಕ್ಕೆ ಇದೇ ಪದ್ಯದ ಇನ್ನೊಂದು ಅನುವಾದವನ್ನು ನೋಡೋಣ, ಇದು ದೇವಶಿಖಾಮಣಿ ಅಳಸಿಂಗರಾಚಾರ್ಯರದು—

ಮಹಾಸ್ರಗ್ಧರಾ ॥ ಸರಪಾಲೋಚ್ಛಿಷವಟ್ಟಾಂಸುಕಪರಿಮೃಜಿತಾಂಘ್ರಿದ್ವಯರ್ ಸುಶಕ್ತರ್ ಸ
ಚ್ಚರಿತರ್ ವಾರ್ಧಕ್ಯಮಾಂತುಂ ನಿಜನಿಯಮರತರ್ ವೇದಪಾಠಪ್ರಗಲ್ಭರ್ ।
ಪರಿತರ್ಪರ್ ಮೂರುಕಾಲಿಂ ನಡೆವವೊಲಿದೊ ! ದಂಡಾಶ್ರಯರ್ ವಿಪ್ರವೃದ್ಧರ್
ಕರಮಂ ತಂತಮ್ಮ ಶಿಷ್ಯಾಂಸದೊಳಿರಿಸಿ ಜರಾಜೀರ್ಣಮತ್ತದ್ವಿಪಂಜೋಲ್ ॥[1]

ಹೊಸ ಕಾವ್ಯ ರಚನೆಯ ಕಾಲದಲ್ಲಿ ಕಡೆಂಗೋಡ್ಲು ಶಂಕರಭಟ್ಟರೆಂದಂತೆ

ಸಂಧಿಸಮಾಸದ ಹೊರೆಗಳ ಹೊತ್ತು
ಬಂದುದೇ ನಿನಗೀ ಬಂಧ ವಿಪತ್ತು

ಎಂದೊಪ್ಪಿದರೂ ಸಂಸ್ಕೃತಭಾಷೆಯ ಮೂಲ ಗಾಂಭೀರ್ಯವನ್ನೂ ಸಹಜ ವಿಲಾಸವನ್ನೂ ಉಳಿಸಿಕೊಳ್ಳಲು ಬಯಸುವ ಅನುವಾದಕನು ಸಮಸಂಸ್ಕೃತ ಶಬ್ದಗಳ ಸಮಯೋಜಿತ ಬಳಕೆಯಿಂದ, ಸಂಧಿಸಮಾಸಗಳ ಜಾಣ್ಮೆಯಿಂದ ಮಾತ್ರ ಯಶಸ್ವಿಯಾಗಬಹುದಾಗಿದೆ.

ಎಲ್. ಗುಂಡಪ್ಪನವರ ಭಾಸನಾಟಕಾನುವಾದಗಳೆಲ್ಲ ಇದೇ ರೀತಿಯವು. ಅಳಸಿಂಗರಾಚಾರ್ಯರು ಉಭಯಭಾಷಾಪ್ರವೀಣರಿದ್ದಂತೆ ತೀವ್ರರಸ ಸಂವೇದನೆಯುಳ್ಳವರೂ ಆಗಿದ್ದರು. ಆದರೆ ಅವರು 'ಸ್ವಪ್ನವಾಸವದತ್ತ', 'ಪಂಚರಾತ್ರ' ಎರಡೇ ಕೃತಿಗಳನ್ನು ಕನ್ನಡಿಸಿದ್ದಾರೆ.

ಇವರಷ್ಟೇ ವಿದ್ವಾಂಸರಾದರೂ ಭಾಸನ ಉತ್ತಮ ಕೃತಿಯಾದ 'ಪ್ರತಿಮಾ' ನಾಟಕವನ್ನು ಕನ್ನಡಿಸುವಲ್ಲಿ ಮೈಸೂರು ಸೀತಾರಾಮಶಾಸ್ತ್ರಿಗಳು ಇಷ್ಟು ಕೃತಕೃತ್ಯರಾಗಲಿಲ್ಲ. ಆದ್ದರಿಂದ ಪ್ರಕೃತ ಲೇಖಕ ತನ್ನ ಒಂದು ಅನುವಾದ ಪ್ರಯೋಗವನ್ನು ಮಾಡಿದ್ದಾನೆ. ಒಂದೇ ಪದ್ಯ ಹೇಗೆ ಇಬ್ಬರಲ್ಲಿ ಬಂದಿದೆ ನೋಡಿ—

(೧) ಬಿದು, ಚಾಟಿಿಂ ನೊಂದೊಡಂ ತಾರಗೆಯುವನನೆ ಬೆಂಗೊಂಡು
ತಾನೆಯ್ದುಗುಂ ನಿ
ಲ್ಲದೆ ಬೀೞ್ಗುಂ ಬಳ್ಳಿ ತಾನುಂ ವನದ ಮಹಿರುಹಂ
ಭೂಮಿಯೊಳ್ ಬೀೞ್ವುದುಂ ಪಂ
ಕದ ಸಂಮರ್ದಕ್ಕಿಭಂ ಪಕ್ಕೆನಿಸೆ ಪಿಡಿಯುದಂ ಬಿಟ್ಟು ಮುಂದೆಯ್ದಿದೊಲ್ದೀ
ವಧುವೀಗಳ್ ಬರ್ಕೆ ಧರ್ಮಂ ಚರಿಕೆ ಸತಿಗೆ ಭರ್ತಾರನೇ ನಾಥನಲ್ತೇ ।[2]

(೨) ರಾಹುವೆ ಸೋಂಕೆಯುಂ ಶಶಿಯ ಬೆಂಬಳಿಯೊಳ್ ಚರಿಪಳ್ ಸುತಾರೆ ತಾಂ
ವೃಕ್ಷಮೆ ಕಾಡಿನೊಳ್ ಕೆಡೆಯಲಾ ಲತೆಯುಂ ತವೆ ಬೀಳ್ವದಾವಗಂ।

---

[1] ಕರ್ಣಾಟಕ ಡಿಪೋ, ಮದ್ರಾಸ್, ೧೯೪೩.

[2] ಮೈಸೂರು ಸೀತಾರಾಮಶಾಸ್ತ್ರೀ, ಕರ್ಣಾಟಕ ಪ್ರತಿಮಾ ನಾಟಕಂ, I, ೨೫.

ಆನೆಯುದೆಂತೊ ಪಂಕದೊಳಗಳಿರೆಯುಂ ಪಿಡಿ ಬಿಟ್ಟು ಪೋಪುದೇ?
ಬರ್ಕೆಯಿವಳ್ ಸ್ವಧರ್ಮಮೆಸಗಲ್ ಪತಿನಾಥೆಯರಲ್ತೆ ಕಾಂತೆಯರ್ ||[1]

ಶಾಸ್ತ್ರಿಗಳ ಪದ್ಯದಲ್ಲಿ ಪ್ರಾಸವಿದೆ, ಹಳಗನ್ನಡದ ಪರಿಶುದ್ಧರೂಪಗಳಿವೆ. ಆದರೆ ಮೂಲದ ಅರ್ಥವ್ಯಕ್ತಿ, ಸಹಜಓಟ ಎಲ್ಲಿ? ಎರಡನೆಯದರಲ್ಲಿ 'ಬಿ'ಕಾರ ದೋಷ, ಪ್ರಾಸ ಹೀನತೆಯ ದೋಷಗಳಿದ್ದರೂ ಉದ್ದೇಶಪೂರ್ವಕವಾಗಿಯೇ ಮೂಲದ ಪಾದಾಂತಯತಿ, ಪ್ರಸಾದ ಗುಣ, ಹಾಗು ಅರ್ಥವ್ಯಕ್ತಿಗಳನ್ನು ಕಾಯ್ದುಕೊಳ್ಳುವದಕ್ಕಾಗಿ ಅವನ್ನು ನಿರ್ಲಕ್ಷಿಸಿ, ಪ್ರಾಚೀನ ನಾಟಕದ ಆವರಣ ಉಳಿಯುವದಕ್ಕೆ ಉಚಿತವಾದ ಮಟ್ಟಿಗೆ ವೃತ್ತಲಕ್ಷಣವನ್ನು ಪಾಲಿಸಿದೆ.

ಇನ್ನೊಂದು ಉದಾಹರಣೆ ಈಗ 'ಮೃಚ್ಛಕಟಿಕ'ದಿಂದ ಮೊದಲನೆಯ ಅಂಕದ ಐವತ್ತೇಳನೆಯ ಪದ್ಯದ ಮೂರು ಅನುವಾದಗಳು—

(೧) ತರುಣೀ ಕಪೋಲ ಪಾಂಡುರ|
ಕರನೀಯು ಮೃತಾಂಶುವುದಯಿಕುಂಗಡ ಜೊನ್ನಂ||
ಮೆರೆಗುಂ ಕಳ್ತಲೆಯೊಳ್ ಸುರು|
ಚಿರಮೆನಿಪಾ ಪಾಲಧಾರೆ ಕೆಸರೊಳಗೆಸೆವೊಲ್ ||[2]

(೨) ರಾಜ ಮಾರ್ಗಕ್ಕೆ ದೀವಟಗೆಯಂತಿರುವ ಚಂದ್ರನು ಉದಯವನ್ನು
ಹೊಂದುತ್ತಿದ್ದಾನೆ, ವಿರಹಿಣಿ ಸ್ತ್ರೀಯ ಗಲ್ಲಗಳಂತೆ ಚಂದ್ರನು ಬಿಳುಪಾ
ಗಿರುತ್ತಾನೆ. ಗ್ರಹನಕ್ಷತ್ರ ಪರಿವಾರವು ಆತನ ಸುತ್ತಲೂ ಮೂಡಿರು
ತ್ತದೆ. ಮಣ್ಣಿನರಾಡೆಯಲ್ಲಿ ಹಾಲಿನಧಾರೆಗಳಂತೆ ಕತ್ತಲೆಯಲ್ಲಿ
ಶುಭ್ರವಾದ ಚಂದ್ರಕಿರಣಗಳು ಪಸರಿಸುತ್ತವೆ.[3]

(೩) ಉದಿಸುವನಿದೊ ಚಂದ್ರಂ ಕಾಮಿನೀ ಗಂಡ ಶುಭ್ರಂ
ಗ್ರಹಗಣ ಪರಿವಾರಂ ರಾಜಮಾರ್ಗ ಪ್ರದೀಪಂ
ಬಿಳಿಯ ಕಿರಣಜಾಲಂ ಕಳ್ತಲೊಳ್ ಕೂಡುತೀಗಳ್
ಪೊಳೆವೊಡು ಹಸಿಮಣ್ಣೊಳ್ ಕ್ಷೀರಧಾರಾಸಮಾನಂ |[4]

ಮೊದಲನೆಯದು ಕೇವಲ ಭಾವಾನುವಾದ. ಮೂಲದಲ್ಲಿ ಮುಖ್ಯವಾದ, ಎಷ್ಟು ಮುಖ್ಯವೆಂದರೆ ಆ ಪ್ರತಿಮೆ ಇನ್ನೂ ಕಣ್ಣಿಗೆ ಕಟ್ಟಿದಂತಿದೆ ಎಂದು ಹಳೆಯ ಶಿಷ್ಯರಿಗೆ

---

[1] ಡಾ. ಕೆ. ಕೃಷ್ಣಮೂರ್ತಿ, ಕನ್ನಡ ಪ್ರತಿಮಾನಾಟಕ, ಶಾರದಾಮಂದಿರ, ೧೯೫೪.

[2] ನಂಜನಗೂಡು ಸುಬ್ಬಾಶಾಸ್ತ್ರೀ, ಕರ್ಣಾಟಕ ಮೃಚ್ಛಕಟಿಕ ಪ್ರಕರಣಂ, ಮೈಸೂರು, ೧೯೪೯.

[3] ಧೋಂಡೋ ನರಸಿಂಹ ಮುಳಬಾಗಲ, ಮೃಚ್ಛಕಟಿಕ, ಧಾರವಾಡ, ೧೯೫೧.

[4] ಡಾ. ಕೆ. ಕೃಷ್ಣಮೂರ್ತಿ, ಕನ್ನಡ ಮೃಚ್ಛಕಟಿಕ, ಶಾರದಾಮಂದಿರ, ಮೈಸೂರು, ೧೯೫೮.

ಈಗಲೂ ಡಾ. ಎ. ಆರ್. ಕೃಷ್ಣಶಾಸ್ತ್ರಿಗಳು ವಿವರಿಸುವ, 'ರಾಜಮಾರ್ಗ ಪ್ರದೀಪಃ' ಎಂಬುದು, ಮಾಯವೇ ಆಗಿದೆ.

ಎರಡನೆಯದರಲ್ಲಿ ಪದ್ಯ ಸೌಂದರ್ಯಕ್ಕೆ ಅವಕಾಶವಿಲ್ಲ.[1] ಮೂರನೆಯದು ಮೂಲದ ಮಾಲಿನಿವೃತ್ತವನ್ನೇ ಕನ್ನಡದಲ್ಲಿ ಬಳಸಿ ಸುಲಭ ವೇದ್ಯವಾಗಿರುವ ಮೂಲ ಪ್ರತಿಮೆಗಳನ್ನು ಅದೇ ಶಬ್ದಗಳಲ್ಲಿ ಉಳಿಸಿದೆ.

ಮೈಸೂರು ಸೀತಾರಾಮಶಾಸ್ತ್ರಿಗಳರವರದೇ ಮತ್ತೊಂದು ಕೃತಿಯಾದ 'ವೇಣೀಸಂಹಾರ ಪ್ರತಿ ಕೃತಿ'ಯಲ್ಲಿ ಅವರು ಸಂಸ್ಕೃತ ಗದ್ಯಕ್ಕೂ ಹಳಗನ್ನಡ ಬಳಸುವ ನೂತನ ಪ್ರಯೋಗಮಾಡಿದ್ದಾರೆ. ಅಲ್ಲಿಯ ವೀರ, ರೌದ್ರ ರಸಗಳನ್ನು ಯಥಾವತ್ತಾಗಿ ಮಾರ್ದನಿಸಲೂ ಅವರ ಇಲ್ಲಿಯ ಪದ್ಯಬಂಧ ಯಶಸ್ವಿಯಾಗಿದೆ—

ಚಲಿತೋದ್ಯಪ್ತಭುಜಂಗಳಿಂ ತಿರುಪಿ ಪೊಯ್ವುದ್ಯದ್‌ಗದಾದಂಡದಿಂ
ದಲಿತೋರುದ್ವಯನಾದ ಕೌರವನ ಗಾಢವ್ಯಾಪ್ತದಿಂ ರಕ್ತದಿಂ।
ಸಲೆ ಜೆಂಬಣ್ಣಮನಾಂತು ರಂಜಿಸಿದ ಪಾಣಿದ್ವಂದ್ವದಿಂ ಭೃಂಗಕುಂ
ತಲೆಯೇ ನಿನ್ನಯ ಕೇಶಪಾಶಮನಿದಂ ಭೀಮಂ ವಲಂ ಕಟ್ಟುವಂ.[2]

ಹಳೆಯ ಹೊಸ ಅನುವಾದ ಶೈಲಿಗಳ ಎದ್ದು ಕಾಣುವ ವೈಷಮ್ಯಕ್ಕೆ ಉತ್ತರ ರಾಮಚರಿತ್ರೆಯಿಂದ ಎರಡು ಭಾಷಾಂತರಗಳ ಅವತರಣಿಕೆಗಳನ್ನು ನೋಡಿ (I. ೨೭)—

೧. ಎಲೌ, ಪ್ರಿಯಳೆ, ಮತ್ತು ಆ ಪ್ರದೇಶದಲ್ಲಿ ನಾವು ವಾಸಂಗೈಯುವಾಗ ರಾತ್ರಿಯಲ್ಲಿ ಪತ್ರಗಳಿಂ ತೃಣಗಳಿಂದಲೂ ರಚಿತವಾದ ಹಾಸಿಕೆಯಲ್ಲಿ ಪವಡಿಸಿಕೊಂಡು ಮೋಹಾವೇಶದಿಂ ಪರಸ್ಪರವಾಗಿ ಕಪೋಲಂಗಳಂ ಕೂಡಿಸಿ ಕ್ರಮವಿಲ್ಲದಂತೆ ಮೆಲ್ಲಮೆಲ್ಲನೆ ಏನೇನೋ ರಹಸ್ಯವಚನಂಗಳಂ ನುಡಿಯುವವರಾಗಿ ದೃಢವಾದ ಆಲಿಂಗನದಲ್ಲಿ ಪರಸ್ಪರ ಉದ್ಯುಕ್ತಗಳಾದ ಒಂದೊಂದು ಭುಜಗಳುಳ್ಳವರಾಗಿಯೂ ಇರುವ ಆ ನಮಗೆ ಕಳೆದು ಪೋಗಿರುವ ಯಾಮಂಗಳಂ ತಿಳಿಯದೆ ಆ ರಾತ್ರಿ ಮಾತ್ರವೇ ಹೋಯಿತು ಆ ಉತ್ಸಾಹವು ಆ ರಹಸ್ಯ ಸಲ್ಲಾಪ ಸಹ ಮುಗಿಯಲಿಲ್ಲ.[3]

೨. ಏನು ಏನನೊ ಮೆಲ್ಲಮೆಲ್ಲನೆ ಗಲ್ಲಗಲ್ಲವ ಕೂಡುತೆ, ಸೇರಿಕೊಂಡಿರೆ ತೋರಿ ತೋರಿದ್ದಾಡಿ ನಲಿಯುತಲಾವಿರೆ; ಒರ್ವರೊರ್ವರ ನೀಳ್ದ ತೋಳಿನ ಸಡಿಲವಲ್ಲದ ತೆಕ್ಕೆಯೊಳ್ ಸಿಕ್ಕಿ, ಕಳೆದಾ ಜಾವ ತಿಳಿಯದೆ ರಾತ್ರಿ ಜಾರಿತ್ತೊಯ್ಯನೆ.[4]

---

[1] ಧೋಂಡೋ ನರಸಿಂಹರ ಜೀವನ ಮತ್ತು ರಚನೆಗಳನ್ನು ಕುರಿತು ಒಂದು ಉತ್ತಮ ನಿಬಂಧ, ಪುಟ ೪೬–೪೯, 'ಸುಧಾ' ಜೂನ್ ೨೫ರ ಸಂಚಿಕೆಯಲ್ಲಿ, ಎನ್. ಕೆ. ಕುಲಕರ್ಣಿಯವರದು.

[2] I. ೨೧

[3] ಆಜಿ ನರಸಿಂಹಾಚಾರ್, ಉತ್ತರ ರಾಮಚರಿತ್ರೆಯ ಕಥೆ, ಮೈಸೂರು, ೧೯೨೪.

[4] ಡಾ. ಕೆ. ಕೃಷ್ಣಮೂರ್ತಿ, ಕನ್ನಡ ಉತ್ತರ ರಾಮಚರಿತೆ, ಮೈಸೂರು, ೧೯೫೬.

ಸಂಸ್ಕೃತ ನಾಟಕಗಳಲ್ಲಿ ಗದ್ಯವೂ ಉಂಟು, ಪದ್ಯವೂ ಉಂಟು. ಗದ್ಯದಲ್ಲಿ ವಿಧವಿಧ ಪ್ರಾಕೃತಗಳ ಬಳಕೆಯಿಂದ ನುಡಿಯ ವಾಸ್ತವಿಕತೆ ಬಹುರೂಪಿಂದ ಹೊಳೆಯುತ್ತದೆ. ಪದ್ಯದಲ್ಲಿ ವರ್ಣನಾವಿಲಾಸಕ್ಕೆ, ಭಾವವಿಕಾಸಕ್ಕೆ, ಹೆಚ್ಚಿನ ಪ್ರಾಶಸ್ತ್ಯ. ಎಲ್ಲಿಯೂ ಅನುಚಿತ ಕೃತಕತೆಗೆ ಪುರಸ್ಕಾರವಿಲ್ಲ. "ನಾಟಕಾಂತಂ ಕವಿತ್ವಂ" ಎಂದರೆ ಕವಿತ್ವದ ಪರಾಕಾಷ್ಠೆ ನಾಟಕದಲ್ಲಿ ಎಂದು ತಾತ್ಪರ್ಯ. ಅದನ್ನೇ ಕೈಬಿಟ್ಟರೆ ಅನುವಾದ ಎಷ್ಟಕ್ಕೂ ಬೆಲೆಯಿಲ್ಲದ್ದಾಗುತ್ತದೆ. ಮೇಲೆ ಭವಭೂತಿಯ ಉತ್ತಮೋತ್ತಮ ಶ್ಲೋಕಗಳಲ್ಲಿ ಒಂದೆನಿಸಿದ—

> "ಕಿಮಪಿ ಕಿಮಪಿ ಮಂದಂ ಮಂದಮಾಸತ್ತಿಯೋಗಾ
> ದವಿರಲಿತಕಪೋಲಂ ಜಲ್ಪತೋರಕ್ರಮೇಣ।
> ....ರಾತ್ರಿರೇವವ್ಯರಂಸೀತ್"

ಎಂಬುದು ಕೃತಕ ಗದ್ಯದ ಸೊಲ್ಲಿನಲ್ಲಿ ಅಡಗಿಹೋಗಿದೆ; ಎರಡನೆಯದರಲ್ಲಿ ಸ್ವಲ್ಪ ಮಟ್ಟಿಗಾದರೂ ಉಳಿದಿದೆ ಎನಿಸುತ್ತದೆ.

ಮೂಲವನ್ನು ಮಾರುದ್ದ ಹಿಗ್ಗಿಸುವ ಇಲ್ಲವೆ ಮುಷ್ಟಿಯೊಳಗೆ ಕುಗ್ಗಿಸುವ ಅನುವಾದಕನ ಅನಿವಾರ್ಯಸ್ಥಿತಿಗೆ ಒಂದು ನಿದರ್ಶನ—

ಮಧುರಮಿವ ವದನ್ತಃ ಸ್ವಾಗತಂ ಭೃಂಗಶಬ್ದೈಃ (ನಾಗಾನಂದದ ಮೂಲ ಶ್ಲೋಕದ ಮೊದಲ ಸಾಲು).

'ಮುಸುರುತ್ತಿಂಚರಮೆತ್ತಿ ಪಾಡೆ ಬವರಂ ಮತ್ಸ್ವಾಗತಂಗೇಳವೋಲ್' (ಇದು ಒಂದು ಭಾಷಾಂತರ—ಅನಂತನಾರಾಯಣ ಶಾಸ್ತ್ರಿಗಳದು.)

'ಅಳಿ ಮೃದುರವದಿಂ ತಾಂ ಸ್ವಾಗತಂ ಗೈಯುತಿರ್ಕುಂ' (ಇದು ಇನ್ನೂ ಕಳೆದ ವರ್ಷ ಅಚ್ಚಾಗಿರುವ ಧಾರವಾಡದ ಪಂಡಿತ ಕವಲಿಯವರ ಸರಲಮಧುರ ಅನುವಾದ.) ಮೊದಲ ಅನುವಾದದಲ್ಲಿ 'ಬವರ' ಎಂದರೆ ಯುದ್ಧವಲ್ಲ, ದುಂಬಿಯೆಂದು ಅರಿವಾಗುವದೂ ಕಷ್ಟವಾಗಿದೆ.

ನಾವು ವಿಮರ್ಶಿಸುತ್ತಿರುವ ಕಾಲುಶತಮಾನದ ಅವಧಿಯಲ್ಲಿ ಅಭಿನವ ಕಾಳಿದಾಸನೆಂಬ ಮನ್ನಣೆಗೆ ಪಾತ್ರರಾಗುತ್ತಿರುವವರೆಂದರೆ ಪ್ರೊ. ಎಸ್. ವಿ. ಪರಮೇಶ್ವರಭಟ್ಟರು. ಇವರು ಕಾಳಿದಾಸನ ನಾಟಕತ್ರಯದಂತೆ ಕಾವ್ಯತ್ರಯವನ್ನೂ ತಮ್ಮದೇ ಆದ ಒಂದು ಲಲಿತರೀತಿಯಲ್ಲಿ ಕನ್ನಡಿಸಿ ಕಾಳಿದಾಸ ಮಹಾ ಸಂಪುಟವನ್ನೇ ಹೊರತಂದಿದ್ದಾರೆ. ಇವರ ಅನುವಾದ ಕಲೆ ಬಗ್ಗೆ ಹೇಳಬೇಕಾದ್ದನ್ನೆಲ್ಲ ಈ ಲೇಖಕನು ಹದಿನಾಲ್ಕು ಪುಟಗಳಷ್ಟು ವಿಸ್ತಾರವಾಗಿ ವಿವೇಚಿಸಿ ಇದೇ ಪತ್ರಿಕೆಯಲ್ಲಿ ಹಿಂದೊಮ್ಮೆ ಪ್ರಕಟಿಸಿಯಾಗಿರುವದರಿಂದ ಈಗ ಮತ್ತೆ ಪುನರುಕ್ತಿಗೆ ಹೋಗುವುದಿಲ್ಲ.[1] ಇಲ್ಲಿ ಮಾದರಿಗೆ ಒಂದೆರಡು ಉದಾಹರಣೆಯನ್ನು ಎತ್ತಿ ತೋರಿಸಬಹುದು.

---

[1] ಡಾ. ಕೆ. ಕೃಷ್ಣಮೂರ್ತಿ, ಕನ್ನಡದಲ್ಲಿ ಕಾಳಿದಾಸತ್ರಯಿ, ಪ್ರಬುದ್ಧ ಕರ್ಣಾಟಕ ಸಂಪುಟ ೪೦, ಸಂಚಿಕೆ ೪, ಪುಟ ೬೩-೬೭.

ಮೂಲ

ಪುರಾಣಮಿತ್ಯೇವ ನ ಸಾಧು ಸರ್ವಂ
ನ ಚಾಪಿ ಕಾವ್ಯಂ ನವಮಿತ್ಯವದ್ಯಮ್ ।
ಸಂತಃ ಪರೀಕ್ಷ್ಯಾನ್ಯತರದ್ ಭಜಂತೇ
ಮೂಢಃ ಪರಪ್ರತ್ಯಯನೇಯ ಬುದ್ಧಿಃ[1]

ಮೋಟಗಾನಹಳ್ಳಿ ಸುಬ್ರಹ್ಮಣ್ಯಶಾಸ್ತ್ರಿಗಳ ಅನುವಾದ

ಪಳದೆಂದೆಲ್ಲಮುಮೊಳ್ಪಂ
ದಳೆಯಿದು ಪೊಸತೆಂದನವದ್ಯಮಾಗದು ಕಾವ್ಯಂ।
ತಿಳಿದಿದನೊಂದನೆ ವಿಬುಧಾ
ವಳಿ ಕೊಳ್ಗುಂ ಪರಮತೈಕಶರಣಂ ಮರುಳಂ॥

ಪರಮೇಶ್ವರಭಟ್ಟರ ಅನುವಾದ

ಎಲ್ಲವೂ ಹಳತೆಂದ ಮಾತ್ರದೊಳೊಳ್ಳಿತಾಗವು
ಕೃತಿಯುಮಾಗದು ಪೊಸತಿದೆಂದನವದ್ಯವು
ಹಳತು ಹೊಸತನು-ಬುಧರು ಪರಿಕಿಸುತೊಂದನೊಲಿವರು
ಪರರು ಪೇಳ್ದಂದವೊಳು ನಡೆದಪರೆಗ್ಗರು

ನನ್ನ ಅಭಿರುಚಿಗೆ ಶಾಸ್ತ್ರಿಗಳ ಭಾಷಾಂತರ ಸಾರವತ್ತಾಗಿಯೂ, ಭಟ್ಟರ ಭಾಷಾಂತರ ಹತ್ತಿಯನ್ನು ಹಿಂಜಿ ಹಿಗ್ಗಿಸಿದಂತೆಯೂ ಭಾಸವಾಗುತ್ತದೆ. ಉದ್ದುದ್ದವಾಗಿ ಸಾಲು ಸಾಲಾಗಿ ಹಿಗ್ಗಿಸುತ್ತ ಹೋದಾಗ ಪದ್ಯಗ್ರಂಥ ಕಡಮೆಯಾಗುತ್ತ ಗದ್ಯದ ನೆರಳು ಹೆಚ್ಚುವದಕ್ಕೆ ಕೆಳಗಿನವು ದೃಷ್ಟಾಂತ—

ಮೂಲ (ಶಾಕುಂತಲ I-೩)

ಸುಲಭಸಲಿಲಾವಗಾಹಾಃ
ಪಾಟಲಸಂಸರ್ಗಿ ಸುರಭಿವನವಾತಾಃ।
ಪ್ರಚ್ಛಾಯಸುಲಭನಿದ್ರಾ
ದಿವಸಾಃ ಪರಿಣಾಮರಮಣೀಯಾಃ॥

ಬಸವಪ್ಪ ಶಾಸ್ತ್ರಿಗಳ ಭಾಷಾಂತರ

ಸಲಿಲಾವಗಾಹನಕ್ಕತಿ
ಲಲಿತತೆಯಂ ಬನದೆಲರ್ಗೆ ಪಾದರಿಗಂಪಂ।
ಸುಲಭತೆಯಂ ನಿದ್ರೆಗೆ ನೆಳ
ಲೊಳಗಿತ್ತುವು ಪರಿಣತಿಯೊಳೆ ಸೊಗಯಿಪ ಪಗಲ್ಗಳ್॥

---

1 ಮಾಳವಿಕಾಗ್ನಿಮಿತ್ರ, ಪ್ರಸ್ತಾವನೆ.

ಪರಮೇಶ್ವರ ಭಟ್ಟರ ಅನುವಾದ

ನೀರಿನೊಳು ಮುಳುಗಿ ಮಿಂದೇಳುವುದಕಿಂದು ನಮಗಾಮೋದಮಹುದು
ಪಾಟಲದ ಹೂಗಂಪನೊಡವೆರೆದು ಬನದೆಲರು ಬೀಸುತ್ತಲಿಹುದು
ತಣ್ಣನೆಯ ಪೊದೆಯ ಬಳಿ ನೆಳಲಿನೊಳು ಸುಲಭವೊಳು ಸುಖನಿದ್ರೆಯುಹುದು
ಬೇಸಗೆಯ ದಿನಗಳಿವು ಪರಿಣಾಮ ರಮಣೀಯಮೆನಲೆಸೆಯುತಿಹವು.

ಹೀಗೆ ಹಿಗ್ಗಿಸಿದಾಗ ಸಂಸ್ಕೃತ ಅಂದವಾಗಲಿ ಅರ್ಥಸಾಂದ್ರತೆಯಾಗಲಿ ಕನ್ನಡದಲ್ಲಿ ಕಾಣದೆ ಕೇವಲ ವಾಚ್ಯಾರ್ಥದ ವ್ಯಾಖ್ಯಾನದಂತಾಗುತ್ತದೆ. "ಧ್ವನಿ"ಯ ದನಿಯೇ ಇಲ್ಲದಂತಾಗುತ್ತದೆ. ಅದೇ ಹಳಗನ್ನಡವನ್ನು ಸಿಕ್ಕಂತೆಲ್ಲ ಬಳಸಿದರೂ ಪ್ರೌಢಿಮೆಯ ಪ್ರದರ್ಶನದಲ್ಲಿ ರಸದ ಚಿಲುಮೆ ಬತ್ತಿಹೋಗಬಹುದು. ಭಾಸನ 'ಬಾಲಚರಿತ'ದ ಬಹುಸರಲ ಪದ್ಯವೊಂದನ್ನು (III-೨)—

ಇವರುತ್ಫುಲ್ಲ ಸರೋಜಕೈರವ ದಳವ್ಯಾಭಾಸಿವಕ್ತ್ರಾಕ್ಷಿಯರ್
ನವಚಾಮೀಕರಚಂಪಕೋದ್ಗಮಲಸದ್ಗೌರಾಂಗಿಯರ್ ಗೋಪಿಯರ್[1]

ಎಂದು ಅನುವಾದಿಸಿದರೆ ಮಗುವಿನ ಉಡುದಾರಕ್ಕೆ ಆನೆಯ ಸರಪಳಿಯನ್ನು ತಂದಂತೆಯೇ. ಸಹಜ ಕವಿಹೃದಯರಾದ ಬಸವಪ್ಪಶಾಸ್ತ್ರಿಗಳು ಕೂಡ ವಿಕ್ರಮೋರ್ವಶೀಯದಲ್ಲಿ ಶಾಕುನ್ತಲದ ಸಿದ್ಧಿಯನ್ನು ಪಡೆಯಲಿಲ್ಲ. ಒಂದು ನಿದರ್ಶನ—

ಪರ್ವತನಾಥನತಾಂಗುಳಿ
ಪರ್ವತತಿಯ ಪೃಥುನಿತಂಬಿ ಸುನಿತಂಬೆಯನಾ
ಪರ್ವತರುಣೇಂದು ಮುಖಿಯ ಸು
ಪರ್ವತನೂವರಿಯ ಬನದೆ ಕಂಡಿರೆ ಪೇಳ್ಕೆ (IV 26)

ಇಲ್ಲಿ 'ಪರ್ವ'ದ ಪ್ರಾಸ ಗರ್ವದಿಂದ ಬರುತ್ತಾ ಕಾಳಿದಾಸನ ಕರುಣರಸ ಕಣ್ಮರೆಯಾಗುವಂತೆ ಮಾಡಿದೆ.

ಇದುವರೆಗೆ ನಾಟಕಾನುವಾದಗಳ ಒಂದು ಸ್ಥೂಲ ಸಮೀಕ್ಷೆ ಆದಂತಾಯಿತು. ಇದೇ ಚಿತ್ರವು ಕಾವ್ಯಾನುವಾದ ಕ್ಷೇತ್ರದಲ್ಲಿ ಕೂಡ ಕಾಣಬರುತ್ತದೆ. ಸಂಸ್ಕೃತ ಅನುವಾದಕರ ಹಿನ್ನೆಲೆಯನ್ನೂ ಆಗಿನ ಸಮಸ್ಯೆಗಳನ್ನೂ, ಎಸ್. ಅನಂತನಾರಾಯಣ ಅವರು ತಮ್ಮ ಪ್ರಬಂಧದ ಪೀಠಿಕೆಯಲ್ಲಿ ಸ್ವಲ್ಪಮಟ್ಟಿಗೆ ವಿವೇಚಿಸಿದ್ದಾರೆ. ಅವರು ಕೊಟ್ಟಿರುವ ಒಂದು ಉದಾಹರಣೆ ಹೀಗಿದೆ—

(ಸಂಸ್ಕೃತ ಮೂಲ)

ಉಪಮಾ ಕಾಲಿದಾಸಸ್ಯ ಭಾರವೇರರ್ಥ ಗೌರವಂ ।
ದಂಡಿನಃ ಪದಲಾಲಿತ್ಯಂ, ಮಾಘೇ ಸಂತಿ ತ್ರಯೋಗುಣಾಃ ॥

---

1 ಎಚ್. ಶೇಷಯ್ಯಂಗಾರ್, ಕರ್ಣಾಟಕ ಬಾಲಚರಿತಂ, 1934.

(ಕನ್ನಡ ಭಾಷಾಂತರ)

ಕವಿವರ ಕಾಳಿದಾಸನ ಕವಿತ್ವದೆ ತೋರ್ಗುಗುಮುತ್ತಮೋಪಮಾ ।
ಕವನದೆ ದಂಡಿಯೆಂಬನೊಳಗುಂಟು ಪದೋನ್ನತ ಸುಂಪರತ್ವಮಾ ॥
ಭುವನನುತಾರ್ಹ ಭಾರವಿಯೊಳರ್ಥದ ಗೌರವಮೈದೆ ರಾಜಿಕುಂ
ನವರಸಯುಕ್ತ ಮಾಘದೊಳಗೀ ತ್ರಿಗುಣಂಗಳುಮಿರ್ಪವೀಕ್ಷಿಕುಂ ॥[1]

ಅನಂತನಾರಾಯಣರ ಮಾತಿನಂತೆ "ಹೇಳಿರುವ ರೀತಿಯಲ್ಲಿ ನಿಸ್ಸಾರತೆಯೇ ಮುಖ್ಯ ಗುಣವಾಗಿದೆ."

ಕಾಳಿದಾಸನ ಸುಪ್ರಸಿದ್ಧ ಕಾವ್ಯಗಳಾದ 'ರಘುವಂಶ,' 'ಕುಮಾರಸಂಭವ' ಗಳನ್ನು ಇಡಿಯಾಗಿಯೂ ಬಿಡಿಯಾಗಿಯೂ ಕನ್ನಡಿಸುವ ಪ್ರಥಮ ಪ್ರಯತ್ನಗಳು ಈ ಶತಮಾನದ ಆದಿಯಲ್ಲೇ ಅವತರಿಸಿವೆ. ದೊಡ್ಡಬೆಲೆ ನಾರಾಯಣಶಾಸ್ತ್ರಿಗಳು 'ರಘುವಂಶದ' ೧೯ ಸರ್ಗಗಳನ್ನು ಗದ್ಯದಲ್ಲೂ, ಬಳ್ಳಾರಿಯ ವೈ. ನಾಗೇಶಶಾಸ್ತ್ರಿಗಳು 'ರಘುವಂಶವನ್ನು' ವಾರ್ಧಕಷಟ್ಪದಿಯಲ್ಲೂ, 'ಕುಮಾರ ಸಂಭವ'ವನ್ನು ಕಂದವೃತ್ತಗಳಲ್ಲಿಯೂ ಕನ್ನಡಿಸಿದ ಕೀರ್ತಿಶಾಲಿಗಳು. ಕೇವಲ ಕೆಲವೇ ಸರ್ಗಗಳನ್ನು ಅನುವಾದಿಸಿದರೂ ಎಸ್. ಜಿ. ನರಸಿಂಹಾಚಾರ್‌ರವರು 'ಅಜನೃಪ ಚರಿತೆ', 'ದಿಲೀಪ ಚರಿತೆ' ಮುಂತಾದುವನ್ನು ಷಟ್ಪದಿ ಪ್ರಯೋಗಗಳಲ್ಲಿ ಅನುವಾದಿಸಿ ತೋರಿಸಿದ ಕೌಶಲ ಇಂದಿಗೂ ಪ್ರಶಂಸಾರ್ಹವಾಗಿದೆ. ೧೯೨೮ರಿಂದ ೧೯೩೮ರ ಅವಧಿಯಲ್ಲಿ ಬಿಜಾಪುರದ ಬಸವರಾಜ ಶಾಸ್ತ್ರಿಗಳು ಕೋಡಿಕೊಪ್ಪಮಠ, ಇವರು ಸಂಸ್ಕೃತ ಪಂಚಮಹಾಕಾವ್ಯಗಳನ್ನೂ ನೂತನ ಕನ್ನಡ ದೇಸಿಯ ಶೈಲಿಯಲ್ಲಿ ಮೂಲದ ಸಾರಸತ್ತ್ವ ಕನ್ನಡದಲ್ಲಿ ಕಳೆಯೇರುವಂತೆ ಬರೆದಿರುವುದು ಅಭಿನಂದನೀಯವಾಗಿದೆ. ಇವರ ಗದ್ಯ ಕಾವ್ಯಗುಣಮಯವಾಗಿದ್ದರೂ ಪ್ರತಿಪದ್ಯದ ಅಕ್ಷರಶಃ ಭಾಷಾಂತರ ಇವರ ಉದ್ದೇಶವಾಗಿರದೆ ಕೇವಲ ಕಾವ್ಯತಾತ್ಪರ್ಯದ ಭಾವಗ್ರಹಣ ಇರುವುದರಿಂದ ಇವರ ಗ್ರಂಥಗಳನ್ನು[2] ಸಮಗ್ರಾನುವಾದಗಳ ಈ ಸಮೀಕ್ಷೆಯಲ್ಲಿ ಅವಲೋಕಿಸುವಂತಿಲ್ಲ.

ಸಂಸ್ಕೃತದಿಂದ ಬಂದ ಅನುವಾದ ಉತ್ತಮವೆನಿಸಬೇಕಾದರೆ ಅಗತ್ಯವಾದ ಅಂಶಗಳು ಯಾವುವು ಎಂಬುದರ ಬಗೆಗೆ ಹಿಂದಿನ ಮಹನೀಯರ ಕೆಲವೊಂದು ಅಭಿಪ್ರಾಯಗಳನ್ನು ಇಲ್ಲಿ ಗಮನಿಸಬಹುದು—

೧ "ಪಂಚಮಹಾಕಾವ್ಯಗಳ ಕಥಾವಸ್ತುಗಳೇನೋ ಪೌರಾಣಿಕವಾದವುಗಳೇ ಆದರೂ ಇವು ಪುರಾಣಗಳಲ್ಲ. ವಿಚಿತ್ರ ಕಥಾಸಂವಿಧಾನಗಳೂ ಇವುಗಳಲ್ಲಿಲ್ಲ. ಕಥೆ

---

[1] ಎಸ್. ಅನಂತನಾರಾಯಣ, ಹೊಸಗನ್ನಡ ಕವಿತೆಯ ಮೇಲೆ ಇಂಗ್ಲಿಷ್ ಕಾವ್ಯದ ಪ್ರಭಾವ, ಮೈಸೂರು, 1662, ಪು. ೧೫.

[2] (೧) ಕನ್ನಡ ರಘುವಂಶ ರಹಸ್ಯ, (೨) ಕುಮಾರಸಂಭವಸಾರ, (೩) ಶಿಶುಪಾಲವಧ ಸತ್ವ, (೪) ಕಿರಾತಾರ್ಜುನೀಯಸಾರ, (೫) ನೈಷಧೀಯಸಾರ—೨ ಭಾಗಗಳು.

ಯನ್ನೇ ಲಕ್ಷಿಸುವುದಾದರೆ ಇವುಗಳಿಗೆ ಬೆಲೆಯೇ ಬಾರದು. ತತ್ತ್ವನಿರೂಪಣೆಯಿಂದ ಪುರಾಣಗಳಲ್ಲಿ ಆಸಕ್ತಿಯುಂಟಾದರೆ ರಸ ನಿರೂಪಣೆಯಿಂದ ಕಾವ್ಯಗಳಲ್ಲಿ ಆಸಕ್ತಿ ಯುಂಟಾಗುವುದು. ರಸೋತ್ಕರ್ಷವೇ ಮಹಾಕಾವ್ಯಗಳು ಹೃದಯಂಗಮವಾಗಲಿಕ್ಕೆ ಮುಖ್ಯ ಕಾರಣವು. ಕವಿಯು ತನ್ನ ರಸಭಾವನೆಗೆ ವಾಕ್ಯಸಮುದಾಯದಲ್ಲಿ ರೂಪು ಗೊಟ್ಟು ರಸಿಕರ ಮನವನ್ನು ಸೂರೆಗೊಂಡು ತನ್ನ ಪ್ರತಿಭೆಯನ್ನು ತೋರಿಸಿಕೊಳ್ಳುವನು. ಸತ್ಕವಿಯು ತನ್ನ ಜಾಣ್ಮೆಯಿಂದ ಲಲಿತವಾದ ಸ್ಥೂಲರೂಪವನ್ನೂ, ರಸಿಕತೆಯಿಂದ ಪ್ರಾಣವನ್ನೂ, ಭಾವಗಳಿಂದ ಆತ್ಮವನ್ನೂ ಉಂಟುಮಾಡಿ ಕವಿತಾ ಕಾಮಿನಿಯ ದಿವ್ಯ ಸತ್ಕಳೆಯನ್ನು ಕುಣಿಸುವನು. ಅವೆಲ್ಲವೂ ಅಂತಹ ಕಾವ್ಯದ ಅನುವಾದದಲ್ಲಿ ಬಾರದಿದ್ದರೆ ಅನುವಾದಗ್ರಂಥವು ವಾಙ್ಮಯಾಕಾಶದಲ್ಲಿ ಎದ್ದುಕಾಣುವುದು ಹೇಗೆ? ಮೂಲ ಗ್ರಂಥದ ಸುಂದರವಾದ ಸ್ಥೂಲರೂಪವನ್ನು ತಮಗೆ ಬೇಕಾದ ಬೇರೊಂದು ಬಗೆಯ ಅಂದವಾದ ಸ್ಥೂಲರೂಪಕ್ಕೆ ಬದಲಿಸಿ, ಮಿಗಿಲಾದ ರಸಭಾವಗಳನ್ನು ಅಳಿಯದಂತೆ ಉಳಿಸುವುದೇ ಅನುವಾದಕನ ಮುಖ್ಯರೀತಿ."[1]

೨ "ಒಂದು ಭಾಷೆಯಿಂದ ಮತ್ತೊಂದಕ್ಕೆ ಅಂತರಿಸುವ, ಅದರಲ್ಲೂ ಕವಿತೆ ಯನ್ನು ಕವಿತೆಯಲ್ಲೇ ಭಾಷಾಂತರಿಸುವ, ಪರಿವರ್ತನೆ ಎಂದರೆ ಮಾತೃಕೆಗೆ ಎತ್ತಿ ಹಿಡಿದ ಕನ್ನಡಿಯಂತಿರಬೇಕು, ಹಾಗೂ ಮಾತೃಕೆ ಪ್ರಾಯಶಃ ಕ್ಲಿಷ್ಟವಾಗಿದ್ದರೂ ಅದರ ಪುತ್ರಿಕೆ ಸರಳವಾಗಿರಬೇಕು: ಜತೆಗೆ ಮಾತೃಕೆಯ ಓಜೆಯೂ, ಧೋರಣೆಯೂ ಪುತ್ರಿಕೆ ಯಲ್ಲಿ ಯಥಾವತ್ತಾಗಿ ಇಲ್ಲವೆ ಬಹುಮಟ್ಟಿಗಾದರೂ ಬಿಂಬಿಸಿರಬೇಕು."[2]

ಇದಕ್ಕಿಂತ ಮಾರ್ಮಿಕವಾಗಿ ಅನುವಾದಕನ ಸಮಸ್ಯೆ, ಹಾಗು ಪರಿಹಾರೋಪಾಯ ಗಳನ್ನು ಇಂದಿಗೂ ನಿರ್ದೇಶಿಸುವಂತಿಲ್ಲ.

ಈ ಸಮೀಕ್ಷೆಗೆ ಪ್ರಸಕ್ತವಾದ ಕಾಲುಶತಮಾನದಲ್ಲಿ ಈ ಹೊಸ ಅನುವಾದಕ ಪ್ರಜ್ಞೆ, ಸ್ಪಷ್ಟತರವಾಗಿ ಕಾಣಿಸಿದೆ. ಕವಿಹೃದಯ, ಉತ್ತಮ ರಸಿಕತೆ, ಇವುಗಳಿಂದ ಕೂಡಿದ ನಾಲ್ಕಾರು ವಿದ್ವಾಂಸರು ಸ್ಥೂಲರೂಪಗಳನ್ನು ಬಗೆಬಗೆಯಾಗಿ ಬದಲಿಸುತ್ತ, ಸಂಸ್ಕೃತದ ಪಂಚಮಹಾಕಾವ್ಯಗಳ ಹಾಗು ಕೆಲವು ಭಾವಗೀತೆಗಳ ಪ್ರತಿಬಿಂಬಗಳನ್ನು ಕನ್ನಡದಲ್ಲಿ ಒದಗಿಸಿದ್ದಾರೆ.

ಕೆಲವನ್ನು ಮಾತ್ರ ಇಲ್ಲಿ ಹೆಸರಿಸಬಹುದು. ಈ ಕ್ಷೇತ್ರದಲ್ಲಿಯೂ ಪರಮೇಶ್ವರ ಭಟ್ಟರ ಅವಿರತ ಪ್ರಯತ್ನಗಳು ಪ್ರಥಮೋಲ್ಲೇಖಕ್ಕೆ ಯೋಗ್ಯವಾಗಿವೆ. ಅವರ "ರಘುವಂಶ" "ಕುಮಾರಸಂಭವ" ಅನುವಾದಗಳು ಸಮಗ್ರವಾಗಿರುವಂತೆ ಸುಭದ್ರವೂ ಆಗಿವೆ. ಆದರೆ ಅವರ ಅನುವಾದಗಳಲ್ಲಿ ಕಂಡುಬರುವ ಅತಿಪರಿಚಿತ ಗದ್ಯಯೋಗ್ಯ ಪದ

---

1 ಫ. ಗು. ಹಳಕಟ್ಟಿ, "ನೈಷಧೀಯಸಾರ"ದ ಮುನ್ನುಡಿ ೧೯೩೪ ವಿಜಾಪೂರ.

2 ಗೋವಿಂದ ಪೈ, ಅಮ್ಮೆಂಬಳ ಶಂಕರನಾರಾಯಣರ "ಕನ್ನಡ ಕುಮಾರಸಂಭವ"ದ ಮುನ್ನುಡಿ, ೧೯೪೭.

ಪ್ರಯೋಗಗಳು ಇಲ್ಲಿಯೂ ಕಾಣುತ್ತವೆಯಾಗಿ 'ಮಹಾ'ಕಾವ್ಯ ಗಾಂಭೀರ್ಯ ಒಮ್ಮೊಮ್ಮೆ ಕಡಮೆಯಾಗುತ್ತದೆ. ಭಾವ ವ್ಯಂಜಕತೆ ಕುಗ್ಗಿ ವಾಚ್ಯಾರ್ಥ– ವಿವರಣೆ ಹಿಗ್ಗುತ್ತದೆ. ಅಲ್ಲಲ್ಲಿ ಮಾತ್ರಾನಿಯತ ಪಾದಗಳು ಅಳತೆಮೀರಿ ನಡೆಯುತ್ತವೆ. ಆದರೆ ಇವರೇ ಲಘುಕಾವ್ಯಗಳಾದ 'ಋತು ಸಂಹಾರ' 'ಮೇಘದೂತ'ಗಳ ಅನುವಾದ ಗಳಲ್ಲಿ ಹೆಚ್ಚಿನ ಯಶಸ್ಸನ್ನು ಗಳಿಸಿದ್ದಾರೆ. 'ಕನ್ನಡ ಋತುಸಂಹಾರ' ಮೂಲದ ಭಾಷಾಂತರವಲ್ಲ, ಭಾವಗ್ರಹಣ. ಮೂಲದ ಎಲ್ಲ ಶ್ಲೋಕಗಳು ಇಲ್ಲಿ ಬಂದಿಲ್ಲ. ಬಂದಿರುವುವೂ ಮೂಲದಲ್ಲಿನ ಕ್ರಮದಲ್ಲಿ ಇಲ್ಲ. ನನಗೆ ಸರಿತೋರಿದಂತೆ ಮೂಲದ ಭಾವಕ್ಕೆ, ಆಶಯಕ್ಕೆ ಹಾನಿ ಅಡಸದ ಹಾಗೆ ಹಲಕೆಲವು ಬದಲಾವಣೆಗಳನ್ನು ಮಾಡಿ ಕೊಂಡಿದ್ದೇನೆ." ಎಂದು ಭಟ್ಟರೆ "ಕನ್ನಡ ಋತುಸಂಹಾರ"ದ ಮುನ್ನುಡಿಯಲ್ಲಿ ಹೇಳಿದ್ದಾರೆ.[1]

ಒಂದು ಮಾದರಿ—

ಶಾರದ ಯಾಮಿನಿ

ಸುಂದರ ಚಂದಿರ ಬಿಂಬವೆ ಮೊಗವೆನೆ
ತಾರಾಗಣ ಆಭರಣವೆನೆ
ತಿಳಿ ಬೆಳುದಿಂಗಳು ಚೀನಾಂಬರವೆನೆ
ವಿಕಸಿತ ನೈದಿಲೆ ಹಸಿತವೆನೆ
ಶಾರದಯಾಮಿನಿ ಬೆಳೆಯುವಳನುದಿನ
ವರ್ಧಿಸುತಿಹ ನವಯುವತಿಯೆನೆ.[2]

ಭಟ್ಟರ ಉತ್ತಮ ಅನುವಾದ ಶೈಲಿಗೆ ಇದು ನಿದರ್ಶನ. ಸಹಜ ಸುಲಭ ಪದಾವಲಿ, ಉಚಿತ ಆವರಣ ನಿರ್ಮಾಣ, ಅಲಂಕಾರ ನಿರ್ವಹಣೆ, ಭಾವಾಭಿವ್ಯಕ್ತಿ ಇವು ಇಲ್ಲಿ ಸ್ಪಷ್ಟ. ಛಂದಸ್ಸು ಕೃತಕವಾಗಿಲ್ಲ.

'ಮೇಘದೂತ' ಈ ಅವಧಿಯಲ್ಲಿ ಭಟ್ಟರಂತೆ ಪಂಡಿತರೊಬ್ಬರನ್ನೂ, ವರಕವಿ ಗಳೊಬ್ಬರನ್ನೂ ಆಕರ್ಷಿಸಿದೆ. ಬೇಂದ್ರೆಯವರ 'ಮೇಘದೂತ' ಒಂದು ಸ್ವತಂತ್ರ ಕಾವ್ಯವೇ ಎನಿಸುತ್ತದೆ. ಅದರಲ್ಲಿ ಸ್ಫೂರ್ತಿ ದಿವ್ಯವಾಗಿ ಮೊದಲಿಂದ ಕಡೆಯವರೆಗೆ ಕಂಗೊಳಿಸುತ್ತದೆ. ಹಿತವಾದ ಹೊಸ ಛಂದಸ್ಸಿನ ಉನ್ಮೇಷ, ಬಳುಕುತ್ತ ಬರುವ ಪ್ರಾಸಲಯಗಳ ಸಂಗೀತ, ಬಹು ಮುಖಧ್ವನಿಯಿಂದ ಬೆಳಗುವ ಅಚ್ಚಗನ್ನಡ ಪದ ವೈಖರಿ ಅಥವಾ ಶಬ್ದಗಾರುಡಿ ಅಭೂತಪೂರ್ವವಾಗಿದ್ದು, ಕನ್ನಡ ಅನುವಾದ ರಂಗದಲ್ಲಿ ಇದೊಂದು ನೂತನ ಮಹಾವಿಜಯವೆನಿಸುತ್ತದೆ. ಪಂಡಿತ ಕ. ನರಸಿಂಹ ಶಾಸ್ತ್ರಿಗಳ ಭಾಷಾಂತರ ಮೂಲಕ್ಕೆ ಅತ್ಯಂತ ಹತ್ತಿರದ ಮಾರ್ದನಿಯಾಗಿದೆ. ಆದರೂ ಇಪ್ಪತ್ತು

---

[1] ಕನ್ನಡ ಋತುಸಂಹಾರ, ಕಾವ್ಯಾಲಯ, ಮೈಸೂರು. ೧೯೪೭.

[2] ಅದೇ, ಪುಟ. ೨೨.

ಮಾತ್ರೆಗಳ ಇವರ ಹೊಸ ಷಟ್ಪದಿಯಲ್ಲಿ ಕಾವ್ಯದ ಕಾವಿಗಿಂತ ಗದ್ಯದ ಗತಿಯೇ ಹೆಚ್ಚು. ಈ ನಾಲ್ವರು ಅನುವಾದಕರಿಂದ ತೆಗೆದ ಒಂದು ಉದಾಹರಣೆಯನ್ನು ನೋಡಿ—

ಮೂಲಪದ್ಯ (ಮೇಘದೂತ. I, 12)

ಆಪೃಚ್ಛಸ್ವ ಪ್ರಿಯಸಖಮಮುಂ ತುಂಗಮಾಲಿಂಗ್ಯ ಶೈಲಂ
ವಂದ್ಯೈಃ ಪುಂಸಾಂ ರಘುಪತಿಪದೈರಂಕಿತಂ ಮೇಖಲಾಸು ।
ಕಾಲೇ ಕಾಲೇ ಭವತಿ ಭವತೋ ಯಸ್ಯ ಸಂಯೋಗಮೇತ್ಯ
ಸ್ನೇಹವ್ಯಕ್ತಿಶ್ಚಿರವಿರಹಜಂ ಮುಂಚತೋ ಬಾಷ್ಪಮುಷ್ಣಮ್ ॥

೧. ಕುಕ್ಕೆ ಸುಬ್ರಹ್ಮಣ್ಯಶಾಸ್ತ್ರಿಗಳ ಅನುವಾದ

ರಾಮಪಾದದ ಕುರುಹಿ
ನೀ ಮಹೀಧರವನ್ನು
ಸಾಮದಿಂದನುಮತಿಯ ಕೇಳಿ ತೆರಳು ।
ಪ್ರೇಮದಿಂ ನೀ ಬರಲು
ಕಾಮಿತದ ಪದವಿತ್ತು
ತಾಂ ಮುದದಿ ಬಾಷ್ಪಮಂ ಬಿಡುವನಲ್ತೆ ॥[1]

೨. ದ. ರಾ. ಬೇಂದ್ರೆ ಅವರ ಅನುವಾದ

"ಹೋಗಿ ಬರಲೊ" ಎಂದಪ್ಪಿ ಕೇಳು ಈ ಮುದ್ದುಗೆಳೆಯನನ್ನು
ರಾಮಪಾದಗಳು ಮುದ್ದಿ ಮುದ್ರಿಸಿದವಿದರ ಮಗ್ಗುಲನ್ನು
ಕಾಲಕಾಲಕೂ ನಿನ್ನ ಕಂಡು ಇದು ಮೈಯನರಳಿಸುವದು
ಆಗಲಿ ಬಲುದಿನಕೆ ಬಂದೆ ಎಂದು ಬಿಸಿನೀರನುರುಳಿಸುವದು.[2]

೩. ಕ. ನರಸಿಂಹಶಾಸ್ತ್ರಿ ಅವರ ಅನುವಾದ

ಶ್ರೀರಾಮ ಪರಿಪೂಜ್ಯ ಚರಣ ಮುದ್ರಿತವಾದ
ಮೇಖಲೆಯನೊಂದಿರುವ ಶೈಲೇಂದ್ರನನ್ನಪ್ಪಿ
ಅಪ್ಪಣೆಯ ಪಡೆದುಕೋ ; ನಿನ್ನ ಸಖನುನ್ನತನು
ಕಾಲಕಾಲದೊಳೊಗೆವ ಸುಖಸಮಾಗಮದಲ್ಲಿ
ಚಿರವಿರಹದಿಂದೊಗೆದ ನಸುಬಿಸಿಯ ಕಂಬನಿಯ
ಕಾವಳವು ಕವಿತರಲು ಪ್ರಕಟಿಪನು ಸ್ನೇಹವನ್ನು.[3]

೪. ಪರಮೇಶ್ವರ ಭಟ್ಟರ ಅನುವಾದ

ಲೋಕವಂದಿತನಾದ ರಾಮನಡಿದಾವರೆಯ
ಗುರುತಿರುವ ಸಾನುಗಳನಾಂತು ಮೆರೆದು

---

1 ಕರ್ಣಾಟಕ ಸಂಘ, ಶಿವಮೊಗ್ಗ, ೧೯೩೧.
2 ಸಾಧನ ಮುದ್ರಣಾಲಯ, ಧಾರವಾಡ, ೧೯೪೩.
3 ಉಷಾಸಾಹಿತ್ಯಮಾಲೆ, ಮೈಸೂರು, ೧೯೫೭.

ನಿನ್ನ ಪ್ರಿಯಸಖನಾಗಿ ಉನ್ನತೋನ್ನತನಾಗಿ
ನಿಂದ ಗಿರಿಯಿದನಪ್ಪಿ ಕೇಳಿ ತೆರಳು.
ಕಾಲಕಾಲಕೆ ನಿನ್ನ ಸಂಯೋಗವನು ಪಡೆದು
ಚಿರವಿರಹದಿಂದೊಗೆದ ಕಂಬನಿಯನು
ನಿನಗಾಗಿ ಕಾತರದೆ ಬೆಚ್ಚಬೆಚ್ಚನೆ ಸುರಿಸಿ
ತನ್ನ ಸ್ನೇಹಮನಿಂತು ತೋರುತಿಹುದು.[1]

ಈ ನಾಲ್ಕು ಅನುವಾದಗಳಲ್ಲಿ ಬೇಂದ್ರೆಯವರದು ರಸನಿರ್ಭರವಾದ ಸ್ವಯಂಸ್ಫೂರ್ತ ಕನ್ನಡಗವಿತೆ; ಎರಡನೆಯದು ಕಿರಿದರಲ್ಲಿ ಪಿರಿದರ್ಥವನ್ನಡಗಿಸಿ ಭಾವಾರ್ಥವನ್ನು ಅಂದವಾಗಿ ಪ್ರತಿಬಿಂಬಿಸಿರುವ ಕನ್ನಡ ಷಟ್ಪದಿ ; ಮೂರನೆಯದು ಸರಳರಗಳೆಯಂತೆ ಸರಿದಾಡುವ ಬಂಧದಲ್ಲಿ ಮೂಲದ ವಾಚ್ಯಾರ್ಥವನ್ನು ಮಾತ್ರ ಕನ್ನಡಿಸುತ್ತಿದೆ. ನಾಲ್ಕನೆಯದು ಸೂಚ್ಯವಾಗಿ ಹೇಳಬಹುದಾದ ಒಂದು ಪದಕ್ಕೆ ಬದಲು ವಾಚ್ಯವಾದ ಎರಡು ಪದಗಳನ್ನು ಬರೆದಂತಿದೆ.

ವಾಚ್ಯದ ಅರ್ಥವ್ಯಕ್ತಿ ಹೆಚ್ಚಿದಷ್ಟೇ ವ್ಯಂಗ್ಯದ ಅರ್ಥವ್ಯಕ್ತಿ ಕಡಮೆಯಾಗುತ್ತದೆ.

ಲಘುಕಾವ್ಯಗಳಲ್ಲಿ ಶೃಂಗಾರ ಪ್ರಧಾನವಾದ 'ಅಮರುಶತಕ'ವನ್ನು ಪರಮೇಶ್ವರ ಭಟ್ಟರು ಚೆನ್ನಾಗಿಯೇ ಕನ್ನಡಿಸಿದ್ದಾರೆ. ನೀತಿಪ್ರಧಾನವಾದ ಭರ್ತೃಹರಿ ಶತಕಗಳನ್ನೂ ಕನ್ನಡಿಸಿದ್ದಾರೆ. ಕ್ಷೇಮೇಂದ್ರನ 'ಚಾರುಚರ್ಯಾ' ಎಂಬ ನೀತಿಕಾವ್ಯವನ್ನು ಮೊಳೆಯಾರು ಶಂಕರನಾರಾಯಣಭಟ್ಟರು ಅಂದವಾದ ಚೌಪದಿಗಳಲ್ಲಿ ಅನುವಾದಿಸಿದ್ದಾರೆ. ಇವರ ಒಂದು ಮಾದರಿ—

ಪರರನು ವಾದಿಸಿ ಸಿಟ್ಟೆಬ್ಬಿಸದಿರು
ಪರವಾದದ ಮುದವೇ ಗತಿಗೇಡು
ಬಿರು ನುಡಿಯನು ಕೇಳುತ್ತಿರಲಾರದೆ
ಹರಿ ಶಿಶುಪಾಲನ ತಲೆಗಡಿದನಲೆ.

ಇಲ್ಲಿ ಮೂಲದಲ್ಲಿಯೇ ಕಾವ್ಯರಸವಲ್ಲ, ನೀತಿಬೋಧೆ ಮಾತ್ರ. ಆದ್ದರಿಂದ ಭಾಷಾಂತರ ಕೆಡುವ ಸಂಭವ ಕಡಮೆ.[2]

ಜಿ. ಪಿ. ರಾಜರತ್ನಂ ರವರು ಲೀಲಾಶುಕನ 'ಕೃಷ್ಣ ಕರ್ಣಾಮೃತ'ದಿಂದ ಆಯ್ದ ಐವತ್ತೊಂದು ಪದ್ಯಗಳನ್ನು ಗದ್ಯದಲ್ಲಿ ಕನ್ನಡಿಸಿದ್ದಾರೆ. ಗದ್ಯವಾದರೂ ಹಿತಮಿತವಾಗಿದೆ.[3] 'ಮುಕುಂದಮಾಲಾ ಸ್ತೋತ್ರ'ವನ್ನು ಹೆಮ್ಮಿಗೆ ದೇಶಿಕಾಚಾರ್ಯರು

---

1 ಶಾರದಾಮಂದಿರ, ಮೈಸೂರು, ೧೯೪೪.

2 ಮಂಗಳೂರು, ೧೯೫೧, ಪು. ೩೫.

3 ಕಸ್ತೂರಿತಿಲಕಂ, ಬೆಂಗಳೂರು, ೧೯೫೭.

ಮನೋಜ್ಞವಾದ ಕಂದವೃತ್ತಗಳಲ್ಲಿ ಕನ್ನಡಿಸಿದ್ದಾರೆ. ಮಂಗಳೂರಿನ ಮೂಲ್ಕಿ ನರಸಿಂಗರಾವ್ ಅವರು "ಸುಶೋಭಿತ ಸುಭಾಷಿತ" ಎಂಬ ಶೀರ್ಷಿಕೆಯಿಂದ ೨೪೪ ಸಂಸ್ಕೃತ ಸೂಕ್ತಿಗಳನ್ನು ಕನ್ನಡ ತಾತ್ಪರ್ಯದೊಂದಿಗೆ ಪ್ರಕಟಿಸಿದ್ದಾರೆ.[1] ಒಂದು ಉದಾಹರಣೆ—

ಮೂಲ

ಅಲ್ಪಾಕ್ಷರ ರಮಣೀಯಂ
ಯಃ ಕಥಯತಿ ನಿಶ್ಚಿತಂ ಸ ಖಲು ವಾಗ್ಮೀ ।
ಬಹುವಚನಮಲ್ಪಸಾರಂ
ಯಃ ಕಥಯತಿ ವಿಪ್ರಲಾಪೀ ಸಃ ॥

ಅನುವಾದ

ಸ್ವಲ್ಪ ಮಾತುಗಳಿಂದ ವಿಷಯವನ್ನು ರಂಜಿಸಿ ಹೇಳುವವನೇ ವಾಗ್ಮಿ. ಬಹು ಮಾತುಗಳಿಂದ ಅಲ್ಪ ಸ್ವಾರಸ್ಯದ ಮಾತುಗಳನ್ನು ಹೇಳುವವನಿಗೆ ಹರಟೆಗಾರನೆನ್ನುವರು.

ಈ ಸಂದರ್ಭದಲ್ಲಿ ಉಲ್ಲೇಖನೀಯವಾದ ಮತ್ತೊಂದು ಹೊಸ ಗದ್ಯಾನುವಾದ ಸಿ. ಬಿ. ಸೀತಾರಾಮ್ ಅವರ "ಗೀತಗೋವಿಂದ." (೧೯೬೧).

ಸಂಸ್ಕೃತ ಮಹಾಕಾವ್ಯಗಳಲ್ಲಿ ವಾಲ್ಮೀಕಿ 'ಸುಲಿದ ಬಾಳೆಯ ಹಣ್ಣು' ಕಾಳಿದಾಸನದು ದ್ರಾಕ್ಷಾಪಾಕ. ಅವನಿಂದೀಚೆಗೆ 'ಮಹಾಕಾವ್ಯದ ಮಾರ್ಗ' ಮತ್ತಷ್ಟು ಪರಿಷ್ಕಾರಗೊಂಡು ಭಾರವಿಯ ಕೈಯಲ್ಲಿ ಹೆಚ್ಚಿನ ಅಲಂಕಾರ ಕೌಶಲವನ್ನೂ, ವಿದ್ವಾಂಸರು ಮೆಚ್ಚುವ ಪದಪ್ರಾಗಲ್ಭ್ಯವನ್ನೂ ಪಡೆಯಿತು. ಭಾರವಿಯ ಪ್ರಭಾವ ಪಂಪನೇ ಮುಂತಾದ ಪ್ರಾಚೀನ ಕನ್ನಡ ಕವಿಗಳ ಮೇಲೂ ಆಗಿದೆ. ಭಾರವಿಯ ಹೃದಯವನ್ನು ಹೊಸ ರೀತಿಯಲ್ಲಿ ಇಂದಿನ ಕನ್ನಡಿಗರಿಗೆ ಪರಿಚಯಮಾಡಿಸುವ ಉದ್ದೇಶದಿಂದ ಹೊರಟ ಪ್ರಯೋಗ (೧೯೫೫) ಈ ಲೇಖಕನ ಕನ್ನಡ "ಕಿರಾತಾರ್ಜುನೀಯ". ಇಲ್ಲಿ ಮೂಲದ ಪದಶಃ ಅನುವಾದ ಇರಬೇಕು, ಸ್ವಂತ ಮಾತು ಇರಬಾರದು, ಮೂಲದ ಅಲಂಕಾರ ಚಮತ್ಕಾರ ಅನುವಾದದಲ್ಲೂ ಉಳಿಯಬೇಕು—ಎಂಬ ಉದ್ದೇಶ ಫಲಿಸಬೇಕೆಂದು ವಿಶೇಷವಾಗಿ ಯತ್ನಿಸಲಾಗಿದೆ. ಇಲ್ಲಿ ಮೊದಲ ಆರು ಸರ್ಗಗಳು ಮಾತ್ರ ಇವೆ.

ಇದೇ ರೀತಿ ಇಷ್ಟೇ ಪ್ರೌಢವಾಗಿರುವ ಮಾಘನ 'ಶಿಶುಪಾಲ ವಧ'ದ ಮೊದಲ ಹದಿಮೂರು ಸರ್ಗಗಳನ್ನು ನಂಜುಂಡಾರಾಧ್ಯ ಅವರು ಕನ್ನಡಿಸಿದ್ದಾರೆ. (೧೯೫೬) ಇಲ್ಲಿ ಉದ್ದಕ್ಕೂ ಬೆಳೆಸಿರುವ ಪ್ರಾಸರಹಿತ ಐದು ಮಾತ್ರೆಗಳ ಚೌಪದಿ ಮೂಲದ ವೃತ್ತ ವೈವಿಧ್ಯಕ್ಕೆ ತಕ್ಕ ವಾಹಕವಾಗಿಲ್ಲ. ಭಾಷೆಯಲ್ಲಿ ಹೊಸ–ಹಳಗನ್ನಡ ರೂಪಗಳ ಮಿಶ್ರಣವಿದೆ.

1 ಮಂಗಳೂರು, ೧೯೩೪.

ಇದರಂತೆ ಇಲ್ಲಿ ಹೆಸರಿಸಬೇಕಾದ ಮತ್ತೊಂದು ಉತ್ತಮ ಅನುವಾದ ಪ್ರಯತ್ನ ತಡವ ಶಂಭುಶರ್ಮರದು. ಇವರು ಅಶ್ವಘೋಷನ ಮಹಾಕಾವ್ಯವಾದ 'ಸೌಂದರನಂದ,' ವನ್ನು ವಿವಿಧ ಪ್ರಾಸಯುಕ್ತ ಕನ್ನಡ ಛಂದೋಬಂಧಗಳಲ್ಲಿ ಅನುವಾದಮಾಡಿದ್ದಾರೆ (೧೯೫೭). ಇಲ್ಲಿ ಸಮಗ್ರವಾಗಿ ಹದಿನೆಂಟೂ ಸರ್ಗಗಳು ಬಂದಿವೆ. "ಇದರಲ್ಲಿ ಮೂಲ ಪದ್ಯದ ಪ್ರತಿಶಬ್ದ ವಿಭಕ್ತಿಗಳ ಅನುವಾದ ಕ್ರಮವು ಪ್ರಾಯಶಃ ಅನುಸರಿಸಲ್ಪಟ್ಟಿದೆ. ಸಂಸ್ಕೃತ ಭಾಷೆಯಂತೆ ಬಿಗುಪಾದ ಹಳಗನ್ನಡ ವ್ಯಾಕರಣಬದ್ಧ ಭಾಷೆಯು ಬಳಸಿದೆ. ೪, ೧೦, ೧೩, ೧೫ನೆ ಸರ್ಗಗಳು ಮಾತ್ರ ನಡುಗನ್ನಡ ಭಾಷೆಯವಾಗಿವೆ." ಎಂದು ಅನುವಾದಕರು ಹೇಳಿದ್ದಾರೆ. ಒಬ್ಬನೇ ಕವಿಯ ಒಂದೇ ಕಾವ್ಯದ ಅನುವಾದದಲ್ಲಿ ನಮಗೆ ಈ ಕಂದವೃತ್ತ ಸಾಂಗತ್ಯಗಳ ದಾಂಪತ್ಯ ಅಷ್ಟು ಹಿಡಿಸುತ್ತಿಲ್ಲ.

ಅಲಂಕಾರಶಾಸ್ತ್ರದ ಪರಿಪೂರ್ಣ ಪರಿಚಯಕ್ಕೆ ವಿಮರ್ಶಾತ್ಮಕ ಕೃತಿಗಳು ಎಷ್ಟು ಪ್ರಯೋಜಕವೋ ಅದಕ್ಕಿಂತಲೂ ಹೆಚ್ಚು ಪ್ರಯೋಜಕ ಮೂಲಲಕ್ಷಣ ಗ್ರಂಥಗಳ ಸಮಗ್ರಾನುವಾದ, ಅವುಗಳ ವಿವರಣೆ—ಈ ಕೆಲಸ. ಪ್ರಸ್ಥಾನ ಗ್ರಂಥಗಳಾದ ಭಾಮಹನ 'ಕಾವ್ಯಾಲಂಕಾರ,' ದಂಡಿಯ 'ಕಾವ್ಯಾದರ್ಶ', ವಾಮನನ 'ಕಾವ್ಯಾಲಂಕಾರ ಸೂತ್ರವೃತ್ತಿ', ಉತ್ತಮ ಆಧಾರ ಗ್ರಂಥಗಳಾದ 'ಕಾವ್ಯಪ್ರಕಾಶ' ಮುಂತಾದವು, ಕೇವಲ ಪ್ರಾಯೋಗಿಕ ವಿಮರ್ಶೆಗೆ ಮೀಸಲಾದ ಕ್ಷೇಮೇಂದ್ರನ 'ಔಚಿತ್ಯ ವಿಚಾರ ಚರ್ಚೆ' ಇಷ್ಟೂ ಗ್ರಂಥಗಳನ್ನು ವಿಸ್ತೃತ ಪೀಠಿಕೆ, ಸಮಗ್ರವಿವರಣೆಗಳೊಂದಿಗೆ ಆಮೂಲಾಗ್ರವಾಗಿ ಮೂಲದ ಪ್ರತಿಪಾದ್ಯಾಂಶ ಪೂರ್ಣವಾಗಿ ಕನ್ನಡದಲ್ಲಿ ಹೆಚ್ಚು ಕಡಮೆಗಳಿಲ್ಲದೆ ಉಳಿಯುವಂತೆ, ಲಕ್ಷ್ಯ ಪದ್ಯಗಳಲ್ಲಿ ಕೂಡ, ವಿವಕ್ಷಿತ ಗುಣ, ಅಲಂಕಾರ, ರಸಾಂಶಗಳು ಯಥಾವತ್ತಾಗಿ ಪ್ರತಿಬಿಂಬಿತವಾಗುವಂತೆ, ಶಾಸ್ತ್ರದ ಪರಿಭಾಷೆಗೆ ಚ್ಯುತಿ ಬಾರದಂತೆ ಗ್ರಂಥರಚನೆಮಾಡಿರುವ ಈ ಲೇಖಕನ ಕಾರ್ಯವನ್ನು ಬೆಲೆಕಟ್ಟಬೇಕಾದವರು ನಾಡಸಹೃದಯರು. ಇನ್ನೂ ಗ್ರಂಥಗಳು ಅವರ ದಾರಿಕಾಯುತ್ತಲೇ ಇವೆ. ಕನ್ನಡ ಅಲಂಕಾರಶಾಸ್ತ್ರದ ಇತಿಹಾಸದಲ್ಲಿ ಗಾತ್ರದಿಂದಲೂ, ಗುಣದಿಂದಲೂ ಈ ಕಾರ್ಯ ಸಣ್ಣದಲ್ಲ. ಇವೆಲ್ಲ ಗ್ರಂಥಗಳೂ ಕಳೆದ ಕಾಲು ಶತಮಾನದಲ್ಲಿಯೇ ಬಂದಿವೆ. ಇವೆಲ್ಲವುಗಳ ಪ್ರಕಾಶಕರಾದ ಶಾರದಾಮಂದಿರದ ಶಂಕರನಾರಾಯಣರಾಯರು ನಿಜಕ್ಕೂ ಅಭಿನಂದನಾರ್ಹರು.

ನಾಟಕ ಲಕ್ಷಣಕ್ಕೆ ಮಾತ್ರ ಸೀಮಿತವಾದ ಧನಂಜಯನ 'ದಶರೂಪಕ' ವನ್ನು ಅಷ್ಟೇ ಸಮರ್ಥವಾಗಿಯೂ ಶಾಸ್ತ್ರೀಯವಾಗಿಯೂ ಕನ್ನಡಿಸಿ ಧನಿಕನ ವ್ಯಾಖ್ಯಾನವನ್ನು ವಿವರವಾಗಿ ಅನುವಾದಿಸಿರುವ ಕೆ. ವಿ. ಸುಬ್ಬಣ್ಣ ಅವರ ಗ್ರಂಥವು ಈ ಅವಧಿಯಲ್ಲೇ ಬಂದುದು.

ಇದರಂತೆ ಮೈಸೂರಿನ ವಿಷ್ಣುಮೂರ್ತಿಭಟ್ಟರು ಪರೀಕ್ಷಾರ್ಥಿಗಳ ಉಪಯೋಗಕ್ಕಾಗಿ ಪ್ರಕಟಿಸಿರುವ "ಚಂದ್ರಾಲೋಕ"ದ ಅನುವಾದ ಹೆಚ್ಚಿನ ವಿಷಯಗಳಿಲ್ಲದಿದ್ದರೂ ಪ್ರಥಮಾಭ್ಯಾಸಿಗಳಿಗೆ ಪ್ರಯೋಜನಕಾರಿಯಾಗಿರುವುದು.

ಸಂಸ್ಕೃತದಲ್ಲಿ ಅಲಂಕಾರಶಾಸ್ತ್ರದ ಮೂರ್ಧನ್ಯ ಗ್ರಂಥ–ಕಾಲದಿಂದಷ್ಟೇ ಅಲ್ಲ; ಶಾಸ್ತ್ರಪಾಂಡಿತ್ಯದ ದೃಷ್ಟಿಯಿಂದಲೂ—ಜಗನ್ನಾಥ ಪಂಡಿತನ 'ರಸಗಂಗಾಧರ'. ಇದನ್ನು ಆಮೂಲಾಗ್ರವಾಗಿ ಕನ್ನಡಿಸುವದೆಂದರೆ ಒಂದು ದೊಡ್ಡ ಸಾಧನೆ. ಈ ಸಾಧನೆಗೆ ಕೈಹಾಕಿರುವವರು ಡಾ. ಟಿ. ಜಿ. ಸಿದ್ಧಪ್ಪಾರಾಧ್ಯ ಅವರು. ಗ್ರಂಥ ೧೯೬೫ ರಲ್ಲಿ ಪ್ರಕಾಶಿತವಾಗಿದೆ. ಆದರೆ ಕೆಳಗಿನಂತಹ ಬರವಣಿಗೆ ಮೂಲದ ಶಾಸ್ತ್ರವಿಚಾರ ವನ್ನು ಹೇಗೆ ಕನ್ನಡಿಸುವುದೋ ನಾವು ಕಾಣೆವು. ಲಿಪಿಭೇದದಿಂದ ಅರ್ಥಜ್ಞಾನ ಹೆಚ್ಚದು.—

"'ಅರವಿಂದಮಿವ ಸುಂದರಂ' ಎಂಬಲ್ಲಿ ಇವ ಪದದ ಅರ್ಥವಾದ ಸಾದೃಶ್ಯದಲ್ಲಿ ಅರವಿಂದಕ್ಕೆ ನಿರೂಪಕತ್ವ ಸಂಬಂಧದಿಂದ ಅನ್ವಯವಾಗುತ್ತದೆ. ಇದರಿಂದ 'ಅರವಿಂದ ನಿರೂಪಿತ ಸಾದೃಶ್ಯಪ್ರಯೋಜಕ ಸೌಂದರ್ಯವದಭಿನ್ನಂ' ಎಂದು ಬೋಧವಾಗುತ್ತದೆ." (ಪುಟ ೧೭೭).

ಮೂಲದ ಲಕ್ಷ್ಯ ಪದ್ಯಗಳಲ್ಲಿನ ಸೌಂದರ್ಯಾಂಶ ಅನುವಾದದಲ್ಲಿ ಬಂದರಷ್ಟೇ ಆ ಸೌಂದರ್ಯವಿವೇಚನೆಗೆ ಬೆಲೆ? ಆದರೆ—

ಪುರಃ ಪುರಸ್ತಾದರಿಭೂಪತೀನಾಂ
ಭವನ್ತಿ ಭೂವಲ್ಲಭ ಭಸ್ಮಶೇಷಾಃ।
ಅನಂತರಂ ತೇ ಭ್ರುಕುಟೀವಿಟಂಕಾತ್
ಸ್ಫುರನ್ತಿ ದೋಷಾನಲವಿಸ್ಫುಲಿಂಗಾಃ॥

ಎಂಬ ಉತ್ತಮ ಅತಿಶಯೋಕ್ತಿಯ ಪದ್ಯವನ್ನು,

"ಮಹಾರಾಜನೇ, ಮೊದಲು ಶತ್ರುರಾಜರ ನಗರಗಳು ನಾಶವಾಗುತ್ತವೆ. ಆಮೇಲೆ ನಿನ್ನ ಹುಬ್ಬುಗಂಟಾಗುವಿಕೆ ಎಂಬ ಕೆನ್ನೆಯ ಪ್ರದೇಶದಿಂದ ಕ್ರೋಧಾಗ್ನಿಯ ಕಿಡಿಗಳು ಹೊರಬೀಳುತ್ತವೆ." (ಪು. ೩೦೩)

ಎಂದು ಶುಷ್ಕವಾಗಿ ಪದಶಃ ಭಾಷಾಂತರಿಸಿ ಬಿಟ್ಟಮೇಲೆ ಈ ಅನುವಾದದಲ್ಲಿ ಸೌಂದರ್ಯವೇ ಕಾಣದವರಿಗೆ ಜಗನ್ನಾಥನು ಬಣ್ಣಿಸುವ ವ್ಯಂಗ್ಯವಿಶೇಷಗಳನ್ನು ಹೆಸರಿಸಿದ್ದರಿಂದ ಆಗುವ ಲಾಭವೇನು?

ಈ ನ್ಯೂನತೆಯನ್ನು ಪರಿಹರಿಸುವ ಹಟದಿಂದ ಪ್ರಕೃತ ಲೇಖಕನು ಮಮ್ಮಟ, ಆನಂದವರ್ಧನರನ್ನು ಕನ್ನಡಿಸುವಾಗ ಒಂದೊಂದು ಉದಾಹರಣ ಪದ್ಯದ ಪ್ರತಿ ಪದ್ಯ ರಚನೆಗೆ ಒಂದೊಂದು ವಾರ ಶ್ರಮಪಟ್ಟುದೂ ಉಂಟು. ಹೀಗೆ ಅನುವಾದ ಕಾರ್ಯದಲ್ಲಿ ಸಹಜವಾಗಿಯೇ ಇರುವ ಲೋಪದೋಷಗಳನ್ನು ಬಿಟ್ಟರೆ ಕನ್ನಡ ಅನುವಾದ ಪ್ರಪಂಚ ದಲ್ಲಿ ಇದೊಂದು ಮೈಲಿಗಲ್ಲು ಎನ್ನಬಹುದು. ಹೀಗೆ ಈ ಕಾಲು ಶತಮಾನದಲ್ಲಿ ಸಂಸ್ಕೃತ ಕಾವ್ಯ, ನಾಟಕ, ಅಲಂಕಾರ ಗ್ರಂಥಗಳ ಅನುವಾದಕಾರ್ಯ ಗಣನೀಯವೂ ಗಮನೀಯವೂ ಆದ ಪ್ರಮಾಣದಲ್ಲಿ ಮುಂದುವರೆದಿದೆ. ಬರಲಿರುವ ಅನುವಾದಕರಿಗೆ ಗುಣಮಟ್ಟದ ಕಲ್ಪನೆಯನ್ನು ತೋರಿಸುವಂತಿವೆ.

ಎಂ. ಜಿ. ನಂಜುಂಡಾರಾಧ್ಯ

ಅನುವಾದ: ಸಂಸ್ಕೃತ ಶಾಸ್ತ್ರಸಾಹಿತ್ಯ

ಸುಮಾರು ಎರಡೂವರೆ ದಶಕಗಳ ಅವಧಿಯಲ್ಲಿ ಸಂಸ್ಕೃತ ವಾಙ್ಮಯ ಜ್ಞಾನ ಭಂಡಾರದಲ್ಲಿ ಅಡಗಿರುವ ಶಾಸ್ತ್ರಗ್ರಂಥಗಳ ಕನ್ನಡ ಭಾಷಾಂತರಕಾರ್ಯದ ಸಿಂಹಾವಲೋಕನ ಮಾಡುವುದು ಈ ಲೇಖನದ ಗುರಿ. ಸಾಮಾನ್ಯವಾಗಿ 'ಶಾಸ್ತ್ರ' ಎಂಬುದು ವೇದಾಂಗಗಳೆನಿಸಿರುವ ಶಿಕ್ಷಾ, ವ್ಯಾಕರಣ, ಛಂದಸ್ಸು, ನಿರುಕ್ತ, ಜ್ಯೋತಿಷ ಮತ್ತು ಕಲ್ಪಗಳಿಗೆ ಅನ್ವಯಿಸುತ್ತದೆ. ಹದಿನಾಲ್ಕು ವಿದ್ಯೆಗಳೆಂದು ಹೇಳಲ್ಪಡುವ ಮೇಲೆ ಕಂಡ ಆರು ವೇದಾಂಗಗಳು, ನಾಲ್ಕು ವೇದಗಳು, ಮೀಮಾಂಸ, ನ್ಯಾಯ, ಪುರಾಣ ಮತ್ತು ಧರ್ಮಶಾಸ್ತ್ರಗಳೂ ಶಾಸ್ತ್ರದ ಚೌಕಟ್ಟಿನಲ್ಲಿ ಸೇರುತ್ತವೆ. ಪ್ರಕೃತ ಗದ್ಯ ಪದ್ಯಾತ್ಮಕವಾದ ಕವಿಕರ್ಮಗಳೆನಿಸಿರುವ ರಸಭಾವಾಲಂಕಾರಪ್ರಧಾನವಾದ ಕಾವ್ಯ ನಾಟಕಾದಿ ಸಾಹಿತ್ಯ ವಿಭಾಗವನ್ನುಳಿದು ವೇದ, ಉಪನಿಷತ್ತು, ಆಗಮ, ಸ್ಮೃತಿ, ಪುರಾಣ, ಸಾಂಖ್ಯ, ಯೋಗ, ವೈದ್ಯ, ನಾಟ್ಯ, ಸಂಗೀತಾದಿ ಎಲ್ಲ ಸಂಸ್ಕೃತ ಸಾಹಿತ್ಯ ಪ್ರಸ್ಥಾನವನ್ನು ಶಾಸ್ತ್ರವೆಂಬ ಎಲ್ಲೆಕಟ್ಟಿನಲ್ಲಿ ಪರಿಗಣಿಸಲಾಗಿದೆ. ಸುಮಾರು ೨೫ ವರ್ಷಗಳು ಎಂದರೆ ಪ್ರಾಯಃ ಕ್ರಿ.ಶ. ೧೯೪೦ ರಿಂದೀಚೆಗೆ ಕನ್ನಡದಲ್ಲಿ ನಡೆದಿರುವ ಶಾಸ್ತ್ರಗಳ ಭಾಷಾಂತರ ಕಾರ್ಯದ ಪರಿಚಯವನ್ನು ಯಥಾಶಕ್ತಿ ಮಾಡಿಕೊಡಲು ಪ್ರಯತ್ನಿಸಿದೆ. ಈ ಕಾರ್ಯದಲ್ಲಿ ನನಗೆ ನೆರವು ನೀಡಿದ ಅನೇಕ ಪುಸ್ತಕಭಂಡಾರಗಳ ಅಧಿಕಾರಿಗಳ ಹಾಗೂ ಸಹೃದಯ ಗ್ರಂಥಕರ್ತರ ಮತ್ತು ವಿದ್ವಾಂಸರ ಉಪಕೃತಿಯನ್ನು ನೆನೆವುದು ನನ್ನ ಮೊದಲ ಕೆಲಸ.

ವೇದಗಳು :

ಭಾರತ ಸಂಸ್ಕೃತಿಯ ಹಿನ್ನೆಲೆ ವೇದ. ಅದು ನಮ್ಮ ಜೀವನದ ಉಸಿರು. ನಮ್ಮ ಶಾಸ್ತ್ರಗಳ ತಳಹದಿ. ವೇದವು ಎಲ್ಲಕ್ಕೂ ಪ್ರಾಚೀನ. ನಮ್ಮವರು ಅದನ್ನು ಅಪೌರುಷೇಯವೆಂದು ಕರೆದರು. ಅಂದರೆ ಅದು ಪ್ರಾಯಃ ಪುರುಷ ಅರ್ಥಾತ್ ಮನುಷ್ಯಕೃತವಲ್ಲ ಎಂಬುದು ಅವರ ಅಭಿಪ್ರಾಯ. ಮಹರ್ಷಿಗಳು ವೇದ ಮಂತ್ರಗಳನ್ನು ಪ್ರಕಾಶಪಡಿಸಿದವರು. ಮಂತ್ರಗಳನ್ನು ಅವರು ರಚಿಸಲಿಲ್ಲ. ಅನೇಕ ವರ್ಷಗಳ ತಪಸ್ಸಿನ ಫಲವಾಗಿ ಅವರಿಗೆ ವಿಶ್ವತತ್ತ್ವ ರಹಸ್ಯಗಳು ಮಂತ್ರಗಳ ರೂಪದಲ್ಲಿ ಸಾಕ್ಷಾತ್ಕಾರವಾದವು ; ಎಂದರೆ

ಅವರ ಬುದ್ಧಿಗೆ ಹೊಳೆದವು. 'ಮಂತ್ರದ್ರಷ್ಟಾರೋ ಋಷಯಃ' ಎಂಬ ನಿರುಕ್ತಿ ಇದನ್ನು ಸಮರ್ಥಿಸಿದೆ.

ವೇದಗಳ ರಚನೆಗೆ ಸುಮಾರು ಹದಿನೆಂಟು ಇಪ್ಪತ್ತು ಶತಮಾನಗಳಾದರೂ ಹಿಡಿದಿರಬೇಕೆಂಬುದು ವಿದ್ವಾಂಸರ ಅಭಿಪ್ರಾಯ. ವೇದವು ಸಂಹಿತೆ, ಬ್ರಾಹ್ಮಣ, ಆರಣ್ಯಕ, ಉಪನಿಷತ್ತು ಎಂದು ಬಹುಮುಖವಾಗಿ ವಿಭಕ್ತವಾಗಿದೆ. ವೇದಾರ್ಥ ನಿರ್ಣಯಕ್ಕಾಗಿ ಶಿಕ್ಷಾ ಮೊದಲಾದ ಆರು ಶಾಸ್ತ್ರಗಳು ಹೊರಟವು.

(i) ವೇದಾರ್ಥ ಪ್ರಕಾಶನ ಮತ್ತು ಪ್ರಕಟನ :

ಕನ್ನಡ ನಾಡು ಅತ್ಯುನ್ನತ ವೈಭವವನ್ನು ಬೆಳಗಿಸಿದ ಕಾಲ ವಿಜಯನಗರ ಸಾಮ್ರಾಜ್ಯದ ಆರಂಭದೆಶೆ. ವೇದವಿದ್ಯಾಭಿಮಾನಿಯಾದ ಬುಕ್ಕರಾಜನು ತನ್ನ ಆಸ್ಥಾನದಲ್ಲಿದ್ದ ಮಹಾವಿದ್ವಾಂಸರಾದ ಮಾಧವಾಚಾರ್ಯ ಮತ್ತು ಸಾಯಣಾಚಾರ್ಯ ರಿಂದ ವೇದಗಳಿಗೆ ಭಾಷ್ಯಗಳನ್ನು ಬರೆಯಿಸಿ ಪ್ರಖ್ಯಾತನಾದನು.

ವೇದಾರ್ಥವಿಚಾರವಾಗಿ ವಿಮರ್ಶಾತ್ಮಕ ಗ್ರಂಥಗಳನ್ನು ಪ್ರಕಟಿಸಿ ವೇದಭಾಷ್ಯ ಗಳನ್ನು ಪರಿಷ್ಕರಿಸಿ ಮುದ್ರಿಸಿ ಪ್ರಕಟಿಸುವ ವಿಷಯದಲ್ಲಿ ಪಾಶ್ಚಾತ್ಯ ಪಂಡಿತರಾದ Wilson, Griffith, Winternitz, Keith, Maxmuller ಮುಂತಾದವರ ಪರಿಶ್ರಮ ಅಗಾಧವಾದುದು.

ಸಂಸ್ಕೃತ ಭಾಷೆಯನ್ನು ಅರಿಯದ ಕನ್ನಡಿಗರಿಗೆ ವೇದಾರ್ಥವನ್ನು ಪ್ರಕಾಶ ಪಡಿಸುವ ಸದುದ್ದೇಶದಿಂದ ನಮ್ಮ ನೆಚ್ಚಿನ ಶ್ರೀಮನ್ಮಹಾರಾಜ ಶ್ರೀ ಜಯಚಾಮರಾಜ ಒಡೆಯರ್ ಬಹದ್ದೂರ್ ಅವರು ವೇದ, ಉಪನಿಷತ್ತು, ಪುರಾಣ ಮೊದಲಾದ ಧರ್ಮ ಗ್ರಂಥಗಳನ್ನು ಕನ್ನಡಕ್ಕೆ ಅನುವಾದ ಮಾಡಿಸಿ ಪ್ರಕಟಿಸುವ ಪವಿತ್ರಕಾರ್ಯವನ್ನು ಕೈಗೊಂಡರು. ಇವುಗಳಲ್ಲಿ ಋಗ್ವೇದವು ಡೆಮ್ಮಿ ೧/೪ ಸೈಜಿನ ಮೂವತ್ತು ಸಂಪುಟ ಗಳಲ್ಲಿ ಪ್ರಕಟವಾಗಿದೆ. ಸುಮಾರು ೨೫,೦೦೦ ಪುಟಗಳಿಗೂ ಮೀರಿ ಬೃಹದಾಕಾರ ವನ್ನು ತಳೆದು ಇದು ಹೊರಬಂದಿದೆ. ಕ್ರಿ.ಶ. ೧೯೪೮ ರಿಂದ ೧೯೫೫ರವರೆಗೆ ಸುಮಾರು ಏಳು ವರ್ಷಗಳಲ್ಲಿ ಈ ಭಾಷಾಂತರ ಕಾರ್ಯ ಅವ್ಯಾಹತವಾಗಿ ನಡೆಯಿತು. ಮಹಾ ವಿದ್ವಾಂಸರಾದ ಶ್ರೀ ಎಚ್. ಪಿ. ವೆಂಕಟರಾವ್ ಅವರ ಪ್ರಧಾನ ಸಂಪಾದಕತ್ವದಲ್ಲಿ ಈ ಕಾರ್ಯ ನಡೆದಿದೆ. ಅನೇಕ ತಜ್ಞ ವಿದ್ವಾಂಸರು ಇಲ್ಲಿ ದುಡಿದಿದ್ದಾರೆ.

ಋಗ್ವೇದ ಸಾಯಣಭಾಷ್ಯ ಭೂಮಿಕೆಯ ಪೂರ್ವಾಂಗವಾಗಿ ಸಿದ್ಧಪಡಿಸಿರುವ ಪೂರ್ವಪೀಠಿಕೆಯು ೨೫ ಅಧ್ಯಾಯಗಳ ೩೪೪ ಪುಟಗಳನ್ನು ಒಳಗೊಂಡಿದೆ. ಇದರಲ್ಲಿ ಕ್ರಮವಾಗಿ ವೇದ ಶಬ್ದದ ವ್ಯುತ್ಪತ್ತಿ, ವೇದ ವಿಭಾಗಗಳು, ವೇದಾಂಗಗಳು, ವೇದ ಶಾಖೆಗಳು, ಬ್ರಾಹ್ಮಣಗಳು, ಆರಣ್ಯಕಗಳು, ಐತರೇಯ ಬ್ರಾಹ್ಮಣ, ಋಗ್ವೇದದ ಋಷಿಗಳು, ದೇವತೆಗಳು, ಛಂದಸ್ಸುಗಳು, ವೇದಭಾಷ್ಯಕಾರರು, ವೇದಾರ್ಥ ವಿಚಾರದಲ್ಲಿ ಪ್ರಾಚೀನರ ಪ್ರಯತ್ನಗಳು, ವೇದಾಭ್ಯಾಸದಲ್ಲಿ ಆಧುನಿಕರ ಪ್ರಯತ್ನಗಳು, ವೇದ

ವ್ಯಾಸಂಗ ಕ್ರಮ, ವೇದಕಾಲದ ಸಾಮಾಜಿಕ ಜೀವನ ಮುಂತಾದ ವಿಚಾರಗಳನ್ನು ಕುರಿತು ವಿಸ್ತಾರವಾಗಿ ಚರ್ಚಿಸಲಾಗಿದೆ.

ಸಾಯಣಾಚಾರ್ಯ ವಿರಚಿತ ಋಗ್ವೇದ ಭಾಷ್ಯಭೂಮಿಕೆಯು ೨೫೦ ಪುಟಗಳಲ್ಲಿ ಇಂಗ್ಲಿಷ್ ಭಾಷಾಂತರದೊಂದಿಗೆ ಕನ್ನಡಿಸಲ್ಪಟ್ಟಿದೆ. ಮುಂದೆ ಮೂಲ ಮಂತ್ರಗಳಿಗೆ ಪದ ಪಾಠವನ್ನು ಕೊಟ್ಟು ಸಾಯಣಭಾಷ್ಯ, ಪ್ರತಿಪದಾರ್ಥ, ಭಾವಾರ್ಥ, ಇಂಗ್ಲಿಷ್ ಭಾಷಾಂತರ, ವಿಶೇಷಾರ್ಥ, ವಿಶೇಷ ವಿಷಯಗಳು ಮತ್ತು ವ್ಯಾಕರಣ ಪ್ರಕ್ರಿಯೆಗಳನ್ನು ಸಹ ತೋರಿಸಿರುವುದು ಓದುಗರಿಗೆ ತುಂಬ ಸಹಾಯಕವಾಗಿದೆ. ಮೊದಲ ಸಂಪುಟದ ಕಡೆಗೆ ಕೊಟ್ಟಿರುವ ಋಗ್ವೇದ ಮಂತ್ರಗಳ ವರ್ಣಾನುಕ್ರಮಣಿಕೆ ಈ ಮಹತ್ಕಾರ್ಯಕ್ಕೆ ವಿಶೇಷ ಕಳೆತಂದಿದೆ. ಶ್ರೀ ಜಯಚಾಮರಾಜೇಂದ್ರ ಗ್ರಂಥಮಾಲೆಯ ಮೂವತ್ತು ಸಂಪುಟಗಳು ಕನ್ನಡ ನುಡಿದೇವಿಗೆ ಸಮರ್ಪಿಸಿರುವ ಗ್ರಂಥಕುಸುಮಗಳಲ್ಲಿ ಪವಿತ್ರಸ್ಥಾನವನ್ನು ಅಲಂಕರಿಸಿವೆ.

(ii) ಋಗ್ವೇದ ಭಾಷಾಂತರ (೧ನೆಯ ಮಂಡಲ)

೧೯೪೪ರಲ್ಲಿ ಋಗ್ವೇದ ಸಾಯಣಭಾಷ್ಯವನ್ನು ಕನ್ನಡಕ್ಕೆ ಭಾಷಾಂತರಿಸಲು ಪ್ರಯತ್ನಿಸಿದವರು ಧಾರವಾಡದ ಶ್ರೀ ಗಾಯತ್ರಿ ಸಾಂಬಶಾಸ್ತ್ರಿ ಮತ್ತು ಭಟ್ಟಿಗಜಾನನ ಉಗ್ರ ಮತ್ತು ಮಾಧವ ಬಲ್ಲಾಳ ಬಂಧುಗಳು. ಪ್ರಾಯಃ ಮೈಸೂರಿನಲ್ಲಿ ವೇದಾರ್ಥ ಪ್ರಕಾಶನಕಾರ್ಯವು ಆರಂಭವಾದ ಮೇಲೆ ಈ ಪ್ರಯತ್ನವು ಕೈಬಿಟ್ಟಂತೆ ಕಂಡು ಬರುತ್ತದೆ. ರಾಯಲ್ ¼ ಸೈಜಿನ ಸು. ೩೦೦ ಪುಟಗಳ ಮೊದಲನೆಯ ಮಂಡಲವು ಮಾತ್ರ ಈ ಗ್ರಂಥಮಾಲೆಯಲ್ಲಿ ಹೊರಬಂದಿದೆ.

(iii) ಬಳ್ಳಾರಿಯ ಶ್ರೀ ಸಿ. ವ. ಚನ್ನಬಸವೇಶ್ವರರಿಂದ ಕನ್ನಡಕ್ಕೆ ಅನುವಾದ ವಾಗಿರುವ 'ಪುರುಷ ಸೂಕ್ತ'ವು ಶ್ರೀ ನಿ. ಪ್ರ. ರುದ್ರಮುನಿಸ್ವಾಮಿಗಳು, ಹಾಲ್ವಿ ಅವರಿಂದ ಪ್ರಕಾಶಿತವಾಗಿದೆ. ಅನುವಾದವು ಶ್ರೀ ಅರವಿಂದರ ಸೂಳ್ನುಡಿಗಳ ಸಮನ್ವಯ ದಿಂದ ಸುಂದರವಾಗಿದೆ.

ಉಪನಿಷತ್ತುಗಳು

ಉಪನಿಷತ್ತುಗಳ ಕನ್ನಡ ಭಾಷಾಂತರ ಕಾರ್ಯಪ್ರಣಾಳಿಕೆಯಲ್ಲಿ ಹೊಳೆನರಸೀ ಪುರದ ಅಧ್ಯಾತ್ಮ ಪ್ರಕಾಶನಾಲಯದ ಪ್ರಯತ್ನ ಸ್ತುತ್ಯ. ಇಲ್ಲಿ ಪ್ರಕಟವಾಗಿರುವ ಅನೇಕ ಉಪನಿಷತ್ ಶಾಂಕರ ಭಾಷ್ಯದ ಕನ್ನಡ ಪ್ರಕಾಶನಗಳು ಶ್ರೀ ಜಯಚಾಮ ರಾಜೇಂದ್ರ ಗ್ರಂಥಮಾಲೆಯ ಅಂಕಿತದಲ್ಲಿಯೇ ಇವೆ. ಆಸ್ಥಾನ ವಿದ್ವಾನ್ ಯಲ್ಲಂಬಳಸೆ ಸುಬ್ರಹ್ಮಣ್ಯ ಶರ್ಮ ಅವರ ಪ್ರಧಾನಸಂಪಾದಕತ್ವದಲ್ಲಿ ೧೯೪೪ ರಿಂದ ಈ ಭಾಷಾಂತರ ಕಾರ್ಯವು ಭರದಿಂದ ಸಾಗಿತು. ಸುಮಾರು ಎಂಟು ಹತ್ತು ವರ್ಷಗಳ ಅವಧಿಯಲ್ಲಿ

ಈಶ-ಕೇನ-ಕಠ ಉಪನಿಷತ್ತುಗಳು ಪ್ರಥಮ ಸಂಪುಟದಲ್ಲಿಯೂ, ಮುಂಡಕ ಮಾಂಡೂಕ್ಯ–ಪ್ರಶ್ನ ಉಪನಿಷತ್ತುಗಳು ಎರಡನೆಯ ಸಂಪುಟದಲ್ಲಿಯೂ, ಐತರೇಯ –ತೈತ್ತಿರೀಯಗಳು ಮೂರನೆಯ ಸಂಪುಟದಲ್ಲಿಯೂ, ಬೃಹದಾರಣ್ಯಕವು ನಾಲ್ಕು ಮತ್ತು ಐದನೆಯ ಸಂಪುಟಗಳಾಗಿಯೂ ಛಾಂದೋಗ್ಯವು ಆರು ಮತ್ತು ಏಳನೆಯ ಸಂಪುಟಗಳಾಗಿಯೂ ಶ್ವೇತಾಶ್ವತರ ಮತ್ತು ನೃಸಿಂಹತಾಪನೀಯಗಳು ಎಂಟನೆಯ ಸಂಪುಟವಾಗಿಯೂ ಹೊರಬಂದಿವೆ.

ಇವುಗಳಲ್ಲದೆ ಇಲ್ಲಿ ೧) ಗೌಡಪಾದ ಹೃದಯ (ಮಾಂಡೂಕ್ಯ ಕಾರಿಕೆಗಳ ಅಭಿಪ್ರಾಯವನ್ನು ಸೂಚಿಸುವ ನಾಲ್ಕು ಸಂಪುಟಗಳು) ೨) ಸರ್ವವೇದಾಂತ ಸಿದ್ಧಾಂತ ಸಾರಸಂಗ್ರಹ (ಶ್ರೀ ಶಂಕರಾಚಾರ್ಯರ ಪ್ರಕರಣ ಗ್ರಂಥದ ಕನ್ನಡ ಭಾಷಾಂತರ) ೩) ಮಾಂಡೂಕ್ಯೋಪನ್ಯಾಸಮಂಜರಿ ಮುಂತಾದ ಗ್ರಂಥಗಳು ಪ್ರಕಟವಾಗಿವೆ.

ಬ್ರಹ್ಮಸೂತ್ರಭಾಷ್ಯ

ಶ್ರೀ ಶಂಕರಾಚಾರ್ಯರು ಬ್ರಹ್ಮಸೂತ್ರಗಳ ಮೇಲೆ ಬರೆದಿರುವ ಭಾಷ್ಯವನ್ನು ಎರಡು ಸಂಪುಟಗಳಲ್ಲಿ ಕನ್ನಡ ಭಾಷಾಂತರದೊಡನೆ ಪ್ರಕಟಿಸಲಾಗಿದೆ. ಇವುಗಳಲ್ಲದೆ ಮೇಲೆ ಕಂಡ ಗ್ರಂಥಮಾಲೆಯಲ್ಲಿ ಉಪದೇಶಸಾಹಸ್ರಿ ಅಪರೋಕ್ಷಾನುಭೂತಿ ಮತ್ತು ಅದ್ವೈತಾನುಭೂತಿ ಎಂಬ ಕನ್ನಡ ಭಾಷಾಂತರಗಳನ್ನು ಸಹ ಹೊಳೆನರಸೀಪುರದ ಅಧ್ಯಾತ್ಮ ಪ್ರಕಾಶನಾಲಯವು ೧೯೪೪ರಲ್ಲಿ ಪ್ರಕಟಿಸಿದೆ.

ಕನ್ನಡನಾಡಿನ ಸುಪ್ರಸಿದ್ಧ ಅಧ್ಯಾತ್ಮಜಿಜ್ಞಾಸುಗಳೂ ಅಖಿಲಭಾರತ ರಾಜಕೀಯ ಧುರೀಣರೂ ಆದ ಶ್ರೀ ರಂಗನಾಥ ರಾಮಚಂದ್ರ ದಿವಾಕರರು ಉಪನಿಷತ್ತುಗಳಲ್ಲಿ ಮುಖ್ಯವಾದ ಹತ್ತು ಉಪನಿಷತ್ತುಗಳಿಗೆ ಸರಳ ಕನ್ನಡ ಭಾಷಾಂತರ ಮಾಡಿದ್ದಾರೆ. ಅಧ್ಯಾತ್ಮಕಾರ್ಯಾಲಯ ಹುಬ್ಬಳ್ಳಿಯಲ್ಲಿ ೧೯೪೫ರಿಂದ ೧೯೫೪ರವರೆಗೆ ನಡೆದ ಈ ಪ್ರಕಾಶನ ಕಾರ್ಯ ಅಧ್ಯಾತ್ಮ ಜಿಜ್ಞಾಸುಗಳಿಗೆ ತುಂಬಾ ನೆರವಾಗಿದೆ. ಯಾವುದೇ ಮತ ಸಂಪ್ರದಾಯ ಗಳ ಕಟ್ಟು ಕಟ್ಟಳೆಗಳಿಗೆ ವಶವಾಗದೆ ಉಪನಿಷನ್ಮಂತ್ರಗಳ ಯಥಾಶ್ರುತವಾದ ಆಶಯ ವನ್ನು ಪ್ರಕಾಶಪಡಿಸಿರುವುದು ಇವುಗಳ ವೈಶಿಷ್ಟ್ಯ.

ವೀರಶೈವ ಮತಸಂಪ್ರದಾಯವನ್ನು ಅನುಸರಿಸಿ ತೈತ್ತಿರೀಯ, ಮಹಾ ನಾರಾಯಣ ಗಳಿಗೆ ವೃಷಭಪಂಡಿತಾರಾಧ್ಯರೂ, ಈಶ–ಕೇನ–ಮುಂಡಕ ಮತ್ತು ಸಿದ್ಧಾಂತ ಶಿಖೋಪ ನಿಷತ್ತುಗಳಿಗೆ ಲಿಂ. ಉಮಚಿಗಿ ಶಂಕರಶಾಸ್ತ್ರಿಗಳೂ ಮತ್ತು ಕೈವಲ್ಯೋಪನಿಷತ್ತಿಗೆ ಷ. ಬ್ರಂ. ಶ್ರೀ ಪಟ್ಟದ ಸದಾಶಿವಶಿವಾಚಾರ್ಯರೂ ಸಂಸ್ಕೃತದಲ್ಲಿ ಭಾಷ್ಯಗಳನ್ನು ಬರೆದಿದ್ದಾರೆ. ಇವುಗಳಲ್ಲಿ ಈಶ–ಕೇನ ಮತ್ತು ಸಿದ್ಧಾಂತ ಶಿಖೆಗಳಿಗೆ ಲಿಂ. ಸಿರಸಿ ಗುರುಶಾಂತ ಶಾಸ್ತ್ರಿಗಳು ಮತ್ತು ಮುಂಡಕ, ಕೈವಲ್ಯಗಳಿಗೆ ಎಂ. ಜಿ. ನಂಜುಂಡಾರಾಧ್ಯರೂ ಕನ್ನಡದಲ್ಲಿ ಭಾಷಾಂತರ ಮಾಡಿದ್ದಾರೆ.

ಇವುಗಳಲ್ಲದೆ ಲಿಂ. ಸಿರಸಿ ಗುರುಶಾಂತಶಾಸ್ತ್ರಿಗಳು ನಂದಿಕೇಶ್ವರ

ಶಿವಾಚಾರ್ಯರ 'ಲಿಂಗಧಾರಣ ಚಂದ್ರಿಕಾ' (೧೯೫೧) ಶ್ರೀ ಮರಿತೋಂಟದಾರ್ಯರ 'ವೀರಶೈವಾನಂದ ಚಂದ್ರಿಕಾ' (ವಾದಕಾಂಡ—೧೯೬೦) ಎಂಬ ಉದ್ಗ್ರಂಥಗಳಿಗೆ ಕನ್ನಡ ಅನುವಾದ ಮಾಡಿದ್ದಾರೆ. ಶಂಕಾ ಸಮಾಧಾನ ರೂಪವಾಗಿ ಕನ್ನಡಿಸಿದ ಶ್ರೀ ಶಾಸ್ತ್ರಿಗಳು ಮೂಲದಲ್ಲಿಯ ಪಾರಿಭಾಷಿಕ ದಾರ್ಶನಿಕ ಪದಗಳಿಗೆ ವಿವರಣಗಳನ್ನು ಕೊಟ್ಟು ಸುಲಭಗೊಳಿಸಿದ್ದಾರೆ. ಪಂಚಾಚಾರ್ಯ ಪ್ರಭಾ ಗ್ರಂಥಮಾಲೆಯಲ್ಲಿ ಪ್ರಕಟವಾಗಿರುವ ಸ್ವಪ್ರಭಾನಂದ ಶಿವಾಚಾರ್ಯರ 'ಶಿವಾದ್ವೈತ ಮಂಜರಿ' ಯು ದೇವಶಿಖಾಮಣಿ ಶ್ರೀ ರಾಮಾನುಜಾಚಾರ್ಯರಿಂದ ಕನ್ನಡಕ್ಕೆ ಭಾಷಾಂತರಿಸಲ್ಪಟ್ಟು ೧೯೬೬ರಲ್ಲಿ ಅದರ ದ್ವಿತೀಯ ಮುದ್ರಣವು ಹೊರಬಿದ್ದಿದೆ.

ಹೈಕೋರ್ಟು ನಿವೃತ್ತ ನ್ಯಾಯಮೂರ್ತಿಗಳಾದ ಶ್ರೀ ಟಿ. ಎನ್. ಮಲ್ಲಪ್ಪನವರು 'ಈಶಾವಾಸ್ಯೋಪನಿಷತ್ಪ್ರಕಾಶ'ಎಂಬ ಗ್ರಂಥವನ್ನು ಪ್ರಕಟಿಸಿದ್ದಾರೆ. ಶ್ರೀಯುತ ಮಲ್ಲಪ್ಪ ನವರು ವೇದಾಂತ ದೇಶಿಕರ ಭಾಷ್ಯ ಮತ್ತು ಮಾಧ್ವಭಾಷ್ಯಗಳ ಕನ್ನಡ ಅನುವಾದಮಾಡಿ ಶ್ರೀ ಶಂಕರ, ಉವಟಾದಿ ಭಾಷ್ಯಕಾರರ ಭಾಷ್ಯಗಳೊಡನೆ ತುಲನಾತ್ಮಕ ವಿಮರ್ಶೆ ಮಾಡಿದ್ದಾರೆ.

ಗೀತೆಗಳು

ಸಂಸ್ಕೃತ ಗೀತಾ ಸಾಹಿತ್ಯದಲ್ಲಿ ಭಗವದ್ಗೀತೆಗೆ ಅಗ್ರಸ್ಥಾನವಿದೆ. ಪ್ರಸ್ಥಾನತ್ರಯದಲ್ಲಿ ಘಟಿತವಾಗಿರುವ ಭಗವದ್ಗೀತೆಗೆ ಎಲ್ಲ ಆಚಾರ್ಯರೂ ಆಯಾ ಮತದ ಪರವಾಗಿ ಭಾಷ್ಯ ಗಳನ್ನು ಬರೆದಿದ್ದಾರೆ.

ಶ್ರೀ ಶಂಕರರ ಗೀತಾ ಭಾಷ್ಯವು ಹೊಳೆನರಸೀಪುರದ ಅಧ್ಯಾತ್ಮ ಪ್ರಕಾಶ ಕಾರ್ಯಾಲಯದಲ್ಲಿ ಕನ್ನಡಿಸಲ್ಪಟ್ಟು ಎರಡು ಸಂಪುಟಗಳಲ್ಲಿ ಹೊರಬಂದಿದೆ. ಇವುಗಳಲ್ಲದೆ ಶ್ರೀ ಲಕ್ಷ್ಮೀಂದ್ರತೀರ್ಥರ 'ಗೀತಾದರ್ಶ' (೧೯೫೪) ದಿ. ಪಂ. ಡಿ. ವಾಸುದೇವಾ ಚಾರ್ಯರ 'ಗೀತಾ ಭಾವ' (೧೯೫೦), ಸ್ವಾಮಿ ಆದಿದೇವಾನಂದರ 'ಭಗವದ್ಗೀತಾ' (೧೯೫೬), 'ಗೀತಾ ತಾತ್ಪರ್ಯ' (ಮಾಧ್ವ ಭಾಷ್ಯ ಸಹಿತ—೧೯೫೩), ಲೋಕಮಾನ್ಯ ತಿಲಕರ 'ಶ್ರೀಮದ್ಭಗವದ್ಗೀತೆ' (ಶ್ರೀ ವೆಂಕಟೇಶ ಭೀಮರಾವ್, ಆಲೂರ್ ಅವರ ಅನುವಾದದೊಡನೆ—೧೯೫೬) ಮುಂತಾದವು ಪ್ರಕಟವಾಗಿವೆ. ಅಲ್ಲದೆ ಮಹಾತ್ಮ ಗಾಂಧಿಜಿಯವರು ಭಗವದ್ಗೀತೆಗೆ ಬರೆದಿರುವ 'ಅನಾಸಕ್ತಿ ಯೋಗ'ವು ಅನೇಕ ಸಂಸ್ಕರಣ ಗಳನ್ನು ಹೊಂದಿ ಕನ್ನಡದಲ್ಲಿ ಹೆಸರಾಂತಿದೆ. ಶ್ರೀರಂಗರವರ 'ಗೀತಾ ಗಾಂಭೀರ್ಯ' (೧೯೪೦) ಶ್ರೀ ಶಂಕರಾನಂದ ಭಾರತಿಯವರ 'ಗೀತಾರ್ಥ ಬೋಧಿನಿ' (೧೯೫೧) ಪರಮ ಗುರು ಶರಣ ಬಸವಸ್ವಾಮಿ ಕೃತ 'ಭವರೋಗ ಆದರ ಪರಮೌಷಧ' (೧೯೬೬) ಡಿ.ವಿ.ಜಿ. ಅವರ 'ಶ್ರೀಮದ್ಭಗವದ್ಗೀತಾ ತಾತ್ಪರ್ಯ–ಅಥವಾ ಜೀವನ ಧರ್ಮಯೋಗ' (೧೯೬೭) ಶ್ರೀ ಎಂ. ಜಿ. ನಂಜುಂಡಾರಾಧ್ಯರ 'ಗೀತೆ ಅಂತರ್ವಾಣಿ; ಗೀತೆಯ ಅಂತರ್ವಾಣಿ' ಮುಂತಾದ ಅನೇಕ ಗ್ರಂಥಗಳು ಭಗವದ್ಗೀತೆಯ ಕನ್ನಡ ಅನುವಾದಗಳಲ್ಲಿ ಪ್ರಮುಖ

ವಾಗಿವೆ. ಮೇಲಾಗಿ ಡಾ. ಟಿ. ಜಿ. ಸಿದ್ದಪ್ಪಾರಾಧ್ಯರು ಬರೆದಿರುವ 'ಭಗವದ್ಗೀತಾ ವೀರಶೈವ ಭಾಷ್ಯ' ಮತ್ತು 'ಶ್ವೇತಾಶ್ವತರೋಪನಿಷತ್ ವೀರಶೈವ ಭಾಷ್ಯ' ಎಂಬ ಗ್ರಂಥಗಳ ಮೂಲ ಮತ್ತು ಕನ್ನಡ ಅನುವಾದಗಳು ಶ್ರೀ ಜಗದ್ಗುರು ಮುರುಘರಾಜೇಂದ್ರ ಗ್ರಂಥಮಾಲೆಯಲ್ಲಿ ಬೆಳಕು ಕಂಡಿವೆ. ಇವುಗಳಲ್ಲದೆ ಇದೇ ಮಹಾಶಯರು ಶ್ರೀಪತಿ ಪಂಡಿತಾರಾಧ್ಯರ 'ಶ್ರೀಕರ ಭಾಷ್ಯ' ಮತ್ತು ನೀಲಕಂಠಶಿವಾಚಾರ್ಯರ 'ಕ್ರಿಯಾ ಸಾರ'ಗಳ ಅನುವಾದವನ್ನೂ ಮಾಡಿರುತ್ತಾರೆ. 'ಶಕ್ತಿವಿಶಿಷ್ಟಾದ್ವೈತ' ಮೂಲ ಮತ್ತು ಅದರ ಕನ್ನಡ ಅನುವಾದಗಳು ಸಹ ಶ್ರೀಯುತರಿಂದ ಹೊರಬಂದಿವೆ.

ಶಿವಗೀತಾ

ಪಾದ್ಮಪುರಾಣಾಂತರ್ಗತ 'ಶಿವಗೀತೆ' (೧೯೫೦) ಮತ್ತು ಸ್ಕಾಂದಪುರಾಣಾಂತರ್ಗತ' "ಗುರುಗೀತೆ" ಗಳು (೧೯೬೫) ಕ್ರಮವಾಗಿ ಆ. ವಿ. ಶ್ರೀ ಎಚ್. ಗಂಗಾಧರಶಾಸ್ತ್ರಿ, ಮತ್ತು ವೇ. ವಿದ್ವಾನ್ ಶ್ರೀ ಅಮರನಾಥಶಾಸ್ತ್ರಿಗಳು, ಕಂಪ್ಲಿ ಅವರಿಂದ ಕನ್ನಡಿಸಲ್ಪಟ್ಟು ಹೊರಬಂದಿವೆ.

ಸಿದ್ಧಾಂತ ಶಿಖಾಮಣಿ (ರೇಣುಕ ಗೀತೆ)

ಭಗವತ್ಪಾದ ರೇಣುಕಾಚಾರ್ಯರು ಅಗಸ್ತ್ಯ ಮಹರ್ಷಿಗೆ ಬೋಧಿಸಿದ ಶಕ್ತಿವಿಶಿಷ್ಟಾದ್ವೈತ ಪ್ರತಿಪಾದಕವಾದ ಸಿದ್ಧಾಂತವನ್ನು ೧೧ನೆಯ ಶತಮಾನ ಪೂರ್ವದವರೆಂದು ತಿಳಿದು ಬಂದಿರುವ ಶಿವಯೋಗಿ ಶಿವಾಚಾರ್ಯರ ಸಿದ್ಧಾಂತ ಶಿಖಾಮಣಿ (ರೇಣುಕ ಗೀತೆ) ಯನ್ನು ಅನೇಕ ವಿದ್ವಾಂಸರು ಕನ್ನಡಿಸಿದ್ದಾರೆ. ಈ ಸಿದ್ಧಾಂತ ಶಿಖಾಮಣಿಗೆ ಕ್ರಿ. ಶ. ೧೭ನೆಯ ಶತಮಾನದಲ್ಲಿದ್ದ ಶ್ರೀ ಮರಿತೋಂಟದಾರ್ಯರು ಬರೆದ ಸಂಸ್ಕೃತ ವ್ಯಾಖ್ಯಾನವಿದೆ. ಅದರ ಕನ್ನಡ ಅನುವಾದಗಳಲ್ಲಿ ಲಿಂ. ಎನ್. ಆರ್. ಕರಿಬಸವಶಾಸ್ತ್ರಿಗಳ, ಮತ್ತು ಲಿಂ. ಕಾಶೀನಾಥಶಾಸ್ತ್ರಿಗಳ ಕೃತಿಗಳು (೧೯೬೪) ಪ್ರಸಿದ್ಧವಾಗಿವೆ. ಆದರೆ ಇತ್ತೀಚೆಗೆ ಶ್ರೀ ಜ. ಚ. ನಿ. ಅವರು ಸಿದ್ಧಾಂತ ಶಿಖಾಮಣಿಯನ್ನು ಅಧಿಕರಿಸಿ 'ಮಣಿಕಾಂತಿ' (೧೯೫೧) ಎಂಬ ಗದ್ಯಗ್ರಂಥವನ್ನು 'ಮಣಿಮುಕುರ' (೧೯೫೬) ಎಂಬ ಪದ್ಯ ಗ್ರಂಥವನ್ನು 'ಮಣಿ ವಚನಗಳು' (೧೯೬೩) ಎಂಬ ವಚನಾತ್ಮಕ ಗ್ರಂಥಗಳನ್ನು ರಚಿಸಿ ವಿಸ್ತಾರವಾದ ಇವುಗಳ ಪೀಠಿಕೆ ಮತ್ತು ಉಪೋದ್ಘಾತಗಳಲ್ಲಿ ಉಪಯುಕ್ತವಾದ ಅನೇಕ ವಿಷಯಗಳನ್ನು ಚರ್ಚಿಸಿ ಮಹೋಪಕಾರ ಮಾಡಿದ್ದಾರೆ. ಇವರು ಪ್ರಕಟಿಸಿರುವ 'ಜೀವನ ಸಿದ್ಧಾಂತ' (೧೯೬೭) ಎಂಬ ೯೦೦ ಪುಟಗಳ 'ಭಕ್ತ ಸಂಪುಟ' ೭೫೨ ಪುಟಗಳ 'ಮಾಹೇಶ ಸಂಪುಟ', ೯೭೬ ಪುಟಗಳ 'ಪ್ರಸಾದಿ ಸಂಪುಟ', ೫೯೨ ಪುಟಗಳ 'ಪ್ರಾಣಲಿಂಗಿ ಸಂಪುಟ', ೫೦೦ ಪುಟಗಳ 'ಶರಣ ಮತ್ತು ಐಕ್ಯ ಸಂಪುಟ'ಗಳ ಬೃಹತ್ ಗ್ರಂಥಗಳು ಸಿದ್ಧಾಂತ ಶಿಖಾಮಣಿಯನ್ನು ಅವಲಂಬಿಸಿರುವುವಲ್ಲದೆ ಇವು ಭಾರತದ ಅಧ್ಯಾತ್ಮ ಲೋಕಕ್ಕೆ ಶ್ರೀಗಳವರು ನೀಡಿರುವ ಜ್ಞಾನದಾಸೋಹದ ಅಮೃತಫಲದಂತಿವೆ.

ಗದುಗಿನ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು ಆಗಾಗ್ಗೆ ಸಿದ್ಧಾಂತ ಶಿಖಾಮಣಿಯ ಪ್ರವಚನಗಳನ್ನು ನಡೆಯಿಸಿದುದರ ನೆನಪಿಗಾಗಿ ಸಂಗ್ರಹಿಸಿರುವ 'ಶ್ರೀ ವೀರಶೈವ ಸಿದ್ಧಾಂತ ಶಿಖಾಮಣಿ' (೧೯೬೨), ೮೦೦ ಪುಟಗಳ ಹೊತ್ತಗೆಯು ಸಿದ್ಧಾಂತ ಶಿಖಾಮಣಿಯ ಮೂಲ, ಪ್ರತಿಪದಾರ್ಥ, ಭಾವಾರ್ಥ ಮತ್ತು ವಿಶೇಷ ವಿಷಯ ಗಳೊಂದಿಗೆ ಹೊರಬಂದಿದೆ. ಇದೂ ಸಹ ಅಭ್ಯಾಸಿಗಳಿಗೆ ತುಂಬಾ ಉಪಯುಕ್ತ ವಾಗಿದೆ.

'ಅನುಭವ ಸೂತ್ರ, ವಿಶೇಷಾರ್ಥಪ್ರಕಾಶಿಕೆ' ಎಂಬ ಶ್ರೀ ಮೊಗ್ಗೆಮಾಯಿದೇವ ವಿರಚಿತ ಗ್ರಂಥಗಳನ್ನು ಬಳ್ಳಾರಿಯ ಆ. ವಿ. ಪಂ. ವೈ. ನಾಗೇಶಶಾಸ್ತ್ರಿಗಳು ಕನ್ನಡಿ ಸಿದ್ದಾರೆ. ವೀರಶೈವ ಪ್ರಕರಣ ಗ್ರಂಥವೆನಿಸಿರುವ 'ವೀರಶೈವ ಸಾದಾಚಾರ ಸಂಗ್ರಹ'ವು ಹುಬ್ಬಳ್ಳಿಯ ಪಂ. ಪಗಡದಿನ್ನಿ ಬಸವರಾಜಶಾಸ್ತ್ರಿಗಳಿಂದ ಭಾಷಾಂತರಿಸಲ್ಪಟ್ಟು ಪ್ರಕಟವಾಗಿದೆ. ಈಚೆಗೆ ಈ ಗ್ರಂಥವು ಮೈಸೂರು ಪಂಚಾಚಾರ್ಯ ಪ್ರೆಸ್ಸಿನಿಂದಲೂ ಕನ್ನಡಿಸಲ್ಪಟ್ಟು ಹೊರಬಂದಿದೆ.

ಕಾಶ್ಮೀರ ಶೈವವನ್ನು ಕುರಿತು ಕನ್ನಡದಲ್ಲಿ ಬಂದಿರುವ ಸಾಹಿತ್ಯ ಅತ್ಯಲ್ಪ. ಈ ದಿಶೆಯಲ್ಲಿ ಬೆಂಗಳೂರಿನ ವಿಶ್ರಾಂತ ನ್ಯಾಯಮೂರ್ತಿ ಶ್ರೀ ಜೆ. ರುದ್ರಪ್ಪನವರು ಕ್ಷೇಮ ರಾಜ ವಿರಚಿತ 'ಪ್ರತ್ಯಭಿಜ್ಞಾಹೃದಯ' (೧೯೫೧) ಮತ್ತು 'ಶಿವಸೂತ್ರಗಳು' (೧೯೫೮) ಎಂಬ ಗ್ರಂಥಗಳನ್ನು ಕನ್ನಡಿಸಿ ಉಪಕಾರ ಮಾಡಿದ್ದಾರೆ. ಶ್ರೀಯುತರು ಈ ಗ್ರಂಥಗಳಿಗೆ ಬರೆದಿರುವ ಪೀಠಿಕೆಗಳು ಕಾಶ್ಮೀರ ಸಿದ್ಧಾಂತದ ಹೃದಯವನ್ನು ಬೋಧಿಸುವಲ್ಲಿ ಸಫಲವಾಗಿವೆ. ಲಿಂ.ಪಂ. ಕೈಲಾಸ ಲಿಂಗ ಶಿವಾಚಾರ್ಯರು ಪ್ರಕಟಿಸಿರುವ 'ಶಿವಾನುಭೂತಿ ಪ್ರಕಾಶಿಕಾ' (೧೯೫೦) ಮತ್ತು 'ಶಿವಸೂತ್ರ ಪಾಠ' ಎಂಬ ಕಿರು ಹೊತ್ತಿಗೆಗಳು ಮತ್ತು ಅನುಭವಸಾರಗಳು ಈ ವಿಷಯದಲ್ಲಿ ದಿಕ್ಸೂಚಿಗಳು ಎನ್ನ ಬಹುದು. ಚೋಳ ಚಿಧ್ಘನ ಸಂವಾದ ರೂಪವಾದ 'ಶಿವಸಿದ್ಧಾಂತ ಚಂದ್ರಿಕೆ' (೧೯೪೧) ಯನ್ನು ಹೂಲಿಯ ಶ್ರೀ ನೀಲಕಂಠಶಿವಾಚಾರ್ಯರು ಕನ್ನಡಿಸಿದ್ದಾರೆ.

ಶಿವತತ್ತ್ವ ರಹಸ್ಯ

ಕ್ರಿ. ಶ. ಸು. ೧೫೩೭ರಲ್ಲಿ ಇದ್ದರೆಂದು ತಿಳಿದುಬಂದಿರುವ ನೀಲಕಂಠದೀಕ್ಷಿತರು ಶ್ರೀ ಶಿವಾಷ್ಟೋತ್ತರ ಶತನಾಮ ಸ್ತೋತ್ರಕ್ಕೆ ರಚಿಸಿರುವ 'ಶಿವತತ್ವ ರಹಸ್ಯ'ದ ಕನ್ನಡ ಭಾಷಾಂತರ(೧೯೫೯)ವನ್ನು ಶ್ರೀ ಸಿ. ಲಿಂಗಾಜೋಯಿಸ್‌ಶರ್ಮಾ ಅವರು ಮಾಡಿದ್ದಾರೆ. ಇವರು ಗ್ರಂಥದ ಪ್ರಾರಂಭದಲ್ಲಿ ಸಂಸ್ಕೃತದಲ್ಲಿರುವ ಶಿವತತ್ತ್ವ ರಹಸ್ಯ ಮತ್ತು ಪುರಾಣ ಪ್ರಾಮಾಣ್ಯಗಳನ್ನು ಸಹ ಕನ್ನಡಿಸಿದ್ದಾರೆ.

ಶೈವಸಿದ್ಧಾಂತ ಪರಿಭಾಷಾ

ಶೈವ ಸಿದ್ಧಾಂತ ಗ್ರಂಥಗಳು ಕನ್ನಡಕ್ಕೆ ಅನುವಾದವಾಗಿರುವುದು ವಿರಳ. ಸಿದ್ಧಾಂತ

ರಹಸ್ಯಗಳು ಮತ್ತು ಅಲ್ಲಿಯ ಪಾರಿಭಾಷಿಕ ಪದಗಳ ನಿಷ್ಕೃಷ್ಟಾರ್ಥಗಳನ್ನು ತಿಳಿಸಲು ಗೀರ್ವಾಣ ಭಾಷೆಯಲ್ಲಿ ಅನೇಕ ಗ್ರಂಥಗಳಿವೆ. ಶಿವಾಗ್ರಯೋಗಿ (೧೫೬೪)ಯ 'ಶೈವಪರಿಭಾಷಾ', ನೀಲಕಂಠಶಿವಾಚಾರ್ಯರ 'ಶಿವಾದ್ವೈತ ಪರಿಭಾಷಾ' ಮುಂತಾದ ಗ್ರಂಥಗಳ ಪಂಕ್ತಿಯಲ್ಲಿ ಕವಿರಾಜಶೇಖರ ಸೂರಿ ಭಟ್ಟಾರಕರ 'ಶೈವ ಸಿದ್ಧಾಂತ ಪರಿಭಾಷಾ' ಎಂಬುದು ಬಹುಮುಖ್ಯವಾದುದು. ಇದು ನಿವೃತ್ತಪ್ರಧಾನಾಗಮ ಪಂಡಿತ ಶ್ರೀ ಕೃಷ್ಣದೀಕ್ಷಿತರಿಂದ ಸಂಪಾದಿಸಲ್ಪಟ್ಟು (೧೯೫೮) ಹೊರಬಂದಿದೆ. ಈ ಗ್ರಂಥದ ಸರಳ ಕನ್ನಡ ಭಾಷಾನುವಾದವು ಕವಿ ನರಸಿಂಹಭಟ್ಟರಿಂದ ರಚಿಸಲ್ಪಟ್ಟಿದೆ.

ಶೈವಕಾಲ ವಿವೇಕ

ಭಗವಂತನನ್ನು ಆರಾಧಿಸಲು ಗುಡಿ ಗೋಪುರಗಳನ್ನು ನಿರ್ಮಿಸಿ ಕರ್ಷಣಾದಿ ಪ್ರತಿಷ್ಠಾಂತವಾದ ಹಾಗೂ ಪ್ರತಿಷ್ಠಾದಿ ಉತ್ಸವಾಂತವಾದ ಆಗಮಿಕ ಕ್ರಿಯೆಗಳನ್ನು ನೆರವೇರಿಸಲು ಕಾಲನಿರ್ಣಯವು ಅಗತ್ಯ. ಈ ವಿಷಯವನ್ನು ಕುರಿತು ಶಿವಶ್ರೀ ನಿಗಮ ಜ್ಞಾನ ಮುನಿ (ಕ್ರಿ. ಶ. ಸು. ೧೬೦೦) ಎಂಬುವರು 'ಶೈಲಕಾಲವಿವೇಕ' ವನ್ನು ರಚಿಸಿದ್ದಾರೆ. ಇದಕ್ಕೆ ಶ್ರೀ ಗಣಪತಿಭಟ್ಟರು ಸಂಸ್ಕೃತ ವ್ಯಾಖ್ಯಾನಮಾಡಿದ್ದಾರೆ. ಇದರ ಕನ್ನಡ ಭಾಷಾನುವಾದವು ಶ್ರೀಮನ್ಮಹಾರಾಜಾ ಸಂಸ್ಕೃತ ಕಾಲೇಜಿನ ಶೈವಾಗಮ ಪ್ರಾಧ್ಯಾಪಕರಾದ ಶಿವ ಶ್ರೀ ಸೀತಾರಾಮ ಸೋಮಯಾಜಿಯವರಿಂದ ಮಾಡ ಲ್ಪಟ್ಟಿದೆ.

ಶಿಲ್ಪವಿದ್ಯಾರಹಸ್ಯೋಪನಿಷತ್

ಭಾರತದ ಪ್ರಾಚೀನ ಶಿಲ್ಪವೈಭವಕ್ಕೆ ಎಲ್ಲೋರ, ಅಜಂತ, ಬಾದಾಮಿ, ಬೇಲೂರು, ಹಳೇಬೀಡು, ಸೋಮನಾಥಪುರ, ಲೇಪಾಕ್ಷಿ ಹಾಗೂ ಹಂಪೆಗಳ ಶಿಲ್ಪಗಳು ನಿದರ್ಶನ. ಇಂಥ ಭವ್ಯಕೃತಿ ನಿರ್ಮಾಣಕ್ಕೆ ಪ್ರಬುದ್ಧ ಶಿಲ್ಪವಿದ್ಯಾವೈದುಷ್ಯ ಅತ್ಯಗತ್ಯ. ಈ ಬಗ್ಗೆ ವಿಪುಲಗ್ರಂಥ ರಾಶಿ ನಮ್ಮಲ್ಲಿದ್ದಿರಬೇಕು. ಆದರೆ ಯಾವ ಕಾರಣದಿಂದಲೋ ಶಿಲ್ಪಶಾಸ್ತ್ರಗ್ರಂಥಗಳು ಬೆಳಕಿಗೆ ಬಂದಿಲ್ಲ. ಮೈಸೂರಿನ ಶಿಲ್ಪ ಸಿದ್ಧಾಂತಿ ಕೈ. ಸಿದ್ಧಲಿಂಗ ಸ್ವಾಮಿಗಳು ಶ್ರೀಮತ್ಕೌಮಾರ ಭಾಷ್ಯೋಪೇತವಾದ 'ಶಿಲ್ಪವಿದ್ಯಾ ರಹಸ್ಯೋಪನಿಷತ್' (೧೯೪೮) ಎಂಬ ಗ್ರಂಥವನ್ನು ಕನ್ನಡಿಸಿ ಈ ಕೊರತೆಯನ್ನು ಹೋಗಲಾಡಿಸಿದ್ದಾರೆ.

ಶಿಲ್ಪಶಾಸ್ತ್ರಕ್ಕೆ ಶಿಲ್ಪ ವೇದವೆಂದೂ ಉಪವೇದವೆಂದೂ ಕರೆಯಲಾಗಿದೆ. ಚರಣ ವ್ಯೂಹದಲ್ಲಿ ಉಲ್ಲೇಖಿಸಿರುವ 'ಸ್ಥಾಪತ್ಯವೇದೋ ವಿಶ್ವಕರ್ಮಾದಿ ಶಿಲ್ಪಶಾಸ್ತ್ರಮಥರ್ವ ವೇದಸ್ಯೋಪವೇದಃ' ಎಂಬ ಮಾತು ಶಿಲ್ಪಶಾಸ್ತ್ರಕ್ಕಿರುವ ಮಹತ್ವವನ್ನು ಸಾರಿದೆ. ಪ್ರಕೃತ ಪ್ರಕಟವಾಗಿರುವ ಶಿಲ್ಪವಿದ್ಯಾರಹಸ್ಯೋಪನಿಷತ್ತು ಯಾಜುಷಾಥರ್ವಣವೆಂದು ಹೇಳಲಾಗಿದೆ. ಶ್ರೀ ಶ್ರೀ ಸ್ವಾಮಿಗಳು ಶಿಲ್ಪವಿಜ್ಞಾನಾಕಾಂಕ್ಷಿಗಳಿಗಾಗಿ ರಚಿಸಿರುವ 'ಶಿಲ್ಪಸಾರ' (ಪದ್ಯ) ಎಂಬ ಹೊತ್ತಗೆಯೂ ಸಹ ಅವಲೋಕನೀಯ.

ತತ್ತ್ವರತ್ನ ಪ್ರದೀಪಿಕೆ

ಕ್ರಿ. ಶ. ಸು. ೧೨ನೆಯ ಶತಮಾನ ಮಧ್ಯದಲ್ಲಿದ್ದಿರಬಹುದೆಂದು ತಿಳಿದುಬಂದಿರುವ ಬಾಲಚಂದ್ರದೇವ ಎಂಬ ದಾರ್ಶನಿಕ, 'ತತ್ತ್ವರತ್ನ ಪ್ರದೀಪಿಕೆ' ಎಂಬ ಗ್ರಂಥವನ್ನು ಕನ್ನಡದಲ್ಲಿ ಬರೆದಿದ್ದಾನೆ. ರಾಮಚಂದ್ರ ಚರಿತ ಪುರಾಣವನ್ನು ಬರೆದಿರುವ ನಾಗಚಂದ್ರನು (ಅಭಿನವಪಂಪ–ಕ್ರಿ. ಶ. ೧೧೦೦) ತನ್ನ ಪುರಾಣದ ಆಶ್ವಾಸಾಂತ್ಯದಲ್ಲಿ ತಾನು ಒಬ್ಬ(?) ಬಾಲಚಂದ್ರನ ಶಿಷ್ಯನೆಂದು ಹೇಳಿಕೊಂಡಿದ್ದಾನೆ. ಕ್ರಿ.ಶ. ಸು. ೧ನೆಯ ಶತಮಾನದವರೆಂದು ತಿಳಿದುಬಂದಿರುವ ಉಮಾಸ್ವಾಮ್ಯಾಚಾರ್ಯರು ರಚಿಸಿರುವ ತತ್ತ್ವಾರ್ಥ ಸೂತ್ರ ಗ್ರಂಥಕ್ಕೆ ಸ್ವಾಮಿ ಸಮಂತಭದ್ರಾಚಾರ್ಯರ (೨ನೇ ಶತಮಾನ) ಗಂಧಹಸ್ತಿ ಮಹಾಭಾಷ್ಯ, ಪೂಜ್ಯ ಪಾದಾಚಾರ್ಯ ಮುಂತಾದವರ (೪ನೇ ಶತಮಾನ) ಸರ್ವಾರ್ಥಸಿದ್ಧಿ ಮೊದಲಾದ ವ್ಯಾಖ್ಯಾನಗಳಿವೆ.

ಇದೇ ಮೂಲ ಗ್ರಂಥಕ್ಕೆ ಬಾಲಚಂದ್ರದೇವನು 'ತತ್ತ್ವರತ್ನ ಪ್ರದೀಪಿಕೆ' ಎಂಬ ಕರ್ಣಾಟಕ 'ತತ್ತ್ವಾರ್ಥತಾತ್ಪರ್ಯ ವೃತ್ತಿ' ಯನ್ನು ಬರೆದಿದ್ದಾನೆ. ಗ್ರಂಥಾರಂಭ ದಲ್ಲಿ 'ನತ್ವಾ ಜಿನೇಶ್ವರಂ ವೀರಂ ವಕ್ಷ್ಯೇ ಕರ್ಣಾಟಭಾಷಯಾ। ತತ್ತ್ವಾರ್ಥಸೂತ್ರ ಸೂತ್ರಾರ್ಥಂ ಮಂದಬುದ್ಧ್ಯನುರೋಧತಃ॥' ಎಂಬ ಈ ಶ್ಲೋಕವು ಉಕ್ತವಾಗಿದೆ. ಜೈನತತ್ತ್ವಗಳನ್ನು ವಿಶದೀಕರಿಸುವ ಈ ಗ್ರಂಥವು ಪಂಡಿತರತ್ನಂ ದಿ. ಎ. ಶಾಂತರಾಜ ಶಾಸ್ತ್ರಿಗಳಿಂದ ಸಂಪಾದಿಸಲ್ಪಟ್ಟು ೧೯೫೫ರಲ್ಲಿ ಪ್ರಕಟವಾಗಿದೆ.

ಮನುಸ್ಮೃತಿ

ಉಡುಪಿಯ ಶ್ರೀನಿವಾಸಭಟ್ಟರು ಮನುಸ್ಮೃತಿಯನ್ನು (೧೯೪೪) ಕನ್ನಡಿಸಿ ಪ್ರಕಟಿಸಿದ್ದಾರೆ.

ಮೈಸೂರು ರಾಮಕೃಷ್ಣಾಶ್ರಮದ ವತಿಯಿಂದ ಕನ್ನಡಿಸಲ್ಪಟ್ಟಿರುವ ಗೀತೆ, ಉಪನಿಷತ್ತು ಮುಂತಾದವುಗಳು ಕನ್ನಡ ಲೋಕಕ್ಕೆ ಮಹದುಪಕಾರ ಮಾಡಿವೆ.

ಪುರಾಣಗಳು

ಪುರಾತನಕಾಲದಿಂದಲೂ ನಡೆದುಬಂದಿರುವ ಅವಸ್ಥಾವಿಶೇಷಗಳನ್ನು ನಿರೂಪಿಸುವುದೇ ಪುರಾಣಗಳ ಗುರಿ. 'ಅಥಪುರಾಣಂ ನಾಮ ವಿಶ್ವಸ್ಯ ಪೂರ್ವಾವಸ್ಥಾನಿರೂಪಕಂ' 'ಪುರಾಭವಂ ಪುರಾಣಂ' ಮುಂತಾದ ನಿರ್ವಚನಗಳು ಈ ಅಂಶವನ್ನು ಸ್ಪಷ್ಟಪಡಿಸುತ್ತವೆ.

ಪುರಾಣಗಳಲ್ಲಿ ಸಾಮಾನ್ಯವಾಗಿ ಸೃಷ್ಟಿ, ಪುನಃ ಸೃಷ್ಟಿ, ದೇವತೆಗಳ ಪಿತೃದೇವತೆಗಳ ವಂಶವಿವರಣೆ, ಮನ್ವಂತರ, ಯಾವ ಮನು ಎಷ್ಟು ಕಾಲ ಅಧಿಕಾರದಲ್ಲಿದ್ದನು ಮುಂತಾದ ವಿವರಣೆಗಳು, ಸೂರ್ಯ ಚಂದ್ರವಂಶಗಳ ಹಾಗೂ ಪ್ರಸಿದ್ಧ ರಾಜರ ಚರಿತ್ರೆಗಳು ಸಂಗ್ರಹಿಸಲ್ಪಟ್ಟಿವೆ. ಇವುಗಳ ಜೊತೆಗೆ ಮತಧರ್ಮ, ನೀತಿ, ವ್ರತಗಳು, ದಾನ,

ಭಕ್ತಿ, ಯೋಗ ಮತ್ತು ಹರಿಹರರ ಅವತಾರಗಳ ವರ್ಣನೆಗಳು, ವೈದ್ಯ, ಸಂಗೀತ, ವ್ಯಾಕರಣ, ಛಂದಸ್ಸು, ನಾಟಕ ಲಕ್ಷಣ, ಜ್ಯೋತಿಷ, ಶಿಲ್ಪ, ರಾಜನೀತಿಗಳನ್ನು ಕುರಿತ ಅವತರಣಗಳು ವರ್ಣಿಸಲ್ಪಟ್ಟವೆ.

ಭಾರತ ಸಂಸ್ಕೃತಿ, ಸಾಹಿತ್ಯಕಲೆ, ಮುಂತಾದವುಗಳನ್ನು ತಿಳಿದುಕೊಳ್ಳಲು ಪುರಾಣಗಳ ನೆರವು ಆಗತ್ಯ. ಪುರಾಣಗಳ ಸಹಾಯವಿಲ್ಲದೆ ಭಾರತದ ಪೂರ್ವ ಚರಿತ್ರೆಯನ್ನು ಅರಿಯುವುದು ಅಶಕ್ಯ. ಭಾರತೀಯ ಆರಾಧ್ಯ ದೇವತೆಗಳ ಸ್ವರೂಪನಿರ್ಣಯಕ್ಕೆ ಪುರಾಣಗಳು, ವೇದಗಳಷ್ಟೇ ಪ್ರಮಾಣವೆನಿಸಿವೆ. ಆದ್ದರಿಂದ ವೇದಾರ್ಥ ನಿರ್ಣಯದಲ್ಲಿ 'ಇತಿಹಾಸಪುರಾಣಾಭ್ಯಾಂ ವೇದಾರ್ಥಮುಪಬೃಂಹಯೇತ್' ಎಂದರೆ ವೇದಮಂತ್ರಾರ್ಥ ನಿರ್ಣಯದಲ್ಲಿ ಪುರಾಣಗಳ ಸಮ್ಮತಿ ಮುಖ್ಯ.

ಇಂತಹ ಪುರಾಣಗಳ ಅರ್ಥವನ್ನು ಕನ್ನಡ ಜನ ತಿಳಿಯಲೆಂಬ ಸದುದ್ದೇಶದಿಂದ ಶ್ರೀಮನ್ಮಹಾರಾಜರವರ ಔದಾರ್ಯದಿಂದ ಪುರಾಣಗಳ ಅನುವಾದಕಾರ್ಯವು ೧೯೪೩ ರಿಂದ ಆರಂಭವಾಯಿತು. ಶ್ರೀ ಚಾಮರಾಜೇಂದ್ರ ಗ್ರಂಥಮಾಲೆಯ ಆಶ್ರಯದಲ್ಲಿ ಅನೇಕ ವಿದ್ವಾಂಸರ ಪರಿಶ್ರಮದ ಫಲವಾಗಿ ಹೊರಬಂದ ಪುರಾಣಗಳನ್ನು ಹೀಗೆ ಸಂಗ್ರಹಿಸಬಹುದು.

೧ ಶಿವರಹಸ್ಯ	೩೦ ಸಂಪುಟಗಳು	೧೯೪೬
೨ ಸ್ಕಾಂದಪುರಾಣ	೨೭ ಸಂಪುಟಗಳು	೧೯೪೪
೩ ಪಾದ್ಮಪುರಾಣ	೨೨ ಸಂಪುಟಗಳು	೧೯೪೪
೪ ಭವಿಷ್ಯಪುರಾಣ	೧೩ ಸಂಪುಟಗಳು	೧೯೪೬
೫ ಶಿವಮಹಾಪುರಾಣ	೧೩ ಸಂಪುಟಗಳು	೧೯೪೬
೬ ನಾರದೀಯ ಪುರಾಣ	೧೦ ಸಂಪುಟಗಳು	೧೯೪೬
೭ ಬ್ರಹ್ಮವೈವರ್ತ	೧೦ ಸಂಪುಟಗಳು	೧೯೪೮
೮ ಮತ್ಸ್ಯಪುರಾಣ	೭ ಸಂಪುಟಗಳು	೧೯೪೬
೯ ವಾಯುಪುರಾಣ	೬ ಸಂಪುಟಗಳು	೧೯೪೭
೧೦ ಲಿಂಗಪುರಾಣ	೬ ಸಂಪುಟಗಳು	೧೯೪೫
೧೧ ಬ್ರಾಹ್ಮ ಮಹಾಪುರಾಣ	೬ ಸಂಪುಟಗಳು	೧೯೪೬
೧೨ ಶಂಕರ ಸಂಹಿತಾ	೬ ಸಂಪುಟಗಳು	೧೯೪೭
೧೩ ವರಾಹಪುರಾಣ	೫ ಸಂಪುಟಗಳು	೧೯೪೬
೧೪ ಗಣೇಶ್ವರ ಪುರಾಣ	೫ ಸಂಪುಟಗಳು	೧೯೫೩
೧೫ ಕೂರ್ಮ ಪುರಾಣ	೪ ಸಂಪುಟಗಳು	೧೯೪೬
೧೬ ಕಾಳಿಕಾ ಪುರಾಣ	೪ ಸಂಪುಟಗಳು	೧೯೪೪
೧೭ ಸೂತ ಸಂಹಿತಾ	೪ ಸಂಪುಟಗಳು	೧೯೪೫

೧೮ ವಾಮನ ಪುರಾಣ	೩ ಸಂಪುಟಗಳು	೧೯೪೬
೧೯ ವಿಷ್ಣು ಪುರಾಣ	೩ ಸಂಪುಟಗಳು	೧೯೪೮
೨೦ ನರಸಿಂಹ ಪುರಾಣ	೧ ಸಂಪುಟ	೧೯೪೯
೨೧ ಸಾಂಬಪುರಾಣ	೨ ಸಂಪುಟಗಳು	೧೯೪೭
೨೨ ಸೌರ ಪುರಾಣ	೨ ಸಂಪುಟಗಳು	೧೯೪೭
೨೩ ವಿಷ್ಣುಧರ್ಮೋತ್ತರ	೧೨ ಸಂಪುಟಗಳು	೧೯೪೫
೨೪ ಹಾಲಾಸ್ಯಮಾಹಾತ್ಮ್ಯ	೩ ಸಂಪುಟಗಳು	೧೯೪೬
೨೫ ಶಿವತತ್ತ್ವ ಸುಧಾನಿಧಿ	೩ ಸಂಪುಟಗಳು	೧೯೪೯
೨೬ ಅಧ್ಯಾತ್ಮ ರಾಮಾಯಣ	೯ ಸಂಪುಟಗಳು	೧೯೪೮
೨೭ ತ್ರಿಪುರ ರಹಸ್ಯ	೫ ಸಂಪುಟಗಳು	೧೯೪೬
೨೮ ಗಾರ್ಗ್ಯ ಸಂಹಿತಾ	೭ ಸಂಪುಟಗಳು	೧೯೪೭
೨೯ ಆನಂದ ರಾಮಾಯಣ	೭ ಸಂಪುಟಗಳು	೧೯೪೭
೩೦ ಯೋಗವಾಸಿಷ್ಠ	೨೧ ಸಂಪುಟಗಳು	೧೯೪೬
೩೧ ಮಾರ್ಕಂಡೇಯ ಪುರಾಣ	೪ ಸಂಪುಟಗಳು	೧೯೫೩
೩೨ ತ್ರಿಪುರ ರಹಸ್ಯ	೫ ಸಂಪುಟಗಳು	೧೯೪೬
೩೩ ಕಾಂಚೀಮಾಹಾತ್ಮ್ಯ		೧೯೪೫
೩೪ ಲಲಿತಾ ಸಹಸ್ರನಾಮಭಾಷ್ಯ		೧೯೪೯
೩೫ ದೇವೀಮಾಹಾತ್ಮ್ಯ		೧೯೪೧
೩೬ ಶುಕ್ರನೀತಿಸಾರ		

ಇವೇ ಮುಖ್ಯವಾದ ಪುರಾಣ ಗ್ರಂಥಗಳು ಕನ್ನಡಕ್ಕೆ ಅನುವಾದವಾಗಿವೆ. ಸ್ಥೂಲವಾಗಿ ಸುಮಾರು ೪೨ ಗ್ರಂಥಗಳ ೩೦೪ ಸಂಪುಟಗಳಿಗೂ ಮಿಗಿಲಾದ ಕನ್ನಡ ಗ್ರಂಥರಾಶಿ ಈ ಮೂಲಕ ಪ್ರಕಟವಾಗಿದೆಯೆಂದು ಅಂದಾಜು ಮಾಡಲಾಗಿದೆ. ಈ ಮಹತ್ಕಾರ್ಯದಲ್ಲಿ ನಿಯುಕ್ತರಾಗಿದ್ದ ಪಂಡಿತವರ್ಗವನ್ನು ಹೀಗೆ ಸಂಗ್ರಹಿಸಬಹುದು. ಶ್ರೀಗಳಾದ ಎಚ್. ಪಿ. ವೆಂಕಟರಾವ್, ಎಚ್. ಗಂಗಾಧರಶಾಸ್ತ್ರೀ, ಮೋಟಗಾನಹಳ್ಳಿ ಸುಬ್ರಹ್ಮಣ್ಯ ಶಾಸ್ತ್ರೀ, ಬೇಲದಕೆರೆ ಸೂರ್ಯನಾರಾಯಣ ಶಾಸ್ತ್ರೀ, ದೇವುಡು ನರಸಿಂಹ ಶಾಸ್ತ್ರೀ, ಬಿ. ಚೆನ್ನಕೇಶವಯ್ಯ, ಡಿ. ವಾಸುದೇವಾಚಾರ್ಯ, ಬಿ. ಎಸ್. ಕೃಷ್ಣಪ್ಪ, ವಾಜಪೇಯಂ ಶ್ರೀರಂಗಾಚಾರ್, ಆರ್. ಸೇತುಮಾಧವಾಚಾರ್, ಯಡತೊರೆ ಚಂದ್ರಶೇಖರ ಶಾಸ್ತ್ರೀ, ಮ.ರಾ. ವರದಾಚಾರ್, ಪಾಟಣಕರ್ ಚಂದ್ರಶೇಖರಭಟ್ಟ, ಹಾನಗಲ್ಲು ಯಜ್ಞೇಶ್ವರಶಾಸ್ತ್ರೀ, ಸಂಕೀಘಟ್ಟಂ ವೆಂಕಟಾಚಾರ್ಯ, ಗಂಜಾ ತಿಮ್ಮಣ್ಣಯ್ಯ ಶಾಸ್ತ್ರೀ, ಎನ್. ವಿ. ಪದ್ಮನಾಭಾಚಾರ್ಯ, ಎಸ್. ಸೀತಾರಾಮ ಶಾಸ್ತ್ರೀ, ಚ. ವೆಂಕಟರಮಣಯ್ಯ, ಕೆ. ಎಲ್. ನರಸಿಂಹಯ್ಯ ಮುಂತಾದವರು.

ವ್ಯಾಕರಣ

ಭಾಷಾಭ್ಯಾಸಕ್ಕೆ ವ್ಯಾಕರಣವೇ ಮೂಲ. ಪ್ರಕೃತಿ ಪ್ರತ್ಯಯ ಮೊದಲಾದವುಗಳನ್ನು ಹೇಳುವ ಶಾಸ್ತ್ರಕ್ಕೆ ವ್ಯಾಕರಣವೆಂದು ಹೆಸರು. 'ಕಾಣಾದಂ ಪಾಣಿನೀಯಂ ಚ ಸರ್ವ ಶಾಸ್ತ್ರೋಪಕಾರಕಂ' ಎಂಬ ನುಡಿ ಶಾಸ್ತ್ರಾಭ್ಯಾಸಕ್ಕೆ ತರ್ಕ ಮತ್ತು ವ್ಯಾಕರಣಗಳ ಅತ್ಯಾವಶ್ಯಕ ಎಂಬುದನ್ನು ಸೂಚಿಸುತ್ತದೆ.

ಸಂಸ್ಕೃತ ವ್ಯಾಕರಣಕ್ಕೆ ಪಾಣಿನಿ, ಕಾತ್ಯಾಯನ ಮತ್ತು ಪತಂಜಲಿಗಳು ಪ್ರವರ್ತಕರು. ಇವರಲ್ಲಿ ಮೊದಲನೆಯ ಪಾಣಿನಿ ಮೊದಲಾದವರ ಕಾಲ ವಿಚಾರಗಳಲ್ಲಿ ಭಿನ್ನಾಭಿಪ್ರಾಯಗಳಿವೆ.

ಲಘುಸಿದ್ಧಾಂತಕೌಮುದಿ

ಸಂಸ್ಕೃತ ಭಾಷಾಜ್ಞಾನವನ್ನು ಬಯಸುವ ಬಾಲಕರಿಗಾಗಿ ಕ್ರಿ. ಶ. ಸು. ೧೭ನೆಯ ಶತಮಾನದಲ್ಲಿದ್ದ ವರದರಾಜನು 'ಲಘುಸಿದ್ಧಾಂತ ಕೌಮುದಿ' ಎಂಬ ಗ್ರಂಥವನ್ನು ಬರೆದನು. ಈತನು ಪಾಣಿನಿಯ ಸೂತ್ರಗಳಲ್ಲಿ ಅತಿ ಮುಖ್ಯವಾದವುಗಳನ್ನು ಆರಿಸಿಕೊಂಡು ಅವುಗಳಿಗೆ ಸರಳ ಸಂಸ್ಕೃತ ಭಾಷೆಯಲ್ಲಿ ವೃತ್ತಿ ಬರೆದು ಉದಾಹರಿಸಿ ಸುಲಭಗೊಳಿಸಿದ್ದಾನೆ. ಇಂಥ ಉಪಯುಕ್ತವಾದ ಗ್ರಂಥವನ್ನು ಮೈಸೂರಿನ ಸಂಸ್ಕೃತ ಕಾಲೇಜಿನ ಪ್ರಾಧ್ಯಾಪಕರಾದ ಶ್ರೀ ಜಿ. ವಿಷ್ಣುಮೂರ್ತಿ ಭಟ್ಟರು ಕನ್ನಡಿಸಿ ೧೯೬೮ರಲ್ಲಿ ಪ್ರಕಟಿಸಿದ್ದಾರೆ.

ಸಿದ್ಧಾಂತಕೌಮುದಿ

ಲಘುಸಿದ್ಧಾಂತ ಕೌಮುದಿಯ ಕರ್ತೃ ವರದರಾಜನ ಗುರು ಭಟ್ಟೋಜಿ ದೀಕ್ಷಿತ. ಈತನು ಬರೆದ "ಸಿದ್ಧಾಂತ ಕೌಮುದಿ"ಯ ಸಂಕ್ಷಿಪ್ತರೂಪವೇ ಲಘು ಸಿದ್ಧಾಂತ ಕೌಮುದಿ. ಭಟ್ಟೋಜಿ ದೀಕ್ಷಿತರ ಕೃತಿ ಅಖಂಡ ಭರತಖಂಡದಲ್ಲಿ ಸಂಸ್ಕೃತ ವಿದ್ಯಾಭ್ಯಾಸ ಮಾಡುವವರ ಕರಭೂಷಣವಾಗಿದೆ. ಇಂಥ ಬೃಹತ್ ಗ್ರಂಥವನ್ನು ಸಹ ಶ್ರೀ ಜಿ. ವಿಷ್ಣುಮೂರ್ತಿ ಭಟ್ಟರು ಕನ್ನಡಿಸಿ ಇದರ (ಸಂಜ್ಞಾದಿಕಾರಕಾಂತ) ಮೊದಲ ಸಂಪುಟವನ್ನು ಪ್ರಕಟಿಸಿದ್ದಾರೆ.

ತರ್ಕ

ಶಾಸ್ತ್ರಾಭ್ಯಾಸಕ್ಕೆ ಅತಿಮುಖ್ಯವಾದ ಮತ್ತೊಂದು ವಿಭಾಗ ತರ್ಕ. ತರ್ಕವು ನ್ಯಾಯ ಮತ್ತು ವೈಶೇಷಿಕ ಎಂಬ ಎರಡು ಶಾಖೆಗಳನ್ನು ಒಳಗೊಂಡಿದೆ. ನ್ಯಾಯ ಶಾಸ್ತ್ರಕ್ಕೆ ಗೌತಮ ಮತ್ತು ವೈಶೇಷಿಕಕ್ಕೆ ಕಣಾದರು ಪ್ರವರ್ತಕರು. ಇವೆರಡು ವಿಭಾಗಗಳಿಗೂ ತರ್ಕಶಾಸ್ತ್ರವೆಂಬ ವ್ಯವಹಾರವುಂಟು. ನ್ಯಾಯಶಾಸ್ತ್ರವು ಪ್ರಮಾಣವನ್ನೂ ವೈಶೇಷಿಕವು ಪ್ರಮೇಯವನ್ನೂ ಮುಖ್ಯವಾಗಿ ಅಧಿಕರಿಸಿವೆ. ತರ್ಕಶಾಸ್ತ್ರವು ಲಕ್ಷಣ

ಮತ್ತು ಪರೀಕ್ಷೆಗಳಿಂದ ತತ್ತ್ವಾರ್ಥಗಳನ್ನು ಸಮರ್ಥಿಸಿ ಸಿದ್ಧಾಂತಗೊಳಿಸಲು ಸಹಾಯಕವಾಗಿದೆ.

ತರ್ಕಸಂಗ್ರಹ

ಇಂಥ ಗಹನವಾದ ಶಾಸ್ತ್ರಪ್ರಕ್ರಿಯೆಯು ಶಾಸ್ತ್ರವೆಂಬ ಗಹನತತ್ತ್ವಾರಣ್ಯವನ್ನು ಪ್ರವೇಶಿಸಲೆಳಸುವ ಬಾಲಕರಿಗೆ ಸಹಾಯಕವಾಗಲೆಂಬ ಉದ್ದೇಶದಿಂದ ಅನ್ನಂಭಟ್ಟನೆಂಬ ಪಂಡಿತನು ನ್ಯಾಯ-ವೈಶೇಷಿಕಗಳೆರಡನ್ನೂ ಸಂಗ್ರಹಿಸಿ 'ತರ್ಕಸಂಗ್ರಹ' ಎಂಬ ಗ್ರಂಥವನ್ನು ರಚಿಸಿದನು. ಉಪಯುಕ್ತವಾದ ಈ ಗ್ರಂಥವನ್ನೂ ಸಹ ಶ್ರೀ ವಿಷ್ಣುಮೂರ್ತಿ ಭಟ್ಟರು ಕನ್ನಡಿಸಿದ್ದಾರೆ.

ಸಾಂಖ್ಯ

ಸಾಂಖ್ಯಶಾಸ್ತ್ರಕ್ಕೆ ಕಪಿಲಮಹರ್ಷಿ ಪ್ರವರ್ತಕ. ಭಾರತದ ಅಧ್ಯಾತ್ಮ ಶಾಸ್ತ್ರ ಪ್ರಕಾರಗಳಲ್ಲಿ ಸಾಂಖ್ಯಸಿದ್ಧಾಂತ ಪ್ರಮುಖವಾದುದು. ಸಾಂಖ್ಯಶಾಸ್ತ್ರದಲ್ಲಿ ಬರುವ ಪುರುಷ, ಪ್ರಕೃತಿ ಮುಂತಾದ ೨೫ ತತ್ತ್ವಗಳನ್ನು ಎಲ್ಲ ತತ್ತ್ವಶಾಸ್ತ್ರಕಾರರೂ ಅಂಗೀಕರಿಸುತ್ತಾರೆ. ಸತ್ಕಾರ್ಯವಾದಿಗಳಾದ ಸಾಂಖ್ಯರು ಹೇಳುವ ಜೀವಾತ್ಮಸ್ವರೂಪ, ಲಿಂಗ ಶರೀರ, ಮೋಕ್ಷಸ್ವರೂಪಗಳು ಇತರ ವೇದಾಂತಿಗಳ ದೃಷ್ಟಿಯಲ್ಲಿ ವಿಲಕ್ಷಣ. ಪ್ರಾಣಿ ಮಾತ್ರಕ್ಕೆ ದುಃಖ ನಿವೃತ್ತಿಯಾಗಬೇಕೆಂಬುದೇ ಈ ದರ್ಶನದ ಗುರಿ. ದುಃಖ, ದುಃಖ ಕಾರಣ, ದುಃಖನಾಶ ಮತ್ತು ದುಃಖನಾಶಕೋಪಾಯಗಳೆಂಬ ನಾಲ್ಕು ವಿಷಯಗಳು ಇಲ್ಲಿ ಮುಖ್ಯ. ಇವುಗಳನ್ನು ಕೂಲಂಕಷವಾಗಿ ವಿಮರ್ಶಿಸಿ ಆಧ್ಯಾತ್ಮಿಕ, ಆಧಿಭೌತಿಕ ಮತ್ತು ಆಧಿದೈವಿಕವೆಂಬ ಮೂರು ದುಃಖಗಳು, ಈ ದುಃಖನಿವೃತ್ತಿಗೆ ಕಾರಣವಾದ ಪ್ರಕೃತಿ ಮತ್ತು ಪುರುಷ ಇವರ ವಿವೇಕವನ್ನು ಸಾಂಖ್ಯಶಾಸ್ತ್ರ ಪ್ರತಿಪಾದಿಸಿದೆ.

ಸಾಂಖ್ಯಕಾರಿಕೆ

ಸಾಂಖ್ಯದರ್ಶನ ಸಾರವನ್ನು ಸಂಗ್ರಹಿಸಿ ಈಶ್ವರಕೃಷ್ಣ ಎಂಬುವನು 'ಸಾಂಖ್ಯಕಾರಿಕೆ' ಯನ್ನು ರಚಿಸಿದನು. ಶ್ರೀಯುತ ಭಟ್ಟರು ಈ ಕಾರಿಕೆಗಳ ಪ್ರತಿಪದಾರ್ಥ ತಾತ್ಪರ್ಯಗಳನ್ನು ಕನ್ನಡದಲ್ಲಿ ಬರೆದು ೧೯೫೯ರಲ್ಲಿ ಪ್ರಕಟಿಸಿದ್ದಾರೆ.

ನಿಘಂಟುಗಳು

ಭಟ್ಟಹಲಾಯುಧನಿಂದ ರಚಿತವಾದ 'ಅಭಿಧಾನರತ್ನಮಾಲಾ' ಎಂಬುದನ್ನು ನಾಗವರ್ಮ ಕವಿಯು 'ಕರ್ಣಾಟಕ ಅಭಿಧಾನರತ್ನಮಾಲಾ' ಎಂಬ ಹೆಸರಿನಿಂದ ಕನ್ನಡಿಸಿದ್ದಾನೆ. ಇದು ಮದರಾಸ್ ವಿಶ್ವವಿದ್ಯಾನಿಲಯದ ಶ್ರೀ ಎಂ. ವೆಂಕಟರಾವ್ ಮತ್ತು ಎಚ್. ಶೇಷಯ್ಯಂಗಾರ್ ಅವರಿಂದ ಸಂಪಾದಿಸಲ್ಪಟ್ಟು ಪ್ರಕಟವಾಗಿದೆ (೧೯೪೦).

ಸಂಸ್ಕೃತ ನಿಘಂಟುಗಳಲ್ಲಿ ಅಮರಕೋಶಕ್ಕೆ ಪ್ರಾಧಾನ್ಯವಿದೆ. ಅಮರಸಿಂಹ ಕವಿಯು ಕ್ರಿ. ಶ. ಸುಮಾರು ೭ನೆಯ ಶತಮಾನದವನೆಂದು ತಿಳಿದುಬಂದಿದೆ. ಈತನು ಜೈನನೆಂದು ಕೆಲವರೂ ಬೌದ್ಧನೆಂದು ಕೆಲವರೂ ವಾದಿಸುತ್ತಾರೆ. ಸಂಸ್ಕೃತ ಶಬ್ದಗಳಿಗೆ ಪರ್ಯಾಯ ಶಬ್ದಗಳನ್ನು ಅವುಗಳ ನಾಮ-ಲಿಂಗಗಳನ್ನು ಪರಿಚಯ ಮಾಡಿಕೊಡುವುದರ ಮೂಲಕ ಈ ನಿಘಂಟು ಸಂಸ್ಕೃತಾಭ್ಯಾಸಿಗಳಿಗೆ ಅತ್ಯುಪಯುಕ್ತವಾಗಿದೆ. ಅಮರಕೋಶಕ್ಕೆ ಅನೇಕ ವಿದ್ವಾಂಸರು ಕನ್ನಡದಲ್ಲಿ ಟೀಕೆಗಳನ್ನು ಬರೆದಿದ್ದಾರೆ. ಶ್ರೀ ವಿಷ್ಣುಮೂರ್ತಿಭಟ್ಟರು ಇದನ್ನು (೧೯೬೫) ಪ್ರಕಟಿಸಿದ್ದಾರೆ.

ಕೌಟಿಲ್ಯನ ಅರ್ಥಶಾಸ್ತ್ರ

ಪ್ರಾಚೀನ ಭಾರತೀಯರು 'ಧರ್ಮದಗೊಡ್ಡು' ಎಂದು ಯಾರಾದರೂ ಮೂಗು ಮುರಿದರೆ ಅದನ್ನು ಸಮೂಲವಾಗಿ ಕಿತ್ತೆಸೆದು ಭಾರತೀಯರ ಜಾಗ್ರುಜ್ಜೀವನ ಸಿದ್ಧಾಂತ ವನ್ನು ಎತ್ತಿಹಿಡಿದ ಗ್ರಂಥರತ್ನ ಕೌಟಿಲ್ಯನ ಅರ್ಥಶಾಸ್ತ್ರ.

ಅಭ್ಯುದಯ ಮತ್ತು ನಿಃಶ್ರೇಯಸ್ಸು (ಮೋಕ್ಷ)ಗಳು ಧರ್ಮದ ಎರಡು ಮುಖ ಗಳು. ಇವುಗಳಲ್ಲಿ ಮೊದಲನೆಯ ಅಭ್ಯುದಯ ಸಾಧನವಿಧಾನವನ್ನು ಕುರಿತು ಹಿರಣ್ಯಕೇಶಿ ಗೃಹ್ಯಸೂತ್ರ, ವಿಷ್ಣುಸ್ಮೃತಿ ಮತ್ತು ಮನುಸ್ಮೃತಿಗಳಲ್ಲಿ ಹಾಗೂ ಪತಂಜಲಿ, ಅಶ್ವಘೋಷ ಮತ್ತು ಪಂಚತಂತ್ರಕಾರರ ಕೃತಿಗಳಲ್ಲಿ ಸಂಗ್ರಹಿಸಲಾಗಿದೆ. ಅಲ್ಲಿ ಧರ್ಮ, ಅರ್ಥ ಮತ್ತು ಕಾಮಗಳು ಮಾನವನ ಐಹಿಕ ಜೀವನದ ಗುರಿ ಎಂಬುದನ್ನು ಸಾರಿದೆ. ಧರ್ಮಸೂತ್ರಗಳಲ್ಲಿ ಮೇಲಿಂದಮೇಲೆ ಒತ್ತಿ ಹೇಳುತ್ತಿರುವ ರಾಜಕಾರ್ಯ, ನಗರ, ದೇಶ, ಅಧಿಕಾರಿವರ್ಗ, ತೆರಿಗೆ, ಮತ್ತು ಸೇನಾ ಸಂಘಟನೆಯ ವಿಚಾರಗಳ ನಿರೂಪಣವಿದೆ. ಇದಲ್ಲದೆ ಪುರಾಣವು ರಾಜಶಾಸ್ತ್ರಕಾರರ ಪಟ್ಟಿಯಲ್ಲಿ ಬೃಹಸ್ಪತಿ, ವಿಶಾಲಾಕ್ಷ, ಉಶನ ಮತ್ತು ಮನು ಮೊದಲಾದವರನ್ನು ಉಲ್ಲೇಖಿಸುತ್ತದೆ.

ಬ್ರಹ್ಮನು ಧರ್ಮ–ಅರ್ಥ–ಕಾಮಗಳ ಬಗ್ಗೆ ಒಂದುಲಕ್ಷ ವಿಭಾಗಗಳ ಒಂದು ಗ್ರಂಥವನ್ನು ರಚಿಸಿದ್ದನೆಂದೂ, ಮುಂದೆ ಶಿವನು ವಿಶಾಲಾಕ್ಷನಾಗಿ ಅವತರಿಸಿ ಮನುಷ್ಯ ಜೀವನದ ಅಲ್ಪಾವಧಿಯನ್ನು ಗಮನಿಸಿ ಅದನ್ನು ಹತ್ತುಸಾವಿರಕ್ಕೆ ಇಳಿಸಿದನೆಂದೂ, ಇಂದ್ರ ಐದು ಸಾವಿರಕ್ಕೂ, ಬೃಹಸ್ಪತಿಯು ಮೂರು ಸಾವಿರಕ್ಕೂ, ಉಶನನು ಒಂದು ಸಾವಿರಕ್ಕೂ ಇಳಿಸಿದರೆಂದು ಮಹಾಭಾರತವು ಉಲ್ಲೇಖಿಸುತ್ತದೆ.

ಕೌಟಿಲ್ಯನು ಬೃಹಸ್ಪತಿ ಮತ್ತು ಉಶನರನ್ನು ಅರ್ಥಶಾಸ್ತ್ರಕಾರರೆಂದು ಒಪ್ಪಿದ್ದಾನೆ. ಕಾಮಸೂತ್ರದಲ್ಲಿ ಧರ್ಮಕ್ಕೆ ಮನುವೂ ಅರ್ಥಕ್ಕೆ ಬೃಹಸ್ಪತಿಯೂ, ಕಾಮಕ್ಕೆ ನಂದಿಯೂ ಪ್ರವರ್ತಕರೆಂದು ಹೇಳಿದೆ. ಅರ್ಥಶಾಸ್ತ್ರವು ಮುಖ್ಯವಾಗಿ ಲಾಭಕ್ಕೆ ಸಂಬಂಧಿಸಿದೆ. ಅರ್ಥಶಾಸ್ತ್ರದ ಪ್ರಕಾರ ಧರ್ಮವು ರಾಜನ ಅಭ್ಯುದಯಕ್ಕೂ, ಕರ್ತವ್ಯವು ಪ್ರಜಾಪ್ರೇಮ ಸಂಪಾದನೆಗೂ ಅಗತ್ಯ. ನೀತಿಶಾಸ್ತ್ರ, ರಾಜನೀತಿ ಅಥವಾ ದಂಡನೀತಿಯೆಂದು ಕರೆಯ ಲ್ಪಡುವ ಅರ್ಥಶಾಸ್ತ್ರವನ್ನು ಕುರಿತು ಕವಿಗಳು ಬಹುವಾಗಿ ವರ್ಣಿಸಿದ್ದಾರೆ. ಭಾಸನ

ಪ್ರತಿಜ್ಞಾಯೌಗಂಧರಾಯಣ, ಪ್ರತಿಮಾ ನಾಟಕಗಳಲ್ಲಿ, ಕಾಳಿದಾಸ, ಭಾರವಿ, ಮಾಘ ಶ್ರೀಹರ್ಷಮುಂತಾದವರ ಕಾವ್ಯಗಳಲ್ಲಿ ಅರ್ಥಶಾಸ್ತ್ರದ ಅನೇಕ ಅವತರಣಗಳಿವೆ.

ಕೌಟಿಲ್ಯನ ಅರ್ಥಶಾಸ್ತ್ರವು ಬಹುಕಾಲದಿಂದ ಪ್ರಸಿದ್ಧವಾಗಿದೆ. ಈ ಶಾಸ್ತ್ರವು ಅಧಿಕರಣಗಳೆಂಬ ೧೫ ದೊಡ್ಡ ವಿಭಾಗಗಳಿಂದಲೂ ೧೮೦ ಪ್ರಕರಣಗಳಿಂದಲೂ ಸಂಘಟಿತ ವಾಗಿದೆ. ಗದ್ಯಗಳಲ್ಲಿ ವಿವರಿಸಿರುವ ಸಿದ್ಧಾಂತಗಳನ್ನು ಸಂಗ್ರಹಿಸಿ ಹೇಳುವ ಶ್ಲೋಕಗಳು ಪ್ರಕರಣಗಳ ಕಡೆಯಲ್ಲಿವೆ. ಈ ಪ್ರಕರಣಗಳಲ್ಲಿ ವಿದ್ಯಾಸಮುದ್ದೇಶ (ಆನ್ವೀಕ್ಷಕೀ ಸ್ಥಾಪನ) ಅಧ್ಯಕ್ಷ ಪ್ರಚಾರ, ಧರ್ಮಸ್ಥೀಯ, ಕಂಟಕಶೋಧನ, ಯೋಗವೃತ್ತ, ಮಂಡಲಯೋನಿ, ಷಾಡ್ಗುಣ್ಯ, ವ್ಯಸನಾಧಿಕಾರಿಕ, ಅಭಿಯಾಸ್ಯತ್ಕರ್ಮ, ಸಾಂಗ್ರಾಮಿಕ, ಸಂಘವೃತ್ತ, ಆಬಲೀಯಸ, ದುರ್ಗಲಂಭೋಪಾಯ, ಔಪನಿಷದಿಕ ಮತ್ತು ತಂತ್ರಯುಕ್ತಿ ಎಂಬ ಅಧಿಕರಣಗಳು ರಾಜನೀತಿ ಮತ್ತು ದಂಡನೀತಿ ಮೊದಲಾದ ವಿಷಯಗಳನ್ನು ವಿಸ್ತಾರವಾಗಿ ಹೇಳಲಾಗಿದೆ.

ಇಂಥ ಮಹತ್ವಪೂರ್ಣವಾದ ಗ್ರಂಥವನ್ನು ಶ್ರೀ ಕೆ. ಕೃಷ್ಣಭಟ್ಟ ಎಂಬುವರು ಕನ್ನಡಿಸಿ (೧೯೬೨) ಪ್ರಕಟಿಸಿದ್ದಾರೆ. ಈ ಶಾಸ್ತ್ರಕ್ಕೆ ಬರೆದಿರುವ ಪೀಠಿಕೆಯಲ್ಲಿ ಅರ್ಥ ಶಾಸ್ತ್ರದ ಹುಟ್ಟು, ಕೌಟಿಲ್ಯನ ಅರ್ಥಶಾಸ್ತ್ರ ಸ್ವರೂಪಗಳ ಬಗ್ಗೆ ಅನುವಾದಕರು ಸುಂದರ ವಾಗಿ ವರ್ಣಿಸಿದ್ದಾರೆ. ಡಾ. ಟಿ. ಜಿ. ಸಿದ್ದಪ್ಪಾರಾಧ್ಯರು ಕನ್ನಡಿಸಿರುವ 'ಕೌಟಿಲ್ಯ ಅರ್ಥಶಾಸ್ತ್ರ'ವು ಮೈಸೂರು ವಿಶ್ವವಿದ್ಯಾನಿಲಯದ ಆಶ್ರಯದಲ್ಲಿ ೧೯೬೫ರಲ್ಲಿ ಪ್ರಕಟ ವಾಗಿದೆ.

ಅಲಂಕಾರಶಾಸ್ತ್ರ

ಸಂಸ್ಕೃತದಲ್ಲಿ ಅಲಂಕಾರಶಾಸ್ತ್ರದ ಚರಿತ್ರೆ ಸುಮಾರು ೧೫೦೦ ವರ್ಷಗಳಷ್ಟು ಹಿಂದಿನಿಂದ ಬೆಳೆದುಬಂದಿದೆ. ಆಲಂಕಾರಿಕರು ಕಾವ್ಯ ಸೌಂದರ್ಯಕ್ಕೆ ಆವಶ್ಯಕವೆನಿಸಿರುವ ರಸ, ರೀತಿ, ಗುಣ, ಅಲಂಕಾರ, ವಕ್ರೋಕ್ತಿ, ಧ್ವನಿ ಮತ್ತು ಔಚಿತ್ಯಗಳ ಬಗ್ಗೆ ಹಲವು ಗ್ರಂಥ ಗಳನ್ನು ಬರೆದಿದ್ದಾರೆ. ಕನ್ನಡದಲ್ಲಿ ನೃಪತುಂಗನಿಂದ ಹಿಡಿದು ಲಿಂಗರಾಜರವರೆಗೆ ಹಲವು ಗ್ರಂಥಗಳು ಹುಟ್ಟಿವೆ. ಆದರೆ ಕೆಲವು ಸಂಸ್ಕೃತದ ನೇರ ಭಾಷಾಂತರಗಳಲ್ಲ. ದಿ. ಅಕ್ಕಲೆ ಲಕ್ಷ್ಮೀನೃಸಿಂಹ ಶಾಸ್ತ್ರಿಗಳು ಮೊದಲು ಸಂಸ್ಕೃತ ಚಂದ್ರಾಲೋಕವನ್ನು ಕನ್ನಡಿಸಿದರು. ಅವರ ತರುವಾಯ ಡಾ. ಕೆ. ಕೃಷ್ಣಮೂರ್ತಿಗಳು ಕನ್ನಡ ಧ್ವನ್ಯಾಲೋಕ, ಕಾವ್ಯಾಲಂಕಾರ, ಕನ್ನಡ ಔಚಿತ್ಯವಿಚಾರ ಚರ್ಚಾ, ಕಾವ್ಯಪ್ರಕಾಶ, ಮತ್ತು ಕಾವ್ಯ ಮೀಮಾಂಸೆ ಎಂಬ ಸಂಸ್ಕೃತ ಗ್ರಂಥಗಳನ್ನು ಪ್ರೌಢ ಶೈಲಿಯಲ್ಲಿ ಕನ್ನಡಿಸಿದ್ದಾರೆ. ಇವು ಗಳಲ್ಲಿ ಮೊದಲನೆಯದು ಆನಂದವರ್ಧನನ ಕಾವ್ಯಮೀಮಾಂಸೆ ಮತ್ತು ಕನ್ನಡಧ್ವನ್ಯಾ ಲೋಕ. ೧೨೪ ಪುಟಗಳಷ್ಟು ವಿಸ್ತಾರವಾದ ಕಾವ್ಯಮೀಮಾಂಸೆಯಲ್ಲಿ ಶ್ರೀಯುತರು ಮೂಲ ಪ್ರಕ್ರಿಯೆಗಳ ದಿಕ್ಪ್ರದರ್ಶನಮಾಡಿ ೧೨ ಅಧ್ಯಾಯಗಳಲ್ಲಿ ಶಬ್ದವ್ಯಾಪಾರವನ್ನೂ ೧೫ ಪ್ರಕರಣಗಳಲ್ಲಿ ಧ್ವನಿವಿವೇಕವನ್ನೂ ೮ ಪ್ರಕರಣಗಳಲ್ಲಿ ಧ್ವನಿಪ್ರಪಂಚವನ್ನೂ

ವಿಸ್ತಾರವಾಗಿ ವಿವೇಚಿಸಿದ್ದಾರೆ. ಗದ್ಯಪದ್ಯಾತ್ಮಕವಾಗಿ ರಚಿತವಾಗಿರುವ ಧ್ವನ್ಯಾಲೋಕ (೧೯೫೧) ಕನ್ನಡ ಲೋಕಕ್ಕೆ ನೀಡಿರುವ ಉತ್ತಮ ಕಾಣಿಕೆ.

ಭಾಮಹನು ಸಂಸ್ಕೃತದಲ್ಲಿ ರಚಿಸಿರುವ 'ಕಾವ್ಯಾಲಂಕಾರ'ವು (೧೯೫೫) ಶ್ರೀಯುತ ಕೃಷ್ಣಮೂರ್ತಿಯವರಿಂದ ಸುಂದರವಾಗಿ ಅನುವಾದ ಮಾಡಲ್ಪಟ್ಟಿದೆ. ಈ ಗ್ರಂಥಕ್ಕೆ ಬರೆದಿರುವ ಪೀಠಿಕೆಯಲ್ಲಿ ಶ್ರೀಯುತರು ಅಲಂಕಾರಶಾಸ್ತ್ರದ ಸಂಕ್ಷಿಪ್ತ ಸ್ವರೂಪವನ್ನು ನಿರೂಪಿಸಿ ಆಲಂಕಾರಿಕರಲ್ಲಿ ಭಾಮಹನ ಸ್ಥಾನವನ್ನು ನಿರ್ಧರಿಸಿದ್ದಾರೆ.

ಕ್ಷೇಮೇಂದ್ರಕವಿಯ 'ಔಚಿತ್ಯವಿಚಾರಚರ್ಚಾ' ಎಂಬ ಮತ್ತೊಂದು ಗ್ರಂಥವನ್ನು ಶ್ರೀಯುತ ಕೃಷ್ಣಮೂರ್ತಿಯವರು ಸುಂದರವಾಗಿ ಕನ್ನಡಿಸಿರುವರಲ್ಲದೆ ಮಮ್ಮಟನ ಕಾವ್ಯಪ್ರಕಾಶದಂತಹ ಮುಖ್ಯ ಆಲಂಕಾರಿಕ ಗ್ರಂಥವನ್ನೂ ಸಹ ಕನ್ನಡಿಸಿ ಅಲಂಕಾರಶಾಸ್ತ್ರಾಭ್ಯಾಸಿಗಳಿಗೆ ತುಂಬಾ ಉಪಕಾರ ಮಾಡಿದ್ದಾರೆ. ಇವುಗಳಲ್ಲದೆ ಡಾ. ಟಿ. ಜಿ. ಸಿದ್ಧಪ್ಪಾರಾಧ್ಯರು ಜಗನ್ನಾಥಪಂಡಿತನ 'ರಸಗಂಗಾಧರ', ವಿಶ್ವನಾಥ ಕವಿರಾಜನ 'ಸಾಹಿತ್ಯ ದರ್ಪಣ' ಮತ್ತು ಅಪ್ಪಯ್ಯದೀಕ್ಷಿತನ 'ಕುವಲಯಾನಂದ' ಎಂಬ ಆಲಂಕಾರಿಕ ಗ್ರಂಥಗಳನ್ನು ಕನ್ನಡಿಸಿದ್ದಾರೆ.

ಚಂದ್ರಾಲೋಕ—ವೃತ್ತ ರತ್ನಾಕರ

ಮೇಲೆ ಕಾಣಿಸಿದ ಎರಡು ಗ್ರಂಥಗಳಿಗೆ ಶ್ರೀ ಜಿ. ವಿಷ್ಣುಮೂರ್ತಿಭಟ್ಟರು ಕನ್ನಡ ವ್ಯಾಖ್ಯಾನ ಮಾಡಿದ್ದಾರೆ. ಶ್ರೀಧರಮೂರ್ತಿಯವರು ಅನುವಾದಮಾಡಿರುವ ನಂದಿಕೇಶ್ವರನ 'ಅಭಿನಯ ದರ್ಪಣ'ವು ಇಲ್ಲಿ ಗಮನಿಸತಕ್ಕದ್ದು.

ವೈದ್ಯಶಾಸ್ತ್ರ

ವೈದ್ಯಶಾಸ್ತ್ರಕ್ಕೆ 'ಆಯುರ್ವೇದ' ಎಂಬ ಹೆಸರಿದೆ. ಆಯುಃ ಎಂದರೆ ಜೀವಿತ. ಜೀವಿತ ಕಾಲವನ್ನು 'ವೇದ' ತಿಳಿಯುವಿಕೆ. ಪ್ರಾಣಿಗಳ ಜೀವಿತ ಕಾಲವನ್ನು ತಿಳಿಸುವ ಎಂದರೆ ದೀರ್ಘಕಾಲದವರೆಗೆ ಆರೋಗ ದೃಢಕಾಯರಾಗಿ ಬದುಕಿರಬೇಕಾದರೆ ಪ್ರಾಣಿಗಳು ಅನುಸರಿಸಬೇಕಾದ ಕ್ರಮಗಳನ್ನು ಬೋಧಿಸುವ ಶಾಸ್ತ್ರವೇ ಆಯುರ್ವೇದ. ಆರೋಗ್ಯಪಾಲನೆ ಮತ್ತು ವ್ಯಾಧಿ ನಿವಾರಣಗಳು ಆಯುರ್ವೇದ ಶಾಸ್ತ್ರದಿಂದ ಉಂಟಾಗುವ ಪ್ರಯೋಜನಗಳು.

ಭಾರತೀಯ ವೈದ್ಯಶಾಸ್ತ್ರವು ಭಗವಂತನಿಂದಲೇ ಬಂದುದು. ದಕ್ಷ, ಅಶ್ವಿನೀ ದೇವತೆಗಳು, ದೇವೇಂದ್ರ, ಆತ್ರೇಯ, ಅಗ್ನಿವೇಶ, ಭೇಡ, ಜತೂಕರ್ಣ, ಪರಾಶರ, ಹಾರೀತ, ಕ್ಷಾರಪಾಣಿ ಮುಂತಾದವರು ಈ ಶಾಸ್ತ್ರದ ಪ್ರವರ್ತಕರೆಂದು ಚರಕಸಂಹಿತೆಯಲ್ಲಿ ಹೇಳಿದೆ. ಸುಶ್ರುತದಲ್ಲಿ ದೇವೇಂದ್ರನ ಅಪ್ಪಣೆಯಂತೆ ಧನ್ವಂತರಿಯು ಕಾಶಿಯಲ್ಲಿ ದಿವೋದಾಸನೆಂಬ ಹೆಸರಿನಿಂದ ಅವತರಿಸಿ ವಿಶ್ವಾಮಿತ್ರಪುತ್ರನಾದ ಸುಶ್ರುತನಿಗೆ ಆಯುರ್ವೇದವನ್ನು ಉಪದೇಶಿಸಿದನೆಂದು ಹೇಳಲಾಗಿದೆ.

ಆಯುರ್ವೇದದಲ್ಲಿ ಆತ್ರೇಯ ಸಂಪ್ರದಾಯದವರಿಗೆ 'ಕಾಯಚಿಕಿತ್ಸಕ'ರೆಂದೂ, ಧನ್ವಂತರಿ ಸಂಪ್ರದಾಯದವರಿಗೆ 'ಶಸ್ತ್ರಚಿಕಿತ್ಸಕ' ರೆಂದೂ ಹೆಸರಿದೆ. ಆತ್ರೇಯ ಸಂಪ್ರದಾಯದ ಅಗ್ನಿವೇಶರು ರಚಿಸಿದ ಗ್ರಂಥವನ್ನು ಚರಕಮುನಿಯು ಪರಿಷ್ಕರಣ ಮಾಡಿದ್ದರಿಂದ ಅದಕ್ಕೆ 'ಚರಕಸಂಹಿತೆ' ಎಂಬ ಹೆಸರು ಬಂದಿತು. ದಿವೋದಾಸನ ಶಿಷ್ಯ ಸುಶ್ರುತನ ಗ್ರಂಥವು 'ಸುಶ್ರುತಸಂಹಿತೆ' ಯೆನಿಸಿತು.

ವೈದ್ಯಶಾಸ್ತ್ರದ ಸಂಪೂರ್ಣಜ್ಞಾನವಾಗಬೇಕಾದರೆ ಮೇಲೆ ಹೇಳಿದ ಚರಕ ಮತ್ತು ಸುಶ್ರುತ ಎಂಬ ಎರಡೂ ಮಾರ್ಗಗಳು ಅತ್ಯಾವಶ್ಯಕ. ಇದಕ್ಕಾಗಿ ಸುಪ್ರಸಿದ್ಧ ವೈದ್ಯಾಚಾರ್ಯನೆನಿಸಿದ ವಾಗ್ಭಟನು (ಕ್ರಿ.ಶ. ಸು. ೩೦೦–೫೦೦) 'ಅಷ್ಟಾಂಗ ಸಂಗ್ರಹ ಮತ್ತು ಅಷ್ಟಾಂಗ ಹೃದಯ' ಎಂಬ ಗ್ರಂಥಗಳನ್ನು ರಚಿಸಿ ವೈದ್ಯವೃಂದಕ್ಕೆ ಮಹೋಪಕಾರ ಮಾಡಿದ್ದಾನೆ. 'ರಸರತ್ನಸಮುಚ್ಚಯ' ವನ್ನು ರಚಿಸಿರುವ ಮತ್ತೊಬ್ಬ ವಾಗ್ಭಟನು ಕ್ರಿ. ಶ. ೧೩೦೦ನೆಯ ಶತಮಾನಕ್ಕೆ ಸೇರಿದವನು.

ಮೊದಲನೆಯ ವಾಗ್ಭಟನು ಆಯುರ್ವೇದ ನಿಷ್ಣಾತನೂ ಕವಿಯೂ ಆಗಿದ್ದನು. ಆತ ಪ್ರತಿಭಾಶಾಲಿ ಅನುಭವಶಾಲಿಯಾದ ವೈದ್ಯನೆಂಬುದನ್ನು ಸೂಚಿಸುವ ಐತಿಹ್ಯವೊಂದು ಜನಜನಿತವಾಗಿದೆ. ಐತಿಹ್ಯದ ವಾಸ್ತವಿಕತೆ ಹೇಗೇ ಇದ್ದರೂ ಅದು ಸ್ವಾರಸ್ಯವಾದ ಉದ್ದೇಶದಿಂದ ಕೂಡಿದೆ. ಭಗವಾನ್ ಧನ್ವಂತರಿ ಪಕ್ಷಿಯ ರೂಪುಧರಿಸಿ ಲೋಕದಲ್ಲಿ ಸದ್ವೈದ್ಯನನ್ನು ಕಾಣಲು ಅಲ್ಲಲ್ಲಿ ಸಂಚರಿಸುತ್ತಾ ಬರುತ್ತಾನೆ. ಬಂದಲ್ಲೆಲ್ಲಾ ಆ ಪಕ್ಷಿಯು 'ಕೋಽರುಕ್' 'ಕೋಽರುಕ್' 'ಕೋಽರುಕ್' ಎಂದು ಶಬ್ದಮಾಡುತ್ತಿತ್ತು. ಆದರೆ ಅದನ್ನು ಯಾವ ವೈದ್ಯನೂ ಅರ್ಥಮಾಡಿಕೊಂಡು ಉತ್ತರಿಸಲಿಲ್ಲ. ರೋಗಿಗಳ ಚಿಕಿತ್ಸಾಮಗ್ನನಾಗಿದ್ದ ವಾಗ್ಭಟ ಅದನ್ನು ಕೇಳಿ 'ಹಿತಭುಕ್, ಮಿತಭುಕ್, ಅಶಾಕಭುಕ್' ಎಂದು ಉತ್ತರಿಸಿದನಂತೆ. ಅದನ್ನು ಕೇಳಿ ಸಂತುಷ್ಟನಾದ ಧನ್ವಂತರಿ ಅವನಿಗೆ ನಿಜರೂಪುತೋರಿ ಹರಸಿದನು.

ಅಷ್ಟಾಂಗ ಹೃದಯ

ಅಷ್ಟಾಂಗಹೃದಯಕ್ಕೆ ಇಂದುವೈದ್ಯಕೃತ 'ಶಶಿಲೇಖಾ,' ಅರುಣದತ್ತಕೃತ 'ಸರ್ವಾಂಗ ಸುಂದರ,' ಹೇಮಾದ್ರಿಕೃತ 'ಆಯುರ್ವೇದ ರಸಾಯನ,' ದಾಸಪಂಡಿತಕೃತ 'ಹೃದಯ ಬೋಧಿಕಾ'ಗಳು ಸೂತ್ರಸ್ಥಾನಕ್ಕೆ ವ್ಯಾಖ್ಯೆಗಳು.

ಅಷ್ಟಾಂಗ ಹೃದಯದಲ್ಲಿ ಸೂತ್ರಸ್ಥಾನ, ಶರೀರಸ್ಥಾನ, ನಿದಾನಸ್ಥಾನ, ಚಿಕಿತ್ಸಾಸ್ಥಾನ, ಕಲ್ಪಸ್ಥಾನ ಎಂಬ ಐದುಪ್ರಕರಣಗಳಿವೆ. ಮೊದಲ ಸೂತ್ರಸ್ಥಾನದಲ್ಲಿ ಆಯುಷ್ಕಾಮಿಯ ದಿನಚರ್ಯೆ, ಋತುಚರ್ಯೆ, ರೋಗ ಬರದಂತೆ ಮಾಡುವ ಕ್ರಮ, ದ್ರವದ್ರವ್ಯ ವಿಜ್ಞಾನ, ಅನ್ನಸ್ವರೂಪ ವಿಜ್ಞಾನ, ಮುಂತಾದ ೩೦ ಅಧ್ಯಾಯಗಳೂ, ಶರೀರಸ್ಥಾನದಲ್ಲಿ ಗರ್ಭಾವಕ್ರಾನ್ತ್ಯ, ಗರ್ಭವ್ಯಾಪದ್ವಿಧಿ, ಅಂಗವಿಭಾಗ, ಮರ್ಮವಿಭಾಗ, ಮುಂತಾದ ಆರು ಅಧ್ಯಾಯಗಳೂ, ನಿದಾನಸ್ಥಾನದಲ್ಲಿ ಸರ್ವರೋಗನಿದಾನ

ಮುಂತಾದ ೧೬ ಅಧ್ಯಾಯಗಳೂ, ಚಿಕಿತ್ಸಾಸ್ಥಾನದಲ್ಲಿ ೨೧, ಕಲ್ಪಸ್ಥಾನದಲ್ಲಿ ೬ ಅಧ್ಯಾಯಗಳೂ ಇವೆ.

ಈ ಮಹಾಗ್ರಂಥವನ್ನು ಮೈಸೂರು ಆಯುರ್ವೇದ ಕಾಲೇಜಿನ ನಿವೃತ್ತ ಅಧ್ಯಾಪಕರೂ, ಚಿಕಿತ್ಸಕರೂ ಆದ ಆಯುರ್ವೇದ ವಿದ್ವಾನ್ ಶ್ರೀ ಎನ್. ಎಲ್. ಭಟ್ಟಾಚಾರ್ಯರು, ಮತ್ತು ಆಯುರ್ವೇದ ವಿದ್ವಾನ್ ಟಿ. ಅಶ್ವತ್ಥನಾರಾಯಣ ಅವರು ಮೂರು ಸಂಪುಟಗಳಲ್ಲಿ (೧೯೫೬–೧೯೫೭) ಬಹುಶ್ರಮವಹಿಸಿ ಕನ್ನಡಿಸಿ ಪ್ರಕಟಿಸಿದ್ದಾರೆ. ಕನ್ನಡ ಲೋಕಕ್ಕೆ ನೀಡಿರುವ ಅಮೂಲ್ಯ ಕೊಡುಗೆ ಇದು.

ಅಷ್ಟಾಂಗಹೃದಯದ ಸೂತ್ರಸ್ಥಾನವನ್ನು ಹುಬ್ಬಳ್ಳಿಯ ವೈದ್ಯಗುರು ಡಾ. ಅ. ಹಲಸೀಕರ ಮತ್ತು ವೈದ್ಯಶ್ರೀ ಜಡೆ ಅವರು ಕನ್ನಡಿಸಿ (೧೯೬೭) ಪ್ರಕಟಿಸಿದ್ದಾರೆ. ಈ ಮಹಾಶಯರು ಕನ್ನಡದಲ್ಲಿ ಪ್ರಕಟಿಸಿರುವ 'ಶಾರ್ಙ್ಗಧರ ಸಂಹಿತೆ' (೧೯೬೪) ಮತ್ತು ಮಾಧವನಿದಾನ (೧೯೪೮) ಗಳು ಈ ದಿಶೆಯಲ್ಲಿ ಹೊರಬಂದಿರುವ ಉತ್ತಮ ಪ್ರಯತ್ನಗಳು.

ವೈದ್ಯಶಾಸ್ತ್ರದಲ್ಲಿ ಚರಕ, ಸುಶ್ರುತ ಮತ್ತು ವಾಗ್ಭಟರ ಗ್ರಂಥಗಳು 'ಬೃಹತ್‌ತ್ರಯೀ' ಎಂದೂ 'ಶಾರ್ಙ್ಗಧರ ಸಂಹಿತೆ', 'ಮಾಧವ ನಿದಾನ' ಮತ್ತು 'ಯೋಗರತ್ನಾಕರ'ಗಳು 'ಲಘುತ್ರಯೀ' ಎಂದೂ ಹೆಸರಾಂತಿವೆ. ಶ್ರೀ ಹಲಸೀಕರ ಮತ್ತು ಶ್ರೀ ವೈ. ಚಂದ್ರಶೇಖರ ಗಣಪತಿಭಟ್ಟರು ಪ್ರಕಟಿಸಿರುವ 'ಶರೀರ ವಿಜ್ಞಾನ' (೧೯೬೬) ಮತ್ತು 'ಕನ್ನಡಸಾರ್ಥ ಮದನಪಾಲ ನಿಘಂಟು' ಗಳು (೧೯೫೨) ಆಯುರ್ವೇದ ಅಭ್ಯಾಸಿಗಳಿಗೆ ಅತ್ಯುಪಯುಕ್ತವಾಗಿವೆ.

ಸುಶ್ರುತ ಸಂಹಿತೆ

ಮೇಲೆ ಕಂಡ ಶ್ರೀ ಭಟ್ಟಾಚಾರ್ಯರ ಮತ್ತೆರಡು ಮೇರುಕೃತಿಗಳೇ ಸುಶ್ರುತ ಸಂಹಿತೆಯ ಪೂರ್ವಾರ್ಧ (ಪು. ೮೯೧–೧೯೫೭) ಮತ್ತು ಉತ್ತರಾರ್ಧ (ಪು. ೫೬೦–೧೯೬೧) ಸಂಪುಟಗಳು. ಕನ್ನಡ ವ್ಯಾಖ್ಯಾನದೊಡನೆ ಪ್ರಕಟವಾಗಿರುವ ಈ ಗ್ರಂಥರತ್ನಗಳು ಕನ್ನಡಾಂಬೆಯ ಮುಕುಟಮಣಿಗಳೆಂದರೆ ಅತ್ಯುಕ್ತಿಯಾಗದು.

ಸಂಗೀತಶಾಸ್ತ್ರ

ಎಲ್ಲ ಪ್ರಾಣಿಗಳಿಗೂ ಶ್ರವಣಮಾತ್ರದಿಂದ ಉಲ್ಲಾಸವನ್ನು ಆನಂದವನ್ನು ನೀಡುತ್ತಿರುವ ಸಂಗೀತ ಮತ್ತು ಆ ಶಾಸ್ತ್ರಕಾರರ ಪರಂಪರೆ ಅವಲೋಕನೀಯ. ಸದಾಶಿವ, ಶಿವಾ, (ಉಮಾ) ಬ್ರಹ್ಮ, ಭರತ, ಕಶ್ಯಪ, ಮತಂಗ, ಯಷ್ಟಿಕ, ದುರ್ಗಾಶಕ್ತಿ, ಶಾರ್ದೂಲ ಕೋಹಲ, ವಿಶಾಖಿಲ, ದತ್ತಿಲ, ಕಂಬಲ–ಅಶ್ವತರ, ವಾಯು, ವಿಶ್ವಾವಸು, ರಂಭಾ, ಅರ್ಜುನ, ನಾರದ, ತುಂಬುರ, ಆಂಜನೇಯ, ಮಾತೃಗುಪ್ತ, ರಾವಣ, ನಂದಿಕೇಶ್ವರ, ಸ್ವಾತಿರ್ಗಣ, ಬಿಂದುರಾಜ, ಕ್ಷೇತ್ರರಾಜ, ರಾಹುಲ, ರುದ್ರಟ, ಭೋಜ, ಪರವಾರ್ದಿ

ಸೋಮೇಶ ಮುಂತಾದವರು ಲೊಲ್ಲಟ, ಉದ್ಭಟ, ಶಂಕುಕ, ಅಭಿನವಗುಪ್ತ, ಕೀರ್ತಿಧರ, ಮುಂತಾದ ಸಂಗೀತಶಾಸ್ತ್ರ ವ್ಯಾಖ್ಯಾನಕಾರರ ಹೆಸರುಗಳನ್ನು ಶಾರ್ಙ್ಗದೇವನು ಉಲ್ಲೇಖಿಸಿದ್ದಾನೆ.

'ಸಂಗೀತ' ಎಂಬ ಪದದ ಅರ್ಥ ಕಾಲಕಾಲಕ್ಕೆ ವ್ಯತ್ಯಾಸವಾಗುತ್ತಾ ಬಂದಿದೆ. ವೇದವಾಙ್ಮಯದಲ್ಲಿ ಗೀತ, ವಾದ್ಯ ಮತ್ತು ನೃತ್ಯಗಳ ಸಮುಚ್ಚಯವನ್ನು 'ಶಿಲ್ಪಕ'ವೆಂದು ಹೇಳಿದೆ. ಭರತನ ನಾಟ್ಯಶಾಸ್ತ್ರದಲ್ಲಿ ಇವು ನಾಟ್ಯದ ಅಂಗಗಳು. ಸಂಗೀತದಲ್ಲಿ 'ಮಾರ್ಗ' ಮತ್ತು 'ದೇಶಿ' ಎಂಬ ಎರಡು ಪ್ರಭೇದಗಳಿವೆ. ಶಿವನ ಮುಂದೆ ಅಭಿನಯಿಸಿದ್ದು ಮಾರ್ಗ, ದೇಶದೇಶಗಳ ಜನಾಭಿರುಚಿ ಹಿಡಿದು ಪ್ರದರ್ಶಿಸಿದ್ದು ದೇಶಿ ಅಥವಾ ಗೀತ, ವಾದನ ಮತ್ತು ನೃತ್ಯಗಳುಳ್ಳದ್ದು ದೇಶಿ. ಗೀತದ ಹಿರಿಮೆ ಮತ್ತು ಅದಕ್ಕೆ ವಾದ್ಯದ ಅಪೇಕ್ಷೆಗಳು ಪರಸ್ಪರ ಪೂರಕಗಳು. ಅಂಥ ಗೀತದ ಪ್ರಯೋಜನವೆಂತಹದು?

> ತಸ್ಯ ಗೀತಸ್ಯ ಮಾಹಾತ್ಮ್ಯಂ ಕೇ ಪ್ರಶಂಸಿತುಮೀಶತೇ ।
> ಧರ್ಮಾರ್ಥಕಾಮಮೋಕ್ಷಾಣಾಮಿದಮೇವೈಕ ಸಾಧನಂ ॥

ಸಂಗೀತಶಾಸ್ತ್ರ ಪ್ರಗತಿ; ಪ್ರಾಚೀನ ಯುಗ

ಸಂಗೀತಶಾಸ್ತ್ರದ ಪ್ರಗತಿಯನ್ನು ಕುರಿತು ಮೂರು ಹಂತಗಳನ್ನು ನಾವು ಕಾಣುತ್ತೇವೆ. ಭರತನ 'ನಾಟ್ಯಶಾಸ್ತ್ರ' ಮತ್ತು ದತ್ತಿಲನ 'ಸಂಕ್ಷೇಪ ಸಂಗ್ರಹ' ಗಳನ್ನು ಬಿಟ್ಟರೆ ಮತಂಗ ಕೃತ 'ಬೃಹದ್ದೇಶಿ'ಯೇ ಅತ್ಯಂತ ಪ್ರಾಚೀನ ಸಂಗೀತ ಗ್ರಂಥ. ಮತಂಗಮುನಿ ಕನ್ನಡಿಗನೆಂದು ಹೇಳುತ್ತಾರೆ. ರಾಗಪದ್ಧತಿಯ ಮೂಲತತ್ತ್ವಗಳನ್ನು ಸುದೃಢ ತಳಹದಿಯ ಮೇಲೆ ಮೊದಲು ಘೋಷಿಸಿದವನು ಮತಂಗ. ಆತನ ಬೃಹದ್ದೇಶಿಯು ಸಂಗೀತ ರತ್ನಾಕರವೇ ಮೊದಲಾದ ಉದ್ದಾಮ ಗ್ರಂಥಗಳಿಗೆ ಮೂಲನಿಯಮಕೋಶವನ್ನು ಒದಗಿಸಿದೆ.

ಭರತಶಾಸ್ತ್ರ ಟೀಕೆಗಳಲ್ಲಿ ಕರ್ಣಾಟಾಧಿಪತಿ ನಾನ್ಯದೇವನ 'ಸಂಗೀತ ಸರಸ್ವತೀ ಹೃದಯಾಲಂಕಾರ'ವು ಪ್ರಸಿದ್ಧವಾದುದು. ಭಾರತೀಯ ಸಂಗೀತಶಾಸ್ತ್ರಕ್ಕೆ ತಿಲಕಪ್ರಾಯವಾದ ಕನ್ನಡಿಗ ನಿಶ್ಶಂಕಶಾರ್ಙ್ಗದೇವನ ಸಂಗೀತರತ್ನಾಕರದ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದು ಅಗತ್ಯ. ಕ್ರಿ.ಶ. ಸು. ೧೩ನೆಯ ಶತಮಾನಕ್ಕೆ ಸೇರಿದ ಈ ಗ್ರಂಥವು ಕರ್ಣಾಟಕ ಸಂಗೀತ ಮತ್ತು ಔತ್ತರೇಯ ಸಂಗೀತ ಪದ್ಧತಿಗಳಿಗೆ ಮಾರ್ಗಪ್ರದರ್ಶಕವಾಗಿದೆ. ಅದು ಭಾರತೀಯ ಸಂಗೀತದ ನೃತ್ತ, ಗೀತ ಮತ್ತು ವಾದ್ಯಗಳಿಗೆ ನಿಘಂಟು ಮಾತ್ರವಲ್ಲ ವಿಶ್ವಕೋಶವೇ ಆಗಿದೆ. ದೇಶಾದ್ಯಂತ ಪಸರಿಸಿದ್ದ ಸಂಗೀತದ ಮೂಲ ಅಂಶಗಳನ್ನು ಮತ್ತು ಪೂರ್ವಾಚಾರ್ಯರ ಅಭಿಪ್ರಾಯಗಳನ್ನು ಒಟ್ಟುಗೂಡಿಸಿ ಪರಾಮರ್ಶಿಸಿದ ಕೃತಿ ಅದು. ಸಂಗೀತರತ್ನಾಕರವು ಪ್ರಾಚೀನ ಹಾಗೂ ನವೀನಯುಗದ ಪದ್ಧತಿಗಳ ಸೇತುವೆಂದರೂ ಸಲ್ಲುತ್ತದೆ.

ಮಧ್ಯಯುಗ

ಕ್ರಿ.ಶ. ೧೩ರಿಂದ ೧೮ರವರೆಗಿನ ಸಂಗೀತಶಾಸ್ತ್ರದ ಬೆಳವಣಿಗೆಯನ್ನು ಮಧ್ಯಯುಗವೆನ್ನಲಾಗಿದೆ. ಹರಿಪಾಲದೇವನು ಶಾರ್ಙ್ಗದೇವನ ದಾರಿಯಲ್ಲಿ ನಡೆದ ಕನ್ನಡ ದೊರೆ. ಅವನು ಶ್ರುತಿ, ಸ್ವರ, ಮೂರ್ಛನಾದಿಗಳ ಲಕ್ಷಣ ಮತ್ತು ಗ್ರಾಮರಾಗಗಳನ್ನು ಸೂಚಿಸಿ ಕರ್ಣಾಟಕ ಮತ್ತು ಹಿಂದೂಸ್ಥಾನೀ ಸಂಗೀತ ಪದ್ಧತಿಗಳನ್ನು ಗುರುತಿಸಿದ್ದಾನೆ. ವೀಣೆ, ಮೃದಂಗ ಮುಂತಾದ ವಾದ್ಯಗಳ ರಚನೆಯಲ್ಲಿ ತನ್ನ ವೈಶಿಷ್ಟ್ಯವನ್ನು ಸ್ಥಾಪಿಸಿದ್ದಾನೆ. ಪಾರ್ಶ್ವದೇವನ 'ಸಂಗೀತ ಸಮಯಸಾರ' ವನ್ನು ಅನುಸರಿಸಿದ ವಿದ್ಯಾರಣ್ಯ, ನಿಜಗುಣ, ಪಾಲ್ಕುರಿಕೆ ಸೋಮನಾಥ ಮೊದಲಾದವರು ಇದನ್ನು ಬೆಳೆಸಿದರು. ಸೋಮನಾಥನ ಪಂಡಿತಾರಾಧ್ಯ ಚರಿತ್ರೆ ಮತ್ತು ಬಸವಪುರಾಣಗಳಲ್ಲಿ ಉಪಯೋಗಿಸಿರುವ ಶಾಸ್ತ್ರೀಯ ಪಾರಿಭಾಷಿಕ ಪದಗಳು ಇವನ್ನು ಸೂಚಿಸುತ್ತವೆ.

ವಿದ್ಯಾರಣ್ಯರ 'ಸಂಗೀತಸಾರ'ವು 'ಕರ್ಣಾಟಕ ಸಂಗೀತ' ಎಂಬ ಹೆಸರನ್ನು ಸ್ಥಿರಪಡಿಸಿತು. ಸಿಂಹಭೂಪಾಲ (೧೪೦೦) ನ 'ಲಾಸ್ಯರಂಜನ' ಎಂಬ ನಾಟ್ಯಶಾಸ್ತ್ರ ಮತ್ತು 'ಸಂಗೀತರತ್ನಾಕರ ವ್ಯಾಖ್ಯೆ ಸುಧಾನಿಧಿ' ಗಳು ಸುಪ್ರಸಿದ್ಧ. ಮಿಥಿಲಾಶಾಖೆಯ ಕರ್ಣಾಟಕ ಪ್ರಭು ಹರಿಸಿಂಹದೇವನ ಆಸ್ಥಾನ ಕವಿ ಜ್ಯೋತಿರೀಶ್ವರನ 'ವರ್ಣರತ್ನಾಕರ'ವು ಕಲ್ಲಿನಾಥ, ನಿಜಗುಣ ಶಿವಯೋಗಿ, ಪುಂಡರೀಕವಿಠಲ, ಮತ್ತು ಮುಮ್ಮಡಿ ಚಿಕ್ಕ ಭೂಪಾಲರ ಸಂಗೀತ ಬೆಳವಣಿಗೆಗೆ ಮಹದುಪಕಾರಮಾಡಿದೆ. ಇವುಗಳಲ್ಲಿ ವಿವೇಕ ಚಿಂತಾಮಣಿ, ಸದ್ರಾಗಚಂದ್ರೋದಯ, ರಾಗಮಂಜರಿ, ಮುಮ್ಮಡಿ ಚಿಕ್ಕಭೂಪನ 'ಅಭಿನವ ಭರತಸಾರ ಸಂಗ್ರಹ' ಗಳು ಮುಖ್ಯವಾದುವು. ರಾಮಾಮಾತ್ಯ, ಗೋವಿಂದ ದೀಕ್ಷಿತ ಮತ್ತು ವೆಂಕಟಮಖಿಗಳೆಂಬ ತ್ರಿಮೂರ್ತಿಗಳ ಸೇವೆ ಮರೆಯುವಂತಹುದಲ್ಲ.

ಆಧುನಿಕ ಯುಗ

ಆಧುನಿಕ ಯುಗಪ್ರವರ್ತಕರು ಮೇಲೆ ಹೇಳಿದ ತ್ರಿಮೂರ್ತಿಗಳು. ಕೆಳದಿ ಬಸವಪ್ಪ ನಾಯಕನ ಶಿವತತ್ತ್ವರತ್ನಾಕರ, ಸಂಗೀತರತ್ನಾಕರ, ಮುಮ್ಮಡಿ ಕೃಷ್ಣಭೂಪನ 'ಸ್ವರಚೂಡಾಮಣಿ', 'ಶ್ರೀತತ್ತ್ವನಿಧಿ', 'ಸಂಗೀತಶಾಸ್ತ್ರ ದುಗ್ಧಾಬ್ಧಿ', 'ಭಾರತ ಕಲ್ಪಲತಾ ಮಂಜರಿ', ವೆಂಕಟಸುಂದರ ರಾಗಸಾನಿ ಸಂಗೃಹೀತ 'ರಸಿಕಮನೋಲ್ಲಾಸಿನಿ ಸಾರ ಸಂಗ್ರಹ ಭರತಶಾಸ್ತ್ರ'ಗಳು ಅವಿಸ್ಮರಣೀಯ. ಆಧುನಿಕಯುಗದ ಉತ್ತರ ಭಾಗದಲ್ಲಿ ಪ್ರಕಟವಾಗಿರುವ ಸಂಗೀತ ಶಾಸ್ತ್ರಗಳು, ಹಲಗೂರು ಕೃಷ್ಣಾಚಾರ್ಯ ಮುಂತಾದವರ ಕೃತಿಗಳು ಗಣನೀಯಗಳು.

ಸಂಗೀತ ರತ್ನಾಕರ

ಮೈಸೂರು ಸಹೋದರರಲ್ಲೊಬ್ಬರಾದ ಶ್ರೀ ರಾ. ಸತ್ಯನಾರಾಯಣ ಅವರು ಮೈಸೂರು ವಿಶ್ವವಿದ್ಯಾನಿಲಯದ ಆಶ್ರಯದಲ್ಲಿ ಶಾರ್ಙ್ಗದೇವನ 'ಸಂಗೀತ ರತ್ನಾಕರ'ವನ್ನು

ಅಮೋಘವಾದ ರೀತಿಯಲ್ಲಿ ಪ್ರಕಟಿಸುತ್ತಿರುವುದು ಕನ್ನಡಿಗರಿಗೆ ಹೆಮ್ಮೆಯ ವಿಷಯ. ಶ್ರೀಯುತರು ಸಂಗೀತಶಾಸ್ತ್ರದಲ್ಲಿ ಕೃತಪರಿಶ್ರಮರಾಗಿರುವುದಲ್ಲದೆ ಇವರು 'ವರಲಕ್ಷ್ಮಿ ಸಂಗೀತ ವಿದ್ಯಾಲಯ'ವನ್ನು ಸ್ಥಾಪಿಸಿ ಸಂಗೀತಶಾಸ್ತ್ರ ಪ್ರಚಾರಕ್ಕಾಗಿ ಅವಿಶ್ರಾಂತವಾಗಿ ದುಡಿಯುತ್ತಿದ್ದಾರೆ.

ನಾಟ್ಯಶಾಸ್ತ್ರಾನುವಾದಗಳು

ಭಾರತವು ದರ್ಶನ ತತ್ತ್ವಗಳಿಗೆ ವಿಖ್ಯಾತವಾಗಿರುವಂತೆ ಕಲೆಗಳಿಗೂ ಪ್ರಸಿದ್ಧವಾಗಿದೆ. ಕಲೆಗಳು ಅರವತ್ತುನಾಲ್ಕು. ಅವುಗಳಲ್ಲಿ ಸಂಗೀತ, ಚಿತ್ರ ಮತ್ತು ಶಿಲ್ಪಗಳು ಮುಖ್ಯ. ಸಂಗೀತವು ಗೀತ ವಾದ್ಯ ಮತ್ತು ನೃತ್ಯಗಳ ಸಮನ್ವಯ.

ನೃತ್ಯವಿಚಾರವನ್ನು ಸಮಗ್ರವಾಗಿ ವಿವರಿಸುವುದೇ ಭರತಶಾಸ್ತ್ರ. ಭಾವ (ಭ) ರಸ (ರ) ತಾಳ (ತ) ಗಳನ್ನು ಬೋಧಿಸುವುದರಿಂದ ಈ ಶಾಸ್ತ್ರಕ್ಕೆ "ಭ-ರ-ತ" ಎಂದು ಹೆಸರು ಬಂದಿದೆಯೆಂದು ಕೆಲವರೂ, ಭರತಮುನಿಪ್ರೋಕ್ತವಾದ್ದರಿಂದ 'ಭರತಶಾಸ್ತ್ರ'ವೆಂದು ಹೇಳಲ್ಪಟ್ಟಿದೆಯೆಂದು ಕೆಲವರೂ ಹೇಳುತ್ತಾರೆ.

ಭರತಶಾಸ್ತ್ರದ ಕಾಲ ಕ್ರಿ.ಪೂ. ೪ನೆಯ ಶತಮಾನದಿಂದ ಕ್ರಿ.ಶ. ೩ನೆಯ ಶತಮಾನದವರೆಗೆ ಊಹಿಸಲ್ಪಟ್ಟಿದೆ. ಭರತಶಾಸ್ತ್ರಕ್ಕೆ 'ಅಭಿನಯಶಾಸ್ತ್ರ'ವೆಂದು ಮತ್ತೊಂದು ಹೆಸರು. ಇಲ್ಲಿ ನೃತ್ಯವನ್ನು ಬಿಟ್ಟು ಉಳಿದ ನಾಟ್ಯನೃತ್ಯಗಳಿಗೆ ಅನುಕರಣಾತ್ಮಕ ಅಭಿನಯವೇ ಆಶ್ರಯ. ಅಂಗೋಪಾಂಗಾದಿ ಕ್ರಿಯೆಗಳ ಮೂಲಕ ರಸ-ಭಾವಗಳನ್ನು ಪ್ರೇಕ್ಷಕರಲ್ಲಿ ಮೂಡಿಸಿ ಆನಂದಗೊಳಿಸುವುದೇ ಅಭಿನಯ.

ನಾಟ್ಯವು ಆಂಗಿಕ, ವಾಚಿಕ, ಆಹಾರ್ಯಕ ಮತ್ತು ಸಾತ್ವಿಕ ಎಂಬ ನಾಲ್ಕು ಪ್ರಕಾರಗಳಿಂದ ಕೂಡಿದೆ. ಭಾವ, ತಾಳ, ಮತ್ತು ಲಯವುಳ್ಳ ಅಭಿನಯವು ನೃತ್ಯ. ಇಲ್ಲಿ ಆಂಗಿಕಕ್ಕೆ ಪ್ರಾಧಾನ್ಯ, ಎಂದರೆ ಒಬ್ಬನೇ ವ್ಯಕ್ತಿ ಪೌರಾಣಿಕ ಕಥಾಭಾಗಗಳನ್ನು ಪ್ರೇಕ್ಷಕರಿಗೆ ಬೋಧವಾಗುವ ಹಾಗೆ ತಾಳ–ಲಯಗಳಿಗೆ ಅನುಗುಣವಾಗಿ ಕೈ–ಕಾಲುಗಳನ್ನು ಮೃದುವಾಗಿ ವಿನ್ಯಾಸಮಾಡುವುದರ ಮೂಲಕ ಅಭಿನಯಿಸುತ್ತಾನೆ.

ನೃತ್ಯವು ಭಾವಾಭಿನಯವಿಲ್ಲದ್ದು. ಇಲ್ಲಿ ಅನುಕರಣ ಪ್ರಸಕ್ತಿಯಿಲ್ಲ. ಗೀತಿಕಾರ್ಥ ಸಂಬಂಧವೂ ಇಲ್ಲ. ಕೇವಲ ತಾಳಲಯಾಶ್ರಿತ ಕರಣಾಂಗಹಾರ ಪ್ರಯೋಗಗಳಿಂದ ಪ್ರೇಕ್ಷಕರನ್ನು ಆನಂದಗೊಳಿಸುವುದು. ನಾಟ್ಯದಲ್ಲಿ ಮಾರ್ಗ ಮತ್ತು ದೇಶಿ ಎಂಬ ಎರಡು ಪ್ರಭೇದಗಳಿವೆ. ಪರಂಪರೆಯಿಂದ ಶಾಸ್ತ್ರಮೂಲಕವಾಗಿ ಬಂದುದು ಮಾರ್ಗ. ಇದೇ ಕಾಲದೇಶಗಳಿಗೆ ತಕ್ಕಹಾಗೆ ಮಾರ್ಪಟ್ಟು ದೇಶಿ ಎನಿಸುತ್ತದೆ.

ನಾಟ್ಯಶಾಸ್ತ್ರಕ್ಕೆ ಶಿವ-ಪಾರ್ವತಿಯರು ಆದ್ಯಪ್ರವರ್ತಕರು. ನಾಟ್ಯದ ಉತ್ಪತ್ತ್ಯಾದಿಗಳಿಗೆ ಬ್ರಹ್ಮವಿಷ್ಣುಗಳೂ ಕಾರಣರೆಂದು ಹೇಳಲಾಗಿದೆ. ಇದನ್ನು ಮೊದಲು ಗ್ರಹಿಸಿ, ಈ ವಿದ್ಯೆಯಲ್ಲಿ ತನ್ನ ನೂರುಮಂದಿ ಮಕ್ಕಳನ್ನೂ ಪ್ರವೀಣರನ್ನಾಗಿ ಮಾಡಿ ಸ್ವರ್ಗದಲ್ಲಿ ಮೊದಲು ಪ್ರಸಾರಮಾಡಿದವನು ಭರತಮುನಿಯೆಂದೂ ಭರತನ ಕುಮಾರರಾದ

ಕೋಹಲ, ದತ್ತಿಲ ಮೊದಲಾದವರು ಅದನ್ನು ಭೂಲೋಕದಲ್ಲಿ ಪ್ರಚುರಪಡಿಸಿದರೆಂದೂ ಹೇಳಲಾಗುತ್ತಿದೆ.

ನಾಟ್ಯದ ಅಸ್ತಿತ್ವ ಮತ್ತು ಬೆಳವಣಿಗೆಗಳಿಗೆ ಶಿಲ್ಪಿಗಳು, ಚಿತ್ರಕರು ಮತ್ತು ಕವಿಗಳು ಮುಖ್ಯರೆನಿಸಿದ್ದಾರೆ. ಪ್ರಾಚೀನ ದೇವಾಲಯಗಳ ಗೋಡೆ ಮತ್ತು ಕಂಬಗಳಲ್ಲಿ ವಿವಿಧ ನಾಟ್ಯಭಂಗಿಗಳನ್ನು ಬೊಂಬೆಗಳ ಮೂಲಕ ಮತ್ತು ಚಿತ್ರಗಳ ಮೂಲಕ ಶಿಲ್ಪಿಗಳು ಹಾಗೂ ಚಿತ್ರಕರು ಪ್ರದರ್ಶಿಸಿದ್ದಾರೆ. ಬೇಲೂರು, ಹಳೇಬೀಡು, ಎಲ್ಲೋರ, ಅಜಂತಾ, ಬಾದಾಮಿ ಮುಂತಾದ ಕಡೆಯಲ್ಲಿರುವ ದೇವಾಲಯಗಳು ಇದಕ್ಕೆ ನಿದರ್ಶನ. ವಾಲ್ಮೀಕಿ, ಕಾಳಿದಾಸ ಮೊದಲಾದ ಸಂಸ್ಕೃತ ಕವಿಗಳೂ ಪಂಪ, ರತ್ನಾಕರ, ಹರಿಹರ ಮುಂತಾದ ಕನ್ನಡ ಕವಿಗಳೂ ತಮ್ಮ ಕಾವ್ಯಗಳಲ್ಲಿ ನೃತ್ಯಗಳನ್ನು ವರ್ಣಿಸಿದ್ದಾರೆ.

ನಮ್ಮ ನಾಡಿನ ನಾಟ್ಯಗಳು ಅನೇಕ ಬಗೆ. ಇವುಗಳಲ್ಲಿ ಭರತನಾಟ್ಯ, ಕಥಕಳಿ, ಕಥಕ್, ಕೂಚಿಪುಡಿ ಮತ್ತು ಮಣಿಪುರಿ ಮುಂತಾದವು ಮುಖ್ಯ. ಕಥಕಳಿಯು ಕೇರಳದಲ್ಲಿಯೂ, ಕಥಕ್ ರಾಜಸ್ಥಾನ ಮತ್ತು ಉತ್ತರ ಪ್ರದೇಶದಲ್ಲಿಯೂ, ಕೂಚಿಪುಡಿಯು ಮಚ್ಚಲೀಪಟ್ಟಣದ ಸಮೀಪದ ಕೂಚಿಪುಡಿಯಲ್ಲಿಯೂ ಮಣಿಪುರದಲ್ಲಿ ಮಣಿಪುರಿಯೂ ಪ್ರಚಾರದಲ್ಲಿವೆ. ಇನ್ನು ಓರಿಸ್ಸಾದಲ್ಲಿ ಒಡಿಸ್ಸಿ ಎಂಬ ನಾಟ್ಯಪ್ರಭೇದವೂ, ಬಿಹಾರದಲ್ಲಿ ಛೌನಾಟ್ಯವೂ, ಅಸ್ಸಾಂನಲ್ಲಿ ಸತ್ರಿಯ ಎಂಬುದೂ ಬಳಕೆಯಲ್ಲಿವೆ.

ನಾಟ್ಯವೇದವನ್ನು ಗ್ರಂಥರೂಪದಲ್ಲಿ ಪ್ರಚುರಪಡಿಸಿದವರು ಕೋಹಲ ಮತ್ತು ದತ್ತಿಲ ಮೊದಲಾದವರು. ಈಗ ದೊರೆತಿರುವ ಸಂಸ್ಕೃತ ನಾಟ್ಯಶಾಸ್ತ್ರ ಗ್ರಂಥಗಳಲ್ಲಿ ಪ್ರಾಚೀನವಾದುದು ಭರತನ ನಾಟ್ಯಶಾಸ್ತ್ರ. ನಂದಿಕೇಶ್ವರನ ಅಭಿನಯದರ್ಪಣ ಎರಡನೆಯದು. ವಿಷ್ಣುಧರ್ಮೋತ್ತರ ಪುರಾಣದ ಮಾನಸೋಲ್ಲಾಸ ಹಾಗೂ ಶಿವತತ್ತ್ವ ರತ್ನಾಕರಗಳಲ್ಲಿಯೂ ನಾಟ್ಯ ಪ್ರಸ್ತಾಪವಿದೆ. ಸಂಗೀತಶಾಸ್ತ್ರಕ್ಕೆ ಸಂಬಂಧಿಸಿದ ಶಾರ್ಙ್ಗಧರನ ಸಂಗೀತ ರತ್ನಾಕರದ ಏಳನೆಯ ಅಧ್ಯಾಯವು ನಾಟ್ಯಕ್ಕೆ ಮೀಸಲಾಗಿದೆ. ಕನ್ನಡ ತೆಲುಗು ಮತ್ತು ತಮಿಳು ಭಾಷೆಗಳ ನಾಟ್ಯಗ್ರಂಥಗಳಿಗೆ ಸಂಗೀತರತ್ನಾಕರವೇ ಮೂಲ.

ಕನ್ನಡದಲ್ಲಿ ನಾಟ್ಯಗ್ರಂಥಗಳು

ನೃತ್ಯಶಾಸ್ತ್ರಕ್ಕೆ ಸಂಬಂಧಿಸಿದ ಛಂದೋಮಯವಾದ ಕನ್ನಡ ಗ್ರಂಥಗಳಲ್ಲಿ 'ಲಾಸ್ಯರಂಜನ' ಮೊದಲನೆಯದು. 'ಲಾಸ್ಯಮುಕುರ' ಎಂಬುದು 'ಸಂಗೀತಸುಧಾಕರ' ಎಂಬ ಸಂಸ್ಕೃತ ಗ್ರಂಥದ ಭಾಷಾಂತರ. ಅದು ಷಟ್ಪದಿಯಲ್ಲಿದೆ. ಅಭಿನಯಶಾಸ್ತ್ರಕ್ಕೆ ಸಂಬಂಧಿಸಿದ 'ತತ್ತ್ವಾಭಿನಯ ನಿಘಂಟು' ಎಂಬ ಕಂದಪದ್ಯಮಯವಾದ ಮತ್ತೊಂದುಗ್ರಂಥವೂ ಉಂಟು. ಇವೆಲ್ಲ ಅಚ್ಚಾಗಿವೆ.

ಲಾಸ್ಯರಂಜನ

ಲಾಸ್ಯರಂಜನವು ನೃತ್ಯಶಾಸ್ತ್ರದ ಲಕ್ಷಣಗ್ರಂಥ. ಇದು ಸಂಗೀತರತ್ನಾಕರದ

ನಾಟ್ಯಾಧ್ಯಾಯದ ಗದ್ಯಪದ್ಯಮಯವಾದ ಕನ್ನಡ ಭಾಷಾಂತರ. ಇದರ ಕರ್ತೃ ಸಿಂಹಣ ಭೂಪಾಲ. (ಸು. ಕ್ರಿ. ಶ. ೧೩ನೆಯ ಶತಮಾನದಿಂದ ಕ್ರಿ. ಶ. ೧೬೦೦) ಈತ ಓರಂಗಲ್ಲು ಪ್ರತಾಪರುದ್ರನ ವಂಶೀಯನೆಂಬುದು ಊಹೆ.

ಇದರಲ್ಲಿ ನೃತ್ಯಲಕ್ಷಣವು ಮಾತ್ರ ಪ್ರತಿಪಾದಿತವಾಗಿದೆ. ವಿನಿಯೋಗಗಳನ್ನು ತಿಳಿಸಿಲ್ಲ. ಎಂಟು ಪ್ರಕರಣಗಳಿವೆ. ಕವಿ ಪ್ರಾರಂಭದಲ್ಲಿ ಅಂಗ, ಪ್ರತ್ಯಂಗ, ಉಪಾಂಗ, ಕರಣ, ಅಂಗಹಾರ, ಚಾರಿ, ಸ್ಥಾನಕ ಮತ್ತು ಮಂಡಲಗಳ ಲಕ್ಷಣಗಳನ್ನು ಕನ್ನಡದಲ್ಲಿ ಹೇಳುವುದಾಗಿ ಪ್ರತಿಜ್ಞೆಮಾಡಿದ್ದಾನೆ.

ಮೈಸೂರು ಪ್ರಾಚ್ಯವಿದ್ಯಾ ಸಂಶೋಧನಾಲಯದ ಮುಖ್ಯಾಧಿಕಾರಿಗಳಾಗಿದ್ದ ಶ್ರೀ ಎಚ್. ಆರ್. ರಂಗಸ್ವಾಮಯ್ಯಂಗಾರ್ ಎಂ.ಎ., ಮತ್ತು ಶ್ರೀ ಎಸ್. ಎನ್. ಕೃಷ್ಣಜೋಯಿಸರ ಸಂಪಾದಕತ್ವದಲ್ಲಿ ಮೈಸೂರು ಅರಮನೆ ಪುಸ್ತಕ ಭಂಡಾರದಲ್ಲಿದ್ದ ಓಲೆಗ್ರಂಥವು ವಿಚಾರಪರಿಪ್ಲುತ ಉಪೋದ್ಘಾತದೊಂದಿಗೆ (೧೯೬೭) ಪ್ರಕಟವಾಗಿದೆ. ಮೂಲದ ಗದ್ಯಾನುವಾದ, ಆಂಗ್ಲ ಭಾಷಂತರಗಳೂ, ಉಪಯುಕ್ತವಾದ ಪರಿಶಿಷ್ಟ ಮತ್ತು ಅನುಬಂಧಗಳೊಂದಿಗೆ ಇದು ಪ್ರಕಟವಾಗಿರುವುದರಿಂದ ಕನ್ನಡಿಗರಿಗೆ ಮಹೋಪಕಾರ ವಾಗಿದೆ. ಈ ಗ್ರಂಥೋಕ್ತವಾದ ನೃತ್ಯಲಕ್ಷಣಗಳಿಗೆ ನಿದರ್ಶನದಂತಿರುವ, ವಿಖ್ಯಾತ ನಾಟ್ಯ ಕಲಾಪ್ರವೀಣರಾದ ಶ್ರೀಯುತ ಯು. ಎಸ್. ಕೃಷ್ಣರಾವ್ ಮತ್ತು ಶ್ರೀಮತಿ ಚಂದ್ರಭಾಗಾದೇವಿಯವರ ವಿವಿಧ ಅಭಿನಯಪ್ರಕಾರಗಳ ಹಲವಾರು ಭಾವಚಿತ್ರ ಗಳು ಮತ್ತು ಚಿದಂಬರ ದೇವಸ್ಥಾನದ ಗೋಪುರಗತ ಕರಣಚಿತ್ರಗಳು ಈ ಗ್ರಂಥದ ಉಪಯುಕ್ತತೆಯನ್ನು ನೂರ್ಮಡಿಸಿವೆ. ಮಹತ್ವಪೂರ್ಣವಾದ 'ಲಾಸ್ಯರಂಜನ' ಗ್ರಂಥವನ್ನು ಪ್ರಕಟಿಸಿದ ಪ್ರಾಚ್ಯ ವಿದ್ಯಾಸಂಸ್ಥೆಯ ಪ್ರಯತ್ನ ಅಭಿನಂದ್ಯ.

ಕನ್ನಡ ಅನುವಾದಗಳ ಬಗ್ಗೆ ಒಂದು ಮಾತು

ಸುಮಾರು ಇಪ್ಪತ್ತೈದು ವರ್ಷಗಳ ಅವಧಿಯಲ್ಲಿ ಭಾರತ ಸಂಸ್ಕೃತಿಯ ಮೂಲವೆನಿಸಿರುವ ಸಂಸ್ಕೃತ ಭಾಷೆಯಲ್ಲಿನ ಶಾಸ್ತ್ರಗಳನ್ನು ಕನ್ನಡಕ್ಕೆ ಅನುವಾದಮಾಡುವ ದಿಶೆಯಲ್ಲಿ ಆಗಿರುವ ಕಾರ್ಯ ಕಡಿಮೆಯೇನಲ್ಲ. ಇದು ಸಂಸ್ಕೃತದ ವಿವಿಧ ಶಾಸ್ತ್ರವಿಭಾಗ ಗಳಲ್ಲಿರುವ ತತ್ತ್ವರಹಸ್ಯಗಳನ್ನು ತಿಳಿಯಬಯಸಿರುವ ಕನ್ನಡಿಗರ ಕುತೂಹಲದ ಮಾನ ದಂಡವೆಂದರೂ ಸಲ್ಲುತ್ತದೆ. ಆದರೆ ಈ ಅನುವಾದದ ಮಟ್ಟವು ನಿರೀಕ್ಷಿಸಿದಷ್ಟು ಎತ್ತರ ವನ್ನು ಮುಟ್ಟಿದೆಯೆ ಎಂಬಲ್ಲಿ ಭಿನ್ನಾಭಿಪ್ರಾಯಗಳು ಬಂದಾವು.

ಕನ್ನಡನಾಡಿನ ವಿದ್ವಜ್ಜನ ಹೊಣೆಗಾರಿಕೆಯ ಈ ಅನುವಾದ ಕಾರ್ಯವನ್ನು ಮಾಡಿ ಯಶಸ್ವಿಗಳಾಗಿ ಕನ್ನಡಲೋಕದ ಕೃತಜ್ಞತೆಗೆ ಪಾತ್ರರಾಗಿದ್ದಾರೆ. ಈ ಮಹತ್ಕಾ ರ್ಯದ ಪ್ರಕಟನೆಯ ಹೊರೆ ಹೊತ್ತ ಪ್ರಕಟನಾಲಯಗಳ ಹಾಗೂ ದಾನಿಗಳ ಔದಾರ್ಯ ಅಭಿನಂದನೀಯ. ಪ್ರಕೃತ ಹೀಗೆ ಅನುವಾದವಾಗಿರುವ ಶಾಸ್ತ್ರಸಾಹಿತ್ಯವನ್ನು ಸಾವಧಾನ ವಾಗಿ ಓದಬಯಸುವ ತತ್ತ್ವ ಜಿಜ್ಞಾಸುಗಳ ದೃಷ್ಟಿಯಿಂದ ಒಂದೆರಡು ಮಾತುಗಳನ್ನು

ಹೇಳಿದಲ್ಲಿ ಸಹೃದಯ ವಿದ್ವಜ್ಜನ ಅನ್ಯಥಾಭಾವಿಸದು. ಈ ಸಲಹೆಯು ಮುಂದೆ ನಡೆಯುವ ಅನುವಾದ ಉದ್ಯಮಕ್ಕೆ ನೆರವಾದರೆ ಅದು ಗುರಿಮುಟ್ಟಿದಂತೆಯೆ.

ಸಂಸ್ಕೃತದಲ್ಲಿರುವ ಶಾಸ್ತ್ರಗ್ರಂಥಗಳನ್ನು ಅನುವಾದಮಾಡಿ ಕನ್ನಡಲೋಕಕ್ಕೆ ನೀಡುವ ಮೊದಲು ಅದಕ್ಕೆ ಸೂಕ್ತವೂ ವಿಚಾರಪರಿಪ್ಲುತವೂ ಆದ ಉಪೋದ್ಘಾತ ಅಥವಾ ಪೀಠಿಕೆಗಳನ್ನು ಬರೆದು ಓದುಗರ ವಿಚಾರಶಕ್ತಿಯನ್ನು ಪ್ರಬೋಧಗೊಳಿಸುವುದು ಅಗತ್ಯ. ಈ ದಿಶೆಯಲ್ಲಿ ಅನೇಕ ಉತ್ತಮ ಶಾಸ್ತ್ರಾನುವಾದಗಳಿಗೆ ವಿದ್ವಾಂಸರು ಶ್ರೇಷ್ಠವಾದ ಭೂಮಿಕೆಗಳನ್ನು ಬರೆದಿರುವುದು ಸಂಸ್ಮರಣೀಯ.

ಈ ದೃಷ್ಟಿಯಿಂದ ಋಗ್ವೇದದ ಮೊದಲ ಸಂಪುಟದ ಪ್ರಾರಂಭದಲ್ಲಿ ಕೊಟ್ಟಿರುವ ೨೫ ಅಧ್ಯಾಯಗಳ ಉಪೋದ್ಘಾತ (ಪು. ೩೪೪) ವು ವಿಶೇಷವಾದ ಬೆಳಕನ್ನು ನೀಡುವುದಾಗಿದೆ. ಇದರಂತೆ ಉಪನಿಷತ್ತುಗಳು ಮತ್ತು ಬ್ರಹ್ಮಸೂತ್ರಭಾಷ್ಯ (ಅಧ್ಯಾತ್ಮ ಪ್ರಕಾಶನಾಲಯ ಹೊಳೆನರಸೀಪುರ), ತತ್ತ್ವರತ್ನಪ್ರದೀಪಿಕೆ, (ಮೈಸೂರು ಪ್ರಾಚ್ಯವಿದ್ಯಾಸಂಸ್ಥೆ) ಕೌಟಿಲ್ಯನ ಅರ್ಥಶಾಸ್ತ್ರ (ಧಾರವಾಡದ ಪ್ರಕಟನೆ) ಆನಂದವರ್ಧನನ ಕಾವ್ಯಮೀಮಾಂಸೆ, ಕಾವ್ಯಾಲಂಕಾರ (ಡಾ. ಕೆ. ಕೃ.) ವೈದ್ಯಗ್ರಂಥಗಳಲ್ಲಿ ಅಷ್ಟಾಂಗ ಹೃದಯ ಸುಶ್ರುತ ಸಂಹಿತೆ (ಪೂರ್ವೋತ್ತರಾರ್ಧಗಳು—ಆಯುರ್ವೇದ ವಿದ್ವಾನ್ ಶ್ರೀಭಟ್ಟಾಚಾರ್ಯರು), ಮತ್ತು ಸಂಗೀತಶಾಸ್ತ್ರದ ಬಗ್ಗೆ ಬರೆದಿರುವ ಶ್ರೀ ರಾ. ಸತ್ಯನಾರಾಯಣ ಮುಂತಾದವರ ಭೂಮಿಕೆಗಳು ಗಣನೀಯವಾಗಿವೆ. ಈ ಬಗ್ಗೆ ಒಂದು ಮಾತನ್ನು ಹೇಳಬಹುದಾದರೆ ವೇದಭಾಷ್ಯದ ಪೀಠಿಕೆಯಲ್ಲಿ ಬರುವ 'ವೇದಭಾಷ್ಯಕಾರರು, ವೇದಾರ್ಥವಿಚಾರದಲ್ಲಿ ಪ್ರಾಚೀನರ ಪ್ರಯತ್ನಗಳು ಮತ್ತು ವೇದಾಭ್ಯಾಸದಲ್ಲಿ ಆಧುನಿಕರ ಪ್ರಯತ್ನಗಳು' ಎಂಬಲ್ಲಿ ಇತ್ತೀಚಿನ ವೇದಭಾಷ್ಯಕಾರರಾದ ಸ್ವಾಮಿದಯಾನಂದ ಸರಸ್ವತಿಯವರ ಋಗ್ವೇದಾದಿಭಾಷ್ಯ ಮತ್ತು ಭೂಮಿಕೆಗಳು ಮತ್ತು ಮಹರ್ಷಿ ಅರವಿಂದರ 'ವೇದರಹಸ್ಯ' ಗಳಲ್ಲದೆ ಸಮಕಾಲೀನ ವೇದಭಾಷ್ಯಕಾರರೆನಿಸಿರುವ ಜಯದೇವವಿದ್ಯಾಲಂಕಾರ ಮುಂತಾದವರ ವೇದಭಾಷಾಭಾಷ್ಯಗಳು, ಮತ್ತು ಪಂ. ದಾಮೋದರ ಸಾತವಳೇಕರ್ ಅವರ ವೇದ ಸೂಕ್ತವ್ಯಾಖ್ಯಾನಗಳು ಮತ್ತು ಧರ್ಮದೇವ ವಿದ್ಯಾವಾಚಸ್ಪತಿಯವರ 'ವೇದಸಂದೇಶ' (ಮಾಸಿಕ)ದಲ್ಲಿ ನಡೆದಿರುವ ಮಂತ್ರಾರ್ಥ ಸ್ವರೂಪಗಳನ್ನು ನೆನೆದಿದ್ದ ಪಕ್ಷದಲ್ಲಿ ಇದು ಮತ್ತಷ್ಟು ಪರಿಪೂರ್ಣವಾಗುತ್ತಿತ್ತೆಂದು ಭಾವಿಸಿದೆ. ಇನ್ನು ಸಂಸ್ಕೃತದಿಂದ ಕನ್ನಡಿಸಲ್ಪಟ್ಟಿರುವ ಪುರಾಣಗಳ ಸಂಖ್ಯೆ ಸುಮಾರು ೩೦೦ ಸಂಪುಟಗಳನ್ನೂ ಮೀರಿ ಕನ್ನಡ ಗ್ರಂಥ ಭಂಡಾರವನ್ನು ತುಂಬಿರುವುದು ಸ್ತುತ್ಯ. ಆದರೆ ಆ ಪುರಾಣಗಳ ಬಗ್ಗೆ ಪ್ರಾಚ್ಯ ಪಾಶ್ಚಿಮಾತ್ಯಪಂಡಿತರು ನಡೆಯಿಸಿರುವ ವಿಚಾರಪರಿಪ್ಲುತವಾದ ಸಮಾಲೋಚನೆಗಳ ಬಗ್ಗೆ ಅನುವಾದಕರು ಅನಾದರವಹಿಸಿರುವುದು ಚಿಂತ್ಯ. ಬಹುತೇಕ ಕ್ಷೇತ್ರಮಾಹಾತ್ಮ್ಯಗಳ ಅವತರಣಗಳಿಂದ ತುಂಬಿರುವ ಈ ಪುರಾಣಗಳಲ್ಲಿ ಸಂಗ್ರಾಹ್ಯವಾದ ಉತ್ತಮಾಂಶಗಳನ್ನು ಪ್ರದರ್ಶಿಸಿ ಆಧುನಿಕ ಕನ್ನಡ ಜನದ ಪ್ರಜ್ಞೆಯನ್ನು ಶ್ರದ್ಧೆಗೆ ಅಭಿಮುಖಗೊಳಿಸುವ ದಿಶೆಯಲ್ಲಿ ಭೂಮಿಕೆಗಳನ್ನು ಕೊಟ್ಟಿದ್ದಪಕ್ಷದಲ್ಲಿ ಇವುಗಳಿಂದ ಕನ್ನಡಿಗರಿಗೆ ಇನ್ನೂ ಹೆಚ್ಚು ಉಪಕಾರವಾಗುತ್ತಿತ್ತೆಂದು ನಿರೀಕ್ಷಿಸಿದರೆ ತಪ್ಪಾಗದು.

ಶಾಸ್ತ್ರಗ್ರಂಥಗಳ ಅನುವಾದದ ಬಗ್ಗೆ ಒಂದು ಮಾತನ್ನು ನಾವು ಮರೆಯು ವಂತಿಲ್ಲ. ಅನುವಾದಕಾರ್ಯ ಪರಕಾಯ ಪ್ರವೇಶದಷ್ಟು ಕಷ್ಟಕರ. ಸ್ವತಂತ್ರ ಗ್ರಂಥ ರಚನೆಗಿಂತ ಅನುವಾದದ ಹೊಣೆ ಮಿಗಿಲು. ಈ ಮಾತು ಶಾಸ್ತ್ರಗ್ರಂಥಗಳಿಗೆ ಅನ್ವಯಿಸು ತ್ತದೆ. ಮೂಲಕಾರನ ದಾರ್ಶನಿಕಾಭಿಪ್ರಾಯಗಳನ್ನು ಮತ್ತು ಅಲ್ಲಿ ಬರುವ ಶಾಸ್ತ್ರೀಯ ಪಾರಿಭಾಷಿಕ ಪದಗಳನ್ನು ಹಾಗೆ ಹಾಗೆಯೆ ಕನ್ನಡ ಅಕ್ಷರಗಳಲ್ಲಿ ಬರೆದು ಅನುವಾದಿಸಿ ದಲ್ಲಿ ಅದು ಉತ್ತಮ ಭಾಷಾಂತರವೆನಿಸುವುದಿಲ್ಲ. ಉದಾಹರಣೆಗಾಗಿ—ವ್ಯಾಕರಣದಲ್ಲಿ 'ಆದಿರಂತ್ಯೇನ ಸಹೇತಾ' (೧-೨-೭೧) ಎಂಬ ಸೂತ್ರವ್ಯಾಖ್ಯಾನದಲ್ಲಿ 'ಆದಿ' 'ಅಂತ್ಯ' ಎಂಬ ವರ್ಣಗಳ ಪರಿಚಯ ಮಾಡುವಲ್ಲಿ–'ಯಸ್ಮಾತ್ ಪೂರ್ವಂ ನಾಸ್ತಿ ಪರಮಸ್ತಿ ಸ ಆದಿಃ। ಯಸ್ಮಾತ್ ಪರಂ ನಾಸ್ತಿ ಪೂರ್ವಮಸ್ತಿ ಸೋಽಂತಃ' ಎಂಬುದಕ್ಕೆ 'ಯಾವುದರ ಹಿಂದೆ ಏನೂ ಇಲ್ಲದೆ ಮುಂದೆ ಇರುವುದಾದರೆ ಅದು ಆದಿ. ಯಾವುದರ ಮುಂದೆ ಏನೂ ಇಲ್ಲದೆ ಹಿಂದೆ ಇರುವುದಾದರೆ ಅದು ಅಂತ್ಯವೆನಿಸುತ್ತದೆ' (ವೈಯಾಕರಣ ಸಿದ್ಧಾಂತ ಕೌಮುದೀ ಕನ್ನಡ ವ್ಯಾಖ್ಯಾನ ಪು. ೬) ಎಂದು ಮೂಲ ದಂತೆಯೇ ಕನ್ನಡಿಸಿದರೆ ಅದರಿಂದ ಓದುಗನಿಗೆ ಪ್ರಯೋಜನ ವಾದೀತೆ? ಅಂಥ ಸ್ಥಳದಲ್ಲಿ ವಿವರಣ ಲೋಭಮಾಡಿದಲ್ಲಿ ಅನುವಾದಮಾಡಿದ ಉದ್ದೇಶವೇ ನೆರವೇರಲಾರದು. ಹೀಗೆಯೇ ಅಲಂಕಾರ ಶಾಸ್ತ್ರಗ್ರಂಥಗಳಲ್ಲಿ ಕೈತವಾಪಹ್ನುತಿ (ಪು–೨೨) ಎಂಬಲ್ಲಿಯೂ ವ್ಯಾಜ, ಕೈತವ, ಛಲ ಮುಂತಾದ ಪದಗಳಿಗೆ ಇನ್ನಷ್ಟು ಅರ್ಥ ವಿವರಣವು ಬೇಕು. 'ಬೌದ್ಧರ ಅಪೋಹ' (ಕಾವ್ಯಾಲಂಕಾರ ೧೨೧) 'ಸ್ಫೋಟ' (೧೨೦) 'ವ್ಯಾವೃತಿ' 'ವ್ಯತಿರೇಕ' (ಪು. ೧೨೨) ಮುಂತಾದ ಪದಗಳು ಮತ್ತಷ್ಟು ವಿವರಣೆ ಬಯಸುತ್ತವೆ. ಮೂಲದಲ್ಲಿ ಶಾಸ್ತ್ರೀಯವಾದ ಪಾರಿಭಾಷಿಕ ಪದಗಳು ಬಂದಾಗ ಅವುಗಳಿಗೆ ಅಡಿಟಿಪ್ಪಣಿ ಯಲ್ಲಾದರೂ ವಿವರಣೆ ಕೊಡಬೇಕು. ಉದಾಹರಣೆಗೆ ಉಪದೇಶಸಾಹಸ್ರಿ (ಪು.೯೦) ಯಲ್ಲಿ ಬರುವ 'ಪರಿಸಂಖ್ಯಾನ' ಎಂಬ ಪದಕ್ಕೆ ಅಡಿಟಿಪ್ಪಣಿಯಲ್ಲಿರುವ 'ಪರಿಸಂಖ್ಯಾನ ವೆಂದರೆ ಶಾಸ್ತ್ರಶ್ರವಣವನ್ನು ಮಾಡಿ ಯುಕ್ತಿಯಿಂದ ನೋಡಿದ್ದನ್ನೆಲ್ಲ ಅನುಭವಕ್ಕೆ ಹೊಂದಿಸಿ ಕೊಳ್ಳುವುದು. ಇದನ್ನು ನಿಧಿಧ್ಯಾಸವೆಂದೂ ವಿಜ್ಞಾನವೆಂದೂ ಕರೆಯುತ್ತಾರೆ' ಎಂದು ಹೇಳಿರುವುದು ತುಂಬಾ ಸಹಾಯಕವಾಗಿದೆ. ಈ ದೃಷ್ಟಿಯಿಂದ ಪರಿಶೀಲಿಸಿದಾಗ ಲಿಂ. ಸಿರಸಿ ಗುರುಶಾಂತಶಾಸ್ತ್ರಿಗಳು ಕನ್ನಡಿಸಿರುವ 'ವೀರಶೈವಾನಂದಚಂದ್ರಿಕೆ' ಮತ್ತು 'ಲಿಂಗಧಾರಣ ಚಂದ್ರಿಕೆ' ಗಳು ಉತ್ತಮ ಭಾಷಾಂತರಗಳಲ್ಲಿ ಪರಿಗಣಿಸಲ್ಪಡು ತ್ತವೆ. ಏಕೆಂದರೆ ಅಲ್ಲಿ ಮೂಲದಲ್ಲಿ ಬರುವ ಶಂಕೆ ಮತ್ತು ಸಮಾಧಾನಗಳನ್ನು ಸ್ಪಷ್ಟವಾಗಿ ಬಿಡಿಸಿರುವುದಲ್ಲದೆ ಮೂಲದಲ್ಲಿ ಬರುವ ಪಾರಿಭಾಷಿಕ ಪದಗಳಿಗೆ ಹಾಗೂ ಮಂತ್ರಾದಿಗಳಿಗೆ ಅರ್ಥವಿವರಣೆಯನ್ನು ಕೊಟ್ಟು ಸ್ವತಂತ್ರವಾದ ಗ್ರಂಥವನ್ನು ಓದುವೆನೆಂಬ ಭಾವವನ್ನು ಓದುಗರಿಗೆ ಉಂಟುಮಾಡಲು ಯತ್ನಿಸಲಾಗಿದೆ. ಆದರೆ ಇಲ್ಲಿಯೂ ಸಾಕಷ್ಟು ಪರಿಶಿಷ್ಟ ಗಳನ್ನು ಕೊಟ್ಟು ಸುಲಭಗೊಳಿಸುವ ಪ್ರಯತ್ನವು ಅಷ್ಟಾಗಿ ನಡೆದಿಲ್ಲ.

ಅನುವಾದ ಕಾರ್ಯದಲ್ಲಿ ಅವಸರ, ಕರಡುತಿದ್ದುವಿಕೆಯಲ್ಲಿ ಅನಾದರ ಮತ್ತು

ಭೂಮಿಕೆರಚನೆಯಲ್ಲಿ ವ್ಯವಸ್ಥಿತ ಕ್ರಮ ಮುಂತಾದವುಗಳನ್ನು ಗಮನಿಸದೆ ಅನುವಾದ ವಾಗಿರುವ ಗ್ರಂಥಗಳೂ ಈ ಶ್ರೇಣಿಯಲ್ಲಿ ಇಲ್ಲದೆ ಇಲ್ಲ. ಆ ಬಗ್ಗೆ ದಿಕ್ ಪ್ರದರ್ಶನವನ್ನಾದರೂ ಮಾಡದ ಪಕ್ಷದಲ್ಲಿ ಕರ್ತವ್ಯವು ಪೂರ್ಣವಾಗದು. ಉದಾಹರಣೆಗಾಗಿ ಇಲ್ಲಿ ಶ್ರೀ ಟಿ. ಜಿ. ಸಿದ್ಧಪ್ಪಾರಾಧ್ಯರ ಕೆಲವು ಶಾಸ್ತ್ರಾನುವಾದಗಳ ದಿಕ್‌ಪ್ರದರ್ಶನ ಮಾಡಲಾಗಿದೆ. ಜಗನ್ನಾಥನ 'ರಸಗಂಗಾಧರ' ಪ್ರೌಢಅಲಂಕಾರಿಕ ಗ್ರಂಥ. ಅದರ ಕನ್ನಡ ಅನುವಾದದಲ್ಲಿ 'ಅಭಿಧಾಕುಂಠಿತ ಶಕ್ತಿಕ' ಎಂಬುದಕ್ಕೆ 'ತನ್ನ ಹಿಂದಿನ ಚಟುವಟಿಕೆಗಳನ್ನು ಜ್ಞಾಪಿಸಿಕೊಳ್ಳುವ ಕುಂಟನಂತೆ' (ಪು. ೧೯) ಎಂದೂ 'ಘೂರ್ಣಿತಾ ಆಸೀತ್=ಹೊರಳಾಡಿದಳು' (ಪು. ೭) 'ಹೃದಯೇಕೃತ ಶೈವಲಾನುಷಂಗಾ–ಹೃದಯದಲ್ಲಿ ಅನೇಕ ವಿಟ ಪುರುಷರ ಸಂಬಂಧವನ್ನು ಕಲ್ಪಿಸಿಕೊಂಡು' (ಪು. ೭೫) ಮುಂತಾದ ಭಾಷಾಂತರಗಳು ಅಸಮರ್ಪಕವಾದುವು.

ಸಾಹಿತ್ಯ ದರ್ಪಣ

'ಶೌರ್ಯಾದಿ ಮಂತೋ ದೇಶಾಃ–ಶೌರ್ಯವೊದಲಾದ ಗುಣವುಳ್ಳ ಪ್ರಾಣಿಗಳು ಎಂದು ಯಾರೂ ಹೇಳುವುದಿಲ್ಲ' (ಪು. ೭) 'ಕಾಣಃ' (ಪು. ೮) 'ಯಃಕೌಮಾರಹರಃ' (ಪು. ೯) ಮುಂತಾದವುಗಳಿಗೆ ವಿರುದ್ಧಾರ್ಥದಲ್ಲಿ ಮಾಡಿರುವ ಅನುವಾದವನ್ನಾಗಲಿ, 'ದಂಡಾಪೂಪಿಕಾನ್ಯಾಯ (ಪು. ೬೩೬) ಖಲೇಕಪೋತನ್ಯಾಯ' (ಪು. ೬೪೫)ಗಳಿಗೆ ಆಗಿರುವ ಅಪಾರ್ಥವನ್ನಾಗಲಿ ಸರಿ ಎಂದು ಹೇಳುವುದು ಹೇಗೆ?

ಕುವಲಯಾನಂದ

'ತಡಿದ್ಗೌರಿ–ಕೃಶಾಂಗಿ ಮಿಂಚಿನಂತೆ ಬೆಳ್ಳಗೆ ಇದ್ದಾಳೆ.' (ಪು. ೫) 'ನಖಕ್ಷತಾನಿ–ನಾಯಕನ ಹಲ್ಲುಗಳಿಂದ ಉಂಟಾಗಿದ್ದ ಗಾಯಗಳು' (ಪು. ೪೩) 'ವೇಧಾ ದ್ವೇಧಾ ಭ್ರಮಂ ಚಕ್ರೇ–ಬ್ರಹ್ಮನು ಕಾಂತೆಯರಲ್ಲೂ ಸುವರ್ಣದಲ್ಲೂ ಇಬ್ಬಗೆಯಾಗಿ ಭ್ರಾಂತಿಗೊಂಡನು' (ಪು. ೧೯) ರತ್ನಾವಳೀ ಅಲಂಕಾರದ ಉದಾಹರಣೆಗೆ 'ರತ್ಯಾಪ್ತಪ್ರಿಯ' (ಪು. ೨೪೮) ಎಂಬುದು. ಇಲ್ಲಿ ವಿಷ್ಣುವಿನ ಹತ್ತು ಅವತಾರಗಳ ವರ್ಣನವಿದೆ. ಅಲ್ಲಿ 'ಜನಿತಾನಂಗೇ' ಎಂದರೆ 'ಅನಂಗ (ಮನ್ಮಥನ) ಜನಕನಾದ ಕೃಷ್ಣ' ಎಂದು ಹೇಳುವುದಕ್ಕೆ ಬದಲಾಗಿ 'ಪತಿಗೆ ಕಾಮೋದ್ರೇಕವನ್ನುಂಟು ಮಾಡುತ್ತಿರುವುದರಿಂದ ಇದು ಶರೀರಕ್ಕೆ ವಿರುದ್ಧವಾಗಿ ಭೋಗತ್ಯಾಗದಿಂದ ಮೌನವನ್ನಾಚರಿಸಿದ ಬೌದ್ಧನಂತೆ' ಎಂದು ಅನುವಾದವಾಗಿದೆ.

ಇನ್ನು ಇವರ 'ಅರ್ಥಶಾಸ್ತ್ರ'ದಲ್ಲಿ-ಅರ್ಥಶಾಸ್ತ್ರದ ಮೂಲ (ಪು. ೨೧೩) ದಲ್ಲಿ 'ರಜಕೈಃ ತುನ್ನವಾಯಾವ್ಯಾಖ್ಯಾತಾಃ' ಎಂಬಲ್ಲಿ ಬರುವ 'ತುನ್ನವಾಯ' ಪದಕ್ಕೆ ಅಡಿಟಿಪ್ಪಣಿಯಲ್ಲಿ 'ತುನ್ನವಾಯಃ ಸೌಚ್ಯಕಃ' ಎಂದರೆ ಹೊಲಿಗೆಯುವವನು (ದರ್ಜಿ) ಎಂದು ಸೂಚಿಸಿದೆ. ಆದರ ಅನುವಾದದಲ್ಲಿ 'ಅಗಸರಿಗೆ ಅನ್ವಯಿಸುವ ನಿಯಮಗಳೇ ನೆಯ್ಗೆಯವರಿಗೂ ಅನ್ವಯಿಸುತ್ತವೆ' (ಪು. ೨೪೬) ಎಂದಾಗಿದೆ. ಆದರೆ ಧಾರವಾಡದಲ್ಲಿ

ಪ್ರಕಟವಾಗಿರುವ ಅರ್ಥಶಾಸ್ತ್ರಾನುವಾದದಲ್ಲಿ 'ಮಡಿವಾಳರಿಗೆ ಹೇಳಿದ ವಿಧಿಯನ್ನೇ ಹೊಲಿಗೆಯವರ ವಿಷಯದಲ್ಲಿಯೂ ನೋಡಿಕೊಳ್ಳಬೇಕು' (ಪು. ೨೮೬) ಎಂದೇ ಹೇಳಿದೆ. ಇದೇ ಪ್ರಕರಣದಲ್ಲಿ ಹಿಂದೆ ಹೇಳಿರುವ 'ತಂತುವಾಯ='ನೆಯ್ಗೆಯವನು' ಎಂಬ ಅರ್ಥವನ್ನು 'ತುನ್ನವಾಯ' ಪದಕ್ಕೂ ಹೇಳಿರುವುದು ಪ್ರಮಾದ.

ಇನ್ನು 'ಭಗವದ್ಗೀತಾ ವೀರಶೈವಭಾಷ್ಯ' ಮತ್ತು ಅದರ 'ಕನ್ನಡ ಅನುವಾದ' 'ಶ್ವೇತಾಶ್ವತರೋಪನಿಷತ್ ವೀರಶೈವಭಾಷ್ಯ' ಮತ್ತು 'ಕನ್ನಡ ಅನುವಾದ' ಹಾಗೂ 'ಶಕ್ತಿವಿಶಿಷ್ಟಾದ್ವೈತ ದರ್ಶನ' ಮತ್ತು ಆದರ 'ಕನ್ನಡ ಅನುವಾದ'ಗಳ ಬಗ್ಗೆಯೂ ಒಂದು ಮಾತು ಹೇಳದೆ ವಿಧಿಯಿಲ್ಲ. ಆದರೆ ಇಲ್ಲಿ ಮೂಲ ಮತ್ತು ಅನುವಾದಗಳನ್ನು ಬರೆದ ವ್ಯಕ್ತಿ ಒಬ್ಬರೇ. ಅಂದಮೇಲೆ ಅನುವಾದಗಳ ಬಗ್ಗೆ ಹೇಳುವ ಮಾತುಗಳು ಮೂಲಕ್ಕೂ ಅನ್ವಯವಾಗದೆ ಇರುವುದೆಂತು?

ಪ್ರತಿಯೊಬ್ಬ ಭಾಷ್ಯಕಾರರೂ ತಾವು ಪ್ರತಿಪಾದಿಸಲಿರುವ ಭಾಷ್ಯದ ಪ್ರಾರಂಭ ದಲ್ಲಿ ವಿಷಯ–ಪ್ರಯೋಜನ–ಸಂಬಂಧ ಮತ್ತು ಅಧಿಕಾರಿ ಎಂಬ ನಾಲ್ಕನ್ನು ಸೂಚಿಸಿರು ವುದಲ್ಲದೆ, ಉಪಕ್ರಮ–ಉಪಸಂಹಾರ ಅಭ್ಯಾಸ-ಅಪೂರ್ವತ್ವ-ಅರ್ಥವಾದ ಫಲ ಮತ್ತು ಉಪಪತ್ತಿ ಎಂಬ ಆರು ವಿಧವಾದ ತಾತ್ಪರ್ಯ ಲಿಂಗಗಳಿಂದ ವಿಷಯವನ್ನು ನಿರ್ಧರಿಸಿರು ತ್ತಾರೆ. ಅವರು ತಾವು ಶ್ರುತ್ಯಾದಿಗಳಿಗೆ ಹೇಳುವ ಅರ್ಥವೇ ನಿಷ್ಕೃಷ್ಟವಾದುದೆಂದೂ, ಆದೇ ಶ್ರುತ್ಯಾದಿಗಳಿಗೆ ಇತರರು ಹೇಳಿರುವ ಅರ್ಥಗಳು ಸರಿಯಲ್ಲವೆಂದೂ ಸಕಾರಣವಾಗಿ ನಿರಾಕರಿಸಿ ತಮ್ಮ ಸಿದ್ಧಾಂತವನ್ನು ದೃಢಪಡಿಸಿರುವುದು ಕಂಡು ಬರುತ್ತದೆ.

ಪ್ರಕೃತ ಮೇಲೆ ಕಂಡ ಭಾಷ್ಯಗಳಲ್ಲಿ ಈ ಯಾವ ಕ್ರಮವನ್ನೂ ಅನುಸರಿಸಿರುವು ದಿಲ್ಲ. ಮೇಲಾಗಿ ಭಾಷ್ಯಾರಂಭದಲ್ಲಿ ಸಿದ್ಧಾಂತಕ್ಕೆ ವಿರುದ್ಧವಾದ ಅಂಶಗಳನ್ನೇ ಪ್ರತಿಪಾದಿ ಸಿರುವುದು ವಿಷಾದಕರ. 'ಸ್ತ್ರೀಯರು ತತ್ತ್ವೋಪದೇಶಕ್ಕೆ ಅನರ್ಹರೆಂದು ಶಾಸ್ತ್ರದಲ್ಲಿ ಹೇಳಿದೆ' (ಪು. ೨೯)ಯೆಂದೂ, ಆದಕ್ಕಾಗಿ 'ಸ್ತ್ರೀಯರಿಗೂ ಶೂದ್ರರಿಗೂ ಕರ್ಮಭ್ರಷ್ಟ ಬ್ರಾಹ್ಮಣರಿಗೂ ವೇದವನ್ನು ಓದುವ ಅಧಿಕಾರವಿಲ್ಲದ್ದರಿಂದ ಮಹರ್ಷಿಯು ಕೃಪೆಯಿಂದ ಭಾರತವನ್ನು ರಚಿಸಿದನು.' 'ಕೃಷ್ಣನೂ ಸಹ ಗೀತೆಯಲ್ಲಿ ಸ್ತ್ರೀಯರಿಗೂ ವೈಶ್ಯರಿಗೂ ಶೂದ್ರರಿಗೂ ಪರಮಾತ್ಮನ ಸ್ವರೂಪವನ್ನರಿಯಲು ಅವಕಾಶ ಕಲ್ಪಿಸಿದನು' (ಪು. ೩೦) ಎಂದು ಹೇಳಲಾಗಿದೆ. ವೀರಶೈವ ಸಿದ್ಧಾಂತದ ಪ್ರಕಾರ ಸ್ತ್ರೀಯರಿಗೂ ಶಿವದೀಕ್ಷಾ ಸಂಸ್ಕಾರವಿರುವುದರಿಂದ ಇಲ್ಲಿ 'ಅನಧಿಕಾರ' ಎಂಬ ಪ್ರಶ್ನೆಯೇ ಏಳುವುದಿಲ್ಲ. ಅಂದ ಮೇಲೆ ಈ ಬಗೆಯ ಪ್ರತಿಪಾದನೆ ವೀರಶೈವ ಸಿದ್ಧಾಂತಕ್ಕೆ ವಿರೋಧವೇ ಆಯಿತು. ಮುಂದೆ 'ಯದಾ ಯದಾ ಹಿ ಧರ್ಮಸ್ಯ' (ಪು. ೧೨೬–೧೨೭) 'ಪರಿತ್ರಾಣಾಯ ಸಾಧೂನಾಂ' ಮುಂತಾದ ಶ್ಲೋಕಾನುವಾದಗಳಲ್ಲಿ 'ಜನರನ್ನು ಒಂದು ವ್ಯವಸ್ಥೆ ಗೊಳಪಡಿಸಿರುವ ವರ್ಣಾಶ್ರಮ ಧರ್ಮವು ಕ್ಷೀಣಸ್ಥಿತಿಗೆ ಬಂದಾಗಲೆಲ್ಲಾ ನಾನು

ಅವತರಿಸುವೆನು' 'ತಾನೇ ಏರ್ಪಡಿಸಿರುವ ವರ್ಣಾಶ್ರಮ ಧರ್ಮಕ್ಕೆ ಸಾಂಕರ್ಯ ವುಂಟಾಗದಂತೆ' ಮುಂತಾಗಿ ಹೇಳಲಾಗಿದೆ. ಈ ಮಹಾಶಯರಿಗೆ ವೀರಶೈವವು 'ಅತಿವರ್ಣಾಶ್ರಮ' ತತ್ತ್ವಕ್ಕೆ ಸೇರಿದುದೆಂಬ ಪರಿವೆಯೇ ಇದ್ದಂತಿರುವುದಿಲ್ಲ. ಇದೇ ಅರ್ಥವನ್ನೇ 'ಚಾತುರ್ವರ್ಣ್ಯಂ ಮಯಾ ಸೃಷ್ಟಂ' (ಪು. ೧೩೧) ಎಂಬಲ್ಲಿಯೂ ಮಾಡಿ ಅಪಸಿದ್ಧಾಂತವನ್ನೇ ಸ್ಥಾಪಿಸಿದ್ದಾರೆ. ವೀರಶೈವದಲ್ಲಿ ಉಕ್ತವಾಗಿರುವ ವರ್ಣಾಶ್ರಮ ಗಳು 'ಅಪ್ರಾಕೃತ' ವೆಂಬ ಅಂಶವಾಗಲಿ, ಇಲ್ಲಿ ಸಮರ್ಥಿಸಿರುವ ಕರ್ಮವು 'ಪತಿಕರ್ಮ' ವೆಂದಾಗಲಿ ಅನುವಾದಕರಿಗೆ ತಿಳಿದಂತೆ ಕಂಡು ಬರುವುದಿಲ್ಲ ಎಂಬುದು 'ಕಿಂ ಕರ್ಮಕಿಮಕರ್ಮೇತಿ' (ಪು. ೧೩೪) 'ಕರ್ಮಣ್ಯಕರ್ಮ ಯಃ ಪಶ್ಯೇತ್' (ಪು. ೧೩೫) ಎಂಬ ಪದ್ಯಗಳ ಅನುವಾದವನ್ನು ಅವಲೋಕಿಸಿದಲ್ಲಿ ವೇದ್ಯವಾಗುತ್ತದೆ.

ವೀರಶೈವ ಸಿದ್ಧಾಂತದಲ್ಲಿ ಉಕ್ತವಾಗಿರುವ ಇಷ್ಟ-ಪ್ರಾಣ ಮತ್ತು ಭಾವಲಿಂಗ ಗಳಲ್ಲಿ ಇಷ್ಟಲಿಂಗವನ್ನು ಸ್ಥೂಲ ಶರೀರದಲ್ಲಿಯೂ, ಪ್ರಾಣಲಿಂಗವನ್ನು ಸೂಕ್ಷ್ಮ ಶರೀರ ದಲ್ಲಿಯೂ, ಭಾವಲಿಂಗವನ್ನು ಕಾರಣಶರೀರದಲ್ಲಿಯೂ ಧರಿಸಲಾಗುವುದೆಂದು ಹೇಳಿದೆ. ಶಿವಾನುಭವದ ಅಂಗವಾಗಿ ಬಿತ್ತರಿಸುವ ೨೧೬ ಸಕೀಲುಗಳ ವಿವರಣದಲ್ಲಿ ಆಧಾರ- ಸ್ವಾಧಿಷ್ಠಾನ-ಮಣಿಪೂರಕ-ಅನಾಹತ-ವಿಶುದ್ಧಿ-ಮತ್ತು ಆಜ್ಞೇಯ (ಭ್ರೂಮಧ್ಯ) ಎಂಬ ಆರು ಚಕ್ರಗಳು ಕ್ರಮವಾಗಿ ಆಚಾರ-ಗುರು-ಶಿವ-ಜಂಗಮ-ಪ್ರಸಾದ ಹಾಗೂ ಮಹಾ ಲಿಂಗಗಳಿಗೂ ಸಹಸ್ರಾರವು ಇಷ್ಟಲಿಂಗಕ್ಕೆ-ಶಿಖಾಚಕ್ರವು ಪ್ರಾಣಲಿಂಗಕ್ಕೆ ಮತ್ತು ಪಶ್ಚಿಮ ಚಕ್ರವು ಭಾವಲಿಂಗಕ್ಕೆ ಸ್ಥಾನಗಳೆಂದೂ ಹೇಳಿದೆ. ಇದನ್ನೇ ಅನುಭವ ಸೂತ್ರಾದಿ ಗ್ರಂಥಗಳಲ್ಲಿ ನಿರ್ಣಯಿಸಲಾಗಿದೆ. ಆದರೆ ಈ ಅನುವಾದಕರು ಭ್ರೂಮಧ್ಯದಲ್ಲಿ ಇಷ್ಟ ಲಿಂಗವೂ ಹೃದಯದಲ್ಲಿ ಪ್ರಾಣಲಿಂಗವೂ ಮತ್ತು ಶಿರಸ್ಸಿನಲ್ಲಿ ಭಾವಲಿಂಗವೂ ಇರುವು ದೆಂದು (ಪು. ೯೪) ಗೀತಾಭಾಷ್ಯದಲ್ಲಿಯೂ, ಶ್ವೇತಾಶ್ವರ ಭಾಷ್ಯ (ಪು. ೧೬) ದಲ್ಲಿಯೂ ಮೇಲಿಂದಮೇಲೆ ಅನುವಾದ ಮಾಡತೊಡಗಿರುವುದು ಆಶ್ಚರ್ಯಕರವಾಗಿದೆ. ಸಿದ್ಧಾಂತ ಶಿಖಾಮಣಿಯ 'ಶಿವಾದ್ವೈತ ಪರಾನಂದ' (ಪರಿ.೪-೪೧) 'ಶಿವಾದ್ವೈತ ಪರಿಜ್ಞಾನ' (ಪರಿ. ೪-೫೦) ಮತ್ತು ಸ್ವಪ್ರಭಾನಂದರ 'ಶಿವಾದ್ವೈತಮಂಜರಿ'ಯಲ್ಲಿಯೂ ಸಹ ಮೇಲಿಂದಮೇಲೆ 'ಶಿವಾದ್ವೈತ' ಪದವನ್ನು ಮತಸಿದ್ಧಾಂತದ ಪರ್ಯಾಯ ನಾಮವಾಗಿ ಪ್ರಯೋಗಿಸಲಾಗಿದೆ. ನೀಲಕಂಠಶಿವಚಾರ್ಯರು 'ಶಿವೇ ಅದ್ವೈತಮಿತಿ ವ್ಯುತ್ಪತ್ತಿಃ' 'ಶಿವಾದ್ವೈತ ಸಿದ್ಧಾಂತೋಽಯಂ' 'ದ್ವೈತಾದ್ವೈತ ಬೋಧಕ ಸಮನ್ವಯ ಸಂಪಾದಿತಃ' (ಶಿವಾದ್ವೈತ ಪರಿಭಾಷಾ ಪು. ೫೭) ಎಂದು ಪ್ರತಿಪಾದಿಸಿದ್ದಾರೆ. ಆದರೂ ಸಹ ಈ ಮಹಾಶಯರು 'ಶಿವಾದ್ವೈತಮಿತ್ಯುಕ್ತೇ ಬ್ರಹ್ಮಾದ್ವೈತಮಿತ್ಯೇವಾರ್ಥಃ|....ಅತಃ ಶಿವಾದ್ವೈತಮಿತಿ ನಾಸಾಧಾರಣಂ ನಾಮ' ಎಂದರೆ 'ಶಿವಾದ್ವೈತವೆಂದರೆ ಶಂಕರರ ಬ್ರಹ್ಮಾದ್ವೈತವೇ! ಆದ್ದರಿಂದ ವೀರಶೈವಕ್ಕೆ ಶಿವಾದ್ವೈತವೆಂಬುದು ಅಸಾಧಾರಣವಾದ ಹೆಸರಲ್ಲ! (ಶಕ್ತಿವಿಶಿಷ್ಟಾದ್ವೈತ ದರ್ಶನ ಪು. ೧೭) ಎಂದು ಸಾಧಿಸಿರುವುದು ಅಸಮಂಜಸ.

ಮೇಲಾಗಿ ಶ್ರೀಪತಿಪಂಡಿತಾರಾಧ್ಯರ 'ಶ್ರೀಕರ ಭಾಷ್ಯ' ಮತ್ತು ನೀಲಕಂಠ

ಸುತ್ತಃ

ಶಿವಾಚಾರ್ಯರ 'ಕ್ರಿಯಾಸಾರ'ಗಳನ್ನು ಈ ವಿದ್ವಾಂಸರು ಅನುವಾದಮಾಡು ವಲ್ಲಿಯೂ ಇಂಥ ದೋಷಗಳನ್ನು ಕಾಣಬಹುದಾಗಿದೆ. ಶ್ರೀಕರ ಭಾಷ್ಯದ ಪ್ರಾರಂಭದಲ್ಲಿನ ಮಂಗಳ ಪದ್ಯಗಳಲ್ಲಿ ಹೆಸರಿಸಿರುವ ಮೂವರು ಆಚಾರ್ಯರ ಜೊತೆಗೆ ಐದುಜನ ಆಚಾರ್ಯರ ಹೆಸರುಗಳನ್ನು ಸೇರಿಸುವ ಪ್ರಯತ್ನ ಇಲ್ಲಿ ನಡೆದಿದೆ. ಅದಕ್ಕಾಗಿ ಇವರು ಮೂಲದಲ್ಲಿನ ಪದ್ಯಗಳ ಪಾದಗಳನ್ನು ಬದಲಾಯಿಸಿ 'ಏಕೋ ರಾಮಾಖ್ಯಸಿದ್ಧಾಂ' ಎಂಬ ಕಡೆ 'ವಿಶ್ವಾರಾಧ್ಯಾಖ್ಯಸಿದ್ಧಂ' ಎಂದೂ 'ಪೂರ್ವಾಚಾರ್ಯ ಪ್ರಶಿಷ್ಯಂ'ಗೆ ಬದಲಾಗಿ 'ಪೂರ್ವಾಚಾರ್ಯ ಪ್ರಸಿದ್ಧಂ' ಎಂದೂ, 'ದ್ವಾಪರಾಚಾರ್ಯ ವರ್ಯಂ' ಎಂಬುದನ್ನು 'ವೀರಮಾಹೇಶ್ವರಾಗ್ರ್ಯಂ" ಎಂದು ಮುಂತಾಗಿ ಸೇರಿಸಿರುವುದು ಸಂಪಾದಕಲೋಕವನ್ನು ಆಚ್ಚರಿಗೊಳಿಸಿದೆ. ಎರಡನೆಯದಾಗಿ ಅನುವಾದಕರು ವಿಚಾರ ಪರಿಪ್ಲುತವಾದ ಪೀಠಿಕೆ ಅಥವಾ ಉಪೋದ್ಘಾತಗಳನ್ನು ಬರೆವುದು ಆವಶ್ಯಕ. ಆದರೆ ಆದರಲ್ಲಿ ಅನುವಾದಕರ ಜೀವನ ಚರಿತ್ರೆಗೆ ಸಂಬಂಧಿಸಿದ ವಿಷಯಗಳನ್ನು (ಶ್ರೀಕರಭಾಷ್ಯ ಪೀಠಿಕೆ ಪು. ೮೪) ತುಂಬುವುದು ಅನುಚಿತ.

ಒಟ್ಟಿನಲ್ಲಿ ಈ ಇಪ್ಪತ್ತೈದು ವರ್ಷಗಳಲ್ಲಿ ಸಾಕಷ್ಟು ಶಾಸ್ತ್ರ ಗ್ರಂಥಗಳು ಕನ್ನಡಕ್ಕೆ ಅನುವಾದವಾಗಿವೆ. ಅವುಗಳಲ್ಲಿ ಎಲ್ಲವೂ ನಿರೀಕ್ಷಿತ ಮಟ್ಟವನ್ನು ಮುಟ್ಟಿವೆ ಎಂದು ಹೇಳಲಾಗದಿದ್ದರೂ ನಡೆದಿರುವ ಕೆಲಸ ಮೆಚ್ಚತಕ್ಕದ್ದು. ಮುಂದೆ ಇದು ಇನ್ನೂ ವ್ಯವಸ್ಥಿತವಾಗಿ ಹೆಚ್ಚು ಪರಿಷ್ಕೃತವಾಗಿ ನಡೆಯುವ ಅಗತ್ಯವಿದೆ.

ಕನ್ನಡಕ್ಕಾಗಿ ಕೈಯೆತ್ತು; ನಿನ್ನ ಕೈ ಕಲ್ಪವೃಕ್ಷವಾಗುತ್ತದೆ! ಕನ್ನಡಕ್ಕಾಗಿ ಕೊರಳೆತ್ತು; ಅಲ್ಲಿ ಪಾಂಚಜನ್ಯ ಮೂಡುತ್ತದೆ! ಕನ್ನಡಕ್ಕಾಗಿ ಕಿರು ಬೆರಳೆತ್ತಿದರೂ ಸಾಕು ಇಂದು ಅದೆ ಗೋವರ್ಧನಗಿರಿ ಧಾರಿಯಾಗುತ್ತದೆ. . . . ಇದು ನಿನ್ನ ಭಾಷೆ; ಇದು ದೇಶಭಾಷೆ; ಇದು ಸಾವಿರಾರು ವರ್ಷಗಳ ಸುಪುಷ್ಟ ಸಾಹಿತ್ಯ ಭಾಷೆ; ಇದು ಮಹಾ ಕವಿಗಳನ್ನೂ, ಶಿಲ್ಪಿಗಳನ್ನೂ, ರಾಜಾಧಿರಾಜರನ್ನು ವೀರಾಧಿ ವೀರರನ್ನೂ ರಸಋಷಿ ದಾರ್ಶನಿಕರನ್ನೂ ಹಡೆದಿರುವ ಭಾಷೆ . . . . ಸ್ವತಂತ್ರನಾದ ಮೇಲೆಯೂ ಆಕೆಯನ್ನು ತೊತ್ತಾಗಿರಿಸುವೆಯ?

—ಕುವೆಂಪು

ಎಂ. ರಾಮರಾವ್

ಅನುವಾದ : ಇಂಗ್ಲಿಷ್ ಸಾಹಿತ್ಯ

ವಿಭಿನ್ನ ಸಂಸ್ಕೃತಿ ಮತ್ತು ಸಾಹಿತ್ಯಗಳನ್ನುಳ್ಳ ಎರಡು ರಾಷ್ಟ್ರಗಳಿಗೆ ಯಾವುದೇ ಕಾರಣದಿಂದಾಗಲಿ ಸಂಪರ್ಕ ಉಂಟಾದಾಗ ಅವು ಪರಸ್ಪರ ಪ್ರಭಾವ ಬೀರುವುದೂ ಆ ಪ್ರಭಾವದಿಂದ ಪ್ರಯೋಜನ ಪಡೆಯುವುದೂ ಸಹಜ. ಈ ಪ್ರಭಾವ ಜೀವನದ ಎಲ್ಲ ಕ್ಷೇತ್ರಗಳಲ್ಲೂ ತಲೆದೋರಿದರೂ ಆ ಜೀವನವನ್ನು ಪ್ರತಿಬಿಂಬಿಸುವ ಸಾಹಿತ್ಯದಲ್ಲಿ ಅತ್ಯಂತ ಸ್ಪಷ್ಟವಾಗಿ ಕಂಡುಬರುತ್ತದೆ. ತಮ್ಮ ಸಾಹಿತ್ಯಕ್ಕಿಂತಲೂ ಹೆಚ್ಚು ಮುಂದು ವರಿದಿರುವ ಅಥವಾ ಅದರಿಂದ ಬೇರೆಯಾಗಿರುವ ವಿದೇಶೀಯ ಸಾಹಿತ್ಯಗಳ ಉತ್ತಮ ಲಕ್ಷಣಗಳನ್ನೂ ವಿಧಾನಗಳನ್ನೂ ಅನುಕರಿಸಿ ತಮ್ಮದನ್ನೂ ಪರಿಪುಷ್ಟವಾಗಿ ಸರ್ವಾಂಗ ಸುಂದರವಾಗಿ ಮಾಡಲೆಳಸುವುದು ಸಾಹಿತಿಗಳಲ್ಲಿ ಸ್ವಾಭಾವಿಕವಾಗಿಯೇ ಉತ್ಪನ್ನ ವಾಗುವ ಆಶಯ. ಈ ರೀತಿ ತಮ್ಮ ದೇಶದ ಜನಜೀವನ, ಭಾಷೆ, ಮತ್ತು ಸಾಹಿತ್ಯ ಗಳನ್ನು ಪುನರುಜ್ಜೀವನಗೊಳಿಸುವ ಅವರ ಪ್ರಯತ್ನಗಳಲ್ಲಿ ತಾವು ಮೆಚ್ಚಿಕೊಂಡಿರುವ ವಿದೇಶೀಯ ಸಾಹಿತ್ಯಗಳಲ್ಲಿರುವ ಉತ್ತಮ ಕೃತಿಗಳನ್ನು ತಮ್ಮ ಭಾಷೆಗಳಿಗೆ ಪರಿವರ್ತಿಸಿ ಕೊಳ್ಳುವುದೂ ಒಂದು. ಅನಂತರ ಆ ಸಾಹಿತ್ಯದ ವಿವಿಧ ಮಾರ್ಗಗಳನ್ನು ಅನುಕರಿಸಿ ಅಥವಾ ಅವುಗಳಿಂದ ಪ್ರೇರಣೆ ಪಡೆದು ತಮ್ಮದೇ ಆದ ನೂತನ ಸಾಹಿತ್ಯದ ನಿರ್ಮಾಣದಲ್ಲಿ ಅವರು ತೊಡಗುತ್ತಾರೆ. ಆದರೆ ಪ್ರತಿ ಸಾಹಿತ್ಯದ ಚರಿತ್ರೆಯಲ್ಲೂ ಪ್ರತಿ ಸಾರಿಯೂ ಹೀಗೆ ಆಗಲೇಬೇಕೆಂಬ ನಿಯಮವೇನೂ ಇಲ್ಲ. ವಿದೇಶೀಯ ಸಾಹಿತ್ಯಗಳ ವ್ಯಾಸಂಗದಿಂದ ಪ್ರೇರಿತರಾದವರು ಭಾಷಾಂತರದ ಗೋಜಿಗೇ ಹೋಗದೆ ಒಮ್ಮೆಗೇ ತಮ್ಮ ಭಾಷೆಗಳಲ್ಲಿ ಹೊಸ ಬಗೆಯ ಕೃತಿಗಳ ರಚನೆಯಲ್ಲಿ ತೊಡಗಬಹುದು ; ತೊಡಗಿರುವುದೂ ಉಂಟು. ಇದು ಸಾಧ್ಯವೆಂದು ಒಪ್ಪಿಕೊಂಡರೂ ಅದರಿಂದ ಭಾಷಾಂತರಗಳ ಪ್ರಾಮುಖ್ಯತೆಗೂ ಆವಶ್ಯಕತೆಗೂ ಏನೂ ಚ್ಯುತಿಬಾರದು. ಅವು ನೂತನ ವಿಧಾನ ಗಳನ್ನು ಒಂದು ಭಾಷೆಯಿಂದ ಇನ್ನೊಂದಕ್ಕೆ ತಂದು ನಶಿಸಿಹೋಗುತ್ತಿರುವ ಹಳೆಯ ಸಾಹಿತ್ಯಗಳಿಗೆ ಜೀವಕಳೆ ಮುರುಕಳಿಸುವಂತೆ ಮಾಡುವುದೊಂದೇ ಅಲ್ಲದೆ ಮೇಲ್ತರಗತಿಯ ಗ್ರಂಥಗಳ ಸವಿಯನ್ನು ವಾಚನಪ್ರೇಮಿಗಳಿಗೆ ಅವರವರ ತಾಯ್ನುಡಿಗಳಲ್ಲೇ ತಂದೂಡಿ ತನ್ಮೂಲಕ ಅವರ ಕುತೂಹಲವನ್ನು ತೃಪ್ತಿಪಡಿಸುವುದಲ್ಲದೆ ಅನುಭವವನ್ನು ವಿಸ್ತರಿಸಿ ಅಭಿರುಚಿಯನ್ನು ಪರಿಶುದ್ಧಗೊಳಿಸುತ್ತವೆ. ಹೀಗೆ ಯಾವ ಭಾಷೆಯಲ್ಲೇ ಆಗಲಿ ಭಾಷಾಂತರಗಳ ಆವಶ್ಯಕತೆ ಇದ್ದೇ ಇದೆ. ಈಚೀಚೆಗೆ ಬಹುಮುಖವಾಗಿ ಬೆಳವಣಿಗೆ ಹೊಂದುತ್ತಿರುವ ಭಾಷೆ ಮತ್ತು ಸಾಹಿತ್ಯಗಳಿಗಂತೂ ಅವು ಚೈತನ್ಯದಾತೃಗಳು.

ಹೊಸಗನ್ನಡ ಸಾಹಿತ್ಯದಲ್ಲಿ-ಇತರ ಅನೇಕ ಭಾಷೆಗಳಲ್ಲಿ ನಡೆದಿರುವಂತೆಯೇ-ಭಾಷಾಂತರಗಳು ಮುಖ್ಯ ಪಾತ್ರವಹಿಸಿವೆ. ಶ್ರೀ. ಬಿ. ಎಂ. ಶ್ರೀಕಂಠಯ್ಯನವರ 'ಇಂಗ್ಲಿಷ್ ಗೀತಗಳು' ಎಂಬ ಕವನಸಂಕಲನ ಕನ್ನಡ ಸಾಹಿತ್ಯದ ನವೋದಯದ ಚರಿತ್ರೆಯಲ್ಲಿ ಪ್ರಸಿದ್ಧವಾಗಿರುವ ಪುಸ್ತಕ. ಅವರಲ್ಲದೆ ಹೊಸಗನ್ನಡ ಸಾಹಿತ್ಯದ ಆರಂಭ ಕಾಲದಲ್ಲಿ ಹೆಸರಾಂತ ಗೋವಿಂದಪೈಗಳು, ಪಂಜೆ ಮಂಗೇಶರಾಯರು, ಕಾಮತರು, ನರಸಿಂಹಾಚಾರ್ಯರು ಮೊದಲಾದವರು ಹಲಕೆಲವು ಇಂಗ್ಲಿಷ್ ಕವನಗಳನ್ನು ಕನ್ನಡಕ್ಕೆ ಅನುವಾದಿಸಿದರು. ಅವರ ಅನಂತರ ಕುವೆಂಪುರವರಂತಹ ವರಕವಿಗಳು ಕೂಡ ಮೊದಲು ಪ್ರಖ್ಯಾತರಾದುದು ತಮ್ಮ ಉತ್ತಮ ಭಾಷಾಂತರ ಕೃತಿಗಳಲ್ಲೊಂದಾದ ಬೊಮ್ಮನಹಳ್ಳಿಯ ಕಿಂದರಿಜೋಗಿಯಿಂದ. ಕುವೆಂಪುರವರೇ ಇನ್ನೂ ಕೆಲವು ಇಂಗ್ಲಿಷ್ ಕವಿತೆಗಳನ್ನು ಕನ್ನಡಿಸಿರುವುದಲ್ಲದೆ ಷೇಕ್ಸ್‌ಪಿಯರನ 'ಹ್ಯಾಮ್ಲೆಟ್' ಮತ್ತು 'ಟೆಂಪೆಸ್ಟ್' ನಾಟಕಗಳನ್ನು ಅನುಸರಿಸಿ ನಾಟಕ ರಚನೆಗೈದಿದ್ದಾರೆ. ಬಿ.ಎಂ.ಶ್ರೀ.ಯವರು ಗ್ರೀಕ್ ನಾಟಕಗಳೆರಡನ್ನು ಕನ್ನಡಕ್ಕೆ ತಂದು ಇತರರಿಗೆ ಮೇಲ್ಪಂಕ್ತಿ ಹಾಕಿಕೊಟ್ಟರು. ಆಮೇಲೆ ಅನೇಕ ಲೇಖಕರು ಇಂಗ್ಲಿಷಿನಿಂದ ಬಗೆ ಬಗೆಯ ಕೃತಿಗಳನ್ನು ಕನ್ನಡಿಸಿ ತಂದು ಇಂಗ್ಲಿಷ್ ಬಾರದ ನಮ್ಮವರಿಗೆ ಇಂಗ್ಲಿಷ್ ಸಾಹಿತ್ಯಸಾಗರದ ಕೆಲವು ಹನಿಗಳದಾದರೂ ಪರಿಚಯ ದೊರೆಯುವಂತೆ ಮಾಡಲು ಯತ್ನಿಸಿದ್ದಾರೆ. ಇಂಗ್ಲಿಷ್ ಸಾಹಿತ್ಯದಿಂದ ಮಾತ್ರವಲ್ಲದೆ ಆ ಭಾಷೆಗೆ ಅನುವಾದಿತವಾಗಿರುವ ಇತರ ಐರೋಪ್ಯ ಸಾಹಿತ್ಯಗಳ ಒಂದೆರಡು ಪ್ರಸಿದ್ಧ ರತ್ನಗಳೂ ನಮ್ಮವರಿಗೆ ಈ ಮೂಲಕ ಲಭಿಸಿವೆ. ಇವುಗಳಲ್ಲಿ ಎಲ್ಲಾ ಭಾಷಾಂತರಗಳೂ ವಾಚನಸೌಲಭ್ಯದ ದೃಷ್ಟಿಯಿಂದ ಮತ್ತು ನಿಷ್ಕೃಷ್ಟತೆಯ ದೃಷ್ಟಿಯಿಂದ ಸರ್ವಸಮರ್ಪಕವೆಂದೇನೂ ಅಲ್ಲ. ಭಾಷಾಂತರ ಎಚ್ಚತ್ತ ಕನ್ನಡಿಗರ ಕಾರ್ಯಕ್ಷೇತ್ರಗಳಲ್ಲಿ ಒಂದಾಗಿ ನಾಡಿಗೆ ತನ್ನ ಸೇವೆಯನ್ನು ಸಲ್ಲಿಸತೊಡಗಿತೆಂದು ಸೂಚಿಸುವುದಷ್ಟೇ ಈ ಹೇಳಿಕೆಯ ಹಿಂದಿರುವ ಉದ್ದೇಶ. ಈ ಕಾರ್ಯ ಸಾಕಷ್ಟು ಹೆಚ್ಚಾಗಿ ನಡೆದಿದೆಯೆಂದೂ ಹೇಳಲಾಗುವುದಿಲ್ಲ. ಜಗತ್ತಿನ ಇತರ ಎಷ್ಟೋ ಭಾಷೆಗಳಲ್ಲಿ ನಡೆದಿರುವುದೇ ನಮ್ಮಲ್ಲೂ ನಡೆದಿದೆ ಎಂಬುದನ್ನು ನಾವು ಗಮನಿಸಿದರೆ ಸಾಕು. ಹೊಸಗನ್ನಡದ ನವೋದಯದ ಕೆಲಸದಲ್ಲಿ ಆರಂಭವಾದ ಈ ಕೆಲಸ ಕಳೆದ ಇಪ್ಪತ್ತೈದು ವರ್ಷಗಳಲ್ಲಿ ಎಷ್ಟರಮಟ್ಟಿಗೆ ಮುಂದುವರಿದಿದೆ ಎಂಬುದರ ಸ್ಥೂಲ ಸಮೀಕ್ಷೆಯೇ ಈ ಬರಹದ ಉದ್ದೇಶ.

ಈ ಲೇಖಕನ ಗಮನಕ್ಕೆ ಬಂದಿರುವ ಮಟ್ಟಿಗೆ ಕಳೆದ ಇಪ್ಪತ್ತೈದು ವರ್ಷಗಳಲ್ಲಿ ಗೋಪಾಲಕೃಷ್ಣ ಅಡಿಗರು ಈಚೆಗೆ ಮಾಡಿರುವ ಅಮೆರಿಕದ ಕವಿ ವಾಲ್ಟ್‌ವ್ಹಿಟ್‌ಮನ್‌ನ Leaves of Grass ಎಂಬ ಪ್ರಸಿದ್ಧ ಕವನಸಂಕಲನದ ಭಾಷಾಂತರವನ್ನೂ ಗ್ಗಳಲರಲ್ಲಿ ಪ್ರಥಮತಃ ಪುಸ್ತಕರೂಪದಲ್ಲಿ ಪ್ರಕಟವಾದ ಎಲ್. ಗುಂಡಪ್ಪನವರು ಮಾಡಿದ ಮ್ಯಾಥ್ಯೂ ಆರ್ನಲ್ಡ್ ಕವಿಯ Sohrab and Rustum ಕವನದ ಅನುವಾದವನ್ನೂ ಬಿಟ್ಟರೆ ಇಂಗ್ಲಿಷ್ ಕಾವ್ಯದಿಂದ ಯಾವುದೊಂದು ಇಡಿ ಪುಸ್ತಕವಾಗಲಿ ಸುದೀರ್ಘವಾದ ಕವಿತೆಯಾಗಲಿ ಕನ್ನಡಕ್ಕೆ ಅನುವಾದವಾಗಿಲ್ಲ. ಅಲ್ಲೊಂದು ಇಲ್ಲೊಂದು

ಬಿಡಿ ಕವನಗಳೇನೋ ಪ್ರಕಟವಾಗಿವೆ. ಉದಾಹರಣೆಗೆ, ಟೆನಿಸನ್ ಕವಿಯ Dora ಎಂಬ ಕವನದ ಕಥೆಯನ್ನು ಪ್ರಕೃತ ಲೇಖಕನೇ 'ನೀಲಿ' ಎಂಬ ಹೆಸರಿನಲ್ಲಿ ಬರೆದು ತನ್ನ 'ಹರ–ಪಾರ್ವತಿ' ಎಂಬ ಕವನ ಸಂಗ್ರಹದಲ್ಲಿ ಪ್ರಕಟಿಸಿದ್ದಾನೆ. ಎಂ. ವಿ. ಸೀತಾರಾಮಯ್ಯನವರು ಇದೇ ಕವನವನ್ನು–ಮೂಲ ಕೃತಿಯ ಹೆಸರುಗಳನ್ನು ಉಳಿಸಿಕೊಂಡೇ–ಕನ್ನಡಿಸಿದ್ದಾರೆ. ಕೆ. ಗುಂಡಣ್ಣನವರು ವರ್ಡ್ಸ್‌ವರ್ತ್ ಕವಿಯ 'ಮೈಕೇಲ್' ಕವನದ ಕಥೆಯನ್ನು ಕನ್ನಡದಲ್ಲಿ ಗದ್ಯರೂಪದಲ್ಲಿ ನಿರೂಪಿಸಿದ್ದಾರೆ. (ಅದರ ಪದ್ಯರೂಪದ ಭಾಷಾಂತರ ಎಸ್. ವಿ. ಪರಮೇಶ್ವರಭಟ್ಟರ 'ಮಾಚಯ್ಯ' ಎಂಬ ಕವನದಲ್ಲಿ ಮೊದಲೇ ಬಂದಿತ್ತು) ಇಂಥ ಇನ್ನೂ ಕೆಲವು ಇಂಗ್ಲಿಷ್ ಕವಿತೆಗಳು ಅಲ್ಲಲ್ಲಿ ಕನ್ನಡದಲ್ಲಿ ತಲೆದೋರಿವೆ. ಬಹುಶಃ ಕಾವ್ಯಲೇಖನಗೈವ ಸಾಮರ್ಥ್ಯವುಳ್ಳವರು ಇಂಗ್ಲಿಷ್ ಕವಿತೆಗಳನ್ನು ಮಾದರಿಯಾಗಿಟ್ಟುಕೊಂಡು ಸ್ವಂತವಾಗಿಯೇ ಬರೆಯತೊಡಗಿರುವುದರಿಂದ ಈ ಪರಿಸ್ಥಿತಿ ಏರ್ಪಟ್ಟಿದೆ ಎನ್ನಬಹುದು. ಕೇವಲ ಕುತೂಹಲದ ಪರಿತೃಪ್ತಿಗಾಗಿ ಅಥವಾ ಪಾಂಡಿತ್ಯದ ಪ್ರಸಾರಕ್ಕಾಗಿ ಇತರ ಭಾಷೆಗಳಲ್ಲಿರುವ ಕವಿತೆಗಳನ್ನು ಭಾಷಾಂತರಿಸುವವರು ಹೆಚ್ಚು ಮಂದಿ ಇಲ್ಲ.

ನಾಟಕಗಳ ಅನುವಾದವನ್ನು ಕುರಿತೂ ಇದೇ ಮಾತನ್ನು ಆಡಬೇಕಾಗಿದೆ. ಕನ್ನಡದಲ್ಲಿ ನಾಟಕಗಳ ಅಭಾವವಿರುವುದರಿಂದಲೂ ಪಾಶ್ಚಾತ್ಯ ಭಾಷೆಗಳಲ್ಲೇ ನಾಟಕ ಲೇಖನದಲ್ಲಿ ಬೇಕಾದಷ್ಟು ಪ್ರಯೋಗಗಳು ನಡೆಯುತ್ತಿರುವುದರಿಂದಲೂ ಹೊಸಹೊಸ ನಾಟಕಗಳಿಗೆ ಹೇಗೆ ಕನ್ನಡದಲ್ಲಿ ಸ್ಥಾನವಿದೆಯೋ ಹಾಗೆಯೇ ಇಂಗ್ಲಿಷ್ ಮತ್ತು ಇತರ ಭಾಷೆಗಳಿಂದ ಆಯ್ದು ತಂದ ಹೊಸಮಾದರಿಯ ನಾಟಕಗಳ ಅನುವಾದಕ್ಕೆ ಅವಕಾಶವಿದೆ. ಆದರೂ ಹೆಚ್ಚು ಕೆಲಸ ನಡೆದಿಲ್ಲ. ಷೇಕ್ಸ್‌ಪಿಯರನ ನಾಟಕಗಳೇ ಇನ್ನೂ ಪೂರ್ತಿಯಾಗಿ ಕನ್ನಡದಲ್ಲಿ ಬಂದಿಲ್ಲ. ೧೯೩೬ ರಲ್ಲಿ ಪ್ರಕಟವಾದ ಡಿ. ವಿ. ಗುಂಡಪ್ಪನವರ 'ಮ್ಯಾಕ್ಬೆತ್' ನಾಟಕದ ಅನುವಾದವನ್ನು ಬಿಟ್ಟರೆ ಕನ್ನಡದಲ್ಲಿ ಷೇಕ್ಸ್‌ಪಿಯರ್ ಕೃತಿಯೊಂದರ ನೇರವಾದ ಭಾಷಾಂತರ ಇರಲೇ ಇಲ್ಲವೆನ್ನಬಹುದು. (ಷೇಕ್ಸ್‌ಪಿಯರ್ ನಾಟಕಗಳ ಆಧಾರದಮೇಲೆ ರಚಿತವಾದ ಕೆಲವು ರೂಪಾಂತರಗಳೇನೋ ಇದ್ದವು). ಈ ಅರಕೆಯನ್ನು ತುಂಬಿಕೊಡಲು ಒಬ್ಬರಿಬ್ಬರು ಮಹನೀಯರು ಸ್ತುತ್ಯವಾದ ಪ್ರಯತ್ನ ಮಾಡಿದ್ದಾರೆ. ಅವರಲ್ಲಿ ಮಾಸ್ತಿಯವರಿಗೆ ಮೊದಲ ಗೌರವ ಸಲ್ಲುತ್ತದೆ. ಅವರು 'ಲಿಯರ್‌ಮಹಾರಾಜಾ'(*King Lear,*)'ಹ್ಯಾಮ್‌ಲೆಟ್' (*Hamlet,*)ಮತ್ತು 'ದ್ವಾದಶ ರಾತ್ರಿ' (*Twelth Night*) 'ಚಂಡಮಾರುತ' (*Tempest*) ನಾಟಕಗಳನ್ನು ಸಂಪೂರ್ಣವಾಗಿಯೂ *Midsummer Nights Dream, Merchant of Venice, Taming of the Shrew, Romeo and Juliet, Henry* VI, *Richard* II, *Henry* V, *All is Well that Ends Well, Othello, Measure For Measure, Traiuls and Cresside,* ಮೊದಲಾದ ಷೇಕ್ಸ್‌ಪಿಯರ್ ನಾಟಕಗಳ ಸ್ವಾರಸ್ಯಮಯವೂ ಸುಪ್ರಸಿದ್ಧವೂ ಆದ ಕೆಲವು ದೃಶ್ಯಗಳನ್ನು ಅನುವಾದಿಸಿ 'ಷೇಕ್ಸ್‌ಪಿಯರ್ ದೃಶ್ಯಗಳು' ಎಂಬ ಸಂಕಲನದಲ್ಲಿ ಪ್ರಕಟಿಸಿ

ಇತರರಿಗೆ ಮಾರ್ಗದರ್ಶನ ನೀಡಿದ್ದಾರೆ. ಡಿ. ವಿ. ಗುಂಡಪ್ಪನವರು ತಮ್ಮ 'ಜಾಕ್‌ಕೇಡ್, ದೊಂಬಿದಾಂಥಲೆ ಪ್ರಸಂಗ'ದಲ್ಲಿ *Henry* VI ನಾಟಕದ ಕೆಲವು ಭಾಗಗಳನ್ನು ಅನುವಾದಿಸಿದ್ದಾರೆ.ಜಿ.ಗುಂಡಣ್ಣನವರು *Merchant of Venice* ನಾಟಕವನ್ನು 'ವೆನಿಸಿನ ವ್ಯಾಪಾರಿ' ಎಂಬ ಹೆಸರಿನಲ್ಲೂ, ವೈ. ಯಂ. ಷಣ್ಮುಖಯ್ಯನವರು *Romeo and Juliet* ಮತ್ತು *Hamlet* ನಾಟಕಗಳನ್ನೂ ಕನ್ನಡಿಸಿದ್ದಾರೆ. ಈ ಎಲ್ಲ ಭಾಷಾಂತರಗಳ ಗುಣ ಒಂದೇ ತೆರನಾಗಿಲ್ಲದಿರಬಹುದು. ಆದರೆ ಇವರು ಮಾಡಿರುವ ಕೆಲಸ ಇಂಗ್ಲಿಷ್ ಕಲಿತಿರುವ ಇತರರಿಗೆ ಅನುಕರಣೀಯವಾದುದು. ದೆಹಲಿಯ 'ಕನ್ನಡ ಭಾರತಿ' ಸಂಸ್ಥೆಯವರು ಪ್ರಕಟಿಸಿರುವ 'ಷೇಕ್ಸ್‌ಪಿಯರಿಗೆ ನಮಸ್ಕಾರ' ಎಂಬ ಗ್ರಂಥದ ಕೊನೆಯಲ್ಲಿ ಷೇಕ್ಸ್‌ಪಿಯರನ ನಾಟಕಗಳಿಂದಲೂ ಕವನಗಳಿಂದಲೂ ಹಾಡುಗಳಿಂದಲೂ ಆಯ್ದ ಭಾಗಗಳ ಅನುವಾದಗಳು ಕೆಲವಿವೆ. ಆದರೆ ಇವೆಲ್ಲಾ ನಮ್ಮ ಆಸೆಯನ್ನು ಕೆರಳಿಸುವಂಥವೇ ಹೊರತು ಹಸಿವನ್ನು ಹೋಗಲಾಡಿಸುವಂಥವಲ್ಲ. ಪರ್ವತವಾಣಿಯವರು ತಮ್ಮ ಒಂದೆರಡು ನಾಟಕಗಳಲ್ಲಿ (ಉದಾಹರಣೆಗೆ, 'ಬಹದ್ದೂರ್ ಗಂಡ' 'ಸುಂದ್ರೋಪಸುಂದ್ರು') ಷೇಕ್ಸ್‌ಪಿಯರ್ ನಾಟಕಗಳ ಸನ್ನಿವೇಶಗಳನ್ನು ಉಪಯೋಗಿಸಿಕೊಂಡಿದ್ದಾರೆ. ಆದರೆ ಅವು ಭಾಷಾಂತರಗಳಲ್ಲ.

ಷೇಕ್ಸ್‌ಪಿಯರನನ್ನು ಬಿಟ್ಟರೆ ಇನ್ನಾವ ಇಂಗ್ಲಿಷ್ ನಾಟಕಕಾರನೂ ಅಷ್ಟಾಗಿ ಕನ್ನಡ ಭಾಷಾಂತರಕಾರರ ಗಮನವನ್ನು ಸೆಳೆದಂತೆ ಕಾಣುವುದಿಲ್ಲ. ಪರ್ವತವಾಣಿಯವರು ತಮ್ಮ ಒಂದೆರಡು ಕೃತಿಗಳಲ್ಲಿ ಷೆರಿಡನ್ ಮೊದಲಾದವರ ನಾಟಕಗಳ ದೃಶ್ಯಗಳ ಸನ್ನಿವೇಶಗಳನ್ನು ಬಳಸಿಕೊಂಡಿದ್ದರೂ ಭಾಷಾಂತರಕಾರರಲ್ಲ. ಜಿ. ಆರ್. ಜೋಸ್ಯರ್‌ರವರು ಷೆರಿಡನ್‌ನ *School For Scandal* ಅನ್ನು 'ನಿಂದಾಶಾಲಾ' ಎಂದು ಕನ್ನಡಿಸಿದ್ದಾರೆ. ವಿ. ಸೀತಾರಾಮಯ್ಯನವರ 'ಪಿಗ್‌ಮೇಲಿಯನ್' ಅದೇ ಹೆಸರಿನ ಬರ್ನಾರ್ಡ್ ಷಾರವರ ನಾಟಕದ ಅನುವಾದ. ಎಂ. ರಾಮರಾಯರ 'ನಾಲ್ಕು ಏಕಾಂಕ ನಾಟಕಗಳು' ಎಂಬ ಸಂಕಲನದಲ್ಲಿ ನಾಲ್ಕು ಉತ್ತಮ ಇಂಗ್ಲಿಷ್ ಏಕಾಂಕ ರೂಪಕಗಳ ಅನುವಾದಗಳಿವೆ. ಶಾ. ಬಾಲೂರಾಯರ 'ಕೈಗೆ ಬಂದ ತುತ್ತು' ಸ್ಟ್ಯಾನ್ಲಿ ಹಫ್‌ಟನ್‌ರವರ *Dear Departed* ಎಂಬ ಏಕಾಂಕ ನಾಟಕದ ಆಧಾರದಮೇಲೆ ರಚಿತವಾದುದು. ವಿ. ಸೀತಾರಾಮಯ್ಯನವರ 'ಶ್ರೀಶೈಲಶಿಖರ' ಜೆ.ಬಿ. ಪ್ರೀಸ್ಟ್ಲಿಯವರ *An Inspector Calls* ಎಂಬ ಪ್ರಸಿದ್ಧನಾಟಕದಿಂದ ಪ್ರೇರಿತವಾದುದು. ಸಾಮಾಜಿಕ ಪರಿಸ್ಥಿತಿಗಳಲ್ಲಿ ಬಹಳ ತಾರತಮ್ಯವಿರುವ ಕಾರಣ ಕನ್ನಡಕ್ಕೆ ಇಂಗ್ಲಿಷ್ ನಾಟಕಗಳನ್ನು ಅನುವಾದಿಸುವುದು ಕಷ್ಟದ ಕೆಲಸವೆನ್ನಬೇಕು.

ಕಾದಂಬರಿಗಳ ಮತ್ತು ಸಣ್ಣ ಕತೆಗಳ ವಿಚಾರವೂ ಅಷ್ಟೇ. ಇಂಗ್ಲಿಷಿನಲ್ಲಿರುವ ಕಾದಂಬರಿ ಮತ್ತು ಕಥಾಸಾಹಿತ್ಯಗಳ ಪರಿಮಾಣವನ್ನು ಪರಿಗಣಿಸಿದರೆ ಅದರಿಂದ ಕನ್ನಡಕ್ಕೆ ಅನುವಾದವಾಗಿರುವ ಖ್ಯಾತ ಕಾದಂಬರಿಗಳ ಮತ್ತು ಕಥೆಗಳ ಸಂಖ್ಯೆ ಕಡಿಮೆಯೇ ಎನ್ನಬೇಕು. ವಾಸ್ತವವಾಗಿ ಅವನ್ನು ಬೆರಳುಗಳಿಂದ ಎಣಿಸಿಬಿಡಬಹು

ದೇನೋ ಎನ್ನಿಸುತ್ತದೆ. ಸರ್ ವಾಲ್ಟರ್ ಸ್ಕಾಟ್‌ನ *Talisman* ಕಾದಂಬರಿಯನ್ನು 'ರಕ್ಷಾಕವಚ' ಎಂಬ ಹೆಸರಿನಲ್ಲಿ ಆನಂದರೂ *Kenilworth* 'ಕೆನಿಲ್‌ವರ್ತ್' ಕಾದಂಬರಿಯನ್ನು ಅದೇ ಹೆಸರಿನಲ್ಲಿ ಎಚ್. ಎಲ್. ನಾಗೇಗೌಡರೂ ಸಂಕ್ಷಿಪ್ತರೂಪದಲ್ಲಿ ಕನ್ನಡಿಸಿ ಪ್ರಕಟಿಸಿದ್ದಾರೆ. ಜೇನ್ ಆಸ್ಟಿನ್‌ಳ *Pride and Prejudice* ಅನ್ನು ದೇ.ಜವರೇಗೌಡರು 'ಹಮ್ಮು-ಬಿಮ್ಮು' ಎಂದು ಸೊಗಸಾಗಿ ನಾಮಕರಣಮಾಡಿ ಅನುವಾದಿಸಿದ್ದಾರೆ. ಆನಂದರವರೇ ಬ್ಯಾಲೆಂಟೇನನ *Gascoigne the Sandal Trader* ಎಂಬ ಕೃತಿಯನ್ನು ಭಾಷಾಂತರಿಸಿದ್ದಾರೆ. ಅವರ 'ಪುರುಷಾಮೃಗ' ಆರ್.ಎಲ್. ಸ್ಟೀವನ್‌ಸನ್ನನ *Doctor Jekyl and Mr. Hyde* ಕಥೆಯ ಭಾಷಾಂತರ. ಸ್ಟೀವನ್‌ಸನ್ನನ *Treasure Island* ಎಂಬ ಸುಪ್ರಸಿದ್ಧ ಸಾಹಸದ ಕಥೆ ಬಿ. ಡಿ. ಮಾಧವ ಬಾಳಿಗಾರವರ 'ನಿಕ್ಷೇಪದ್ವೀಪ'ವಾಗಿ ಕನ್ನಡದಲ್ಲಿ ಕಾಣಿಸಿಕೊಂಡಿದೆ. ಬ್ಯಾಲೆಂಟೇನನ *Coral Island* ನ ಕಥೆಯನ್ನು ಎ. ಎನ್. ಮೂರ್ತಿರಾಯರು ತಮ್ಮ 'ಹವಳದ್ವೀಪ'ದಲ್ಲಿ ಹೇಳಿದ್ದಾರೆ. (ಮೂರ್ತಿರಾಯರ 'ಯೋಧನ ಪುನರಾಗಮನ' ಮತ್ತು 'ಪಾಶ್ಚಾತ್ಯ ಸಣ್ಣಕಥೆಗಳು' ಎಂಬ ಪುಸ್ತಕಗಳಲ್ಲಿ ಕೆಲವು ಇಂಗ್ಲಿಷ್ ಸಣ್ಣಕಥೆಗಳೂ ಬಂದಿವೆ.) ಎ.ಪಿ.ಸುಬ್ಬಯ್ಯನವರು ಡಿಕನ್ಸ್‌ನ 'ಡೇವಿಡ್ ಕಾಪರ್‌ಫೀಲ್ಡ್' ಕಾದಂಬರಿಯನ್ನು ಸಂಪೂರ್ಣವಾಗಿ ಕನ್ನಡಿಸಿರುವರು. ಜಾರ್ಜ್ ಎಲಿಯೆಟ್‌ಳ 'ಸೈಲಾಸ್ ಮಾರ್ನರ್'ರನ್ನು ಎಂ. ರಾಮರಾಯರು ಕನ್ನಡಿಸಿದ್ದಾರೆ. ಎ. ಕೃಷ್ಣಮೂರ್ತಿಯವರ 'ಪಾಂಪೆಯ ಕೊನೆಯ ದಿನಗಳು' ಬುಲ್ವಾರ್ ಲಿಟ್ಟನ್‌ರವರ *Last Days of Pompey* ಯ ಭಾಷಾಂತರ. ಇವಲ್ಲದೆ, ಜಾರ್ಜ್ ಆರ್ವೆಲ್‌ರವರ *Animal Farm* ಅನ್ನು 'ಮೃಗ ಪ್ರಭುತ್ವ' ಎಂದು ಎಚ್. ಎಚ್. ಅಣ್ಣಯ್ಯಗೌಡರೂ, ಎಚ್. ಜಿ. ವೆಲ್ಸ್‌ರವರ *Time Machine* ನನ್ನು 'ಕಾಲಯಾನ' ಎಂದು ಭಾರತೀಸುತರೂ, ಜೆ.ಎಚ್.ವಿಲಿಯಮ್ಸ್‌ರ *Elephant Bill* ಅನ್ನು 'ಗಜೇಂದ್ರಲೋಕ' ಎಂದು ಕಸ್ತೂರಿಯವರೂ, Ryder Hegard ರವರ *She* ಯನ್ನು 'ಆಷಾ' ಎಂದು ಎ. ಮೈಲಾರಿರಾಯರೂ ಕನ್ನಡದಲ್ಲಿ ಪ್ರಕಟಿಸಿದ್ದಾರೆ. ಡಾ. ಹಾ. ಮಾ. ನಾಯಕರ 'ಹಾವು–ಹೆಣ್ಣು' ಕಥಾಸಂಕಲನದಲ್ಲಿ ಒಂದೆರಡು ಇಂಗ್ಲಿಷ್ ಕಥೆಗಳ ಅನುವಾದಗಳೂ ಇವೆ.

ಹಲವು ಉತ್ತಮ ಇಂಗ್ಲಿಷ್ ಪ್ರಬಂಧಗಳು ಕನ್ನಡಕ್ಕೆ ಅನುವಾದಿತವಾಗಿವೆ. ಎಸ್. ವಿ. ಪರಮೇಶ್ವರಭಟ್ಟರ 'ಕೆಲವು ಇಂಗ್ಲಿಷ್' ಪ್ರಬಂಧಗಳು, ಎಂ. ರಾಮರಾಯರ 'ಇಪ್ಪತ್ತಾರು ಇಂಗ್ಲಿಷ್ ಪ್ರಬಂಧಗಳು,' ಮತ್ತು ಎನ್. ಎಸ್. ರಾಮಚಂದ್ರಯ್ಯನವರ 'ಗೋಲ್ಡ್‌ಸ್ಮಿತ್ ಮತ್ತು ಇತರ ಪ್ರಬಂಧಗಳು' ಇಂಥ ಅನುವಾದಗಳ ಸಂಕಲನಗಳು.

ಬೇರೆ ಬೇರೆಯ ರಾಷ್ಟ್ರಗಳ ವಿಶಿಷ್ಟವ್ಯಕ್ತಿಗಳ ಚರಿತ್ರೆಗಳೂ ಅನುಭವಗಳೂ ನಮ್ಮ ನುಡಿಗಳಲ್ಲಿ ಎಷ್ಟು ಬಂದರೂ ಬೇಕು. ಆದರೂ ಅದೇಕೋ ಕನ್ನಡದಲ್ಲಿ ಅನುವಾದಿತವಾಗಿರುವ ಇಂಗ್ಲಿಷ್ ಜೀವನ ಚರಿತ್ರೆಗಳು ಒಂದೋ ಎರಡೋ ಇವೆ. ಮಾರ್ಜರಿ ಸೈಕ್ಸ್‌ರವರ 'ರವೀಂದ್ರನಾಥ ಠಾಕೂರರ ಚರಿತ್ರೆ'ಯನ್ನು ವಿ. ಸುಬ್ರಾಯಭಟ್ಟರೂ, ಬ್ರಾಡ್ ಬ್ರೂಕ್ ರವರ 'ಟಿ. ಎಸ್. ಎಲಿಯೆಟ್' ಅನ್ನು ಬಿ.ಎಚ್. ಶ್ರೀಧರರವರೂ, ಲಾರೆನ್ಸ್

ಬಿನ್ಯನ್ ರವರ *Akbar* ('ಅಕ್ಬರ್') ಅನ್ನು ದೇ. ಜವರೇಗೌಡರೂ ಕನ್ನಡಿಸಿದ್ದಾರೆ. ಜಿಮ್ ಕಾರ್ಬೆಟ್‌ರವರ *Man-Eaters of Kumoan*ನ ಕೆಲವು ಅಧ್ಯಾಯಗಳನ್ನು 'ಕುಮಾವು ನರಭಕ್ಷಕ' ಎಂದು ವಿ.ಎಸ್. ನಾರಾಯಣರಾಯರು ಭಾಷಾಂತರಿಸಿದ್ದಾರೆ. ಕೆನೆತ್ ಆಂಡರ್‌ಸನ್‌ರವರ 'ಶಿವನಿಪಲ್ಲಿಯ' ಕಪ್ಪು ಚಿರತೆಯ ಕೆಲವು ಅಧ್ಯಾಯಗಳೂ ಕನ್ನಡದಲ್ಲಿ ಕಾಣಿಸಿಕೊಂಡಿವೆ. ಎಚ್.ಎಲ್.ನಾಗೇಗೌಡರ 'ಪ್ರವಾಸಿ ಕಂಡ ಇಂಡಿಯಾ' ಯೂರೋಪ್ ಮತ್ತು ಇತರ ದೇಶಗಳಿಂದ ನಮ್ಮ ನಾಡಿಗೆ ಬಂದುಹೋದ ಕೆಲವರು ಪ್ರವಾಸಿಗಳು ಬರೆದಿಟ್ಟುಹೋಗಿರುವ ವರ್ಣನೆಗಳ ಅನುವಾದ ಸಂಕಲನ.

ವಿಚಾರಸಾಹಿತ್ಯದ ಕ್ಷೇತ್ರದಲ್ಲಿ ಇಂಗ್ಲಿಷಿನಲ್ಲಿ ಖ್ಯಾತಿವೆತ್ತಿರುವ ಒಂದೆರಡು ಗ್ರಂಥಗಳು ಕನ್ನಡದಲ್ಲಿ ಹೊರಬಿದ್ದಿವೆ. ಜೆ. ಎಸ್. ಮಿಲ್‌ರವರ *On Liberty* ಯನ್ನು ಎಸ್. ರಾಜಗೋಪಾಲರಾವ್ ಮತ್ತು ಬಿ. ಎಚ್. ಶ್ರೀಧರರವರು 'ಸ್ವಾತಂತ್ರ್ಯ ಮೀಮಾಂಸೆ' ಎಂಬ ಹೆಸರಿನಲ್ಲೂ, ಎಚ್.ಮಲ್ಲಯ್ಯನವರು 'ಸ್ವಾತಂತ್ರ್ಯವನ್ನು ಕುರಿತು' ಎಂಬ ಹೆಸರಿನಲ್ಲೂ ಕನ್ನಡಿಸಿದ್ದಾರೆ. ಸಾಹಿತ್ಯವಿಮರ್ಶೆಯಲ್ಲಿ ಪ್ರಸಿದ್ಧವಾದ ಏಬರ್‌ಕ್ರಾಂಬಿಯವರ *Principles of Literary Criticism* ಅನ್ನು 'ಸಾಹಿತ್ಯವಿಮರ್ಶೆಯ ಮೂಲ ತತ್ವಗಳು' ಎಂದೂ ಹಡ್ಸನ್‌ರವರ *Introduction to the Study of Literature* ಅನ್ನು 'ಸಾಹಿತ್ಯ ಪ್ರವೇಶ' ಎಂದೂ ಸಿ. ಪಿ. ಕೆ. ರವರು ಭಾಷಾಂತರಿಸಿರುವರು. ಷೆಲ್ಲಿಯ *Defence of Poetry* ಯನ್ನು ಸಿ. ಮಹದೇವಪ್ಪನವರು 'ಷೆಲ್ಲಿಯ ಕಾವ್ಯಸಮರ್ಥನೆ' ಎಂದು ಅನುವಾದಿಸಿದ್ದಾರೆ.

ಅಮೆರಿಕದ ಸಾಹಿತ್ಯದ ಹಿರಿಯ ಕೃತಿಗಳು ಕೆಲವು ಕನ್ನಡಕ್ಕೆ ಅನುವಾದ ಹೊಂದಿವೆ. ಅಮೆರಿಕದ ಸಾಹಿತ್ಯದ ಸ್ಥೂಲಪರಿಚಯವನ್ನು ಪಡೆಯಲಪೇಕ್ಷಿಸುವವರಿಗೆ ಎ. ಎನ್. ಮೂರ್ತಿರಾಯರು ಭಾಷಾಂತರಿಸಿರುವ ಮಾರ್ಕಸ್ ಕನ್ಲಿಫ್‌ರವರ *Literature of the United States*—'ಸಂಯುಕ್ತ ಸಂಸ್ಥಾನಗಳ ಸಾಹಿತ್ಯ'–ಉಪಯುಕ್ತ ಗ್ರಂಥ. ಗೋಪಾಲಕೃಷ್ಣ ಅಡಿಗರು ಕನ್ನಡಿಸಿರುವ *Leaves of Grass* ('ಹುಲ್ಲಿನ ದಳಗಳು') ಅನ್ನು ಕುರಿತು ಹಿಂದೆಯೇ ಪ್ರಸ್ತಾಪಿಸಲಾಗಿದೆ. ಇದಲ್ಲದೆ ಥೋರೋನ 'ವಾಲ್ಡೆನ್' (*Walden*, ಭಾಷಾಂತರ: ದೇವುಡು ನರಸಿಂಹಶಾಸ್ತ್ರಿಗಳಿಂದ); ಬೆಂಜಮಿನ್ ಫ್ರಾಂಕ್ಲಿನ್‌ನ ಆತ್ಮಕಥೆ (ಭಾಷಾಂತರ : ಜನಾರ್ದನ ಗುರ್ಕಾರರಿಂದ); ಹೆಮಿಂಗ್‌ವೆಯ *Old Man and the Sea* ('ಗೆದ್ದು ಸೋತವನು' ಎಂಬ ಹೆಸರಿಟ್ಟು ಅನುವಾದಿಸಿರುವವರು ಪಂಕಜಾ); ಹಾಥಾರ್ನ್‌ನ *Scarlet Letter* ('ಕೆಂಪು ಅಕ್ಷರ', ಅನುವಾದ : ಬಾಲುರವರಿಂದ); ಎಡ್ಗರ್ ಆ್ಯಲೆನ್‌ಪೋನ *Gold Bug* ('ಸುವರ್ಣಕೀಟ') ಮತ್ತು *Purloined Letter* ('ಕಳುವಾದ ಕಾಗದ'—ಅನುವಾದಿಸಿರುವವರು : ಗೋಪಾಲಕೃಷ್ಣ ಅಡಿಗ); ಜಾನ್‌ಡ್ಯೂಯಿಯವರ *Freedom and Culture* ('ಸ್ವಾತಂತ್ರ್ಯ ಮತ್ತ ಸಂಸ್ಕೃತಿ' ಅನುವಾದ: ಕು. ಶಿ. ಹರಿದಾಸಭಟ್ಟರಿಂದ) ; James Hilton ರವರ *Lost Horizon* ('ಲುಪ್ತದಿಗಂತ', ಸಂಕ್ಷಿಪ್ತ ಅನುವಾದ : ಕೃಷ್ಣಮೂರ್ತಿಯವರಿಂದ) — ಇವೆಲ್ಲಾ ಕನ್ನಡದಲ್ಲಿ ಪ್ರಕಟವಾಗಿವೆ.

ಮೇಲೆ ಹೇಳಿದ ಪ್ರಸಿದ್ಧ ಪುಸ್ತಕಗಳಲ್ಲದೆ, ವಿವಿಧ ವಿಷಯಗಳನ್ನು ಕುರಿತು ಅಮೆರಿಕದ ಇತರ ಲೇಖಕರನೇಕರು ಬರೆದಿರುವ ಕಿರುಹೊತ್ತಗೆಗಳೂ ಕನ್ನಡಕ್ಕೆ ಭಾಷಾಂತರ ಹೊಂದಿವೆ. ಅವುಗಳ ದೊಡ್ಡ ಪಟ್ಟಿಯನ್ನೇ ಕೊಡಬಹುದು. ಉದಾಹರಣೆಗೆ : ಮನ್ವಂತ : 'ಸವಿನೆನಪು' (Eleonor Roosevelt-*This I Remember*); ಧನ್ವಂತ: ಜ್ಞಾನಭಂಡಾರ' (Catherine Shipte-*Pool of Know-ledge*); ಎಸ್. ನಾರಾಯಣನ್: 'ರಷ್ಯಾ ನಿಜ ಚಿತ್ರ' (Edmund Stevens-*This is Russia*) ; ಎಚ್. ಎಸ್. ಕೃಷ್ಣಸ್ವಾಮಿ : 'ಮಾನವನ ಐಹಿಕಾಭ್ಯುದಯ' (*Leo Humberman-Man's Worldly Good*).; ಕೆ. ಎನ್. ಎಸ್. ರಾವ್ : 'ಐಸೆನ್ ಹೋವರ್'); ಉಷಾದೇವಿ: 'ಪ್ರಥಮ ಸ್ಥಾನಗಳನ್ನು ಪಡೆದ ಅಮೆರಿಕದ ಮಹಿಳೆಯರು' (*Aylesa Forsa – American Women who Scored Fist*) ; ಚಿ. ನ. ಮಂಗಳ : 'ಹೆಲೆನ್ ಕೆಲ್ಲರ್' (Vanvik Brooke-*Helen Keller*); ನ. ಬಾಲಸುಬ್ರಹ್ಮಣ್ಯಂ: 'ಕಲೆಗಳು' ಮತ್ತು ಮಾನವ (*Irvin Edmund – The Arts and Man*) ಎನ್. ಎಸ್. ಸೀತಾರಾಮಶಾಸ್ತ್ರೀ: 'ಕೆಂಪು ಟಾಕಣ' (John Steinbeck – *Red Pony*); ಎಂ.ಯಾಮುನಾಚಾರ್ಯ: 'ಥೋರೋ' (William Candri–*Thoreau*): ಎನ್. ಎಸ್. ಸೀತಾರಾಮಶಾಸ್ತ್ರೀ: 'ಅಮೆರಿಕದ ಕತೆ' (Franklin Eschar – *A Brief History of United States*); ನಾ. ಕಸ್ತೂರಿ : 'ರೈಟ್ ಸಹೋದರರು' (*Henry Thomas – The Wright Brothers*) ; ಕೆ. ನಾಗರಾಜ : 'ಆಂಡ್ರ್ಯೂ ಕಾರ್ನೆಗಿ' (Alvin A Harlow - *Andrew Carnegie*) ; ನ. ಕೃ. ಮೂ : ಅಮೆರಿಕದ 'ಶ್ರಮಜೀವಿ' (*Life of an American Labourer*) ; ಎನ್. ಆರ್. ರಾವ್: 'ಗ್ಯಾರೆಟ್‌ಸನ್ ದಿನಚರಿ' (Gerald Warner Brace-Garret's *Chro-nicle*) ನಾ.ಕೃ.ಮೂ : 'ಅಮೆರಿಕದ ಪವಾಡ ಪುರುಷರು' (Frank Luther Mott-*A Gallery of Americans*);ಧನ್ವಂತ: 'ನಾನು ಮಕ್ಕಳಿಂದ ಕಲಿತೆ' Carocine Prutt *I Learn from Children*)) ಎಸ್. ಎಸ್. ರಾವ್: 'ಜನನಿಬಿಡ ಪ್ರಪಂಚ' (Margaret O Hyde—*This Crowded Planet*); ಎ. ಎಸ್. ಕೆದಿಲಾಯ : 'ಥಿಯೋಡೋರ್ ರೂಸ್‌ವೆಲ್ಟ್' (Henry Thomas – *Theodore Roosevelt*) ; ಎಸ್. ಬಿದಾನಿ : 'ಜೋಸೆಫ್ ಪ್ಯೂಲಿಟ್ಜೆರ್' (Iris Nobel – *Joseph Pulitzer*) ; ಸತ್ಯಪ್ರಿಯ: 'ಜಾರ್ಜ್‌ವಾಷಿಂಗ್‌ಟನ್' (Marcus Cunliffe-*George Washing ton*) ; ಎಸ್. ಕೃಷ್ಣಮೂರ್ತಿ : 'ಅಮೆರಿಕನ್ ಚಿತ್ರ ಕಲೆಯ ಸಂಕ್ಷಿಪ್ತ ಇತಿಹಾಸ' (James Thomas Fleckner–*A Short History of American Painting*) ; ಎಂ. ವಿ. ಕೃಷ್ಣರಾವ್ : ಅಮೆರಿಕನ್ ಪ್ರೆಸಿಡೆನ್ಸಿ ಅಥವಾ ಅಮೆರಿಕೆಯ ಅಧ್ಯಕ್ಷಾಲಯ Clinton Rocisiter – *The American Presidency*) ; ಹರಿದಾಸಭಟ್ಟ: 'ನಡು ಹಗಲಿನ ಕತ್ತಲೆ' (Arthur Koestler—*Darkness at Noon*) ; ಮನ್ವಂತ :

'ಸುಗ್ಗಿಯ ಹಾಡು' *(Rice Sprout Song)* ಶಿವರಾಮ ಕಾರಂತ : 'ಪಂಚ ಋತು' (Kar Eske–*The Five Seasons)*; ಚಾಳುಕ್ಯ : 'ಮುಳ್ಳುಬೇಲಿ' (Hall Cain-*Barbed wire)* ; ಎಚ್. ವಿ. ಸಾವಿತ್ರಮ್ಮ : 'ಶಶಿಲೇಖಾ' ಮತ್ತು 'ನೀಲನೇತ್ರೆ' (S. W. Blaire – *A Digit of the Moon* and *A Brought of Blue)* ; ಗದರ್ಗ್‌ಕರ್ : 'ಕಾಡಿನ ಕರೆ' *(The Call of the Wild)* ; ಡಿ. ವಿ. ರಾಘವೇಂದ್ರ: 'ಬಾಳನಿಯಮ' (ಜಾಕ್ ಲಂಡನ್‌ರವರ ಎಂಟು ಸಣ್ಣ ಕಥೆಗಳು) ; ಕ್ಷೀರಸಾಗರ : 'ಕಲಹ ಕುತೂಹಲ' (ಓ ಹೆನ್ರಿರವರ *A Harem Tragedy* ಯ ಆಧಾರದ ಮೇಲೆ ರಚಿತವಾದುದು); ನಾ. ಕೃ. ಮೂರ್ತಿ: 'ಸಮಯೋಪಾಯ' (ಅಮೆರಿಕದ ಐದು ಕಥೆಗಳು ಮತ್ತು ಒಂದು ಏಕಾಂಕನಾಟಕ) ; ಸೇವಾ ನಮಿರಾಜಮಲ್ಲ : 'ಸೇತುವೆಯಲ್ಲಿ ಮರಣ ಕಾದಿತ್ತು' (Tharnton Wilder—*Bridge of Sans Louis Ray*) ಎಚ್. ವಿ. ಸಾವಿತ್ರಮ್ಮ : 'ಮಹಾತ್ಮಗಾಂಧಿ' (Louis Fischer—*The Life of Mahatma Gandhi*) ; ಉಡುಪಿ ಲಕ್ಷ್ಮೀನಾರಾಯಣ ಆಚಾರ್ಯ: 'ಅದೃಷ್ಟಶಾಲಿ ರಾಷ್ಟ್ರನಾಯಕ ಜಾರ್ಜ್‌ವಾಷಿಂಗ್‌ಟನ್' (Jeanette Eaton – *Leader by Destiny)* ; ಕೊಡಲಿ ಚಿದಂಬರಂ: 'ಎವರೆಸ್ಟ್ ವೀರ' (James Ramsay Ullman-*The Everest Hero)* ; – ಇವೇ ಮೊದಲಾದ ಇನ್ನೂ ಹತ್ತಾರು ಪುಸ್ತಕಗಳನ್ನು ಹೇಳಬಹುದು. ಅವುಗಳಲ್ಲಿ ಕಂಡು ಬರುವ ವಸ್ತು ವೈವಿಧ್ಯ ಸೋಜಿಗವನ್ನುಂಟುಮಾಡುವಂತಹುದು. ಅಮೆರಿಕದ ಜನತೆಯಲ್ಲಿ, ಸಾಹಿತ್ಯ, ಸಂಸ್ಕೃತಿಗಳಲ್ಲಿ ನಮ್ಮವರಿಗೆ ಹೇಗೆ ಆಸಕ್ತಿ ಬೆಳೆದಿದೆ ಎನ್ನುವುದಕ್ಕೆ ಇದೊಂದು ಸೂಚಿಯಾಗಿದೆ ಎನ್ನಬಹುದು.

ಇಂಗ್ಲಂಡ್ ಅಮೆರಿಕಗಳಲ್ಲಿ ರಚಿತವಾದ ಗ್ರಂಥಗಳನ್ನು ಇಂಗ್ಲಿಷಿನಿಂದ ಕನ್ನಡಕ್ಕೆ ಭಾಷಾಂತರಿಸಿರುವಂತೆಯೇ ನಮ್ಮ ಲೇಖಕರು ಕೆಲವರು ಆ ಭಾಷೆಯಲ್ಲಿ ದೊರೆಯುವ ಇತರ ಐರೋಪ್ಯ ಭಾಷೆಗಳ ಕೆಲವು ಕೃತಿಗಳನ್ನೂ ಕನ್ನಡಿಸಿ ತನ್ಮೂಲಕ 'ಇಂಗ್ಲಿಷ್ ಭಾಷೆಯ ತಿಳಿವು, ಜ್ಞಾನದ ಭಂಡಾರಕ್ಕೆ ಬೀಗದ ಕೈಯಿದ್ದಂತೆ' ಎಂಬ ಹೇಳಿಕೆಯನ್ನು ಸಾರ್ಥಕಗೊಳಿಸಿದ್ದಾರೆ. ಪ್ರಾಚೀನ ಗ್ರೀಕ್ ಭಾಷೆಯಿಂದ ನಾಟಕಗಳನ್ನು ಅನುವಾದಿಸುವ ಪದ್ಧತಿ ಬಿ. ಎಂ. ಶ್ರೀ. ಯವರಿಂದ ಆರಂಭವಾದುದು ಈ ತಲೆಮಾರಿನಲ್ಲಿ ಮುಂದುವರಿದಿದೆ. ಯೂರಿಪಿಡೀಸನ 'ಮೀಡಿಯಾ' ನಾಟಕವನ್ನು ಕೆ. ಎಸ್. ನರಸಿಂಹಸ್ವಾಮಿಯವರೂ, ಸಾಫೊಕ್ಲೀಸನ 'ಏಜಾಕ್ಸ್' ನಾಟಕವನ್ನು ಸುಜನಾರವರೂ, ಸಾಫೊಕ್ಲೀಸನ 'ಈಡಿಪಸ್‌ದೊರೆ' ಮತ್ತು ಆರಿಸ್ಟಾಫನೀಸನ 'ಕಪ್ಪೆಗಳು' ಎಂಬ ನಾಟಕಗಳನ್ನು ಕೆ. ವಿ. ರಾಘವಾಚಾರ್ಯರೂ, ಈಸ್ಕಿಲೀಸನ 'ಬದ್ಧಪ್ರಮಿಥ್ಯೂಸ್' ನಾಟಕವನ್ನು ಟಿ. ವಿ. ವೆಂಕಟಾಚಲಶಾಸ್ತ್ರಿಗಳೂ ಭಾಷಾಂತರಿಸಿ ಕನ್ನಡದಲ್ಲಿ ದೊರೆಯುವ ಗ್ರೀಕ್ ಸಾಹಿತ್ಯ ಕೃತಿಗಳ ಸಂಪತ್ತನ್ನು ಹೆಚ್ಚಿಸಿದ್ದಾರೆ. ಗ್ರೀಕರ ತಾತ್ವಿಕ ಶಿರೋಮಣಿಯಾದ ಪ್ಲೇಟೋನ 'ರಿಪಬ್ಲಿಕ್' (ಆದರ್ಶರಾಜ್ಯ) ಗ್ರಂಥವನ್ನು ಕೆ. ವೆಂಕಟರಾಮಪ್ಪನವರೂ ಆರಿಸ್ಟಾಟಲನ 'ಕಾವ್ಯಮೀಮಾಂಸೆ'ಯನ್ನು ನ. ಬಾಲಸುಬ್ರಹ್ಮಣ್ಯರವರೂ ಕನ್ನಡಿಸಿ

ದ್ದಾರೆ. ಹೋಮರನ 'ಒಡಿಸ್ಸಿ'ಯ ಗದ್ಯಾನುವಾದ ಜಿ. ಎ. ರೆಡ್ಡಿಯವರಿಂದಲೂ ಈಸೋಪನ ನೀತಿಕಥೆಗಳ ಭಾಷಾಂತರ ಆನಂದರಿಂದಲೂ ನರಸಿಂಹಶಾಸ್ತ್ರಿಗಳಿಂದಲೂ ನಡೆದಿವೆ. ಇಂಥ ಉತ್ಕೃಷ್ಟವಾದ ಗ್ರೀಕ್ ಗ್ರಂಥಗಳು (ಇಂಗ್ಲಿಷಿನ ಮೂಲಕ) ಕನ್ನಡಕ್ಕೆ ಬಂದಿರುವುದು ಬಹು ಸಂತೋಷದ ಸಂಗತಿ.

ಗ್ರೀಕ್ ಸಾಹಿತ್ಯದಿಂದಲ್ಲದೆ ಇತರ ಐರೋಪ್ಯ ಸಾಹಿತ್ಯಗಳ ಕೃತಿರತ್ನಗಳಲ್ಲಿ ಕೆಲವು ಇಂಗ್ಲಿಷಿನ ದ್ವಾರ ಕನ್ನಡಕ್ಕೆ ಪರಿವರ್ತಿತವಾಗಿವೆ. ಈ ಭಾಷಾಂತರ ಮತ್ತು ರೂಪಾಂತರಗಳ ಸಂಖ್ಯೆ ಗಮನಾರ್ಹವಾದುದು ಮಾತ್ರವಲ್ಲದೆ ತುಂಬಾ ಆಶಾದಾಯಕವೂ ಆಗಿದೆ ; ಆಧುನಿಕ ಕನ್ನಡ ಗ್ರಂಥ ಪ್ರಪಂಚವೂ ವಾಚನ ಪ್ರಪಂಚವೂ ಹೇಗೆ ಮೆಲ್ಲ ಮೆಲ್ಲನೆ ತಮ್ಮ ಎಲ್ಲೆಗಳನ್ನು ವಿಸ್ತರಿಸಿಕೊಳ್ಳುತ್ತಿವೆ ಎಂಬುದಕ್ಕೆ ಕೈಗನ್ನಡಿಯಂತಿದೆ. ಇಂಥ ಅನುವಾದಗಳಲ್ಲಿ ರಷ್ಯನ್ ಭಾಷೆಯ ಕೃತಿಗಳಿಗೆ ಪ್ರಥಮಸ್ಥಾನ ಸಲ್ಲಬೇಕು. ರಷ್ಯದ ಹಲವು ಉದ್ಗ್ರಂಥಗಳು ಕನ್ನಡದಲ್ಲಿ ಇಂದು ಲಭಿಸುತ್ತವೆ. ಇವುಗಳಲ್ಲಿ ಮೊದಲು ಹೆಸರಿಸಬೇಕಾದಂತಹುದು ದೇ. ಜವರೇಗೌಡರು ಮಾಡಿರುವ ಕೌಂಟ್ ಲಿಯೋ ಟಾಲ್‌ಸ್ಟಾಯ್‌ರವರ 'ರಿಸರೆಕ್ಷನ್' (*Resurrection*) ಎಂಬ ಬೃಹತ್ಕಾದಂಬರಿಯ ಅನುವಾದವಾದ 'ಪುನರುತ್ಥಾನ'. ಟಾಲ್ಸ್‌ಟಾಯ್‌ರವರ ಕಾಸಕ್ಸ್ *Cossacks* ಕಾದಂಬರಿ 'ಮಲೆನಾಡಿನವರು' ಎಂದು ಗೊರೂರು ರಾಮಸ್ವಾಮಿ ಐಯಂಗಾರ್ಯರಿಂದ ಕನ್ನಡಕ್ಕೆ ತರ್ಜುಮೆಯಾಗಿದೆ. ಟೌಲ್ಸ್‌ಟಾಯ್‌ರವರ ಸಣ್ಣ ಕಥೆಗಳಲ್ಲಿ ಕೆಲವನ್ನು ಎಲ್. ಗುಂಡಪ್ಪನವರು ಭಾಷಾಂತರಿಸಿ ೧೯೩೬ರಲ್ಲಿ ಪ್ರಕಟಿಸಿದ್ದರು. ಅವರ ಆ ಸಂಕಲನದ ಎರಡನೆಯ ಮುದ್ರಣ ೧೯೬೪ರಲ್ಲಿ ಹೊರಬಿತ್ತು ('ಟಾಲ್‌ಸ್ಟಾಯ್ ಅವರ ಕಥೆಗಳು'). ಅಲೆಕ್ಸಿಟೌಲ್ಸ್‌ಟಾಯ್‌ರವರ 'ಆರ್ಡಿಯಲ್'(*Ordeal*) ಕಾದಂಬರಿಯನ್ನು ಆನಂದರು 'ಉಗ್ರಪರೀಕ್ಷೆ' ಎಂದುಹೆಸರಿಟ್ಟು ಕನ್ನಡಿಸಿದ್ದಾರೆ. ಆನಂದರೇ ವಿಗ್ ಡೊರೋವಾರವರ *Diary of a School Teacher* ಅನ್ನು 'ಶಾಲಾ ಉಪಾಧ್ಯಾಯಿನಿಯೊಬ್ಬಳ ದಿನಚರಿ' ಎಂದು ಅನುವಾದಿಸಿದ್ದಾರೆ. ಗಾರ್ಕಿಯವರ ಆತ್ಮ ಕಥೆಗಳನ್ನು 'ಜನತೆಯ ನಡುವೆ' ಎಂದೂ 'ನನ್ನ ಬಾಲ್ಯ' ಎಂದೂ ನಿರಂಜನರು ಭಾಷಾಂತರಗೈದಿರುವರು. ಗಾರ್ಕಿಯವರ ಇಪ್ಪತ್ತೊಂದು ಕಥೆಗಳನ್ನು ಅ. ನ. ಕೃಷ್ಣರಾಯರು 'ರಸಿಕಾಗ್ರಣಿ' ಮತ್ತು 'ನೀಲಲೋಚನೆ ಮತ್ತು ಇತರ ಕಥೆಗಳು' ಎಂಬ ತಮ್ಮ ಎರಡು ಸಂಕಲನಗಳಲ್ಲಿ ಪ್ರಕಟಿಸಿದ್ದಾರೆ. ಇವಾನ್ ಟರ್ಜನಿವ್ ರವರ *A Hunter's Sketches* ಅನ್ನು ಶ್ರೀಧರಮೂರ್ತಿಯವರು 'ಷಿಕಾರಿಯ ಚಿತ್ರಗಳು' ಎಂದೂ, ತ. ರಾ. ಸು. ಅವರು*First Love* ಅನ್ನು 'ಪ್ರಥಮಪ್ರಣಯ' ಎಂದೂ ಅನುವಾದಿಸಿದ್ದಾರೆ. *First Love* ಅನ್ನು ಮೊದಲಪ್ರೇಮ ಎಂಬ ಹೆಸರಿನಲ್ಲಿ ಎಂ. ರಾಮನ್ ರವರೂ. ಅನುವಾದಿಸಿದ್ದಾರೆ. ವ್ಲಾಡಿಮಿರ್ ಡ್ಯೂಡೆನ್‌ಸ್ಲೆವ್‌ರವರ *A New Year's Tale* ಮರಿಯಪ್ಪ ಭಟ್ಟರಿಂದ ಕನ್ನಡಿಸಲ್ಪಟ್ಟು 'ಒಂದು ಯುಗಾದಿಯ ಕಥೆ'ಯಾಗಿ ಅವತರಿಸಿದೆ. ಎನ್. ಸುಬ್ರಹ್ಮಣ್ಯರ 'ಇಸ್ಪೀಟರಾಣಿಯ' ಮೂಲಲೇಖಕರು ಪುಷ್ಕಿನ್‌ರವರು.

ಚೆಕಾಫ್‌ನ *The Bride* ಎಂಬ ಕಾದಂಬರಿಯನ್ನು ನಿರಂಜನರವರೂ, ಅವನ ಕಿರು ಕಾದಂಬರಿಗಳಲ್ಲೂ ಕಥೆಗಳಲ್ಲೂ ಕೆಲವನ್ನು ಗೋ.ನಂ. ಚುಳಕಿಯವರೂ, ಎಚ್. ವಿ. ಸಾವಿತ್ರಮ್ಮನವರೂ, ಮತ್ತು ಎಸ್. ವಿ. ರಂಗಣ್ಣನವರೂ ಅನುವಾದಿಸಿದ್ದಾರೆ. ಅದೇ ಲೇಖಕನ*Uncle Vanya* 'ನಾಟಕ' ವೇಣು ಮಾವ ಎಂದು ಪಡಕೋಣೆ ಸೀತಾಬಾಯಿ ಯವರಿಂದ ಕನ್ನಡದಲ್ಲಿ ಬಂದಿದೆ. ಪರ್ವತವಾಣಿಯವರ 'ವಾರ್ಷಿಕೋತ್ಸವ' ಚೆಕಾಫನ (*Anniversary*)ಯ ಆಧಾರದ ಮೇಲೆ ರಚಿತವಾದುದು. ಪ. ವಿ. ಚಂದ್ರಶೇಖರರವರು ಪುಷ್ಕಿನ್, ಟರ್ಜನೀವ್, ಡೋಸ್ಟೊವಿಸ್ಕಿ ಮತ್ತು ಟಾಲ್‌ಸ್ಟಾಯ್‌ರವರ ಕೆಲವು ಕಥೆಗಳನ್ನು ಅನುವಾದಿಸಿ 'ರಷ್ಯಾದ ಸಣ್ಣ ಕಥೆಗಳು' ಎಂಬ ಪುಸ್ತಕದಲ್ಲಿ ಹೊರತಂದಿದ್ದಾರೆ. ಬಿ. ಎಸ್. ರುಕ್ಕಮ್ಮನವರು ನೋಸೋವ್‌ರವರ 'ಶಾಲೆಯ ಮಕ್ಕಳು' ಎಂಬ ಪುಸ್ತಕ ವನ್ನು ಅನುವಾದಿಸಿರುವರು.

ನಾರ್ವೆ ದೇಶದ ಪ್ರಸಿದ್ಧ ನಾಟಕಕಾರ ಬಾಯೋರ್ನ್‌ಸನ್‌ನ 'ಲಿಯೋನಾರ್ಡೊ' ನಾಟಕದ ಕನ್ನಡ ಅನುವಾದ (ಎಸ್. ಜಿ. ಶಾಸ್ತ್ರಿಗಳು ಮಾಡಿದ್ದು) ಈ ಅವಧಿಯಲ್ಲಿ ಪ್ರಕಟವಾಗಿದೆ. ಬೆಲ್ಜಿಯಮ್‌ನ ಕವಿ ಮೇಟರ್‌ಲಿಂಕ್‌ನ 'ಮೊನ್ನವನ್ನ' ನಾಟಕವನ್ನು ಅನುವಾದಿಸಿರುವವರೂ ಎಸ್. ಜಿ. ಶಾಸ್ತ್ರಿಗಳೇ. ಕನ್ನಡದಲ್ಲಿ ಮೊಟ್ಟಮೊದಲಿಗೆ ಇಬ್ಸೆನ್ ನಾಟಕಗಳನ್ನು ತಂದವರೂ ಅವರೇ ('ಆರ್ಯಕ,' 'ಹೆಲ್ಗೊಲ್ಯಾಂಡಿನ ವೀರರು' ಮತ್ತು ಸೂತ್ರದ ಗೊಂಬೆ'.) ಅವರ ಅನಂತರ ಗೋಪಾಲಕೃಷ್ಣ ಅಡಿಗರು ಇಬ್ಸೆನ್ನನ *Enemy of the People* ಅನ್ನು 'ಜನತೆಯ ಶತ್ರು' ಎಂದೂ, ಆದ್ಯ ರಂಗಾಚಾರ್ಯರು *Ghosts* ಮತ್ತು *Wild Duck* ನಾಟಕಗಳನ್ನು 'ಪ್ರಾರಬ್ಧ' ಮತ್ತು 'ಕಾಡುಕೋಳಿ' ಎಂದೂ ಭಾಷಾಂತರಿಸಿದ್ದಾರೆ.

ಫ್ರಾನ್ಸ್ ದೇಶದ ನಾಟಕಕಾರ ಮೋಲಿಯರ್‌ನ ಎರಡು ನಾಟಕಗಳನ್ನು 'ತಾರ್ತೂಫ್' ಮತ್ತು 'ಬೂಜ್ವಾ ಮಹನೀಯನಾದದ್ದು', ಎ. ಎನ್. ಮೂರ್ತಿರಾಯರು ಕನ್ನಡಕ್ಕೆ ಭಾಷಾಂತರ ಮಾಡಿದ್ದಾರೆ. ಹಿಂದೆ ಮೂರ್ತಿರಾಯರೇ 'ತಾರ್ತೂಫ್' ನಾಟಕ ವನ್ನು 'ಆಷಾಡಭೂತಿ' ಎಂದು ರೂಪಾಂತರಮಾಡಿದ್ದರು. ಮೋಲಿಯರ್‌ನ ಇತರ ಅನೇಕ ನಾಟಕಗಳ ರೂಪಾಂತರಗಳು ಪರ್ವತವಾಣಿ, ಕಸ್ತೂರಿ, ಎಂ. ರಾಮರಾವ್, ಎಚ್. ಯೋಗನರಸಿಂಹಂ, ಮೊದಲಾದವರಿಂದ ಯಶಸ್ವಿಯಾಗಿ ನಡೆದಿವೆ. ಪರ್ವತವಾಣಿ ಯವರ 'ಹಣಹದ್ದು'(*La Avare*),ಕಸ್ತೂರಿಯವರ 'ಗಗ್ಗಯ್ಯನ ಗಡಿಬಿಡಿ' (*Monsier de Pourceangnae*), ರಾಮರಾಯರ 'ವ್ಯಾಧಿಗೆ ತಕ್ಕ ವೈದ್ಯ' ಮತ್ತು 'ಚಿತ್ರಪ್ರಮಾದ' (*Le Medicin Malgre Lui* ಮತ್ತು *Sganarelle o uLe Coen Imaginaire*) ಯೋಗನರಸಿಂಹಂರವರ 'ಮನ್ನಿಲ್ಲದ ಮದುವೆ' (*Le Mariage Force*) ಇವೆಲ್ಲಾ ಮೋಲಿಯರ್ ನಾಟಕಗಳ ಆಧಾರದ ಮೇಲೆ ರಚಿತವಾದ ಕೃತಿಗಳು. ಫ್ರೆಂಚ್ ನಾಟಕ ಕಾರ ರ‍್ಯಾಸೀನನ *Phaedre* ನಾಟಕದ ಛಾಯೆಯನ್ನು ಚದುರಂಗರ 'ಕುಮಾರರಾಮು' ನಲ್ಲಿ ಕಾಣಬಹುದು. ಫ್ರಾನ್ಸಿನ ಪ್ರಖ್ಯಾತ ಕತೆಗಾರ ಮೋಪಸಾನ ಒಂಬತ್ತು ಕತೆಗಳನ್ನು

ಗೊ. ವೆಂ. ಚುಳಕಿಯವರು ಕನ್ನಡದಲ್ಲಿ ಬರೆದಿದ್ದಾರೆ. ವಾಲ್ಟೇರನ 'ಕ್ಯಾಂಡಿಡ್' ಜಿ. ಪಿ. ರಾಜರತ್ನಂರವರಿಂದ ಕನ್ನಡಕ್ಕೆ ದತ್ತವಾಗಿದೆ. ಬಿ. ಡಿ. ಮಾಧವ ಬಾಳಿಗಾರವರು ಡ್ಯೂಮಾಸನ *Three Musketeers* ಕಾಂದಬರಿಯನ್ನು 'ಯೋಧತ್ರಯರು' ಎಂಬ ಹೆಸರಿನಲ್ಲಿ ಸಂಕ್ಷೇಪವಾಗಿ ನಿರೂಪಿಸಿದ್ದಾರೆ. ವಿಕ್ಟರ್‌ಹ್ಯೂಗೋನ *Le Miserable* 'ದುಃಖಾರ್ತರು' ಎಂದು ಎ. ಪಿ. ಸುಬ್ಬಯ್ಯನವರಿಂದಲೂ 'ನೊಂದಜೀವಿ' ಎಂದು ಕಸ್ತೂರಿಯವರಿಂದಲೂ ಸಂಕ್ಷೇಪವಾಗಿ ಕನ್ನಡಿಸಲ್ಪಟ್ಟಿದೆ. 'ಅವನ ಮರಣದಂಡನೆ'ಯನ್ನು ಹೊಸಮನೆ ಸಿದ್ದಪ್ಪನವರು ಕನ್ನಡಕ್ಕೆ ನೀಡಿದ್ದಾರೆ.

ಯೂರೋಪಿನ ಇತರ ಭಾಷೆಗಳಿಂದಲೂ ಇಂಗ್ಲಿಷಿನ ಮಾರ್ಗವಾಗಿ ಕನ್ನಡಕ್ಕೆ ಕೊಡುಗೆ ಸಂದಿದೆ. ಜರ್ಮನಿ ದೇಶದ ಶ್ರೇಷ್ಠಕವಿ ಗಯಟೆಯ *Faust, PartI* ನಾಟಕ ಪು. ತಿ. ನರಸಿಂಹಾಚಾರ್ಯರಿಂದ ಕನ್ನಡಿಸಲ್ಪಟ್ಟು ಈಚೆಗೆ ಪ್ರಕಟವಾಗಿದೆ. ಜರ್ಮನಿಯ ಜಾನಪದ ಸಾಹಿತ್ಯ ಸಂಗ್ರಾಹಕರಾದ ಗ್ರಿಮ್ ಸಹೋದರರ ಜಗದ್ವಿಖ್ಯಾತವಾದ ನೂರಾರು ಕಥೆಗಳನ್ನು ಎಂ. ರಾಮರಾಯರು ಕನ್ನಡದಲ್ಲಿ ಬರೆದಿದ್ದಾರೆ. ರಾಮರಾಯರೇ ಡೆನ್ಮಾರ್ಕಿನ ಹ್ಯಾನ್ಸ್ ಕ್ರಿಶ್ಚಿಯನ್ ಆ್ಯಂಡರ್‌ಸನ್‌ನ ಏಳು ಕಥೆಗಳನ್ನು ಕನ್ನಡಿಸಿದ್ದಾರೆ. ಜಿ. ಪಿ. ರಾಜರತ್ನಂರವರೂ ಒಬ್ಬರಿಬ್ಬರು ಇತರರೂ ಗ್ರಿಮ್ ಮತ್ತು ಆ್ಯಂಡರ್‌ಸನ್‌ರ ಕೆಲವು ಕಥೆಗಳನ್ನು ಕನ್ನಡಿಸಿರುವುದುಂಟು. ಹರ್ಮನ್ ಹೆಸ್‌ರವರ 'ಸಿದ್ಧಾರ್ಥ' ಎಂಬ ಕಾದಂಬರಿ ಹಿಲ್ಡಾ ರೋಸ್ನರ್‌ರವರಿಂದ ಇಂಗ್ಲಿಷಿಗೆ ಭಾಷಾಂತರಿತವಾಗಿದೆ. ಅದನ್ನು ಬಿ. ಎಸ್. ರಾಮಸ್ವಾಮಿಯವರು ಕನ್ನಡಕ್ಕೆ ಅನುವಾದಿಸಿದ್ದಾರೆ. ಇಟಲಿಯ ರಾಜತಂತ್ರಜ್ಞ ಮ್ಯಾಕಿಯವೆಲಿಯ *Prince* ನವರತ್ನ ರಾಮರಾಯರ 'ಮ್ಯಾಕಿಯವೆಲಿಯ ರಾಜನೀತಿ' ಎಂಬ ಪುಸ್ತಕದಲ್ಲಿ ಮೂಡಿದೆ.

ನಮ್ಮ ಭಾರತೀಯ ಲೇಖಕರನೇಕರು ಇಂಗ್ಲಿಷಿನಲ್ಲಿ ಕೃತಿರಚನೆಗೈದಿದ್ದಾರೆ. ಇಂಥ ಹಲವು ಉತ್ತಮ ಗ್ರಂಥಗಳು ಖ್ಯಾತಿವೆತ್ತಿವೆ. ಅವುಗಳಲ್ಲಿ ಚಿತ್ರಿತವಾಗಿರುವ ಜೀವನ ಭಾರತೀಯರದು; ಚರ್ಚಿತವಾಗಿರುವ ಸಮಸ್ಯೆಗಳು ನಮ್ಮ ದೇಶಕ್ಕೆ ಸಂಬಂಧಪಟ್ಟಿರುವುವು. ಆದಕಾರಣ ಅವನ್ನು ನಮ್ಮ ದೇಶಭಾಷೆಗಳಿಗೆ ಭಾಷಾಂತರ ಮಾಡುವ ಚಾಪಲ್ಯ ಸಹಜವಾಗಿರುವುದು ಮಾತ್ರವಲ್ಲದೆ ಅಗತ್ಯವೂ ಆಗಿದೆ ಎನ್ನಬಹುದು. ಇವುಗಳಲ್ಲಿ ಮೊದಲು ಉಲ್ಲೇಖಿಸಬೇಕಾದ ಕೃತಿಗಳು ಗಾಂಧೀಜಿ ಮತ್ತು ವಿವೇಕಾನಂದರವು. ಗಾಂಧೀಜಿಯವರ ಕೃತಿಗಳನ್ನೆಲ್ಲಾ ಕನ್ನಡಕ್ಕೆ ಅನುವಾದಿಸಿ ತಮ್ಮ 'ಗಾಂಧೀಗ್ರಂಥಮಾಲೆಯಲ್ಲಿ' ಪ್ರಕಟಿಸಿ ಕನ್ನಡಿಗರಿಗೆ ಉಪಕಾರವೆಸಗಿರುವವರು ಗಾಂಧೀ ಸ್ಮಾರಕನಿಧಿಯವರು. ಹಾಗೆಯೇ ಮೈಸೂರಿನ ರಾಮಕೃಷ್ಣ ಆಶ್ರಮದವರು 'ವಿವೇಕಾನಂದರ ಕೃತಿಶ್ರೇಣಿ'ಯಲ್ಲಿ ಸ್ವಾಮಿ ವಿವೇಕಾನಂದರ ಬೋಧನೆಗಳು ಭಾಷಣಗಳನ್ನೆಲ್ಲಾ ಒಂದೊಂದಾಗಿ ಕನ್ನಡಕ್ಕೆ ತಂದಿದ್ದಾರೆ, ತರುತ್ತಿದ್ದಾರೆ. ಈ ಸಂಸ್ಥೆಗಳಲ್ಲದೆ ಕೆಲವರು ಮಹನೀಯರು ಬಿಡಿಕೃತಿಗಳನ್ನೂ ಕನ್ನಡಿಸಿರುವುದುಂಟು. ಆರ್. ಕೆ. ಪ್ರಭುರವರು ಪ್ರಕಟಿಸಿರುವ *Mohana Mala* ಎಂಬ ಗಾಂಧೀಜಿಯವರ ಉಕ್ತಿಗಳ ಸಂಗ್ರಹ

ವನ್ನು ಕೆ. ಎಸ್. ನರಸಿಂಹಶಾಸ್ತ್ರಿಗಳೂ, 'ಮಹಾತ್ಮರ ಮನೋರಂಗ' ಎಂಬುದಾಗಿ ಆರ್. ಆರ್. ದಿವಾಕರರೂ, *God is Truth* ಎಂಬ ಕೃತಿಯನ್ನು ಕೆ. ನರಸಿಂಹಶಾಸ್ತ್ರಿಗಳೂ, ಕೃಷ್ಣಲಾಲ್ ಮಷ್ರೂವಾಲಾರವರ ಇಂಥದೇ ಸಂಕಲನವನ್ನು 'ಗಾಂಧೀ ವಿಚಾರದೋಹನ'ವೆಂದು ಗುರುನಾಥ ಜೋಷಿಯವರೂ, ಸ್ತ್ರೀಯರ ಸಮಸ್ಯೆಗಳು ಎಂಬ ಹೊತ್ತಗೆಯನ್ನು ಕೂಡಲಿ ಚಿದಂಬರಂರವರೂ 'ಗಾಂಧೀಸಾಹಿತ್ಯ' ಎಂಬ ಸಂಕಲನವನ್ನು ಸಿದ್ಧವ್ವನಹಳ್ಳಿ ಕೃಷ್ಣಶರ್ಮರೂ, ಜಿ. ರಾಮಚಂದ್ರನ್‌ರವರು ರಚಿಸಿರುವ 'ಗಾಂಧೀಕಥಾವಳಿ'ಯನ್ನು ದಿವಾಕರ್‌ರವರೂ, 'ಮೂಲಶಿಕ್ಷಣ'ವನ್ನು ಕುರಿತು ಗಾಂಧೀಜಿಯವರು ಬರೆದಿರುವ ಲೇಖನಗಳ ಸಂಗ್ರಹವನ್ನು ಸಿದ್ದವ್ವನಹಳ್ಳಿ ಕೃಷ್ಣಶರ್ಮರೂ ಕನ್ನಡಕ್ಕೆ ಅನುವಾದಿಸಿದ್ದಾರೆ. ಕೊ. ಚೆನ್ನಬಸಪ್ಪನವರು ವಿವೇಕಾನಂದರ ಕೆಲವು ಪತ್ರಗಳನ್ನು 'ಸ್ವಾಮೀಜಿಯವರ ಪತ್ರಗಳು' ಎಂದು ಕನ್ನಡಿಸಿ ಪ್ರಕಟಿಸಿದ್ದಾರೆ. ರಾಮಕೃಷ್ಣ ಆಶ್ರಮದಿಂದ ಸೋದರಿ ನಿವೇದಿತಾರವರ *The Master As I Saw Him* ಗ್ರಂಥದ ಅನುವಾದವೂ ಬಂದಿದೆ. ಕವಿ ರವೀಂದ್ರರ ಕೃತಿಗಳೇನಕವು ಅವರ ಜನ್ಮ ದಿನೋತ್ಸವದ ಸಂದರ್ಭದಲ್ಲಿ ಕನ್ನಡಿಸಲ್ಪಟ್ಟಿವೆ. ಎಚ್. ವಿ. ಸಾವಿತ್ರಮ್ಮ, ಅಹೋಬಲ ಶಂಕರ, ನಾರಾಯಣ ಸಂಗಮ, ಬೇಂದ್ರೆ ಮೊದಲಾದವರು ಈ ಕೆಲಸವನ್ನು ಎಸಗಿ ನಮ್ಮ ಕೃತಜ್ಞತೆಗೆ ಪಾತ್ರರಾಗಿದ್ದಾರೆ. ಇವುಗಳಲ್ಲಿ ಕೆಲವು ಬಂಗಾಳಿಯಿಂದಲೇ ಅನುವಾದಿತವಾಗಿದ್ದರೆ ಇನ್ನು ಕೆಲವು ಇಂಗ್ಲಿಷ್ ಅನುವಾದಗಳ ಮೂಲಕ ಕನ್ನಡಕ್ಕೆ ಬಂದಿವೆ. ಆದಕಾರಣ ಈ ಲೇಖನದಲ್ಲಿ ಅವಕ್ಕೂ ಸ್ಥಾನವುಂಟು. ರವೀಂದ್ರರ ಪ್ರಸಿದ್ಧ ಭಾಷಣಗಳ ಸಂಗ್ರಹವಾದ *Towards Universal Man* 'ವಿಶ್ವ ಮಾನವನೆಡೆಗೆ' ಎಂದು ಕನ್ನಡದಲ್ಲಿ ಕಾಣಿಸಿಕೊಂಡಿದೆ. ಜವಾಹರಲಾಲ್ ನೆಹರೂರವರ ಕೃತಿಗಳೂ ಬೇಕಾದಷ್ಟು ಕನ್ನಡಕ್ಕೆ ಬಂದಿವೆ. ಅವರ *Glimpses of World History* ಎಂಬ ಬೃಹದ್ಗ್ರಂಥದ ಅರ್ಧಭಾಗವನ್ನು ಜಗತ್ಕಥಾವಲ್ಲರಿ ಎಂದು ಸಿದ್ಧವ್ವನಹಳ್ಳಿ ಕೃಷ್ಣಶರ್ಮರೂ, *A Father's Letters to His Daughter* ಪುಸ್ತಕವನ್ನು ಹೊಯ್ಸಳರೂ, ಆತ್ಮಕಥೆಯನ್ನು ಅಶ್ವತ್ಥನಾರಾಯಣರಾಯರೂ, *Discovery of India* ಗ್ರಂಥವನ್ನು 'ಭಾರತ ದರ್ಶನ' ಎಂಬ ಹೆಸರಿನಲ್ಲಿ (ಎರಡು ಸಂಪುಟಗಳಾಗಿ) ಎಸ್. ವಿ. ಕೃಷ್ಣಮೂರ್ತಿರಾಯರೂ *India Today and Tomorrow* ಎಂಬ ಭಾಷಣವನ್ನು ಎ. ಎನ್. ಮೂರ್ತಿರಾಯರೂ ಕನ್ನಡಿಸಿದ್ದಾರೆ. ಶ್ರೀ ಅರವಿಂದರ *Life Divine* ಮಹಾಗ್ರಂಥದ ೨೦, ೨೧, ೨೨ನೆ ಅಧ್ಯಾಯಗಳನ್ನು ಆರ್. ಕೆ. ಜೋಷಿಯವರು 'ತಮ್ಮ ಅರವಿಂದದರ್ಶನ'ದಲ್ಲಿ ಕೊಟ್ಟಿದ್ದಾರೆ. 'ಯುಗಪುರುಷರ ಅಮೃತ ವಚನಗಳು' ಶ್ರೀ ಅರವಿಂದರ ಮತ್ತು ರವೀಂದ್ರರ ಬರಹಗಳಿಂದ ಆಯ್ದ ವಾಕ್ಯಗಳ ಸಂಕಲನ. ಡಾಕ್ಟರ್ ರಾಧಾಕೃಷ್ಣನ್‌ರವರ ಪ್ರಸಿದ್ಧ ಕೃತಿಗಳಲ್ಲಿ ಒಂದೆರಡು ಕನ್ನಡಕ್ಕೆ ಅನುವಾದಿತವಾಗಿವೆ. ಅವರ *Recovery of Faith* ಅನ್ನು ಎಂ. 'ಯಾಮುನಾಚಾರ್ಯರು' ಮತಧರ್ಮದ ಪುನರುಜ್ಜೀವನ ಎಂಬ ಹೆಸರಿನಲ್ಲೂ, *Kalki or the Future of Civilization* ಅನ್ನು ಸಿ. ಕೆ. ವೆಂಕಟರಾಮಯ್ಯನವರು

'ಕಲ್ಕಿ ಅಥವಾ ನಾಗರಿಕತೆಯ ಭವಿಷ್ಯ' ಎಂಬ ಹೆಸರಿನಲ್ಲೂ, *East and West—Some Reflections* ಅನ್ನು ನಿಕವಮ್ ಮತ್ತು ಅನಂತರಂಗಾಚಾರ್ಯರೂ ಕನ್ನಡಿಸಿದ್ದಾರೆ. ಜವಾಹರಲಾಲರ ತಂಗಿ ಕೃಷ್ಣಹತೀಸಿಂಗರ ಆತ್ಮಕಥೆ *With No Regrets* ಅನ್ನು 'ನೆನಪು ಕಹಿಯಲ್ಲ' ಎಂದು ದೇ. ಜವರೇಗೌಡರೂ, ಮೌಲಾನಾ ಅಜಾದರ *India Wins Freedom* ಅನ್ನು ವಿ. ಸೀತಾರಾಮಯ್ಯನವರೂ, ಹುಮಾಯೂನ್ ಕಬೀರರ ಪುಸ್ತಕವೊಂದನ್ನು 'ಭಾರತದ ಇತಿಹಾಸ ಪಾಠಗಳು' ಎಂದು ತ. ಸು. ಶಾಮರಾಯರೂ, ಅಹ್ಮದ್ ಅಬ್ಬಾಸ್‌ರವರ 'ಡಾಕ್ಟರ್ ಕೊಟ್ನೀಸ್'ಅನ್ನು ತ.ರಾ.ಸು. ಅವರೂ, ಟಿ. ವಿ. ಪರ್ವತೆಯವರ 'ಬಾಲಗಂಗಾಧರ ತಿಲಕ್'ಅನ್ನು ಎಸ್. ಅನಂತನಾರಾಯಣ ಅವರೂ, ಬಿ. ಎಲ್. ನಂದಾರವರ *Nehrus* ಅನ್ನು 'ಮೋತೀಲಾಲ್ ಮತ್ತು ಜವಹರಲಾಲ್‌ನೆಹರು' ಎಂದು ಸಿದ್ದವ್ವನಹಳ್ಳಿ ಕೃಷ್ಣಶರ್ಮರೂ, ಅದೇ ಲೇಖಕರು ಬರೆದಿರುವ ಮಹಾತ್ಮಗಾಂಧಿಯವರ ಜೀವನಚರಿತ್ರೆಯನ್ನು ಜಿ. ವಿ. ನಾರಾಯಣಮೂರ್ತಿಯವರೂ, ರಾಜಾಜಿಯವರ 'ಸೆರೆಮನೆಯ ಮಾತುಕತೆ'ಯನ್ನು ಗರಣಿ ಶ್ರೀನಿವಾಸನ್‌ರವರೂ ವೆರಿಯರ್ ಎಲ್ವಿನ್‌ರವರ *Tribal World of Verrier Elvin* ಅನ್ನು 'ವೆರಿಯರ್ ಎಲ್ವಿನ್‌ರವರ ಗಿರಿಜನ ಪ್ರಪಂಚ' ಎಂದು ಎಚ್. ಎಲ್. ನಾಗೇಗೌಡರೂ, ಜಕೀರ್ ಹುಸೇನರ *Educational Re-construction in India* ವನ್ನು ಭಾರತದಲ್ಲಿ ಶಿಕ್ಷಣದ ಪುನರ್ನಿರ್ಮಾಣ ಎಂದು ಮತ್ತೂರು ಕೃಷ್ಣಮೂರ್ತಿಯವರೂ, ಟಿ. ಪಿ. ಮಹದೇವನ್‌ರವರ *Indian Saints* ಅನ್ನು 'ಸಂತರ ಚರಿತ್ರೆ' ಎಂದು ಮರಿಯಪ್ಪಭಟ್ಟರೂ, ಕೆ. ಪಿ. ಎಸ್. ಮೆನನ್‌ರವರ *Journey Round The World* ಅನ್ನು 'ವಿಶ್ವಪರ್ಯಟಣೆ' ಎಂದು ಎಂ. ಬಿ. ಶೇಷಗಿರಿರಾಯರೂ, ಆರ್. ಪಿ. ಮಸಾನಿಯವರ 'ದಾದಾಭಾಯಿ ನವರೋಜಿ'ಯನ್ನು ಕೂಡಲಿ ಚಿದಂಬರಂರವರೂ, ಸುಕುಮಾರಸೇನ್‌ರವರ *A History of Bengali Literature* ಅನ್ನು ವಿ. ಸೀತಾರಾಮಯ್ಯನವರೂ ಭಾಷಾಂತರಿಸಿದ್ದಾರೆ.

ಭಾರತೀಯರಿಂದ ರಚಿತವಾದ ಕೆಲವು ಉತ್ತಮ ಇಂಗ್ಲಿಷ್ ಕಾದಂಬರಿಗಳು ಇಂದು ಕನ್ನಡದಲ್ಲಿ ಲಭಿಸುತ್ತವೆ. ಆರ್. ಕೆ. ನಾರಾಯಣ್‌ರವರ *Waiting for the Mahatma* 'ಮಹಾತ್ಮರ ಬರವಿಗಾಗಿ' ಎಂಬ ಹೆಸರಿನಲ್ಲಿ ಮತ್ತು *The Guide* 'ಮಾರ್ಗದರ್ಶಿ' ಎಂಬ ಹೆಸರಿನಲ್ಲಿ ಚಿ. ನ. ಮಂಗಳಾರವರಿಂದಲೂ, *Swamy and His friends* 'ಸ್ವಾಮಿ ಮತ್ತು ಸ್ನೇಹಿತರು' ಎಂದು ಎಚ್. ವೈ. ಶಾರದಾಪ್ರಸಾದರಿಂದಲೂ, ಭವಾನಿ ಭಟ್ಟಾಚಾರ್ಯರ *He Who Rides A Tiger* 'ಹುಲಿಯ ಬೆನ್ನೇರಿದಾಗ' ಎಂದು ಮತ್ತು *So Many Hungers* 'ಹಸಿವೋ ಹಸಿವು' ಎಂದು ಎಚ್. ವಿ. ಸಾವಿತ್ರಮ್ಮನವರಿಂದಲೂ, ಮನೋಹರ ಮಲಗಾಂವಕರ್‌ರವರ *The Princes* 'ರಾಜ ಮಹಾರಾಜರುಗಳು' ಎಂದು ಶಂಕರ ಪಾಟೀಲರಿಂದಲೂ ಭಾಷಾಂತರ ಹೊಂದಿವೆ.

ವಿಜ್ಞಾನಕ್ಕೆ ಸಂಬಂಧಿಸಿದ ಕೆಲವು ಒಳ್ಳೆಯ ಪುಸ್ತಕಗಳು ಕನ್ನಡಕ್ಕೆ ಅನುವಾದಿತವಾಗಿವೆ. ಹಿಂದೆ ಹೇಳಿದ ಅಮೆರಿಕದ ಪುಸ್ತಕಗಳ ಪಟ್ಟಿಯಲ್ಲೇ ಇಂಥ ಪುಸ್ತಕಗಳ

ಒಂದೆರಡು ಹೆಸರುಗಳನ್ನು ಕಾಣಬಹುದು. ಅವಲ್ಲದೆ ಇನ್ನೂ ಕೆಲವನ್ನು ಇಲ್ಲಿ ಪ್ರತ್ಯೇಕ ವಾಗಿ ಸೂಚಿಸಬಹುದು. ಬಿ. ವಿ. ಸುಬ್ಬರಾಯಪ್ಪನವರು ಬೋರಿಸ್ ಲೆವಿನ್‌ರವರ *The Origin of the Earth and the Planets*ಅನ್ನು 'ಭೂಮಿ ಮತ್ತಿತರ ಗ್ರಹಗಳು' ಎಂದೂ, ಗ್ಯಾಮೋರವರ *Tomkins in Wonderland* ಅನ್ನು 'ವಿಚಿತ್ರಲೋಕದಲ್ಲಿ ವಿದ್ಯಾಲಂಕಾರ' ಎಂದೂ ಕನ್ನಡಿಸಿದ್ದಾರೆ. ಶಿವರಾಮ ಕಾರಂತರು ಮಾರ್ಗರೆಟ್ ಒಹೈಡ್‌ರವರ *Atoms Today and Tomorrow* ಎಂಬ ಪುಸ್ತಕವನ್ನು 'ಪರಮಾಣು–ಇಂದು ನಾಳೆ' ಎಂದೂ, ರೇಚಲ್ ಎಲ್. ಕೆರೆನ್‌ರವರ *The Sea around us* ಎಂಬ ಪುಸ್ತಕವನ್ನು 'ನಮ್ಮ ಸುತ್ತಲಿನ ಕಡಲು' ಎಂದೂ ಅನುವಾದಿಸಿದ್ದಾರೆ. ಡಿ. ವಿ. ರಾಘವೇಂದ್ರರವರು ಸೆಲಿಗ್ ಹೆಕ್ಟರ್‌ರವರ *Explaining The Atom* ಎಂಬ ಗ್ರಂಥವನ್ನು ಕನ್ನಡಿಸಿರುವರು. *Fun with Mechanics* ಎಂಬ ಹರ್ಬರ್ಟ್ ಮೆಕೆರವರ ಪುಸ್ತಕ ಸಿ. ಕೆ. ಮೂರ್ತಿಯವರಿಂದ 'ಯಾಂತ್ರಿಕ ಶಕ್ತಿಗಳೊಡನೆ ವಿನೋದ' ಎಂದೂ, ಜ್ಯೂಲ್ಸ್‌ವೆರ್ನ್‌ರವರ *Eighty Days Around the World* ಎಂಬುದು ಬಿ. ಕೆ. ಸುಬ್ಬಲಕ್ಷ್ಮಿಯವರಿಂದ 'ಎಂಬತ್ತು ದಿನಗಳಲ್ಲಿ ಪ್ರಪಂಚ ಪ್ರವಾಸ' ಎಂದೂ, ಜ್ಯೂಲ್ಸ್ ವೆರ್ನರ್‌ರವರ ವೈಜ್ಞಾನಿಕ ಕಾದಂಬರಿಯಾದ *A Journey to the Centre of the Earth* ಎಂಬುದು ಗೋಪಾಲಕೃಷ್ಣ ಅಡಿಗರಿಂದ 'ಭೂಗರ್ಭಯಾತ್ರೆ' ಎಂದೂ ಕನ್ನಡದಲ್ಲಿ ಬಂದಿವೆ. ಓರಿಯಂಟ್ ಲಾಂಗ್‌ಮನ್ಸ್ ಪ್ರಕಾಶನ ಸಂಸ್ಥೆಯವರು 'ನಮ್ಮ ಮಕ್ಕಳು', 'ಶಿಶು ಮತ್ತು ಶಿಶುಜನದ ಪೂರ್ವೋತ್ತರಗಳು', 'ಶಿಶುಜನನದ ಪೂರ್ವೋತ್ತರಗಳು ಎಂಬ ಅನುವಾದಿತ ಗ್ರಂಥಗಳನ್ನು ಕನ್ನಡದಲ್ಲಿ ಪ್ರಕಟಿಸಿದ್ದಾರೆ. ಸರ್ ರಾಬರ್ಟ್ ಮಕ್ಕಾರಿಸನ್‌ರ ಕೃತಿಯೊಂದನ್ನು ಡಾಕ್ಟರ್ ಜಿ. ನಾರಾಯಣಸ್ವಾಮಿ ಯವರು ಆಹಾರ ಎಂದು ಅನುವಾದಿಸಿದ್ದಾರೆ. ಇವಲ್ಲದೆ, ಡಾಕ್ಟರ್ ಎಂ. ಕಾಮತ್ ರವರ ಪ್ರಥಮ ಚಿಕಿತ್ಸೆಯ ಕೈಪಿಡಿ (ಅನುವಾದಕರು: ವಿಠ್ಠಲಶೆಣೈ), ಭುವನೇಶ್ವರಿ ಮತ್ತು ಇತರರು ಬರೆದಿರುವ *Science of Living Things* ಎಂಬ ಗ್ರಂಥದ ಅನುವಾದ (ಎಂ. ಎಸ್. ಎಸ್. ರಾವ್‌ರಿಂದ) ಜೀವಿಗಳ ವಿಕಾಸವೂ, ಎಂ. ತಂಗರಾಜ್‌ರ *Life-Giving Sun* ನ ಭಾಷಾಂತರ ಜೀವದಾತ ಸೂರ್ಯ (ಕನ್ನಡಿಸಿರುವವರು: ಕೆ. ಆರ್. ಪ್ರಭಾಕರ)–ಈ ಪುಸ್ತಕಗಳೂ ಪ್ರಕಟವಾಗಿವೆ.

ಮೇಲೆ ಕೊಟ್ಟಿರುವ ಪುಸ್ತಕಗಳ ಪಟ್ಟಿ ಈ ಕಾಲುಶತಮಾನದಲ್ಲಿ ಇಂಗ್ಲಿಷಿನಿಂದ ಕನ್ನಡಕ್ಕೆ ಅನುವಾದವಾಗಿರುವ ಎಲ್ಲ ಗ್ರಂಥಗಳ ಹೆಸರುಗಳನ್ನೂ ಒಳಗೊಂಡಿದೆಯೆಂಬ ಭ್ರಮೆ ನನಗೇನೂ ಇಲ್ಲ. ನನ್ನ ಗಮನಕ್ಕೆ ಬರದಿರಬಹುದಾದ ಇನ್ನೂ ಅನೇಕ ಕೃತಿಗಳಿರಬಹುದು—ಇರಬೇಕು—ಎಂಬುದರ ಅರಿವು ನನಗುಂಟು. ಆದರೆ ಉದ್ದೇಶ ಪೂರ್ವಕವಾಗಿ ಯಾವ ಭಾಷಾಂತರದ ಹೆಸರನ್ನೂ ಇಲ್ಲಿ ಬಿಟ್ಟಿಲ್ಲ ಎಂದಿಷ್ಟು ಮಾತ್ರ ಹೇಳಬಯಸುತ್ತೇನೆ. ಈ ಪಟ್ಟಿಯ ಉದ್ದಕ್ಕೂ ದೃಷ್ಟಿಪ್ರಸಾರ ಮಾಡಿದರೆ ಒಂದು ವಿಷಯ ವ್ಯಕ್ತವಾಗುತ್ತದೆ—ಸುಮಾರು ಇನ್ನೂರು ಪುಸ್ತಕಗಳಾದರೂ ಈ ಅವಧಿಯಲ್ಲಿ

ಇಂಗ್ಲಿಷಿನಿಂದ ಕನ್ನಡಕ್ಕೆ ಬಂದಿವೆ ಎಂಬುದು. ಸಾಹಿತ್ಯಕೃತಿಗಳು, ವಿಜ್ಞಾನಕ್ಕೆ, ತತ್ವ ಶಾಸ್ತ್ರಕ್ಕೆ ಸಂಬಂಧಪಟ್ಟ ಗ್ರಂಥಗಳು, ಸಾಮಾನ್ಯ ತಿಳಿವಳಿಕೆಗೆ ಆಹಾರವನ್ನು ಒದಗಿಸುವ ಲೇಖನಗಳು-ಎಲ್ಲವೂ ಅವುಗಳಲ್ಲಿ ಸೇರಿವೆ. ಇದೇನೋ ಸಮಾಧಾನಕರವಾದ ಸಂಗತಿಯೇ. ಆದರೆ ನಮ್ಮ ಜನತೆಯ ಮತ್ತು ಭಾಷೆಯ ಆವಶ್ಯಕತೆಯೊಡನೆ ಹೋಲಿಸಿ ನೋಡಿದರೆ ಈ ಸಂಖ್ಯೆ ಏತಕ್ಕೂ ಸಾಲದು. ಅದೂ ಅಲ್ಲದೆ, ಈ ಅನುವಾದಿತ ಗ್ರಂಥಗಳಲ್ಲಿ ಕಿರು ಹೊತ್ತಗೆಗಳ ಮಾದರಿಯ ತೀರಾ ಸಣ್ಣದಾದ ಮತ್ತು ಅಪ್ರಖ್ಯಾತವಾದ ಕೃತಿಗಳೂ ಎಷ್ಟೋ ಸೇರಿವೆ. (ಈ ಭಾಷಾಂತರಗಳ ಗುಣದೋಷಗಳ ವಿಮರ್ಶೆಗೆ ಇದು ಸ್ಥಳವಲ್ಲ; ಇಲ್ಲಿ ಆ ಕೆಲಸ ಸಾಧ್ಯವೂ ಇಲ್ಲ.) ಉದ್ಗ್ರಂಥಗಳನ್ನು ಭಾಷಾಂತರಿಸಿರುವವರು ಹೇಳ ಬೇಕಾದಷ್ಟು ಹೆಚ್ಚುಮಂದಿಯಿಲ್ಲ. ಹಾಗೆ ಮಾಡಿರುವವರಲ್ಲಿ ಕೂಡ ಕೆಲವರು ಸಾಹಿತ್ಯ ಅಕಾಡೆಮಿ ಮೊದಲಾದ ಸಂಸ್ಥೆಗಳು ಆ ಕೆಲಸವನ್ನು ತಮಗೆ ಒಪ್ಪಿಸಿದ್ದರಿಂದ ಮಾಡಿರುವರೇ ಹೊರತು ಸ್ವಯಂಪ್ರೇರಣೆಯಿಂದಲ್ಲ. ಇದಕ್ಕೆ ಕಾರಣ ಬಹುಶಃ ಇಂಥ ಗ್ರಂಥಗಳ ಭಾಷಾಂತರಕ್ಕೆ ಬೇಕಾಗುವ ಕಾಲಾವಕಾಶದ ಅಭಾವದ ಜೊತೆಗೆ ಅವುಗಳ ಮಾರಾಟದ ಕಷ್ಟವೂ ಇರಬಹುದು. ಆದರೆ ಜಗತ್ತಿನ ಸಾಹಿತ್ಯದಲ್ಲೂ ಇತರ ಸಾರಸ್ವತ ಕ್ಷೇತ್ರಗಳಲ್ಲೂ ಹೆಸರುಗಳಿಸಿ ತಲೆಯೆತ್ತಿ ನಿಂತಿರುವ—ನಿಲ್ಲಬಲ್ಲ—'ಮೇರುಕೃತಿ'ಗಳೆಲ್ಲ ವನ್ನೂ ಕನ್ನಡದಲ್ಲಿ ತಂದ ಹೊರತು ಈ ಭಾಷೆಯ ಸಂಪತ್ತು ಹೆಚ್ಚಲಾರದು. ಕನ್ನಡದಲ್ಲಿ ಮಾತ್ರವೇ ಗ್ರಂಥಪಠಣೆ ಮಾಡಬಲ್ಲವರಿಗೆ ಎಲ್ಲ ದೇಶಗಳ ಎಲ್ಲ ಶ್ರೇಷ್ಠಕೃತಿಗಳ ಅನುವಾದಗಳೂ (ಸಾಧ್ಯವಾದರೆ ಅಧಿಕಾರಯುತವಾದ ಟೀಕೆಟಿಪ್ಪಣಿಗಳೊಡನೆ) ದೊರೆಯುವಂತಾಗಬೇಕು. ಇದರಿಂದ ಕನ್ನಡವಾಚಕವೃಂದಕ್ಕೆ ಮಾತ್ರವೇ ಅಲ್ಲದೆ ಕನ್ನಡ ಸಾಹಿತಿಗಳಿಗೂ ಸಂಶೋಧಕರಿಗೂ ಪ್ರಯೋಜನವಾಗುವುದರಲ್ಲಿ ಸಂದೇಹವಿಲ್ಲ. ಕನ್ನಡ ಮಾಧ್ಯಮ ವಿದ್ಯಾಭ್ಯಾಸದ ಎಲ್ಲ ಮಜಲುಗಳಲ್ಲೂ ಎಲ್ಲ ಕಡೆಯೂ ಜಾರಿಗೆ ಬಂದಾಗಲಂತೂ ಈ ಅಗತ್ಯ ಇನ್ನಷ್ಟು ಪ್ರಖರವಾಗುತ್ತದೆ. ಭಾಷಾಂತರಕಾರರು ತಮ್ಮ ವೈಯಕ್ತಿಕ ಇಷ್ಟಾನಿಷ್ಟಗಳಿಗೆ ಅನುಸಾರವಾಗಿ ಅಲ್ಲೊಂದು ಇಲ್ಲೊಂದು ಪುಸ್ತಕವನ್ನು ಕನ್ನಡಿಸುವುದರ ಜೊತೆಗೆ ಈ ಕೆಲಸವನ್ನು ಕೈಗೊಳ್ಳಲು ಯೋಗ್ಯತೆಯುಳ್ಳ ವ್ಯಕ್ತಿಗಳೂ ಸಂಸ್ಥೆಗಳೂ ಪ್ರಸಿದ್ಧ ಲೇಖಕರ ಕೃತಿಗಳನ್ನೆಲ್ಲಾ ಭಾಷಾಂತರಿಸುವ ಪಣತೊಟ್ಟು ದುಡಿದರೆ ಈ ಉದ್ದೇಶದ ಸಾಧನೆ ಸುಗಮವಾಗುತ್ತದೆ.

ಇಂಗ್ಲಿಷ್ ಓದಿದವರಲ್ಲಿ ಅನೇಕರು ಕನ್ನಡದಲ್ಲಿ ಮಾತನಾಡುವುದೇ ಒಂದು ಅಪಮಾನವೆಂದು ಹಿಂದೆ ಭಾವಿಸಿದ್ದರು; ಹಾಗೆ ಭಾವಿಸುವವರು ಈಗಲೂ ಕೆಲವರಿದ್ದಾರೆ. ಅವರಿಂದ ಇಂಗ್ಲಿಷ್ ಭಾಷೆಗೆ ಆಗಿರುವ ಉದ್ಧಾರವು ಅಷ್ಟರಲ್ಲೇ ಇದೆ. ಜೀವಾವಧಿ ವ್ಯಾಸಂಗ ಮಾಡಿದರೂ ಪರಭಾಷೆಯಾದ ಇಂಗ್ಲಿಷ್ ಭಾಷೆಯು ಸ್ವಾಧೀನವಾಗುವುದು ಕಷ್ಟ. ಇಂಗ್ಲಿಷ್ ಭಾಷೆ ಬಂದಮಾತ್ರಕ್ಕೆ ಕನ್ನಡ ಭಾಷೆಯನ್ನು ಕನ್ನಡಿಗರೇ ಕಡೆಗಣಿಸುವುದು ಅಕ್ಷಮ್ಯ ಅಪರಾಧವೇ ಸರಿ.

—ಸಿ. ಕೆ. ವೆಂಕಟರಾಮಯ್ಯ

ಪ್ರಧಾನ್ ಗುರುದತ್ತ

ಅನುವಾದ : ಹಿಂದಿ ಸಾಹಿತ್ಯ

ಸಂಸ್ಕೃತ ಭಾಷೆಯ ಹಿನ್ನೆಲೆಯಲ್ಲಿ ಬೆಳೆದುಬಂದಿರುವ ಇತರ ಭಾರತೀಯ ಭಾಷೆಗಳಂತೆಯೇ ಕನ್ನಡಕ್ಕೂ 'ಅನುವಾದ ಸಾಹಿತ್ಯ' ಎಂಬ ಪ್ರಕಾರ ಹೊಸದಲ್ಲ. ಕನ್ನಡ ಗ್ರಂಥಗಳು ಬೇರೆ ಬೇರೆ ಭಾಷೆಗಳಿಗೆ ಭಾಷಾಂತರಗೊಂಡುದಕ್ಕೂ, ಇತರ ಭಾಷೆಗಳಿಂದ ಕನ್ನಡಕ್ಕೆ ಭಾಷಾಂತರ ಕಾರ್ಯ ನಡೆದಿರುವುದಕ್ಕೂ ಕನ್ನಡ ಸಾಹಿತ್ಯ ವಿಪುಲವಾಗಿ ಉದಾಹರಣೆಗಳನ್ನು ಒದಗಿಸಬಲ್ಲದು. ಒಂದು ದೃಷ್ಟಿಯಲ್ಲಿ ಎಲ್ಲ ಭಾಷೆಗಳ, ಭಾಷಾ–ಸಾಹಿತ್ಯಗಳ ಸಾರವನ್ನು ಮೈಗೂಡಿಸಿಕೊಂಡು ದಷ್ಟಪುಷ್ಟವಾಗಿ ಬೆಳೆದಿರುವ ಭಾಷೆಗಳಲ್ಲಿ ಕನ್ನಡಕ್ಕೆ ಹಿರಿಯ ಸ್ಥಾನ ದೊರೆತಿದೆ ಎಂದು ಹೇಳಬಹುದು. ಸ್ವತಂತ್ರ ಸಾಹಿತ್ಯಸೃಷ್ಟಿಯಲ್ಲಿ ತನ್ನದೇ ಆದ ರೀತಿಯಲ್ಲಿ ಮುನ್ನಡೆದಿರುವುದರ ಜೊತೆಗೆ ಅಂತರ ಭಾರತೀಯ ವೈಶಿಷ್ಟ್ಯಗಳನ್ನು ಒಗ್ಗೂಡಿಸಿಕೊಂಡಿರುವುದು ಕನ್ನಡದ ಹಿರಿಮೆ. ಈ ಪರಂಪರೆಯಲ್ಲಿ ಹಿಂದಿ ಭಾಷಾ–ಸಾಹಿತ್ಯ ಹೊಸದೊಂದು ಕೊಂಡಿ ಮಾತ್ರ.

ಭಾರತೀಯ ಸಂವಿಧಾನ ರಾಷ್ಟ್ರ ಭಾಷೆಗಳೆಂದು ಒಪ್ಪಿ ಸ್ವೀಕರಿಸಿರುವ ಹದಿನೈದು ಭಾಷೆಗಳಲ್ಲಿ ಹಿಂದಿಯೂ ಒಂದು. ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯೋತ್ತರ ಕಾಲದ ರಾಜಕೀಯ ಮತ್ತು ಸಾಮಾಜಿಕ ಆಂದೋಳನದ ಅಂಗವಾಗಿ ಈ ಭಾಷೆಗೆ ದೊರೆತ ಮಹತ್ವ, ಬೆಂಬಲ ಮತ್ತು ಪ್ರೋತ್ಸಾಹಗಳಿಂದಾಗಿ, ಅಧಿಕೃತವಾಗಿ ಅದಕ್ಕೆ ದೊರೆತ ಸ್ಥಾನಮಾನಗಳಿಂದಾಗಿ, ವ್ಯವಹಾರ ಮತ್ತು ಸಂಪರ್ಕ ಭಾಷೆಯಾಗಿ ವಿಶಿಷ್ಟ ಸ್ಥಾನವನ್ನು ಗಳಿಸಿದ ಐತಿಹಾಸಿಕ ಸಂಗತಿಯಿಂದಾಗಿ ಇತರ ಭಾಷಾಬಾಂಧವರನ್ನು ಹೆಚ್ಚು ಹೆಚ್ಚಾಗಿ ತನ್ನತ್ತ ಸೆಳೆದುಕೊಂಡಿತು. ಈ ಹಿಂದೆ, ಗಾಂಧೀಜಿ ಮತ್ತಿತರ ನಾಯಕರು ರೂಪಿಸಿದ್ದ ರಚನಾತ್ಮಕ ಕಾರ್ಯಕ್ರಮಗಳಲ್ಲಿ ಒಂದಾಗಿದ್ದ ಹಿಂದಿ ಭಾಷೆಯ ಪ್ರಚಾರ ಹೆಚ್ಚು ಸದ್ದುಗದ್ದಲಗಳಿಲ್ಲದೆ ನಡೆಯುತ್ತಿತ್ತು. ರಾಜಕೀಯ ವಾಗಿ ಸ್ಥಾನಮಾನಗಳು ದೊರೆತ ಮೇಲಂತೂ ಹಿಂದಿಯ ಪ್ರಚಾರಕಾರ್ಯ ನಾಡಿನ ಎಲ್ಲೆಡೆಗಳಲ್ಲಿ, ಅದರಲ್ಲಿಯೂ ಅಹಿಂದಿ ಪ್ರಾಂತ್ಯಗಳಲ್ಲಿ, ಭರದಿಂದ ಸಾಗತೊಡಗಿತು. ದೇಶಭಾಷೆಗಳು ಮತ್ತು ಇಂಗ್ಲಿಷ್‌ನ ಬಾಂಧವ್ಯ ಇದ್ದ ರೀತಿಯೇ ಬೇರೆಯಾಗಿತ್ತು. ಹಿಂದಿ ಬೇರೂರತೊಡಗಿದ ರೀತಿಯೇ ಬೇರೆ ತೆರನಾಯ್ತು. ಪ್ರಥಮ ಭಾಷೆಯೆಂದು

ಗೌರೀಶಂಕರವನ್ನೇರಿ ಕುಳಿತ ಇಂಗ್ಲಿಷ್‌ನೆದರು ಸಾಮಾನ್ಯ ಜನತೆ ಕೈ ಎತ್ತಿ, ಕಾಲ ಉಂಗುಟದ ಮೇಲೆ ನಿಂತ ವಾಮನನಂತಾಯ್ತು. ಹಿಂದಿ ಅವರ ಮಟ್ಟಕ್ಕೆ, ಅವರ ಮನೆಯ ಬಾಗಿಲಿಗೆ ಇಳಿದುಬಂತು. ಅನೇಕ ಕಾರಣಗಳಿಂದಾಗಿ ಉನ್ನತ ಶಿಕ್ಷಣವನ್ನು ಪಡೆಯಲಾಗದೆ ಮನೆಯಲ್ಲಿ ಕುಳಿತಿದ್ದ ಹೆಣ್ಣುಮಕ್ಕಳಿಗಂತೂ ಹೊಸ ಸುಗ್ಗಿಯಾಗಿ ಪರಿಣಮಿಸಿತು. "ಒಂದು ಗಂಡಿಗೆ ಹಿಂದಿ ಹೇಳಿಕೊಟ್ಟರೆ ಒಬ್ಬನಿಗೆ ಹೇಳಿ ಕೊಟ್ಟಂತಾಯ್ತು; ಒಂದು ಹೆಣ್ಣಿಗೆ ಹೇಳಿ ಕೊಟ್ಟರೆ ಒಂದು ಸಂಸಾರಕ್ಕೇ ಹಿಂದಿ ಕಲಿಸಿದಂತಾಯ್ತು" ಎಂಬ ಸಿದ್ಧಾಂತದೊಡನೆ ಹಿಂದಿಯ ಪ್ರಚಾರ ಕಾರ್ಯ ಆರಂಭ ವಾಯ್ತು. ಹಿಂದಿ ಕಲಿಯುವುದು ಒಂದು ಹೊಸ ಫ್ಯಾಶನ್ ಆಗಿ ಪರಿಣಮಿಸಿತು. ಒಂದೆಡೆ ಮಾತೃಭಾಷೆಯ ವಿಚಾರದಲ್ಲಿ ಅವರುಗಳಿಗಿದ್ದ ಅಜ್ಞಾನ, ಅದರ ಫಲವಾಗಿ ಮೂಡಿದ್ದ ತಿರಸ್ಕಾರ, ಇವೇ ಮೊದಲಾದ ಕಾರಣಗಳಿಂದಾಗಿ ಪ್ರಚಾರದ ಭರಾಟೆಯಲ್ಲಿ ಅದೊಂದೇ ದೇಶಸೇವೆ ಎಂಬ ಭಾವನೆಯಿಂದ ಯುವಜನಾಂಗ ಮುಂದುವರಿಯಿತು. ಆಗ ಕಟುವಾಗಿ ಎಚ್ಚರಿಸಲು ಪ್ರಯತ್ನಿಸಿದ ಕನ್ನಡದ ಹಿತಚಿಂತಕರು ಹಿಂದಿ ವಿರೋಧಿಗಳೆಂಬ ಪ್ರಥೆಗೆ ಒಳಗಾಗಿದ್ದೂ ಉಂಟು. ಅನಕೃ ಅವರ 'ಬಣ್ಣದ ಬೀಸಣಿಗೆ' ಅವರ ಈ ಭಯವನ್ನು ಮಾರ್ಮಿಕವಾಗಿ ಬಿತ್ತರಿಸಿತು. ಕೊಂಚ ಮಟ್ಟಿಗೆ ವಿರೋಧದ ಗಾಳಿ ಬೀಸಿದರೂ ಅದು ಶೀಘ್ರವಾಗಿಯೇ ಅಡಗಿಹೋಯಿತು. ಹಿಂದಿಯ ಕಾರ್ಯ ನಿರ್ವಿಘ್ನವಾಗಿಯೇ ನಡೆಯತೊಡಗಿತು. ಕರ್ನಾಟಕವೂ ಹಿಂದಿಯ ಪ್ರಚಾರ ಕಾರ್ಯದಲ್ಲಿ ವಿಕ್ರಮವನ್ನು ಸ್ಥಾಪಿಸಿತು. ಕರ್ನಾಟಕವೊಂದರಲ್ಲಿಯೇ ಹಲವಾರು ಹಿಂದಿ ಸಂಸ್ಥೆಗಳು ಜನ್ಮತಾಳಿ ಕಾರ್ಯನಿರತವಾದುವು; ಇಂದಿಗೂ ಅವು ತಮ್ಮ ಕಾರ್ಯವನ್ನು ನಿರ್ವಹಿಸುತ್ತಾ ಇವೆ. ಕೇಂದ್ರ ಸರಕಾರದಿಂದ ದೊರೆಯುತ್ತಿದ್ದ ಪ್ರೋತ್ಸಾಹದ ಪ್ರಮಾಣ ಯಾವ ಮಟ್ಟವನ್ನು ತಲುಪಿತ್ತೆಂಬುದನ್ನು ಮಾನ್ಯ ರೊಬ್ಬರು ಹೀಗೆ ವಿವರಿಸುತ್ತಿದ್ದುದುಂಟು: "ಕೇಂದ್ರ ಸರಕಾರಕ್ಕೆ ಇರುವುದು ಎರಡೇ ಬಜೆಟ್—ಹಿಂದಿ ಬಜೆಟ್ ಮತ್ತು ಡಿಫೆನ್ಸ್ ಬಜೆಟ್." ಶಾಲಾ ಕಾಲೇಜುಗಳಲ್ಲಿಯೂ ಹಿಂದಿಯನ್ನು ಅಭ್ಯಾಸ ಮಾಡುವವರಿಗೆ ವಿದ್ಯಾರ್ಥಿವೇತನಾದಿ ಸೌಲಭ್ಯಗಳು ದೊರೆಯಲಾರಂಭಿಸಿದುವು. ಹಿಂದಿ 'ಜನಪ್ರಿಯ'ವಾಗಿ ಪರಿಣಮಿಸಿತು. ಈಚೆಗೆ, ಮತ್ತೊಮ್ಮೆ ವಿರೋಧದ ಬಿರುಗಾಳಿ ಬಲವಾಗಿಯೇ ಬೀಸಿತು. ಅದನ್ನು ಪ್ರಶಮನಗೊಳಿಸುವ ಪ್ರಯತ್ನವೂ ನಡೆಯ ತೊಡಗಿದೆ. ಇಷ್ಟಾದರೂ, ಹಿಂದಿಯ ಪ್ರೇಮಚಂದ್ ಮೊದಲಾದ ಕಾದಂಬರಿಕಾರರೂ, ಮೈಥಿಲೀ ಶರಣಗುಪ್ತ ಮೊದಲಾದ ಕವಿಗಳೂ ಆಹಿಂದಿ ಪ್ರಾಂತ್ಯಗಳಲ್ಲಿ ಅತ್ಯಂತ ಜನಪ್ರಿಯರಾಗಿ ಪರಿಣಮಿಸಿದ್ದರು. ಭಾಷೆ ಹೀಗೆ ಸಾಹಿತ್ಯದ ಮೂಲಕ ತನ್ನ ಸಂಬಂಧಗಳನ್ನು ವಿಸ್ತರಿಸತೊಡಗಿದಾಗ ಅನುವಾದಗಳು ತಾವಾಗಿಯೇ ಪ್ರಾರಂಭವಾಗುತ್ತವೆಂದು ಇಟ್ಟು ಕೊಳ್ಳಬಹುದು. ಸಾಮಾನ್ಯವಾಗಿ ಈ ಬಗೆಯ ಸಂಬಂಧಗಳಲ್ಲಿ ಹೊಸದಾಗಿ ಕಲಿತ ಭಾಷೆಯಿಂದ ತನ್ನ ಮಾತೃಭಾಷೆಗೆ ಅಥವಾ ತನಗೆ ಚೆನ್ನಾಗಿ ಪರಿಚಯವಿರುವ

ಭಾಷೆಗೆ ತನಗೆ ಮೆಚ್ಚಿಕೆಯಾದ ಕೃತಿಯನ್ನು ಅನುವಾದಿಸಿ ಕೊಡುವ ಪ್ರವೃತ್ತಿ ಕಾಣದೊರೆಯುತ್ತದೆ. ಹೊಸ ಭಾಷೆಯನ್ನು ಎಷ್ಟೇ ಚೆನ್ನಾಗಿ ಕಲಿತರೂ ಮೂಲ ಭೂತ ಶಬ್ದಕೋಶ ಸಂಪೂರ್ಣವಾಗಿ ಕೈವಶವಾಗದೆ ಹೋಗುವುದರಿಂದ, ಭಾಷೆಯ ಎಲ್ಲ ಮುಖಗಳ ಪರಿಚಯ ಆಗದೆ ಇರುವುದರಿಂದ ಹೊಸದಾಗಿ ಕಲಿತ ಭಾಷೆಗೆ ಅನುವಾದವಾಗುವ ಸಂಭವ ಅತಿ ಕಡಿಮೆಯಾಗಿದ್ದು, ಹೆಚ್ಚು-ಕಡಿಮೆ ಏಮ್ಮುಖ ಪ್ರಯಾಣದಂತೆ ಹೊಸದಾಗಿ ಪರಿಚಯವಾದ ಭಾಷೆಯಿಂದ ಕೃತಿಗಳು ಹರಿಯತೊಡಗುವುದೇ ಹೆಚ್ಚು. ಈ ಸಂದರ್ಭಗಳಲ್ಲಿ ವಿವೇಚನಾಯುತವಾಗಿ ಇಂತಹ ಕಾರ್ಯಗಳು ನಡೆಯುವ ಸಂಭವ ಕಡಿಮೆ. ಹೀಗಾಗಿ, ಬೇಕು ಬೇಡವಾದದ್ದನ್ನೆಲ್ಲಾ ತಂದು ತುಂಬುವ ಭಯವೂ ಇರುತ್ತದೆ. ಕಸವನ್ನೂ ರಸವೆಂದು ತಂದು ತುಂಬದಿದ್ದರೆ ಅದು ಆ ಭಾಷೆಗಳವರ ಕಿಂಚಿತ್ ಪುಣ್ಯಫಲ. ಸಾಹಿತ್ಯ ಕೃತಿಗಳನ್ನು ರಚಿಸುವ ವ್ಯಕ್ತಿಗೆ ವ್ಯುತ್ಪತ್ತಿ ಇರಬೇಕು, ಪ್ರತಿಭೆಯಿರಬೇಕು, ಸತ್ಸಂಗವಿರಬೇಕು, ಸತ್ಕಾವ್ಯಗಳ ಪರಿಚಯವಿರಬೇಕು, ವ್ಯಾಕರಣ, ಛಂದಸ್ಸು ಮೊದಲಾದ ಶಾಸ್ತ್ರಗಳ ಅಭ್ಯಾಸವಾಗಿರ ಬೇಕು ಎಂದೆಲ್ಲ ನಿಯಮಿಸಿದ್ದಾರೆ. ಅನುವಾದಕರಿಗೆ ಇಷ್ಟು ಅಥವಾ ಇದಕ್ಕೂ ಹೆಚ್ಚು ಅರ್ಹತೆ ಬೇಕು. ಆದರೆ ಅರ್ಹ, ಅನರ್ಹ ವ್ಯಕ್ತಿಗಳೆಲ್ಲ ಕೈ ಹಾಕಿ "ಅನುವಾದ ಕೀಳು ಕಾರ್ಯ; ವೈಗಳ್ಳರ ಕಸುಬು; ಅದು ಪ್ರತಿಭಾವಂತರು ಕೈಗೊಳ್ಳಬಹುದಾದ ಗೌರವ ಕಾರ್ಯವಲ್ಲ" ಎಂಬ ಪ್ರಥೆಯೂ ಉಂಟಾಗಿದೆ. ಆದರೆ ಪುಣ್ಯವಶಾತ್ ಭಾರತದಲ್ಲಿ ಅನುವಾದ ಸಾಹಿತ್ಯ ಎಲ್ಲ ಭಾಷೆಗಳ ಅನಿವಾರ್ಯ ಸಾಹಿತ್ಯ ಪ್ರಕಾರವಾಗಿ ಪರಿಣಮಿ ಸಿದ್ದು, ಉಭಯ ಭಾಷಾ ಪ್ರವೀಣರೂ, ಪ್ರತಿಭಾವಂತರೂ ಆದ ಕವಿಗಳ ಲೇಖಕರ ಸೇವೆ ದೊರೆತಿರುವುದರಿಂದ ಅನುವಾದ ಸಾಹಿತ್ಯ ಈ ಪ್ರಥೆಯನ್ನು ಮೀರಿ ನಿಂತಿದೆ. ಧಾರ್ಮಿಕ ವೃಂದ ಆಳಸಿಂಗರಾಚಾರ್ಯರಿಗೆ ಋಣಿಯಾದಂತೆ, ಸಾಹಿತ್ಯ ಜಿಜ್ಞಾಸುಗಳು ವೈ. ನಾಗೇಶ ಶಾಸ್ತ್ರಿಗಳು, ಬಸವಪ್ಪ ಶಾಸ್ತ್ರಿಗಳಿಗೆ ಚಿರಋಣಿಗಳಾಗಿ ಪರಿಣಮಿಸುತ್ತಾರೆ. ಬೆಳೆಯೊಡನೆ ಕಳೆಯೂ ಬೆಳೆಯಬೇಕು. ಆದರೆ ಕಾಲಕ್ಕೆ ಸರಿಯಾಗಿ ಕಳೆಯನ್ನು ಕಿತ್ತು ಎಸೆಯಲೂ ಬೇಕು. ಆಗಲೇ ಬೆಳೆ ಸಮೃದ್ಧವಾದೀತು. ಸಾಹಿತ್ಯ ಸೃಷ್ಟಿಯ ಕ್ಷೇತ್ರಕ್ಕೆ ಅನ್ವಯವಾಗುವ ಈ ತತ್ತ್ವ ಅನುವಾದ ಕ್ಷೇತ್ರಕ್ಕೂ ಅನ್ವಯವಾಗುತ್ತದೆ. ಕಾಲವೇ ಇಲ್ಲಿಯೂ ಕಳೆಯನ್ನು ಕಿತ್ತೆಸೆಯುತ್ತದೆ.

ಕನ್ನಡ-ಹಿಂದಿ ಬಾಂಧವ್ಯದ ಅನೇಕ ದಶಕಗಳ ಅವಧಿಯ ಅನಂತರದಲ್ಲಿ ಈ ಬಾಂಧವ್ಯ ನೀಡಿರುವ ಫಲಾಫಲಗಳ ಸಮೀಕ್ಷೆ ಎಂದಾದರೊಮ್ಮೆ ನಡೆಯಲೇ ಬೇಕಾಗಿತ್ತು. 'ಪ್ರಬುದ್ಧ ಕರ್ಣಾಟಕ'ದ ಸುವರ್ಣ ಮಹೋತ್ಸವದ ಅಂಗವಾಗಿ ಈ ಕಾರ್ಯ ನೆರವೇರುತ್ತಿರುವುದು ಔಚಿತ್ಯಪೂರ್ಣವಾಗಿಯೇ ಇದೆ. ಈ ಗುರುತರ ಹೊಣೆಯನ್ನು ನನಗೆ ವಹಿಸಿಕೊಟ್ಟ ಸಂಪಾದಕ ಮಂಡಲಿಗೆ ನಾನು ಕೃತಜ್ಞನಾಗಿದ್ದೇನೆ. ದೊರೆತ ಅವಧಿಯೊಳಗಾಗಿ ಎಲ್ಲ ವಿವರಗಳನ್ನು ಕಲೆ ಹಾಕಿದ್ದೇನೆಂಬ ಧೈರ್ಯವೂ ಇಲ್ಲ; ಎಲ್ಲ ವಿವರಗಳನ್ನು ಸಂಗ್ರಹಿಸಲು ಸಾಧನ ಸಲಕರಣೆಗಳ ಸೌಲಭ್ಯವೂ ಇರಲಿಲ್ಲ. ನನಗೆ

ಪರಿಚಯವಿದ್ದ ಆನೇಕ ವ್ಯಕ್ತಿಗಳಿಗೆ ಕಾಗದಗಳನ್ನು ಬರೆದು ವಿವರಗಳೇನಾದರೂ ತಿಳಿದಿದ್ದರೆ ತಿಳಿಸಬೇಕೆಂದು ಪ್ರಾರ್ಥಿಸಿಕೊಂಡೆ. ಹಲವರು ಉತ್ತರವನ್ನಿತ್ತರು; ಹಲವರು ಮೌನವಾಗಿಯೇ ಉತ್ತರಿಸಿದರು. ಹಲವರು ಎಲ್ಲ ಸಹಕಾರಗಳನ್ನೂ ನೀಡಿದರು; ಕೆಲವರು ಯಾವ ಸಹಕಾರವನ್ನೂ ನೀಡುವ ಅಗತ್ಯವಿಲ್ಲವೆಂದು ಭಾವಿಸಿದರು. ಪುಸ್ತಕ ಭಂಡಾರಗಳಲ್ಲಿ ದೊರೆತ ಪುಸ್ತಕಗಳನ್ನು ನೋಡಿದ್ದೇನೆ. ಕಂಡ ಕಂಡ ಹಿಂದಿ ಬಂಧುಗಳನ್ನೆಲ್ಲಾ ವಿಚಾರಿಸಿದ್ದೇನೆ. ಆ ಶ್ರಮಕ್ಕೆ ದೊರೆತ ಫಲವನ್ನು ನನ್ನ ಶಕ್ತಿ–ಸಾಮರ್ಥ್ಯ, ಇತಿ–ಮಿತಿಗಳಿಗೆ ಒಳಪಟ್ಟಂತೆ ವಿಶ್ಲೇಷಿಸುವ ಪ್ರಯತ್ನ ಮಾಡಿದ್ದೇನೆ. ಕೆಲವು ಪುಸ್ತಕಗಳಂತೂ ಅತ್ತ–ಇತ್ತ ಹಲವಾರು ಪುಟಗಳನ್ನು ಕಳೆದು ಕೊಂಡಿದ್ದುದೂ ಉಂಟು. ಅಂತಹ ಪ್ರಸಂಗಗಳಲ್ಲಿ ಅನುವಾದ ಕರಾರೆಂಬುದನ್ನು ಪತ್ತೆ ಹಚ್ಚುವುದೂ ಕಷ್ಟಸಾಧ್ಯವಾಯ್ತು. ಸರಿಯಾದ ಸ್ಥಿತಿಯಲ್ಲಿ ದೊರೆತ ಪುಸ್ತಕಗಳ ಸಂಖ್ಯೆ ಕೇವಲ ೬೨(+೧೩ ಶರತ್). ಇವುಗಳಲ್ಲಿ ೧೮ ಪುಸ್ತಕಗಳ ಮೂಲ ಕೃತಿಗಳನ್ನು ಒಮ್ಮೆಯಾದರೂ ನೋಡಲಾಗಲಿಲ್ಲ. ಉಳಿದ ಪುಸ್ತಕಗಳ ಮೂಲಗಳನ್ನು ನೋಡಿದ ತೃಪ್ತಿ ನನಗಿದೆ. ತೀರ ಆವಶ್ಯಕವೆಂದು ತೋರಿದ ಕಡೆಗಳಲ್ಲಿ ಮಾತ್ರ ನನಗೆ ದೋಷವೆಂದು ತೋರಿದ ಅಥವಾ ಒಮ್ಮೊಮ್ಮೆ ತೀರ ಮೆಚ್ಚಿಗೆಯಾದ ಅಂಶಗಳನ್ನು ಉದ್ಧರಿಸಿದ್ದೇನೆ. ಎಲ್ಲ ಕಡೆಗಳಲ್ಲಿಯೂ, ಎಲ್ಲ ಬಗೆಯ ದೋಷಗಳತ್ತ ಗಮನ ಸೆಳೆಯುವ ಅಗತ್ಯವೂ ನನಗೆ ತೋರಲಿಲ್ಲ; ಅದು ಸಾಧ್ಯವೂ ಇಲ್ಲ. ಸಾಮಾನ್ಯವಾಗಿ ಕಾಣಬರುವ ಲೋಪ–ದೋಷಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಕೊನೆಯಲ್ಲಿ ಕೆಲವು ಮಾತುಗಳನ್ನಾಡಿದ್ದೇನೆ. ಕಾಲಾನುಕ್ರಮವಾಗಿ ಎಲ್ಲ ಕೃತಿಗಳನ್ನೂ ವಿಶ್ಲೇಷಿಸಿಕೊಂಡು ಹೋಗುವ ಪ್ರಯತ್ನ ಮನಸ್ಸಿಗೆ ಒಪ್ಪಿಗೆಯಾಗದೆ ಹೋದದ್ದರಿಂದ ಸಾಹಿತ್ಯ ಪ್ರಕಾರವನ್ನೇ ಆಧಾರವಾಗಿಟ್ಟುಕೊಂಡು ಆಯಾ ಕೃತಿಗಳನ್ನು ವಿಶ್ಲೇಷಿಸಿಕೊಂಡು ಹೋಗಿದ್ದೇನೆ. ಒಟ್ಟಿನಲ್ಲಿ ನನ್ನ ಅಭಿಪ್ರಾಯ ಇಂತಿದೆ: ಇದುವರೆಗೆ ಆಗಿರುವ ಕಾರ್ಯ ಅಲ್ಪ; ಆಗಬೇಕಾಗಿರುವ ಕಾರ್ಯ ಅಗಾಧ. ಅವ್ಯವಸ್ಥಿತವಾಗಿ ಈ ಬಗೆಯ ಕಾರ್ಯಗಳು ನಡೆಯುತ್ತಿರುವುದನ್ನು ತಪ್ಪಿಸಿ ವ್ಯವಸ್ಥಿತ ರೀತಿಯಲ್ಲಿ ಇವುಗಳನ್ನು ನಡೆಸಿದ್ದೇ ಆದರೆ ಕಾಲ–ಶ್ರಮ ಎಲ್ಲವೂ ಸದುಪಯೋಗವಾಗಬಹುದು. ಇಲ್ಲವಾದಲ್ಲಿ ಕಾಲ-ಶ್ರಮ ವ್ಯರ್ಥ. ಪುನರಾವೃತ್ತಿ ತಪ್ಪದು. ಕಾವ್ಯ ಕ್ಷೇತ್ರದಲ್ಲಿಯಂತೂ ಶ್ರೇಷ್ಠ ಕಾವ್ಯವಾವುದೂ ಸಮರ್ಪಕವಾದ ರೀತಿಯಲ್ಲಿ ಕನ್ನಡಕ್ಕೆ ಬಂದಿಲ್ಲ. ಕಾದಂಬರಿ ಕ್ಷೇತ್ರದಲ್ಲಿ ಮಾತ್ರ ಸ್ವಲ್ಪ ಮಟ್ಟಿನ ತೃಪ್ತಿ ನೀಡುವಂತಹ ಕಾರ್ಯ ನಡೆದಿದೆ. ನಾಟಕ ಕ್ಷೇತ್ರ ಎಂದಿನಂತೆ ಅತೃಪ್ತಿಯನ್ನೇ ಉಂಟುಮಾಡುತ್ತದೆ. ಕಥಾ ಕ್ಷೇತ್ರದ ವಿಚಾರವೂ ಇಷ್ಟೆ. ಉಳಿದ ಸಾಹಿತ್ಯ ಪ್ರಕಾರಗಳಲ್ಲಿಯಂತೂ ಹೇಳಿಕೊಳ್ಳುವಂತಹ ಕೆಲಸವೇನೂ ಆಗಿಲ್ಲ. ಒಟ್ಟಿನಲ್ಲಿ ಚಿತ್ರ ನಿರಾಶಾದಾಯಕವಾಗಿದೆ.

ಪೂಜ್ಯ ತೀ. ನಂ. ಶ್ರೀಕಂಠಯ್ಯನವರು ಒಮ್ಮೆ ಸೂಚಿಸಿದ್ದಂತೆ, ಮೊಟ್ಟ ಮೊದಲು 'A Contrastive Grammar of Hindi and Kannada

Languages' ಅನ್ನು ಸಿದ್ಧಪಡಿಸಬೇಕು. ಇದು ಮೊದಲ ಆವಶ್ಯಕ ಕಾರ್ಯ. ಪ್ರಚಾರೋಪನ್ಯಾಸ ಮಾಲೆಯಲ್ಲಿ ಹಿಂದಿಯ ಪ್ರಸಿದ್ಧ ಕೃತಿಗಳನ್ನು ಪರಿಚಯ ಮಾಡಿಕೊಡುವ ಪ್ರಯತ್ನವೂ ನಡೆಯಬೇಕು. ಜೊತೆಗೆ ಹಿಂದಿ ಸಾಹಿತ್ಯ ಚರಿತ್ರೆಯೊಂದನ್ನು ಜನತೆಗೆ ನೀಡಬೇಕು. ಈ ಬಗೆಯ ಪರಿಚಯ ಅನುವಾದ ಕೃತಿಗಳಿಗೆ ಯೋಗ್ಯವಾದ ವಾತಾವರಣವನ್ನು ನಿರ್ಮಿಸುತ್ತದೆ. ಈ ಕಾರ್ಯಗಳು ಆಗದ ಹೊರತು, ತೌಲನಿಕ ವಿಮರ್ಶೆಗಳು ಹೆಚ್ಚದ ಹೊರತು, ತಮ್ಮ ತಮ್ಮ ಮೇಲ್ಮೆಯನ್ನು ಕೊಚ್ಚಿಕೊಳ್ಳುವ ಪ್ರವೃತ್ತಿಯೂ ಕಡಿಮೆಯಾಗುವುದಿಲ್ಲ; ಯೋಗ್ಯತಾನುಸಾರವಾದ ಪಾರಸ್ಪರಿಕ ಅರಿವು–ಆದರ ಭಾವಗಳೂ ಮೂಡುವುದಿಲ್ಲ.

ಕಾವ್ಯಗಳು

'ಕಲಿಯುಗದ ವಾಲ್ಮೀಕಿ' ಎಂದೂ (ನಾಭಾದಾಸನ ಹೇಳಿಕೆ), 'ಬುದ್ಧದೇವನ ಅನಂತರ ಅವತರಿಸಿದ ಅತ್ಯಂತ ಶ್ರೇಷ್ಠ ಲೋಕನಾಯಕ' (ಗ್ರಿಯರ್ಸನ್ ಹೇಳಿಕೆ) ಎಂದೂ ಖ್ಯಾತರಾಗಿರುವ ತುಲಸೀದಾಸರ 'ರಾಮಚರಿತ ಮಾನಸ' ಪೌರಾಣಿಕ ಮಹಾಕಾವ್ಯಗಳ ಪಂಕ್ತಿಯಲ್ಲಿ ಅಗ್ರಸ್ಥಾನಕ್ಕೆ ಯೋಗ್ಯವಾಗಿರುವ ಮಹಾನ್ ಕೃತಿ, ಹಿಂದಿ ಸಾಹಿತ್ಯಕ್ಕೆ ವಿಶ್ವ ಸಾಹಿತ್ಯದಲ್ಲಿ ಸ್ಥಾನವನ್ನು ಗಳಿಸಿಕೊಟ್ಟಿರುವ ಕೃತಿ. ಹದಿನಾರನೆಯ ಶತಮಾನದ ಉತ್ತರಾರ್ಧದಲ್ಲಿ (ಕ್ರಿ. ಶ. ೧೫೭೪) ರಚಿತವಾದ ಈ ಕೃತಿ ಜನಮನ್ನಣೆಗೆ ಪಾತ್ರವಾಗುವ ಸೌಭಾಗ್ಯವನ್ನು ಪಡೆದ ಕೆಲವೇ ಕೃತಿಗಳಲ್ಲಿ ಒಂದಾಗಿ ಪರಿಣಮಿಸಿದೆ. ಕುಮಾರವ್ಯಾಸ ಭಾರತ, ಜೈಮಿನಿ ಭಾರತ ಮೊದಲಾದ ಮಹಾಕಾವ್ಯಗಳು ಕನ್ನಡ ನಾಡಿನ ಮನೆಮನೆಯಲ್ಲಿಯೂ ವಿಜೃಂಭಿಸಿರುವಂತೆ ಉತ್ತರ ಭಾರತದಲ್ಲೆಲ್ಲಾ ಜಯಭೇರಿ ಹೊಡೆದು ಅಂದಿನಿಂದ ಇಂದಿನವರೆಗೂ ಜನಪ್ರಿಯವಾಗಿ ಉಳಿದಿರುವ ಮಹಾಕಾವ್ಯ ಇದು. ಹಿಂದಿಯಲ್ಲಿ ಈ ಹಿಂದೆ ರಚಿತವಾಗಿದ್ದ ಮತ್ತು ಮುಂದೆ ರಚಿಸಲಾದ ಇತರ ಎಲ್ಲ ರಾಮಾಯಣಗಳನ್ನೂ ಇತಿಹಾಸದ ಗರ್ಭಕ್ಕೆ ನೂಕಿ ಕಾಲಾತೀತವಾಗಿ ಕುಳಿತಿರುವ ಏಕಮೇವಾದ್ವಿತೀಯ ಗ್ರಂಥ ಇದಾಗಿದೆ ಎಂಬುದಕ್ಕೆ ಹಿಂದಿ ಸಾಹಿತ್ಯೇತಿಹಾಸ ಪ್ರಮಾಣವನ್ನು ಒದಗಿಸುತ್ತದೆ. ಹಿಂದಿ ಸಾಹಿತ್ಯಾಕಾಶದ ಚಂದ್ರನೆಂಬ ಶಾಶ್ವತ ಕೀರ್ತಿಯನ್ನು ತುಲಸಿದಾಸರಿಗೆ ತಂದಿತ್ತ ಈ ಕೃತಿಯನ್ನು ಕನ್ನಡಕ್ಕೆ ತಂದುಕೊಳ್ಳುವ ಪ್ರಯತ್ನ ಬಹಳ ಹಿಂದೆಯೇ ನಡೆದಿದೆ. ಗದ್ಯರೂಪದಲ್ಲಿ, ಸಂಕ್ಷಿಪ್ತರೂಪದಲ್ಲಿ, ಪದ್ಯರೂಪದಲ್ಲಿ ಇದನ್ನು ಕನ್ನಡಿಗರಿಗೆ ಒದಗಿಸುವ ಪ್ರಯತ್ನಗಳೂ ನಡೆದಿವೆ.

೧೯೩೫ರಲ್ಲಿಯೇ ದ. ಕೃ. ಭಾರದ್ವಾಜರು 'ರಾಮಚರಿತಮಾನಸ'ವನ್ನು ಭಾಷಾಂತರಿಸತೊಡಗಿದ್ದರು. ನನಗೆ ತಿಳಿದಮಟ್ಟಿಗೆ ಇದೇ 'ರಾಮಚರಿತಮಾನಸ'ದ ಮೊಟ್ಟಮೊದಲ ಕನ್ನಡ ಅನುವಾದ. ೧೨ ಮಾಸಿಕ ಸಂಚಿಕೆಗಳಲ್ಲಿ ಸಂಪೂರ್ಣ ಕೃತಿಯನ್ನು ಭಾಷಾಂತರಿಸುವ ಯೋಜನೆಯನ್ನು ಹಾಕಿಕೊಂಡು ೧೯೩೫ರಲ್ಲಿ ಎರಡು

ಸಂಚಿಕೆಗಳನ್ನು ಹೊರಡಿಸಿದರು. ಆದರೆ, ಅವರೇ ತಿಳಿಸಿರುವಂತೆ, "ಸಾಕಷ್ಟು ಚಂದಾದಾರರೊದಗಲಿಲ್ಲವಾದುದರಿಂದಲೂ ಹಲವರು ಪೂರ್ಣಕಾಂಡವನ್ನೆ ಕೊಡಬೇಕೆಂದಪೇಕ್ಷಿಸಿದುದರಿಂದಲೂ ಆ ಪ್ರಯತ್ನವನ್ನು ನಿಲ್ಲಿಸಿ ಕಾಂಡಗಳ ರೂಪದಲ್ಲಿ ಪುಸ್ತಕವನ್ನು ವಾಚಕರಿಗೆ 'ಸಮರ್ಪಿಸಬೇಕೆಂದು" (ಪ್ರಸ್ತಾವನೆ, ಪುಟ ೮) ಯೋಜಿಸಿದರು. ಈ ಯೋಜನೆಯ ಅಂಗವಾಗಿ ೧೯೩೮ರಲ್ಲಿ ಬಾಲಕಾಂಡ ಪುಸ್ತಕ ರೂಪದಲ್ಲಿ ಹೊರಬಂದಿತು. ಮುಂದಿನ ಕಾಂಡಗಳು ಬಹುಶಃ ಹೊರಬಂದಿಲ್ಲ.

ಭಾರದ್ವಾಜರು ತುಂಬ ಶ್ರದ್ಧೆಯಿಂದ ತಮ್ಮ ಕಾರ್ಯವನ್ನು ನಿರ್ವಹಿಸಿದ್ದಾರೆಂಬುದಕ್ಕೆ ಬಾಲಕಾಂಡದ ಈ ಭಾಷಾಂತರ ಸಾಕ್ಷಿಯಾಗಿದೆ. "ಈ ಗ್ರಂಥವನ್ನು ಸಾಧ್ಯವಾದಮಟ್ಟಿಗೆ ಮನೋಹರವಾಗಿ ಮಾಡಲೆತ್ನಿಸಿರುವೆನು....ಇಲ್ಲಿ ನನ್ನ ಅಲ್ಪಮತಿಗೆ ತಿಳಿದಂತೆ ಸಾಮಾನ್ಯರೆಲ್ಲರಿಗೂ ಸುಲಭವಾಗಿ ತಿಳಿಯುವಂತಹ ಶೈಲಿಯನ್ನು ಅನುಸರಿಸಿರುವೆನು. ಇದರಲ್ಲಿ ಮೂಲಗ್ರಂಥಕಾರರ ಅಭಿಪ್ರಾಯವು ಸರಿಯಾಗಿ ಬಿಂಬಿತವಾಗದಿದ್ದರೆ ಅದು ಕೇವಲ ನನ್ನ ಅಲ್ಪಮತಿಯ ದೋಷವೆಂದೂ, ಎಲ್ಲೆಲ್ಲಿ ವಾಚಕರೂ ತಲ್ಲೀನಭಾವವನ್ನು ಹೊಂದುವರೊ ಅದೆಲ್ಲಕ್ಕೂ ಶ್ರೀ ತುಲಸೀದಾಸರೆ ಮತ್ತು ಅವರ ರಾಮಭಕ್ತಿಯೇ ಕಾರಣವೆಂದೂ ತಿಳಿಯಬೇಕು." (ಪ್ರಸ್ತಾವನೆ, ಪುಟ ೧೦) ಅನುವಾದ ಸರಳವಾಗಿದೆ, ಸುಂದರವಾಗಿದೆ. ಒಂದು ಪ್ರಸಂಗವನ್ನು ತೆಗೆದುಕೊಂಡರೆ ಅನುವಾದ ಎಷ್ಟು ಯಥಾವತ್ತಾಗಿದೆಯೆಂಬುದು ಗೋಚರಿಸುತ್ತದೆ.

ಗಿರಿಜಾ ಪೂಜೆಗೆಂದು ತನ್ನ ಸಖಿಯರೊಂದಿಗೆ ಬಂದಿದ್ದ ಸೀತೆಗೆ ಸಖಿಯರು ಶ್ರೀರಾಮ–ಲಕ್ಷ್ಮಣರ ಸೌಂದರ್ಯವನ್ನು ಕುರಿತ ತಮ್ಮ ಅಭಿಪ್ರಾಯವನ್ನು ವರದಿ ಮಾಡುವ ಪ್ರಸಂಗವನ್ನು ಮೂಲದಲ್ಲಿ ಈ ರೀತಿ ವರ್ಣಿಸಲಾಗಿದೆ:

ದೋಹಾ ॥ ತಾಸು ದಸಾ ದೇಖಿ ಸಖಿನ್ಹ ಪುಲಕ ಗಾತ ಜಲು ನೈನ ।
ಕಹು ಕಾರನು ನಿಜ ಹರಷ ಕರ ಪೂಛಹಿಂ ಸಬ ಮೃದು ಬೈನ ॥

ಚೌಪಾಈ ॥ ದೇಖನ ಬಾಗು ಕುಂಅರ ದುಇ ಆಏ ।
ಬಯ ಕಿಸೋರ ಸಬ ಭಾಂತಿ ಸುಹಾಏ ॥
ಸ್ಯಾಮ ಗೌರ ಕಿಮಿ ಕಹೌ ಬಖಾನೀ ।
ಗಿರಾ ಅನಯನ ನಯನ ಬಿನು ಬಾನೀ ॥

ಈ ಪ್ರಸಂಗದ ಅನುವಾದ ಈ ಕೆಳಕಂಡಂತೆ ಇದೆ:

"ಅವಳಾ ಸ್ಥಿತಿಯನ್ನು ನೋಡಿ ಉಳಿದ ಸಖಿಯರ ಶರೀರಗಳು ಪುಳಕಿತವಾಗಿ, ಕಣ್ಣುಗಳಲ್ಲಿ ಆನಂದಾಶ್ರುಗಳು ತುಂಬಿದುವು. (ಆಗ) ಸಖಿಯರೆಲ್ಲರೂ 'ನಿನ್ನ ಹರ್ಷಕ್ಕೆ ಕಾರಣವಾವುದು' ಹೇಳೆಂದು ಮೃದುವಚನಗಳಿಂದ ಕೇಳಿದರು. ಆಗಲಾ ಸಖಿಯು-- 'ಸಖಿಯರೇ, ಇಬ್ಬರು ರಾಜಕುವರರು ತೋಟವನ್ನು ನೋಡಲು ಬಂದಿರುವರು. ಅವರಿಬ್ಬರೂ ಕಿಶೋರವಯಸ್ಕರಾಗಿಯೂ ಸರ್ವಾಂಗಸುಂದರರಾಗಿಯೂ ಇರುವರು.

ಅವರಲ್ಲಿ ಒಬ್ಬನು ಶ್ಯಾಮಾಂಗನಾಗಿಯೂ ಮತ್ತೊಬ್ಬನು ಗೌರಾಂಗನಾಗಿಯೂ ಇರುವರು. ಅವರ ವರ್ಣನೆಯನ್ನು ನಾನು ಮಾಡಲಾರೆನು. ಏಕೆಂದರೆ ಅವರನ್ನು ನೋಡಿದ ನನ್ನ ಕಣ್ಣಿಗೆ ವರ್ಣಿಸುವ ಶಕ್ತಿಯಿಲ್ಲ. ನಾಲಿಗೆಯ ಸಹಾಯದಿಂದ ವರ್ಣಿಸೋಣವೆಂದರೆ ಅದಕ್ಕೆ ಅವರ ಸೌಂದರ್ಯವನ್ನು ನೋಡುವ ಶಕ್ತಿಯಿಲ್ಲ–ಎಂದಳು. ಈ ಮಾತುಗಳನ್ನು ಕೇಳಿ ಸಖಿಯರೆಲ್ಲರೂ ಹರ್ಷಿತರಾದರು." (ಪುಟ. ೧೬೫)

ಅನುವಾದ ಯಥಾವತ್ತಾಗಿದೆ. ಮೂಲದ ಪ್ರತಿಯೊಂದು ಅಂಶವನ್ನೂ ಸರಳ ವಾದ ಗದ್ಯದಲ್ಲಿ ಮೂಡಿಸಿದ್ದಾರೆ. ಗದ್ಯದಲ್ಲಿ ಹೇಳುವಾಗ ಅಗತ್ಯವಾದುದಕ್ಕಿಂತ ಹೆಚ್ಚು ಶಬ್ದಗಳನ್ನೇನೂ ಉಪಯೋಗಿಸಿಲ್ಲ. ಅಂದರೆ ಅನಾವಶ್ಯಕ ವಿಸ್ತಾರಕ್ಕೆ ಎಡೆಗೊಟ್ಟಿಲ್ಲ. ಇದರ ಜೊತೆಗೆ ತುಳಸೀದಾಸರ ಜೀವನ ಮತ್ತು ಕೃತಿಗಳ ಸಂಕ್ಷಿಪ್ತ ಪರಿಚಯವನ್ನು ನೀಡಿರುವುದು ಮತ್ತು ತೌಲನಿಕ ಅಭ್ಯಾಸ ನಡೆಸುವ ಜಿಜ್ಞಾಸು ಓದುಗರಿಗಾಗಿ ಬಾಲಕಾಂಡದ ಮೂಲಪಾಠವನ್ನು ನೀಡಿರುವುದು (ವರ್ಣಮಾಲಾದಿ ಪರಿಚಯದೊಂದಿಗೆ ಮೂಲ ಲಿಪಿಯನ್ನು ಓದಲು ಅಗತ್ಯವಾದ ನೆರವು ನೀಡಿರುವುದು) ಶ್ಲೇಷಾರ್ಥಗಳಿರುವ ಸಂದರ್ಭದಲ್ಲಿ ಅಡಿಟಿಪ್ಪಣಿಗಳಲ್ಲಿ ಅವನ್ನು ವಿವರಿಸಿರುವುದು, ಅವಶ್ಯಕವೆಂದೆನಿಸಿದ ಕಡೆಗಳಲ್ಲಿ ಅಡಿಟಿಪ್ಪಣಿಗಳಲ್ಲಿ ಭಗವದ್ಗೀತೆ, ಪುರಾಣಗಳು, ಮತ್ತಿತರ ಗ್ರಂಥಗಳ ಹೇಳಿಕೆ ಗಳನ್ನು ವಿವರಗಳನ್ನು ಉದ್ಧರಿಸಿರುವುದು ಅಥವಾ ಉಲ್ಲೇಖಿಸಿರುವುದು–ಇವು ಈ ಅನುವಾದದ ವೈಶಿಷ್ಟ್ಯಗಳು. ಮೂಲಭಾಷೆ ಮತ್ತು ಉದ್ದಿಷ್ಟಭಾಷೆಯ ಮೇಲಿನ ಪ್ರಭುತ್ವದ ಜೊತೆಗೆ ಲೇಖಕರ ಪಾಂಡಿತ್ಯ ಮತ್ತು ವ್ಯಾಪಕ ವೇದಾಂತ ಜ್ಞಾನಕ್ಕೂ ಇದು ಸಾಕ್ಷಿಯಾಗಿದೆ. ಭಾರದ್ವಾಜರ ಭಾಷಾಂತರ, ಒಟ್ಟಿನಲ್ಲಿ, ಮೂಲಕ್ಕೆ ತುಂಬ ಹತ್ತಿರವಾಗಿದ್ದು, ಇದುವರೆಗೆ ಆಗಿರುವ ಭಾಷಾಂತರಗಳಲ್ಲಿ ಅತ್ಯಂತ ಸಮರ್ಪಕವಾದು ದೆನಿಸಿಕೊಂಡಿದೆ.

ಸಾಹಿತ್ಯ ಧರ್ಮಪ್ರೇರಕವಾಗಬೇಕು, ಧರ್ಮರಕ್ಷಕವಾಗಬೇಕು ಎಂಬ ದೃಷ್ಟಿ ಯನ್ನು ಹೊಂದಿದ್ದ ವೆಂಕಟೇಶ ತಿರಕೋ ಕುಲಕರ್ಣಿ ಗಳಗನಾಥರು 'ಶ್ರೀರಾಮ ಚರಿತ ಮಾನಸ'ದತ್ತ ಆಕರ್ಷಿತರಾದುದು ಸ್ವಾಭಾವಿಕವೆ. ಅವರು 1926ರಲ್ಲಿ ಇದರ ಸಂಗ್ರಹಾನುವಾದವನ್ನು ಪ್ರಕಟಿಸಿದರು. ತಮ್ಮ ಉದ್ದೇಶವನ್ನೂ ಭಾಷಾಂತರ ವಿಧಾನವನ್ನೂ ಪ್ರಸ್ತಾವನೆಯಲ್ಲಿ ಅವರೇ ಈ ರೀತಿ ಸ್ಪಷ್ಟಪಡಿಸಿದ್ದಾರೆ: "ನಾನು ಇದನ್ನು ಎಲ್ಲರಿಗೂ ಓದಲಿಕ್ಕೆ ಹವಣಿಯಾಗುವಂತೆ, ಬೇಸರಬರುವ ಭಾಗವನ್ನೂ, ಇಷ್ಟೊಂದು ಹೇಳದಿದ್ದರೂ ಬರುತ್ತಿತ್ತೆಂಬ ಭಾಗವನ್ನೂ ಬಿಟ್ಟು ಸದ್ಗುರು ಪ್ರೇರಿಸಿದಂತೆ ಕನ್ನಡದಲ್ಲಿ ಇದನ್ನು ಭಾಷಾಂತರಿಸಿರುವೆನು. ಮೇಲಾಗಿ ಕೆಲವು ಶ್ರೇಷ್ಠ ದೇಶಭಕ್ತರು ತಮ್ಮ ಕಡೆಗಾಣದ ಅಧಾರ್ಮಿಕವಾದ ಅಹಿತಕಾರಕ ಕೆಲವು ಮತಗಳನ್ನು ಪ್ರಸಾರಗೊಳಿಸುವಾಗ ಈ ತುಲಸೀರಾಮಾಯಣವನ್ನು ಕೆಲವಿಷಯಗಳಲ್ಲಿ ಮುಂದುಮಾಡುತ್ತಿರುವರು. ಆದರೆ ಆ ರಾಮಾಯಣದ ಬೋಧನಕ್ರಮಕ್ಕೆ ಅವರು ಒಟ್ಟಿನಲ್ಲಿ ಎಷ್ಟು ವಿರೋಧವಾಗಿ ನಡೆದುಕೊಳ್ಳುವರೆಂಬುದನ್ನು ಎಲ್ಲರ ಕಣ್ಣುಮುಂದೆ

ಇಡುವುದಕ್ಕಾಗಿಯೂ ನಾನು ಈ ಬಗೆಯ ಭಾಷಾಂತರವನ್ನು ಮಾಡಬೇಕಾಯಿತು. ನನ್ನ ಈ ಭಾಷಾಂತರ ಕಾರ್ಯಕ್ಕೆ ಮರಾಠೀ ಭಾಷಾಂತರವು ಅತ್ಯಂತ ಸಹಾಯಕ ವಾದದ್ದರಿಂದ ಆ ಭಾಷಾಂತರಕಾರರಾದ ಶ್ರೀಮಂತ ಯಾದವ ಶಂಕರ ಜಾಮದಾರ ಮುನಸಫರವರ ಉಪಕಾರವನ್ನು ನಾನು ಕೃತಜ್ಞತೆಯಿಂದ ಸ್ಮರಿಸುವೆನು ".

ಗಳಗನಾಥರದು ಸಂಕ್ಷಿಪ್ತಾನುವಾದ. ಇದಕ್ಕೆ ಅವರು ಮರಾಠೀ ಅನುವಾದದ ನೆರವನ್ನೂ ಪಡೆದುಕೊಂಡಿದ್ದಾರೆ. ಗಳಗನಾಥರ ಅನುವಾದ ಮೂಲದಿಂದ ಕೊಂಚ ಮಟ್ಟಿಗೆ ದೂರಸರಿದಿದೆ. ಅನಿವಾರ್ಯವೋ ಎಂಬಂತೆ ಅವರ ಕೃತಿಗಳಲ್ಲಿ ಆಗಿಂದಾಗ್ಗೆ ಧರ್ಮಪ್ರಜ್ಞೆ ತಲೆ ಹಾಕುವುದನ್ನು ಕಾಣುತ್ತೇವೆ. ಈ ಧರ್ಮಪ್ರಜ್ಞೆ ಅವರ ಕೃತಿಗಳ ಗುಣವೂ ಹೌದು, ಅವಗುಣವೂ ಹೌದು. ಸಂಗ್ರಹಾನುವಾದದಲ್ಲಿಯೂ ಅವರ ಈ ಪ್ರಜ್ಞೆ ತನ್ನ ಕೈವಾಡವನ್ನು ನಡೆಸಿಬಿಟ್ಟಿದೆ. ಹೀಗಾಗಿ ಸಾಹಿತ್ಯಗುಣ ವಿಶೇಷ ವಾಗಿರುವಂತಹ ಪ್ರಸಂಗಗಳು ಕತ್ತರಿ ಪ್ರಯೋಗಕ್ಕೆ ಒಳಗಾಗಿ ಬಿಟ್ಟಿವೆ. ಧಾರ್ಮಿಕ ವಿಚಾರಗಳ ಚರ್ಚೆಯಿರುವ ಭಾಗಗಳು ಸಾಮಾನ್ಯವಾಗಿ ಯಾವುದೇ ಸಂಕ್ಷೇಪ ಕ್ಕೊಳಗಾಗಿಲ್ಲ. ಈ ಹಿಂದೆ ಉದಾಹರಿಸಿರುವ ಪ್ರಸಂಗವನ್ನೇ ಪರಿಶೀಲಿಸೋಣ. ಇದನ್ನು ಗಳಗನಾಥರು ಈ ರೀತಿ ಸಂಕ್ಷೇಪಿಸಿದ್ದಾರೆ. "ಸೀತೆಯ ಸಖಿಯೊಬ್ಬಳು ರಾಮಲಕ್ಷ್ಮಣರನ್ನು ನೋಡಿ ಆನಂದ ಭರಿತಳಾಗಿ ಸೀತೆಯ ಬಳಿಗೆ ಬಂದು ಆ ವರ್ತ ಮಾನವನ್ನು ಹೇಳಿದಳು. ಅದನ್ನು ಕೇಳಿ ಸೀತೆಯ ಸಖಿಯರು ಸಂತೋಷಪಟ್ಟರು. ಅವರಲ್ಲಿ ಒಬ್ಬಳು ರಾಮಲಕ್ಷ್ಮಣರ ಸೌಂದರ್ಯ ಸದ್ಗುಣಗಳನ್ನೂ, ಪರಾಕ್ರಮವನ್ನೂ ಬಹಳವಾಗಿ ವರ್ಣಿಸಿದಳು. ಸಖಿಯ ಆ ಮಾತುಗಳು ಸೀತೆಗೆ ಬಹಳ ಸವಿಯಾಗಿ, ಆಕೆಯ ನೇತ್ರಗಳು ರಾಮದರ್ಶನೋತ್ಸುಕವಾದವು". (ಪುಟ ೬೯)

ಗಳಗನಾಥರ ಉದ್ದೇಶ ಮತ್ತು ದೃಷ್ಟಿಯನ್ನು ಅರಿತ ಮೇಲೆ, ಅವರ ಅನುವಾದ ದಲ್ಲಿ ಇತರ ಸಾಹಿತ್ಯ ಗುಣಗಳನ್ನು ಅರಸಿದರೆ ಅಷ್ಟಾಗಿ ತೃಪ್ತಿದೊರೆಯುವ ಸಂಭವವಿಲ್ಲ ಹೀಗಾಗಿ, ಗಳಗನಾಥರ ಈ ಕೃತಿಗೆ ಐತಿಹಾಸಿಕ ಮಹತ್ವ ಮಾತ್ರ ಉಂಟು.

ಪದ್ಯಾನುವಾದವನ್ನು ಮುಂದಿರಿಸುವ ಪ್ರಯತ್ನವನ್ನು ಕೈಗೊಂಡಿರುವ ಮಹನೀಯರಲ್ಲಿ ಶಂಭುಭಟ್ಟರೇ ಮೊದಲಿಗರೆಂದು ತೋರುತ್ತದೆ. ಅವರು ೧೯೫೪ರಲ್ಲಿ ಬಾಲಕಾಂಡವನ್ನೂ, ೧೯೫೭ರಲ್ಲಿ ಅಯೋಧ್ಯಾಕಾಂಡ ಮತ್ತು ಅರಣ್ಯಕಾಂಡಗಳನ್ನೂ ಭಾಷಾಂತರಿಸಿಕೊಟ್ಟಿದ್ದಾರೆ. ಲಲಿತರಗಳೆ, ಉತ್ಸಾಹ ವೃತ್ತ ಮತ್ತು ವಾರ್ಧಿಕ ಷಟ್ಪದಿ ಯನ್ನು ಯಥೋಚಿತವಾಗಿ ಬಳಸಿಕೊಂಡು ಈ ಮೂರು ಕಾಂಡಗಳನ್ನು ಅವರು ಪದ್ಯರೂಪದಲ್ಲಿ ಭಾಷಾಂತರಿಸಿದ್ದಾರೆ. ಶ್ಲೇಷಾರ್ಥಗಳನ್ನು ಅಡಿಟಿಪ್ಪಣಿಗಳಲ್ಲಿ ಕಾಣಿಸಿದ್ದಾರೆ. ಕ್ಲಿಷ್ಟವೆನಿಸಿದ ರೂಪಗಳಿಗೆ ಅಲ್ಲಲ್ಲಿಯೇ ಆವರಣದಲ್ಲಿ ಅರ್ಥನೀಡಿದ್ದಾರೆ. ಶಂಭುಭಟ್ಟರ ಅನುವಾದಕ್ಕೆ ಒರೆಗಲ್ಲಾಗಿ ಮತ್ತೆ ಅದೇ ಪ್ರಸಂಗವನ್ನು ಪರಿಶೀಲಿಸ ಬಹುದು :

"ರೋಮಾಂಚ ಮೈಯೊಳಗೆ ಜಲವು ನಯನಂಗಳೊಳು।
ಭಾವಿ-ಸಿಯ ದೆಸೆಗಂಡು ಕೌತುಕದಿ ಕೇಳಿದರು॥
ಈ ಮೋದ ನಿನಗಾಗಲೇನು ಕಾರಣವೆಂದು।
ಭೂಮಿಜೆಯ ಸಖಿಗಳೆಲ್ಲರು ಮೃದುಲ ವಾಣಿಯೊಳು॥

ಕುವರರೀರ್ವರು ವನವನೋಡಲೈತಂದಿಹರು।
ಯುವಕವಯದರು ಸಕಲ ಸೌಂದರ್ಯಯುತರಜರು॥
ಅವರ ಬಣ್ಣಿಪೆನೆಂತು ಶ್ಯಾಮಲನು ಬಿಳಿಯವನು।
ತವೆ ನುಡಿಗೆ ಕಂಗಳಿರವಿರವು ನುಡಿ ಕಂಗಳಿಗೆ॥

ಹರುಷಗೊಂಡರು ಕೇಳಿ ಸಖಿಗಳೆಲ್ಲರು ಸೀತೆ।
ಯುರದೊಳಗೆ ಉತ್ಕಂಠೆ ಹಿರಿದೆಂದು ಬಲ್ಲವರು॥ (ಪುಟ ೨೦೦–೨೦೧)

ಛಂದಸ್ಸಿನ ಬಂಧನ ಭಾವಸಂಕುಚನಕ್ಕೂ, 'ವಯದರು' ಎಂಬಂತಹ ಶಬ್ದ ರೂಪಗಳ ಬಳಕೆಗೂ ಎಡೆಮಾಡಿಕೊಟ್ಟಿದೆ. 'ಸಖಿಗಳು' ಎಂಬ ರೂಪ ಕಿವಿಗೂ ಅಷ್ಟು ಹಿತವಾಗದು. ವ್ಯಾಕರಣ ದೃಷ್ಟಿಯಿಂದಲೂ ಶಿಷ್ಟ ಪ್ರಯೋಗವೇನಲ್ಲ. ಇಷ್ಟಾದರೂ ಶಂಭುಭಟ್ಟರು ತುಂಬ ಶ್ರದ್ಧೆಯಿಂದ ಈ ಅನುವಾದ ಕಾರ್ಯವನ್ನು ಸಾಕಷ್ಟು ಯಶಸ್ವಿಯಾಗಿಯೇ ನಿರ್ವಹಿಸಿದ್ದಾರೆ. ಅತಿ ಪೆಡಸುತನವಾಗಲಿ ಅತಿ ಸರಳತೆಯಾಗಲಿ ಇಲ್ಲಿ ಕಂಡು ಬರುವುದಿಲ್ಲ. ಭಾಷೆಯಲ್ಲಿ ಕವಿಸಹಜ ಲಾಸ್ಯ ಅಷ್ಟಾಗಿ ಕಂಡು ಬರುವುದಿಲ್ಲವಾದರೂ ಈ ಕಾರ್ಯದ ಕಷ್ಟಾನಿಷ್ಟಗಳನ್ನು ಅರಿತಿರುವವರಿಗೆ ಶಂಭುಭಟ್ಟರ ಸಾಫಲ್ಯವೆಷ್ಟು ಎಂಬುದು ಮನದಟ್ಟಾಗುತ್ತದೆ. ಏನನ್ನೂ ಬಿಡದೆ, ಹೊಸದೇನನ್ನೂ ಅತಿಯಾಗಿ ಸೇರಿಸದೆ ಸಂಯಮದಿಂದ ಅನುವಾದಿಸಿದ್ದಾರೆ. ಉಳಿದ ಭಾಗಗಳ ಭಾಷಾಂತರ ಇನ್ನೂ ಪ್ರಕಟವಾದಂತಿಲ್ಲ.

ಮೈ. ಶೇ. ಅನಂತಪದ್ಮನಾಭರಾಯರು ೧೯೫೮ರಲ್ಲಿ ತಮ್ಮ ಅನುವಾದವನ್ನು ಹೊರತಂದಿದ್ದಾರೆ. ಆಗ ಇದರ ೫೦೦ ಪ್ರತಿಗಳು ಮಾತ್ರ ಅಚ್ಚಾಗಿದ್ದುವು. ೧೯೪೮ರ ಹೊತ್ತಿಗೇ ಸಿದ್ಧವಾಗಿದ್ದ ಈ ಅನುವಾದ ಸೂರ್ಯನ ಬೆಳಕನ್ನು ಕಾಣಬೇಕಾದರೆ ಹತ್ತು ವರ್ಷಗಳವರೆಗೆ ತಪಸ್ಸನ್ನಾಚರಿಸಬೇಕಾಗಿ ಬಂದಿತೆಂಬ ಸಂಗತಿ ವಿಷಾದನೀಯವಾಗಿರುವಷ್ಟೇ, ವಿಚಾರಾರ್ಹವೂ ಆಗಿದೆ.

"ನಾನು ಹೇಳಬಹುದಾದ ಮಾತೆಂದರೆ ಶ್ರೀ ಅನಂತಪದ್ಮನಾಭರಾಯರವರ ಕನ್ನಡ ಪದ್ಯವನ್ನು ಕುರಿತದ್ದು. ಈ ಗ್ರಂಥವನ್ನು ನಾನು ಅಲ್ಲಲ್ಲಿ ನೋಡಿದ್ದೇನೆ. ಪದ್ಯಗಳ ಓಟ ಸೊಗಸಾಗಿದೆ. ಕುಮಾರವ್ಯಾಸನ ಪ್ರಸಾದ ಇದರ ರೀತಿಯಲ್ಲಿ ಕಾಣುತ್ತದೆ. ಕನ್ನಡ ಪದಗಳ ಮೇಲೆ ಶ್ರೀ ಅನಂತಪದ್ಮನಾಭರಾಯರಿಗಿರುವ ಹಿಡಿತವೂ, ಧಾಟಿಯ ಕಡೆಗೆ ಅವರಿಗಿರುವ ಕಿವಿಯೊಲವೂ, ಅವರ ಬರವಣಿಗೆಯ ಭಾವ ಪ್ರಸನ್ನತೆಯೂ ಲಾಲಿತ್ಯವೂ ಎಲ್ಲರನ್ನೂ ಮೆಚ್ಚಿಸಬಲ್ಲುದಾಗಿವೆ." ಮುನ್ನುಡಿಯಲ್ಲಿ

ಡಿ. ವಿ. ಜಿ. ಯವರು ವ್ಯಕ್ತಪಡಿಸಿರುವ ಅಭಿಪ್ರಾಯದೊಡನೆ ಎಲ್ಲರೂ ದನಿಗೂಡಿಸಲೇ ಬೇಕಾಗುತ್ತದೆಂಬ ಸಂಗತಿ ನಿಜಕ್ಕೂ ಪ್ರಿಯವಾದ ಕಾರ್ಯವೇ ಸರಿ. ಅನಂತ ಪದ್ಮನಾಭರಾಯರ ಪ್ರಯತ್ನ ಈ ದೃಷ್ಟಿಯಿಂದ ಸ್ತುತ್ಯರ್ಹವಾಗಿದೆ. ಅದನ್ನು ಓದು ವಾಗ ನಾವು ಬೇರೊಂದು ಭಾಷೆಯ ಗ್ರಂಥವನ್ನು ಓದುತ್ತಿದ್ದೇವೆಂಬ ಅನುಭವ ಎಲ್ಲಿಯೂ ನಮಗಾಗುವುದಿಲ್ಲ.

ಆದರೆ, ಈ ಬಗೆಯ ಅನುಭವ ನಮಗೆ ಎರಡು ಸಂದರ್ಭಗಳಲ್ಲಿ ಉಂಟಾಗ ಬಹುದು. ಭಾಷೆಯ ಸೌಂದರ್ಯ–ಸೌಕುಮಾರ್ಯಗಳಿಗೆ ಅನುಗುಣವಾದ ರೀತಿಯಲ್ಲಿ ಮೂಲವನ್ನು ಸುಂದರವಾಗಿ ಅನುವಾದಿಸಿಕೊಟ್ಟಾಗ ಇಂತಹ ಅನುಭವ ದೊರೆಯ ಬಹುದು; ಮೂಲವನ್ನು ಕೈಬಿಟ್ಟು, ಭಾವವನ್ನು ಗ್ರಹಿಸಿ, ತಮಗೆ ತೋರಿದಂತೆ ಅದನ್ನು ವಿಸ್ತರಿಸಿ ಇಲ್ಲವೇ ಸಂಕೋಚಗೊಳಿಸಿ ಅಥವಾ ಉತ್ತಮಪಡಿಸಿ ಹೇಳಿ ದಾಗಲೂ—ಮೂಲವನ್ನು ಮರೆತು ಅದನ್ನು ಆಸ್ವಾದಿಸತೊಡಗಿದಾಗ—ಇದೇ ಬಗೆಯ ಅನುಭವವಾಗಬಹುದು. ಆಗ ಲೇಖಕನ ಪ್ರತಿಭೆ, ವ್ಯುತ್ಪತ್ತಿ, ಕಾವ್ಯಶಕ್ತಿ ಇವುಗಳೆಲ್ಲ ವನ್ನೂ ಕೊಂಡಾಡಬಹುದು. ಆದರೆ, ಈ ಎರಡನೆಯ ಪ್ರಕಾರವನ್ನು ಅನುವಾದದ ಒರೆಗಲ್ಲಿನಲ್ಲಿ ಉಜ್ಜಿ ನೋಡಿದಾಗ ಇದೇ ಮಾತುಗಳನ್ನು ಹೇಳಲಾಗುವುದಿಲ್ಲ. ಸ್ವತಂತ್ರ ಸೃಷ್ಟಿಯ ಪ್ರತಿಭೆಯನ್ನು ಮೆರೆಯಲು ಬೇರೊಂದು ಕ್ಷೇತ್ರವನ್ನು ಆರಿಸಿಕೊಳ್ಳಬೇಕೇ ಹೊರತು ಅನುವಾದ ಕ್ಷೇತ್ರವನ್ನಲ್ಲ ಎಂಬ ವಿಚಾರದಲ್ಲಿ ಎರಡು ಅಭಿಪ್ರಾಯಗಳಿರುವುದು ಸಾಧ್ಯವಿಲ್ಲ. ಅಯತ್ನವಾಗಿ ಹೆಚ್ಚಿನ ಯಾವ ಪ್ರಯಾಸವೂ ಇಲ್ಲದೆ ಒಮ್ಮೊಮ್ಮೆ ಆಗಿಬಿಡುವ ಉತ್ತಮಿಕೆಯನ್ನು ಮಿತಸ್ವಾತಂತ್ರ್ಯದ ಉಪಯೋಗವೆಂದು ಸ್ವೀಕರಿಸಬಹು ದಾದರೂ ಅಂತಹ ಉದಾಹರಣೆಗಳು ಅಪವಾದಸ್ವರೂಪವಾಗಿರುವುದಕ್ಕೆ ಬದಲಾಗಿ, ನಿಯಮವೇ ಆಗಿಬಿಟ್ಟರೆ ಆಗ ಆ ಪ್ರವೃತ್ತಿ ಪ್ರಶಂಸಾರ್ಹವಾಗದೆ ಖಂಡನಾರ್ಹವಾಗಿ ಪರಿಣಮಿಸುತ್ತದೆ. ಅನಂತಪದ್ಮನಾಭರಾಯರ ಭಾಷಾಂತರ ಈ ಎರಡನೆಯ ರೀತಿಗೆ ಉದಾಹರಣೆಯಾಗಿ ಬಿಟ್ಟಿರುವುದು ವಿಷಾದದ ಸಂಗತಿ. ಹಿಂದೆ ಉದಾಹರಿಸಿದ ಪ್ರಸಂಗವನ್ನು ಉಲ್ಲೇಖಿಸಿ ಈ ಹೇಳಿಕೆಯನ್ನು ಸಮರ್ಥಿಸ ಬಯಸುತ್ತೇನೆ. ಅನಂತಪದ್ಮನಾಭರಾಯರು ಆ ವರ್ಣನೆಯನ್ನು ಕನ್ನಡದಲ್ಲಿ ಈರೀತಿ ಮೂಡಿ ಸಿದ್ದಾರೆ.

"ಎನಲು ಮಾರುತ್ತರವ ಕೊಡದಿಹ
ಜನಕಜೆಯ ನೋಡುತ್ತ ಸಖಿಯರು
ವನಜನಯನೆಯ ನೋಟದೊಳು ನಿಜನೋಟಮಂ ಹರಿಸಿ
ಅನರ್ಘನಿರ್ವರ ಕಂಡು ಮೌನದಿ
ಮನಮುಳುಗಿದಂತಾಗೆ ಮಾರನ
ಕಣೆಗೆ ಹೃದಯವನೊಡ್ಡಿನಿಂದರು ವರ ಸಖೀಜನರು ॥

ಅವರವರು ತಮತಮಗೆ ತೋರಿದ
ಸವಿಗುಣವ ರೂಪುಗಳ ಹೊಗಳುತ
ಕುವಲಯಶ್ಯಾಮನನು ಬಣ್ಣಿಸುತಿವರು ನರರಲ್ಲ |
ದಿವಿಜರೊಡೆಯನ ಸುತರೊ ಮನ್ಮಥ
ಕುವರರೊ ಸಿರಿಯಾತ್ಮಜರೊ ಮೇ
ಣಿವರು ವಿದ್ಯಾಧರ ಕುಮಾರರೊ ಖೇಚರಾನ್ವಯರೋ ||

ನಾಲಿಗೆಗೆ ಕಣ್ಣಿಲ್ಲ—ಕಣ್ಗಳು
ಪೇಳಲಾರವು ಹಲವು ಮಾತೇಂ
ವ್ಯಾಳಶಯನನಂಗರಿದು ಚೆಲುವು ಸ್ಮರನ ಬೆಡಗೇನು? |
ಕೇಳಿ ಸಖಿಯರ ನುಡಿಯನಾಲಿಸಿ ಜಾನಕಿ
ನೀಲವರ್ಣನ ನೋಡಿ ಸಿಲ್ಕಿದ
ವಾಲಿಗಳು ಸೆರೆ ಹರುಷವೇರಲು ಮಾತು ಮರೆಯಾಯ್ತು ||

ಮೂಲದಲ್ಲಿ ಕವಿಯೇ 'ಚೌಪಾಈ' ಮತ್ತು 'ದೋಹಾ' ಎಂಬ ಎರಡು ಬಗೆಯ ಛಂದಸ್ಸುಗಳನ್ನು ಉಪಯೋಗಿಸಿರುವುದನ್ನು ಕಾಣಬಹುದು. ಅನುವಾದಕ್ಕೆ ಭಾಮಿನೀ ಷಟ್ಪದಿಯನ್ನು ಆಯ್ದುಕೊಂಡಿರುವುದರಿಂದ ಭಾವವನ್ನು ಅನೇಕ ಶಸ್ತ್ರಕ್ರಿಯೆಗಳಿಗೆ ಒಳಪಡಿಸಿ ಹಿಗ್ಗಾ–ಮುಗ್ಗಾ ಎಳೆಯಬೇಕಾಗಿ ಬಂದಿದೆ. ಹೀಗಾಗಿ, ತಮಗೆ ತೋರಿದಂತೆ ಆಶ್ರಯವನ್ನು ಗ್ರಹಿಸಿ, ತಮ್ಮ ಕಲ್ಪನೆಗಳನ್ನೂ ಸೇರಿಸಿಕೊಂಡು ವರ್ಣಿಸಿಕೊಂಡು ಹೋಗುವ ಮಾರ್ಗವನ್ನು ಅನುಸರಿಸಿರುವುದರಿಂದ ಆಗಿರುವ ಪ್ರಮಾದಗಳನ್ನು ವಿವರಿಸಿ ಹೇಳಬೇಕಾದ ಆಗತ್ಯವಿಲ್ಲ. ಈ ಕಾರಣಗಳಿಂದ ಶುದ್ಧ ಅನುವಾದದ ಕಕ್ಷೆಗೆ ಇದನ್ನು ಒಳಪಡಿಸಿ ಪರೀಕ್ಷಿಸಬೇಕಾದ ಅಗತ್ಯವಿಲ್ಲ; ಅಂತಹ ಪ್ರಯತ್ನದಿಂದ ಫಲವೂ ದೊರೆಯು ವುದಿಲ್ಲ. ಇತ್ತ ಅನುವಾದವೂ ಆಗದೆ, ಅತ್ತ ಸ್ವತಂತ್ರ ಕೃತಿಯೂ ಆಗದೆ ಅಡ್ಡ ಪಂಕ್ತಿಯ ಕೃತಿಯಾಗುವುದು ಇಂತಹ ಮಾರ್ಗವನ್ನು ಅನುಸರಿಸಿದಾಗ ಆಗುವ ಅನಿವಾರ್ಯ ಪರಿಣಾಮವೆಂಬುದನ್ನು ಸ್ಪಷ್ಟಪಡಿಸುವ ದೃಷ್ಟಿಯಿಂದ ಮೇಲ್ಕಂಡ ಪ್ರಸಂಗ ವನ್ನು ಉದಾಹರಿಸಿದ್ದೇನೆ. ಈ ಕೃತಿಯ ಎರಡನೆಯ ಭಾಗ ಅಚ್ಚಿನ ಹಂತದಲ್ಲಿದೆ ಯೆಂದು ಕೇಳಿದ್ದೇನೆ.

ಒಟ್ಟಿನಲ್ಲಿ, ಇಂತಹ ಕೃತಿಯನ್ನು ಭಾಷಾಂತರಿಸುವಾಗ ಒಂದಲ್ಲ ಹಲವಾರು ಛಂದಸ್ಸುಗಳ ಆಯ್ಕೆ ಮತ್ತು ಅವುಗಳ ಔಚಿತ್ಯಪೂರ್ಣ ಪ್ರಯೋಗದತ್ತ ಅನುವಾದಕ ಗಮನವನ್ನೀಯದೆ ಹೋದಲ್ಲಿ, ಛಂದಸ್ಸಿನ ದಾಸ್ಯ ಆತನ ಸಾಹಸವನ್ನು ವಿಫಲಗೊಳಿಸು ತ್ತದೆ ಎಂಬ ಸಂಗತಿಯನ್ನು ಸ್ಪಷ್ಟಪಡಿಸುತ್ತದೆ.

'ರಾಮಚರಿತ ಮಾನಸ'ದ ಭಾಷಾಂತರದ ಪರಂಪರೆಯಲ್ಲಿ ಈಚಿನ ಕೃತಿ (೧೯೬೪ ರಲ್ಲಿ ಪ್ರಕಟವಾಯಿತು) ಗುರುನಾಥ ಜೋಶಿಯವರದು. ಇದು ಮಿಂಚಿನ ಬಳ್ಳಿಯ ವಾರ್ಷಿಕ ಯೋಜನೆಯ ಅಗತ್ಯವನ್ನು ತುಂಬಲು ತಿಂಗಳೊಳಗಾಗಿ ರಚಿತವಾಗಿರುವ

ಕೃತಿ. ಸುಮಾರು ೨೬೫ ಪುಟಗಳಲ್ಲಿ ರಾಮಚರಿತ ಮಾನಸದ ಏಳು ಕಾಂಡಗಳ ಕಥೆಯನ್ನು ಸಂಗ್ರಹಿಸುವ ಪ್ರಯತ್ನ ಮಾಡಿದ್ದಾರೆ ಜೋಶಿಯವರು. ಹೀಗಾಗಿ ಕಥೆಯ ಓಟದ ಕಡೆಗೆ ಅವರು ಗಮನಹರಿಸಿದ್ದಾರೆ. ವರ್ಣನಪ್ರಧಾನವಾಗಿರುವ ಭಾಗಗಳು ಒಂದೆರಡು ನುಡಿಗಳಲ್ಲಿ, ಸಂಬಂಧ ಕಲ್ಪಿಸುವ ವಾಕ್ಯಗಳ ರೂಪದಲ್ಲಿ ತೇಲಿ ಹೋಗುತ್ತವೆ. ಇಷ್ಟಾದರೂ, ಸಾಹಿತ್ಯ ಸೌಂದರ್ಯ ಅಡಕವಾಗಿರುವಂತಹ ಎಡೆಗಳನ್ನು ಅವರು ಸಂಪೂರ್ಣವಾಗಿ ಕೈಬಿಟ್ಟಿಲ್ಲ. ಒಂಡೆರಡು ಮಾತುಗಳಲ್ಲಿ ಹೇಳಿ ಮುಂದೆ ಸಾಗಿದ್ದಾರೆ. ಹೀಗೆ ಮಾಡುವಾಗ ಭಾವಾನುಭಾವಗಳ ಸುಂದರವಾದ ಹೂಮಾಲೆ ಎಳತಕ್ಕೆ ಸಿಕ್ಕಿ ಕಿತ್ತುಹೋಗಿದೆ. ಪುನಃ ಅದನ್ನು ಒಂದುಗೂಡಿಸಿದಲ್ಲಿ ಹೇಗೆ ಕೆಲವು ರಮಣೀಯ ಕುಸುಮಗಳಿಗೆ ಅಲ್ಲಿ ಸ್ಥಾನವಿಲ್ಲದೆ ಹೋಗುತ್ತಯೋ, ಹಾಗೆ ಆಗಿದೆ ಇಲ್ಲಿ ಕೂಡ. ಈ ಹಿಂದೆ ಉದಾಹರಿಸಿದ ಪ್ರಸಂಗವನ್ನು ಅವರು ಹೀಗೆ ಕನ್ನಡಿಸಿದ್ದಾರೆ:

"ಇಬ್ಬರು ರಾಜಕುಮಾರರು ತೋಟವನ್ನು ನೋಡಲು ಬಂದಿದ್ದಾರೆ. ಕಿಶೋರ ವಯಸ್ಸಿನವರು, ಎಲ್ಲ ತರದಿಂದಲೂ ಚೆಲುವರು. ಅವರು ನಸುಗಪ್ಪು ಮತ್ತು ಗೌರ ವರ್ಣದವರು. ಅವರ ಚೆಲುವನ್ನು ನಾನೆಂತು ವರ್ಣಿಸಲಿ? ವಾಣಿಗೆ ಕಣ್ಣಿಲ್ಲ. ಕಣ್ಣಿಗೆ ವಾಣಿಯಿಲ್ಲ. ಈ ಮಾತುಗಳನ್ನು ಕೇಳಿ ಸೀತೆಗೆ ಅವರನ್ನು ನೋಡಬೇಕೆಂಬ ತವಕ ವುಂಟಾಯಿತು." (ಪುಟ ೮೧).

'ಎಲ್ಲ ತರದಿಂದಲೂ ಚೆಲವರು' ಎಂಬ ಮಾತು ಮೂಲದಲ್ಲಿಲ್ಲ. 'ನಸುಗಪ್ಪು' ಎಂಬುದು ಮೂಲದ 'ಶ್ಯಾಮ' ಎಂಬ ಶಬ್ದಕ್ಕೆ ಉಚಿತವಾದ ಭಾಷಾಂತರವಲ್ಲ. ಕಥೆಯ ಕುತೂಹಲಕ್ಕೂ ತಡೆಯೊಡ್ಡುವಂತೆ ಮಧ್ಯೆ ಮಧ್ಯೆ ಜೋಶಿಯವರು ಕೆಲವು ಪ್ರಸಂಗಗಳ ಮೂಲವನ್ನು ಉದ್ಧರಿಸಿಬಿಡುತ್ತಾರೆ. ಅವುಗಳನ್ನು ಶಬ್ದಶಃ ಭಾಷಾಂತರಿಸುತ್ತಾರೆ. ಕಾಂಡಗಳ ಪ್ರಾರಂಭದಲ್ಲಿ ಬರುವ ಕೆಲವು ಸಂಸ್ಕೃತ ಶ್ಲೋಕ, ವೃತ್ತಗಳ ವಿಚಾರದಲ್ಲಿಯೂ ಹೀಗೆಯೇ ಮಾಡಿದ್ದಾರೆ.

ಈ ಕೆಲವು ಒರೆಕೋರೆಗಳನ್ನು ಬಿಟ್ಟರೆ, ಅಂಗೈ ಅಗಲದ ೨೬೫ ಪುಟಗಳಲ್ಲಿ, ಆಡಂಬರ ರಹಿತವಾದ ಸರಳ ಶೈಲಿಯಲ್ಲಿ ಕಥೆಯನ್ನು ಸುಲಭವಾಗಿ ಹೇಳಿಕೊಂಡು ಹೋಗಿದ್ದಾರೆ. 'ರಾಮಚರಿತ ಮಾನಸ'ದ ರಸಬಿಂದುಗಳ ರುಚಿತೋರಿಸುವ ಅವರ ಪ್ರಯತ್ನ ಸಫಲವಾಗಿದೆ.

'ರಾಮಚರಿತ ಮಾನಸ' ಇನ್ನೂ ಸಮರ್ಥವಾಗಿ, ಸಮಗ್ರವಾಗಿ ಕನ್ನಡದಲ್ಲಿ ಕಾಣಿಸಿಕೊಳ್ಳಬೇಕಾಗಿದೆ. ಇದುವರೆಗೆ ಆಗಿರುವುದು ಆರಂಭದ ಕಾರ್ಯ ಮಾತ್ರ. ಅದರ ಬೃಹತ್ತು ಮತ್ತು ಮಹತ್ತುಗಳೆರಡೂ ಕನ್ನಡಿಸಲ್ಪಟ್ಟಾಗ ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ಅದು ಮಹತ್ವಪೂರ್ಣ ಘಟನೆಯಾಗುತ್ತದೆ.

ಜಯಶಂಕರ ಪ್ರಸಾದರ 'ಆಂಸೂ' ಎಂಬ ಮುಕ್ತಕ ಕಾವ್ಯ 'ಛಾಯಾವಾದ' ವೆಂದು ಹೆಸರಾಗಿರುವ ಕಾವ್ಯಪಂಥದಲ್ಲಿ ಉಲ್ಲೇಖಾರ್ಹವಾಗಿರುವ ಆದ್ಯ ಕೃತಿ; ಆ ಪರಂಪರೆಯ ಒಂದು ವಿಶಿಷ್ಟವಾದ ಮೈಲಿಗಲ್ಲು; ಓದುಗರಿಗೆ ಕಾವ್ಯರಮಣೀಯತೆಯ

ಅನುಪಮ ಆನಂದವನ್ನು ನೀಡುವಂತಹ ಮಹಾನ್ ಕೃತಿ. ಈ ಮುಕ್ತಕ ಕಾವ್ಯ ಕನ್ನಡಿಗರ ಗಮನವನ್ನು ಸೆಳೆದುದರಲ್ಲಿ ಆಶ್ಚರ್ಯವೇನೂ ಇಲ್ಲ. ಈಗಾಗಲೇ ಇದರ ಎರಡು ಅನುವಾದಗಳು ಪ್ರಕಟವಾಗಿದ್ದು, ಮೂರನೆಯ ಅನುವಾದವೂ ಅಚ್ಚಿಗೆ ಸಿದ್ಧವಾಗಿದೆ. ಪ್ರಸಾದರ ಪ್ರತಿಭೆ ಓದುಗರನ್ನು ತನ್ನತ್ತ ಸೆಳೆದು ನಿಲ್ಲಿಸಿಕೊಳ್ಳುತ್ತದೆಯಾದರೂ ಅವರ ಮುಕ್ತಕಗಳ ವಿಚಾರದಲ್ಲಿ 'ಇದಮಿತ್ಥಂ' ಎಂದು ಏನೂ ಹೇಳುವಂತಿಲ್ಲ. ಮನ ಬಂದಂತೆ ಅವುಗಳನ್ನು ವ್ಯಾಖ್ಯಾನಮಾಡಿ ವ್ಯಾಖ್ಯಾಕಾರರು ಗೊಂದಲವನ್ನುಂಟುಮಾಡಿದಾಗ ಪ್ರಸಾದರ ನಿಕಟವರ್ತಿಯಾಗಿದ್ದು, ಅವರನ್ನೂ ಅವರ ಕಾವ್ಯಧೋರಣೆಗಳನ್ನು ಚೆನ್ನಾಗಿ ಅರಿತುಕೊಂಡಿದ್ದ ಪಂ. ವಿನಯಮೋಹನ ಶರ್ಮಾ ಎಂಬವರು 'ಆಂಸೂ ಪದ್ಯಗಳ ಭಾವಾರ್ಥ' ಎಂಬ ಪುಸ್ತಕವನ್ನು ಪ್ರಕಟಿಸಿದರು. ಈಗ 'ಆಂಸೂ' ಪದ್ಯಗಳಿಗೆ ಅರ್ಥ ಹಚ್ಚುವಾಗ ಶರ್ಮಾ ಅವರ ಭಾವವಿವರಣೆಯನ್ನು ಆಧಾರವಾಗಿಟ್ಟುಕೊಂಡು ಮುಂದುವರಿಯುವುದನ್ನು ಸಾಮಾನ್ಯವಾಗಿ ಕಾಣಬಹುದಾಗಿದೆ. ಮೇಲಾಗಿ, ಪ್ರಸಾದರ ಪ್ರತಿಭೆ ವ್ಯಾಖ್ಯಾನ–ಅನುವಾದಗಳಿಗೆ ತನ್ನನ್ನು ಸಂಪೂರ್ಣವಾಗಿ ಒಳಪಡಿಸದಿರುವಷ್ಟು ಸುಂದರ ಸೃಷ್ಟಿಯನ್ನು ಮುಂದಿರಿಸಿದೆ ಎಂಬ ಸಂಗತಿಯನ್ನು ಗಮನಿಸಿದರೆ ಅನುವಾದಕನ ಕಷ್ಟ ಏನೆಂಬುದು ಅರಿವಾಗುತ್ತದೆ. ಅತೃಪ್ತಿ–ಓದುಗರಿಗೆ ಮತ್ತು ಅನುವಾದಕರಿಗೆ–ಅನಿವಾರ್ಯ.

ಮೊಟ್ಟಮೊದಲಬಾರಿಗೆ ೧೯೫೬ರಲ್ಲಿ ಈ ಕೃತಿಯ ಪದ್ಯಾನುವಾದವನ್ನು ನೀಡಿದ ಶ್ರೇಯಸ್ಸು 'ಕುಮುದಪ್ರಿಯ' ಅವರದು. ೧೯೬೧ರಲ್ಲಿ ಎಂ. ವಿ. ನಾರಾಯಣ ರಾವ್ ಅವರು ತಮ್ಮ ಅನುವಾದವನ್ನು ಮುಂದಿರಿಸಿದ್ದಾರೆ. ಮತ್ತೆ ೧೯೬೭ರಲ್ಲಿ ಅವರೇ ಇನ್ನೊಂದು ಅನುವಾದವನ್ನು ಸಿದ್ಧಪಡಿಸಿದ್ದಾರೆ. ೧೯೫೬-೫೭ರಲ್ಲಿ, ಕರ್ನಾಟಕ ಪ್ರಾಂತೀಯ ಹಿಂದಿ ಪ್ರಚಾರ ಸಭೆಯ ಮುಖಪತ್ರಿಕೆಯಾದ 'ಭಾರತವಾಣಿ' ಕುಮುದಪ್ರಿಯರ ಮತ್ತು ನಾರಾಯಣರಾಯರ ಅನುವಾದಗಳ ಕೆಲವು ಪದ್ಯಗಳನ್ನು ಮೂಲಸಹಿತವಾಗಿ ಅಕ್ಕಪಕ್ಕದಲ್ಲಿ ಪ್ರಕಟಿಸಿತ್ತು. ಅನುವಾದಗಳು ಒಂದಕ್ಕೊಂದು ಬಾರು ದೂರದಲ್ಲಿಯೇ ಇವೆ ಎಂಬುದನ್ನು ಅಲ್ಲಿಯೂ ಗುರುತಿಸಬಹುದಾಗಿತ್ತು. ಕೃತಿಯ ರೂಪದಲ್ಲಿ ಹೊರಬಂದಾಗಲೂ ಈ ಅನುವಾದಗಳಿಗೆ ಅಂತಹ ಸ್ವಾಗತವೇನೂ ದೊರಕಲಿಲ್ಲವೆಂಬ ಸಂಗತಿ ವಿಷಾದನೀಯವಾಗಿರುವಷ್ಟೇ ವಿಚಾರಾರ್ಹವೂ ಆಗಿದೆ.

ಜಯಶಂಕರ ಪ್ರಸಾದರ ಸಾಹಿತ್ಯವನ್ನು ಕನ್ನಡದಲ್ಲಿ ಬೆಳಕು ಕಾಣಿಸುವ ಉದ್ದೇಶದಿಂದಲೇ 'ಸಾಹಿತ್ಯ ಸೇವಾಸದನ'ವು 'ಪ್ರಸಾದ್ ಗ್ರಂಥಮಾಲೆ'ಯನ್ನು ಪ್ರಾರಂಭಿಸಿ, ತನ್ನ ಮೊದಲ ಪುಷ್ಪಾಂಜಲಿಯಾಗಿ 'ಕಂಬನಿ'ಯನ್ನು ಹೊರತಂದಿದೆ. 'ಕುಮುದ ಪ್ರಿಯ'ರು ಮೊದಲು ಕವಿಯ ಪರಿಚಯವನ್ನೂ, ಅನಂತರ ಕವಿಯ ಸಾಹಿತ್ಯ ಸೃಷ್ಟಿಯ ವಿಹಂಗಮ ಅವಲೋಕನವನ್ನೂ ನೀಡಿ 'ಆಂಸೂ' ಕಾವ್ಯದ ಮುಕ್ತಕಗಳ ಅನುವಾದವನ್ನು ಮುಂದಿರಿಸಿದ್ದಾರೆ. ಕೊನೆಯಲ್ಲಿ 'ಪದ್ಯಗಳ ಅಕಾರಾದಿ'ಯನ್ನು ಒದಗಿಸಿದ್ದಾರೆ 'ಪ್ರಸಾದ' ಸಾಹಿತ್ಯವದು ನಮಗೆ, ಕನ್ನಡಕೆ

ಕಾವ್ಯಕ್ಕ ಎಲ್ಲದಕೆ ಬೆಳಕಾಗಲಿ” ಎಂಬ ಮಹದಾಶೆ ಅವರನ್ನು ಅನುವಾದಕಾರ್ಯದಲ್ಲಿ ತೊಡಗಿಸಿದೆ.

ಪ್ರಸಾದರ ಸಾಹಿತ್ಯಸೇವೆಯ ಪರಿಚಯ ಮಾಡಿಕೊಡುವ ಪ್ರಸಂಗದಲ್ಲಿ ಉಳಿದವುಗಳಿಗಿಂತ ಒಂದು ಪಟ್ಟು ಹೆಚ್ಚಾಗಿಯೇ ‘ಆಂಸೂ’ ಕಾವ್ಯದ ಪರಿಚಯವನ್ನು ನೀಡಲು ಪ್ರಯತ್ನಿಸಿದ್ದಾರೆ. ಅಂಗೈಯಲ್ಲಿ ಆಗಸವನ್ನು ತೋರುವ ಈ ಸಾಹಸದಲ್ಲಿ ‘ಆಂಸೂ’ ಕಾವ್ಯದ ಪರಿಚಯ ಅತ್ಯಂತ ಸಂದಿಗ್ಧವಾಗಿ ಬಿಟ್ಟಿದೆ. ಉದಾಹರಣೆಗೆ ಈ ಒಂದೆರಡು ವಾಕ್ಯಗಳೇ ಸಾಕು:

“ಕಂಬನಿಯು ಒಂದು ಪ್ರೇಮ ಕಾವ್ಯ ಎಂಬುದಕ್ಕೆ ಇನ್ನೂ ಅನೇಕ ಉದಾಹರಣೆಗಳಿವೆ. ಅವುಗಳನ್ನು ಕನ್ನಡ ಸಾಹಿತ್ಯದ ವಿಮರ್ಶಕರ ಪಾಲಿಗೆ ಬಿಡಬೇಕೆಂಬ ಯೋಚನೆಯಿಂದಲೇ ಇಲ್ಲಿ ಅವುಗಳ ಪ್ರಸ್ತಾಪವನ್ನು ಮಾಡಿಲ್ಲ. ರೂಪಕಗಳ ಆವರಣದಲ್ಲಿ ಘೋರವಾದ ಸಂಯೋಗ ಶೃಂಗಾರವೂ ‘ಕಂಬನಿ’ಯಲ್ಲಿ ಪ್ರಸ್ತಾಪಿಸಲ್ಪಟ್ಟಿದೆ. ಆದರೆ, ಅದು ಅಶ್ಲೀಲತೆಯ ಸೋಂಕಿಲ್ಲದೆ, ಸಭ್ಯತೆಗೆ ಮತ್ತು ಅಲೌಕಿಕತೆಗೆ ಧಕ್ಕೆ ಬರದಂತೆ ವಿವೇಚಿಸಲ್ಪಟ್ಟಿದೆ.” (ಪುಟ. vii)

ಏಳು ಪುಟಗಳವರೆಗೆ ಮಾತ್ರ ವಿಸ್ತರಿಸಿಕೊಂಡಿರುವ ಈ ಪರಿಚಯದಲ್ಲಿ “ಶತ್ರು, ದೃಷ್ಠಿ, ಉಚ್ಛ, ಸ್ಥರ, ವೈಶಿಷ್ಠ್ಯ, ಪ್ರಾಧಾನ್ಯತೆ, ಸೃಷ್ಠಿ, ಮಿಥ್ಯೆ, ಪ್ರಸ್ತಾಪ, ಮಹ” ಮೊದಲಾದ ತಪ್ಪುರೂಪಗಳೇ ತುಂಬಿಕೊಂಡಿರುವ ಅಪೂರ್ವಶಬ್ದ ಭಂಡಾರವೇ ನಮಗೆದುರಾಗುತ್ತದೆ. ಅನುವಾದಕರ ಸಂಸ್ಕೃತ ಭಾಷಾಜ್ಞಾನಕ್ಕೆ ಇದಕ್ಕಿಂತ ಹೆಚ್ಚಿನ ಪ್ರಮಾಣವೇನೂ ಬೇಕಾಗಿಲ್ಲ. ಅನುವಾದದಲ್ಲಿ, ಕನ್ನಡ ಭಾಷೆಯ ವಿಶಿಷ್ಟ ಸ್ವರೂಪವನ್ನು ನೋಡಬೇಕೆಂಬ ಆಶೆಯುಂಟಾದರೆ, ಅಲ್ಲಿಯೂ ಓದುಗರಿಗೆ ನಿರಾಶೆಯಾಗದು. “ಮೃದುವಾದ ಶ್ಯಾಮಪಚ್ಚೆ, ಹೋಗುತಲಿತ್ತುರ್, ಉಜ್ವಲುಪಹಾರಗಳ, ನಸುನಗುತಿರ್ತುರ್, ದಾನಕೊಡುತಿರ್ತುರ್, ಹೋಗುತಲಿರ್ತುರ್, ಇರುವಿನಂತೆ, ಇತ್ಯಾದಿ”—ಇಂತಹ ಇನ್ನೂ ಅನೇಕ ರೂಪಗಳು ಹಿಂಡು ಹಿಂಡಾಗಿ ಕಾಣದೊರೆಯುತ್ತವೆ.

ಹಿಂದಿ, ಕನ್ನಡ, ಸಂಸ್ಕೃತ ಭಾಷೆಗಳ ಸಮ್ಯಕ್‌ಜ್ಞಾನ ಇಂತಹ ಕೃತಿಗಳನ್ನು ಅನುವಾದಿಸುವವನಿಗೆ ಇರಬೇಕಾದ ಮೊಟ್ಟ ಮೊದಲ ಅರ್ಹತೆ ಎಂಬುದನ್ನು ಈ ಅನುವಾದ ಸ್ಪಷ್ಟಪಡಿಸುತ್ತದೆ. ಆದರೆ ಈ ಕೃತಿಯಲ್ಲಿ ಹೆಜ್ಜೆ ಹೆಜ್ಜೆಗೂ ಭಾಷೆ ಮತ್ತು ಅಭಿವ್ಯಕ್ತಿಯ ತೊಡಕು ಓದುಗರ ಸಹನೆಯನ್ನು ಪರೀಕ್ಷಿಸಿಬಿಡುತ್ತದೆ. ಭಾವಕ್ಕೆ ಅನುಗುಣವಾಗಿ ಭಾಷೆಯೂ ಓಡದಿದ್ದರೆ ಅನುವಾದಕನೊಡನೆ ಓದುಗನೂ ಹಳ್ಳಕ್ಕೆ ಬೀಳಬೇಕಾಗುತ್ತದೆ. ಕಾರಣ ಇಷ್ಟೆ: ‘ಆಂಸೂ’ ಒಂದು ಸಂಕೇತಕಾವ್ಯ, (Allegorical Epic). ಭಾವ ಮತ್ತು ಭಾಷೆಗಳ ಅನ್ಯಾದೃಶ ಸಂಗಮ ಲೌಕಿಕಾರ್ಥಗಳನ್ನು ಅನಾಯಾಸವಾಗಿ ಧ್ವನಿಸುತ್ತದೆ. ಅನುವಾದ ಭಾಷೆಯಲ್ಲಿಯೂ ಈ ಸೌಲಭ್ಯ ದೊರೆಯಬೇಕು. ಕುಮುದ ಪ್ರಿಯರೇನೋ “ಮೂಲದ ಸೌಂದರ್ಯ, ಭಾವ. ಅರ್ಥ ಇತ್ಯಾದಿಗಳನ್ನು ಕಾಪಾಡಿಕೊಂಡು ಬರುವ ಪ್ರಯತ್ನವನ್ನು ಸಾಧ್ಯವಾದಮಟ್ಟಿಗೆ

ಮಾಡಲಾಗಿದೆ. ಎಲ್ಲಿಯಾದರೂ ಲೇಖಣಿಯು ಎಡವಿದ್ದರೆ ಮುಂದಿನ ಸಂಸ್ಕರಣದಲ್ಲಿ ತಿದ್ದಿಕೊಳ್ಳಲಾಗುವುದು" ಎಂದಿದ್ದಾರೆ. ಅವರ ವಿನಯದ ಈ ಮಾತುಗಳ ದುರುಪಯೋಗ ಸಲ್ಲದಾದರೂ, ಎಡವದೆ ಇರುವ ಎಡೆಗಳಿಗಾಗಿ ಅರಸಬೇಕಾದ ದೌರ್ಭಾಗ್ಯ ಈ ಸಮೀಕ್ಷಕನದಾಯಿತು ಎಂದು ವಿಧಿಯಿಲ್ಲದೆ ಹೇಳಬೇಕಾಗಿ ಬಂದಿದೆ. "ವ್ಯಾಕರಣಂ ? ಅದು ಪಂಡಿತರ ಭಾಗಂ ! ಕಾವ್ಯರಣರಂಗಂ ? ಅದು ಕಣೌ ಯೋಧರ್ಗ್ಗೆ ! ನಾಂ ಪಸುಳೆ ತೊದಲಿಹೆನ್...." ಎಂದಿರುವ ಮಾತು ಸತ್ಯಕಥನವಾಗಿಬಿಟ್ಟಿರುವುದು ನಿಜಕ್ಕೂ ವಿಷಾದನೀಯ. ಈ ಹಸುಳೆ ಕಾವ್ಯಕ್ಕೂ, ವ್ಯಾಕರಣಕ್ಕೂ ಕೈಮುಗಿದುಬಿಟ್ಟಿದೆ ; ಆದ್ದರಿಂದಲೇ "ಹಾ ! ಓದುಗರು ಸಹನೆಯನ್ನು ಪರಿಪಾಲಿಸಿಕೊಂಡು ಗ್ರಂಥವನ್ನು ಓದಬೇಕೆಂದು ಮನವಿಮಾಡಿಕೊಳ್ಳುತ್ತೇನೆ" ಎನ್ನುತ್ತದೆ. ಹೀಗಾಗಿ, ಅನುವಾದ ಹಾಸ್ಯಾಸ್ಪದವಾಗಿಬಿಟ್ಟಿದೆ. ಒಂದೇ ಒಂದು ಉದಾಹರಣೆಯನ್ನು ನೋಡಿ ;

ಮೂಲ : ಆತಿ ಹೈ ಶೂನ್ಯ ಕ್ಷಿತಿಜ ಸೇ
ಕ್ಯೋಂ ಲೌಟ ಪ್ರತಿಧ್ವನಿ ಮೇರೀ
ಟಕರಾತೀ ಬಿಲಖಾತೀ ಸೀ
ಪಗಲೀ ಸೀ ದೇತೀ ಫೇರೀ ?

ನಿಕಟಾನುವಾದ : ಬರುವುದೇಕೆ ಶೂನ್ಯ ಕ್ಷಿತಿಜದಿಂದೆ
ಹಿಂದಿರುಗಿ ನನ್ನ ಪ್ರತಿಧ್ವನಿಯು
ತಾಗುತಿರುವವೊಲು, ಬಿಕ್ಕಳಿಸುತಿರುವವೊಲು
ಏಕೆ ಮರುಳನಂದದೆ ಶತಪದವ ಹಾಕುತಿದೆ ? (ಲೇಖಕ)

'ಕುಮುದಪ್ರಿಯ'ರ ಅನುವಾದ :
ಶೂನ್ಯದಾ ಕ್ಷಿತಿಜದಿಂ ಮರುಬರುತಲಿಹುದೇಕೆ
ನನ್ನ ಈ ಪ್ರತಿದನಿಯೆ ನನ್ನ ಎಡೆಗೆ ?
ಮತ್ತೆ ಹೊಡೆದೆನಗೆ ಮೇಣ್ ಬಿಕ್ಕಳಿಸಿ ಮಗುವಿನೊಲು
ಹುಚ್ಚನೊಲು ಬಡಿದಿಹುದು ನನ್ನ ಎದೆಗೆ.

೧೯೬೧ರಲ್ಲಿ ಈ ಕಾವ್ಯದ ಮತ್ತೊಂದು ಅನುವಾದವನ್ನು ಮುಂದಿರಿಸಿದ ಎಂ. ವಿ. ನಾರಾಯಣ ರಾಯರು ಕನ್ನಡ, ಹಿಂದಿ, ಸಂಸ್ಕೃತ ಭಾಷೆಗಳಲ್ಲಿ ಪಾಂಡಿತ್ಯವನ್ನು ಗಳಿಸಿರುವರೆಂಬುದಕ್ಕೆ ಅವರ ಅನುವಾದವೇ ಸಾಕ್ಷಿಯಾಗಿದೆ. ಅನುವಾದಕರು, ಒಟ್ಟಿನಲ್ಲಿ, ಸುಂದರವಾದ ಭಾವಾನುವಾದವನ್ನು ಮುಂದಿರಿಸಿದ್ದಾರೆಂದು ಧಾರಾಳವಾಗಿ ಹೇಳಬಹುದಾಗಿದೆ. ಮೊದಲಬಾರಿಗೆ ಮೇಲ್ಕಂಡ ಪದ್ಯವನ್ನು ಅನುವಾದಿಸಿದಾಗ ಅವರೂ ಎಡವಿದ್ದರೆಂಬುದಕ್ಕೆ ೧೯೬೧ರ ಈ ಕೆಳಕಂಡ ಅನುವಾದ ಹಾಗೂ ೧೯೬೭ರ ಪರಿಷ್ಕೃತ ಅನುವಾದಗಳನ್ನೇ ಪ್ರಮಾಣವಾಗಿ ಮುಂದಿರಿಸಬಹುದು :

೧೯೬೧ರ ಅನುವಾದ :

ಶೂನ್ಯ ಕ್ಷಿತಿಜದ ಕಡೆಗೆ ಪರಿದೆನ್ನ ನಿಡುಕೂಗು
ಪಡಿನುಡಿದು ಮೇಣೆನ್ನ ಬಳಿ ಮರಳಿತು ?
ತಾಗಿತಾಗದೆ ಸುಯ್ದು ಸುಯ್ಯದಂತೆನ್ನದನಿ
ಅರಿವುಗೆಟ್ಟುರುಳುತ್ತೆ ಬಳಿಸಾರಿತೊ ?

ಮೂಲದಲ್ಲಿಯ ಪ್ರಶ್ನಾರ್ಥಕ ಭಾವ ಅನುವಾದದಲ್ಲಿ ಸಂದೇಹಸೂಚಕವಾಗಿಬಿಟ್ಟದೇ ಅಲ್ಲದೆ, 'ತಾಗಿಯೂ ತಾಗದಂತೆ, ಸುಯ್ದು ಸುಯ್ಯದಂತೆ' ಜಂಜಾಟವಾಡುವ ಮರುಳ ತನವನ್ನೂ ತೋರಿಸಿಬಿಟ್ಟಿತ್ತು. ಈ ಅಂಶವನ್ನು ಗಮನಿಸಿರುವ ಶ್ರೀಯುತರು ೧೯೬೦ರಲ್ಲಿ ಸಿದ್ಧಪಡಿಸಿರುವ ಅನುವಾದದಲ್ಲಿ ಅದನ್ನು ಈರೀತಿ ತಿದ್ದಿದ್ದಾರೆ :

ಶೂನ್ಯದಾ ಕಡೆಯಿಂದಲೇತಕೆ
ಮರುಳುತಿದೆ ಮೇಣೆನ್ನ ಮಾರ್ದನಿ
ಸುಯ್ದು ಮತಿಗೆಟ್ಟಂತೆ ತಾಗಿ
ಉರುಳುರುಳಿ ತಾ ಬರುತಿದೆ.

'ಕಣ್ಣೀರು' ಎಂಬ ಹೆಸರಿನಲ್ಲಿ ಸಿದ್ಧಪಡಿಸಲಾಗಿರುವ ಈ ಎರಡನೆಯ ಅನುವಾದ ಇನ್ನೂ ಅಚ್ಚಾಗಿಲ್ಲ. ೧೯೬೧ರಲ್ಲಿ 'ಅಶ್ರು' ಎಂಬ ಹೆಸರಿನಿಂದ ಇದನ್ನು ಅನುವಾದಿಸಿದ್ದರು. ಒಬ್ಬನೇ ವ್ಯಕ್ತಿ ಬೇರೆ ಬೇರೆ ಕಾಲಗಳಲ್ಲಿ ಮಾಡಿದ ಅನುವಾದಗಳು ಒಂದಕ್ಕಿಂತ ಒಂದು ಎಷ್ಟರ ಮಟ್ಟಿಗೆ ಭಿನ್ನವಾಗಿರಬಲ್ಲವು ಎಂಬುದಕ್ಕೂ ಈ ಎರಡು ಅನುವಾದಗಳು ಉತ್ತಮ ಉದಾಹರಣೆಗಳನ್ನೊದಗಿಸುತ್ತವೆ. ಅನುವಾದಕರ ಅತೃಪ್ತಿ ಈ ಹೊಸ ಅನುವಾದವನ್ನು ಮುಂದಿರಿಸಿದೆ ಎಂಬ ಸಂಗತಿ ಅವರ ಪ್ರಾಮಾಣಿಕತೆಗೂ ಸಾಕ್ಷಿಯಾಗಿದೆ. ಕೆಲವೆಡೆಗಳಲ್ಲಿ ಮೊದಲನೆಯ ಅನುವಾದದಲ್ಲಿದ್ದ ತಪ್ಪುಗಳನ್ನೂ, ಸರಿಪಡಿಸಿದ್ದಾರೆ. ೧೯೬೦ರಲ್ಲಿ ಸಿದ್ಧಪಡಿಸಲಾಗಿರುವ ಈ ಅಪ್ರಕಾಶಿತ ಕೃತಿಯನ್ನು ಬದಿಗಿಟ್ಟರೂ, ೧೯೬೧ರಲ್ಲಿ 'ಅಶ್ರು' ಎಂಬ ಹೆಸರಿನಲ್ಲಿ ಪ್ರಕಟವಾಗಿರುವ ಅನುವಾದದಲ್ಲಿ ನಾರಾಯಣ ರಾಯರಿಗೆ ಸಾಕಷ್ಟು ಯಶಸ್ಸು ದೊರೆತಿದೆ ಎಂಬುದರಲ್ಲಿ ಸಂದೇಹವಿಲ್ಲ.

ಇಂದುವದನಕೆ ಲಜ್ಜೆ ತೆಳುದೆರೆಯ ಬಾಸಣಿಸಿ
ಮೇಲುದವ ಮರೆಮಾಡಿ ಮಣಿ ದೀಪಕೆ
ಈ ಬಾಳ ಗೋಧೂಳಿ ಶುಭವೇಳೆಯಲಿ ಜಾಣೆ
ಕೌತುಕದೊಲ್ಪೆತಂದೆ ಮೌನಮುನಕೆ ॥ ೩೮ ॥

ಕನ್ನಡದ ಜೀವವಾಹಿನಿಯಿಂದ ನಳನಳಿಸುತ್ತಿರುವ ಇಂತಹ ಅನೇಕ ಪದ್ಯಗಳನ್ನು ಓದಿದಾಗ ಇವು ಅನುವಾದವೆಂಬ ಕಹಿ ಅನುಭವ ಉಂಟಾಗದೆ ಹೋಗುವುದೇ ಅನುವಾದಕರ ಸಫಲತೆಗೆ ಸಾಕ್ಷಿಯಾಗುತ್ತದೆ. ಇವುಗಳೊಡನೆ ಹೋಲಿಸಿ ನೋಡಿದಾಗ 'ಕುಮುದಪ್ರಿಯ'ರ ಅನುವಾದ ಅನೇಕ ವೇಳೆ ಭಾವಕ್ಕೇ ಗ್ರಹಣಹಿಡಿಸಿಬಿಟ್ಟಿದೆ ಎಂಬ ಅಂಶ ಸ್ಪಷ್ಟವಾಗುತ್ತದೆ.

ಇದೇ ಅಲ್ಲದೆ, ಆಧುನಿಕ ಹಿಂದೀ ಸಾಹಿತ್ಯ ವಿಶ್ವಸಾಹಿತ್ಯಕ್ಕಿತ್ತಿರುವ ಮಹೋನ್ನತ ಕಾಣಿಕೆಯೆಂದು ಪ್ರಖ್ಯಾತವಾಗಿರುವ ಜಯಶಂಕರ ಪ್ರಸಾದರ 'ಕಾಮಾಯನೀ' ಎಂಬ ಮಹಾಕಾವ್ಯವನ್ನೂ, ಅವರದೇ ಆದ 'ಲಹರ್' ಎಂಬ ಇನ್ನೊಂದು ಕಾವ್ಯವನ್ನೂ ಅನುವಾದಿಸಿದ್ದಾಗಿದೆಯೆಂದೂ ಹೇಳಿಕೊಂಡಿದ್ದಾರೆ. ಬಹುಶಃ ತಮ್ಮ ಅನುವಾದದ ಅಭ್ಯಾಸ, ಅನುಭವಗಳಿಂದ ಪಳಗಿರುವ 'ಕುಮುದಪ್ರಿಯ'ರು ಅವುಗಳನ್ನು ಬೇಗನೆ ಬೆಳಕು ಕಾಣಿಸಲಿ ಎಂದು ಆಶಿಸಬೇಕಾದ್ದು ನಮ್ಮ ಕರ್ತವ್ಯ.

'ಕುಮುದಪ್ರಿಯ' ರಂತೆಯೇ ನಾರಾಯಣರಾಯರೂ 'ಕಾಮಾಯನೀ' ಯನ್ನು ಅನುವಾದಿಸಿ ಇಟ್ಟುಕೊಂಡಿದ್ದಾರೆ. 'ಚಿಂತಾ', 'ಆಶಾ' ಎಂಬ ಎರಡು ಸರ್ಗಗಳ ಅನುವಾದದ ಹಸ್ತಪ್ರತಿ ಮೇ. ರಾಜೇಶ್ವರಯ್ಯನವರ ಬಳಿ ನೋಡಲು ದೊರೆಯಿತು. ಶ್ರೀಯುತರ ಅನುವಾದಾಭ್ಯಸ್ತ ಹಸ್ತದ ಕೌಶಲವನ್ನು ಅಲ್ಲಿ ಕಾಣಬಹುದಾಗಿದೆ. ಅಪ್ರಕಾಶಿತ ಕೃತಿಗಳ ಸಮೀಕ್ಷೆಗೆ ಇಲ್ಲಿ ಎಡೆಯಿಲ್ಲವಾಗಿರುವುದರಿಂದ ಈ ವಿಚಾರವನ್ನು ಇಲ್ಲಿಯೇ ಕೈಬಿಡಲಾಗಿದೆ.

'ಕುಮುದಪ್ರಿಯ' ಅವರು ರಾಮಧಾರಿಸಿಂಹ 'ದಿನಕರ್' ಅವರ 'ಕುರುಕ್ಷೇತ್ರ' ಎಂಬ ಮಹತ್ವಪೂರ್ಣ ಕಾವ್ಯವನ್ನು ಕನ್ನಡಿಸಿದ್ದಾರೆ. 'ದಿನಕರ್' ಹಿಂದಿ ಸಾಹಿತ್ಯದಲ್ಲಿ ಪ್ರಖ್ಯಾತರಾದ ಕವಿಗಳು. ಅವರ ಈ ಕಾವ್ಯ ಹಿಂದಿಯಲ್ಲಿ ಮಹತ್ವಪೂರ್ಣ ಸ್ಥಾನವನ್ನು ಗಳಿಸಿದೆ. ಆದರೆ ಕನ್ನಡದಲ್ಲಿ ಇದಕ್ಕೆ ಅಂತಹ ಉತ್ಸಾಹಪೂರ್ಣವಾದ ಸ್ವಾಗತ ದೊರೆತಂತೆ ಕಾಣಲಿಲ್ಲ. ದಿನಕರ್ ಅವರೂ ಈ ವಿಚಾರದಲ್ಲಿ ನನ್ನನ್ನೊಮ್ಮೆ ಪ್ರಶ್ನಿಸಿದರಾದರೂ, ಸೌಜನ್ಯದ ಉತ್ತರವನ್ನು ನೀಡಬೇಕಾಯಿತೇ ಹೊರತು, ಸಮರ್ಪಕವಾದ ಉತ್ತರವನ್ನು ನೀಡಲಾಗಲಿಲ್ಲ. ಅವರ ಮಾತಿನಲ್ಲಿ ಉತ್ತಮ ಪ್ರತಿಕ್ರಿಯೆ ದೊರೆತಿಲ್ಲವೆಂಬ ಅಂಶ ಧ್ವನಿಸುತ್ತಿತ್ತು.

ಈ ಭಾಷಾಂತರಕ್ಕೆ ಮುನ್ನುಡಿ ಬರೆಯುತ್ತಾ ದಿ. ನವರತ್ನ ರಾಮರಾಯರು ಈ ರೀತಿ ಹೇಳಿದ್ದಾರೆ: "ಈ ಕಾವ್ಯವು ನಿಜವಾಗಿಯೂ ಈಗಿನ ಸಾಮಾಜಿಕ ಸ್ಥಿತಿಯಲ್ಲಿ ಅತ್ಯವಶ್ಯಕವಾಗಿ ಜನಗಳಿಗೆ ಬೋಧಿಸಬೇಕಾದ ತತ್ವ ಪ್ರಬಂಧವಾಗಿದೆ. ಈ ಕನ್ನಡ ಅನುವಾದವು ಭಾಷಾಂತರವೆಂದು ನಮಗೆ ತಿಳಿಯದಿದ್ದಲ್ಲಿ, ಇದೇ ಒಂದು ಉತ್ಕೃಷ್ಟವಾದ ಮೂಲ ಗ್ರಂಥವೆಂದೇ ಭಾವಿಸುತ್ತಿದ್ದೆವು; ಇದರ ಭಾಷೆ ಬಹು ಮಧುರವಾಗಿಯೂ, ತಿಳಿಯಾಗಿಯೂ, ಅರ್ಥ ಗರ್ಭಿತವಾಗಿಯೂ ಇದೆ. 'ಕುಮುದಪ್ರಿಯ'ರು ಇದನ್ನು ತಮ್ಮ ಭಕ್ತಿಗೆ ಪಾತ್ರರಾದ ಶ್ರೀ ರಾಮಧಾರೀಸಿಂಹ 'ದಿನಕರ'ರಿಗೆ ಬಹು ಪ್ರೇಮದಿಂದ ಒಪ್ಪಿಸಿದ ಕಾಣಿಕೆ ಎಂದು ಹೇಳಬಹುದು."

ಹಿರಿಯರ ಈ ಹಾರೈಕೆಯಲ್ಲಿ ಪ್ರೋತ್ಸಾಹದ, ಪ್ರಶಂಸೆಯ ಮಾತುಗಳಿವೆಯೇ ಹೊರತು ವಿಮರ್ಶೆಯ ಮಾನದಂಡವಲ್ಲ. ವಿಮರ್ಶದೃಷ್ಟಿಯಿಂದ ಆಡಿರುವ ಮಾತುಗಳು ಇಲ್ಲಿಲ್ಲವೆಂಬುದಂತೂ ನಿಶ್ಚಯ. ಏಕೆಂದರೆ ಈ ಭಾಷಾಂತರದಲ್ಲಿ ಆಗಿರುವ ಅನಾಹುತಗಳಿಗಂತೂ ಮಿತಿಯೇ ಇಲ್ಲವೇನೋ ಎಂದೆನಿಸುತ್ತದೆ.

ಮೂಲದ 'ಕಪಿಶ ಧೂಮ' ಅನುವಾದದಲ್ಲಿ 'ಕುಪಿತ ಧೂಮ' ವಾಗುತ್ತದೆ (ಪುಟ. ೬೦) 'ಪ್ರಬಂಧ' ಎಂಬ ಶಬ್ದಕ್ಕೆ ಹಿಂದಿಯಲ್ಲಿ ಯಾವ ಅರ್ಥವಿದೆಯೋ ಆ ಅರ್ಥದಲ್ಲಿ ಅದು ಕನ್ನಡದಲ್ಲಿ ಬಳಕೆಯಲ್ಲಿಲ್ಲ. ಈ ಶಬ್ದವನ್ನು ಯಾವುದೇ ವಿವರಣೆ ಯಿಲ್ಲದೆ ರಕ್ಷಾಪುಟ, ಮತ್ತು ಮೂಲಲೇಖಕರ ನಿವೇದನದ ಅನುವಾದದಲ್ಲಿ (ಪುಟ. iii ಮತ್ತು v)ಬಳಸಲಾಗಿದೆ. 'ಪ್ರತಿಶೋಧ' ಎನ್ನುವ ಶಬ್ದ 'ಸೇಡು'ಎನ್ನುವ ಅರ್ಥದಲ್ಲಿ ಕನ್ನಡದಲ್ಲಿ ಅಷ್ಟಾಗಿ ಬಳಕೆಯಲ್ಲಿಲ್ಲ. 'ಅಥವ' 'ನಂತರ', 'ಒಮ್ಮೆಲೆಯೆ' 'ಮರು ಬರುತಲಿತ್ತು' ಎಂಬಂತಹ ರೂಪಗಳನ್ನು ಬದಿಗಿರಿಸಿದರೂ 'ನಿನ್ನ ಮಾತಿಗೆ ಇಂದು ಬೆಲೆಯೆನಿಲ್ಲ' (ಪುಟ. ೫) 'ತಿಂಗಳಿನ ಕುಮುದಳನು' (ಪುಟ ೮೦) ಎಂಬಂತಹ, ಅಷ್ಟೇ ಅಲ್ಲ, "ಪ್ರತಿಯೊಂದು ಯುದ್ಧಗಳ ಮುಂದೆ ದ್ವಿಥಗಳು ಕುದಿವ ಕ್ರೋಧದಿಂ ಕಾದಾಟವಾಡುತ್ತವೆ" (ಪುಟ. ೨) "ವಿಶ್ವಸಿರಿ ಮಾನವನ ಹೃದಯ ನಿರ್ದ್ವೇಷದಲಿ ದ್ರೋಹಾಗ್ನಿ ದ್ವೇಷಗಳು ಮೂಲವೇ?" (ಪುಟ. ೨) ಎಂಬಂತಹ ಪ್ರಯೋಗಗಳನ್ನು ಕಂಡಾಗ ಇದು ಯಾವ ಕಾಲದ ಭಾಷೆ, ಇವುಗಳ ಅರ್ಥವೇನು ಎಂಬ ಗೊಂದಲ ಉಂಟಾಗುತ್ತದೆ.

ಈ ಭಾಷಾಂತರದ ಯಾವುದೇ ಪುಟವನ್ನು ತೆಗೆದು ಮೂಲದೊಡನೆ ಹೋಲಿಸಿ ದರೂ, ಅಲ್ಲಿ ಕಾಣಬರುವ ಅಸಮರ್ಪಕತೆ ಅನಿವಾರ್ಯವಾಗಿ ಅಸಹನೆಯನ್ನು ಮೂಡಿ ಸುತ್ತದೆ. ಇಂತಹ ಅನುವಾದ ಮೂಲಕ್ಕೆ ಎಸಗಿದ ಅಪಚಾರ ಎಂದರೆ ಅದು ಅತ್ಯಂತ ಸೌಮ್ಯೋಕ್ತಿಯಾಗುತ್ತದೆ. ಒಂದೇ ಒಂದು ಉದಾಹರಣೆಯನ್ನು ನೋಡಿ:

ಮೂಲ:

ವಹ ಕೌನ ರೋತಾ ಹೈ ವಹಾಂ—ಇತಿಹಾಸ ಕೇ ಅಧ್ಯಾಯ ಪರ,
ಜಿಸಮೇಂ ಲಿಖಾ ಹೈ, ನೌಜವಾನೋಂ ಕೇ ಲಹೂ ಕಾ ಮೋಲ ಹೈ
ಪ್ರತ್ಯಯ ಕಿಸೀ ಬೂಢೇ ಕುಟಿಲ ನೀತಿಜ್ಞ ಕೇ ವ್ಯಾಹಾರ ಕಾ
ಜಿಸಕಾ ಹೃದಯ ಉತನಾ ಮಲಿನ ಜಿತನಾ ಕಿ ಶೀರ್ಷ ವಲಕ್ಷ ಹೈ;
ಜೋ ಆಪ ತೋ ಲಡತಾ ನಹೀಂ,
ಕಟವಾ ಕಿಶೋರೋಂ ಕೋ ಮಗರ,
ಆಶ್ವಸ್ತ ಹೋಕರ ಸೋಚತಾ,
ಶೋಣಿತ ಬಹಾ, ಲೇಕಿನ, ಗಈ ಬಚ ಲಾಜ ಸಾರೇ ದೇಶ ಕೀ?

ಅನುವಾದ:

ಶೀರ್ಷಪರ್ವತದಂತೆ ಕಠಿಣ ಹೃದಯುದ ಮುದುಕ;
ಕುಟಿಲ ನೀತಿಜ್ಞ;
ಅವನ ಕಾರಣದಿಂದ ನವಯುವಕರೆಲ್ಲ ಬಿಸಿ ರಕುತವನ್ನು ಹರಿಸಿದರು;
ತಾನೋ! ಸುಮ್ಮನೆ ಕುಳಿತ; ಕೊಲ್ಲಿಸಿದ ಮಕ್ಕಳನು;
ಆಶ್ವಸ್ತನಾಗುಳಿದ ಯೋಚಿಸುತ; ಕುಟಿಲನ ಬಗ್ಗೆ ಬರೆದಿರುವ ಇತಿಹಾಸ
ಪುಟಗಳಲಿ.
ಯಾರದಳುತಿಹರಲ್ಲಿ,
ರಕುತ ಹರಿದುದು; ದೇಶಗೌರವವು ಮಣ್ಣಾಗಿ

ಭಾಷಾಂತರದಲ್ಲಿ 'ಮಲಿನ ಹೃದಯ'ವೂ 'ಕಠಿಣ ಹೃದಯ'ವಾಗುತ್ತದೆ; 'ಅಧ್ಯಾಯ'ವೇ 'ಪುಟ'ವಾಗುತ್ತದೆ. 'ಕುಟಿಲ ಬ್ಯಾಹಾರ' 'ಕುಟಿಲನ ಬಗ್ಗೆ ಬರೆದಿರುವ ಇತಿಹಾಸ'ವಾಗುತ್ತದೆ. ಇಷ್ಟೇ ಸಾಕೆ? ಮೂಲದ 'ಉಳಿಯಿತಲ್ಲವೆ ನಾಡಿನ ಮಾನ?' ಎಂಬುದು ಪ್ರಶ್ನಾರ್ಥಕ ಚಿಹ್ನೆಯನ್ನು ಕಳೆದುಕೊಂಡು ಅಧೋಗತಿಗೆ ಪಕ್ಕಾಗಿ 'ದೇಶದ ಗೌರವವು ಮಣ್ಣಾಗಿ' ಎಂದಾಗಿ ಬಿಡುತ್ತದೆ. ಈ ಭಾಷಾಂತರದ ಬಗ್ಗೆ ಹೆಚ್ಚಿಗೆ ಏನೂ ಹೇಳದಿರುವುದೇ ವಾಸಿ.

ಹಿಂದಿ ಕಾವ್ಯ ಸಾಹಿತ್ಯದ ಪರಿಚಯ ಮಾಡಿಕೊಡ ಬಯಸಿದ ಪ್ರಯತ್ನಗಳಲ್ಲಿ ಅನುವಾದಕರ ದೃಷ್ಟಿ ಸ್ವಾಭಾವಿಕವಾಗಿ ಆ ಸಾಹಿತ್ಯಕ್ಕೆ ಗೌರವಪ್ರಾಯವಾಗಿರುವಂತಹ ಕೃತಿಗಳತ್ತ ಹರಿಯಬೇಕಾಗಿತ್ತು. ಹಿಂದಿಯ ಹೆಸರೆತ್ತಿದೊಡನೆಯೇ ಕೇಳಿ ಬರುವ ತುಳಸೀದಾಸ್, ಸೂರದಾಸ್, ಮೀರಾಬಾಯಿ, ಕಬೀರ್, ವಿದ್ಯಾಪತಿ, ಬಿಹಾರಿ ಮೈಥಿಲೀ ಶರಣಗುಪ್ತ, ಜಯಶಂಕರಪ್ರಸಾದ್, ಸೂರ್ಯಕಾಂತ ತ್ರಿಪಾಠೀ, 'ನಿರಾಲಾ', ಸುಮಿತ್ರಾನಂದನ ಪಂತ್ ಮೊದಲಾದವರ ಕೃತಿಗಳಲ್ಲಿ ಕೆಲವನ್ನಾದರೂ ಕನ್ನಡಕ್ಕೆ ನೀಡುವ ಪ್ರಯತ್ನ ನಡೆಯಬೇಕಾಗಿತ್ತು. ಹಿಂದಿ ಭಾಷೆಯ ಅಲ್ಪಸ್ವಲ್ಪ ಪರಿಚಯದಿಂದ ಈ ಬಗೆಯ ಕಷ್ಟಸಾಧ್ಯವಾದ ಕೆಲಸವನ್ನು ನಿರ್ವಹಿಸುವುದು ಅಸಾಧ್ಯವಾಗಿದ್ದುದ ರಿಂದಲೂ, ಅನುವಾದಕರಿಗೆ ಹಿಂದಿ ಭಾಷೆಯ ಮೇಲಿನ ಪ್ರಭುತ್ವದಂತೆಯೇ ಕನ್ನಡ ಭಾಷೆಯ ಪ್ರಭುತ್ವವೂ ಅತ್ಯಾವಶ್ಯಕವಾಗಿದ್ದುದರಿಂದಲೂ ಈ ಬಗೆಯ ಕಾರ್ಯ ವಿಶೇಷ ವಾಗಿ ನಡೆಯಲಿಲ್ಲವೆಂದೇ ಹೇಳಬೇಕು. ಅಪವಾದವೆಂಬಂತೆ ಒಂದೆರಡು ಅನುವಾದಗಳು ಲಭ್ಯವಾಗಿವೆ. ಯಾವ ಸಾಹಿತ್ಯದಲ್ಲಿಯಾಗಲೀ, ಅಲ್ಲಿಯ ವಿಶಿಷ್ಟ ಕೃತಿಗಳು ಅನು ವಾದಕನ ಅರ್ಹತೆಯನ್ನು ಪ್ರಶ್ನಿಸುತ್ತವೆ ಎಂಬುದೇ ಈ ಕ್ಷೇತ್ರದ ವಿರಳ ಪ್ರಯತ್ನಗಳ ಹಿಂದೆ ಅಡಗಿರುವ ಕಟುಸತ್ಯ.

ತುಳಸೀದಾಸರನ್ನು ಪರಿಚಯ ಮಾಡಿಕೊಡುವ ಒಂದೆರೆಡು ಪ್ರಯತ್ನಗಳನ್ನೂ ಇಲ್ಲಿಯೇ ಹೆಸರಿಸಬಹುದು. ಸುಬೋಧ ಕುಸುಮಾಂಜಲೀ ಗ್ರಂಥಮಾಲೆಯ ಜೀವನ ವೃತ್ತಾಂತ ಮಾಲೆಯಲ್ಲಿ ೬ನೆಯ ಕುಸುಮವಾಗಿ ಬೆಳಕು ಕಂಡಿರುವ 'ತುಳಸೀದಾಸರು' ಎಂಬ ಕೃತಿ ಸ್ವತಂತ್ರ ಕೃತಿಯಾದರೂ ಅಲ್ಲಲ್ಲಿ ಒಮ್ಮೊಮ್ಮೆ ಮಾರ್ಮಿಕ ಪ್ರಸಂಗಗಳ ಸಂಗ್ರಹ ಭಾವಾನುವಾದವನ್ನು ಕಾಣಬಹುದಾಗಿದೆ. ಅಥವಾ ಆ ಪ್ರಸಂಗಗಳನ್ನು ಸರಳ ಸುಬೋಧ ಶೈಲಿಯಲ್ಲಿ ಲೇಖಕರೇ ವರ್ಣಿಸಿದ್ದಾರೆ ಎಂದು ಹೇಳಿದರೆ ಅಸಂಗತವಾಗಲಾರದು. ಡಾ. ಹಿರಣ್ಮಯ ಅವರ 'ತುಳಸೀದಾಸ' ಪ್ರಚಾರೋಪನ್ಯಾಸ ಮಾಲೆಯಲ್ಲಿ ಪ್ರಕಟವಾಗಿರುವ ಒಂದು ಉತ್ತಮ ಪರಿಚಯಾತ್ಮಕ ಗ್ರಂಥ. ಅಲ್ಲಲ್ಲಿ ತುಳಸೀದಾಸರ ಕೃತಿಗಳ ಹಾಗೂ ಕಾವ್ಯವೈಶಿಷ್ಟ್ಯಗಳ ಪರಿಚಯ ವನ್ನು ಮಾಡಿಕೊಡುವಲ್ಲಿ ಕೆಲವು ಪ್ರಸಂಗಗಳ ಸರಳಾನುವಾದ ಕಾಣದೊರೆಯುತ್ತದೆ. ಶ್ರೀ ಎಂ. ಎಸ್. ಕೃಷ್ಣಮೂರ್ತಿಯವರ 'ಸೂರದಾಸ' ಎಂಬ ಕೃತಿಯೂ ಪ್ರಚಾರೋಪನ್ಯಾಸ ಮಾಲೆಯಲ್ಲಿಯೇ ಬೆಳಕು ಕಂಡಿದೆ, ಇದೂ ಪರಿಚಯಾತ್ಮಕ

ಗ್ರಂಥ. ಸೂರದಾಸರ ಜೀವನ, ವ್ಯಕ್ತಿತ್ವ ಮತ್ತು ಕೃತಿತ್ವಗಳ ಪರಿಚಯವನ್ನು ನೀಡುವಲ್ಲಿ ಛಂದೋಬದ್ಧವಾಗಿ ಹಲವು ಪ್ರಸಂಗಗಳನ್ನು ಅನುವಾದಿಸಿ ಕೊಟ್ಟಿದ್ದಾರೆ. ಪ್ರಾಸಂಗಿಕವಾಗಿರುವ ಈ ಅನುವಾದಗಳು ಸುಂದರವಾಗಿವೆ ಎಂದೇ ಹೇಳಬೇಕು. ಆದರೂ ಅಂತಿಮ ಪ್ರಾಸದ ಬಂಧನಕ್ಕೆ ಲೇಖಕರು ಒಳಗಾಗಿ ಬಿಟ್ಟಿರುವುದರಿಂದ ಕೆಲವೆಡೆ ಭಾವವಿಸ್ತರಣ, ಭಾವಸಂಕೋಚನ ಮೊದಲಾದವುಗಳಿಗೆ ಎಡೆಗೊಟ್ಟಿರುವುದನ್ನು ಕಾಣಬಹುದಾಗಿದೆ. ಕನ್ನಡ ಸಾಹಿತ್ಯ ಸಮ್ಮೇಳನದ 'ಸುವರ್ಣಸಂಪುಟ'ದಲ್ಲಿ ಪ್ರಕಟವಾಗಿರುವ ಶ್ರೀ ಪ್ರಧಾನ್ ಗುರುದತ್ತರವರ 'ಭ್ರಮರಗೀತ' ಎಂಬ ಲೇಖನವೂ ಇದೇ ಮಾದರಿಯದಾದರೂ, ಕವಿಯ ಕೃತಿಯೊಂದರ ಮೂಲಕ ಕವಿಯ ಕಾವ್ಯ ಮತ್ತು ಸಾಧನೆಗಳನ್ನು ತೋರಿಸಿ ಕೊಡುವ ಪ್ರಯತ್ನವನ್ನು ಅಲ್ಲಿ ಕಾಣಬಹುದಾಗಿದೆ. 'ಭ್ರಮರ ಗೀತ' ಕೃಷ್ಣಕಾವ್ಯದ ಒಂದು ರಸಘಟ್ಟ. ಅಲ್ಲಿಯ ಕೆಲ ಭಾಗಗಳ ಪದ್ಯಾನುವಾದ ಅಲ್ಲಿದೆ. ಈ ಎಲ್ಲವೂ ಪರಿಚಯಾತ್ಮಕ ಗ್ರಂಥ ಅಥವಾ ಲೇಖನಗಳಲ್ಲಿ ಪ್ರಾಸಂಗಿಕವಾಗಿ ಬಂದಿರುವ ಉಲ್ಲೇಖ ಮಾತ್ರವಾಗಿರುವುದರಿಂದ ಅವುಗಳನ್ನು ಶುದ್ಧ ಅನುವಾದದ ಕಕ್ಷೆಯಲ್ಲಿಟ್ಟು ವಿಮರ್ಶಿಸಬೇಕಾದ ಅಗತ್ಯವಿಲ್ಲ.

'ನುಡಿಮಲ್ಲಿಗೆ' (ಕಬೀರೋಪನಿಷತ್) ಈ ದಿಕ್ಕಿನಲ್ಲಿ ಬೇರೆ ರೀತಿಯ ಪ್ರಯತ್ನ. ಕಬೀರದಾಸನ ನೂರೆಂಟು ವಚನಗಳನ್ನು ಕನ್ನಡದಲ್ಲಿ ಅನುವಾದಿಸಿ ಕೊಟ್ಟಿದ್ದಾರೆ, ನೇ. ನಂ. ಶಿವರಾಮಯ್ಯನವರು. "ಮೂಲದ ಭಾವ, ಸರಳತೆ, ಸೌಂದರ್ಯ ಯಾವುದಕ್ಕೂ ಲೋಪಬಾರದಂತೆ ಭಾಷಾಂತರ ಮಾಡಿ ಸಫಲರಾಗಿದ್ದಾರೆ" ಎಂಬ ಮುನ್ನುಡಿಕಾರರ ಮೆಚ್ಚುನುಡಿ ಇಂತಹ ಆರಂಭ ಪ್ರಯತ್ನಗಳಲ್ಲಿ ಅತ್ಯಾವಶ್ಯಕ ಎಂದೆನ್ನಿಸುತ್ತದೆ. ಅನುವಾದಕರ ಪೀಠಿಕೆಯ "ವರವಿನಾಯಕ, ವಾಣಿ, 'ನಾಣಿ'ಗಂ ಶರಣಾಗಿ 'ನೇನಂಶಿ' ರಚಿಸಿಹನು 'ನುಡಿ ಮಲ್ಲಿಗೆ'; ಭಾವಬೇಕೇ? ಬಾಳಿನನು ಭಾವಬೇಕೇನು? ನೋವೇಕೆ? ಮಿಡಿದೊಮ್ಮೆ ನೋಡಿರಣ್ಣ" ಮೊದಲಾದ ಉಕ್ತಿಗಳ ಅಗತ್ಯವಿತ್ತೆ ಎಂಬ ಅನುಭವ ಅನಿವಾರ್ಯವಾಗಿ ಉಂಟಾಗುತ್ತದೆ. ಇದಕ್ಕೆ ಅಗತ್ಯವಾಗಿದ್ದುದು ಕಬೀರನ ಕಾಲ, ದೇಶ, ಪರಿಸ್ಥಿತಿ, ಕಾವ್ಯ ಸಾಧನೆಗಳ ಬಗ್ಗೆ ಪರಿಚಯವನ್ನು ನೀಡುವ ಪೀಠಿಕೆ ಎಂಬುದನ್ನು ಒತ್ತಿ ಹೇಳಬೇಕಾಗುತ್ತದೆ. ಈ ಸಂಗ್ರಹದಲ್ಲಿನ ವಚನಗಳನ್ನು ನೋಡಿದಾಗ, ಅನುವಾದ ಒಟ್ಟಿನಲ್ಲಿ ಸುಂದರವಾಗಿದೆ ಎಂದು ಅನ್ನಿಸುತ್ತದೆ. ಮೇಲಾಗಿ ಕಬೀರನನ್ನು ಕನ್ನಡಕ್ಕೆ ತರುವ ಪ್ರಯತ್ನ, ನನಗೆ ತಿಳಿದಮಟ್ಟಿಗೆ, ಇದೇ ಮೊದಲು ಎಂಬುದನ್ನು ನೆನೆದಾಗ 'ನುಡಿಮಲ್ಲಿಗೆ' ಮಹತ್ವಪೂರ್ಣವಾದ ಹೆಜ್ಜೆ ಎಂದು ಹೇಳ ಬೇಕಾಗುತ್ತದೆ.

ಸುಂದರ ಅನುವಾದಕ್ಕೆ ಉದಾಹರಣೆ:

> "ಕಿಂಚಿತ್ತು ಹೃದಯದೊಳು ನಾಮರಸ ಸಂಚರಿಸೆ
> ಹೊನ್ನಾಯ್ತು ಮೇಣೆನ್ನ ಮಣ್ಣಿನೊಡಲು."

ಆದರೂ, ಈ ಕೃತಿಯಲ್ಲಿ ಪ್ರಾಸಪರಿಶ್ರಮ ಹೆಜ್ಜೆ ಹೆಜ್ಜೆಗೂ ಕಾಣದೊರೆಯುತ್ತದೆ.

"....ಜಗದ–ಜನ ಮುಂಡನವ ಮಾಡದಿಹರೆ?
.......ವೈಕುಂಠ ಸೇರ್ವುದೇಂ? ಭಾಪು! ಭಳಿರೆ!"

ಪ್ರಾಸಕ್ಕಾಗಿಯೇ ಅಗತ್ಯವಿಲ್ಲದ ಶಬ್ದಗಳನ್ನು ತಂದುತುಂಬಿರುವ ಹಲವಾರು ಪ್ರಸಂಗಗಳಿವೆ (ಪದ್ಯಗಳು ೧೭, ೭೪, ೭೮, ೮೧, ೯೦ ಇತ್ಯಾದಿ). ಆಡುಮಾತಿನಲ್ಲಿ ಅನುವಾದವನ್ನು ಮುಂದಿರಿಸುವ ಪ್ರಯತ್ನ ಅಲ್ಲಲ್ಲಿ ಕಾಣಬರುವುದಾದರೂ ಅನುವಾದಕರ ಪಾಂಡಿತ್ಯ ಪ್ರೇಮ ಹಲವಾರು ಕ್ಲಿಷ್ಟ ಶಬ್ದಗಳಿಗೂ ಅನುವಾದದಲ್ಲಿ ಎಡೆಮಾಡಿಕೊಟ್ಟಿದೆ. ಅದರಲ್ಲೂ ಜನ ಸಾಮಾನ್ಯರಿಗಾಗಿ ಆಡು ಮಾತಿನಲ್ಲಿ ವಚನ ಸುಧೆಯನ್ನು ಹರಿಸಿದ ಕಬೀರನನ್ನು ಕನ್ನಡಕ್ಕೆ ನೀಡುವಾಗ ಪಾಂಡಿತ್ಯವನ್ನು ಕೊಂಚ ದೂರವಿರಿಸುವುದೆ. ಲೇಸು. 'ಏಳ್ದೀವಿ', 'ನಾಲ್ದೋಳನಂ' (ಮೂಲ: ಜಾಕೇ ಭುಜಾ ಚಾರಿ) ಎಂಬ ಪ್ರಯೋಗಗಳು ಅಗತ್ಯವೆಂದು ಹೇಳುವುದು ಕಷ್ಟ.

ಭಾವಗ್ರಹಣದಲ್ಲಿಯೂ ಕೆಲವೊಮ್ಮೆ ಅಸ್ಪಷ್ಟತೆಗೆ ಎಡೆಕೊಟ್ಟಿರುವುದುಂಟು. ೧೦೩ನೆಯ ಪದ್ಯದಲ್ಲಿಯ 'ನಾನು' ಶಬ್ದ ಪ್ರಯೋಗ ಇದಕ್ಕೆ ಉದಾಹರಣೆ. ೮೫ನೆಯ ಪದ್ಯದ 'ಹಣದ ಹೆಣಬೂದಿಯನು........ನೈಜವದು' ಪಂಕ್ತಿಗಳ ಅರ್ಥಗ್ರಹಣವೂ ಅಸಂಭವ. ಭಾವಸ್ಪಷ್ಟತೆಯೂ ಅನುವಾದದ ಅಂಗ ಎಂಬುದನ್ನು ಮರೆಯಬಾರದು.

ಅಚ್ಚಿನ ದೋಷಗಳೂ ಹಲವಾರು ಉಳಿದು ಹೋಗಿವೆ. ಉದಾಹರಣೆ: ಆಂಬರ, ಕೆಕಾಲ, ನೆಕ್ಸುತ್ತೆ, ದೊಡೆವ ಇತ್ಯಾದಿ.

ಇಲ್ಲಿನ ನೂರೆಂಟು ಪದ್ಯಗಳಲ್ಲಿ ಕಬೀರನ ವಿಚಾರಧಾರೆ ಅಸ್ತವ್ಯಸ್ತವಾಗಿ ಹರಿದು ಹಂಚಿಹೋಗಿದೆ. ವಿಷಯಾನುಗುಣವಾದ ಒಂದು ಕ್ರಮವನ್ನು ಅನುಸರಿಸಿ ಪದ್ಯಗಳನ್ನು ವಿಂಗಡಿಸಿದ್ದರೆ ಈ ಹೊತ್ತಗೆಯ ಬೆಲೆ ಹೆಚ್ಚುತ್ತಿತ್ತು. ಇಷ್ಟಾದರೂ, 'ನುಡಿಮಲ್ಲಿಗೆ' ಯಂತಹ ಸುಂದರ ಕೃತಿಯನ್ನು ಕನ್ನಡಿಗರಿಗೆ ನೀಡಿರುವ ಶ್ರೀಯುತರು ಅಭಿನಂದನಾರ್ಹರು.

ಜನಪ್ರಿಯನಾದ ಕವಿಯೊಬ್ಬನನ್ನು ನಮ್ಮವನು ಎಂದು ಹೇಳಿಕೊಂಡು ಹೆಮ್ಮೆ ಪಡದೆ ಇರುವಂಥ ಜನಾಂಗ ವಿರಳ. ಆದ್ದರಿಂದಲೇ, ಭಾರತೀಯ ಸಾಹಿತ್ಯಕ್ಕೆ ಭೂಷಣಪ್ರಾಯನಾಗಿರುವ ವಿದ್ಯಾಪತಿಯನ್ನು ಹಿಂದಿಯವರು ಹಿಂದಿ ಕವಿಯೆಂದೂ, ಬಂಗಾಳಿಗಳು ಬಂಗಾಳಿ ಕವಿಯೆಂದೂ ವಾದಿಸುತ್ತಾರೆ. ಪಾಂಡಿತ್ಯ ವಿದ್ಯಾಪತಿಯ ಭಾಷೆಯನ್ನು ಇತ್ತ ಹಿಂದಿಗೂ ಅತ್ತ ಬಂಗಾಳಿಗೂ ಗಂಟುಹಾಕಿದೆ. ಆದರೆ ಬಹುಮತದ ಅಭಿಪ್ರಾಯದಂತೆ ಆತ ಹಿಂದಿ ಕವಿ. ಆತನ 'ಪದ'ಗಳು ಕಾಲಮಿತಿಯನ್ನು ಮೀರಿ ಅತ್ಯಂತ ಜನಪ್ರಿಯವಾಗಿ ಉಳಿದು ಬಂದಿವೆ. ಆತನ "ಜಾಬೇ ರಹಿಅ ತುಅ ಲೋಚನ ಆಗೇ" ಎಂಬ ಪದವನ್ನು ಹಾ. ಮಾ. ನಾಯಕರು ಸರಳವಾಗಿಯೂ, ಸುಂದರವಾಗಿಯೂ ಅನುವಾದಿಸಿದ್ದಾರೆ. ಅವರು ವಿದ್ಯಾಪತಿಯ ಇತರ 'ಪದ'ಗಳನ್ನೂ ಅನುವಾದಿಸಿ ಕೊಟ್ಟಾರೆ ಎಂಬ ಆಸೆ ಮೂಡಿಸುವಷ್ಟು ಮನೋಹರವಾಗಿದೆ ಆ

ಅನುವಾದ. ಪ್ರಯಾಸವಿಲ್ಲದೆ ಪ್ರಾಸವೂ ಸಿದ್ಧಿಸಿರುವುದು ಇಲ್ಲಿಯ ವಿಶೇಷ. ಒಂದೆರಡು ನುಡಿಗಳನ್ನು ನೋಡಿ :

"ನನ್ನ ಕಣ್ಣೆದುರಿನಲಿ ನೀನು ಇರುವಾಗ,
ದಿಟವೆಂದೆ ತೋರುವುದು ನಿನ್ನ ಅನುರಾಗ!
ಕಣ್ಣು ಮರೆಯಾದಾಗ ಬೇರೆ ಅವತಾರ!
ಹೊಳೆಯುವುದೆ ಬಹು ಕಾಲ ಕೃತಕ ಬಂಗಾರ?"

ಪ್ರಸಾದರನ್ನು ಕುರಿತ ಪರಿಚಯಾತ್ಮಕ ಲೇಖನಗಳ ಅನುವಾದಗಳಲ್ಲಿ ಕೆಲವು ಉದಾಹೃತ ಪದ್ಯಗಳು ಅನುವಾದಗೊಂಡಿರುವುದನ್ನು ಕಾಣಬಹುದಾಗಿದೆ. 'ಕಾಮಾಯನೀ' ಜಯಶಂಕರ ಪ್ರಸಾದರ ವೈಶಿಷ್ಟ್ಯಪೂರ್ಣ ಮಹಾಕಾವ್ಯ. ಹಿಂದೀ ಸಾಹಿತ್ಯದ ಗೌರವವನ್ನು ಹೆಚ್ಚಿಸಿರುವ ಮಹಾನ್ ಕೃತಿ. ವಿಶ್ವ ಸಾಹಿತ್ಯಕ್ಕೆ ಹಿಂದಿಯ ಕೊಡುಗೆ ಎಂದು ಧೈರ್ಯವಾಗಿ ಹೇಳಬಹುದು. ಈ ಕಾವ್ಯದ ಕೆಲವು ಪ್ರಸಂಗಗಳ ಅನುವಾದ ಡಾ. ನಗೇಂದ್ರರ 'ಕಾಮಾಯನಿಯಲ್ಲಿ ರೂಪಕತತ್ವ' ಎಂಬ ಪ್ರಬಂಧದ ಅನುವಾದದ ಅಂಗವಾಗಿ ಬಂದಿದೆ. ಕಾಮಾಯನಿಯ ಈ ಹಲವು ಪ್ರಸಂಗಗಳ ಅನುವಾದ ದಲ್ಲಿ ಮೂಲಭಾವ ಸಂಪೂರ್ಣವಾಗಿ ಮೈದಳೆದಿದೆ ಎಂದು ಯಾರೂ ಎದೆತಟ್ಟಿ ಹೇಳು ವಂತಿಲ್ಲ. ಪ್ರಸಾದರ ಪ್ರತಿಭೆ ಅಷ್ಟು ಸುಲಭವಾಗಿ ಅನುವಾದಕ್ಕೆ ಒಳಗಾಗುವುದೂ ಇಲ್ಲ. ಅನುವಾದಕರ ಶ್ರಮಕ್ಕೆ ಅವು ನಿದರ್ಶನವಾಗಿವೆ. ಇವುಗಳ ಅನುವಾದದ ಹೊಣೆ ರಾಜೇಶ್ವರಯ್ಯ ಮತ್ತು ಪ್ರಧಾನ್ ಗುರುದತ್ತ ಅವರದು.

ಪ್ರಸಾದರ ತರುವಾಯ ಪ್ರಖ್ಯಾತವಾದ ಮತ್ತೊಂದು ಹೆಸರೆಂದರೆ ಮೈಥಿಲೀಶರಣ ಗುಪ್ತ ಅವರದು. ಜನಪ್ರಿಯತೆಯಲ್ಲಿ ಇವರನ್ನು ಸರಿಗಟ್ಟುವ ಬೇರೊಬ್ಬ ಕವಿಮಲ್ಲ ದೊರೆಯುವುದೂ ಅಸಂಭವ. ಅವರ ಜನಪ್ರಿಯ ಕಾವ್ಯ 'ಸಾಕೇತ'. ವಸ್ತು ರಾಮಾಯಣದ್ದು. ಈ ಕಾವ್ಯದ ಅನೇಕ ಭಾಗಗಳ ಅನುವಾದಗಳು 'ಊರ್ಮಿಳಾ' ಎಂಬ ವಿಮರ್ಶಗ್ರಂಥದಲ್ಲಿ ವಿಪುಲವಾಗಿ ಕಾಣಿಸಿಕೊಂಡಿವೆ. ಗ್ರಂಥಕರ್ತರು ರಾಜೇಶ್ವರಯ್ಯ ಮತ್ತು ಪ್ರಧಾನ್ ಗುರುದತ್ತ. ಇಲ್ಲಿಯ ಅನುವಾದಗಳು ಸಾಕಷ್ಟು ಸುಂದರವಾಗಿ ಬಂದಿವೆ ಎಂಬುದು ಹಲವು ವಿಮರ್ಶಕರ ಅಭಿಪ್ರಾಯ. ಮೇಲಾಗಿ ಅಲ್ಲಲ್ಲಿ ಮಾರ್ಜನೀಯ ದೋಷಗಳಿರಬಹುದಾದರೂ, ಕೃತಿಯ ಉದ್ದೇಶ ತೌಲನಿಕ ವಿಮರ್ಶೆ. ಅವು ಅಭಿಪ್ರಾಯ ಸ್ಪಷ್ಟೀಕರಣದ ದೃಷ್ಟಿಯಿಂದ ಮಾಡಿರುವ ಅನುವಾದಗಳು. ಇದೇ ಕೃತಿಯ ಅಂತಿಮ ಭಾಗದಲ್ಲಿ ಬಾಲಕೃಷ್ಣ ಶರ್ಮ 'ನವೀನ್' ಅವರ 'ಉರ್ಮಿಲಾ' ಎಂಬ ಮಹಾಕಾವ್ಯದ ಹಲವಾರು ಪ್ರಸಂಗಗಳ ಅನುವಾದ ಕಾಣದೊರೆಯುತ್ತದೆ. ವಿಮರ್ಶೆಯ ಅಂಗವಾಗಿ ಬಂದಿರುವ ಈ ಅನುವಾದಗಳ ವಿಚಾರದಲ್ಲಿ ಮೇಲೆ ಹೇಳಿದ ಮಾತುಗಳೇ ಅನ್ವಯವಾಗುತ್ತವೆ.

ಕಾವ್ಯ ಮತ್ತು ಕಾವ್ಯಾಂಶಗಳ ಅನುವಾದದ ಈ ಪ್ರಕರಣಗಳಲ್ಲಿ ನಮಗೆ ಸ್ಪಷ್ಟ

ವಾಗಿ ಕಾಣಬರುವ ಕೆಲವು ಅಂಶಗಳು ಇಂತಿವೆ: ತನಗೆ ಮೆಚ್ಚುಗೆಯಾದ ಕವಿಯನ್ನು ತನ್ನ ಮಾತೃಭಾಷೆಗೆ ಅಳವಡಿಸುವ ಪ್ರಯತ್ನ ಒಂದೆಡೆ ಕಾಣಬರುವಲ್ಲಿ, ನರನಾಡಿಗಳಲ್ಲಿ ಹರಿಯುತ್ತಿರುವ ಧರ್ಮಾಭಿಮಾನದಿಂದಾಗಿ ತನ್ನ ಆದರ್ಶ ದೇವತೆಯ ಗುಣಕಥನ ತನ್ನವರಿಗೂ ಒದಗಲಿ ಎಂಬ ಉದಾರಭಾವ ಮತ್ತೊಂದೆಡೆ ತೋರಿಬರುವಲ್ಲಿ, ಅಂಗೈಯಲ್ಲಿ ಆಗಸ ತೋರಿಸುವಂತೆ ಪರಿಚಯ, ಪ್ರಚಾರ ಅಥವಾ ವಿಮರ್ಶೆಯ ಉದ್ದೇಶ ಬೇರೊಂದೆಡೆ ಎದ್ದು ಕಾಣುವುದನ್ನು ಗಮನಿಸಬಹುದು. ಫಲ–ಪರಿಣಾಮಗಳು ಉದ್ದೇಶಕ್ಕೆ, ದೃಷ್ಟಿಗೆ ತಕ್ಕಂತೆ ಬೇರೆ ಬೇರೆಯಾಗಿವೆ. ಹಾಗಾಗಬೇಕಾದ್ದು ಸಹಜವೂ ಹೌದು ಎಂಬ ಸಂಗತಿ ನಿಜವಾದರೂ ಅನುವಾದಗಳು ಏಕೋ ಪ್ರಭಾವಶಾಲಿಯಾದಂತಿಲ್ಲ ಎಂಬ ಅಂಶವನ್ನು ಮರೆಮಾಚಲಾಗುವುದಿಲ್ಲ. ಕಾವ್ಯದ ವಿಚಾರದಲ್ಲಿ ವಿಶೇಷ ಉತ್ಸಾಹವಿಲ್ಲದಿರುವುದು. ದೊಡ್ಡ ದೊಡ್ಡ ಕಾವ್ಯಗಳ ಅಧ್ಯಯನಕ್ಕೆ ಬೇಕಾದ ತಾಳಿ ಇಲ್ಲದಿರುವುದು–ಇವು ಇಂದಿನ ಜನಮಾನಸದ ಲಕ್ಷಣವಾಗಿ ಪರಿಣಮಿಸಿರುವಾಗ ಅನುವಾದ ಕಾವ್ಯಗಳು ಹೆಚ್ಚನ್ನು ನಿರೀಕ್ಷಿಸಬಾರದೇನೋ ಎನಿಸುತ್ತದೆ.

ಗದ್ಯ ಗ್ರಂಥಗಳ ಕ್ಷೇತ್ರದತ್ತ ಧಾವಿಸಿದೆವೆಂದರೆ ಈ ಅನುವಾದ ಪ್ರಕಾರದಲ್ಲಿಯೂ ನಾವು ಸಾಹಿತ್ಯ ಪ್ರಭೇದಗಳನ್ನು ಗಮನಿಸುವುದು ಒಳಿತೆಂದು ತೋರುತ್ತದೆ. ನಾಟಕಗಳು, ಕಾದಂಬರಿಗಳು, ಕಥಾಸಂಕಲನಗಳು, ಪ್ರಬಂಧಗಳು, ಶಿಶುಸಾಹಿತ್ಯ, ಸಂಕೀರ್ಣ ಗ್ರಂಥಗಳು–ಈ ಎಲ್ಲ ಸಾಹಿತ್ಯಪ್ರಕಾರಗಳನ್ನೂ, ಪ್ರತಿನಿಧಿಸತಕ್ಕ ಕೃತಿಗಳು ಕನ್ನಡಕ್ಕೆ ಅನುವಾದಗೊಂಡಿವೆ ಎಂಬ ಸಂಗತಿ ಹರ್ಷದಾಯಕವೆನಿಸಿದರೂ, ಆಯ್ಕೆ ಅಷ್ಟೊಂದು ತೃಪ್ತಿದಾಯಕವಾಗಿಲ್ಲವೆಂಬ ಅನಿವಾರ್ಯ ನಿರ್ಣಯದತ್ತ ಧಾವಿಸಬೇಕಾಗಿ ಬರುತ್ತದೆ. ಏಕೆ ಹೀಗಾಯಿತು ಎಂಬ ಮಹತ್ವಪೂರ್ಣ ಪ್ರಶ್ನೆ ಉಳಿದೇ ಉಳಿಯುತ್ತದೆ.

ಕಾದಂಬರಿಗಳು

ಕನ್ನಡ ನಾಡಿನ ಹಿಂದೀ ವಿದ್ವಾಂಸರು ಹಿಂದೀ ಕಾದಂಬರೀ ಕ್ಷೇತ್ರದತ್ತ ಕಣ್ಣು ಹಾಯಿಸಿದಾಗ ಅಲ್ಲಿನ ಜ್ಯೋತಿರ್ಮಯ ಕಾಯಗಳಾದ ಪ್ರೇಮಚಂದ್ ಮತ್ತಿತರು ಗೋಚರಿಸಿದರು. ಪ್ರೇಮಚಂದರಂತೂ 'ಕಾದಂಬರಿಕಾರ ಚಕ್ರವರ್ತಿ' ಎಂದು ಖ್ಯಾತರಾದವರು. ನಿರ್ಜೀವವಾಗಿದ್ದ ಹಿಂದೀ ಗದ್ಯಕ್ಷೇತ್ರಕ್ಕೆ, ಗದ್ಯ ಶೈಲಿಗೆ ಜೀವದಾನಮಾಡಿದ ಮಹಾಮಹಿಮ. ಅವರ ಕಥೆ, ಕಾದಂಬರಿಗಳತ್ತ ಕನ್ನಡಿಗರು ಕಣ್ಣು ಹಾಯಿಸಿದುದರಲ್ಲಿ ಆಶ್ಚರ್ಯವಿಲ್ಲ. ಅಲ್ಲೊಬ್ಬ ಇಲ್ಲೊಬ್ಬ, ಅನುವಾದಕರು ಆಗೊಂದು ಈಗೊಂದು ಕೃತಿಯನ್ನು ಅನುವಾದಿಸಿ ನೀಡಿರುವುದರ ಜೊತೆಗೆ ಪ್ರಕಾಶನ ಸಂಸ್ಥೆಯೊಂದು (' ಮಿಂಚಿನಬಳ್ಳಿ ') ಪ್ರೇಮಚಂದರ ಎಲ್ಲ ಕೃತಿಗಳನ್ನೂ ಬೆಳಕಿಗೆ ತರಬೇಕೆಂದು ಸಂಕಲ್ಪಿಸಿರುವುದು ಕನ್ನಡದಲ್ಲಿ ಪ್ರೇಮಚಂದರ ಜನಪ್ರಿಯತೆಗೆ ಸಾಕ್ಷಿಯಾಗಿದೆ.

ಪ್ರೇಮಚಂದರ ಬೃಹತ್ ಕಾದಂಬರಿಗಳೊಂದೆರಡನ್ನು ಬಿಟ್ಟರೆ ಉಳಿದುವೆಲ್ಲ

ಕನ್ನಡದಲ್ಲಿ ಪ್ರಕಟವಾಗಿವೆ. ಪ್ರೇಮಚಂದರನ್ನು ಮೊದಲಿಗೆ ಕನ್ನಡಿಗರಿಗೆ ಪರಿಚಯಿಸಿಕೊಟ್ಟ, ಅವರ ಅನೇಕ ಕಾದಂಬರಿಗಳನ್ನು ಅನುವಾದಿಸಿಕೊಟ್ಟ ಶ್ರೇಯಸ್ಸು ಶ್ರೀ ಗುರುನಾಥ ಜೋಶಿಯವರಿಗೆ ಸಲ್ಲಬೇಕಾಗಿದೆ. ಜೋಶಿಯವರದು ನಿರಾಡಂಬರವಾದ ಸರಳ ಶೈಲಿ. ಅನುವಾದವನ್ನು ಪೆಡಸಾಗಿಸದೆ ಸುಲಭವಾಗಿ ಕೊಂಡೊಯ್ಯುವ ಕಲೆ ಅವರಿಗೆ ಕರಗತವಾಗಿದೆ. ಆದರೆ ಶೈಲಿ ಪ್ರಸಂಗಾನುಕೂಲವಾಗಿ ಬದಲಾಗದು; ಏರಿಳಿತವಿಲ್ಲದಂತಿದೆ. ಕನ್ನಡಕ್ಕೆ ಒಗ್ಗದ ಹಿಂದೀ–ರೀತಿಯ ವಾಕ್ಯರಚನೆಗಳೂ ಅಲ್ಲಲ್ಲಿ ಕಾಣಬರುತ್ತವೆ. ಉದಾಹರಣೆಗೆ: 'ನೀವು ಯಾರ ಹಿತ ಬಯಸುವಿರೋ, ಅವರೊಡನೆ ಸಮರಸವಾಗುವಲ್ಲಿ ಬರುವ ಕಷ್ಟವನ್ನು ಎದುರಿಸಬೇಕು' 'ಹೀಗೆ ಪ್ರೀತಿ ಮಾಡುವುದೂ' (ಪ್ಯಾರ್ ಕರ್‌ನಾ) 'ನಡುವಿನ ಸೊಸೆ' (ಮಝುಲೀ ಬಹೂ)—ಈ ಬಗೆಯ ಶಾಬ್ದಿಕ ಅನುವಾದಗಳೂ, "ಬೇರೆಯವರ ಕರ್ತವ್ಯವನ್ನು ಕುರಿತು ಮಾತನಾಡುವುದು ತಪ್ಪು ಎಂದು ತನ್ನ ತಿಳುವಳಿಕೆ" ಇಂತಹ ಪ್ರಸಂಗಗಳಲ್ಲಿ 'ಅಪನಾ' ಪ್ರಯೋಗಕ್ಕೆ ಸರಿಯಾದ ಅರ್ಥ ಮಾಡಿಲ್ಲದೆ ಇರುವುದೂ ಅವರ ಅನುವಾದದಲ್ಲಿ ಅಲ್ಲಲ್ಲಿ ಕಂಡುಬರುತ್ತದೆ.

ಶ್ರೀ ಕೆ. ಆರ್. ಉಡುಪ ಅವರು ಪ್ರೇಮಚಂದ್ರರ ' 'ಗೋದಾನ' ಎಂಬ ಕಾದಂಬರಿಯನ್ನು ಅನುವಾದಿಸಿಕೊಟ್ಟಿದ್ದಾರೆ. 'ಗೋದಾನ' ಸಂಕ್ಷೇಪಾನುವಾದ. ಉಡುಪರು ಕನ್ನಡದಲ್ಲಿ ಪಳಗಿದ ಕೈ. ಅವರ ಅನುವಾದದಲ್ಲಿಯೂ ಒಂದು ಬಗೆಯ ಜೀವಂತತೆಯನ್ನು ಕಾಣಬಹುದಾಗಿದೆ. ಭಾಷೆಯ ಜೀವಾಳದಂತಿರುವ ನುಡಿಗಟ್ಟುಗಳ ಬಳಕೆ ಪ್ರೇಮಚಂದರ ಶೈಲಿಯ ವೈಶಿಷ್ಟ್ಯ. ಅದನ್ನು ಉಡುಪರು ಸುಮಾರಾಗಿ ಅಳವಡಿಸಿಕೊಂಡಿದ್ದಾರೆ. ಉಡುಪರ ಅನುವಾದ ಒಟ್ಟಿನಲ್ಲಿ ಪ್ರಶಂಸಾರ್ಹ ಗುಣಗಳಿಂದ ಕೂಡಿದೆ.

ಅನುವಾದಕರು ಒಮ್ಮೊಮ್ಮೆ ಕಾದಂಬರಿಯ ಹೆಸರನ್ನು ಅನುವಾದಿಸದೆ ಬದಲಾಯಿಸಿರುವುದೂ ಉಂಟು. ಉದಾಹರಣೆಗೆ 'ಗಬನ್' (ವಿತ್ತಾಪಹರಣ) 'ಚಂದ್ರಹಾರ' ಎಂಬುದಾಗಿ ಬದಲಾಗಿದೆ. ಅನುವಾದಕರು ಕು. ಶಿ. ಹರಿದಾಸ ಭಟ್ಟರು. ಕಥೆಯಲ್ಲಿನ ವಿತ್ತಾಪಹರಣದ ಪ್ರಮುಖ ಘಟನೆಗೆ ಕಾರಣವಾದ ಚಂದ್ರಹಾರದ ಬಯಕೆ, ಈ ಬಗೆಯ ನಾಮಪರಿವರ್ತನಕ್ಕೆ ಕಾರಣವೆಂದಿದ್ದಾರೆ. ಲೇಖಕರ ದೃಷ್ಟಿ, ಅನುವಾದಕರ ದೃಷ್ಟಿ ಬೇರೆ ಬೇರೆಯಾದಾಗ ಹೀಗಾಗುವುದು ಸಹಜ. ವಿತ್ತಾಪಹರಣ ಎಂಬ ಶೀರ್ಷಿಕೆಯಲ್ಲಿ ಅರ್ಥ ಸುಭಗತೆ ಮತ್ತು ಆಕರ್ಷಣೆ ಇಲ್ಲದಿರುವುದೂ ಇದಕ್ಕೆ ಕಾರಣವಾಗಿರಬೇಕು. ಇದನ್ನು ಬಿಟ್ಟರೆ ಉಳಿದ ದೃಷ್ಟಿಗಳಿಂದ ಭಾಷಾಂತರ ಬಹುಮಟ್ಟಿಗೆ ಸಮರ್ಪಕವಾಗಿದೆ.

ಪ್ರೇಮಚಂದರನ್ನು ಬಿಟ್ಟರೆ ಐತಿಹಾಸಿಕ ಕಾದಂಬರಿಗಳನ್ನು ಬರೆದು ವಿಖ್ಯಾತರಾಗಿರುವ ವೃಂದಾವನ ಲಾಲ ವರ್ಮಾ ಅವರು ಕನ್ನಡ ಅನುವಾದಕರಿಗೆ ಅತ್ಯಂತ ಪ್ರಿಯವಾಗಿ ಪರಿಣಮಿಸಿದ್ದಾರೆ. 'ಝಾಂಸಿ ಕೀ ರಾನೀ'ಯಿಂದ ಪ್ರಾರಂಭವಾದ ಅನುವಾದಪರಂಪರೆ 'ರಾಮಘಡ್ ಕೀ ರಾನೀ'ಯ ವರೆಗೂ ಬಂದಿದೆ. ಗೋವಿಂದರಾಜ್ ಅವರೇ ವರ್ಮರ ಅನೇಕ ಕೃತಿಗಳನ್ನು ಅನುವಾದಿಸಿದ್ದಾರೆ. ಗೋವಿಂದ

ರಾಜ್ ಅವರ ಶೈಲಿ ಸರಳ ಸುಂದರವಾಗಿದೆ. ನಿರರ್ಗಳವಾಗಿ ಓಡುತ್ತದೆ. ಐತಿಹಾಸಿಕ ಕಥಾನಕ ಕುತೂಹಲವಾಗಿರುವುದರಿಂದಲೂ, ವರ್ಮರ ಕಥನ ಶೈಲಿಯ ವೈಶಿಷ್ಟ್ಯ ದಿಂದಲೂ, ಭಾಷೆಯಲ್ಲಿ ಅಲ್ಲಲ್ಲಿ ಕಾಣಬರುವ ಪರಿಮಾರ್ಜನೀಯ ದೋಷಗಳತ್ತ ಗಮನ ಹೆಚ್ಚಾಗಿ ಹರಿಯುವುದಿಲ್ಲ. ಒಟ್ಟಿನಲ್ಲಿ ಗೋವಿಂದರಾಜ್ ಅವರ ಅನುವಾದ ತೃಪ್ತಿಕರ ವಾಗಿದೆ. ವೃಂದಾವನ ಲಾಲ ವರ್ಮರ ಇತರ ಅನುವಾದಕರಲ್ಲಿ ಪುಷ್ಪಾದೇವಿ ಮತ್ತು ಎಂ. ಎಸ್. ಕೃಷ್ಣಮೂರ್ತಿ ಅವರ ಅನುವಾದಗಳು ಅತ್ಯಂತ ಗಮ ನಾರ್ಹವಾಗಿವೆ. ಪುಷ್ಪಾದೇವಿಯವರು ಅನುವಾದಿಸಿರುವ 'ವಿರಾಟ ದುರ್ಗದ ಪದ್ಮಿನಿ' ವರ್ಮರ ಅತ್ಯಂತ ಜನಪ್ರಿಯ ಕಾದಂಬರಿ. ಕನ್ನಡದಲ್ಲಿಯೂ ಇದು ಸಾಕಷ್ಟು ಜನ ಪ್ರಿಯತೆ ಗಳಿಸಿತು. ಇದಕ್ಕೆ ಪುಷ್ಪಾದೇವಿಯವರ ಸುಂದರ ಅನುವಾದವೂ ಕಾರಣವೆನ್ನ ಬೇಕು. ಅವರ ಕೈಯಲ್ಲಿ ಕನ್ನಡ ಸುಲಭವಾಗಿ ಓಡುತ್ತದೆ. ಆದರೆ ಎಂದಿನಂತೆ ಹಲವು ಸಾಮಾನ್ಯವಾದ ದೋಷಗಳು ನುಸುಳಿಕೊಂಡುಬಿಟ್ಟಿವೆ. ಈ ದೋಷಗಳು ಅಷ್ಟೇನೂ ಪ್ರಮಾದಕರವಾಗಿಲ್ಲವೆಂಬುದೇ ಸಂತೋಷದ ಸಂಗತಿ.

'ಮೃಗನಯನಿ' ಕಾದಂಬರಿಯನ್ನು ಅನುವಾದಿಸಿರುವ ಎಂ. ಎಸ್. ಕೃಷ್ಣ ಮೂರ್ತಿಯವರು ಕನ್ನಡಕ್ಕೆ ಈ ಮೊದಲೇ ಕೆಲವು ಅನುವಾದಗಳನ್ನು ನೀಡಿದ್ದರು. ಮೇಲಾಗಿ ಕನ್ನಡ, ಹಿಂದಿ ಮತ್ತು ಸಂಸ್ಕೃತ ಭಾಷೆಗಳಲ್ಲಿ ಅವರಿಗಿರುವ ಪ್ರಭುತ್ವ ಅನುವಾದ ಶೈಲಿಯಲ್ಲೂ ಕಾಣುತ್ತದೆ. ಅವರ ಸಂಸ್ಕೃತಪ್ರಿಯತೆ ಶೈಲಿ ಅನಾವಶ್ಯಕವಾಗಿ ಒಮ್ಮೊಮ್ಮೆ ಪೆಡಸಾಗುವಂತೆ ಮಾಡಿಬಿಡುತ್ತದೆ. ಇಷ್ಟಾದರೂ ಅವರ ಶೈಲಿಯಲ್ಲಿ ಜೀವವಿದೆ. ಅನುವಾದ ಸುಂದರವಾಗಿ ಬಂದಿದೆ. ಕನ್ನಡಕ್ಕೆ ದೊರೆ ತಿರುವ ಉತ್ತಮ ಅನುವಾದಗಳಲ್ಲಿ 'ಮೃಗನಯನೀ' ಕೂಡ ಒಂದಾಗುತ್ತದೆ ಎಂದು ಹೇಳಬಹುದು. ಆದರೆ ಈ ಕೃತಿಯ ಶೀರ್ಷಿಕೆಯೇ ವಿಚಿತ್ರವೆಂದು ತೋರಿದರೆ ಆಶ್ಚರ್ಯ ವಿಲ್ಲ. 'ಮೃಗನಯನೀ' ಎಂಬ ರೂಪ ಹಿಂದಿಯಲ್ಲಾಗಲೀ, ಕನ್ನಡದಲ್ಲಾಗಲೀ ಹೇಗೆ ಸಿದ್ಧಿಸುತ್ತದೆಂಬುದರ ಕಡೆಗೆ ನಮ್ಮ ಗಮನ ಹರಿಯದೆ ಇರದು. ಈ ಅಂಶ ಅವರ ಗಮನಕ್ಕೆ ಬಂದಿದ್ದರೂ, ಮೂಲ ಲೇಖಕರು ಇಟ್ಟುಕೊಂಡಿರುವ ರೂಪವನ್ನೇ ಅವರೂ ಉಳಿಸಿಕೊಳ್ಳಲಿಚ್ಛಿಸಿದ್ದಾರೆ ಎಂದು ತೋರುತ್ತದೆ. ಆದರೆ ದ್ವಿತೀಯ ಮುದ್ರಣದಲ್ಲಿ ಇದನ್ನು ತಿದ್ದಿಕೊಂಡಿದ್ದಾರೆಂಬುದು ಗಮನಾರ್ಹ ಸಂಗತಿ.

'ಬಾಣಭಟ್ಟನ ಆತ್ಮಕಥೆ' ಹಿಂದೀ ಸಾಹಿತ್ಯಪ್ರಪಂಚದಲ್ಲಿಯೇ ಕೋಲಾಹಲ ವನ್ನೆಬ್ಬಿಸಿದ ಕೃತಿ. ಡಾ. ಹಜಾರಿ ಪ್ರಸಾದ್ ದ್ವಿವೇದಿಯವರ ಈ ಕೃತಿಯನ್ನು ಭರತ ಖಂಡದ ಎಲ್ಲ ಭಾಷೆಗಳಿಗೂ ಅನುವಾದಿಸಲಾಯ್ತು. 'ಅಖಿಲ ಭಾರತೀಯ ಸಾಹಿತ್ಯ ಸೃಷ್ಟಿಯಲ್ಲಿ ಉತ್ತಮ ಕೋಟಿಗೆ ಸೇರಿದುದೆಂದು' 'ನಿವೇದನೆ'ಯಲ್ಲಿ ಪ್ರಕಾಶಕರು ಹೇಳಿಕೊಂಡಿದ್ದಾರೆ. ಸಾಹಿತ್ಯ ಅಕಾದಮಿಗಾಗಿ ಇದನ್ನು ಅನುವಾದಿಸಿರು ವವರು ಎಂ. ಎಸ್. ಕೃಷ್ಣಮೂರ್ತಿ. ಮೂಲಕೃತಿ ಪಾಂಡಿತ್ಯಪೂರ್ಣ ಶೈಲಿಗೆ ಹೆಸರಾಗಿದೆಯಾದರೂ ಮೂಲವನ್ನು ಮೀರಿಸುವಷ್ಟರಮಟ್ಟಿಗೆ ಕನ್ನಡದ ಶೈಲಿ ಸಂಸ್ಕೃತ

ಭೂಯಿಷ್ಠವಾಗಿರುವುದು ಗೋಚರಿಸುತ್ತದೆ: "ಗಂಗೆಯ ಸ್ವಚ್ಛ ಸೈಕತ ಶಯ್ಯೆ ಚಂದ್ರಿಕೆಯಲ್ಲಿ ಹೊಳೆಯುತ್ತಿತ್ತು." ಹಾಗೂ "ಘನಮೇಚಕ ಕೇಶಪಾಶಗಳ ಮಧ್ಯದ ಉಜ್ವಲ ಸೀಮಂತ ರೇಖೆಯು ಮಂದಾಕಿನಿಯ ಧವಲಧಾರೆ ಕ್ಷಣಕಾಲ ಪಾರ್ವತಿಯ ಚಿಕುರರಾಜಿಯ ಮಧ್ಯಕ್ಕೆ ಬಂದಿದೆಯೋ ಎಂಬಂತೆ ಮನೋಹರವಾಗಿ ಕಾಣುತ್ತಿತ್ತು".

ಕನ್ನಡ ಸಂಸ್ಕೃತದ ಈ ಹೊರೆಯನ್ನು ತಾಳಲಾರದೆ ತತ್ತರಿಸುತ್ತದೆಂದು ಬೇರೆ ಹೇಳಬೇಕಾಗಿಲ್ಲ. ಈ ಕೃತಿಯಲ್ಲಿ ಸಂಸ್ಕೃತ ಶಬ್ದಗಳು ಕೊಂಚ ಹೆಚ್ಚಾಗಿಯೇ ಕಾಣ ಬೇಕಾಗಿರುವುದು ಸಹಜವಾದರೂ ಅತಿ ಸಂಸ್ಕೃತ ನಿಷ್ಠೆ ಅರ್ಥಗ್ರಹಣಕ್ಕೆ ಅಡ್ಡಿಯಾಗಿದೆ. ಒಂದು ದೃಷ್ಟಿಯಲ್ಲಿ ಇದೇ ಶೈಲಿಯ ವೈಶಿಷ್ಟ್ಯ ಎಂದರೂ ಇದೇ ಈ ಕೃತಿಯ ಕೊರತೆಯೂ ಹೌದು. ಅಲ್ಲಲ್ಲಿ ಹಿಂದಿಯಲ್ಲಿ ಬಳಕೆಯಲ್ಲಿರುವ ಆದರೆ ಕನ್ನಡದಲ್ಲಿ ಅದೇ ಅರ್ಥದಲ್ಲಿ ಬಳಕೆಯಲ್ಲಿಲ್ಲದ ಶಬ್ದಗಳೂ ಸೇರಿಕೊಂಡುಬಿಟ್ಟಿರುವುದನ್ನು ಕಾಣಬಹುದಾಗಿದೆ. ಉದಾಹರಣೆಗೆ; 'ಕೋಟಿ' ಶಬ್ದ. ಹಿಂದಿಯಲ್ಲಿ ಪಂಕ್ತಿ, ಶ್ರೇಣಿ ಎಂಬ ಅರ್ಥದಲ್ಲಿ ಬಳಕೆಯಲ್ಲಿರುವ ಈ ಶಬ್ದ ಕನ್ನಡದಲ್ಲಿ ಸಂಖ್ಯಾವಾಚಿ. ಆದರೂ ಉತ್ತಮ ಅನು ವಾದಕ್ಕೆ ನಾವು ಮೆಚ್ಚಿಗೆಯನ್ನು ಸೂಚಿಸಲೇ ಬೇಕು.

ಬಿ. ನಂ. ಚಂದ್ರಯ್ಯ ಅವರು ಅನುವಾದಿಸಿಕೊಟ್ಟಿರುವ 'ಚಿತ್ರಲೇಖಾ' ಭಗವತೀ ಚರಣ ವರ್ಮಾ ಅವರ ಅತ್ಯಂತ ಪ್ರಸಿದ್ಧವಾದ ಕೃತಿ. ಈ ಮೊದಲು ರಾಮಮೂರ್ತಿ ಅವರು ಇದೇ ಕೃತಿಯನ್ನು ಅನುವಾದಿಸಿದ್ದರೆಂದು ಕೇಳಿದ್ದೇನೆ. ಆದರೆ ಈಗ ಅದರ ಪ್ರತಿಗಳು ದುರ್ಲಭವಾಗಿವೆ. ಚಂದ್ರಯ್ಯನವರ ಅನುವಾದದ ವೈಶಿಷ್ಟ್ಯ ಸಜೀವ ಕನ್ನಡ ಶೈಲಿ. ಆದರೆ ಹಿಂದಿಯಲ್ಲಿ ಮಾತ್ರ ವಿಶಿಷ್ಟ ಅರ್ಥದಲ್ಲಿ ಬಳಕೆ ಯಲ್ಲಿರುವ ಕೆಲವು ಶಬ್ದಗಳನ್ನು ಲೀಲಾಜಾಲವಾಗಿ ಕನ್ನಡದಲ್ಲಿಯೂ ಬಳಸಿಬಿಡುತ್ತಾರೆ. ಆದರೆ ಅವರ ಮೋಹಕ ಸುಂದರ ಕನ್ನಡ ಶೈಲಿ ಅದನ್ನು ಮರೆಮಾಡಿಬಿಡುತ್ತದೆ. ಕೆಲವೆಡೆಗಳಲ್ಲಿ ಕಂಸಗಳನ್ನು ಹಾಕಿ ಬೇರೆ ಶಬ್ದಗಳನ್ನು ಕೊಟ್ಟಿರುವುದು ಅರ್ಥವಾಗು ವಂತಿಲ್ಲ. ಉದಾಹರಣೆಗೆ; ಬೀಸಣಿಗೆಯ ಗಾಳಿಯನ್ನು (ವಿದ್ಯುತ್ ಫ್ಯಾನ್), ತೋಟಗಾರನು (ವಾಟಿಕೆಯಲ್ಲಿದ್ದವನು), ನಿಷ್ಕಳಂಕ (ನಿರ್ಮಲ), ಹೇಳಿದ (ಶ್ವೇತಾಂಕ). ಇಷ್ಟಾದರೂ ಒಟ್ಟಿನಲ್ಲಿ 'ಚಿತ್ರಲೇಖಾ' ಉತ್ತಮ ಅನುವಾದವೆನ್ನಬಹುದು.

'ಚಿತ್ರಲೇಖಾ'ದ ತರುವಾಯ ಚಂದ್ರಯ್ಯನವರು ನೀಡಿದ ಮತ್ತೊಂದು ಅನುವಾದ 'ಮಲ್ಲಿಕಾ'. ಯಾದವಚಂದ್ರ ಜೈನ್‌ರವರ 'ಮಲ್ಲ–ಮಲ್ಲಿಕಾ' ಎಂಬ ಐತಿಹಾಸಿಕ ಕಾದಂಬರಿಯ ಕನ್ನಡ ಅನುವಾದ. 'ಮಲ್ಲಿಕಾ'ದಲ್ಲಿ ಚಂದ್ರಯ್ಯನವರ ಶೈಲಿಯ ಮೆಚ್ಚುಗೆಯ ಅಂಶಗಳು ಎಂದಿನಂತೆಯೇ ಇವೆಯಾದರೂ, ಅಚ್ಚಿನ ತಪ್ಪುಗಳೂ, ದೋಷಪೂರ್ಣ ಪ್ರಯೋಗಗಳೂ ತುಂಬಿಕೊಂಡುಬಿಟ್ಟಿವೆ. ಅಚ್ಚಿನ ತಪ್ಪುಗಳಿಗೆ ಉದಾಹರಣೆ: ಅಚೇತನಸ್ವ, ವೈಶಿಷ್ಠ, ದಿಗ್ದಶನ, ಸಂಸಾದನೆ, ಪ್ರಸಾಧನ ಇತ್ಯಾದಿ. ದೋಷಪೂರ್ಣ ಪ್ರಯೋಗಗಳು: ಕಾತುರ, ನೈಪುಣ್ಯತೆ, ಐಕ್ಯತೆ, ಕೌಶಲ್ಯ ಇತ್ಯಾದಿ. 'ಮಲ್ಲಿಕಾ'ದಲ್ಲಿ ಕಾಣಬರುವ ಈ ಕೊರತೆಯನ್ನು ಬಿಟ್ಟರೆ,ಈ ಅನುವಾದ ಪ್ರಶಂಸಾರ್ಹವಾಗಿವೆ.

೧೯೬೮ರಲ್ಲಿ ಚಂದ್ರಯ್ಯನವರು 'ಬರ್‌ಗದ್ ಕಿ ಛಾಯಾ' ಎಂಬ ಡಾ. ಸತ್ಯಪ್ರಕಾಶ್ ಸಾಂಗರ್ ಅವರ ಮನೋವೈಜ್ಞಾನಿಕ ಕಾದಂಬರಿಯನ್ನು ಭಾಷಾಂತರಿಸಿದ್ದಾರೆ. ರಕ್ಷಾ ಕವಚದಲ್ಲಿ ಮೂಲಲೇಖಕರ ಹೆಸರನ್ನು ಕಾಣಿಸಿಲ್ಲ. ರಕ್ಷಾ ಕವಚದ ನಾಲ್ಕನೆಯ ಪುಟದ ಬ್ಲರ್ಬ್ ಬರೆಹದಲ್ಲಿ ಎರಡು ಕಡೆ ಡಾ. ಸಂಗರ್ ಎಂಬ ಹೆಸರು ಬಂದಿದೆ. ಒಳಪುಟಗಳಲ್ಲಿ ಸಂಗರ್, ಸಾಂಗರ್ ಎಂಬ ಎರಡು ರೂಪಗಳೂ ಇದ್ದು, ಸರಿಯಾದ ರೂಪ ಯಾವುದೆಂಬುದು ತಿಳಿಯದೆ ಹೋಗುತ್ತದೆ. ಮೂಲ ಲೇಖಕರಿಗೆ ಸಲ್ಲಬೇಕಾದ ಗೌರವ ಸಲ್ಲಿಸಬೇಕೆಂಬುದೂ ಭಾಷಾಂತರಕಾರನ ಕರ್ತವ್ಯವಷ್ಟೆ? ಹಿಂದಿನ ಅನುವಾದಗಳಲ್ಲಿ ಮಾಡಿದಂತೆಯೇ ಇದರಲ್ಲೂ ಕೆಲವೆಡೆಗಳಲ್ಲಿ ಪರ್ಯಾಯ ಪದಗಳನ್ನು ಕಂಸಗಳಲ್ಲಿ ಉಳಿಸಿಕೊಂಡಿರುವುದು ಪ್ರಶ್ನೆಗಳಿಗೆ ಎಡೆಮಾಡಿಕೊಡುತ್ತದೆ. ಉದಾ : ಯೋಗ್ಯತೆ (ಕ್ವಾಲಿಫಿಕೇಶನ್), ಸಂಕೋಚ (ನಾಚಿಕೆ), ಹಿಂದೆ ಓಡಿಬರುವಂತೆ (ದುಂಬಾಲು ಬಿದ್ದು) (ಪುಟಗಳು ಕ್ರಮಶ : ೩೪, ೫, ಮತ್ತು ೫೫). ಅಂತೆಯೇ, 'ಅಪನಾ' ಎಂಬ ಆತ್ಮಾರ್ಥಕ ಸರ್ವನಾಮದ ಪ್ರಯೋಗದ ಬಳಕೆಯಲ್ಲಿ ಈ ಮೊದಲ ಅನುವಾದಗಳಲ್ಲಿ ಕಾಣಿಸಿಕೊಂಡಿದ್ದ ದೋಷ ಪುನರಾವರ್ತಿತವಾಗಿದೆ. ಉದಾ : "ಹಾಗೆಯೇ ಆಗಲಿ, ತನ್ನ ಹಿಂದೆ ಓಡಿಬರುವಂತೆ (ದುಂಬಾಲು ಬಿದ್ದು) ಏಕೆ ಆದೇಶ ನೀಡುತ್ತೀಯೆ?" (ಪುಟ. ೫೫). ಅಂತೆಯೇ ಸ್ವಸ್ಥ (ಸಮರ್ಪಕ ಎಂಬ ಅರ್ಥದಲ್ಲಿ), ತಥಾ ಕಥಿತ (ಹಾಗೆಂದು ಹೇಳಲಾದ) ಇವೇ ಮೊದಲಾದ ಶಬ್ದಗಳನ್ನು ಹಾಗೆ ಹಾಗೆ ಬಳಸಿಬಿಡುತ್ತಾರೆ. ವಿಭಕ್ತಿ ಪಲ್ಲಟದ ಬಗ್ಗೆಯೂ ಕೆಲವೊಮ್ಮೆ ಉದಾಸೀನರಾಗಿ ಬಿಡುತ್ತಾರೆ. ಈ ಕೆಲವು ಸಣ್ಣಪುಟ್ಟ ಓರೆಕೋರೆಗಳನ್ನು ಬಿಟ್ಟರೆ ಅನುವಾದ ಒಟ್ಟಿನಲ್ಲಿ ಸರಳವೂ, ಸುಂದರವೂ ಆಗಿದ್ದು, ಮೂಲದಂತೆಯೇ ಓದುಗರನ್ನು ಸೆರೆ ಹಿಡಿಯುತ್ತದೆ.

ಶ್ರೀಮತಿ ತೇಜರಾನಿಯವರ ಸಾಮಾಜಿಕ ಕಾದಂಬರಿ 'ಮಾಲತೀ ಮಂದಿರ' ಮತ್ತು ಪ್ರೊ. ಇಂದ್ರ ವಿದ್ಯಾ ವಾಚಸ್ಪತಿಯವರ ಕಾದಂಬರಿ 'ಜಮಿನ್ದಾರ' ಇವುಗಳನ್ನು ಕನ್ನಡಿಗರಿಗೆ ಅನುವಾದಿಸಿಕೊಟ್ಟಿರುವ ವಿದ್ವಾನ್ ಹೊಸಮನೆ ಗುಡ್ಡಪ್ಪ ಅವರು "ನಾನು ಈ ಮೊದಲು ಕನ್ನಡಕ್ಕೆ ಹಿಂದಿಯಿಂದ ಅನೇಕ ಉಚ್ಚ ಕೋಟಿಯ ಕಥೆ, ಕಾದಂಬರಿ, ನಾಟಕಗಳನ್ನು ಅನುವಾದಿಸಿದ್ದೇನೆ. ಆದರೂ ಅಂಜಂಜುತ್ತ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಹೆಜ್ಜೆ ಇಡುತ್ತಿದ್ದೇನೆ" ('ಒಂದೇ ಮಾತು' ಎಂಬಲ್ಲಿ) ಎಂದು ಹೇಳಿಕೊಂಡಿದ್ದಾರೆ. ಅವರ ಅಂಜಿಕೆಗೆ ಕಾರಣವಿಲ್ಲದೆ ಇಲ್ಲ. ಅವರು ಅನುವಾದಿಸಿರುವ ಇತರ ಕಥೆಗಳನ್ನು, ನಾಟಕಗಳನ್ನು ನೋಡುವ ಭಾಗ್ಯ ದೊರೆಯದೆ ಹೋಯಿತು. ಆದರೆ ಮೇಲೆ ಹೇಳಿದ ಎರಡು ಕಾದಂಬರಿಗಳಿಗೂ ಹಿಂದಿಯಲ್ಲಿ ಯಾವ ಗಣ್ಯಸ್ಥಾನವೂ ದೊರೆತಿಲ್ಲ. ಅಂತಹ ಬಾಲಿಶ ಕೃತಿಗಳಿವು. ಇವುಗಳ ಅನುವಾದದಿಂದ, ಬೇಡವಾದುದನ್ನು ತಂದು ಕನ್ನಡಕ್ಕೆ ಗಿಡಿದಂತಾಗಿದೆಯೇ ಹೊರತು ಉಪಕಾರ ಮಾತ್ರ ಆಗಿಲ್ಲ. ಭಾಷೆಯ ಬಳಕೆಯಲ್ಲಿಯೂ ಸೌಷ್ಠವ ಕಾಣದೊರಕುವುದಿಲ್ಲ. ಉದಾ :

'ಕನಕನು...........ಎಬ್ಬಿಸಿದಳು', 'ಕನಕಳೇನು ಮೊಲೆ ತಿನ್ನುವ ಮಗುವೆ!' 'ಆರು ವರುಷದ ಹುಡುಗ ತಮ್ಮ ಅಣ್ಣನನ್ನು ಕರೆಯುತ್ತಿದ್ದ'. 'ಕೈಯೊಳಗೆ, ಹಿಡಿದು ಕೊಂಡಿದ್ದ ಕೋಲನ್ನು ಊರಿದ್ದ' ಇತ್ಯಾದಿ. ಮೇಲಾಗಿ ಬುಂದು, ಭಜ್ಜು, ಜಂಗುಲಾ, ಬಟ್ಟೋ ಮೊದಲಾದ ಹೆಸರುಗಳು ಮಾನಸಿಕವಾಗಿ ಪ್ರಿಯವೆನ್ನಿಸುವುದೂ ಇಲ್ಲ.

'ಮಾಲತೀ ಮಂದಿರ'ದಲ್ಲಿ "ವಾಚಕರೇ ಬೆಚ್ಚಿಬಿದ್ದಿರೇನು?........ಇನ್ನು ಹೆಚ್ಚು ವಿಚಾರ ಮಾಡಬೇಡಿರಿ"; "ವಾಚಕರು ಹತಭಾಗಿನೀ ಮಾಲತಿಯನ್ನು ಮರೆತಿರಲಿಕ್ಕಿಲ್ಲ. ನಡೆಯಿರಿ, ಮಾಲತಿಯನ್ನು ಸ್ವಲ್ಪ ಮಾತನಾಡಿಸಿ ಬರುವಾ" ಈ ರೀತಿ ಲೇಖಿಕೆಯ ವ್ಯಕ್ತಿತ್ವ ಅನಾವಶ್ಯಕವಾಗಿ ಮಧ್ಯೆ ಮಧ್ಯೆ ಕರಡಿಯಂತೆ ನುಗ್ಗಿ ಬರುತ್ತದೆ.

'ಜಮೀನ್ದಾರ' ಕೂಡಾ ಇದೇ ಜಾತಿಯ ಕೃತಿ. "ಜಮೀನ್ದಾರನು ಆತನ ಬೇಡಿಕೆಯನ್ನು ಕೇಳಿದ ವಿಚಾರ ವಾಚಕರಿಗೆ ಗೊತ್ತಾಗಿದೆ"; "ಹೂಂ ಭೋಲಾನ ಕಥೆ ಕೇಳುತ್ತಾ ಮೂಲಕಥೆಯನ್ನೇ ಮರೆತೆ". ಅಚ್ಚಿನ ತಪ್ಪುಗಳೂ, ದೋಷಪೂರ್ಣ ಪ್ರಯೋಗಗಳೂ ಬೇಸರ ತರಿಸುವಷ್ಟು ಹೇರಳವಾಗಿವೆ. ಶೈಲಿಯ ಮಹತ್ವಪೂರ್ಣ ಅಂಶವಾದ ವಿರಾಮಚಿಹ್ನೆಗಳ ಬಳಕೆಯೂ ಗಾಬರಿಯನ್ನುಂಟುಮಾಡುವಂತಿದೆ. "ಅದೊಂದು ಅವರಿಗೆ ರೋಗ; ಕೈಯೊಳಗೆ ವ್ಹೀಲ ಇರುತ್ತದೆ. ಕಾಲಲ್ಲಿ ಎಕ್ಸಲೆಟರ, ಕಾಲಿಟ್ಟು ಒತ್ತಿದರೆ ತೀರಿತು,...........ಹೀಗೆ ಡ್ರಾಯ್ವರನು ಹೇಳುತ್ತಾನೆ".

ಒಟ್ಟಿನಲ್ಲಿ, ಅನುವಾದ ಹೇಗೆ ಮಾಡಬಾರದು ಮತ್ತು ಎಂತಹ ಕೃತಿಗಳನ್ನು ಅನುವಾದ ಮಾಡಬಾರದು ಎಂಬುದಕ್ಕೆ ಈ ಎರಡು ಅನುವಾದಗಳು ಉದಾಹರಣೆಯಾಗಿವೆ.

ಧರ್ಮವೀರ ಭಾರತಿಯವರ 'ಸೂರಜ ಕಾ ಸಾತವಾಂ ಘೋಡಾ' ಎಂಬ ಲಘು ಕಾದಂಬರಿಯನ್ನು ಎಂ. ಎಸ್. ಕೃಷ್ಣಮೂರ್ತಿ ಭಾಷಾಂತರಿಸಿದ್ದಾರೆ. ಕಾದಂಬರಿಯ ಅಥವಾ ಏಕಸೂತ್ರದಲ್ಲಿ ಬಂಧಿತವಾಗಿರುವ ಏಳು ಬಿಡಿಗತೆಗಳ ಶ್ರೋತೃಗಳ ಪ್ರಶ್ನೆಗೆ ಉತ್ತರವಾಗಿ ಈ ಮಾತುಗಳು ಬಂದಿವೆ: "ನೋಡು, ಈ ಕತೆಗಳು ವಾಸ್ತವವಾಗಿ ಪ್ರೇಮವನ್ನಲ್ಲ, ಇಂದಿನ ನಿಮ್ಮ ಮಧ್ಯವರ್ಗ ಬಾಳುತ್ತಿರುವ ಬದುಕನ್ನು ಚಿತ್ರಿಸುತ್ತವೆ. ಅದರಲ್ಲಿ ಆರ್ಥಿಕ ಸಂಘರ್ಷಕ್ಕೆ, ನೈತಿಕ ವಿಶೃಂಖಲತೆಗೆ ಪ್ರೇಮಕ್ಕಿಂತಲೂ ಮಿಗಿಲಾದ ಮಹತ್ವವಿದೆ. ಆದ್ದರಿಂದ ಇಷ್ಟೊಂದು ಅನಾಚಾರ, ನಿರಾಶೆ, ಕಹಿ ಮತ್ತು ಕತ್ತಲೆ ಮಧ್ಯಮ ವರ್ಗದ ಮೇಲೆ ಕವಿದಿದೆ. ಆದರೆ ಕಗ್ಗತ್ತಲೆಯನ್ನು ಸೀಳಿಕೊಂಡು ಮುಂದುವರಿಯಲು, ಸಮಾಜ ವ್ಯವಸ್ಥೆಯನ್ನು ಬದಲಿಸಲು, ಮಾನವತೆಯ ಸಹಜ ಮೌಲ್ಯಗಳನ್ನು ಪುನಃ ಸ್ಥಾಪಿಸಲು ಶಕ್ತಿಯನ್ನೂ, ಪ್ರೇರಣೆಯನ್ನೂ ನೀಡಿದ ಯಾವುದೋ ಒಂದು ಶಕ್ತಿ ಅದರಲ್ಲಿದೆ. ಅದನ್ನು ಬೇಕಾದರೆ ಆತ್ಮ ಎನ್ನಿ, ಇಲ್ಲವೆ ಬೇರೇನು ಬೇಕಾದರೂ ಅನ್ನಿ. ನಂಬಿಕೆ, ಸಾಹಸ, ಸತ್ಯನಿಷ್ಠೆ ಆ ಪ್ರಕಾಶವಾಹೀ, ಆತ್ಮವನ್ನು ಏಳು ಕುದುರೆಗಳು ಸೂರ್ಯನ ರಥವನ್ನು ಮುಂದಕ್ಕೆಳೆಯುವಂತೆ ಮುಂದಕ್ಕೆ ಒಯ್ಯುತ್ತಿವೆ." (ಪು. ೧೧೧)

ಆತ್ಮವನ್ನು ಮುಂದಕ್ಕೊಯ್ಯುವ ಏಳು ಕುದುರೆಗಳಲ್ಲಿ ಆರು ಕುದುರೆಗಳು ಕಾಲಗತಿಯಲ್ಲಿ ಸತ್ವಹೀನವಾಗಿ ಕುಳಿತಿವೆ; 'ಭವಿಷ್ಯ'ವೆಂಬ ಏಳನೆಯ ಕುದುರೆಯೊಂದೇ ನಮಗುಳಿದಿರುವ ಆಶಾಕಿರಣ ಎಂಬುದು ಲೇಖಕರ ಅಭಿಮತ. ಭಾಷೆ, ಶೈಲಿ ಮತ್ತು ನಿರೂಪಣೆಯ ದೃಷ್ಟಿಯಿಂದ ತನ್ನದೇ ಆದ ವೈಶಿಷ್ಟ್ಯವನ್ನು ಹೊಂದಿರುವ ಈ ಅಪೂರ್ವ ಕೃತಿ ಕನ್ನಡಕ್ಕೆ ಬಂದಿರುವುದು ನಿಜಕ್ಕೂ ಸಂತೋಷದ ಸಂಗತಿ. "ಸಂತನ ವಚನಗಳನ್ನೋ ಇಲ್ಲವೇ ಧರ್ಮಗ್ರಂಥವನ್ನೋ ಒಂದು ವಾರದವರೆಗೂ ಪಾರಾಯಣ ನಡೆಯುತ್ತದೆ" (ಪು. ೧೧೧) ಇಂತಹ ವ್ಯಾಕರಣ ಸಾಂಗತ್ಯವಿಲ್ಲದಿರುವ ವಾಕ್ಯಗಳೂ, "ಇತ್ತ ಮಾಣಿಕ ನಿಶ್ಚಯಮಾಡಿ ಬಿಟ್ಟಿದ್ದರು....ಪ್ರಾಣ ಕಳೆದುಕೊಂಡೇ ತೀರುತ್ತೇನೆ—ಎಂದು" ಈ ರೀತಿಯ ಕನ್ನಡಕ್ಕೆ ಅಸಹಜವಾದ ವಾಕ್ಯರಚನೆಗಳೂ, ವಿರಾಮ ಚಿಹ್ನೆಗಳ ಯಾದೃಚ್ಛಿಕ ಬಳಕೆಯೂ, ಕನ್ನಡದಲ್ಲಿ ಮೂಲದ ಉದ್ದಿಷ್ಟಾರ್ಥವನ್ನು ನೀಡದಂತಹ ಶಬ್ದಗಳ ಬಳಕೆಯೂ (ಉದಾ: ಸಾವಧಾನ) ಅಲ್ಲಲ್ಲಿ ಕಾಣಬರುತ್ತದೆ. ಸಂಸ್ಕೃತ ಶಬ್ದಗಳ ಅತಿಬಳಕೆ ಕೆಲವೆಡೆಗಳಲ್ಲಿ ಶೈಲಿಯನ್ನೇ ಪೆಡಸಾಗಿಸಿದೆ. ಇಷ್ಟಾದರೂ, ಒಟ್ಟಿನಲ್ಲಿ ಭಾಷಾಂತರ ಸುಂದರವಾಗಿದೆ. ಆದರೆ, ಹೇರಳವಾಗಿ ತುಂಬಿಕೊಂಡಿರುವ ಅಚ್ಚಿನ ತಪ್ಪುಗಳು ರಸಾಸ್ವಾದನೆ ಭಂಗವನ್ನುಂಟುಮಾಡುತ್ತವೆ. ಒಂದೆಡೆಯಂತೂ ಪಂಕ್ತಿಗಳೇ ಹಿಂದುಮುಂದಾಗಿವೆ (ಪುಟ ೪೯). ಅಚ್ಚಿನ ಒಂದು ತಪ್ಪು ನಗೆಯನ್ನುಕ್ಕಿಸುತ್ತದೆ. "ಹುಡುಗ ಮೂರನೆಯ ವಾರವಾದರೇನಾಯಿತು?" (ವರನಾದರೇನಾಯಿತು ಎಂಬುದಕ್ಕೆ ಬದಲಾಗಿ)

ಬಾಬೂ ದೇವಕೀನಂದನ 'ಖತ್ರಿ'ಯವರ ಐಂದ್ರಜಾಲಿಕ, ಪತ್ತೇದಾರಿ ಕಾದಂಬರಿಗಳು ಹಿಂದೀ ಸಾಹಿತ್ಯದಲ್ಲಿ ಕೋಲಾಹಲವನ್ನೇ ಉಂಟುಮಾಡಿದುವು. ಖತ್ರಿಯವರ ಕಾದಂಬರಿಯನ್ನು ಓದಲೆಂದೇ ಅನೇಕರು ಹಿಂದಿ ಕಲಿತಿದ್ದೂ ಉಂಟು. ಹಿಂದಿ ಕಾದಂಬರೀ ಸಾಹಿತ್ಯದ ಶೈಶವಾವಸ್ಥೆಯಲ್ಲಿ ನಡೆದ ಘಟನೆ ಇದು. ಸಾಹಿತ್ಯದ ದೃಷ್ಟಿಯಿಂದ ಇವುಗಳ ಮಹತ್ವ ಗೌಣವಾದರೂ ಇತಿಹಾಸದ ದೃಷ್ಟಿಯಿಂದ, ಹಿಂದಿ ಗದ್ಯಸಾಹಿತ್ಯದ ಬೆಳವಣಿಗೆಯ ದೃಷ್ಟಿಯಿಂದ ಇವುಗಳ ಮಹತ್ವ ಅಕ್ಷುಣ್ಣವಾಗಿದೆ ಎಂದೇ ಹೇಳಬೇಕು. 'ಚಂದ್ರಕಾಂತ' 'ಚಂದ್ರಕಾಂತ ಸಂತತಿ' 'ಕಾಜರ್ ಕೀ ಕೋಠರೀ ; 'ನೌ ಲಖಾ ಹಾರ್', 'ಕುಸುಮ ಕುಮಾರಿ', 'ನರೇಂದ್ರ ಮೋಹಿನಿ', 'ವೀರೇಂದ್ರವೀರ' ಎಂಬ ಹೆಸರಿನಲ್ಲಿ ಪ್ರಕಟವಾದ ಈ ಎಲ್ಲ ಕೃತಿಗಳನ್ನೂ ಕನ್ನಡಿಗರಿಗೆ ಪ್ರತಾಪ ಸುಧಾಕರ ಅವರು ಒದಗಿಸಿಕೊಟ್ಟಿದ್ದಾರೆ. ಮನೆಮಾತು ಹಿಂದಿಯೇ ಆಗಿದ್ದು, ಹಿಂದೀ ವಿದ್ವಾಂಸರಾಗಿರುವ ಸುಧಾಕರ ಅವರು ಬೆಂಗಳೂರಿನಲ್ಲಿಯೇ ಹುಟ್ಟಿ ಬೆಳೆದವರಾದ್ದರಿಂದ ಕನ್ನಡ ಭಾಷೆಯ ನಿಕಟ ಪರಿಚಯವನ್ನು ಪಡೆದುಕೊಂಡಿದ್ದಾರೆ. ಹೀಗಾಗಿ ಅವರು ಹಿಂದಿಯಿಂದ ಕನ್ನಡಕ್ಕಾಗಲೀ, ಕನ್ನಡದಿಂದ ಹಿಂದಿಗಾಗಲೀ ಅನುವಾದಿಸಿರುವ ಕೃತಿಗಳಲ್ಲಿ ಭಾಷೆ ಮತ್ತು ಶೈಲಿಯ ದೃಷ್ಟಿಯಿಂದ ಉತ್ತಮ ನಿದರ್ಶನವೆನ್ನಬಹುದಾದ ಮಾದರಿಗಳನ್ನು ನೀಡಬಹುದಾದಷ್ಟು ಸುಂದರವಾಗಿ ಕೆಲಸವನ್ನು ನಿರ್ವಹಿಸಿದ್ದಾರೆ.

ಆದರೆ ಕೇವಲ ಐತಿಹಾಸಿಕ ಮಹತ್ವವುಳ್ಳ ಪತ್ತೇದಾರಿ ಈ ಕಾದಂಬರಿಗಳನ್ನು ಕನ್ನಡಕ್ಕೆ ಅನುವಾದಿಸಿಕೊಡಬೇಕಾಗಿತ್ತೆ ಎಂಬ ಪ್ರಶ್ನೆಗೆ ಉತ್ತರ ಹೇಳುವುದು ಕಷ್ಟ. ಪ್ರತಾಪ ಸುಧಾಕರ ಅವರು ಇನ್ನೂ ಕೆಲವು ಕಾದಂಬರಿಗಳನ್ನೂ, ಕಥೆಗಳನ್ನೂ ಅನುವಾದಿಸಿದ್ದಾರೆ. ಆದರೆ ಅವುಗಳಲ್ಲಿ ಕೆಲವು ಇಂದು ದುರ್ಲಭವಾಗಿವೆ. ಕೆಲವು ಕೃತಿಗಳ ಹೆಸರುಗಳು ಅವರಿಗೂ ನೆನಪಿಲ್ಲದಷ್ಟು ಹಳೆಯವಾಗಿಬಿಟ್ಟಿವೆ. ಒಟ್ಟಿನಲ್ಲಿ ಪ್ರತಾಪ ಸುಧಾಕರ ಅತ್ಯಂತ ಸಮರ್ಥ ಅನುವಾದಕರು ಎಂಬುದು ಗಟ್ಟಿಮಾತು. ಅವರು ತಮ್ಮ ಶಕ್ತಿಯನ್ನು ಪ್ರಮಾಣಪೂರ್ವಕವಾಗಿ ತೋರಿಸಿಕೊಟ್ಟಿದ್ದಾರೆ.

ಕಥೆಗಳು

ಕಥಾಪ್ರಪಂಚದಲ್ಲಿಯೂ ಪ್ರೇಮಚಂದರ ಕಥೆಗಳು ಸಹಜವಾಗಿಯೇ ಕನ್ನಡಿಗರ ಗಮನವನ್ನು ಸೆಳೆದಿವೆ. ಗುರುನಾಥಜೋಶಿಯವರು ನೀಡಿರುವ ಪ್ರೇಮಚಂದರ ಕಥಾಸಂಕಲನಗಳ ಹಲವು ಅನುವಾದಗಳು ಮುದ್ರಿತವಾಗಿದ್ದರೂ, ಇಂದು ಸುಲಭವಾಗಿ ದೊರೆಯುವಂತಿಲ್ಲ.

ರಂ. ಶಾ. ಲೋಕಾಪುರ ಅವರು ಪ್ರೇಮಚಂದರ ಎಂಟು ಕಥೆಗಳನ್ನು ಅನುವಾದಿಸಿ ಕೊಟ್ಟಿದ್ದಾರೆ, "ಚೌಧರಿಗಳ ಹೆಂಡತಿಗೂ, ಕರೀಮಳಿಗೂ ಒಂದು ದೊಡ್ಡ ಯುದ್ಧವೇ ಎಸಗಿತು"; "ಇಬ್ಬರೂ ದೇವಿಯರು ತಮ್ಮ ಶಬ್ದ ಭಂಡಾರದ ನದಿ ಹರಿಸಿದರು"— ಇಂತಹ ಪ್ರಯೊಗೇಗಳು ಅಲ್ಲಲ್ಲಿ ಇವೆ. ಹಿಂದಿಯಲ್ಲಿ 'ದೇವಿ' ಶಬ್ದ 'ಮಹಿಳೆ, ಹೆಂಗಸು' ಎಂಬರ್ಥದಲ್ಲಿ ಬಳಕೆಯಲ್ಲಿದೆ. ಅನುವಾದ ಅತ್ಯಂತ ಸಾಧಾರಣವಾಗಿದೆ.

ಕೆ. ಆರ್. ಉಡುಪರು ಪ್ರೇಮಚಂದರ 'ದುರ್ಗಾಮಂದಿರ', 'ಮುದಿದೊಡ್ಡಮ್ಮ', 'ದೊಡ್ಡಣ್ಣ', 'ಸತ್ಯದ ಸತ್ವ' ಮತ್ತು 'ಕಳಂಕ' ಎಂಬ ಐದು ಕಥೆಗಳನ್ನು ಕನ್ನಡಿಸಿ 'ದುರ್ಗಾಮಂದಿರ' ಎಂಬ ಹೆಸರಿನಲ್ಲಿ ಪ್ರಕಟಿಸಿದ್ದಾರೆ. ಕಥೆಗಳ ಅನುವಾದ ಒಟ್ಟಿನಲ್ಲಿ ಚೆನ್ನಾಗಿದೆ. ಕೆಲವೆಡೆಗಳಲ್ಲಿ ಭಾಷಾಂತರ ಕೇವಲ ಶಬ್ದಾನುವಾದವಾಗಿ ಬಿಟ್ಟಿದೆ; ವಾಕ್ಯರಚನೆಗಳೂ ಮೂಲದ ಶೈಲಿಯನ್ನೇ ಅನುಸರಿಸಿರುವುದರಿಂದ ಕೆಲವೆಡೆ ಓದುಗರಿಗೆ ತ್ರಾಸವಾಗುತ್ತದೆ. ಉದಾಹರಣೆ: "ಯಾವ ಸಾಮಾನು ಬಗಲಿಲ್ಲವೋ ಅದನ್ನು ನಾನು ಎಲ್ಲಿಂದ ತರಲಿ?" (ಪು. ೮೮) ನುಡಿಗಟ್ಟುಗಳ ಭಾಷಾಂತರದಲ್ಲಿಯೂ ಕೆಲವೊಮ್ಮೆ ಹೀಗಾಗಿದೆ. ಉದಾಹರಣೆ : ಕುತ್ತಿಗೆ ಒತ್ತಿಬಿಡಲೆ?" (ಪುಟ. ೮೮). ಗರ್ವ (ಹಿಂದಿಯಲ್ಲಿ ಅಭಿಮಾನ ಎಂದು ಅರ್ಥ) ಮೊದಲಾದ ಶಬ್ದಗಳನ್ನು ಭಾಷಾಂತರದಲ್ಲಿ ಹಾಗೆಯೇ ಉಳಿಸಿಕೊಂಡಿರುವುದು ಅಪಾರ್ಥಕ್ಕೆಡೆಗೊಟ್ಟಿದೆ. ಇಷ್ಟಾದರೂ, ಕನ್ನಡದ ಜಾಯಮಾನವನ್ನೇ ಬಹುಮಟ್ಟಿಗೆ ಉಳಿಸಿಕೊಂಡಿರುವ ಈ ಭಾಷಾಂತರ ಪ್ರಶಂಸಾರ್ಹವಾಗಿದೆ

ಈ ದಿಕ್ಕಿನಲ್ಲಿ ಒಂದು ವಿಶಿಷ್ಟ ಪ್ರಯತ್ನ 'ಶುಕ್ರದೆಸೆ'. ಕೆ. ಸಿ. ಶಿವಪ್ಪ (ಸರಸಪ್ರಿಯ) ಅವರು ಭಗವತೀ ಚರಣ ವರ್ಮಾ, ಸುದರ್ಶನ್, ಉಗ್ರ, ಯಶಪಾಲ್,

ಇಲಾಚಂದ್ರಜೋಶೀ ಮೊದಲಾದ ಹತ್ತುಮಂದಿ ಪ್ರಮುಖ ಕಥೆಗಾರರ ಸುಂದರವಾದ ಕಥೆಗಳನ್ನು ಅನುವಾದಿಸಿದ್ದಾರೆ. ಶಿವಪ್ಪನವರಿಗೆ ಅನುವಾದ ಕಲೆ ಸಿದ್ಧಿಸಿದೆ. ಅನುವಾದ ಎಷ್ಟು ಸರಸಪೂರ್ಣವಾಗಿರಬಲ್ಲದು ಎಂಬುದಕ್ಕೆ 'ಶುಕ್ರದೆಸೆ' ಒಂದು ಉದಾಹರಣೆ. 'ಅವರ ಕನ್ನಡ ಶುದ್ಧವಾಗಿದೆ, ಭಾಷೆ ಸರಳವಾಗಿದೆ. ಶೈಲಿ ಮೋಹಕವಾಗಿದೆ' ಎಂಬ ಮುನ್ನುಡಿಕಾರರ ಮಾತು ಯೋಗ್ಯವಾದ ಪ್ರಶಂಸೆ. ಹಿಂದಿ ಕಥಾ ಪ್ರಪಂಚದ ದಿಗ್ದರ್ಶನವನ್ನು ಮಾಡಿಸಿದ ಶಿವಪ್ಪನವರು ಅನುವಾದಕರಿಗೆ ಹೊಸ ದಾರಿಯೊಂದನ್ನು ಹಾಕಿಕೊಟ್ಟಿದ್ದಾರೆ.

'೨೩ ಹಿಂದಿ ಕಥೆಗಳು' ಜೈನೇಂದ್ರಕುಮಾರರು ಸಾಹಿತ್ಯ ಅಕಾದಮಿಗಾಗಿ ಸಿದ್ಧಪಡಿಸಿಕೊಟ್ಟ ಹಿಂದಿ ಕಥೆಗಳ ಪ್ರಾತಿನಿಧಿಕ ಸಂಕಲನದ ಕನ್ನಡ ಅನುವಾದ. ಸ್ವತಃ ಉತ್ತಮ ಕಥೆಗಾರರಾದ ಪಿ. ವಿ. ನಂಜರಾಜ ಅರಸು ಅವರು ಆದರ್ಶ ರೀತಿಯಲ್ಲಿ ಈ ಸಂಕಲನವನ್ನು ಭಾಷಾಂತರಿಸಿದ್ದಾರೆ. ಶೈಲಿಯ ದೃಷ್ಟಿಯಿಂದ ವಿಶಿಷ್ಟವಾಗಿರುವ ಪಾಂಡೇಯ ಬೇಚನ ಶರ್ಮ 'ಉಗ್ರ' ಮತ್ತು ರಾಧಿಕ ರಮಣ ಪ್ರಸಾದರ ಕತೆಗಳ "ಅನುವಾದದಲ್ಲಿ ಮೂಲಕತೆಯ ಸೊಗಸು ಎಷ್ಟು ದೊರಕಬಲ್ಲುದೋ?" ಎಂದು ಸಂಪಾದಕರೆ ಸಂದೇಹಪಟ್ಟಿದ್ದರೂ ಭಾಷೆಯ ಜಾಯಮಾನವನ್ನು ಚೆನ್ನಾಗಿಬಲ್ಲ ಭಾಷಾಂತರಕಾರ ಇಲ್ಲಿಯೂ ಗಮನಾರ್ಹ ಸಾಫಲ್ಯವನ್ನು ಗಳಿಸಿಬಿಟ್ಟಿದ್ದಾರೆ. ಒಂದು ಉದಾಹರಣೆ : "ಆ ಮೋರೆಸುಟ್ಟವಳು ಸಾಬರವಳು, ಗೊಲ್ಲತಿಯಾಗ್ಬಿಟ್ಟಳು. ಮುಸಲ್ಮಾನ ಹೆಂಗಸರಲ್ಲಿ ಮರ್ಯಾದೆಯನ್ನೋದು ಇಲ್ಲ ಅಮ್ಮ! ಅವಳು ತನ್ನ ಗಂಡನನ್ನು ಬಿಟ್ಟು ಬೇರೆಯವರ ಹತ್ತಿರ ಬಂದಳು. ಆದರೆ ನನಗಿಲ್ಲಿ ಮನೆಯಿಂದ ಹೊರಗೆ ಹೋಗಲೂ ಹೆದರಿಕೆಯಾಗುತ್ತೆ. ಹಾಳಾದವಳು ಹೆಣ್ಣೇನು, ಪಾತರಗಿತ್ತಿ." (ಪುಟ. ೧೨೧). ಇದೊಂದು ಉತ್ಕೃಷ್ಟ ಅನುವಾದ.

ಸುದರ್ಶನ್ ಹಿಂದಿಯ ಪ್ರಖ್ಯಾತ ಕಥೆಗಾರರಲ್ಲಿ ಒಬ್ಬರು. 'ಝುರೋಕೇ' ಅವರ ಮಹತ್ವಪೂರ್ಣ ಕಥಾಸಂಕಲನ. ಶಿಮುಂಜೆ ಪರಾರಿ ಅವರು 'ಹಣತೆ' ಎಂಬ ಹೆಸರಿನಲ್ಲಿ ಇದನ್ನು ಕನ್ನಡಕ್ಕೆ ಭಾಷಾಂತರಿಸಿದ್ದಾರೆ. ಸಭ್ಯತೆಯ ಹೆಸರಿನಲ್ಲಿ ಮೆರೆಯುತ್ತಿರುವ ಹಾಗೂ ಸಮಾಜದಲ್ಲಿ ಇಂದು ಕಾಣದೊರೆಯುತ್ತಿರುವ ಲೋಪದೋಷಗಳನ್ನು, ಅಂಕುಡೊಂಕುಗಳನ್ನು ಸಮರ್ಥವಾಗಿ ಪ್ರತಿಬಿಂಬಿಸಿವೆ ಈ ಸಂಕಲನದಲ್ಲಿನ ಕಥೆಗಳು. ಈ ಸಂಕಲನದ ಕಥೆಗಳ ರಚನೆಗೆ ಪ್ರೇರಣೆದೊರತದ್ದು ಖಲೀಲ್ ಗಿಬ್ರಾನನಿಂದ. ಈ ಗ್ರಂಥ ಈಗಾಗಲೇ ಹಲವಾರು ಭಾಷೆಗಳಿಗೆ ಭಾಷಾಂತರಗೊಂಡಿದೆ. ಈ ಕಥೆಗಳಲ್ಲಿ ಜೀವನದ ವೈವಿಧ್ಯಪೂರ್ಣ ಅನುಭವಗಳ ಸೂಕ್ಷ್ಮಾತಿಸೂಕ್ಷ್ಮ ಎಳೆಗಳನ್ನು ಬಿಡಿಸಿ ತೋರಿಸುವ ಜಾಣ್ಮೆಯಿದೆ. ಶಿಮುಂಜೆ ಅವರು ಇದನ್ನು ಸಮರ್ಥವಾಗಿ ಅನುವಾದಿಸಿದ್ದಾರೆ. ಅಲ್ಲಲ್ಲಿ ಕೆಲವು ಪರಿಮಾರ್ಜನೀಯ ದೋಷಗಳಿವೆಯಾದರೂ, ಗುಣಾಧಿಕ್ಯದಿಂದ ಕೂಡಿರುವ ಈ ಅನುವಾದ ಕನ್ನಡಕ್ಕೊಂದು ಉತ್ತಮ ಕೊಡುಗೆ.

ಮೇ. ರಾಜೇಶ್ವರಯ್ಯ ಅವರು 'ಕಫನ್' (ಸಿದಿಗೆ ಬಟ್ಟೆ) ಎಂಬ ಪ್ರೇಮ ಚಂದರ ಕಥೆಯನ್ನು ದಾವಣಗೆರೆಯ 'ಶಕ್ತಿ' ವಾರಪತ್ರಿಕೆಯಲ್ಲಿ ಪ್ರಕಟಿಸಿದ್ದಾರೆ. ದೇವೇಂದು ಅವರ 'ಆತ್ಮಹತ್ಯೆ', ಪ್ರಭಾಕರ್ ಅವರ 'ಕಲೆಯ ಉದಯ' ಜಯಸಿಂಹ ಎಸ್. ರಾಠೋರ್ ಅವರ 'ಸತ್ತಮೇಲೆ!' ಸುದರ್ಶನ್ ಚೋಪ್‌ಡಾರವರ 'ನಡೆದು ಬಂದ ದಾರಿ' ಎಂಬ ಕಥೆಗಳನ್ನು ಸಂಯುಕ್ತ ಕರ್ಣಾಟಕ, ತರಂಗಿಣಿ, ಅಜಂತಾ, ಪತ್ರಿಕೆಗಳಲ್ಲಿ ಬೆಳಕು ಕಾಣಿಸಿರುವ ಪ್ರಧಾನ್ ಕೃಷ್ಣಮೂರ್ತಿಯವರು ಉತ್ತಮವಾಗಿ ಅನುವಾದಿಸುತ್ತಿದ್ದಾರೆ. ಹಿಂದೀ ಮುಖಾಂತರವಾಗಿ ದೊರೆತಿರುವ ಗುಜರಾತಿ, ತಮಿಳು ಮತ್ತು ಇಂಗ್ಲಿಷ್ ಕಥೆಗಳಲ್ಲಿ ಹಲವನ್ನು ಅವರು ಕನ್ನಡಕ್ಕೆ ಅನುವಾದಿಸಿರುವುದು ಕಂಡುಬರುತ್ತದೆ.

ಆಗಾಗ್ಗೆ ಪತ್ರಿಕೆಗಳಲ್ಲಿ ಪ್ರಕಟವಾಗಿರುವ ಕಥೆಗಳಲ್ಲಿ ಹಲವು ಅನುವಾದಗಳು ಬಂದಿವೆಯಾದರೂ ಅವುಗಳ ಸಂಗ್ರಹ, ವಿಮರ್ಶೆ ಸಾಧ್ಯವಾಗಲಿಲ್ಲ. ಅನೇಕ ವೇಳೆ ಒಂದೇ ಕಥೆಯ ಹಲವು ಅನುವಾದಗಳು ಬೇರೆ ಬೇರೆ ಪತ್ರಿಕೆಗಳಲ್ಲಿ ಬಂದಿರುವುದೂ ಉಂಟು. 'ತರಂಗಿಣಿ'ಯಲ್ಲಿ 'ಕಲೆಯ ಉದಯ' ಎಂಬ ಹೆಸರಿನಲ್ಲಿ ಪ್ರಧಾನ್ ಕೃಷ್ಣಮೂರ್ತಿ ಅವರು ಅನುವಾದಿಸಿದ್ದ ಕಥೆಯನ್ನೇ 'ಮಲ್ಲಿಗೆ'ಯಲ್ಲಿ ಬೇರೊಂದು ಹೆಸರಿನಿಂದ ಬೇರೊಬ್ಬರು ಪ್ರಕಟಿಸಿದ್ದಾರೆ. ಇದು ಒಂದು ಬಗೆ.

ಕೃತಿ ಚೌರ್ಯಕ್ಕಂತೂ ಇಲ್ಲಿ ಹೇರಳವಾಗಿ ಅವಕಾಶವಿದೆ. ಭಗವತೀ ಚರಣ ವರ್ಮಾರವರ 'ಪ್ರಾಯಶ್ಚಿತ್ತ' ಎಂಬ ಮೋಹಕ ಕಥೆ ಅನುವಾದವೆಂಬ ಸುಳಿವೇ ಇಲ್ಲದೆ ಸ್ವತಂತ್ರ ಕಥೆಯೆಂಬಂತೆ 'ಜನಪ್ರಗತಿ'ಯಲ್ಲಿ ಅಚ್ಚಾದುದನ್ನು ಕಂಡಿದ್ದೇನೆ. ಇತರ ಪತ್ರಿಕೆಗಳಲ್ಲೂ ಇಂತಹ ಘಟನೆಗಳು ಪುನರಾವರ್ತಿತವಾಗುತ್ತಿರುವುದನ್ನು ಆಗಾಗ್ಗೆ ಕಾಣುತ್ತಿದ್ದೇವೆ. ಇದೇ ರೀತಿ 'ಗಹ್ರಾ ದಾಗ್' ಎಂಬ ಸಿನಿಮಾದ ಕಥೆಯನ್ನು ಒಂದೇ ಒಂದು ವ್ಯತ್ಯಾಸದೊಡನೆ ತನ್ನ ಕಥೆಯನ್ನಾಗಿ ಮಾಡಿ ಪೂರ್ಣಪ್ರಜ್ಞಾ ಕಾಲೇಜು ಪತ್ರಿಕೆಯಲ್ಲಿ ವಿದ್ಯಾರ್ಥಿಯೊಬ್ಬ ಅಚ್ಚು ಹಾಕಿಸಿಕೊಂಡಿದ್ದಾನೆ. ಇಂತಹ ಪ್ರಯತ್ನಗಳು ಯಾರಿಗೂ ಗೌರವವನ್ನು ತರತಕ್ಕಂತಹವಲ್ಲ ಎಂಬುದನ್ನು ಎಲ್ಲರೂ ಅರಿಯಬೇಕು. ಕಾದಂಬರಿಯನ್ನಾಗಲೀ ಕಾವ್ಯವನ್ನಾಗಲೀ ಅನಾಮತ್ತಾಗಿ, ತಮ್ಮದನ್ನಾಗಿಸಿಕೊಳ್ಳುವುದು ಕಷ್ಟ. ಆದರೆ ಅಲ್ಪಕಾಯದ ಕಥೆಗಳು ಅನೇಕ ವೇಳೆ ಈ ದುರಂತಕ್ಕೆ ಸುಲಭವಾಗಿ ಗುರಿಯಾಗುತ್ತವೆ.

ನಾಟಕಗಳು

ನಾಟಕಲೋಕವನ್ನು ಪ್ರವೇಶಿಸಿದರೆ ಅಲ್ಲಿ ಮತ್ತೆ ಜಯಶಂಕರ ಪ್ರಸಾದರ ಹೆಸರು ಕೇಳಿಬರುತ್ತದೆ. ಪ್ರಸಾದರು ಹೆಸರಾಂತ ನಾಟಕಕಾರರೂ ಹೌದು. ಅವರ ನಾಟಕಗಳಲ್ಲಿ ಮಧ್ಯೆ ಮಧ್ಯೆ ಕಾಣಿಸಿಕೊಳ್ಳುವ ಗೀತಗಳು ಕಾವ್ಯಖಂಡಗಳೇ ಸರಿ. ಅವರ ನಾಟಕಗಳು ಕಾವ್ಯ ಶೈಲಿಯಲ್ಲಿಯೇ ವಿಜೃಂಭಿಸುತ್ತವೆ. ಅನುವಾದಕನ ಶಕ್ತಿ ಪರೀಕ್ಷೆಯೂ ಅಲ್ಲಿ ನಡೆದುಹೋಗುತ್ತದೆ.

ಆರ್. ನಾಗರಾಜ್ ಅವರು ಜಯಶಂಕರ ಪ್ರಸಾದರ 'ಅಜಾತ ಶತ್ರು' ನಾಟಕವನ್ನು ಅನುವಾದಿಸಿದ್ದಾರೆ. ಸತ್ವಪರೀಕ್ಷೆಯಲ್ಲಿ ಅವರು ಉತ್ತೀರ್ಣರಾಗಿದ್ದಾರೆ. 'ಅಜಾತ ಶತ್ರು'ವಿನ ಅನುವಾದ ಸುಂದರವೂ, ಶಕ್ತಿಪೂರ್ಣವೂ ಆಗಿದೆ. ಭಾಷೆಯ ಬಿಗುವು ಮೂಲದ ಗಾಂಭೀರ್ಯವನ್ನು ಕಾಯ್ದುಕೊಂಡು ಬರುವಲ್ಲಿ ನೆರವಾಗಿದೆ. ಸಾಮಾನ್ಯವಾಗಿ ಕಂಡುಬರುವ ಒಂದೆರಡು ದೋಷಗಳು ಇಲ್ಲಿಯೂ ನುಸುಳಿಕೊಂಡಿವೆ. ಆದರೂ ಒಟ್ಟನಲ್ಲಿ ಈ ಅನುವಾದ ಸ್ತುತ್ಯರ್ಹವಾಗಿದೆ.

'ಧ್ರುವಸ್ವಾಮಿನಿ' ಪ್ರಸಾದರ ಇನ್ನೊಂದು ಮಹತ್ವಪೂರ್ಣ ನಾಟಕ. ಬಿ. ನಂ. ಚಂದ್ರಯ್ಯನವರು ಇದನ್ನು ಅನುವಾದಿಸಿದ್ದಾರೆ. ಈ ನಾಟಕದ ರಕ್ಷಾಕವಚ ದಲ್ಲಿ 'ಧೃವಸ್ವಾಮಿನಿ' ಎಂದೂ, ಒಳಪುಟಗಳಲ್ಲೆಲ್ಲಾ 'ಧ್ರುವಸ್ವಾಮಿನಿ' ಎಂದೂ ಕಾಣಿಸಲಾಗಿದೆ. ಚಂದ್ರಯ್ಯನವರ ಪ್ರಥಮ ಅನುವಾದ ಪ್ರಯತ್ನ ಇದಾಗಿರುವುದ ರಿಂದ ಇದರಲ್ಲಿ ಹಲವು ಕೊರತೆಗಳು ಕಂಡುಬಂದಿವೆ. ರಕ್ಷಾಕವಚವನ್ನು ನೋಡಿವಾಗ ಅಲ್ಲಿ ಮೂಲ ಲೇಖಕರ ಹೆಸರಿಲ್ಲದಿರುವುದರಿಂದಲೂ, ತಮ್ಮ ಹೆಸರಿನ ಜೊತೆಗೆ ಅನುವಾದ ಎಂದು ಸೇರಿಸದಿರುವುದರಿಂದಲೂ ಇದು ಸ್ವತಂತ್ರ ನಾಟಕವೆಂಬ ಭ್ರಮೆ ಮೂಡುತ್ತದೆ. ಇದು ಉದ್ದೇಶಪೂರ್ವಕವಾದ ಕಾರ್ಯವಲ್ಲದಿದ್ದರೂ, ಎದ್ದು ತೋರುವ ಅಂಶವಾಗಿದೆ. 'ಧ್ರುವಸ್ವಾಮಿನಿ'ಯಲ್ಲಿ ಚಂದ್ರಯ್ಯನವರ ಕನ್ನಡ ಶೈಲಿಯ ಮೋಹ ಕತೆಯ ಪ್ರಭಾವಕ್ಕೆ ಒಳಗಾಗುವೆವಾದರೂ ಅಲ್ಲಲ್ಲಿ 'ಅಪನಾ' ಪ್ರಯೋಗದ ಸಾಂದ ರ್ಭಿಕ ಅರ್ಥವನ್ನು ಗ್ರಹಿಸುವಲ್ಲಿ ಅವರು ಎಡವಿರುವುದನ್ನು ಕಾಣಬಹುದು, ಉದಾ : "ನನ್ನ ಹಾಗೂ ತನ್ನ ಗೌರವವನ್ನು ರಕ್ಷಿಸು" ಮತ್ತು "ಪ್ರೇಮಾಮೃತವ ಸೂಸಿ ತನ್ನ ನೀರವ ಕಥೆಯ ಹೇಳಿಬಿಡು". ಅಲ್ಲಲ್ಲಿ "ಆ ನಿರಭ್ರವಾದ ಪೂರ್ವದಿಗಂತದ ಆಬಾಲ ಅರುಣ" ಎಂಬಂತಹ ಸಂಸ್ಕೃತಮಯ ಪ್ರಯೋಗಗಳೂ, "ನನ್ನಲ್ಲಿ ರಕ್ತದ ತರಲ ಲಾಲಿಮತೆ (ಕೆಂಪು) ಇದೆ" ಎಂಬಂತಹ ಕಂಸದೊಳಗೆ ವಿವರಣೆಯನ್ನುಳ್ಳ ಪ್ರಯೋಗ ಗಳೂ ಕಾಣದೊರೆಯುತ್ತದೆ. ಇವುಗಳನ್ನು ಬಿಟ್ಟರೆ ಅನುವಾದ ಉತ್ತಮವೂ, ಸಮರ್ಥವೂ ಆಗಿದೆ ಎಂಬುದರಲ್ಲಿ ಅನುಮಾನವಿಲ್ಲ.

ಜಯಶಂಕರ ಪ್ರಸಾದರ 'ಚಂದ್ರಗುಪ್ತ' ನಾಟಕವನ್ನು ಆದ್ಯ ರಂಗಾಚಾರ್ಯರು ಸಾಹಿತ್ಯ ಅಕಾದಮಿಗಾಗಿ ಭಾಷಾಂತರಿಸಿದ್ದಾರೆ. ಇದೊಂದು ಅತ್ಯಂತ ಅಸಮರ್ಪಕ ಭಾಷಾಂತರ. ಭಾಷಾಂತರದ ಕರಡು ಪ್ರತಿಯೇ ಅಚ್ಚಿನ ರೂಪದಲ್ಲಿ ಪ್ರತ್ಯಕ್ಷ ವಾಗಿದೆಯೋ ಎನ್ನಿಸುತ್ತದೆ. ಅನುವಾದದಲ್ಲಿ ಕಾಣುವ ಅನೇಕ ಬಗೆಯ ದೋಷಗಳಿಗೆ ಈ ಅನುವಾದ ಉದಾಹರಣೆಗಳನ್ನೊದಗಿಸುತ್ತದೆ. ಕಂಸದಲ್ಲಿ ಕೊಡಲಾಗಿರುವ ಪರ್ಯಾಯ ಪದಗಳು [ಉದಾ : ಒರಟು (ಸ್ಥೂಲ) (xvi), ಸೇವಾ (=ಶುಶ್ರೂಷೆಯು) (೮೭), ಹಾಡುವಾಕೆ (=) ಇತ್ಯಾದಿ], ಕನ್ನಡದಲ್ಲಿ ಉದ್ದಿಷ್ಟ ಅರ್ಥವನ್ನು ನೀಡದ ಮೂಲ ನಾಟಕದ ಶಬ್ದಗಳು [ಉದಾ : ಆಹ್ವಾನ (ಹಿಂದಿಯಲ್ಲಿ ಸವಾಲು ಎಂದರ್ಥ), ಸಂಸಾರ (ಪ್ರಪಂಚ ಎಂದು ಅರ್ಥ)], ವ್ಯಾಕರಣ ಸಾಂಗತ್ಯವಿಲ್ಲದಿರುವಿಕೆ [ಉದಾ : ನೀನು

ಸಹಾಯ ಮಾಡುವೆಯಾ'....ನೀವು ಹಸಿದ ತೋಳ! (ಪು. ೧೧೧)], ಕೃತಕ ವಾಕ್ಯರಚನೆಗಳು [ಚಂದ್ರಗುಪ್ತನಿಗೆ ದಾಟಿ ಹೋಗಬೇಕಾಗಬಹುದು (ಪು. ೧೬೫)], ಯಾಂತ್ರಿಕ ಭಾಷಾಂತರ [ಉದ್ದ ಉಸಿರೆಳೆದು (ಪು. ೧೪೩)], ಕಾಗುಣಿತದ ತಪ್ಪುಗಳು—ಅಚ್ಚಿನ ತಪ್ಪುಗಳು [ದೊಡ್ಡಿಸ್ತನ, ಸುತರಾತ ಇತ್ಯಾದಿ)] ಪ್ರತಿಲಿಪೀಕರಣ ದೋಷಗಳು [ಘುಹಾರ (ಪುಟ. ೧೧) ಇತ್ಯಾದಿ]—ಇವೇ ಮೊದಲಾದ ದೋಷಗಳು ಇದರಲ್ಲಿ ತುಂಬಿಕೊಂಡಿದ್ದು ಓದುಗರಲ್ಲಿ ಅಸಹನೆಯನ್ನುಂಟುಮಾಡುತ್ತವೆ. ನಾಟಕದ ಸಂಭಾಷಣೆಯ ಭಾಷೆಯಲ್ಲೂ ಲವಲವಿಕೆ ಇಲ್ಲ. ಹೀಗಾಗಿ, ಭಾಷಾಂತರ ತುಂಬ ನೀರಸವಾಗಿಬಿಟ್ಟಿದೆ.

ಪಂಡಿತ ದೀನ ದಯಾಳ ಉಪಾಧ್ಯಾಯರ ಹಿಂದಿ ಕೃತಿಯ ಕನ್ನಡ ಅನುವಾದ 'ಯವನವಿಜೇತ ಚಂದ್ರಗುಪ್ತ' ಶಿವರಾಂ ಅವರ ಪ್ರಯತ್ನದ ಫಲವಾಗಿ ನಮಗೆ ದೊರೆತಿರುವ ಉತ್ತಮ ಕೃತಿ. ಮೂಲಕಥೆಯನ್ನು ಒರೆಗೆ ಹಚ್ಚಿರುವ ನೂತನ ದೃಷ್ಟಿಯ ಫಲವಾಗಿ ನಮಗೆ ದೊರೆತಿರುವ ಈ ಕೃತಿ ವೈಶಿಷ್ಟ್ಯಪೂರ್ಣ ಅಂಶಗಳಿಂದ ಕೂಡಿದೆ. ಪರಿಚಿತವಾಗಿರುವ ಕೆಲವು ಪಾತ್ರಗಳು ಬೇರೆ ಹೆಸರನ್ನು ತಾಳಿ ಬಂದಾಗ ಕ್ಷಣ ಕಾಲ ಭ್ರಮೆಯುಂಟಾಗುತ್ತದೆ. ಅಲಿಕಸುಂದರ ನಾಮಧಾರಿಯಾಗಿ ಅಲೆಕ್ಸಾಂಡರ್ ಪ್ರವೇಶಿಸುತ್ತಾನೆ, ಅಷ್ಟೆ. ಇದು ಮೂಲ ಕೃತಿಯ ದೋಷ. ಅನುವಾದದಲ್ಲಿರುವ ಲೋಪ ದೋಷಗಳು ತೀರ ನಗಣ್ಯವಾಗಿವೆ. ಸಂಸ್ಕೃತ ನಿಷ್ಠ ಶೈಲಿಯಲ್ಲಿರುವ ಮೂಲಕ್ಕೆ ಸಂಸ್ಕೃತ ನಿಷ್ಠ ಕನ್ನಡ ಶೈಲಿಯನ್ನು ಬಳಸಿಕೊಂಡಿರುವುದು ಯೋಗ್ಯವೇ ಆಗಿದೆ. ಕನ್ನಡತನವೂ ತುಂಬಿಕೊಂಡಿರುವ ಈ ಕೃತಿ ಉತ್ತಮ ಅನುವಾದವಾಗಿ ಪರಿಣಮಿಸಿದೆ.

ದ್ವಿಜೇಂದ್ರ ಲಾಲ ರಾಯ ವಿಖ್ಯಾತ ವಂಗ ನಾಟಕಕಾರರು, ಬಂಗಾಳದ ಶೇಕ್ಸ್‌ಪಿಯರ್ ಎಂದು ಪ್ರಖ್ಯಾತರಾದವರು. ಅವರ ಹಲವಾರು ಪ್ರಸಿದ್ಧ ಕೃತಿಗಳು ಹಿಂದಿಯ ಮೂಲಕ ಕನ್ನಡಕ್ಕೆ ಬಂದಿವೆ. ಕೆಲವೆಡೆ ಅನುವಾದಕರು ಮುಚ್ಚು ಮರೆಯಿಲ್ಲದೆ, ಈ ಅಂಶವನ್ನು ಸ್ಪಷ್ಟಪಡಿಸುವ ನಿಸ್ಪೃಹತೆಯನ್ನು ತೋರಿದ್ದಾರೆ. ಇನ್ನು ಕೆಲವೆಡೆ ಸಂದೇಹಾಸ್ಪದವಾಗಿ ಬಿಟ್ಟುಬಿಟ್ಟಿರುವುದೂ ಉಂಟು. ಉದಾಹರಣೆಗೆ, 'ದುರ್ಗಾದಾಸ' ಮತ್ತು 'ಮೇವಾಡ ಪತನ' ನಾಟಕಗಳನ್ನು ಅನುವಾದಿಸಿರುವ ಪಿ. ಎಸ್. ರಾಮಪ್ಪ ಮತ್ತು ಆರ್. ನಾಗರಾಜ ಅವರು ಹಿಂದಿ ಮೂಲದಿಂದ ಕನ್ನಡ ರೂಪಾಂತರಗಳನ್ನು ಸಿದ್ಧಪಡಿಸಿರುವುದನ್ನು ಸ್ಪಷ್ಟಪಡಿಸಿದ್ದಾರೆ. ಅದೇ ಗೋವಿಂದ ಲಕ್ಷ್ಮಣ ಹಳ್ಳೆಪ್ಪನವರು ನೇರವಾಗಿ ಬಂಗಾಳಿಯಿಂದಲೇ ಅನುವಾದಿಸಿದ್ದಾರೆಂದು ನಂಬಬೇಕಾಗುತ್ತದೆ, ನಿರ್ದಿಷ್ಟ ಹೇಳಿಕೆಯ ಅಭಾವದಿಂದಾಗಿ.

'ದುರ್ಗಾದಾಸ' ನಾಟಕದ ಅನುವಾದದ ಅರಿಕೆಯಲ್ಲಿ ರಾಮಪ್ಪನವರು ಈ ಮಾತುಗಳನ್ನಾಡಿದ್ದಾರೆ: "ಈ ಅನುವಾದವನ್ನು ಮೂಲ ಬಂಗಾಲಿಯಿಂದಲೇ ಮಾಡಿದ್ದರೆ, ಇನ್ನೂ ಚೆನ್ನಾಗಿರುತ್ತಿದ್ದಿತೇನೋ. ನಾನು ಅನುವಾದಿಸಿರುವುದು ಹಿಂದಿ ಭಾಷೆಯ ಅನುವಾದದಿಂದ." ಅವರ ಈ ಅನುವಾದ ಸಾಕಷ್ಟು ಸುಂದರವಾಗಿಯೇ

ಬಂದಿದೆ. ಅನುವಾದವೆಂಬ ಬೇಸರ ಅಲ್ಲಿ ಉಂಟಾಗದಿರುವುದು ಅವರ ಅನುವಾದದ ಸಾಫಲ್ಯಕ್ಕೆ ಸಾಕ್ಷಿಯಾಗಿದೆ. ಕೆಲವಡೆಗಳಲ್ಲಿ ಮಾತ್ರ ಹಿಂದಿಯ ನುಡಿಗಟ್ಟುಗಳನ್ನು ಅಳವಡಿಸಿ ಕೊಳ್ಳುವಲ್ಲಿ ಕೊಂಚಮಟ್ಟಿನ ಕೃತಕತೆ ಕಂಡುಬರುತ್ತದೆ. ಉದಾ: "ಮೊಗಲ್ ಸಾಮ್ರಾಜ್ಯವು ಇಂದು ನಿಮ್ಮ ಹಸ್ತದಲ್ಲಿ ಇಷ್ಟೊಂದು ದುರ್ಬಲ; ಇಷ್ಟೊಂದು ಚೈತನ್ಯ ಹೀನ!" (ಪು. ೨೪) ಅವರೇ ಹೇಳಿಕೊಂಡಿರುವಂತೆ ಮೂಲ ಕೃತಿಗೆ ಯಾವುದನ್ನೂ ಸೇರಿಸುವ ಸಾಹಸಕ್ಕೆ ಹೋಗಿಲ್ಲವಾದರೂ, ಕೆಲವು ದೃಶ್ಯ ಗಳನ್ನು "ಕೈ ಬಿಟ್ಟಿರುವುದರಿಂದ" ದುರ್ಗಾದಾಸ್ ನಾಟಕವನ್ನು ಅನುವಾದವೆಂದು ಕರೆಯದೆ ಪರಿವರ್ತನವೆಂದು ಕರೆದಿದ್ದಾರೆ. ಇಲ್ಲಿ ಕೈಬಿಟ್ಟಿರುವ ಅಂಶಗಳಿದ ನಾಟಕದ ಒಟ್ಟಾರೆ ಸೌಂದರ್ಯಕ್ಕಾಗಲೀ, ಪಾತ್ರಗಳ ಬೆಳವಣಿಗೆಗಾಗಲೀ, ಕಥಾನಕದ ವಿಕಾಸ ಕ್ಕಾಗಲೀ ಯಾವ ಹಾನಿಯೂ ಉಂಟಾಗದೆ ಇರುವುದು ಅವರ ಕಲಾಭಿಜ್ಞತೆಯತ್ತಲೂ ಕೈದೋರುತ್ತದೆ.

'ಮೇವಾಡ ಪತನ'ವನ್ನು ಅನುವಾದಿಸಿರುವ ಗೋವಿಂದ ಲಕ್ಷ್ಮಣ ಹಳ್ಳಿಪ್ಪನವರ ಭಾಷಾಜ್ಞಾನ ಹಲವಾರು ಭಾಷೆಗಳವರೆಗೆ ವ್ಯಾಪಿಸಿದ್ದರೂ, ಅವರ ಶೈಲಿಯಲ್ಲಿ ಏಕೋ ಜೀವ ಚಿಹ್ನೆಗಳು ಕಾಣ ದೊರೆಯುವುದಿಲ್ಲ. ಅನೇಕ ವೇಳೆ ಯಾಂತ್ರಿಕ ಶಬ್ದ ಪ್ರತಿನಿದಾನವಾಗಿದೆಯೋ ಎಂಬ ಭಾವನೆ ತಲೆದೋರುತ್ತದೆ. ಉದಾ: "ನೀವು ನಮಗೆ ದೋಷಕೊಟ್ಟರೆ ಏನು ಆಗುವುದು" (ಪು. ೧೧೨); "ಆ ಯೋಗ ತಪ್ಪಿ ಹೋಗಿದೆ." (ಪು. ೧೩೩) "ಆ ಗರ್ವವನ್ನು ಚೂರ್ಣಮಾಡಿ ಕಾಲಕೆಳಗೆ ತುಳಿದು ಹೊರಳಾಡುವ ಇಚ್ಛೆ ನನಗಿದೆ". 'ದೋಷ್ ದೇನಾ' 'ಪೈರೋಂ ತಲೇ ಕುಚಲ್ನಾ' ಈ ನುಡಿಗಟ್ಟುಗಳು ಯಾಂತ್ರಿಕವಾಗಿ ಅನುವಾದಗೊಂಡಿವೆ. 'ಯೋಗ' ಎನ್ನುವ ಶಬ್ದಕ್ಕೆ ಕನ್ನಡದಲ್ಲಿ 'ಅವಕಾಶ' ಎನ್ನುವ ಅರ್ಥ ಬಳಕೆಯಲ್ಲಿ ಇಲ್ಲ ಎಂಬುದನ್ನು ಬೇರೆಯಾಗಿ ಹೇಳಬೇಕಾಗಿಲ್ಲ. ಮೇಲಾಗಿ ಈ ಬಗೆಯ ಅಂತರಿಕ ಸಾಕ್ಷ್ಯಗಳು ಅನುವಾದದ ಮೂಲ ದತ್ತಲೂ ಕೈತೋರುತ್ತವೆ ಎಂಬುದನ್ನು ಗಮನಿಸಬಹುದು.

ಅದೇ ಆರ್. ನಾಗರಾಜ್ ಅವರು ಕನ್ನಡಿಸಿರುವ 'ಮೇವಾಡ ಪತನ' ಅಚ್ಚ ಕನ್ನಡತನವನ್ನು ಮೆರೆಯುತ್ತಿರುವ ಉತ್ತಮ ಅನುವಾದ. ಕೆಲವೆಡೆಗಳಲ್ಲಿ ಅವರು ಉಪಯೋಗಿಸಿರುವ ಕನ್ನಡ ಶೈಲಿ ಅನುವಾದಕರಿಗೇ ಏಕೇ, ಲೇಖಕರಿಗೂ ಕರುಬನ್ನುಂಟು ಮಾಡುವಷ್ಟು ಸುಂದರವಾಗಿದೆ. "ಬಿರುಗಾಳಿಗುಬ್ಬೆದ್ದ ಕಡಲಲೆಯ ಮೇಲೆ ಹೊರಳಿ ಸುಳಿಯುವ ಹೊನ್ನೇಸರ ಕಿರಣದಂತೆ, ಕಾರ್ಮೋಡದಟ್ಟಹಾಸವನ್ನು ಕಡೆಗಾಣಿಸಿ ಮೆರೆಯುವ ನೀಲಗಗನದಂತೆ, ಅಳಲನ್ನು ಮೆಟ್ಟಿ ನಿಲ್ಲುವ ಕರುಣಾಮೂರ್ತಿಯಂತೆ ಕಾಣುವ ಈ ಜೀವಿಯಾವುದು!" ಸಂಯಮಪೂರ್ಣವಾಗಿ ಈ ಶೈಲಿಯನ್ನು ಬಳಸಿದ್ದೇ ಆದರೆ ನಾಗರಾಜರು ಅದ್ಭುತವಾದ ಯಶಸ್ಸನ್ನು ಗಳಿಸಬಹುದು. ಆದರೆ ಮಧ್ಯೆ ಸ್ವರಗಳನ್ನು ಹಾರಿಸಿಬಿಡುವ ಪದ್ಧತಿ ಕನ್ನಡದ ಜಾಯಮಾನಕ್ಕೆ ಒಗ್ಗುವುದಿಲ್ಲ, ಸಂಸ್ಕೃತದಂತೆ ಸವರ್ಣ ದೀರ್ಘ ಸಂಧಿ ಏರ್ಪಡುವುದಿಲ್ಲ ಎಂಬುದನ್ನು ಗಮನಿಸಬೇಕು. "ಬಿರುಗಾಳಿಗೆ

ಉಬ್ಬಿ ಎದ್ದ ಕಡಲ ಅಲೆಯ ಮೇಲೆ " ಎಂದು ಬಿಡಿಸಿ ಬರೆದರೆ ಕುಂದೇನೂ ಉಂಟಾಗುವುದಿಲ್ಲ. ಆಂಡಯ್ಯನ ಧೋರಣೆಯನ್ನು ಕೊಂಚ ಕಡಿಮೆ ಮಾಡಿಕೊಂಡರೆ ಒಳಿತು ಎಂದು ತೋರುತ್ತದೆ. 'ಮಿತ್ತಿನ ಆಟದ ಬಯಲು', 'ಬವರ ಬಯಲು' ಮೊದಲಾದ ರೂಪಗಳು ಭಾವ ಗ್ರಹಣಕ್ಕೆ ಅಡಚಣೆಯನ್ನು ಒಡ್ಡಬಲ್ಲವು. ಅಂತೆಯೇ ಕನ್ನಡಕ್ಕೆ ಆಷ್ಟಾಗಿ ಒಗ್ಗದ ವಾಕ್ಯರಚನೆಯೂ ಉಂಟು, ಉಪಾ: "ಯಾವ ದಿವಸ........ ....ವೈಭವ ವಿಲಾಸವು....ಅಟ್ಟಹಾಸಮಾಡಿತೋ, ಆ ದಿವಸವೇ ನಾನಂದುಕೊಂಡೆ" (ಪು. ೧೪) "ಯಾವ ಈ ಕೆನ್ನೀರ ಬಾವುಟ........ಸ್ವಚ್ಛಂದವಾಗಿ ಹಾರುತ್ತಿದೆಯೋ ಅದು ಈಗ........ಬೆದರಿ ಬಾಗೀತೇ (ಪು.೧೫) 'ಸ್ವರ್ಗೀಯ' ಎಂಬ ಶಬ್ದ ಕನ್ನಡದಲ್ಲಿ ದಿವಂಗತ ಎಂಬ ಅರ್ಥದಲ್ಲಿ ಬಳಕೆಯಲ್ಲಿಲ್ಲ. ಇದಕ್ಕೆ 'ಸ್ವರ್ಗೀಯ ಕರುಣೆ' (ಪು.೫೦) ಎಂಬ ಅವರ ಪ್ರಯೋಗವೇ ಸಾಕ್ಷಿಯಾಗಿದೆ. ಈ ಬಗೆಯ ಹಲವು ತಪ್ಪು ಪ್ರಯೋಗಗಳಿವೆ. ಕೆಲವೆಡೆ ಅಭಿಪ್ರಾಯ ಅಸ್ಪಷ್ಟವಾಗಿರುವುದೂ ಉಂಟು. "ಆ ಬಡತನದ ಗುಡಿಲ ಸೂರಿನ ಮೇಲೆ ಮುಂಜೆಳಕಿನ ಹೊಂಸೇಸರ ಕಿರಣಗಳು ಸುಳಿದಿಳಿಯುವಂತಹ ಸ್ನೇಹಶಾಂತಿಯಲ್ಲಿ ಮತ್ತೇತರ ಮೇಲೆಯೂ ಇಳಿಯಲಾರದು". ಹುಡುಕಲೇಬೇಕೆಂದು ಹೊರಟಲ್ಲಿ ಈ ದೋಷಗಳು ಕಾಣಬರುತ್ತವೆ. ಇಲ್ಲವಾದಲ್ಲಿ ಶೈಲಿಯ ಮೋಹಕತೆಯಲ್ಲಿ, ನಿರರ್ಗಳ ಓಟದಲ್ಲಿ, ಸಂಭಾಷಣೆಯ ಕೌಶಲದಲ್ಲಿ, ಕಥೆಯ ಕುತೂಹಲದಲ್ಲಿ ಮಗ್ನವಾದ ಮನಸ್ಸು ಈ ಸೂಕ್ಷ್ಮ ಅಂಶಗಳತ್ತ ಗಮನ ಹರಿಸುವುದೇ ಇಲ್ಲ. ಒಟ್ಟಿನಲ್ಲಿ ಇದು ಸಫಲ ಅನುವಾದ.

ಶಿಶು ಸಾಹಿತ್ಯ

ಶಿಶುಸಾಹಿತ್ಯವನ್ನು ಗಮನಿಸಹೊರಟರೆ–ಮಕ್ಕಳ ರಾಷ್ಟ್ರೀಯ ಸಮಿತಿಯವರು ಹೊರತಂದಿರುವ ಪುಸ್ತಕಗಳನ್ನು ಬಿಟ್ಟು–ಹರಿಕೃಷ್ಣ ದೇವಸರೆ ಅವರ ಕೃತಿಯ ಕನ್ನಡಾನುವಾದ 'ದರೋಡೆಕಾರನ ಮಗ' ಗಮನಾರ್ಹವಾಗಿದೆ; ದರೋಡೆಕಾರನಾಗಿದ್ದ ತಂದೆ ಸನ್ಮಾರ್ಗದಲ್ಲಿ ಪ್ರವರ್ತಿಸುವಂತೆ ಪ್ರಭಾವಬೀರಿದ ಆದರ್ಶ ಬಾಲಕನೊಬ್ಬನ ಅಸಾಮಾನ್ಯ, ಅಪೂರ್ವ ಸಾಹಸದ ರೋಮಾಂಚಕ ಕಥೆ ಪಂಚಾಕ್ಷರಿ ಹಿರೇಮಠ ಅವರ ಅನುವಾದದಲ್ಲಿ ಸಜೀವವಾಗಿ, ಸುಂದರವಾಗಿ ಮೈದಳೆದಿದೆ. ಭಾಷೆ ಮಕ್ಕಳಿಗೆ ಪ್ರಿಯವಾಗುವಂತೆ ಸರಳವಾಗಿಯೇ ಇರುವುದು ಇದರ ವೈಶಿಷ್ಟ್ಯ. ಕನ್ನಡದಲ್ಲಿ 'ಪ್ರಥಮ ಮಕ್ಕಳ ಕಾದಂಬರಿ' ಎಂಬ ಯಶಸ್ಸು ಈ ಕೃತಿಗೆ ದೊರಕುವ ಸಂಭವವಿಲ್ಲ. ಇಂತಹ ಆದರ್ಶ ಬಾಲಕರ ಕಥೆಗಳನ್ನೊಳಗೊಂಡ ಅನೇಕ ಪುಸ್ತಕಗಳು ಬೇರೆ ಭಾಷೆಗಳಿಂದ ಈ ಮೊದಲೇ ಬಂದಿವೆ. ಹಿಂದಿಯಿಂದ ಬಂದಿರುವ ಪ್ರಥಮ ಕಾದಂಬರಿ ಎಂದು ಬೇಕಾದರೆ ಹೇಳಿಕೊಳ್ಳಬಹುದು.

ಪ್ರಯಾಗದ ಛಾತ್ರಹಿತಕಾರಿಣಿ ಬಾಲೋಪಯೋಗೀ ಗ್ರಂಥಮಾಲೆಯ ಸಂಪಾದಕರಾದ ಕೇದಾರನಾಥ ಗುಪ್ತರು ಮಕ್ಕಳಲ್ಲಿ ರಾಷ್ಟ್ರಭಕ್ತಿ, ರಾಷ್ಟ್ರಪ್ರಜ್ಞೆ,

ಮುಂತಾದ ಭಾವಗಳನ್ನು ಬೆಳೆಸಬೇಕು ಎಂಬ ದೃಷ್ಟಿಯಿಂದ ಸುಮಾರು ೯೬ ಗ್ರಂಥಗಳನ್ನು ಪ್ರಕಟಿಸಿ ಸುಲಭ ಬೆಲೆಯಲ್ಲಿ ದೊರಕಿಸುತ್ತಿದ್ದಾರೆ. ಆ ಮಾಲೆಯ 'ವೀರಕೇಸರಿ ಹಮ್ಮೀರದೇವ' ಎಂಬ ಗ್ರಂಥವನ್ನು ಗಾಯತ್ರೀ ವಿದ್ಯಾಪೀಠದವರು ಅದೇ ಹೆಸರಿನಲ್ಲಿ ಕನ್ನಡದಲ್ಲಿಯೂ ತಂದಿದ್ದಾರೆ. ಜಗದೀಶ ಝಾ 'ವಿಮಲ'ರವರ ಈ ಗ್ರಂಥವನ್ನು ಎಚ್. ವಿ. ನಾರಾಯಣ ರಾವ್ ಅವರು ಕನ್ನಡಿಸಿದ್ದಾರೆ. ವಸ್ತು ಮಕ್ಕಳ ಹೃದಯದಲ್ಲಿ ಶೌರ್ಯವನ್ನು ಉಂಟುಮಾಡಬಲ್ಲ ಶಕ್ತಿಯನ್ನು ಹೊಂದಿದ್ದರೂ ಭಾಷೆ ಅಷ್ಟು ಸರಳವಾಗಿಲ್ಲ. ಮೇಲಾಗಿ ಮಕ್ಕಳ ಪುಸ್ತಕಗಳಲ್ಲಿ ಯಾವ ದೋಷಗಳೂ ಇಲ್ಲದಂತೆ ಅತಿಯಾದ ಎಚ್ಚರವನ್ನು ವಹಿಸಬೇಕು. ಇಲ್ಲಿ ಆ ಎಚ್ಚರ ಕೊಂಚ ಕಡಿಮೆಯಾಗಿರುವುದರಿಂದ ಭಾಷೆಯೂ ಬಿಗುವಾಗಿದೆ. ಶತ್ರು, ನಿಷ್ಠೂರ ಮೊದಲಾದ ಅಪಶಬ್ದಗಳೂ ನುಸುಳಿಬಿಟ್ಟಿವೆ. "ಈ ಕಾರಣದಿಂದ ರಣಥಾಂಬೋರಿನ ವಿಶೇಷ ಖ್ಯಾತಿವುಂಟಾಗಿದೆ" ಹಾಗೂ "ಯಾವ ರಾಜನು ಶಕ್ತಿಶಾಲಿಯಾದರೂ ಪರಾಕ್ರಮವನ್ನು ತೋರಿಸುವುದಿಲ್ಲವೋ ಅವನು ಎಂದಿಗೂ ಅಪಮಾನ ಹೊಂದುವನು" ಎಂಬ ವಾಕ್ಯಗಳು ಹಿಂದಿ ವಾಕ್ಯರಚನೆಯ ಪ್ರಭಾವವನ್ನು ತೋರುತ್ತವೆ. ಇಷ್ಟಾದರೂ ನಾರಾಯಣ ರಾಯರ ಸೇವೆ ಸ್ತುತ್ಯರ್ಹವಾಗಿದೆ ಎಂಬುದರಲ್ಲಿ ಸಂಶಯವಿಲ್ಲ.

ಜೀವನ ಚರಿತ್ರೆಗಳು

ಜೀವನ ವೃತ್ತಾಂತಗಳನ್ನು ನಿರೂಪಿಸುವ ಗ್ರಂಥಗಳಲ್ಲಿ ಬಲದೇವ ಉಪಾಧ್ಯಾಯರ 'ಶ್ರೀ ಶಂಕರಾಚಾರ್ಯ' ಎಂಬ ಗ್ರಂಥ ಮಹತ್ವಪೂರ್ಣವಾದುದಾಗಿದೆ. ಇದನ್ನು ಕನ್ನಡಿಗರಿಗೆ ಒದಗಿಸಿಕೊಟ್ಟಿರುವ ಎಸ್ ರಾಮಚಂದ್ರಶಾಸ್ತ್ರಿಗಳಿಗೆ ಕನ್ನಡಿ ಋಣಿಗಳಾಗಿರಬೇಕಾಗಿದೆ. ಅವರು ಕೃತಿಯ ಉದ್ದೇಶವನ್ನು ಈ ರೀತಿ ಸ್ಪಷ್ಟಪಡಿಸಿದ್ದಾರೆ: "ನಮ್ಮ ಮಾತೃಭಾಷೆಯಾದ ಕನ್ನಡದಲ್ಲಿ ಶ್ರೀ ಭಗವತ್ಪಾದರ ಜೀವನ ಚರಿತ್ರೆ ಮತ್ತು ಉಪದೇಶಗಳನ್ನು ಸ್ಥೂಲವಾಗಿ ನಿರೂಪಿಸುವ ಗ್ರಂಥದ ಕೊರತೆ ಇರುವುದು ದೃಷ್ಟಿಗೋಚರವಾಯಿತು. ಶ್ರೀ ಮಧ್ವಾಚಾರ್ಯರ ಜೀವನ ಚರಿತ್ರೆ ಮತ್ತು ಉಪದೇಶಗಳನ್ನು ನಿರೂಪಿಸುವ ಪ್ರಾಮಾಣಿಕವಾದ ಗ್ರಂಥವನ್ನು ಬರೆಯಬೇಕೆಂದು ಉಪಕ್ರಮಿಸಿದ ನನಗೆ ಕಾಶೀ ವಿಶ್ವವಿದ್ಯಾಲಯದಲ್ಲಿ ಸಂಸ್ಕೃತ ಪಾಧ್ಯಾಪಕರಾಗಿದ್ದ ಬಲದೇವ ಉಪಾಧ್ಯಾಯ ಎಂ. ಎ. ಸಾಹಿತ್ಯಚಾರ್ಯ, ಇವರು ಹಿಂದೀ ಭಾಷೆಯಲ್ಲಿ ಆಚಾರ್ಯರ ವಿಷಯದಲ್ಲಿ ಬರೆದಿದ್ದ ಗ್ರಂಥವು ಉಪಲಬ್ಧವಾಯಿತು. ಅದನ್ನು ಓದಿದ ನಂತರ, ಆ ಹಿಂದಿ ಭಾಷೆಯಲ್ಲಿನ ಗ್ರಂಥವನ್ನು ಕನ್ನಡಕ್ಕೆ ಅನುವಾದ ಮಾಡಿದರೆ ಚೆನ್ನಾದೀತು ಎಂದು ಮನಸ್ಸಾಯಿತು." ಶಂಕರ ದಿಗ್ವಿಜಯಗಳನ್ನೇ ಆಧಾರವಾಗಿಟ್ಟುಕೊಂಡು ಆಚಾರ್ಯ ಶಂಕರರ ಜೀವನ ಚರಿತ್ರೆಯನ್ನು ಪ್ರಾಮಾಣಿಕವಾಗಿ ನಿರೂಪಿಸುವ ಈ ಬೃಹದ್ಗ್ರಂಥ ಉತ್ತಮವಾಗಿ ಅನುವಾದಗೊಂಡಿದೆಯೆಂಬ ಸಂಗತಿ ಹರ್ಷದಾಯಕವಾಗಿದೆ. ಗ್ರಂಥದ ಗಾತ್ರ ಹೆಚ್ಚಿದಷ್ಟೂ ಅನುವಾದದ ಕಾರ್ಯ ಬೇಸರವಾಗಿ, ಕೆಡುವ

ಸಂಭವವೇ ಹೆಚ್ಚಾಗಿರುತ್ತದೆ. ಆದರೆ ಇಲ್ಲಿ ಶಾಸ್ತ್ರಿಗಳು ತೋರಿರುವ ನಿಷ್ಠೆ ಮತ್ತು ತಾಳ್ಮೆ ಸ್ತುತ್ಯರ್ಹವಾಗಿದೆ, ಅನುವಾದ ಚೆನ್ನಾಗಿ ಬಂದಿದೆ, ಅಲ್ಲಲ್ಲಿ ಹಿಂದಿಯಲ್ಲಿ ಬಳಕೆಯಲ್ಲಿರುವ 'ಶಿಲಾಲೇಖ', 'ಪ್ರತಿಬಂಧ', 'ಪ್ರಸ್ತುತ', 'ಸುಚಾರೂ', 'ಉಪಹಾರ', 'ಸರ್ವಪ್ರಥಮ' ಮೊದಲಾದ ಶಬ್ದಗಳು ನುಸುಳಿಕೊಂಡುಬಿಟ್ಟಿವೆ. ಹಿಂದಿ ವಾಕ್ಯರಚನೆಯನ್ನು ನೆನಪಿಗೆ ತರುವ ವಾಕ್ಯಗಳು ಅಲ್ಲಲ್ಲಿ ಕಾಣದೊರೆಯುತ್ತದೆ. ಉದಾ: "ನಾರದ ಪಂಚರಾತ್ರದ ಅನುಸಾರ" (ಪು. ೩೪); "ಇನ್ನೊಂದರ ಉತ್ಥಾನ ಮಾಡುವ ಪಕ್ಷಪಾತಿಗಳಾಗಿರಲಿಲ್ಲ" (ಪು ೩೨) "ಕಾಶಿಯು ಯಾವ ಸ್ಥಾನದಲ್ಲಿ........ ಸಿದ್ಧಿಯನ್ನು ಹೊಂದಿದರೋ ಆ ಸ್ಥಾನದ ಸಮೀಪದಲ್ಲಿ" (ಪುviii). ಸುಮಾರು ೪೩೦ ಪುಟಗಳವರೆಗೆ ಸಾಗಿಸಿರುವ ಈ ಗ್ರಂಥದಲ್ಲಿ, ಇಂತಹ ಸಣ್ಣ ಪುಟ್ಟ ಲೋಪ ದೋಷಗಳು ಉಳಿದರೆ ಆಶ್ಚರ್ಯವಿಲ್ಲ, ಒಟ್ಟಿನಲ್ಲಿ ಸಫಲವಾಗಿರುವ ಅನುವಾದ ಗಳಲ್ಲಿ ಇದೂ ಒಂದು. ಮೇಲಾಗಿ, ಕನ್ನಡ ಜೀವನ ಚರಿತ್ರೆಗಳ ಪಂಕ್ತಿಗೆ ಹಿಂದಿಯು ನೀಡಿರುವ ಅಮೂಲ್ಯ ಕೊಡುಗೆಯೂ ನಿಜ.

ಶುದ್ಧ ಶಾಸ್ತ್ರೀಯ ದೃಷ್ಟಿಯಿಂದ ಜೀವನ ಚರಿತ್ರೆ ಎನಿಸಿಕೊಳ್ಳಲಾರದೆ ಹೋದರೂ ಸಂಸ್ಮರಣ ಗ್ರಂಥ ಎಂಬ ಹೆಸರಿಗೆ ಒಪ್ಪುವಂತಹ ಕೃತಿ 'ಲೋಕದೇವ ನೆಹರೂ.' ಗಾಂಧೀಜಿಯ ತರುವಾಯ ಬಾಳಿ ಬದುಕಿದ ಅತ್ಯಂತ ಹಿರಿಯ ಮಾನವರಾದ ನೆಹರೂ ಅವರ ನಿಕಟ ಸಂಪರ್ಕದ ಸೌಭಾಗ್ಯವನ್ನು ಹೊಂದಿದ್ದ ರಾಮಧಾರಿ ಸಿಂಹ'ದಿನಕರ' ಅವರ ಸಂಸ್ಮರಣಗಳನ್ನೊಳಗೊಂಡ ಹಿಂದೀ ಕೃತಿಯ ಕನ್ನಡಾನುವಾದವನ್ನು ಲೇಖನ ಮಾಲೆಯ ರೂಪದಲ್ಲಿ ಸುಮಾರು ಎಂಟು ತಿಂಗಳಕಾಲ ಪ್ರಕಟಿಸಿದ ಬಳಿಕ ಪುಸ್ತಕ ರೂಪದಲ್ಲಿ ಹೊರತರಲಾಗಿದೆ. ಅನುವಾದಕರು ಶ್ರೀ ಮೇ. ರಾಜೇಶ್ವರಯ್ಯ ಮತ್ತು ಶ್ರೀ ಪ್ರಧಾನ್ ಗುರುದತ್ತ. ಈಚಿಗೆ ಇದರ ಎರಡನೆಯ ಮುದ್ರಣ ಹೊರಬಂದಿದೆ.

ಸಂಕೀರ್ಣ

'ಮಣ್ಣಿನ ಮೂರ್ತಿಗಳು' ರಾಮವೃಕ್ಷ ಬೇನಿಪುರಿಯವರ 'ಮಾಟೀ ಕೀ ಮೂರತೇಂ' ಪುಸ್ತಕದ ಕನ್ನಡಾನುವಾದ. ಎಸ್. ಕೃಷ್ಣ ಅವರು ವಿಖ್ಯಾತ ನಾಟಕ ಕಾರರೂ, ಅದ್ಭುತ ಶಬ್ದಶಿಲ್ಪಿಗಳೂ ಆದ ಬೇನಿಪುರಿಯವರ ಕಲ್ಪನಾವಿಲಾಸಗಳನ್ನು ಕನ್ನಡದಲ್ಲಿ ಸುಂದರವಾಗಿ ಮಾಡಿಸುವಲ್ಲಿ ಸಫಲರಾಗಿದ್ದಾರೆ. ಈ ಕೃತಿಯ ವಿಚಾರದಲ್ಲಿ ಗಮನಾರ್ಹವಾದ ಸಂಗತಿಯೊಂದಿದೆ. ಹೊರನೋಟಕ್ಕೆ 'ರಜಿಯಾ' ದಿಂದ 'ಬುಧಿಯಾ ವರೆಗಿರುವ ಕಥೆಗಳ ಸಂಕಲನ ಎಂದು ತೋರಿದರೂ, ಲೇಖಕರೇ ಹೇಳುವಂತೆ "ಹಜಾರಿ ಬಾಗ್ ಸೆಂಟ್ರಲ್ ಜೇಲಿನ ಏಕಾಂತ ಜೀವನ ಸಮಯದಲ್ಲಿ ಆಕಸ್ಮಾತಾಗಿ ನನ್ನ ಊರು, ಅಜ್ಜನೂರುಗಳ ಕೆಲ ಇಂಥವರೇ ಆದ ವ್ಯಕ್ತಿಗಳ ಪರಿಚಿತ ಮುಖಗಳು ಬಗೆಗಣ್ಣೆದರು ಮೂಡಿ ನನ್ನ ಲೇಖನಿಯಿಂದ ತಮ್ಮ ಚಿತ್ರಗಳನ್ನು ಮಾಡಿಸಲು ಪ್ರಾರ್ಥಿಸಿದವು. ಆ ಯೋಚನೆಯ ಶಕ್ತಿ ಅಸದೃಶವಾಗಿತ್ತು. ಅಂತೆಯೇ ಈ 'ಮಣ್ಣಿನ ಮೂರ್ತಿಗಳು'

ಮೂಡಿಕೊಂಡಾಗಲೇ ಶಾಂತಿ ದೊರೆಯಿತು". ಇಷ್ಟೇ ಅಲ್ಲ, "ಇವು ಕಥೆಗಳಲ್ಲ, ಆತ್ಮ ಚರಿತ್ರೆಗಳೆಂದು ನಾನು ಸ್ಪಷ್ಟವಾಗಿ ಹೇಳಲೇ? ಇವು ಓಡಾಡುವ ಜೀವಂತ ವ್ಯಕ್ತಿಗಳ ಶಬ್ದ ಚಿತ್ರಗಳಾಗಿವೆ. ಕಲೆ ತನ್ನ ಕುಸುರುಗೆಲಸವನ್ನು ಮಾಡದೆ ಬಿಟ್ಟಿಲ್ಲವೆಂದು ನನಗೆ ಗೊತ್ತು. ಆದರೆ ವರ್ಣಲೇಪದಲ್ಲಿ ಮೂಲ ರೇಖಾಚಿತ್ರ ಅಳಿಸಿಹೋಗದಂತೆ ನೋಡಿ ಕೊಂಡಿದ್ದೇನೆ. ಪಕ್ವಾನ್ನಗಳ ಮೂಲ ರುಚಿಯನ್ನೇ ಕಳೆಯುವಷ್ಟು ಮಸಾಲೆ ಸುರಿವ ವ್ಯಕ್ತಿಯನ್ನು ಒಳ್ಳೆಯ ಬಾಣಸಿಗನೆಂದು ನಾನು ತಿಳಿಯುವುದಿಲ್ಲ" (ಪು.೧೦) ಲೇಖಕರ ಈ ಮಾತಿನಲ್ಲಿ ಅತ್ಯುಕ್ತಿ ಏನೂ ಇಲ್ಲ. ಶೈಲಿಯ ಅದ್ಭುತ ವೈಖರಿ ಉದ್ದಕ್ಕೂ ಕಾಣದೊರೆಯುತ್ತದೆ. ಅನುವಾದವೂ ಸುಂದರವಾಗಿದೆ. ಅಲ್ಲಲ್ಲಿ ಕಟ್ಮೊ(ಪು.೩೯), ಸಂಭಾಳಿಸು(ಸಂಭಾಲ್ನಾ-ಹಿಂದಿ) ಪರಮೇಸರ್ (ಪು.೯೭) (ಪರಮೇಶ್ವರದ ಸರಲೀಕೃತ ರೂಪ) ಮೊದಲಾದ ಶಬ್ದಗಳು ನುಸುಳಿವೆ. ಕೆಲವೊಮ್ಮೆ 'ಬೊಗಸೆ ನೀರಿನಲ್ಲಿ ಮುಳುಗಿ ಸತ್ತೇವು' (ಪು.೧೪೦) (ಚುಲ್ಲೂ ಭರ್‌ಪಾನೀ ಮೇಂ ಡೂಬ್ ಮರ್‍ನಾ–ನಾಚಿಕೆಗೇಡು ಎಂಬ ಅರ್ಥದಲ್ಲಿ)ಎಂದು ಯಾಂತ್ರಿಕವಾಗಿ ಅನುವಾದ ಮಾಡಿರುವುದನ್ನು ಕಾಣಬಹು ದಾದರೂ ಒಟ್ಟಿನಲ್ಲಿ ಅನುವಾದ ತೃಪ್ತಿಕರವಾಗಿದೆ.

ತನ್ನದೇ ಆದ ವಿಶಿಷ್ಟತೆಯಿಂದ ವಾಚಕರನ್ನು ಸೆರೆಹಿಡಿದ ಕೃತಿ, ಪ್ರಖ್ಯಾತ ಸಾಹಿತಿ ಕೃಷ್ಣಚಂದರ 'ಒಂದು ಕತ್ತೆಯ ಆತ್ಮಕಥೆ'. 'ಕಸ್ತೂರಿ'ಯಲ್ಲಿ ಸಂಗ್ರಹರೂಪವಾಗಿ ಇತ್ತಿದ್ದ ಈ ವಿಡಂಬನಾತ್ಮಕ ಕಥೆಯನ್ನು ಇಲ್ಲಿ ಪೂರ್ಣರೂಪದಲ್ಲಿ ಮುಂದಿರಿಸಿದ್ದಾರೆ ಬಿ. ಜಿ. ಹೆಗ್ಗಡೆ. ಕೃಷ್ಣಚಂದರು ಖ್ಯಾತ ಉರ್ದು ಸಾಹಿತಿಗಳೂ ಹೌದು. ನಾಗರಿಕನೆಂದು ಬೀಗಿ ಮೆರೆಯುವ ಆಧುನಿಕ ಮಾನವನ ಹೃದಯದಲ್ಲಿ ತಾಂಡವವಾಡುವ ಕತ್ತೆತನವನ್ನು, ಕತ್ತೆಯಲ್ಲಿ ಕಾಣಬರುವ ಮಾನವೀಯತೆಯನ್ನು ಮುಂದಿರಿಸಿ ಸಮಾಜದ ಲೋಪದೋಷಗಳನ್ನು ಎತ್ತಿ ಆಡಿದರೂ, ಸಿಹಿಯ ಲೇಪದಿಂದ ಕೂಡಿದ ಗುಳಿಗೆಗಳಂತೆ ಇರುವುದರಿಂದ ನೋವನ್ನುಂಟುಮಾಡದೆ ನಗೆಯ ಮೂಲಕವೇ ತನ್ನ ಉದ್ದೇಶವನ್ನು ನೆರವೇರಿಸಿಕೊಂಡುಬಿಡುತ್ತದೆ. ಹೆಗ್ಗಡೆಯವರ ಅನುವಾದ ಸುಂದರವಾಗಿದೆ.

ಪ್ರಬಂಧಗಳು

ಪ್ರಬಂಧ ಸಾಹಿತ್ಯದಲ್ಲಿ 'ಡಾ. ನಗೇಂದ್ರರ ಶ್ರೇಷ್ಠ ಪ್ರಬಂಧಗಳು' ಎಂಬುದು ಗಮನಾರ್ಹವಾಗಿದೆ. ಡಾ. ನಗೇಂದ್ರರು ಖ್ಯಾತ ವಿಮರ್ಶಕರು. ಅವರ ಪ್ರಬಂಧಗಳಲ್ಲಿ ಕೆಲವನ್ನು ಆರಿಸಿ ಭರತ ಭೂಷಣ ಅಗ್ರವಾಲರು 'ಡಾ. ನಗೇಂದ್ರರ ಶ್ರೇಷ್ಠ ಪ್ರಬಂಧಗಳು' ಎಂಬ ಹೆಸರಿನಲ್ಲಿ ಪ್ರಕಟಿಸಿದರು. ಇದನ್ನು ಭರತ ಖಂಡದ ಅನೇಕ ಭಾಷೆಗಳಿಗೆ ಅನುವಾದಿಸುವ ಪ್ರಯತ್ನ ಸಾಗುತ್ತಿದೆ. ಕನ್ನಡದಲ್ಲಿ ಈ ಕಾರ್ಯವನ್ನು ನೆರವೇರಿಸಿರುವವರು ಮೇ. ರಾಜೇಶ್ವರಯ್ಯ ಮತ್ತು ಪ್ರಧಾನ್ ಗುರುದತ್ತ ಅವರು. ಡಾ. ಆರ್. ಸಿ. ಹಿರೇಮಠ ಅವರು ಹೇಳಿರುವಂತೆ "ಈ ಗ್ರಂಥದಲ್ಲಿ

ಬಳಸಿದ ಭಾಷೆ ಕನ್ನಡದ ಸುಂದರ ಶೈಲಿಗೆ ಮಾದರಿಯಾಗಿದೆ. ಇದೊಂದು ಅನುವಾದ ಗ್ರಂಥ ಎನ್ನುವ ಕಲ್ಪನೆ ಎಲ್ಲಿಯೂ ಬಾರದಂತೆ ಲೇಖಕರು ಈ ಕಾರ್ಯವನ್ನು ಪೂರೈಸಿರುವರು. ”

‘ಪ್ರಾಚೀನ ಭಾರತದ ಕಲಾತ್ಮಕ ವಿನೋದಗಳು’—ಡಾ. ಹಜಾರಿ ಪ್ರಸಾದ್ ದ್ವಿವೇದಿಯವರ ಈ ಹಿಂದಿ ಕೃತಿಯನ್ನು ಕನ್ನಡಕ್ಕೆ ತಂದಿದ್ದಾರೆ ಯ. ಹನುಮಯ್ಯ ಅವರು. ಉಪಯೋಗವಾದದ ಕನ್ನಡಕವನ್ನೇ ಧರಿಸಿ ನೋಡುವ ನಮಗೆ ಪ್ರಾಚೀನರ ಬಾಳ್ವೆಯ ಅನೇಕ ಅಂಶಗಳು ನಿರರ್ಥಕವೆಂದೇ ತೋರಿಯಾವು. ಆದರೆ ಆ ಅಂಶಗಳಲ್ಲಿರುವ ಸೌಂದರ್ಯ ದೃಷ್ಟಿಯ ಹಿನ್ನೆಲೆಯನ್ನು ಅರ್ಥಮಾಡಿಕೊಂಡಾಗ ನಿರರ್ಥಕವೆಂದು ತೋರಿದವು ಎಷ್ಟು ಅರ್ಥಪೂರ್ಣವೂ, ಸಾರ್ಥಕವೂ ಆಗಿವೆ ಎಂಬ ಅಂಶ ಗೋಚರಿಸುತ್ತದೆ. ಈ ಕಣ್ಣು ತೆರೆಯಿಸುವ ಕಾರ್ಯವನ್ನು ಮಾಡಿದ್ದಾರೆ ಆಚಾರ್ಯ ದ್ವಿವೇದಿಯವರು. ಹನುಮಯ್ಯನವರು “ನಾನು ಈ ಪುಸ್ತಕವನ್ನು ಮೂಲದಲ್ಲಿ ಓದಿದಾಗ ಬಹಳ ಸಂತೋಷಪಟ್ಟೆ. ಪ್ರಾಚೀನ ಭಾರತೀಯರ ತುಂಬು ಜೀವನದ ಸರಸ ಸೌಂದರ್ಯವನ್ನು ನೋಡಿ ಮುಗ್ಧನಾದೆ. ಇಲ್ಲಿ ನಾನು ಕಂಡ ಭಾರತೀಯರ ಸೌಂದರ್ಯ ದೃಷ್ಟಿಯ ಪರಿಚಯವನ್ನು ನಮ್ಮವರಿಗೂ ಮಾಡಿಸಿಕೊಡಬೇಕೆಂಬ ಇಚ್ಛೆಯಿಂದ ಈ ಅನುವಾದಕ್ಕೆ ಕೈ ಹಾಕಿದೆ” ಎಂದಿದ್ದಾರೆ. ತಮ್ಮ ಉದ್ದೇಶ್ಯದಲ್ಲಿ ಅವರು ಕೃತಕೃತ್ಯರಾಗಿದ್ದರೂ, ಅವರೇ ಒಪ್ಪಿಕೊಂಡಿರುವಂತೆ, “ಅನೇಕ ಕಾರಣಗಳಿಂದ ಅಲ್ಲಲ್ಲಿ ತಪ್ಪುಗಳು ಉಳಿದುಕೊಂಡುಬಿಟ್ಟಿವೆ.”

ಇತರ ಬಗೆಯವು

ಇಳಿವಯಸ್ಸಿನಲ್ಲಿ ಓದು ಕಲಿಯುವ ವಯಸ್ಕರಿಗಾಗಿ ತಯಾರಿಸಲಾಗಿರುವ ‘ಹಮ ಹೈಂ ಸರಕಾರ’ ಎಂಬ ಪುಸ್ತಕವನ್ನು ಮೈಸೂರಿನ ವಯಸ್ಕರ ಶಿಕ್ಷಣ ಸಂಸ್ಥೆಗಾಗಿ ಶ್ರೀ ಮೇ. ರಾಜೇಶ್ವರಯ್ಯನವರು ಕನ್ನಡಕ್ಕೆ ಅನುವಾದಿಸಿದ್ದಾರೆ. ಭಾಷೆ ಉದ್ದೇಶ್ಯಕ್ಕೆ ತಕ್ಕಂತೆ ಸರಳವೂ, ಸುಲಭವೂ ಆಗಿದೆ. ‘ನಾವೇ ಸರಕಾರ’ ಒಂದು ಸಫಲ ಅನುವಾದವಾಗಿದೆ.

ಶ್ರೀ ಎಸ್. ವಿ. ಭಟ್ಟ ಅವರು ಹಿಂದಿಯಿಂದ ಕನ್ನಡಕ್ಕೆ ‘ಪ್ರೇಮಚಂದ’ ಅನ್ನು ತಂದಿದ್ದಾರೆಬುದು ‘ಕರ್ಣಾಟಕ ಕೇ ಹಿಂದಿ ಸಾಹಿತ್ಯಕಾರ’ ಎಂಬ ಪರಿಚಯ ಮಾಲಿಕೆಯಿಂದ ತಿಳಿದುಬರುತ್ತದೆ. ಆದರೆ ‘ಪ್ರೇಮಚಂದ’ರನ್ನು ಕುರಿತು ಬರೆಯಲಾದ ಯಾರ ಗ್ರಂಥ ಎಂಬ ವಿವರ ದೊರೆಯುವುದಿಲ್ಲ. ಈ ಕೃತಿ ನನಗೆ ದೊರೆತಿಲ್ಲ.

ಕೊನೆಯದಾಗಿ, ಶರತ್ ಸಾಹಿತ್ಯವನ್ನು ಕುರಿತು ಒಂದು ಮಾತು ಹೇಳಬೇಕಾಗಿದೆ. ಶರತ್ ಸಾಹಿತ್ಯದ ಬಹು ಭಾಗ ಕನ್ನಡಕ್ಕೆ ದೊರೆತಿರುವುದು ಹಿಂದಿಯ ಮೂಲಕವೇ ಎಂಬ ವಿಷಯದಲ್ಲಿ ನನಗೆ ಯಾವ ಸಂದೇಹವೂ ಉಳಿದಿಲ್ಲ. ಅನೇಕ ಕಡೆಗಳಲ್ಲಿ ಭಾಷಾಂತರಕಾರರು ತಮ್ಮ ಮೂಲ ಯಾವ ಭಾಷೆಯದೆಂಬುದನ್ನು

ಸ್ಪಷ್ಟಪಡಿಸುವ ಗೋಜಿಗೇ ಹೋಗಿಲ್ಲ. ಪ್ರಕಾಶಕರ ಕೃತಜ್ಞತೆಗಳಲ್ಲಿ ಕೆಲವೊಮ್ಮೆ "ಹಿಂದಿ ಗ್ರಂಥ ರತ್ನಾಕರ"ದ ಹೆಸರು ಕಾಣದೊರೆಯುತ್ತದೆ. ಅನುವಾದ ಶೈಲಿಯ ಆಂತರಿಕ ವಿಶ್ಲೇಷಣೆಯೂ ಹಿಂದಿಯೇ ಮೂಲವೆಂಬುದನ್ನು ದೃಢಪಡಿಸುತ್ತದೆ. ಇಷ್ಟಾಗಿಯೂ ಶರತ್ ಸಾಹಿತ್ಯದ ಬೃಹದ್ಗಾತ್ರ ಮತ್ತು ಈಗಾಗಲೇ ಮಿತಿಮೀರಿ ಬೆಳೆದಿದುವ ಪ್ರಬಂಧದ ಗಾತ್ರದಿಂದಾಗಿ ಇದನ್ನು ಸಂಪೂರ್ಣವಾಗಿ ವಿಮರ್ಶೆಯ ಕಕ್ಷೆಯಿಂದ ಹೊರಗಿಡಬೇಕಾಯ್ತು. ಇಲ್ಲಿಯೂ ಪ್ರಧಾನವಾಗಿ ಕಾಣುವ ಹೆಸರು ಗುರುನಾಥ ಜೋಶಿಯವರದು. ಜೋಶಿಯವರ ಅನುವಾದ ಶೈಲಿಯ ವಿಚಾರವನ್ನು ಆಗಲೇ ಹೇಳಿ ಆಗಿದೆ. ಪ್ರಾಸಂಗಿಕವಾಗಿ, ಮತ್ತೊಬ್ಬ ಪ್ರತಿಭಾವಂತ ಅನುವಾದಕರ ವಿಚಾರವನ್ನು ಇಲ್ಲಿ ಪ್ರಸ್ತಾವಿಸಲೇಬೇಕಾಗಿದೆ. ಶ್ರೀ ಸಿದ್ಧಲಿಂಗ ಪಟ್ಟಣಶೆಟ್ಟಿ ಅವರು ಹಿಂದಿ–ಕನ್ನಡ ಭಾಷೆಗಳ ಮೇಲೆ ಸಮಾನ ಪ್ರಭುತ್ವವುಳ್ಳ ಶ್ರೇಷ್ಠಮಟ್ಟದ ಲೇಖಕರು. ಹಿಂದಿಯಲ್ಲಿ ಸ್ವತಂತ್ರ ಕೃತಿಗಳನ್ನು ರಚಿಸಿರುವುದರ ಜೊತೆಗೆ ಕನ್ನಡದಲ್ಲಿಯೂ ಸಾಕಷ್ಟು ದುಡಿಯುತ್ತಿದ್ದಾರೆ. ಅವರು ಅನುವಾದಿಸಿರುವ ಶರತ್‌ಚಂದ್ರರ 'ಸ್ತ್ರೀ' ('ಹೆಣ್ಣಿನ ಸ್ಥಾನ–ಮಾನ') ಅತ್ಯುತ್ತಮ ಅನುವಾದಕ್ಕೊಂದು ಉದಾಹರಣೆ. ಶುದ್ಧವಾದ ಭಾಷೆ, ಜೀವಂತ ಶೈಲಿ ಅವರ ಅನುವಾದದ ಮುಖ್ಯ ಲಕ್ಷಣಗಳು. ಇವರಿಂದ ಇನ್ನೂ ಹೆಚ್ಚಿನ, ಉತ್ತಮ ಸೇವೆಯನ್ನು ಕನ್ನಡ ನಿರೀಕ್ಷಿಸಿದರೆ ಆಶಾಭಂಗವಾಗಲಾರದು.

ಇದೇ ರೀತಿ, 'ಖಲೀಲ್ ಗಿಬ್ರಾನ್'ನ ಕೃತಿಯ ಹಿಂದಿ ರೂಪಾಂತರವನ್ನು ಆಧಾರವಾಗಿಟ್ಟುಕೊಂಡು ಕನ್ನಡ ಅನುವಾದವನ್ನು ಸಿದ್ಧಗೊಳಿಸಿದ್ದಾರೆಂದು ಹೇಳಲಾಗಿರುವ ನ. ಸುಬ್ರಹ್ಮಣ್ಯ ಅವರ ಅನುವಾದವನ್ನೂ ಇಲ್ಲಿ ವಿಮರ್ಶೆಗೆ ಒಳಪಡಿಸಿಲ್ಲ

ವಿಶ್ಲೇಷಣೆ

ನನ್ನ ಪ್ರಯತ್ನಕ್ಕೆ ಮೀರಿ ನನಗೆ ಇನ್ನೂ ಕಾಣೆಯಾಗಿರುವ ಕೃತಿಗಳ ಮತ್ತು ಅನುವಾದಕರ ವಿಚಾರದಲ್ಲಿ ಉದ್ದೇಶಪೂರ್ವಕವಾದ ಅಸಡ್ಡೆಯಿಂದ ವರ್ತಿಸಿಲ್ಲವೆಂಬ ಅಂಶವನ್ನು ಸ್ಪಷ್ಟಪಡಿಸಿ ಈ ಪರಿವೀಕ್ಷಣೆಯ ಫಲವಾಗಿ ನಾನು ಸಂಗ್ರಹಿಸಿ ವಿಶ್ಲೇಷಿಸಿದ, ಭಾಷೆ-ಶೈಲಿ ಮುಂತಾದ ವಿಚಾರಗಳನ್ನು ಕುರಿತ ನನ್ನ ಅಭಿಪ್ರಾಯ ಹಾಗೂ ಸೂಚನೆಗಳನ್ನು ಮುಂದಿರಿಸಿ ಈ ಪ್ರಬಂಧವನ್ನು ಕೊನೆಗಾಣಿಸ ಬಯಸಿದ್ದೇನೆ. ವಿಭಿನ್ನಾರ್ಥ ಶಬ್ದಕೋಶ, ನುಡಿಗಟ್ಟುಗಳ ಕೋಶ, ತೌಲನಿಕ ವ್ಯಾಕರಣ ಮತ್ತು ಕಾಂಟ್ರಾಸ್ಟೀವ್ ವ್ಯಾಕರಣ, ಭಾಷಾ-ಸಂಪ್ರದಾಯಗಳು, ವಿರಾಮ ಚಿಹ್ನೆ ಮತ್ತು ಶೈಲಿ ಮೊದಲಾದ ಮುಖ್ಯಾಂಶಗಳನ್ನು ಆದಷ್ಟು ಸಂಕ್ಷೇಪವಾಗಿ ಪ್ರಸ್ತಾವಿಸಿದ್ದೇನೆ.

ಭಾರತೀಯ ಭಾಷೆಗಳೆಲ್ಲ ಸಂಸ್ಕೃತದ ಹಿನ್ನೆಲೆಯಲ್ಲಿ ಬೆಳೆದುಬಂದಿರುವುದರಿಂದಾಗಿ ಸಂಸ್ಕೃತದ ಅನೇಕ ಶಬ್ದಗಳು ಎಲ್ಲ ಭಾಷೆಗಳ ಶಬ್ದ ಕೋಶಗಳಲ್ಲಿಯೂ

ಕಾಣದೊರೆಯುತ್ತವೆ. ಇವುಗಳಲ್ಲಿ ಹಲವು ಶಬ್ದಗಳು ಎಲ್ಲ ಭಾಷೆಗಳಲ್ಲಿಯೂ ಒಂದೇ ಅರ್ಥದಲ್ಲಿ ಬಳಕೆಯಲ್ಲಿವೆ. ಆದರೆ ಇನ್ನು ಕೆಲವು ಶಬ್ದಗಳು ಬೇರೆ ಬೇರೆ ಭಾಷೆಗಳಲ್ಲಿ ಬೇರೆ ಬೇರೆ ಅರ್ಥದಲ್ಲಿ ಬಳಕೆಯಲ್ಲಿವೆ. ಹೀಗಾಗಿ, ಪ್ರಾಸಂಗಿಕವಾಗಿ ಅನುವಾದಕ ಅರ್ಥಮಾಡಿಕೊಳ್ಳಬಲ್ಲನಾದರೂ ಅನುವಾದದಲ್ಲಿ ಆ ಶಬ್ದಗಳನ್ನು ಅರಿತೋ, ಅರಿಯದೆಯೋ ಪ್ರಯೋಗಿಸಿ ಬಿಟ್ಟಾಗ ಅವು ಉದ್ದಿಷ್ಟ ಅರ್ಥವನ್ನು ನೀಡಲಾರದೆ ಹೋಗುವುದುಂಟು; ಆಭಾಸಕ್ಕೂ ಕಾರಣವಾದರೆ ಆಶ್ಚರ್ಯವಿಲ್ಲ. ನಾನು ಪರಿಶೀಲಿಸಿದ ಕೃತಿಗಳಲ್ಲಿ ದೊರೆತ ವಿಭಿನ್ನಾರ್ಥಕ ಶಬ್ದಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಪಟ್ಟಿ ಮಾಡಿದ್ದೇನೆ.

ಸಂಸ್ಕೃತ ಶಬ್ದ	ಹಿಂದಿಯಲ್ಲಿ ಅರ್ಥ	ಕನ್ನಡದಲ್ಲಿ ಅರ್ಥ
ಯೋಗ	ಅವಕಾಶ	ವೇದಾಂತ ವಿಭಾಗ
ಕೋಟಿ	ಶ್ರೇಣಿ, ಪಂಕ್ತಿ	ಸಂಖ್ಯೆ
ಧ್ಯಾನ	ಗಮನ	ಧ್ಯಾನ ಮಾಡುವುದು
ದೇವಿ	ಹೆಂಗಸು	ದೇವಿ, ಪೂಜಾರ್ಹಳು
ಯುಕ್ತಿ	ಚಾತುರ್ಯ	ಉಪಾಯ
ಶ್ರೀ ಗಣೇಶ	ಆರಂಭ	ದೇವತೆ
ಪ್ರಬಂಧ	ಏರ್ಪಾಟು	ಪ್ರಬಂಧ (ಸಾಹಿತ್ಯ ಪ್ರಕಾರ)
ಅವಸ್ಥಾ	ವಯಸ್ಸು	ಸ್ಥಿತಿ
ಗರ್ವ	ಅಭಿಮಾನ	ಅಹಂಕಾರ
ಸ್ವರ್ಗೀಯ	ದಿವಂಗತ	ಸ್ವರ್ಗಸದೃಶ
ಸಂಪನ್ನ	ನಡೆದ (ಕ್ರಿ)	ಯುಕ್ತ
ಬಲ	ಆಧಾರ, ಶಕ್ತಿ	ಶಕ್ತಿ

ಈ ದೃಷ್ಟಿಯಿಂದ ಸಮಾನಾರ್ಥಕ ಶಬ್ದ ಕೋಶವನ್ನಲ್ಲದಿದ್ದರೂ, ಅತ್ಯಗತ್ಯವಾಗಿ ವಿಭಿನ್ನಾರ್ಥಕ ಶಬ್ದಕೋಶವನ್ನು ಸಿದ್ಧಪಡಿಸಬೇಕು.

ಶಬ್ದಸಮುಚ್ಚಯಗಳು (Phrases) ಮತ್ತು ನುಡಿಗಟ್ಟುಗಳು (Idioms) ಭಾಷೆಯ ಜೀವಸತ್ವಗಳು. ಇವುಗಳ ಬಳಕೆ ಇಲ್ಲದೆ ಶೈಲಿ ಜೀವಂತವಾಗಿ ತೋರಲಾರದು. ಆಯಾ ಭಾಷೆಯ ಜಾಯಮಾನಕ್ಕೆ ತಕ್ಕಂತೆ ಅವು ಬಳಕೆಯಲ್ಲಿರುತ್ತವೆ. ಅನುವಾದ ಮಾಡುವಾಗ ಅನುವಾದಕ ಈ ಅಂಶಗಳನ್ನು ಗಮನಿಸದೆ ಯಾಂತ್ರಿಕ ಶಬ್ದಪ್ರತಿನಿದಾನ (Mechanical Replacement of Words)ದಲ್ಲಿ ತೊಡಗಿದರೆ ಆಭಾಸಕ್ಕೆ, ಅನರ್ಥಕ್ಕೆ ಕಾರಣವಾಗುತ್ತದೆ.

ಕೆಲವು ಉದಾಹರಣೆಗಳನ್ನು ನೋಡಿ:

ಶಬ್ದ ಸಮುಚ್ಚಯ ಅಥವಾ ನುಡಿಗಟ್ಟು	ಅರ್ಥ	ಪ್ರಯೋಗ ಮಾಡಿರುವುದು
ಹವಾ ಸೇ ಬಾತೇಂ ಕರನಾ	ವೇಗವಾಗಿ ಓಡು	ಗಾಳಿಯ ಕೂಡ ಮಾತನಾಡ ಹತ್ತಿದವು.
ಭಾಗ ಲೇನಾ	ಭಾಗವಹಿಸು	ಸಮಾಜೋತ್ಸವಗಳಲ್ಲಿ ಭಾಗ ತೆಗೆದುಕೊಳ್ಳುತ್ತಿದ್ದ
ದೂಧ ಪೀತೀ ಬಚ್ಚೀ	ಎಳೆಯ ಮಗು	ಮೊಲೆತಿನ್ನುವ ಮಗುವೆ
ಧೀರೇ ಧೀರೇ	ನಿಧಾನವಾಗಿ	ನಿಧ ನಿಧಾನವಾಗಿ
ಅಂಖೋಂ ಮೇಂ ಖೂನ ಭರ ಜಾನಾ	ಕೋಪೋದ್ರಿಕ್ತನಾಗು	ಕಣ್ಣುಗಳಲ್ಲಿ ರಕ್ತ ತುಂಬಿ ಕೊಂಡಿತು.
ಪೈರೋಂ ತಲೇ ಕುಚಲನಾ	ಹೊಸಗಿ ಹಾಕು, ಮೆಟ್ಟಿ ಹಾಕು	ಕಾಲಕೆಳಗೆ ತುಳಿದು ಹೊರ ಳಾಡುವ ಇಚ್ಛೆ ನನಗಿದೆ.
ಚಕನಾ ಚೂರ ಕರನಾ	ಚೂರುಚೂರು ಮಾಡು, ನಾಶ ಮಾಡು	ಗರ್ವವನ್ನು ಚೂರ್ಣಮಾಡಿ
ದೋಷ ದೇನಾ	ದೂಷಿಸು, ನಿಂದಿಸು	ನಮಗೆ ದೋಷಕೊಟ್ಟರೆ ಏನು ಆಗುವುದು.
ಚುಲ್ಲೂ ಭರ ಪಾನೀ ಮೇಂ ಡೂಬ ಮರನಾ	ಅಪಮಾನಕರ, ನಾಚಿಕೆಗೇಡು	ಬೊಗಸೆ ನೀರಿನಲ್ಲಿ ಮುಳುಗಿ ಸತ್ತೇವು.
ಧಥ ಸೇ ಅಲಗ ಕರನಾ	ಶಿರಚ್ಛೇಧನ	ತಲೆಗಳು ಶರೀರದಿಂದ ಬೇರೆ ಮಾಡಲ್ಪಟ್ಟವು

ಈ ಬಗೆಯ ತಪ್ಪುಗಳು ಯಾರು ಯಾರಲ್ಲಿ ಆಗಿವೆ ಎಂಬುದು ಮುಖ್ಯವಲ್ಲ. ಅನುವಾದ ಈ ಬಗೆಯ ದೋಷಗಳಿಂದ ದೂರವಿರಬೇಕು. ಈ ದೃಷ್ಟಿಯಿಂದ ನುಡಿಗಟ್ಟುಗಳ ಕೋಶವೊಂದನ್ನೂ ತಯಾರಿಸಬೇಕು. 'ಹಿಂದಿ ಮುಹಾವರ (ನುಡಿಗಟ್ಟು) ಕೋಶ', 'ಹಿಂದಿ ಉರ್ದೂ ಮುಹಾವರ ಕೋಶ' ಎಂಬ ಕೋಶಗಳು ದೊರೆಯುತ್ತವೆಯಾದರೂ "ಹಿಂದಿ–ಕನ್ನಡ ನುಡಿಗಟ್ಟು ಕೋಶ" ಮತ್ತು "ಕನ್ನಡ–ಹಿಂದಿ ನುಡಿಗಟ್ಟು ಕೋಶ"ಗಳನ್ನು ಸಿದ್ಧಪಡಿಸಿದರೆ ಅವು ಬಹುಮಟ್ಟಿಗೆ ಸಹಾಯಕವಾಗಿ ಪರಿಣಮಿಸುತ್ತವೆ.

ವಾಕ್ಯರಚನೆಯ ವೈಶಿಷ್ಟ್ಯಗಳೂ ಭಾಷೆಯಿಂದ ಭಾಷೆಗೆ ಅಥವಾ ಇನ್ನೂ ನಿರ್ದಿಷ್ಟವಾಗಿ ಹೇಳಬೇಕೆಂದರೆ ಭಾಷಾಪರಿವಾರದಿಂದ ಭಾಷಾಪರಿವಾರಕ್ಕೆ ಬೇರೆ ಬೇರೆಯಾಗುವುದುಂಟು. ಹೀಗಿರುವಲ್ಲಿ ಭಾಷೆಯ ಜಾಯಮಾನಕ್ಕೆ ಒಗ್ಗದಂತಹ ವಾಕ್ಯರಚನೆಗಳನ್ನು ತಂದು ತುಂಬುವುದರಿಂದ ಅನುವಾದಕನ ಅಸಾಮರ್ಥ್ಯ, ಅಜ್ಞಾನ, ಅನಭ್ಯಾಸಗಳ ಪರಿಚಯ ದೊರೆಯುತ್ತದೆಯೇ ಹೊರತು ಭಾಷೆಗೆ ಯಾವ ಉಪಕಾರವನ್ನೂ ಮಾಡಿದಂತಾಗುವುದಿಲ್ಲ. ಕರ್ಮಣೀ ಪ್ರಯೋಗ ಕನ್ನಡಕ್ಕೆ ಒಗ್ಗದ, ತುಂಬ ಕೃತಕವಾದ ಪ್ರಯೋಗ. ಆದ್ದರಿಂದ ಅದನ್ನು ಕೈಬಿಡುವುದೇ ಮೇಲು. ಉದಾ:

ಹಿಂದಿ	ಕನ್ನಡ ಪ್ರಯೋಗ
ಮುಝು ಸೇ ಖಾಯಾ ನಹೀಂ ಜಾತಾ	ನನ್ನಿಂದ ತಿನ್ನಲಾಗುವುದಿಲ್ಲ

ಇದಕ್ಕೆ ಬದಲಾಗಿ 'ನಾನು ತಿನ್ನಲಾರೆ' ಎಂದು ಹೇಳುವುದೇ ಕನ್ನಡಕ್ಕೆ ಸಹಜವಾಗಿ ತೋರುತ್ತದೆ.

ಹಿಂದಿಯಲ್ಲಿ ಕರ್ತೃ, ಕರ್ಮಣಿ ಪ್ರಯೋಗಗಳ ಜೊತೆಗೆ 'ಭಾವೆ ಪ್ರಯೋಗ' ಎಂಬುದೂ ಉಂಟು. ಭಾವೆ ಪ್ರಯೋಗದಲ್ಲಿರುವ ವಾಕ್ಯಗಳನ್ನು ಅನುವಾದಿಸು ವಾಗಲೂ ಕನ್ನಡದಲ್ಲಿ ಕರ್ತೃ ಪ್ರಯೋಗಕ್ಕೇ ಶರಣುಹೋಗುವುದು ವಾಸಿ. ಉದಾ :

ಹಿಂದಿ	ಕನ್ನಡ ಪ್ರಯೋಗ
ಮೈಂ ಉಠ ನಹೀಂ ಸಕತಾ (ಕರ್ತೃ)	ನಾನು ಏಳಲಾರೆ
ಮುಝುಸೇ ಉಠಾ ನಹೀಂ ಜಾ ಸಕತಾ (ಭಾವೆ)	ನನ್ನಿಂದ ಏಳಲಾಗುವುದಿಲ್ಲ
ಮುಝುಸೇ ಉಠಾ ನಹೀಂ ಗಯಾ	ನನ್ನಿಂದ ಏಳಲಾಗಲಿಲ್ಲ.

ಅದಕ್ಕೆ ಬದಲಾಗಿ 'ನಾನು ಏಳಲಾರೆ', 'ನಾನು ಏಳಲಾರದೆ ಹೋದೆ' ಎಂದು ಅನುವಾದಿಸಿಕೊಳ್ಳುವುದೇ ಉಚಿತವೆಂದು ತೋರುತ್ತದೆ. ಇಂಗ್ಲಿಷ್‌ಗೆ ಅನುವಾದ ಮಾಡಬೇಕಾದರಂತೂ ಕರ್ತೃಪ್ರಯೋಗವೊಂದೇ ಶರಣು.

ಕನ್ನಡಕ್ಕೆ ಅಷ್ಟಾಗಿ ಒಗ್ಗದ ಒಂದು ಬಗೆಯ ವಾಕ್ಯರಚನೆ ಎಲ್ಲ ಅನುವಾದ ಗಳಲ್ಲಿಯೂ ಸಾಮಾನ್ಯವಾಗಿ ಕಾಣದೊರೆಯುತ್ತದೆ. ಇದನ್ನು ಹಿಂದೀ ವಾಕ್ಯರಚನೆಯ ಪ್ರಭಾವವೆಂದು ಕರೆಯುವುದಕ್ಕಿಂತಲೂ ಆ ಬಗೆಯ ವಾಕ್ಯಗಳ ಯಥಾವತ್ ಅನುವಾದವೆಂದು ಕರೆಯುವುದೇ ಉಚಿತವೆಂದು ತೋರುತ್ತದೆ. ಉದಾಹರಣೆಗೆ :

೧. "ಯಾವ ಸ್ಥಾನದಲ್ಲಿ ವಾಸಮಾಡುತ್ತಾ ಶಂಕರರು .... ಸಿದ್ಧಿಯನ್ನು ಹೊಂದಿದರೋ ಆ ಸ್ಥಾನದ ಸಮೀಪದಲ್ಲಿಯೇ ಶಂಕರರ ಜೀವನ ಚರಿತ್ರೆಯನ್ನು ರಚಿಸಲಾಯಿತೆಂಬುದನ್ನು ಪಾಠಕರಿಗೆ ತಿಳಿಸಲು ಇಚ್ಛಿಸುತ್ತೇನೆ." (ಶ್ರೀ ಶಂಕರಾಚಾರ್ಯ, ಪು. viii).

೨. "ಯಾವ ದಿವಸ .... ವೈಭವ ವಿಲಾಸವು .... ಅಟ್ಟಹಾಸ ಮಾಡಿತೋ ಆ ದಿವಸವೇ ನಾನಂದುಕೊಂಡೆ" (ಪು. ೧೪) (ಮೇವಾಡಪತನ : ಶ್ರೀ ಆರ್. ನಾಗರಾಜ).

೩. "ಯಾವ ಈ ಕೆನ್ನೀರ ಬಾವುಟ .... ಸ್ವಚ್ಛಂದವಾಗಿ ಹಾರುತ್ತಿದೆಯೋ ಅದು ಈಗ ....ಬೆದರಿ ಬಾಗೀತೇ ? (ಪು. ೧೫) (ಅದೇ).

ಈ ಬಗೆಯ ವಾಕ್ಯರಚನೆ ಹಿಂದಿ ಭಾಷೆಗೆ ಆವಶ್ಯಕವೂ ಹೌದು. ಆದರೆ ಕನ್ನಡಕ್ಕೆ ಇದಿಲ್ಲದೆ ವಿಧಿಯೇ ಇಲ್ಲ ಎಂದು ಹೇಳಲು ಬರುವಂತಿಲ್ಲ. ಕನ್ನಡಕ್ಕೆ ಸಹಜ ವೆನ್ನಿಸುವ ರೀತಿಯಲ್ಲಿ ಇದನ್ನು ಅಳವಡಿಸಿಕೊಂಡಾಗ ಭಾಷೆಗೆ ಬಿಗುವೂ ಉಂಟಾಗಿ ಅದರ ಸಹಜ ಶಕ್ತಿ ಸುವ್ಯಕ್ತವಾಗುತ್ತದೆ. ಅಂಥ ಅಥವಾ ಅಂತಹ ಎಂಬ ಒಂದು

ಶಬ್ದ ಉಪವಾಕ್ಯಗಳನ್ನು ಪ್ರಧಾನವಾಕ್ಯದಲ್ಲಿ ಸುಲಭವಾಗಿ ಅಳವಡಿಸಿಬಿಡುತ್ತದೆ. ಕೆಲವು ವೇಳೆ ಈ ಶಬ್ದದ ಆವಶ್ಯಕತೆಯೂ ಇಲ್ಲ. "ಇಲ್ಲಿ ಯಾರು ಬಂದಿದ್ದಾನೋ ಅವನು ನನ್ನ ತಮ್ಮ" ಎನ್ನುವುದಕ್ಕಿಂತ "ಇಲ್ಲಿ ಬಂದಿರುವವನು ನನ್ನ ತಮ್ಮ" ಎಂಬುದೇ ಕನ್ನಡಕ್ಕೆ ಸಹಜವಾದ ರಚನೆ. ಆದ್ದರಿಂದ ಹಿಂದಿ ವಾಕ್ಯರಚನೆಯನ್ನು ಅನುಸರಿಸಬೇಕಾದ ಅಗತ್ಯವಿಲ್ಲ. ಮೇಲೆ ಉದಾಹರಿಸಿರುವ ವಾಕ್ಯಗಳನ್ನು ಈ ರೀತಿ ಅಳವಡಿಸಿದರೆ ಕನ್ನಡ ವಾಕ್ಯರಚನೆಯ ವ್ಯಾಪ್ತಿ ಮತ್ತು ಶಕ್ತಿ ಗೊತ್ತಾಗುತ್ತದೆ.

೧. ಶಂಕರರು ವಾಸವಾಗಿದ್ದುಕೊಂಡು .... ಸಿದ್ಧಿಯನ್ನು ಹೊಂದಿದ ಸ್ಥಾನದ ಸಮೀಪದಲ್ಲಿಯೇ ಶಂಕರರ ಜೀವನ ಚರಿತ್ರೆಯನ್ನು .... ಇತ್ಯಾದಿ.

೨. ವೈಭವ ವಿಲಾಸವು....ಅಟ್ಟಹಾಸ ಮಾಡಿದ ದಿವಸವೇ ನಾನಂದುಕೊಂಡೆ.... ಇತ್ಯಾದಿ.

೩. ....ಸ್ವಚ್ಛಂದವಾಗಿ ಹಾರುತ್ತಿರುವ ಈ ಕೆನ್ನೀರ ಬಾವುಟ ಈಗ....ಬೆದರಿ ಬಾಗೀತೇ ?

ಈ ಅಳವಡಿಕೆಯ ಫಲವಾಗಿ ಭಾಷಾಂತರ ಗಾತ್ರದಲ್ಲಿ ಕಿರಿದಾಗಿ ಪರಿಣಮಿಸಿದರೂ ಪ್ರಭಾವಶಾಲಿಯಾಗಿ ಪರಿಣಮಿಸುತ್ತದೆಂಬುದನ್ನು ಅನುವಾದಕರು ಗಮನಿಸಬೇಕು.

ಇನ್ನು ಅವ್ಯಯಗಳನ್ನೂ ಸಮುಚ್ಚಯಗಳನ್ನೂ ಕುರಿತು ಹೇಳಬೇಕಾಗುತ್ತದೆ. ಇಲ್ಲಿ ಒಂದು ಸಮುಚ್ಚಯದ ವಿಚಾರವನ್ನು ಮಾತ್ರ ಹೇಳಬಯಸುತ್ತೇನೆ. ಹಿಂದಿಯಲ್ಲಿ 'ಕಿ' ಎಂಬ ಸಮುಚ್ಚಯ ದ್ವಿಕ್ರಿಯಾಯುಕ್ತ ವಾಕ್ಯಗಳಲ್ಲಿ ಅನಿವಾರ್ಯವಾಗಿ ಬಂದೇ ತೀರುತ್ತದೆ. ಈ ಸಮುಚ್ಚಯ ವಿಭಿನ್ನಾರ್ಥಕವಾದುದು. ವಾಕ್ಯವನ್ನು ಇದು ಎರಡು ಭಾಗಗಳಾಗಿ ವಿಂಗಡಿಸುತ್ತದೆ. ಆದರೆ ಕನ್ನಡದಲ್ಲಿ ಈ ಪದ್ಧತಿ ಇಲ್ಲ. ಉದಾ: "ಉಸ್ನೇ ಕಹಾ ಕಿ ಜಮೀನ್ದಾರ್ ಘರ್ ಪರ್ ನಹೀಂ ಹೈಂ" ಇದನ್ನು "ಅವನು ಹೇಳಿದ ಏನೆಂದರೆ ಜಮೀನ್ದಾರರು ಮನೆಯಲ್ಲಿ ಇಲ್ಲ." ಎಂದು ಅನುವಾದಿಸುವುದಕ್ಕಿಂತ "ಜಮೀನ್ದಾರರು ಮನೆಯಲ್ಲಿ ಇಲ್ಲವೆಂದು ಅವನು ಹೇಳಿದನು" ಎಂದು ಅನುವಾದಿಸುವುದೇ ಕನ್ನಡಕ್ಕೆ ಸಹಜವಾದ ರೀತಿ. ಹಿಂದಿ ವಾಕ್ಯದ ಮೊದಲ ಅರ್ಧ ಕನ್ನಡ ವಾಕ್ಯದ ಕೊನೆಯ ಅರ್ಧವಾಗಿಯೂ, ಕೊನೆಯ ಅರ್ಧ ಮೊದಲ ಅರ್ಧವಾಗಿಯೂ ಪರಿಣಮಿಸುತ್ತದೆ. ಇದು ಅನುವಾದಕರಿಗೆ ಮೊದಲನೆಯ ಪಾಠ.

'ಕಿ' ಎಂಬ ಸಮುಚ್ಚಯ ಅಥವಾ ಎಂಬ ಅರ್ಥದಲ್ಲಿಯೂ ಬಳಕೆಯಾಗುತ್ತದೆ. ಅನುವಾದಕರು ಇದನ್ನು ಗಮನಿಸಬೇಕು.

ಹಿಂದಿ	ಕನ್ನಡ ಪ್ರಯೋಗ
ಮೈ ಅಕೇಲೆ ಹೀ ಆಊಂ ಕಿ ಔರ್ ದೋ ಚಾರ್ ಲೋಗೋಂ ಕೋ ಬುಲಾಊಂ	ನಾನೊಬ್ಬನೇ ಬರಲೋ ಏನು ಮತ್ತೆ ಮೂರು ನಾಲ್ಕು ಮಂದಿಯನ್ನು ಕರೆಯಲೊ ?

ಇಂತಹ ಭಾಷಾಂತರ ಅಸಹಜವಾಗುತ್ತದೆ.

‘ ವಿಭಕ್ತಿಪಲ್ಲಟ ’ದ ತತ್ತ್ವವನ್ನೂ ಅನುವಾದಕರು ಅರಿತು ಅಳವಡಿಸಿಕೊಳ್ಳದಿದ್ದಲ್ಲಿ ಅನುವಾದ ಭಾಷೆಯ ಮಾಧುರ್ಯವೂ ಕಡಿಮೆಯಾಗುತ್ತೆಂಬುದರಲ್ಲಿ ಸಂದೇಹವಿಲ್ಲ. ಈ ಕೆಲವು ಉದಾಹರಣೆಗಳನ್ನು ನೋಡಿ:

	ಹಿಂದಿ	ಕನ್ನಡ ಪ್ರಯೋಗ
೧.	ಏಕ ಧರ್ಮ ಕೋ ಕುಚಲ ಕರ ದೂಸರೇ ಕಾ ಉತ್ಥಾನ ಕರನೇ ”	ಒಂದು ಧರ್ಮವನ್ನು ತುಳಿದು ಇನ್ನೊಂದರ ಉತ್ಥಾನ ಮಾಡುವ.
೨.	ಅಪನೇ ಸಿದ್ಧಾಂತೋಂ ಕೀ ರಕ್ಷಾ ಕೀ	ತಮ್ಮ ಸಿದ್ಧಾಂತಗಳ ರಕ್ಷಣೆಯನ್ನು ಮಾಡಿದರು.
೩.	ಶಂಕರ ಸೇ ಪೂರ್ವ ಭಾರತ	ಶಂಕರರ ಪೂರ್ವದಲ್ಲಿ ಭಾರತವು.
೪.	ನಾರದ ಪಂಚರಾತ್ರಕೇ ಅನುಸಾರ	ನಾರದ ಪಂಚರಾತ್ರದ ಅನುಸಾರ.
೫.	ರಣಥಾಂ ಬೋರ ಕೀ ವಿಶೇಷ ಖ್ಯಾತಿ ಹುಈ ಹೈ	ರಣಥಾಂಬೋರಿನ ವಿಶೇಷ ಖ್ಯಾತಿವುಂಟಾಗಿದೆ.

ಈ ಕನ್ನಡ ಪ್ರಯೋಗಗಳನ್ನು ಕೆಳಕಂಡಂತೆ ತಿದ್ದಿ ಬರೆದರೆ ಎಷ್ಟು ಚೆನ್ನಾಗಿ ಕಾಣುತ್ತದೆ, ಎಷ್ಟು ಚೆನ್ನಾಗಿ ಕೇಳುತ್ತದೆ ಎಂಬುದನ್ನು ಗಮನಿಸಬಹುದಾಗಿದೆ:

೧. ಒಂದು ಧರ್ಮವನ್ನು ತುಳಿದು ಇನ್ನೊಂದನ್ನು ಮೇಲೆತ್ತುವ

೨. ತಮ್ಮ ಸಿದ್ಧಾಂತಗಳನ್ನು ರಕ್ಷಿಸಿದರು (?)

೩. ಶಂಕರರಿಗಿಂತ ಹಿಂದೆ ಭಾರತ

೪. ನಾರದ ಪಂಚರಾತ್ರಕ್ಕೆ ಅನುಸಾರವಾಗಿ

೫. ರಣಥಾಂಬೋರ್ ವಿಶೇಷ ಖ್ಯಾತಿಗಳಿಸಿದೆ

ಭಾಷಾ ಸಂಪ್ರದಾಯ, ಭಾಷಾಪ್ರದೇಶದ ಸಂಸ್ಕೃತಿಗಳಿಗೆ ಅನುಗುಣವಾದ ಪ್ರಯೋಗಗಳನ್ನು ಯಾಂತ್ರಿಕವಾಗಿ ಉಳಿಸಿಕೊಂಡರೆ ಅದರಿಂದ ಪ್ರಯೋಜನವೇನೂ ಇಲ್ಲ. ಪತಿ ಅಥವಾ ಪುತ್ರನಾಮದಿಂದ ಹೆಂಗಸರನ್ನು ಸಂಬೋಧಿಸುವ ಪದ್ಧತಿ ಹಿಂದಿಯಲ್ಲಿ ಬಳಕೆಯಲ್ಲಿರುವುದು ನಿಜ. ಸಂಸ್ಕೃತಿ ವೈಶಿಷ್ಟ್ಯವನ್ನು ತೋರಲು ಎಲ್ಲಾದರೂ ಒಂದು ಕಡೆ ತೋರಿಸಿ ಉಳಿದ ಕಡೆ ಅದನ್ನು ಕೈಬಿಡುವುದೇ ಲೇಸೆಂದು ತೋರುತ್ತದೆ. ಉದಾಹರಣೆಗೆ, ಅನುವಾದದಲ್ಲಿ ಎಷ್ಟು ಕಡೆ ‘ಮುನ್ನೋನ ಚಿಕ್ಕಮ್ಮ’, ‘ಬುದ್ಧಿಯ ತಾಯಿ’ ಎಂದು ಬಳಸಿಕೊಂಡು ಹೋಗುವುದು ಸಾಧ್ಯ? ಅಂಕಿತನಾಮಗಳನ್ನೇ ಬಳಸಿಕೊಂಡಲ್ಲಿ, ಕೃತಕತೆಯನ್ನು ದೂರ ಮಾಡಿದಂತಾಗುತ್ತದೆ.

ಅಭಿವಂದನೋದ್ದೇಶಗಳಿಗಾಗಿ ಬಳಕೆಯಲ್ಲಿರುವ ‘ ಜಯರಾಮ ’, ‘ ರಾಮ ರಾಮ ’ ಶಬ್ದಗಳನ್ನು ಉಚಿತವರಿತು ಅಗತ್ಯಕ್ಕೆ ತಕ್ಕಂತೆ ಅಳವಡಿಸಿಕೊಳ್ಳುವ ಜಾಣ್ಮೆಯನ್ನು ತೋರಬೇಕಾಗುತ್ತದೆ. “ ಚಾಧರಿಜೀ, ಜಯರಾಮ ! ಜಯರಾಮ ! !” ಎಂದಾಗ ಜಯರಾಮನಿಗೆ ಏನಾಯಿತೋ ಎಂಬ ಭಯ ಮೂಡದೇ ಇದ್ದರೂ, “ ರಾಮ

ರಾಮು" ಎಂದಾಗ ಏನು ಅನಾಹುತವಾಯಿತೋ ಎಂಬ ಸಂದೇಹ ಮೂಡದೇ ಇದ್ದರೂ, ಕೃತಕತೆ ಮಾತ್ರ ಇದ್ದೇ ಇರುತ್ತದೆ. ಆದ್ದರಿಂದ 'ಚಾಥರಿಜೀ! ನಮಸ್ಕಾರ' ಎಂದರೆ ಅಪರಾಧವೇನೂ ಆಗುವುದಿಲ್ಲವಷ್ಟೆ?

ಒಡೆಯ, ಮಾಲೀಕ ಎಂಬುದನ್ನು ಸೂಚಿಸಲು ಬಳಸುವ 'ಸರಕಾರ' ಶಬ್ದವೂ ನಮ್ಮ ಎಚ್ಚರವನ್ನು ನಿರೀಕ್ಷಿಸುತ್ತದೆ. "ನೀವೆಲ್ಲರೂ ತುಸು ತಡೆಯಿರಿ. ನಾನು ಸರಕಾರಕ್ಕೆ ತಿಳಿಸುತ್ತೇನೆ" ಎಂದಾಗ ಅದು ಜಮೀನ್ದಾರ ಎಂಬುದನ್ನು ಸೂಚಿಸಲು ಅಸಮರ್ಥವಾಗುತ್ತದೆ. ಇಂತಹ ಸಂದರ್ಭಗಳಲ್ಲಿ ಪರ್ಯಾಯ ಶಬ್ದಗಳನ್ನೇ ಬಳಸುವುದು ಮೇಲು ಎಂಬುದು ನನ್ನ ಅಭಿಪ್ರಾಯ.

ವಿರಾಮಚಿಹ್ನೆಗಳ ಔಚಿತ್ಯಪೂರ್ಣವಾದ ಬಳಕೆ ಉತ್ತಮ ಶೈಲಿಯ ಅನಿವಾರ್ಯ ಅಂಗ ಎಂಬ ಮಾತನ್ನು ಅಲ್ಲಗಳೆಯುವಂತಿಲ್ಲ. ಹಲವಾರು ಅನುವಾದ ಗ್ರಂಥಗಳನ್ನು ಓದಿದಾಗ ಅನುವಾದಕರು ಈ ಅಂಶದತ್ತಲೂ ಗಮನ ಕೊಡಬೇಕಾದುದು ಅಗತ್ಯ ಎಂದೆನಿಸಿತು, ಈ ಕೆಳಕಂಡ ಪ್ರಕರಣವನ್ನು ಕಂಡಾಗಲಂತೂ ಇಷ್ಟೊಂದು ಅಲಕ್ಷ್ಯ ಸಲ್ಲದು ಎಂದೆನಿಸಿತು.

"ಅದೊಂದು ಅವರಿಗೆ ರೋಗ: ಕೈಯೊಳಗೆ ವ್ಹೀಲ ಇರುತ್ತದೆ. ಕಾಲಲ್ಲಿ ಎಕ್ಸೆಲೆಟರ, ಕಾಲಿಟ್ಟು ಒತ್ತಿದರೆ ತೀರಿತು, ಬುರ್ ಎಂದು ಓಡುವುದು ಗಾಡಿ. ನಾನು ಬೇಕಾದರೆ ವೇಗವಾಗಿ ಓಡಬಲ್ಲೆ, ಓಡದಿದ್ದರೆ ಮನುಷ್ಯಜಾತಿಯ ಮೇಲೆ ದಯೆ ತೋರಿಸುತ್ತೇನೆ, ಇಲ್ಲವೆ ಪೋಲಿಸರ ಬಡಿಗೆ ಬೆನ್ನಿಗೆ ಬಿದ್ದಿತೆಂಬ ಬೆದರಿಕೆ ಎಂದು ತಿಳಿಯಬೇಕು, ಹೀಗೆ ಡ್ರಾಯ್ವರನು ಹೇಳುತ್ತಾನೆ."

ಹೀಗಾಗಿ, ಈ ಅಂಶದತ್ತಲೂ ಗಮನ ಸೆಳೆದಿದ್ದೇನೆ.

ಪ್ರಾತಿನಿಧಿಕವಾಗಿ ಕೆಲವು ಸೂಚನೆಗಳನ್ನು ಮಾತ್ರ ಮುಂದಿರಿಸಲು ಸಾಧ್ಯವಾಗಿದೆಯೇ ಹೊರತು ಇದು ಸರ್ವಂಕಷವಾಗಿಲ್ಲ. ಹಿಂದಿ ಮತ್ತು ಕನ್ನಡ ಭಾಷೆಗಳ 'Comparative' ಮತ್ತು 'Contrastive' ವ್ಯಾಕರಣಗಳಲ್ಲಿ ಈ ಕಾರ್ಯವನ್ನು ಸರ್ವಂಕಷವಾಗಿ ನಿರ್ವಹಿಸಬೇಕು. ಇದು ಸೂಚನೆ ಮಾತ್ರ. ತೀ. ನಂ. ಶ್ರೀಕಂಠಯ್ಯನವರು ಈ ಕಾರ್ಯ ಮೊದಲು ಆಗಬೇಕೆಂದು ಆಶಿಸಿದ್ದರು. ಎಂದು ಈ ಅಗತ್ಯ ಪೂರೈಕೆಯಾಗುತ್ತದೆಯೇ ಕಾದು ನೋಡಬೇಕು.

ಕೋಶಗಳಾಗಲೀ, ವ್ಯಾಕರಣಗಳಾಗಲೀ, ಅನುವಾದ ಶಿಕ್ಷಣವಾಗಲೀ ತಮ್ಮಿಂದ ತಾವೇ ಏನನ್ನೂ ಸಾಧಿಸಲಾರವು. ಕಾಯಕ ಶ್ರದ್ಧೆ, ಅಭ್ಯಾಸ, ಪರಿಶ್ರಮ, ಅಧ್ಯಯನ ಇವುಗಳಿಗೆ ಅವು ಪೂರಕ–ಸಾಧನಗಳಾಗಿ ಬಂದಾಗ ಮಾತ್ರ ನೆಲೆಯಾಗಿ ನಿಲ್ಲಬಲ್ಲಂತಹ ಕಾರ್ಯವಾದೀತು. ಹೀಗೆಂದು ಯಾವ ಕೆಲಸವನ್ನೂ ಮಾಡದೆಯೇ ಕುಳಿತರೆ ಇಂದಿನ ಇದೇ ಅವ್ಯವಸ್ಥೆ, ಇದೇ ವಿಚಿತ್ರ ಪರಿಸ್ಥಿತಿ, ಇದೇ ಪುನರಾವೃತ್ತಿ, ಇದೇ ಶ್ರಮ-ಕಾಲ. ಪ್ರತಿಭೆಗಳ ಅಪವ್ಯಯ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಘಟಿಸುತ್ತಾ ಹೋಗುತ್ತದೆ. ಹಾಗೆ ಆಗದಿರಲೆಂಬ ಹಾರೈಕೆಯೊಡನೆ ಈ ಪ್ರಬಂಧವನ್ನು ಮುಕ್ತಾಯಗೊಳಿಸ ಬಯಸುತ್ತೇನೆ.

ಕನ್ನಡನಾಡಿನಲ್ಲಿ ಕನ್ನಡಜನಕ್ಕೆ ವಿದ್ಯೆಯನ್ನು ಕನ್ನಡದಲ್ಲಿ ಕಲಿಸಬೇಕೆಂಬುದು ಸಹಜವಾಗಿ ಕಾಣುತ್ತದೆ. ....ವಿದ್ಯೆಯಿಂದ ಮನುಷ್ಯನಿಗೆ ಮುಖ್ಯವಾಗಿ ಭಾವವಿಕಾಸ ವಾಗಬೇಕು. ಇದು ಮಾತೃಭಾಷೆಯಿಂದ ಆಗುವಂತೆ ಇನ್ನು ಯಾವ ಭಾಷೆಯಿಂದಲೂ ಆಗಲಾರದು. ....ಇದನ್ನು ಬಿಟ್ಟು ಪರಸೀಮೆಯ ಭಾಷೆಯಿಂದ ಭಾವವನ್ನು ವಿಕಾಸ ಗೊಳಿಸುತ್ತೇವೆನ್ನುವುದು ಅಸಾಧ್ಯವಾದ ಪ್ರಯತ್ನ. ....ಮಾತೃಭಾಷೆಯಲ್ಲಿ ಅಥವಾ ಅದಕ್ಕೆ ಸಮವಾದ ಭಾಷೆಯಲ್ಲಿ ಪಾಠಕಲಿಸುವುದರಿಂದ ಬರುವ ಸಂಸ್ಕಾರವು ಬೇರೆ ಯಾವ ಭಾಷೆಯಲ್ಲಿ ಕಲಿಸಿದರೂ ಬರುವುದಿಲ್ಲ. ಇದು ನಿಜವಾದ ಮಾತು; ಇದು ನಾವು ಮರೆಯಬಾರದ ಮಾತು.

—ಮಾಸ್ತಿ ವೆಂಕಟೇಶ ಅಯ್ಯಂಗಾರ್

ಎನ್. ಅನಂತರಂಗಾಚಾರ್

ಅನುವಾದ : ಇತರ ಭಾಷೆಗಳು

(ಸಂಸ್ಕೃತ, ಇಂಗ್ಲಿಷ್ ಮತ್ತು ಹಿಂದೀ ಭಾಷೆಗಳನ್ನುಳಿದು)

ಪ್ರಪಂಚದ ಸಾವಿರಾರು ಭಾಷೆಗಳನ್ನು ಪಂಡಿತರು ಸ್ಥೂಲವಾಗಿ ಜೀವಂತ ಭಾಷೆ ಮೃತ ಭಾಷೆ ಎಂದು ಎರಡು ಭಾಗ ಮಾಡುವುದುಂಟು. ಆಕಾರ, ಆವೇಶ, ಆಳ, ಭಾವ, ವೈವಿಧ್ಯಗಳಲ್ಲಿ ಬೃಹದ್ರೂಪಗಳನ್ನು ತಾಳಿ ಪಂಡಿತ ಪಾಮರರ ನಿತ್ಯಬಳಕೆಯಲ್ಲಿ ಹಾಸುಹೊಕ್ಕಾಗಿ ಸೇರಿಕೊಂಡು ನವನವೋನ್ಮೇಷಶಾಲಿಯಾಗಿ ಪ್ರವಹಿಸುತ್ತಿರುವ ಭಾಷೆಗೆ ಜೀವಂತ ಭಾಷೆಯೆಂದು ಹೆಸರು. ಮೂಲದ ಜಾಡಿನಲ್ಲಿಯೇ ಹರಿದು ಇತರ ಭಾಷೆಗಳ ಸಂಪರ್ಕದಿಂದ ವಿಶೇಷ ಪ್ರಭಾವಿತವಾಗದೆ ಜನಸಾಮಾನ್ಯರ ನಿತ್ಯ ಜೀವನ ದಿಂದ ದೂರವಾಗಿ ತಟಸ್ಥವಾಗಿರುವ ಭಾಷೆಗೆ ಮೃತ ಭಾಷೆಯೆಂದು ಸಂಜ್ಞೆ. ಜೀವಂತ ಭಾಷೆಯ ಬೆಳವಣಿಗೆಗೆ ಸ್ವಭಾಷೆಯ ಹೊಸ ಹೊಸ ಸ್ವತಂತ್ರ ಕೃತಿಗಳು ಎಷ್ಟು ಆವಶ್ಯಕವೋ ಪರಭಾಷೆಯ ಭಾಷಾಂತರಗಳೂ ಅಷ್ಟೇ ಆವಶ್ಯಕ; ಅಲ್ಲ ಅದಕ್ಕಿಂತಲೂ ಹೆಚ್ಚಿನ ಪ್ರಾಮುಖ್ಯವನ್ನು ಪಡೆಯುತ್ತವೆ. ಅಷ್ಟೇಕೆ ಪ್ರಪಂಚದ ಸಾಹಿತ್ಯ ಸೃಷ್ಟಿಯ ಆದಿಕಾಲದಿಂದ ಬೆಳೆದು ಬಂದ ಎಲ್ಲ ಸಾಹಿತ್ಯಗಳೂ ಪರಿಪುಷ್ಟವಾಗಿ ಬೆಳೆದುಬಂದಿರು ವುದು ಭಾಷಾಂತರಗಳಿಂದಲೇ ಎಂದು ಹೇಳಬಹುದು. ಬೇರೊಂದರ್ಥದಲ್ಲಿ ಹೇಳುವು ದಾದರೆ ಸ್ವತಂತ್ರ ಸೃಷ್ಟಿಕರ್ತನಾದ ಕವಿಯೂ ಒಂದು ರೀತಿಯ ಅನುವಾದಕ ಅಥವಾ ಭಾಷಾಂತರಕಾರನೆಂದು ಹೇಳಬಹುದು. ಅವನು ತನ್ನ ಸುತ್ತಮುತ್ತಲಿನ ಆಶೆ ಆತಂಕಗಳನ್ನು, ಲೋಪದೋಷಗಳನ್ನು ಸುಖದುಃಖಗಳನ್ನು ಮೋಡಿ ಮುರವುಗಳನ್ನು ಆಚಾರ ವ್ಯವಹಾರಗಳನ್ನು ತನ್ನದೇ ಆದ ಭಾಷೆಯಲ್ಲಿ ಅನುವದಿಸುತ್ತಾನೆ. ಇದನ್ನು ನಿಷ್ಕೃಷ್ಟವಾದ ರೀತಿಯಲ್ಲಿ ಅಳೆಯಲು ಸಾಧ್ಯವಿಲ್ಲ. ಆದರೆ ಅನ್ಯಭಾಷೆಗಳಲ್ಲಿ ರಚಿತವಾದ ಕೃತಿಗಳ ನೇರವಾದ ಭಾಷಾಂತರಗಳು ಅವುಗಳ ಪ್ರಭಾವವನ್ನೂ ಸ್ಪಷ್ಟವಾಗಿ ಚಿತ್ರಿಸ ಬಲ್ಲವು.

ಸಾಹಿತ್ಯವು ಸಮಾಜದ ನುಡಿಗನ್ನಡಿ ಎಂದು ಹೇಳುವುದು ಬಹು ಸಾಮಾನ್ಯ ವಾದ ಮಾತು. ಈ ಸಮಾಜವು ಪ್ರಪಂಚದ ಎಲ್ಲ ಭಾಗದಲ್ಲಿಯೂ ಏಕರೂಪ

ವಾಗಿರುವುದಿಲ್ಲ. ಅವುಗಳ ಪ್ರಾಕೃತಿಕ, ಭೌಗೋಳಿಕ, ಸಾಂಸ್ಕೃತಿಕ, ಆರ್ಥಿಕ, ಪ್ರಾದೇಶಿಕ ಹಿನ್ನೆಲೆಗಳಿಗನುಗುಣವಾಗಿ ವೈವಿಧ್ಯವನ್ನೂ ಭಿನ್ನತೆಯನ್ನೂ ಪ್ರದರ್ಶಿಸುತ್ತದೆ. ಅಂತರ ರಾಷ್ಟ್ರೀಯ ಐಕ್ಯತೆಯನ್ನು ಅಪೇಕ್ಷಿಸುತ್ತಿರುವ ಈ ಕಾಲದಲ್ಲಿ ಈ ಅಸಂಖ್ಯೇಯ ಸಮಾಜಗಳ ಭಾವೈಕ್ಯತೆಯ ಆವಶ್ಯಕತೆಯೆಷ್ಟೆಂಬುದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಅವುಗಳನ್ನು ಸಾಧಿಸುವುದು ಆ ಸಮಾಜಗಳನ್ನು ಪ್ರತಿಬಿಂಬಿಸುವ ಭಾಷಾ ಸಾಹಿತ್ಯಗಳ ಪರಸ್ಪರ ಸಮಾವೇಶದಿಂದ ಎಂಬುದನ್ನು ಬೇರೆಯಾಗಿ ವಿಶದಪಡಿಸಬೇಕಾಗಿಲ್ಲ.

ಭಾರತದ, ಅಷ್ಟೇ ಅಲ್ಲ ಪ್ರಪಂಚದ ಅತಿ ಪ್ರಾಚೀನವಾದ ಭಾಷೆಗಳಲ್ಲೊಂದಾದ ಸಂಸ್ಕೃತವೂ ಮತ್ತು ಇಂದಿನ ಆಧುನಿಕ ಭಾಷಾ ಸಾಹಿತ್ಯಗಳೂ ಪರಿಪುಷ್ಟವಾಗಿರುವುದು ಬಹುಮಟ್ಟಿಗೆ ಅನುವಾದಗಳಿಂದಲೇ. ಕನ್ನಡದಲ್ಲಿಯಂತೂ ಇದು ಬಹುಮಟ್ಟಿಗೆ ಸತ್ಯ. ಆದಿಕಾಲದಲ್ಲಿ ಅದರ ಸಂಬಂಧ ಭಾಷೆಗಳಾದ ಸಂಸ್ಕೃತ ಪ್ರಾಕೃತ ಅಪಭ್ರಂಶಗಳಿಂದಲೂ ಸ್ವಲ್ಪ ಕಾಲವಾದ ಮೇಲೆ ಬಂಧು ಭಾಷೆಗಳಾದ ತಮಿಳು ತೆಲುಗುಗಳಿಂದಲೂ ಇನ್ನೂ ಮುಂದೆ ಮಿತ್ರ ಭಾಷೆಗಳಾದ ಬಂಗಾಳಿ ಮರಾಠಿ ಮೊದಲಾದ ಭಾರತೀಯ ಭಾಷೆಗಳಿಂದಲೂ ಪರಭಾಷೆಗಳಾದ ಇಂಗ್ಲಿಷ್, ಫ್ರೆಂಚ್, ರಷ್ಯನ್ ಮೊದಲಾದ ಅನ್ಯದೇಶೀಯಗಳಿಂದಲೂ ವಸ್ತು, ಶೈಲಿ, ರೀತಿ, ಪದ, ತಂತ್ರ ಭಾವಗಳನ್ನು ಅನುವದಿಸಿಕೊಂಡು ಸುಪುಷ್ಟವಾಗಿ ಸರ್ವತೋಮುಖವಾಗಿ ಸಜೀವವಾಗಿ ಬೆಳೆಯುತ್ತಿದೆ.

ಭಾರತದಲ್ಲಿ ಅನುವಾದ ಸಾಹಿತ್ಯಕ್ಕೆ ನಿಜವಾದ ಕೋಡು ಮೂಡಿದುದು ಹತ್ತೊಂಬತ್ತನೆಯ ಶತಮಾನದಲ್ಲಿ ಆಂಗ್ಲ ಸಾಹಿತ್ಯ ಸಂಸ್ಕೃತಿಗಳ ಸಂಬಂಧವನ್ನು ಪಡೆದಮೇಲೆ. ಇಂಗ್ಲಿಷ್ ಸಾಹಿತ್ಯದ ಬಹುಮುಖವಾದ ವೈಭವವನ್ನೂ ರೀತಿಯ ವೈವಿಧ್ಯವನ್ನೂ ಸಜೀವವೂ ರಸಸ್ಯಂದಿಯೂ ಆದ ಭಾಷಾಮಾಧುರ್ಯವನ್ನೂ ಆಕರ್ಷಕವೂ ಆವೇಶಪೂರಿತವೂ ಆದ ಶೈಲಿಯನ್ನೂ ಹೊಸದಾಗಿ ಕಂಡುಂಡ ಭಾರತೀಯರು ಅವುಗಳನ್ನು ಅನುವಾದಗಳ ಮೂಲಕ ತಮ್ಮಲ್ಲಿಗೆ ಅಳವಡಿಸಿಕೊಳ್ಳಲು ಪ್ರಯತ್ನಪಟ್ಟರು. ಆ ದಾರಿಯಲ್ಲಿ ಮೊದಲು ಕಾಲಿಟ್ಟವರು ವಂಗೀಯರು. ಅವರ ಪ್ರತ್ಯಕ್ಷ ಅಥವಾ ಪರೋಕ್ಷ ಪ್ರಭಾವದಿಂದ ಇತರ ಭಾರತೀಯ ಭಾಷೆಗಳಲ್ಲಿಯೂ ಅನುವಾದ ಸಾಹಿತ್ಯ ವಿಶೇಷವಾಗಿ ಬೆಳೆದು ಸಾಹಿತ್ಯಪ್ರಪಂಚವನ್ನು ಪರಿಪುಷ್ಟವನ್ನಾಗಿಸುತ್ತಿದೆ. ಅಂದ ಮಾತ್ರಕ್ಕೆ ಪರಭಾಷೆಗಳಿಂದ ನೇರವಾಗಿ ಅನುವಾದಗಳಾಗಿಲ್ಲವೆಂದಲ್ಲ. ಅವುಗಳ ಪ್ರಮಾಣ ಒಂದು ದೃಷ್ಟಿಯಿಂದ ನೋಡಿದರೆ ಇವುಗಳಿಗಿಂತ ಹೆಚ್ಚಿನದೆಂದು ಹೇಳಿದರೂ ತಪ್ಪಾಗಲಾರದು. ಆದರೆ ಅವುಗಳ ಪರಾಮರ್ಶವು ಈ ಪ್ರಬಂಧದ ವ್ಯಾಸದಿಂದ ಹೊರಗಿನದಾದುದರಿಂದ ಇದರಲ್ಲಿ ಕನ್ನಡದ ಬಂಧುಮಿತ್ರ ಭಾಷೆಗಳ (ಹಿಂದಿಯನ್ನುಳಿದು) ಅನುವಾದ ಸಾಹಿತ್ಯವನ್ನು ಮಾತ್ರ—ಅದರಲ್ಲಿಯೂ ಕಳೆದ ೨೫ ವರ್ಷಗಳ ಅವಧಿಗೆ ಬಹುಮಟ್ಟಿಗೆ ಸಂಬಂಧಿಸಿರುವುದನ್ನು ಮಾತ್ರ ಬಹು ಸ್ಥೂಲವಾಗಿ ಪರಿಚಯಮಾಡಿಸಲು ಪ್ರಯತ್ನಪಟ್ಟಿದೆ. ಇದೇ ಸಂದರ್ಭದಲ್ಲಿ ಮತ್ತೊಂದಂಶವನ್ನೂ ವಾಚಕರ ಗಮನಕ್ಕೆ

ತರುವುದು ಹೆಚ್ಚು ಹಿತಕರ. ಭಾರತದಲ್ಲಿಯಾಗಲಿ ಕರ್ಣಾಟಕದಲ್ಲಿಯಾಗಲಿ ಅನುವಾದ ಸಾಹಿತ್ಯಕ್ಕೆ ಸಂಬಂಧಿಸಿದ ಎಲ್ಲ ಕೃತಿಗಳನ್ನೂ ಒಂದೆಡೆಯಲ್ಲಿ ಶೇಖರಿಸಿ ವಿಚಾರಮಾಡಲು ಅನುಕೂಲಿಸುವ ಸಂಘಸಂಸ್ಥೆಗಳಾಗಲಿ ಮಾರಾಟಗಾರರಾಗಲಿ ಇಲ್ಲದಿರುವುದರಿಂದ ಈ ಕ್ಷೇತ್ರದ ಪರಾಮರ್ಶೆ ಅಸಂಪೂರ್ಣವಾಗಿ ಉಳಿಯುವುದು ಅನಿವಾರ್ಯ. ಯಾವ ಪ್ರತ್ಯೇಕ ವ್ಯಕ್ತಿಗಾಗಲಿ ಎಲ್ಲವನ್ನೂ ಶೇಖರಿಸಿಕೊಂಡು ಅಭ್ಯಾಸ ಮಾಡುವುದಂತೂ ಅಸಾಧ್ಯ. ಆದುದರಿಂದ ಇಲ್ಲಿಯ ಪ್ರಯತ್ನವೂ ದಿಗ್ದರ್ಶನ ಮಾತ್ರ.

ಕನ್ನಡದಲ್ಲಿ ಅನುವಾದ ಸಾಹಿತ್ಯ ವಿಶೇಷವಾಗಿ ಪ್ರಭಾವಿತವಾದುದು ಬಿ. ವೆಂಕಟಾಚಾರ್ಯರಿಂದ. ಇವರು ಬಹು ಪ್ರಖ್ಯಾತರಾದ ಬಂಗಾಳಿ ಕಾದಂಬರಿಕಾರರಾದ ಬಂಕಿಮಚಂದ್ರ ಚಟ್ಟೋಪಾಧ್ಯಾಯರ ಎಲ್ಲ ಕಾದಂಬರಿಗಳನ್ನೂ ಕನ್ನಡಕ್ಕೆ ಭಾಷಾಂತರಿಸಿ ಕನ್ನಡಿಗರಿಗೆ ಹೊಸ ಕ್ಷೇತ್ರವೊಂದನ್ನು ಅಣಿಮಾಡಿಕೊಟ್ಟುದಲ್ಲದೆ ಅನೇಕ ಸ್ವತಂತ್ರ ಕೃತಿಗಳನ್ನೂ ರಚಿಸಿ ಮಾರ್ಗದರ್ಶಕರಾದರು. ಅವರ ಅನುವಾದಗಳು ಅಂದಿನಿಂದ ಇಂದಿನವರೆಗೆ ಬೇರೆ ಬೇರೆಯವರಿಂದ ಹತ್ತಾರು ಸಲ ಪ್ರಕಟವಾಗಿವೆ. ಪ್ರಸಕ್ತ ಅವಧಿಯಲ್ಲಿ ಅವರ ಕೃತಿಗಳನ್ನು ಕುರಿತು ಡಾ. ಎ. ಆರ್. ಕೃಷ್ಣಶಾಸ್ತ್ರಿಗಳು ವಿಮರ್ಶಾತ್ಮಕ ನಾಯಕ ಕೃತಿಯನ್ನು ರಚಿಸಿದ್ದಾರೆ. ಅದಕ್ಕೆ ಸಾಹಿತ್ಯ ಅಕಾಡೆಮಿಯ ಬಹುಮಾನವೂ ದೊರೆತಿದೆ. ಈಚೆಗೆ ಆಹೋಬಲ ಶಂಕರರವರಿಂದ ಅನುವಾದಿತವಾದ ಅವರ 'ರಜನಿ', 'ಇಂದಿರಾ', 'ಯುಗಳಾಂಗುರೀಯ' ಮತ್ತು 'ರಾಧಾರಾಣಿ' ಎಂಬುವೂ ಪುಷ್ಪಾದೇವಿಯವರಿಂದ ಅನುವದಿತವಾದ 'ರಾಜಾರಾಮಮೋಹನನ ಹೆಂಡತಿ' ಎಂಬುದೂ ಕಾವ್ಯಾಲಯದಿಂದ ಪ್ರಕಟವಾಗಿವೆ.

ಬಂಕಿಮಚಂದ್ರರಾದ ಮೇಲೆ ಬಂಗಾಳಿ ಸಾಹಿತ್ಯದಲ್ಲಿ ಬಹು ಪ್ರಖ್ಯಾತವಾದ ಹೆಸರೆಂದರೆ ರವೀಂದ್ರನಾಥ ಠಾಕೂರರವರದು. ಅವರ ಪ್ರತಿಭೆ ಸರ್ವತೋಮುಖವಾದುದು. ಅವರು ಗದ್ಯ, ಪದ್ಯ, ನಾಟಕ, ಕಾದಂಬರಿ, ವಿಮರ್ಶೆ, ಪ್ರಬಂಧ, ಪತ್ರಲೇಖನ, ಪ್ರವಾಸ, ಚಿತ್ರ ಮತ್ತು ಗೀತೆಗಳ ಕ್ಷೇತ್ರದಲ್ಲಿ ಆಶ್ಚರ್ಯಕರವಾದ ಕೃತಿನಿರ್ಮಾಣ ಮಾಡಿದ್ದಾರೆ. ಅವರ ಕೃತಿಗಳೆಲ್ಲ ಅವರ ಅಮೃತಸ್ಪರ್ಶದಿಂದ ಅಮರವಾಗಿವೆ. ಅವರು ಪ್ರಪಂಚದ ಸಾಹಿತಿಗಳ ಅಗ್ರಶ್ರೇಣಿಯಲ್ಲಿ ಪರಿಗಣಿತರಾಗಿದ್ದಾರೆ. ಅವರ ಪ್ರಪಂಚವಂತೂ ಅತಿ ವಿಸ್ತಾರವಾದುದು. ಬಾಬುಗಳು, ಭಿಕ್ಷುಕರು, ಬಡವರು, ಬಲ್ಲಿದರು, ಸುಖಿಗಳು, ದುಃಖಿಗಳು ಬಾಲಕ ಬಾಲಕಿಯರು, ನಟರು, ನ್ಯಾಯವಾದಿಗಳು, ತರುಣ ತರುಣಿಯರು ಎಲ್ಲರೂ ಅವರ ಲೇಖಣಿಯಿಂದ ಚಿತ್ರಿತರಾಗಿದ್ದಾರೆ. ಅವರ ಕಥನಕೌಶಲವಂತೂ ಅಸಾಧಾರಣವಾದುದು. ಅವರ ಅನೇಕ ಕೃತಿಗಳ ಭಾಷಾಂತರ ಕನ್ನಡದಲ್ಲಿ ಆಗಿದೆ. ಅವೆಲ್ಲವನ್ನೂ ಪಟ್ಟಿಮಾಡುವುದು ಪ್ರಯಾಸಕರ. ಅವರ ಸಾಹಿತ್ಯ ವಿಷಯಕವಾದ ಪ್ರಬಂಧಗಳ ಅನುವಾದಗಳು ತಳುಕಿನ ವೆಂಕಣ್ಣಯ್ಯನವರು, ಅಗರದ ನರಸಿಂಹಯ್ಯನವರು, ಎ. ಆರ್. ಕೃಷ್ಣಶಾಸ್ತ್ರಿಗಳು ಮೊದಲಾದವರಿಂದ ಬಹು ಹಿಂದೆಯೇ ಆಗಿದ್ದುವು. ಈಚೆಗೆ ಅಹೋಬಲಶಂಕರರು 'ರವೀಂದ್ರ ಕಥಾಮಂಜರಿ'ಯ ಐದು ಭಾಗಗಳನ್ನೂ

(ಸತ್ಯಶೋಧನ) 'ವಿನೋದಿನಿ' ಎಂಬ ಕಥಾಗುಚ್ಛವನ್ನೂ ಸ್ವಾಮಿ ಶಂಕರಾನಂದ ಸರಸ್ವತಿಯವರು 'ಚತುರಂಗ' (ಎ್ಃ. ಎಸ್. ವಾಸನ್) 'ಪ್ರಗತಿ ಸಂಹಾರ' (ಇದರಲ್ಲಿ ರವೀಂದ್ರರ ಕೊನೆಯ ನೀಳ್ಗತೆಗಳಾದ ರವಿವಾರ, ಕೊನೆಯಮಾತು, ಲಾಬೊರೇಟರಿ ಎಂಬುವು ಅಡಕವಾಗಿವೆ—ಸತ್ಯಶೋಧನ) ಎಂಬುವುಗಳನ್ನೂ 'ರಾಜಾ' ಮತ್ತು 'ಮುಕ್ತದ್ವಾರಾ' ಎಂಬ ಎರಡು ಸಾಂಕೇತಿಕ ನಾಟಕ (ಕಾವ್ಯಾಲಯ) ಗಳನ್ನೂ 'ನಿಬಂಧಮಾಲೆ'ಯ ಮೊದಲನೆಯ ಸಂಪುಟವನ್ನು (ಸಾಹಿತ್ಯ ಅಕಾಡೆಮಿಯ ಪರವಾಗಿ) ನಾರಾಯಣಸಂಗಮರು 'ಉದ್ಯಾಪನ ಪದ್ಯ' (ಶೇಷೇರ್ ಕಬಿತಾ ಎಂಬ ಕಾದಂಬರಿಯ ಅನುವಾದ–ಜೀವನ ಕಾರ್ಯಾಲಯ) 'ಅಚಲಾಯಿತ ನಾಟಕ' 'ರವೀಂದ್ರರ ಕತೆಗಳು' (ಮಿಂಚಿನಬಳ್ಳಿ) ಎಂಬ ಕೃತಿಗಳನ್ನೂ ಎ. ಆರ್. ಕೃಷ್ಣಶಾಸ್ತ್ರಿಗಳು 'ನಿಬಂಧ ಮಾಲೆ'ಯ ದ್ವಿತೀಯ ಸಂಪುಟವನ್ನೂ ಅಂಬುಜಾಕ್ಷಿಯವರು 'ಪುಷ್ಪೋದ್ಯಾನ' (ಮಾಲಂಚ ಎಂಬ ಕಾದಂಬರಿಯ ಅನುವಾದ) 'ರಾಜರ್ಷಿ' (ಎ್ಃ. ಎಸ್. ವಾಸನ್) ಎಂಬ ಕೃತಿಗಳನ್ನೂ ಪದ್ಮರಾಜ ಹನುಗುಂದರು 'ತಾರಾಮಂಡಲ' ಎಂಬ ಕೃತಿಯನ್ನೂ ಕೆ. ಎನ್. ಭಟ್ಟರ 'ಸಾಧನಾ' ಎಂಬ ಕಾದಂಬರಿಯನ್ನೂ ವಿ. ವೆಂಕೋಬಾಚಾರ್ಯರು 'ಕಾಬೂಲಿವಾಲಾ' ಎಂಬ ಕಥೆಯನ್ನೂ ಪಶುಪತಿರೆಡ್ಡಿಯವರು 'ಮಾಲಿನಿ' ಎಂಬ ಕಾದಂಬರಿಯನ್ನೂ ರಾಮಕೃಷ್ಣರಾಯರು 'ಕಚದೇವಯಾನಿ', 'ಅಮಾ', 'ಮಾತೃ ಪರಾಜಯ' ಎಂಬ ಮೂರು ರೂಪಕಗಳನ್ನೂ (ತ. ವೆಂ. ಸ್ಮಾರಕಮಾಲೆ) ಗಣೇಶ ಶರ್ಮರು 'ಅಂಚೆಮನೆ ಎಂಬ ನಾಟಕವನ್ನೂ ಕನ್ನಡದಲ್ಲಿ ಭಾಷಾಂತರ ಕೃತಿಗಳಾಗಿ ರಚಿಸಿದ್ದಾರೆ. ನಾರಾಯಣಸಂಗಮರ 'ರವೀಂದ್ರರ ೨೫ ಕಥೆಗಳು' ಎಂಬ ಕೃತಿಗೆ ಸಾಹಿತ್ಯ ಅಕಾಡೆಮಿಯ ಬಹುಮಾನ ದೊರೆತಿದೆ. ಇದರಲ್ಲಿ ಪೋಸ್ಟ್‌ಮಾಸ್ಟರ್, ಒಂದು ರಾತ್ರಿ, ಜೀವಿತ ಮತ್ತು ಮೃತ, ಕಾಬೂಲಿವಾಲ ಮೊದಲಾದ ೨೫ ಕತೆಗಳಿವೆ.

ಆಧುನಿಕ ಬಂಗಾಳಿ ಸಾಹಿತ್ಯದಲ್ಲಿ ಸರ್ವಜನಾದರಣೀಯನಾದ ಕಾದಂಬರಿ ಮತ್ತು ಸಣ್ಣ ಕತೆಗಳ ಲೇಖಕ ಶರತ್‌ಚಂದ್ರಚಟ್ಟೋಪಾಧ್ಯಾಯ. ಆತನ ಕೃತಿಗಳೆಲ್ಲ ಪರಮೋತ್ತಮವಲ್ಲದಿದ್ದರೂ ಅನೇಕವು ಬಂಕಿಂಚಂದ್ರ ಮತ್ತು ರವೀಂದ್ರರ ಕೃತಿಗಳ ಮಟ್ಟಕ್ಕೇರಲಾರದಿದ್ದರೂ ದೀನದಳಿತರ ವಿಷಯದಲ್ಲಿ ಆತನಿಗಿರುವ ಅಪೂರ್ವ ಸಹಾನು ಭೂತಿಯು ಅವನ ಕೃತಿಗಳನ್ನು ಬಹು ಆಕರ್ಷಕವನ್ನಾಗಿಯೂ ಬಹು ಜನಪ್ರಿಯವನ್ನಾ ಗಿಯೂ ಮಾಡಿದೆ. ಆತನ ಕಾದಂಬರಿಗಳಾದ 'ಶ್ರೀಕಾಂತ', 'ಅರಗಿನ ಮನೆ' 'ಷೋಡಶೀ' (ಭೈರವಿ), 'ವಿಜಯ', 'ದೇವದಾಸ', 'ವೃಂದಾವನ', 'ರಾಜಲಕ್ಷ್ಮಿ' 'ಸುಮತಿ–ಅನೂರಾಧ', 'ಪರಿಣೀತ', 'ಸ್ವಾಮಿ', 'ಅಕ್ಕಾಜಿ', 'ವೈಕುಂಠನ ಮೃತ್ಯುಪತ್ರ', 'ಚಿತ್ರ', 'ಮಂದಿರ', 'ಏಕಾದಶಿ ಬೈರಾಗಿ' ಮತ್ತು 'ಗುರುಚರಣ' 'ಪ್ರೇಮಪಥ', 'ಹೇಮಾಂಗನೆ', 'ಮಂಗಳಸೂತ್ರ', 'ಮಹಾಸತಿ', 'ಮಹೇಶ', 'ಗರ್ವಭಂಗ' 'ಅನುಪಮೆಯ ಪ್ರೇಮ', 'ಬಾಲ್ಯದ ಕತೆಗಳು' ಮೊದಲಾದುವು ಧಾರವಾಡದ ಸಮಾಜಪುಸ್ತಕಾಲಯದಿಂದ ಬಹು ಹಿಂದೆಯೇ ಪ್ರಕಟವಾದುವು. ಪುನಃ

'ಬ್ರಾಹ್ಮಣರ ಹುಡುಗಿ', 'ಅಧಿಕಾರ', 'ಶೇಷಪ್ರಶ್ನೆ', 'ಹಳ್ಳಿಯ ಸಮಾಜ', 'ಚಂದ್ರನಾಥ', 'ವೈಕುಂಠನ ಉಯಿಲು', 'ಮಹೇಶ', 'ಭಾವಚಿತ್ರ', 'ಸುಮತಿ-ಅನುರಾಧಾ', 'ದರ್ಪಚೂರ್ಣ', 'ಆಲೇಖ್ಯ', 'ದತ್ತ' ಎಂಬುವು ಹೆಚ್. ಕೆ. ವೇದವ್ಯಾಸಾಚಾರ್ಯರಿಂದ ಅನುವಾದಿತವಾಗಿ ಡಿ. ವಿ. ಕೆ. ಮೂರ್ತಿಯವರಿಂದ ಪ್ರಕಾಶಿತವಾಗಿವೆ. ಗುರುನಾಥಜೋಶಿಯವರಿಂದ ಭಾಷಾಂತರಿತವಾದ 'ಚಂದ್ರನಾಥ್' ಸಾಹಿತ್ಯಭಂಡಾರದಿಂದ ಪ್ರಕಟವಾಗಿದೆ. ವೀರಭದ್ರರು 'ಚರಿತ್ರಹೀನ' ಎಂಬ ಕಾದಂಬರಿಯನ್ನು ಭಾಷಾಂತರಿಸಿದ್ದಾರೆ. ಇತ್ತೀಚೆಗೆ ಅವರ 'ಅರಗಿನ ಮನೆ' ('ಗೃಹದಾಹ' ಕಾದಂಬರಿಯ ಅನುವಾದ-ಮೇವುಂಡಿಮಲ್ಲಾರಿಯವರಿಂದ), 'ನಡುಕಲ ಅಕ್ಕ' (ಗಣೇಶಶರ್ಮ), 'ಅರಕ್ಷಣೀಯ' (ಸಿ. ಕೆ. ನಾಗರಾಜ್), 'ಬಿಂದುವಾಸಿನಿಯ ಮಗ' (ಗುರುನಾಥಜೋಶಿ) 'ಸತೀವಿರಾಜ್' (ಮ. ವೆಂಕಟೇಶ್), 'ಗೃಹದೇವಿ' 'ಬಿರಾಜ್‌ಬಾಹು' ಎಂಬ ಕಾದಂಬರಿಯ (ಅನುವಾದ—ಕೃ. ನ. ಪಾರ್ವತಿ), 'ಛಾಯಾದೇವಿ ಮತ್ತು ಅತೃಪ್ತ ಆಕಾಂಕ್ಷೆ'(ಹೆಚ್. ವಿ. ನಾರಾಯಣ), 'ವಿಪ್ರದಾಸ್' (ಭಾರತೀರಮಣಾಚಾರ್) ಮೊದಲಾದುವು ಕನ್ನಡಕ್ಕೆ ಅನುವಾದವಾಗಿವೆ. ಶರತರ ಕೊನೆಯ ಕಾದಂಬರಿಯಾದ 'ಶೇಷಪರಿಚಯ'ವು ಗಣೇಶಶರ್ಮ ಮತ್ತು ಕೆ. ಕೆ. ಪೂಜಾರಿಯವರಿಂದ ಭಾಷಾಂತರವಾಗಿದೆ (ಇದರ ಮೂಲದ ೧೫ ಪರಿಚ್ಛೇದಗಳು ಶರತರಿಂದಲೂ ಉಳಿದ ೧೧ ಪರಿಚ್ಛೇದಗಳು ರಾಧಾರಾಣಿಯವರಿಂದಲೂ ರಚಿತವಾಗಿವೆ). ಶರತರ ಅವಸಾನ ಕಾಲದಲ್ಲಿ ೫ ಕಾದಂಬರಿಗಳು ಅಸಂಪೂರ್ಣವಾಗಿದ್ದುವು. ಅವುಗಳಲ್ಲಿ ಜಾಗರಣೆ ಎಂಬುದೊಂದು. ಅದನ್ನು ಲತಾ ಎಂಬುವರು ಪೂರ್ಣಗೊಳಿಸಿದರು. ಆ ಕಾದಂಬರಿಯು 'ಆಲೇಖ್ಯ'ಎಂಬ ಹೆಸರಿನಿಂದ ತೆಲುಗಿಗೆ ಪರಿವರ್ತಿತವಾಯಿತು. ಅದನ್ನು ಮ. ಸು. ಸುಲೋಚನ ಎಂಬುವರು ಕನ್ನಡಿಸಿದ್ದಾರೆ.

ರಮೇಶ ಚಂದ್ರದತ್ತರು ಬಂಗಾಳಿಯ ಮತ್ತೊಬ್ಬ ಖ್ಯಾತ ಕಾದಂಬರೀಕಾರರು. ಅವರ ಕಾದಂಬರಿಗಳಾದ 'ಸಮಾಜ' 'ಸಂಸಾರ' ಮತ್ತು 'ಮಹಾರಾಷ್ಟ್ರರ ಜೀವನ ಪ್ರಭಾತ' ಎಂಬುವು ಸಿ. ಕೃಷ್ಣರವರಿಂದ ಭಾಷಾಂತರವಾಗಿ ಕಾವ್ಯಾಲಯದಿಂದ ಪ್ರಕಾಶಿತವಾಗಿವೆ. ಹಾಗೆಯೇ ವಿಮಲ ಮಿತ್ರರ 'ಮಿಥುನ ಲಗ್ನ'ವೂ ಜರಾಸಂಧಿಯವರ 'ಕರ್ಮಚಾರಿ'ಯೂ ವಾಸಂತಿ ಪಡುಕೋಣೆಯವರಿಂದಲೂ ಅವರದೇ ಆದ 'ಸಾಹೇಬ ಬೀಬಿ ಔರ್‌ಗುಲಾಮ್' ಎಂಬುದು ಅಹೋಬಲಶಂಕರರವರಿಂದಲೂ ಪ್ರಮಥನಾಥ ಬಿಷಿಯವರ 'ಸಿಂಧು ನದೇರ್ ಪ್ರಹರಿ'ಯು ಕುಮಾರ ವೆಂಕಣ್ಣನವರಿಂದಲೂ ಮಾಣಿಕ್ಯಬ್ಯಾನರ್ಜಿಯವರ 'ಪದ್ಮಾನದಿಯ ನಾವಿಕ'ವು ಜೋಗಿಯವರಿಂದಲೂ ಪ್ರಬೋಧಕುಮಾರಸನ್ಯಾಲರ 'ಯಾತ್ರಿಕ'ವು ಜಿ. ಆರ್. ಹೆಗ್ಗಡೆಯವರಿಂದಲೂ ಕನ್ನಡಿಸಲ್ಪಟ್ಟಿವೆ. ದಕ್ಷಿಣ ಭಾಷಾ ಪುಸ್ತಕ ಸಮಿತಿಯ ಪರವಾಗಿ ಟಿ. ಎನ್. ಕುಮಾರಸ್ವಾಮಿಯವರಿಂದ ಸಂಪಾದಿತವಾದ 'ಆಚಾರ್ಯ ದೇವರ ಸೊಸೆ ಮತ್ತು ಇತರ ಕತೆಗಳ'ಲ್ಲಿ 'ಬಂದಿ', 'ಸಿದ್ಧೇಶ್ವರೀಲಿಮಿಟೆಡ್' 'ಡೌನ್‌ಡೆಲ್ಲಿ ಎಕ್ಸ್‌ಪ್ರೆಸ್' ಮತ್ತು 'ವಸಂತ ಸೇನೆ' ಎಂಬ ಬಂಗಾಳಿ ಕತೆಗಳು ಸಂಕಲಿತವಾಗಿವೆ.

ಸಾಹಿತ್ಯ ಅಕಾಡೆಮಿಯು ಸ್ಥಾಪಿತವಾದ ಮೇಲೆ ಅನುವಾದ ಸಾಹಿತ್ಯಕ್ಕೆ ವಿಶೇಷ ಪ್ರೋತ್ಸಾಹ ದೊರೆಯುತ್ತಿದೆ. ಭಾರತದ ವಿವಿಧ ಭಾಷೆಗಳ ಉತ್ತಮ ಕೃತಿಗಳು ಅಖಂಡಭಾರತದ ಪಂಡಿತ ಪಾಮರರಿಗೆ ಸುಲಭವಾಗಿ ದೊರೆಯಬೇಕೆಂಬ ಘನ ಉದ್ದೇಶದಿಂದ ಅಕಾಡೆಮಿಯವರು ಅಂತಹ ಅನೇಕ ಕೃತಿಗಳ ಅನುವಾದಗಳಿಗೆ ನೆರವನ್ನೀಯುತ್ತಿದ್ದಾರೆ. ಅವರಿಂದ ಕನ್ನಡ ಸಾಹಿತ್ಯಕ್ಕೂ ಬಹು ಮಟ್ಟಿನ ಉಪಯೋಗವಾಗುತ್ತಿದೆ. ಭಾರತದ ವಿವಿಧ ಭಾಷಾ ಸಾಹಿತ್ಯಗಳ ವಿಷಯವಾಗಿ ಆಯಾ ಪಂಡಿತೋತ್ತಮರಿಂದ ರಚಿತವಾದ ಲೇಖನಮಾಲೆಯನ್ನೂ 'ಸಮಕಾಲೀನ ಭಾರತೀಯ ಸಾಹಿತ್ಯ' ಎಂಬ ಹೆಸರಿನಲ್ಲಿ ಪ್ರಕಟಿಸಿದ್ದಾರೆ. ಇದರಲ್ಲಿ ೧೬ ಭಾರತೀಯ ಭಾಷಾ ಸಾಹಿತ್ಯಗಳ ಚರಿತ್ರೆಯಿದೆ. ಸುಪ್ರಸಿದ್ಧ ಕನ್ನಡ ಕವಿವರ್ಯರಾದ ಪು. ತಿ. ನರಸಿಂಹಾಚಾರ್ಯರು ಇದರ ಅನುವಾದಕರು. ಹಾಗೆಯೆ ವಿಖ್ಯಾತ ಬಂಗಾಳಿ ವಿದ್ವಾಂಸರಾದ ಡಾ. ಸುಕುಮಾರ ಸೇನರವರಿಂದ ರಚಿತವಾದ ಬಂಗಾಳಿ ಸಾಹಿತ್ಯ ಚರಿತ್ರೆಯನ್ನು ಕನ್ನಡದ ಖ್ಯಾತ ಸಾಹಿತಿಗಳಾದ ವಿ. ಸೀತಾರಾಮಯ್ಯನವರು ಕನ್ನಡಕ್ಕೆ ಭಾಷಾಂತರಿಸಿದ್ದಾರೆ. ಇದರ ಆಶ್ರಯದಲ್ಲಿಯೇ ಅಸ್ಸಾಮಿಯ ಸಾಹಿತ್ಯದ ಪ್ರಖ್ಯಾತ ಕಾದಂಬರಿಕಾರರಾದ ರಜನೀಕಾಂತ ಬರದಲ್ಯೆ ಅವರ 'ಮೀರಿ–ಜಯಿರಿ' ಎಂಬ ಕಾದಂಬರಿಯನ್ನು ಗುರುನಾಥ ಜೋಶಿಯವರು 'ಮೀರಿ ಮಗಳು' ಎಂಬ ಹೆಸರಿನಲ್ಲಿ ಪರಿವರ್ತಿಸಿದ್ದಾರೆ. ಒರಿಯ ಸಾಹಿತ್ಯದ ಶ್ರೇಷ್ಠ ಕಾದಂಬರೀಕಾರರಾದ ಕಾಳೀಚರಣಪಾಣಿಗ್ರಾಹಿಯವರ ಕಾದಂಬರಿಯೊಂದು ಗೌರೀಶ ಕಾಯ್ಕಿಣಿಯವರಿಂದ 'ಮಣ್ಣಿನ ಮನುಷ್ಯ' ಎಂಬ ಶಿರೋನಾಮೆಯಲ್ಲಿ ಪ್ರಕಟವಾಗಿದೆ. ಮಲೆಯಾಳದ ಖ್ಯಾತ ಕತೆಗಾರರಾದ ತಹೞಿ ಶಿವಶಂಕರಪಿಳ್ಳೈಯವರ 'ರಂಡು ಇರುಂಗಲಿ' ಎಂಬ ಕಾದಂಬರಿಯು ನಾ. ಕಸ್ತೂರಿ ಮತ್ತು ಬಿ. ಶಂಕರಭಟ್ಟರಿಂದ 'ಎರಡು ಬಳ್ಳ' ಎಂಬ ನಾಮಧೇಯದಿಂದಲೂ ಇವರ 'ಚೆಮ್ಮೀನ್' ಎಂಬುದು 'ಕೆಂಪು ಮೀನು' ಎಂಬ ಹೆಸರಿನಿಂದ ಪ್ರಕಟವಾಗಿರುವುದೂ ಇದೇ ಆಶ್ರಯದಲ್ಲಿ. ಹಾಗೆಯೇ ಕನ್ನಡ ವಿದ್ವಾಂಸರಾದ ಕೆ. ವೆಂಕಟರಾಮಪ್ಪನವರು ತೆಲುಗಿನ ಪಂಡಿತವರ್ಯರಾದ ನೋರಿನರಸಿಂಹಶಾಸ್ತ್ರಿಗಳ 'ರುದ್ರಮದೇವಿ' ಎಂಬ ಕಾಕತೀಯರ ವಿಷಯಕವಾದ ಐತಿಹಾಸಿಕ ಕಾದಂಬರಿಯನ್ನು ಅನುವದಿಸಿರುವುದೂ ಈ ನೇತೃತ್ವದಲ್ಲಿಯೇ. ಇದೇ ತೆಲುಗು ಸಾಹಿತ್ಯದ ಪ್ರಸಿದ್ಧ ಕತೆಗಾರರಾದ ಬಲಿವಾಡುಕಾಂತಾರಾವ್, ಕೊಡವಟಿಗಂಟಿ ಕುಟುಂಬರಾವ್, ಚಿಂತಾದೀಕ್ಷಿತಲು ಮೊದಲಾದವರ ಶ್ರೇಷ್ಠ ಕತೆಗಳನ್ನೊಳಗೊಂಡ ಶಿವಶಂಕರ ಶಾಸ್ತ್ರಿಗಳವರಿಂದ ಸಂಪಾದಿತವಾದ 'ಆಂಧ್ರ ಕಥಾಮಂಜೂಷ'ವೆಂಬ ಕಥಾ ಸಂಗ್ರಹವು ಕೊ. ಚೆನ್ನಬಸಪ್ಪನವರಿಂದ ಈ ಆಶ್ರಯದಲ್ಲಿಯೇ ಅನುವಾದಿತವಾಗಿವೆ. ಎಂ. ಜಿ. ಭೀಮರಾಯರಿಂದ ಅನುವಾದಿತವಾದ 'ಒಲುಮೆಯ ಚಿಲುಮೆ' ಎಂಬ ತೆಲುಗು ಕೃತಿಯ ಭಾಷಾಂತರಕ್ಕೆ ಅಕಾಡೆಮಿಯ ಬಹುಮಾನ ದೊರೆತಿದೆ. 'ರವೀಂದ್ರರ ಕಥೆಗಳು ಮತ್ತು ನಿಂಬಂಧಮಾಲಾ' ಅನುವಾದಗಳನ್ನು ಹಿಂದೆಯೇ ತಿಳಿಸಿದೆ.

ಸಾಹಿತ್ಯ ಅಕಾಡೆಮಿಯಂತೆಯೇ ದಕ್ಷಿಣ ಭಾರತದ ಭಾಷೆಗಳ ಅಭಿವೃದ್ಧಿಗಾಗಿ ಪುಸ್ತಕ ಪ್ರಕಾಶನ ಕಾರ್ಯವನ್ನು ಕೈಗೊಂಡಿರುವ ಮತ್ತೊಂದು ಸಂಸ್ಥೆ 'ದಕ್ಷಿಣಭಾರತ ಪುಸ್ತಕ ಸಮಿತಿ' (South Indian Book Trust). ಇದು ಫೋರ್ಡ್ ಸಹಾಯಕ ಸಂಸ್ಥೆ, ಕೇಂದ್ರ ಮತ್ತು ರಾಜ್ಯಸರ್ಕಾರಗಳು, ಮತ್ತು ವಿವಿಧ ವಿಶ್ವವಿದ್ಯಾನಿಲಯಗಳು ಇವುಗಳ ನೆರವಿನಿಂದ ಭಾಷಾಂತರಿತ ಗ್ರಂಥ ಪ್ರಕಟಣೆಗೆ ವಿಶೇಷ ಸಹಾಯಮಾಡುತ್ತಿದೆ. ಕಡಿಮೆ ಬೆಲೆಗೆ ಉತ್ತಮ ಪುಸ್ತಕಗಳನ್ನು ದೊರಕಿಸುವುದು ಇದರ ಪ್ರಧಾನ ಧ್ಯೇಯ. ಇದು ತನ್ನ ಕಾರ್ಯಕ್ಷೇತ್ರವನ್ನು ಪ್ರಧಾನವಾಗಿ ದ್ರಾವಿಡ ಭಾಷೆಗಳಾದ ಕನ್ನಡ, ತಮಿಳು, ತೆಲುಗು ಮತ್ತು ಮಲೆಯಾಳಗಳಿಗೆ ಸೀಮಿತಗೊಳಿಸಿದೆ. ಈ ಭಾಷಾಗ್ರಂಥಗಳ ಪರಸ್ಪರ ಪರಿವರ್ತನಕ್ಕೋ ಅಥವಾ ಅನ್ಯಸ್ವದೇಶ ಪರದೇಶ ಭಾಷೆಗಳಿಂದ ಈ ಭಾಷೆಗಳ ಪರಿವರ್ತನ ಕಾರ್ಯಕ್ಕೋ ತನ್ನ ಕಾರ್ಯವನ್ನು ಮೀಸಲಾಗಿಸಿದೆ. ಈ ಸಂಸ್ಥೆಯ ಕಾರ್ಯಕ್ರಮದಿಂದ ಕನ್ನಡ ಅನುವಾದ ಸಾಹಿತ್ಯಕ್ಕೆ ವಿಶೇಷ ಸಹಾಯ ದೊರೆತಿದೆ. ಸೋದರೀ ಭಾಷೆಗಳಾದ ತಮಿಳು, ತೆಲುಗು, ಮತ್ತು ಮಲೆಯಾಳಗಳ ಉತ್ತಮ ಕೃತಿಗಳು ಕನ್ನಡಕ್ಕೆ ಅನುವಾದವಾಗಿವೆ. ಇದರ ಆಶ್ರಯದಲ್ಲಿಯೇ ಬಿ. ಪುಟ್ಟ ಸ್ವಾಮಯ್ಯನವರು ಬಂಗಾಳದ ತಾರಾಶಂಕರ ವಂದ್ಯೋಪಾಧ್ಯಾಯರ 'ನಾಅಅ' ಎಂಬ ಕಾದಂಬರಿಯನ್ನೂ 'ಇವನಲ್ಲ' ಎಂಬ ಹೆಸರಿನಿಂದ ಪ್ರಕಟಿಸಿದ್ದಾರೆ. 'ದಕ್ಷಿಣಭಾಷಾ ಕಥಾಮಂಜರಿ' ಎಂಬ ಎರಡು ಶ್ರೇಷ್ಠ ಕಥಾಸಂಗ್ರಹಗಳು ಈ ಮಾಲೆಯಲ್ಲಿ ಸೇರಿವೆ. ಮೊದಲನೆಯ ಸಂಪಾದಕರು ಎ. ಎಸ್. ಕೃಷ್ಣಸ್ವಾಮಿಯವರು. ಅನುವಾದಕರು ಚಂದ್ರಶೇಖರ ಐತಾಳರು. ಇವರಿಬ್ಬರೂ ಇದೇ ಆಶ್ರಯದಲ್ಲಿ 'ನೈಕಲ್' ಎಂಬ ಮತ್ತೊಂದು ತೆಲುಗು ಕೃತಿಯನ್ನು ಕನ್ನಡಕ್ಕೆ ತಂದಿದ್ದಾರೆ. ಎರಡನೆಯ ಸಂಪುಟದ ತಮಿಳು ಕತೆಗಳನ್ನು ಜಯಲಕ್ಷ್ಮಿ ಆರ್. ಶ್ರೀನಿವಾಸನ್ ಅವರೂ, ಮಲೆಯಾಳದವನ್ನು ಕೆ. ಎಸ್. ಕರುಣಾಕರನ್ ಅವರೂ ತೆಲುಗಿನವನ್ನು ವೀರಭದ್ರರೂ ಭಾಷಾಂತರಿಸಿದ್ದಾರೆ. ಭಾರತದ ವಿವಿಧ ಪ್ರಾಂತಗಳ ಲೇಖಕರ ಮನರಂಜಕ ಮತ್ತು ನೀತಿಬೋಧಕ ಕತೆಗಳನ್ನು ಉಷಾ ಮತ್ತು ಕಾವೇರಿ ಎಂಬುವರು ಸಂಕಲಿಸಿ 'ಜಾನಪದ ಕಥಾಸಂಗ್ರಹ' ವೆಂಬ ಹೆಸರಿನಲ್ಲಿ ಅನುವಾದ ಮಾಡಿದ್ದಾರೆ. ತಮಿಳು ಭಾಷೆಯಿಂದ ಜಿ. ಎಸ್. ಕೃಷ್ಣ ರಾಯರು ಕೆ. ಕೆ. ಪಿಳ್ಳೆಯವರ 'ಪ್ರಾಚೀನ ಭಾರತದ ಇತಿಹಾಸ' ಎಂಬ ಚಾರಿತ್ರಕ ಗ್ರಂಥವನ್ನೂ ಕನ್ನಡಿಸಿದ್ದಾರೆ. ಮತ್ತೂರು ಕೃಷ್ಣಮೂರ್ತಿಯವರು ತಮಿಳಿನ ಪ್ರಪ್ರಥಮ ಕಾದಂಬರಿಯಾದ 'ಪ್ರತಾಪ ಮೊದಲಿ' (ವೇದನಾಯಕಂ ಪಿಳ್ಳೆಯವರ ಚರಿತ್ರೆ), ಪ್ರಸಿದ್ಧ ಸಾಮಾಜಿಕ ಕಾದಂಬರಿಯಾದ ಜಿ. ಕೌಸಲ್ಯಾ ಅವರ 'ಡಾ. ಅಖಿಲಾ', ಕಲ್ವಗೋಪಾಲಕೃಷ್ಣ ಅವರ 'ಕಾಗದದ ಪಾಪಚ್ಚಿ' ಮುಂತಾದವನ್ನೂ ಭಾಷಾಂತರಿಸಿರುವುದೂ ಈ ಸಂಸ್ಥೆಯ ನೆರವಿನಿಂದಲೇ. ರಾಜಾಜಿಯವರು ತಮಿಳಿನ ಸುಪ್ರಸಿದ್ಧ ಗದ್ಯ ಲೇಖಕರು. ಅವರ 'ರಾಮಾಯಣ'ವನ್ನೂ 'ಕಲ್ಪನೆಯ ಕಾಡು' ಎಂಬ ಶಿಶುಸಾಹಿತ್ಯಕ್ಕೆ ಸಂಬಂಧಪಟ್ಟ ಕಥಾವಳಿಯನ್ನೂ ಪ್ರಖ್ಯಾತರಾದ ರಾಜಂ ಅಯ್ಯರವರ

'ಕಮಲಾಂಬಾಳ್ ಚರಿತ್ರ' (ಬಾಳಿನ ರಹಸ್ಯ) ವೆಂಬ ಸಾಮಾಜಿಕ ಕಾದಂಬರಿಯನ್ನೂ ಕೆ. ಸಂಪದ್ಗಿರಿರಾಯರು ಕನ್ನಡಕ್ಕೆ ಪರಿವರ್ತನೆ ಮಾಡಿದ್ದಾರೆ. 'ಮಂತ್ರವಿದ್ಯೆ' ಎಂಬುದು ಶಬರೀ ರಾಜನ್ ಅವರಿಂದ ರಚಿತವಾದ ಶಿಶುಸಾಹಿತ್ಯ. ಅ. ರಾ. ಮಿತ್ರರು ಅದರ ಕನ್ನಡ ಅನುವಾದಕರು. ಭಾರತಿಯವರ ಕವಿತೆಗಳು ಆಧುನಿಕ ತಮಿಳು ಕಾವ್ಯ ಪ್ರಪಂಚದಲ್ಲಿ ಬಹು ಗಣ್ಯವಾದುವು. 'ತಿರುಕ್ಕುಱಳ್' ಪ್ರಾಚೀನ ತಮಿಳು ಸಾಹಿತ್ಯದ ಕೃತಿ ರತ್ನ (ಇದರ ಪದ್ಯರೂಪವಾದ ಭಾಷಾಂತರವನ್ನೂ 'ನೀತಿಮಂಜರಿ' ಯೆಂಬ ಹೆಸರಿನಲ್ಲಿ ಆರ್. ನರಸಿಂಹಾಚಾರ್ಯರು ಕನ್ನಡದಲ್ಲಿ ಹಿಂದೆಯೇ ಪ್ರಕಟಿಸಿದ್ದಾರೆ). ಇವೆರಡನ್ನೂ ಎಲ್. ಗುಂಡಪ್ಪನವರು ಉತ್ತಮ ರೀತಿಯಲ್ಲಿ ಕನ್ನಡಕ್ಕೆ ಪರಿವರ್ತಿಸಿದ್ದಾರೆ. ಭಾರತೀಯ ಪುರಾಣಗಳಿಂದ ಅನೇಕ ಕತೆಗಳನ್ನು ಆಯ್ದು ಚಂದ್ರಶೇಖರನ್ ಅವರು 'ಆರ್ಯ ಚರಿತ್ರಂ' ಎಂಬ ಸಂಕಲನವನ್ನು ತಮಿಳಿನಲ್ಲಿ ಪ್ರಕಟಿಸಿದರು. ಅದರ ಕನ್ನಡ ಅನುವಾದವು ಟಿ. ಎಲ್. ಶ್ರೀನಿವಾಸಾಚಾರ್ಯರಿಂದ ನಡೆದಿದೆ. ಪುರನುಬಾಲಕೃಷ್ಣನ್ ಅವರ ಕಾದಂಬರಿಯೊಂದನ್ನು ಜಯಲಕ್ಷ್ಮಿ ಆರ್. ಶ್ರೀನಿವಾಸನ್ ಅವರು 'ಚಿನ್ನದ ಬಳೆ' ಎಂಬ ಹೆಸರಿನಲ್ಲಿ ಭಾಷಾಂತರಿಸಿದ್ದಾರೆ. ಇವುಗಳಿಗೆಲ್ಲ ಸಂಸ್ಥೆಯ ನೆರವು ದೊರೆತಿದೆ. ಸಂಸ್ಥೆಯ ನೆರವಿನಿಂದಲ್ಲದಿದ್ದರೂ ಸ್ವತಂತ್ರವಾಗಿ ಗೊರೂರವರಿಂದ ಅನುವಾದಿತವಾಗಿರುವ 'ಕೊನಿಷ್ಠೆಯ ಕತೆಗಳು' ತಮಿಳಿನಿಂದ ಬಂದ ಉತ್ತಮ ಕಥಾ ಸಂಗ್ರಹ.

ಕನ್ನಡದ ಇತರ ಸೋದರೀ ಭಾಷೆಗಳಾದ ಮಲೆಯಾಳ ಮತ್ತು ತೆಲುಗು ಭಾಷೆಗಳಿಂದಲೂ ಇತ್ತೀಚೆಗೆ ಅನೇಕ ಅನುವಾದಗಳಾಗಿ ಕನ್ನಡ ಸಾಹಿತ್ಯ ಭಂಡಾರ ಸುಪುಷ್ಟವಾಗುತ್ತಿದೆ. ಮಲೆಯಾಳದಿಂದ ಅನುವಾದ ಮಾಡುತ್ತಿರುವವರಲ್ಲಿ ಕೆ. ಎಸ್. ಕರುಣಾಕರನ್ ಮತ್ತು ನಾ. ಕಸ್ತೂರಿಯವರು ಪ್ರಸಿದ್ಧರು. ಇವರಲ್ಲಿ ಮೊದಲನೆಯವರು ಆರ್. ಶಂಕರಕುರುಪ್ಪರ 'ಆಣುಂಪೆಣ್ಣುಂ' (ಗಂಡು ಹೆಣ್ಣಾದಾಗ) ಎಂಬುದನ್ನೂ ಪಾವುಣ್ಣಿ ತೈಕ್ಕಾಡರ 'ವಿಚಿತ್ರ ಪಂದ್ಯಂ' ಎಂಬುದನ್ನೂ ಮಾಲಿಯವರ 'ಸರ್ಕಸ್' ಎಂಬ ಕಿರುಹೊತ್ತಿಗೆಯೊಂದನ್ನೂ ಕನ್ನಡಕ್ಕೆ ಪರಿವರ್ತಿಸಿದ್ದಾರೆ. ಕಸ್ತೂರಿಯವರು ಕೃಷ್ಣಮೇನನ್ನರ 'ಚೇರುಮಾನ್ ಪೆರುಮಾಳ್' ಎಂಬ ಪುರಾತನ ಕಾಲಕ್ಕೆ ಸಂಬಂಧಿಸಿದ ಐತಿಹಾಸಿಕ ಕಾದಂಬರಿಯನ್ನು ಕನ್ನಡಿಸಿದ್ದಾರೆ. ಇದು ಶಂಕರಾಚಾರ್ಯರ ಕಾಲಕ್ಕೆ ಸಂಬಂಧಪಟ್ಟ ೧೨೦೦ ವರ್ಷದ ಹಿಂದಿನ ಕೇರಳದ ಸ್ಥಿತಿಯನ್ನು ಚಿತ್ರಿಸುತ್ತದೆ. ಇದೂ ದಕ್ಷಿಣ ಭಾರತ ಪುಸ್ತಕ ಸಮಿತಿಯ ಸಹಾಯದಿಂದ ಪ್ರಕಾಶಿತವಾದುದು.

ಅಕಾಡೆಮಿಯ ಆಶ್ರಯದಲ್ಲಿ ಪ್ರಕಟವಾದ ಕೆಲವು ತೆಲುಗು ಗ್ರಂಥಗಳನ್ನೂ ಮೇಲೆ ಸೂಚಿಸಿದೆ. ಸ್ವತಂತ್ರವಾಗಿ ಬೆಳಕಿಗೆ ಬಂದ ಹಲವಾರು ಗ್ರಂಥಗಳೂ ಉಂಟು. ಈ ಗ್ರಂಥಗಳನ್ನು ಅನುವಾದ ಮಾಡಿದವರಲ್ಲಿ ಎಂ. ಜಿ. ಭೀಮರಾಯರು ಪ್ರಖ್ಯಾತರು. ಇವರು ಮುಪ್ಪಾಳ ರಂಗನಾಯಕಮ್ಮನವರ 'ಬಲಿಪೀಠ' ಮತ್ತು 'ಚಕ್ರಭ್ರಮಣ' ಎಂಬ ಕಾದಂಬರಿಗಳನ್ನೂ ಶಾರ್ವರಿ ಮತ್ತು ಗಣಪತಿ ಶಾಸ್ತ್ರಿಗಳವರ 'ಹೊಸ ಬಾಳಿನ

ಹೊಸದಾರಿ' ಮತ್ತು 'ವಿಶಾಲ ನೇತ್ರವು' ಎಂಬ ಕೃತಿಗಳನ್ನೇ ಅಲ್ಲದೆ ತೆಲುಗು ಸಾಹಿತ್ಯದ ವಿವಿಧ ಕೃತಿಗಳ ಆಧಾರದ ಮೇಲೆ 'ವಿಶ್ವನಾಥ', 'ಪದವಿಹೀನೆ' 'ಒಂದೇ ಹಾಡು' 'ಎರಡು ರಾಗ', 'ನೆಳಲು ಬೆಳಕು', 'ಬೆಟ್ಟಕ್ಕೆ ಹೊತ್ತಕಲ್ಲು' 'ರಾಜೀವಪುರ', 'ಸ್ತ್ರೀ', 'ಬೇಡಿಬಂದ ಭಾಗ್ಯ', 'ಒಲುಮೆಯ ಚಿಲುಮೆ' ಎಂಬ ವಿವಿಧ ಕತೆ ಮತ್ತು ಕಾದಂಬರಿಗಳನ್ನು ಕನ್ನಡದಲ್ಲಿ ರಚಿಸಿದ್ದಾರೆ. 'ಅನಾಮಧೇಯನ ಆತ್ಮಕಥೆ'ಯೆಂಬುದು ಕವಿಸಾಮ್ರಾಟ್ ಕಲಾಪ್ರಪೂರ್ಣ ವಿಶ್ವನಾಥ ಸತ್ಯನಾರಾಯಣರ 'ಅನಾಥಪಕ್ಷಿ'ಯೆಂಬ ಕಾದಂಬರಿಯ ಅನುವಾದ. ವೀರಭದ್ರರು ಇದರ ಅನುವಾದಕರು ಎಸ್. ಅನಂತನಾರಾಯಣರು ಅಡವಿ ಬಾಪುರಾಜು ಅವರ 'ನಾರಾಯಣರಾವ್' ಎಂಬ ಕಾದಂಬರಿಯನ್ನು ಕನ್ನಡಿಸಿದ್ದಾರೆ. ಆತ್ರೇಯರ 'ರಕ್ತಾಂಜಲಿ'ಯು ಕೋಲಾರದ ವಾಸುದೇವರಾಯರಿಂದ ಅನುವಾದಿತವಾಗಿದೆ. ಉನ್ನವ ವಿಜಯಲಕ್ಷ್ಮಿಯವರ 'ನಿರೀಕ್ಷಣ'ವನ್ನು ಕುಮಾರಿ ಇಂದಿರಾ ಅವರು ಭಾಷಾಂತರಿಸಿದ್ದಾರೆ. ಭಾನುಮತಿಯ ಸಣ್ಣಕತೆಗಳು ಬಿಡಿಬಿಡಿಯಾಗಿ ಅನುವಾದಿತವಾಗಿವೆ. 'ತೆಲುಗು ವೇಮನ ರತ್ನಗಳು' ಮತ್ತು 'ವೇಮನಗೀತೆ'ಗಳು ರಾಯದುರ್ಗದ ಅಶ್ವತ್ಥರಾವ್ ಚಿತ್ರದುರ್ಗದ ಭೀಮರಾಜು, ಮತ್ತು ಎಸ್. ಆರ್ ಪಾಟೀಲರುಗಳಿಂದ ಭಿನ್ನ ಭಿನ್ನವಾಗಿ ಅನುವಾದವಾಗಿವೆ.

ಮರಾಠಿ ಕನ್ನಡದ ಗಡಿನಾಡಿನ ಭಾಷೆ. ಒಂದಾನೊಂದು ಕಾಲದಲ್ಲಿ ಅದು ಉತ್ತರ ಕರ್ಣಾಟಕದವರನ್ನು ಕಪಿಮುಷ್ಟಿಯಿಂದ ಹಿಡಿದು ಅವರ ಕನ್ನಡಿಗತನವನ್ನೇ ಅಳಿಸಿಬಿಟ್ಟಿತ್ತು. ಅದರ ಪ್ರಭಾವವು ಕನ್ನಡದ ಮೇಲೆ ಈಗಲೂ ಅಲ್ಪವಾಗಿಯಾದರೂ ಇಲ್ಲವೆಂದು ಹೇಳಲು ಸಾಧ್ಯವಿಲ್ಲ. ಮರಾಠಿ ಭಾಷಾಸಾಹಿತ್ಯಗಳ ಸಂಪರ್ಕವೂ ಅಷ್ಟೇ ನಿಕಟವಾಗಿ ಬೆಳೆದು ಬಂದಿದೆ. ಈ ಶತಮಾನದ ಆದಿಕಾಲದಿಂದ ಕನ್ನಡಿಗರು ಆ ಸಾಹಿತ್ಯದ ನೆರವನ್ನೂ ಯಥೋಚಿತವಾಗಿ ಬಳಸಿಕೊಂಡಿದ್ದಾರೆ. ಕನ್ನಡದ ಪುನರುಜ್ಜೀವನ ಯುಗದ ವಿಖ್ಯಾತ ಕಾದಂಬರೀಕಾರರಾದ ಗಳಗನಾಥರು ಮರಾಠಿಯ ಪ್ರಸಿದ್ಧ ಕಾದಂಬರಿಕಾರರಾದ ಹರಿನಾರಾಯಣ ಆಪ್ಟೆಯವರ ಕೃತಿಗಳ ಆಧಾರದ ಮೇಲೆ ತಮ್ಮ ಅನೇಕ ಕೃತಿಗಳನ್ನು ರಚಿಸಿದರು. ಮುಂದೆ ಬಂದ ಕೆರೂರು ವಾಸುದೇವಾಚಾರ್ಯರ ಕೃತಿಗಳಲ್ಲಿಯೂ ಆ ಪ್ರಭಾವವನ್ನು ಅಲ್ಲಲ್ಲಿ ಕಾಣ ಬಹುದು. ಆಪ್ಟೆಯವರಾದ ಮೇಲೆ ಮರಾಠಿಯಲ್ಲಿ ಜೋಶಿ, ಫಡಕೆ, ಖಾಂಡೇಕರ್, ಬಾಲಚಂದ್ರಫಾಣೇಕರ್, ಜಿಟಮಾಡಖೋಲ್ಕರ್, ದೇಶಪಾಂಡೆ ಮತ್ತು ಸಾನೆಗುರೂಜಿ ಮೊದಲಾದವರು ಪ್ರಸಿದ್ಧ ಕಾದಂಬರಿಕಾರರು. ಇವರಲ್ಲಿ ಕೆಲವರ ಕೃತಿಗಳಾದರೂ ಕನ್ನಡಕ್ಕೆ ಪರಿವರ್ತಿತವಾಗಿವೆ. ಲಕ್ಷ್ಮೀಬಾಯಿ ತಿಳಕರ 'ಸ್ಮೃತಿಚಿತ್ರಗಳು' ಡಿ. ಬಿ. ಕುಲಕರ್ಣಿಯವರಿಂದಲೂ ಅಣ್ಣಾಬಾವು ಸಾಠೆಯವರ 'ಮಂಗಲ'ವು ಎಂ. ದಸ್ತಗಿರಿಯವರಿಂದಲೂ, ಶೀವಡೆಯವರ 'ಮೃಗಜಲ'ವು ಪೆರನಾಜಿಯವರಿಂದಲೂ ಅನಂತಫಾಣೇಕರರ 'ಪ್ರತಿಬಿಂಬ'ವು ಫಾಣೇಕರರಿಂದಲೂ ಕನ್ನಡಕ್ಕೆ ಅನುವಾದಿತ

ವಾಗಿವೆ. ವಿ. ಎಸ್. ಖಾಂಡೇಕರರ 'ಅಪೂರ್ಣಸ್ವಪ್ನ' ಮತ್ತು ಎರಡು ಧ್ರುವಗಳನ್ನು ಇನಾಂದಾರರೂ ಅವರ 'ಕ್ರೌಂಚವಧೆ'ಯನ್ನು ಗೊರೂರು ರಾಮಸ್ವಾಮಯ್ಯಂಗಾರ್ಯರೂ ಭಾಷಾಂತರಿಸಿದ್ದಾರೆ. ಜಿ. ಟಿ. ಮಾಡಖೋಲಕರರ 'ಬಂಗ್ಲೇ ಲೇಲೆ ದೇವೂಲ್' ಎಂಬ ಜನಪ್ರಿಯ ಕಾದಂಬರಿಯನ್ನು 'ಹಾಳದೇಗುಲ' ವೆಂಬ ಹೆಸರಿನಿಂದ ಶ್ರೀರಂಗರು ಪರಿವರ್ತಿಸಿದ್ದಾರೆ. ಲೀಲಾಕಾರಂತ್ ಮತ್ತು ಕಾರಂತರು ಆಪ್ಟೆಯವರ ಕಾದಂಬರಿಯೊಂದನ್ನು 'ಯಾರು ಲಕ್ಷಿಸುವವರು' ಎಂಬ ಹೆಸರಿನಲ್ಲಿ ಪ್ರಕಟಿಸಿದ್ದಾರೆ. ಬಾಲಚಂದ್ರ ಘಾಣೇಕರರ 'ಶ್ಯಾಮನತಾಯಿ' ಎಂಬ ಭಾಷಾಂತರ ಕೃತಿಯೂ ಜನಪ್ರಿಯವಾಗಿದೆ.

ಉರ್ದು ಸಾಹಿತ್ಯದಿಂದಲೂ ಕನ್ನಡಕ್ಕೆ ಒಂದೆರಡು ಗ್ರಂಥಗಳು ಅನುವಾದವಾಗಿವೆ. ಇವುಗಳಲ್ಲಿ ಗುರುನಾಥ ಜೋಶಿಯವರಿಂದ ಪ್ರಕಾಶಿತವಾಗಿರುವ 'ಉರ್ದು ಕಥಾವಳಿ' ಮುಖ್ಯವಾದುದು. ಇದರಲ್ಲಿ ಜಹೀರ್ ಹುಸೇನ್, ಅಖ್ತರ್ ಹುಸೇನ್ ರಾಯಪುರಿ, ಸದೀಕ್ ಹುಸೇನ್ ನಜಮಿ, ಮುಹಮ್ಮದ್ ಆಲಿ ಇವರ ಅಬ್ಬಾಖಾನರ 'ಆಡು', 'ಮಸಣ', 'ತಾರೂ' ಮತ್ತು 'ನಮ್ಮಬೀದಿ' ಎಂಬ ಕತೆಗಳು ಸಂಕಲಿತವಾಗಿವೆ. ಬೆಂಗಳೂರಿನ ಕೇಸರಿಪ್ರಕಟಣ ಮತ್ತು ಉರ್ದು ಗ್ರಂಥ ಪ್ರಕಾಶನ ಸಮಿತಿಯವರಿಂದ ಖುರಾನಿನ ಎರಡು ಪ್ರತ್ಯೇಕ ಭಾಷಾಂತರಗಳು ಕನ್ನಡ ಸಾಹಿತ್ಯ ಸಮೃದ್ಧಿಗೆ ಕಾರಣವಾಗಿವೆ.

ಇದುವರೆಗಿನ ಅನುವಾದ ಸಾಹಿತ್ಯದ ವಿಹಂಗಮಾವಲೋಕನದಿಂದ ಆ ಸಾಹಿತ್ಯ ಪ್ರಮಾಣದ ಸಾಮಾನ್ಯ ಪರಿಚಯವಾಗಿರಬೇಕು. ಹಿಂದೆಯೇ ತಿಳಿಸಿರುವಂತೆ ಅದು ದಿಗ್ದರ್ಶನ ಮಾತ್ರ. ವಿವಿಧ ಭಾಷಾಪಂಡಿತರು ಅನುವಾದಗಳ ಆವಶ್ಯಕತೆಯನ್ನು ಮನಗಂಡು ಆ ದೃಷ್ಟಿಯಲ್ಲಿ ಕೆಲಸಮಾಡುತ್ತಿರುವುದು ಶ್ಲಾಘನೀಯ. ಈ ಕಾರ್ಯದಿಂದ ಕನ್ನಡ ಸಾಹಿತ್ಯಭಂಡಾರವು ಐಶ್ವರ್ಯವಂತವಾಗುವುದಲ್ಲದೆ ಅಖಂಡ ಭಾರತದ ಭಾಷೈಕ್ಯತೆಗೆ ವಿಶೇಷ ಪ್ರಯೋಜನವಾಗುತ್ತದೆ. ಮೇಲೆ ಸೂಚಿಸಿರುವ ಕೆಲವು ಭಾಷೆಗಳಿಂದಲೇ ಅಲ್ಲದೆ ಸಂಸ್ಕೃತ, ಹಿಂದೀ ಮತ್ತು ಪರಭಾಷೆಗಳಾದ ಇಂಗ್ಲೀಷ್, ಫ್ರೆಂಚ್, ಜರ್ಮನ್, ರಷ್ಯನ್ ಮೊದಲಾದುವುಗಳಿಂದಲೂ ಅಸಂಖ್ಯಾತ ಅನುವಾದಗಳಾಗಿವೆ. ಅವುಗಳ ಪರಾಮರ್ಶೆ ಇದೇ ಗ್ರಂಥದಲ್ಲಿ ಬೇರೆಯವರಿಂದ ನಡೆದಿದೆ. ಆದರೂ ಆ ಕ್ಷೇತ್ರದಲ್ಲಿ ನಡೆಯಬೇಕಾದ ಕೆಲಸ ಅಸಾಧ್ಯವಾಗಿದೆ. ಭಾರತೀಯ ಭಾಷೆಗಳಾದ ಗುಜರಾತಿ, ಸಿಂಧಿ, ಪಂಜಾಬಿ ಮತ್ತು ಉರ್ದು ಭಾಷೆಗಳಲ್ಲಿ ಇತ್ತೀಚೆಗೆ ಶ್ರೇಷ್ಠ ಕೃತಿಗಳು ರಚಿತವಾಗುತ್ತಿವೆ. ಕೆಲವು ರಮ್ಯವಾದ ಪ್ರಾಚೀನ ಕೃತಿಗಳೂ ಇವೆ. ಅವುಗಳ ಪರಿಚಯ ಕನ್ನಡಿಗರಿಗೆ ಅವಶ್ಯ ಆಗಬೇಕು. ಆ ಭಾಷೆಗಳನ್ನೂ ಕನ್ನಡವನ್ನೂ ತಿಳಿದ ದ್ವಿಭಾಷಿಗಳ ಸಂಖ್ಯೆಯು ಹೆಚ್ಚುವವರೆಗೂ ಆ ಜನರೊಡನೆ—ವಿಶೇಷತಃ ವಿದ್ವಾಂಸರೊಡನೆ—ಕನ್ನಡಿಗರ ಸಂಪರ್ಕವು ಹೆಚ್ಚಾಗುವವರೆಗೂ ಆ ಕಾರ್ಯ ಸುಲಭಸಾಧ್ಯವಲ್ಲ. ಆದರೂ ಆವಶ್ಯಕವೆಂಬುದರ ಅರಿವು ಇಂದಿನ ವಿದ್ವಾಂಸರಿಗೆ ಮನವರಿಕೆ

ಯಾಗುತ್ತಿರುವುದು ಸಂತೋಷಕರವಾದ ವಿಷಯ. ಅಲ್ಲದೆ, ಕೇಂದ್ರ ಸರ್ಕಾರದ ವಿವಿಧ ಶಾಖೆಗಳಲ್ಲಿ ಸಂಪರ್ಕ ಹೆಚ್ಚುತ್ತಿರುವ, ಭಾರತದ ಒಕ್ಕೂಟದ ನೆರಳಿನಲ್ಲಿ ಜೀವಿಸುತ್ತಿರುವ ಇಂದಿನ ಭಾರತೀಯರಿಗೆ ಈ ಸಂಬಂಧ ಸಮಾವೇಶಗಳೂ ನಿಕಟವಾಗುವುದು ಅಸಂಭವವೂ ಅಲ್ಲ. ಹಾಗೆಯೇ ಇದುವರೆಗಿನ ಅನುವಾದ ಕಾರ್ಯ ಹೆಚ್ಚಾಗಿ ಕಥೆ ಕಾದಂಬರೀ ಕ್ಷೇತ್ರಗಳಿಗೆ ಮೀಸಲಾಗಿದೆ. ಇನ್ನು ಮುಂದೆ ಈ ಕಾರ್ಯವು ಸಾಹಿತ್ಯದ ಇತರ ಶಾಖೆಗಳಲ್ಲದೆ ಶಾಸ್ತ್ರ ಮತ್ತು ವಿಜ್ಞಾನ ಭಾಗಗಳಲ್ಲಿಯೂ ಪ್ರಸರಿಸಿ ಬಹುಮುಖವಾಗಿ ಬೆಳೆದರೆ ಆಗ ಇದರ ಪ್ರಯೋಜನವು ಮತ್ತಷ್ಟು ಹೆಚ್ಚುವುದೆಂಬುದರಲ್ಲಿ ಸಂದೇಹವಿಲ್ಲ.

ಶಾಲಾಕಾಲೇಜುಗಳಲ್ಲಿ ವಿಜ್ಞಾನಸಂಬಂಧವಾದ ವಿಷಯಗಳನ್ನು ಕನ್ನಡದಲ್ಲಿ ಬೋಧಿಸುವುದಾದರೆ ವಿದ್ಯಾರ್ಥಿಗಳ ಕಾಲ ಉಳಿತಾಯವಾಗುತ್ತದೆ, ಶ್ರಮ ಕಡಿಮೆಯಾಗುತ್ತದೆ, ಕುತೂಹಲ ಕೆರಳುತ್ತದೆ, ಆಸಕ್ತಿ ಹೆಚ್ಚುತ್ತದೆ, ಗ್ರಹಣಶಕ್ತಿ ವರ್ಧಿಸುತ್ತದೆ, ಆಲೋಚನಾಶಕ್ತಿ ಉದ್ದೀಪನಗೊಳ್ಳುತ್ತದೆ, ಒಟ್ಟಿನಲ್ಲಿ ಅವರ ಜ್ಞಾನಕೋಶ ವಿಸ್ತಾರವಾಗುತ್ತದೆ. ವಿಷಯದ ಗಾಢಪರಿಚಯ ಆಗುತ್ತದೆ. ಹೆಚ್ಚು ಹೆಚ್ಚಾಗಿ ಪುಸ್ತಕಗಳನ್ನು ಓದಲು ಅವರಿಗೆ ವೇಳೆ ಸಿಗುತ್ತದೆ. ಹಾಗೆಯೇ ಇಂಗ್ಲಿಷ್ ಸಾಹಿತ್ಯವನ್ನೂ ಸಹ ಕನ್ನಡದ ಮೂಲಕ ಬೋಧಿಸಿದರೆ ಸಾಹಿತ್ಯದ ರುಚಿ ಸುಲಭವಾಗಿ ವಿದ್ಯಾರ್ಥಿಗಳ ಹೃದಯವನ್ನು ಮುಟ್ಟುತ್ತದೆ.

—ಕುವೆಂಪು

ನಮ್ಮ ಸಾಧನೆ

ಇಪ್ಪತ್ತೈದು ವರ್ಷಗಳು

ಟಿ. ವಿ. ವೆಂಕಟಾಚಲ ಶಾಸ್ತ್ರೀ

ವ್ಯಾಕರಣ ಸಾಹಿತ್ಯ

೧

ಕನ್ನಡಭಾಷಾಸ್ವರೂಪದ ಪರಿಶೀಲನೆ ಹಾಗೂ ವ್ಯಾಕರಣಾಂಶಗಳ ಪ್ರಸ್ತಾವನೆಗೆ 'ಕವಿರಾಜಮಾರ್ಗ'ದಲ್ಲಿ (ಕ್ರಿ.ಶ. ಸು. ೮೫೦) ಸ್ವಲ್ಪಮಟ್ಟಿಗೆ ಮಾತ್ರ ಪ್ರಾಸಂಗಿಕವಾಗಿ ಎಡೆದೊರೆತಿರುವುದರ ಹೊರತು, ಕನ್ನಡ ವ್ಯಾಕರಣದ ಒಂದು ಪ್ರತ್ಯೇಕವಾದ ಕೈಪಿಡಿಯಾಗಿ ತಕ್ಕಮಟ್ಟಿಗೆ ವಿಸ್ತಾರವಾಗಿ ಎರಡನೆಯ ನಾಗವರ್ಮನ 'ಕಾವ್ಯಾವಲೋಕನ'ದ (ಕ್ರಿ.ಶ. ಸು. ೧೧೪೫) ಭಾಗವಾದ 'ಶಬ್ದಸ್ಮೃತಿ' ರಚಿತವಾಗುವುದಕ್ಕೆ ಮೊದಲು ಕನ್ನಡದಲ್ಲಿ ಯಾವ ವ್ಯಾಕರಣಗ್ರಂಥವೂ ರಚಿತವಾಗಿದ್ದಂತೆ ತಿಳಿದುಬಂದಿಲ್ಲ.[1] 'ಶಬ್ದಸ್ಮೃತಿ'ಯೂ ಪ್ರಧಾನವಾಗಿ ಅಲಂಕಾರಗ್ರಂಥವಾದ 'ಕಾವ್ಯಾವಲೋಕನ'ದ ಪ್ರಥಮಾಧಿಕರಣವಾಗಿ ಸೇರಿಕೊಂಡು ಬಂದಿರುವುದರಿಂದ, ಅದನ್ನು ಕನ್ನಡದ ಮೊದಲನೆಯ ಸ್ವತಂತ್ರವ್ಯಾಕರಣವೆನ್ನುವಂತಿಲ್ಲ. ಆದರಲ್ಲಿ ಸಂಜ್ಞಾ, ಸಂಧಿ, ನಾಮ, ಸಮಾಸ, ತದ್ಧಿತ—ಎಂಬುದಾಗಿ ೬ ಪ್ರಕರಣಗಳಿದ್ದು, ಒಟ್ಟು ೯೬ ಸೂತ್ರಗಳಲ್ಲಿ ಕನ್ನಡವ್ಯಾಕರಣಪ್ರಕ್ರಿಯೆಯನ್ನು ಪೂರ್ವಕವಿಪ್ರಯೋಗಗಳ ಉದಾಹರಣೆಗಳನ್ನೆತ್ತಿಕೊಟ್ಟು ವಿವರಿಸಿರುವುದು ಕಂಡುಬರುತ್ತದೆ. ನಾಗವರ್ಮನೇ ಅನಂತರದಲ್ಲಿ ಬರೆದ '(ಕರ್ಣಾಟಕ) ಭಾಷಾಭೂಷಣ' (ಕ್ರಿ.ಶ. ಸು. ೧೧೪೫) ಸಂಸ್ಕೃತದಲ್ಲಿ ರಚಿತವಾಗಿಯೂ ಕನ್ನಡದ ಆದ್ಯ ವ್ಯಾಕರಣಗ್ರಂಥವಾಗಿ ಗಣ್ಯವಾಗಿದೆ. ಇದು ಸಂಜ್ಞಾವಿಧಾನ ಸಂಧಿವಿಧಾನ ವಿಭಕ್ತಿವಿಧಾನ ಕಾರಕವಿಧಾನ ಶಬ್ದರೀತಿವಿಧಾನ

---

[1] ಜನ್ನನ 'ಅನಂತನಾಥಪುರಾಣ'ದಲ್ಲಿರುವ 'ರನ್ನಂ ವೈಯಾಕರಣಂ....' ಎಂಬ ೧೪ನೆಯ ಆಶ್ವಾಸದ ೭೭ನೆಯ ಪದ್ಯದ ಮತ್ತು ನಾಗವರ್ಮನ 'ಭಾಷಾಭೂಷಣ'ದಲ್ಲಿರುವ 'ದೀರ್ಘೋಕ್ತಿರ್ನಯಸೇನಸ್ಯ' ಎಂಬ ೭೨ನೆಯ ಸೂತ್ರದ ಆಧಾರಗಳ ಮೇಲೆ ರನ್ನನೂ ನಯಸೇನನೂ ಎರಡನೆಯ ನಾಗವರ್ಮನಿಗೆ ಪೂರ್ವದಲ್ಲಿ ವ್ಯಾಕರಣಗ್ರಂಥಕರ್ತೃಗಳಾಗಿದ್ದರೆಂದು ಸಾಮಾನ್ಯವಾಗಿ ಭಾವಿಸಲಾಗಿದೆ. ಹಾಗೆಂದು ನಿರ್ಧಾರಕವಾಗಿ ತಿಳಿಯುವುದಕ್ಕೆ ಬೇರೆ ಖಚಿತವಾದ ಪ್ರಮಾಣಗಳಾವುವೂ ಕಂಡುಬಂದಿಲ್ಲ.

ಸಮಾಸವಿಧಾನ ತದ್ಧಿತವಿಧಾನ ಆಖ್ಯಾತನಿಯಮವಿಧಾನ ಅವ್ಯಯನಿರೂಪಣವಿಧಾನ ನಿಪಾತ ನಿರೂಪಣವಿಧಾನ—ಎಂಬ ಹತ್ತು ಪರಿಚ್ಛೇದಗಳನ್ನು ಒಳಕೊಂಡು, ಸಂಸ್ಕೃತ ವ್ಯಾಕರಣಗಳ ಸೂತ್ರಪದ್ಧತಿಯನ್ನು ಅನುಸರಿಸಿ ಒಟ್ಟು ೨೮೦ ಸರಳವೂ ವಿಶದವೂ ಆದ ಸೂತ್ರಗಳಲ್ಲಿ, ಸಂಕ್ಷಿಪ್ತವೂ ಸ್ವೋಪಜ್ಞವೂ ಆದ ಸಂಸ್ಕೃತವೃತ್ತಿಯೊಡನೆ, ಕನ್ನಡ ಪ್ರಯೋಗಗಳೊಡನೆ, ರಚಿತವಾಗಿರುವ ಹಳಗನ್ನಡ ವ್ಯಾಕರಣವಾಗಿದೆ. ಇದು 'ಶಬ್ದಸ್ಮೃತಿ'ಗಿಂತ ಕೆಲಮಟ್ಟಿಗೆ ಹೆಚ್ಚು ವಿವರಗಳನ್ನೊಳಗೊಂಡಿದೆ.

ಎರಡನೆಯ ನಾಗವರ್ಮನ ಪೂರ್ವೋಕ್ತವಾದೆರಡು ವ್ಯಾಕರಣಗ್ರಂಥಗಳನ್ನೇ ಆಧರಿಸಿಯೂ, ಹಳಗನ್ನಡಭಾಷಾಸ್ವರೂಪವನ್ನು ಇನ್ನೂ ಗಾಢವಾಗಿಯೂ ವಿವರವಾಗಿಯೂ ಅಭ್ಯಾಸಮಾಡಿದ ಫಲವಾಗಿ ವಿಷಯಗಳನ್ನು ಬಲುಮಟ್ಟಿಗೆ ಸ್ವಾತಂತ್ರ್ಯ ವಹಿಸಿ ವಿಸ್ತರಿಸಿ, ಕೇಶಿರಾಜನು 'ಶಬ್ದಮಣಿದರ್ಪಣ'ವೆಂಬ ವಿಖ್ಯಾತವೂ ಪ್ರಮಾಣಭೂತವೂ ಆದ ವ್ಯಾಕರಣಗ್ರಂಥವೊಂದನ್ನು ಕ್ರಿ.ಶ. ಸು. ೧೨೬೦ರಲ್ಲಿ ಬರೆದನು. ಸಂಧಿ, ನಾಮ, ಸಮಾಸ, ತದ್ಧಿತ, ಆಖ್ಯಾತ, ಧಾತು, ಅಪಭ್ರಂಶ, ಅವ್ಯಯ—ಎಂಬ ೮ ಪ್ರಕರಣಗಳಲ್ಲಿ, ಒಟ್ಟು ೩೩೭ ಸೂತ್ರಗಳಲ್ಲಿ, ವಿವರಪೂರ್ವಕ ಸ್ವಕೀಯ ವೃತ್ತಿ ಮತ್ತು ಪೂರ್ವಕವಿಪ್ರಯೋಗಗಳ ಉದಾಹರಣೆಗಳೊಡನೆ ಕನ್ನಡ ವ್ಯಾಕರಣದ ಹಲವಾರು ಅಂಶಗಳನ್ನು ವಿವರವಾಗಿಯೂ ವಿಶದವಾಗಿಯೂ ಈ ಗ್ರಂಥದಲ್ಲಿ ಕೇಶಿರಾಜನು ಮೊದಲಬಾರಿಗೆ ವಿವೇಚಿಸಿರುವುದು ಕಂಡುಬರುತ್ತದೆ. ಕನ್ನಡ ವ್ಯಾಕರಣವಾಗಿ ಇದರ ವೈಶಿಷ್ಟ್ಯಗಳು ಅನೇಕವಾಗಿವೆ: ಕನ್ನಡದಲ್ಲಿಯೇ ರಚಿತವಾಗಿರುವ ಸ್ವತಂತ್ರ ಕನ್ನಡ ವ್ಯಾಕರಣಗಳಲ್ಲಿ 'ಶಬ್ದಮಣಿದರ್ಪಣ'ವೇ ಮೊದಲನೆಯದು; ೧೩ನೆಯ ಶತಮಾನದ ನಡುಗಾಲದವರೆಗೆ ಬೆಳೆದುಬಂದ ಹಳಗನ್ನಡಭಾಷೆಯ ಸ್ವರೂಪವನ್ನು ವಿವರಣಾತ್ಮಕವಾಗಿ ವಿಶ್ಲೇಷಿಸಿ ಶಾಸ್ತ್ರಬದ್ಧವಾಗಿ ನಿಯಂತ್ರಿಸಲು ಯತ್ನಿಸಿರುವುದು ಇಲ್ಲಿ ಮಾತ್ರವೇ ಕಾಣುತ್ತದೆ; ಇದು ತತ್ಕಾಲೀನಕ ನ್ನಡಭಾಷೆಯ ರನ್ನಗನ್ನಡಿಯಾಗಿದೆ; ಪ್ರಸಿದ್ಧರಾದ ಪೂರ್ವಕವಿಗಳ ಕಾವ್ಯಪುರಾಣಗಳಿಂದಲೂ ಶಾಸನಗಳಿಂದಲೂ ಪ್ರಯೋಗಸಂಗ್ರಹಣೆಮಾಡಿರುವ ರೀತಿಯೂ ಸಂಯೋಜನೆಯೂ ವ್ಯಾಕರಣಾಂಶಗಳ ಪುಷ್ಟೀಕರಣಕ್ಕೆ ಸಹಾಯಕವಾಗಿರುವಂತೆಯೇ ಕೇಶಿರಾಜನ ಅನನ್ಯಸಾಧಾರಣವಾದ ಕಾವ್ಯಮನೋಧರ್ಮದ ಪ್ರತೀಕಗಳೂ ಆಗಿ ಪರಿಣಮಿಸಿವೆ; ಅನುಪಲಬ್ಧವಾಗಿರುವ ಪ್ರಾಚೀನ ಕವಿಕಾವ್ಯಭಂಡಾರದ ನಿಗೂಢಸಂಪದವನ್ನು ಸ್ವಲ್ಪಮಟ್ಟಿಗಾದರೂ ಮನಗಾಣಿಸುವ ಉಪಯುಕ್ತ ಆಕರಗಳಲ್ಲಿ ಒಂದಾಗಿದೆ; ಪ್ರಧಾನವಾಗಿ 'ವಿಧ್ಯಾತ್ಮಕ'ರೀತಿಯದು ಅಥವಾ 'ಆದರ್ಶ'ರೀತಿಯದಾಗಿಯೂ (Prescriptive) 'ವಿವರಣಾತ್ಮಕ' ಅಥವಾ 'ವರ್ಣನಾತ್ಮಕ'ರೀತಿಯ (Descriptive) ನಿರೂಪಣ ದೃಷ್ಟಿಯನ್ನು ಹೊಂದಿದೆ. ಈ ಕಾರಣಗಳಿಂದಲೆ, ನಿರೂಪಣಕ್ರಮ ವ್ಯಾಕರಣಾಂಶಗಳ ವಿಶ್ಲೇಷಣೆ-ಮುಂತಾದವುಗಳಲ್ಲಿ ಲೋಪದೋಷಗಳೇನಿದ್ದರೂ, ಹಳಗನ್ನಡಭಾಷಾ ಸ್ವರೂಪವನ್ನು ಪ್ರಾಮಾಣಿಕರೀತಿಯಲ್ಲಿ ನಿಷ್ಠೆಯಿಂದ ವಿವರಿಸಲು ಪ್ರಯತ್ನಿಸಿರುವ,

ಅದರಿಂದಾಗಿಯೇ ಪ್ರಸಿದ್ಧವಾಗಿರುವ, 'ಶಬ್ದಮಣಿದರ್ಪಣ'ವು ಇಂದಿಗೂ ಹಳಗನ್ನಡದ ಅಭ್ಯಾಸಿಗಳಿಗೆ ಅತ್ಯುಪಯುಕ್ತವೂ ಅತ್ಯಂತ ಪ್ರಿಯವೂ ಆದ ಏಕೈಕ ವ್ಯಾಕರಣ ಗ್ರಂಥವಾಗಿದೆ.

ಕೇಶಿರಾಜನ ಅನಂತರದಲ್ಲಿ ೧೭ನೆಯ ಶತಮಾನದವರೆಗೆ, ಭಟ್ಟಾಕಳಂಕನಿಂದ 'ಶಬ್ದಾನುಶಾಸನ'ವು (ಕ್ರಿ.ಶ. ೧೬೦೪) ರಚನೆಯಾಗುವವರೆಗೆ ಕನ್ನಡದಲ್ಲಿ ವ್ಯಾಕರಣಗಳಾವುವೂ ರಚನೆಯಾದಂತೆ ತೋರುವುದಿಲ್ಲ. 'ಶಬ್ದಾನುಶಾಸನ'ವು ಪ್ರಾಯಃ ನಾಗವರ್ಮನ 'ಭಾಷಾಭೂಷಣ'ದಿಂದ ಪ್ರಭಾವಿತವಾಗಿ ಅದರ ಹಾಗೆಯೇ ಸಂಸ್ಕೃತಭಾಷೆಯಲ್ಲಿ ಬಿಗಿಯಾದ ಸೂತ್ರಪದ್ಧತಿಯಲ್ಲಿ ಕನ್ನಡ ವ್ಯಾಕರಣವನ್ನು ಬರೆಯತೊಡಗಿದ ಒಂದು ಪಂಡಿತವೈಯಾಕರಣಪ್ರಯತ್ನವೆನ್ನಬಹುದು. ನಾಗವರ್ಮ ಭಟ್ಟಾಕಲಂಕರಿಬ್ಬರಿಗೂ ದೇಶೀಯಭಾಷೆಯಾದ ಕನ್ನಡಕ್ಕೆ ಅಖಿಲಭಾರತ ವ್ಯಾಪಕತೆ ದೊರೆಯಲೆಂಬ ಒಂದು ಶ್ಲಾಘ್ಯವಾದ ಉದ್ದೇಶವೂ, ಕನ್ನಡಸಂಸ್ಕೃತ ಭಾಷೆಗಳೆರಡರಲ್ಲಿಯೂ ತಮ್ಮ ರಚನಾಸಾಮರ್ಥ್ಯವನ್ನು ಹೊರಪಡಿಸಬೇಕೆಂಬ ಒಂದು ವೈದಗ್ಧ್ಯಪ್ರೇರಿತವಾದ ಅಹಮಿಕೆಯೂ, ಇದ್ದದ್ದು ಕಾರಣವಾಗಿ ಅವರು ಸಂಸ್ಕೃತ ವ್ಯಾಕರಣಕಾರರ ಮಾದರಿಯನ್ನು ಅನುಸರಿಸುವುದಕ್ಕೆ ಅಪೇಕ್ಷೆಪಟ್ಟರೆಂದು ತೋರುತ್ತದೆ. ಪ್ರಸ್ತುತ, 'ಶಬ್ದಾನುಶಾಸನ'ದಲ್ಲಿ ೪ ಪಾದಗಳಿದ್ದು, ಅವುಗಳಲ್ಲಿ ಅನುಕ್ರಮವಾಗಿ ಸಂಧಿ, ಲಿಂಗ, ಸಮಾಸ ಮತ್ತು ಧಾತು—ಈ ಮುಖ್ಯವಿಷಯಗಳ ಮತ್ತು ಇತರ ವಿಷಯಗಳ ವಿವೇಚನೆಯು ೫೯೨ ಸೂತ್ರಗಳಲ್ಲಿ ವಿಸ್ತಾರವಾಗಿಯೂ ಪ್ರೌಢವಾಗಿಯೂ ವಿವೃತಗೊಂಡಿದೆ. ಗ್ರಂಥಕ್ಕೆ ಸ್ವಕೀಯವಾದ 'ಭಾಷಾ ಮಂಜರೀ' ಎಂಬ ವೃತ್ತಿಯೂ 'ಮಂಜರೀ ಮಕರಂದ' ಎಂಬ ವ್ಯಾಖ್ಯೆಯೂ ಇದ್ದು, ಇವು ಕೂಡ ಸಂಸ್ಕೃತದಲ್ಲಿಯೇ ರಚಿತವಾಗಿವೆ. ವಿಸ್ತಾರವಾಗಿ ಬೆಳೆದಿರುವ ಈ ಗ್ರಂಥದ ವಿಷಯಪ್ರತಿಪಾದನೆಯಲ್ಲಿ ಪ್ರಾಚೀನ ಕನ್ನಡ ವೈಯಾಕರಣರನ್ನು ಸಾಮಾನ್ಯವಾಗಿ ಅನುಸರಿದ್ದರೂ, ಪ್ರತಿಪಾದನ ಕ್ರಮದಲ್ಲಿ ಸಂಸ್ಕೃತವೈಯಾಕರಣರ ಪದ್ಧತಿಯನ್ನೂ ಪ್ರೌಢಿಮೆಯನ್ನೂ ಪ್ರಕಟಿಸಿದೆ.

೨

ಈ ಮೇಲೆ ಪ್ರಸ್ತಾಪಿಸಿದ ನಾಲ್ಕು ವ್ಯಾಕರಣಗ್ರಂಥಗಳೂ ಮುಖ್ಯವಾಗಿ ಹಳಗನ್ನಡಭಾಷೆಗೆ ಬರೆದ ವ್ಯಾಕರಣಗಳು. ೧೭ನೆಯ ಶತಕದ ಮೊದಲ ದಶಕದಿಂದಿತ್ತ ೧೯ರ ಮೊದಲ ದಶಕದವರೆಗೆ ಕನ್ನಡದಲ್ಲಿ ಹಳಗನ್ನಡ ಅಥವಾ ಅದರೀಚೆಯ ನಡುಗನ್ನಡದ ನುಡಿಗೆ ವ್ಯಾಕರಣವನ್ನು ಬರೆಯುವ ಪ್ರಯತ್ನವನ್ನೇ ಯಾರೂ ಮಾಡಿದ ಹಾಗೆ ತೋರುವುದಿಲ್ಲ. ಈಯವಧಿಯ ನಡುಗಾಲದಲ್ಲಿ ಹಳಗನ್ನಡ ವ್ಯಾಕರಣಗಳ ಅಭ್ಯಾಸವಂತೂ ನಡೆಯುತ್ತಿದ್ದಿರಬೇಕು—ಎಂಬುದನ್ನು ನಿಟ್ಟೂರ

ನಂಜಯ್ಯನು (ಕ್ರಿ.ಶ. ಸು. ೧೭೫೫) 'ಶಬ್ದಮಣಿದರ್ಪಣ'ಕ್ಕೆ ಬರೆದ 'ಟೀಕು'ವಿನಿಂದ ಗುರುತಿಸಬಹುದಾಗಿದೆ. ಹಳಗನ್ನಡ ನಡುಗನ್ನಡ ಭಾಷೆಗಳ ಕಾಲವು ಹಿಂದಾಗಿ ಹೊಸಗನ್ನಡದ ರೂಪರೇಷೆಗಳು ಕನ್ನಡನುಡಿಯಲ್ಲಿ ಸ್ಪಷ್ಟವಾಗಿ ಒಡೆದುಕಾಣುತ್ತಿರುವ ಘಟ್ಟದಲ್ಲಿ ಅದರ ಸ್ವರೂಪವನ್ನು ವಿಶ್ಲೇಷಿಸುವ ಕೆಲಸವೂ ನಡುಗನ್ನಡದ ಕೆಲಸದ ಹಾಗೆಯೇ ದೇಶೀಯ ಪಂಡಿತರಿಂದ ಉಪೇಕ್ಷಿತವಾಗಿದ್ದಿತು. ಇಂತಹ ಸ್ಥಿತಿಯಲ್ಲಿ ಭಾರತದೊಳಗೆ ಬಂದಿಳಿದ ವಿದೇಶೀಯ ಆಡಳಿತಗಾರರ ಹಾಗೂ ಕ್ರೈಸ್ತಧರ್ಮ ಪ್ರಸಾರಕರ ಪ್ರಯತ್ನಗಳ ಮೂಲಕವಾಗಿ ಅದು ಬೇರೊಂದು ರೀತಿಯಲ್ಲಿ ಸ್ವಲ್ಪಮಟ್ಟಿಗೆ ಸಾಧ್ಯವಾಯಿತು. ಪೌರಾಡಳಿತ, ನ್ಯಾಯ ಮತ್ತು ವಿದ್ಯಾ ಇಲಾಖೆಯ ಉದ್ಯೋಗಸ್ಥರಾದ ಇಂಗ್ಲಿಷ್ ಸರ್ಕಾರಿ ಅಧಿಕಾರಿಗಳ ದೇಶೀಯ ಆಡಳಿತ ವ್ಯವಹಾರಗಳಿಗೆ ದೇಶಭಾಷಾಜ್ಞಾನವು ಅತ್ಯಂತ ಅನಿವಾರ್ಯವಾಗಿದ್ದಿತು. ಹಾಗೆಯೇ ಕ್ರೈಸ್ತ ಮಿಷನರಿಗಳ ಧರ್ಮಪ್ರಸಾರಕಾರ್ಯವು ಫಲಕಾರಿಯಾಗಬೇಕಾದರೆ ಅವರು ಹೆಚ್ಚು ಹೆಚ್ಚು ದೇಶೀಯ ಜನರ ಸಂಪರ್ಕವನ್ನು ಪಡೆಯುವುದು ಆವಶ್ಯಕವಾಗಿದ್ದು, ಆ ಸಂಪರ್ಕವು ದೇಶೀಯ ಭಾಷೆಗಳ ಅಭ್ಯಾಸದಿಂದಲೇ ಸಾಧ್ಯವೆಂಬುದನ್ನು ಮನಗಂಡ ಅವರು ದೇಶೀಯ ಭಾಷೆಗಳನ್ನು ಕಲಿಯತೊಡಗಿದರು. ಹೀಗೆ ಎರಡು ದೃಷ್ಟಿಗಳಿಂದ ವ್ಯವಹಾರದ ಸಲುವಾಗಿ ಎಂದು ಆರಂಭವಾದ ಭಾಷಾಭ್ಯಾಸವು ಕೆಲವರಲ್ಲಿ ಆಯಾ ದೇಶ ಭಾಷೆಗಳ ಬಗೆಗೆ ಗಾಢವಾದ ಆಸಕ್ತಿಯನ್ನು ಕೆರಳಿಸಿತು. ಕಾಲಕ್ರಮದಲ್ಲಿ, ತಮ್ಮ ತಮ್ಮ ಕಾರ್ಯಕ್ಷೇತ್ರದಲ್ಲಿ ಶ್ರಮಿಸುತ್ತಿರುವಾಗಲೇ, ದೇಶ ಭಾಷಾ ಸಾಹಿತ್ಯಗಳ ಪುನರುಜ್ಜೀವನ ಕಾರ್ಯವು ತಮ್ಮ ಪ್ರೀತಿಯ ಕರ್ತವ್ಯವೆಂಬ ಭಾವನೆಯನ್ನೂ ಅದು ಬಲಿಯಿಸಿತು. ಕನ್ನಡದ ವಿಷಯದಲ್ಲಿಯೂ ಆದದ್ದು ಹೀಗೆಯೇ. ಮೊದಮೊದಲು ರೂಢಿಯಲ್ಲಿರುವ ಹೊಸಗನ್ನಡ ಭಾಷೆಯನ್ನು ಭಾಷಾಭ್ಯಾಸಿಗಳಾದ ಇಂಗ್ಲಿಷ್ ಜನರಿಗೆ ಅಥವಾ ವಿದೇಶೀಯರಿಗೆ ಅನುಕೂಲಕರವಾದ ರೀತಿಯಲ್ಲಿ ವಿಶ್ಲೇಷಿಸಿ ವಿವರಿಸಿ ಸರಳವಾದ ವ್ಯಾಕರಣಗಳನ್ನು ಇಂಗ್ಲಿಷ್ ವ್ಯಾಕರಣ ಪದ್ಧತಿಯನ್ನು ಅನುಸರಿಸಿ ಇಂಗ್ಲಿಷಿನಲ್ಲಿಯೇ ಬರೆಯುವ ಕೆಲಸ ಆರಂಭವಾಯಿತು. ಇದನ್ನು ಮೊದಲು ವಿಶೇಷವಾಗಿ ಮಾಡಿದವರು ಕನ್ನಡೇತರರಾದ ವಿದೇಶೀಯರೇ. ಇಂತಹ ವ್ಯಾಕರಣಗಳನ್ನು 'ಅಭ್ಯಾಸಿಗಳಿಗಾಗಿ ಬರೆದ ಸಾಮಾನ್ಯ ವ್ಯಾಕರಣಗಳು' ಎಂದು ಕರೆಯಬಹುದು. ಕನ್ನಡ ದೇಶದಲ್ಲಿ ಇಂಗ್ಲಿಷ್ ಭಾಷೆಯ ವಿದ್ಯಾಭ್ಯಾಸ ಪದ್ಧತಿ ಕಾಲಕ್ರಮದಲ್ಲಿ ರೂಢಿಗೆ ಬಂದ ಮೇಲಂತೂ, ವಿದ್ಯಾವಂತರಾದ ಇಂಗ್ಲಿಷ್ ಜನರೇ ವಿದ್ಯಾ ಇಲಾಖೆಯ ಮೇಲಧಿಕಾರಿಗಳಾಗಿರುತ್ತಿದ್ದುದು ಸಾಮಾನ್ಯವಾಗಿ, ಇಲಾಖೆಯ ಕಡೆಯಿಂದಲೂ ಇಲಾಖಾಧಿಕಾರಿಗಳ ಸ್ವಂತ ಆಸಕ್ತಿಯಿಂದಲೂ ಶಾಲೆಗಳ ಬೇರೆ ಬೇರೆ ಮಟ್ಟಗಳಿಗೆ ಅನುಗುಣವಾಗಿ ಅಭ್ಯಾಸಯೋಗ್ಯವಾದ ಕನ್ನಡ ವ್ಯಾಕರಣಗಳನ್ನು ಬರೆಯುವುದು ಅನಿವಾರ್ಯವಾಯಿತು. ಕನ್ನಡದ ಪ್ರೌಢವಿದ್ಯಾರ್ಥಿಗಳಿಗೆ ಹಳಗನ್ನಡ ವ್ಯಾಕರಣಗಳಿಂದ ಪ್ರಯೋಜನವಾಗಬಹುದಾಗಿದ್ದಿತಲ್ಲದೆ, ಶಾಲಾಭ್ಯಾಸಂಗಿಗಳಿಗೆ ಅವರ ಬುದ್ಧಿಯ ಮಟ್ಟಕ್ಕೆ ಅನುಗುಣವಾಗಿ ಹೊಸ

ಕಾಲದ ಆವಶ್ಯಕತೆಗೆ ಅನುಸಾರವಾಗಿ ಹೊಸಗನ್ನಡ ವ್ಯಾಕರಣಗಳನ್ನು ರಚಿಸಬೇಕಾಗಿದ್ದಿತು. ಹೀಗೆ ಬರೆಯಲಾದ ಕನ್ನಡವ್ಯಾಕರಣಗಳನ್ನು 'ವಿದ್ಯಾರ್ಥಿಗಳಿಗಾಗಿ ಬರೆದ ಶಾಲಾವ್ಯಾಕರಣಗಳು' ಎಂದು ಕರೆಯಬಹುದು. ಈಯೆರಡು ರೀತಿಯ ವ್ಯಾಕರಣಗಳೂ ಸಾಮಾನ್ಯವಾಗಿ ರೂಢಿಯ ಹೊಸಗನ್ನಡಭಾಷೆಯನ್ನೆ ಲಕ್ಷ್ಯದಲ್ಲಿರಿಸಿಕೊಂಡು, ಸರಳವಾದ ವ್ಯಾಕರಣಪದ್ಧತಿಯನ್ನು ಅನುಸರಿಸಿ, ಸಾಧ್ಯವಾದಷ್ಟು ಸಂಕ್ಷೇಪವಾಗಿಯೂ ಸುಲಭವಾಗಿಯೂ ಇರುವಂತೆ ರಚಿತವಾದ ವ್ಯಾಕರಣದ ಪುಟ್ಟ ಕೈಪಿಡಿಗಳೇ ಆಗಿವೆ. ಈಯೆರಡು ರೀತಿಯ, ಸಂಖ್ಯಾಬಾಹುಳ್ಯವಿರುವ, ವ್ಯಾಕರಣಗಳೇ ಅಲ್ಲದೆ ಬೇರೆ ಕೆಲವು ವಿಸ್ತಾರವೂ ಪ್ರೌಢವೂ ಆದ ಕನ್ನಡವ್ಯಾಕರಣಗಳೂ ಒಂದೆರಡರ ಮಟ್ಟಿಗೆ ರಚನೆಯಾಗಿವೆ. ಇವುಗಳಲ್ಲಿ ಹಳಗನ್ನಡ ನಡುಗನ್ನಡಗಳನ್ನೂ ಹೊಸಗನ್ನಡದೊಡನೆ ಕೂಡಿಸಿಕೊಂಡು, ಶಬ್ದಮಣಿದರ್ಪಣ ಮೊದಲಾದ ಪ್ರಾಚೀನ ಪ್ರೌಢವ್ಯಾಕರಣಗಳನ್ನು ಸಾಮಗ್ರಿಗಳ ಸಂಕಲನದಲ್ಲಿಯೂ ಉದಾಹರಣಸಂಯೋಜನೆಯಲ್ಲಿಯೂ ರಚನಾಪದ್ಧತಿಯಲ್ಲಿಯೂ ವಿಶೇಷವಾಗಿ ಅನುಸರಿಸಿ, ವ್ಯಾಕರಣಾಂಶಗಳ ವಿವೇಚನೆಯನ್ನು ಮಾಡಿರುತ್ತದೆ. ಮುಂದುವರಿದ, ವಿಶೇಷಾಸಕ್ತಿಯ ಭಾಷಾಸಾಹಿತ್ಯಾಭ್ಯಾಸಿಗಳಾಗಿ ಉದ್ದೇಶಿಸಿರುವ ಇಂತಹ ಕನ್ನಡವ್ಯಾಕರಣಗಳನ್ನು 'ಪ್ರೌಢವ್ಯಾಕರಣ'ಗಳೆಂದು ಇಲ್ಲಿ ಕರೆಯಬಹುದು.

ಸ್ವತಂತ್ರವಾಗಿ ವ್ಯಾಕರಣಗ್ರಂಥಗಳನ್ನು ರಚಿಸುವುದರ ಜತೆಗೆ, ಪ್ರಾಚೀನ ಕವಿಕಾವ್ಯಕೃತಿಗಳ ಅಭ್ಯಾಸವನ್ನು ಸುಗಮಗೊಳಿಸಲು, ಉತ್ತರೋತ್ತರವಾಗಿ ವ್ಯಾಕರಣ ರಚನೆಗೆ ಭಾಷಾವಿಶ್ಲೇಷಣೆಗೆ ಮಾರ್ಗದರ್ಶಕವಾಗಲು, ಕನ್ನಡದ ಪ್ರಾಚೀನ ವ್ಯಾಕರಣ ಗ್ರಂಥಗಳ ಪ್ರಕಾಶನ, ಸಂಪಾದನ ಮತ್ತು ಟೀಕಾವ್ಯಾಖ್ಯಾನ ಸಂಯೋಜನ- ಮುಂತಾದ ಕೆಲಸಗಳೂ ೧೯ನೆಯ ಶತಮಾನದ ಉತ್ತರಾರ್ಧದಲ್ಲಿ ಹುರುಪಿನಿಂದ ಸಾಗಿದುವು. ಇದು ಕೂಡ ಅಮಿತ ಶ್ರದ್ಧೋತ್ಸಾಹಿಗಳೂ ಸಾಮರ್ಥ್ಯಸಂಪನ್ನರೂ ಆದ ಕ್ರೈಸ್ತ ಮಿಷನರಿಗಳ ಕಡೆಯಿಂದಲೇ ಮೊದಲಾಯಿತು. ಹೊಸವ್ಯಾಕರಣಗಳ ರಚನೆಗಿಂತ ಒಂದು ದೃಷ್ಟಿಯಲ್ಲಿ ಹೆಚ್ಚು ಕ್ಲೇಶಕರವೂ ಹೆಚ್ಚು ಪ್ರಯೋಜನಕರವೂ ಆದ ಈ ಕೆಲಸವನ್ನು ಅವರಲ್ಲಿ ಕೆಲವರು ಆಶ್ಚರ್ಯಕರವಾದ ರೀತಿಯಲ್ಲಿ, ಉತ್ತಮವಾಗಿ, ದೇಶೀಯಪಂಡಿತರ ಸಹಕಾರದೊಡನೆ ನಿರ್ವಹಿಸಿ, ಕನ್ನಡ ಭಾಷಾಸಾಹಿತ್ಯಗಳ ಪುನರುಜ್ಜೀವಕರ ಶ್ರೇಣಿಯಲ್ಲಿ ಶಾಶ್ವತವಾದ ಸ್ಥಾನವನ್ನು ಪಡೆದುಕೊಂಡರೆಂದು ಹೇಳಬಹುದು. ಈ ಕಾರ್ಯವನ್ನು 'ಪ್ರಾಚೀನ ವ್ಯಾಕರಣ ಗ್ರಂಥಗಳ ಪ್ರಕಾಶನ-ಪರಿಷ್ಕರಣಗಳು' ಎಂಬುದಾಗಿ ನಿರ್ದೇಶಿಸಬಹುದು. ಕೊನೆಯದಾಗಿ ಹೊಸ ವ್ಯಾಕರಣಗಳ ರಚನೆ ಹಾಗೂ ಹಳೆಯ ವ್ಯಾಕರಣಗಳ ಪ್ರಕಟನೆಯಂತೆಯೇ, ಭಾಷಾಸ್ವರೂಪದ ಪರಿಶೀಲನೆ ವಿಶ್ಲೇಷಣೆಗಳೂ ಉಪಯುಕ್ತವೆಂದರಿತ ವಿದೇಶೀಯ ಮತ್ತು ಸ್ವದೇಶೀಯ ಪಂಡಿತರಿಂದ ಕನ್ನಡ ಭಾಷೆಯ ಚರಿತ್ರೆ ವರ್ಣನೆ ವೈಲಕ್ಷಣ್ಯಗಳು, ಅವಸ್ಥಾಭೇದಗಳು, ಇತರ ಭಾಷೆಗಳೊಡನೆ ಹೋಲಿಕೆ ವ್ಯತ್ಯಾಸಗಳು-ಮುಂತಾದವು

ಗಳನ್ನು ಕುರಿತ ಲೇಖನಗಳೂ ಉಪನ್ಯಾಸಗಳೂ ಗಮನಾರ್ಹವಾದ ರೀತಿಯಲ್ಲಿ ಬರೆದು ಬಂದವು; ಇವುಗಳೊಡನೆ ಸಾಂಪ್ರದಾಯಿಕ ವ್ಯಾಕರಣಗಳ ಲೋಪದೋಷಗಳು ಅವ್ಯಾಪ್ತಿ ಅತಿವ್ಯಾಪ್ತಿ ಸಮಸ್ಯೆಗಳು ಮುಂತಾದವುಗಳ ಮೇಲೆ ಬರೆದ ಒಂದೆರಡು ವಿಮರ್ಶಾತ್ಮಕ ಲೇಖನಗಳನ್ನೂ ಸೇರಿಸಬಹುದು; ಇವು ವಿಮರ್ಶಕ ವಿದ್ವಾಂಸರ ಭಾಷಣ ಲೇಖನಗಳಲ್ಲಿಯೋ ಕೃತಿಗಳ ಮುನ್ನುಡಿ ಉಪೋದ್ಘಾತಗಳಲ್ಲಿಯೋ ಸಮಾವೇಶವಾಗಿರುತ್ತಿದ್ದುವು. ಇಂಥವನ್ನು 'ಭಾಷೆ–ವ್ಯಾಕರಣಗಳ ಮೇಲಿನ ಭಾಷಣ–ಲೇಖನಗಳು' ಎಂದು ಹೇಳಬಹುದು.

೩

ಈಗ ೧೯ನೆಯ ಶತಕದ ಆದಿಭಾಗದಿಂದ ತೊಡಗಿ ೨೦ನೆಯ ಶತಕದಲ್ಲಿ ಸು. ೧೯೪೦ರ ವರೆಗೆ ನಡೆದಂತಹ ವೈಯಾಕರಣ ಚಟುವಟಿಕೆಗಳನ್ನು ಇಲ್ಲಿ ಸಂಕ್ಷೇಪವಾಗಿ ವಿಹಂಗಮ ದೃಷ್ಟಿಯಿಂದ ವೀಕ್ಷಿಸಲು ಪ್ರಯತ್ನಿಸಿದೆ.[2]

(೧) ಅಭ್ಯಾಸಿಗಳ ಸಾಮಾನ್ಯ ವ್ಯಾಕರಣಗಳನ್ನೂ ವಿದ್ಯಾರ್ಥಿಗಳ ಶಾಲಾ ವ್ಯಾಕರಣಗಳನ್ನೂ ಒಂದು ಗುಂಪಾಗಿ ತೆಗೆದುಕೊಂಡು ಇಲ್ಲಿ ಅವುಗಳ ಬಗೆಗೆ ಮೊದಲು ಸ್ವಲ್ಪಮಟ್ಟಿಗೆ ಪ್ರಸ್ತಾಪಿಸಬಹುದು:

ರೆ. ಜಾನ್ ಹಾಂಡ್ಸ್ (Rev. John Hands) ಎಂಬ ಲಂಡನ್ ಮಿಷನರಿ ಸೊಸೈಟಿಯ ಪಾದ್ರಿಗಳೊಬ್ಬರು ೧೮೦೯ರಲ್ಲಿ ಬಳ್ಳಾರಿಗೆ ಬಂದರೆಂದೂ, ಅಲ್ಲಿಗೆ ಬಂದ ಮೇಲೆ ಒಂದು ವರ್ಷದೊಳಗೆ ಕನ್ನಡವ್ಯಾಕರಣವೊಂದನ್ನು ಬರೆದರೆಂದು (Compiled) ತಿಳಿದುಬಂದಿದೆ. ಈ ವ್ಯಾಕರಣವು ಯಾವುದು, ಅಚ್ಚಾಯಿತೇ ಇಲ್ಲವೇ–ಈ ಸಂಬಂಧವಾದ ಯಾವ ಹೆಚ್ಚಿನ ವಿವರಗಳೂ ಗೊತ್ತಾಗಿಲ್ಲ. ರೆ. ಡಾ. ಡಬ್ಲ್ಯು. ಕೇರಿ (Rev. Dr. W. Carey) ಯವರ 'A Grammar of the Carnataca

---

೨. ಈ ಸಮೀಕ್ಷೆಯಲ್ಲಿ, ನನಗೆ ನೋಡಲು ದೊರೆತ ಕೆಲವು ವ್ಯಾಕರಣ ಗ್ರಂಥಗಳ ಬಗೆಗೆ ಗ್ರಂಥ ರಚನೆಯ ಕಾಲಕ್ರಮವನ್ನು ಅನುಸರಿಸಿ ಕೇವಲ ಪರಿಚಯಾತ್ಮಕವಾದ ಲಘುಟಿಪ್ಪಣಿಗಳನ್ನು ಮಾತ್ರ ಬರೆದುಕೊಂಡು ಹೋಗಿದ್ದೇನೆ; ನನಗೆ ನೋಡಲು ದೊರೆಯದವುಗಳ ಬಗೆಗೆ ಬೇರೆ ಬೇರೆ ಆಕರಗಳನ್ನು ಅವಲಂಬಿಸಿ ಹೆಸರಿನ ಸೂಚನೆಯಷ್ಟೇ ಕೊಟ್ಟು ಮುಂದೆ ಹೋಗಿದ್ದೇನೆ. ಈ ವಿಭಾಗದಲ್ಲಿ ಸೇರುವ, ಇಂದಿಗೆ ಪರಿಶೀಲನೆಗೆ ವಿರಳವೂ ಅಲಭ್ಯವೂ ಆಗಿರುವ, ಹಲವು ಹೊಸಗನ್ನಡದ ವ್ಯಾಕರಣ ಪುಸ್ತಕಗಳನ್ನು ನನ್ನ ಪರಿಶೀಲನೆಗಾಗಿ ಸಂತೋಷದಿಂದ ಎರವಲುಕೊಟ್ಟು ಉಪಕಾರ ಮಾಡಿರುವ ಮಾನ್ಯಮಿತ್ರರಾದ ಶ್ರೀಮಾನ್ ಆರ್. ಎಲ್. ಅನಂತರಾಮಯ್ಯ ಎಂ. ಎ., ಅವರಿಗೆ ನಾನು ತುಂಬ ಕೃತಜ್ಞನಾಗಿದ್ದೇನೆ. ಹೀಗೆಯೇ ಇನ್ನೂ ಕೆಲವು ಪುಸ್ತಕಗಳು ನನಗೆ ನೋಡಲು ದೊರೆತದ್ದು ಪ್ರೊ. ಹಾ. ಮಾ. ನಾಯಕ್ ಮತ್ತು ಶ್ರೀಮಾನ್ ಕೆ. ರಾಘವೇಂದ್ರರಾವ್ ಎಂ. ಎ., ಅವರ ಕೃಪೆಯಿಂದ. ಇವರ ಉಪಕಾರವನ್ನೂ ಇಲ್ಲಿ ಸಂತೋಷದಿಂದ ನೆನೆಯುತ್ತೇನೆ.

Language' ಎಂಬುದು ೧೮೧೭ರಲ್ಲಿ ಪ್ರಕಟವಾಯಿತೆಂದೂ, ಪ್ರಾಯಃ ಇದೇ ಇಂಗ್ಲಿಷ್ ಜನರ ಸಂಪರ್ಕವಾದ ಈಚಿನ ಕಾಲದ ಮೊದಲನೆಯ ವ್ಯಾಕರಣ ಗ್ರಂಥ ವೆಂದೂ ತಿಳಿಯಲಾಗಿದೆ. ಆದರೆ ೧೮೨೦ರಲ್ಲಿ ಪ್ರಕಟವಾದ ಹಾಗೆ ತಿಳಿಯುವ ಜಾನ್ ಮೆಕರೆಲ್ (John Mc Kerrell) ಎಂಬ ಮದ್ರಾಸು ಸಿವಿಲ್ ಸರ್ವಿಸ್ ಅಧಿಕಾರಿ ಯೊಬ್ಬರ 'A Grammar of the Carnataca Language' ಎಂಬ ಹೊಸಗನ್ನಡದ ವ್ಯಾಕರಣವು ಇತ್ತೀಚಿನವರೆಗೆ ನೋಡಲು ದೊರೆಯುತಿದ್ದ ಗಮನಾರ್ಹವಾದ ವ್ಯಾಕರಣ ವಾಗಿದೆ. ಈ ಗ್ರಂಥವು ಇಂಗ್ಲಿಷಿನಲ್ಲಿ ಬರೆದಿರುವ ಕನ್ನಡ ವ್ಯಾಕರಣವಾಗಿರುವಂತೆ ತೋರುತ್ತದೆ. ಇದು ನಾಲ್ಕನೆಯ ಜಾರ್ಜ್ ಪ್ರಭುವಿಗೆ ಅಂಕಿತವಾಗಿದೆ. ಶ್ರೀರಂಗ ಪಟ್ಟಣಂ ಕೃಷ್ಣಮಾಚಾರ್ಯರು (೧೮೩೮) ಇದನ್ನು ಉಲ್ಲೇಖಿಸಿರುವುದರಿಂದ, ಅಡಕಿ ಸುಬ್ಬರಾಯರು (೧೮೪೬) ತಮ್ಮ ಭಾಷಾವ್ಯಾಕರಣ ವಿಷಯಕಗ್ರಂಥದಲ್ಲಿ ಇದರ ಪ್ರಯೋಜನವನ್ನು ಪಡೆದುಕೊಂಡಿರುವುದರಿಂದ, ಥಾಮಸ್ ಹಡ್ಸನ್ (Thomas Hadson) ಅವರು (೧೮೫೯) ತಮ್ಮ ಕನ್ನಡ ವ್ಯಾಕರಣದ ರಚನೆಗೆ ಇದನ್ನು ಬಲು ಮಟ್ಟಿಗೆ ಬಳಸಿಕೊಂಡಿರುವ ಹಾಗೆ ತೋರುವುದರಿಂದ ಈ ಗ್ರಂಥವು ಮೊದಮೊದಲು ಹೊಸಗನ್ನಡ ವ್ಯಾಕರಣಗಳಲ್ಲಿ ತಕ್ಕಮಟ್ಟಿಗೆ ಪ್ರಸಿದ್ಧವಾಗಿದ್ದಿತೆಂದು ತೋರುತ್ತದೆ. ಅಜ್ಞಾತಕರ್ತೃಕವಾದ 'ಕನ್ನಡ ವ್ಯಾಕರಣ ಸಂಗ್ರಹವು' ('Canarese Grammar') ಎಂಬುದು ೧೮೪೧ರಲ್ಲಿ "ಬೆಂಗಳೂರಲ್ಲಿ ಅಚ್ಚು ಹಾಕಲ್ಪಟ್ಟಿತು." ತೆಲುಗು ಮಾದರಿಯ ಕನ್ನಡ ಅಕ್ಷರಗಳಲ್ಲಿರುವ ಈ ಕೃತಿ "ಮಠದಲ್ಲಿ ಓದುವ ಹುಡುಗರು ಕನ್ನಡ ವ್ಯಾಕರಣದ ನ್ಯಾಯಗಳನ್ನು ಸುಲಭವಾಗಿ ತಿಳಿದುಕೊಳ್ಳುವುದಕ್ಕೋಸ್ಕರ ಬರಿಯಲ್ಪ ಟ್ಟಿದೆ." ೨೮೯ ವ್ಯಾಕರಣಾಂಶಗಳನ್ನು ವಿಶೇಷವಾದ ಉದಾಹರಣೆಗಳೊಡನೆ ಸರಳ ರೀತಿಯಿಂದ ಸಂಕ್ಷೇಪವಾಗಿ ನಿರೂಪಿಸಿದೆ. ಸಾಧಾರಣವಾದ ಸೂತ್ರಪದ್ಧತಿಯನ್ನು ಇಲ್ಲಿ ಅನುಸರಿಸಿರುವ ಹಾಗೆ ತೋರುವುದಿಲ್ಲ. ಅಡಕಿ ಸುಬ್ಬರಾವ್ ಎಂಬುವರು (Adacki Sooba Row, Moonshee in the Canarese Translators Office) ಕಾಲೇಜಿನಲ್ಲಿ ಕಲಿಯುತ್ತಿದ್ದ ಐರೋಪ್ಯ ಜೂನಿಯರ್ ಸಿವಿಲ್ ಉದ್ಯೋಗಸ್ಥರಿ ಗಾಗಿ ಕ್ರಮಿಕ ಭಾಷಾವ್ಯಾಕರಣ ಪಾಠಗಳನ್ನು ಅಳವಡಿಸಿ 'Selection of Stories and Revenue Papers in the Carnataka Language with Translations and Grammatical Analysis to which is added Dialogues in Carnataca and English' ಎಂಬ ಗ್ರಂಥವನ್ನು ೧೮೪೬ರಲ್ಲಿ ಬರೆದರು (Compiled). ಈ ಗ್ರಂಥದಲ್ಲಿರುವ ಭಾಷಾಂತರವೂ ವ್ಯಾಕರಣ ಟಿಪ್ಪಣಿಗಳೂ ಅತ್ಯಂತ ಅಮೂಲ್ಯವಾಗಿವೆ. ೧೮೪೯ರಲ್ಲಿ ರಚಿತವಾದಂತೆ ತಿಳಿಯುವ 'ಬಾಲವ್ಯಾಕರಣವೂ' ಎಂಬ ಗ್ರಂಥವೊಂದು ಬ್ರಿಟಿಷ್ ಮ್ಯೂಸಿಯಂ ಪುಸ್ತಕ ಭಂಡಾರದಲ್ಲಿರುವಂತೆ ತಿಳಿಯುವುದು.

೧೮೪೯ರಲ್ಲಿಯೇ ಕೇಂಬಲ್ ಅಯ್ಯನವರು (Rev. C. Campbell B.A.,) 'ಕನ್ನಡ ವ್ಯಾಕರಣಸಾರವು' ('Elements of Kanarese Grammar') ಎಂಬ

ವ್ಯಾಕರಣ ಗ್ರಂಥವೊಂದನ್ನು ಬರೆದರು. ಇದರ ೧೧ನೆಯ ಮುದ್ರಣ ೧೮೬೩ರಲ್ಲಿ ಬೆಂಗಳೂರಿಂದ ಪ್ರಕಟವಾಯಿತು. ಇದರಲ್ಲಿ ಅಕ್ಷರಲಕ್ಷಣ, ಶಬ್ದಲಕ್ಷಣ ಮತ್ತು ಪ್ರಯೋಗ ಲಕ್ಷಣ—ಎಂಬ ಮೂರು ಭಾಗಗಳಿವೆ. ಸಾಧಾರಣವಾದ ಎಲ್ಲ ವ್ಯಾಕರಣಾಂಶಗಳನ್ನೂ ಸುಲಭವಾಗಿ ವಿಶದವಾಗಿ ೨ಳಳ ವಾಕ್ಯಗಳಲ್ಲಿ ವಿವರಿಸಿದೆ. ಕೊನೆಯಲ್ಲಿ 'ವ್ಯಾಕರಣದಲ್ಲಿ ಪ್ರಯೋಗಿಸಿರುವ ಮುಖ್ಯ ಶಬ್ದಗಳು' ಎಂಬ ಹೆಸರಿನಲ್ಲಿ ಒಂದು ಉಪಯುಕ್ತ ಇಂಗ್ಲಿಷ್–ಕನ್ನಡ ಶಬ್ದಪಟ್ಟಿಕೆಯಿದೆ. ಥಾಮಸ್ ಹಡ್ಸನ್ (Thomas Hodson) ಎಂಬ Wesleyan Missionary ಗೆ ಸೇರಿದ ಒಬ್ಬರು 'An Elementary Grammar of the Kannada, or Canarese Language; in which Every word used in the Examples is Translated, And the Pronunciation is given in English Characters'—ಎಂಬ ಒಂದು ಪುಸ್ತಕವನ್ನು ಇಂಗ್ಲಿಷಿನಲ್ಲಿ ಬರೆದು ೧೮೫೯ರಲ್ಲಿ ಪ್ರಕಟಿಸಿದರು; ೧೮೬೪ರಲ್ಲಿ ಅದರ ಎರಡನೆಯಾವೃತ್ತಿ ಬಂದಿತು. ಭಾಷಾಭ್ಯಾಸಿಗಳಾದ ಸರ್ಕಾರದ ನಾನಾ ಇಲಾಖೆಗಳ ಉದ್ಯೋಗಸ್ಥರಿಗೆ ಮತ್ತು ಕ್ರೈಸ್ತಧರ್ಮ ಪ್ರಸಾರಕರಿಗೆ ಕನ್ನಡಭಾಷೆಯ ಅಭ್ಯಾಸವು ಆವಶ್ಯಕವೆಂದೂ, ಕನ್ನಡದಲ್ಲಿ ಸಂಕ್ಷಿಪ್ತವೂ, ಸರಳವೂ ಆದ ಪರಿಚಯಾತ್ಮಕವ್ಯಾಕರಣದ ಅಗತ್ಯವಿದ್ದುದರಿಂದ ತಾವು ಅಂತಹುದನ್ನು ಬರೆದಿರುವುದಾಗಿಯೂ ಕೃತಿಕರ್ತರು ಕೃತಿಯ ಮುನ್ನುಡಿಯಲ್ಲಿ ಹೇಳಿಕೊಂಡಿದ್ದಾರೆ. ವರ್ಣಮಾಲೆಯಿಂದ ಮೊದಲುಗೊಂಡು ನಿಪಾತಾವ್ಯಯಗಳ ವರೆಗೆ ೧ಳಳ ಪ್ರಕ್ರಿಯೆಗಳನ್ನು ಮೊದಲಭಾಗದಲ್ಲಿಯೂ, ಇತರ ಪ್ರಕ್ರಿಯೆಗಳನ್ನು (೧ಳ೫ ರಿಂದ ೩೭೫ರವರೆಗೆ) Syntax ಎಂಬ ಎರಡನೆಯ ಭಾಗದಲ್ಲಿಯೂ, ಇಂಗ್ಲಿಷ್–ಕನ್ನಡ ವ್ಯಾಕರಣ ಪರಿಭಾಷೆಯ ಪದಪಟ್ಟಿಯನ್ನೂ ಇತರ ಉಪಯುಕ್ತ ವಿಷಯಗಳನ್ನೂ ಕೊನೆಯ ಪರಿಶಿಷ್ಟಭಾಗದಲ್ಲಿಯೂ ಕೊಡಲಾಗಿದೆ. ಉದಾಹರಣೆಗಳು ವ್ಯವಹಾರೋಚಿತವಾಗಿ ತಕ್ಕುಮಟ್ಟಿಗೆ ಸರಳವೂ ಸ್ವಾರಸ್ಯಕರವೂ ಆಗಿದ್ದು ಅಭ್ಯಾಸಿಗಳಿಗೆ ವ್ಯಾಕರಣದ ಬಗೆಗೆ ಒಲವು ಹುಟ್ಟುವಂತಿದೆ. ರೆ. ಎಫ್. ಜಿಗ್ಲರ್ (Rev. F. Ziegler) ಅವರು ಬರೆದ 'ಕನ್ನಡಭಾಷೆಯ ವ್ಯಾಕರಣ'ವು ೧೮೬೨ರಲ್ಲಿ ೨ನೆಯ ಆವೃತ್ತಿಯನ್ನು ಪಡೆದದ್ದೂ, ೧೮೬೬ರಲ್ಲಿ ಅವರಿಂದಲೇ 'ಕನ್ನಡ ಶಾಲಾವ್ಯಾಕರಣ'ವು ರಚಿತವಾದದ್ದೂ ಇಲ್ಲಿ ಸೂಚಿಸತಕ್ಕದ್ದಾಗಿದೆ. ಇನ್ನು ರೆ. ಡಾ. ಎಫ್. ಕಿಟ್ಟೆಲ್ (Rev. Dr. F. Kittel) ತಮ್ಮ ಜನಪ್ರಿಯವೂ ಪ್ರೌಢವೂ ಆದ 'ಕನ್ನಡ ವ್ಯಾಕರಣ' (೧೯೦೩) ವನ್ನು ಬರೆಯುವ ಮೊದಲಲ್ಲೆ ೧೮೬೬ರಲ್ಲಿ 'ಸಂಕ್ಷೇಪ ವ್ಯಾಕರಣ ಸೂತ್ರಗಳು' ಎಂಬ ಕೃತಿಯನ್ನೂ, ೧೮೮೯ರಲ್ಲಿ 'ಹಳಗನ್ನಡ ವ್ಯಾಕರಣಸೂತ್ರಗಳು' ಎಂಬ ಕೃತಿಯನ್ನೂ ಬರೆದಿದ್ದ ಹಾಗೆ ತಿಳಿಯುತ್ತದೆ. ಇವುಗಳಲ್ಲಿ ಮೊದಲನೆಯದರ ಬಗೆಗೆ ಮಾತ್ರ ಕೊಂಚ ವಿವರಗಳು ದೊರೆಯುವಂತೆ ತೋರುತ್ತದೆ.

ಮುನಷಿ ಶ್ರೀನಿವಾಸಯ್ಯ (ಶ್ರೀನಿವಾಸ ಕವೀಶ) ಎಂಬ ದೇಶೀಯ ಪಂಡಿತರೊಬ್ಬರು 'ಪದ್ಯಕಾವ್ಯ ವ್ಯಾಕರಣ' ('The Canarese Grammar in

Rhyme') ಎಂಬ ೩೬ ಸಣ್ಣ ಪುಟಗಳ ಚಿಕ್ಕ ಪುಸ್ತಕವೊಂದನ್ನು ೧೮೬೭ರಲ್ಲಿ ಬರೆದು ಬೆಂಗಳೂರಿನಿಂದ ಪ್ರಕಟಿಸಿದರು. ಇದನ್ನು ಶಾಲೆಗಳ ಮತ್ತು ಖಾಸಗಿ ವಿದ್ಯಾರ್ಥಿಗಳ ಉಪಯೋಗಕ್ಕೆಂದು ಬರೆದಿರುವುದಾಗಿ ಮುಖಪುಟದಲ್ಲಿ ಸೂಚನೆಯಿದೆ. ಇದಕ್ಕೆ ಎಸ್. ವರದರಾಜ ಅಯ್ಯಂಗಾರ್ ಎಂಬ ಉಪಾಧ್ಯಾಯರೊಬ್ಬರು ಕನ್ನಡ–ಇಂಗ್ಲಿಷ್ ಭಾಷೆಗಳಲ್ಲಿ ಸಂಕ್ಷಿಪ್ತವಾಗಿ ಟಿಪ್ಪಣಿಗಳನ್ನೂ ವಿವರಣೆಗಳನ್ನೂ ಬರೆದಿದ್ದು ಅವು ಗ್ರಂಥದ ಅಡಿಟಿಪ್ಪಣಿಗಳಲ್ಲಿ ಅಡಕವಾಗಿವೆ. ಈ ಪುಟ್ಟ ಪುಸ್ತಕವನ್ನು 'ಹೊಸಗನ್ನಡ ನುಡಿಚಂದ್ರಿಕೆ' ಎಂದೂ ಕರೆದಿದೆ. ಗ್ರಂಥದಲ್ಲಿ Orthography, Etymology ಮತ್ತು Syntax ಎಂಬ ಮೂರು ಭಾಗಗಳಿದ್ದು, ಒಟ್ಟು ೮ ಆಶ್ವಾಸಗಳಿವೆ. ಕಂದ ವೃತ್ತಾದಿ ಬೇರೆ ಬೇರೆ ಪದ್ಯಜಾತಿಗಳಲ್ಲಿ ವ್ಯಾಕರಣಾಂಶಗಳನ್ನು ವಿವರಿಸಿರುವುದು ಇಲ್ಲಿಯ ಅಪೂರ್ವವೈಶಿಷ್ಟ್ಯವಾಗಿದೆ. ಜಿ. ಕಾಯಿಜ್ ಅವರು ಬರೆದ 'ಕನ್ನಡ ಬಾಲವ್ಯಾಕರಣ'ವು (ಅಜ್ಞಾತಕರ್ತೃಕವಾದ 'ಕನ್ನಡ ಭಾಷೆಯಲ್ಲಿ ತರ್ಜುಮೆಮಾಡಲ್ಪಟ್ಟಂಥಾ ಇಂಗ್ಲಿಷ್ ವ್ಯಾಕರಣವು' ಎಂಬುದೂ) ೧೮೬೮ರಲ್ಲಿ ಪ್ರಕಟವಾದಂತೆ ತಿಳಿಯುತ್ತದೆ. ದಕ್ಷಿಣಾಮೂರ್ತಿಶಾಸ್ತ್ರಿಯವರ 'ಶಬ್ದಭಾಸ್ಕರ' ೧೮೭೧ರಲ್ಲಿ ಮೊದಲಬಾರಿಗೆ ಅಚ್ಚಾದಂತೆ ಕಂಡುಬರುತ್ತದೆ. ಈ ಗ್ರಂಥದ ಮುಖಪತ್ರದಲ್ಲಿ "ಕನ್ನಡಭಾಷೆಯನ್ನು ಓದುವಂಥವರಿಗೆ ಅತ್ಯಂತೋಪಯುಕ್ತವಾದ ಶಬ್ದಭಾಸ್ಕರವೆಂಬ ಈ ಕನ್ನಡ ವ್ಯಾಕರಣವು ಮೈಸೂರುಶೀಮೆಯ ವಿದ್ಯಾಶಾಲಾ ಯಿಲಾಖಾ ೧ನೇ ತುಕ್ಕಡಿ ಇನ್‌ಸ್ಪೆಕ್ಟರ್ ಬಿ. ಎಲ್. ರೈಸ್ ಸಾಹೇಬರವರ ಅನುಮತಿಯನ್ನು ಹೊಂದಿದ್ದಾಗಿ ಬೆಂಗಳೂರು ಡಿಸ್ಟ್ರಿಕ್ಟ್ ಸಬ್‌ಡಿಪ್ಯುಟಿ ಇನ್‌ಸ್ಪೆಕ್ಟರ್ ಉ. ದಕ್ಷಿಣಾಮೂರ್ತಿಶಾಸ್ತ್ರಿಯಿಂದ ವಿರಚಿತವಾಗಿ ಬೆಂಗಳೂರು ಕರ್ಣಾಟಕಾಕ್ಷರ ಮುದ್ರಾಶಾಲೆಯೊಳ್ ಕಂ. ಟಿ. ಶ್ರೀನಿವಾಸಾಚಾರ್ಯರಿಂದ ಮುದ್ರಿಸಲ್ಪಟ್ಟಿತು"— ಎಂಬುದಾಗಿ ಕರ್ತೃವಿನ ಮತ್ತು ಗ್ರಂಥದ ಬಗೆಗೆ ವಿವರಗಳಿವೆ. ಶ್ರೀನಿವಾಸಯ್ಯನವರ ಪುಸ್ತಕದಂತೆಯೇ ಇಲ್ಲಿಯೂ ಅಕ್ಷರಖಂಡ, ಶಬ್ದಖಂಡ ಮತ್ತು ವಾಕ್ಯಖಂಡ ಎಂಬ ಮೂರು ಭಾಗಗಳಿವೆ. ಅಲ್ಲಿಯ ಹಾಗೆಯೇ ಇಲ್ಲಿಯೂ ನಿರೂಪಣೆಯು ಪದ್ಯಾತ್ಮಕವಾಗಿದ್ದು ಕಂದ ಭಾಮಿನೀಷಟ್ಪದಿ ಮೊದಲಾದ ಪದ್ಯಜಾತಿಗಳಲ್ಲಿ ಹೊಸಗನ್ನಡ ವ್ಯಾಕರಣವನ್ನು ಅಭ್ಯಾಸಿಗಳಿಗಾಗಿ ಬರೆದಿದೆ; ಗದ್ಯದಲ್ಲಿ ತಾತ್ಪರ್ಯವನ್ನು ಬರೆದು ಸೇರಿಸಿದೆ. ತೆಲುಗು–ಕನ್ನಡ ಮಿಶ್ರಲಿಪಿಯಲ್ಲಿ ಗ್ರಂಥವನ್ನು ಮುದ್ರಿಸಿರುವುದು ಒಂದು ವಿಶೇಷ. ದೇಶ್ಯ ಸಂಸ್ಕೃತ ಮತ್ತು ಅನ್ಯದೇಶ್ಯಗಳ ಬಗೆಗೆ ಇಲ್ಲಿ ಸ್ಪಷ್ಟವಾದ ಉಲ್ಲೇಖವಿರುವುದು ಗಮನಾರ್ಹವಾಗಿದೆ. ಕೋಸ್ತ (ಟಿಟಸ್) ಕೃತವಾದ 'ಕನ್ನಡ ಬಾಲ ವ್ಯಾಕರಣ' ೧೮೭೭ ರಲ್ಲಿ ರಚಿತವಾಗಿದ್ದು ಅದು ಈಗ ಬ್ರಿಟಿಷ್ ಮ್ಯೂಜಿಯಂ ಗ್ರಂಥಾಲಯದಲ್ಲಿರುವಂತೆ ತೋರುತ್ತದೆ. ರಾವ್‌ಸಾಹಿಬ್ ಪಾಂಡುರಂಗ್ ವೆಂಕಟೇಶ್ ಚಿಂತಾಮಣಿ ಪೇಟ್‌ಕರ್ 'ಸಂಸ್ಕೃತ ಕನ್ನಡ ವ್ಯುತ್ಪತ್ತಿ' ('A Manual of Sanskrit and Kannada roots') ಎಂಬುದನ್ನು ೧೮೮೦ರಲ್ಲಿ ಬರೆದಿದ್ದಾರೆ.

ಇದರ ಎರಡನೆಯ ಭಾಗದಲ್ಲಿ ೨೫೨ ಕನ್ನಡ ಪ್ರಕೃತಿಗಳನ್ನು ಪಟ್ಟಿಮಾಡಿದೆ; ಮೊದಲು ಕನ್ನಡ ಧಾತುವನ್ನೂ ದುಂಡುಕಂಸದಲ್ಲಿ ಅದರ ಅರ್ಥವನ್ನೂ ಕೊಟ್ಟು, ಅನಂತರದಲ್ಲಿ ಧಾತುವಿನ ನಿಷ್ಪನ್ನರೂಪಗಳನ್ನು ಕೊಡುತ್ತಹೋಗಿದೆ.

ಉತ್ತರಕನ್ನಡ ಜಿಲ್ಲೆಯಲ್ಲಿ ಕನ್ನಡ ಭಾಷೆ ಸಾಹಿತ್ಯಗಳ ದೃಷ್ಟಿಯಿಂದ ಸ್ತುತ್ಯರ್ಹವಾದ ಕೆಲಸಗಳನ್ನು ಮಾಡಿದವರಲ್ಲಿ ವೆಂಕಟರಂಗೋಕಟ್ಟಿಯವರು ಒಬ್ಬರು. ಅವರು ಬರೆದಿರುವ 'ಕನ್ನಡ ಲಘುವ್ಯಾಕರಣ' 'ಸಂಕ್ಷಿಪ್ತ ಕನ್ನಡ ವ್ಯಾಕರಣವು' ('Outlines of Kanarese Grammar') ೧೮೮೦ರಲ್ಲಿ ಮೊದಲು ಮುದ್ರಿತವಾಗಿ ಅನಂತರದಲ್ಲಿ ಹಲವು ಮುದ್ರಣಗಳನ್ನು ಕಂಡಿತು (೫ನೆಯದು ೧೮೯೫; ೬ನೆಯದು ೧೯೦೧). ಇದರಲ್ಲಿ ವರ್ಣವಿವರ, ಸಂಧಿಗಳು, ಶಬ್ದವಿವರ ಮತ್ತು ವಾಕ್ಯರಚನೆ—ಎಂಬುದಾಗಿ ಭಾಗಗಳಿವೆ. ಕೇಂಬಲ್ ಮಾಡಿರುವ ಹಾಗೆಯೇ ಇಲ್ಲಿಯೂ ೧೩೫ ವ್ಯಾಕರಣಾಂಶಗಳನ್ನು ಶಾಲಾವಿದ್ಯಾರ್ಥಿಗಳಿಗಾಗಿ ಸಂಕ್ಷಿಪ್ತವಾಗಿಯೂ ವಿಶದವಾಗಿಯೂ ವಿವರಿಸಿದೆ. ೧೮೮೪ರಲ್ಲಿ ಬಿ. ಗ್ರೇಟರ್ ಅವರಿಂದ ಇಂಗ್ಲಿಷಿನಲ್ಲಿ 'Tables of Canarese Grammar' ಎಂಬುದೂ, ರಾಮಚಂದ್ರ ಶ್ರೀನಿವಾಸ ನರೇಗಲ್ಲ ಅವರಿಂದ 'ವಾಣೀಮುಕುರ' ಎಂಬುದೂ ಬಂದುವು. ೧೮೮೫ರಲ್ಲಿ ಮಂಗಳೂರಿಂದ ಪ್ರಕಟವಾದ, 'ಸೈಂಟ್ ಆಲೋಯಿಸ್ಯುಸ್ ಕೊಲೆಜಿನ ಕರ್ನಾಟಕ ಪಂಡಿತ ಸಜೀಪ ರಾಮಕೃಷ್ಣಯ್ಯ' ನವರಿಂದ ರಚಿಸಲ್ಪಟ್ಟ, 'ಕನ್ನಡ ವಚನಕೌಮುದಿ' ಒಂದು ಗಮನಾರ್ಹವಾದ ವ್ಯಾಕರಣಗ್ರಂಥ. (ಇದರಲ್ಲಿ ಛಂದೋಲಕ್ಷಣವೆಂಬ ಭಾಗವೂ ಸೇರಿಕೊಂಡಿದೆ). ಇಂಡಿಯನ್ ಮೆಡಿಕಲ್ ಸರ್ವಿಸ್‌ನ D. P. Warlikar ಎಂಬ ಶಸ್ತ್ರವೈದ್ಯರಿಗೆ ಇದು ಅಂಕಿತಗೊಂಡಿದೆ. ಇದರ ಇಂಗ್ಲಿಷ್ ಮುನ್ನುಡಿಯಲ್ಲಿ ಗ್ರಂಥಕರ್ತೃ ಶಾಲಾ ಕಾಲೇಜು ವಿದ್ಯಾರ್ಥಿಗಳಿಗೂ ಅಧ್ಯಾಪಕರಿಗೂ ಉಪಯುಕ್ತವಾಗುವ ರೀತಿಯಲ್ಲಿ ವಿಶದವೂ ಸಂಕ್ಷಿಪ್ತವೂ ಆದ ವ್ಯಾಕರಣವನ್ನೂ ರಚಿಸುವ ದೃಷ್ಟಿಯಿಂದ ಈ ಹೊಸ ವ್ಯಾಕರಣವನ್ನು ಸಿದ್ಧಪಡಿಸಿರುವುದಾಗಿಯೂ ಇದನ್ನು ಚೆನ್ನಾಗಿ ಅರಗಿಸಿಕೊಂಡರೆ ವಿದ್ಯಾರ್ಥಿಗಳಿಗೆ ಬೇಕಾಗುವನಿತು ವ್ಯಾಕರಣ ವಿಧಿಗಳ ತಿಳಿವಳಿಕೆಯನ್ನು ಇಲ್ಲಿಯೇ ಪಡೆಯಬಹುದೆಂದೂ ಆಶಿಸಿರುತ್ತಾರೆ. ಅಲ್ಲದೆ ನಿರೂಪಣ ವಿಧಾನದಲ್ಲಿ ಹಿಂದಿನ ವ್ಯಾಕರಣಗಳ ಪ್ರಶ್ನೋತ್ತರ ವಿಧಾನದ ಸೂತ್ರ ಪದ್ಧತಿಯನ್ನು ಇಲ್ಲಿ ಟೀಕಿಸಿ ವಿಶೇಷವಾದ ಉದಾಹರಣೆಗಳಿಂದ ವ್ಯಾಕರಣಾಂಶಗಳನ್ನು ವಿವರಿಸತೊಡಗಿದೆ. ಅಕ್ಷರವಿಚಾರ, ಶಬ್ದಲಕ್ಷಣ ಮತ್ತು ವಾಕ್ಯರಚನೆ–ಎಂಬುದಾಗಿ ಹಳೆಯ ಸಂಪ್ರದಾಯದಂತೆ ಮೂರು ವಿಭಾಗಗಳನ್ನು ಮಾಡಿಕೊಂಡು ೧೫೭ ವ್ಯಾಕರಣಾಂಶಗಳನ್ನು ಇಲ್ಲಿ ಪ್ರತಿಪಾದಿಸಿದೆ. ೧೮೯೦ರಲ್ಲಿ ಹೆ. ಹೊನ್ನಪ್ಪನವರು 'ವ್ಯಾಕರಣ ಸಂಗ್ರಹಂ' ಎಂಬುದನ್ನು ಬರೆದರು. ('ವ್ಯಾಕರಣ ಸಂಗ್ರಹ' ಎಂಬ ಅಜ್ಞಾತಕರ್ತೃಕವಾದ ಒಂದು ಗ್ರಂಥವಿದೆ. ಇದೇ ಹೊನ್ನಪ್ಪನವರದಿರಬಹುದೇನೋ, ಇದರಲ್ಲಿ ೯ ಲಘು ಪ್ರಕರಣಗಳಿವೆ. ಆರಂಭದ ಸೂಚನೆಯಲ್ಲಿ ಈ ಗ್ರಂಥವು ಮೈಸೂರು ದೇಶಿಯೋಪಾಧ್ಯಾಯ ವಿದ್ಯಾರ್ಥಿಗಳ ಉಪಯೋಗಕ್ಕೆಂದು ಬರೆದದ್ದಾಗಿದೆ

ಎಂದು ಹೇಳಿದೆ. ಇಲ್ಲಿ ವ್ಯಾಕರಣಾಂಶಗಳನ್ನು ಪ್ರಶ್ನೋತ್ತರ ರೂಪದಲ್ಲಿ ವಿವರಿಸಿದೆ. ವಿಚಾರಣೀಯವಾದೆಡೆಗಳಲ್ಲಿ 'ವಿಚಾರಂ' ಎಂಬ ಟಿಪ್ಪಣಿ ಬರೆದಿದೆ. ಒಟ್ಟು ೮೧ ಪ್ರಶ್ನೆಗಳಿರುವ ಈ ಕೃತಿಯ ರಚನೆಗೆ 'ಶಬ್ದಮಣಿದರ್ಪಣ'ವು ಕೆಲಮಟ್ಟಿಗೆ ಆಧಾರವಾಗಿರುವಂತೆ ತೋರುತ್ತದೆ.) ಎಂ. ರಾಮಸ್ವಾಮಿ ಶಾಸ್ತ್ರಿಗಳ 'ಕರ್ನಾಟಕ ವಾಗ್ವಿಧಾಯಿನಿ' 'ಹೊಸಗನ್ನಡ ನುಡಿಗನ್ನಡಿ'ಯ ಹಾದಿಯಲ್ಲಿಯೇ ರಚಿತವಾಗಿರುವಂತೆಯೂ ಆತ್ಯಾರಂಭ ಕಾಲದ ವ್ಯಾಕರಣಗಳಲ್ಲಿ ಇದು ಕೂಡ ಒಂದಾಗಿದ್ದು ಈಚೆಗೆ ಕೂಡ ಜನಪ್ರಿಯವಾಗಿದ್ದಂತೆಯೂ ತೋರುತ್ತದೆ. ೧೯೫೦ರಲ್ಲಿ ಇದರ ಏಳನೆಯ ಮುದ್ರಣ ಹೊರಬಿದ್ದಿತು.

ಕನ್ನಡದ ಖ್ಯಾತ ಭಾಷಾಸೇವಕರಲ್ಲಿ ಒಬ್ಬರಾದ ಧೋಂಡೋ ನರಸಿಂಹ ಮುಳಬಾಗಲರು 'ಕನ್ನಡ ಕಯ್ಪಿಡಿ' ('Kaipidi or Advanced Kannada Grammar) ಎಂಬ ಹೆಸರಿನಿಂದ ಎರಡು ಭಾಗಗಳಲ್ಲಿ ಕನ್ನಡ ವ್ಯಾಕರಣವೊಂದನ್ನು ಬರೆದುದಾಗಿ ತಿಳಿಯುತ್ತದೆ. ಪೂರ್ವಾರ್ಧವು ೧೯೫೦ರಲ್ಲಿ ರಚಿತವಾಗಿ ಧಾರವಾಡದಿಂದ ಪ್ರಕಟವಾಗಿದೆ. ಇದರ 'ತಿದ್ದಿ ಬೆಳಸಿದೆರಡನೆಯಾವೃತ್ತಿ' ೧೯೫೩ರಲ್ಲಿ ಬಂದಿತು. ಗ್ರಂಥದ ಪೂರ್ವಾರ್ಧದಲ್ಲಿಯ ನಿರೂಪಣೆ ಮುಖ್ಯವಾಗಿ ಹಳಗನ್ನಡ ಭಾಷೆಯನ್ನು ಕುರಿತಿದೆ. "ಕನ್ನಡ ಶಿಕ್ಷಣಾಲಯ (ಟ್ರೇನಿಂಗ ಕಾಲೇಜ)ದ ವಿದ್ಯಾರ್ಥಿಗಳಿಗೂ ಹಾಯಸ್ಕೂಲ ವಿದ್ಯಾರ್ಥಿಗಳಿಗೂ ಕನ್ನಡ ನುಡಿಯ ಅಧ್ಯಾಪಕರಿಗೂ ಕನ್ನಡದ ಸತ್ಯಜ್ಞಾನವಾಗಬೇಕೆಂಬುದ್ದೇಶದಿಂದ ಶಬ್ದಮಣಿದರ್ಪಣ ಶಬ್ದಾನುಶಾಸನ ಮುಂತಾದ ಪ್ರಸಿದ್ಧವಾದ ಪ್ರಾಚೀನ ಕನ್ನಡ ಗ್ರಂಥಗಳಾಧಾರದಿಂದಲೂ ಸ್ವಾನುಭವದಿಂದಲೂ ರಚಿಸಲ್ಪಟ್ಟಿದೆ"–ಎಂಬುದಾಗಿ ಗ್ರಂಥದ ಮುಖಪತ್ರದಲ್ಲಿ ಬರೆದಿದೆ. ಈ ಹೇಳಿಕೆಯಿಂದಲೂ ಗ್ರಂಥ ಪರಿಶೀಲನೆಯಿಂದಲೂ ಇದು ನ್ಯಾಯವಾಗಿ ಪ್ರೌಢವ್ಯಾಕರಣಗಳ ಗುಂಪಿಗೆ ಸೇರಿಸಲು ತಕ್ಕದ್ದಾಗಿದೆ. 'ಕನ್ನಡ ಕಯ್ಪಿಡಿ'ಯನ್ನು ಬರೆದ ಮುಳಬಾಗಲರೇ ೧೯೫೨ರಲ್ಲಿ 'ನುಡಿಗಟ್ಟು' ಎಂಬ 'ಹೊಸಗನ್ನಡ ಸಂಕ್ಷಿಪ್ತ ವ್ಯಾಕರಣ'ವನ್ನು ಬರೆದರು. ಇದರ 'ತಿದ್ದಿಬೆಳಿಸಿದ ಮೂರನೆಯಾವೃತ್ತಿ' ೧೯೫೬ರಲ್ಲಿಯೂ ಸುಧಾರಿಸಿದ ಇನ್ನೊಂದು ಈಚಿನ ಆವೃತ್ತಿ ೧೯೬೦ರಲ್ಲಿಯೂ ಬಂದಿತು. ಇಲ್ಲಿಯೂ ಕರ್ತೃಗಳು ಇದರ ಬಗೆಗೆ 'ವಿದ್ಯಾರ್ಥಿಗಳ ಪ್ರಯೋಜನಕ್ಕಾಗಿ ಸಿದ್ಧವಾದ್ದು, ಶಬ್ದಮಣಿದರ್ಪಣ ಶಬ್ದಾನುಶಾಸನ ಮುಂತಾದ ಹಳಗನ್ನಡದ ಪ್ರಸಿದ್ಧ ಗ್ರಂಥಗಳ ಆಧಾರದಿಂದಲೂ ಸ್ವಾನುಭವದಿಂದಲೂ ರಚಿಸಿದ್ದು'–ಎಂಬುದಾಗಿ ಹೇಳಿಕೊಂಡಿರುತ್ತಾರೆ. ಅಕ್ಷರವಿಚಾರ ಶಬ್ದವಿಚಾರ ಮತ್ತು ವಾಕ್ಯವಿಚಾರ–ಎಂಬ ಮೂರು ಭಾಗಗಳಲ್ಲಿ ೩೨೪ ವ್ಯಾಕರಣಾಂಶಗಳನ್ನು ವಿಶದಪಡಿಸಲು ಇಲ್ಲಿ ಪ್ರಯತ್ನಿಸಿದೆ. ತಕ್ಕಮಟ್ಟಿಗೆ ವಿಸ್ತಾರವಾಗಿಯೂ ಪ್ರೌಢವಾಗಿಯೂ ರಚಿತವಾಗಿರುವ ಈ ವ್ಯಾಕರಣವು, ಮುಂಬಯಿ ಪ್ರಾಂತದ ಉತ್ತರಕರ್ಣಾಟಕದ ಹಿಂದಿನ ಶಾಲಾವ್ಯಾಕರಣಗಳಲ್ಲಿ, ಜನಪ್ರಿಯವೂ ಅಧಿಕೃತವೂ ಆದವುಗಳಲ್ಲಿ, ಒಂದಾಗಿದ್ದಂತೆ ತೋರುತ್ತದೆ. ಎಂ. ಬಿ. ಶ್ರೀನಿವಾಸಯ್ಯಂಗಾರ್ಯರೆಂಬುವರು ೧೯೫೪ರಲ್ಲಿ 'ವಾಚಕ ಬೋಧಿನಿ' ಎಂಬುದನ್ನು ಬರೆದರು. ೧೯೩೩ರಷ್ಟು ಹಿಂದೆಯೇ ಇದರ ೨೨ನೆಯ ಆವೃತ್ತಿ ಪ್ರಕಟವಾದದ್ದು

ನೋಡಿದರೆ ಇತರ ಜನಪ್ರಿಯ ವ್ಯಾಕರಣಗಳ ಶ್ರೇಣಿಗೆ ಇದು ಕೂಡ ತಪ್ಪದೆ ಸೇರುತ್ತದೆ. 'ಕನ್ನಡ ಶಾಲಾವ್ಯಾಕರಣ'ವೆಂಬುದೊಂದರ ('Canarese School Grammar') ೯ನೆಯ ಮುದ್ರಣವು ೧೮೯೫ರಲ್ಲಿ ಮಂಗಳೂರಿಂದ ಪ್ರಕಟವಾಯಿತು. ಇದು ಎಫ್. ಜಿಗ್ಲರ್ ಕೃತವಾಗಿ ೧೮೬೬ರಲ್ಲಿ ಮೊದಲು ಪ್ರಕಟವಾದ 'ಕನ್ನಡ ಶಾಲಾ ವ್ಯಾಕರಣ'ವೇಯೋ ಬೇರೆಯೋ ಸರಿಯಾಗಿ ತಿಳಿಯದು. ಇದರಲ್ಲಿ ಅಕ್ಷರಖಂಡ, ಶಬ್ದಖಂಡ ಮತ್ತು ವಾಕ್ಯಖಂಡ-ಎಂಬ ಮೂರು ಭಾಗಗಳಿದ್ದು ಒಟ್ಟು ೧೮೭ ವ್ಯಾಕರಣಾಂಶಗಳನ್ನು ಇಲ್ಲಿ ಕುರಿತಿದೆ. ನಿರೂಪಣಕ್ರಮದಲ್ಲಿ ತಕ್ಕಮಟ್ಟಿನ ಸ್ವಾತಂತ್ರ್ಯವನ್ನು ವಹಿಸಿದೆ. ೧೮೯೬ರಲ್ಲಿ ರಾ. ಶ್ರೀ. ಕುಲಕರ್ಣಿ ಎಂಬುವರ, 'ಕನ್ನಡ ಬರಹದ ವರ್ಣಗಳು' ಮತ್ತು 'ಕನ್ನಡ ಶಿಶುಬೋಧ ವರ್ಣಮಾಲೆ' ಎಂಬೆರಡು ಪುಸ್ತಕಗಳು ಬಂದವು.

ಮೈಸೂರು ಪ್ರಾಂತದಲ್ಲಿ ಇಂದಿಗೂ ಪ್ರಖ್ಯಾತವಾಗಿರುವ ಬಿ. ಮಲ್ಲಪ್ಪನವರ 'ಶಬ್ದಾದರ್ಶ' ಮೊದಲಬಾರಿಗೆ ೧೮೯೭ರಲ್ಲಿ ಪ್ರಕಟವಾಯಿತು.[3] ೧೯೩೩ರಷ್ಟು ಹಿಂದೆಯೇ ಇದರ ೨೫ನೆಯ ಆವೃತ್ತಿ ಅಚ್ಚಾಯಿತು. ಇದರ ಜನಪ್ರಿಯತೆ ಆವಶ್ಯಕತೆ ಈವರೆಗೂ ಕುಂದಿಲ್ಲವೆಂಬುದನ್ನು ನೋಡಿದರೆ ಇದರ ಮಹತ್ವ ತಿಳಿಯುತ್ತದೆ. ಆಗಾಗ ಅಧ್ಯಾಪಕ ಧುರೀಣರಾದ ವ್ಯಾಕರಣ ಪಂಡಿತರಿಂದ ಉಚಿತರೀತಿಯ ತಿದ್ದುಪಡಿಗಳನ್ನು ಪಡೆದುಕೊಂಡು ನಿರ್ದುಷ್ಟವಾಗಿ ಇದು ರೂಪುಗೊಂಡಿದೆ. ಒಳ್ಳೆಯ ಶಾಲಾವ್ಯಾಕರಣಕ್ಕೆ 'ಸೊಗಸಾದ ಉದಾಹರಣೆ' ಯೆಂಬ ಮೆಚ್ಚಿಕೆಯನ್ನು ಗಳಿಸಿದೆ. ಶಾಲಾ ವ್ಯಾಕರಣಗಳಲ್ಲಿ ಮುಂಬಯಿ ಪ್ರಾಂತದ ಕಡೆ ಕಟ್ಟಿಯವರ 'ಕನ್ನಡ ಲಘುವ್ಯಾಕರಣ'ವೂ, ಉತ್ತರ ಕರ್ನಾಟಕದ ಪ್ರದೇಶದಲ್ಲಿ ಪೂಜಾರರ 'ನುಡಿಗನ್ನಡಿ'ಯೂ, ಮದ್ರಾಸು ಪ್ರಾಂತದಲ್ಲಿ ಪಂಜೆಯವರ 'ಕನ್ನಡ ಮೂಲ ವ್ಯಾಕರಣ'ವೂ ಹೇಗೆ ಪ್ರಖ್ಯಾತವೂ ಉಪಯುಕ್ತವೂ ಆಗಿದೆಯೋ ಹಾಗೆಯೇ ಮೈಸೂರು ಪ್ರಾಂತದಲ್ಲಿ ಮಲ್ಲಪ್ಪನವರ 'ಶಬ್ದಾದರ್ಶ' ಪ್ರಖ್ಯಾತವೂ ಉಪಯುಕ್ತವೂ ಆಗಿದೆಯೆಂದು ಹೇಳಬಹುದು.

ಪಂಡಿತ ವೈ. ಕೃಷ್ಣಾಚಾರ್ಯರ 'ಕರ್ಣಾಟ ವ್ಯಾಕರಣಂ' ೧೮೯೭ರಲ್ಲಿಯೇ ಮೈಸೂರಿನಿಂದ ಪ್ರಕಟವಾಯಿತು. ಇದು ಬ್ರಹ್ಮ ಶ್ರೀ ವೈಯಾಕರಣ ವ್ಯಾಸಕೃಷ್ಣಾಚಾರ್ಯವರ್ಯರ ಜ್ಞಾಪಕಾರ್ಥವಾಗಿ ಅವರ ದೌಹಿತ್ರರಾದ ಗ್ರಂಥಕರ್ತೃ ಅರ್ಪಿಸಿದ ಒಂದು ಕೃತಿಯಾಗಿದೆ. ಇದನ್ನು "ಕರ್ಣಾಟಕ ವಿದ್ಯಾರ್ಥಿಗಳುಪಯೋಗಾರ್ಥವಾಗಿ" (For the use of those studying for thc Local and University Exami nations)ಬರೆದುದಾಗಿ ಮುಖಪತ್ರದ ಮತ್ತು ಪೀಠಿಕೆಯ ಸೂಚನೆಗಳಿಂದ ತಿಳಿಯಬಹುದಾಗಿದೆ. ಷಟ್ಪದೀ ಕಾವ್ಯಗಳ ಶಬ್ದರೂಪಗಳನ್ನು ಲಕ್ಷ್ಯದಲ್ಲಿರಿಸಿಕೊಂಡು ಪ್ರೌಢವಿದ್ಯಾರ್ಥಿಗಳಿಗೆ ಅವರ ಪರೀಕ್ಷೆಗಳಿಗೆ ಅನುಕೂಲವಾಗುವಂತೆ ವ್ಯಾಕರಣವೊಂದನ್ನು ಬರೆಯಬೇಕೆಂಬುದು ಕರ್ತೃವಿನ ಉದ್ದೇಶ. ಇದರಲ್ಲಿ ಹತ್ತು ಪ್ರಕರಣಗಳಿವೆ. ಹಳಗನ್ನಡ

---

3. ಈ ವಿಷಯವನ್ನು ನನಗೆ ತಿಳಿಸಿದವರು ಶ್ರೀ ಎಸ್. ಶಿವಣ್ಣ ಎಂ. ಎ. ಅವರು.

ನಡುಗನ್ನಡಗಳಿಗೆ ಬರೆದ ಸರಳ ವ್ಯಾಕರಣವೆಂದು ಇದನ್ನು ಹೇಳಬಹುದು. ಪ್ರಾಚೀನ ವ್ಯಾಕರಣಗಳಲ್ಲಿಯ ಜಟಿಲವಾದ ವ್ಯಾಕರಣಾಂಶಗಳನ್ನು ಸರಳವಾಗಿ ಸಂಕ್ಷೇಪವಾಗಿ ಇಲ್ಲಿ ಕ್ರೋಡೀಕರಿಸಿದೆ. ವ್ಯಾಕರಣವನ್ನು ಹಳಗನ್ನಡದ ಶೈಲಿಯಲ್ಲಿಯೇ ಬರೆದಿರುವುದು ಈ ಗ್ರಂಥದ ಒಂದು ವೈಶಿಷ್ಟ್ಯ. ಅಲ್ಲಲ್ಲಿ ಉದಾಹರಣೆಗಳನ್ನು ಸ್ವತಂತ್ರವಾಗಿ ಹಳಗನ್ನಡದಲ್ಲಿ ಬರೆದು ಸೇರಿಸಿದೆ. ಅಡಿ ಟಿಪ್ಪಣಿಗಳಲ್ಲಿ ಭಾಷಾಭೂಷಣ, ಶಬ್ದಮಣಿದರ್ಪಣ ಮತ್ತು ಶಬ್ದಾನುಶಾಸನದ ಸಂವಾದಿಯಾದ ಸೂತ್ರೋದಾಹರಣೆಗಳನ್ನು ಹೋಲಿಕೆಗಾಗಿ ಕೊಟ್ಟಿದೆ. ಒಟ್ಟು ೪೭೪ ವ್ಯಾಕರಣಾಂಶಗಳನ್ನು ವಿವರಿಸಿರುವ ಈ ಕೃತಿಯನ್ನು ಪ್ರೌಢ ವ್ಯಾಕರಣಗಳ ಗುಂಪಿಗೆ ಸೇರಿಸುವುದೇ ಒಂದು ದೃಷ್ಟಿಯಿಂದ ಸೂಕ್ತವಾಗಿದೆ. ವೈ. ಕೃಷ್ಣಾ ಚಾರ್ಯರು ಬಿ. ಮಲ್ಲಪ್ಪನವರ 'ಶಬ್ದಾದರ್ಶ'ದ ಲೋಪದೋಷಗಳ ವಿಮರ್ಶೆಯನ್ನೂ ಹೊಸ ಗನ್ನಡಭಾಷಾ ಸ್ವರೂಪದ ಮತ್ತು ಆಡುಮಾತಿನ ಭೇದಗಳ ಸಂಕೀರ್ಣತೆಯನ್ನೂ ಕುರಿತು ಒಂದು ಲೇಖನವನ್ನು ಕೂಡ ಬರೆದಿರುವ ಹಾಗೆ ಕಂಡು ಬರುತ್ತದೆ. ೧೮೯೭ರಲ್ಲಿಯೇ, ಪುಟ್ಟಪರ್ತಿ ಶೇಷಾಚಾರ್ಯರಿಂದ ರಚಿಸಲ್ಪಟ್ಟ 'ವ್ಯಾಕರಣ ಸಂಗ್ರಹ'ವೆಂಬ ಹೊಸ ಗನ್ನಡ ವ್ಯಾಕರಣದ ಮೂರನೆಯ ಮುದ್ರಣವು ಬೆಂಗಳೂರಿನಿಂದ ಅಚ್ಚಾಯಿತು. ಇದು ಕೂಡ ಒಂದು ಶಾಲಾವ್ಯಾಕರಣವೇ. ಸಂಜ್ಞಾ, ಸಂಧಿ, ಶಬ್ದಲಕ್ಷಣ ಮುಂತಾಗಿ ೭ ಪ್ರಕರಣಗಳಿದ್ದು, ಅವುಗಳಲ್ಲಿ ೧೨೧ ವ್ಯಾಕರಣಾಂಶಗಳ ವಿವರಣೆಯಿದೆ. ವ್ಯಾಕರಣಾಂಶ ಗಳ ವಿಶದವಾದ ಸೂತ್ರೀಕರಣ ಹಾಗೂ ಪ್ರಶ್ನೋದಾಹರಣೆಗಳ ಸೂಕ್ತ ಸಂಯೋಜನೆ– ಇವು ಈ ಗ್ರಂಥವನ್ನು ಒಂದು ಉಪಯುಕ್ತ ಶಾಲಾ ವ್ಯಾಕರಣವನ್ನಾಗಿ ಮಾಡಿವೆ. ಅನಂತ ಶಿವರಾಮಮೂಡಭಟ್ಟ ಎಂಬವರು ೧೮೯೪ರಲ್ಲಿ 'ಇಂಗ್ಲೀಷು ಭಾಷೆಯಲ್ಲಿ ಬರೆದ ಹೊಸಗನ್ನಡ ವ್ಯಾಕರಣವು' ಎಂಬ ಗ್ರಂಥವನ್ನು ರಚಿಸಿದಂತೆ ತಿಳಿಯುತ್ತದೆ.

ಇಪ್ಪತ್ತನೆಯ ಶತಮಾನಕ್ಕೆ ಕಾಲಿಡುತ್ತಿದ್ದಂತೆ ಈ ಗುಂಪಿನ ವ್ಯಾಕರಣಗಳ ರಚನೆಯಲ್ಲಿ ಮೊದಲಿನ ಈ ಶ್ರದ್ಧೋತ್ಸಾಹಗಳು ಇಳಿಮುಖವಾದುದು ಕಾಣುತ್ತದೆ. ಸಂಖ್ಯಾಕ್ಷೀಣತೆಯಿಂದಲೂ ಗ್ರಂಥಸ್ವರೂಪದಿಂದಲೂ ಇದನ್ನು ಮನಗಾಣಬಹುದು. ೧೯೦೩ರಲ್ಲಿ 'ಲಘುವ್ಯಾಕರಣ' ಎಂಬ ಹೆಸರಿನ ಕೇವಲ ೧೫ ಸಣ್ಣ ಪುಟಗಳು ಮಾತ್ರ ವಿರುವ ಅತಿ ಸಂಕ್ಷಿಪ್ತವಾದ ವ್ಯಾಕರಣವೊಂದು ಚಿಕ್ಕ ಮಕ್ಕಳ ಸಲುವಾಗಿ ರಚಿತವಾಗಿ ಹೊರಬಿದ್ದಿತು. ಇದರ ಕರ್ತೃ ಮಾಗಡಿ ಎ. ವಿ. ಸ್ಕೂಲ್ ಹೆಡ್‌ಮಾಸ್ಟರ್ ಕೆ. ರಾಮಸ್ವಾಮೈಯಂಗಾರ್. ಇದು ಮುದ್ರಿತವಾದದ್ದು ಬೆಂಗಳೂರಿನಲ್ಲಿ. ಇದರಲ್ಲಿ ವಾಕ್ಯ, ವಾಚಕಗಳು, ಮತ್ತು ಮುಖ್ಯವಾದ ಸಂಜ್ಞೆಗಳು ಎಂಬುದಾಗಿ ಮೂರು ವಿಭಾಗಗಳುಂಟು. ಮಕ್ಕಳ ಉಪಯೋಗಕ್ಕಾಗಿ ಕೆಲವಂಶಗಳ ಸೂಚನೆಯಷ್ಟೇ ಇದ್ದು ಅಭ್ಯಾಸಗಳನ್ನು ಸೇರಿಸಿದೆ. ಇದೇ ರೀತಿ ಪ್ರಸಿದ್ಧ ಸಾಹಿತಿಗಳಾದ ಪಂಜೆ ಮಂಗೇಶ ರಾಯರು 'ಕನ್ನಡ ಮೂಲ ವ್ಯಾಕರಣ' ('A Kannada Grammatical Premier') ಎಂಬ ಕೃತಿಯೊಂದನ್ನು ೧೯೦೫ರಲ್ಲಿ ಬರೆದು, ಅದು ಮಂಗಳೂರಿಂದ ಪ್ರಕಟವಾಯಿತು. (೧೯೩೭ರಲ್ಲಿ ಇದರ ೬ನೆಯ ಆವೃತ್ತಿಯೂ ೧೯೫೨ರಲ್ಲಿ ೯ನೆಯ ಆವೃತ್ತಿಯೂ

ಬಂದಿತು). ಪ್ರೈಮರಿಶಾಲೆಯ ಬಾಲಕರಿಗಾಗಿ ಬರೆದ ಈ ಕೃತಿಯಲ್ಲಿ ೩೧ ಪಾಠಗಳಿದ್ದು, ಸಂಜ್ಞಾ, ಸಂಧಿ ಮತ್ತು ಸಮಾಸ ಪ್ರಕರಣದ ಸಂಗತಿಗಳು ಹೊರತಾಗಿ ಉಳಿದ ವ್ಯಾಕರಣಾಂಶಗಳು ಹೊಸ ಪದ್ಧತಿಯಲ್ಲಿ ವಿಶದವಾಗಿ ಇಲ್ಲಿ ವಿವರಿಸಲ್ಪಟ್ಟಿವೆ. ಇಲ್ಲಿ ಅನುಸರಿಸಿರುವ ನಿರೂಪಣಕ್ರಮದಲ್ಲಿ ಒಂದು ವಿಶಿಷ್ಟತೆಯಿದೆ, ಆಕರ್ಷಣೆಯಿದೆ. ಮೊದಲು ಸಾಮಾನ್ಯವಾಗಿ ಉದಾಹರಣೆಗಳು, ಅನಂತರ ಅವುಗಳಲ್ಲಿ ಕಂಡುಬರುವ ವ್ಯಾಕರಣವೈಲಕ್ಷಣ್ಯಗಳು, ಆದರನಂತರ ಪ್ರಶ್ನೆಗಳು ಮತ್ತು 'ಪರೀಕ್ಷೆ' ಎಂಬ ಹೆಸರಿನಲ್ಲಿ ಅಭ್ಯಾಸಗಳು (Excercises; Test Questions)—ಹೀಗೆ ಒಂದು ಉಪಯುಕ್ತ ಕ್ರಮವನ್ನು ಅನುಸರಿಸಿದೆ. ವ್ಯಾಕರಣಾಂಶಗಳ ನಿರೂಪಣೆ ಸರಳವೂ ಸ್ಪಷ್ಟವೂ ನಿರ್ದುಷ್ಟವೂ ಆಗಿರುವಂತೆಯೇ ಅವುಗಳಿಗೆ ಕೊಟ್ಟಿರುವ ಉದಾಹರಣೆಗಳು ಮತ್ತು ಪ್ರಶ್ನೆಗಳು ಕೂಡ ಸರಸವೂ ಆಕರ್ಷಕವೂ ಆಗಿವೆ.

ಕೋಲಾರದ ಪಂಡಿತ ಕೆ. ಆರ್. ನರಸಿಂಹಯ್ಯನವರಿಂದ ೧೯೧೫ರಲ್ಲಿ ಮಧ್ಯಮ ತರಗತಿಗಳಿಗಾಗಿ ಮೊದಲು ರಚಿಸಲ್ಪಟ್ಟ 'ಕರ್ಣಾಟಕ ಬಾಲವ್ಯಾಕರಣಂ' (ಛಂದಸ್ಸು ಮೊದಲಾದ ಇತರ ವಿಷಯಗಳನ್ನೂ ಸೇರಿಸಿದೆ.) ಈಚೆಗೆ ಹೈಸ್ಕೂಲು ವಿದ್ಯಾರ್ಥಿಗಳ ಅಭ್ಯಾಸಕ್ಕೆ ಅಂಗೀಕೃತ ಪಠ್ಯಪುಸ್ತಕವಾಗಿ ಕೆಲಕಾಲ ಮೈಸೂರು ಪ್ರಾಂತದಲ್ಲಿ ಬಳಕೆಯಲ್ಲಿದ್ದಿತೆಂದು ತಿಳಿಯುತ್ತದೆ. ಇದರ ೯ ಮತ್ತು ೧೦ನೆಯ ಆವೃತ್ತಿಗಳು ೧೯೪೬-೧೯೪೭ರಲ್ಲಿ ಬಂದುವು. ಇದರಲ್ಲಿ ಕನ್ನಡದ ಮೂರು ಭಾಷಾ ಸ್ವರೂಪಗಳನ್ನೂ ಒಟ್ಟಿಗೆ ಲಕ್ಷ್ಯದಲ್ಲಿರಿಸಿಕೊಂಡು ವಿಷಯವನ್ನು ವಿವೇಚಿಸಿರುವುದರಿಂದ, ಆಯಾ ಭಾಷಾವಸ್ಥೆಯ ವಿಶಿಷ್ಟವಾದ ವ್ಯಾಕರಣ ವಿಷಯಗಳು ಒಂದರೊಡನೊಂದು ಬೆರೆತುಕೊಂಡು ನಿರೂಪಣೆಯಲ್ಲಿ ನಿಷ್ಕೃಷ್ಟವಾದ ಶಾಸ್ತ್ರದೃಷ್ಟಿಗೆ ಖಚಿತತೆಗೆ ಭಂಗಬಂದಂತಾಗಿದೆ. ವಿದ್ಯಾರ್ಥಿಗಳಿಗೆ ಭಾರವಾಗುವ ಮಟ್ಟಿಗೆ ವಿಷಯಗಳನ್ನು ಅಡಕಿರುವುದರಿಂದ ನಿರೂಪಣೆಯನ್ನು ಸಂಕೀರ್ಣಗೊಳಿಸಿರುವುದರಿಂದ ಸರಳತೆ ಸ್ಪಷ್ಟತೆಗಳಿಗೆ ಅಪೋಹವುಂಟಾಗಿದೆ. 'ಶಬ್ದಾದರ್ಶ'ವನ್ನೂ ಈ ಗ್ರಂಥವನ್ನೂ ಹೋಲಿಸಿ ನೋಡಿದರೆ ಇದು ತಿಳಿಯುತ್ತದೆ. ಪ್ರಸ್ತುತ 'ಕರ್ಣಾಟಕ ಬಾಲವ್ಯಾಕರಣ'ವೂ ಎನ್. ಕೆ. ಆರ್. ಎಂಬವರ 'ಕರ್ಣಾಟಕ ವ್ಯಾಕರಣಸಾರ' ಎಂಬುದೂ ಏಕಕರ್ತೃಕವೆಂದೇ ಹೇಳುವುದಕ್ಕೆ ಅವಕಾಶವಿದೆ. "ಚಿಕ್ಕವರಿಗೆ ತಿಳಿಸಬೇಕಾದ ಕ್ರಮವನ್ನು ಹಿಡಿದು ಅಭ್ಯಾಸಸಹಿತವಾಗಿರುವ ಕನ್ನಡ ಮೊದಲನೆಯ ವ್ಯಾಕರಣ"ವನ್ನು 'ಪದತ್ರಯ' ಎಂಬ ಹೆಸರಿನಿಂದ ವೈ. ಸುಬ್ಬರಾವ್ ಅವರು ಬರೆದಿದ್ದು ಅದರ ತಿದ್ದಿದ ೬ನೆಯ ಆವೃತ್ತಿ ೧೯೨೧ರಲ್ಲಿ ಬಂದಿತು. "ಪಾಶ್ಚಾತ್ಯರ ಈಚೀಚಿನ ಪಾಠ ಕ್ರಮಗಳ ಆಧಾರದಿಂದ ನಮ್ಮ ಭಾಷೆಗೆ ಹೊಂದುವ ಕ್ರಮವನ್ನು ಅನುಸರಿಸಿ ಬರೆದಿರುವುದಾಗಿ" ಕರ್ತೃಗಳು ಸೂಚಿಸಿರುತ್ತಾರೆ. ಅಭ್ಯಾಸಿಗಳಿಗಾಗಿ ೫೭ ವ್ಯಾಕರಣಾಂಶಗಳನ್ನು ಸರಳವಾಗಿ ಸ್ಪಷ್ಟವಾಗಿ ನಿರೂಪಿಸಿದೆ. ಎಂ. ಎಸ್. ಪುಟ್ಟಣ್ಣನವರ 'ಕನ್ನಡ ಲೇಖನ ಲಕ್ಷಣ'ವು ೧೯೨೨ರಲ್ಲಿಯೂ, ಬಿ. ರಾಮಕೃಷ್ಣಯ್ಯನವರ 'ಕನ್ನಡ ವ್ಯಾಕರಣ' ೧೯೨೩ರಲ್ಲಿಯೂ ಪ್ರಕಟವಾದವು. 'ಪ್ರಶ್ನೋತ್ತರ ಸಂವಾದ'ದಲ್ಲಿದ್ದು

ಅಕ್ಷರ ಖಂಡ, ಶಬ್ದ ಖಂಡ ಮತ್ತು ವಾಕ್ಯ ಖಂಡ–ಎಂಬ ಮೂರು ಭಾಗಗಳಲ್ಲಿ ವ್ಯಾಕರಣದ ಮುಖ್ಯಾಂಶಗಳನ್ನಷ್ಟೆ ಉದಾಹರಣಪೂರ್ವಕವಾಗಿ ವಿವರಿಸಿರುವ 'ಬಾಲ ವ್ಯಾಕರಣ' ಎಂಬ ಒಂದು ಗ್ರಂಥದ ೨೧ನೆಯ ಮುದ್ರಣವು ೧೯೨೪ರಲ್ಲಿ ಮಂಗಳೂರಿಂದ ಪ್ರಕಟವಾದಂತೆ ತಿಳಿಯುತ್ತದೆ. ಕನ್ನಡದಲ್ಲಿ ರಚಿತವಾದಂತೆ ತಿಳಿಯುವ ನಾಲ್ಕೈದು 'ಬಾಲವ್ಯಾಕರಣ'ಗಳಲ್ಲಿ ಈ ವ್ಯಾಕರಣದ ಕರ್ತೃ ಯಾರೋ ತಿಳಿಯದು. ಗ್ರಂಥದ ಕೊನೆಗೆ ಕನ್ನಡ-ಇಂಗ್ಲಿಷ್ ಸಮಾನಾರ್ಥಕ ಪ್ರಕ್ರಿಯೆಗಳನ್ನು ಕೊಡಲಾಗಿದೆ.

ಪಂಡಿತ ಮ. ಪ್ರ. ಪೂಜಾರರು ಪ್ರಾಥಮಿಕ ಮಾಧ್ಯಮಿಕ ಶಾಲಾಬಾಲಕರಿಗಾಗಿ ಬರೆದು, ೧೯೨೮ರಲ್ಲಿ ಅಚ್ಚಾದ 'ಕನ್ನಡ ನುಡಿಗನ್ನಡಿ'ಯ ಮೂರು ಭಾಗಗಳು ಉತ್ತರ ಕರ್ಣಾಟಕದ ಪ್ರಾಂತದಲ್ಲಿ ವಿಶೇಷವಾಗಿ ಪ್ರಚಾರದಲ್ಲಿದ್ದ ಅಂಗೀಕೃತ ಶಾಲಾವ್ಯಾಕರಣಗಳಲ್ಲಿ ಸೇರಿದ್ದ ಜನಪ್ರಿಯ ವ್ಯಾಕರಣ ಗ್ರಂಥಗಳೆಂದು ಹೆಸರಿಸಲು ತಕ್ಕವಾಗಿವೆ. ನಿರೂಪಣಕ್ರಮದಲ್ಲಿ ಮೊದಲು ಉದಾಹರಣೆ, ಬಳಿಕ ಅದರಲ್ಲಿಯ ವೈಲಕ್ಷಣ್ಯಗಳ ವಿವರಣೆ, ಕೊನೆಗೆ ಅಭ್ಯಾಸಗಳು–ಈ ಕ್ರಮವನ್ನು ಅನುಸರಿಸಿರುವುದರಿಂದ ಇದು ಪಂಜೆಯವರ 'ಕನ್ನಡ ಮೂಲ ವ್ಯಾಕರಣ'ವನ್ನು ಹೋಲುತ್ತದೆ. ಇದು ಕೂಡ ಹಲವು ಪುನರ್ಮುದ್ರಣಗಳನ್ನು ಕಂಡಿದೆ. ಉಪಾಧ್ಯಾಯ ಎಸ್. ಶ್ರೀಕಂಠಯ್ಯ ಎಂಬವರು ೧೯೨೮ರಲ್ಲಿಯೇ ಬರೆದ 'ಅಕ್ಷರತಂತ್ರ (ಕನ್ನಡ ವ್ಯಾಕರಣ)' ಎಂಬುದು ಇಲ್ಲಿ ಉಲ್ಲೇಖನಾರ್ಹವಾಗಿದೆ. ಇದರಲ್ಲಿ ಸಂಜ್ಞಾ ಪ್ರಕರಣಕ್ಕೆ ಸಂಬಂಧಿಸಿದಂತೆ ಅಕ್ಷರಸ್ವರೂಪ ಮತ್ತು ಕಾಗುಣಿತಗಳ ವಿಸ್ತಾರವಾದ ವಿವೇಚನೆಯನ್ನು ಸರಳವಾಗಿಯೂ ಆಕರ್ಷಕವಾಗಿಯೂ ಮಾಡಿಕೊಟ್ಟಿದೆ. ಅಕ್ಷರ ಸ್ವರೂಪವನ್ನಷ್ಟನ್ನೆ ಒಂದು ಪ್ರತ್ಯೇಕವಾದ ಪುಸ್ತಕದಲ್ಲಿ ವಿಚಾರ ಮಾಡಿರುವ ಈ ಪ್ರಯತ್ನ ಅಪೂರ್ವವಾದದ್ದಾಗಿದೆ. ಇದರಲ್ಲಿ ೬೩ ಅಲೆಗಳಿದ್ದು, ಮುದ್ದಾಗಿ ಅಚ್ಚಾಗಿದೆ. ಮಹಾದೇವಪ್ಪಾ ಶಿದ್ದಪ್ಪಾ ಕೇಸರಿಯವರ 'ಬಾಲವ್ಯಾಕರಣ' ಅಚ್ಚಾದುದು (ಧಾರವಾಡ) ಕೂಡ ೧೯೨೮ರಲ್ಲಿಯೇ. ಇಲ್ಲಿಯ ೭ ಪ್ರಕರಣಗಳಲ್ಲಿ, ಕನ್ನಡ ವ್ಯಾಕರಣದ ಅತಿ ಸಾಮಾನ್ಯವಾದ ಒಂದೆರಡು ಅಂಶಗಳನ್ನು ಮಾತ್ರ ತೀರ ಚಿಕ್ಕವರಿಗೆ ಕೂಡ ಅರ್ಥವಾಗುವ ಸುಲಭಶೈಲಿಯಲ್ಲಿ ಕಥೆಯನ್ನು ಹೇಳಿಕೊಂಡು ಹೋಗುವಂತೆ ಹೇಳಿಕೊಂಡು ಹೋಗಿದೆ. ಓದುವುದಕ್ಕೆ ಒಪ್ಪುವ ದಪ್ಪಕ್ಷರಗಳಲ್ಲಿ ಪುಸ್ತಕವನ್ನು ಅಚ್ಚುಮಾಡಿದೆ. ಮೈಸೂರು ಶಿಕ್ಷಣ ಇಲಾಖೆಯ ಪ್ರಕಟಣೆಯಾದ 'ಹೊಸಗನ್ನಡ ವ್ಯಾಕರಣ' ಶಾಲೋಪಯೋಗಿ ವ್ಯಾಕರಣವಾಗಿ ಕೆಲಕಾಲದಿಂದ ಬಳಕೆಯಲ್ಲಿದ್ದು ೧೯೩೪ರಲ್ಲಿ ಅದರ ೨೩ನೆಯ ಆವೃತ್ತಿ ಹೊರಬಿದ್ದಿತು. ಪಂಡಿತ ಎಚ್. ಶೇಷ ಅಯ್ಯಂಗಾರ್ ಅವರ 'ವಾಕ್ಯಚಿಂತಾಮಣಿ'ಯ ಮೊದಲ ಆವೃತ್ತಿ ೧೯೩೫ರಲ್ಲಿ (ಈಚಿನ ಆವೃತ್ತಿ ೧೯೫೪ರಲ್ಲಿ) ಬಂದಿತು. ಆಗಲೇ ಎಸ್. ಐ. ಶಿವರಾಮಯ್ಯನವರ 'ಕನ್ನಡ ಲಘುವ್ಯಾಕರಣ' ಮತ್ತು 'ಕನ್ನಡ ಪ್ರೌಢವ್ಯಾಕರಣ' ಇವು ಪ್ರಕಟವಾದವು.

ಆರ್. ಎನ್. ಸೂರ್ಯನಾರಾಯಣ ಎಂ.ಎ. (ಸಂಸ್ಕೃತ ಅಧ್ಯಾಪಕ, ಮೈಸೂರು ಯೂನಿವರ್ಸಿಟಿ) ಮತ್ತು ಕೋಣನೂರು ಅಹೋಬಲ ಶಾಸ್ತ್ರಿ (ಕನ್ನಡ ಅಧ್ಯಾಪಕ, ಹೊಳೆನರಸೀಪುರದ ಮಿಡ್ಲ್‌ಸ್ಕೂಲ್) ಇವರು ಬರೆದು ೧೯೩೬ರಲ್ಲಿ ಪ್ರಕಟಿಸಿದ 'ತಿಳಿಗನ್ನಡ ವ್ಯಾಕರಣ' (ಪ್ರಥಮ ಭಾಗ) ಲೇಖಕರು ಅರಿಕೆಮಾಡಿರುವಂತೆ "ಮುಖ್ಯವಾಗಿ ಲೋವರ್ ಸೆಕಂಡರಿ ಮತ್ತು ಮಿಡಲ್ ಸ್ಕೂಲು ಪರೀಕ್ಷೆಗಳಿಗೆ ಓದುವ ವಿದ್ಯಾರ್ಥಿಗಳಿಗೆ ಸುಲಭವಾಗಿ ವ್ಯಾಕರಣಾಂಶಗಳನ್ನು ಗ್ರಹಿಸಲು ತಕ್ಕ ಕೈಪಿಡಿಯಾಗಿದೆ." ಗ್ರಂಥದ 'ಪ್ರಸ್ತಾವನೆ' ಮತ್ತು 'ಗ್ರಂಥ ಪರಿಚಯ' ವಿಭಾಗಗಳಲ್ಲಿ ಎಷ್ಟರಮಟ್ಟಿಗೆ ಭಾಷೆಯ ಸ್ವರೂಪ, ವಿದ್ಯಾರ್ಥಿಗಳ ಮನೋಧರ್ಮ, ಮತ್ತು ಅಭ್ಯಾಸದಲ್ಲಿಯ ಸರಸತೆ ಸೌಲಭ್ಯಗಳ ದೃಷ್ಟಿ—ಇವನ್ನು ಲಕ್ಷ್ಯದಲ್ಲಿರಿಸಿಕೊಂಡು ಗ್ರಂಥವನ್ನು ಸಿದ್ಧಪಡಿಸಲಾಗಿದೆ ಎಂಬುದನ್ನು ವಿಶದವಾಗಿ ವಿವರಿಸಿದೆ. ವ್ಯಾಕರಣ ಪಾಠಪದ್ಧತಿಯಲ್ಲಿ ಗಮನಾರ್ಹವಾದ ನೂತನಾಂಶಗಳನ್ನು ಇಲ್ಲಿ ಅಳವಡಿಸಿಕೊಂಡಿರುವಂತೆ ತೋರುತ್ತದೆ. ಸರಸವಾದ ಉದಾಹರಣೆಗಳನ್ನು ಮೊದಲು ಎತ್ತಿಕೊಟ್ಟು, ಅವುಗಳಲ್ಲಿಯ ವೈಲಕ್ಷಣ್ಯಗಳನ್ನು ಅನಂತರದಲ್ಲಿ ಸರಳವಾಗಿ ನಿರೂಪಿಸುವ ಇಲ್ಲಿಯ ಪದ್ಧತಿಯು ಈ ಹಿಂದೆ ಒಂದೆರಡು ಪ್ರಸಿದ್ಧವಾದ ವ್ಯಾಕರಣದ ಕೈಪಿಡಿಗಳಲ್ಲಿ ಅನುಸರಿಸಿರುವುದೇ ಆಗಿದೆ. ಕೆಲವು ಅಭ್ಯಾಸಗಳನ್ನೂ ಜತೆಗೂಡಿಸಿದೆ; ವಾಕ್ಯವಿಭಜನೆ ಮುಂತಾದ ಕೆಲವು ಪರಿಶಿಷ್ಟಗಳು ಗ್ರಂಥಕ್ಕೆ ಉಪಯುಕ್ತ ರೀತಿಯಲ್ಲಿ ಸೇರಿಕೊಂಡಿವೆ. ೧೯೩೭ರಲ್ಲಿ ಟಿ. ಶ್ರೀನಿವಾಸರಂಗಾಚಾರ್ಯರೆಂಬವರ 'ಕನ್ನಡದ ಕನ್ನಡಿ' ಪ್ರಕಟವಾಯಿತು. ಇತ್ತೀಚೆಯ ಕನ್ನಡ ಶಾಲಾ ವ್ಯಾಕರಣಗಳಲ್ಲಿ ಅತ್ಯಂತ ಗಣ್ಯವಾದವೆಂದರೆ ಡಾ. ಎ. ಎನ್. ನರಸಿಂಹಯ್ಯನವರ 'ಕನ್ನಡ ಪ್ರಥಮ ವ್ಯಾಕರಣ' ಮತ್ತು ಪ್ರೊ. ತೀ. ನಂ. ಶ್ರೀಕಂಠಯ್ಯನವರ 'ಕನ್ನಡ ಮಧ್ಯಮ ವ್ಯಾಕರಣ'. ಇವುಗಳಲ್ಲಿ ಮೊದಲನೆಯದು ೧೯೩೮ರಲ್ಲಿಯೂ[4] ಎರಡನೆಯದು ೧೯೩೯ರಲ್ಲಿಯೂ ಮೊದಲಬಾರಿಗೆ ಮುದ್ರಣವಾದುವು. ಒಂದು ನಿರ್ದಿಷ್ಟವಾದ ಪೂರ್ವಯೋಜನೆಯಂತೆ ಪ್ರಾಥಮಿಕ ಮತ್ತು ಮಾಧ್ಯಮಿಕ ತರಗತಿಗಳ ವಿದ್ಯಾರ್ಥಿಗಳಿಗಾಗಿ ಎಂದು ಸಿದ್ಧವಾದ ಈಯೆರಡು ಗ್ರಂಥಗಳೂ ಅಂಗೀಕೃತ ಪಠ್ಯಗ್ರಂಥಗಳ ಸಾಲಿನಲ್ಲಿ ಗಣ್ಯಸ್ಥಾನವನ್ನು ಗಳಿಸಿರುವುದು ವಿದಿತವೇ ಆಗಿದೆ. ಆಧುನಿಕರೀತಿಯ ಭಾಷಾಶಾಸ್ತ್ರ ಶಿಕ್ಷಣವನ್ನು ಪಡೆದಿದ್ದ ಪೂರ್ವೋಕ್ತ ವ್ಯಾಕರಣಕರ್ತೃಗಳಿಬ್ಬರೂ ತಾವು ಪಡೆದುಕೊಂಡಿದ್ದ ಹೊಸದೃಷ್ಟಿಗೆ ಅನುಸಾರವಾಗಿ ನಿಷ್ಕೃಷ್ಟವೂ ಸರಸವೂ ಆದ ರೀತಿಯಲ್ಲಿ ತಮ್ಮ ವ್ಯಾಕರಣಗಳನ್ನು ಆಯಾ ವಿದ್ಯಾರ್ಥಿಗಳ ಮಟ್ಟಕ್ಕೆ ಅನುಗುಣವಾಗಿ ರಚಿಸಿರುತ್ತಾರೆ. ಈಯೆರಡೂ ಈಚೆಗೆ ಹಲವು ಮುದ್ರಣಗಳನ್ನು ಕಂಡಿವೆ. ಇವುಗಳಲ್ಲಿ ಎರಡನೆಯದರ ಬಗೆಗೆ "ಮಧ್ಯಮವ್ಯಾಕರಣ ತುಂಬ ವ್ಯಾಪಕವಾದ ಶಾಲಾವ್ಯಾಕರಣ. ಅದು ಭಾಷೆಯ ರಚನೆಯನ್ನು ಗಮನಕ್ಕೆ ತೆಗೆದು

4. ಈ ವಿಷಯವನ್ನು ತಿಳಿಸಿದವರು ಶ್ರೀ ಎಸ್. ಶಿವಣ್ಣ, ಎಂ.ಎ., ಅವರು

ಕೊಂಡಿದೆ. ಜೊತೆಗೆ ಭಾಷೆಯ ಐತಿಹಾಸಿಕ ವಿಕಸನಗಳನ್ನು ಕೂಡ ಅದು ಒಳಗೊಂಡಿದೆ. ಈ ಬಗೆಯ ಇತರ ವ್ಯಾಕರಣಗಳಿಗಿಂತ ಇದು ನಿಶ್ಚಯಕ್ಕೂ ಬೇರೆ ಮಾರ್ಗದ್ದು"— ಎಂಬುದಾಗಿ ವ್ಯಕ್ತವಾಗಿರುವ ಅಭಿಪ್ರಾಯವನ್ನು ಗಮನಿಸಬೇಕು[4ಅ]. "ವ್ಯಾಕರಣ ಗ್ರಂಥವು ಕೇವಲ ಸೂತ್ರಗಳ ಪಟ್ಟಿಯಾಗಿರಬಾರದು. ಅದರಲ್ಲಿ ಸೂತ್ರಕ್ಕಿಂತ ಹೆಚ್ಚಾಗಿ ವಿವರಣೆಯೂ ವಿವರಣೆಗಿಂತ ಹೆಚ್ಚಾಗಿ ಉದಾಹರಣೆಯೂ ಬಂದರೆ, ಪಾಠವನ್ನು ಓದತಕ್ಕ ವಿದ್ಯಾರ್ಥಿಗಳಿಗೆ ಕ್ಲೇಶ ಕಡಮೆಯಾಗುತ್ತದೆ; ಆಸಕ್ತಿಯೂ ಬೆಳೆಯಬಹುದು. ಈ ಅಂಶವನ್ನು ಉದ್ದಕ್ಕೂ ದೃಷ್ಟಿಯಲ್ಲಿರಿಸಿಕೊಂಡು ಈ 'ಕನ್ನಡ ಮಧ್ಯಮ ವ್ಯಾಕರಣ' ವನ್ನು ರಚಿಸಲಾಗಿದೆ...." ಎಂಬುದಾಗಿ ಗ್ರಂಥಕರ್ತೃಗಳೇ 'ಮುನ್ನುಡಿ'ಯಲ್ಲಿ ಹೇಳಿರುವ ಮಾತು ರಚನೆಯ ಸ್ವರೂಪವನ್ನು ಮನಗಾಣಿಸುತ್ತದೆ. ವಿಷಯನಿರೂಪಣೆ ಯಲ್ಲಿ ಕೆಲವು ನೂತನವಾಗಿ ಕಾಣುವ ಅಂಶಗಳು ಕನ್ನಡ ಭಾಷೆಯ ಚರಿತ್ರೆಯಲ್ಲಿ ಕಂಡುಬರುವ ಆಧಾರದಿಂದ ಸಮರ್ಥನೀಯವಾಗತಕ್ಕವಾಗಿವೆ. ಉದಾಹರಣೆಯ ವಾಕ್ಯಗಳಲ್ಲಿ ತೋರಿಬಂದಿರುವ ಸ್ವಾರಸ್ಯ ಮತ್ತು ವೈವಿಧ್ಯಗಳು ವ್ಯಾಕರಣಪಾಠಗಳನ್ನು ಹಿತಕರವೆನಿಸಿವೆ. ವ್ಯಾಕರಣದ ಸಕಲಾಂಶಗಳನ್ನೂ ೨೭ ಅಧ್ಯಾಯಗಳಲ್ಲಿಯೇ ಬಲು ಮಟ್ಟಿಗೆ ಅಡಕಮಾಡಿದೆ.

ಈ ಮೇಲೆ ಪರಿಶೀಲಿಸಿದ ಸಾಧಾರಣಸ್ವರೂಪದ ವ್ಯಾಕರಣ ಗ್ರಂಥಗಳ ನಿರೂಪಣ ವಿಧಾನದಲ್ಲಿಯ ಕೆಲವು ಸಾಮಾನ್ಯಾಂಶಗಳನ್ನು ಇಲ್ಲಿ ಹೀಗೆ ಸಂಗ್ರಹಿಸಬಹುದಾಗಿದೆ: (i) ವಿರಳವಾಗಿ ಒಂದೆರಡು ವ್ಯಾಕರಣಗಳ ಹೊರತು ಉಳಿದ ಎಲ್ಲ ವ್ಯಾಕರಣಗಳೂ ಹೊಸ ಗನ್ನಡ ಭಾಷೆಯನ್ನೇ ಕುರಿತಿವೆ. (ii) ಹೊಸಗನ್ನಡ ವ್ಯಾಕರಣರಚನೆಯ ಆದ್ಯ ಪ್ರವರ್ತಕರು ಆರಂಭಕಾಲದ ಕೃಷಿಕರು ಎಂದರೆ ಕ್ರೈಸ್ತಮಿಷನರಿಗಳು ಮತ್ತು ವಿದೇಶೀಯ ವಿದ್ಯಾಧಿಕಾರಿಗಳು. ಅನಂತರ ವ್ಯಾಕರಣರಚನೆಯನ್ನು ಮಾಡಿದ ದೇಶೀಯಪಂಡಿತರು ಅವರನ್ನು ಬಲುಮಟ್ಟಿಗೆ ವಿಷಯದಲ್ಲಿಯೂ ವಿಷಯನಿರೂಪಣ ವಿಧಾನದಲ್ಲಿಯೂ ಅನುಸರಿಸಿದರು. (iii) ಹೊಸಗನ್ನಡ ವ್ಯಾಕರಣರಚನೆಗಳ ದೃಷ್ಟಿಯಿಂದ ೧೯ನೆಯ ಶತಮಾನದಲ್ಲಿ ಬಂದಷ್ಟು ವಿಪುಲಸಂಖ್ಯೆಯ ಹಾಗೂ ವಿವಿಧ ರಚನಾಪದ್ಧತಿಯ ಕೃತಿಗಳು ೨೦ನೆಯ ಶತಮಾನದಲ್ಲಿ ಕೂಡ ಬಂದಹಾಗೆ ತೋರುವುದಿಲ್ಲ. (iv) ಸಾಧಾರಣವಾಗಿ ಈಯೆಲ್ಲ ವ್ಯಾಕರಣಗ್ರಂಥಗಳೂ ನೂರರ ಪುಟಮಿತಿಯೊಳಗೆ ಮಾತ್ರವಿರುವ ಅಂಗೈ ಯಗಲದ ಕಿರುಹೊತ್ತಗೆಗಳು; ಇವು ಬಹುತೇಕ ಮಂಗಳೂರು ಬೆಂಗಳೂರು ಧಾರವಾಡ ಮತ್ತು ಮೈಸೂರು ಈ ಸ್ಥಳಗಳಲ್ಲಿ ಅಚ್ಚಾದವು. (v) ಅಭ್ಯಾಸಿಗಳಿಗಿಂತ ಶಾಲಾ ವಿದ್ಯಾರ್ಥಿಗಳನ್ನೆ ಲಕ್ಷ್ಯದಲ್ಲಿರಿಸಿಕೊಂಡು ರಚಿಸಿರುವ ವ್ಯಾಕರಣಗಳೇ ಅಧಿಕಸಂಖ್ಯಾಕ ವಾಗಿವೆ. ಇವು ಸಾಧಾರಣವಾಗಿ ವಿದ್ಯಾ ಇಲಾಖೆಯು ನೇಮಿಸುವ ಪಠ್ಯನಿಯಾಮಕ ಸಮಿತಿಯ ಅಂಗೀಕಾರವನ್ನು ಪಡೆದು ಪೂರ್ವೋಕ್ತ ನಗರಕೇಂದ್ರಗಳಲ್ಲಿ ಪಠ್ಯಗ್ರಂಥ

[4ಅ] ಡಾ. ಹಾ.ಮಾ. ನಾಯಕ: 'ಸಮೀಕ್ಷೆ', ಪು. ೧೪೧.

ಗಳಾಗಿ ಪ್ರಚಲಿತವಿರುತ್ತಿದ್ದುವು. ಸಾಧಾರಣವಾಗಿ ಇವುಗಳಲ್ಲಿ ಹಲವಕ್ಕೆ ಒಂದಕ್ಕಿಂತ ಹೆಚ್ಚಿನ ಆವೃತ್ತಿಗಳು ಬಂದುವು. (vi) ಅಭ್ಯಾಸಿಗಳ ವ್ಯಾಕರಣಗಳ ಗುಂಪಿಗೆ ಮೊದಮೊದಲ ಇಂಗ್ಲಿಷ್-ಕನ್ನಡ ಉಭಯಭಾಷಾತ್ಮಕ ವ್ಯಾಕರಣಗಳೂ, ಶಾಲಾ ವ್ಯಾಕರಣಗಳ ಗುಂಪಿಗೆ ಅನಂತರದ ಕನ್ನಡ ವ್ಯಾಕರಣಗಳೂ ಸೇರುತ್ತವೆ. ಅಭ್ಯಾಸಗಳೂ ಪ್ರಶ್ನೆಗಳೂ ಶಾಲಾವ್ಯಾಕರಣಗಳಲ್ಲಿ ಮಾತ್ರವೇ ಕಾಣುವುದಾಗಿವೆ. (vii) ಆರಂಭ ಸೂತ್ರೀಕರಣ ಪದ್ಧತಿ, ಪ್ರಶ್ನೋತ್ತರಸಂವಾದ ಪದ್ಧತಿ ಮತ್ತು ಉದಾಹರಣಾದಿ ಪೂರ್ವಕ ವಿಷಯವಿವರಣ ಪದ್ಧತಿ—ಇವು ಇಲ್ಲಿಯ ಪ್ರಧಾನವಾದ ರಚನಾವಿಧಾನ ಗಳಾಗಿವೆ. ಇವುಗಳಲ್ಲಿ ಮೊದಲನೆಯ ಪದ್ಧತಿಯೇ ಹೆಚ್ಚು ವ್ಯಾಪಕವಾದುದು. (viii) ಸರ್ವಸಾಮಾನ್ಯವೂ ಅಸಂದಿಗ್ಧವೂ ಆದ ವ್ಯಾಕರಣಾಂಶಗಳನ್ನು ಮನನಮಾಡುವು ದಕ್ಕೆ ಅನುಕೂಲವಾಗುವಂತೆ ಸರಳ ಸಂಕ್ಷಿಪ್ತ ಸೂತ್ರೀಕರಣಪದ್ಧತಿಯನ್ನು ಅನುಸರಿಸಿರು ವುದು ಕಾಣುತ್ತದೆಯಲ್ಲದೆ, ಭಾಷೆಯರಚನೆ ಸ್ವರೂಪ ವಿಕಾಸ ವೈಲಕ್ಷಣ್ಯ ಮುಂತಾದು ವನ್ನು ಹೆಚ್ಚು ವ್ಯಾಕರಣಕಾರರು ಗಮನಿಸಿದಂತೆ ತೋರುವುದಿಲ್ಲ. (ix) ಸಾಧಾರಣವಾಗಿ ಅಕ್ಷರವಿಚಾರ (Orthography) ಶಬ್ದವಿಚಾರ (Etymology) ಮತ್ತು ವಾಕ್ಯವಿಚಾರ (Syntax)—ಎಂಬುವಾಗಿ ಮೂರು ಪ್ರಮುಖ ವಿಭಜನೆಗಳನ್ನುಮಾಡಿಕೊಂಡು ಅವು ಗಳಿಗೆ ಅನುಗುಣವಾಗಿ ವ್ಯಾಕರಣಾಂಶಗಳನ್ನು ವಿವರಿಸಿರುತ್ತದೆ. (x) ಬೇರೆಬೇರೆ ವ್ಯಾಕರಣ ಪ್ರಕ್ರಿಯೆಯನ್ನು ಸೋದಾಹರಣವಾಗಿ ವಿವರಿಸುವಾಗ ಒಂದೊಂದು ಪ್ರಕ್ರಿಯೆಗೂ ಕ್ರಮಸಂಖ್ಯೆಯನ್ನು ಕೊಟ್ಟಿರುತ್ತದೆ.

(೨) ಈ ವಿಭಾಗದಲ್ಲಿ ಸ್ವತಂತ್ರರಚನೆಯ 'ಪ್ರೌಢವ್ಯಾಕರಣ'ಗಳ ವಿಷಯ ವನ್ನು ಸ್ವಲ್ಪಮಟ್ಟಿಗೆ ಸಮೀಕ್ಷಿಸಬಹುದು: ಮೊದಲ ವಿಭಾಗದಲ್ಲಿಯೇ ಥೋಂಡೋ ನರಸಿಂಹ ಮುಳಬಾಗಲರ 'ಕನ್ನಡ ಕಯ್ಪಿಡಿ' (೧೮೯೦), ವೈ. ಕೃಷ್ಣಾಚಾರ್ಯರ 'ಕರ್ಣಾಟ ವ್ಯಾಕರಣಂ' (೧೮೯೭)—ಇವುಗಳ ಪ್ರಸ್ತಾಪ ಬಂದಿದೆ. ಇಲ್ಲಿ ಬೇರೆಯ ಕೆಲವನ್ನು ನೋಡಬಹುದು. ಕೇರಿ ಮತ್ತು ಜಾನ್ ಮೆಕರೆಲ್ ಮೊದಲಾದ ಹೊಸಗನ್ನಡ ವ್ಯಾಕರಣಪ್ರವರ್ತಕರು ಇಂಗ್ಲಿಷ್ ಭಾಷೆಯಲ್ಲಿ ಬರೆದ ಕನ್ನಡ ವ್ಯಾಕರಣಗಳು ಪ್ರಚಲಿತವಾಗಿದ್ದ ಕಾಲದಲ್ಲಿ ಕನ್ನಡದಲ್ಲಿಯೇ ಬರೆದ ಹೊಸಗನ್ನಡ ವ್ಯಾಕರಣವಾವುದೂ ರಚನೆಯಾಗಿದ್ದಂತೆ ತೋರುವುದಿಲ್ಲ. ಈ ಪರಿಸ್ಥಿತಿಯನ್ನು ಮನಗಂಡು ವಿದ್ಯಾಪಕ್ಷಪಾತಿ ಯಾದೊಬ್ಬರು ಮದರಾಸಿನ ಪಂಡಿತಶಿಕ್ಷಣದ ಕಾಲೇಜು ಬೋರ್ಡಿನ ಸೆಕ್ರೆಟರಿ ಯಾಗಿದ್ದ 'ಕೆಪ್ಟನ್ ಹಾರ್ಕಿನನು ದೊರೆಯವರು' ಎಂಬವರು ಶ್ರೀರಂಗಪಟ್ಟಣದ ಕೃಷ್ಣಮಾಚಾರ್ಯರಿಗೆ "ಇಂಗಲೀಷೂ ಸಂಸ್ಕೃತವೂ ತಿಳಿಯದ ವಿದ್ಯಾರ್ಥಿಗಳಿಗೆ ಸುಲಭವಾಗಿ ತಿಳಿಯುವ ಹಾಂಗೆ ಕನ್ನಡದಲ್ಲಿ ಪ್ರಶ್ನೋತ್ತರರೂಪವಾಗೊಂದು ವ್ಯಾಕರಣವ ಮಾಡಹೇಳಿದ್ದರಿಂದ" ಅವರು 'ಹೊಸಗನ್ನಡ ನುಡಿಗನ್ನಡಿ' ಎಂಬ ಹೆಸರಿನ ವ್ಯಾಕರಣವನ್ನು ಬರೆದುದಾಗಿ ತಮ್ಮ ಗ್ರಂಥದ ಪೀಠಿಕೆಯಲ್ಲಿ ಹೇಳಿಕೊಂಡಿ ದ್ದಾರೆ. ಪ್ರಾಯಃ ಶ್ರೀರಂಗಪಟ್ಟಣದ ಕೃಷ್ಣಮಾಚಾರ್ಯರಿಂದಾದ 'ಹೊಸಗನ್ನಡ

ನುಡಿಗನ್ನಡಿ' ಕನ್ನಡ ಭಾಷೆಯಲ್ಲಿಯೇ ರಚಿತವಾದ ಹೊಸಗನ್ನಡ ವ್ಯಾಕರಣಗಳಲ್ಲಿ ಮೊತ್ತಮೊದಲನೆಯದು ಎಂದು ತೋರುತ್ತದೆ. ಇದರ ಮೊದಲ ಮುದ್ರಣವಾದುದು ೧೮೩೮ರಲ್ಲಿ, ಮಂಗಳೂರಿನಿಂದ; ಪುನರ್ಮುದ್ರಣವಾದುದು ೧೮೮೨ರಲ್ಲಿ, ಆಗಲೂ ಮಂಗಳೂರಿನಿಂದಲೇ. ಇದರಲ್ಲಿ ಸಂಜ್ಞಾ ಸಂಧಿ ಶಬ್ದ ಆಖ್ಯಾತ ಕೃತ್ ತದ್ಧಿತ ತತ್ಸಮ ತದ್ಭವ ಸಮಾಸ ಪ್ರಯೋಗ–ಎಂಬ ಹತ್ತು ಪ್ರಕರಣಗಳಿದ್ದು, ಅವುಗಳಲ್ಲಿ ವ್ಯಾಕರಣದ ಅನೇಕ ಅಂಶಗಳನ್ನು ನಿಖರವೂ ಸರಳವೂ ನೇರವೂ ಆದ ಪ್ರಶ್ನೋತ್ತರ ವಿಧಾನದಲ್ಲಿ ಉದಾಹರಣಪೂರ್ವಕವಾಗಿ ಬರೆದುಕೊಂಡು ಹೋಗಿದೆ. ಗ್ರಂಥಕ್ಕೆ ಬರೆದಿರುವ ಎಂಟು ಪುಟಗಳ ಪೀಠಿಕೆಯಲ್ಲಿ ಸಂಸ್ಕೃತ ಮತ್ತು ದೇಶಭಾಷೆಗಳ ಸಂಬಂಧವನ್ನೂ ಸ್ಥಾನಮಾನಗಳನ್ನೂ ತತ್ಕಾಲೀನ ಕನ್ನಡನುಡಿಯ ಸ್ಥಿತಿಗತಿಗಳನ್ನೂ ಪ್ರಾಸಂಗಿಕವಾಗಿ ವಿಮರ್ಶಿಸಿರುವುದು ಕಂಡುಬರುತ್ತದೆ. ಇಲ್ಲಿಯೇ ಗ್ರಂಥಸ್ವರೂಪವೂ ಕರ್ತೃಪರಿಚಯವೂ ಸೇರಿಕೊಂಡಿವೆ. ೧೯ನೆಯ ಶತಮಾನದ ಕನ್ನಡ ಗದ್ಯಶೈಲಿಗೆ ಈ ಪೀಠಿಕೆ ಕೂಡ ಒಂದು ರೀತಿಯಲ್ಲಿ 'ಹೊಸಗನ್ನಡ ನುಡಿಗನ್ನಡಿ'ಯೇ ಆಗಿದೆ. "....ಅಚ್ಚಗನ್ನಡ ದೇಶದಲ್ಲಿರುವ ಈಗಿನ ಹಿರಿಯವರು ಮಾತನಾಡುವ ಹೊಸಗನ್ನಡವನ್ನು ಅನುಸರಿಸೀ ಹೊಸಗನ್ನಡ ನುಡಿಗನ್ನಡಿ ಎಂಬ ವ್ಯಾಕರಣವ ಮಾಡಿದೆನು"—ಎಂಬುದಾಗಿ ಹೇಳಿ ತಮ್ಮ ಗ್ರಂಥದ ವ್ಯಾಪ್ತಿಯನ್ನು ಸೂಚಿಸಿರುತ್ತಾರೆ. ಗ್ರಂಥರಚನೆಗೆ ಕರ್ತೃಗಳು ಪ್ರಾಚೀನಕನ್ನಡ ವ್ಯಾಕರಣಗಳನ್ನೂ ಅನ್ಯಭಾಷಾವ್ಯಾಕರಣಗಳನ್ನೂ ಆಯಾ ಭಾಷೆಗಳಲ್ಲಿರುವ ಕಾವ್ಯಗಳನ್ನೂ ಪರಿಶೀಲಿಸಿಗುವುದಾಗಿ ಪೀಠಿಕೆಯಲ್ಲಿಯೇ ಸೂಚಿಸಿದೆ. ಈಚಿನ ಒಂದಿಬ್ಬರು ಇದೇ ಗ್ರಂಥದ ವಿಷಯನ್ಯಾಸವನ್ನೂ ನಿರೂಪಣಕ್ರಮವನ್ನೂ ಅನುಸರಿಸಿರುವ ಹಾಗೆ ತೋರುತ್ತದೆ. ಕೃಷ್ಣಮಾಚಾರ್ಯರು 'ಹಳಗನ್ನಡ ನುಡಿಗನ್ನಡಿ' 'ಶಬ್ದಮಂಜರಿ' ಮತ್ತು 'ಧಾತುಮಂಜರಿ'—ಎಂಬುವನ್ನು ಕೂಡ ಬರೆದಿರುವಂತೆ ಕವಿಚರಿತೆಕಾರರು ಹೇಳಿರುತ್ತಾರೆ. ಇವು ಈವರೆಗೆ ದೊರೆತಿರುವ ಹಾಗೆ ಕಾಣುವುದಿಲ್ಲ. ಈ ವ್ಯಾಕರಣ ಕರ್ತೃಗಳಿಗೆ ಸಾಂಪ್ರದಾಯಿಕ ವ್ಯಾಕರಣಪದ್ಧತಿಯ ನಿರೂಪಣದೃಷ್ಟಿಯೇ ಅಲ್ಲದೆ ಹೊಸಗನ್ನಡ ಶಬ್ದಕೋಶ ಭಾಷಾರಚನೆ ಮತ್ತು ಭಾಷಾವಿಕಾಸ—ಇವನ್ನು ಕೂಡ ಭಾಷಾಶಾಸ್ತ್ರೀಯ ದೃಷ್ಟಿಯಿಂದ ತಕ್ಕಮಟ್ಟಿಗೆ ಪರಿಶೀಲಿಸುವ ವಿಶ್ಲೇಷಣ ದೃಷ್ಟಿಯೂ ಇದ್ದಿತೆಂಬುದಕ್ಕೆ ಆಧಾರಗಳಿವೆ. ಇದನ್ನು ಈಚೆಗೆ ಭಾಷಾಶಾಸ್ತ್ರಜ್ಞರಾದ ಕನ್ನಡ ವಿದ್ವಾಂಸರು ಗುರುತಿಸಿರುತ್ತಾರೆ.

೧೮೫೬ರಲ್ಲಿ ಮೊದಲಬಾರಿಗೆ ಪ್ರಕಟವಾದ ಮೇಲೆ, ಆಗಾಗ ಪರಿಷ್ಕೃತಗೊಂಡು ೧೮೭೫, ೧೯೧೩ ಮತ್ತು ಈಚೆಗೆ ೧೯೫೬ರಲ್ಲಿ ಪುನರ್ಮುದ್ರಿತವಾಗಿ, ಇಂದಿಗೂ ಪ್ರಸಿದ್ಧವಾಗಿರುವ ರೆ. ರಾಬರ್ಟ್ ಕಾಲ್ಡ್ವೆಲ್ (Rev. Robert Caldwell) ಅವರ 'A Comparative Grammar of the Dravidian or South Indian Family of Languages' ಎಂಬ ಉದ್ಗ್ರಂಥದಲ್ಲಿ ಕನ್ನಡ ವ್ಯಾಕರಣವು ಇತರ ದ್ರಾವಿಡ ಭಾಷೆಗಳೊಡನೆ ತುಲನಾತ್ಮಕವಾಗಿ ಪರಿಶೀಲಿಸಲ್ಪಟ್ಟಿದೆ. ಇಲ್ಲಿ ತಮಿಳಿಗೆ

ದೊರೆತಿರುವ ಪ್ರಾಶಸ್ತ್ಯ ಕನ್ನಡಕ್ಕೆ ದೊರೆತಿಲ್ಲದಿರುವುದಕ್ಕೆ, ಪ್ರತಿಪಾದನೆಯಲ್ಲಿ ನಿರ್ದುಷ್ಟತೆ ಅಲ್ಲಲ್ಲಿ ಕಾಣದಿರುವುದಕ್ಕೆ, ಗ್ರಂಥಕರ್ತೃಗಳಿಗೆ ತಮಿಳಿನಲ್ಲಿದ್ದಂತೆ ಕನ್ನಡದಲ್ಲಿ ಪ್ರತ್ಯಕ್ಷ ಪರಿಚಯವಿಲ್ಲದಿದ್ದುದೇ ಪ್ರಾಯಃ ಕಾರಣವಾಗಿರಬೇಕು. ದ್ರಾವಿಡ ಭಾಷೆಗಳನ್ನು ತೌಲನಿಕವಾಗಿ ಅಧ್ಯಯನ ಮಾಡುವುದು ಫಲಕಾರಿ–ಎಂಬುದರ ಕಡೆಗೆ ವಿದ್ವಾಂಸರ ಕಣ್ದೆರೆಸಿದ ಮೊದಲನೆಯ ಮಹಾಕೃತಿ ಇದು—ಎಂಬುದರಿಂದ ಇದಕ್ಕೆ ಪ್ರಾಶಸ್ತ್ಯವಿದೆ.

ಇದರನಂತರ ಪರಿಶೀಲಿಸಬೇಕಾದದ್ದು ರೆ. ಎಫ್. ಕಿಟ್ಟೆಲ್ ಅವರು ೧೯೦೩ ರಲ್ಲಿ ಬರೆದು ಪ್ರಕಟಿಸಿದ 'A Grammar of the Kannada Language' ಎಂಬ ಜನಪ್ರಿಯ ಪ್ರೌಢವ್ಯಾಕರಣವನ್ನು. ಇದು ಹಳಗನ್ನಡ ನಡುಗನ್ನಡ ಮತ್ತು ಹೊಸಗನ್ನಡಗಳಿಗೆ ಒಂದೇ ಕಡೆ ಅವಕಾಶಕೊಟ್ಟು, ಗ್ರಾಂಥಿಕೋಕ್ತಿಯಿಂದ ಆಡುನುಡಿಯವರೆಗಿನ ಎಲ್ಲಾ ಭಾಷಾರೀತಿಗಳನ್ನೂ ಲಕ್ಷಿಸಿ ವಿಸ್ತಾರವಾಗಿಯೂ ಪ್ರೌಢವಾಗಿಯೂ ಬರೆದ ವ್ಯಾಕರಣವಾಗಿದೆ. ಗ್ರಂಥಕರ್ತೃವು ಮುನ್ನುಡಿಯ ಮೊದಲ ವಾಕ್ಯದಲ್ಲಿಯೇ ನೀಡಿರುವ ಸೂಚನೆಯಿಂದ ಇದು ಪ್ರಧಾನವಾಗಿ ಕೇಶಿರಾಜನ 'ಶಬ್ದಮಣಿದರ್ಪಣ'ವನ್ನು ಆಧರಿಸಿದೆಯೆಂದು ತಿಳಿಯುವುದು. ಗ್ರಂಥರಚನೆಯಲ್ಲಿ ಇನ್ನೂ ಹತ್ತು ಕೃತಿಗಳನ್ನು ನೋಡಿಕೊಂಡಿದೆ. ಇವುಗಳಲ್ಲಿ ಮುಳಬಾಗಲರ 'ನುಡಿಗಟ್ಟು' (೧೮೯೪) ಹಡ್ಸನ್ ಮತ್ತು ಜಿಗ್ಲರ್ ಅವರ ಕನ್ನಡ ವ್ಯಾಕರಣಗಳು (೧೮೬೪, ೧೮೯೨) ಸೇರಿಕೊಂಡಿರುವುದನ್ನು ಗಮನಿಸಬೇಕು. ಪ್ರಸ್ತುತ ಕೃತಿಯಲ್ಲಿ ಒಟ್ಟು ೨೮ ಸಂಧಿಗಳಿರುತ್ತಿದ್ದು ಒಟ್ಟು ೩೬೨ ವ್ಯಾಕರಣಾಂಶಗಳನ್ನು ವಿವರವಿವರವಾಗಿ, ವಿವಿಧ ಮೂಲಗಳಿಂದೆತ್ತಿದ ವಿಪುಲ ಪ್ರಯೋಗೋದಾಹರಣೆಗಳ ಬೆಂಬಲದೊಡನೆ ವಿಸ್ತಾರವಾಗಿ ಪ್ರತಿಪಾದಿಸಿದೆ. ಹಲವು ಕಡೆಗಳಲ್ಲಿ ಬೇರೆ ಅಭಿಪ್ರಾಯಗಳನ್ನು ಸವಿಮರ್ಶವಾಗಿ ಪರಿಶೀಲಿಸಿರುವುದು ವಿಶ್ಲೇಷಣಪೂರ್ವಕವಾಗಿ ಸ್ವಾಭಿಪ್ರಾಯವನ್ನು ನಿರೂಪಿಸಿರುವುದು ಕಿಟ್ಟೆಲರ ವಿದ್ವತ್ತು ಮತ್ತು ನಿರ್ವಹಣಶಕ್ತಿಗಳನ್ನು ಸ್ಪಷ್ಟಪಡಿಸುತ್ತದೆ. ಅವರು ಈ ಮೊದಲೇ ಎರಡು ಕನ್ನಡ ವ್ಯಾಕರಣಗ್ರಂಥಗಳನ್ನು ಬರೆದು ಕೈಪಳಗಿದ್ದಿತೆಂಬುದನ್ನು ಇಲ್ಲಿ ನೆನೆಯಬಹುದು. ಗ್ರಂಥವು ೪೮೩ ಪುಟಗಳಷ್ಟು ವಿಸ್ತಾರವಾಗಿದ್ದು, ಇದುವರೆಗೆ ಪ್ರಕಟವಾಗಿರುವ ಸಾಂಪ್ರದಾಯಿಕ ಹೊಸಗನ್ನಡ ವ್ಯಾಕರಣಗಳಲ್ಲಿ ಇದೇ ಗಾತ್ರದಲ್ಲಿ ಅತ್ಯಂತ ಹಿರಿದಾದುದಾಗಿದೆ.

ಈಚೆಗೆ ೧೯೧೪ರಲ್ಲಿ ಹೆರಾಲ್ಡ್ ಸ್ಪೆನ್ಸರ್ ಬಿ. ಎ. (Harold Spencer B.A.,) ಅವರು 'A Kanarese Grammar (with Graduated excercises)' ಎಂಬುದನ್ನು ಬರೆದು ಮೈಸೂರಿಂದ ಪ್ರಕಟಿಸಿದರು. ಥಾಮಸ್ ಹಡ್ಸನ್ ಮತ್ತು ರೆ. ಎಫ್. ಕಿಟ್ಟೆಲ್ ಇವರ ಪ್ರೌಢವ್ಯಾಕರಣಗಳನ್ನೂ ಇತರ ಕೆಲವರ ಸರಳವ್ಯಾಕರಣಗಳನ್ನೂ ಬಳಸಿಕೊಂಡು ತಮ್ಮ ಕೃತಿಯನ್ನು ಸ್ವತಂತ್ರವಾಗಿ ಬರೆದಿದ್ದಾರೆ. ಈ ಕೃತಿಯಲ್ಲಿ ೪ ಪರಿಚ್ಛೇದಗಳಿದ್ದು, ೩೧ ಪಾಠಗಳಲ್ಲಿ ಕನ್ನಡ ವ್ಯಾಕರಣಾಂಶಗಳು ವಿಸ್ತಾರವಾಗಿಯೂ

ಪರಿಷ್ಕಾರವಾಗಿಯೂ ನಿರೂಪಿತವಾಗಿವೆ. ಹಾಗೆಯೇ ಬೇರೆ ಸಹಾಯಕಸಾಮಗ್ರಿಗಳೊಡನೆ ೭ ಉಪಯುಕ್ತ ಪರಿಶಿಷ್ಟಗಳೂ ಸೇರಿಕೊಂಡಿವೆ. ಇಂಗ್ಲಿಷ್ ವಿದ್ಯಾರ್ಥಿಗಳ ಕನ್ನಡ ಕಲಿಕೆಗಾಗಿ ಇಂಗ್ಲಿಷಿನಲ್ಲಿ ಬರೆದಿರುವುದಾಗಿದ್ದು, "ಕನ್ನಡ ಭಾಷೆಯನ್ನು ಬಳಸುವುದರಲ್ಲಿ ಆಸಕ್ತರಾಗಿರುವ ಕನ್ನಡೇತರರಿಗೆ ಇದು ಅಮೂಲ್ಯ ಕೈಪಿಡಿಯಾಗಿದೆ"–ಎಂಬ ಪ್ರಶಸ್ತಿಗೆ[5] ಪಾತ್ರವಾಗುವಮಟ್ಟಿಗೆ ಗಣ್ಯವಾಗಿದೆ. ಪ್ರಚಲಿತ ಇಂಗ್ಲಿಷ್ ವ್ಯಾಕರಣಾನುಕರಣಪದ್ಧತಿಯನ್ನು ಕೈಬಿಟ್ಟು ಕನ್ನಡ ವ್ಯಾಕರಣಪದ್ಧತಿಯನ್ನು ಸಾಧಾರಣವಾಗಿ ಅನುಸರಿಸಿದೆಯೆಂಬ ಸೂಚನೆಯನ್ನು ಮುನ್ನುಡಿಯಲ್ಲಿ ಕೊಟ್ಟಿದೆ. ಈ ಗ್ರಂಥವು ಈಚೆಗೆ ಡಬ್ಲ್ಯೂ. ಪರ್ಸ್ಟನ್ ಬಿ. ಡಿ. (W. Perston B. D.) ಅವರಿಂದ ೧೯೫೦ರಲ್ಲಿ ಮತ್ತೆ ಪರಿಷ್ಕರಿಸಲ್ಪಟ್ಟು ಮೈಸೂರಿನಿಂದ ಪ್ರಕಟಗೊಂಡಿದೆ.

೧೯೩೭ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದಿಂದ ಪ್ರಕಟವಾದ 'ಕನ್ನಡ ಕೈಪಿಡಿ'ಯ ೧ನೆಯ ಸಂಪುಟದ ಒಂದನೆಯ ಭಾಗವಾದ 'ಹಳಗನ್ನಡದ ವ್ಯಾಕರಣ' (ಮೊದಲ ಮುದ್ರಣದಲ್ಲಿರುವ ಎರಡು ಪರಿಶಿಷ್ಟಗಳನ್ನು ಮುಂದಿನ ಎಲ್ಲಾ ಮುದ್ರಣಗಳಲ್ಲಿಯೂ ಕೈಬಿಟ್ಟಿದೆ.) ಪ್ರೌಢ ವ್ಯಾಕರಣಗ್ರಂಥಗಳ ರಚನೆಯಲ್ಲಿ ಒಂದು ಮೈಲಿಗಲ್ಲು. ಇದನ್ನು ಬರೆದವರು ಟಿ. ಶ್ರೀನಿವಾಸರಾಘವಾಚಾರ್ಯರು ಮತ್ತು ಬಿ. ಕೃಷ್ಣಪ್ಪನವರು. ಇದರಲ್ಲಿ ಸಂಜ್ಞಾದಿಯಾಗಿ ೧೦ ಪ್ರಕರಣಗಳಿದ್ದು 'ಶಬ್ದಮಣಿದರ್ಪಣ' ಮೊದಲಾದ ಪ್ರಾಚೀನ ವ್ಯಾಕರಣಗಳ ವಿಷಯುಗಳನ್ನು ಉಚಿತಕ್ಕೆ ತಕ್ಕಷ್ಟು ಮಟ್ಟಿಗೆ ಸಂಗ್ರಹಿಸಿ ಹೊಸರೀತಿಯಿಂದ ಸಂಯೋಜಿಸಿರುವುದು ಕಾಣುತ್ತದೆ. ಭಾಷಾ ಚರಿತ್ರೆಯ ದೃಷ್ಟಿಯಿಂದ ಅತ್ಯಾವಶ್ಯಕವೆಂದು ತೋರಿದ ಕೆಲವು ಕಡೆಗಳಲ್ಲಿ ಪ್ರಾಚೀನರ ಅಭಿಪ್ರಾಯದಿಂದ ಭಿನ್ನವಾದ ವಿವರಣೆಗಳನ್ನು ಕೊಟ್ಟಿರುವುದು ಗಮನಾರ್ಹವಾಗಿದೆ. ಹಳಗನ್ನಡ ಭಾಷಾಸ್ವರೂಪವನ್ನರಿಯಲು ಇದು ಅತ್ಯುತ್ತಮವಾದ ಕೈಪಿಡಿಯಾಗಿದೆ. ನಿರೂಪಣೆಯಲ್ಲಿ ನಿಷ್ಕೃಷ್ಟತೆ ಸಂಕ್ಷೇಪದೃಷ್ಟಿ ಭಾಷಾಶುದ್ಧಿ—ಇವು ಎದ್ದುಕಾಣುತ್ತವೆ.

(೩) ಪ್ರಾಚೀನ ವ್ಯಾಕರಣಗ್ರಂಥಗಳ ಪ್ರಕಟನೆ ಸಂಪಾದನೆ ಮೊದಲಾದವುಗಳ ಬಗೆಗೆ ಕೆಲವು ಸಂಗತಿಗಳನ್ನು ಈಗ ಗಮನಿಸಬಹುದು :

ಹಳಗನ್ನಡ ಭಾಷೆಗೆ ಪ್ರಾಮಾಣಿಕ ವ್ಯಾಕರಣವೆಂದರೆ 'ಶಬ್ದಮಣಿದರ್ಪಣ'ವೇ ಎಂಬುದೂ, ಅದರ ಜನಪ್ರಿಯತೆ ಬೇರೆಯ ಹಳಗನ್ನಡ ವ್ಯಾಕರಣಗಳಿಗಿಲ್ಲವೆಂಬುದೂ ಸರ್ವವಿದಿತವೇ ಆಗಿದೆ. ಹಳಗನ್ನಡ ವ್ಯಾಕರಣಗ್ರಂಥಗಳ ಶ್ರೇಣಿಯಲ್ಲಿ ಪ್ರಥಮವಾಗಿ ಪರಿಷ್ಕೃತಗೊಂಡು ಪ್ರಕಟವಾದದ್ದು ಕೂಡ 'ಶಬ್ದಮಣಿದರ್ಪಣ'ವೇ. ಈವರೆಗೆ ಈ ಗ್ರಂಥದ ೫ ಪರಿಷ್ಕರಣಗಳೂ ೯ ಮುದ್ರಣಗಳೂ ಹೊರಬಿದ್ದಿವೆ. ಮೈಸೂರು ವಿದ್ಯಾ ಇಲಾಖೆಯ ಡೈರೆಕ್ಟರ್ ಆಗಿದ್ದ ಜೆ. ಗ್ಯಾರೆಟ್ (J. Garrett) ಅವರು ೧೮೬೮ರಲ್ಲಿ, ಮೊದಲ ಬಾರಿಗೆ, 'ಶಬ್ದಮಣಿದರ್ಪಣ'ವನ್ನು ಸಮಗ್ರವಾಗಿ ಸಂಪಾದಿಸಿ

---

5. ಅದೇ : ಪು. ೧೮೩.

('Shabdamani Darpana, A Celebrated Grammatical Manual of Ancient Canarese Literature') ಪ್ರಕಟಿಸಿದರು. ಈ ಗ್ರಂಥಕ್ಕೆ Advertisement ಎಂಬ ಎರಡು ಪುಟಗಳ ಮುನ್ನುಡಿಯಿದೆ. ಗ್ರಂಥಶರೀರದಲ್ಲಿ ಬೇಕಾದ ಹಾಗೆ ತಪ್ಪುಗಳಿದ್ದರೂ ಇದು ಗ್ರಂಥದ ಮೊತ್ತಮೊದಲ ಮುದ್ರಣವಾದದ್ದರಿಂದ ಇದಕ್ಕೆ ಪ್ರಾಶಸ್ತ್ಯವಿದೆ. ರೆ. ಎಫ್. ಕಿಟ್ಟೆಲ್ ಅವರು ೧೮೭೨ರಲ್ಲಿ 'ಶಬ್ದಮಣಿದರ್ಪಣ'ವನ್ನು ಒಂದು ಶಾಸ್ತ್ರೀಯ ಕ್ರಮದಲ್ಲಿ ಕೆಲವು ಹಸ್ತಪ್ರತಿಗಳ ಆಧಾರದ ಮೇಲೆ ಪರಿಷ್ಕರಿಸಿ, ಮೊದಲನೆಯ ಪರಿಷ್ಕೃತ ಮುದ್ರಣವಾಗಿ ಅದನ್ನು ಮಂಗಳೂರಿಂದ ಪ್ರಕಟಿಸಿದರು. ಇವರು ಜೆ. ಗ್ಯಾರೆಟ್ ಅವರ ಮುದ್ರಣವನ್ನು ನೋಡಿರುವ ಸಂಭವವಿಲ್ಲವೆಂದೇ ಹೇಳಬಹುದು. ಕಿಟ್ಟೆಲ್ ಅವರ ಪರಿಷ್ಕರಣದಲ್ಲಿ, ಸೂತ್ರದ ಮಗ್ಗುಲಿಗೆ ಇಂಗ್ಲಿಷಿನಲ್ಲಿ ಸೂತ್ರಾರ್ಥದ ತಾತ್ಪರ್ಯವನ್ನು ಬರೆದಿದೆ; ಗ್ರಂಥಶರೀರದಲ್ಲಿಯೂ ಗ್ರಂಥಾಂತ್ಯದಲ್ಲಿಯೂ ಪಾಠಾಂತರಗಳನ್ನು ಗುರುತಿಸಿದೆ. ಅಭ್ಯಾಸದ ದೃಷ್ಟಿಯಿಂದ ಉಪಯುಕ್ತವಾದ ಮುನ್ನುಡಿಯನ್ನು ಇಂಗ್ಲಿಷಿನಲ್ಲಿ ಬರೆದು ಸೇರಿಸಿದೆ. ಅನಂತರದಲ್ಲಿ ಇದರ 'ಎರಡನೆಯ ಸುಧಾರಿಸಲ್ಪಟ್ಟ ಆವೃತಿ'ಯನ್ನು ೧೮೯೯ರಲ್ಲಿ ಹೊರತರಲಾಯಿತು. ೧೯೨೦ರಲ್ಲಿ ಪಂಜೆ ಮಂಗೇಶರಾಯರು ಕಿಟ್ಟೆಲರ ಎರಡನೆಯ ಪರಿಷ್ಕರಣಕ್ಕೆ ತಮ್ಮ ಕೈವಾಡವನ್ನು ಸ್ವಲ್ಪಮಟ್ಟಿಗೆ ಸೇರಿಸಿ ಅದರ ಮೂರನೆಯ ಮುದ್ರಣವನ್ನು ಪ್ರಚುರಪಡಿಸಿದರು. ಇತ್ತೀಚೆಗೆ ಮೈಸೂರು ಶಾರದಾಮಂದಿರದ ಪರಿಷ್ಕರಣವು ಅಚ್ಚಾಗುವುದಕ್ಕೆ ಸ್ವಲ್ಪ ಮೊದಲು ಇದೊಂದೇ ವಿದ್ಯಾರ್ಥಿಗಳಿಗೂ ಅಭ್ಯಾಸಿಗಳಿಗೂ ನೋಡಲು ಲಭ್ಯವಾಗುತ್ತಿದ್ದಿತು. ಇದೇ ವ್ಯಾಕರಣ ಗ್ರಂಥದ ಇನ್ನೊಂದು ಪರಿಷ್ಕೃತ ಮುದ್ರಣವು ೧೯೨೦ರಲ್ಲಿಯೇ ಬೆಂಗಳೂರಿನ ಕರ್ಣಾಟಕ ಸಾಹಿತ್ಯಪರಿಷತ್ತಿನಿಂದ ಪ್ರಕಟವಾಯಿತು. ಸಂಪಾದಕತ್ವವು ಸೂಚಿತವಾಗಿಲ್ಲ. ೧೯೩೯ರಲ್ಲಿ, ಎ. ವೆಂಕಟರಾವ್ ಮತ್ತು ಎಚ್. ಶೇಷ ಅಯ್ಯಂಗಾರ್ ಅವರ ಉಭಯಸಂಪಾದಕತ್ವದಲ್ಲಿ, ಲಿಂಗಣಾರಾಧ್ಯರಚಿತವಾದ ವೃತ್ತಿಯೊಡನೆ ಕೂಡಿದ 'ಶಬ್ದಮಣಿದರ್ಪಣ'ದ ಬೇರೊಂದು ಪರಿಷ್ಕರಣವು ಮದರಾಸು ಯೂನಿವರ್ಸಿಟಿಯ ಕನ್ನಡ ಗ್ರಂಥಮಾಲೆಯ ೫ನೆಯ ಪುಸ್ತಕವಾಗಿ ಹೊರಬಂದಿತು. ಪ್ರೊ. ಎಚ್. ಚೆನ್ನಕೇಶವ ಅಯ್ಯಂಗಾರ್ ಅವರು ಈ ಗ್ರಂಥಕ್ಕೆ ಬರೆದ ಸುದೀರ್ಘವಾದ ಅವತರಣಿಕೆಯೂ ಉಪಯುಕ್ತವಾದ ೯ ಪರಿಶಿಷ್ಟಗಳೂ ಈ ಗ್ರಂಥದ ಪರಿಷ್ಕರಣವನ್ನು ಹೆಚ್ಚು ಉಪಯುಕ್ತವನ್ನಾಗಿಯೂ ಶ್ರೀಮಂತವನ್ನಾಗಿಯೂ ಮಾಡಿವೆ. ಟೀಕೆಯಿಲ್ಲದೆಯೇ ಈ ಗ್ರಂಥದ ಗಾತ್ರವು 'ಶಬ್ದಮಣಿದರ್ಪಣ'ದ ಉಳಿದೆಲ್ಲ ಪರಿಷ್ಕರಣಗಳನ್ನೂ ಮೀರಿಸಿರುವುದು ಗಮನಾರ್ಹವಾಗಿದೆ! 'ಶಬ್ದಮಣಿದರ್ಪಣ'ದ ಈ ಮೇಲಿನ ೬ ಪರಿಷ್ಕರಣಗಳ ಸ್ವರೂಪದ ವಿಚಾರವಾಗಿ ವಿಶದವಾದ ವಿವರಗಳಿಗೆ ಪ್ರೊ. ಡಿ. ಎಲ್. ನರಸಿಂಹಾಚಾರ್ ಅವರ ಪರಿಷ್ಕರಣದ ಪ್ರಸ್ತಾವನೆಯ ಆದಿಭಾಗವನ್ನು ನೋಡಬಹುದು. ಅವರಿಂದ ಸಂಪಾದಿತವಾಗಿ ಇದೇ ಗ್ರಂಥವು ಮೈಸೂರಿನ ಶಾರದಾಮಂದಿರದ ಮೂಲಕವಾಗಿ ೧೯೫೪ರಲ್ಲಿ ಒಮ್ಮೆಯೂ, ೧೯೬೪ ಮತ್ತು ೧೯೬೮ರಲ್ಲಿ ಎರಡು ಬಾರಿಯೂ ಪ್ರಕಾಶಿತವಾಗಿದೆ. ಇದರ ವಿಚಾರವಾಗಿ ಮುಂದೆ ಹೇಳಿದೆ.

ಪ್ರಾಚೀನ ವ್ಯಾಕರಣ ಗ್ರಂಥಗಳ ಪರಿಷ್ಕರಣ ಕಾರ್ಯದಲ್ಲಿ ಎರಡನೆಯ ಗಮನಾರ್ಹವಾದ ಕೆಲಸವೆಂದರೆ, ಕೆಲವು ಪ್ರಾಚೀನ ಕನ್ನಡ ಕಾವ್ಯಗಳ ಪ್ರಥಮ ಪರಿಷ್ಕರ್ತರೂ ಶಾಸನ ಸಂಗ್ರಾಹಕರೂ ಆದ ಲೂಯಿ ರೈಸ್ ಎಂ.ಆರ್.ಎ.ಎಸ್. (Lewis Rice M.R.A.S.) ಅವರು ೨ನೆಯ ನಾಗವರ್ಮನ '(ಕರ್ಣಾಟಕ) ಭಾಷಾಭೂಷಣ'ವನ್ನು ೧೮೮೪ರಲ್ಲಿ ಪ್ರಕಟಿಸಿದುದು. ಸಮಗ್ರ ಗ್ರಂಥಪಾಠವನ್ನು ಮೊದಲು ರೋಮನ್ ಲಿಪಿಯಲ್ಲಿ ಬರೆದು ಅವುಗಳಿಗೆ ಅಡಿಯಲ್ಲಿ ಅಲ್ಲಲ್ಲಿಯೆ ಅಡಿ ಟಿಪ್ಪಣಿಗಳನ್ನು ಬರೆದಿದೆ. ಬಳಿಕ ಮೊದಲನೆಯ ವಿಭಜನರೇಖೆಯ ತಳದಲ್ಲಿ ಕನ್ನಡ ಲಿಪಿಯಲ್ಲಿ ಗ್ರಂಥಪಾಠವನ್ನು ಸ್ವಕೀಯವೋ ಅನ್ಯಕೃತವೋ ಆದ ಹೊಸಗನ್ನಡ ತಾತ್ಪರ್ಯದೊಡನೆ ಮುದ್ರಿಸಿದೆ. ಹಾಗೆಯೇ ಎರಡನೆಯ ವಿಭಜನರೇಖೆಯ ತಳದಲ್ಲಿ ಪಾಠಾಂತರಗಳನ್ನೂ ವಿರಳವಾಗಿ ಬೇರೆ ಸೂಚನೆಗಳನ್ನೂ ಕೊಟ್ಟಿದೆ. ಗ್ರಂಥದ ಆದ್ಯಂತಗಳಲ್ಲಿ ಉಪಯುಕ್ತವಾದ ಉಪೋದ್ಘಾತಗಳನ್ನೂ ಪರಿಶಿಷ್ಟಗಳನ್ನೂ ಸೇರಿಸಿ ಪರಿಷ್ಕರಣವನ್ನು ವಿದ್ವತ್ಪೂರ್ಣವನ್ನಾಗಿ ಮಾಡಿದೆ. ಇದೇ ಗ್ರಂಥವು ಆರ್. ನರಸಿಂಹಾಚಾರ್ ಅವರಿಂದ ಮತ್ತೆ ಸಂಪಾದಿತವಾಗಿ ೧೯೦೩ರಲ್ಲಿ ಬೆಂಗಳೂರಿನಿಂದ ಪ್ರಕಟವಾಯಿತು. ಇದು ನಾಗವರ್ಮನ 'ಕಾವ್ಯಾವಲೋಕನ'ದೊಡಗೂಡಿ, ರೈಸ್ ಅವರ ಸಂಪಾದಿತ ಗ್ರಂಥದ ಪರಿಷ್ಕೃತ ಮುದ್ರಣವಾಗಿ, ಹೊರಬಿದ್ದಿದೆ. ಇದರ ಪರಿಷ್ಕರಣಕ್ಕೆ ಹೊಸದಾಗಿ ಎರಡು ಓಲೆ ಪ್ರತಿಗಳನ್ನೂ ಒಂದು ಅಸಂಪೂರ್ಣವಾದ ನಕಲನ್ನೂ ಶ್ರೀ ನರಸಿಂಹಾಚಾರ್ಯರು ಬಳಸಿಕೊಂಡಿದ್ದಾರೆ. ರೈಸ್ ಅವರ ಸಂಪಾದಿತ ಗ್ರಂಥದಲ್ಲಿದ್ದ ಹೊಸಗನ್ನಡ ತಾತ್ಪರ್ಯ ಭಾಗವನ್ನು ಇಲ್ಲಿ ಕೈಬಿಟ್ಟು, ಪ್ರಾಚೀನವಾದ ಟೀಕುವೊಂದನ್ನು ಎರಡು ಓಲೆಪ್ರತಿಗಳ ಆಧಾರದಿಂದ ಸೇರಿಸಿರುವುದು ಕಂಡುಬರುತ್ತದೆ.

'ಭಾಷಾಭೂಷಣ'ದ ಪ್ರಕಟನೆಯ ತರುವಾಯದಲ್ಲಿ ಬಿ. ಲೂಯಿರೈಸ್ ಅವರೇ ಭಟ್ಟಾಕಲಂಕದೇವನ 'ಕರ್ಣಾಟಕ ಶಬ್ದಾನುಶಾಸನ'ವನ್ನು ಆ ಗ್ರಂಥದ 'ಭಾಷಾಮಂಜರೀ ವೃತ್ತಿ' ಮತ್ತು 'ಮಂಜರೀಮಕರಂದ 'ವ್ಯಾಖ್ಯೆ' ಇವುಗಳೊಡನೆ ಮೊದಲಬಾರಿಗೆ ೧೮೯೦ರಲ್ಲಿ ಪ್ರಕಟಿಸಿದರು. ಇದು ಆಗಿನ ಮೈಸೂರು ಮಹಾರಾಜರಾದ ಶ್ರೀ ಚಾಮರಾಜೇಂದ್ರ ಒಡೆಯರ್ ಅವರಿಗೆ ಅರ್ಪಿತವಾಗಿದೆ. ಈ ಗ್ರಂಥದ ಪರಿಷ್ಕರಣಕ್ಕೆ ಸುಮಾರು ೨೦ ವರ್ಷಗಳ ಮುಂಚಿನಿಂದಲೂ ಹಸ್ತಪ್ರತಿಗಳನ್ನು ಶೇಖರಿಸ ತೊಡಗಿದ್ದುದಾಗಿಯೂ ಸಂಪಾದನಕಾರ್ಯವು ಮುಗಿದ ಮೇಲೆಯೂ ಅಚ್ಚಿನ ಕಾರ್ಯವೇ ಹಲವು ವರ್ಷಗಳು ಹಿಡಿದುದಾಗಿಯೂ ರೈಸ್ ಅವರು ಮುನ್ನುಡಿಯಲ್ಲಿ ಹೇಳಿರುವುದನ್ನು ನೋಡಿದರೆ ಅವರ ಭಾಷಾಪ್ರೇಮ ವಿದ್ವತ್ಪ್ರಿಯತೆ ಸಹನ ಮತ್ತು ಸಾಹಸ ಶಕ್ತಿಗಳು ಎಷ್ಟೆಂಬುದು ಮನವರಿಕೆಯಾಗುತ್ತದೆ. ಪೂರ್ತಿಗ್ರಂಥವು ಮೊದಲು ವೃತ್ತಿ ವ್ಯಾಖ್ಯೆಗಳೊಡನೆ ರೋಮನ್‌ಲಿಪಿಯಲ್ಲಿಯೂ ಅನಂತರದಲ್ಲಿ ಕನ್ನಡದಲ್ಲಿಯೂ ಚೆನ್ನಾಗಿ ಅಚ್ಚಾಗಿದೆ. ಗ್ರಂಥದ ಆಕಾರವೂ ಗಾತ್ರವೂ ಉತ್ಸಾಹಿಗಳಾದ ಇಂದಿನ ಸಂಪಾದಕ-ಪ್ರಕಾಶಕರಿಗೆ ಕೂಡ ಬೆರಗುಗೊಳಿಸುವಂತಿವೆ. ಇಲ್ಲಿಯೂ ಉಪಯುಕ್ತವಾದ ಉಪೋ

ದ್ಘಾತಗಳನ್ನೂ ಪರಿಶಿಷ್ಟಗಳನ್ನೂ ಸೇರಿಸಿ ರೈಸ್ ಅವರು ಗ್ರಂಥದ ಪ್ರಯೋಜನವನ್ನು ಅಧಿಕಗೊಳಿಸಿರುತ್ತಾರೆ. ಇಲ್ಲಿಂದೀಚೆಗೆ ಈ ಗ್ರಂಥವು ಐದು ಬಾರಿ ಸ್ವತಂತ್ರ ರೀತಿಯಲ್ಲಿ ಪರಿಷ್ಕೃತವಾಗಿ ಮುದ್ರಿತವಾಗಿದೆ. ಕುಂಡಲಗಿರಿ ಆಚಾರ್ಯರು 'ವಾಗ್ಭೂಷಣ' ಪತ್ರಿಕೆಯಲ್ಲಿ ಪ್ರಾಯಃ ಮೊದಲು ಈ ಗ್ರಂಥದ ಕೆಲವು ಭಾಗಕ್ಕೆ 'ಪ್ರಕಾಶಿಕೆ'ಯನ್ನು ('ಶಬ್ದಾನುಶಾಸನ ಪ್ರಕಾಶಿಕೆ') ಬರೆದು ೧೯೦೪ರಲ್ಲಿ ಪ್ರಕಟಿಸಿದರು. ಅನಂತರ ೧೯೦೮ರಲ್ಲಿ ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ 'ವಾಗ್ಭೂಷಣ ಗ್ರಂಥ ಮಾಲೆ'ಯಲ್ಲಿ, ಇದೇ ಪುಸ್ತಕರೂಪವಾಗಿ, ೪೬ನೆಯ ಪುಸ್ತಕವಾಗಿ, ಕುಂಡಲಗಿರಿ ಆಚಾರ್ಯರ (ಮತ್ತು ಕಟ್ಟಿ ಶ್ರೀನಿವಾಸಮೂರ್ತ್ಯಾಚಾರ್ಯರ) ಹೆಸರಿನಲ್ಲಿ 'ಕರ್ನಾಟಕ ಶಬ್ದಾನುಶಾಸನ ಪ್ರಕಾಶಿಕಾ (ಪ್ರಥಮ ಸಂಪುಟ)' ಎಂಬುದಾಗಿ ಪ್ರಕಟವಾಯಿತು. ಇದರ ಬಳಿಕ ರಾ. ನರಸಿಂಹಾಚಾರ್ಯರು ೧೯೨೩ರಲ್ಲಿ ಇನ್ನೊಮ್ಮೆ, ಮೂಲದ ವೃತ್ತಿವ್ಯಾಖ್ಯೆಗಳೊಡನೆ ಪೂರ್ತಿ ಗ್ರಂಥದ ಬೇರೊಂದು ಸಂಪಾದಿತ ಮುದ್ರಣವನ್ನು ಹೊರತಂದರು. ಈ ಗ್ರಂಥ ಆಗಿನ ಮೈಸೂರು ಮಹಾರಾಜರಾದ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಅವರಿಗೆ ಅರ್ಪಿತವಾಗಿದೆ. ಇದು ರೈಸರ ಪರಿಷ್ಕರಣಕ್ಕಿಂತ ಹೆಚ್ಚು ಉಪಯುಕ್ತವಾದ ರೀತಿಯಲ್ಲಿ ಸಿದ್ಧಗೊಂಡಿದೆ. ಇದಕ್ಕೆ ಕೊಟ್ಟಿರುವ ಗ್ರಂಥಕರ್ತೃವಿಷಯಕವಾದ ಇಂಗ್ಲಿಷ್ ಉಪೋದ್ಘಾತವೂ ಹಲವು ಪರಿಶಿಷ್ಟಗಳೂ ಗ್ರಂಥಾಭ್ಯಾಸದ ದೃಷ್ಟಿಯಿಂದ ವಿಪುಲವಾದ ಸಂಶೋಧಿತ ಸಾಮಗ್ರಿಯನ್ನು ಒಳಗೊಂಡಿರುತ್ತದೆ. ಈಚೆಗೆ ೧೯೬೧ರಲ್ಲಿ ಶಿ. ಶಿ. ಬಸವನಾಳರಿಂದ ಸಂಪಾದಿತವಾಗಿ ಧಾರವಾಡದಿಂದಲೂ, ೧೯೬೮ರಲ್ಲಿ ಡಿ. ಪದ್ಮನಾಭಶರ್ಮರಿಂದ ಪರಿಷ್ಕೃತವಾಗಿ ಬೆಂಗಳೂರಿಂದಲೂ ಮತ್ತೆರಡು ಪರಿಷ್ಕರಣಗಳು ಹೊರಬಂದಿವೆ. ಇವುಗಳ ವಿಚಾರವನ್ನು ಮುಂದೆ ಹೇಳಿದೆ.

೨ನೆಯ ನಾಗವರ್ಮನ 'ಶಬ್ದಸ್ಮೃತಿ'ಯನ್ನು 'ಕಾವ್ಯಾವಲೋಕನ'ದಿಂದ ಬೇರ್ಪಡಿಸಿ 'ಕರ್ಣಾಟಕ ಕಾವ್ಯಮಂಜರಿ'ಯ ಮೂಲಕವಾಗಿ ಮೊದಲು ಪ್ರಕಟಿಸಲಾಯಿತು. ಇದರ ಸಂಪಾದಕರು ಯಾರು, ಮುದ್ರಣವಾದುದು ಎಂದು–ಎಂಬುದನ್ನು ಇಲ್ಲಿ ಗುರುತಿಸುವುದು ಸಾಧ್ಯವಾಗಿಲ್ಲ. ಸಂಪಾದಕರು ಗ್ರಂಥಪಾಠದ ಅಡಿಗೆ 'ಭಾಷಾಭೂಷಣ', ದರ್ಪಣ ಮತ್ತು ಶಾಸನಗಳ ಸಂವಾದಿಭಾಗಗಳನ್ನು ಉದ್ಧರಿಸಿಕೊಟ್ಟು ಹಳಗನ್ನಡ ವ್ಯಾಕರಣಗಳ ಸಹಾಧ್ಯಯನಕ್ಕೆ ಅನುಕೂಲಮಾಡಿಕೊಟ್ಟಿದ್ದಾರೆ. ೧೯೦೩ರಲ್ಲಿ ರಾ. ನರಸಿಂಹಾಚಾರ್ಯರು ಸಂಪಾದಿಸಿ ವಿದ್ವತ್ಪೂರ್ಣವೂ ವಿಸ್ತಾರವೂ ಆದ ಉಪೋದ್ಘಾತದೊಡನೆ ಪರಿಶಿಷ್ಟಗಳೊಡನೆ ಬೆಂಗಳೂರಿಂದ ಪ್ರಕಟಿಸಿದ 'ಕಾವ್ಯಾವಲೋಕನ'ದಲ್ಲಿಯೂ, ಮೈಸೂರು ಓರಿಯೆಂಟಲ್ ಲೈಬ್ರರಿಯಿಂದ ಪ್ರಕಟವಾದ (ಕೆ.ಎಸ್.ನಂ. ೨೨) ಅದರ ೧೯೩೩ರ ದ್ವಿತೀಯ ಮುದ್ರಣದಲ್ಲಿಯೂ, 'ಶಬ್ದಸ್ಮೃತಿ' ಹೆಚ್ಚು ಶುದ್ಧಪಾಠದೊಡನೆ ಅಭ್ಯಾಸೋಪಯುಕ್ತವಾದ ವಿಷಯಗಳೊಡನೆ 'ಕಾವ್ಯಾವಲೋಕನ'ದ ಪ್ರಥಮಾಧಿಕರಣವಾಗಿ ಸೇರಿಕೊಂಡು ಬಂದಿದೆ. ೧೯೩೩ರಲ್ಲಿಯೇ ಶಿ. ಶಿ. ಬಸವನಾಳ ಮತ್ತು ಕೇಪು. ಶಂಕರನಾರಾಯಣ ಅವರ ಸಂಪಾದಕತ್ವದಲ್ಲಿ

ಪ್ರಕಟವಾದ ‘ಕಾವ್ಯಾವಲೋಕನ’ದಲ್ಲಿಯೂ ಇದು ಸಹಜವಾಗಿ ಸೇರಿದ್ದು, ಇದಕ್ಕೆ ಗ್ರಂಥಾಂತ್ಯದಲ್ಲಿ ಸಂಪಾದಕರು ಸವಿಮರ್ಶೆವೂ ಉಪಯುಕ್ತವೂ ಆದ ಟಿಪ್ಪಣಿಗಳನ್ನು ಬರೆದಿರುವುದು ಗಮನಿಸತಕ್ಕದ್ದಾಗಿದೆ. ಇತ್ತೀಚೆಗೆ ಮೈಸೂರು ವಿಶ್ವವಿದ್ಯಾನಿಲಯದಿಂದ ಪ್ರಕಟವಾದ ‘ಕಾವ್ಯಾವಲೋಕನ’ದ ಪುನರ್ಮುದ್ರಣವೊಂದರಲ್ಲಿಯೂ ‘ಶಬ್ದಸ್ಮೃತಿ’ ಯುಂಟು. ಇದರ ಬಗೆಗೆ ಮುಂದೆ ಹೇಳಿದೆ.

(೪) ಕೊನೆಯದಾಗಿ, ಭಾಷೆ ಮತ್ತು ವ್ಯಾಕರಣಗಳ ಮೇಲೆ ಈಯವಧಿಯಲ್ಲಿ ರಚನೆಯಾಗಿರುವ ಭಾಷಣ–ಲೇಖನಗಳಲ್ಲಿ ಕೆಲವನ್ನು ಇಲ್ಲಿ ಪ್ರಸ್ತಾಪಿಸಬಹುದು :

೨೦ನೆಯ ಶತಮಾನದ ಪೂರ್ವಾರ್ಧದ ಮೊದಲಲ್ಲಿಯೇ, ಸಾಂಪ್ರದಾಯಿಕ ವ್ಯಾಕರಣ ರಚನಾದೃಷ್ಟಿಯಿಂದ ಒಂದೆರಡು ಹಜ್ಜೆಗಳನ್ನು ಮುಂದಿಟ್ಟು ಭಾಷಾ ಶಾಸ್ತ್ರರೀತಿಯ ಸಮಾಲೋಚನೆಗಳನ್ನು ತಮ್ಮ ಲೇಖನೋಪನ್ಯಾಸಗಳ ಮೂಲಕವಾಗಿ ಕೆಲವು ವಿದ್ವಾಂಸರು ನಡಸಿರುವುದು ಕಂಡು ಬರುತ್ತದೆ. ಇವುಗಳಲ್ಲಿ ಬಹುಪಾಲು ವಿದ್ವತ್ ಸಮ್ಮೇಲನಗಳಲ್ಲಿ ಉಪನ್ಯಾಸಗಳಾಗಿ ಬಂದವೆಂದೇ ಹೇಳಬಹುದು. ಈ ಉಪನ್ಯಾಸಗಳಲ್ಲಿ ಹಲವು ಅನಂತರದಲ್ಲಿ ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ ಪ್ರಬುದ್ಧ ಕರ್ಣಾಟಕ ಮೊದಲಾದ ಪಂಡಿತ ಪತ್ರಿಕೆಗಳಲ್ಲಿ ಪ್ರಕಟವಾದುವು. ಗಣ್ಯವಾದ ಈ ಕೆಲವು ಪತ್ರಿಕೆಗಳಲ್ಲಿ ಚೆದುರಿ ಹೋಗಿರುವ ಹಲವಾರು ಇಂಥ ಲೇಖನಗಳನ್ನು ಇಲ್ಲಿ ಗಮನಿಸಬೇಕಾದುದಿಲ್ಲ. ಇವುಗಳಲ್ಲಿ ಪುಸ್ತಕರೂಪದಲ್ಲಿ ಅಚ್ಚಾಗಿ ಬಂದವು ತೀರ ಕಡಮೆ. ಟಿ. ಜಿ. ಕೃಷ್ಣಾಚಾರ್ಯರೆಂಬವರು ೧೮೭೮ರಲ್ಲಿ ಬರೆದ ‘ಕರ್ಣಾಟಕ ಭಾಷಾ ವಿಷಯವು’ ಮತ್ತು ೧೮೭೯ರಲ್ಲಿ ಬರೆದ ‘ಕರ್ಣಾಟಕ ಭಾಷಾ ಸಮೀಕರಣೋಪನ್ಯಾಸ’- ಇವು ಪ್ರಾಯಃ ಸ್ವತಂತ್ರವಾಗಿ ಪುಸ್ತಕರೂಪದಲ್ಲಿ ರಚಿತವಾದ ಆತ್ಯಾರಂಭಕಾಲದ ಭಾಷಾ ವಿಷಯಕವಾದ ಕೃತಿಗಳು ಎಂದು ತೋರುತ್ತದೆ. ೧೮೯೪ರಲ್ಲಿ ಆರ್. ರಘುನಾಥರಾಯರು ‘ಕರ್ಣಾಟಕ ವ್ಯಾಕರಣೋಪನ್ಯಾಸಮಂಜರಿ’ ಎಂಬುದನ್ನು ಬರೆದು ಬೆಂಗಳೂರಿಂದ ಪ್ರಕಟಿಸಿದರು. ಈ ಗ್ರಂಥವು ರಚನೆಯಾದ ಸಂದರ್ಭದ ಬಗೆಗೆ ಗ್ರಂಥದ ಪೀಠಿಕೆಯಲ್ಲಿ ಬರೆಯುತ್ತ ಅವರು “ಬೆಂಗಳೂರು ಶೆಂಟ್ರಲ್ ಕಾಲೀಜಿನಲ್ಲಿ ಕರ್ಣಾಟ ವ್ಯಾಕರಣವನ್ನು ವಿದ್ಯಾರ್ಥಿಗಳಿಗೆ ಹೇಳಿಕೊಡುವ ಸಂದರ್ಭದಲ್ಲಿ ಸುಮಾರು ಮೂರು ವರುಷಗಳ ಕೆಳಗೆ ಈ ಉಪನ್ಯಾಸಗಳ ಮುಖ್ಯಾಂಶಗಳನ್ನು ಬರೆದಿಟ್ಟೆನು”– ಎಂಬುದಾಗಿಯೂ, ಅಲ್ಲಿಯೇ ಗ್ರಂಥ ಪ್ರಕಟನೆಯ ಬಗೆಗೆ ತಿಳಿಸುತ್ತ “....ಶಬ್ದಾನು ಶಾಸನಕ್ಕೆ ಮ. ರೈಸ್ ಸಾಹೇಬರವರು ಬರೆದಿರುವ ಪೀಠಿಕೆಯಲ್ಲಿಯೇ ಆಗಲಿ, ಕನ್ನಡ ಇಂಗ್ಲೀಷು ನಿಘಂಟಿಗೆ ರೆವರೆಂಡ್ ಕಿಟ್ಟೆಲ್ ಸಾಹೇಬರವರು ಬರೆದಿರುವ ಪೀಠಿಕೆಯಲ್ಲಿಯೇ ಆಗಲಿ, ಹೊಸಗನ್ನಡದ ನಿಜಸ್ಥಿತಿ ಪ್ರಕಟನೆಗೆ ಬಾರದಿರುವುದನ್ನು ನೋಡಿ, ಸುಮ್ಮನಿರು ವುದಿನ್ನು ಸರಿಯಲ್ಲವೆಂದು ನಂಬಿ, ಧೈರ್ಯಮಾಡಿ, ಈ ಉಪನ್ಯಾಸಗಳನ್ನು ಮುದ್ರಿಸಿರು ತ್ತೇನೆ”-ಎಂಬುದಾಗಿಯೂ ಹೇಳಿದ್ದಾರೆ. ಗ್ರಂಥದ ಪ್ರಥಮೋಪನ್ಯಾಸವು ‘ಭಾಷಾ ಸ್ವರೂಪ ನಿರೂಪಣ’ವನ್ನೂ ದ್ವಿತೀಯೋಪನ್ಯಾಸವು ‘ನವೀನರೂಪೋತ್ಪತ್ತಿವಿವರಣ’

ವನ್ನೂ ಕುರಿತಿದೆ. ಇದರಲ್ಲಿ ವ್ಯಾಕರಣಾಂಶಗಳಿಗಿಂತ ಕನ್ನಡ ಭಾಷಾಸ್ವರೂಪದ ಮತ್ತು ಅವಸ್ಥಾಭೇದಗಳ ವಿಶ್ಲೇಷಣಕ್ಕೆ ಹೆಚ್ಚು ಗಮನ ಸಂದಿದೆ. ಶ್ರೀರಂಗಪಟ್ಟಣಂ ಕೃಷ್ಣಮಾಚಾರ್ಯರ ಮತ್ತು 'ವಾಗ್ವಿಧಾಯಿನಿ'ಯ ಕರ್ತೃಗಳಾದ ರಾಮಸ್ವಾಮಿ ಶಾಸ್ತ್ರಿಗಳ ವ್ಯಾಕರಣ ಪದ್ಧತಿಯನ್ನು ಟೀಕಿಸುವುದರಲ್ಲಿ, ಹೊಸಗನ್ನಡ ವ್ಯಾಕರಣ ರಚನೆಯ ಸಮಸ್ಯೆ ಮತ್ತು ಸಂಧಿಕಾಲಗಳ ಬಗೆಗೆ ಪರೋಕ್ಷವಾಗಿ ಸೂಚನೆಗಳು ದೊರೆಯುತ್ತವೆ. ಕನ್ನಡ ಭಾಷಾ ಸಾಹಿತ್ಯಗಳ ಪುನರುಜ್ಜೀವಕ ಮಹನೀಯರಲ್ಲಿ ಗಣ್ಯರಾದ ಬಿ. ಎಂ. ಶ್ರೀಕಂಠಯ್ಯನವರು 'ಕನ್ನಡ ಮಾತು ತಲೆಯೆತ್ತುವ ಬಗೆ' 'ಕನ್ನಡಕ್ಕೆ ಒಂದು ಕಟ್ಟು' 'ಕನ್ನಡದ ಪುನರುಜ್ಜೀವನ'–ಮುಂತಾದ ಕೆಲವು ಉಪನ್ಯಾಸಗಳಲ್ಲಿ (೧೯೧೧ ಮತ್ತು ಸ್ವಲ್ಪ ಈಚೆಗೆ) ಹೊಸಗನ್ನಡ ಭಾಷಾವ್ಯಾಕರಣ ವಿಷಯಕವಾದ ಸಮಸ್ಯೆಗಳನ್ನು ಆಧುನಿಕ ವಿಚಾರದೃಷ್ಟಿಗೆ ಅನುಗುಣವಾಗಿ ಸ್ವತಂತ್ರ ರೀತಿಯಿಂದ ಗಾಢವಾಗಿಯೂ ವಿವರವಾಗಿಯೂ ಚರ್ಚಿಸಿರುವುದು ಕಾಣುತ್ತದೆ.

೨೦ನೆಯ ಶತಮಾನದ ಮೊದಲ ದಶಕದಲ್ಲಿ ಜಾಗ್ರತಗೊಂಡ ಭಾಷಾ-ವ್ಯಾಕರಣ ವಿಷಯಕವಾದ ಸ್ವೈಜ ಪರಿಜ್ಞಾನವು ಹಳೆಯ ಜಾಡಿನಲ್ಲಿದ್ದ ವಿದ್ವಾಂಸರನ್ನು ಕೂಡ ಆಧುನಿಕ ವಿಚಾರ ವೈಖರಿಗೆ ಅನುಗುಣವಾಗಿ ವಿಶೇಷವಾದ ಪರಿಶೀಲನೆ ಸಂಶೋಧನೆ ಗಳಿಗೆ ತೊಡಗುವಂತೆ ಪ್ರೇರಿಸಿತೆನ್ನಬಹುದು. ಇವರಲ್ಲಿ ಆರ್. ರಘುನಾಥರಾಯರು, ಬಿ. ಎಂ. ಶ್ರೀಕಂಠಯ್ಯನವರು, ತೋಗೆರೆ ನಂಜುಂಡ ಶಾಸ್ತ್ರಿಗಳು, ಕಾನಕಾನಹಳ್ಳಿ ವರದಾಚಾರ್ಯರು, ಸಿದ್ಧಾಂತಿ ಶಿವಶಂಕರ ಶಾಸ್ತ್ರಿಗಳು ರಾಜಪುರೋಹಿತ ನಾರಾಯಣಾ ಚಾರ್ಯರು–ಮೊದಲಾದವರ ಹೆಸರುಗಳನ್ನು ಇಲ್ಲಿ ತಪ್ಪದೆ ನೆನೆಯಬೇಕು. ಇವರು ಅಲ್ಲಲ್ಲಿ ಕೊಟ್ಟ ಭಾಷಾಭಿವೃದ್ಧಿಪರವಾದ ಭಾಷಣಗಳಿಂದಲೂ, ಪರಿಷತ್ಪತ್ರಿಕೆ ಪ್ರಬುದ್ಧ ಕರ್ಣಾಟಕ ಮುಂತಾದ ಪತ್ರಿಕೆಗಳಲ್ಲಿ ಬರೆದ ವರ್ಣಸಮಾಮ್ನಾಯ, ಭಾಷಾವಸ್ಥೆಗಳು, ಗ್ರಾಂಥಿಕ ಪ್ರಯೋಗಗಳು, ರೂಢಿಯ ಆಡುಮಾತು, ಪ್ರಚಲಿತವಾದ ಭಾಷೆಗೆ ವ್ಯಾಕರಣದ ಕಟ್ಟು, ದಕ್ಷಿಣೋತ್ತರ ಮಾರ್ಗಗಳು, ನುಡಿಯ ಏಕರೂಪತೆ, ಭಾಷಾಲಿಪಿ, ಶಬ್ದಸಾಧುತ್ವ–ಮುಂತಾದವುಗಳ ಮೇಲಿನ ಭಾಷಾ ವ್ಯಾಕರಣ ವಿಷಯಕ ಸಂಶೋಧನ ಲೇಖನಗಳಿಂದಲೂ, ಮುಂದಿನ ವೈಯಾಕರಣ ಚಟುವಟಿಕೆಗಳಿಗೆ ಪ್ರಚೋದನೆ ದೊರೆಯಿತೆಂದು ಧಾರಾಳವಾಗಿ ಹೇಳಬಹುದು. ಸ್ವತಂತ್ರವಾದ ಇಂಥ ಸಮಾಲೋಚನೆ ಗಳೇ ಅಧಿಕವಾಗಿ ಕಂಡು ಬಂದರೂ ಪ್ರಾಚೀನ ವ್ಯಾಕರಣ ಗ್ರಂಥಗಳ ಪುನರ್ ಮೌಲ್ಯ ಮಾಪನದಂತಹ ಕೆಲಸಗಳೂ ವಿರಳವಾಗಿ ನಡೆದುದಕ್ಕೆ ನಿದರ್ಶನಗಳಿವೆ. ಕೆ. ವರದಾಚಾರ್ ಅವರು ಬರೆದ 'ಕರ್ಣಾಟಕ ಶಬ್ದಾನುಶಾಸನ ತತ್ವಾಲೋಕತರಂಗ'ವೆಂಬ ಒಂದು ಚಿಕ್ಕದಾದ, ಆದರೆ ಅಪೂರ್ಣವಾದ, ಕೃತಿಯನ್ನು ಇಲ್ಲಿ ಉಲ್ಲೇಖಿಸಬಹುದು. ಇದರ ಕೆಲಭಾಗವು 'ಪ್ರಬುದ್ಧ ಕರ್ಣಾಟಕ'ದಲ್ಲಿಯೂ (ಸಂ. ೩–ಸಂ. ೪) ಕರ್ಣಾಟಕ ಸಾಹಿತ್ಯ ಪರಿಷತ್ಪತ್ರಿಕೆಯಲ್ಲಿಯೂ (ಸಂ. ೧–೩, ೪ ; ೧೯೧೬–೧೭) ಅಚ್ಚಾಗಿದೆ. "....ಕರ್ಣಾಟಕ ಶಬ್ದಾನುಶಾಸನವೆಂಬ ಸೂತ್ರಮಾಲೆಗೆ ಭಟ್ಟಾಕಳಂಕದೇವನು

ಕರ್ತೃವಲ್ಲವೆಂಬ ವಿಷಯವನ್ನು ಸ್ಥಿರೀಕರಿಸಲು ಒಂದು ಸಣ್ಣಗ್ರಂಥವನ್ನು ಬರೆಯುವುದೇ...." ಅವರ ಕೃತಿರಚನೆಯ ಉದ್ದೇಶವೆಂಬುದು ಅಚ್ಚಾಗಿರುವ ಭಾಗದಲ್ಲಿಯ ಪ್ರಥಮ ಪರಿಚ್ಛೇದದಿಂದ ತಿಳಿಯುತ್ತದೆ.

೧೯೩೩ ರಷ್ಟು ಹಿಂದೆಯೇ ಆರ್. ವಿ. ಜಹಗೀರ್‌ದಾರ್ ಅವರು ತಮ್ಮ 'ಶಾರದೆಯ ಸಂಸಾರ ಅಥವಾ ಭಾಷಾಶಾಸ್ತ್ರ' ಎಂಬ ಗ್ರಂಥದ ಮೂಲಕವಾಗಿ ಆಧುನಿಕ ಐರೋಪ್ಯ ಭಾಷಾಶಾಸ್ತ್ರದ ರೀತಿಯಲ್ಲಿ ಭಾಷೆಯ ಸಾಮಾನ್ಯ ಸ್ವರೂಪವನ್ನು ಕುರಿತ ಸರಳವಿವೇಚನೆಯನ್ನು ಮೊತ್ತಮೊದಲಿಗೆ ಕನ್ನಡದಲ್ಲಿ ಒದಗಿಸಿದರು. ಭಾಷಾಶಾಸ್ತ್ರವೆಂದರೇನು ?-ಎಂಬುದರ ಬಗೆಗೆ ಸಾಮಾನ್ಯರಿಗೂ ಸುಲಭವಾಗಿ ತಿಳಿಯುವ ರೀತಿಯಲ್ಲಿ ಸರಳವಾಗಿಯೂ ಸರಸವಾಗಿಯೂ ಅಷ್ಟೇಮಟ್ಟಿಗೆ ಸ್ಥೂಲವಾಗಿಯೂ ಇಲ್ಲಿ ವಿಚಾರ ಮಾಡಿದ್ದಾರೆ. ಅವರು ಈ ಗ್ರಂಥವನ್ನು ಬರೆಯುವ ಕಾಲಕ್ಕೆ ಭಾಷಾಶಾಸ್ತ್ರದ ಬಗೆಗೆ ಕನ್ನಡದಲ್ಲಿ ಪ್ರಚಲಿತವಿದ್ದ ಆದರಾಭಿಪ್ರಾಯಗಳು ಎಂತಹವು ಎಂಬ ಬಗೆಗೆ-ಅವರ ಗ್ರಂಥದ ಮುನ್ನುಡಿಯನ್ನು ಓದಿದರೆ ತಿಳಿಯುವುದು ! ಈಗ ಕನ್ನಡ ನಾಡಿನಲ್ಲಿ ಭಾಷಾಶಾಸ್ತ್ರದ ಅಧ್ಯಯನ ಅಧ್ಯಾಪನಾದಿಗಳಿಗೆ ದೊರೆತಿರುವ ಪ್ರಾಮುಖ್ಯವನ್ನು ನೋಡಿದರೆ, ತಜ್ಞರು ಉತ್ಸಾಹದಿಂದ ಭಾಷಾ ವಿಜ್ಞಾನದ ನಾನಾ ವಿಷಯಗಳನ್ನು ಅಧಿಕರಿಸಿ ಗ್ರಂಥಗಳ ರಚನೆ ಪ್ರಕಾಶನಗಳಲ್ಲಿ ತೊಡಗಿರುವುದನ್ನು ನೋಡಿದರೆ, ಅಂದಿಗೂ ಇಂದಿಗೂ ಕಾಲಗತಿಯಲ್ಲಿ ಉಂಟಾಗಿರುವ ದೃಷ್ಟಿಭೇದವು ಮನವರಿಕೆಯಾಗುತ್ತದೆ.

ಕನ್ನಡದ ಆಚಾರ್ಯ ಪುರುಷರಲ್ಲಿ ಅಗ್ರಪಙ್ಕ್ತಿಯಲ್ಲಿರುವ ರಾ. ನರಸಿಂಹಾಚಾರ್ಯರು ಮೈಸೂರು ವಿಶ್ವವಿದ್ಯಾನಿಲಯದ ಆಹ್ವಾನವನ್ನು ಮನ್ನಿಸಿ ೧೯೨೬-೨೭ರಲ್ಲಿ ಮೈಸೂರು ಮತ್ತು ಬೆಂಗಳೂರು ನಗರಗಳಲ್ಲಿ ಇಂಗ್ಲಿಷಿನಲ್ಲಿ ಮಾಡಿದ ಕನ್ನಡ ಭಾಷಾ ಚರಿತ್ರೆಯ ಮೇಲಿನ ಐದು ಉಪನ್ಯಾಸಗಳು (Readership Lectures) ೧೯೩೪ರಲ್ಲಿ ಪುಸ್ತಕರೂಪದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಪ್ರಕಟನೆಯಾಗಿ ಹೊರಬಿದ್ದಿತು. ಇದು ಕನ್ನಡ ಕೈಪಿಡಿಯ ೪ನೆಯ ಭಾಗವಾದ 'ಕನ್ನಡ ಭಾಷೆಯ ಚರಿತ್ರೆ'ಯಂತೆಯೇ ವಿದ್ಯಾರ್ಥಿಗಳಿಗೂ ಅಭ್ಯಾಸಿಗಳಿಗೂ ಒಂದು ಉಪಯುಕ್ತ ಕೈಪಿಡಿಯೇ ಆಗಿದೆ; ಕನ್ನಡೇತರರಾದ ಭಾಷಾ ಕುತೂಹಲಿಗಳಿಗೆ ಒಂದು ಸರಳ ಸಂಕ್ಷಿಪ್ತ ಪ್ರವೇಶಿಕೆಯೂಗಿದೆ. ಇದರ ಐದು ಅಧ್ಯಾಯಗಳಲ್ಲಿ ಭಾಷೆಯ ರಚನೆ ಮತ್ತು ವಿಕಾಸ ಇವನ್ನು ದೃಷ್ಟಿಯಲ್ಲಿರಿಸಿಕೊಂಡು ಕನ್ನಡ ಭಾಷೆಯನ್ನು ವಿವೇಚಿಸಿದ್ದರೂ, ಇದರೊಂದಿಗೆ ಇತರ ದ್ರಾವಿಡಭಾಷೆಗಳ ತುಲನಾತ್ಮಕ ಪರಿಶೀಲನೆಯೂ ಸೇರಿರುವುದು ಗಮನಾರ್ಹವಾಗಿದೆ.

ಮೈಸೂರು ವಿಶ್ವವಿದ್ಯಾನಿಲಯದ 'ಕನ್ನಡ ಕೈಪಿಡಿ'ಯ ೪ನೆಯ ಭಾಗವಾಗಿರುವ 'ಕನ್ನಡ ಭಾಷೆಯ ಚರಿತ್ರೆ' (೧೯೩೬) ಬಿ. ಎಂ. ಶ್ರೀಕಂಠಯ್ಯ ಮತ್ತು ಟಿ. ಎಸ್. ವೆಂಕಣ್ಣಯ್ಯ-ಇವರಿಬ್ಬರ ಸಹರಚನೆಯಾಗಿ ಸಿದ್ಧವಾದ ಒಂದು ಅಚ್ಚುಕಟ್ಟಾದ ಹಾಗೂ ಆದರ್ಶಪ್ರಾಯವಾದ ಕೃತಿ. ಕನ್ನಡ ಭಾಷೆಯ ಚರಿತ್ರೆಯನ್ನು ಸಾಂಪ್ರದಾಯಿಕವಾದ ವ್ಯಾಕರಣದ ನೆಲೆಗಟ್ಟನ್ನು ಪೂರ್ತಿಯಾಗಿ ಬಿಡದೆ, ಆಧುನಿಕ ಭಾಷಾ

ಶಾಸ್ತ್ರದ ತತ್ತ್ವಗಳಿಗನುಸಾರವಾಗಿ ಪರಾಮರ್ಶಿಸಿ, ಬಲುಮಟ್ಟಿಗೆ ನಿಷ್ಕೃಷ್ಟವೂ ಅಭ್ಯಾಸಕ್ಕೆ ಸರಸವೂ ಆಗಿರುವಂತೆ ರಚಿಸಿರುವ ಈ ಕೃತಿ ಕನ್ನಡದ ಭಾಷಾ ವ್ಯಾಕರಣದ ಚಟುವಟಿಕೆಗಳಲ್ಲಿ ಒಂದು ಮೈಲಿಗಲ್ಲು ಎಂದೇ ಹೇಳಬಹುದು. ಇದಕ್ಕೆ ಮೊದಲು ಒಂದು ಕ್ರಮದಲ್ಲಿ ಕನ್ನಡ ಭಾಷೆಯ ಚರಿತ್ರೆಯನ್ನು ಕನ್ನಡದಲ್ಲಿ ಯಾರೂ ಬರೆದಿರಲಿಲ್ಲ. ಈ ಕೃತಿಯು ವಿಷಯ ವಿಭಜನೆಯ ವಿಶಿಷ್ಟರೀತಿಯಿಂದ ನವೀನ ದೃಷ್ಟಿಯ ಪರಿಶೀಲನೆಯಿಂದ ನಿರೂಪಣೆಯಲ್ಲಿಯ ನಿಷ್ಕೃಷ್ಟತೆಯಿಂದ ಮತ್ತು ಸಂಗ್ರಾಹಕತೆಯಿಂದ ಇಂದಿಗೂ ವಿದ್ಯಾರ್ಥಿಗಳಿಗೆ ಮತ್ತು ಅಭ್ಯಾಸಿಗಳಿಗೆ ತುಂಬ ಉಪಯುಕ್ತವೆನಿಸಿದೆ. ಇದರ ೧೧ ಪ್ರಕರಣಗಳಲ್ಲಿ ಕನ್ನಡ ಭಾಷೆಯ ಸ್ವರೂಪ ವಿಶ್ಲೇಷಣೆ ಅತಿ ಸಂಕ್ಷೇಪವಾಗಿ ಬಂದಿದೆ.

೧೯೩೦ರಲ್ಲಿ 'ಕಂನುಡಿಯ ಹುಟ್ಟು' ಎಂಬುದನ್ನೂ ೧೯೪೪ರಲ್ಲಿ 'ಕನ್ನಡ ನುಡಿಯ ಜೀವಾಳ' ಎಂಬುದನ್ನೂ ಬರೆದ ಶಂ. ಬಾ. ಜೋಶಿಯವರು ಉತ್ಕಟ ಭಾಷಾಪ್ರೇಮಿಗಳು. ಈಚೆಗೆ ಅವರ ಈಯೆರಡೂ ಗ್ರಂಥಗಳೂ ಪುನರ್ಮುದ್ರಿತವಾಗಿದೆ (೧೯೬೨, ೧೯೫೬). ಮೊದಲನೆಯ ಗ್ರಂಥದಲ್ಲಿ ಸಮಾಸಗಳು ಮೊದಲುಗೊಂಡು ೯ ಪ್ರಕರಣಗಳಿದ್ದು, ಇಲ್ಲಿ ಶಬ್ದಾರ್ಥಶಾಸ್ತ್ರದ (Semantics) ವಿಧಿವಿಧಾನಗಳನ್ನು ಅನುಸರಿಸಿ ಕನ್ನಡ ಶಬ್ದ ಭಂಡಾರದ ವೈಲಕ್ಷಣ್ಯಗಳನ್ನೆಲ್ಲಾ ಬಿಚ್ಚಿತೋರುವ, ಪೃಥಕ್ಕರಿಸಿ ವಿಮರ್ಶಿಸುವ ಪ್ರಯತ್ನವನ್ನು ಮಾಡಿದೆ. ಹಾಗೆಯೇ ಎರಡನೆಯ ಗ್ರಂಥದಲ್ಲಿ ಮುಖ್ಯವಾಗಿ ಕನ್ನಡ ಭಾಷೆಯಲ್ಲಿರುವ 'ಹುಟ್ಟುನುಡಿ'ಗಳನ್ನು ಬಿಡಿಸಿ ವಿವರಿಸುವ ಇನ್ನೊಂದು ಪ್ರಯತ್ನವನ್ನು ಮಾಡಿದೆ. ಇಂತಹ ಪ್ರಯತ್ನಗಳು ಭಾಷಾಶಾಸ್ತ್ರದ ದೃಷ್ಟಿಯಿಂದ ಸರ್ವಸಮರ್ಪಕವೂ ನಿರ್ದುಷ್ಟವೂ ಆಗಿ ತೋರದಿದ್ದರೂ, ಕಲ್ಪನೆಯ ಕೆಲಸವೂ ಅಷ್ಟಿಷ್ಟು ತೋರಿದರೂ ಈ ದಿಕ್ಕಿನಲ್ಲಿ ವಿಚಾರ ದೃಷ್ಟಿ ಫಲಪ್ರದವಲ್ಲ ಎಂದು ಹೇಳಲಾಗದು. ಶಂ. ಬಾ. ಜೋಶಿಯವರಿಗೆ ಮೊದಲು ಯಾರೂ ಹೀಗೆ ಕನ್ನಡ ಭಾಷೆಯ ಬಗೆಗೆ ವಿಚಾರ ಮಾಡಿರಲಿಲ್ಲವೆಂದು ತೋರುತ್ತದೆ.

೪

ಸ್ಥೂಲವಾಗಿ ಮೇಲಿನ ರೀತಿಯ ವಿಭಾಗಕ್ರಮವನ್ನೇ ಅನುಸರಿಸಿ, ಸು. ೧೯೪೦–೪೫ ರಿಂದೀಚೆಗೆ ನಡೆದಂತಹ ಭಾಷಾವ್ಯಾಕರಣ ರಂಗದ ಚಟುವಟಿಕೆಗಳನ್ನು ಇನ್ನು ಸಂಕ್ಷಿಪ್ತವಾಗಿ ಸಮಾಲೋಚಿಸಲು ತೊಡಗಬಹುದು. ಈ ಸಮಾಲೋಚನೆಯೂ ಕೇವಲ ಪರಿಚಯಾತ್ಮಕವಷ್ಟೇ ಆಗಿರುತ್ತದೆ.

(೧) ೧೯ನೆಯ ಶತಮಾನದಲ್ಲಿ ರಚಿತವಾದ ವಿಪುಲ ಸಂಖ್ಯೆಯ ಹಾಗೂ ವಿವಿಧ ದೃಷ್ಟಿಯ ಅಭ್ಯಾಸೀ ವ್ಯಾಕರಣಗಳೂ ಶಾಲಾವ್ಯಾಕರಣಗಳೂ ೨೦ನೆಯ ಶತಮಾನಾವಧಿಯಲ್ಲಿ ರಚಿತವಾಗಲಿಲ್ಲವೆಂಬುದು ಗಮನಿಸಬೇಕಾದ ವಿಷಯ. ಈ ಶತಮಾನವು ಸರಳ ಸಂಕ್ಷಿಪ್ತ ಮತ್ತು ನಿರ್ದುಷ್ಟರೀತಿಯ ವ್ಯಾಕರಣಗಳ ರಚನೆಗೆ

ಗುಣ-ಗಾತ್ರಗಳ ದೃಷ್ಟಿಯಿಂದ ಪ್ರಾಯಃ ಇಳಿಗಾಲವಿರುವಂತೆ ತೋರುತ್ತದೆ. ೧೯ನೆಯ ಶತಮಾನದಲ್ಲಿ ಸರಳ ವ್ಯಾಕರಣಗಳನ್ನು ಹೆಚ್ಚಾಗಿ ರಚಿಸಿದುದಕ್ಕೆ, ಆರಂಭದಲ್ಲಿ ಹೊಸಗನ್ನಡ ಭಾಷೆಗಾಗಿ ಬರೆದ ವ್ಯಾಕರಣಗಳ ಕೊರತೆಯಿದ್ದಿತೆಂಬುದು ಒಂದು ಕಾರಣವಾದರೆ, ಅಂದಿನ ಸಾಹಿತ್ಯಾಭ್ಯಾಸಪದ್ಧತಿಯಲ್ಲಿ ವ್ಯಾಕರಣ ಪಾಠಕ್ಕೆ ತಕ್ಕಮಟ್ಟಿಗೆ ಪ್ರಾಮುಖ್ಯವಿದ್ದಿತೆಂಬುದು ಇನ್ನೊಂದು ಕಾರಣ. ಆದರೆ ಇವುಗಳಿಗಿಂತ ಹೆಚ್ಚಾಗಿ ಕ್ರೈಸ್ತ ಮಿಷನರಿಗಳು ಆರಂಭಕಾಲದಲ್ಲಿ ವ್ಯಾಕರಣ ರಚನೆಗೆ ತೋರಿದ ಉತ್ಸಾಹವು, ಶಾಸ್ತ್ರ ಸಂಪ್ರದಾಯದಲ್ಲಿ ಶ್ರದ್ಧೆಯಿದ್ದ ದೇಶೀಯ ಪಂಡಿತರಿಗೆ ಆದರ್ಶಪ್ರಾಯವಾಯಿತೆಂಬುದೂ ಕನ್ನಡದ ವಿಭಿನ್ನ ಪ್ರದೇಶಗಳಿಗೆ ಸೇರಿದ ಅಂತಹ ಪಂಡಿತರು ಆಯಾ ಪ್ರದೇಶಗಳ ನುಡಿಯ ಜಾಯಮಾನವನ್ನು ಹಿಡಿದು ತಮ್ಮ ತಮ್ಮ ಕಡೆಯ ಶಾಲೆಗಳಲ್ಲಿ ವ್ಯಾಕರಣ ಪಾಠದ ಪೂರೈಕೆಯ ಅಗತ್ಯವನ್ನು ಮನಗಂಡು ಹೊಸಗನ್ನಡ ವ್ಯಾಕರಣದ ಸರಳ ಕೈಪಿಡಿಗಳನ್ನು ವಿಶೇಷವಾಗಿ ಬರೆದರೆಂಬುದೂ ನೆನೆಯತಕ್ಕುದ್ದಾಗಿದೆ. ಕೆಲವು ವ್ಯಾಕರಣಗಳಂತೂ ಹಲವಾರು ಬಾರಿ ಪುನರ್ಮುದ್ರಿತಗಳಾಗಿವೆ, ಸಹಸ್ರಾರು ಪ್ರತಿಗಳು ಅಚ್ಚಾಗಿವೆ. ಪ್ರಸ್ತುತ ಸಂದರ್ಭದಲ್ಲಿ, ಮೊದಮೊದಲು ಕೆಲಮಟ್ಟಿಗೆ ಶಾಲಾಮಟ್ಟದಲ್ಲಿ ವ್ಯಾಕರಣಬೋಧೆಗೆ ಅನುಕೂಲವಾಗುವಂತಹ ಕೈಪಿಡಿಗಳನ್ನು ಶಾಲೆಗಳಲ್ಲಿ ಉದ್ಯೋಗಸ್ಥರಾದ ಕೆಲವರು ಕನ್ನಡ ಪಂಡಿತರು ವೈಯಕ್ತಿಕವಾಗಿ ರಚಿಸಿದರಾದರೂ, ಬರುಬರುತ್ತ ಅವುಗಳಲ್ಲಿ ಗ್ರಂಥದಿಂದ ಗ್ರಂಥಕ್ಕೆ ನಿರೂಪಣ ಕ್ರಮದಲ್ಲಿನ ವ್ಯತ್ಯಾಸ ವೈಪರೀತ್ಯಗಳು, ಪ್ರಾಂತಭೇದ ವೈಚಿತ್ರ್ಯಗಳು-ಮುಂತಾದವು ಅಧಿಕವಾಗುತ್ತ ಹೋದದ್ದು, ಹಳೆಯ ಪುಸ್ತಕಗಳ ಆತುರದ ಅನುಕರಣೆಗಳು, ಸರ್ಕಾರದ ಮನ್ನಣೆಯನ್ನು ಗಳಿಸಲೆಂದು ಅವಸರದಲ್ಲಿ ಸಿದ್ಧಪಡಿಸಿದ ಅಸ್ತವ್ಯಸ್ತರಚನೆಗಳು-ಮುಂತಾದುವು ಬೆಳೆಯುತ್ತಾ ಹೋದದ್ದು-ಇಂತಹವು ಕಾರಣವಾಗಿ ಸರ್ಕಾರವು ಪಠ್ಯನಿಯಾಮಕ ಸಮಿತಿಗಳ ಮೂಲಕವಾಗಿ ತನ್ನವೇ ಆದ ವ್ಯಾಕರಣಗಳನ್ನು ಬರಸಿ ಶಾಲೆಗಳಿಗೆ ವಿಧಿಸುವುದು ಅತ್ಯಾವಶ್ಯಕವಾದಂತೆ ತೋರುತ್ತದೆ. ಅಲ್ಲದೆ ಈಚಿನ ಸಾಹಿತ್ಯಾಭ್ಯಾಸ ಪದ್ಧತಿಯಲ್ಲಿ ವ್ಯಾಕರಣಪಾಠ ಅತ್ಯಂತ ಉಪೇಕ್ಷಿತವೂ ಕೇವಲ ಔಪಚಾರಿಕವೂ ಆಗಿ ಪರಿಣಮಿಸಿದ್ದು ಕೂಡ ವ್ಯಾಕರಣ ರಚನೆಗೆ ಬಿದ್ದ ದೊಡ್ಡ ಪೆಟ್ಟೇ ಎನ್ನಬಹುದು. ಇದರ ಜತೆಗೆ ಹೆಚ್ಚು ಜನ ಲೇಖಕ ಪಂಡಿತರಿಗೆ ಆರ್ಥಿಕ ನೆರವು ದೊರೆಯಲೆಂದೋ ಏನೋ ಬೇರೆ ಬೇರೆ ಜಿಲ್ಲೆಗಳಿಗೆ ಬೇರೆ ಬೇರೆಯವರು ಬರೆದ ವ್ಯಾಕರಣಗಳನ್ನು ಪಠ್ಯ ಪುಸ್ತಕಗಳಾಗಿ ನಿಯಮಿಸುವುದು, ವ್ಯಾಕರಣದ ಪಾಠಗಳನ್ನು ಸರಳಗೊಳಿಸಲು ಪಾಠಪಟ್ಟಿಗೆ ಅನುಗುಣವಾಗಿ ವಿಷಯಗಳನ್ನು ಹಂಚಿ ಅಭ್ಯಾಸಕ್ಕೆ ನಿಯಮಿಸುವುದು-ಇವು ಕೂಡ ರೂಢಿಯಲ್ಲಿರುವಂತೆ ತೋರುತ್ತದೆ. ಇವುಗಳ ಉದ್ದೇಶದ ಸಾಧುತ್ವವೇನೇ ಇರಲಿ, ಈವರೆಗೆ ವಿದ್ಯಾರ್ಥಿಗಳಿಗೆ ಭಾಷಾಸ್ವರೂಪಜ್ಞಾನದ ಬಗೆಗೆ ಆಸಕ್ತಿ ಕುತೂಹಲಗಳನ್ನು ಉಂಟುಮಾಡುವ ಪ್ರಯತ್ನಗಳು ಅಷ್ಟಾಗಿ ನಡೆದಿರುವಂತೆ ತೋರುವುದಿಲ್ಲ.

ಶಾಲಾ ವ್ಯಾಕರಣಗಳ ರಚನೆಯ ಬಗೆಗೆ ಬಂದಿರುವ ಈ ಅಭಿಪ್ರಾಯವು ವಸ್ತು

ಸ್ಥಿತಿಯನ್ನು ಬಲುಮಟ್ಟಿಗೆ ಸ್ಪಷ್ಟವಾಗಿಯೇ ತಿಳಿಸುತ್ತದೆಯೆನ್ನಬಹುದು: "ಹೆಚ್ಚು ಸಂಖ್ಯೆಯ ಪ್ರಕಟಣೆಗಳು ಶಾಲಾವ್ಯಾಕರಣದ ವಿಭಾಗದಲ್ಲಿಯೇ ಸೇರಿಕೊಳ್ಳುತ್ತವೆ. ಆದರೆ, ದುರದೃಷ್ಟವಶಾತ್, ಇವುಗಳಲ್ಲಿ ಹಲವು ತೇಪೆಯ ಕೆಲಸಗಳು; ನಿಷ್ಪ್ರಯೋಜಕವಾದವು; ಹೆಸರಿಸಲೂ ಅನರ್ಹವಾದವು. ಈ ವ್ಯಾಕರಣಗಳು ಸರ್ಕಾರ ನೇಮಿಸಿದ ಸಮಿತಿಗಳಿಂದಲೋ ಪಂಡಿತರುಗಳಿಂದಲೋ ರಚಿತವಾದವು. ಅವು ವಿದ್ಯಾಭ್ಯಾಸ ಇಲಾಖೆಯವರು ಗೊತ್ತುಪಡಿಸುವ ಪಠ್ಯಕ್ರಮದ ಚೌಕಟ್ಟಿಗೆ ಅನುಗುಣವಾಗಿ ನಿರ್ಮಿತವಾದವು. ವ್ಯಾಕರಣ ಶುಷ್ಕವೂ, ಕಠಿಣವೂ ಆದ ವಿಷಯವೆಂಬ ತಿಳಿವಳಿಕೆಯನ್ನು ಹೊಂದಿದ ಈ ವ್ಯಾಕರಣಗಳ ಲೇಖಕರು ವಿಷಯಗಳನ್ನು ಅತಿ ಸರಳಗೊಳಿಸಿದರು. ಅಲ್ಲದೆ ಅವರು ಭಾಷೆಯ ಇತಿಹಾಸವನ್ನಾಗಲಿ, ರಚನೆಯನ್ನಾಗಲಿ ಗಮನಿಸಲೇ ಇಲ್ಲ. ಅವರಿಗೆ ವ್ಯಾಕರಣವೆಂದರೆ ಶಾಲೆಗಳ ಪಠ್ಯಕ್ರಮದ ಒಂದು ವಿಷಯ ಮಾತ್ರವಲ್ಲದೆ ಇನ್ನೇನೂ ಅಲ್ಲ. ಪಠ್ಯಕ್ರಮವನ್ನು ಪೂರ್ಣಗೊಳಿಸುವ ದೃಷ್ಟಿಯಿಂದ ಅದು ವಾಕ್ಯರಚನೆ (Composition)ಯ ಕೆಲವು ಪಾಠಗಳನ್ನೂ ಛಂದಸ್ಸಿನ ಕೆಲವು ಅಭ್ಯಾಸ (Exercise) ಗಳನ್ನೂ ಒಳಗೊಂಡಿರಲೇಬೇಕು. ವ್ಯಾಕರಣಗಳ ರಚನೆಯಲ್ಲಿ ತಾವು ನವವಿಧಾನವನ್ನು ಅನುಸರಿಸಿರುವುದಾಗಿ ಕೂಡ ಕೆಲವು ಲೇಖಕರು ಹೇಳಿಕೊಂಡಿರುವುದುಂಟು. ಆದರೆ ಅವರ ಕೃತಿಗಳಲ್ಲಿ ನವೀನವಾದುದೇನನ್ನೂ ನಾವು ಕಾಣೆವು...."[6]

ಈ ಅವಧಿಯ ಕೆಲವು ಶಾಲಾವ್ಯಾಕರಣಗಳನ್ನು ಇಲ್ಲಿ ಪಟ್ಟಿಮಾಡಿದೆ: ಬಿ. ಚಿಕ್ಕಣ್ಣಯ್ಯ: 'ಸಚಿತ್ರ ಕನ್ನಡ ವ್ಯಾಕರಣಪಾಠಗಳು' (೧೯೪೭); ಪಂಡಿತ ತಿರು ಶ್ರೀನಿವಾಸಾಚಾರ್ಯ: 'ವ್ಯಾಕರಣಸಾರ' (೧೯೪೭); ಎಸ್. ಹನುಮಂತಪ್ಪ: 'ಕನ್ನಡ ನುಡಿಗನ್ನಡಿ' (೧೯೪೭); ವಿದ್ವಾನ್ ಪುತ್ತೂರು ಪುಟ್ಟಣಸೆಟ್ಟಿ: 'ವ್ಯಾಕರಣ ಮತ್ತು ಪ್ರಬಂಧ' (೧೯೫೦); ಡಿ. ಗಂಗರಾಜು: 'ಹೊಸಗನ್ನಡ ವ್ಯಾಕರಣ ಮತ್ತು ವಾಕ್ಯರಚನೆ' (೧೯೫೯); ಎ. ಕೆ. ಪುಟ್ಟರಾಮು: 'ವಾಕ್ಸುಧೆ' (೧೯೬೧); ಎಲ್. ಗುಂಡಪ್ಪ ಮತ್ತು ಪಂಡಿತ ಕೆ. ಹನುಮಂತರಾಯರು: 'ಕನ್ನಡ ವ್ಯಾಕರಣ ಪಾಠಗಳು ಮತ್ತು ಪ್ರಬಂಧರಚನೆ' ಭಾಗ ೧ (೧೯೬೧); ಎಲ್. ಗುಂಡಪ್ಪ: 'ಕನ್ನಡ ವ್ಯಾಕರಣ ಪಾಠಗಳು' ಭಾಗ ೨ (೧೯೬೧) ಇತ್ಯಾದಿ. ಹೀಗೆಯೇ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಂ. ಎನ್. ಕಾಮತ್, ಕಯ್ಯಾರ ಕಿಞ್ಞಣ್ಣ ರೈ, ಉಗ್ರಾಣ ಮಂಗೇಶರಾವ್, ಎಚ್. ಎ. ಪದ್ಮನಾಭಭಟ್ಟ, ಎಸ್. ನಾರಾಯಣಭಟ್ಟ ಮತ್ತು ಇತರರು ಕೆಲವು ಶಾಲಾವ್ಯಾಕರಣಗಳನ್ನು ರಚಿಸಿರುವ ಹಾಗೆ ತಿಳಿದು ಬರುತ್ತದೆ.

(೨) ಪ್ರೌಢವ್ಯಾಕರಣಗಳ ಶ್ರೇಣಿಯಲ್ಲಿ ಸೇರತಕ್ಕ ಗಣ್ಯವಾದ ಯಾವುದೇ ಕೃತಿ ಈ ಕಾಲಾವಧಿಯಲ್ಲಿ ರಚಿತವಾದಂತೆ ತೋರುವುದಿಲ್ಲ. ಸ್ಪೆನ್ಸರ್ ಅವರ ಇಂಗ್ಲಿಷ್ ಭಾಷೆಯಲ್ಲಿರುವ ಕನ್ನಡ ವ್ಯಾಕರಣವು (೧೯೧೪) ಡಬ್ಲ್ಯೂ. ಪರ್ಸ್ಟನ್ ಅವರಿಂದ

---

[6] ಅದೇ: ಪು. ೧೩೪,೧೩೯.

೧೯೫೦ರಲ್ಲಿ ಪರಿಷ್ಕೃತವಾಗಿ ಪ್ರಕಟವಾಯಿತೆಂಬುದನ್ನು ಹಿಂದೆಯೇ ಹೇಳಿದೆ. ಈಚಿನ ಕಾಲದ ಆವಶ್ಯಕತೆ ಉಪಯುಕ್ತತೆಗಳನ್ನು ಮನಗಂಡು ಈ ಪರಿಷ್ಕರಣದಲ್ಲಿ ಅಗತ್ಯವಾದ ಕೆಲವು ಮಾರ್ಪಾಡುಗಳನ್ನೂ ಮೇಲ್ಪಾಡುಗಳನ್ನೂ ಸೇರ್ಪಡೆಗಳನ್ನೂ ಮಾಡಿದೆ. ಈ ಪರಿಷ್ಕರಣದ ಸ್ವರೂಪವನ್ನು ಪರಿಷ್ಕರ್ತರು ಮುನ್ನುಡಿಯಲ್ಲಿ ವಿಶದಪಡಿಸಿದ್ದಾರೆ.

(೩) ಪ್ರಾಚೀನ ವ್ಯಾಕರಣಗ್ರಂಥಗಳ ಸಂಪಾದನೆಗೆ ಸಂಬಂಧಿಸಿದಂತೆಯೂ ೧೯೪೦ರ ಪೂರ್ವದಲ್ಲಿ ನಡೆದಿರುವ ರೀತಿಯ ಮತ್ತು ಪ್ರಮಾಣದ ಕಾರ್ಯಗಳು ಈ ಕಾಲ ಮಾನಾವಧಿಯಲ್ಲಿ ನಡೆದಿಲ್ಲವೆನ್ನಬಹುದು. ನಡೆದಿರುವಷ್ಟು ಕೆಲಸದ ಒಂದು ಸಂಕ್ಷಿಪ್ತ ಸಮೀಕ್ಷೆಯನ್ನು ಇಲ್ಲಿ ಕೊಡಬಹುದು. ಬಿ. ಲೂಯಿ ರೈಸ್ ಅವರು ೧೮೮೪ರಲ್ಲಿ ನಾಗವರ್ಮನ 'ಕರ್ಣಾಟಕ ಭಾಷಾಭೂಷಣ'ವನ್ನು ಪ್ರಥಮ ಬಾರಿಗೆ ಪರಿಷ್ಕರಿಸಿ ಪ್ರಕಟಿಸಿದ ಮೇಲೆ, ಆ ಗ್ರಂಥವು ಎರಡನೆಯ ಬಾರಿಗೆ ಯಾರಿಂದಲೂ ಸಂಪಾದಿತವಾಗಿಲ್ಲ, ಮುದ್ರಿತವಾಗಿಲ್ಲ. 'ಶಬ್ದಸ್ಮೃತಿ' ಇತ್ತೀಚೆಗೆ ೧೯೭೭ರಲ್ಲಿ ಎಚ್. ದೇವೀರಪ್ಪನವರ ಪ್ರಧಾನ ಸಂಪಾದಕತ್ವದಲ್ಲಿ ಮೈಸೂರು ವಿಶ್ವವಿದ್ಯಾನಿಲಯದಿಂದ ಪ್ರಕಟವಾಗಿರುವ 'ಕಾವ್ಯಾವಲೋಕನ'ದಲ್ಲಿ ಸೇರಿಕೊಂಡು ಬಂದಿದೆ. ಇದು 'ಕಾವ್ಯಾವಲೋಕನ'ದ ಪುನರ್ಮುದ್ರಣವೇ ಆಗದೆ, ಎರಡು ಬೇರೆ ಓಲೆ ಪ್ರತಿಗಳನ್ನು ಇದರಲ್ಲಿ ಉಪಯೋಗಿಸಿ ಕೊಂಡಿರುವುದಾಗಿಯೂ ತಿಳಿಯುವುದರಿಂದ 'ಶಬ್ದಸ್ಮೃತಿ'ಯ ಪದ್ಯಪಾಠದಲ್ಲಿಯೂ ಅಲ್ಲಲ್ಲಿ ಉಪಯುಕ್ತ ತಿದ್ದುಪಡಿಗಳಾಗಿರುವ ಸಂಭವವಿದೆ.

'ಶಬ್ದಮಣಿದರ್ಪಣ'ವು ಕನ್ನಡ ಬಿ. ಎ., ಎಂ. ಎ., ಮತ್ತು ಸಂಶೋಧನ ವಿದ್ಯಾರ್ಥಿಗಳಿಗೂ ಇತರ ವಿದ್ಯಾರ್ಥಿಗಳಿಗೂ ಅಭ್ಯಾಸಿವರ್ಗದವರಿಗೂ ಅತ್ಯಾವಶ್ಯಕವಾದ ವ್ಯಾಕರಣ ಗ್ರಂಥವಾದುದರಿಂದ, ೧೯೨೦ರ ಮಂಗಳೂರು ಮುದ್ರಣದ ಅನಂತರದಲ್ಲಿ ಅದು ಮುದ್ರಿತವಾಗದೆ ಎಲ್ಲಾ ಪರಿಷ್ಕರಣಗಳ ಹಳೆಯ ಮುದ್ರಣಗಳ ಪ್ರತಿಗಳೆಲ್ಲಾ ಮುಗಿದು ಹೋಗಿ ಅಭ್ಯಾಸಕ್ಕೆ ತೊಂದರೆಯಾಗಿದ್ದುದರಿಂದ ಅದರ ಪ್ರಕಟನೆಯ ಕಾರ್ಯವು ಅತ್ಯಗತ್ಯವಾಗಿದ್ದಿತು. "ವಿದ್ಯಾರ್ಥಿಗಳ ಸೌಕರ್ಯಕ್ಕಾಗಿ 'ಶಬ್ದಮಣಿದರ್ಪಣ'ದ ಒಂದು ತಾತ್ಕಾಲಿಕ ಪರಿಷ್ಕರಣ"ವನ್ನಾದರೂ ಸಿದ್ಧಗೊಳಿಸುವುದು ಕನಿಷ್ಠ ಪೂರೈಕೆ ಯಾಗಿದ್ದಿತು. ಈ ಉದ್ದೇಶದಿಂದ ಪ್ರೇರಿತರಾಗಿ ಪ್ರೊ. ಡಿ. ಎಲ್. ನರಸಿಂಹಾಚಾರ್ ಅವರು 'ಶಬ್ದಮಣಿದರ್ಪಣ'ವನ್ನು ವಿದ್ವತ್ಪೂರ್ಣವಾಗಿ ಸಂಪಾದಿಸಲು, ಅದು ಮೈಸೂರು ಶಾರದಾಮಂದಿರದ ಕನ್ನಡ ಕವಿಕಾವ್ಯಮಾಲೆಯ ೬೪ನೆಯ ಗ್ರಂಥವಾಗಿ ೧೯೫೫ರಲ್ಲಿ ಪ್ರಕಟವಾಯಿತು. ಎರಡು ಓಲೆಯ ಪ್ರತಿಗಳ ಮತ್ತು ಎರಡು ಮುದ್ರಿತ ಪ್ರತಿಗಳ ಆಧಾರದ ಮೇಲೆ ಅವರು ತಮ್ಮ ಪರಿಷ್ಕರಣವನ್ನು ಸಿದ್ಧಪಡಿಸಿದ್ದಾರೆ. ಮುದ್ರಿತ ಪ್ರತಿಗಳಲ್ಲಿ ಒಂದು, ೧೯೨೦ರಲ್ಲಿ ಪ್ರಕಟವಾದ ಕಿಟ್ಟೆಲ್ ಅವರ ಪರಿಷ್ಕರಣದ ಮೂರನೆಯ ಆವೃತ್ತಿ (ಇದೇ ಪ್ರತಿಯ ಪಾಠವನ್ನೂ ಕ್ರಮವನ್ನೂ ಪ್ರಕೃತ ಮುದ್ರಣಕ್ಕೆ ಆಧಾರ ವಾಗಿ ಸ್ವೀಕರಿಸಿರುವುದಾಗಿ ಅವರು ಪ್ರಸ್ತಾವನೆಯಲ್ಲಿ ಹೇಳಿರುತ್ತಾರೆ); ಇನ್ನೊಂದು, ೧೯೨೦ರಲ್ಲಿಯೇ ಕರ್ಣಾಟಕ ಸಾಹಿತ್ಯ ಪರಿಷತ್ತಿನಿಂದ ಪ್ರಕಟವಾದುದು. ಪ್ರೊ.

ಡಿ. ಎಲ್. ನರಸಿಂಹಾಚಾರ್ ಅವರು ತಮ್ಮ ಪರಿಷ್ಕರಣದ 'ಪ್ರಸ್ತಾವನೆ'ಯಲ್ಲಿ ಇದುವರೆಗಿನ ಎಲ್ಲಾ 'ಶಬ್ದಮಣಿದರ್ಪಣ'ದ ಪರಿಷ್ಕರಣಗಳ ಸ್ವರೂಪ ಪರಿಚಯವನ್ನೂ, ತಮ್ಮ ಪರಿಷ್ಕರಣಕ್ಕೆ ಬಳಸಿಕೊಂಡಿರುವ ನಾಲ್ಕು ಪ್ರತಿಗಳ ವಿಶದ ವಿವರಣೆಯನ್ನೂ, ಸೂತ್ರ-ವೃತ್ತಿ-ಪ್ರಯೋಗಗಳಿಗೆ ಸಂಬಂಧಿಸಿದ ಪಾಠ ಸಮಸ್ಯೆಗಳ ಪರಿಶೀಲನೆಯನ್ನೂ, ಮೂಲಪಾಠ ನಿರ್ಣಯ, ಪ್ರಯೋಗಗಳ ಆಕರ, ಕೇಶಿರಾಜನ ವ್ಯಕ್ತಿತ್ವ ಮತ್ತು ಪ್ರಕೃತ ಮುದ್ರಣದ ಸ್ಥೂಲ ಸ್ವರೂಪ-ಇವುಗಳ ಸಂಕ್ಷಿಪ್ತ ವಿವೇಚನೆಯನ್ನೂ ಮಾಡಿರುತ್ತಾರೆ. ಪೂರ್ವೋಕ್ತ ಪ್ರಕಟನಾಲಯದಿಂದಲೇ ಈ ಪರಿಷ್ಕರಣದ ೨ನೆಯ ಮತ್ತು ೩ನೆಯ ಮುದ್ರಣಗಳು ೧೯೬೪ರಲ್ಲಿ ಮತ್ತು ೧೯೬೮ರಲ್ಲಿ ಹೊರ ಬಂದಿವೆ. ಈ ಮತ್ತಿನ ಮುದ್ರಣಗಳಲ್ಲಿ ಗ್ರಂಥದ ಉಪಯುಕ್ತತೆಯನ್ನೂ ನಿರ್ದುಷ್ಟತೆಯನ್ನೂ ಹೆಚ್ಚಿಸುವ ದೃಷ್ಟಿಯಿಂದ ಕೆಲವು ಗಮನಾರ್ಹವಾದ ಸೇರ್ಪಡೆಗಳನ್ನೂ ಮಾರ್ಪಾಡುಗಳನ್ನೂ ಹೊಸದಾಗಿ ಮಾಡಿರುವುದು ಕಂಡು ಬರುತ್ತದೆ. ಈ ಮೂರು ಪರಿಷ್ಕರಣಗಳೂ 'ಶಬ್ದಮಣಿದರ್ಪಣ'ದ ಹಿಂದಿನ ಪರಿಷ್ಕರಣಗಳನ್ನು ನಿಸ್ಸಂದೇಹವಾಗಿ ಅನೇಕಾಂಶಗಳಲ್ಲಿ ಉತ್ತಮಗೊಳಿಸಿದೆಯೆಂಬುದು ಗ್ರಂಥದ ಪರಿಶೀಲನೆಯಿಂದ ಸ್ಪಷ್ಟಪಡುತ್ತದೆ. 'ಶಬ್ದಮಣಿದರ್ಪಣ'ದ ಪಾಠ ಸಮಸ್ಯೆಗಳ ದೃಷ್ಟಿಯಿಂದ ಈ ಗ್ರಂಥದ ಪ್ರಸ್ತಾವನೆ ಅಮೂಲ್ಯವಾದದ್ದಾಗಿದೆ. ಇತ್ತೀಚೆಗೆ ಮೂರನೆಯ ಮುದ್ರಣದ ಬಗೆಗೆ ಬರೆಯುತ್ತ ಸಂಪಾದಕರು "ಪ್ರಕೃತ ಮುದ್ರಣದ ಪಾಠ ಎಲ್ಲ ಪ್ರತಿಗಳ ಉತ್ತಮಾಂಶಗಳನ್ನು ಒಳಕೊಂಡ ಒಂದು ಸಮ್ಮಿಶ್ರ ಪಾಠ (Eclectic text) ವಾಗಿ ಪರಿಣಮಿಸಿದೆ. ಇದು ಕೇಶಿರಾಜನ ಹಸ್ತಪ್ರತಿಯ ಪ್ರತಿಬಿಂಬವಲ್ಲ; ಅದಕ್ಕೆ ಸಮೀಪತಮವಾದ ಪಾಠವೂ ಆಗಿಲ್ಲ. ಇತರ ಮುದ್ರಣಗಳಂತೆ ಇದೂ ಒಂದು ಮುದ್ರಣ, ಅಷ್ಟೆ. ಓದುವುದಕ್ಕೂ ವಿಷಯ ಗ್ರಹಣಕ್ಕೂ ಅನುಕೂಲವಾಗಿರುವ ಒಂದು ಪರಿಷ್ಕರಣ"—ಎಂಬುದಾಗಿ ಬರೆದಿರುವುದು ಗಮನಾರ್ಹವಾಗಿದೆ.

'ವಾಗ್ಭೂಷಣ' ಗ್ರಂಥಮಾಲೆಯಲ್ಲಿ 'ಕರ್ಣಾಟಕ ಶಬ್ದಾನುಶಾಸನ' ಪ್ರಕಟವಾದ ೩೨ ವರ್ಷಗಳ ಅನಂತರದಲ್ಲಿ, ೧೯೪೧ರಲ್ಲಿ 'ಕರ್ಣಾಟಕ ಶಬ್ದಾನುಶಾಸನ ಪ್ರಕಾಶಿಕೆ' ಎಂಬ ಹೆಸರಿಂದ ಅದರ 'ನೂತನ ಪರಿಷ್ಕರಣ'ವು ಶಿ. ಶಿ. ಬಸವನಾಳರಿಂದ ಸಂಪಾದಿತವಾಗಿ ಧಾರವಾಡದಿಂದ ಪ್ರಕಟಗೊಂಡಿತು. ಕೊನೆಯ ೧೨೦ ಸೂತ್ರಗಳಿಗೆ ಪಂಡಿತ ಮ. ಪ್ರ. ಪೂಜಾರರ ಟೀಕೆ ಟಿಪ್ಪಣಿಗಳು ಸೇರಿಕೊಂಡಿರುವುದು ಈ ಪರಿಷ್ಕರಣದ ವಿಶೇಷ. ಗ್ರಂಥಕ್ಕೆ ಒಂದು ಲಘು ಪ್ರಸ್ತಾವನೆಯೂ 'ಪ್ರಕಾಶಿಕಾ'ಕರ್ತೃ ಕುಂಡಲಗಿರಿ ಆಚಾರ್ಯರ ಅಲ್ಪ ಪರಿಚಯವೂ ಸೇರಿದೆ (ಇವರ ಬಗೆಗೆ ವೈಯಕ್ತಿಕ ವಿವರಗಳು ೧೯೦೮ರ 'ಪ್ರಕಾಶಿಕಾ' ಮುದ್ರಣದ ಪೀಠಿಕೆಯಲ್ಲಿಯೇ ದೊರೆಯುತ್ತವೆ). ಗ್ರಂಥವು ಸೊಗಸಾದ ರೀತಿಯಲ್ಲಿ ಮುದ್ರಿತವಾಗಿದೆ. ಇದರ ಅನಂತರದಲ್ಲಿ ೨೭ ವರ್ಷಗಳು ದಾಟಿದ ಮೇಲೆ, ಈಗ ಮತ್ತೆ ೧೯೬೮ರಲ್ಲಿ, ಇದೇ ಗ್ರಂಥವು ಭುವನಹಳ್ಳಿ ಡಿ. ಪದ್ಮನಾಭ ಶರ್ಮರ 'ನಲ್ನುಡಿಗನ್ನಡ' ಎಂಬ ಕನ್ನಡ ವ್ಯಾಖ್ಯಾನದೊಡನೆ ಬೆಂಗಳೂರಿಂದ

ಪ್ರಕಟಗೊಂಡಿದೆ. ವ್ಯಾಖ್ಯಾತೃಗಳು ತಮ್ಮ ವ್ಯಾಖ್ಯಾನ ರಚನೆಗೆ ಹಿನ್ನೆಲೆಯನ್ನು ಹೀಗೆ ಹೇಳಿದ್ದಾರೆ: "ಮತ್ತೊಂದು ಕನ್ನಡದ ವ್ಯಾಖ್ಯಾನ ಕುಂಡಲಗಿರಿಯಾಚಾರ್ಯರ 'ಕರ್ಣಾಟಕ ಶಬ್ದಾನುಶಾಸನ ಪ್ರಕಾಶಿಕೆ'. ಇದು ಹಲವಾರು ಪ್ರಾಚೀನ ಸಂಸ್ಕೃತ ವ್ಯಾಕರಣಗಳ ತುಲನಾತ್ಮಕ ಅಧ್ಯಯನದ ದೃಷ್ಟಿಯಿಂದ ರಚಿತವಾಗಿದ್ದ ವಿಸ್ತೃತ ವ್ಯಾಖ್ಯಾನ. ಎರಡು ವರ್ಷಗಳ ಅವಧಿಯಲ್ಲಿ ಇದನ್ನು ಓದಿ ಮುಗಿಸುವುದು ಬಾಲ ಬುದ್ಧಿಯ ವಿದ್ಯಾರ್ಥಿಗಳಿಗೆ ಕಷ್ಟ ಪ್ರಯತ್ನ ಲಭ್ಯವಾಗಿತ್ತು. ಆದುದರಿಂದ ವಿದ್ಯಾರ್ಥಿ ಗಳಿಗೆ ಅನುಕೂಲವಾಗುವಂತೆ ಸಂಪೂರ್ಣವಾಗಿ ಕನ್ನಡದಲ್ಲಿ ವ್ಯಾಖ್ಯಾನವನ್ನು ಬರೆಯ ಬೇಕೆಂಬ ಅಪೇಕ್ಷೆ ನನ್ನಲ್ಲಿ ಮೂಡಿತು". ಇಲ್ಲಿಯ ಪ್ರಾಗ್ವಿಷಯ ದಿಗ್ದರ್ಶನವೆಂಬ ಉಪೋದ್ಘಾತವೂ ಪರಿಶಿಷ್ಟಗಳೂ ಗ್ರಂಥಾಭ್ಯಾಸಕ್ಕೆ ಉಪಯುಕ್ತವಾದವಾಗಿವೆ. 'ಶಬ್ದಾನುಶಾಸನ'ದ ಇನ್ನೂ ಒಂದು ಪರಿಷ್ಕರಣವು ಪ್ರೊ. ಟಿ. ಎಸ್. ಶಾಮರಾವ್ ಅವರ ಸಂಪಾದಕತ್ವದಲ್ಲಿ ಸಿದ್ಧವಾಗುತ್ತಿದೆಯೆಂದು ತಿಳಿದು ಬಂದಿದೆ. ಪ್ರೊ. ಶಾಮರಾಯರ ಪರಿಷ್ಕರಣವು ಒಂದು ಉಪಯುಕ್ತ ವಿದ್ವತ್ ಪರಿಷ್ಕರಣವಾಗುವುದರಲ್ಲಿ ಸಂದೇಹವಿಲ್ಲ.

(೪) ಭಾಷೆ ಮತ್ತು ವ್ಯಾಕರಣಗಳ ಮೇಲೆ ರಚಿತವಾದಂತಹ ಕೃತಿಗಳ ಒಂದು ಸಂಕ್ಷಿಪ್ತವಾದ ಸಮೀಕ್ಷೆಯನ್ನು ಈ ವಿಭಾಗದಲ್ಲಿ ಈಗ ನೋಡಬಹುದು.

ಪಾಶ್ಚಾತ್ಯ ದೇಶಗಳಲ್ಲಿ ಭಾಷಾಶಾಸ್ತ್ರದ ವ್ಯಾಸಂಗವು ಸಾಂಪ್ರದಾಯಿಕ–ವಿಧ್ಯಾತ್ಮಕ ವ್ಯಾಕರಣ ಮಾರ್ಗದಿಂದ ಬೇರೆಯ ಹಾದಿ ಹಿಡಿದು ಭಾಷೆಯ ರಚನೆ ಸ್ವರೂಪ ವಿಕಾಸ ಮೊದಲಾದವನ್ನು ಹೊಸ ಹೊಸ ವಿಶ್ಲೇಷಣ ತಂತ್ರಗಳನ್ನು ಕಂಡು ಕೊಂಡು ಅಭ್ಯಾಸ ಮಾಡುವುದು ವಿಮರ್ಶಿಸುವುದು ಬೆಳೆದಂತೆಲ್ಲ, ದ್ರಾವಿಡ ಭಾಷಾ ವಿಜ್ಞಾನದ ಅಭ್ಯಾಸದಲ್ಲಿಯೂ ಹೊಸ ಬೆಳಕಿನ ಅಧ್ಯಯನಗಳೂ ಹೊಸ ಫಲಿತಾಂಶಗಳೂ ನಿರ್ಣಯಗಳೂ ಹೊರ ಹೊಮ್ಮುವುದು ಮೊದಲಾಯಿತು. ಪ್ರಸಿದ್ಧರಾದ ವಿದೇಶೀಯ ಭಾಷಾ ವಿಜ್ಞಾನಿಗಳ ಇಂತಹ ಶೋಧಗಳು ಭರತಖಂಡದ ಕೆಲವು ದ್ರಾವಿಡ ಭಾಷಾ ಭ್ಯಾಸಿಗಳ ಗಮನವನ್ನು ವಿಶೇಷವಾಗಿ ಸೆಳೆದವಲ್ಲದೆ, ಅವರು ತಮ್ಮ ಅಭ್ಯಾಸವನ್ನು ಅಂತಹ ಆಚಾರ್ಯರ ಮಾರ್ಗದರ್ಶನದಲ್ಲಿಯೇ ಶಾಸ್ತ್ರೀಯವಾಗಿ ಮುನ್ನಡಸುವುದರ ಸೂಕ್ತತೆಯನ್ನು ಮನಗಂಡರು. ಕನ್ನಡದ ಮಟ್ಟಿಗೆ ಇಂತಹ ಶ್ರದ್ಧೋತ್ಸಾಹವನ್ನು ಮೊದಲು ಪ್ರಕಟಿಸಿದವರು ಡಾ. ಎ. ಎನ್. ನರಸಿಂಹಯ್ಯನವರು. ೧೯೪೧ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಮೂಲಕ ದ್ರಾವಿಡ ಭಾಷಾ ವಿಜ್ಞಾನದ ಮೊದಲನೆಯ ಪ್ರಕಟನೆಯಾಗಿ (Studies in Dravidian Philology–No.1) ಹೊರಬಿದ್ದಿರುವ 'A Grammar of the Oldest Kanarese Inscriptions' ಎಂಬ ಅವರ ಕೃತಿಯು, ಅವರು ಲಂಡನ್ ವಿಶ್ವವಿದ್ಯಾನಿಲಯಕ್ಕೆ ೧೯೩೩ರಲ್ಲಿ ಸಾದರಪಡಿಸಿದ್ದ ಡಾಕ್ಟರೇಟ್ ನಿಬಂಧವೇ ಆಗಿದೆ. ಇದು ೬ನೆಯ ಮತ್ತು ೭ನೆಯ ಶತಮಾನಗಳ ಪ್ರಾಚೀನ ಕನ್ನಡ ಶಾಸನಗಳಲ್ಲಿ ಕಂಡುಬರುವ ಭಾಷಾ ಸಾಮಗ್ರಿಯನ್ನು ವಿವರ

ಣಾತ್ಮಕ ಭಾಷಾ ವಿಧಾನದಿಂದ ವಿಶ್ಲೇಷಣ ಮಾಡಿ ಬರೆದಿರುವ ಆ ಕಾಲದ ಶಾಸನಗಳ ವ್ಯಾಕರಣವಾಗಿದೆ. ಸಾಧ್ಯವಿದ್ದೆಡೆಗಳಲ್ಲಿ ತಮಿಳು ಮಲಯಾಳಂ ತೆಲುಗು ಮತ್ತು ತುಳು ನುಡಿಗಳೊಡನೆ ತೌಲನಿಕವಾಗಿ ಕನ್ನಡ ಶಬ್ದರೂಪಗಳನ್ನು ವಿವರಿಸುವ ಪ್ರಯತ್ನ ವನ್ನು ಕೂಡ ಇಲ್ಲಿ ಮಾಡಿದೆ. ಹಾಗೆಯೇ ಹಳಗನ್ನಡ ರೂಪಗಳು ಹೊಸಗನ್ನಡ ರೂಪಗಳಾಗಿ ಪರಿವರ್ತಿತವಾಗಿರುವುದನ್ನು ತೋರಿಸುವ ಪ್ರಯತ್ನವನ್ನೂ ಇಲ್ಲಿ ಕಾಣ ಬಹುದು. ಆರ್. ಎಲ್. ಟರ್ನರ್ ಅವರ ದಿಗ್ದರ್ಶನದಲ್ಲಿ ವೈಜ್ಞಾನಿಕ ರೀತಿಯ ಪಾಶ್ಚಾತ್ಯ ಪದ್ಧತಿಯನ್ನನುಸರಿಸಿ ಸಿದ್ಧವಾಗಿರುವ ಈ ಕೃತಿ, ಅನಂತರದ ಕನ್ನಡ ಶಾಸನಗಳ ಭಾಷಾತ್ಮಕ ಅಧ್ಯಯನಕ್ಕೆ ಮಾರ್ಗದರ್ಶಕವೂ ಪ್ರಚೋದಕವೂ ಆಯಿತೆಂದು ಧಾರಾಳವಾಗಿ ಹೇಳಬಹುದು. ಈ ಗ್ರಂಥದಲ್ಲಿ ವ್ಯಂಜನಗಳು-ವ್ಯಂಜನ ಗುಚ್ಛಗಳು ಮತ್ತು ವ್ಯಾಕರಣ, ಶಾಸನಗಳ ಪಾಠ, ಪದಾನುಕ್ರಮಣಿಕೆ ಮತ್ತು ಪರಿಶಿಷ್ಟಗಳು ಹೀಗೆ ಮೂರು ಭಾಗಗಳಿವೆ. ಒಟ್ಟು ೬೬ ಶಾಸನಗಳ ಭಾಷೆಯನ್ನು ಸಮೀಕ್ಷಿಸಿ ಅದಕ್ಕೆ ಇಲ್ಲಿ ವ್ಯಾಕರಣವನ್ನು ಬರೆದಿದೆ.

ಇದೇ ಹಾದಿಯಲ್ಲಿಯೇ ಬಂದದ್ದು, ಡಾ. ಗೋವಿಂದ ಸ್ವಾಮಿರಾವ್ ಗಾಯಿ ಅವರ 'Historical Grammar of Old Kannada' ಕೃತಿ ಕೂಡ. ಇದು ಪುಣೆಯ ಸ್ನಾತಕೋತ್ತರ ಮತ್ತು ಸಂಶೋಧನ ಸಂಸ್ಥೆಯಾಗಿರುವ ಡೆಕ್ಕನ್ ಕಾಲೇಜಿನಿಂದ ೧೯೪೬ರಲ್ಲಿ ಪ್ರಕಟವಾಯಿತು. ಶ್ರೀಯುತ ಗಾಯಿಯವರು ಈ ಸಂಸ್ಥೆಯಲ್ಲಿ ಅಭ್ಯಾಸ ಮಾಡುತ್ತಿದ್ದ ಸಂಶೋಧನ ವಿದ್ಯಾರ್ಥಿಗಳಲ್ಲಿ ಮೊದಲಿಗರೆಂಬುದೂ ಕನ್ನಡಿಗರಿಗೆ ಅಭಿಮಾನಾಸ್ಪದವಾದ ಸಂಗತಿಯಾಗಿದೆ. ಶ್ರೀಯುತರು ಡೆಕ್ಕನ್ ಕಾಲೇಜಿನ ವಿದ್ಯಾ ಪೀಠದಲ್ಲಿ ಸಂಸ್ಥೆಯ ಸಂಶೋಧನ ವಿದ್ಯಾರ್ಥಿವೇತನದ ಮೇಲೆ ಮೂರುವರ್ಷಗಳ ಕಾಲ ಸಂಶೋಧನೆಯನ್ನು ಮಾಡಿ, ಬೊಂಬಾಯಿ ವಿಶ್ವವಿದ್ಯಾನಿಲಯಕ್ಕೆ ಒಪ್ಪಿಸಿದ ಡಾಕ್ಟರೇಟ್ ನಿಬಂಧವೇ ಪ್ರಸ್ತುತ ಕೃತಿ. ಹಿರಿಯ ಭಾಷಾ ವಿದ್ವಾಂಸರ ಕಣ್ಣು ಮುಂದೆ ಹಾಯ್ದು ಬಂದಿರುವ, ಅವರ ಸಲಹೆಗಳನ್ನು ಒಳಕೊಂಡಿರುವ ಈ ಕೃತಿ ವಿದ್ವದಾದರಣೀಯವಾಗಿ ಮಾನ್ಯತೆಯನ್ನು ಪಡೆದಿರುವುದು ಸಹಜವೇ ಆಗಿದೆ. ವಿವರಣಾತ್ಮಾಕ ಭಾಷಾಧ್ಯಯನ ವಿಧಾನಗಳನ್ನು ಅನುಸರಿಸಿ ಒಂದು ನಿರ್ದಿಷ್ಟಾವಧಿಯ ಕನ್ನಡ ಭಾಷಾ ಸ್ವರೂಪವನ್ನು ವಿಶ್ಲೇಷಿಸಿರುವ ಗ್ರಂಥಗಳಲ್ಲಿ ಡಾ. ಎ. ಎನ್. ನರಸಿಂಹಯ್ಯನವರ ಕೃತಿಯು ತರು ವಾಯದ್ದೇ ಡಾ. ಜಿ. ಎಸ್. ಗಾಯಿಯವರ ಕೃತಿ. ಅಲ್ಲಿ ೬ ಮತ್ತು ೭ನೆಯ ಶತಮಾನದ ಕನ್ನಡ ಶಾಸನಗಳನ್ನೂ, ಇಲ್ಲಿ ೯ ಮತ್ತು ೧೦ನೆಯ ಶತಮಾನದ ಕನ್ನಡ ಶಾಸನಗಳನ್ನೂ ಭಾಷಾವಿಶ್ಲೇಷಣೆಗಾಗಿ ಪರಿಶೀಲಿಸಿದೆ. ಶಾಸನ ತಜ್ಞರು ಕಾಲದ ದೃಷ್ಟಿ ಯಿಂದ ನಿಷ್ಕೃಷ್ಟವೆಂದು ಬಲುಮಟ್ಟಿಗೆ ಗಣಿಸಿರುವ ಶಾಸನಗಳಲ್ಲಿ ಸು. ೧೯೦ನ್ನು ಗಾಯಿ ಯವರು ಪರಿಶೀಲನೆಗೆ ಆಯ್ದುಕೊಂಡಿದ್ದಾರೆ. ಗ್ರಂಥದ Phonology (ಧ್ವನಿಮಾ ವಿಜ್ಞಾನ) ಮತ್ತು Morphology (ಆಕೃತಿಮಾ ವಿಜ್ಞಾನ) ಎಂಬ ಎರಡು ಅಧ್ಯಾಯ ಗಳಲ್ಲಿ ಶಾಸನಗಳ ಭಾಷೆಯನ್ನು ವಿವೇಚಿಸಿದೆ. ಮೂರನೆಯ ಅಧ್ಯಾಯದಲ್ಲಿ ಶಾಸನಗಳ

ಪಾಠವನ್ನು ಕೊಟ್ಟಿದೆ. ಬಳಿಕ ಪದಸೂಚ್ಯನುಕ್ರಮಣಿಯ (Index Verborum) ಒಂದು ದೊಡ್ಡ ಪರಿಶಿಷ್ಟವನ್ನೂ ಅಂಕಿತನಾಮಗಳ ಒಂದು ಸಣ್ಣ ಪರಿಶಿಷ್ಟವನ್ನೂ ಸೇರಿಸಿ ಗ್ರಂಥಾಭ್ಯಾಸಕ್ಕೆ ಅನುಕೂಲಮಾಡಿದೆ.

ಇದೇ ರೀತಿಯಾಗಿ ೧೧, ೧೨ ಮತ್ತು ೧೩ನೆಯ ಶತಮಾನಗಳ ಕನ್ನಡ ಶಾಸನಗಳ ಭಾಷಾವಿಶ್ಲೇಷಣೆಯ ಕಾರ್ಯವನ್ನು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾಗಿರುವ ಪ್ರೊ. ದೇ. ಜವರೇಗೌಡರು ಕೈಗೊಂಡು ಸಂಶೋಧನೆಯ ಕಾರ್ಯವನ್ನು ಮುಂದುವರಿಸಿರುವುದಾಗಿ ತಿಳಿದುಬಂದಿದೆ. ಹೀಗೆ ಶಾಸನಗಳ ಭಾಷೆಯನ್ನು ಹಂತಹಂತವಾಗಿ ಮುಂದುವರಿಸಿ ಮುಗಿಸಿದಲ್ಲಿ, "ಕನ್ನಡ ಭಾಷೆಯ ಸಮಗ್ರವಾದ ಚರಿತ್ರೆಯ ರಚನೆಗೆ ಇದರಿಂದ ಮಹತ್ವದ ನೆರವು ದೊರೆಯುತ್ತದೆ" ಎಂಬ ಪ್ರಯೋಜನವನ್ನು ಮನಗಂಡಿರುವುದು[7] ಸೂಕ್ತವಾಗಿಯೇ ಇದೆ.

ಕನ್ನಡ ಭಾಷಾಶಾಸ್ತ್ರವನ್ನು ಕುರಿತು ಕನ್ನಡದಲ್ಲಿಯೇ ಬರೆದಂತಹ ಗ್ರಂಥಗಳು ತೀರ ವಿರಳವಾಗಿದ್ದಾಗ ಪ್ರೊ. ರಾ.ಯ. ಧಾರವಾಡಕರ ಅವರು 'ಕನ್ನಡ ಭಾಷಾಶಾಸ್ತ್ರ ('An Approach to the study of Kannada Language') ಎಂಬ ಹೆಸರಿನ ಗ್ರಂಥವೊಂದನ್ನು ಬರೆದು ೧೯೫೧ರಲ್ಲಿ ಪ್ರಕಟಿಸಿದರು. ಈ ಗ್ರಂಥವನ್ನು ಲೇಖಕರು ಸ್ವಲ್ಪಮಟ್ಟಿಗೆ ಸಾಹಸದಿಂದಲೇ ಬರೆದು ಅಂಜುತ್ತಳುಕುತ್ತ ಅಭ್ಯಾಸಿಗಳೆದುರಿಗೆ ಇಟ್ಟಿರುತ್ತಾರೆ. ಇದರಲ್ಲಿ ಭಾಷೆ, ಉತ್ಪತ್ತಿ ಮತ್ತು ಬೆಳವಣಿಗೆ; ಭಾಷೆಯ ವರ್ಗೀಕರಣ ಮತ್ತು ದ್ರಾವಿಡ ವರ್ಗದ ಭಾಷೆಗಳು; ಕನ್ನಡ ವರ್ಣಮಾಲೆ—ಉತ್ಪತ್ತಿ, ಬೆಳವಣಿಗೆ ಮತ್ತು ಸಂಸ್ಕರಣ; ಕನ್ನಡ ಕೋಶ ಮತ್ತು ಅದರ ಬೆಳವಣಿಗೆ; ಕನ್ನಡ ಮತ್ತು ನೆರೆಹೊರೆಯ ಭಾಷೆಗಳು; ಭಾಷೆಯಲ್ಲಿ ಕಂಡುಬರುವ ಕನ್ನಡದ ಸಂಸ್ಕೃತಿ, ಕನ್ನಡ ವ್ಯಾಕರಣದ ಮುಖ್ಯಾಂಶಗಳು—ಎಂಬುದಾಗಿ ಏಳು ಪ್ರಕರಣಗಳಿದ್ದು, ಉಪಯುಕ್ತವಾದ ನಾಲ್ಕು ಪರಿಶಿಷ್ಟಗಳೂ ಸೇರಿಕೊಂಡಿವೆ. ಸಾಧಾರಣವಾಗಿ ತೌಲನಿಕ ಭಾಷಾವಿಜ್ಞಾನದ ರೀತಿಯನ್ನು ಸ್ಥೂಲವಾಗಿ ಅನುಸರಿಸಿರುವ ಈ ಗ್ರಂಥದ ಒಂದು ವೈಶಿಷ್ಟ್ಯವೆಂದರೆ, ಕ್ಲಿಷ್ಟವಾದ ಶಾಸ್ತ್ರವಿಷಯವನ್ನು ಸಾಧ್ಯವಾದಮಟ್ಟಿಗೆ ಸರಳಗೊಳಿಸಲು ಯತ್ನಿಸಿರುವುದು, ಮತ್ತು ಸರಸವಾಗಿ ನಿರೂಪಿಸಿಕೊಂಡು ಹೋಗಿರುವುದು. ಹೇರಳವಾದ ಉದಾಹರಣೆಗಳನ್ನಿತ್ತು ವಿಷಯ ವಿಶ್ಲೇಷಣೆಯನ್ನು ಮಾಡಿದೆ. ಈ ಗ್ರಂಥವು ೧೯೬೨ರಲ್ಲಿ ಕೆಲವು ಸಲಹೆ ಸೂಚನೆಗಳನ್ನು ಅಳವಡಿಸಿಕೊಂಡು ಎರಡನೆಯ ಬಾರಿಗೆ ಅಚ್ಚಾಯಿತು. ಅನಂತರ ಇದೇ ರೂಪದಲ್ಲಿ ಗ್ರಂಥವು ೧೯೬೪ರಲ್ಲಿ ಒಮ್ಮೆ, ೧೯೬೮ರಲ್ಲಿ ಇನ್ನೊಮ್ಮೆ ಪುನರ್ಮುದ್ರಣಗೊಂಡಿತು.

ಪ್ರಾಚೀನ ವ್ಯಾಕರಣಗ್ರಂಥಗಳ ಪಾಠಶೋಧನೆ, ಹೊಸದೃಷ್ಟಿಯ ವಿಚಾರ ವಿಮರ್ಶೆ, ವಿವಾದಾಸ್ಪದ ವಿಷಯಗಳ ಪರಾಮರ್ಶೆ, ಸ್ಥಾನಮಾನಗಳ ನಿರ್ಣಯ

---

[7] ಅದೇ : ಪು. ೧೪೫.

ಮುಂತಾದವು ಈಚೆಗೆ ನಡೆಯುತ್ತಿದ್ದು ಈ ದಿಕ್ಕಿನಲ್ಲಿ ಮೊದಲನೆಯ ಗಣ್ಯ ಪ್ರಯತ್ನವೆಂದರೆ 'ಶಬ್ದಮಣಿದರ್ಪಣ'ದ ಪಾಠಾಂತರಗಳನ್ನು ಕುರಿತ ಪ್ರೊ. ಡಿ. ಕೆ. ಭೀಮಸೇನರಾಯರ ಎರಡು ವಿದ್ವದುಪನ್ಯಾಸಗಳೆಂದು ಹೇಳಬಹುದು. ಶ್ರೀಯುತರು ೧೯೬೩ರಲ್ಲಿ ಧಾರವಾಡದ ಕನ್ನಡ ಸಂಶೋಧನ ಸಂಸ್ಥೆಯ ಆಶ್ರಯದಲ್ಲಿ 'ಶಬ್ದಮಣಿ ದರ್ಪಣದ ಪಾಠಾಂತರಗಳು' ಎಂಬ ವಿಷಯದ ಮೇಲೆ ಕೊಟ್ಟ ಎರಡು ಉಪನ್ಯಾಸಗಳು ಅದೇ ಸಂಸ್ಥೆಯಿಂದ ೧೯೬೭ರಲ್ಲಿ ಪುಸ್ತಕರೂಪದಲ್ಲಿ ('ಶಬ್ದಮಣಿ ದರ್ಪಣದ ಪಾಠಾಂತರಗಳು ಮತ್ತು ಅನುಭವಾಮೃತವೂ ಹರಿಕಥಾಮೃತಸಾರವೂ') ಪ್ರಕಟವಾಗಿವೆ. ಉಪನ್ಯಾಸ ಕರ್ತೃಗಳು ಉಸ್ಮಾನಿಯಾ ವಿಶ್ವವಿದ್ಯಾಲಯದ ಹಸ್ತಲಿಖಿತ ಪುಸ್ತಕಗಳ ಸಂಗ್ರಹದಲ್ಲಿರುವ 'ಶಬ್ದಮಣಿ ದರ್ಪಣ'ದ ಓಲೆ ಪ್ರತಿಯೊಂದರ ಹೊಸಪಾಠಗಳನ್ನೂ ಹೊಸವ್ಯಾಖ್ಯಾನವನ್ನೂ ಲಕ್ಷಿಸಿ, ತಮ್ಮ ಸೂಕ್ಷ್ಮವಾದ ವಿಚಾರ ವಿಮರ್ಶೆಗಳೊಡನೆ ವಿಸ್ತಾರವಾಗಿ ಚರ್ಚಿಸಿರುತ್ತಾರೆ. ಜತೆಗೆ 'ಶಬ್ದಮಣಿ ದರ್ಪಣ'ದ ಇತರ ಮುದ್ರಿತ ಪ್ರತಿಗಳ ಸೂತ್ರ, ವೃತ್ತಿ, ಮತ್ತು ಪ್ರಯೋಗಗಳ ಪಾಠಗಳೊಡನೆ ಹೋಲಿಸಿ ನೋಡಿ ಸಮಗ್ರ ಗ್ರಂಥಪಾಠದ ಪುನರ್ವಿಮರ್ಶೆಯನ್ನೇ ಮಾಡಿರುತ್ತಾರೆ.

ಪ್ರಸಿದ್ಧ ವ್ಯಾಕರಣ ವಿದ್ವಾಂಸರೂ ಸ್ವತಃ ವೈಯಾಕರಣರೂ ಆದ ಪಂಡಿತ ಮ. ಪ್ರ. ಪೂಜಾರ ಅವರು, ಧಾರವಾಡದ ಪೂರ್ವೋಕ್ತ ಕನ್ನಡ ಸಂಶೋಧನ ಸಂಸ್ಥೆಯ ಆಶ್ರಯದಲ್ಲಿಯೇ ೧೯೬೮ರ ಮಾರ್ಚ್ ತಿಂಗಳಲ್ಲಿ ಕೊಟ್ಟ ಎರಡು ಉಪನ್ಯಾಸಗಳು 'ಕೆಲವು ಕನ್ನಡ ವ್ಯಾಕರಣ ವಿಚಾರಗಳು' ಎಂಬ ಹೆಸರಿನಲ್ಲಿ ಅದೇ ಸಂಸ್ಥೆಯ ಮೂಲಕ ಪ್ರಕಟವಾಗಿವೆ. 'ಶಬ್ದಮಣಿದರ್ಪಣ' ಹಾಗೂ 'ಶಬ್ದಾನುಶಾಸನ' ಇವನ್ನು ಅಧಿಕರಿಸಿ, ಮೊದಲ ಉಪನ್ಯಾಸದಲ್ಲಿ ಸಂಜ್ಞಾ, ಸಂಧಿ ಮತ್ತು ನಾಮ ಪ್ರಕರಣಗಳಲ್ಲಿ ಕಂಡುಬರುವ ಕೆಲವು ಸಂದಿಗ್ಧ ವ್ಯಾಕರಣಾಂಶಗಳನ್ನೂ ಎರಡನೆಯ ಉಪನ್ಯಾಸದಲ್ಲಿ ಕೃತ್ತು ಸಮಾಸ ಮತ್ತು ಆಖ್ಯಾತ ಪ್ರಕರಣಗಳಲ್ಲಿ ಕಂಡುಬರುವ ಕೆಲವು ಸಂದಿಗ್ಧ ವ್ಯಾಕರಣಾಂಶಗಳನ್ನೂ ಶ್ರೀಯುತರು ಸರಳವಾಗಿಯೂ ಸಂಕ್ಷಿಪ್ತವಾಗಿಯೂ ಚರ್ಚಿಸಿರುತ್ತಾರೆ.

ಪೂರ್ವೋಕ್ತರಾದಿಬ್ಬರು ವಿದ್ವಾಂಸರೂ ಸಾಂಪ್ರದಾಯಿಕವಾದ ದೃಷ್ಟಿಯಲ್ಲಿ ವಿಷಯಗಳನ್ನು ವಿವೇಚಿಸಿದ್ದರೂ ಅವುಗಳಲ್ಲಿ ಹಲವು ಅಂಶಗಳು ಭಾಷಾಶಾಸ್ತ್ರದ ದೃಷ್ಟಿಯಿಂದಲೂ ಗಮನಾರ್ಹವಾಗಿವೆ. ಇಂತಹ ವಿಷಯಗಳ ಮೇಲೆ ಉಪನ್ಯಾಸಗಳನ್ನು ಏರ್ಪಡಿಸಿದ ಧಾರವಾಡದ ಕನ್ನಡ ಸಂಶೋಧನ ಸಂಸ್ಥೆಯ ಶ್ರದ್ಧೋತ್ಸಾಹಗಳು ನಿಜವಾಗಿ ಶ್ಲಾಘನೀಯವಾಗಿದೆ.

೧೯೬೪ರಲ್ಲಿ, ಡಾ. ಸಿ. ಆರ್. ಶಂಕರನ್ ಅವರು ಇಂಗ್ಲಿಷಿನಲ್ಲಿ 'Some Problems in Kannada Linguistics' ಎಂಬ ಗ್ರಂಥವನ್ನು ಬರೆದಿರುತ್ತಾರೆ.

ಧಾರವಾಡದ ಕನ್ನಡ ಸಂಶೋಧನ ಸಂಸ್ಥೆಯ ೧೯೪೯–೫೦ನೆಯ ವರ್ಷದ ಉಪನ್ಯಾಸ ಮಾಲೆಯಲ್ಲಿ ವಿದ್ವಾನ್ ಸೇಡಿಯಾಪು ಕೃಷ್ಣಭಟ್ಟರು ಕೊಟ್ಟ ಭಾಷಾ

ವಿಷಯಕವಾದೊಂದು ಉಪನ್ಯಾಸವು ಅದೇ ಸಂಸ್ಥೆಯ ವತಿಯಿಂದ ೧೯೫೫ರಲ್ಲಿ 'ಕನ್ನಡ ವರ್ಣಗಳು' ಎಂಬ ಹೆಸರಿನ ಗ್ರಂಥವಾಗಿ ಹೊರಬಿದ್ದಿದೆ. "ದ್ರಾವಿಡ ವಿಶೇಷವಾಗಿ ಕನ್ನಡ ಉಚ್ಚಾರವೈಶಿಷ್ಟ್ಯದ ಹಿನ್ನೆಲೆಯಲ್ಲಿ ಕೆಲವೊಂದು ವರ್ಣ ಮತ್ತು ಶಬ್ದಗಳನ್ನು ತುಲನಾತ್ಮಕವಾಗಿ ಶಾಸ್ತ್ರೀಯದೃಷ್ಟಿಯಿಂದ ವಿಮರ್ಶಿಸಿ, ಅವುಗಳ ಸಾಧುವಾದ ಉಚ್ಚಾರ ಮತ್ತು ಲೇಖನರೂಪಗಳನ್ನು ತೋರಿಸುವ ಪ್ರಯತ್ನ ವನ್ನು ಈ ಹೊತ್ತಗೆಯಲ್ಲಿ ನಾವು ಕಾಣುತ್ತೇವೆ"—ಎಂಬುದಾಗಿ ಗ್ರಂಥದ ಪೀಠಿಕೆ ಯಲ್ಲಿ ಸಂಸ್ಥೆಯ ಅಂದಿನ ಡೈರೆಕ್ಟರ್ ಸ. ಸ. ಮಾಳವಾಡರು ಬರೆದಿರುತ್ತಾರೆ. ಕನ್ನಡ ವರ್ಣಗಳ ಬಗೆಗೆ ಇಷ್ಟು ಗಾಢವೂ ವಿಸ್ತಾರವೂ ಆದ ಪ್ರಾಮಾಣಿಕ ರೀತಿಯ ವಿವೇಚನೆಯನ್ನು ಅಂದಿನವರೆಗೆ ಯಾರೂ ಮಾಡಿರಲಿಲ್ಲವೆಂದೇ ತೋರುತ್ತದೆ. ಇದರ ಪೀಠಿಕಾ ಪ್ರಕರಣ ಮತ್ತು ಅನುಬಂಧ ಭಾಗಗಳನ್ನು ಬಿಟ್ಟರೆ ಗ್ರಂಥ ಶರೀರದಲ್ಲಿ ೨ನೆಯದು ಸ್ವರಪ್ರಕರಣವೆಂದೂ ೩ನೆಯದು ವ್ಯಂಜನ ಪ್ರಕರಣವೆಂದೂ ವಿಭಕ್ತವಾಗಿ ಕನ್ನಡ ಶಬ್ದೋಚ್ಚಾರ ಲೇಖನ ಸ್ವರೂಪದ ಹಲವು ಸಮಸ್ಯೆಗಳನ್ನೂ ಪರಿಹಾರಗಳನ್ನೂ ಅವುಗಳಲ್ಲಿ ವಿವರವಾಗಿ ಆಳವಾಗಿ ವಿವೇಚನೆ ಮಾಡಿರುವುದು ಕಂಡುಬರುತ್ತದೆ. ವಿವರಣಾತ್ಮಕ ಭಾಷಾಶಾಸ್ತ್ರದ ದೃಷ್ಟಿಯೂ ಈ ವಿವೇಚನೆಯಲ್ಲಿ ತಕ್ಕಮಟ್ಟಿಗೆ ಹರಿಹಾಯ್ದಿದೆಯೆನ್ನಬಹುದು.

೧೯೫೭ರಲ್ಲಿ ಮೈಸೂರಿನ ಶಾರದಾಮಂದಿರದ ಮೂಲಕವಾಗಿ ಪ್ರಕಟವಾದ ಪ್ರೊ. ಡಿ. ಎಲ್. ನರಸಿಂಹಾಚಾರ್ಯರ 'ಶಬ್ದವಿಹಾರ' ಎಂಬ ಸಣ್ಣ ಗ್ರಂಥವು, ಶ್ರೀಯುತರು ಹಳಗನ್ನಡ ಕಾವ್ಯಪುರಾಣಾದಿಗಳ ಅಧ್ಯಾಪನಕಾರ್ಯದಲ್ಲಿ ತಮಗೆ ಎದುರಾದ ಕೆಲವು ಶಾಬ್ದಿಕಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಕೊಳ್ಳುವ ಶ್ರದ್ಧಾಪೂರ್ವಕ ಪ್ರಾಮಾಣಿಕ ಪ್ರಯತ್ನದಲ್ಲಿ ಭಾಷಾಶಾಸ್ತ್ರದ ವಿಧಿವಿಧಾನಗಳನ್ನು ಅನ್ವಯಿಸಿ ನಿರ್ಣಯಿಸಿದ ಕೆಲವು ಕ್ಲಿಷ್ಟಪದಗಳ ಅರ್ಥ ಮತ್ತು ನಿಷ್ಪತ್ತಿಗಳನ್ನು ಕುರಿತ ಕೆಲವು ಲೇಖನಗಳ ಒಂದು ಸಂಗ್ರಹಗ್ರಂಥವಾಗಿದೆ. ಈ ಕೆಲಸವನ್ನು ಅವರು ಇತ್ತೀಚೆಗೆ ಇನ್ನೂ ಮಿಗಿಲಾಗಿ ಮುಂದುವರಿಸಿ 'ಪ್ರಬುದ್ಧ ಕರ್ಣಾಟಕ'ದಲ್ಲಿಯೂ ಬೇರೆ ಒಂದೆರಡು ಕಡೆಗಳಲ್ಲಿಯೂ ಕೆಲವು ಲೇಖನಗಳನ್ನು ಬರೆದಿದ್ದಾರೆ. ಇವೂ ಏಕತ್ರ ಸಂಗ್ರಹಿತವಾಗುವುದು ಆವಶ್ಯಕ ವಿದೆ. ಈಯೆಡೆಗಳಲ್ಲೆಲ್ಲ ಶ್ರೀಯುತರ ಅನನ್ಯಸಾಧಾರಣ ಶೋಧನಸಾಮರ್ಥ್ಯ—ವೈದುಷ್ಯವೂ ಸಯುಕ್ತಿಕವೂ ಸವಿಮರ್ಶವೂ ಆದ ನಿರೂಪಣ ವಿಚಕ್ಷಣತೆಯೂ ಸಂಯಮಪೂರ್ಣಲೇಖನವಿಧಾನವೂ ಸುಪ್ರಕಟಗೊಂಡಿವೆ. ಶಬ್ದಾರ್ಥನಿರ್ಣಯವನ್ನು ಕುರಿತಂತಹ ಈ ರೀತಿಯ ಗ್ರಂಥವೆಂದರೆ ಕನ್ನಡದಲ್ಲಿ ಈವರೆಗೆ ಇದು ಒಂದೇ ಆಗಿದೆ.

ಪ್ರೊ. ನರಸಿಂಗರಾವ್ ಮಾನ್ವಿ ಅವರು ಬರೆದಿರುವ 'ನಡುಗನ್ನಡ' ಎಂಬ ಕೃತಿಯು ಹೈದರಾಬಾದಿನ ಕರ್ನಾಟಕ ಸಾಹಿತ್ಯ ಮಂದಿರದ ೭ನೆಯ ಪ್ರಕಟನೆಯಾಗಿ ೧೯೫೭ರಲ್ಲಿ ಹೊರಬಿದ್ದಿತು. ಶ್ರೀಯುತರು ೧೯೩೭ರಿಂದ ೧೯೪೯ರವರೆಗೆ ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ 'ಸಂಶೋಧನಾಛಾತ್ರ'ರಾಗಿ ಕೆಲಸಮಾಡುತ್ತಿದ್ದಾಗ ಬರೆದ

ಪ್ರಬಂಧವಿದು. ಪ್ರೊ. ಡಿ. ಕೆ. ಭೀಮಸೇನರಾಯರ ದಿಗ್ದರ್ಶನದಲ್ಲಿ ಪೂರ್ತಿಯಾದ ಈ ಪ್ರಬಂಧರಚನೆಯು ಪ್ರೊ. ಎ. ಆರ್. ಕೃಷ್ಣಶಾಸ್ತ್ರಿಯವರ ಮುನ್ನುಡಿಯೊಡನೆ ಅಚ್ಚುಕಟ್ಟಾಗಿ ಪುಸ್ತಕರೂಪದಲ್ಲಿ ಮುದ್ರಿತವಾಗಿದೆ. ಇದರಲ್ಲಿ ಪ್ರವೇಶ, ಸ್ವನಗಳು, ರಚನಾಕ್ರಮ ಅಥವಾ ವ್ಯಾಕರಣ ಪ್ರಕ್ರಿಯೆಗಳು, ಶಬ್ದಕೋಶ ಮತ್ತು ಉಪಸಂಹಾರ ಎಂಬುದಾಗಿ ಐದು ಪ್ರಕರಣಗಳಿವೆ. ಆಧುನಿಕ ಭಾಷಾಶಾಸ್ತ್ರದ ವಿಧಿವಿಧಾನಗಳನ್ನು ಲಕ್ಷ್ಯದಲ್ಲಿರಿಸಿಕೊಂಡು ನಡುಗನ್ನಡಭಾಷೆಯ ಸ್ವರೂಪವನ್ನು ಶಾಸ್ತ್ರೀಯವಾಗಿ ವಿಶ್ಲೇಷಿಸಿರುವುದು ಇಲ್ಲಿ ಕಂಡುಬರುತ್ತದೆ. ನಡುಗನ್ನಡಭಾಷೆಯನ್ನೆ ಕುರಿತು ವಿಶಿಷ್ಟವಾಗಿ ವಿವೇಚಿಸಿದ ಈ ರೀತಿಯ ಗ್ರಂಥ ಕನ್ನಡದಲ್ಲಿ ಸದ್ಯಃ ಇದೊಂದೇ ಎನ್ನಬಹುದು.

ಮೈಸೂರು ಶ್ರೀಮನ್ಮಹಾರಾಜಾ ಸಂಸ್ಕೃತ ಮಹಾಪಾಠಶಾಲೆಯಲ್ಲಿ ಅಲಂಕಾರ ಶಾಸ್ತ್ರ ಪ್ರಾಧ್ಯಾಪಕರಾಗಿರುವ ವಿದ್ವಾನ್ ಜಿ. ವಿಷ್ಣುಮೂರ್ತಿ ಭಟ್ಟರು ೧೯೫೬ ರಲ್ಲಿ 'ಲಘುಸಿದ್ಧಾಂತ ಕೌಮುದೀ' ಎಂಬ ಸಂಸ್ಕೃತದ ಪ್ರಖ್ಯಾತ ವ್ಯಾಕರಣವನ್ನು ಸವ್ಯಾಖ್ಯವಾಗಿ ಕನ್ನಡಕ್ಕೆ ಅನುವಾದಿಸಿ, ಕನ್ನಡದ ವ್ಯಾಕರಣ ಚಟುವಟಿಕೆಗಳಲ್ಲಿ ಹೊಸ ವಿಕ್ರಮವನ್ನೆ ಸ್ಥಾಪಿಸಿದರು. ಇಷ್ಟು ದೊಡ್ಡ ಗಾತ್ರದ ಗ್ರಂಥವನ್ನು ಶ್ಲಾಘ್ಯವಾದ ರೀತಿಯಲ್ಲಿ ಬರೆದು ಪ್ರಕಟಿಸಲು ಅವರಿಗೆ ಸಾಧ್ಯವಾದುದು ಒಂದು ಸಾಹಸಕಾರ್ಯವೇ ಸರಿ. ಸಂಸ್ಕೃತ ವ್ಯಾಕರಣವನ್ನು ಅಭ್ಯಾಸಮಾಡುವವರಿಗೂ ಕನ್ನಡ ವ್ಯಾಕರಣ ಪದ್ಧತಿಯ ಮೂಲ ಮಾತೃಕೆಯಾಗಿರುವ ಸಂಸ್ಕೃತವ್ಯಾಕರಣತತ್ತ್ವಗಳ ರಹಸ್ಯವನ್ನು ಅರ್ಥಮಾಡಿಕೊಂಡು ಅವುಗಳ ಸಹಾಯದಿಂದ ಸಾಂಪ್ರದಾಯಿಕ ಕನ್ನಡವ್ಯಾಕರಣತತ್ತ್ವಗಳನ್ನು ಅಭ್ಯಾಸ ಮಾಡಬೇಕೆಂಬವರಿಗೂ ಈ ಗ್ರಂಥದಿಂದ ತುಂಬ ಉಪಕಾರವಾಗುತ್ತದೆ. ಶ್ರೀಯುತರು ಹೀಗೆಯೇ ಶ್ರೀ ಬಾಲಬೋಧಿನೀ ಸಿದ್ಧಾಂತ ಕೌಮುದೀ ಕನ್ನಡ ವ್ಯಾಖ್ಯಾನವನ್ನು ಕೂಡ ೧೯೬೫ರಲ್ಲಿ ಬರೆದು ಪ್ರಕಟಿಸಿರುತ್ತಾರೆ.

ವಿಲಿಯಂ ಬ್ರೈಟ್ ಅವರ (William Bright) 'An Outline of Colloquial Kannada' ಅಚ್ಚಾದುದು ೧೯೫೮ರಲ್ಲಿ. ಪುಣೆಯ ಡೆಕ್ಕನ್ ಕಾಲೇಜು ಮತ್ತು ಭಾರತದ ಭಾಷಾಸಮಿತಿಯ ಜಂಟಿ ಸಹಕಾರದಲ್ಲಿ ಅಚ್ಚಾಗಿರುವ ಈ ಗ್ರಂಥವು ಪುಣೆಯ ಡೆಕ್ಕನ್ ಕಾಲೇಜಿನ Monograph Series ನಲ್ಲಿ ಮೊದಲನೆಯದಾಗಿದೆಯೆಂಬುದು ಗಮನಿಸತಕ್ಕದ್ದಾಗಿದೆ. ಕಿಟ್ಟೆಲ್ ಮತ್ತು ಸ್ಪೆನ್ಸರ್ ಅವರ ಕನ್ನಡ ವ್ಯಾಕರಣಗಳು ಬರೆಹದ ನುಡಿಯನ್ನು ಕುರಿತಿವೆಯೆಂದೂ, ತಾವು ಆಡುನುಡಿಯ ವ್ಯಾಕರಣ ರಚನೆಗೆ ಸಹಾಯಕವಾಗುವ ಪ್ರಥಮಪ್ರಯತ್ನವೊಂದನ್ನು ಪ್ರಸ್ತುತಕೃತಿಯ ಮೂಲಕ ಮಾಡುತ್ತಿದ್ದು ಹೆಚ್ಚು ಖಚಿತವಾದ ಭಾಷಾವಿಶ್ಲೇಷಣೆಗೆ ಅದರಿಂದ ಉಪಯೋಗವಾಗಬಹುದೆಂದೂ ತಮ್ಮ ಗ್ರಂಥದ ಮುನ್ನುಡಿಯಲ್ಲಿ ಬ್ರೈಟ್ ಅವರು ಸೂಚಿಸಿರುತ್ತಾರೆ. ಇಲ್ಲಿ ೧೯೫೬ರ ಪೂರ್ವದಲ್ಲಿದ್ದ ಸ್ಥಿತಿಯ 'ಹಳೆಯ' ಮೈಸೂರು ಪ್ರಾಂತದ ವಿದ್ಯಾವಂತ ನಗರವಾಸಿಗಳ ದೈನಂದಿನ ಮಾತುಕತೆಯ ಸಾಮಗ್ರಿಯನ್ನು ವಿಶ್ಲೇಷಿಸಲಾಗಿದೆ. ಇದಕ್ಕಾಗಿ ಬೆಂಗಳೂರುನಗರ, ಮೈಸೂರು ಹಾಸನ ಮತ್ತು ತುಮಕೂರು ಜಿಲ್ಲೆಗಳ

ಮುಖ್ಯವಾದ ಮೂರು ಪಂಗಡಗಳ ಭಾಷಾನಿವೇದಕರನ್ನು ಬಳಸಿಕೊಂಡಿದೆ. ಈ ವಿಶ್ಲೇಷಣೆಯನ್ನು ಸಂಶೋಧಕರು ೨೦ ತಿಂಗಳ ಕಾಲ ಭಾರತದಲ್ಲಿ ಜೂನಿಯರ್ ಲಿಂಗ್ವಿಸ್ಟಿಕ್ಸ್ ಸ್ಕಾಲರ್ ಆಗಿದ್ದಾಗ ಕೈಕೊಂಡಿದ್ದಾಗಿದೆ. ಗ್ರಂಥದಲ್ಲಿ ಒಟ್ಟು ೧೧ ಪ್ರಕರಣಗಳಿವೆ; ಉಪಯುಕ್ತವಾದ ಪರಿಶಿಷ್ಟವೂ ಇದೆ. ಆಧುನಿಕ ಭಾಷಾವಿಜ್ಞಾನದ ವಿಧಿನಿಯಮಗಳಿಗನುಸಾರವಾಗಿ ಕನ್ನಡದ ಆಡುನುಡಿಯನ್ನು ವಿಶ್ಲೇಷಿಸಿ ವ್ಯಾಕರಣವನ್ನು ಬರೆಯಲು ಹೊರಟ ಪ್ರಯತ್ನಗಳಲ್ಲಿ ವಿಲಿಯಂ ಬ್ರೈಟ್ ಅವರ ಪ್ರಯತ್ನವೇ ಮೊತ್ತಮೊದಲನೆಯದಾಗಿದೆ.

ಡಾ. ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರು ೧೯೫೮ರಿಂದ ಪ್ರತಿ ತಿಂಗಳೂ ಕ್ರಮವಾಗಿ 'ಜೀವನ' ಪತ್ರಿಕೆಯಲ್ಲಿ ಪ್ರಕಟಿಸುತ್ತ ಬಂದು, ೧೯೬೦ರಲ್ಲಿ ಪುಸ್ತಕ ರೂಪದಲ್ಲಿ ಹೊರತಂದಿರುವ 'ನಮ್ಮ ನುಡಿ' ಕನ್ನಡ ಶಬ್ದಭಾಂಡಾರದ ಹಲವು ವೈಲಕ್ಷಣ್ಯಗಳನ್ನು ಒಟ್ಟು ೮೨ ಪರಿಚ್ಛೇದಗಳಲ್ಲಿ ಸಮೃದ್ಧವಾದ ಉದಾಹರಣೆಗಳ ಬೆಂಬಲದಿಂದ ಸರಳವಾಗಿಯೂ ಸರಸವಾಗಿಯೂ ವಿವರಿಸಿರುವ ಒಂದು ಅಪೂರ್ವರೀತಿಯ ಗ್ರಂಥವಾಗಿದೆ. ಇಲ್ಲಿಯ ಪರಿಶೀಲನಕ್ರಮಕ್ಕೆ ಶ್ರೀಯುತರಿಗೆ ಯೆಸ್ಪರ್‌ಸನ್ ಮುಂತಾದ ಭಾಷಾವಿಜ್ಞಾನಿಗಳ ಕೃತಿಗಳು ಮಾರ್ಗದರ್ಶಕವಾದವೆಂದು ಗ್ರಂಥದ ಮುನ್ನುಡಿಯಲ್ಲಿರುವ ಸೂಚನೆಯಿಂದ ತಿಳಿಯುತ್ತದೆ. ಸಾಂಪ್ರದಾಯಿಕ ವ್ಯಾಕರಣ ಮತ್ತು ನವೀನಪದ್ಧತಿಯ ಭಾಷಾಶಾಸ್ತ್ರ ಇವುಗಳ ತತ್ತ್ವಪದ್ಧತಿಯನ್ನು ಬೆರಸಿ ಇಲ್ಲಿ ಸಂಗತಿಗಳನ್ನು ವಿವೇಚಿಸಿದ್ದರೂ "ಮಾಸ್ತಿಯವರ ಕೃತಿ ವಿದ್ವಾಂಸದೃಷ್ಟಿಗಿಂತ ಹೆಚ್ಚಾಗಿ ಜನಪ್ರಿಯ ದೃಷ್ಟಿಯದು"[8]

ಧಾರವಾಡದ ಕರ್ನಾಟಕ ವಿಶ್ವವಿದ್ಯಾನಿಲಯದಿಂದ ೧೯೬೧ರಲ್ಲಿ ಪ್ರಕಟವಾಗಿರುವ ಡಾ. ಆರ್. ಸಿ. ಹಿರೇಮಠ ಅವರು ಬರೆದ, 'The Structure of Kannada' ಎಂಬುದು ಧಾರವಾಡ ಬೆಳಗಾಂ ಮತ್ತು ಬಿಜಾಪುರ ಜಿಲ್ಲೆಗಳಲ್ಲಿ ಪ್ರಚಲಿತವಿರುವ 'ಧಾರವಾಡದ ಕನ್ನಡ' ಎಂದು ರೂಢಿಯಾಗಿ ಕರೆಯುವ ಕನ್ನಡದ ಆಡುನುಡಿಯನ್ನು ವಿಶ್ಲೇಷಿಸುವ ಒಂದು ಗ್ರಂಥವಾಗಿದೆ. ಕನ್ನಡದ ಆಡುನುಡಿಯ ಸ್ವರೂಪವನ್ನು ವಿಶ್ಲೇಷಿಸುವ ಕಾರ್ಯವು ೧೯೫೮ರಲ್ಲಿಯೇ ಬ್ರೈಟ್ ಅವರ ಪುಸ್ತಕದಿಂದ ಒಂದು ರೀತಿಯಲ್ಲಿ ಆರಂಭವಾಗಿತ್ತು. ಆದರೆ ಡಾ. ಆರ್. ಸಿ. ಹಿರೇಮಠರು ನಿರ್ದಿಷ್ಟವಾದ ಒಂದು ಪ್ರಾಂತಭಾಗದ ಕನ್ನಡವನ್ನು ಪ್ರತ್ಯೇಕವಾಗಿ ಪರಿಶೀಲನೆಗೆ ತೆಗೆದುಕೊಂಡದ್ದು ಗಮನಾರ್ಹವಾಗಿದೆ. ಈಚೆಗೆ ಈ ದಿಕ್ಕಿನಲ್ಲಿ ಹಲವರು ಮುನ್ನಡೆದಿರುವುದು ಕಾಣುತ್ತದೆ. ಶ್ರೀಯುತರು ತಮ್ಮ ಉದ್ದೇಶದ ಭಾಷಾವಿಶ್ಲೇಷಣೆಗೆ ತಮ್ಮ ಮಾತನ್ನೇ ತಮ್ಮ ಸುತ್ತು ಬಳಸಿನ ಅನಕ್ಷರಸ್ಥ ಸ್ತ್ರೀಪುರುಷರ ಮಾತನ್ನೇ ಸಾಮಗ್ರಿಯಾಗಿ ಬಳಸಿಕೊಂಡಿರುತ್ತಾರೆ. ಭಾರತದಲ್ಲಿ ಆಗಾಗ ನಡೆದ ಆಧುನಿಕಭಾಷಾವಿಜ್ಞಾನದ ಹಲವು ಅಭ್ಯಾಸ ಶಿಬಿರಗಳಲ್ಲಿ

---

[8] ಅದೇ: ಪು. ೧೪೬.

ಭಾಗವಹಿಸಿದ್ದು, ರಾಕ್‌ಫೆಲರ್ ವಿದ್ಯಾರ್ಥಿವೇತನದ ಮೇಲೆ ಅಮೆರಿಕೆಯಲ್ಲಿ ವಿವರಣಾತ್ಮಕ ಭಾಷಾವಿಜ್ಞಾನದಲ್ಲಿ ಹೆಚ್ಚಿನ ವ್ಯಾಸಂಗವನ್ನು ಪಡೆದುಕೊಂಡು, ಆ ಪರಿಶ್ರಮದ ಪ್ರಯೋಜನವನ್ನು ತಮ್ಮ ಗ್ರಂಥರಚನೆಯಲ್ಲಿ ತೋರಿದ್ದಾರೆ. ಬರ್ಕ್ಲೆಯ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾನಿಲಯದಲ್ಲಿದ್ದಾಗ ತಾವು ಆಯ್ದುಕೊಂಡ ವಿಶೇಷ ಸಂಶೋಧನ ವಿಷಯದ ಮೇಲಿನ ವ್ಯವಸಾಯದ ಫಲವೇ ಅವರ ಪ್ರಸ್ತುತ ಗ್ರಂಥವಾಗಿದೆ. ಶ್ರೀಯುತರು ಇಂದಿಗೆ ವಿವರಣಾತ್ಮಕ ಭಾಷಾವಿಜ್ಞಾನದಲ್ಲಿ ಸುಪ್ರಸಿದ್ಧರಾಗಿರುವ ವಿದ್ವಾಂಸರ ಸಲಹೆ ಮಾರ್ಗದರ್ಶನಗಳಲ್ಲಿ ತಮ್ಮ ಅಭ್ಯಾಸವನ್ನೂ ಗ್ರಂಥರಚನೆಯನ್ನೂ ಕೈಕೊಂಡುದಾಗಿ ತಿಳಿಯುತ್ತದೆ. ಗ್ರಂಥದಲ್ಲಿ Phonology (ಧ್ವನಿಮಾವಿಜ್ಞಾನ) ಮತ್ತು Morphology (ಆಕೃತಿಮಾವಿಜ್ಞಾನ) ಎಂಬುದಾಗಿ ೨ ಪ್ರಧಾನ ಖಂಡಗಳಿದ್ದು ಮೊದಲನೆಯದರಲ್ಲಿ ೪ ಮತ್ತು ಎರಡನೆಯದರಲ್ಲಿ ೬ ಪ್ರಕರಣಗಳಿವೆ. ಈ ಗ್ರಂಥಕ್ಕೆ ಆಧುನಿಕ ಭಾಷಾವಿಜ್ಞಾನದ ಪ್ರಭೇದಗಳನ್ನೂ ಪದ್ಧತಿಗಳನ್ನೂ ಕುರಿತ ಒಂದು ವಿಶದವೂ ಸಂಕ್ಷಿಪ್ತವೂ ಆದ ಮುನ್ನುಡಿಯನ್ನೂ, ಗ್ರಂಥಾಭ್ಯಾಸಕ್ಕೆ ಅನುಕೂಲವಾಗುವಂತೆ ಒಂದು ಶಬ್ದಾನುಕ್ರಮಪಟ್ಟಿಕೆಯನ್ನೂ ಕೂಡಿಸಿದೆ.

೧೯೬೨ರಲ್ಲಿ ಎಂ. ಎಸ್. ಆಂಡ್ರನೋವ್ (M. S. Andronov) ಅವರು ರಷ್ಯನ್ ಭಾಷೆಯಲ್ಲಿ ಬರೆದ 'Kannada Language' ಮೊದಲಬಾರಿಗೆ ಕನ್ನಡ ವ್ಯಾಕರಣವನ್ನು ರಷ್ಯನ್ ಭಾಷೆಯಲ್ಲಿ ಹೇಳಿರುವ ಗ್ರಂಥವಾಗಿದೆ. ಈ ಪ್ರಯತ್ನ ರಷ್ಯಾದೇಶವು ದಕ್ಷಿಣಭಾರತದ ಜನಗಳ ಮತ್ತು ಭಾಷೆಗಳ ಬಗೆಗೆ ತಳೆದಿರುವ ಮೈತ್ರಿಯ ಆಸಕ್ತಿಯ ಪ್ರತೀಕವಾಗಿದೆ.

ಕನ್ನಡದಲ್ಲಿ ಭಾಷಾವಿಜ್ಞಾನದ ಮೂಲತತ್ತ್ವಗಳನ್ನು ಕುರಿತು ಪ್ರಕಟವಾದ ಪುಸ್ತಕಗಳಲ್ಲಿ ಪ್ರೊ. ಜಾಗೀರ್‌ದಾರರ 'ಶಾರದೆಯ ಸಂಸಾರ' ವನ್ನು ಕಾಲದೃಷ್ಟಿಯಿಂದ ಮೊದಲನೆಯದಾಗಿ ಎಣಿಸಬಹುದು; ಆದರೆ ವೈಜ್ಞಾನಿಕ ದೃಷ್ಟಿಯಿಂದ ವಿಸ್ತರಗೊಂಡ ಆಧುನಿಕವಿಚಾರಧಾರೆಯಲ್ಲಿ ಭಾಷಾವಿಜ್ಞಾನದ ಮೂಲತತ್ತ್ವಗಳನ್ನು ಕುರಿತು ಕನ್ನಡದಲ್ಲಿ ಮೊದಲಬಾರಿಗೆ ಪ್ರಕಟವಾದ ಗ್ರಂಥವೆಂದರೆ ಡಾ. ಎಂ. ಚಿದಾನಂದಮೂರ್ತಿ ಅವರು ಬರೆದ 'ಭಾಷಾವಿಜ್ಞಾನದ ಮೂಲತತ್ತ್ವಗಳು' ಎಂಬುದೇ ಆಗಿದೆ. ಇದು ಅಚ್ಚಾದದ್ದು ೧೯೬೫ರಲ್ಲಿ. ಈ ಗ್ರಂಥವನ್ನು ಮುಖ್ಯವಾಗಿ ವಿದ್ಯಾರ್ಥಿಗಳನ್ನೂ ಭಾಷಾವಿಜ್ಞಾನದ ಪರಿಚಯವನ್ನು ಮಾಡಿಕೊಳ್ಳಲು ಬಯಸುವ ವಿದ್ಯಾವಂತರನ್ನೂ ದೃಷ್ಟಿಯಲ್ಲಿರಿಸಿಕೊಂಡು ಬರೆದದ್ದಾಗಿದೆಯೆಂದು ತಿಳಿಯುವುದು. ಗ್ರಂಥಕರ್ತೃಗಳೇ ಹೇಳಿರುವಂತೆ ಈ ಗ್ರಂಥದಲ್ಲಿ ಐತಿಹಾಸಿಕ ಭಾಷಾವಿಜ್ಞಾನಕ್ಕೆ ಹೆಚ್ಚು ಪ್ರಾಮುಖ್ಯ ಸಂದಿದೆ; ಒಂದು ಅಧ್ಯಾಯದಲ್ಲಿ ವರ್ಣನಾತ್ಮಕ ಮತ್ತು ತೌಲನಿಕ ಭಾಷಾವಿಜ್ಞಾನಗಳ ಸ್ಥೂಲ ಪರಿಚಯವನ್ನು ಮಾಡಿಕೊಟ್ಟಿದೆ. ಈ ಗ್ರಂಥವು ಪೂರ್ವಸೂರಿಗಳ ಪ್ರಸಿದ್ಧ ಗ್ರಂಥಗಳಲ್ಲಿ ಪ್ರತಿಪಾದಿತವಾಗಿರುವ ಭಾಷಾತತ್ತ್ವವಿವರಣೆಗಳ ಸರಳ ಸಂಕ್ಷಿಪ್ತ ಕನ್ನಡ ನಿರೂಪಣೆಯೇ ಆದರೂ ಅಲ್ಲಲ್ಲಿ ಸ್ವಂತ ಅಧ್ಯಯನದ ಅಂಶಗಳನ್ನೂ ಸ್ವಂತ ಸಂಶೋಧನೆಯ

ಫಲಿತಗಳನ್ನೂ ಲೇಖಕರು ವಿರಳವಾಗಿ ಸೇರಿಸಿರುತ್ತಾರೆ. ಗ್ರಂಥದಲ್ಲಿ ೧೩ ಪ್ರಕರಣಗಳಿದ್ದು ಗ್ರಂಥಾಭ್ಯಾಸಕ್ಕೆ ಅನುಕೂಲವಾಗುವ ಮೂರು ಅನುಬಂಧಗಳಿವೆ. ಶ್ರೀಯುತರು ಭಾಷಾವಿಜ್ಞಾನದ ಬೇಸಗೆಕಾಲದ ಅಭ್ಯಾಸಶಿಬಿರಗಳು ನಡೆದ ಬೇರೆ ಬೇರೆ ಸಂದರ್ಭಗಳಲ್ಲಿ ಹಲವರು ದೇಶೀಯ ಮತ್ತು ವಿದೇಶೀಯ ವಿದ್ವಾಂಸರಿಂದ ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ಕೇಳಿ ಅರಿತು ಅಭಿವೃದ್ಧಿಪಡಿಸಿಕೊಂಡ ಭಾಷಾವಿಜ್ಞಾನದ ಆಸಕ್ತಿ, ಅಧ್ಯಯನಗಳ ಫಲವಾಗಿ ಈ ಗ್ರಂಥ ರಚಿತವಾಗಿದೆ. ಗ್ರಂಥದ ಶೈಲಿ ನಿಷ್ಕೃಷ್ಟವೂ ನಿರರ್ಗಳವೂ ಆಗಿದ್ದು, ಪ್ರತಿಪಾದಿತವಾದ ಶಾಸ್ತ್ರವಿಷಯವನ್ನು ಆತ್ಮೀಯವೂ ಆಕರ್ಷಕವೂ ಆಗಿ ಮಾಡಿದೆ.

೧೯೬೬ರಲ್ಲಿ ಬೆಂಗಳೂರಿಂದ ಪ್ರಕಟವಾದ ಹಂಪ. ನಾಗರಾಜಯ್ಯನವರ 'ದ್ರಾವಿಡ ಭಾಷಾ ವಿಜ್ಞಾನ' ಎಂಬ ಗ್ರಂಥವು ಸಾಕಲ್ಯದೃಷ್ಟಿಯನ್ನಿರಿಸಿಕೊಂಡು ಆ ವಿಷಯವನ್ನು ವಿವರಿಸಲು ಯತ್ನಿಸಿರುವ ಒಂದು ಉದ್ಗ್ರಂಥವಾಗಿದೆ. ಗ್ರಂಥಕ್ಕೆ ಪ್ರೊ. ದೇ. ಜವರೇಗೌಡರ ವಿದ್ವತ್ಪೂರ್ಣವಾದ ಮುನ್ನುಡಿಯಿದೆ. ದ್ರಾವಿಡ ಭಾಷೆಗಳಲ್ಲಿ ಈಗಾಗಲೇ ತಮ್ಮ ಪರಿಶ್ರಮಪೂರ್ಣ ಅಧ್ಯಯನದ ಉತ್ತಮಫಲಗಳನ್ನು ಹಲವಾರು ಲೇಖನಗಳ ಹಾಗೂ ಗ್ರಂಥಗಳ ಮೂಲಕವಾಗಿ ಪ್ರಕಟಿಸಿರುವ ಹಲವಾರು ದೇಶೀಯ ಮತ್ತು ವಿದೇಶೀಯ ವಿದ್ವಾಂಸರ ರಚನೆಗಳನ್ನೆಲ್ಲ ಸಾಧ್ಯವಿದ್ದಮಟ್ಟಿಗೆ ಸಂಗ್ರಹಿಸಿ, ಅನಂತರದಲ್ಲಿ ಅವುಗಳನ್ನು ವಿಶ್ಲೇಷಿಸಿ, ಅವುಗಳ ಸಾರಾಂಶರೂಪವನ್ನು ಸರಳವೂ ಆಕರ್ಷಕವೂ ಆದ ಶೈಲಿಯಲ್ಲಿ ಈ ಕನ್ನಡ ಗ್ರಂಥದಲ್ಲಿ ಸಂಯೋಜಿಸಲಾಗಿದೆ. ಇದು ಕೂಡ ಅಭ್ಯಾಸಿಗಳಿಗೂ ವಿದ್ಯಾರ್ಥಿಗಳಿಗೂ ಬೇಕಾಗಿರುವಂತೆ ಸಿದ್ಧವಾಗಿರುವ ಒಂದು ಅಧ್ಯಯನ ಪ್ರವೇಶಿಕೆಯೇ. ದ್ರಾವಿಡ ಭಾಷೆಗಳ ಚರಿತ್ರೆಯನ್ನೂ ನಾನಾ ವೈಲಕ್ಷಣ್ಯಗಳನ್ನೂ ಒಂದೇ ಕಡೆಯಲ್ಲಿ ಮೊದಲಬಾರಿಗೆ ಕನ್ನಡದಲ್ಲಿ ಕಾಣುತ್ತಿರುವುದು ಇದೇ ಗ್ರಂಥದಲ್ಲಿ ಎನ್ನಬಹುದು. ಆಯಾ ಭಾಷೆಗಳ ಬಗೆಗೆ ಈವರೆಗೆ ಬಂದಿರುವ ಕೆಲವು ಸಂಶೋಧನಗಳನ್ನು ಈ ಗ್ರಂಥವು ಒಳಕೊಂಡಿದ್ದರೂ, ಅಭ್ಯಾಸಿಗಳಿಗೆ ಸಾಕಾಗುವನಿತು ಪರಿಚಯಾತ್ಮಕ ವಿವರಗಳನ್ನಷ್ಟೇ ಇಲ್ಲಿ ಒದಗಿಸಲಾಗಿದೆ.

೧೯೬೬ರಲ್ಲಿಯೇ ವಿಲಿಯಂ ಮೆಕ್ಕೊರ್ಮ್ಯಾಕ್ (William Mc Cormack) ಅವರು 'Kannada—A Cultural ntroduction to the Spoken Styles of the language' ಎಂಬ ಕೃತಿಯೊಂದನ್ನು ಬರೆದಿದ್ದಾರೆ.

೧೯೬೬ನೆಯ ಡಿಸೆಂಬರ್ ೮, ೯ ಮತ್ತು ೧೦ರಂದು ಮಾನಸಗಂಗೋತ್ರಿಯಲ್ಲಿ ನಡೆದ ಮೈಸೂರು ವಿಶ್ವವಿದ್ಯಾನಿಲಯದ ಸುವರ್ಣಮಹೋತ್ಸವ ಸಮಾರಂಭಗಳ ಅಂಗವಾಗಿ ನಡೆದ ಕನ್ನಡ ಲೇಖಕರ ಸಮ್ಮೇಳನದ ಕಾರ್ಯಕಲಾಪಗಳು ಕನ್ನಡ ಅಧ್ಯಯನ ಸಂಸ್ಥೆಯ ಮೂಲಕವಾಗಿ 'ಸುವರ್ಣ ಸಂಚಯ' ಎಂಬ ಗ್ರಂಥರೂಪದಲ್ಲಿ (೧೯೬೭) ಪ್ರಕಟವಾಗಿದೆ. ಡಿಸೆಂಬರ್ ೧೦ರಂದು ನಡೆದ ಮೂರನೆಯ ವಿಚಾರಗೋಷ್ಠಿ 'ಇಂದಿನ ಕನ್ನಡದ ಪ್ರಾದೇಶಿಕ ಸ್ವರೂಪಗಳು' ಎಂಬ ವಿಷಯವನ್ನು ಕುರಿತದ್ದು.

ಅದರಲ್ಲಿ ನಾಡಿನ ನಾನಾ ಭಾಗಗಳ ಕನ್ನಡ ವಿದ್ವಾಂಸರು, ಕನ್ನಡ ಭಾಷೆಯ ಪ್ರಾಂತ ಭೇದಗಳ ವೈಲಕ್ಷಣ್ಯಗಳನ್ನು, "ಕನ್ನಡ ಭಾಷೆ ತನ್ನ ಧ್ವನಿಗಳಲ್ಲಿ ಪದಗಳಲ್ಲಿ ವ್ಯಾಕರಣ ವಿಚಾರಗಳಲ್ಲಿ ವಾಕ್ಯರಚನೆಯ ಅಂಗಗಳಲ್ಲಿ ಅರ್ಥ ವ್ಯತ್ಯಾಸದಲ್ಲಿ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಹೇಗೆ ಬದಲಾಗುವುದೆಂಬುದನ್ನು",—ಉದಾಹರಣ ಪೂರ್ವಕವಾಗಿ ವಿವರಿಸಿರುತ್ತಾರೆ. ವರ್ಣರಂಜಿತವೂ ವೈವಿಧ್ಯಮಯವೂ ಆದ ಕನ್ನಡ ನುಡಿಯ ನಿರಿಗೆಯನ್ನು ಸರಸ ಸುಂದರವಾಗಿ ನಿರೂಪಿಸಿರುವುದು, ಒಂದೇ ಕಡೆಯಲ್ಲಿ ಈ ಗ್ರಂಥದಲ್ಲಿ ಕಾಣಲು ದೊರೆಯುತ್ತದೆ.

ಪ್ರ. ಗೋ. ಕುಲಕರಣಿ ಎಂಬವರು 'ಕನ್ನಡ ಭಾಷೆಯ ಚರಿತ್ರೆ' ಎಂಬ ಉದ್ಗ್ರಂಥವೊಂದನ್ನು ರಚಿಸಿ ೧೯೬೭ರಲ್ಲಿ ಬೆಳಗಾವಿನಿಂದ ಅದನ್ನು ಪ್ರಕಟಿಸಿರುತ್ತಾರೆ. ಸರ್ವಸಮ್ಮತವಾದ ಶಾಸ್ತ್ರೀಯ ವ್ಯಾಕರಣರಚನೆಗೆ ಸಹಾಯಕವಾಗಲೆಂದು, ಕನ್ನಡ ಭಾಷೆಯ ಚರಿತ್ರೆಯನ್ನು ಸಾದ್ಯಂತವಾಗಿ ವಿವರಿಸುವ ಗ್ರಂಥಗಳ ಕೊರತೆಯನ್ನು ಕಳೆಯಲೆಂದು ತಾವು ಪ್ರಸ್ತುತ ಗ್ರಂಥವನ್ನು ಬರೆದುದಾಗಿ ಅವರು ಮುನ್ನುಡಿಯಲ್ಲಿ ತಿಳಿಸಿದ್ದಾರೆ. ಈ ಕೃತಿ ಗ್ರಂಥಕರ್ತೃಗಳ ಹಲವಾರು ವರ್ಷಗಳ ಭಾಷಾಸಾಹಿತ್ಯ ವ್ಯಾಸಂಗದ ಪರಿಶ್ರಮವನ್ನು ಒಳಕೊಂಡು, ಕನ್ನಡ ಭಾಷಾ ಚರಿತ್ರೆಯೊಂದನ್ನು ಬರೆಯಬೇಕೆಂಬ ಬಹುಕಾಲದ ಜೀವನ ಸಂಕಲ್ಪದ ಪೂರೈಕೆಯಾಗಿ ಹೊರಬಿದ್ದಿದೆ. ಜೀವನದ ನಾನಾ ಕ್ಲೇಶಮಯ ಸನ್ನಿವೇಶಗಳ ಒತ್ತಡದಲ್ಲಿಯೂ ಭಾಷಾವ್ಯಾಕರಣ ದಂತಹ ನಿರಾಕರ್ಷಕ ಶಾಸ್ತ್ರ ವಿಷಯದ ಮೇಲೆ ಇಷ್ಟರಮಟ್ಟಿಗೆ ಗ್ರಂಥವೊಂದನ್ನು ಬರೆಯುವಂತಾದುದು ಅವರ ಭಾಷಾಪ್ರೇಮ ಚಿತ್ತಸ್ಥೈರ್ಯಗಳಿಗೆ ಉಜ್ವಲವಾದ ಸಾಕ್ಷಿಯಾಗಿದೆ. ಶ್ರೀಯುತರು ಗ್ರಂಥಸ್ವರೂಪವನ್ನು ಮುನ್ನುಡಿಯಲ್ಲಿ ತಕ್ಕಮಟ್ಟಿಗೆ ವಿವರಿಸಿರುತ್ತಾರೆ. ಕನ್ನಡ ಭಾಷೆಯ ಚರಿತ್ರೆಯನ್ನು ಶಾಸನಾಧಾರ ಗ್ರಂಥಾಧಾರ ಗಳಿಂದ ಭಿನ್ನಾಭಿಪ್ರಾಯಕ್ಕೆ ಎಡೆಯಿಲ್ಲದಂತೆ ವಿವರಿಸಿರುವುದಾಗಿ ಅವರು ವಿಶ್ವಾಸ ತಳೆದಿದ್ದಾರೆ. ಅವರು ಅಭ್ಯಾಸ ಮಾಡಿರುವ ಗ್ರಂಥಗಳು ವಿಪುಲವಾಗಿವೆ. ಪ್ರಾಚೀನ ವ್ಯಾಕರಣಗಳನ್ನೂ ವ್ಯಾಕರಣ ವಿಚಾರಗಳ ಮೇಲೆ ಬಂದಿರುವ ಹಳಬರ ರಚನೆಗಳನ್ನೂ ತಮ್ಮ ಗ್ರಂಥರಚನೆಯಲ್ಲಿ ಮುಖ್ಯ ಸಾಮಗ್ರಿಯಾಗಿ ಸ್ವೀಕರಿಸಿದ್ದರೂ, ಸ್ವತಂತ್ರವಾದ ಸೂಕ್ಷ್ಮವಾದ ವಿಮರ್ಶನ ವಿಧಾನವನ್ನು ಲೇಖಕರು ಉದ್ದಕ್ಕೆ ಅನುಸರಿಸಿರುತ್ತಾರೆ. ಮುಖ್ಯ ವಿಷಯ ನಿರೂಪಣೆಯಲ್ಲಿ, ಪೂರ್ವಾಭಿಪ್ರಾಯಗಳನ್ನು ಒಪ್ಪುವ ಬಿಡುವ ವಿಮರ್ಶನ ರೀತಿಯಲ್ಲಿ, ಸ್ವಾಭಿಪ್ರಾಯ ಪ್ರಕಟನೆಯಲ್ಲಿ, ಸಂಕ್ಷೇಪ ಸಂಯಮದೃಷ್ಟಿಗಳು ಹೆಚ್ಚಾಗಿ ತೋರುತ್ತವೆ. ಹಳೆಯ ವ್ಯಾಕರಣದ ನೆಲೆಗಟ್ಟು ಬಿಡದೆ ಚಾರಿತ್ರಿಕ ಭಾಷಾವಿಜ್ಞಾನದ ಪದ್ಧತಿಯಲ್ಲಿ ಸ್ಥೂಲವಾಗಿ ವಸ್ತುವಿವೇಚನೆ ಈ ಗ್ರಂಥದಲ್ಲಿ ನಡೆದಿದೆ. ಪ್ರಸ್ತಾವನಾಕಾಂಡ, ವರ್ಣಕಾಂಡ, ಶಬ್ದಕಾಂಡ, ಪದಸಿದ್ಧಿಕಾಂಡ, ಪರಿಶಿಷ್ಟಕಾಂಡ—ಎಂಬ ಐದು ಕಾಂಡಗಳಿವೆ, ಗ್ರಂಥದಲ್ಲಿ.

ಅಮೇರಿಕಾದ ಇಂಡಿಯಾನಾ ಯೂನಿವರ್ಸಿಟಿಗೆ ಡಾಕ್ಟರೇಟ್ ನಿಬಂಧವಾಗಿ

೧೯೬೪ರಲ್ಲಿ ಸಾದರಪಡಿಸಿದ್ದ ಡಾ. ಎಚ್. ಎಮ್. ನಾಯಕ್ ಅವರ 'Kannada Literary and Colloquial' ಎಂಬ ಗ್ರಂಥವು ೧೯೬೭ರಲ್ಲಿ ಮೈಸೂರಿಂದ ಪ್ರಕಟಗೊಂಡಿದೆ. ಕ್ಲ್ಯಾಸಿಕ್ಸ್ ಮತ್ತು ಲಿಂಗ್ವಿಸ್ಟಿಕ್ಸ್‌ಗಳಲ್ಲಿ ಪ್ರೊಫೆಸರ್ ಆದ ಡಾ. ಫ್ರೆಡ್ ಎಚ್. ಹೌಸ್‌ಹೋಲ್ಡರ್ ಜೂ., (Dr. Fred H. Householder Jr.,) ಅವರ ದಿಗ್ದರ್ಶನದಲ್ಲಿ ಸಿದ್ಧಗೊಳಿಸಲ್ಪಟ್ಟ ಈ ನಿಬಂಧವು ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದ ಇಂಡಿಯನ್ ಇನ್ಸಿಟ್ಯೂಟ್‌ನ ಸಂಸ್ಕೃತ ಪ್ರಾಧ್ಯಾಪಕರಾದ ಟಿ. ಬರ್ರೋ (T. Burrow) ಅವರ ಮುನ್ನುಡಿಯನ್ನು ಒಳಕೊಂಡು ಹೊರಬಂದಿದೆ. ಈ ಗ್ರಂಥದಲ್ಲಿ ಸಾಹಿತ್ಯಿಕ (ಗ್ರಾಂಥಿಕ) ಮತ್ತು ವ್ಯವಹಾರದ ಕನ್ನಡ ಭಾಷಾಭೇದಗಳ ರಚನಾತ್ಮಕ ಸಂಕೀರ್ಣತೆಯನ್ನು ಆಳವಾಗಿ ಅಧ್ಯಯನ ಮಾಡಿದೆ. ಈ ತೌಲನಿಕ ಅಧ್ಯಯನದಲ್ಲಿ ಆಯೆರಡೂ ಮಾರ್ಗಗಳನ್ನು ಧ್ವನಿಮಾ ಪ್ರಕ್ರಿಯೆ (Phonological) ಆಕೃತಿಮಾ ಪ್ರಕ್ರಿಯೆ (Morphological) ಮತ್ತು ಪದ/ಪದಕೋಶಾತ್ಮಕ ಪ್ರಕ್ರಿಯೆ (Lexical)—ಎಂಬ ಮೂರು ರೀತಿಯ ವ್ಯತ್ಯಾಸಗಳನ್ನು ಅನುಲಕ್ಷಿಸಿ ವಿಸ್ತಾರವಾಗಿ ವಿವೇಚಿಸಿದೆ. ಪದಕೋಶದ ಹೋಲಿಕೆಗಾಗಿ ಬಳಸಿದ ೫೨೦ ಪದಗಳ ಒಂದು ಪಟ್ಟಿಯನ್ನು ಬರೆಹದ ಮತ್ತು ಆಡುಮಾತಿನ ಸಮಾನ ಪದಗಳೊಡನೆ ಸೇರಿಸಿದೆ. ಧ್ವನ್ಯಾತ್ಮಕ ಮತ್ತು ರೂಪಾತ್ಮಕ ವ್ಯತ್ಯಾಸಗಳೆಲ್ಲ ವಿವರವಾಗಿ ಕ್ರೋಡೀಕೃತವಾಗಿರುವುದರಿಂದ ಈ ಗ್ರಂಥವು ಆಯಂಶಗಳ ಮೇಲೆ ಅತ್ಯುಪಯುಕ್ತವಾದ ಗ್ರಂಥವಾಗಿದೆಯೆಂದು ಮುನ್ನುಡಿಕಾರರು ಹೇಳಿರುವುದನ್ನು ಗಮನಿಸಬೇಕು. ಈ ಮೊದಲು ಬ್ರೈಟ್, ಹಿರೇಮಠ್ ಮೊದಲಾದವರು ಕನ್ನಡದ ಬೇರೆ ಬೇರೆ ಪ್ರದೇಶಗಳ ಆಡುಮಾತಿನ ಸ್ವರೂಪವನ್ನು ವಿಶ್ಲೇಷಿಸಿರುವರಾದರೂ, ಪ್ರಸ್ತುತ ಗ್ರಂಥದಲ್ಲಿ ಬರೆಹ ಮತ್ತು ಆಡುನುಡಿಗಳೆರಡರ ತೌಲನಿಕ ವಿವರ ವಿಶ್ಲೇಷಣೆಯನ್ನು ಮಾಡಿರುವುದರಿಂದ ಈ ದಿಕ್ಕಿನಲ್ಲಿ ಇದು ಒಂದು ಮಾರ್ಗದರ್ಶಕವಾದ ಪ್ರಥಮ ಕ ತಿಯಾಗಿದೆಯೆಂದು ಹೇಳಬಹುದು. ಶಿವಮೊಗ್ಗಾ ಜಿಲ್ಲೆಯ ಅನಕ್ಷರಸ್ಥರ ಭಾಷೆಯನ್ನು ಆಡುಮಾತಿಗೆ ಮೂಲಸಾಮಗ್ರಿಯಾಗಿ ತೆಗೆದುಕೊಂಡಿದೆ. ಗ್ರಂಥದ ಮುಖ್ಯಭಾಗದಲ್ಲಿ ೫ ಪ್ರಕರಣಗಳಿವೆ. ಪದಕೋಶದ ಒಂದು ಪರಿಶಿಷ್ಟವೂ ಅಭ್ಯಾಸಿಗಳಿಗೆ ಬೇಕಾಗುವ ಒಂದು ಗ್ರಂಥಸೂಚಿಯೂ ಕೊನೆಗೆ ಸೇರಿ ಗ್ರಂಥಪ್ರಯೋಜನವನ್ನು ಅಧಿಕಗೊಳಿಸಿವೆ.

ದಕ್ಷಿಣ ಭಾರತೀಯ ಭಾಷೆಗಳ ಭಾಷಾಸಮೀಕ್ಷೆಯು ಬಹಳ ಕಾಲದಿಂದ ಉಪೇಕ್ಷೆಗೆ ಗುರಿಯಾಗಿದ್ದು, ಈ ವಿಷಯದಲ್ಲಿ ಆಸಕ್ತಿವಹಿಸಿದ ಪುಣೆಯ ಡೆಕ್ಕನ್ ಕಾಲೇಜು ಕೇಂದ್ರಸರ್ಕಾರದ ನೆರವನ್ನು ದೊರಕಿಸಿಕೊಂಡು, ಆಧುನಿಕ ಭಾಷಾ ವಿಜ್ಞಾನದಲ್ಲಿ ಚೆನ್ನಾಗಿ ತರಬಿಯತ್ತು ಪಡೆದಿರುವ ಶ್ರದ್ಧೋತ್ಸಾಹಿಗಳಾದ ತರುಣ ವಿದ್ವಾಂಸರ ಮೂಲಕವಾಗಿ ಈಗಾಗಲೇ ಆ ಕಾರ್ಯವನ್ನು ಯಶಸ್ವಿಯಾಗಿ ಮುನ್ನಡಸುತ್ತಲಿದೆ. ಕನ್ನಡ ನಾಡಿನ ಹತ್ತಾರು ಕಡೆಗಳ ವ್ಯವಹಾರ ಭಾಷೆಯನ್ನು ವಿವರಣಾತ್ಮಕವಾಗಿ ವಿಶ್ಲೇಷಣಗೊಳಿಸಿದ್ದು ಅವುಗಳಲ್ಲಿ ಒಂದೆರಡು ಗ್ರಂಥಗಳು ಈವರೆಗೆ ಅಚ್ಚಾಗಿರುವಂತೆ

ತಿಳಿಯುತ್ತದೆ. ಈ ಶ್ಲಾಘ್ಯವಾದ ಕೆಲಸದ ವ್ಯವಸ್ಥೆ ಮತ್ತು ಉಪಯುಕ್ತತೆಗಳನ್ನು ಕುರಿತು ಎಸ್. ಎಮ್. ಕತ್ರೆ ಅವರು 'Halakki Kannada' ದ ಮುನ್ನುಡಿಯಲ್ಲಿ ಬರೆದಿರುತ್ತಾರೆ. ಎ. ಶ್ರೀರಮಣ ಆಚಾರ್ಯರ 'Halakki Kannada' ಎಂಬ ಇಂಗ್ಲಿಷ್ ಭಾಷೆಯಲ್ಲಿರುವ ಗ್ರಂಥವು ಪುಣೆಯ ಸ್ನಾತಕೋತ್ತರ ಮತ್ತು ಸಂಶೋಧನ ಸಂಸ್ಥೆಯಾಗಿರುವ ಡೆಕ್ಕನ್ ಕಾಲೇಜಿನವರ 'ಭಾರತದ ಭಾಷಾಸಮೀಕ್ಷೆಯ ಗ್ರಂಥ ಮಾಲೆಯ' ಪ್ರಥಮ ಕೃತಿಯಾಗಿ ೧೯೬೭ರಲ್ಲಿ ಅಚ್ಚಾಯಿತು. ಹಾಲಕ್ಕಿ ಕನ್ನಡದ ಒಂದು ಉಪಭಾಷೆ; ಹಾಲಕ್ಕಿ ವಕ್ಕಲರು ಆಡುವ ಮಾತು. ಮೈಸೂರು ಪ್ರಾಂತದ ಉತ್ತರ ಕನ್ನಡ ಜಿಲ್ಲೆಯ ಕುಮಟಾ ಕಾರವಾರ ಅಂಕೋಲ ಮತ್ತು ಹೊನ್ನಾವರ ತಾಲ್ಲೂಕುಗಳ ಸುತ್ತು ಮುತ್ತಿನ ಹಳ್ಳಿಗಳಲ್ಲಿ ಬಹುಮಟ್ಟಿಗೆ ವಾಸಿಸುವ ಇವರ ಸಂಖ್ಯೆ ಸು. ನಲವತ್ತು ಸಾವಿರ. ಇವರ ಮುಖ್ಯವೃತ್ತಿ ಬೇಸಾಯ. ಕುಮಟಾದಲ್ಲಿ ವಾಸಿಸುವ ಗಿರಿಯ ಗಾಣಪ್ಪಗೌಡ ಎಂಬ ಭಾಷಾನಿವೇದಕನಿಂದ ಸಂಗ್ರಹಿಸಿದ ಭಾಷಾಸಾಮಗ್ರಿಯನ್ನು ಪ್ರಸ್ತುತ ಕೃತಿಯಲ್ಲಿ ವಿಶ್ಲೇಷಿಸಿದೆ. ಗ್ರಂಥದ ಮುನ್ನುಡಿಯಲ್ಲಿಯೇ ಪೂರ್ವ ನಿರ್ದಿಷ್ಟವಾದ ಯೋಜನೆಯಂತೆ ಈ ಉಪಭಾಷಾ ಪರಿವೀಕ್ಷಣೆಯ ಫಲಿತಗಳನ್ನೂ ಸಾಮಾನ್ಯ ಲಕ್ಷಣಗಳನ್ನೂ ಕ್ರೋಡೀಕರಿಸಿದೆ. ಈ ಆಡುಮಾತಿಗೆ ವ್ಯಾಕರಣವನ್ನು ಧ್ವನಿವಿಜ್ಞಾನ, ರೂಪಧ್ವನಿಮಾಯ ವಿಜ್ಞಾನ, ರೂಪಿಮಾ ವಿಜ್ಞಾನ, ಪಠ್ಯ ಸಾಮಗ್ರಿ, ವಾಕ್ಯಗಳ ಪಟ್ಟಿ, ಪದಕೋಶ–ಈಯಾರು ಪ್ರಧಾನ ಖಂಡಗಳಲ್ಲಿ ವಿವರಿಸಿದೆ. ಪೂರ್ವೋಕ್ತವಾದ ಸಂಸ್ಥೆಯ ಅದೇ ಸಾಲಿನ ಎರಡನೆಯ ಪ್ರಕಟನೆಯೆಂದರೆ ಯು. ಪದ್ಮನಾಭ ಉಪಾಧ್ಯಾಯ ಅವರ 'Nanjangud Kannada (Vakkaliga Dialect)'. ಇದು ೧೯೬೮ರಲ್ಲಿ ಅಚ್ಚಾಗಿದೆ. ಇದರಲ್ಲಿ 'ಮೈಸೂರು ಕನ್ನಡ'ವೆಂದೇ ಸಾಮಾನ್ಯವಾಗಿ ಕರೆಯುವ ನಂಜನಗೂಡು ಪ್ರದೇಶದ ಒಕ್ಕಲಿಗರ ಆಡುನುಡಿಯನ್ನು ವಿಶ್ಲೇಷಿಸಿದೆ. ಇದಕ್ಕೆ ನಂಜಪ್ಪನೆಂಬೊಬ್ಬ ಅನಕ್ಷರಸ್ಥ ಬೇಸಾಯಗಾರನನ್ನು ಭಾಷಾ ನಿವೇದಕನನ್ನಾಗಿ ಇಟ್ಟುಕೊಂಡಿದೆ. ಇದರ ಸ್ವರೂಪ ಈ ಮೊದಲು ಹೇಳಿದ ಎ. ಎಸ್. ಆಚಾರ್ಯರ ಗ್ರಂಥದ ರೀತಿಯಲ್ಲಿಯೇ ಇದೆ.

ಹೀಗೆಯೇ ಪುಣೆಯ ಡೆಕ್ಕನ್ ಕಾಲೇಜ್ ಮೂಲಕವಾಗಿ ಆರ್. ಮಹಾದೇವನ್ ಅವರು ಸಿದ್ಧಪಡಿಸಿದ 'Gulbarga Kannada' ಅಚ್ಚಿನಲ್ಲಿರುವ ಹಾಗೆಯೂ, ಯು. ಪಿ. ಉಪಾಧ್ಯಾಯ ಅವರು ಸಿದ್ಧಪಡಿಸಿರುವ 'Gulbarga Kannada (Lingayat)', 'Bellari Kannada', 'Standard Kannada' ಮತ್ತು 'Coorg Kannada' ಎಂಬ ಗ್ರಂಥಗಳೂ, ಆರ್. ಮಹಾದೇವನ್ ಸಿದ್ಧಪಡಿಸಿರುವ 'Nanjangud Kannada (Brahmin) ಮತ್ತು 'Coimbatore Kannada' ಎಂಬ ಗ್ರಂಥಗಳೂ, ಎ. ಎಸ್. ಆಚಾರ್ಯರು ಸಿದ್ಧಪಡಿಸಿರುವ 'Tipatur Kannada' 'Bijapur Kannada' ಮತ್ತು 'Kota Kannada' ಎಂಬ ಗ್ರಂಥಗಳೂ, ಡಿ. ಎನ್. ಎಸ್. ಭಟ್ ಅವರು ಸಿದ್ಧಪಡಿಸಿರುವ 'Havyaka Kannada' ಎಂಬ ಗ್ರಂಥವೂ ಪ್ರಕಟನೆಗೆ

ಸಿದ್ಧವಾಗಿರುವುದಾಗಿಯೂ, 'Madurai Kannada' ಮತ್ತು 'Shimoga Kannada' ಎಂಬ ಗ್ರಂಥಗಳಿಗೆ ಸಾಮಗ್ರಿ ಕ್ರೋಢೀಕೃತವಾಗಿರುವುದಾಗಿಯೂ ಪ್ರಕಟವಾದೆರಡು ಗ್ರಂಥಗಳಲ್ಲಿ ಕೊಟ್ಟಿರುವ ಜಾಹಿರಾತುಗಳಿಂದ ತಿಳಿದುಬರುತ್ತದೆ.

ಈ ಮೊದಲು 'ದ್ರಾವಿಡ ಭಾಷಾ ವಿಜ್ಞಾನ'ವೆಂಬ ದೊಡ್ಡ ಗ್ರಂಥವನ್ನು ಬರೆದು ಭಾಷಾವಿಜ್ಞಾನ ಲೇಖನ ಪ್ರಪಂಚದಲ್ಲಿ ಪ್ರವೇಶಿಸಿದ ಹಂಪ. ನಾಗರಾಜಯ್ಯನವರು 'ಭಾಷಾವಿಜ್ಞಾನ'ವೆಂಬ ಇನ್ನೊಂದು ದೊಡ್ಡ ಗ್ರಂಥವನ್ನು ೧೯೭೦ರಲ್ಲಿ ಬರೆದು ಮೈಸೂರಿಂದ ಪ್ರಕಟಿಸಿ ತಮಗೆ ಭಾಷಾಶಾಸ್ತ್ರ ವಿಷಯದಲ್ಲಿರುವ ಅಮಿತಾಸಕ್ತಿಯನ್ನೂ ಸಾಮರ್ಥ್ಯವನ್ನೂ ಪ್ರಕಟಪಡಿಸಿರುತ್ತಾರೆ. ಈ ಗ್ರಂಥಕ್ಕೆ ಪ್ರೊ. ಡಿ. ಎಲ್. ನರಸಿಂಹಾಚಾರ್ ಅವರ ವಿಸ್ತಾರವೂ ವಿಚಾರಪೂರ್ಣವೂ ಆದ ಮುನ್ನುಡಿಯಿದೆ. ಈ ಮುನ್ನುಡಿಯಲ್ಲಿ ನಮ್ಮ ಪ್ರಾಚೀನ ಕನ್ನಡ ಕವಿಗಳಿಗಿದ್ದ 'ಭಾಷಾ ಪ್ರಜ್ಞೆ'ಯ ಬಗೆಗೆ, ಭಾಷಾವಿಜ್ಞಾನದ ಪ್ರಯೋಜನಗಳ ಬಗೆಗೆ, ವ್ಯಕ್ತವಾಗಿರುವ ವಿಚಾರಗಳು ನವೀನವೂ ಹೃದಯಂಗಮವೂ ಆಗಿವೆ. ಪ್ರಸ್ತುತ ಗ್ರಂಥದಲ್ಲಿ ೨೩ ಅಧ್ಯಾಯಗಳಿದ್ದು ಸಾಮಾನ್ಯ ಭಾಷಾವಿಜ್ಞಾನದ ಹಲವು ಸಿದ್ಧಾಂತಗಳ ಪರಿಚಯವನ್ನೂ ಸಾಧಾರಣ ರೂಪ ವೈಲಕ್ಷಣ್ಯಗಳನ್ನೂ ನಿರರ್ಗಳವಾದ ಶೈಲಿಯಲ್ಲಿ ಸಂಕ್ಷೇಪವಾಗಿಯೂ ಸರಳವಾಗಿಯೂ ಪರಿಚಯ ಮಾಡಿಕೊಡಲಾಗಿದೆ. ಆವಶ್ಯಕವಾದ ಕಡೆಗಳಲ್ಲಿ ಕನ್ನಡದ ಉದಾಹರಣೆಗಳ ನ್ನಾಯ್ದುಕೊಟ್ಟಿದೆ. ಭಾಷಾ ಸ್ವರೂಪ, ಸಂಸ್ಕೃತ ಪ್ರಾಕೃತ ಭಾಷೆಗಳು, ಭಾಷಾ ಮೂಲದ ಕೆಲವು ಸಿದ್ಧಾಂತಗಳು, ಭಾಷೆಯ ಬೆಳವಣಿಗೆ, ಭಾಷೆಗಳ ವರ್ಗೀಕರಣ, ವ್ಯಾಕರಣ ಮತ್ತು ಭಾಷಾವಿಜ್ಞಾನ, ಭಾಷಾ ಸಾಮಾನ್ಯದ ನಿಯಮಗಳು ಮತ್ತು ಸಿದ್ಧಾಂತಗಳು, ಭಾಷಾ ಪರಿವಾರಗಳು, ಭಾಷಾ ವಿಜ್ಞಾನದ ವ್ಯಾಸಂಗ ಮತ್ತು ವಿವಿಧ ಸಿದ್ಧಾಂತಗಳು—ಮುಂತಾದ ಹಲವು ವಿಚಾರಗಳನ್ನು ಕುರಿತು ಇಲ್ಲಿ ಪ್ರತಿಪಾದಿಸಿದೆ. ಗ್ರಂಥೋಪಯುಕ್ತವಾಗಿ ಇಲ್ಲಿ ಪಾರಿಭಾಷಿಕ ಶಬ್ದಕೋಶ ಮೊದಲಾದ ೫ ಅನುಬಂಧ ಗಳನ್ನು ಜತೆಗೆ ಸೇರಿಸಿದೆ. ಪ್ರಸ್ತುತ ಗ್ರಂಥವು ಸಾಮಾನ್ಯ ಭಾಷಾವಿಜ್ಞಾನದ ಅಭ್ಯಾಸಿಗಳಿಗೆ ಒಂದು ಪ್ರವೇಶಿಕೆ, ಒಂದು ಪಠ್ಯಗ್ರಂಥ ಎಂಬ ರೀತಿಯಲ್ಲಿ ಸಿದ್ಧವಾಗಿದೆ.

ಇತ್ತೀಚೆಗೆ ಡಾ. ಕೆ. ಎಂ. ಕೃಷ್ಣರಾವ್ ಅವರು 'ಕನ್ನಡ ಭಾಷಾಸ್ವರೂಪ' ಎಂಬ ಒಂದು ಲಘು ಕೃತಿಯನ್ನು ಬರೆದು (೧೯೭೦) ಕನ್ನಡ ಭಾಷಾ ಚರಿತ್ರೆಗಳ ಸಾಲಿಗೆ ಸೇರಿಸಿದ್ದಾರೆ. "ಭಾಷಾಶಾಸ್ತ್ರಕ್ಕೆ ಸಂಬಂಧಿಸಿದಂತೆ ಕನ್ನಡ ಭಾಷಾ ಸ್ವರೂಪದ ವಿವಿಧ ಅಂಗಗಳ ಪರಿಶೀಲನೆ ಈ ಕಿರು ಕೃತಿಯ ಗುರಿಯಾಗಿದೆ." ಇದರಲ್ಲಿ ಒಟ್ಟು ಹತ್ತು ಪ್ರಕರಣಗಳಿದ್ದು (ಭಾಷೆ ಮತ್ತು ಭಾಷಾಶಾಸ್ತ್ರ, ಭಾಷೆಯ ಉಗಮ, ಭಾಷಾ ವರ್ಗೀಕರಣ, ಕನ್ನಡ—ಒಂದು ದ್ರಾವಿಡಭಾಷೆ, ಕನ್ನಡ ಭಾಷೆಯ ಪ್ರಾಚೀನತೆ, ಕನ್ನಡ ಭಾಷೆಯ ಧ್ವನಿವ್ಯವಸ್ಥೆ, ಭಾಷಾವ್ಯತ್ಯಾಸಗಳು—ಕನ್ನಡ, ಸ್ವೀಕರಣ, ಕನ್ನಡದಲ್ಲಿ ಪದ ಮತ್ತು ವಾಕ್ಯರಚನಾ ವಿಧಾನ, ದ್ರಾವಿಡ (ಕನ್ನಡ) ಭಾಷೆಗಳ ಅಧ್ಯಯನ), ಕೊನೆಯಲ್ಲಿ 'ಅಭ್ಯಾಸ ಲೇಖನ—ಗ್ರಂಥಸೂಚಿ' ಎಂಬ ಒಂದು ಪರಿಶಿಷ್ಟವಿದೆ. ಕನ್ನಡ

ಭಾಷೆಯ ಸಾಮಾನ್ಯ ಸ್ವರೂಪವನ್ನು ಇಲ್ಲಿ ಬಲುಮಟ್ಟಿಗೆ ಸಾಂಪ್ರದಾಯಿಕ ವ್ಯಾಕರಣದ ಮತ್ತು ಚಾರಿತ್ರಿಕ ಭಾಷಾವಿಜ್ಞಾನದ ಪದ್ಧತಿಗಳನ್ನು ಅನುಸರಿಸಿ ಸರಳವೂ ಸಂಕ್ಷಿಪ್ತವೂ ಆಗಿ ಬರೆದಿದೆ. ಒಂದು ಸುಲಭ ಓದಿನ ಕೈಪಿಡಿಯೆಂದು ಇದರ ಬಗೆಗೆ ಹೇಳಬಹುದು.

ಪ್ರಸ್ತುತ, ಸ್ಥೂಲವೂ ಪರಿಚಯಾತ್ಮಕವೂ ಆದ ಈ ಪರಿಶೀಲನೆಯಿಂದ ಶಬ್ದ ಶಾಸ್ತ್ರದ ರಂಗದಲ್ಲಿ ನಡೆದಿರುವ ಪ್ರಗತಿ-ವಿಗತಿಗಳನ್ನು ಹೀಗೆ ತಿಳಿಯುವುದು ತಪ್ಪಾಗದು: ಈಯವಧಿಯಲ್ಲಿ ಸರಳ ವ್ಯಾಕರಣ ರಚನೆಯು ತಕ್ಕರೀತಿಯಲ್ಲಿ ಮುನ್ನಡೆ ನಡೆದಿಲ್ಲ. ಸಂಖ್ಯಾದೃಷ್ಟಿಯಿಂದ ಕ್ಷೀಣತೆ, ಪ್ರಯೋಗದೃಷ್ಟಿಯಿಂದ ವೈವಿಧ್ಯರಾಹಿತ್ಯ ಮತ್ತು ಶಾಸ್ತ್ರದೃಷ್ಟಿಯಿಂದ ಶೈಥಿಲ್ಯ—ಇವು ಸಾಮಾನ್ಯವಾಗಿ ತೋರುತ್ತವೆ. ಪ್ರೌಢ ವ್ಯಾಕರಣಗಳ ರಚನೆಯಲ್ಲಿ ಉಲ್ಲೇಖನಾರ್ಹವಾದ ಒಂದೇ ಒಂದು ಸ್ವತಂತ್ರ ಕೃತಿ ಈಯವಧಿಯಲ್ಲಿ ಕಂಡುಬರುವುದಿಲ್ಲ. ಸ್ವತಂತ್ರ ರೀತಿಯಲ್ಲಿಯೂ ಆಧುನಿಕ ಭಾಷಾ ಶಾಸ್ತ್ರ ಪದ್ಧತಿಗಳ ಬೆಳಕಿನಲ್ಲಿಯೂ ಸಾಂಪ್ರದಾಯಿಕ ವ್ಯಾಕರಣ ವಿಷಯಗಳ ಮತ್ತು ತತ್ತ್ವಗಳ ಪುನರ್ವಿಮರ್ಶೆ ಪುನರ್ಮೌಲ್ಯಮಾಪನಗಳು ತಕ್ಕಮಟ್ಟಿಗೆ ನಡೆದಿರುವುದು ಗಮನಾರ್ಹವಾಗಿದೆ. ಚಾರಿತ್ರಿಕ ಮತ್ತು ತೌಲನಿಕ ಭಾಷಾಶಾಸ್ತ್ರಪದ್ಧತಿಯು ೧೯ನೆಯ ಶತಕದ ಉತ್ತರಾರ್ಧದಲ್ಲಿ ಚಾಲನೆಯನ್ನು ಪಡೆದು, ಪ್ರಸ್ತುತ ಪರಿಶೀಲನೆಯ ಅವಧಿಯಲ್ಲಿ ವಿಶೇಷವಾಗಿ ರೂಢಿಗೆ ಬಂದಿತು. ಇದರ ಫಲವಾಗಿ ಸಾಮಾನ್ಯ ಭಾಷಾವಿಜ್ಞಾನ, ದ್ರಾವಿಡ ಭಾಷಾವಿಜ್ಞಾನ, ಕನ್ನಡ ಭಾಷಾಚರಿತ್ರೆ, ಶಾಸನಗಳ ಭಾಷೆಗೆ ವ್ಯಾಕರಣ, ಉಪಭಾಷಾ ಪರಿವೀಕ್ಷಣೆ, ವ್ಯವಹಾರ ಭಾಷಾಭೇದಗಳ ವಿಶ್ಲೇಷಣೆ, ಶಬ್ದಾರ್ಥವಿಚಾರ —ಮುಂತಾದ ವಿಭಾಗಗಳಲ್ಲಿ ಕ್ಷಿಪ್ರಕಾಲದಲ್ಲಿಯೇ ಶ್ಲಾಘ್ಯವಾದ ಕೆಲಸಗಳು ನಡೆದಿವೆ. ಇಲ್ಲಿಂದ ಮುನ್ನಡೆದು, ಈಚೆಗೆ ೧೫-೨೦ ವರ್ಷಗಳಿಂದ ತೀವ್ರಚಾಲನೆಯನ್ನು ಪಡೆದು ವಿಸ್ತಾರಗೊಳ್ಳುತ್ತಿರುವ ವಿವರಣಾತ್ಮಕ ಭಾಷಾವಿಜ್ಞಾನದ ತತ್ತ್ವಗಳಲ್ಲಿ ಕೂಡ ವಿದ್ಯಾರ್ಥಿಗಳೂ ವಿದ್ವಾಂಸರೂ ಪರಿಶ್ರಮಗಳಿಸಿ ಪಾಂಡಿತ್ಯವನ್ನಾರ್ಜಿಸಿ ಆ ತತ್ತ್ವಗಳ ಅನ್ವಯಾನುಸಾರವಾಗಿ ಕನ್ನಡದ ಭಾಷಾ-ಸಾಹಿತ್ಯಕ್ಷೇತ್ರಗಳಲ್ಲಿ ಶ್ರಮಿಸಿರುವುದು ಕಂಡು ಬರುತ್ತದೆ. ಈ ದಿಕ್ಕಿನಲ್ಲಿ ನಡೆದಿರುವ ಬಹುಪಾಲು ಕೆಲಸ ಇನ್ನೂ ಪ್ರಕಟವಾಗದೆ ಇದೆ. ಕೊನೆಯದಾಗಿ, ಪ್ರಾಚೀನ ವ್ಯಾಕರಣ ಗ್ರಂಥಗಳ ಪರಿಷ್ಕರಣ ಕಾರ್ಯದಲ್ಲಿಯೂ ತಕ್ಕಮಟ್ಟಿನ ಪ್ರಗತಿ ಸಾಧಿತವಾಗಿದೆಯೆಂದು ಹೇಳಬಹುದು.

ಇನ್ನು ವಿಮರ್ಶಾದೃಷ್ಟಿಯಿಂದ ಗಮನಿಸತಕ್ಕ ಒಂದು ವಿಷಯವಿದೆ. ಮೇಲೆ ಪರಿಶೀಲಿಸಲಾಗಿರುವ ಕೃತಿಗಳಲ್ಲಿ ಭಾಷಾಶಾಸ್ತ್ರೀಯವಾದ ಕೆಲವು ಕೃತಿಗಳು, ಬೇರೆ ಬೇರೆ ಕನ್ನಡ ಭಾಷಾಸಂಶೋಧಕರ ತೀಕ್ಷ್ಣವಾದ ವಿಮರ್ಶೆ ವಿಶ್ಲೇಷಣೆಗಳಿಗೆ ಗುರಿ ಯಾಗಿರುವುದು ಕೆಲವೊಮ್ಮೆ ಕಂಡುಬಂದಿದೆ. ಶಾಸ್ತ್ರವಿಷಯದ ನಿರೂಪಣೆಯಲ್ಲಿ ನಿರ್ದುಷ್ಟತೆ ನಿಸ್ಸೃಷ್ಟತೆಗಳಿರಬೇಕೆಂಬ ಕಳಕಳಿಯಿಂದಲೂ, ಇತ್ತೀಚೆಗೆ ಬೆಳೆಯುತ್ತಿರುವ ನಿಷ್ಪಾಕ್ಷಿಕ ವಸ್ತುನಿಷ್ಠೆಯ ವಿಮರ್ಶೆಯ ದೃಷ್ಟಿಕೋನದಿಂದಲೂ ಇದು ಸ್ಪೃಹಣೀಯವೇ ಆಗಿದೆ. ಇವನ್ನು ವಿದ್ಯಾಪಕ್ಷಪಾತಿಗಳೂ ಸಂಶೋಧನೆಯ ಆರಾಧಕರೂ ಆದ ಭಾಷಾ

ಶೋಧಕರು ಸಾಧುವಾಗಿ ಗಣಿಸಿಯೂ ಸ್ವಾಗತಿಸಿಯೂ ಇದ್ದಾರೆ. ಈಗ ಹತ್ತಿಪ್ಪತ್ತು ವರ್ಷಗಳಿಂದಷ್ಟೇ ಕನ್ನಡನಾಡಿನಲ್ಲಿ ಭಾಷಾವಿಜ್ಞಾನದ ವ್ಯಾಸಂಗ ಕಳೆಗೊಳ್ಳುತ್ತಿರುವುದರಿಂದ, ಅದರಲ್ಲಿಯೂ ವಿವರಣಾತ್ಮಕ ಭಾಷಾವಿಜ್ಞಾನದ ರೂಪರೇಷೆಗಳು ಕನ್ನಡದಲ್ಲಿ ಇನ್ನೂ ಖಚಿತವಾಗಿ ನೇರ್ಪಟ್ಟಿಲ್ಲದಿರುವುದರಿಂದ, ಒಬ್ಬೊಬ್ಬ ಭಾಷಾ ವಿಶ್ಲೇಷಕರೂ ಅನುಸರಿಸುವ ವಿಭಿನ್ನಕ್ರಮಗಳ ದೆಸೆಯಿಂದಾಗಿ, ಅಧ್ಯಯನಗ್ರಂಥಗಳ ಹಾಗೂ ಮಾರ್ಗದರ್ಶಕರ ಕೊರತೆಯಿಂದಾಗಿ, ಕೆಲವೊಮ್ಮೆ ಗ್ರಂಥರಚನೆಯ ಆತುರ ಆಕಾಂಕ್ಷೆಗಳಿಂದಾಗಿ, ಕೆಲವು ಗ್ರಂಥಗಳಲ್ಲಿ ಲೋಪದೋಷಗಳು ಅಡಿಯಿಟ್ಟಿರುವಂತೆ ಕಾಣುವುದು ಸಹಜವಾಗಿದೆ. ಉತ್ತರೋತ್ತರದ ಸಂಶೋಧನೆಗಳಲ್ಲಿ ಅಂತಹ ಕುಂದು ಕೊರತೆಗಳು ಹಣೆಯಿಕ್ಕದಿರಲು ಈ ವಿಮರ್ಶೆಗಳು ಸಹಾಯಕವಾಗಬೇಕೆಂಬುದು ದಿಟವಾದರೂ, ವಿಮರ್ಶೆಯು ವಸ್ತುನಿಷ್ಠವಾಗಿ ಪ್ರವರ್ತಿಸುವಂತೆ ತಪ್ಪದೆ ಜಾಗ್ರತೆ ವಹಿಸಬೇಕು.

ಈವರೆಗೆ ಗ್ರಂಥರೂಪದಲ್ಲಿ ಅಚ್ಚಾಗಿ ಹೊರಬರದಿರುವ, ಕನ್ನಡ ಭಾಷಾ ವ್ಯಾಸಂಗದ ವಿವಿಧ ಮುಖಗಳನ್ನು ಕುರಿತ, ಕೆಲವು ಗಮನಾರ್ಹವಾದ ರಚನೆಗಳನ್ನು ಮಾತ್ರ ಇಲ್ಲಿ ಹೆಸರಿನ ಮಟ್ಟಿಗೆ ಉಲ್ಲೇಖಿಸಬಹುದು. ಇವುಗಳಲ್ಲಿ ಹೆಚ್ಚುಪಾಲು ವಿಶ್ವವಿದ್ಯಾನಿಲಯಗಳಿಗೆ ಒಪ್ಪಿಸಿದ ಡಾಕ್ಟರೇಟ್ ನಿಬಂಧಗಳೆಂದೇ ತೋರುತ್ತದೆ. ಡಾ. ಎ. ಕೆ. ರಾಮಾನುಜನ್ ಅವರ ಪ್ರಬಂಧ 'A Generative Grammar of Kannada' ಎಂಬುದು "ಕನ್ನಡಕ್ಕೆ ರೂಪಾಂತರ ವ್ಯಾಕರಣ (Transformational Grammar) ವನ್ನು ಒದಗಿಸುವ ಪ್ರಯತ್ನ"[10] "ವಾಕ್ಯದಿಂದ ಧ್ವನಿಯವರೆಗಿನ ವಿಶ್ಲೇಷಣ ನಿರೂಪಣೆಯ ಈ ಕೃತಿ ಸಿದ್ಧವಾದಾಗ (೧೯೬೨), ಭಾರತೀಯ ಭಾಷೆಗಳಿಗೇ ರೀತಿಯಲ್ಲಿ ಹಾಗೂ ವ್ಯಾಪ್ತಿಯಲ್ಲಿ ಮೊದಲನೆಯದಾಗಿತ್ತು"—ಎಂಬುದು[11] ಇಲ್ಲಿ ಮೊದಲು ಉಲ್ಲೇಖಿಸತಕ್ಕದ್ದಾಗಿದೆ. ಡಾ. ಆರ್. ಸಿ. ಹಿರೇಮಠ ಅವರು ಬರೆದಿರುವ 'ಆರ್ಯ ಮತ್ತು ದ್ರಾವಿಡ ಭಾಷೆಗಳ ಸಂಬಂಧ ವಿಚಾರ', ಡಾ. ಎ. ಎಸ್. ಕೆದಿಲಾಯ ಅವರು ಬರೆದಿರುವ 'ಕನ್ನಡದಲ್ಲಿರುವ ಪರ್ಷಿಯನ್ ಮತ್ತು ಅರಾಬಿಕ್ ಸ್ವೀಕರಣಗಳ ವಿಚಾರ', ಡಾ. ಬಿ. ರಾಜಪುರೋಹಿತ ಅವರ 'ಶಿವಶರಣರ ವಚನಗಳ ವ್ಯಾಕರಣ', ಡಾ. ಬಿ. ರಾಮಚಂದ್ರರಾವ್ ಅವರ 'ಪಂಪಭಾರತದ ವರ್ಣನಾತ್ಮಕ ವ್ಯಾಕರಣ', ಡಾ. ಸಿ. ಓಂಕಾರಪ್ಪ ಅವರ 'ಕುಮಾರವ್ಯಾಸ ಭಾರತದ ವರ್ಣನಾತ್ಮಕ ವ್ಯಾಕರಣ'—ಈ ಮೊದಲಾದವು ಬೇರೆ ಬೇರೆ ವಿಶ್ವವಿದ್ಯಾನಿಲಯಗಳಿಗೆ ಒಪ್ಪಿಸಿದ ಡಾಕ್ಟರೇಟ್ ನಿಬಂಧಗಳಾಗಿದ್ದು ಇವು ಅಚ್ಚಾಗಬೇಕಾಗಿವೆ. ಕುಶಾಲಪ್ಪ ಗೌಡರು 'ವಡ್ಡಾರಾಧನೆಯ ಭಾಷೆ'ಯನ್ನು ಕುರಿತು ವಿಶ್ಲೇಷಿಸಿರುತ್ತಾರೆ. 'ಇಂತಹ ವಿಶ್ಲೇಷಣೆಗಳು ಹರಿಹರ ರಾಘವಾಂಕರ ಕೃತಿಗಳ ಭಾಷೆಯ ಬಗೆಗೆ ಕೂಡ ನಡೆಯುತ್ತಿವೆ. ಇರುಳರು ಸೋಲಿಗರು

10—11 ಅದೇ: ಪು. ೧೪೭-೧೪೯.

ಲಂಬಾಣಿಗರು ಹವ್ಯಕರು ಮೊದಲಾದವರ, ವಿಭಿನ್ನಪ್ರದೇಶದ ವಿಭಿನ್ನ ಸಮಾಜವರ್ಗದ ಕನ್ನಡಿಗರ, ಭಾಷೋಪಭಾಷಾವೈವಿಧ್ಯಗಳನ್ನು ವಿಶ್ಲೇಷಿಸಲಾಗುತ್ತಿದೆ. ಕನ್ನಡ ಸಾಹಿತ್ಯದಲ್ಲಿ ಮತ್ತು ವೃತ್ತಪತ್ರಿಕೆಗಳಲ್ಲಿ ತೋರಿಬರುವ ಪ್ರಾದೇಶಿಕ ವ್ಯತ್ಯಾಸಗಳು, ಕನ್ನಡದಲ್ಲಿ ಪ್ರಾಕೃತ ಸ್ವೀಕರಣಗಳು, ಕನ್ನಡದಲ್ಲಿನ ವ್ಯಾಕರಣ ವಿಚಾರಧಾರೆಯ ಇತಿಹಾಸ, ಮೈಸೂರು ನಗರದ ಸುತ್ತುಮುತ್ತಿನ ಹರಿಜನರ ಆಡುಮಾತು, ಕನ್ನಡ ವ್ಯಾಕರಣಗಳ ತೌಲನಿಕವಿವೇಚನೆ—ಈ ಮೊದಲಾದ ವಿಷಯಗಳ ಮೇಲೆ ಸಂಶೋಧನ ವಿದ್ಯಾರ್ಥಿಗಳು ಕೆಲಸಮಾಡಿದ್ದಾರೆ, ಮಾಡುತ್ತಿದ್ದಾರೆ.[12] ಪ್ರೊ. ತೀ. ನಂ. ಶ್ರೀ, ಪ್ರೊ. ಡಿ. ಎಲ್. ಎನ್., ಪ್ರೊ. ಎಂ. ಎಂ. ಭಟ್, ಪ್ರೊ. ಡಿ. ಕೆ. ಭೀಮಸೇನರಾವ್, ಪ್ರೊ. ಆರ್. ಸಿ. ಹಿರೇಮಠ್, ಪ್ರೊ. ದೇಜಗೌ, ಪ್ರೊ. ಎಚ್. ಎಮ್. ನಾಯಕ್, ಡಾ. ಎಚ್. ಎಸ್. ಬಿಳಿಗಿರಿ ಮೊದಲಾದ ವಿದ್ವಾಂಸರು ನಾನಾ ವಿದ್ವತ್‌ಪತ್ರಿಕೆಗಳಲ್ಲಿ ಕನ್ನಡ ಭಾಷಾಸ್ವರೂಪದ ವಿವಿಧ ವಿಚಾರಗಳನ್ನು ಕುರಿತು ಬರೆದಿರುವ ಬರೆಯುತ್ತಿರುವ ಅಧಿಕಾರಯುತ ಲೇಖನಗಳಿಂದಲೂ, ವಿದ್ವದುಪನ್ಯಾಸಗಳಿಂದಲೂ, ಕನ್ನಡ ಭಾಷಾ ವ್ಯಾಕರಣದ ಜ್ಞಾನಪ್ರಪಂಚ ಇತೋಪ್ಯತಿಶಯವಾಗಿ ವಿಸ್ತರಿಸಿದೆ, ವಿಸ್ತರಿಸುತ್ತಿದೆ–ಎಂಬುದನ್ನು ಇಲ್ಲಿ ಅಭಿಮಾನಪೂರ್ವಕವಾಗಿ ನೆನೆಯಬಹುದು.*

---

12 ಅದೇ: ಪು. ೧೪೭-೧೪೯.

* ಈ ಪ್ರಬಂಧದ ರಚನೆಗೆ ಗಮನಿಸಿದ ಮೂರು ಲೇಖನಗಳು: ೧. 'ಈಚಿನ ಕನ್ನಡ ವ್ಯಾಕರಣ ಸಾಹಿತ್ಯ' (ಡಾ. ಹಾ. ಮಾ. ನಾಯಕ: ಸಮೀಕ್ಷೆ, ೧೯೬೭). ೨. 'ಕನ್ನಡದಲ್ಲಿ ವ್ಯಾಕರಣವೂ ಭಾಷಾಶಾಸ್ತ್ರವೂ' (ಪ್ರೊ. ಎಂ. ಮರಿಯಪ್ಪಭಟ್ಟ: ಕನ್ನಡ ಸಂಸ್ಕೃತಿ, ೧೯೬೭). ೩. 'ದ್ರಾವಿಡ (ಕನ್ನಡ) ಭಾಷೆಗಳ ಅಧ್ಯಯನ' (ಡಾ. ಕೆ. ಎಂ. ಕೃಷ್ಣರಾವ್; ಕನ್ನಡ ಭಾಷಾಸ್ವರೂಪ, ೧೯೬೮).

ಡಾ. ಜಿ. ವರದರಾಜರಾವ್

೬೦೯
609
ಬೆಂಗಳೂರು-13

ಗ್ರಂಥಸಂಪಾದನೆ

ಸೃಷ್ಟಿಯಾದ ಸಾಹಿತ್ಯ ಕೇವಲ ಬಾಯಿಮಾತಿನಲ್ಲಿಯೇ ಉಳಿಯದೆ ಲಿಖಿತರೂಪದಲ್ಲಿ ಶಾಶ್ವತವಾಗಿ ನಿಲ್ಲುವಂತೆ ಮಾಡುವುದು ಒಂದು ಮಹತ್ಪ್ರಯತ್ನವೆನ್ನಿಸಿದರೆ, ಅದನ್ನು ಅಚ್ಚುಮಾಡಿ ಪ್ರಚಾರ ಮಾಡುವುದು ಮತ್ತೊಂದು ಐತಿಹಾಸಿಕ ಘಟನೆಯೇ ಸರಿ. ಈ ಎರಡು ಕ್ರಿಯೆಗಳೂ ಪರಸ್ಪರ ಪೂರಕವಾಗಿರುವುವಲ್ಲದೆ ಅವುಗಳ ಪ್ರಗತಿಗನುಸಾರವಾಗಿ ಸಾಹಿತ್ಯದ ಮೇಲ್ಮೆಯೂ ಆಗುತ್ತದೆ. ಈ ದೃಷ್ಟಿಯಿಂದ ಪರಿಶೀಲಿಸಿದಾಗ ನಮ್ಮ ಕನ್ನಡ ಗ್ರಂಥಸಂಪಾದನೆಯ ಪ್ರಗತಿಯಲ್ಲಿ ಹಲವಾರು ಹಂತಗಳನ್ನು ನಾವು ಗುರುತಿಸಬಹುದು.

ಪ್ರಾಚೀನ ಕವಿಗಳು ತಮ್ಮ ಕೃತಿಗಳನ್ನು ಬರೆದಿಟ್ಟದ್ದು ಸರಿಯಷ್ಟೆ. ಅವರ ಕೃತಿಗಳನ್ನು ಮೆಚ್ಚಿದ ಇತರರು ಅವುಗಳನ್ನು ತಮಗಾಗಿಯೋ ಇಲ್ಲವೆ ಜನತೆಗಾಗಿಯೋ ಪ್ರತಿಮಾಡಿಸಿ ಕವಿಯ ಪ್ರಶಸ್ತಿಗೆ ಕಾರಣರಾದರಲ್ಲದೆ, ಸಮಾಜದ ಕೃತಜ್ಞತೆಗೂ ಪಾತ್ರರಾದರು. ತಾಳೆಗರಿಗಳ ಮೇಲೆ ಬರೆಯುವ ಕೆಲಸ ಅಷ್ಟೇನೂ ಸುಲಭವಾದುದಲ್ಲ. ಆದರೂ ಜನರು ಈ ಕೆಲಸ ಮಾಡುವುದಕ್ಕೆ ಹಿಂತೆಗೆದವರಲ್ಲ. ಸ್ವಪ್ರಯೋಜನಕ್ಕಾಗಿ ಸ್ವಂತ ಪ್ರತಿಮಾಡಿದ್ದವರನ್ನು ಕಾಣಬಹುದು. ಇಲ್ಲವೇ ಲಿಪಿಕಾರರಿಂದ ಗ್ರಂಥಗಳನ್ನು ಪ್ರತಿಮಾಡಿಸಿದ ನಿದರ್ಶನಗಳು ಹಲವಾರಿವೆ. ಉತ್ಕೃಷ್ಟವಾದ ಕೃತಿಗಳನ್ನು ಬರೆಯಿಸಿ ದಾನಮಾಡುವುದೂ ಒಂದು ಶ್ರೇಷ್ಠವಾದ ಕಾರ್ಯವೆಂದು ಪರಿಗಣಿತವಾಗಿದ್ದರಿಂದ ಅತ್ತಿಮಬ್ಬೆಯಂತಹ ದಾನಚಿಂತಾಮಣಿ ಪೊನ್ನನ 'ಶಾಂತಿಪುರಾಣ'ದ ಸಾವಿರ ಪ್ರತಿಗಳನ್ನು ಮಾಡಿಸಿದ ಸಂಗತಿ ಇತಿಹಾಸಪ್ರಸಿದ್ಧವಾಗಿದೆ. ಅಂತೂ, ಹಿಂದಿನ ಕಾಲದಲ್ಲಿ ಕವಿಗಳ ಕೃತಿಗಳು ಈ ರೀತಿ ಬೆಳಕು ಕಂಡು ಬಾಳಿ ಬದುಕಿದುವು. ಪುರಾತನ ಗ್ರಂಥಗಳನ್ನು ಓದುವುದಕ್ಕೆ ಬಾರದವರೂ, ಅವುಗಳಲ್ಲಿದ್ದ ಪೂಜ್ಯಭಾವನೆಯಿಂದ ಅವುಗಳನ್ನು ತಮ್ಮ ನಿತ್ಯಪೂಜಾವಸ್ತುಗಳಲ್ಲಿ ಒಂದೆಂದು ಭಾವಿಸಿ ಕಾಪಾಡಿಕೊಂಡು ಬಂದರು. ಆಸ್ತಿ ವಿಭಾಗಮಾಡುವಲ್ಲಿ ಅವೂ ಸೇರಿದುವು. ವಿಶೇಷವಾದ ಪ್ರಚಾರಕ್ಕೆ ಅವಕಾಶವಿಲ್ಲದೆ, ನಮ್ಮ ಸಾಹಿತ್ಯ ಈ ರೀತಿ ವಿದ್ವಾಂಸರ ಮಂಡಲಿಯಲ್ಲಿಯೋ, ಅರಮನೆ ಗುರುಮನೆಗಳಲ್ಲಿಯೋ ಅನೇಕ ಶತಮಾನಗಳ ಕಾಲ ಉಳಿಯಿತು.

ಮುದ್ರಣ ಸೃಷ್ಟಿಯಿಂದ ಪಾಶ್ಚಾತ್ಯ ದೇಶದಲ್ಲಿ ಕ್ರಿ.ಶ. ೧೪೫೭ರ ವೇಳೆಗೆ ಅತ್ಯದ್ಭುತವಾದ ನವೋದಯವಾಯಿತು. ಕ್ರಮಕ್ರಮವಾಗಿ ಈ ಜ್ಞಾನಪ್ರಸಾರದ ಕಾರ್ಯ ಭರತಖಂಡದಲ್ಲಿಯೂ ಮೊದಲಾಯಿತು. ಈ ಸೌಭಾಗ್ಯವು ಕನ್ನಡ ಭಾಷೆಗೆ ಪ್ರಾಪ್ತವಾಗಲು ಕ್ರಿ.ಶ. ೧೮೧೭ರ ವರೆಗೂ ಕಾಯಬೇಕಾಯಿತು. ಬಂಗಾಳದ ಶ್ರೀರಾಮಪುರದಲ್ಲಿ ಕ್ರೈಸ್ತಮತ ಪ್ರಚಾರಕನಾಗಿದ್ದ ವಿಲಿಯಂ ಕೇರಿ ಎಂಬಾತನು ತನ್ನ 'History of Karnata Language' ಎಂಬ ಪುಸ್ತಕಕ್ಕೆ ಕನ್ನಡದ ಅಚ್ಚು ಮೊಳೆಗಳನ್ನು ಮೊದಲನೆಯ ಬಾರಿಗೆ ಬಳಸಿದುದಾಗಿ ತಿಳಿದುಬರುತ್ತದೆ. ಕ್ರಿ.ಶ. ೧೮೨೦ ರಲ್ಲಿ ಜಾನ್ ಮೆಕ್ಕೆರೆಲ್ ಎಂಬುವನು ಬರೆದ 'Grammar of the Carnataca Language' ಎಂಬ ಮತ್ತೊಂದು ಕೃತಿ ಮದರಾಸಿನಲ್ಲಿ ಪ್ರಕಟವಾಯಿತು. ೧೮೨೪ರಲ್ಲಿ ವಿಲಿಯಮ್ ರೀವ್ ಅವರಿಂದ ವಿರಚಿತವಾದ ಇಂಗ್ಲಿಷ್–ಕನ್ನಡ ನಿಘಂಟೂ, ೧೮೩೨ರಲ್ಲಿ ಆತನ ಕನ್ನಡ–ಇಂಗ್ಲಿಷು ನಿಘಂಟೂ ಸಿದ್ಧವಾದುವು. ಶ್ರೀರಂಗಪಟ್ಟಣದ ಕೃಷ್ಣಮಾಚಾರಿಯವರ 'ಹೊಸಗನ್ನಡ ನುಡಿಗನ್ನಡಿ' ಎಂಬ ಅಪೂರ್ವ ಕೃತಿ ಕ್ರಿ.ಶ. ೧೮೩೮ರಲ್ಲಿ ಮದರಾಸಿನಲ್ಲಿ ಮುದ್ರಿತವಾಯಿತು. ಮದರಾಸಿನಂತೆಯೇ ಬಳ್ಳಾರಿಯಲ್ಲಿಯೂ ಕ್ರಿಶ್ಚಿಯನ್ನರ ಮೇಲ್ವಿಚಾರಣೆಯಲ್ಲಿ ೧೮೨೦ರಲ್ಲಿ ಬೈಬಲ್ಲಿನ ಕನ್ನಡ ಅನುವಾದವೊಂದು ತೆಲುಗು ಲಿಪಿಯಲ್ಲಿ ಪ್ರಕಾಶಿತವಾಯಿತು.[1]

ಅತ್ತ ಮಂಗಳೂರಿನಲ್ಲಿ ಜರ್ಮನ್ ಮಿಶನೆರಿಯವರು ೧೮೪೧ರಲ್ಲಿ ಒಂದು ಮುದ್ರಣ ಶಾಲೆಯನ್ನು ತೆರೆದು ಕಲ್ಲಚ್ಚಿನಲ್ಲಿ ಪುಸ್ತಕಗಳನ್ನು ಪ್ರಕಟಿಸತೊಡಗಿದರು. ಇವರು ಜನಪ್ರಿಯವಾದ ತುಳು ಕೀರ್ತನೆಗಳು, ಗಾದೆಗಳು, ದಾಸರಪದಗಳನ್ನು ಮುದ್ರಿಸಿದ್ದಲ್ಲದೆ ಕ್ರಮಕ್ರಮವಾಗಿ ಅನೇಕ ಕನ್ನಡ ಕಾವ್ಯಗಳನ್ನೂ ಪ್ರಕಟಿಸಿದರು. ಈ ಮಾಲಿಕೆಯಲ್ಲಿ ಜೈಮಿನಿಭಾರತ (೧೮೪೮), ಕುಮಾರವ್ಯಾಸ ಭಾರತ (೧೮೫೧), ಬಸವಪುರಾಣ (೧೮೫೦), ಚೆನ್ನಬಸವಪುರಾಣ(೧೮೫೧)ಗಳು ಅಚ್ಚಾದುವು. ಉತ್ತಮ ಹಸ್ತಾಕ್ಷರಗಳನ್ನೊಳಗೊಂಡ ಈ ಕಾವ್ಯಗಳ ಪ್ರತಿಗಳನ್ನು ಕಂಡರೆ ಆ ವಿದೇಶೀಯರ ಶ್ರದ್ಧಾಸಕ್ತಿಗಳಿಗೆ ಮಾರುವೋಗುವಂತಾಗುತ್ತದೆ.[2]

---

1 ಈ ವಿವರಗಳನ್ನು ಶ್ರೀ ಶ್ರೀನಿವಾಸ ಹಾವನೂರ್ ಅವರ 'ಕನ್ನಡದಲ್ಲಿ ಮುದ್ರಣದ ಅಭಿಯೋಗ' ಎಂಬ ಲೇಖನದಿಂದ ಸಂಗ್ರಹಿಸಲಾಗಿದೆ (ಪ್ರಜಾವಾಣಿ, ದೀಪಾವಳಿ ವಿಶೇಷಾಂಕ, ೧೯೬೬, ಪು. ೮೨–೮೮). ಶ್ರೀಯುತರು ಈ ಮುದ್ರಣ ಕಾರ್ಯದ ಪ್ರಾರಂಭವನ್ನು ಹೀಗೆ ಸಂಗ್ರಹಿಸಿ ಹೇಳಿರುತ್ತಾರೆ: "ಕನ್ನಡ ಮುದ್ರಣದ ಬೀಜಗಳನ್ನು ಕಾಲನು ಕಣ್ಣು ಮುಚ್ಚಿಕೊಂಡೇ ಹರಡಿದನೆಂದು ಕಾಣುತ್ತದೆ! ಗೋವೆಯಲ್ಲಿ ಒಗೆದ ಬೀಜವು ಹುಸಿ ಹೋಯಿತು, ರಾಜೋಲ್‌ದಲ್ಲಿಯದು ಮಣ್ಣಿನಲ್ಲಿಯೇ ಹುದುಗಿಕೊಂಡಿವೆ. ಶ್ರೀರಾಮಪುರ, ಮದ್ರಾಸ ಮತ್ತು ಬಳ್ಳಾರಿಗಳಲ್ಲಿ ಮಾತ್ರ ಒಂದೇ ಸಮಯಕ್ಕೆ ಈ ಬೀಜಗಳು ಮೊಳೆತುವು (ಪು. ೮೮)."

2 ಈ ಅಂಶವನ್ನು ಶ್ರೀ ದಾಮೋದರ ಬಾಳಿಗಾ ಅವರ "ಕನ್ನಡ ಭಾಷೆಯ ವಿಕಾಸ" ಎಂಬ ಲೇಖನದಿಂದ ಸಂಗ್ರಹಿಸಲಾಗಿದೆ (ತೆಂಕನಾಡು, ೧೯೪೭, ಪು. ೧೦೬.).

ಪಾಶ್ಚಾತ್ಯರ ಸ್ತುತ್ಯ ಪ್ರಯತ್ನಗಳಿಂದ ಕನ್ನಡ ಭಾಷೆ ಮುದ್ರಣ ರೂಪವನ್ನು ಕಾಣುವ ಸುಸಂಧಿಯೊದಗಿತು. ಈವರೆಗೆ ಓಲೆಯ ಕಟ್ಟುಗಳಲ್ಲಿಯೋ, ಕಾಗದದ ಪುಸ್ತಕಗಳಲ್ಲಿಯೋ, ಕಡತಗಳಲ್ಲಿಯೋ ಹುದುಗಿದ್ದ ಕೃತಿಗಳು ಒಂದೊಂದಾಗಿ ಬೆಳಕಿಗೆ ಬಂದುವು. ಕಾಲಕ್ರಮೇಣ ದೇಶೀಯರೂ ಈ ಮಹತ್ಕಾರ್ಯದಲ್ಲಿ ತೊಡಗಿದರು. ಗ್ರಂಥದ ಮೂಲಸ್ವರೂಪದ ಬಗ್ಗೆ ಚಿಂತಿಸದೆ, ತಮಗೆ ದೊರೆತ ಯಾವುದಾದರೊಂದು ಪ್ರತಿಯನ್ನು ಅವಲಂಬಿಸಿ, ಪುಸ್ತಕಗಳನ್ನು ಪ್ರಕಾಶಿಸಿದರು. ಶುದ್ಧವೋ ಅಶುದ್ಧವೋ ಜನಸಾಮಾನ್ಯರ ಕೈಗೂ ನಮ್ಮ ಕಾವ್ಯಗಳು ದೊರೆಯುವಂತಾದುದು ಒಂದು ಸುಯೋಗವೇ ಸರಿ.

ಲಭ್ಯಹಸ್ತಪ್ರತಿಗಳನ್ನೆಲ್ಲ ಸಂಪಾದಿಸಿ, ಅವುಗಳನ್ನು ಪರಸ್ಪರವಾಗಿ ಪರಿಶೀಲಿಸಿ, ಆದಷ್ಟುಮಟ್ಟಿಗೆ ಕವಿಕೃತವಾದ ಮೂಲಪಾಠವನ್ನು ನಿರ್ದೇಶಿಸಿ ಶುದ್ಧವಾಗಿ ಪ್ರಕಟಿಸಬೇಕೆಂಬ ಪ್ರಜ್ಞೆ ನಮ್ಮ ಸಾಹಿತ್ಯವನ್ನು ವಿಶೇಷವಾಗಿ ಅಧ್ಯಯನ ಮಾಡತೊಡಗಿದ ರೆವರೆಂಡ್ ಎಫ್. ಕಿಟ್ಟೆಲ್ ಮತ್ತು ಬಿ. ಎಲ್. ರೈಸ್ ಅವರ ಪ್ರಯತ್ನಗಳಲ್ಲಿ ಮೊದಲಬಾರಿಗೆ ಕಂಡುಬರುತ್ತದೆ. ಇತರ ಸಾಮಾನ್ಯ ವಿದೇಶೀಯರಂತಲ್ಲದೆ, ಕಿಟ್ಟೆಲ್ಲರು ತಮ್ಮ ನಿಘಂಟಿನ ನಿರ್ಮಾಣಕಾರ್ಯಕ್ಕೆ ತೊಡಗಿದಾಗ ಕನ್ನಡಕಾವ್ಯಗಳನ್ನೂ ಶಾಸ್ತ್ರಗ್ರಂಥಗಳನ್ನೂ ಪರಿಶೀಲಿಸಬೇಕಾಗಿ ಬಂದಿತಷ್ಟೆ. ಆಗ ಅವರಿಗೆ ಕನ್ನಡ ಶಾಸ್ತ್ರಗ್ರಂಥಗಳ ಪ್ರಕಟನೆಯ ಕಡೆಗೆ ಒಲವುಂಟಾಯಿತೆಂದು ತೋರುತ್ತದೆ. ಒಂಬತ್ತು ಹಸ್ತಪ್ರತಿಗಳ ಆಧಾರದ ಮೇಲೆ (ಇವುಗಳಲ್ಲಿ ಐದು ಓಲೆಯ ಪ್ರತಿಗಳು) ಕೇಶಿರಾಜನ, 'ಶಬ್ದಮಣಿದರ್ಪಣ (೧೮೭೨)ವನ್ನು ಸಂಪಾದಿಸಿಕೊಟ್ಟ ಈ ವಿದ್ವಾಂಸರು, ಪಾಠ ನಿಷ್ಕರ್ಷೆಮಾಡುವಲ್ಲಿ ತಮಗಾದ ಕಷ್ಟವನ್ನು ಹೀಗೆ ಹೇಳಿಕೊಂಡಿರುತ್ತಾರೆ:

> "To have had a larger number of manuscripts than we have used, did not appear desirable but rather perplexing, regarding the first edition; hereafter by the help of a few other good manuscripts and carefully worked out Glossarium and by the employment of deferential criticism it will be comparatively easy to make emendations. We beg (as Kesava did for his whole work) that the learned who know the difficulties and doubts which arise, when for the first time[3] and

[3] ರೆವರೆಂಡ್ ಕಿಟ್ಟೆಲ್ ಅವರಿಗಿಂತ ಮುಂಚಿತವಾಗಿ ಜೆ. ಗ್ಯಾರೆಟ್ ಅವರು ಕ್ರಿ.ಶ. ೧೮೬೪ರಲ್ಲಿ 'ಶಬ್ದಮಣಿದರ್ಪಣ'ವನ್ನು ಮುದ್ರಿಸಿದ್ದುದಾಗಿ ತಿಳಿದುಬರುತ್ತದೆ. ಆದರೆ 'ತೀರ ಅಶುದ್ಧವಾದ ಹಸ್ತಪ್ರತಿಯೊಂದರ ಬೆಲೆಯನ್ನು ಮಾತ್ರ ಈ ಮುದ್ರಣಕ್ಕೆ ಕೊಡಬಹುದು' ಎಂದು ಶ್ರೀ ಡಿ. ಎಲ್. ನರಸಿಂಹಾಚಾರ್ಯರು ಅಭಿಪ್ರಾಯಪಡುತ್ತಾರೆ (ಶಬ್ದಮಣಿದರ್ಪಣ, ೧೯೬೮, ಪ್ರಸ್ತಾವನೆ, ಪು. vii ಮತ್ತು viii).

according to more or less deficient manuscripts, preparing such a work for the press will kindly and forbearingly receive this edition together with its marginal and other notes (Preface, pp. XII–XIII). "

ಎಫ್. ಕಿಟ್ಟೆಲ್ ಅವರಂತೆಯೇ 'ಶಬ್ದಮಣಿದರ್ಪಣ'ದ ಈ ಪಾಠಾಂತರ ಸಮಸ್ಯೆಯನ್ನು ಬಲ್ಲ ಶ್ರೀ ಡಿ. ಎಲ್. ನರಸಿಂಹಾಚಾರ್ಯರು ಇಂದಿಗೂ "ಕೇಶಿರಾಜನ ಸ್ವಹಸ್ತಪ್ರತಿಯ ಸ್ವರೂಪವನ್ನು ಕಂಡುಹಿಡಿಯುವುದಕ್ಕೂ, ಅದು ಸಾಧ್ಯವಾಗದಿದ್ದಲ್ಲಿ ಅದಕ್ಕೆ ಅತಿ ಸಮೀಪವಾದ ಪಾಠವನ್ನು ಗೊತ್ತುಪಡಿಸುವುದಕ್ಕೂ, ಪಾಠಸಮಸ್ಯೆಗಳ ವಿಶದೀಕರಣಕ್ಕೂ ಸರ್ವಪಾಠಭೇದಗಳನ್ನೊಳಕೊಂಡ ಸಶಾಸ್ತ್ರೀಯ ಸವಿಮರ್ಶ ಪರಿಷ್ಕರಣವನ್ನು (Variorum and critical edition based on the science of Textual Criticism) ಸಿದ್ಧಪಡಿಸಬೇಕಾದ ಅವಶ್ಯಕತೆಯಿದೆ" ಎಂದು ಅಭಿಪ್ರಾಯಪಡುತ್ತಾರೆ.[4] ಎಂದ ಮೇಲೆ ಕಿಟ್ಟೆಲ್ಲರವರ ಅಂದಿನ ಕಷ್ಟ ಹೇಳತೀರದು.

ಎಫ್. ಕಿಟ್ಟೆಲ್ಲರು ೧೮೭೫ರಲ್ಲಿ ಪ್ರಕಟಿಸಿದ ನಾಗವರ್ಮನ ಛಂದೋಂಬುಧಿಯೂ ಸಹ ಕನ್ನಡದಲ್ಲಿ ಒಂದು ವಿಶಿಷ್ಟವಾದ ಕೃತಿ. ಪ್ರಾಚೀನ ಕನ್ನಡ ಛಂದಸ್ಸನ್ನು ಕುರಿತ ಈ ಏಕೈಕ ಶ್ರೇಷ್ಠ ಕೃತಿ ಅಸಂಖ್ಯಾತ ಪಾಠಾಂತರಗಳಿಂದ ಸಂಪಾದಕನಿಗೆ ಒಂದು ಸವಾಲಿನಂತಿದೆ. ಇಂತಹ ಕೃತಿಯ ಹದಿನಾಲ್ಕು ಪ್ರತಿಗಳನ್ನು ಅವಲಂಬಿಸಿ ಕಿಟ್ಟೆಲ್ಲರು ಮೊಟ್ಟ ಮೊದಲಿಗೆ ಮುದ್ರಿಸಿದರು. ಹಲಕೆಲವು ಪಾಠಾಂತರಗಳ ಸಮೇತ ಪ್ರಕಟಿಸಿರುವ ಈ ಲಕ್ಷಣ ಗ್ರಂಥವನ್ನು ಸಂಪಾದಿಸುವುದರಲ್ಲಿ ಅವರು ಅನುಸರಿಸಿರುವ ಕ್ರಮವನ್ನು ಕುರಿತು ಹೀಗೆ ಪರಿಚಯಮಾಡಿಕೊಟ್ಟಿರುತ್ತಾರೆ.

"The present edition is a collection of the essential portion of all the manuscripts, with a few additions concerning the Ragales. Of the very numerous different readings, so far as they are quite unimportant, such have been adopted as are metrically right; wherever necessary, different readings are adduced (Introduction, p. iv)."

ತಮ್ಮ ಮುಂದೆ ಇದ್ದ ಪ್ರತಿಗಳನ್ನೆಲ್ಲ ಪರಿಶೀಲಿಸಿ ಸುಮಾರು ನಾಲ್ಕು ಪಾಠ ಸಂಪ್ರದಾಯಗಳಿರಬಹುದೆಂದು ಊಹಿಸಿದ್ದಾರೆ. ಕಿಟ್ಟೆಲ್ಲರವರಿಂದ ಈಚೆಗೆ ಈ ಗ್ರಂಥ ಇನ್ನೂ ಎರಡು ಬಾರಿ ಬೇರೆ ಬೇರೆ ಸಂಪಾದಕರಿಂದ ಪ್ರಕಟವಾಗಿದೆ. ಆದರೂ ಇಂದಿಗೂ ಅದರ ಮೂಲಸ್ವರೂಪ ಇತ್ಯರ್ಥವಾಗಿಲ್ಲ. ಇದೇ ಗ್ರಂಥದ ಮುನ್ನುಡಿಯಲ್ಲಿ ಕಿಟ್ಟೆಲ್ಲರು

---

[4] ಅದೇ. ಪು. xxv–xxvi,

ಇಂಗ್ಲಿಷಿನಲ್ಲಿ ಬರೆದಿರುವ ಕನ್ನಡ ಸಾಹಿತ್ಯದ ಸಮಾಲೋಕನವೇ ನಮ್ಮ ಸಾಹಿತ್ಯ ಚರಿತ್ರೆಗೆ ಮೊದಲನೆಯ ತಳಹದಿ ಎನ್ನುವುದನ್ನು ನೆನೆದರೆ, ಈ ಪಾಶ್ಚಾತ್ಯ ವಿದ್ವಾಂಸರು ಕನ್ನಡಕ್ಕೆ ಎಂತಹ ಅಪೂರ್ವವಾದ ಉಪಕಾರವನ್ನು ಮಾಡಿದ್ದಾರೆ ಎನ್ನುವುದು ವಿದಿತ ವಾಗುತ್ತದೆ. ಕಿಟ್ಟೆಲ್ಲರ ನಿಘಂಟು ಒಂದು ಮೇರುಕೃತಿಯೆನ್ನಿಸಿದರೆ, ಅವರು ರಚಿಸಿರುವ ಕನ್ನಡ ವ್ಯಾಕರಣ (A Grammar of the Kannada Language, 1903) ಕನ್ನಡ ಭಾಷಾಚರಿತ್ರೆಯನ್ನು ತಿಳಿಯಲು ಕೈಗನ್ನಡಿಯಂತಿದೆ. ಅಭಿಪ್ರಾಯ ಭೇದಗಳಿದ್ದರೂ, ಕಿಟ್ಟೆಲ್ಲರವರ ವಿಷಯಸಂಗ್ರಹ, ಸಂಶೋಧನಾತ್ಮಕ ದೃಷ್ಟಿಗಳು ಅಭಿನಂದನೀಯವಾದುವು.

ಎಫ್. ಕಿಟ್ಟೆಲ್ಲರಂತೆಯೇ ಈ ಕ್ಷೇತ್ರದಲ್ಲಿ ಶ್ರಮಿಸಿದ ಮತ್ತೊಬ್ಬ ಪಾಶ್ಚಾತ್ಯ ವಿದ್ವಾಂಸರು ಬಿ. ಎಲ್. ರೈಸ್ ಅವರು. ಇವರ ಉತ್ಸಾಹಕ್ಕೆ ತಕ್ಕಂತೆ ಕಾಲವೂ ಹದವಾಗಿ ಕೂಡಿಕೊಂಡು ಬಂದಿತು. ಏಕೆಂದರೆ, ಕ್ರಿ.ಶ. ೧೮೮೪ರ ಹೊತ್ತಿಗೆ ಮೈಸೂರು ಸಂಸ್ಥಾನದಲ್ಲಿ ಪ್ರಾಕ್ತನ ಇಲಾಖೆ ಪ್ರಾರಂಭವಾಯಿತು.[5] ಶಾಸನಗಳು ಮತ್ತು ಪುರಾತನ ಹಸ್ತಪ್ರತಿಗಳ ಸಂಕಲನಕಾರ್ಯವೇ ಅದರ ಗುರಿಯಾಗಿತ್ತು. ಈ ಇಲಾಖೆಯ ಮುಖ್ಯಸ್ಥರಾಗಿ ಬಿ. ಎಲ್. ರೈಸ್ ಅವರು ನೇಮಕರಾದರು. ಕಾರ್ಯ ತತ್ಪರರಾದ ಈ ಮಹನೀಯರು ಕನ್ನಡ ಶಾಸನಗಳ ಸಂಗ್ರಹ, ಸಂಪಾದನೆ ಮತ್ತು ಪ್ರಕಟನೆಗಳಲ್ಲಿ ತೋರಿದ ಆಸಕ್ತಿಯನ್ನೇ ಕನ್ನಡ ಪ್ರಾಚೀನ ಗ್ರಂಥಗಳ ಪ್ರಕಟನೆ ಯಲ್ಲಿಯೂ ವ್ಯಕ್ತಪಡಿಸಿದರು. "Biblotheca Carnatica" ಎಂಬ ಅಂಕಿತದಲ್ಲಿ ಕನ್ನಡ ಪ್ರಾಚೀನ ಕೃತಿಗಳ ಪ್ರಕಾಶನ ಮೊದಲಾಯಿತು. ಪಂಪರಾಮಾಯಣ, ಕರ್ಣಾಟಕ ಶಬ್ದಾನುಶಾಸನ, ಕಾವ್ಯಾವಲೋಕನ, ಪಂಪಭಾರತ ಮತ್ತು ಕವಿರಾಜ ಮಾರ್ಗ ಎಂಬ ಉದ್ಗ್ರಂಥಗಳು ಈ ಮಾಲೆಯಲ್ಲಿ ಪ್ರಕಟವಾದುವು. ಇವುಗಳ ಸಂಪಾದನಕಾರ್ಯದಲ್ಲಿ ಬಿ. ಎಲ್. ರೈಸ್ ಅವರು ತೋರಿರುವ ಶ್ರದ್ಧಾಭಿಮಾನಗಳೂ ಅವರ ಸಹಾಯಕರು ಪಟ್ಟಿರುವ ಶ್ರಮವೂ ಚಿರಸ್ಮರಣೀಯವಾದುವು. ಈ ಒಂದೊಂದು ಗ್ರಂಥವನ್ನೂ ಸಿದ್ಧಪಡಿಸುವುದರಲ್ಲಿ ಬಿ. ಎಲ್. ರೈಸ್ ಅವರು ವಹಿಸಿರುವ ಆಸಕ್ತಿ ಯನ್ನು ಅವರ ಪ್ರಸ್ತಾವನೆಗಳ ಮೂಲಕ ಮನಗಾಣಬಹುದು.

ಪಂಪರಾಮಾಯಣಕ್ಕೆ (ಕ್ರಿ.ಶ. ೧೮೮೨) ಮುನ್ನುಡಿಯನ್ನು ಬರೆಯುತ್ತ ಶ್ರೀಯುತರು ಈ ರೀತಿ ವಿನಂತಿ ಮಾಡಿಕೊಂಡಿರುತ್ತಾರೆ.

> "The present edition of this interesting Jaina work *now for the fist time printed* is a recension from three manuscripts on palmyra leaf, the oldest dated S.S. 1350

---

[5] ಶ್ರೀ ಎನ್. ಎಸ್. ಲಕ್ಷ್ಮೀನಾರಾಯಣಭಟ್ಟ ಅವರಿಂದ ರಚಿತವಾದ 'ಭಾರತೀಯ ಗ್ರಂಥಸಂಪಾದನೆಯ ಪರಿಚಯ'ದ ಮುನ್ನುಡಿ, ಶ್ರೀ ಡಿ. ಎಲ್. ನರಸಿಂಹಾಚಾರ್, ಪು. viii.

(A.D. 1428), but is chiefly based on one dated S.S. 1517 which was in my hands long before (Introduction, p. 1)."

ಕರ್ಣಾಟಕ ಶಬ್ದಾನುಶಾಸನವನ್ನು ಪ್ರಕಟಿಸುವ (ಕ್ರಿ.ಶ. ೧೮೯೦) ಸಂದರ್ಭದಲ್ಲಿಯಂತೂ ಅವರಿಗಾಗಿರುವ ಆನಂದ ಅಷ್ಟಿಷ್ಟಲ್ಲ.

"This standard work, now offered to the public, *has never before been printed.* The collection of manuscripts with a view to its publication was commenced by me nearly twenty years ago, but multifarious changes and duties have prevented the design from being brought sooner to completion.

For manuscripts of the work, I am indebted to Brahmasuri Sastri of Sravana Belagola, to Brahmasuri Pandit of Chamarajanagar and to B. Mallappa of Mysore. Also to the Rev. F. Kittel for a copy of the sutras and vrittis only, made for him at Mangalore (Preface).

ಕನ್ನಡದ ಉಪಲಬ್ಧ ಮಹಾಕಾವ್ಯಗಳಲ್ಲಿ ಮೊಟ್ಟಮೊದಲನೆಯದಾದ ಪಂಪಭಾರತವನ್ನು ಪ್ರಥಮತಃ ಪ್ರಕಟಿಸಿದ (ಕ್ರಿ.ಶ. ೧೮೯೮) ಕೀರ್ತಿಯೂ ಬಿ. ಎಲ್. ರೈಸ್ ಅವರಿಗೇ ಮೀಸಲಾಗಿದೆ. ಈ ಗ್ರಂಥಪ್ರಕಟನೆಯ ಸಮಯದಲ್ಲಿ ಹಸ್ತಪ್ರತಿಗಳಿಗಾಗಿ ಅವರು ಪಟ್ಟಿರುವ ಶ್ರಮ ಹೇಳತೀರದು. ದೊರೆತರೂ ಅವುಗಳಲ್ಲಿ ಕಂಡುಬಂದ ಕೊರತೆಗಳಿಗಾಗಿ ಸಂಪಾದಕನು ಒಮ್ಮೊಮ್ಮೆ ಬಿಸುಸುಯ್ಯುವಂತಾಗಿದೆ.

"It is a matter for regret that complete manuscripts of it have been so difficult to obtain. Notwithstanding search in every quarter and the pursuit of various rumours as to the existence of manuscripts in one place or another, only two have been met with for use in preparing this edition. And in one of those the first asvasa is wanting. I had a copy made of it with a view to publication more than twenty years ago. It was lent to me by the late lamented jaina scholar, Brahmasuri Sastri and from him purchased for the Deccan College at Poona, to which I am indebted for the loan of it again for reference. A complete manu-

script was later discovered in the Saraswati Bhandara of H. H. the Maharaja of Mysore's palaces and this was kindly placed at my disposal" (Introduction, p. 13).

ಕನ್ನಡದ ಶ್ರೇಷ್ಠ ಲಾಕ್ಷಣಿಕನಾದ ನಾಗವರ್ಮನ 'ಕರ್ಣಾಟಕ ಭಾಷಾಭೂಷಣ'ವನ್ನು ಸಂಪಾದಿಸಿ ಪ್ರಕಟಿಸುವುದರಲ್ಲಿಯೂ (ಕ್ರಿ.ಶ. ೧೮೮೪) ಬಿ. ಎಲ್. ರೈಸ್ ಅವರು ಇದೇ ವಿಚಕ್ಷಣತೆಯನ್ನು ವಹಿಸಿದ್ದಾರೆ. ಕವಿಕಾವ್ಯ ಪರಿಚಯುಗಳೊಂದಿಗೆ, ಕನ್ನಡ ಲಿಪಿಯ ಬೆಳವಣಿಗೆಯನ್ನು ಕುರಿತ ಸಮೀಕ್ಷೆಯೂ ಕನ್ನಡಸಾಹಿತ್ಯದ ಸಂಕ್ಷಿಪ್ತ ಪರಿಚಯವೂ ಈ ಸಂಪುಟದಲ್ಲಿ ಕಂಡುಬರುತ್ತದೆ.

ಬಿ. ಎಲ್. ರೈಸ್ ಅವರು ಸ್ವತಃ ಶ್ರೇಷ್ಠತರಗತಿಯ ಸಂಶೋಧಕರಾಗಿದ್ದುದಲ್ಲದೆ, ತಮ್ಮ ನೇತೃತ್ವದಲ್ಲಿ ಇತರರನ್ನೂ ಹಾಗೆಯೇ ತಯಾರುಮಾಡಬಲ್ಲ ನಿಪುಣರಾಗಿದ್ದರೆಂಬುದಕ್ಕೆ, ಕನ್ನಡದ ಗಣ್ಯವಿದ್ವಾಂಸರಾದ ರಾ. ನರಸಿಂಹಾಚಾರ್ಯರು ಮತ್ತು ಕೆ. ಬಿ. ಪಾಠಕ್ ಅವರ ಮಾತುಗಳೇ ಸಾಕ್ಷಿಯಾಗಿವೆ. ನಾಗವರ್ಮನ ಕಾವ್ಯಾವಲೋಕನದ ಪ್ರಥಮ ಮುದ್ರಣಕ್ಕೆ (೧೯೦೩) ಮುನ್ನುಡಿಯನ್ನು ಬರೆಯುವಲ್ಲಿ ಶ್ರೀ ರಾ. ನರಸಿಂಹಾಚಾರ್ಯರು ಬಿ. ಎಲ್. ರೈಸ್ ಅವರಿಗೆ ತಮ್ಮ ಕೃತಜ್ಞತೆಯನ್ನು ಮುಕ್ತಕಂಠದಿಂದ ಹೀಗೆ ಸಮರ್ಪಿಸಿರುತ್ತಾರೆ :

"In conclusion, I have to thank Mr. Rice for kindly entrusting me with the work of editing this volume and for his valuable advice and guidance during the course of the work" (Introduction, 1939 Edn. p. lxxviii).

ನಾಲ್ಕು ಹಸ್ತಪ್ರತಿಗಳ ಆಧಾರದ ಮೇಲೆ ಸಂಪಾದಿತವಾಗಿರುವ 'ಕಾವ್ಯಾವಲೋಕನ'ವನ್ನು ಕಂಡರೆ ರಾ. ನರಸಿಂಹಾಚಾರ್ಯರು ಎಷ್ಟರಮಟ್ಟಿಗೆ ಬಿ. ಎಲ್. ರೈಸ್ ಅವರು ಹಾಕಿಕೊಟ್ಟಿರುವ ಮಾರ್ಗವನ್ನು ಮುಂದುವರಿಸಿರುವರೆಂದು ವಿದಿತವಾಗುತ್ತದೆ. ಶ್ರೀಯುತರು ಮುಂದೆ ಪ್ರಾಕ್ತನ ಇಲಾಖೆಯ ಮುಖ್ಯಸ್ಥರಾದ ಮೇಲಂತೂ ನಿರ್ವಹಿಸಿರುವ ಕೆಲಸ ಇಂದಿಗೂ ಅದ್ವಿತೀಯವೆನ್ನಿಸಿದೆ.

ಬಿ. ಎಲ್. ರೈಸ್ ಅವರ ಮೇಲ್ವಿಚಾರಣೆಯಲ್ಲಿ ಪ್ರಕಟವಾದ ಮತ್ತೊಂದು ಕೃತಿ 'ಕವಿರಾಜಮಾರ್ಗ' ಕ್ರಿ.ಶ.(೧೮೯೮). ಈ ಕಾರ್ಯಕ್ಕೆ ಕೆ. ಬಿ. ಪಾಠಕ್ ಅವರು ನಿಯೋಜಿತರಾಗಿದ್ದರು. ಶ್ರೀಯುತರು ಮೂರು ಹಸ್ತಪ್ರತಿಗಳನ್ನು ಅವಲಂಬಿಸಿ ಈ ಕೃತಿಯನ್ನು ಸಿದ್ಧಪಡಿಸಿರುತ್ತಾರೆ. ಗ್ರಂಥ ಕರ್ತೃವನ್ನು ಕುರಿತ ವಿಸ್ತಾರವಾದ ಇಲ್ಲಿನ ಪೀಠಿಕೆ, ಮುಂದಿನ ವಿದ್ವಾಂಸರಿಗೆ ತುಂಬ ವಿಚಾರಪ್ರಚೋದಕವಾಯಿತು. ಜೆ. ಎಫ್. ಫ್ಲೀಟ್ ಅವರು ಈ ಗ್ರಂಥವನ್ನು ಕುರಿತು ಬರೆದಿರುವ ವಿಸ್ತಾರವಾದ ವಿಮರ್ಶೆಯೇ

ಇದಕ್ಕೆ ಸಾಕ್ಷಿ.[6] ಸಂಪಾದಕರು ತಮಗೆ ದೊರೆತ ಹಸ್ತಪ್ರತಿಗಳ ಗುಣ ದೋಷಗಳನ್ನೆಲ್ಲ ತಿಳಿಸಿದ ತರುವಾಯ, ಕಡೆಯಲ್ಲಿ "In conclusion I beg to express my thanks to Mr. Rice for his kindness in entrusting me with the duty of preparing the following edition" ಎಂದು ಹೇಳಿರುತ್ತಾರೆ.[7]

ಕನ್ನಡ ಉದ್ಗ್ರಂಥಗಳ ಪ್ರಪ್ರಥಮ ಪ್ರಕಟನೆಯಲ್ಲಿ ಬಿ. ಎಲ್. ರೈಸ್ ಮತ್ತು ಅವರ ಸಹೋದ್ಯೋಗಿಗಳು ವಹಿಸಿರುವ ಈ ಪಾತ್ರ ಚಿರಸ್ಮರಣೀಯವಾದುದು. ಹತ್ತೊಂಬತ್ತನೆಯ ಶತಮಾನದ ಪ್ರಾರಂಭಕಾಲದಲ್ಲಿ ಕ್ರಮಕ್ರಮವಾಗಿ ಮೊದಲಾದ ಕನ್ನಡಗ್ರಂಥಗಳ ಮುದ್ರಣಕಾರ್ಯ, ಕಲ್ಲಚ್ಚಿನ ಹಂತವನ್ನು ದಾಟಿ, ತೆಲುಗು ಲಿಪಿಯ ಪರಾವಲಂಬನವನ್ನೂ ನಿವಾರಿಸಿಕೊಂಡು, ಸ್ವಸ್ವರೂಪದಲ್ಲಿಯೇ ವಿರಾಜಿಸತೊಡಗಿದ ಈ ಕಾಲಾವಧಿ ಗಮನಾರ್ಹವಾದುದು. ಅಂದು ಮೊದಲಾದ ಗ್ರಂಥಸಂಪಾದನಕಾರ್ಯ ಮುಂದಿನ ಪೀಳಿಗೆಗೆ ಎಂಥ ಪ್ರೇರಣೆಯಾಯಿತೆಂಬುದನ್ನೂ, ಹೇಗೆ ಮಾರ್ಗದರ್ಶಕ ವಾಯಿತೆಂಬುದನ್ನೂ ಈಗ ಅವಲೋಕಿಸಬಹುದು.

೨

ಕ್ರಿ.ಶ. ೧೮೯೧ರಲ್ಲಿ "ಮೈಸೂರು ಓರಿಯೆಂಟಲ್ ಲೈಬ್ರರಿ" ಎಂಬ ಸಂಸ್ಥೆಯನ್ನು ಸರ್ಕಾರದವರು ಸ್ಥಾಪಿಸಿದ ಮೇಲೆ, ಅವರಿಗೆ ಪ್ರಾಕ್ತನ ಇಲಾಖೆಯ ಒಂದು ಅಂಗವಾಗಿ ನಡೆಯುತ್ತಿದ್ದ ಗ್ರಂಥಪ್ರಕಟನೆಯ ಕಾರ್ಯ ಸ್ವತಂತ್ರವಾಗಿ ಅಧಿಕಪ್ರಮಾಣದಲ್ಲಿ ಮುಂದುವರಿಯಿತು[8]. ಸಂಸ್ಕೃತ ಮತ್ತು ಕನ್ನಡ ಪ್ರಾಚೀನ ಗ್ರಂಥಗಳ ಹಸ್ತಪ್ರತಿಗಳ ಸಂಗ್ರಹ, ಸಂರಕ್ಷಣೆ, ಸಂಪಾದನೆ ಮತ್ತು ಪ್ರಕಟನೆಗಳ ಕಾರ್ಯ ಸುವ್ಯವಸ್ಥಿತವಾಗಿ ಮೊದಲಾಯಿತು. ಈ ಸಂಸ್ಥೆಯ ಕನ್ನಡ ಗ್ರಂಥಮಾಲೆಯ ಮೊದಲನೆಯ ಪುಸ್ತಕವೇ ಪಂಪನ ಆದಿಪುರಾಣ (೧೯೦೦). ಇದನ್ನು ಸಂಪಾದಿಸಿಕೊಟ್ಟಿರುವ ಶ್ರೀ ಎಸ್. ಜಿ. ನರಸಿಂಹಾಚಾರ್ಯರು, ತಮ್ಮ ಮುನ್ನುಡಿಯಲ್ಲಿ ಈ ಗ್ರಂಥಮಾಲೆಯ ಉದ್ದೇಶವನ್ನೂ, ಗ್ರಂಥಸಂಪಾದನೆಯಲ್ಲಿ ತಾವು ಅನುಸರಿಸಿರುವ ಕ್ರಮವನ್ನೂ ಈ ರೀತಿ ಪರಿಚಯಮಾಡಿ ಕೊಟ್ಟಿರುತ್ತಾರೆ :

> "It is a part of the programme of the Mysore Government Oriental Library to publish important Kannada works which have been hitherto unpublished or which though already published, require re-editing with the aid of correct manuscripts. The present volume

---

[6] Indian Antiquary, xxxiii, Nov. 1904, pp. 258-280.

[7] Introduction, P. 21.

[8] Oriental Research Institute, Mysore, 1953, p. 1.

forms the first number of the Kannada section of the Oriental Library Series" (Preface, p. 1).

"For the purposes of editing this book, four manuscript have been consulted, two belonging to the Jaina Mutt at Sravanabelagola, kindly lent by the present pontiff and two others belonging to the Oriental Library. The text of this edition is mainly based on one of the palmleaf manuscripts belonging to the Jain Mutt and it is only where reading of that manuscript was apparently incorrect that a better reading found in any one of the other manuscripts has been inserted in its place. All important variants are given as foot-notes." (Preface, p. iv).

ಈ ರೀತಿಯಾಗಿ ಪ್ರಾರಂಭವಾದ ಮೈಸೂರು ಓರಿಯೆಂಟಲ್ ಲೈಬ್ರರಿಯ ಗ್ರಂಥ ಸಂಪಾದನೆಯ ಕೆಲಸ ದಿನದಿನಕ್ಕೆ ಅಭಿವೃದ್ಧಿಗೊಂಡು ಕನ್ನಡಸಾಹಿತ್ಯಕ್ಕೆ ಅಮೂಲ್ಯ ವಾದ ಸೇವೆ ಸಲ್ಲಿಸಿದೆ. ಈ ಸಂಸ್ಥೆಯ ಆಶ್ರಯದಲ್ಲಿ ಈವರೆಗೆ ೪೩ ಗ್ರಂಥಗಳು ಪ್ರಕಟವಾಗಿವೆ. ಅವುಗಳಲ್ಲಿ ಎಲ್ಲ ಗ್ರಂಥಗಳನ್ನೂ ಪರಿಚಯಮಾಡಿಕೊಡಲು ಸಾಧ್ಯವಾಗದಿದ್ದರೂ, ಕುಮಾರವ್ಯಾಸ ಭಾರತದ ದಶಪರ್ವಗಳನ್ನು ಪ್ರಕಟಿಸಿದ ಸಂಗತಿ ಯನ್ನು ಇಲ್ಲಿ ಪ್ರಸ್ತಾಪಿಸುವುದು ಅಗತ್ಯವೆನ್ನಿಸುತ್ತದೆ.

ಕ್ರಿ.ಶ. ೧೮೫೧ರ ವೇಳೆಗಾಗಲೇ ಕಲ್ಲಚ್ಚಿನಲ್ಲಿ ಪ್ರಕಟಿತವಾದ ಕುಮಾರವ್ಯಾಸ ಭಾರತ ಮೇಲಿಂದ ಮೇಲೆ ಅಚ್ಚಾಗಿದ್ದರೂ, ಅದರ ಶುದ್ಧ ಪ್ರತಿಯನ್ನು ಒದಗಿಸಿ ಕೊಡುವ ಉದ್ದೇಶದಿಂದ ಓರಿಯೆಂಟಲ್ ಲೈಬ್ರರಿಯಲ್ಲಿ ಪಂಡಿತರಾಗಿದ್ದ ಶ್ರೀ ವಿ. ಶ್ಯಾಮಾಚಾರ್ಯರು ಕ್ರಿ.ಶ. ೧೯೧೨ರಲ್ಲಿ ಆದಿಪರ್ವವನ್ನು ಸಿದ್ಧಪಡಿಸಿ ಪ್ರಕಾಶಿಸಿದರು. ಸಂಪಾದಕರು ಗ್ರಂಥದ ಅವತರಣಿಕೆಯಲ್ಲಿ "ಈ ಭಾರತದ ದಶಪರ್ವಗಳು ಬೆಂಗಳೂರು ಮತ್ತು ಮಂಗಳೂರು ಸ್ಥಳಗಳಲ್ಲಿ ಮುದ್ರಿತವಾಗಿ ಪ್ರಚುರವಾಗಿರುವಾಗ ಹೊಸದಾಗಿ ಮುದ್ರಿಸಲು ಯತ್ನಿಸುವುಕ್ಕೆ ಕಾರಣಗಳನ್ನು ಹೇಳಬೇಕಾಗಿದೆ. ಮೇಲೆ ಕಂಡ ಸ್ಥಳ ಗಳಲ್ಲಿ ಮುದ್ರಿತವಾದ ಪ್ರತಿಗಳನ್ನು ನಮಗೆ ದೊರೆತಿರುವ ಭಾರತದ ಲಿಖಿತ ಪ್ರತಿಗಳೊಡನೆ ಹೋಲಿಸಿ ನೋಡುವಾಗ ಮುದ್ರಿತ ಪುಸ್ತಕಗಳಲ್ಲಿ ಕವಿರಚಿತಗ್ರಂಥವು ಸಂಪೂರ್ಣವಾಗಿ ಪ್ರಕಟವಾಗಿರುವುದಿಲ್ಲವೆಂದು....ವ್ಯಕ್ತವಾಗುವುದು. ಹೀಗೆ ಮುದ್ರಿತ ಪುಸ್ತಕಗಳಲ್ಲಿ ತೋರಿಬರುವ ಅಸಂಪೂರ್ಣತೆಯು ಭಾಷಾಭಿಮಾನಿಗಳಲ್ಲಿ ಬಹುಜನಗಳಿಗೆ ಸಾಮಾನ್ಯವಾಗಿ ಕಂಡುಬಂದುದರಿಂದ ಪ್ರಾಚೀನವಾದ ಪುಸ್ತಕಗಳನ್ನ ನುಸರಿಸಿ ಸಂಪೂರ್ಣವಾಗಿ ಸರಿಯಾದ ಮುದ್ರಣವು ಆವಶ್ಯಕವೆಂಬ ಅಭಿಪ್ರಾಯದಿಂದ ಈ ಪುಸ್ತಕದ ಮುದ್ರಣ ಕಾರ್ಯವು ಆರಂಭಿಸಲ್ಪಟ್ಟಿತು" (ಪು. xvi–xvii) ಎಂದು

ತಿಳಿಯಪಡಿಸಿರುತ್ತಾರೆ. ಸಂಪಾದನಕಾರ್ಯದಲ್ಲಿ ಹತ್ತು ಹಸ್ತಪ್ರತಿಗಳನ್ನು ಅವಲಂಬಿಸಿರುತ್ತಾರೆ. ಪಾಠಾಂತರಗಳ ಸಮೇತ ಪುಸ್ತಕವನ್ನು ಪ್ರಕಟಿಸಲಾಗಿದೆ. ಸಂಪಾದಕರ ಗಮನವೆಲ್ಲ ವಿಶೇಷವಾಗಿ ಹಸ್ತಪ್ರತಿಗಳಲ್ಲಿದ್ದ ಅಧಿಕಪಾಠಗಳ ಕಡೆಗೆ ಇದ್ದುದರಿಂದ ಹಲವಾರು ಪ್ರಕ್ಷಿಪ್ತಭಾಗಗಳು ಅರಿತೋ ಅರಿಯದಯೋ ನುಸುಳಿಕೊಂಡು ಬಂದಿವೆ. ಈ ಆದಿಪಂಚಕದ ಸಂಪಾದನಕಾರ್ಯದಲ್ಲಿ ಭಾಗವಹಿಸಿದ ಮತ್ತೊಬ್ಬ ವಿದ್ವಾಂಸರು ಶ್ರೀ ಟಿ. ಎನ್. ಸುಬ್ಬರಾಯಶಾಸ್ತ್ರಿಗಳು.

ಮುಂದೆ ಯುದ್ಧಪಂಚಕದ ಸಂಪಾದನಕಾರ್ಯಕ್ಕೆ ಒಂದು ಸಂಪಾದಕ ಮಂಡಲಿಯನ್ನು ನಿಯೋಜಿಸಲಾಯಿತು. ಈ ಸಮಿತಿಯಲ್ಲಿ ಶ್ರೀಯುತರುಗಳಾದ ಬಿ. ಎಂ. ಶ್ರೀಕಂಠಯ್ಯ, ಟಿ. ಎಸ್. ವೆಂಕಣ್ಣಯ್ಯ, ಡಿ. ಶ್ರೀನಿವಾಸಾಚಾರ್ ಮತ್ತು ತೀ. ನಂ. ಶ್ರೀಕಂಠಯ್ಯ ಅವರುಗಳಿದ್ದರು. ಆಗಿಂದಾಗ್ಗೆ ಈ ಮಂಡಲಿಯಲ್ಲಿ ಬದಲಾವಣೆಗಳಾಗಿ, ಈ ಸಂಪಾದನ ಕಾರ್ಯದಲ್ಲಿ ಶ್ರೀಯುತರುಗಳಾದ ಎ. ಆರ್. ಕೃಷ್ಣಶಾಸ್ತ್ರಿ, ಎಂ. ಎಸ್. ಬಸವಲಿಂಗಯ್ಯ, ತಿರುವಳ್ಳೂರು ಶ್ರೀನಿವಾಸರಾಘವಾಚಾರ್ಯ, ಡಿ. ಎಲ್. ನರಸಿಂಹಾಚಾರ್ ಮತ್ತು ಎನ್. ಅನಂತರಂಗಾಚಾರ್ ಮೊದಲಾದ ಇತರ ವಿದ್ವಾಂಸರೂ ಭಾಗವಹಿಸಿರುತ್ತಾರೆ.

ಭೀಷ್ಮಪರ್ವವನ್ನು ಪರಿಶೀಲಿಸಿದರೆ ಈ ಸಂಪಾದನಕ್ರಮ ಹಿಂದಿನ ರೀತಿಗಿಂತಲೂ ಹೇಗೆ ಉತ್ತಮವಾಗಿದೆಯೆಂಬುದು ವಿದಿತವಾಗುತ್ತದೆ. ಹಸ್ತಪ್ರತಿಗಳ ವಿವರ, ಪಾಠಾಂತರಗಳ ನಿರ್ದೇಶನ, ಪ್ರಕ್ಷಿಪ್ತ ಭಾಗಗಳನ್ನೊಳಗೊಂಡ ಪರಿಶಿಷ್ಟಗಳು ಮುಂತಾದುವು ಈ ನೂತನ ಸಂಪಾದನದ ವಿಶಿಷ್ಟಲಕ್ಷಣಗಳು. ಶುದ್ಧಪಾಠಗಳ ನಿರ್ಣಯದಲ್ಲಿಯೂ ಒಬ್ಬರಿಗಿಂತ ಹೆಚ್ಚಿನ ವಿದ್ವಾಂಸರ ಪರ್ಯಾಲೋಚನೆ ಸ್ವಾಗತಾರ್ಹವಾದುದೇ ಸರಿ. ಈ ವೇಳೆಗೆ ಇತರ ಭಾಷೆಗಳಲ್ಲಿಯೂ ನಡೆದಿದ್ದ ಸಂಪಾದನ ಸಂವಿಧಾನವು ಈ ಮಂಡಲಿಗೆ ಸಾಕಷ್ಟು ಸಹಾಯಕವಾಗಿದ್ದಿರಬೇಕು. ೧೯೧೨ರಲ್ಲಿ ಮೊದಲಾದ ಈ ಸಂಪಾದನ ಕಾರ್ಯ ೧೯೪೩ರ ವೇಳೆಗೆ ಮುಕ್ತಾಯವಾಯಿತು. ಆದಿ ಪಂಚಕದಲ್ಲಿ, ೧೯೫೫ರಲ್ಲಿ ಉದ್ಯೋಗಪರ್ವವು ಪುನರ್ಮುದ್ರಣವಾದಾಗ ಅದರ ಸಂಪಾದಕರಾದ ಶ್ರೀ ಎಸ್. ಎನ್. ಕೃಷ್ಣಜೋಯಿಸರು ವಹಿಸಿರುವ ಶ್ರಮ ತುಂಬ ಪ್ರಶಂಸನೀಯವಾದದ್ದು. ಹದಿನೆಂಟು ಹಸ್ತಪ್ರತಿಗಳನ್ನು ಅವಲಂಬಿಸಿ ಈ ಹೊಸ ಮುದ್ರಣವನ್ನು ಅಣಿಮಾಡಿರುವುದಲ್ಲದೆ, ಇದಕ್ಕೆ ವಿಸ್ತಾರವಾದ ನೂರಮೂರು ಪುಟಗಳಷ್ಟು ಪೀಠಿಕೆಯನ್ನು ಬರೆದಿರುತ್ತಾರೆ. ಇದರಲ್ಲಿ ಕಥಾಭಾಗವನ್ನು ಕುರಿತ ತೌಲನಿಕ ಸಮೀಕ್ಷೆ ತುಂಬ ಉಪಯುಕ್ತವಾಗಿದೆ. ಒಟ್ಟಿನಲ್ಲಿ, ಓರಿಯೆಂಟಲ್ ಲೈಬ್ರರಿಯವರು ಪ್ರಕಟಿಸಿರುವ ಕುಮಾರವ್ಯಾಸಭಾರತದ ದಶಪರ್ವಗಳ ಸಂಪುಟಗಳನ್ನು ಸಮೀಕ್ಷಿಸಿದರೆ, ಕನ್ನಡ ಗ್ರಂಥಸಂಪಾದನ ಕಾರ್ಯದ ವಿವಿಧ ಸಮಸ್ಯೆಗಳೂ, ಅದು ಬೆಳೆದುಬಂದ ಹಲವಾರು ಹಂತಗಳೂ ಮನವರಿಕೆಯಾಗುತ್ತವೆ.

ಜೈನ, ವೀರಶೈವ ಮತ್ತು ವೈದಿಕ ಧರ್ಮಗಳಿಗೆ ಸಂಬಂಧಿಸಿದ ಹಲವಾರು

ಕೃತಿಗಳನ್ನೂ, ಶಾಸ್ತ್ರಗ್ರಂಥಗಳನ್ನೂ ಪ್ರಕಟಿಸಿರುವ ಯಶಸ್ಸು ಈ ಸಂಸ್ಥೆಗೆ ಸಲ್ಲತಕ್ಕದ್ದು. ಈ ಪ್ರಕಟನಕಾರ್ಯದಲ್ಲಿ ಕಂಡುಬರುವ ಹಲವಾರು ಹಿರಿಯ ವಿದ್ವಾಂಸರ ಪರಿಶ್ರಮ ಮತ್ತು ಸಂಪಾದನಶಾಸ್ತ್ರದ ಮೇಲ್ಮೆಗಳು ಮನಮೆಚ್ಚುವಂತಹವು.

ಕನ್ನಡ ಪ್ರಾಚೀನ ಗ್ರಂಥಗಳ ಪ್ರಕಟನೆಯ ಕಾರ್ಯದಲ್ಲಿ ಅನೇಕ ಇತರ ಸಂಸ್ಥೆಗಳೂ, ವಿದ್ಯಾಪೀಠಗಳೂ, ಯಥಾಶಕ್ತಿ ಭಾಗವಹಿಸಿವೆ. ಅವುಗಳಲ್ಲಿ ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತು, ಧಾರವಾಡದ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಕರ್ನಾಟಕ ವಿದ್ಯಾವರ್ಧಕಸಂಘ, ಕನ್ನಡ ಸಂಶೋಧನ ಸಂಸ್ಥೆ, ಇತ್ತೀಚೆಗೆ ಸ್ಥಾಪಿತವಾದ ಕರ್ನಾಟಕ ವಿಶ್ವವಿದ್ಯಾಲಯ, ಮದರಾಸು ವಿಶ್ವವಿದ್ಯಾನಿಲಯ ಮೊದಲಾದುವು ಪ್ರಮುಖವಾದುವು.

ಶ್ರೀ ಬೆಳ್ಳಾವೆ ವೆಂಕಟನಾರಾಯಣಪ್ಪನವರ ನೇತೃತ್ವದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನವರು ಪ್ರಕಟಿಸಿದ ಪಂಪರಾಮಾಯಣ, ಪಂಪಭಾರತ ಮತ್ತು ಶಬ್ದಮಣಿ ದರ್ಪಣಗಳು ಗಮನಾರ್ಹವಾದುವು. ಮೈಸೂರು ಸರ್ಕಾರದ ಪರವಾಗಿ ಪರಿಷತ್ತಿನವರು ಪಂಪರಾಮಾಯಣ ಮತ್ತು ಪಂಪಭಾರತಗಳನ್ನು ಪರಿಷ್ಕರಿಸುವ ಕಾರ್ಯವನ್ನು ಕೈಕೊಂಡು ಅವುಗಳ ಎರಡನೆಯ ಮುದ್ರಣವನ್ನು ಬಹಳ ಅಚ್ಚುಕಟ್ಟಾಗಿ ನಿರ್ವಹಿಸಿರುತ್ತಾರೆ. ಈ ಕಾರ್ಯ ತ್ವರಿತವಾಗಿಯೂ, ತೃಪ್ತಿಕರವಾಗಿಯೂ ನೆರವೇರಲು ಶ್ರೀ ಬೆಳ್ಳಾವೆ ವೆಂಕಟನಾರಾಯಣಪ್ಪನವರು ಬಹುಮಟ್ಟಿಗೆ ಕಾರಣರು ಎಂಬುದು ಎಲ್ಲರಿಗೂ ತಿಳಿದಿರುವ ವಿಷಯ. ಪಂಪರಾಮಾಯಣವನ್ನೇನೋ ಪಂಡಿತರ ಬೆಂಬಲದಿಂದ ಸಕಾಲದಲ್ಲಿ ಸಿದ್ಧಪಡಿಸಲಾಯಿತು, ಆದರೆ ಪಂಪಭಾರತವನ್ನು ಅಷ್ಟು ಅನಾಯಾಸವಾಗಿ ಸಿದ್ಧಪಡಿಸುವಂತಿರಲಿಲ್ಲ. ಹೊಸದಾದ ಹಸ್ತಪ್ರತಿಗಳ ಅಭಾವ, ರೈಸ್ ಅವರ ಕಾಲದಿಂದಲೂ ಹಾಗೆಯೇ ಉಳಿದುಬಂದ ಪಾಠಕ್ಲೇಶಗಳು ಮೊದಲಾದುವು ಸಂಪಾದಕರನ್ನು ಮೂದಲಿಸುವಂತಿದ್ದುವು. ಇದಕ್ಕಾಗಿ ಬೆಳ್ಳಾವೆ ವೆಂಕಟನಾರಾಯಣಪ್ಪನವರು ಪರಿಣತರ ಸಲಹೆ ಸಹಕಾರಗಳನ್ನು ಪಡೆಯಲು ನಿಶ್ಚಯಿಸಿ, ನೂತನ ಹಸ್ತಪ್ರತಿಗಳನ್ನು ದೊರಕಿಸಿಕೊಳ್ಳಲೂ ತುಂಬ ಶ್ರಮಪಡಬೇಕಾಯಿತು. ಪೂನಾದಲ್ಲಿರುವ "ಭಂಡಾರ್ಕರ್ ರಿಸರ್ಚ್ ಇನ್‌ಸ್ಟಿಟ್ಯೂಟ್" ಮತ್ತು ಉತ್ತರ ಹಿಂದೂಸ್ಥಾನದ ಆರಾ ಎಂಬಲ್ಲಿರುವ ಜೈನಪ್ರಾಚ್ಯ ಗ್ರಂಥ ಕೋಶಾಲಯಗಳಲ್ಲಿದ್ದ ಪಂಪಭಾರತದ ಪ್ರತಿಗಳನ್ನು ತರಿಸಿಕೊಳ್ಳಲು ಅವರು ಮಾಡಿದ ಪ್ರಯತ್ನಗಳನ್ನು ಅವರ 'ಉಪೋದ್ಘಾತದ' ಮೂಲಕ ತಿಳಿಯಬಹುದು. ತಮ್ಮ ಸಂಪಾದನಕಾರ್ಯ ಆದಷ್ಟು ಸಮರ್ಪಕವಾಗಿರಬೇಕೆಂಬ ಧ್ಯೇಯದಿಂದ ಅವರು ಅನುಸರಿಸಿದ ವಿಧಾನಗಳನ್ನೂ ಈ ಹೇಳಿಕೆಯಲ್ಲಿ ವಿವರಿಸಿರುತ್ತಾರೆ. ಪಾಠ ನಿರ್ಣಯದಲ್ಲಿ ತಮಗೆ ಉಂಟಾದ ಕ್ಲೇಶಗಳನ್ನು ವಿಚಾರ ಮಾಡಿರುತ್ತಾರೆ. ಕಡೆಯಲ್ಲಿ, ಅವರು ಈ ಬಗ್ಗೆ ಬರೆದಿರುವ ಒಂದೆರಡು ಮಾತುಗಳನ್ನು ಇಲ್ಲಿ ಉದಾಹರಿಸಬಹುದು.

"'ಕ' ಪ್ರತಿಯ ಸಂಪಾದಕರು (ಬಿ. ಎಲ್. ರೈಸ್) ಗ್ರಂಥಪಾಠ

ವನ್ನು ೧೭೫ ಕಡೆಗಳಲ್ಲಿ ತಮ್ಮ ಊಹೆಯಿಂದ ತುಂಬಿ, ಅವನ್ನು ಕಂಸದಲ್ಲಿ ತೋರಿಸಿರುತ್ತಾರೆ ; ಇನ್ನೂ ೬೩ ಪದ್ಯಗಳಲ್ಲಿಯೂ ೧೩ ವಚನಗಳಲ್ಲಿಯೂ ಹಾಗೆಯೇ ಬಿಟ್ಟುಹೋಗಿರುವ ಅನೇಕ ಭಾಗಗಳನ್ನು, ನಾವು ಆರಾ ಪ್ರತಿಯ ಸಹಾಯದಿಂದ ತುಂಬಿ, ನಮ್ಮ ಊಹೆಯಿಂದ ಸೇರಿಸಿರುವ ಭಾಗಗಳನ್ನು ಕಂಸದಲ್ಲಿ ತೋರಿಸಿರುತ್ತೇವೆ. ಇಷ್ಟೇ ಅಲ್ಲದೆ, ನಮಗೆ ಅರ್ಥವಾಗದೆ ಸರಿಯಲ್ಲವೆಂದು ತೋರಿದ ಸ್ಥಳಗಳಲ್ಲೆಲ್ಲ ನಮ್ಮ ಊಹೆಯ ಪಾಠವನ್ನು ಕಂಸದಲ್ಲಿ ಕೊಟ್ಟು, ಇತರ ಪ್ರತಿಗಳಲ್ಲಿಯ ಪಾಠಗಳನ್ನು ಅಡಿಯಲ್ಲಿ ಹಾಕಿರುತ್ತೇವೆ. ವಾಚಕರ ಸೌಕರ್ಯಕ್ಕೆಂದೇ ಈ ಮಾರ್ಗವನ್ನನುಸರಿಸಿರುವೆವು. ಒಟ್ಟು ಗ್ರಂಥದಲ್ಲಿ, ನಮ್ಮ ಊಹೆಯಿಂದ ಹಾಕಿರುವ ಪಾಠಗಳು ಸುಮಾರು ೬೦೦ ಇರುವುವು. ಇವುಗಳಲ್ಲಿ ಅನೇಕ ಪಾಠಗಳು ಮ. ರಾ॰ ಕಡಬದ ನಂಜುಂಡಶಾಸ್ತ್ರಿಗಳಿಂದಲೇ ಮೊದಲು ಊಹಿಸಲ್ಪಟ್ಟುವು.

ಯಾವ ಪಾಠವನ್ನಾದರೂ ನಾವು ತಿದ್ದಬೇಕೆಂದಭಿಪ್ರಾಯಪಟ್ಟರೆ, ಎಲ್ಲ ಪ್ರತಿಗಳ ಪಾಠವನ್ನೂ ಮುಂದಿಟ್ಟುಕೊಂಡು, ಸಾಮಾನ್ಯವಾಗಿ ಆ ಪಾಠಗಳಲ್ಲಿಯ ಅಕ್ಷರಗಳನ್ನೇ ಅರ್ಥವಾಗುವ ರೀತಿಯಲ್ಲಿ ಮಾರ್ಪಡಿಸಿಕೊಂಡು, ಈ ಮಾರ್ಪಾಡಿನ ಪಾಠವನ್ನು ಪದ್ಯದಲ್ಲಿ ಕಂಸ ಚಿಹ್ನೆಗಳ ಮಧ್ಯೇ ಹಾಕಿ, ಇತರ ಪಾಠಗಳನ್ನು ಅಡಿ ಟಿಪ್ಪಣದಲ್ಲಿ ಕೊಟ್ಟಿರುವೆವು. ಆದುದರಿಂದ, ನಮ್ಮ ಪಾಠವು ತೃಪ್ತಿಕರವಾಗಿಲ್ಲದಿದ್ದರೂ, ಅಡಿಟಿಪ್ಪಣದಲ್ಲಿಯ ಪಾಠಾಂತರಗಳಿಂದ ಪಂಡಿತರು ತಮಗೊಪ್ಪುವ ಮಾರ್ಪಾಡನ್ನು ಮಾಡಿಕೊಳ್ಳಲು ಯಾವ ಅಭ್ಯಂತರವೂ ಇರುವುದಿಲ್ಲ. ಇಂತಹ ಸಂದರ್ಭಗಳಲ್ಲೆಲ್ಲ 'ಘ' ಮತ್ತು 'ಘs' ಪಾಠಗಳಿಗೆ ಹೆಚ್ಚು ಗೌರವವನ್ನು ಕೊಟ್ಟಿರುತ್ತೇವೆ. ಮತ್ತೆ ಕೆಲವು ಸ್ಥಳಗಳಲ್ಲಿ ಪದ್ಯಗಳೂ ಪದ್ಯಭಾಗಗಳೂ ಪದಗಳೂ ನಮಗೆ ಅರ್ಥವಾಗದುದರಿಂದ, ವಾಚಕರ ಅನುಕೂಲ್ಯಕ್ಕಾಗಿ ಆ ಸ್ಥಳಗಳಲ್ಲಿ ಸಂಶಯ ಚಿಹ್ನೆ(?)ಯನ್ನು ಹಾಕಿರುತ್ತೇವೆ. ಕೆಲವು ಕಡೆಗಳಲ್ಲಿ, ಎಲ್ಲ ಪ್ರತಿಗಳ ಪಾಠಗಳೂ ಒಂದೇ ಆಗಿದ್ದರೂ, ಅಂತಹವು ನಮಗೆ ಸಮಂಜಸವಾಗಿ ತೋರದೆ ಹೋದುದರಿಂದ, ನಮಗೊಪ್ಪಿದ ಪಾಠವನ್ನು ಕಂಸದಲ್ಲಿ ಕೊಟ್ಟು ಇತರ ಪಾಠವನ್ನು 'ಸ' (ಸರ್ವ) ಎಂಬ ಸಂಕೇತದಿಂದ ಅಡಿ ಟಿಪ್ಪಣದಲ್ಲಿ ಕೊಟ್ಟಿದ್ದೇವೆ. ಮತ್ತೆ ಕೆಲವು ಕಡೆ, ಪ್ರತಿಗಳ ಪಾಠಗಳು ಯಾವುದೋ ಒಂದು ರೀತಿಯಲ್ಲಿ ಸಮಂಜಸವಾಗಿದ್ದರೂ, ಅಷ್ಟು ತೃಪ್ತಿಕರವಾದುವಾಗಿ ನಮಗೆ ತೋರದೆ ಹೋದುದರಿಂದ, ಅಡಿ ಟಿಪ್ಪಣದಲ್ಲಿ ಮಾತ್ರ ನಮ್ಮ ಸಲಹೆಗಳನ್ನು 'ಪ' (ಪರಿಷತ್ತು) ಎಂಬ ಸಂಕೇತದಿಂದ ಕೊಟ್ಟಿರುತ್ತೇವೆ" (ಪು. xv–xvi).

ಈ ವಿವರಣೆಯಲ್ಲಿ ಕಂಡುಬರುವ ಸಂಪಾದಕನ ಪ್ರಾಮಾಣಿಕತೆ ತುಂಬ ಆದರ್ಶ ಪ್ರಾಯವಾದುದು. ಪುನರ್ಮುದ್ರಣ ಕಾರ್ಯವನ್ನು ಕೈಕೊಂಡ ಸಂಪಾದಕರು, ಅದನ್ನು ಪರಿಷ್ಕರಿಸುವುದರಲ್ಲಿ ತೋರಿರುವ ಆಸಕ್ತಿ ಅಸದೃಶವೆನ್ನಿಸುತ್ತದೆ.

ಪರಿಷತ್ತಿನವರು ಪ್ರಕಟಿಸಿರುವ 'ಶಬ್ದಮಣಿ ದರ್ಪಣ' 'ಸೋಮೇಶ್ವರ ಶತಕ' ಮತ್ತು ಚಾವುಂಡರಾಯನ 'ಆದಿಪುರಾಣ'ಗಳು ಉಲ್ಲೇಖಾರ್ಹವಾದುವು. ದೇವ ಕವಿಯ 'ಕುಸುಮಾವಳಿ' ಕಾವ್ಯ ಪ್ರತ್ಯೇಕವಾಗಿ ಪುಸ್ತಕ ರೂಪದಲ್ಲಿ ಬಾರದೆ ಹೋದರೂ ಪರಿಷತ್ಪತ್ರಿಕೆಯಲ್ಲಿ ಕ್ರಮಶಃ ಪ್ರಕಟವಾದುದನ್ನು ಇಲ್ಲಿ ನೆನೆಯಬಹು ದಾಗಿದೆ.

ಧಾರವಾಡದ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯವರು ಶ್ರೀಯುತರುಗಳಾದ ಶಿ. ಶಿ. ಬಸವನಾಳ, ಶಿ. ಚ. ನಂದೀಮಠ, ಎಸ್. ಎಸ್. ಮಾಳವಾಡ ಮೊದಲಾದ ವಿದ್ವಾಂಸರ ಜೆಂಬಲದಿಂದ 'ಚನ್ನಬಸವಪುರಾಣ' 'ಪ್ರಭುಲಿಂಗಲೀಲೆ' 'ಗಿರಿಜಾ ಕಲ್ಯಾಣ', 'ರಕ್ಷಾಶತಕ-ಪಂಪಾಶತಕ', 'ಹರಿಹರನ ಮೂರು ರಗಳೆಗಳು' ಮೊದಲಾದ ಕನ್ನಡ ಕೃತಿಗಳನ್ನು ಅಚ್ಚುಕಟ್ಟಾಗಿ ಪ್ರಕಟಿಸಿದ್ದು ಮೆಚ್ಚತಕ್ಕ ವಿಷಯ. ಕರ್ನಾಟಕ ವಿದ್ಯಾವರ್ಧಕ ಸಂಘದವರು ನಾಗವರ್ಮನ 'ಕಾವ್ಯಾವಲೋಕನ'ವನ್ನು ಮತ್ತೆ ಮುದ್ರಿಸಿದುದಲ್ಲದೆ, ಭಟ್ಟಾಕಳಂಕನ 'ಶಬ್ದಾನುಶಾಸನ'ವನ್ನು ಕನ್ನಡ ವ್ಯಾಖ್ಯಾನ ಸಮೇತವಾಗಿ ದೊರಕಿಸಿಕೊಟ್ಟರು. ಅತ್ತ ಮದರಾಸಿನಲ್ಲಿ ಸರ್ಕಾರದ ಪ್ರಾಚ್ಯ ಪುಸ್ತಕ ಭಂಡಾರದವರೂ (Govt. Oriental Manuscripts Library), ವಿಶ್ವ ವಿದ್ಯಾನಿಲಯದ ಕನ್ನಡ ವಿಭಾಗದವರೂ ಸಲ್ಲಿಸಿರುವ ಸೇವೆ ಗಣನೀಯವಾದುದು. ಶ್ರೀ ಎಚ್. ಶೇಷಯ್ಯಂಗಾರ್, ಶ್ರೀ. ಎಂ. ವೆಂಕಟರಾವ್, ಶ್ರೀ. ಎಂ. ಗೋವಿಂದರಾವ್, ಶ್ರೀ. ಎಚ್. ಚನ್ನಕೇಶವ ಅಯ್ಯಂಗಾರ್ ಮತ್ತು ಶ್ರೀ. ಎಂ. ಮರಿಯಪ್ಪಭಟ್ಟ ಅವರ ಸಂತತವಾದ ಶ್ರಮದಿಂದ ಅನೇಕ ಉದ್ಗ್ರಂಥಗಳು ಬಹು ಅಂದವಾಗಿ ಬೆಳಕಿಗೆ ಬಂದವು. 'ಕವಿರಾಜಮಾರ್ಗ'ದ ಎರಡನೆಯ ಸಂಸ್ಕರಣದ ಕೀರ್ತಿ ಮದರಾಸಿಗೆ ಸಲ್ಲತಕ್ಕದ್ದು. ಇದಲ್ಲದೆ ಲಿಂಗಣಾರಾಧ್ಯನ ವೃತ್ತಿಸಮೇತವಾದ 'ಶಬ್ದಮಣಿದರ್ಪಣ'ವನ್ನು ಸಾಕಷ್ಟು ವಿಸ್ತಾರವಾದ ವಿದ್ವತ್ಪೂರ್ಣವಾದ ಮುನ್ನುಡಿಯೊಂದಿಗೆ ಅನೇಕ ಉಪಯುಕ್ತವಾದ ಅನುಬಂಧಗಳನ್ನು ಕೊಟ್ಟು ಅತ್ಯಂತ ಸುಲಭ ಬೆಲೆಗೆ ಕನ್ನಡಿಗರಿಗೆ ಒದಗಿಸಿದ ಶ್ರೇಯಸ್ಸು ಇವರಿಗೆ ಮೀಸಲಾದುದು.

ಧಾರವಾಡದಲ್ಲಿ ಕನ್ನಡ ಸಂಶೋಧನ ಸಂಸ್ಥೆ ಸ್ಥಾಪಿತವಾದ ಮೇಲೆ ಶ್ರೀ ಆರ್. ಎಸ್. ಪಂಚಮುಖಿಯವರ ಮೇಲ್ವಿಚಾರಣೆಯಲ್ಲಿ ಹಲವಾರು ಶಾಸನಗಳು ಮತ್ತು ಗ್ರಂಥಗಳು ಪ್ರಕಟವಾದುವು. ಇವುಗಳಲ್ಲಿ ಚಂದ್ರರಾಜನ 'ಮದನತಿಲಕ' ಮತ್ತು ಈಶ್ವರ ಕವಿಯ 'ಕವಿಜಿಹ್ವಾಬಂಧನ'ಗಳು ವಿದ್ವಾಂಸರಿಗೆ ತುಂಬ ಉಪಯುಕ್ತವೆನ್ನಿಸಿವೆ. ಡಾ. ಬಿ. ಎಸ್. ಕುಲಕರ್ಣಿ ಅವರು ಬ್ರಹ್ಮಶಿವನ "ಸಮಯ ಪರೀಕ್ಷೆ" ಯನ್ನು ಈ ಸಂಸ್ಥೆಯ ಮೂಲಕವೇ ಒದಗಿಸಿಕೊಟ್ಟಿರುತ್ತಾರೆ.

ಕರ್ನಾಟಕ ವಿಶ್ವವಿದ್ಯಾಲಯವು ಸ್ಥಾಪಿತವಾದ ಮೇಲೆ ಅಲ್ಲಿನ ಕನ್ನಡ ವಿಭಾಗದ ಪ್ರಕಟನಕಾರ್ಯ ಅಸದೃಶವಾಗಿ ಸಾಗುತ್ತಿದೆ. ಉತ್ಸಾಹಶಾಲಿಗಳೂ, ಕಾರ್ಯದಕ್ಷರೂ, ವಿದ್ವಾಂಸರೂ ಆದ ಡಾ. ಆರ್. ಸಿ. ಹಿರೇಮಠ ಅವರ ಸಂಪಾದಕತ್ವದಲ್ಲಿ, ಈವರೆಗೆ ಆಗಿರುವ ಗ್ರಂಥಸಂಪಾದನೆಯ ಕಾರ್ಯ ಯಾರಿಗಾದರೂ ಬೆರಗನ್ನುಂಟುಮಾಡದೆ ಇರದು. ಹರಿಹರ, ರಾಘವಾಂಕ, ಷಡಕ್ಷರಿ, ಸುರಂಗ, ನೇಮಿಚಂದ್ರ ಮೊದಲಾದವರ ಕೃತಿಗಳನ್ನಲ್ಲದೆ ಸಮಗ್ರ ವಚನಸಾಹಿತ್ಯವನ್ನೇ ಸಂಪಾದನೆಮಾಡಲು ತೊಡಗಿರುವ ಈ ವಿಭಾಗದ ಕೆಲಸ ಕನ್ನಡ ಗ್ರಂಥಸಂಪಾದನೆಯ ಕ್ಷೇತ್ರದಲ್ಲಿ ಸರ್ವದಾ ಸ್ಮರಣೀಯವಾದುದು. ಈ ಕೆಲಸದ ಪ್ರಮಾಣವನ್ನೂ, ವಿಧಾನವನ್ನೂ, ಪ್ರಗತಿಯನ್ನೂ ಈವರೆಗೆ ಅಚ್ಚಾಗಿರುವ 'ಚನ್ನಬಸವಣ್ಣನವರ ವಚನಗಳು' 'ಸಿದ್ಧರಾಮೇಶ್ವರನ ವಚನಗಳು' 'ಬಸವಣ್ಣನವರ ವಚನಗಳು' ಮತ್ತು 'ಶಿವಶರಣೆಯರ ವಚನಗಳು' ಎಂಬ ಸಂಕಲನಗಳಿಂದ ತಿಳಿಯಬಹುದು.

ಗ್ರಂಥಸಂಪಾದನಕಾರ್ಯಕ್ಕೆ ಕರ್ಣಾಟಕ ಸಂಘಗಳೂ ತಮ್ಮ ಶಕ್ತ್ಯನುಸಾರ ಸೇವೆಸಲ್ಲಿಸಬಹುದೆಂಬುದಕ್ಕೆ 'ಸಿದ್ಧರಾಮಚಾರಿತ್ರ' ಮತ್ತು 'ಸುಕುಮಾರ ಚರಿತ'ಗಳನ್ನು ಪ್ರಕಟಿಸಿರುವ ಶಿವಮೊಗ್ಗ ಕರ್ಣಾಟಕ ಸಂಘದ ಹೆಸರನ್ನು ಇಲ್ಲಿ ಹೇಳಬಹುದು. ಇಂತೆಯೇ ವೀರಶೈವ ಮಠಗಳವರು ಸಲ್ಲಿಸಿರುವ ಸೇವೆಯೂ ಸಹ ಗಮನಾರ್ಹವಾದುದಾಗಿದೆ. 'ಲಿಂಗಲೀಲಾವಿಲಾಸಚಾರಿತ್ರ', 'ಬಸವಪುರಾಣ', 'ಶೂನ್ಯಸಂಪಾದನೆ' ಮುಂತಾದ ಕೃತಿಗಳ ಪ್ರಕಟನೆಗೆ ಮಠಾಧಿಪತಿಗಳು ನೀಡಿರುವ ನೆರವು ನೆನೆಯತಕ್ಕುದಾಗಿದೆ. ಜೈನಮಠಗಳು ಪ್ರಾಚೀನ ಪ್ರತಿಗಳ ಸಂರಕ್ಷಣೆಯ ಕಾರ್ಯದಲ್ಲಿ ತೋರಿದ ಆದರವನ್ನೇ ಒಮ್ಮೊಮ್ಮೆ ಅವುಗಳನ್ನು ಪ್ರಕಟಿಸುವುದಕ್ಕೂ ಪ್ರೋತ್ಸಾಹವಿತ್ತಿರುವುದನ್ನು ಕಾಣಬಹುದು. ಇತರ ಧಾರ್ಮಿಕ ಸಂಸ್ಥೆಗಳವರೂ ಈ ಕಡೆಗೆ ತಮ್ಮ ಗಮನವನ್ನು ಇತ್ತರೆ, ಕನ್ನಡದ ಪ್ರಾಚೀನ ಗ್ರಂಥಗಳ ಶೇಖರಣೆ ಮತ್ತು ಪ್ರಕಟನೆಗಳು ಇನ್ನೂ ಅತಿಶಯವಾಗಿ ಆದೀತು.

ಕನ್ನಡ ಗ್ರಂಥಗಳ ಪ್ರಕಟನೆಯ ಕಾರ್ಯದಲ್ಲಿ ಪುಸ್ತಕ ಪ್ರಕಾಶಕರ ಸೇವೆಯನ್ನು ಇಂದು ಎಷ್ಟು ಸ್ಮರಿಸಿದರೂ ಸಾಲದು. ವಾಜಪೇಯಂ ಗೋವಿಂದಯ್ಯ, ವಿ. ಬಿ. ಸುಬ್ಬಯ್ಯ, ಟಿ. ಎಲ್. ಕೃಷ್ಣಯ್ಯಶೆಟ್ಟಿ, ಕಳಾನಿಧಿ ಪುಸ್ತಕವ್ಯಾಪಾರಿಗಳು ಮೊದಲಾದ ಹೆಸರಾಂತ ಹಳೆಯ ಪ್ರಕಾಶಕರೂ, ವಿವೇಕಾಭ್ಯುದಯ ಕಾರ್ಯಾಲಯ, ಶಾರದಾ ಮಂದಿರ, ಕಾವ್ಯಾಲಯ, ಸಮಾಜಪುಸ್ತಕಾಲಯ ಮೊದಲಾದ ಇತ್ತೀಚಿನ ಪ್ರಕಾಶಕರೂ ಈ ಕ್ಷೇತ್ರಕ್ಕೆ ಅಪಾರವಾದ ಕಾಣಿಕೆ ನೀಡಿರುತ್ತಾರೆ. 'ಅಂಗಡಿ ಮುದ್ರಣ'ಗಳನ್ನು ಸಿದ್ಧಪಡಿಸುವಲ್ಲಿಯೂ, ಹಳೆಯ ಕಾವ್ಯಗಳಿಗೆ ಟೀಕು, ಟಿಪ್ಪಣಿಗಳನ್ನು ಬರೆಯುವಲ್ಲಿಯೂ, ಶ್ರೀಯುತರುಗಳಾದ ಭಾರತಿ ಸಂಪಂಗಿರಾಮಯ್ಯ, ಪಿ. ಆರ್. ಕರಿಬಸವಶಾಸ್ತ್ರಿ, ಬೊಮ್ಮರಸಪಂಡಿತ ಮೊದಲಾದ ವಿದ್ವಾಂಸರು ಅಭಿನಂದನೀಯರು. ಕುಮಾರವ್ಯಾಸ ಭಾರತ, ಜೈಮಿನಿ ಭಾರತ, ಹರಿಶ್ಚಂದ್ರ ಕಾವ್ಯ, ಸರ್ವಜ್ಞನ ವಚನಗಳು ಮತ್ತು ಶಿವ

ಶರಣರ ವಚನಗಳ ಜನಪ್ರಿಯ ಸಂಸ್ಕರಣಗಳನ್ನು ಇತ್ತೀಚೆಗೆ ಪ್ರಚುರಪಡಿಸಿದ ಮೈಸೂರು ಸರ್ಕಾರದ ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿ ಇಲಾಖೆಯ ಕೆಲಸ ಶ್ಲಾಘನೀಯವಾದುದು. ಮೈಸೂರು ವಿಶ್ವವಿದ್ಯಾನಿಲಯದವರು ಈಗ ಕೈಕೊಂಡಿರುವ ಮುದ್ರಿತ ಕನ್ನಡ ಗ್ರಂಥಗಳ ಸೂಚಿಯು ಸಿದ್ಧವಾದರೆ, ಇಡೀ ಕರ್ಣಾಟಕದ ಪುಸ್ತಕ ಪ್ರಕಾಶಕರು ಈ ಬಗ್ಗೆ ಎಷ್ಟು ಶ್ರಮಿಸಿದ್ದಾರೆನ್ನುವುದರ ನೈಜಚಿತ್ರ ನಮಗೆ ವ್ಯಕ್ತವಾಗುತ್ತದೆ.

೩

ಗ್ರಂಥಸಂಪಾದನೆಗಾಗಿಯೇ ಹಗಲಿರುಳೂ ಶ್ರಮವಹಿಸಿದ ಕೆಲವು ವಿದ್ವಾಂಸರನ್ನೂ, ಅವರು ಸಂಪಾದಿಸಿಕೊಟ್ಟಿರುವ ಕೆಲವು ಕೃತಿಗಳನ್ನೂ ಪ್ರತ್ಯೇಕವಾಗಿ ಪರ್ಯಾಲೋಚಿಸುವುದು ಯುಕ್ತವೆನ್ನಿಸುತ್ತದೆ. ಕನ್ನಡ ಉದ್ಗ್ರಂಥಗಳು ಪ್ರಕಟವಾಗಲು ತೊಡಗಿದ ಆರಂಭದ ದಿನಗಳಲ್ಲಿಯೇ 'ಕಾವ್ಯಕಲಾನಿಧಿ' ಮತ್ತು 'ಕಾವ್ಯಮಂಜರಿ' ಗ್ರಂಥಮಾಲೆಗಳ ಮೂಲಕ, ಈ ಪವಿತ್ರಕಾರ್ಯವನ್ನು ಒಂದು ವ್ರತದಂತೆ ಸ್ವೀಕರಿಸಿ ನಿರ್ವಹಿಸಿದ ಶ್ರೀ ಎಸ್. ಜಿ. ನರಸಿಂಹಾಚಾರ್ ಮತ್ತು ಶ್ರೀ ಎಂ. ಎ. ರಾಮಾನುಜ ಅಯ್ಯಂಗಾರ್ ಅವರುಗಳನ್ನು ಎಷ್ಟು ನೆನೆದರೂ ಸಾಲದು. ಎಫ್. ಕಿಟ್ಟೆಲ್ ಮತ್ತು ಬಿ. ಎಲ್. ರೈಸ್ ಅವರು ಅನುಸರಿಸಿದ ನವೀನ ಪದ್ಧತಿಗಳನ್ನೇ ಮುಂದುವರಿಸಿ, ಈ ವಿದ್ವಾಂಸರು ಕನ್ನಡದ ಅನೇಕ ಕೃತಿಗಳನ್ನು ಬೆಳಕಿಗೆ ತಂದರು. ಕರ್ಣಾಟಕ ಕಾವ್ಯಕಲಾನಿಧಿಯ ಮೊದಲನೆಯ ಪುಸ್ತಕವಾದ ಹರಿಹರನ 'ಪಂಪಾಶತಕ'ವನ್ನು ಪ್ರಕಟಿಸುವಲ್ಲಿ (ಕ್ರಿ.ಶ. ೧೮೯೯) ಸಂಪಾದಕರು ಹೀಗೆ ಮನವಿಮಾಡಿಕೊಂಡಿರುತ್ತಾರೆ.

> "ಕರ್ಣಾಟಕ ಕಾವ್ಯಕಲಾನಿಧಿ
>
> ಈ ಮಾಸಪುಸ್ತಕವು ಪ್ರತಿತಿಂಗಳೂ ಪ್ರಕಟವಾಗುತ್ತದೆ. ಇದರಲ್ಲಿ ಪ್ರಾಚೀನ ಕವಿಗಳ ಉತ್ತಮವಾದ ಕಾವ್ಯ, ನಾಟಕ, ಚಂಪು, ಗದ್ಯ, ಛಂದಸ್ಸು, ಅಲಂಕಾರ ಮುಂತಾದ ಗ್ರಂಥಗಳು ಮುದ್ರಿಸಲ್ಪಡುತ್ತವೆ. ಇದರಲ್ಲಿ ಅಚ್ಚಾಗುವ ಗ್ರಂಥಗಳಿಗೆ ಬೇರೆ ಬೇರೆ ಪುಟಸಂಖ್ಯೆಯನ್ನು ಕೊಡುವುದರಿಂದ ಗ್ರಂಥವು ಮುಗಿದಕೂಡಲೆ ಬೇರೆ ಬೇರೆ ಪುಸ್ತಕಗಳಾಗಿ ಕಟ್ಟುಕಟ್ಟಿಸಬಹುದು. ಇದರ ಪ್ರತಿ ಸಂಚಿಕೆಯೂ ೪೦ ಪುಟಗಳಿಗೆ ಕಡಮೆಯಿಲ್ಲದೆ ಇರುತ್ತದೆ.
>
> ಭಾಷಾಭಿಮಾನಿಗಳೆಲ್ಲರೂ ಇದಕ್ಕೆ ಪ್ರೋತ್ಸಾಹಮಾಡುತ್ತಾರೆಂದು ನಂಬುತ್ತೇವೆ."

ಇಷ್ಟು ಪರಿಮಿತವಾದ ಪ್ರಮಾಣದಲ್ಲಿ ಮೊದಲಾದ ಈ ಗ್ರಂಥಮಾಲೆ ಕನ್ನಡ ಸಾಹಿತ್ಯ ಪ್ರಕಾಶನಕ್ಕೆ ಸಲ್ಲಿಸಿರುವ ಅಪರಿಮಿತವಾದ ಸೇವೆಯನ್ನು ಇಂದು ಪರಿಶೀಲಿಸಿದರೆ ಯಾರಿಗಾದರೂ ಹೆಮ್ಮೆಯಾಗದೆ ಇರದು. ಅಂದು ಪ್ರಕಟಿತವಾದ ಎಷ್ಟೋ ಅಪೂರ್ವ

ಕೃತಿಗಳು ಇನ್ನೂ ಎರಡನೆಯ ಬಾರಿ ಮುದ್ರಣವಾಗಿಲ್ಲವೆಂದು ಮನಗಂಡರೆ, ಈ ಸಂಪಾದಕರ ಉಪಕಾರವನ್ನು ನಾವು ಹೇಳಲಸದಳವಾದುದು.

ನಾಗವರ್ಮನ 'ಕರ್ಣಾಟಕ ಕಾದಂಬರಿ'ಯ ಏಕೈಕ ಹಸ್ತಪ್ರತಿಯನ್ನೇ ಅವಲಂಬಿಸಿ ಅದನ್ನು ಅಚ್ಚುಮಾಡಿಸಿದ ಕೀರ್ತಿ ಶ್ರೀ ಬಿ. ಮಲ್ಲಪ್ಪನವರದಾಗಿದೆ. ಅವರು ಆ ಕೃತಿಗೆ ಪ್ರಸ್ತಾವನೆಯಾಗಿ ಬರೆದಿರುವ ಒಂದೆರಡು ಮಾತುಗಳನ್ನು ಇಲ್ಲಿ ಹೇಳಿದರೆ ಅಪ್ರಕೃತವಾಗಲಾರದು.

> "Manuscripts of Kannada Kadambari are exceedingly rare; and it was not without much difficulty that I succeeded in procuring a single copy of this work, ten years before. I learnt with gladness, that another manuscript copy was to be had in the Palace Library, but unfortunately for me it was found on examination, that the Palace copy was in fact the original from which the other had been copied out. The same errors and omissions are to be found in both. The manuscript is an old and worn out palmyra leaves and abounds in errors, which the ignorant copyists have been extremely active in multiplying to a large extent. I had almost given up the idea of bringing out this work; but the desire of saving such an able work from oblivion, and of supplying the long-felt want for a correct edition of a standard work, which may be prescribed for the Higher University Examinations prompted me to undertake this Herculean work" (preface, p. 1).

ಕ್ರಿ. ಶ. ೧೮೯೬ರಲ್ಲಿ ಮೊದಲು ಮುದ್ರಿತವಾದ ಈ ಕಾವ್ಯ, ಸಂಗ್ರಹ ಸ್ವರೂಪವನ್ನು ಬಿಟ್ಟರೆ, ಈವರೆಗೆ ಮತ್ತೆ ಅಚ್ಚಾಗಿಲ್ಲವೆಂದು ನೆನೆದರೆ, ಮೊದಲ ಸಂಪಾದಕರಿಗೆ ನಮ್ಮ ಕೃತಜ್ಞತೆ ದ್ವಿಗುಣವಾಗುತ್ತದೆ.

ಹಲವಾರು ವೀರಶೈವ ಗ್ರಂಥಗಳನ್ನು ಸಂಪಾದಿಸಿ ಕೊಟ್ಟಿರುವ ಶ್ರೀ ಎಸ್.ಎಸ್. ಭೂಸನೂರುಮಠ, ರಾಘವಾಂಕನ 'ವೀರೇಶ ಚರಿತೆ'ಯನ್ನು ಬೆಳಕಿಗೆ ತಂದ ಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳು, 'ಭರತೇಶ ವೈಭವ'ವನ್ನು ಸಂಪಾದಿಸಿಕೊಟ್ಟಿರುವ ಶ್ರೀ ಉಳ್ಳಾಲ ಮಂಗೇಶರಾವ್, ಪಂಪನ 'ಆದಿಪುರಾಣ'ದ ಎರಡನೆಯ ಸಂಸ್ಕರಣವನ್ನೂ, ಕುಮುದೇಂದು ರಾಮಾಯಣವನ್ನೂ ಪ್ರಕಟಿಸಿದ ಶ್ರೀ ಕೆ. ಜಿ. ಕುಂದಣಗಾರ್, ರನ್ನನ 'ಗದಾಯುದ್ಧ'ವನ್ನು ಮತ್ತೊಮ್ಮೆ ಮುದ್ರಿಸಿರುವ ಶ್ರೀ ಕೆ. ವಿ. ಕೃಷ್ಣಭಟ್ಟ,

ಜೈನಗ್ರಂಥಗಳ ಪರಿಷ್ಕರಣ ಕಾರ್ಯದಲ್ಲಿ ನಿಷ್ಣಾತರೆನ್ನಿಸಿದ್ದ ಶ್ರೀ ಎ. ಶಾಂತರಾಜಶಾಸ್ತ್ರಿ, 'ಬಸವರಾಜದೇವರ ರಗಳೆ'ಯನ್ನು ಬೆಳಕಿಗೆ ತಂದ ಶ್ರೀ ಟಿ. ಎಸ್. ವೆಂಕಣ್ಣಯ್ಯ ಮೊದಲಾದ ಹಿರಿಯರು ಈ ಕ್ಷೇತ್ರದಲ್ಲಿ ತುಂಬ ದುಡಿದಿರುತ್ತಾರೆ.

ಬಿಜಾಪುರದ ವಕೀಲರಾದ ರಾವ್‌ಬಹಾದೂರ್ ಶ್ರೀ ಪಿ. ಜಿ. ಹಳಕಟ್ಟಿಯವರು ಹರಿಹರನ ರಗಳೆಗಳು ಮತ್ತು ಶಿವಶರಣರ ವಚನಗಳನ್ನು ಸಂಪಾದಿಸಿಕೊಟ್ಟಿದ್ದು ಗ್ರಂಥ ಸಂಪಾದನೆಯ ಕ್ಷೇತ್ರದಲ್ಲಿ ಒಂದು ಐತಿಹಾಸಿಕ ಘಟನೆಯೇ ಸರಿ. ಇಂತೆಯೇ ಹಲವಾರು ತಾಳೆಯೋಲೆಗಳಲ್ಲಿ ಚೆದರಿಹೋಗಿದ್ದ ಸರ್ವಜ್ಞನ ವಚನಗಳನ್ನು ಸುವ್ಯವಸ್ಥಿತವಾಗಿ, ವಿಚಾರ ಪ್ರದವಾದ ಮುನ್ನುಡಿಯೊಂದಿಗೆ ಕನ್ನಡಿಗರಿಗೆ ಕೊಟ್ಟ ಪುಣ್ಯ ಶ್ರೀ ಚೆನ್ನಪ್ಪ ಉತ್ತಂಗಿಯವರದಾಗಿದೆ. ಬೆಂಗಳೂರಿನ 'ಸುಬೋಧ' ಪತ್ರಿಕೆಯ ಸಂಪಾದಕರಾದ ಶ್ರೀ ಯಂ. ರಾಮರಾವ್, ಉಡುಪಿಯ ಶ್ರೀ ಪಾವಂಜೆ ಗುರುರಾವ್ ಮತ್ತು ಲಿಂಗಸೂಗೂರಿನ ಶ್ರೀ. ಗೊರಬಾಳು ಹನುಮಂತರಾಯರು ದಾಸಸಾಹಿತ್ಯದ ಪ್ರಕಾಶನಕ್ಕೆ ನಾನಾ ವಿಧವಾಗಿ ದುಡಿದಿದ್ದಾರೆ. ಬಹಳ ಹಿಂದೆಯೇ 'ದಾಸರ ಪದಗಳು' ಎಂಬ ಸಂಕಲನವನ್ನು ಪ್ರಕಟಿಸಿದ ಜೆ. ಗ್ಯಾರೆಟ್ ಅವರನ್ನೂ, ತೆಲುಗು ಲಿಪಿಯಲ್ಲಿ ಹಲವಾರು ದಾಸರ ಕೃತಿಗಳ ಸಂಕಲನಗಳನ್ನು ಪ್ರಕಾಶಿಸಿದ ಶ್ರೀ ಮಡಕಶಿರ ಬಾಲಕೃಷ್ಣರಾವ್ ಅವರನ್ನೂ, ದೇವನಾಗರಿ ಲಿಪಿಯಲ್ಲಿಯೇ ಹರಿದಾಸರ ಕೀರ್ತನೆಗಳನ್ನು ಅಚ್ಚುಮಾಡಿದ ಬೆಳಗಾವಿಯ ಆಬಾಜಿ ರಾಮಚಂದ್ರ ಸಾವಂತ ಅವರನ್ನೂ ನಾವು ಇಲ್ಲಿ ಕೃತಜ್ಞತೆ ಯಿಂದ ನೆನೆಯಬೇಕಾಗಿದೆ.

೪

ಡಾ. ವಿ. ಎಸ್. ಸೂಕ್ತಂಕರ್ ಅವರು ಮಹಾಭಾರತದ ಸಂಪಾದನೆಯ ಕಾರ್ಯವನ್ನು ಕೈಕೊಂಡ ಮೇಲೆ ಭಾರತೀಯ ಗ್ರಂಥಸಂಪಾದನೆಯ ವಲಯದಲ್ಲಿ ನೂತನವಾದ ಗಾಳಿ ಬೀಸಲಾರಂಭಿಸಿತು ಎಂದರೆ ತಪ್ಪಾಗದು. ಪಾಶ್ಚಾತ್ಯ ವಿದ್ವಾಂಸರು ಪಂಚತಂತ್ರ, ವಿಕ್ರಮಾದಿತ್ಯನ ಪರಾಕ್ರಮಗಳು (ಬತ್ತೀಸ ಪುತ್ಥಳಿ ಕಥೆ), ಭೇತಾಳ ಪಂಚವಿಂಶತಿ ಮುಂತಾದ ಗ್ರಂಥಗಳ ಸಂಪಾದನೆಯಲ್ಲಿ ಅನುಸರಿಸಿದ ಸಂವಿಧಾನಗಳು ಈ ಕಾರ್ಯದಲ್ಲಿ ತೊಡಗುವವರಿಗೆ ನಿರ್ದೇಶಕವಾಗಿರಬಲ್ಲವು. ಈ ಹೊಸ ಹುರುಪಿನಿಂದ ಕನ್ನಡದ ಕೃತಿಗಳನ್ನು ಆದಷ್ಟು ಶಾಸ್ತ್ರೀಯವಾಗಿ ಸಂಪಾದಿಸಬೇಕೆಂಬ ಹಂಬಲ ಹಲವರಲ್ಲಿ ಮಿಡಿದಿರುವುದನ್ನು ಕಾಣಬಹುದು. ಹಸ್ತಪ್ರತಿಗಳ ಸಂಗ್ರಹ ಕಾರ್ಯ ಮಾತ್ರವಲ್ಲದೆ, ಅವುಗಳ ಪರಸ್ಪರ ತುಲನೆ, ವರ್ಗೀಕರಣ, ಪಾಠನಿರ್ಣಯದಲ್ಲಿ ಬಾಹ್ಯ ಮತ್ತು ಆಂತರಿಕ ಪ್ರಮಾಣಗಳ ಸ್ವೀಕರಣ, ವಿಶಿಷ್ಟವಾದ ನೂತನ ಸಂಕೇತಗಳ ಸೃಷ್ಟಿ ಇವೇ ಮೊದಲಾದುವು ಖಚಿತಗೊಂಡು, ಇಡೀ ಸಂಪಾದನ ಕ್ರಮವೇ ಒಂದು ವಿಜ್ಞಾನ ವೆನ್ನುವಷ್ಟು ಪರಿಣತಿಯನ್ನು ಪಡೆದಿರುವುದನ್ನು ನೋಡಬಹುದು. ಇಂಥ ಪ್ರಯತ್ನ ಗಳನ್ನು ಕೈಕೊಂಡಿರುವ ಹಲವರಲ್ಲಿ ನಿದರ್ಶನಾರ್ಥವಾಗಿ ಶ್ರೀ ತೀ. ನಂ. ಶ್ರೀಕಂಠಯ್ಯ

ನವರು ಸಂಪಾದಿಸಿರುವ 'ನಂಬಿಯಣ್ಣನ ರಗಳೆ'ಯನ್ನೂ, ಶ್ರೀ ಡಿ. ಎಲ್. ನರಸಿಂಹಾಚಾರ್ಯರು ಅಣಿಮಾಡಿರುವ 'ವಡ್ಡಾರಾಧನೆ'ಯನ್ನೂ ಇಲ್ಲಿ ಸಮೀಕ್ಷಿಸಬಹುದು.

'ನಂಬಿಯಣ್ಣನ ರಗಳೆ'ಯ ಅರಿಕೆಯಲ್ಲಿ ಶ್ರೀ ತೀ. ನಂ. ಶ್ರೀಕಂಠಯ್ಯನವರು ಈ ಬಗ್ಗೆ ಒಂದೆರಡು ಸಂಗತಿಗಳನ್ನು ಪ್ರಸ್ತಾಪಿಸಿರುತ್ತಾರೆ—

> "ಇವುಗಳಲ್ಲಿ (ಬಳಸಿಕೊಂಡಿರುವ ಹಸ್ತಪ್ರತಿಗಳಲ್ಲಿ) 'ಕ, ಜ'ಗಳ ಪಾಠ ಸಂಪ್ರದಾಯವೂ 'ಖ, ಗ, ಚ'ಗಳ ಪಾಠ ಸಂಪ್ರದಾಯವೂ ಕೆಲಮಟ್ಟಿಗೆ ಭಿನ್ನವಾಗಿವೆ. 'ಕ, ಜ'ಗಳ ಸಂಪ್ರದಾಯವೇ ಮೂಲಕ್ಕೆ ಹೆಚ್ಚು ಹತ್ತಿರವೆಂದು ಪರಿಶೀಲನೆಯಿಂದ ವ್ಯಕ್ತವಾಗುತ್ತದೆ. 'ಖ, ಗ, ಚ'ಗುಂಪಿನಲ್ಲಿ 'ಖ, ಗ'ಗಳು ಒಂದಕ್ಕೊಂದು ಬಲು ಹೊಂದಿಕೊಳ್ಳುತ್ತವೆ; 'ಚ'ವೇ ಬೇರೆ ನಿಲ್ಲುತ್ತದೆ. 'ಖ, ಗ'ಗಳಲ್ಲಿ ಅನೇಕ ಪ್ರಕ್ಷಿಪ್ತ ಭಾಗಗಳುಂಟು; ತಿದ್ದುಪಾಡುಗಳೂ ಉಂಟು. 'ಚ'ದಲ್ಲಂತೂ ಇವು ಮಿತಿಮೀರಿ ಹೋಗಿವೆ. ಈ ಐದು ಮಾತೃಕೆಗಳಲ್ಲಿ ಯಾವುದೂ ಇನ್ನೊಂದರ ನಕಲಾಗಿಲ್ಲ. ಇವುಗಳ ಪರಸ್ಪರ ಸಂಬಂಧವನ್ನು ಸ್ಥೂಲವಾಗಿ ಹೀಗೆ ರೇಖಿಸಬಹುದು.



> ಗ್ರಂಥಸಂಪಾದನಕಾರ್ಯವು ಈಗ ಒಂದು ಖಚಿತವಾದ ಶಾಸ್ತ್ರವಾಗಿ ಪರಿಣಮಿಸಿದೆ; ಅದರ ನಿಯಮಗಳನ್ನು ಕಟ್ಟುನಿಟ್ಟಾಗಿ ಅನುಸರಿಸಿದಲ್ಲಿ ಮೂಲಪಾಠವನ್ನು ಬಹುಮಟ್ಟಿಗೆ ಶುದ್ಧವಾಗಿ ನಿರ್ಣಯಿಸುವುದು ಸಾಧ್ಯ. 'ನಂಬಿಯಣ್ಣನ ರಗಳೆ'ಯಂತೂ ಈ ಶಾಸ್ತ್ರ ಪದ್ಧತಿಯ ಅನೇಕ ಸೂಕ್ಷ್ಮಾಂಶಗಳಿಗೆ ಒಳ್ಳೆಯ ನಿದರ್ಶನಗಳನ್ನು ಒದಗಿಸಿಕೊಡುತ್ತದೆ. ಈ ಕಾರ್ಯದಲ್ಲಿ ಅಜ್ಞಾನದಿಂದಲೂ, ಅನವಧಾನದಿಂದಲೂ, ಪ್ರಮಾದಗಳುಂಟಾಗುವುದು ಸುಲಭ. ನನ್ನ ಸಂಪಾದನೆಯಲ್ಲಿ ಇಂಥ ಕೆಲವು ಸಂಘಟಿಸಿವೆಯೆಂದು ಈಗ ನನಗೇ ಅರಿವಾಗಿದೆ. ಆದರೂ, ತಿಳಿದಮಟ್ಟಿಗೆ ನೇರವಾದ ದಾರಿಯಲ್ಲಿ ನಡೆದು ಹರಿಹರನ ಮೂಲ ಪಾಠಕ್ಕೆ ಆದಷ್ಟು ಹತ್ತಿರ ಸೇರಲು ಇಲ್ಲಿ ಪ್ರಯತ್ನಿಸಿದ್ದೇನೆ. ವಿಷಯ, ಭಾಷೆ, ಮೊದಲಾದವುಗಳ ದೃಷ್ಟಿಯಿಂದ ಗಮನಾರ್ಹ

ವಾದ ಪಾಠಾಂತರಗಳನ್ನು ಆದಷ್ಟು ಸಮಗ್ರವಾಗಿ ಕೊಟ್ಟಿದ್ದೇನೆ. ಇದರಿಂದ ಪುಸ್ತಕಕ್ಕೆ ಹೊರೆಯಾದರೂ ಚಿಂತೆಯಿಲ್ಲ; ಗ್ರಂಥ ವ್ಯಾಸಂಗ ಮಾಡುವವರಿಗೆ ಪ್ರಯೋಜನ ಹೆಚ್ಚಾಗಲೆಂದು ನನ್ನ ಹಾರೈಕೆ" (ಪು. ix–x).

ಇದೇ ಸಂಪಾದಕರು ಸಿದ್ಧಪಡಿಸಿರುವ 'ಗದಾಯುದ್ಧ ಸಂಗ್ರಹ'ದಲ್ಲಿಯೂ ಈ ಸೂಕ್ಷ್ಮದೃಷ್ಟಿಯನ್ನು ಪರಿಶೀಲಿಸಬಹುದು.

ಶ್ರೀ ಡಿ. ಎಲ್. ನರಸಿಂಹಾಚಾರ್ಯರು ಇದೇ ವೈಜ್ಞಾನಿಕ ಕ್ರಮವನ್ನು 'ವಡ್ಡಾರಾಧನೆ' ಯನ್ನು ಸಂಪಾದಿಸುವಲ್ಲಿ ಅನುಸರಿಸಿರುವುದನ್ನು ಕಾಣಬಹುದು. ಗ್ರಂಥದ ಹೆಸರಿನ ನಿಷ್ಕರ್ಷೆ, ಹಸ್ತಪ್ರತಿಗಳ ವರ್ಗೀಕರಣ, ಪಾಠಾಂತರಗಳ ಸೂಚನೆ, ಕವಿಪಾಠ ಸಂಯೋಜನೆ ಮೊದಲಾದುವುಗಳಲ್ಲಿ ಅವರು ವಹಿಸಿರುವ ಎಚ್ಚರಿಕೆ ಸ್ತುತ್ಯ ವಾದುದು. ಹಸ್ತಪ್ರತಿಗಳ ವರ್ಗೀಕರಣವನ್ನು ಕುರಿತ ಅವರ ಅಭಿಪ್ರಾಯ ಮಾನ್ಯ ವಾಗಿದೆ.

"ಈ ಏಳು ಪ್ರತಿಗಳನ್ನು ಎರಡು ತಂಡಗಳಾಗಿ ವಿಂಗಡಿಸಬಹುದು; ಕ ಖ ಗ ಒಂದು ಗುಂಪು; ಘ ಚ ಛ ಜ ಇನ್ನೊಂದು ಗುಂಪು....

ಈ ಎರಡು ಗುಂಪುಗಳ ಒಟ್ಟು ಪೀಳಿಗೆಯನ್ನು ಕೆಳಗೆ ಕೊಡಬಹುದು—



ಈ ಪೀಳಿಗೆಯಲ್ಲಿ ಯ ಎಂಬುದು ಪ್ರಧಾನಮಾತೃಕೆ; ರ ಲ ಎಂಬಿವು ಉಪಪ್ರಧಾನಮಾತೃಕೆಗಳು; ಕ ವ ಎಂಬುವು ಮಾತೃಕೆಗಳು. ಯ ಎಂಬುದು ಕವಿಯ ಹಸ್ತಪ್ರತಿಗೆ ಸಮೀಪತಮವಾದದ್ದು. ದೊರೆತಿರುವ ಪ್ರತಿಗಳ ಸಹಾಯದಿಂದ 'ಯ'ದ ಪಾಠವನ್ನು ಪುನರ್ರಚಿಸಬಹುದು"
(ಗ್ರಂಥಸಂಪಾದನೆ, ಪು. ೧೫೭–೧೫೮).

ಈ ನಿರ್ಣಯಗಳನ್ನು ಗಮನಿಸಿದರೆ ಕನ್ನಡ ಗ್ರಂಥಸಂಪಾದನೆ ದಿನದಿನಕ್ಕೂ ಹೇಗೆ ಶಾಸ್ತ್ರಾಭಿಮುಖವಾಗುತ್ತಿದೆಯೆನ್ನುವುದನ್ನು ನೋಡಬಹುದು. 'ಸಿದ್ಧರಾಮ

ಚಾರಿತ್ರ', 'ಸುಕುಮಾರ ಚರಿತ' 'ಶಬ್ದ ಮಣಿದರ್ಪಣ' ಮೊದಲಾದ ಗ್ರಂಥಗಳನ್ನು ಸಂಪಾದಿಸುವುದರ ಮೂಲಕವೂ ಹಲವಾರು ಹಸ್ತಪ್ರತಿಗಳನ್ನು ಅಧ್ಯಯನಮಾಡುವುದರ ಮೂಲಕವೂ ತಮಗಿರುವ ಪರಿಪಕ್ವವಾದ ಅನುಭವದಿಂದ ಶ್ರೀ ಡಿ. ಎಲ್. ನರಸಿಂಹಾಚಾರ್ ಅವರು 'ಕನ್ನಡ ಗ್ರಂಥಸಂಪಾದನೆ' ಎಂಬ ಅಮೂಲ್ಯ ಶಾಸ್ತ್ರಗ್ರಂಥವೊಂದನ್ನು ಬರೆದಿರುವುದು ಈ ಕ್ಷೇತ್ರಕ್ಕೆ ಒಂದು ವಿಶಿಷ್ಟವಾದ ಕಾಣಿಕೆಯೆನ್ನಿಸಿದೆ. ಭಾರತೀಯ ಭಾಷೆಗಳಲ್ಲಿಯೇ ಈವರೆಗೆ ಕಂಡುಬಾರದಿರುವ ಇಂಥ ವಿನೂತನ ಕೃತಿಯೊಂದು ಕನ್ನಡದಲ್ಲಿ ರಚನೆಯಾಗಿರುವುದು ಹೆಮ್ಮೆಪಡಬೇಕಾದ ಸಂಗತಿ. ಇಲ್ಲಿ ನಮ್ಮ ಪ್ರಾಚೀನ ಲಾಕ್ಷಣಿಕರ ವಿದ್ವತ್ತೂ ನವೀನರ ವಿಮರ್ಶನದೃಷ್ಟಿಯೂ ಮಿಳಿತವಾಗಿವೆ.[9]

ಇತ್ತೀಚೆಗೆ ಈ ದಿಸೆಯಲ್ಲಿ ಅನೇಕ ಮಂದಿ ಹುರುಪಿನಿಂದ ದುಡಿಯುತ್ತಿದ್ದಾರೆ. ಇವರಲ್ಲಿ ಶ್ರೀ ಎನ್. ಬಸವಾರಾಧ್ಯರ ಗ್ರಂಥಸಂಪಾದನೆಯ ಕಾರ್ಯ ಗಮನಾರ್ಹವಾದದ್ದು. ಡಾ. ಎಲ್. ಬಸವರಾಜು ಅವರು ಪ್ರಕಟಿಸಿರುವ 'ಅಲ್ಲಮನ ವಚನ ಚಂದ್ರಿಕೆ', 'ಶಿವದಾಸ ಗೀತಾಂಜಲಿ', 'ಅಕ್ಕನ ವಚನಗಳು' ಎಂಬ ಕೃತಿಗಳಲ್ಲಿ ವಿದಿತವಾಗುವ ಅಪಾರವಾದ ಶ್ರದ್ಧೆ ಮತ್ತು ಪರಿಶ್ರಮಗಳು ಆಶಾದಾಯಕವಾಗಿವೆ. ಶ್ರೀ ಜಿ. ಬ್ರಹ್ಮಪ್ಪನವರು ಪ್ರಕಟಿಸಿರುವ 'ಭರತೇಶವೈಭವ'ದ ಬೃಹತ್ ಸಂಪುಟ, ಶ್ರೀ ಬಿ. ಸಣ್ಣಯ್ಯನವರು ಸಂಪಾದಿಸಿರುವ 'ನೇಮಿನಾಥಪುರಾಣ', ಶ್ರೀ ಶಿವರಾಮ ಕಾರಂತರವರು ಬೆಳಕಿಗೆ ತಂದಿರುವ 'ಕೌಶಿಕರಾಮಾಯಣ', ಶ್ರೀ ಕೆ. ವೆಂಕಟರಾಯಾಚಾರ್ಯರು ದೊರಕಿಸಿಕೊಟ್ಟಿರುವ 'ಉತ್ತರರಾಮ ಕಥೆ', ಶ್ರೀ ಕೆ. ವೆಂಕಟರಾಮಪ್ಪನವರು ಸಿದ್ಧಪಡಿಸಿರುವ 'ಕನ್ನಡ ಭಾಗವತ,' ಡಾ. ಎಚ್. ತಿಪ್ಪೇರುದ್ರಸ್ವಾಮಿಯವರಿಂದ ಪ್ರಕಟಿತವಾಗಿರುವ 'ಅಮುಗಿದೇವಯ್ಯಗಳ ಸಾಂಗತ್ಯ', ಶ್ರೀ ಬಿ. ಎನ್. ಚಂದ್ರಯ್ಯನವರು ಪ್ರಕಾಶಿಸಿರುವ 'ಬಸವಪವಾಡ', ಶ್ರೀ ಕೆ. ರಾಘವೇಂದ್ರರಾವ್ ಸಂಪಾದಿತ 'ಸುಧಾಮಚರಿತೆ', ಶ್ರೀ ಎಚ್. ದೇವೀರಪ್ಪನವರು ಸಂಕಲಿಸಿರುವ 'ಹರಿಹರನ ಮೂವರು ಪುರಾತನರು' ಮತ್ತು 'ಶರಣಚರಿತಮಾನಸ' ಎಂಬ ಕೃತಿಗಳು ಗ್ರಂಥಸಂಪಾದನೆಯ ಕಾರ್ಯ ಹೇಗೆ ನಿರಂತರವಾಗಿ ಸಾಗುತ್ತಿವೆಯೆಂಬುದಕ್ಕೆ ಸಾಕ್ಷಿ. ಶ್ರೀ ಡಿ. ಜವರೇಗೌಡರು 'ಕಬ್ಬಿಗರ ಕಾವ'ವನ್ನು ಸಂಪಾದನೆಮಾಡುವಲ್ಲಿಯೂ, 'ಲೀಲಾವತಿ ಪ್ರಬಂಧ'ವನ್ನು ಪ್ರಕಟಿಸುವಲ್ಲಿಯೂ ಬರೆದಿರುವ ವಿದ್ವತ್ಪೂರ್ಣವಾದ ಮುನ್ನುಡಿಗಳು ಗ್ರಂಥಸಂಪಾದನಕಾರ್ಯದಲ್ಲಿ ಕವಿ-ಕಾವ್ಯ ಪರಿಚಯದ ಮಹತ್ವವೇ

---

[9] ಇದೇ ವಿಷಯಕ್ಕೆ ಸಂಬಂಧಿಸಿದ ಎರಡು ಲೇಖನಗಳನ್ನು ಇಲ್ಲಿ ಉದಾಹರಿಸಬಹುದು.

(i) ಗ್ರಂಥಸಂಪಾದನೆ: ಡಿ. ಎಲ್. ನರಸಿಂಹಾಚಾರ್, ಕನ್ನಡನುಡಿ, ಜೂನ್ ೧೯೪೪, ಸಂ. vi, ಸಂಚಿಕೆ ೩೫ ಮತ್ತು ೩೬.

(ii) ಕನ್ನಡ ಗ್ರಂಥಗಳ ಸಂಸ್ಕರಣ ಅಥವಾ ಗ್ರಂಥಸಂಪಾದನೆ: ಎನ್. ಅನಂತರಂಗಾಚಾರ್, ಪ್ರಬುದ್ಧ ಕರ್ಣಾಟಕ, ಸಂ. xxxi—೨, ಪು. ೯೩—೧೧೫.

ನೆನ್ನುವುದನ್ನು ಮನವರಿಕೆಮಾಡಿಕೊಡುವಂತಿವೆ. ಹೀಗೆಯೇ 'ಕವಿರಾಜಮಾರ್ಗ'ದ ಮೂರನೆಯ ಸಂಸ್ಕರಣವನ್ನು ಹೊರತಂದಿರುವ ಶ್ರೀ ಎಂ. ವಿ. ಸೀತಾರಾಮಯ್ಯನವರು ಈ ಗ್ರಂಥಕ್ಕೆ ಬರೆದಿರುವ ವಿಸ್ತಾರವಾದ ಪೀಠಿಕೆ ಮತ್ತು ಉಪಯುಕ್ತವಾದ ಟಿಪ್ಪಣಿಗಳನ್ನು ಪರಿಶೀಲಿಸಿದರೆ, ಕೃತಿವಿಮರ್ಶೆಗೆ ಈ ಶಾಸ್ತ್ರದಲ್ಲಿ ಎಷ್ಟು ಮಾನ್ಯತೆಯಿದೆಯೆಂಬುದು ವೇದ್ಯವಾಗುತ್ತದೆ.

ಶ್ರೀಯುತರುಗಳಾದ ಬೆಂಗೇರಿ ಹುಚ್ಚರಾವ್ ಮತ್ತು ಬೆಟಗೇರಿ ಕೃಷ್ಣಶರ್ಮರು ಅತ್ಯಂತ ಆಸಕ್ತಿಯಿಂದ ಪುರಂದರದಾಸರ ಕೀರ್ತನೆಗಳ ಆರು ಸಂಪುಟಗಳನ್ನೂ, ಕನಕದಾಸರ ಕೀರ್ತನೆಗಳ ಒಂದು ಸಂಪುಟವನ್ನೂ ಪರಿಷ್ಕರಿಸಿ, ಸಂಪಾದಿಸಿ, ಪ್ರಕಟಿಸಿರುವುದು ಅಭಿನಂದನೀಯವಾದುದು. ಈ ಸಲುವಾಗಿ ದಾಸಸಾಹಿತ್ಯಕ್ಕೆ ಸಂಬಂಧಿಸಿದ ಹಲವಾರು ಹಸ್ತಪ್ರತಿಗಳನ್ನು ಸಂಗ್ರಹಿಸಿ, ಶುದ್ಧಪಾಠಗಳನ್ನು ನಿರ್ಣಯಿಸಲು ಮಾಡಿರುವ ಪ್ರಯತ್ನ ಪರಿಶೀಲನಾರ್ಹವಾದುದು. ಸಂದರ್ಭೋಚಿತವಾದ ಟಿಪ್ಪಣಿಗಳನ್ನೂ ಬರೆದಿರುವುದರಿಂದ ಇವು ವ್ಯಾಸಂಗಮಾಡುವವರಿಗೆ ತುಂಬ ಉಪಯೋಗವಾಗುವಂತಿದೆ. ಪುರಂದರದಾಸರು ಮತ್ತು ಕನಕದಾಸರ ಚತುರ್ಥಶತಮಾನೋತ್ಸವ ಸಂದರ್ಭಗಳಲ್ಲಿಯೂ ಬಸವೇಶ್ವರರ ಅಷ್ಟಶತಮಾನೋತ್ಸವ ಸಂದರ್ಭದಲ್ಲಿಯೂ ಹಲವಾರು ವಿದ್ವಾಂಸರು ಈ ರೀತಿ ಕೀರ್ತನೆಗಳನ್ನೂ, ವಚನಗಳನ್ನೂ ಸಂಪಾದಿಸಿ ಕೊಟ್ಟಿರುವುದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದಾಗಿದೆ.

ಸುಮಾರು ೧೫೦ ವರ್ಷಗಳ ಈ ಅವಧಿಯಲ್ಲಿ ಕನ್ನಡ ಗ್ರಂಥಸಂಪಾದನೆಯ ಕಾರ್ಯ ಹೇಗೆ ಹೆಜ್ಜೆಯಿಡುತ್ತಾ ಸಾಗಿದೆಯೆಂಬುದನ್ನು ಕಂಡರೆ ಅಷ್ಟೇನೂ ನಿರುತ್ಸಾಹವಾಗಲಾರದು. ಈವರೆಗೆ ಸಂಪಾದಿತವಾಗಿರುವ ಎಲ್ಲ ಕೃತಿಗಳನ್ನೂ ಇಲ್ಲಿ ಸಮೀಕ್ಷಿಸಲು ಸಾಧ್ಯವಾಗಿಲ್ಲ. ಒಟ್ಟು ಕರ್ಣಾಟಕದ ಬೇರೆ ಬೇರೆ ಎಡೆಗಳಲ್ಲಿ ಯಾವ ಯಾವ ಗ್ರಂಥಗಳು ಪ್ರಕಟವಾಗಿವೆಯೆಂಬ ವಿವರ ಒಂದು ಕಡೆ ಸಿಗುವಂತಿಲ್ಲ. ವಿವಿಧ ಪ್ರಕಾಶಕರೂ, ವ್ಯಕ್ತಿಗಳೂ ಎಷ್ಟೆಷ್ಟು ಪ್ರಾಚೀನ ಕಾವ್ಯಗಳನ್ನು ಯಾವ ಯಾವ ಕಾಲದಲ್ಲಿ ಪ್ರಕಾಶಿಸಿದ್ದಾರೆಂಬ ಅಂಶವೂ ತಿಳಿದುಬರುವಂತಿಲ್ಲ. ಆದ್ದರಿಂದ ಇಂಥ ಸಮೀಕ್ಷೆಯನ್ನು ಬರೆಯುವಲ್ಲಿ ಈ ಕೊರತೆಯಿಂದ ವಿಷಯ ಪೂರ್ಣವಾಗದಿರುವುದು ಸಹಜ. ನಮ್ಮ ಗ್ರಂಥಸಂಪಾದಕನಿಗೂ ಸಹ ಇಂಥ ಹಲವಾರು ಅಡಚಣೆಗಳಿವೆ. ಹಸ್ತಪ್ರತಿಗಳ ಸಂಗ್ರಹ, ಆಯಾ ಕೃತಿಯನ್ನು ಕುರಿತ ಲೇಖನಗಳು ಮತ್ತು ವಿಮರ್ಶಾಗ್ರಂಥಗಳ ಪಟ್ಟಿ ಮೊದಲಾದುವು ಬಯಸಿದ ಕೂಡಲೆ ಸುಸಜ್ಜಿತವಾದ ಪುಸ್ತಕಭಂಡಾರಗಳಲ್ಲಿಯೂ ದೊರೆಯುವುದು ದುರ್ಲಭ. ಗ್ರಂಥಸಂಪಾದಕನಿಗೆ ಶಾಸ್ತ್ರಜ್ಞಾನ, ಸಾಹಿತ್ಯಾಭಿರುಚಿಗಳು ಸರಿಸಮವಾಗಿರಬೇಕು. ಆತನ ಶ್ರಮಕ್ಕೆ ತಕ್ಕ ಉತ್ತೇಜನವೂ ದೊರೆಯಬೇಕು. ವಿಶ್ವವಿದ್ಯಾನಿಲಯಗಳಲ್ಲಿ ಪ್ರಾಚೀನ ಗ್ರಂಥಸಂಪಾದನೆಯ ಕಾರ್ಯ ನಿರಂತರವಾಗಿ ನಡೆಯಬೇಕು. ಅಲ್ಪಸ್ವಲ್ಪ ಅವಕಾಶಗಳನ್ನೇ ಸದುಪಯೋಗಪಡಿಸಿಕೊಂಡು ನಮ್ಮ ಗ್ರಂಥಸಂಪಾದಕರು ಈವರೆಗೆ ಮಾಡಿರುವ ಕಾರ್ಯವನ್ನು ಮನವಾರೆ ಮೆಚ್ಚಿಕೊಂಡು, ಈ ಕ್ಷೇತ್ರ ಸಾಕಷ್ಟು ಸಂಪದ್ಯುಕ್ತವಾಗಿ ವಿರಾಜಿಸಲೆಂದು ಹಾರೈಸೋಣ.

“ಅಯ್ಯೊ! ಕನ್ನಡ, ಕನ್ನಡ ಎಂದು ಏಕೆ ಬಡಕೊಳ್ಳುವಿರಿ? ಕರ್ನಾಟಕದಲ್ಲಿ ಯಾವ ಭಾಷೆಯಾದರೇನು? ಭಾಷೆಗೆ ಸುಮ್ಮನೆ ಹೆಚ್ಚಳ ಕೊಟ್ಟು ಹುಯಿಲು ಎಬ್ಬಿಸಬೇಡಿರಿ” ಎಂಬ ಉಪದೇಶವನ್ನು ನಮಗೆ ಕನ್ನಡಿಗರಿಗೆ ಕನ್ನಡಿಗರೂ, ಕನ್ನಡಿಗರಲ್ಲದವರೂ ಹಿಂದೆ ಮಾಡಿದ್ದಾರೆ; ಇನ್ನೂ ಮಾಡುತ್ತಾರೆ “....ನಾಡು ಹೆಚ್ಚಿನದು; ಅದರ ಮುಂದೆ ನುಡಿಯ ಪಾಡೇನು?” ಎಂದು ವಾದಿಸುವವರಿಗೆ ಜೋಡುಗೈ ಶರಣೆನ್ನದೆ ಬೇರೆ ಉಪಾಯವೇ ಕಾಣುವುದಿಲ್ಲ. ನಾಡು ಜನಾಂಗದ ಪ್ರಾಕೃತಿಕ ಸ್ವರೂಪ ಮಾತ್ರ, ನುಡಿಯೇ ಅದರ ‘ಜೀವ, ಆತ್ಮ, ಅಂತರಾತ್ಮ’. ನುಡಿಯಿಲ್ಲದ ನಾಡು ನಾಡಲ್ಲ, ಕಾಡು. ನುಡಿಯಿಂದಲೇ ನಾಡು, ನಾಡಿನ ನುಡಿಯ ಮೇಲಿಂದಲೇ ನಾಡಿಗೆ ಹೆಸರು.

ಮುದವೀಡು ಕೃಷ್ಣರಾಯರು

ರಾ. ನಂ. ಶ್ರೀ.

ವಯಸ್ಕರ ಶಿಕ್ಷಣ ಸಾಹಿತ್ಯ

ಮಿಂಚಿನವೇಗದಲ್ಲಿ ಮುಂದುವರಿಯುತ್ತಿರುವ ಈ ವೈಜ್ಞಾನಿಕ ಯುಗದಲ್ಲಿ ರೇಡಿಯೊ, ಟೆಲಿವಿಷನ್, ಚಲನಚಿತ್ರ ಮುಂತಾದುವು ಹೆಚ್ಚುಹೆಚ್ಚಾಗಿ ಬಳಕೆಗೆ ಬರುತ್ತಿದ್ದರೂ ಅಚ್ಚಾದ ಸಾಹಿತ್ಯ ತನ್ನದೇ ಆದ ವಿಶಿಷ್ಟಸ್ಥಾನವನ್ನು ಇನ್ನೂ ಉಳಿಸಿಕೊಂಡಿದೆ. ಮುಂದೆಯೂ ಅದರ ಸ್ಥಾನವನ್ನು ಆಕ್ರಮಿಸುವ ಸುಲಭ ಸಾಧನ ಮತ್ತೊಂದಿಲ್ಲವೆಂದು ಹೇಳಬಹುದು. ಆದ್ದರಿಂದ ಸಾಕ್ಷರತೆಯ ಅಗತ್ಯತೆಯನ್ನು ಇಲ್ಲಿ ಮತ್ತೆ ಒತ್ತಿ ಹೇಳಬೇಕಾಗಿಲ್ಲ. ಈ ಸಂದರ್ಭದಲ್ಲಿ, ಸಾಕ್ಷರತೆ ಶಿಕ್ಷಣದ ಒಂದು ಸಾಧನವೇ ಹೊರತು ಅದೇ ಗುರಿಯಲ್ಲ, ಎಂಬುದನ್ನು ಗಮನಿಸಬೇಕು. ಜ್ಞಾನಾರ್ಜನೆಯ ಆ ಸಾಧನ ಹೇಗೆ, ಎಷ್ಟರಮಟ್ಟಿಗೆ ವ್ಯಕ್ತಿಯ ಕರಗತವಾಗಬೇಕು ಎಂಬ ಬಗ್ಗೆ ಸಾಕ್ಷರತೆ ಹುಟ್ಟಿದಂದಿನಿಂದಲೂ ಪ್ರಯತ್ನ ನಡೆಯುತ್ತಿದೆ. ಅಚ್ಚಿನ ಯುಗ, ವೃತ್ತಪತ್ರಿಕೆಯ ಯುಗ, ಸಾಕ್ಷರತೆಯ ಯುಗ ಎಂದು ಹೇಳುತ್ತಿರುವ ಈಗ ಆ ಪ್ರಯತ್ನದ ಅಗತ್ಯ ಇನ್ನೂ ಹೆಚ್ಚಾಗಿದೆ. ಆದ್ದರಿಂದಲೇ ಯುನೆಸ್ಕೊ ಸಂಸ್ಥೆಯವರು ನಿರಕ್ಷರತೆಯ ನಿರ್ಮೂಲನಕ್ಕೆ ಅನೇಕ ಯೋಜನೆಗಳನ್ನು ರೂಪಿಸಿ ಅವುಗಳನ್ನು ಯಶಸ್ವಿಯಾಗಿ ಕಾರ್ಯಗತಮಾಡಲು ವಿಶ್ವಪ್ರಯತ್ನ ನಡಸುತ್ತಿದ್ದಾರೆ.

ಶಿಕ್ಷಣದ ಸಂಮೃದ್ಧ ಫಲವನ್ನನುಭವಿಸಿ, ವೇದಗಳ ಹಿಂದಿನ ಕಾಲದಿಂದಲೂ ಉನ್ನತ ಸಂಸ್ಕೃತಿಯನ್ನು ಬೆಳಸಿಕೊಂಡು ಬಂದಿರುವ ಭಾರತಕ್ಕೆ ವಯಸ್ಕರ ಶಿಕ್ಷಣ ಹೊಸದೇನಲ್ಲ. ಹರಿಕಥೆ, ಪುರಾಣ, ಪ್ರವಚನ, ಪ್ರಸಂಗ ಮುಂತಾದುವುಗಳಿಂದ ಜ್ಞಾನ ವಾಹಿನಿ ಪಾಂಡಿತ್ಯದ ಮೇರುಪರ್ವತದಿಂದ ಪಾಮರ ಮಹಾಕೋಟಿಗೆ ಹರಿದು ಎಲ್ಲೆಲ್ಲೂ ಶಿಕ್ಷಣಪ್ರಸಾರವಾಗುತ್ತಿತ್ತು.

> ಕ್ಷಾಮೀ ವಾ ನ ಕದರ್ಯೋ ವಾ ನೃಶಂಸಃ ಪುರುಷಃ ಕ್ವಚಿತ್ |
> ದೃಷ್ಟುಂ ಶಾಕ್ಯಮಯೋಧ್ಯಾಯಾಂ ನ ವಿದ್ವಾನ್ ನ ಚ ನಾಸ್ತಿಕಃ ||
>
> (ವಾಲ್ಮೀಕಿ ರಾಮಾಯಣ, vi, ೮)

ಅಯೋಧ್ಯೆಯಲ್ಲಿ ಅವಿದ್ಯಾವಂತರೇ ಇರಲಿಲ್ಲ ಎಂದು ವಾಲ್ಮೀಕಿ ಹೇಳುವುದನ್ನು

ನೋಡಿದಾಗ ಅಂದಿನ ಭಾರತ ಶಿಕ್ಷಣದಲ್ಲಿ ಎಷ್ಟು ಮುಂದುವರಿದಿತ್ತು ಎಂಬುದನ್ನು ಊಹಿಸಿಕೊಳ್ಳಬಹುದು.

ಮಾನವ ಕಾಲಾನುಗುಣಕ್ಕೆ ತಕ್ಕಂತೆ ಶಿಕ್ಷಣಸಾಧನಗಳನ್ನು ರೂಪಿಸಿಕೊಂಡು, ಬೆಳಸಿಕೊಂಡು ಬರುತ್ತಿದ್ದಾನೆ. ವೇದಗಳ, ಪುರಾಣಗಳ ಕಾಲದಲ್ಲಿ ಆ ಕಾಲಕ್ಕೆ ತಕ್ಕಂತೆ ಶಿಕ್ಷಣ ಪ್ರಚಾರವಾಗುತ್ತಿತ್ತು. ಜನ ವಿವೇಕಿಗಳಾಗಿ, ವಿದ್ಯಾವಂತರಾಗಿ ಬಾಳುತ್ತಿದ್ದರು. ಭಾರತೀಯ ಇತಿಹಾಸದಲ್ಲಿ 'ಸುವರ್ಣಯುಗ'ವೆಂದು ಕರೆಸಿಕೊಳ್ಳುವ ಒಂದು ಕಾಲವೂ ಇತ್ತು.

ಆದರೆ ಕಾರಣಾಂತರಗಳಿಂದ, ಪಾಶ್ಚಾತ್ಯ ನಾಡಿನಲ್ಲೆಲ್ಲ ಆವರಿಸಿದ ವೈಜ್ಞಾನಿಕ ನವಚೇತನ ಹಿಮಾಲಯದಿಂದೀಚೆಗೆ ಹರಿಯಲಿಲ್ಲ. ಆದ್ದರಿಂದಲೇ ಭಾರತ ವೈಜ್ಞಾನಿಕ ಪ್ರಗತಿಯಲ್ಲಿ ಇನ್ನೂ ಬಹಳ ಹಿಂದುಳಿದಿದೆ.

ಈ ಯುಗವನ್ನು ವಿಶಾಲವಾಗಿ 'ವಿಜ್ಞಾನಯುಗ'ವೆಂದು ಕರೆದರೆ ಸಮಂಜಸವಾಗುತ್ತದೆ. ಆ ದೃಷ್ಟಿಯಿಂದ ನೋಡಿದರೆ ಏಷ್ಯಾದ ಅನೇಕ ರಾಷ್ಟ್ರಗಳು ಯೂರೋಪ್, ಅಮೆರಿಕ ಮುಂತಾದುವುಗಳಿಗಿಂತ ಬಹಳ ಹಿಂದುಳಿದಿವೆ.

ವಿಜ್ಞಾನಯುಗದ ಅನುಕೂಲಗಳು ಈ ರಾಷ್ಟ್ರಗಳಿಗೂ ಒದಗಬೇಕು, ಆ ಹಾದಿಯಲ್ಲಿ ಈ ರಾಷ್ಟ್ರಗಳೂ ಮುಂದುವರಿಯಬೇಕು, ಪ್ರಗತಿಯನ್ನು ಸಾಧಿಸಬೇಕು ಎಂಬ ಆಕಾಂಕ್ಷೆಯಿಂದ ಸಮಾಜಸೇವಕರೂ, ರಾಜ್ಯಸೂತ್ರಧಾರಿಗಳೂ ಹಿಂದಿನಿಂದಲೂ ಪ್ರಯತ್ನಮಾಡುತ್ತಿದ್ದಾರೆ.

ಈ ಪ್ರಯತ್ನ ಈಗ್ಗೆ ಐವತ್ತೆಂಟು ವರುಷಗಳ ಹಿಂದೆಯೆ ನಡೆಯಿತು. ೧೯೧೧ರಲ್ಲಿ ಶ್ರೀ ಗೋಪಾಲಕೃಷ್ಣ ಗೋಖಲೆಯವರು ಇಂಪೀರಿಯಲ್ ಲೆಜಿಸ್ಲೇಟಿವ್ ಕೌನ್ಸಿಲಿನ ಮುಂದೆ ಕಡ್ಡಾಯ ಶಿಕ್ಷಣದ ಒಂದು ಮಸೂದೆಯನ್ನು ತಂದರು. ೧೩ ಪರ ಮತ್ತು ೩೮ ವಿರೋಧಮತಗಳಿಂದ ಆ ಮಸೂದೆ ಬಿದ್ದುಹೋಯಿತು. ಪಾಶ್ಚಾತ್ಯರ ದುರದೃಷ್ಟ ಸಂಖ್ಯೆ ೧೩ ಅದಲುಬದಲಾಗಿ ೩೧ ಅನ್ನಿಸಿಕೊಂಡು ಅಂದಿನ ಬ್ರಿಟಿಷ್ ಸರಕಾರಕ್ಕೆ ಹಿತಕರವಾಗುವಂತೆ ಮಾಡಿದ್ದರೂ ಭಾರತೀಯರನ್ನು ಎಚ್ಚರಿಸಿ, ಕೆರಳಿಸಿತು. ಭಾರತದ ಹಲವು ಸಂಸ್ಥಾನಗಳು ಕಡ್ಡಾಯ ಶಿಕ್ಷಣದ ಮಹತ್ವವನ್ನು ಮನಗಂಡು ಅದರ ಸಾಧನೆಯ ಬಗ್ಗೆ ಪ್ರಯತ್ನ ನಡಸತೊಡಗಿದುವು.

ಈ ಹಾದಿಯಲ್ಲಿಯೂ ಮುಂದಾಳಾಗಿ ನಡೆದದ್ದು ಮೈಸೂರು. ೧೯೧೪ರಲ್ಲಿಯೇ, ಆಗ ದಿವಾನರಾಗಿದ್ದ ಸರ್ ಎಂ. ವಿಶ್ವೇಶ್ವರಯ್ಯನವರು ವಯಸ್ಕರ ಶಿಕ್ಷಣದ ಬಗ್ಗೆ ಹೆಚ್ಚು ಆಸಕ್ತಿ ವಹಿಸಿ, ಅದಕ್ಕೆ ಸೂಕ್ತವಾದ ಏರ್ಪಾಟುಗಳನ್ನು ಮಾಡಿದರು. ಶಾಲೆ ಕಾಲೇಜುಗಳಲ್ಲಿ ಕ್ರಮವಾಗಿ ಓದಿ ವಿದ್ಯಾವಂತರಾಗುವವರ ಸಲುವಾಗಿ ಮೈಸೂರು ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಿದ ಅವರೇ ಶಾಲೆಗಳಲ್ಲಿ ಓದದ ಅನಕ್ಷರಸ್ಥ ವಯಸ್ಕರಿಗೆ ವಯಸ್ಕರ ಶಾಲೆಗಳನ್ನೂ ಸ್ಥಾಪಿಸಿದರು. ಸಂಸ್ಥಾನದಲ್ಲಿ ಎಲ್ಲೆಲ್ಲಿ ಪ್ರಾಥಮಿಕ ಶಾಲೆಗಳಿದ್ದುವೊ ಅಲ್ಲೆಲ್ಲ ರಾತ್ರಿಶಾಲೆಗಳು ಪ್ರಾರಂಭವಾದುವು. ಅಕ್ಷರ ಕಲಿತ

ವಯಸ್ಕರು ಪುನಃ ಅನಕ್ಷರತೆಗೆ ಬಾರದಂತೆ ಅವರಿಗೆ ಅಗತ್ಯವಾದ ಸಾಹಿತ್ಯವನ್ನು ಒದಗಿಸಲು ಪುಸ್ತಕಭಂಡಾರಯೋಜನೆಯೊಂದು ಕಾರ್ಯರೂಪಕ್ಕೆ ಬಂದಿತು. ವೈಜ್ಞಾನಿಕ ಶಿಕ್ಷಣದ ಮಹತ್ವವನ್ನರಿತು 'ವಿಜ್ಞಾನ' ಎಂಬ ಪತ್ರಿಕೆಯೂ ಆಗ ಪ್ರಾರಂಭ ವಾಯಿತು. ಮೈಸೂರಿನಲ್ಲಿ ವಯಸ್ಕರ ಶಿಕ್ಷಣಸಾಹಿತ್ಯದ ಮೊಟ್ಟಮೊದಲನೆಯ ಕೃತಿ ಇದು ಎಂದರೂ ತಪ್ಪಾಗಲಾರದು.

ಭಾರತದ ಎಲ್ಲ ರಾಜ್ಯಗಳಿಗೂ ಮಾದರಿಯಾಗಿ ಪ್ರಾರಂಭವಾದ ಈ ಯೋಜನೆ ಹಲವು ಕಾರಣಗಳಿಂದ ಯಶಸ್ವಿಯಾಗಿ ಮುಂದುವರಿಯದೆ ಸ್ತಬ್ಧವಾಯಿತು. ಸರ್ ಎಂ. ವಿಶ್ವೇಶ್ವರಯ್ಯನವರು ಸಂಸ್ಥಾನದ ದಿವಾನ್ ಪದವಿಯನ್ನು ಬಿಟ್ಟುಹೋದುದು ಒಂದು ಕಾರಣವಾದರೆ, ವಯಸ್ಕಮನೋಗುಣಕ್ಕೆ, ಅಗತ್ಯ ಆಸಕ್ತಿ ಅನುಭವಗಳಿಗೆ ಅನುಗುಣವಾಗಿ ಬರೆದ ಪಠ್ಯಪುಸ್ತಕಗಳಿಲ್ಲದುದೂ, ವಯಸ್ಕರಿಗೆ ಪಾಠಹೇಳುವುದರಲ್ಲಿ ಶಿಕ್ಷಣ ಪಡೆದ ಉಪಾಧ್ಯಾಯರಿಲ್ಲದುದೂ ಮುಖ್ಯಕಾರಣಗಳಾದುವು. ಆಗ ಪ್ರಾರಂಭವಾದ ಸುಮಾರು ೭೦೦೦ ವಯಸ್ಕರ ಶಾಲೆಗಳು ಪ್ರಾಥಮಿಕ ಶಾಲಾ ಉಪಾಧ್ಯಾಯರುಗಳಿಂದಲೇ ನಡೆಯುತ್ತಿದ್ದುವು. ಹಗಲು ಮಗ ಕಲಿಯುವ ಬಾಲ ಬೋಧೆಯನ್ನೆ ತಂದೆ ರಾತ್ರಿ ಕಲಿಯಬೇಕಾಗಿತ್ತು.

ಮುಂದಿನ ಸುಮಾರು ಇಪ್ಪತ್ತೈದು ವರುಷಗಳಲ್ಲಿ ನಡೆದ ಸಂಶೋಧನೆಗಳು, ಪ್ರಯೋಗಗಳು ವಯಸ್ಕರ ಶಿಕ್ಷಣರಂಗದ ಮೇಲೆ ಹೊಸ ಬೆಳಕನ್ನು ಚೆಲ್ಲಿದುವು.

೧೯೪೦ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಮಹತ್ವ ಪೂರಿತವಾದ ಸಾರ್ವಜನಿಕ ಸೇವಾಯೋಜನೆಯೊಂದನ್ನು ಕೈಗೊಂಡರು. ಅಕ್ಷರ ಪ್ರಚಾರ ಅವರ ಮುಖ್ಯ ಕಾರ್ಯಕ್ರಮಗಳಲ್ಲಿ ಒಂದಾಗಿತ್ತು. ಈ ಕಾರ್ಯ ನಿರೀಕ್ಷಿಸಿದ್ದ ಕ್ಕಿಂತ ಯಶಸ್ವಿಯಾಗಿ ನಡೆದುದರಿಂದ ಅದು ಎಲ್ಲ ಶಿಕ್ಷಣತಜ್ಞರ, ಸ್ಥಳೀಯ ಸಂಸ್ಥೆಗಳ ಗಮನವನ್ನು ಸೆಳೆಯಿತು. ಇದೇ ರಾಜ್ಯಮಟ್ಟದ ವಯಸ್ಕರ ಶಿಕ್ಷಣಸಮಿತಿಯ ಸ್ಥಾಪನೆಗೆ ನಾಂದಿಯಾಯಿತು.

ಇಪ್ಪತ್ತೈದು ವರುಷಗಳಿಂದ ನಡೆದ ಪ್ರಯತ್ನ ಪ್ರಯೋಗಗಳಲ್ಲಿ ಕಂಡುಬಂದ ಲೋಪದೋಷಗಳಿಲ್ಲದಂತೆ, ರಷ್ಯಾ, ಜಪಾನ್, ಚೀನಾ, ಟರ್ಕಿ ಮುಂತಾದುವುಗಳ ಮಾದರಿಯನ್ನನುಸರಿಸುವಂತೆ ವಯಸ್ಕರ ಶಿಕ್ಷಣಯೋಜನೆಯನ್ನು ರಾಜ್ಯದ ವಯಸ್ಕರ ಶಿಕ್ಷಣಸಮಿತಿ ತಯಾರಿಸಿತು.

ಅದು ಮೊಟ್ಟಮೊದಲು ಕೈಗೊಂಡಿದ್ದು ವಯಸ್ಕರಿಗೇ ಪ್ರತ್ಯೇಕವಾದ ಪಠ್ಯ ಪುಸ್ತಕಗಳ ರಚನೆ. ಶಿಕ್ಷಣತಜ್ಞರನ್ನೂ, ಆದುವರೆಗೆ ವಯಸ್ಕರಿಗಾಗಿ ರಚಿಸಿದ್ದ ಪಠ್ಯಪುಸ್ತಕಗಳ ಲೇಖಕರನ್ನೂ ಒಳಗೊಂಡ ತಜ್ಞರ ಸಮಿತಿಯೊಂದನ್ನು ರಚಿಸಿ, ಅದರ ಸಹಾಯದಿಂದ ಮೂರು ಪಠ್ಯಪುಸ್ತಕಗಳನ್ನು ವಯಸ್ಕರ ಶಿಕ್ಷಣಸಮಿತಿ ತಯಾರಿಸಿತು. ಮೂರು ಭಾಗಗಳಲ್ಲಿ ಪ್ರಕಟವಾದ ಈ ಪಠ್ಯಪುಸ್ತಕವೇ ವಯಸ್ಕರ ಶಿಕ್ಷಣಕ್ಕಾಗಿ ಇಪ್ಪತ್ತೈದು ವರುಷಗಳ ಹಿಂದೆ ಪ್ರಕಟವಾದ ಮೊದಲನೆಯ ಅಭ್ಯಾಸ ಸಾಹಿತ್ಯ ಎಂದು ಹೇಳಬಹುದು.

ಕಾಲಾಭಾವದಿಂದ ವಯಸ್ಕರು ಆದಷ್ಟು ಬೇಗ, ಆದಷ್ಟು ಸುಲಭವಾಗಿ ಓದು ಬರೆಹ ಕಲಿಯಲು ಬಯಸುತ್ತಾರೆ, ಎಂಬುದನ್ನು ದೃಷ್ಟಿಯಲ್ಲಿಟ್ಟುಕೊಂಡು ಸುಮಾರು ೧೫೦ ಗಂಟೆಗಳಲ್ಲಿ ಓದುಬರೆಹ ಕಲಿಸುವಂತೆ ಈ ಪಠ್ಯಪುಸ್ತಕಗಳನ್ನು ತಯಾರಿಸಲಾಯಿತು.

ಕನ್ನಡದಲ್ಲಿ ಕಣ್ವರೆನಿಸಿದ್ದ 'ಶ್ರೀ'ಯವರೇ ಈ ವಯಸ್ಕರ ಶಿಕ್ಷಣಸಮಿತಿಯ[1] ಮೊದಲನೆಯ ಅಧ್ಯಕ್ಷರಾಗಿದ್ದು, ವಯಸ್ಕರ ಶಿಕ್ಷಣಸಾಹಿತ್ಯ ರಚನೆಗೆ, ಪ್ರಚಾರಕ್ಕೆ ಹೆಚ್ಚು ಶ್ರಮಿಸಿದರು. ಅವರ ಅಚ್ಚುಮೆಚ್ಚಿನ ಶಿಷ್ಯರೂ, ಶಿಕ್ಷಣತಜ್ಞರೂ ಆಗಿದ್ದ ದಿವಂಗತ ಶ್ರೀ ಎಸ್. ವಿ. ಶ್ರೀನಿವಾಸರಾಯರು ಸಂಸ್ಥಾನಾದ್ಯಂತ ಕಾರ್ಯವ್ಯವಸ್ಥೆಯ ಜವಾಬ್ದಾರಿಯನ್ನು ಹೊತ್ತರು. ಮುಂದೆ ಯುನೆಸ್ಕೊ ತಜ್ಞರಾಗಿ, ಮುಂದುವರಿಯುತ್ತಿರುವ ಅನೇಕ ರಾಷ್ಟ್ರಗಳಲ್ಲಿ ಸೇವೆಸಲ್ಲಿಸಿ ಖ್ಯಾತಿಪಡೆದ ಶ್ರೀ ಟಿ. ಕೃಷ್ಣಮೂರ್ತಿಯವರು ಪ್ರೊ. ಡಬ್ಲ್ಯು. ಜಿ. ಈಗಲ್ಟನ್ ಅವರು, ಶ್ರೀ ನ. ಭದ್ರಯ್ಯನವರು ಮುಂತಾದವರು ಅವರಿಗೆ ಸಹಾಯಕರಾಗಿ ನಿಂತರು. ೧೯೪೩ರ ನಂತರ ವಯಸ್ಕರ ಶಿಕ್ಷಣಯೋಜನೆಗೆ ನವೀನ ಚೇತನ ಬಂದಂತಾಯಿತು.

ಬೇಗ ಕಲಿತದ್ದು ಬೇಗ ಮರೆಯುತ್ತದೆ. ಆದ್ದರಿಂದ ಕಲಿತ ಅಕ್ಷರತೆಯನ್ನು ಸ್ಥಿರಪಡಿಸಲು ಮತ್ತು ವಯಸ್ಕರ ಜ್ಞಾನಭಂಡಾರವನ್ನು ಹೆಚ್ಚಿಸಲು ಅವರಿಗೆ ಸರಳವಾದ ಸಾಹಿತ್ಯವನ್ನು ಒದಗಿಸುವುದು ಅಗತ್ಯ. ಅದಕ್ಕಾಗಿಯೆ ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿಯವರು ವಯಸ್ಕರಿಗಾಗಿ ಸಾಹಿತ್ಯವನ್ನು ರಚಿಸುವುದರಲ್ಲಿ ಸಲಹೆಮಾಡಲು ಒಂದು ಸಮಿತಿಯನ್ನು ರಚಿಸಿದರು. ಆ ಸಮಿತಿಯ ಸಹಕಾರದಿಂದ ವಯಸ್ಕರಿಗಾಗಿ ಒಂದು ಪುಸ್ತಕಮಾಲೆಯನ್ನೇ ಪ್ರಾರಂಭಿಸಲಾಯಿತು. ವಯಸ್ಕರಿಗೆ ರುಚಿಸುವ ವಿಷಯಗಳ ಮೇಲೆ ಬೇರೆಬೇರೆ ಲೇಖಕರು ಬರೆದ ಪುಟ್ಟಪುಟ್ಟ ಪುಸ್ತಕಗಳ ಈ ಮಾಲೆಗೆ 'ವಯಸ್ಕರ ಶಿಕ್ಷಣದ ಪುಸ್ತಕಮಾಲೆ' ಎಂಬ ಹೆಸರನ್ನಿಡಲಾಯಿತು. ರಾಜ್ಯಶಾಸ್ತ್ರ, ಪೌರನೀತಿ, ಜನಪದಸಾಹಿತ್ಯ, ಸಣ್ಣಕತೆಗಳು, ಮಹಾಭಾರತದ ಕತೆಗಳು, ಖಗೋಳ ವಿಜ್ಞಾನ ಮುಂತಾದ ವಿಷಯಗಳ ಮೇಲೆ ಸುಮಾರು ೨೪ರಿಂದ ೪೮ ಪುಟಗಾತ್ರದ ಪುಸ್ತಕಗಳು ಬೇಗ ಬೇಗ ಪ್ರಕಟವಾದುವು.

ಕೇವಲ ಅರ್ಧಾಣೆ ಬೆಲೆಯ[2] ಆ ಪುಸ್ತಕಗಳಲ್ಲಿ ಮೊದಲನೆಯದು ಶಿಕ್ಷಣತಜ್ಞರಾದ ಶ್ರೀ ಎ. ಶೇಷಯ್ಯಂಗಾರ್ ಅವರು ಬರೆದ 'ಮೈಸೂರಿನ ಆಡಳಿತಕ್ರಮ'. ಆ ಮೇಲೆ ಶ್ರೀ ಕೃಷ್ಣರಾಜೇಂದ್ರ ಒಡೆಯರು, ಪಾರ್ಲಿಮೆಂಟ್, ಹೆಣ್ಣುಮಕ್ಕಳ ಪದಗಳು, ಪೌರಸಭೆ, ನಮ್ಮ ಮೈಸೂರು, ಮೈಸೂರಿನ ನೋಟಗಳು, ಕುಂತೀದೇವಿ, ಪುಟ್ಟಾಚಾರಿಯ ಕಾಡುಕೋಳಿ, ಕೀಚಕವಧೆ, ಸೀತಾವನವಾಸ, ಚಿನ್ನ, ಸೂರ್ಯಚಂದ್ರ, ನಕ್ಷತ್ರಗಳು,

1 ಆಗ ಇದಕ್ಕೆ 'ಸಂಸ್ಥಾನದ ಅಕ್ಷರಪ್ರಚಾರ ಸಮಿತಿ' ಎಂಬ ಹೆಸರಿತ್ತು.

2 ಈಗ ಈ ಮಾಲೆಯ ಪುಸ್ತಕದ ಬೆಲೆ ೨೫ ಪೈಸೆ.

ನಮ್ಮ ಮಕ್ಕಳು—ಮುಂತಾದ ಪುಸ್ತಕಗಳು ಅಚ್ಚಾದುವು. ೩೦೦೦ದಿಂದ ೬೦೦೦ ಪ್ರತಿಗಳವರೆಗೆ ಅಚ್ಚಾದ ಅನೇಕ ಪುಸ್ತಕಗಳು ಮೊದಲನೆಯ ಮುದ್ರಣದಲ್ಲಿಯೇ ಅತ್ಯಂತ ಜನಪ್ರಿಯವಾಗಿ ಬಹಳ ಬೇಗ ಪುನರ್ಮುದ್ರಣ ಕಂಡುವು. ಅವುಗಳಲ್ಲಿ ಕೆಲವು ಕೃತಿಗಳಂತೂ ಮೂರು ನಾಲ್ಕು ಬಾರಿ ಮುದ್ರಣವಾಗಿ ಒಟ್ಟು ಹದಿನೈದು ಸಾವಿರಕ್ಕೂ ಹೆಚ್ಚು ಪ್ರತಿಗಳು ವಯಸ್ಕ ಓದುಗರ ಕೈಸೇರಿವೆ. ಈ ೨೫ ವರುಷಗಳಲ್ಲಿ ಒಟ್ಟು ೧೫೦ಕ್ಕೂ ಹೆಚ್ಚು ಪುಸ್ತಕಗಳು ಪ್ರಕಟವಾಗಿರುವುದು ಈ ಮಾಲೆ ಹೆಚ್ಚು ಜನಪ್ರಿಯವಾಗಿರುವುದಕ್ಕೆ ನಿದರ್ಶನವಾಗಿದೆ.

ಹೊಸದಾಗಿ ಓದುಬರೆಹ ಕಲಿತ ವಯಸ್ಕರ ಸಾಮಾನ್ಯ ಪುಸ್ತಕಭಂಡಾರದಲ್ಲಿರುವ ಗಾತ್ರದ ಪುಸ್ತಕಗಳನ್ನು ಓದಿ ಅರ್ಥಮಾಡಿಕೊಳ್ಳಬೇಕಾದರೆ ಈ ಪುಟ್ಟಪುಟ್ಟ ಪುಸ್ತಕಗಳನ್ನು ಓದಿ ಅಭ್ಯಾಸಮಾಡುವುದು ಅಗತ್ಯ. ಹಾಗೆಯೆ ಸಣ್ಣಕ್ಷರದ ಎಂಟು ಕಾಲಮ್ಮಿನ ಸಾಮಾನ್ಯ ವೃತ್ತಪತ್ರಿಕೆಯನ್ನು ಓದುವುದಕ್ಕೆ ಮುಂಚೆ ಸರಳವಾದ ಮತ್ತು ದಪ್ಪಕ್ಷರಗಳಲ್ಲಿ ಅಚ್ಚಾದ ಸಣ್ಣ ವೃತ್ತಪತ್ರಿಕೆಯನ್ನು ಓದಿ ಅಭ್ಯಾಸ ಮಾಡುವುದು ಅಗತ್ಯ. ಆ ಅಗತ್ಯದ ಪೂರೈಕೆಗಾಗಿ ವಯಸ್ಕರ ಶಿಕ್ಷಣಸಮಿತಿಯವರು ೨೭ ವರುಷಗಳ ಹಿಂದೆಯೆ ‘ಬೆಳಕು’ ಎಂಬ ವಾರಪತ್ರಿಕೆಯನ್ನು ಪ್ರಾರಂಭಿಸಿದರು. ರಾಷ್ಟ್ರೀಯ, ಅಂತರರಾಷ್ಟ್ರೀಯ ಮತ್ತು ಸಂಸ್ಥಾನದ ಸುದ್ದಿಗಳು, ವ್ಯವಸಾಯ, ವಿಜ್ಞಾನ, ಜನಪದ ಸಾಹಿತ್ಯ, ವಾರದ ಕತೆ—ಮುಂತಾದುವುಗಳನ್ನೊಳಗೊಂಡ ನಾಲ್ಕು ಪುಟದ ಈ ಪತ್ರಿಕೆ ಹಳ್ಳಿಹಳ್ಳಿಗೂ ಜ್ಞಾನದ ಬೆಳಕಾಗಿ ಪಸರಿಸಿ ಜನಪ್ರಿಯವಾಯಿತು. ಇದರ ಸುಮಾರು ೬೦೦೦ ಪ್ರತಿಗಳು ರಾಜ್ಯದ ಮೂಲೆಮೂಲೆಗೂ ಪ್ರಸಾರವಾಗುತ್ತಿದೆ; ವಯಸ್ಕರ ಶಾಲೆಯ ವಿದ್ಯಾರ್ಥಿಗಳಿಗೆ ಅಭ್ಯಾಸಪತ್ರಿಕೆಯಾಗಿ, ಗ್ರಾಮಪುಸ್ತಕಭಂಡಾರಗಳಿಗೆ ಸುದ್ದಿಪತ್ರಿಕೆಯಾಗಿ ಜ್ಞಾನದೀವಿಗೆಯಾಗಿ ಬೆಳಗುತ್ತಿದೆ.

ಕನ್ನಡದಲ್ಲಿ ಓದುಬರೆಹ ಮಾತ್ರ ಬಲ್ಲ ಗ್ರಾಮಸ್ಥರ ಉಪಯೋಗಕ್ಕಾಗಿ ‘ರೀಡರ್ಸ್ ಡೈಜೆಸ್ಟ್’ ಮಾದರಿಯಲ್ಲಿ ‘ಪುಸ್ತಕ ಪ್ರಪಂಚ’ ಎಂಬ ಒಂದು ಮಾಸಪತ್ರಿಕೆಯನ್ನು ಸಂಸ್ಥಾನದ ವಯಸ್ಕರ ಶಿಕ್ಷಣಸಮಿತಿ ಈಗ್ಗೆ ೨೨ ವರುಷಗಳ ಹಿಂದೆ ಪ್ರಾರಂಭಿಸಿತು. ಕನ್ನಡೇತರ ಭಾಷೆಗಳ ಪತ್ರಿಕೆಗಳಲ್ಲಿ ಬರುವ ಉತ್ತಮವಾದ ಲೇಖನಗಳ ಭಾವಾನುವಾದ, ಕನ್ನಡದಲ್ಲಿ ಪ್ರಕಟವಾಗುವ ಪುಸ್ತಕಗಳ ಪರಿಚಯ ಮತ್ತು ವಿಮರ್ಶೆ, ಗ್ರಾಮಾಭಿವೃದ್ಧಿ, ವ್ಯವಸಾಯ ಮುಂತಾದ ವಿಷಯಗಳ ಬಗ್ಗೆ ಉಪಯುಕ್ತವಾದ ಲೇಖನಗಳು, ಜನಪದಸಾಹಿತ್ಯಕೃತಿಗಳು, ಅತ್ಯುತ್ತಮವಾದ ಸಣ್ಣ ಕತೆಗಳು—ಮುಂತಾದುವುಗಳೊಡನೆ ಪ್ರಕಟವಾಗುವ ಈ ಮಾಸಪತ್ರಿಕೆ ಕನ್ನಡದ ಶ್ರೇಷ್ಠಪತ್ರಿಕೆಗಳಲ್ಲೊಂದು ಎಂದು ಈಗಾಗಲೇ ಪ್ರಸಿದ್ಧವಾಗಿದೆ.

ವಯಸ್ಕರಿಗೆ ಪುಟ್ಟಪುಟ್ಟ ಪುಸ್ತಕಗಳನ್ನು, ‘ಬೆಳಕು’ ವಾರಪತ್ರಿಕೆಯನ್ನು ಒದಗಿಸಿದರೆ ಸಾಲದು. ಅವರು ತಾವು ಕಲಿತ ಸಾಕ್ಷರತೆಯನ್ನು ನಾನಾ ರೂಪದಲ್ಲಿ ಬಳಸಲು ಇಚ್ಛಿಸುತ್ತಾರೆ. ಅಲ್ಲದೆ, ಬರಿಯ ಪಠ್ಯಪುಸ್ತಕಗಳನ್ನು, ವಾರಕ್ಕೊಮ್ಮೆ

'ಬೆಳಕು' ವಾರಪತ್ರಿಕೆಯನ್ನು ಓದಿದರೆ ಅವರಿಗೆ ತೃಪ್ತಿಯಿಲ್ಲ. ಅವರ ಕುತೂಹಲವನ್ನು ಹೆಚ್ಚಿಸಲು ಮತ್ತು ಅವರಲ್ಲಿ ತಾನು ಓದಬಲ್ಲೆನೆಂಬ ಆತ್ಮವಿಶ್ವಾಸವನ್ನು ಹೆಚ್ಚಿಸಲು ಓದುವ ಸರಳಸಾಹಿತ್ಯವನ್ನು ನಾನಾ ರೂಪದಲ್ಲಿ ಒದಗಿಸುವುದು ಅಗತ್ಯ. ಆದ್ದರಿಂದ ಶಿಕ್ಷಣತಜ್ಞರು ಕಾರ್ಡು, ಮಡಿಕೆ, ಭಿತ್ತಿಪತ್ರ ಮುಂತಾದ ರೂಪಗಳಲ್ಲಿ ವಯಸ್ಕರ ಶಿಕ್ಷಣ ಸಾಹಿತ್ಯವನ್ನು ಒದಗಿಸಬಹುದು ಎಂದು ಸೂಚಿಸುತ್ತಾರೆ.

ಅದರಂತೆ ವಯಸ್ಕರ ಶಿಕ್ಷಣಸಮಿತಿಯವರು ಅನೇಕ ಕಾರ್ಡುಗಳು, ಮಡಿಕೆಗಳು ಮತ್ತು ಭಿತ್ತಿಪತ್ರಗಳನ್ನು ಅಚ್ಚುಮಾಡಿಸಿದ್ದಾರೆ. ಮುಂದುವರಿದ ಓದುಗರಿಗಾಗಿ ಪುಸ್ತಕಭಂಡಾರಮಾಲೆ, ಜೀವವಿಜ್ಞಾನಮಾಲೆಗಳನ್ನು ಪ್ರಾರಂಭಿಸಿ ಅವುಗಳ ಮೂಲಕ ಆಕಾಶಲೋಕ, ವ್ಯವಹಾರಧರ್ಮ, ವಿದ್ಯಾಪೀಠಗಳು, ಬಾಳಿಗೊಂದು ನಂಬಿಕೆ, ಕಾಮಧೇನು, ಬಸವೇಶ್ವರ ವಚನಸಂಗ್ರಹ, ಜೈಮಿನಿಭಾರತ ಸಂಗ್ರಹ, ನಮ್ಮ ಭೂಮಿ, ಸರ್ವಜ್ಞನ ವಚನಗಳು, ಮಕ್ಕಳ ವರ್ತನೆ—ಮುಂತಾದ ಉಪಯುಕ್ತ ಗ್ರಂಥಗಳನ್ನೂ ಹೊರತಂದಿದ್ದಾರೆ.

ಶ್ರೀ 'ಕುವೆಂಪು' ಅವರಿಂದ ವಾಲ್ಮೀಕಿ ರಾಮಾಯಣವನ್ನು ಜನಪ್ರಿಯ ಗದ್ಯಶೈಲಿಯಲ್ಲಿ ಬರೆಯಿಸಿ ವಿಶೇಷ ಗ್ರಂಥಮಾಲೆಯಲ್ಲಿ ಪ್ರಕಟಿಸಿದ್ದಾರೆ. ಇದರ ಸುಮಾರು ೨೦,೦೦೦ ಪ್ರತಿಗಳು ಈಗಾಗಲೆ ಮಾರಾಟವಾಗಿವೆ ಎಂಬುದೇ ಈ ಕೃತಿಯ ಜನಪ್ರಿಯತೆಗೆ ಸಾಕ್ಷಿಯಾಗಿದೆ.

ಹಾಗೆಯೆ, ಶ್ರೀ ಸಿದ್ಧಯ್ಯಪುರಾಣಿಕ ಅವರು ಬರೆದ 'ಶರಣಚರಿತಾಮೃತ', ಶ್ರೀ ಕೆ. ವೆಂಕಟರಾಮಪ್ಪನವರು ಬರೆದ 'ವಚನಭಾಗವತ' ಮುಂತಾದ ಕೃತಿಗಳೂ ಪ್ರಕಟವಾಗಿವೆ.

ಸಂಸ್ಥಾನದ ವಯಸ್ಕರ ಶಿಕ್ಷಣಸಮಿತಿಯಂತೆಯೆ ಕನ್ನಡದಲ್ಲಿ ವಯಸ್ಕರ ಶಿಕ್ಷಣ ಕಾರ್ಯವನ್ನು ನಡಸುತ್ತಿದ್ದ ಬೆಳಗಾಮಿನ ಸಮಾಜ ಶಿಕ್ಷಣಸಮಿತಿಯವರು, ಬೊಂಬಾಯಿ ನಗರ ವಯಸ್ಕರ ಶಿಕ್ಷಣ ಸಮಿತಿಯವರು ಸೂಕ್ತವೆನಿಸಿದ ಸಾಹಿತ್ಯವನ್ನು ಪುಸ್ತಕರೂಪ ದಲ್ಲಿ, ಪತ್ರಿಕೆಯ ರೂಪದಲ್ಲಿ ಪ್ರಕಟಿಸಿದ್ದಾರೆ. ಲಕ್ನೊ ನಗರದಲ್ಲಿರುವ ಸಾಕ್ಷರತಾ ನಿಕೇತನ ಭಾರತದ ಇತರ ಭಾಷೆಗಳಲ್ಲಿ ವಯಸ್ಕರಿಗೆ ಸಾಹಿತ್ಯವನ್ನು ಒದಗಿಸುವ ಒಂದು ಯೋಜನೆ ಹಾಕಿಕೊಂಡಿದೆ. ಅದರಂತೆ ಮೈಸೂರು ಸಂಸ್ಥಾನ ವಯಸ್ಕರ ಶಿಕ್ಷಣ ಸಮಿತಿಯ ಸಹಕಾರದಿಂದ ಕನ್ನಡದಲ್ಲಿಯೂ ಕೆಲವು ಉಪಯುಕ್ತವಾದ ಪುಸ್ತಕಗಳನ್ನು ಅದು ಪ್ರಕಟಿಸಿದೆ. ಕರ್ನಾಟಕದ ಜಾನಪದ ನೃತ್ಯಗಳು, ನಡೆದುನೋಡು ಕೊಡಗಿನ ಬೆಡಗ, ನಾವೇ ಸರಕಾರ ಮುಂತಾದುವು ಅವುಗಳಲ್ಲಿ ಮುಖ್ಯವಾದುವು.

೧೯೫೦ರಿಂದ ಈಚೆಗೆ ವಯಸ್ಕರ ಶಿಕ್ಷಣಸಾಹಿತ್ಯರಂಗದಲ್ಲಿ ಅನೇಕ ಸಂಶೋಧನೆ ಗಳು ನಡೆದುವು. ಭಾರತೀಯ ವಯಸ್ಕರ ಶಿಕ್ಷಣ ಸಂಘದವರು ಈ ವಿಷಯವಾಗಿ ಒಂದು ವ್ಯಾಸಂಗಗೋಷ್ಠಿಯನ್ನು ದೆಹಲಿಯಲ್ಲಿ ಏರ್ಪಡಿಸಿದ್ದರು. ಅದಾದನಂತರ ಭಾರತದ ವಿವಿಧ ಭಾಗಗಳಲ್ಲಿ ಆಯಾ ವಿಭಾಗಗಳ ಭಾಷೆಗನುಗುಣವಾಗಿ ವ್ಯಾಸಂಗ

ಗೋಷ್ಠಿಗಳು ನಡೆದುವು. ಯುನೆಸ್ಕೊ ಸಂಸ್ಥೆಯವರು ಈ ವಿಷಯವಾಗಿ ಐದಾರು ಅಂತರರಾಷ್ಟ್ರೀಯ ವ್ಯಾಸಂಗಗೋಷ್ಠಿಗಳನ್ನು ನಡೆಸಿದರು. ಮೈಸೂರಿನ ಯಲವಾಲದ ಹತ್ತಿರ ಒಂದು ತರಪೇತು ಕೇಂದ್ರವನ್ನು ನಡಸಿ ಅದರ ಮೂಲಕ ಹೊಸ ಪಠ್ಯಪುಸ್ತಕಗಳನ್ನೂ, ಮುಂದೆ ವಯಸ್ಕರು ಓದಬಹುದಾದ ಸರಳಸಾಹಿತ್ಯಕೃತಿಗಳನ್ನೂ ಪ್ರಕಟಿಸಿದರು. ಈ ಕಾರ್ಯದಲ್ಲಿ ಸುಪ್ರಸಿದ್ಧ ಸಾಹಿತಿಗಳಾದ ಡಾ. ಶಿವರಾಮಕಾರಂತ, ಶ್ರೀ ನ. ಭದ್ರಯ್ಯ ಮತ್ತು ಹೆಸರಾಂತ ಚಿತ್ರಗಾರ ಶ್ರೀ ಹೆಬ್ಬಾರ್ ಅವರ ನೆರವನ್ನು ಯುನೆಸ್ಕೊ ಸಂಸ್ಥೆಯವರು ಪಡೆದಿದ್ದರು.

ಡಾ. ಥಾರ್ನ್‌ಡೈಕ್, ಡಾ. ಎಡ್ಗರ್ ಡೇಲ್, ಡಬ್ಲ್ಯು. ಎಸ್. ಗ್ರೇ ಮತ್ತು ಬಿ. ಇ. ಲೀರಿ, ಡಾ. ಇರ್ವಿಂಗ್ ಲಾರ್ಜ್, ಡಾ. ರೂಹಾಲ್ಫ್ ಫ್ಲೆಷ್, ರಾಬರ್ಟ್ ಗನ್ನಿಂಗ್, ಯೋಕಂ, ಡಾ. ಗೇಟ್ಸ್, ಡಾ. ರಾಲ್ಫ್, ಡಾ. ಫ್ರ್ಯಾಂಕ್ ಲಾಬಕ್ ಮುಂತಾದ ಶಿಕ್ಷಣತಜ್ಞರು ೧೯೨೦ರಿಂದೀಚೆಗೆ ನಡಸಿದ ಸಂಶೋಧನೆಗಳಿಂದ ಶಿಕ್ಷಣ ಸಾಹಿತ್ಯ ರಚನೆಯ ರೂಪರೇಖೆಗಳನ್ನು ಬದಲಾಯಿಸಬೇಕು ಎಂಬುದು ಖಚಿತವಾಯಿತು.

ಚೆನ್ನಾಗಿ ಅಭಿವೃದ್ಧಿಯಾದ ಯಾವುದೇ ಭಾಷೆಯಲ್ಲಾಗಲಿ ಅತ್ಯಂತ ಹೆಚ್ಚು ಬಳಕೆಯಲ್ಲಿರುವ ೩೦೦೦ ಪದಗಳನ್ನು ಮಾತ್ರ ಆಯ್ದು ಅಷ್ಟರಲ್ಲಿಯೇ ಯಾವ ವಿಷಯದ ಮೇಲಾದರೂ ಸರಳವಾದ ಸಾಹಿತ್ಯವನ್ನು ರಚಿಸಬಹುದು ಎಂಬುದು ಇಂಗ್ಲಿಷ್, ಫ್ರೆಂಚ್, ಸ್ಪ್ಯಾನಿಷ್ ಮುಂತಾದ ಭಾಷೆಗಳಲ್ಲಿ ನಡೆದ ಸಂಶೋಧನೆಗಳಿಂದ ಗೊತ್ತಾಗಿದೆ. ಅಮೆರಿಕದ ಲ್ಯಾಡರ್ ಎಡಿಷನ್‌ನ ಪುಸ್ತಕಗಳನ್ನು ಹಲವರು ನೋಡಿರಬಹುದು. 'ಲರ್ನ್ ಬೈ ರೀಡಿಂಗ್' ಅಥವಾ 'ಈಸಿಯರ್-ಟು-ರೀಡ್' ಮಾಲೆಯಲ್ಲಿ ಕ್ಲಿಷ್ಟವಾದ ಅಣುವಿಜ್ಞಾನದ ಬಗ್ಗೆಯೂ ಸರಳವಾದ ಪುಸ್ತಕಗಳು ಪ್ರಕಟವಾಗಿರುವುದನ್ನು ಗಮನಿಸಿರಬಹುದು.

ಓದುವುದು ಮತ್ತು ವಿಷಯಗ್ರಹಣದ ಬಗ್ಗೆ ನಡೆದ ಸಂಶೋಧನೆಗಳಿಂದ ತಿಳಿದ ಅಂಶ ಇದು: ಪರಿಚಿತವಾದ ಸರಳಪದಗಳನ್ನೆ ಹೆಚ್ಚಾಗಿ ಬಳಸಿ, ಚಿಕ್ಕಚಿಕ್ಕ ವಾಕ್ಯಗಳಲ್ಲಿ, ಪುಟ್ಟಪುಟ್ಟ ಪ್ಯಾರಾಗಳಲ್ಲಿ ಆದಷ್ಟು ಮಟ್ಟಿಗೆ ವೈಯಕ್ತಿಕ ಘಲನೆ ಸಂಬೋಧನೆಗಳನ್ನು ಬೆರಸಿ, ಸ್ಪಷ್ಟವಾಗಿ ಮತ್ತು ನೇರವಾಗಿ ಅಭಿಪ್ರಾಯಗಳನ್ನು ತಿಳಿಸುವಂತೆ ರಚಿಸಿದ ಸಾಹಿತ್ಯ ಹೆಚ್ಚು ಪರಿಣಾಮಕಾರಿಯಾಗುತ್ತದೆ. ಎಲ್ಲ ತಜ್ಞರೂ ಈ ತತ್ತ್ವವನ್ನು ಅಂಗೀಕರಿಸಿದ್ದಾರೆ. ಆದ್ದರಿಂದಲೇ ಮುಂದುವರಿದ ಪಾಶ್ಚಾತ್ಯ ಭಾಷೆಗಳಲ್ಲಿ ಪದಪಟ್ಟಿಗಳು ತಯಾರಾಗಿವೆ. ಅವುಗಳ ಸಹಾಯದಿಂದ ವಿವಿಧ ಮಟ್ಟಗಳಿಗೆ ಅನುಗುಣವಾಗಿ ಸಾಹಿತ್ಯವನ್ನು ರಚಿಸಬಹುದು. ಶಾಲೆಗಳಲ್ಲಿ ಉಪಯೋಗಿಸುವ ಪಠ್ಯಪುಸ್ತಕಗಳನ್ನು ರಚಿಸುವಾಗಲೂ ಲೇಖಕರು ಈ ಪದಪಟ್ಟಿಗಳ ಸಹಾಯವನ್ನು ಪಡೆಯುತ್ತಿದ್ದಾರೆ.[3] ಭಾರತದ ಭಾಷೆಗಳಲ್ಲಿಯೂ ಈ ರೀತಿಯ ಪದಪಟ್ಟಿ ಮೊದಲು

[3] ಡಾ. ಎಡ್ಗರ್ ಡೇಲ್ ಅವರು ಹೆಚ್ಚು ಬಳಕೆಯಲ್ಲಿರುವ ೭೬೯ ಇಂಗ್ಲಿಷ್ ಪದಗಳ

ತಯಾರಾಗಬೇಕಾಗಿದೆ. ಶಾಸ್ತ್ರೀಯವಾಗಿ, ಉಪಯುಕ್ತವಾಗಿ, ಪರಿಣಾಮಕಾರಿಯಾಗಿ ವಯಸ್ಕರ ಶಿಕ್ಷಣಸಾಹಿತ್ಯವನ್ನು ರಚಿಸಬೇಕಾದರೆ ಅಸ್ಥಿಭಾರದಂತಿರುವ ಮೊಟ್ಟ ಮೊದಲನೆಯ ಕೆಲಸ ಇದು. ಆದಷ್ಟು ಜಾಗ್ರತೆ ಈ ಕಾರ್ಯ ನಡೆಯಬೇಕಾಗಿದೆ. ಕನ್ನಡದ ೩೦೦೦ ಪದಗಳ ಒಂದು ಪಟ್ಟಿಯನ್ನು ಶಾಸ್ತ್ರೀಯವಾಗಿ ತಯಾರಿಸುವ ಪ್ರಯತ್ನ ಸುಮಾರು ಹತ್ತು ವರುಷಗಳಿಂದ ನಡೆಯುತ್ತಿದೆ. ಈ ಕೆಲಸ ಬೇಗ ಮತ್ತು ಯಶಸ್ವಿಯಾಗಿ ಮುಗಿದರೆ ವಯಸ್ಕರ ಶಿಕ್ಷಣಸಾಹಿತ್ಯ ರಚನೆಗೇ ಅಲ್ಲದೆ ಸರಳವಾದ ಸಾಮಾನ್ಯ ಸಾಹಿತ್ಯರಚನೆಗೂ, ಹೆಚ್ಚು ಸಹಾಯವಾಗುತ್ತದೆ. ಇದರ ಜೊತೆಗೆ ಮಾತಾಡುವಾಗ ಹೆಚ್ಚು ಬಳಸುವ ಪದಗಳ ಒಂದು ಪಟ್ಟಿಯೂ ವಯಸ್ಕರ ಶಿಕ್ಷಣದ ದೃಷ್ಟಿಯಿಂದ ಅಗತ್ಯ. ಆಡುವ ಭಾಷೆಗೂ ಓದುವ ಭಾಷೆಗೂ ಇರುವ ಅಂತರವನ್ನು ಕಡಮೆಮಾಡಲು ಇದು ಸಹಾಯಕವಾಗುತ್ತದೆ.

ಯಾವ ದರ್ಜೆಗೆ ಯಾವ ಸಾಹಿತ್ಯ ಸರಿದೂಗುತ್ತದೆ, ಎಂಬುದನ್ನು ಗೊತ್ತು ಮಾಡಲು ಒಂದು ಅಳತೆಗೋಲುಬೇಕು. ಪಾಶ್ಚಾತ್ಯದೇಶಗಳಲ್ಲಿ ಸಾಹಿತ್ಯವನ್ನು ಅಳೆಯಲೂ ಈ ರೀತಿಯ ಒಂದು ವ್ಯವಸ್ಥೆ ಇದೆ ಎಂಬುದು ನಮ್ಮಲ್ಲಿ ಹಲವರಿಗೆ ತಿಳಿಯದು. ಇಂಗ್ಲಿಷ್ ಭಾಷೆಯ ಸಾಹಿತ್ಯವನ್ನು ಅಳೆಯಲು ಸುಮಾರು ೧೩ ಸೂತ್ರಗಳಿವೆ. ಇದನ್ನು ವಾಚ್ಯಸೂತ್ರಗಳೆಂದು (Readability Formulas) ಕರೆಯಬಹುದು. ಅಮೆರಿಕದ ಡಾ. ರೂಡಾಲ್ಫ್ ಫ್ಲೆಷ್ ಅವರ ಸೂತ್ರ ಹೆಚ್ಚು ಜನಪ್ರಿಯವಾಗಿರುವುದಲ್ಲದೆ ಪ್ರಪಂಚದ ಅನೇಕ ಭಾಷೆಗಳಿಗೂ ಅದನ್ನು ಸ್ವಲ್ಪಮಟ್ಟಿಗೆ ಬಳಸಬಹುದು.[4]

ಕನ್ನಡ ಭಾಷೆಗೂ ಒಂದು ವಾಚ್ಯಸೂತ್ರ ಅಗತ್ಯ. ಕರಾರುವಾಕಾಗಿ ಅಳೆಯುವ ಒಂದು ಸೂತ್ರವನ್ನು ರೂಪಿಸಬೇಕಾದರೆ ಅಗತ್ಯವಾದ ಪದಪಟ್ಟಿ ಮೊದಲು ತಯಾರಾಗ ಬೇಕು.

ಪದಪಟ್ಟಿ, ವಾಚ್ಯಸೂತ್ರ, ಎಷ್ಟು ಮುಖ್ಯವೋ ಸಾಹಿತ್ಯರಚನಾತಂತ್ರವೂ ಅಷ್ಟೇ ಮುಖ್ಯ. ಅದರ ಬಗ್ಗೆಯೂ ಅನೇಕ ಸಂಶೋಧನೆಗಳು ನಡೆದಿವೆ.

ವಯಸ್ಕರ ಆಸಕ್ತಿ ಅಗತ್ಯಗಳಿಗನುಗುಣವಾಗಿ ವಿಷಯವನ್ನು ಆಯ್ದುಕೊಳ್ಳ ಬೇಕು. ಅವರಿಗೆ ಆ ವಿಷಯವಾಗಿ ಏನೇನು ಗೊತ್ತಿದೆ, ಏನು ಗೊತ್ತಾಗಬೇಕು ಎಂಬುದನ್ನು ಗಮನದಲ್ಲಿಟ್ಟು, ಆಕರ್ಷಕವಾದ ರೀತಿಯಲ್ಲಿ ರಚಿಸಬೇಕು. ಆದ್ದರಿಂದಲೇ

ಒಂದು ಪಟ್ಟಿಯನ್ನು ತಯಾರಿಸಿದ್ದಾರೆ. ಅತ್ಯಂತ ಸರಳವಾದ ಅಭ್ಯಾಸಸಾಹಿತ್ಯವನ್ನು ರಚಿಸು ವಾಗ ಈ ಪಟ್ಟಿಯ ಸಹಾಯವನ್ನು ಪಡೆಯಬಹುದು.

[4] ಡಾ. ಫ್ಲೆಷ್ ಅವರು ಭಾರತಕ್ಕೆ ಬಂದಿದ್ದಾಗ ಅವರು ತಮ್ಮ ಸೂತ್ರವನ್ನು ಭಾರತೀಯ ಭಾಷೆಗಳಿಗೂ ಬಳಸಿನೋಡಿದರು. ಕನ್ನಡಕ್ಕೆ ಬಳಸುವ ಕಾರ್ಯದಲ್ಲಿ ಅವರಿಗೆ ನೆರವಾಗುವ ಅವಕಾಶ ಈ ಲೇಖಕನಿಗೆ ಒದಗಿತ್ತು. ಮುಂದೆ ಅಲಹಾಬಾದಿನಲ್ಲಿ ಮತ್ತು ಅಮೆರಿಕದಲ್ಲಿ ಅವರಿಂದ ಹೆಚ್ಚು ವಿಷಯವನ್ನು ತಿಳಿದುಕೊಳ್ಳುವ ಅವಕಾಶವೂ ದೊರೆಯಿತು.

ವಯಸ್ಕರ ಅಗತ್ಯ ಆಸಕ್ತಿಗಳ ಬಗ್ಗೆ, ಸಾಹಿತ್ಯರಚನಾತಂತ್ರದ ಬಗ್ಗೆ ಸಂಶೋಧನೆಗಳು ನಡೆಯಬೇಕು.

ಈ ದೃಷ್ಟಿಯಿಂದಲೇ ಸಂಸ್ಥಾನದ ವಯಸ್ಕರ ಶಿಕ್ಷಣಸಮಿತಿಯವರು ಸಂಶೋಧನ ವಿಭಾಗವನ್ನು ಪ್ರಾರಂಭಿಸಿ, ಅನೇಕ ಪ್ರಯೋಗಗಳನ್ನು, ಅಭ್ಯಾಸಗಳನ್ನು ಮಾಡಿದರು.

ವಯಸ್ಕರ ಶಿಕ್ಷಣಸಾಹಿತ್ಯರಚನೆಗೆ ಸಂಶೋಧನೆಯ ಸಹಕಾರ ಅತ್ಯಗತ್ಯ. ಸಾಹಿತ್ಯ ರಚನೆಗೆ ವಸ್ತುವನ್ನು ಆಯ್ದುಕೊಳ್ಳುವಾಗ, ರಚಿಸುವಾಗ, ರಚಿಸಿದ ಸಾಹಿತ್ಯವನ್ನು ಅದು ಯಾರಿಗಾಗಿ ರಚಿತವಾಗಿದೆಯೊ ಅವರಿಂದ ಓದಿಸಿ ಪರೀಕ್ಷಿಸುವಾಗ, ಚಿತ್ರಗಳ ಉಪಯೋಗ ಮತ್ತು ಪರಿಣಾಮಗಳನ್ನು ತಿಳಿದುಕೊಳ್ಳುವಾಗ, ಅಕ್ಷರದ ಗಾತ್ರ, ಸಾಲಿನ ಉದ್ದ ಮುಂತಾದುವುಗಳ ಅನುಕೂಲ ಅನನುಕೂಲಗಳನ್ನು ಗ್ರಹಿಸುವಾಗ ಸಂಶೋಧನದ ನೆರವು ಬೇಕೇಬೇಕು.

ಇವುಗಳನ್ನೆಲ್ಲ ಗಮನಿಸಿದರೆ, ನಿರಾತಂಕವಾಗಿ ನಿರರ್ಗಳವಾಗಿ ಹರಿಯುವ ಸಾಮಾನ್ಯ ಸಾಹಿತ್ಯರಚನೆಗೂ, ವಯಸ್ಕರ ಶಿಕ್ಷಣ ಸಾಹಿತ್ಯರಚನೆಗೂ ಇರುವ ವ್ಯತ್ಯಾಸ ಗೊತ್ತಾಗುತ್ತದೆ. ಈ ಸಾಹಿತ್ಯರಚನೆ ಅಷ್ಟೇನೂ ಸುಲಭವಲ್ಲ, ಎಂಬುದೂ ಗೋಚರವಾಗುತ್ತದೆ. ಆದ್ದರಿಂದಲೇ ಸಾಮಾನ್ಯ ಲೇಖಕರಿಗೆ ಈ ರಂಗದಲ್ಲಿ ಶಿಕ್ಷಣ ಅಗತ್ಯ. ಅದಕ್ಕಾಗಿಯೆ ಅಂತರರಾಷ್ಟ್ರೀಯ, ರಾಷ್ಟ್ರೀಯ ಮತ್ತು ರಾಜ್ಯಮಟ್ಟಗಳಲ್ಲಿ ಲೇಖಕರಿಗೆ ಸಾಹಿತ್ಯರಚನಾಲಯಗಳನ್ನು ಏರ್ಪಡಿಸಲಾಗುತ್ತಿದೆ. ಮೈಸೂರು ಸಂಸ್ಥಾನದಲ್ಲಿಯೂ ಇದುವರೆಗೆ ಇಂಥ ನಾಲ್ಕು ಸಾಹಿತ್ಯರಚನಾಲಯಗಳು ಏರ್ಪಟ್ಟು ಸುಮಾರು ಅರವತ್ತಕ್ಕೂ ಹೆಚ್ಚು ಮಂದಿ ಲೇಖಕರು ತರಪೇತು ಪಡೆದಿದ್ದಾರೆ. ಕೇಂದ್ರ ಸರಕಾರದ ಶಿಕ್ಷಣ ವಿಭಾಗದವರೂ ರಾಷ್ಟ್ರದ ಬೇರೆ ಬೇರೆ ಭಾಗಗಳಲ್ಲಿ ಈ ರೀತಿಯ ಸಾಹಿತ್ಯರಚನಾಲಯಗಳನ್ನು ಏರ್ಪಡಿಸಲು ಸಹಾಯಮಾಡುತ್ತಿದ್ದಾರೆ.

ಹಾಗೆಯೆ ಲಕ್ನೊ ನಗರದಲ್ಲಿರುವ ಸಾಕ್ಷರತಾ ನಿಕೇತನ ಲೇಖಕರಿಗೆ ಶಿಕ್ಷಣ ನೀಡುವ ಕಾರ್ಯಕ್ರಮವನ್ನು ಅನೇಕ ವರುಷಗಳಿಂದ ನಡಸಿಕೊಂಡು ಬರುತ್ತಿದೆ. ವಯಸ್ಕರ ಶಿಕ್ಷಣಕಾರ್ಯದಲ್ಲಿ ತೊಡಗಿರುವ ಲೇಖಕರು ಭಾರತದ ನಾನಾ ಕಡೆಗಳಿಂದ ಬಂದು ಇಲ್ಲಿ ಸಾಹಿತ್ಯರಚನಾತಂತ್ರವನ್ನು ಅಭ್ಯಾಸಮಾಡುತ್ತಾರೆ.

ಅಲ್ಲದೆ, ಕೇಂದ್ರ ಸರಕಾರದವರು ಪ್ರತಿವರುಷವೂ ಸ್ಪರ್ಧೆನಡಸಿ, ಹೊಸದಾಗಿ ಅಕ್ಷರ ಕಲಿತ ವಯಸ್ಕರಿಗಾಗಿ ರಚಿತವಾದ ಅತ್ಯುತ್ತಮ ಕೃತಿಗಳಿಗೆ ಬಹುಮಾನಗಳನ್ನಿತ್ತು ಪ್ರೋತ್ಸಾಹಿಸುತ್ತಿದ್ದಾರೆ. ಈ ವ್ಯವಸ್ಥೆಯಿಂದಲೂ ವಯಸ್ಕರ ಶಿಕ್ಷಣ ಸಾಹಿತ್ಯ ಭಂಡಾರಕ್ಕೆ ಇದುವರೆಗೆ ಸುಮಾರು ಐವತ್ತು ಅಮೂಲ್ಯವಾದ ಕೃತಿರತ್ನಗಳು ಸೇರಿವೆ.

ಶಾಸ್ತ್ರೀಯವಾಗಿ ಈ ಸಾಹಿತ್ಯಸೃಷ್ಟಿಯಾಗಬೇಕಾದರೆ ಸುವ್ಯವಸ್ಥಿತವಾದ ಒಂದು ಪ್ರಕಟಣ ಸಂಸ್ಥೆ ಏರ್ಪಡಬೇಕು. ಅದರ ಕೆಲಸ ಸುಗಮವಾಗಿ, ಯಶಸ್ವಿಯಾಗಿ ನಡೆಯಲು ಅದಕ್ಕೆ ಸೇರಿದಂತೆ ಒಂದು ಸಂಶೋಧನ ಶಾಖೆ, ಗ್ರಾಮಾಂತರ ಪ್ರದೇಶಗಳಲ್ಲಿ ಸಂಚರಿಸಿ, ಓದುಗರೊಡನೆ ಸಂಪರ್ಕವಿಟ್ಟುಕೊಂಡು ಅವರಿಗೆ ಉಪಯುಕ್ತವಾದ

ರೀತಿಯಲ್ಲಿ ಸಾಹಿತ್ಯವನ್ನು ರಚಿಸಲು ಸೂಕ್ತವಾದ ವ್ಯವಸ್ಥೆ, ಅವಕಾಶ ಮುಂತಾದುವು ಗಳಿರಬೇಕು. ಆಗ ವಯಸ್ಕರ ಶಿಕ್ಷಣಕಾರ್ಯ ಇನ್ನೂ ಯಶಸ್ವಿಯಾಗಿ, ಪ್ರಭಾವ ಕಾರಿಯಾಗಿ, ಫಲಕಾರಿಯಾಗಿ ನಡೆಯುವುದರಲ್ಲಿ ಸಂದೇಹವಿಲ್ಲ.

ರಾ. ಸತ್ಯನಾರಾಯಣ

ಸಂಗೀತ

ಭಾರತೀಯ ಸಂಸ್ಕೃತಿ ಸರಸ್ವತಿಯ ಮಡಿಲನ್ನು ತನ್ನ ವಿಶಿಷ್ಟವೂ ಅಮೂಲ್ಯವೂ ಆಗಿರುವ ಕಾಣಿಕೆಗಳಿಂದ ಬಹುಕಾಲದಿಂದ ತುಂಬುತ್ತಿರುವ ಕನ್ನಡನಾಡು ಮತ್ತು ಕನ್ನಡನುಡಿ ತನ್ನ ಲಲಿತಕಲೆಗಳನ್ನು ಹೇಗೆ ಉಳಿಸಿ ಬೆಳೆಸಿಕೊಂಡಿದೆ ಎಂಬ ಅಭ್ಯಾಸವು ಮುಖ್ಯವೂ ಹೌದು, ಸಮಯೋಚಿತವೂ ಹೌದು. 'ಕರ್ಣಾಟಕ ಸಂಗೀತ'ವೆಂದು ಹೆಸರು ಬಂದು ಅದೇ ಸ್ಥಿರವಾಗಿ ನಿಲ್ಲಲು ಕರ್ಣಾಟಕವು ಹೇಗೆ ಕಾರಣವಾಗಿದೆ ಎಂಬುದನ್ನು ಬೇರೆಡೆಯಲ್ಲಿ ತೋರಿಸಿದ್ದೇನೆ. ಈ ಲೇಖನದಲ್ಲಿ ಸ್ವಾತಂತ್ರ್ಯಾನಂತರದ ಭಾರತದಲ್ಲಿ ಕನ್ನಡದ ಜನ ತಮ್ಮ ಸಂಗೀತವನ್ನು ಹೇಗೆ ಕಂಡು ನಡೆಸಿಕೊಂಡಿದ್ದಾರೆ ಎಂಬ ಸುಮಾರು ಕಾಲು ಶತಮಾನದ ಅವಧಿಯ ಸಾಧನಗಳನ್ನು ಮಾತ್ರ ವಿಹಂಗಮದೃಷ್ಟಿಯಿಂದ ವಿಮರ್ಶಿಸುವ ಪ್ರಯತ್ನವನ್ನು ಮಾಡಲಾಗುವುದು; ರವಿಕೋಟಿತೇಜಸ್ಸಿನ, ವರ್ಚಸ್ಸಿನ, ಕನ್ನಡ ಕಲೆಯ ಮಹಾದೇವಿಯ ಮುಗಿಲುಮುಟ್ಟಿ ಮುಂಬರುತ್ತಿರುವ ತೇರಿಗೆ ಈ ಸಣ್ಣ ಸೊಡರಿನ ಆರತಿ.

ನಮ್ಮ ತಲೆಮಾರಿನಲ್ಲಿಯೇ ನಡೆದ, ನಡೆಯುತ್ತಿರುವ ಘಟನೆಗಳನ್ನು ಅನಾಂತರಿಕ ವಿಮರ್ಶೆಯಿಂದ ರಾಷ್ಟ್ರದ ಚರಿತ್ರೆಯ ಚೌಕಟ್ಟಿನಲ್ಲಿ ಸಮಂಜಸವಾಗಿ ಅಳೆದು ಹೇಳುವುದು ಪ್ರಯಾಸಸಾಧ್ಯವಾದುದು; ಅದಕ್ಕೆ ಕಾಲದ ಕನಿಷ್ಠದೂರವಾದರೂ ಬೇಕು. ಆದರೆ ನಮ್ಮ ಕಣ್ಣಮುಂದೆ ನಡೆದುದನ್ನು, ನಡೆಯುತ್ತಿರುವುದನ್ನು ಕಂಡಹಾಗೆಯೇ, ಕಂಡಷ್ಟೇ ನಿಷ್ಪಾಕ್ಷಿಕವಾಗಿ ಬರೆದಿಡುವುದು ಚರಿತ್ರೆಯ ದೃಷ್ಟಿಯಿಂದ ಅತ್ಯಂತ ಆವಶ್ಯಕವಾದುದು; ಅಷ್ಟೇ ಅಲ್ಲ, ನಮ್ಮ ಸಮಸಾಮಯಿಕ ಸಂಕೀರ್ಣ ಜೀವನದ ಹಿನ್ನೆಲೆಯಲ್ಲಿ ಈ ಕಲೆ ಎತ್ತಸಾಗಿದೆ, ಈ ವಿಷಯದಲ್ಲಿ ನಮ್ಮ ಆಸೆ, ಆಕಾಂಕ್ಷೆಗಳೇನು, ಎಂಬುದನ್ನೂ ಆಗಾಗ್ಗೆ ಸ್ಮರಿಸಿಕೊಳ್ಳುತ್ತಿದ್ದರೆ, ಅದರ ಬೆಳವಣಿಗೆಯ ಕಡಿವಾಣ ಕೈಯಲ್ಲಿರುತ್ತದೆ— ಎಂದೇ ಈ ಲೇಖನ. ಹೇಳಬಹುದಾದುದನ್ನೆಲ್ಲ, ಹೇಳಬೇಕಾದುದನ್ನೆಲ್ಲಾ ಇಲ್ಲಿ ಹೇಳಿದ್ದೇನೆ ಎಂದೇನೂ ಇಲ್ಲ. ನನಗೆ ತಿಳಿಯದೆ, ಮರೆತು, ಬಿಟ್ಟುಹೋಗಿರುವುದು ಎಷ್ಟೋ ಇರಬಹುದು. ಹಾಗೆ ಬಿಟ್ಟುಹೋದುದಕ್ಕಾಗಿ ಕ್ಷಮೆಬೇಡಿಯೇ ಈ ಲೇಖನವನ್ನು ಪ್ರಾರಂಭಿಸುತ್ತಿದ್ದೇನೆ.

ಮೈಸೂರು ಸರ್ಕಾರವು ಸಂಗೀತಕಲೆಯ ಉನ್ನತಿಗೆ ಸಲ್ಲಿಸುತ್ತಿರುವ ಸೇವೆಯನ್ನು ಶೈಕ್ಷಣಿಕ ಹಾಗೂ ಸಾರ್ವಜನಿಕ ಕ್ಷೇತ್ರಗಳೆಂದು ವಿಂಗಡಿಸಬಹುದು. ಸಂಗೀತ ಶಿಕ್ಷಣ ವನ್ನು ವೈಜ್ಞಾನಿಕ ತಳಹದಿಯ ಮೇಲೆ ನಿಲ್ಲಿಸಲು ಪಠ್ಯಕ್ರಮ, ಬೋಧನಕ್ರಮ, ಪರೀಕ್ಷಾ ಪದ್ಧತಿ—ಈ ಮೂರರ ಮೂಲಕವೇ ಸಾಧಿಸಬೇಕಷ್ಟೆ. ಸಂಗೀತಶಿಕ್ಷಣವು ನಮ್ಮ ನಾಡಿನಲ್ಲಿ ಇನ್ನೂ ಬಹುವಾಗಿ ಮನೆಪಾಠಗಳಲ್ಲಿಯೋ ಸರ್ಕಾರೇತರ ಸಂಸ್ಥೆಗಳ ಲ್ಲಿಯೋ ನಡೆಯುತ್ತಿದೆ. ಆದುದರಿಂದ ಬೋಧನಕ್ರಮದಲ್ಲಿಯಾಗಲೀ ಗುಣದಲ್ಲಿ ಯಾಗಲೀ ಏಕರೂಪತೆಯನ್ನೂ, ಉತ್ಕೃಷ್ಟತೆಯನ್ನೂ ಸಾಧಿಸಲೆಳಸುವುದು ಅಸಂಭವವೇ. ಆದರೂ ಈ ಕೊರತೆಯನ್ನು ಎರಡು ವಿಧದಲ್ಲಿ ಸ್ವಲ್ಪಮಟ್ಟಿಗಾದರೂ ನಿವಾರಿಸಬಹುದು: (೧) ಶಿಕ್ಷಣಸಂಸ್ಥೆಗಳಲ್ಲಿ ಸಂಗೀತವನ್ನು ಹೆಚ್ಚುಹೆಚ್ಚಾಗಿ ಸೇರಿಸುವುದು, (೨) ಪಠ್ಯ ಕ್ರಮ ಮತ್ತು ಪರೀಕ್ಷಾ ಪದ್ಧತಿಗಳನ್ನು ಉತ್ತಮ ಶೈಕ್ಷಣಿಕ ತತ್ವಗಳನ್ನು ಸಂಗೀತ ಕಲೆಗೆ ವಿಶಿಷ್ಟವಾದ ಸಮಸ್ಯೆಗಳ ಚೌಕಟ್ಟಿನಲ್ಲಿ ಅನುಷ್ಠಾನಕ್ಕೆ ತರುವುದು.

ಸಂಗೀತಶಿಕ್ಷಣವನ್ನು ಹೆಚ್ಚುಹೆಚ್ಚಾಗಿ ಶಾಲೆಗಳಲ್ಲಿ ಐಚ್ಛಿಕವಿಷಯವಾಗಿ ಸೇರಿಸುವ ಪ್ರಯತ್ನವನ್ನೇನೋ ಸರ್ಕಾರವು ಮಾಡುತ್ತಿದೆ. ಆದರೆ ಶಾಲೆಯಲ್ಲಿ ಹೆಚ್ಚುಹೆಚ್ಚಾಗಿ ವಿದ್ಯಾರ್ಥಿಗಳು ಸಂಗೀತ ತರಗತಿಗಳಿಗೆ ಆಕರ್ಷಿತರಾಗಬೇಕಾದರೆ ಸಂಗೀತಶಿಕ್ಷಕರ ದಕ್ಷತೆಯು ಹೆಚ್ಚಬೇಕು, ಪಠ್ಯವಿಷಯವು ಆಕರ್ಷಕವಾಗಿರಬೇಕು. ಉಪಾಧ್ಯಾಯ–ವಿದ್ಯಾರ್ಥಿ ಈ ಅನುಪಾತವು ಹೆಚ್ಚಬೇಕು ಎಂದರೆ ದೊಡ್ಡಿಯಲ್ಲಿ ದನಗಳನ್ನೆಂಬಂತೆ, ಹಿಗ್ಗಿ ಹರಿಯಲೆಳಸುವ ಕೊಠಡಿಗಳಲ್ಲಿ ಉತ್ತಮ, ಮಧ್ಯಮ, ಅಧಮ ವಿದ್ಯಾರ್ಥಿಗಳನ್ನೆಲ್ಲಾ ಒಟ್ಟಿಗೆ ತುರುಕಿ ಅವರಿಂದ ಸಾಮೂಹಿಕವಾಗಿ 'ಸಂಗೀತ'ವನ್ನು ಕಿರುಚಿಸಿ ತೃಪ್ತಿಪಟ್ಟುಕೊಳ್ಳುವುದು ತಗ್ಗಬೇಕು. ಅಂಕಗಳನ್ನು ಪಡೆಯುವುದು ಸುಲಭ ವೆಂಬ ಒಂದೇ ಕಾರಣಕ್ಕಾಗಿ, ಯಾವ ಅರ್ಹತೆಯೂ ಇಲ್ಲದೆ ವಿದ್ಯಾರ್ಥಿಗಳು ಸಂಗೀತ ವನ್ನು ಐಚ್ಛಿಕವಿಷಯವಾಗಿ ತೆಗೆದುಕೊಳ್ಳುವುದು ನಿಲ್ಲಬೇಕು. ಸಂಗೀತ ಶಿಕ್ಷಕರಿಗೆ ಅರ್ಹತೆಯನ್ನು ಹೆಚ್ಚಿಸಿ, ವೈಜ್ಞಾನಿಕವಾಗಿ ತರಪೇತುಕೊಡಿಸಿ, ಅವರಿಗೆ ಆಕರ್ಷಕವಾದ ವೇತನಗಳನ್ನು ಕೊಟ್ಟು ಪ್ರತಿಭೆಯುಳ್ಳ–ಕಡೆಯಪಕ್ಷ ಆಸಕ್ತಿಯುಳ್ಳ–ವಿದ್ಯಾರ್ಥಿಗಳನ್ನು ಒದಗಿಸುವ ಪ್ರಯತ್ನಮಾಡಿದರೆ, ಪ್ರತಿಭಾವಂತರಾದ ನಮ್ಮ ಹುಡುಗರಿಗೂ ಸಂಗೀತದ ರುಚಿ, ಆಸೆಗಳನ್ನು ಹುಟ್ಟಿಸಿದರೆ, ಸಂಗೀತವು ಕೇವಲ ಹೆಣ್ಣುಮಕ್ಕಳ 'ಹಾಡಿನ ಕ್ಲಾಸ್' ಆಗಿರುವುದು ಬಿಟ್ಟು ಸಂಗೀತವಾಗಿ ಉಳಿದೀತು. ಸರ್ಕಾರವು ಬೇಕಾದಷ್ಟು ಹಣವನ್ನು ಸಂಗೀತಶಿಕ್ಷಣಕ್ಕಾಗಿ ವ್ಯಯಮಾಡುತ್ತಿದೆ. ಆದರೂ ಶಾಲಾಕಾಲೇಜುಗಳಿಂದ ಇತರ ವಿಷಯಗಳಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳು ಹೊರಬಿದ್ದು ತಮ್ಮ ಕ್ಷೇತ್ರಗಳಲ್ಲಿ ಗಣ್ಯಸೇವೆ ಸಲ್ಲಿಸಿದಂತೆ ಸಂಗೀತದಿಂದ ಒಂದೇ ವಿದ್ಯಾರ್ಥಿಯೂ ಸಂಗೀತದಲ್ಲಿ ಹಾಗೆ ಹೊರಬರಲಿಲ್ಲವೆಂಬುದು ಇಲ್ಲಿ ಚಿಂತ್ಯವಾಗಿದೆ. ಹೀಗಾಗಲು, ಮತ್ತು ನಮ್ಮ ವಿದ್ಯಾರ್ಥಿ ಗಳು 'ಬೀಟ್ಲ್' ಸಂಗೀತ, 'ಸಿಲೋನ್ ರೇಡಿಯೋ' ಸಂಗೀತ, 'ಆರ್ಕೆಸ್ಟ್ರಾ'ಗಳೆಡೆಗೆ ಹೆಚ್ಚುಹೆಚ್ಚಾಗಿ ತಿರುಗುವುದರ ಬದಲು, ಶಾಸ್ತ್ರೀಯ ಸಂಗೀತದಲ್ಲಿ ಆಳವಾದ ಅಭಿರುಚಿ

ಬೆಳೆಸಿಕೊಳ್ಳಲು ಸಾಧಕವಾಗಲು, ಶಾಸ್ತ್ರೀಯ ಸಂಗೀತಕ್ಕೆ ಪ್ರೇರಕವಾದ, ಅಶಾಸ್ತ್ರೀಯ ವಲ್ಲದ, ಆಕರ್ಷಕವಾದ, ಸುಗಮಸಂಗೀತದ ಮಾದರಿಯ ಸಾಮೂಹಿಕ ಸಂಗೀತವನ್ನು ನಮ್ಮ ಶಾಲಾಕಾಲೇಜುಗಳಲ್ಲಿ ಮಕ್ಕಳಿಗೆ ಕಲಿಸಬೇಕು. ವ್ಯಾಯಾಮದ ತರಗತಿ ಗಳನ್ನು ಕಡ್ಡಾಯಗೊಳಿಸಿದ ನಮ್ಮ ಸರ್ಕಾರವು ಈ ದಿಕ್ಕಿನಲ್ಲಿ ಏನನ್ನೂ ಮಾಡದಿರುವುದು ಯೋಚನಾಪರರಾದ ಶಿಕ್ಷಣವೇತ್ತರನ್ನು ವ್ಯಸನಗೊಳಿಸಿದೆ. ಇಂತಹ ಸಾಮೂಹಿಕ ಸಂಗೀತವನ್ನು ಕುರಿತು ಇಡೀ ದೇಶದಲ್ಲಿಯೇ ಮೊದಲಬಾರಿಗೆ ಒಂದು ಅಖಿಲ ಭಾರತ ಸಮ್ಮೇಳನವನ್ನು ಮೈಸೂರಿನಲ್ಲಿ ಒಂದು ದಶಕದ ಹಿಂದೆ ನಡೆಸಲಾಯಿತು. ಶಿಕ್ಷಣ, ಮನೋವಿಜ್ಞಾನ, ಸಾಹಿತ್ಯ, ಸಂಗೀತಗಳಲ್ಲಿ ದೇಶದಲ್ಲಿಯೇ ಅತ್ಯಂತ ಗಣ್ಯರಾದ ಪರಿಣತರು ಇದರಲ್ಲಿ ಭಾಗವಹಿಸಿದ್ದರು. ಈ ಸಮ್ಮೇಳನದಲ್ಲಿ ಫಲಿತಾಂಶಗಳನ್ನೂ ಸರ್ಕಾರಕ್ಕೆ ಕಳುಹಿಸಿಕೊಡಲಾಯಿತು.

ಮೈಸೂರು ಸರ್ಕಾರವು ಸಂಗೀತ ವಿದ್ವಾಂಸರಿಗೆ ಕೆಲವು ರೀತಿಯಲ್ಲಿ ಸಹಾಯ ಮಾಡುತ್ತಿದೆ: ವೃದ್ಧರೂ ಸ್ವಂತಸಂಪಾದನೆಯಿಂದ ತಮ್ಮ ಜೀವನವನ್ನು ನಡೆಸಿ ಕೊಳ್ಳಲು ಅಶಕ್ತರೂ ಅನಾಥರೂ ಆಗಿರುವ ಸಂಗೀತವಿದ್ವಾಂಸರಿಗೆ ವೇತನಗಳನ್ನು ಕೊಡುವ ಯೋಜನೆಯೊಂದನ್ನು ಹಾಕಿಕೊಂಡಿದೆ. ದಸರಾ ಸಾಂಸ್ಕೃತಿಕ ಕಾರ್ಯಕ್ರಮಗಳಿ ಗಾಗಿ ಸುಮಾರು ೮೦ ಸಾವಿರ ರೂಪಾಯಿಗಳವರೆಗೂ ನಮ್ಮ ಸರ್ಕಾರವು ವೆಚ್ಚಮಾಡು ತ್ತದೆ. ಈಚೆಗೆ ಉತ್ತಮ ಸಂಗೀತ ಕಲಾವಿದರನ್ನೂ ನವರಾತ್ರಿಯ ನಾಡಹಬ್ಬದ ಸಂದರ್ಭದಲ್ಲಿ ಸನ್ಮಾನಿಸುವ ಸತ್ಸಂಪ್ರದಾಯವನ್ನು ನಮ್ಮ ಸರ್ಕಾರವು ಪ್ರಾರಂಭಿಸಿದೆ. ಇದು ಅನುಕರಣೀಯವೂ ಅಭಿನಂದನೀಯವೂ ಹೌದು. ಆದರೆ ಸರ್ಕಾರಕ್ಕೆ ಸದುದ್ದೇಶವು ಮಾತ್ರವಿದ್ದರೆ ಸಾಲದು. ಅದು ಫಲಿಸಿ ಸಂಗೀತಕಲೆಗೆ, ಸಂಗೀತಕಲೆಗಾರರಿಗೆ ಉಪಯೋಗವಾಗಬೇಕು. ಹಣವನ್ನು ಮಂಜೂರುಮಾಡಿದುದರಿಂದ, ಸಮಿತಿಗಳನ್ನು ಏರ್ಪಡಿಸಿದುದರಿಂದ ತನ್ನ ಕೆಲಸವು ಮುಗಿಯಿತೆಂದು ಆಡಳಿತವು ಕೈಕಟ್ಟಿ ಕುಳ್ಳಿರ ಬಾರದು; ಸರಿಯಾದ, ನಿಷ್ಪಕ್ಷಪಾತವಾದ ರೀತಿಯಲ್ಲಿ ತನ್ನ ಉದ್ದೇಶ, ಯೋಜನೆಗಳು ಕೈಗೂಡುತ್ತಿವೆಯೇ ಎಂಬ ಉಸ್ತುವಾರಿಯ ಜವಾಬ್ದಾರಿಯನ್ನೂ ಅದು ಹೊತ್ತು ಕೊಳ್ಳಬೇಕು.

ಸರ್ಕಾರವು ಸ್ಥಾಪಿಸಿರುವ ಮತ್ತೊಂದು ಸಂಸ್ಥೆಯೆಂದರೆ ರಾಜ್ಯಸಂಗೀತನಾಟಕ ಅಕಾಡಮಿ.

ಕಲಾಕ್ಷೇತ್ರದಲ್ಲಿ ಜ್ಞಾನವೃದ್ಧರೂ ವಯೋವೃದ್ಧರೂ ಆಗಿರುವವರಿಗೆ ಅಕಾಡಮಿಯು— ಇತರ ಸೋದರ ಅಕಾಡಮಿಗಳಂತೆ—ಪ್ರತಿವರ್ಷವೂ ಸನ್ಮಾನಗಳನ್ನು ನೀಡುತ್ತಿದೆ. ಕಲೆಗೆ ಸರ್ಕಾರವು ನೀಡುತ್ತಿರುವ ಪ್ರೋತ್ಸಾಹಗಳಲ್ಲಿ ಇದು ಗಣ್ಯವಾದುದು. ರಾಜರುಗಳ ಕಾಲದಲ್ಲಾದರೆ ಅವರ ಹಿರಿಯ ಜೀವಮಾನದಲ್ಲಿ ಒಮ್ಮೆ ಒಂದು ಶಾಲು ಹೊದಿಸಿ ಒಂದು ಮಿಶ್ರಲೋಹದ ವಿಗ್ರಹವನ್ನೂ ಸಾವಿರ ರೂಪಾಯಿಗಳ ಥೈಲಿಯನ್ನೂ ಕೊಟ್ಟು ತೃಪ್ತಿ ಯಿಂದ ಕೈಕಟ್ಟಿಕೊಳ್ಳುತ್ತಿರಲಿಲ್ಲ; ಅವರಿಗೆ ಅಶನ, ವಸನ ವಸತಿಗಳನ್ನೂ ಪ್ರೋತ್ಸಾಹ

ಸ್ಫೂರ್ತಿಯನ್ನೂ ಆಜೀವವೂ ನೀಡುತ್ತಿದ್ದರು. ಆದರೆ ಇದು ಪ್ರಜೆಗಳೇ ಆಡಳಿತವನ್ನು ನಡೆಸುವ ಕಾಲ; ಆದುದರಿಂದ ಪ್ರಜೆಗಳೇ ರಾಜರು ಮಾಡುತ್ತಿದ್ದ ಕೆಲಸವನ್ನು ವಹಿಸಿಕೊಳ್ಳಬೇಕು—ಎಂದು ರಾಜಕಾರಣಿಗಳು ಉಪದೇಶ ನೀಡುತ್ತಾರೆ. ಹೊಟ್ಟೆ, ಬಟ್ಟೆಗಿಲ್ಲದ ಪ್ರಜೆಗಳು ಸಂಸಾರವನ್ನು ಮಾನದಿಂದ ಸಾಗಿಸಿಕೊಂಡು ಹೋಗಲು ಅನಿವಾರ್ಯವಾದಷ್ಟು ಸಂಪಾದನೆಯಲ್ಲೇ ತಮ್ಮ ಜೀವಿತವನ್ನು ಕಳೆಯುತ್ತಿರುವಾಗ ಕಲೆಯನ್ನು ಪ್ರೋತ್ಸಾಹಿಸುವ ಆಸಕ್ತಿ, ಸಾಮರ್ಥ್ಯಗಳು ಹೇಗೆ ಬಂದಾವು! ಪ್ರಜಾಪ್ರಭುತ್ವದ ಸರ್ಕಾರವಾದರೆ ಕಲಾವಿದರನ್ನು ಪೋಷಿಸಲು ಕಾನೂನು ಹೇಗೆ ಅಡ್ಡ ಬಂದೀತು ಎಂದು ಮುಂತಾದ ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರಗಳನ್ನು ಅವರು ಕೊಡುವುದಿಲ್ಲ.

ಇದು ಹೇಗೇ ಇರಲಿ, ಸಂಗೀತ ನಾಟಕ ಅಕಾಡಮಿಯು ತನಗೆ ಬರುವ ಅಲ್ಪ ಧನಸಹಾಯದಲ್ಲಿಯೇ ಸಂತೋಷಪಡಬಹುದಾದಷ್ಟು ಕೆಲಸಮಾಡಿದೆ. ಹೀಗೆ ಅದು ಬಹು ಯಶಸ್ವಿಯಾದ ಸಂಗೀತಸಮ್ಮೇಳನವನ್ನು ನಡೆಸಿ ಕನ್ನಡನಾಡಿನ ವಿದ್ವಾಂಸರು ಕಲೆಯಲ್ಲಿ, ಶಾಸ್ತ್ರದಲ್ಲಿ ಯಾರಿಗೂ ಕಡಿಮೆಯಿಲ್ಲ ಎಂದಷ್ಟೇ ಅಲ್ಲ, ಮುಂದೆಯೇ ಇದ್ದಾರೆ ಎಂದು ತೋರಿಸಿಕೊಟ್ಟಿತು; ಬಹುಕಾಲ ಇಟ್ಟೂ ಅಭ್ಯಾಸಮಾಡಬಹುದಾದ ವಿದ್ವತ್‌ಲೇಖನಸಂಗ್ರಹವನ್ನು ಹೊರತಂದಿತು. ಇಂತಹ ಸಮ್ಮೇಳನಗಳನ್ನು ಅಕಾಡಮಿಯು ಪ್ರತಿವರ್ಷವೂ ನಡೆಸಬಾರದೆ, ಎಂಬ ಆಸೆ ಸಂಗೀತ ವಿದ್ವಾಂಸರಲ್ಲಿ ಮೂಡಿದೆ. ಇದೇ ರೀತಿಯಲ್ಲಿ ಅಕಾಡಮಿಯು ಶ್ರೀ ಪುರಂದರದಾಸರ ಚತುಃಶತಮಾನೋತ್ಸವ, ತ್ಯಾಗರಾಜರ ದ್ವಿಶತಮಾನೋತ್ಸವಗಳನ್ನು ವೈಭವದಿಂದ ನಡೆಸಿ ವಿದ್ವತ್‌ಪೂರ್ಣ ಲೇಖನಗಳನ್ನುಳ್ಳ ಕಿರುಹೊತ್ತಿಗೆಗಳನ್ನು ಹೊರತಂದಿದೆ; ತ್ಯಾಗರಾಜರ ಜೀವಿತದ ಚಿತ್ರಗಳ, ಅವರ ಕೃತಿಸಂಗ್ರಹಗಳ ಪ್ರದರ್ಶನವನ್ನೇರ್ಪಡಿಸಿದೆ. ಆಗಾಗ ವಿದ್ವಾಂಸರಿಂದ ಸಂಗೀತ, ನಾಟಕ, ನಾಟ್ಯಗಳ ಪ್ರದರ್ಶನಗಳನ್ನೂ ವಿಚಾರ ಗೋಷ್ಠಿಗಳನ್ನೂ ನಡೆಸಿದೆ. ಪ್ರತಿಭಾವಂತರಾದ ವಿದ್ಯಾರ್ಥಿಗಳಿಗೆ ವೇತನಗಳನ್ನು ಕೊಡುತ್ತಿದೆ. ಸಾಂಸ್ಕೃತಿಕ ವಿನಿಮಯ ಕಾರ್ಯಕ್ರಮದಲ್ಲಿ ಕನ್ನಡನಾಡಿನ ಕಲಾವಿದರನ್ನು ಹೊರಪ್ರಾಂತಗಳಿಗೆ ಕಳುಹಿಸಿ ಹೊರಗಿನವರ ಪ್ರದರ್ಶನಗಳನ್ನು ಕನ್ನಡನಾಡಿನ ವಿವಿಧ ಭಾಗಗಳಲ್ಲಿ ಏರ್ಪಡಿಸಿದೆ. ವಿದ್ವಾಂಸರು ಬರೆಯುವ ಪುಸ್ತಕಗಳಿಗೆ ಧನಸಹಾಯವನ್ನೋ ಸಂಭಾವನೆಯನ್ನೋ ಕೊಟ್ಟು ಪುರಸ್ಕರಿಸಿದೆ; ಸಂಗೀತನಾಟಕ ನೃತ್ಯಸಂಸ್ಥೆಗಳಿಗೆ ಆಗಾಗ ಉಪಕರಣಗಳಿಗಾಗಿ, ನಿರ್ದಿಷ್ಟ ಕಾರ್ಯಕ್ರಮಗಳಿಗಾಗಿ ಕೈಲಾದಷ್ಟು ಧನ ಸಹಾಯ ನೀಡುತ್ತಿದೆ.

ಕಳೆದ ಇಪ್ಪತ್ತೈದು ವರ್ಷಗಳಲ್ಲಿ ಕನ್ನಡನಾಡಿನ ಸಂಗೀತದ ಹಲವು ಸಂಘಸಂಸ್ಥೆಗಳು ತಲೆಯೆತ್ತಿ ಗಣನೀಯ ಸೇವೆಯನ್ನು ಸಲ್ಲಿಸಿವೆ. ಇವುಗಳು ಮುಖ್ಯವಾಗಿ ಮೈಸೂರು ಬೆಂಗಳೂರುಗಳಲ್ಲಿಯೇ ಹೆಚ್ಚಾಗಿ ನೆಲೆಸಿವೆ. ಹೀಗೆ ಮೈಸೂರಿನಲ್ಲಿ ವರಲಕ್ಷ್ಮೀ ಅಕಾಡಮಿಯು ಇಡೀ ದೇಶದಲ್ಲೇ ಮೊದಲಬಾರಿಗೆ ಸಂಗೀತ ಸಮ್ಮೇಳನವನ್ನು ನಡೆಸಿತು. ಕನ್ನಡನಾಡಿನಲ್ಲಿ ಏಕೈಕವಾದ, ನಾಡಿನಲ್ಲೇ ಹಿರಿಯದಾದ

ಸಂಗೀತನೃತ್ಯಗಳ ಹಸ್ತಪ್ರತಿಗಳ ಭಂಡಾರವನ್ನೂ, ಏಕೈಕವಾದ ಸಂಶೋಧನಾ ಸಮಿತಿಯನ್ನೂ ಪಡೆದಿದೆ. ಹಲವಾರು ಸಂಶೋಧನಾ ಗ್ರಂಥಗಳನ್ನೂ, ಸಂಪಾದಿತ ಶಾಸ್ತ್ರಗ್ರಂಥಗಳನ್ನೂ ದೇಶವಿದೇಶಗಳ ವಿದ್ವಜ್ಜನರಿಗೆ ಮೆಚ್ಚಿಕೆಯೆನಿಸಿ ಹೊರತಂದಿದೆ. ಗಾನವಿಶಾರದ ಬಿಡಾರಂ ಕೃಷ್ಣಪ್ಪನವರ ಪ್ರಸನ್ನ ಸೀತಾರಾಮಮಂದಿರವು ಸಂಗೀತ ಸಮ್ಮೇಳನಗಳನ್ನೂ, ರಾಮೋತ್ಸವ ಸಂಗೀತಕಚೇರಿಗಳನ್ನೂ ನಡೆಸಿ ಅನುಪಮ ಸೇವೆ ಸಲ್ಲಿಸುತ್ತಿದೆ. ಸಂಗೀತ ಕಲಾಭಿವರ್ಧಿನೀ ಸಭೆಯು ಮೈಸೂರಿನ ಸಂಗೀತವಿದ್ವಾಂಸರ ಸೇವೆಗೆಂದೇ ಕಂಕಣತೊಟ್ಟು ಹುಟ್ಟಿದ ಅಪೂರ್ವಸಂಸ್ಥೆ. ಸ್ಥಳೀಯ ವಿದ್ವಾಂಸರ ಸಂಗೀತ ಕಚೇರಿಗಳನ್ನು ನಡೆಸುವುದೇ ಅಲ್ಲದೆ ಕನ್ನಡನಾಡಿನ ಕಲೆಯ ಕಣ್ಣುಗಳಾದ ವೀಣೆ ಶೇಷಣ್ಣನವರ, ಮೈಸೂರು ಸದಾಶಿವರಾಯರ ಕೃತಿಸಂಗ್ರಹಗಳನ್ನೂ ಅಭಿಮಾನಾಸ್ಪದ ರೀತಿಯಲ್ಲಿ ಹೊರತಂದಿದೆ. ಶ್ರೀ ಪುರಂದರದಾಸತ್ಯಾಗಬ್ರಹ್ಮೋತ್ಸವ ಸಮಿತಿಯು ಮೈಸೂರಿನ ಎಲ್ಲಾ ವಿದ್ವಾಂಸರೂ ಒಟ್ಟುಗೂಡಿ ನಡೆಸುತ್ತಿರುವ, ದೇಶದಲ್ಲಿ ಅತ್ಯಂತ ವಿಶಿಷ್ಟರೀತಿಯ ಸಂಸ್ಥೆ. ನಾದಬ್ರಹ್ಮ ಸಂಗೀತಸಭೆಯು ಪ್ರತಿತಿಂಗಳೂ ನಮ್ಮ ಜನರಿಗೆ ಸಂಗೀತದ ರಸದೌತಣವನ್ನು ನೀಡುತ್ತಿರುವ ಉನ್ನತಮಟ್ಟದ ಸಂಸ್ಥೆ. ಉನ್ನತ ಮಟ್ಟದ ಸಂಗೀತಶಿಕ್ಷಣಕ್ಕೆಂದೇ ಮೀಸಲಾದ ಅಯ್ಯನಾರ್ ಕಲಾಶಾಲೆ, ಸರಸ್ವತೀ ಗಾನಕಲಾಮಂದಿರ ಮುಂತಾದ ಹಲವು ಸಂಗೀತಸಂಸ್ಥೆಗಳು ಮೈಸೂರು ಸಂಗೀತತೌರು ಎಂಬ ಮಾತನ್ನು ಇನ್ನೂ ಸಾರ್ಥಕಗೊಳಿಸುತ್ತಿವೆ.

ಈಚೆಗೆ ಮೈಸೂರು ವಿಶ್ವವಿದ್ಯಾನಿಲಯವು ಸ್ಥಾಪಿಸಿ ನಡೆಸುತ್ತಿರುವ ಸಂಗೀತ ನೃತ್ಯಕಾಲೇಜು ಈ ಸಂದರ್ಭದಲ್ಲಿ ಉಲ್ಲೇಖನೀಯವಾಗಿದೆ. ಉತ್ತಮ ಉಪಾಧ್ಯಾಯ ವರ್ಗ ಪಡೆದುಕೊಂಡಿರುವ ಈ ಸಂಸ್ಥೆಗೆ ಒಳ್ಳೆಯ ಭವಿಷ್ಯವಿದೆ.

ಬೆಂಗಳೂರಿನಲ್ಲಿ ಗಾಯನಸಮಾಜವು ಅತ್ಯಂತ ಹಿರಿಯ ಸಂಸ್ಥೆ. ಅದು ಅತ್ಯುತ್ತಮ ಮಾಸಿಕ ಸಂಗೀತಕಚೇರಿಗಳನ್ನೂ ಆಗಾಗ ಬೋಧಪ್ರದ ಕಾರ್ಯಕ್ರಮ ಗಳನ್ನೂ ನಡೆಸಿ ಈಚೆಗೆ ಸುವರ್ಣಮಹೋತ್ಸವವನ್ನು ಆಚರಿಸಿಕೊಂಡಿದೆ. ಬೆಂಗಳೂರು ಸಂಗೀತಸಭಾ, ಮಲ್ಲೇಶ್ವರ ಸಂಗೀತಸಭಾ ಮುಂತಾದ ಕೆಲವು ಸಂಸ್ಥೆಗಳು ಜನತೆಗೆ ಉತ್ತಮ ಸಂಗೀತವನ್ನು ಒದಗಿಸುತ್ತಿವೆ. ಬೆಂಗಳೂರಿನಲ್ಲಿ ಶಂಕರಜಯಂತಿಯಲ್ಲೂ ರಾಮೋತ್ಸವದಲ್ಲೂ ಶೇಷಾದ್ರಿಪುರ, ಚಾಮರಾಜಪೇಟೆಗಳಲ್ಲಿ ಶ್ರೇಷ್ಠಮಟ್ಟದ ಸಂಗೀತ ಕಚೇರಿಗಳು ಏರ್ಪಡುತ್ತವೆ. ಅಯ್ಯನಾರ್ ಕಾಲೇಜು, ವಿಜಯಾಕಾಲೇಜು ಮುಂತಾದ ಹಲವು ಸಂಗೀತ ಶಿಕ್ಷಣಸಂಸ್ಥೆಗಳು ಉತ್ತಮಮಟ್ಟದ ವಿದ್ಯಾರ್ಥಿಗಳನ್ನು ತಯಾರು ಮಾಡುತ್ತಿವೆ.

ಮೈಸೂರು ಸಂಗೀತನಾಟಕ ಅಕಾಡಮಿಯು ಒಂದು ಆಕರ್ಷಕವಾದ ಸಂಗೀತ ಸಮ್ಮೇಳನವನ್ನು ನಡೆಸಿದುದನ್ನೂ ವರಲಕ್ಷ್ಮೀ ಅಕಾಡಮಿಯು ಅಖಿಲ ಭಾರತ ಸಾಮೂಹಿಕ ಸಂಗೀತ ಸೆಮಿನಾರನ್ನೂ ನಡೆಸಿದುದನ್ನು ಈಗಾಗಲೇ ಸೂಚಿಸಿದೆ. ಇದಲ್ಲದೆ ಮೈಸೂರು ಸಂಸ್ಥಾನದ ಸಂಗೀತ ಪರಿಷತ್ತು ಕೆಲವು ವಾರ್ಷಿಕ ಸಂಗೀತ

ಸಮ್ಮೇಳನಗಳನ್ನು ಉತ್ತಮ ರೀತಿಯಲ್ಲಿ ನಡೆಸಿತು. ಕೀರ್ತಿಶೇಷ ಮೈಸೂರು ವಾಸುದೇವಾಚಾರ್ಯರ ಅಧ್ಯಕ್ಷತೆಯಲ್ಲಿ ಕೀರ್ತಿಶೇಷ ಮೈಸೂರು ಟಿ. ಚೌಡಯ್ಯನವರು ಬೆಂಗಳೂರಿನಲ್ಲಿ ೧೯೫೨ರಲ್ಲಿ ಒಂದು ಸಂಗೀತಸಮ್ಮೇಳನವನ್ನು ನಡೆಸಿದ್ದರು. ಈಚೆಗೆ ಮೈಸೂರಿನಲ್ಲಿ ಪ್ರಸನ್ನ ಸೀತಾರಾಮಮಂದಿರವು ವಾರ್ಷಿಕ ಸಂಗೀತಸಮ್ಮೇಳನಗಳನ್ನು ಯಶಸ್ವಿಯಾಗಿ ನಡೆಸಿ ಅಧ್ಯಕ್ಷತೆ ವಹಿಸಿದ ಹಿರಿಯ ವಿದ್ವಾಂಸರನೇಕರಿಗೆ 'ಗಾನಕಲಾ ಸಿಂಧು' ಎಂಬ ಬಿರುದನ್ನು ಕೊಟ್ಟು ಸನ್ಮಾನಿಸಿತು. ಕನ್ನಡನಾಡಿನ ದುರ್ದೈವದಿಂದ ಸಂಗೀತಸಮ್ಮೇಳನಗಳು ನಿಂತುಬಿಟ್ಟವೆ. ಈ ಎಲ್ಲಾ ಸಮ್ಮೇಳನಗಳಲ್ಲಿಯು ಶಾಸ್ತ್ರ ಜಿಜ್ಞಾಸೆಯು ಅಭಿಮಾನಾಸ್ಪದವಾಗಿಯೇ ನಡೆದು ಕನ್ನಡಿಗರು ಸಂಗೀತಕಲೆ ಶಾಸ್ತ್ರ ಗಳಲ್ಲಿ ಕೀಳೆಂದು ಮುರಿಯುವವರಿಗೆ ಭ್ರಮನಿರಸನವನ್ನುಂಟುಮಾಡಿತು. ಸಂಗೀತ ಸಮ್ಮೇಳನಗಳು ಮುಖ್ಯವಾಗಿ ಶಾಸ್ತ್ರಜಿಜ್ಞಾಸೆ, ಪ್ರಾಯೋಗಿಕ ವಿಷಯಗಳ ವಿವೇಚನೆ ಗೆಂದೇ ನಡೆದರೂ ವಿದ್ವಾಂಸರುಗಳಲ್ಲಿಯೂ, ರಸಿಕರಲ್ಲಿಯೂ, ಸ್ವಾಭಿಮಾನ, ಭಾವೈಕ್ಯತೆ, ಜಾಗೃತಿಗಳನ್ನು ಮೂಡಿಸುವುದು ಅವುಗಳ ಮೂಲವಾದ ಉದ್ದೇಶ. ಆದುದರಿಂದ ಪುನಃ ಸಮ್ಮೇಳನಗಳನ್ನು ಸಂಸ್ಥಾನದ ಮಟ್ಟದಲ್ಲಿ ನಡೆಸುವುದು ನಮ್ಮ ಸಂಗೀತದ ಬೆಳವಣಿಗೆಯ ದೃಷ್ಟಿಯಿಂದ ಕೂಡಲೇ ಆಗಬೇಕಾದ ಕೆಲಸ.

ಕಳೆದ ಇಪ್ಪತ್ತೈದು ವರ್ಷಗಳಲ್ಲಿ ಕನ್ನಡನಾಡಿನಲ್ಲಿ ಸಂಗೀತವನ್ನು ಕುರಿತು ಹೊರಬಂದ ಪುಸ್ತಕಗಳೂ, ಲೇಖನಗಳೂ ಕಡಿಮೆಯೇನಿಲ್ಲ. ವರಲಕ್ಷ್ಮೀ ಅಕಾಡಮಿಯೇ ಅಂತರರಾಷ್ಟ್ರೀಯ ಪ್ರಚಾರ, ಮೆಚ್ಚಿಕೆಗಳನ್ನೂ ಗಳಿಸಿದ ಹಲವು ಸಂಶೋಧನಾ ಗ್ರಂಥಗಳನ್ನೂ, ಶಾಸ್ತ್ರಗ್ರಂಥಗಳನ್ನೂ ಹೊರತಂದಿದೆ; ಸಂಗೀತ, ನಾಟ್ಯಗಳನ್ನು ಕುರಿತ ಹಲವು ಅಮೂಲ್ಯ ಪ್ರಾಚೀನ ಹಸ್ತಪ್ರತಿಗಳನ್ನು ವಿಮರ್ಶಾತ್ಮಕವಾಗಿ ಸಂಪಾದಿಸಿ, ವಿಮರ್ಶಾತ್ಮಕ ಮೌಲ್ಯನಿರ್ಣಯಗಳ ಮುನ್ನುಡಿಗಳೊಡನೆ ಅಚ್ಚಿಗೆ ಸಿದ್ಧ ಪಡಿಸಿ, ನೆರವಿಗೆ ಕೇಂದ್ರ ಸಂಗೀತನಾಟಕ ಅಕಾಡಮಿಯೊಡನೆ ವ್ಯವಹರಿಸುತ್ತಿದೆ. ಈ ಸಂಸ್ಥೆಯು ಸಿದ್ಧಪಡಿಸಿರುವ ಗ್ರಂಥಗಳನ್ನು ಹೊರತಂದಾಗ ಕನ್ನಡನಾಡು ಭಾರತದಲ್ಲಿ ಪ್ರಥಮ ಪಂಙ್ಕ್ತಿಗೆ ಸೇರುತ್ತದೆ. ಮೈಸೂರಿನ ಸಂಗೀತಕಲಾಭಿವರ್ಧಿನೀ ಸಭೆಯೂ, ರಾಜ್ಯ ಸಂಗೀತನಾಟಕ ಅಕಾಡಮಿಯೂ ಹೊರತಂದಿರುವ ಅಮೂಲ್ಯ ಪುಸ್ತಕಗಳನ್ನು ಈಗಾಗಲೇ ಸೂಚಿಸಿದೆ. ಸರ್ವಶ್ರೀಗಳಾದ ಎಲ್. ರಾಜಾರಾಯರು, ಆರ್. ಆರ್. ಕೇಶವಮೂರ್ತಿಯವರು, ಶೇಷಾದ್ರಿ ಗವಾಯ್‌ರವರು, ರಾಮರತ್ನಂರವರು, ಸಂಪತ್ಕು ಮಾರನ್‌ರವರು, ಕುಮಾರಿ ಗಾಯತ್ರೀ ರಾಜಾಪೂರ್‌ರವರು ಮೊದಲಾದ ಹಲವಾರು ವಿದ್ವಾಂಸರು ಕನ್ನಡದಲ್ಲಿ ಸಂಗೀತಶಾಸ್ತ್ರಗ್ರಂಥಗಳನ್ನು ಬರೆದಿದ್ದಾರೆ. ಶ್ರೀ ಮತ್ತೂರು ಶಂಕರಮೂರ್ತಿಯವರು ಅನೇಕ ಉತ್ತಮ ಕೃತಿಸಂಗ್ರಹಗಳನ್ನು ಕನ್ನಡಲಿಪಿಯಲ್ಲಿ ಹೊರತರುತ್ತಿರುವುದರಿಂದ ಬಹುಕಾಲದ ಕೊರತೆಯನ್ನು ಸ್ವಲ್ಪಮಟ್ಟಿಗೆ ನೀಗಿಸಿದಂತಾ ಗಿದೆ. ಕರ್ಣಾಟಕದಲ್ಲಿ ಸಂಗೀತವು ಬೃಹತ್ತಾಗಿ ಬೆಳೆದಿರುವುದನ್ನು ಗಮನಿಸಿದರೆ ಇದು ಏನೇನೂ ಸಾಲದು.

ಸಂಗೀತವನ್ನು ಕುರಿತ ಲೇಖನಗಳು ವಿಶೇಷವಾಗಿಯೇ ಪ್ರಕಟವಾಗುತ್ತಿವೆ. ಜನಸಾಮಾನ್ಯರ ಅಭಿರುಚಿಯನ್ನು ಉತ್ತಮಗೊಳಿಸಿ ಸಂಗೀತ ಕಚೇರಿಗಳನ್ನು ವಿಮರ್ಶಿಸಿ ಬರೆಯುವುದರಲ್ಲಿ ಸರ್ವಶ್ರೀ ಮುರಲಿ(ಬಿ.ವಿ.ಕೆ. ಶಾಸ್ತ್ರಿ)ಯವರು, ರಾಜಶ್ರೀಯವರು, ಚಂದ್ರಶೇಖರ್‌ರವರು ಕನ್ನಡದಲ್ಲಿ ಈ ಕ್ಷೇತ್ರವನ್ನು ಪ್ರಾರಂಭಿಸಿ ಹೆಚ್ಚಿನದನ್ನು ಸಾಧಿಸಿದ್ದಾರೆ. ಇವರುಗಳ ಪರಿಶ್ರಮದಿಂದಾಗಿ ಈ ಬಗೆಯ ಬರೆಹಕ್ಕೆ ನಿರ್ದಿಷ್ಟವೂ ಗಣ್ಯವೂ ಆದ ಸ್ಥಾನಮಾನಗಳು ದೊರೆತಿವೆ. ಸಂಗೀತದ ಸಾಮಾನ್ಯವಿಷಯಗಳು, ಚಾರಿತ್ರಿಕವಿಷಯಗಳು ಮುಂತಾದವುಗಳಲ್ಲಿ ಇವರೂ, ಶ್ರೀ ಎಸ್. ಕೆ. ರಾಮಚಂದ್ರ ರಾಯರೂ, ಶ್ರೀ ಚೆಲುವರಾಯಸ್ವಾಮಿಯವರೂ, ಶ್ರೀ ಯೋಗಾನರಸಿಂಹಂರವರೂ, ಈ ಲೇಖಕನೂ ಇತರ ಹಲವು ವಿದ್ವಾಂಸರೂ ಹಲವಾರು ಲೇಖನಗಳನ್ನು ಬರೆಯುತ್ತಿದ್ದಾರೆ. ಸಂಶೋಧನಾತ್ಮಕ, ತಾಂತ್ರಿಕ ಹಾಗೂ ಪಾರಿಭಾಷಿಕ ಲೇಖನಗಳನ್ನು ಶ್ರೀ ಕುಕ್ಕಿಲ ಕೃಷ್ಣಭಟ್ಟರೂ, ಈ ಲೇಖಕನೂ ಬರೆಯುತ್ತಿದ್ದಾರೆ. ಸಂಗೀತಸಮ್ಮೇಳನದ ಕೈಪಿಡಿ ಗಳಲ್ಲಿಯೂ, ಶ್ರೀ ಪುರಂದರದಾಸ ಚತುಃಶತಮಾನೋತ್ಸವ, ಶ್ರೀ ತ್ಯಾಗರಾಜ ದ್ವಿಶತಾಬ್ದಿ ಮುಂತಾದ ವಿಶೇಷ ಸಂದರ್ಭಗಳ ಹಲವಾರು ಸ್ಮಾರಕಸಂಚಿಕೆಗಳಲ್ಲಿಯೂ ಇಂತಹ ಇತರ ವಿಶೇಷ ಸಂಚಿಕೆಗಳಲ್ಲಿಯೂ ಇನ್ನೂ ಅನೇಕ ವಿದ್ವಾಂಸರು ಲೇಖನ ಗಳನ್ನು ಬರೆದಿದ್ದಾರೆ.

ಸಂಗೀತಕ್ಕೆಂದೇ ಮೀಸಲಾದ ನಿಯತಕಾಲಿಕ ಪತ್ರಿಕೆಗಳೂ ನಮ್ಮಲ್ಲಿ ಹುಟ್ಟಿದ್ದುಂಟು. ಮೈಸೂರಿನಿಂದ ಶ್ರೀ ಎಸ್. ಕೃಷ್ಣಯ್ಯಂಗಾರ್ಯರು ಹೊರಡಿಸುತ್ತಿದ್ದ 'ಸಂಗೀತ', ಮಂಡ್ಯದಿಂದ ಶ್ರೀ ಕೆ. ಎಸ್. ಚಂದ್ರಶೇಖರಯ್ಯನವರು ಹೊರಡಿಸುತ್ತಿದ್ದ 'ಗಾನವಾಹಿನಿ'ಗಳನ್ನು ಇಲ್ಲಿ ಸ್ಮರಿಸಬಹುದು. ಸಾಕಷ್ಟು ಗ್ರಾಹಕರಿಲ್ಲದೆ, ಹಣದ ಅಡಚಣೆಯಿಂದ ಇವು ನಿಂತುಹೋದವು. ಬೆಂಗಳೂರಿನಿಂದ ಶ್ರೀ ಶೇಷಾದ್ರಿ ಗವಾಯ್ ರವರು ಅನೇಕ ವರ್ಷಗಳಿಂದ ಉತ್ತಮ ಮಟ್ಟದಲ್ಲಿ ಪ್ರಕಟಿಸುತ್ತಿರುವ 'ಗಾಯನ ಗಂಗಾ' ಮಾಸಿಕ ಪತ್ರಿಕೆಯು ಈಗ ನಮ್ಮಲ್ಲಿ ಉಳಿದಿರುವ ಏಕೈಕವಾದ ಸಂಗೀತ ಪತ್ರಿಕೆ. ಚಿಕ್ಕದಾದರೂ ಚೊಕ್ಕವಾಗಿ, ಉತ್ತಮವಾದ ಸ್ವಾರಸ್ಯವಾದ ಲೇಖನಗಳನ್ನೊಳ ಗೊಂಡು ಈ ಪತ್ರಿಕೆ ಪ್ರಕಟವಾಗುತ್ತಿದೆ. ಇನ್ನೂ ಹೆಚ್ಚು ಇಂತಹ ಪತ್ರಿಕೆಗಳು ಪ್ರಕಟವಾಗಬೇಕು; ಏಕೆಂದರೆ ಓದುಗರಿಗೆ, ಸಂಗೀತ ವಿದ್ಯಾರ್ಥಿಗಳಿಗೆ ನಮ್ಮಲ್ಲಿ ಕೊರತೆಯೇನಿಲ್ಲ. ಕನ್ನಡನಾಡಿನಲ್ಲಿ ಪ್ರಕಟವಾಗುವ ಪ್ರತಿಯೊಂದು ಮುಖ್ಯಪತ್ರಿಕೆ ಯಲ್ಲಿಯೂ ಸಾಪ್ತಾಹಿಕ ಪುರವಣಿಗಳಲ್ಲಿ ಸಂಗೀತಕ್ಕೆ ಸ್ವಲ್ಪ ಸ್ಥಾನವು ಮೀಸಲಾಗಿರು ವುದೂ, ವಾರಪತ್ರಿಕೆಗಳಲ್ಲಿ, ಮಾಸಪತ್ರಿಕೆಗಳಲ್ಲಿ ಸಂಗೀತವನ್ನು ಕುರಿತ ಲೇಖನಗಳೂ, ಸರ್ವೇಸಾಧಾರಣವಾಗಿರುವುದೂ, ಎಲ್ಲಾ ಮುಖ್ಯಪತ್ರಿಕೆಗಳ ದೀಪಾವಳಿ, ರಾಜ್ಯೋತ್ಸವ ಮುಂತಾದ ವಿಶೇಷ ಸಂಚಿಕೆಗಳಲ್ಲಿ ಸಂಗೀತವನ್ನು ಕುರಿತ ಲೇಖನಗಳು ಅವಿಭಾಜ್ಯ ಅಂಗಗಳಾಗಿರುವುದೂ ಇದಕ್ಕೆ ಸಾಕ್ಷಿ.

ಸಂಗೀತ ಗ್ರಂಥಪ್ರಕಟನೆಯ ವಿಷಯದಲ್ಲಿ ಇನ್ನೆರಡು ಸಂಗತಿಗಳನ್ನಿಲ್ಲಿ ಸ್ಮರಿಸ

ಬೇಕು. ಜನಪದಸಂಗೀತವನ್ನು ಕುರಿತು ಮೈಸೂರಿನ ಜನಪದ ಸಾಹಿತ್ಯ ಅಕಾಡಮಿಯ ಶ್ರೀ ಕ.ರಾ.ಕೃ.ರವರು ವಿಪುಲವಾಗಿ ಸಂಗ್ರಹಿಸಿ ಪ್ರಕಟಿಸುತ್ತಿರುವ ಸಂಗ್ರಹಗಳು ಮೊದಲನೆಯದು. ಈ ಅಕಾಡಮಿಯು ನಮ್ಮ ಜನಪದಸಂಗೀತದ ಹಲವಾರು ಅಮೂಲ್ಯ ಧ್ವನಿಮುದ್ರಿಕೆಗಳನ್ನೂ ಸಂಗ್ರಹಿಸಿದೆಯೆಂದು ಕೇಳಿದ್ದೇನೆ; ಇದನ್ನೂ ನಮ್ಮ ಆಕಾಶವಾಣಿಯು ಸಂಗ್ರಹಿಸಿರುವ ಸಾಮಗ್ರಿಸಂಪತ್ತನ್ನೂ ಕುರಿತು ವೈಜ್ಞಾನಿಕ ಅಧ್ಯಯನವು ಕೂಡಲೇ ನಡೆದು ಕರ್ಣಾಟಕದ ಜನಪದ ಸಂಗೀತಸಿರಿಯನ್ನು ಸಾರುವ ಶಾಸ್ತ್ರೀಯ ವಿವೇಚನೆಯು ಹೊರಬೀಳಬೇಕು. ಎರಡನೆಯದು ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗವು ಈ ದಿಕ್ಕಿನಲ್ಲಿ ಸಲ್ಲಿಸುತ್ತಿರುವ ಸೇವೆ. ಈಗಾಗಲೇ ವಿದ್ಯಾರ್ಥಿಗಳಿಗಾಗಿ ಕನ್ನಡದಲ್ಲಿ ಒಂದು ಸಂಗೀತಶಾಸ್ತ್ರಗ್ರಂಥವನ್ನು ಪ್ರಸಾರಾಂಗವು ಹೊರತಂದಿದೆ. ಇಲ್ಲಿಂದಲೆ ಕನ್ನಡಿಗ ಶ್ರೀ ಶಾರ್ಙ್ಗದೇವ ಸೂರಿಯ ತ್ರಿಕಾಲಾಬಾಧಿತವೂ ವೇದಸದೃಶವೂ ಆದ ಸಂಗೀತರತ್ನಾಕರದ ವಿಮರ್ಶಾತ್ಮಕ ಸಂಪಾದನ, ಕನ್ನಡ ಅನುವಾದ ಮತ್ತು ವೈಜ್ಞಾನಿಕವೂ ವಿಸ್ತಾರವೂ ಆದ ಕನ್ನಡ ವ್ಯಾಖ್ಯಾನಗಳೊಡನೆ ಹೊರಬರುತ್ತಿದೆ. ಇದರ ಮೊದಲನೆಯ ಭಾಗವು ಸದ್ಯದಲ್ಲೇ ಹೊರಬೀಳಲಿದೆ. ಕ್ರೌನ್ ಚತುಷ್ಪತ್ರದ ಸುಮಾರು ಹತ್ತುಸಾವಿರ ಪುಟಗಳಷ್ಟು ವಿಸ್ತಾರವಾದುದು ಇಡೀ ಗ್ರಂಥ. ಪ್ರಪಂಚದ ಯಾವುದೇ ಭಾಷೆಯಲ್ಲಿ ಇಷ್ಟು ವಿಸ್ತಾರವೂ, ವೈಜ್ಞಾನಿಕವೂ ಪ್ರೌಢವೂ ಆದ ವ್ಯಾಖ್ಯಾನವು ಸಂಗೀತಶಾಸ್ತ್ರಗ್ರಂಥವೊಂದನ್ನು ಕುರಿತು ಈವರೆಗೆ ಆದುದಿಲ್ಲ. ಇದು ಕನ್ನಡದಲ್ಲಿ ಮೊದಲು ಆಗುತ್ತಿರುವುದು ಸಂತೋಷದ ವಿಷಯ.

ಮೈಸೂರು ವೀಣೆ ಶೇಷಣ್ಣನವರ, ಮೈಸೂರು ಸದಾಶಿವರಾಯರ ಕೃತಿಗಳು ಕನ್ನಡಜನಕ್ಕೆ ಮೊದಲು ಸುವ್ಯವಸ್ಥಿತ ರೀತಿಯಲ್ಲಿ ದೊರೆತುದು ಈ ಇಪ್ಪತ್ತೈದು ವರ್ಷಗಳಲ್ಲಿ. ಮೈಸೂರು ವಾಸುದೇವಾಚಾರ್ಯರ ಕೃತಿಗಳು ಪುಸ್ತಕರೂಪದಲ್ಲಿ ಹೊರಬಂದು ಇಡೀ ಭಾರತದಲ್ಲಿ ಪ್ರಸಾರವಾದುದೂ ಈ ಕಾಲದಲ್ಲಿಯೇ. ಮುತ್ತಯ್ಯ ಭಾಗವತರ ಕನ್ನಡಕೀರ್ತನೆಗಳು ವಿಶೇಷವಾಗಿ ಈ ಅವಧಿಯಲ್ಲೇ ಲಕ್ಷ್ಯದಲ್ಲಿ ಹರಡಿದವು. ಇದಲ್ಲದೆ ಕರಿಗಿರಿರಾಯರು, ಬಿಡಾರಂ ಕೃಷ್ಣಪ್ಪನವರು, ಪಲ್ಲವಿ ರಾಮಲಿಂಗಯ್ಯನವರು, ಟಿ. ಚೌಡಯ್ಯನವರು ಮೊದಲಾಗಿ ಕನ್ನಡನಾಡಿನಲ್ಲಿ ಆಗಿಹೋದ ಹಲವರ ಕೃತಿಗಳು ಬೆಳಕುಕಾಣದೆ ಅಡಗಿವೆ. ಇವುಗಳನ್ನು ಸರಿಯಾಗಿ ಸಂಪಾದಿಸಿ ಹೊರತರುವ ಕೆಲಸವಿನ್ನೂ ಉಳಿದಿದೆ. ಆಧುನಿಕರಲ್ಲಿ ಹಲವರು ಕೃತಿಗಳನ್ನು ಉತ್ತಮ ಮಟ್ಟದಲ್ಲಿ ರಚಿಸುತ್ತಿದ್ದಾರೆ. ನನಗೆ ತಿಳಿದಂತೆಯೇ ಮೈಸೂರಿನಲ್ಲಿ ಹಲವರು ಇಂತಹ ವಿದ್ವಾಂಸರಿದ್ದಾರೆ. ಇವರ ಕೃತಿಗಳು ಅಚ್ಚಾಗಿ ಕರ್ಣಾಟಕದ ವಿದ್ವಾಂಸರ ಕಂಠಶ್ರೀಯಲ್ಲಿ, ವಿದ್ಯಾರ್ಥಿಗಳ ಸಂಗ್ರಹದಲ್ಲಿ ಸೇರಿದರೆ ಕಾಲಕ್ರಮದಲ್ಲಿ ಕನ್ನಡ ನಾಡಿನಲ್ಲಿ ಯಾರಿಗೂ ಕಡಿಮೆಯಿಲ್ಲದ ವಾಗ್ಗೇಯಕಾರರಿದ್ದಾರೆ ಎಂಬ ಸತ್ಯದ ಅರಿವು ನಮ್ಮ ಜನಕ್ಕೂ ಬೇರೆಯವರಿಗೂ ಆದೀತು.

ಇಷ್ಟೆಲ್ಲ ಆದರೂ ರಾಷ್ಟ್ರೀಯ ಮಟ್ಟದಲ್ಲಿ ನಮ್ಮ ಕಲಾವಿದರಿಗೂ, ವಿದ್ವಾಂಸರಿಗೂ

ನ್ಯಾಯವಾದ ಸ್ಥಾನಮಾನಗಳು ದೊರೆತಿಲ್ಲ. ಕೇಂದ್ರ ಸಂಗೀತನಾಟಕ ಅಕಾಡಮಿಯ ಜನರಲ್ ಕೌನ್ಸಿಲ್ಲಿಗೆ ಕರ್ಣಾಟಕ ಸಂಗೀತದ ಸ್ಥಾನಕ್ಕೆಂದು ಇಡೀ ಭಾರತದಿಂದ ಶ್ರೀ ಆರ್. ಚಂದ್ರಶೇಖರಯ್ಯನವರು ಮೊದಲಬಾರಿಗೆ ಚುನಾಯಿತರಾದರು. ಕೀರ್ತಿ ಶೇಷರಾದ ಮೈಸೂರು ವಾಸುದೇವಾಚಾರ್ಯರೂ, ಕೀರ್ತಿಶೇಷ ಶ್ರೀ ಟಿ. ಚೌಡಯ್ಯನವರೂ, ಶ್ರೀ ದೇವೇಂದ್ರಪ್ಪನವರೂ ಮೈಸೂರಿಗೆ ರಾಷ್ಟ್ರೀಯ ಪ್ರಶಸ್ತಿಯ ಅಗ್ಗಳಿಕೆಯನ್ನು ಗಳಿಸಿಕೊಟ್ಟಿದ್ದಾರೆ. ಮೈಸೂರು ಟಿ. ಚೌಡಯ್ಯನವರು ಮದ್ರಾಸಿನಲ್ಲಿ ಸಂಗೀತ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿ 'ಸಂಗೀತಕಳಾನಿಧಿ' ಎಂಬ ಬಿರುದನ್ನೂ ಮೈಸೂರು ಸಹೋದರರ ಶ್ರೀ ಆರ್. ಚಂದ್ರಶೇಖರಯ್ಯನವರು ಮದ್ರಾಸಿನ ಅಖಿಲ ಭಾರತೀಯ ನಾಟ್ಯಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿ 'ನಾಟ್ಯಶಾಸ್ತ್ರಕೋವಿದ' ಎಂಬ ಬಿರುದನ್ನೂ ಗಳಿಸಿದ್ದಾರೆ. ರಾಷ್ಟ್ರೀಯ ಸಂಗೀತದ ಕಾರ್ಯಕ್ರಮಗಳಲ್ಲಿ ಇವರುಗಳೂ, ಶ್ರೀ ಮೈಸೂರು ದೊರೆಸ್ವಾಮಿ ಅಯ್ಯಂಗಾರ್ಯರು, ಶ್ರೀ ಆರ್. ಕೆ. ಶ್ರೀಕಂಠನ್‌ರವರು, ಮುಂತಾದವರೂ ಭಾಗವಹಿಸಿದ್ದಾರೆ. ಹಿಂದೂಸ್ತಾನೀ ಸಂಗೀತದಲ್ಲಿ ಶ್ರೀ ಭೀಮಸೇನ್ ಜೋಷಿಯವರು, ಶ್ರೀ ಮಲ್ಲಿಕಾರ್ಜುನ ಮನ್ಸೂರರು, ಶ್ರೀಮತಿ ಗಂಗೂಬಾಯಿ ಹಾನಗಲ್ಲರು, ಶ್ರೀ ಬಸವರಾಜ ರಾಜಗುರುಗಳು ಮುಂತಾದ ಕೆಲವೇ ಕೆಲವರು ರಾಷ್ಟ್ರೀಯ ಕಾರ್ಯಕ್ರಮಗಳಲ್ಲಿ ಹಾಡಿದ್ದಾರೆ. ಈ ಅಲ್ಪಸಂಖ್ಯಾತ ಪ್ರಾತಿನಿಧ್ಯಕ್ಕೆ 'ರಾಜಕೀಯವು' ಎಷ್ಟು ಕಾರಣವೋ, ಅಷ್ಟೇ ನಮ್ಮ ರಾಜ್ಯಸರ್ಕಾರ ಮತ್ತು ನಾಯಕರುಗಳು ದಿಟ್ಟವಾಗಿ ನ್ಯಾಯಕ್ಕಾಗಿ ಹೋರಾಡಲು ಹಿಂತೆಗೆಯುವುದೂ, ಉದಾಸೀನರಾಗಿರುವುದೂ, ನಮ್ಮ ವಿದ್ವಾಂಸರುಗಳು ಮುನ್ನುಗ್ಗಿ ನಾಡಿನಲ್ಲೆಲ್ಲಾ ತಮ್ಮ ಕಲಾಪ್ರೌಢಿಮೆಯನ್ನು ಪ್ರದರ್ಶಿಸಿ ಬರುವ ದಾಷ್ಟೀಕವನ್ನು ತೋರದಿರುವುದೂ ಕಾರಣಗಳಾಗಿವೆ.

ಕನ್ನಡನಾಡಿನಲ್ಲಿ ಕಳೆದ ಇಪ್ಪತ್ತೈದು ವರ್ಷಗಳಲ್ಲಿ ಸಂಗೀತವು ಬಹು ವಿಸ್ತಾರ ವಾಗಿಯೇ ಬೆಳೆದಿದೆ. ರಾಮೋತ್ಸವ, ಗಣಪತಿಹಬ್ಬ, ಕೃಷ್ಣಜಯಂತಿ, ಹನುಮ ಜ್ಜಯಂತಿ, ಶಂಕರಜಯಂತಿಗಳು ಸಂಗೀತದ ಹಬ್ಬಗಳೂ ಆಗಿವೆ. ಮಾಸಿಕ ಸಂಗೀತ ಕಚೇರಿಗಳಿಗೆಂದೇ ಮೀಸಲಾದ ಸಂಗೀತಸಮಾಜ, ಸಾಂಸ್ಕೃತಿಕ ಸಂಘ, ಸಂಗೀತಸಭೆ ಮುಂತಾದವುಗಳು ನಾಡಿನಲ್ಲೆಲ್ಲಾ ತುಂಬಿವೆ. ಸಂಗೀತವನ್ನು ಶಾಲೆಯಲ್ಲಿಯೂ, ಮನೆಯಲ್ಲಿಯೂ ಕಲಿಯುವ ಮಕ್ಕಳ ಸಂಖ್ಯೆಯು ಬೆಳೆಯುತ್ತಿದೆ. ಸಂಗೀತ ಕಚೇರಿ ಗಳಿಗೆ ಪ್ರವೇಶಶುಲ್ಕವನ್ನು ಕೊಟ್ಟು ಬರುವವರ ಸಂಖ್ಯೆಯೂ, ಸಂಗೀತಸಭೆಗಳ ಸದಸ್ಯರ ಸಂಖ್ಯೆಯೂ ಏರುತ್ತಲೇ ಇದೆ. ಹಿಂದಿಗಿಂತ ಹೆಚ್ಚು ವಿಮರ್ಶಾತ್ಮಕವಾಗಿ ಸಂಗೀತವನ್ನು ಕೇಳುವವರೂ ಹೆಚ್ಚುತ್ತಿದ್ದಾರೆ. ಅಕ್ಷರವಿದ್ಯೆಯಲ್ಲಿ ಬಲ್ಲಿದರು ಸಂಗೀತ ವನ್ನು ಕಲಾವಿಲಾಸಿಗಳಾಗಿ, ಹವ್ಯಾಸಕ್ಕೆಂದು ಕಲಿಯುವ ಪ್ರವೃತ್ತಿಯು ಬೆಳೆಯುತ್ತಿದೆ.

* * * *

ಹಾಗಾದರೆ ಸಂಗೀತವು ಉತ್ತಮಗೊಂಡಿದೆಯೇ, ಅವನತಿಯನ್ನು ಹೊಂದಿದೆಯೇ ಎಂದು ಕೇಳಿದರೆ ಒಂದೇ ಮಾತಿನಲ್ಲಿ ಉತ್ತರ ಕೊಡಲಾಗದು. ಕೆಲವು ವಿಷಯಗಳಲ್ಲಿ

ತುಂಬಾ ಪ್ರಗತಿಯನ್ನು ಸಾಧಿಸಿದ್ದೇವೆ; ವಿದ್ಯಾರ್ಥಿವೃಂದವು ಶಾಸ್ತ್ರೀಯ ಸಂಗೀತದ ವಿಷಯದಲ್ಲಿ ತೋರಿಸುವ ಅನಾದರ, ಮದುವೆಮನೆಗಳ ಸತ್ಕಾರಸಮಾರಂಭಗಳಲ್ಲಿಯೂ ಸಹ 'ಆರ್ಕೆಸ್ಟ್ರಾ', ಧ್ವನಿಮುದ್ರಿಕೆಗಳು ಮುಂತಾದವುಗಳ ಪೈಪೋಟಿ ಮುಂತಾದ ಕೆಲವು ಸಂಗತಿಗಳು ಆಲೋಚನಾಪರರನ್ನು ಚಿಂತೆಗೀಡುಮಾಡುತ್ತವೆ. ನಮ್ಮ ಯುವಕ ವಿದ್ವಾಂಸರಿಗೆ ನಮ್ಮಲ್ಲಿಯೇ ಪ್ರೋತ್ಸಾಹ ದೊರೆಯದಿರುವುದು ಒಂದು ತೀವ್ರವಾದ ಸಮಸ್ಯೆ. ಅವರಿಗೆ ಸ್ಥಳೀಯ ಪ್ರೋತ್ಸಾಹ ದೊರೆತ ಹೊರತು ಪರಸ್ಥಳಗಳಲ್ಲಿ ಪ್ರಸಿದ್ಧರಾಗುವಂತಿಲ್ಲ; ಹೊರಗೆ ಪ್ರಸಿದ್ಧಿಯನ್ನು ಪಡೆದ ಹೊರತು ನಮ್ಮ ಜನರು ಅವರನ್ನು ಪುರಸ್ಕರಿಸುವಂತಿಲ್ಲ—ಹೀಗಿದೆ ವಿಷಚಕ್ರ. ಪರಸ್ಥಳದ ವಿದ್ವಾಂಸರು ಎಷ್ಟೇ ಕಳಪೆಯಾಗಿ ಹಾಡಿ ನುಡಿಸಿ ಹೋದರೂ ಅದನ್ನೇ ಪಾವನವೆಂದು ಚಪ್ಪರಿಸುವ 'ರಸಿಕತೆ' ಸಂಸ್ಥೆಗಳಲ್ಲಿಯೂ ಪಟ್ಟಭದ್ರ ರಸಿಕರಲ್ಲಿಯೂ ಬೇರೂರುತ್ತಿದೆ; ಸ್ಥಳೀಯ ವಿದ್ವಾಂಸರ ಕಚೇರಿಯಿಟ್ಟರೆ ಜನಬರುವುದಿಲ್ಲ ಎಂಬ ವಾದವನ್ನು ಅವರು ಮುಂದೆ ಇಡುತ್ತಾರೆ. ಸಂಗೀತಕ್ಕೆ ಭಾಷೆ, ಬಣ್ಣಗಳ ಭೇದವಿಲ್ಲ ಎನ್ನುವ ಆದರ್ಶದ ಮಾತನ್ನು ನಮ್ಮ ಮನೆ ಮಕ್ಕಳ ಹೊಟ್ಟೆತುಂಬಿ ಸಂತೋಷಪಟ್ಟಮೇಲೆ ಆಡಿ ಆಮೇಲೆ ಇತರರಲ್ಲಿ ಔದಾರ್ಯವನು ತೋರಿಸೋಣ. ನಮ್ಮ ಕೂಸಿಗೇ ಹಾಲಿಲ್ಲದಿದ್ದಾಗ ನೆರೆಮನೆಯ ಮಗುವಿಗೆ ಅಜೀರ್ಣವಾಗಿ ತಲೆತಿರುಗುವಷ್ಟು ಉಣಬಡಿಸುವುದೇ ?

ಒಟ್ಟಿನಲ್ಲಿ, ನಮ್ಮಲ್ಲಿ ಸ್ವಾಭಿಮಾನವು—ದುರಭಿಮಾನವಲ್ಲ—ಬೆಳೆಯಬೇಕು. ಹೆಚ್ಚಿನದನ್ನು ಸಾಧಿಸಿದ್ದೇವೆ; ಆದರೆ ಮಾಡಬೇಕಾದುದು ಇನ್ನೂ ತುಂಬಾ ಉಳಿದಿದೆ. ಮಾತು ಕಡಿಮೆ ಮಾಡಿ ಕೆಲಸವನ್ನು ಹೆಚ್ಚುಮಾಡುವ ಅಭ್ಯಾಸವನ್ನು ನಾವು ಮೈಗೂಡಿಸಿಕೊಳ್ಳಬೇಕು.

ಕೆ. ಶಿವರಾಮ ಐತಾಳ

ನೃತ್ಯ

ಕನ್ನಡನಾಡಿನ ನಾಟ್ಯಚರಿತ್ರೆಯ ರಚನೆಗೆ ಸಹಾಯವಾಗುವಂಥ ಶಾಸ್ತ್ರೀಯ ಕಾರ್ಯಗಳೇನೂ ನಡೆದಿಲ್ಲದಿರುವಾಗ ಈ ೨೫ ವರ್ಷಗಳಲ್ಲಿ ಏನೇನಾಯಿತು ಎನ್ನುವುದು ಅಷ್ಟು ಸುಲಭವಾದ ಕಾರ್ಯವಲ್ಲ; ಸುಲಭವಾದರೂ ತೂಕವಾದ ಕಾರ್ಯವಲ್ಲ. ಈ ೨೫ ವರ್ಷಗಳ ಹಿಂದೆಯಾದರೂ ಏನಿತ್ತು, ಹೇಗಿತ್ತು,–ಎಂಬುದು ತಿಳಿದಿರಬೇಕಾಗುತ್ತದೆ. ಆಗೊಮ್ಮೆ ಈಗೊಮ್ಮೆ ಎಲ್ಲೋ ಒಂದೊಂದು ಕಡೆ ಕೆಲವು ಲೇಖನಗಳು ಬೆಳಕು ಕಂಡಿವೆ. ಒಂದೆರಡು ಸಂಸ್ಕೃತದಿಂದ ಕನ್ನಡಕ್ಕೆ ಬಂದ ಅನುವಾದಗಳು. ಅವು ಶಾಸ್ತ್ರೀಯನಾಟ್ಯ ಹೇಗಿರಬೇಕೆಂಬುದನ್ನು ಹೇಳುತ್ತವೆಯೇ ವಿನಾ ಹೇಗಿತ್ತು, ಹೇಗಿವೆ ಎಂಬುದನ್ನಲ್ಲ. ಇನ್ನು ಕೆಲವು ವಿಷಯದಲ್ಲಿ ಪರಿಶ್ರಮವಿಲ್ಲದೆ ಅಭಿಮಾನದಿಂದ ಬರೆದಂಥವು. ಕೆಲವು ಹಿತಾಸಕ್ತಿಸಾಧನೆಗಳನ್ನು ಗುರಿಯಾಗುಳ್ಳವು. ಹೀಗಾಗಿ ಕರ್ನಾಟಕದ ನಾಟ್ಯಕ್ಕೆ ತನ್ನದೇ ಆದ ಪರಂಪರೆ, ವಿಶಿಷ್ಟತೆ, ಸೊಬಗು, ಚರಿತ್ರೆ ಇದೆಯೇ ಎನ್ನುವುದರ ಕಡೆಗೆ ನಮ್ಮ ಕಲಾವಿದರ, ವಿದ್ವಾಂಸರ ಗಮನ ಹರಿಯದಿರುವುದು ತುಂಬಾ ವಿಷಾದಕರ. ಈ ಕೆಲಸವನ್ನು ಯಾರು ಮಾಡಬೇಕು? ವಿದ್ಯಾವಂತರು ನಾಟ್ಯಕಲಿತರೆ, ಅಥವಾ ನರ್ತಕರು ವಿದ್ಯಾವಂತರಾದರೆ — ಅಂಥವರಿಂದ ಮಾತ್ರ ಸಾಧ್ಯ. ಮಿಗಿಲಾಗಿ ಸಂಕೀರ್ಣಕಲೆಯಾದ ನಾಟ್ಯದ ವಿಷಯದಲ್ಲಿ ಕೆಲಸ ಮಾಡತಕ್ಕವರು ಅದಕ್ಕೆ ಸಂಬಂಧಿಸಿದಂತೆ ಸಂಗೀತ, ಚಿತ್ರ, ಶಿಲ್ಪಗಳ ತತ್ತ್ವಗಳನ್ನೂ, ಸಾಹಿತ್ಯವನ್ನೂ ತಿಳಿದಿರಬೇಕಾಗುತ್ತದೆ. ಇಷ್ಟೆಲ್ಲ ಕಷ್ಟಪಟ್ಟರೆ ಅದಕ್ಕೆ ಕನಿಷ್ಠಫಲವಾಗಿ ಗೌರವವಾದರೂ ಎಲ್ಲಿದೆ? ಹೀಗಾಗಿ ನಮ್ಮ ನಾಡಿನ ನಾಟ್ಯಚರಿತ್ರೆ ಗಾಢಾಂಧಕಾರದಲ್ಲಿ ಮುಳುಗಿಹೋಗಿದೆ. ಐತಿಹಾಸಿಕ ಪ್ರಜ್ಞೆಯಿಲ್ಲದೆ ವರ್ತಮಾನ ಅರ್ಥವಿಲ್ಲದ್ದು. ಈಗ ೨೫ ವರ್ಷಗಳ ಹಿಂದೆ 'ಮೈಸೂರುಭರತನಾಟ್ಯ' ಎಂಬ ಹೆಸರು ದಕ್ಷಿಣಭಾರತದಲ್ಲಿ ಪ್ರಸಿದ್ಧವಾಗಿತ್ತು. ಮದರಾಸಿನಿಂದ, ತಂಜಾವೂರಿನಿಂದ ಇಲ್ಲಿಗೆ ಬಂದು ಕಲಿತರು. ಇಲ್ಲಿನವರ ಜೊತೆಯಲ್ಲಿ ಸ್ಪರ್ಧಿಸಲು ಹಿಂದೆಗೆಯುತ್ತಿದ್ದರು. ಮೈಸೂರಿನವರು ಜಯದೇವನ ಅಷ್ಟಪದಿಗಳನ್ನು, ಕೃಷ್ಣಕರ್ಣಾಮೃತ, ಅಮರುಶತಕಗಳ ಶ್ಲೋಕಗಳನ್ನು ಅಭಿನಯಿಸುತ್ತಾರೆಂದರೆ ಇತರ ರಾಜ್ಯಗಳ 'ತದಿಗಿಣತೊಂ' ಹೇಳ ಹೆಸರಿಲ್ಲದಾಗಿತ್ತು.

ಆದರೆ, ಈ ೨೫ ವರ್ಷಗಳು ಕಳೆದಮೇಲೆ, ಇಂದು ಮೈಸೂರುಭರತನಾಟ್ಯವನ್ನು ಕೇಳುವವರಿಲ್ಲವಾಗಿಬಿಟ್ಟಿದೆ. ಕಾರಂತರಂಥ ಪ್ರಯೋಗಶೀಲರ ಕ್ರಾಂತಿದೃಷ್ಟಿಗೆ ಇದರಲ್ಲಿ ಕಲೆಗಾರಿಕೆ ಕಾಣಿಸಲಿಲ್ಲ; ಉಳಿಸಬೇಕೆನ್ನುವುದರಲ್ಲಿ ಸಾರ್ಥಕತೆ ತೋರಲಿಲ್ಲ. ಗದ್ದಲಗಳು ಗದ್ದಲದಲ್ಲೇ ಮುಗಿದುವೇ ಹೊರತು ಉದ್ಧಾರದ ಹಾದಿಯನ್ನು ಹಸನುಮಾಡಲಿಲ್ಲ. ಈ ೨೫ ವರ್ಷಗಳ ಹಿಂದೆ ಮೈಸೂರಿನಲ್ಲಿ ಒಂದೋ ಎರಡೋ ನೃತ್ಯಶಾಲೆಗಳಿದ್ದರೆ ಹೆಚ್ಚು. ಈಗ ಮೈಸೂರು ಜಿಲ್ಲೆಯಲ್ಲೇ ಸುಮಾರು ಮೂವತ್ತು ಇವೆ. ಬೆಂಗಳೂರಿನಲ್ಲಿ ಆಗ ಇರಲಿಲ್ಲವೆಂದರೂ ಸಲ್ಲುತ್ತದೆ; ಈಗ ಅಲ್ಲೂ ಮೂವತ್ತಕ್ಕೂ ಮಿಕ್ಕಿ ನಾಟ್ಯಾಚಾರ್ಯರಿದ್ದಾರೆ. ನೃತ್ಯ–ನಾಟ್ಯಗಳ ವ್ಯತ್ಯಾಸ ತಿಳಿಯದವರೂ ಇದ್ದಾರು. ಈಚೆಗೆ, ನಾನು ಗಮನಿಸಿದಂತೆ ಎರಡು ಮೂರು ವರ್ಷ ನೃತ್ಯಪ್ರದರ್ಶನಗಳಲ್ಲಿ ಮೃದಂಗ ಬಾರಿಸುತ್ತಿದ್ದವರು ಇದ್ದಕ್ಕಿದ್ದ ಹಾಗೆ ನೃತ್ಯಶಾಲೆಯಿಟ್ಟು ಆಚಾರ್ಯರಾದರು. ಇಷ್ಟೆಲ್ಲ ಆಗಿ, ಪ್ರಕೃತ ಮೈಸೂರುಭರತನಾಟ್ಯವನ್ನು ಬಲ್ಲವರು ಕೇವಲ ನಾಲ್ಕಾರು ಜನರು, ಅಷ್ಟೆ. ಬೆಂಗಳೂರಿನಲ್ಲಿ ಮೈಸೂರುಭರತನಾಟ್ಯ ಇಲ್ಲವೇ ಇಲ್ಲ. ಮೈಸೂರಿನಲ್ಲಿ ಅದರ ಪೀಳಿಗೆ ಮುಗಿಯುತ್ತ ಬಂತು. ಈ ೨೫ ವರ್ಷಗಳ ಹಿಂದೆ ಇಲ್ಲದ ಎಷ್ಟೋ ನೃತ್ಯರೂಪಗಳು ಈಗ ಕಾಣಸಿಗುತ್ತವೆ. ಕಥಕ್ಕಳಿ, ಕಥಕ್, ಮಣಿಪುರಿ ಎಂಬ ದೊಡ್ಡದೊಡ್ಡ ಹೆಸರುಗಳಲ್ಲಿ ವಿರೂಪವಾದ, ಯಾವ ಶಾಸ್ತ್ರಕ್ಕೂ ಸೇರದ, ಯಾವ ಪರಂಪರೆಯದೂ ಅಲ್ಲದ, ಕಲೆಗಾರಿಕೆಯ ಗಂಧವೂ ಇಲ್ಲದ ಕುಣಿತಗಳು ಚಲಾವಣೆಗೆ ಬಂದಿವೆ. ಪಂದನಲ್ಲೂರು ಸಂಪ್ರದಾಯ ಹೆಚ್ಚು ಬಳಕೆಗೆ ಬಂದಿದೆ. ತುಂಬ ಗಮನಾರ್ಹಸಂಗತಿಯೆಂದರೆ ಮೈಸೂರಿನಲ್ಲಿ ಹುಟ್ಟಿಬೆಳೆದ, ಒಂದು ಕಾಲದಲ್ಲಿ ಪ್ರಸಿದ್ಧವಾದ, ಕನ್ನಡಕಲೆಯಾದ ಮೈಸೂರು ಭರತನಾಟ್ಯವೆಂಬುದೇನಿದೆ ಅದರ ಶಿಕ್ಷಣ ವಿಶ್ವವಿದ್ಯಾನಿಲಯದ ಲಲಿತಕಲಾ ಕಾಲೇಜಿನಲ್ಲೂ ನೀಡಲ್ಪಡುತ್ತಿಲ್ಲ. ಅಲ್ಲಿ ಸಿಗುತ್ತಿರುವುದು ಮದರಾಸಿನ ಪದ್ಧತಿ. ಮೈಸೂರಿನ ಕಲೆಯ ಪ್ರಾತಿನಿಧ್ಯ ರಾಜ್ಯ ಅಕಾಡೆಮಿಯಲ್ಲೂ ಇಲ್ಲ. 'ಕಲೆ'ಯೆಂದರೇನು ಎಂಬುದನ್ನು ಸ್ವಲ್ಪವೂ ತಿಳಿಯದೆ ನಾಟ್ಯ ವಿದ್ವತ್ಪರೀಕ್ಷೆಯಲ್ಲಿ ತೇರ್ಗಡೆಯಾಗಲು ಅವಕಾಶವಾಗುವಂತೆ ಪಠ್ಯಕ್ರಮ ರೂಪಿತವಾಗಿದೆ. ಆದರೂ ನಾವು ಕನ್ನಡಿಗರು, ನಮ್ಮದು ಕನ್ನಡಕಲೆ, ನಾಲ್ವಡಿ ಕೃಷ್ಣನ ಮೈಸೂರಿನ ಕಲೆ—ಎಂದು ಹೆಮ್ಮೆಪಡುತ್ತೇವೆ. ಕನ್ನಡತನದ ಸಮಾಧಿಯಮೇಲೆ ಮೈಸೂರಿನ ನಾಟ್ಯಚರಿತ್ರೆಯನ್ನು ಕಟ್ಟಹೊರಡುತ್ತೇವೆ. ಕಥೆ ಮುಗಿದಮೇಲೆಯೇ ಇತಿಹಾಸದ ರಚನೆ. ಈ ದೃಷ್ಟಿಯಿಂದ ಮೈಸೂರಿನ ನಾಟ್ಯಚರಿತ್ರೆಯ ರಚನೆಗೆ ಒಳ್ಳೆಯಕಾಲ ಬಂದಿದೆ ಎಂದುಕೊಳ್ಳಬಹುದು.

ನಾಟ್ಯಚರಿತ್ರೆರಚನೆಗೆ ಆಧಾರಗಳು

ಈ ಪುಟ್ಟ ಅವಕಾಶದಲ್ಲಿ ನಾಟ್ಯಚರಿತ್ರೆರಚನೆಗೆ ಉಪಯೋಗಿಸಿಕೊಳ್ಳಬಹುದಾದ, ಲಭಿಸುವ ಕೆಲವು ಮುಖ್ಯ ಆಧಾರಗಳನ್ನು ಸೂಚಿಸುವುದು ಸಾಧ್ಯವಾದೀತು. ಆದುದರಿಂದ ಇದು ಮೂಲೆಯಲ್ಲಿ ನಿಂತ ದಿಕ್ಸೂಚಿಯಂತೆ.

ನಾಟಕ ವಿಶ್ವವ್ಯಾಪಿಯಾದರೂ ಅಭಿನಯ ಪರಿಪೂರ್ಣತೆಯೇ ಪ್ರಧಾನವಾದ ನಾಟ್ಯ ಇಲ್ಲಿನಷ್ಟು ಬೇರೆಡೆಗಳಲ್ಲಿ ಬೆಳೆದಿಲ್ಲ. ಅಭಿನಯಕ್ಕೆ ವೇದಗಳಲ್ಲಿ ಮೂಲವನ್ನು ಹುಡುಕಿದ್ದಾರೆ. ಕೆಲವಿದ್ವಾಂಸರು ಅದನ್ನು ಒಪ್ಪುವುದಿಲ್ಲ. ಮುಖ್ಯವಾಗಿ, ನಾಟ್ಯವು ಆರ್ಯರು ರೂಪಿಸಿದ ದ್ರಾವಿಡರ ಕಲೆ ಎಂಬ ಮಾತು ಹೆಚ್ಚು ಸಮ್ಮತವಾಗಿರುವಂತೆ ತೋರುತ್ತದೆ. ಅವೈದಿಕರಾದ ಶೂದ್ರರಿಗಾಗಿ ಐದನೆಯದಾದ ನಾಟ್ಯವೇದವು ದ್ರಾವಿಡದೇವನಾದ ಶಿವನಮೂಲಕ ಕಲ್ಪಿತವಾಯಿತು. ಆದುದರಿಂದ ನಾಟ್ಯವೆಂಬುದು ಮಾರ್ಗವಲ್ಲ. ನಾಟ್ಯವಷ್ಟೇ ಅಲ್ಲ ಎಲ್ಲ ಕಲೆಗಳನ್ನೂ ದೇಸಿಗೆ ಸೇರಿಸಲಾಗಿತ್ತು. ವಿಮುಕ್ತಿದಾಯಕವಾದುದು, ಸ್ವರ್ಗ್ಯವಾದುದು ಮಾರ್ಗ; ಲೋಕಾನುರಂಜಕವಾದುದು ದೇಶಿ, ಅದು ಅಸ್ವರ್ಗ್ಯ, ವ್ಯರ್ಥ. ಮಾರ್ಗ ಪರದ್ದಾದರೆ ದೇಶಿ ಇಹದ್ದು. ಮೃಗ್– ಮೃಗದಿಂದ ಮಾರ್ಗ. ದಿಶೆಯಿಂದ ದೇಶೀ.[1] ಶ್ರೀ ತ. ಸು. ಶಾಮರಾಯರೂ ನಾಟ್ಯವು ದ್ರಾವಿಡರದ್ದೆಂದು ಪ್ರತಿಪಾದಿಸಿದ್ದಾರೆ.[2] 'ತಾಂಡವ ಮಾತಿಗೆ ಸಂಸ್ಕೃತದಲ್ಲಿ ನಿರುಕ್ತಿಯೇ ದೊರೆಯುವುದಿಲ್ಲವೆಂದೂ, ಆ ಮಾತು ದ್ರಾವಿಡಶಬ್ದವಾಗಿರಬೇಕೆಂದೂ ಪ್ರೊ. ಎ. ಆರ್. ಕೃಷ್ಣಶಾಸ್ತ್ರಿಗಳು ಹೇಳುತ್ತಾರೆ.[3] ಕನ್ನಡ ದಾಂಟು (ದಾಟು) ಶಬ್ದ ತಾಂಡವಕ್ಕೆ ಸಂಬಂಧಿ.[4] ಹಿಂದೂ ಕಣಿವೆಯ ನಾಗರಿಕತೆಯ ಅನ್ವೇಷಣೆಯಿಂದ ಭಾರತದಲ್ಲಿದ್ದ ಅನಾರ್ಯರೇ ಇಲ್ಲಿನ ಕಲೆಗಳಿಗೆ ಜನ್ಮನೀಡಿದವರೆಂಬುದು ಬೆಳಕಿಗೆ ಬಂತು.[5] ಹರಪ್ಪ ಮೊಹೆಂಜೊದಾರೊ ಸಂಸ್ಕೃತಿಯ ಕಾಲದಲ್ಲಿ 'ಸಂಗೀತ ನರ್ತನಗಳು

---

1. 'We think it has now been made sufficiantly clear that the distinction of mārga from dēśi is not a distinction of aristocratic and cultivated from folk and primitive art, but one of sacred and traditional from profane and sentimental art'. The Nature of 'Folklore' and 'Popular Art', By Ananda Coomaraswamy. *Indian Art and Letters*, Vol. XI, No. 2, 1937, p. 79. ವಿವರಗಳನ್ನು ಈ ಲೇಖನದಲ್ಲಿ ನೋಡಬಹುದು.

2. ಭರತಖಂಡದಲ್ಲಿ ರೂಪಕ ಕಲೆಯ ಜನನ. ಕಲಾದರ್ಶಿನಿ. ಲಲಿತಕಲಾಮಹೋತ್ಸವ ಸಂಚಿಕೆ 1966. ಪು. ೯–೧೨.

3. ಸಂಸ್ಕೃತ ನಾಟಕ. ಪು. ೪೮.

4. *A Dravidian Etymological Dictionary*–T. Burrow and M. B. Emeneau, p. 204.

5. 'However, the discovery of Indus Vally Civilisation upset the earlier theories by shifting the emphasis from the Aryans to non-Aryans and gradually it was revealed that the Contribution of the non-Aryan population in the domain of art and literature was not only great but it could form the basis of music, dance and drama in India'. 'Drama' By Indu Shekhar, Cultural Forum. Special Number on Indological Studies, 1964, Ministry of Education, p. 66.

ಪ್ರಚಾರದಲ್ಲಿದ್ದುವೆಂದು ಕೆಲವು ವಿಗ್ರಹಗಳಿಂದಲೂ ಮುದ್ರಿಕೆಗಳಿಂದಲೂ ಊಹಿಸಬಹುದು. ಕಂಚಿನಿಂದ ಮಾಡಿದ ಅನಾಗರಿಕ ಸ್ತ್ರೀಯರ ನಗ್ನವಿಗ್ರಹಗಳೂ ನಟರಾಜನಂತೆ ಕಾಲೆತ್ತಿಕೊಂಡಿರುವ ಕಲ್ಲಿನ ವಿಗ್ರಹಗಳು ನೃತ್ಯಕಲೆಗೆ ಸಾಕ್ಷಿಯಾಗಿವೆ........ ಬಹುಶಃ ಸೂತ್ರದ ಗೊಂಬೆಯಾಟವೂ ಪ್ರಚಾರದಲ್ಲಿದ್ದಿತು' ಎಂದು ಡಾ. ಎಸ್. ಶ್ರೀಕಂಠಶಾಸ್ತ್ರೀ ಅವರು ಹೇಳಿದ್ದಾರೆ.[6]

ಚಿತ್ರಶಿಲ್ಪಗಳು ನಾಟ್ಯಚರಿತ್ರೆಯ ರಚನೆಗೆ ತುಂಬಾ ಸಹಾಯಕವಾಗಬಲ್ಲುವು. ಬರೀ ಹಸ್ತಗಳನ್ನು ಗಮನಿಸಿದರೆ ಒಂದೊಂದರ ಬೆಳೆವಣಿಗೆಗೂ ನಮಗೆ ಆಧಾರಗಳು ಸಿಗುತ್ತವೆ. ಕಥಕ್ಕಳಿಯ ಸೂಚೀಹಸ್ತವು ಭರತನಾಟ್ಯದ ಸೂಚೀಹಸ್ತಕ್ಕಿಂತ ಪ್ರಾಚೀನವಿರಬೇಕೆನಿಸುತ್ತದೆ. ಏಕೆಂದರೆ ಕಥಕ್ಕಳಿಯ ಸೂಚಿ ನಾವು ದೈನಂದಿನ ಜೀವನದ ವ್ಯವಹಾರಗಳಲ್ಲಿ ಬಳಸುವ ರೂಢಿಯನ್ನು ಹೋಲುತ್ತದೆ ; ಸುಲಭವಾಗಿ ಹಿಡಿಯುವಂಥದೂ ಆಗಿದೆ. ಸಾಮಾನ್ಯವಾಗಿ ಯಾವ ಹಸ್ತವು ಹೆಚ್ಚು ಕಲಾತ್ಮಕವೋ, ಅದನ್ನು ಹಿಡಿಯಲು ಹೆಚ್ಚು ಕಷ್ಟವೋ ಆ ಹಸ್ತ ಈಚಿನದೆನ್ನಬಹುದು. ಭರತನಾಟ್ಯದ ಸೂಚಿ ಹೆಚ್ಚು ಕಲಾತ್ಮಕವಾದುದು, ಹೆಚ್ಚಿನ ಪರಿಶ್ರಮಪೂರ್ವಕ ಅಭ್ಯಾಸವನ್ನು ಅಪೇಕ್ಷಿಸತಕ್ಕುದು. ಶಿಲ್ಪಚಿತ್ರಗಳಲ್ಲಿನ ಹಸ್ತಗಳ ಅಧ್ಯಯನ ಒಂದು ಮಹಾಪ್ರಬಂಧಕ್ಕೆ ವಸ್ತುವಾಗಬಲ್ಲುದು. ಹತ್ತಿಪ್ಪತ್ತು ವರ್ಷಗಳ ಶ್ರಮ ಅಗತ್ಯಬೀಳತಕ್ಕುದು. ಒಂದು ಆಯುಧವನ್ನು, ವಸ್ತುವನ್ನು ಹಿಡಿದಿರಬೇಕಾದರೆ ಮುಷ್ಟಿಮಾತ್ರವಲ್ಲದೆ ಶಿಖರ, ಕಟಕಾಮುಖ, ಸೂಚೀ, ಸಿಂಹಾಸ್ಯ, ಅಲಪದ್ಮ ಮೊದಲಾದ ಹಸ್ತಗಳನ್ನು ಹಿಡಿದಿರುವುದು ಕಂಡುಬರುತ್ತದೆ. ಅವನ್ನು ಕಾಲಾನುಕ್ರಮ ದೃಷ್ಟಿಯಿಂದ ಪರಿಶೀಲಿಸುವುದು ಯೋಗ್ಯವಾಗಿದೆ. ಭರತ ಹೇಳಿರುವ ಹಸ್ತಗಳು, ಅವುಗಳ ವಿನಿಯೋಗಗಳು ಕೆಲವೇ. ಹೆಚ್ಚಿನವುಗಳನ್ನು, ವೈವಿಧ್ಯಗಳನ್ನು ಚಿತ್ರಶಿಲ್ಪಗಳಲ್ಲಿ ಕಾಣಬಹುದು. ಸೂಚೀಮುಖದಲ್ಲೂ ಹಲವು ವಿನ್ಯಾಸಗಳನ್ನು ಗುರುತಿಸಬಹುದು. ನಾಟ್ಯಶಾಸ್ತ್ರಕ್ಕೆ ಭಿನ್ನವಾದ ವಿವರಗಳೇ ನಮಗೆ ಖಚಿತ ಆಧಾರಗಳಾಗಿವೆ. ಕ್ರಿಸ್ತಪೂರ್ವದಿಂದ ನಾಟ್ಯಶಾಸ್ತ್ರ ಭಾರತದ ಎಲ್ಲೆಡೆಗಳಲ್ಲೂ ಒಂದೇ ರೂಪದಲ್ಲಿ ಪ್ರಚಾರದಲ್ಲಿತ್ತು ಎನ್ನಲು ಆಧಾರವಿಲ್ಲ. ಅಲ್ಲಲ್ಲಿನ ಚಿತ್ರಶಿಲ್ಪಗಳು ಅಲ್ಲಲ್ಲಿ ಪ್ರಚಲಿತವಿದ್ದ ನಾಟ್ಯಕಲೆಯ ರೀತಿ ವೈವಿಧ್ಯವನ್ನು ತಿಳಿಸಬಲ್ಲುವು. ನಾಟ್ಯಶಾಸ್ತ್ರಕಿಂತಲೂ ಚಿತ್ರಶಿಲ್ಪಗಳು ನಾಟ್ಯಚರಿತ್ರೆಯ ರಚನೆಗೆ ಮುಖ್ಯ ಆಧಾರವೆಂಬುದನ್ನು ಮನಗಾಣಬಹುದು. ನೃತ್ಯ ಹೇಗೋ ಚಿತ್ರವೂ ತ್ರೈಲೋಕ್ಯಾನುಕೃತಿಯೇ ಆಗಿದೆ. 'ಹಾಸತಿವ ಚ ಮಾಧುರ್ಯಂ ಯತ್ ಸಜೀವ ಇವ ದೃಶ್ಯತೇ' ಎಂದು ವಿಷ್ಣುಧರ್ಮೋತ್ತರವು ಹೇಳುತ್ತದೆ. ಚಿದಂಬರ, ಬೇಲೂರು, ಹಳೇಬೀಡು, ಅಬು ಬೆಟ್ಟದಲ್ಲಿನ ಶಿಲ್ಪಗಳನ್ನು ಅವಲೋಕಿಸಬೇಕು. ಕನ್ನಡದ ವೈಶಿಷ್ಟ್ಯವನ್ನು ಗುರುತಿಸಬೇಕು. ಬಾದಾಮಿ

6. ಹರಪ್ಪ-ಮೊಹೆಂಜೊದಾರೊ, ಭಾರತೀಯ ಸಂಸ್ಕೃತಿದರ್ಶನ, ಪು. ೧೩.

ಚಾಲುಕ್ಯರ ಕಾಲದ ಶಿಲ್ಪದ ವಿಕಾಸ(ಕ್ರಿ.ಶ. ೪೫೦ರಿಂದ ೭೫೦)ವು ಪರಿಶೀಲನಾರ್ಹ. ಹೊಯ್ಸಳರ ಕಾಲದಲ್ಲಿ ನೃತ್ಯವು ಪ್ರವರ್ಧಮಾನವಾಗಿತ್ತು. ಶಾಂತಲೆ 'ಗೀತವಾದ್ಯ ನೃತ್ಯ ಸೂತ್ರಧಾರೆ'ಯಾಗಿದ್ದಳು. ವಿಷ್ಣುವರ್ಧನನು 'ಸಂಗೀತಪ್ರಸಂಗ ಭಂಗೀ ಸಂಗತ ಚತುರ ಭರತ'ನಾಗಿದ್ದನು. ಭಂಗೀಸಂಗತ, ಭರತ—ಎರಡೂ ನಾಟ್ಯವನ್ನು ಸೂಚಿಸತಕ್ಕವು. ಅಜಂತಾದ ಗುಹಾಂತರ್ದೇವಾಲಯಗಳ ಭಿತ್ತಿಗಳ ಮೇಲೆ ಕ್ರಿ.ಪೂ. ೧ನೇ ಶತಮಾನದಿಂದ ಕ್ರಿ.ಶ. ೭ನೇ ಶತಮಾನದವರೆಗೆ ಎದ್ದ ಚಿತ್ರಗಳು ಕರ್ನಾಟಕ ದಲ್ಲಿ ಮಾತ್ರವಲ್ಲ ಭಾರತಕ್ಕೇ ಮೊದಲು ರಚಿತವಾದುವುಗಳು. ಬಾದಾಮಿಗುಹೆಗಳಲ್ಲಿ, ವೈಷ್ಣವಗವಿಯಲ್ಲಿ ಕ್ರಿ.ಶ. ೫೦೦ರಲ್ಲಿ ಎರಡನೇ ಪುಲಿಕೇಶಿಯ ಚಿಕ್ಕಪ್ಪನಾದ ಮಂಗಳೇಶನು ಕೊರೆಸಿದ 'ಗಿರಿಜಾ ಕಲ್ಯಾಣ' ಭಿತ್ತಿಚಿತ್ರ ಆ ಕಾಲದಲ್ಲಿ ಕರ್ನಾಟಕ ದಲ್ಲಿದ್ದ ರೂಪಕಕಲೆಯನ್ನು ತೋರುತ್ತದೆ. ವಿಜಯನಗರ ಕಾಲದ ಹಂಪೆಯ ವಿರೂ ಪಾಕ್ಷ ಮತ್ತು ಶ್ರೀಕೃಷ್ಣಸ್ವಾಮಿ ದೇವಾಲಯಗಳಲ್ಲಿನ ರಾಮಾಯಣ ಹಾಗೂ ಶ್ರೀಕೃಷ್ಣಲೀಲೆಯ ವಸ್ತುವುಳ್ಳ ವರ್ಣಚಿತ್ರಗಳು ಆ ಕಾಲದ ನಾಟ್ಯವಸ್ತು, ಪದ್ಧತಿ ಯನ್ನು ತಿಳಿಸುತ್ತವೆ.

ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಯನ್ನು ಶಾಸನಗಳ ಅವಲೋಕನದಿಂದ ರಚಿಸಲೆತ್ನಿಸಿರುವ ಡಾ. ಎಂ. ಚಿದಾನಂದಮೂರ್ತಿ ಅವರು ದೇವದಾಸಿಯರನ್ನು, ನರ್ತಕಿಯರನ್ನು ಕುರಿತು ಪ್ರಸ್ತಾಪಿಸಿದ್ದಾರೆ.[7] ದೇವಸ್ಥಾನಗಳಲ್ಲಿ ನರ್ತಕಿಯರು ದೇವದಾಸಿಯರಾಗಿದ್ದ ಮಾತ್ರಕ್ಕೆ ದೇವದಾಸಿಯರಲ್ಲದ ನರ್ತಕಿಯರು ಇರಲಿಲ್ಲ ವೆಂದಾಗುವುದಿಲ್ಲ. 'ಹತ್ತನೆಯ ಶತಮಾನದಿಂದೀಚೆಗೆ ಶಾಸನಗಳಲ್ಲಿ ದೇವದಾಸಿಯರಲ್ಲಿ 'ಪಾತ್ರ' ಮತ್ತು 'ಸೂಳೆ' ಎಂದು ಎರಡು ವಿಭಾಗವಾಡುವಂತೆ ತೋರುತ್ತದೆ' ಎಂದು ಹೇಳಿದ ಲೇಖಕರು 'ಪಾತ್ರಕ್ಕೆ ವೇಶ್ಯೆಯೆಂಬ ಅರ್ಥ'ವಿರುವುದನ್ನು ಹೇಳಿ 'ಪಾತ್ರ ಮತ್ತು ಸೂಳೆಯರಿಬ್ಬರೂ ವೇಶ್ಯೆಯರು' ಎಂದಿದ್ದಾರೆ.[8] ಇವರೇ ಮುಂದೆ 'ಮಹಾಮಂಡಲೇಶ್ವರ ಗಂಗಪೆರ್ಮಾಡಿಯ ಪತ್ನಿ ಬಾಚಲದೇವಿಯು ತನ್ನ ನೃತ್ಯ ಕೌಶಲವನ್ನು ಪ್ರದರ್ಶಿಸಿ ತನ್ನ ಗಂಡನಿಂದ 'ಪಾತ್ರ ಜಗದಳೆ' ಎಂಬ ಬಿರುದನ್ನು ಸಂಪಾದಿಸಿದ್ದಳು' ಎಂದಿದ್ದಾರೆ.[9] ಹಾಗಾದರೆ ಬಾಚಲದೇವಿ ವೇಶ್ಯೆಯಾಗಿದ್ದಳೆ? ದೇವದಾಸಿಯಾಗಿದ್ದಳೆ? ಹಾಗಿರಲಾರದು. ಕ್ರಿ.ಶ. ೧೧೧೩ರ ಶಾಸನ ಇದು. ಈ ಕಾಲದಲ್ಲಿ 'ಪಾತ್ರ' ಶಬ್ದಕ್ಕೆ ಒಳ್ಳೆಯ ಅರ್ಥವಿದ್ದುದು (ಹಾಗಿಲ್ಲದಿದ್ದಲ್ಲಿ ಪಾತ್ರ ಎಂಬ ಬಿರುದನ್ನು ಗಂಡನೇ ಕೊಡುತ್ತಿರಲಿಲ್ಲ) ಹತ್ತನೆಯ ಶತಮಾನದಲ್ಲಿ ಕೆಟ್ಟು ಹೋಗಿದ್ದಿರಲಾರದು. ಪಾತ್ರವೆನ್ನುವುದಕ್ಕೆ ಪಾತ್ರವೆಂದಷ್ಟೇ ಅರ್ಥ. ಪಾತ್ರದ

---

7. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ. ಪುಟಗಳು. ೧೮೦–೧೮೬, ೪೧೨–೧೩.
8. ಅದೇ. ಪು. ೧೮೨.
9. ಅದೇ. ಪು. ೪೧೨.

ಸೂಳೆ ಎನ್ನುವಾಗ ಅವಳು ವೇಶ್ಯೆಯೆನ್ನಿಸಲಿ. ವೇಶ್ಯೆಯಾಗಿರದ ಪಾತ್ರಗಳೂ ಇದ್ದಿರಲು ಸಾಧ್ಯವೆನ್ನುವುದಕ್ಕೆ ಬಾಚಲದೇವಿಯೇ ಸಾಕ್ಷಿ. ಉತ್ತರಭಾರತದಲ್ಲಿ ಪಾತ್ರ ಶಬ್ದಕ್ಕೆ ವೇಶ್ಯೆ ಎಂಬ ಅರ್ಥವಿದ್ದರೆ ಕರ್ನಾಟಕದಲ್ಲಿ ಪಾತ್ರವಹಿಸುವವರೆಲ್ಲ ವೇಶ್ಯೆಯರಾಗಬೇಕಾಗಿಲ್ಲ.[10] 'ತಾವು ರಂಭೆ ಊರ್ವಶಿಯ ವಂಶದವರು ಎಂದು ಹೇಳಿಕೊಳ್ಳುವ, ನೃತ್ಯಕಲೆಯ ಆರಾಧಕರಾಗಿರುವ ಪತ್ರದವರು ಎಂಬ ಒಂದು ಸಮಾಜವಿದೆ' ಎಂದು ಕುಮಾರವೆಂಕಣ್ಣನವರು ಹೇಳಿದ್ದಾರೆ.[11] ಪಾತ್ರದವರೇ ಪತ್ರದವರಾಗಿರಬಹುದೇನೊ. ಈ ಸಮಾಜವೂ ವೇಶ್ಯೆಯರದಾದರೆ ಆ ಮಾತು ಬೇರೆ. ಒಟ್ಟಿನಲ್ಲಿ ಗೌರವವುಳ್ಳ 'ಪಾತ್ರ'ದವರೂ ಇದ್ದರೆನ್ನುವುದು ಇಲ್ಲಿ ಮುಖ್ಯವಾದುದು.

ನಾಟ್ಯನಾಟಕ ಕಲೆಗಳು ಕೆಟ್ಟಹೆಸರು ಪಡೆವ ಉದಾಹರಣೆಗಳು ಇಂದು ನಿನ್ನೆಯವಲ್ಲ. ಕಾಮದಲ್ಲೆ ಕಲೆಗಳ ಉತ್ಪತ್ತಿ ಹೇಳುವವರಿದ್ದಾರೆ. ಕ್ರಿ.ಪೂ. ನಾಲ್ಕನೇ ಶತಮಾನದ ಗ್ರೀಕ್ ನಾಟಕಕಾರ ಲಿಸಿಸ್ಟ್ರಾಟ್ ಎಂಬುವನು ಕಾಮೋತ್ತೇಜಕ ನೃತ್ಯವನ್ನು ತನ್ನೊಂದು ನಾಟಕದಲ್ಲಿ ಹೇಳಿದ್ದಾನೆ. ಗ್ರೀಕ್ ಚರಿತ್ರಕಾರ ಹೆರೊಡೊತಸ್ ಅಂಥದೇ ನೃತ್ಯವನ್ನು ವರ್ಣಿಸಿದ್ದಾನೆ. ರೋಮನ್ ರಂಗಭೂಮಿ ವ್ಯಭಿಚಾರಗೃಹವಾಗಿತ್ತು. ಲ್ಯಾಟಿನ್ ಚರಿತ್ರಕಾರ ಲಿವಿ ಎಂಬಾತನೂ ಇಂಥದೇ ಸಂಪ್ರದಾಯವನ್ನು ಹೇಳಿದ್ದಾನೆ.[12] 'ಪ್ರಾಚೀನ ಈಜಿಪ್ಟ್, ಸಿರಿಯ, ಅರೇಬಿಯ ಮುಂತಾದ ಮಧ್ಯಪ್ರಾಚ್ಯ ದೇಶಗಳಲ್ಲಿಯೂ ಈ (ದೇವದಾಸಿ) ಸಂಪ್ರದಾಯವಿತ್ತಲ್ಲದೆ ದೇವದಾಸಿಯರೊಂದಿಗೆ ಸಂಬಂಧವಿಟ್ಟುಕೊಳ್ಳುವುದು ಪುಣ್ಯಕಾರಿ ಎಂದು ಅಲ್ಲಿನ ಜನ ನಂಬಿದ್ದರು.'[13] ಈಗ ವೇಶ್ಯೆಗೆ ಬಳಕೆಯಲ್ಲಿರುವ 'ಗುಡಿಶೆಟ್ಟಿ' ಎಂಬ ಶಬ್ದ ದೇವದಾಸಿಯರೆಂಬ ಅರ್ಥವನ್ನು ಹೊಂದಿತ್ತು.[14]

೧೫೦ ವರ್ಷಗಳ ಹಿಂದೆ

ಭಾರತದ ಗವರ್ನರ್ ಜನರಲ್ ಆಗಿದ್ದ ವೆಲ್ಲೆಸ್ಲಿಯ ಅಪ್ಪಣೆಯ ಮೇರೆಗೆ

---

10. ಕೊಡಗಿನಲ್ಲಿ ಚೂಲೆ (ಸೂಳೆ) ಎಂಬುದಕ್ಕೆ ನರ್ತಕಿ ಎಂಬರ್ಥವಿದೆ. ಅಂದಮಾತ್ರಕ್ಕೆ ಕರ್ನಾಟಕದಲ್ಲೆಲ್ಲಾ ಆ ಅರ್ಥವಿಲ್ಲ. 'ಪಾತ್ರ' ಶಬ್ದಕ್ಕೆ ಆ ಅರ್ಥ ಬರುವುದು ಅಸಂಭವವೆನ್ನಲಾಗದು. ಕೂತ್ತು–ಒಂದುನಾಟ್ಯ, ಕೂತ್ತಿ ಎಂದರೆ ನರ್ತಕಿ, ಅದಕ್ಕೆ ವೇಶ್ಯೆ ಎಂಬರ್ಥವಿದೆ. ಸೇವಾವೃತ್ತಿಯಲ್ಲಿರುವ 'ತೊತ್ತು' ಕೂಡ ವೇಶ್ಯೆ ಎನಿಸಿತು. ನಮ್ಮ ಅಭಿಪ್ರಾಯ ದೇವದಾಸಿಯರಲ್ಲದ, ವೇಶ್ಯೆಯರಲ್ಲದ 'ಪಾತ್ರ'ಗಳೂ ಇದ್ದುವೆಂಬುದು.

11. ಮಹಾತ್ಮಾಗಾಂಧಿ ವಿದ್ಯಾಪೀಠ (ಬೆಂಗಳೂರು)ದವರು ಪ್ರಕಟಿಸಿರುವ ನೃತ್ಯ ಮಹೋತ್ಸವ ಪುರವಣಿಯಲ್ಲಿ 'ಕರ್ನಾಟಕದ ನೃತ್ಯಕಲೆ' ಲೇಖನ. ಪು. ೧೩.

12. *Dictionary of Aphrodisiacs* by H. E. Wedeck 1964. pp. 33, 85, 108, 210.

13. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ. ಪು. ೧೮೦.

14. ಗುಡಿಚೇಟಿಕಾ, ಗುಡಿಚೇಟಿ > ಗುಡಿಚೆಟ್ಟಿ > ಗುಡಿಶೆಟ್ಟಿ > ಗುಡ್‌ಸೆಟ್ಟಿ.

೧೮೦೦ರಲ್ಲಿ ಮದರಾಸಿನಿಂದ ಮೈಸೂರು, ಕೆನರಾ ಮತ್ತು ಮಲಬಾರಿನ ಪ್ರವಾಸವನ್ನು ಫ್ರಾನ್ಸಿಸ್ ಬುಶನನ್ ಎಂಬಾತನು ಮಾಡಿದನು. ಮೈಸೂರು ರಾಜರ ಅಂಕೆಯಲ್ಲಿದ್ದ ಸ್ಥಳಗಳನ್ನೆಲ್ಲಾ ಇವನು ಸುತ್ತಾಡಿದ್ದಾನೆ. ಕೊಯಮತ್ತೂರಿನ ನರ್ತಕಿಯರನ್ನು ಕುರಿತು ಇವನು ಬರೆದಿರುವುದು ಅಂದಿನ ನೃತ್ಯಗಾತಿಯರ ಸ್ಥಿತಿ ಹೇಗಿತ್ತೆಂಬುದನ್ನು ವಿಶದಪಡಿಸುತ್ತದೆ.

ಕೊಯಮತ್ತೂರು ಕರ್ನಾಟಕಕ್ಕೆ ಸೇರಿತ್ತು. ಮೈಸೂರರಸರ ಅಧೀನದಲ್ಲಿತ್ತು. ಹೈದರನು ಆಳಿದ ನೆಲ. ಕರ್ನಾಟಕದ ತೊರಚರು, ತೊರೆಯರು ಅಲ್ಲಿದ್ದುದನ್ನು ಹೇಳಲಾಗಿದೆ.[15] ಇಲ್ಲಿನ ನರ್ತಕಿಯರನ್ನು ಕುಂಚಣಿಯರು ಎಂದು ಕರೆದಿದ್ದಾನೆ.[16] ಅವರದೇ ಒಂದು ಬೇರೆ ವರ್ಗವಿತ್ತು. ಅವರ ಬದುಕನ್ನು ಚೆನ್ನಾಗಿ ವರ್ಣಿಸಿದ್ದಾನೆ.[17] ಇವರು ಮದುವೆಗಳಲ್ಲೂ ನರ್ತಿಸುತ್ತಿದ್ದರು.

---

15. ಬುಶ್‌ನನ್ ಸತ್ಯಮಂಗಲದ ಬಗೆಗೂ ಬರೆದಿದ್ದಾನೆ. ಕನ್ನಡ ಮಾತನಾಡುವವರ ಪ್ರದೇಶ. ಕಂಠೀರವ ನರಸರಾಜ ಒಡೆಯರ ಆಳಿಕೆಯಲ್ಲಿದ್ದರು. ಕನ್ನಡದಲ್ಲಿ ಲೆಕ್ಕಪತ್ರಗಳನ್ನು ಬರೆದಿಡುತ್ತಿದ್ದರು. ಇಂಗ್ಲಿಷರ ಕೈಗೆ ಬಂದಮೇಲೆ ಮರಾಠಿಗರಿಗೆ ಸೇರಿತು. ೧೮೦೦ರಹೊತ್ತಿಗೇ ತಮಿಳರು ನೆಲಸಿ ಹೆಚ್ಚಾಗಿದ್ದರು.

16. ಬುಶ್‌ನನ್ 'Cuncheny' ಎನ್ನುತ್ತಾನೆ. ಕುಣಿಯುವವರು ಎಂದು ಅರ್ಥವೋ ಕುಂಟಣಿಯರೋ ತಿಳಿಯದು. ಹೀನಾರ್ಥವಿದ್ದರೂ ಬಾಧಕವಿಲ್ಲ. ಕೊಂಟಿ ಎಂಬುದಕ್ಕೆ ವೇಶ್ಯೆಯೆಂಬ ಅರ್ಥವಿದೆ.

17. "These dancing women, and their musicians, thus now form a seperate kind of caste; and a certain number of them are attached to every temple of any consequence The allowances which the musicians receive for their public duty is very small; yet morning and evening they are bound to attend at the temple to perform before the image· They must also receive every person travelling on account of the government, meet him at some distance from the town, and conduct him to his quarters with music and dancing· All the handsome girls are instructed to dance and sing, and are all prostitutes, at least to the Brahmans· In ordinary sets they are quite common...The Mussalman officers in particular were exceedingly attached to this kind of company and lavished away on these women a great part of their incomes····To my taste nothing can be more silly and unanimated than the dancing woman, nor more harsh and barbarous than their music····Most of them that I have had an opportunity of seeing have been very ordinary in their looks,

ಒಟ್ಟೊ ರೊತ್‌ಫೆಲ್ಡ್ ಅವರು ಭಾರತದ ನೃತ್ಯಗಳನ್ನು ಕುರಿತು ತಾವು ಕಂಡ ವಿವರಗಳನ್ನು ಬರೆದಿದ್ದಾರೆ. ಭಾರತೀಯ ನೃತ್ಯಗಳಲ್ಲಿ ಸಾಹಿತ್ಯವೇ ಪ್ರಧಾನವಾದುದು, ಹಾಡಿಗೆ ಅಧೀನವಾದುದು ಎಂಬುದನ್ನು ಗುರುತಿಸಿದ್ದಾರೆ. ಹೆಜ್ಜೆಯನ್ನು ಬಲಚರಣದಿಂದ ಆರಂಭಿಸುವುದು ರೂಢಿ. ಬಲಚರಣ ತಾಳವನ್ನು ತೋರುವುದರಲ್ಲಿ ಪ್ರಧಾನ ಪಾತ್ರವಹಿಸುತ್ತದೆ, ಎಡಚರಣ ಲಯವನ್ನು ಪೂರ್ತಿಗೊಳಿಸುತ್ತದೆ—ಎಂದಿದ್ದಾನೆ.[18] ನೃತ್ಯವನ್ನು ಉತ್ತರದಕ್ಷಿಣಗಳೆಂದು ವರ್ಗೀಕರಿಸಿದ್ದಾನೆ. ಉತ್ತರದಲ್ಲಿ ದೆಹಲಿ ಲಕ್ನೋಗಳು ಕೇಂದ್ರವಾದರೆ ದಕ್ಷಿಣದಲ್ಲಿ ಮದರಾಸು ಮೈಸೂರು. ಉತ್ತರದ ನರ್ತಕಿಯರಿಗೆ ದೇವಸ್ಥಾನದ ಸಂಬಂಧವೇನೂ ಇಲ್ಲ. ಅಲ್ಲಿ ಮುಸ್ಲಿಮ್ ಮತೀಯರು ಹೆಚ್ಚು. ನರ್ತಕಿಯರು ಮುಸ್ಲಿಮ್ ಉಡುಪು ತೊಡುತ್ತಾರೆ. ಹಸ್ತಗಳನ್ನು ಬಳಸುತ್ತಾರೆ. ತಾಳಸೂಚನೆಯೇ ಪ್ರಧಾನ ಹೊರತು ಭಾವಾಭಿವ್ಯಕ್ತಿ ತೀರ ಕಡಮೆ ಎಂದಿದ್ದಾನೆ.[19] ಉತ್ತರದ ಕಥಕಕ್ಕೂ ದಕ್ಷಿಣದ ಭರತನಾಟ್ಯಕ್ಕೂ ಇರುವ ವ್ಯತ್ಯಾಸವನ್ನು ಮನಗಂಡಿರುವುದು ಸ್ಪಷ್ಟವಾಗಿದೆ. ತಂಜಾವೂರು ಪಂಥವನ್ನು ಹೊಗಳಿ[20] ಇಲ್ಲಿದ್ದ ಕೀಳು ಅಭಿರುಚಿಯನ್ನು, ಅವಿದ್ಯೆಯನ್ನು ಟೀಕಿಸಿದ್ದಾನೆ. ಸೌಂದರ್ಯಪ್ರಜ್ಞೆಯೇ ಈ ಭಾರತದ ಮಂದಿಗಿಲ್ಲವಲ್ಲಾ ಎಂದು ವ್ಯಥೆಪಟ್ಟಿದ್ದಾನೆ. ಶಿಷ್ಯರಿಗೆ ರಹಸ್ಯವನ್ನು ಬಿಟ್ಟುಕೊಡದ ಗುರುಗಳ ಲಘುತ್ವವನ್ನು ನೊಂದು ಪ್ರಸ್ತಾಪಿಸುತ್ತಾನೆ. 'ಪ್ರತಿಯೊಂದು ದೇವಾಲಯದಲ್ಲೂ ಆರು, ಎಂಟು ಅಥವಾ ಇನ್ನೂ ಹೆಚ್ಚು ಜನ ನರ್ತಕಿಯರಿರುತ್ತಾರೆ, ಇವರು ದಿನಕ್ಕೆರಡುಬಾರಿ!' ಬೆಳಿಗ್ಗೆ ಮತ್ತು ಸಂಜೆ ದೇವರೆದುರು ಹಾಡಿಕೊಂಡು ಕುಣಿಯುವರು. ವೃದ್ಧ ಸಂಗೀತಗಾರರು, ನರ್ತಕರು ಈ ಹುಡುಗಿಯರಿಗೆ ನೃತ್ಯ ಹೇಳಿಕೊಡುತ್ತಾರೆ. ಈ ನರ್ತಕಿಯರು ಸ್ವತಂತ್ರರು. ಯಾವ ನೀತಿನಿಯಮಗಳಿಗೂ ಕಟ್ಟುಬೀಳದೆ ತಮ್ಮ ಸುಖ ಸಂತೋಷಗಳನ್ನು ಸಾಧಿಸಿಕೊಳ್ಳಬಹುದಾಗಿತ್ತು.

ತಂಜಾವೂರಲ್ಲದೆ ಪೋರ್ಚುಗೀಸ್ ಆಡಳಿತದಲ್ಲಿನ ಗೋವಾ ಮತ್ತು ಅದರ ನೆರೆಯಜಿಲ್ಲೆಗಳು, ಪಶ್ಚಿಮಘಟ್ಟದ ಕೆಳಗೆ ಸಮುದ್ರತೀರದ ಪ್ರದೇಶಗಳಲ್ಲಿ ಹಾಡುಗಾರರಿದ್ದಾರೆ. ಇವರನ್ನು ನಾಯಕಿಯರು ಎನ್ನುತ್ತಾರೆ. ಕಿಂಚಿತ್‌ಗೌರವವೂ ಇವರಿಗೆ ಸಿಗುತ್ತಿಲ್ಲ. ಸ್ವರ್ಗದಲ್ಲಿ ದೇವತೆಗಳನ್ನು ಸಂತೋಷಪಡಿಸುವ ಅಪ್ಸರೆಯರ ಕುಲ

---

very indegent in their dress, and very dirty in their persons; a large proportion are more severely diseased". *A Journey from Madras through the Countries of Mysore, Canara and Malabar*, By Francis Buchanan, II Ed., Vol. I, pp. 475-6.

18. *Woman of India*. By Otto Rothfeld. pp. 154-5. ಯಾವ ವರ್ಷದಲ್ಲಿ ಪ್ರಕಟವಾಯಿತೆಂಬ ವಿವರ ಇದರಲ್ಲಿ ನಮೂದಿತವಾಗಿಲ್ಲ.

19. ಅದೇ. ಪು. ೧೫೮.

20. ಅದೇ. ಪು. ೧೫೯.

ತಮ್ಮದೆಂದು ಹೇಳಿಕೊಳ್ಳುತ್ತಾರೆ. ಆದರೆ ಇವರು ಇತರ ವರ್ಗಗಳಿಂದ ಮಕ್ಕಳನ್ನು ಕೊಂಡುಕೊಂಡೋ, ದತ್ತುಪಡೆದೋ ಸಾಕಿಕೊಳ್ಳುತ್ತಾರೆ. ತುರುಬಿನಲ್ಲಿ ಚಿನ್ನದ ಒಡವೆಗಳು, ಬಳೆ, ಉಂಗುರ, ಬೆಳ್ಳಿಯ ಸೊಂಟದಪಟ್ಟಿ, ತಲೆತುಂಬಾ ಹೂ. ಇವರ ಜೀವನ ಸರಳ. ದಿನವೆಲ್ಲಾ ಕೆಲಸವಿಲ್ಲದೆ ಕಾಲಕಳೆಯುತ್ತಾರೆ[21]. ಹಿಂದೆ ದೇವಾಲಯಗಳಲ್ಲಿ ಸುಖವಾಗಿರುತ್ತಿದ್ದರು ನರ್ತಕಿಯರು. ಇಂದು ಭಿಕ್ಷೆಬೇಡುವ ಸ್ಥಿತಿಯಲ್ಲಿದ್ದಾರೆ. ಹಿಂದೆ ಸುಶಿಕ್ಷಿತರಾಗಿದ್ದು ರಾಜಕುಮಾರಿಯರಿಗೆ ಶಿಕ್ಷಕಿಯರಾಗಿದ್ದಂಥವರು ಇಂದು ನಿರಕ್ಷರಕುಕ್ಷಿಗಳಾಗಿದ್ದಾರೆ ಎಂದೆಲ್ಲಾ ಹೇಳಿದ್ದಾನೆ.[22]

ಮೈಸೂರಿನ ವೈಶಿಷ್ಟ್ಯ

ಹಸ್ತಾಭಿನಯ ಭಾರತದಲ್ಲಿ ಬೆಳೆದಷ್ಟು ಪ್ರಪಂಚದಲ್ಲಿ ಎಲ್ಲೂ ಬೆಳೆದಿಲ್ಲ. ಅದರಲ್ಲೂ ದಕ್ಷಿಣಭಾರತದ್ದೇ ಸಿಂಹಪಾಲು. ದಕ್ಷಿಣಭಾರತದಲ್ಲೂ ನಾಟ್ಯಪದ್ಧತಿ ಪ್ರಾಚೀನ ಕಾಲದಿಂದಲೂ ಒಂದೇರೀತಿಯಾಗಿರಲಿಲ್ಲ. ಪ್ರಾದೇಶಿಕ ವೈವಿಧ್ಯಗಳು ಭಾಷೆಯಲ್ಲಿ ಹೇಗೋ ಕಲೆಯಲ್ಲೂ ಹಾಗೆಯೇ. ಭಾಷಾವೈವಿಧ್ಯದ ಬಗೆಯನ್ನು ತಿಳಿದವರಿಗೆ ಕಲಾ ವೈವಿಧ್ಯದ ಸೂತ್ರ ಚೆನ್ನಾಗಿ ಮನದಟ್ಟಾಗುತ್ತದೆ. ಹಿಂದೆ ಪೂರ್ವ ದ್ರಾವಿಡ ವೆಂಬುದೊಂದಿತ್ತು ಎನ್ನುತ್ತಾರಷ್ಟೆ. ಆ ಪೂರ್ವದ್ರಾವಿಡವೂ ಎಲ್ಲೆಡೆಯೂ ಒಂದೇ ರೂಪದಲ್ಲಿದ್ದಿತೆಂದು ಹೇಳಬರುವುದಿಲ್ಲ. ಅದರಲ್ಲೂ ಪ್ರಾದೇಶಿಕ ವೈವಿಧ್ಯ ಇರಲೇಬೇಕು. ಅದು ಬೆಳೆದು, ಕವಲುಗೊಂಡು ಕನ್ನಡ ತಮಿಳು ಮಲೆಯಾಳ ಮೊದಲಾದುವುಗಳಾಗಿವೆಯಷ್ಟೆ. ಕನ್ನಡವೆಂದರೂ ಒಂದೇ ಅಲ್ಲ. ಕಾಲಾನುಕ್ರಮವಾಗಿ ಪೂರ್ವದ ಹಳಗನ್ನಡ, ಹಳಗನ್ನಡ ನಡುಗನ್ನಡ, ಹೊಸಗನ್ನಡ ಎಂಬ ವೈವಿಧ್ಯವಿದೆ. ಹೊಸಗನ್ನಡದಲ್ಲಿ ದಕ್ಷಿಣ ಕನ್ನಡ, ಮೈಸೂರುಕನ್ನಡ ಉತ್ತರಕನ್ನಡ, ಗ್ರಾಮ್ಯ, ನಾಗರಿಕ, ಮೊದಲಾಗಿ ಪ್ರಾದೇಶಿಕ ವೈವಿಧ್ಯವಿದೆ. ಇದೇ ವೈವಿಧ್ಯ ನಡುಗನ್ನಡದಲ್ಲೂ, ಹಳಗನ್ನಡದಲ್ಲೂ ಒಂದಲ್ಲ ಒಂದು ರೀತಿಯಲ್ಲಿ ಇದ್ದೇ ಇದ್ದಿತು. ಇದನ್ನು ಏಕೆ ಹೇಳಿದೆವೆಂದರೆ ಇದೇ ರೀತಿಯಲ್ಲಿ ಭಾರತೀಯ ನಾಟ್ಯಕಲೆಯೂ ಪ್ರಾದೇಶಿಕ ವೈವಿಧ್ಯಗಳನ್ನೊಳಗೊಂಡಿತ್ತು ಎನ್ನಲು ಇದನ್ನು ಕ್ರಿಸ್ತಪೂರ್ವದಿಂದ ನಾವು ಗೊತ್ತುಹಚ್ಚಬಹುದಾಗಿದೆ.

---

21. 'Their lives are simple and not luxurious ; but the days are idled away in the languorous ease of the tropic sea breezes, a land of repose, a lazy land. They rise late, they bathe, they eat rtce-gruel, and talk and sleep. The long afternoon is passed in more chatting and in their constant enjoyment of chewing betal leaves, till after dinner they go out to sing and dance to a late hour of the night. It is a life of quite ease, uneventful indolent no doubt, but hardly dissipated'. Ibid., p. 165.

22. ಅದೇ. ಪು. ೧೭೩.

ಭರತನ ನಾಟ್ಯಶಾಸ್ತ್ರ ಪ್ರಾಚೀನತಮವಾದ ಏಕಮೇವ ಲಕ್ಷಣಗ್ರಂಥವೆನಿಸಿದರೂ ಅದು ತುಂಬಾ ಪರಿಮಿತವಾದ ಲಕ್ಷಣಗ್ರಂಥವೆನ್ನುವುದನ್ನು ಹಿಂದೆಯೇ ಹೇಳಿದ್ದೇವೆ. ಈ ರೀತಿ ನಾವು ತರ್ಕಿಸಬಹುದು: ನಾಟ್ಯಶಾಸ್ತ್ರವನ್ನು ಭರತನೆಂಬಾತ ಭಾರತದ ಎಲ್ಲೆಡೆಗಳ ನಾಟ್ಯದ ಬಗೆಗಳನ್ನು ನೋಡಿ ಬರೆದುದಲ್ಲ. ಅವನು ಎಲ್ಲವನ್ನೂ ಹೇಳಿರಲು ಸಾಧ್ಯವೂ ಇಲ್ಲ. ನಾಟ್ಯವು ತುಂಬಾ ಉನ್ನತಿಗೇರಿ ಪತನಗೊಳ್ಳುತ್ತಿದ್ದ ಕಾಲಕ್ಕೆ ಬಂದ ಗ್ರಂಥ ನಾಟ್ಯಶಾಸ್ತ್ರ. ಅದೂ ಯಾವುದೋ ಒಂದು ಸುಸಂಸ್ಕೃತ ಕೇಂದ್ರದಿಂದ ಹೊರಬಂದಿದ್ದೀತು. ಹೊರಬಂದ ಗ್ರಂಥವೆನ್ನುವುದಕ್ಕಿಂತ ಬೆಳೆದು ಬಂದ ಗ್ರಂಥವೆನ್ನುವುದು ಸೂಕ್ತವೆನಿಸೀತು. ಭಾರತದ ಎಲ್ಲಾ ಕಡೆ ನಾಟ್ಯಶಾಸ್ತ್ರವನ್ನು ನೋಡಿಕೊಂಡೇ ನಾಟ್ಯ ಹುಟ್ಟಿದ್ದೂ ಅಲ್ಲ; ಬೆಳೆದದ್ದೂ ಅಲ್ಲ. ನಾಟ್ಯಶಾಸ್ತ್ರಕ್ಕೆ ಹಿಂದಿನ ಶಿಲ್ಪಚಿತ್ರಕಲೆಗಳಲ್ಲಿನ ರೀತಿ ಬೇರೆ ನಿಯಮಗಳನ್ನೇ ಹೊಂದಿರುತ್ತವೆ. ನಾಟ್ಯಶಾಸ್ತ್ರದ ನಿಯಮಗಳ ನೇರಕ್ಕೆ ಅವನ್ನು ಎಳೆಯುವುದು ಸಾಧುವಲ್ಲ. ಶಿಲ್ಪಚಿತ್ರಗಳು ಪ್ರತಿಪಾದಿಸತಕ್ಕವು ಪ್ರಾದೇಶಿಕ ವೈವಿಧ್ಯಗಳನ್ನು. ಒಂದೊಂದು ಪ್ರದೇಶದಲ್ಲೂ ಕಾಲಾನುಕ್ರಮವಾಗಿ, ಪ್ರದೇಶಪ್ರದೇಶಕ್ಕೆ ಬದಲಾವಣೆ ಕಂಡುಬರುತ್ತವೆ. ದಕ್ಷಿಣ ಭಾರತದಲ್ಲೇ ಅಜಂತ ಚಿತ್ರಗಳಲ್ಲಿ ಕಾಣುವ ನಾಟ್ಯರೀತಿ ಆಂಧ್ರದ ನಾಗಾರ್ಜುನ ಕೊಂಡ, ಅಮರಾವತಿಗಳ ನಾಟ್ಯರೀತಿಗೆ ಭಿನ್ನವಾಗಿರುತ್ತದೆ. ನಾಟ್ಯಶಾಸ್ತ್ರ ಅಷ್ಟು ವ್ಯಾಪಕವಾದ ಪ್ರಸಾರವನ್ನು ಒಂದೇರೂಪದಲ್ಲಿ ಹೊಂದಿದ್ದರೆ ಕಥಕಳಿಯ ಹಸ್ತಗಳೇ ಬೇರೆಯಾಗಬೇಕಾದ ಅವಶ್ಯವಿರುತ್ತಿರಲಿಲ್ಲ.

ಮೈಸೂರಿನ ನಾಟ್ಯವೈಶಿಷ್ಟ್ಯಕ್ಕೆ ಅಜಂತಾ ಚಿತ್ರಕಲೆಯಿಂದ ಆರಂಭಿಸಿ ಆಧಾರಗಳು ದೊರಕುತ್ತವೆ. ಪಂಪನಿಂದ ಆರಂಭಿಸಿ ಕಾವ್ಯಗಳಲ್ಲಿ ನಾಟ್ಯವರ್ಣನೆಗಳು ಕಾಣಸಿಗುತ್ತವೆ. ಮಾನಸೋಲ್ಲಾಸ, ಲಾಸ್ಯರಂಜನಿಗಳಂಥ ಗ್ರಂಥಗಳು ಆಯಾ ಕಾಲಕ್ಕೆ ಉಚಿತವಾಗಿ ನಾಟ್ಯಲಕ್ಷಣಗಳನ್ನು ವಿವರಿಸುತ್ತವೆ. ಸಿಂಹಭೂಪಾಲನ ಲಾಸ್ಯರಂಜನ ಐತಿಹಾಸಿಕ ಮಹತ್ವವುಳ್ಳ ಗ್ರಂಥ. ಇದರಲ್ಲಿನ ಅಶಾಸ್ತ್ರೀಯ ರೂಪಗಳೆಲ್ಲ ಪರಿಶೀಲನಾರ್ಹವಾಗಿವೆ.[23] ಮೈಸೂರು ನಾಟ್ಯಕಲೆಯ ಹಲವು ವಿಶೇಷಗಳಿಗೆ ಇಲ್ಲಿ ಆಧಾರ ಸಿಗುತ್ತವೆ. ಕೆಲವೆಡೆ ಸಿಂಹಭೂಪಾಲ ದಾರಿತಪ್ಪಿದರೆ ಹಲವೇಳೆ ಸುಧಾರಣೆ ಮಾಡಿರುವುದು ಕಾಣಿಸುತ್ತದೆ. ಶಿಲ್ಪಕಲೆಯಲ್ಲಿ ಕಾಣುವ ವೈವಿಧ್ಯಗಳಲ್ಲಿ ಕೆಲವು ಇವನಲ್ಲೂ ಇವೆ. ಈ ನಾಟ್ಯಕಲೆಯನ್ನೇ ಮುಂದೆ ಬಂದ ಜೆಟ್ಟಿತಾಯಮ್ಮನವರು ಸಂಸ್ಕರಿಸಿ ಉಜ್ಜೀವನಗೊಳಿಸಿದರು.

ಇನ್ನೊಂದು ಮುಖ್ಯವಿಷಯವನ್ನು ಇಲ್ಲಿ ಪ್ರಸ್ತಾಪಿಸುವುದು ತಪ್ಪಾಗಲಾರದು.

---

23. ಲಾಸ್ಯರಂಜನದ ಕರ್ತರೀಮುಖ, ಶುಕತುಂಡ, ಅರಾಲ, ಕಟಕಾಮುಖಗಳನ್ನು ಗಮನಿಸಿ. ವಿವರವಾದ ಪರಿಶೀಲನೆಯನ್ನು ಇಲ್ಲಿ ವಿಸ್ತರಿಸಿಲ್ಲ. ಬೇರೊಂದು ಅವಕಾಶದಲ್ಲಿ ವಿಸ್ತರಿಸುತ್ತೇವೆ.

ಇಂದು ಯಾವುದೇ ನೃತ್ಯನಾಟ್ಯಗಳ ವಿಷಯವಾಗಿ ಲೇಖನ ಬರೆಯಲು ಯಾವ ಸಾಧನೆಯೂ ಅವಶ್ಯವೆಂದು ನಮ್ಮ ಜನಕ್ಕೆ ತೋರುವುದಿಲ್ಲ. ಹರುಕುಮುರುಕು ಆಂಗ್ಲಲೇಖನಗಳು ಸಾಕಾಗುತ್ತವೆ. ಅದರಲ್ಲೂ ಕಲೆ ಸಂಸ್ಕೃತಿಗಳ ವಿಷಯ ಯಾರೇ ಬರೆಯಲಿ ಯಾರ ಸಂತೋಷಕ್ಕೋ ಯಾವ ಪ್ರಯೋಜನಕ್ಕೋ ಕರ್ನಾಟಕದ ವೈಶಿಷ್ಟ್ಯವನ್ನು, ಹಿರಿಮೆಯನ್ನು ಅಲ್ಲಗಳೆಯುವುದು, ಅಲಕ್ಷಿಸುವುದು, ಅದರ ತಲೆಯ ಮೇಲೆ ಬೇರಾವುದನ್ನೋ ಕುಳ್ಳಿರಿಸಿ ಮೆರೆಸುವುದು ಹಿರಿಯರೆನಿಸಿದವರಿಗೂ ಅಭ್ಯಾಸವಾಗಿ ಬಿಟ್ಟಿದೆ. ಕನ್ನಡದ ಗೂಡಿನಿಂದ ಹಾರಿಹೋದವರೂ ಹೀಗೇ ಮಾಡುವುದು ಕನ್ನಡಿಗರ ದುರ್ದೈವ. ಇಂಥ ಅನ್ಯಾಯಗಳಿಗೂ ಒಂದು ಇತಿಹಾಸವೇ ಇದೆ.

ವಿಜಯನಗರ ಸಾಮ್ರಾಜ್ಯ ನಾಟ್ಯಕಲೆಯನ್ನು ಬೆಳಗಿಸಿತು. ಆ ಸಾಮ್ರಾಜ್ಯ ಪತನಗೊಂಡಮೇಲೆ "ಪಂಡಿತರು ಕಲಾವಿದರು ಕುಶಲಕವಿಗಳೂ ತಂಜಾವೂರಿಗೆ ಹೋಗಿ ಅಲ್ಲಿ ದೊರಕಿದ ಅನುಕೂಲವಾದ ಪರಿಸ್ಥಿತಿಗಳಲ್ಲಿ ತಮ್ಮತಮ್ಮ ಸಂಪ್ರದಾಯಗಳನ್ನು ಬೆಳೆಸಿಕೊಂಡು ಬಂದಗು" ಎಂದೂ ಹೇಳಿದ ನಾಟ್ಯವಿದುಷಿಗಳೊಬ್ಬರು ಅದು ಹೇಗೆ ಮೈಸೂರಿನಲ್ಲೂ ಉಳಿದುಬೆಳೆಯಿತು ಎನ್ನುವುದನ್ನು ತಿಳಿಸಲು ಪ್ರಯತ್ನಿಸಲಿಲ್ಲ. ಎಲ್ಲಾ ಅಲ್ಲಿಗೆ ಹೋದಮೇಲೆ ಇಲ್ಲಿ ಉಳಿಯುವುದೇನು ಮಣ್ಣು ಎಂದಃ ಆಲೋಚಿಸುವುದೂ ಸಹಜವೇ.[24] ಭರತಖಂಡದ ನಾಟ್ಯಪದ್ಧತಿಗಳಲ್ಲಿ ಮೈಸೂರಿನ ಪಾತ್ರ ಹೇಳಿಕೊಳ್ಳುವಂಥದೇನೇನೂ ಇಲ್ಲವೆಂಬುದು ಇವರ ಅಭಿಪ್ರಾಯ. "ಹತ್ತೊಂಬತ್ತನೆಯ ಶತಮಾನದಲ್ಲಿ ತಂಜಾವೂರಿನಲ್ಲಿ....ನಾಲ್ವರು ಸೋದರರು ಆಚರಣೆಗೆ ತಂದ ವ್ಯವಸ್ಥಿತವಾದ ಸಾದಿರ್ ನಾಟ್ಯ ಸಂಪ್ರದಾಯಕ್ಕೆ ಬಂದ ಹೆಸರಾಗಿದೆ" ಎಂದು ಕನ್ನಡವಲ್ಲದ ಕನ್ನಡದಲ್ಲಿ ಬರೆದು[25] ಅದರಲ್ಲೇ ಕನ್ನಡ ಪದಗಳ ಅಭಿನಯವನ್ನು ಸೇರಿಸಿದ್ದಾರೆ. ಯಾವ ಕಾಲದಲ್ಲಿ ತಂಜಾವೂರಿನಲ್ಲಿ ಕನ್ನಡಪದಗಳ ನಾಟ್ಯಮಾಡಿರುವುದನ್ನು ನೋಡಿದರೋ ತಿಳಿಯದು. ಇವರು ಕಂಡಹಾಗೆ ಭಾಗವತ ಮೇಳ ತಂಜಾವೂರಲ್ಲಿ ಮಾತ್ರ ಇದ್ದುದು. ಮೈಸೂರಿನಲ್ಲಿದ್ದುದು ಕೇಳಿಯೂ ಅರಿಯರು. ಕಥಕ್ಕಳಿಯು ನಾಟ್ಯಶಾಸ್ತ್ರವನ್ನು ಹೋಲತಕ್ಕದ್ದೆಂದಿದ್ದಾರೆ. ಇವರೇ ಹೇಳಿದ 'ಹಸ್ತಲಕ್ಷಣ ದೀಪಿಕೆ'ಯನ್ನು ನೋಡಿದ್ದರೆ ಕಥಕ್ಕಳಿಯ ಹಸ್ತಗಳು ಹೇಗೆ ನಾಟ್ಯಶಾಸ್ತ್ರದಿಂದ ಭಿನ್ನ ಎಂಬುದನ್ನು ಹೇಳುತ್ತಿದ್ದರು. ಕರ್ನಾಟಕದ ಪ್ರಭಾವ ಕಥಕ್ಕಳಿಯ ಮೇಲಾಗಿರುವುದನ್ನು ಹೇಳುವುದು ಹೇಗೆ ಸಾಧ್ಯ. ದೊಡ್ಡವರು ಬರೆದರೆ ಜನ ನಂಬುತ್ತಾರೆ. ಆದರೆ ಪಾಮರವಾಗಬಾರದು. ಇತಿಹಾಸಕಾರರಿಗೆ ವಸ್ತುನಿಷ್ಠೆಯೂ ಇಲ್ಲದಿದ್ದರೆ ಪ್ರಾದೇಶಿಕ ಕಲೆಗಳಿಗಾದರೂ ಪ್ರಾಶಸ್ತ್ಯ ಹೇಗೆ ದೊರಕೀತು? ಇಂಥ ಉದಾಹರಣೆಗಳಿಂದಲೇ ನಮ್ಮ ದೇಶದ ಕಲೆ ಅವನತಿಗೊಂಡಿತು.

---

24. ಭರತಖಂಡದ ನಾಟ್ಯಪದ್ಧತಿಗಳು: ಮಾಯಾರಾವ್, ಭಾರತೀಯ ಸಂಸ್ಕೃತಿದರ್ಶನ ಪು. ೫೫೪.

25. ಅದೇ. ಪು. ೫೫೫.

ಜೆಟ್ಟಿತಾಯಮ್ಮನವರ ಪಾತ್ರ

೧೯ನೆಯ ಶತಮಾನದ ಅಂತ್ಯಭಾಗ. ಮಳವಳ್ಳಿ, ಎಡತೊರೆ ಮೊದಲಾದ ಸ್ಥಳಗಳಲ್ಲಿ ನಾಟ್ಯವನ್ನು ಬೆಳಗಿನವರೆಗೂ ಕುಣಿಯುತ್ತಿದ್ದರು.[26] ಕನ್ನಡಕೃತಿಗಳೇ ಹೆಚ್ಚಾಗಿರುತ್ತಿದ್ದುವು. ಸಂಸ್ಕೃತ ಶ್ಲೋಕಗಳನ್ನು ಹೇಳಿದರೂ ಕನ್ನಡದಲ್ಲಿ ಅರ್ಥ ಹೇಳುತ್ತಿದ್ದರು. ನೃತ್ಯಕಲೆಗೆ ಗೌರವವಿರಲಿಲ್ಲ. ಆಸ್ಥಾನದಲ್ಲಿದ್ದ ಭಾಗವತ ನಾಟ್ಯಗಳಲ್ಲಿ ಹಳೆಯ ಕರ್ನಾಟಕದ ರಾಗಗಳನ್ನು ಹಾಡುತ್ತಿದ್ದರು. ಭಾಷೆ ಪ್ರೌಢವಾಗಿರಲಿಲ್ಲ; ಶಾಸ್ತ್ರಸಂಸ್ಕಾರವಿರಲಿಲ್ಲ. ಮುಮ್ಮಡಿ ಕೃಷ್ಣರಾಜ ಒಡೆಯರ ಖಾಸಾ ಊಳಿಗದ ಮಲ್ಲಯುದ್ಧವಿಶಾರದ ಉಸ್ತಾದ್ ದಾಸಾಜೆಟ್ಟಪ್ಪ ಮತ್ತು ಅವರ ಪತ್ನಿ ರಂಗಮ್ಮನವರಿಗೆ ಹುಟ್ಟಿದ ಲಕ್ಷ್ಮೀದೇವಮ್ಮ ಎಂಬುವರೇ ಮುಂದೆ ನಾಟ್ಯಸರಸ್ವತಿ ಜೆಟ್ಟಿತಾಯಕ್ಕ, ತಾಯಮ್ಮ ಎನಿಸಿದರು. ಇವರು ದಾಸಪ್ಪನವರಲ್ಲಿ ಸಂಸ್ಕೃತ, ತೆಲುಗು ಕಲಿತರು. ಭರ್ತೃಹರಿಯ ಸುಭಾಷಿತಗಳು, ರಘುವಂಶ, ರಾಮಾಯಣ ಮಹಾಭಾರತಗಳನ್ನು ಓದಿದ್ದರು. ಉತ್ತರಾದಿ ದಕ್ಷಿಣಾದಿ ಸಂಗೀತಗಳನ್ನು ಕಲಿತರು. ಆಸ್ಥಾನವಿದ್ವಾನ್ ಕವೀಶ್ವರ ಗಿರಿಯಪ್ಪನವರಿಂದ ನಾಟ್ಯಾಭ್ಯಾಸಮಾಡಿದರು. ಇಂದಿನ ನಾಟ್ಯಕಲಾವಿಶಾರದರಲ್ಲಿ ಎಷ್ಟು ಜನಕ್ಕೆ ಈ ವಿದ್ವತ್ತು, ಸಂಸ್ಕಾರವಿದೆಯೋ ಎಣಿಸುವುದು ಕಷ್ಟ. ಅಂಥ ಸಂಸ್ಕಾರ ತಾಯಮ್ಮನವರಿಗೆ ಆ ಕಾಲದಲ್ಲಿ ದೊರಕಿದುದರಿಂದಲೇ ನಾಟ್ಯಕಲೆಯನ್ನು ಸಂಸ್ಕರಿಸಲು ಅವರಿಗೆ ಸಾಧ್ಯವಾಯಿತು. ನಾಟ್ಯ ವೇಶ್ಯೆಯರ ಸೊತ್ತಾಗಿದ್ದ, ಹಾಗೆಂದು ಜನ ಮೂಗುಮುರಿಯುತ್ತಿದ್ದ ಕಾಲದಲ್ಲಿ ತಾಯಮ್ಮ ಸ್ವತಃ ಋಜು ಜೀವನ ನಡೆಸಿ, ಶಿಷ್ಯರಿಗೂ ಕನ್ನಡ ಸಂಸ್ಕೃತಗಳನ್ನು ಹೇಳಿಕೊಡುತ್ತಿದ್ದುದರ ಜೊತೆಗೆ 'ನಾಟ್ಯ ದೇಹ ಮಾರಿಕೊಳ್ಳಲಲ್ಲ; ಆತ್ಮವಿಕಾಸಕ್ಕೆ' ಎಂದು ಬೋಧಿಸಿ ನಾಟ್ಯಕಲೆಗೆ ಗೌರವವನ್ನೂ ಹೆಸರನ್ನೂ ಸಂಪಾದಿಸಿ ತಂದುಕೊಟ್ಟರು. ಮೈಸೂರು ಸಂಪ್ರದಾಯ ಅಭಿನಯಕ್ಕೆ ಹೆಸರಾದುದು. ೧೯೪೫ರಲ್ಲಿ ಆಗಮಿಸಿದ್ದ ತಂಜಾವೂರಿನ ಶ್ರೇಷ್ಠ ನಾಟ್ಯಗಾರ್ತಿ ಸುಬ್ಬಲಕ್ಷ್ಮಿ ಎಂಬಾಕೆ ಮೈಸೂರಿನ ಅಭಿನಯವೇ ಶ್ರೇಷ್ಠವೆಂದು ಒಪ್ಪಿ ಮೆಚ್ಚಿದ್ದರು. ಪ್ರಸಿದ್ಧ ನರ್ತಕಿ ಶ್ರೀಮತಿ ರಾಗಿಣಿದೇವಿ ಅವರು ತಾಯಮ್ಮನವರಲ್ಲಿ ನಾಟ್ಯಾಭ್ಯಾಸಮಾಡಿದ್ದರು. ಮೈಸೂರಿನವರ ಅಷ್ಟಪದಿಗಳ ಅಭಿನಯ, ಶ್ಲೋಕಾಭಿನಯ ಆಂಧ್ರ, ತಂಜಾವೂರು ಮದರಾಸಿನ ನಾಟ್ಯಕಾರ್ತಿಯರಿಗೆಲ್ಲ ಮೇಲ್ಪಂಕ್ತಿಯಾಗಿತ್ತು. ಆ ಹೊತ್ತಿನಲ್ಲೇ 'ಕೃಷ್ಣಾ ನೀ ಬೇಗನೆ ಬಾರೋ' ಅತ್ತ ಕಾಲಿಟ್ಟಿತು. ಬಾಲಸರಸ್ವತಿ ಅವರು ಅದನ್ನು ಹೆಚ್ಚು ಪ್ರಚಾರಕ್ಕೆ ತಂದರೆನ್ನಬಹುದು.

ಅನಂತರದಲ್ಲಿ

ಜೆಟ್ಟಿತಾಯಮ್ಮನವರು ೧೭–೧೧–೧೯೪೭ರಲ್ಲಿ ದಿವಂಗತರಾದರು. ಅವರ ಸಮ

---

26. ಈ ವಿವರಗಳನ್ನು ನಾಟ್ಯಸರಸ್ವತಿ ದಿ. ಜೆಟ್ಟಿತಾಯಮ್ಮನವರ ಮೊಮ್ಮಕ್ಕಳಾದ ಶ್ರೀ ಅಪ್ಪಾಸಾಮಿ ಎಂಬುವರಿಂದ ಸಂಗ್ರಹಿಸಲಾಗಿದೆ.

ಕಾಲೀನರು ಮತ್ತು ಅವರಿಂದೀಚೆಗೆ ಇದ್ದ ನಾಟ್ಯಗಾರ್ತಿಯರಲ್ಲಿ ಕೆಲವರ ಹೆಸರನ್ನು ಇಲ್ಲಿ ಉಲ್ಲೇಖಿಸಬಹುದಾಗಿದೆ.[27] ಜೆಟ್ಟಿತಾಯಮ್ಮನವರಿದ್ದಾಗ ಅಂದರೆ ಈ ಮೂವತ್ತು ವರ್ಷಗಳ ಹಿಂದೆ ಬಳ್ಳಾಪುರದ ಭವಾನಮ್ಮ ಎಂಬುವರಿದ್ದರು. ಇವರ ಮಗಳು ಶ್ರೀಮತಿ ಸುಬ್ಬಮ್ಮ (ವೀಣೆ ಸುಬ್ಬಮ್ಮ ಎನ್ನುತ್ತಾರೆ) ಅವರು ರಾಜ್ಯ ಅಕಾಡೆಮಿಯಿಂದ ಪ್ರಶಸ್ತಿ ಪಡೆದಿದ್ದಾರೆ. ಮೂಗೂರು ತಾಯಕ್ಕನೆಂಬುವರಿದ್ದರು. ಇವರ ಮಗಳು ಚಿಕ್ಕದೇವಮ್ಮ (ಪುಟ್ಟತಾಯಕ್ಕ). ಅವರೂ ರಾಜ್ಯಪ್ರಶಸ್ತಿ ಪಡೆದು ದಿವಂಗತರಾದರು. ಅರಮನೆ ನರ್ತಕಿಯಾಗಿ ಶ್ರೀಮತಿ ಆದಿಲಕ್ಷ್ಮಮ್ಮ ಎಂಬುವರಿದ್ದರು. ನರಸೀಪುರದ ಚಂದ್ರಕಾಂತಮ್ಮ, ಮಂಡ್ಯದ ಗೌರಮ್ಮ, ಮೂಗುರು ಪುಟ್ಟಮ್ಮ ಆ ಕಾಲಕ್ಕೆ ಪ್ರಸಿದ್ಧರಾದವರು. ಸದ್ಯಕ್ಕೆ ಉಳಿದುಬಂದಿರುವುಗಳಲ್ಲಿ ಮುಖ್ಯವಾದುದು ಜೆಟ್ಟಿತಾಯಮ್ಮನವರ ಪರಂಪರೆಯೇ. ಬೇರೆಡೆಯಿಲ್ಲದ ಅಭಿನಯ ಸೌಷ್ಠವ ಇಲ್ಲಿದೆ. ಜೆಟ್ಟಿತಾಯಮ್ಮನವರ ಶಿಷ್ಯರಾದ ಶ್ರೀಮತಿ ಎಸ್. ಸುಂದರಮ್ಮ ಅವರು ಮೈಸೂರು ನಾಟ್ಯಶೈಲಿಯನ್ನು ಇರುವ ರೀತಿಯಲ್ಲಿ ಉಳಿಸಿಕೊಂಡು ಬಂದಿದ್ದಾರೆ. ಇನ್ನೊಬ್ಬರು ಶ್ರೀಮತಿ ವೆಂಕಟಲಕ್ಷ್ಮಮ್ಮ ಅವರು. ಅಮೃತಪ್ಪನವರ ಪರಂಪರೆಯಲ್ಲಿ ಶ್ರೀಮತಿ ದೇಜಮ್ಮನವರು ಉಳಿದಿದ್ದಾರೆ. ಇಲ್ಲಿ ಕುಣಿತ ಅಭಿನಯಕ್ಕಿಂತ ಹೆಚ್ಚು.

ಮದುವೆ ಮನೆಗಳಲ್ಲಿ

ಕರ್ನಾಟಕದಲ್ಲಿ ದೇವಸ್ಥಾನದಲ್ಲಿ ನರ್ತಿಸುವ ಪದ್ಧತಿ ತಪ್ಪಿ ೪೦ ವರ್ಷಗಳ ಮೇಲಾಯಿತು. ಅನಂತರ ಮದುವೆಗಳಲ್ಲಿ ಮಾತ್ರ ನರ್ತಿಸುತ್ತಿದ್ದರು. ಅಂದಿನ ನಾಟ್ಯ ಶಿಕ್ಷಣ, ಪ್ರದರ್ಶನಗಳ ರೀತಿ ತಿಳಿಯತಕ್ಕುದಾಗಿದೆ. ಮದುವೆ ಮನೆಗಳಲ್ಲಿ ನಾಟ್ಯಕ್ಕೆ ಪ್ರತ್ಯೇಕವಾದ ವೇದಿಕೆ ಇರುತ್ತಿರಲಿಲ್ಲ. ಕಾಲುದೀಪವೇ ಬೆಳಕಿನ ವ್ಯವಸ್ಥೆ. ಅನಂತರ ಪೆಟ್ರೋಮ್ಯಾಕ್ಸ್ ಬಂತು. ಮುಖವೀಣೆ, ಮೃದಂಗ, ತಂಬೂರಿ—ಇವು ಬಳಸುತ್ತಿದ್ದ ಪಕ್ಕವಾದ್ಯಗಳು. ವೇಷಗಳು ಇಂದಿನಂತಿರಲಿಲ್ಲ. ಒಂಭತ್ತು ಗಜದ ಸೀರೆಯನ್ನೇ ನಿರಿ ಎದುರುಬರುವಂತೆ ಉಟ್ಟುಕೊಳ್ಳುತ್ತಿದ್ದರು. ತೋಳಿಗೆ ವಂಕಿ, ಡಾಬು, ಬುಲಾಕು (ಬುಗುಡಿ) ಕೆನ್ನೆ ಸರಪಳಿ ಮೊದಲಾದುವು ಆಭರಣಗಳು. ನಾಟ್ಯಪ್ರದರ್ಶನಕ್ಕೆ ಮೊದಲು ನರ್ತಕಿಯು ಸಭಾವಂದನೆಯನ್ನು ಹಾಡುತ್ತಿದ್ದಳು.[28] ಈ ಹಾಡಾದ ಮೇಲೆ 'ಗೆಜ್ಜೆ ಕಟ್ಟೋಕೆ ಅಪ್ಪಣೇನಾ' ಎಂದು ಕೇಳುತ್ತಿದ್ದಳು. ಸಭಾಸದರೆಲ್ಲರೂ

---

27. ಈ ಹಲವು ವಿವರಗಳನ್ನು ನನ್ನ ಗುರುಗಳಾದ ಆಸ್ಥಾನ ವಿದುಷಿ ಎಸ್. ಸುಂದರಮ್ಮ ಅವರಿಂದ ಸಂಗ್ರಹಿಸಲಾಗಿದೆ.

28. ಜಯ ಜಾನಕೀ ರಮಣ
ಜಯ ವಿಭೀಷಣ ಶರಣ
ಜಯ ಸರೋರುಹ ನಯನ
ಜಯ ದಿವ್ಯ ಕರುಣ ॥ ಇತ್ಯಾದಿ.

"ಆಗಬಹುದು" ಎಂದಮೇಲೆ ಮೃದಂಗದವರನ್ನು ಬಲವಂದು ತಟ್ಟುಮುಗಿದು,[29] ಸಭಾಸದರಿಗೆ ನಮಸ್ಕಾರ ಹಾಕಿ ಪುಷ್ಪಾಂಜಲಿ ಶ್ಲೋಕವನ್ನು[30] ಅಭಿನಯಿಸಿ, ಗಣಪತಿ ಸ್ತೋತ್ರ, ನಾರಾಯಣಸ್ತೋತ್ರಗಳನ್ನು ಹೇಳಿ, ಅಲರಿಪು, ಸ್ವರಜತಿ, ಶಬ್ದ, ವರ್ಣಗಳನ್ನು ಮಾಡುತ್ತಿದ್ದರು. ಅನಂತರ ಜಾವಡಿಗಳ ಅಭಿನಯ. ಒಂದೆರಡು ತೆಲುಗು ಬಿಟ್ಟರೆ ಪೂರ್ಣ ಕನ್ನಡ ಜಾವಡಿಗಳನ್ನು[31] ಅಭಿನಯಿಸುತ್ತಿದ್ದರು. ಅನಂತರ ಕ್ಷೇತ್ರಿಯ ಪದಗಳು, ಶ್ಲೋಕಗಳು. ಕೊನೆಯಲ್ಲಿ ಗೀತಗೋವಿಂದದ ಅಷ್ಟಪದಿ ಅಭಿನಯಿಸುತ್ತಿದ್ದರು.

ಶಿಕ್ಷಣ ಪದ್ಧತಿ

ಅಂದಿನ ಶಿಕ್ಷಣಪದ್ಧತಿ ಇತಿಹಾಸಕ್ಕೂ ಮುಖ್ಯವಾದುದು. ಗುರುಗಳು ಶಿಷ್ಯರಿಗೆ ಪಾಠವನ್ನು ಆರಂಭಿಸುವ ಮುನ್ನ 'ಸಾಧಕದ ಪೂಜೆ'ಯನ್ನು ಮಾಡಿಸುತ್ತಿದ್ದರು. ಐದು ಸೇರು ಬತ್ತ ಹಾಕಿ, ಅದರಮೇಲೆ ಪಂಚೆಯನ್ನು ಹಾಸಿ ಅದನ್ನೂ ಜೊತೆಗೆ

---

29. ತಟ್ಟಡವಿನ ಮೂಲಕ ನಾಟ್ಯಭಂಗಿಯಲ್ಲಿ ನಮಸ್ಕರಿಸುವುದು.

30. ಪುಷ್ಪಾಂಜಲಿ ಶ್ಲೋಕ:–

ಆದ್ಯ ಶ್ರೀ ಶಶಿಖಂಡ ಮೌಳಿ ಮುರಭಿತ್ ಪದ್ಮಾಸನಾನಾಂ ಮುದೇ
ಪ್ರಾಲೇಯಾದ್ರಿ ಸುತಾಂಬುರಾಶಿ ತನಯಾ ವಾಗ್ದೇವತಾ ತುಷ್ಟಯೇ।
ಪಾಕಾರಿ ಪ್ರಮುಖಾಷ್ಟ ದಿಕ್ ಪರಿವೃಢಾ ಮೋದಾಯ ಪುಷ್ಪಾಂಜಲೀ
ಸೇಯಂ ನಾಟ್ಯಕಲಾ ಪ್ರವರ್ತಕ ಬುಧಾನಂದಾಯ ಸಂದರ್ಶತೇ॥

31 ಈಗ ಯಾರೂ ಕನ್ನಡ ಜಾವಡಿಗಳನ್ನು ಅಭಿನಯಿಸುತ್ತಿಲ್ಲ. ಅವೆಲ್ಲಾ ಮೂಲೆಗೆ ಹೋದುವು. ಅವು ಶೃಂಗಾರ ಪ್ರಧಾನವಾಗಿದ್ದುದು ಮುಖ್ಯಕಾರಣ. ಸಾಹಿತ್ಯದೃಷ್ಟಿಯಿಂದಲೂ ಇವು ನಷ್ಟವಾಗಬಾರದು. ಕನ್ನಡಜಾವಡಿಯ ಒಂದು ಉದಾಹರಣೆಯನ್ನು ಇಲ್ಲಿ ನೋಡಬಹುದು—

ಬಾರೇ ಪ್ರಿಯಕರಿ, ತಾರೇ ಹರಿಯನು
ತೋರೇ, ಬಾರೆಲೆ ವೈಯಾರೇ॥ ಪ॥
ಬಾರೇ ಬಾರೇ ಬಾರೆ ಸಖೀ।
ನೀರಜ ನಯನೆಯೆ ಇಂದುಮುಖೀ॥ ಅನು.ಪ॥

ಸರಿಗೆಳತಿಯರಲಿ ಪ್ರೀತಿಯು
ಸರಿಯೇ ನಿನಗೀ ರೀತಿಯು
ಅರುಹುವ ದಾರಿಗೆ ನಾರಿಯೆ
ತ್ವರಿತದಿ ಕರೆತರಲಾರೆಯೆ?॥೧॥

ಕಿಂಕರ ಜನಪರಿಪಾಲನ
ಸಂಕರುಷಣ ಗುಣಶೀಲನ
ಸಂಕಟರಹಿತ ಮಹೇಶನ
ವೆಂಕಟಗಿರಿಯ ನಿವಾಸನ॥೨॥

ದೇವರನ್ನೂ ಪೂಜಿಸಿ ಅನಂತರ ಬತ್ತದಮೇಲೆ ತೈ–ತೈ (ತಟ್ಟಡವು) ಎಂಬೆರಡು ಹೆಜ್ಜೆ ಹಾಕಿಸುತ್ತಿದ್ದರು. ಅಂದಿಗೆ ಅದೊಂದೇ ಹೆಜ್ಜೆ. ತಟ್ಟು, ನಾಟು, ಮೆಟ್ಟು, ಕುತ್ತು, ತಟ್ಟಿಮೆಟ್ಟು—ಈ ಅಡವುಗಳೆಲ್ಲ ಹೇಳಿಕೊಟ್ಟಮೇಲೆ ಜತಿಗಳು, ಅಲರಿಪೂಜೆ, ಆಮೇಲೆ ಸ್ವರಜತಿ, ತಿಲ್ಲಾನ, ವರ್ಣಗಳು. ಅನಂತರ ವಾದ್ಯಸಮೇತ ನರ್ತಿಸುವ 'ಹೊದ್ದಿಗೆ ಪೂಜೆ' ನಡೆಯುತ್ತದೆ. ಹೀಗೆ ಎಲ್ಲಾ ಕಲಿತಮೇಲೆ 'ಗೆಜ್ಜೆಪೂಜೆ' ಎಂಬ ಇನ್ನೊಂದು ಸಮಾರಂಭ ನಡೆಯುತ್ತದೆ. ವಿದ್ವಾಂಸರನ್ನೆಲ್ಲಾ ಆಹ್ವಾನಿಸುತ್ತಾರೆ. ತಟ್ಟೆಯಲ್ಲಿ ಅಕ್ಕಿ, ಮೇಲೆ ಬೆಲ್ಲ, ಜೊತೆಗೆ ಗೆಜ್ಜೆಯಿಟ್ಟು ಪೂಜೆಮಾಡುತ್ತಾರೆ. ಅನಂತರ ಆ ಗೆಜ್ಜೆಯನ್ನು ಮುತ್ತೈದೆಯರ ಕೈಯಲ್ಲಿ ತಾಳಿಮುಟ್ಟಿಸುವಂತೆ ವಿದ್ವಜ್ಜನರ ಕೈಯಲ್ಲಿ ಮುಟ್ಟಿಸಿ ನರ್ತಿಸಬೇಕಾದವರ ಕಾಲಿಗೆ ಕಟ್ಟುತ್ತಾರೆ. ಅದುವರೆಗೆ ಗೆಜ್ಜೆ ಕಟ್ಟಿರುವುದಿಲ್ಲ. ಹೊದ್ದಿಗೆಪೂಜೆಯೂ ಗೆಜ್ಜೆಯಿಲ್ಲದೆ ನಡೆಯುತ್ತದೆ. ಕೆಸರು ತುಳಿವಂತೆ ಸುಮ್ಮನೆ ಹೆಜ್ಜೆಹಾಕಿದರೆ ನೃತ್ಯವೆನಿಸುವುದಿಲ್ಲ. ಅಕ್ಷರಾಘಾತಗಳ ಲಘುತ್ವ ಗುರುತ್ವಗಳನ್ನು ಹೆಜ್ಜೆಯೂ ಸೂಕ್ಷ್ಮವಾಗಿ ತೋರಿಸಬೇಕು. ನೇರವಾಗಿ ನಿಂತು ಪಾದವನ್ನು ಸಮತಲ ವಾಗಿ ಭೂಮಿಗಿಡುವಾಗ ಆಗುವ ಶಬ್ದಕ್ಕೂ, ಭಂಗಿಯೊಡನೆ ಅದೇ ಹೆಜ್ಜೆಯನ್ನು ಇಡುವ ಶಬ್ದಕ್ಕೂ ವ್ಯತ್ಯಾಸವಿದೆ. ಆ ವ್ಯತ್ಯಾಸ ವ್ಯಕ್ತವಾಗುವಂತೆ ಗೆಜ್ಜೆಯಿಲ್ಲದೆ ಅಭ್ಯಾಸಮಾಡಿದರೆ ಗೆಜ್ಜೆಯಿದ್ದಾಗ ಸ್ಪಷ್ಟವಾಗುತ್ತದೆ. ಅಭ್ಯಾಸಕಾಲದಲ್ಲಿ ಗೆಜ್ಜೆ ಯಿದ್ದರೆ ಈ ಸೂಕ್ಷ್ಮವ್ಯತ್ಯಾಸವನ್ನು ಕಲಿಯುವವರು ತಿಳಿಯಲಾರರು. ಎರಡು ಧ್ವನಿಗಳೂ ಬೆರೆತುಹೋಗುತ್ತವೆ. ಕುತ್ತಡುವು ಹಾಕುವಾಗ ಇದು ಸ್ಪಷ್ಟವೇದ್ಯ. ಈ ಅಂಶವನ್ನು ಹಿಂದಿನವರು ಅರಿತಿದ್ದರು. ಒಂದೊಂದು ಹೆಜ್ಜೆಯ ಭಾರ ಎಷ್ಟಿರಬೇಕೆಂಬುದು ಗೆಜ್ಜೆಕಟ್ಟದೇ ತಿಳಿದಿರಬೇಕು. ಹೆಜ್ಜೆಯನ್ನು ಮೃದುವಾಗಿ ನೆಲಕ್ಕಿಟ್ಟು ಕೆಂಡ ತುಳಿದಾಗಲೋ, ಮುಳ್ಳುಚುಚ್ಚಿಕೊಂಡಾಗಲೋ ಮೇಲೆತ್ತುವಂತೆ ಶೀಘ್ರವಾಗಿ ಮೇಲೆತ್ತಿದರೆ ಇಡುವ ಶಬ್ದವೇ ಬೇರೆ, ತೆಗೆಯುವ ಶಬ್ದವೇ ಬೇರೆಯಾಗಿ ತೋರುತ್ತದೆ. ಇದನ್ನು ಸಾಮಾನ್ಯರೂ ಮಾಡಿನೋಡಬಹುದು. ಮೃದಂಗದಲ್ಲಿ ಹೇಗೆ ಬೇರೆಬೇರೆ ಧ್ವನಿಗಳು ಹೊರಡುತ್ತವೆ ಹಾಗೆಯೇ ಕೆಲವೇ ಹೆಜ್ಜೆಗಳಲ್ಲೂ ವಿಶಿಷ್ಟಧ್ವನಿಗಳನ್ನು ಹೊರಡಿಸಲು ನರ್ತಕ ಶ್ರಮಿಸಬೇಕು. ಎತ್ತಿನ ಕೊರಳಿಗೆ ಗಂಟೆಕಟ್ಟಿದ ಹಾಗೆ ಆಗ ಬಾರದು ; ಕಾಲಿನ ಗೆಜ್ಜೆಗೂ ಶ್ರುತಿಯಿರಬೇಕು. ಅದನ್ನು ನುಡಿಸುವುದೂ ಒಂದು ಸಂಗೀತ. ನೃತ್ತಪ್ರಧಾನವಾದುವುಗಳಿಗೆ ಬೇಕಾದ ಗೆಜ್ಜೆ ಬೇರೆ, ಅಭಿನಯಕ್ಕೆ ಬೇಕಾದ ಗೆಜ್ಜೆ ಬೇರೆ, ತಾಂಡವಗಳಿಗೆ ಬೇಕಾದ ಗೆಜ್ಜೆ ಬೇರೆ. ಸೋಮಾರಿಗಳಿಗೆ, ದೇಹ ಪಟುತ್ವ ಇಲ್ಲದವರಿಗೆ ನೃತ್ತಹೇಳಿಸಿದ್ದಲ್ಲ. ತಿಳಿಯದ ಜನ ಸಭಾಸದರಾದರೆ ಕುಣಿದ ದ್ದೆಲ್ಲಾ ಶಾಸ್ತ್ರವಾಗುತ್ತದೆ, ಹೇಳಿದ್ದೆಲ್ಲಾ ವಿದ್ವತ್ತಾಗುತ್ತದೆ. ದೃಷ್ಟಿಯಂತೆ ವಸ್ತು ಕಾಣುತ್ತದೆ. ಶ್ರದ್ಧೆಯಿರತಕ್ಕವರಿಗೆ ಕುಣಿತ ಎಷ್ಟು ಸಾಧನೀಯವಾದುದು ಎಂಬುದ ನ್ನಷ್ಟೆ ನಾವು ಕುರಿತಿದ್ದೇವೆ. ಸುಮಾರು ಆರುವರ್ಷಕ್ಕೆ ನಾಟ್ಯಾಭ್ಯಾಸ ಆರಂಭಿಸಿದರೆ ಹನ್ನೆರಡು ವರ್ಷಕ್ಕೆ ಗೆಜ್ಜೆಪೂಜೆ ನಡೆಯುತ್ತದೆ. ಕನ್ಯಾವಸ್ಥೆಯಲ್ಲಿರುವಾಗಲೇ ಈ

ಪೂಜೆ ನಡೆಯಬೇಕೆಂದು ನಿಯಮ. ಈ ಸಂದರ್ಭದಲ್ಲೇ ಗುರುಗಳಿಗೆ ದಕ್ಷಿಣೆ ಉಡುಗೊರೆಗಳನ್ನು ನೀಡಲಾಗುತ್ತದೆ. ವಾಸ್ತವವಾಗಿ 'ಗೆಜ್ಜೆಪೂಜೆ' ಕೆಲವರು ಭಾವಿಸುವಂತೆ ನೀಚಾರ್ಥ ಉಳ್ಳುದಲ್ಲ.

ಈಚೆಗೆ ಈಚೆಗೆ

ಸುಮಾರು ೨೦ ವರ್ಷಗಳ ಈಚೆಗೆ ಚಲಚ್ಚಿತ್ರಗಳ ಪ್ರಭಾವ ಒಂದು ಕಡೆ, ಮದರಾಸಿನ ಭರತನಾಟ್ಯದ ದಾಳಿ ಒಂದು ಕಡೆ—ಇವುಗಳಿಂದ ಹಲವು ಬದಲಾವಣೆಗಳಾದುವು. ಮೊದಮೊದಲು ಕಂಪನಿನಾಟಕಗಳು ನಾಟ್ಯಕ್ಕೆ ಪ್ರಚಾರ ಒದಗಿಸಿದುವೆನ್ನಬಹುದು. ೨೫–೩೦ ವರ್ಷಗಳ ಹಿಂದೆ ನಾಟ್ಯಶಾಲೆಗಳು ಇರಲಿಲ್ಲ; ಬಹಿರಂಗದ ಮಾರುಕಟ್ಟೆಗೆ ಬಂದಿರಲಿಲ್ಲ. ಮದರಾಸಿನ ನೃತ್ಯಕಲೆ ಪರಿವರ್ತನೆಗೆ ಮೊದಲು ಬಲಿಯಾಯಿತು. ಚಲಚ್ಚಿತ್ರಗಳೊಡನೆ ಸ್ಪರ್ಧಿಸುವುದೂ ಒಂದು ಉದ್ದೇಶವಾಗಿ ಪೋಷಾಕುಗಳು ಅಲಂಕಾರಗಳು ಹೊಸದಾದುವು. ಮೈಸೂರು ಅದನ್ನು ಅನುಕರಿಸಿತು. ಬರಬರುತ್ತ ಶಾಸ್ತ್ರೀಯವಾದ ಅಭಿನಯ ಮೂಲೆಗೆ ಹೋಗಿ ಕುಣಿತಕ್ಕೆ ಅಂಗಾಂಗ ವಿಲಾಸಗಳಿಗೆ ಅಗ್ರಸ್ಥಾನ ದೊರಕಿತು. ಇಂದೂ ಕೂಡ ಚಲಚಿತ್ರಗಳ ನೃತ್ಯಗಳಲ್ಲಿ ಹಸ್ತಾಭಿನಯ ಬಹುಪಾಲು ಸೊನ್ನೆಯಾಗಿರುವುದೂ, ಹಾಡಿಗೂ ಕುಣಿತಕ್ಕೂ ಯಾವುದೇ ಬಗೆಯ ಸಂಬಂಧವಿಲ್ಲದಿರುವುದನ್ನೂ ನೋಡಬಹುದು. ನಮ್ಮ ಜನಕ್ಕೆ ಮೈಮುರಿವು ಅರ್ಥವಾಗುವಷ್ಟು ಸುಲಭವಾಗಿ ಹಸ್ತಗಳಾಗಲಿ, ಶಾಸ್ತ್ರೀಯವಾದ ಯಾವ ಅಂಶವೇ ಆಗಲಿ, ಕೊನೆಗೆ ಕಲೆಯಾಗಲಿ ಅರ್ಥವಾಗುವುದಿಲ್ಲ. ಇದು ಜನರ ಮಟ್ಟಕ್ಕೆ ಸಹಜವೇ. ಇಂಥ ಜನ ಪೋಷಕರಾದುದರಿಂದ ಅವರ ಮಟ್ಟಕ್ಕೆ ಕಲೆ ಇಳಿದದ್ದೂ ಸಹಜವೇ. ಹೀಗೆ ಮದರಾಸೀ ಕುಣಿತಕ್ಕೆ ಮೈಸೂರಿನಲ್ಲಿ ಪ್ರಚಾರ ದೊರಕಿ ಮೈಸೂರು ಶೈಲಿ, ಕನ್ನಡದ ವಿಶಿಷ್ಟತೆ, ಅಭಿನಯ ಹಿಂದೆ ಬಿದ್ದಿತು. ತಮಿಳು ಹಾಡುಗಳು, ತೆಲುಗು ಹಾಡುಗಳು ಅರ್ಥವಾಗದೆ ಹೋದರೂ ನರ್ತಕರಿಗೆ ಪ್ರಿಯವಾಯಿತು. ಕನ್ನಡ ಹಾಡುಗಳು, ಜಾವಡಿಗಳು ಹಿಂದೆ ಬಿದ್ದುವು.

ರಾಮಗೋಪಾಲ್ ಅಮೆರಿಕೆಯಲ್ಲಿ ನೆಲಸಿದ ಮೇಲೆ ಉದಯಶಂಕರರ ಬ್ಯಾಲೆ ನರ್ತನವನ್ನು ಪ್ರಚಾರಕ್ಕೆ ತಂದಿತು. ಅನಂತರ ಸೋಹನ್‌ಲಾಲ್ ಮೊದಲಾದವರು ಬ್ಯಾಲೆ ಆರಂಭಿಸಿ ಕರ್ನಾಟಕದಲ್ಲೂ ಓಡಾಡಿ ಪ್ರಚಾರಮಾಡಿದರು. ಉದಯಶಂಕರರ ಕಲೆ ಶಾಸ್ತ್ರನಿಷ್ಠವಾದುದಲ್ಲ ಎಂದು ಅಂದಿನ ವಿಮರ್ಶಕರೇ ಹೇಳಿದ್ದಾರೆ. ಸೋಹನ್‌ಲಾಲ್‌ರ ಬ್ಯಾಲೆಯ ಕಥೆಯೂ ಅಷ್ಟೆ. ಜನರಂಜನೆ ಇವರಿಗೆ ಮುಖ್ಯವಾಗಿ ಕಥಕ್ ಕಥಕಳಿ ಭರತನಾಟ್ಯಗಳನ್ನೆಲ್ಲಾ ಮಿಶ್ರಮಾಡುವುದು ಸಾಮಾನ್ಯವಾಗಿತ್ತು. ಈ ಗುಂಪಿನಲ್ಲಿದ್ದ ಶ್ರೀ ಎಂ. ಸಿ. ವೀರ್—ಕಥಕಳಿಯನ್ನು ಕುಂಜಿಕುರುಪ್ ಅವರಲ್ಲಿ ಅಭ್ಯಾಸಮಾಡಿದವರು ಮೈಸೂರಿನಲ್ಲಿ ನಿಂತು ನಾಟ್ಯಶಾಲೆ ಆರಂಭಿಸಿದರು. ಶ್ರೀ ಕೆ. ಎಸ್. ರಾಜಗೋಪಾಲ್ ಅವರು ಶ್ರೀ ನಾಗಭೂಷಣ ಎಂಬುವರಲ್ಲಿ ಕಥಕ್ಕಳಿ ಅಭ್ಯಾಸಮಾಡಿ, ನಾಟಕಗಳಲ್ಲಿ

ನರ್ತನಮಾಡುತ್ತಿದ್ದುದನ್ನು ಬಿಟ್ಟು ಮೈಸೂರಿನಲ್ಲಿ ಶಾಲೆ ಆರಂಭಿಸಿದರು. ಆ ಹೊತ್ತಿಗೇ ಶ್ರೀಮತಿ ಎಸ್. ಸುಂದರಮ್ಮ ಅವರೊಡನೆ ಕೆಲವರು ಕಲಾವಿದರು ಸೇರಿ ಕಾರ್ಯಕ್ರಮಗಳನ್ನು ಕೊಡುತ್ತಿದ್ದರು. ಕಲಿಯುವವರ ಸಂಖ್ಯೆ ಹೆಚ್ಚಿತು.

ಬ್ಯಾಲೆಯ ನಾಟ್ಯ ಇನ್ನಷ್ಟು ವಿಕಾರವಾಗಿ ಓರಿಯೆಂಟಲ್ ಡಾನ್ಸ್ ಎಂಬ ಹೆಸರಿನಲ್ಲಿ ಯಾವುದೇ ಶಾಸ್ತ್ರೀಯ ಪಂಥಕ್ಕೂ ಸೇರದ, ಕಲೆಯೂ ಅಲ್ಲದ ಬೇಟೆಗಾರ, ಬೆಸ್ತ, ನವಿಲು [ಇವನ್ನು ಹಂಟರ್, ಫಿಶರ್‌ಮನ್, ಪೀಕಾಕ್ ಎನ್ನುವುದೇ ರೂಢಿ] ಕುಣಿತಗಳು ಬಂದುವು. ಕೆಲಸಕ್ಕೆ ಬಾರದ ಪ್ರಭಾತ, ಸುಪ್ರಭಾತ ಮೊದಲಾದ ಚಿಲ್ಲರೆ ಕುಣಿತಗಳೂ ಬಂದುವು. ಹಿಂದೆ ವರ್ಷಗಟ್ಟಲೆ ಸಾಧನೆ ಅಗತ್ಯವಾಗಿದ್ದರೆ ಇಂದು ಕಲಿಯಲು ಸೇರಿದ ಹದಿನೈದೇ ದಿನಗಳಲ್ಲಿ ಪ್ರದರ್ಶನ ನೀಡಲೂ ಸಾಧ್ಯವಾಗಿದೆ. ಅಷ್ಟೂ ಕಲಿಯದವರು ಆಚಾರ್ಯರಾಗಿ ಜೀವನೋಪಾಯ ನಡೆಸಲೂ ಸಾಧ್ಯವಾಗಿದೆ. ಇಂದು ಕಥಕ್ಕಳಿ ಎಂಬ ಹೆಸರಿನಲ್ಲಿ ಪಾಠಹೇಳುವವರಲ್ಲಿ ಹಲವರಿಗೆ ಅದರ ವೈಶಿಷ್ಟ್ಯ ತಿಳಿಯದಿದ್ದರೆ ಆಶ್ಚರ್ಯಪಡಬೇಕಾಗಿಲ್ಲ. ಕೊನೆಯಪಕ್ಷ ವೇಷದಲ್ಲಾದರೂ ಕಥಕ್ಕಳಿಯ ಅನುಕರಣೆಯಿಲ್ಲ. ಕೇರಳದ ಕಥಕ್ಕಳಿಯ ಯಾವುದೇ ಪ್ರದರ್ಶನರೂಪಗಳಲ್ಲಿ ಒಂದೂ ಕರ್ನಾಟಕದಲ್ಲಿ ಸರಿಯಾದ ರೂಪದಲ್ಲಿ ಇಲ್ಲವೇ ಇಲ್ಲ ಎನ್ನಬಹುದು. ಈ ಲಘು ಆಕರ್ಷಣೆಗಳ ಎದುರು ಮೈಸೂರಿನ ವಿಶಿಷ್ಟಕಲೆಯಾದ ಭರತನಾಟ್ಯ ಅವಜ್ಞೆಗೆ ಗುರಿಯಾಗಿದೆ. ನಮ್ಮ ಜನಕ್ಕೆ ಕಲೆಬೇಕಿಲ್ಲ; ಗದ್ದಲಬೇಕು. ಶಮನಬೇಕಿಲ್ಲ; ಉದ್ರೇಕಬೇಕು. ಚೊಕ್ಕವಾದ, ಕಲಾತ್ಮಕವಾದ ಕನ್ನಡಕೃತಿಯೊಂದರ ಅಭಿನಯಕ್ಕಿಂತ ಅದುರುವಾಯು ಹಿಡಿದವರಂತೆ, ಉನ್ಮಾದ ಏರಿದವರಂತೆ, ದೆವ್ವ ಹಿಡಿದವರಂತೆ ಅರ್ಥವಿಲ್ಲದೆ ತಲೆಕೊಡಹುವ, ಕಾಲಿನಡಿಯ ಬೆಂಚು ಮುರಿಯುವ ತಾಂಡವ ಹಿಡಿಸುತ್ತದೆ. ಬರಿಗೈಯಲ್ಲಿ ಮೊಳಹಾಕುವ, ವಿಕಾರವಾಗಿ ಕತ್ತುತಿರುಗಿಸುವ, ಹೆಜ್ಜೆಹಾಕಿ ರಂಗವನ್ನು ಅಳೆಯುವ, ಬಾಲಗ್ರಹ ಹಿಡಿದ ಮಗುವಿನಹಾಗೆ ಅರ್ಥವಿಲ್ಲದೆ ದಿಕ್ಕುದಿಕ್ಕಿಗೆ ಓಡಿ, ಆಲೋಚಿಸುತ್ತ ನಿಲ್ಲುವ ಕೀಳು ಕುಣಿತ ಹಿಡಿಸುತ್ತದೆ. ತಿಳಿಯಬೇಕಾದುದಿದೆ, ಇನ್ನೂ ಆಲೋಚಿಸಬೇಕಾದುದು ಇದೆ ಎನ್ನುವಂಥದು ನಮ್ಮ ಕಲಾವಿದರಿಗೆ ಏನೂ ಉಳಿದಿಲ್ಲ. ದೊಡ್ಡ ಹೆಸರುಗಳನ್ನು ಹೇಳಿ ಆ ಪರಂಪರೆಯಲ್ಲಿ ಬಂದೆವೆನ್ನುವವರು 'ಬುಧಾನಂದಾಯ ಸಂದರ್ಶತೇ' ಎಂಬ ಪುಷ್ಪಾಂಜಲೀ ಶ್ಲೋಕಭಾಗವನ್ನು ಬುಧಾ—ನಂದಾಯ ಎಂದು ವಿಭಜಿಸಿ 'ಬುಧರ ಮಕ್ಕಳಿಗಾಗಿ' ಎಂದು ಅಭಿನಯಿಸಿ "ನೀ ಚರಣಾಂಬುಜ ಮುನುನೇ ವಿಡಜಾಲ ಕರುಣಾಲವಾಲ" ಎಂಬಲ್ಲಿ ಚರಣ ಮತ್ತು ಭುಜವನ್ನು ತೋರಬಲ್ಲರು. ಮುರಾರಿ, ಪಾಕಾರಿ—ಅರ್ಥ ಬೇರೆಯಾದರೂ ಅಭಿನಯ ಒಂದೇ. ಪರ್ಯಾಯವಾಗಿ ವೈಷ್ಣವಹಸ್ತವನ್ನೂ, ಐಂದ್ರಹಸ್ತವನ್ನೂ ತೋರಿಸಲಾದೀತೆ ಎಂದು ಯೋಚಿಸಲಾರದು. ಈ ಮಟ್ಟ ಉತ್ತಮವಾಗಬೇಕು. ಗದ್ದಲ ತಿಳಿಯಾಗಬೇಕು, ಜನ ವಿವೇಕಿಗಳಾಗಬೇಕು. ಎಲ್ಲ ಎಂದಿಗೊ?

ಭರತನಾಟ್ಯ ಗಂಡಸರು ಮಾಡತಕ್ಕದ್ದಲ್ಲ. "ಮಾಧುರೀಭಾವ ತೋರ್ಪಡಿಸುವ

ಭರತನಾಟ್ಯ ಸ್ತ್ರೀಯರು ಮಾತ್ರ ಯಶಸ್ವಿಯಾಗಿ ಮಾಡಬಲ್ಲ ಕಲೆ" ಎಂಬ ಮಾತೂ ನಾಟ್ಯದ ವಿಷಯದಲ್ಲಿ ಕೇಳಿಬರುತ್ತಿದೆ.[32] ರಾಧೆಯ ಪಾತ್ರವನ್ನು ಗೋಪೀಕೃಷ್ಣ (ಕಥಕ್‌ನಲ್ಲಿ) ಅಭಿನಯಿಸುವಷ್ಟು ಸೊಗಸಾಗಿ ಯಾವ ಹೆಂಗಸು ಅಭಿನಯಿಸುವುದನ್ನು ನೋಡುತ್ತಿದ್ದೇವೆ! ಲಾಸ್ಯ ಹೆಂಗಸರಿಗೆ ಎನ್ನುವುದು ಕುಣಿಯಲಾರದವರ ಮಾತು. ಕಥಕ್ಕಳಿಯನ್ನು ಗಂಡಸರು ಗುತ್ತಿಗೆ ಹಿಡಿದ ಬಗೆಯನ್ನು ಕರ್ನಾಟಕದಲ್ಲಿ ಆಗಲೇ ನೋಡಿದ್ದೇವೆ. ಈ ಬಗೆಯ ವಾದ ವ್ಯರ್ಥವಾದುದು. ಗಂಡಸರು ಲಾಸ್ಯ ಮಾಡ ಬಾರದೆಂದಿಲ್ಲ, ಹೆಂಗಸರು ತಾಂಡವ ಮಾಡಲಾರರೆಂದಿಲ್ಲ. ಅಭಿನಯಕಲೆಗೆ ಗಂಡಸು ಹೆಂಗಸು ಎಂಬುದು ಆಧಾರವಲ್ಲ.[33] ಮಾಧುರ್ಯ ಎಂಬುದು ರತಿಯ ಒಂದು ವೈವಿಧ್ಯ. ಪುರುಷಾರ್ಥಗಳಲ್ಲಿ ಮೂರನೆಯದಾದ ಕಾಮ ಫ್ರಾಯ್ಡನ ಸಿದ್ಧಾಂತದಂತೆ ಪ್ರವೃತ್ತಿ ಜನ್ಯವಲ್ಲ; ಸಂಸ್ಕಾರಜನ್ಯವಾದುದು, ಧರ್ಮನಿಷ್ಠವಾದುದು. ಇಂಗ್ಲಿಷಿನ Truth ಎಂಬುದಕ್ಕೆ ಧೃ ಎಂಬುದೇ ಧಾತು.[34] ವಿದ್ಯೆಯೇ ಅರ್ಥವಲ್ಲದೆ ಅವಿದ್ಯೆಯಲ್ಲ. ಮೋಕ್ಷದ ಶಾಂತಿಯೇ ಗುರಿ. ಒಂದು ರೀತಿಯಲ್ಲಿ ರತಿಯೇ ಎಲ್ಲ ರಸಗಳ ತಾಯಿ;[35] ಇವೆಲ್ಲ ನೆಲೆನಿಲ್ಲುವ ಶಮನವೇ, ಶಾಂತಿಯೇ ಅದರ ನೆಲೆ. ರಸಗಳ ಆರಂಭ ರತಿಯಾದರೆ ಮುಗಿವೇ ಶಾಂತ. ಈ ರತಿಯೇ ಪ್ರೇಮಭಕ್ತಿಯಾಗಿ ಶಾಂತ, ದಾಸ್ಯ, ಸಖ್ಯ,

---

[32] ಕನ್ನಡ ನಾಡಿನಲ್ಲಿ ನೃತ್ಯಪರಂಪರೆ: ನಾಟ್ಯಾಚಾರ್ಯ ಕುಲಕರ್ಣಿ ಶ್ರೀನಿವಾಸ್. ಮೈಸೂರು ದಸರಾದರ್ಶಿನಿ, ೧೯೬೨, ಪು. ೪೨.

[33] "This does not mean that males cannot do the graceful 'lāsya' also, or that woman cannot do the vigorous 'tāṇḍava' also." Kathakali and Other Forms of Bharata Natya: V. Raghavan, Triveni. Vol. VI, No. 2, 1933. p. 164. ಈ ಲೇಖನದಲ್ಲಿ ಕಥಕ್ಕಳಿಯನ್ನು ಕುರಿತು ವಿಸ್ತಾರವಾದ ವಿವೇಚನೆಯಿದೆ.

[34] "Truth and True—trauen (Ger.), to trust; treu, true; treowth (A.S.), what may be relied upon; (Sans.) dhru, to be fixed. Connected are troth, trust, and tryst (Scotch), a fixed place of meeting." *Exercises on Etymology* By William Graham, 1872. p. 36.

[35] "Love is not a simple emotion, but it is a complex system of emotions. It menifests itself through various emotions such as, joy, sorrow, hope, anxiety, fear, disappointment, admiration etc., of which, however, joy appears to be the most fundamental, being the central and dominent emotion." The Role of Love in Religious Experience: B. N. Ray, The Philosophical Quarterly. Vol. V, No. 3, 1929, p. 176.

ವಾತ್ಸಲ್ಯ ಮತ್ತು ಮಧುರಗಳಾಗುತ್ತವೆ, ದೈವಪ್ರೇಮದಲ್ಲಿ ಶಮನಗೊಳ್ಳುತ್ತದೆ ಜೀವ.[36] ಭಾರತೀಯ ಕಲೆಯ ವಿಶಿಷ್ಟತೆಯಲ್ಲಿ ಇದೂ ಒಂದು. ಜೆಟ್ಟಿ ತಾಯಮ್ಮ ನವರು ಇದನ್ನು ತಿಳಿದಿದ್ದರು, ಈಗಿನವರೂ ತಿಳಿದುಕೊಳ್ಳಬೇಕು.

ಎಷ್ಟು ಹೆಚ್ಚು ಸುತ್ತುಹೊಡೆದರೆ ಅಷ್ಟು ಶುದ್ಧ ಎಂದು ಕಥಕ್‌ನವರು ಭಾವಿಸಿ ದಂತಿದೆ.[37] ಕಥಕ್ ನೃತ್ತವು ಭರತನಾಟ್ಯ ಕಥಕ್ಕಳಿಗಳಿಗೆ ಭಿನ್ನವಾದ ಸಂಪ್ರದಾಯ. ಆದರೆ ಅದು ಹುಟ್ಟಿದ ಸ್ಥಳದಲ್ಲೆ ಬದಲಾವಣೆಯಾಗುತ್ತಿರುವಂತೆ ತೋರುತ್ತದೆ. ನಾಟ್ಯಶಾಸ್ತ್ರದ ಹಸ್ತಗಳನ್ನೇ ಅದು ಅನುಕರಿಸುವುದಾದರೆ ಅದಕ್ಕೆ ಬೇರೆ ಹೆಸರಾದರೂ ಏಕೆ?

ತಮಿಳಿನ ತೆರುಕ್ಕೂತ್ತು,[38] ಆಂಧ್ರದ ವೀಥಿನಾಟಕ, ಕರ್ನಾಟಕದ ಯಕ್ಷಗಾನ, ಕೇರಳದ ಕಥಕ್ಕಳಿ ಎಲ್ಲಾ ಒಂದೇ ಜಾತಿಯವು. ಆದರೆ ಕಥಕ್ಕಳಿಯ ವಿಷಯವಾಗಿ ನಡೆದಿರುವ ವ್ಯಾಪಕವಾದ ಕೆಲಸ ಕರ್ನಾಟಕದ ಯಕ್ಷಗಾನಕ್ಕೆ ಇನ್ನೂ ನಡೆದಿಲ್ಲ; ನಡೆದಿರುವುದು ಸಾಲದು. ಯಕ್ಷಗಾನ ಬಯಲಾಟಗಳ ಹೆಜ್ಜೆಗಳ ಬಗ್ಗೆ, ಹಸ್ತಾಭಿನಯದ ಬಗ್ಗೆ ಇನ್ನೂ ಸರಿಯಾದ ವಿವರವುಳ್ಳ ಸಾಹಿತ್ಯ ಬರಬೇಕಾಗಿದೆ. ಕಥಕ್ಕಳಿಯ ಹಾಡುಗಳಲ್ಲಿನ ಪಲ್ಲವಿ, ಅನುಪಲ್ಲವಿ ಚರಣಗಳು ಕನ್ನಡದ ಕಾಣಿಕೆ[39]. ಹಳ್ಳಿಯ

---

[36] "The love of God ultimately means universal sympathy and universal love. Again in the loving communion with God, the human soul finds lasting peace and contentment of mind. The restlessness of lower passions and impulsive desires being conquered, the soul finds its ultimate resting place in the love life of God" Ibid, p. 181.

[37] ಪ್ರಬುದ್ಧ ಕರ್ನಾಟಕದ ಬೆಳ್ಳಿಹಬ್ಬದ ಸಂಚಿಕೆಯಲ್ಲಿ ಶ್ರೀ ಶಿವರಾಮ ಕಾರಂತರು 'ನಾಡಿನಲ್ಲಿ ಕಲೆಗಳ ಮೆಲ್ನಡೆ' ಎಂಬ ಲೇಖನದಲ್ಲಿ ನೃತ್ಯದ ವಿಷಯವಾಗಿ ಸ್ವಲ್ಪ ಬರೆದಿದ್ದಾರೆ. ಇಂದಿಗೂ ಆ ಪರಿಸ್ಥಿತಿ ಮಟ್ಟದ ವಿಷಯದಲ್ಲಿ ಹಾಗೆ ಉಳಿದಿದೆ ಎಂದು ಧಾರಾಳವಾಗಿ ದನಿಗೂಡಿಸಬಹುದು. ಲೇಖನದ ಕೊನೆಯಲ್ಲಿ "ಇದು ಬದುಕುವ ಜನವೆ? ಬದುಕಲು ಬಯಸುವ ಜನವೆ? ಬಯಕೆಯ ಬೆನ್ನಿಗೆ ಬೇಕಾದ ಹಟವುಳ್ಳವರೇ—ಇವರು?" ಎಂದು ಪ್ರಶ್ನೆಗಳನ್ನು ಹಾಕಿದ್ದಾರೆ (ಪು. ೭೩). ಅವು ಹಾಗೇ ಇಂದಿಗೂ ಇರುವುದೇ ಲೇಸು. ರಾಜಕೀಯ ಹೆಚ್ಚಾಯಿತು ಕಲೆಯಲ್ಲಿ.

[38] ಕೇರಳದಲ್ಲೂ ಕೂತ್ತುನಾಟ್ಯವಿದೆ. ವಿವರಗಳಿಗೆ ನೋಡಿ :–

The 'Kuttu' of the Kerala Theatre By Mrs. Devaki Menon. The journal of The Music Academy, Madras, 1954, pp. 122–129.

[39] The song is in the same form, as anybody knowing Karnatic music, and Karnatic music composition knows, in 'pallavi', 'anupallavi', and 'charana'. This will clearly indicate the date of Kathakali, for the definite names of 'pallavi',

ಕುಣಿತಗಳು ಶಾಸ್ತ್ರಕ್ಕಾದರೂ ಉಳಿದಿರುತ್ತಿತ್ತು. ಆದರೆ ಈಗ ಹಳ್ಳಿಗಳು ಪಟ್ಟಣಿಗರ ಸಂಸರ್ಗದಿಂದ ಹಳೆತನವನ್ನು ಕಳೆದುಕೊಳ್ಳುತ್ತಿವೆ, ಪಟ್ಟಣಗಳಾಗುತ್ತಿವೆ. ಹಿಂದೆ ಆರತಿ ಎತ್ತಬೇಕಾದರೆ ಹಾಡು, ಹೊಸಿಲುಪಾಟಬೇಕಾದರೆ ಹಾಡು ಎಂದು ಮದುವೆ ಮನೆಗಳಲ್ಲಿ ಹಾಡಿನ ಪೈಪೋಟಿ ನಡೆಯುತ್ತಿತ್ತು. ಈಗ ನಮ್ಮ ಹೆಣ್ಣುಗಳ ಕೊರಳಲ್ಲಿ ದನಿಯೇ ಹೊರಡುವುದಿಲ್ಲ. ಹಾಡುಬರದ ಹೆಣ್ಣು ಹೆಣ್ಣಲ್ಲ ಎಂಬ ಭಾವನೆಯಿದ್ದರೆ ಈಗ ಅದಿಲ್ಲ. 'ಹಾಹೂ' ಎಂಬ ಚಲಚ್ಚಿತ್ರ ಗೀತೆಗಳ ಗದ್ದಲ, ವಿಕಾರ ಆಕ್ರಂದನ ಹೆಚ್ಚಾಗಿದೆ. ಉರುಟಣೆಯ ಹಾಡುಗಳನ್ನು ನಾಲ್ಕೇನಾಲ್ಕನ್ನು ಒಂದು ಹಳ್ಳಿಯಲ್ಲಿ ಸಂಗ್ರಹಿಸಬೇಕಾದರೆ ತುಂಬಾ ಕಷ್ಟವಿದೆ. ನಮ್ಮ ಸಂಸ್ಕೃತಿ ಏನಿದೆ ಅದು ನಮ್ಮ ಸಾಮಾಜಿಕ ಜೀವನದಿಂದ ಹಾರಿಹೋಗುತ್ತಿದೆ. ನಮ್ಮ ಸಂಸ್ಕೃತಿಯ ಬೆಲೆಯನ್ನು ಅರಿಯದವರು, ಅಜ್ಞಾನವನ್ನೇ ಬಂಡವಾಳವನ್ನಾಗಿ ಉಳ್ಳ ಹೆಚ್ಚಿನ ಪಾಲಿನ ಪ್ರಯೋಗ ಶೀಲರು ಹಳಮೆಯನ್ನು, ಸಂಪ್ರದಾಯವನ್ನು ಶಾಸ್ತ್ರಾಂಧತೆ, ಮೌಢ್ಯ ಎಂದು ಮೊದಲಾಗಿ ಹೀಗಳೆದು ನಮ್ಮತನವನ್ನು ತೊಡೆದುಹಾಕಹೊರಟಿದ್ದಾರೆ. ನಮ್ಮಲ್ಲಿನ ಸಂಪ್ರದಾಯಗಳು ಏನು ಯಾವುವು ಹೇಗಿವೆ ಎಂದು ಐತಿಹಾಸಿಕ ದಾಖಲೆಯನ್ನಾಗಿ ಮಾಡುವ ಮುನ್ನವೇ ಅವು ಅದೃಶ್ಯವಾದರೂ ಆಶ್ಚರ್ಯವಿಲ್ಲ. ಹಳೆಯದರ ವಿಷಯದಲ್ಲಿ ನಮಗೆ ಗೌರವವಿಲ್ಲ; ಅದು ಹೋಯಿತು, ಹೊಸತು, ತೂಕವಾದುದು, ಸರಿಯಾಗಿ ಸಿಕ್ಕಲಿಲ್ಲ. ಹೀಗೆ ಇಬ್ಬಂದಿಯ ಸ್ಥಿತಿ ನಮ್ಮ ಕಲೆಗಳದಾಗುತ್ತಿದೆ. ಪಟ್ಟಣಗಳಲ್ಲಿ ನಾಟ್ಯಕಲೆಯನ್ನು ಗುಜರಿಮಾಲನ್ನಾಗಿ ಮಾಡಿದ ಕಲಾಚಾರ್ಯರು ಚಲಾವಣೆಗೆ ತರುತ್ತಿರುವ ಹಳ್ಳಿಯ ಕುಣಿತಗಳು ಎಳ್ಳಷ್ಟೂ ಹಳ್ಳಿಯ ಕುಣಿತಗಳಲ್ಲ. ಹಳ್ಳಿಯವು ಹಳ್ಳಿಗಳಲ್ಲಿ ಹಾಳಾಗುತ್ತಿವೆ. ಅವರೂ ಪಟ್ಟಣದ ಈ ಜಾನಪದವೆಂದು ಹಣೆಪಟ್ಟಿ ಹಾಕಿಕೊಂಡ ಮೋಟಾ ನೃತ್ಯಗಳನ್ನೇ ಅನುಕರಿಸತೊಡಗಿದ್ದಾರೆ.

ಮುಂದಿನ ಹಾದಿ

ಈಗಾಗಲೇ ಕೆಲವರು ಹೊಸಗನ್ನಡ ಭಾವಗೀತೆಗಳನ್ನು ನಾಟ್ಯಕ್ಕೆ ಅಳವಡಿಸುತ್ತಿರುವುದನ್ನು ನೋಡುತ್ತಿದ್ದೇವೆ. ಕುವೆಂಪು, ಪುತಿನ, ಡಿವಿಜಿ–ಮೊದಲಾದವರ ಒಂದೆರಡು ಕವನಗಳು ಅಭಿನಯಿಸಲ್ಪಡುತ್ತಿವೆ. ಇದು ಏನೇನೂ ಸಾಲದು. ಅಭಿನಯದ ಮಟ್ಟವಂತೂ ತುಂಬಾ ಕೀಳು. ಅದು ಉತ್ತಮವಾಗಬೇಕು. ಹೊಸಗನ್ನಡದ ಪು.ತಿ.ನ., ಕಾರಂತ ಮೊದಲಾದವರ ಗೀತನಾಟಕಗಳನ್ನು ನಾಟ್ಯಕ್ಕೆ ಅಳವಡಿಸಿಕೊಳ್ಳಬೇಕು.

'anupallavi', and 'charana' date only after the time of Kannada composer Purandara Das, though long before him we had corresponding parts being called 'dhruvapada' etc., in Sanskrit" Kathakali and other forms...., V. Raghavan. Triveni Vol. VI, No. 2, 1933, p. 159.

ಸಾಮಾಜಿಕ ನಾಟಕಗಳನ್ನೂ ನಾಟ್ಯಮಾಡಬೇಕು. ಕನ್ನಡ ಕಾವ್ಯಗಳಲ್ಲಿನ ಭರತ ಬಾಹುಬಲಿ, ನೀಲಾಂಜನೆಯ ನಾಟ್ಯ ಮೊದಲಾದ ಕಾವ್ಯ ಪ್ರಸಂಗಳನ್ನು ನಾಟ್ಯಕ್ಕೆ ತೊಡಗಿಸಬೇಕು. ಹರಿಹರನ ರಗಳೆಗಳಲ್ಲಿ ಹಲವನ್ನು ಆಡಬಹುದು. ಲುಪ್ತವಾದ ಕನ್ನಡ ಜಾವಡಿಗಳನ್ನು ಪುನಃ ಚಲಾವಣೆಗೆ ತರಬೇಕು. ಈಚೆಗೆ ಬೆಂಗಳೂರಿನಲ್ಲಿ ಮೇಘಸಂದೇಶವೇ ಮೊದಲಾಗಿ ಒಂದೆರಡು ನೃತ್ಯನಾಟಕಗಳಾದುವು. ಸಾವಿರಗಟ್ಟಲೆ ಸರಕಾರದ ಹಣ ವ್ಯಯವಾಯಿತೇ ವಿನಾ ಕಲೆ ಹೊರಬರಲಿಲ್ಲ. ಕಲೆ ಪ್ರಕಟಗೊಳ್ಳಲು ಸಾವಿರಾರು ರೂಪಾಯಿಗಳು ಅನಾವಶ್ಯಕ. ಶ್ರದ್ಧೆ, ಕಲಾಭಿಮಾನ ಅಷ್ಟು ಸಾಕು. ಶಾಸ್ತ್ರವಾಗಲಿ, ಕಲೆಯಾಗಲಿ ನಮ್ಮ ಜನರ ಹೃದಯಕ್ಕೆ ತಾಗಬೇಕಾದರೆ ಕನ್ನಡವಲ್ಲದೆ ಬೇರೆ ದಾರಿಯಿಲ್ಲ. ಕನ್ನಡ ಮಾಧ್ಯಮ ಬರೀ ಶಿಕ್ಷಣಕ್ಕಲ್ಲ; ಇಡೀ ಜೀವನಕ್ಕೆ ಆಗಬೇಕು. ಆಗಮಾತ್ರ ನಾವು ನಾವೆನಿಸುತ್ತೇವೆ. ಅರ್ಥವಾಗದಿರುವಿಕೆಯೇ ಹಿರಿತನವೆನಿಸಬಾರದು. ಕಲೆಗೆ ಭಾಷೆಯ ಸೀಮೆಯಿಲ್ಲ, ನಿಜ, ನಾವು ಬಾಗಿಲುಗಳನ್ನು ಸದಾ ತೆರೆದಿಡಬೇಕು, ಆದರೆ ನಮ್ಮ ದೇಶರೂಢಿಯಲ್ಲಿ ಅದನ್ನು ಬಳಸಿಕೊಳ್ಳಬೇಕು. ನಮ್ಮ ಕಲೆ, ನಮ್ಮ ಭಾಷೆ, ನಮ್ಮ ನಾಡು—ಎನ್ನುವ ವಿಷಯಗಳಲ್ಲಿ ನಾಚಿಕೆಪಡತಕ್ಕವರು ತಮ್ಮ ಹುಟ್ಟಿನ ಬಗೆಗೇ ನಾಚಿಕೊಳ್ಳುವವರಾಗಿರುತ್ತಾರೆ. ಅಂಥವರಿಂದ ಕಲೆ ಉದ್ಧಾರವಾಗುವುದಿಲ್ಲ; ಜನ ಉದ್ಧಾರವಾಗುವುದಿಲ್ಲ.[40]

---

40 'ದೇಶರೂಢಿ' ಎಷ್ಟು ಅವಶ್ಯ ಎಂಬುದನ್ನು ೧೮೬೭ ರಲ್ಲಿ ಶ್ರೀ ಟಿ. ಜಿ. ಮಾಬೆನ್ ಎಂಬಾತ ಕನ್ನಡಿಗರಿಗೆ ಬೋಧಿಸಬೇಕಾಯಿತು. ದೇಶರೂಢಿಯಿಲ್ಲದ ಕಾನೂನುಗಳಿಂದ ಜನರು ಹೇಗೆ ತರತರದ ನಷ್ಟಗಳಿಗೆ ಗುರಿಯಾಗುತ್ತಾರೆ ಎಂಬುದನ್ನು ಮನಗಂಡಿದ್ದಾನೆ. ಆವನು ತನ್ನ ಹೊತ್ತಗೆಯ ಪೀಠಿಕೆಯಲ್ಲಿ ಆತ್ಮೀಯ ಶೈಲಿಯಲ್ಲಿ ಹೇಳಿರುವ ಕೆಲವು ಮಾತುಗಳನ್ನು ಇಲ್ಲಿ ಉದ್ಧರಿಸುತ್ತೇವೆ:

"ಆದ್ದರಿಂದ ದಸ್ತಾವೇಜು ವಗೈರೆಯ ಅನುಭವದಲ್ಲಿ ವಾಚಕರಿಗೆ ಇರಬಹುದಾದ ಅಜ್ಞಾನವೂ ನಾಚಿಕೆಯೂ ಪರಿಹಾರವಾಗಬೇಕೆಂಬ ಮೋಹದಿಂದ ಕಾನೂನು ಕಾಯಿದೆಗಳನ್ನೂ ದೇಶರೂಢಿಯನ್ನೂ ಅನುಸರಿಸಿ ಈ ಗ್ರಂಥವನ್ನು ಪ್ರಕಟಿಸಮುಂಕೊಂಡಿದ್ದೇನೆ..........ಆಸ್ತಿ ಪಾಸ್ತಿ ಇದ್ದವರು ಮರಣಶಾಸನ ಯಾನೆ ವಿಲ್‌ನಾಮೆ ಮಾಡುವ ಅವಶ್ಯಬೀಳುವಾಗ್ಯೆ ಸಾಧ್ಯವಾದಷ್ಟು ಗುಪ್ತವಾಗಿ ಅದನ್ನು ಬರೆಸಿಡಬೇಕೆಂತ ಮನಸ್ಸಿದ್ದರೂ, ಬರೆಯುವ ಕ್ರಮ ಮೊದಲಾದ್ದನ್ನೂ ಸರಕಾರದವರು ಆ ವಿಷಯ ಮಾಡಿರುವ ಉಪಾಯವನ್ನೂ ತಿಳಿಯದವರಾಗಿ ತಮ್ಮ ಗುಟ್ಟನ್ನು ಇತರರ ಮುಂದೆ ಬಿಚ್ಚಿ, ಬರೆಯುವವನ ಪ್ರೇರಣೆಗೆ ಒಳಗಾಗಿ, ತಮಗೆ ಸಮಾಧಾನಕರವಲ್ಲದ ಸಂಗತಿಗಳಿಗೂ ದಸ್ಕತು ಹಾಕಿ, ವ್ಯರ್ಥವಾಗಿ ತರತರದ ನಷ್ಟಕ್ಕೆ ಗುರಿಯಾಗುತ್ತಾರೆ............

"ಈ ಸಂಬಂಧದಲ್ಲಿ ಇನ್ನೊಂದು ಮಾತನ್ನು ಇಲ್ಲಿ ಕೂಡಿಸುವರೆ ಅಪ್ಪಣೆಯಾಗಲಿ! ಒಬ್ಬರಿಗೊಬ್ಬರು ಕಾಗದಪತ್ರಾದಿಗಳನ್ನು ಬರೆಯುವಾಗ್ಯೆ ಅವರವರಿಗಿರುವ ಸಂಬಂಧ ಸ್ಥಾನಮಾನಾದಿಗಳಿಗನುಸಾರವಾಗಿ ಲೇಖನ, ರಾಯಸ ಮುಂತಾದ ಕಾಗದಪತ್ರಾದಿಗಳಲ್ಲಿ ಉಪಯೋಗಿಸತಕ್ಕ ಬಹು ಶ್ಲಾಘನೀಯವಾದ ನಾನಾ ತರದ ಒಕ್ಕಣೆಗಳು ನಮ್ಮ ಕಸ್ತೂರಿ ಕನ್ನಡ ಭಾಷೆಯಲ್ಲಿ ಇವೆ.

ವೃತ್ತಿನಾಟ್ಯಕಲಾವಿದರಿಂದ ನಾವು ಹೆಚ್ಚು ನಿರೀಕ್ಷಿಸುವುದು ಸಾಧ್ಯವಿಲ್ಲ ಅವರಿಗೆ ಕಲೆಗಿಂತ ಅನ್ನದ ಮೇಲೆ ದೃಷ್ಟಿ ಹೆಚ್ಚಾಗಿ ಕೇಂದ್ರೀಕೃತವಾಗಿರಬೇಕಾದುದು ಸಹಜವೇ. ಅವರು ಜನರ ಅಭಿರುಚಿಯನ್ನು ತಿದ್ದುವ ಸಾಹಸಕ್ಕೆ ಹೋಗಬೇಕೆಂದು ಒತ್ತಾಯಪಡಿಸಿ ಪ್ರಯೋಜನವಿಲ್ಲ. ಜನರ ಅಭಿರುಚಿಯ ಪ್ರವಾಹದಲ್ಲಿ ಕೊಚ್ಚಿ ಹೋಗುತ್ತಾರೆ; ಹಾಗೆ ಅವರನ್ನು ಬಿಟ್ಟುಬಿಡಬೇಕು. ಜ್ಞಾನದ ಮುಂದೆ ವಿನಯವನ್ನು, ಸಾಧನೆಯ ಮುಂದೆ ಶ್ರದ್ಧೆಯನ್ನು ಹೇಳಿತರುವುದು ಸಾಧ್ಯವಲ್ಲ. ಮಗುವನ್ನು ತಾಯಿ ಸಲಹುವಷ್ಟು ಪ್ರೀತಿಯಿಂದ ದಾದಿಯರು ಸಲಹಲಾರರು. ಬೋರ್ಡು ಹಾಕಿಕೊಂಡ ಮಾತ್ರಕ್ಕೆ ಕಲಾವಿದರಾಗುವುದಿಲ್ಲ. ಏನೂ ಕಲಿಯದವನು ವೃತ್ತಿಕಲಾವಿದನಾಗ ಬಹುದು, ಕಲಿತವನು ವೃತ್ತಿಗಿಳಿಯದೆ ಇರಬಹುದು. ಅಬದ್ಧವನ್ನು ದಿನಗಟ್ಟಲೆ ಕುಣಿದರೂ ಕಲೆಯಾಗದು. ಹೊಲಸು ಹೊರೆಯಾದರೂ ಹೊಲಸೇ. ಮೈಸೂರಿನ ಕಲೆ ಮುಂದುವರಿಯಲು ಈ ಕ್ಷೇತ್ರಕ್ಕೆ ಕಾಲವನ್ನು, ಶ್ರಮವನ್ನು ತ್ಯಾಗಮಾಡಲು ಸಿದ್ಧರಿರುವ, ಪ್ರಚಾರಾಕಾಂಕ್ಷೆ ಇಲ್ಲದ, ಸೇವಾಮನೋಭಾವದ ಕೆಲವರೇ ವಿದ್ಯಾವಂತ ರಾದರೂ ಬಂದರೆ ಮಾತ್ರ ಸಾಧ್ಯ. ಇಂದು ಸಾಕಷ್ಟು ಅನುಕೂಲಸೌಲಭ್ಯಗಳಿವೆ, ಜೆಟ್ಟಿತಾಯಮ್ಮನವರಿಗಿದ್ದಷ್ಟಕ್ಕಿಂತ ನೂರುಪಾಲು ಹೆಚ್ಚಾಗಿ. ಹಾಗೆಯೇ ಅವರಿಗಿಂತ ನೂರುಪಾಲು ಸಾಧನೆಮಾಡತಕ್ಕವರು ಬರಬೇಕಾಗಿದೆ. ಇದೇ ಕೊನೆಯ ದಾರಿ. ಕೆಲವು ಸುಲಭ ರೂಪದ ನರ್ತನಗಳು ಎಲ್ಲರೂ ಮಾಡುವಂತೆ ಪ್ರಚಾರಕ್ಕೆ ತರಬೇಕಾಗಿದೆ.[41]

ಆದರೆ ಸಕಲ ಕಾರ್ಯಗಳಲ್ಲಿಯೂ ಬಿಳೀ ಜನರನ್ನೇ ಅನುಸರಿಸಬೇಕೆಂಬ ಹುಚ್ಚುಭ್ರಾಂತಿಯು ಪ್ರಬಲವಾಗಿರುವ ಈ ಯುಗದಲ್ಲಿ ಈ ವಿಷಯದಲ್ಲೂ ಅವರನ್ನು ಅನುಸರಿಸುವದು ರೂಢಿ ಯಾಗುತ್ತಾ ಬರುತ್ತದೆ. ಪ್ರಾಜ್ಞರಾದವರಿಗೆ ತಮ್ಮ ಭಾಷಾಭಿಮಾನವೂ ದೇಶಾಭಿಮಾನವೂ ಇರಬೇಡವೇ ?—ಮಗನು ತಂದೆ ತಾಯಿಗಳಿಗೆ ಬರೆಯುವಾಗ "ಪ್ರಿಯರೇ" ಅಥವಾ "ಪ್ರಿಯ ತಂದೆತಾಯಿಗಳಿಗೆ" ಎಂಬ ಮೊದಲಾದ ವಿಲಾಯತೀ ನಮೂನೆಯಲ್ಲಿ ಕಾಗದ ತೊಡಗುವದು ಉತ್ತಮವೋ? ಇಲ್ಲವೆ "ತೀರ್ಥರೂಪ ತಂದೆತಾಯಿಗಳವರ ಪಾದಕ್ಕೆ, ಬಾಲಕ ಮಾಡುವ ಬಿನ್ನಹ" ಎಂತ ಬರೆಯತೊಡಗುವುದು ವಿಹಿತವೋ? ನೀವೇ ಸ್ವಲ್ಪವರಲ್ಲಿ ವಿಚಾರಿಸಿ ನೋಡಿರಿ. ಒಂದು ವೇಳೆ ಅನೇಕರಿಗೆ ಈ ತರದ ಕನ್ನಡ ಒಕ್ಕಣೆಗಳು ಗೊತ್ತಿಲ್ಲ; ಅವುಗಳ ಬೆಲೆ ಎಷ್ಟೆಂತಲೂ ಅವರು ಅರಿಯರು ; ಹೀಗಾಗಿ ಅವುಗಳ ಪ್ರಯೋಗ ಕಮ್ಮಿಯಾಗಿದೆಂತ ಹೇಳಬಹುದು. ಆದರೆ ಅವುಗಳನ್ನು ತಿಳಿದರೆ ಸಂತೋಷದಿಂದ ಬಳಿಸ್ಯಾರೆಂತ ನಂಬಿ, ಸಂಬಂಧಿಕರೊಳಗೂ ಸ್ನೇಹಿತ ರೊಳಗೂ ಪತ್ರವಹಿವಾಟದಲ್ಲಿ ನಡೆಯುವ ಅದಬಿನ ಮಾತುಗಳನ್ನು ಕಾಣಿಸುವ ಬಗ್ಗೆ ಕೆಲವು ಕಾಗದಗಳ ನಮೂನೆಗಳನ್ನು ಸಹ ಇದರಲ್ಲಿ ಸಂಕ್ಷೇಪವಾಗಿ ಕಾಣಿಸಲಾಗಿವೆ". Kannada Penman's Guide (ಲೋಕವ್ಯವಹಾರ ಬೋಧಿನಿ) By T. G. Maben, Mangalore, 1897, pp. IV – VII.

ಮೈಸೂರಿನ ಕನ್ನಡಕಲೆಯು ಶೈಲಿಯನ್ನಿಟ್ಟುಕೊಳ್ಳುವುದು ತಂದೆಗೆ "ತೀರ್ಥರೂಪ ತಂದೆಯ ಪಾದಕ್ಕೆ" ಎಂದು ಬರೆಯುವಂತೆ, ಪ್ರಾಜ್ಞರಾದವರು ಅದನ್ನುಳಿಸಿಕೊಳ್ಳಬೇಕಲ್ಲವೆ?

41 " For every art the great safeguard and vivifying influence

ಆದಕ್ಕಾಗಿಯೇ ನಾಟ್ಯದ ಹೆಜ್ಜೆಗಳನ್ನು ಆಧರಿಸಿ ಹೊಸರೂಪಗಳನ್ನು ಮಾಡಿದರೂ ಒಳ್ಳೆಯದೇ. ತಾವೇ ಹಾಕಿಕೊಂಡು ನಮ್ಮ ಜನ ಸಾಮೂಹಿಕವಾಗಿ ಕೆಲವು ಸರಳ ಹೆಜ್ಜೆಗಳನ್ನು ಹಾಕುತ್ತ ಕುಗ್ಗನ್ನು, ಮಾನಸಿಕ ಬಿಗಿತಗಳನ್ನು ಕಳೆದುಕೊಳ್ಳುವಂತಾಗ ಬೇಕು. ಹೀಗೆ ಆಸಕ್ತಿ ಮೊಳೆತರೆ ಅಂಥವರಲ್ಲಿ ಶ್ರದ್ಧೆವುಳ್ಳವರು ಸಾಧನೆಮಾಡಲು ಸುಲಭವಾಗುತ್ತದೆ. ಮುಖ್ಯವಾಗಿ ಅರೆಬರೆಯ ನಾಟ್ಯಾಚಾರ್ಯರ ಕಪಿಮುಷ್ಟಿಯಿಂದ ಕಲೆ ಹೊರಬರಲು ಅನುವಾಗುತ್ತದೆ.

ಶಾಸ್ತ್ರಬೇರೆ, ಸಂಪ್ರದಾಯ ಬೇರೆ, ಕಲೆ ಬೇರೆ. ಯಾವುದೂ ಯಾರ ಗುತ್ತಿಗೆಯೂ ಅಲ್ಲ. ನಾಟ್ಯಪದ್ಧತಿಯೊಂದು ಶಾಸ್ತ್ರೀಯವಿದ್ದು ಕಲೆಯಾಗದೇ ಹೋದರೆ ಫಲವಿಲ್ಲ. ಸಂಪ್ರದಾಯವೊಂದರ ಶಾಸ್ತ್ರೀಯತೆಯ ಆಧಾರದ ಮೇಲೆ ನಾಟ್ಯವನ್ನು ಕಲೆಯನ್ನಾಗಿ ರೂಪಿಸಬೇಕಾಗಿದೆ. ಈಗ ನಾವು ನೋಡುತ್ತಿರುವ ನಾಟ್ಯ ಬಹುಪಾಲು ಡ್ರಿಲ್–ಕವಾಯತು ಆಗಿದೆ. ಹಾಗಾದರೆ ಪ್ರಯೋಜನವಿಲ್ಲ. ವಿಜ್ಞಾನಿಗಳನ್ನು ಪ್ರಾರ್ಥಿಸಿದರೆ ಶಾಸ್ತ್ರೀಯವಾಗಿ ಬಗೆಬಗೆಯಲ್ಲಿ ಕುಣಿಯುವ ಯಂತ್ರಮಾನವನನ್ನೋ, ಹೆಣ್ಣು ಬೊಂಬೆಯನ್ನೋ ನಿರ್ಮಿಸಿಕೊಟ್ಟಾರು. ಅಷ್ಟೇ ಉದ್ದೇಶಕ್ಕೆ ಈ ನಾಟ್ಯ ಕಥಕಳಿ ಯಿರಲಿ, ಕಥಕಾಗಲಿ, ಭರತನಾಟ್ಯವಾಗಲಿ, ಜಾನಪದವಾಗಲಿ ಉಳಿಯಬೇಕಾಗಿಲ್ಲ. ಅನುವಾದಮಾಡುವ, ವಾಕ್ಯರಚನೆಮಾಡುವ ಯಂತ್ರಗಳು ಬಂದಿವೆಯಂತೆ. ಮಹಾ ಕಾವ್ಯ ಬರೆಯುವ ಯಂತ್ರ ಮಾನವನಲ್ಲದೆ ಬೇರೆಯಿಲ್ಲ. ಕಾವ್ಯದಂತೆ ನಾಟ್ಯವೂ. ನಮ್ಮ ಎದೆಯೊಳಗಿನ ನೋವುನಲಿವುಗಳು ಹೊರಬರಬೇಕು. ಅಭಿನಯ ನಾಟ್ಯದ ಜೀವಾಳ. ಈ ದೃಷ್ಟಿಯಿಂದ ದಕ್ಷಿಣಭಾರತದ ಭರತನಾಟ್ಯದ ಶೈಲಿಗಳಲ್ಲೆಲ್ಲಾ ಮೈಸೂರು ಸಂಪ್ರದಾಯ ಉತ್ಕೃಷ್ಟವಾದುದು. ಕಾವ್ಯನಾಟಕಗಳನ್ನು ಓದಿ, ನೋಡಿ ಅಳುವಂತೆ ನಾಟ್ಯವನ್ನೂ ನೋಡಿ ಕಣ್ಣೀರು ಮಿಡಿವಂಥ ಕಲೆ ಆಗಬೇಕು. ನಾಟ್ಯಕಲೆ ಬದುಕಿಗೆ ಹತ್ತಿರವಾಗಬೇಕು. ಜೆಟ್ಟಿತಾಯಮ್ಮನವರು ಬೆಳೆಸಿದುದನ್ನು ಇನ್ನಷ್ಟು ಬೆಳೆಸುವುದು ಕನ್ನಡ ವಿದ್ಯಾವಂತರ ಪಾಲಿಗೆ ಬಂದ ಕಾರ್ಯವಾಗಿದೆ. ನಶಿಸು ತ್ತಿರುವ ಮೈಸೂರು ನಾಟ್ಯಸಂಪ್ರದಾಯವನ್ನು ಬೆಳೆಸಿ ರೂಪಿಸುವುದರಿಂದ ಮಾತ್ರ ಕನ್ನಡಕಲೆ, ಮೈಸೂರಿನ ಕಲೆ ಉಳಿದೀತು. ಇಲ್ಲದಿದ್ದರೆ ನಮ್ಮದು ಎನ್ನುವುದೇನೂ ಉಳಿಯುವುದಿಲ್ಲ. ನಾವು ನಾವಾಗಿ ಉಳಿಯಬಲ್ಲವರೆ?—ಎಂದು ನಮ್ಮ ಜನ ಪ್ರಶ್ನಿಸಿ ಕೊಳ್ಳಬೇಕು.

---

is a popular practice of its easier forms. Music flourished in Italy and in Germany, where every person sings. Poetry becomes great when behind it there is a living growth of popular ballads or lyrics. The Russian ballad has made its wonderful achievement because every peasant dances with vigour and even with grace, and in the summer nights in every village young men and women dance. In India popular dancing has for many centuries been moribund, even dead". *Women of India* By Otto Rothfeld, p. 161.

ನನ್ನದೆಂಬ ಸ್ವಾಭಿಮಾನ ಮನುಷ್ಯನಿಗೆ ಬೇಕೇಬೇಕು; ದುರಭಿಮಾನ ಮಾತ್ರಬೇಡ. ಕನ್ನಡಿಗರು ತಮ್ಮ ಕನ್ನಡತನವನ್ನು ಉಳಿಸಿಕೊಳ್ಳಲಿಕ್ಕೆ ಯಾವಾಗಲೂ ಪ್ರಯತ್ನಿಸಬೇಕು. ನಾವು ಪರಪ್ರಾಂತದವರ ಸಂಗಡ ಶಾಂತಿಯಿಂದ ನಡೆದುಕೊಳ್ಳಬೇಕು. ನಮ್ಮ ಶತ್ರುವನ್ನು ನಾವು ಏಕಪೀಠದಲ್ಲಿ ಕೂಡಿಸಿಕೊಳ್ಳುವಷ್ಟು ಸಮಾಧಾನವನ್ನು ತಾಳಬೇಕು. ಆದರೆ ಆ ಶತ್ರು ನಮ್ಮಲ್ಲಿರತಕ್ಕ ಶಾಂತಿಯನ್ನು ಕಂಡು ನಮ್ಮ ತಲೆಯ ಮೇಲೆ ಕೂರಲಿಕ್ಕೆ ಪ್ರಯತ್ನಿಸಿದರೆ ಮಾತ್ರ ಅವನನ್ನು ಕೆಳಗೆ ಒಗೆಯುವ ದಿಟ್ಟತನವೂ ನಮ್ಮಲ್ಲಿರಬೇಕು.

ವ್ಯಾಕರಣತೀರ್ಥ ಚಂದ್ರಶೇಖರಶಾಸ್ತ್ರಿ

ಸಿಂಧುವಳ್ಳಿ ಅನಂತಮೂರ್ತಿ

ರಂಗಭೂಮಿ

ರಂಗಭೂಮಿಯು ಒಂದು ಕಲಾಸೃಷ್ಟಿ. ಮತ್ತೊಬ್ಬರನ್ನು ರಂಜಿಸುವುದಕ್ಕಾಗಿ ಒಂದು ಗೊತ್ತಾದ ಜಾಗದಲ್ಲಿ, ಒಂದು ಗೊತ್ತಾದ ಸಂಗತಿಯನ್ನು ಕುರಿತು ಅನುಕರಣ ಮಾಡುವುದು. ಅಂದರೆ, ಅನುಕರಣೆ ಹಾಗು ರಂಜನೆ ರಂಗಭೂಮಿಯ ಮುಖ್ಯ ಅಂಶಗಳು ಎಂದ ಹಾಗಾಯಿತು. ನಮ್ಮ ಬುದ್ಧಿಶಕ್ತಿ, ಪ್ರತಿಭಾಶಕ್ತಿ ಬೆಳೆಯುತ್ತಾ ಹೋದಂತೆಲ್ಲಾ ನಮ್ಮ ರಂಗಭೂಮಿಯೂ ಬೆಳೆಯುತ್ತಾ ಹೋಗುತ್ತದೆ. ಕೇವಲ ಬುದ್ಧಿಶಕ್ತಿ, ಪ್ರತಿಭಾಶಕ್ತಿಗಳನ್ನು ಕಲೆ ಎಂದು ಕರೆಯಲಾಗುವುದಿಲ್ಲ; ಅದೊಂದು ಅನುಕರಣೆ ಮಾತ್ರ. ಆದ್ದರಿಂದ ರಂಗಭೂಮಿಯು ಒಂದು ಕಲಾಸೃಷ್ಟಿಯಾಗಿ ಉಳಿಯಬೇಕಾದರೆ ಅದಕ್ಕೆ ಗೊತ್ತಾದ ಒಂದು ಸಾಹಿತ್ಯವಿರಬೇಕು; ಆ ಸಾಹಿತ್ಯ ಒಂದು ಗೊತ್ತಾದ ಪರಿಸರದಲ್ಲಿ ಅಭಿನಯಿಸಲ್ಪಡಬೇಕು—ಇವೆರಡರಿಂದ ಮೂಡಿಬಂದ ರೂಪವೇ ನಾಟಕ. ಇಷ್ಟರಿಂದಲೇ ನಾಟಕ ಎಂದು ಕರೆಯಿಸಿಕೊಳ್ಳುವುದಿಲ್ಲ. ಸಂಗೀತ, ಸಾಹಿತ್ಯ, ಅಭಿನಯ, ರಂಗಮಂಟಪ—ಇವಿಷ್ಟೂ ಇದ್ದರೆ ಒಂದು ರಂಗಭೂಮಿ ಅಸ್ತಿತ್ವಕ್ಕೆ ಬರಲು ಸಾಧ್ಯ.

ಮಹಾಕವಿ ಪಂಪನ ಕಾವ್ಯದಲ್ಲಿ ಕಂಡುಬರುವ ಕೆಲವು ಪದಗಳ ಆಧಾರದಿಂದ ಕನ್ನಡ ರಂಗಭೂಮಿಯು ಸಾವಿರ ವರ್ಷಕ್ಕೂ ಹಿಂದೆಯೇ ಅಸ್ತಿತ್ವದಲ್ಲಿದ್ದಿತು ಎಂದು ವಾದಿಸುವುದುಂಟು; ಕನ್ನಡ ರಂಗಭೂಮಿಯು ಸಂಸ್ಕೃತ ರಂಗಭೂಮಿಯಿಂದ ಪ್ರಭಾವಿತವಾಗಿದೆ ಎಂದು ಹೇಳಿ, ಕನ್ನಡ ರಂಗಭೂಮಿಯ ಕಾಲವನ್ನು ಬಹಳ ಹಿಂದಕ್ಕೆ ತೆಗೆದುಕೊಂಡು ಹೋಗುವುದೂ ಉಂಟು. ಕನ್ನಡ ರಂಗಭೂಮಿಯು ಯಾವಾಗ ಅಸ್ತಿತ್ವಕ್ಕೆ ಬಂದಿತು ಎಂದು ಚರ್ಚಿಸುವುದು ಈ ಲೇಖನದ ಉದ್ದೇಶವಲ್ಲ. ನಮ್ಮ ರಂಗಭೂಮಿಯು ಸುಮಾರು ನೂರುವರ್ಷಗಳಿಂದ ತನ್ನ ಕಾಲಮೇಲೆ ತಾನು ನಿಲ್ಲಲು ಪ್ರಯತ್ನ ಪಟ್ಟಿದೆ ಎಂದು ಹೇಳಬಹುದು; ಅದರ ಒಂದು ಸಮೀಕ್ಷೆ ಪ್ರಕೃತ ನಮ್ಮ ಉದ್ದೇಶ.

ಹಿಂತಿರುಗಿ ನೋಡಿದಾಗ ಕನ್ನಡ ರಂಗಭೂಮಿಯು ಮರಾಠಿ ರಂಗಭೂಮಿಯ ಮೇಲೆ, ತೆಲುಗು ರಂಗಭೂಮಿಯ ಮೇಲೆ, ತಮಿಳು ರಂಗಭೂಮಿಯಮೇಲೆ ತನ್ನ ಪ್ರಭಾವವನ್ನು ಬೀರಿದೆ ಎಂದು ಕಂಡುಬರುತ್ತದೆ. ಆಧುನಿಕ ಕನ್ನಡ ರಂಗಭೂಮಿ ಬೆಳೆದು

ಬಂದ ಬಗೆಯನ್ನು ನೋಡುವಾಗ ಉತ್ತರ ಕರ್ನಾಟಕ, ದಕ್ಷಿಣ ಕನ್ನಡ ಮತ್ತು ಮೈಸೂರು—ಈ ಪ್ರಾದೇಶಿಕ ಹಿನ್ನೆಲೆಯಲ್ಲಿ ನೋಡುವುದು ಅನಿವಾರ್ಯ.

ಒಂದುಕಡೆ ಜಾನಪದ ರಂಗಭೂಮಿ, ಮತ್ತೊಂದುಕಡೆ ಅರಮನೆ ನಾಟಕ ಕಂಪನಿಗಳು ಕೆಲಸಮಾಡಿಕೊಂಡು ಬರುತ್ತಿದ್ದಾಗಲೇ ವ್ಯವಸಾಯ ನಾಟಕ ಕಂಪನಿಗಳು ಅಸ್ತಿತ್ವಕ್ಕೆ ಬಂದುವು. ಜಾನಪದ ರಂಗಭೂಮಿಯು ರುಚಿಸದೆ ಅರಮನೆ ನಾಟಕ ಕಂಪನಿಗಳು ಕೈಗೆ ನಿಲುಕದೆ, ವ್ಯವಸಾಯ ನಾಟಕ ಕಂಪನಿಗಳು ಅಸ್ತಿತ್ವಕ್ಕೆ ಬಂದಿರ ಬೇಕು.

ಆಧುನಿಕ ಭಾರತೀಯ ರಂಗಭೂಮಿಯು ಕಲ್ಕತ್ತದಲ್ಲಿ ಪ್ರಾರಂಭವಾಯಿತೆಂದು ಹೇಳಬಹುದು. ಬ್ರಿಟಿಷರು ಮೊದಲು ನೆಲಸಿದುದು ಕಲ್ಕತ್ತದಲ್ಲಿ. ಮನೋರಂಜನೆಗೆಂದು ಅವರು ಇಂಗ್ಲಿಷ್ ನಾಟಕಗಳನ್ನು ಆಡಿಕೊಳ್ಳುತ್ತಿದ್ದರು. ಇದರಿಂದ ಪ್ರಭಾವಿತರಾದ ಬಂಗಾಳಿಗಳು ಕೆಲವು ಇಂಗ್ಲಿಷ್ ನಾಟಕಗಳನ್ನು ಅನುವಾದಮಾಡಿ ಪ್ರದರ್ಶಿಸಿಸಿದರು. ಈ ನಾಟಕಗಳು ಇಂಗ್ಲಿಷ್ ಕಲಿತ ಜನಕ್ಕೇ ರುಚಿಸುತ್ತಿದ್ದುವು. ಅಂಥವರಿಗೇ ಇವು ಮೀಸಲಾಗಬಾರದು ಎಂಬ ಉದ್ದೇಶದಿಂದಲೂ, ಲಾಭಗಳಿಕೆಯ ದೃಷ್ಟಿಯಿಂದಲೂ, ಪಾರ್ಸಿ ಕಂಪನಿಗಳು ಅಸ್ತಿತ್ವಕ್ಕೆ ಬಂದವು. ಈ ಕಂಪನಿಗಳು ಉರ್ದುಭಾಷೆಯ ನಾಟಕಗಳನ್ನು ಪ್ರಯೋಗಮಾಡಲು ಆರಂಭಿಸಿದುವು. ಈ ಕಂಪನಿಗಳ ದೃಷ್ಟಿ ಲಾಭಗಳಿಕೆಯಾದುದರಿಂದ ನಾಟಕಗಳನ್ನು ಹಳೆಯರೀತಿಯಲ್ಲಿ ಪ್ರದರ್ಶಿಸದೆ ಪ್ರೇಕ್ಷಕರಿಗೆ ಮೆಚ್ಚುಗೆಯಾಗುವಂತೆ ಬಣ್ಣ, ದೀಪ, ರಂಗಸಜ್ಜಿಕೆ ಮೊದಲಾದುವುಗಳಿಗೆ ಹೆಚ್ಚು ಗಮನಕೊಡಲಾಯಿತು. ಹೀಗಾಗಿ ಈ ಕಂಪನಿಗಳ ನಾಟಕಗಳು ಜನರಮೇಲೆ ತಮ್ಮ ಪ್ರಭಾವವನ್ನು ಬಹಳವಾಗಿ ಬೀರಿದವು. ಈ ದೃಷ್ಟಿಯಿಂದ, ಬಂಗಾಳದಲ್ಲಿ ಮೊದಲು ಭಾರತೀಯ ರಂಗಭೂಮಿ ಆರಂಭವಾಯಿತು ಎನ್ನುವುದಕ್ಕಿಂತಲೂ, ಪಾರ್ಸಿ ಕಂಪನಿಗಳ ಉಗಮವೇ ಭಾರತೀಯ ರಂಗಭೂಮಿಯ ಉದಯ ಎನ್ನಬಹುದು. ಬಂಗಾಳದಲ್ಲಿ ಸಂಸ್ಕೃತ ನಾಟಕಗಳೂ ಅನುವಾದವಾಗಿ ಪ್ರಯೋಗಿಸಲ್ಪಟ್ಟವು. ಇವುಗಳಿಗೆ ರಾಜಾಶ್ರಯವೂ ದೊರಕಿತು. ಇವೆಲ್ಲಾ ನಮ್ಮ ವ್ಯವಸಾಯ ನಾಟಕ ಕಂಪನಿಗಳಿಗೆ ಪ್ರೇರಕವಾದವು.

ಉತ್ತರ ಕರ್ನಾಟಕದಲ್ಲಿ ಮರಾಠೀ ವ್ಯವಸಾಯ ಕಂಪನಿಗಳು ತಮ್ಮ ಪ್ರಭಾವ ವನ್ನು ಕನ್ನಡ ಜನತೆಯಮೇಲೆ ಚೆನ್ನಾಗಿ ಬೀರಿದವು. ಕನ್ನಡ ಜನತೆಗೆ, ಕನ್ನಡ ರಂಗಭೂಮಿಯೇ ಇಲ್ಲದಂತಾಗುವುದೋ ಎನ್ನುವಷ್ಟರ ಮಟ್ಟಿಗೆ ಆ ಮರಾಠೀ ನಾಟಕ ಗಳು ಪ್ರಯೋಗಿಸಲ್ಪಟ್ಟವು. ಕನ್ನಡ ಜನ ಈ ನಾಟಕಗಳಿಗೆ ಮಾರುಹೋದರು. ಕನ್ನಡಾಭಿಮಾನಿಗಳಿಗೆ ಭಯವಾಗಲು ಪ್ರಾರಂಭವಾಯಿತು. ಇದರ ಪರಿಣಾಮವಾಗಿ ಶಾಂತಕವಿಗಳ ನೇತೃತ್ವದಲ್ಲಿ ಕನ್ನಡ ವ್ಯವಸಾಯ ನಾಟಕ ಕಂಪನಿಯೊಂದು ಗದುಗಿನಲ್ಲಿ ಪ್ರಾರಂಭವಾಯಿತು. ಈ ಕಂಪನಿಯು ಮರಾಠೀ ಕಂಪನಿಗಳಿಗೆ ಹೆಗಲೆಣೆಯಾಗಿ ನಿಂತು ಕನ್ನಡ ನಾಟಕಗಳ ಪ್ರದರ್ಶನ ಮಾಡಿತು. ಮರಾಠೀ ನಾಟಕಗಳ ಪ್ರಭಾವ

ಕನ್ನಡ ಜನರ ಮೇಲೆ ಕಡಮೆಯಾಗುತ್ತಾ ಬಂದಿತು. ನಾಟಕ ರಚನೆ ಹಾಗು ಪ್ರಯೋಗ ಗಳ ದೃಷ್ಟಿಯಿಂದ ಶಾಂತಕವಿ ಉತ್ತರ ಕರ್ನಾಟಕದಲ್ಲಿ ಮೊದಲಸ್ಥಾನ ಗಳಿಸುತ್ತಾರೆ. ಉತ್ತರ ಕರ್ನಾಟಕ ವ್ಯವಸಾಯ ರಂಗಭೂಮಿಗೆ ಇವರೇ ಜನ್ಮದಾತರು. ಶಾಂತ ಕವಿಗಳ ಪ್ರಯೋಗಗಳಿಂದ ಪ್ರಭಾವಿತರಾದ ಉತ್ತರ ಕರ್ನಾಟಕದ ಜನ ಅನೇಕ ನಾಟಕ ಕಂಪನಿಗಳನ್ನು ಉತ್ತರ ಕರ್ನಾಟಕದ ಪ್ರಮುಖ ಊರುಗಳಲ್ಲಿ ಸ್ಥಾಪಿಸಿದರು. ಅವುಗಳಲ್ಲಿ ಮೊದಲಿಗೆ ಕಾಣುವುದು 'ಹಲಸಗಿ ಕಂಪನಿ'. ಈ ಕಂಪನಿಗೆ ಒಂದು ಸಾಂಸ್ಕೃತಿಕ ಹಿನ್ನೆಲೆ ಇದ್ದದ್ದರಿಂದ, ಒಳ್ಳೊಳ್ಳೆಯ ನಾಟಕಗಳನ್ನು ಪ್ರಯೋಗಿಸಿ, ಜನರಮೇಲೆ ಒಳ್ಳೆಯ ಪರಿಣಾಮವನ್ನು ಮಾಡಿತು. ಕರ್ನಾಟಕದ ನಾನಾಭಾಗಗಳಲ್ಲಿ, ಮಹಾರಾಷ್ಟ್ರ ಹಾಗು ಆಂಧ್ರಪ್ರದೇಶಗಳಲ್ಲಿ ಪ್ರವಾಸಮಾಡಿ, ಕನ್ನಡ ನಾಟಕಗಳನ್ನು ಪ್ರಯೋಗಿಸುವಲ್ಲಿ 'ತಂತು ಪುರನ್ಯ ನಾಟಕ ಕಂಪನಿ' ಪ್ರಮುಖ ಪಾತ್ರವನ್ನು ವಹಿಸಿತು. ಹೀಗೆ ಕನ್ನಡ ನಾಟಕಗಳು ತಲೆ ಎತ್ತುತ್ತಿರುವಾಗಲೇ ಮತ್ತೆ ಮರಾಠೀ ನಾಟಕಗಳು ಪ್ರಬಲವಾಗತೊಡಗಿದವು. ಈ ಸಂದರ್ಭದಲ್ಲಿ 'ಭಾರತ ಕಲೋತ್ತೇಜಕ ಸಂಗೀತ ಸಮಾಜ' ಎಂಬ ಕಲಾವಿಲಾಸೀ ತಂಡವು ತನ್ನ ಪ್ರಯೋಗಗಳಿಂದ ಕನ್ನಡ ನಾಟಕ ಗಳನ್ನು ಜನಪ್ರಿಯಗೊಳಿಸಲು ಯತ್ನಿಸಿತು. ಕನ್ನಡ ರಂಗಭೂಮಿಯು ಮರಾಠೀ ರಂಗಭೂಮಿಯ ಮುಂದೆ ತನ್ನ ಆತ್ಮಗೌರವವನ್ನು ಕಾಪಾಡಿಕೊಳ್ಳುವಲ್ಲಿ, ಹಾಗು ವಿಲಾಸೀ ನಾಟಕಗಳು ಹುಟ್ಟಿಕೊಳ್ಳುವಲ್ಲಿ 'ಭಾರತ ಕಲೋತ್ತೇಜಕ ಸಂಗೀತ ಸಮಾಜ' ಬಹಳ ಕೆಲಸಮಾಡಿತು.

ಶಿರಹಟ್ಟಿ ವೆಂಕೋಬರಾಯರ 'ಶ್ರೀಮಹಾಲಕ್ಷ್ಮೀ ಪ್ರಾಸಾದಿಕ ನಾಟಕ ಮಂಡಳಿ' ಇಪ್ಪತ್ತನೆಯ ಶತಮಾನದಲ್ಲಿ ಅಸ್ತಿತ್ವಕ್ಕೆ ಬಂದ ಬಹು ಪ್ರಮುಖ ಕಂಪನಿ. ಶ್ರೀ ವೆಂಕೋಬರಾಯರು ಶ್ರೇಷ್ಠದರ್ಜೆಯ ನಟರಾಗಿದ್ದುದೇ ಅಲ್ಲದೆ ಉತ್ತಮ ವ್ಯವ ಸ್ಥಾಪಕರೂ ಆಗಿದ್ದರು. ಸಂಸ್ಥೆಯನ್ನು ಬಹು ಚಾಕಚಕ್ಯತೆಯಿಂದ ನಡಸಿದರು. ಮಹಾರಾಷ್ಟ್ರ ರಂಗಭೂಮಿಯೊಡನೆ ಸರಿಸಮನಾಗಿ ನಿಲ್ಲಬಲ್ಲ ಒಂದು ಕಂಪನಿಯನ್ನು ಶ್ರೀ ಶಿವಮೂರ್ತಿಸ್ವಾಮಿ ಕಟ್ಟಿದರು. ಅದೇ 'ಕೊಣ್ಣೂರ್ ಕಾಡಸಿದ್ಧೇಶ್ವರ ಸಂಗೀತ ನಾಟಕ ಮಂಡಳಿ'. ಈ ಕಂಪನಿಯಲ್ಲಿ ಸ್ತ್ರೀ ಪಾತ್ರಗಳನ್ನು ಹೆಂಗಸರೇ ವಹಿಸಲು ಪ್ರಾರಂಭಿಸಿದರು. ಅಲ್ಲದೆ ವಿದ್ಯುದ್ದೀಪಗಳ ಉಪಯೋಗವೂ ಈ ಕಂಪನಿಯಲ್ಲೇ ಮೊದಲಿಗೆ ಪ್ರಾರಂಭವಾದುದು. ಕಾಲ ಹಾಗೂ ಹಣವನ್ನು ಸಂಪೂರ್ಣವಾಗಿ ರಂಗ ಭೂಮಿಗೆ ಉಪಯೋಗಿಸಿದವರೆಂದರೆ ಶ್ರೀಶಿವಮೂರ್ತಿಸ್ವಾಮಿ. ಉತ್ತಮ ಅಭಿನಯ ಹಾಗೂ ಸಂಗೀತಕ್ಕೆ ಹೆಸರಾಗಿದ್ದ ವಾಮನರಾವ್ ಮಾಸ್ತರ್ 'ವಿಶ್ವಗುಣಾದರ್ಶ ನಾಟಕಮಂಡಳಿ'ಯ ಮೂಲಕ ಕಾಣಿಸಿಕೊಳ್ಳುತ್ತಾರೆ. ಹಲಗೇರಿ ಜಟ್ಟಪ್ಪನವರ ಕಂಪನಿ ಹಾಸ್ಯದ ಹೊನಲನ್ನು ಹರಿಸಿತು. ಉತ್ತಮ ಅಭಿನಯ ಹಾಗೂ ಧ್ಯೇಯಗಳಿಗೆ ಹೆಸರಾದುದು 'ಶ್ರೀದತ್ತಾತ್ರೇಯ ಸಂಗೀತ ನಾಟಕ ಮಂಡಳಿ' ; ಇದರ ನಾಯಕರು ಶ್ರೀ ಗರೂಡ್ ಸದಾಶಿವರಾವ್. ಒಳ್ಳೆಯ ಅಭಿರುಚಿಯಿಂದ ಕೂಡಿದ ಸಾಹಿತ್ಯ ವಸ್ತುಗಳು

ಇವರು ಪ್ರಯೋಗಿಸುತ್ತಿದ್ದ ನಾಟಕಗಳಲ್ಲಿದ್ದುವು. ಹತ್ತೊಂಬತ್ತನೆಯ ಶತಮಾನದ ಕೊನೆಯ ಭಾಗದಲ್ಲಿ ಹಿಂದೆ ಹೇಳಿದ ವ್ಯವಸಾಯ ನಾಟಕ ಕಂಪನಿಗಳು ಅಸ್ತಿತ್ವಕ್ಕೆ ಬಂದುವು; ಇಪ್ಪತ್ತನೆಯ ಶತಮಾನದ ಆದಿಭಾಗದಲ್ಲಿ ಒಳ್ಳೊಳ್ಳೆಯ ನಾಟಕಗಳನ್ನು ಪ್ರಯೋಗಿಸಿದುವು; ಮುಂದೆ ನಾಟಕರಂಗ ಬೆಳೆಯಲು ಬಹಳಮಟ್ಟಿಗೆ ಸಹಾಯಕ ವಾದುವು.

ಉತ್ತರ ಕರ್ನಾಟಕದಲ್ಲಿ ಮರಾಠಿ ರಂಗಭೂಮಿಯಿಂದ ಪ್ರಭಾವಿತವಾಗಿ ವ್ಯವಸಾಯ ನಾಟಕ ಮಂಡಳಿಗಳು ಉಗಮವಾದರೆ, ಮೈಸೂರಿನಲ್ಲಿ ಅರಮನೆಯ ರಂಗಭೂಮಿ, ಹಾಗೂ ಜಾನಪದ ರಂಗಭೂಮಿಯಿಂದ ವ್ಯವಸಾಯ ರಂಗಭೂಮಿ ಅಸ್ತಿತ್ವಕ್ಕೆ ಬಂದಿತು. ಅರಮನೆಯಲ್ಲಿ ಮೊದಲಿಗೆ ಇದ್ದುದ್ದು ಯಕ್ಷಗಾನ ಮಂಡಳಿಯೇ ಹೊರತು ನಾಟಕ ಮಂಡಳಿಯಲ್ಲ. ಮರಾಠೀ ನಾಟಕಗಳು ಹಾಗೂ ಪಾರ್ಸಿ ಕಂಪನಿ ನಾಟಕಗಳು ಇಲ್ಲಿ ಪ್ರದರ್ಶಿತವಾದ ಮೇಲೆಯೇ ಸರಿಯಾದ ವ್ಯವಸಾಯ ರಂಗಭೂಮಿ ಅಸ್ತಿತ್ವಕ್ಕೆ ಬಂದಿತು ಎಂದು ಹೇಳಬಹುದು.

ಚಾಮರಾಜ ಒಡೆಯರು ಅರಮನೆ ರಂಗಭೂಮಿಗೆ ಪ್ರೇರಕರಾದರು. ಅದರ ಫಲವಾಗಿ ಬಸವಪ್ಪ ಶಾಸ್ತ್ರಿಗಳಿಂದ 'ಕನ್ನಡ ಶಾಕುಂತಲ' ಉದಯವಾಯಿತು. ಶಾಕುಂತಲವನ್ನೇ ಈ ಗುಂಪು ಮೊದಲು ಅಭಿನಯಿಸಿದ್ದರಿಂದ 'ಶಾಕುಂತಲ ಕರ್ಣಾಟಕ ನಾಟಕ ಸಭಾ' ಎಂದು ಹೆಸರಿಟ್ಟುಕೊಂಡಿತು. ಸ್ವಲ್ಪ ಕಾಲದನಂತರ ಇದೇ 'ಶ್ರೀ ಚಾಮರಾಜೇಂದ್ರ ಕರ್ಣಾಟಕ ಸಭಾ' ಆಯಿತು. ಚಾಮರಾಜ ಒಡೆಯರಿಂದ ಪೋಷಣೆ ಪ್ರೋತ್ಸಾಹ ಸಿಕ್ಕಿದ್ದರಿಂದ ರಂಗಭೂಮಿಗಾಗಿ ಸಿ. ಸುಬ್ಬರಾಯರು ಹಾಗು ಎ. ಆನಂದರಾಯರು ಕೆಲವು ಇಂಗ್ಲೀಷ್ ನಾಟಕಗಳನ್ನು ಅನುವಾದ ಮಾಡಿದರು. ಅರಮನೆಗೆ ಸೇರದೇ ಇದ್ದ ಪಂಡಿತರಿಂದಲೂ ಕೆಲವು ಸಂಸ್ಕೃತ ನಾಟಕಗಳು ಕನ್ನಡಕ್ಕೆ ಅನುವಾದವಾದುವು. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಶಾಕುಂತಲ ಕರ್ಣಾಟಕ ನಾಟಕಸಭಾ ತನ್ನ ಕಾಲಮೇಲೆ ತಾನು ನಿಂತಿತು.

ಅರಮನೆ ರಂಗಭೂಮಿಯಿಂದ ಪ್ರಭಾವಿತವಾಗಿ ಬಹಳ ಮೊದಲಿಗೆ ಕಾಣಿಸಿ ಕೊಂಡದ್ದು ಮಂಡ್ಯಂ ರಂಗಾಚಾರ್ಯರ 'ರಾಜಧಾನಿ ನಾಟಕ ಮಂಡಳಿ'. ಅದಕ್ಕೆ ಹತ್ತಿರದಲ್ಲೇ ಗುಬ್ಬಿ ಚಂದಣ್ಣನವರ ನೇತೃತ್ವದಲ್ಲಿ 'ಗುಬ್ಬಿ ಚನ್ನ ಬಸವೇಶ್ವರ ಕೃಪಾ ಪೋಷಿತ ನಾಟಕ ಸಂಘ' ಅಸ್ತಿತ್ವಕ್ಕೆ ಬಂದಿತು. ಈ ಕಂಪನಿಯು ಆಡುತ್ತಿದ್ದ ನಾಟಕಗಳ ವಸ್ತು ಪುರಾಣಕ್ಕೆ ಸಂಬಂಧಿಸಿದ್ದು. ಕಂಪನಿ ಪ್ರಾರಂಭವಾದ ಸ್ವಲ್ಪ ಕಾಲದಲ್ಲೇ ಗುಬ್ಬಿ ವೀರಣ್ಣನವರು ಈ ಕಂಪನಿಯನ್ನು ಪ್ರವೇಶಿಸಿದರು. ವೀರಣ್ಣನವರ ನಾಯಕತ್ವದಲ್ಲಿ ಕಂಪನಿ ಬಹಳ ಯಶಸ್ವಿಯಾಯಿತು. ದಕ್ಷಿಣ ಭಾರತವನ್ನೆಲ್ಲಾ ಈ ಕಂಪನಿ ಪ್ರವಾಸ ಮಾಡಿ, ತಮಿಳು, ತೆಲಗು ಪ್ರದೇಶಗಳಲ್ಲಿ ಜಯಭೇರಿ ಹೊಡೆದು ಬಂದಿತು. ಗುಬ್ಬಿ ವೀರಣ್ಣನವರು ಕನ್ನಡ ರಂಗಭೂಮಿಗೆ ಒಂದು ಸ್ಥಾನ ಗಳಿಸಿ ಕೊಟ್ಟರು. ಕನ್ನಡ ರಂಗಭೂಮಿಯ ಇತಿಹಾಸದಲ್ಲಿ ಗುಬ್ಬಿಕಂಪನಿ ಒಂದು ಮೈಲಿಗಲ್ಲು;

ಇಲ್ಲ, ಗುಬ್ಬಿ ವೀರಣ್ಣನವರ ನಾಟಕ ಜೀವನವೇ ಕನ್ನಡ ರಂಗಭೂಮಿಯ ಇತಿಹಾಸ. ಗುಬ್ಬಿ ವೀರಣ್ಣನವರು ತಮ್ಮ ತನು, ಮನ, ಧನ ಎಲ್ಲವನ್ನೂ ಕನ್ನಡ ರಂಗಭೂಮಿಯ ಏಳಿಗೆಗಾಗಿ ಅರ್ಪಿಸಿದರು. ಗುಬ್ಬಿ ಕಂಪನಿಗೆ ಬಾಲಕನಾಗಿ ಪ್ರವೇಶಿಸಿದ ವೀರಣ್ಣ ಅದೇ ಕಂಪನಿಯಲ್ಲಿ ನಾಟಕರತ್ನರಾಗಿ ಮೆರೆದರು. ಗುಬ್ಬಿ ಕಂಪನಿಯಲ್ಲಿದ್ದ ಮತ್ತೊಬ್ಬ ಉತ್ತಮ ನಟರೆಂದರೆ ಸಿ. ಬಿ. ಮಲ್ಲಪ್ಪ. ಇವರು ಭಕ್ತಿರಸವೇ ಪ್ರಧಾನವಾದ ಪಾತ್ರಗಳನ್ನು ನಿರ್ವಹಿಸುವಲ್ಲಿ ನಿಷ್ಣಾತರಾಗಿದ್ದರು. ವ್ಯವಸಾಯ ನಾಟಕ ಕಂಪನಿಗಳಲ್ಲಿ ಪ್ರಧಾನ ಪಾತ್ರವಹಿಸಿ ಕನ್ನಡ ರಂಗಭೂಮಿಗೆ ಶ್ರಮಿಸಿದವರಲ್ಲಿ ಗೌರಿನರಸಿಂಹಯ್ಯನವರು ಹಾಗೂ ವರದಾಚಾರ್ಯರೂ ಮುಖ್ಯರೇ. ವರದಾಚಾರ್ಯರು ಕನ್ನಡ ರಂಗಭೂಮಿಯ ಅತ್ಯಂತ ಶ್ರೇಷ್ಠ ನಟರು. ಇವರು ಕನ್ನಡ ರಂಗಭೂಮಿಯ ನಟಸಾರ್ವಭೌಮರಾಗಿದ್ದರು. ಇವರ ಕಂಪನಿ ಉತ್ತಮ ಸಂಗೀತ, ಉತ್ತಮ ಅಭಿನಯಕ್ಕೆ ಹೆಸರಾಯಿತು. ಮಹಮದ್ ಪೀರ್ ಅವರ ಕಾಲ ಬಹಳ ಕಡಿಮೆಯಾದರೂ ಕನ್ನಡಿಗರೆಲ್ಲರ ಮನಮುಟ್ಟುವಂತೆ ಅಭಿನಯಿಸಿ ಕಣ್ಮರೆಯಾದರು. ವರದಾಚಾರ್ಯರ 'ರತ್ನಾವಳೀ' ಕಂಪನಿಯಂತೆಯೇ 'ಶ್ರೀ ಚಾಮುಂಡೇಶ್ವರಿ ಕರ್ಣಾಟಕ ನಾಟಕ ಸಭಾ'ವನ್ನು ವ್ಯವಸಾಯ ರಂಗಭೂಮಿಯ ಸಾಲಿನಲ್ಲಿ ಸ್ಮರಿಸಿಕೊಳ್ಳಬಹುದು. ಇದುವರೆವಿಗೆ ಬಂದ ನಾಟಕಗಳೇ ಒಂದು ರೀತಿಯಾದರೆ, ಹಿರಣ್ಣಯ್ಯನವರ ನಾಟಕಗಳ ರೀತಿಯೇ ಬೇರೆಯಾಯಿತು. ಸಮಾಜದ ಓರೆಕೋರೆಗಳನ್ನು ತಿದ್ದುವಲ್ಲಿ ಅವರು ನಾಟಕವನ್ನು ಮಾಧ್ಯಮವಾಗಿ ಬಳಸಿಕೊಂಡರು. ಹಿರಣಯ್ಯನವರ ಮಿತ್ರಮಂಡಲಿಯು ಕನ್ನಡ ರಂಗಭೂಮಿಯ ಇತಿಹಾಸದಲ್ಲಿ ಒಂದು ಮಹತ್ವದ ಪಾತ್ರವಹಿಸಿತು ಎನ್ನಬಹುದು.

ದಕ್ಷಿಣ ಕನ್ನಡದಲ್ಲಿ ಯಕ್ಷಗಾನವೇ ಪ್ರಧಾನವಾಗಿದ್ದು, ಅಲ್ಲಿನ ಜನತೆ ತನ್ನದೇ ಆದ ವ್ಯವಸಾಯ ಮಂಡಲಿಯನ್ನು ಮಾಡಿಕೊಳ್ಳುವಲ್ಲಿ ಅಷ್ಟಾಗಿ ಆಸಕ್ತಿ ವಹಿಸಲಿಲ್ಲ. ಉತ್ತರ ಕರ್ನಾಟಕ ಹಾಗು ಮೈಸೂರಿನಿಂದ ಬಂದ ನಾಟಕ ಕಂಪನಿಗಳು ಪ್ರಯೋಗಿಸುತ್ತಿದ್ದ ನಾಟಕಗಳನ್ನು ನೋಡಿ ಅವರು ತೃಪ್ತರಾಗುತ್ತಿದ್ದರು. ಕೆಲವು ಕಾಲದ ನಂತರ ರಂಗನಾಥ ಭಟ್ಟರ 'ಅಂಬಾ ಪ್ರಾಸಾದಿಕ ನಾಟಕ ಮಂಡಳಿ' ಅಸ್ತಿತ್ವಕ್ಕೆ ಬಂದಿತು. ಈ ಕಂಪನಿ ಕನ್ನಡ ನಾಡಿನಲ್ಲೆಲ್ಲಾ ಸಂಚಾರ ಮಾಡಿ ಹೆಸರುಗಳಿಸಿತು.

ದಕ್ಷಿಣ ಕನ್ನಡದಲ್ಲಿ ಯಕ್ಷಗಾನವಾದರೆ, ಬಳ್ಳಾರಿಯಲ್ಲಿ ಜಾನಪದ ರಂಗಭೂಮಿ ತನ್ನ ಕೆಲಸವನ್ನು ಮಾಡಿಕೊಂಡು ಬರುತ್ತಿತ್ತು. ಅಲ್ಲಲ್ಲೇ ಒಂದೆರಡು ವ್ಯವಸಾಯ ನಾಟಕ ಕಂಪನಿಗಳು ಬಂದವು. ಬಳ್ಳಾರಿಯ ಹೆಸರು ಬಂದಾಗ ಬಳ್ಳಾರಿ ರಾಘವಾಚಾರ್ಯರ ಹೆಸರು ಬಂದೇ ಬರುತ್ತದೆ. ಬಳ್ಳಾರಿಯ ರಾಘವಾಚಾರ್ಯರು ವಕೀಲರಾಗಿದ್ದುಕೊಂಡು ಕಲಾಸೇವೆ ಮಾಡಿದವರು. ಇವರು ಹೆಸರಾಂತ ನಟರಾಗಿದ್ದರು. ಆದರೂ ಉತ್ತರ ಕರ್ನಾಟಕ ಹಾಗು ಮೈಸೂರು ಕಡೆಗಳಿಂದ ಬಂದ ವ್ಯವಸಾಯ ಕಂಪನಿಗಳು ಪ್ರಸಿದ್ಧವಾಗಿದ್ದವು. ನಾಟಕ ಸಮ್ಮೇಳನಗಳನ್ನು ಬಳ್ಳಾರಿಗೆ ಸೇರಿದ ಜೋಳದ ರಾಶಿಯಲ್ಲಿ ನಡೆಸಿದ್ದರಿಂದ ಕನ್ನಡ ರಂಗಭೂಮಿಯ ಬಗ್ಗೆ ಪ್ರಜ್ಞೆ ಆ ಭಾಗದ ಜನರಲ್ಲಿ ಉಂಟಾಯಿತು.

ಹೈದರಾಬಾದು ಕರ್ನಾಟಕದಲ್ಲಿ ಮರಾಠೀ ನಾಟಕಗಳ ಪ್ರಯೋಗಗಳೇ ಹೆಚ್ಚಾಗಿದ್ದುದರಿಂದ, ಕನ್ನಡ ಜನ ಕನ್ನಡ ನಾಟಕಗಳನ್ನು ಪ್ರಯೋಗಿಸಲು ತಮ್ಮದೇ ಆದ ನಾಟಕ ತಂಡಗಳನ್ನು ಮಾಡಿಕೊಂಡರು.

ಅನುಕರಣೆ, ಅನುವಾದ, ಯಕ್ಷಗಾನ, ಜನಪದ ಆಟಗಳು–ಇವುಗಳಿಂದ ಪ್ರೇರಿತ ವಾಗಿ ಕರ್ನಾಟಕದ ನಾನಾಭಾಗಗಳಲ್ಲಿ ಕನ್ನಡ ರಂಗಭೂಮಿ ಅಸ್ತಿತ್ವಕ್ಕೆ ಬಂದಿತು. ಸಂಸ್ಕೃತ ಹಾಗು ಇಂಗ್ಲಿಷ್ ಸಾಹಿತ್ಯದ ಅನುವಾದಗಳು ಕನ್ನಡ ರಂಗಭೂಮಿಯ ಮೇಲೆ ಬಹಳವಾಗಿ ಬಂದವು; ಜನರು ಆಕರ್ಷಿತರಾದರು. ಪಾರ್ಸಿ ಹಾಗು ಮರಾಠಿ ನಾಟಕಗಳ ಪ್ರಭಾವದಿಂದ ನಮ್ಮ ರಂಗಭೂಮಿಯು ರಂಜಕವಾಯಿತು. ಒಳ್ಳೆಯ ಕಂಪನಿಗಳು, ಉತ್ತಮ ಬರಹಗಾರರು, ಶ್ರೇಷ್ಠ ನಟರು ಸೃಷ್ಟಿಯಾದರು. ಅಕ್ಕ ಪಕ್ಕದ ನಾಡುಗಳಲ್ಲಿ ಕನ್ನಡ ರಂಗಭೂಮಿ ತನ್ನ ಪ್ರಭಾವವನ್ನು ಬೀರಿತು. ಹೀಗೆ ಕನ್ನಡ ರಂಗಭೂಮಿ ಏಳಿಗೆ ಹೊಂದುತ್ತಿರುವಾಗಲೇ ಸ್ಪರ್ಧೆಯನ್ನು ಎದುರಿಸಬೇಕಾಯಿತು. ಜನರ ಅಭಿರುಚಿ ಬದಲಾವಣೆಯಾಗಲು ಪ್ರಾರಂಭವಾಯಿತು. ಚಲನಚಿತ್ರ ಜನರ ಮನಸ್ಸನ್ನು ಆಕರ್ಷಿಸಿತು. ಪೌರಾಣಿಕ ವಸ್ತುಗಳು ಜನರಿಗೆ ರುಚಿಸದೆ ಹೋದವು. ರಂಗಭೂಮಿಯ ನಟರೂ ಚಿತ್ರ ಪ್ರಪಂಚ ಸೇರಲು ಆರಂಭಿಸಿದರು. ಕಂಪನಿಯ ಕೆಲವರು ಮಾಲೀಕರೂ ಚಿತ್ರೋದ್ಯಮವನ್ನು ಪ್ರಾರಂಭಿಸಿದರು. ಹೀಗಾಗಿ ರಂಗಭೂಮಿಗೆ ಪೆಟ್ಟು ಬೀಳಲು ಪ್ರಾರಂಭವಾಯಿತು. ನಾಟಕ ಕಂಪನಿಗಳ ಉಳಿವಿನ ಪ್ರಶ್ನೆ ಬಂದಿತು. ಜನರ ಅಭಿರುಚಿಗೆ ಅನುಗುಣವಾಗಿ ನಾಟಕದ ವಸ್ತುಗಳೂ ಬದಲಾವಣೆಯಾಗಲು ಆರಂಭವಾಯಿತು. ಸಾಮಾಜಿಕ ವಸ್ತುಗಳು ಪ್ರಧಾನ ಪಾತ್ರವಹಿಸಲು ಪ್ರಾರಂಭ ವಾಯಿತು. ಇದರಿಂದ ಅನೇಕ ನಾಟಕ ಕಂಪನಿಗಳು ಮಾಯವಾದವು. ಜನರ ಅಭಿರುಚಿಗೆ ಹಾಗು ಕಾಲಬದಲಾವಣೆಗೆ ಹೊಂದಿಕೊಂಡಿದ್ದರಿಂದ ಕೆಲವು ವ್ಯವಸಾಯ ನಾಟಕ ಕಂಪನಿಗಳು ಉಳಿದುಕೊಂಡುವು.

ಇದುವರೆಗೆ ವ್ಯವಸಾಯ ಕಂಪನಿಗಳು ಅಸ್ತಿತ್ವಕ್ಕೆ ಬಂದು, ಏಳಿಗೆ ಹೊಂದಿ ಅಳಿದು ಹೋದುದನ್ನೂ ನೋಡಿದ್ದಾಯಿತು. ಹೀಗಿದ್ದರೂ ಕೆಲವು ವ್ಯವಸಾಯ ಕಂಪನಿಗಳು ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡಿವೆ. ಹಾಗೆ ಅವು ಉಳಿದು ಕೊಂಡಿರಬೇಕಾದರೆ ಕಾರಣ, ಅವು ತಮ್ಮ ನಾಟಕಗಳಿಗೆ ಆರಿಸಿಕೊಂಡಿರುವ ವಸ್ತುಗಳು, ಇಲ್ಲವೆ ಕಂಪನಿ ಮಾಲೀಕರುಗಳ ರಂಗಸೇವಾ ಮನೋಭಾವ. ಒಮ್ಮೊಮ್ಮೆ ಜೀವನೋಪಾಯಕ್ಕೆ ಬೇರೆ ಮಾರ್ಗವಿಲ್ಲದೆ ಕೆಲವು ಜನ ಕಂಪನಿಗೇ ಅಂಟಿಕೊಂಡು ಮುಂದುವರಿಯುತ್ತಿರುವುದರಿಂದ ಕೆಲವು ವ್ಯವಸಾಯ ಕಂಪನಿಗಳು ಉಳಿದುಕೊಂಡು ಬಂದಿರುವುದನ್ನು ಗುರುತಿಸಬಹುದು. ಹೀಗೆ ಉಳಿದುಕೊಂಡು ಬಂದಿರುವ ಕೆಲವು ವ್ಯವಸಾಯ ಕಂಪನಿಗಳನ್ನು ಇಲ್ಲಿ ನೋಡ ಬಹುದು.

ಇವುಗಳ ಸಾಲಿನಲ್ಲಿ ಗುಬ್ಬಿಕಂಪನಿ ಮೊದಲಿಗೆ ನಿಲ್ಲುತ್ತದೆ. ಈಗಾಗಲೇ ನೋಡಿ ದಂತೆ ಗುಬ್ಬಿ ವೀರಣ್ಣನವರ ಸಾಹಸ ಜೀವನವೇ ಇಂದಿಗೂ ಗುಬ್ಬಿಕಂಪನಿ ನಿಂತಿರುವುದಕ್ಕೆ

ಕಾರಣವಾಗಿದೆ. ಗುಬ್ಬಿ ವೀರಣ್ಣನವರು ನಾಟಕ ಜೀವನದಿಂದ ನಿವೃತ್ತರಾದರೂ, ಅವರ ಮಕ್ಕಳು, ಅವರ ಸಲಹೆ ಸಹಕಾರಗಳೊಂದಿಗೆ ಗುಬ್ಬಿಕಂಪನಿಯನ್ನು ನಡೆಸಿಕೊಂಡು ಬರುತ್ತಿದ್ದಾರೆ. ಜನಗಳ ಅಭಿರುಚಿ ಬದಲಾವಣೆಯಾದಂತೆ ಗುಬ್ಬಿ ಕಂಪನಿಯ ನಾಟಕಗಳೂ ಬದಲಾದುವು. ಹೀಗಿದ್ದೂ ಅವರು ಪೌರಾಣಿಕ ನಾಟಕಗಳನ್ನು ಪ್ರದರ್ಶಿಸುವುದನ್ನು ಬಿಟ್ಟಿಲ್ಲ. ಮೊನ್ನೆ ಮೊನ್ನೆ ನೂರಾರು ಪ್ರಯೋಗಗಳನ್ನು ಕಂಡ ದಶಾವತಾರ, ಲವ–ಕುಶ ಇದಕ್ಕೆ ಸಾಕ್ಷಿಯಾಗಿವೆ. ಉತ್ತಮ ಅಭಿನಯ, ಉತ್ತಮ ರಂಗ ಸಜ್ಜಿಕೆ ಹಾಗೂ ಶ್ರೇಷ್ಠದರ್ಜೆಯ ಪ್ರಯೋಗ–ಇವುಗಳಿಂದ ಆ ನಾಟಕಗಳು ನೂರಾರು ಪ್ರಯೋಗಗಳನ್ನು ಕಂಡಿರಬೇಕು. ಜತೆಗೆ ಕೀಳುಮಟ್ಟದ ಚಲನ ಚಿತ್ರಗಳು ಹೆಚ್ಚಾಗಿ, ನಾಟಕಗಳನ್ನು ನೋಡಬೇಕೆಂಬ ಹಂಬಲ ಜನರಲ್ಲಿ ಉಂಟಾಗಿ ಈ ಪ್ರಯೋಗಗಳಿಗೆ ಬೆಲೆ ಬಂದಿರಬೇಕು. ಗುಬ್ಬಿ ಕಂಪನಿಯು ಪೌರಾಣಿಕ ನಾಟಕಗಳನ್ನು ಪ್ರಯೋಗಿಸುವುದೇ ಅಲ್ಲದೆ ಸಾಮಾಜಿಕ ನಾಟಕಗಳನ್ನೂ ಪ್ರದರ್ಶಿಸುತ್ತಿದೆ. ದಶಾವತಾರ, ಲವ–ಕುಶಗಳಂತೆಯೇ ಅವರ ಸಾಹುಕಾರ, ಅಣ್ಣ–ತಮ್ಮ–ಇವು ನೂರಾರು ಪ್ರಯೋಗಗಳನ್ನು ಕಂಡಿವೆ. ಒಟ್ಟಿನಲ್ಲಿ ಇಷ್ಟು ಹೇಳ ಬಹುದು : ಐತಿಹಾಸಿಕ ಮಹತ್ವದ ದೃಷ್ಟಿಯಿಂದ, ಜನರ ಅಭಿರುಚಿಗೆ ಹೊಂದಿಕೊಂಡು ಬರುತ್ತಿರುವುದರಿಂದ, ಗುಬ್ಬಿವೀರಣ್ಣನವರ ತಪಸ್ಸಿನ ಫಲವಾಗಿ ಇಂದಿಗೂ ಗುಬ್ಬಿ ಕಂಪನಿ ಉಳಿದುಕೊಂಡು ಬಂದಿದೆ. ಇದಕ್ಕೆ ಕನ್ನಡಿಗರು ಋಣಿಗಳಾಗಿರಬೇಕು.

ಉಳಿದುಕೊಂಡುಬಂದಿರುವ ವ್ಯವಸಾಯ ಕಂಪನಿಗಳಲ್ಲಿ ಎರಡನೆಯದಾಗಿ ಎದ್ದು ಕಾಣುವುದೆಂದರೆ ಹಿರಣ್ಣಯ್ಯನವರ ಮಿತ್ರಮಂಡಳಿ. ಈಗಾಗಲೇ ನೋಡಿದಂತೆ ಈ ಕಂಪನಿ ತನ್ನ ನಾಟಕಗಳಿಗೆ ಮೊದಲಿನಿಂದಲೂ ಆರಿಸಿಕೊಂಡ ವಸ್ತುವೇ ಬೇರೆ. ಸಾಧಾರಣವಾಗಿ ಎಲ್ಲ ವ್ಯವಸಾಯ ಕಂಪನಿಗಳೂ ಪೌರಾಣಿಕ ಹಾಗು ಐತಿಹಾಸಿಕ ವಸ್ತುಗಳನ್ನುಳ್ಳ ನಾಟಕಗಳನ್ನು ಆರಿಸಿಕೊಂಡರೆ, ಈ ಕಂಪನಿ ಜನರ ಹಾಗೂ ಸರ್ಕಾರದ ಓರೆಕೋರೆಗಳನ್ನು ತಿದ್ದುವ ವಸ್ತುಗಳನ್ನು, ತಾನು ಆಡುವ ನಾಟಕಗಳಿಗೆ ಆರಿಸಿಕೊಂಡಿತು. ದಿವಂಗತ ಹಿರಣ್ಣಯ್ಯನವರು ತಾವೇ ರಚಿಸಿ ಅಭಿನಯಿಸಿದ ದೇವದಾಸಿ ರಂಗದಮೇಲೆ ಸಾವಿರಾರು ಬಾರಿ ಕಾಣಿಸಿಕೊಂಡಿದ್ದು ನಮಗೆ ಇನ್ನೂ ನೆನಪಿದೆ. ಅದೇ ಹಾದಿಯನ್ನು ಅವರ ಮಗ ಮಾಸ್ಟರ್ ಹಿರಣ್ಣಯ್ಯ (ನರಸಿಂಹಮೂರ್ತಿ) ನವರು ತುಳಿದುಕೊಂಡು ಬರುತ್ತಿದ್ದಾರೆ. ತಂದೆ ರಚಿಸಿದ ನಾಟಕಗಳನ್ನು ಪ್ರಯೋಗಿಸಿ, ತಂದೆಯ ಎದುರಿಗೇ ಪ್ರಖ್ಯಾತಿಗೆ ಬಂದು, ಇಂದು ಲಂಚಾವತಾರದ ಸಾವಿರಾರು ಪ್ರಯೋಗಗಳ ಮೂಲಕ ಜನರ ಮನಸ್ಸನ್ನು ಸೂರೆಗೊಂಡಿದ್ದಾರೆ. ಭ್ರಷ್ಟಾಚಾರವೂ ಇದೇ ಮಾದರಿಗೆ ಸೇರಿದ್ದು. ಜನರಿಗೆ ಜೀವನ ಕಷ್ಟಮಯವಾಗಿದ್ದು, ದೇಶದ ಪರಿಸ್ಥಿತಿ ಹದಗೆಟ್ಟಿರುವುದರಿಂದ ಲಂಚಾವತಾರದಂಥ ನಾಟಕಗಳು ಹೆಚ್ಚು ಜನಪ್ರಿಯವಾಗಿವೆ ಎಂದು ಹೇಳಬಹುದು. ಲಂಚಾವತಾರ ರಂಗದಮೇಲೆ ಜನಪ್ರಿಯವಾಗಿರುವುದಕ್ಕೆ ಮಾಸ್ಟರ್ ಹಿರಣ್ಣಯ್ಯನವರ ಮಾತುಗಳೂ ಮುಖ್ಯ. ಸಮಾಜದ ಓರೆಕೋರೆಗಳನ್ನು

ತಿದ್ದುವಲ್ಲಿ ಹಿರಣ್ಣಯ್ಯ ಮಿತ್ರಮಂಡಳಿಯವರ ನಾಟಕಗಳು ಪ್ರಧಾನಪಾತ್ರವಹಿಸಿವೆ ಎನ್ನುವುದನ್ನು ನೋಡಬಹುದು.

ವ್ಯವಸಾಯ ಕಂಪನಿಗಳ ಸಾಲಿನಲ್ಲಿ ನಾಗರತ್ನಮ್ಮನವರ ನೇತೃತ್ವದಲ್ಲಿ ನಡೆಯುತ್ತಿರುವ ಸ್ತ್ರೀನಾಟಕ ಮಂಡಳಿಯ ನಾಟಕಗಳು ಹಾಗು ಪಂಡರೀಬಾಯಿ ಅವರ ನೇತೃತ್ವದಲ್ಲಿ ನಡೆಯುತ್ತಿರುವ ಶಾಂತಿನಿವಾಸ ಮತ್ತು ಇತರ ನಾಟಕಗಳು ಉಲ್ಲೇಖನಾರ್ಹ. ಇದೇ ಸಂದರ್ಭದಲ್ಲಿ ಮೊನ್ನೆ ಮೊನ್ನೆ ಮರೆಯಾದ ದಿವಂಗತ ಸುಬ್ಬಯ್ಯನಾಯಿಡು ಅವರ ಕಂಪನಿ ಮತ್ತು ದಿವಂಗತ ಮಹದೇವಸ್ವಾಮಿ ಅವರ ಕಂಪನಿಗಳನ್ನ ಸ್ಮರಿಸಿಕೊಳ್ಳಬಹುದು.

ಉತ್ತರ ಕರ್ನಾಟಕದಲ್ಲೂ ಕೆಲವು ವ್ಯವಸಾಯ ಕಂಪನಿಗಳು ನಾಟಕ ಕಂಪನಿಗಳನ್ನು ನಡೆಸಿಕೊಂಡು ಬರುತ್ತಿವೆ. ಅವುಗಳಲ್ಲಿ ಕೆಲವನ್ನು ಇಲ್ಲಿ ನೋಡಬಹುದು. ಬಾಳಪ್ಪ ಏಣಾಗಿ ಅವರ ಕಲಾವೈಭವ ನಾಟ್ಯಸಂಘ; ಬಸವರಾಜ ಹೊಸಮನಿ ಅವರ ಶಾರದಾ ಸಂಗೀತ ನಾಟಕ ಮಂಡಳಿ (ಗೋಕಾಕ್); ಗಂಗಾಧರಶಾಸ್ತ್ರಿ ಚಿಟ್ಟರಗಿ ಅವರ ಕುಮಾರೇಶ್ವರ ಸಂಗೀತ ನಾಟಕ ಮಂಡಳಿ (ಕಮಟಗಿ); ಮತ್ತು, ಜಮಖಂಡಿಯ ಗಜಾನನ ನಾಟಕ ಮಂಡಳಿ. ಹಳೆಯ ಮೈಸೂರು ಭಾಗದಲ್ಲಿ ನೋಡಿದಂತೆಯೇ ಈ ಭಾಗದಲ್ಲೂ ಪೌರಾಣಿಕ, ಐತಿಹಾಸಿಕ, ಸಾಮಾಜಿಕ ವಸ್ತುಗಳುಳ್ಳ ನಾಟಕಗಳು ಈಗಲೂ ಜನಪ್ರಿಯವಾಗಿವೆ. ಬಾಳಪ್ಪ ಏಣಗಿ ಅವರ ಕಂಪನಿ ೧೯೫೭ರಲ್ಲಿ 'ಜಗಜ್ಯೋತಿ ಬಸವೇಶ್ವರ' ನಾಟಕವನ್ನು ಸತತವಾಗಿ ಇನ್ನೂರಐವತ್ತು ಬಾರಿ ಪ್ರದರ್ಶಿಸಿದ್ದನ್ನ ಇಲ್ಲಿ ನೆನಸಿಕೊಳ್ಳಬಹುದು. ಸುಮಾರು ಇನ್ನೂರಕ್ಕೂ ಮೇಲ್ಪಟ್ಟು 'ಕುಮಾರೇಶ್ವರ ಸಂಗೀತ ನಾಟಕ ಮಂಡಳಿ'ಯವರ ಸಾಮಾಜಿಕ ನಾಟಕ 'ಜೀವನಯಾತ್ರೆ' ೧೯೫೭ರ ಎರಡನೆ ಭಾಗದಲ್ಲಿ ನಡೆದುದು ಕಂಪನಿ ನಾಟಕಗಳ ಜನಪ್ರಿಯತೆಯನ್ನು ತೋರಿಸುತ್ತದೆ. ಜಮಖಂಡಿಯ ಗಜಾನನ ನಾಟಕ ಮಂಡಳಿಯ 'ಸತ್ಯನಾರಾಯಣ' ನಾಟಕವೂ ಜನಪ್ರಿಯವಾಗಿದೆ; ಕಾರಣ, ಅದರ ವಸ್ತು ಸತ್ಯನಾರಾಯಣ ಪೂಜೆ.

ದಕ್ಷಿಣ ಕನ್ನಡದಲ್ಲಿ ರಂಗನಾಥಭಟ್ಟರ ಅಂಬಾಪ್ರಸಾದಿಕ ನಾಟಕ ಮಂಡಳಿಯ ತರುವಾಯ, ಈಗ ನಾಟಕ ನಡೆಸಿಕೊಂಡುಬರುತ್ತಿರುವ ಕಂಪನಿಯೆಂದರೆ ವಿ. ವಿ. ನಾಯಕ್ ಅವರ 'ಕರ್ನಾಟಕ ಥಿಯೇಟರ್ಸ್.' ಈ ಕಂಪನಿ ಪ್ರಧಾನವಾಗಿ ಸಾಮಾಜಿಕ ನಾಟಕಗಳನ್ನೇ ಪ್ರಯೋಗಿಸುತ್ತಾ ಬಂದಿದೆ.

ದಕ್ಷಿಣಕನ್ನಡ ಈಗಲೂ ತನ್ನ ವೈಶಿಷ್ಟ್ಯವೇ ಆದ ಯಕ್ಷಗಾನವನ್ನು ಉಳಿಸಿಕೊಂಡು ಬಂದಿದೆ. ಯಕ್ಷಗಾನವೆಂದರೆ, ರಂಗಭೂಮಿಯ ಮೇಲೆ ಪ್ರೇಕ್ಷಕರಿಗೆ ಕಾಣುವಂತೆ ಹಾಡುವ ಭಾಗವತರೂ, ಪಾತ್ರಧಾರಿಗಳೂ ಇರುತ್ತಾರೆ. ಯಕ್ಷಗಾನ ಮುಂದುವರಿದಂತೆಲ್ಲ ಭಾಗವತರು ಹಾಡುತ್ತಾರೆ. ಪಾತ್ರಗಳು ತಮ್ಮ ಮಾತುಗಳನ್ನು ಆಡುತ್ತವೆ. ವಿವಿಧ ಕ್ಷೇತ್ರಗಳಲ್ಲಿ ಕೈಯಾಡಿಸಿದ ಶಿವರಾಮ ಕಾರಂತರು ಸಾಂಪ್ರದಾಯಿಕ ರೀತಿಯಲ್ಲಿ ನಡೆದುಕೊಂಡು ಬರುತ್ತಿದ್ದ ಯಕ್ಷಗಾನಕ್ಕೆ ಈಗ ಒಂದು ಹೊಸರೂಪವನ್ನು ಕೊಟ್ಟರು

ತ್ತಾರೆ. ಕಾರಂತರು ಸಿದ್ಧಪಡಿಸಿ ಪ್ರದರ್ಶಿಸುವ ಈಚಿನ ಯಕ್ಷಗಾನಗಳಲ್ಲಿ ಹಾಡುವ ಭಾಗವತರು ರಂಗದಮೇಲೆ ಕಾಣಿಸಿಕೊಳ್ಳುವುದಿಲ್ಲ; ಮತ್ತು ಅಭಿನಯಿಸುವ ಪಾತ್ರಗಳು ಮಾತನಾಡುವುದಿಲ್ಲ. ಇದು ನೃತ್ಯನಾಟಕದ ರೂಪದಲ್ಲಿ ಇರುತ್ತದೆ. ಈ ಹೊಸರೀತಿಯ ಯಕ್ಷಗಾನ ಕಾರಂತರು ಯಕ್ಷಗಾನ ರಂಗಭೂಮಿಗೆ ನೀಡಿದ ಕೊಡುಗೆಯಾಗಿದೆ.

ಇದುವರೆಗೆ ಉಳಿದುಕೊಂಡುಬಂದಿರುವ ಕೆಲವು ವ್ಯವಸಾಯ ಕಂಪನಿಗಳನ್ನು ನೋಡಿದ್ದಾಯಿತು. ಕನ್ನಡ ರಂಗಭೂಮಿಯು ಮತ್ತೊಂದು ಮುಖವಾದ ವಿಲಾಸೀ ತಂಡಗಳು ಮಾಡಿಕೊಂಡು ಬಂದಿರುವ ಕೆಲಸವನ್ನು ಮುಂದೆ ನೋಡೋಣ.

ಸುಮಾರು ೧೯೪೫ನೇ ಇಸವಿಯವರೆಗೂ ಕನ್ನಡ ರಂಗಭೂಮಿಯು ತನ್ನ ಕೆಲಸವನ್ನು ಚೆನ್ನಾಗಿಯೇ ಮಾಡಿಕೊಂಡು ಬಂದಿತು. ಒಂದು ಕಾಲಕ್ಕೆ ವ್ಯವಸಾಯ ಕಂಪನಿ ನಾಟಕಗಳು ತಮ್ಮ ಪ್ರಭಾವವನ್ನು ಚೆನ್ನಾಗಿಯೇ ಬೀರಿದುವು. ಕನ್ನಡ ರಂಗಭೂಮಿಯ ಅವನತಿಯನ್ನು ನಾವು ಇಂದು ನೋಡುತ್ತಿದ್ದರೂ, ಅದರ ಮೊದಲ ಸ್ಥಾನವನ್ನು ಸಂಪಾದಿಸಿಕೊಡಲು ವ್ಯವಸಾಯ ಕಂಪನಿಗಳು ತಮ್ಮ ಕೆಲಸವನ್ನು ಸಮರ್ಪಕವಾಗಿ ಮಾಡಿಕೊಂಡು ಬರುತ್ತಿರುವಾಗಲೇ 'ವಿಲಾಸೀ ತಂಡಗಳು' ಹುಟ್ಟಿಕೊಂಡವು. ಕಂಪನಿ ನಾಟಕಗಳನ್ನು ನೋಡುತ್ತಿದ್ದ ಸುಶಿಕ್ಷಿತ ವಿದ್ಯಾವಂತ ಜನರಿಗೆ ನಾಟಕ ನೋಡುವುದರ ಜತೆಗೆ, ತಾವೂ ನಾಟಕಗಳಲ್ಲಿ ಪಾತ್ರವಹಿಸಬೇಕೆಂಬ ಅಭಿಲಾಷೆ ಕಾಲಕ್ರಮೇಣ ಉಂಟಾಯಿತು. ಕಂಪನಿ ನಾಟಕಗಳು ನಾನಾ ಕಾರಣಗಳಿಂದ ಇವರಿಗೆ ರುಚಿಸದೆ ಹೋದವು. ಆ ನಾಟಕಗಳ ವಸ್ತು, ಅವುಗಳಿಗೆ ವ್ಯಯವಾಗುತ್ತಿದ್ದ ಕಾಲ, ಚಲನಚಿತ್ರಗಳ ಪ್ರವೇಶ ಮೊದಲಾದವು ಕಂಪನಿ ನಾಟಕಗಳು ರುಚಿಸದೇ ಇದ್ದುದಕ್ಕೆ ಕಾರಣವಾದವು. ಇವುಗಳ ಜತೆಗೆ ಅಲ್ಲಲ್ಲೇ ಪ್ರಯೋಗಿಸಲ್ಪಡುತ್ತಿದ್ದ ಇಂಗ್ಲಿಷ್ ನಾಟಕಗಳೂ ಕಾರಣವಾದವು. ಹೀಗಾಗಿ ನಾಟಕಗಳನ್ನು ಆಡಲು ಸಣ್ಣಸಣ್ಣ ತಂಡಗಳು ಹುಟ್ಟಿಕೊಂಡವು. ಸಾಮಾನ್ಯವಾಗಿ ಈ ನಾಟಕಗಳಿಗೆ ವಸ್ತು ಸಾಮಾಜಿಕ; ವ್ಯಯವಾಗುತ್ತಿದ್ದ ಕಾಲ ಕಡಮೆ; ಸಂಗೀತವಿಲ್ಲ; ಸಂಗೀತಕ್ಕೆ ಬದಲು ಹಾಸ್ಯ; ಹೀಗಾಯಿತು. ಕಾಲೇಜುಗಳಲ್ಲೂ ಕೂಡ ಅಭಿನಯಿಸಬೇಕೆಂಬ ಆಕಾಂಕ್ಷೆ ಅಲ್ಲಿನವರಲ್ಲಿ ಮೂಡಿತು. ಕಾಲೇಜು ದಿನಾಚರಣೆ ಇತ್ಯಾದಿಗಳಲ್ಲಿ ಈ ರೀತಿಯ ನಾಟಕಗಳ ಪ್ರಯೋಗ ಆರಂಭವಾಯಿತು.

ನಾಟಕಗಳನ್ನು ಆಡಲು ಸಿದ್ಧವಾದಂತೆ ಸಣ್ಣಸಣ್ಣ ನಾಟಕಗಳು ಆಡಲು ಬೇಕಾದವು. ಈ ನಾಟಕಗಳ ಬರವಣಿಗೆ ಪ್ರಧಾನವಾಗಿ ಗದ್ಯ. ಈ ನಾಟಕಗಳಿಗೆ ಪೌರಾಣಿಕ ಐತಿಹಾಸಿಕ ನಾಟಕಗಳಿಗೆ ಬೇಕಾಗುವಂತೆ ಉಡಿಗೆತೊಡಿಗೆಗಳಾಗಲಿ, ರಂಗಸಜ್ಜಿಕೆಯಾಗಲಿ, ದೀಪಾಲಂಕಾರವಾಗಲಿ ಬೇಕಿರಲಿಲ್ಲ. ಕನ್ನಡನಾಡಿನ ವಿವಿಧ ಭಾಗಗಳಲ್ಲಿ ಒಂದು ಕಾಲಕ್ಕೆ ವ್ಯವಸಾಯ ಕಂಪನಿಗಳು ಹುಟ್ಟಿಕೊಂಡಂತೆ, ವಿಲಾಸೀ ತಂಡಗಳೂ ಹುಟ್ಟಿಕೊಂಡವು. ವ್ಯವಸಾಯ ನಾಟಕ ವಿಭಾಗದಲ್ಲಿ ನೋಡಿದಂತೆ ಇಲ್ಲೂ ಕೆಲವು ವಿಲಾಸೀ ತಂಡಗಳನ್ನು ನೋಡಬಹುದು.

ಇಪ್ಪತ್ತನೆಯ ಶತಮಾನದ ಆದಿಭಾಗದಲ್ಲಿ ಪ್ರಾರಂಭವಾದ 'ಭರತ ಕಲೋತ್ತೇಜಕ ಸಂಗೀತ ಸಮಾಜ'ವು ಮೊದಲ ವಿಲಾಸೀ ತಂಡವೆಂದು ಹೇಳಬಹುದು. ಈ ವಿಲಾಸೀ ತಂಡವು ಹೆಚ್ಚುಕಾಲ ಬಾಳದೇಹೋದರೂ ಉತ್ತರ ಕರ್ನಾಟಕದಲ್ಲಿ ಅನೇಕ ವಿಲಾಸೀ ತಂಡಗಳು ಹುಟ್ಟಿಕೊಳ್ಳಲು ಕಾರಣವಾಯಿತು. ಆದ್ದರಿಂದ ಭರತ ಕಲೋತ್ತೇಜಕ ಸಂಗೀತ ಸಮಾಜಕ್ಕೆ ಐತಿಹಾಸಿಕ ಮಹತ್ವವಿದೆ. ಈ ತಂಡದ ಪ್ರಭಾವದಿಂದ ಹುಟ್ಟಿಕೊಂಡ ವಿಲಾಸೀ ತಂಡಗಳಲ್ಲಿ ಪ್ರಮುಖವಾದದ್ದು ಗದುಗಿನ 'ದಿ ಯಂಗ್ ಮೆನ್ಸ್ ಫುಟ್‌ಬಾಲ್‌ಕ್ಲಬ್ ಅಸೋಸಿಯೇಷನ್'. ಹುಯಿಲುಗೋಳ ನಾರಾಯಣರಾಯರು ಈ ವಿಲಾಸೀ ತಂಡದ ಉಸಿರಾಗಿದ್ದರು. ಈ ವಿಲಾಸೀ ತಂಡದ ಮೂಲಕ ಹೊಸಹೊಸ ತಂತ್ರ ಹಾಗು ಹೊಸಹೊಸ ವಸ್ತುಗಳುಳ್ಳ ನಾಟಕಗಳನ್ನು ಹುಯಿಲುಗೋಳರು ರಂಗದ ಮೇಲೆ ತಂದರು. ಬಾಗಿಲುಕೋಟೆಯ 'ವಾಸುದೇವ ವಿನೋದಿನಿ ಸಭಾ'ವನ್ನೂ ಪ್ರಮುಖ ವಿಲಾಸೀ ತಂಡಗಳ ಸಾಲಿನಲ್ಲಿ ಹೆಸರಿಸುವುದು ಆವಶ್ಯಕ. ಈ ವಿಲಾಸೀ ತಂಡವು ಪ್ರಮುಖವಾಗಿ, ಮೊದಲಿಗೆ ಕೆರೂರು ವಾಸುದೇವಾಚಾರ್ಯರ, ಅನಂತರ ಶ್ರೀರಂಗರ ನಾಟಕಗಳನ್ನೇ ಪ್ರದರ್ಶಿಸಿತು. ಈ ತಂಡವು ಕರ್ನಾಟಕದ ವಿವಿಧ ಭಾಗಗಳಲ್ಲಿ ನಾಟಕಗಳ ಪ್ರದರ್ಶನವನ್ನು ಏರ್ಪಡಿಸುತ್ತಿತ್ತು ಎಂಬುದೂ ತಿಳಿದುಬಂದಿದೆ. 'ಕನ್ನಡ ನಾಟ್ಯವಿಲಾಸೀ ಸಂಘವು' ಧಾರವಾಡದಲ್ಲಿ ಶ್ರೀರಂಗರ ನೇತೃತ್ವದಲ್ಲಿ ಆರಂಭ ವಾಯಿತು. ಶ್ರೀರಂಗರೇ ಈ ವಿಲಾಸೀ ತಂಡಕ್ಕೆ ಕೆಲವು ನಾಟಕಗಳನ್ನು ಬರೆದರು; ಭಾರತದ ವಿವಿಧ ಭಾಗಗಳಲ್ಲಿ ಆಡಿಸಿದರು. ಧಾರವಾಡದ 'ಕಲೋಪಾಸಕ ಮಂಡಳಿ'ಯೂ ಧಾರವಾಡದ ವಿಲಾಸೀ ತಂಡಗಳಲ್ಲಿ ಮುಖ್ಯವಾದದ್ದು. ಈ ತಂಡವು ದ. ರಾ. ಬೇಂದ್ರೆಯವರ, ಎಲ್. ಜಿ. ಬೇಂದ್ರೆಯವರ ಹಾಗು ಹುಯಿಲುಗೋಳ ನಾರಾಯಣರಾಯರ ನಾಟಕಗಳನ್ನು ಅಭ್ಯಾಸಮಾಡಿ, ಉತ್ತರ ಕರ್ನಾಟಕದ ಪ್ರಮುಖ ಊರುಗಳಲ್ಲಿ ಮತ್ತು ಮಹಾರಾಷ್ಟ್ರದ ವಿವಿಧ ಭಾಗಗಳಲ್ಲಿ ಪ್ರದರ್ಶಿಸಿದೆ. ಶ್ರೀನಿವಾಸ ಹಾವನೂರ ಅವರ ನೇತೃತ್ವದಲ್ಲಿ ನಡೆದ 'ಕನ್ನಡ ಕಲೋದ್ಧಾರಕ ಸಂಘ'ವನ್ನು ಇಲ್ಲಿ ಸ್ಮರಿಸಬಹುದು. ಈ ಸಂಘವು ಈಗಲೂ ಕೆಲಸಮಾಡಿಕೊಂಡು ಬರುತ್ತಿದೆ. ಮನೋಹರ ಗ್ರಂಥ ಮಾಲೆಯ ಜಿ. ಬಿ. ಜೋಷಿ ಅವರು ವಿಲಾಸಿಗಳಿಂದ ನಾಟಕಾಭ್ಯಾಸ ಮಾಡಿಸಿ, ಉತ್ತರ ಕರ್ನಾಟಕದ ವಿವಿಧ ಭಾಗಗಳಲ್ಲಿ ಹಾಗೂ ಪುನಾ, ಬೊಂಬಾಯಿ ಮುಂತಾದ ಪ್ರಮುಖ ಊರುಗಳಲ್ಲಿ ಹೊಸಹೊಸ ಪ್ರಯೋಗಗಳನ್ನು ಮಾಡಿದ್ದನ್ನು ಇಲ್ಲಿ ಉಲ್ಲೇಖಿಸಬಹುದು. ಧಾರವಾಡ ಆಕಾಶವಾಣಿ ವಿಭಾಗದಲ್ಲಿ ನಾಟಕ ನಿರ್ದೇಶಕ ರಾಗಿರುವ ಎನ್. ಎಸ್. ವಾಮನ್ ಅವರು ಆಕಾಶವಾಣಿಯ ಹೊರಗೂ ಕೆಲಸ ಮಾಡುತ್ತಿದ್ದಾರೆ. ತಮ್ಮ ಸ್ನೇಹಿತರೊಡಗೂಡಿ ಅಲ್ಲಲ್ಲೇ ನಾಟಕಗಳನ್ನು ಪ್ರದರ್ಶಿಸು ವುದರ ಜತೆಗೆ, ನಾಟಕ ತಂಡಗಳಿಗೆ ಸಹಾಯವನ್ನು ಮಾಡುತ್ತಿದ್ದಾರೆ. ಉತ್ತರ ಕರ್ನಾಟಕದ ಹಲವು ಭಾಗಗಳಲ್ಲಿ ವಿಲಾಸೀತಂಡಗಳು ಪ್ರದರ್ಶಿಸುತ್ತಿರುವ ನಾಟಕಗಳಿಗೆ ಈಗಲೂ ಸಹಾಯ ನೀಡುತ್ತಿದ್ದಾರೆ.

ಹಳೆಯ ಮೈಸೂರು ವಿಭಾಗದಲ್ಲಿಯೂ ಹಲವು ವಿಲಾಸೀತಂಡಗಳು ಒಳ್ಳೆಯ ಕೆಲಸ ಮಾಡಿಕೊಂಡು ಬರುತ್ತಿವೆ. ಬೆಂಗಳೂರಿನ Amateur Dramatic Association ಬಹಳ ಹಳೆಯ ಹಾಗೂ ಬಹು ಮುಖ್ಯ ವಿಲಾಸೀ ತಂಡವಾಗಿದೆ. ಆಧುನಿಕ ಕನ್ನಡ ನಾಟಕಗಳ ಜನಕ ಕೈಲಾಸಂ ಅವರ ಮೊದಲ ನಾಟಕ ಟೊಳ್ಳುಗಟ್ಟಿಯ ಜನನಕ್ಕೆ A.D.A. ಕಾರಣ. ನಾಟಕಕಾರ ಕೈಲಾಸಂನ ಪರಿಚಯ ಮಾಡಿದ್ದು A. D. A. ಈ ಸಂಘ ಸತತವಾಗಿ ಮೂವತ್ತು ವರ್ಷಗಳ ಕಾಲ ಬಹಳ ಚೆನ್ನಾಗಿ ಕೆಲಸ ಮಾಡಿ, ವಿಲಾಸೀ ಸಂಸ್ಥೆಗಳಿಗೇ ಒಂದು ಮಾದರಿಯಾಯಿತು. ೧೯೧೯ರಲ್ಲಿ ಡಿ. ಲಕ್ಷ್ಮಣಯ್ಯ ನವರ ನೇತೃತ್ವದಲ್ಲಿ ಪ್ರಾರಂಭವಾದ ಮೈಸೂರಿನ The Literary and Dramatic Association ೧೯೪೪ರ ವರೆಗೂ ಕೆಲಸ ಮಾಡಿಕೊಂಡು ಬಂದು, ಅನಂತರ ಇಲ್ಲ ವಾಯಿತು. ೧೯೪೩–೪೪ರಲ್ಲಿ ವಿಲಾಸೀ ತಂಡಗಳಿಗಾಗಿ ಒಂದು ನಾಟಕ ಸ್ಪರ್ಧೆ ಏರ್ಪಡಿಸಿತು; ಅನೇಕ ವಿಲಾಸೀ ತಂಡಗಳು ಒಂದೆಡೆ ಸೇರಿ ವಿಚಾರ ವಿನಿಮಯ ಮಾಡಲು ಅವಕಾಶ ಮಾಡಿಕೊಟ್ಟಿತು. ೧೯೪೫ರಲ್ಲಿ ಬಿ. ಎಸ್. ವೆಂಕಟರಾಂ ಹಾಗು ಸಹೋದರರ ನೇತೃತ್ವದಲ್ಲಿ ಬೆಂಗಳೂರಿನ ಛಾಯಾಕಲಾವಿದರ ಜನನವಾಯಿತು. ಇವರು ಮೊದಲಿಗೆ ಕೈಲಾಸಂ ಅವರ ನಾಟಕಗಳನ್ನೂ ಅನಂತರ ಪರ್ವತವಾಣಿಯವರ ನಾಟಕಗಳನ್ನೂ ಪ್ರದರ್ಶಿಸಿದರು. ಪರ್ವತವಾಣಿಯವರ 'ಬಹದ್ದೂರ್ ಗಂಡ' ನಾಟಕ ವನ್ನು ಸತತವಾಗಿ ೧೨೦ ಬಾರಿ ಬೆಂಗಳೂರಿನಲ್ಲಿ ಪ್ರದರ್ಶಿಸಿದ ಗೌರವ ಈ ಕಲಾವಿದರಿಗೆ ಸಲ್ಲುತ್ತದೆ. ಬೆಂಗಳೂರಿನ ರವಿ ಕಲಾವಿದರು, ಶಶಿಕಲಾವಿದರು, ಕಮಲ ಕಲಾಮಂದಿರ ಇವೇ ಮೊದಲಾದುವು ಹಾಗು ಎ. ಎನ್. ಮೂರ್ತಿ, ಜಿ. ವಿ. ಶಿವಾನಂದ್, ಬಿ. ಚಂದ್ರಶೇಖರ್, ಬಿ. ಎಸ್. ನಾರಾಯಣ್, ಉಮೇಶ್ ರುದ್ರ, ಪಿ. ಎ. ವೇಣು ಗೋಪಾಲ್ ಇವರೇ ಮೊದಲಾದ ವ್ಯಕ್ತಿಗಳು ಜನಪ್ರಿಯ ಸಾಮಾಜಿಕ ನಾಟಕಗಳನ್ನು ಪ್ರದರ್ಶಿಸುತ್ತಿದ್ದಂತೆಯೇ ಅಸಂಗತ ನಾಟಕಗಳನ್ನು, ಹೊಸ ಹೊಸ ವಸ್ತುಗಳುಳ್ಳ ನಾಟಕಗಳನ್ನು ಹಾಗು ಹೊಸಹೊಸ ತಂತ್ರಗಳಿಂದ ಕೂಡಿದ ನಾಟಕಗಳನ್ನು ಪ್ರದರ್ಶಿಸುತ್ತಿದ್ದಾರೆ; ಹೀಗಾಗಿ ವಿಲಾಸೀ ರಂಗಭೂಮಿಯಲ್ಲಿ ಹೊಸ ಬೆಳಕನ್ನು ಚೆಲ್ಲುತ್ತಿದ್ದಾರೆ. ನಟರೂ ನಾಟಕಕಾರರೂ ಆದ ಪರ್ವತವಾಣಿ ಹಾಗು ಎಚ್. ಕೆ. ರಂಗನಾಥ್ ಅವರೂ ಬೆಂಗಳೂರಿನಲ್ಲೇಇದ್ದು ವಿಲಾಸೀ ರಂಗಭೂಮಿಯ ಮೇಲೆ ಆಗಾಗ್ಗೆ ಕಾಣಿಸಿಕೊಳ್ಳುವುದೇ ಅಲ್ಲದೆ ಇಂದಿನ ಯುವಕರಿಗೆ ಮಾರ್ಗದರ್ಶಕರಾಗಿರುತ್ತಾರೆ.

ನಾಟಕ ರಂಗದಲ್ಲಿ ಕ್ರಾಂತಿಯನ್ನುಂಟುಮಾಡಿದ ಶ್ರೀರಂಗರೂ ಈಗ ಬೆಂಗಳೂರಿ ನಲ್ಲಿದ್ದಾರೆ. ಅವರ ಹೊಸ ರೀತಿಯ ನಾಟಕಗಳು ಬೆಂಗಳೂರಿನ ರಂಗಭೂಮಿಯ ಮೇಲೆ ಆಗಾಗ ಕಾಣಿಸಿಕೊಳ್ಳುತ್ತಿವೆ; ಶ್ರೀರಂಗರೂ ಒಮ್ಮೊಮ್ಮೆ ಅವರ ನಾಟಕಗಳಲ್ಲಿ ಕಾಣಿಸಿಕೊಂಡುದು ಉಂಟು. ಇವರ ಈ ನಾಟಕಗಳು ವಿಲಾಸೀ ರಂಗಭೂಮಿ ಬೆಳೆಯುತ್ತಾ ಇದೆ ಎನ್ನುವುದನ್ನು ತೋರಿಸಿಕೊಡುತ್ತಿವೆ. ಹೊಸ ಹೊಸ ತಂತ್ರ ಹಾಗು ಹೊಸ ಹೊಸ ಪ್ರಯೋಗಗಳನ್ನು ಮಾಡುವುದರಲ್ಲಿ ಇವರು ಎತ್ತಿದ ಕೈ. ಬೆಂಗಳೂರಿನಲ್ಲಿ

ಚೆನ್ನಾಗಿ ಕೆಲಸ ಮಾಡಿಕೊಂಡು ಬರುತ್ತಿರುವ ನಾಟ್ಯಸಂಘಕ್ಕೆ ಇವರೇ ಮೊದಲ ಅಧ್ಯಕ್ಷರು. ಅದರ ಆಶ್ರಯದಲ್ಲಿ ವರ್ಷಕೊಮ್ಮೆ ನಡೆಯುತ್ತಿರುವ ನಾಟಕ ಸ್ಪರ್ಧೆಗಳನ್ನು (ಉಲ್ಲಾಳ ಪಾರಿತೋಷಕ) ಮೊದಲಿಗೆ ಚೆನ್ನಾಗಿ ನಡೆಸಿಕೊಟ್ಟರು. ಅವರ ನೇತೃತ್ವದಲ್ಲಿ ಪ್ರಾರಂಭವಾದ ನಾಟ್ಯಸಂಘ ಹಾಗು ನಾಟಕ ಸ್ಪರ್ಧೆಗಳು ಈಗ ಚೆನ್ನಾಗಿ ನಡೆದುಕೊಂಡು ಬರುತ್ತಾ ಇವೆ. ಮೈಸೂರಿನಲ್ಲಿ Sams Little Theatre ಸಂಪತ್ ಅವರ ನೇತೃತ್ವದಲ್ಲಿ ಕೆಲಸಮಾಡಿಕೊಂಡು ಬರುತ್ತಿದೆ. ಬಹಳ ವರ್ಷಗಳಿಂದಲೂ ಇವರು ತಮ್ಮ ತಂಡದವರಿಂದ ನಾಟಕಗಳನ್ನು ಆಡಿಸುವುದೇ ಅಲ್ಲದೆ, ಬೇರೆಬೇರೆ ಕಡೆಗಳಿಗೆ ಹೋಗಿ ನಾಟಕ ತಂಡಗಳಿಗೆ ಸಹಾಯ ಮಾಡುತ್ತಿದ್ದಾರೆ. ವಿಲಾಸೀ ರಂಗಭೂಮಿಯು ಮೈಸೂರು ನಗರದಲ್ಲಿ ಜೀವಂತವಾಗಿರಲು ಸಂಪತ್ ಅವರು ಬಹಳ ಮಟ್ಟಿಗೆ ಕಾರಣ ಎಂದರೆ ಅತಿಶಯೋಕ್ತಿಯೇನೂ ಅಲ್ಲ. ಸಂಪತ್ ಉತ್ತಮ ನಟರೇ ಅಲ್ಲದೆ ಉತ್ತಮ ದಿಗ್ದರ್ಶಕರೂ ಆಗಿರುತ್ತಾರೆ.

ಒಂದು ಕಾಲದಲ್ಲಿ ಬಹಳ ಚೆನ್ನಾಗಿ ಕೆಲಸಮಾಡಿ ಈಗ ಇಲ್ಲವಾಗಿರುವ ಎರಡು ಗುಂಪುಗಳನ್ನು ಇಲ್ಲಿ ಹೇಳಬೇಕು; ಒಂದು ಯಾಕೊಬ್ಸ್, ಮತ್ತೊಂದು ಮಿತ್ರ ಮೇಳ. ಇವೆರಡೂ ಮಹಾರಾಜಾ ಕಾಲೇಜಿನಲ್ಲೇ ಇದ್ದದ್ದು. ಈ ಎರಡೂ ಕನ್ನಡ ರಂಗಭೂಮಿಗೆ ಉತ್ತಮ ನಟರನ್ನು ಕೊಡುವುದರ ಜತೆಗೆ ಉತ್ತಮ ನಾಟಕಕಾರರನ್ನೂ ಕೊಟ್ಟಿವೆ.

ಬೆಂಗಳೂರಿನಲ್ಲಿ ಪರ್ವತವಾಣಿಯವರ ತಂಡದಲ್ಲಿ ಭಾಗವಹಿಸುತ್ತಿದ್ದ ಆರ್. ಗುರುರಾಜಾರಾಯರು ಈಗ ಮೈಸೂರಿನಲ್ಲಿದ್ದಾರೆ. ಗುರುರಾಜಾರಾಯರು ಒಳ್ಳೆಯ ನಟರು ಹಾಗು ಒಳ್ಳೆಯ ದಿಗ್ದರ್ಶಕರು. ಸಂಪತ್ ಅವರಂತೆಯೇ ಇವರೂ, ವಿಲಾಸೀ ತಂಡಗಳು ಪ್ರದರ್ಶಿಸುವ ನಾಟಕಗಳಿಗೆ ಸಹಾಯಮಾಡುತ್ತಿದ್ದಾರೆ. ಅಮರಕಲಾವಿದರು ಹಾಗು ಸಮತೆಂತೋ ಹವ್ಯಾಸಿಗಳು—ಈ ಎರಡು ವಿಲಾಸೀ ತಂಡಗಳು ಮೈಸೂರಿನಲ್ಲಿ ಮೊನ್ನೆ ಮೊನ್ನೆ ಜನ್ಮತಾಳಿದವು. ಅಮರ ಕಲಾವಿದರು ಹೊಸ ಹೊಸ ಪ್ರಯೋಗಗಳನ್ನು ಮಾಡುತ್ತಿದ್ದಾರೆ; ಒಳ್ಳೊಳ್ಳೆಯ ಯೋಜನೆಗಳನ್ನು ಹಾಕಿಕೊಂಡಿದ್ದಾರೆ. ಸಮತೆಂತೋ ಹವ್ಯಾಸಿಗಳ ಗುಂಪಿನಲ್ಲಿ ಇರುವವರು ಹೆಚ್ಚಾಗಿ ಕಾಲೇಜು ಅಧ್ಯಾಪಕರುಗಳೇ. ಎಲ್ಲ ರೀತಿಯ ನಾಟಕಗಳನ್ನು ಪ್ರದರ್ಶಿಸಬೇಕೆಂಬುದೇ ಈ ಹವ್ಯಾಸಿಗಳ ಉದ್ದೇಶವಾಗಿದೆ. ಈ ತಂಡ ಮೊನ್ನೆ ಮೊನ್ನೆ ಜನ್ಮತಾಳಿದರೂ ಮೈಸೂರು ನಗರದಲ್ಲಿ ಹಾಗು ಇನ್ನೂ ಕೆಲವೆಡೆಗಳಲ್ಲಿ ಜನಪ್ರಿಯವಾಗಿದೆ.

ಕನ್ನಡನಾಡಿನ ಮುಖ್ಯನಗರಗಳಾದ ಬೆಂಗಳೂರು, ಮೈಸೂರುಗಳನ್ನು ಬಿಟ್ಟು ಉಳಿದೆಡೆಗಳಲ್ಲೂ ವಿಲಾಸೀ ತಂಡಗಳು ಕೆಲಸಮಾಡಿಕೊಂಡು ಬರುತ್ತಿವೆ. ಸಾಗರದ ಎನ್. ಆರ್. ಮಾಸೂರ್ ಅವರು ಬಹಳ ವರ್ಷಗಳಿಂದ ಶ್ರೀರಂಗರ ನಾಟಕಗಳನ್ನು ಉತ್ತಮ ರೀತಿಯಲ್ಲಿ ಪ್ರದರ್ಶಿಸುತ್ತಾ ಬಂದಿದ್ದಾರೆ. ಕನ್ನಡ ನಾಡಿನಲ್ಲಿ ಅಲ್ಲದೆ, ಭಾರತದ ಪ್ರಮುಖ ನಗರಗಳಾದ ದೆಹಲಿ, ಬೊಂಬಾಯಿ, ಮದರಾಸು

ಮೊದಲಾದ ಕಡೆಗಳಲ್ಲಿ ಕನ್ನಡ ನಾಟಕಗಳು ವಿಲಾಸೀ ತಂಡಗಳಿಂದ ಪ್ರದರ್ಶಿತ ವಾಗುತ್ತಿವೆ.

ಈ ಭಾಗಗಳಲ್ಲಿ ಪ್ರದರ್ಶಿತವಾಗುತ್ತಿರುವ ಕನ್ನಡ ನಾಟಕಗಳಲ್ಲಿ ಶ್ರೀರಂಗರ ನಾಟಕಗಳೇ ಹೆಚ್ಚು. ಈ ತಂಡಗಳು ಶ್ರೀರಂಗರ ನಾಟಕಗಳನ್ನು ಪ್ರದರ್ಶಿಸುವುದರ ಜತೆಗೆ 'ಪ್ರಾಯೋಗಿಕ' ಹಾಗು 'ಅಸಂಗತ' ನಾಟಕಗಳನ್ನೂ ಪ್ರದರ್ಶಿಸುತ್ತಾ ಇವೆ. ಈ ದಿಸೆಯಲ್ಲಿ ಬೊಂಬಾಯಿಯ ಕನ್ನಡ ಥಿಯೇಟರ್ಸ್, ತೆಲಗೇರಿ, ಕೆ. ಕೆ. ಸುವರ್ಣ, ಕೆ. ಎಂ. ಮುತಾಲಿಕ್ ಮತ್ತು ದೆಹಲಿಯ ಕನ್ನಡ ಭಾರತಿ, ಬಿ. ವಿ. ಕಾರಂತ್ ಮೊದಲಾದ ಸಂಸ್ಥೆ ಹಾಗು ವ್ಯಕ್ತಿಗಳು ಕೆಲಸಮಾಡಿಕೊಂಡು ಬರುತ್ತಿದ್ದಾರೆ. ಕನ್ನಡ ಭಾರತಿ ಕನ್ನಡೇತರರಿಗೆ ಕನ್ನಡ ನಾಟಕಗಳನ್ನು ಪರಿಚಯ ಮಾಡಿಸಿ ಶ್ಲಾಘನೀಯಕಾರ್ಯವಮಾಡಿದೆ. ಮೈಸೂರಿನ ಎಂ. ಎನ್. ಸತ್ಯ ಈ ನಾಟಕಗಳಿಗೆ ರಂಗಸಜ್ಜಿಕೆಯಲ್ಲಿ, ದೀಪಗಳ ಜೋಡಣೆಯಲ್ಲಿ ಬಹಳಮಟ್ಟಿಗೆ ಸಹಾಯ ನೀಡುತ್ತಿದ್ದಾರೆ. ಮದರಾಸಿನ ಕನ್ನಡ ಸಂಘದ ಆಶ್ರಯದಲ್ಲಿ, ಪಿ. ಶೇಷಗಿರಿರಾವ್ ಅವರ ನೇತೃತ್ವದಲ್ಲಿ ಪೌರಾಣಿಕ ಹಾಗು ಸಾಮಾಜಿಕ ನಾಟಕಗಳು ಪ್ರದರ್ಶಿಸಲ್ಪಡು ತ್ತಿವೆ. ಕನ್ನಡ ನಾಟಕಗಳು ಕನ್ನಡನಾಡಿನ ಹೊರಗೂ ಒಳ್ಳೆಯ ರೀತಿಯಲ್ಲಿ ಕೆಲಸ ಮಾಡಿಕೊಂಡು ಬರುತ್ತಿರುವುದನ್ನು ಇಲ್ಲಿ ಗುರುತಿಸಬಹುದು.

ನೂರುವರ್ಷಗಳ ಇತಿಹಾಸವುಳ್ಳ ಕನ್ನಡ ರಂಗಭೂಮಿಯನ್ನು ಈ ಪುಟ್ಟ ಲೇಖನದಲ್ಲಿ ಅಳವಡಿಸಲು ಹೊರಟಿರುವುದರಿಂದ ಇದರಲ್ಲಿ ಕೊರತೆ ಇದ್ದೇ ಇದೆ. ಆದರೂ ಇಲ್ಲಿ ಒಂದು ವಿಹಂಗಮ ನೋಟ ದೊರಕಲು ಸಾಧ್ಯ. ಜಾನಪದ ವಸ್ತುಗಳಿಂದ ಪ್ರಾರಂಭವಾದ ಕನ್ನಡ ರಂಗಭೂಮಿ; ಪೌರಾಣಿಕ, ಐತಿಹಾಸಿಕ ವಸ್ತುಗಳಲ್ಲಿ ಮುಂದು ವರಿದು, ಸಾಮಾಜಿಕ ವಸ್ತುಗಳಿಗೆ ಬಂದುನಿಂತಿದೆ ಎನ್ನಬಹುದು. ಅನೇಕ ವ್ಯವಸಾಯ ಸಂಸ್ಥೆಗಳು ಜನ್ಮತಾಳಿ ಒಳ್ಳೆಯಕೆಲಸಮಾಡಿ ಮಾಯವಾದವು. ಎಲ್ಲೋ ಒಂದೆರಡು ವ್ಯವಸಾಯ ಸಂಸ್ಥೆಗಳು, ಸಾಹಸದ ಫಲವಾಗಿ ಉಳಿದುಕೊಂಡು ಬಂದಿವೆ. ವ್ಯವಸಾಯ ಸಂಸ್ಥೆಗಳಂತೆ ವಿಲಾಸೀ ತಂಡಗಳೂ ಉತ್ತಮ ರೀತಿಯಲ್ಲಿ ಕೆಲಸಮಾಡಿದವು. ಸಾಧಾರಣವಾಗಿ ವಿಲಾಸೀ ತಂಡಗಳು ಒಬ್ಬಿಬ್ಬರ ಸುತ್ತ ಕೇಂದ್ರೀಕೃತವಾಗಿದ್ದುದರಿಂದ, ಅವರಿಗೆ ಚಟುವಟಿಕೆಗಳಲ್ಲಿ ನಿರಾಸಕ್ತಿ ಮೂಡುತ್ತಿದ್ದಂತೆಯೇ, ಅಥವಾ ಬೇರಾವುದೇ ಕಾರಣದಿಂದ ಅವರು ದೂರವಾಗುತ್ತಿದ್ದಂತೆಯೇ ಅವು ಕಣ್ಮರೆಯಾದವು. ಸಾಧಾರಣ ವಾಗಿ ವಿಲಾಸಿ ತಂಡಗಳ ಜನನ ಹಾಗು ಅಳಿವು ಬೇಗಬೇಗ ಆದದ್ದು ಉಂಟು.

ಈ ಹಿನ್ನೆಲೆಯಲ್ಲಿ ಕನ್ನಡ ರಂಗಭೂಮಿಯು ಜೀವಂತವಾಗಿರಲು ಯಾವರೀತಿ ಕೆಲಸಮಾಡಿಕೊಂಡು ಬಂದರೆ ಸಾಧ್ಯವಾದೀತು ಎಂದು ಸೂಕ್ಷ್ಮವಾಗಿ ಇಲ್ಲಿ ನೋಡ ಬಹುದು. ಚಲನಚಿತ್ರದ ಈ ಯುಗದಲ್ಲಿ ವ್ಯವಸಾಯ ಕಂಪನಿಗಳು ಉಳಿದುಕೊಂಡು ಬರುವುದು ಕಷ್ಟವೇ ಆಗಿದೆ. ಯಾವುದನ್ನು ರಂಗಭೂಮಿಯ ಮೇಲೆ ನೋಡಲಾಗುವು ದಿಲ್ಲವೋ ಅದೆಲ್ಲವನ್ನೂ ಚಲನಚಿತ್ರದಲ್ಲಿ ನೋಡುವುದು ಸಾಧ್ಯವಾಗಿದೆ. ಅಲ್ಲದೆ ಜನರ

ಅಭಿರುಚಿ ಬದಲಾಗುತ್ತಿರುವುದರಿಂದ ಹಳೆಯ ವಸ್ತುಗಳು ರುಚಿಸಪಾಗಿವೆ. ಮನುಷ್ಯ ನೆಲದಮೇಲೆ ಇದ್ದವನು ಮುಗಿಲೆತ್ತರಕ್ಕೆ ಬೆಳೆದಿದ್ದಾನೆ. ವ್ಯವಸಾಯ ಕಂಪನಿಗಳು ತಾವು ಆಡುವ ನಾಟಕಗಳಿಗೆ ವಿಚಾರ ಪ್ರಧಾನವಾದ ವಸ್ತುಗಳನ್ನು ಆರಿಸಿಕೊಂಡರೆ, ಸ್ವಲ್ಪಮಟ್ಟಿಗೆ ಜನರ ಮನಸ್ಸನ್ನು ನಾಟಕಗಳ ಕಡೆಗೆ ತಿರುಗಿಸಲು ಸಾಧ್ಯವಾಗಬಹುದು. ಅಲ್ಲದೆ ವಿಲಾಸೀತಂಡಗಳ ನಡುವೆ ಹಾಗು ವ್ಯವಸಾಯ ಕಂಪನಿಗಳ ನಡುವೆ ಸಂಪರ್ಕ ಉಂಟಾಗಬೇಕು. ವಿಲಾಸೀ ತಂಡಗಳು ಹಾಸ್ಯವಿಷಯವೇ ವಸ್ತುಗಳಾಗಿ ಉಳ್ಳ ನಾಟಕಗಳನ್ನು ಹೆಚ್ಚಾಗಿ ಆರಿಸಿಕೊಳ್ಳಬಾರದು. ನಾಟಕದ ಅಭಿನಯ, ರಂಗಸಜ್ಜಿಕೆ, ನಾಟಕದ ಆಯ್ಕೆ, ನಾಟಕಾಭ್ಯಾಸ ಇವೇ ಮೊದಲಾದವುಗಳ ಕಡೆಗೆ ಹೆಚ್ಚಿನ ಗಮನ ಕೊಟ್ಟಲ್ಲಿ ಪ್ರೇಕ್ಷಕರು ಹೆಚ್ಚುಹೆಚ್ಚಾಗಿ ನಾಟಕಗಳನ್ನು ನೋಡಲು ಬರಲು ಸಾಧ್ಯವಾಗಬಹುದು. ನಾಟಕ ಗೃಹಗಳು ಹೆಚ್ಚಾಗಬೇಕು. ಇಂತಹ ನಾಟಕ ಗೃಹಗಳಲ್ಲಿ ಆಗಾಗ್ಗೆ ನಾಟಕಾಭಿನಯವಾಗುವುದರ ಜತೆಗೆ ನಾಟಕ ವಾಚನವೂ ನಡೆಯಬೇಕು. ಈ ರೀತಿಯ ವಾಚನಗಳಿಗೆ ವಿಮರ್ಶಕರನ್ನು ಆಹ್ವಾನಿಸಬೇಕು. ಅವರ ಸಲಹೆಗಳನ್ನು ತೆಗೆದುಕೊಂಡು ನಾಟಕಗಳನ್ನು ಅಭಿನಯಿಸಬೇಕು. ಹೀಗೆ ವಿಲಾಸೀ ತಂಡಗಳು ಮಾಡಿದಲ್ಲಿ ಉತ್ತಮರೀತಿಯ ನಾಟಕಗಳ ರಚನೆ ಸಾಧ್ಯವಾಗುತ್ತದೆ. ಒಳ್ಳೆಯ ನಾಟಕ, ಒಳ್ಳೆಯ ಅಭಿನಯ—ಪ್ರೇಕ್ಷಕರನ್ನು ನಾಟಕನೋಡಲು ಆಕರ್ಷಿಸುವುದರಲ್ಲಿ ಸಂದೇಹವಿಲ್ಲ.

ವಿಶ್ವವಿದ್ಯಾನಿಲಯವು ಕ್ರೀಡಾಚಟುವಟಿಕೆಗಳಿಗೆ ಯಾವ ಒಂದು ವ್ಯವಸ್ಥೆಯನ್ನು ವಿಶ್ವವಿದ್ಯಾನಿಲಯದ ಮಟ್ಟದಲ್ಲಿ ಹಾಗು ಕಾಲೇಜುಗಳ ಮಟ್ಟದಲ್ಲಿ ಏರ್ಪಡಿಸಿದೆಯೋ ಅದೇ ರೀತಿಯಲ್ಲಿ ಸಾಂಸ್ಕೃತಿಕ ಚಟುವಟಿಕೆಗಳಿಗೆ, ಅದರಲ್ಲೂ ಮುಖ್ಯವಾಗಿ ನಾಟಕಕ್ಕೆ ಅಂಥದೇ ಒಂದು ವ್ಯವಸ್ಥೆ ಮಾಡಬೇಕು. ಇದರಿಂದ ವಿದ್ಯಾರ್ಥಿಗಳಲ್ಲಿ ಒಳ್ಳೆಯ ಅಭಿರುಚಿ ಬೆಳೆಯಲು ಸಾಧ್ಯವಾಗುವುದು. ವರ್ಷಕ್ಕೊಮ್ಮೆ ಅಂತರ—ಕಾಲೇಜು ಕ್ರೀಡಾ ಸ್ಪರ್ಧೆಗಳನ್ನು ಏರ್ಪಡಿಸುವಂತೆ, ಅಂತರ-ಕಾಲೇಜು ನಾಟಕ ಸ್ಪರ್ಧೆಗಳನ್ನು ಒಂದು ಗೊತ್ತಾದ ರೀತಿಯಲ್ಲಿ ಏರ್ಪಡಿಸಬೇಕು. ಈ ಎಲ್ಲ ಕೆಲಸಗಳಿಗೂ ವಿಶ್ವವಿದ್ಯಾನಿಲಯ ಮುಂದೆ ಬರಬೇಕು. ವ್ಯವಸಾಯ ಕಂಪನಿಗಳು, ವಿಲಾಸೀ ತಂಡಗಳು ಮತ್ತು ವಿಶ್ವವಿದ್ಯಾನಿಲಯ ಮೇಲೆ ಹೇಳಿದ ರೀತಿಯಲ್ಲಿ ಕೆಲಸಮಾಡಿಕೊಂಡು ಬಂದಲ್ಲಿ ಕನ್ನಡ ರಂಗಭೂಮಿಗೆ ಒಳ್ಳೆಯ ಭವಿಷ್ಯ ಇದ್ದೇಇದೆ.

ನನಗೆ ದೊರೆತ ಗ್ರಂಥಗಳ ಆಧಾರದಿಂದ ಹಾಗು ವ್ಯಕ್ತಿಗಳಿಂದ ದೊರೆತ ಸಾಮಗ್ರಿಗಳಿಂದ ಈ ಲೇಖನವನ್ನು ಸಿದ್ಧಪಡಿಸಲಾಗಿದೆ. ಈ ಲೇಖನ ಸಿದ್ಧಪಡಿಸುವಲ್ಲಿ ಎಷ್ಟೋ ಸಂಸ್ಥೆಗಳು ಹಾಗು ವ್ಯಕ್ತಿಗಳು ಬಿಟ್ಟುಹೋಗಿರಬಹುದು; ಅದಕ್ಕೆ ಕ್ಷಮೆಯಿರಲಿ. ಲೇಖನ ರಚನೆಯಲ್ಲಿ ಬೆಲೆಕಟ್ಟುವುದು ಅನಿವಾರ್ಯ; ಅದೇನೂ ತುಲನಾತ್ಮಕವಾಗಿರುವುದಿಲ್ಲ.

ಪಿ. ಆರ್. ತಿಪ್ಪೇಸ್ವಾಮಿ

ಚಿತ್ರಕಲೆ

ಕನ್ನಡನಾಡು ಚಿತ್ರಕಲೆಗೆ ತೌರೂರು ಎನಿಸಿದೆ. ಅಜಂತ, ಬಾದಾಮಿ, ಲೇಪಾಕ್ಷಿ, ಹಂಪೆ, ಸೀಬಿ, ಶ್ರೀರಂಗಪಟ್ಟಣ, ಶ್ರವಣಬೆಳಗೊಳ ಮುಂತಾದ ಕಡೆಗಳಲ್ಲಿನ ಲೋಕ ಪ್ರಸಿದ್ಧ ಭಿತ್ತಿಚಿತ್ರಗಳ ಖ್ಯಾತಿ ಈ ನಾಡಿನ ಕಲಾವಿದರದು. ಇಂಥ ಒಂದು ಭವ್ಯ ಪರಂಪರೆ ಇಂದಿಗೂ ಉಳಿದುಬಂದಿರುವುದು ಅಭಿಮಾನದ ವಿಷಯವಾಗಿದೆ. ಮೈಸೂರು ಅರಸರ ಆಶ್ರಯದಲ್ಲಿ ಕನ್ನಡನಾಡಿನ ಚಿತ್ರಕಲೆ ಚೈತನ್ಯವನ್ನು ಪಡೆದು ತನ್ನ ವೈಭವದ ಶಿಖರವನ್ನು ಮುಟ್ಟಿತು. ಸ್ವಾತ್ರಂತ್ರ್ಯ ಬಂದಮೇಲೆ ಕಲೆಯ ಪ್ರೋತ್ಸಾಹ ಆಶಾದಾಯಕವಾಗಿಲ್ಲದಿದ್ದರೂ ಕಲಾವಿದರ ಸಂಖ್ಯೆ ಅಧಿಕವಾಗುತ್ತಲೇ ಸಾಗಿದೆ. ಕಲೆಯ ಎಲ್ಲ ಪ್ರಕಾರಗಳಲ್ಲೂ ಸಿದ್ಧಿಯನ್ನು ಪಡೆದ ಶ್ರೇಷ್ಠ ಕಲಾವಿದರು ಕರ್ನಾಟಕದ ಕೀರ್ತಿಯನ್ನು ಬೆಳಗಿಸಿದ್ದಾರೆ. ಕಳೆದ ಇಪ್ಪತ್ತೈದು ವರ್ಷಗಳಲ್ಲಿ ಇಂಥ ಒಂದು ಶ್ರೇಷ್ಠ ಪರಂಪರೆಯನ್ನು ರೂಢಿಸಿದ ಕಲಾವಿದರ ಸಾಧನೆಯ ಕೆಲವು ಮಜಲುಗಳನ್ನು ಇಲ್ಲಿ ವಿವೇಚಿಸಲಾಗಿದೆ. ಅಲ್ಲದೆ ಚಿತ್ರಕಲಾಕ್ಷೇತ್ರದಲ್ಲಿನ ಏರುಪೇರುಗಳನ್ನು ಸ್ಥೂಲವಾಗಿ ನಿರ್ದೇಶಿಸಲಾಗಿದೆ.

ಕರ್ನಾಟಕದ ಕಲಾವಿದರನ್ನು ಕುರಿತು ಬರೆಯುವಾಗ ಒಂದು ಕಲಾಪ್ರಕಾರದ ಆಧಾರದ ಮೇಲೆ ವಿಭಜಿಸಿಕೊಳ್ಳುವುದು ಕಷ್ಟಸಾಧ್ಯವಾಗುತ್ತದೆ. ಏಕೆಂದರೆ ಒಬ್ಬನೇ ಕಲಾವಿದ ಕಲೆಯ ನಾನಾ ಪ್ರಕಾರಗಳಲ್ಲಿ ಅತ್ಯುತ್ತಮ ಕೌಶಲವನ್ನು ಮೆರೆದ ನಿದರ್ಶನಗಳೂ ನಮ್ಮಲ್ಲಿ ಹೇರಳವಾಗಿಯೇ ಇವೆ. ಆದುದರಿಂದ ಪ್ರಮುಖ ಕಲಾವಿದರ ಸಾಧನೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಆದಷ್ಟು ಪರಿಚಯಾತ್ಮಕವಾಗಿ ಒಂದು ಸಮೀಕ್ಷೆಯನ್ನು ನಡೆಸಲಾಗಿದೆ. ಅನೇಕ ಕಲಾವಿದರ ಹೆಸರುಗಳು ಇಲ್ಲಿ ಬಿಟ್ಟು ಹೋಗಿರಲೂ ಸಾಧ್ಯ. ಎಲ್ಲ ಕಲಾವಿದರನ್ನು ಹೆಸರಿಸಬೇಕಾದ ಔಚಿತ್ಯವೂ ಇಲ್ಲಿಲ್ಲ. ಇಲ್ಲಿನ ಉದ್ದೇಶ ಕರ್ನಾಟಕದ ಕಲೆಯ ಶ್ರೀಮಂತಿಕೆಯನ್ನು ವರ್ಧಿಸಿದ ಪ್ರಮುಖ ಚಿತ್ರಕಾರರನ್ನು ಕುರಿತದ್ದೇ ಆಗಿದೆ. ಅಪಾರ ಸಂಖ್ಯೆಯ ಕಲಾವಿದರ ಸಾಲಿನಲ್ಲಿ ಎದ್ದು ತೋರುವ ಹೆಸರುಗಳು ಇಲ್ಲಿ ಉಲ್ಲೇಖಿತವಾಗಿವೆ.

ದಿ. ಕೆ. ವೆಂಕಟಪ್ಪನವರು ಕರ್ನಾಟಕದ ಚಿತ್ರಕಾರರಲ್ಲಿ ಏಕೆ ಭಾರತದಲ್ಲೇ

ಅಗ್ರಗಣ್ಯ ಸ್ಥಾನಪಡೆದಿದ್ದವರು. ಚಿತ್ರಕಾರ ಮನೆತನದಲ್ಲಿ ಹುಟ್ಟಿದ ಇವರು ಬಾಲ್ಯದಲ್ಲಿ ಪಾಶ್ಚಿಮಾತ್ಯ ಸಂಪ್ರದಾಯ ಪದ್ಧತಿಯನ್ನು ಅಭ್ಯಾಸಮಾಡಿ ತಮ್ಮ ಕೈ ಪಳಗಿಸಿಕೊಂಡರು. ಮದರಾಸು, ಕಲಕತ್ತ ಕಲಾಶಾಲೆಯಲ್ಲಿ ವ್ಯಾಸಂಗಮಾಡಿದರು. ಬೌದ್ಧ, ರಜಪೂತ ಹಾಗೂ ಮೊಗಲ್ ಚಿತ್ರಸಂಪ್ರದಾಯ ಹಾಗೂ ಚಿತ್ರಕಲೆಯನ್ನು ಸತತವಾಗಿ ಅಭ್ಯಾಸ ನಡೆಸಿದರು. ಲಂಡನ್ನಿನಲ್ಲಿ ೧೯೧೦ರಲ್ಲಿ ನಡೆದ ಕಲಾಪ್ರದರ್ಶನದಲ್ಲಿ ಶ್ರೀಯುತರ ಕೃತಿಗಳು ಅನೇಕರ ಪ್ರಶಂಸೆಗೆ ಪಾತ್ರವಾಗಿ ಭಾರತೀಯ ಕೀರ್ತಿಯನ್ನು ವಿದೇಶದಲ್ಲಿ ಬೆಳಗಿಸಿದುವು. ಇವರು ಬಹುಸೂಕ್ಷ್ಮ ರೇಖಾವೈಖರಿಯನ್ನು ತಮ್ಮ ಕೃತಿಗಳಲ್ಲಿ ಮೆರೆಯಬಲ್ಲರು. ನಿಸರ್ಗ ಹಾಗು ಸಂಯೋಜನ ಚಿತ್ರಣದಲ್ಲಿ ಇವರು ಪ್ರಸಿದ್ಧರು. 'ವೀಣಾಹುಚ್ಚು' ಇವರ ಕೃತಿಗಳಲ್ಲಿ ಬಹುದೊಡ್ಡ ಕೀರ್ತಿಯನ್ನು ಗಳಿಸಿಕೊಟ್ಟ ಕೃತಿ. ಇವರ ಕೌಶಲ್ಯಕ್ಕೆ ಮೆಚ್ಚಿದ ಶ್ರೀಕೃಷ್ಣರಾಜ ಒಡೆಯರವರು ಅನೇಕ ಕೃತಿಗಳನ್ನು ಅವರಿಂದ (ಉಬ್ಬಚ್ಚಿನ) ಮಾಡಿಸಿ ಪ್ರೋತ್ಸಾಹಿಸಿದರು. ರಾಜರ ಆಡಳಿತದನಂತರ ಅನೇಕ ವರ್ಷಗಳ ಕಾಲ ಇವರು ಬೆಂಗಳೂರಿನ ಮಲ್ಲೇಶ್ವರದ ತಮ್ಮ ಸ್ವಗೃಹದಲ್ಲಿ ಪ್ರಶಾಂತಚಿತ್ತರಾಗಿ ಕಾಲಕಳೆದರು. ಜೀವನದ ಕೊನೆಯಲ್ಲಿ ಕೇಂದ್ರ ಲಲಿತಕಲಾ ಅಕಾಡಮಿ ಇವರು ಇರುವಲ್ಲಿಗೇ ಬಂದು ಪ್ರಶಸ್ತಿಯನ್ನು ಇತ್ತು ಗೌರವ ವನ್ನು ಸಲ್ಲಿಸಿತು. ಇವರ ಉಬ್ಬಚ್ಚಿನ ಕೆಲವು ಕೃತಿಗಳನ್ನು ನಮ್ಮ ರಾಜ್ಯಸರ್ಕಾರ ಕೊಂಡಿತು. ಅಲ್ಲದೆ ಇವರ ಕೀರ್ತಿಯನ್ನು ಉಳಿಸಲು ಇವರ ಹೆಸರಿನಲ್ಲಿ ಬೆಂಗಳೂರಿನಲ್ಲಿ ಒಂದು ಕಲಾಗಾರವನ್ನು ಕಲಾತ್ಮಕವಾಗಿ ಕಟ್ಟಲಿದೆ. ಬಿಟ್ಟುಹೋಗಿರುವ ಇವರ ಅನೇಕ ವರ್ಣಚಿತ್ರಗಳನ್ನು ಆ ಕಲಾಗಾರದಲ್ಲಿ ಪ್ರದರ್ಶಿಸಲಾಗುವುದು. ಕಲಾ ತಪಸ್ವಿಗಳಾಗಿ ಶ್ರೀ ಕೆ. ವೆಂಕಟಪ್ಪನವರ ಹೆಸರು ಕನ್ನಡ ಚಿತ್ರಕಲಾ ಕ್ಷೇತ್ರದಲ್ಲಿ ಶಾಶ್ವತವಾಗಿ ನಿಲ್ಲುತ್ತದೆ.

ದಿ. ಎಸ್. ನಂಜುಂಡಸ್ವಾಮಿಯವರು ಕಲೆಯ ಎಲ್ಲ ಪ್ರಕಾರಗಳಲ್ಲೂ ಉತ್ತಮ ಕೌಶಲವನ್ನು ಮೆರೆದ ಸುಪ್ರಸಿದ್ಧ ಕಲಾವಿದರು. ಇವರ ಹೆಸರು ಅಷ್ಟಾಗಿ ಪ್ರಖ್ಯಾತ ವಾಗಿರಲಿಲ್ಲವಾದರೂ ಇವರ ಕಲೆಗಾರಿಕೆಯ ಬಗ್ಗೆ ಪ್ರತಿಯೊಬ್ಬ ಕನ್ನಡ ಕಲಾವಿದನ ಹೃದಯದಲ್ಲೂ ಒಂದು ಹಿರಿದಾದ ಸ್ಥಾನವಿದೆ. ಇವರು ಪ್ರಸಿದ್ಧ ಶಿಲ್ಪಿ ದಿ. ಸಿದ್ಧಲಿಂಗ ಸ್ವಾಮಿಗಳ ಅಣ್ಣಂದಿರ ಪುತ್ರರು. ವಂಶಕ್ಕೆ ಅಂಟಿಬಂದ ಕಲೆ ಇವರದು. ಇವರು ರಚಿಸುವ ಪ್ರತಿಯೊಂದು ಚಿತ್ರದಲ್ಲೂ ಕಲ್ಪನೆ, ಸನ್ನಿವೇಶ, ವರ್ಣವೈವಿಧ್ಯತೆ, ವ್ಯಕ್ತಿಗಳ ಚಲನ ವಲನ, ಪ್ರಕೃತಿಸಹಜತೆ—ಮುಂತಾದುವು ಯಾರ ಹೃದಯವನ್ನಾದರೂ ಆಕರ್ಷಿ ಸುತ್ತವೆ. ಚಾಮರಾಜ ಕಲಾಶಾಲೆಯಲ್ಲಿ ಕಲಾಧ್ಯಾಪಕರಾಗಿ ಸೇವೆಸಲ್ಲಿಸಿ ಈಗ ನಮ್ಮನ್ನಗಲಿದ್ದಾರೆ. ಇವರ ಕುಂಚವೈಭವವನ್ನು ಗಮನಿಸುವುದಾದರೆ ಅರಮನೆಯ ಕಲ್ಯಾಣ ಮಂಟಪದಲ್ಲಿರುವ ಬೃಹದಾಕಾರದ ದಸರೆ ಮೆರವಣಿಗೆಯ ಮೂರು ಚಿತ್ರ ಗಳನ್ನು ಒಮ್ಮೆ ನೋಡಬೇಕು. ತೈಲವರ್ಣದ ಈ ಕೃತಿಗಳಲ್ಲಿ ಪಾಶ್ಚಾತ್ಯ ಶೈಲಿ ಕಲಾತಂತ್ರ ಎದ್ದು ತೋರುತ್ತದೆ. ಪ್ರಸಿದ್ಧರಲ್ಲ ನಿಜ. ಆದರೆ, ಇವರ ಕಲಾಪ್ರತಿಭೆ

ಇವರೊಬ್ಬರಿಗೇ ಮೀಸಲಾದುದು. ಭಾರತೀಯ ಪರಂಪರೆ ಹಾಗೂ ಪಾಶ್ಚಾತ್ಯ ತಂತ್ರಗಳ ಅತ್ಯುತ್ತಮ ಸಮನ್ವಯವನ್ನು ಇವರೊಬ್ಬರ ಕೃತಿಗಳಲ್ಲಿ ಮಾತ್ರ ಕಾಣಬಹುದು. ಗ್ರಾಮೀಣ ಜೀವನವನ್ನು ಆರಿಸಿಕೊಂಡರೆ ಅದಕ್ಕೆ ತಕ್ಕ ನೈಜವಾದ ರೀತಿಯಲ್ಲಿ ಚಿತ್ರರಚನೆಯನ್ನು ಮಾಡುವ ಸಾಮರ್ಥ್ಯದಂತೆಯೇ ಪೌರಾಣಿಕ ಚಿತ್ರಗಳ ಕಲಾಸಿದ್ಧಿ ಅನನ್ಯವಾದುದು. ಹೀಗೆಯೇ ಪ್ರಕೃತಿಚಿತ್ರ ಮತ್ತು ರೂಪಚಿತ್ರ ಕಲೆಯಲ್ಲಿ ಇವರು ಸಿದ್ಧಹಸ್ತರು. ಆಳವಾಗಿ ಭಾರತೀಯ ಸಾಹಿತ್ಯ ಪರಂಪರೆಯನ್ನು ಪಳಗಿಸಿಕೊಂಡ ಸಂಪ್ರದಾಯನಿಷ್ಠ ಕಲಾವಿದರು. ಶ್ರೀ ನಂಜುಂಡಸ್ವಾಮಿಯವರಿಗೆ ದೊರೆಯಬೇಕಾದ ಗೌರವ ಪುರಸ್ಕಾರ ಖ್ಯಾತಿಗಳು ಸಕಾಲದಲ್ಲಿ ದೊರೆಯದಿದ್ದುದು ನಮ್ಮ ದುರ್ದೈವ.

ಡಿ. ಎಂ. ವೀರಪ್ಪನವರು ಚಿತ್ರಕಲಾ ಕ್ಷೇತ್ರದಲ್ಲಿ ಅಪೂರ್ವ ಸೇವೆಸಲ್ಲಿಸಿದ ವ್ಯಕ್ತಿಗಳು. ಕಲಾವಿದರಿಗೆ ಸ್ಫೂರ್ತಿಯುತರಾಗಿ ಕಲಾವಿದ ಚಿತ್ರಕಲೆಯಿಂದ ಹೇಗೆ ಜೀವಿಸಬಹುದು ಎಂಬುದನ್ನು ತೋರಿಸಿ ಸುಖದಬಾಳನ್ನು ಕಂಡ ಹಿರಿಯ ಕಲಾವಿದರು. ಭಾರತೀಯ ಸಂಯೋಜನ ಚಿತ್ರಣದಲ್ಲಿ ತಮ್ಮದೇ ಆದ ಸಾಧನೆಯನ್ನು ಸಾಧಿಸಿಕೊಂಡು ಬಂದರು. ಮೈಸೂರಿನ ಚಾಮರಾಜ ಕಲಾಶಾಲೆಯ ಕಲಾವಿಭಾಗದ ಅಧಿಕಾರಿಗಳಾಗಿ ಸೇವೆಸಲ್ಲಿಸಿದರು. ಕೈಗಾರಿಕಾ ಇಲಾಖೆಯ ಪರವಾಗಿ ಜಪಾನ್ ಪ್ರವಾಸವನ್ನು ಕೈಕೊಂಡು ಅಲ್ಲಿ ಬಿದುರು ಬೊಂಬಿನ ನಾಜೂಕು ಕಲೆಗಾರಿಕೆಯನ್ನು ಅರಿತುಕೊಂಡು ಬಂದರು. ಅಲ್ಲದೆ ಆದರ ಅನುಕರಣೆಯಲ್ಲಿ ಯಶಸ್ವಿಗಳಾದರು. ಇವರ ಸಂಯೋಜನ ಚಿತ್ರಗಳಲ್ಲಿ 'ಪ್ರಲೋಭನ', 'ಯಾತ್ರಿಕರು ಬಹು ಜನಮೆಚ್ಚಿಗೆ ಪಡೆದವು. ಇತ್ತೀಚೆಗೆ ಶ್ರೀ ಬಸವೇಶ್ವರರ ವಚನಗಳಿಗೆ ಅನುಗುಣವಾಗಿ ಅನೇಕ ಜಲವರ್ಣ ಚಿತ್ರಗಳನ್ನೂ ರಚಿಸಿದ್ದರು. ಮೈಸೂರಿನ ಹಿರಿಯ ಕಲಾವಿದರೂ ಪ್ರಭಾವಶಾಲಿ ವ್ಯಕ್ತಿಗಳೂ ಆಗಿದ್ದರು. ಇವರ ಶ್ರಮದ ಫಲದಿಂದಲೇ 'ಮೈಸೂರು ಟಾಯ್ಸ್ ಅಂಡ್ ಕೋ' ನಿರ್ಮಾಣವಾದುದು. ಇಲ್ಲಿ ತಯಾರಾಗುವ ಮಕ್ಕಳ ಆಟದ ಸಾಮಾನುಗಳು ಲೋಕಪ್ರಸಿದ್ಧವಾಗಿವೆ. ಮೈಸೂರಿಗೆ ಉತ್ತಮ ಕೀರ್ತಿಯನ್ನು ಗಳಿಸಿವೆ. ಮೊನ್ನೆತಾನೆ ಶ್ರೀಯುತರು ನಮ್ಮನ್ನಗಲಿ ಹೋದುದು ಕನ್ನಡನಾಡಿಗೆ ಬಹುದೊಡ್ಡ ನಷ್ಟವಾಗಿದೆ.

ಭಾರತೀಯ ಚಿತ್ರಕಲಾ ಪದ್ಧತಿಯ ಕೃತಿರಚನೆಯಲ್ಲಿ ಹೆಸರಾದವರಲ್ಲಿ ಎಸ್. ಆರ್. ಸ್ವಾಮಿಯವರೂ ಒಬ್ಬರು. ಇವರ ಚಿತ್ರಗಳು ಪೌರಾಣಿಕ ಹಾಗೂ ಐತಿಹಾಸಿಕ ವಸ್ತುಗಳನ್ನೊಳಗೊಂಡು ಇವರ ಅಭ್ಯಾಸ ನಿಷ್ಠೆಗಳ ಸಂಕೇತವಾಗಿವೆ. ಉತ್ತಮ ರೇಖಾಚಿತ್ರಕಾರರಾಗಿಯೂ ಹೆಸರಾಗಿದ್ದಾರೆ. ಇವರ ಕೃತಿಗಳಲ್ಲಿ ಉತ್ತಮ ಕಲ್ಪನಾವೈಭವವೂ ರೇಖಾವಿನ್ಯಾಸವೂ ರಚನಾಕೌಶಲವೂ ತುಂಬ ಮೆಚ್ಚಬಹುದಾದ ರೀತಿಯಲ್ಲಿರುತ್ತವೆ. ವರ್ಣಸಂಯೋಜನೆಯಲ್ಲಿ ಹಳದಿವರ್ಣವನ್ನು ಪ್ರಧಾನವಾಗಿಟ್ಟುಕೊಂಡು ಮಿಕ್ಕೆಲ್ಲ ವರ್ಣಗಳನ್ನು ಅದರೊಡನೆ ಸಮ್ಮಿಳನಗೊಳಿಸುವ ಅವರದೇ

ಆದ ಸ್ವತಂತ್ರ ರೀತಿ ಕಂಡುಬರುತ್ತದೆ. ‘ ಶ್ರೀರಾಮ ವಿರಹ ’, ‘ ಉದ್ಭವ ಲಕ್ಷ್ಮಿ ’, ‘ ಕರುಣಾಳು ಬುದ್ಧ ’ ಮುಂತಾದ ಅವರ ಕೃತಿಗಳನ್ನು ಇಲ್ಲಿ ಹೆಸರಿಸಬಹುದು.

ಶಂಕರರಾವ್ ಆಳಂದಕರ್ ಅವರು ಕಲಬುರ್ಗಿಯ ಆಳಂದ ತಾಲ್ಲೂಕಿನವರು. ಬೊಂಬಾಯಿ ಕಲಾಶಾಲೆಯಲ್ಲಿ ತರಬೇತಿ ಆದನಂತರ ಮೊಗಲ ಪದ್ಧತಿಗನುಸಾರವಾಗಿ ಹೈದರಾಬಾದ್ ನವಾಬ್ ಮನೆತನದವರ ಕಾಲ್ಪನಿಕ ಚಿತ್ರಗಳನ್ನು ಬರೆದರು. ನಿಜಾಮರು ಇವರ ಕುಂಚವೈಖರಿಗೆ ಮೆಚ್ಚಿ ಹತ್ತು ಸಾವಿರ ರೂಪಾಯಿಗಳನ್ನು ಬಹುಮಾನವಾಗಿ ಕೊಡಲು ನಿರ್ಧರಿಸಿದರು. ಆದರೆ ನಿಜಾಮರು ರಾಜಕೀಯ ಗೊಂದಲಕ್ಕೆ ಸಿಕ್ಕಿ ಅವರ ನಿರ್ಧಾರ ಕುಡಿಯೊಡೆಯಲಿಲ್ಲ. ‘ ನನ್ನ ಕಲ್ಪನೆಯಲ್ಲಿ ಗುರುದೇವ ’ ಎಂಬ ಇಪ್ಪತ್ತೆರಡು ಕಾಲ್ಪನಿಕ ಚಿತ್ರಗಳ ಸಂಗ್ರಹವು ೧೯೪೩ರಲ್ಲಿ ಅಚ್ಚಾಗಿ ರಮಾನಂದ ತೀರ್ಥರ ಪರಿಚಯ ಲೇಖನದೊಡನೆ ಹೊರಬಂದಿತು. ಕವಿ ಬೇಂದ್ರೆಯವರು ಆ ಒಂದೊಂದು ಚಿತ್ರಕ್ಕೂ ಒಂದೊಂದು ಚಿಕ್ಕ ಗೀತೆಯನ್ನು ರಚಿಸಿ ಈ ಕಲಾಕಾರನ ಕೃತಿಗೆ ತಮ್ಮ ಕಾವ್ಯ ಧಾರೆಯನ್ನೆರೆದಿದ್ದಾರೆ. ಸುಪ್ರಸಿದ್ಧ ಚಿತ್ರಕಾರರಾದ ಎಸ್. ಎಂ. ಪಂಡಿತ್, ಎಮ್. ಬಿ. ಭೋಹಳ, ಕುಮಾರಚಂದ್ರರೇ ಮೊದಲಾದವರು ಆಳಂದಕರ್ ಅವರ ಶಿಷ್ಯರು. ಹೈದರಾಬಾದ್ ಕರ್ನಾಟಕದಿಂದ ಬಂದ ಪ್ರತಿಭಾನ್ವಿತ ಹಿರಿಯ ಕಲಾವಿದರಲ್ಲಿ ಶ್ರೀಯುತರು ಅಗ್ರಸ್ಥಾನ ಪಡೆದುಕೊಂಡವರು. ಈಚೆಗೆ ಮೈಸೂರು ಸರ್ಕಾರ ಇವರಿಗೆ ವಿಶ್ರಾಂತಿವೇತನವನ್ನು ನೀಡುವುದರ ಮೂಲಕ ಇವರ ಕಲೆಯನ್ನು ಗುರುತಿಸಿದೆ.

ರೂಪಚಿತ್ರ ರಚನೆಯಲ್ಲಿ ವಿ. ಆರ್. ರಾವ್ ಅವರು ಭಾರತದಲ್ಲೇ ಹೆಸರಾದ ವ್ಯಕ್ತಿಗಳು. ಮಂಗಳೂರು ಜಿಲ್ಲೆಯ ಇವರು ಬೊಂಬಾಯಿಯಲ್ಲಿ ಕಲಾಭ್ಯಾಸ ಮಾಡಿ ‘ ನೂತನ ಕಲಾಮಂದಿರ ’ ಕಲಾಶಾಲೆಯ ಮುಖ್ಯ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದರು. ಲಂಡನ್ ರಾಯಲ್ ಅಕಾಡಮಿಯಲ್ಲಿ ಸದಸ್ಯರಾಗಿ ಅಲ್ಲೇ ಹನ್ನೆರಡು ವರ್ಷಗಳ ಕಾಲ ನೆಲೆಸಿ ಕನ್ನಡನಾಡಿನ ಕಲಾಕೀರ್ತಿಯನ್ನು ಉಳಿಸಿಕೊಂಡು ಮೆರೆಸಿ ಕೊಂಡು ಬಂದ ಸಹೃದಯ ಸಂಪನ್ನ ವ್ಯಕ್ತಿಗಳು. ಈಚೆಗೆ ಬೆಂಗಳೂರಿನಲ್ಲಿ ತೀರಿಕೊಂಡರು. ಇವರ ತೈಲವರ್ಣದ ರೂಪಚಿತ್ರಗಳು ಜಲವರ್ಣದ ತಂತ್ರವನ್ನು ಮೆರೆಯುತ್ತವೆ. ತೆಳುವಾದ ವರ್ಣಗಳ ಬಳಕೆ ಇವರಿಗೆ ಹೆಚ್ಚು ಪ್ರಿಯ. ಇವರ ಅನೇಕ ರೂಪ ಚಿತ್ರಗಳು ಹೊರ ಒಳಗಿನ ರಾಜ್ಯಗಳಲ್ಲೂ ಅರಮನೆ ಗುರುಮನೆ ಸರ್ಕಾರಿ ಹಾಗೂ ಖಾಸಗಿ ಕಟ್ಟಡಗಳಲ್ಲೂ ಶೋಭಿಸುತ್ತಿವೆ. ಇವರ ಕಲಾಸಿದ್ಧಿ ಅಪೂರ್ವವಾದುದು.

ಚಿತ್ರಕಲಾರಂಗದಲ್ಲಿ ಹೆಚ್. ಎಸ್. ಇನಾಮತಿಯವರು ಖ್ಯಾತಿಯನ್ನು ಪಡೆದವರು. ಬೊಂಬಾಯಿ ಕಲಾಶಾಲೆಯಲ್ಲಿ ವಿದ್ಯಾರ್ಥಿ ಆಗಿದ್ದಾಗಲೇ ಪ್ರಸಿದ್ಧ ‘ ಡ್ಯಾಲಿಕ ಪದ್ಧಿ ’ ಬಹುಮಾನಗಳಿಸಿದ ಮೊದಲ ಮೈಸೂರಿಗರು. ೧೯೩೦ರಲ್ಲಿ ನಡೆದ ಲಂಡನ್ ಕಲಾಪ್ರದರ್ಶನದಲ್ಲಿ ಬೆಳಕುಕಂಡ ಇವರ ‘ ನ್ಯಾಯ ’ ಎಂಬ ಕೃತಿ ಅಲ್ಲಿನ ಕಲಾವಿಮರ್ಶಕರ ಪ್ರಶಂಸೆಯನ್ನು ಗಳಿಸಿದ್ದಿತು. ಇವರ ಕೃತಿಗಳಲ್ಲಿ ಶುದ್ಧ ವರ್ಣ ವೈಖರಿ ಹೊರಹೊಮ್ಮುತ್ತದೆ. ಜಗನ್ಮೋಹನ ಅರಮನೆಯಲ್ಲಿ ಇವರ ಕೆಲವು

ಚಿತ್ರಗಳು ಪ್ರದರ್ಶಿತವಾಗಿವೆ. 'ಶ್ರೀಕೃಷ್ಣ ಗೋಪಿಯರು' ಒಂದು ಅತ್ಯುತ್ತಮ ಕೃತಿ. ಕಲಾರಾಧನೆಯಲ್ಲಿ ತಲ್ಲೀನರಾದ ಸೌಮ್ಯವ್ಯಕ್ತಿಗಳಿವರು.

ಮೃಗ ಪಕ್ಷಿಗಳ ಬೆಡಗು ಬಿನ್ನಾಣವನ್ನು ತೋರಬಲ್ಲ ವರ್ಣಶಿಲ್ಪಿ ಜನಾಬ್ ಸೂಫಿಯವರು ಕನ್ನಡಿಗರಿಗೆ ಚಿರಪರಿಚಿತರು. ಮೈಸೂರಿನ ಮೃಗಾಲಯವನ್ನು ಕಲಾಶಾಲೆಯಂತೆ ತಿಳಿದು ಅಲ್ಲಿಯೂ ಅಭ್ಯಾಸ ನಡೆಸಿದರು. ಕಷ್ಟದಲ್ಲಿ ಬೊಂಬಾಯಿ ಕಲಾಶಾಲೆ ಮುಗಿಸಿ ಬಂದಮೇಲೆ ಚಾಮರಾಜ ಕಲಾಶಾಲೆಯ ಅಧ್ಯಾಪಕರಾಗಿ ದುಡಿಯುತ್ತಿದ್ದಾರೆ. ಇವರು ಮೃಗ ಪಕ್ಷಿಗಳ ಚಲನವಲನವನ್ನು ಬಹು ಸೂಕ್ಷ್ಮವಾಗಿ ಅಭ್ಯಸಿಸಿದ್ದಾರೆ. ಇವರ ಕೃತಿಗಳಲ್ಲಿ 'ಜಿಪ್ಸಿಕುಕ್ಕರ್', 'ದಿ ರೆಸ್ಟ್', 'ಆನ್‌ದಿ ಅಲರ್ಟ್', 'ಬ್ಲೂ ಪಿಕಾಕ್', 'ಜಂಗಲ್‌ಗರ್ಲ್', 'ವನರಾಣಿ', 'ತಾಯಿ ಹುಲಿ', 'ಹೆಬ್ಬುಲಿ', 'ಬಿಳಿನವಿಲು' ಮುಂತಾದುವು ಸಹಜಕೃತಿಗಳು. ಪ್ರಕೃತಿ ದೇವಿಯ ಪ್ರಫುಲ್ಲ ದೃಶ್ಯಗಳನ್ನು, ಸ್ವಂತ ಕಲ್ಪನೆಯ ಚಿತ್ರಗಳನ್ನು, ತಾವು ಅಭ್ಯಸಿಸಿದ ಪ್ರಾಣಿಗಳನ್ನು ಬಹು ಹೃದಯಂಗಮವಾಗಿ ಚಿತ್ರಿಸುತ್ತಾರೆ. ಇವರ ಕಲೆ ಇವರ ಹೃದಯದಷ್ಟೇ ನಯ ನಾಜೂಕು.

ಭಾರತೀಯ ಹಾಗೂ ಪಾಶ್ಚಾತ್ಯ ಕಲಾಪದ್ಧತಿಯನ್ನು ಅಳವಡಿಸಿಕೊಂಡು ಶ್ರೀ ವೈ. ಸುಬ್ರಹ್ಮಣ್ಯರಾಜು ಅವರು ಚಾರಿತ್ರಿಕ ಸಂಯೋಜನಚಿತ್ರ ರಚಿಸುವುದರಲ್ಲಿ ತಮ್ಮದೇ ಆದ ವೈಖರಿಯನ್ನು ತೋರಿದ್ದಾರೆ. ಅಲ್ಲದೆ ಅಲಂಕಾರಕಲೆ ಸೂಕ್ಷ್ಮಕಲೆಗಳಲ್ಲಿಯೂ ಶ್ರೀಯುತರಿಗೆ ಹಿರಿಯ ಸ್ಥಾನವಿದೆ. ಚಾಮರಾಜ ಕಲಾಶಾಲೆಯ ಕಲಾಶಿಕ್ಷಕರಾಗಿ ಅನೇಕ ಕಲಾವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದವರಿವರು. ಈಗ ನವ್ಯಕಲಾತಂತ್ರದಲ್ಲಿ ಪ್ರಯೋಗ ನಡೆಸುತ್ತಿದ್ದಾರೆ.

ಸಂಯೋಜನಚಿತ್ರ ಹಾಗೂ ಭಾವಚಿತ್ರ ರಚನೆಯಲ್ಲಿ ಮಲೆನಾಡಿನ ಕಡೆಯ ಎಸ್. ಎಸ್. ಕುಕ್ಕೆಯವರು ಖ್ಯಾತಿಗಳಿಸಿದ್ದಾರೆ. ಪಾಶ್ಚಾತ್ಯ ಮತ್ತು ಭಾರತೀಯ ಸಂಪ್ರದಾಯಗಳಲ್ಲಿ ಪಳಗಿದ ಕೈ ಇವರದು. 'ಗಾಯಿತ್ರಿ', 'ದುರ್ಗ', 'ಮೇಘದೂತ' ಮೊದಲಾದ ಇವರ ಪೌರಾಣಿಕ ಚಿತ್ರಗಳಲ್ಲಿ ಸೂಕ್ಷ್ಮ ರೇಖಾವಿನ್ಯಾಸವನ್ನೂ ಸಹಜ ವರ್ಣಸಂಯೋಜನೆಯನ್ನೂ ಗಮನಿಸಬಹುದು. ಮನಸ್ಸನ್ನು ಆಕರ್ಷಿಸುವ ಹೆಚ್ಚು ಬೆಲೆತೆತ್ತು ಕೊಳ್ಳಬೇಕೆನಿಸುವ ಕೃತಿಗಳು ಇವರವು. ಪಂಡಿತ ದಿ. ಕುಕ್ಕೆ ಸುಬ್ರಹ್ಮಣ್ಯ ಶಾಸ್ತ್ರಿಗಳ ಪುತ್ರರಾದ ಇವರು ಸಂಸ್ಕೃತ ಮುಂತಾದ ಭಾಷೆಗಳಲ್ಲಿ ಪರಿಶ್ರಮವನ್ನು ಹೊಂದಿದ್ದಾರೆ. ಶಾಸ್ತ್ರೀಯ ಅಭ್ಯಾಸವೇ ಇವರ ಕೃತಿಗಳ ವಸ್ತುರಚನೆಗೆ ತುಂಬ ನೆರವಾಗಿದೆ.

'ಚಂದಮಾಮ' ಖ್ಯಾತಿಯ ಕಲಾವಿದ ಎಂ. ಟಿ. ವಿ. ಆಚಾರ್ಯರ ಕಲೆಗಾರಿಕೆ ಯಾವ ಕನ್ನಡಿಗರಿಗೆ ತಿಳಿದಿಲ್ಲ! ಪೌರಾಣಿಕ ಚಿತ್ರರಚನೆಯಲ್ಲಿ ಅಗ್ರಗಣ್ಯರಿವರು. ಜಲವರ್ಣ ಚಿತ್ರರಚನೆ ಇವರಿಗೆ ಬಹು ಪ್ರಿಯವಾದುದು. ರಾಮಾಯಣ, ಮಹಾಭಾರತದ ಅನೇಕ ಸನ್ನಿವೇಶಕ್ಕೆ ತಕ್ಕಂತೆ ಚಿತ್ರಗಳನ್ನು ರಚಿಸಿದ್ದಾರೆ. ಈ ಕೃತಿಗಳ

ಪ್ರದರ್ಶನವನ್ನು ಈಕ್ಷಿಸಲು ಕನ್ನಡಜನ ಸಾಲುಗಟ್ಟಿ ನಿಲ್ಲಬೇಕಾದ ಸಂದರ್ಭಗಳೂ ಇವರ ಕಲಾಸಿದ್ಧಿಯ ಹಿರಿಮೆಯಾಗಿದೆ. ಇವರ ಕೃತಿಗಳು ಚಂದಮಾಮ, ಪ್ರಜಾಮತ, ಗೋಕುಲ, ಕರ್ಮವೀರ ಪತ್ರಿಕೆಗಳಲ್ಲಿ ಬೆಳಕು ಕಂಡಿವೆ. ಇವರು ರಚಿಸುವ ಚಿತ್ರಗಳಲ್ಲಿ ಯೋಧರ ಮಾಂಸಖಂಡಗಳ ರಚನೆ ಚಲನವಲನ ಬಹು ಒಪ್ಪವಾಗಿ ಸಹಜವಾಗಿ ರೂಪಗೊಂಡಿವೆ. ಇವರು ಬಳಸುವ ವರ್ಣವಿನ್ಯಾಸ ಮುದ್ರಣಕಲೆಗೆ ತುಂಬ ಸಹಕಾರಿಯಾಗುತ್ತವೆ. ಅಲ್ಲದೆ ಬಹು ಜನಪ್ರಿಯಗಳಿಸುತ್ತವೆ.

ಚಿತ್ರಕಲೆಯನ್ನು ಮಂದ ಹುದುಗು (ಇನ್‌ಲೇ) ಕಲೆಗೆ ಅಳವಡಿಸಿ ಖ್ಯಾತರಾದವರಲ್ಲಿ ವಿಾರ್‌ಶೌಕತ್ತಾಲಿಯವರು ಮೊದಲಿಗರು. ಈ ಕಲೆಗಾರಿಕೆಯಲ್ಲಿ ಯಾರೂ ಸಾಧಿಸದಷ್ಟು ವಿಶಿಷ್ಟರೀತಿಯ ಕಲೆಗಾರಿಕೆಯನ್ನು ಮೆರೆದು ಕೇಂದ್ರಸರ್ಕಾರದಿಂದ ಗೌರವವನ್ನೂ, ಮಾನ್ಯತೆಯನ್ನೂ ಗಳಿಸಿಕೊಂಡಿದ್ದಾರೆ. ಇವರ ರೇಖಾವಿನ್ಯಾಸ ಸಹ ಸುಂದರವಾದುದು. ಇಜ್ಜಲಿನ ರೇಖಾಚಿತ್ರಗಳಲ್ಲಿನ 'ಬೀದಿಯ ಬಟ್ಟೆಮಾರುವವ', 'ಸಂಜೆಯ ಕೆಲಸ' ಮುಂತಾದವು ಹೆಸರಿಸುವಂತಹವು.

ರಸಿಕ ಶ್ರಮಜೀವಿ ಕಲಾವಿದ ಎಂ. ಎಚ್. ರಾಮು ಅವರನ್ನು ಮರೆಯುವಂತಿಲ್ಲ. ಮೈಸೂರಿನಲ್ಲಿ ಸ್ವತಃ ಕಲಾಗಾರವನ್ನು ನಡೆಸಿಕೊಂಡು ಹೋಗುತ್ತಿರುವ ಇವರು ಉತ್ತಮ ಕಾಲ್ಪನಿಕ ಚಿತ್ರಗಳನ್ನೂ ರಚಿಸಿದ್ದಾರೆ. ಶ್ರೀ ಬಸವೇಶ್ವರ, ಅಕ್ಕಮಹಾದೇವಿ, ಕೆಂಪೇಗೌಡ ಮುಂತಾದವು ಮೆಚ್ಚುವಂತಹವು. ನೈಜ ವರ್ಣಶಿಲ್ಪಿಯಾಗಿ ರೂಪಚಿತ್ರಕಾರರಾಗಿ ಇವರು ಖ್ಯಾತರಾಗಿದ್ದಾರೆ. ಅನೇಕ ರಾಷ್ಟ್ರನಾಯಕರ ಭಾವಚಿತ್ರಗಳನ್ನು ರಚಿಸಿ ಸಂಘ ಸಂಸ್ಥೆಗಳಿಗೆ ನೀಡಿದ್ದಾರೆ. ಅರಮನೆಯ ಉತ್ತರದಿಕ್ಕಿನ ಮಹಾದ್ವಾರದ ನಾಲ್ಕೂ ಗೋಡೆಗಳಲ್ಲಿ ಕಾಣುವ ಬೃಹದಾಕಾರದ ಭಿತ್ತಿಚಿತ್ರಗಳು ಅವರ ಉತ್ತಮ ಕಲಾಕೌಶಲಕ್ಕೆ ನಿದರ್ಶನಪ್ರಾಯವಾಗಿವೆ.

ಕಟ್ಟುಕಟ್ಟಳೆಗೆ ಶರಣಾಗದ ಧೀಮಂತ ಕಲಾವಿದ ಆರ್. ಎಸ್. ನಾಯ್ಡು. ತಮ್ಮ ಅಪೂರ್ವ ವ್ಯಂಗ್ಯಚಿತ್ರಗಳಿಂದಲೂ ತಮ್ಮದೇ ಆದ ವಿಶಿಷ್ಟ ರೇಖಾವಿನ್ಯಾಸದಿಂದಲೂ ಮೆರೆದ ವಿಶ್ವವಿಖ್ಯಾತ ಕಲಾವಿದರೊಬ್ಬರು ಮೈಸೂರಿನಲ್ಲಿ ಇದ್ದಾರೆಂದರೆ ಯಾರಾದರೂ ಸೋಜಿಗಪಟ್ಟಾರು! ಇವರ ಆಕರ್ಷಕ ಹಾಗೂ ಭಾವಪೂರ್ಣವಾದ ರೇಖಾಚಿತ್ರಗಳಂತೆಯೇ ಬಿಳಿಯ ಮಣ್ಣಿನ ಉಬ್ಬುಚ್ಚಿನ ರಚನೆಗಳೂ ಪ್ರತಿಮೆಗಳೂ ಪ್ರಸಿದ್ಧವಾಗಿವೆ. ಕನ್ನಡನಾಡಿನ ಕೆಲವೇಮಂದಿ ವ್ಯಂಗ್ಯಚಿತ್ರಕಾರರಲ್ಲಿ ಶ್ರೀಯುತರು ಪ್ರಮುಖರು. ವಕ್ರರೇಖೆಯಲ್ಲಿ ಸಮಾಜದ ಅಥವಾ ರಾಜಕೀಯ ಲೋಪದೋಷಗಳನ್ನು ವ್ಯಂಗ್ಯವಾಗಿ ವಿನೋದಪೂರ್ಣವಾಗಿ ಚಿತ್ರಿಸುವ ಕಲೆಗಾರಿಕೆಯಲ್ಲಿ ಇವರು ಸಿದ್ಧಹಸ್ತರಾಗಿದ್ದಾರೆ. ಬಿಡುವಿನಲ್ಲಿ ನಾಯ್ಡು ಅವರು ತಮ್ಮ ಮಿತ್ರರಿಗೆ ಕಾರ್ಡಿನಲ್ಲಿ ಚಿತ್ರಗಳನ್ನು ಬರೆದು ಪೋಸ್ಟ್‌ಮಾಡುವ ಒಂದು ಸದಭಿರುಚಿಯನ್ನು ಪಡೆದಿದ್ದಾರೆ. ಮಿತ್ರರಿಗೆ ಹಾಗೆ ಬರುವ ಕಾರ್ಡಿನ ಕಲಾಕೃತಿಗಳು ಒಂದು ಪುಟ್ಟ ಕಲಾಗಾರಕ್ಕೆ ಆಗುವ ಅಪೂರ್ವ ಆಸ್ತಿ ಎನ್ನಬಹುದು.

ಆರ್. ಕೆ. ಲಕ್ಷ್ಮಣ್ ಅವರು ಮತ್ತೊರ್ವ ವಿಶಿಷ್ಟ ರೇಖಾಚಿತ್ರಕಾರರಾಗಿ ಭಾರತದಲ್ಲೇ ಪ್ರಖ್ಯಾತರಾಗಿದ್ದಾರೆ. ಪ್ರಸಿದ್ಧ ಕಾದಂಬರಿಕಾರ ಆರ್. ಕೆ. ನಾರಾಯಣ್ ಅವರ ಸೋದರರಿವರು. ಕೊರವಂಜಿ ಮಾಸಪತ್ರಿಕೆಯ ಮೂಲಕ ಬೆಳಕು ಕಂಡ ಇವರು ಈಗ ಟೈಂಸ್ ಆಫ್ ಇಂಡಿಯಾ ಪತ್ರಿಕಾಲಯದಲ್ಲಿ ಕಲಾವಿದರಾಗಿ ದುಡಿಯುತ್ತಿದ್ದಾರೆ. ತಮ್ಮ ಶ್ರೇಷ್ಠಮಟ್ಟದ ವ್ಯಂಗ್ಯಚಿತ್ರಗಳನ್ನು ನೀಡುತ್ತಾ ಎಲ್ಲರ ಪ್ರೀತಿ ಆದರಗಳಿಗೂ ಪಾತ್ರರಾಗಿದ್ದಾರೆ. ಕಲಾರಂಗದಲ್ಲಿ ಸದ್ದುಗದ್ದಲವಿಲ್ಲದ ಜೀವನ ಇವರದು. ಇವರ ರೇಖೆಗಳಲ್ಲಿ ಸ್ವಾಭಾವಿಕತೆಯನ್ನೂ ಅಭ್ಯಾಸಸಾಧನೆಯನ್ನೂ ಮನಗಾಣಬಹುದಾಗಿದೆ.

'ಮೈಸೂರು ಪ್ರಿಂಟರ್ಸ್ ಲಿಮಿಟೆಡ್ಡಿ'ನ ವೃತ್ತಪತ್ರಿಕಾ ಬಳಗವು ಕೆಲವು ಉತ್ತಮ ರೇಖಾಚಿತ್ರಕಾರರನ್ನು ಹೊಂದಿದೆ. ರಮೇಶ್, ಮೂರ್ತಿ, ಸಿಂಹ, ಸತ್ಯ, ಶ್ರೀ ಮುಂತಾದವರು ರೇಖಾಚಿತ್ರ ರಚನೆಯಲ್ಲಿ ಒಳ್ಳೆಯ ಕೌಶಲವನ್ನು ಮೆರೆಯುತ್ತಾ ಬಂದಿದ್ದಾರೆ. ರಮೇಶ್ ಅವರು ರೇಖಾವಿನ್ಯಾಸದಲ್ಲಿ ಹೊಸಬಗೆಯ ಸಾಧನೆಯನ್ನು ಮೆರೆಯುತ್ತಿದ್ದಾರೆ. ಮೂರ್ತಿ ಅವರ ವ್ಯಂಗ್ಯ ಚಿತ್ರಗಳು ಅಖಿಲಭಾರತ ಮಟ್ಟದಲ್ಲಿ ತೂಗಿನೋಡುವ ಯೋಗ್ಯತೆಯನ್ನು ಪಡೆದುಕೊಂಡಿವೆ.

ಬೆಂಗಳೂರಿನ ರಂಗನಾಥ್, ಮಂಗಳೂರಿನ ನವಭಾರತ ಪತ್ರಿಕೆಯ ಎನ್. ಸಿ. ರಘು, ವಿನೋದ, ಕೊರವಂಜಿ, ಸುಧಾ, ಮಯೂರ ಪತ್ರಿಕೆಗಳ ಮೂಲಕ ವ್ಯಂಗ್ಯ ಚಿತ್ರಗಳನ್ನು ಪ್ರಕಟಿಸಿದ ಎಸ್. ಕೆ. ನಾಡಿಗ್ ಮುಂತಾದವರ ರೇಖಾಚಿತ್ರ ರಚನೆಯಿಂದ ಚಿರಪರಿಚಿತವಾಗಿದ್ದಾರೆ. ಸಾಂಪ್ರದಾಯಕ ಚಿತ್ರಗಳಲ್ಲಿ ' ಹುಬ್ಳೀಕರ್ ' ಅವರಿಗೆ ಉತ್ತಮ ಭವಿಷ್ಯವಿದೆ.

ಬಳ್ಳಾರಿಯ ಕೊಂಡಾಚಾರ್ಯ ಅವರು ಉತ್ತಮ ರೇಖಾಚಿತ್ರಗಳಿಂದ ಖ್ಯಾತರಾಗಿದ್ದಾರೆ. ಇವರಲ್ಲದೆ ಬೊಂಬಾಯಿನ ರಾಘವೇಂದ್ರ, ಬೆಂಗಳೂರಿನ ಪುರುಷೋತ್ತಮ, ಅನಂತಯ್ಯ, ಆರಗಂ ಕೃಷ್ಣಮೂರ್ತಿ, ಹೀರೇನಾಥರಾವ್, ದಕ್ಷಿಣ ಕನ್ನಡದ ಕೆ. ಎಲ್. ರಾವ್, ಶೇವಾಗೂರ್, ಬಾಹಿರಿ, ಹುಬ್ಬಳ್ಳಿಯ ' ಕಸ್ತೂರಿ ' ಖ್ಯಾತಿ ಟಿ. ಕೆ. ರಾವ್ (ಈಗ ಕನ್ನಡ ಪ್ರಭ), ಕೆ. ಬಿ. ಕುಲಕರ್ಣಿ ಮುಂತಾದವರು ರೇಖಾಚಿತ್ರ ರಚನೆಯಲ್ಲಿ ಉತ್ತಮ ಪ್ರೌಢಿಮೆಯನ್ನು ಗಳಿಸಿದ್ದಾರೆ.

ಮೈಸೂರಿನ ಸ್ವರ್ಣಕಲಾನಿಪುಣ ದಿ. ಸಿಂಗಣ್ಣಾಚಾರ್ಯರ ಪುತ್ರರಾದ ಎಸ್. ಎನ್. ಸ್ವಾಮಿಗಳು ಕನ್ನಡ ನಾಡಿನಲ್ಲಿ ಸುಪ್ರಸಿದ್ಧ ಕಲಾವಿದರು. ಇವರು ಭಾವಚಿತ್ರ ರಚನೆಯಲ್ಲಿ ಹಾಗೂ ಪೆನ್ಸಿಲ್‌ನ ರೇಖಾಚಿತ್ರಣದಲ್ಲಿ ಹೆಸರಾದ ಕಲಾವಿದರು. ತೈಲವರ್ಣ ಮಾಧ್ಯಮ ಇವರದು. ಅನೇಕ ರಾಜಕಾರಣಿಗಳ ಖ್ಯಾತ ಸಾಹಿತಿಗಳ ಚಿತ್ರಗಳನ್ನು ರಚಿಸಿ ಅವರ ಹಸ್ತಾಕ್ಷರಗಳನ್ನು ಪಡೆದುಕೊಂಡಿದ್ದಾರೆ. ಗಾಂಧಿಜೀ, ಹಿಟ್ಲರ್, ಷಾ, ಟಾಗೂರ್ ಮುಂತಾದವರ ರೂಪಚಿತ್ರಗಳ ಮೇಲೆ ಅವರವರ

ಹಸ್ತಾಕ್ಷರಗಳನ್ನು ಸಂಗ್ರಹಿಸಿಕೊಂಡಿದ್ದಾರೆ. ರಾಜ್ಯದ ಹಾಗೂ ಕೇಂದ್ರದ ಲಲಿತಕಲಾ ಅಕಾಡಮಿಯ ಸದಸ್ಯರಾಗಿದ್ದಾರೆ. ಕಲಾರಂಗದಲ್ಲಿ ಇವರ ಹೆಸರು ಎಲ್ಲೆಲ್ಲೂ ಕೇಳಿ ಬರುತ್ತಿದೆ. ಅಂತೆಯೇ ಇವರ ಕುಂಚವೈಖರಿಯೂ ಸಹ ವಿಶಿಷ್ಟವಾದುದು. ಈಚೆಗೆ ಕೇಂದ್ರ ಸರ್ಕಾರ 'ಪದ್ಮ ಶ್ರೀ' ಪ್ರಶಸ್ತಿ ನೀಡಿ ಗೌರವಿಸಿದೆ.

ಹಿರಿಯ ಕಲಾವಿದರಾದ ಯಲವಟ್ಟಿಯವರು ಸಹ ಜಲವರ್ಣದ ನಿಸರ್ಗ ಚಿತ್ರಗಳಿಗೆ ಪ್ರಖ್ಯಾತರಾದವರು. ಗ್ರಾಮೀಣ ದೃಶ್ಯಗಳನ್ನು ಸಹಜವಾಗಿ ಚಿತ್ರಿಸುವ ಕಲಾಕೌಶಲ ಅವರದು. ಅವರದೇ ಆದ ಸುಸಂಬದ್ಧವಾದ ಹದವರಿತ ಶೈಲಿಯನ್ನು ಕುದುರಿಸಿಕೊಂಡಿದ್ದಾರೆ. ದೇಶವಿದೇಶಗಳಲ್ಲಿ ಇವರ ಕೃತಿಗಳು ಪ್ರಸಾರವಾಗಿ ಕನ್ನಡ ನಾಡಿನ ಕೀರ್ತಿಯನ್ನು ಬೆಳಗಿವೆ. ತಡವಾದರೂ ಈ ವರ್ಷ ರಾಜ್ಯ ಲಲಿತಕಲಾ ಅಕಾಡಮಿ ಇವರಿಗೆ ರಾಜ್ಯಪ್ರಶಸ್ತಿಯನ್ನು ನೀಡಿ ಗೌರವಿಸಿತು. ಇವರಷ್ಟೇ ಕಲಾ ಸಿದ್ಧಿಯನ್ನು ಶ್ರೀ ಟಂಕಸಾಲೆಯವರೂ ಪಡೆದಿದ್ದು ಅನೇಕ ಕಲಾ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದ್ದಾರೆ.

ವೈ. ನಾಗರಾಜು ಅವರು ಚಿತ್ರಕಾರ ವಂಶದಲ್ಲಿ ಜನಿಸಿ ರಾಜರ ಪ್ರೋತ್ಸಾಹಗಳಿಸಿ ಕಲಾಭ್ಯಾಸ ನಡೆಸಿ ಅರಮನೆ ಚಿತ್ರಕಾರರಾಗಿ ದುಡಿದ ಶ್ರಮಜೀವಿ ಕಲಾವಿದರು. ಶ್ರೀಮಪ್ ಯುವರಾಜರ ಜೊತೆಯಲ್ಲಿ ವಿದೇಶಪ್ರವಾಸ ಕೈಕೊಂಡು ಅಲ್ಲಿನ ಕಲಾಗಾರ ಗಳನ್ನೂ ಕಲಾವಿದರನ್ನೂ ಕಲಾಚಟುವಟಿಕೆಗಳನ್ನೂ ಕಂಡು ಪರಿಚಯಮಾಡಿಕೊಂಡು ಬಂದ ಕನ್ನಡಿಗರಲ್ಲಿ ಒಬ್ಬರು. ರೂಪಚಿತ್ರ ರಚನೆಯಲ್ಲಿ ಅಗ್ರಗಣ್ಯರಿವರು. ಅರಮನೆ ಕಲಾವಿದರಾಗಿದ್ದ ದಿ. ಕೆ. ಕೇಶವಯ್ಯನವರಲ್ಲಿ ಕಲಾಭ್ಯಾಸ ನಡೆಸಿದ್ದರಿಂದ ಅವರ ಕೃತಿಗಳಲ್ಲಿ ಕಾಣುವ ವರ್ಣಸ್ವಚ್ಛತೆಯನ್ನು ಪ್ರಮಾಣಬದ್ಧತೆಯನ್ನೂ ಇವರ ಕೃತಿಗಳಲ್ಲಿ ಗಮನಿಸಬಹುದಾಗಿದೆ. ಇವರ ಕೃತಿಗಳು ಅನೇಕ ಸಂಘಸಂಸ್ಥೆಗಳಲ್ಲೂ ಅರಮನೆ ಗುರುಮನೆಗಳಲ್ಲೂ ಶೋಭಿಸುತ್ತಿವೆ. ಬಿ. ಹೆಚ್. ರಾಮಚಂದ್ರ ಮತ್ತು ಎಸ್. ಆರ್. ಐಯಂಗಾರ್ಯ ಅವರ ರೂಪಚಿತ್ರಗಳಲ್ಲಿ ನುರಿತ ಕುಂಚವೈಖರಿಯನ್ನೂ ಕಲಾಕೌಶಲವನ್ನೂ ಕಾಣಬಹುದಾಗಿದೆ.

ಎನ್. ಹನುಮಯ್ಯನವರು ಸುಪ್ರಸಿದ್ಧ ನಿಸರ್ಗಚಿತ್ರಕಾರರಾದ ಟಂಕಸಾಲೆಯವರ ಶಿಷ್ಯರು. ಹನುಮಯ್ಯನವರೂ ನಿಸರ್ಗಚಿತ್ರಗಳಿಗೆ ಹೆಸರಾದವರು. ಇವರು ತೆಗೆದು ಕೊಳ್ಳುವ ವಸ್ತು ಗ್ರಾಮೀಣ ಜೀವನದ ಸಹಜ ರಮ್ಯದೃಶ್ಯಗಳು. ಕಲಾವಿದ ಹನುಮಯ್ಯನವರು ತಾವು ಕಾಣುವ ದೃಶ್ಯದ ಪಡಿಯಚ್ಚನ್ನು ಇಳಿಸದೆ ತಮ್ಮದೇ ಆದ ವಿಶಿಷ್ಟ ಶೈಲಿಯಲ್ಲಿ ತಮ್ಮ ಕೃತಿಗಳಿಗೆ ಅಪೂರ್ವ ಆವರಣವನ್ನು ಕಲ್ಪಿಸಿಬಿಡುತ್ತಾರೆ. ಬಹುಶಃ ಪ್ರಕೃತಿಚಿತ್ರಕಾರರಲ್ಲಿ ಹನುಮಯ್ಯನವರನ್ನು ಮೀರಿಸುವ ಕಲಾವಿದರು ಇಡೀ ಭಾರತದಲ್ಲೇ ಹೆಚ್ಚುಮಂದಿ ಇಲ್ಲ ಎಂದೇ ಹೇಳಬೇಕು. ಇವರ ಚಿತ್ರಗಳು ವಿದೇಶಗಳಲ್ಲೆಲ್ಲಾ ಪ್ರಸಾರವಾಗಿವೆ. ಇವರ ಸಾಲಿನಲ್ಲಿ ಚಂದ್ರಶೇಖರ್, ರುಮಾಲೆ ಚನ್ನಬಸವಯ್ಯ, ಶುದ್ಧೋದನ, ಸೋಮಸುಂದರ, ಸೀತಾರಾಮ್, ಮರಿಸ್ವಾಮಿ ತಿಪ್ಪೇಸ್ವಾಮಿ ಮುಂತಾದವರೂ ಕೂಡ ಪ್ರಕೃತಿ ಚಿತ್ರಕಾರರಲ್ಲಿ ಹೆಸರಾದವರಾಗಿದ್ದಾರೆ.

ಜಲವರ್ಣ ಪ್ರಕೃತಿ ಚಿತ್ರಕಾರರಲ್ಲಿ ಪಿ. ಆರ್. ತಿಪ್ಪೇಸ್ವಾಮಿಯವರ ಸ್ಥಾನವೂ ಗಮನಾರ್ಹವಾದುದು. ಭಾರತದ ನಾನಾ ಕಡೆಗಳಲ್ಲಿ ಪ್ರವಾಸ ಮಾಡಿ ಸಮಗ್ರ ಭಾರತದ ಸಾಂಸ್ಕೃತಿಕ ಪರಂಪರೆಯ ಭವ್ಯ ಸಂಕೇತಗಳಾದ ಗುಡಿಗೋಪುರಗಳ ವೈಭವ ವನ್ನು ಚಿತ್ರಿಸುವುದರಲ್ಲಿ ಇವರು ನಿಷ್ಣಾತರು. ಮಲೆನಾಡಿನ ಅದಮ್ಯ ಸೌಂದರ್ಯವನ್ನು ತಮ್ಮ ಕುಂಚದಲ್ಲಿ ಸೆರೆ ಹಿಡಿದಂತೆಯೇ ಬಯಲು ಸೀಮೆಯ ಹಾಸು ಬೀಸಿನ ಜೀವನ ವನ್ನು ವರ್ಣಪ್ರಪಂಚದಲ್ಲಿ ಬಿತ್ತರಿಸಿದ್ದಾರೆ. ನಾಡಿನ ಸುಪ್ರಸಿದ್ಧ ಪತ್ರಿಕೆಗಳು ಆಂಧ್ರಪ್ರಭಾ ಮುಂತಾದ ನೆರೆನಾಡಿನ ಪತ್ರಿಕೆಗಳೂ ಪ್ರಬುದ್ಧ ಕರ್ಣಾಟಕದಂಥ ಸರ್ವೋತ್ಕೃಷ್ಟ ಪತ್ರಿಕೆಗಳೂ ಇವರ ಅನೇಕ ಪ್ರಕೃತಿ ಚಿತ್ರಗಳನ್ನು ಪ್ರಕಟಿಸಿವೆ. ನಾಡಿನ ಜನಪ್ರಿಯ ಕಲಾವಿದರಲ್ಲಿ ಇವರೂ ಒಬ್ಬರಾಗಿದ್ದಾರೆ. ಕಲಾವಿದರ ಸಂಘಟನೆಯಲ್ಲಿ ಕಲಾವಿದರಿಗೆ ನ್ಯಾಯ ದೊರಕಿಸಿಕೊಡುವುದರಲ್ಲಿ ವಿಶೇಷವಾಗಿ ದುಡಿಯುತ್ತಿರುವ ಇವರು ಇತ್ತೀಚೆಗೆ ಜಾನಪದ ಕ್ಷೇತ್ರದಲ್ಲೂ ಆಸಕ್ತಿ ತೋರಿದ್ದಾರೆ.

ಸಾಹಿತ್ಯದಲ್ಲಿ ನವ್ಯತೆ ತಲೆದೋರಿದಂತೆ ಹೊಸ ಹೊಸ ಪ್ರಯೋಗಗಳು ನಡೆಯು ವಂತೆ ಚಿತ್ರಕಲೆಯಲ್ಲಿಯೂ ನವ್ಯಕಲೆ ಕಾಣಿಸಿಕೊಂಡಿದೆ. ನವ್ಯ ಕಲೆಯಲ್ಲಿಯೂ ಕನ್ನಡಿಗರು ಹಿಂದೆ ಬಿದ್ದಿಲ್ಲ. ಇಲ್ಲಿ ಕೆ. ಕೆ. ಹೆಬ್ಬಾರರನ್ನು ನೆನೆಯುವುದು ಉಚಿತವಿದೆ. ಇವರು ದಕ್ಷಿಣ ಕನ್ನಡದವರು. ಮೈಸೂರಿನ ಚಾಮರಾಜ ಕಲಾ ಶಾಲೆಯಲ್ಲಿ ಪ್ರಪ್ರಥಮ ಕಲಾ ಶಿಕ್ಷಣ ಪಡೆದರು. ಅನಂತರ ಬೊಂಬಾಯಿಯಲ್ಲಿ ಅಭ್ಯಾಸ ಮುಗಿಸಿ ದರು. ಇವರ ಮೊದಮೊದಲಿನ ಚಿತ್ರಗಳಲ್ಲಿ ಸಂಪ್ರದಾಯ ಕಲಾತಂತ್ರವನ್ನು ಮೆರೆದಿ ದ್ದಾರೆ. ಪಾಶ್ಚಾತ್ಯ ಶೈಲಿಯಲ್ಲಿಯೂ ಹೆಚ್ಚು ಪರಿಶ್ರಮ ಪಡೆದುಕೊಂಡವರು. ಅನಂತರ ಯುಗಧರ್ಮಕ್ಕೆ ಅನುಸಾರವಾಗಿ ಹೆಬ್ಬಾರರು ತಮ್ಮ ಕಲೆಯನ್ನು ನವೀನಗೊಳಿಸಿ ಕೊಂಡರು. ಆದರೂ ಭಾರತೀಯ ವಸ್ತುನಿಷ್ಠೆಯನ್ನು ಇವರ ಕೃತಿಗಳಲ್ಲಿ ನಾವು ಗಮನಿಸ ಬಹುದಾಗಿದೆ. ರೇಖೆ ಬಣ್ಣ ಬಳಕೆಯಲ್ಲಿ ನವೀನತೆ ತೋರಿದರೂ ಸಮಗ್ರತೆಯಲ್ಲಿ ಸಹಜ ಸುಂದರತೆಯನ್ನು ಗುರುತಿಸಬಹುದಾಗಿದೆ. ಇಂದು ಭಾರತದಲ್ಲಿ ಖ್ಯಾತ ಚಿತ್ರಕಾರರಾಗಿದ್ದಾರೆ. 'ಪದ್ಮಶ್ರೀ' ಪ್ರಶಸ್ತಿಯನ್ನು ಗಳಿಸಿದ ಕನ್ನಡಿಗರ ಹೆಮ್ಮೆಯ ಕಲಾವಿದರಿವರು. ಭಾರತದಲ್ಲೆ ಏಕೆ ಅಂತರರಾಷ್ಟ್ರೀಯ ಖ್ಯಾತಿಗೇರಿರುವ ಕೆಲವೇ ಮಂದಿ ಕಲಾವಿದರಲ್ಲಿ ಶ್ರೀ ಹೆಬ್ಬಾರರೂ ಒಬ್ಬರು. ಇವರ ಕಲಾಕೃತಿಗಳು ದೇಶವಿದೇಶಗಳಲ್ಲೂ ದೆಹಲಿ ಕೇಂದ್ರದ ಸರ್ಕಾರಿ ಭವನಗಳಲ್ಲೂ, ಶ್ರೀಮಂತರ ಭವನಗಳಲ್ಲೂ, ಮಾನಸ ಗಂಗೋತ್ರಿಯ ಗ್ರಂಥಭಂಡಾರ ಕಟ್ಟಡದಲ್ಲೂ ಪ್ರದರ್ಶಿತವಾಗಿವೆ.

ಈ ನವ್ಯ ಸಂಪ್ರದಾಯದಲ್ಲಿ ಕಾರವಾರದ ಲಕ್ಷ್ಮಣ ಪೈ, ಬೆಂಗಳೂರಿನ ದಿ. ಪಿ. ಸುಬ್ಬರಾವ್, ಗೋಕುಲದಾಸ್ ಶಣೈ, ವಾಸುದೇವ, ನೂರುಲ್ಲಾ ಮುಂತಾದವರನ್ನು ಹೆಸರಿಸಬಹುದಾಗಿದೆ.

ಅನೇಕ ಸುಂದರ ರಕ್ಷಾಪತ್ರಗಳನ್ನು ರಚಿಸಿ ಹೆಸರಾದ ಕಲಾವಿದರು ನಮ್ಮಲ್ಲುಂಟು. ಧಾರವಾಡದ ಶ್ರೀ ಮೂರ್ತಿ, ಬೆಂಗಳೂರಿನ ರಮೇಶ್, ಶರ್ಮ, ದಿ. ಲಕ್ಷ್ಮೀನರಸಿಂಹನ್,

ಮೈಸೂರಿನ ಕಾಳಪ್ಪ, ಮ. ಈ. ಗುರು, ಮುಂತಾದವರನ್ನು ಇಲ್ಲಿ ನೆನೆಯಬಹುದು. ಕರ್ನಾಟಕದ ಕಲಾಪದ್ಧತಿಯ ಚಿತ್ರರಚನೆಯನ್ನು ಇನ್ನೂ ಪೋಷಿಸಿಕೊಂಡು ಬಂದಿರುವ ಮೈಸೂರಿನ ಶ್ರೀ ನರಸಿಂಹಯ್ಯ ಟಿ. ನರಸೀಪುರದ ಕೆ. ವೆಂಕಟರಮಣನ್‌ನವರನ್ನು ಮರೆಯುವಂತಿಲ್ಲ.

ಸೊರಬದ ರಾಮಚಂದ್ರಪ್ಪ ಮೈಸೂರು ಬೊಂಬಾಯಿ ಕಲಾಶಾಲೆಗಳಲ್ಲಿ ಕಲಾಭ್ಯಾಸ ನಡೆಸಿದ ಉತ್ತಮ ಕಲಾವಿದರು. ಈಗ ಅಜಂತಾದ ಗವಿಗಳಲ್ಲಿನ ಭಿತ್ತಿ ಚಿತ್ರಗಳನ್ನು ನಕಲುಮಾಡುವ ಕಾರ್ಯದಲ್ಲಿ ನಿರತರಾಗಿದ್ದಾರೆ. ಇವರ ಜೊತೆಯಲ್ಲಿ ಕನ್ನಡದ ಸುಪ್ರಸಿದ್ಧ ನಿಸರ್ಗ ಚಿತ್ರಕಾರ ಎಂ. ಎಸ್. ಚಂದ್ರಶೇಖರ್ ಅವರೂ ಕೆಲಸ ಮಾಡುತ್ತಿದ್ದಾರೆ. ಈ ಇಬ್ಬರು ರಚಿಸಿದ ನಕಲು ಚಿತ್ರಕೃತಿಗಳು ಈಗ ನವದೆಹಲಿಯ ನ್ಯಾಷನಲ್ ಮ್ಯೂಜಿಯಂನಲ್ಲಿ ಪ್ರದರ್ಶಿತವಾಗಿವೆ. ಅಜಂತ ಭಿತ್ತಿಚಿತ್ರಗಳಲ್ಲಿ ಕಾಣಬರುವ ಹಿಂದಿನ ಕಾಲದ ವರ್ಣ ವೈಖರಿಯನ್ನು ಇವರು ಸಹಜವಾಗಿ ತಂದು ಜಯಗಳಿಸಿದ್ದಾರೆ. ಕನ್ನಡಿಗರ ಕೀರ್ತಿಯನ್ನು ಅಜಂತಾ ದೆಹಲಿಯವರೆಗೂ ಮೆರೆಸುತ್ತಿರುವ ಅಪೂರ್ವ ಕಲಾವಿದರಿವರು.

ಮುಂಬಯಿ ಕರ್ನಾಟಕದಲ್ಲಿ ಪ್ರಸಿದ್ಧರಾದ ಕಲಾವಿದರಲ್ಲಿ ಎಂ. ವಿ. ಮಿಣಜಿಗಿಯವರು ಅಗ್ರಗಣ್ಯರು. ಇವರು ಅನೇಕ ಕಲಾಸಂಸ್ಥೆಗಳಿಗೆ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ. ಅನೇಕ ಕಲಾವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದ್ದಾರೆ. ಹುಬ್ಬಳ್ಳಿಯಲ್ಲಿ ತಮ್ಮದೇ ಆದ ಒಂದು ಕಲಾಮಂದಿರವನ್ನು ಸ್ಥಾಪಿಸಿ ಸುವ್ಯಸ್ಥಿತವಾಗಿ ನಡೆಸಿಕೊಂಡು ಬಂದಿದ್ದಾರೆ. ಇವರೇ ಅಲ್ಲದೆ ವ್ಹಿ. ಜಿ. ಶೆಣೈ, ಬಿ. ಜಿ. ಬಡಿಗೇರ, ಎಂ. ಎ. ಚೆಟ್ಟಿ, ಹಾಲಬಾವಿ, ದಂಡಾವತಿಮಠ, ಎ. ಕಮಡೊಳ್ಳಿ, ಎಸ್. ಎಂ. ಪಂಡಿತ್, ಶಂಕರರಾವ್ ಆಳಂದಕರ, ಬಿ. ಜಿ. ಗೌಡ; ಟಿ. ಪಿ. ಅಕ್ಕಿ ಸೋಮಶೇಖರಸಾಲಿ ಮತ್ತು ಆರ್. ಜಿ. ರಾಯಕರ್ ಮುಂತಾದವರನ್ನು ನೆನೆಯ ಬಹುದಾಗಿದೆ.

ಎನ್. ಎಸ್. ಸುಬ್ಬಕೃಷ್ಣ ಅವರು ಗ್ವಾಲಿಯರ್‌ನ ಪಿಂಗಾಣಿ ಕಾರ್ಖಾನೆಯಲ್ಲಿ ಕಲಾವಿದರಾಗಿದ್ದಾರೆ. ಚಾಮರಾಜ ಕಲಾಶಾಲೆಯಲ್ಲಿ ಇವರು ಕಲಾಭ್ಯಾಸ ನಡೆಸಿದವರು. ನಂಜನಗೂಡು ಇವರ ಹುಟ್ಟೂರು. ಇವರು ಪ್ರಕೃತಿಚಿತ್ರ ಹಾಗು ರೂಪ ಚಿತ್ರದಲ್ಲಿ ಸಿದ್ಧಹಸ್ತರು. ಇವರು ರಚಿಸಿಕೊಟ್ಟ ರಾಷ್ಟ್ರನಾಯಕರ ಅನೇಕ ರೂಪ ಚಿತ್ರಗಳು ರಾಷ್ಟ್ರಪತಿ ಭವನದಲ್ಲಿ ಕಂಗೊಳಿಸುತ್ತಿವೆ. ಈಚೆಗೆ ದಿ. ಲಾಲ್‌ಬಹದ್ದೂರ್ ಶಾಸ್ತ್ರಿಗಳ ಭಾವಚಿತ್ರವನ್ನು ರಚಿಸುವ ಅವಕಾಶ ದೊರೆತಿದ್ದು, ಅದನ್ನು ತಾಷ್ಕೆಂಟ್‌ಗೆ ಕೊಂಡುಹೋಗಿ ಸಮರ್ಪಿಸಿ ಬರುವ ಸದವಕಾಶ ಇವರಿಗೆ ದೊರೆತಿದ್ದು, ಬಾಪೂಜಿಯ ನೆನಪಿಗೆ ಅಂಚೆಚೀಟಿಯ ರೇಖಾಚಿತ್ರ ರಚಿಸಿಕೊಟ್ಟದ್ದು ಕನ್ನಡಿಗರು ಹೆಮ್ಮೆಪಡುವಂತಹದು. ನೆಹರೂರವರ 'ಸಿಟ್ಟಿಂಗ್' ಪಡೆದು ರೂಪಚಿತ್ರ ರಚಿಸುವ ಅವಕಾಶ ಇವರೊಬ್ಬರಿಗೇ ಪ್ರಥಮ ದೊರೆತ ಅವಕಾಶ ಎನ್ನಬಹುದು. ಕನ್ನಡಿಗರ ಹೆಮ್ಮೆಯು

ಕಲಾವಿದ ಶ್ರೀ ಸುಬ್ಬಕೃಷ್ಣ. ಇವರ ಪ್ರಕೃತಿ ಚಿತ್ರಗಳನ್ನು ಜಗನ್ಮೋಹನ ಚಿತ್ರ ಶಾಲೆಯಲ್ಲಿ ನೋಡಬಹುದು. ಕನ್ನಡ ನಾಡಿನಿಂದ ಬಹುದೂರ ಇದ್ದರೂ ಕಲಾಕೀರ್ತಿ ಯನ್ನು ಬೆಳಗಿಸುತ್ತಾ ಕನ್ನಡಿಗರಿಗೆ ಗೌರವ ತರುತ್ತಿದ್ದಾರೆ ಸುಬ್ಬಕೃಷ್ಣ ಅವರು.

ಹೀಗೆ ಕನ್ನಡ ಕಲಾವಿದರ ಪರಿಚಯವನ್ನು ಬೆಳೆಸುತ್ತ ಹೋಗುವಲ್ಲಿ ಕೊನೆ ಇಲ್ಲ ವಾಗಬಹುದು. ಕಲಾಶಿಕ್ಷಣವನ್ನು ಮುಗಿಸಿ ವಿವಿಧ ಸಂಸ್ಥೆಗಳಲ್ಲಿ ಕೆಲಸಮಾಡುತ್ತ ಚಿತ್ರಕಲಾ ಸೇವೆಯನ್ನು ಕೈಬಿಡದೆ ನಡೆಸಿಕೊಂಡು ಬರುತ್ತಿರುವ ಇನ್ನೂ ಅನೇಕ ಕಲಾವಿದರನ್ನು ಮರೆಯುವಂತಿಲ್ಲ. ಶ್ರೀಗಳಾದ ರಘೋತ್ತಮರಾವ್ ಪುಟ್ಟ, ರಾಮರಾವ್, ಗೂಳಣ್ಣನವರ್, ಗಣೇಕರ್, ರಾಜಶೇಖರ್, ದೊಡ್ಡಯ್ಯ, ಹುಚ್ಚಯ್ಯ, ದೊಡ್ಡಬಳ್ಳಾಪುರದ ಶಂಕರ್, ಮಳವಳ್ಳಿಯ ಅಂಕಯ್ಯ, ಮಡಕೇರಿಯ ಚಂದ್ರಶೇಖರ್, ಬೆಂಗಳೂರಿನ ವಿಷ್ಣುದಾಸ್ ರಾಮದಾಸ್, ಬಸವರಾಜ್, ಗೋಪಾಲ್, ಎಂ. ಎಸ್. ನಂಜುಂಡರಾವ್, ಆನಂದ್, ಶ್ರೀನಿವಾಸ್, ಆನಂದರೇಣು, ಮೈಲಾರಯ್ಯ, ಜಯರಾಮ್, ಅಡಪದ್, ಸುಂಕದ್, ಮನೋಳಿ, ನಾರಾಯಣ್, ಮುಂತಾದ ವಿವಿಧ ಕಲಾಶೀಲರನ್ನು ಹೆಸರಿಸಬಹುದು. ಅಲ್ಲದೆ ಮೈಸೂರಿನ ನಾಗೇಂದ್ರ ಸ್ಥಪತಿ ಮತ್ತು ಶ್ರೀ ಮಹದೇವಸ್ವಾಮಿಗಳೂ ಶಾಸ್ತ್ರೀಯ ಚಿತ್ರಕಲೆಯಲ್ಲಿ ಕುಶಲಿಗಳಾಗಿದ್ದಾರೆ. ರಾಮನರಸಯ್ಯ ಅವರ ಹೆಸರೂ ಇಲ್ಲಿ ಗಮನಾರ್ಹವಾದುದು.

ವನಿತಾ ಕಲಾವಿದೆಯರಲ್ಲಿ ಪಿ.ಆರ್. ಕಮಲಮ್ಮ, ಸೀತಾರಾವ್, ಶುಭಾಷಿಣಿದೇವಿ, ಹೆಚ್. ವಿ. ಸರೋಜಮ್ಮ, ಭಾರತಿ, ಸೀತಾ ಹೀರಾನಾಥರಾವ್, ಹೆಚ್. ವೈ. ಉಷಾದೇವಿ, ಈ.ವಿ. ಸೀತಾ, ಸೀತಮ್ಮ, ರಾಜಮ್ಮ, ಕಮಲಾಕ್ಷಿ ಮತ್ತು ರಾಜಲಕ್ಷ್ಮಿ ಮುಂತಾದವರ ಹೆಸರನ್ನು ಇಲ್ಲಿ ಮರೆಯುವಂತಿಲ್ಲ.

ವಿಶ್ವದ ಕಲಾರಂಗಕ್ಕೆ ತನ್ನ ಕಾಣಿಕೆಯನ್ನು ನೀಡುವಲ್ಲಿ ಕನ್ನಡ ತಾಯಿ ಎಂದಿಗೂ ಬಂಜೆಯಾಗಿಲ್ಲ. ಎಷ್ಟೋ ಸಹಸ್ರಾರು ವರ್ಷಗಳಿಂದಲೂ ಕನ್ನಡ ಚಿತ್ರಕಲೆ ಅತ್ಯುತ್ತಮ ಮಟ್ಟದಲ್ಲಿ ಸಾಂಸ್ಕೃತಿಕ ದೇವತೆಗೆ ವಿಶಿಷ್ಟ ಕೊಡುಗೆಯನ್ನು ನೀಡುತ್ತಲೇ ಬಂದಿದೆ.

ಕಳೆದ ಇಪ್ಪತ್ತೈದು ವರ್ಷಗಳಲ್ಲಿ ಕರ್ನಾಟಕದ ನೂರಾರು ಮಂದಿ ಕಲಾವಿದರು ಆ ಕ್ಷೇತ್ರವನ್ನು ಸುಪುಷ್ಟಗೊಳಿಸಿದ್ದಾರೆ. ಇಡೀ ಭಾರತದಲ್ಲಿಯೇ ಬಹುಶಃ ಇಷ್ಟೊಂದು ವೈವಿಧ್ಯಮಯ ಕಲಾಸಾಧನೆ ಕಂಡುಬರುವುದಿಲ್ಲ. ನಮ್ಮ ನಾಡಿನ ಭವ್ಯ ಪರಂಪರೆ ಇನ್ನೂ ಈ ಚಿತ್ರಕಾರರಲ್ಲಿ ಉಳಿದುಬಂದು ಪ್ರೋತ್ಸಾಹದ ಅಭಾವ ಇದ್ದರೂ ಕಲಾ ವಿದರು ನಿರುತ್ಸಾಹರಾಗದೆ ತಮ್ಮ ಸಾಧನೆಯಲ್ಲಿ ತೊಡಗಿದ್ದಾರೆ.

ಚಿತ್ರರಚನೆ ಒಂದುಕಡೆ ನಿರಂತರವಾಗಿ ಸಾಗುತ್ತಿದ್ದರೆ ಮತ್ತೊಂದುಕಡೆ ಅದನ್ನು ತೂಗಿ ನೋಡಿ ಬೆಲೆ ಕಟ್ಟುವ ಕಲಾವಿಮರ್ಶಕರು ನಮ್ಮಲ್ಲಿ ಹೆಚ್ಚಾಗಿ ಬರಲಿಲ್ಲ. ಆದರೂ ಅಲ್ಲಲ್ಲಿ ಪತ್ರಿಕೆಗಳಲ್ಲಿ ಒಂದು ಎರಡು ಕೃತಿಗಳಲ್ಲಿ ಲೇಖನಗಳ ಮೂಲಕ ಪರಿಚಿತರಾಗಿರುವ ಕೆಲವು ವ್ಯಕ್ತಿಗಳನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ಗಣ್ಯ ಸಾಹಿತಿಗಳಾದ ಡಾ.

ಶಿವರಾಮ ಕಾರಂತರು ಚಿತ್ರಕಲೆಯ ಬಗ್ಗೆ ತಮ್ಮದೇ ಆದ ಒಂದು ನಿಲುವನ್ನು ತಾಳಿದವರಾಗಿದ್ದಾರೆ. ಕಲಾವಿದ ಹೆಬ್ಬಾರರ ಬಗ್ಗೆ ಅವರು ಬರೆದಿರುವ ಪುಟ್ಟ ಕೃತಿ ಅವರ ಜೀವಂತ ಕಲಾ ಪ್ರಜ್ಞೆಗೆ ಸಾಕ್ಷಿ. ಅ. ನ. ಕೃ. ಅವರು ಚಿತ್ರಕಲಾ ವಿಮರ್ಶೆಯಲ್ಲಿ ಹೆಸರಾಗಿದ್ದಾರೆ. ಪಾಶ್ಚಾತ್ಯ ಸಿದ್ಧಾಂತಗಳನ್ನು ಪರಿಚಯಮಾಡಿಕೊಂಡಿರುವ ಅ. ನ. ಕೃ ಅವರ ಕಲಾವಿಮರ್ಶಾ ದೃಷ್ಟಿ ಅತ್ಯಂತ ತೀಕ್ಷ್ಣವಾದುದು. ಇವರ 'ರಾಜಾರವಿವರ್ಮ' ಇದಕ್ಕೆ ಒಳ್ಳೆ ಉದಾಹರಣೆ. 'ನಾ ಕಂಡ ಕಲಾವಿದರು' ಕೃತಿಗಳಲ್ಲಿ ಸಹ ಕೆಲವು ಚಿತ್ರಕಾರರ ಕೃತಿ ಪರಿಚಯವನ್ನು ಸಮರ್ಪಕವಾಗಿ ಮಾಡಿದ್ದಾರೆ. ಡಾ. ಹೆಚ್. ತಿಪ್ಪೇರುದ್ರಸ್ವಾಮಿಗಳು ಕರ್ನಾಟಕದ ಚಿತ್ರಕಲೆಯ ಬಗ್ಗೆ ವಿಶೇಷವಾದ ಅಭ್ಯಾಸವನ್ನು ನಡೆಸಿದ್ದಾರೆ. ಅವರ ಇತ್ತೀಚಿನ ಬೃಹತ್ ಕೃತಿ 'ಕರ್ನಾಟಕ ಸಂಸ್ಕೃತಿ ಸಮೀಕ್ಷೆ'ಯಲ್ಲಿ ಕನ್ನಡ ಚಿತ್ರ ಕಲೆಯ ಬಗ್ಗೆ ವಿಸ್ತಾರವಾಗಿ ಪ್ರಸ್ತಾಪ ಮಾಡಿದ್ದಾರೆ.

ಭಾರತದಲ್ಲಿಯೇ ಹೆಸರಾದ ಕಲಾವಿಮರ್ಶಕ ದಿ. ಜಿ. ವೆಂಕಟಾಚಲಂ ಅವರು ಕರ್ನಾಟಕದವರು. ಪಾಂಡವಪುರದವರು. ಬಹುಪಾಲು ಇಂಗ್ಲೀಷ್‌ನಲ್ಲೇ ಬರೆದ ಇವರ ಕಲಾವಿಮರ್ಶೆಗಳು ಅತ್ಯುಚ್ಚ ಮಟ್ಟದ ಸಮತೂಕವಾದ ವಿಮರ್ಶೆಗಳಾಗಿವೆ. ವೆಂಕಟಾಚಲಂ ಅವರಂತೆ ಪರಿಪಕ್ವವಾದ ವಿಮರ್ಶಾ ಪ್ರಜ್ಞೆಯನ್ನು ಬೆಳಸಿಕೊಂಡವರು ಇನ್ನೊಬ್ಬರಿಲ್ಲ. ಎಸ್. ಕೆ. ರಾಮಚಂದ್ರರಾವ್ ಮತ್ತು ಬಿ. ವಿ. ಕೆ. ಶಾಸ್ತ್ರಿ ಅವರೂ ಚಿತ್ರಕಲಾ ವಿಮರ್ಶೆಯಲ್ಲಿ ಸಾಕಷ್ಟು ಪರಿಣತಿಯನ್ನು ಪಡೆದುಕೊಂಡಿದ್ದಾರೆ.

ಪಿ. ಆರ್. ತಿಪ್ಪೇಸ್ವಾಮಿಯವರು ಕಲಾ ವಿಮರ್ಶೆಯಲ್ಲಿ ಬಹುವಾಗಿ ಹೆಸರು ಪಡೆದವರು. ಕಳೆದ ಒಂದುವರೆ ದಶಕದಿಂದ ಅನೇಕ ಅಜ್ಞಾತ ಕಲಾವಿದರ ಕೃತಿ ವಿಮರ್ಶೆಯನ್ನು ಮಾಡಿ ಅವರು ಆ ಕಲಾವಿದರಿಗೆ ಹೆಸರು ತಂದಿದ್ದಾರೆ. ನಿರ್ವಿಕಾರ ವಿಮರ್ಶೆಗಳ ಮೂಲಕ ಎಲ್ಲ ಪಂಥ ಪರಂಪರೆಗಳನ್ನೂ ಸಮಾನ ದೃಷ್ಟಿಯಿಂದ ಕಂಡು ನಿಜವಾದ ಕಲೆಯ ಸತ್ವವನ್ನು ಗುರುತಿಸಿ ಕರ್ನಾಟಕದ ಕಲೆಯ ಹೆಚ್ಚಳವನ್ನು ಸ್ಥಾಪಿಸಲು ಹೆಣಗಿದ್ದಾರೆ. ಇವರ ಅಪಾರ ಸಂಖ್ಯೆಯ ಲೇಖನಗಳು ಪತ್ರಿಕೆಗಳಲ್ಲಿ ಪ್ರಕಟವಾಗಿರುವುದಲ್ಲದೆ 'ಭಾರತೀಯ ಚಿತ್ರಕಲೆ' ಎಂಬ ವಿಮರ್ಶಾ ಗ್ರಂಥವೂ ಪ್ರಕಟವಾಗಿದೆ. ಅಲ್ಲದೆ 'ಕಲೋಪಾಸಕರು' ಎನ್ನುವ ಹೆಬ್ಬೊತ್ತಿಗೆಯೊಂದು ಕನ್ನಡ ನಾಡಿನ ಅನೇಕ ಮಂದಿ ಚಿತ್ರಕಾರರ ಜೀವನ ಪರಿಚಯವನ್ನೂ ಕಲಾ ಪರಿಚಯವನ್ನೂ ಮಾಡಿಕೊಡುವ ಉತ್ತಮ ಗ್ರಂಥವಾಗಿದೆ. 'ಕರ್ನಾಟಕದ ಚಿತ್ರ ಕಲೆ' ಎಂಬ ಕಿರು ಹೊತ್ತಿಗೆಯೂ ಪ್ರಕಟವಾಗಿದೆ.

ಚಿತ್ರಕಲೆಯ ಪ್ರೋತ್ಸಾಹದ ಗುರಿಯನ್ನು ಇಟ್ಟುಕೊಂಡು ಅನೇಕ ಸಂಘ ಸಂಸ್ಥೆಗಳೂ ಕರ್ನಾಟಕದಲ್ಲಿ ಕಳೆದ ಇಪ್ಪತ್ತೈದು ವರ್ಷಗಳಲ್ಲಿ ಹುಟ್ಟಿಕೊಂಡಿವೆ. ಸ್ವಾತಂತ್ರ್ಯಾನಂತರ ೧೯೬೦ರಲ್ಲಿ ಸ್ಥಾಪಿತವಾದ ರಾಜ್ಯದ ಲಲಿತಕಲಾ ಅಕಾಡಮಿ ಉತ್ತಮ ಕಲಾವಿದರನ್ನು ಆಯ್ಕೆಮಾಡಿ ಪ್ರೋತ್ಸಾಹಿಸುವ ಕಾರ್ಯದಲ್ಲಿ ನಿರತವಾಗಿದೆ.

ಅಲ್ಲಲ್ಲಿ ಕಲಾಪ್ರದರ್ಶನಗಳನ್ನು ವ್ಯವಸ್ಥೆಗೊಳಿಸುತ್ತದೆ. ಮೈಸೂರಿನಲ್ಲಿ ಸ್ಥಾಪಿತವಾಗಿದ್ದ (೧೯೬೦ರಲ್ಲಿ) ಚಿತ್ರ–ಶಿಲ್ಪ ಅಕಾಡಮಿ ಕಲಾವಿದ ತಿಪ್ಪೇಸ್ವಾಮಿ ಅವರ ನೇತೃತ್ವದಲ್ಲಿ ಅತ್ಯುತ್ತಮವಾದ ಕಾರ್ಯವನ್ನು ಎಸಗಿದೆ. ಅನೇಕ ತಜ್ಞ ಕಲಾವಿದರ ಮುವತ್ತಕ್ಕೂ ಹೆಚ್ಚು ಏಕವ್ಯಕ್ತಿ ಕಲಾಪ್ರದರ್ಶನಗಳನ್ನು ಸತತವಾಗಿ ನಡೆಸಿ ವಿದ್ವಾಂಸರಿಂದ ಉಪನ್ಯಾಸಗಳನ್ನು ಮೈಸೂರು ನಗರದಲ್ಲಿ ಏರ್ಪಡಿಸಿ ಉತ್ತಮ ಕಲಾಪ್ರಸಾರವನ್ನು ಕೈಗೊಂಡಿತು. ಬೆಂಗಳೂರಿನಲ್ಲಿ ಸ್ಥಾಪಿತವಾಗಿರುವ ಮೈಸೂರು ಪ್ರದೇಶ ಚಿತ್ರಕಲಾ ಪರಿಷತ್ ಕಲಾವಿದರ ಏಳಿಗೆಗಾಗಿ ಶ್ರಮಿಸುತ್ತಿರುವ ಏಕೈಕ ಸಂಸ್ಥೆ. ರಾಜ್ಯ ಮಟ್ಟದ ಕಲಾವಿದರ ಸಮ್ಮೇಳನಗಳನ್ನು ನಡೆಸಿ ಕಲಾವಿದರ ಸಂಘಟಣೆಗೂ ಶ್ರಮಿಸಿದೆ. ಆಗಾಗ ವಿಧಾನ ಸೌಧದಲ್ಲೂ, ದೆಹಲಿಯಲ್ಲೂ ಕಲಾ ಪ್ರದರ್ಶನಗಳನ್ನು ನಡೆಸಿ ಕರ್ನಾಟಕದ ಚಿತ್ರಕಲೆಗೆ ಉತ್ತಮ ಖ್ಯಾತಿಯನ್ನು ತಂದುಕೊಟ್ಟಿದೆ.

ರಾಜ್ಯದಲ್ಲಿ ಆಗಾಗ ಕಲಾಶಿಕ್ಷಕರ ಸಮ್ಮೇಳನಗಳೂ ನಾನಾಕಡೆ ಜರುಗಿ ಚಿತ್ರ ಕಲಾಕ್ಷೇತ್ರದ ಸಮಸ್ಯೆಗಳನ್ನು, ಕಲಾಶಿಕ್ಷಕರ ಸ್ಥಾನಮಾನಗಳನ್ನು ಕುರಿತು ನಿರ್ಣಯ ಗಳನ್ನು ಕೈಕೊಳ್ಳಲಾಗಿದೆ.

ಸ್ವಾತಂತ್ರ್ಯ ಪೂರ್ವದಲ್ಲಿ ಹರಿದು ಹಂಚಿಹೋಗಿದ್ದ ಕನ್ನಡ ನಾಡಿನ ನಾನಾ ಭಾಗಗಳಲ್ಲಿ ಭಿನ್ನ ಭಿನ್ನ ರೀತಿಯ ಕಲಾಭ್ಯಾಸ ಶಾಲೆಗಳಲ್ಲಿ ರೂಢಿಯಲ್ಲಿದ್ದು ಕರ್ನಾಟಕ ಏಕೀಕರಣದನಂತರ ಏಕರೂಪತೆಯನ್ನು ತರುವ ಸ್ತುತ್ಯವಾದ ಕಾರ್ಯವೂ ನಡೆದಿದೆ. ಇದಲ್ಲದೆ ಮೈಸೂರಿನ ಸುಪ್ರಸಿದ್ಧ ಕಲಾಶಿಕ್ಷಣ ಕೇಂದ್ರವಾದ ಚಾಮರಾಜೇಂದ್ರ ಕಲಾಶಾಲೆಯ ಜೊತೆಗೆ ಅನೇಕ ಕಲಾಶಾಲೆಗಳು ಆರಂಭವಾಗಿ ಕಲಾ ವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಣವನ್ನು ಒದಗಿಸುತ್ತಿವೆ. ಅವುಗಳಲ್ಲಿ ಮುಖ್ಯವಾಗಿ ಬೆಂಗಳೂರಿನ 'ಕಲಾಮಂದಿರ', ಚಿತ್ರಕಲಾ ಪರಿಷತ್ತಿನ 'ಚಿತ್ರಕಲಾ ವಿದ್ಯಾಲಯ' ಮೈಸೂರಿನ 'ಕಲಾನಿಕೇತನ', ಧಾರವಾಡದ 'ಸ್ಕೂಲ್ ಆಫ್ ಆರ್ಟ್ಸ್', ಹುಬ್ಬಳ್ಳಿಯ ಮಿಣಜಿಗಿ ಅವರ 'ಕಲಾಶಾಲೆ', ಗದಗು, ಗುಲಬರ್ಗ, ಮಂಗಳೂರು ಮುಂತಾದ ಕಡೆಯ ಕಲಾಶಾಲೆಗಳು ಮುಖ್ಯವಾದವು. ದಾವಣಗೆರೆಯ ಸರ್ಕಾರಿ ಕಲಾಶಿಕ್ಷಣ ಕೇಂದ್ರವೂ ಮುಖ್ಯವಾದುದು.

ಮುಂಬಯಿ ಜೆ. ಜೆ. ಕಲಾಶಾಲೆಯ ಮಾದರಿಯಲ್ಲಿ ನಮ್ಮ ರಾಜ್ಯ ಸರ್ಕಾರವೂ ೧೯೫೬ರಿಂದ ಪ್ರಪ್ರಥಮವಾಗಿ ಕಲಾ ಪರೀಕ್ಷೆಗಳ ವ್ಯವಸ್ಥೆಯನ್ನು ಮಾಡಿ ಅದಕ್ಕಾಗಿಯೇ ಪ್ರತ್ಯೇಕ ಇಲಾಖೆಯನ್ನು ಸಹ ಸ್ಥಾಪಿಸಿರುತ್ತದೆ.

ನಾಲ್ಕು ಐದು ದಶಕಗಳಿಂದ ಮೈಸೂರಿನ ದಸರಾ ಚಿತ್ರ ಕಲಾ ಪ್ರದರ್ಶನ ಇಡೀ ಭಾರತದ ಚಿತ್ರಕಲಾವಿದರ ಕುತೂಹಲವನ್ನು ಸೆಳೆದಿದೆ. ಭಾರತದ ಹೆಸರಾಂತ ಕಲಾ ವಿದರ ಜೊತೆಯಲ್ಲಿ ಕರ್ನಾಟಕದ ಕಲಾವಿದರೂ ಸ್ಪರ್ಧಿಸಿ ಪುರಸ್ಕಾರಗಳನ್ನು ಪಡೆಯುವ ಕಲಾವಿನಿಮಯ ಮಾಡಿಕೊಳ್ಳುವ ಏಕೈಕ ಅವಕಾಶ ಇದು. ಅಂತೆಯೇ ಮೈಸೂರಿನ ಜಗನ್ ಮೋಹನ ಚಿತ್ರಶಾಲೆ, ಮೈಸೂರಿನ ಅರಮನೆ, ಬೆಂಗಳೂರಿನ ವೆಂಕಟಾಚಲಂ

ಅವರ 'ಆರ್ಟ್‌ಗ್ಯಾಲರಿ', ಮೈಸೂರಿನ ದಸರಾ ವಸ್ತುಪ್ರದರ್ಶನದ ಆವರಣದಲ್ಲಿರುವ ಕಲಾಗಾರ-ಇಲ್ಲಿ ಕನ್ನಡ ಕಲಾವಿದರ ಅತ್ಯುತ್ತಮ ಕಲಾ ಕೃತಿಗಳ ಪರಿಚಯ ಮಾಡಿಕೊಳ್ಳಬಹುದು. ಈಚೆಗೆ ಬೆಂಗಳೂರು ನಗರದಲ್ಲಿ ಕಲಾವಿದರ ಕೃತಿಗಳ ಪ್ರದರ್ಶನಗಳು ಆಗಾಗ ಜರುಗುತ್ತ ಜನರ ಆಸಕ್ತಿಯನ್ನು ಕೆರಳಿಸುತ್ತಿವೆ. ಕನ್ನಡ ಪತ್ರಿಕೆಗಳೂ ಸಾಕಷ್ಟು ಪ್ರೋತ್ಸಾಹ ನೀಡುತ್ತಿವೆ. ಕನ್ನಡ ನಾಡಿನಲ್ಲಿ ಅತ್ಯಂತ ಪ್ರಸಾರವಿರುವ 'ಸುಧಾ' ಮತ್ತು 'ಕರ್ಮವೀರ' ವಾರ ಪತ್ರಿಕೆಗಳ ರಕ್ಷಾ ಪುಟಗಳಲ್ಲಿ ಕನ್ನಡ ಕಲಾವಿದರ ಅನೇಕ ಉತ್ತಮ ಚಿತ್ರಗಳನ್ನು ಪ್ರಕಟಿಸಿ ಪ್ರೋತ್ಸಾಹಿಸುತ್ತಿರುವುದು ಹೆಮ್ಮೆಯ ಸಂಗತಿ.

ಕರ್ನಾಟಕದಲ್ಲಿ ಸರ್ಕಾರದ ವತಿಯಿಂದಾಗಲೀ ಸಾರ್ವಜನಿಕ ವತಿಯಿಂದಾಗಲೀ ಚಿತ್ರಕಲೆಗೆ ಸಾಕಷ್ಟು ಪ್ರೋತ್ಸಾಹ ದೊರೆಯುತ್ತಿಲ್ಲ. ಅನೇಕ ಸಂದರ್ಭಗಳಲ್ಲಿ ಪ್ರೋತ್ಸಾಹದ ಹೆಸರಿನಲ್ಲಿ ಎಷ್ಟೋ ಅನ್ಯಾಯಗಳು ನಡೆದುಬಿಡುತ್ತವೆ. ಅತ್ಯುತ್ತಮ ಕಲಾವಿದರು ಸರಿಯಾದ ಮನ್ನಣೆ ಇಲ್ಲದೆ ಅಜ್ಞಾತರಾಗಿಯೇ ಉಳಿದುಹೋಗುತ್ತಾರೆ. ರಾಜ್ಯ ಪ್ರಶಸ್ತಿಗಳನ್ನು ಕೇವಲ ಪ್ರಭಾವಿತ ವ್ಯಕ್ತಿಗಳೇ ಬಹುಮಂದಿ ಲಲಿತ ಕಲಾ ಅಕಾಡಮಿಯ ಸದಸ್ಯರೇ ಹಂಚಿಕೊಂಡ ದುರ್ದೈವೀ ಪ್ರಸಂಗಗಳೂ ನಮ್ಮಲ್ಲಿವೆ. ಇತ್ತೀಚಿಗೆ ಸರ್ಕಾರ ದಿ. ಕೆ. ವೆಂಕಟಪ್ಪನವರ ಹೆಸರಿನಲ್ಲಿ ಶಾಶ್ವತವಾದ ಚಿತ್ರಕಲಾಗಾರವೊಂದನ್ನು ತೆರೆಯಲು ಮುಂದೆ ಬಂದು ಭವ್ಯ ಕಟ್ಟಡದ ಶಂಕುಸ್ಥಾಪನೆಯೂ ಆಗಿರುವುದು ಸಂತೋಷದ ಸಂಗತಿ. ಕರ್ನಾಟಕದಲ್ಲಿ ಇಂಥ ಒಂದು ಕಲಾಗಾರದ ಅಗತ್ಯ ಅಪಾರವಾಗಿತ್ತು. ಈ ಕಲಾಗಾರ ಅನೇಕ ಕಲಾವಿದರ ಕೃತಿಗಳ ಪ್ರದರ್ಶನಕ್ಕೂ ಅವುಗಳ ಮಾರಾಟಕ್ಕೂ ಉತ್ತಮ ವ್ಯವಸ್ಥೆಯನ್ನು ಮಾಡಿಕೊಡುವ ನಿರೀಕ್ಷೆ ಇದೆ. ಕನ್ನಡ ಕಲಾವಿದರು ಆದಷ್ಟು ಬೇಗ ಈ ಕಲಾಗಾರದ ಸ್ಥಾಪನೆಯನ್ನು ಕಾಣುವಂತಾಗಲೆಂದು ಹಾರೈಸಬಹುದು.

ಎಂ. ಬಿ. ಸಿಂಗ್

ಚಲನಚಿತ್ರೋದ್ಯಮ

ಕನ್ನಡ ಚಿತ್ರೋದ್ಯಮಕ್ಕೆ ಸುಮಾರು ಮೂವತ್ತೈದು ವರ್ಷಗಳ ಇತಿಹಾಸವಿದ್ದರೂ ವಾಸ್ತವವಾಗಿ ಅದು ಒಂದು ಗಣನೀಯ ಉದ್ಯಮವಾಗಿ, ನಾಡಿನ ಒಂದು ಪ್ರಮುಖ ಸಾಂಸ್ಕೃತಿಕ ಸಾಧನವಾಗಿ ಬೆಳವಣಿಗೆ ಹೊಂದಿರುವುದು ಕಳೆದ ಎರಡು ದಶಕಗಳಲ್ಲಿ. ಚರಿತ್ರಕಾರನ ದೃಷ್ಟಿಯಿಂದ ಈ ಎರಡು ದಶಕಗಳು ಗಮನಾರ್ಹವಾಗಿವೆ. ಆದ್ದರಿಂದ ಕನ್ನಡ ಚಿತ್ರೋದ್ಯಮದ ಬೆಳವಣಿಗೆಯನ್ನು ಅವಲೋಕಿಸುವವರು ಕಳೆದ ಇಪ್ಪತ್ತು—ಇಪ್ಪತ್ತೈದು ವರ್ಷಗಳು ಕನ್ನಡ ವಾಕ್ಚಲನ ಚಿತ್ರೋದ್ಯಮದ ಆರಂಭಕಾಲ ಎಂದು ಪರಿಗಣಿಸಬಹುದು.

ಮೂರು ದಶಕಗಳಿಗೂ ಹೆಚ್ಚಿನ ಇತಿಹಾಸ ಹೊಂದಿದ್ದರೂ ಕನ್ನಡ ಚಿತ್ರೋದ್ಯಮ ನಿರೀಕ್ಷಿಸುವಷ್ಟು ವ್ಯಾಪಕವಾದ, ಪ್ರಭಾವಶಾಲಿಯಾದ ರೀತಿಯಲ್ಲಿ ಬೆಳೆಯದಿರುವುದಕ್ಕೆ ಕಾರಣಗಳನ್ನು ಪರ್ಯಾಲೋಚಿಸಬೇಕು. ಕನ್ನಡ ಚಿತ್ರಗಳು ಗಣನೀಯ ಸಂಖ್ಯೆಯಲ್ಲಿ ತಯಾರಾಗತೊಡಗಿರುವುದು ಕಳೆದ ಹದಿನೈದು ವರ್ಷಗಳಿಂದ. ಅದಕ್ಕೆ ಮುಂಚೆ ಪ್ರತಿವರ್ಷ ಕೇವಲ ನಾಲ್ಕೈದು ಚಿತ್ರಗಳು ತಯಾರಾಗುತ್ತಿದ್ದವು. ವರ್ಷಕ್ಕೆ ಹತ್ತು-ಹದಿನೈದು ಚಿತ್ರಗಳಾದರೂ ತೆರೆಕಾಣತೊಡಗಿರುವುದು ೧೯೫೪ರಿಂದೀಚೆಗೆ. ರಾಜ್ಯದಲ್ಲಿ ಚಿತ್ರಮಂದಿರಗಳಾದರೋ ಸುಮಾರು ೩೦೦ರವರೆಗಿದ್ದವು. ಆದರೆ ತೆರೆಗೆ ಬರುತ್ತಿದ್ದ ಚಿತ್ರಗಳು ನಾಲ್ಕಾರು. ಅವೂ ಆರ್ಥಿಕ ನಿರ್ಬಂಧದಿಂದ ಬಡತನದ ನಿರ್ಮಾಣಮೌಲ್ಯಗಳೊಡನೆ. ಇದೇ ಅವಧಿಯಲ್ಲಿ ಇತರ ಭಾಷಾ ಉದ್ಯಮಗಳು—ಮುಖ್ಯವಾಗಿ ಹಿಂದೀ, ತಮಿಳು, ತೆಲುಗು—ಅಗಾಧವಾಗಿ ಬೆಳೆದಿದ್ದವು. ಅದ್ದೂರಿಯಾಗಿ ನೂರಾರು ಚಿತ್ರಗಳು ಬರುತ್ತಿದ್ದವು. ವಿಸ್ತಾರವಾದ ಮಾರುಕಟ್ಟೆ ಅವುಗಳಿಗಿದ್ದುದರಿಂದ ವೈಭವೋಪೇತವಾಗಿ ತಯಾರಾಗುತ್ತಿದ್ದುವು. ಇವುಗಳ ಮುಂದೆ ಕನ್ನಡ ಚಿತ್ರಗಳು ಸರಿನಿಲ್ಲಲಾಗುತ್ತಿರಲಿಲ್ಲ. ಇತ್ತ ಕನ್ನಡ ಚಿತ್ರನಿರ್ಮಾಣ ಇನ್ನೂ ಒಂದು ಉದ್ಯಮವಾಗಿಯೇ ಬೆಳೆಯದಿರುವಾಗ ಇನ್ನು ಸಿರಿವಂತ ತಯಾರಿಕೆ ಎಲ್ಲಿಬಂತು?

ಹೀಗಾಗಿ ಅನ್ಯಭಾಷಾ ಚಿತ್ರಗಳ ಧಾಳಿಯಲ್ಲಿ ಕನ್ನಡ ಉದ್ಯಮ ಬೆಳೆಯುವುದು ಬಹುಕಷ್ಟವಾಯಿತು. ಕನ್ನಡ ಚಿತ್ರೋದ್ಯಮವು ಒಂದು ಗಮನಾರ್ಹ ಉದ್ಯಮವಾಗಿ

ಬೆಳೆದು ಜನರ ಆಸಕ್ತಿ ಸೆಳೆಯುತೊಡಗಿದುದು ಈಗ್ಗೆ ಸುಮಾರು ಹನ್ನೆರಡು-ಹದಿನೈದು ವರ್ಷಗಳಿಂದ. ಹಲವು ಒಳ್ಳೆಯ ಚಿತ್ರಗಳು ಬಂದು ಜನಮನ್ನಣೆ ಗಳಿಸಿದಾಗ ಪರಭಾಷಾ ಚಿತ್ರಗಳ ವೈಭವಾಡಂಬರಗಳಿಗೆ ಮಾರುಹೋಗಿದ್ದ ಉದ್ಯಮಿಗಳೂ ಕನ್ನಡದತ್ತ ಆಸಕ್ತಿ ಹರಿಸುವಂತಾಯಿತು. ಕಳೆದ ಒಂದು ದಶಕದಲ್ಲಿ ನಡೆದಿರುವ ಕನ್ನಡ ಚಳುವಳಿಯಂತೂ ಕನ್ನಡ ಚಿತ್ರೋದ್ಯಮಕ್ಕೆ ಒಂದು ನವಚೇತನ ಕೊಟ್ಟಿತೆಂದೇ ಹೇಳಬೇಕು.

ಕನ್ನಡ ಚಿತ್ರೋದ್ಯಮದ ಆರಂಭ ಸ್ವಾರಸ್ಯಕರವಾಗಿದೆ. ಈ ಶತಮಾನದ ಆರಂಭದಲ್ಲಿ ಕನ್ನಡದ ವೃತ್ತಿ ರಂಗಭೂಮಿ ವೈಭವದಿಂದ ಮೆರೆಯುತ್ತಿತ್ತು. ರಂಗದ ಮೇಲೆ ತಮ್ಮದೇ ಆದ ವೈಶಿಷ್ಟ್ಯದಿಂದ ರಾರಾಜಿಸಿದ್ದ ನಾಟಕಶಿರೋಮಣಿ ಎ. ವಿ. ವರದಾಚಾರ್ಯರು ೧೯೩೩ರಲ್ಲಿ ನಿಧನರಾದರು. ಆಮೇಲೆ ಅವರ ಕೆಲವರು ಅಭಿಮಾನಿಗಳು ಮತ್ತು ಅನುಯಾಯಿಗಳು ಸಮಾಲೋಚನೆ ನಡೆಸಿ ಆಚಾರ್ಯರ ನೆನಪಿಗಾಗಿ ಒಂದು ಚಲನಚಿತ್ರವನ್ನು ನಿರ್ಮಿಸಲು ಸಂಕಲ್ಪಿಸಿದರು. ಕನ್ನಡದ ಪ್ರಥಮ ವಾಕ್ಪಟ "ಭಕ್ತಧ್ರುವ" ತಯಾರಾದುದು ಹೀಗೆ. ಜಯವಾಣಿ ಫಿಲಂಸ್ ಲಾಂಛನದಲ್ಲಿ ಮುಂಬಯಿಯಲ್ಲಿ ತಯಾರಾದ ಈ ಚಿತ್ರದಲ್ಲಿ ವರದಾಚಾರ್ಯರ ಮೊಮ್ಮಗ ಮಾಸ್ಟರ್ ಮುತ್ತು ಧ್ರುವನ ಪಾತ್ರವಹಿಸಿದ್ದ; ಆಗ್ಗೆ ವಿಶ್ವವಿದ್ಯಾನಿಲಯದಲ್ಲಿ ಲೆಕ್ಚರರ್ ಆಗಿದ್ದ ಶ್ರೀಮತಿ ಕನಕಲಕ್ಷ್ಮಮ್ಮ ಸುನೀತಿಯಾಗಿ ಅಭಿನಯಿಸಿದರು. ಲೆಜಿಸ್ಲೆಟಿವ್ ಕೌನ್ಸಿಲ್ ಸದಸ್ಯೆಯಾಗಿದ್ದ ಶ್ರೀಮತಿ ಟಿ. ಸುನಂದಮ್ಮ, ಈಗ ಬೆಂಗಳೂರಿನ ಜಯಚಾಮರಾಜೇಂದ್ರ ಔದ್ಯೋಗಿಕ ಶಿಕ್ಷಣಶಾಲೆಯಲ್ಲಿ ಸೌಂಡ್ ಎಂಜಿನಿಯರೂ ಅಧ್ಯಾಪಕರೂ ಆಗಿರುವ ಶ್ರೀ ಟಿ. ದ್ವಾರಕಾನಾಥ್, ಹಿರಿಯ ನಟರಾದ ನಾಗೇಶರಾವ್ ಮತ್ತು ಎಂ. ಜಿ. ಮರಿರಾವ್—ಇವರೆಲ್ಲರೂ ಈ ಚಿತ್ರದ ತಾರಾಗಣದಲ್ಲಿದ್ದರು.

ಇದೇ ವರ್ಷ 'ಸತಿಸುಲೋಚನಾ' ಎಂಬ ಇನ್ನೊಂದು ಕನ್ನಡ ವಾಕ್ಚಿತ್ರವೂ ತಯಾರಾಯಿತು. ದಿವಂಗತ ಬೆಳ್ಳಾವೆ ನರಹರಿಶಾಸ್ತ್ರಿಗಳು ಇದರ ಸಾಹಿತ್ಯ ಬರೆದಿದ್ದರು. ಹಿರಿಯ ನಟ–ನಿರ್ಮಾಪಕ ಆರ್. ನಾಗೇಂದ್ರರಾವ್, ದಿವಂಗತ ಎಂ. ವಿ. ಸುಬ್ಬಯ್ಯನಾಯ್ಡು, ತ್ರಿಪುರಾಂಬ ಮೊದಲಾದವರು ಈ ಚಿತ್ರದಲ್ಲಿ ನಟಿಸಿದ್ದರು. ಈಗಲೂ ಕನ್ನಡ ಚಿತ್ರರಂಗದಲ್ಲಿ ಚಟುವಟಿಕೆಯಿಂದ ಕಾರ್ಯನಿರತರಾಗಿರುವ ವೈ. ವಿ. ರಾವ್ ಈ ಚಿತ್ರವನ್ನು ನಿರ್ದೇಶಿಸಿದರು.

ಕನ್ನಡ ಚಿತ್ರೋದ್ಯಮದ ಆರಂಭ ಹೀಗೆ ಉತ್ಸಾಹಪೂರ್ಣವಾಗಿಯೇ ಆಯಿತು. ಚಿತ್ರರಂಗದಲ್ಲಿ ಬೆಂಗಳೂರು ಇದಕ್ಕೆ ಮೊದಲೇ ಪ್ರಸಿದ್ಧವಾಗಿತ್ತು. ೧೯೨೯ರಲ್ಲಿ ಎಂ. ಭಾವನಾನಿಯವರು ಇಲ್ಲಿ ತಯಾರಿಸಿದ 'ಮೃಚ್ಛಕಟಿಕ' ಚಿತ್ರದಲ್ಲಿ ಕಮಲಾದೇವಿ ಚಟ್ಟೋಪಾಧ್ಯಾಯ, ಟಿ. ಪಿ. ಕೈಲಾಸಂ, ಏಣಾಕ್ಷಿ ರಾಮರಾವ್, ಜೆ. ಕೆ. ನಂದಾ ಮೊದಲಾದವರು ಅಭಿನಯಿಸಿದ್ದು ಚಿತ್ರವು ಭಾರತದಲ್ಲೇ ಅಲ್ಲದೆ ಜರ್ಮನಿ ಮತ್ತು ಇತರ ವಿದೇಶಗಳಲ್ಲೂ ಪ್ರಶಂಸೆಗಳಿಸಿತು. ೧೯೩೦ರಲ್ಲಿ ಮುಂಬಯಿಯ ಹರಿಭಾಯ್ ಆರ್. ದೇಸಾಯಿ ಮತ್ತು ಭೋಗಿಲಾಲ್ ದಾವೆ ಎಂಬ ಉದ್ಯಮಿಗಳು ಬೆಂಗಳೂರಿನ

ಪ್ರಕೃತಿಸೌಂದರ್ಯಕ್ಕೆ ಮಾರುಹೋಗಿ ಇಲ್ಲಿ ಸೂರ್ಯ ಫಿಲಂ ಕಂಪನಿ ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. ಈ ಸಂಸ್ಥೆ ಸುಮಾರು ನಲವತ್ತು ಮೂಕಚಿತ್ರಗಳನ್ನು ತಯಾರಿಸಿ ಅವು ದೇಶದಾದ್ಯಂತ ಪ್ರದರ್ಶಿತವಾದವು. ಲಕ್ಷ್ಮೀಬಾಯಿ, ಅಶ್ವತ್ಥಮ್ಮ, ದಕ್ಷಿಣದಲ್ಲಿ ಈಗ ಒಬ್ಬ ಹಿರಿಯ ನಿರ್ಮಾಪಕ–ನಿರ್ದೇಶಕರೆಂದು ಹೆಸರಾಗಿರುವ ಸುಂದರರಾವ್ ನಾಡಕರ್ಣಿ–ಹೀಗೆ ಅನೇಕರು ಬೆಳಕಿಗೆ ಬಂದುದು ಈ ಅವಧಿಯಲ್ಲೇ. ಇದೇ ಸಮಯದಲ್ಲಿ ದಿವಂಗತ ದೇವುಡು ನರಸಿಂಹಶಾಸ್ತ್ರಿ, ನಾಟಕರತ್ನ ಗುಬ್ಬಿ ವೀರಣ್ಣ ಮತ್ತು ಇತರ ಕೆಲವರು ಆಸಕ್ತರು ಒಂದು ಸ್ಟುಡಿಯೊ ಸ್ಥಾಪಿಸಿ 'ಹರಿಮಾಯಾ' ಮತ್ತು 'ಹಿಸ್ ಲವ್ ಅಫೇರ್' ಎಂಬ ಎರಡು ಮೂಕಚಿತ್ರಗಳನ್ನು ನಿರ್ಮಿಸಿದರು.

ಮೈಸೂರು ರಾಜ್ಯದಲ್ಲಿ ಹೀಗೆ ಚಿತ್ರೋದ್ಯಮ ಆರಂಭವಾದ ಹೊಸತರಲ್ಲೇ ವಿದ್ಯಾವಂತರು, ಹಿರಿಯ ಸಾಹಿತಿಗಳು ಈ ಹೊಸ ಮಾಧ್ಯಮದಲ್ಲಿ ಆಸಕ್ತಿ ತೋರಿದುದು ಗಮನಾರ್ಹ. ಆಮೇಲಿನ ವರ್ಷಗಳಲ್ಲಿ ಕನ್ನಡ ಚಿತ್ರೋದ್ಯಮ ಈ ಅಂಶಕ್ಕೆ ಸಾಕಷ್ಟು ಆಸಕ್ತಿ ತೋರದಿದ್ದ ಪರಿಣಾಮವಾಗಿ ನಮ್ಮ ಬಹುತೇಕ ಚಿತ್ರಗಳ ಗುಣಮೌಲ್ಯಗಳು ಒಳ್ಳೆಮಟ್ಟದಲ್ಲಿರದೆ ಹೋದವು. ಆದರೆ ಅನಂತರದ ವರ್ಷಗಳಲ್ಲಿ ಕನ್ನಡ ಚಿತ್ರರಂಗದಲ್ಲಿ ಹೆಚ್ಚಿನ ಪ್ರಭಾವ ಬೀರಿ ಉದ್ಯಮದ ಬೆಳವಣಿಗೆಯ ಮೈಲಿಗಲ್ಲುಗಳನ್ನು ಸ್ಥಾಪಿಸಿದ ಎಚ್. ಎಲ್. ಎನ್. ಸಿಂಹ, ಸುಬ್ಬಯ್ಯನಾಯ್ಡು, ಬಿ. ಜಯಮ್ಮ, ಗುಬ್ಬಿ ವೀರಣ್ಣ, ಸರ್ವೋತ್ತಮ ಬಾದಾಮಿ ಮೊದಲಾದವರು ಚಿತ್ರವೃತ್ತಿಯನ್ನು ಆರಂಭಿಸಲು ಅವಕಾಶವಾದುದು ಈ ಅವಧಿಯಲ್ಲೇ.

೧೯೩೪ರಲ್ಲಿ ಗುಬ್ಬಿ ವೀರಣ್ಣನವರು ತಮ್ಮ ಜನಪ್ರಿಯ ನಾಟಕವಾದ 'ಸದಾರಮೆ' ಕಥೆಯನ್ನು ತೆರೆಗೆ ತಂದರು. ೧೯೩೬ ಕನ್ನಡ ಚಿತ್ರೋದ್ಯಮಕ್ಕೆ ಒಂದು ಮಹತ್ವದ ವರ್ಷವಾಯಿತು. ಆ ವರ್ಷ ಸೇಲಂನ ಶ್ರೀ ರಾಜಗೋಪಾಲ ಚೆಟ್ಟಿ ಅವರು ಆಗ್ಗೆ ಜನಪ್ರಿಯವಾಗಿದ್ದ ನಾಟಕ 'ಸಂಸಾರನೌಕ'ವನ್ನು ಚಿತ್ರೀಕರಿಸಿದರು. ಇದು ದಕ್ಷಿಣದ ಮೊಟ್ಟಮೊದಲನೇ ಸಾಮಾಜಿಕ ಚಿತ್ರವೆನಿಸಿ ಅಧಿಕ ಜನಮನ್ನಣೆ ಗಳಿಸಿತು. ಕಳೆದ ಮೂರು ದಶಕಗಳಲ್ಲಿ ದಕ್ಷಿಣದ ಪ್ರಮುಖ ನಿರ್ಮಾತೃವೊಬ್ಬರೆನಿಸಿರುವ ಬಿ. ಆರ್. ಪಂತಲು, ನಟಿ ಎಂ. ವಿ. ರಾಜಮ್ಮ ಚಲನಚಿತ್ರರಂಗದಲ್ಲಿ ಬೆಳಕಿಗೆ ಬಂದುದು ಈ ಚಿತ್ರದಿಂದಲೇ. ೧೯೩೬ರಲ್ಲಿ ಕೈಗಾರಿಕೋದ್ಯಮಿ ತಿಮ್ಮಯ್ಯನವರು ಮೈಸೂರಿನಲ್ಲಿ ಒಂದು ಸ್ಟುಡಿಯೊ ಸ್ಥಾಪಿಸಿ 'ರಾಜಸೂಯಯಾಗ' ಚಿತ್ರವನ್ನು ನಿರ್ಮಿಸಿದರು ; ಇದು ಕನ್ನಡನಾಡಿನಲ್ಲಿ ತಯಾರಾದ ಪ್ರಥಮ ಕನ್ನಡ ಚಿತ್ರ.

ಈ ಶತಮಾನದ ಮೊದಲ ಅರ್ಧ ಮುಗಿಯುವವರೆಗೂ ಕನ್ನಡ ಚಿತ್ರರಂಗ ಹೇಳಿಕೊಳ್ಳುವಂತಹ ಸ್ಥಿತಿಯಲ್ಲಿರಲಿಲ್ಲ. ವರ್ಷಕ್ಕೆ ನಾಲ್ಕಾರು ಕನ್ನಡ ಚಿತ್ರಗಳು ತೆರೆ ಕಾಣುವುದೂ ದುಸ್ತರವಾಗಿತ್ತು. ೧೯೩೪ರಿಂದ ೧೯೫೪ರ ವರೆಗಿನ ಹತ್ತೊಂಬತ್ತು ವರ್ಷಗಳಲ್ಲಿ ತಯಾರಾದ ಕನ್ನಡ ಚಿತ್ರಗಳ ಸಂಖ್ಯೆ ಕೇವಲ ೩೧. ಆದರೆ ಕೆಲವೇ ಚಿತ್ರಗಳು ತಯಾರಾದರೂ ನಿರ್ಮಾಪಕರು ಆರಿಸಿಕೊಂಡಿರುವ ಕಥಾವಸ್ತುಗಳನ್ನು

ನೋಡಿದಾಗ ಅವರ ಸಾಮಾಜಿಕ ಸದುದ್ದೇಶಕ್ಕೆ ನಾವು ಅಭಿಮಾನಪಡಬೇಕು. ಇಂದು ನಾವು ಬಹುತೇಕ ಚಿತ್ರಗಳಲ್ಲಿ ಕಾಣುವ ಹುಚ್ಚಾಟ, ಅತಿರೇಕಗಳು ಆಗ್ಗೆ ಅಪರೂಪ ವಾಗಿದ್ದವು. 'ಪುರಂದರದಾಸ' (೧೯೩೭), 'ಪ್ರಹ್ಲಾದ', 'ಸುಭದ್ರ' ಮತ್ತು 'ವಸಂತಸೇನ' (೧೯೪೧), 'ಹರಿಶ್ಚಂದ್ರ' ಮತ್ತು 'ವಾಣಿ' (೧೯೪೩), ಹೇಮ ರೆಡ್ಡಿ ಮಲ್ಲಮ್ಮ' (೧೯೪೫), 'ಕಬೀರ್' (೧೯೪೭), 'ಮೀರಾ' (೧೯೪೮)—ಇವೇ ಮೊದಲಾದ ಪುರಾಣೇತಿಹಾಸ ಕಥೆಗಳನ್ನು ನಿರ್ಮಾಪಕರು ತೆರೆಗೆ ತರುತ್ತಿದ್ದರು. ೧೯೪೯ರಷ್ಟು ಹಿಂದೆ ತಯಾರಾದ ಒಂದು ಮನನೀಯ ಕನ್ನಡ ಸಾಮಾಜಿಕ ಚಿತ್ರ 'ಭಾರತಿ', 'ಕಲಾವಿದ', 'ವಾಣಿ' ಮೊದಲಾದ ಚಿತ್ರಗಳಲ್ಲಿ ನಾಡಿನ ರಂಗ ಭೂಮಿ ಮತ್ತು ಸಂಗೀತ ಕ್ಷೇತ್ರಗಳ ಘಟಾನುಘಟಿಗಳು ಪಾಲ್ಗೊಂಡಿದ್ದರು. 'ವಸಂತ ಸೇನಾ' ಪ್ರಚಂಡ ಜನಪ್ರಿಯತೆ ಗಳಿಸಿತು.

ಇದೇ ಅವಧಿಯಲ್ಲಿ ಮೈಸೂರಿನಲ್ಲಿ ನವಜ್ಯೋತಿ ಸ್ಟೂಡಿಯೊ ಹಲವು ವರ್ಷ ಬಹು ಚಟುವಟಿಕೆಯಿಂದ ತುಂಬಿದ್ದು, ಅನೇಕ ಚಿತ್ರಗಳು ಅಲ್ಲಿ ತಯಾರಾಗತೊಡಗಿ ದವು. ಕಳೆದ ಎರಡು ದಶಕಗಳಲ್ಲಿ ಕನ್ನಡ ಚಿತ್ರರಂಗದಲ್ಲಿ ವಿಶೇಷ ಚಟುವಟಿಕೆ ಯಿಂದ ಕೆಲಸಮಾಡಿದ ಹಲವರು ಪ್ರಮುಖ ನಿರ್ಮಾಪಕರಿಗೆ ಆರಂಭದ ಸೋಪಾನ ವಾಗಿತ್ತು ನವಜ್ಯೋತಿ. ೧೯೪೭ರಲ್ಲಿ ಅಲ್ಲಿ ತಯಾರಾದ 'ಕೃಷ್ಣಲೀಲಾ' ಚಿತ್ರದ ನಿರ್ಮಾತೃಗಳು ಡಿ. ಕೆಂಪರಾಜ ಅರಸ್, ಬಿ. ವಿಠಲಾಚಾರ್ಯ, ಡಿ. ಶಂಕರಸಿಂಗ್, ಜಿ. ಎನ್. ವಿಶ್ವನಾಥಶೆಟ್ಟಿ ಮತ್ತಿತರರು. ಕನ್ನಡ ಚಿತ್ರೋದ್ಯಮದ ಬೆಳವಣಿಗೆಯಲ್ಲಿ ಇವರೊಬ್ಬೊಬ್ಬರ ಪಾತ್ರವೂ ವಿಶಿಷ್ಟವಾದುದು, ಗಮನೀಯವಾದುದು. ಕನ್ನಡದಲ್ಲಿ ಚಿತ್ರಗಳ ಸಂಖ್ಯೆ ಬಹಳ ಕಡಿಮೆಯಿದ್ದ ಒಂದು ಕಾಲದಲ್ಲಿ ಮೈಸೂರಿನಲ್ಲಿ ಎಡೆಬಿಡದೆ ಹತ್ತಾರು ಚಿತ್ರಗಳನ್ನು ನಿರ್ಮಿಸಿ ಕನ್ನಡ ಚಿತ್ರರಂಗವನ್ನು ಉಳಿಸಿದ ಕೀರ್ತಿ ಡಿ. ಶಂಕರಸಿಂಗರಿಗೆ ಸಲ್ಲಬೇಕು.

೧೯೪೯ರ ವೇಳೆಗೆ ಕನ್ನಡ ಚಿತ್ರರಂಗಕ್ಕೆ ಸ್ವಲ್ಪ ಹೆಚ್ಚಿನ ಚೈತನ್ಯ ಬಂದಿತು. ಈ ವರ್ಷ ತಯಾರಾದ ಆರು ಚಿತ್ರಗಳಲ್ಲಿ 'ನಾಗಕನ್ನಿಕಾ' ಜಾನಪದ ಚಿತ್ರ ಹೆಚ್ಚಿನ ವ್ಯಾಪಾರೀ ಯಶಸ್ಸುಗಳಿಸಿತು. ಎರಡು ವರ್ಷಗಳನಂತರ ಮೈಸೂರಿನಲ್ಲೇ ತಯಾರಾದ ಚಿತ್ರ 'ಜಗನ್ಮೋಹಿನಿ' ದಾವಣಗೆರೆಯಲ್ಲಿ ೨೭ ವಾರಗಳ ಕಾಲ ನಿರಂತರವಾಗಿ ಪ್ರದರ್ಶಿತವಾಗಿ ಹೊಸದಾಖಲೆ ಸ್ಥಾಪಿಸಿತು. ಕನ್ನಡ ಚಿತ್ರಗಳಿಗೆ ನಾಡಿನಲ್ಲಿ ಬೆಳೆಯುತ್ತಿದ್ದ ಮಾರುಕಟ್ಟೆಯ ವ್ಯಾಪ್ತಿ ಈ ಅವಧಿಯಲ್ಲಿ ಅನುಭವಕ್ಕೆ ಬರತೊಡಗಿತು.

೨

ಮೊದಲಿಗೆ ಇಪ್ಪತ್ತು ವರ್ಷಕಾಲ ತೀರಾ ಕುಂಟುತ್ತ ಸಾಗಿದ್ದ ಕನ್ನಡ ಚಿತ್ರ ರಂಗಕ್ಕೆ ನಿಜವಾದ ಹೊಸಚೇತನ ಬಂದುದು ೧೯೫೦ರ ದಶಕದಲ್ಲಿ. ಅದುವರೆಗೆ ಪ್ರತಿ ವರ್ಷ ತಯಾರಾಗುತ್ತಿದ್ದ ಚಿತ್ರಗಳು ಕೇವಲ ನಾಲ್ಕಾರು. ಅವೂ ಮೈಸೂರಿನಲ್ಲಿ

ಆಗ್ಗೆ ಇದ್ದ ನಿರ್ಬಂಧಿತ ಅವಕಾಶಗಳಲ್ಲಿ ತಯಾರಾದ ಈ ಚಿತ್ರಗಳಲ್ಲಿ ಕೆಲವು ಗಮನಾರ್ಹ ವ್ಯಾಪಾರೀ ಯಶಸ್ಸು ಕಂಡರೂ ಬಹುಪಾಲು ಚಿತ್ರಗಳು ತಾಂತ್ರಿಕ ದೃಷ್ಟಿಯಿಂದ ಕೀಳುಮಟ್ಟದ್ದಾಗಿದ್ದವು. ಛಾಯಾಗ್ರಹಣ ಮೊದಲಾದ ಪಾರಿಭಾಷಿಕ ವಿಭಾಗಗಳಲ್ಲಿ ಹೆಚ್ಚಿನ ಪರಿಶ್ರಮ ಕಾಣಬರುತ್ತಿರಲಿಲ್ಲ. ಈ ಬಾಬತಿನಲ್ಲಿ ನಮ್ಮ ಚಿತ್ರೋದ್ಯಮ ಇತರ ದಾಕ್ಷಿಣಾತ್ಯ ಭಾಷಾ ಉದ್ಯಮಗಳಿಗಿಂತ ಬಹಳ ಹಿಂದಿತ್ತೆಂದೇ ಹೇಳಬಹುದು. ಇಂತಹ ಪರಿಸ್ಥಿತಿಯಲ್ಲಿ ಮದರಾಸಿನಲ್ಲಿ, ಮುಂಬಯಿಯಲ್ಲಿ ತಯಾರಾದ ಶ್ರೀಮಂತ ಚಿತ್ರಗಳಿಗೆ ರಾಜ್ಯದಲ್ಲಿ ಒಳ್ಳೇ ಮಾರುಕಟ್ಟೆಯಿದ್ದುದು ಅಚ್ಚರಿಯಲ್ಲ. ಈ ಪರಿಸ್ಥಿತಿ ಅಳಿದು ಕನ್ನಡ ಚಿತ್ರಗಳು ತಮ್ಮ ನ್ಯಾಯವಾದ ಸ್ಥಾನವನ್ನು ಗಳಿಸಿಕೊಳ್ಳಲು ಹಲವು ವರ್ಷಗಳೇ ಹಿಡಿದವು.

೧೯೫೦ರಿಂದೀಚೆಗೆ ಕನ್ನಡ ಚಿತ್ರೋದ್ಯಮದ ಒಂದು ಹೊಸ ಶಕೆ ಆರಂಭವಾಯಿತೆನ್ನಬಹುದು. ಚಿತ್ರಗಳ ಸಂಖ್ಯೆ ಹೆಚ್ಚತೊಡಗಿತು. ಹೊಸಹೊಸ ಪ್ರಯೋಗಗಳು ನಡೆಯತೊಡಗಿದವು. ಸಾಮಾಜಿಕ ಜೀವನವನ್ನು ಕುರಿತಾದ ಕಥಾಚಿತ್ರಗಳತ್ತ ನಿರ್ಮಾಪಕರ ಆಸಕ್ತಿ ಬೆಳೆಯಿತು. ಕನ್ನಡ ಚಿತ್ರರಂಗದ ಹಿರಿಯರೆಂದು ಈಗ ಪ್ರಸಿದ್ಧರಾಗಿರುವ ಆರ್. ನಾಗೇಂದ್ರರಾವ್, ಬಿ. ಆರ್. ಪಂತಲು, ಶಂಕರಸಿಂಗ್, ಬಿ. ವಿ. ಆಚಾರ್ಯ, ಕೆಂಪರಾಜ ಅರಸ್, ಬಿ. ಎಸ್. ರಂಗಾ ಮೊದಲಾದವರು ಸ್ವಂತ ಲಾಂಛನಗಳಲ್ಲಿ ಚಿತ್ರಗಳನ್ನು ನಿರ್ಮಿಸತೊಡಗಿದರು.

ಈ ಅವಧಿಯಲ್ಲಿ ಮೈಸೂರಿನಲ್ಲಿ ನವಜ್ಯೋತಿ ಸ್ಟೂಡಿಯೊ ಮುಚ್ಚಿ ಪ್ರೀಮಿಯರ್ ಸ್ಟೂಡಿಯೊ ಜನ್ಮತಾಳಿತು. ಇಷ್ಟುವೇಳೆಗೆ ಮದರಾಸು ದಕ್ಷಿಣದ ಚಿತ್ರರಂಗದ ಮುಖ್ಯ ಪಟ್ಟಣವೆನಿಸಿತ್ತು. ಹೈದರಾಬಾದ್, ಮೈಸೂರು, ತಿರುವನಂತಪುರ, ಸೇಲಂಗಳಲ್ಲಿ ಕೆಲವು ಸ್ಟುಡಿಯೋಗಳಿದ್ದರೂ ದೊಡ್ಡ ಪ್ರಮಾಣದಲ್ಲಿ ಸ್ಟುಡಿಯೊಗಳು ಸ್ಥಾಪಿತವಾಗಿ ಬೆಳೆದದ್ದು ಮದರಾಸಿನಲ್ಲಿ. ಚಿತ್ರನಿರ್ಮಾಣಕ್ಕೆ ಬೇಕಾದ ಸಕಲ ವ್ಯವಸ್ಥೆಗಳು, ಸಹಾಯಕ ಉದ್ಯಮಗಳು ಅಲ್ಲಿ ಚೆನ್ನಾಗಿ ನೆಲೆಗೊಂಡಿದ್ದವು. ಆದರಿಂದ ದಕ್ಷಿಣದ ಎಲ್ಲ ಭಾಷೆಗಳ ಬಹುತೇಕ ಚಿತ್ರಗಳು ಮದರಾಸಿನಲ್ಲೇ ತಯಾರಾಗುತ್ತಿದ್ದವು. ಈಗಲೂ ಬಹುಮಟ್ಟಿಗೆ ಅದೇ ಪರಿಸ್ಥಿತಿಯಿದೆ.

೧೯೫೪ ಒಂದು ಪ್ರಮುಖ ವರ್ಷವಾಗಿತ್ತು. ಆ ವರ್ಷ ಶ್ರೇಷ್ಠ ಚಿತ್ರಗಳಿಗೆ ರಾಷ್ಟ್ರಪ್ರಶಸ್ತಿಗಳನ್ನಿತ್ತು ಪ್ರೋತ್ಸಾಹಿಸುವ ಸತ್ಸಂಪ್ರದಾಯವನ್ನು ಭಾರತ ಸರಕಾರ ಆರಂಭಿಸಿತು. ಈ ಪ್ರಶಸ್ತಿಗಳು ಚಲನಚಿತ್ರಗಳ ಗುಣಮೌಲ್ಯ ಸುಧಾರಣೆಗೆ ತುಂಬಾ ನೆರವಾಗಿವೆ. ಪ್ರಶಸ್ತಿಗಳು ಸ್ಥಾಪಿತವಾದ ಮೊದಲ ವರ್ಷವೇ ಕನ್ನಡ ಚಿತ್ರರಂಗವೂ ಒಂದು ಪ್ರಶಸ್ತಿಯನ್ನು ಗಳಿಸಿತು. ಗುಬ್ಬಿ ಕರ್ಣಾಟಕ ಪ್ರೊಡಕ್ಷನ್ಸ್‌ನವರ 'ಬೇಡರ ಕಣ್ಣಪ್ಪ' ಈ ಪ್ರಶಸ್ತಿಗಳಿಸಿದ ಚಿತ್ರ. ಇದೇತಾನೇ ೧೦೦ ಚಿತ್ರಗಳಲ್ಲಿ ಅಭಿನಯಿಸಿ ನಾಡಿನಾದ್ಯಂತ ಸನ್ಮಾನಿಸಲ್ಪಟ್ಟ ನಟ ರಾಜಕುಮಾರ್ ಅಭಿನಯಿಸಿದ ಮೊದಲ ಚಿತ್ರವಿದು. ೧೯೫೪ರಲ್ಲೇ ತಯಾರಾದ ಇನ್ನೊಂದು ಕನ್ನಡಚಿತ್ರ ಅದರ

ಸಾಮಾಜಿಕ ಕಥಾವಮೌಲ್ಯದಿಂದ ನಮ್ಮ ಗಮನಸೆಳೆಯಿತು. ಅದು ವಿಠಲ್ ಪ್ರೊಡಕ್ಷನ್ಸ್‌ರವರ 'ಕನ್ಯಾದಾನ'; ವರದಕ್ಷಿಣೆಯ ಸಾಮಾಜಿಕ ಅನಿಷ್ಟವನ್ನು ಕುರಿತಾದ ಕಥೆಯಿದ್ದ ಈ ಚಿತ್ರ ಸಾಕಷ್ಟು ಜನಮನ್ನಣೆಗಳಿಸಿತು. ಇಂದು ಕನ್ನಡದ ಇನ್ನೊಬ್ಬ ಪ್ರಮುಖ ನಟರಾಗಿರುವ ಕಲ್ಯಾಣಕುಮಾರರ ಪ್ರಥಮ ಚಿತ್ರ 'ನಟಶೇಖರ' ಪ್ರದರ್ಶನಕ್ಕೆ ಬಂದುದೂ ಈ ವರ್ಷವೇ.

ಬಹುಮಟ್ಟಿಗೆ ಪೌರಾಣಿಕ ಮತ್ತು ಜನಪದ ಕಥೆಗಳನ್ನೇ ಆರಿಸಿಕೊಳ್ಳುತ್ತಿದ್ದ ನಮ್ಮ ನಿರ್ಮಾಪಕರು ಇದೇ ಅವಧಿಯಲ್ಲಿ ಸಾಮಾಜಿಕ ಕಥಾವಸ್ತುಗಳ ಕಡೆಗೆ ಹೆಚ್ಚು ಗಮನಹರಿಸತೊಡಗಿದರು. ೧೯೫೩ರಲ್ಲಿ ಆರ್. ನಾಗೇಂದ್ರರಾಯರು ನಿರ್ಮಿಸಿದ 'ಜಾತಕ ಫಲ' ಹಾರ್ದಿಕ ಮನರಂಜನೆ ನೀಡಿದ ಹಾಸ್ಯಪ್ರಧಾನ ಚಿತ್ರವಾಗಿ ಮೆಚ್ಚುಗೆ ಗಳಿಸಿತು. ಬಿ. ಆರ್. ಪಂತುಲುರವರ 'ಮೊದಲ ತೇದಿ' ಒಂದು ಹೃದಯಂಗಮ ಚಿತ್ರವಾಗಿತ್ತು.

ಹೀಗೆ ಸಂಖ್ಯೆ ಮತ್ತು ವಸ್ತುವೈವಿಧ್ಯ—ಈ ಎರಡು ದೃಷ್ಟಿಗಳಿಂದಲೂ ಕನ್ನಡ ಚಿತ್ರೋದ್ಯಮ ಹೆಚ್ಚಿನ ಗಮನಸೆಳೆದ ಒಂದು ಉದ್ಯಮವಾಗಿ ಬೆಳೆಯತೊಡಗಿದುದು ೧೯೫೪ರಿಂದೀಚೆಗೆ. ಆಗಿನಿಂದ ಕನ್ನಡ ಚಿತ್ರಗಳು ವರ್ಷಕ್ಕೆ ೧೦–೧೫ ಚಿತ್ರಗಳಿಗೆ ಕಡಿಮೆಯಿಲ್ಲದಂತೆ ಪ್ರದರ್ಶನಕ್ಕೆ ಬರುತ್ತಿದ್ದವು. ಕನ್ನಡ ಚಿತ್ರಗಳಿಗೆ ಮಾರುಕಟ್ಟೆ ಬೆಳೆಯತೊಡಗಿತು. ಶ್ರೀಮಂತ ನಿರ್ಮಾಣ ಮೌಲ್ಯಗಳಿಂದ ಕೂಡಿದ, ಇತರ ಭಾಷೆಗಳ ಚಿತ್ರಗಳೊಡನೆ ಸರಿಸಮನಾಗಿ ನಿಲ್ಲಬಲ್ಲಂತಹ ಚಿತ್ರಗಳ ನಿರ್ಮಾಣದಲ್ಲಿ ತಾವೂ ಹಿಂದಿಲ್ಲವೆಂಬುದನ್ನು ಕನ್ನಡ ನಿರ್ಮಾಪಕರು ತೋರ್ಪಡಿಸತೊಡಗಿದರು.

೧೯೫೪–೬೦ರ ಅವಧಿಯಲ್ಲಿ ಕನ್ನಡ ಉದ್ಯಮವು ದೃಢವಾಗಿ ನೆಲೆಗೊಳ್ಳಲು ಶ್ರಮಿಸಿತು. ಕೆಲವು ಅತ್ಯಂತ ಮನೋಜ್ಞ ಚಿತ್ರಗಳು ಈ ಅವಧಿಯಲ್ಲಿ ಪ್ರದರ್ಶನಕ್ಕೆ ಬಂದು ಉದ್ಯಮದ ಬಗ್ಗೆ ಭರವಸೆಯನ್ನು ಹುಟ್ಟಿಸಿದವು. 'ಆದರ್ಶಸತಿ', 'ಮಾಯಾಬಜಾರ್', 'ರತ್ನಗಿರಿ ರಹಸ್ಯ', 'ಭೂಕೈಲಾಸ', 'ದಶಾವತಾರ' ಮೊದಲಾದ ವೈಭವೋಪೇತ ಚಿತ್ರಗಳು ತೆರೆಕಂಡು ಜನರ ಕಣ್ಮನಗಳನ್ನು ತಣಿಸಿದವು. 'ಮಹಾಕವಿ ಕಾಳಿದಾಸ', 'ಮಾರ್ಕಂಡೇಯ', 'ನಳದಮಯಂತಿ', 'ಬಸವೇಶ್ವರ', 'ಕನಕದಾಸ', 'ರಣಧೀರ ಕಂಠೀರವ'—ಇಂತಹ ಹೃದಯಂಗಮ ಜೀವನಕಥಾ ಚಿತ್ರಗಳು ಬಂದದ್ದು ಈ ಅವಧಿಯಲ್ಲೇ. 'ಪ್ರೇಮದ ಪುತ್ರಿ', 'ಸ್ಕೂಲ್‌ಮಾಸ್ಟರ್' ಗಳಂತಹ ಮನೋಜ್ಞ ಸಾಮಾಜಿಕ ಚಿತ್ರಗಳು ಕನ್ನಡ ಚಿತ್ರರಂಗವು ಉತ್ತಮ ರೀತಿಯಲ್ಲಿ ಮುನ್ನಡೆಯುವುದೆಂಬ ಭರವಸೆ ನೀಡಿದವು.

ಚಿತ್ರದ ನಿರ್ಮಾಣಮೌಲ್ಯಗಳಿಗೆ ನಿರ್ಮಾಪಕರು ಹೆಚ್ಚು ಗಮನಕೊಡಲಾರಂಭಿಸಿದರು. ಛಾಯಾಗ್ರಹಣ, ರಂಗಸಜ್ಜಿಕೆ, ಉಡುಗೆತೊಡುಗೆ ಮೊದಲಾದವಕ್ಕೆ ಹೆಚ್ಚಿನ ಆಸಕ್ತಿ ದೊರೆತು ಚಿತ್ರಗಳಿಗೆ ಅಧಿಕ ಸಮರ್ಪಕತೆ ಸಿಗಲಾರಂಭಿಸಿತು. ತಾಂತ್ರಿಕ ಮೌಲ್ಯಗಳಲ್ಲೂ ಕನ್ನಡ ಚಿತ್ರಗಳು ಇತರರೊಡನೆ ಸ್ಪರ್ಧಿಸಬಲ್ಲವಾದವು ಈ

ಅವಧಿಯಲ್ಲಿ. ಕನ್ನಡದಲ್ಲಿ ವಿಶೇಷ ಯಶಸ್ಸುಗಳಿಸಿದ ಚಿತ್ರಕಥೆಗಳನ್ನು ನಿರ್ಮಾಪಕರು ಇತರ ಭಾಷೆಗಳಲ್ಲೂ ನಿರ್ಮಿಸತೊಡಗಿದರು.

೩

ಕಳೆದ ಹತ್ತು ವರ್ಷಗಳಲ್ಲಿ ಕನ್ನಡ ಚಿತ್ರೋದ್ಯಮವು ನೈಜ ಬೆಳವಣಿಗೆಯ ಸಮಸ್ಯೆಗಳನ್ನು ಎದುರಿಸಬೇಕಾಗಿ ಬಂದಿತು. ಹಲವು ಉತ್ತಮ ಚಿತ್ರಗಳು ಬಂದು ಕನ್ನಡ ಉದ್ಯಮವು ಪಂಡಿತಪಾಮರರೆಲ್ಲರ ಆಸಕ್ತಿಗೆ ಪಾತ್ರರಾಗುವಂತಾದರೂ ಕನ್ನಡದ ಮಾರುಕಟ್ಟೆಗೆ ಇನ್ನೂ ನಿಜವಾದ 'ಕನ್ನಡತನ' ಬಂದಿರಲಿಲ್ಲ.

೧೯೬೫ರಿಂದೀಚೆಗೆ ಕೆಲವು ಪ್ರಮುಖ ಬೆಳವಣಿಗೆಗಳು ಕನ್ನಡ ಉದ್ಯಮದ ಬಗ್ಗೆ ಎಲ್ಲರ ಹೆಚ್ಚಿನ ಗಮನಹರಿಯಲು ಕಾರಣವಾದವು. ಇಷ್ಟು ವರ್ಷಗಳು ಸಾಗಿದ್ದರೂ ಕನ್ನಡ ಚಿತ್ರಗಳಿಗೆ ಇನ್ನೂ ಬಂಡವಾಳದ ಕೊರತೆ ಇದ್ದೇ ಇತ್ತು. ಅಧಿಕ ಹಣವನ್ನು ತಯಾರಿಕೆಗೆ ತೊಡಗಿಸಿ ಹೆಚ್ಚಿನ ಆರ್ಥಿಕ ಶ್ರಮವಿಲ್ಲದೆ ಚಿತ್ರಗಳನ್ನು ನಿರ್ಮಿಸಲು ಶಕ್ತಿಯಿದ್ದಂತಹ ನಿರ್ಮಾಪಕರ ಸಂಖ್ಯೆ ಅತ್ಯಲ್ಪವಾಗಿತ್ತು. ಕನ್ನಡದಲ್ಲಿ ಈ ಸನ್ನಿವೇಶದಲ್ಲಿ 'ಕಂಠದಾನ' ಚಿತ್ರಗಳು ಬಂದು ಕನ್ನಡಕ್ಕೆ ಧಕ್ಕೆ ಬರುವಂತಹ ಸಂದರ್ಭ ಒದಗಿತು. ಇತರ ಭಾಷೆಗಳಲ್ಲಿ ಯಶಸ್ವಿಯಾದ ಚಿತ್ರಗಳಿಗೆ ಕನ್ನಡದ ಮಾತುಗಳನ್ನು ಅಂಟಿಸಿ ಬಿಡುಗಡೆ ಮಾಡುವ ಪರಿಪಾಠ ಬಂದಿತು. ಇತರ ಭಾಷೆಗಳಲ್ಲಿ ದೊಡ್ಡ ಯಶಸ್ಸುಗಳಿಸಿದ ನಿರ್ಮಾಪಕರು ಸುಲಭದ ಪ್ರಯತ್ನದಿಂದ ಈ 'ಕನ್ನಡ' ಚಿತ್ರಗಳನ್ನು ಬಿಡುಗಡೆ ಮಾಡಲಾರಂಭಿಸಿದರು. ಇದಕ್ಕೆ ಕನ್ನಡನಾಡಿನಲ್ಲಿ ಪ್ರತಿಭಟನೆ ವ್ಯಕ್ತಪಟ್ಟು ಈ 'ಕಂಠದಾನ' ಚಿತ್ರಗಳ ಸೃಷ್ಟಿ ಕಡಿಮೆಯಾಯಿತು.

ಕಳೆದ ಏಳೆಂಟು ವರ್ಷಗಳಲ್ಲಿ ಕನ್ನಡ ಚಿತ್ರಗಳ ವ್ಯಾಪ್ತಿ–ಪ್ರಮಾಣ ವಿಶೇಷವಾಗಿ ಬೆಳೆದವು. ಮೊದಲು ನೆಲಸಿದ್ದ ಅವ್ಯವಸ್ಥೆ–ಏರುಪೇರಿನ ಪರಿಸ್ಥಿತಿಗಳಿಂದ, ಅಂಧಸಂಪ್ರದಾಯಗಳಿಂದ ಸಾಕಷ್ಟು ತೊಂದರೆ ಅನುಭವಿಸಿ ಸೊರಗಿದ್ದ ಉದ್ಯಮವು ಹಿತಕರ ರೀತಿಯಲ್ಲಿ ಬೆಳೆಯಲು ಅನೇಕ ಪ್ರಯತ್ನಗಳು ಈ ಅವಧಿಯಲ್ಲಿ ಆರಂಭವಾದವು. ಇದುವರೆಗೆ ನಿರ್ಮಾಪಕರ ಅಲಕ್ಷ್ಯಕ್ಕೆ ಗುರಿಯಾಗಿದ್ದ ಸಮಕಾಲೀನ ಸಾಹಿತ್ಯದಿಂದ ಉತ್ತಮ, ಜನಪ್ರಿಯ ಕೃತಿಗಳನ್ನು ತೆರೆಗೆ ತರುವ ಸ್ವಾಗತಾರ್ಹ ಪ್ರವೃತ್ತಿ ಬೆಳೆದು ಚಿತ್ರಗಳಿಗೆ ಒಂದು ವಿಶಿಷ್ಟ, ಸ್ಥಳೀಯ ಸೊಬಗು, ಸತ್ವಗಳು ಬರತೊಡಗಿದವು. ಎ. ಸಿ. ನರಸಿಂಹಮೂರ್ತಿ ಮತ್ತು ಮಿತ್ರರು ನಿರ್ಮಿಸಿದ 'ಕರುಣೆಯೇ ಕುಟುಂಬದ ಕಣ್ಣು' ಈ ಸತ್ಸಂಪ್ರದಾಯದ ಆದ್ಯಪ್ರವರ್ತಕನೆನಿಸಿ ಪ್ರೇಕ್ಷಕರ, ಪತ್ರಿಕೆಗಳ ಮುಕ್ತಕಂಠದ ಪ್ರಶಂಸೆ ಗಳಿಸಿತು. 'ಕುಲವಧು', 'ಚಂದವಳ್ಳಿಯ ತೋಟ', 'ಬೆಳ್ಳಿಮೋಡ', 'ಚಕ್ರತೀರ್ಥ' ಇವೆಲ್ಲ ಕನ್ನಡ ಕಾದಂಬರಿಗಳನ್ನಾಧರಿಸಿ ನಿರ್ಮಿತವಾದ ಮನನೀಯ ಚಿತ್ರಗಳಾಗಿ ಕನ್ನಡ ಚಿತ್ರೋದ್ಯಮದ ಘನತೆಯನ್ನು ಹೆಚ್ಚಿಸಿವೆ. ತ.ರಾ.ಸು., ಕೃಷ್ಣಮೂರ್ತಿ ಪುರಾಣಿಕರಂತಹ ಪ್ರಮುಖ ಸಾಹಿತಿಗಳು ಚಿತ್ರರಂಗದ ನಿಕಟಸಂಪರ್ಕ

ಬೆಳಸಿಕೊಂಡಿದ್ದಾರೆ. ಕುವೆಂಪು, ಕೆ. ಎಸ್. ನರಸಿಂಹಸ್ವಾಮಿ, ಪು.ತಿ.ನ., ಬೇಂದ್ರೆ, ಆಡಿಗರಂತಹ ಪ್ರಸಿದ್ಧ ಕವಿಗಳ ಕೃತಿಗಳನ್ನು ಚಿತ್ರಗೀತೆಗಳಿಗೆ ಅಳವಡಿಸಿಕೊಳ್ಳಲು ಆರಂಭಿಸಿದ ಮೇಲೆ ಸಾಮಾನ್ಯವಾಗಿ ನಮ್ಮ ಚಿತ್ರಗಳಲ್ಲಿನ ಗೀತೆಗಳಲ್ಲಿ ನಾವು ಕಾಣುತ್ತಿದ್ದ ಸಾಹಿತ್ಯದ ಕೊರತೆ ಮತ್ತು ಶೈಥಿಲ್ಯ ನಿವಾರಣೆಯಾಗುತ್ತಿದೆ.

ವಸ್ತುವಿನ ನಿರೂಪಣೆಯಲ್ಲೂ ಕಳೆದ ಒಂದು-ಒಂದೂವರೆ ವರ್ಷಗಳಲ್ಲಿ ಗಮನಾರ್ಹ ಸುಧಾರಣೆಯನ್ನು ಕಾಣುತ್ತೇವೆ. 'ಸ್ಕೂಲ್‌ಮಾಸ್ಟರ್', 'ತಾಯಿ ಕರುಳು', 'ನಂದಾದೀಪ', 'ಜೇನುಗೂಡು', 'ಮನಮೆಚ್ಚಿದ ಮಡದಿ', 'ನಾಂದಿ', 'ಸರ್ವಜ್ಞ ಮೂರ್ತಿ', 'ಸುಬ್ಬಾಶಾಸ್ತ್ರಿ', 'ಬಂಗಾರದ ಹೂವು'—ಮುಂತಾದ ಅನೇಕ ಚಿತ್ರಗಳಲ್ಲಿ ಸುಸಂಸ್ಕೃತ ಅಭಿರುಚಿ, ಉತ್ತಮ ಚಿತ್ರಸಾಹಿತ್ಯ, ಶ್ರದ್ಧಾವಂತ ತಯಾರಿಕಾ ಪ್ರಯತ್ನಗಳನ್ನು ಕಾಣುತ್ತೇವೆ. ಇಂದಿನ ಮಾನದಂಡದಿಂದ ಅಳೆದು ನೋಡಿದಾಗ ಈಗಲೂ ನಮ್ಮಲ್ಲಿ ಬರುತ್ತಿರುವ ಬಹುತೇಕ ಚಿತ್ರಗಳು ಕೀಳುದರ್ಜೆಯ ವೆನಿಸಿದರೂ ಇಲ್ಲಿ ಹೆಸರಿರುಸಿವಂತಹ ಉತ್ತಮ ಚಿತ್ರಗಳೂ ಗಣನೀಯ ಸಂಖ್ಯೆಯಲ್ಲಿ ಬರುತ್ತಿರುವುದು ಉದ್ಯಮದ ಬಗ್ಗೆ ಆಶಾಭಾವನೆಯನ್ನು ದೃಢಪಡಿಸುತ್ತದೆ. ಹೋಲಿಸಿ ನೋಡಿದಾಗ, ಸಂಖ್ಯಾಪ್ರಮಾಣಕ್ಕನುಗುಣವಾಗಿ ನೋಡಿದಲ್ಲಿ ಅಭಿರುಚಿ ಮತ್ತು ಶೀಲಗಳಲ್ಲಿ ಕನ್ನಡ ಚಿತ್ರೋದ್ಯಮ ಇತರರಿಗಿಂತ ಉತ್ತಮ ಮಟ್ಟದಲ್ಲಿದೆಯಂದೇ ಹೇಳಬಹುದು. ಇತರ ಎಷ್ಟೋ ಚಿತ್ರಗಳಲ್ಲಿ ನಾವು ಹೇರಳವಾಗಿ ಕಾಣುವಂತಹ ಆಭಾಸ, ಅತಿರೇಕ, ಅಸಭ್ಯತೆಗಳು ನಮ್ಮ ಚಿತ್ರಗಳಲ್ಲಿ ಎಷ್ಟೋ ಪಾಲು ಕಡಿಮೆ.

೪

ಕನ್ನಡ ಚಿತ್ರೋದ್ಯಮದ ಬಗ್ಗೆ ವ್ಯಾಪಕವಾದ ಆಸಕ್ತಿ, ಗಮನ ಹರಿಯಲು ಪ್ರೇರಕವಾದ ಎರಡು ಬೆಳವಣಿಗೆಗಳನ್ನು ಇಲ್ಲಿ ಮುಖ್ಯವಾಗಿ ಪ್ರಸ್ತಾಪಿಸಬೇಕು. ಅವುಗಳಿಂದ ಕನ್ನಡ ಉದ್ಯಮಕ್ಕೆ ಮಹತ್ವಪೂರಿತ ಪ್ರೋತ್ಸಾಹದೊರೆತು ಉದ್ಯಮದತ್ತ ಆಡಳಿತಗಾರರ ದೃಷ್ಟಿಯೂ ಹೊರಳುವಂತಾಯಿತು.

೧೯೬೧ರಲ್ಲಿ ರಾಜ್ಯದ ಅನೇಕ ಕಡೆ ಘೋರವಾದ ಪ್ರವಾಹಗಳು ಸಂಭವಿಸಿ ಲಕ್ಷಾಂತರಜನ ಸಂಕಟಕ್ಕೆ ಗುರಿಯಾದರು. ಆಗ್ಗೆ ಕನ್ನಡದ ಅನೇಕ ನಟನಟಿಯರು, ನಿರ್ಮಾಪಕರು, ಸಂಗೀತ ನಿರ್ದೇಶಕರು, ಹಿನ್ನೆಲೆಗಾಯಕ-ಗಾಯಕಿಯರು ರಾಜ್ಯದಲ್ಲಿ ಸಂಚಾರ ಕೈಗೊಂಡು ಹಣಸಂಗ್ರಹಿಸಿ ಪ್ರವಾಹ ಪರಿಹಾರ ನಿಧಿಗೆ ನೀಡಿದರು. ಅವಿಶ್ರಾಂತ ಪ್ರವಾಸ ಕೈಗೊಂಡು ನೂರಾರು ಮೈಲಿ ಸಂಚರಿಸಿ ಈ ನಿಧಿ ಸಂಗ್ರಹಿಸಿದಾಗ ಕಲಾವಿದರಿಗೆ ಜನತೆ ನೀಡಿದ ಅದ್ಭುತ ಸ್ವಾಗತ ಮತ್ತು ನಿಧಿಗೆ ನೀಡಿದ ಉದಾರ ಕಾಣಿಕೆ ಸ್ಮರಣೀಯವಾದುದು. ಜನರಿಗೆ ತಮ್ಮಲ್ಲಿ ಎಷ್ಟೊಂದು ಅಭಿಮಾನವಿದೆ ಯೆಂಬುದು ಆಗ್ಗೆ ಕಲಾವಿದರಿಗೆ ಖುದ್ದಾಗಿ ಅನುಭವಕ್ಕೆ ಬಂದಿತು.

೧೯೬೧-೬೨ರಲ್ಲಿ ಆರಂಭವಾದ ಕನ್ನಡ ಚಳವಳಿಯಿಂದ ಚಿತ್ರೋದ್ಯಮಕ್ಕೆ

ಅತ್ಯಂತ ಪ್ರಯೋಜನವಾಯಿತು. ಜೀವನದ ವಿವಿಧ ರಂಗಗಳಲ್ಲಿ ಕನ್ನಡಿಗರಿಗೆ ಇರುವ ಕುಂದುಕೊರತೆಗಳು, ಆಗುತ್ತಿರುವ ಅನ್ಯಾಯಗಳು ಮತ್ತು ದೊರೆಯಬೇಕಾದ ಸ್ಥಾನ ಮಾನಗಳತ್ತ ಆಡಳಿತಗಾರರ ಮತ್ತು ನಾಡಿನ ಗಮನಸೆಳೆಯಲು ಉದ್ದೇಶಿಸಿ ನಡೆದ ಚಳವಳಿ ಇದು. ಕನ್ನಡ ಚಿತ್ರಗಳ ಬಗ್ಗೆ ಜನರಲ್ಲಿ ಅಭಿಮಾನವನ್ನು ಬೆಳೆಸಲು ಚಳವಳಿ ಒಂದು ಪ್ರಚಂಡ ಸಾಧನವಾಯಿತು. ಬೆಂಗಳೂರಿನಲ್ಲಿಯೇ ಕನ್ನಡ ಚಿತ್ರಗಳ ಪ್ರದರ್ಶನಕ್ಕೆ ಚಿತ್ರಮಂದಿರಗಳು ದೊರೆಯದಿದ್ದಂತಹ ಪರಿಸ್ಥಿತಿಯಿತ್ತು. ಈ ಚಳವಳಿಯ ಪರಿಣಾಮವಾಗಿ ಈ ಪರಿಸ್ಥಿತಿ ತಪ್ಪಿತು. ಕಳೆದ ಕೆಲವು ವರ್ಷಗಳಲ್ಲಿ ಚಿತ್ರಮಂದಿರಗಳಿಗೆ ಹೋಗುವ ಪ್ರೇಕ್ಷಕರ ಸಂಖ್ಯೆ ಬೆಳೆದಿದೆ; ಚಿತ್ರಗಳ ಗಳಿಕೆಯೂ ಹೆಚ್ಚಿದೆ. ಹೀಗಿದ್ದು, ಕನ್ನಡಚಿತ್ರಗಳ ಪ್ರದರ್ಶನವೂ ಇತರ ಭಾಷಾಚಿತ್ರಗಳ ಪ್ರದರ್ಶನದಷ್ಟೇ ಆಕರ್ಷಕ ವ್ಯಾಪಾರವಾಗಬಲ್ಲದೆಂದು ಪ್ರದರ್ಶನಕಾರರು ಮನಗಂಡಿದ್ದರಿಂದ ಈಗ ಕನ್ನಡ ಚಿತ್ರಗಳಿಗೆ ಅಗ್ರಸ್ಥಾನ ದೊರೆಯುತ್ತಿದೆ. ಕನ್ನಡ ಚಿತ್ರೋದ್ಯಮದ ಇತಿಹಾಸದಲ್ಲಿಯೇ ಮೊದಲಬಾರಿಗೆ ರಾಜಧಾನಿಯಾದ ಬೆಂಗಳೂರಿನಲ್ಲಿ ಏಕಕಾಲದಲ್ಲಿ ಎಂಟು–ಹತ್ತು ಚಿತ್ರಮಂದಿರಗಳಲ್ಲಿ ಕನ್ನಡ ಚಿತ್ರಗಳು ಪ್ರದರ್ಶಿತವಾಗುವ ದಿನಗಳು ಬಂದಿವೆ.

ಈಚಿನ ಕೆಲವು ವರ್ಷಗಳಲ್ಲಿ ರಾಜ್ಯದಾದ್ಯಂತ ಕನ್ನಡ ಚಿತ್ರಗಳಿಗೆ ಪ್ರೇಕ್ಷಕರ ಸಂಖ್ಯೆ ಅಧಿಕಗೊಂಡಿದೆ. ಕನ್ನಡ ಚಿತ್ರಗಳ ಸಂಪಾದನೆ ಕಳೆದ ಒಂದು ದಶಕದಲ್ಲಿ ಶೇ. ೩೦೦ರಷ್ಟಾದರೂ ಹೆಚ್ಚಿದೆಯೆಂದು ಉದ್ಯಮತಜ್ಞರು ಅಂದಾಜು ಮಾಡಿದ್ದಾರೆ. ರಾಜ್ಯದಲ್ಲಿ ಈಗ ಸುಮಾರು ೪೦೦ ಚಿತ್ರಮಂದಿರಗಳಿವೆ.

ಈ ಎಲ್ಲ ಬೆಳವಣಿಗೆಗಳಿಂದಾಗಿ ಸಹಜವಾಗಿಯೇ ಸರಕಾರವೂ ಚಿತ್ರರಂಗದ ವಿಷಯದಲ್ಲಿ ಹೆಚ್ಚು ಆಸಕ್ತಿ ತೋರಿಸಲಾರಂಭಿಸಿದೆ. ನಮ್ಮಲ್ಲಿ ಸಾಮಾನ್ಯವಾಗಿ ಕಾಣುವ ಆಲಸ್ಯಮನೋಭಾವದ ದ್ಯೋತಕವೋ ಎಂಬಂತೆ ರಾಜ್ಯಸರಕಾರದ ದೃಷ್ಟಿಯಲ್ಲಿ ಚಲನಚಿತ್ರವೆಂದರೆ ತೆರಿಗೆಗಳಿಕೆಯ ಸಾಧನಗಳಲ್ಲೊಂದಷ್ಟೇ ಎಂಬ ಭಾವನೆ ಬಹುಕಾಲದಿಂದ ಇತ್ತು. ಕನ್ನಡ ಚಿತ್ರಗಳ ಪ್ರಥಮ ಪ್ರದರ್ಶನಗಳಿಗೆ ಮುಖ್ಯ ಅತಿಥಿಗಳಾಗಿ ಬಂದ ಮಂತ್ರಿಮಹಾಶಯರು "ಚಿತ್ರ ಚೆನ್ನಾಗಿದೆ. ಉತ್ತಮ ಚಿತ್ರಗಳಿಗೆ ಕನ್ನಡಜನ ಹೆಚ್ಚಿನ ಪ್ರೋತ್ಸಾಹ ಕೊಡಬೇಕು" ಎಂದು ಹೇಳುವುದಕ್ಕಷ್ಟೇ ಆಡಳಿತಗಾರರ ದೃಷ್ಟಿ ಸೀಮಿತವಾಗಿತ್ತು. ಕಳೆದ ಕೆಲವು ವರ್ಷಗಳಲ್ಲಿ ಈ ಆಸಕ್ತಿ ಸಕ್ರಿಯವಾಗಿದೆ.

ಚಿತ್ರೋದ್ಯಮಿಗಳ ಒತ್ತಾಯದ ಕೇಳಿಕೆಗಳು ಮತ್ತು ಜನತೆಯ ಒತ್ತಾಯದ ಪರಿಣಾಮವಾಗಿ ರಾಜ್ಯಸರಕಾರ ಕನ್ನಡ ಚಿತ್ರೋದ್ಯಮದ ಬಗ್ಗೆ ಹೆಚ್ಚಿನ ಗಮನ ಕೊಡಲಾರಂಭಿಸಿತು. ಕನ್ನಡ ಚಿತ್ರಗಳು ಬಹುತೇಕವಾಗಿ ತಯಾರಾಗುತ್ತಿರುವುದು ಮದರಾಸಿನಲ್ಲಿ. ಆದುದರಿಂದ ಚಿತ್ರಗಳು ಕನ್ನಡನಾಡಿನಲ್ಲೇ ತಯಾರಾಗುವಂತೆ ವ್ಯವಸ್ಥೆಯಿರಬೇಕಾದುದು ಕನ್ನಡನಾಡಿನಲ್ಲಿ ಚಿತ್ರೋದ್ಯಮ ದೃಢ ತಳಹದಿಯ ಮೇಲೆ ಬೆಳೆಯಲು ಒಂದು ಪ್ರಮುಖ ಆವಶ್ಯಕತೆಯಷ್ಟೇ. ಅದರಿಂದ ಬೆಂಗಳೂರಿನಲ್ಲಿ

ಸ್ಟುಡಿಯೊ ಸ್ಥಾಪನೆಯ ಸಾಧ್ಯತೆಯನ್ನು ಸರಕಾರ ತೀವ್ರವಾಗಿ ಪರಿಶೀಲಿಸಿ ಸ್ಟುಡಿಯೊ ಸ್ಥಾಪಿಸಲು ಮುಂದೆ ಬರುವವರಿಗೆ ಎಲ್ಲ ಸೌಲಭ್ಯಗಳನ್ನೂ ನೀಡುವುದಾಗಿ ಘೋಷಿಸಿತು. ಈ ದಿಶೆಯಲ್ಲಿ ಕೆಲವು ಪ್ರಯತ್ನಗಳು ಆರಂಭವಾಗಿವೆ.

ಕನ್ನಡ ಚಿತ್ರಗಳ ಪ್ರೋತ್ಸಾಹಕ್ಕೆ ಮೈಸೂರು ಸರಕಾರ ಕೈಗೊಂಡಿರುವ ಇನ್ನೊಂದು ಪ್ರಮುಖ ಕ್ರಮವೆಂದರೆ ರಾಜ್ಯದಲ್ಲಿಯೇ ಚಿತ್ರೀಕರಣ ನಡೆದ ಚಿತ್ರಗಳಿಗೆ ೫೦,೦೦೦ ರೂಪಾಯಿಗಳ ಸಹಾಯಧನ ನೀಡುವುದು. ಈಗಾಗಲೇ ಅನೇಕ ಚಿತ್ರಗಳಿಗೆ ಈ ಸಹಾಯಧನ ದೊರೆತಿದ್ದು ರಾಜ್ಯದಲ್ಲಿ ಕನ್ನಡ ಚಿತ್ರಗಳ ಚಿತ್ರೀಕರಣಕ್ಕೆ ಇದೊಂದು ದೊಡ್ಡ ಪ್ರೋತ್ಸಾಹವಾಗಿದೆ.

ಅಲ್ಲದೆ ಪ್ರತಿ ವರ್ಷ ಶ್ರೇಷ್ಠ ಚಿತ್ರಗಳಿಗೆ ಪ್ರಶಸ್ತಿಗಳನ್ನೂ ರಾಜ್ಯಸರ್ಕಾರ ನೀಡಲು ಆರಂಭಿಸಿದೆ. ನಗದು ಬಹುಮಾನಗಳನ್ನೂ ಕೊಡುತ್ತಿದ್ದು ಇದೀಗ ತಂತ್ರಜ್ಞರಿಗೂ ಬಹುಮಾನಗಳು ದೊರೆಯುವಂತೆ ಪ್ರಶಸ್ತಿಗಳ ವ್ಯಾಪ್ತಿಯನ್ನು ವಿಸ್ತರಿಸಲಾಗಿದೆ.

ಈ ಎಲ್ಲ ಕ್ರಮಗಳಿಂದ ಕನ್ನಡ ಚಿತ್ರರಂಗಕ್ಕೆ ನವಚೇತನ ಬಂದಿದೆ. ಹಿಂದೆಂದೂ ಇಲ್ಲದ ಅಧಿಕ ಸಂಖ್ಯೆಯಲ್ಲಿ ಚಿತ್ರಗಳು ಈಗ ತಯಾರಾಗುತ್ತಿವೆ. ಅನತಿ ಕಾಲದಲ್ಲೇ ಸ್ಟುಡಿಯೋ ಸೌಲಭ್ಯಗಳೂ ರಾಜ್ಯದಲ್ಲಿ ದೃಢವಾಗಿ ನೆಲೆಗೊಂಡು ನಮ್ಮ ಉದ್ಯಮವು ನಮ್ಮ ನಾಡಿನಲ್ಲೇ ಭದ್ರವಾದ ತಳಹದಿಯ ಮೇಲೆ ಬೆಳೆಯುವಂತಾಗಬಹುದೆಂಬ ಆಶಾಭಾವನೆ ಈಗ ಮೂಡಿದೆ.

ಕನ್ನಡ ಚಿತ್ರಗಳ ಗುಣಮೌಲ್ಯಗಳ ವಿಷಯ ಪ್ರಸ್ತಾಪಿಸಿದಾಗ ಒಂದು ಅಂಶ ವನ್ನು ಗಮನಿಸಬೇಕಾಗಿದೆ. ಬಹುಕಾಲ ಉದ್ಯಮದ ಬಗ್ಗೆ ಆಡಳಿತಗಾರರ ಮತ್ತು ಸಾಹಿತಿಗಳೇ ಮೊದಲಾದ ಬುದ್ಧಿಜೀವಿಗಳ ದೃಷ್ಟಿ ಅನಾಸಕ್ತಿಯದೇ ಆಗಿತ್ತು. ಈಗಲೀಗ ಅದು ನಿಷ್ಕ್ರಿಯತೆಯಿಂದ ಸಕ್ರಿಯತೆಯತ್ತ ಸುಧಾರಿಸುತ್ತಿದೆ. ಇದು ಶುಭಸೂಚನೆ. ಅತ್ಯಂತ ಪ್ರಭಾವಶಾಲಿಯಾದ ಸಾಮೂಹಿಕ ಸಂಪರ್ಕ ಮಾಧ್ಯಮವೆಂದು ಸರ್ವತ್ರ ಮಾನ್ಯಮಾಡಲ್ಪಟ್ಟಿರುವ ಚಲನಚಿತ್ರದ ಕ್ಷೇತ್ರದಲ್ಲೂ ಕನ್ನಡನಾಡು ಪ್ರತಿಷ್ಠಿತ ರೀತಿಯಲ್ಲಿ ಮುನ್ನಡೆದು ನಾಡಿನ ಭವ್ಯಪರಂಪರೆ, ಆಶೋತ್ತರಗಳು, ಆಚಾರ-ವಿಚಾರಗಳು ಸುಯೋಗ್ಯರೀತಿಯಲ್ಲಿ ನಮ್ಮ ಚಿತ್ರಗಳಲ್ಲಿ ಮೂಡುವಂತಾಗಲು ಅಂತಹ ಸಕ್ರಿಯ ಆಸಕ್ತಿ ಆವಶ್ಯಕ.

ಎಚ್. ಎಂ. ಶಂಕರನಾರಾಯಣ ರಾವ್

ಪ್ರಕಟನ ಪ್ರಪಂಚ

೧

ಒಬ್ಬ ಮಹದ್ವ್ಯಕ್ತಿಯ ಜೀವನಾನುಭವದ ಸಾರಸರ್ವಸ್ವವೇ ಒಂದು ಉದ್ಗ್ರಂಥ. ಈ ಅನುಭವ ಕಾವ್ಯರೂಪದಲ್ಲಿಯೋ, ನಾಟಕರೂಪದಲ್ಲಿಯೋ, ಇಲ್ಲವೆ ಶಾಸ್ತ್ರರೂಪದಲ್ಲಿಯೋ ಹೊರಹೊಮ್ಮಿರಬಹುದು. ಈ ಅನುಭವಗಳನ್ನು ಲೋಕ ಸುಲಭವಾಗಿ ಕಳೆದುಕೊಳ್ಳದೆ, ಅದನ್ನು ಅಮೂಲ್ಯನಿಧಿಯಾಗಿ ಇಂದಿಗೂ ಕಾಪಾಡಿಕೊಂಡು ಬಂದಿರುವುದಕ್ಕೆ ವೇದ, ಉಪನಿಷತ್ತು, ರಾಮಾಯಣ ಮಹಾಭಾರತಗಳೂ, ಗ್ರೀಕರ ಕಾವ್ಯ ನಾಟಕ ಪುರಾಣೇತಿಹಾಸ ಮತ್ತು ಶಾಸ್ತ್ರಗ್ರಂಥಗಳೂ ಹಾಗೂ ಪ್ರಪಂಚದ ಇತರ ದೊಡ್ಡ ಗ್ರಂಥಗಳೂ ಸಾಕ್ಷಿಯಾಗಿ ನಿಂತಿವೆ. ಬರವಣಿಗೆ ಇಲ್ಲದಿದ್ದ ಕಾಲದಲ್ಲಿ ಈ ಮಹಾಗ್ರಂಥಗಳನ್ನು ಬಾಯಿಂದ ಬಾಯಿಗೆ ಉಳಿಸಿಕೊಂಡು, ಲೇಖನಕಲೆ ರೂಢಿಗೆ ಬಂದಮೇಲೆ ಬೇರೆಬೇರೆ ಸಲಕರಣೆಗಳ ಮೇಲೆ (ಕಲ್ಲು, ಲೋಹ, ಚರ್ಮ, ಓಲೆಯಗರಿ ಇತ್ಯಾದಿ) ಕಾಪಾಡಿಕೊಂಡು ಬಂದಿರುವುದು ಒಂದು ಆಶ್ಚರ್ಯವಾದ ಸಂಗತಿ. ಗ್ರಂಥಗಳನ್ನು ಹಲವು ಪ್ರತಿಗಳ ಮೂಲಕ ಹಂಚುವುದು ಶ್ರಮಸಾಧ್ಯವಾದ ವಿಷಯವಾದ ಕಾರಣ, ಈ ಗ್ರಂಥಜ್ಞಾನ ಕೆಲವರ ಸ್ವತ್ತಾಗಿ ಉಳಿದದ್ದು ಅನಿವಾರ್ಯವೇ ಆಯಿತು.

ಹದಿನೈದನೆಯ ಶತಮಾನದಲ್ಲಿ ಯೂರೋಪಿನಲ್ಲಿ 'ಸಾಹಿತ್ಯದ ಪುನರುಜ್ಜೀವನ'ವಾದಾಗ, ಮುದ್ರಣಯಂತ್ರ ಪ್ರಚಾರಕ್ಕೆ ಬಂದುದೂ, ಇದರ ಜೊತೆಗೆ ಕಾಗದ ಸುಲಭ ಬೆಲೆಗೆ ದೊರಕುವಂತಾದುದೂ ಅತ್ಯಂತ ಮಹತ್ವದ ಸಂಗತಿಗಳು. ಇದರಿಂದ ಧನಿಕರ ಮನೆಯ ಗ್ರಂಥ ಭಂಡಾರಗಳನ್ನು ಅಲಂಕರಿಸಿದ್ದ ಗ್ರಂಥಗಳು ಸುಲಭ ಬೆಲೆಯಲ್ಲಿ ಶ್ರೀ ಸಾಮಾನ್ಯನಿಗೆ ದೊರಕುವಂತಾದವು. ಅಲ್ಲಿಂದೀಚೆಗೆ ಮುದ್ರಣ ಮತ್ತು ಗ್ರಂಥ ನಿರ್ಮಾಣಗಳು ಕುಶಲಕಲೆಗಳಾಗಿ ಪರಿಣಮಿಸಿವೆ. ಕ್ರಮೇಣ ಮುದ್ರಣಕಲೆ ಯೂರೋಪುಖಂಡವನ್ನಲ್ಲದೆ ಪ್ರಪಂಚದ ಎಲ್ಲ ಕಡೆಗಳಿಗೂ ವ್ಯಾಪಿಸಿ ಇಂಗ್ಲೀಷರೊಡನೆ ಭರತಖಂಡಕ್ಕೂ ದಾಳಿಯಿಟ್ಟಿತು. ಪುಸ್ತಕಗಳನ್ನು ಮುದ್ರಿಸುವುದರಲ್ಲಿ ಕನ್ನಡನಾಡು ಹಿಂದಾಗಲಿಲ್ಲ.

ಕಳೆದ ಶತಮಾನದ ಮೊದಲಲ್ಲಿ ಬೈಬಲ್‌ಗ್ರಂಥವನ್ನು ಕನ್ನಡಿಸಿ ಮುದ್ರಿಸಲು ತೊಡಗಿದ್ದ ಕ್ರೈಸ್ತ ಪಾದ್ರಿಗಳು, ನಮ್ಮ ಭಾಷೆಯ ಅಭ್ಯಾಸಕ್ಕೆ ಅನುಕೂಲಿಸತಕ್ಕ ವ್ಯಾಕರಣ ಛಂದೋಗ್ರಂಥಗಳನ್ನೂ ಹಳಗನ್ನಡ ಕಾವ್ಯಗಳನ್ನೂ ಅಚ್ಚಿಟ್ಟರು.[1] ಇವರನ್ನು ಅನುಸರಿಸಿ ನಮ್ಮ ದೇಶದ ವಿದ್ವಾಂಸರು ಓಲೆಯಗರಿಗಳಲ್ಲಿ ಅಡಗಿದ್ದ ಗ್ರಂಥಗಳನ್ನು ಒಂದೊಂದಾಗಿ ಹೊರತೆಗೆದು ಪ್ರಕಟಿಸಿದರು. ಈ ಮಾರ್ಗದಲ್ಲಿ ಮೈಸೂರು ದೇಶದ ವಿದ್ಯಾಭ್ಯಾಸ ಹಾಗೂ ಶಾಸನದ ಇಲಾಖೆಗಳೂ, ಮೈಸೂರಿನ ಪ್ರಾಚ್ಯ ಕೋಶಾಗಾರ, ಕಾವ್ಯಕಲಾನಿಧಿ ಮತ್ತು ಕಾವ್ಯಮಂಜರಿ ಸಂಸ್ಥೆಗಳೂ, ಮಂಗಳೂರಿನ ಬೇಸಿಲ್‌ಮಿಷನ್ ಮುದ್ರಣಾಲಯದವರೂ ಮಾಡಿದ ಕಾರ್ಯ ಸುತ್ಯರ್ಹವಾಗಿದೆ; ಮಾರ್ಗದರ್ಶಕವಾಗಿದೆ. ಈ ಅಮೂಲ್ಯಕಾರ್ಯಕ್ಕಾಗಿ ಈ ಸಂಸ್ಥೆಗಳಿಗೆ ಕನ್ನಡಿಗರು ಎಷ್ಟು ಕೃತಜ್ಞರಾಗಿದ್ದರೂ ಸಾಲದು. ಖಾಸಗಿ ಪ್ರಕಾಶಕರು ಪ್ರಕಾಶನಕಾರ್ಯದಲ್ಲಿ ತಮಗೆ ಒದಗಬಹುದಾದ ಕಷ್ಟನಷ್ಟಗಳನ್ನು[2] ಲೆಕ್ಕಿಸದೆ ಭಾರತ ರಾಮಾಯಣ ಭಾಗವತಗಳನ್ನೂ, ಸರ್ವಜ್ಞವಚನ, ಜೈಮಿನಿಭಾರತ, ನಳಚರಿತ್ರೆ ಮುಂತಾದ ಗ್ರಂಥಗಳನ್ನೂ ಹೊರತಂದ ಅಂಶವನ್ನು ಯಾವ ಕನ್ನಡಿಗನೂ ಮರೆಯಲಾರನು. ಇಲ್ಲಿಂದ ಮುಂದೆ ಕನ್ನಡ ನಾಡಿನಲ್ಲಿ ಪ್ರಕಾಶನಕಾರ್ಯ ಅವಿರತವಾಗಿ ನಡೆದಿದೆ.

೨

ಸ್ವಾತಂತ್ರ್ಯೋತ್ತರ ಭಾರತದಲ್ಲಿ ದೇಶಭಾಷೆಗಳಿಗೆ ಪ್ರೋತ್ಸಾಹವನ್ನು ಕೊಡಬೇಕೆಂಬ ತತ್ವವನ್ನು ಕೇಂದ್ರಸರ್ಕಾರ ಒಪ್ಪಿರುವಾಗ, ಕನ್ನಡ ನಾಡಿನಲ್ಲಿ ಮಂದಗತಿಯಲ್ಲಿದ್ದ ಪ್ರಕಾಶನಕಾರ್ಯ ಈಗ ಸ್ವಲ್ಪ ಚುರುಕಾಗಿ ನಡೆದು, ಪ್ರಕಾಶನ ಕಾರ್ಯದಲ್ಲಿ ವೈವಿಧ್ಯತೆ ತೋರಿ, ಜನತೆಯ ಅವಶ್ಯಕತೆಗಳನ್ನು ಪೂರೈಸಿಕೊಡಲು ಸಾಧ್ಯವಾಗುತ್ತಿದೆ. ವಯಸ್ಕರ ಶಿಕ್ಷಣಕಾರ್ಯ, ಬಲಾತ್ಕಾರ ವಿದ್ಯಾಭ್ಯಾಸದಿಂದಾಗಿ ವಿದ್ಯೆ ಮುಂದುವರೆಯುತ್ತದೆಯೇ ಹೊರತು ಕುಂಠಿತವಾಗಲಾರದು. ಹಾಗೆಯೇ ಪ್ರಕಾಶನ ಕಾರ್ಯವೂ ಕೂಡ. ಶರತ್ಕಾಲದ ಕಾರ್ತೀಕಮಾಸದ ಬೆಳುದಿಂಗಳ ರಾತ್ರಿಯಲ್ಲಿ ಬಿಸಿಲುಮಚ್ಚಿನ

---

[1] ಕಿಟೆಲ್ ಅವರು ಪ್ರಕಟಿಸಿದ 'ಶಬ್ದಮಣಿ ದರ್ಪಣ', 'ಛಂದೋಂಬುಧಿ'; ರೈಸ್ ಅವರು ಪ್ರಕಟಿಸಿದ 'ಪಂಪಭಾರತ' 'ಪಂಪರಾಮಾಯಣ' 'ಕರ್ಣಾಟಕ ಭಾಷಾಭೂಷಣ' 'ಶಬ್ದಾನುಶಾಸನ'; ಒಂದೇ ಒಂದು ಪ್ರತಿಯಿಂದ ಬಿ. ಮಲ್ಲಪ್ಪನವರು ಬದುಕಿಸಿದ 'ಕರ್ಣಾಟಕ ಕಾದಂಬರಿ'—ಇವು ಮುಖ್ಯವಾದುವು.

[2] ಕಳೆದ ಶತಮಾನದ ಕೊನೆಯಲ್ಲಿ ಬೆಂಗಳೂರಿನ ಎಂ. ರುದ್ರಪ್ಪ ಅಂಡ್ ಸನ್ಸ್ ಅವರು ಕೃಷ್ಣರಾಜ ವಾಣೀವಿಲಾಸ ಭಾರತದ ಐನೂರು ಪ್ರತಿಗಳನ್ನು ಮಾತ್ರ ಅಚ್ಚಿಟ್ಟದ್ದನ್ನು ಇಲ್ಲಿ ನೆನೆಯಬಹುದು. ಹಾಗೆಯೇ ಚಾಮರಾಜೋಕ್ತಿ ವಿಲಾಸವೆಂಬ ರಾಮಾಯಣವೂ ಕೂಡ. ಈ ಎರಡು ಗ್ರಂಥಗಳೂ ಈಗ ವಿದ್ವಾನ್ ಎನ್. ರಂಗನಾಥಶರ್ಮರ ಪ್ರಧಾನ ಸಂಪಾದಕತ್ವದಲ್ಲಿ ಪರಿಷ್ಕೃತವಾಗುತ್ತಿದ್ದು, ಚಾಮರಾಜೋಕ್ತಿವಿಲಾಸ ರಾಮಾಯಣದ ಮೊದಲಭಾಗ (ಕಿಷ್ಕಿಂಧಾ ಕಾಂಡ ಪೂರ್ತಿ) ಹೊರಬಂದಿವೆ.

ಮೇಲೆ ನಿಂತು ಮನೆಮನೆಗಳಲ್ಲಿಯೂ ಹಚ್ಚಿಟ್ಟಿರುವ ದೀಪದ ಸಾಲುಗಳನ್ನು ನೋಡುವವನಂತೆ, ಈ ಇಪ್ಪತ್ತು ಇಪ್ಪತ್ತೈದು ವರ್ಷಗಳ ಅವಧಿಯಲ್ಲಿ ನಡೆದಿರುವ ಪ್ರಕಾಶನದ ಸ್ಥೂಲಪರಿಚಯವನ್ನು ಮಾಡಿಕೊಡಲು ಸಾಧ್ಯವೇ ಹೊರತು, ಸೂಕ್ಷ್ಮವಾದ ವಿವರಗಳನ್ನು ಕೊಡಲು ಇಲ್ಲಿ ಸಾಧ್ಯವಿಲ್ಲ. ಈ ವಿಷಯದಲ್ಲಿ ಲೇಖಕನು ವಾಚಕರ ಕ್ಷಮೆಯನ್ನು ಕೇಳದೆ ವಿಧಿಯಿಲ್ಲ.

೩

ಉತ್ತಮೋತ್ತಮ ಗ್ರಂಥಗಳ ಪ್ರಕಟನೆಯ ಕಾರ್ಯ ಜ್ಞಾನವಿತರಣೆಯ ಕಾರ್ಯ. ಈ ಕಾರ್ಯದ ಹೊಣೆಯನ್ನೂ ಹೊರೆಯನ್ನೂ ಯಾವ ಒಬ್ಬ ವ್ಯಕ್ತಿಯೇ ಆಗಲಿ ಸಂಸ್ಥೆಯೇ ಆಗಲಿ ಸಂಪೂರ್ಣವಾಗಿ ಹೊರಲು ಸಾಧ್ಯವಿಲ್ಲದ ಮಾತು. ಅದು ಎಲ್ಲ ವಿದ್ವಾಂಸರ ಪ್ರತಿಭಾವಂತ ಲೇಖಕರ ಪ್ರಕಾಶಕರ ಹೊಣೆ. ಕನ್ನಡ ನಾಡಿನಲ್ಲಿ ಯಾದರೋ ಈ ಕಾರ್ಯವನ್ನು ಅರಮನೆ ಗುರುಮನೆಗಳೂ, ವಿಶ್ವವಿದ್ಯಾನಿಲಯಗಳೂ, ಖಾಸಗಿ ಸಂಸ್ಥೆಗಳೂ, ಸರ್ಕಾರ ಕೊನೆಗೆ ವ್ಯಕ್ತಿಯೇ ಈ ಕಾರ್ಯವನ್ನು ನಿರ್ವಹಿಸಿದ್ದಾರೆ.

ಬಹಳ ಹಿಂದಿನ ಕಾಲದಿಂದಲೂ ಮೈಸೂರಿನ ಅರಸುಮನೆತನದವರು ಕವಿಗಳಿಗೂ ಕನ್ನಡ ಸಾಹಿತ್ಯಕ್ಕೂ ಆಶ್ರಯಕೊಟ್ಟಿರುವ ವಿಷಯ ಲೋಕಪ್ರಸಿದ್ಧವಾಗಿದೆ. ಚಿಕ್ಕದೇವರಾಯ ಒಡೆಯರು ತಾವೇ ಕವಿಗಳಾಗಿದ್ದುದಲ್ಲದೆ, ಕವಿಜನಾಶ್ರಯರೂ ಆಗಿದ್ದರು. ಮುಮ್ಮಡಿ ಕೃಷ್ಣರಾಜ ಒಡೆಯರಂತೂ ಕವಿಗಳಿಗೆ ವಿದ್ವಾಂಸರಿಗೆ ಕಲ್ಪವೃಕ್ಷದಂತಿದ್ದರು. ಅವರ ಕಾಲದಲ್ಲಿಯೇ ರಾಮಾಯಣ ಮಹಾಭಾರತಗಳು ಕನ್ನಡ ಗದ್ಯದಲ್ಲಿ ರೂಪುಗೊಂಡುವಲ್ಲದೆ, ಸಂಸ್ಕೃತ ನಾಟಕಗಳು ಕಥೆಯ ರೂಪದಲ್ಲಿ ವಿಸ್ತಾರವಾದ ಗದ್ಯದಲ್ಲಿ ದೊರಕುವಂತಾದವು. ತಮ್ಮ ಹಿರಿಯರ ಮೇಲ್ಪಂಕ್ತಿಯನ್ನನುಸರಿಸಿ ಮೈಸೂರಿನ ಅರಸರಾದ ಶ್ರೀ ಜಯಚಾಮರಾಜ ಒಡೆಯರು 'ಶ್ರೀ ಜಯಚಾಮರಾಜೇಂದ್ರ ಗ್ರಂಥರತ್ನಮಾಲಾ' ಎಂಬ ಗ್ರಂಥಮಾಲೆಯನ್ನು ಆರಂಭಿಸಿ, ಸಂಸ್ಕೃತ ಭಾಷೆಯಲ್ಲಿರುವ ಅನೇಕ ಪುರಾಣಗಳನ್ನು ವಿದ್ವಾಂಸರು ಕನ್ನಡಿಸುವಂತೆ ಪ್ರೋತ್ಸಾಹಿಸಿ ಅವರಿಂದ ಕೆಲಸಮಾಡಿಸಿದ್ದಾರೆ. ಇವುಗಳಲ್ಲಿ ಸ್ಕಾಂದ ಪದ್ಮಪುರಾಣಗಳು, ದೇವೀಭಾಗವತ—ಇವು ದೊಡ್ಡ ಪ್ರಮಾಣದ ಅನೇಕ ಸಂಪುಟಗಳಲ್ಲಿ ಪ್ರಕಟಗೊಂಡಿವೆ. ಇಷ್ಟೇ ಅಲ್ಲದೆ, ಸ್ವರ ಮತ್ತು ಅರ್ಥಸಮೇತವಾದ ಋಗ್ವೇದ ಮುವತ್ತು ಬೃಹತ್ ಸಂಪುಟಗಳಲ್ಲಿ ಕನ್ನಡಿಗರ ಕೈಸೇರುವಂತಾದುದು ಜನತೆಯ ಪುಣ್ಯವೇ ಸರಿ. ಕನ್ನಡ ನಾಡಿನಲ್ಲಿಯೇ ಈ ತೆರನಾದ ಯೋಜನೆ ಹಿಂದೆ ಎಂದೂ ರೂಪಗೊಂಡಿರಲಿಲ್ಲ. ಈ ಗ್ರಂಥಗಳಲ್ಲದೆ ಈ ಮಾಲೆಯಲ್ಲಿ ಶಂಕರಭಾಷ್ಯ ಸಮೇತ ಉಪನಿಷತ್ತುಗಳು, ಭಗವದ್ಗೀತೆ—ಇವು ಪ್ರಕಟವಾಗಿರುವುದು ಒಂದು ವಿಶೇಷ. ಒಳ್ಳೆಯ ಕಾಗದದ ಮೇಲೆ ಅಂದವಾದ ಮುದ್ರಣದಲ್ಲಿ ಸಂಸ್ಕೃತಮೂಲವನ್ನು ಕನ್ನಡ ಲಿಪಿಯಲ್ಲಿ ಅರ್ಥಸಹಿತವಾಗಿ

ಓದಬೇಕೆನ್ನುವವರಿಗೆ ಈ ಸಂಪುಟಗಳು ನಿಜವಾಗಿಯೂ ಒಂದು ಅಮೂಲ್ಯಗಣಿ. ಸಂಸ್ಕೃತ ದೇಶಭಾಷೆಗಳ ಮೂಲಕ ಬದುಕಿ, ಕನ್ನಡ ಬೆಳೆಯುವಂತೆ ಮಾಡಿದ ಮಹಾ ಪ್ರಭುಗಳಿಗೆ ಕನ್ನಡಿಗರು ಎಷ್ಟು ಕೃತಜ್ಞರಾಗಿದ್ದರೂ ಸಾಲದು.

ಭಾರತದ ಎಲ್ಲ ಧರ್ಮಗಳ ತವರಾದ ಕನ್ನಡನಾಡಿನಲ್ಲಿ ಗುರುಮನೆಗಳಿಗೇನೂ ಕಡಮೆ ಇಲ್ಲ. ಆದರೆ ಗ್ರಂಥರೂಪ ಅವು ತಮ್ಮ ಧರ್ಮದ ಸಾರವನ್ನು ಕನ್ನಡದಲ್ಲಿ ಪ್ರಕಟಿಸದಿರುವುದು ಒಂದುಕೊರತೆ ಎಂದೇ ಹೇಳಬೇಕು. ವೀರಶೈವ ಮಠಗಳು ಆಗೊಮ್ಮೆ ಈಗೊಮ್ಮೆ ತಮ್ಮ ಧರ್ಮಗ್ರಂಥಗಳನ್ನು ಹೊರತರುತ್ತಿದ್ದರೂ, ಧರ್ಮಗ್ರಂಥ ಗಳ ಪ್ರಕಟನೆಗಳ ವಿಚಾರದಲ್ಲಿ ನಿಜವಾಗಿಯೂ ಗುರುಮನೆಯೆಂಬ ಬಿರುದಿಗೆ ಹೆಮ್ಮೆಗೆ ಅರ್ಹವಾದುದೆಂದರೆ ಮೈಸೂರಿನ ಶ್ರೀರಾಮಕೃಷ್ಣಮಠ ಒಂದೇ. ಉತ್ತಮವಾದ ಕಾಗದ, ತಪ್ಪಿಲ್ಲದ ಅಂದವಾದ ಮುದ್ರಣದಿಂದ ಕೂಡಿದ ಶ್ರೀರಾಮಕೃಷ್ಣಾಶ್ರಮದ ಪ್ರಕಟನೆಗಳಲ್ಲಿ ಪೀಠಿಕೆ, ಶಂಕರ ರಾಮಾನುಜಾಚಾರ್ಯರ ಭಾಷ್ಯಕ್ಕೆ ಅನುಸಾರವಾದ ಅರ್ಥದಿಂದ ಕೂಡಿದ ಹತ್ತು ಉಪನಿಷತ್ತುಗಳು, ಭಗವದ್ಗೀತೆ, ಬ್ರಹ್ಮಸೂತ್ರಭಾಷ್ಯ ಇವು ಪ್ರಕಟವಾಗಿವೆ. ಈ ಗ್ರಂಥಗಳ ವಾಚನದಿಂದ ವೇದಾಂತಧರ್ಮದ ಸ್ವರೂಪ ನಮ್ಮ ಜನರಿಗೆ ಗ್ರಹಿಕೆಯಾಗುತ್ತದೆ. ಎಲ್ಲಕ್ಕೂ ಮಿಗಿಲಾಗಿ 'ಶ್ರೀರಾಮಕೃಷ್ಣ ವಚನವೇದ' 'ಶ್ರೀ ವಿವೇಕಾನಂದರ ಕೃತಿಶ್ರೇಣಿ' (ಸ್ವಾಮಿ ವಿವೇಕಾನಂದರ ಸಮಗ್ರ ಕೃತಿಗಳ ಕನ್ನಡ ಅನುವಾದ–೧೦ ಬೃಹತ್ ಸಂಪುಟಗಳಲ್ಲಿ)–ಈ ಕೃತಿಗಳು ಮಠದ ಪ್ರಕಟನೆಯ ಮೇರು ಸಾಹಸಕ್ಕೆ ಸಾಕ್ಷಿಯಾಗಿ ನಿಂತಿವೆ. ಕನ್ನಡ ಸಾಹಿತ್ಯ ಭಂಡಾರಕ್ಕೆ ಈ ಕೃತಿಗಳು ಅಮೂಲ್ಯವಾದ ಕಾಣಿಕೆ.

ಮೈಸೂರು ಸಂಸ್ಥಾನದ ಮುಖ್ಯಮಂತ್ರಿಗಳಾಗಿದ್ದ ಶ್ರೀ ಕೆಂಗಲ್ ಹನುಮಂತಯ್ಯ ನವರು ಬಹುಕ್ಷಿಪ್ರಕಾಲದಲ್ಲಿ ದಕ್ಷತೆಯಿಂದ ಲೋಕಮೋಹಕವಾದ ಕಲಾತ್ಮಕವಾದ ವಿಧಾನಸೌಧವನ್ನು ಕಟ್ಟಿಸಿದಂತೆ, ಸಾಹಿತ್ಯ ಸಂಸ್ಕೃತಿಯ ಇಲಾಖೆಯನ್ನು ಸ್ಥಾಪಿಸಿ, 'ಕುಮಾರವ್ಯಾಸ ಭಾರತ'ವನ್ನು ಮುದ್ದಾಗಿ ಮುದ್ರಿಸಿ, ಕೇವಲ ಎರಡು ರೂಪಾಯಿಗಳ ಬೆಲೆಗೇ ಅದು ಜನತೆಗೆ ಸೇರುವಂತೆ ಮಾಡಿ, ಒಂದು ಪವಾಡವನ್ನೇ ಎಸಗಿದರು. ದಶಪರ್ವಗಳ ಭಾರತದ ಪ್ರಕಟನೆಯಾದ ಮೇಲೆ ಈ ಇಲಾಖೆಯಿಂದ ರಾಘವಾಂಕನ 'ಹರಿಶ್ಚಂದ್ರಕಾವ್ಯ', ಲಕ್ಷ್ಮೀಶನ 'ಜೈಮಿನಿ ಭಾರತ', ಸರ್ವಜ್ಞನ 'ವಚನಗಳು', ಕನಕದಾಸರ 'ನಳಚರಿತ್ರೆ', 'ರಾಮಧಾನ್ಯ ಚರಿತೆ', 'ಹರಿಭಕ್ತಿಸಾರ', 'ಕನಕದಾಸ ಪ್ರಶಸ್ತಿ', 'ವಚನಸಾಹಿತ್ಯ ಸಂಗ್ರಹ', ರವೀಂದ್ರರನ್ನು ಕುರಿತ ಗ್ರಂಥಗಳು ಪ್ರಕಟ ವಾಗಿ ಜನತೆಗೆ ಸುಲಭ ಬೆಲೆಯಲ್ಲಿ ಒಳ್ಳೆಯ ಗಾತ್ರ ಮತ್ತು ಮುದ್ರಣಗಳಲ್ಲಿ ದೊರಕು ವಂತಾಗಿದ್ದರೂ, ಒಟ್ಟಿನಲ್ಲಿ ಈ ಇಲಾಖೆಯ ಗ್ರಂಥಪ್ರಕಟನೆಯ ಕಾರ್ಯ ಕೂರ್ಮ ಗತಿಯಲ್ಲಿ ನಡೆದಿದೆ.

ಕನ್ನಡಿಗರ ಕಣ್ಣಿನಂತಿರುವ ಕನ್ನಡ ಸಾಹಿತ್ಯ ಪರಿಷತ್ತು ಸುಸಜ್ಜಿತವಾದ ಮುದ್ರಣಾಲಯವನ್ನು ಹೊಂದಿದ್ದರೂ ಪ್ರಕಟನೆಯ ವಿಷಯದಲ್ಲಿ ಸಂಪೂರ್ಣವಾಗಿ

ನಿದ್ರಾವಸ್ಥೆಯಲ್ಲಿದೆ. ಈ ಮಾತನ್ನು ಆಡಿದುದಕ್ಕಾಗಿ ಕ್ಷಮೆ ಇರಲಿ. ೧೯೬೧ರಲ್ಲಿ ಆ ಸಂಸ್ಥೆಯಿಂದ ಪ್ರಕಟವಾದ 'ಕರ್ಣಾಟಕ ಕವಿಚರಿತೆ'ಯ ಪ್ರಥಮ ಸಂಪುಟ (ಇನ್ನೆರೆಡು ಸಂಪುಟಗಳಿಗೆ ಇನ್ನೆಷ್ಟು ದಿನ ಕಾಯಬೇಕೋ!)ದ ಹೊರತು ಬೇರೊಂದು ವಿದ್ವತ್ಪ್ರಕಟನೆಯು ಬರದಿರುವುದು ವಿಷಾದದ ಸಂಗತಿ. 'ಪಂಪಭಾರತ' 'ಪಂಪ ರಾಮಾಯಣ' 'ಶಬ್ದಮಣಿದರ್ಪಣ' 'ವಡ್ಡಾರಾಧನ'ದಂತಹ ಗ್ರಂಥಗಳನ್ನು ಅಚ್ಚಿಡದೆ ಕೈಬಿಟ್ಟು ಕುಳಿತುಕೊಂಡಿರುವುದು ಇನ್ನೂ ವಿಷಾದದ ಸಂಗತಿ. ಇನ್ನು ಅದು ಕೈಕೊಂಡಿರುವ ಕನ್ನಡ ನಿಘಂಟು. ಇದು ಬಹು ಶ್ರಮ ವಿದ್ವತ್ತು ಕಾಲ–ಇವುಗಳಿಂದಾಗಿ ಆಗತಕ್ಕ ಕೆಲಸ ಎಂಬುದನ್ನು ಯಾರೂ ಅಲ್ಲಗಳೆಯುವಂತಿಲ್ಲ. ಈಗ ವರ್ಷ ಒಂದಕ್ಕೆ ಒಂದರಂತೆ ಬರುತ್ತಿರುವ ಅದರ ಸಂಚಿಕೆಯನ್ನು ದ್ವಿಗುಣಗೊಳಿಸಿದರೂ, ಅದು ಮುಗಿಯಲು ಕನಿಷ್ಠಪಕ್ಷ ಇಪ್ಪತ್ತು ವರುಷಗಳಿಗೆ ಕಡಮೆ ಇಲ್ಲದಂತೆ ಬೇಕಾಗುವುದು.

ಪಂಡಿತ ಶ್ರೀ ಜವಹರಲಾಲ್ ನೆಹರು ಅವರ ಅಧ್ಯಕ್ಷತೆಯಲ್ಲಿ ನವದೆಹಲಿಯಲ್ಲಿ ಸಾಹಿತ್ಯ ಅಕಾಡೆಮಿ ಸ್ಥಾಪಿತವಾದಂದಿನಿಂದ ಅದು ಉತ್ತಮವಾದ ಕೆಲಸವನ್ನು ಮಾಡುತ್ತಿದೆ. ಭಾರತದ ಹದಿನಾಲ್ಕು ರಾಷ್ಟ್ರಭಾಷೆಗಳಲ್ಲಿಯೂ ಉತ್ತಮವಾದ ಸಾಹಿತ್ಯವನ್ನು ಪ್ರಕಟಿಸುವುದಲ್ಲದೆ, ಸುಸಮರ್ಥರಾದ ಭಾಷಾಂತರಕಾರರಿಂದ ಇತರ ಭಾಷಾಸಾಹಿತ್ಯಗಳ ಕೃತಿಗಳನ್ನು ಜನತೆಗೆ ಪರಿಚಯಮಾಡಿಸಿಕೊಡುವುದೂ ಅದರ ಧ್ಯೇಯವಾಗಿದೆ. ಈ ದಿಕ್ಕಿನಲಿ ಕನ್ನಡ ಭಾಷೆಯಲ್ಲಿಯೂ ತಕ್ಕಮಟ್ಟಿಗೆ ಕೆಲಸ ನಡೆದಿದೆ. ಕನ್ನಡದಲ್ಲಿ ನವದೆಹಲಿಯ ಸಾಹಿತ್ಯ ಅಕಾಡೆಮಿಯವರು ಪ್ರಕಟಿಸಿರುವ ಪ್ರಕಟನೆಗಳಲ್ಲಿ ಡಾ.ರಂ. ಶ್ರೀ. ಮುಗಳಿಯವರ 'ಕನ್ನಡ ಸಾಹಿತ್ಯದ ಇತಿಹಾಸ'; ಪ್ರೊ.ವಿ. ಸೀ. ಅವರ 'ಬಂಗಾಳೀ ಸಾಹಿತ್ಯದ ಚರಿತೆ' (ಅನುವಾದ); ಶ್ರೀ ಕೆ. ವಿ. ರಾಘವಾಚಾರ್ಯರ ಗ್ರೀಕ್ ನಾಟಕದ ಅನುವಾದಗಳು; ಶ್ರೀ ಪು. ತಿ. ನರಸಿಂಹಾಚಾರ್ಯರ ಗಯಟೆಯ 'ಫೌಸ್ಟ್' ನಾಟಕದ ಅನುವಾದ; ರವೀಂದ್ರನಾಥಠಾಕೂರರ ಶತಮಾನೋತ್ಸವದ ಸಂದರ್ಭದಲ್ಲಿ ಪ್ರಕಟವಾದ 'ನಿಬಂಧಮಾಲೆ'ಯ ಎರಡು ದೊಡ್ಡ ಸಂಪುಟಗಳು ಮುಖ್ಯವಾದುವು. ಈ ಸಂಸ್ಥೆಯ ಪ್ರಕಟನೆಯ ಗತಿ ಮಂದವೆನಿಸಿದರೆ, ಭಾರತದ ಹದಿನಾಲ್ಕು ಭಾಷೆಗಳನ್ನು ಇದು ಪ್ರತಿನಿಧಿಸುವುದೆಂಬ ಅಂಶವನ್ನು ಗಮನಕ್ಕೆ ತಂದು ಕೊಂಡಾಗ, ಮನಸ್ಸಿಗೆ ಸ್ವಲ್ಪ ಸಮಾಧಾನವೆನಿಸುವುದು.

೪

ಇನ್ನು ಪ್ರಕಟನೆಗಳ ವಿಷಯದಲ್ಲಿ ನಾಡಿನ ವಿಶ್ವವಿದ್ಯಾನಿಲಯಗಳ ಕಡೆಗೆ ನಮ್ಮ ಗಮನವನ್ನು ಸ್ವಲ್ಪ ತಿರುಗಿಸೋಣ. ಈ ವಿಷಯದಲ್ಲಿ ಇದುವರೆಗೆ ಐವತ್ತುವರ್ಷಗಳ ಸಾರ್ಥಕವಾದ ಬದುಕನ್ನು ನಡೆಸಿ ನಾಡಿಗೆ ನಂದಾದೀಪದಂತಿರುವ ಮೈಸೂರು ವಿಶ್ವ ವಿದ್ಯಾನಿಲಯದ್ದೇ ಪ್ರಧಾನವಾದ ನಡೆ. ತನ್ನೆಡೆಗೆ ಬರುವ ವಿದ್ಯಾರ್ಥಿಗಳಿಗೆ ವಿದ್ಯಾದಾನ ಮಾಡುವ ಕಾರ್ಯವನ್ನಲ್ಲದೆ, ಗ್ರಾಮಾಂತರಗಳಿಗೆ ಹೋಗಿ ಕನ್ನಡದಲ್ಲಿ ಜ್ಞಾನವನ್ನು

ಹಂಚುವ, ಹಂಚಿದ ಜ್ಞಾನವನ್ನು ಪುಸ್ತಕರೂಪದಲ್ಲಿ ಸ್ಥಾಯಿಯಾಗಿ ಉಳಿಸುವ ಕಾರ್ಯವನ್ನು ಮುವತ್ತು ನಾಲವತ್ತು ವರುಷಗಳಿಂದ ತಪ್ಪದೆಮಾಡಿದೆ. ಶ್ರೀಯವರ ಸಂಪಾದಕತ್ವದಲ್ಲಿ ಪ್ರಾರಂಭವಾದ 'ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಗ್ರಂಥಮಾಲೆ' ತನ್ನ ಮುಂದೆ ಎರಡು ಧ್ಯೇಯಗಳನ್ನು ಇರಿಸಿಕೊಂಡಿತ್ತು. ಹಳೆಯ ಸಾಹಿತ್ಯವನ್ನು ಶುದ್ಧವಾದ ಪಾಠ ರೂಪದಲಿ ಪೀಠಿಕೆ ಟಿಪ್ಪಣಿ ಶಬ್ದಕೋಶಗಳ ಮೂಲಕ ಸಂಗ್ರಹವಾಗಿ ಕೊಡುವುದು ಮೊದಲನೆಯ ಧ್ಯೇಯ. ಎರಡನೆಯದು, ಹೊಸ ಯುಗದ ಜ್ಞಾನವನ್ನು ಸುಲಭ ಸಮಂಜಸವಾದ ಕನ್ನಡದಲ್ಲಿ ಜನತೆಗೆ ಒದಗಿಸುವುದು. ಈ ಕೆಲಸವನ್ನು ಈ ಗ್ರಂಥಮಾಲೆ ಶ್ರೀಯವರ, ಎ. ಆರ್. ಕೃ. ಅವರ ಪ್ರಧಾನಸಂಪಾದ ಕತ್ವದಲ್ಲಿ ಬಹು ದಕ್ಷತೆಯಿಂದ ಕೆಲಸಮಾಡಿತು. ಈ ಮಾಲೆಯಲ್ಲಿ ಪ್ರಕಟವಾದ 'ಸಂಸ್ಕೃತ ನಾಟಕ' 'ಪಾಶ್ಚಾತ್ಯ ತತ್ವಶಾಸ್ತ್ರದ ಸಮಸ್ಯೆಗಳು'—ಈ ತೆರನಾದ ಗ್ರಂಥಗಳು ಸುಂದರವಾದ ಮುದ್ರಣದಲ್ಲಿ, ಸುಭದ್ರವಾದ ರಟ್ಟಿನಲ್ಲಿ ಕೇವಲ ಹನ್ನೆರಡು ಆಣೆಗಳಿಗೆ ದೊರಕಿದ್ದು ಕನ್ನಡಿಗರ ಸುದೈವವೆಂದೇ ಹೇಳಬೇಕು. 'ಜೀವವಿಜ್ಞಾನ' 'ಪ್ರಾಣಿಶಾಸ್ತ್ರ' ದಂತಹ ಗ್ರಂಥಗಳು ಎಂತಹ ಗಹನವಾದ ವಿಜ್ಞಾನದ ವಿಷಯವನ್ನೂ ಕನ್ನಡದಲ್ಲಿ ಪ್ರತಿಪಾದಿಸಬಹುದೆಂಬುದನ್ನು ಬೆಳ್ಳಂಬೆಳಕಾಗಿ ತೋರಿಸಿಕೊಟ್ಟವು. ಸ್ವಾರ್ಥ ವನ್ನು ಸಂಪೂರ್ಣವಾಗಿ ಬದಿಗೊತ್ತಿ ಕನ್ನಡದಲ್ಲಿ ಗ್ರಂಥಗಳನ್ನು ಬರೆದುಕೊಟ್ಟ ವಿದ್ವಾಂಸ ರನ್ನೂ, ಸುಲಭವಾದ ಬೆಲೆಗೆ ಜ್ಞಾನವನ್ನು ಒದಗಿಸಿಕೊಟ್ಟ ವಿಶ್ವವಿದ್ಯಾನಿಲಯವನ್ನೂ ಎಷ್ಟು ಹೊಗಳಿದರೂ ಸಾಲದು.

ಡಾ. ಕೆ. ವಿ. ಪುಟ್ಟಪ್ಪನವರು ಈ ಗ್ರಂಥಮಾಲೆಯ ಪ್ರಧಾನ ಸಂಪಾದಕರಾದ ಮೇಲೆ, ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾದ ಮೇಲೆ, ಪ್ರಕಟನೆಯ ಪ್ರಪಂಚಕ್ಕೆ ಒಂದು ಹೊಸ ಸ್ಫೂರ್ತಿ ಬಂದಂತಾಯಿತು. ಇವರು ಪ್ರಧಾನ ಸಂಪಾದ ಕತ್ವವನ್ನು ವಹಿಸಿಕೊಂಡ ತರುಣದಲ್ಲಿಯೇ ಕನ್ನಡ ಕೈಪಿಡಿಯ ಐದನೆಯ ಭಾಗವೂ (ಶ್ರೀಯವರು ರಚಿಸಿದ ಕನ್ನಡ ಸಾಹಿತ್ಯ ಚರಿತ್ರೆ—ಅದು ಪೂರ್ತಿಯಾಗದೆ ಇದ್ದುದು ಕನ್ನಡಿಗರ ದುರ್ದೈವ) ಪ್ರೊ. ತೀ. ನಂ. ಶ್ರೀಯವರ 'ಭಾರತೀಯ ಕಾವ್ಯ ಮೀಮಾಂಸೆ' ಯೂ ಪ್ರಕಟವಾದವು. ಕನ್ನಡ ಸಾಹಿತ್ಯ ವಿದ್ಯಾರ್ಥಿಗಳಿಗೆ ಈ ಎರಡು ಗ್ರಂಥಗಳೂ ಒಂದು ವರವಾಗಿ ಪರಿಣಮಿಸಿವೆ. ಶ್ರೀಯವರ ಗ್ರಂಥ ಕನ್ನಡ ಸಾಹಿತ್ಯ ಚರಿತ್ರೆಯನ್ನು ಸ್ಫೂರ್ತಿಯುತವಾದ ವೀರ್ಯವತ್ತಾದ ಶೈಲಿಯಲ್ಲಿ ಚಿತ್ರಿಸಿದರೆ, ತೀ. ನಂ. ಶ್ರೀ ಅವರ ಗ್ರಂಥ ಕಾವ್ಯಶಾಸ್ತ್ರವನ್ನು ಅನೇಕ ಉದಾಹರಣೆಗಳಿಂದ ಸರಳವಾದ ಭಾಷೆಯಲ್ಲಿ ಭರತನಿಂದ ಜಗನ್ನಾಥನ ವರೆಗೆ ನಡೆದು ಬಂದ ವಿವಿಧ ಪ್ರಸ್ಥಾನಗಳನ್ನೂ, ಕಾವ್ಯ ತತ್ವದ ವಿಕಾಸವನ್ನೂ ನಿರೂಪಿಸುತ್ತದೆ. ಇತ್ತೀಚೆಗೆ ಹೊರಬಿದ್ದಿರುವ ಪ್ರಕಟನೆ ಗಳಲ್ಲಿ ಪ್ರೊ ಎ. ಎನ್. ಮೂರ್ತಿರಾಯರ 'ಷೇಕ್ಸ್‌ಪಿಯರ್' (ಭಾಗ ೧); ಡಾ. ಎ. ಆರ್. ಕೃ. ಅವರ 'ಬಂಕಿಮಚಂದ್ರ' (ಈ ಗ್ರಂಥಕ್ಕೆ ದೆಹಲಿ ಅಕಾಡೆಮಿಯ ಪ್ರಶಸ್ತಿ ದೊರಕಿದೆ. ಇಂಥದೊಂದು ಗ್ರಂಥ ಬಂಗಾಳೀ ಭಾಷೆಯಲ್ಲಿಯೂ ಇಲ್ಲವೆನ್ನು

ತ್ತಾರೆ. ಇದು ನಿಜವಾದರೆ ಕನ್ನಡಕ್ಕೆ ಒಂದು ಕೋಡೇ ಸರಿ!); ಡಾ. ಎಸ್. ಶ್ರೀಕಂಠಶಾಸ್ತ್ರಿಯವರ 'ಹೊಯ್ಸಳ ವಾಸ್ತು ಶಿಲ್ಪ'; ಶ್ರೀ ಎಚ್.ಎಲ್. ನಾಗೇಗೌಡರ 'ಪ್ರವಾಸಿಕಂಡ ಇಂಡಿಯಾ' (ಮೂರು ಭಾಗಗಳು); ಮೈಸೂರು ವಿಶ್ವವಿದ್ಯಾನಿಲಯದ ಸುವರ್ಣಮಹೋತ್ಸವದ ಸಂದರ್ಭದಲ್ಲಿ ನಡೆದ ಲೇಖಕರ ಸಮ್ಮೇಳನದ (ಡಿಸೆಂಬರ್ ೧೯೬೬) ಸವಿನೆನಪಿಗಾಗಿ ಕನ್ನಡ ಅಧ್ಯಯನ ಸಂಸ್ಥೆಯ ಪ್ರಕಟನೆಯಾದ 'ಸುವರ್ಣ ಸಂಚಯ'; ಡಾ. ಎಂ. ಚಿದಾನಂದಮೂರ್ತಿಯವರ 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ'; ಡಾ. ಜಿ. ವರದರಾಜರಾಯರ 'ಕುಮಾರರಾಮನ ಸಾಂಗತ್ಯಗಳು'–ಈ ಗ್ರಂಥಗಳು ವಿಶ್ವವಿದ್ಯಾನಿಲಯದ ಉತ್ತರೋತ್ತರ ಗೌರವವನ್ನು ಕಾಪಾಡಲು ಅತ್ಯಂತ ಅರ್ಹವಾಗಿವೆ.

ಡಾ. ಕೆ. ವಿ. ಪುಟ್ಟಪ್ಪನವರು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾಗಿದ್ದ ಕಾಲದಲ್ಲಿ ಕನ್ನಡ ಮಾಧ್ಯಮ ಜಾರಿಗೆ ಬಂದಿತಷ್ಟೆ. ಇದರ ಹಿಂದೆಯೇ 'ಮೈಸೂರು ವಿಶ್ವವಿದ್ಯಾನಿಲಯದ ಪಠ್ಯ ಪುಸ್ತಕ ಮಾಲೆ' ಪ್ರಾರಂಭವಾಗಿ, ಸುಸಮರ್ಥರಾದ ವಿದ್ವಾಂಸರಿಂದ ಎಲ್ಲ ವಿಷಯಗಳ ಮೇಲೂ ನಲವತ್ತಕ್ಕೂ ಮಿಕ್ಕು ಪುಸ್ತಕಗಳು ಕನ್ನಡದಲ್ಲಿ ಬಂದಿವೆ. ಈ ಗ್ರಂಥಗಳು ಇಂಟರ್ ಮೀಡಿಯೆಟ್ ಇಲ್ಲವೆ ಪ್ರೀ–ಯೂನಿವರ್ಸಿಟಿ ವಿದ್ಯಾರ್ಥಿಗಳಿಗೆ ಮಾತ್ರ ಸೀಮಿತವಾಗಿವೆಯೆಂದು ತಿಳಿಯಬಾರದು. 'ಸಾರ್ವಜನಿಕ ಆಡಳಿತ' 'ಪಾಶ್ಚಾತ್ಯ ರಾಜಕೀಯ ತತ್ವಶಾಸ್ತ್ರ' 'ರಾಜತತ್ವ'— ಈ ತೆರನಾದ ಗ್ರಂಥಗಳು ವಿಷಯ ಬಾಹುಳ್ಯದಿಂದ ಕೂಡಿ, ಪ್ರೌಢ ಶೈಲಿಯಲ್ಲಿದ್ದು ವಿದ್ಯಾರ್ಥಿಗಳಿಗೆ ಮಾತ್ರವೇ ಅಲ್ಲದೆ ಉಪಾಧ್ಯಾಯರಿಗೂ ರಾಜಕೀಯರಂಗದಲ್ಲಿರುವವರಿಗೂ ಬೋಧಪ್ರದವಾಗಿವೆ.

ನಮ್ಮ ವಿಶ್ವವಿದ್ಯಾನಿಲಯ ಹುಟ್ಟಿದ ತರುಣದಲ್ಲಿ ಬೆಂಗಳೂರು ಮೈಸೂರು ನಗರಗಳಿಗೆ ಮಾತ್ರ ಸೀಮಿತವಾಗಿ ಹೊರಗಡೆಯಿಂದ ಬಂದ ವಿದ್ವಾಂಸರಿಂದ ಇಂಗ್ಲೀಷಿನಲ್ಲಿ ವಿಶೇಷೋಪನ್ಯಾಸಗಳು ನಡೆಯುತ್ತಿದ್ದವು. ಈಗ ಈ ವಿಶೇಷೋಪನ್ಯಾಸಗಳು ಕನ್ನಡದಲ್ಲಿಯೂ ನಡೆಯುತ್ತಿವೆಯಲ್ಲದೆ, ಪುಸ್ತಕ ರೂಪದಲ್ಲಿಯೂ ಹೊರಬಿದ್ದಿವೆ. ವಿಶ್ವವಿದ್ಯಾನಿಲಯವು ಮೂಲವಿಗ್ರಹವಾದರೆ, ಅದರ ಭಕ್ತರು ಉತ್ಸವ ವಿಗ್ರಹವನ್ನು ನಾಡಿನ ಮೂಲೆ ಮೂಲೆಯಲ್ಲಿಯೂ ಮೆರೆಯಿಸಿದ್ದಾರೆ. ಹೀಗೆ ಉಪಾಧ್ಯಾಯರು ನಡೆಸಿದ ಪ್ರಚಾರೋಪನ್ಯಾಸಗಳು ಸಪ್ರಮಾಣವಾದ ಸುಂದರವಾದ ಕನ್ನಡದಲ್ಲಿ ಪ್ರಚಾರಪುಸ್ತಕಮಾಲೆಯಲ್ಲಿ ಮೂಡಿ ಬಂದು ಸಂಖ್ಯೆಯಲ್ಲಿ ನೂರೈವತ್ತಕ್ಕೂ ಮಿಕ್ಕಿವೆ. ಸಾಹಿತ್ಯ, ವಿಜ್ಞಾನ, ಸಮಾಜಶಾಸ್ತ್ರ ಇವೇ ಮೊದಲಾದ ವಿಷಯಗಳನ್ನೊಳಗೊಂಡ ಈ ಪುಸ್ತಕ ಮಾಲೆಯಲ್ಲಿ ವೈವಿಧ್ಯಕ್ಕೆ ಮಿತಿಯಿಲ್ಲ. ಪುಟ್ಟಣ ಚೆಟ್ಟರ ಪುದುವಟ್ಟಿನ ಗ್ರಂಥ ಮಾಲೆಯೂ ಈ ದಿಕ್ಕಿನಲ್ಲಿ ಗಮನಾರ್ಹವಾದ ಕೆಲಸ ಮಾಡಿದೆ. ಒಟ್ಟಿನಲ್ಲಿ ಪ್ರಸಾರಾಂಗ ವಟವೃಕ್ಷದಂತೆ ಹಬ್ಬಿ, ವಿಶ್ವವಿದ್ಯಾನಿಲಯಕ್ಕೊಂದು ಹೆಮ್ಮೆ ಎನಿಸಿದೆ.

ಇನ್ನೊಂದು ವಿಷಯ. ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸೇರಿದ ಪ್ರಾಚ್ಯ ಕೋಶಾಗಾರ (Oriental Research Institute) ಅದು ಜನ್ಮವೆತ್ತಿದಂದಿನಿಂದಲೂ ಹಳಗನ್ನಡ ನಡುಗನ್ನಡ ಕಾವ್ಯವನ್ನು ಬಹು ಎಚ್ಚರಿಕೆಯಿಂದ ಪರಿಷ್ಕರಿಸಿ ಸಂಪಾದಿಸಿ ಮುದ್ರಿಸಿದೆ. ಕಳೆದ ಇಪ್ಪತ್ತು ವರ್ಷಗಳಲ್ಲಿ ಆ ಸಂಸ್ಥೆಯಿಂದ ಹೊರಬಿದ್ದಿರುವ ಮಲ್ಲಿಕಾರ್ಜುನನ 'ಸೂಕ್ತಿ ಸುಧಾರ್ಣವ', ನಂಜುಂಡ ಕವಿಯ 'ಕುಮಾರರಾಮ ಸಾಂಗತ್ಯ' (ಎರಡುಸಂಪುಟಗಳು), ಶ್ರೀಧರಾಚಾರ್ಯರ 'ಜಾತಕತಿಲಕ' (ಟಿಪ್ಪಣಿ ಗಳೊಡನೆ), ಕುಮಾರವ್ಯಾಸ ಭಾರತದ 'ಉದ್ಯೋಗಪರ್ವ'ದ ಪರಿಷ್ಕೃತಮುದ್ರಣ, ಸಿಂಹ ಭೂಪಾಲನ 'ಲಾಸ್ಯರಂಜನ' ಈ ಗ್ರಂಥಗಳು ಆ ಸಂಸ್ಥೆಯ ಗೌರವವನ್ನು ಕಾಯಲು ಅರ್ಹವಾಗಿವೆ.

ಕರ್ನಾಟಕ ವಿಶ್ವವಿದ್ಯಾನಿಲಯ ಜನ್ಮತಾಳಿ ಕೇವಲ ಹದಿನೈದು ವರ್ಷಗಳಿಗೆ ಮಿಕ್ಕಿದ್ದರೂ, ಮೈಸೂರು ವಿಶ್ವವಿದ್ಯಾನಿಲಯದ ಮಾದರಿಯಲ್ಲಿ ಕನ್ನಡದಲ್ಲಿ ತಕ್ಕಮಟ್ಟಿಗೆ ಉತ್ತಮವಾದ ಕೆಲಸವನ್ನು ಮಾಡಿದೆ. ಅದರ ಪ್ರಚಾರೋಪನ್ಯಾಸ ಮಾಲೆಯಲ್ಲಿ ಐವತ್ತಕ್ಕೂ ಮಿಕ್ಕ ಹೊತ್ತಗೆಗಳು. ಬೆಳಕು ಕಂಡಿವೆ. ವಿಶೇಷೋಪನ್ಯಾಸ ಮಾಲೆಗಳ ಹೊತ್ತಗೆಗಳೂ ಸಿದ್ಧವಾಗುತ್ತಿವೆ. ಎಲ್ಲಕ್ಕೂ ಮಿಗಿಲಾಗಿ ಆ ವಿಶ್ವವಿದ್ಯಾನಿಲಯದ ಕನ್ನಡ ಗ್ರಂಥಮಾಲೆಯಲ್ಲಿ ಪ್ರಕಟವಾಗಿರುವ ಡಾ. ಆರ್. ಸಿ. ಹಿರೇಮಠರಿಂದ ಸಂಪಾದಿತವಾಗಿರುವ 'ಚನ್ನಬಸವಣ್ಣನವರ ವಚನಗಳು' ಮತ್ತು ಡಾ. ಎಂ. ಎಸ್. ಸುಂಕಾಪುರರೊಡನೆ ಪೀಠಿಕೆ ಶಬ್ದಕೋಶಗಳೊಡನೆ ಸಂಪಾದಿಸಿರುವ 'ರಾಜಶೇಖರ ವಿಳಾಸ', 'ಸೋಮನಾಥಚಾರಿತ್ರ', 'ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರರತ್ನಾಕರ', 'ತ್ರಿಷಷ್ಠಿ ಪುರಾತನರ ಚರಿತ್ರೆ', ಡಾ. ಎಂ. ಎಸ್. ಸುಂಕಾಪುರರ 'ಕನ್ನಡ ಸಾಹಿತ್ಯದಲ್ಲಿ ಹಾಸ್ಯ', ಡಾ. ಬಿ. ಎಸ್. ಗದ್ದಗಿಮಠರ 'ಕನ್ನಡ ಜಾನಪದ ಗೀತಗಳು' ಈ ಗ್ರಂಥಗಳು ಸುಂದರವಾದ ಮುದ್ರಣದಿಂದ, ವಿಷಯ ಸಂಪತ್ತಿನಿಂದ ವಿದ್ವಾಂಸರನ್ನು ತಲೆದೂಗಿಸುವಂತಿವೆ. ಕನ್ನಡದ ಈ ಬೆಳಸನ್ನು ನೋಡಿದರೆ ಮುಂದೆ ಕನ್ನಡದ ಮುನ್ನಡೆಗೆ ಭಯವಿಲ್ಲ ಎನಿಸುತ್ತದೆ.

೨

ಕನ್ನಡ ನಾಡಿನಲ್ಲಿ ಮುದ್ರಣದ ಕಲೆ ಪ್ರಚಾರಕ್ಕೆ ಬಂದಂದಿನಿಂದಲೂ, ಹಳೆಯ ಸಾಹಿತ್ಯದ ಉತ್ತಮ ಕಾವ್ಯಗಳನ್ನೂ ನೂತನ ಕೃತಿಗಳನ್ನೂ ಪ್ರಕಟಿಸಿ, ಜನರಲ್ಲಿ ರುಚಿ ಶುದ್ಧಿಯನ್ನು ಮೂಡಿಸಲು ಯತ್ನಿಸಿ, ತಮ್ಮ ಕಷ್ಟನಷ್ಟಗಳನ್ನು ಲೆಕ್ಕಿಸದೆ ಈ ಕೆಲಸದಲ್ಲಿ ತೊಡಗಿದ್ದಾರೆ. ಈ ವಿಷಯದಲ್ಲಿ ಉತ್ತರ ಕರ್ನಾಟಕದಲ್ಲಿ 'ಮನೋಹರ ಗ್ರಂಥ ಮಾಲೆ' 'ಮಿಂಚಿನ ಬಳ್ಳಿ' ಎಂಬ ಎರಡು ಗ್ರಂಥಮಾಲೆಗಳು ಅದ್ಭುತವಾದ ಕೆಲಸ ವನ್ನು ಮಾಡಿವೆ. ಈ ಎರಡು ಮಾಲೆಗಳ ಸಂಚಾಲಕರು ಊರೂರು ತಿರುಗಿ, ಮನೆ ಮನೆಗಳಿಗೆ ಅಲೆದು ಜನರಲ್ಲಿ ವಾಚನಾಭಿರುಚಿ ಮೂಡುವಂತೆ ಮಾಡಿದ್ದಾರೆ.

ಮನೋಹರ ಗ್ರಂಥಮಾಲೆ ಪುರಸ್ಕೃತರಾದ ಲೇಖಕರನ್ನಲ್ಲದೆ, ಕಿರಿಯ ಲೇಖಕರನ್ನೂ ಸಂಭಾವಿಸಿ ಅವರ ಗ್ರಂಥಗಳನ್ನು ಪ್ರಕಟಿಸಿತು. ಆ ಮಾಲೆಯಲ್ಲಿ ನೂರು ಗ್ರಂಥಗಳು ಪ್ರಕಟವಾದ ತರುವಾಯ ಒಂದು ಉತ್ಸವವನ್ನು ನಡೆಸಿ, ಕನ್ನಡ ನಾಡುನುಡಿಗಳ ಹರಹನ್ನೂ, ಆದ ಆಗಬೇಕಾಗಿರುವ ಕೆಲಸವನ್ನೂ ಎತ್ತಿ ತೋರಿಸುವ 'ನಡೆದುಬಂದದಾರಿ' ಎಂಬ ಮೂರು ದೊಡ್ಡ ಸಂಪುಟಗಳನ್ನು ಪ್ರಕಟಿಸಿತು (೧೯೫೭). ಈಗಲೂ ಈ ಮಾಲೆ ಮುಂದುವರಿಯುತ್ತಿದ್ದು, ನವ್ಯಕವಿಗಳನ್ನೂ ನವ್ಯಲೇಖಕರನ್ನೂ ಪ್ರೋತ್ಸಾಹಿಸುತ್ತಿದೆ. ಮಿಂಚಿನ ಬಳ್ಳಿಯಿಂದ ಪ್ರಕಟವಾದ 'ಕನ್ನಡದ ಕಾಲುಶತಮಾನ' ಎಂಬ ಗ್ರಂಥ ಇಪ್ಪತ್ತೈದು ವರ್ಷಗಳಲ್ಲಿ ಕನ್ನಡ ನಾಡಿನಲ್ಲಿ ನಡೆದಿರುವ ಸರ್ವತೋಮುಖವಾದ ಪ್ರಗತಿಯನ್ನು ಸಾರುವ ಲೇಖನಗಳನ್ನು ಒಳಗೊಂಡ ಎಲ್ಲರೂ ಸಂಗ್ರಹಿಸಲೇ ಬೇಕಾದ ಗ್ರಂಥವಾಗಿದೆ.

ಪ್ರಕಟನೆಯ ಹಾದಿಯಲ್ಲಿ ಧಾರವಾಡದ 'ಸಮಾಜ ಪುಸ್ತಕಾಲಯ'ವೂ ಒಳ್ಳೆಯ ಕೆಲಸವನ್ನು ಮಾಡುತ್ತಿದೆ. ತನ್ನ ಇತರ ಪ್ರಕಟನೆಗಳ ಜೊತೆಗೆ ನವದೆಹಲಿಯ 'ಸಾಹಿತ್ಯ ಅಕಾಡೆಮಿ'ಯ ಕೆಲವು ಪ್ರಕಟನೆಗಳನ್ನೂ, ಕವಿವರ್ಯ ಶ್ರೀ ದ. ರಾ. ಬೇಂದ್ರೆಯವರ ಮತ್ತು ಶ್ರೀ ಶಂ. ಬಾ. ಜೋಶಿಯವರ ಕೃತಿಗಳನ್ನೂ ಹೊರತರುವ ಕೆಲಸವನ್ನು ಕೈಗೊಂಡಿರುವುದು ಸ್ತುತ್ಯತ್ಯರ್ಹವಾದ ಕೆಲಸ. ಇದಲ್ಲದೆ ಇತ್ತೀಚೆಗೆ ಪ್ರಕಟವಾದ ಶ್ರೀ ಶಂ. ಬಾ. ಜೋಶಿಯವರ 'ಕರ್ಣಾಟಕ ಸಂಸ್ಕೃತಿಯ ಪೂರ್ವ ಪೀಠಿಕೆ', ಶ್ರೀ ಕೆ. ಕೃಷ್ಣಭಟ್ಟರ 'ಕೌಟಿಲ್ಯನ ಅರ್ಥಶಾಸ್ತ್ರ', ಶ್ರೀ ಬೆಟಗೇರಿ ಕೃಷ್ಣಶರ್ಮರ 'ಕನಕದಾಸರ ಭಕ್ತಿ ಗೀತೆಗಳು', ಶ್ರೀ ವಿ. ಶಿವಾನಂದರ 'ಷಡಕ್ಷರ ದೇವ'—ಇವು ಇವರ ಅಮೂಲ್ಯ ಪ್ರಕಟನೆಗಳಲ್ಲಿ ಕೆಲವು.

ಉತ್ತಮವಾದ ಪ್ರಕಟನೆಯ ಕಾರ್ಯ ಮೈಸೂರು ನಗರದಲ್ಲಿಯೇ ಕೇಂದ್ರೀಕೃತ ವಾಗಿರುವಂತೆ ತೋರುತ್ತದೆ. ಬಹುಶಃ ಇಷ್ಟೊಂದು ಪ್ರಕಾಶನ ಸಂಸ್ಥೆಗಳು ಕನ್ನಡ ನಾಡಿನ ಬೇರೆ ಯಾವ ನಗರದಲ್ಲಿಯೂ ಇರಲಾರವು. ಈ ಸಂಸ್ಥೆಗಳಲ್ಲಿ ೧೯೩೦ರಲ್ಲಿ ಶಿವಮೊಗ್ಗೆಯಲ್ಲಿ ಜನ್ಮವೆತ್ತಿ ಈಗ ಮೈಸೂರು ನಗರದಲ್ಲಿ ಕೆಲಸಮಾಡುತ್ತಿರುವ 'ಕಾವ್ಯಾಲಯ'ಕ್ಕೆ ಅಗ್ರಮರ್ಯಾದೆ ಸಲ್ಲುತ್ತದೆ. ಕನ್ನಡನಾಡಿನ ಹಿರಿಯ ಹಾಗೂ ಕಿರಿಯ ಲೇಖಕರನ್ನು ತನ್ನ ವಲಯದೊಳಗೆ ಸೇರಿಸಿಕೊಂಡು, ಅದು ನಾನೂರಕ್ಕೂ ಮಿಕ್ಕು ಗ್ರಂಥಗಳನ್ನು ಹೊರತಂದಿದೆ ಎಂದರೆ ಅದು ಸಾಹಸದ ಮಾತೇ ಸರಿ. ಸುಸಂಪಾದಿತವಾದ ಹಳಗನ್ನಡ ನಡುಗನ್ನಡ ಕಾವ್ಯಗಳು, ಕಾವ್ಯ, ನಾಟಕ, ಕಥೆ, ಕಾದಂಬರಿ, ವಿಮರ್ಶೆ, ಭಾಷಾಂತರಗಳು, ಕೊನೆಗೆ ಮಕ್ಕಳ ಕಥೆಗಳು,—ಇವೆಲ್ಲ ಈ ಸಂಸ್ಥೆಯ ಪ್ರಕಟನೆಯ ವ್ಯಾಪ್ತಿಗೆ ಒಳಪಟ್ಟು, ಸಂಪಾದಕರ ಉತ್ತಮರುಚಿ ಶುದ್ಧಿಗೆ ಕೈಗನ್ನಡಿಯುಂತಿವೆ. ಹಾಗೆಯೇ ಈ ಪ್ರಕಟನೆಗಳಲ್ಲಿ ಬಳಸಿರುವ ಕಾಗದ, ಒಳ್ಳೆಯ ಮುದ್ರಣ, ಪುಸ್ತಕಗಳ ಸಮಷ್ಟಿ ಸೌಂದರ್ಯ ಇವು ಯಾರನ್ನಾದರೂ ಮೆಚ್ಚಿ ತಲೆದೂಗಿಸುವಂತಹವು. ಈ ಸಂಸ್ಥೆಯ ಕೆಲವು ಪ್ರಕಟನೆಗಳನ್ನು ಹೆಸರಿಸುವುದಾದರೆ

ಡಾ. ಡಿ. ವಿ. ಗುಂಡಪ್ಪನವರ 'ಗೀತಾ ತಾತ್ಪರ್ಯ', ಅಕಾಡೆಮಿಯ ಪ್ರಶಸ್ತಿಯನ್ನು ಗಳಿಸಿದ ಪ್ರೊ. ಎಸ್. ವಿ. ರಂಗಣ್ಣನವರ 'ರಂಗಬಿನ್ನಪ', ಪಂಡಿತ ಶ್ರೀ ಕೆ. ನರಸಿಂಹ ಶಾಸ್ತ್ರಿಗಳ 'ಪಂಚತಂತ್ರ' ಮತ್ತು 'ಹಿತೋಪದೇಶ'ಗಳ ಅನುವಾದ, ರವೀಂದ್ರನಾಥ ಠಾಕೂರರ ಕೃತಿಗಳ ಅನುವಾದ--ಮುಖ್ಯವಾದುವು. ಪ್ರೊ. ತೀ. ನಂ. ಶ್ರೀಕಂಠಯ್ಯನವರ 'ಗದಾಯುದ್ಧ ಸಂಗ್ರಹ', 'ನಂಬಿಯಣ್ಣನ ರಗಳೆ'ಗಳು ಸಂಪಾದನಕಾರ್ಯಕ್ಕೆ ಮೇಲ್ಪಂಕ್ತಿಯಾಗಿವೆ. ಇಂಗ್ಲಿಷ್ ಭಾಷಾಸಾಹಿತ್ಯಗಳು ಪ್ರಬಲವಾಗಿದ್ದಾಗ, ಕನ್ನಡ ನುಡಿ ಆಗತಾನೆ ತಲೆಯೆತ್ತುತ್ತಿದ್ದಾಗ, ಕಷ್ಟನಷ್ಟಗಳನ್ನು ಲೆಕ್ಕಿಸದೆ ಹಿರಿಯ ಲೇಖಕರ ಸಹಾಯದಿಂದ ಈ ಸಂಸ್ಥೆಯನ್ನು ಕಟ್ಟಿ, ಉತ್ತಮ ಗ್ರಂಥಗಳನ್ನು ಪ್ರಕಟಿಸಿ, ಜನರಲ್ಲಿ ಉತ್ತಮ ಸಂಸ್ಕಾರವನ್ನೂ ರುಚಿಶುದ್ಧಿಯನ್ನೂ ಉಂಟುಮಾಡಲು ಶ್ರಮಿಸುತ್ತಿರುವ 'ಕಾವ್ಯಾಲಯ' ನಮ್ಮ ನಾಡಿನ ಹಿರಿಯ ಹಾಗೂ ಹೆಮ್ಮೆಯ ಪ್ರಕಟನೆಯ ಸಂಸ್ಥೆಯಾಗಿದೆ.

ಕಾದಂಬರಿಗಳನ್ನೇ ಪ್ರಕಟಿಸಲು ಹೊರಟ ಮೈಸೂರಿನ 'ಉಷಾ ಸಾಹಿತ್ಯಮಾಲೆ' ಡಾ. ರಂ. ಶ್ರೀ. ಮುಗಳಿಯವರ 'ಕನ್ನಡ ಸಾಹಿತ್ಯಚರಿತ್ರೆ'ಯನ್ನು ಪ್ರಕಟಿಸಿ ವಿದ್ಯಾರ್ಥಿಗಳಿಗೂ ವಿದ್ವಾಂಸರಿಗೂ ಮಹೋಪಕಾರಮಾಡಿದೆ. ಇದೇ ಮಾಲೆಯಲ್ಲಿ ಪ್ರಕಟವಾದ ಕರ್ಣಾಟಕ ಕವಿಚರಿತೆಗೆ ಪೂರಕವಾದ ಇನ್ನೊಂದು ಗ್ರಂಥ ಶ್ರೀ ವೆಂಕಟೇಶ ಸಾಂಗಲಿ ಅವರ 'ಕನ್ನಡ ಗ್ರಂಥಕರ್ತರ ಚರಿತ್ರಕೋಶ'. ಹಾಗೆಯೇ ಶ್ರೀ ಡಿ. ವಿ. ಕೆ. ಮೂರ್ತಿಯವರ ಪ್ರಕಾಶನದಿಂದ ಹೊರಬಿದ್ದಿರುವ ಡಾ. ಎಚ್. ತಿಪ್ಪೇರುದ್ರಸ್ವಾಮಿಯವರ 'ಶರಣರ ಅನುಭಾವಸಾಹಿತ್ಯ', ಡಾ. ಪ್ರಭುಶಂಕರ್ ಅವರ 'ಕನ್ನಡದಲ್ಲಿ ಭಾವಗೀತೆ' ಎಂಬ ವಿದ್ವತ್ ಪ್ರಬಂಧ, ಡಾ. ಚಿದಾನಂದಮೂರ್ತಿಯವರ 'ಭಾಷಾ ವಿಜ್ಞಾನದ ಮೂಲತತ್ವಗಳು', ಗೀತಾ ಪುಸ್ತಕಾಲಯದ ಶ್ರೀ ತ. ಸು. ಶಾಮರಾಯರ 'ಕನ್ನಡ ನಾಟಕ', ಡಾ. ಹಾ. ಮಾ. ನಾಯಕರ 'ಸಮೀಕ್ಷೆ', ಮೋಹನ ಪ್ರಕಾಶನದ 'ನಗೇಂದ್ರರ ಶ್ರೇಷ್ಠ ಪ್ರಬಂಧಗಳು'; ತ. ವೆಂ. ಸ್ಮಾರಕ ಗ್ರಂಥಮಾಲೆಯ ಡಾ. ಜಿ. ಎಸ್. ಶಿವರುದ್ರಪ್ಪನವರ 'ಸೌಂದರ್ಯ ಸಮೀಕ್ಷೆ'; ಶ್ರೀ ತ.ಸು. ಶಾಮರಾಯರ 'ಜನಪ್ರಿಯ ಕನ್ನಡ ಸಾಹಿತ್ಯಚರಿತ್ರೆ', ಭಾರತೀ ಪ್ರಕಾಶನದ ಶ್ರೀ ಸಿ.ಪಿ.ಕೆ. ಅವರ 'ಕಾವ್ಯಾರಾಧನ', ಗಂಗಾತರಂಗ ಪ್ರಕಾಶನದ ಶ್ರೀ ಎಸ್. ಅನಂತನಾರಾಯಣ ಅವರ 'ಹೊಸಗನ್ನಡ ಸಾಹಿತ್ಯದ ಮೇಲೆ ಇಂಗ್ಲಿಷ್ ಕವಿಗಳ ಪ್ರಭಾವ', ಸುರುಚಿ ಪ್ರಕಾಶನದ ಶ್ರೀ ಜಿ. ಎಚ್. ವೀರಣ್ಣನವರ ಆತ್ಮಕಥೆಯಾದ 'ಕಲೆಯೇ ಕಾಯಕ' ಎಂಬ ಗ್ರಂಥಗಳು ಉಲ್ಲೇಖನಾರ್ಹವಾದುವು. ಹಾಗೆಯೇ ಮೈಸೂರಿನ ಶಾರದಾ ಮಂದಿರದಿಂದ ಪ್ರಕಟವಾಗಿರುವ ಡಾ.ಕೆ. ಕೃಷ್ಣಮೂರ್ತಿಯವರಿಂದ ಅನುವಾದಗೊಂಡ 'ಕಾವ್ಯಾಲಂಕಾರ' (ಭಾಮಹ), 'ಕಾವ್ಯಾದರ್ಶ' (ಭಾಗಶಃ), 'ಕಾವ್ಯಾಲಂಕಾರ ಸೂತ್ರವೃತ್ತಿ' (ವಾಮನ), 'ಔಚಿತ್ಯವಿಚಾರ ಚರ್ಚೆ' (ಕ್ಷೇಮೇಂದ್ರ), 'ಧ್ವನ್ಯಾಲೋಕ ಮತ್ತು ಲೋಚನ ಸಾರ' (ಆನಂದವರ್ಧನ ಮತ್ತು ಅಭಿನವಗುಪ್ತ),

'ಕಾವ್ಯಪ್ರಕಾಶ' (ಮಮ್ಮಟ) ; ಪ್ರೊ. ಎಸ್. ವಿ. ರಂಗಣ್ಣನವರ 'ಹೊನ್ನ ಶೂಲ', 'ಕಾಳಿದಾಸನ ನಾಟಕಗಳ ವಿಮರ್ಶೆ', ಪ್ರೊ. ಡಿ. ಎಲ್. ನರಸಿಂಹಾಚಾರ್ಯರಿಂದ ಸಂಪಾದಿತವಾದ ಮತ್ತು ರಚಿತವಾದ 'ಶಬ್ದಮಣಿದರ್ಪಣ' 'ವಡ್ಡಾರಾಧನೆ' 'ಕನ್ನಡ ಗ್ರಂಥಸಂಪಾದನೆ', ಪ್ರೊ. ತೀ. ನಂ. ಶ್ರೀಯವರ 'ಸಮಾಲೋಕನ'—ಈ ಗ್ರಂಥಗಳು ಕನ್ನಡದ ವಿದ್ವತ್ಪ್ರಪಂಚವನ್ನು ಬೆಳೆಸಿವೆ. ಇಷ್ಟೇ ಅಲ್ಲದೆ ಪ್ರೊ. ದೇ. ಜವರೇಗೌಡರಿಂದ ಸಂಪಾದಿತವಾದ 'ಕಬ್ಬಿಗರ ಕಾವ', ಶ್ರೀ ವೆಂಕಟರಾಮಪ್ಪನವರೊಡನೆ ಸಂಪಾದಿಸಿದ ನೇಮಿಚಂದ್ರನ 'ಲೀಲಾವತೀ ಪ್ರಬಂಧ', ಇಂಗ್ಲಿಷ್ ಹಾಗೂ ರಷ್ಯನ್ ಕಾದಂಬರಿಗಳ ಸಂಪೂರ್ಣ ಭಾಷಾಂತರಗಳಾದ 'ಹಮ್ಮು-ಬಿಮ್ಮು' (Pride and Prejudice), ಪುನರುತ್ಥಾನ (Resurrection), ಶ್ರೀ ಕೆ. ವೆಂಕಟರಾಮಪ್ಪನವರಿಂದ ಸಂಪಾದಿತವಾದ ಚಾಟುವಿಠಲನಾಥ ಕವಿಯ ಕನ್ನಡ ಭಾಗವತದ ಸಂಪುಟಗಳು; ಶ್ರೀ ಶ್ರೀರಂಗರ ಎರಡು ಸಂಪುಟಗಳಲ್ಲಿ ಹೊರಬಿದ್ದಿರುವ ನಲವತ್ತೇಳು ಏಕಾಂಕಗಳು, (ಶ್ರೀರಂಗನಾಟ್ಯತರಂಗ I, II)—ಈ ಮಾಲೆಯ ಉಲ್ಲೇಖಾರ್ಹ ಪ್ರಕಟನೆಗಳು. ಮೈಸೂರಿನ ಈ ಪ್ರಕಾಶನಗಳಲ್ಲದೆ ದೊಡ್ಡ ಬಂಡವಾಳವನ್ನು ಹೂಡಿ ದೊಡ್ಡದೊಡ್ಡ ಗ್ರಂಥಗಳನ್ನು ಹೊರತರುತ್ತಲಿರುವ ಬೆಂಗಳೂರಿನ ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರದವರು ಶ್ರೀ ಸಿ.ಪಿ.ಕೆ. ಅವರ 'ಸಾಹಿತ್ಯ ಪ್ರವೇಶ' (W.H. Hudson -Introduction to the Study of Literature) ಎಂಬ ಗ್ರಂಥವನ್ನು ಪ್ರಕಟಿಸಿ ಜನತೆಗೆ ಉಪಕಾರವೆಸಗಿದ್ದಾರೆ. ಬೆಂಗಳೂರಿನ ಇನ್ನೊಂದು ದೊಡ್ಡ ಪ್ರಕಟನ ಸಂಸ್ಥೆಯಾದ 'ಶಾರದಾ ಪ್ರಕಟನಾಲಯ' ಅನೇಕ ಸಣ್ಣ ಕಥೆ, ಕಾದಂಬರಿ, ನಾಟಕಗಳನ್ನು ಪ್ರಕಟಿಸಿ ತರುಣಲೇಖಕರನ್ನು ಪ್ರೋತ್ಸಾಹಿಸಿದೆ. ವಿವಿಧ ವಿಷಯಗಳ ಮೇಲೆ ಸುಲಭ ಬೆಲೆಯ ಗ್ರಂಥಗಳನ್ನು ಪ್ರಕಟಿಸಿರುವ ಮದರಾಸಿನ ದಕ್ಷಿಣ ಭಾಷಾ ಪುಸ್ತಕ ಸಂಸ್ಥೆಯು ಮಾಡಿರುವ ಕೆಲಸವೂ ಗಮನಾರ್ಹವಾಗಿದೆ. ನನ್ನ ಗಮನಕ್ಕೆ ಬರದಿರುವ ಇನ್ನೂ ಅನೇಕ ಪ್ರಕಾಶನ ಸಂಸ್ಥೆಗಳಿರಬೇಕು. ಈ ಸಣ್ಣ ಅವಲೋಕನದಲ್ಲಿ ಅವುಗಳನ್ನು ಅವಲೋಕಿಸಲು ಸಾಧ್ಯವಿಲ್ಲದುದಕ್ಕೆ ವಿಷಾದಿಸಬೇಕಾಗಿದೆ.

ಇನ್ನೆರಡು ವಿಷಯಗಳನ್ನು ನಿರೂಪಿಸಿ ಈ ಅವಲೋಕನವನ್ನು ಮುಗಿಸ ಬಯಸುತ್ತೇನೆ. ವಿಶ್ವವಿದ್ಯಾನಿಲಯಗಳೂ, ಖಾಸಗೀ ಸಂಸ್ಥೆಗಳೂ ಗ್ರಂಥಗಳನ್ನು ಪ್ರಕಟಿಸುತ್ತಿದ್ದರೂ, ಗ್ರಂಥಕರ್ತರೇ ತಮ್ಮ ಗ್ರಂಥಗಳನ್ನು ಅಚ್ಚಿಟ್ಟುಕೊಂಡಿರುವ ಸಂದರ್ಭವುಂಟು. ನೆನಪಿಗೆ ಬಂದ ಕೆಲವನ್ನು ಮಾತ್ರ ಇಲ್ಲಿ ಉಲ್ಲೇಖಿಸಬಯಸುತ್ತೇನೆ. ಕನ್ನಡನಾಡಿನಲ್ಲಿಯೇ ಅತ್ಯಂತ ಸಾಹಸಜೀವಿಗಳಾದ ಶ್ರೀ ಕೆ. ಶಿವರಾಮ ಕಾರಂತರು ತಮ್ಮ ಗ್ರಂಥಗಳನ್ನು ತಾವು ಅಚ್ಚಿಟ್ಟುಕೊಂಡಿರುವರಲ್ಲದೆ, 'ವಿಜ್ಞಾನ ಪ್ರಪಂಚ'ವೆಂಬ ಐದು ಸಂಪುಟಗಳಲ್ಲಿ ವಿಜ್ಞಾನಲೋಕದ ದರ್ಶನವನ್ನು ಮಾಡಿ ಕೊಡುವ ಸಾಹಸಕಾರ್ಯದಲ್ಲಿ ತೊಡಗಿ, ನಾಲ್ಕು ಸಂಪುಟಗಳನ್ನು ಹೊರತಂದಿದ್ದಾರೆ. ಎಂದಿನಿಂದಲೂ ಡಾ. ಮಾಸ್ತಿ ವೆಂಕಟೇಶ ಐಯ್ಯಂಗಾರರು ತಮ್ಮ ಗ್ರಂಥಗಳನ್ನು ತಾವೇ

ಪ್ರಕಟಿಸಿಕೊಳ್ಳುತ್ತಿದ್ದರು. ಹದಿನೈದು ವರ್ಷಗಳ ಕಾಲ 'ಜೀವನ' ಪತ್ರಿಕೆಯಲ್ಲಿ ಅವರು ಬರೆದ ಸಂಪಾದಕೀಯ ಟಿಪ್ಪಣಿಗಳು ಈಗ ಐದು ಸಂಪುಟಗಳಲ್ಲಿ ಹೊರಬಿದ್ದಿವೆ. ಈ ಸಂಪುಟಗಳಲ್ಲಿ ಹೃದಯಕ್ಕೆ ಆನಂದ, ಬುದ್ಧಿಗೆ ಬೇಕಾದಷ್ಟು ಅನ್ನ ದೊರಕುತ್ತದೆ. ಕನ್ನಡದ ವಿಷಯದಲ್ಲಿ ಅಭಿಮಾನ, ಭಾರತದ ವಿಷಯದಲ್ಲಿ ಪ್ರೇಮ, ವ್ಯಕ್ತಿವಿಷಯ ದಲ್ಲಿ ಆದರಾಭಿಮಾನಗಳು, ದೇಶದ ಆಡಳಿತದ ವಿಷಯದಲ್ಲಿ ನಿಷ್ಪಕ್ಷಪಾತವಾದ ಸಲಹೆ ಇವುಗಳಿಂದ ಕೂಡಿರುವ ಈ ಗ್ರಂಥಗಳು ಮನಸ್ಸನ್ನು ರಂಜಿಸುತ್ತವೆ. ಮೈಸೂರಿನ ಉದಯರವಿ ಪ್ರಕಾಶನದಲ್ಲಿ ಇಪ್ಪತ್ತೆಂಟು ವರ್ಷಗಳ ಹಿಂದೆ 'ವಿಚಾರವಾಹಿನಿ' ಎಂಬ ಪತ್ರಿಕೆಯಲ್ಲಿ ಮೂಡಿದ 'ಮಲೆಗಳಲ್ಲಿ ಮದುಮಗಳು' ಎಂಬ ಶ್ರೀ ಕುವೆಂಪು ಅವರ ಕಾದಂಬರಿ, ಎಂಟುನೂರಕ್ಕೂ ಮಿಕ್ಕಪುಟಗಳಲ್ಲಿ ಸಮಗ್ರರೂಪವನ್ನು ತಳೆದುಬಂದಿದೆ. ಕವಿಗಳಾದ ಶ್ರೀ ಎಸ್. ವಿ. ಪರಮೇಶ್ವರಭಟ್ಟರು ತಮ್ಮ ಗ್ರಂಥಗಳನ್ನು ಪ್ರಕಟಿಸುವುದ ಕ್ಕಾಗಿ 'ಸರಸ ಪ್ರಕಾಶನ' ಗ್ರಂಥಮಾಲೆಯನ್ನು ಆರಂಭಿಸಿ, ಕಾಳಿದಾಸನ ಕೃತಿಗಳ ತಮ್ಮ ಅನುವಾದಗಳೆಲ್ಲವನ್ನೂ 'ಕಾಳಿದಾಸ ಮಹಾಸಂಪುಟ' ಎಂಬ ಹೆಸರಿನಲ್ಲಿ ಹೊರತಂದಿದ್ದಾರೆ. ಹಾಗೆಯೇ 'ಗಾಥಾ ಸಪ್ತಶತಿ'ಯೂ ಸಂಪೂರ್ಣವಾಗಿ ಅವರಿಂದ ಅನುವಾದಗೊಂಡಿದೆ. ಇದಲ್ಲದೆ ಅವರೇ ಸಾಂಗತ್ಯದ ಛಂದಸ್ಸಿನಲ್ಲಿ ರಚಿಸಿರುವ 'ಇಂದ್ರಚಾಪ' 'ಚಂದ್ರವೀಧಿ' ಎಂಬ ಕೃತಿಗಳಲ್ಲಿ 'ಇಂದ್ರಚಾಪ' ಉತ್ತಮೋತ್ತಮ ವಾಗಿದೆ. ರತ್ನಾಕರ ಹೊನ್ನಮ್ಮರಾದ ಮೇಲೆ ಸಾಂಗತ್ಯವನ್ನು ಇಷ್ಟು ಸಶಕ್ತವಾಗಿ ಬಳಸಿದ ಕವಿಯನ್ನು ನಾನು ಕಂಡಿಲ್ಲ. ಇಷ್ಟೇ ಅಲ್ಲದೆ ಶ್ರೀಯುತರು ನಂಜುಂಡ ಕವಿಯ ಕುಮಾರರಾಮ ಸಾಂಗತ್ಯದ ಸಮಗ್ರಕೃತಿಯನ್ನು ಪರಿಚಯಮಾಡಿಕೊಡುವ ಪ್ರೊ. ದೇ. ಜವರೇಗೌಡರ 'ನಂಜುಂಡಕವಿ', ಡಾ .ಎಂ. ಚಿದಾನಂದಮೂರ್ತಿಯವರ ಸಂಶೋಧನ ಲೇಖನಗಳನ್ನು 'ಸಂಶೋಧನ ತರಂಗ' ಎಂಬ ಹೆಸರಿನಿಂದ ಪ್ರಕಟಿಸಿರು ವುದು ಗಮನಾರ್ಹ.

ಮೇಲಿನ ಸಣ್ಣ ಅವಲೋಕನದಿಂದ ಕನ್ನಡದಲ್ಲಿ ಪ್ರಕಟನೆಯ ಕಾರ್ಯ ಎಷ್ಟು ಮುಖದಲ್ಲಿ ನಡೆಯುತ್ತಿದೆ ಎಂಬುದು ಸ್ವಲ್ಪಮಟ್ಟಿಗಾದರೂ ಸ್ಪಷ್ಟವಾಗುತ್ತದೆ. ಕನ್ನಡದಲ್ಲಿ ಹೊಸಸಾಹಿತ್ಯದ ಸೃಷ್ಟಿಕಾರ್ಯ ತಕ್ಕಮಟ್ಟಿಗೆ ನಡೆಯುತ್ತಿದೆ. ಹೊಸದೇ ಆಗಲಿ, ಹಳೆಯದೇ ಆಗಲಿ ಸಾಹಿತ್ಯದಲ್ಲಿ ಜಳ್ಳನ್ನು ತೂರಿ ಕಾಳನ್ನು ಸಂರಕ್ಷಿಸುವ ಕಾರ್ಯವೂ ನಡೆಯುತ್ತಿದೆ. ಆದರೂ ಒಂದೆರಡು ಕೊರತೆಗಳನ್ನು ಇಲ್ಲಿ ಹೇಳಲೇಬೇಕು. ಇನ್ನುಮುಂದೆ ಅಕ್ಷರಸ್ಥರ ಸಂಖ್ಯೆ ಹೆಚ್ಚಾಗುವುದೇ ಹೊರತು ಹಿಂದೆ ಬೀಳುವುದಿಲ್ಲ. ಪ್ರಪಂಚವೋ ನಾಗಾಲೋಟದಿಂದ ಮುಂದುವರೆಯುತ್ತಿದೆ. ಹೀಗಿರುವಲ್ಲಿ ಈಗ ಬಂದಿರುವ ಬೆಳೆಯಿಂದಲೇ ನಾವು ತೃಪ್ತರಾಗಬಾರದು. ಜ್ಞಾನಕ್ಕಾಗಿ ಆಸೆ ಪಡುತ್ತಿರುವ ನಮ್ಮ ಜನರಿಗೆ ನಮ್ಮ ದೇಶದ ಮತ್ತು ಹೊರದೇಶಗಳ ಇತಿಹಾಸದ ಪ್ರಮಾಣ ಗ್ರಂಥಗಳೂ, ಸಮಾಜ ವಿಜ್ಞಾನ, ವೈದ್ಯ, ಭೌತರಸಾಯನ ಮತ್ತು ಇತರ ವಿಜ್ಞಾನ ಗ್ರಂಥಗಳೂ ಕೋಶಗಳೂ ಹೆಚ್ಚು ಸಂಖ್ಯೆಯಲ್ಲಿ ಬರಬೇಕು. ಜ್ಞಾನವಿತರಣೆಯ

ಕೆಲಸ ಮುಗಿಯದ ಕೆಲಸ; ಒಬ್ಬನಂತೂ ಮಾಡಿಮುಗಿಸದ ಕೆಲಸ. ಹಲವುಜನ ಈ ಜ್ಞಾನ ರಥದ ನೊಗಕ್ಕೆ ಹೆಗಲುಕೊಟ್ಟು ಅದನ್ನು ಮುಂದೆ ಎಳೆಯಬೇಕು. ಕನ್ನಡ ಮೂಲಕ ಜನ ವಿದ್ಯಾವಂತರಾಗಿ ನಾಡು ಮುಂದುವರೆದರೆ ಆಗ ವಿಶ್ವವಿದ್ಯಾನಿಲಯಗಳೂ ಪರಿಷತ್ತು ಹುಟ್ಟಿದ್ದಕ್ಕೆ ಸಾರ್ಥಕ. ಲೇಖಕರೂ ಪ್ರಕಾಶಕರೂ ಭಾಷಾಋಣವನ್ನು ತೀರಿಸಿ ನಾಡನ್ನು ಮುಕ್ತಿಗೊಳಿಸಿದಂತಾಗುತ್ತದೆ.

೬

'ಪ್ರಬುದ್ಧ ಕರ್ಣಾಟಕ' ನಮ್ಮ ನಾಡಿನ ವಿದ್ಯಾವಂತರ, ವಿದ್ವಾಂಸರ ಪತ್ರಿಕೆಯಾಗಿ ಜನರ ಸಾಹಿತ್ಯಾಭಿರುಚಿಯನ್ನು ತಿದ್ದುವುದರಲ್ಲಿ ಈ ಐವತ್ತುವರ್ಷಗಳ ಕಾಲ ಮಾಡಿರುವ ಕೆಲಸ ಈಗಾಗಲೇ ಮನೆಮಾತಾಗಿದೆ. ಕನ್ನಡ ನಾಡಿನಲ್ಲಿ ಒಂದು ಪತ್ರಿಕೆ ಐವತ್ತುವರ್ಷಗಳ ಕಾಲ ಬದುಕಿಬರುವುದು ಸಾಮಾನ್ಯವಾದ ವಿಷಯವೇನಲ್ಲ. 'ಪ್ರಬುದ್ಧ ಕರ್ಣಾಟಕ' ಈ ಪವಾಡವನ್ನು ಎಸಗಿದೆ. ಸರ್ವಾಂಗಸುಂದರವಾಗಿ, ಸುಪುಷ್ಟವಾಗಿ, ವಿವಿಧವಿಷಯಗಳನ್ನು ಒಳಗೊಂಡು, ಪಂಡಿತಪಾಮರರನ್ನು ರಂಜಿಸಿ, ಆದರೆ ತನ್ನ ಉಚ್ಚ ಆದರ್ಶದಿಂದ ಕೆಳಗಿಳಿಯದೆ ಕನ್ನಡನಾಡಿನಲ್ಲಿ ಉಳಿದು ಬೆಳೆದುಬಂದಿರುವ ಪತ್ರಿಕೆ ಇದೊಂದೇ ಎಂದರೆ ಇದೇನೂ ಅತಿಶಯೋಕ್ತಿಯಲ್ಲ. 'ಪ್ರಬುದ್ಧ ಕರ್ಣಾಟಕ' ಈಗ ಸುಪ್ರಸಿದ್ಧರಾಗಿರುವ ಅನೇಕ ಕವಿ, ಕತೆಗಾರ, ನಾಟಕಕಾರ, ಲೇಖಕ, ವಿದ್ವಾಂಸರನ್ನು ಹೊರತಂದಂತೆ, ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘದ ಮೂಲಕ ಗ್ರಂಥಗಳನ್ನು ಪ್ರಕಟಿಸಿ, ಕನ್ನಡದಲ್ಲಿ ಗ್ರಂಥಪ್ರಕಟನೆಗೆ ಒಂದು ಮೇಲ್ಪಂಕ್ತಿಯನ್ನು ಹಾಕಿಕೊಟ್ಟಿತು. ವಿಷಯದ ಆಯ್ಕೆ, ಮುದ್ರಣ, ಗ್ರಂಥದ ಸರ್ವಾಂಗ ಸೌಂದರ್ಯ ಹಾಗೂ ಅಚ್ಚುಕಟ್ಟು, ಇವುಗಳಿಗೆಲ್ಲ ಕರ್ಣಾಟಕ ಸಂಘದ ಪ್ರಕಟನೆಗಳು ಇತರ ಪ್ರಕಟನೆಗಳಿಗೆ ಮಾದರಿಯಾದುವು. 'ಉಮರನ ಒಸಗೆ' 'ಮೈಸೂರು ದೇಶದ ವಾಸ್ತುಶಿಲ್ಪ' 'ಗದಾಯುದ್ಧ ನಾಟಕಂ' 'ಅಶ್ವತ್ಥಾಮನ್' 'ಭಕ್ತಿಭಂಡಾರಿ ಬಸವಣ್ಣನವರು' 'ಭಾಸನ ಏಕಾಂಕ ನಾಟಕಗಳು' 'ಚೀನಾದೇಶದ ಬೌದ್ಧಯಾತ್ರಿಕರು'—ನೆನಪಿಗೆ ಬಂದ ಈ ಹೆಸರುಗಳೇ ಸಾಕು, ಪ್ರಕಟವಾದ ಗ್ರಂಥಗಳ ಯೋಗ್ಯತೆಯನ್ನು ತೂಗಿನೋಡುವುದಕ್ಕೆ. ಈ ಗ್ರಂಥಗಳ ಬೆಲೆ ಆಗ ಸ್ವಲ್ಪ ಹೆಚ್ಚೆಂದು ಗೊಣಗಿದವರೂ ಉಂಟು. ನಿಜ, ಒಳ್ಳೆಯ ಲೇಖಕರು, ಮುದ್ರಣ, ಕಾಗದ, ಅಚ್ಚುಕೂಟ ಬೇಕಾದರೆ ಗ್ರಂಥಗಳಿಗೆ ಸ್ವಲ್ಪ ಹೆಚ್ಚು ಬೆಲೆಯನ್ನು ತೆರಬೇಕಾದುದು ಅನಿವಾರ್ಯ. ಆದರೆ ಕಾಲಕ್ರಮದಲ್ಲಿ ಇದೇ ಸುಲಭವೆಂದು ತೋರುತ್ತದೆ. ಇನ್ನೊಂದು ವಿಷಯ. 'ಪ್ರಬುದ್ಧ ಕರ್ಣಾಟಕ' ತನ್ನ ಚಂದಾದಾರರಿಗೆ 'ವಸಂತ ಕುಸುಮಾಂಜಲಿ' 'ನಿವೇದನ' 'ಇಂಗ್ಲಿಷ್ ಗೀತೆಗಳು' 'ತಾವರೆ'—ಈ ಗ್ರಂಥಗಳನ್ನು ಓದಿಸಿದ್ದುದನ್ನೂ ನಾವು ಮರೆಯುವಂತಿಲ್ಲ. ಅಲ್ಲದೆ ಈ ಪ್ರಕಟನೆಯ ಸತ್ಸಂಪ್ರದಾಯವನ್ನು ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘ ಉಳಿಸಿಕೊಂಡು ಬೆಳಸಿಕೊಂಡು ಬಂದಿರುವುದಲ್ಲದೆ ಸುಂದರವಾದ ಆಕಾರದಲ್ಲಿ ಅನೇಕ

ಪುಸ್ತಕಗಳನ್ನು ಹೊರತಂದಿದೆ. ಆ ಕರ್ಣಾಟಕ ಸಂಘದ ಪ್ರಕಟನೆಗಳಲ್ಲಿ 'ಸಂಸಕವಿ' 'ಕರ್ಣಾಟಕ ಮಾಳವಿಕಾಗ್ನಿ ಮಿತ್ರನಾಟಕ', 'ಹೆಜ್ಜೆಪಾಡು', 'ಸೊಹ್ರಾಬ್ ಮತ್ತು ರುಸ್ತುಂ', 'ಅಭಿಜ್ಞಾನಶಾಕುಂತಳ ನಾಟಕದ ವಿಮರ್ಶೆ'—ಇವು ಉಲ್ಲೇಖಾರ್ಹ ವಾದುವು. ಈ ಗ್ರಂಥಗಳ ಪ್ರಕಟನೆಗಾಗಿ ತಮ್ಮ ದೇಹಶ್ರಮವನ್ನೂ ಲಕ್ಷಿಸದೆ ವಿದ್ಯಾರ್ಥಿ ಗಳಿಗಾಗಿ, ಕನ್ನಡಕ್ಕಾಗಿ ಕೈಂಕರ್ಯನಡೆಸಿದ ಶ್ರೀ ಜಿ. ಪಿ. ರಾಜರತ್ನಂ ಅವರು ಅಭಿನಂದ ನಾರ್ಹರು.

೭

ಕೊನೆಯ ಮಾತಾಗಿ ಕನ್ನಡನಾಡಿನಲ್ಲಿ ಪ್ರಕಾಶನ ಪ್ರಪಂಚದ ಭವಿಷ್ಯವನ್ನು ಕುರಿತು ಒಂದೆರಡು ಮಾತುಗಳನ್ನು ಹೇಳುವುದು ಅಪ್ರಕೃತವೆನಿಸಲಾರದು. ಮುಂಬರುವ ದಿನಗಳಲ್ಲಿ ಭಾರತದಲ್ಲಿ ಅಕ್ಷರಸ್ಥರ, ವಿದ್ಯಾವಂತರ ಸಂಖ್ಯೆ ಒಂದಕ್ಕೆ ಹತ್ತಾಗಿ ಬೆಳೆಯುವುದ ರಲ್ಲಿ ಸಂದೇಹವೇ ಇಲ್ಲ. ದಿನಕಳೆದಂತೆ ಅಖಂಡ ಕರ್ಣಾಟಕದಲ್ಲಿ ಸ್ವಲ್ಪ ನಿಧಾನವಾದರೂ ಸುದೃಢವಾದ ಸ್ಥಾನ ನಮ್ಮ ಜೀವನದ ವ್ಯವಹಾರದ ಎಲ್ಲ ಹಂತಗಳಲ್ಲಿಯೂ ಕನ್ನಡ ನುಡಿಗೆ ದೊರಕುತ್ತದೆ. ಎಂದ ಮೇಲೆ ಜನತೆಗೆ, ವಿದ್ಯಾವಂತರಿಗೆ ಬೇಕಾಗುವ ಉಪಯುಕ್ತ ವಾಗುವ ಗ್ರಂಥಗಳನ್ನು ಒದಗಿಸುವ ಭಾರ ಪ್ರಕಾಶಕರ ಮೇಲೆ ಬಿದ್ದಂತಾಗಿದೆ. ಈ ದೃಷ್ಟಿಯಿಂದ ನೋಡಿದರೆ ಮುಂದಿನ ದಿನಗಳಲ್ಲಿ ಪ್ರಕಾಶನಕಾರ್ಯ ಒಂದಕ್ಕೆ ಹತ್ತಾಗಿ, ನೂರಾಗಿ ಅಭಿವೃದ್ಧಿಗೊಳ್ಳಬೇಕಾಗುತ್ತದೆ. ಮೈಸೂರು ವಿಶ್ವವಿದ್ಯಾನಿಲಯ ಇಂಗ್ಲಿಷ್–ಕನ್ನಡ ನಿಘಂಟನ್ನು ಪರಿಷ್ಕರಿಸಿ ಹೊರತಂದಾಗ, ವಿಶ್ವಕೋಶವನ್ನು ಪ್ರಕಟಿಸಿದಾಗ, ಕನ್ನಡ ಸಾಹಿತ್ಯ ಪರಿಷತ್ತು 'ಕನ್ನಡ–ಕನ್ನಡ ನಿಘಂಟ'ನ್ನು ಪ್ರಕಟಿಸಿದಾಗ ಪ್ರಕಾಶನ ಕಾರ್ಯಕ್ಕೆ ತುಂಬ ಅನುಕೂಲವಾಗಬಹುದು. ಇನ್ನು ಮುಂದಾದರೂ ಕನ್ನಡ ಸಾಹಿತ್ಯ ಪರಿಷತ್ತು ಸಣ್ಣ ಸಣ್ಣ ಪ್ರಕಟನೆಗಳನ್ನು ತರುವ ಗೋಜಿಗೆ ಹೋಗದೆ, ಹಿಂದೆ ಅದು ಪ್ರಕಟಿಸಿದ ಕಾವ್ಯಗಳನ್ನು ಮುನರ್ಮುದ್ರಿಸಬೇಕು (ಉದಾ: ಪಂಪ ಭಾರತ, ಪಂಪ ರಾಮಾಯಣ). ಕವಿಚರಿತೆಯ ಉಳಿದ ಭಾಗಗಳನ್ನು ಬೇಗ ಹೊರತರಬೇಕು. ಪ್ರಮಾಣ ಭೂತವಾದ ಕೆಲವು ವೈಜ್ಞಾನಿಕ ನಿಘಂಟುಗಳ ಸಿದ್ಧತೆಗಾಗಿ ಪ್ರಯತ್ನಿಸಬೇಕು. ಮೈಸೂರು–ಕರ್ನಾಟಕ ವಿಶ್ವವಿದ್ಯಾನಿಲಯಗಳು ದೊಡ್ಡ ಪ್ರಮಾಣದಲ್ಲಿ ಪ್ರಕಟನೆಯ ಕಾರ್ಯವನ್ನು ಕೈಗೊಂಡಿವೆ. ಇವುಗಳ ಜೊತೆಗೆ ಬೆಂಗಳೂರು ವಿಶ್ವವಿದ್ಯಾನಿಲಯವೂ ಬೇಗ ತನ್ನ ಪ್ರಕಟನೆಯ ಕಾರ್ಯವನ್ನು ಪ್ರಾರಂಭಿಸಿದೆ. ಕೇಂದ್ರ ಸರ್ಕಾರದ ಹಾಗೂ ನಮ್ಮ ಸರ್ಕಾರದ ವಿದ್ಯಾನೀತಿಯಿಂದಾಗಿ ನಮ್ಮ ವಿಶ್ವವಿದ್ಯಾನಿಲಯ ದಲ್ಲಿ ಈಗಾಗಲೇ ಬಳಕೆಯಲ್ಲಿರುವ ಕನ್ನಡಮಾಧ್ಯಮ ಸರ್ವಜನಪ್ರಿಯವಾಗಿ ಸುಪುಷ್ಟ ವಾಗುತ್ತದೆ. ಕನ್ನಡಮಾಧ್ಯಮವನ್ನು ಜನಪ್ರಿಯವಾಗಿ ಮಾಡುವ ಹೊಣೆ ಹೊರೆ ನಾಡಿನ ಮೂರು ವಿಶ್ವವಿದ್ಯಾಲಯಗಳ ಮೇಲೂ ಅದರ ಅಧ್ಯಾಪಕರ ಮೇಲೂ ಬಿದ್ದಿದೆ. ಈ ವಿಷಯದಲ್ಲಿ ನಮ್ಮ ವಿಶ್ವವಿದ್ಯಾನಿಲಯಗಳು ಮಾಡಬೇಕಾಗಿರುವ ಮುಖ್ಯ ಕೆಲಸ

ಗಳು ಮೂರು: ಮೊದಲನೆಯದಾಗಿ ಪ್ರಮಾಣಭೂತವಾದ ಪಠ್ಯಪುಸ್ತಕಗಳ ಭಾಷಾಂತರ; ಎರಡನೆಯದಾಗಿ ಅನುಭವಿಗಳೂ ಸುಸಮರ್ಥರೂ ಆದ ಪ್ರಾಧ್ಯಾಪಕರಿಂದ ಸರಳ ಸುಂದರವಾದ ಕನ್ನಡದಲ್ಲಿ ಪ್ರೌಢ ಪಠ್ಯಪುಸ್ತಕಗಳ ರಚನೆ; ಮೂರನೆಯದಾಗಿ ಪ್ರಮಾಣಭೂತವಾದ ವೈಜ್ಞಾನಿಕ ನಿಘಂಟುಗಳ ರಚನೆ.* ಎಲ್ಲ ವಿಶ್ವವಿದ್ಯಾನಿಲಯ ಗಳೂ ಒಂದೇ ಕೆಲಸವನ್ನು ಮಾಡದೆ, ಪ್ರತಿನಿಧಿ ರೂಪವಾದ ಸಮಿತಿಗಳ ಮೂಲಕ ಈ ಕೆಲಸವನ್ನು ಹಂಚಿಕೊಳ್ಳಬೇಕು. ಹತ್ತಾರು ವರ್ಷಗಳ ಕಾಲ ವಿಶ್ವವಿದ್ಯಾನಿಲಯಗಳಿಗೆ ಈ ಕೆಲಸವೇ ಇರುತ್ತದೆ. ಕೇಂದ್ರದ ಹಾಗೂ ಸ್ಥಳೀಯ ಸರ್ಕಾರದ ವಿಪುಲ ಧನಸಹಾಯ ದಿಂದ ಬಹು ಜನಧನಸಾಧ್ಯವಾದ ಈ ಕೆಲಸವನ್ನು ನಿರ್ವಹಿಸಬಲ್ಲವು.

ಇಷ್ಟಾದರೂ ನಾವು ಖಾಸಗಿಯ ಪ್ರಕಾಶಕರನ್ನು ಕಡೆಗಣಿಸುವಂತಿಲ್ಲ. ಹಳೆಯ ಕೃತಿಗಳ ಪ್ರಕಟನೆ, ನವ್ಯ ಕೃತಿಗಳು, ಬೇರೆಯ ಭಾಷೆಯ ಸಾಹಿತ್ಯಕೃತಿಗಳ ಭಾಷಾಂತರ, ವಿಮರ್ಶೆ—ಇವೇ ಮೊದಲಾದ ಗ್ರಂಥಗಳ ಪ್ರಕಟನೆಗೆ ಖಾಸಗಿ ಪ್ರಕಾಶಕನು ಅವಶ್ಯಕ ವಾಗಿ ಬೇಕೇಬೇಕು. ಏಕೆಂದರೆ ಸರ್ಕಾರವಾಗಲೀ, ವಿಶ್ವವಿದ್ಯಾನಿಲಯಗಳಾಗಲೀ ಎಲ್ಲ ಪ್ರಕಟನೆಗಳ ಭಾರವನ್ನು ಹೊರಲಾರವಷ್ಟೆ. ಪಠ್ಯಪುಸ್ತಕೋಪಜೀವಿಗಳಾದ ಪ್ರಕಾಶಕ ರನ್ನು ಕುರಿತು ನಾನು ಇಲ್ಲಿ ಮಾತನಾಡುತ್ತಿಲ್ಲ. ಕಾರಣ ಅವರು ಪ್ರಕಟಿಸುವುದು ತಾತ್ಕಾಲಿಕ ಸಾಹಿತ್ಯ. ಆದರೆ ಚಿರಕಾಲಿಕವಾದ ಸಾಹಿತ್ಯವನ್ನು ಪ್ರಕಟಿಸುವ ಪ್ರಕಾಶಕ ರಿಗೆ ಸರ್ಕಾರ ಕೊಡುತ್ತಿರುವ ಉತ್ತೇಜನವೇನು? ಪ್ರಕಾಶಕನು ಮೊದಲು ಕೊಡುವುದು ಇಡಿಗಂಟು; ಆಮೇಲೆ ಬರುವುದು ಪುಡಿಗಂಟು. ಒಂದು ಒಳ್ಳೆಯ ಗ್ರಂಥದ ಸಾವಿರ ಪ್ರತಿಗಳು ಮಾರಾಟವಾಗಲು ಹತ್ತುವರ್ಷಗಳು ಬೇಕಾದರೆ ಯಾವ ಪ್ರಕಾಶಕನಿಗೆ ತಾನೆ ಪ್ರಕಟನೆಯಲ್ಲಿ ಉತ್ಸಾಹವಿರುತ್ತದೆ? ಸರ್ಕಾರ ಪ್ರಕಾಶಕರ ವಿಚಾರದಲ್ಲಿ ಈ ರೀತಿಯ ಸಹಾಯಮಾಡಬಹುದಲ್ಲವೇ? ನಮ್ಮ ಸಂಸ್ಥಾನದಲ್ಲಿ ಸಾವಿರಕ್ಕೂ ಮಿಕ್ಕ ಹೈಸ್ಕೂಲುಗಳಿವೆ. ಪುಸ್ತಕಗಳನ್ನು ಕೊಳ್ಳಲು ಅವುಗಳಿಗೆ ಸಾಕಷ್ಟು ಹಣವಿರುತ್ತದೆ. ಆದರೆ ಆ ಶಾಲೆಗಳು ಕೊಳ್ಳುವುದು ಉತ್ತಮೋತ್ತಮ ಗ್ರಂಥಗಳನ್ನಲ್ಲ. ವಿದ್ಯಾಭ್ಯಾಸದ ಇಲಾಖೆ ಸಮರ್ಥರ ಸ್ಥಾಯಿಸಮಿತಿಯೊಂದನ್ನು ನೇಮಿಸಿ ಇಂಥದೇ ಪುಸ್ತಕಗಳನ್ನು ಕೊಳ್ಳಬೇಕೆಂಬ ನಿರೂಪವನ್ನು ಹೊರಡಿಸಬೇಕು. ಇದರಿಂದ ಎರಡು ಲಾಭ: ಪ್ರಕಾಶಕನಿಗೆ ಪ್ರೋತ್ಸಾಹ; ಭಂಡಾರಗಳಿಗೆ ಒಳ್ಳೆಯ ಗ್ರಂಥಗಳ ಗಳಿಕೆ. ಅಲ್ಲದೆ ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಪುಸ್ತಕ ಭಂಡಾರಗಳ ಸ್ಥಾಪನೆಗಾಗಿ ಸರ್ಕಾರ ನಲವತ್ತೈದುಲಕ್ಷ ರೂಪಾಯಿಗಳನ್ನು ವೆಚ್ಚಮಾಡಲಿರುವುದೆಂದು ಕೇಳುತ್ತೇವೆ. ಇದು ವಿತರಣೆಯಿಂದ ವೆಚ್ಚವಾದರೆ ಉತ್ತಮ ಪ್ರಕಾಶಕರು ಬದುಕಿಕೊಂಡರು. ಏಕೆಂದರೆ ಒಂದೊಂದು ಒಳ್ಳೆಯ ಪ್ರಕಾಶನ ಸಂಸ್ಥೆ ಹತ್ತಾರು ಲೇಖಕರಿಗೆ ಆಶ್ರಯಕೊಡುವ ಕಲ್ಪ ವೃಕ್ಷವಿದ್ದಂತೆ. ಈ ಸಂಸ್ಥೆಗಳನ್ನು ಉಜ್ಜೀವಿಸುವಕಾರ್ಯ ಸರ್ಕಾರದ್ದು, ಅದಕ್ಕಿಂತಲೂ ಹೆಚ್ಚಾಗಿ ಮಹಾಜನಗಳದ್ದು ಎಂದು ಮಾತ್ರ ಇಲ್ಲಿ ಹೇಳಬಹುದಾಗಿದೆ.

---

* ಈ ನಿಟ್ಟಿನಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ಇತ್ತೀಚಿನ ಕಾರ್ಯ ಮನನೀಯವಾಗಿದೆ.

ಕನ್ನಡವು ಸಂಮಿಶ್ರಿತ ಭಾಷೆ. ಅದರ ಶರೀರದಲ್ಲಿ ಬಹುಭಾಗ ಸಂಸ್ಕೃತದಿಂದ ಪರಿಪುಷ್ಟವಾದುದು. ಇದಕ್ಕಾಗಿ ಅದು ತಲೆತಗ್ಗಿಸಲು ಕಾರಣವಿಲ್ಲ. ಸಂಸ್ಕೃತಕ್ಕೆ ಕೂಡ ಋಣದ ಪ್ರಸಕ್ತಿ ತಪ್ಪಿಲ್ಲವೆಂದು ಕೆಲವರು ಹೇಳುತ್ತಾರೆ. ಪ್ರಪಂಚದ ಬಹುಭಾಗವನ್ನಾಕ್ರಮಿಸಿಕೊಂಡು ಆಳುತ್ತಿರುವ ಇಂಗ್ಲಿಷಿನ ಶರೀರದಲ್ಲಿ ಅನ್ಯಭಾಷಾ ಸಾಮಗ್ರಿಯಿಂದ ಬೆಳೆದ ಭಾಗವೇನೊ ಕಡಮೆಯಾಗಿಲ್ಲ. ಆ ಅನ್ಯಭಾಷೆಗಳ ವಿಷಯದಲ್ಲಿ ಇಂಗ್ಲೀಷೇನೂ ಸೇವಕಭಾವವನ್ನು ತಾಳಿಲ್ಲ. ಕನ್ನಡವೂ ಆ ಧೋರಣೆಯನ್ನನುಸರಿಸಬೇಕು. ಎಲ್ಲ ಭಾಷೆಗಳೂ ವಿಶ್ವಪ್ರಕೃತಿಯವು; ಅವುಗಳಲ್ಲಿ ತನಗೆ ಬೇಕಾದ ಸಾಮಗ್ರಿ ಯಾವುದರಲ್ಲಿದ್ದರೂ ಅದನ್ನು ಆರಿಸಿಕೊಳ್ಳುವ ಅಧಿಕಾರವು ಪ್ರತಿಯೊಂದು ಭಾಷೆಗೂ ಉಂಟು. ಹಾಗೆ ಮಾಡದ ಭಾಷೆಯು ಆತ್ಮವಂಚನೆಮಾಡಿಕೊಳ್ಳುತ್ತದೆ.

—ಡಿ. ವಿ. ಗುಂಡಪ್ಪ

ಎಚ್. ನರಸಣ್ಣ

ಮುದ್ರಣ

ಪಾಶ್ಚಾತ್ಯದೇಶಗಳಲ್ಲಿ ಬೆಳೆಯುತ್ತಿದ್ದ ಮುದ್ರಣಕಲೆ ಕ್ರೈಸ್ತಪಾದ್ರಿಗಳ ಮೂಲಕ ಕ್ರಿ.ಶ. ೧೫೫೬ರ ಸೆಪ್ಟೆಂಬರ್ ೬ನೇ ತಾರೀಖು ಇಂಡಿಯಾದೇಶದ ಗೋವಾವನ್ನು ಪ್ರವೇಶಿಸಿತು. ಗೋವ ಮೂಲಕ ಅಬಿಸೀನಿಯಾಕ್ಕೆ ಹೋಗಬೇಕಾಗಿದ್ದ ಮುದ್ರಣ ಯಂತ್ರ ಕಾರಣಾಂತರಗಳಿಂದ ಗೋವಾದಲ್ಲಿಯೇ ನಿಂತಿತು. ಕ್ರೈಸ್ತಮತಕ್ಕೆ ಸಂಬಂಧಿಸಿದ ಧರ್ಮಗ್ರಂಥಗಳನ್ನು ಗೋವದಲ್ಲಿ ಮುದ್ರಿಸಿ ಅಬಿಸೀನಿಯಾಕ್ಕೆ ಕಳುಹಿಸ ಲಾಗುತ್ತಿದ್ದಿತು. ಮೊಟ್ಟಮೊದಲು ಇಂಡಿಯ ದೇಶಭಾಷೆಯಲ್ಲಿ ಮುದ್ರಣಾಕ್ಷರಗಳನ್ನು ತಯಾರಿಸಿದ ಕೀರ್ತಿ ಸ್ಪೆಯಿನ್‌ದೇಶದ ಗೋನ್‌ಸಾಲ್ವ್ಸ್ (Gonsalves) ಎಂಬುವನಿಗೆ ಸಲ್ಲುತ್ತದೆ. ಇವನು ಮೊಟ್ಟಮೊದಲು ಮಲೆಯಾಳಿ ಭಾಷೆಯ ಅಚ್ಚಿನ ಅಕ್ಷರಗಳನ್ನು ತಯಾರಿಸಿದನು. ತರುವಾಯ ಫೇರಿಯ (Faria) ಎಂಬುವನು ತಮಿಳಿನ ಅಚ್ಚಿನ ಅಕ್ಷರಗಳನ್ನು ತಯಾರಿಸಿದನೆಂದು ತಿಳಿದುಬರುತ್ತದೆ.

ಗೋನ್‌ಸಾಲ್ವ್ಸ್ (Gonsalves) ಕನ್ನಡದ ಅಚ್ಚಿನ ಅಕ್ಷರಗಳನ್ನು ತಯಾರಿಸ ಬೇಕೆಂದು ಯೋಚಿಸಿದ್ದನು. ಆದರೆ ಹೆಚ್ಚು ತೊಡಕಾದ ಈ ಅಕ್ಷರಗಳನ್ನು ತಯಾರಿಸುವ ಕಾರ್ಯವನ್ನು ಅವನು ಕೈಗೊಳ್ಳಲಿಲ್ಲ ಎಂದು ಫಾದರ್ ಜೆ. ಸಿ. ರೊಡೆಲ್ಸ್ ಎಂಬುವನು ಅಭಿಪ್ರಾಯಪಟ್ಟಿದ್ದಾನೆ.

ಕನ್ನಡ ಮುದ್ರಣಕಾರ್ಯವನ್ನು ಮೊಟ್ಟಮೊದಲು ಮದರಾಸಿನ ಪೋರ್ಟ್ ಸೆಂಟ್ ಜಾರ್ಜ್ ಕಾಲೇಜಿನ ಮುದ್ರಣಾಲಯದಲ್ಲಿ ಕೈಗೊಳ್ಳಲಾಯಿತು. ಈ ಮುದ್ರಣಾಲಯ ದಲ್ಲಿ ರೆವರೆಂಡ್ ವಿಲಿಯಂ ರೀವ್ (Rev. William Reeve) ಎಂಬುವನು ಸಂಗ್ರಹಿಸಿದ ಇಂಗ್ಲಿಷ್–ಕನ್ನಡ ನಿಘಂಟು ೧೮೨೭ರಲ್ಲಿ ಮುದ್ರಿತವಾಯಿತು. ಜೆ. ಎಂ. ಮೆಕೆರೆಲ್‌ನ (J. M. M'Kerrel) ಕರ್ಣಾಟಕ ಭಾಷೆಯ ವ್ಯಾಕರಣಶಾಸ್ತ್ರ (A grammar of the Carnatic language) ೧೮೨೦ರಲ್ಲಿ ಮದರಾಸಿನಲ್ಲಿ ಪ್ರಕಟವಾಯಿತು. ಆದುದ ರಿಂದ ಮದರಾಸಿನಲ್ಲಿ ಕನ್ನಡ ಮುದ್ರಣ ೧೮೨೦ರಲ್ಲಿ ಅಥವಾ ಅದಕ್ಕೂ ಹಿಂದೆ ಪ್ರಾರಂಭ ವಾಗಿರಬಹುದೆಂದು ಊಹಿಸಬಹುದು. ಮದರಾಸಿನ ಸೆಂಟ್ ಜಾರ್ಜ್ ಕಾಲೇಜಿನ ಮುದ್ರಣಾಲಯದಲ್ಲಿ ಬಳಸಿದ ಕನ್ನಡ ಅಚ್ಚಿನ ಮೊಳೆಗಳು ಮದರಾಸಿನಲ್ಲಿಯೇ ತಯಾರಾ

ದುವು. ಮದರಾಸಿನಲ್ಲಿ ಕನ್ನಡ ಮುದ್ರಣ ಪ್ರಾರಂಭವಾಗುವುದಕ್ಕೆ ಮೊದಲೆ ಡಾ. ಡಬ್ಲ್ಯು. ಕಾರೆ (Dr. W. Carey)ಯ ಕರ್ಣಾಟಕ ಭಾಷೆಯ ವ್ಯಾಕರಣ ೧೮೧೭ರಲ್ಲಿ ಮತ್ತು ಬೈಬಲಿನ ಕನ್ನಡ ಅನುವಾದಗ್ರಂಥ ೧೮೨೩ರಲ್ಲಿ ಬಂಗಾಳದ ಸೆರಮ್ ಪೋರಿನಲ್ಲಿ ಮಿಷನರಿಗಳಿಂದ ಅಚ್ಚಾದುವು; ಡಾ. ಕಾರೆ ಕನ್ನಡ ಅಚ್ಚಿನ ಮೊಳೆಗಳನ್ನು ತಯಾರಿಸಿದ್ದನು ಎಂದು ಕೆಲವು ವಿದ್ವಾಂಸರು ಅಭಿಪ್ರಾಯಪಡುತ್ತಾರೆ.

ಸರ್ ಛಾರ್ಲ್ಸ ಮೆಟ್‌ಕಾಪ್ ಎಂಬುವನು ಮುದ್ರಣದ ಮೇಲಿನ ನಿರ್ಬಂಧವನ್ನು ಸಡಿಲಿಸಿದನು. ಇದರಿಂದ ಮದರಾಸಿನಲ್ಲಿದ್ದ ಮುದ್ರಣಾಲಯಗಳ ಸಂಖ್ಯೆ ಹೆಚ್ಚಿತು. ೧೮೬೩ರಲ್ಲಿ ದೇಶೀಯರು ಸ್ಥಾಪಿಸಿದ್ದ ಹತ್ತು ಮುದ್ರಣಾಲಯಗಳು ಮದರಾಸಿನಲ್ಲಿದ್ದುವು. ಅಂದರೆ ಸುಮಾರು ನೂರು ವರ್ಷಗಳ ಹಿಂದೆಯೇ ಪ್ರಪಂಚದ ಇತರ ಭಾಗಗಳಲ್ಲಿ ಮುದ್ರಣಕಲೆಯಲ್ಲಿ ಮುಂದುವರಿದ ದೇಶಗಳಲ್ಲಿನ ಮುದ್ರಣಾಲಯಗಳಿಗೆ ಸರಿಗಟ್ಟುವ ಮುದ್ರಣಾಲಯಗಳು ಮದರಾಸಿನಲ್ಲಿದ್ದುವೆಂಬ ವಿಷಯ ಹೆಮ್ಮೆಯ ಸಂಗತಿಯಾಗಿದೆ.

ಮದರಾಸಿನಲ್ಲಿ ಪ್ರಾರಂಭವಾದ ಕನ್ನಡ ಮುದ್ರಣ ತರುವಾಯ ಕನ್ನಡನಾಡಿನ ಬಳ್ಳಾರಿ, ಬೆಂಗಳೂರು ಮತ್ತು ಮಂಗಳೂರುಗಳಲ್ಲಿ ಬೆಳೆಯಲು ಕ್ರೈಸ್ತಪಾದ್ರಿಗಳು ಕಾರಣರಾದರು. ಮಂಗಳೂರಿನ ಅಕ್ಕಸಾಲಿ ವಂಶಕ್ಕೆ ಸೇರಿದ ಅನಂತಾಚಾರ್ಯ ಎಂಬುವರು ಕನ್ನಡ ಮುದ್ರಣಾಕ್ಷರಗಳ ಅಂದವಾದ ಕೆತ್ತನೆಗೆ ಬಹಳವಾಗಿ ಶ್ರಮಿಸಿದರು.

ಹತ್ತೊಂಬತ್ತನೆ ಶತಮಾನದ ಉತ್ತರಾರ್ಧದಲ್ಲಿ ಕೆಲವು ಸಾಹಿತ್ಯಗ್ರಂಥಗಳು ಬಳ್ಳಾರಿ, ಬೆಂಗಳೂರು, ಮತ್ತು ಮಂಗಳೂರು ನಗರಗಳಲ್ಲಿನ ಮುದ್ರಣಾಲಯಗಳಲ್ಲಿ ಅಚ್ಚಾದುವು. ದಕ್ಷಿಣ ಮರಾಠ ಕನ್ನಡವನ್ನು ಕಲಿಯಲು ಬಹಳ ಪ್ರಯೋಜನ ಕಾರಿಯಾದ ಕೆನರೀಸ್ ಸ್ಕೂಲ್ ಬುಕ್ಸ್ (Canarese school books) ಎಂಬ ಹೊಸಗನ್ನಡ ಗದ್ಯಪುಸ್ತಕದ ನಾಲ್ಕು ಭಾಗಗಳು ಮಂಗಳೂರಿನ ಬೇಸಲ್ ಮಿಶನ್ ಮುದ್ರಣಾಲಯದಲ್ಲಿ ೧೮೮೨ ಮತ್ತು ೧೮೮೬ರ ಮಧ್ಯೆ ಮುದ್ರಿತವಾದುವು. ಈ ಪುಸ್ತಕದ ಐದನೇ ಭಾಗ ೧೮೮೬ರಲ್ಲಿ ಮೈಸೂರು ಮುದ್ರಣಾಲಯದಲ್ಲಿ ಅಚ್ಚಾಯಿತು. ಮಂಗಳೂರಿನ ಬೇಸಲ್ ಮಿಶನ್ ಮುದ್ರಣಾಲಯದಲ್ಲಿ ಶಬ್ದಮಣಿದರ್ಪಣ ೧೮೭೨ರಲ್ಲಿಯೂ, ನಾಗವರ್ಮನ ಛಂದಸ್ಸು ೧೮೭೫ರಲ್ಲಿಯೂ, ಕಿಟಲ್ ನಿಘಂಟು ೧೮೯೪ರಲ್ಲಿಯೂ ಮುದ್ರಿತವಾದುವು. ಬೆಂಗಳೂರಿನ ವಿಚಾರದರ್ಪಣ ಮುದ್ರಾಕ್ಷರ ಶಾಲೆಯಲ್ಲಿ ಅನುಭವಾಮೃತ ೧೮೭೪ರಲ್ಲಿಯೂ, ಜ್ಞಾನಸಿಂಧು ೧೮೭೯ರಲ್ಲಿಯೂ ಮುದ್ರಿತವಾದುವು. ಬೆಂಗಳೂರಿನ ವಿಚಾರದರ್ಪಣ ಮುದ್ರಣಾಲಯದಲ್ಲಿ ಕೈವಲ್ಯ ಪದ್ಧತಿ ೧೮೭೩ರಲ್ಲಿಯೂ, ಕುಮಾರವ್ಯಾಸ ಭಾರತ ೧೮೭೫ರಲ್ಲಿಯೂ, ಕುಮಾರ ವಾಲ್ಮೀಕಿ ರಾಮಾಯಣ ೧೮೮೧ರಲ್ಲಿಯೂ ಮುದ್ರಿತವಾದುವು. ಬೆಂಗಳೂರಿನ ಕೃಷ್ಣರಾಜವಿಲಾಸ ಮುದ್ರಣಾಲಯದಲ್ಲಿ ಜೈಮಿನಿ ಭಾರತ ೧೮೬೧ರಲ್ಲಿ ಮುದ್ರಿತವಾಯಿತು. ಬೆಂಗಳೂರಿನ ಲಕ್ಷ್ಮೀವಿಲಾಸ ಮುದ್ರಣಾಲಯದಲ್ಲಿ ಗಿರಿಜಾಕಲ್ಯಾಣ ೧೮೮೬ರಲ್ಲಿ ಅಚ್ಚಾಯಿತು. ರಾಜಶೇಖರವಿಲಾಸ ಬೆಂಗಳೂರಿನ ಕೃಷ್ಣರಾಜವಿಲಾಸ

ಮುದ್ರಣಾಲಯದಲ್ಲಿ ೧೮೬೬ರಲ್ಲಿ ಅಚ್ಚಾಗಿ ಹೊರಬಿದ್ದಿತು. ಶಬರಶಂಕರವಿಲಾಸ ಬಳ್ಳಾರಿಯ ಚಿತ್ರಲಿಪಿ ಶಾರದ ಮುದ್ರಣಾಲಯದಲ್ಲಿ ೧೮೮೬ರಲ್ಲಿಯೂ, ಸೋಮೇಶ್ವರ ಶತಕ ಮೈಸೂರಿನ ವೆಸ್ಲಿ ಮಿಶನ್ ಮುದ್ರಣಾಲಯದಲ್ಲಿ ೧೮೭೨ರಲ್ಲಿಯೂ ಮುದ್ರಿತವಾದವು.

ಕನ್ನಡದಲ್ಲಿ ಒತ್ತಕ್ಷರಗಳಿರುವುದರಿಂದ ಕನ್ನಡ ಮುದ್ರಣ ಕಲೆಯ ಬೆಳವಣಿಗೆಗೆ ಅಡಚಣೆಯುಂಟಾಗಿದೆ ಎಂದು ಕೆಲವರು ವಾದಿಸುತ್ತಾರೆ. ಒತ್ತಕ್ಷರಗಳಿಲ್ಲದಿದ್ದರೆ ಮುದ್ರಣದಲ್ಲಿ ಕೆಲವು ಪ್ರಯೋಜನಗಳಿವೆ; ಅಚ್ಚಿನ ಮೊಳೆಗಳ ಸಂಖ್ಯೆ ಕಡಿಮೆಯಾಗುತ್ತದೆ; ಅಚ್ಚಿನ ಮೊಳೆಗಳನ್ನು ಜೋಡಿಸುವುದು ಸುಲಭ; ಪುಟದಲ್ಲಿ ಹೆಚ್ಚು ಪಂಕ್ತಿಗಳು ಬರುತ್ತವೆ; ಅಂದರೆ ಒತ್ತಕ್ಷರಗಳಿಲ್ಲದಿದ್ದರೆ ಅಚ್ಚಿನ ಮೊಳೆಗಳ ಉಳಿತಾಯ, ಕಾಲದ ಉಳಿತಾಯ, ಕಾಗದದ ಉಳಿತಾಯವಾಗುತ್ತದೆ; ಎಲ್ಲಕ್ಕಿಂತ ಮಿಗಿಲಾಗಿ ಮುದ್ರಣ ಸೌಂದರ್ಯ ಹೆಚ್ಚುತ್ತದೆ. ಮತ್ತು ಮುದ್ರಣ ಖರ್ಚಿನ ಉಳಿತಾಯವಾಗುತ್ತದೆ ಎಂಬುದನ್ನು ನಾವು ಒಪ್ಪಿಕೊಳ್ಳಲೇಬೇಕು. ಆದರೆ ಕನ್ನಡದಲ್ಲಿ ಒತ್ತಕ್ಷರಗಳಿರುವುದೇ ಕನ್ನಡ ಮುದ್ರಣಕಲೆಯ ಬೆಳವಣಿಗೆಗೆ ಅಡಚಣೆ ಎಂಬುದನ್ನು ಸಂಪೂರ್ಣವಾಗಿ ಒಪ್ಪಲು ಸಾಧ್ಯವಿಲ್ಲ. ಜಪಾನ್ ಭಾಷೆಯ ವರ್ತಮಾನ ಪತ್ರಿಕೆ ಮತ್ತು ಶಾಲೆಯ ಪಠ್ಯಪುಸ್ತಕಗಳ ಮುದ್ರಣಕ್ಕೆ ಸುಮಾರು ೨೦೦೦ ಅಕ್ಷರಗಳನ್ನು ಉಪಯೋಗಿಸಬೇಕಾಗುತ್ತದೆ; ಸಾಹಿತ್ಯಗ್ರಂಥಗಳ, ವಿಜ್ಞಾನ ಪುಸ್ತಕಗಳ ಮತ್ತು ವಿಶ್ವಕೋಶ ಮುದ್ರಣಕ್ಕೆ ಸುಮಾರು ೯೦೦೦ ವಿವಿಧ ಬಗೆಯ ಅಕ್ಷರಗಳನ್ನು ಉಪಯೋಗಿಬೇಕಾಗುತ್ತದೆ ಎಂದು ಹೇಳುತ್ತಾರೆ. ಆದರೂ ಜಪಾನ್ ಇಂದು ಮುದ್ರಣ ಕಲೆಯಲ್ಲಿ ಬಹಳ ಮುಂದುವರಿದಿರುವ ದೇಶವಾಗಿದೆ. ಒತ್ತಕ್ಷರಗಳಿಲ್ಲದ ಕನ್ನಡ ಪುಸ್ತಕವೊಂದು ಹತ್ತೊಂಬತ್ತನೆ ಶತಮಾನದ ಮಧ್ಯಭಾಗದಲ್ಲಿ ಹೊಸರೀತಿಯಲ್ಲಿ ಮುದ್ರಿತವಾಗಿತ್ತು ಎಂಬ ವಿಷಯ ನಮ್ಮನ್ನು ಚಕಿತಗೊಳಿಸುತ್ತದೆ. ಕೊಡಗಿನ ರಾಜ ವೀರರಾಜೇಂದ್ರ ಒಡೆಯನ ಜೀವನಚರಿತ್ರೆ 'ರಾಜೇಂದ್ರನಾಮೆ' ಒತ್ತಕ್ಷರಗಳಿಲ್ಲದೆ ನವೀನರೀತಿಯಲ್ಲಿ ಮುದ್ರಿತವಾದ ಕನ್ನಡ ಗದ್ಯಪುಸ್ತಕ. ಇದು ೧೮೫೭ರಲ್ಲಿ ಮಂಗಳೂರು ಜರ್ಮನ್ ಮಿಶನ್ ಮುದ್ರಣಾಲಯದಲ್ಲಿ ಮುದ್ರಿತವಾಯಿತು.

ಕನ್ನಡದಲ್ಲಿ ಇಲ್ಲಿಯವರೆವಿಗೆ ಸುಮಾರು ನಲವತ್ತು ಸಾವಿರ ಪುಸ್ತಕಗಳು ಅಚ್ಚಾಗಿರಬಹುದೆಂದೂ ಅವುಗಳಲ್ಲಿ ಸುಮಾರು ಮುಕ್ಕಾಲು ಭಾಗ ಪುಸ್ತಕಗಳು ಇಪ್ಪತ್ತೈದು ವರ್ಷಗಳಿಂದೀಚೆಗೆ ಮುದ್ರಿತವಾಗಿರಬಹುದೆಂದೂ ಅಂದಾಜು ಮಾಡಬಹುದು. ಕನ್ನಡನಾಡಿನಲ್ಲಿ ಮುದ್ರಣಾಲಯಗಳು ಅದರಲ್ಲೂ ಪುಸ್ತಕ ಮುದ್ರಣಕ್ಕೆ ಯೋಗ್ಯವಾದ ಮುದ್ರಣಾಲಯಗಳು ಮುಖ್ಯವಾಗಿ ಬೆಂಗಳೂರು, ಮಂಗಳೂರು, ಮೈಸೂರು, ಧಾರವಾಡ ನಗರಗಳಲ್ಲಿ ಸ್ಥಾಪಿತವಾಗಿವೆ. ಕನ್ನಡ ಪುಸ್ತಕಗಳನ್ನು ಅತ್ಯುತ್ತಮವಾಗಿ ಮುದ್ರಿಸಲು ಯೋಗ್ಯವಾದ ಮುದ್ರಣಾಲಯಗಳು ಈಚಿನ ವರ್ಷಗಳಲ್ಲಿ ಬೊಂಬಾಯಿ, ಮದರಾಸು ಮತ್ತು ಡೆಲ್ಲಿ ನಗರಗಳಲ್ಲಿ ಸ್ಥಾಪಿತವಾಗಿರುವುದು

ಹೆಮ್ಮೆಯ ವಿಷಯವಾಗಿದೆ. ನಮ್ಮ ಕನ್ನಡನಾಡಿನಲ್ಲಿ ಕೆಲವು ದೊಡ್ಡದೊಡ್ಡ ಊರುಗಳಲ್ಲಿ ಚಿಕ್ಕಪುಟ್ಟ ಮುದ್ರಣಾಲಯುಗಳಿರುವುದೂ ಉಂಟು.

ನಮ್ಮ ನಾಡಿನಲ್ಲಿ ತಕ್ಕ ಸಾಧನಸಲಕರಣೆಗಳಿಲ್ಲದ ಚಿಕ್ಕ ಮುದ್ರಣಾಲಯುಗಳ ಸಂಖ್ಯೆಯೇ ಹೆಚ್ಚು. ನಮ್ಮಲ್ಲಿಯೇ ಏಕೆ, ಮುದ್ರಣಕಲೆಯಲ್ಲಿ ಬಹಳ ಮುಂದುವರಿದಿರುವ ಇಂಗ್ಲೆಂಡ್, ಅಮೆರಿಕ ಮೊದಲಾದ ಪಾಶ್ಚಾತ್ಯದೇಶಗಳಲ್ಲಿಯೂ ಚಿಕ್ಕ ಮುದ್ರಣಾಲಯುಗಳ ಸಂಖ್ಯೆಯೇ ಅಧಿಕ. ಇಂಗ್ಲೆಂಡಿನಲ್ಲಿ ೧೯೫೨ರಲ್ಲಿ ಹತ್ತು ಕೆಲಸಗಾರರಿಗಿಂತ ಕಡಿಮೆ ಕೆಲಸಗಾರರನ್ನುಳ್ಳ ಮುದ್ರಣಾಲಯುಗಳ ಸಂಖ್ಯೆ ೧೮೦೦, ಒಂದು ಸಾವಿರಕ್ಕಿಂತ ಹೆಚ್ಚು ಕೆಲಸಗಾರರನ್ನೊಳಗೊಂಡ ಮುದ್ರಣಾಲಯುಗಳ ಸಂಖ್ಯೆ ಕೇವಲ ೨೦ ಇದ್ದುವೆಂದು ತಿಳಿದುಬಂದಿದೆ.

ಮುದ್ರಣ ಕೈಗಾರಿಕೆಯಲ್ಲಿ ಬಹಳ ಮುಂದುವರಿದ ಬ್ರಿಟನ್ ಮತ್ತು ಅಮೆರಿಕ ದೇಶಗಳಲ್ಲಿ ಮುದ್ರಣ ಉತ್ಪತ್ತಿ ಹೆಚ್ಚಿದಂತೆ ಮುದ್ರಣ ಗುಣ ಕಡಿಮೆಯಾಗುವುದಿಲ್ಲ. ಇದಕ್ಕೆ ಮುಖ್ಯಕಾರಣ ಅಲ್ಲಿಯ ಕೆಲಸಗಾರರಿಗೆ ಮುದ್ರಣಕಲೆಯ ವಿಚಾರದಲ್ಲಿ ಒಳ್ಳೆಯ ತರಬೇತು ಕೊಟ್ಟಿರುತ್ತಾರೆ. ಬ್ರಿಟನ್ನಿನ ಕಾರ್ಖಾನೆಗಳಲ್ಲಿ ಮತ್ತು ಔದ್ಯೋಗಿಕ ಶಾಲೆಗಳಲ್ಲಿ ಮುದ್ರಣಕಲೆಯಲ್ಲಿ ಆಸಕ್ತಿಯುಳ್ಳವರಿಗೆ ಸರಿಯಾದ ತರಬೇತುಕೊಡುತ್ತಾರೆ. ಮುದ್ರಣಕಲೆಯ ಪ್ರತಿಯೊಂದು ವಿಭಾಗದಲ್ಲಿಯೂ ಐದು ಅಥವಾ ಆರು ವರ್ಷಗಳು ಶಿಕ್ಷಣ ಪಡೆಯಬೇಕಾಗುತ್ತದೆ. ಅಲ್ಲಿ ಮುದ್ರಣಾಲಯುಗಳ ಮಾಲೀಕರೂ ಮತ್ತು ಕೆಲಸಗಾರ ಸಂಘದವರೂ ಹೊಸಬರಿಗೆ ಈ ಕಲೆಯಲ್ಲಿ ಸಂಪೂರ್ಣ ತರಬೇತು ನೀಡಲು ಒಬ್ಬರೊಡನೊಬ್ಬರು ಸಹಕರಸಿ ದುಡಿಯುತ್ತಾರೆ. ಆದುದರಿಂದ ಈ ದೇಶಗಳಲ್ಲಿ ಒಳ್ಳೆಯ ನುರಿತ ಕೆಲಸಗಾರರು ಸಾಕಷ್ಟು ಸಂಖ್ಯೆಯಲ್ಲಿ ದೊರಕುತ್ತಾರೆ. ಈ ದೇಶಗಳಲ್ಲಿ ಚಿಕ್ಕ ಮುದ್ರಣಾಲಯದ ಮಾಲೀಕರೂ ಮುದ್ರಣಕಲೆಯಲ್ಲಿ ಶಿಕ್ಷಣ ಪಡೆಯದೆ ಈ ಉದ್ಯಮವನ್ನು ಕೈಗೊಳ್ಳುವುದಿಲ್ಲ. ನಮ್ಮಲ್ಲಿ ಇಪ್ಪತ್ತೈದು ವರ್ಷಗಳಿಂದೀಚೆಗೆ ಮುದ್ರಣಾಲಯುಗಳ ಸಂಖ್ಯೆಯೇನೊ ಬೆಳೆದಿದೆ. ಆದರೆ ನಮ್ಮಲ್ಲಿ ಮುದ್ರಣಕಲೆಯ ತರಬೇತಿಗೆ ಹೆಚ್ಚು ಗಮನಕೊಟ್ಟಿಲ್ಲ. ಕೆಲಸಗಾರರಿಗೆ ಓದುಬರಹ ಬರಲಿ ಅಥವಾ ಬರದಿರಲಿ, ಅವನಿಗೆ ಮುದ್ರಣಕಲೆಯಲ್ಲಿ ಆಸಕ್ತಿ ಇರಲಿ ಅಥವಾ ಇಲ್ಲದಿರಲಿ ನಮ್ಮ ಮುದ್ರಣಾಲಯುಗಳಲ್ಲಿ ಎಲ್ಲ ಬಗೆಯ ಕೆಲಸಗಾರರಿಗೂ ಕೆಲಸ ಮಾಡಲು ಅವಕಾಶವುಂಟು. ಕನ್ನಡ ಮುದ್ರಕರಿಗೆ ವಿವಿಧಮುಖವಾಗಿ ಬೆಳೆಯುತ್ತಿರುವ ಮುದ್ರಣಕಲೆಯ ಅರಿವು ಸಾಕಷ್ಟು ಇಲ್ಲದಿರುವುದರಿಂದ ಕನ್ನಡ ಪುಸ್ತಕಗಳ ಮುದ್ರಣ ವಿಷಯದಲ್ಲಿ ಬಹಳ ಹಳೆಯ ಪದ್ಧತಿಯನ್ನೇ ಇಂದೂ ಅನುಸರಿಸಲಾಗುತ್ತಿದೆ. ಇದರಿಂದ ಕನ್ನಡದಲ್ಲಿ ಹೊಸ ಮುದ್ರಣ ಮಾದರಿಯ ಪುಸ್ತಕಗಳು ಸಾಕಷ್ಟು ಪ್ರಕಟವಾಗುತ್ತಿಲ್ಲ.

ಸರಿಯಾದ ಯೋಜನೆ ಹಾಕಿಕೊಂಡು ಕೆಲಸಮಾಡಿದರೆ ಕಾರ್ಯ ಸುಗಮವಾಗುವುದಲ್ಲದೆ, ಉತ್ಪತ್ತಿ ಹೆಚ್ಚುತ್ತದೆ. ಬೇಕಾದ ಕಾಗದ, ಮಸಿ ಮತ್ತು ಇತರ

ಕಚ್ಚಾವಸ್ತುಗಳನ್ನು ಸಕಾಲಕ್ಕೆ ಒದಗಿಸಿಕೊಳ್ಳಬೇಕು. ನಮ್ಮ ಮುದ್ರಣಾಲಯಗಳ ಮಾಲೀಕರು ಮತ್ತು ಕೆಲಸಗಾರರು ಸರಿಯಾದ ಯೋಜನೆಗನುಗುಣವಾಗಿ ಕೆಲಸ ಮಾಡುವುದಿಲ್ಲ. ಆದುದರಿಂದ ನಮ್ಮ ಮುದ್ರಣಾಲಯಗಳ ಕೆಲವು ವಿಭಾಗಗಳಲ್ಲಿ ಹೆಚ್ಚಿನ ಕೆಲಸವಿದ್ದರೆ ಕೆಲವು ವಿಭಾಗಗಳಲ್ಲಿ ಸಾಕಷ್ಟು ಕೆಲಸವಿರುವುದಿಲ್ಲ; ಇದರಿಂದ ಮುದ್ರಣಾಲಯದ ಬೇರೆಬೇರೆ ವಿಭಾಗಗಳಿಗೆ ಹೊಂದಾಣಿಕೆ ತಪ್ಪಿ ಕೆಲಸ ಕೆಡುವುದು ಮಾತ್ರವಲ್ಲದೆ ಮುದ್ರಣ ಉತ್ಪತ್ತಿ ಇಳಿಮುಖವಾಗುತ್ತದೆ. ನಮ್ಮಲ್ಲಿ ಕೆಲವರಲ್ಲಿ ಮುದ್ರಣ ಕಲೆಯಲ್ಲಿ ಆಸಕ್ತಿಮೂಡಿ, ಮುದ್ರಣಾಲಯಗಳನ್ನು ಸ್ಥಾಪಿಸಲು ಕೈಹಾಕಿದರೂ ಉಪಯುಕ್ತವಾದ ಯಂತ್ರಗಳನ್ನೆಲ್ಲಾ ಕೊಳ್ಳಲು ಅವರಲ್ಲಿ ಸಾಕಷ್ಟು ಬಂಡವಾಳವಿರುವುದಿಲ್ಲ. ಅಂದಮೇಲೆ ಹೆಚ್ಚು ಬೆಲೆಯ ನವೀನ ಯಂತ್ರಗಳನ್ನು ಕೊಳ್ಳಲು ಹೇಗೆ ತಾನೇ ಸಾಧ್ಯವಾದೀತು? ಉತ್ತಮ ಅಚ್ಚಿನ ಮೊಳೆಗಳು, ಉತ್ತಮ ಕಾಗದ, ಉತ್ತಮ ಮಸಿ ಮತ್ತು ಉತ್ತಮ ಮುದ್ರಣ ಯಂತ್ರಗಳಿಲ್ಲದೆ ಹೇಗೆ ತಾನೆ ಉತ್ತಮ ಫಲ ಲಭಿಸೀತು? ನಮ್ಮ ನಾಡಿನ ಚಿಕ್ಕ ಮುದ್ರಣಾಲಯಗಳಲ್ಲೆಲ್ಲಾ ಪುಸ್ತಕ ಮುದ್ರಣಕ್ಕೆ ಅಷ್ಟು ಯೋಗ್ಯವಲ್ಲದ ಪ್ಲೇಟನ್ ಮುದ್ರಣ ಯಂತ್ರಗಳು ಹೆಚ್ಚು ಬಳಕೆಯಲ್ಲಿವೆ. ಅಷ್ಟೇಕೆ ನಮ್ಮ ಕೆಲವು ಅಚ್ಚುಕೂಟಗಳಲ್ಲಿ ಮುದ್ರಣ ಯಂತ್ರಗಳೇ ಇರುವುದಿಲ್ಲ. ಆ ಅಚ್ಚುಕೂಟದವರು ಕೈಯಿಂದ ಅಚ್ಚಿನ ಮೊಳೆಗಳನ್ನು ಜೋಡಿಸಿ, ಯಂತ್ರಗಳಿರುವ ಬೇರೆ ಮುದ್ರಣಾಲಯಗಳಿಗೆ ಹೊತ್ತು ಮುದ್ರಿಸುವ ಕೆಲಸವನ್ನು ಕೈಗೊಳ್ಳುತ್ತಾರೆ.

ಇಪ್ಪತ್ತೈದು ವರ್ಷಗಳಿಂದೀಚೆಗೆ ಕನ್ನಡ ಮುದ್ರಣ ಬೆಳೆಯತೊಡಗಿತು. ಈಚಿನ ವರ್ಷಗಳಲ್ಲಂತೂ ಅಗ್ಗದ ಬೆಲೆಯ ಕಾದಂಬರಿಗಳ ಮುದ್ರಣಕಾರ್ಯ ಬಹಳವಾಗಿ ಹೆಚ್ಚಿತು. ನಮ್ಮ ದೇಶ ಸ್ವಾತಂತ್ರ್ಯ ಪಡೆದನಂತರ ಸರ್ಕಾರದವರು ವಿದ್ಯಾಭ್ಯಾಸಕ್ಕೆ ಹೆಚ್ಚು ಗಮನ ಹರಿಸಿದ್ದರಿಂದ ಪಠ್ಯಪುಸ್ತಕಗಳ ಮುದ್ರಣಕಾರ್ಯ ಬೆಳೆಯಿತು. ಅನೇಕ ಕೈಗಾರಿಕೆಗಳು ಬೆಳೆದಂತೆ ನಮ್ಮಲ್ಲಿ ವ್ಯಾಪಾರೋದ್ಯಮ ಹೆಚ್ಚಿದಂತೆ ಜಾಹೀರಾತಿಗೆ ಸಂಬಂಧಿಸಿದ ಮುದ್ರಣ ಕೆಲಸ ಹೆಚ್ಚಿತು. ಕಾಲುಶತಮಾನದಿಂದೀಚೆಗಂತೂ ಸಮಾಚಾರ ಪತ್ರಿಕೆಗಳ ಮುದ್ರಣ ಬಹಳವಾಗಿ ಬೆಳೆದಿದೆ. ಕನ್ನಡ ಪುಸ್ತಕಗಳಿಗೆ ಸಾಕಷ್ಟು ಗಿರಾಕಿಗಳಿಲ್ಲ. ನಮ್ಮ ಮುದ್ರಕರು ಮತ್ತು ಪ್ರಕಾಶಕರು ಕಡಿಮೆ ವೆಚ್ಚದಲ್ಲಿ ಪುಸ್ತಕಗಳನ್ನು ಮುದ್ರಿಸಿ, ಅಗ್ಗದ ಬೆಲೆಗೆ ಮಾರಲು ಪೈಪೋಟಿ ನಡೆಸುವುದರಿಂದ ಕನ್ನಡ ಮುದ್ರಣ ಅಧೋಗತಿಗಿಳಿಯುತ್ತಿದೆ ಎಂದೇ ಹೇಳಬಹುದು. ಆದರೆ ಈಚಿನ ವರ್ಷಗಳಲ್ಲಿ ಪುಸ್ತಕಗಳನ್ನು ಅಂದವಾಗಿ ಮುದ್ರಿಸಿ ಸರ್ಕಾರದಿಂದ ಮನ್ನಣೆ ಪಡೆದ ಮುದ್ರಣಾಲಯಗಳೂ ನಮ್ಮಲ್ಲಿವೆ. ಆದರೆ ಅವುಗಳ ಸಂಖ್ಯೆ ಬಹಳ ಕಡಿಮೆ. ನಮ್ಮ ನಾಡಿನಲ್ಲಿ ಪುಸ್ತಕಗಳ ಉತ್ತಮ ಮುದ್ರಣಕ್ಕೆ ಕೇವಲ ನಾಲ್ಕಾರು ಮುದ್ರಣಾಲಯಗಳನ್ನು ಮಾತ್ರ ಹೆಸರಿಸಬಹುದು.

ಕನ್ನಡದಲ್ಲಿ ಮೋನೊಟೈಪ್ ಯಂತ್ರ ಬಳಕೆಗೆ ಬಂದು ಕೆಲವಾರು ವರ್ಷಗಳಾದವು.

ಈ ಯಂತ್ರದಲ್ಲಿ ಕನ್ನಡದ ಬಿಡಿ ಅಕ್ಷರಗಳನ್ನು ಎರಕಹೊಯ್ದು ಬೇಕಾದ ಅಳತೆಗೆ ಜೋಡಿಸಬಹುದು. ಈ ಯಂತ್ರದಲ್ಲಿ ಒಂದು ನಿಮಿಷಕ್ಕೆ ೧೦೦ರಿಂದ ೧೫೦ ಅಕ್ಷರ ಗಳನ್ನು ಎರಕಮಾಡಿ, ಜೋಡಿಸಿ, ಪಂಕ್ತಿಯ ಸರಿಯಾದ ಅಳತೆಗೆ ಅಳವಡಿಸಬಹುದು. ಅಂದರೆ ಆರು ಜನರು ಕೈಯಿಂದ ಅಚ್ಚಿನ ಮೊಳೆ ಜೋಡಿಸುವ ಕೆಲಸವನ್ನು ಈ ಒಂದು ಯಂತ್ರದಲ್ಲಿ ಮಾಡಬಹುದು. ಈ ಯಂತ್ರದಲ್ಲಿ ಪ್ರತಿ ಅಕ್ಷರಕ್ಕೂ ಪ್ರತ್ಯೇಕವಾದ ಅಕ್ಷರವನ್ನು ಎರಕಮಾಡಿ ಜೋಡಿಸಬಹುದಾದುದರಿಂದ ತಪ್ಪುಗಳನ್ನು ತಿದ್ದುವುದು ಸುಲಭ. ಯಾವುದಾದರೂ ಒಂದು ಕೆಲಸಕ್ಕೆ ಉಪಯೋಗಿಸಿದ ಅಚ್ಚಿನ ಮೊಳೆಗಳನ್ನು ಬೇರೆ ಕೆಲಸಕ್ಕೆ ಉಪಯೋಗಿಸುವುದಿಲ್ಲ. ಆ ಅಚ್ಚಿನ ಮೊಳೆಗಳನ್ನು ಕುದಿಯುವ ಪಾತ್ರೆಗೆ ಸುರಿದು, ಬೇರೆ ಕೆಲಸಕ್ಕೆ ಹೊಸ ಅಚ್ಚಿನ ಮೊಳೆಗಳನ್ನು ಎರಕಮಾಡುವುದರಿಂದ ಪ್ರತಿ ಕೆಲಸಕ್ಕೂ ಹೊಸ ಅಚ್ಚಿನ ಮೊಳೆಗಳನ್ನು ಉಪಯೋಗಿಸಿದ ಹಾಗಾಗುತ್ತದೆ. ಇದರಿಂದ ಮೊನಚಾದ ಅಚ್ಚಿನ ಅಕ್ಷರಮುಖ ಸ್ಪಷ್ಟವಾಗಿ ಮುದ್ರಿತವಾಗಲು ಸಹಾಯಕ ವಾಗುತ್ತದೆ; ಮುದ್ರಣಸೌಂದರ್ಯ ಹೆಚ್ಚುತ್ತದೆ. ಈ ಯಂತ್ರದಲ್ಲಿ ಅಗಲವಾದ ಪುಸ್ತಕ ಮುದ್ರಣಭಾಗವನ್ನು ಸುಲಭವಾಗಿ ಜೋಡಿಸಬಹುದು. ರಂಧ್ರಮಾಡಿದ ಸುರಳಿಕಾಗದವನ್ನು ಬೇಕಾದಾಗ ಅಚ್ಚಿನ ಮೊಳೆಗಳನ್ನು ಎರಕಹೊಯ್ದು ಜೋಡಿಸುವ ಯಂತ್ರದಲ್ಲಿ ಅನುಗೊಳಿಸಿ, ಪುನರ್ಮುದ್ರಣಕ್ಕೆ ಅಚ್ಚಿನಮೊಳೆಗಳನ್ನು ತಯಾರಿಸ ಬಹುದು. ಇದರಿಂದ ಜೋಡಿಸಿದ ಅಚ್ಚಿನ ಮೊಳೆಗಳನ್ನು ಪುನರ್ಮುದ್ರಣಕ್ಕಾಗಿ ಬಹಳ ದಿವಸ ಇಡಬೇಕಾದ ಪ್ರಮೇಯವಿಲ್ಲ. ರಂಧ್ರಮಾಡಿರುವ ಸುರಳಿಕಾಗದವನ್ನು ಜೋಪಾನವಾಗಿಟ್ಟುಕೊಂಡರೆ ಸಾಕು. ನಮ್ಮ ನಾಡಿನಲ್ಲಿ ನಾಲ್ಕಾರು ಮುದ್ರಣಾಲಯ ಗಳು ಮಾತ್ರ ಈ ಮೋನೊಟೈಪ್ ಯಂತ್ರವನ್ನು ಹೊಂದಿವೆ. ಇನ್ನೂ ಅನೇಕ ದೊಡ್ಡ ಮುದ್ರಣಾಲಯಗಳಲ್ಲಿಯೇ ಅಚ್ಚಿನ ಮೊಳೆಗಳನ್ನು ಕೈಯಿಂದ ಜೋಡಿಸುವ ಕೆಲಸ ಮುಂದುವರಿಯುತ್ತಿದೆ. ಈ ಯಂತ್ರದ ಬಳಕೆ ಹೆಚ್ಚಬೇಕು.

ಈಗ ಕನ್ನಡ ಮುದ್ರಣ ಹೆಚ್ಚಾಗಿ ಉಬ್ಬು ಅಕ್ಷರ ಮುದ್ರಣ (Letter press Process) ವಿಧಾನದಿಂದ ಆಗುತ್ತಿದೆ. ರಬ್ಬರಿನ ಸಮತಲ ಪ್ರದೇಶದ ಅಥವಾ ಉರುಳೆಯ ಮೈಮೇಲೆ ಮುದ್ರಣಭಾಗವನ್ನು ಒತ್ತಿ, ಆ ಪ್ರದೇಶದ ಮೇಲೆ ರೂಪು ಗೊಂಡ ಮುದ್ರಣಭಾಗದಿಂದ ಪ್ರತಿಗಳನ್ನು ತೆಗೆಯುವ ವಿಧಾನ (Offset process) ಈಗ ಬಳಕೆಗೆ ಬರುತ್ತಿದೆ. ಮುದ್ರಣಕಲೆಯಲ್ಲಿ ಬಹಳ ಮುಂದುವರಿದಿರುವ ಇಂಗ್ಲೆಂಡ್ ಮತ್ತು ಜಪಾನ ದೇಶಗಳಲ್ಲಿ ಮೊದಲ ವಿಧಾನವೇ (Letter press process) ಇನ್ನೂ ಹೆಚ್ಚು ಬಳಕೆಯಲ್ಲಿದೆ. ಈ ವಿಧಾನದಲ್ಲಿ ಕೆಲವು ವರ್ಷಗಳಿಂದೀಚೆಗೆ ಗಮನಾರ್ಹವಾದ ಕೆಲವು ಬೆಳವಣಿಗೆಗಳನ್ನು ಕಾಣಬಹುದು. ಕನ್ನಡ ಮುದ್ರಕರು ವಿವಿಧ ಮುಖವಾಗಿ ಬೆಳೆಯುತ್ತಿರುವ ಮುದ್ರಣಕಲೆಯ ವಿಚಾರವಾಗಿ ಪ್ರಕಟವಾಗುವ ಪಾಶ್ಚಾತ್ಯ ಪತ್ರಿಕೆಗಳನ್ನು ತರಿಸಿ ಓದಿ ಹೊಸ ಬೆಳವಣಿಗೆಗಳನ್ನು ಅರಿತು ಕನ್ನಡ ಮುದ್ರಣವನ್ನು ವೃದ್ಧಿಪಡಿಸುವ ಕಾರ್ಯದಲ್ಲಿ ಶ್ರಮಿಸಬೇಕು.

ಕನ್ನಡ ಮುದ್ರಣದ ಅಂದ ಹೆಚ್ಚಬೇಕಾದರೆ ಕನ್ನಡ ಮುದ್ರಕರು ಮುಂದೆ ಹೇಳಿರುವ ಕೆಲವು ಮುಖ್ಯಾಂಶಗಳ ಕಡೆ ಹೆಚ್ಚು ಗಮನಹರಿಸಬೇಕು. ಪುಸ್ತಕದ ವಿಷಯ ಎಷ್ಟೇ ಮಹತ್ತಾಗಿರಲಿ, ಆ ಪುಸ್ತಕ ಅಂದವಾಗಿ ಮುದ್ರಣವಾಗದಿದ್ದರೆ ಪುಸ್ತಕದ ವಿಷಯಕ್ಕೆ ಕುಂದು ಬರುತ್ತದೆ; ಓದುಗನ ಮನಸ್ಸಿಗೆ ಜುಗುಪ್ಸೆಯುಂಟಾಗುತ್ತದೆ. ಅಂದರೆ ಪುಸ್ತಕದ ಮಹತ್ತಿಗೆ ಒಳ್ಳೆಯ ಮುದ್ರಣ ಮೆರಗುಕೊಡುವುದು ಮಾತ್ರವಲ್ಲದೆ ಪುಸ್ತಕದ ಬೃಹತ್ತಾದ ವಿಷಯಕ್ಕೆ ಓದುಗನ ಮನವನ್ನು ಸೆಳೆಯಲು ಸಹಾಯಕವಾಗುತ್ತದೆ ಎಂಬ ವಿಷಯವನ್ನು ಕನ್ನಡ ಮುದ್ರಕರು ಮನಗಾಣಬೇಕು.

ನಮ್ಮ ಅನೇಕ ಲೇಖಕರು ಮುದ್ರಣಕ್ಕೆ ಹಸ್ತಪ್ರತಿಯನ್ನು ಸಿದ್ಧಪಡಿಸುವ ಕ್ರಮವನ್ನು ಸರಿಯಾಗಿ ಅನುಸರಿಸುತ್ತಿಲ್ಲ. ಶುದ್ಧವಾದ ಬಿಳಿಕಾಗದ ಮತ್ತು ಮಸಿಯನ್ನು ಉಪಯೋಗಿಸಿ ಮುದ್ರಣಕ್ಕೆ ಹಸ್ತಪ್ರತಿಯನ್ನು ಸಿದ್ಧಪಡಿಸಬೇಕು. ಕಾಗದದ ಒಂದು ಮಗ್ಗುಲಲ್ಲಿ ಮಾತ್ರ ಬರೆಯಬೇಕು. ಸುತ್ತಲೂ ಅಗಲವಾದ ಪರಿಸರ ಬಿಡಬೇಕು. ಪದಗಳ ಮಧ್ಯೆ ಮತ್ತು ಪಂಕ್ತಿಗಳ ಮಧ್ಯೆ ಸಾಕಷ್ಟು ಸ್ಥಳವಿರಬೇಕು. ಪುಟಸಂಖ್ಯೆಯನ್ನು ಸರಿಯಾಗಿ ಬರೆಯಬೇಕು. ಹಸ್ತಪ್ರತಿಯನ್ನು ವಿಮರ್ಶಕರು ಪರಿಶೀಲಿಸುವಾಗ ಹಸ್ತಪ್ರತಿಯಲ್ಲಿ ಅಲ್ಲಲ್ಲಿ ತಿದ್ದುಪಡಿಮಾಡಿರಬಹುದು. ತಿದ್ದುಪಡಿ ಮಾಡಿರುವ ಪ್ರತಿಯನ್ನೇ ಮುದ್ರಣಕ್ಕೆ ಕಳುಹಿಸಬಾರದು. ಹಸ್ತಪ್ರತಿಯಲ್ಲಿರುವ ಲೋಪದೋಷಗಳೆಲ್ಲ ನಿವಾರಣೆಯಾದಮೇಲೆ ಬೇರೆ ಪ್ರತಿಯನ್ನು ಸ್ಪಷ್ಟವಾಗಿ ಬರೆದು ಮುದ್ರಣಕ್ಕೆ ಕಳುಹಿಸಬೇಕು. ಇದರಿಂದ ಅಚ್ಚಿನಮೊಳೆ ಜೋಡಿಸುವಾಗ ಹೆಚ್ಚು ತಪ್ಪುಗಳು ಬರಲು ಅವಕಾಶವಿಲ್ಲ. ಕರಡುಪ್ರತಿಯಲ್ಲಿ ಬರುವ ಹೆಚ್ಚು ತಪ್ಪುಗಳನ್ನು ತಿದ್ದಲು ತಗಲುವ ಖರ್ಚಿನಲ್ಲಿ ಉಳಿತಾಯವಾಗುತ್ತದೆ. ಸ್ಪಷ್ಟವಾಗಿ ಬರೆದ ಹಸ್ತಪ್ರತಿ ಅಚ್ಚಿನಮೊಳೆ ಜೋಡಿಸುವವನ ಮನಸ್ಸಿನ ಮೇಲೆ ಹೆಚ್ಚು ಪ್ರಭಾವ ಬೀರುತ್ತದೆ. ಅವನು ಉಲ್ಲಾಸದಿಂದ ಕೆಲಸಮಾಡಲು ಸಹಾಯಕವಾಗುತ್ತದೆ. ಆದರಿಂದ ಕೆಲಸ ಬೇಗ ಮುಗಿಯುತ್ತದೆ; ಖರ್ಚಿನಲ್ಲಿ ಉಳಿತಾಯವಾಗುತ್ತದೆ.

ಕರಡುಪ್ರತಿಯಲ್ಲಿರುವ ಎಲ್ಲ ತಪ್ಪುಗಳನ್ನು ಮೊದಲ ಪ್ರತಿಯಲ್ಲಿಯೇ ತಿದ್ದಬೇಕು. ಕರಡುಪ್ರತಿ ತಿದ್ದುವ ವಿಧಾನವನ್ನು ಸರಿಯಾಗಿ ಅಭ್ಯಾಸಮಾಡಿ, ಆ ಕಾರ್ಯವನ್ನು ಕೈಗೊಳ್ಳಬೇಕು. ಮುದ್ರಣ ಕಾರ್ಖಾನೆಯ ರೂಪಣ ಮುದ್ರಣ ಉತ್ಪತ್ತಿಯ ಮೇಲೆ ಪರಿಣಾಮ ಬೀರುತ್ತವೆ ಎಂಬುದನ್ನು ಮರೆಯಬಾರದು. ಕನ್ನಡ ಅಚ್ಚಿನ ಅಕ್ಷರಗಳ ನಮೂನೆ ಕಡಿಮೆ. ಇಂಗ್ಲಿಷಿನಲ್ಲಿ ಸಾವಿರಾರು ನಮೂನೆಯ ಅಚ್ಚಿನ ಅಕ್ಷರಗಳಿವೆ. ಇಂಗ್ಲಿಷಿನಲ್ಲಿ ೧೯೩೦ರಿಂದ ಈಚೆಗಂತೂ ವಿವಿಧ ಬಗೆಯ ಅಚ್ಚಿನಮೊಳೆಗಳು ಬಳಕೆಗೆ ಬಂದಿವೆ. ಕನ್ನಡದಲ್ಲಿ ಕೈಬರಹವನ್ನು ಹೋಲುವ ವಿವಿಧ ನಮೂನೆಯ ಅಕ್ಷರಗಳು, ಓರೆಯಾದ ಅಕ್ಷರಗಳು, ರೇಖಾವೈಖರಿಯಿಲ್ಲದ ಅಕ್ಷರಗಳು ಇಲ್ಲ. ಕನ್ನಡದಲ್ಲಿ ಅಲಂಕರಣ ಮುದ್ರಣಕ್ಕೆ ಬೇಕಾದ ವಿವಿಧ ಬಗೆಯ ಅಚ್ಚಿನ ಮೊಳೆಗಳಿಲ್ಲ. ಕನ್ನಡದಲ್ಲಿ ಹತ್ತು ಪಾಯಿಂಟ್ ಅಕ್ಷರ ಈಗ ಹೆಚ್ಚು ಬಳಕೆಯಲ್ಲಿರುವ

ಅತ್ಯಂತ ಚಿಕ್ಕ ಅಕ್ಷರ. ಇಂಗ್ಲಿಷಿನಲ್ಲಿರುವಂತೆ ಕನ್ನಡದಲ್ಲಿಯೂ ಎಂಟು ಪಾಯಿಂಟ್ ಮತ್ತು ಆರು ಪಾಯಿಂಟ್ ಅಕ್ಷರಗಳನ್ನು ತಯಾರಿಸಬೇಕಾಗಿದೆ. ವಿವಿಧ ನಮೂನೆಯ ಅಕ್ಷರಗಳ ತಯಾರಿಕೆಗೆ ಆಕ್ಷರಕಲೆಯಲ್ಲಿ ನುರಿತವರು ಶ್ರಮಿಸಬೇಕಾಗಿದೆ.

ಉತ್ತಮ ಲೋಹವನ್ನು ಉಪಯೋಗಿಸಿ ತಯಾರಿಸಿದ ಅಚ್ಚಿನಮೊಳೆಗಳನ್ನು ಪುಸ್ತಕ ಮುದ್ರಣಕ್ಕೆ ಉಪಯೋಗಿಸಿದರೆ ಮುದ್ರಣದ ಅಂದ ಹೆಚ್ಚುತ್ತದೆ ಎಂಬ ವಿಷಯವನ್ನು ನಮ್ಮ ಅನೇಕ ಮುದ್ರಕರು ಇನ್ನೂ ಅರಿತಿಲ್ಲ. ಅಚ್ಚಿನಮೊಳೆ ತಯಾರಿಕೆಗೆ ಉಪಯೋಗಿಸುವ ಲೋಹ ಕಡಿಮೆ ಶಾಖದಲ್ಲಿ ಕರಗಬೇಕು. ಕರಗಿದ ಲೋಹ ಅಚ್ಚಿನಮೊಳೆಗಳನ್ನು ಎರಕಹೊಯ್ಯುವಾಗ ಸರಾಗವಾಗಿ ಹರಿಯಬೇಕು. ಅಚ್ಚಿನ ಮೊಳೆಯ ಪೂರ್ಣ ಆಕಾರ ಮತ್ತು ಅಕ್ಷರದ ಸ್ಪಷ್ಟಮುಖದ ಎರಕಕ್ಕೆ ಲೋಹ ಸಹಾಯವಾಗಬೇಕು. ಸೀಸಕ್ಕೆ ಯಥೋಚಿತವಾದ ಪ್ರಮಾಣದಲ್ಲಿ ತವರ ಮತ್ತು ಆಂಟಿಮನಿ ಬೆರಸಿದ ಮಿಶ್ರಲೋಹದಿಂದ ಮಾಡಿದ ಅಚ್ಚಿನ ಮೊಳೆಗಳನ್ನು ಕೊಳ್ಳಬೇಕು. ಶೇಕಡ ೧೨½ ತವರ, ಶೇಕಡ ೨೪½ ಆಂಟಿಮನಿ ಮತ್ತು ಶೇಕಡ ೬೩ ಭಾಗ ಸೀಸದಿಂದ ಕೂಡಿದ ಮಿಶ್ರಲೋಹದಿಂದ ಮಾಡಿದ ಅಚ್ಚಿನ ಮೊಳೆಗಳು ಹೆಚ್ಚು ದಿನ ಬಾಳಿಕೆ ಬರುತ್ತವೆ. ಕಡಿಮೆ ಪ್ರಮಾಣದಲ್ಲಿ ಆಂಟಿಮನಿ ಮತ್ತು ತವರ ಬೆರಸಿರುವ ಮಿಶ್ರ ಲೋಹದಿಂದ ಮಾಡಿದ ಅಚ್ಚಿನ ಮೊಳೆಗಳು ಬೇಗ ಸವೆದುಹೋಗುವುವಲ್ಲದೆ ಮುದ್ರಣದ ಅಂದ ಕೆಡಲು ಕಾರಣವಾಗುತ್ತವೆ. ಮೋನೊಟೈಪ್ ಯಂತ್ರದಲ್ಲಿ ಅಚ್ಚಿನ ಮೊಳೆ ತಯಾರಿಕೆಗೆ ಶೇಕಡ ೧೦ ಭಾಗ ತವರ, ಶೇಕಡ ೧೬ ಭಾಗ ಆಂಟಿಮನಿ, ಶೇಕಡ ೭೪ ಭಾಗ ಸೀಸದಿಂದ ಕೂಡಿದ ಮಿಶ್ರಲೋಹವನ್ನು ಉಪಯೋಗಿಸುತ್ತಾರೆ.

ಅಚ್ಚಿನ ಮೊಳೆಯ ಲೋಹ ಗಟ್ಟಿಯಾದ ಮತ್ತು ಗಡುಸಾದ ಲೋಹವಾಗಿರ ಬೇಕು. ಆ ಲೋಹ ಹೆಚ್ಚು ಕಠಿನವಾಗಿರಬಾರದು. ಅಂದರೆ ಒಡೆದು ಚೂರಾಗುವ ಸ್ವಭಾವವುಳ್ಳದ್ದಾಗಿರಬಾರದು. ಅಚ್ಚಿನ ಮೊಳೆಗಳು ಒಳ್ಳೆಯ ಕುತ್ತಿಗೆ ಮತ್ತು ಆಳವಾದ ಮುಖವನ್ನು ಹೊಂದಿರಬೇಕು. ಅಕ್ಷರ ಮುಖದ ಒಳಭಾಗದ ಹಳ್ಳ ಅಕ್ಷರಗಳ ಅಡ್ಡಳತೆಯನ್ನು ಅವಲಂಬಿಸಿರುತ್ತದೆ. ಅಕ್ಷರ ಮುಖದೊಳಗಿನ ಹಳ್ಳ ಆಳವಾಗಿರದಿದ್ದರೆ ಮುದ್ರಣ ಕಾಲದಲ್ಲಿ ಆ ಭಾಗದಲ್ಲಿ ಮಸಿ ತುಂಬಿ ಮುದ್ರಣ ಕೆಡುತ್ತದೆ.

ಈಚಿನ ವರ್ಷಗಳಲ್ಲಿ ನಮ್ಮ ಕೆಲವು ಮುದ್ರಕರು ವಿವಿಧ ಮಾದರಿಯ ಪುಸ್ತಕ ಗಳನ್ನು ನಿರ್ಮಿಸಿದ್ದಾರೆ. ಆದರೆ ಒಳ್ಳೆ ಮಾದರಿಯ ಪುಸ್ತಕಗಳ ನಿರ್ಮಾಣಕ್ಕೆ ನಮ್ಮ ನಾಡಿನ ನಾಲ್ಕಾರು ಮುದ್ರಣಾಲಯಗಳು ಮಾತ್ರ ಪ್ರಸಿದ್ಧಿಯಾಗಿವೆ. ಪುಸ್ತಕದ ವಿಷಯವನ್ನು ಗಮನದಲ್ಲಿಟ್ಟುಕೊಂಡು ಪುಸ್ತಕದ ಅಳತೆ, ಅಚ್ಚಿನ ಮೊಳೆ ನಮೂನೆ, ಅಚ್ಚಿನ ಮೊಳೆ ಜೋಡಿಸುವ ವಿಧಾನ, ಮುದ್ರಣಕ್ಕೆ ಬೇಕಾದ ಕಾಗದ ಮತ್ತು ಮಸಿ ಇವುಗಳನ್ನು ಆರಿಸಬೇಕಾಗುತ್ತದೆ. ಮಕ್ಕಳಿಗಾಗಿ ಮುದ್ರಿಸುವ ಪುಸ್ತಕದ ಅಳತೆ ಮತ್ತು ಅಚ್ಚಿನ ಮೊಳೆ ನಮೂನೆಗಳಿಗೂ, ಪ್ರೌಢರಿಗಾಗಿ ಮುದ್ರಿಸುವ ಪುಸ್ತಕದ

ಅಳತೆ, ಅಚ್ಚಿನ ಮೊಳೆ ನಮೂನೆಗಳಿಗೂ ವ್ಯತ್ಯಾಸವಿರುತ್ತದೆ. ಮಕ್ಕಳ ಪುಸ್ತಕಗಳಿಗೆ ಉಪಯೋಗಿಸುವ ಕಾಗದವೇ ಬೇರೆ, ಪ್ರೌಢರಿಗಾಗಿ ಬರೆದ ಪುಸ್ತಕಗಳಿಗೆ ಉಪಯೋಗಿಸುವ ಕಾಗದವೇ ಬೇರೆ.

ಅಚ್ಚಿನ ಮೊಳೆ ಜೋಡಿಸುವ ವಿಧಾನದಲ್ಲಿ ತೆರಪು ಕೊಡುವ ಬಗ್ಗೆ, ಪುಟದಲ್ಲಿ ಬೇರೆ ಬೇರೆ ಪಂಕ್ತಿಗಳನ್ನು ಅನುಗೊಳಿಸುವ ವಿಧಾನದಲ್ಲಿ ಕೈಗೊಳ್ಳುವ ಸರಿಯಾದ ನಿರ್ಧಾರ ಪುಸ್ತಕದ ಅಂದವನ್ನು ಹೆಚ್ಚಿಸಬೇಕು. ಪುಸ್ತಕಗಳನ್ನು ಸುಂದರವಾಗಿ ಮುದ್ರಿಸಬೇಕಾದರೆ ಚಿತ್ರವಿಚಿತ್ರವಾದ ಅಚ್ಚಿನ ಮೊಳೆಗಳನ್ನೇ ಉಪಯೋಗಿಸಬೇಕಾಗಿಲ್ಲ. ಯಥೋಚಿತವಾದ ಸರಳ ಸಾಮಾನ್ಯ ಅಲಂಕರಣ ವಿಧಾನವೇ ಪುಸ್ತಕಕ್ಕೆ ಹೆಚ್ಚು ಮೆರಗುಕೊಡುತ್ತದೆ.

ಪುಸ್ತಕವನ್ನು ಓದುವ ನಮ್ಮ ದೃಷ್ಟಿಯ ಮಧ್ಯಭಾಗವನ್ನು (Optical centre) ಗಮನದಲ್ಲಿಟ್ಟುಕೊಂಡು ಮುಖಪುಟವನ್ನು ರೂಪಿಸಬೇಕು. ಪುಸ್ತಕದ ವಿಷಯ ಘನವಾದುದೇ ಲಘುವಾದುದೇ ಎಂಬ ವಿಷಯವನ್ನು ಕೂಡ ಮನಸ್ಸಿನಲ್ಲಿಟ್ಟುಕೊಂಡು ಮುಖಪುಟದ ಮಾದರಿಯನ್ನು ನಿರ್ಣಯಿಸಬೇಕಾಗುತ್ತದೆ. ಮುಖಪುಟದ ಯಾವ ಅಂತರದಲ್ಲಿ ಪುಸ್ತಕದ ಹೆಸರು, ಯಾವ ಅಂತರದಲ್ಲಿ ಲೇಖಕನ ಹೆಸರು ಇರಬೇಕು ಎಂಬುದನ್ನು ನಿರ್ಧರಿಸುವಾಗ, ಇವುಗಳಿಗೆ ಅಚ್ಚಿನ ಮೊಳೆ ನಮೂನೆಗಳನ್ನು ಆರಿಸುವಾಗ ಸೌಂದರ್ಯದೃಷ್ಟಿ ಅಗತ್ಯವಾಗುತ್ತದೆ.

ಕನ್ನಡ ಮುದ್ರಣಕಲೆಯಲ್ಲಿ ತೆರಪುಕೊಡುವುದು (Spacing) ಬಹಳ ಮುಖ್ಯ ಸ್ಥಾನವನ್ನು ಗಳಿಸುತ್ತದೆ. ಭಾವಕ್ಕೆ, ಅರ್ಥಕ್ಕೆ ಅನುಗುಣವಾಗಿ ಪದಗಳ ಮಧ್ಯೆ, ಅಲಂಕರಣ ಮುದ್ರಣದಲ್ಲಿ, ಮುಖಪುಟಗಳನ್ನು ರೂಪಿಸುವಾಗ, ಪರಿಚ್ಛೇದಗಳ ಪ್ರಾರಂಭದಲ್ಲಿ, ಪಂಕ್ತಿಗಳ ಮಧ್ಯೆ ತೆರಪುಕೊಡಬೇಕಾಗುತ್ತದೆ. ಇಲ್ಲದಿದ್ದರೆ ಮುದ್ರಣದ ಅಂದ ಕೆಡುವುದು ಮಾತ್ರವಲ್ಲದೆ ಓದುಗರಿಗೆ ಸುಲಭವಾಗಿ ಅರ್ಥಗ್ರಾಹ್ಯವಾಗುವುದಿಲ್ಲ. ಒಂದು ವೇಳೆ ಉದ್ದೇಶದ ಅರ್ಥಕ್ಕೆ ಬದಲಾಗಿ ಬೇರೆ ಅರ್ಥ ಭಾಸವಾಗಬಹುದು. ಪದಗಳ ಮಧ್ಯೆ ಸಮಾನ ತೆರಪು ಕೊಡಬೇಕೆಂಬ ತತ್ತ್ವ ಇಂಗ್ಲಿಷ್ ಭಾಷೆಗೆ ಅನ್ವಯಿಸುವುದೇ ಹೊರತು, ಅದೇ ತತ್ತ್ವವನ್ನು ಕನ್ನಡ ಭಾಷೆಯ ಮುದ್ರಣಕ್ಕೆ ಅನ್ವಯಿಸಲಾಗುವುದಿಲ್ಲ. ಕನ್ನಡ ಭಾಷೆಯ ಮುದ್ರಣದಲ್ಲಿ ಕೆಲವು ಪದಗಳ ಮಧ್ಯೆ ಹೆಚ್ಚು ಸ್ಥಳ ಬಿಡಬೇಕಾಗುತ್ತದೆ; ಕೆಲವು ಪದಗಳ ಮಧ್ಯೆ ಸ್ವಲ್ಪ ಸ್ಥಳ ಬಿಡಬೇಕು; ಮತ್ತೆ ಕೆಲವು ಪದಗಳ ಮಧ್ಯೆ ಕೂದಲಿನ ಎಳೆಯಷ್ಟು ಸ್ಥಳ ಬಿಟ್ಟರೆ ಸಾಕು. ಅಂದರೆ ಕನ್ನಡ ಭಾಷೆಯ ಮುದ್ರಣದಲ್ಲಿ ಈ ತೆರಪು ಕೊಡುವ ಕೆಲಸ ಅರ್ಥಕ್ಕೆ ಮತ್ತು ಭಾವಕ್ಕೆ ಅನುಗುಣವಾಗಿ ನಡೆಯಬೇಕಾಗುತ್ತದೆ.

ನಾಮಪದಗಳ ಅರ್ಧಭಾಗ ಪಂಕ್ತಿಯ ಕೊನೆಯಲ್ಲಿಯೂ ಮತ್ತೆ ಅರ್ಧಭಾಗ ಪಂಕ್ತಿಯ ಪ್ರಾರಂಭದಲ್ಲಿಯೂ ಬರುವಂತೆ ನಾಮಪದಗಳನ್ನು ವಿಭಜಿಸಬಾರದು. ಹೆಸರಿನ ಮತ್ತು ಉಪನಾಮದ ಮೊದಲಕ್ಷರಗಳು, ಪದವಿಯನ್ನು ಸೂಚಿಸುವ ಅಕ್ಷರ

ಗಳು ಹೆಸರಿನ ಜೊತೆಯಲ್ಲಿಯೇ ಬರಬೇಕು. ಪಂಕ್ತಿಯ ಕೊನೆಯಲ್ಲಿ ಬರುವ ಅಕ್ಷರಗಳನ್ನು ವಿಭಜಿಸುವಾಗ ಅರ್ಥಕ್ಕೆ ಮತ್ತು ಭಾವಕ್ಕೆ ಕುಂದುಬರಬಾರದು. ಪುಟದ ಕೊನೆಯಲ್ಲಿ ಬರುವ ಪದಗಳನ್ನು ವಿಭಜಿಸಬಾರದು. ಪುಟದ ಪ್ರಾರಂಭದಲ್ಲಿ ಮೊಟಕು ಪಂಕ್ತಿ ಬರಬಾರದು. ಪದ ವಿಭಜಿಸುವಾಗ ಪಂಕ್ತಿಯ ಕೊನೆಯಲ್ಲಿ ಅಥವಾ ಪಂಕ್ತಿಯ ಪ್ರಾರಂಭದಲ್ಲಿ ಒಂದೇ ಒಂದು ಅಕ್ಷರ ಉಳಿಯಬಾರದು. ಪಂಕ್ತಿಯ ಪ್ರಾರಂಭದಲ್ಲಿ ಅನುಸ್ವಾರ ಮತ್ತು ವಿಸರ್ಗ ಬರಬಾರದು. ಪಂಕ್ತಿಗಳ ಕೊನೆಯಲ್ಲಿ ಬರುವ ಎರಡು ಮತ್ತು ಮೂರು ಅಕ್ಷರದ ಪದಗಳನ್ನು ವಿಭಜಿಸಬಾರದು.

ಪುಸ್ತಕದ ಪ್ರಾರಂಭದಲ್ಲಿ ಪುಸ್ತಕದ ಸಂಕ್ಷಿಪ್ತನಾಮ, ಅದೇ ಲೇಖಕರ ಇತರ ಪುಸ್ತಕಗಳ ಪಟ್ಟಿ, ಅಥವಾ ಒಂದು ಮಾಲೆಯ ಇತರ ಪುಸ್ತಕಗಳು ಮತ್ತು ಆ ಪುಸ್ತಕಗಳ ವಿಚಾರವನ್ನು ಕುರಿತ ಪ್ರಕಟಣೆ, ಮುಖಚಿತ್ರ, ಮುಖಪುಟ, ಮುದ್ರಕರ ವಿಳಾಸ, ಅರ್ಪಣೆ, ಮುನ್ನುಡಿ ಅಥವಾ ಪ್ರಸ್ತಾವನೆ, ಕೃತಜ್ಞತೆ, ವಿಷಯಸೂಚಿಕೆ, ಚಿತ್ರಗಳಪಟ್ಟಿ ಅನುಕ್ರಮವಾಗಿ ಬರಬೇಕು. ಪುಸ್ತಕದ ಕೊನೆಯಲ್ಲಿ ಅನುಬಂಧ, ಆಧಾರಗ್ರಂಥಗಳು, ಟಿಪ್ಪಣಿ, ಅಕಾರಾದಿ ಸೂಚಿ ಮತ್ತು ಪ್ರಕಟಣೆಗಳು ಅನುಕ್ರಮವಾಗಿ ಬರಬೇಕು. ಪುಸ್ತಕದ ಮೊದಲು ಮತ್ತು ಅಂತ್ಯದಲ್ಲಿ ಬರುವ ಎಲ್ಲಾ ವಿಷಯಗಳೂ ಬಲಭಾಗದ ಪುಟದಲ್ಲಿಯೇ ಪ್ರಾರಂಭವಾಗಬೇಕು. ಇವುಗಳ ಶಿರೋನಾಮೆಗಳು ಗ್ರಂಥದ ಪ್ರಕರಣ ಶಿರೋನಾಮೆಗಳ ಎತ್ತರದಲ್ಲಿಯೇ ಪ್ರಾರಂಭವಾಗಬೇಕು. ಗ್ರಂಥದ ಪ್ರಕರಣ ಶಿರೋನಾಮೆಗಳಿಗೆ ಉಪಯೋಗಿಸಿರುವ ಮಾದರಿಯ ಮತ್ತು ಅಳತೆಯ ಅಚ್ಚಿನ ಮೊಳೆಗಳನ್ನೇ ಇವುಗಳ ಶಿರೋನಾಮೆಗಳಿಗೆ ಉಪಯೋಗಿಸಿದರೆ ಪುಸ್ತಕದ ಅಂದ ಹೆಚ್ಚುತ್ತದೆ.

ಗ್ರಂಥದಲ್ಲಿ ಬರುವ ಮುಖಚಿತ್ರವೊಂದನ್ನು ಬಿಟ್ಟು ಒಂದು ಮಗ್ಗುಲಲ್ಲಿ ಬರುವ ಚಿತ್ರಗಳೆಲ್ಲಾ ಬಲಭಾಗದ ಪುಟಗಳಲ್ಲಿಯೇ ಬರಬೇಕು. ಮುಖಚಿತ್ರ ಮುಖಪುಟಕ್ಕೆ ಎದುರಾಗಿರಬೇಕು. ಪುಸ್ತಕದ ಹೆಸರುಗಳು, ಅಲಂಕರಿಸಿದ ಪಂಕ್ತಿಗಳು, ಪ್ರಕರಣ ಶಿರೋನಾಮೆಗಳು, ಪುಟ ಶಿರೋನಾಮೆಗಳು, ತಾರೀಖು, ನಾಟಕಗಳಲ್ಲಿನ ಪಾತ್ರಗಳ ಹೆಸರುಗಳು ಪ್ರತ್ಯೇಕವಾದ ಪಂಕ್ತಿಗಳಲ್ಲಿದ್ದರೆ ಅವುಗಳ ಮುಂದೆ ಪೂರ್ಣವಿರಾಮ ಚಿಹ್ನೆಗಳು ಬೇಕಾಗಿಲ್ಲ. ಚಿತ್ರಗಳ ವಿವರಣೆಯ ಮುಂದೆ ಪೂರ್ಣವಿರಾಮ ಬರುತ್ತದೆ. ಆದರೆ ಚಿತ್ರದ ವಿವರಣೆ ಒಂದೇ ಒಂದು ಪಂಕ್ತಿಯಲ್ಲಿದ್ದರೆ ಪೂರ್ಣವಿರಾಮ ಬೇಕಾಗಿಲ್ಲ. ಕನ್ನಡ ಪುಸ್ತಕಗಳ ಅಡಿಟಿಪ್ಪಣಿಯನ್ನು ಸೂಚಿಸಲು ಅರಾಬಿಕ್ ಮೇಲಿನ ಅಂಕಿ (Superior figures) ಗಳನ್ನು ಉಪಯೋಗಿಸಬಹುದು. ಗ್ರಂಥಭಾಗಕ್ಕೆಉಪಯೋಗಿಸಿರುವ ಅಕ್ಷರಗಳಿಗಿಂತ ಎರಡು ಪಾಯಿಂಟ್ಸ್ ಚಿಕ್ಕ ಅಳತೆಯ ಅಕ್ಷರ ಮತ್ತು ಅಂಕಿಗಳನ್ನು ಅಡಿ ಟಿಪ್ಪಣಿಗೆ ಉಪಯೋಗಿಸಬೇಕು. ಗ್ರಂಥಭಾಗದಲ್ಲಿ ಉಪಯೋಗಿಸುವ ಮೇಲಿನ ಅಂಕಿಗಳ ಅಳತೆಯ ಮತ್ತು ಮಾದರಿಯ ಅಂಕಿಗಳನ್ನೇ ಅಡಿಟಿಪ್ಪಣಿಯ ಭಾಗದಲ್ಲಿ ಉಪಯೋಗಿಸಬೇಕು. ಅಡಿ ಟಿಪ್ಪಣಿಯ ಭಾಗವನ್ನು ಗ್ರಂಥಭಾಗದಿಂದ

ಪ್ರತ್ಯೇಕಿಸಲು ಸಾಮಾನ್ಯವಾಗಿ ಮಧ್ಯೆ ಅಡ್ಡಗೆರೆಯನ್ನು ಹಾಕುತ್ತಾರೆ. ಈ ಅಡ್ಡಗೆರೆ ಗ್ರಂಥದ ಸೌಂದರ್ಯವನ್ನು ಕೆಡಿಸುತ್ತದೆ. ಆದುದರಿಂದ ಈ ಅಡ್ಡಗೆರೆಯು ಅನಾವಶ್ಯಕ. ಈಚಿನ ಕೆಲವು ಪುಸ್ತಕಗಳಲ್ಲಿ ಈ ಎರಡು ಭಾಗಗಳನ್ನು ಪ್ರತ್ಯೇಕಿಸಲು ಎಡಭಾಗದಲ್ಲಿ ಎರಡು 'ಎಮ್ಸ್' ಅಳತೆಯ ಗೆರೆಯನ್ನು ಹಾಕುವುದು ಹೆಚ್ಚು ರೂಢಿಯಲ್ಲಿದೆ. ಸೌಂದರ್ಯ ದೃಷ್ಟಿಯಿಂದ ಈ ಚಿಕ್ಕಗೆರೆಯೂ ಬೇಕಾಗಿಲ್ಲ. ಏಕೆಂದರೆ ಅಡಿ ಟಿಪ್ಪಣಿಯ ಭಾಗಕ್ಕೆ, ಗ್ರಂಥ ಭಾಗಕ್ಕೆ ಉಪಯೋಗಿಸಿರುವ ಅಕ್ಷರಗಳಿಗಿಂತ ಚಿಕ್ಕ ಅಕ್ಷರಗಳನ್ನು ಉಪಯೋಗಿಸುವುದರಿಂದ ಅಡಿ ಟಿಪ್ಪಣಿಯ ಭಾಗ ಗ್ರಂಥಭಾಗದಿಂದ ಪ್ರತ್ಯೇಕವಾಗಿಯೆ ಕಾಣುತ್ತದೆ. ಆದುದರಿಂದ ಗ್ರಂಥ ಭಾಗಕ್ಕೂ ಅಡಿಟಿಪ್ಪಣಿಯ ಭಾಗಕ್ಕೂ ಮಧ್ಯೆ ವಾಕ್ಯಗಳ ಮಧ್ಯೆ ಇರುವ ಸ್ಥಳಕ್ಕಿಂತ ಹೆಚ್ಚು ಸ್ಥಳ ಬಿಟ್ಟರೆ ಸಾಕು. ನೂರಕ್ಕಿಂತ ಕಡಿಮೆಯ ಅಂಕಿಗಳನ್ನು ಅಕ್ಷರಗಳಿಂದ ಜೋಡಿಸಿದರೆ ಚೆನ್ನ. ಆದರೆ ಅಳತೆಯನ್ನು ಹೇಳುವಾಗ, ಅಂಕಿ ಅಂಶಗಳನ್ನು ಕೊಡುವಾಗ, ವಯಸ್ಸನ್ನು ಹೇಳುವಾಗ ಅಂಕಿಗಳನ್ನೇ ಉಪಯೋಗಿಸಬೇಕು.

ಓದುಗನ ದೃಷ್ಟಿಮಧ್ಯೆ (Optical Centre)ಯನ್ನು ಗಮನದಲ್ಲಿಟ್ಟುಕೊಂಡು ಪುಟದ ಪರಿಸರಣಗಳನ್ನು ನಿರ್ಧರಿಸಬೇಕಾಗುತ್ತದೆ. ಪುಟದ ಅಡಿಪರಿಸರಣ ಮಿಕ್ಕೆಲ್ಲ ಪರಿಸರಣಗಳಿಗಿಂತ ದೊಡ್ಡದಾಗಿರಬೇಕು. ಪುಟದ ಹಿಂಭಾಗದ ಪರಿಸರಣ ಮಿಕ್ಕೆಲ್ಲ ಪರಿಸರಣಗಳಿಗಿಂತ ಚಿಕ್ಕದಾಗಿರಬೇಕು. ಪುಟದ ಮುಂಭಾಗದ ಪರಿಸರಣ ಪುಟದ ಹಿಂಭಾಗದ ಎರಡು ಪರಿಸರಣಗಳಿಗಿಂತ ಚಿಕ್ಕದಾಗಿರಬಾರದು. ಅಂದರೆ ಒಂದು ಪುಟದಲ್ಲಿ ಹಿಂಭಾಗದ ಪರಿಸರಣ ಮಿಕ್ಕ ಪರಿಸರಣಗಳಿಗಿಂತ ಚಿಕ್ಕದು. ಅದಕ್ಕಿಂತ ಮೇಲ್ಭಾಗದ ಪರಿಸರಣ ದೊಡ್ಡದು. ಮೇಲ್ಭಾಗದ ಪರಿಸರಣಕ್ಕಿಂತ ಮುಂಭಾಗದ ಪರಿಸರಣ ದೊಡ್ಡದು. ಮುಂಭಾಗದ ಪರಿಸರಣಕ್ಕಿಂತ ಅಡಿಪರಿಸರಣ ದೊಡ್ಡದು. ಒಂದು ವೇಳೆ ಮೇಲಿನ ಪರಿಸರಣ ಒಂದು ಪುಟದ ಹಿಂಭಾಗದ ಪರಿಸರಣದಷ್ಟೆ ಇದ್ದರೆ ಅಕ್ಷರಗಳು ಬಹಳ ಮೇಲೆ ಇರುವ ಹಾಗೆ ಓದುಗನಿಗೆ ಭಾಸವಾಗುವುದಲ್ಲದೆ ಅಡಿ ಪರಿಸರಣ ಬಹಳ ದೊಡ್ಡದಾಗಿ ಕಾಣುತ್ತದೆ. ಆದುದರಿಂದ ಮೇಲಿನ ಪರಿಸರಣ ಹಿಂಭಾಗದ ಪರಿಸರಣಕ್ಕಿಂತ ದೊಡ್ಡದಾಗಿರಬೇಕು. ಒಂದುವೇಳೆ ಪುಟದ ಮೇಲ್ಭಾಗದ ಪರಿಸರಣ ಮತ್ತು ಅಡಿಪರಿಸರಣ ಸಮವಾಗಿದ್ದರೆ, ಓದುಗನಿಗೆ ಪುಟದಲ್ಲಿ ಅಚ್ಚಿನ ವಿಭಾಗ ಕೆಳಜಾರಿದಂತೆ ಭಾಸವಾಗುತ್ತದೆ. ಅಡಿ ಪರಿಸರಣ ಮೇಲಿನ ಪರಿಸರಣಕ್ಕಿಂತ ಚಿಕ್ಕದಾಗಿ ಕಾಣುತ್ತದೆ. ಇದಕ್ಕೆ ಕಾರಣವೇನೆಂದರೆ ಓದುಗನ ಕಣ್ಣಿಗೆ ಪುಸ್ತಕದ ಮಧ್ಯಭಾಗ ಗಣಿತದ ಮಧ್ಯಭಾಗವಾಗಿರುವುದಿಲ್ಲ; ಗಣಿತದ ಮಧ್ಯಭಾಗಕ್ಕಿಂತ ಸ್ವಲ್ಪ ಮೇಲಿರುತ್ತದೆ.

ಪುಸ್ತಕ ಮುದ್ರಣಕ್ಕೆ ಉತ್ತಮವಾದ ಕಾಗದ ಮತ್ತು ಅದಕ್ಕೆ ಅನುಗುಣವಾದ ಮಸಿಯನ್ನು ಉಪಯೋಗಿಸಿದರೆ ಪುಸ್ತಕದ ಅಂದ ಹೆಚ್ಚುತ್ತದೆ. ಯಂತ್ರಗಳಲ್ಲಿ ವಿವಿಧ ಬಗೆಗಳಿವೆ. ಆಯಾ ಯಂತ್ರಗಳಿಗೆ ಅನುಗುಣವಾಗಿ ಮಸಿಯನ್ನು ಬಳಸಬೇಕಾಗುತ್ತದೆ. ಪ್ಲೇಟನ್ ಯಂತ್ರಗಳಿಗೆ ಉಪಯೋಗಿಸುವ ಮಸಿಗೂ ಸಿಲಿಂಡರ್ ಯಂತ್ರಗಳಿಗೆ

ಉಪಯೋಗಿಸುವ ಮಸಿಗೂ ವ್ಯತ್ಯಾಸವಿರುತ್ತದೆ. ಕಡಿಮೆ ವೇಗದಲ್ಲಿ ಮುದ್ರಿಸುವ ಮತ್ತು ಜಾಸ್ತಿ ವೇಗದಲ್ಲಿ ಮುದ್ರಿಸುವ ಮುದ್ರಣ ಯಂತ್ರಗಳಿಗೆ ಉಪಯೋಗಿಸುವ ಮುದ್ರಣ ಮಸಿಯಲ್ಲಿ ವ್ಯತ್ಯಾಸವಿಗುತ್ತದೆ. ಹೆಚ್ಚುವೇಗದ ಯಂತ್ರಕ್ಕೆ ತೆಳುವಾದ ಮಸಿಯನ್ನು ಉಪಯೋಗಿಸಬೇಕು. ಬಗೆ ಬಗೆಯ ಮಾದರಿ ಮುದ್ರಣಕಾಗದಕ್ಕೆ ಆಯಾ ಕಾಗದಕ್ಕೆ ಹೊಂದುವ ಮುದ್ರಣಮಸಿಯನ್ನು ಉಪಯೋಗಿಸಬೇಕು. ಕಡಿಮೆ ಮಸಿಯನ್ನು ಹೀರುವ ಶಕ್ತಿಯುಳ್ಳ ಗಟ್ಟಿಯಾದ ಬಾಂಡ್‌ಕಾಗದದ ಮೇಲೆ ಮುದ್ರಿಸುವಾಗ ಭಾರವಾದ ಮತ್ತು ಹೆಚ್ಚು ಅಂಟುವ ಶಕ್ತಿಯುಳ್ಳ ಮುದ್ರಣಮಸಿಯನ್ನು ಉಪಯೋಗಿಸಬೇಕು. ಈ ಕಾಗದದ ಮೇಲೆ ಮಸಿ ಗಾಳಿಯಲ್ಲಿರುವ ಆಮ್ಲಜನಕವನ್ನು ಹೀರಿಕೊಂಡು ಒಣಗುತ್ತದೆ. ಮಸಿಯನ್ನು ಹೀರುವ ಶಕ್ತಿಯುಳ್ಳ ಬಹಳ ಮೃದುವಾದ ಕಾಗದದ ಮೇಲೆ ಮುದ್ರಿಸಲು ಕಾಗದ ಬಹುಭಾಗದ ಮಸಿಯನ್ನು ಹೀರಲು ಅನುಗುಣವಾದ ಗುಣವುಳ್ಳ ಮಸಿಯನ್ನು ಬಳಸಬೇಕಾಗುತ್ತದೆ. ಮಿಕ್ಕಭಾಗ ಗಾಳಿಯಲ್ಲಿರುವ ಆಮ್ಲಜನಕವನ್ನು ಹೀರಿ ಒಣಗುತ್ತದೆ. ಸೂಪರ್ ಕ್ಯಾಲೆಂಡರ್ ಕಾಗದ ಅಥವಾ ಯಂತ್ರಗಳಿಂದ ತಯಾರಾದ ಕಾಗದದ ಮೇಲೆ ಮುದ್ರಿಸಬೇಕಾದರೆ ಮೃದುವಾದ ಕಡಿಮೆ ಅಂಟುವ ಶಕ್ತಿಯುಳ್ಳ ಮಸಿಯನ್ನು ಉಪಯೋಗಿಸಬೇಕು.

ಹಾಫ್‌ಟೋನ್ ಪಡಿಯಚ್ಚುಗಳಿಂದ ಮುದ್ರಿಸುವಾಗ ಮುದ್ರಕನು ಕಾಗದಕ್ಕೆ ತಕ್ಕ ಮಸಿಯನ್ನು ಆರಿಸಿ, ಮಸಿಗೆ ಸಂಬಂಧಿಸಿದ ಭಾಗಗಳನ್ನು ಸರಿಯಾಗಿ ಅನುಗೊಳಿಸಿ, ಸರಿಯಾದ ರೀತಿಯಲ್ಲಿ ಓವರ್‌ಲೆ ಮತ್ತು ಇಂಟರ್‌ಲೆ ಮಾಡಿದರೆ ಮುದ್ರಣದ ಅಂದ ಹೆಚ್ಚುತ್ತದೆ. ಹಾಫ್‌ಟೋನ್ ಪಡಿಯಚ್ಚುಗಳನ್ನು ತಯಾರಿಸುವಾಗ ಉಪಯೋಗಿಸಿರುವ ಸ್ಕ್ರೀನಿಗೆ ಅನುಗುಣವಾದ ಕಾಗದವನ್ನು ಬಳಸಬೇಕು. ಮುದ್ರಣಕ್ಕೆ ಸರಿಯಾದ ಕಾಗದ ಮತ್ತು ಅದಕ್ಕೆ ತಕ್ಕ ಮಸಿಯನ್ನು ಆರಿಸಿದರೆ ಮುದ್ರಣಕಾಲದಲ್ಲಿ ಕಾಗದದ ಧೂಳು ಉದುರುವಿಕೆ, ಕಾಗದದ ಮತ್ತೊಂದು ಮಗ್ಗುಲಲ್ಲಿ ಮುದ್ರಣಕಲೆ ಕಾಣುವಿಕೆ, ಕಾಗದದ ಮೇಲೆ ಮುದ್ರಣ ಮಸಿ ಹರಡುವಿಕೆ, ಕಾಗದ ಜಜ್ಜುವಿಕೆ, ಮುದ್ರಣಾಕ್ಷರಗಳಲ್ಲಿ ಮಸಿತುಂಬುವಿಕೆ, ಹಾಫ್‌ಟೋನ್ ಪಡಿಯಚ್ಚುಗಳಿಂದ ಮುದ್ರಿಸಿದ ಭಾಗದಲ್ಲಿ ಮಸಿಯ ಚುಕ್ಕೆಗಳು ಕಾಣುವಿಕೆ, ಕಾಗದವನ್ನು ಮಸಿ ಕೀಳುವಿಕೆ ಮೊದಲಾದ ತೊಂದರೆಗಳಿಂದ ಪಾರಾಗಬಹುದು.

ಟಿ. ವಿ. ಸುಬ್ರಹ್ಮಣ್ಯಂ

ಗ್ರಂಥಾಲಯಗಳು

ಮಾನವಜೀವನದ ಪರಮ ಆದರ್ಶ ಜ್ಞಾನಾರ್ಜನೆ. ನಮ್ಮ ಅಭಿರುಚಿ, ಅನುಕೂಲ, ಬುದ್ಧಿಶಕ್ತಿಗೆ ಅನುಗುಣವಾದ ವಿಷಯವನ್ನು ಆರಿಸಿ, ಅದರಲ್ಲಿ ನಾವು ಪರಿಣತಿಯನ್ನು ಆತ್ಮೋನ್ನತಿಗಾಗಿ, ಆತ್ಮತೃಪ್ತಿಗಾಗಿ ಪಡೆಯುವ ಪ್ರಯತ್ನ ಪ್ರಶಂಸನೀಯ. ಪ್ರಾಪಂಚಿಕ ಜ್ಞಾನ ಇಲ್ಲವೇ ಪಾರಮಾರ್ಥಿಕ ಜ್ಞಾನಸಾಧನೆಗೆ ಅನುಕೂಲಿಸುವಂತೆ ನಮ್ಮ ಪೂರ್ವಿಕರು ನಮಗಾಗಿ ಬರೆದು ದತ್ತಿಯಾಗಿಟ್ಟಿರುವ ಗ್ರಂಥಗಳ ಅಧ್ಯಯನ, ಚಿಂತನ, ಅವುಗಳಲ್ಲಿನ ತತ್ವಪಾಲನೆ ಇವುಗಳಿಂದ ನಮ್ಮ ಬುದ್ಧಿಶಕ್ತಿ ಬೆಳೆದು ತಿಳುವಳಿಕೆ ಹೆಚ್ಚಿ ನಮ್ಮ ಜೀವನವನ್ನು ಉತ್ತಮಪಡಿಸಿಕೊಳ್ಳಲು ಸಾಧ್ಯವಾಗುತ್ತದೆ. ಇದಕ್ಕೆ ನಮಗೆ ಬೇಕಾದ ರೀತಿಯ ಉತ್ತಮಗ್ರಂಥಗಳು ಓದಲು ದೊರೆಯಬೇಕು. ಪುಸ್ತಕಗಳ ಬೆಲೆ ತುಂಬಾ ಏರುತ್ತಿರುವುದರಿಂದ ಯಾರೇ ಆಗಲಿ, ಯಾವುದಾದರೂ ಒಂದು ವಿಷಯದಲ್ಲಿ ಎಲ್ಲಾ ಪುಸ್ತಕಗಳನ್ನು ಕೊಳ್ಳುವುದು ಅಸಾಧ್ಯ. ಒಂದು ವೇಳೆ ಕೊಂಡರೆ ಗಮನಾರ್ಹ ಸಂಖ್ಯೆಯಲ್ಲಿ ಪುಸ್ತಕ ಸಂಗ್ರಹ ಬೆಳೆದರೆ ಅವುಗಳ ನಿರ್ವಹಣೆ, ಪಾಲನೆ ಬಹಳ ಕಷ್ಟ. ಈ ಸಂಕಟಪರಿಹಾರಕ್ಕೆ ನಾವು ಗ್ರಂಥಾಲಯಗಳ ಮರೆಹೊಗಲೇಬೇಕು.

ವ್ಯಕ್ತಿಯ ವಿದ್ಯಾಭ್ಯಾಸಕಾಲದಲ್ಲಿ ಶಾಲೆಗಳಲ್ಲಿ ಗುರುಮುಖೇನ ದೊರೆಯುವ ವಿದ್ಯೆಯೆಂದರೆ ವಿದ್ಯಾರ್ಜನೆಯ ವಿಧಾನದಲ್ಲಿ ತರಪೇತಿ. ಈ ರೀತಿಯ ಶಿಕ್ಷಣ ಮುಗಿದು ಹೊಟ್ಟೆಪಾಡಿಗಾಗಿ ಕೆಲಸಕ್ಕೆ ಸೇರಿದಮೇಲೆಯೂ ಜ್ಞಾನದಾಹವನ್ನು ಉಳಿಸಿಕೊಂಡು ಅದನ್ನು ತಣಿಸಲು ಒಬ್ಬ ವ್ಯಕ್ತಿಯು ಯತ್ನಿಸಿದರೆ, ಆ ರೀತಿಯ ಯತ್ನ ಆತನ ಸಂಸ್ಕಾರದ ಕುರುಹು. ಈ ರೀತಿಯ ಜ್ಞಾನಭಿಕ್ಷುಗಳಿಗೆ ಎಲ್ಲಾ ರೀತಿಯ ನೆರವನ್ನೀಯುವುದು ಗ್ರಂಥಾಲಯಗಳ ಆದ್ಯ ಕರ್ತವ್ಯ. ನಮ್ಮ ನಿತ್ಯಜೀವನದಲ್ಲಿ ಸಹ ಸಮತೋಲನ ರೀತಿಯ ಸಾಮಾಜಿಕ ಪ್ರಜ್ಞೆ, ರಾಜಕೀಯ ಪ್ರಜ್ಞೆ, ಪೌರಜೀವನದ ಪ್ರಜ್ಞೆ ಮೂಡಿದರೆ ನಾವು ನೆಮ್ಮದಿಯಿಂದ ಬಾಳಬಹುದು.

ಗ್ರಂಥಾಲಯಗಳ ಮುಖ್ಯ ಉದ್ದೇಶ ತಮ್ಮ ಓದುಗರಿಗೆ ಉತ್ತಮ ಸಾಹಿತ್ಯವನ್ನು ಸಕಾಲದಲ್ಲಿ ಒದಗಿಸುವುದು. ಗ್ರಂಥಾಲಯವು ತನ್ನ ಉದ್ದೇಶ ಸಾಧನೆಗೆ, ಓದುಗರ ಅಗತ್ಯಕ್ಕೆ ತಕ್ಕಂತೆ, ಇರುವ ಹಣದಲ್ಲೇ ಉತ್ತಮ ಪುಸ್ತಕಗಳನ್ನು ಆರಿಸಿ, ಕೊಂಡು,

ಅವುಗಳನ್ನು ವರ್ಗೀಕರಿಸಿ, ಅವುಗಳಿಗೆ ಪಟ್ಟಿಕೆಗಳನ್ನು ತಯಾರಿಸಿ ಓದುಗರಿಗೆ ಅವುಗಳನ್ನು ಒದಗಿಸಬೇಕು. ಇದಲ್ಲದೆ ನಿಯತಕಾಲಿಕೆಗಳು, ಪರಾಮರ್ಶನ ಗ್ರಂಥಗಳಾದ ಶಬ್ದಕೋಶಗಳು, ವಿಶ್ವಕೋಶಗಳು, ಜೀವನಚರಿತ್ರೆಕೋಶಗಳು, ಸರಕಾರಿ ಪ್ರಕಟಣೆಗಳು, ಸಮ್ಮೇಳನದ ವರದಿಗಳು—ಇವುಗಳನ್ನು ಗ್ರಂಥಾಲಯಿಯು ಅವಲೋಕಿಸಿ ಅವುಗಳಲ್ಲಿ ಸಿಗುವ ಮಾಹಿತಿಗಳ ಬಗ್ಗೆ ಅರಿತಿರಬೇಕು. ಪುಸ್ತಕ ಪ್ರದರ್ಶನಗಳು, ಪುಸ್ತಕ ವಿಮರ್ಶೆ, ವಿಚಾರಸಂಕೀರ್ಣ, ಉಪನ್ಯಾಸಗಳು, ಚಲಚ್ಚಿತ್ರ ಪ್ರದರ್ಶನ ಇವುಗಳಿಂದ ಗ್ರಂಥಾಲಯದಲ್ಲಿನ ಪುಸ್ತಕಗಳನ್ನು ಓದುಗರ ಗಮನಕ್ಕೆ ತರುವುದರಿಂದ ಹೆಚ್ಚು ಜನ ಹೆಚ್ಚು ಪುಸ್ತಕಗಳನ್ನು ಉಪಯೋಗಿಸುವಂತೆ ಆಗುತ್ತದೆ. ಅಲ್ಲದೆ ಗ್ರಂಥಾಲಯವು ಒದಗಿಸಬಹುದಾದ ಸೌಕರ್ಯವೆಂದರೆ ಭಾಷೆಗಳ ಅಧ್ಯಯನಕ್ಕೆ, ಸಂಗೀತ ಅಭ್ಯಾಸಕ್ಕೆ ಟೇಪ್ ರಿಕಾರ್ಡುಗಳನ್ನು ಬಳಸುವ ಅನುಕೂಲತೆ.

ಕದಂಬರಿಂದ ಮೊದಲಾಗಿ ವಿಜಯನಗರದ ಅರಸರವರೆಗೆ ಕರ್ನಾಟಕವನ್ನು ಆಳಿದ ಕನ್ನಡ ದೊರೆಗಳು ವಿದ್ಯಾಪಕ್ಷಪಾತಿಗಳು, ಸಾಹಿತ್ಯ-ಸಂಸ್ಕೃತಿಗಳ ಪೋಷಕರು. ಈ ರಾಜರ ಆಳ್ವಿಕೆಯ ಕಾಲದಲ್ಲಿ ಕ್ರಿ.ಪೂ. ೫ರಿಂದ ಕ್ರಿ.ಶ. ೧೬ನೆಯ ಶತಮಾನದವರೆಗೆ ಈ ದೊರೆಗಳು ಸ್ಥಾಪಿಸಿದ ವಿದ್ಯಾಕೇಂದ್ರಗಳು, ವಿಶ್ವವಿದ್ಯಾನಿಲಯಗಳು, ಅವುಗಳಿಗೆ ಸೇರಿದಂತೆ ಇದ್ದ ಸರಸ್ವತೀ ಭಂಡಾರಗಳ ಬಗ್ಗೆ ಶಿಕಾರಿಪುರದ ಶಾಸನ, ನಾಗಾಯಿಯ ಶಾಸನ ಇವುಗಳಲ್ಲಿ ಉಲ್ಲೇಖವಿದೆ. ಅಲ್ಲದೆ ಈ ಕೇಂದ್ರಗಳ ಆಡಳಿತನಿರ್ವಹಣೆಗೆ, ಅಲ್ಲಿಯ ವಿದ್ಯಾರ್ಥಿಗಳು, ಖ್ಯಾತ ಪ್ರಾಚಾರ್ಯರುಗಳು, ಸರಸ್ವತೀ ಭಂಡಾರಿಗಳ ಜೀವನೋಪಾಯಕ್ಕಾಗಿ ರಾಜರುಗಳು ಭೂಮಿಯನ್ನು ದತ್ತಿಯಾಗಿ ಕೊಟ್ಟಿರುವುದರ ಬಗ್ಗೆ ಆಧಾರವಿದೆ. ಈ ಭಂಡಾರಗಳು ವಿದ್ಯಾಕೇಂದ್ರಕ್ಕೆ ಸೀಮಿತವಾಗಿದ್ದುದರಿಂದ ಇವುಗಳು ಪ್ರಾಧ್ಯಾಪಕರಿಗೆ, ಸಂಶೋಧಕರಿಗೆ, ವಿದ್ಯಾರ್ಥಿಗಳಿಗೆ ಮೀಸಲಾಗಿದ್ದಿರಬಹುದು.

ಕರ್ನಾಟಕವನ್ನು ಆಳಿದ ಅನೇಕ ಮುಹಮ್ಮದೀಯ ಅರಸರು ತಮ್ಮ ಸಂತೋಷಕ್ಕೋಸ್ಕರ ಗ್ರಂಥಾಲಯಗಳನ್ನು ಅರಮನೆಯ ಒಂದು ಭಾಗದಲ್ಲಿ ಸ್ಥಾಪಿಸಿದ್ದರು. ಈ ರಾಜರಿಗೆ ಸಂಸ್ಕೃತ ಮತ್ತು ದೇಶೀಯ ಭಾಷೆಗಳ ಅಧ್ಯಯನದಲ್ಲಿ ಸಾಕಷ್ಟು ಆಸಕ್ತಿಯಿರಲಿಲ್ಲ. ಅವರು ಪರ್ಷಿಯನ್, ಅರಾಬಿಕ್, ಉರ್ದು ಭಾಷೆಗಳಲ್ಲಿನ ಗ್ರಂಥಗಳನ್ನು ಸಂಗ್ರಹಿಸುವುದರಲ್ಲಿ ಉತ್ಸುಕರಾಗಿದ್ದರು. ಈ ರೀತಿಯಲ್ಲಿ ಸ್ಥಾಪಿತವಾದ ಗ್ರಂಥಾಲಯಗಳ ಪೈಕಿ, ಬಿಜಾಪುರದ ಸುಲ್ತಾನ ಆದಿಲ್‌ಷಾ, ಬೀದರ್‌ನಲ್ಲಿಯ ಮುಹಮ್ಮದ್ ಗವಾನ್, 'ಮೈಸೂರು ಹುಲಿ' ಟೀಪುಸುಲ್ತಾನ್ ಇವರುಗಳು ಪೋಷಿಸಿದ ಗ್ರಂಥಾಲಯಗಳು ಮುಖ್ಯವಾದುವು.

ಬ್ರಿಟಿಷರ ಆಳ್ವಿಕೆಯಲ್ಲಿ ಇಂಗ್ಲಿಷ್ ಭಾಷೆಯ ಅಗತ್ಯ, ಉಪಯೋಗ ಹೆಚ್ಚಾದುದರಿಂದ, ಆ ಭಾಷೆಯನ್ನು ಅಭ್ಯಾಸಮಾಡಿದವರಿಗೆ ಉನ್ನತ ಹುದ್ದೆಗಳೂ, ಗೌರವವೂ, ಸಂಬಳಸಾರಿಗೆಗಳೂ ದೊರೆತಿದುದರಿಂದ ದೇಶೀಯ ಸಾಹಿತ್ಯ ಸಂಸ್ಕೃತಿಯ ಅಭ್ಯಾಸ

ಕುಂಠಿತವಾಗಿ, ನಮ್ಮ ಆತ್ಮವಿಶ್ವಾಸ ನಶಿಸಿತು. ಪ್ರಾಚೀನ ಗ್ರಂಥಾಲಯಗಳು ಪಾಳುಬಿದ್ದವು. ಅನೇಕವೇಳೆ ಅಮೂಲ್ಯಗ್ರಂಥಗಳೂ ನಷ್ಟವಾದುವು. ದೇಶದ ಪ್ರಗತಿ ಕುಂಠಿತವಾಯಿತು. ೧೯ನೆಯ ಶತಮಾನದಲ್ಲಿ ಹಲವು ಯೂರೋಪಿಯ‌ರ್ ವಿದ್ವಾಂಸರ ಸತತ ಪರಿಶ್ರಮದ ಫಲವಾಗಿ ಸಂಸ್ಕೃತ ಭಾಷೆಯ ಅಧ್ಯಯನ ಪುನರಾರಂಭವಾಯಿತು. ಈ ಶತಮಾನದಲ್ಲಿ ಮೂಡಿದ ರಾಜಕೀಯಪ್ರಜ್ಞೆ, ದೇಶಾಭಿಮಾನದ ಕುರುಹಾಗಿ ದೇಶೀಯ ಭಾಷಾಸಾಹಿತ್ಯದ ಅಭ್ಯಾಸ ಪುನರಾರಂಭವಾಯಿತು. ಈ ಪುನರುತ್ಥಾನದ ಕಾಲದಲ್ಲಿ ವಿಶ್ವಸಾಹಿತ್ಯದ ಅನೇಕ ಅನರ್ಘ್ಯರತ್ನಗಳು ನಮಗೆ ಇಂಗ್ಲಿಷಿನ ಮೂಲಕ ಪರಿಚಯವಾದುವು. ಸಾಕ್ಷರತೆ ಹೆಚ್ಚಿದಂತೆ ಪುಸ್ತಕಗಳಿಗೆ ಬೇಡಿಕೆಯೂ ಹೆಚ್ಚಾಯಿತು. ಆದರೆ ಈ ಹೆಚ್ಚಳದ ವೇಗ ಸಾಕಷ್ಟು ಇರಲಿಲ್ಲ. ೧೯೪೨ರಿಂದ ೧೯೪೭ರ ವರೆಗೆ ನಡೆದ ಸ್ವಾತಂತ್ರ್ಯಸಂಗ್ರಾಮದ ಭರಾಟೆಯಲ್ಲಿ ಜನರ ಗಮನವೆಲ್ಲಾ ಸ್ವಾತಂತ್ರ್ಯಸಾಧನೆಗೇ ಮೀಸಲಾಗಿದ್ದಾಗ ಶಾಂತಿಕಾಲದ ವಾತಾವರಣದಲ್ಲಿ ನಡೆಯುವ ಕಾರ್ಯಗಳು ಸ್ಥಗಿತಗೊಂಡಿದುದರಲ್ಲಿ ಅಚ್ಚರಿಯೇನಿಲ್ಲ. ಕರ್ನಾಟಕ ಕ್ಷೇತ್ರದಲ್ಲಿ ಗ್ರಂಥಾಲಯಗಳ ಸ್ಥಾಪನೆಗೆ ಮೊದಲು ನಡೆದ ಪ್ರಯತ್ನವೆಂದರೆ ೧೯೩೯ರಲ್ಲಿ ಅಧಿಕಾರದಲ್ಲಿದ್ದ ಬೊಂಬಾಯಿ ಕಾಂಗ್ರೆಸ್ ಮಂತ್ರಿಮಂಡಲದ್ದು. ಶ್ರೀ ಎ. ಎ. ಎ. ಫೈಜಿಯವರ ಅಧ್ಯಕ್ಷತೆಯಲ್ಲಿ ನೇಮಕವಾದ ಗ್ರಂಥಾಲಯ ಸಲಹಾಸಮಿತಿಯು ೧೯೪೦ರಲ್ಲಿ ಬೊಂಬಾಯಿ ಸರ್ಕಾರಕ್ಕೆ ವರದಿಯೊಂದನ್ನು ಒಪ್ಪಿಸಿ ಗ್ರಂಥಾಲಯಗಳ ಸ್ಥಾಪನೆಗೆ ಶಿಫಾರಸುಮಾಡಿತು. ಅದರಂತೆ ಕೇಂದ್ರ ಹಾಗೂ ಪ್ರಾದೇಶಿಕ ಗ್ರಂಥಾಲಯಗಳು, ಜಿಲ್ಲಾಕೇಂದ್ರ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ, ಐದುಸಾವಿರ ಜನಸಂಖ್ಯೆಯುಳ್ಳ ಹಳ್ಳಿಗಳಲ್ಲಿ, ಎರಡುಸಾವಿರ ಜನಸಂಖ್ಯೆಯ ಗ್ರಾಮಗಳಲ್ಲಿ, ಕಡೆಗೆ ಪ್ರತಿ ಹಳ್ಳಿಯಲ್ಲೂ ಹಂತಹಂತವಾಗಿ ಗ್ರಂಥಾಲಯಗಳು ಸ್ಥಾಪಿತವಾಗಲೆಂದು ಸೂಚಿಸಿತು. ಈ ವರದಿಯನ್ನು ಸರಕಾರ ಅಂಗೀಕರಿಸಿ ಕಾರ್ಯಗತಮಾಡುವುದರಲ್ಲಿ ೧೯೪೨ರಲ್ಲಿ ಸ್ವಾತಂತ್ರ್ಯ ಆಂದೋಲನದ ಕಾವು ಹೆಚ್ಚಿ ಕಾಂಗ್ರೆಸ್ ಮಂತ್ರಿಮಂಡಲ ರಾಜೀನಾಮೆ ನೀಡಿತು.

ಸ್ವಾತಂತ್ರ್ಯೋತ್ತರದಲ್ಲಿ ೧೯೪೭ರಲ್ಲಿ ಬೊಂಬಾಯಿ ಮಂತ್ರಿಮಂಡಲ ಗ್ರಂಥಾಲಯ ಸೇವೆಯನ್ನು ವ್ಯವಸ್ಥೆಗೊಳಿಸುವುದನ್ನು ತ್ವರಿತಗೊಳಿಸಿತು. ಆಗಿನ ಬೊಂಬಾಯಿ ಪ್ರದೇಶ ಮರಾಠಿ, ಗುಜರಾತಿ, ಕನ್ನಡ ಮಾತನಾಡುವ ಜನರನ್ನು ವಿಪುಲವಾಗಿ ಒಳಗೊಂಡಿದ್ದರಿಂದ ಪೂನಾ, ಅಹಮದಾಬಾದ್, ಧಾರವಾಡಗಳಲ್ಲಿ ಪ್ರಾದೇಶಿಕ ಗ್ರಂಥಾಲಯಗಳು ಆರಂಭವಾದುವು. ಜಿಲ್ಲಾ ಕೇಂದ್ರಗಳಲ್ಲಿ, ತಾಲ್ಲೂಕುಗಳಲ್ಲಿ ಸಲಹಾಸಮಿತಿಯ ಶಿಫಾರಸಿನಂತೆ ಗ್ರಂಥಾಲಯಗಳು ಸ್ಥಾಪಿತವಾದುವು. ಅಲ್ಲದೆ ೧೯೪೮ರ ಡಿಸೆಂಬರಿನಲ್ಲಿ ಧಾರವಾಡದಲ್ಲಿ ಅಖಿಲಕರ್ನಾಟಕ ಪುಸ್ತಕ ಭಂಡಾರಗಳ ಸಮ್ಮೇಳನ ನಡೆದು ಅದರ ಫಲವಾಗಿ 'ಮುಂಬಯಿ-ಕರ್ನಾಟಕ ಗ್ರಂಥಾಲಯ ಸಂಘ' ಹುಟ್ಟಿತು. ಒಂದೆರಡು ವರ್ಷ ಅಲ್ಪಾವಧಿಯ ಗ್ರಂಥಾಲಯ ತರಪೇತಿ ಸರ್ಟಿಫಿಕೇಟ್

ತರಗತಿಗಳನ್ನು ನಡೆಸಿ, ಕನ್ನಡದಲ್ಲಿ ಗ್ರಂಥಾಲಯ ಶಾಸ್ತ್ರಕ್ಕೆ ಸಂಬಂಧಿಸಿದಂತೆ ಒಂದು ಪಠ್ಯಪುಸ್ತಕವನ್ನು ಪ್ರಕಟಿಸಿತು. ಅಲ್ಲದೆ ಮುಂದೆ ನಾಲ್ಕು ಸಮ್ಮೇಳನಗಳನ್ನೂ ನಡೆಸಿತು.

ನಮ್ಮ ರಾಜ್ಯಾಂಗದಲ್ಲಿರುವ ನಿರ್ದೇಶನದಂತೆ ಪ್ರತಿಪ್ರಜೆಗೂ ಉಚಿತ ವಿದ್ಯಾಭ್ಯಾಸ ದೊರಕಿಸುವುದು ರಾಜ್ಯ ಸರ್ಕಾರದ ಕರ್ತವ್ಯ. ಓದುಬರಹ ಕಲಿತವರು ಪುನಃ ನಿರಕ್ಷರಿಗಳಾಗದಂತೆ ಅವರಿಗೆ ಪುಸ್ತಕ ವಾಚನ ಸೌಕರ್ಯವನ್ನು ಕಲ್ಪಿಸುವುದೂ ಅಷ್ಟೇ ಮುಖ್ಯ. ಈ ದಿಕ್ಕಿನಲ್ಲಿ ಸರ್ಕಾರದ ಮೊದಲನೆಯ ಹೆಜ್ಜೆ ಉಚಿತ ಸಾರ್ವಜನಿಕ ಗ್ರಂಥಾಲಯಗಳ ಸ್ಥಾಪನೆ. ರಾಜ್ಯದ ಎಲ್ಲಾ ಭಾಗಗಳಲ್ಲಿ—ಕೇಂದ್ರದಲ್ಲಿ, ಜಿಲ್ಲಾ ತಾಲ್ಲೂಕುಗಳಲ್ಲಿ, ಹೋಬಳಿ ಗ್ರಾಮಗಳಲ್ಲಿ ಗ್ರಂಥಾಲಯಗಳು—ಸ್ಥಾಪನೆಯಾಗಿ ಅವುಗಳನ್ನು ಒಂದು ವ್ಯವಸ್ಥೆಗೆ ಒಳಪಡಿಸಿ, ಅವುಗಳು ದಕ್ಷತೆಯಿಂದ ಕೆಲಸಮಾಡುವಂತೆ ನಿಯೋಜಿಸಲು ಅಪಾರ ಹಣ, ಸರಕಾರದ ಬೆಂಬಲ ಅಗತ್ಯ. ಈ ಕಾರ್ಯ ಕಾನೂನಿನ ಬಲದಿಂದಲೇ ಸಾಧ್ಯ. ಭಾಷಾವಾರು ಪ್ರಾಂತ ವಿಭಜನೆಗೆ ಮೊದಲು ಮದರಾಸ್, ಆಂಧ್ರಪ್ರದೇಶ, ಹೈದರಾಬಾದ್ ಪ್ರದೇಶಗಳಲ್ಲಿ ಗ್ರಂಥಾಲಯ ಕಾನೂನು ಜಾರಿಯಲ್ಲಿತ್ತು. ವಿಭಜನೆಯನಂತರ ಈ ರಾಜ್ಯಗಳ ಹಲವು ಭಾಗಗಳೂ ಹಳೆಯ ಮೈಸೂರು ರಾಜ್ಯದೊಡನೆ ವಿಲೀನವಾದುವು.

ಈ ವಿಲೀನ ಪ್ರದೇಶಗಳಲ್ಲಿದ್ದ ಗ್ರಂಥಾಲಯ ಕಾನೂನಿನಲ್ಲಿ ಸ್ವಲ್ಪ ವ್ಯತ್ಯಾಸಗಳಿದ್ದುವು. ಈ ಭೇದಗಳನ್ನು ತೊಡೆದುಹಾಕಿ, ಕಾರ್ಯದಲ್ಲಿ ಏಕರೀತಿಯನ್ನು ರೂಪಿಸಲು, ಹಾಗೂ ಇಡೀ ಮೈಸೂರು ರಾಜ್ಯಕ್ಕೇ ಅನ್ವಯಿಸುವಂತಹ ಒಂದು ನೂತನ ಗ್ರಂಥಾಲಯ ಕಾನೂನನ್ನು ತರಲು ಸರಕಾರ ಇಚ್ಛಿಸಿತು. ಭಾರತ ಸರಕಾರದಿಂದ ನೇಮಿತವಾದ ಸಮಿತಿಯೂ ಸಹ ರಾಜ್ಯಸರ್ಕಾರಗಳು ಕಾನೂನಿನ ಮೂಲಕ ಸಾರ್ವಜನಿಕ ಗ್ರಂಥಾಲಯಗಳನ್ನು ಎಲ್ಲೆಡೆ ವ್ಯವಸ್ಥೆಗೊಳಿಸಬೇಕೆಂದು ೧೯೫೮ರಲ್ಲಿ ಶಿಫಾರಸು ಮಾಡಿತು. ಮೈಸೂರು ಸರ್ಕಾರವು ಸಮಿತಿಯೊಂದನ್ನು ರಚಿಸಿ ಪದ್ಮಶ್ರೀ ಎಸ್. ಆರ್. ರಂಗನಾಥರವರನ್ನು ಅಧ್ಯಕ್ಷರನ್ನಾಗಿ ನೇಮಿಸಿತು. ಭಾರತದಲ್ಲಿ ಸಾರ್ವಜನಿಕ ಗ್ರಂಥಾಲಯ ಚಳುವಳಿಯ ಜನಕರೂ ಗ್ರಂಥಾಲಯಶಾಸ್ತ್ರದ ಅಭಿವೃದ್ಧಿಗೆ ಸತತವಾಗಿ ದುಡಿಯುತ್ತಿರುವವರೂ ಆದ ಶ್ರೀ ರಂಗನಾಥರವರ ಮಾರ್ಗದರ್ಶನದಲ್ಲಿ ಈ ಸಮಿತಿಯು ಮುಖ್ಯವಾಗಿ ಈ ರೀತಿ ಶಿಫಾರಸು ಮಾಡಿತು : (೧) ರಾಜ್ಯಮಟ್ಟದ ಸಮಿತಿ (೨) ಗ್ರಂಥಾಲಯ ಶಾಖೆ (೩) ಕೇಂದ್ರ ಗ್ರಂಥಾಲಯ (೪) ಹಣಕಾಸು (೫) ಸಿಬ್ಬಂದಿ, ಇವುಗಳ ಸ್ಥಾಪನೆ.

ಶಿಕ್ಷಣ ಮಂತ್ರಿಗಳು ಅಧ್ಯಕ್ಷರಾಗಿ ಉಳ್ಳ ರಾಜ್ಯಮಟ್ಟದ ಸಮಿತಿಯು ೧೯ ಸದಸ್ಯರಿಂದ ಕೂಡಿದ್ದು ಗ್ರಂಥಾಲಯ ಕಾನೂನಿನ ಅನುಸಾರ ನೀತಿಯನ್ನು ರೂಪಿಸಿ ಆಡಳಿತವನ್ನು ನಿಯಂತ್ರಿಸುತ್ತದೆ. ಗ್ರಂಥಾಲಯ ವ್ಯವಸ್ಥೆಗೇ ಪ್ರತ್ಯೇಕ ಸರಕಾರೀ ಶಾಖೆ ಇದ್ದು ಇದರ ಮುಖ್ಯಸ್ಥರು ಶಿಕ್ಷಣ ಇಲಾಖೆಯ ಡೈರೆಕ್ಟರರ ಸ್ಥಾನಮಾನಗಳನ್ನು ಪಡೆದಿರುತ್ತಾರೆ ; ಹಾಗೂ ಈ ಅಧಿಕಾರಿಗಳೇ ಕೇಂದ್ರ ಗ್ರಂಥಾಲಯದ ಅಧಿಪತಿಯೂ

ಸಹ ಆಗಿರುತ್ತಾರೆ. ಕೇಂದ್ರ ಗ್ರಂಥಾಲಯದಲ್ಲಿ (೧) ಕಾಪಿರೈಟ್ ಪುಸ್ತಕಗಳ ಸಂಗ್ರಹ (೨) ಅಂಧರಿಗಾಗಿ ಬ್ರೇಲ್ ಪುಸ್ತಕ ಸಂಗ್ರಹ (೩) ಅಂತರ ಗ್ರಂಥಾಲಯ ಪುಸ್ತಕ ಎರವಲು ವ್ಯವಸ್ಥೆ (೪) ಪುಸ್ತಕ ಸೂಚಿಗಳ ತಯಾರಿಕಾ ಕೇಂದ್ರ (೫) ತಾಂತ್ರಿಕ ಮತ್ತಿತರ ಕೆಲಸಗಳಿಗೆ ಕೇಂದ್ರೀಕೃತ ವ್ಯವಸ್ಥೆ ಇರುತ್ತದೆ. ಸಾರ್ವಜನಿಕ ಗ್ರಂಥಾಲಯಗಳ ಬೆಳವಣಿಗೆಯ ಅಂಗವಾಗಿ ಬೆಂಗಳೂರು, ಮೈಸೂರು, ಮಂಗಳೂರು, ಹುಬ್ಬಳ್ಳಿ, ಧಾರವಾಡ, ಬೆಳಗಾಂ ನಗರಗಳಲ್ಲಿ ಮತ್ತು ಒಂದು ಲಕ್ಷಕ್ಕಿಂತಲೂ ಹೆಚ್ಚು ಜನರಿರುವ ನಗರಗಳಲ್ಲಿ ನಗರ ಕೇಂದ್ರ ಗ್ರಂಥಾಲಯಗಳನ್ನು ಸ್ಥಾಪಿಸಲಾಗುವುದು. ಜಿಲ್ಲೆಯ ಕೇಂದ್ರಗಳಲ್ಲಿ ಜಿಲ್ಲಾ ಕೇಂದ್ರ ಗ್ರಂಥಾಲಯಗಳಿದ್ದು, ಇವುಗಳು ತಾಲ್ಲೂಕು ಕೇಂದ್ರದಲ್ಲಿ ಗ್ರಂಥಾಲಯದ ಶಾಖೆಗಳನ್ನೂ ಗ್ರಾಮಗಳಿಗೆ ಸಂಚಾರಿ ಗ್ರಂಥಾಲಯವನ್ನೂ ವ್ಯವಸ್ಥೆ ಮಾಡುವುವು. ಈ ಎಲ್ಲಾ ಶಾಖೆಗಳಿಗೂ ಸಲಹಾ ಸಮಿತಿಗಳಿವೆ.

ಈ ರೀತಿಯ ಸೇವಾ ವ್ಯವಸ್ಥೆಗೆ ಹಣಕಾಸನ್ನು ಒದಗಿಸಲು ಸರಕಾರದವರು ಕಟ್ಟಡಗಳು, ಜಮೀನುಗಳ ಮೇಲಿನ ಕಂದಾಯ, ಸುಂಕ, ವಾಹನ ತೆರಿಗೆ, ವೃತ್ತಿ ತೆರಿಗೆ ಇವುಗಳ ಮೇಲೆ ರೂಪಾಯಿಗೆ ಮೂರು ಪೈಸೆಯಿಂದ ಆರು ಪೈಸೆವರೆಗೆ ಸರ್‌ಛಾರ್ಜ್ ಎಂದು ಲೈಬ್ರರಿ ಸುಂಕವನ್ನು ವಿಧಿಸಿರುತ್ತಾರೆ. ಇದನ್ನು ನಗರಸಭೆ, ಪುರಸಭೆ ಅಥವಾ ಸ್ಥಳೀಯ ಪಂಚಾಯಿತಿ ವಸೂಲು ಮಾಡುತ್ತದೆ. ಇದಲ್ಲದೆ ಪ್ರತಿ ಜಿಲ್ಲಾ ಗ್ರಂಥಾಲಯ ಸಮಿತಿಗೆ ಆ ಜಿಲ್ಲೆಯ ವಾರ್ಷಿಕ ಕಂದಾಯದ ಶೇಕಡಾ ಮೂರರಷ್ಟನ್ನು ಸರಕಾರ ಕೊಡುತ್ತದೆ. ಆದರೆ ಈ ರೀತಿ ಏರ್ಪಡಿಸಿದ ಗ್ರಂಥಾಲಯಗಳು ಓದುಗರಿಂದ ಯಾವ ರೀತಿಯ ಶುಲ್ಕವನ್ನೂ ವಸೂಲು ಮಾಡದೆ ಉಚಿತವಾಗಿ ಸೇವೆ ಸಲ್ಲಿಸಬೇಕು.

ಗ್ರಂಥಾಲಯದ ನೌಕರರುಗಳು ಸರಕಾರಿ ನೌಕರರಾದುದರಿಂದ ಅವರು ತಮ್ಮ ಸ್ಥಾನಮಾನಗಳ ಬಗ್ಗೆ ಚಿಂತಿಸಬೇಕಾದುದಿಲ್ಲ. ಸರಕಾರಿ ನೌಕರರ ಸಂಬಳ ಸಾರಿಗೆಗಳು ಇವರಿಗೂ ಸಲ್ಲುವುವು.

ಈ ರೀತಿಯ ಗ್ರಂಥಾಲಯ ವ್ಯವಸ್ಥೆಯನ್ನು ಏರ್ಪಡಿಸಬೇಕೆಂದಿರುವ ಮೈಸೂರು ಸರ್ಕಾರದ ಪ್ರಯತ್ನ ನಿಜಕ್ಕೂ ಪ್ರಶಂಸನೀಯ. ಭಾರತದ ಇತರ ರಾಜ್ಯಗಳಲ್ಲಿರುವ ಗ್ರಂಥಾಲಯ ಕಾನೂನುಗಳಿಗಿಂತ ಮೈಸೂರು ಸಾರ್ವಜನಿಕ ಗ್ರಂಥಾಲಯ ಕಾನೂನು ಕ್ರಾಂತಿಕಾರಕವಿದ್ದು ಕಾಲಕ್ಕನುಗುಣವಾಗಿ ನೂತನ ಹಾದಿಯಲ್ಲಿ ಧೈರ್ಯವಾಗಿ ಹೆಜ್ಜೆಯಿಟ್ಟಿದೆ. ಇದನ್ನು ಈ ದಶಕದ ಮಹತ್ಸಾಧನೆಯೆಂದರೂ ಉತ್ಪ್ರೇಕ್ಷೆಯಿಲ್ಲ. ಇದರ ಪೂರ್ಣ ಉಪಯೋಗವನ್ನು ಕಾಣಲು ಸ್ವಲ್ಪ ಕಾಲ ಬೇಕು.

ಈಗ ಬೆಂಗಳೂರಿನಲ್ಲಿದ್ದ ಸಾರ್ವಜನಿಕ ಗ್ರಂಥಾಲಯವು ರಾಜ್ಯದ ಕೇಂದ್ರ ಗ್ರಂಥಾಲಯವಾಗಿ ಮಾರ್ಪಟ್ಟು ಕೆಲಸವನ್ನು ಆರಂಭಿಸಿದೆ. ಕೊಡಗಿನ ಮಡಕೇರಿಯಲ್ಲಿರುವ ಮಹಾತ್ಮಾಗಾಂಧಿ ಸಾರ್ವಜನಿಕ ಗ್ರಂಥಾಲಯವು ೧೯೫೪ರಲ್ಲಿ ಸ್ಥಾಪಿತವಾಯಿತು. ಇದರಲ್ಲಿ ೧೦ಸಾವಿರ ಕನ್ನಡ, ೫ಸಾವಿರ ಇಂಗ್ಲಿಷ್, ೪೦೦ ಮಲೆಯಾಳಂ ಮತ್ತಿತರ ಭಾಷೆಯ ಪುಸ್ತಕಗಳಿದ್ದು ೧೧೪ ನಿಯತಕಾಲಿಕೆಗಳನ್ನು ತರಿಸಲಾಗುತ್ತಿದೆ.

ಅಲ್ಲದೆ ಈ ಗ್ರಂಥಾಲಯದ ಮೇಲ್ವಿಚಾರಣೆಯಲ್ಲಿ ೧೧೧ ಗ್ರಾಮಗ್ರಂಥಾಲಯಗಳಿದ್ದು ಇವುಗಳನ್ನು ಗ್ರಾಮದ ಗ್ರಾಮಪಂಚಾಯಿತಿ, ಶಾಲಾ ಕಟ್ಟಡ ಅಥವಾ ಯುವಕ ಸಂಘಗಳಲ್ಲಿಡಲಾಗಿದೆ. ಇದಲ್ಲದೆ ಚಲಚ್ಚಿತ್ರ ಸಂಗ್ರಹಾಲಯವೂ ಇದ್ದು ಇದು ೫೦೦ ಚಲಚಿತ್ರ ಪ್ರತಿಗಳನ್ನು ಹೊಂದಿದೆ. ಇವುಗಳನ್ನು ಉಚಿತವಾಗಿ ಶಿಕ್ಷಣ ಸಂಸ್ಥೆಗಳಿಗೆ ಪ್ರದರ್ಶನಕ್ಕಾಗಿ ಎರವಲು ಕೊಡಲಾಗುತ್ತಿದೆ. ಸಂಚಾರಿ ವಿಭಾಗವು ವರ್ಷಕ್ಕೆ ೧೫೦ ಪ್ರದರ್ಶನಗಳನ್ನು ಏರ್ಪಡಿಸುತ್ತದೆ.

ಶಿಕ್ಷಣ ಸಂಸ್ಥೆಗಳ ಗ್ರಂಥಾಲಯಗಳು

ಶಿಕ್ಷಣದ ವ್ಯವಸ್ಥೆಯಲ್ಲಿ ಬೋಧಕರು, ಬೋಧನಸಲಕರಣೆ, ಪ್ರಯೋಗ ಶಾಲೆಗಳಷ್ಟೇ ಮುಖ್ಯವಾದುವು ಗ್ರಂಥಾಲಯಗಳು. ಆದರೆ ಈ ಸತ್ಯವನ್ನು ನಾವು ಇನ್ನೂ ಮನಗಂಡಿಲ್ಲ. ಶಿಕ್ಷಣಸಂಸ್ಥೆಯು ಪಾಠಕ್ರಮದ ಪುಸ್ತಕಗಳನ್ನು ಹಾಗೂ ವಿದ್ಯಾರ್ಥಿಗಳ ವ್ಯವಹಾರಜ್ಞಾನ, ತಿಳುವಳಿಕೆ ಹೆಚ್ಚಿಸಿ ಅವರನ್ನು ಸುಸಂಸ್ಕೃತರನ್ನಾಗಿ ಮಾಡುವಂತಹ ಪುಸ್ತಕಗಳನ್ನು ಗ್ರಂಥಾಲಯಕ್ಕೆ ಸೇರಿಸಿ, ವಿದ್ಯಾರ್ಥಿಗಳಿಗೆ ವಿದ್ಯಾರ್ಜನೆಯಲ್ಲಿ ಗ್ರಂಥಾಲಯವು ಸಹಾಯ ಮಾಡಬೇಕು.

ಮೈಸೂರು ರಾಜ್ಯದಲ್ಲಿರುವ ನಾಲ್ಕು ವಿಶ್ವವಿದ್ಯಾಲಯಗಳಲ್ಲಿ ಅತ್ಯಂತ ಹಳೆಯದು ಮೈಸೂರು ವಿಶ್ವವಿದ್ಯಾನಿಲಯ. ಎಂಟುವರ್ಷದ ಹಿಂದೆ ರೂಪಿತವಾದ ಮಾನಸ ಗಂಗೋತ್ರಿ ಸ್ನಾತಕೋತ್ತರ ಪ್ರದೇಶದಲ್ಲಿ ಉನ್ನತ ವ್ಯಾಸಂಗ ಹಾಗೂ ಸಂಶೋಧನೆಗೆ ನೆರವಾಗಲು ಗ್ರಂಥಾಲಯವು ಭವ್ಯವಾದ ಕಟ್ಟಡದಲ್ಲಿ ವ್ಯವಸ್ಥಿತವಾಗಿದೆ. ಇದರಲ್ಲಿ ೨ ಲಕ್ಷ ಪುಸ್ತಕಗಳೂ ನಿಯತಕಾಲಿಕೆ ಸಂಪುಟಗಳೂ ಇದ್ದು ಸುಮಾರು ೧೦೦೦ ನಿಯತ ಕಾಲಿಕೆಗಳು ಬರುತ್ತವೆ. ಇದರಲ್ಲಿ ಪಠ್ಯಪುಸ್ತಕ ವಿಭಾಗ, ಪರಾಮರ್ಶನ ವಿಭಾಗವಿದ್ದು, ಸಂಶೋಧಕರಿಗೆ ಅಧ್ಯಯನಕ್ಕಾಗಿ ಪ್ರತ್ಯೇಕ ಕೊಠಡಿಗಳಿವೆ. ಕನ್ನಡ ಗ್ರಂಥಗಳಿಗೇ ಪ್ರತ್ಯೇಕ ವಿಭಾಗವಿದ್ದು ಇದರಲ್ಲಿ ಸುಮಾರು ೧೮,೦೦೦ ಗ್ರಂಥಗಳೂ ೩೦೦ ನಿಯತ ಕಾಲಿಕೆ ಸಂಪುಟಗಳೂ ಇವೆ. ಪುಸ್ತಕಗಳು ವರ್ಗೀಕೃತವಿದ್ದು ಮುದ್ರಿತಪಟ್ಟಿಕೆಗಳನ್ನು ಹೊಂದಿವೆ. ಇದಲ್ಲದೆ ಆಗಾಗ್ಗೆ ಪುಸ್ತಕ ಪ್ರದರ್ಶನ, ಚಲಚ್ಚಿತ್ರ ಪ್ರದರ್ಶನಗಳನ್ನು ಏರ್ಪಡಿಸಲಾಗುತ್ತದೆ. ಮುಖ್ಯದ್ವಾರದ ಬಳಿ ಲಘುವಾಚನ ಮಂದಿರವಿದ್ದು ದಿನಪತ್ರಿಕೆ ಗಳು, ವಾರಪತ್ರಿಕೆಗಳು, ಮಾಸಪತ್ರಿಕೆಗಳು ಇವುಗಳನ್ನು ಓದಲು ಅವಕಾಶವಿದೆ. ಅಂತರ ಗ್ರಂಥಾಲಯ ಎರವಲು ಸೇವೆ, ಮೈಕ್ರೋಫಿಲಂ ರೀಡರ್ ಮುಂತಾದ ಸೌಕರ್ಯಗಳಿವೆ. ಪ್ರೊಫೆಸರ್ ಸ್ಥಾನಮಾನದ ಒಬ್ಬ ಗ್ರಂಥಾಲಯದ ಅಧಿಕಾರಿ, ಉಪಪ್ರಧಾನ ಅಧಿಕಾರಿ ಗಳಲ್ಲದೆ ೧೨ ಜನ ತರಪೇತಿಪಡೆದ ಸಹಾಯಕ ಗ್ರಂಥಪಾಲಕರಿರುತ್ತಾರೆ. ವರ್ಷದಲ್ಲಿ ಐದುದಿನ ಮಾತ್ರ ಮುಚ್ಚಿರುವ ಈ ಗ್ರಂಥಾಲಯ ಪ್ರತಿದಿನ ಬೆಳಿಗ್ಗೆ ೮ ರಿಂದ ರಾತ್ರಿ ೮ರವರೆಗೆ ಕೆಲಸಮಾಡುತ್ತದೆ. ಓದುಗರಿಗೆ ಇನ್ನೂ ಉತ್ತಮ ಸೇವೆಸಲ್ಲಿಸಲು ಪ್ರಯತ್ನ ನಡೆದಿದೆ. ಈ ಗ್ರಂಥಾಲಯದ ವಾರ್ಷಿಕವೆಚ್ಚ ಸುಮಾರು ೫ ಲಕ್ಷ ರೂಪಾಯಿ.

೧೯೪೯ರಲ್ಲಿ ಸ್ಥಾಪಿತವಾದ ಕರ್ನಾಟಕ ವಿಶ್ವವಿದ್ಯಾಲಯವು ಸುವ್ಯಸ್ಥಿತ ಗ್ರಂಥಾಲಯವನ್ನು ಹೊಂದಿದೆ. ನಿಸರ್ಗದ ಮಡಿಲಲ್ಲಿ ಭವ್ಯಕಟ್ಟಡಗಳನ್ನು ಒಳಗೊಂಡಿರುವ ವಿಶ್ವವಿದ್ಯಾನಿಲಯದ ಪ್ರದೇಶ ರಮಣೀಯದೃಶ್ಯ. ಒಂದು ಲಕ್ಷಕ್ಕೂ ಮಿಕ್ಕಿ ಇರುವ ಪುಸ್ತಕಗಳು, ೭೫೦ ನಿಯತಕಾಲಿಕೆಗಳು ಇವುಗಳ ನೆರವಿನಿಂದ ವಿದ್ಯಾರ್ಥಿಗಳಿಗೆ, ಬೋಧಕರಿಗೆ ಉತ್ತಮ ನೆರವು ನೀಡುತ್ತದೆ. ಈ ಗ್ರಂಥಾಲಯದಲ್ಲಿ ಅಪೂರ್ವ ಕೃತಿಗಳು ಹಲವಾರು ಇವೆ: ಹಿಂದಿನಕಾಲದ ಮುದ್ರಿತ ಪುಸ್ತಕಗಳು, ದುಬಾರಿ ಬೆಲೆಯ ಕಲಾಗ್ರಂಥಗಳು, ಯುನೆಸ್ಕೋ ಕಲಾಮಾಲೆಯ ಪುಸ್ತಕಗಳೂ ಇವೆ. ಯುನೆಸ್ಕೋ ತಾನು ಪ್ರಕಟಿಸುವ ಪುಸ್ತಕಗಳ ಒಂದು ಪ್ರತಿಯನ್ನು ಉಚಿತವಾಗಿ ಈ ಗ್ರಂಥಾಲಯಕ್ಕೆ ಕಳಿಸುತ್ತದೆ. ಇಲ್ಲಿಯೂ ತರಪೇತಿ ಪಡೆದ ಸಹಾಯಕ ಗ್ರಂಥಪಾಲಕರಿರುತ್ತಾರೆ. ಕರ್ನಾಟಕ ವಿಶ್ವವಿದ್ಯಾಲಯವು 'ಸಂಚಾರಿ ಗ್ರಂಥಾಲಯ'ವನ್ನು ೧೯೫೮ರಿಂದ ಆರಂಭಿಸಿದೆ. ಯಾವುದಾದರೊಂದು ತಾಲೂಕಿನ ೨೦ ಹಳ್ಳಿಗಳ ಮಂಡಲವನ್ನಾಯ್ದು ಒಂದೊಂದರಲ್ಲಿ ೬೦ ವಿವಿಧ ಪುಸ್ತಕಗಳುಳ್ಳ ೨೦ ಬೇರೆ ಬೇರೆ ಪೆಟ್ಟಿಗೆಗಳನ್ನು ಹಳ್ಳಿಗೊಂದರಂತೆ ಮೊದಲು ಹಂಚಲಾಗುವುದು. ತಿಂಗಳನಂತರ ಕ್ರಮವಾಗಿ ಬೇರೆ ಪೆಟ್ಟಿಗೆ ಅಲ್ಲಿಗೆ ಬಂದು ಅಲ್ಲಿನ ಪೆಟ್ಟಿಗೆ ಬೇರೆಕಡೆಗೆ ಹೋಗುತ್ತದೆ. ಹೀಗಾಗಿ ಪ್ರತಿಹಳ್ಳಿಯೂ ಎಲ್ಲಾ ೨೦ ಪೆಟ್ಟಿಗೆಗಳನ್ನು ಉಪಯೋಗಿಸಲು ೨೦ ತಿಂಗಳು ಹಿಡಿಯುತ್ತದೆ. ಮೈಸೂರು ಸಂಸ್ಥಾನದಲ್ಲೇ ನಡೆದಿರುವ ಈ ನೂತನ ಪ್ರಯೋಗ ಜನಾದರಣೀಯವಾಗಿದೆ.

ಬೆಂಗಳೂರಿನ ಸೆಂಟ್ರಲ್ ಕಾಲೇಜನ್ನು ಕೇಂದ್ರವಾಗಿಟ್ಟುಕೊಂಡು ಬೆಂಗಳೂರಿನ ನಗರಸಭೆಯ ಸರಹದ್ದಿನಲ್ಲಿರುವ ಎಲ್ಲಾ ಕಾಲೇಜುಗಳ ಮೇಲೆ ಅಧಿಕಾರ ಹೊಂದಿದ ಬೆಂಗಳೂರು ವಿಶ್ವವಿದ್ಯಾನಿಲಯವು ೧೯೬೪ರಲ್ಲಿ ಸ್ಥಾಪಿತವಾಯಿತು. ಸೆಂಟ್ರಲ್ ಕಾಲೇಜಿನ ಗ್ರಂಥಾಲಯವೇ ಈ ನೂತನ ವಿಶ್ವವಿದ್ಯಾನಿಲಯದ ಗ್ರಂಥಾಲಯವಾಗಿ ಮಾರ್ಪಟ್ಟಿತು. ಇದರಲ್ಲಿ ಸುಮಾರು ಒಂದು ಲಕ್ಷ ಪುಸ್ತಕಗಳಿವೆ. ಸುಮಾರು ೫೦೦ ನಿಯತಕಾಲಿಕೆಗಳು ಬರುತ್ತವೆ. ಓದುಗರಿಗೆ ಉತ್ತಮ ಸೇವೆ ಸಲ್ಲಿಸಲು ಗ್ರಂಥಾಲಯವನ್ನು ಸಜ್ಜುಗೊಳಿಸಿ ವ್ಯವಸ್ಥೆಮಾಡಲಾಗುತ್ತಿದೆ. ಊರಿನ ಆಚೆ ವೃಷಭಾವತೀ ತೀರದಲ್ಲಿ ಕಟ್ಟಲಾಗುವ ನೂತನ ಸ್ನಾತಕೋತ್ತರ ಕೇಂದ್ರದಲ್ಲಿ ಗ್ರಂಥಾಲಯವನ್ನು ಸ್ಥಾಪಿಸಲು ನಕ್ಷೆ ತಯಾರಿಸಿ, ಕಟ್ಟಡದ ಕೆಲಸ ಆರಂಭವಾಗಲಿದೆ.

ವ್ಯವಸಾಯದ ವಿಷಯಗಳಿಗಂತೂ ನೂತನವಾಗಿ ೧೯೬೪ರಲ್ಲಿ ನಿರ್ಮಿತವಾದ ಕೃಷಿ ವಿಶ್ವವಿದ್ಯಾನಿಲಯವು ತೀವ್ರಗತಿಯಲ್ಲಿ ಮುನ್ನಡೆಯುತ್ತಿದೆ. ಇದಕ್ಕೆ ಪಶುಸಂಗೋಪನ ಕಾಲೇಜು, ಹೆಸರುಘಟ್ಟದ ಫಲ ಸಂಶೋಧನಾ ಕೇಂದ್ರಗಳು ಸೇರಿವೆ. ವಿದ್ಯಾರ್ಥಿಗಳು, ಬೋಧಕರು, ಸಂಶೋಧಕರು ಇವರೆಲ್ಲರಿಗೆ ಸೇವೆ ಸಲ್ಲಿಸಲು ಹೆಚ್ಚು ಅನುಕೂಲವಿರುವಂತೆ ಭವ್ಯವಾದ ಕಟ್ಟಡದ ನಕ್ಷೆ ತಯಾರಿಕೆ ನಡೆದಿದೆ. ಈಗಿರುವ ಸಣ್ಣ ಕಟ್ಟಡದಲ್ಲಿ ಸ್ಥಳಾಭಾವದಿಂದ ಓದುಗರಿಗೆ ಅನುಕೂಲ ಕಲ್ಪಿಸಲು ಆಗುತ್ತಿಲ್ಲ.

ದಕ್ಷಿಣ ಭಾರತದಲ್ಲಿ ವಿಜ್ಞಾನದ ಅಧ್ಯಯನಕ್ಕೆ ಕೇಂದ್ರವೆನಿಸಿರುವ ಬೆಂಗಳೂರಿನ ತಾತಾ ವಿಜ್ಞಾನಮಂದಿರವು ವಿಶ್ವವಿದ್ಯಾನಿಲಯವೆಂದೇ ಪರಿಗಣಿತವಾಗಿದೆ. ಉನ್ನತ ವ್ಯಾಸಂಗ, ಸಂಶೋಧನೆಗೆ ಅನುಕೂಲಿಸುವಂತೆ ಇದರ ಗ್ರಂಥಾಲಯವು ನೂತನ ಕಟ್ಟಡದಲ್ಲಿ ಉತ್ತಮ ಸಲಕರಣೆಗಳಿಂದ ಸಜ್ಜಾಗಿದೆ. ಎಸಡು ಲಕ್ಷದಷ್ಟು ಪುಸ್ತಕಗಳು ನಿಯತಕಾಲಿಕೆ ಸಂಪುಟಗಳು ಇವೆ. ಅಮೆರಿಕದ ಅಣುಶಕ್ತಿಕೇಂದ್ರದ ವರದಿಗಳು, ಸರ್ಕಾರಿ ಸಂಸ್ಥೆಗಳ ಸಂಶೋಧನ ವರದಿಗಳು, ಭಾರತ ಹಾಗೂ ಜರ್ಮನಿ ದೇಶದ ಪೇಟೆಂಟುಗಳು ಮುಂತಾದ ಅತ್ಯುಪಯುಕ್ತ ಸಾಧನಗಳಿವೆ. ಅಲ್ಲದೆ ಓದುಗರ ಬೇಡಿಕೆಯಂತೆ ಜರ್ಮನ್, ರಷ್ಯನ್, ಫ್ರೆಂಚ್ ಭಾಷೆಗಳಿಂದ ಲೇಖನಗಳನ್ನು ಭಾಷಾಂತರ ಮಾಡಿ ಓದುಗರಿಗೆ ಅವರ ಆವಶ್ಯಕತೆಗಳನ್ನು ಪೂರೈಸಲಾಗುತ್ತದೆ. ಇತ್ತೀಚೆಗೆ ದೆಹಲಿಯ ಇನ್‌ಸ್‌ಡಾಕ್ ಸಂಸ್ಥೆಯವರು ಪ್ರಾದೇಶಿಕ ಕೇಂದ್ರವನ್ನು ಆರಂಭಿಸಿ, ವಿಜ್ಞಾನದ ಯಾವುದೇ ವಿಭಾಗದಲ್ಲಿ ಸಂಶೋಧಕರಿಗೆ ಬೇಕಾಗುವ ನಿಯತಕಾಲಿಕೆ ಲೇಖನಗಳ ಪ್ರತಿಗಳನ್ನು ತಯಾರಿಸಿ ಒದಗಿಸುವ ವ್ಯವಸ್ಥೆ ಮಾಡಿರುತ್ತಾರೆ. ಲೇಖನಗಳನ್ನು ಮೈಕ್ರೋಫಿಲಂ ಅಥವಾ ಫೋಟೋ ತೆಗೆದು ಅತಿ ಸುಲಭ ಬೆಲೆಗೆ ಒದಗಿಸುತ್ತಾರೆ. ಬೆಂಗಳೂರಿನ ಸ್ನಾತಕೋತ್ತರ ವಿದ್ಯಾರ್ಥಿಗಳು, ಕೈಗಾರಿಕೆ ಅಥವಾ ಸಂಶೋಧನ ಸಂಸ್ಥೆಗಳಲ್ಲಿ ಕೆಲಸ ಮಾಡುವವರು ಈ ಗ್ರಂಥಾಲಯವನ್ನು ಉಪಯೋಗಿಸಬಹುದು.

ಕಾಲೇಜುಗಳಿರುವ ಎಲ್ಲಾ ಊರುಗಳಲ್ಲಿ ಆಯಾ ಕಾಲೇಜುಗಳಿಗೆ ಸೇರಿದಂತೆ ಗ್ರಂಥಾಲಯಗಳು ಇವೆ. ಆದರೆ ಹೆಚ್ಚು ಸಂಸ್ಥೆಗಳಲ್ಲಿ ಗ್ರಂಥಾಲಯಶಾಸ್ತ್ರದಲ್ಲಿ ತರಪೇತಿ ಪಡೆದ ಕಾರ್ಯಕರ್ತರಿಲ್ಲ. ಸಂಸ್ಥೆಯ ಆಡಳಿತಗಾರರು ಸಹ ಗ್ರಂಥಾಲಯದ ಅಭಿವೃದ್ಧಿಗೆ ಗಮನವಿತ್ತಿಲ್ಲ. ಈ ದೂರಿಗೆ ಹೊರತಾಗಿರುವ ಸಂಸ್ಥೆಗಳೆಂದರೆ ಸುರತ್ಕಲ್‌ನಲ್ಲಿರುವ ಪ್ರಾದೇಶಿಕ ಇಂಜನಿಯರಿಂಗ್ ಕಾಲೇಜು, ಉಡುಪಿಯಲ್ಲಿನ ಮಹಾತ್ಮಾ ಗಾಂಧಿ ಸ್ಮಾರಕ ಕಾಲೇಜು, ಪೂರ್ಣಪ್ರಜ್ಞ ಕಾಲೇಜು, ಮೈಸೂರಿನಲ್ಲಿರುವ ಪ್ರಾದೇಶಿಕ ಶಿಕ್ಷಣ ಕಾಲೇಜು. ೧೯೬೦ರಲ್ಲಿ ಸ್ಥಾಪಿತವಾದ ಸುರತ್ಕಲ್‌ನಲ್ಲಿರುವ ಗ್ರಂಥಾಲಯ ಉತ್ತಮ ಗ್ರಂಥ ಸಂಗ್ರಹ ಹೊಂದಿದ್ದು, ಅನುಕರಣೀಯ ರೀತಿಯಲ್ಲಿ ಸೇವೆಸಲ್ಲಿಸುತ್ತಿದೆ. ಉಡಿಪಿಯ ಮಹಾತ್ಮಾಗಾಂಧಿ ಸ್ಮಾರಕ ಕಾಲೇಜಿನ ಗ್ರಂಥಾಲಯದಲ್ಲಿ ೨೬ ಸಾವಿರ ಪುಸ್ತಕಗಳಿದ್ದು, ೧೨೦ ನಿಯತಕಾಲಿಕೆಗಳು ಬರುತ್ತಿವೆ. ಇದರ ಒಂದು ವೈಶಿಷ್ಟ್ಯವೆಂದರೆ ದಿವಂಗತ ರಾಷ್ಟ್ರಕವಿ ಗೋವಿಂದ ಪೈ ರವರ ಗ್ರಂಥಾಲಯವನ್ನು (೪೭೩೪ ಪುಸ್ತಕಗಳು ೪೦೭ ನಿಯತಕಾಲಿಕೆಗಳನ್ನು) ದತ್ತಿಯಾಗಿ ಪಡೆದು ಅವರ ಹೆಸರಿನಲ್ಲಿ ಒಂದು ಸಂಶೋಧನಾ ಕೇಂದ್ರವನ್ನು ಏರ್ಪಡಿಸಿರುವುದು. ಮೈಸೂರಿನ ಪ್ರಾದೇಶಿಕ ಶಿಕ್ಷಣ ಕಾಲೇಜಿಗೆ ಸೇರಿದ ಗ್ರಂಥಾಲಯವು ಸುಮಾರು ೫೦ ಸಾವಿರ ಪುಸ್ತಕಗಳನ್ನು ಹೊಂದಿದ್ದು ೫೨ ನಿಯತಕಾಲಿಕೆಗಳನ್ನು ತರಿಸುತ್ತದೆ. ಈ ಎಲ್ಲಾ ಕಾಲೇಜು ಗ್ರಂಥಾಲಯಗಳಲ್ಲಿ ತರಪೇತಿ ಪಡೆದ ಗ್ರಂಥಾಲಯಿಗಳಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯ ನಡೆಸುತ್ತಿರುವ ಮಹಾರಾಜಾ ಮತ್ತು

ಯುವರಾಜಾ ಕಾಲೇಜುಗಳಿಗೆ ಸೇರಿದಂತೆ ಒಂದೇ ಗ್ರಂಥಾಲಯವನ್ನು ಆ ಕಾಲೇಜುಗಳ ವಿದ್ಯಾರ್ಥಿಗಳ ಉಪಯೋಗಕ್ಕಾಗಿ ಹಿಂದಿನ ವಿಶ್ವವಿದ್ಯಾನಿಲಯ ಗ್ರಂಥಾಲಯ ಕಟ್ಟದ ದಲ್ಲಿ ಈಗ ವ್ಯವಸ್ಥೆಗೊಳಿಸಲಾಗುತ್ತಿದೆ. ಇದೇ ರೀತಿ ಕರ್ನಾಟಕ ವಿಶ್ವವಿದ್ಯಾನಿಲಯಕ್ಕೆ ಸೇರಿದ ಕರ್ನಾಟಕ ಕಾಲೇಜು, ಬೆಂಗಳೂರು ವಿಶ್ವವಿದ್ಯಾನಿಲಯಕ್ಕೆ ಸೇರಿದ ಸರಕಾರಿ ಇಂಜನಿಯರಿಂಗ್ ಕಾಲೇಜು, ಸರಕಾರಿ ಆರ್ಟ್ಸ್ ಮತ್ತು ಸೈನ್ಸ್ ಕಾಲೇಜುಗಳ ಗ್ರಂಥಾಲಯಗಳಲ್ಲಿ ಉತ್ತಮ ಸಂಗ್ರಹಗಳಿವೆ.

ಖಾಸಗಿ ಗ್ರಂಥಾಲಯಗಳು

ಪ್ರಸಿದ್ಧ ಬರಹಗಾರರಾದ ಶ್ರೀ ಡಿ. ವಿ. ಗುಂಡಪ್ಪನವರ ಶ್ರಮದಿಂದ ರೂಪಿತ ವಾದ ಬೆಂಗಳೂರಿನ ಗೋಖಲೆ ಸಾರ್ವಜನಿಕ ವಿಚಾರಸಂಸ್ಥೆಯು ತನ್ನದೇ ಆದ ಗ್ರಂಥಾಲಯವನ್ನು ೧೯೪೫ ರಿಂದ ಪಡೆದಿದೆ. ಇತಿಹಾಸ, ಸಾಹಿತ್ಯ, ದರ್ಶನ, ಕಲೆ, ಸಾರ್ವಜನಿಕ ಆಡಳಿತ, ಕಾನೂನು ಇವುಗಳಲ್ಲಿ ೨೦ ಸಾವಿರ ಶ್ರೇಷ್ಠ ಪುಸ್ತಕಗಳನ್ನು ಹೊಂದಿ ೨೧೦ ನಿಯತ ಕಾಲಿಕೆಗಳನ್ನು ತರಿಸುತ್ತದೆ. ವಿಚಾರ ಸಂಕೀರ್ಣ, ಭಾಷೆಗಳು, ಚರ್ಚೆಗಳು, ಅಧ್ಯಯನವೃಂದ ಮೊದಲಾದ ಚಟುವಟಿಕೆಗಳಿಂದ ಗ್ರಂಥಾಲಯದ ಉಪಯೋಗ ಹೆಚ್ಚಿದೆ.

ಬೆಂಗಳೂರಿನಲ್ಲಿರುವ ಮಿಥಿಕ್ ಸೊಸೈಟಿ ಗ್ರಂಥಾಲಯದಲ್ಲಿ ಇತಿಹಾಸ, ಭಾಷಾ ಶಾಸ್ತ್ರಗಳಿಗೆ ಸಂಬಂಧಿಸಿದ ಅಪೂರ್ವ ಸಂಗ್ರಹಗಳಿವೆ. ಗಾಂಧಿ ವಿಚಾರ ಅಧ್ಯಯನಕ್ಕೆ ಮಲ್ಲೇಶ್ವರದ ಗಾಂಧಿ ಸಾಹಿತ್ಯ ಸಂಘ ಅದಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ಒದಗಿಸು ತ್ತಿದೆ.

ಬಸವನಗುಡಿಯಲ್ಲಿರುವ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್ ಉತ್ತಮ ಗ್ರಂಥಾಲಯವನ್ನು ಹೊಂದಿದೆ. ಇಲ್ಲಿ ಅನೇಕ ನಿಯತಕಾಲಿಕೆಗಳು ಓದಲು ದೊರೆಯುತ್ತವೆ. ಈ ಸಂಸ್ಥೆಯ ಇನ್ನೊಂದು ವೈಶಿಷ್ಟ್ಯವೆಂದರೆ ಸುಸಜ್ಜಿತ ಮಕ್ಕಳ ವಿಭಾಗ. ಇದರಲ್ಲಿ ಮಕ್ಕಳಿಗಾಗಿ ಬಣ್ಣದ ಚಿತ್ರಗಳಿರುವ ಅನೇಕ ಪುಸ್ತಕಗಳನ್ನು ಅವರಿಗೆ ಸುಲಭವಾಗಿ ಸಿಗುವಂತೆ ಜೋಡಿಸಿದೆ. ಶಾಲಾ ರಜಾದಿನಗಳಲ್ಲಿ ಮಕ್ಕಳು ಇಲ್ಲಿ ಪುಸ್ತಕಗಳನ್ನು ಓದುವುದನ್ನು ನೋಡುವುದೇ ಕಣ್ಣಿಗೆ ಒಂದು ಹಬ್ಬ.

ಮಕ್ಕಳಿಗಾಗಿಯೇ ಒಂದು ಪುಟ್ಟ ಗ್ರಂಥಾಲಯವನ್ನು ಮೈಸೂರು ನಗರದಲ್ಲಿ ರೋಟರಿ ಕ್ಲಬ್‌ನವರು ನಡೆಸುತ್ತಿದ್ದಾರೆ. ಇದನ್ನು ಮಕ್ಕಳು ಚೆನ್ನಾಗಿ ಉಪಯೋಗಿಸು ತ್ತಿದ್ದಾರೆ. ಇಲ್ಲಿ ಕತೆ ಹೇಳಲು ಪ್ರತ್ಯೇಕವಾಗಿ ಒಂದು ಕಾಲವನ್ನು ಗೊತ್ತುಮಾಡಿರು ತ್ತಾರೆ. ಆಗ ಮಕ್ಕಳು ಆಸಕ್ತಿಯಿಂದ ಮೈಯೆಲ್ಲಾ ಕಿವಿಯಾಗಿ ಕತೆ ಕೇಳುವುದನ್ನು ನೋಡಿ ನಲಿಯಬಹುದು.

ವಿಶಿಷ್ಟ ವಿಷಯ ಗ್ರಂಥಾಲಯಗಳು

ಈ ರೀತಿಯ ಗ್ರಂಥಾಲಯಗಳಲ್ಲದೆ ಬೆಂಗಳೂರು, ಮೈಸೂರುಗಳಲ್ಲಿರುವ ಹಲವಾರು

ಸಂಶೋಧನಾಸಂಸ್ಥೆಗಳಲ್ಲಿ, ಕೈಗಾರಿಕೆಗಳಲ್ಲಿ ಆಯಾ ವಿಷಯಕ್ಕೆ ಸಂಬಂಧಿಸಿದಂತೆ ಪುಸ್ತಕ ಸಂಗ್ರಹಗಳು, ನಿಯತಕಾಲಿಕೆಗಳುಳ್ಳ ಗ್ರಂಥಾಲಯಗಳಿವೆ.

ಯಂತ್ರಶಾಸ್ತ್ರದಲ್ಲಿ (ಇಂಜನಿಯರಿಂಗ್) ಆಯಾ ಕಾಲೇಜು ಪಾಲಿಟೆಕ್ನಿಕ್‌ಗಳಲ್ಲಿರುವ ಗ್ರಂಥಾಲಯಗಳಲ್ಲದೆ ಯಂತ್ರಶಾಸ್ತ್ರಪರಿಣತರ ಸಂಸ್ಥೆ(ಇನ್‌ಸ್ಟಿಟ್ಯೂಟ್ ಆಫ್ ಇಂಜನಿಯರ್ಸ್) ಯ ಗ್ರಂಥಾಲಯವೂ ಸೇರಿದೆ. ಇವೆಲ್ಲಾ ಸಾಮಾನ್ಯ ಇಂಜನಿಯರಿಂಗ್ ವಿಷಯಕ್ಕೆ ಸಂಬಂಧಿಸಿದುವು.

ವಾಯುಯಾನಶಾಸ್ತ್ರಕ್ಕೆ ಸಂಬಂಧಿಸಿದ ವಿಚಾರಗಳಿಗೆ ಭಾರತ ಸರ್ಕಾರದ ರಕ್ಷಣಾ ಶಾಖೆಯ ಆಶ್ರಯದಲ್ಲಿ ಹಲವಾರು ಶಾಖೆಗಳಿವೆ: ವಾಯುಯಾನ ಅಭಿವೃದ್ಧಿ ಸಂಸ್ಥೆ (ಏರೋನಾಟಿಕಲ್ ಡೆವಲಪ್‌ಮೆಂಟ್ ಎಸ್ಟಾಬ್ಲಿಷ್‌ಮೆಂಟ್), ವಾಯುದಳ ತರಪೇತಿ ಕೇಂದ್ರ (ಏರ್‌ಫೋರ್ಸ್ ಟ್ರೈನಿಂಗ್ ಕಮಾಂಡ್), ವಾಯುಯಾನ ತರಪೇತಿ ಕೇಂದ್ರ (ಫ್ಲೈಯಿಂಗ್ ಸ್ಕೂಲ್), ಹಿಂದೂಸ್ಥಾನ್ ವಿಮಾನ ಕಾರ್ಖಾನೆ, ಅದೇ ಕಾರ್ಖಾನೆಯ ವಾಯುಯಾನ ಯಂತ್ರಶಾಖೆಗಳಲ್ಲದೆ ರಾಷ್ಟ್ರೀಯ ವಾಯುಯಾನ ಸಂಶೋಧನಾ ಕೇಂದ್ರವೂ ಇದೆ.

ಯಂತ್ರನಿರ್ಮಾಣ ತಂತ್ರದಲ್ಲಿ (ಮೆಷಿನ್ ಟೂಲ್ಸ್) ಭಾರತೀಯ ವಿಜ್ಞಾನ ಮಂದಿರದ ಶಾಖೆಗಳಲ್ಲದೆ ಭಾರತ ಸರ್ಕಾರವು ಸ್ಥಾಪಿಸಿರುವ ಕೇಂದ್ರ ಯಂತ್ರಸಾಧನ ಸಂಸ್ಥೆ (ಸೆಂಟ್ರಲ್ ಮೆಷಿನ್ ಟೂಲ್ಸ್ ಇನ್‌ಸ್ಟಿಟ್ಯೂಟ್) ಜೆಕೊಸ್ಲೊವೇಕಿಯಾ ದೇಶದ ನೆರವಿನಿಂದ ನಡೆಯುತ್ತಿದ್ದು ಉತ್ತಮ ಗ್ರಂಥಾಲಯವನ್ನು ಹೊಂದಿದೆ. ಹಿಂದೂಸ್ಥಾನ್ ಮೆಷಿನ್ ಟೂಲ್ಸ್ ಕಾರ್ಖಾನೆಯ ಗ್ರಂಥಾಲಯ(ಇದನ್ನು ಅಲ್ಲಿ ತಾಂತ್ರಿಕ ಸಮಾಚಾರ ಕೇಂದ್ರ ಎನ್ನುತ್ತಾರೆ)ವಂತೂ ಕೈಗಾರಿಕೆಗಳಲ್ಲಿ ಇರಬೇಕಾದ ಗ್ರಂಥಾಲಯಗಳಿಗೆ ಮಾದರಿಯಾಗಿದೆ. ಇದು ಮೆಷಿನ್ ಟೂಲ್ಸ್ ಮತ್ತು ಅದಕ್ಕೆ ಸಂಬಂಧಿಸಿದ ವಿಷಯಗಳಲ್ಲದೆ, ಕೈಗಾರಿಕಾ ಆಡಳಿತ, ಯಂತ್ರಗಳ ಮಾರಾಟ, ಆರ್ಥಿಕ ವ್ಯವಸ್ಥೆ, ಯಂತ್ರನಿರ್ಮಾಣ ನಕ್ಷೆ, ಸಂಶೋಧನೆಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ಇತ್ತೀಚಿನ ವರದಿಗಳನ್ನು ಆಯಾ ವಿಭಾಗ ಮುಖ್ಯಸ್ಥರ ಗಮನಕ್ಕೆ ತರುತ್ತದೆ. ಲೇಖನ ಸೂಚಿಗಳು, ತಾಂತ್ರಿಕ ಟಿಪ್ಪಣಿಗಳು, ಮೆಷಿನ್ ಟೂಲ್ಸ್ ವಾರ್ತೆ, ಅಂಕಿಅಂಶಗಳು, ನಿರ್ದಿಷ್ಟ ವಿಷಯ ಗ್ರಂಥಸೂಚಿಗಳು, ಟಿಪ್ಪಣಿಗಳನ್ನು ನೀಡುತ್ತದೆ. ಅಲ್ಲದೆ ಕಾರ್ಖಾನೆಯ ನೌಕರರಿಗೆ ಅವರ ಕೆಲಸಕ್ಕೆ ಸಂಬಂಧಿಸಿದಂತೆ ಚಿತ್ರಪ್ರದರ್ಶನ, ಭಾಷಣ, ವಿಚಾರವಿನಿಮಯವನ್ನು ಏರ್ಪಡಿಸುತ್ತದೆ. ಇಲ್ಲಿ ಇರುವ ಇನ್ನೊಂದು ಅನುಕೂಲವೆಂದರೆ ಲೇಖನದ ಹಾಗೂ ನಕ್ಷೆಗಳ ಪ್ರತಿಯನ್ನು ನಿಮಿಷಾರ್ಧದಲ್ಲಿ ತಯಾರಿಸುವ "ಕ್ಸೆರಾಕ್ಸ್" ಪ್ರತಿನಿರ್ಮಾಣ ಸಾಧನ.

ಎಲೆಕ್ಟ್ರಾನಿಕ್ಸ್ ಅಧ್ಯಯನಕ್ಕೂ ಬೆಂಗಳೂರು ಉತ್ತಮ ಕೇಂದ್ರ. ರಕ್ಷಣಾ ಶಾಖೆಯ ಎಲೆಕ್ಟ್ರಾನಿಕ್ಸ್ ಹಾಗೂ ರೇಡಾರ್ ಸಂಶೋಧನಾ ಕೇಂದ್ರ, ಎಲೆಕ್ಟ್ರಾನಿಕ್ಸ್ ಸಾಮಗ್ರಿಗಳ ಪರೀಕ್ಷಣ ಸಂಸ್ಥೆ, ಭಾರತ್ ಎಲೆಕ್ಟ್ರಾನಿಕ್ಸ್, ರೇಡಿಯೋ ಮತ್ತು ಎಲೆಕ್ಟ್ರಿಕಲ್ ಸಾಧನ ತಯಾರಿಕಾಸಂಸ್ಥೆ (Remco) ಇವುಗಳಿಗೂ ಭಾರತ ವಿಜ್ಞಾನ ಸಂಸ್ಥೆಯ ಎಲೆಕ್ಟ್ರಾನಿಕ್ಸ್ ಶಾಖೆಗೂ ನಿಕಟಸಂಪರ್ಕವಿದೆ.

ವ್ಯವಸಾಯದ ವಿಷಯಗಳಿಗಂತೂ ಕೃಷಿವಿಶ್ವವಿದ್ಯಾನಿಲಯ, ಅದಕ್ಕೆ ಸೇರಿದ ಪಶುಸಂಗೋಪನ ಕಾಲೇಜು, ಹೆಸರುಘಟ್ಟದ ಫಲಸಂಶೋಧನಾ ಕೇಂದ್ರ, ರಾಷ್ಟ್ರೀಯ ಡೈರಿ ಸಂಶೋಧನಾ ಸಂಸ್ಥೆ, ಲಾಲ್‌ಬಾಗಿನಲ್ಲಿರುವ ತೋಟಗಾರಿಕೆ ಇಲಾಖೆ, ಕಾಫೀ ಬೋರ್ಡ್, ವೃಕ್ಷಸಂಶೋಧನಾಸಂಸ್ಥೆ (ಉಡ್ ರಿಸರ್ಚ್ ಇನ್ಸ್ಟಿಟ್ಯೂಟ್), ಕಾರ್ಮವೆಲ್ತ್ ಬಯಾಲಾಜಿಕಲ್ ಕಂಟ್ರೋಲ್ ಸಂಸ್ಥೆ, ಕೇಂದ್ರ ವನಮೂಲಿಕೆಗಳ ಸಂಶೋಧನಾ ಸಂಸ್ಥೆ, ಯುವಕ ಕೃಷಿಕರ ಸಂಸ್ಥೆಗಳಿವೆ. ಈ ಎಲ್ಲಾ ಸಂಸ್ಥೆಗಳಲ್ಲೂ ಅಪೂರ್ವ ಗ್ರಂಥ ಸಂಗ್ರಗಳಿವೆ.

ವೈದ್ಯಶಾಸ್ತ್ರದಲ್ಲಿ ಬೆಂಗಳೂರು ವೈದ್ಯಕೀಯ ಕಾಲೇಜು, ದಂತವೈದ್ಯರ ಕಾಲೇಜು, ಸೆಂಟ್‌ಜಾನ್ ಮೆಡಿಕಲ್‌ಕಾಲೇಜು, ಫಾರ್ಮಸಿಕಾಲೇಜು, ವ್ಯಾಕ್ಸೀನ್‌ಸಂಸ್ಥೆ, ಕ್ಷಯರೋಗ ನಿವಾರಣಾಸಂಸ್ಥೆ, ಮಾನಸಿಕ ಆರೋಗ್ಯಸಂಸ್ಥೆ, ಮುಂತಾದ ಕಡೆಗಳಲ್ಲಿ ಉತ್ತಮ ಗ್ರಂಥಾಲಯಗಳಿವೆ.

ಆಹಾರ ವಿಜ್ಞಾನದ ಅಧ್ಯಯನಕ್ಕೆ ಮೈಸೂರಿನಲ್ಲಿರುವ ಕೇಂದ್ರ ಆಹಾರ ಸಂಶೋಧನಾಲಯ (CFTRI) ಮತ್ತು ರಕ್ಷಣಾಶಾಖೆಯ ಆಹಾರ ವಿಜ್ಞಾನ ಸಂಶೋಧನಾಲಯಗಳು ಮುಖ್ಯವಾದುವು. ಮೊದಲನೆಯ ಸಂಸ್ಥೆಯಲ್ಲಿ ೨೦ ಸಾವಿರ ಪುಸ್ತಕಗಳೂ, ೭೫ ಸಾವಿರ ನಿಯತಕಾಲಿಕೆ ಸಂಪುಟಗಳೂ ಇವೆ. ಯೂರೋಪಿಯನ್ ಭಾಷೆಗಳಿಂದ ನಿಯತಕಾಲಿಕೆ ಲೇಖನಗಳನ್ನು ಇಂಗ್ಲಿಷಿಗೆ ಭಾಷಾಂತರ ಮಾಡುವ ಸೌಕರ್ಯವಿದೆ. ಗ್ರಂಥಾಲಯಕ್ಕೆ ತನ್ನದೇ ಆದ ಆಫ್‌ಸೆಟ್ ಪ್ರಿಂಟಿಂಗ್‌ಯಂತ್ರ, ಫೋಟೋ ಕಾಪಿಯಂತ್ರಗಳಿವೆ. ವಿಶ್ವ ಆರೋಗ್ಯ ಸಂಸ್ಥೆಯು ಇಲ್ಲಿ ಏಷ್ಯಾ ಪ್ರಾದೇಶಿಕ ಆಹಾರ ವಿಜ್ಞಾನ ತರಪೇತಿ ಕೇಂದ್ರವನ್ನು ನಡೆಸುತ್ತಿದೆ. ಇದರಿಂದ ಏಷ್ಯದ ನಾನಾ ದೇಶಗಳಿಂದ ವಿದ್ಯಾರ್ಥಿಗಳು ಇಲ್ಲಿರುತ್ತಾರೆ. ರಕ್ಷಣಾಶಾಖೆಯ ಆಹಾರ ವಿಜ್ಞಾನ ಸಂಸ್ಥೆ ಇತ್ತೀಚಿಗೆ ಸ್ಥಾಪಿತವಾಗಿದ್ದು ಅಭಿವೃದ್ಧಿಗೊಳ್ಳುತ್ತಿದೆ.

ಕೈಗಾರಿಕಾ ಉತ್ಪಾದನೆಯನ್ನು ಹೆಚ್ಚಿಸಲು ರಾಷ್ಟ್ರೀಯ ಉತ್ಪಾದನಾ ಸಂಸ್ಥೆ, ಮೈಸೂರು ಉತ್ಪಾದನಾ ಸಂಸ್ಥೆ, ಭಾರತ ಅಂಕಿ ಅಂಶ ಸಂಸ್ಥೆ, ಕೈಗಾರಿಕಾ ವಸ್ತುಗಳ ಗುಣನಿಯಂತ್ರಣ ಸಂಸ್ಥೆಗಳು ಸೇರಿವೆ.

ಶಿಕ್ಷಣಕ್ಕೆ ಸಂಬಂಧಿಸಿದಂತೆ, ಶಿಕ್ಷಣ ಸಂಶೋಧನಾ ಸಂಸ್ಥೆ, ಪಠ್ಯಪುಸ್ತಕ ನಿರ್ಮಾಣ ಸಂಸ್ಥೆ, ಫಿಲಂ ಗ್ರಂಥಾಲಯಗಳೂ ಕೆಲಸಮಾಡುತ್ತಿವೆ. ಅಲ್ಲದೆ ಮೈಸೂರಿನಲ್ಲಿರುವ ವಯಸ್ಕರ ಶಿಕ್ಷಣ ಸಮಿತಿಯೂ ಬಹು ಮುಖ್ಯವಾದುದು. ಇದು ಗ್ರಾಮಗಳಲ್ಲಿ ವಯಸ್ಕರಿಗಾಗಿ ಗ್ರಂಥಾಲಯಗಳನ್ನು ಏರ್ಪಡಿಸಿ, ಸಾಕ್ಷರಸ್ಥರು ವಿದ್ಯಾರ್ಜನೆಯಲ್ಲಿ ಆಸಕ್ತರಾಗುವಂತೆ ಮಾಡುತ್ತದೆ. ಗ್ರಾಮದಲ್ಲಿ ಗ್ರಂಥಾಲಯಕ್ಕೆ ಕಟ್ಟಡ ಮತ್ತು ವಾರ್ಷಿಕ ಚಂದಾದ ೩೦ ರೂಗಳನ್ನು ಗ್ರಾಮಕೊಟ್ಟರೆ ಸಮಿತಿಯು ೭೦ರೂ ಧನಸಹಾಯದೊಡನೆ ಗ್ರಾಮದಲ್ಲಿ ಗ್ರಂಥಾಲಯವನ್ನೂ ವಾಚನಾಲಯವನ್ನೂ ಏರ್ಪಡಿಸಿ, ಪ್ರತಿ ವರ್ಷ ಗ್ರಾಮದಲ್ಲಿ ಎತ್ತುವ ಚಂದಾ ಮೊಬಲಗಿನಷ್ಟೇ ಧನಸಹಾಯವನ್ನು ಸಮಿತಿ

ನೀಡುತ್ತದೆ. ಈಗ ಸುಮಾರು ೨೪೦೦ ಗ್ರಾಮಗ್ರಂಥಾಲಯಗಳೂ, ಇದರಂತೆ ಪಟ್ಟಣಗಳಲ್ಲಿ ೧೦ ಸರ್ಕಲ್ ಲೈಬ್ರರಿಗಳೂ, ೧೨ ಜಿಲ್ಲಾ ಕೇಂದ್ರಗಳಲ್ಲಿ ಕೇಂದ್ರ ಗ್ರಂಥಾಲಯಗಳೂ ಇವೆ. ಗ್ರಾಮಗ್ರಂಥಾಲಯಗಳು ಕೇಂದ್ರ ಗ್ರಂಥಾಲಯದಿಂದ ಪುಸ್ತಕಗಳನ್ನು ಎರವಲು ಪಡೆಯಬಹುದು. ಇದಲ್ಲದೆ ಜಿಲ್ಲಾ ಕೇಂದ್ರಗಳಲ್ಲಿ ವಿದ್ಯಾಪೀಠಗಳಲ್ಲಿ ವಯಸ್ಕರ ಶಿಕ್ಷಣ ಮತ್ತಿತರ ಸಂಬಂಧಿಸಿದ ವಿಷಯಗಳ ಬಗ್ಗೆ ಪುಸ್ತಕಗಳನ್ನು ಅಲ್ಲೇ ಓದಲು ಗ್ರಂಥಾಲಯಗಳಿವೆ. ಈ ರೀತಿಯ ಸೌಲಭ್ಯವನ್ನು ಸಂಸ್ಥಾನದ ಎಲ್ಲಾ ಗ್ರಾಮಗಳಿಗೂ ವಿಸ್ತರಿಸಲು ಹಣದ ಕೊರತೆಯೇ ಅಡ್ಡಿಯಾಗಿದೆ. ಗ್ರಾಮಾಂತರ ಜನರ ಶಿಕ್ಷಣದಲ್ಲಿ ಯಶಸ್ವಿಯಾಗಿ ಕೆಲಸಮಾಡುತ್ತಿರುವ ವಿದ್ಯಾಪೀಠಗಳಿಗೆ ಡೆನ್ಮಾರ್ಕ್ ದೇಶದ ತಾಂತ್ರಿಕ ಸಹಾಯ ಒದಗುತ್ತಿದೆ. ಆ ದೇಶದ ತಜ್ಞರು ಇಲ್ಲಿಗೆ ಬಂದು ವ್ಯವಸಾಯ, ಕೋಳಿಸಾಕಣೆ, ಪಶುಪಾಲನೆ ಮುಂತಾದ ವಿಷಯಗಳಲ್ಲಿ ಉತ್ತಮ ಶಿಕ್ಷಣ ಕೊಡುತ್ತಿದ್ದಾರೆ. ಸಮಿತಿಯ ಕಾರ್ಯಗಳಿಗೆ ಯುನೆಸ್ಕೋ ನೆರವು ಸಹಿತ ದೊರೆತಿದೆ. ವಯಸ್ಕರಿಗಾಗಿ ಸುಲಭಶೈಲಿಯಲ್ಲಿ ತಜ್ಞರು ಬರೆದ ಅತಿಸುಲಭ ಬೆಲೆಯ ೧೪೦ ಪುಸ್ತಕಗಳು ಪ್ರಕಟವಾಗಿವೆ. ಸಮಿತಿಯು 'ಬೆಳಕು' ವಾರಪತ್ರಿಕೆಯನ್ನೂ, 'ಪುಸ್ತಕ ಪ್ರಪಂಚ' ಮಾಸಪತ್ರಿಕೆಯನ್ನೂ ನಡೆಸುತ್ತಿದೆ. ಜನಪದ ಕಲೆಗೆ ವಿಶೇಷ ಉತ್ತೇಜನ ನೀಡಲಾಗುತ್ತಿದೆ. ಭಾರತವಾಚನ, ಹರಿಕಥೆ, ಯಕ್ಷಗಾನ, ಚಲಚಿತ್ರ ಪ್ರದರ್ಶನ ಮುಂತಾದ ಸಾಂಸ್ಕೃತಿಕ ಚಟುವಟಿಕೆಗಳಿಗೆ ಸಮಿತಿ ಉತ್ತೇಜನ ನೀಡುತ್ತದೆ. ರಾಷ್ಟ್ರಕವಿ ಕುವೆಂಪುರವರ 'ಜನಪ್ರಿಯ ವಾಲ್ಮೀಕಿ ರಾಮಾಯಣ' ಮತ್ತು 'ಶರಣ ಚರಿತಾಮೃತ' ಈ ಸಮಿತಿಯ ಮುಖ್ಯ ಪ್ರಕಟಣೆಗಳು.

ಕಾಲೇಜುಗಳಲ್ಲಿ ಪಠ್ಯಪುಸ್ತಕ ಪ್ರತಿಗಳನ್ನು ಬಡವಿದ್ಯಾರ್ಥಿಗಳಿಗೆ ದೀರ್ಘಕಾಲ ಎರವಲು ಕೊಡಲು ಅನುಕೂಲಿಸುವಂತೆ ಬೆಂಗಳೂರಿನ ರಾಂನಾರಾಯಣ ಚೆಲ್ಲಾರಾಂ ಸಂಸ್ಥೆಯವರು ವಿದ್ಯಾರ್ಥಿ ಸಹಾಯ ಸಂಸ್ಥೆ (Students Aid Society) ಹೆಸರಿನಲ್ಲಿ ೪೭ ಕಾಲೇಜುಗಳಿಗೆ ಧನಸಹಾಯವಿತ್ತಿದ್ದಾರೆ. ಈ ದಿಸೆಯಲ್ಲಿ ಬ್ರಿಟಿಷ್ ಕೌನ್ಸಿಲ್ ಲೈಬ್ರರಿ ಸಹ ಸಹಾಯಮಾಡುತ್ತಿದೆ. ಕೆನರಾ ಬ್ಯಾಂಕ್‌ನವರು ಮುಖ್ಯಪಟ್ಟಣಗಳಲ್ಲಿ ಬುಕ್ ಬ್ಯಾಂಕ್ ಎಂಬ ಹೆಸರಿನಲ್ಲಿ ಪಠ್ಯಪುಸ್ತಕ ಗ್ರಂಥಾಲಯವನ್ನು ಏರ್ಪಡಿಸಿದ್ದಾರೆ.

ವಿದೇಶೀ ಸಂಪರ್ಕ ಗ್ರಂಥಾಲಯಗಳು

ನಾನಾ ವಿಧವಾದ ಈರೀತಿಯ ಗ್ರಂಥಾಲಯಗಳಲ್ಲದೆ ವಿದೇಶೀಯ ಸರಕಾರಗಳು ಭಾರತದ ಮುಖ್ಯ ಪಟ್ಟಣಗಳಲ್ಲಿ ಗ್ರಂಥಾಲಯಗಳನ್ನು ಆರಂಭಿಸಿವೆ. ಆ ಸರಕಾರಗಳು ತಮ್ಮ ದೇಶದ ಇತಿಹಾಸ, ಸಾಹಿತ್ಯ, ಕಲೆ, ಕೈಗಾರಿಕೆ ಮತ್ತು ಇತರ ಸಂಸ್ಕೃತಿಯ ಮುಖಗಳನ್ನು ನಮ್ಮ ಜನರಿಗೆ ಪರಿಚಯ ಮಾಡಿಕೊಡುವ ಉದ್ದೇಶದಿಂದ ಸುವ್ಯವಸ್ಥಿತ ಗ್ರಂಥಾಲಯಗಳನ್ನು ಸ್ಥಾಪಿಸಿವೆ. ಬೆಂಗಳೂರಿನಲ್ಲಿರುವ ಅಮೆರಿಕ ಸಂಸ್ಕೃತಿ ಕೇಂದ್ರ

೧೯೫೨ರಲ್ಲಿ ಆರಂಭವಾಯಿತು. ಸುಮಾರು ೧೦ ಸಾವಿರ ಪುಸ್ತಕಗಳನ್ನು ಹೊಂದಿ ೧೫೦ ನಿಯತಕಾಲಿಕೆಗಳನ್ನು ತರಿಸುತ್ತಿದೆ. ಬ್ರಿಟಿಷ್ ಕೌನ್ಸಿಲ್ ಗ್ರಂಥಾಲಯದಲ್ಲೂ ಇದೇರೀತಿಯ ಉತ್ತಮ ಸಂಗ್ರಹವಿದೆ. ಈ ಗ್ರಂಥಾಲಯಗಳಲ್ಲಿ ಆಯಾ ದೇಶದಲ್ಲಿ ಪ್ರಕಟವಾಗುವ ಪುಸ್ತಕ, ನಿಯತಕಾಲಿಕೆಗಳನ್ನು ಮಾತ್ರ ತರಿಸಲಾಗುತ್ತಿದೆ. ಇವಲ್ಲದೆ ಗ್ರಾಮಫೋನ್ ರಿಕಾರ್ಡುಗಳು, ಫಿಲಂ ಸಂಗ್ರಹವಿದ್ದು ಅವನ್ನೂ ಸದಸ್ಯರಿಗೆ ಎರವಲು ಕೊಡಲಾಗುತ್ತದೆ. ಅಲ್ಲದೆ ಪುಸ್ತಕ ಪ್ರದರ್ಶನ, ಫಿಲಂ ಪ್ರದರ್ಶನ, ಕಲಾಚಿತ್ರ ಪ್ರದರ್ಶನ, ಆಯಾ ದೇಶದ ಪರಿಣತರಿಂದ ಭಾಷಣಗಳು, ಸಂಗೀತ, ನಾಟಕ, ಪುಸ್ತಕ ವಿಮರ್ಶೆ ಮುಂತಾದ ಚಟುವಟಿಕೆಗಳಿಂದ ಜನರನ್ನು ಆಕರ್ಷಿಸುತ್ತಾರೆ. ನಮ್ಮ ವಿದ್ಯಾಭ್ಯಾಸ ಕ್ರಮ ಬ್ರಿಟಿಷ್ ಮಾದರಿಯದೂ, ಓದಬೇಕಾದ ಪುಸ್ತಕಗಳಲ್ಲಿ ಹೆಚ್ಚು ಬ್ರಿಟಿಷ್ ಪರಿಣತರಿಂದ ರಚಿತವಾಗಿರುವುದರಿಂದಲೂ, ಕಾಲೇಜು ಪಠ್ಯ ಪುಸ್ತಕ ಪ್ರತಿಗಳು ಹೆಚ್ಚಾಗಿ ಬ್ರಿಟಿಷ್ ಕೌನ್ಸಿಲ್ ಲೈಬ್ರರಿಯಲ್ಲಿರುವುದರಿಂದಲೂ ವಿದ್ಯಾರ್ಥಿಗಳು ಹೆಚ್ಚಾಗಿ ಈ ಗ್ರಂಥಾಲಯವನ್ನು ಬಳಸುತ್ತಾರೆ. ೧೯೬೩ರಲ್ಲಿ ಸ್ಥಾಪಿತವಾದ ಮ್ಯಾಕ್ಸ್‌ಮುಲ್ಲರ್ ಭವನ ಜರ್ಮನ್ ಭಾಷೆ, ಸಾಹಿತ್ಯ, ಸಂಸ್ಕೃತಿಗಳ ಪ್ರಸಾರಕ್ಕೆ ಉತ್ತಮ ಕೆಲಸಮಾಡುತ್ತಿದೆ. ಅಲ್ಲದೆ ಇಲ್ಲಿ ಜರ್ಮನ್ ಭಾಷೆಯನ್ನೂ ನಾನಾ ಹಂತಗಳಲ್ಲಿ ಬೋಧಿಸಲಾಗುತ್ತಿದೆ.

ಗ್ರಂಥಾಲಯ ಶಾಸ್ತ್ರ ತರಪೇತಿ ಸಂಸ್ಥೆಗಳು

ಭಾರತದಲ್ಲಿ ಗ್ರಂಥಾಲಯ ಶಾಸ್ತ್ರದ ಅಧ್ಯಯನ ಆರಂಭವಾದುದು ಬರೋಡದಲ್ಲಿ. ಮದರಾಸ್ ರಾಜ್ಯದಲ್ಲಿ ೧೯೨೯ರಿಂದ ಶ್ರೀ ಎಸ್. ಆರ್. ರಂಗನಾಥನ್‌ರವರಿಂದ ಆರಂಭವಾಯಿತು. ಮೈಸೂರು ರಾಜ್ಯದಲ್ಲಿ ಸಂಸ್ಥೆಗಳು ಆರಂಭವಾದುದು ಈ ದಶಕದಲ್ಲಿ ಮಾತ್ರ. ಕಾಲಾನುಕ್ರಮವಾಗಿ ೧೯೬೧ರಲ್ಲಿ ಶಿಕ್ಷಣಶಾಖೆಯ ಗ್ರಂಥಾಲಯ ಶಾಸ್ತ್ರ ತರಪೇತಿಶಾಲೆ ಆರಂಭವಾಗಿ ರಾಜ್ಯದ ಪ್ರೌಢಶಾಲೆಗಳ ಗ್ರಂಥಾಲಯದಲ್ಲಿ ಕೆಲಸ ಮಾಡುವ ಉಪಾಧ್ಯಾಯರುಗಳಿಗೆ ಗ್ರಂಥಾಲಯ ನಿರ್ವಹಣೆಯಲ್ಲಿ ಮೂರು ತಿಂಗಳ ತರಪೇತಿ ನೀಡಿ ಪ್ರಶಸ್ತಿ ನೀಡುತ್ತಿದೆ.

ಪ್ರಿಯೂನಿವರ್ಸಿಟಿ ಅಥವಾ ಹೈಯರ್ ಸೆಕೆಂಡರಿ ಶಾಲೆಯಲ್ಲಿ ಉತ್ತೀರ್ಣರಾದ ಮಹಿಳೆಯರಿಗೆ ಗ್ರಂಥಾಲಯ ಶಾಸ್ತ್ರದಲ್ಲಿ ತರಪೇತು ನೀಡಲು ಬೆಂಗಳೂರಿನ ವಿಮೆನ್ಸ್ ಪಾಲಿಟೆಕ್ನಿಕ್ ಶಾಲೆಯಲ್ಲಿ ಅವಕಾಶವಿದೆ. ಒಂದು ವರ್ಷ ಶಿಕ್ಷಣ ಪಡೆದು ಪರೀಕ್ಷೆಯಲ್ಲಿ ಉತ್ತೀರ್ಣರಾದ ನಂತರ ಆರು ತಿಂಗಳಕಾಲ ಅಂಗೀಕೃತ ಗ್ರಂಥಾಲಯದಲ್ಲಿ ಪ್ರಾಯೋಗಿಕ ಶಿಕ್ಷಣ ಪಡೆಯುವುದು ಅನಿವಾರ್ಯ. ಗ್ರಂಥಾಲಯ ಶಾಸ್ತ್ರದಲ್ಲಿ ಶಿಕ್ಷಣದ ಜೊತೆಗೆ ಕನ್ನಡ ಹಾಗೂ ಇಂಗ್ಲಿಷ್ ಸಾಹಿತ್ಯದ ಸ್ಥೂಲಪರಿಚಯವಿರಬೇಕಾದುದು ಅಗತ್ಯ.

ಕರ್ನಾಟಕ ವಿಶ್ವವಿದ್ಯಾನಿಲಯವು ೧೯೬೨ರ ಜೂನ್ ತಿಂಗಳಿನಿಂದ ಗ್ರಂಥಾಲಯ

ಶಾಸ್ತ್ರದ ಡಿಪ್ಲೊಮಾ ತರಗತಿಯನ್ನು ಆರಂಭಿಸಿ ೧೯೬೫ರಿಂದ ಡಿಗ್ರಿಕೋರ್ಸನ್ನಾಗಿ ಪರಿವರ್ತಿಸಿತು. ಪ್ರತಿ ದಿನವೂ ಪ್ರತಿ ಅಭ್ಯರ್ಥಿಯೂ ವಿಶ್ವವಿದಾನಿಲಯದ ಗ್ರಂಥಾಲಯ ದಲ್ಲಿ ಎರಡು ಗಂಟೆಗಳ ಕಾಲ ಕೆಲಸ ಮಾಡಬೇಕು. ಸಂಜೆ ೪ ಗಂಟೆಯಿಂದ ೭ಗಂಟೆ ವರೆಗೆ ಪಾಠಪ್ರವಚನಗಳುಂಟು.

ಗ್ರಂಥಾಲಯ ಶಾಸ್ತ್ರದಲ್ಲಿ ಉಚ್ಚಶಿಕ್ಷಣ ನೀಡುವ ಸಂಸ್ಥೆ ಬೆಂಗಳೂರಿನ ಡಾಕ್ಯುಮೆಂಟೇಷನ್ ರಿಸರ್ಚ್ ಎಂಡ್ ಟ್ರೈನಿಂಗ್ ಸೆಂಟರ್ (ಡಿ.ಆರ್.ಟಿ.ಸಿ.)೧೯೬೨ರಲ್ಲಿ ಕಾರ್ರ್ಯಾರಂಭಮಾಡಿತು. ಭಾರತದಲ್ಲಿ ಗ್ರಂಥಾಲಯ ಶಾಸ್ತ್ರದ ಸಂಶೋಧನೆಯ ರಾಷ್ಟ್ರೀಯ ಪ್ರೊಫೆಸರ್ ಡಾ. ರಂಗನಾಥನ್‌ರವರು ಇದರ ನಿರ್ದೇಶಕರು. ಇವರು ಭಾರತದಲ್ಲಿ ಗ್ರಂಥಾಲಯ ಶಾಸ್ತ್ರದ ಪ್ರಸಾರ, ಗ್ರಂಥಾಲಯಗಳ ವ್ಯವಸ್ಥೆಗಾಗಿ ಕಳೆದ ೩೫ ವರ್ಷ ಗಳಿಂದ ಸತತವಾಗಿ ದುಡಿಯುತ್ತಿರುವವರಲ್ಲದೆ, ಈ ಶಾಸ್ತ್ರದಲ್ಲಿ ೫೦ಕ್ಕೂ ಹೆಚ್ಚು ಗ್ರಂಥ ಗಳನ್ನೂ ನೂರಾರು ಲೇಖನಗಳನ್ನೂ ಬರೆದು ಅಂತರ ರಾಷ್ಟ್ರೀಯ ಮಟ್ಟದಲ್ಲಿ ವಿಚಾರಕ್ರಾಂತಿಯನ್ನು ಎಬ್ಬಿಸಿದ್ದಾರೆ. ವಿಶಿಷ್ಟವಿಷಯ ಗ್ರಂಥಾಲಯಗಳಲ್ಲಿ ಇರಬೇಕಾದ ಲೇಖನ ವರ್ಗೀಕರಣ, ಇವುಗಳ ಪತ್ರಿಕಲೇಖನ ಮುಂತಾದ ವಿಷಯಗಳಲ್ಲಿ ತರಪೇತಿ ಕೊಡುತ್ತಾರೆ. ಕ್ರಿಯಾತ್ಮಕ ಸಂಶೋಧಕನಿಗೆ ತನ್ನ ವೇಳೆ, ಶ್ರಮ ಸಾರ್ಥಕ ವಾಗಲು ಅವನ ವಿಶೇಷ ಅಭ್ಯಾಸದಲ್ಲಿ ಇದುವರೆಗೆ ನಡೆದಿರುವ ಸಂಶೋಧನೆಗಳು, ಅದರ ವಿಚಾರದ ಬರಹಗಳ ನಿಕಟ ಪರಿಚಯ ಅಗತ್ಯ. ಇದಕ್ಕಾಗಿ ಪುಸ್ತಕದ ಅಧ್ಯಾಯಗಳು, ನಿಯತಕಾಲಿಕೆ ಲೇಖನಗಳು ಇವುಗಳನ್ನು ಸಂಗ್ರಹಿಸಿ ವರ್ಗೀಕರಿಸಿ, ಬೇಕಾದಾಗ ತಕ್ಷಣ ದೊರೆಯುವಂತೆ ಮಾಡುವುದೇ ಈ ತರಪೇತಿಯ ಉದ್ದೇಶ.

ಮೈಸೂರು ವಿಶ್ವವಿದ್ಯಾನಿಲಯವು ಗ್ರಂಥಾಲಯಶಾಸ್ತ್ರದಲ್ಲಿ ಪದವಿ ತರಗತಿಗಳನ್ನು ೧೯೬೫ರಿಂದ ಆರಂಭಿಸಿದೆ. ಪ್ರತಿವರ್ಷ ೨೦ ಮಂದಿಗೆ ತರಪೇತಿ ಕೊಡಲಾಗುತ್ತದೆ. ಎಂ.ಎ. ಅಥವಾ ಎಂ.ಎಸ್‌ಸಿ. ಮಾಡಿದವರಿಗೆ ಆದ್ಯತೆ. ಅನಂತರ ಸರಕಾರ, ವಿಶ್ವವಿದ್ಯಾ ನಿಲಯ, ಕಾಲೇಜುಗಳಿಂದ ಕಳಿಸಲ್ಪಟ್ಟವರಿಗೆ, ಕಡೆಯದಾಗಿ ಪದವೀಧರರಿಗೆ ಮಾನ್ಯತೆ. ದಕ್ಷರಾದ ಐದುಮಂದಿ ವಿದ್ಯಾರ್ಥಿಗಳಿಗೆ ಅವರು ವಿಶ್ವವಿದ್ಯಾನಿಲಯದ ಗ್ರಂಥಾಲಯದಲ್ಲಿ ಮಾಡುವ ವಾರದ ೧೦ ಗಂಟೆಗಳ ಕೆಲಸಕ್ಕೆ ಮಾಹೆಯಾನಾ ೭೫ರೂ ವೇತನ ದೊರೆಯು ತ್ತದೆ.

ಭಾರತದಲ್ಲಿ ವಿಶ್ವವಿದ್ಯಾನಿಲಯದ ಗ್ರಂಥಾಲಯಗಳು ಈ ದಶಕದಲ್ಲಿ ತುಂಬಾ ಅಭಿವೃದ್ಧಿಹೊಂದಲು ವಿಶ್ವವಿದ್ಯಾನಿಲಯದ ಧನಸಹಾಯ ಆಯೋಗ (ಯೂನಿವರ್ಸಿಟಿ ಗ್ರಾಂಟ್ಸ್ ಕಮಿಷನ್) ದ ಅಧ್ಯಕ್ಷರಾಗಿದ್ದ ಶ್ರೀ ಸಿ. ಡಿ. ದೇಶಮುಖ್‌ರವರು ಯುಜಿಸಿ ಯಿಂದ ಗ್ರಂಥಾಲಯಗಳ ಕಟ್ಟಡ ನಿರ್ಮಾಣ, ಪುಸ್ತಕ ಸಿಬ್ಬಂದಿಗೆ ವೆಚ್ಚ, ಗ್ರಂಥಾಲಯ ಶಾಸ್ತ್ರದ ಶಿಕ್ಷಣ ಇವುಗಳಿಗೆ ಕೊಡುಗೈಯಿಂದ ಧನಸಹಾಯ ದೊರೆಯುವಂತೆ ಮಾಡಿದರು.

ಅಲ್ಲದೆ ಬೆಂಗಳೂರಿನಲ್ಲಿ ಅನೇಕ ಕೈಗಾರಿಕೆಗಳು ಸ್ಥಾಪಿತವಾಗಿ, ಅವುಗಳನ್ನು ದಕ್ಷರೀತಿಯಲ್ಲಿ ನಡೆಸದೆ ಗತ್ಯಂತರವಿಲ್ಲದಾಗಿ ಅವುಗಳ ಸಮಸ್ಯೆಗಳ ಬಗ್ಗೆ ಶಾಸ್ತ್ರೀಯ

ವಾಗಿ ಸಂಶೋಧನೆ ನಡೆದಿದೆ. ಇದಕ್ಕಾಗಿ ಗ್ರಂಥಾಲಯಗಳ ನೆರವು ಎಷ್ಟೆಂದು ಹೇಳಲು ಉತ್ಪ್ರೇಕ್ಷೆಯೇನೂ ಬೇಕಿಲ್ಲ.

ಕಾಲೇಜು, ಹೈಸ್ಕೂಲುಗಳಲ್ಲಿ ಸಹ ಶಿಕ್ಷಣ ವಿಧಾನಗಳಲ್ಲಿ ಸುಧಾರಣೆಯಾಗ ಬೇಕೆಂಬ ಅರಿವು ಮೂಡಿದ್ದು, ಗ್ರಂಥಾಲಯಗಳ ಅಭಿವೃದ್ಧಿಗೆ ಈಗೀಗ ಗಮನ ಕೊಡುತ್ತಿದ್ದಾರೆ. ಆದರೆ ಹಣದ ಕೊರತೆಯಿಂದ ಪ್ರಗತಿ ಕುಂಠಿತವಾಗಿದೆ. ಆದರೂ ಧೃಡ ಮನಸ್ಸಿನಿಂದ ಉದಾರ ಕೊಡುಗೆಯಿಂದ ಮುನ್ನಡೆದರೆ ಅಭಿವೃದ್ಧಿ ಸಾಧ್ಯ.

ಮೈಸೂರು ಸಾರ್ವಜನಿಕ ಗ್ರಂಥಾಲಯ ಕಾನೂನು ಜಾರಿಗೆ ಬಂದರೂ ಅದರ ಕಾರ್ಯವಾಪ್ತಿ ಇನ್ನೂ ವಿಸ್ತಾರಗೊಂಡಿಲ್ಲ. ಈ ಭಾಗದಲ್ಲಿ ಕಾರ್ಯ ಇನ್ನೂ ಬಹಳ ಚುರುಕಾಗಿ ನಡೆಯಬೇಕಾಗಿದೆ. ಹಾಗೆ ನಡೆದರೆ ಜನರಿಗೆ ಉತ್ತಮ ಸೇವೆ ಶೀಘ್ರವೇ ದೊರೆತು, ಗ್ರಂಥಾಲಯಶಾಸ್ತ್ರ ತರಪೇತಿ ಪಡೆದವರಿಗೆ ಉದ್ಯೋಗವಕಾಶವೂ ಹೆಚ್ಚುವುದು.

ಈ ಗ್ರಂಥಾಲಯ ಸೇವಾಕ್ಷೇತ್ರಕ್ಕೆ ಮೇಧಾವಿಗಳನ್ನು ಆಕರ್ಷಿಸಲು ಕಾಲೇಜು, ಸ್ಕೂಲು ಗ್ರಂಥಾಲಯಗಳಲ್ಲಿ ತರಪೇತಿ ಪಡೆದವರಿಗೆ ಬೋಧಕರಷ್ಟೇ ಸಂಬಳ ಸಾರಿಗೆ, ಅಂತಸ್ತು, ಸ್ಥಾನಮಾನ ದೊರೆಯಬೇಕು.

ಈಗ ದಕ್ಷಿಣ ಭಾರತದಲ್ಲಿ ಯಾವ ವಿಶ್ವವಿದ್ಯಾನಿಲಯದಲ್ಲೂ ಗ್ರಂಥಾಲಯ ಶಾಸ್ತ್ರದಲ್ಲಿ ಮಾಸ್ಟರ್ ಡಿಗ್ರಿ ಅಧ್ಯಯನಕ್ಕೆ ಅವಕಾಶವಿಲ್ಲ. ಆದರಿಂದ ಮೈಸೂರಿನ ಯಾವುದಾದರೂ ಒಂದು ವಿಶ್ವವಿದ್ಯಾನಿಲಯ ಪ್ರತಿವರ್ಷ ೫ ಮಂದಿಗಾದರೂ ಮಾಸ್ಟರ್ ಡಿಗ್ರಿ ತರಪೇತಿ ಕೊಡುವ ಕಾರ್ಯವಾಗಬೇಕು. ಇದರಲ್ಲೂ ಸಾರ್ವಜನಿಕ ಗ್ರಂಥಾಲಯ, ಶಿಕ್ಷಣ ಸಂಸ್ಥೆಯ ಗ್ರಂಥಾಲಯ ವಿಶಿಷ್ಟ ವಿಷಯವಾಗಿ ಉಳ್ಳ ಪಾಠ ಪ್ರವಚನಗಳಿರಬೇಕು. ಸಂಶೋಧನೆಗಳಿಗೂ ಅವಕಾಶವಿರಬೇಕು. ಪದವಿ ತರಗತಿಯ ಪಾಠಪ್ರವಚನಗಳಲ್ಲೂ ಸುಧಾರಣೆಯಾಗಬೇಕಾಗಿದೆ.

ಗ್ರಂಥಾಲಯ ಶಾಸ್ತ್ರಕ್ಕೆ ಸಂಬಂಧಿಸಿದ ಪುಸ್ತಕಗಳು ಕನ್ನಡದಲ್ಲಿ ರಚಿತವಾಗ ಬೇಕು. ಎಲ್ಲಾ ವಿಧವಾದ ಗ್ರಂಥಾಲಯಗಳ ನಿರ್ವಹಣೆಗೆ ತರಪೇತಿ ಪಡೆದವರು ಬೇಕು. ಹಾಗೂ ಈ ಗ್ರಂಥಾಲಯಗಳ ಯಶಸ್ವೀ ಕಾರ್ಯ ನಿರ್ವಹಣೆಗೆ ಸಮೀಕ್ಷೆಗಳು, ಮಾನಕಗಳು ತಯಾರಾಗಬೇಕು. ಇವುಗಳಿಗೆ ಬೇಕಾಗುವ ಕಾಗದಪತ್ರಗಳು, ಉಪಕರಣಗಳು, ಇವುಗಳ ಸಣ್ಣ ಉದ್ಯಮವೇ ಆರಂಭವಾಗಬೇಕು.

ಮೈಸೂರು ಗ್ರಂಥಾಲಯ ಸಂಘವು ೧೯೬೨ ರಲ್ಲಿ ಸ್ಥಾಪಿತವಾಗಿ ಮೈಸೂರು ರಾಜ್ಯದಲ್ಲಿ ಸಾರ್ವಜನಿಕ ಗ್ರಂಥಾಲಯ ಕಾನೂನು ಜಾರಿಗೆ ಬರಲು ಶ್ರಮಿಸಿತು. ಸಂಘದ ಚಟುವಟಿಕೆ ಕಾರ್ಯವಾಪ್ತಿ ಇನ್ನೂ ಹೆಚ್ಚಬೇಕಾಗಿದೆ.

ಮಗುವಿನಿಂದ ಮುದುಕರ ವರೆಗೆ ಜೀವನದ ನಾನಾ ಹಂತಗಳಲ್ಲಿ ಎಲ್ಲಾ ವ್ಯಕ್ತಿ ಗಳಿಗೆ ಯಾವುದೇ ರೀತಿಯ ಜ್ಞಾನಾರ್ಜನೆಗೆ, ಸಂಸ್ಕೃತಿಯ ವಿಕಾಸಕ್ಕೆ, ಅಧ್ಯಯನಕ್ಕೆ ಅಗತ್ಯವಾದ ನೆರವನ್ನು ನೀಡಬಲ್ಲ ವ್ಯವಸ್ಥೆ ಗ್ರಂಥಾಲಯವೊಂದೇ. ಈ ಗ್ರಂಥಾಲಯ ಸೇವೆ ಎಲ್ಲೆಡೆ ವಿಸ್ತರಿಸಿ, ನಮ್ಮ ಜನಗಳ ಪ್ರಗತಿಗೆ ಸಚೇತಕವಾಗಿ ಲಭಿಸಲೆಂದು ಆಶಿಸೋಣ.

ಸಾಮಾನ್ಯವಾಗಿ ಪ್ರತಿಯೊಬ್ಬರಿಗೂ ತಮ್ಮ ತಮ್ಮ ಭಾಷೆಯ ವಿಷಯದಲ್ಲಿ ಹೆಮ್ಮೆ ಭಕ್ತಿ ಶ್ರದ್ಧೆಗಳು ಇದ್ದೇ ಇರುತ್ತವೆ. ಹೀಗಿರುವು ದೇನೂ ತಪ್ಪಾಗಿ ಕಾಣುವುದಿಲ್ಲ. ಆದ್ದರಿಂದ, ಕನ್ನಡದ ಪರವಾಗಿ, ಕನ್ನಡದ ಮೇಲಿನ ಅಭಿಮಾನದಿಂದ, ನಾನು ಒಂದು ಮಾತನ್ನು ಹೇಳಿದ ಪಕ್ಷದಲ್ಲಿ ಅದನ್ನು ಸಂಕುಚಿತ ದೃಷ್ಟಿಯೆಂದು ಯಾರೂ ಹೇಳಬಾರದು : ಆ ಮಾತೇನೆಂದರೆ–"ಕನ್ನಡ ನಾಡಿಗೆ ಕನ್ನಡವೇ ಗತಿ. ಅನ್ಯಥಾ ಶರಣಂ ನಾಸ್ತಿ." ಸಂಸ್ಕೃತವಲ್ಲ, ಇಂಗ್ಲಿಷಲ್ಲ, ಹಿಂದಿಯಲ್ಲ, ಕನ್ನಡ.

—ಶ್ರೀ.

ಆರ್. ಜಿ. ಕೃಷ್ಣ

ಶೀಘ್ರಲಿಪಿ

ಅನುಕರಣಯೋಗ್ಯವೂ ಕ್ರಮಬದ್ಧವೂ ಆದ ಕನ್ನಡ ಶೀಘ್ರಲಿಪಿಯನ್ನು ಕಂಡುಹಿಡಿದು ಜಾರಿಗೆತಂದು ಅಕ್ಷರಶಃ ಕನ್ನಡ ಭಾಷಣಗಳನ್ನು ಶೀಘ್ರಲಿಪಿಯಲ್ಲಿ ಬರೆದು ಕೊಂಡು ಕನ್ನಡಕ್ಕೆ ಪರಿವರ್ತಿಸಲು ಅನುವಾಗುವಂತಹ ಪದ್ಧತಿಯನ್ನು ಸಿದ್ಧಪಡಿಸಿದ ಯಶಸ್ಸು ಪ್ರಥಮವಾಗಿ ದಿವಂಗತ ಎ. ದೇವರಾವ್‌ರವರಿಗೆ ಸಲ್ಲತಕ್ಕದ್ದಾಗಿದೆ. ಇಡೀ ಕರ್ನಾಟಕವೇ ಈ ಉದ್ಯಮವನ್ನು ಕೊಂಡಾಡುತ್ತದೆ.

ಶ್ರೀ ದೇವರಾಯರು ಮೈಸೂರು ದೇಶದಲ್ಲಿ ಪ್ರಥಮ ಇಂಗ್ಲಿಷು ಶೀಘ್ರಲಿಪಿ ವರದಿಗಾರರಾಗಿ ಸೇರಿ, ಅಂದಿನ ಸರ್ಕಾರದ ಪ್ರಜಾಪ್ರತಿನಿಧಿ ಸಭೆ ಮತ್ತು ನ್ಯಾಯ ವಿಧಾಯಕ ಸಭೆಗಳ ವರದಿಗಾರರ ಶಾಖೆಯಲ್ಲಿ ಮುಖ್ಯ ವರದಿಗಾರರಾಗಿ—ಅಧೀನ ಕಾರ್ಯ ದರ್ಶಿಗಳಾಗಿ ಸೇವೆಸಲ್ಲಿಸಿ ನಿವೃತ್ತರಾದವರಲ್ಲಿ ಪ್ರಥಮರು. ಅವರು ಇಂಗ್ಲಿಷು ಶೀಘ್ರಲಿಪಿ ಗಾರರ ಸಂಘಕ್ಕೆ ಉಪಾಧ್ಯಕ್ಷರಾಗಿ ಕೆಲವುಕಾಲ ಸೇವೆಸಲ್ಲಿಸಿದವರಲ್ಲೊಬ್ಬರು. ಆಗ, ಅಂದರೆ ೧೯೩೦–೩೧ರಲ್ಲಿ ಇಂಗ್ಲಿಷು ಶೀಘ್ರಲಿಪಿಗಾರರ ಸಂಘವು ಇಂಟರ್ ಮೀಡಿಯಟ್ ಕಾಲೇಜಿನಲ್ಲಿ ಸ್ಥಾಪಿತವಾಗಿತ್ತು. ರಾಜಚರಿತವಿಶಾರದ ದಿ. ಶ್ರೀ ಹಯವದನರಾಯರು ಸಂಘದ ಅಧ್ಯಕ್ಷರಾಗಿದ್ದರು. ಆ ಕಾಲದಲ್ಲಿ ನಾನು ಅಧ್ಯಕ್ಷರಿಂದ ಪ್ರೋತ್ಸಾಹಿಸಲ್ಪಟ್ಟು ಶ್ರೀ ದೇವರಾಯರ ನೇರ ನೇತೃತ್ವದಲ್ಲಿ ಕನ್ನಡಶೀಘ್ರಲಿಪಿ ಯನ್ನು ಕಲಿಯಲು ಪ್ರಾರಂಭಿಸಿದೆ. ಕಲಿತದ್ದನ್ನು ಅಭ್ಯಾಸಮಾಡಿ ದೇವರಾಯರ ಮೆಚ್ಚುಗೆಯನ್ನು ಪಡೆಯುವುದು ತುಂಬಾ ಕಷ್ಟವಾಗಿತ್ತು. ಕಲಿಯಲು ಬಂದು ಬಿಟ್ಟುಹೋದವರೆಷ್ಟೋ ಮಂದಿ. ಎಷ್ಟೇ ಕಷ್ಟವಾದರೂ ಬಿಡದೆ ಮುಂದುವರಿಸಬೇಕೆಂಬ ಹಠದಿಂದ ೨–೩ ವರ್ಷಗಳ ಕಾಲ ಸತತ ಅಭ್ಯಾಸವನ್ನು ಮುಂದುವರಿಸಿ ಪ್ರಾವೀಣ್ಯತೆ ಯನ್ನು ಗಳಿಸಿ, ಅನೇಕ ರಾಜಕೀಯ ಭಾಷಣಗಳನ್ನು ಕನ್ನಡ ಶೀಘ್ರಲಿಪಿಯಲ್ಲಿ ಬರೆದುಕೊಂಡು ವರದಿ ಸಲ್ಲಿಸಿದ್ದರ ಪರಿಣಾಮವಾಗಿ ಅಂದಿನ ಸರ್ಕಾರ ನನ್ನನ್ನು ದೇಶದ ಪ್ರಥಮ ಕನ್ನಡ ಶೀಘ್ರಲಿಪಿ ಅಧ್ಯಾಪಕನನ್ನಾಗಿ ನೇಮಿಸಿ ಕನ್ನಡ ಶೀಘ್ರಲಿಪಿಗೆ ಸ್ವಲ್ಪ ಮಟ್ಟಿನ ಉತ್ತೇಜನ ನೀಡಿತು. ಈ ಉತ್ತೇಜನದಿಂದ ಸ್ಫೂರ್ತಿಗೊಂಡು, ಶ್ರೀ ದೇವರಾಯರ ಮೆಚ್ಚುಗೆಯನ್ನು ಗಳಿಸಿ, ಅವರೊಡನೆ ಗುರು ಶಿಷ್ಯನಂತೆ, ಅಧ್ಯಾಪಕ—

ಪರೀಕ್ಷಕನಂತೆ ನಿಕಟಸಂಪರ್ಕವನ್ನು ಬೆಳೆಸಿಕೊಂಡು ಬಂದದ್ದರಿಂದ ಸುಮಾರು ೨೦ ವರ್ಷಗಳಿಗೆ ಮೇಲ್ಪಟ್ಟು ಕನ್ನಡ ಶೀಘ್ರಲಿಪಿ ಅಧ್ಯಾಪಕನಾಗಿ ಸೇವೆಸಲ್ಲಿಸಲು, ಮತ್ತು ಆ ಪದ್ಧತಿಯಲ್ಲಿದ್ದ ನ್ಯೂನಾತಿರಿಕ್ತಗಳನ್ನು ಸರಿಪಡಿಸಲು ಅವಕಾಶವಾಯಿತು.

ಕನ್ನಡ ಶೀಘ್ರಲಿಪಿಯ ಹುಟ್ಟು–ಬೆಳವಣಿಗೆ

೧೯೩೩ರಲ್ಲಿ ಶ್ರೀ ದೇವರಾಯರು ಕನ್ನಡ ಭಾಷಣಗಳನ್ನು ಇಂಗ್ಲಿಷು ಶೀಘ್ರಲಿಪಿಯ ಮೂಲಕ ಬರೆದುಕೊಳ್ಳುವುದೂ, ಮತ್ತು ಅದನ್ನು ಪುನಃ ಕನ್ನಡಕ್ಕೆ ಪರಿವರ್ತಿಸುವುದೂ ಕಷ್ಟತರವೆಂಬುದನ್ನು ಮನಗಂಡು, ಕನ್ನಡಭಾಷೆಯ ವೈಶಿಷ್ಟ್ಯ ಮತ್ತು ಬರವಣಿಗೆಗಳಿಗನುಸಾರವಾದ ಶೀಘ್ರಲಿಪಿ ಪದ್ಧತಿಯೊಂದನ್ನು ಪ್ರಥಮವಾಗಿ ಕಂಡುಹಿಡಿದರು. ಈ ಕನ್ನಡ ಶೀಘ್ರಲಿಪಿ ಪದ್ಧತಿಯು ಪ್ರಕಾಶಕ್ಕೆ ಬರುವ ಮೊದಲು, ಸಾರ್ವಜನಿಕ ಭಾಷಣಗಳನ್ನು ವರದಿಮಾಡಬೇಕಾದರೆ ಮುಖ್ಯವಾದ ವಿಷಯಗಳನ್ನು ಕನ್ನಡಲಿಪಿಯಲ್ಲೇ ಗುರುತಿಸಿಕೊಂಡು ಬರೆದಿಡುತ್ತಿದ್ದರು ಅಥವಾ ಮಾನಸಿಕವಾಗಿ ಇಂಗ್ಲಿಷು ಭಾಷೆಗೆ ತರ್ಜುಮೆಮಾಡಿಕೊಂಡು ಪಿಟ್‌ಮನ್ನರ ಇಂಗ್ಲಿಷು ಶೀಘ್ರಲಿಪಿಯನ್ನು ಬಲ್ಲವರು ಬರೆಯುತ್ತಿದ್ದರು. ಈ ಎರಡು ಸಂದರ್ಭಗಳಲ್ಲೂ ಸಭೆಯಲ್ಲಿ ಮಾಡಿದ ಭಾಷಣಕ್ಕೂ, ಬರೆದಿಟ್ಟ ವರದಿಗೂ ಸ್ವಲ್ಪವೂ ಹೋಲಿಕೆ ಇರುತ್ತಿರಲಿಲ್ಲ. ಅದು ಸಾರಾಂಶ ರೂಪವಾಗಿ ಮಾತ್ರ ಇರುತ್ತಿತ್ತು. ಪ್ರಾವೀಣ್ಯತೆ ಪಡೆದ ಇಂಗ್ಲಿಷು ಶೀಘ್ರಲಿಪಿ ಬರಹಗಾರನೂ ಸಹ ಕನ್ನಡ ಭಾಷಣಗಳನ್ನು ಪದಶಃ ಮಾನಸಿಕವಾಗಿ ಇಂಗ್ಲಿಷು ಭಾಷೆಗೆ ತರ್ಜುಮೆ ಮಾಡಿಕೊಂಡು ಬರೆಯುತ್ತಿದ್ದುದು ನ್ಯೂನತೆಗಳಿಂದ ಕೂಡಿರುತ್ತಿತ್ತು. ಯಾಕೆಂದರೆ, ಕನ್ನಡ ಭಾಷಣಗಳ ಶ್ರವಣ, ಮಾನಸಿಕವಾದ ತರ್ಜುಮೆ, ಅದನ್ನು ಇಂಗ್ಲಿಷು ಶೀಘ್ರಲಿಪಿಯಲ್ಲಿ ಬರೆಯುವುದು, ಭಾಷಣಕಾರನಿಂದ ಹೊರಹೊರಡುವ ಮುಂದಿನ ಪದಗಳ ಮೇಲೆ ಗಮನ, ಇವಿಷ್ಟೂ ಒಂದೇಸಮನೆ ನಡೆದರೆಮಾತ್ರ, ಕನ್ನಡಕ್ಕೆ ಪರಿವರ್ತನೆ ಸಾಧ್ಯವಾಗುತ್ತಿತ್ತು. ಆದರೆ ಇದು ಸಾಧ್ಯವೂ ಇಲ್ಲ, ಸಾಧುವೂ ಅಲ್ಲ. ಆದ್ದರಿಂದ ಇಂಗ್ಲಿಷು ಶೀಘ್ರಲಿಪಿಯಲ್ಲಿ ಕನ್ನಡ ಭಾಷಣಗಳನ್ನು ತರ್ಜುಮೆಮಾಡಿ ಬರೆದುಕೊಳ್ಳುವುದರಿಂದ ಪರಿವರ್ತನೆ ತಪ್ಪಾಗಲು ಕಾರಣವಿತ್ತು. ಶ್ರೀ ದೇವರಾಯರು ಇದೆಲ್ಲವನ್ನೂ ಅರಿತು ಕನ್ನಡಭಾಷೆ—ಭಾಷಣಗಳ ವೈಶಿಷ್ಟ್ಯಕ್ಕನುಗುಣವಾದ "ಕನ್ನಡ ಶೀಘ್ರಲಿಪಿ ಪದ್ಧತಿ"ಯನ್ನು ಅನುಕರಣಕ್ಕೆ ಯೋಗ್ಯವಾದ ರೀತಿಯಲ್ಲಿ ರೂಢಿಸಿ ಪುಸ್ತಕ ರೂಪದಲ್ಲಿ ಪ್ರಕಟಿಸಿದರು. ಆ ಪುಸ್ತಕವನ್ನು (ಮ್ಯಾನ್ಯುಯಲ್ ಆಫ್ ಕನ್ನಡ ಷಾರ್ಟ್‌ಹ್ಯಾಂಡ್) ಸರ್ಕಾರದವರು ತಮ್ಮ ಮುದ್ರಣಾಲಯದಲ್ಲಿ ಖರ್ಚಿಲ್ಲದೆ ಮುದ್ರಿಸಿಕೊಟ್ಟು ಈ ಪದ್ಧತಿಗೆ ಮಾನ್ಯತೆ ನೀಡಿದರು. ಈ ಪದ್ಧತಿಯಿಂದ ಕನ್ನಡ ಶಬ್ದಗಳ ಎಲ್ಲಾ ಸ್ವರೂಪವನ್ನೂ ಅಕ್ಷರಶಃ ಬರೆದುಕೊಂಡು ಕನ್ನಡಕ್ಕೆ ಪರಿವರ್ತಿಸುವುದು ಸುಲಭಸಾಧ್ಯವಾಯಿತು. ಈಚೆಗೆ ಪ್ರಚಲಿತವಾಗಿರುವ ಒಂದೆರಡು ಕನ್ನಡ ಶೀಘ್ರಲಿಪಿ ಪದ್ಧತಿಗಳಿಗಿಂತ ಶ್ರೀ ದೇವರಾಯರು ಕಂಡುಹಿಡಿದ ಪದ್ಧತಿಯು ವೈಜ್ಞಾನಿಕವಾದದ್ದೆಂದು

ಹಿಂದೆಯೇ ಪರಿಗಣಿಸಲ್ಪಟ್ಟಿದೆ. ಇದನ್ನು ಕಲಿಯಲು ಇತರ ಶೀಘ್ರಲಿಪಿ ಪದ್ಧತಿಗಳ ಹಾಗೆ ಇಂಗ್ಲಿಷು ಶೀಘ್ರಲಿಪಿಯಲ್ಲಿ ಪರಿಶ್ರಮ ಹೊಂದಿರಬೇಕಾದ ಅಗತ್ಯವಿಲ್ಲ. ಕನ್ನಡ ಭಾಷಾಜ್ಞಾನ ಉತ್ತಮ ಮಟ್ಟದಲ್ಲಿದ್ದರೆ ಸಾಕು, ಇದನ್ನು ಕಲಿಯುವುದು ಸುಲಭ. ಆದರೆ ಆ ಕಾಲದಲ್ಲಿ ಕನ್ನಡ ಭಾಷಣಗಳೇ ತೀರ ವಿರಳವಾಗಿದ್ದುದರಿಂದ ಈ ಪದ್ಧತಿಯು ವೈಜ್ಞಾನಿಕವಾದದ್ದೆಂದು ಪರಿಗಣಿಸಲ್ಪಟ್ಟದ್ದರೂ, ಅದರ ಉಪಯುಕ್ತತೆಯ ಬಗ್ಗೆ ಸಾರ್ವಜನಿಕರ ಗಮನವನ್ನು ಸೆಳೆಯಲು ಅವಕಾಶವಾಗಲಿಲ್ಲ. ಮೇಲಾಗಿ ಆಗ ಕನ್ನಡ ಶೀಘ್ರಲಿಪಿಯನ್ನು ಕಲಿಯಲು ಯಾರೂ ಮುಂದೆಬರುತ್ತಿರಲಿಲ್ಲ. ಬಂದರೂ ಸ್ಥಿರಮನಸ್ಸಿನಿಂದ ಅಭ್ಯಾಸವನ್ನು ಮುಂದುವರಿಸದೆ ಬಿಟ್ಟುಬಿಡುತ್ತಿದ್ದರು.

ಕನ್ನಡ ಶೀಘ್ರಲಿಪಿಯ ಬಳಕೆ

ಸುಮಾರು ೨೫–೩೦ ವರ್ಷಗಳ ಹಿಂದೆ ಪ್ರಥಮವಾಗಿ ಪ್ರಜಾಪ್ರತಿನಿಧಿ ಸಭೆ, ನ್ಯಾಯ ವಿಧಾಯಕ ಸಭೆಗಳಲ್ಲಿ ಕನ್ನಡದಲ್ಲಿ ಭಾಷಣಗಳನ್ನು ಮಾಡುವ ಸಂಪ್ರದಾಯ ಪ್ರಾರಂಭ ವಾಯಿತೆಂದು ಹೇಳಬಹುದು. ಹೆಚ್ಚು ಹೆಚ್ಚಾಗಿ ಕನ್ನಡದಲ್ಲಿ ಭಾಷಣಗಳು ನಡೆಯಲು ಪ್ರಾರಂಭವಾದ್ದರಿಂದ ಕನ್ನಡ ಶೀಘ್ರಲಿಪಿ ಬರಹಗಾರರ ಅವಶ್ಯಕತೆ ಒದಗಿ ಬಂತು. ಆಗ ಈ ಪದ್ಧತಿಯನ್ನನುಸರಿಸಿ ಅಭ್ಯಾಸಮಾಡಿ ನುರಿತ ೩–೪ ಮಂದಿ ಕನ್ನಡ ಶೀಘ್ರಲಿಪಿ ಬರಹಗಾರರನ್ನೂ ಸರ್ಕಾರದವರು ವಿಧಾನಸಭೆ ಶಾಸನಸಭೆಗಳಲ್ಲಿ ನಡೆಯುವ ಕನ್ನಡ ಭಾಷಣಗಳನ್ನು ಅಕ್ಷರಶಃ ವರದಿಮಾಡಲು ನೇಮಿಸಿಕೊಂಡರು. ಅಂದರೆ ೧೯೪೧–೪೨ರಲ್ಲಿ ಅಂದಿನ ಪ್ರಥಮ ಪ್ರಜಾಪ್ರತಿನಿಧಿ ಸಭೆಯ ಅಧ್ಯಕ್ಷರಾಗಿದ್ದ ಸನ್ಮಾನ್ಯ ಶ್ರೀ ಡಿ. ಹೆಚ್. ಚಂದ್ರಶೇಖರಯ್ಯನವರು ಕನ್ನಡ ಶೀಘ್ರಲಿಪಿಕರ್ತರಾದ ಶ್ರೀ ದೇವರಾಯರನ್ನೂ, ಅಧ್ಯಾಪಕನಾಗಿದ್ದ ನನ್ನನ್ನೂ ಶಾಸನಸಭೆಗೆ ಬೇಕಾಗಿದ್ದ ಕನ್ನಡ ಶೀಘ್ರಲಿಪಿ ವರದಿಗಾರರನ್ನು ಪರೀಕ್ಷಿಸಿ ಚುನಾಯಿಸಲು ನೇಮಿಸಿದರು. ಅಂದು ಅವರ ನೇತೃತ್ವದಲ್ಲಿ ನಡೆದ ಪರೀಕ್ಷೆಯಲ್ಲಿ ೬–೮ ಮಂದಿ ಭಾಗವಹಿಸಿದ್ದು, ಅದರಲ್ಲಿ ಶ್ರೀ ದೇವರಾಯರ ಪದ್ಧತಿಯಲ್ಲಿ ಪರಿಶ್ರಮ ಹೊಂದಿದ ೪ ಮಂದಿ ಕನ್ನಡ ಶೀಘ್ರಲಿಪಿ ಬರಹಗಾರರು ಮಾತ್ರ ಉತ್ತೀರ್ಣರಾದರು ಮತ್ತು ಅವರು ಕನ್ನಡ ವರದಿಗಾರರಾಗಿ ನೇಮಿಸಲ್ಪಟ್ಟರು. ಅವರಲ್ಲಿಬ್ಬರು ಪೋಲೀಸ್ ಶಿಕ್ಷಣ ಶಾಲೆಯಲ್ಲಿ ಶಿಕ್ಷಣ ಹೊಂದಿದವರು. ಕ್ರಮೇಣ ನ್ಯಾಯವಿಧಾಯಕ ಸಭೆಯಲ್ಲಿ ಕನ್ನಡ ಶೀಘ್ರಲಿಪಿ ವರದಿಗಾರರ ಅವಶ್ಯಕತೆ ಒದಗಿಬಂದಂತೆ ಪೋಲೀಸ್ ಶಿಕ್ಷಣಶಾಲೆಯಲ್ಲಿ ನನ್ನಿಂದ ತರಪೇತಾದ ವರದಿಗಾರರ ಸೇವೆಯನ್ನು ದೊರಕಿಸಿಕೊಳ್ಳುವ ಪ್ರಯತ್ನ ಮುಂದುವರಿಯಿತು. ಅಂದಿನ ಪರಿಸ್ಥಿತಿ ಯಲ್ಲಿ ಶಾಸನಸಭೆಯ ನಡವಳಿಕೆಗಳನ್ನು ಬಿಟ್ಟು, ಸರ್ಕಾರದ ಬೇರೆ ಬೇರೆ ಇಲಾಖೆ ಗಳಲ್ಲಾಗಲೀ, ಖಾಸಗೀ ಸಂಸ್ಥೆಗಳಲ್ಲಾಗಲೀ ಕನ್ನಡ ಶೀಘ್ರಲಿಪಿಯ ಉಪಯೋಗ ಅಷ್ಟಾಗಿರಲಿಲ್ಲವಾದ್ದರಿಂದ, ಕನ್ನಡ ಶೀಘ್ರಲಿಪಿಯನ್ನು ಅಭ್ಯಾಸಮಾಡಿ ನುರಿತವರಿಗೆ ಉದ್ಯೋಗ ದೊರೆಯುವುದೆಂಬ ಭರವಸೆ ಇರಲಿಲ್ಲ. ಸಾರ್ವಜನಿಕ ಸಂಸ್ಥೆಗಳಾಗಲೀ,

ಸರ್ಕಾರದ ವತಿಯಿಂದಾಗಲೀ, ಸರ್ಕಾರದಿಂದ ಮನ್ನಣೆ ಪಡೆದ ಸಂಸ್ಥೆಗಳಾಗಲೀ ಕನ್ನಡ ಶೀಘ್ರಲಿಪಿ ಬರಹಗಾರರನ್ನು ತರಪೇತುಮಾಡಲು ಮುಂದೆ ಬಾರದಿದ್ದುದು ಒಂದು ದೊಡ್ಡ ಕೊರತೆಯಾಗಿತ್ತು. ನನಗೆ ಜ್ಞಾಪಕವಿರುವಂತೆ ಎಲ್ಲೋ ಒಂದೆರಡು ಖಾಸಗೀ ವಾಣಿಜ್ಯಸಂಸ್ಥೆಗಳು ಕನ್ನಡ ಶೀಘ್ರಲಿಪಿಯಲ್ಲಿ ಶಿಕ್ಷಣವನ್ನು ನೀಡಲು ನನ್ನನ್ನು ಆಹ್ವಾನಿಸಿ ವ್ಯವಸ್ಥೆಮಾಡಿದ್ದರು. ಆದರೆ ಆಸಕ್ತಿಯುಳ್ಳ ವಿದ್ಯಾರ್ಥಿಗಳು ಕಲಿಯಲು ಮುಂದೆ ಬರುತ್ತಿರಲಿಲ್ಲವಾದ್ದರಿಂದ, ಬಂದವರೂ ಸ್ವಲ್ಪ ಕಲಿತು ಬಿಟ್ಟುಬಿಡುತ್ತಿದ್ದುದರಿಂದ, ಸ್ವಲ್ಪಕಾಲ ಶಿಕ್ಷಣ ನಡೆದು ನಿಂತುಹೋಯಿತು. ಎಲ್ಲವೂ ಇಂಗ್ಲಿಷುಮಯವಾಗಿದ್ದು ಕನ್ನಡ ಭಾಷೆಗೇ ಪ್ರಾಧಾನ್ಯತೆಯಿಲ್ಲದ, ಕನ್ನಡದಲ್ಲಿ ಮಾತನಾಡುವವರ ಬಗ್ಗೆ ತಾತ್ಸಾರಮನೋಭಾವವಿದ್ದ ಅಂದಿನ ಪರಿಸ್ಥಿತಿಯಲ್ಲಿ, ಕನ್ನಡ ಶೀಘ್ರಲಿಪಿಯ ಕಲಿಕೆ, ಬಳಕೆ, ಇವು ಯಾರಿಗೂ ಬೇಡವಾಗಿತ್ತೆಂದು ಹೇಳಬಹುದು. ಪ್ರಜಾಪ್ರತಿನಿಧಿ ಸಭೆ, ನ್ಯಾಯವಿಧಾಯಕ ಸಭೆಗಳಲ್ಲಿ ಮಾತ್ರ ಕನ್ನಡದ ಮೇಲೆ ಅಭಿಮಾನವುಳ್ಳ ಕೆಲವು ಸದಸ್ಯರು ಕನ್ನಡದಲ್ಲೇ ಮಾತನಾಡಲು ಪ್ರಾರಂಭಿಸಿದ್ದರಿಂದ ಅಲ್ಲಿ ಕನ್ನಡ ಶೀಘ್ರಲಿಪಿ ಬರಹಗಾರರನ್ನು ನೇಮಿಸಿಕೊಳ್ಳುವ ಅವಶ್ಯಕತೆ ಒದಗಿಬಂತು.

ಪೋಲೀಸ್ ಶಿಕ್ಷಣಶಾಲೆಯಲ್ಲಿ ಕನ್ನಡ ಶೀಘ್ರಲಿಪಿ ಶಿಕ್ಷಣ ಪ್ರಾರಂಭ—ಮುನ್ನಡೆ:

ಮೈಸೂರು ದೇಶದಲ್ಲಿ ರಾಜಕೀಯ ಚಳುವಳಿ, ಆಂದೋಳನಗಳು ಬಿರುಸಿನಿಂದ ಪ್ರಾರಂಭವಾದಾಗ, ಸಾರ್ವಜನಿಕ ಭಾಷಣಗಳು ಕನ್ನಡದಲ್ಲಿ ನಡೆಯಲು ಪ್ರಾರಂಭವಾಗಿ, ಪೋಲೀಸ್ ಇಲಾಖೆಯಲ್ಲಿ ಕನ್ನಡ ಶೀಘ್ರಲಿಪಿ ಬರಹಗಾರರ ಅವಶ್ಯಕತೆ ಕಂಡುಬಂತು. ಈ ಅವಶ್ಯಕತೆಯನ್ನು ಪೂರೈಸಲು ತಕ್ಕಷ್ಟುಮಂದಿ ಕನ್ನಡ ಶೀಘ್ರಲಿಪಿ ಬರಹಗಾರರಿಲ್ಲದ್ದರಿಂದ, ಅವರನ್ನು ತರಪೇತುಮಾಡಲು ಶಿಕ್ಷಣಶಾಲೆಯನ್ನು ತೆರೆಯಬೇಕೆಂದು ನ್ಯಾಯವಿಧಾಯಕ ಸಭೆಯಲ್ಲಿ ಅಂದಿನ ಸದಸ್ಯರೂ, ಪ್ರಥಮ ಪ್ರಜಾಪ್ರತಿನಿಧಿ ಸಭೆಯ ಅಧ್ಯಕ್ಷರೂ, ಮಾಜಿ ವಿದ್ಯಾಮಂತ್ರಿಗಳೂ ಆದ ಸನ್ಮಾನ್ಯ ಡಿ. ಹೆಚ್. ಚಂದ್ರಶೇಖರಯ್ಯನವರು ಪ್ರಥಮವಾಗಿ ಈ ವಿಷಯವನ್ನು ಚರ್ಚೆಗೆ ತಂದರು. ಅಂದಿನ ಸದಸ್ಯರೂ, ಪ್ರತಿಭಾವಂತ ವ್ಯಕ್ತಿಗಳೂ, ಕನ್ನಡ ಭಾಷಾಭಿಮಾನಿಗಳೂ ಆದ ಸನ್ಮಾನ್ಯ ಡಾ. ಡಿ. ವಿ. ಗುಂಡಪ್ಪನವರು, ರಾಜಚರಿತವಿಶಾರದ ಶ್ರೀ ಸಿ. ಹಯವದನರಾಯರು ಮೊದಲಾದವರಿಂದ ಅದು ಪುಷ್ಟೀಕರಿಸಲ್ಪಟ್ಟಿತು. ಈ ಬಗ್ಗೆ ನ್ಯಾಯವಿಧಾಯಕ ಸಭೆಯಲ್ಲಿ ತೀವ್ರಚರ್ಚೆ ನಡೆದನಂತರ ಕನ್ನಡ ಶೀಘ್ರಲಿಪಿಯಲ್ಲಿ ಶಿಕ್ಷಣವನ್ನು ಏರ್ಪಡಿಸಿ, ಪೋಲೀಸ್ ಇಲಾಖೆಯ ಆರಿಸಲ್ಪಟ್ಟ ಕೆಲವು ಆಫೀಸರುಗಳಿಗೆ ಶಿಕ್ಷಣ ನೀಡಲು ಅಂದಿನ ಮೈಸೂರು ಸರ್ಕಾರ ಒಪ್ಪಿತು. ಸರ್ಕಾರದ ಈ ನಿರ್ಧಾರವನ್ನು ಕಾರ್ಯರೂಪಕ್ಕೆ ತರಲು ಅಂದಿದ್ದ ದಿವಾನರ ಅಧ್ಯಕ್ಷತೆಯಲ್ಲಿ ಇಲಾಖಾ ಮುಖ್ಯಾಧಿಕಾರಿಗಳೂ, ಸರ್ಕಾರದ ಕಾರ್ಯದರ್ಶಿಗಳೂ, ಜಿಲ್ಲಾಧಿಕಾರಿಗಳೂ ಸಭೆ ಸೇರಿ ಪೋಲೀಸ್ ಇಲಾಖೆಯಲ್ಲಿ ಅನೇಕ ಮಂದಿ ಕನ್ನಡ ಶೀಘ್ರಲಿಪಿ

ಬರಹಗಾರರ ಆವಶ್ಯಕತೆ ಇದೆಯೆಂದು ಮನಗಂಡು, ಅದನ್ನು ತುಂಬಲು ಪೋಲೀಸ್ ಶಿಕ್ಷಣಶಾಲೆಯಲ್ಲಿ ಕನ್ನಡ ಶೀಘ್ರಲಿಪಿ ಶಿಕ್ಷಣದ ಕೇಂದ್ರವೊಂದನ್ನು ತೆರೆಯಲು ಚರ್ಚಿಸಿ ನಿರ್ಧರಿಸಿದರು. ಸರ್ಕಾರ ಈ ನಿರ್ಧಾರಕ್ಕೆ ಬರಲು ಮುಖ್ಯಕಾರಣವೆಂದರೆ, ಅದುವರೆಗೂ ಕನ್ನಡದಲ್ಲಿ ಮಾಡಿದ ಸಾರ್ವಜನಿಕ ಭಾಷಣವನ್ನು ಇಂಗ್ಲಿಷು ಶೀಘ್ರಲಿಪಿಯಲ್ಲಿ ಪರಿಶ್ರಮ ಹೊಂದಿದ ಬರಹಗಾರರು ಮಾನಸಿಕವಾಗಿ ಇಂಗ್ಲಿಷಿಗೆ ತರ್ಜುಮೆ ಮಾಡಿ ಬರೆದುಕೊಂಡು, ಅದನ್ನು ಪರಿವರ್ತಿಸಿ, ಇಲಾಖಾ ಮುಖ್ಯಾಧಿಕಾರಿಗಳಿಗೆ ಒಪ್ಪಿಸುತ್ತಿದ್ದ ಪದ್ಧತಿಯಿಂದ ಅವುಗಳು ಅಸಮರ್ಪಕವಾಗಿದ್ದುದಲ್ಲದೆ, ನ್ಯಾಯಾಲಯಗಳಲ್ಲಿ ಭಾಷಣಗಳ ಯಥಾರ್ಥತೆ ಬಗ್ಗೆ ಪಾಟೀಸವಾಲು ನಡೆದಾಗ ಇಂಗ್ಲಿಷು ಶೀಘ್ರಲಿಪಿ ಬರಹಗಾರರಿಂದ ಕನ್ನಡ ಭಾಷಣಗಳನ್ನು ರುಜುವಾತುಮಾಡಲು ಅಸಾಧ್ಯವಾಗುತ್ತಿದ್ದುದು. ಈ ಅಭಿಪ್ರಾಯವನ್ನು ಎತ್ತಿತೋರಿಸಿ ಆಗಿನ ಶಿವಮೊಗ್ಗಾ ಜಿಲ್ಲಾಧಿಕಾರಿಗಳಾಗಿದ್ದ ರಾಜಸೇವಾಪ್ರಸಕ್ತ ಶ್ರೀ ಎಂ. ಶೇಷಾದ್ರಿಯವರು (ನಿವೃತ್ತ ಐ.ಜಿ.ಪಿ. ಮತ್ತು ಗೃಹಮಂತ್ರಿಗಳಾಗಿದ್ದವರು), ರಾಜಕೀಯ ಭಾಷಣಗಳು ಯಾವ ಭಾಷೆಯಲ್ಲಿ ನಡೆಯುತ್ತವೆಯೋ ಅದೇ ಭಾಷೆಯಲ್ಲಿ ವರದಿಯಾಗಬೇಕೆಂದು ಮಾಡಿದ ಸಲಹೆಯನ್ನು ಸರ್ಕಾರವು ಅನುಮೋದಿಸಿತು. ಈ ನಿರ್ಧಾರವನ್ನು ಕಾರ್ಯಗತಗೊಳಿಸಲು ಪೋಲೀಸ್ ಶಿಕ್ಷಣಶಾಲೆಯಲ್ಲಿ ಕನ್ನಡ ಶೀಘ್ರಲಿಪಿ ಬರಹಗಾರರನ್ನು ತರಪೇತು ಮಾಡಲು ನನ್ನನ್ನು ಅಧ್ಯಾಪಕನನ್ನಾಗಿ ನೇಮಿಸಿ ಶಿಕ್ಷಣವನ್ನೇರ್ಪಡಿಸಲು ಕಾರಣಕರ್ತರಾದ ಮೈಸೂರು ಸರ್ಕಾರ, ಪೋಲೀಸ್ ಇಲಾಖಾ ಮುಖ್ಯಾಧಿಕಾರಿಗಳು ಮತ್ತು ಇತರರೆಲ್ಲರಿಗೂ ಅಭಿನಂದನೆಗಳನ್ನು ಸಲ್ಲಿಸುವುದು ನನ್ನ ಕರ್ತವ್ಯ.

ಇಂತಹ ಶಿಕ್ಷಣದ ಅವಶ್ಯಕತೆ ಅಗತ್ಯವೆಂದು ಬಹಳ ಹಿಂದೆಯೇ ಕಂಡುಬಂದರೂ, ಕನ್ನಡ ಶೀಘ್ರಲಿಪಿಯನ್ನು ಕಲಿಯಲು ಅಭ್ಯರ್ಥಿಗಳು ಮುಂದೆಬಾರದಿದ್ದುದರಿಂದಲೂ, ಇಬ್ಬರೋ ಮೂವರೋ ಬಂದರೂ ಕಲಿಕೆಯನ್ನು ಮುಂದುವರಿಸಲು ಅನಾಸಕ್ತರಾಗಿ ಮಧ್ಯದಲ್ಲೇ ಬಿಟ್ಟುಬಿಡುತ್ತಿದ್ದುದರಿಂದಲೂ, ಕನ್ನಡ ಶೀಘ್ರಲಿಪಿ ಪದ್ಧತಿಯು ಕ್ಲಿಷ್ಟವಾದದ್ದೆಂದೂ, ಉಪಯೋಗಕ್ಕೆ ಅನರ್ಹವೆಂದೂ ಸಂಶಯ ಮೂಡಿದ್ದುದು ಮೊದಲನೆಯ ಕೊರತೆ. ಸಾರ್ವಜನಿಕ ಶಿಕ್ಷಣ ಇಲಾಖೆಗೆ ಸೇರಿದ ಸರ್ಕಾರಿ ಕಮರ್ಷಿಯಲ್ ಸ್ಕೂಲ್‌ನಲ್ಲಿಯಾಗಲೀ, ಅಥವಾ ಉಪಾಧ್ಯಾಯರ ಶಿಕ್ಷಣಶಾಲೆಯಲ್ಲಾಗಲೀ ಕನ್ನಡ ಶೀಘ್ರಲಿಪಿ ಶಿಕ್ಷಣವನ್ನು ಏರ್ಪಡಿಸದಿದ್ದುದು ಎರಡನೆಯ ಕೊರತೆ. ಮೂರನೆಯದಾಗಿ ಶಿಕ್ಷಣ ನೀಡಲು ಕನ್ನಡ ಶೀಘ್ರಲಿಪಿ ಕರ್ತರನ್ನುಳಿದು ವಿಶೇಷ ತರಪೇತುಹೊಂದಿದ ಉಪಾಧ್ಯಾಯರು ದೊರಕದಿದ್ದುದೊಂದು ಮುಖ್ಯವಾದ ಕೊರತೆ. ಈ ನ್ಯೂನತೆ, ಕೊರತೆಗಳನ್ನು ಮನಗಂಡು ಮೈಸೂರು ಸರ್ಕಾರ, ಪೋಲೀಸ್ ಇಲಾಖೆಯ ಮುಖ್ಯಾಧಿಕಾರಿಗಳು ಮತ್ತು ಶ್ರೀ ದೇವರಾಯರೂ ಪತ್ರವ್ಯವಹಾರ ನಡೆಸಿ ಚರ್ಚಿಸಿ, ಪೋಲೀಸ್ ಶಿಕ್ಷಣಶಾಲೆಯಲ್ಲಿ ಕನ್ನಡ ಶೀಘ್ರಲಿಪಿ ಶಿಕ್ಷಣಶಾಖೆಯನ್ನು ಪ್ರಾರಂಭಿಸಿದ್ದು ಅಭಿನಂದನೀಯವಲ್ಲದೆ ಪೋಲೀಸ್ ಇಲಾಖೆಯ ಪ್ರೌಢಿಮೆಯನ್ನೂ ಹೆಚ್ಚಿಸಿತು. ಅಲ್ಲದೆ

ರಾಜಕೀಯ ಭಾಷಣಗಳ ಪದಶಃ ವರದಿಯ ಅವಶ್ಯಕತೆಯನ್ನೂ, ನ್ಯಾಯಾಲಯಗಳಲ್ಲಿ ಅದಕ್ಕಿರುವ ಬೆಲೆಯನ್ನೂ ಮನಗೊಳ್ಳುವಂತಾಯಿತೆಂದು ಹೇಳಬಹುದು.

ಶಿಕ್ಷಣದ ಯಶಸ್ಸು—ಮುನ್ನಡೆ

ಯಾವ ಶೀಘ್ರಲಿಪಿ ಪದ್ಧತಿಯೇ ಆಗಲಿ ಅದನ್ನು ಪೂರ್ಣವಾಗಿ ಕಲಿತು, ಯಶಸ್ವಿಯಾಗಿ ಕನ್ನಡಭಾಷಣಗಳನ್ನು ಪರಿವರ್ತಿಸಿಕೊಡುವ ಯೋಗ್ಯತೆ ಹೊಂದಿದವರಿಂದ ಅದು ಬೆಳಕಿಗೆ ಬರಬೇಕು. ಇದನ್ನು ಕಲಿತವರು ಹೆಚ್ಚಾಗಿರಲಿಲ್ಲ. ಪೋಲೀಸ್ ಇಲಾಖೆಯ ಅವಶ್ಯಕತೆಗೆ ಬೇಕಾದಷ್ಟು ಮಂದಿಯನ್ನು ಶಿಕ್ಷಣನೀಡಿ ಪಡೆಯುವ ಪರಿಸ್ಥಿತಿ ಒದಗಿತ್ತು, ಅಲ್ಲದೆ ಸರ್ಕಾರಿ ವಲಯದಲ್ಲಿ ಬೇರೆಲ್ಲೂ ಶಿಕ್ಷಣದ ವ್ಯವಸ್ಥೆ ಇಲ್ಲದ್ದರಿಂದ ವಿಧಾನಸಭೆಯ ವರದಿ ವಿಭಾಗಕ್ಕೆ ಬೇಕಾದ ಕನ್ನಡ ಶೀಘ್ರಲಿಪಿ ಬರಹಗಾರರ ಅವಶ್ಯಕತೆಯನ್ನು ಪೂರೈಸಲೂ ಈ ಶಿಕ್ಷಣವು ನೆರವಾಗಿತ್ತು. ಈ ಪರಿಸ್ಥಿತಿಯಲ್ಲಿ ಅಂದಿನ ಪೋಲೀಸ್ ಮುಖ್ಯಾಧಿಕಾರಿಗಳೂ ಮತ್ತು ಅವರ ಉಪಅಧಿಕಾರಿಗಳೂ ಶ್ರೀ ದೇವರಾಯರ ಕನ್ನಡ ಶೀಘ್ರಲಿಪಿ ಕ್ರಮವನ್ನೂ ಅದರ ಶ್ರೇಷ್ಠತೆಯನ್ನೂ ಪರೀಕ್ಷಿಸಿ ಅರಿತರು. ಅದುವರೆಗೆ ಈ ಗ್ರಂಥಕರ್ತನು ಅನೇಕ ರಾಜಕೀಯ ಭಾಷಣಗಳನ್ನು ಯಶಸ್ವಿಯಾಗಿ ಕನ್ನಡ ಶೀಘ್ರಲಿಪಿಯಲ್ಲಿ ತೆಗೆದುಕೊಂಡು, ಕನ್ನಡಕ್ಕೆ ಪರಿವರ್ತಿಸಿ ಕೊಟ್ಟ ಅಕ್ಷರಶಃ ವರದಿಯ ಆಧಾರದ ಮೇಲೆ ನಡೆದ ಕೋರ್ಟು ಮೊಖದ್ದಮೆಗಳಲ್ಲಿ ಸರ್ಕಾರಕ್ಕೆ ಉಂಟಾದ ಜಯವೇ ಈ ನಿರ್ಧಾರಕ್ಕೆ ಬರಲು ಮತ್ತು ನನ್ನನ್ನು ಅಧ್ಯಾಪಕನನ್ನಾಗಿ ಆರಿಸಲು ಕಾರಣವಾಯಿತು. ಈ ರೀತಿ ಏರ್ಪಡಿಸಿದ ಶಿಕ್ಷಣವು ಜಯಪ್ರದವೂ, ಪರಿಣಾಮಕಾರಿಯೂ ಮತ್ತು ಉಪಯುಕ್ತವಾದುದಾಗಿಯೂ ಸಾಧಿಸಲ್ಪಟ್ಟಿತು. ವರ್ಷವರ್ಷವೂ ಈ ಶಿಕ್ಷಣಶಾಲೆಯಲ್ಲಿ ಆರಿಸಲ್ಪಟ್ಟ ಪೋಲೀಸ್ ಅಧಿಕಾರಿಗಳಿಗೆ ನೀಡಿದ ಶಿಕ್ಷಣದ ಉಪಯುಕ್ತತೆಯನ್ನರಿಯಲು ಇಲಾಖಾ ಮುಖ್ಯಾಧಿಕಾರಿಗಳು ಕನ್ನಡ ಶೀಘ್ರಲಿಪಿ ಕರ್ತರಾದ ಶ್ರೀ ದೇವರಾಯರನ್ನು ಮುಖ್ಯಪರೀಕ್ಷಕರನ್ನಾಗಿ ಆಹ್ವಾನಿಸಿ ಸರ್ಕಾರಕ್ಕೆ ವರದಿಮಾಡಿದರು. ಈ ಆಹ್ವಾನವನ್ನು ಮನ್ನಿಸಿ ನಾನು ಶಿಕ್ಷಣನೀಡಿದ ಅಭ್ಯರ್ಥಿಗಳನ್ನು ವರ್ಷೇ ವರ್ಷೇ ಸೂಕ್ಷ್ಮವಾಗಿಯೂ ಸಂಪೂರ್ಣವಾಗಿಯೂ ಪರೀಕ್ಷಿಸಿ ಯಶಸ್ವಿಯಾಗಿ ತರಪೇತು ನೀಡಿದ ವಿಷಯದಲ್ಲಿ, ಮತ್ತು ಶಿಕ್ಷಣದ ಉಪಯುಕ್ತತೆ, ಅಭಿವೃದ್ಧಿ ವಿಷಯದಲ್ಲಿ ನಿರ್ದಾಕ್ಷಿಣ್ಯವಾದ ಹಾಗೂ ಉಪಯುಕ್ತವಾದ ಸಲಹೆಗಳನ್ನು ಇಲಾಖಾ ಮುಖ್ಯಾಧಿಕಾರಿಗಳಿಗೆ ನೀಡುತ್ತಾ ಬಂದರು. ಕಳೆದ ಸುಮಾರು ೨೫ ವರ್ಷಗಳಲ್ಲಿ ಪೋಲೀಸ್ ಟ್ರೈನಿಂಗ್ ಕಾಲೇಜಿನಲ್ಲಿ ಮತ್ತು ಹೊರಗೆ ನೀಡಿದ ಕನ್ನಡ ಶೀಘ್ರಲಿಪಿ ಶಿಕ್ಷಣದಲ್ಲಿ ವರ್ಷೇ ವರ್ಷೇ ಪರೀಕ್ಷೆಯಲ್ಲಿ ಉತ್ತೀರ್ಣರಾದ ಕನ್ನಡ ಶೀಘ್ರಲಿಪಿ ಬರಹಗಾರರ ಒಟ್ಟು ಸಂಖ್ಯೆ ೫೦. ಅವರ ಪೈಕಿ ಇಬ್ಬರು ವಿಧಾನಸಭೆ ಶಾಸನಸಭೆಗಳಲ್ಲಿ ಕನ್ನಡ ವರದಿಗಾರರಾಗಿ ನೇಮಕಗೊಂಡಿದ್ದಾರೆ. ಶ್ರೀ ದೇವರಾಯರು ಸುಮಾರು ೧೦ ವರ್ಷಗಳಕಾಲ ಪರೀಕ್ಷಕರಾಗಿದ್ದು ಮಾಡಿದ ಸಲಹೆಗಳಲ್ಲಿ ಕೇಂದ್ರಾಧಿಕಾರಿ

ಗಳ ಕಛೇರಿಯಲ್ಲಿ, ಅಧ್ಯಾಪಕರ ಮೇಲ್ವಿಚಾರಣೆಯಲ್ಲಿ ಪ್ರಾವೀಣ್ಯತೆ ಪಡೆದ ಕನ್ನಡ ಶೀಘ್ರಲಿಪಿ ಬರಹಗಾರರ ಶಾಖೆಯೊಂದನ್ನು ಸ್ಥಾಪಿಸಬೇಕೆಂಬುದು ಮತ್ತು ಅವರ ಹೊಣೆಗಾರಿಕೆ ಹಾಗೂ ಶ್ರಮಕ್ಕೇ ತಕ್ಕಹಾಗೆ ಸೂಕ್ತ ವೇತನ, ಸಂಭಾವನೆ ನೀಡ ಬೇಕೆಂಬುದು ಮುಖ್ಯವಾದದ್ದಾಗಿತ್ತು. ಇದನ್ನು ಕಾರ್ಯರೂಪಕ್ಕೆ ತಾರದಿದ್ದುದೊಂದು ಕೊರತೆ. ಆದರಿಂದಾಗಿ ಕಾಲಕ್ರಮೇಣ ಕನ್ನಡ ಶೀಘ್ರಲಿಪಿ ಬರಹಗಾರರ ದಕ್ಷತೆ ಮತ್ತು ಕಾರ್ಯತತ್ಪರತೆ ಇವು ಕ್ಷೀಣಿಸಲು ಅವಕಾಶವಾಯಿತು.

ಈ ಹಿನ್ನೆಲೆಯಲ್ಲಿ ಕನ್ನಡ ಶೀಘ್ರಲಿಪಿ ಶಿಕ್ಷಣವು ಅಧಿಕೃತವಾಗಿ ರೂಪುಗೊಂಡು, ಶಿಕ್ಷಣವು ಯಶಸ್ವಿಯಾಗುವುದೋ ಇಲ್ಲವೋ ಎಂಬ ಸಂಶಯವನ್ನು ಪೂರ್ಣವಾಗಿ ನಿವಾರಿಸಿ ತೆರೆಮರೆಯಲ್ಲಿದ್ದ ದೇವರಾಯರ ಕನ್ನಡ ಶೀಘ್ರಲಿಪಿ ಪದ್ಧತಿಯು ಅನುಮಾನ ಕ್ಕೆಡೆಯಿಲ್ಲದಂತೆ ದಕ್ಷತೆಗೆ ಯೋಗ್ಯವಾದದ್ದೆಂದು ಸ್ಥಾಪಿತವಾಯಿತು.

ಈ ಪದ್ಧತಿಯಲ್ಲಿನ ಗುಣದೋಷಗಳು

ಈ ಪದ್ಧತಿಯ ಪಾರಿಭಾಷಿಕ ವಿಷಯಗಳ ಬಗ್ಗೆ ಹೇಳುವುದಾದರೆ, ಇದರಲ್ಲಿ ಶಿಕ್ಷಣ ನೀಡುವಾಗ ಅನೇಕ ಲೋಪದೋಷಗಳು ಆಗಾಗ್ಗೆ ಕಂಡುಬರುತ್ತಿದ್ದು ಅವನ್ನು ಸರಿಪಡಿ ಸಲು ಶ್ರೀ ದೇವರಾಯರವರಲ್ಲಿ ಆಗಾಗ್ಗೆ ಚರ್ಚಿಸಿ ಸುಧಾರಿತ ಸೂತ್ರಗಳನ್ನು ಅಳವಡಿಸ ಲಾಗಿದೆ. ಈ ವಿಷಯಗಳಲ್ಲಿ ಶ್ರೀ ದೇವರಾಯರು ನನ್ನೊಡನೆ ಇಟ್ಟಿದ್ದ ಸುಮಾರು ೧೫ ವರ್ಷ ಕಾಲದ ನಿಕಟಸಂಪರ್ಕ, ಹತ್ತಾರು ವರ್ಷಗಳ ಕಾಲ ಅಧ್ಯಾಪಕನಾಗಿ ಗಳಿಸಿದ ಅನುಭವ, ದಿನನಿತ್ಯದ ಪಾಠಕ್ರಮದಲ್ಲಿ ಏಳುವ ಪಾರಿಭಾಷಿಕ ಸಮಸ್ಯೆ, ಅದರ ಪರಿಹಾರೋಪಾಯ, ಇವುಗಳ ಸಮ್ಮಿಲನದಿಂದ ಸ್ಫೂರ್ತಿಗೊಂಡು ಕನ್ನಡ ಶೀಘ್ರಲಿಪಿ ಯಲ್ಲಿ ನೈಪುಣ್ಯವನ್ನು ಸಂಪಾದಿಸಲು ನೆರವಾಗುವಂತೆ ಮುಂದರಿದ ಪುಸ್ತಕವೊಂದನ್ನು ರಚಿಸಬೇಕೆಂಬ ಹಂಬಲ ಮನಸ್ಸಿನಲ್ಲಿ ಮೊಳೆತು ಬೆಳೆಯಿತು. ಯಾವ ಶೀಘ್ರಲಿಪಿ ಪದ್ಧತಿಯನ್ನಾಗಲೀ ಒಂದೇ ಬಾರಿಗೆ ಪರಿಪೂರ್ಣತೆಗೆ ತರಲು ಯಾರಿಂದಲೂ ಸಾಧ್ಯವಿಲ್ಲ. ಸುಮಾರು ೧೨೦ ವರ್ಷಗಳ ಹಿಂದೆ ಕಂಡುಹಿಡಿಯಲ್ಪಟ್ಟ ಪಿಟ್‌ಮನ್ನರ ಇಂಗ್ಲಿಷು ಶೀಘ್ರಲಿಪಿ ಪದ್ಧತಿ ಕೂಡ ಹಂತ ಹಂತವಾಗಿ, ವಿವಿಧ ವಲಯಗಳಲ್ಲಿ, ಅದನ್ನರಿತ ಪ್ರತಿಭಾವಂತ ಬರಹಗಾರರಿಂದ ಸುಧಾರಿಸಲ್ಪಡುತ್ತಿದೆ. ಹೀಗಿರುವಾಗ ಶ್ರೀ ದೇವರಾಯರ ಕನ್ನಡ ಶೀಘ್ರಲಿಪಿ ಪದ್ಧತಿಯು ಸೂಕ್ತವಾದ ಮತ್ತು ಶಾಸ್ತ್ರೀಯವಾದ ಅಡಿಪಾಯದ ಮೇಲೆ ರೂಢಿಸಲ್ಪಟ್ಟಿರುವುದರಿಂದ (Sound basic Principles), ಈ ಪದ್ಧತಿಯು ಹೊರಬಂದ ಕೇವಲ ೧೨ ವರ್ಷಗಳಲ್ಲಿ ಸಾರ್ವಜನಿಕ ಉಪಯೋಗಕ್ಕೆ ಯೋಗ್ಯವಾದ ದ್ದೆಂದು ನಿರ್ಧರಿಸಲ್ಪಟ್ಟಿದೆ ಮತ್ತು ಸರ್ಕಾರದಿಂದ ಮಾನ್ಯತೆ ಪಡೆದಿದೆ.

'ತಜ್ಞ ಕನ್ನಡ ಶೀಘ್ರಲಿಪಿ ಬರಹಗಾರ' ಪುಸ್ತಕ ಪರಿಚಯ

ಈ ಪದ್ಧತಿಯಲ್ಲಿ ಶಿಕ್ಷಕನಾಗಿ ಹತ್ತಿಪ್ಪತ್ತು ವರ್ಷಗಳ ಅನುಭವದಲ್ಲಿ ನನಗೆ

ಕಂಡುಬಂದ ವಿಷಯುಗಳೆಂದರೆ ಈ ಪುಸ್ತಕದ ಮೊದಲನೇ ಭಾಗದಲ್ಲಿ ಅಲ್ಪಸ್ವಲ್ಪ ಮಾರ್ಪಾಟು ಮತ್ತು ಹೆಚ್ಚಿನ ಸೂತ್ರಗಳನ್ನು ಅನುಸರಿಸುವುದರ ಮೂಲಕ ಸಾಮಾನ್ಯ ವಿದ್ಯಾರ್ಥಿ ನಿಮಿಷಕ್ಕೆ ಸುಮಾರು ೩೦೦ ಅಕ್ಷರಗಳ ವೇಗವನ್ನು ಸುಲಭವಾಗಿ ಗಳಿಸಬಹುದಾದದ್ದು. ಆದರೆ ಎರಡನೇ ಭಾಗದಲ್ಲಿ ಕೊಟ್ಟಿರುವ ಸೂತ್ರಗಳು, ಪದ ಸಮುದಾಯಗಳು ಸಂಕ್ಷೇಪಪದಗಳು ಇವು ನಿಮಿಷಕ್ಕೆ ೨೪೦–೨೫೦ ಅಕ್ಷರಗಳ ವೇಗವನ್ನು ಸಾಮಾನ್ಯ ವಿದ್ಯಾರ್ಥಿ ಗಳಿಸಲು ಸಾಲದೆಂದು ಕಂಡುಬಂದದ್ದರಿಂದ ಹೆಚ್ಚಿನ ಪರಿಷ್ಕರಣ, ಸಂಶೋಧನೆ ನಡೆಸುವುದು ಅವಶ್ಯಕವೆಂದು ನಿರ್ಧರಿಸಲಾಯಿತು. ಅಲ್ಲಿಂದೀಚೆಗೆ ಸುಮಾರು ೧೦ ವರ್ಷಗಳ ಕಾಲ ಸತತ ಪರಿಶ್ರಮ, ಸಂಶೋಧನೆ ನಡೆಸಿ, ಒಬ್ಬ ವಿದ್ಯಾರ್ಥಿ ನಿಮಿಷಕ್ಕೆ ೨೭೦ರಿಂದ ೩೦೦ ಅಕ್ಷರಗಳ ವೇಗವನ್ನು ಗಳಿಸಿ ವಿವಿಧ ವಲಯಗಳ ಭಾಷಣಗಳನ್ನು ಯಶಸ್ವಿಯಾಗಿ ಕನ್ನಡ ಶೀಘ್ರಲಿಪಿಯಲ್ಲಿ ಬರೆದುಕೊಂಡು, ಪರಿವರ್ತಿಸಿ, ವರದಿಮಾಡಲು ಅನುಕೂಲವಾಗುವಂತೆ, ಕನ್ನಡ ಶೀಘ್ರಲಿಪಿಯಲ್ಲಿ ಪ್ರಾವೀಣ್ಯತೆಯನ್ನು ಪಡೆಯಲು 'ತಜ್ಞ ಕನ್ನಡ ಶೀಘ್ರಲಿಪಿ ಬರಹಗಾರ' ಎಂಬ ಮುಂದರಿದ ಪುಸ್ತಕವನ್ನು ಬರೆದು ಮುಗಿಸಿದೆ. ಆ ಪುಸ್ತಕವು ಶ್ರೀ ದೇವರಾಯರು ಬದುಕಿದ್ದಾಗ ಅವರಿಂದ ಪ್ರಶಂಶಿಸಲ್ಪಟ್ಟಿತು. ಅಲ್ಲದೆ ಸರ್ಕಾರ, ಸಾರ್ವಜನಿಕರು, ವಿದ್ಯಾತಜ್ಞರು, ಸಾಹಿತಿಗಳು ಮತ್ತು ಉತ್ತಮ ರಾಜಕಾರಣಿಗಳ ಮನ್ನಣೆಗೆ ಪಾತ್ರವಾಯಿತು. ಪದ್ಮಭೂಷಣ, ರಾಷ್ಟ್ರಕವಿ, ಡಾ. ಕುವೆಂಪು ಅವರು ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳಾಗಿದ್ದಾಗ ಪುಸ್ತಕದ ಹಸ್ತಪ್ರತಿಯನ್ನು ನೋಡಿ, ಅದರ ಉಪಯುಕ್ತತೆಯನ್ನು ಪ್ರಶಂಶಿಸಿ ಮುನ್ನುಡಿಯನ್ನು ನೀಡಿದ್ದಾರೆ. ಅನೇಕ ಕನ್ನಡ ಅಭಿಮಾನಿಗಳೂ, ರಾಜಕಾರಣಿಗಳೂ, ಅಧಿಕಾರಿಗಳೂ, ಇಂತಹ ಪುಸ್ತಕವೊಂದನ್ನು ಹೊರತಂದಿರುವ ಬಗ್ಗೆ ಅಚ್ಚರಿಯನ್ನೂ ಅಮಿತ ಸಂತೋಷವನ್ನೂ ವ್ಯಕ್ತಪಡಿಸಿದ್ದಾರೆ. ಸರ್ಕಾರದವರು ೧೯೬೦ರಲ್ಲೇ ಈ ಪುಸ್ತಕದ ಕಾಪಿರೈಟನ್ನು ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿ ಇಲಾಖೆಯ ಮೂಲಕ ಪಡೆದು, ಸರ್ಕಾರಿ ಮುದ್ರಣಾಲಯದಲ್ಲಿ ಈ ಪುಸ್ತಕವನ್ನು ಮುದ್ರಿಸಲು ಅನುಮತಿ ನೀಡಿದರು. ಆದರೆ ಅನೇಕ ಎಡರು ತೊಡರುಗಳಿಂದಾಗಿ ಅಲ್ಲಿ ಮುದ್ರಣಕಾರ್ಯ ४-೫ ವರ್ಷಗಳ ಕಾಲ ವಿಳಂಬವಾಗಿ ತಾಂತ್ರಿಕ ಅಡಚಣೆಗಳು ಬಂದೊದಗಿದವು. ಈಚೆಗೆ ಮೈಸೂರು ವಿಶ್ವವಿದ್ಯಾನಿಲಯದವರು ಕೃಪೆಮಾಡಿ ಈ ಪುಸ್ತಕವನ್ನು ಪ್ರಸಾರಾಂಗ ಶಾಖೆಯಲ್ಲಿ ಮುದ್ರಿಸಿ ಪ್ರಕಟಿಸುವ ಸ್ತುತ್ಯಕಾರ್ಯವನ್ನು ಕೈಕೊಂಡಿದೆ.

ಈ ಪುಸ್ತಕವು ४ ಭಾಗಗಳಿಂದ ಕೂಡಿದೆ. ಮೊದಲನೇ ಮತ್ತು ಎರಡನೇ ಭಾಗಗಳು ಉತ್ತಮ ಕನ್ನಡ ಶೀಘ್ರಲಿಪಿ ಬರಹಗಾರನಾಗಲು ಅವಶ್ಯಕತೆಗಳೇನು? ತಾನು ಹೊಂದಿರುವ ವೇಗವನ್ನುಳಿಸಿಕೊಂಡು ಉತ್ತಮ ಪಡಿಸಿಕೊಳ್ಳುವುದು ಹೇಗೆ? ಉತ್ತಮ ಕನ್ನಡ ಶೀಘ್ರಲಿಪಿಗಾರನಾಗಿ ಶಿಕ್ಷಣ ಪಡೆದ ವರದಿಗಾರನು ಸಾರ್ವಜನಿಕ ರಾಜಕೀಯ ಭಾಷಣಗಳನ್ನುಯಶಸ್ವಿಯಾಗಿ ತೆಗೆದುಕೊಂಡು ವರದಿ ಮಾಡಲು ಹೊಂದಿರಬೇಕಾದ ತಾಂತ್ರಿಕ

ತಿಳುವಳಿಕೆಯ ಮಟ್ಟ, ವರ್ಣಪದಗಳು, ಪದವರ್ಣಗಳು, ಸಂಕ್ಷೇಪರೂಪಗಳು, ರಾಜಕೀಯ ಭಾಷಣಗಳಲ್ಲಿ ಉಪಯೋಗಿಸುವ ಸಂಕ್ಷೇಪರೂಪದ ಪದಗಳು—ಪದಗಳ ಸಂಯೋಜನೆ (Phrases) ಮತ್ತು ಪದೇ ಪದೇ ಭಾಷಣಕಾರರಿಂದ ಉಪಯೋಗಿಸಲ್ಪಡುವ ವಿರೋಧಾರ್ಥಗಳನ್ನು ಸೂಚಿಸುವ ಪದಗಳು (Conflicting words), ಇವುಗಳನ್ನು ಶೀಘ್ರಲಿಪಿಯಲ್ಲಿ ಬರೆದುಕೊಳ್ಳುವ ವಿಧಾನ, ಇವೇ ಮುಂತಾದವುಗಳ ಬಗ್ಗೆ ವಿಸ್ತಾರವಾದ ವಿವರಣೆಗಳನ್ನೊಳಗೊಂಡಿದೆ. ಈ ಭಾಗವು ತರಪೇತಿ ಹೊಂದಿದ ವರದಿಗಾರರು ಭಾಷಣ ನಡೆಯುವ ಸ್ಥಳದಲ್ಲಿ ಅದನ್ನು ಯಶಸ್ವಿಯಾಗಿ ತೆಗೆದು ಕೊಳ್ಳಲು ಅನುಸರಿಸಬೇಕಾದ ಕ್ರಮಗಳ ಬಗ್ಗೆ ಸಲಹೆಗಳು ಮತ್ತು ಅವರ ವೇಗದ ಪರಿಮಿತಿ ಇವುಗಳಿಂದ ಕೂಡಿದೆ—ವಿವಿಧ ವರ್ಗದ ಪ್ರತಿಭಾವಂತ ಭಾಷಣಕಾರರ ಭಾಷಣಗಳಲ್ಲಿ ಉತ್ತಮವಾದದ್ದನ್ನು ಆರಿಸಿ ಈ ಭಾಗದಲ್ಲಿ ಉದಾಹರಣೆಗಾಗಿ ಕೊಟ್ಟಿದೆ. ಒಟ್ಟಿನಲ್ಲಿ ಈ ಪುಸ್ತಕವು ಒಬ್ಬ ತಜ್ಞ ಕನ್ನಡ ಶೀಘ್ರಲಿಪಿ ಬರಹಗಾರನಾಗಲು ಬೇಕಾದ ಅವಶ್ಯಕತೆಗಳನ್ನು ಪೂರೈಸುವುದರಲ್ಲಿ ಅನುಮಾನವಿರಲಾರದು.

ಕನ್ನಡ ಶೀಘ್ರಲಿಪಿಯನ್ನು ಕಲಿಯಲಿಚ್ಛಿಸುವವರಿಗೆ ಒಂದು ಮಾತು

ಕನ್ನಡ ಶೀಘ್ರಲಿಪಿಯನ್ನು ಎಲ್ಲರೂ ಕಲಿತು ಪ್ರಾವೀಣ್ಯತೆಯನ್ನು ಸಂಪಾದಿಸಲು ಸಾಧ್ಯವಿಲ್ಲ. ಇದನ್ನು ಕಲಿಯುವವರಿಗೆ ಕನ್ನಡ ಭಾಷೆಯಲ್ಲಿ ಒಳ್ಳೆಯ ಪಾಂಡಿತ್ಯವಿರಬೇಕು, ಅಭಿಮಾನವಿರಬೇಕು. ಕನ್ನಡ ಶೀಘ್ರಲಿಪಿಯಲ್ಲಿ ಪ್ರಥಮ ಘಟ್ಟವನ್ನು ಮುಟ್ಟಿದವರಿಗೆ ವೇಗದ ಗಳಿಕೆ ಮುಖ್ಯ. ವೇಗವನ್ನು ಗಳಿಸಲು ಸತತ ಅಭ್ಯಾಸ ಅವಶ್ಯಕ. ಪ್ರಾರಂಭದಿಂದ ಸಂಯೋಜಿತ ಅಭ್ಯಾಸ ಮಾಡಬೇಕು. ಈ ಅಭ್ಯಾಸವು ೪ ತತ್ವಗಳಿಂದ ಕೂಡಿದೆ:

೧. ಶೀಘ್ರಲಿಪಿಯ ಬರವಣಿಗೆಯ ಸಂಪ್ರದಾಯಗಳ ಮನನ ಮತ್ತು ಅದರ ಅಭ್ಯಾಸ.

೨. ಬರೆದ ಸಂಕೇತಕ್ಕೂ ಆಡಿದ ಮಾತಿಗೂ ಸಂಯೋಜನೆ.

೩. ವೇಗದ ಗುರಿಯನ್ನು ಮುಟ್ಟಲು ಅನುಸರಿಸಬೇಕಾದ ನಿಯಮಗಳು.

೪. ಯಾವ ವೇಗದಲ್ಲಿ ಮಾತುಗಳು ಹೊರಡುತ್ತವೆಯೋ ಅದೇ ಅನುಕರಣದಲ್ಲಿ ಅವನ್ನು ಶಿಘ್ರಲಿಪಿಯಲ್ಲಿ ಬರೆದುಕೊಳ್ಳುವುದು ಮತ್ತು ಕನ್ನಡಕ್ಕೆ ಪರಿವರ್ತಿಸುವುದು.

ಪ್ರಾರಂಭದಿಂದಲೂ ಸಹ ಈ ಪ್ರಮಾಣಗಳನ್ನು ಅನುಕರಿಸಿದ್ದಲ್ಲಿ ಕನ್ನಡ ಶೀಘ್ರಲಿಪಿಯ ಅಭ್ಯಾಸ ಸಾರ್ಥಕವಾಗುತ್ತದೆ. ಶೀಘ್ರಲಿಪಿಗಾರನು ಮನಸ್ಥೈರ್ಯ ಏಕಾಗ್ರಚಿತ್ತತೆಯನ್ನು ಹೊಂದಿದವನಾಗಿರಬೇಕು. ಶೀಘ್ರಲಿಪಿಯ ಅಭ್ಯಾಸಿಗೆ ಕೂಡಲೇ ತನ್ನ ಕಲಿಯುವಿಕೆಯನ್ನು ಜೀವನೋಪಾಯಕ್ಕೆ ನಿಯೋಜಿಸಬೇಕೆಂಬ ಆಸೆ ಮೂಡುತ್ತದೆ. ಇದು ಸಹಜವೇ. ಆದರೆ ಅಭ್ಯಾಸಿಯು ಶೀಘ್ರಲಿಪಿ ಪರೀಕ್ಷೆಯಲ್ಲಿ ಉತ್ತೀರ್ಣನಾದರೆ ಮಾತ್ರ ಸಾಲದು. ಮುತುವರ್ಜಿಯಿಂದ ಅಭ್ಯಾಸವನ್ನು ದಿನನಿತ್ಯ ಮುಂದುವರಿಸಿ

ಕೊಂಡು ಬರಬೇಕು. ನಿಷ್ಠೆಯಿಂದ ಅಭ್ಯಾಸ ಮಾಡುವವರಿಗೆ ಶೀಘ್ರಲಿಪಿ ಸುಲಭವಾಗಿ ಕಂಡುಬಂದು ಅವರು ಜಯಗಳಿಸುವುದರಲ್ಲಿ ಸಂದೇಹವಿಲ್ಲ.

ಕನ್ನಡ ಶೀಘ್ರಲಿಪಿ ಬೆಳವಣಿಗೆಗೆ ಸರ್ಕಾರ ಮತ್ತು ಸಾರ್ವಜನಿಕರ ಉತ್ತೇಜನ

ಇಷ್ಟೂ ಕನ್ನಡ ಶೀಘ್ರಲಿಪಿಯನ್ನು ಕಲಿಯುವ, ಕಲಿತು ಪ್ರಾವೀಣ್ಯತೆಯನ್ನು ಸಂಪಾದಿಸಲಿಚ್ಛಿಸುವವರ ಬಗ್ಗೆ ಹೇಳುವ ಮಾತಾಯಿತು. ಇನ್ನು ಕನ್ನಡ ಶೀಘ್ರಲಿಪಿಯಲ್ಲಿ ಪಾಂಡಿತ್ಯವನ್ನು ಗಳಿಸಿರುವ ಉತ್ತಮ ವರದಿಗಾರರ ಪರವಾಗಿ, ಕನ್ನಡದ ಅಭಿಮಾನಿಗಳು, ವಿದ್ಯಾತಜ್ಞರು, ಶ್ರೇಷ್ಠಸಾಹಿತಿಗಳು, ಆಡಳಿತಸೂತ್ರಗಳನ್ನು ನಿರ್ವಹಿಸುತ್ತಿರುವವರು ಮತ್ತು ಪ್ರತಿಭಾವಂತ ಭಾಷಣಕಾರರು ಇವರಲ್ಲಿ ತೋಡಿಕೊಳ್ಳುವ ಮನವಿ ಏನೆಂದರೆ, ಕನ್ನಡ ಶೀಘ್ರಲಿಪಿಯನ್ನು ಕಲಿಯುವುದೂ, ಕಲಿಸುವುದೂ ಇಂಗ್ಲಿಷಿನಷ್ಟು ಸುಲಭವಲ್ಲವೆಂಬುದು ನಿರ್ವಿವಾದವಾದ ವಿಷಯ. ಕನ್ನಡ ಶೀಘ್ರಲಿಪಿಯಲ್ಲಿ ಪಠ್ಯಪುಸ್ತಕಗಳು ಇನ್ನೂ ಹೆಚ್ಚುಹೆಚ್ಚಾಗಿ ಹುಟ್ಟಲು ಪ್ರೋತ್ಸಾಹ ನೀಡಬೇಕು. ಇತ್ತೀಚಿನ ವರ್ಷಗಳಲ್ಲಿ ಕನ್ನಡ ಸಾಹಿತ್ಯ, ಭಾಷೆ ಅಗಾಧವಾಗಿ ಬೆಳೆದಿದೆ, ಬೆಳೆಯುತ್ತಿದೆ. ಅನೇಕ ಕನ್ನಡ ಪುಸ್ತಕಗಳು ಹೊರಬಂದಿವೆ. ಆದರೆ ಕನ್ನಡ ಶೀಘ್ರಲಿಪಿ ಸಾಹಿತ್ಯ ಏನೇನೂ ಬೆಳೆದಿಲ್ಲ. ಇದೂ ಬೆಳೆಯಬೇಕು, ವೃದ್ಧಿಯಾಗಬೇಕು. ಅದಕ್ಕೆ ಸರ್ಕಾರದ ಪ್ರೋತ್ಸಾಹ ಅಗತ್ಯ. ಈ ದೆಸೆಯಲ್ಲಿ ಗ್ರಂಥಕರ್ತರೇ ವಿರಳ. ಅವರಿಗೆ ಸಾರ್ವಜನಿಕರ ಪ್ರೋತ್ಸಾಹ ವಿಪುಲವಾಗಿ ದೊರೆತರೂ, ಸರ್ಕಾರದ ಪ್ರೋತ್ಸಾಹವಿಲ್ಲದೆ, ಹಣಕಾಸಿನ ಅಭಾವದಿಂದಾಗಿ ಕನ್ನಡ ಶೀಘ್ರಲಿಪಿಯ ಪಠ್ಯಪುಸ್ತಕಗಳು ಹೊರಬರುವುದು ತುಂಬಾ ಪ್ರಯಾಸವಾಗಿದೆ. ಕನ್ನಡ ಶೀಘ್ರಲಿಪಿಯನ್ನು ಕಲಿಯುವ ಅಭ್ಯರ್ಥಿಗಳು ಅನೇಕ ಎಡರು ತೊಡರುಗಳನ್ನು ದಿನನಿತ್ಯದ ಅಭ್ಯಾಸದಲ್ಲಿ ಎದುರಿಸಬೇಕಾಗುತ್ತದೆ. ಕಲಿತದ್ದನ್ನು ಮನನ ಮಾಡಿಕೊಳ್ಳುವುದಲ್ಲದೆ, ಪದೇ ಪದೇ ಅಭ್ಯಾಸ ಮಾಡುತ್ತಿರಬೇಕು. ಕಲಿಯುವವರಿಗೆ ಅದು ನಿತ್ಯ ನೂತನ, ಕಲಿತವರಿಗೆ ಇದೇಕೊನೆ ಎಂದು ಹೇಳಲು ಸಾಧ್ಯವಿಲ್ಲ. ಶೀಘ್ರಲಿಪಿಯಲ್ಲಿ ವೇಗದ ಗಳಿಕೆ ಮುಖ್ಯ. ಅದನ್ನು ಗಳಿಸುವುದೆಂದರೆ ಬಿಸಿಲು ಕುದುರೆಯನ್ನು ಹಿಡಿಯಲು ಹೋದಂತೆ ಭಾಸವಾಗುತ್ತದೆ. ಮುಂದೆ ಮುಂದೆ ಹೋಗುತ್ತಾ ಹೋಗುತ್ತಾ ಇದೇ ಕೊನೆಯೆಂದು ನಿರ್ಧರಿಸುವುದು ಅಸಾಧ್ಯ. ಅಷ್ಟು ಅನಂತವಾಗಿದೆ ಇದರ ಆಳ. ಸಾಮಾನ್ಯ ವಿದ್ಯಾರ್ಥಿಗೆ ಕಲಿಯುತ್ತಾ ಹೋದಂತೆಲ್ಲಾ ನಿರಾಶಾಭಾವನೆ ಬೆಳೆಯುವುದು ಸಹಜ. ಕಾರಣ ಕನ್ನಡ ಶೀಘ್ರಲಿಪಿಯ ವೇಗದ ಬರವಣಿಗೆಯನ್ನು ಕನ್ನಡಕ್ಕೆ ಪರಿವರ್ತಿಸುವಾಗ ಉಂಟಾಗುವ ತೊಡಕು ಮತ್ತು ತಪ್ಪುಗಳು. ಪರಿಣಾಮ ಜುಗುಪ್ಸೆ—ನಿರಾಶಾಭಾವನೆ. ಈ ನಿರಾಶಾಭಾವನೆಯು ಅಭ್ಯಾಸಬಲವನ್ನು ವೃದ್ಧಿಪಡಿಸಿಕೊಳ್ಳಲು ಅಡ್ಡಿ ಉಂಟುಮಾಡುತ್ತದೆ. ಇದನ್ನು ನಿವಾರಿಸಿ ಆಶಾಭಾವನೆ ಉಂಟಾದರೆ ಕಲಿಯುವುದೂ ಸುಲಭ. ಅಭ್ಯಸಿಸುವುದೂ ಅಷ್ಟು ಕಷ್ಟವಾಗಿ ಕಾಣುವುದಿಲ್ಲ. ಮುಂದುವರಿಯಲು ಅನುಕೂಲ. ಅದಕ್ಕೆ

ಪೂರಕವಾಗಿ ಆಕರ್ಷಕವಾದ ವೇತನ, ಯೋಗ್ಯ ಸ್ಥಾನಮಾನ, ಇವನ್ನು ಕನ್ನಡ ಶೀಘ್ರಲಿಪಿ ಬರಹಗಾರರಿಗೆ ದೊರಕಿಸಿಕೊಡಬೇಕಾದ್ದು ಅಗತ್ಯ. ಈ ದೃಷ್ಟಿಯಿಂದ ಕನ್ನಡ ಶೀಘ್ರಲಿಪಿ ಬರಹಗಾರರಿಗೆ ಕಲಿಯುವಾಗ ೩೦೦–ರೂಪಾಯಿಗಳ ಸ್ಟೈಪೆಂಡ್ ಮತ್ತು ಕಲಿತಮೇಲೆ ಪೂರ್ಣ ಪಾಂಡಿತ್ಯ ಪಡೆದವರಿಗೆ ೩೦೦–೬೦೦ ರೂಪಾಯಿಗಳ ಪ್ರಾರಂಭಿಕ ವೇತನ, ಭತ್ಯ, ಇವುಗಳನ್ನು ನಿಗಧಿಮಾಡಬೇಕಾದ್ದು ಯುಕ್ತ, ಅವಶ್ಯಕ. ಯಾಕೆಂದರೆ ಕನ್ನಡ ಶೀಘ್ರಲಿಪಿಯನ್ನು ಯಶಸ್ವಿಯಾಗಿ ಕಲಿತಮೇಲೂ ತಾನು ಪಡೆದಿರುವ ಜ್ಞಾನಮಟ್ಟವನ್ನು ಪ್ರತಿದಿನವೂ ಬಿಡದೆ ನಿರಂತರ ಅಭ್ಯಾಸದಿಂದ ಉಳಿಸಿಕೊಂಡು ಬರಬೇಕಾದ್ದು ಮುಖ್ಯ. ಈ ಅಭ್ಯಾಸವನ್ನು ಉಳಿಸಿಕೊಂಡು ದಕ್ಷತೆಯನ್ನು ಕಾಪಾಡಿಕೊಂಡು ಮುನ್ನಡೆಯಲು ಪ್ರಶಸ್ತಿಗಳೂ, ಉತ್ತಮ ಸ್ಥಾನಮಾನ, ಆಕರ್ಷಕ ಸಂಬಳ—ಭತ್ಯಗಳೂ ಸಹಾಯಕವಾಗುತ್ತವೆ. ಕನ್ನಡದ ಮುನ್ನಡೆಗೆ ಪೂರಕವಾಗಿ ಕನ್ನಡ ಶೀಘ್ರಲಿಪಿಯೂ ಮುನ್ನಡೆಯುತ್ತದೆ. ಪ್ರಕೃತದಲ್ಲಿ ಈರೀತಿ ವ್ಯವಸ್ಥೆ ಇಲ್ಲದಿರುವುದೇ ಕನ್ನಡ ಶೀಘ್ರಲಿಪಿಯನ್ನು ಕಲಿಯಲು ಹೆಚ್ಚುಮಂದಿ ಮುಂದೆ ಬಾರದಿರುವುದಕ್ಕೆ ಮುಖ್ಯ ಕಾರಣ.

ಒಂದು ದೃಷ್ಟಿಯಲ್ಲಿ ನೋಡುವುದಾದರೆ, ಈ ಕನ್ನಡ ಶೀಘ್ರಲಿಪಿ ಶಿಕ್ಷಣ ವ್ಯವಸ್ಥೆಯು 'ಅವಶ್ಯಕತೆ ಮತ್ತು ಪೂರೈಕೆ' (Demand supply) ತತ್ವಕ್ಕನುಗುಣವಾಗಿ ನಡೆದುಕೊಂಡುಬಂದಿದೆ. ೩೦ ವರ್ಷಗಳ ಇತಿಹಾಸ, ಚಾರಿತ್ರಿಕ ಹಿನ್ನೆಲೆ ಇದನ್ನು ಸಿದ್ದಪಡಿಸುತ್ತದೆ. ಸರ್ಕಾರದಿಂದ ಹೆಚ್ಚಿನ ಪ್ರೋತ್ಸಾಹ ದೊರೆತಾಗ ಮಾತ್ರ ಕನ್ನಡ ಶೀಘ್ರಲಿಪಿ ಶಿಕ್ಷಣ ನಡೆದಿದೆ. ಅಭ್ಯರ್ಥಿಗಳು ಮುಂದೆಬಂದಿದ್ದಾರೆ, ಬಂದಾರು. ಶಿಕ್ಷಣವ್ಯವಸ್ಥೆ ಕನ್ನಡ ಶೀಘ್ರಲಿಪಿ ಬರಹಗಾರರ ಅವಶ್ಯಕತೆಯನ್ನವಲಂಬಿಸಿದೆ. ಸರ್ಕಾರಿವಲಯದಲ್ಲಿ ವಿದ್ಯಾಭ್ಯಾಸದ ಇಲಾಖೆಯವರು ಕನ್ನಡ ಶೀಘ್ರಲಿಪಿಯಲ್ಲಿ ಶಾಶ್ವತವಾದ ಶಿಕ್ಷಣವ್ಯವಸ್ಥೆಯನ್ನು ಏರ್ಪಡಿಸದೆ ಕೇವಲ ಪರೀಕ್ಷೆಯನ್ನು ನಡೆಸುವ ವ್ಯವಸ್ಥೆಯನ್ನು ಮುಂದುವರಿಸಿಕೊಂಡು ಬರುತ್ತಿರುವುದರಿಂದ ಪರೀಕ್ಷೆಗೆ ಕೂರಲು ಅಭ್ಯರ್ಥಿಗಳೇ ಇಲ್ಲದ ಪರಿಸ್ಥಿತಿ ಒದಗಿಬಂದಿದೆ. ಇದು ತೀರಾ ಶೋಚನೀಯ. ಖಾಸಗೀ ವಲಯದಲ್ಲಿ, ಮುಖ್ಯವಾಗಿ ಪತ್ರಿಕಾವೃತ್ತಿಯಲ್ಲಿರುವ ವರದಿಗಾರರು, ಉಪಸಂಪಾದಕರು, ಇವರಿಗೆ ಅವರ ವೃತ್ತಿಯಲ್ಲಿ ಹೆಚ್ಚಿನ ದಕ್ಷತೆ ಯಶಸ್ಸು ಗಳಿಸಲು ಕನ್ನಡ ಶೀಘ್ರಲಿಪಿಯ ತಿಳುವಳಿಕೆ, ತಕ್ಕುಮಟ್ಟಿನ ಜ್ಞಾನ ಅವಶ್ಯಕ. ಅದಕ್ಕಾಗಿ ಪ್ರತ್ಯೇಕ ಶಿಕ್ಷಣ ವ್ಯವಸ್ಥೆ ಏರ್ಪಡಿಸಿದರೆ ಉತ್ತಮ. ಸಾಹಿತಿಗಳು ಪಠ್ಯಪುಸ್ತಕಗಳನ್ನು ರಚಿಸುವ ಶಿಕ್ಷಣವೇತ್ತರು, ಇವರೆಲ್ಲರಿಗೂ ಕನ್ನಡ ಶೀಘ್ರಲಿಪಿಯ ಅವಶ್ಯಕತೆ, ಬಳಕೆ ಹೆಚ್ಚಾಗಿದೆ.

ಕನ್ನಡವನ್ನು ಅಧಿಕೃತ ಭಾಷೆಯನ್ನಾಗಿ ಜಾರಿಗೆ ತರಲು ಪೂರ್ವಭಾವಿ ಸಿದ್ಧತೆಗಳ ಅಂಗವಾಗಿ ಸರ್ಕಾರದ ಸೇವೆಗೆ ಕನ್ನಡ ಶೀಘ್ರಲಿಪಿ ಬರಹಗಾರರ ಅವಶ್ಯಕತೆ, ಶಿಕ್ಷಣ ಮತ್ತು ನಿರ್ದೇಶನ

ಈ ಚಾರಿತ್ರಿಕ ಹಿನ್ನಲೆಯ ಆಧಾರದಿಂದ ವಿಮರ್ಶಿಸುವುದಾದರೆ, ಕನ್ನಡ ಶೀಘ್ರಲಿಪಿ

ಶಿಕ್ಷಣವು ಸರ್ಕಾರದ ಅವಶ್ಯಕತೆಗನುಗುಣವಾಗಿ, ಪರಿಸ್ಥಿತಿಯ ಒತ್ತಡದಿಂದಾಗಿ, ಎಷ್ಟು ಮಂದಿ ಶೀಘ್ರಲಿಪಿಗಾರರು ಬೇಕೋ ಅಷ್ಟು ಮಂದಿಯನ್ನು ಮಾತ್ರಾ ತಯಾರಿಸುವುದರಲ್ಲಿ ಸೀಮಿತಗೊಂಡಿತ್ತೆಂದು ತಿಳಿದು ಬರುತ್ತದೆ. ಆದರೆ ಈಗ ಸರ್ಕಾರದವರು ಕನ್ನಡವನ್ನು ರಾಜ್ಯಭಾಷೆಯನ್ನಾಗಿ ಘೋಷಿಸಿರುವುದರಿಂದ ಹಾಗೂ ಕನ್ನಡದಲ್ಲೇ ಎಲ್ಲ ವ್ಯವಹಾರಗಳೂ ನಡೆಯಬೇಕಾಗಿರುವುದರಿಂದ, ಹೆಚ್ಚು ಮಂದಿ ಕನ್ನಡ ಶೀಘ್ರಲಿಪಿ ಬರಹಗಾರರ ಅವಶ್ಯಕತೆ ಇದೆಯೆಂಬುದು ನಿರ್ವಿವಾದವಾದವಿಷಯ. ಈ ವಿಷಯದಲ್ಲಿ ಸರ್ಕಾರವೇ ಆಸ್ಥೆವಹಿಸಿ ತನ್ನ ಅವಶ್ಯಕತೆಯ ಪೂರೈಕೆಗೆ, ಕನ್ನಡ ಶೀಘ್ರಲಿಪಿ ಬರಹಗಾರರ ಶಿಕ್ಷಣ ಸಂಶೋಧನೆಗಳಿಗೆ, ಹೆಚ್ಚಿನ ಆದ್ಯತೆ ನೀಡಬೇಕಾದ ಪರಿಸ್ಥಿತಿ ಒದಗಿಬಂದಿದೆ. ಸರ್ಕಾರದವರು ಕನ್ನಡವನ್ನು ಅಧಿಕೃತ ಭಾಷೆಯನ್ನಾಗಿ ಘೋಷಿಸಿ ಸುಮಾರು ೪–೫ ವರ್ಷಗಳಾಯಿತು. ಈಗ ತಾಲ್ಲೂಕು ಮಟ್ಟದಲ್ಲಿ ಇದನ್ನು ಜಾರಿಗೆ ತರುವ ಪ್ರಯತ್ನ ನಡೆದಿದೆ. ಜಿಲ್ಲಾಮಟ್ಟದಲ್ಲಿ, ಕೇಂದ್ರ ಮಟ್ಟದಲ್ಲಿ ಇದನ್ನು ಜಾರಿಗೆ ತರಲು ಕಾತರರಾಗಿದ್ದಾರೆ. ಅದಕ್ಕಾಗಿ ಪೂರ್ವಸಿದ್ಧತೆಗಳನ್ನು ಕೈಕೊಳ್ಳುವ ಕಾರ್ಯ ಸ್ವಲ್ಪ ಸ್ವಲ್ಪವಾಗಿ ಮುಂದುವರಿಯುತ್ತಿದೆ. ಈ ಸಂದರ್ಭದಲ್ಲಿ ಅನೇಕ ಮಂದಿ ಕನ್ನಡ ಶೀಘ್ರಲಿಪಿ ಬರಹಗಾರರ ಅವಶ್ಯಕತೆ ಇದೆಯೆಂಬ ವಾದವನ್ನು ಸರ್ವರೂ ಒಪ್ಪಿದ್ದಾರೆ. ಪ್ರಕೃತದಲ್ಲಿ ಕನ್ನಡ ಶೀಘ್ರಲಿಪಿಯಲ್ಲಿ ಪ್ರಾವೀಣ್ಯತೆಯನ್ನು ಪಡೆದವರು ತೀರ ವಿರಳ. ಈ ಪರಿಸ್ಥಿತಿಯನ್ನು ಕೂಲಂಕಷವಾಗಿ ಚರ್ಚಿಸಿ, ಜಿಲ್ಲಾ ಮತ್ತು ಕೇಂದ್ರ ಮಟ್ಟದಲ್ಲಿ ಕನ್ನಡವನ್ನು ಆಡಳಿತ–ವ್ಯವಹಾರ ಭಾಷೆಯನ್ನಾಗಿ ಮಾಡಿ ಜಾರಿಗೆ ತರಬೇಕಾದರೆ ನೂರಾರು ಮಂದಿ ಕನ್ನಡ ಶೀಘ್ರಲಿಪಿ ಬರಹಗಾರರೂ, ಕನ್ನಡ ಟೈಪಿಸ್ಟುಗಳೂ ಅಗತ್ಯವೆಂದು ವಿದ್ಯಾತಜ್ಞರೂ, ಕನ್ನಡ ಅಭಿಮಾನಿಗಳೂ, ಶಾಸಕರೂ ಮತ್ತು ಕನ್ನಡ ಶೀಘ್ರಲಿಪಿಗೆ ಉತ್ತೇಜನ ನೀಡಿದವರೂ ಆದ ಅನೇಕ ಮಹನೀಯರು ಸರ್ಕಾರಕ್ಕೆ ಮನವರಿಕೆ ಮಾಡಿಕೊಟ್ಟಿದ್ದಾರೆ. ಅವರಲ್ಲಿ ಮುಖ್ಯವಾಗಿ ಡಿ. ಹೆಚ್. ಚಂದ್ರಶೇಖರಯ್ಯನವರು ಮಾನ್ಯ ಮುಖ್ಯಮಂತ್ರಿಗಳಿಗೆ, ವಿದ್ಯಾ ಮಂತ್ರಿಗಳಿಗೆ, ಹಣ ಕಾಸಿನ ಮಂತ್ರಿಗಳಿಗೆ ಮತ್ತು ವಿಶ್ವವಿದ್ಯಾನಿಲಯದ ಉಪಕುಲಪತಿಗಳಿಗೂ ಸಹ ಸುದೀರ್ಘ ಪತ್ರವೊಂದನ್ನು ಜೂನ್ ೧೯೬೮ರಲ್ಲೇ ಬರೆದಿದ್ದಾರೆ. ಅವರ ಅಭಿಪ್ರಾಯದಲ್ಲಿ ದೇಶಾದ್ಯಂತ ಸರ್ಕಾರದ ಸೇವೆಗ ಕನಿಷ್ಠಪಕ್ಷ ೭೦೦-೮೦೦ ಮಂದಿ ಕನ್ನಡ ಶೀಘ್ರಲಿಪಿ ಬರಹಗಾರರು ಅಗತ್ಯವೆಂದು ಸೂಚಿಸಿದ್ದಾರೆ. ಈ ಅಭಿಪ್ರಾಯವನ್ನು ಮೈಸೂರು ವಿಶ್ವವಿದ್ಯಾನಿಲಯದವರೂ ಪುಷ್ಟೀಕರಿಸಿದ್ದಾರೆ. ಸುಮಾರು ೧೦ ವರ್ಷಗಳ ಹಿಂದೆಯೇ ನನ್ನ ಪುಸ್ತಕಕ್ಕೆ ಮುನ್ನುಡಿಯನ್ನು ಕೊಟ್ಟಿರುವ ಪದ್ಮಭೂಷಣ ಡಾ. ಕುವೆಂಪುರವರು ಈ ಅಭಿಪ್ರಾಯವನ್ನು ಪುಷ್ಟೀಕರಿಸಿ ಕನ್ನಡವನ್ನು ಅಧಿಕೃತ ಭಾಷೆಯನ್ನಾಗಿ ಮಾಡಿ ಮತ್ತು ಅದನ್ನು ದೇಶ ಭಾಷಾ ಮಾಧ್ಯಮವನ್ನಾಗಿ ಮಾಡಿ ವಿದ್ಯಾಸುಧಾರಣೆ, ವಿದ್ಯಾಪ್ರಗತಿಯನ್ನು ಸಾಧಿಸಬೇಕಾದ್ದು ಅನಿವಾರ್ಯವಾಗುತ್ತದೆಂದೂ, ಅದನ್ನು ಜಾರಿಗೆ ತರಲು ಈ ರೀತಿ ಪೂರ್ವಸಿದ್ಧತೆಗಳು ಅವಶ್ಯಕವೆಂದೂ ಸ್ಪಷ್ಟಪಡಿಸಿ ಭವಿಷ್ಯ ಚಿತ್ರವನ್ನು

ರೂಪಿಸಿ ಸರ್ಕಾರದ ಮುಂದಿಟ್ಟಿದ್ದಾರೆ. ಅಲ್ಲದೆ ವಿದ್ಯಾಧುರೀಣರೂ, ಕನ್ನಡ ಭಾಷಾಭಿಮಾನಿಗಳೂ, ಕನ್ನಡ ನಾಡಿನ ಸ್ಥಾಪಕರಲ್ಲಿ ಪ್ರಮುಖರೂ ಆದ ಡಾ. ದಿವಾಕರ ರಂಗರಾವ್‌ರವರು ಕಳೆದ ಕನ್ನಡ ರಾಜ್ಯೋತ್ಸವದ ಸಮಾರಂಭ ಒಂದರಲ್ಲಿ ನೀಡಿದ ಭಾಷಣದಲ್ಲಿ ಕನ್ನಡ ಶೀಘ್ರಲಿಪಿ ಬರಹಗಾರರ ಶಿಕ್ಷಣ ವ್ಯವಸ್ಥೆಯನ್ನೇರ್ಪಡಿಸುವ ಬಗ್ಗೆ ಪ್ರಸ್ತಾಪಿಸಿದ್ದಾರೆ. ಪ್ರೊ. ದೇ. ಜವರೇಗೌಡರವರೂ, ಡಾ. ಪ್ರಭುಶಂಕರ್‌ರವರೂ, ಪ್ರೊ. ರಂ. ಶ್ರೀ. ಮುಗುಳಿಯವರೂ, ಶ್ರೀಮತಿ ಎಂ. ಆರ್. ಲಕ್ಷ್ಮಮ್ಮನವರೂ ಮತ್ತು ಶ್ರೀಮತಿ ಪಿ. ಆರ್. ಜಯಲಕ್ಷ್ಮಮ್ಮನವರೂ ಈ ಅಭಿಪ್ರಾಯವನ್ನು ಪುಷ್ಟೀಕರಿಸಿದ್ದಾರೆ, ಮತ್ತು ತಜ್ಞರ ಸಲಹೆ ಪಡೆದು ಯೋಜನೆಯೊಂದನ್ನು ತಯಾರಿಸಿ ಸರ್ಕಾರಕ್ಕೆ ಈ ಹಿಂದೆಯೇ ಸಲ್ಲಿಸಿದ್ದಾರೆ. ಸರ್ಕಾರದವರೂ ಈ ವಾದವನ್ನು ಪುಷ್ಟೀಕರಿಸುವರಾದರೂ, ಆ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ಅಗತ್ಯ ಹಣಕಾಸನ್ನು ಒದಗಿಸಿ ಸೂಕ್ತ ಕಾರ್ಯಕ್ರಮ ಕೈಕೊಳ್ಳದಿರುವುದು ನಿರಾಶಾದಾಯಕವಾಗಿದೆ. ಅಂತೂ ಇಂದಿಲ್ಲ ನಾಳೆ ಈ ಯೋಜನೆಗಳನ್ನು ಕಾರ್ಯಗತಗೊಳಿಸಲೇಬೇಕಾದ್ದು ಅಗತ್ಯ, ಅವಶ್ಯಕ. ಪ್ರಕೃತ ಪರಿಸ್ಥಿತಿಯಲ್ಲಿ ಕನ್ನಡ ಶೀಘ್ರಲಿಪಿ ಬರಹಗಾರರ ತೀವ್ರ ಅಭಾವವಿರುವ ಮತ್ತು ಕನ್ನಡ ಶೀಘ್ರಲಿಪಿಯಲ್ಲಿ ಅಧಿಕೃತ ಶಿಕ್ಷಣ ಎಲ್ಲೂ ಇಲ್ಲದಿರುವ ಪರಿಸ್ಥಿತಿಯಲ್ಲಿ ೭೦೦–೮೦೦ ಮಂದಿ ಕನ್ನಡ ಶೀಘ್ರಲಿಪಿ ಬರಹಗಾರರನ್ನು ತಯಾರಿಸುವುದು ಹೇಗೆಂಬುದು ಸರ್ಕಾರದವರಿಗೂ ದೊಡ್ಡ ಸಮಸ್ಯೆಯಾಗಿ ಪರಿಣಮಿಸಿದೆ. ಈ ರೀತಿ ಪೂರ್ವಭಾವೀ ಸಿದ್ಧತೆ ಅಗತ್ಯವೆಂದು ಮಾನ್ಯ ಮುಖ್ಯಮಂತ್ರಿಗಳೂ, ವಿದ್ಯಾಮಂತ್ರಿಗಳೂ ಒಪ್ಪಿದ್ದಾರೆ. ಕಳೆದ ಕನ್ನಡ ರಾಜ್ಯೋತ್ಸವದ ದಿನದಂದು ಮುಖ್ಯಮಂತ್ರಿಗಳು ಬೆಂಗಳೂರು ಪುರಭವನದಲ್ಲಿ ನಡೆದ ಸಮಾರಂಭದ ಅಧ್ಯಕ್ಷ ಭಾಷಣದಲ್ಲಿ ಈ ವಿಷಯವನ್ನು ಉಲ್ಲೇಖಿಸಿದ್ದಾರೆ. ಅಂದಮೇಲೆ, ಈ ಗುರಿಯನ್ನು ಹಂತಹಂತವಾಗಿ ಸಾಧಿಸಬೇಕಾಗಿದೆ. ಮೊದಲು ಅಗತ್ಯವಾದಷ್ಟು ಮಂದಿ ಕನ್ನಡ ಶೀಘ್ರಲಿಪಿ ಅಧ್ಯಾಪಕರನ್ನು ತಯಾರಿಸಿಟ್ಟುಕೊಳ್ಳಬೇಕು. ಈ ದೆಸೆಯಲ್ಲಿ ಮೈಸೂರು ವಿಶ್ವವಿದ್ಯಾನಿಲಯದವರು ಯೋಜನೆಯೊಂದನ್ನು ತಯಾರಿಸಿ ಸರ್ಕಾರದ ಮಂಜೂರಾತಿಗೆ ಕಳುಹಿಸಿದ್ದಾರೆಂದು ತಿಳಿದು ಬಂದಿದೆ. ಈ ಯೋಜನೆಗೆ ಸರ್ಕಾರ ಹಣಕಾಸನ್ನೊದಗಿಸಿ ಮಂಜೂರಾತಿ ನೀಡಬೇಕಾಗಿದೆ. ಇವರನ್ನು ಮೊದಲು ತಯಾರಿಸಿಟ್ಟುಕೊಂಡು, ನಂತರ ಅವರ ಮೂಲಕ ಬೃಹತ್ ಸಂಖ್ಯೆಯಲ್ಲಿ ಬೇಕಾಗುವ ಕನ್ನಡ ಶೀಘ್ರಲಿಪಿ ಬರಹಗಾರರನ್ನು ಹಂತ ಹಂತವಾಗಿ ತಯಾರಿಸಿ ಸರ್ಕಾರದ ಸೇವೆಗೆ ನಿಯೋಜಿಸಿಕೊಳ್ಳಬಹುದು. ಮುಂದೆ ಗಣನೀಯವಾದ ಸಂಖ್ಯೆಯಲ್ಲಿ ಕನ್ನಡ ಶೀಘ್ರಲಿಪಿಗಾರರು ಹೊರಬಂದ ಮೇಲೆ, ಕಾರ್ಯದಕ್ಷತೆಯನ್ನು ಕಾಪಾಡಿಕೊಂಡು ಬರುವ ದೃಷ್ಟಿಯಿಂದ (೧) 'ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ವಿಭಾಗ' (೨) 'ಭಾಷಣಗಳ ಅಧ್ಯಯನ ಮತ್ತು ಸಂಶೋಧನಾ ವಿಭಾಗ' ಮತ್ತು (೩) 'ವರದಿ ವಿಭಾಗ' ಎಂಬ ೩ ಪ್ರತ್ಯೇಕ ವಿಭಾಗಗಳನ್ನು ವಿಧಾನ ಸೌಧದಲ್ಲಿ ಸ್ಥಾಪಿಸಿ, ಒಂದಕ್ಕೊಂದಕ್ಕೆ ನಿಕಟ ಸಂಪರ್ಕವನ್ನಿಟ್ಟುಕೊಂಡು ದಕ್ಷತೆಯಿಂದ ಕೆಲಸ ನಡೆಯುವ

ವ್ಯವಸ್ಥೆಯೊಂದನ್ನು ಏರ್ಪಡಿಸುವುದು ಅಗತ್ಯ. ಹಾಗೆ ಮಾಡುವುದಾದರೆ ನಾಡಿನ ಸೇವೆಗೆ ಬೇಕಾದಷ್ಟು ಮಂದಿ ಕನ್ನಡ ಶೀಘ್ರಲಿಪಿ ಬರಹಗಾರರನ್ನೂ ಕನ್ನಡ ಟೈಪಿಸ್ಟು ಗಳನ್ನೂ ಇನ್ನು ೫-೬ ವರ್ಷಗಳಲ್ಲಿ ಸಿದ್ಧಗೊಳಿಸಿ, ಕನ್ನಡವನ್ನು ರಾಜ್ಯಾದ್ಯಂತ ಅಧಿಕೃತ ಭಾಷೆಯನ್ನಾಗಿ ಮಾಡಿ, ಆಡಳಿತ ಗದ್ದುಗೆಯಲ್ಲಿ ಕೂರಿಸಲು ಸಾಧ್ಯವಾಗುವುದರಲ್ಲಿ ಸಂದೇಹವಿಲ್ಲ. ಅದಕ್ಕೆ ಬೇಕಾದ ಪೂರ್ವಸಿದ್ಧತೆಗಳಲ್ಲಿ ಇದು ಮುಖ್ಯವಾದದ್ದು.

ಇಂತಹ ವ್ಯವಸ್ಥೆಗೆ ಹಣಕಾಸಿನ ನೆರವು ನೀಡುವ ದೃಷ್ಟಿಯಲ್ಲಿ ಕೇಂದ್ರ ಸರ್ಕಾರ ದವರು ಕನ್ನಡ ಭಾಷಾಭಿವೃದ್ಧಿಗೆ ನೀಡಿರಬಹುದಾದ ೧ಕೋಟಿ ರೂಪಾಯಿಗಳಲ್ಲಿ ಶೇಕಡಾ ೨೦%ರಷ್ಟನ್ನು ಕನ್ನಡ ಶೀಘ್ರಲಿಪಿ ಶಿಕ್ಷಣ, ಅಧ್ಯಯನ, ಸಂಶೋಧನೆಗಳಿಗೆ ಮುಡುಪಾ ಗಿಟ್ಟುಕೊಂಡು, ವಾರ್ಷಿಕ ವೆಚ್ಚವನ್ನು ಸರ್ಕಾರ ವಹಿಸುವುದಾದರೆ, ಈ ಯೋಜನೆ ಗಳನ್ನು ಕಾರ್ಯಗತಗೊಳಿಸಲು ಸುಲಭ ಸಾಧ್ಯವಾಗುವುದು. ಸರ್ಕಾರದ ಮುಂದಿರುವ ಈ ಯೋಜನೆಗಳನ್ನು ಕೂಡಲೇ ಜಾರಿಗೆ ತರುವ ಏರ್ಪಾಟು ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

ಚಿ. ನ. ಮಂಗಳ

ಬೆಂಗಳೂರು-19
609

ಮಹಿಳೆಯರ ಕೊಡುಗೆ

ಇಪ್ಪತ್ತೈದು ವರುಷಗಳಿಗಿಂತ ಹಿಂದೆ

ಸೃಷ್ಟಿಯ ಒಂದು ಭಾಗವಾಗಿ ಜೀವನದ ಎಲ್ಲ ರಂಗಗಳನ್ನೂ ಅಲಂಕರಿಸಿರುವಂತೆ ಮಹಿಳೆ ಸಾಹಿತ್ಯರಂಗವನ್ನೂ ಅಲಂಕರಿಸಿದ್ದಾಳೆ. ಅಲ್ಲಿ ಬಾಳಿ ಬೆಳಗಿದ್ದಾಳೆ. ತನ್ನ ಕಾಣಿಕೆಯನ್ನು ಸಲ್ಲಿಸಿದ್ದಾಳೆ. ಹೋಮರ್, ಕಾಲಿದಾಸ, ಷೇಕ್ಸ್‌ಪಿಯರ್, ಮಿಲ್ಟನ್ ಇವರಿಗೆ ಸರಿಸಮನಾದ 'ಮಹಿಳೆ'ಯನ್ನು ವಿಶ್ವಸಾಹಿತ್ಯ ಇದುವರೆಗೂ ಕಂಡಿಲ್ಲವಾದರೂ ಉತ್ತಮ ಸಾಹಿತ್ಯವನ್ನು ಬರೆದ ಮಹಿಳೆಯರು ಅನೇಕರಿದ್ದಾರೆ. ವಿಶ್ವಸಾಹಿತ್ಯದಲ್ಲಿ ಕಾಣುವ ಸತ್ಯವನ್ನೇ ನಾವು ಕನ್ನಡ ಸಾಹಿತ್ಯದಲ್ಲೂ ಕಾಣುತ್ತೇವೆ. ಪಂಪ, ರನ್ನ, ರತ್ನಾಕರವರ್ಣಿಗಳಿಗೆ ಏಕೆ ಬೇಂದ್ರೆ, ಕುವೆಂಪು, ಪು.ತಿ.ನ. ಇವರಿಗೆ ಸರಿಸಮನಾದ ಕವಯಿತ್ರಿಯಿಲ್ಲ. ಹತ್ತನೆಯ ಶತಮಾನದಲ್ಲಿದ್ದ ರಾಜಶೇಖರನೇನೋ ತನ್ನ ಕಾವ್ಯ ಮೀಮಾಂಸೆಯಲ್ಲಿ "ಪುರುಷರಂತೆಯೇ ಮಹಿಳೆಯರೂ ಕವಯಿತ್ರಿಯರಾಗಬಲ್ಲರು. ರಾಜಕುಮಾರಿಯರು, ಮಂತ್ರಿಕುಮಾರಿಯರು, ದೇವದಾಸಿಯರು, ಶಾಸ್ತ್ರವಿಶಾರದರಾಗಿರುವುದರ ಜೊತೆಗೆ ಕಾವ್ಯಕೋವಿದೆಯರಾಗಿರುವುದೂ ಪ್ರತ್ಯಕ್ಷವಾಗಿ ಕಂಡುಬರುವುದು" ಎಂದಿದ್ದಾನೆ. ಕಾಳಿದಾಸನಿಗೆ ಸರಿಸಮನೆಂದು ಹೊಗಳಲ್ಪಟ್ಟ 'ವಿಜಯಾಂಕ,' ಕುಮಾರ ಕಂಪಣ್ಣನ ಪತ್ನಿ 'ಗಂಗಾದೇವಿ' ಇವರಿಬ್ಬರೂ ಸಂಸ್ಕೃತದಲ್ಲಿ ಕಾವ್ಯವನ್ನು ರಚಿಸಿದರು. ಇವರಿಬ್ಬರನ್ನು ಬಿಟ್ಟರೆ ಕನ್ನಡನಾಡಿನ ಮಹಿಳಾ ಸಾಹಿತ್ಯ ಆರಂಭವಾದದ್ದು ಕಂತಿಯಿಂದ. ಇದುವರೆಗೂ ಉಪಲಬ್ಧವಾಗಿರುವ ಆಧಾರಗ್ರಂಥಗಳ ಪ್ರಕಾರ ಕನ್ನಡ ಸಾಹಿತ್ಯಕ್ಕೆ ಮಹಿಳೆಯರ ಕೊಡುಗೆ ಆರಂಭವಾದದ್ದು ೧೧೦೦ರಲ್ಲಿ. ದ್ವಾರಸಮುದ್ರದ ಬಲ್ಲಾಳರಾಯನ ಆಸ್ಥಾನದಲ್ಲಿದ್ದು "ಅಭಿನವ ವಾಗ್ದೇವಿ" ಎಂದು ಹೆಸರು ಪಡೆದ 'ಕಂತಿ,' ವಿಜಯನಗರದ 'ತಿರುಮಲಾಂಬೆ', ಹದಿಬದೆಯ ಧರ್ಮವನ್ನು ರಚಿಸಿದ 'ಸಂಚಿಯ ಹೊನ್ನಮ್ಮ', ವಚನಕಾರ್ತಿ 'ಅಕ್ಕಮಹಾದೇವಿ', ಭಕ್ತಕವಿಯಿತ್ರಿ 'ಹೆಳವನಕಟ್ಟೆ ಗಿರಿಯಮ್ಮ'—ಇವರೆಲ್ಲ ಮನಸ್ಸಿನಲ್ಲಿ ಮೂಡಿದ ಭಾವವನ್ನು ರಸದ ಹೊನಲನ್ನಾಗಿ ಹರಿಸಿ ಕನ್ನಡ ಸಾಹಿತ್ಯಕ್ಕೆ ತಮ್ಮ ಕಾವ್ಯಕಾಣಿಕೆಯನ್ನು ಅರ್ಪಿಸಿದರು. ಇವರ ಕಾವ್ಯಧಾರೆ ಮಹಾಕವಿ ವಾಣಿಯಾಗದಿರಬಹುದು. ಮಹಾಕಾವ್ಯದ ಘನ

ವಿಸ್ತಾರವಾಗಲಿ, ವ್ಯಾಪಕತೆಯಾಗಲಿ ಇರದಿರಬಹುದು. ಆದರೆ ಅಕ್ಕನ ವಚನಗಳಲ್ಲೂ ಹೊನ್ನಮ್ಮನ ಒಲುಮೆಯ ನುಡಿಯಲ್ಲೂ ತುಂಬುಹೃದಯದ ಸುಂದರ ಸೌಮ್ಯತೆಯಿದೆ. ಇವರ ಕಾವ್ಯಧಾರೆ ವಾಸ್ತವಿಕತೆ ಹಾಗೂ ಆದರ್ಶಗಳ ಸಂಗಮ.

ಹನ್ನೆರಡನೆಯ ಶತಮಾನದಲ್ಲಿ ಆರಂಭವಾದ ಕನ್ನಡನಾಡಿನ ಮಹಿಳೆಯರ ಕೊಡುಗೆ ಎಂದೂ ನಿಂತಿಲ್ಲ. ಇಪ್ಪತ್ತನೆಯ ಶತಮಾನದಲ್ಲಿ ಸ್ವಾತಂತ್ರ್ಯಪೂರ್ವವೂ ಅದರ ಅನಂತರವೂ ಕನ್ನಡ ಸಾಹಿತ್ಯಕ್ಕೆ ಮಹಿಳೆಯರು ತಮ್ಮ ಕಾಣಿಕೆಯನ್ನು ನೀಡಿದ್ದಾರೆ.

ಈ ಶತಮಾನದ ಆರಂಭದಲ್ಲಿಯೇ ಸಾಹಿತ್ಯ ರಚನೆಯನ್ನು ಕೈಗೊಂಡು ಮಹಿಳೆಯರ ಏಳಿಗೆಗಾಗಿ ದುಡಿದವರಲ್ಲಿ ನಂಜನಗೂಡಿನ ತಿರುಮಲಾಂಬ ಅವರೂ ಬೆಂಗಳೂರಿನ ಆರ್. ಕಲ್ಯಾಣಮ್ಮನವರೂ ಪ್ರಮುಖರು. ಮಹಿಳೆಯರ ಏಳಿಗೆಗಾಗಿ ಅವರ ಕಲ್ಯಾಣಕ್ಕಾಗಿ ಕೆಲಸಮಾಡಿದ ಈ ಇಬ್ಬರು ಮಹಿಳೆಯರ ಸಾಹಿತ್ಯವೂ ಒಂದು ರೀತಿಯಲ್ಲಿ 'ಉಪದೇಶ' ಸಾಹಿತ್ಯ. ಆದರೂ ಇವರ ಕೊಡುಗೆ ವಿಶಿಷ್ಟವಾದುದಾಗಿದೆ.

ಈ ಇಪ್ಪತ್ತೈದು ವರುಷಗಳ ಹಿಂದೆ ಉತ್ತಮವಾದ ಕಾವ್ಯವನ್ನು ಬರೆದ ಕೀರ್ತಿ ಬೆಳಗೆರೆ ಜಾನಕಮ್ಮನವರಿಗೆ ಸಲ್ಲಬೇಕು. ಅವರ ಕಾವ್ಯಸಂಕಲನದ ಹೆಸರು 'ಕಲ್ಯಾಣ'. ಆದರೆ ಅವರ ಕವನಗಳು ಪುಸ್ತಕರೂಪದಲ್ಲಿ ಪ್ರಕಟವಾಗುವ ಮೊದಲೇ ಕಾಲವಾದರು.

ಕಥಾಸಾಹಿತ್ಯಕ್ಕೆ ಉತ್ತಮ ಕೊಡುಗೆಯನ್ನಿತ್ತವರು ಕೊಡಗಿನ ಗೌರಮ್ಮನವರು. 'ಕಂಬನಿ' 'ಚಿಗುರು' ಇವೆರಡೂ ಅವರ ಕಥಾಸಂಕಲನಗಳು. ಗೌರಮ್ಮನವರ ಕಥಾಸಂಕಲನಗಳೆರಡೂ ಕಲಾತ್ಮಕವಾಗಿವೆ.

ಇನ್ನೂ ಕೃತಿರಚನೆಯಲ್ಲಿ ತೊಡಗಿರುವ ಶ್ರೀಮತಿ ಭಾರತಿ (ತಿರುಮಲೆ ರಾಜಮ್ಮನವರು) ಅವರು ಮೂವತ್ತೈದು ವರುಷಗಳ ಹಿಂದೆಯೇ 'ತಪಸ್ವಿನಿ' ಎಂಬ ಕಾವ್ಯನಾಟಕವನ್ನು ಪ್ರಕಟಿಸಿದರು.

ಇಪ್ಪತ್ತನೆಯ ಶತಮಾನದ ಆದಿಯಿಂದ ಈಗ ಇಪ್ಪತ್ತೈದು ವರುಷಗಳ ಹಿಂದಿನವರೆಗಿನ ಸಾಹಿತ್ಯವನ್ನು ನೋಡಿದಾಗ ನಮಗೆ ಆಗಿರುವ ಮಾರ್ಪಾಟುಗಳ ಪರಿಚಯವಾಗುತ್ತದೆ. ತಿರುಮಲಾಂಬನವರ ಆಲಂಕಾರಿಕ ಶೈಲಿಗೂ ಕೊಡಗಿನ ಗೌರಮ್ಮನವರ ಸುಲಲಿತ ಬಳಕೆಯ ಭಾಷೆಗೂ ಅಜಗಜಾಂತರ. ಶೈಲಿಯಲ್ಲಿ ಮಾರ್ಪಾಡಾದಂತೆಯೇ ವಿಷಯದ ಆಯ್ಕೆಯಲ್ಲೂ ಅದರ ನಿರೂಪಣೆಯಲ್ಲೂ ಬದಲಾವಣೆಗಳಾದವು. ತಿರುಮಲಾಂಬ, ಕಲ್ಯಾಣಮ್ಮ ಇವರ ಸಾಹಿತ್ಯದಲ್ಲಿ ಕಾಣುವ ಪೌರಾಣಿಕ, ರೋಮಾಂಚಕಾರಕ ವಸ್ತುವನ್ನು ಗೌರಮ್ಮನವರ ಕಥೆಗಳಲ್ಲಿ ಕಾಣುವುದಿಲ್ಲ. ಇವರದ್ದು ಸಾಂಸಾರಿಕ ದಿನನಿತ್ಯದ ಚಿತ್ರಗಳು. ಸಾಹಿತ್ಯ ಹೆಚ್ಚು ಕ್ರಿಯಾಶಾಲಿಯಾಗಿ ಕಲಾತ್ಮಕವಾಗುತ್ತ ಬಂದಿತು. ಆದರೆ ಅಂದಿನ ಬರಹಗಾರ್ತಿಯರ ಮೇಲೆ ಭಾರತೀಯರು ನಡೆಸಿದ ಸ್ವಾತಂತ್ರ್ಯ ಹೋರಾಟ ಪ್ರಭಾವ ಬೀರದೆ ಇರುವುದು ಒಂದು ಗಮನಾರ್ಹ ವಿಷಯ.

ಸಮಾಜ ಸುಧಾರಣೆಯ ಬಗ್ಗೆ ತಿರುಮಲಾಂಬನವರೂ ಕಲ್ಯಾಣಮ್ಮನವರೂ ನಾಟಕಗಳನ್ನೂ ಕಥೆಗಳನ್ನೂ ಬರೆದರೂ ರಾಜಕೀಯ ಆಂಧೋಳನದ ಬಗ್ಗೆ ಮಹಿಳೆಯರ ಕೊಡುಗೆ ಇಲ್ಲವೆಂದೇ ಹೇಳಬೇಕು.

ಕಳೆದ ಇಪ್ಪತ್ತೈದು ವರುಷಗಳಲ್ಲಿ

ಇಪ್ಪತ್ತೈದು ವರುಷಗಳ ಈ ಅವಧಿಯಲ್ಲಿ ಮಹಿಳಾ ಲೇಖಕಿಯರ ಸಂಖ್ಯೆ ಹೆಚ್ಚಿದೆ. ಇಪ್ಪತ್ತೈದು ವರುಷಗಳ ಹಿಂದೆ ಬರೆಯುತ್ತಿದ್ದ ಹಲವರು ಇನ್ನೂ ಬರೆಯುತ್ತಿದ್ದಾರೆ. ಹೊಸಬರನೇಕರು ಸಾಹಿತ್ಯರಂಗವನ್ನು ಪ್ರವೇಶಿಸಿದ್ದಾರೆ. ಬರೆಯುತ್ತಿದ್ದ ಕೆಲವರು ಇಲ್ಲವಾಗಿದ್ದಾರೆ. ಉಳಿಯುವಂತಹ ಉತ್ತಮ ಕೃತಿಗಳನ್ನು ರಚಿಸಿ ಜನರ ಆದರಾಭಿಮಾನಗಳಿಗೆ ಪಾತ್ರರಾಗಿದ್ದ ಇಬ್ಬರು ಸೋದರಿಯರ ಅಕಾಲಮರಣದಿಂದಾಗಿ ಮಹಿಳೆಯರ ಕೊಡುಗೆ ಅಪೂರ್ಣವಾಗಿಯೇ ಉಳಿದಿದೆ. ಹೊಸದಾಗಿ ಸಾಹಿತ್ಯ ಸೇವೆಯನ್ನು ಕೈಗೊಂಡ ಒಬ್ಬಿಬ್ಬರು ಅತ್ಯಲ್ಪಕಾಲದಲ್ಲಿಯೇ ಉತ್ತಮ ಕೃತಿಗಳನ್ನು ಬರೆದಿರುವುದು ಪ್ರಶಂಸನೀಯವಾದ ವಿಷಯ.

ಈ ಇಪ್ಪತ್ತೈದು ವರ್ಷಗಳ ಸಾಹಿತ್ಯ ಸೃಷ್ಟಿಯನ್ನು ಗಮನಿಸಿದಾಗ ನಮಗೆ ಕೆಲವು ವಿಷಯಗಳು ಸ್ಪಷ್ಟವಾಗುತ್ತವೆ.

೧. ಮಹಿಳೆಯರ ಕೊಡುಗೆಯಲ್ಲೂ ಕಾದಂಬರಿಗೇ ಪ್ರಥಮಸ್ಥಾನ.

೨. ಸಣ್ಣಕತೆಗೆ ಎರಡನೆಯ ಸ್ಥಾನ. ಪತ್ರಿಕೆಗಳಿಗೆ ಕಥೆಗಳನ್ನು ಬರೆಯುವ ಮಹಿಳೆಯರ ಸಂಖ್ಯೆ ಹೆಚ್ಚಿದೆ.

೩. ಕಾದಂಬರಿಗಳನ್ನು ಬರೆದ ಮಹಿಳೆಯರು ಕತೆಗಳನ್ನೂ ಬರೆದಿದ್ದಾರೆ.

೪. ಕಾವ್ಯ, ಕಾವ್ಯನಾಟಕ, ನಾಟಕ, ವಿಚಾರ, ವಿಮರ್ಶೆ, ಜೀವನಚರಿತ್ರೆ, ವೈಜ್ಞಾನಿಕ ಸಾಹಿತ್ಯ, ಬಾಲಸಾಹಿತ್ಯ ಈ ಪ್ರಕಾರಗಳಲ್ಲಿ ಮಹಿಳೆಯ ಕೊಡುಗೆ ಅತ್ಯಲ್ಪ.

೫. ಭಾರತೀಯರ ಜೀವನದಲ್ಲಿ ಅತ್ಯಂತ ಪ್ರಮುಖ ಘಟನೆಯಾದ ಸ್ವಾತಂತ್ರ್ಯ ಸಂಗ್ರಾಮದ ಬಗ್ಗೆ ನನಗೆ ತಿಳಿದಮಟ್ಟಿಗೆ ಯಾವೊಂದು ಗಮನಾರ್ಹ ಕೃತಿಯೂ ಮೂಡಿಬಂದಿಲ್ಲ. ಸ್ವಾತಂತ್ರ್ಯಸಂಗ್ರಾಮದಲ್ಲಿ ಅನೇಕ ಮಹಿಳೆಯರು ಭಾಗವಹಿಸಿದರೂ ಅದರ ಬಗ್ಗೆ ಸಾಹಿತ್ಯ ಕಲ್ಪನೆಯಿಲ್ಲದಿರುವುದು ಆಶ್ಚರ್ಯ.

೬. ಮಹಿಳೆಯ ಬರಹದಲ್ಲಿ ರಾಷ್ಟ್ರೀಯ ಅಂತರಾಷ್ಟ್ರೀಯ ವ್ಯಾಪ್ತಿಯಿಲ್ಲ.

ಈ ಶತಮಾನದ ಪ್ರಮುಖ ಸಾಹಿತ್ಯ ಪ್ರಕಾರಗಳನ್ನು ಮೊದಲು ವಿವೇಚಿಸಿ ಅನಂತರ ಉಳಿದ ಪ್ರಕಾರಗಳ ವಿವೇಚನೆಗೆ ಹೊರಡುತ್ತೇನೆ.

ಕಾದಂಬರಿ

ಕಾದಂಬರಿ ಈ ಶತಮಾನದ ಪ್ರಮುಖ ಹಾಗೂ ಅತ್ಯಂತ ಜನಪ್ರಿಯ ಸಾಹಿತ್ಯ ಪ್ರಕಾರ. ಮಹಿಳೆಯರ ಕೊಡುಗೆಯಲ್ಲಿ ಕಾದಂಬರಿಗಳದ್ದೇ ಬಹುಭಾಗ. ಶ್ರೀಮತಿ

ಯರಾದ ದಿ. ತ್ರಿವೇಣಿ, ದಿ. ಎಂ. ಕೆ. ಜಯಲಕ್ಷ್ಮಿ, ವಾಣಿ, ಎಂ. ಕೆ. ಇಂದಿರಾ, ಅನುಪಮಾ ನಿರಂಜನ, ಉಷಾದೇವಿ, ಎಚ್. ವಿ. ಸಾವಿತ್ರಮ್ಮ, ನೀಳಾದೇವಿ, ಆರ್ಯಾಂಬ ಪಟ್ಟಾಭಿ, ಇವರು ಹಲವಾರು ವೈಶಿಷ್ಟ್ಯಪೂರ್ಣ ಕಾದಂಬರಿಗಳನ್ನು ಕನ್ನಡಿಗರಿಗಿತ್ತಿದ್ದಾರೆ.

ತ್ರಿವೇಣಿ ತಮ್ಮ ಹತ್ತು ವರುಷಗಳ ಸಾಹಿತ್ಯ ಜೀವನದಲ್ಲಿ ಇಪ್ಪತ್ತು ಕಾದಂಬರಿಗಳನ್ನು ಬರೆದು ಕನ್ನಡ ನಾಡಿನ ಅತ್ಯಂತ ಜನಪ್ರಿಯ ಮಹಿಳಾ ಕಾದಂಬರಿಕಾರರಾಗಿದ್ದರು. 'ಹಣ್ಣೆಲೆ ಚಿಗುರಿದಾಗ' ಅವರ ಕೊನೆಯ ಕಾದಂಬರಿ. ಆದರೆ ಹಣ್ಣೆಲೆಯನ್ನು ಚಿಗುರಿಸಿದ ತ್ರಿವೇಣಿ ತಾವಿನ್ನೂ ಚಿಗುರೆಲೆಯಾಗಿದ್ದಾಗಲೇ ನಮ್ಮನ್ನಗಲಿದ್ದು ನಾಡಿನ ದುರ್ದೈವ.

ಸುಪ್ತ ಚೇತನದ ಅಧ್ಯಯನದಲ್ಲಿ ಬಹಳ ಆಸಕ್ತಿಯನ್ನು ಹೊಂದಿದ್ದ ತ್ರಿವೇಣಿ ತಮ್ಮ ಪ್ರಥಮ ಯಶಸ್ವೀ ಕಾದಂಬರಿ 'ಬೆಕ್ಕಿನ ಕಣ್ಣು' ಕೃತಿಯಲ್ಲಿ ತಾಯೊಲಮೆ ಇಲ್ಲದ ಮಗುವಿನ ಮನಸ್ಸಿನ ಪದರ ಪದರವನ್ನೂ ತೆರೆದು ತೋರಿದ್ದಾರೆ. ತನ್ನ ಪ್ರೀತಿಯ ಬೆಕ್ಕಿನ ಕಣ್ಣುಗಳಲ್ಲಿ ತನ್ನ ಮಲತಾಯಿಯ ಕ್ರೌರ್ಯವನ್ನು ಕಂಡ ಮುಗ್ಧ ಬಾಲಿಕೆ ಕುಸುಮ ಮಲತಾಯಿಯ ಮೇಲಿನ ದ್ವೇಷವನ್ನೆಲ್ಲಾ ಬೆಕ್ಕಿನ ಮೇಲೆ ತೋರಿಸಿ ಕೊನೆಗೆ ಹುಚ್ಚಾಸ್ಪತ್ರೆಯನ್ನು ಸೇರಿದಳು. ಆದರೆ ಚತುರ ಮನಶ್ಶಾಸ್ತ್ರಜ್ಞನಾದ ವೈದ್ಯನ ಸಹಾಯದಿಂದ ಎಲ್ಲರಂತೆ ಮತ್ತೆ ಸಹಜ ಪ್ರಕೃತಿಯುಳ್ಳವಳಾದಳು.

ಬಾಹ್ಯ ವ್ಯಕ್ತಿತ್ವದೊಡನೆ ಮಾನವನ ಆಂತರಿಕ ಶಕ್ತಿಯ ಪ್ರಬಲವಾದ ಸ್ಪರ್ಧೆಯ ಚಿತ್ರಣ 'ದೂರದ ಬೆಟ್ಟ'. ವಿಧವೆ ಸುನಂದೆಯಲ್ಲಿ ಪರಂಪರಾನುಗತವಾಗಿ ಬಂದ ಧರ್ಮಕ್ಕೂ, ಬಾಳಿನ ಸ್ವಾಭಾವಿಕವಾದ ಹಂಬಲಕ್ಕೂ ನಡುವೆ ದೊಡ್ಡ ತುಮುಲವೇ ನಡೆಯಿತು. ಇಲ್ಲಿಯೂ ಕೂಡ ಸಹಾನುಭೂತಿಯ ಮೂರ್ತಿಯಾದ ಮನಶ್ಶಾಸ್ತ್ರಜ್ಞನೊಬ್ಬನ ಸಹಾಯದಿಂದ ಸುನಂದೆ ಹಿಂದಿನ ಜೀವನವನ್ನು ಮರೆತು ಹೊಸ ಜೀವನಕ್ಕೆ ಹೊಂದಿಕೊಳ್ಳುವುದು ಸಾಧ್ಯವಾಯಿತು. 'ಮುಚ್ಚಿದ ಬಾಗಿಲು' ಅಂತರ್ಮನೋವ್ಯಾಪಾರದ ಒಂದು ವಾಸ್ತವಿಕ ಚಿತ್ರಣ. ಹುಚ್ಚರನ್ನು ಕಂಡು ಜಗತ್ತು ನಗುತ್ತದಷ್ಟೆ? ಆದರೆ ಹುಚ್ಚರು ಜಗತ್ತನ್ನು ಕಂಡು ನಗಬೇಕಾದ ಕಾರಣಗಳು ಎಷ್ಟೊಂದಿಲ್ಲ. ಈ ಕಾದಂಬರಿಯಲ್ಲಿ ಜಗತ್ತಿನ ದೃಷ್ಟಿಯಿಂದ ದೂರವಿರುವ ಮುಚ್ಚಿದ ಬಾಗಿಲಿನ ಹಿಂದೆ ನಡೆಯುವ ಮನುಷ್ಯನ ಪರಸ್ಪರ ವಿರೋಧಿ ಭಾವೋದ್ವೇಗಗಳ ಘರ್ಷಣ ಪ್ರಪಂಚವನ್ನು ಕನ್ನಡ ವಾಚಕರೆದುರು ತೆರೆದು ತೋರಿಸಿದ್ದಾರೆ ತ್ರಿವೇಣಿ.

ತ್ರಿವೇಣಿ ಅವರ ಕಾದಂಬರಿಗಳು ಕನ್ನಡ ಸಾಹಿತ್ಯಕ್ಕೆ ಕೊಡುಗೆಯಷ್ಟೇ ಅಲ್ಲ, ಅವು ಪ್ರಾಯೋಗಿಕ ಮನಶ್ಶಾಸ್ತ್ರಕ್ಕೆ ಸಲ್ಲಿಸಿದ ಕಾಣಿಕೆಗಳೂ ಆಗಿವೆ. ಮನಶ್ಶಾಸ್ತ್ರದ ವಿದ್ಯಾರ್ಥಿನಿಯಾಗಿ ಮಾನಸ ಕ್ರಿಯೆಗಳ ಅರ್ಥಗ್ರಾಹಿಯಾಗಿ ಅನಸೂಯಶಂಕರ್ ಹೊಂದಿದ್ದ ಧ್ಯೇಯವೆಂದರೆ ಮನುಷ್ಯಸ್ವಭಾವದ ಬಗ್ಗೆ ನಮ್ಮಲ್ಲಿರುವ ಜ್ಞಾನವನ್ನು ಹೆಚ್ಚು ನಿರ್ದಿಷ್ಟವೂ ಹೆಚ್ಚು ಸುವ್ಯವಸ್ಥಿತವೂ ಆಗುವಂತೆ ಮಾಡುವುದು.

ತ್ರಿವೇಣಿ ಬರಿ ಮಾನಸಿಕ ವಿಶ್ಲೇಷಣೆಗಾಗಿಯೇ ತನ್ನೆಲ್ಲ ಕ್ರಿಯಾಶಕ್ತಿಯನ್ನೂ ಕೇಂದ್ರೀಕರಿಸಲಿಲ್ಲ. ಬದುಕಿನ ವ್ಯಾಪಕ ಕ್ಷಿತಿಜ ಆಕೆಯ ಕಣ್ಣೆದುರಿಗಿತ್ತು. ಅಲ್ಲಿ ಹೆಣ್ಣಿನ ಬದುಕಿನ ವಿವಿಧ ಮುಖಗಳು ಆಕೆಗೆ ವಸ್ತುವನ್ನು ಒದಗಿಸಿದವು. 'ಅಪಸ್ವರ'. 'ಕಂಕಣ' 'ವಸಂತಗಾನ' 'ತಾವರೆಕೊಳ' 'ಕಾಶೀಯಾತ್ರೆ' 'ಹೃದಯ ಗೀತೆ' 'ಅವಳಮನೆ' 'ಹಣ್ಣೆಲೆ ಚಿಗುರಿದಾಗ' ಇವೆಲ್ಲಾ ಹೆಣ್ಣಿನ ಬದುಕಿನ ವಿವಿಧ ಚಿತ್ರಗಳು. ಪ್ರೇಮದ ನೂರು ವಿನ್ಯಾಸಗಳು ಇಲ್ಲಿವೆ.

ತ್ರಿವೇಣಿ ಆಧುನಿಕ ಕಾದಂಬರಿಗಾರ್ತಿಯಾದರೂ ತಮ್ಮ ಬರವಣಿಗೆಗೆ ಅಸ್ಪಷ್ಟ ಪರಿಣಾಮದ ಕ್ಲಿಷ್ಟ ತಂತ್ರವನ್ನು ಬಳಸಲಿಲ್ಲ. ಹಿತಮಿತವಾದ ಹಾಸ್ಯ, ನುರಿತ ಶೈಲಿ, ಮಿಂಚುಮಾತು, ಎಲ್ಲದಕ್ಕೂ ಮಿಗಿಲಾಗಿ ಮನುಷ್ಯನ ಹೃದಯದ ಭಾವಗಳ ವಿಶ್ಲೇಷಣೆ ತ್ರಿವೇಣಿಯನ್ನು ಕನ್ನಡದ ಹಿರಿಯ ಕಾದಂಬರಿಕಾರರ ಸಾಲಿನಲ್ಲಿ ನಿಲ್ಲಿಸಿವೆ.

ಟಿ. ಎಂ. ಕೆ. ಜಯಲಕ್ಷ್ಮಿ ಅವರ ಸಾಮಾಜಿಕ ಕಾದಂಬರಿಗಳಾದ 'ನಿಂದೆಯ ನೆಲೆ' 'ಮಾಯದ ಒಲೆ' 'ಸಂಸಾರ ಸಮರ' 'ಬಾಳು ಬೆಳಗಿತು' ಮೊದಲಾದವು ಗಳಲ್ಲಿ ಕೌಟುಂಬಿಕ ಜೀವನ ಚಿತ್ರಣವಿದೆ. ಇವರ ಕಾದಂಬರಿಗಳಲ್ಲಿ ಘಟನೆಗಳೂ ಪಾತ್ರಗಳೂ ಸ್ವಲ್ಪ ಅಗತ್ಯವಿರುವುದಕ್ಕಿಂತ ಹೆಚ್ಚಾದರೂ ಸಂಸಾರದ ಜಟಿಲತೆ ಸ್ಪಷ್ಟವಾಗಿ ಚಿತ್ರಿಸಲ್ಪಟ್ಟಿದೆ.

ಅರ್ಥವತ್ತಾದ ಕಾದಂಬರಿಗಳನ್ನು ನೀಡುತ್ತಿರುವ ಇನ್ನೊಬ್ಬ ಕಾದಂಬರಿಗಾರ್ತಿ ಯೆಂದರೆ ಡಾ. ಅನುಪಮ ನಿರಂಜನ ಅವರು. ಇವರು ವೈದ್ಯವೃತ್ತಿಯಲ್ಲಿ ಎಷ್ಟು ಯಶಸ್ವಿ ಯಾಗಿ—ಜನಾನುರಾಗಿಗಳಾಗಿದ್ದಾರೋ ಸಾಹಿತ್ಯರಂಗದಲ್ಲೂ ಅಷ್ಟೇ ಯಶಸ್ವಿಯಾಗಿ ದ್ದಾರೆ. 'ಸಂಕೋಲೆಯೊಳಗಿಂದ' ಸ್ತ್ರೀಸ್ವಾತಂತ್ರ್ಯದ ಮೇಲೆ 'ಕ್ಷ' ಕಿರಣ ಬೀರುವ ಕಾದಂಬರಿ. ಗಂಡಸು ಹೆಣ್ಣಿನ ಸ್ವಾತಂತ್ರ್ಯವನ್ನು ಕಸಿದುಕೊಂಡ ಪರಂಪರಾನು ಗತವಾದ ಸಮಾಜ ವ್ಯವಸ್ಥೆಯಲ್ಲಿ ನರಳುತ್ತಿರುವ ವಿವಿಧ ಹೆಣ್ಣುಗಳ ಕತೆ ಈ ಕಾದಂಬರಿ. 'ಶ್ವೇತಾಂಬರಿ' ವೈದ್ಯಕೀಯ ಜೀವನಕ್ಕೆ ಸಂಬಂಧಿಸಿದ ಇನ್ನೊಂದು ಕಾದಂಬರಿ. 'ನೂಲು ನೆಯ್ದ ಚಿತ್ರ'ದಲ್ಲಿ ಹಳ್ಳಿಯ ಬಾಳಿನ ಕಷ್ಟನಿಷ್ಠುರಗಳನ್ನು ಮುಂದಿಟ್ಟಿದ್ದಾರೆ. 'ಹಿಮದ ಹೂ' ಹೃದಯವಿಲ್ಲದ ಹೆಣ್ಣಿನ ಒಂದು ಚಿತ್ರ. ಇವರ ಇತ್ತೀಚಿನ ಕಾದಂಬರಿ 'ಸ್ನೇಹ ಪಲ್ಲವಿ' ಸುಧಾ ವಾರ ಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟವಾಯಿತು.

'ವಾಣಿ' ಎಂಬ ಕಾವ್ಯನಾಮದಿಂದ ಬರೆಯುತ್ತಿರುವ ಶ್ರೀಮತಿ ಸುಬ್ಬಮ್ಮ ನಂಜುಂಡಯ್ಯನವರ ಕಾದಂಬರಿಗಳಾದ 'ಬಿಡುಗಡೆ' 'ಚಿನ್ನದ ಪಂಜರ' 'ಎರಡು ಕನಸು' 'ಮನೆ ಮಗಳು' 'ಶುಭಮಂಗಳ' ಇವೆಲ್ಲವೂ ಕುಟುಂಬ ಜೀವನವನ್ನು ಓದುಗರಿಗೆ ವಿವಿಧ ರೀತಿಯಲ್ಲಿ ಪರಿಚಯಮಾಡಿಕೊಡುತ್ತವೆ. 'ಕಾವೇರಿಯ ಮಡಿಲಲ್ಲಿ' ಕೂಡ ಒಂದು ಕೌಟುಂಬಿಕ ಚಿತ್ರ. ವಾಣಿಯವರ ಸಾಂಸಾರಿಕ ಚಿತ್ರಗಳು ಕಥೆಯ ಓಟದಲ್ಲಿ ಎಲ್ಲೂ ಕುಂಟದೆ ಓದುಗರನ್ನು ವಿರಸ–ಸರಸ ಪ್ರೇಮಮಯ ವಾತಾವರಣದಲ್ಲಿ ತೇಲಿಸುತ್ತವೆ.

ಉಷಾದೇವಿ ಅವರ 'ಧೂಮಕೇತು' 'ಪೊಗ್ಗಿನಜಡೆ' ಈ ಎರಡು ಕಾದಂಬರಿಗಳೂ ಒಂದೇ ತತ್ವದ ಎರಡು ಮುಖಗಳನ್ನು ಚರ್ಚಿಸಿವೆ. ಹೆಣ್ಣನ್ನು ಹೆಣ್ಣಿನಂತೆಯೇ ಬೆಳೆಸಬೇಕಲ್ಲದೆ ಗಂಡಿನಂತೆ ಬೆಳೆಸಬಾರದು ಎನ್ನುವ ತತ್ವದ ಆಧಾರದ ಮೇಲೆ ರಚಿತವಾಗಿರುವ ಕಾದಂಬರಿ 'ಧೂಮಕೇತು'. ಮನಶ್ಶಾಸ್ತ್ರದ ಆಧಾರದ ಮೇಲೆ ರಚಿತವಾಗಿರುವ ಈ ಕಾದಂಬರಿ ಸ್ವಲ್ಪ ಪುಸ್ತಕದ ಬದನೇಕಾಯಿ ಆಗಿದೆಯೇನೋ ಎನಿಸುತ್ತದೆ. ಹೆಣ್ಣು ಎಷ್ಟೇ ಓದಲಿ, ಎಂತಹ ಸಾಹಿತಿಯೇ ಆಗಿರಲಿ, ಎಷ್ಟು ಆಟಪಾಟಗಳನ್ನು ಕಲಿತವಳೇ ಆಗಲಿ ಅವಳಲ್ಲಿನ ಹೆಣ್ಣುತನ ಜಾಗ್ರತವಾಗುವುದಿಲ್ಲ ಎನ್ನುವ ಮಾತು ಸತ್ಯವಾಗಿ ಕಾಣುವುದಿಲ್ಲ. ಶೈಲಿ ಚೆನ್ನಾಗಿದೆ. ನಿರೂಪಣೆ ಸ್ಪಷ್ಟ ವಾಗುತ್ತದೆ. ಆದರೆ ಬರಿಯ ತತ್ವದ ಆಧಾರದ ಮೇಲೆ ರಚಿತವಾದ ಕೃತಿ ಸತ್ಯಕ್ಕೆ ದೂರವಾಗುತ್ತದೆ ಎನ್ನುವುದಕ್ಕೆ ಈ ಕೃತಿ ನಿದರ್ಶನ.

ಶ್ರೀಮತಿ ಎಂ. ಕೆ. ಇಂದಿರಾ ಅವರು ಇತ್ತೀಚೆಗೆ ಕಾದಂಬರಿ ಕ್ಷೇತ್ರಕ್ಕೆ ಕಾಲಿರಿಸಿದ್ದರೂ ಸ್ವಲ್ಪ ಕಾಲದಲ್ಲೇ ಜನಪ್ರಿಯ ಕಾದಂಬರಿಗಾರ್ತಿಯಾಗಿದ್ದಾರೆ. ಅವರ 'ಸದಾನಂದ' ಕಾದಂಬರಿಗೆ ರಾಜ್ಯಸರ್ಕಾರದ ಬಹುಮಾನವೂ ಸಿಕ್ಕಿದೆ. ಇಂದಿರಾ ಅವರ ಕಾದಂಬರಿಗಳೂ ಸಾಂಸಾರಿಕ ಚಿತ್ರಗಳು. ಅವರ ವಸ್ತು, ನಿರೂಪಣೆ ಚೆನ್ನಾಗಿವೆ. 'ತುಂಗ–ಭದ್ರೆ' ಒಂದು ಉತ್ತಮ ಕಾದಂಬರಿ.

ಅನುವಾದಗಳು

ಸ್ವತಂತ್ರ ಕಾದಂಬರಿಗಳನ್ನು ರಚಿಸುವುದರ ಜೊತೆಗೆ ಕನ್ನಡ ಮಹಿಳಾ ಬರಹಗಾರರು ಇತರ ಭಾಷೆಗಳಿಂದ ಕಾದಂಬರಿಗಳನ್ನು ಕನ್ನಡಕ್ಕೆ ಭಾಷಾಂತರಿಸಿದ್ದಾರೆ. ಶ್ರೀಮತಿ ಎಚ್. ವಿ. ಸಾವಿತ್ರಮ್ಮ ಅವರು ರವೀಂದ್ರನಾಥ ಟಾಗೂರರ ಕಾದಂಬರಿಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. 'ನೌಕಾಘಾತ', 'ಗೋರಾ', 'ಮನೆ ಜಗತ್ತು' ಈ ಕಾದಂಬರಿಗಳು ಉತ್ತಮ ಅನುವಾದಗಳು. ಶ್ರೀ ಆರ್. ಕೆ. ನಾರಾಯಣ್ ಅವರ 'ದಿ ಗೈಡ್' ಹಾಗೂ 'ವೈಟಿಂಗ್ ಫರ್ ದಿ ಮಹಾತ್ಮ' ಕಾದಂಬರಿಗಳನ್ನೂ ಭವಾನಿ ಭಟ್ಟಾಚಾರ್ಯರ 'ಹುರೈಡ್ಸ್ ಎ ಟೈಗರ್' ಕಾದಂಬರಿಯನ್ನೂ ಕನ್ನಡಕ್ಕೆ ಅನುವಾದಿಸಿದ್ದಾರೆ ಚಿ. ನ. ಮಂಗಳ. ಶ್ರೀಮತಿ ನೀಳಾದೇವಿ ಅವರೂ ಕೆಲವು ಆಂಗ್ಲ ಕಾದಂಬರಿಗಳನ್ನು ಕನ್ನಡಿಗರಿಗೆ ನೀಡಿದ್ದಾರೆ.

ಕಥೆ

ಸಣ್ಣಕಥೆ ಅನೇಕ ಮಹಿಳಾ ಬರಹಗಾರರನ್ನು ಆಕರ್ಷಿಸಿದೆ. ವಾರಪತ್ರಿಕೆ, ಮಾಸ ಪತ್ರಿಕೆಗಳು ಕಥೆಗಳನ್ನು ಪ್ರಕಟಿಸುತ್ತವೆಯಾದ್ದರಿಂದ ಅನೇಕ ಹೊಸ ಬರಹಗಾರರು ಕಥೆಗಳನ್ನು ಬರೆಯಲು ಅವಕಾಶವಾಗಿದೆ. ಸಂಕಲನಗಳನ್ನು ಪ್ರಕಟಿಸದ ಅನೇಕರು ಉತ್ತಮ ಸಣ್ಣಕಥೆಗಳನ್ನು ಬರೆದಿದ್ದಾರೆ. ಪ್ರೇಮಾ ಭಟ್, ಕೆ. ಸರಸ್ವತಿ, ಶಾರದ

ಮೊದಲಾದ ಹೊಸಬರಲ್ಲದೆ ನುರಿತ ಬರಹಗಾರರಾದ ಎಚ್. ವಿ. ಸಾವಿತ್ರಮ್ಮ, ಜಯಲಕ್ಷ್ಮಿ ಶ್ರೀನಿವಾಸನ್, ತ್ರಿವೇಣಿ, ಅನುಪಮಾ, ಗೀತಾ ಕುಲಕರ್ಣಿ, ವಾಣಿ, ಎಚ್. ಎಸ್. ಪಾರ್ವತಿ, ಆನಂದಿ ಸದಾಶಿವರಾವ್, ಸರೋಜಿನಿ ಮಹಿಷಿ, ಉಷಾದೇವಿ, ರಾಜಲಕ್ಷ್ಮಿ ಎನ್. ರಾವ್, ಎಂ. ಕೆ. ಇಂದಿರಾ, ಎಂ. ಕೆ. ಜಯಲಕ್ಷ್ಮಿ, ಸುಶೀಲಾ ಕೊಪ್ಪರ, ರಾಜೇಶ್ವರಿ ನರಸಿಂಹಮೂರ್ತಿ, ಸೌ. ಭುವನೇಶ್ವರಿ ಇವರೆಲ್ಲರ ಕಥಾ ಸಾಹಿತ್ಯವನ್ನೂ ವಿವರವಾಗಿ ಪರಿಶೀಲಿಸುವುದಕ್ಕೆ ಅಲ್ಪಸ್ಥಳದಲ್ಲಿ ಸಾಧ್ಯವಾಗುವುದಿಲ್ಲ. ಆದರೆ ಎಲ್ಲ ಕಥೆಗಳನ್ನೂ ಸ್ಥೂಲವಾಗಿ ಎರಡು ವಿಭಾಗವಾಗಿ ವಿಂಗಡಿಸಬಹುದು. ೧. ಸರಳ ಶೈಲಿಯಲ್ಲಿ ಬರೆದ ಸಾಂಸಾರಿಕ ಚಿತ್ರಗಳು. ೨. ಪ್ರಯೋಗಾತ್ಮಕ ಶೈಲಿಯಲ್ಲಿ ರಚಿತವಾದ ವ್ಯಕ್ತಿತ್ವ ಚಿತ್ರಗಳು.

ಮನೆಮಾತು ತಮಿಳಾದರೂ ಶ್ರೀಮತಿ ಜಯಲಕ್ಷ್ಮಿ ಶ್ರೀನಿವಾಸನ್ ಅವರು ಕನ್ನಡದಲ್ಲಿ ಸೊಗಸಾಗಿ ಬರೆಯುತ್ತಾರೆ. 'ಚಿನ್ನದ ಬಳೆ ಮತ್ತಿತರ ಕತೆಗಳು', 'ಕಲಾವಿದನ ತ್ಯಾಗ ಮತ್ತಿತರ ಕತೆಗಳು' ಇವೆರಡೂ ಉತ್ತಮ ಕೊಡುಗೆಗಳು. ಶ್ರೀಮತಿ ಎಚ್. ವಿ. ಸಾವಿತ್ರಮ್ಮನವರು ಕನ್ನಡದ ಉತ್ತಮ ಕತೆಗಾರರಲ್ಲಿ ಒಬ್ಬರು. ಸಣ್ಣ ಕತೆಗಾರರಿಗೆ ವಸ್ತುವನ್ನು ವಿವರಿಸಲು ಸ್ಥಳಾವಕಾಶವಿರುವುದಿಲ್ಲ, ಪಾತ್ರಗಳನ್ನು ವಿಸ್ತರಿಸಲು ಸ್ಥಳಾವಕಾಶವಿರುವುದಿಲ್ಲ. ಸಣ್ಣ ಕಥೆಗಾರ ಒಂದೇ ಸಾಲಿನಲ್ಲಿ ಒಂದೇ ಒಂದು ಮಾತಿನಲ್ಲಿ ಒಂದು ಸಣ್ಣ ಘಟನೆಯಲ್ಲಿ ವಸ್ತು ಸಮಗ್ರವನ್ನೂ ಆದರ ವಿಶೇಷ ಭಾವವನ್ನೂ ಓದುಗನ ಮುಂದಿಡಬೇಕು. ಈ ಕಲೆ ಸಾವಿತ್ರಮ್ಮನವರಿಗೆ ಚೆನ್ನಾಗಿ ಸಾಧಿಸಿದೆ. ಇದಕ್ಕೆ ಉತ್ತಮ ಉದಾಹರಣೆ ಅವರ 'ನಿರಾಶ್ರಿತೆ' ಸಂಕಲನದಲ್ಲಿನ ಕತೆ 'ಬಹಿಷ್ಕೃತೆ'. ದಿನನಿತ್ಯದ ಜೀವನಕ್ಕೆ ಸಂಬಂಧಿಸಿದ ಹಲವಾರು ಪ್ರಶ್ನೆಗಳು 'ನಿರಾಶ್ರಿತೆ' ಯಲ್ಲಿ ಕಲಾತ್ಮಕವಾಗಿ ಮೂಡಿಬಂದಿವೆ. ತಾಯಿ ತಂದೆಗಳು ಯಾರೆಂದು ಅರಿಯದ ಮಗುವನ್ನು ಹಿಂದೂ ಸಮಾಜದಲ್ಲಿ 'ಸೊಸೆ'ಯಾಗಿ ಸ್ವೀಕರಿಸುವುದೇನು ಸುಲಭವೆ? ಹಡೆದ ತಾಯಿಯೇ ಅವಳನ್ನು ಬಹಿಷ್ಕರಿಸಿದರು. 'ಪಶ್ಚಾತ್ತಾಪ' ಎಂಬ ಕತೆ ಗಂಡಸಿನ ಬೂಟಾಟಿಕೆಗೆ ಮರುಳಾಗದೆ ಆತ್ಮಸ್ವಾತಂತ್ರ್ಯವನ್ನು ರಕ್ಷಿಸಿ ಕೊಂಡ ಸ್ತ್ರೀಯೊಬ್ಬಳ ಕತೆ. ಸ್ವಾತಂತ್ರ್ಯ ಹೋರಾಟ, ಅದರ ಹಿನ್ನೆಲೆ, ಅದರ ಪ್ರಭಾವ ಇವುಗಳ ಬಗ್ಗೆ ಮಹಿಳೆಯರಿಂದ ಸಾಹಿತ್ಯ ರಚನೆ ಇಲ್ಲವೆಂದೇ ಹೇಳಬೇಕಾಗಿರು ವಾಗ ಇದರ ಹಿನ್ನೆಲೆಯಲ್ಲಿ ರಚಿತವಾಗಿರುವ 'ಜಾತಿಯ ಬಲಿ' ಹಾಗೂ 'ಕಲ್ಯಾಣಿ' ಇವೆರಡೂ ಪ್ರಶಂಸಾರ್ಹ ಕತೆಗಳಾಗಿವೆ. ಅಣ್ಣತಮ್ಮಂದಿರಂತೆ ಬಾಳಬೇಕಾದ ಜನ ನಾಯಿಗಳಂತೆ ಕಚ್ಚಾಡಿದ್ದು ಇವೆರಡರ ವಸ್ತು. 'ಗುರುಪೀಠ' ಎಂಬ ಕತೆಯಲ್ಲಿ ಕತೆಗಾರ್ತಿ ಹೊಸದೊಂದು ಪ್ರಶ್ನೆಯನ್ನು ಎದುರಿಸಿದ್ದಾರೆ. ಹತ್ತುವರುಷದ ಹುಡುಗನಿಗೆ ಸನ್ಯಾಸಕೊಟ್ಟು ಸಮಾಜ ತಾನು ಉದ್ಧಾರವಾಯಿತೆಂದು ಬಗೆದರೆ ಆ ಹುಡುಗ ಸನ್ಯಾಸಿಗೆ ಸನ್ಯಾಸಭಾವ ಬಂದುಬಿಡುತ್ತದೆಯೆ? ಗಂಡಸರ ವ್ಯಕ್ತಿತ್ವವನ್ನು ಹೆಂಗಸರು ಯಶಸ್ವಿಯಾಗಿ ಚಿತ್ರಿಸಬಲ್ಲರು ಎಂಬುದಕ್ಕೆ ಸಾವಿತ್ರಮ್ಮನವರ ಕಥೆಗಳಲ್ಲಿ ಅನೇಕ ನಿದರ್ಶನಗಳಿವೆ.

'ಮರುಮದುವೆ'ಯ ಕೃಷ್ಣಪ್ಪ ಅಂತಹ ಒಂದು ಯಶಸ್ವೀ ಚಿತ್ರಣ. 'ಸರಿದ ಬೆರಳು' ಸಾವಿತ್ರಮ್ಮನವರ ಇತ್ತೀಚಿನ ಕಥಾಸಂಕಲನ. ಈ ಸಂಗ್ರಹದಲ್ಲಿ ಏಳು ಕಥೆಗಳಿವೆ. 'ಪಾತು ಕಥೆ' ಪುಸ್ತಕದ ಅರ್ಧಭಾಗವನ್ನು ತುಂಬಿನಿಂತ ಮಾರ್ಮಿಕವಾದ ಕಥೆ. ಹೆಣ್ಣೊಬ್ಬಳ ಆದರಲ್ಲೂ ನಿರಾವಲಂಬಿ ಹೆಣ್ಣೊಬ್ಬಳ ಬಾಳಿನ ಗೋಳು ಇಲ್ಲಿ ಕಣ್ಣಿಗೆ ಕಟ್ಟುವಂತೆ ಚಿತ್ರಿತವಾಗಿದೆ. ಹಿಂದಿನೆರಡು ಕಥಾ ಸಂಕಲನಗಳಿಗಿಂತ ಶೈಲಿಯಲ್ಲೂ ವಸ್ತುನಿರೂಪಣೆಯಲ್ಲೂ ನೂತನವಾಗಿದ್ದು ಇನ್ನೂ ಹೆಚ್ಚು ಆಕರ್ಷಕವಾಗಿದೆ. ಸ್ವತಂತ್ರ ಕತೆಗಳನ್ನಲ್ಲದೆ ಆ್ಯಂಟನ್ ಚೆಕಾವನ ರಷ್ಯನ್ ಕಥೆಗಳನ್ನು 'ಮದುವಣಗಿತ್ತಿ' ಎಂಬ ಸಂಕಲನದಲ್ಲಿ ಅನುವಾದಿಸಿದ್ದಾರೆ. ಮೂಲ ಕೃತಿಕಾರನ ಭಾವವನ್ನು ಸ್ಪಷ್ಟವಾಗಿ ಅರ್ಥಮಾಡಿಕೊಂಡು ಸಹಜ ಶೈಲಿಯಲ್ಲಿ ಬರೆಯುವುದರಿಂದ ಇವರ ಅನುವಾದಿತ ಕತೆಗಳೂ ಕೂಡ ಸ್ವತಂತ್ರ ಕೃತಿಗಳಂತೆಯೇ ಇವೆ. ಎಚ್. ವಿ. ಸಾವಿತ್ರಮ್ಮನವರ ಕಥಾಸಾಹಿತ್ಯ ಕನ್ನಡ ಸಾಹಿತ್ಯಕ್ಕೊಂದು ವಿಶಿಷ್ಟ ಕಾಣಿಕೆ.

ಅತ್ಯಂತ ಜನಪ್ರಿಯ ಮಹಿಳಾ ಕಾದಂಬರಿಗಾರ್ತಿಯೆನಿಸಿದ್ದ ತ್ರಿವೇಣಿ ಹಲವಾರು ಉತ್ತಮ ಕತೆಗಳನ್ನು ಕನ್ನಡಿಗರಿಗೆ ನೀಡಿದ್ದಾರೆ. ಮಾನವನ ಹಲವಾರು ಭಾವರಾಗಗಳ ಅರಿವು ಆಕೆಗಿತ್ತು. ಪ್ರೇಮದ ನೂರು ವಿನ್ಯಾಸಗಳನ್ನು ಚಿತ್ರಿಸಬಲ್ಲ ಶಕ್ತಿಯಿತ್ತು. ಸ್ತ್ರೀ ಮತ್ತು ಸ್ತ್ರೀಯ ಅಸಂಖ್ಯ ಸೂಕ್ಷ್ಮ ಸಮಸ್ಯೆಗಳ ಆತ್ಮೀಯ ವಿಮರ್ಶಕಿಯಾಗಿದ್ದರು ಆಕೆ. ಕಥಾಸಂಕಲನ 'ಸಮಸ್ಯೆಯ ಮಗು'ವಿಗೆ ಮೈಸೂರು ರಾಜ್ಯಸರ್ಕಾರದ ಬಹುಮಾನ ಬಂದಿತು. 'ಹೆಂಡತಿಯ ಹೆಸರು', ಮತ್ತು 'ಎರಡು ಮನಸ್ಸು' ತ್ರಿವೇಣಿಯವರ ಇನ್ನೆರಡು ಕಥಾಸಂಕಲನಗಳು. ಜೀವನದ ಅನೇಕ ಸಾಧಾರಣ ಮತ್ತು ಅಸಾಧಾರಣ ಅಂಶಗಳ ಪ್ರತಿಂಬಿಂಬಗಳು ಈ ಕತೆಗಳಲ್ಲಿವೆ. ಹೆಣ್ಣೊಬ್ಬಳು ಒರಟಾಗಿರಬಹುದು. ನಿರ್ದಯಿಯಾಗಿರಬಹುದು. ಆದರೆ ತಾಯ್ತನವೆಂಬುದು ಈ ಕೊಂಕು ಡೊಂಕುಗಳನ್ನೆಲ್ಲ ಮುಚ್ಚುತ್ತದೆ. ಈ ವಸ್ತುವನ್ನು ತ್ರಿವೇಣಿಯವರ ಹೃದಯಸ್ಪರ್ಶಿ ಕಥೆ 'ಕೆಸರಿನ ಕಮಲ'ದಲ್ಲಿ ಕಾಣಬಹುದು. 'ಸಲಹೆ'ಯಂತಹ ಕಥೆಯನ್ನು ಓದುವಾಗಲಂತೂ ಬರೆಹಗಾರ್ತಿಯ ಅಕಾಲ ಮೃತ್ಯುವಿನ ಅಸಹನೀಯ ಸ್ಮೃತಿಯು ಒಮ್ಮಿಂದೊಮ್ಮೆಗೇ ಚಿಮ್ಮಿ ಓದುಗರೆದೆಯಲ್ಲಿ ನಾಟುತ್ತದೆ. ತ್ರಿವೇಣಿಯವರ ಅನೇಕ ಕಥೆ ಕಾದಂಬರಿಗಳಲ್ಲಿ ತಾಯಿಯಾಗುವ ಭೀತಿಯಿಂದ ತೊಳಲಾಡುವ ಅನೇಕ ಪ್ರಾಯದ ಪತ್ನಿಯರನ್ನು ಕಾಣುತ್ತೇವೆ. 'ಸಮಸ್ಯೆಯ ಮಗು' 'ಹೆಂಡತಿಯ ಹೆಸರು' ಎರಡೂ ಮನೋವೈಜ್ಞಾನಿಕ ಕತೆಗಳು. ಈಶ್ವರ ಮೂರ್ತಿಗೆ ಹೆಂಡತಿಯ ಹೆಸರು ಮರೆತು ಹೋಯಿತು. ಏನು ಮಾಡಿದರೂ ಕಾರಣ ಗೊತ್ತಾಗಲಿಲ್ಲ. ಹೀಗೂ ಉಂಟೆ? ಎನ್ನಿಸುತ್ತದೆ. ಆದರೆ ಜೀವನದಲ್ಲಿ ನೂರುವಿಧ. ಕೆಲವು ಸಹಜ, ಕೆಲವು ಅಸಹಜ. ಬಡವರನ್ನು ಎಲ್ಲರೂ ಅನುಮಾನದೃಷ್ಟಿಯಿಂದ ನೋಡುತ್ತಾರೆ ಎನ್ನುವುದರ ಪರಿಚಯ 'ಚಿನ್ನದ ಸರ'. ಹೆಣ್ಣಿನ ಕಣ್ಣೀರಿನ ಬಾಳನ್ನು ಹೃದಯಂಗಮವಾಗಿ ಚಿತ್ರಿಸಿರುವ ಕತೆ 'ಬೆಡ್ ನಂಬರ್ ಏಳು!'

ಉತ್ತಮ ಕಾದಂಬರಿಗಳನ್ನು ಬರೆಯುತ್ತಿರುವ ಅನುಪಮಾ ಉತ್ತಮ ಕತೆಗಳನ್ನೂ ಬರೆದಿದ್ದಾರೆ. 'ನೀರಿಗೆ ನೈದಿಲೆ ಶೃಂಗಾರ' ಒಂದು ಒಳ್ಳೆಯ ಕಥಾಸಂಕಲನ. ವೈದ್ಯನಿಗೆ ಬುದ್ಧಿ ಇರಬೇಕು. ಆದರೆ ಬುದ್ಧಿವಂತಿಕೆಗಿಂತ ಹೆಚ್ಚಾಗಿ ಹೃದಯವಂತಿಕೆಯಿರಬೇಕು. 'ಧನ್ವಂತರಿಯ ದಿನಚರಿ', 'ಜೀವದಾನ' 'ಸ್ಟೆತಾಸ್ಕೋಪ್ ಸನ್ಯಾಸ' ಹಾಗೂ 'ಧನ್ಯವಾದ' ಇದಕ್ಕೆ ಉದಾಹರಣೆಗಳು. ಅನುಪಮಾ ಅವರ ಮೊದಲ ಸಂಕಲನ 'ಕಣ್ಮಣಿ'ಯನ್ನು ಓದಿ ಅವರ ಇತ್ತೀಚಿನ ಕಥೆಗಳಾದ 'ಬೆಳಕು ಕತ್ತಲಿನಾಟ', 'ಬೆಳ್ಳಂ ಬೆಳಗು' ಇವನ್ನು ಓದುವಾಗ ಕತೆಗಾರ್ತಿಯ ನಿರೂಪಣಾ ವಿಧಾನದಲ್ಲಿ, ಕಥನ ಕಲೆಯಲ್ಲಿ ಆಗಿರುವ ಅಗಾಧ ಮಾರ್ಪಾಟು ಗೋಚರವಾಗುತ್ತದೆ. ಸುಬ್ಬಯ್ಯ ಮೂಕಿ ವಾಸಂತಿಯನ್ನು ಹಣದಾಸೆಗೆ ಮದುವೆಯಾದ. ಪರಿಣಾಮ ಹಲವು ನಿಮಿಷದ ಬೆಳಕು. ಮುಂದೆ ಅನಂತ ಅಂಧಕಾರ. ಇಲ್ಲಿ ಪ್ರಯೋಗ ಯಶಸ್ವಿಯಾಗಿದೆ. ಇವರ 'ರೂವಾರಿಯ ಲಕ್ಷ್ಮಿ' ಸಂಕಲನಕ್ಕೆ ರಾಜ್ಯಸರ್ಕಾರದ ಬಹುಮಾನ ಬಂದಿದೆ.

ಕಾದಂಬರಿಗಾರ್ತಿ ವಾಣಿ ಕತೆಗಾರ್ತಿಯೂ ಹೌದು. 'ಅರ್ಪಣೆ', 'ನಾಣಿಯ ಮದುವೆ' ಇವೆರಡೂ ವಾಣಿಯವರ ವಸ್ತು ಹಾಗೂ ಶೈಲಿಗೆ ಉತ್ತಮ ಉದಾಹರಣೆಗಳು. ಇಲ್ಲಿ ಪ್ರಯೋಗದ ಪ್ರಭಾವವಿಲ್ಲ. ಜೀವನದ ಜಟಿಲತೆಯ ತೊಡಕಿಲ್ಲ. ಪರದೇಶಕ್ಕೆ ಹೋಗಿ ಮಗ ತಾಯನ್ನು ಮರೆತರೂ ತಾಯಿಯ 'ಕರುಳಿನ ಕರೆ' ಅವನನ್ನು ಬಿಡಲಿಲ್ಲ. 'ಶುಭ ಸೂಚನೆ' 'ರಾಜಿ–ರತ್ನ', 'ಪರ್ಣಕುಟಿ' ಇವೆಲ್ಲ ಸಂಸಾರದ ಸುಂದರ ಚಿತ್ರಗಳು.

ಕಾದಂಬರಿಗಳ ರಚನೆಗೆ ಇದೀಗ ಕೈಹಾಕಿರುವ ಕತೆಗಾರ್ತಿ ಗೀತಾ ಕುಲಕರ್ಣಿ 'ಪುಟ್ಟಗೌರಮ್ಮ'ನೇ ಸರಿ. ಇವರ ಕಥಾಸಂಕಲನಗಳಾದ 'ತೇಲಿಹೋದ ಮೋಡ', 'ಮೌನ ಸಂಧಾನ' ಇವೆರಡೂ ಸ್ತ್ರೀಜೀವನದ ಮಾರ್ಮಿಕ ವರ್ಣನೆಗಳು. ಬೈದು ತಿದ್ದದೆ ಹೋದರೆ ಮಗಳಿಗೆ ಬುದ್ಧಿ ಬರುವುದಿಲ್ಲವೆಂದು ತಾಯಿ. ಆದರೆ ತಂದೆ ಹಾಗಲ್ಲ. ಪದ್ಮನಾಭ ತಾಯಿಯ ಪ್ರೀತಿಯನ್ನು ಕಾಣದವನು. ಲಲಿತೆಗೆ ತನ್ನ ತಪ್ಪು ಅರಿವಾಯಿತು. ಮೌನ ಮುರಿದು ಸಂಧಾನವಾಯಿತು. 'ತೇಲಿಹೋದ ಮೋಡ'ಕ್ಕೆ ದ. ರಾ. ಬೇಂದ್ರೆಯವರು ಅರ್ಥವತ್ತಾದ ಮುನ್ನುಡಿ ಬರೆಯುತ್ತ "ಈ ಕಥಾಸಂಕಲನದ ಉದ್ದಕ್ಕೂ ಸ್ತ್ರೀ ಹೃದಯದ ವಿವಿಧ ಭಂಗಿಗಳನ್ನೂ ವಿವಿಧ ವಿಕಾರ ವಿಲಾಸಗಳನ್ನೂ ಕಾಣುತ್ತೇವೆ. ಕತೆಗಾರ್ತಿಯ ಮುಖ್ಯ ಕೌಶಲ ವಾಸ್ತವ ಚಿತ್ರಗಳನ್ನೇ ಮೂರ್ತಿಮತ್ತಾಗಿ ಬರೆಯುವುದರಲ್ಲಿದೆ" ಎಂದಿದ್ದಾರೆ. ಇದು ಅಕ್ಷರಶಃ ನಿಜ. ಇದಕ್ಕೆ ಉತ್ತಮ ಉದಾಹರಣೆ 'ತೇಲಿಹೋದ ಮೋಡ'. ಅನಾರೋಗ್ಯದಿಂದಿದ್ದ ಪತಿಯನ್ನು ಅವನ ಪಾಡಿಗೇ ಬಿಟ್ಟು ನಾಟಕಕ್ಕೆ ಹೋದದ್ದು ಆನಂದನಿಗೆ ಸರಿಹೋಗಲಿಲ್ಲ. ನಾಟಕ ಮುಗಿಸಿಕೊಂಡು ಬಂದ ಪತ್ನಿಯೊಂದಿಗೆ ಆನಂದ ಒರಟಾಗಿಯೇ ನಡೆದುಕೊಂಡಿದ್ದ. ಆದರೆ ಮುಂಜಾವಿನಲ್ಲಿ ವಿವೇಕ ಅವನ ಕಣ್ಣು ತೆರೆಸಿತ್ತು. ಅವನು ಬರೆದಿಟ್ಟ ಕಾಗದವನ್ನೋದಿ ಶೈಲೆಯ ಮನಸ್ಸಿನ ಭಾರ ಹಗುರವಾಯಿತು. ಅವರ ದಾಂಪತ್ಯ ಜೀವನದಲ್ಲಿ ಕಾರ್ಗತ್ತಲಿನಂತೆ ಕವಿದುಬಂದ ಮೋಡ ಹಗುರವಾಗಿ ತೇಲಿಹೋಗಿತ್ತು.

ಪತ್ರಿಕೆಗಳ ಮೂಲಕ ಕನ್ನಡಿಗರಿಗೆ ಪರಿಚಿತರಾಗಿರುವ ಶ್ರೀಮತಿ ಆನಂದಿ ಸದಾಶಿವರಾವ್ ಅವರ ಪ್ರಥಮ ಕಥಾಸಂಕಲನ 'ಅಪರ್ಣಾ'. ಸಂಸಾರದ ವಿವಿಧ ತರಂಗಗಳ ಸುಂದರ ಚಿತ್ರಣ. ಇಲ್ಲಿನ ಕೆಲವೊಂದು ಕತೆಗಳಲ್ಲಿ ವಸ್ತುವಿನ ಹೊಸತನವನ್ನು ಕಾಣಬಹುದು. ಅಂತಹ ಒಂದು ಕಥೆ 'ಮನಸ್ಸಿನ ಒಲವು'. ಫ್ಯಾಶನ್‌ಮಾಡಿಕೊಂಡು ತಿರುಗುವ ಹೆಂಗಸರು ಏನು ಸಮಾಜಸೇವೆ ಮಾಡುತ್ತಾರೆ? ಎಂದು ಹಂಗಿಸುವ ಹೆಂಗಸರಿಗೊಂದು ಸವಾಲು ಈ ಕಥೆ.

ಶ್ರೀಮತಿ ರಾಜೇಶ್ವರಿ ನರಸಿಂಹಮೂರ್ತಿ ಅವರ ಕಥಾಸಂಕಲನ 'ಬೆಳದಿಂಗಳ ರಾತ್ರಿ'ಗೆ ಮುನ್ನುಡಿ ಬರೆಯುತ್ತ ಶ್ರೀ ವಿ. ಸೀ. ಅವರು "ಲೇಖಕಿಯರು ಕಾಣುವ ಸುಖದುಃಖ, ಸರಸ ವಿರಸ, ವ್ಯಂಗ್ಯಭ್ರಾಂತಿ ವಿಷಮತೆ ವಿಶದತೆ ವಿಸ್ತಾರ ಸಹಜವಾದವು. ದಿನ ಜೀವನದಲ್ಲಿ ಕಾಣುತ್ತಿರುವುದು. ಅವನ್ನು ಅವರು ಸಾಮರಸ್ಯದಿಂದ ನೋಡುತ್ತಾರೆ. ಯಾವುದರಲ್ಲೂ ಅತಿಯಿಲ್ಲ. ಹೊಸ ಕಾಲದ ಕತೆಗಾರರಿಗೆ ಪ್ರಿಯವಾದ ಕೆಲವು ವೃತ್ತಿಗಳನ್ನು ಇವರು ಆರಿಸಿಕೊಳ್ಳುವುದಿಲ್ಲ. ಅಲ್ಲಿ ತರಬಹುದಾಗಿದ್ದ ರಂಗು ರೋಮಾಂಚನಗಳನ್ನೂ ಸೆಳೆತಗಳನ್ನೂ ಈ ಕತೆಗಳಲ್ಲಿ ಕಾಣಲಾಗದು. ಇರುವುದು ನಿಷ್ಕಪಟವಾಗಿ ಮರ್ಯಾದೆ ಮೀರದೆ ಇವೆ" ಎಂದಿದ್ದಾರೆ. 'ಸಿನಿಮಾಕ್ಕೆ ಸೇರಿದಳು', 'ಆಸೆ-ನಿರಾಸೆ' 'ಮಹಾಸತಿ' ಮೊದಲಾದ ಕೌಟುಂಬಿಕ ಚಿತ್ರಗಳ ಜೊತೆಗೆ ಎರಡು ದೆವ್ವದ ಕತೆಗಳಿರುವುದು ಈ ಸಂಕಲನದ ವೈಶಿಷ್ಟ್ಯ. ಈ ಲೇಖಕಿಯರ ಎರಡನೆಯ ಕಥಾಸಂಕಲನ 'ಗುಲಾಬಿ' ಈಗ ಅಚ್ಚಿನಲ್ಲಿದೆ.

ಶ್ರೀಮತಿ ರಾಜಲಕ್ಷ್ಮಿ ಎನ್. ರಾವ್ ಅವರ 'ಸಂಗಮ' ನವ್ಯ ಕತೆಯಲ್ಲಿ ಒಂದು ಪ್ರಯೋಗ. ಈ ಸಂಕಲನದಲ್ಲಿನ 'ಸ್ಕಾಲರ್ ಜಿಪ್ಸಿ', 'ಫೀಡ್ರಾ', 'ಕೆಂಪು ಕಪ್ಪು ಬಿಳುಪು' ಇವು ನವ್ಯತೆಯ ಆವಿರ್ಭಾವ. ಮಲಮಗನನ್ನು ಕಾಮಿಸಿ ಅವನು ನಿರಾಕರಿಸಿದಾಗ ಅವನ ಮೇಲೆ ತಪ್ಪು ಹೊರಿಸುವ ಪಾರ್ವತಿ ಗ್ರೀಕ್ ಸಾಹಿತ್ಯದ 'ಫೀಡ್ರಾ'ಳ ತದ್ರೂಪ. ಪಾಶ್ಚಿಮಾತ್ಯ ಸಾಹಿತ್ಯದ ಪರಿಚಯವಿಲ್ಲದವರಿಗೆ ರಾಜಲಕ್ಷ್ಮಿಯವರ ಸಾಂಕೇತಿಕ ಕತೆಗಳು ಸ್ಪಷ್ಟವಾಗಿ ಅರ್ಥವಾಗುವುದು ಕಷ್ಟ. ಆದರೆ ನಿರೂಪಣೆಯ ನಾವೀನ್ಯ ಓದುಗರ ಮೆಚ್ಚುಗೆಗೆ ಎಂದೂ ಪಾತ್ರ. ರಾಜಲಕ್ಷ್ಮಿ ಅವರು ಕನ್ನಡದಲ್ಲೇ ಅಲ್ಲ, ಇಂಗ್ಲಿಷ್, ಹಿಂದಿ ಭಾಷೆಗಳಲ್ಲೂ ನವ್ಯ ಕತೆಗಳನ್ನು ಬರೆದು ಯಶಸ್ವಿಯಾಗಿದ್ದಾರೆ.

ಶ್ರೀಮತಿ ಸುಶೀಲಾ ಕೊಪ್ಪರ ಅವರ ಕಥಾಸಂಕಲ 'ಲೇಖಕನ ಹೆಂಡತಿ'. ಇದಕ್ಕೆ ರಾಜ್ಯ ಸರ್ಕಾರದ ಬಹುಮಾನ ಬಂದಿದೆ. ಪ್ರಸಿದ್ಧ ಸಾಹಿತಿ ವಿದ್ಯಾಪತಿಯ ಮಡದಿ ವಿದ್ಯಾಧರೆ. ಹೇಗಿರಬಹುದು? ನೋಡಲು ಮಹಿಳಾ ಮಂಡಲದ ಸದಸ್ಯರು ಹೋದರು. ಅವರಿಗೆ ಕಂಡದ್ದೇನು? ಎಲ್ಲೆಲ್ಲೂ ಮಕ್ಕಳ ರಚ್ಚೆ, ರಂಪು. ಕನ್ನಡ ಸಾಹಿತಿಯ ಹೆಂಡತಿಗೆ ಕನ್ನಡ ಓದಲೂ ಬಾರದು! ಮಹಿಳೆಯರ ಸಮಸ್ಯೆಗಳ ಮೇಲೆ ಆಗಾಗ ಪತ್ರಿಕೆಗಳಲ್ಲಿ ಲೇಖನಗಳನ್ನು ಬರೆಯುವ ಶ್ರೀಮತಿಯವರು ತಮ್ಮ ಕತೆಗಳಲ್ಲೂ ಹಲವಾರು ಸಮಸ್ಯೆಗಳನ್ನು ಚರ್ಚಿಸಿದ್ದಾರೆ.

ಶ್ರೀಮತಿ ಎಚ್. ಎಸ್. ಪಾರ್ವತಿ ಅವರ 'ಹೆಣ್ಣು ಹೃದಯ ಮತ್ತು ಇತರ ಕಥೆಗಳು' ಸಂಕಲನದಲ್ಲಿ ಸ್ತ್ರೀ ಜೀವನದ ವಿವಿಧ ಚಿತ್ರಗಳಿವೆ.

'ತಾಯ ಕಾಣದ ಜೀವ' ಕಥಾಸಂಕಲನವನ್ನು ಪ್ರಕಟಿಸಿ ಕನ್ನಡಿಗರ ಮನ್ನಣೆ ಗಳಿಸಿದ ಸೌ. ಭುವನೇಶ್ವರಿ ಅವರು ತಮ್ಮ ಎರಡನೆಯ ಕಥಾಸಂಕಲನವಾಗಿ 'ಕರುಳಿನ ಕರೆ'ಯನ್ನು ಪ್ರಕಟಿಸಿದ್ದಾರೆ. ಸಂಕಲನಕ್ಕೆ ದ. ರಾ. ಬೇಂದ್ರೆಯವರು ಮುನ್ನುಡಿ ಬರೆದಿದ್ದಾರೆ. ಶ್ರೀಮತಿಯವರು ಕನ್ನಡಿಗರಿಗೆ ಪರಿಚಿತರಾಗಿರುವ ಕವಿ ಶ್ರೀ ಸಿಂಪಿಲಿಂಗಣ್ಣನವರ ಮಗಳು. ಇವರ ಕತೆಗಳಲ್ಲಿ ಅನುಭವದ ಮಾರ್ನುಡಿಯಿದೆ. 'ಪ್ರೇಮಸ್ವಪ್ನ' ಮತ್ತು 'ನನ್ನ ಬೀಳ್ಕೊಡುಗೆ' ಇವೆರಡೂ ಲೇಖಕಿಯರ ಶಿಕ್ಷಕ ಜೀವನದ ಸ್ಮೃತಿಯ ಒರೆಗಲ್ಲು. 'ಪಿತೃಪ್ರೇಮ', 'ಮಾರ್ಪಾಡು', 'ಮಾತೃಶಕ್ತಿ' ಇವುಗಳು ಸ್ವಾನುಭವ ದಿಂದ ರೂಪಿತ. 'ಕರುಳಿನ ಕರೆ' 'ಹೇಮಣ್ಣ ಮಾಸ್ತರು' 'ಶಾಪಗ್ರಸ್ತ ದೇವತೆ' ಇವುಗಳಿಗೆ ಸುತ್ತಲಿನ ಜೀವನ ಆಧಾರ. ಪರಿಚಿತವಲ್ಲದ ಜೀವನದ ಜಟಿಲತೆಯನ್ನು ಚಿತ್ರಿಸಲು ಹೊರಟು ತೊಳಲಾಡುವುದಕ್ಕಿಂತ ಪರಿಚಯವಿದ್ದ ರಂಗದಲ್ಲಿನ ನೂರು ಬಗೆಯನ್ನು ಹೇಗೆ ಜೀವಂತವಾಗಿ ವರ್ಣಿಸಬಹುದು ಎನ್ನುವುದಕ್ಕೆ ಈ ಸಂಕಲನವೊಂದು ಉತ್ತಮ ಉದಾಹರಣೆ. ಕತೆ ಬರೆಯಬೇಕೆಂದು ಬರೆದು ಅವುಗಳಲ್ಲಿ ಭಾವ ತುಂಬುವ ಪ್ರಯತ್ನಗಳಲ್ಲ ಇವು. ಭಾವ ತುಂಬಿ ಬಂದು ಕಥೆಗಳಾಗಿ ಹರಿದಿವೆ ಇಲ್ಲಿಯ ಚಿತ್ರಗಳು.

ಒಟ್ಟಿನಲ್ಲಿ ಹೇಳುವುದಾದರೆ ಕಾದಂಬರಿಗಳ ಕೊಡುಗೆಗಿಂತ ಕಥಾ ಸಾಹಿತ್ಯದಲ್ಲಿ ಮಹಿಳೆಯರ ಕೊಡುಗೆ ಹೆಚ್ಚು ಸತ್ವಶಾಲಿಯಾಗಿದೆ. ಕನ್ನಡದ ಹಿರಿಯ ಕತೆಗಾರರ ಸಾಲಿನಲ್ಲಿ ನಿಲ್ಲಬಲ್ಲ ಕತೆಗಾರ್ತಿಯರಿದ್ದಾರೆ. ಕನ್ನಡ ಮಹಿಳೆಯರಿಂದ ವಿಶ್ವಕಥಾ ಸಾಹಿತ್ಯದಲ್ಲಿ ಸ್ಥಾನವನ್ನು ಪಡೆಯಬಲ್ಲ ಕತೆಗಳು ರಚಿತವಾಗಿವೆ.

ಕಾವ್ಯ

ಯಾವ ಕಾರಣದಿಂದಲೋ ಏನೋ ಮಹಿಳೆ ಎಲ್ಲ ದೇಶಗಳಲ್ಲೂ ಎಲ್ಲ ಕಾಲಗಳಲ್ಲೂ ಕಾವ್ಯವನ್ನು ಅನಾದರಿಸಿದ್ದಾಳೆ. ಯಾವ ದೇಶದ ಸಾಹಿತ್ಯ ಚರಿತ್ರೆಯನ್ನೇ ತೆಗೆದುಕೊಂಡರೂ ಕಾವ್ಯವನ್ನು ಬರೆದ ಮಹಿಳೆಯರು ಬಹಳ ಕಡಿಮೆ. ಬೆಳಗೆರೆ ಜಾನಕಮ್ಮನವರ ಕಾವ್ಯಧಾರೆಯನ್ನು ಬಿಟ್ಟರೆ ಕನ್ನಡ ಕಾವ್ಯಕೆ ಪುಷ್ಟಿಕರವಾದ ನೀರನ್ನೆರೆದಿರುವವರು ಶ್ರಿಮತಿ ಜಯದೇವಿ ತಾಯಿ ಲಿಗಾಡೆ ಮತ್ತು ಕುಮಾರಿ ಎಲ್. ಜಿ. ಸುಮಿತ್ರ ಅವರು. ಶ್ರಿಮತಿ ಜಯದೇವಿ ಅವರ 'ತಾಯಿಯ ಪದಗಳು' ಕನ್ನಡಕ್ಕೆ ಹೊಸ ಕಾಣಿಕೆ. ನಾಡಿನ ತಾಯಂದಿರು ಹಾಡಿರುವ ಜನಪದ ಶೈಲಿಯಲ್ಲಿ ಬರೆದ ಗೀತೆಗಳಿವು. ಕೆಳಗಿನ ಈ ನುಡಿಗಳು ಜಯದೇವಿ ಅವರ ಕಾವ್ಯಶೈಲಿಗೆ ಉದಾಹರಣೆ. ಕವಯಿತ್ರಿಯ ಜೀವನ ದರ್ಶನದ ಬಗ್ಗೆ ಇಂತಹ ಸಾವಿರ ತ್ರಿಪದಿಗಳು ಇಲ್ಲಿವೆ.

"ನಯಬೇಕ ನುಡಿಯಲ್ಲಿ ಭಯಬೇಕು ನಡೆಯಲ್ಲಿ
ದಯಬೇಕ ಸಕಲ್ಯ ಜೀವರಲಿ। ತಾಯವ್ವ
ಲಯಬೇಕ ಶಿವನ್ಯ ನೆನೆವಲ್ಲಿ."

ಶ್ರೀಮತಿಯವರು ಸ್ವಲ್ಪ ಕಾಲದ ಹಿಂದೆ ಕರ್ಮಯೋಗಿ ಸಿದ್ಧರಾಮನ ಜೀವನ ಚರಿತ್ರೆಯನ್ನು ತ್ರಿಪದಿಯಲ್ಲಿ ಮಹಾಕಾವ್ಯವಾಗಿ ರಚಿಸಿ ಕನ್ನಡಿಗರಿಗೆ ನೀಡಿದ್ದಾರೆ. ಭಾವದ ರಸವರ್ಷ ಜಯದೇವಿ ಅವರ ಕಾವ್ಯದ ಜೀವಾಳ. ಅಲ್ಲದೆ ಅವರ ಕಾವ್ಯ ಭಕ್ತಿಪ್ರಧಾನ.

ಜಯದೇವಿ ತಾಯಿ ಅವರನ್ನು ಬಿಟ್ಟರೆ ಕಾವ್ಯರಂಗದಲ್ಲಿ ಸ್ವಲ್ಪಮಟ್ಟಿನ ಕೃಷಿ ಮಾಡಿರುವವರೆಂದರೆ ಎಲ್. ಜಿ. ಸುಮಿತ್ರ ಅವರು. 'ಮುತ್ತ್ಯಾಲ ಮಡು' 'ಕಾವ್ಯ ಕಾವೇರಿ' ಇವೆರಡರಲ್ಲಿಯೂ ಪ್ರಕೃತಿಯ ವಿವಿಧ ನೋಟಗಳ ಚಿತ್ರಣವಿದೆ.

ಶ್ರೀಮತಿ ತಿರುಮಲೆ ರಾಜಮ್ಮನವರೂ ಕವನಗಳನ್ನು ಬರೆದಿದ್ದಾರೆ.

ಕೆಲವು ಮಹಿಳೆಯರು ಆಗಾಗ ಪತ್ರಿಕೆಗಳಲ್ಲಿ ಕವನಗಳನ್ನು ಬರೆದಿದ್ದಾರೆ. ಆದರೆ ಯಾವ ವಿಶಿಷ್ಟ ಕೊಡುಗೆಯೂ ಇನ್ನೂ ಬಂದಿಲ್ಲ.

ಕಾವ್ಯನಾಟಕ

ಕಾವ್ಯವನ್ನು ಬರೆದ ಮಹಿಳೆಯರೇ ಕಡಿಮೆ. ನಾಟಕಗಳನ್ನು ಬರೆದಿರುವ ಮಹಿಳೆಯರು ಇನ್ನೂ ಕಡಿಮೆ. ಇನ್ನು ಕಾವ್ಯನಾಟಕವನ್ನು ಬರೆದವರಂತೂ ಒಬ್ಬರೇ ಎನ್ನಬಹುದು. ಸುಮಾರು ಮೂವತ್ತೈದು ವರುಷಗಳ ಹಿಂದೆ ಊರ್ಮಿಳೆಯನ್ನು ಕುರಿತು ಕಾವ್ಯನಾಟಕ 'ತಪಸ್ವಿನಿ'ಯನ್ನು ಕನ್ನಡಿಗರಿಗೆ ಕೊಟ್ಟ 'ಭಾರತಿ' (ಶ್ರೀಮತಿ ತಿರುಮಲೆ ರಾಜಮ್ಮನವರು) ೧೯೫೭ರಲ್ಲಿ 'ಮಹಾಸತಿ' ಎಂಬ ಕಾವ್ಯನಾಟಕವನ್ನು ಬರೆದು ಪ್ರಕಟಿಸಿದ್ದಾರೆ. ದೇಕಬ್ಬೆ ನುಗು ನಾಡಧಿಪತಿ ರವಿಗನ ಮಗಳು. ಪತಿಯ ಮರಣವಾರ್ತೆ ಕೇಳಿ ವೀರಸತಿಗೆ ಉಚಿತವಾದ ಮಾರ್ಗವನ್ನು ಹಿಡಿದ ಮಹಾಸತಿಯ ಜೀವನ ನಿರೂಪಣೆ. ಕಾವ್ಯಕ್ಕೆ ಮುನ್ನುಡಿ ಬರೆಯುತ್ತ ವಿ. ಸೀ. ಅವರು "ಭಾರತೀಯವರ ಬದುಕಿನಲ್ಲೂ ಇತರ ಕೃತಿಗಳಲ್ಲೂ ನಾಡು ಯಾವ ಗುಣಗಳನ್ನು ಕಂಡಿದೆಯೋ ಅವು ಇದರಲ್ಲಿಯೂ ಕಾಣುತ್ತವೆ. ಸೌಂದರ್ಯ, ಶುಚಿ, ನಿಷ್ಠೆ ಬಾಳಿನ ತೀವ್ರತೆ ಲಲಿತವಾಗಿ, ಅರ್ಥವತ್ತಾಗಿ ಬರೆವ ರೀತಿ ಅವು ಈ ನಾಟಕದಲ್ಲಿ ಕಾಣುತ್ತವೆ", ಎಂದಿದ್ದಾರೆ. ಏಚನ ದೇಹವನ್ನು ತಂದು ಮಹಾಚಿತೆಯನ್ನು ಒಡ್ಡಿದಾಗ ದೇಕಬ್ಬೆ ತಂದೆ ತಾಯಿಗಳ ಬಂಧು ಮಿತ್ರರ ಅನುಮತಿ ಪಡೆದು ಚಿತೆಯೇರಿದಳು. ಚಿತೆಯೇರುವ ಮುನ್ನ ದೇಕಬ್ಬೆ

"ಸೊಗಮಿತ್ತು ಜೀವನದೊಳಿಂಬೊಗೆದು ಇನ್ನವರ
ಮೆನ್ನ ಜೀವಾನಂದಕಾಧಾರಮಾಗಿರ್ದ
ಮಮತೆಯಾಗರವೆ! ತಾಯ್ನೆಲವೆ..........."

ಎನ್ನುತ್ತಾಳೆ. ವೀರರಮಣಿಗೆ ಉಚಿತವಾದ ಮಾತುಗಳು. ಇಂತಹ ಸಾಲುಗಳಲ್ಲಿ

ಭಾರತಿಯವರ ಕಾವ್ಯ ಕಾವ್ಯನಾಟಕದ ಸತ್ವವನ್ನು ಕಾಣುತ್ತೇವೆ. ಭಾರತಿಯವರ ಎರಡು ಕಾವ್ಯನಾಟಕಗಳೂ ರಂಗದ ಮೇಲೆ ಯಶಸ್ವಿಯಾಗಬಲ್ಲವು.

ನಾಟಕ

ಬಾನುಲಿಯಲ್ಲಿ ಆಗಾಗ ನಾವು ಮಹಿಳೆಯರು ಬರೆದ ನಾಟಕಗಳನ್ನು ಕೇಳುತ್ತೇವೆ. ಆದರೆ ನಾಟಕ ಸಾಹಿತ್ಯಕ್ಕೆ ತಮ್ಮ ಕೊಡುಗೆಯನ್ನು ಕೊಟ್ಟಿರುವವರು ಬೆಂಗಳೂರಿನ ಶ್ರೀಮತಿ ಟಿ. ಸುನಂದಮ್ಮನವರೊಬ್ಬರೆ ಎನ್ನಬಹುದು. ಇವರ ನಾಟಕಗಳೆಲ್ಲ ಹಾಸ್ಯರಸದಿಂದ ತುಂಬಿವೆ. ಕನ್ನಡ ಸಾಹಿತ್ಯದಲ್ಲೇ 'ಹಾಸ್ಯ' ಕಡಿಮೆ. ಇನ್ನು ಮಹಿಳೆಯರಿಂದ ರಚಿತವಾದ ಸಾಹಿತ್ಯದಲ್ಲಂತೂ 'ಹಾಸ್ಯ' ಇನ್ನೂ ಕಡಿಮೆ. ಹೀಗಿರುವಾಗ ಹಲವಾರು ವರುಷಗಳಿಂದ ಹಾಸ್ಯಭರಿತ ವಿಡಂಬನಾತ್ಮಕ ನಾಟಕಗಳನ್ನು ಬರೆದಿರುವ, ಬರೆಯುತ್ತಿರುವ ಶ್ರೀಮತಿ ಸುನಂದಮ್ಮನವರು ಅಭಿನಂದನೆಗೆ ಪಾತ್ರರು. 'ಆದರ್ಶದ ಆಡಂಬರ', 'ಸಾಮೂಹಿಕ ಪಾಠಶಾಲೆ' 'ದೀಪಾವಳಿ ಧೂಪಾವಳಿ', 'ಅತ್ತೆಮ್ಮನ ದೀಪಾವಳಿ' ಮೊದಲಾದ ಅನೇಕ ಪ್ರಹಸನಗಳಲ್ಲಿ ಸಮಾಜದ ಅದರಲ್ಲೂ ಮಹಿಳೆಯರ ಜೀವನದ ವಿಮರ್ಶೆಯಿದೆ. 'ಗೃಹಲಕ್ಷ್ಮಿ' 'ಕೂಸು ಹುಟ್ಟುವುದಕ್ಕೆ ಮುಂಚೆ', 'ಚಿಕ್ಕಪ್ಪನ ಉಯಿಲು' ಇವು ಮೂರೂ ೧೯೬೦ರಲ್ಲಿ ಪ್ರಕಟವಾದ ನಾಟಕಗಳು. ಗಂಡನ ಪಂಚೆಯನ್ನೂ ಮಗಳ ಕಾಲೇಜು 'ನೋಟ್ಸ್' ಗಳನ್ನೂ, ಅತ್ತೆಯ ಮಡಿಸೀರೆಯನ್ನೂ, ಹಳೇಪಾಗಿನವನಿಗೂ, ಹಳೇಪೇಪರಿನವನಿಗೂ ಮಾರಿ ಮನೆ "clean" ಮಾಡಿ 'ಗೃಹಲಕ್ಷ್ಮಿ' ಸ್ಪರ್ಧೆಯಲ್ಲಿ ಗೆದ್ದ 'ಗೃಹಲಕ್ಷ್ಮಿ' ಮೊದಲಾದ ನಾಟಕಗಳು ಈಗಾಗಲೇ ರಂಗದ ಮೇಲೆ ಯಶಸ್ವಿಯಾಗಿವೆ.

ಜೀವನ ಚರಿತ್ರೆ

ಕಾದಂಬರಿ ಕಥೆಗಳನ್ನು ಬಿಟ್ಟರೆ ಮಹಿಳೆಯರಿಂದ ಉತ್ತಮ ಬರಹಗಳು ಮೂಡಿ ಬಂದಿರುವುದೆಂದರೆ ಜೀವನ ಚರಿತ್ರೆಗಳು. ಇವುಗಳಲ್ಲಿ ಹೆಚ್ಚು ಭಾಷಾಂತರಗಳೇ ಇವೆ. ಎಚ್. ವಿ. ಸಾವಿತ್ರಮ್ಮನವರು ಭಾಷಾಂತರಿಸಿರುವ ಮಹಾತ್ಮಗಾಂಧಿಯವರ ಜೀವನ ಚರಿತ್ರೆ, ಎಂ. ಆರ್. ಲಕ್ಷ್ಮಮ್ಮನವರ ಎಲಿನಾರ್ ರೂಸ್‌ವೆಲ್ಟ್, ಉಷಾದೇವಿ ಅವರ 'ಅಮೆರಿಕದ ಮಹಿಳೆಯರು', ಶಕುಂತಲ ನಾಡಿಗ ಅವರ 'ವಿಜಯಲಕ್ಷ್ಮಿ ಪಂಡಿತ್', ಚಿ. ನ. ಮಂಗಳ ಅವರ 'ಹೆಲನ್ ಕೆಲರ್', ಕೆ. ವಿ. ರತ್ನಮ್ಮನವರ 'ಮೇಡಂ ಕ್ಯೂರಿ', ಭಾರತಿ ಅವರು ಬರೆದಿರುವ ವೀಣೆ ಶೇಷಣ್ಣನವರ ಜೀವನ ಚರಿತ್ರೆ, ಇವು ಗಮನಾರ್ಹ ಕೃತಿಗಳು. ಹೆಲನ್ ಕೆಲರ್ ಗ್ರಂಥಕ್ಕೆ ರಾಜ್ಯ ಸರ್ಕಾರದ ಬಹುಮಾನ ಬಂದಿದೆ.

ಲಘು ಬರಹಗಳು

ಬೀಚಿ ಅವರ 'ತಿಮ್ಮನ ತಲೆ'ಯಂತಹ ಬರಹಗಳಾಗಲಿ, ಮೂರ್ತಿರಾಯರ 'ಹಗಲು ಗನಸುಗಳು' ಅಂತಹ ಚಿತ್ರಗಳಾಗಲಿ, ಸಂಕಲನರೂಪದಲ್ಲಿ ಮಹಿಳೆಯರಿಂದ ಪ್ರಕಟ

ವಾಗಿಲ್ಲ. ವಾರ ಪತ್ರಿಕೆಗಳಲ್ಲಿ, ಮಾಸ ಪತ್ರಿಕೆಗಳಲ್ಲಿ, ಆಗಾಗ ಟಿ. ಸುನಂದಮ್ಮ, ಸುನೀತಿ ಕೃಷ್ಣಸ್ವಾಮಿ, ಶಾಂತ ಲಿಂಗೇಗೌಡ, ಸುಶೀಲ ಕೊಪ್ಪರ, ಆರ್ಯಾಂಬ ಪಟ್ಟಾಭಿ ಇವರಿಂದ ಹರಟೆಗಳು ಲಘು ಬರಹಗಳು ಪ್ರಕಟವಾಗುತ್ತಿವೆಯೇ ಹೊರತು ಯಾವ ಗಮನಾರ್ಹ ಕಾಣಿಕೆಯೂ ಇದುವರೆಗೂ ಆಗಿಲ್ಲ.

ಬಾಲ ಸಾಹಿತ್ಯ

ಮಗುವಿನ ಬೆಳವಣಿಗೆಗೆ ಮೂಲಾಧಾರವಾದ ಮಹಿಳೆ ಮಕ್ಕಳ ಸಾಹಿತ್ಯಕ್ಕೆ ಅತ್ಯಲ್ಪ ಕಾಣಿಕೆ ಸಲ್ಲಿಸಿರುವುದು ವಿಷಾದಕರ. ಕನ್ನಡ ಸಾಹಿತ್ಯದಲ್ಲೇ ಮಕ್ಕಳಿಗಾಗಿ ಬರೆದ ಸಾಹಿತ್ಯ ಕಡಿಮೆ. ದಿ. ಆರ್. ಕಲ್ಯಾಣಮ್ಮನವರಿಂದ ಸ್ಥಾಪಿತವಾಗಿ ಶ್ರೀಮತಿ ಕೆ. ಟಿ. ಬನಶಂಕರಮ್ಮನವರಿಂದ ಪೋಷಿಸಲ್ಪಡುತ್ತಿರುವ 'ಮಕ್ಕಳ ಬಾವುಟ' ಮಕ್ಕಳಿಗೆ ಉತ್ತಮ ಸಾಹಿತ್ಯ. 'ಮೋಹನ ಮಾಲೆ'ಯಲ್ಲಿ ಜಯಲಕ್ಷ್ಮಿ ಶ್ರೀನಿವಾಸನ್ ಅವರು ಬರೆದಿರುವ ಕೆಲವು ಕತೆಗಳು, ದಕ್ಷಿಣ ಭಾಷಾ ಸಂಸ್ಥೆಯ ಆಶ್ರಯದಲ್ಲಿ ಪ್ರಕಟವಾಗಿರುವ ಪುಟ್ಟತಾಯಮ್ಮನವರ 'ಚಿಟಾರಿ ಮೊಲ', ಎಚ್. ವೈ. ಸರಸ್ವತಮ್ಮನವರು ಮಕ್ಕಳಿಗಾಗಿ ಬರೆದಿರುವ ಚಿತ್ರ ಭಾರತ ಇವನ್ನು ಬಿಟ್ಟರೆ ಬಾಲ ಸಾಹಿತ್ಯಕ್ಕೆ ಮಹಿಳೆಯರ ಕೊಡುಗೆ ಬಹಳ ನಿರಾಶಾದಾಯಕ. ತಾವು ಅಜ್ಜ ಅಜ್ಜಿಯರಿಂದ ಕೇಳಿದ ಕತೆಗಳನ್ನಾದರೂ ಬರೆದಿಟ್ಟರೆ ಅವು ಮಕ್ಕಳಿಗೆ ರಂಜನೀಯವಾಗುವುದರಲ್ಲಿ ಸಂದೇಹವಿಲ್ಲ.

ವಿಚಾರ, ವಿಜ್ಞಾನ, ವಿಮರ್ಶಾ ಸಾಹಿತ್ಯ

ಕೀಟಗಳ ಬಗ್ಗೆ ಶ್ರೀಮತಿ ರುಕ್ಕಮ್ಮನವರ ಒಂದು ಪುಸ್ತಕ, ಮನಶ್ಶಾಸ್ತ್ರದ ಬಗ್ಗೆ ಶ್ರೀಮತಿ ವನಜ ಉಡುಪ ಅವರ ಪುಸ್ತಕ ಹೀಗೆ ಅಲ್ಲೊಂದು ಇಲ್ಲೊಂದು ಪುಸ್ತಕವನ್ನು ಬಿಟ್ಟರೆ ಯಾವ ಗಮನಾರ್ಹ ಕೊಡುಗೆಯೂ ಇಲ್ಲ. ಪತ್ರಿಕೆಗಳ ಮೂಲಕ ವೈದ್ಯಕೀಯ ಸಲಹೆ ನೀಡುತ್ತಿರುವ ಡಾ. ಅನುಪಮಾ ನಿರಂಜನ ಅವರ ಕೃತಿ 'ತಾಯಿ–ಮಗು' (ಕರ್ಮವೀರದಲ್ಲಿ ಧಾರಾವಾಹಿಯಾಗಿ ಪ್ರಕಟವಾಯಿತು) ಒಂದು ಉತ್ತಮ ಕಾಣಿಕೆ. ಅನುಭವದ ಆಧಾರದ ಮೇಲೆ ರಚಿತವಾಗಿರುವಂತ ಇಂತಹ ವೈಜ್ಞಾನಿಕ ವಿಚಾರಸಾಹಿತ್ಯ ಹೆಚ್ಚಬೇಕು. ಪತ್ರಿಕೆಗಳಲ್ಲಿ ಪ್ರಕಟವಾಗುವ ವಿಮರ್ಶೆಗಳನ್ನು ಬಿಟ್ಟರೆ ವಿಮರ್ಶಾಸಾಹಿತ್ಯ ಇಲ್ಲವೆಂದೇ ಹೇಳಬೇಕು. ಶ್ರೀಮತಿ ಸರೋಜಿನಿ ಮಹಿಷಿ ಅವರು ತಮ್ಮ ಡಾಕ್ಟರೇಟ್ ಪ್ರಶಸ್ತಿಗಾಗಿ ಬರೆದ 'ಕನ್ನಡ ಕವಯತ್ರಿಯರು' ಗ್ರಂಥ ಹಾಗೂ ಶ್ರೀಮತಿ ಗುರುದೇವಿ ಹಿರೇಮಠ ಅವರ 'ಕನ್ನಡ ವಚನಗಾರ್ತಿಯರು' ಇಂತಹ ಬರವಣಿಗೆ ಹೆಚ್ಚಬೇಕು.

ಇತರ

ಪಾಕಶಾಸ್ತ್ರದ ಬಗ್ಗೆ ಪ್ರಕಟವಾಗಿರುವ ಒಂದೆರಡು ಪುಸ್ತಕಗಳೂ, ಕಸೂತಿ ಕಲೆಯ ಬಗ್ಗೆ

ಸರೋಜಿನಿ ಮಹಿಷಿಯವರು ಪ್ರಕಟಿಸಿದ ಪುಸ್ತಕವೂ, ಕೇಶಾಲಂಕಾರ ಹಾಗೂ ಗೃಹಾಲಂಕಾರಗಳ ಬಗ್ಗೆ ಶ್ರೀಮತಿ ಶಾಂತಾದೇವಿ ಮಾಳವಾಡರ ಪುಸ್ತಕವೂ ಉಪಯುಕ್ತ ಕೊಡುಗೆಗಳು.

ಮುಕ್ತಾಯ

ಕನ್ನಡ ನಾಡಿನ ಮಹಿಳೆಯರು ಈ ಇಪ್ಪತ್ತೈದು ವರುಷಗಳಲ್ಲಿ ಹಲವಾರು ಉತ್ತಮ ಕತೆಗಳನ್ನು ಕಾದಂಬರಿಗಳನ್ನು ರಚಿಸಿದ್ದಾರೆ. ಒಂದೆರಡು ಉತ್ತಮ ಕವನ ಸಂಕಲನಗಳೂ, ನಾಟಕಗಳೂ ಪ್ರಕಟವಾಗಿವೆ. ಜೀವನ ಚರಿತ್ರೆಗಳು ಹಲವಾರು ಬಂದಿವೆ. ಆದರೆ ಮಹಿಳೆಯರ ಸಾಹಿತ್ಯದಲ್ಲಿ ಇನ್ನೂ ಹೆಚ್ಚು ವಿಚಾರ ವಿಮರ್ಶೆ ಮೂಡಬೇಕು. ಅವರ ಬರಹ ಹೆಚ್ಚು ಸಾಂಸಾರಿಕ ಜೀವನ ಚಿತ್ರಣ. ಇದು ಸಹಜ. ಕನ್ನಡ ನಾಡಿನ ಮಹಿಳೆಗೆ ಮನೆಯೇ ಮೂಲಸ್ಥಾನ, ಕಾರ್ಯಸ್ಥಾನ. ಕತೆಗಳಲ್ಲಿ, ಕಾದಂಬರಿಗಳಲ್ಲಿ ಸಂಸಾರದ ಚಿತ್ರಣಗಳು ವಿಪುಲವಾಗಿರುವುದರಲ್ಲಿ ಯಾವ ಅಸಹಜತೆಯೂ ಇಲ್ಲ. ಆದರೆ ಈ ಇಪ್ಪತ್ತೈದು ವರ್ಷಗಳಲ್ಲಿ ಮಹಿಳೆಯ ಕಾರ್ಯರಂಗ ವಿಸ್ತಾರವಾಗಿದೆ. ಮನೆಯ ಹೊರಗಿನ ಅನೇಕ ರಂಗಗಳನ್ನು ಕನ್ನಡ ನಾಡಿನ ಮಹಿಳೆ ಬೆಳಗಿದ್ದಾಳೆ. ಅವುಗಳ ಚಿತ್ರ ಸಾಹಿತ್ಯದಲ್ಲಿ ಮೂಡಬೇಕು. ಗೃಹಿಣಿಯಾದ ಮಹಿಳೆ ರಾಷ್ಟ್ರೀಯ, ಅಂತರರಾಷ್ಟ್ರೀಯ ವ್ಯವಹಾರಗಳನ್ನೂ, ಜೀವನದ ಚಟುವಟಿಕೆಯನ್ನೂ, ರಾಜಕೀಯ ಏರುಪೇರುಗಳನ್ನೂ, ಆರ್ಥಿಕ, ಸಾಮಾಜಿಕ, ಧಾರ್ಮಿಕ ಸಮಸ್ಯೆಗಳನ್ನೂ ಅರ್ಥಮಾಡಿಕೊಳ್ಳಬೇಕು. ರಾಜಕೀಯ, ಶೈಕ್ಷಣಿಕ, ವೈದ್ಯಕೀಯ, ಔದ್ಯೋಗಿಕ ರಂಗಗಳಲ್ಲಿ ಇರುವ ಮಹಿಳೆಯರು ಕ್ರಿಯಾತ್ಮಕ ಸಾಹಿತ್ಯವನ್ನಲ್ಲದಿದ್ದರೆ ವಿಚಾರಸಾಹಿತ್ಯವನ್ನಾದರೂ ಬೆಳೆಸಬೇಕು. ಮಕ್ಕಳ ಸಾಹಿತ್ಯಕ್ಕೆ ಮಹಿಳೆಯರ ಕೊಡುಗೆ ಆರಂಭವಾಗಬೇಕಾಗಿದೆ. ಇವಕ್ಕೆಲ್ಲ ಓದುಗರ ಪ್ರಕಾಶಕರ ಉತ್ತೇಜನ ಬೇಕು.

ಒಟ್ಟಿನಲ್ಲಿ ಈ ಇಪ್ಪತ್ತೈದು ವರುಷಗಳಲ್ಲಿ ಕನ್ನಡ ನಾಡಿನ ಮಹಿಳೆಯರ ಕೊಡುಗೆ ಸರ್ವಾಂಗಪೂರಿತವಾಗಿಲ್ಲದಿದ್ದರೂ ಹೃದಯಸಂಪತ್ತಿನಲ್ಲಿ, ರಸಭಾವಗಳಲ್ಲಿ, ಕಲಾಕೌಶಲ್ಯದಲ್ಲಿ ಉತ್ತಮ ಕಾಣಿಕೆಯಾಗಿದೆ. ಕನ್ನಡ ನಾಡಿಗೆ ಕೀರ್ತಿ ತಂದಿದೆ. ಆದರೆ ಈ ಕೊಡುಗೆ ಹೆಚ್ಚು ವಿಸ್ತಾರವೂ ವ್ಯಾಪಕವೂ ವಿಚಾರಶೀಲವೂ ಆಗಬೇಕಾಗಿದೆ.

ನಮಗೆ ಭಾಷೆ ಎಂಬುದು ನೀರು ಗಾಳಿ ಅನ್ನ ಬಟ್ಟೆ ಮನೆ ಮಠಗಳಂತೆ ಕೆಲವು ಸಂದರ್ಭಗಳಲ್ಲಿ ಅವುಗಳಿಗಿಂತ ಹೆಚ್ಚಾಗಿ ಉಪಯೋಗವಾದ ಮತ್ತು ಅನಿವಾರ್ಯವಾದ ವಸ್ತು. ಆದುದರಿಂದ ನಾವು ನಮ್ಮ ಭಾಷೆಯನ್ನು ಪ್ರೀತಿಸುವುದೇನೂ ಆಶ್ಚರ್ಯವಲ್ಲ. ಭಾಷೆ ನಮಗೆ ನಮ್ಮ ದೇಹದ ಅವಯವಗಳಂತೆ ಪ್ರಿಯವಾದುದರಿಂದ ಅದು ಸರ್ವವಿಧದಲ್ಲಿಯೂ ಪುಷ್ಟವಾಗಿರಬೇಕೆಂದು ನಾವು ಸರ್ವಪ್ರಯತ್ನವನ್ನೂ ಮಾಡುತ್ತೇವೆ.

—ಗೊರೂರು ರಾಮಸ್ವಾಮಿ ಐಯ್ಯಂಗಾರ್

ಜಿ. ಹನುಮಂತರಾವ್

ತತ್ತ್ವಶಾಸ್ತ್ರ

ಇಪ್ಪತ್ತನೆಯ ಶತಮಾನದ ಮೊದಲನೆಯ ನಲವತ್ತು ವರ್ಷಗಳ ಕಾಲದಲ್ಲಿ ಭಾರತೀಯರ ತತ್ತ್ವ ಚಿಂತನೆಯಲ್ಲಿ ಎರಡು ಬಗೆಯಾದ ಬದಲಾವಣೆಗಳು ಕಾಣಿಸಿಕೊಂಡವು. ಭಾರತದ ಮುಖ್ಯ ವಿಶ್ವವಿದ್ಯಾನಿಲಯಗಳಲ್ಲಿ ಪಾಶ್ಚಾತ್ಯ ತತ್ತ್ವಶಾಸ್ತ್ರವು ಪಠ್ಯವಿಷಯವಾಯಿತು. ಪ್ಲೇಟೋ, ಅರಿಸ್ಟಾಟಲ್, ಕ್ಯಾಂಟ್, ಹೆಗೆಲ್, ಷೊಪೆನ್ ಹೌರ್, ಹರ್ಬರ್ಟ್ ಸ್ಪೆನ್ಸರ್, ಲಾಕ್, ರೂಸೋ, ಜಾನ್ ಸ್ಟೂಯರ್ಟ್, ಮಿಲ್ ಮುಂತಾದ ಪಾಶ್ಚಾತ್ಯ ತಾತ್ತ್ವಿಕರ ತತ್ತ್ವದ ಪರಿಚಯ ಹೆಚ್ಚಿ ವ್ಯಕ್ತಿಸ್ವಾತಂತ್ರ್ಯ ಮತ್ತು ವಿಚಾರ ಸ್ವಾತಂತ್ರ್ಯಗಳಲ್ಲಿ ಭಾರತೀಯರಿಗೆ ಆಸಕ್ತಿ ಹುಟ್ಟಿತು. ಇದಾದನಂತರ ಭಾರತೀಯ ವಿಶ್ವವಿದ್ಯಾನಿಲಯಗಳಲ್ಲಿ ಭಾರತದ ತತ್ತ್ವವೂ ಒಂದು ಪಠ್ಯ ವಿಷಯವಾಯಿತು. ಮೊದಲಲ್ಲಿ ಭಾರತೀಯ ವಿದ್ವಾಂಸರು ಕ್ಯಾಂಟ್ ಮತ್ತು ಹೆಗೆಲ್‌ರ ದರ್ಶನಗಳನ್ನು ವಿಶೇಷವಾಗಿ ಹೋಲುವ ಶಂಕರವೇದಾಂತ ದರ್ಶನದಲ್ಲಿ ಹೆಚ್ಚು ಸಂಶೋಧನೆ ನಡಸಿದರು. ಈ ಸಂಶೋಧಕರಲ್ಲಿ ಪ್ರಸಿದ್ಧರಾದವರು ಸರ್ವಪಲ್ಲಿ ರಾಧಾಕೃಷ್ಣನ್, ಎಸ್. ಎನ್. ದಾಸ್ ಗುಪ್ತ ಮತ್ತು ಎಂ. ಹಿರಿಯಣ್ಣನವರು. ಭಾರತದ ದರ್ಶನಗಳನ್ನು ಕುರಿತು ಇವರು ಬರೆದಿರುವ ಗ್ರಂಥಗಳು ಹೊರಬಿದ್ದ ಮೇಲೆ, ಆದುವರೆಗೆ ಭಾರತದ ತತ್ತ್ವವನ್ನು ಕುರಿತು ಪಾಶ್ಚಾತ್ಯ ವಿದ್ವಾಂಸರು ಬರೆದಿದ್ದ ಗ್ರಂಥಗಳ ಪ್ರಭಾವ ಕುಗ್ಗಿತು.

ಕಳೆದ ಇಪ್ಪತ್ತೈದು ವರ್ಷಗಳಿಂದ ಈಚೆಗೆ ಪಾಶ್ಚಾತ್ಯ ತತ್ತ್ವದಲ್ಲಿ ಆದ ಕೆಲವು ಬದಲಾವಣೆಗಳ ಕಡೆಗೆ ಭಾರತೀಯರ ದೃಷ್ಟಿ ಹರಿದಿದೆ. ಇತ್ತೀಚೆಗೆ ಹೆಗೆಲ್ಲನ ತತ್ತ್ವಕ್ಕೆ ಪಾಶ್ಚಾತ್ಯ ದೇಶಗಳಲ್ಲಿ ವಿಶೇಷ ವಿರೋಧ ಹುಟ್ಟಿದೆ. ಈ ವಿರೋಧ ಎಷ್ಟು ದೂರ ಹೋಗಿದೆಯೆಂದರೆ ಪಾಶ್ಚಾತ್ಯ ತಾತ್ವಿಕರಲ್ಲಿ ಅನೇಕರು ಪರತತ್ತ್ವವಿಚಾರ (Metaphysics) ಕೇವಲ ಅಪ್ರಯೋಜಕವೆಂದು ಅದರ ಕಡೆಗೆ ಬೆನ್ನು ತಿರುಗಿಸಿರುತ್ತಾರೆ. 'ಲಾಜಿಕಲ್ ಪಾಸಿಟಿವಿಸಂ' ಎಂಬ ಹೊಸ ತತ್ತ್ವ ಪಕ್ಷದವರು ಪರತತ್ತ್ವಕ್ಕೆ ಸಂಬಂಧಪಟ್ಟ ಪ್ರತಿಜ್ಞೆಗಳು ಬರಿಯ ಅಪದ್ಧಗಳು ಮಾತ್ರವಲ್ಲ, ಅವು ಕೇವಲ ಅರ್ಥರಹಿತವಾದ ಅವಿವೇಕ (Metaphysical statements are not merely false, but are meaningless nonsense)ವೆಂದು ಸಾರುತ್ತಿರುವರು. ಅಮೆರಿಕದ ಫಲವಾದಿ

(Pragmatists) ಗಳೂ ಹೆಗೆಲ್ಲಿನ ಪರತತ್ತ್ವಕ್ಕೂ ಮತ್ತು ಬೌದ್ಧಿಕತತ್ತ್ವ(Intellectualism) ಕ್ಕೂ ಪರಮ ವಿರೋಧಿಗಳು. ಆದರೆ ಈಚಿನ ವಾಸ್ತವವಾದಿಗಳು ಪರತತ್ತ್ವಕ್ಕೆ ವಿರೋಧಿಗಳಲ್ಲದಿದ್ದರೂ ಹೆಗೆಲ್ಲನ ಪರಮ ಭಾವವಾದ (absolute idealism)ವನ್ನು ತೀವ್ರವಾಗಿ ಪ್ರತಿಭಟಿಸುತ್ತಾರೆ. ಎಸ್. ಅಲೆಕ್ಸಾಂಡರ್ ಮತ್ತು ಎ. ಎನ್. ವೈಟೆಡ್ ಹೆಗೆಲ್ಲನ ಪರತತ್ತ್ವವನ್ನೂ ಬೌದ್ಧಿಕತತ್ತ್ವವನ್ನೂ ನಿಷೇಧಿಸುವುದಿಲ್ಲ. ಆದರೆ ಅವರು ಹೆಗೆಲ್ಲಿನಂತೆ ಇರವು (being) ಕಾಲ, ದೇಶ, ಬದಲಾವಣೆ ಮತ್ತು ವಿಶೇಷಗಳಿಗೆ ಅತೀತವಾದುದೆಂದು ಪರಿಗಣಿಸುವುದಿಲ್ಲ. ದಿಕ್ಕಾಲಗಳು, ಹೊಸ ಹೊಸ ಪರಿಣಾಮಗಳು (emergents) ಸತ್ತಿಗೆ ಆಂತರಿಕವಾದುವೆಂದು ಅಲೆಕ್ಸಾಂಡರ್ 'ಸ್ಪೇಸ್, ಟೈಮ್ ಆ್ಯಂಡ್ ಡಿಯಿಟಿ' ಎಂಬ ತನ್ನ ಮಹಾಗ್ರಂಥದಲ್ಲಿ ಪ್ರತಿಪಾದಿಸಿದ್ದಾನೆ. ಎ. ಎನ್. ವೈಟೆಡ್, ಕಾಲ, ದೇಶ, ಪರಿಣಾಮ ಮತ್ತು ಭಿನ್ನತೆಗಳನ್ನು ಸಾಪೇಕ್ಷತತ್ತ್ವ(principle of relativity) ಕ್ಕೆ ಒಳಪಡಿಸಿ ತತ್ತ್ವ ಸೌಧವನ್ನು ನಿರ್ಮಿಸಿರುತ್ತಾನೆ. ಇತ್ತೀಚೆಗೆ ಪಾಶ್ಚಾತ್ಯ ದೇಶಗಳಲ್ಲಿ ಕೀರ್ಕ್‌ಗಾರ್ಡಿನ ಅನುಯಾಯಿಗಳಾದ ಸತ್ರೆ, ಮ್ಯಾರಿಟೈನ್ ಮುಂತಾದವರು 'ಎಕ್ಸಿಸ್ಟೆಂಷಿಯಲಿಸಂ' ಎಂಬ ಹೊಸ ತತ್ತ್ವವನ್ನು ಎತ್ತಿಹಿಡಿದಿರುತ್ತಾರೆ. ಈ ಮೂರು ಹೊಸ ದರ್ಶನಗಳು ಕಳೆದ ಇಪ್ಪತ್ತೈದು ವರ್ಷಗಳಲ್ಲಿ ಭಾರತೀಯ ತಾತ್ತ್ವಿಕರ ಸಂಶೋಧನೆಗಳನ್ನು ಸ್ವಲ್ಪಮಟ್ಟಿಗೆ ಪ್ರೇರಿಸಿವೆ.

ಯು. ಜಿ. ಸಿ. ಅವಾರ್ಡಿಯಾಗಿ ಮೈಸೂರು ಯೂನಿವರ್ಸಿಟಿ ಸ್ನಾತಕೋತ್ತರ ತತ್ತ್ವಶಾಸ್ತ್ರ ಸಂಶೋಧನೆ ಮತ್ತು ಅಧ್ಯಯನ ಶಾಖೆಯಲ್ಲಿ ಕೆಲಸಮಾಡುತ್ತಿರುವ ಪ್ರೊ. ಎಲ್. ರಾಜಗೋಪಾಲ್ ಅವರು ಆಲ್‌ಫ್ರೆಡ್ ನಾರ್ತವೈಟೆಡ್ಡಿನ ತತ್ತ್ವದಲ್ಲಿ ಸಂಶೋಧನೆ ನಡೆಸಿ ವಿದ್ವತ್ಪೂರ್ಣವಾದ 'ದಿ ಫಿಲಾಸಫಿ ಆಫ್ ಎ. ಎನ್. ವೈಟೆಡ್' ಎಂಬ ಒಂದು ದೊಡ್ಡ ಗ್ರಂಥವನ್ನು ಬರೆದಿರುತ್ತಾರೆ. ಇದನ್ನು ಮೈಸೂರು ವಿಶ್ವವಿದ್ಯಾನಿಲಯವು ೧೯೬೭ರಲ್ಲಿ ಪ್ರಕಟಪಡಿಸಿತು.

ಮೈಸೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ತತ್ತ್ವಶಾಸ್ತ್ರ ಸಂಶೋಧನೆ ಮತ್ತು ಅಧ್ಯಯನ ವಿಭಾಗದ ರೀಡರಾದ ಜಿ. ಶ್ರೀನಿವಾಸನ್ ಅವರು ಎಕ್ಸಿಸ್ಟೆಂಷಿಯಲಿಸಂ ತತ್ತ್ವವನ್ನು ಸಾಂಖ್ಯ ತತ್ತ್ವಕ್ಕೆ ಹೋಲಿಸಿ ಒಂದು ಸಂಶೋಧನ ಗ್ರಂಥವನ್ನು ೧೯೬೭ರಲ್ಲಿ ಪ್ರಕಟಿಸಿರುತ್ತಾರೆ.

ಡಾ. ಎ. ಆರ್. ವಾಡಿಯ ಅವರ ತತ್ತ್ವ ಹೆಗೆಲ್ಲ ಪರಮ ಭಾವವಾದ ಮತ್ತು ಡ್ಯೂಯಿಯ ಫಲವಾದಗಳ ಸಮನ್ವಯತತ್ತ್ವ. ಅವರ ತತ್ತ್ವವನ್ನು 'ಐಡಿಯಲಿಸ್ಟಿಕ್ ಹ್ಯೂಮನಿಸಂ' ಎಂದು ಕರೆಯಬಹುದು. ವಾಡಿಯಾ ಅವರ ತತ್ತ್ವದೃಷ್ಟಿ ಪಾಶ್ಚಿಮಾತ್ಯರ ತತ್ತ್ವದೃಷ್ಟಿ. ಆ ದೃಷ್ಟಿಯಿಂದ ಅವರು ಭಾರತೀಯ ಸಾಮಾಜಿಕ ನೀತಿಯನ್ನೂ ಮತವನ್ನೂ ವಿಮರ್ಶೆಮಾಡಿರುವುದು ಅವರ ಲೇಖನಗಳ ವೈಶಿಷ್ಟ್ಯ. ಭಾರತೀಯ ತಾತ್ತ್ವಿಕರು ಇಂದೂ ಕೂಡ ವೈದಿಕ ಸಂಪ್ರದಾಯದ ಸೆರೆಯಿಂದ ಪೂರ್ಣವಾಗಿ ಬಿಡುಗಡೆ ಹೊಂದಿಲ್ಲವೆಂದು ಅವರು ೧೯೫೨ರಲ್ಲಿ ಬರೆದಿರುವ 'ಟ್ರೆಡಿಷನ್ ಇನ್ ಫಿಲಾಸಫಿ'

ಎಂಬ ಲೇಖನದಲ್ಲಿ ಪ್ರತಿಪಾದಿಸಿರುತ್ತಾರೆ. ಇವರು ೧೯೫೦ರಲ್ಲಿ ಪ್ರಕಟಿಸಿರುವ 'ರೆಲಿಜನ್‌ಅಸ್ ಎ ಕ್ವೆಸ್ಟ್ ಫಾರ್‌ವ್ಯಾಲ್ಯೂಸ್' ಎಂಬ ಗ್ರಂಥದಲ್ಲೂ ಮೈಸೂರು ವಿಶ್ವವಿದ್ಯಾನಿಲಯದವರು ಪ್ರಕಟಿಸಿರುವ ಅವರ ಲೇಖನಗಳ ಸಂಪುಟವಾದ 'ದಿ ಫಿಲಾಸಫಿ ಆಫ್ ಮಹಾತ್ಮ ಗಾಂಧಿ ಆ್ಯಂಡ್ ಅದರ್ ಎಸ್ಸೇಸ್'ನಲ್ಲೂ ಗಾಂಧಿ, ವಿವೇಕಾನಂದ, ರಾಮಕೃಷ್ಣ ಪರಮಹಂಸ–ಇವರ ಉದಾರ ಸಾಮಾಜಿಕ ತತ್ತ್ವವನ್ನು ಪ್ರಶಂಸಿಸಿರುತ್ತಾರೆ. ಆದರೂ ಇವರುಗಳೆಲ್ಲ ವಿಜ್ಞಾನಕ್ಕೂ ಯಂತ್ರವಿದ್ಯೆಗೂ ಹೆಚ್ಚು ಪ್ರಾಶಸ್ತ್ಯ ಕೊಡದಿರುವುದು ಅವರ ತತ್ತ್ವದ ಒಂದು ಲೋಪವೆಂದು ವಾದಿಸಿರುತ್ತಾರೆ. (ಇವರು 'ಯುನೆಸ್ಕೊ' ಆಶ್ರಯದಲ್ಲಿ 'ದಿ ಕಾನ್‌ಸೆಪ್ಟ್ ಆಫ್ ಮ್ಯಾನ್ ಅಂಡ್ ದಿ ಫಿಲಾಸಫಿ ಆಫ್ ಎಜುಕೇಷನ್ ಇನ್ ದಿ ಈಸ್ಟ್ ಆ್ಯಂಡ್ ವೆಸ್ಟ್' ಎಂಬ ಶ್ರೇಷ್ಠ ಲೇಖನವನ್ನು ಬರೆದಿರುತ್ತಾರೆ.)

ಇವರೆಲ್ಲರಿಗಿಂತಲೂ ವಿಶ್ವವಿದ್ಯಾನಿಲಯದಿಂದ ನಿವೃತ್ತರಾದ ಮೇಲೆ ದಿವಂಗತ ಪ್ರೊ. ಎಂ. ಹಿರಿಯಣ್ಣನವರು ಭಾರತೀಯ ತತ್ತ್ವಸಂಶೋಧನೆಗೆ ಮಾಡಿರುವ ಸೇವೆ ತುಂಬ ಗಣ್ಯವಾದದ್ದು. ಅವರು ೧೯೪೯ರಲ್ಲಿ ಬರೆದಿರುವ 'ದಿ ಎಸೆನ್ಷಿಯಲ್ ಆಫ್ ಇಂಡಿಯನ್ ಫಿಲಾಸಫಿ' ಎಂಬ ಗ್ರಂಥದಲ್ಲಿ ಅದಕ್ಕಿಂತ ಹಿಂದೆ ಪ್ರಕಟವಾದ ದೊಡ್ಡ ಪುಸ್ತಕದಲ್ಲಿಲ್ಲದ ಅನೇಕ ಹೊಸ ವಿಚಾರಗಳನ್ನು ಸೇರಿಸಿರುತ್ತಾರೆ. ಅಂಥ ಹೊಸ ಅಂಶಗಳಲ್ಲಿ ಅವರು ದ್ವೈತವೇದಾಂತದ 'ಭೇದ' ತತ್ತ್ವದ ನಿರೂಪಣೆ ಒಂದು. ಮಧ್ವಾಚಾರ್ಯರ ಭೇದ ತತ್ತ್ವದ ವೈಶಿಷ್ಟ್ಯವನ್ನು ತುಂಬ ಚೆನ್ನಾಗಿ ತೋರಿಸಿರುತ್ತಾರೆ. ಅಲ್ಲಿ ಬೌದ್ಧ ಮತ್ತು ಜೈನತತ್ತ್ವಗಳನ್ನೂ ಕೂಡ ಹೊಸ ನಿಟ್ಟಿನಿಂದ ನೋಡಿರುತ್ತಾರೆ. ಜೈನ ಮತ್ತು ಪೂರ್ವಮೀಮಾಂಸಾ ತತ್ತ್ವಗಳಿಗೆ ವಿಶಿಷ್ಟವಾದ 'ಊರ್ಧ್ವತಾ ಸಾಮಾನ್ಯ'ವನ್ನು ಅದ್ವಿತೀಯವಾಗಿ ವರ್ಣಿಸಿರುತ್ತಾರೆ. ಹಾಗೆಯೇ ಇದುವರೆಗೆ ಭಾರತೀಯರು ಅಲಕ್ಷಿಸಿದ್ದ 'ಸ್ವಭಾವವಾದ' (Indian naturalism)ವನ್ನು ಸಮಗ್ರವಾಗಿ ನಿರೂಪಿಸಿರುತ್ತಾರೆ.

ಇದುವರೆಗೂ ಭಾರತೀಯ ತಾತ್ವಿಕರು ಭಾರತದ ದರ್ಶನಗಳ ಸಾಮಾನ್ಯ ರೂಪವನ್ನು ಮಾತ್ರ ವಿವರಿಸುತ್ತಿದ್ದರು. ಕಾಲ, ದೇಶ, ಪ್ರಾಮಾಣ್ಯ, ಮುಂತಾದ ವಿಶಿಷ್ಟ ಭಾವನೆಗಳನ್ನು ಒಳಹೊಕ್ಕು ನೋಡಿ ಅವುಗಳನ್ನು ತುಲನಾತ್ಮಕದೃಷ್ಟಿಯಿಂದ ಪರಿಶೀಲಿಸುವುದು ತೀರ ವಿರಳವಾಗಿತ್ತು. ಈ ವಿಶಿಷ್ಟ ಭಾವನೆಗಳನ್ನು ಹಿರಿಯಣ್ಣನವರು ಕೆಲವು ಸಂಶೋಧನೆಯ ಲೇಖನಗಳಲ್ಲಿ ಸೂಕ್ಷ್ಮವಾಗಿ ಪರಿಶೀಲಿಸಿರುತ್ತಾರೆ. 'ಆ್ಯನ್ ಇಂಡಿಯನ್ ವ್ಯೂ ಆಫ್ ಟೈಮ್' ಎಂಬ ಲೇಖನದಲ್ಲಿ ನ್ಯಾಯವೈಶಿಕರ ಕಾಲ ಭಾವನೆಯನ್ನು ವೈಟೆಡ್ಡಿನ 'ಡೂರೇಷನ್' ಎಂಬ ಭಾವನೆಗೆ ಹೋಲಿಸಿರುತ್ತಾರೆ. ಹಿಂದೆ ಭಾರತೀಯ ತಾತ್ತ್ವಿಕರು ವಾಸ್ತವ ತತ್ತ್ವಕ್ಕೂ, ವಾಸ್ತವ ಜ್ಞಾನ ಮೀಮಾಂಸೆಗೂ ಹೆಚ್ಚು ಗಮನ ಕೊಟ್ಟಿರಲಿಲ್ಲ. ಈ ಕೊರತೆಯನ್ನು ನಿವಾರಿಸಲು ಹಿರಿಯಣ್ಣನವರು ಭಾರತೀಯ ವಾಸ್ತವವಾದದ ಎಲ್ಲ ಮುಖಗಳನ್ನೂ ಹಲವು ಲೇಖನ

ಗಳಲ್ಲಿ ಪ್ರಕಾಶಪಡಿಸಿರುತ್ತಾರೆ. 'ನ್ಯಾಯ ಕನ್‌ಸೆಪ್ಷನ್ ಆಫ್ ಟ್ರೂತ್ ಆ್ಯಂಡ್ ಎರರ್', 'ದಿ ಪ್ರಾಬ್ಲೆಮ್ಸ್ ಆಫ್ ಟ್ರೂತ್', 'ಪ್ರಮಾಣ' 'ಭಾಸ್ಕರಾಸ್ ವ್ಯೂ ಆಫ್ ಎರರ್', 'ಮೀಮಾಂಸಾ ವ್ಯೂ ಆಫ್ ಎರರ್', 'ದಿ ಸಾಂಖ್ಯ ವ್ಯೂ ಆಫ್ ಎರರ್', 'ವಾಟ್ ಇಸ್ ಸಮವಾಯ', ಈ ಮುಂತಾದ ಲೇಖನಗಳು ಸೇರಿರುವ 'ಫಿಲಸಾಫಿಕಲ್ ಎಸ್ಸೇಸ್' ಎಂಬ ಹೆಸರಿನ ಗ್ರಂಥವನ್ನು ಕಾವ್ಯಾಲಯ ಪ್ರಕಾಶಕರು ೧೯೫೭ರಲ್ಲಿ ಪ್ರಕಟಿಸಿರುತ್ತಾರೆ.

ಭಾರತದ ನೀತಿತತ್ತ್ವಕ್ಕೂ ಪುರುಷಾರ್ಥ ತತ್ತ್ವಕ್ಕೂ ಇದುವರೆಗೆ ತಾತ್ತ್ವಿಕರು ಹೆಚ್ಚು ಗಮನಕೊಟ್ಟಿರಲಿಲ್ಲ. ಈ ವಿಷಯಗಳನ್ನು ಕುರಿತು ಹಿರಿಯಣ್ಣನವರು ಸಂಶೋಧನೆ ನಡೆಸಿರುತ್ತಾರೆ. 'ದಿ ಕ್ವೆಸ್ಟ್ ಆ್ಯಫ್ಟರ್ ಪರ್ಫೆಕ್ಷನ್', 'ದಿ ಪ್ಲೇಸ್ ಆಫ್ ಫೀಲಿಂಗ್ ಇನ್ ಕಾಂಡಕ್ಟ್', 'ದಿ ಇಂಡಿಯನ್ ಕನ್ಸೆಪ್ಷನ್ ಆಫ್ ವ್ಯಾಲ್ಯೂಸ್' 'ದಿ ಎಥಿಕ್ಸ್ ಆಫ್ ಅದ್ವೈತ', 'ದಿ ಇಂಡಿಯನ್ ಫಿಲಾಸಫಿ ಆಫ್ ಹೆಡೊನಿಸಮ್'–ಇವು ನೀತಿ ಮತ್ತು ಪುರುಷಾರ್ಥ ತತ್ತ್ವಗಳಿಗೆ ಸಂಬಂಧಪಟ್ಟ ಲೇಖನಗಳು.

ಇತ್ತೀಚಿನವರೆಗೂ ಕಲಾತತ್ತ್ವವನ್ನು ತತ್ತ್ವಶಾಸ್ತ್ರಕ್ಕೆ ಒಳಪಟ್ಟ ವಿಷಯವೆಂದು ಭಾವಿಸಿರಲಿಲ್ಲ. ಇದೂ ತತ್ತ್ವಶಾಸ್ತ್ರಕ್ಕೆ ಒಳಪಟ್ಟ ವಿಷಯವೆಂದು ತೋರಿಸಿದ್ದು ಹಿರಿಯಣ್ಣನವರ ಸಂಶೋಧನೆಯ ವೈಶಿಷ್ಟ್ಯ. ಅವರು ಭಾರತೀಯ ಕಲಾತತ್ತ್ವವನ್ನು ಕುರಿತು ಬರೆದ ಸಂಶೋಧನ ಲೇಖನಗಳನ್ನು ಕಾವ್ಯಾಲಯ ಪ್ರಕಾಶಕರು 'ಆರ್ಟ್ ಎಕ್ಸ್‌ಪೀರಿಯನ್ಸ್' ಎಂಬ ಲೇಖನ ಸಂಪುಟವಾಗಿ ಪ್ರಕಟಿಸಿರುತ್ತಾರೆ.

ಶ್ರೀ ಜಿ. ಹನುಮಂತರಾಯರು ತಮ್ಮ ಗುರುಗಳನ್ನು ಅನುಸರಿಸಿ ಭಾರತೀಯ ಮತ್ತು ಪಾಶ್ಚಾತ್ಯ ಕಲೆಯ ಮೀಮಾಂಸೆಯನ್ನು ಕುರಿತು ಸಂಶೋಧನೆ ನಡಸಿ ಅದರ ಎರಡು ಸಂಪುಟಗಳನ್ನು ಮೈಸೂರು ವಿಶ್ವವಿದ್ಯಾಲಯಕ್ಕೆ ಒಪ್ಪಿಸಿರುತ್ತಾರೆ. ಸಾಧಾರಣೀಕರಣವನ್ನು ಕುರಿತು ಮೈಸೂರು ಯೂನಿವರ್ಸಿಟಿ ಆರ್ಟ್ಸ್ ಜರ್ನಲ್‌ನಲ್ಲಿ ಮೂರು ಲೇಖನಗಳನ್ನು ಪ್ರಕಟಿಸಿರುತ್ತಾರೆ. ಮೂರನೆಯ ಲೇಖನದಲ್ಲಿ ಸಾಧಾರಣೀಕರಣಕ್ಕೂ ಪಾಶ್ಚಾತ್ಯ ಕಲಾಮೀಮಾಂಸಕ ಎಡ್ವರ್ಡ್ ಬುಲ್ ಅವರ 'ಸೈಕಿಕಲ್ ಡಿಸ್ಟೆನ್ಸ್' ತತ್ತ್ವಕ್ಕೂ ಇರುವ ಸಾಮ್ಯವನ್ನು ತೋರಿಸಿರುತ್ತಾರೆ.

ಶ್ರೀ ಎನ್. ಬಾಲಸುಬ್ರಹ್ಮಣ್ಯ ಅವರು ಬರ್ಟ್ರೆಂಡ್‌ರಸಲ್‌ನ ಭಾಷಾತತ್ತ್ವವನ್ನು ಕುರಿತು ವಿಶ್ವವಿದ್ಯಾನಿಲಯದ ಜರ್ನಲ್ (ಆರ್ಟ್ಸ್)ನಲ್ಲಿ ಒಂದು ಉತ್ಕೃಷ್ಟ ಲೇಖನವೊಂದನ್ನು ಬರೆದಿರುತ್ತಾರೆ. ಪ್ರೊ. ಎಸ್. ಎಸ್. ರಾಘವಾಚಾರ್ಯರು ಅಪ್ಪಯ್ಯ ದೀಕ್ಷಿತರ ಪ್ರಸಿದ್ಧವಾದ 'ನೈಷ್ಕರ್ಮ್ಯಸಿದ್ಧಿ' ಎಂಬ ಗ್ರಂಥವನ್ನು ಆಂಗ್ಲ ಭಾಷೆಗೆ ಪರಿವರ್ತಿಸಿ ಅದರ ವಿಚಾರವಾಗಿ ವಿದ್ವತ್ಪೂರ್ಣ ಸಂಶೋಧನೆಯನ್ನು ನಡೆಸಿರುತ್ತಾರೆ.

ಭಾರತೀಯ ದರ್ಶನಗಳಲ್ಲಿ ಮಧ್ವಾಚಾರ್ಯರ ದ್ವೈತ ವೇದಾಂತ ತತ್ತ್ವವನ್ನು ಕುರಿತು ವಿಚಾರಪೂರ್ಣವಾದ ದೀರ್ಘ ವಿವರಣೆಗಳು ಅತಿವಿರಳ. ದಿವಂಗತ ಪ್ರೊ. ಎಚ್. ಎನ್. ರಾಘವೇಂದ್ರಾಚಾರ್ಯರು ದ್ವೈತತತ್ತ್ವವನ್ನು ಕುರಿತು 'ಬ್ರಹ್ಮ

ಮೀಮಾಂಸಾ' ಎಂಬ ದೊಡ್ಡ ಗ್ರಂಥವನ್ನು ಬರೆದಿರುತ್ತಾರೆ. ದ್ವೈತ ವೇದಾಂತ ವಿಚಾರವಾಗಿ ಇಷ್ಟು ವಿದ್ವತ್ಪೂರ್ಣವಾದ ಗ್ರಂಥ ಇದುವರೆಗೆ ಹುಟ್ಟಿರಲಿಲ್ಲ. ಇದನ್ನು ಮೈಸೂರು ವಿಶ್ವವಿದ್ಯಾನಿಲಯವು ಪ್ರಕಟಿಸಿದೆ. ಡಾ. ಟಿ. ಜಿ. ಸಿದ್ಧಪ್ಪಾರಾಧ್ಯರು ವೀರಶೈವ ಶಕ್ತಿವಿಶಿಷ್ಟಾದ್ವೈತವನ್ನು ಕುರಿತು ಒಂದು ವಿದ್ವತ್ಪೂರ್ಣವಾದ ಗ್ರಂಥವನ್ನು ಬರೆದಿರುತ್ತಾರೆ. ಇತ್ತೀಚೆಗೆ ಜೈನ ಮತ್ತು ಬೌದ್ಧ ದರ್ಶನಗಳ ಬಗೆಗೆ ಹೊಸ ಆಸಕ್ತಿಹುಟ್ಟಿದೆ. ಜಿ. ಹನುಮಂತರಾಯರು ಜೈನ ತತ್ತ್ವದ ತಳಹದಿಯಾದ ಸಾಪೇಕ್ಷತಾತತ್ತ್ವವನ್ನು ಕುರಿತು 'ಅನೇಕಾಂತವಾದ ಆರ್ ದಿ ಫಿಲಾಸಫಿ ಆಫ್ ರಿಲೆಟಿವಿಟಿ', ಎಂಬ ಲೇಖನವನ್ನು ಮೈಸೂರು ವಿಶ್ವವಿದ್ಯಾನಿಲಯದ (ಆರ್ಟ್ಸ್) ಜರ್ನಲ್ಲಿನಲ್ಲಿ ಪ್ರಕಟಿಸಿರುತ್ತಾರೆ. ತದನಂತರದಲ್ಲಿ ದಿವಂಗತ ಡಾ. ವೈ. ಜೆ. ಪದ್ಮರಾಜಯ್ಯನವರು ಜೈನ ದರ್ಶನದ ಸತ್ ಮತ್ತು ಜ್ಞಾನಮೀಮಾಂಸೆಯ ಸಿದ್ಧಾಂತಗಳಲ್ಲಿ ಸಂಶೋಧನೆ ನಡೆಸಿ 'ಕಂಪ್ಯಾರಟಿವ್ ಸ್ಟಡಿ ಆಫ್ ದಿ ಜೈನ ಥಿಯರೀಸ್ ಆಫ್ ರಿಯಾಲಿಟಿ ಅಂಡ್ ನಾಲೆಡ್ಜ್' ಎಂಬ ಗ್ರಂಥವನ್ನು ೧೯೬೩ರಲ್ಲಿ ಪ್ರಕಟಿಸಿದರು. ಇದುವರೆಗೂ ಜೈನ ದರ್ಶನವನ್ನು ಕುರಿತ ಇಷ್ಟು ಪ್ರೌಢವಾದ ಗ್ರಂಥಪ್ರಕಟನೆಯಾಗಿರಲಿಲ್ಲ.

ಎನ್. ಎ. ನಿಕಂ ಅವರು ಪಾಶ್ಚಾತ್ಯ ನವೀನ ಮತ್ತು ವೈಚಾರಿಕ ವಾಸ್ತವವಾದಗಳನ್ನು ಕುರಿತು ಬರೆದಿರುವ ತುಂಬ ಶ್ರೇಷ್ಠವಾದ ಲೇಖನವು 'ಫಿಲಾಸಫಿ-ಇಸ್ಟರನ್ ಅಂಡ್ ವೆಸ್ಟರನ್', ಎಂಬ ಗ್ರಂಥದಲ್ಲಿ ಸೇರಿದೆ. ೧೯೫೨ರಲ್ಲಿ ಪ್ರೊ. ಹಿರಿಯಣ್ಣನವರ ಗೌರವಾರ್ಥವಾಗಿ ಅವರ ಶಿಷ್ಯರೂ ಮತ್ತು ಸ್ನೇಹಿತರೂ 'ಪ್ರೊ. ಎಂ. ಹಿರಿಯಣ್ಣ ಕಮ್ಮೆಮೊರೇಷನ್ ವಾಲ್ಯೂಮ್' ಎಂಬ ಗ್ರಂಥವನ್ನು ಪ್ರಕಟಿಸಿದರು. ಇದರಲ್ಲಿ ಕನ್ನಡಿಗರು ಬರೆದಿರುವ ತತ್ತ್ವಶಾಸ್ತ್ರಕ್ಕೆ ಸಂಬಂಧಪಟ್ಟ ಆರು ಲೇಖನಗಳಿವೆ.

ಕಳೆದ ಇಪ್ಪತ್ತೈದು ವರ್ಷಗಳಲ್ಲಿ ಪಾಶ್ಚಾತ್ಯ ಮತ್ತು ಭಾರತದ ದರ್ಶನಗಳ ವಿವಿಧ ಅಂಶಗಳನ್ನು ಕುರಿತು 'ಥೀಯಿಸಮ್ ಆಫ್ ದಿ ಕ್ಲಾಸಿಕಲ್ ಸಾಂಖ್ಯ (೧೯೫೯)' ಎಂಬ ವಿಷಯದ ಮೇಲೆ ಕೆ. ಬಿ. ರಾಮಕೃಷ್ಣರಾಯರೂ, 'ದಿ ಫಿಲಾಸಫಿ ಆಫ್ ಸಾಧನ ಇನ್ ವಿಶಿಷ್ಟಾದ್ವೈತ ವಿತ್ ಪರ್ಟಿಕ್ಯುಲರ್ ರೆಫರೆನ್ಸ್ ಟು ವೇದಾಂತದೇಶಿಕ (೧೯೬೨)' ಎಂಬ ವಿಷಯದ ಮೇಲೆ ಎಸ್. ಎಸ್. ಅನಂತರಂಗಾಚಾರ್ಯರೂ, ಪಿಎಚ್.ಡಿ. ಪ್ರಬಂಧಗಳನ್ನು ರಚಿಸಿದ್ದಾರೆ. ಅಲ್ಲದೆ ಎಂ. ಎ. ಪದವಿಗೆ ವಿವಿಧ ವಿಷಯಗಳನ್ನು ಹದಿನೈದು ಮಂದಿ ಆಯ್ಕೆಮಾಡಿಕೊಂಡಿದ್ದಾರೆ. ಪ್ರೊ. ಎಂ. ಯಾಮುನಾಚಾರ್ಯರು ಗಾಂಧೀತತ್ತ್ವ ಮತ್ತು ಇತರ ವಿಷಯಗಳನ್ನು ಕುರಿತು ಸಂಶೋಧನ ಲೇಖನಗಳನ್ನು ೧೯೬೬ರಲ್ಲಿ ವಿಶ್ವವಿದ್ಯಾನಿಲಯಕ್ಕೆ ಒಪ್ಪಿಸಿರುತ್ತಾರೆ.

ತತ್ತ್ವಶಾಸ್ತ್ರವನ್ನು ಕುರಿತು ಕನ್ನಡದಲ್ಲಿ ಬರವಣಿಗೆ ಅಷ್ಟು ಹೆಚ್ಚಾಗಿ ಕಾಣುತ್ತಿಲ್ಲ. ಇದಕ್ಕೆ ಕಾರಣ ವಿಜ್ಞಾನ, ಇತಿಹಾಸ, ಅರ್ಥಶಾಸ್ತ್ರ, ಸಮಾಜಶಾಸ್ತ್ರ, ಮನಶ್ಶಾಸ್ತ್ರ ಮತ್ತು ತತ್ತ್ವಶಾಸ್ತ್ರ ಇವನ್ನೂ ಕನ್ನಡದಲ್ಲಿ ಬೋಧಿಸಲು ಅವಕಾಶವಿಲ್ಲದಿದ್ದದ್ದು. ಈ ಕುಂದನ್ನು ಪರಿಹರಿಸಲು ಇತ್ತೀಚೆಗೆ ಮೈಸೂರು ವಿಶ್ವವಿದ್ಯಾನಿಲಯವು

ಈ ಎಲ್ಲ ವಿಷಯಗಳನ್ನೂ ಕನ್ನಡದಲ್ಲಿ ಬೋಧಿಸಲು ಅವಕಾಶ ಕಲ್ಪಿಸಿಕೊಟ್ಟಿದೆ. ಸಮಾಜ ಶಾಸ್ತ್ರ, ತರ್ಕಶಾಸ್ತ್ರ ಮತ್ತು ತತ್ತ್ವಶಾಸ್ತ್ರವನ್ನು ಕುರಿತು ಕೆಲವು ವರ್ಷಗಳ ಹಿಂದೆ ಪಠ್ಯಪುಸ್ತಕಗಳಾಗಿ ಉಪಯೋಗಿಸಲು ಯೋಗ್ಯವಾದ ಗ್ರಂಥಗಳನ್ನು ಕನ್ನಡದಲ್ಲಿ ಬರೆಯಿಸಿ ಪ್ರಕಟಿಸಿರುತ್ತಾರೆ. ಕೇಂದ್ರ ಸರ್ಕಾರವು ಪ್ರಕಟಿಸಿರುವ ಭಾರತೀಯ ಮತ್ತು ಪಾಶ್ಚಾತ್ಯ ತತ್ತ್ವಶಾಸ್ತ್ರ ಚರಿತ್ರೆಯ ಕನ್ನಡ ಭಾಷಾಂತರವು ಮುದ್ರಣಕ್ಕೆ ಸಿದ್ಧವಾಗಿದೆ.

ಕಳೆದ ಇಪ್ಪತ್ತೈದು ವರ್ಷಗಳಲ್ಲಿ ತತ್ತ್ವಶಾಸ್ತ್ರಕ್ಕೆ ಸಂಬಂಧಪಟ್ಟ ಕೆಲವು ಗಣ್ಯವಾದ ಗ್ರಂಥಗಳೂ ಲೇಖನಗಳೂ ಹೊರಬಿದ್ದಿವೆ. ಡಾ. ಡಿ. ವಿ. ಗುಂಡಪ್ಪನವರು 'ಈಶೋಪನಿಷತ್' ಮತ್ತು 'ಪುರುಷಸೂಕ್ತ' ಗಳಲ್ಲಿ ಅಡಗಿರುವ ಉದಾತ್ತ ತತ್ತ್ವವನ್ನು ಬಹಳ ಚೆನ್ನಾಗಿ ಪ್ರತಿಪಾದಿಸಿರುತ್ತಾರೆ. ಅವರ 'ಭಗವದ್ಗೀತೆಯ ತಾತ್ಪರ್ಯ', ದಲ್ಲಿ ಗುಂಡಪ್ಪನವರದೇ ಆದ ನವೀನತೆಯೂ ವೈಶಿಷ್ಟ್ಯವೂ ಇದೆ.

ಶ್ರೀಮಾನ್ ಜಿ. ಹನುಮಂತರಾಯರು ಭಾರತೀಯ ನಿಗಮನ ಮತ್ತು ಅನುಗಮನ ತರ್ಕವನ್ನು ಕುರಿತು ಬರೆದಿರುವ ಎರಡು ಭಾಗಗಳೂ ಕುಟುಂಬ ಜೀವನ ತತ್ತ್ವವನ್ನು ಕುರಿತು ಬರೆದಿರುವ ಗ್ರಂಥವೂ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಗ್ರಂಥಮಾಲೆಯಲ್ಲಿ ಅಚ್ಚಾಗಿವೆ. ಈ ಗ್ರಂಥಗಳಲ್ಲದೆ, ಭಾರತ ಧರ್ಮದಲ್ಲಿ ಮತ ಸಹಿಷ್ಣುತೆ, ಬುದ್ಧನ ತತ್ತ್ವ, ಸಂಗೀತದಲ್ಲಿ ಧ್ವನಿಯ ಅವಲೋಕ ಎಂಬ ಇವರ ಲೇಖನಗಳು ಶ್ರೀಮಾನ್ ಆರ್. ಆರ್. ದಿವಾಕರ್, ಎ. ಆರ್. ಕೃಷ್ಣಶಾಸ್ತ್ರಿ, ಡಿ. ಎಲ್. ನರಸಿಂಹಾಚಾರ್ ಮುಂತಾದವರಿಗೆ ಅರ್ಪಿಸಿದ ಪ್ರಶಸ್ತಿ ಗ್ರಂಥಗಳಲ್ಲಿ ಪ್ರಕಟವಾಗಿವೆ.

ಶ್ರೀಮಾನ್ ಎಸ್. ಕೆ. ರಾಮಚಂದ್ರರಾಯರು ಮಧ್ವಾಚಾರ್ಯರು, ಟಿಬೆಟ್ಟಿನ ಯೋಗಿ ಮಿಲರೇಪ–ಇವರ ತತ್ತ್ವವನ್ನು ಕುರಿತು ಎರಡು ಗ್ರಂಥಗಳನ್ನು ಬರೆದಿರುತ್ತಾರೆ.

ಶ್ರೀಮಾನ್ ಎಚ್. ಎಸ್. ಕೃಷ್ಣಸ್ವಾಮಿ ಐಯ್ಯಂಗಾರ್ ಅವರು ರಾಮಾನುಜರ ಜೀವನ ಮತ್ತು ತತ್ತ್ವವನ್ನು ಕುರಿತು ತುಂಬ ವಿದ್ವತ್ಪೂರ್ಣವಾದ ಗ್ರಂಥವೊಂದನ್ನು ಬರೆದಿರುತ್ತಾರೆ.

ಶ್ರೀ ಎಸ್. ರಾಮಚಂದ್ರಶಾಸ್ತ್ರೀ ಅವರು ಬಲದೇವ ಉಪಾಧ್ಯಾಯರು ಬರೆದಿರುವ 'ಶಂಕರಾಚಾರ್ಯರು' ಎಂಬ ಗ್ರಂಥವನ್ನು ಕನ್ನಡಿಸಿ ೧೯೬೬ರಲ್ಲಿ ಪ್ರಕಟಿಸಿರುತ್ತಾರೆ. ಶಂಕಾರಾಚಾರ್ಯರ ತತ್ತ್ವ ಮತ್ತು ಜೀವನವನ್ನು ಕುರಿತು ಇಷ್ಟು ಪ್ರೌಢವಾದ ಗ್ರಂಥ ಇದುವರೆಗೆ ಕನ್ನಡದಲ್ಲಿ ಬಂದಿರಲಿಲ್ಲ.

ಕೌಲಗಿ ಶೇಷಾಚಾರ್ ಅವರ 'ವೇದಾಂತಸಾರ' ಎಂಬ ಶ್ರೇಷ್ಠ ಗ್ರಂಥ ವಿಶ್ವವಿದ್ಯಾನಿಲಯದ ಕನ್ನಡ ಗ್ರಂಥಮಾಲೆಯಲ್ಲಿ ಪ್ರಕಟವಾಗಿದೆ.

ತತ್ತ್ವಶಾಸ್ತ್ರಕ್ಕೆ ಸಂಬಂಧಪಟ್ಟ ವಿಷಯಗಳನ್ನು ಕುರಿತು ಪ್ರಚಾರ ಪುಸ್ತಕ ಮಾಲೆಯಲ್ಲಿ ಹನ್ನೆರಡು ಹೊತ್ತಿಗೆಗಳು ಪ್ರಕಟವಾಗಿವೆ.

ಈಚಿನ ಇಪ್ಪತ್ತೈದು ವರ್ಷಗಳಲ್ಲಿ ಪ್ರಬುದ್ಧ ಕರ್ಣಾಟಕದಲ್ಲಿ ತತ್ತ್ವಶಾಸ್ತ್ರಕ್ಕೆ ಸಂಬಂಧಪಟ್ಟ ಇಪ್ಪತ್ತೊಂಬತ್ತು ಲೇಖನಗಳು ಪ್ರಕಟವಾಗಿವೆ.

ಹಳೆಯ ಸಾಹಿತ್ಯ

ಹಕ್ಕಿನೋಟ

ಡಾ. ಎಂ. ಚಿದಾನಂದಮೂರ್ತಿ

ಶಾಸನಗಳು ಮತ್ತು ಕನ್ನಡ ಸಾಹಿತ್ಯ

ಈ ಪ್ರಬಂಧದಲ್ಲಿ ಶಾಸನಗಳನ್ನು ಮುಖ್ಯವಾಗಿ ಎರಡು ದೃಷ್ಟಿಗಳಿಂದ ಕಂಡು ವಿಚಾರ ಮಾಡಿದೆ—ಒಂದು, ಶಾಸನಗಳನ್ನು ಸಾಹಿತ್ಯವಾಗಿ; ಮತ್ತೊಂದು, ಶಾಸನಗಳನ್ನು ಪಕ್ಕಾ ಸಾಹಿತ್ಯದ[1] ಅಧ್ಯಯನಕ್ಕೆ ಸಹಾಯಕವಾಗಿ (ಉದಾಹರಣೆಗೆ ಕನ್ನಡ ಸಾಹಿತ್ಯದ ಪ್ರಾಚೀನತೆ ತಿಳಿಯುವಲ್ಲಿ ಇತ್ಯಾದಿ). ಕೊನೆಯಲ್ಲಿ, 'ಶಾಸನ ಸಾಹಿತ್ಯ' ಎಂಬುದನ್ನು ಪ್ರತ್ಯೇಕವಾಗಿ ಗುರುತಿಸುವುದರ ಮತ್ತು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಅದಕ್ಕೆ ಒಂದು ಸ್ವತಂತ್ರ ಸ್ಥಾನವು ದೊರೆಯಬೇಕಾದುದರ ಪರವಾಗಿ ವಾದಮಾಡುತ್ತೇನೆ.

ಕನ್ನಡ ಸಾಹಿತ್ಯದ ಪ್ರಾಚೀನತೆಯನ್ನು ಕುರಿತು ಈಗಾಗಲೇ ತಕ್ಕಮಟ್ಟಿಗೆ ಚರ್ಚೆ ನಡೆದಿದೆ. ಕ್ರಿ. ಶ. ಐದನೆಯ ಶತಮಾನದಲ್ಲಿ ಕನ್ನಡ ಶಾಸನವೊಂದು ದೊರೆಯುವುದರಿಂದ[2] ಅದಕ್ಕಿಂತಲೂ ಹಿಂದೆಯೇ ಕನ್ನಡ ಸಾಹಿತ್ಯ ಬೆಳೆದುಕೊಂಡು ಬಂದಿದ್ದಿತೆಂದು ಕೆಲವರು ವಾದಮಾಡುತ್ತಾರೆ. ಭಾಷೆಯ ಅಸ್ತಿತ್ವ ಸಾಹಿತ್ಯದ ಅಸ್ತಿತ್ವಕ್ಕೆ ಆಧಾರವಾಗುವುದಿಲ್ಲ. ಎಷ್ಟೇ ರೀತಿಯ ವಾದಗಳನ್ನು ಮುಂದಿಟ್ಟಿದ್ದರೂ, 'ಕವಿರಾಜಮಾರ್ಗದ' ಹೆಸರು (ಸು. ಕ್ರಿ. ಶ. ೮೫೦) ಈಚಿನ ಒಂದು ಖಚಿತ ಮಿತಿ. ಅದರಲ್ಲಿ ದೊರಕುವ ಕವಿಗಳ ಹೆಸರುಗಳು ಎಷ್ಟು ಹಿಂದಕ್ಕೆ ಹೋಗುತ್ತವೆಯೋ ತಿಳಿಯದು. ಇಲ್ಲಿಯ ದುರ್ವಿನೀತನೂ ಗಂಗರ ದೊರೆ ದುರ್ವಿನೀತನೂ (ಸು. ಕ್ರಿ. ಶ. ೬೦೦) ಒಂದೇ ಎಂದು ಹೇಳಲು ಹೆಸರಿನ ಸಾಮ್ಯವನ್ನು ಬಿಟ್ಟರೆ ಇನ್ನೇನೂ ಆಧಾರ ಕಾಣದು. (ಗಂಗರ ದೊರೆ ದುರ್ವಿನೀತನು 'ಕಿರಾತಾರ್ಜುನೀಯ'ಕ್ಕೆ ಬರೆದ ಟೀಕೆ

---

[1] ಇದನ್ನು ಬರಿಯ 'ಸಾಹಿತ್ಯ' ಎಂದೋ, 'ಕನ್ನಡ ಸಾಹಿತ್ಯ' ಎಂದೋ ಆಗಾಗ್ಗೆ ನಿರ್ದೇಶಿಸಿರುತ್ತೇನೆ. ಸಾಹಿತ್ಯದ ಕಾರಣವಾಗಿಯೇ ಹುಟ್ಟಿದ ಕೃತಿಗಳನ್ನು ಪಕ್ಕಾ ಸಾಹಿತ್ಯವೆಂದೂ (ಉದಾ.ಗೆ ಪಂಪ, ಹರಿಹರ, ಕುಮಾರವ್ಯಾಸರ ಕೃತಿಗಳು), ಸಾಹಿತ್ಯಾಂಶವಿರುವ ಶಾಸನಗಳನ್ನು ಶಾಸನ ಸಾಹಿತ್ಯವೆಂದೂ ಇಲ್ಲಿ ಭಾವಿಸಿದೆ. ಪಕ್ಕಾ ಸಾಹಿತ್ಯದ ವಿವರಣೆ, ಅದರಲ್ಲೂ ಭಾರತೀಯ ಭಾಷೆಗಳಲ್ಲಿ, ಅಷ್ಟು ಸುಲಭವಲ್ಲವೆಂಬ ಅರಿವು ನನಗಿದ್ದರೂ, ಸದ್ಯಕ್ಕೆ ಮೇಲಿನ ಭೇದವನ್ನು ಒಪ್ಪಿಕೊಳ್ಳುವುದರಲ್ಲಿ ನನಗೆ ಅಂತಹ ತೊಂದರೆಗಳೇನೂ ಕಾಣುವುದಿಲ್ಲ.

[2] ಹಲ್ಮಿಡಿ ಶಾಸನದ ಪ್ರಾಚೀನತೆಯನ್ನು ಪ್ರಶ್ನಿಸಿರುವ ಶಾಸನಜ್ಞರಿಲ್ಲದಿಲ್ಲ.

ಕನ್ನಡದಲ್ಲಿದ್ದಿರಬೇಕೆಂಬುದು ಕೇವಲ ಊಹೆ). 'ಕವಿರಾಜಮಾರ್ಗ'ದ ಇನ್ನಿತರ ಉಲ್ಲೇಖಗಳೂ ಕೂಡ ಕ್ರಿ. ಶ. ೮೫೦ಕ್ಕಿಂತ ಹಿಂದೆ ಕನ್ನಡದಲ್ಲಿ ಸಾಹಿತ್ಯವಿದ್ದಿತೆಂಬುದಕ್ಕೆ ಆಧಾರಗಳೇ ಹೊರತು, ಎಷ್ಟು ಹಿಂದೆ ಎಂಬುದಕ್ಕೆ ಅಲ್ಲಿಂದ ಏನೂ ಸಹಾಯ ದೊರಕುವುದಿಲ್ಲ. ಆದ್ದರಿಂದ ಕ್ರಿ. ಶ. ೮೫೦ಕ್ಕಿಂತ ಹಿಂದಿನ ಕನ್ನಡ ಸಾಹಿತ್ಯದ ಪ್ರಾಚೀನತೆಯ ಬಗ್ಗೆ ವಿಚಾರಮಾಡಬಯಸುವವರು ಸದ್ಯಕ್ಕೆ ಅನಿವಾರ್ಯವಾಗಿ ಶಾಸನ ಸಾಹಿತ್ಯವನ್ನೇ ಅವಲಂಬಿಸಬೇಕಾಗಿದೆ.

ಸು. ೭೦೦ಕ್ಕಿಂತ ಹಿಂದಿನ ಕರ್ಣಾಟಕದ ಕಾವ್ಯಮಯ ಶಾಸನಗಳೆಲ್ಲವೂ ಬಹುಮಟ್ಟಿಗೆ ಸಂಸ್ಕೃತದಲ್ಲಿವೆ. ಸು. ೪೫೦ರ ತಾಳಗುಂದ ಶಾಸನದ ಕರ್ತೃ ಕುಬ್ಜ, ಕ್ರಿ. ಶ. ೬೩೪ರ ಐಹೊಳೆ ಶಾಸನದ ಕರ್ತೃ ರವಿಕೀರ್ತಿ, ಕ್ರಿ. ಶ. ೬೦೨ರ ಮಹಾಕೂಟ ಸ್ತಂಭ ಶಾಸನದ ಅಜ್ಞಾತಕವಿ (ಬಹುಶಃ ಅದೇ ರವಿಕೀರ್ತಿ) ಇವರು ಕನ್ನಡನಾಡಿನ ಕೆಲವು ಸುಪ್ರಸಿದ್ಧ ಕವಿಗಳು. ಈ ಶಾಸನಗಳೆಲ್ಲವೂ ಸಂಸ್ಕೃತದಲ್ಲಿವೆ. ರವಿಕೀರ್ತಿ ತಾನು ಕಾಲಿದಾಸ ಭಾರವಿಯರಿಗೆ ಸಮಾನ ಕೀರ್ತಿಯುಳ್ಳವನು ಎಂದು ಹೇಳಿಕೊಳ್ಳುವುದನ್ನು ನೋಡಿದರೆ (ಇದು ಉತ್ಪ್ರೇಕ್ಷೆ ಎಂಬ ಮಾತು ಬೇರೆ), ಆ ಕಾಲದಲ್ಲಿ ಶಕ್ತರಾದ ಕನ್ನಡಿಗ ಕವಿಗಳು ಸಂಸ್ಕೃತದಲ್ಲಿ ಕಾವ್ಯರಚನೆ ಮಾಡಿ ಅಲ್ಲಿ ಸ್ಥಾನವನ್ನು ಪಡೆಯಲು ಪ್ರಯತ್ನಿಸುತ್ತಿದ್ದರೆಂದು ಬೋಧೆಯಾಗುತ್ತದೆ. ಮಹಾಕೂಟ ಸ್ತಂಭ ಶಾಸನದಲ್ಲಿ ಕಾಲಿದಾಸನ 'ರಘುವಂಶದ' ಶ್ಲೋಕಾರ್ಥವನ್ನು ಉದಾಹರಿಸಿರುವುದನ್ನು ನೋಡಿದರೆ, ಕಾಲಿದಾಸ ಮುಂತಾದ ಸಂಸ್ಕೃತ ಕವಿಗಳು ಕರ್ಣಾಟಕದ ಕವಿಗಳಿಗೆ ಆದರ್ಶರಾಗಿದ್ದರು ಎಂಬುದು ಸ್ಪಷ್ಟವಾಗುತ್ತದೆ. ಗಂಗರ, ಕದಂಬರ ತಾಮ್ರಪಟಗಳೆಲ್ಲ ಸಂಸ್ಕೃತದಲ್ಲಿದ್ದು, ಕೊನೆಯಲ್ಲಿ ಒಮ್ಮೊಮ್ಮೆ ಗಡಿಗಳನ್ನು ಹೇಳುವಾಗ ಕನ್ನಡ ಭಾಷೆ ('ಪ್ರಾಕೃತ' ಅಥವಾ 'ದೇಶ'ಭಾಷೆ) ಗೋಚರವಾಗುತ್ತದೆ. ಕನ್ನಡದಲ್ಲಿಯೇ ರಚಿತವಾಗಿರುವ ಶಿಲಾಶಾಸನಗಳು ಸಂಕ್ಷಿಪ್ತವಾಗಿದ್ದು, ಕೇವಲ ವಿಷಯನಿರೂಪಣೆಯನ್ನು ಮಾಡಿ ಅಲ್ಲಿಗೆ ನಿಂತುಬಿಡುವ ಗದ್ಯವನ್ನು ಒಳಗೊಂಡಿವೆ. ಇವುಗಳ ಗದ್ಯಶೈಲಿಯಲ್ಲಿ ಹೇಳಿಕೊಳ್ಳುವಂತಹ ಗುಣವೇನೂ ಕಾಣದು.

ಹಲ್ಮಿಡಿ ಶಾಸನದಲ್ಲಿ ಬೆಳೆದು ನಿಂತ ಕನ್ನಡ ಗದ್ಯವನ್ನು ಕಾಣಬಹುದೆಂದು ಕೆಲವರು ಭಾವಿಸುತ್ತಾರೆ. ಅಲ್ಲಿಯ 'ಪೆತ್ತ ಜಯನ್' ಎಂಬ ವಿಲಕ್ಷಣ ರೂಪವನ್ನೂ, 'ಪೊಗೞ್ೞೆಪ್ಪೊಟ್ಟಣ' ಎಂಬ ಕರ್ಮಣೀ ರೂಪವನ್ನೂ (?), 'ಬಹು ಶತ ಹವನಾಹವದುಳ್....' ಎಂಬ ಉಕ್ತಿಯಲ್ಲಿ ಬರುವ ಶ್ಲೇಷೆಯನ್ನೂ ಗಮನಿಸಿದರೆ, ಸಂಸ್ಕೃತದ ಪ್ರಭಾವಕ್ಕೆ ತೀವ್ರವಾಗಿ ಒಳಗಾಗಿರುವ ಮತ್ತು ಸಂಸ್ಕೃತದಲ್ಲಿ ವಾಕ್ಯಗಳನ್ನು ಕಲ್ಪಿಸಿಕೊಂಡು ಅವುಗಳನ್ನು ಕನ್ನಡಕ್ಕೆ ಅನುವಾದಿಸಿರುವ ಒಬ್ಬ ಸಂಸ್ಕೃತ ವಿದ್ವಾಂಸನ ಕನ್ನಡ ಭಾಷೆಯನ್ನು ಅಲ್ಲಿ ಕಾಣಬಹುದಾಗಿದೆ.

ತಾಳಗುಂದ ಮತ್ತು ಐಹೊಳೆ ಶಾಸನಗಳಲ್ಲಿ ಸಂಸ್ಕೃತದಲ್ಲಿ ಪ್ರಸಿದ್ಧವಾದ ವಂಶಸ್ಥ, ಮಂದಾಕ್ರಾಂತ, ಇಂದ್ರವಜ್ರ ಮುಂತಾದ ವೃತ್ತಗಳಲ್ಲದೆ ಮುಂದೆ ಕನ್ನಡದಲ್ಲಿ

ಬಹು ಜನಪ್ರಿಯತೆಯನ್ನು ಗಳಿಸಿದ ಆರ್ಯಾಗೀತಿ (=ಕಂದ), ಶಾರ್ದೂಲ ವಿಕ್ರೀಡಿತ, ಮತ್ತೇಭ ವಿಕ್ರೀಡಿತ, ಸ್ರಗ್ಧರಾವೃತ್ತಗಳೂ ಬಳಕೆಯಾಗಿರುವುದು ಗಮನಾರ್ಹ ಸಂಗತಿಯಾಗಿದೆ.

ಸು. ಕ್ರಿ. ಶ. ೭೦೦ರ ಸರಿಸುಮಾರಿನಲ್ಲಿ ಮೊತ್ತಮೊದಲು ಕನ್ನಡದಲ್ಲಿ ರಚಿತವಾದ ಬಿಡಿ ಪದ್ಯಗಳ ರೂಪದ ಶಾಸನಗಳು ದೊರೆಯುತ್ತವೆ. ಚಿತ್ರದುರ್ಗ ಜಿಲ್ಲೆಯ ತಮಟಕಲ್ಲು ಊರಿನ ಶಾಸನದಲ್ಲಿ ಒಂದೇ ಒಂದು ಸುಂದರ ವೃತ್ತವಿದೆ[3]. ಇದು ಹದಿನೇಳನೆಯ ಅತ್ಯಷ್ಟಿಯ ವರ್ಗಕ್ಕೆ ಸೇರಿದ ಒಂದು ವೃತ್ತ ಆಗಿದೆ. ಇದರ ಕಾಲವನ್ನು ಸು. ೫೦೦ ಎಂದು ಸಂದೇಹದೊಡನೆ ಊಹಿಸಿದ್ದರೂ, ಆ ಶಾಸನದ ಲಿಪಿಯ ಸಹಾಯದಿಂದ ಅದರ ತೇದಿಯನ್ನು ಸುಮಾರಾಗಿ ನಿಶ್ಚಯಿಸುವವರೆಗೆ ಆ ಬಗ್ಗೆ ಏನೂ ಹೇಳಲು ಬರುವಂತಿಲ್ಲ. ಭಾಷೆಯೇನೋ ಪೂರ್ವದ ಹಳಗನ್ನಡ. ಇದನ್ನು ಬಿಟ್ಟರೆ ಶ್ರವಣಬೆಳಗೊಳದಲ್ಲಿ ಸು. ೭೦೦ರ ಸರಿಸುಮಾರಿನಲ್ಲಿ ರಚಿತವಾದ ಬಿಡಿ ಪದ್ಯಗಳು ದೊರೆಯುತ್ತವೆ[4]. ಅವುಗಳಲ್ಲಿ ಕೆಲವು ವೃತ್ತಗಳು ಹೀಗಿವೆ.

(೧) ಮಹಾಸ್ರಗ್ಧರಾ (೨೨ ಅಕ್ಷರದ ವೃತ್ತ. ೧೫+೭ರಲ್ಲಿ ಯತಿ)
No. ೧೨.—"ದುರಿತಾ ಭೂದ್ವ್ಯಪ ಮಾನ್ಕಿಲ್ಬ್ರಿಲಜಿತ...."
No. ೮೮.—"ಸುರಚಾಪಂ ಬೋಲೆ...."
ಇವೆರಡರಲ್ಲೂ ಯತಿ ಪಾಲನೆಯಿದೆ.

(೨) ಶಾರ್ದೂಲ ವಿಕ್ರೀಡಿತ (೧೯ ಅಕ್ಷರದ ವೃತ್ತಿ. ೧೨+೭ರಲ್ಲಿ ಯತಿ)
No. ೧೩.—"ರಾಗದ್ವೇಷ ತವೋಮಲವ್ಯ...."
No. ೨೨—"ಬಾಳಾಮೇಲ್ಮೈಖಿ ಮೇಲೆ...."
No. ೨೭—"ಮಾಸೇನರ್ ಪರಮ ಪ್ರಭಾವ...."
ಈ ಮೂರರಲ್ಲೂ ಯತಿ ಪಾಲನೆಯಿದೆ.

---

3. ಬಿಣಮಣಿ ಅನ್ತು ಭೋಗಿ ಬಿಣದುಳ್ಮಣಿ ವಿಲ್ಮನದೋನ್
ರಣಮುಖದುಳ್ಳ ಕೋಲ [೦] ನೆರಿಯರ್ಕ್ಕಮನಿನ್ದ್ರಗುಣನ್
ಪ್ರಣಯಿ ಜನಕ್ಕೆ ಕಾಮನಸಿತೋತ್ಪಲ ವರ್ಣನವನ್
ಗುಣಮಧುರಾಂಕ್ಕ ದಿವ್ಯ ಪುರುಷನ್ಪುರುಷ ಪ್ರವರನ್ ‖

(Ec. xi. Chitradurga. 43)

ಈ ವೃತ್ತದಲ್ಲಿ ಪಾದಾಂತಯತಿ ಸ್ಪಷ್ಟವಾಗಿದೆ. ಪಾದದ ಮಧ್ಯೆ ೮ನೆಯ ಸ್ಥಾನದಲ್ಲಿ ಯತಿ ಎಲ್ಲ ಕಡೆಗೂ ಬಂದಿದೆ. 'ವೃತ್ತರತ್ನಾಕರ'ದ ಪ್ರಕಾರ ೭+೧೦ರಲ್ಲಿ ಯತಿ ಬಂದರೆ ನರ್ಕುಟಕ ವೃತ್ತ; ೭+೬+೪ರಲ್ಲಿ ಬಂದರೆ ಕೋಕಿಲಕ. ಆದ್ದರಿಂದ ಮೇಲಿನ ಪದ್ಯ ಇವೆರಡೂ ಆಗಿರದೆ ಅತ್ಯಷ್ಟಿಯ ಬೇರೊಂದು ವೃತ್ತವಾಗಿರುವ ಸಾಧ್ಯತೆಯೂ ಇದೆ.

4. EC. II. ಈ ಸಂಪುಟದಲ್ಲಿ ಬಂದಿರುವ ಶಾಸನಗಳ ಸಂಖ್ಯೆಯನ್ನು ಮುಂದೆ ಕೊಟ್ಟಿದೆ.

(೩) ಮತ್ತೇಭವಿಕ್ರೀಡಿತ (೨೦ ಅಕ್ಷರದ ವೃತ್ತ. ೧೩+೭ರಲ್ಲಿ ಯತಿ)

No. ೭೬—"ನೆಱೆದಾದ ವ್ರತಶೀಲ...."

No. ೭೭—"ಗತಿಚೇಷ್ಟಾ ವಿರಹಂ...."

ಇವೆರಡರಲ್ಲೂ ಯತಿ ಪಾಲನೆಯಿದೆ.

(೪) ಮಲ್ಲಿಕಾಮಾಲೆ (೧೮ ಅಕ್ಷರಗಳು. ೮+೧೦ಕ್ಕೆ ಯತಿ)

No. ೩೧.—"ಭದ್ರಬಾಹು ಸ ಚಂದ್ರಗುಪ್ತ...."

ಇಲ್ಲಿ ಯತಿಯ ಉಲ್ಲಂಘನೆಯಿದೆ.

(೫) ಉತ್ಪಲ ಮಾಲೆ (೨೦ ಅಕ್ಷರದ ವೃತ್ತ. ೧೧+೯ಕ್ಕೆ ಯತಿ)

No. ೨೧.—"ದಕ್ಷಿಣ ಭಾಗದಾ ಮದುರೆ...."

No. ೧೦೭.—"ವಂದನುರಾಗದಿ ನೆಱೆದು...."

ಎರಡರಲ್ಲೂ ಯತಿ ಪಾಲನೆಯಿಲ್ಲ.

(೬) ಮಂಗಳಂ (೧೬ ಅಕ್ಷರದ ವೃತ್ತ. ೮+೮ಕ್ಕೆ ಯತಿ)

No. ೧೧೩.—"ತನಗೆ ಮೃತ್ಯುವರವಾನಱಿದು...."

ಯತಿ ಪಾಲನೆಯಿಲ್ಲ.

ಹೀಗೆಯೇ ಚಂಪಕಮಾಲೆ, ವಂಶಸ್ಥ ಮುಂತಾದ ವೃತ್ತಗಳು ದೊರಕುತ್ತವೆ.

ಸುಮಾರು ಇದೇ ಕಾಲದಲ್ಲಿ (ಸು. ೭೦೦) ರಚಿತವಾದ ಕೆಲವು ಸುಂದರ ತ್ರಿಪದಿಗಳು ಬಾದಾಮಿಯ ಶಾಸನದಲ್ಲಿ ದೊರಕುತ್ತವೆ. ಜನಪದ ಸಾಹಿತ್ಯದ ಅಸ್ತಿತ್ವಕ್ಕೆ ಇವು ಆಧಾರಗಳು.

ಸು. ಕ್ರಿ. ಶ. ೭೦೦ ಆದಮೇಲೂ ಕನ್ನಡ ಶಾಸನಗಳಲ್ಲಿ ಪದ್ಯಗಳನ್ನೂ ಒಳ್ಳೆಯ ಗದ್ಯವನ್ನೂ ಕಾಣಬೇಕಾದರೆ ಇನ್ನೂ ಸ್ವಲ್ಪ ಕಾಲ ಕಾಯಬೇಕಾಗುತ್ತದೆ.

ಇದೆಲ್ಲವನ್ನೂ ನೋಡಿದರೆ, ಕನ್ನಡದಲ್ಲಿ ಮೊದ ಮೊದಲು ಪದ್ಯರಚನೆ ಆರಂಭವಾದದ್ದು ಸು. ೭೦೦ರ ಸರಿಸುಮಾರಿನಲ್ಲಿ ಎಂದು ಊಹಿಸಬಹುದಾಗಿದೆ. ಸು. ೭೦೦ರಲ್ಲಿ ಸಿಗುವ ಕನ್ನಡ ಅಕ್ಷರ ವೃತ್ತಗಳಲ್ಲಿ ಕೆಲವು ಕಡೆ ಯತಿಯ ಪಾಲನೆಯೂ, ಇನ್ನು ಕೆಲವೆಡೆ ಯತಿಯ ಉಲ್ಲಂಘನೆಯೂ ಕಂಡುಬರುವುದನ್ನು ನೋಡಿದರೆ, ಸಂಸ್ಕೃತ ಅಕ್ಷರ ವೃತ್ತಗಳನ್ನು ಕನ್ನಡಕ್ಕೆ ಒಗ್ಗಿಸಿಕೊಳ್ಳುವ ಪ್ರಯತ್ನ ಆರಂಭವಾಗಿ ಹೆಚ್ಚು ಕಾಲವಾಗಿರಲಿಲ್ಲವೆಂದು ಊಹಿಸಲು ಅವಕಾಶವಾಗುತ್ತದೆ.

ಆದ್ದರಿಂದ ಕನ್ನಡ ಸಾಹಿತ್ಯದ[5] ಇತಿಹಾಸವನ್ನು ಸು. ಕ್ರಿ.ಶ. ೬೫೦ಕ್ಕಿಂತ

---

[5] ಇಲ್ಲಿ ಜನಸಾಮಾನ್ಯರಲ್ಲಿ ಪ್ರಚಲಿತವಾಗಿದ್ದಿರಬಹುದಾದ ಮುಖಸ್ಥವಾದ 'ಜನಪದ ಸಾಹಿತ್ಯ'ವನ್ನು ಗಮನಕ್ಕೆ ತೆಗೆದುಕೊಂಡಿಲ್ಲ.

ಹಿಂದಕ್ಕೆ ತೆಗೆದುಕೊಂಡು ಹೋಗಲು ಸಾಧ್ಯವಿಲ್ಲವೆಂದು ಕಾಣುತ್ತದೆ.[6] ಅದಕ್ಕಿಂತ ಹಿಂದೆ ಪದ್ಯ ಕಾವ್ಯಗಳು ಹುಟ್ಟಿದ್ದರೆ, ನಮಗೆ ಕಾವ್ಯಮಯವಾದ ಕೆಲವು ಕನ್ನಡ ಶಾಸನಗಳಾದರೂ ದೊರಕುತ್ತಿದ್ದುವು; ಗದ್ಯ ಕೃತಿಗಳು ಹುಟ್ಟಿದ್ದರೆ ಶಾಸನಗಳಲ್ಲಿ ಉತ್ತಮ ಗದ್ಯವಾದರೂ ಕಾಣಿಸಿಕೊಳ್ಳುತ್ತಿದ್ದಿತು. 'ಕವಿರಾಜಮಾರ್ಗ'ದಲ್ಲಿ ಉಕ್ತರಾಗಿರುವ ಕವಿಗಳು ಏಳನೆಯ ಶತಮಾನಕ್ಕಿಂತ ಹಿಂದೆ ಹೋಗಲಾರರು.

ಕಾವೇರಿ ನದಿ ಮೂಲತಃ ಹನಿಹನಿಗಳ ರೂಪದಲ್ಲಿ ಆರಂಭವಾಗಿ ಮುಂದೆ ಬೆಳೆಯುತ್ತ ಹರಿಯುತ್ತದೆ. ಕನ್ನಡ ಕಾವ್ಯಪ್ರವಾಹವೂ ಕೂಡ ಏಳನೆಯ ಶತಮಾನದ ಬಿಡಿ ಬಿಡಿ ಪದ್ಯಗಳ ಹನಿ ಹನಿ ರೂಪದಲ್ಲಿ ಆರಂಭವಾಗಿರಬಹುದೆಂದು ಊಹಿಸಬಹುದು ಈ ಬಿಡಿ ಪದ್ಯಗಳು ಕನ್ನಡದಲ್ಲಿ ಪದ್ಯರಚನೆ ನಡೆದ ಆರಂಭದ ಪ್ರಯತ್ನಗಳೆಂದು ಕರೆದರೂ ತಡೆಯುತ್ತದೆ.

ಕನ್ನಡ ಭಾಷೆ ಆರಂಭಕಾಲದಿಂದ ಮೊದಲ ಶ್ರೇಷ್ಠಕವಿ ಪಂಪನವರೆಗೆ ಬೆಳೆದು ಕೊಂಡು ಬಂದ ಪರಿಯನ್ನು ಶಾಸನಗಳ ಸಹಾಯದಿಂದ ತಿಳಿಯಬಹುದು. ಮೊದ ಮೊದಲು ನಮಗೆ ಗೋಚರವಾಗುವುದು ಅಪಕ್ವವಾದ ಭಾಷೆ. ಆ ಭಾಷೆಗೆ ಅಭಿವ್ಯಂಜಕ ಶಕ್ತಿ ಇರುವುದು ಅಷ್ಟಕ್ಕಷ್ಟೇ. ಸಂಸ್ಕೃತದ ಪಕ್ಕದಲ್ಲಿ ಅದು ಮಂಕಾಗಿ, ತಲೆತಗ್ಗಿಸಿ ದೈನ್ಯತೆಯ ಭಾವದಲ್ಲಿ ಕಂಪಿಸುತ್ತ ನಿಂತಿರುವಂತೆ ಭಾಸವಾಗುತ್ತದೆ. ಸು. ೭೦೦ರ ಹೊತ್ತಿನಲ್ಲಿ ಹುಟ್ಟಿದ ವೃತ್ತಗಳ ಭಾಷೆಗೂ ಒಂದು ಸ್ವತಂತ್ರ ವ್ಯಕ್ತಿತ್ವವಿದೆಯೆಂದು ಅನ್ನಿಸುವುದಿಲ್ಲ. ಅಲ್ಲಿ ಬರುವ ದೀರ್ಘ ಸಮಾಸಗಳ ಮಾತಿರಲಿ, "ಸುರವಿದ್ಯಾವಲ್ಲ

---

[6] ಡಾ. ಎಚ್. ತಿಪ್ಪೇರುದ್ರಸ್ವಾಮಿಯವರು ತಮ್ಮ 'ಕರ್ಣಾಟಕ ಸಂಸ್ಕೃತಿ ಸಮೀಕ್ಷೆ'ಯಲ್ಲಿ (ಮೈಸೂರು. ೧೯೬೮. ಪು. ೬೬೩) ಈ ಮಾತುಗಳನ್ನಾಡಿದ್ದಾರೆ.—"ಭರತನ ನಾಟ್ಯ ಶಾಸ್ತ್ರವನ್ನು ಬಿಟ್ಟರೆ ಸಂಗೀತದಲ್ಲಿ ಬಹು ಪ್ರಾಚೀನವಾದ ಮತ್ತು ಪ್ರಮುಖವಾದ ಗ್ರಂಥ ಬೃಹದ್ದೇಶಿ. ಇದರ ಕರ್ತೃ ಮತಂಗ, ಸುಮಾರು ಕ್ರಿ.ಶ. ೫ನೇ ಶತಮಾನದಲ್ಲಿದ್ದಿರಬೇಕೆಂಬುದು ಈಗ ಬಹು ಮಟ್ಟಿಗೆ ಒಪ್ಪಿತವಾಗಿರುವ ಅಭಿಪ್ರಾಯ. ಈತ ಕನ್ನಡ ನಾಡಿನವನು, ಮತ್ತು ಋಷ್ಯಮೂಕ ಪರ್ವತದ ಬಳಿಯಲ್ಲಿ ವಾಸಿಸುತ್ತಿದ್ದವನೆಂದು ತಿಳಿದುಬರುತ್ತದೆ. ಕನ್ನಡ ಭಾಷೆಯನ್ನು ಇವನು ಬಲ್ಲವನಾಗಿದ್ದನೆಂಬುದಕ್ಕೆ ಅವನ ಗ್ರಂಥದಲ್ಲಿ ಸ್ಪಷ್ಟವಾದ ಆಧಾರಗಳು ಸಿಕ್ಕುತ್ತವೆ. ಕನ್ನಡದ ಅನೇಕ ಪ್ರಬಂಧಗಳನ್ನು ಅಂದರೆ ಸಂಗೀತ ರಚನೆಯ ಕೃತಿಗಳನ್ನು ಈತ ಹೆಸರಿಸುತ್ತಾನೆಂದು ತಿಳಿದುಬರುತ್ತದೆ. ಕನ್ನಡ ಸಾಹಿತ್ಯ ಚರಿತ್ರೆಯ ದೃಷ್ಟಿಯಿಂದಲೂ ಇದು ಬಹಳ ಕುತೂಹಲಕರವಾದ ಅಂಶವಾಗಬಲ್ಲುದು. ಕ್ರಿ.ಶ. ೫ನೇ ಶತಮಾನದಷ್ಟು ಹಿಂದಿನ ಮತಂಗ ತನ್ನ ಈ ಸಂಸ್ಕೃತ ಗ್ರಂಥದಲ್ಲಿ ಕನ್ನಡದ ಹಾಡುಗಳನ್ನು ಉದಾಹರಿಸಿದ್ದರೆ, ಅದು ಭಾಷೆಯ ಪ್ರಾಚೀನತೆಯನ್ನೂ ಸ್ವರೂಪವನ್ನೂ ಅರಿಯಲು ಅಮೂಲ್ಯವಾದ ಸಾಧನವಾಗಬಲ್ಲುದು."

ಮತಂಗನ 'ಬೃಹದ್ದೇಶಿ'ಯ ಕಾಲದ ಬಗ್ಗೆ ಸಂದೇಹಕ್ಕೆ ಅವಕಾಶವಿರುವುದರಿಂದ, ಅದು ಬಹುಶಃ ಈಚಿನ ಕೃತಿಯಾಗಿರುವುದರಿಂದ, ಅದರಲ್ಲಿ ಕನ್ನಡ ಭಾಷೆಯ ಒಂದು ಮಾದರಿಯೂ ಇಲ್ಲವಾದ್ದರಿಂದ ಮೇಲಿನ ಮಾತುಗಳಿಗೆ ಯಾವ ರೀತಿಯ ಬೆಲೆಯನ್ನೂ ಕೊಡಬೇಕಾಗಿಲ್ಲ. ಮತಂಗ ಕನ್ನಡ ನಾಡಿನವನೆಂದು ಹೇಳಲೂ ಯಾವ ಆಧಾರವೂ ಇಲ್ಲ.

ಭೇಂಪ್ರಾಸ್ಸರವರ ಮುನಿಭಿಸ್ತುತ್ಯ ಕ್ಷ್ಟಪ್ಪಿನಾ ಮೇಲ್" ಎಂಬಲ್ಲಿನ ಸಂಸ್ಕೃತ ವಿಭಕ್ತ್ಯಂತ ರೂಪವನ್ನು ನೋಡಿದರೆ, ಕನ್ನಡದ ಮೇಲೆ ಇದ್ದ ಸಂಸ್ಕೃತದ ಯಾಜಮಾನ್ಯ ಎಷ್ಟೆಂಬುದು ಗೊತ್ತಾಗುತ್ತದೆ. ಎಂಟನೆಯ ಶತಮಾನದಲ್ಲಿ ಕನ್ನಡ ಶಾಸನಗಳ ಗಾತ್ರವೂ ದೊಡ್ಡದಾಗುತ್ತದೆ; ಭಾಷೆಯೂ ಹೆಚ್ಚು ಅಭಿವ್ಯಂಜಕವಾಗುತ್ತದೆ. ಸು. ೮೦೦ರ ವೀರಗಲ್ಲಿನ[7] ಭಾಷೆಯನ್ನು ಇಲ್ಲಿ ನೆನೆಯಬಹುದು("....ಕಿಟ್ಟಿ ಕಾದಿ ಮಱು ವಕ್ಕದವರ ಮೆಯ್ಯ್ ಮೆಯ್ಯ್ಯಂಬಾಗೆ ಎಚ್ಚ್ಕೋಡಿಸಿ ಆ ಕಯ್ಯ್ಯಂ ಗೆಲ್ದು ತಾನುಂ ಪಲವುಂ ಎಸುವೆತ್ತು ಎಯ್ದೊಪ್ಪಿದೊ [ಲ] ದಪ್ಪಿದಪ್ಪೊಲ್ ಕಣೆ ಪಂಜರದೊಳ್ ಎರಗಿ ಬೀಸ್ಮನ್ನಿಪ್ಪಬ್ಬಂತೆ ನೆಲ ಮುಟ್ಟದೆ ಬಿಟ್ಟಿರ್ದ್ದನಾನ್ ದೇವಗಣಿಕೆಯರಾರ್ಗ್ಗುಂ ಬಿಡಿದು ಬಂದಿದಿರ್ಗೊಂಡು ವೀರಲೋಕಕ್ಕೆ ಸಂದೋನ್"........) 'ಕವಿರಾಜಮಾರ್ಗ' (ಸು. ೮೫೦), ಮೊದಲನೆಯ ಗುಣವರ್ಮನ ಕಾವ್ಯಗಳು[8] (ಸು. ೯೦೦), ವಡ್ಡಾರಾಧನೆ (ಸು. ೯೨೦?)–ಇವುಗಳ ಜೊತೆಗೆ ಕಳಸದ ಶಾಸನವನ್ನೂ[9] (ಕಿ.ಶ. ೯೩೦) ನೋಡಬೇಕಾಗುತ್ತದೆ, ಪಂಪನಿಗೆ ಬರುವ ಮುನ್ನ. ಭಾಷೆ ಕ್ರಮಕ್ರಮೇಣವಾಗಿ ಪಕ್ವಗೊಳ್ಳುತ್ತ, ತನ್ನ ವ್ಯಕ್ತಿತ್ವವನ್ನು ಬೆಳಸಿಕೊಂಡು ಸಮೃದ್ಧವಾಗುತ್ತ, ಎಂತಹ ಸೂಕ್ಷ್ಮ ಸಂಕೀರ್ಣ ಭಾವವನ್ನಾದರೂ ಹೇಳುವಷ್ಟು ಸಾಮರ್ಥ್ಯವನ್ನು ಪಡೆಯಿತು ಎಂಬುದರ ಇತಿಹಾಸದ ಬಗ್ಗೆ ಇನ್ನೂ ಕ್ರಮಬದ್ಧವಾದ ಕೆಲಸ ಆಗಬೇಕಾಗಿದೆ. ಪಂಪನ ಪಕ್ವಕನ್ನಡಕ್ಕೆ ಪಂಪನೊಬ್ಬನೇ ಕಾರಣನಲ್ಲ; ಅದು ಅನೇಕ ಶತಮಾನಗಳಿಂದ ಬೆಳೆದುಬಂದಿದ್ದೂ ಕಾರಣ. ಪಂಪ ಎಂತಹ ಪ್ರತಿಭಾಶಾಲಿಯಾಗಿದ್ದರೂ, ಅವನಿಂದ 'ಆದಿಪುರಾಣ', 'ಪಂಪಭಾರತ'ಗಳಂತಹ ಕಾವ್ಯಗಳನ್ನು ಐದು ಆರನೇ ಶತಮಾನಗಳಲ್ಲಿ ನಿರೀಕ್ಷಿಸಲು ಸಾಧ್ಯವೇ?

ಶಾಸನದ ಪಾಠವನ್ನು ಸಿದ್ಧಪಡಿಸಿಕೊಡಲು ವಿದ್ಯಾವಂತರನ್ನೋ ವಿದ್ವಾಂಸರನ್ನೋ ಕವಿಗಳನ್ನೋ ಕೇಳಿಕೊಳ್ಳುತ್ತಿದ್ದರು. ಕೆಲವು ಸಾರಿ ಶಾಸನಗಳ ಪಾಠವನ್ನು ಪ್ರಸಿದ್ಧ ಕವಿಗಳು ಸಿದ್ಧಪಡಿಸಿಕೊಟ್ಟಿರುವುದುಂಟು. ಕನ್ನಡದಲ್ಲಿ ಕಾವ್ಯಗಳನ್ನು ಬರೆದು ಪ್ರಖ್ಯಾತರಾದ ಕವಿಗಳು ಬರೆದ ಅನೇಕ ಶಾಸನಗಳು ದೊರಕಿವೆ. ಅತ್ತಿಮಬ್ಬೆಯ ಸದ್ಗುಣ ಔದಾರ್ಯಾದಿಗಳನ್ನು ಪ್ರಶಂಸಿಸಿರುವ ಲಕ್ಕುಂಡಿಯ ಶಾಸನವನ್ನು ರನ್ನನೇ ಬರೆದಿರಬಹುದೆಂದು ಪ್ರೊ. ತೀ. ನಂ. ಶ್ರೀಕಂಠಯ್ಯನವರು ಊಹಿಸಿದ್ದಾರೆ. ಅವನ 'ಅಜಿತಪುರಾಣ'ದ ಎರಡು ಪದ್ಯಗಳು ಇಲ್ಲಿ ಮತ್ತೆ ಕಾಣಿಸಿಕೊಳ್ಳುತ್ತವೆ. ಶಾಂತಿನಾಥ, ನಾಗಚಂದ್ರ, ಪಾರ್ಶ್ವ, ಜನ್ನ, ಮಧುರ, ತಿರುಮಲಾರ್ಯ ಮುಂತಾದ ಕವಿಗಳ ಶಾಸನಗಳೂ ದೊರೆತಿವೆ. ಈ ಕವಿಗಳ ಕಾವ್ಯಗಳ ಅಧ್ಯಯನಕ್ಕೆ ಅವರು ಬರೆದಿರುವ

---

7 EC. VIII. Sb. 100.

8 ಇವುಗಳ ಕೆಲವು ಮಾದರಿಗಳು ಮಾತ್ರ ಉಳಿದುಕೊಂಡು ಬಂದಿವೆ.

9 EI, XIII, pp. 329–33.

ಶಾಸನಗಳ ಅಧ್ಯಯನ ಪೂರಕವಾಗಿರುತ್ತದೆ. ಉದಾಹರಣೆಗೆ ಜನ್ನನ ಎರಡು ಶಾಸನಗಳನ್ನು ತೆಗೆದುಕೊಳ್ಳಬಹುದು. (ಅವನು ಇನ್ನೂ ಎರಡು ಶಾಸನಗಳನ್ನು ಬರೆದಿರುವನೆಂದು ಊಹಿಸಲು ಸಾಧ್ಯವಿದೆಯಾದರೂ, ಕವಿಯ ಹೆಸರು ಅಲ್ಲಿ ಇಲ್ಲವಾದ್ದರಿಂದ ಆ ಬಗ್ಗೆ ಖಚಿತವಾಗಿ ಹೇಳಲು ಬರುವಂತಿಲ್ಲ). ಅವನ ಕಾವ್ಯಗಳಾದ 'ಯಶೋಧರ ಚರಿತೆ' ಮತ್ತು 'ಅನಂತನಾಥ ಪುರಾಣ'ಗಳು ಕ್ರಮವಾಗಿ ಕ್ರಿ. ಶ. ೧೨೦೯ ಮತ್ತು ೧೨೩೦ರಲ್ಲಿ ಹುಟ್ಟಿವೆ. ಅವನು ಬರೆದ ಚನ್ನರಾಯಪಟ್ಟಣ ತಾಲೂಕಿನ ತಾಮ್ರಶಾಸನ ಕ್ರಿ. ಶ. ೧೧೯೧ರಲ್ಲಿಯೂ ತರೀಕೆರೆ ತಾಲೂಕಿನ ಶಿಲಾಶಾಸನ ೧೧೯೭ರಲ್ಲಿಯೂ ರಚಿತವಾಗಿವೆ. ಜನ್ನನ ಶೈಲಿಯ ವಿಕಾಸದ ನಿರೂಪಣೆಗೆ ಶಾಸನಗಳು ಸೊಗಸಾದ ಸಾಮಗ್ರಿಯನ್ನು ಒದಗಿಸುತ್ತವೆ. ಮೊದಲನೆಯ ಶಾಸನ ತೀರಾ ಸಪ್ಪೆ. ಆದರೆ ಎರಡನೆಯ ಶಾಸನವನ್ನು ಬರೆಯುವ ಹೊತ್ತಿಗೆ ಜನ್ನ ತನ್ನ ಶೈಲಿಯನ್ನಾಗಲೇ ನಿರ್ಮಿಸಿಕೊಂಡಿದ್ದನೆಂದು ಹೇಳಬಹುದು. ತರೀಕೆರೆ ಶಾಸನದಲ್ಲಿ ಬರುವ ವೀರಗಜದ ವರ್ಣನೆಯಾಗಲಿ, ಸುಗ್ಗಿಯಕ್ಕನ ಅಥವಾ ಅಮಿತದಂಡಾಧಿಪನ ವ್ಯಕ್ತಿತ್ವಗಳ ನಿರೂಪಣೆಯಾಗಲಿ ಬಹಳ ಸೊಗಸಾಗಿವೆ. ' ಮೊಱಡಿಯ ಮೇಲೆ ಮಾಡುಫಲಮೊಲಾದುದು ಶೀವಿನಿಂದ ಪೆರ್ಗಱ್ತೆ ' ಎಂಬ ಮಾತು 'ಯಶೋಧರ ಚರಿತೆ'ಯ ಉಕ್ತಿಯೊಂದನ್ನು ಜ್ಞಾಪಕಕ್ಕೆ ತರುತ್ತದೆ. ಜೊತೆಗೆ, ಜನ್ನ ಮೊದ ಮೊದಲು ಹೊಯ್ಸಳ ರಾಜ್ಯದ ಅಧಿಕಾರಿಗಳ, ದಂಡನಾಥರ ವಿಶ್ವಾಸವನ್ನು ಪಡೆದು, ಕ್ರಮೇಣ ಅವನು ಹೊಯ್ಸಳ ಚಕ್ರವರ್ತಿಯ ಆಸ್ಥಾನ ಕವಿಯಾಗಿ ಮೇಲೇರಿದ ಒಂದು ಸ್ಥೂಲಚಿತ್ರವನ್ನು ಕಟ್ಟಿಕೊಳ್ಳಲು ಶಾಸನಗಳು ಸಹಾಯ ಮಾಡುತ್ತವೆ. ಹೀಗೆ ಅವನ ಶಾಸನಗಳು ಅವನ ವೈಯಕ್ತಿಕ ಲೌಕಿಕ ಪ್ರಗತಿಯ ಚಿತ್ರವನ್ನೂ ಮತ್ತು ಕಾವ್ಯಶೈಲಿಯ ವಿಕಾಸದ ಚಿತ್ರವನ್ನೂ ಕಲ್ಪಿಸಿಕೊಳ್ಳಲು ಸಾಮಗ್ರಿಯನ್ನೊದಗಿಸುವುದರಿಂದ ಜನ್ನನ ಸಮಗ್ರ ಅಧ್ಯಯನದಲ್ಲಿ ಶಾಸನಗಳನ್ನು ಉಪೇಕ್ಷಿಸಲು ಸಾಧ್ಯವಿಲ್ಲವೆಂಬುದು ಸ್ಪಷ್ಟವಾಗುತ್ತದೆ.

ಬೊಪ್ಪಣ ಕವಿಯ ' ಗೊಮ್ಮಟಸ್ತುತಿ ' ಶ್ರವಣಬೆಳಗೊಳದ ಒಂದು ಶಾಸನದಲ್ಲಿ ಉತ್ಕೀರ್ಣವಾಗಿದೆ. ಇದನ್ನು ಒಂದು ಸ್ವತಂತ್ರ ಕೃತಿಯೆಂದೇ ಭಾವಿಸಬಹುದು. ಅನೇಕ ಕವಿಗಳ ಕೃತಿಗಳ ಹೆಸರುಗಳು ಶಾಸನಗಳಲ್ಲಿ ಉಕ್ತವಾಗಿವೆ ; ಆದರೆ ಅವು ಈಗ ಉಪಲಬ್ಧವಿಲ್ಲ. ಗಂಗರ ದೊರೆ ಶಿವಮಾರನ 'ಗಜಾಷ್ಟಕ' ಅಂತಹ ಒಂದು ಉದಾಹರಣೆ. ವಿಜಯನಗರದ ಪ್ರೌಢಪ್ರತಾಪ ದೇವರಾಯನ ಮಂತ್ರಿಯಾಗಿದ್ದ ಲಕ್ಷ್ಮೀಧರನು 'ನೀತಿವಾಕ್ಯಾಮೃತ,' ' ರಾಮಾಯಣ ' ಮತ್ತು 'ಕೃಷ್ಣಲೀಲೆ'ಗಳನ್ನು (ಕನ್ನಡದಲ್ಲಿ ?) ಬರೆದನೆಂದು ಮಧುರಕವಿ ತಾನು ರಚಿಸಿದ ಶಾಸನದಲ್ಲಿ ಹೇಳಿದ್ದಾನೆ. ಅವು ಇಂದು ಉಪಲಬ್ಧವಾಗಿಲ್ಲ. ಎಷ್ಟೋ ಶಾಸನಕವಿಗಳು ಬರೆದಿರಬಹುದಾದ ಕಾವ್ಯಗಳು ದೊರಕದಿದ್ದರೂ ಪುಟ್ಟ ಕಾವ್ಯಗಳಂತಿರುವ ಅವರ ಶಾಸನಗಳು ದೊರಕಿವೆ. ಜನ್ನನ ಹೆಂಡತಿ ಲಕುಮಾದೇವಿಯ ಗುರುವಾಗಿದ್ದ ಚತುರ್ಭಾಷಾಕವಿ ಬಾಳಚಂದ್ರ ಕವಿಕಂದರ್ಪನು ಕೌಲೂರು ಶಾಸನ ಮತ್ತು ಬೆಳಗಾವಿಯ ಶಾಸನಗಳನ್ನು ಬರೆದಿದ್ದಾನೆ. ಇವನು

ಮಂಡ್ಯ ಜಿಲ್ಲೆಯ ತಿಪ್ಪೂರಿನವನೆಂಬ ಸಂಗತಿ ಅವನ ಶಾಸನಗಳಿಂದ ತಿಳಿದುಬರುತ್ತದೆ. ಇಂತಹ ಮಹಾವಿದ್ವಾಂಸ ಕವಿಯ ಕೃತಿಗಳು ಇನ್ನೂ ಅಡಗಿ ಕುಳಿತಿರಬಹುದು ಅಥವಾ ಸಂಪೂರ್ಣವಾಗಿ ನಾಶವಾಗಿರಬಹುದು.

ಇನ್ನು ಗದ್ಯ ಮತ್ತು ಪದ್ಯ ಶಾಸನಗಳನ್ನೇ ಬರೆದ ನೂರಾರು ಕವಿಗಳ ಹೆಸರುಗಳು ದೊರಕುತ್ತವೆ. ಅವರು ಇನ್ನೇನು ಬೇರೆ ಬರೆದಿರುವರೋ ತಿಳಿಯದು. ಶಿರಸಂಗಿ ಶಾಸನವನ್ನು ಬರೆದ ಸಜ್ಜನ ತಿಳಕನು ಶಾಸನವನ್ನು ಹೇಳುವ ನೆಪದಲ್ಲಿ ಋಷ್ಯಶೃಂಗರ ಕಥೆಯನ್ನು ಸಂಕ್ಷಿಪ್ತವಾಗಿ ನಿರೂಪಿಸಿದ್ದೇನೆಂದು ಹೇಳಿಕೊಂಡಿದ್ದಾನೆ. ನಾರಣ ಎಂಬ ಕವಿ ತಾನು ವೇದವೇದಾಂಗಗಳನ್ನು ಓದದಿದ್ದರೂ ಕವಿತೆಯು ತನಗೆ ಸಹಜವಾಗಿ ಬಂದಿದೆಯೆಂದು ತ್ರಿಪದಿಯಲ್ಲಿ ಹೇಳಿಕೊಂಡಿದ್ದಾನೆ. ಆಶುಕವಿ ನಿಟಿಲಾಕ್ಷ, ಮಲ್ಲ, ಕವಿರಾಜ ರಾಜ ಮುಂತಾದ ನಿಜವಾಗಿಯೂ ಸಮರ್ಥರಾದ ನೂರಾರು ಶಾಸನ ಕವಿಗಳ ಹೆಸರುಗಳು ದೊರಕುತ್ತವೆ. ಇವರಲ್ಲಿ ಎಲ್ಲರೂ ಉತ್ತಮ ಕವಿಗಳೆಂದು ಹೇಳಲಾಗದಿದ್ದರೂ ಕೆಲವರಾದರೂ ಉತ್ತಮ ಕವಿತೆಯನ್ನು ಬರೆಯಬಲ್ಲವರಾಗಿದ್ದರೆಂಬುದಕ್ಕೆ ಶಾಸನಗಳು ಸ್ಪಷ್ಟಾಧಾರಗಳನ್ನು ಒದಗಿಸುತ್ತವೆ. ಇವರಲ್ಲಿ ಕೆಲವರಿಗೆ ಪ್ರೋತ್ಸಾಹ, ಪೋಷಣೆ, ಅವಕಾಶಗಳ ಅಭಾವದಿಂದಾಗಿ ತಮ್ಮ ಕಾವ್ಯಶಕ್ತಿಯನ್ನು ಬೆಳಸಿಕೊಳ್ಳಲು ಸಾಧ್ಯವಾಗದೆಯೇ ಹೋಗಿರಬಹುದು. ಅನೇಕ ಶ್ರೇಷ್ಠ ಶಾಸನ ಕರ್ತೃಗಳು ತಮ್ಮ ಹೆಸರುಗಳನ್ನು ಹೇಳಿಕೊಳ್ಳದೆಯೆ ಬಿಟ್ಟಿದ್ದಾರೆ.

ಅನೇಕ ಶಾಸನಗಳಂತೂ ಪುಟ್ಟ ಕಾವ್ಯಗಳೇ ಸರಿ. ಆರಂಭದಲ್ಲೋ ಕೊನೆಯಲ್ಲೋ ಮಧ್ಯದಲ್ಲೋ ಬರುವ ಕೆಲವು ವಾಸ್ತವಾಂಶಗಳ ವಿವರಗಳನ್ನು ಬಿಟ್ಟರೆ ಉಳಿದ ಭಾಗಗಳು ಒಳ್ಳೆಯ ಕಾವ್ಯವೇ ಆಗಿರುವುದುಂಟು. ಕೆಲವು ಶಾಸನಗಳು ಚಂಪೂ ಶೈಲಿಯ ಕಾವ್ಯಗಳಂತೆ ಸಮುದ್ರ ವರ್ಣನೆಯಿಂದ ಆರಂಭವಾಗುತ್ತವೆ. ದೇಶ, ನಗರಗಳ ವರ್ಣನೆಗಳಲ್ಲಿ, ಕೆರೆ ನದಿ ಗದ್ದೆಗಳ ವರ್ಣನೆಗಳಲ್ಲಿ ನಮಗೆ ಚಂಪೂ ಕಾವ್ಯಗಳು ಜ್ಞಾಪಕಕ್ಕೆ ಬರುತ್ತವೆ. ಕೆಲವು ಕಡೆ ಬಹು ಸೂಕ್ಷ್ಮವಾದ ಮಾನುಷ ಸ್ವಭಾವದ ವಿಶ್ಲೇಷಣೆಯೂ ಕಂಡುಬರುತ್ತದೆ. ಉಪಮೆ, ರೂಪಕ, ಉತ್ಪ್ರೇಕ್ಷೆಗಳಂತೂ ಸಾಮಾನ್ಯ. ಶ್ಲೇಷೆ, ವಿರೋಧಾಭಾಸಗಳಂತಹ ಪಂಡಿತಪ್ರಿಯ ಅಲಂಕಾರಗಳೂ ಇಲ್ಲದಿಲ್ಲ. ಯುದ್ಧ ವರ್ಣನೆಗಳಲ್ಲಿ ವೀರರಸ ಉಕ್ಕಿ ಹರಿದರೆ, ಸಹಗಮನದ ವರ್ಣನೆಗಳಲ್ಲಿ ಶೋಕ ಹೆಪ್ಪುಗಟ್ಟಿರುತ್ತದೆ. ನಿಸಿದಿಗಲ್ಲುಗಳಲ್ಲಿ ಶಾಂತರಸದ ನಿರೂಪಣೆಯಿರುತ್ತದೆ. ಹರಿತವಾದ ವ್ಯಂಗ್ಯ, ವಿಡಂಬನೆಗಳಿಗೂ ಶಾಸನಗಳಲ್ಲಿ ಉದಾಹರಣೆಗಳುಂಟು.

ಶಾಸನಗಳಲ್ಲಿ ಸುಪ್ರಸಿದ್ಧ ಕವಿಗಳ ಪ್ರಭಾವವನ್ನು ಗುರುತಿಸಬಹುದು. ಪಂಪನ 'ಪಂಪಭಾರತ'ದ 'ನೆನೆಯದಿರಣ್ಣ ಭಾರತದೊಳಿಂ ಪೆಱರಾರುಮನ್........' ಎಂಬ ಸುಪ್ರಸಿದ್ಧ ಪದ್ಯದ ಅನುಕರಣೆಯೂ, ಅದೇ ಕೃತಿಯ ಮೊದಲ ಆಶ್ವಾಸದ 'ನೆನೆದ ಮನಂ ಪೆಱಗುಱಿದತ್ತೆನೆ........' ಎಂಬ ಪದ್ಯದ ಅನುಕರಣೆಯೂ ಕೆಲವು ಶಾಸನಗಳಲ್ಲುಂಟು. ಹಾಗೆಯೇ, ಶಾಸನಗಳನ್ನು ಓದುತ್ತಿದ್ದರೆ ಅವನ ಅನೇಕ ಪದ್ಯಗಳು

ನೆನಪಿಗೆ ಬರುತ್ತವೆ. ರನ್ನನ 'ಒಡಲೊಡಮೆಯೆಂಬಿವೆರಡುಂ........' ಎಂಬ ಪದ್ಯವನ್ನೂ, 'ತುಱುಗೋಳೊಳ್ ಪೆಣ್ಬುಯ್ಯಲೊಳ್........' ಎಂಬ ಪದ್ಯವನ್ನೂ ಶಾಸನ ಕವಿಗಳು ಅನೇಕ ಕಡೆಗಳಲ್ಲಿ ಅಲ್ಪ ಸ್ವಲ್ಪ ವ್ಯತ್ಯಾಸಗಳೊಡನೆ ಬಳಸಿಕೊಂಡಿದ್ದಾರೆ[10]. ವಾಸ್ತವ ಸಂಗತಿಯೇನೆಂದರೆ, ಪಕ್ಕಾ ಸಾಹಿತ್ಯವು ಶಾಸನ ಸಾಹಿತ್ಯಕ್ಕೆ ಆದರ್ಶ ಮತ್ತು ಪ್ರಚೋದಕ. ಪಕ್ಕಾ ಸಾಹಿತ್ಯದ ಏಳು ಬೀಳುಗಳನ್ನು ಶಾಸನ ಸಾಹಿತ್ಯವೂ ಅನುಸರಿಸಿದೆ. ಪಂಪನಿಗಿಂತ ಹಿಂದೆ ಕಾವ್ಯಮಯವಾದ ಕಳಸದ ಶಾಸನಗಳಂತಹ ಒಂದೆರಡು ಶಾಸನಗಳು ಕಂಡುಬಂದರೂ, ಪಂಪ ರನ್ನ ಮೊದಲಾದ ಚಂಪೂ ಕವಿಗಳ ನಂತರ ಕಾವ್ಯಮಯ ಶಾಸನಗಳ ಸಂಖ್ಯೆಯೂ ಅವುಗಳ ಗುಣವೂ ಹೆಚ್ಚುತ್ತಾ ಹೋಗುತ್ತದೆ. ಇದು ಹನ್ನೆರಡು ಹದಿಮೂರನೇ ಶತಮಾನಗಳವರೆಗೆ ಮುಂದುವರಿದುಕೊಂಡು ಬಂದಿತು. ಆ ಹೊತ್ತಿಗೆ ಚಂಪೂ ಪರಂಪರೆ ಬಹುಮಟ್ಟಿಗೆ ನಿಸ್ಸತ್ವವಾಯಿತು. ಶಾಸನ ಸಾಹಿತ್ಯಕ್ಕೂ ಇದೇಗತಿ ಒದಗಿತು. ವಿಚಿತ್ರ ಸಂಗತಿಯೆಂದರೆ ಮುಂದೆ ಬಂದ ಷಟ್ಪದಿ, ರಗಳೆ, ಸಾಂಗತ್ಯ ಪರಂಪರೆಗಳು ಶಾಸನ ಸಾಹಿತ್ಯದ ಮೇಲೆ, ಕಾವ್ಯ ಮಾಧ್ಯಮದ ದೃಷ್ಟಿಯಿಂದ ಹೇಳುವುದಾದರೆ, ಯಾವ ಪ್ರಭಾವವನ್ನೂ ಬೀರಲಿಲ್ಲ. ಷಟ್ಪದೀರೂಪವಾದ ಅಥವಾ ಸಾಂಗತ್ಯರೂಪವಾದ ಯಾವ ಶಾಸನವೂ ನಮಗೆ ದೊರಕುವುದಿಲ್ಲ. ಈಚಿನವರೆಗೆ ಶಾಸನಗಳು ಇಲ್ಲವೇ ಚಂಪೂರೂಪವಾಗಿರುತ್ತವೆ, ಇಲ್ಲವೇ ಗದ್ಯರೂಪವಾಗಿರುತ್ತವೆ.

ಅನೇಕ ಪ್ರಖ್ಯಾತ ಕವಿಗಳಿಗೆ ಸಂಬಂಧಿಸಿದ ಕೆಲವು ವೈಯಕ್ತಿಕ ಸಂಗತಿಗಳು ಶಾಸನಗಳಲ್ಲಿ ದೊರಕುತ್ತವೆ. ಉದಾಹರಣೆಗೆ ಈಚೆಗೆ ದೊರೆತ ಜಿನವಲ್ಲಭನ ಗಂಗಾಧರಂ ಶಾಸನವನ್ನೇ ನೋಡಬಹುದು. ಪಂಪನ ತಂದೆ ಅಭಿರಾಮದೇವರಾಯ ಅಲ್ಲ, ಭೀಮಪಯ್ಯ ; ಅವನ ತಾಯಿ ಅಬ್ಬಣಬ್ಬೆ, ತಮ್ಮ ಜಿನವಲ್ಲಭ ಇತ್ಯಾದಿ ಹೊಸ ಸಂಗತಿಗಳು ಮಾತ್ರವಲ್ಲದೆ, ಅವನ ತಾಯಿ ಕರ್ಣಾಟಕದ ಬೆಳ್ವೊಲದವಳು, ಅಣ್ಣಿಗೇರಿಯವಳು ಎಂಬ ಅಮೂಲ್ಯ ಸಂಗತಿ ಆ ಶಾಸನದಿಂದ ಗೊತ್ತಾಗುತ್ತದೆ. ಪಂಪ ತನ್ನ ಕಾವ್ಯವನ್ನು "ಸಾಜದ ಪುಲಿಗೆಱೆಯ" ತಿರುಳ್ಗನ್ನಡದಲ್ಲಿ ಬರೆದಿರುವುದಾಗಿ ಹೇಳಿಕೊಂಡಿದ್ದಾನೆ. ಪುಲಿಗೆರೆ ಅಥವಾ ಈಗಿನ ಲಕ್ಷ್ಮೇಶ್ವರ ಅಣ್ಣಿಗೇರಿಗೆ ಸಮೀಪದ ಊರು. ಪಂಪಕವಿ ಭಾರತವನ್ನು ಬರೆದದ್ದಕ್ಕೆ ಅರಿಕೇಸರಿ ಸಂತೋಷಪಟ್ಟು ಶಾಸನ ಸಮೇತವಾಗಿ ಒಂದು ಅಗ್ರಹಾರವನ್ನು ದಯಪಾಲಿಸಿದುದಾಗಿ 'ಪಂಪಭಾರತ'ದಲ್ಲಿ ನಿರೂಪಣೆಯಿದೆ. ಆ ಶಾಸನವು ಶಿಲಾಶಾಸನವಲ್ಲ, ತಾಮ್ರಪಟ ಎಂಬುದು ಗಂಗಾಧರಂ ಶಾಸನದಿಂದ ಸ್ಪಷ್ಟವಾಗುತ್ತದೆ. ನಮ್ಮ ಹಿಂದಿನ ಕವಿಗಳಿಗೆ ಸಂಬಂಧಿಸಿದ ಯಾವುದೇ

---

10. ಬಾಣನ 'ಹರ್ಷಚರಿತ'ದ ಪ್ರಾರ್ಥನಾ ಪದ್ಯವು ("ನಮಸ್ತುಂಗ ಶಿರಶ್ಚುಂಬಿ....") ಅನೇಕ ಶಾಸನಗಳ ಪ್ರಾರ್ಥನಾ ಪದ್ಯವೂ ಆಗಿದೆ. ಕಾಳಿದಾಸನ 'ವಾಗರ್ಥಾವಿವ........' ಪದ್ಯವೂ ಅನೇಕ ಕಡೆ ಕಾಣಿಸಿಕೊಳ್ಳುತ್ತದೆ. ಸಂಸ್ಕೃತದಲ್ಲಿ ಸುಪ್ರಸಿದ್ಧವಾದ 'ಶಿವಮಹಿಮ್ನಾ ಸ್ತೋತ್ರ'ದ ಒಂದೆರಡು ಪದ್ಯಗಳು ಶಾಸನಗಳಲ್ಲಿ ಅನುವಾದಗೊಂಡಿವೆ.

ಹೊಸ ಸಂಗತಿ—ಅದು ಮುಖ್ಯವಾದುದಾಗಿರಲಿ, ಅಮುಖ್ಯವಾದುದಾಗಿರಲಿ—ಯಾವಾಗಲೂ ಸ್ವಾಗತಾರ್ಹವಾಗಿರುತ್ತದೆ.

ಕವಿಗಳ ಕಾಲನಿರ್ಣಯದಲ್ಲಿ ಶಾಸನಗಳು ಅತ್ಯಮೂಲ್ಯವಾದ ಸಂಗತಿಗಳನ್ನು ಒದಗಿಸಿಕೊಡುತ್ತವೆ. ಶ್ರೀ ಆರ್. ನರಸಿಂಹಾಚಾರ್ಯರ 'ಕರ್ಣಾಟಕ ಕವಿಚರಿತೆ'ಯ ಸಂಪುಟಗಳನ್ನೂ, ಡಾ. ಎ. ವೆಂಕಟಸುಬ್ಬಯ್ಯನವರ 'ಕೆಲವು ಕನ್ನಡ ಕವಿಗಳ ಜೀವನ ಕಾಲವಿಚಾರ'ವನ್ನೂ, ಶ್ರೀ ಎಂ. ಗೋವಿಂದ ಪೈ ಮತ್ತು ಇತರರ ಲೇಖನಗಳನ್ನೂ ಓದಿದವರಿಗೆ ಈ ಅಂಶ ಚನ್ನಾಗಿ ಗೊತ್ತಿರುತ್ತದೆ.

ಸಾಹಿತ್ಯ ಮತ್ತು ಜನಜೀವನಗಳು ಪರಸ್ಪರ ಸಂಬಂಧವುಳ್ಳುವು. ಒಂದನ್ನು ಅರ್ಥಮಾಡಿಕೊಳ್ಳಲು ಇನ್ನೊಂದರ ಅರಿವು ಅಗತ್ಯ. ಈ ಮಾತು ಈಗಿನ ಕಾಲಕ್ಕೆ ಹೇಗೋ ಹಾಗೆಯೇ ಹಿಂದಕ್ಕೂ ಅನ್ವಯವಾಗುತ್ತದೆ. ನಮ್ಮ ನಾಡಿನ ಹಿಂದಿನ ಜನಜೀವನವನ್ನರಿಯಲು ಶಾಸನಗಳಿಗಿಂತ ಉತ್ತಮ ಸಾಧನಗಳು ಇಲ್ಲ. ಏಕೆಂದರೆ ಶಾಸನಗಳು ಜನ ಜೀವನಕ್ಕೆ ಸಂಬಂಧಿಸಿದ ನೇರ ಸಂಗತಿಗಳನ್ನು ಘಟನೆಗಳನ್ನು ನಿರೂಪಿಸುತ್ತವೆ. ಆಯಾ ಕಾಲದ ಮೌಲ್ಯಗಳನ್ನು ಅವು ಸ್ಪಷ್ಟವಾಗಿ ನಿರೂಪಿಸುತ್ತವೆ. ಪಂಪನ ಕಾಲದ ಆಚಿನ ಮತ್ತು ಈಚಿನ ಶಾಸನಗಳ ಅಧ್ಯಯನದಿಂದ ಪಂಪನ ಕಾವ್ಯಗಳು ಹೆಚ್ಚು ಅರ್ಥಪೂರ್ಣವಾಗುತ್ತವೆ. ಆದ್ದರಿಂದ ಯಾವುದೇ ಶತಮಾನದ ಸಾಹಿತ್ಯದ ಅಧ್ಯಯನಕ್ಕೆ ಹಿನ್ನೆಲೆಯಾದ ಸಾಮಾಜಿಕ ಜೀವನವನ್ನರಿಯಲು ನಮಗೆ ಶಾಸನಗಳು ಇತರ ಸಾಧನ ಸಾಮಗ್ರಿಗಳಿಗಿಂತ ಹೆಚ್ಚಾಗಿಯೇ ಸಹಾಯವನ್ನು ಮಾಡುತ್ತವೆ.

ಕನ್ನಡ ಗದ್ಯದ ಬೆಳವಣಿಗೆಯಲ್ಲಿ ಶಾಸನಗಳಿಗೆ ವಿಶಿಷ್ಟ ಸ್ಥಾನವುಂಟು. 'ವಡ್ಡಾರಾಧನೆ'ಯಂತಹ ಗದ್ಯಕೃತಿಗಳ ಗದ್ಯವಾಗಲಿ, ಚಂಪೂರಗಳೆ ಕಾವ್ಯಗಳಲ್ಲಿ ಮಧ್ಯೆ ಕಾಣಿಸಿಕೊಳ್ಳುವ ಗದ್ಯವಾಗಲಿ ಮುಖ್ಯವಾಗಿ ಕಲಿತವರು ಬರೆದದ್ದು. ಹಲವಾರು ಪ್ರೌಢ ಶಾಸನಗಳಲ್ಲಿ ಕಂಡುಬರುವ ಗದ್ಯ ಇದೇ ರೀತಿಯದು. ಆದರೆ ಅಷ್ಟು ಕಲಿತವರಲ್ಲದ ಜನ ಬರೆದ ಅನೇಕ ಶಾಸನಗಳ ಗದ್ಯದಲ್ಲಿ ಆಡುಮಾತಿನ ಸೊಗುಡು ಕಂಡುಬರುತ್ತದೆ. ಗದ್ಯ ತನ್ನ ನೀರಸತನವನ್ನು ಕಳೆದುಕೊಂಡು ಓಜಸ್ವಿಯಾಗಿ ಬೆಳಗುತ್ತಿರುವುದನ್ನು ಗುರುತಿಸಬಹುದು. ಕೆಲವು ಶಾಸನಗಳ ಕೊನೆಯಲ್ಲಿ ಬರುವ ಫಲಶ್ರುತಿಯ ಮತ್ತು ಶಾಪದ ವಾಕ್ಯಗಳಲ್ಲಿ ಜನಸಾಮಾನ್ಯರ ಒರಟು, ಆದರೆ ಶಕ್ತಿಯುತ ಶೈಲಿಯು ಇಣಿಕಿಹಾಕುತ್ತದೆ.

ಕನ್ನಡ ಛಂದಸ್ಸಿನ ಅಧ್ಯಯನಕ್ಕೆ ಶಾಸನಗಳು ತಮ್ಮದೇ ಆದ ಕೊಡುಗೆಯನ್ನು ಕೊಟ್ಟಿವೆ. ಸಂಸ್ಕೃತದಿಂದ ಕನ್ನಡ ಕವಿಗಳು ಅಕ್ಷರ ವೃತ್ತಗಳನ್ನು ಹೊಸದಾಗಿ ಸ್ವೀಕರಿಸಿದಾಗ ಇದ್ದ ಪರಿಸ್ಥಿತಿಯ ಪರಿಚಯಕ್ಕೆ ನಾವು ಏಳನೇ ಶತಮಾನದ ಬಿಡಿಪದ್ಯದ ಶಾಸನಗಳಿಗೇ ಹೋಗಬೇಕು. (ಇದರ ಚರ್ಚೆ ಈ ಲೇಖನದ ಆರಂಭದಲ್ಲಾಗಲೇ ಬಂದಿದೆ). ಕನ್ನಡದಲ್ಲಿ ವಿಷಮವೃತ್ತಗಳ ಬಳಕೆಯಿಲ್ಲವೆಂಬ ಕೆಲವರ ನಂಬಿಕೆಯನ್ನು

ಶಾಸನಗಳು ಸುಳ್ಳುಮಾಡಿವೆ. ತ್ರಿಪದಿ, ಷಟ್ಪದಿ, ಅಕ್ಕರಗಳಂತಹ ಅಂಶವೃತ್ತಗಳೂ ಲಲಿತದಂತಹ (ಲಯಗ್ರಾಹಿ) ಮಾಲಾವೃತ್ತವೂ ಶಾಸನಗಳಲ್ಲಿ ಅನೇಕ ಸಂಖ್ಯೆಯಲ್ಲಿ ದೊರಕುತ್ತವೆ. ಕೆಲವು ರಗಳೆಗಳೂ ದೊರಕಿವೆ. (ಲಲಿತ ರಗಳೆಯನ್ನೇ ಒಂದು ಶಾಸನದಲ್ಲಿ 'ತೋಮರ ರಗಳೆ' ಎಂದು ಕರೆದಿದೆ). ಈ ಸಂಗತಿಗಳನ್ನು ಬೇರೆ ಬೇರೆ ಲೇಖಕರು ಬೇರೆ ಬೇರೆ ಸಂದರ್ಭಗಳಲ್ಲಿ ಬಳಸಿಕೊಂಡಿದ್ದಾರೆ. 'ಕವಿರಾಜಮಾರ್ಗ'ದಲ್ಲಿ ಶ್ಲೋಕವನ್ನು ಕನ್ನಡಕ್ಕೆ ತರುವ ಪ್ರಯತ್ನಗಳಿವೆ. ಶಾಸನಕಾರರೂ ಒಂದೆರಡು ಕಡೆ ಇಂತಹ ಪ್ರಯತ್ನಗಳನ್ನು ಮಾಡಿದ್ದಾರೆ.

ಶಾಸನಗಳು ಸಾಹಿತ್ಯವಾಗಿ ಹುಟ್ಟಿದವುಗಳಲ್ಲವೆಂದೂ, ಅವುಗಳ ಪ್ರಧಾನ ಉದ್ದೇಶ ಬೇರೆಯೆಂದೂ ಈಗಾಗಲೇ ಸ್ಪಷ್ಟವಾಗಿದೆ. ಅವುಗಳಲ್ಲಿ ಸಾಹಿತ್ಯಿಕ ಮೌಲ್ಯವಿದ್ದರೆ ಅದು ಕೇವಲ ಪ್ರಾಸಂಗಿಕ. ಆದ್ದರಿಂದ ಅವು ಸಾಹಿತ್ಯಿಕವಾಗಿ ಶುದ್ಧ ಸಾಹಿತ್ಯದೊಡನೆ ಸ್ಪರ್ಧಿಸಲಾರವು. ಅವುಗಳಿಗೆ ಬೇರೆ ಬೇರೆ ದೃಷ್ಟಿಗಳಿಂದ ಸಂದಿರುವ, ಸಲ್ಲುತ್ತಿರುವ, ಸಲ್ಲಬೇಕಾಗಿರುವ ಪ್ರಾಮುಖ್ಯತೆಯನ್ನು ಚರ್ಚಿಸುವುದು ಸದ್ಯಕ್ಕೆ ಅಪ್ರಸ್ತುತ. ಆದರೆ ಕೇವಲ ಸಾಹಿತ್ಯದ ದೃಷ್ಟಿಯಿಂದ ನೋಡಿದರೂ ಶಾಸನಗಳಿಗೆ ಒಂದು ಸ್ಥಾನವನ್ನು ಕೊಡುವುದು ಆತ್ಯವಶ್ಯಕ ಎಂಬುದು ಸ್ಪಷ್ಟವಾಗಿದೆ. ಶಾಸನಗಳನ್ನು ರಸಾನುಭವಕ್ಕಾಗಿ ಅಧ್ಯಯನ ಮಾಡಬೇಕಾಗಿರದಿದ್ದರೂ, ಅನೇಕ ಶಾಸನಗಳನ್ನು ಓದಿದಾಗ ಒಳ್ಳೆಯ ಕಾವ್ಯವನ್ನು ಎದುರುಗೊಂಡ ಅನುಭವವಾಗುತ್ತದೆ ಎಂಬುದನ್ನು ಗುರುತಿಸಿದರೆ ಸಾಕು. ಜೊತೆಗೆ, ಶಾಸನಗಳ ಅಧ್ಯಯನ ನಮ್ಮ ಸಾಹಿತ್ಯದ ಅಧ್ಯಯನಕ್ಕೆ ಎಷ್ಟರಮಟ್ಟಿಗೆ ಸಹಾಯಕವಾಗಿದೆ ಎಂಬುದನ್ನು ಈ ಲೇಖನದ ಉದ್ದಕ್ಕೂ ಚರ್ಚಿಸಲಾಗಿದೆ. ಇದರಿಂದ, ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ಇತರ ಕವಿಗಳ ಜೊತೆಗೆ ಶಾಸನ ಕವಿಗಳನ್ನೂ ಸಾಹಿತ್ಯ ಕೃತಿಗಳ ಜೊತೆಗೆ ಶಾಸನಗಳನ್ನೂ ವಿವೇಚಿಸಬೇಕೆಂದು ಸೂಚಿಸುತ್ತಿಲ್ಲ. ಸಾಹಿತ್ಯ ಚರಿತ್ರೆಯಲ್ಲಿ ಪಕ್ಕಾ ಸಾಹಿತ್ಯವನ್ನೂ ಶಾಸನ ಸಾಹಿತ್ಯವನ್ನೂ ಮಿಶ್ರಣಗೊಳಿಸುವುದರಲ್ಲಿ ಅನೇಕ ತೊಂದರೆಗಳೂ ಅಪಾಯಗಳೂ ಉಂಟು. ಆದರೆ ಶಾಸನ ಸಾಹಿತ್ಯವನ್ನು ಉಪೇಕ್ಷೆ ಮಾಡಿದರೆ ಅಷ್ಟೇ ದೊಡ್ಡ ಪ್ರಮಾಣದ ತಪ್ಪನ್ನು ಮಾಡಿದಂತಾಗುತ್ತದೆ. ಅದಕ್ಕೆ ಇರುವ ಪರಿಹಾಗ ಬಹುಶಃ ಒಂದೇ—ಶಾಸನಗಳಲ್ಲಿ ಬರುವ ಸಾಹಿತ್ಯಾಂಶವನ್ನು ಗುರುತಿಸುವುದು ಮತ್ತು ಪ್ರತ್ಯೇಕ ಅಧ್ಯಾಯ ಅಥವಾ ಅಧ್ಯಾಯಗಳಲ್ಲಿ ಶಾಸನ ಕವಿಗಳ, ಶಾಸನ ಸಾಹಿತ್ಯದ ವಿಚಾರವನ್ನು ಮಾಡುವುದು. ಸಾಹಿತ್ಯಕ್ಕಿರುವಂತೆಯೇ ಶಾಸನ ಸಾಹಿತ್ಯಕ್ಕೂ ಒಂದು 'ಇತಿಹಾಸ' ವಿರುವಂತಿದೆ. ಅಲ್ಲಿಯೂ ಬೆಳವಣಿಗೆ, ಏಳು, ಬೀಳುಗಳು ಇವೆ; ಅಲ್ಲಿಯೂ 'ಪ್ರಭಾವ'ಗಳನ್ನು ಬಹುಶಃ ಪರಂಪರೆಗಳನ್ನೂ ಗುರುತಿಸಬಹುದು. ಶುದ್ಧ ಸಾಹಿತ್ಯದ ಪಕ್ಕದಲ್ಲಿ, ಅದಕ್ಕೆ ಸೇರಿಕೊಂಡಂತೆ, ಒಮ್ಮೊಮ್ಮೆ ಆದರಿಂದ ದೂರವಾಗಿ, ಶಾಸನ ಸಾಹಿತ್ಯವಾಹಿನಿಯೂ ಈ ಸಾವಿರಾರು ವರ್ಷಗಳಲ್ಲಿ ಹರಿದುಕೊಂಡು ಬಂದಿದೆಯೆಂಬುದನ್ನು ಸ್ಪಷ್ಟವಾಗಿ ಗಮನಿಸುವುದರ ಅಗತ್ಯ ಹೆಚ್ಚಾಗಿದೆ.

ಕನ್ನಡ ಭಾಷೆ ಸುಪುಷ್ಟವಾಗಿ ತೇಜಃಪುಂಜವಾಗಿ ವೀರ್ಯವತ್ತಾಗಿ ಬೆಳೆಯಬೇಕಾದರೆ ಅದು ಶಿಕ್ಷಣದ ಎಲ್ಲ ಹಂತಗಳಲ್ಲಿಯೂ ಮಾಧ್ಯಮವಾಗಬೇಕು, ಆಡಳಿತಭಾಷೆಯಾಗಬೇಕು........ಕನ್ನಡ ಮಾಧ್ಯಮ ಇನ್ನೂ ಯಶಸ್ವಿಯಾಗದಿರುವುದಕ್ಕೆ ಅದು ಆಡಳಿತಭಾಷೆಯಾಗದಿರುವುದೇ ಪ್ರಬಲ ಕಾರಣ. ರಾಜಕೀಯ ನಾಯಕರು ಆ ಬಗ್ಗೆ ಆಸಕ್ತಿ ವಹಿಸಿದ್ದರೂ, ಮಂತ್ರಿಮಂಡಲ ಘೋಷಣೆ ಹೊರಡಿಸಿದ್ದರೂ, ಆ ಘೋಷಣೆ ಕಾರ್ಯಗತವಾಗಿಲ್ಲ. ಸಾಮಾನ್ಯ ಜನತೆಯ ಅಭ್ಯುದಯದಲ್ಲಿ ನಿರಾಸಕ್ತವಾದ, ತಾಯಿನೆಲದಲ್ಲಿ ಬೇರೂರದ, ನವಾಬ್ ಮನೋಭಾವದ, ಸೆಡೆತ ಕೊರಳಿನ, ದಂತಗೋಪುರ ನಿವಾಸಿಯಾದ ಅಧಿಕಾರಶಾಹಿಯ ಸಂಕೇತವಾದ ಇಂಗ್ಲಿಷ್ ಭಾಷೆ ನಿರ್ಗಮಿಸಿದಂದೆ ತಮ್ಮ ಪ್ರಾಬಲ್ಯ ಕ್ಷೀಣಿಸುತ್ತದೆಂಬ ವಿಷಯ ಅವರಿಗರಿವಾಗಿದೆ. ಅವರು ಸರ್ವಜ್ಞರು, ಸರ್ವಶಕ್ತರೆಂಬ ಭಾವನೆ ರಾಜಕೀಯ ಧುರೀಣರ ಮನಸ್ಸಿನಿಂದ ತೊಲಗುವ ತನಕ ನಾಡಿಗೆ ಕ್ಷೇಮವಿಲ್ಲ.

— ದೇಜಗೌ

ಹಂ.ಪ. ನಾಗರಾಜಯ್ಯ

ಚಂಪೂ ಸಾಹಿತ್ಯ

ವೈವಿಧ್ಯರಮಣೀಯವಾದ ಕನ್ನಡ ಸಾಹಿತ್ಯವನ್ನು ಅಭ್ಯಾಸದ ಅನುಕೂಲಕ್ಕಾಗಿ ಕೆಲವು ವಿಭಾಗಗಳನ್ನಾಗಿ ವರ್ಗೀಕರಣಮಾಡಿಕೊಳ್ಳಬಹುದು. ಅವುಗಳನ್ನು ಮುಖ್ಯವಾಗಿ ಐದು ಅಂಗಗಳಾಗಿ ವಿಂಗಡಿಸಬಹುದು :

(೧) ಕಾವ್ಯಗಳು (೨) ವಚನಗಳು (೩) ಕೀರ್ತನೆಗಳು (೪) ನಾಟಕಗಳು (೫) ಶಾಸ್ತ್ರಕೃತಿಗಳು.

ಇವುಗಳಲ್ಲಿ ಮೊದಲನೆಯದಾದ ಕಾವ್ಯ ಪ್ರಕಾರವನ್ನು ಮತ್ತೆ ಆರು ವಿಧವಾಗಿ ವಿಭಾಗಿಸಲು ಸಾಧ್ಯವಿದೆ :

(೧) ಚಂಪೂಕಾವ್ಯ (೨) ರಗಳೆಗಳು (೩) ಷಟ್ಪದಿಗಳು (೪) ಸಾಂಗತ್ಯ ಕಾವ್ಯ (೫) ತ್ರಿಪದಿಗಳು (೬) ಗದ್ಯ ಗ್ರಂಥಗಳು.

ವೈವಿಧ್ಯವೂ ವಿಸ್ತಾರವೂ ಸಾರತರವೂ ಆದ ಕನ್ನಡ ಸಾಹಿತ್ಯ ಮತ್ತೂ ಸಾರವತ್ತಾಗುವಂತೆ ಮೇಲಿನ ಆರು ಪ್ರಕಾರಗಳು ಸಾಧ್ಯಗೊಳಿಸಿವೆ. ಇದನ್ನೇ ಒಂದು ರೇಖಾರೂಪದಲ್ಲಿ ಹೀಗೆ ತೋರಿಸಬಹುದು :



ಈ ಲೇಖನದಲ್ಲಿ ಚಂಪೂ ಸಾಹಿತ್ಯ ಕುರಿತು ಸ್ಥೂಲವಾಗಿ ಒಂದು ಸಮೀಕ್ಷೆಯಿದೆ. ಚಂಪೂ ಸಾಹಿತ್ಯದ ಪರಿಧಿಯಲ್ಲಿ ಬರುವ ಎಲ್ಲ ಕವಿಗಳ ಹಾಗೂ ಕಾವ್ಯಗಳ

ವಿವರವಾದ ವಿಮರ್ಶೆ ಈ ಕಿರುಲೇಖನದ ಪರಿಮಿತಿಗೆ ಮೀರಿದುದು. ಆದರೂ ಮುಖ್ಯವಾದ ಯಾವ ಚಂಪೂ ಕಾವ್ಯವನ್ನೂ ಇಲ್ಲಿ, ಕಡೆಯಪಕ್ಷ ಉಲ್ಲೇಖಿಸದೆ ಬಿಟ್ಟಿಲ್ಲ.

ಕನ್ನಡದಲ್ಲಿ ಚಂಪೂ ಸಾಹಿತ್ಯವೇ ಅತ್ಯಂತ ಪ್ರಪ್ರಾಚೀನ ಪ್ರಕಾರವೆಂದು ದೊರೆತ ಆಧಾರಗಳಿಂದ ತಿಳಿದು ಬರುತ್ತದೆ. ಆದರೆ ತೀರ ಹಳೆಯ ಚಂಪೂ ಕಾವ್ಯಗಳು ಇಂದು ಉಪಲಬ್ಧವಾಗದಿರುವುದು ದುರ್ದೈವ. ನಮಗೆ ಸಿಕ್ಕಿರುವ ಚಂಪೂ ಕಾವ್ಯಗಳಲ್ಲಿ ಪಂಪನ ಕಾವ್ಯಗಳೇ ಹಳೆಯವು. ಪಂಪನಿಗಿಂತಲೂ ಮೂರು ಶತಮಾನಗಳ ಹಿಂದಿನಿಂದಲೇ ಕನ್ನಡದಲ್ಲಿ ಚಂಪೂಕಾವ್ಯ ರಚಿತವಾಗುತ್ತಿದ್ದಿರಬೇಕೆಂದು ಹೇಳುವುದು ಸಾಧ್ಯವಿದೆ. ಕನ್ನಡ ಭಾಷೆಯಲ್ಲಿ ಸಿಗುವ ಮೊಟ್ಟಮೊದಲ ಗ್ರಂಥವೆಂದರೆ ಕವಿರಾಜಮಾರ್ಗ. ಅದನ್ನು ಅಮೋಘವರ್ಷ ನೃಪತುಂಗನ (೮೮೧೪–೮೭೭) ಹೆಸರಿಗೆ ಆರೋಪಿಸಿದ್ದರೂ ಶ್ರೀವಿಜಯನೇ ಅದರ ಕರ್ತೃವೆಂದು ನಿಶ್ಚಿತವಾಗಿ ತೋರುತ್ತದೆ.

ಕವಿರಾಜಮಾರ್ಗದ ಕರ್ತೃತ್ವವಿಚಾರ ಅದೇನೇ ಇರಲಿ ಅದರಲ್ಲಿ ಬರುವ ಕವಿಗಳ ಹೆಸರಿನ ಉಲ್ಲೇಖ ಸ್ವಾರಸ್ಯವಾಗಿದೆ. ಒಂಬತ್ತನೆಯ ಶತಮಾನದಲ್ಲಿ ರಚಿತವಾದ ಒಂದು ಕೃತಿಯಲ್ಲಿ ಅದಕ್ಕಿಂತಲೂ ಹಿಂದೆ ಇದ್ದ ಕವಿಗಳ ಪ್ರಸ್ತಾಪ ಪ್ರಾಚೀನತೆಗೊಂದು ಸ್ವಾರಸ್ಯವಾದ ಆಧಾರಾಂಶ. ಕವಿರಾಜಮಾರ್ಗ ಒಂದು ಲಕ್ಷಣ ಶಾಸ್ತ್ರಗ್ರಂಥ. ಯಾವುದೇ ಒಂದು ಭಾಷೆಯಲ್ಲಿ ಸಾಕಷ್ಟು ಸಾಹಿತ್ಯ ಸೃಷ್ಟಿಯಾಗದೆ, ಕಾವ್ಯಗಳು ಹುಟ್ಟದೆ ಅಲಂಕಾರ ಶಾಸ್ತ್ರಗ್ರಂಥ ರಚಿತವಾಗುವುದಿಲ್ಲ. ಒಂಬತ್ತನೆಯ ಶತಮಾನದ ನಡುಗಾಲಕ್ಕಾಗಲೇ ಕನ್ನಡದಲ್ಲೊಂದು ಕಾವ್ಯಮೀಮಾಂಸಾಕೃತಿ ಹುಟ್ಟಬರಬೇಕಾದರೆ ಆ ವೇಳೆಗೆ ಕನ್ನಡ ಸಾಹಿತ್ಯ ಅದೆಷ್ಟು ಬೆಳೆದಿದ್ದಿರಬೇಕೆಂಬುದನ್ನು ಊಹಿಸಬಹುದು. ಇದು ಕೇವಲ ಕಲ್ಪನೆಯ ಕಟ್ಟುಕಥೆಯಾಗದೆ ವಸ್ತುಸ್ಥಿತಿಯ ಹೇಳಿಕೆಯಾಗಿದೆಯೆಂಬುದಕ್ಕೆ ಕವಿರಾಜಮಾರ್ಗದ ತುಂಬ ಹಲವಾರು ಸಾಕ್ಷಿ ಪುರಾವೆಗಳಿವೆ. ಆ ಆಧಾರಗಳಲ್ಲಿ ಬಲವಾದುದು ಮತ್ತು ಮುಖ್ಯವಾದುದು 'ಪರಮಕವೀಶ್ವರರ್', 'ಅಕೃತಕಾಚಾರಪರರ್', 'ಕವಿವೃಷಭರ್', 'ಕವಿಪ್ರಧಾನರಾಕಾವ್ಯಂಗಳ್', 'ಪಲಗನ್ನಡ'— ಮುಂತಾದ ಮಾತುಗಳಲ್ಲದೆ ಆತ ಕೊಡುವ ಗದ್ಯ ಮತ್ತು ಪದ್ಯ ಕವಿಗಳ ಪಟ್ಟಿ. ಜೊತೆಗೆ ಚತ್ತಾಣ ಹಾಗೂ ಬೆದಂಡೆ ಎಂಬ ಎರಡು ದೇಸಿಯ ಕಾವ್ಯಪ್ರಕಾರವನ್ನು ಪ್ರಸ್ತಾಪಿಸಿದ್ದಾನೆ.

ಚಂಪೂ ಕಾವ್ಯಗಳೆಂದರೆ ಗದ್ಯಪದ್ಯಮಿಶ್ರ ಕಾವ್ಯತಾನೆ. ಚಂಪೂ ರೂಪವೆಂಬುದು ದೇಸಿ ಹಾಗೂ ಮಾರ್ಗಗಳ ಒಂದು ಸುಂದರ ಸಮನ್ವಯದ ಚೌಕಟ್ಟು. ಕನ್ನಡ ನುಡಿಯ ಜೀವಜೀವಾಳವಾದ ಛಂದಸ್ಸೆಲ್ಲ ಅದರಲ್ಲಿಯೇ ಅಡಗಿದೆ, ಅಡಕವಾಗಿದೆ. ರಗಳೆ, ತ್ರಿಪದಿ, ಅಕ್ಕರಗಳು ಕಂದವೃತ್ತಗಳೊಡನೆ ಸಮಾನ ಸ್ಥಾನ ಗೌರವದಿಂದ ಚಂಪೂ ಚೌಕಟ್ಟಿನಲ್ಲಿ ಸೇರ್ಪಡೆಯಾಗಿದೆ. ಯಾವುದನ್ನು ಒಂಬತ್ತನೆಯ ಶತಮಾನದ ತರುವಾಯ ಕನ್ನಡ ಕವಿಗಳು ಚಂಪೂ ಕಾವ್ಯವೆಂದು ಕರೆದು ಹೆಚ್ಚು ಪ್ರಚಾರಕ್ಕೆ ತಂದರೋ ಅದನ್ನೇ ಕವಿರಾಜಮಾರ್ಗಕಾರ 'ಗದ್ಯಕಥಾ' ಎಂದು ಕರೆದಿದ್ದಾನೆ:

ಮಿಗೆ ಕನ್ನಡಗಬ್ಬಂಗಳೊ
ಳಗಣಿತಗುಣ ಗದ್ಯಪದ್ಯ ಸಮ್ಮಿಶ್ರಿತಮಂ
ನಿಗದಿಸುವರ್ಗದ್ಯಕಥಾ
ಪ್ರಗೀತಿಯಿಂ ತಚ್ಚಿರಂತನಾಚಾರ್ಯರ್ಕಳ್ ೧–೨೭

ಕವಿರಾಜಮಾರ್ಗದಲ್ಲಿ ಇದೊಂದು ಮುಖ್ಯವಾದ ಪದ್ಯ. ಒಂಬತ್ತನೆಯ ಶತಮಾನದ ವೇಳೆಗೆ ಆಗಲೇ ಗದ್ಯಪದ್ಯ ಸಮ್ಮಿಶ್ರಿತವಾದ ಕನ್ನಡ ಕಾವ್ಯಗಳು ರಚಿತವಾಗಿದ್ದುವೆಂಬುದು ಇದರಿಂದ ಸ್ಪಷ್ಟವಾಗಿ ತಿಳಿದು ಬರುತ್ತದೆ. ಕವಿರಾಜಮಾರ್ಗದಲ್ಲಿ ಬರುವ ಪದ್ಯ ಕವಿಗಳ ಪಟ್ಟಿಯ ಪ್ರಾರಂಭದಲ್ಲೇ ಇರುವ ಶ್ರೀವಿಜಯನನ್ನು ದುರ್ಗಸಿಂಹ, ಆಚಣ್ಣ, ಕೇಶಿರಾಜ, ಮೂರನೆಯ ಮಂಗರಸ, ದೊಡ್ಡಯ್ಯ ಮುಂತಾದ ಕವಿಗಳು ಹೆಸರಿಸಿದ್ದಾರೆ. ಶ್ರೀವಿಜಯ ಚಂದ್ರಪ್ರಭ ಪುರಾಣವನ್ನು ಬರೆದಂತೆ ಈ ಕವಿಗಳಲ್ಲಿ ಒಬ್ಬಿಬ್ಬರು ತಿಳಿಸಿದ್ದಾರೆ. ಬಹುಶಃ ಒಂಬತ್ತನೆಯ ಶತಮಾನದ ಆದಿಭಾಗದಲ್ಲೇ ಇದ್ದ ಶ್ರೀವಿಜಯನ ಈ 'ಚಂದ್ರಪ್ರಭಪುರಾಣ' ಚಂಪೂ ಕಾವ್ಯವೇ ಇರಬೇಕು. ಇದಕ್ಕೆ ಬೇರೆ ಯಾವ ಆಧಾರಗಳೂ ಇಲ್ಲವಾದುದರಿಂದ ಖಚಿತವಾಗಿ ಹೇಳುವಂತಿಲ್ಲ.

ಆಧಾರಸಹಿತವಾಗಿ ಚಂಪೂ ಕಾವ್ಯಗಳೆಂದು ಹೇಳಲು, ಕವಿಯ ಕಾವ್ಯಗಳು ದೊರೆಯದಿದ್ದರೂ, ಸಾಧ್ಯವಾಗಿರುವುದು ಒಂದನೆಯ ಗುಣವರ್ಮನ ವಿಚಾರವಾಗಿ ಮಾತ್ರ. ಕ್ರಿ.ಶ. ೯೦೦ರಲ್ಲಿ ಇದ್ದಿರಬಹುದಾದ ಗುಣವರ್ಮಕವಿ ಶೂದ್ರಕ ಮತ್ತು ಹರಿವಂಶ (ನೇಮಿನಾಥ ಪುರಾಣ)ವನ್ನು ಬರೆದಿದ್ದಾನೆ. ಮಲ್ಲಿಕಾರ್ಜುನನ (೧೨೪೫) ಸೂಕ್ತಿಸುಧಾರ್ಣವದಲ್ಲೂ, ಅಭಿನವವಾದಿವಿದ್ಯಾನಂದನ (೧೫೩೩) ಕಾವ್ಯಸಾರದಲ್ಲೂ, ನಾಗವರ್ಮ (೧೧೪೫) ಮತ್ತು ಕೇಶಿರಾಜ (೧೨೬೦) ಮುಂತಾದವರ ಕೃತಿಗಳಲ್ಲೂ ಗುಣವರ್ಮನ ಪದ್ಯಗಳೂ ಪದ್ಯಭಾಗಗಳೂ ಉಲ್ಲೇಖವಾಗಿವೆ. ಅವುಗಳ ಆಧಾರ ದಿಂದಲೇ ಹೇಳುವುದಾದರೆ ಗುಣವರ್ಮ ಪ್ರೌಢನಾದ ಹಿರಿಯ ಕವಿ. ಇಲ್ಲಿ ಮತ್ತೊಂದು ಸ್ವಾರಸ್ಯವಿದೆ. ಜೈನಕವಿಯಾದ ಗುಣವರ್ಮನ ಎರಡು ಕಾವ್ಯಗಳಲ್ಲಿ ಒಂದು ಲೌಕಿಕವೂ ಮತ್ತೊಂದು ಧಾರ್ಮಿಕವೂ ಆಗಿದೆ. ಇದರಿಂದ ಮುಂದೆ ಜೈನ ಕವಿಗಳಲ್ಲಿ ಬಹುಪಾಲು ಒಂದು ಲೌಕಿಕ ಕಾವ್ಯವನ್ನೂ ಮತ್ತೊಂದು ಮತೀಯ ಗ್ರಂಥವನ್ನೂ ಬರೆಯುವ ಸಂಪ್ರದಾಯವೇ ಏರ್ಪಟ್ಟಿತು. ಈಗ ಇರುವ ಆಧಾರಗಳಿಂದ ಈ ಪದ್ಧತಿಯನ್ನು ಗುಣವರ್ಮನೇ ರೂಢಿಗೆ ತಂದನೆಂದು ಹೇಳಬಹುದು. ಏಕೆಂದರೆ ಅವನಿಗಿಂತಲೂ ಹಿಂದೆ ಇದ್ದ ಗುಣನಂದಿ ಮತ್ತು ಕವಿರಾಜಮಾರ್ಗ ಪ್ರಣೀತ ಕವಿಗಳು, ಸಮಂತಭದ್ರ, ಪೂಜ್ಯಪಾದ, ಕವಿಪರಮೇಷ್ಠಿ ಮುಂತಾದವರ ಕನ್ನಡ ಕಾವ್ಯಗಳಾವುವೂ ದೊರೆತಿಲ್ಲ. ಅಷ್ಟೇಕೆ ಅವರು ಬರೆದ ಕನ್ನಡ ಕಾವ್ಯಗಳ ಹೆಸರುಗಳೂ ತಿಳಿಯುವುದಿಲ್ಲ. ಇವರಲ್ಲಿ ಗುಣವರ್ಮನ ಅಥವಾ ಗುಣನಂದಿಯ ಇಲ್ಲವೇ ಬೇರೆ ಯಾರ ಕಾವ್ಯವೇ ಆಗಲಿ ಉಪಲಬ್ಧವಾದರೆ ಪ್ರಾಚೀನ ಕಾವ್ಯಪದ್ಧತಿ, ಇತಿಹಾಸ, ಕನ್ನಡ ಭಾಷೆಯ ಸ್ವರೂಪ — ಮೊದಲಾದ ಅನೇಕ ಮುಖ್ಯ ಸಂಗತಿಗಳು ಬೆಳಕಿಗೆ ಬರುತ್ತವೆ.

ಕನ್ನಡದಲ್ಲಿ ಇಂದು ಉಪಲಬ್ಧವಾಗಿರುವ ಮೊಟ್ಟಮೊದಲ ಕಾವ್ಯಗಳೆಂದರೆ ಆದಿಪಂಪನ ಕಾವ್ಯಗಳು. ಪಂಪ ಎರಡು ಚಂಪೂ ಕಾವ್ಯಗಳನ್ನು ಬರೆದಿದ್ದಾನೆ. ಒಂದು ವಿಕ್ರಮಾರ್ಜುನ ವಿಜಯ, ಇನ್ನೊಂದು ಆದಿಪುರಾಣ. ಇವುಗಳಲ್ಲಿ ಆದಿಪುರಾಣ ಮೊದಲನೆಯದು, ವಿಕ್ರಮಾರ್ಜುನವಿಜಯ ಎರಡನೆಯದು—ಅವು ರಚಿತ ವಾದ ಕಾಲಮಾನದ ದೃಷ್ಟಿಯಿಂದ. ಆದರೆ ಕೇವಲ ಶುದ್ಧ ಕಾವ್ಯ ಮೌಲ್ಯ ಮಾಪನದಿಂದ ವಿಕ್ರಮಾರ್ಜುನ ವಿಜಯ ಮೊದಲು, ಆದಿಪುರಾಣ ಅನಂತರವೆಂದು ಹೇಳಬಹುದು. ಪಂಪ ಕನ್ನಡದ ಆದಿಕವಿ, ಎರಡು ಅರ್ಥದಲ್ಲಿ. ಕನ್ನಡದಲ್ಲಿ ದೊರೆತ ಮೊದಲ ಕಾವ್ಯಗಳು ಪಂಪನವೇ ಆದುದರಿಂದ ಆತ ಆದಿಕವಿ; ಆದಿತೀರ್ಥಂಕರನ ಚರಿತೆಯನ್ನು ರಚಿಸಿದುದರಿಂದಲೂ ಪಂಪನೇ ಆದಿಕವಿ. ಆತನ ಕಾವ್ಯಗಳ ಸತ್ವದ ಔನ್ನತ್ಯದಿಂದ ಪಂಪ ಕನ್ನಡದ ಅಗ್ರಕವಿ. ಇನ್ನು ಆತ ಅವನ ಅನಂತರದ ಅನೇಕಾನೇಕ ಕವಿಗಳಿಗೆ ದಾರಿದೀಪವಾಗಿ ಮತ್ತು ಅವರು ಸಾಧಿಸಬೇಕಾದ ದೊಡ್ಡ ಗುರಿಯಾಗಿರುವುದ ರಿಂದ ಆತ ಆದರ್ಶಕವಿ. ಆನೆ ನಡೆದುದೇ ಬೀದಿಯಾಗುವಂತೆ ಪಂಪ ನಡೆದುದೇ ಕವಿ ಗಳಿಗೆ ರಾಜಮಾರ್ಗವಾಯಿತು. ಮಹಾಭಾರತ ಹಾಗೂ ಆದಿಪುರಾಣಗಳ ಕಥೆ ವಿಸ್ತಾರವಾದುದು. ಆದರೆ ಪಂಪನ ಕ್ರತುಶಕ್ತಿ, ಕವಿಶಕ್ತಿ ಹಾಗೂ ಕಾರಯಿತ್ರೀ ಪ್ರತಿಭೆ ಅಷ್ಟೇ ಮಹೋನ್ನತವಾದುದು. ಇವನ ಭಾರತ ತೆಲುಗು ಭಾರತಕ್ಕೆ ಸ್ಫೂರ್ತಿಯ ಸೆಲೆಯಾಯಿತೆಂಬುದು ಕನ್ನಡದ ಹೆಮ್ಮೆ. ಗದ್ಯಪದ್ಯ ವಿದ್ಯಾಧರನಾದ ಪಂಪ ದುಂದುಭಿ ಸಂವತ್ಸರೋದ್ಭವ, ಕ್ರಿ.ಶ. ೯೦೨ರಲ್ಲಿ ಹುಟ್ಟಿದವನು. ಕದಳೀಗರ್ಭ ಶ್ಯಾಮನಾದ ಆತ ರಾಷ್ಟ್ರಕೂಟರ ಸಾಮಂತರಾದ ಚಾಲುಕ್ಯರ ಎರಡನೆಯ ಅರಿಕೇಸರಿಯ ಆಸ್ಥಾನ ಕವಿ. ಸಾಜದ ಪುಲಿಗೆಱೆಯ (ಲಕ್ಷ್ಮೇಶ್ವರದ) ತಿರುಳ್ ಕನ್ನಡದಲ್ಲಿ ತನ್ನ ಕಾವ್ಯ ಗಳನ್ನು ರಚಿಸಿದ್ದಾನೆ. ಕಲಿಯೂ ಕವಿಯೂ ಆದ ಪಂಪ ಆದಿಪುರಾಣ ಬರೆದದ್ದು ಕ್ರಿ.ಶ. ೯೪೧ರಲ್ಲಿ. ಆದಿಪುರಾಣ ಜೈನರ ೨೪ ತೀರ್ಥಂಕರರಲ್ಲಿ ಮೊಟ್ಟಮೊದಲನೆಯವನಾದ ಪುರುದೇವನ ಕಥಾ ನಿರೂಪಣೆ. ಸಂಸ್ಕೃತದಲ್ಲಿರುವ ಭಗವಾನ್ ಜಿನಸೇನಾಚಾರ್ಯ ರಚಿತ ಪೂರ್ವ ಪುರಾಣದ ಆಧಾರದಿಂದ ಈ ಪುರುಚರಿತೆಯನ್ನು ಬರೆದಿದ್ದಾನೆ. ೧೬ ಆಶ್ವಾಸಗಳ ಆದಿಪುರಾಣದಲ್ಲಿ ಅನೇಕ ರಸಘಟ್ಟಗಳೂ, ಮಹೋಪಮೆಗಳೂ ಕವಿಯ ಹಿರಿಮೆಗರಿಮೆಗಳನ್ನು ಸಾರುತ್ತವೆ. ನೀಲಾಂಜನೆಯ ನರ್ತನ, ಜನ್ಮಾಭಿ ಷೇಕೋತ್ಸವ, ಪುರುದೇವನ ಪೂರ್ವಭವಾವಳಿ, ಭರತ ಬಾಹುಬಲಿಗಳ ಪ್ರಕರಣ–ಇವು ಪಂಪನ ಆದಿಪುರಾಣದ ಅತಿ ಮುಖ್ಯವಾದ ಕೆಲವು ಹೃದಯಂಗಮವಾದ ಭಾಗಗಳು. ಜಿನಧರ್ಮ ಹಾಗೂ ಕಾವ್ಯಧರ್ಮಗಳ ಯಶಸ್ವಿಯಾದ ಅಪೂರ್ವ ಸಂಗಮವನ್ನು ಈ ಪುರಾಣದಲ್ಲಿ ಕಾಣಬಹುದು. ಕನ್ನಡಕ್ಕಿಂತಲೂ ಸಂಸ್ಕೃತದ ಪದಪ್ರಯೋಗವೇ ಹೆಚ್ಚಾಗಿದ್ದರೂ ಆದಿಪುರಾಣ ಕನ್ನಡದ ಪುರಾಣಪ್ರಪಂಚದ ಉನ್ನತ ಶಿಖರಪ್ರಾಯ ವಾಗಿ ಶೋಭಿಸುತ್ತದೆ. ಮಹಾಕವಿಗಳಲ್ಲಿ ಭವ್ಯತೆ ಹೇಗಿರಬೇಕೆಂಬುದನ್ನು, ಹೇಗೆ ಬರಬೇಕೆಂಬುದನ್ನು ವಿವರಿಸಲು ಇದೊಂದು ಉತ್ತಮ ಉದಾಹರಣೆಯೆಂಬಂತೆ

ವಿಮರ್ಶಕರ ಮೆಚ್ಚುಗೆಗಳಿಸಿದೆ. ಆದಿಪುರಾಣ ಶೃಂಗಾರ ಸಾಗರದ ಮೇಲೆ ಶಾಂತಿ ರಸದ ಪತಾಕೆಯನ್ನು ಎತ್ತಿಹಿಡಿದು ವೀತರಾಗದ ಕಾಂತಿಯನ್ನು ಪಸರಿಸುವ ಶ್ರೇಷ್ಠ ಪುರಾಣ ಕಾವ್ಯ.

ವಿಕ್ರಮಾರ್ಜುನ ವಿಜಯ ಪಂಪನ ಪರಿಪಕ್ವ ಕೃತಿರತ್ನ. ಅವನ ಪ್ರತಿಭಾಶ್ರೀಯ ಲೀಲಾವಿಲಾಸದ ಆಡುಂಬೊಲ. ತನಗೆ ಆಶ್ರಯಕೊಟ್ಟ ದೊರೆಯಾದ ಅರಿಕೇಸರಿ ಯನ್ನು ಮಹಾಭಾರತದ ಅರ್ಜುನನೊಡನೆ ಅಭೇದಭಾವ ಕಲ್ಪಿಸಿ ಅಪೂರ್ವವಾದ ರೀತಿಯಲ್ಲಿ ಸಮಸ್ತ ಭಾರತವನ್ನು ರಚಿಸಿದ್ದಾನೆ. ಪೋಷಕನಾದ ಅರಿಕೇಸರಿ ಗುಣಾರ್ಣವ ನಾದರೆ ಪಂಪ ಕವಿತಾಗುಣಾರ್ಣವನಾಗಿದ್ದಾನೆ. ೧೪ ಆಶ್ವಾಸಗಳ ಈ ಕಾವ್ಯ ಜಗತ್ತಿನ ಯಾವುದೇ ಮಹಾ ಕಾವ್ಯಕ್ಕೆ ಹೊಯ್‌ಕಯ್ ಆಗಿ, ಹೆಗಲೆಣೆಯಾಗಿ ನಿಲ್ಲುತ್ತದೆ. ಅರಿಕೇಸರಿಯ ವಂಶವೃಕ್ಷದ ಇತಿಹಾಸ ಇದರ ಆರಂಭದ ಆಶ್ವಾಸದಲ್ಲಿ ನಿರೂಪಿತವಾಗಿದ್ದು ಚರಿತ್ರೆಕಾರರಿಗೆ ತುಂಬ ನೆರವಾಗಿದೆ. ಭಾರತದ ಕತೆ ‘ ಪಿರಿದಾದರೂ ’ ‘ ಅದರ ’ ‘ ಮೆಯ್ ಕೆಡಲೀಯದಂತೆ ’ ಬರೆದ ವಿಕ್ರಮಾರ್ಜುನ ವಿಜಯ ಆದಕ್ಕೂ ಮುನ್ನಿನ ‘ ಕಬ್ಬಮನೆಲ್ಲ ಇಕ್ಕಿಮೆಟ್ಟಿ ’ತಂತೆ.

ಪಂಪನ ಉತ್ಕೃಷ್ಟವಾದ ಹಿತಮಿತ ಶೈಲಿ ಅದರ ಪೂರ್ಣ ಪ್ರಮಾಣದಲ್ಲಿ ಇಲ್ಲಿ ವ್ಯಕ್ತವಾಗಿದೆ. ಹತ್ತು ಕಟ್ಟುವ ಕಡೆ ಒಂದು ಮುತ್ತು ಕಟ್ಟುವುದು ಪಂಪನ ಸಂಯಮ ಸ್ವಭಾವ. ಅವನ ಕಾವ್ಯವೆಂದರೆ ಸಂಸ್ಕೃತ ಮತ್ತು ಕನ್ನಡಗಳ ಮಧುರ ದಾಂಪತ್ಯ. ಸರಸ್ವತಿಗೆ ಪೊಸತು ಮಾಡುವ ಪಂಪನ ವಾಗ್ವಿಲಾಸ ವಿಕ್ರಮಾರ್ಜುನ ವಿಜಯದಲ್ಲಿ ಲಾಸ್ಯವಾಡಿದೆ. ಪಂಚಪಾಂಡವರ ಪಾತ್ರಗಳಲ್ಲದೆ ಪ್ರತಿಪಕ್ಷದ ದುರ್ಯೋಧನ ಕರ್ಣರೂ, ಪ್ರಚ್ಛನ್ನ ಪಾಂಡವರಾದ ದ್ರೋಣ ಭೀಷ್ಮರೂ, ಪೂರ್ಣ ಮಾನವನ ಪ್ರತೀಕವಾದ ಕೃಷ್ಣನೂ ಇದರಲ್ಲಿ ಎದ್ದುಕಾಣುವ ಹಿರಿಯ ವ್ಯಕ್ತಿ(ಪಾತ್ರ)ಗಳಾದರೂ ಉಳಿದ ಅನೇಕ ಸಣ್ಣಪುಟ್ಟ ಪಾತ್ರಗಳು ಓದುಗರ ಚಿತ್ತಭಿತ್ತಿಯಲ್ಲಿ ಅಚ್ಚೊತ್ತಿದಂತೆ ಕೊರೆದು ನಿಲ್ಲುತ್ತವೆ. ಪಂಪ ಕನ್ನಡದ ಬಾವುಟವನ್ನು ಹಿಡಿದು ವಿಶ್ವಕವಿಗಳ ಸಾಲಿನಲ್ಲಿ ಸಾಹಿತ್ಯ ಸಿಂಹಾಸನಾರೂಢನಾಗಿ ವಿರಾಜಮಾನನಾದ ವಿಶ್ವಕವಿಯೆಂದೂ, ಆತ ಕನ್ನಡದ ಕಾಳಿದಾಸನೆಂದೂ ಕನ್ನಡದ ಷೇಕ್ಸ್‌ಪಿಯರ್ ಎಂದೂ ಮಾನ್ಯನಾಗಿದ್ದಾನೆ. ಚಂಪೂವಿನ ಪೆಂಪನ್ನೂ ಕನ್ನಡದ ಕಂಪನ್ನೂ ‘ ಪಸರಿಪ ಕನ್ನಡಕ್ಕೊರ್ವನೇ ’ ಆದ ಸತ್ಕವಿ ಪಂಪನ ಕಾವ್ಯಗಳು ಕನ್ನಡಿಗರ ವೈಭವವನ್ನೇ ಪ್ರತಿಬಿಂಬಿಸಿವೆ. ಚಂಪೂ ಸಾಹಿತ್ಯ ಸೌಧದ ಹೊನ್ನಕಳಶಗಳಂತಿರುವ ಆದಿಪುರಾಣ ವಿಕ್ರಮಾರ್ಜುನ ಕಾವ್ಯಗಳು ವಿಜಯ ಕನ್ನಡದ ಸಾರಸರ್ವಸ್ವವೂ ಆಗಿವೆ. ಸಾಮಂತ ದೊರೆಯಾದ ಅರಿಕೇಸರಿ ಪಂಪನಿಗೆ ಕವಿಚಕ್ರವರ್ತಿ ಯೆಂಬ ಬಿರುದನ್ನು ಕೊಡಲು ಆಗಲಿಲ್ಲ. ಆದರೆ ಕಾಲ ಪಂಪನೇ ಕವಿಚಕ್ರವರ್ತಿ ಯೆಂದು ನಿರ್ಧರಿಸಿದೆ.

ಚಂಪೂ ಸಾಹಿತ್ಯ ನಿರ್ಮಾಣ ಮಾಡಿದ ಕನ್ನಡ ಕವಿಗಳ ಶ್ರೇಣಿಯಲ್ಲಿ ಪಂಪನ ತರುವಾಯ, ಹೆಜ್ಜೆ ಕಡಮೆ ಪಂಪನ ಸಮವಯಸ್ಕನೂ ಸಮಕಾಲೀನನೂ ಆದ,

ಕುರುಳ್ಗಳ ಸವಣ ಪೊನ್ನ ಬರುತ್ತಾನೆ. ಇವನು ರಾಷ್ಟ್ರಕೂಟವಂಶದ ಚಕ್ರವರ್ತಿ ಮೂರನೆಯ ಕೃಷ್ಣನ (೯೩೯–೯೬೮) ಆಸ್ಥಾನ ಕವಿ. ತನ್ನ ಆಶ್ರಯದಾತನಾದ ಈ ಮುಮ್ಮಡಿ ಕೃಷ್ಣನನ್ನು ರಾಮಾಯಣದ ಶ್ರೀರಾಮನಿಗೆ ಹೋಲಿಸಿ 'ಭುವನೈಕ ರಾಮಾಭ್ಯುದಯ'ವೆಂಬ ೧೪ ಆಶ್ವಾಸಗಳ ಮಹಾಕಾವ್ಯವನ್ನು ರಚಿಸಿದನಾದರೂ ಆ ಚಂಪೂ ಕಾವ್ಯ, ಕೆಲವು ಬಿಡಿ ಪದ್ಯಗಳ ಹೊರತು, ಏನೇನೂ ದೊರೆತಿಲ್ಲ. ಕಡೆಗೆ ಒಂದನೆಯ ಗುಣವರ್ಮನ ಶೂದ್ರಕದ ಪದ್ಯಗಳು ದೊರೆತಷ್ಟೂ ಈ ರಾಮಕಥೆಯ ಪದ್ಯಗಳು ಉಪಲಬ್ಧವಿಲ್ಲದಿರುವುದು ಶೋಚನೀಯ ಸಂಗತಿ. ಇದು ದೊರೆತದ್ದೇ ಆದರೆ ಕನ್ನಡದಲ್ಲಿ ರಚಿತವಾದ ಮೊದಲ ರಾಮಾಯಣ ಗ್ರಂಥ ಪೊನ್ನನದೇ ಆಗುತ್ತದೆ. ಅದು ಜೈನ ರಾಮಾಯಣವೋ, ಜೈನೇತರ ರಾಮಾಯಣವೋ ಎಂಬುದನ್ನು ಕಾವ್ಯ ಸಿಕ್ಕ ಮೇಲೆ ಮಾತ್ರ ಹೇಳಲು ಸಾಧ್ಯ. ಕವಿರಾಜಮಾರ್ಗದಲ್ಲಿ ಸಿಗುವ ರಾಮಾಯಣದ ಪದ್ಯಗಳು ಅದರ ರಚನೆಗೂ ಪೂರ್ವದಲ್ಲಿ ಕನ್ನಡದಲ್ಲಿದ್ದ ರಾಮಾಯಣ ಕಾವ್ಯದಿಂದ, ಬಹುಮಟ್ಟಿಗೆ ಜೈನ ಸಂಪ್ರದಾಯಪರವಾದ ಕಾವ್ಯಗಳಿಂದ ಆರಿಸಿಕೊಂಡ ಪದ್ಯಗಳೆಂಬ ಪ್ರತೀತಿಯಿದೆ. ಆದರೆ ಆ ಪೂರ್ವ ಕಾವ್ಯಗಳಾಗಲಿ, ಪೊನ್ನನ ಭುವನೈಕ ರಾಮಾಭ್ಯುದಯವಾಗಲಿ ದೊರೆತಿಲ್ಲವಾದುದರಿಂದ ನಾಗಚಂದ್ರ (ಅಭಿನವ ಪಂಪ)ನ ರಾಮಚಂದ್ರ ಚರಿತ ಪುರಾಣ (ಪಂಪರಾಮಾಯಣ)ವೇ ಕನ್ನಡದ ಉಪಲಬ್ಧ ಪ್ರಥಮ ರಾಮಾಯಣವಾಗಿದೆ. ಪೊನ್ನನ ಈ ಕಾವ್ಯದಂತೆ ಅವನ ಇನ್ನೊಂದು ಕೃತಿಯಾದ ಗತಪ್ರತ್ಯಾಗತವೂ ದೊರೆತಿಲ್ಲ.

ಉಪಲಬ್ಧವಾಗಿರುವ ಪೊನ್ನನ ಕೃತಿಗಳು ಎರಡು. ಅವುಗಳಲ್ಲಿ ೩೯ ಕಂದ ಪದ್ಯಗಳ ಜಿನಾಕ್ಷರಮಾಲೆಯನ್ನು ಬಿಟ್ಟರೆ ಶಾಂತಿಪುರಾಣವೇ ಇವನ ಪ್ರೌಢ ಚಂಪೂ ಕಾವ್ಯ. ಪೊನ್ನ ಕವಿಚಕ್ರವರ್ತಿಯಷ್ಟೇ ಅಲ್ಲ, ಉಭಯಕವಿ—ಚಕ್ರವರ್ತಿಯೂ ಹೌದು. ಅವನಿಗೆ ಕನ್ನಡಕ್ಕಿಂತಲೂ ಸಂಸ್ಕೃತದ ಮೇಲೆ ಸ್ವಾಮ್ಯ, ಪ್ರಭುತ್ವ ಹಾಗೂ ಒಲವು ಹೆಚ್ಚು. ಸಂಸ್ಕೃತ ಕವಿಗಳಿಂದಲೂ ತುಂಬ ಪ್ರಭಾವಿತನಾಗಿದ್ದಾನೆ. ಶಾಂತಿಪುರಾಣ ೧೬ನೆಯ ತೀರ್ಥಂಕರನಾದ ಶಾಂತಿನಾಥ ಸ್ವಾಮಿಯ ಚರಿತೆ. ೧೨ ಆಶ್ವಾಸಗಳ ಈ ಪುರಾಣದ ಬಂಧ ಪ್ರೌಢ ಚಂಪೂರೂಪದಲ್ಲಿದೆ. ವೆಂಗಿ ವಿಷಯದ ಕಮ್ಮೆನಾಡಿನ ಪುಂಗನೂರು ಗ್ರಾಮದ ಸತ್‌ಪ್ರಜೆ ನಾಗಮಯ್ಯನ ಮಕ್ಕಳಾದ ಮಲ್ಲಪ ಮತ್ತು ಪುನ್ನಮಯ್ಯರ ಪ್ರಾರ್ಥನೆಯ ಮೇರೆಗೆ ಪೊನ್ನ ತನ್ನ ಶಾಂತಿಪುರಾಣ ಕಾವ್ಯ ರಚಿಸಿದನು. ಪೊನ್ನನಿಗೆ ತುಂಬ ಆತ್ಮಪ್ರತ್ಯಯ. ತಾನು ಕನ್ನಡ ಕವಿತೆಯಲ್ಲಿ ಅಸಗನಿಗಿಂತಲೂ ನೂರ್ಮಡಿ ಹಾಗೂ ಸಂಸ್ಕೃತ ರಚನೆಯಲ್ಲಿ ಕಾಳಿದಾಸನಿಗಿಂತಲೂ ನಾಲ್ಮಡಿ ಮಿಗಿಲೆಂದು ಪೊನ್ನ ಹೇಳಿಕೊಂಡಿದ್ದರೂ, ದೊರೆತ ಅವನ ಒಂದೇ ಚಂಪೂಕಾವ್ಯದಿಂದ ಇದನ್ನು ಒಪ್ಪಲು ಸಾಧ್ಯವಿಲ್ಲ. ಇನ್ನು ಆ ಭುವನೈಕರಾಮಾಭ್ಯುದಯ ದೊರೆತ ಮೇಲೆ ಕವಿಯ ಆತ್ಮಪ್ರಶಂಸೆ ಏನಾದರೂ ಯಥಾರ್ಥವಾದೀತೆ? ಕುತೂಹಲದಿಂದ ಕಾದು ನೋಡಬೇಕು. ಶಾಂತಿಪುರಾಣ ಮಾತ್ರ ಪಂಪನ ಕಾವ್ಯಗಳ ಮಹಿಮೆಯನ್ನು ಅದೇ

ಪ್ರಮಾಣದಲ್ಲಿ ಪಡೆದಿಲ್ಲ. ಹಾಗೆಂದು ಅದು ಕಳಪೆಯ ಕಾವ್ಯವಲ್ಲ. ಜೈನಧರ್ಮದ ಶಾಸ್ತ್ರಪ್ರಕ್ರಿಯಾ ನಿರೂಪಣೆಯಲ್ಲಿ ಶಾಂತಿಪುರಾಣಕ್ಕೆ ವಿಶಿಷ್ಟವಾದ ಸ್ಥಾನವಿದೆಯಲ್ಲದೆ ಅದೊಂದು ಕಾವ್ಯವೆಂಬ ದೃಷ್ಟಿಯಿಂದಲೂ ಉತ್ತಮವಾಗಿದೆ.

ಹತ್ತನೆಯ ಶತಮಾನದ ಉತ್ತರಾರ್ಧ ಹಾಗೂ ಹನ್ನೊಂದನೆಯ ಶತಮಾನದ ಆರಂಭ ಕಹಳೆಯನ್ನೂದಿದ ಮಹಾಕವಿಯೆಂದರೆ ರನ್ನ. ಪ್ರಧಾನವಾಗಿ ಶಕ್ತಿ ಕವಿಯಾದ ರನ್ನ ಕನ್ನಡ ಭಾಷೆಯ ಓಜಸ್ಸು ತೇಜಸ್ಸುಗಳನ್ನು ತನ್ನ ಕಾವ್ಯಗಳಲ್ಲಿ ಚೆನ್ನಾಗಿ ತೆರೆದು ತೋರಿದ್ದಾನೆ. ರನ್ನ ಮೊದಲಲ್ಲಿ ಸಾಮಂತ ಮಾಂಡಲಿಕರಿಂದ ಪೋಷಿತನಾಗಿ ತರುವಾಯ ಹಂತಹಂತವಾಗಿ ಉದಿತೋದಿತನಾದವನು. ಅಜಿತಸೇನಾಚಾರ್ಯರ ಶಿಷ್ಯನಾಗಿ, ಚಾವುಂಡರಾಯನ ಗೆಳೆಯನಾಗಿ ರನ್ನ ನಾಲ್ಕು ಕಾವ್ಯಗಳನ್ನು ರಚಿಸಿದ್ದಾನೆ, ಚತುರ್ಮುಖ ಬಸದಿಯನ್ನು ನಿರ್ಮಿಸಿದಂತೆ. ಅವುಗಳಲ್ಲಿ ಚಕ್ರೇಶ್ವರ ಚರಿತೆ ಮತ್ತು ಪರಶುರಾಮಚರಿತೆ ಎಂಬ ಎರಡು ಕಾವ್ಯಗಳಾಗಲಿ, ಅವುಗಳಿಗೆ ಸೇರಿದ ಪದ್ಯವೇಷ್ಟನ ಗಳಾಗಲಿ ಎಳ್ಳನಿತೂ ದೊರೆಯದಿದ್ದುದು ದೌರ್ಭಾಗ್ಯ. ಅವೂ ಚಂಪೂಕಾವ್ಯಗಳೇ ಇದ್ದಿರಬೇಕು. ಚಕ್ರೇಶ್ವರ ಚರಿತೆ ಭರತ ಚಕ್ರಿಯ ಚರಿತೆಯೆಂದೂ, ಅದೇ ಸಾಹಸ ಭೀಮ ವಿಜಯವೆಂದೂ ಇರ್ತೆರನಾದ ಅಭಿಪ್ರಾಯ ವ್ಯಕ್ತವಾಗಿದೆ. ಪರಶುರಾಮ ಚರಿತೆ ಸಮರ ಪರಶುರಾಮ ಬಿರುದಾಂಕಿತನೂ, ತನಗೆ ಸಹಪಾಠಿಯೂ, ಸನ್ಮಿತ್ರನೂ, ಸಕಲ ಸಹಾಯವಿತ್ತವನೂ ಆದ ಚಾವುಂಡರಾಯನ ಚರಿತೆಯಿರಬೇಕೆಂದು ಭಾವಿಸ ಲಾಗಿದೆ. ಈ ಮಾತನ್ನು 'ಗಂಗಮಂಡಲ ಚಕ್ರೇಶ್ವರ ಕಟಕೋತ್ತಮ ನಾಯಕ ವಿರಚನೆಯಿನ್....' ಎಂಬ ಸಾಹಸ ಭೀಮ ವಿಜಯದ ಪದ್ಯ ಪೋಷಿಸುತ್ತದೆ.

ಈಗ ಸಿಕ್ಕಿರುವ ರನ್ನನ ಚಂಪೂಕಾವ್ಯಗಳು ಎರಡು, ಅಜಿತ ತೀರ್ಥಂಕರ ಪುರಾಣ ಮತ್ತು ಸಾಹಸ ಭೀಮವಿಜಯ. ಇವುಗಳಲ್ಲಿ ಅಜಿತಪುರಾಣ ರಚಿತವಾದ ಕಾಲ ೯೯೩. ಪೊನ್ನನಿಂದ ಶಾಂತಿಪುರಾಣವನ್ನು ಬರೆಸಿದವರ ಮನೆತನದ ಮಗಳಾದ ಮಹಾಸಾಧ್ವಿ ದಾನಚಿಂತಾಮಣಿ ಅತ್ತಿಮಬ್ಬೆಯೇ ರನ್ನನಿಂದ ಅಜಿತಪುರಾಣ ಬರೆಸಿ ದವಳು. ೧೨ ಆಶ್ವಾಸಗಳ ಅಜಿತಪುರಾಣದ ಚೌಕಟ್ಟು ಅತ್ತಿಮಬ್ಬೆಯ ದಿವ್ಯಜೀವನ. ಅದರಲ್ಲಿ ಅವಳ ಬಾಳು ಶುದ್ಧಕಾವ್ಯವಾಗಿ ಒಡಮೂಡಿದೆ. ರನ್ನನ ಕಾರಯಿತ್ರೀ ಪ್ರತಿಭೆ ಅಜಿತತೀರ್ಥಂಕರನ ಚರಿತೆಯ ನಿರೂಪಣೆಗಿಂತಲೂ ಒಂದು ಕೈ ಮಿಗಿಲಾಗಿ ಅತ್ತಿಮಬ್ಬೆಯ ಪಾತ್ರ ಚಿತ್ರಣದಲ್ಲಿ ಕೆಲಸಮಾಡಿದೆ. ಕಾವ್ಯದ ಮೊದಲನೆಯ ಮತ್ತು ಕಡೆಯ ಆಶ್ವಾಸಗಳಲ್ಲಿ ಅತ್ತಿಮಬ್ಬೆಯ ಆದರ್ಶ ಜೀವನದ ದರ್ಶನವಿದೆ, ಇದನ್ನು ಸಾಮಾನ್ಯ ಚಿತ್ರಕ್ಕೆ ಸುವರ್ಣ ಚೌಕಟ್ಟೆಂದು ಧಾರಾಳವಾಗಿ ಕರೆಯಬಹುದು. ಜನ್ಮಾಭಿಷೇಕೋತ್ಸವ, ವೈರಾಗ್ಯ ಪ್ರತಿಪಾದನೆ ಮತ್ತು ಸಗರನ ಕಥೆ—ಇವು ಅಜಿತಪುರಾಣ ಚಂಪೂಕಾವ್ಯದ ಮುಖ್ಯ ಭಾಗಗಳು.

ರನ್ನನ ಮಹೋನ್ನತಿಯನ್ನು ಶ್ರುತಪಡಿಸಿ ಶಾಶ್ವತಗೊಳಿಸಿದ ಕಾವ್ಯ ಸಾಹಸಭೀಮವಿಜಯ. ಮಹಾಭಾರತದ ೧೮ ದಿವಸಗಳ ಯುದ್ಧದಲ್ಲಿ ಕಡೆಯ ದಿವಸದ

ಅರ್ಧಭಾಗವನ್ನು ಮಾತ್ರ—ಗದಾಯುದ್ಧ ಪ್ರಕರಣ—ಆರಿಸಿಕೊಂಡು ಈ ಖಂಡ ಕಾವ್ಯವನ್ನು ಬರೆದಿದ್ದರೂ ಸಿಂಹಾವಲೋಕನ ಕ್ರಮದಿಂದ ಭಾರತದ ಕಥೆಯನ್ನೆಲ್ಲ ಸಂಕ್ಷಿಪ್ತವಾಗಿ, ಆದರೆ ಸ್ವಾರಸ್ಯವಾಗಿ ತಂದಿರುವುದು ಇದರ ಘನತೆಯಲ್ಲಿ ಒಂದಂಶ. ರನ್ನನಿಗೆ ರಾಜಾಶ್ರಯ ಕೊಟ್ಟವರು ತೈಲಪ (೯೭೩–೯೭೭) ಮತ್ತು ಸತ್ಯಾಶ್ರಯ ಚಕ್ರವರ್ತಿ (೯೯೭–೧೦೦೯). ಈ ತಂದೆಮಕ್ಕಳಲ್ಲಿ ಇಜಿವಬೆಡಂಗನಾದ ಸತ್ಯಾಶ್ರಯ ನನ್ನು ಮಹಾಭಾರತದ ಭೀಮನಿಗೆ ಹೋಲಿಸಿ ಸಾಹಸಭೀಮವಿಜಯವೆಂಬ ಹತ್ತು ಆಶ್ವಾಸಗಳ ಚಂಪೂಕಾವ್ಯ ಬರೆದ. ಇದು ಗದಾಯುದ್ಧವೆಂಬ ಹೆಸರಿನಿಂದ ತುಂಬ ಪ್ರಸಿದ್ಧಿಪಡೆದಿರುವ ಚಂಪೂಕಾವ್ಯ. ಹಳಗನ್ನಡದ ಚಂಪೂಕಾವ್ಯಗಳಲ್ಲಿ ಇದು ಗ್ರಂಥ ಪ್ರಮಾಣದಲ್ಲಿ ಚಿಕ್ಕದಾದರೂ ಕಾವ್ಯಗುಣ, ಶೈಲಿ, ಪದ ಮೈತ್ರಿ, ರಸಪ್ರತಿಪಾದನೆ—ಈ ನಿಟ್ಟಿನಿಂದ ಬಹಳ ಹಿರಿಯ ಮಟ್ಟದ ಕಾವ್ಯವೆಂದು ಹೆಸರುವಾಸಿಯಾಗಿದೆ. ವೀರ, ರೌದ್ರ ಮತ್ತು ಕರುಣ ರಸಗಳು ಇದರಲ್ಲಿ ಸಮಪ್ರಮಾಣದಲ್ಲಿ ಮುಪ್ಪುರಿಗೊಂಡಿವೆ.

ರನ್ನ ಸಾರಸ್ವತವೆನಿಪ ಕವಿತೆಯಿಂದ ವಾಗ್ದೇವಿಯ ಭಂಡಾರದ ಮುದ್ರೆಯೊಡೆ ದವನು, ತನ್ನ ಕಾವ್ಯವನ್ನು ಪರೀಕ್ಷಿಸುವವನಿಗೆ ಎಂಟೆದೆ ಇದೆಯೇ ಎಂದು ಪ್ರಶ್ನಿಸಿ ದವನು. ಕಾರ್ಗಾಲದಲ್ಲಿ ಭೋರ್ಗರೆದು ಧುಮ್ಮಿಕ್ಕುವ ಜಲಪಾತದಂತೆ ಮೆಟ್ಟಿದಲ್ಲಿ ಮುಟ್ಟಿದಲ್ಲಿ ಶಕ್ತಿಯ ವಿದ್ಯುತ್ ಸಂಚಾರ ಸ್ಪರ್ಶವಾಗುವ ಸಾಹಸಭೀಮವಿಜಯ ಪಂಪನ ವಿಕ್ರಮಾರ್ಜುನ ವಿಜಯದ ಆಧಾರ ಮತ್ತು ಸ್ಫೂರ್ತಿಯಿಂದಲೇ ರಚಿತವಾಗಿದ್ದರೂ ಅದೊಂದು ಮರುಹುಟ್ಟು ಪಡೆದ ಮಹಾಕಾವ್ಯದಂತೆ ಪರಿಶೋಭಿಸಿದೆ. ಪಂಪಪೊನ್ನರೊಡನೆ ತನ್ನ ಹೆಸರನ್ನೂ ಸೇರಿಸಿಕೊಂಡು ರನ್ನ ತಾವು ಮೂವರೂ ಜಿನಸಮಯ ದೀಪಕರೆಂದೂ, ಜೈನರ ರತ್ನತ್ರಯಗಳಂತೆ ಇರುವವರೆಂದೂ ಹೇಳಿಕೊಂಡಿರುವುದು ಸಮಂಜಸವಾಗಿದೆ. ಆದರೆ ಅವನಿಗೆ ಪೊನ್ನನಿಗಿಂತ ಪಂಪನಲ್ಲೇ ಪೂಜ್ಯತೆ, ಪಕ್ಷಪಾತ. ಕವಿಗಣದಲ್ಲಿ ತಾವಿಬ್ಬರೇ ಪುಣ್ಯವಂತರೆಂದು ತಿಳಿಸಿದ್ದಾನೆ. ಇದಂತೂ ಸಾಕಷ್ಟು ಸತ್ಯವಾದ ಸಾರಿಕೆ ಯೆಂದು ತೋರುತ್ತದೆ. ಭೀಷ್ಮಾನಂತರ ದ್ರೋಣನೆಂಬುದು ಮಹಾಭಾರತ ರಣರಂಗದ ಪ್ರಸಿದ್ಧ ಮಾತು. ಪಂಪಾನಂತರ ರನ್ನನೆಂಬುದು ಮಹಾಕವಿಗಳ ಕಾವ್ಯರಂಗದ ಸುಪ್ರಸಿದ್ಧ ಮಾತು.

ಹತ್ತನೆಯ ಶತಮಾನದ ಮತ್ತೊಬ್ಬ ಮುಖ್ಯನಾದ ಚಂಪೂಕವಿಯೆಂದರೆ ನಾಗವರ್ಮ. ಸಂಸ್ಕೃತ ಸಾಹಿತ್ಯದ ಗದ್ಯ ಮಹಾಕಾವ್ಯವಾದ ಬಾಣನ ಕಾದಂಬರಿಯ ಕನ್ನಡ ಭಾವಾನುವಾದವೇ 'ಕರ್ಣಾಟಕ ಕಾದಂಬರಿ' ಕಾವ್ಯ. ಮೂಲ ಕಾವ್ಯದ ಸೊಗಸು ಬತ್ತದಂತೆ, ಸಾಧ್ಯವಾದಲ್ಲಿ ಆದರ ಸೌಂದರ್ಯ ವೆಗ್ಗಳಿಸುವಂತೆ ಮಾಡಿದ, ಮಾದರಿ ಭಾಷಾಂತರವಿದು. ಕನ್ನಡ ಭಾಷೆಯ ಸಾಹಿತ್ಯ ಸಂಪತ್ತನ್ನು ಅನುವಾದದ ಮೂಲಕವೂ ಹೆಚ್ಚಿಸಿದ ಕವಿಗಳ ಸಾಲಿಗೆ ಸೇರಿದವನು ನಾಗವರ್ಮ. ಕಾದಂಬರಿ ಒಂದು ಅದ್ಭುತ ಶೃಂಗಾರ ಲೋಕ. ಅದೊಂದು ಸೊಗಸಾದ ಕಥಾಗುಚ್ಛವೂ ಹೌದು. ಮತ್ತೆ ಮತ್ತೆ ಹತ್ತು ಸಲ ಓದಿದರೂ ಚಿತ್ತವನ್ನು ಸೂರೆಗೊಳ್ಳುವ ಆತ್ಯಾಕರ್ಷಕ ಕಥೆಗೆ,

ಮನಸ್ಸನ್ನು, ಮೋಹಗೊಳಿಸುವ ಮನೋಹರ ಶೈಲಿಯೂ ಸೇರಿ ಕಾದಂಬರಿ ಒಂದು ಸುಂದರ ಚಂಪೂಕಾವ್ಯವಾಗಿದೆ. ಸರಳತೆ, ನಿರರ್ಗಳತೆ ಇದರ ಇತರ ಸೊಗಸು. ಆದರೂ ಇದೊಂದು ಭಾಷಾಂತರ ಗ್ರಥವೆಂಬುದನ್ನೂ, ಮೂಲದ ಕಾವ್ಯವೂ ಮಹಾಕವಿ ಪ್ರಣೀತ ಮಹಾಕಾವ್ಯವೆಂಬುದನ್ನೂ ಮರೆಯುವಂತಿಲ್ಲ.

ಕನ್ನಡ ಸಾಹಿತ್ಯದಲ್ಲಿ ಹತ್ತನೆಯ ಶತಮಾನ ಸುವರ್ಣಯುಗ. ಕನ್ನಡದ ಮಹಾ ಕವಿಗಳೂ, ಮಹಾ ಕಾವ್ಯಗಳೂ ಬಾಳಿ ಬೆಳಗಿದ ಸಾರವತ್ತಾದ ಕಾಲ. ಕನ್ನಡ ಸಾಹಿತ್ಯದ ಎರಡು ಸಾವಿರ ವರ್ಷಗಳ ಇತಿಹಾಸದಲ್ಲಿ ಮತ್ತೆ ಯಾವಾಗಲೂ ಇಷ್ಟೊಂದು ಹಿರಿಯ ಕವಿಗಳು ಕೇವಲ ಅರ್ಧ ಶತಮಾನದ, ೯೫೧ ರಿಂದ ೧೦೦೦ದ ವರೆಗೆ, ಪರಿಮಿತಾವಧಿ ಯಲ್ಲಿ ಒಟ್ಟಿಗೆ ಆಳಿ ಬಾಳಿ ಕಾವ್ಯನಿರ್ಮಾಣ ಮಾಡಿರುವುದು ಕಂಡುಬರುವುದಿಲ್ಲ. ಪಂಪ ಪೊನ್ನ ರನ್ನ ನಾಗವರ್ಮರು ಈ ಶತಮಾನದ ಚಂಪೂ ಸಾಹಿತ್ಯ ನಿರ್ಮಾಪಕ ಅಧ್ವರ್ಯುಗಳು.

೧೧ನೆಯ ಶತಮಾನದ ಅರುಣೋದಯ ರನ್ನನಿಂದಲೇ ಆರಂಭವಾಯಿತೆಂದು ಹಿಂದೆಯೇ ಹೇಳಿದೆ. ಅವನನ್ನು ಬಿಟ್ಟರೆ ಈ ಶತಮಾನದಲ್ಲಿ ಒಟ್ಟು ನಾಲ್ಕು ಜನ ಚಂಪೂ ಕವಿಗಳಿದ್ದಾರೆ. ಇವರಲ್ಲಿ ಶ್ರೀಧರಾಚಾರ್ಯನ (೧೦೪೦) ಚಂದ್ರಪ್ರಭ ಚರಿತೆ ದೊರೆತಿಲ್ಲ. ದುರ್ಗಸಿಂಹನ (೧೦೩೫) ಪಂಚತಂತ್ರ ಪ್ರಖ್ಯಾತಿ ಪಡೆದಿದೆ. ಭೇಧ ಪ್ರಕರಣ, ಪರೀಕ್ಷಾವ್ಯಾವರ್ಣನ, ವಿಶ್ವಾಸ ಪ್ರಕರಣ, ವಂಚನಾಪ್ರಕರಣ ಮತ್ತು ಮಿತ್ರಕಾರ್ಯ ಪ್ರಕರಣಗಳೆಂಬ ಪಂಚಪ್ರಕರಣ ಹಾಗೂ ಪಂಚತಂತ್ರಗಳ ವರ್ಣನೆಯೇ ಈ ಪಂಚತಂತ್ರ ಚಂಪೂಕಾವ್ಯ. ಪೈಶಾಚೀ ಭಾಷೆಯಲ್ಲಿ ಬರೆದ ಗುಣಾಢ್ಯನ ಬೃಹತ್ಕಥೆಯ—ಇಂದು ಅದರ ಅವಶೇಷ ಏನೇನೂ ದೊರೆತಿಲ್ಲ—ಆಧಾರದಿಂದ ಸಂಸ್ಕೃತ ದಲ್ಲಿ ವಸುಭಾಗಭಟ್ಟ ಬರೆದ ಪಂಚತಂತ್ರದ ಆಧಾರದಿಂದ ದುರ್ಗಸಿಂಹ ಕನ್ನಡದಲ್ಲಿ ಚಂಪೂ ರೂಪದಲ್ಲಿ ಪಂಚತಂತ್ರ ಬರೆದಿದ್ದಾನೆ. ದುರ್ಗಸಿಂಹನ ಪದ್ಯ, ಗದ್ಯ ಪ್ರೌಢವಾಗಿ, ಅನೇಕ ಕಡೆ ಪ್ರಾಸಾನುಪ್ರಾಸಬದ್ಧವಾಗಿ ಚೇತೋಹಾರಿಯಾಗಿ ಒಡಮೂಡಿದೆ.

ಹಯಶಾಸ್ತ್ರಜ್ಞನಾದ ಚಂದ್ರರಾಜ (೧೦೨೫)ನ ಮದನತಿಲಕ ಈ ಶತಮಾನದ ಮತ್ತೊಂದು ಚಂಪೂಕಾವ್ಯ. ಮದನತಿಲಕ, ಅದರ ಹೆಸರೇ ಸೂಚಿಸುವಂತೆ, ಕಾಮತತ್ವ ನಿರೂಪಣಾವಸ್ತು ಪ್ರಧಾನ ಕಾವ್ಯ. ಇದು ಗಾತ್ರದಲ್ಲಿ ಹಾಗೂ ಇತರ ಅಂಶಗಳಲ್ಲೂ ಗದಾಯುದ್ಧಕ್ಕಿಂತಲೂ ಸ್ವಲ್ಪ ಚಿಕ್ಕದಾದ ಚಂಪೂಕಾವ್ಯ. ಚಂದ್ರರಾಜನ ಶಬ್ದಾಲಂಕಾರ ಜ್ಞಾನ ಚೆನ್ನಾಗಿದೆ. ಕನ್ನಡ ಸಾಹಿತ್ಯದಲ್ಲಿ ಅಪರೂಪವಾದ ಚಕ್ರಾವಿಬಂಧ ರೂಪವಾದ ಹತ್ತಾರು ಪದ್ಯಗಳು ಇದರಲ್ಲಿವೆ. ಮದನ ತಿಲಕವನ್ನು ಚಿತ್ರಕವಿತೆಯೆಂದೂ ಕರೆಯಬಹುದು. ಕಾವ್ಯ ಕಡಮೆ, ಕಸರತ್ತು ಅಧಿಕ–ಇದು ಮದನ ತಿಲಕದ ಸ್ಥೂಲವಿಮರ್ಶೆ.

ಹನ್ನೊಂದನೆಯ ಶತಮಾನದ ಶ್ರೇಷ್ಠ ಚಂಪೂಕವಿಯೆಂದರೆ ಶಾಂತಿನಾಥ

(೧೦೬೮). ಜೈನ ಕಥಾ ಸಾಹಿತ್ಯದಲ್ಲಿ ಸರ್ವೋತ್ಕೃಷ್ಟ ಕಥಾ ರತ್ನವಾದ ಸುಕುಮಾರ ಸ್ವಾಮಿಯ ಕಥೆಯನ್ನು ಆರಿಸಿಕೊಂಡು ಶಾಂತಿನಾಥ ಕವಿ 'ಸುಕುಮಾರ ಚರಿತೆ'ಯನ್ನು ರಚಿಸಿದ್ದಾನೆ. ಸಾಮಾನ್ಯವಾಗಿ ಹನ್ನೊಂದನೆಯ ಶತಮಾನವನ್ನು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಕತ್ತಲೆಯ ಕಾಲವೆಂದು ಕೆಲವರು ಕರೆಯುವುದುಂಟು. ಆದರೆ ಶಾಂತಿನಾಥನ ಕಾವ್ಯ ಈ ಹೇಳಿಕೆಯನ್ನು ಸುಳ್ಳಾಗಿಸಿದೆ. ಶಾಂತಿನಾಥನ ದೇಸಿಮಾರ್ಗಗಳ, ಸಂಸ್ಕೃತ ಕನ್ನಡಗಳ ಸಾಮರಸ್ಯದತ್ತವಾದ ರಸಪಾಕವೇ ಸುಕುಮಾರ ಚರಿತೆ. ಶಾಂತಿನಾಥಕವಿ ಬರೆದಿರುವುದು ಒಂದು ಶಾಸನ, ಒಂದು ಕಾವ್ಯ ಮಾತ್ರ. ಆದರೆ ಅಷ್ಟರಿಂದಲೇ ಆತನ ಸತ್ವಶ್ರೀ ವ್ಯಕ್ತವಾಗಿದೆ. ಸಮಯೋಚಿತ ವರ್ಣನೆಗಳಿಂದ, ವಿಲಕ್ಷಣವಾದವಾಗ್ವೈಖರಿಯಿಂದ ಶಾಂತಿನಾಥ ಚಂಪೂಕವಿಗಣದಲ್ಲೇ ಏಕೆ, ಕನ್ನಡ ಕವಿಗಳಲ್ಲೇ ಒಬ್ಬ ಹಿರಿಯ ಕವಿಯಾಗಿ ಬೆಳಗಿದ್ದಾನೆ. ಅವನ ಪಾತ್ರ ಚಿತ್ರಣ ಪ್ರಜ್ಞೆ ಹಾಗೂ ಪ್ರಕೃತಿ ಪ್ರೇಮ ಅಸಾಧಾರಣವಾದುದು. ಶಾಂತಿನಾಥ ಪಂಪನ ಹೆಜ್ಜೆಯ ಹೆದ್ದಾರಿಯನ್ನೇ ಅನುಸರಿಸಿದ್ದರೂ ಆತ ತನ್ನತನವನ್ನು ತೋರಿದ್ದಾನೆ.

ಹನ್ನೆರಡನೆಯ ಶತಮಾನ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಹಲವು ದೃಷ್ಟಿಗಳಿಂದ ಪ್ರಮುಖವಾದ ಕಾಲ. ವಚನ ಸಾಹಿತ್ಯದ ಸಮೃದ್ಧ ಸೃಷ್ಟಿಯೊಂದು ಕಡೆ, ಚಂಪೂ ಸಾಹಿತ್ಯದ ಸುರಿಮಳೆಯೊಂದು ಕಡೆ–ಇವು ಎರಡು ಮುಖ್ಯಾಂಶಗಳು. ಚಂಪೂ ಸಾಹಿತ್ಯದ ಪ್ರೌಢ ಕವಿಗಳೂ, ಜನಪ್ರಿಯ ಕವಿಗಳೂ ಕಾವ್ಯರಚನೆಗೆ ತೊಡಗಿದ್ದು ಈ ಶತಮಾನದ ಹರವಿನಲ್ಲಿ. ಅಭಿನವ ಪಂಪನೆಂಬ ಬಿರುದಾಂಕಿತನಾದ ನಾಗಚಂದ್ರ (೧೧೦೦) ಕವಿ ಜೈನ ಕವಿಗಳ ಪರಂಪರಾನುಸಾರವಾಗಿ ಎರಡು ಕಾವ್ಯಗಳನ್ನು ಬರೆದಿದ್ದಾನೆ. ಆದರೆ ಅವನ ಈ ಎರಡು ಕಾವ್ಯಗಳೂ ಜೈನ ಧರ್ಮಕ್ಕೆ ಸಂಬಂಧಿಸಿದ ಕಾವ್ಯಗಳೇ ಆಗಿವೆ. ಸಹಜ ಶ್ರೀಮಂತನಾದ ನಾಗಚಂದ್ರ ಸಹಜಕವಿಯೂ ಆಗಿದ್ದಾನೆ. ಇವನ ರಾಮಚಂದ್ರ ಚರಿತಪುರಾಣ ಪಂಪರಾಮಾಯಣವೆಂಬ ಹೆಸರಿನಿಂದ ಪ್ರಸಿದ್ಧಿಗಳಿಸಿದೆ. ಇದು ಜೈನ ಸಂಪ್ರದಾಯಾನುಸಾರವಾಗಿ ಬರೆದ ರಾಮಾಯಣ. ವಾಲ್ಮೀಕಿ ರಾಮಾಯಣಕ್ಕೂ ಇದಕ್ಕೂ ಅಂತರವಿದೆ. ಕನ್ನಡದಲ್ಲಿ ಸಿಕ್ಕಿರುವ ಮೊಟ್ಟಮೊದಲ ರಾಮಾಯಣವಿದು. ಇದರಿಂದ ಮುಂದೆ ರಾಮಾಯಣಗಳ ಸಾಲುಸಾಲೇ ಸಿದ್ಧವಾಗಲು ನಾಂದಿಯಾಯಿತು. ಇದರಲ್ಲಿ ಬರುವ ರಾವಣನ ದುರಂತ ಪಾತ್ರ ವಿನ್ಯಾಸ, ಅದರ ಮೂಲದ ಸೊಗಸು ವಿಮಲಸೂರಿಯದಾದರೂ, ಕನ್ನಡಕ್ಕೆ ನಾಗಚಂದ್ರನ ವಿಶಿಷ್ಟ ಕಾಣಿಕೆಯಾಗಿದೆ.

ನಾಗಚಂದ್ರನ ಇನ್ನೊಂದು ಚಂಪೂ ಕಾವ್ಯವಾದ ಮಲ್ಲಿನಾಥಪುರಾಣ ೧೯ನೆಯ ತೀರ್ಥಂಕರನ ಚರಿತೆ. ೧೪ ಆಶ್ವಾಸಗಳ ಈ ಕಾವ್ಯದ ವರ್ಣನಾಶಕ್ತಿ ಮೆಚ್ಚುಗೆಗೆ ಅರ್ಹವಾಗಿದೆ. ರಾಮಚಂದ್ರಚರಿತಪುರಾಣದ ಲಾಲಿತ್ಯ, ಕುಸುರಿ ಕೆಲಸ, ನಯ ನುಣುಪು ಆ ಪ್ರಮಾಣದಲ್ಲಿ ಮಲ್ಲಿನಾಥಪುರಾಣದಲ್ಲಿಲ್ಲ. ಅದುವರೆಗಿನ ಪುರಾಣಗಳ ಸಾಂಪ್ರದಾಯಿಕ ಜಾಡಿನಲ್ಲೇ ಇದೂ ಸಾಗಿದೆ. ಆದರೆ ನಾಗಚಂದ್ರನ ಸ್ವಂತ ಹಿರಿಮೆಯೊಂದಿದೆ. ಆತನ ಸುಕೋಮಲ ಶೈಲಿ ಅವನಿಗೇ ಮೀಸಲೆಂಬಂತೆ ಪ್ರಸಾದ ಗುಣ

ಮಿಶ್ರವಾಗಿ ಬಂದಿದೆ, ತುಂಬ ಪ್ರಸನ್ನವಾಗಿದೆ. ಉಪಮೆ ಮಾಲೋಪಮೆಯಲ್ಲಿ ಮುಂದೆ ಮೇರುಪರ್ವತದಂತೆ ನಿಲ್ಲುವ ನಯಸೇನನಿಗೆ ಮಾದರಿ ಮಾಡಿಟ್ಟಂತೆ, ಉಪಮಾಲಂಕಾರ ನಾಗಚಂದ್ರನ ಕಾವ್ಯಗಳಲ್ಲಿ ಯಥೋಚಿತವಾಗಿ ಬಂದಿದೆ.

ನಯಸೇನ (೧೧೧೨) ಈ ಶತಮಾನದ ಅತ್ಯಂತ ಜನಪ್ರಿಯ ಚಂಪೂಕವಿ. ಅವನ ಏಕೈಕ ಚಂಪೂಕಾವ್ಯ ಧರ್ಮಾಮೃತ ಜಾನಪದ ಸತ್ವದಿಂದ ಅರಳಿದ ಪರಿಮಳ ಭರಿತ ಸರ್ವಜನ ಸುಲಭಕಾವ್ಯ. ಜನಜೀವನದಿಂದ ಆರಿಸಿಕೊಂಡ ಹೋಲಿಕೆಗಳೂ, ಸಾಮತಿಗಳೂ ಧರ್ಮಾಮೃತದಲ್ಲಿ ಮಾಲೆ ಮಾಲೆಯಾಗಿ ತೇಲಿಬರುತ್ತವೆ. ಜೈನಧರ್ಮ ಪ್ರಚಾರಕ್ಕಾಗಿಯೇ ರಚಿಸಿದ ಈ ಕಾವ್ಯ ಜನಸಾಮಾನ್ಯರನ್ನೇ ದೃಷ್ಟಿಯಲ್ಲಿಟ್ಟುಕೊಂಡು ಬರೆದಿರುವುದರಿಂದ ಕಾವ್ಯದ ಶೈಲಿ ಸರಳ ಸುಂದರ ನೇರವಾಗಿದೆ. ೧೪ ಆಶ್ವಾಸಗಳಲ್ಲಿ ಆಬಾಲವೃದ್ಧರಿಗೂ ಹೃದಯಂಗಮವಾಗುವ ಹದಿನಾಲ್ಕು ಕಥೆಗಳಿವೆ. ಹೊರನೋಟಕ್ಕೆ ಅವು ಬರಿಯ ಆಕರ್ಷಕ ಕಥೆಗಳಾಗಿ ಕಂಡರೂ ಅಂತರ್ಯದಲ್ಲಿ ಅವೆಲ್ಲ ಅಹಿಂಸೆಯ ಮೇಲ್ಮೆಯನ್ನು ಸಾರುವ ಶುಕ್ತಿಕೆಗಳಾಗಿವೆ. ನಯಸೇನನನ್ನು ಜಾನಪದ ಚಂಪೂಕವಿ ಯೆಂದು ವಿಮರ್ಶಕರು ಕರೆದಿರುವುದು ಉಚಿತಾರ್ಹವಾಗಿದೆ. ಕನ್ನಡ ನೆಲದ ಬೆಳೆಯಾಗಿ ಇಲ್ಲಿನ ಮಣ್ಣಿನ ವಾಸನೆ ಕೊಡುವ ಕನ್ನಡ ನುಡಿಯ ಸೊಗಡು ಬೀರುವ ಕೆಲವೇ ಕಾವ್ಯ ಗಳಲ್ಲಿ ನಯಸೇನನ ಧರ್ಮಾಮೃತವೂ ಒಂದು.

ಕರ್ಣಪಾರ್ಯ (೧೧೪೦) ಜೈನರಲ್ಲಿ ಹೆಚ್ಚು ಸಂಖ್ಯೆಯ ಕಾವ್ಯಗಳ ವಸ್ತುವಾಗಿರುವ ೨೨ನೆಯ ತೀರ್ಥಂಕರನಾದ ನೇಮಿನಾಥ ಪುರಾಣ ಬರೆದಿದ್ದಾನೆ. ನೇಮಿನಾಥಪುರಾಣ ಒಂದು ವಿಶಿಷ್ಟವಾದ ಕಾವ್ಯ. ಅದರಲ್ಲಿ ಹರಿವಂಶ ಕುರುವಂಶಗಳ ಕಥೆಯೂ ಜಿನಕಥೆಯೊಡನೆ ಬರುತ್ತದೆ. ೧೪ ಆಶ್ವಾಸಗಳ ಚಂಪೂಕಾವ್ಯವಾದ ನೇಮಿನಾಥಪುರಾಣವನ್ನು ಕರ್ಣಪಾರ್ಯ ಲಲಿತವಾದ ಸುಭಗಶೈಲಿಯಲ್ಲಿ ರಚಿಸಿದ್ದಾನೆ. ಉಳಿದ ಜೈನಪುರಾಣಕವಿಗಳಿಗಿಂತ ಭಿನ್ನವಾದ ಕರ್ಣಪಾರ್ಯ ಕವಿಯ ವೈಶಿಷ್ಟ್ಯವೆಂದರೆ ಆತ ವರ್ಣನಾಭಾಗಗಳನ್ನು ತುಂಬ ಹಿತಮಿತವಾಗಿ ತಂದು, ಕಥಾನಿರೂಪಣೆಗೆ ಮಾತ್ರ ಹೆಚ್ಚು ಪ್ರಾಶಸ್ತ್ಯವಿತ್ತಿದ್ದಾನೆ.

ಹರಿಹರ (೧೧೬೫) ಕನ್ನಡದ ಮಹಾಕವಿಗಳಲ್ಲಿ ಒಬ್ಬ. ಅವನ ಕಾವ್ಯಗಳ ರಾಶಿ ದೊಡ್ಡದು. ರಗಳೆಯ ಸಾರ್ವಭೌಮನಾದ ಹರಿಹರ ತಾನು ಕೇವಲ ರಗಳೆಯ ಕವಿಯಲ್ಲವೆಂದು ತೋರಿಸಲು ಗಿರಿಜಾಕಲ್ಯಾಣವೆಂಬ ಚಂಪೂಕಾವ್ಯವನ್ನು ರಚಿಸಿದ ನೆಂದು ಪ್ರತೀತಿ. ಹತ್ತು ಆಶ್ವಾಸಗಳ ಗಿರಿಜಾಕಲ್ಯಾಣ ಶಿವಪಾರ್ವತಿಯರ ಮದುವೆ ಯನ್ನು ಕುರಿತ ಕಾವ್ಯ. ಕ್ರಾಂತಿ ಕವಿಯಾದ ಹರಿಹರ ರಳಕುಳಕ್ಷಳಗಳನ್ನು ಕವಿತತಿ ವಿಚಾರಿಸಕೂಡದೆಂದು ನುಡಿದದ್ದು ಈ ಕಾವ್ಯದಲ್ಲೇ. ಹರಿಹರನ ಪ್ರಾರಂಭದ ಕೃತಿಗಳಲ್ಲಿ ಒಂದಾದ ಗಿರಿಜಾಕಲ್ಯಾಣ ಸಹಜವಾಗಿಯೇ ಮಧ್ಯಮವರ್ಗದ ಕಾವ್ಯ ವಾಗಿದೆ. ಹೀಗಾದುದರಿಂದ ಅವನ ಘನತೆಗೇನೂ ಕುಂದಿಲ್ಲ. ಅವನ ಕಾವ್ಯಶ್ರೀ ಕ್ರೀಡೆಯ ಉದ್ಯಾನ ರಗಳೆಯ ಭಕ್ತಿಕ್ಷೇತ್ರ. ಹರಿಹರನ ಕವಿತಾವಿಲಾಸವೆಲ್ಲ ಅಲ್ಲಿ

ವಾಂಗುಡಿಯಿಟ್ಟಿದೆ. ಆದರೂ ಗಿರಿಜಾಕಲ್ಯಾಣ ಅಲ್ಲಲ್ಲಿ ನಾಟಕೀಯಗುಣದಿಂದ ರಂಜಿಸಿದೆ. ತಪಸ್ಸಿನಲ್ಲಿ ತೊಡಗಿದ್ದ ಪಾರ್ವತಿಯನ್ನು ಪರೀಕ್ಷಿಸಲು ವೃದ್ಧವೇಷದಲ್ಲಿ ಬಂದ ಶಿವನೊಡನೆ ನಡೆಯುವ ಮಾತುಕಥೆಯನ್ನು ಅನುಲಕ್ಷಿಸಬೇಕು.

ನೇಮಿಚಂದ್ರ (೧೧೭೦) ಬಹಳ ಪ್ರೌಢನಾದ ಚಂಪೂಕವಿ. ಸ್ವತಂತ್ರ ಮನೋಧರ್ಮದ ನೇಮಿಚಂದ್ರನನ್ನು ಅವನಿಗೆ ಗಿಟ್ಟಬೇಕಾಗಿದ್ದ ಮಹಾಕವಿ ಪಟ್ಟದಿಂದ ವಂಚಿಸಿದ್ದು ಅವನಲ್ಲಿ ಕಡಮೆ ಪ್ರಮಾಣದಲ್ಲಿದ್ದ ಔಚಿತ್ಯಜ್ಞಾನ. ಲೀಲಾವತಿ ಕೇವಲ ಒಂದು ವರ್ಷದಲ್ಲಿ ಬರೆದ ಅವನ ಪ್ರೌಢ ಪ್ರಬಂಧ. ೧೪ ಆಶ್ವಾಸಗಳ ಈ ಚಂಪೂಕಾವ್ಯದಲ್ಲಿ ಸ್ತ್ರೀರೂಪಮೆ ರೂಪಂ, ಶೃಂಗಾರಮೆ ರಸಂ—ಎಂಬ ಶೃಂಗಾರ ತತ್ವದ ತಿರುಳು ಪ್ರತಿಪಾದಿತವಾಗಿದೆ. ಇಲ್ಲಿಯ ವರ್ಣನೆ ಪ್ರಣಯೋಪಲಾಲಿತವಾಗಿದ್ದು ಕಾವ್ಯದ ಒಟ್ಟು ಚೌಕಟ್ಟಿನ ದೃಷ್ಟಿಯಿಂದ ಹದ ಹಾಗೂ ಹವಣು ಮೀರಿದಂತೆಯೇ ಆಧುನಿಕ ಮೌಲ್ಯಮಾಪನಕ್ಕೆ ತೋರುತ್ತದೆ. ಆದರೆ ಲೀಲಾವತಿ ಅಂದಿನ ಸಮಾಜದ ಚಿತ್ರವನ್ನೂ, ಜನತೆಯ ರುಚಿ ಅಭಿರುಚಿಗಳನ್ನೂ ಪ್ರತಿನಿಧಿಸುತ್ತದೆ. ಜೊತೆಗೆ ಇದರಲ್ಲಿ ಪ್ರಯೋಗವಾಗಿರುವ ಶಬ್ದಸಂಪತ್ತು ಅದ್ಭುತವಾಗಿದೆ.

ನೇಮಿಚಂದ್ರನ ಕಾವ್ಯಶಕ್ತಿಯನ್ನು ವ್ಯಕ್ತಪಡಿಸುವ ಚಂಪೂಕಾವ್ಯವೆಂದರೆ ನೇಮಿನಾಥಪುರಾಣ. ಇದು ಕೇವಲ ಎಂಟು ಆಶ್ವಾಸಗಳಿಗೇ ನಿಂತುಹೋದ ಕಾವ್ಯವಾದುದರಿಂದ ಇದನ್ನು ಅರ್ಧನೇಮಿಪುರಾಣವೆಂದೂ ಕರೆಯುವರು. ಲೀಲಾವತಿ ಶೃಂಗಾರ ರಸಪ್ರಧಾನ ಕಾವ್ಯವಾದರೆ ನೇಮಿನಾಥಪುರಾಣ ಶಾಂತಿರಸ ಪ್ರಧಾನವಾದ ತೀರ್ಥಂಕರ ಪುರಾಣ. ಲೀಲಾವತಿಯಲ್ಲಿ ಸಂಯಮ ಸಾಲದು, ನೇಮಿನಾಥ ಪುರಾಣದಲ್ಲಿ ಸಂಯಮ ಹೆಚ್ಚಾಯಿತು. ತನ್ನ ಕವಿತಾಪ್ರೌಢಿಮೆಯನ್ನು ಪ್ರದರ್ಶಿಸುವ ಅವಕಾಶವಿದ್ದರೂ ಧಾರ್ಮಿಕ ಗ್ರಂಥದ ಪರಿಮಿತಿಯಲ್ಲಿ ಅದು ಸಾಧ್ಯವಾಗಲಿಲ್ಲವೆಂದು ವಿಮರ್ಶಕರು ಅಭಿಪ್ರಾಯಪಟ್ಟಿದ್ದಾರೆ. ನೇಮಿನಾಥಪುರಾಣ ಲೀಲಾವತಿಯ ಗಾತ್ರದ ಅರ್ಧದಷ್ಟಿದ್ದರೂ ಕವಿಯ ಔನ್ನತ್ಯವನ್ನು ಸಾರಿದೆ. ವಾಗುರೆಯ ಪ್ರಸಂಗ, ವಾಮನಾವತಾರದ ಸಂದರ್ಭ ಕಾವ್ಯದ ಉತ್ತಮಿಕೆಯನ್ನು ಸಾರುವ ಸನ್ನಿವೇಶಗಳು.

ಇದೇ ಅವಧಿಯ ಇನ್ನೊಬ್ಬ ಕವಿ ರುದ್ರಭಟ್ಟ (೧೧೮೫). ನೇಮಿಚಂದ್ರ ಮತ್ತು ರುದ್ರಭಟ್ಟ ಒಬ್ಬನೇ ದೊರೆಯ ರಾಜಾಸ್ಥಾನದ ಇಬ್ಬರು ಅಧಿಕಾರಿಗಳಿಂದ ಪೋಷಿತರಾದ ಕವಿಗಳು. ಹೊಯ್ಸಳ ವೀರಬಲ್ಲಾಳನ (೧೧೭೩-೧೨೨೦) ಪ್ರಧಾನನಾದ ಪದ್ಮನಾಭನೇ ನೇಮಿಚಂದ್ರನ ಪೋಷಕ. ವೀರಬಲ್ಲಾಳನ ಮಂತ್ರಿ ಚಂದ್ರಮೌಳಿಯ ಪ್ರೇರಣೆಯಿಂದ ರುದ್ರಭಟ್ಟ ಜಗನ್ನಾಥವಿಜಯ ಬರೆದುದಾಗಿ ತಿಳಿದು ಬರುತ್ತದೆ. ಕನ್ನಡದ ಕೆಲವು ಕವಿಗಳು ತಮ್ಮ ಪಾಂಡಿತ್ಯಪೂರ್ಣ ಸಂಸ್ಕೃತ ಭೂಯಿಷ್ಠ ಕ್ಲಿಷ್ಟಶೈಲಿಗೆ ಖ್ಯಾತನಾಮರಾಗಿದ್ದಾರೆ. ರುದ್ರಭಟ್ಟ ಅವರಲ್ಲಿ ಅಗ್ರಗಣ್ಯ. ೧೮ ಆಶ್ವಾಸಗಳ 'ಜಗನ್ನಾಥ ವಿಜಯ'ದ ಪ್ರಾರಂಭದ ಅಯ್ದು ಪದ್ಯಗಳು ಪಂಚಪಾಷಾಣಪದ್ಯಗಳೆಂದು, ಸಂಸ್ಕೃತ ವ್ಯಾಖ್ಯಾನ ಸಹಿತ, ಪ್ರಸಿದ್ಧಿಪಡೆದು ಪಂಡಿತ

ಮಾನ್ಯವಾಗಿವೆ. ಆದರೆ ಕೃಷ್ಣನ ಬಾಲಲೀಲೆ ಮುಂತಾದ ಕೆಲವು ಪ್ರಸಂಗದ ಪದ್ಯಗಳಲ್ಲಿ ಕವಿತಾಚಾತುರ್ಯ ಚೆನ್ನಾಗಿ ಕಾಣುತ್ತದೆ.

ಅಗ್ಗಳ (೧೧೮೯) ಜೈನ ಜನ ಮನೋಹರಚರಿತನಾದ ಪ್ರೌಢ ಚಂಪೂಕವಿ. ಎಂಟನೆಯ ತೀರ್ಥಂಕರನಾದ ಚಂದ್ರಪ್ರಭನ ಚರಿತೆಯೇ ೧೬ ಆಶ್ವಾಸಗಳ ಚಂದ್ರಪ್ರಭ ಪುರಾಣ. ಪಂಪ ಪೊನ್ನ ರನ್ನರ ತರುವಾಯ ತನ್ನ ಚಂದ್ರಪ್ರಭ ಪುರಾಣವೇ ಅಮೂಲ್ಯವಾದುದೆಂದು ಕವಿಯ ಆಶಯದ ಹೇಳಿಕೆ. ಬಹುಮಟ್ಟಿಗೆ ಇದು ನಿಜವಾದ ಭಾವನೆಯಾದರೂ ರುದ್ರಭಟ್ಟನಂತೆ ಅಗ್ಗಳನೂ ಸಂಸ್ಕೃತ ಸಮಾಸ ಪದಗಳ ಪೊಂಛಾವಣಿಯಲ್ಲಿ ವಿಶೇಷ ಗಮನವಿತ್ತಿದ್ದಾನೆ. ಆದರೂ ಅಗ್ಗಳನಲ್ಲಿ ಕಾವ್ಯ ಸೆಲೆ ಸಂಪನ್ನವಾಗಿದೆ. ಚಂದ್ರಪ್ರಭಪುರಾಣದ ಬಾಹ್ಯಾಕಾರ ಸಂಸ್ಕೃತವೇ ಹೆಚ್ಚಾದ ಪೌಢಪದ ಪುಂಜವಾದರೂ ಅದರ ಅಂತರ್ಯದಲ್ಲಿ ತೀರ್ಥಂಕರನ ವೀತರಾಗ ಕಾಂತಿ ಕಮನೀಯವಾಗಿ ಕಾದು ಕುಳಿತಿದೆ. ಅಗ್ಗಳನ ಕಾವ್ಯ ನಾರೀಕೇಳಪಾಕ.

ಹೊಯ್ಸಳ ವೀರಬಲ್ಲಾಳನ ಮತ್ತೊಬ್ಬ ಮಂತ್ರಿಯಾದ ರೇಚಣ ಚಮೂಪನು ಆಚಣ್ಣನೆಂಬ (೧೧೯೫) ಜೈನ ಕವಿಯಿಂದ ವರ್ಧಮಾನಪುರಾಣ ಬರೆಸಿದನು. ಕಡೆಯ ತೀರ್ಥಂಕರನಾದ ವರ್ಧಮಾನ ಅಥವಾ ಮಹಾವೀರ ಸ್ವಾಮಿಯ ಚರಿತೆಯನ್ನು ಅಚಣ್ಣ ೧೬ ಆಶ್ವಾಸಗಳಲ್ಲಿ ನಿರೂಪಿಸಿದ್ದಾನೆ. ಜಿನಮುನಿಯಾದ ಆಚಣ್ಣ ಸಭಾಸದರ ಅಂತಃಕರಣಕ್ಕೆ ಸೌಖ್ಯಾಮೃತಾಸಾರವನ್ನು ಕರೆಯುವಂತೆ ಕಾವ್ಯ ರಚಿಸಿರುವುದಾಗಿ ತಿಳಿಸಿದ್ದಾನೆ. ವರ್ಧಮಾನ ಪುರಾಣ ಪ್ರಾಸಯಮಕವೇ ಮೊದಲಾದ ಶಬ್ದಾಲಂಕಾರ ದಿಂದ ಕೂಡಿಕೊಂಡಿರುವ ಸಾಕಷ್ಟು ಪ್ರೌಢವಾದ ಚಂಪೂಕಾವ್ಯ. ಜೊತೆಗೆ ಇದು ಕನ್ನಡದಲ್ಲಿ ಮಹಾವೀರನನ್ನು ಕುರಿತು ಬರೆದ ಏಕೈಕ ಚಂಪೂಕಾವ್ಯ.

ಬಂಧುವರ್ಮ (೧೨೦೦) ಹದಿಮೂರನೆಯ ಶತಮಾನಾರಂಭದ ಕವಿ ಕೋಗಿಲೆ. ಅವನ ಹರಿವಂಶಾಭ್ಯುದಯ ೨೨ನೆಯ ತೀರ್ಥಂಕರನಾದ ನೇಮಿನಾಥನ ಪುರಾಣ. ೧೪ ಆಶ್ವಾಸಗಳ ಈ ಚಂಪೂಕಾವ್ಯದಲ್ಲಿ ಕರ್ಣಪಾರ್ಯ, ನೇಮಿಚಂದ್ರ ಮುಂತಾದ ಹಿಂದಿನ ಕವಿಗಳ ಹೆದ್ದಾರಿಯಲ್ಲಿ ಹರಿವಂಶಾಭ್ಯುದಯ ರಚಿತವಾಗಿದೆ. ಆದರೆ ಬಂಧುವರ್ಮ ಎಷ್ಟು ಹೆಸರನ್ನು ಪಡೆದು ಪ್ರಚುರನಾಗಬೇಕಿತ್ತೊ, ಅಷ್ಟು ಪಡೆದು ಪ್ರಸಿದ್ಧನಾಗಿಲ್ಲ. ಹರಿವಂಶಾಭ್ಯುದಯ ಸ್ವಾರಸ್ಯಪೂರ್ಣವಾದ ಸರಸ ಚಂಪೂಕಾವ್ಯ. ಜಗದ ಜನ ನಾಡೆ ಬೆಕ್ಕಸಪಡುವಂತೆ ತಾನು ಮಹಾಕಾವ್ಯವನ್ನು ಹೇಳುತ್ತಿರುವುದಾಗಿ ಬಂಧುವರ್ಮ ತನ್ನ ಕವಿತಾಚಾತುರ್ಯವನ್ನು ಕುರಿತು ಹೇಳಿಕೊಂಡಿದ್ದರೂ ಅದರ ಅರ್ಧಪಾಲು ಯಶಸ್ವಿಯಾಗಿದೆ. ಬಂಧುವರ್ಮನ ಇನ್ನೊಂದು ಕಾವ್ಯವಾದ ಜೀವಸಂಬೋಧನೆಯನ್ನೂ ಚಂಪೂಕಾವ್ಯವೆಂದು ಕರೆಯಬಹುದೆ ಎಂಬ ವಿಚಾರದಲ್ಲಿ ಭಿನ್ನಾಭಿಪ್ರಾಯವಿದೆ.

ದೇವಕವಿಯ (೧೨೦೦) ಕುಸುಮಾವಳಿ ಕಾವ್ಯ ಕನ್ನಡ ಚಂಪೂ ಹಾಗೂ ಕಥಾಸಾಹಿತ್ಯ ಸೀಮೆಯಲ್ಲಿ ಒಂದು ವಿಲಕ್ಷಣ ಕೃತಿ. 'ಭಾರತೀ ಭೂಷಣ'

ಬಿರುದಾಂಕಿತನಾದ ದೇವಕವಿ ತನ್ನ 'ಕುಸುಮಾವಳಿ'ಯನ್ನು 'ಸಮ್ಯಕಾವ್ಯ'ವೆಂದು ಕರೆದಿರುವುದು ಗಮನಾರ್ಹವಾಗಿದೆ. ನೇಮಿಚಂದ್ರನ ಲೀಲಾವತಿಯಂತೆ ಕುಸುಮಾವಳಿ ಕಾವ್ಯವೂ ಶೃಂಗಾರರಸ ಪ್ರಧಾನ ಕಾಲ್ಪನಿಕ ಕಾವ್ಯ. ಆದರೆ ಲೀಲಾವತಿಯ ನೇಮಿಚಂದ್ರನಿಗಿಂತ ಕುಸುಮಾವಳಿಯ ದೇವಕವಿಯಲ್ಲಿ ಔಚಿತ್ಯ ಜ್ಞಾನ, ಪ್ರಮಾಣ ಪ್ರಜ್ಞೆ, ಚೆನ್ನಾಗಿ ಸಾಧಿತವಾಗಿದೆ. ೧೬ ಆಶ್ವಾಸಗಳಿರಬೇಕಾದ ಈ ಚಂಪೂಕಾವ್ಯದ ಕೇವಲ ೧೫ ಆಶ್ವಾಸಗಳಷ್ಟು ಮಾತ್ರ ದೊರೆತಿರುವುದು ಕವಿ ಕಾಲ ಕಾವ್ಯ ವಿಚಾರಕ್ಕೆ ಅತ್ಯಗತ್ಯವಾದ ವಿಚಾರ ಸಾಮಗ್ರಿ ಲೋಪವಾದಂತಾಗಿದೆ.

ಪಾರ್ಶ್ವಪಂಡಿತ (೧೨೦೫) ಈ ಕಾಲದ ಮತ್ತೊಬ್ಬ ಜೈನ ಚಂಪೂಕವಿ. ಈತ ತನ್ನ ಹೆಸರಿಗೆ ಹೊಂದುವ ೨೩ನೆಯ ತೀರ್ಥಂಕರನಾದ ಪಾರ್ಶ್ವನಾಥಸ್ವಾಮಿಯ ಪುರಾಣವನ್ನು ರಚಿಸಿದ್ದಾನೆ. ಸೌಂದತ್ತಿಯ ರಟ್ಟರಾಜ ವಂಶದ ಕಾರ್ತವೀರ್ಯ (೧೨೦೨-೧೨೨೦) ರಾಜನ ಆಸ್ಥಾನಕವಿಯಾಗಿದ್ದಿರಬಹುದೆಂದು ಭಾವಿಸಲಾಗಿದೆ. ಪಾರ್ಶ್ವಪಂಡಿತ ಶಾಸನ ಕವಿಯೂ ಆಗಿದ್ದಾನೆ. ಪಾರ್ಶ್ವನಾಥ ಪುರಾಣವನ್ನು ೧೨೨೨ರಲ್ಲಿ ಬರೆದಂತೆ ಹೇಳಿದ್ದಾನೆ. ಮುಚ್ಚಿಹೋದ ಗೂಢಾರ್ಥದ ಕವಿಯಂತಿರದೆ ಪಾರ್ಶ್ವಪಂಡಿತ ತನ್ನ ಕಾವ್ಯವನ್ನು ಆದಷ್ಟು ಸರಳವಾಗಿ ಬರೆದಿದ್ದಾನೆ. ಆದರೂ ಆತನ ಅನೇಕ ವರ್ಣನೆಗಳಲ್ಲಿ ನಾವೀನ್ಯಕ್ಕಿಂತ ಸಾಂಪ್ರದಾಯಿಕ ನಿರೂಪಣೆಯೇ ಕಾಣುತ್ತದೆ.

ಜನ್ನ (೧೨೦೯) ಈ ಶತಮಾನದ, ಅಷ್ಟೇಕೆ ಸಮಸ್ತ ಕನ್ನಡ ಸಾಹಿತ್ಯದ ಜನಪ್ರಿಯ ಕವಿಗಳಲ್ಲೊಬ್ಬ. ಆತನ ಕೀರ್ತಿಕಳಶ ನಿಂತಿರುವುದು ಯಶೋಧರ ಚರಿತೆಯ ಕಾವ್ಯಸೌಧದ ಮೇಲಾದರೂ ಆತ ಬರೆದ ಅನಂತನಾಥಪುರಾಣವೆಂಬ ಚಂಪೂಕಾವ್ಯವೂ ಅಧ್ಯಯನಾರ್ಹವಾಗಿದೆ. ತಾನು ನಿಂತರೆ ದಂಡಾಧೀಶನಾಗಿ, ಕುಳಿತರೆ ಮಂತ್ರಿಯಾಗಿ, ತೊಡಗಿದರೆ ಕವಿಯಾಗಿ ತ್ರಿಮೂರ್ತಿಯಂತೆ ಮೆರೆದವನು ಜನ್ನ. ಸಾಹಿತಿಗಳ ಮನೆತನದಲ್ಲಿ ಜನಿಸಿ ಬೆಳೆದ ಜನ್ನ ೧೨೩೦ರಲ್ಲಿ ರಚಿಸಿದ ಅನಂತನಾಥ ಪುರಾಣದಲ್ಲಿ ೧೪ನೆಯ ತೀರ್ಥಂಕರನಾದ ಅನಂತನಾಥನ ಚರಿತೆಯನ್ನು ಚಿತ್ರಿಸಿದ್ದಾನೆ. ಅರುಹನ ಮೂರ್ತಿಯಂತೆ ನಿರಾಭರಣ ಸುಂದರವಾದ ಸರಳ ಕಾವ್ಯವೆಂದು ತನ್ನ ಅನಂತನಾಥ ಪುರಾಣವನ್ನು ಕವಿ ನಿವೇದಿಸಿದ್ದರೂ ಅನೇಕ ಕಡೆ ಪಾಂಡಿತ್ಯದ ಸೆಡವು ತಲೆದೋರಿದೆ. ಚಂಡಶಾಸನ ಮತ್ತು ಸುನಂದೆಯರ ಪ್ರಕರಣ ಈ ಕಾವ್ಯದ ರಸದ ಮಡು, ದುರಂತದ ಪರಮಾವಧಿ. ಜನ್ನ ಎರಡು ಶಾಸನಗಳನ್ನೂ ಬರೆದಿದ್ದಾನೆ. ಚೆನ್ನರಾಯಪಟ್ಟಣ(೧೧೯೧) ಮತ್ತು ತರೀಕೆರೆಯ (೧೧೯೭) ಶಾಸನಗಳು ಜನ್ನನ ಕಾವ್ಯಶ್ರೀಸಮುದ್ಯುಕ್ತತನಕ್ಕೆ ನಾಂದಿ ಹಾಡಿದ ಕಾವ್ಯ ಪ್ರವೇಶ ಪ್ರಶಸ್ತಿ ಪತ್ರದಂತಿವೆ.

ಎರಡನೆಯ ಗುಣವರ್ಮ(೧೨೧೫)ಒಂಬತ್ತನೆಯ ತೀರ್ಥಂಕರನಾದ ಪುಷ್ಪದಂತನ ಚರಿತೆಯನ್ನು ೧೪ ಆಶ್ವಾಸಗಳಲ್ಲಿ ಬರೆದಿದ್ದಾನೆ. ನಾಡ ಪ್ರಭುವಾದ ನಾಘೋಮಣಿ ಶಾಂತಿವರ್ಮನ ಯಶೋಲತೆಗೆ ಆಲಂಬನವಾಗುವ ಸಲುವಾಗಿ ಈ ಪುಷ್ಪದಂತ ಪುರಾಣವೆಂಬ ಚಂಪೂಕಾವ್ಯ ಸೃಷ್ಟಿಯಾಗಿದೆ. ಗುಣವರ್ಮಕವಿ ಇದನ್ನು ಕುಸುಮಾವಳಿ

ಕಾವ್ಯದ ದೇವಕವಿಯಂತೆ 'ನವ್ಯಕಾವ್ಯ'ವೆಂದು ಕರೆದು ಪೂರ್ವಕವಿಗಳ ಅಪೂರ್ವ ಗುಣಸಮುದಾಯವೆಲ್ಲ ತನ್ನಲ್ಲಿ ಬಂದು ಸೇರುವಂತೆ ಸ್ಮರಿಸಿದ್ದಾನೆ. ಕೆಲವು ಗುಣಗಳು ಅವನಲ್ಲಿ ಬಂದು ಸೇರಿವೆ, ಸಂದೇಹವಿಲ್ಲ; ಆದರೆ ಅದರಲ್ಲಿ ಪ್ರೌಢಕವಿಗಳ ದೋಷಗುಣಗಳೇ ಹೆಚ್ಚು ಸಾಕ್ಷಾತ್ಕಾರವಾಗಿರುವುದು ವಿಷಾದವನ್ನುಂಟುಮಾಡುತ್ತದೆ. ಪುಷ್ಪದಂತ ಪುರಾಣದ ಒಂದು ಮೆಚ್ಚುಗೆಯ ಲಕ್ಷಣವೆಂದರೆ ಅದರ ಓಟ ಚಿತ್ತಾಹ್ಲಾದಕಾರಿಯಾಗಿದೆ.

ಸೋಮರಾಜ (೧೨೨೨) ಶೃಂಗಾರಸಾರವೆಂಬ ಚಂಪೂಕಾವ್ಯ ಬರೆದ ವೀರಶೈವ ಕವಿ. ಶೃಂಗಾರಸಾರ ಉದ್ಭಟನಾದ ಕುಮಾರಪಾಲ ಘೂರ್ಜರನ ಚರಿತೆ. ಹೀಗಾಗಿ ಅದು ಉದ್ಭಟ ಕಾವ್ಯವೆಂಬ ಹೆಸರಿನಿಂದ ವಿಖ್ಯಾತವಾಗಿದೆ. ಸೋಮರಾಜನ ಕಬ್ಬ ದಿಂಪು ಬುಧರನ್ನು ಬಗೆಗೊಳ್ಳುವುದೆಂಬ ಕವಿಯ ಆಶಯ ಸಾರ್ಥಕವಾಗಿದೆ. ಸಾಮಾನ್ಯ ಜನಕ್ಕೆ 'ರುಚಿರ ಪ್ರಬಂಧ'ವಾಗಿಲ್ಲವಾದರೂ, ಅದರಲ್ಲಿ ಸಂಸ್ಕೃತ ಕನ್ನಡಗಳ ಹದವರಿತ ಪ್ರಯೋಗವಿದೆ. ಕಮಲಭವ (೧೨೩೫) ಶಾಂತೀಶ್ವರ ಪುರಾಣ ರಚಿಸಿದ ಜೈನಕವಿ. ಕುಸುಮಾವಳಿ ಕಾವ್ಯದ ದೇವಕವಿ ಮತ್ತು ಶಾಂತೀಶ್ವರ ಪುರಾಣದ ಕಮಲಭವ ಪರಮ ಸ್ನೇಹಿತರೆಂದು ತೋರುತ್ತದೆ. ಅಲ್ಲದೆ ಕೆಲವು ಪದ್ಯಗಳು ಈ ಎರಡೂ ಕಾವ್ಯಗಳಲ್ಲಿ ಸಮಾನವಾಗಿ ದೊರೆಯುತ್ತವೆ. ೧೬ನೆಯ ತೀರ್ಥಂಕರನ ಚರಿತೆಯಾದ ಶಾಂತೀಶ್ವರ ಪುರಾಣದಲ್ಲಿ ೧೬ ಆಶ್ವಾಸಗಳಿವೆ. ಕಮಲಭವನನ್ನು ಹಿರಿಯ ಚಂಪೂಕವಿಯೆಂದು ಧಾರಾಳವಾಗಿ ಕರೆಯಬಹುದು. ಗುಣವರ್ಮನಲ್ಲಿರುವಂತೆ ಎಡೆತಡೆಯಿಲ್ಲದ ನಿರರ್ಗಳ ವಾದ ಓಟ ಕಮಲಭವನ ಕಾವ್ಯದ ಒಂದು ಮುಖ್ಯ ಸೊಗಸು. ವರ್ಣನೆಯಲ್ಲೂ ಅಲಂಕಾರಗಳಲ್ಲೂ, ಪಂಚಕಲ್ಯಾಣ ನಿರೂಪಣೆಯಲ್ಲೂ, ಕಥಾ ಪ್ರತಿಪಾದನೆಯಲ್ಲೂ ಕಮಲಭವ ಕ್ಲುಪ್ತವಾಗಿದ್ದಾನೆ; ಅತಿ ಮಾಡಿಲ್ಲ, ಎಲ್ಲೆ ಮೀರಿಲ್ಲ. ಪೊನ್ನನಂತರ ಕನ್ನಡದಲ್ಲಿ ಬರೆದ ಎರಡನೆಯ ಶಾಂತಿನಾಥನ ಪುರಾಣವಾದರೂ ಅವನ ಸಮಕ್ಕೆ ನಿಲ್ಲುವ ಕೃತಿಯಾಗಿದೆಯೆಂದರೆ ಕವಿಗೆ ಸುಯೋಗ್ಯ ಪುರಸ್ಕಾರ ಸಂದಂತೆ.

'ಕಬ್ಬಿಗರ ಕಾವ'ವೆಂಬ ಕಾವ್ಯವನ್ನು ಬರೆದ ಆಂಡಯ್ಯನಿಗೆ (೧೨೩೫) ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಒಂದು ವಿಶಿಷ್ಟವಾದ ಸ್ಥಾನ ಏರ್ಪಟ್ಟಿದೆ. ಕೇವಲ ಸುಮಾರು ೨೫೨ ಪದ್ಯಗಳ ಈ ಪುಟ್ಟ ಚಂಪೂಕಾವ್ಯ ಕಳೆದ ಅರವತ್ತು ವರ್ಷಗಳ ಅವಧಿಯಲ್ಲಿ ನಾಲ್ಕು ಮುದ್ರಣ ಕಂಡಿದೆ. ಕಬ್ಬಿಗರ ಕಾವಕ್ಕೆ 'ಕಾವನಗೆಲ್ಲ', 'ಸಂಸ್ಕೃತ ಸಹೋದರಿ' ಎಂಬ ಹೆಸರುಗಳೂ ಇವೆ. ಆಂಡಯ್ಯ ಹೇಗೆ ಅರುಹಂಗಲ್ಲದೆ ಇತರರಿಗೆ ಎಜಗದ ನಿಷ್ಠನಾದ ಜೈನನೋ ಹಾಗೆ ಕನ್ನಡವಲ್ಲದೆ ಇತರ ಭಾಷೆಯಿರಲಿ, ಕಡೆಗೆ ಇತರ ಭಾಷೆಯ ಪದಗಳನ್ನೂ ಬಳಸದ ನಿಷ್ಠನಾದ ವೀರ ಕನ್ನಡಿಗ. ಅಚ್ಚಗನ್ನಡದ ಹುಚ್ಚು ಕೆಚ್ಚುಗಳಿಂದ ಬಲ್ಲಿದರೆಲ್ಲರ ಮೆಚ್ಚುಗೆಗೆ ಪಾತ್ರವಾದ 'ಕಬ್ಬಿಗರ ಕಾವ'ವೆಂಬ ಚಂಪೂಕಾವ್ಯ ಬರೆದಿದ್ದಾನೆ. ಇದರ ಮತ್ತೊಂದು ಸ್ವಾರಸ್ಯವೆಂದರೆ ಹಿಂದಿನ ಜೈನ ಕಾವ್ಯಗಳಂತೆ ಇದರಲ್ಲಿ ಯಾವ ಜಿನಕಥೆಯೂ ಇಲ್ಲದಿರುವುದು. ಕಬ್ಬಿಗರ ಕಾವದಲ್ಲಿ ಸೃಷ್ಟಿತತ್ವ ಹಾಗೂ ಮುಕ್ತಿತತ್ವಗಳು ಕಾವ್ಯತತ್ವದಲ್ಲಿ ಬೆರೆತುಹೋಗಿವೆ. ಆದರಿಂದಾಗಿ

ಜೈನಮುನಿಯ ವಿರಕ್ತಿ ಮತ್ತು ಶಿವನ ಗೆಲವಿನ ಜೊತೆಜೊತೆಯಲ್ಲೇ ಕಾಮನ ವಿಜಯಾಟ್ಟಹಾಸವೂ ಕೇಳಿಬರುತ್ತದೆ. ಆಂಡಯ್ಯನ ಸ್ವತಂತ್ರವಾದ, ಅದರಷ್ಟೇ ಉನ್ನತವಾದ ಕಾವ್ಯಶಕ್ತಿ ಅವನ ಏಕೈಕ ಕಿರುಕಾವ್ಯದಲ್ಲಿ ತಕ್ಕಪ್ರಮಾಣದಲ್ಲಿ ಅಭಿವ್ಯಕ್ತವಾಗಿದೆ.

ಮಹಾಬಲಕವಿ (೧೨೫೪) ಮತ್ತೆ ನೇಮಿನಾಥಪುರಾಣವನ್ನು ಕನ್ನಡದಲ್ಲಿ, ಚಂಪೂರೂಪದಲ್ಲಿ ಬರೆದ ಇನ್ನೊಬ್ಬಕವಿ. ೧೬ ಆಶ್ವಾಸಗಳ ಈ ಕಾವ್ಯ ತುಂಬ ಪ್ರೌಢವಾಗಿದ್ದು ದೇಸಿ ಮತ್ತು ಮಾರ್ಗಗಳ ಸಮನ್ವಯವನ್ನು ಸಾಕಷ್ಟು ಯಶಸ್ವಿಯಾಗಿ ಸಾಧಿಸಿದ ಉತ್ತಮ ಕಾವ್ಯ. ಚರ್ವಿತ ಚರ್ವಣವಾಗಬಹುದಾಗಿದ್ದ ನೇಮಿನಾಥ ಪುರಾಣ ಕಾವ್ಯದಲ್ಲಿ ಮಹಾಬಲಕವಿ ತನ್ನ ಸ್ವಂತಿಕೆಯನ್ನು ಸಾರಿದ್ದಾನೆ, ತನ್ನ ಹೆಸರನ್ನು ಸಾರ್ಥಕಪಡಿಸಿದ್ದಾನೆ. ಚೌಂಡರಸ (೧೩೦೦) ಎರಡು ಒಳ್ಳೆಯ ಚಂಪೂ ಕಾವ್ಯಗಳನ್ನು ಬರೆದಿದ್ದಾನೆ. ಸಂಸ್ಕೃತದಲ್ಲಿರುವ ದಂಡಿಯ ದಶಕುಮಾರ ಚರಿತೆಯನ್ನು 'ಅಭಿನವದಸಕುಮಾರ ಚರಿತೆ 'ಯೆಂಬ ಹೆಸರಿನಿಂದ ೧೪ ಆಶ್ವಾಸಗಳಲ್ಲಿ ಕನ್ನಡಿಸಿದ್ದಾನೆ. ಚೌಂಡರಸನ ಶೈಲಿಯಲ್ಲಿ ಲಾಲಿತ್ಯವಿದೆ. ಅವನ ಇನ್ನೊಂದು ಚಂಪೂಕೃತಿ ನಳಚರಿತ್ರೆ. ಇದರಲ್ಲಿ ಆಶ್ವಾಸಾನುಸಾರ ವಿಭಾಗವಿಲ್ಲ. ಕರ್ನಾಟವಂಶ ಶೃಂಗಾರರಸವೆಂಬ ಕವಿಯ ಆಶಯದ ಉಕ್ತಿ ಅವನ ಮನೋಧರ್ಮವನ್ನು ಸ್ಪಷ್ಟಪಡಿಸುತ್ತದಾದರೂ ಇಲ್ಲಿ ಕಟ್ಟರೆ ಯಾಗುವ ಶೃಂಗಾರಾಧಿಕ್ಯವಿಲ್ಲ. ಪ್ರಾಚೀನ ಕವಿಗಳ ಮಾನಸಪುತ್ರನಾಗಿ ಈ ಕವಿ ರಚಿಸಿದ್ದಾನೆ. ಇದೇ ಇವನ ಕಾವ್ಯಗಳ ಒಟ್ಟು ವಿಮರ್ಶೆಯ ಮುಖ್ಯ ಸೂತ್ರವಾಕ್ಯವೆನ್ನ ಬಹುದು.

ಕನ್ನಡದ ಜೈನ ಕಥಾಸಾಹಿತ್ಯದ ಶ್ರೇಣಿಗೆ ಸೇರಿದ ಮತ್ತೊಂದು ಚಂಪೂ ಕಾವ್ಯವೆಂದರೆ ನಾಗರಾಜ (೧೩೩೧) ಕವಿಯ ಪುಣ್ಯಾಸ್ರವ ಕಾವ್ಯ. ಸಗರದ ನಗರದವರ ಪ್ರಾರ್ಥನೆಯಂತೆ ನಾಗರಾಜಕವಿ ಪುಣ್ಯಾಸ್ರವವನ್ನು ಸಂಸ್ಕೃತದಿಂದ ೧೨ ಅಧಿಕಾರಗಳಲ್ಲಿ ಕನ್ನಡಕ್ಕೆ ಪರಿವರ್ತಿಸಿದ್ದಾನೆ. ಪುಣ್ಯಾಸ್ರವ ಶ್ರಾವಕಧರ್ಮದ ರೀತಿನೀತಿಗಳನ್ನು ನಿರೂಪಿಸುವ ೫೪ ಕಥೆಗಳ ಸಂಕಲನ ಕಾವ್ಯವೆಂದರೂ ಒಪ್ಪುತ್ತದೆ. ಇದರಲ್ಲಿ ಬರುವ ಕೆಲವು ಕಥೆಗಳಂತೂ ಓದುಗರ ಚಿತ್ತವನ್ನು ಸೂರೆಗೊಳ್ಳುತ್ತವೆ. ನಾಗರಾಜಕವಿಯ ಶೈಲಿ ಸುಪ್ರಸನ್ನವಾಗಿದೆ.

ಬಾಹುಬಲಿ ಪಂಡಿತನ (೧೩೫೨) ಧರ್ಮನಾಥಪುರಾಣ ೧೬ ಆಶ್ವಾಸಗಳ ಜೈನ ಪುರಾಣ. ೧೫ನೆಯ ತೀರ್ಥಂಕರನಾದ ಧರ್ಮನಾಥನ ಚರಿತೆಯೇ ಇದರ ವಸ್ತು. ಉಭಯ ಭಾಷಾಕವಿ ಚಕ್ರವರ್ತಿಯೆಂದು ತನ್ನನ್ನು ಕರೆದುಕೊಂಡಿರುವ ಬಾಹುಬಲಿ ಪಂಡಿತ ಕವಿಚಕ್ರವರ್ತಿಯಾಗದಿದ್ದರೂ ಉಭಯ ಭಾಷಾಪಂಡಿತನೆಂಬುದು ಮಾತ್ರ ಸತ್ಯ. ವೃತ್ತವಿಲಾಸ (೧೩೬೦) ಮತ್ತು ಮಧುರ (೧೩೮೫) ಈ ಶತಮಾನದ ಹಿರಿಯ ಚಂಪೂಕವಿಗಳು. ವೃತ್ತವಿಲಾಸನ ಧರ್ಮಪರೀಕ್ಷೆ ಮತ್ತು ಮಧುರನಧರ್ಮನಾಥಪುರಾಣ ಶ್ರೇಷ್ಠ ಚಂಪೂಕಾವ್ಯಗಳ ಶ್ರೇಣಿಗೆ ಸೇರಿದ ಉತ್ಕೃಷ್ಟ ಜೈನಕಾವ್ಯಗಳು.

ಅಮಿತಗತಿಯೆಂಬ ಕವಿ ಸಂಸ್ಕೃತದಲ್ಲಿ ರಚಿಸಿದ ಧರ್ಮಪರೀಕ್ಷೆಯನ್ನೇ ವೃತ್ತವಿಲಾಸ ಕನ್ನಡಕ್ಕೆ ತರ್ಜುಮೆಮಾಡಿದ್ದಾನೆ. ಹತ್ತು ಆಶ್ವಾಸಗಳ ಧರ್ಮಪರೀಕ್ಷೆಯ ಬರವಣಿಗೆ ಯಲ್ಲಿ ಕನ್ನಡದ ಬಳಕೆಯೇ ಹೆಚ್ಚು. ಸರಳವಾದ ತಿಳಿಗನ್ನಡದ ಮಾತುಗಳಿಂದ ಧರ್ಮಪರೀಕ್ಷೆ ಜಿನಧರ್ಮದ ಹಿರಿಮೆಯನ್ನು ಸಾರಿದೆ. ಮಧುರನ ಧರ್ಮನಾಥಪುರಾಣ ೧೫ನೆಯ ತೀರ್ಥಂಕರನಾದ ಧರ್ಮನಾಥನ ಚರಿತೆಯನ್ನು ಬಿಚ್ಚಳಿಸುವ ಮೇಲ್ಮಟ್ಟದ ಚಂಪೂಕಾವ್ಯ. ಮಧುರನಿಗೆ ಕನ್ನಡ ಕವಿಗಳ ಪಾಳಿಯಲ್ಲಿ ಪ್ರಮುಖ ಸ್ಥಾನವಿದೆ. ಚಂಪೂ ಸಾಹಿತ್ಯಪ್ರಕಾರ ಶಿಥಿಲಾವಸ್ಥೆಯಲ್ಲಿ ಪೇಚಾಡುತ್ತಿದ್ದಾಗ ಮಧುರ ಅದಕ್ಕೆ ಮತ್ತೆ ಮೊದಲಿನ ಮೋಹಕತೆಯನ್ನೂ, ಜೀವಕಳೆಯನ್ನೂ ತುಂಬಿ ಸಚೇತನಗೊಳಿಸಲೆತ್ನಿಸಿದನು. ಮಧುರ ಎಲ್ಲ ರೀತಿಯಿಂದಲೂ ಹಿಂದಿನ ಹಿರಿಯ ಚಂಪೂಕವಿಗಳ ಸಾಲಿಗೆ ಸೇರುತ್ತಾನೆ. ಅವನ ಕಾವ್ಯ ಉತ್ಕೃಷ್ಟವಾಗಿದೆ. ಮಧುರ ಶಾಸನಕವಿಯೂ ಆಗಿದ್ದಾನೆ. ಜೊತೆಗೆ ಆತ ಸಾಹಸಿಯೂ ಹೌದು. ಹೀಗೆ ಕಲಿಯಾಗಿ, ಕವಿಯಾಗಿ, ಶಾಸನ ಕವಿಯಾಗಿ ಮಧುರ ವಿಶಿಷ್ಟಸ್ಥಾನಕ್ಕೆ ಅರ್ಹನಾಗಿದ್ದಾನೆ.

೧೪ನೆಯ ಶತಮಾನದ ತರುವಾಯ ಚಂಪೂ ಕಾವ್ಯಗಳು ಕಡಮೆಯಾಗತೊಡಗಿ ಕ್ರಮೇಣ ತನ್ನ ಅಂತಃಸತ್ವವನ್ನು ಕಳೆದುಕೊಂಡು ಕರಗಿಹೋಗಲಾರಂಭಿಸಿದುವು. ಚಂಪೂ ಕಾವ್ಯ ಪರಂಪರೆಯಲ್ಲಿ, ಒಂದು ದೃಷ್ಟಿಯಿಂದ ಮೊದಲನೆಯ ಗುಣವರ್ಮನೇ ಪ್ರಾರಂಭ ಪುರುಷ, ಮಧುರನೇ ಅದರ ಎಲ್ಲೆಯ ಗಡಿಗಲ್ಲು. ಅವನ ಅನಂತರ ಚಂಪೂ ಕಾವ್ಯಗಳು ಹುಟ್ಟಲೇ ಇಲ್ಲವೆಂದು ಇದರ ಅರ್ಥವಲ್ಲ. ಆದರೆ ಮಧುರನಾದ ಮೇಲೆ ಬಂದ ಚಂಪೂಕಾವ್ಯಗಳೆಲ್ಲ ಅಲ್ಲೊಂದು ಇಲ್ಲೊಂದು ಕಾಮನ ಬಿಲ್ಲಿನಂತೆ ಕಮನೀಯವಾಗಿ ಕಂಗೊಳಸಿ ಕಣ್ಮರೆಯಾಗುತ್ತವೆ. ಇದಕ್ಕೆ ಹಲವು ಕಾರಣಗಳಿವೆ. ಅವುಗಳಲ್ಲಿ ಚಂಪೂ ಕಾವ್ಯರಚನೆಗೆ ಅವಶ್ಯ ಬೇಕಾದ ಸಿದ್ಧತೆ, ವ್ಯುತ್ಪತ್ತಿ, ಕಾವ್ಯಾಭ್ಯಾಸ ಶ್ರಮ—ಇವು ತಪ್ಪಿಹೋದುದೂ, ಉಳಿದ ಛಂದಸ್ಸಿನ ರೂಪಗಳು ತಲೆದೋರಿದುದೂ, ಜನತೆಯಲ್ಲಿ ಅದರ ಬಗೆಗೆ ಇದ್ದ ಆದರ ಮಾನ್ಯತೆ ತಗ್ಗಿದುದೂ ಕೆಲವು ಮುಖ್ಯ ಕಾರಣಗಳು. ವಿಶೇಷವಾಗಿ ಷಟ್ಪದಿ ಮತ್ತು ಸಾಂಗತ್ಯ ಬಹಳ ಬೇಗ (ಕವಿ) ಜನ ಪ್ರಿಯವಾದ ಛಂದಸ್ಸಾದುದು ಚಂಪೂರೂಪ ಮೂಲೆಗುಂಪಾಗಲು ಕಾರಣವಾಯಿತು. ಇಲ್ಲಿಂದೀಚೆಗೆ ಸೃಷ್ಟಿಯಾಗತೊಡಗಿದ ಕಾವ್ಯಗಳಲ್ಲಿ ಛಂದಸ್ಸಿನ ಮಾಧ್ಯಮ ಚಂಪೂವಿ ನಿಂದ ಷಟ್ಪದಿಗೆ, ಷಟ್ಪದಿಯಿಂದ ಸಾಂಗತ್ಯಕ್ಕೆ, ಸಾಂಗತ್ಯದಿಂದ ಸ್ವಚ್ಛಂದ ಛಂದದತ್ತ ಪರಿವರ್ತನೆಯಾಯಿತು.

೧೫ನೆಯ ಶತಮಾನದ ಅನಂತರದ ಚಂಪೂ ಕವಿಗಳಲ್ಲಿ ಸುರಂಗ ಕವಿ (೧೫೦೦), ತಿರುಮಲಾರ್ಯ (೧೬೪೫–೧೭೦೬), ಷಡಕ್ಷರದೇವ (೧೬೫೦), ಚಿಕುಪಾಧ್ಯಾಯ (೧೬೭೨), ತಿಮ್ಮಕವಿ (೧೬೭೭), ಮತ್ತು ಅಳಿಯ ಲಿಂಗರಾಜ (೧೮೨೩–೧೮೭೪)- ಇವರು ಪ್ರಧಾನರು. ಸುರಂಗಕವಿ ೬೩ ಜನ ಪುರಾತನರಾದ ಶಿವಭಕ್ತರ ಚರಿತೆಯನ್ನು ೬೩ ಆಶ್ವಾಸಗಳಲ್ಲಿ ಬರೆದಿದ್ದಾನೆ. ಚಿಕುಪಾಧ್ಯಾಯ ಸುಮಾರು ಆರು ಚಂಪೂಕಾವ್ಯ

ಗಳನ್ನು ಬರೆದು ಸಂಖ್ಯೆಯಲ್ಲಿ ಸಮೃದ್ಧ ಸಾಹಿತ್ಯ ಸೃಷ್ಟಿಸಿದ ಸಮರ್ಥ ಕವಿ. ಅದರಲ್ಲಿಯೂ ೩೨ ಆಶ್ವಾಸಗಳ ವಿಷ್ಣುಪುರಾಣ ಪ್ರೌಢವೂ, ಎಂದಿನಂತೆ ಸಂಸ್ಕೃತ ಪದಭೂಯಿಷ್ಠವೂ ಆದ ಸನೆದ ಚಂಪೂಕಾವ್ಯ. ತಿಮ್ಮಕವಿಯೂ ಮೂರು ಮಹಾತ್ಮೆಗಳನ್ನು ಚಂಪೂ ಪ್ರಣಾಳಿಕೆಯಲ್ಲಿ ಪ್ರವಹಿಸಿದ್ದಾನೆ. ಷಡಕ್ಷರದೇವ ಮಾತ್ರ ಹಿಂದಿನ ಚಂಪೂಕಾವ್ಯಗಳನ್ನು ದಕ್ಷತೆಯಿಂದ ಪುನರುಜ್ಜೀವಿಸಲೆತ್ನಿಸಿದ ಪಂಡಿತ ಕವಿ. ಅವನ ರಾಜಶೇಖರ ವಿಲಾಸ, ಬಸವರಾಜ ವಿಜಯ ಮತ್ತು ಶಬರಶಂಕರ ವಿಲಾಸ–ಈ ಮೂರು ಚಂಪೂಕಾವ್ಯಗಳನ್ನು ಓದುತ್ತಿದ್ದರೆ ಹಳೆಯ ಚಂಪೂಕಾವ್ಯಗಳ ನಂದನವನದಲ್ಲೇ ವಿಹರಿಸಿದ ಅನುಭವ ಆನಂದ ಆಗುತ್ತದೆ. ಆದರೆ ಕವಿ ಉಭಯ ಭಾಷಾವಿಶಾರದನಾದುದರಿಂದ ಕನ್ನಡಕ್ಕಿಂತಲೂ ಸಂಸ್ಕೃತದ ಮೇಲೇ ಅವನ ಆದರಾಭಿಮಾನಗಳು ವ್ಯಕ್ತವಾಗಿವೆ. ಅದರ ಫಲವಾಗಿ ಮೂರೂ ಕಾವ್ಯಗಳಲ್ಲಿ ಪಾಂಡಿತ್ಯದ ಪೆಡಸು ತಲೆದೋರಿದೆ. ಅಗ್ಗಳ, ರುದ್ರಭಟ್ಟ, ಷಡಕ್ಷರದೇವ–ಇವರು ಕನ್ನಡ ಕವಿಗಳಲ್ಲಿ ಪಂಡಿತ ತ್ರಯರು. ರಾಜಶೇಖರ ವಿಲಾಸದಲ್ಲಿ ಬರುವ ಶಿರುಕೊಳವಿನಾಚಿಯ ಪುತ್ರಶೋಕ ಪ್ರಕರಣದಲ್ಲಿ ಕವಿ ಕರುಣಾರಸದ ಕೋಡಿ ಹರಿಸಿದ್ದಾನೆ. ೧೭, ೧೮ನೆಯ ಶತಮಾನದ ಅನಂತರವೂ ಒಮ್ಮೊಮ್ಮೆ ಚಂಪೂಕಾವ್ಯ ಕಾಣಿಸಿಕೊಳ್ಳುತ್ತಿರುತ್ತದೆ. ಆದರೆ ಅಕಾಲ ಫಲದಂತೆ ಕೇವಲ ಕುತೂಹಲಕಾರಿಯಾಗಿದೆ.

ಇದಿಷ್ಟೂ ಗ್ರಂಥರೂಪದ ಚಂಪೂಸಾಹಿತ್ಯದ ಸಂಗ್ರಹ ಸಮೀಕ್ಷೆ. ಇದಲ್ಲದೆ ಶಾಸನಗಳಲ್ಲೂ ಚಂಪೂಕಾವ್ಯ ರಚಿತವಾಗಿರುವುದನ್ನು ಮರೆಯುವಂತಿಲ್ಲ. ನಾನು ಕಂಡಂತೆ ಸುಮಾರು ಮುವ್ವತ್ತು ಚಿಲುವಾದ ಚಂಪೂ ಶಾಸನಗಳಿವೆ. ಇವುಗಳಲ್ಲಿ ಮುಖ್ಯವಾದ ಕೆಲವು ಶಾಸನ ಚಂಪೂ ಸಾಹಿತ್ಯವನ್ನು ಇಲ್ಲಿ ಉಲ್ಲೇಖಿಸಬಹುದು. ರಾಷ್ಟ್ರಕೂಟ ದೊರೆಯಾದ ಗೊಜ್ಜಿಗ ಅಥವಾ ನಾಲ್ಕನೆಯ ಗೋವಿಂದನ (೯೧೮–೯೩೩) ಆಳಿಕೆಯ ಕಾಲದಲ್ಲಿ ರಚಿತವಾದ ಕವಿರಾಜರಾಜ (೯೩೦)ನ ಧಾರ್ವಾಡ ಜಿಲ್ಲೆಯ ಕಳಸದ ಶಾಸನ; ಚಾಳುಕ್ಯರಾಜ ನೂರ್ಮಡಿ ತೈಲಪನ (೯೭೩–೯೯೭) ಆಳಿಕೆಯಲ್ಲಿ ರಚಿತವಾದ ಬೆಳಗಾಂ ಜಿಲ್ಲೆಯ ಸೊಗಲ್ ಎಂಬ ಗ್ರಾಮದಲ್ಲಿರುವ ಕಮಳಾದಿತ್ಯ (೯೭೮) ಕವಿಯ ಶಾಸನ; ಧಾರವಾಡ ಜಿಲ್ಲೆ ಹಾವೇರಿ ತಾಲ್ಲೂಕು ಕಳ್ಳಿಹಾಳು ಗ್ರಾಮದಲ್ಲಿರುವ ಕವಿ ಕಂದರ್ಪ (೧೦೧೯)ನ ಶಾಸನ; ಹೆಗ್ಗಡದೇವನಕೋಟೆಯಲ್ಲಿರುವ ೧೮ನೆಯ ಸಂಖ್ಯೆಯ ಕವಿಮಲ್ಲ (೧೦೫೭)ನ ಶಾಸನ; ಚಾಳುಕ್ಯ ವಿಕ್ರಮಾದಿತ್ಯನ (೧೦೭೬–೧೧೨೬) ಸಾಮಂತ ಗಂಗಪೆರ್ಮಾನಡಿಯ ದಾನವಿವರ ತಿಳಿಸುವ ದಾಮರಾಜ ಕವಿ (೧೦೮೫) ರಚಿತ ಶಿವಮೊಗ್ಗ ೧೦ನೆಯ ಶಾಸನ; ಧಾರವಾಡ ಜಿಲ್ಲೆಯ ಗದಗು ತಾಲ್ಲೂಕಿಗೆ ಸೇರಿದ ಸೊರಟೂರು ಗ್ರಾಮದಲ್ಲಿ ದೊರೆತ ಮಾಧವಭಟ್ಟ (೧೦೯೧) ಕವಿಯ ಶಾಸನ; ಬೆಳಗಾಂ ಜಿಲ್ಲೆಯ ಸೌಂದತ್ತಿ ತಾಲ್ಲೂಕು ಸಿರಿಸಂಗಿಯ ಕಾಳಮ್ಮನ ಗುಡಿಯ ಶಾಸನ ಮತ್ತು ಕೊಪ್ಪಳ ಜಿಲ್ಲೆಯ ಕುಕನೂರಿನ ಮಲ್ಲಿಕಾರ್ಜುನ ಗುಡಿಯ ಶಾಸನಗಳನ್ನು ಬರೆದ ಕವಿ ಸಜ್ಜನ ತಿಳಿಕನ ಎರಡು ಶಾಸನಗಳು; ಹೀಗೆಯೇ

ಬಾಲಚಂದ್ರ ಕವಿ ಕಂದರ್ಪನ(೧೨೦೪)ಶಾಸನ, ಮಾದಿರಾಜಕವಿಯ (೧೨೨೯) ಎರಡು ಶಾಸನಗಳು, ಮಧುರ (೧೪೧೦)ನ ಹಂಪೆಯ ಶಾಸನ—ಇವು ಸೊಗಸಾದ ಕೆಲವು ಚಂಪೂ ಶಾಸನ ಕಾವ್ಯಗಳು. ಇವುಗಳಲ್ಲಿ ಮಧುರನ ಶಾಸನವೇ ಕನ್ನಡದಲ್ಲಿ ಇಂದು ದೊರೆಯುವ ಕಟ್ಟಕಡೆಯ (South Indian Inscriptions, Volume IV, 267) ಚಂಪೂ ಶಾಸನ. ಅವನ ಅನಂತರ ಚಂಪೂಶಾಸನ ನಮಗೆ ಸಿಗುವುದಿಲ್ಲ. ಹೀಗಾಗಿ ಅವನ ಸೊಗಸಾದ ಹಂಪೆಯ ಶಾಸನ ಚಂಪೂಸಾಹಿತ್ಯದ ವೈಭವ ಅಲ್ಲಿಗೆ ಮುಗಿಯಿತೆಂದು ಸಾರುವ ಚರಮಗೀತೆಯಾಗಿದೆ. ಮೇಲೆ ಹೆಸರಿಸಿರುವ ಚಂಪೂಶಾಸನಗಳಲ್ಲಿ ದೊರೆಯುವ ಕಾವ್ಯ ಕೆಲವೊಮ್ಮೆ ಎಷ್ಟೋ ಚಂಪೂ ಗ್ರಂಥಗಳಲ್ಲೂ ಸಿಗದ ಕಾವ್ಯಸಂಪತ್ತು ನಿಕ್ಷೇಪ ದಂತೆ ಅಂತರ್ನಿಹಿತವಾಗಿದೆ.

ಕನ್ನಡ ಸಾಹಿತ್ಯ ಸಾಮ್ರಾಜ್ಯವನ್ನು ಚಂಪೂ ಕಾವ್ಯಗಳು ಅವಿಚ್ಛಿನ್ನವಾಗಿ, ದೊರೆತ ಆಧಾರಗಳಷ್ಟರಿಂದಲೇ ಹೇಳುವುದಾದರೆ, ಸುಮಾರು ನಾಲ್ಕುನೂರು ವರ್ಷಗಳ ತನಕ ಅಬಾಧಿತವಾಗಿ ಆಳಿದುದು ಸಾಹಿತ್ಯಾವಲೋಕನದಿಂದ ಸ್ಪಷ್ಟವಾಗುತ್ತದೆ. ಅಷ್ಟೇ ಅಲ್ಲದೆ ಕನ್ನಡ ಸಾಹಿತ್ಯದ ಹಿರಿಮೆಗರಿಮೆಗಳ ಬಹುಭಾಗ ಚಂಪೂಸಾಹಿತ್ಯ ದಲ್ಲಿದೆ. ಇದರಲ್ಲಿ ಭಿನ್ನಾಭಿಪ್ರಾಯಕ್ಕಾಗಲಿ, ಸಂಶಯಕ್ಕಾಗಲಿ ಎಡೆಯಿಲ್ಲ. ಹಳಗನ್ನಡದ ಕಾವ್ಯಗಳೆಲ್ಲ ವಿಶೇಷವಾಗಿ ಚಂಪೂರೂಪದಲ್ಲೇ ಇವೆ. ಸಂಸ್ಕೃತ, ಪ್ರಾಕೃತ ಮತ್ತು ದೇಶ್ಯ ಸಂಪತ್ತೆಲ್ಲ ಕನ್ನಡದಲ್ಲಿ ಚಂಪೂಕಾಲುವೆಯಲ್ಲಿ ಪ್ರವಹಿಸಿದೆ. ಜೈನರೂ ವೀರಶೈವರೂ ಬ್ರಾಹ್ಮಣರೂ ಚಂಪೂ ಕಾವ್ಯನಿರ್ಮಾಣದಲ್ಲಿ ತೊಡಗಿದರಾದರೂ ಜಿನ ಸಮಯ ದೀಪಕರು ಚಂಪೂಲೋಕದ ಸೀಮಾಪುರುಷರು. ಕನ್ನಡ ಕಾವ್ಯಕನ್ನಿಕೆ ತನ್ನೆಲ್ಲ ವಿಲಾಸ ವಿಭ್ರಮ ಒನಪು ಒಯ್ಯಾರ ಹಾಗೂ ಚೆಲವುಗಳನ್ನು ಚಂಪೂ ವೇದಿಕೆಯ ಮೇಲೆ ಪ್ರದರ್ಶಿಸಿದ್ದಾಳೆ.

ತಿರುಮಲಾರ್ಯ ಕವಿ ತನ್ನ 'ಅಪ್ರತಿಮ ವೀರಚರಿತೆ'ಯಲ್ಲಿ ಚಂಪೂವನ್ನು ಕುರಿತು 'ಇದರ್ಕೆ ವಸ್ತುಕಮೆಂದುಂ ಚಂಪುವೆಂದುಂ ಪೆಸರ್' ಎಂದು ಹೇಳಿದ್ದಾನೆ. ಚಂಪೂ ವಸ್ತುಕ ಕಾವ್ಯ, ವರ್ಣಕ ಕಾವ್ಯವಲ್ಲ. ಈ ಸಾಹಿತ್ಯದ ಮೂಲವೆಲ್ಲಿ ಅಥವಾ ಯಾವುದು?—ಎಂಬ ವಿಚಾರದಲ್ಲಿ ಸಂಶೋಧನೆ ಅಗತ್ಯ. ಸಂಸ್ಕೃತದಲ್ಲಿ ಪ್ರಚಾರ ದಲ್ಲಿದ್ದ ಚಂಪೂಕಾವ್ಯಗಳನ್ನು ಅನುಸರಿಸಿ ಕನ್ನಡದಲ್ಲಿ ಚಂಪೂಕಾವ್ಯಗಳು ಹುಟ್ಟಿ ದುವು—ಎಂದು ಸುಲಭವಾಗಿ ಹೇಳಿಬಿಡಬಹುದು. ಆದರೆ ಹಾಗೆ ಹೇಳಿದರೆ ಅದು ವಸ್ತುಸ್ಥಿತಿಯನ್ನು ಅರಿಯದವರು ಆಡಿದ ಆತುರದ ಮಾತಾಗುತ್ತದೆ. ವಾಸ್ತವವಾಗಿ ಇದರ ವಿಪರೀತಸ್ಥಿತಿ ಸತ್ಯವಾಗಿ ಪರಿಣಮಿಸಿದೆ. ಸಂಸ್ಕೃತ ಭಾಷೆಯಲ್ಲಿ ಅದರ ಪ್ರಾಚೀನತೆಯ ದೃಷ್ಟಿಯಿಂದ ಸಮೀಕ್ಷಿಸಿದಾಗ ಚಂಪೂಕಾವ್ಯ ಪದ್ಧತಿ ತಲೆದೋರಿದ್ದು ತುಂಬ ತಡವಾಗಿ. ಅಲ್ಲಿ ಅದು ಏನಿದ್ದರೂ ಹತ್ತನೆಯ ಶತಮಾನದ ಅನಂತರ ಕಾಣಿಸಿ ಕೊಂಡ ಸಾಹಿತ್ಯಪ್ರಕಾರ. ಅದಕ್ಕೂ ಹಿಂದಿನ ಹಳೆಯ ಚಂಪೂಕಾವ್ಯಗಳು ಉಪಲಬ್ಧ ವಿಲ್ಲ, ಇಲ್ಲವೇ ಇದ್ದಿತೆಂಬುದಕ್ಕೆ ಸಬಲ ಆಧಾರಗಳೂ ಇಲ್ಲ. ದೊರೆತ ಕಾವ್ಯಗಳಲ್ಲಿ

ದೊರೆಯುದ ಹಳೆಯ ಸಂಸ್ಕೃತ ಚಂಪೂಕಾವ್ಯಗಳ ಉಲ್ಲೇಖವೂ ಇಲ್ಲ. ಇವೆಲ್ಲ ಚಂಪೂವಿನ ಮೂಲ ಸಂಸ್ಕೃತೇತರವೇ ?—ಎಂದು ಶಂಕಿಸಲು, ಸಾಧಿಸಲು ಸಹಾಯಕವಾಗಿವೆ. ಡಾ. ಎ. ಬಿ. ಕೀತ್, ಎಂ. ಕೃಷ್ಣಮಾಚಾರ್ಯ ಮುಂತಾದ ಸಂಸ್ಕೃತ ವಿದ್ವಾಂಸರೇ ಚಂಪೂವಿನ ಮೂಲ ಹಾಗೂ ಅದರ ಉದಯದ ವಿಷಯದಲ್ಲಿ ಸಂದೇಹ ವ್ಯಕ್ತಪಡಿಸಿದ್ದಾರೆ. ಇಲ್ಲಿ ಮತ್ತೊಂದು ಸ್ವಾರಸ್ಯವಿದೆ. ಉಪಲಬ್ಧವಾಗಿರುವ ಸಂಸ್ಕೃತ ಚಂಪೂಕಾವ್ಯಗಳೂ ಬಹುತೇಕ ದಕ್ಷಿಣದಲ್ಲೇ, ಅದೂ ಕನ್ನಡನಾಡಿನಲ್ಲೇ ರಚಿತವಾದುವೆಂಬುದನ್ನು ಅವಶ್ಯ ಅವಲೋಕಿಸಬೇಕು.

ಸಂಸ್ಕೃತಭಾಷೆ ಮತ್ತು ಸಾಹಿತ್ಯಗಳಿಂದ ಕನ್ನಡಭಾಷೆ ಮತ್ತು ಸಾಹಿತ್ಯ ಸ್ಫೂರ್ತಿಪಡೆದು ಸಮೃದ್ಧವಾಗಿ ತೋರಹಾರವಾಗಿ ಮೆರಗು ಪಡೆಯಿತೆಂಬುದು ಶತಸ್ಸಿದ್ಧ ಸಂಗತಿ. ಇದರಲ್ಲಿ ಅನುಮಾನಕ್ಕೆ ಅವಕಾಶವಿಲ್ಲ. ಅಂದಮಾತ್ರಕ್ಕೆ ಕನ್ನಡಕ್ಕೆ ತನ್ನತನವೇ ಇಲ್ಲ, ತನ್ನದೆಂಬುವೇ ಇಲ್ಲವೆಂದು ತಿಳಿಯಲಾಗದು, ತಿಳಿಯಬಾರದು. ಸಂಸ್ಕೃತ ಸಾಹಿತ್ಯದ ಅನುವಾದ, ಅನುಸರಣೆ, ಅನುಕರಣೆ, ಆದರ್ಶಗಳಿಂದ ಕನ್ನಡ ಕಸುವು ಪಡೆದಂತೆಲ್ಲಾ ಮೊದಲೇ ಕನ್ನಡದಲ್ಲಿ ಇದ್ದ ಸಂಪತ್ತು ಮತ್ತೂ ಹೆಚ್ಚುತೊಡಗಿತೆಂಬುದು ಸತ್ಯಕ್ಕೆ ಸಮೀಪವಾದ ಮಾತು. ಆದರೆ ಅಷ್ಟೇ ನಿಜ, ಸಂಸ್ಕೃತವೂ ಕನ್ನಡದಿಂದ ಅಲ್ಪಸ್ವಲ್ಪವಾದರೂ ಪ್ರಭಾವಿತವಾಗಿರುವುದು.

ಸಂಸ್ಕೃತ ಭಾಷೆ ಹಾಗೂ ಸಾಹಿತ್ಯ ಬಹಳ ಹಳೆಯವು. ಭಾರತದಲ್ಲೇ ಅತ್ಯಂತ ಪ್ರಾಚೀನ ಭಾಷಾಪರಿವಾರವೆಂದರೆ ದ್ರಾವಿಡ, ಮುಂಡಾ, ಮತ್ತು ಆರ್ಯವರ್ಗ. ಇವುಗಳಲ್ಲಿ ಆರ್ಯವರ್ಗದ ನಾಯಕರತ್ನವಾದ ಸಂಸ್ಕೃತ ಭಾಷೆಯ ಉಲ್ಲೇಖಗಳೂ, ಸಾಹಿತ್ಯ ಕೃತಿಗಳೂ ತುಂಬ ಹಿಂದಿನಿಂದಲೂ ದೊರೆತಿವೆ. ಅವುಗಳಲ್ಲಿ ಕ್ರಿಸ್ತಪೂರ್ವದ ವೇದಗಳು, ಕ್ರಿ.ಶ.ದ ಆರಂಭ ಶತಮಾನಗಳ ರಾಮಾಯಣ ಮಹಾಭಾರತಗಳೂ, ಅಶ್ವಘೋಷ ಭಾಸ ಭವಭೂತಿಗಳ ನಾಟಕಗಳೂ, ಕಾಳಿದಾಸಾದಿಗಳ ಕಾವ್ಯಗಳೂ ಸಂಸ್ಕೃತದ ಸಾಹಿತ್ಯಸಂಪತ್ತನ್ನು ಕನ್ನಡಿಸುತ್ತವೆ. ಆದರೆ ಚಂಪೂಕೃತಿಗಳು ಸಂಸ್ಕೃತದಲ್ಲಿ ಯಾವ ಕಾಲದಿಂದ ದೊರೆತಿವೆಯೆಂಬುದನ್ನು ನೋಡಿದರೆ ಅದರ ಪ್ರಾಚೀನತೆಯೆಲ್ಲ ಕೇವಲ ಅರ್ವಾಚೀನತೆಯೇ ಆಗಿದೆ. ಗದ್ಯಪದ್ಯ ಮಿಶ್ರಣ ಜಾತಕಕಥೆಗಳಲ್ಲಿ ಒಂದಾದ ಆರ್ಯಶೂರನ 'ಜಾತಕಮಾಲಾ' ಎಂಬ ಗ್ರಂಥದಲ್ಲೂ, ಹರಿಷೇಣನೇ ಮೊದಲಾದ ಕೆಲವು ಸಂಸ್ಕೃತ ಕವಿಗಳ ಶಾಸನಗಳಲ್ಲೂ, ಪುರಾಣಾಂತರಗಳಲ್ಲೂ ಕಂಡುಬರುತ್ತದೆಂಬುದು ನಿಜ. ಆದರೆ ಇವೆಲ್ಲ ಚಂಪೂಕಾವ್ಯವೆಂಬ ಹೆಸರಿಗೆ ಪಾತ್ರವಾದುವಲ್ಲ. ಅಲ್ಲದೆ ಇವೂ ಕೂಡ ಅಷ್ಟೇನೂ ತೀರ ಪ್ರಾಚೀನವಾದುವೂ ಅಲ್ಲ.

ವಾಸ್ತವವಾಗಿ ಸಂಸ್ಕೃತ ಸಾಹಿತ್ಯದಲ್ಲೇ ಚಂಪೂಕಾವ್ಯವೆಂಬ ಹೆಸರಿಗೆ ಪಾತ್ರವಾದ ಮೊಟ್ಟಮೊದಲನೆಯ ಕಾವ್ಯವೆಂದರೆ ತ್ರಿವಿಕ್ರಮಭಟ್ಟನ ದಮಯಂತೀ ಕಥಾ ಎಂಬುದು. ಇದಕ್ಕೆ ನಲಚಂಪೂ ಎಂಬ ಹೆಸರೂ ಇದೆ, ಮತ್ತು ನಲಚಂಪೂ ಎಂಬ ಹೆಸರಿನಿಂದಲೇ ಅದು ಖ್ಯಾತಿಪಡೆದಿರುವುದು. ತ್ರಿವಿಕ್ರಮಭಟ್ಟ, ರಾಷ್ಟ್ರಕೂಟರ

ಮೂರನೆಯ ಇಂದ್ರ(೯೧೪–೯೧೬)ನ ಆಶ್ರಯದಲ್ಲಿ ಈ ಚಂಪೂಕಾವ್ಯ ರಚಿಸಿದ ನೆಂಬುದನ್ನು ಗಮನಿಸಬೇಕು. ಇದೇ ಕಾಲದಲ್ಲಿ ರಾಷ್ಟ್ರಕೂಟ ಚಕ್ರವರ್ತಿ ಮುಮ್ಮಡಿ ಕೃಷ್ಣನ ಸಾಮಂತ ದೊರೆ ಎರಡನೆಯ ಅರಿಕೇಸರಿಯ ಆಸ್ಥಾನದಲ್ಲಿ ಪಂಪ ಕನ್ನಡದಲ್ಲಿ ಬರೆದರೆ, ಸೋಮದೇವನೆಂಬ ಕವಿ ಸಂಸ್ಕೃತದಲ್ಲಿ 'ಯಶಸ್ತಿಲಕ ಚಂಪೂ' (೯೫೯) ಬರೆದ. ಇದೇ ಅವಧಿಯ ಹರಿಚಂದ್ರನ ಜೀವಂಧರ ಚಂಪೂ ಕೂಡ ಕನ್ನಡ ಕಾವ್ಯಗಳಿಗೆ ಸದೃಶವಾದದು. ಅಂತೂ ನಲಚಂಪುವೇ ಪ್ರಥಮ ಸಂಸ್ಕೃತ ಚಂಪೂಕಾವ್ಯ: 'ನಲಚಂಪುರೇವ ಸರ್ವವಿದ್ವಜ್ಜನಾನುಮತಾ ಸರ್ವಪ್ರಥಮಾ ಚಂಪೂರ್ಮಂತವ್ಯಾ' ಎಂದು ಅದರ ಸಂಪಾದಕರೇ ವಿಜ್ಞಾಪಿಸಿದ್ದಾರೆ. ಅದರ ಅನಂತರ ರಾಮಾಯಣ ಚಂಪು, ಭಾರತ ಚಂಪು ಮುಂತಾದ ಸಂಸ್ಕೃತ ಚಂಪೂಕೃತಿಗಳು ರಚಿತವಾಗಿವೆ. ಆದರೂ ಸಂಸ್ಕೃತದಲ್ಲಿ ರಚಿತವಾಗಿರುವ ಒಟ್ಟು ಚಂಪೂಕಾವ್ಯಗಳು ಕನ್ನಡದಲ್ಲಿರುವ ಚಂಪೂಕಾವ್ಯಗಳ ಅರ್ಧ ಸಂಖ್ಯೆಗೂ ಕಡಮೆಯಾಗಿವೆ. ಅಲ್ಲದೆ ಸಂಸ್ಕೃತದಲ್ಲಿ ಚಂಪೂಕಾವ್ಯಗಳು ಜನಪ್ರಿಯವಾಗಲಿಲ್ಲ. ಅಲ್ಲಿ ಏನಿದ್ದರೂ ಕೇವಲ ಪದ್ಯಕಾವ್ಯಗಳು ಇಲ್ಲವೇ ಕೇವಲ ಗದ್ಯಕಾವ್ಯಗಳಿಗೇ ಪ್ರಾಧಾನ್ಯ. ಇದಕ್ಕೆ ಕಾರಣವಾದರೂ ಏನು? ಎಂದು ಸಮಗ್ರವಾಗಿ ಪರಿಶೀಲಿಸಿ ಪರಿಭಾವಿಸಿದರೆ, ಚಂಪೂ ಸಂಪ್ರದಾಯ ಸಂಸ್ಕೃತಕ್ಕೆ ಹೊಸದು, ಹೊರಗಿನದು, ಅದು ಅವರಿಗೆ ಒಗ್ಗಲಿಲ್ಲ–ಎಂಬ ವಿಷಯ ನಿಚ್ಚಳವಾಗುತ್ತದೆ.

ಹಾಗಾದರೆ 'ಚಂಪೂ' ಆರಂಭವಾದುದು, ಭಾರತದ ಯಾವ ಭಾಗದಲ್ಲಿ? ಯಾವ ಭಾಷೆಯಲ್ಲಿ? ಅದರ ಮೂಲ ಚೂಲಗಳೆಲ್ಲಿ?–ಎಂಬ ಪ್ರಶ್ನೆಗಳು ಮೂಡುತ್ತವೆ. ಕನ್ನಡ ಸಾಹಿತ್ಯದ ಇತಿಹಾಸವೇ ಇದಕ್ಕೆ ತಕ್ಕ ಉತ್ತರ. ಚಂಪೂ ಪದದ ಪ್ರಯೋಗ ಮತ್ತು ವಿವರಣೆ ಬರುವ ಗ್ರಂಥಗಳಲ್ಲಿ ಕ್ರಿ.ಶ. ೭ನೆಯ ಶತಮಾನದ ಅಗ್ನಿಪುರಾಣ ಮೊದಲನೆಯದೆಂದು ತೋರುತ್ತದೆ. ಅದರಲ್ಲಿ 'ಮಿಶ್ರಂ ಚಂಪುರಿತಿ ಖ್ಯಾತಂ' ಎಂಬ ಮಾತಿದೆ. ಅನಂತರ ದಂಡಿ ತನ್ನ ಕಾವ್ಯಾದರ್ಶದಲ್ಲಿ ಹೀಗೆ ಹೇಳಿದ್ದಾನೆ:

> ಪದ್ಯಂ ಗದ್ಯಂ ಚ ಮಿಶ್ರಂ ಚ ತತ್ ತ್ರಿಧೈವ ವ್ಯವಸ್ಥಿತಮ್ । ೧–೧೧
> ಮಿಶ್ರಾಣಿ ನಾಟಕಾದೀನಿ ತೇಷಾಮನ್ಯತ್ರ ವಿಸ್ತರಃ ।
> ಗದ್ಯಪದ್ಯಮಯೀ ಕಾಚಿಚ್ಚಂಪೂರಿತ್ಯಭಿಧೀಯತೇ ॥ ೧–೩೧

ದಂಡಿ ಕಂಡ ಚಂಪೂಕಾವ್ಯಗಳು ಯಾವುವು? ಅವು ಸಂಸ್ಕೃತದಲ್ಲಿದ್ದುವೆ? ಅಥವಾ ಕನ್ನಡದಲ್ಲಿದ್ದುವೆ? ಎಂಬ ಪ್ರಶ್ನೆಗೆ ಉತ್ತರ ಹೇಳುವುದು ಕಠಿಣವಾದರೂ ದಂಡಿ ದಾಕ್ಷಿಣಾತ್ಯನೆಂಬುದನ್ನು ಅವಶ್ಯ ಮನಗಾಣಬೇಕು. ಇದರಿಂದ ಚಂಪೂವಿನ ಉಗಮ ಸ್ಥಾನ ಕನ್ನಡವೆಂದೇ ಕಾಣುತ್ತದೆ.

ಇನ್ನು ಚಂಪು ಎಂಬ ಪದದ ವ್ಯುತ್ಪತ್ತಿಯನ್ನು ನೋಡೋಣ. ಅದರ ವಿಚಾರ ದಲ್ಲಿ ಡಾ. ಎ. ಬಿ. ಕೀತ್ ಅವರು 'ಅದೊಂದು ಮೂಲಗೊತ್ತಿಲ್ಲದ ಪದ'ವೆಂದು ಅಭಿಪ್ರಾಯಿಸಿದ್ದಾರೆ. ಆದರೆ ಸಂಸ್ಕೃತದವರು ಅಷ್ಟು ಸುಲಭವಾಗಿ ಸೋಲನ್ನೊಪ್ಪುವ

ಸ್ವಭಾವದವರಲ್ಲ. ಅವರು ಎಲ್ಲದಕ್ಕೂ ಸಂಸ್ಕೃತದ ವ್ಯುತ್ಪತ್ತಿ ಹೇಳುವ ಗಟ್ಟಿಗರೆಂದು ಲೋಕಕ್ಕೇ ತಿಳಿದ ವಿಷಯ. ಸಂಸ್ಕೃತ ಪಂಡಿತರು ಚಂಪು ಪದಕ್ಕೂ ನಿರ್ಯುಕ್ತಿ ನುಡಿದಿದ್ದಾರೆ. ಆ ನಿರುಕ್ತಿಯನ್ನು ನಿರುಕಿಸಿ :

೧. ಚಂಪಯತಿ ಚಂಪತಿ ಇತಿ ಚಂಪೂಃ
= ಗತಿಯುಳ್ಳದು ಚಂಪು (ಗತ್ಯರ್ಥಕಾತ್ ಚಪಿ ಧಾತೋಃ)

೨. ಚಮತ್ಕೃತ್ಯ ಪುನಾತಿ ಸಹೃದಯಾನ್ ವಿಸ್ಮತೀಕೃತ್ಯ
ಪ್ರಸಾದಯತೀತಿ ಚಂಪೂರಿತಿ ಹರಿದಾಸಭಟ್ಟಾಚಾರ್ಯಃ

ಆದರೆ ಈ ಬಗೆಯ ವ್ಯುತ್ಪತ್ತಿಗಳು ಚಮತ್ಕಾರಜನ್ಯವೇ ಹೊರತು, ಸತ್ಯಸಂಗತಿಯಲ್ಲ ವೆಂದು ತೋರುತ್ತದೆ. ಏಕೆಂದರೆ ಸಂಸ್ಕೃತ ಹಾಗೂ ಅದಕ್ಕೆ ಸಂಬಂಧಿಸಿದ ಜ್ಞಾತಿ ಭಾಷೆಗಳಲ್ಲಿ ಈ ಪದಕ್ಕೆ ಸಂಬಂಧಿಸಿದ ಇತರ ಪದಗಳೇ ಇದ್ದಂತಿಲ್ಲ. ಆದರೆ ಕನ್ನಡ ಮತ್ತು ಇತರ ದ್ರಾವಿಡ ಭಾಷೆಗಳಲ್ಲಿ ಹೀಗಿಲ್ಲ. ಇಲ್ಲಿ ಚಂಪು ಪದಕ್ಕೆ ಜ್ಞಾತಿಪದಗಳಿವೆ. ಕನ್ನಡಕ್ಕಿಂತ ತೆಲುಗು ಭಾಷೆಯಲ್ಲಿ ಚಂಪೂಕಾವ್ಯಗಳೇ ಹೆಚ್ಚು. ತಮಿಳಿನಲ್ಲೂ ಹಳೆಯ ಕಾವ್ಯಗಳಲ್ಲಿ ಚಂಪೂರೂಪವಿದೆ. ಹೀಗಾಗಿ 'ಚಂಪು' ಎಂಬುದು ದೇಸೀಯ ವಾದ ಮಾತು. ಈ ಶಬ್ದಮಾತ್ರವಲ್ಲ ಈ ಸಾಹಿತ್ಯರೂಪ, ಪ್ರಕಾರವೂ ದೇಶ್ಯವೇ. ಸಂಪು, ಚಂಪೆ–ಚಂಪೆ ಎಂಬ, ಸೋದರಭಾಷೆಯಲ್ಲಿ ದೊರೆಯುವ, ಪದಗಳಿಗೆ ಸುಂದರ, ಮಿಶ್ರ ಎಂಬರ್ಥವಿದೆಯೆಂದು ತಿಳಿದುಬರುತ್ತದೆ. ಚಂಪು ಎಂಬ ಪದ ಕೆನ್ ಎಂಬ ಧಾತುವಿನಿಂದ ನಿಷ್ಪನ್ನವಾದಂತೆ ತೋರುತ್ತದೆ. ಸುಂದರ, ಮನೋಹರ, ಚೆಲ್ವು ಎಂಬರ್ಥದ ಕೆನ್ ಧಾತು ಸಮಾಸದಲ್ಲಿ ಚೆನ್ ಎಂದಾಗುವುದು ವ್ಯಾಕರಣದಲ್ಲಿ ಪ್ರಸಿದ್ಧ ವಾಗಿದೆ. ಚೆಂಗಣಿಗಿಲೆ, ಚೆಂದುಟಿ, ಚೆಂಗುಲಾಬಿ, ಚೆನ್ನೈದಿಲೆ ಮುಂತಾದ ಪದಗಳ ಪೂರ್ವಾರ್ಧವಾದ ಚೆನ್ ಎಂಬುದು ಕೆನ್ ಎಂಬ ಕ್ರಿಯಾಪದದ ಅನಂತಗದ ರೂಪ. ಇದರಂತೆ ಸುಂದರವಾದುದು (ಸಾಹಿತ್ಯದಲ್ಲಿ) √ಕೆನ್ (=ಕೆಂಪು) > √ಚೆನ್ > ಚೆಂಪು > ಚಂಪು ಆಗಿರಬಹುದು. ಇದು ಸಂಭಾವ್ಯವೆಂದು ತೋರುತ್ತದೆ. ಈ ವಿಚಾರಧಾರೆ ನಿಜವಾದಲ್ಲಿ ಚಂಪು ಪದ ಮತ್ತು ಪ್ರಕಾರ ಸಂಸ್ಕೃತಕ್ಕೆ ಕನ್ನಡ ಕೊಟ್ಟ ಅಮೂಲ್ಯ ಕಾಣಿಕೆಯಾಗುತ್ತದೆ. ಬುದ್ಧಿಯೊಡೆಯರು ಬೆಳಕುಬೀರಬೇಕು.

ಡಾ. ಎಚ್. ತಿಪ್ಪೇರುದ್ರಸ್ವಾಮಿ

ವಚನಸಾಹಿತ್ಯ

ಕನ್ನಡದಲ್ಲಿ ವಚನಸಾಹಿತ್ಯ ಒಂದುವಿಶಿಷ್ಟ ಪ್ರಕಾರ, ರೂಪದಿಂದ ಮಾತ್ರವಲ್ಲ, ಸತ್ವದಿಂದಲೂ. ವಚನಸಾಹಿತ್ಯದ ಸಾರವತ್ತಾದ ಭಾಗ, ಸಾಹಿತ್ಯದ ಮಹತ್ವವನ್ನೂ ಔನ್ನತ್ಯವನ್ನೂ ಅಳೆಯುವ ಯಾವುದೇ ಒರೆಗಲ್ಲಿಗೆ ಒಳಗಾದರೂ ಉತ್ತುಂಗ ಶಿಖರದಲ್ಲಿ ನಿಲ್ಲಬಲ್ಲುದು. ಅತ್ಯಂತ ಸನಾತನವಾದ ಅನುಭವದ ಶ್ರೀಮಂತಿಕೆಯನ್ನು ಅತ್ಯಂತ ಆಧುನಿಕ ವಿಮರ್ಶಾಸೂತ್ರಗಳಿಗೂ ಸಂಗತವಾಗುವಂತಹ ಚಿರಂತನ ಕಲಾಕೃತಿಗಳ ರೂಪದಲ್ಲಿ ಅಭಿವ್ಯಕ್ತಗೊಳಿಸಿದ ಹಿರಿಮೆ ವಚನಸಾಹಿತ್ಯದ್ದು. ಅನುಭವವಾಹಕ ವನ್ನಾಗಿ ಭಾಷೆಯ ಸಾಧ್ಯತೆಗಳನ್ನು ಸಂಪೂರ್ಣವಾಗಿ ಬಳಸಿಕೊಳ್ಳುವ ಪರಿಣಾಮಕಾರಿ ಯಾದ ಪ್ರಯೋಗಗಳನ್ನು ವಚನಸಾಹಿತ್ಯದಲ್ಲಿ ಕಂಡು ಆಶ್ಚರ್ಯಗೊಳ್ಳುತ್ತೇವೆ. ಈ ದೃಷ್ಟಿಯಿಂದ ವಚನಸಾಹಿತ್ಯದ ಪುನರ್‌ಮೌಲ್ಯವನ್ನು ಕಂಡುಕೊಳ್ಳುವ ಆವಶ್ಯಕತೆ ಯಿದೆ. ಆದರೆ ಇಲ್ಲಿನದು ಆ ವ್ಯಾಪಕವಾದ ಉದ್ದೇಶವಲ್ಲ; ವಚನಸಾಹಿತ್ಯದ ಸೂಕ್ಷ್ಮಪರಿಚಯದ ಪ್ರಯತ್ನ.

ಶರಣರ ಬಹುಮುಖವಾದ ವಿಚಾರಕ್ರಾಂತಿ, ಬಸವಣ್ಣನವರ ನೇತೃತ್ವದಲ್ಲಿ ಅಂದಿನ ಜನಜೀವನದ ಎಲ್ಲ ರಂಗಗಳನ್ನೂ ವ್ಯಾಪಿಸಿ ನವಚೇತನವನ್ನು ತುಂಬಿದಂತೆ, ಕನ್ನಡ ಸಾಹಿತ್ಯದಲ್ಲಿ ಒಂದು ಹೊಸನಾದವನ್ನು ಮಿಡಿಯಿತು. ಶರಣರು ತಮ್ಮ ಆಧ್ಯಾತ್ಮಿಕ ಸಾಧನೆಯ ಅನುಭವಗಳನ್ನು, ಆದರ್ಶಗಳನ್ನು, ಸಮಾಜದ ರೀತಿನೀತಿಗಳನ್ನು, ಓರೆ ಕೋರೆಗಳನ್ನು ಎಲ್ಲರಿಗೂ ತಿಳಿಯುವ ಮಾತುಗಳಲ್ಲಿ ಹೇಳಬೇಕಾಗಿತ್ತು. ಜನತೆಯಲ್ಲಿ ತಮ್ಮ ಅಭಿಪ್ರಾಯಗಳನ್ನು ಪರಿಣಾಮಕಾರಿಯಾದ ರೀತಿಯಲ್ಲಿ ಪ್ರತಿಬಿಂಬಿಸಬೇಕಾಗಿತ್ತು. ಪಂಡಿತರಂಜನೀಯವಾದ ಪ್ರೌಢ ಚಂಪೂಶೈಲಿ ಅದಕ್ಕೆ ಸಹಾಯಕವಾಗುವಂತಿರಲಿಲ್ಲ. ಆದುದರಿಂದ ಶರಣರು ತಮ್ಮ ಉದ್ದೇಶಸಾಧನೆಗಾಗಿ ಕನ್ನಡ ಸಾಹಿತ್ಯದಲ್ಲಿ ಒಂದು ಹೊಸ ಮಾರ್ಗವನ್ನೇ ರೂಢಿಸಬೇಕಾಯಿತು. ಆ ಸಾಹಸದಲ್ಲಿ ಅವರಾಡಿದ ಮಾತುಗಳೇ ವಚನಗಳಾಗಿ ಪರಿಣಮಿಸಿದುವು.

'ವಚನ' ಎನ್ನುವ ಮಾತು ಗದ್ಯ ಅಥವಾ ಗದ್ಯದ ಒಂದು ಭಾಗ ಎನ್ನುವ ಅರ್ಥದಲ್ಲಿ ಮೊದಲಿನಿಂದಲೂ ಬಳಕೆಯಲ್ಲಿತ್ತು. ಚಂಪೂಕಾವ್ಯಗಳಲ್ಲಿ ಬರುವ ಗದ್ಯ

ಭಾಗವನ್ನು 'ವಚನ' ಎಂದೇ ಕರೆಯಲಾಗಿದೆ. ಆದರೆ ಅಲ್ಲಿ ಬರುವ ಸಂಸ್ಕೃತ ಭೂಯಿಷ್ಠವಾದ ಮಾತುಗಳ ಜೋಡಣೆಗೂ ಶರಣರ ವಚನಗಳ ಸಹಜದೃಷ್ಟಿಗೂ ಅಜಗಜಾಂತರ ವ್ಯತ್ಯಾಸ. ಅನೇಕವೇಳೆ ಪಂಡಿತರ ಶಕ್ತಿಪ್ರದರ್ಶನದ ರಂಗಸ್ಥಳ ಆ ಗದ್ಯ; ಜನತೆಯ ಉದ್ಧಾರದ ಉಸಿರು ಈ ವಚನಗಳು.

ಶರಣರು ಸಾಹಿತ್ಯಸೇವೆಗೆಂದೇ ಕುಳಿತು ವಚನಗಳನ್ನು ಬರೆದವರಲ್ಲ. ಜಾಗ್ರತ ಹೃದಯದ ತಮ್ಮ ವಿಚಾರವಾಣಿಯನ್ನು ಜನಜಾಗೃತಿಗಾಗಿ ಹೊರಹೊಮ್ಮಿಸಿದವರು. ತಮ್ಮ ಮನಸ್ಸನ್ನು ಪ್ರಚೋದಿಸಿದ, ಬುದ್ಧಿಯನ್ನು ಕೆರಳಿಸಿದ, ಆತ್ಮವನ್ನು ಅರಳಿಸಿದ ಒಂದೊಂದು ಭಾವನೆಯನ್ನೂ ಆಯಾ ಭಾವಕ್ಕೆ ತಕ್ಕಂತೆ ಹಾಡಿದವರು. ಹಾಗೆ ಸಹಜ ಸ್ಫೂರ್ತಿಯಿಂದ ಉಣ್ಮಿದ ವಚನಗಳಿಂದಲೇ ವಚನಸಾಹಿತ್ಯದ ಹಿರಿಮೆ ಮುಗಿಲು ಮುಟ್ಟಿರುವುದು. ಕೆಲವು ವಚನಗಳಂತೂ ಶರಣರ ಆತ್ಮಾಕಾಶದಲ್ಲಿ ಮೂಡಿದ ಒಂದೊಂದು ನಕ್ಷತ್ರಗಳು. ಅವು ಸ್ವಯಂಪೂರ್ಣವಾಗಿವೆ, ಸ್ವಯಂಪ್ರಭೆಯಿಂದ ಹೊಳೆಯುತ್ತಿವೆ.

ಸಿದ್ಧಾಂತ ಪ್ರತಿಪಾದಕವಾದ ಅಥವಾ ದೀರ್ಘವರ್ಣನಾತ್ಮಕವಾದ ಕೆಲವು ವಚನಗಳನ್ನು ಬಿಟ್ಟರೆ ಉಳಿದ ಎಲ್ಲ ವಚನಗಳೂ ಸಾಮಾನ್ಯವಾಗಿ ಚಿಕ್ಕವು. ಆಯಾ ಕಾಲಕ್ಕೆ ಶರಣರಿಗೆ ಅನಿಸಿದ ಒಂದೊಂದು ಭಾವವನ್ನು ಮಾತ್ರ ಕುರಿತವು. ಈ ಅರ್ಥದಲ್ಲಿ ಆಧುನಿಕ ಭಾವಗೀತೆಗಳ ಲಕ್ಷಣವನ್ನು ವಚನಗಳಲ್ಲಿ ಕಾಣುತ್ತೇವೆ. ಆದರೆ ವಚನಗಳು ಪದ್ಯಗಳಲ್ಲ; ಗದ್ಯರೂಪವಾದುವುಗಳು. ಈ ಗದ್ಯಶೈಲಿ ಅಂದಿನ ಚಂಪೂ ಗ್ರಂಥಗಳಲ್ಲಿದ್ದ ಗದ್ಯಶೈಲಿಯಲ್ಲ; ಅಥವಾ ಆಡುಮಾತಿನ ನೀರಸ ನಿರೂಪಣೆಯೂ ಅಲ್ಲ. ಪದ್ಯಶೈಲಿಯ ಭಾವಸೌಂದರ್ಯ, ಗದ್ಯದ ವಿಚಾರಪ್ರತಿಪಾದನೆ. ಈ ಎರಡನ್ನೂ ಏಕತ್ರ ಒಳಗೊಂಡ ಒಂದು ವಿಶಿಷ್ಟರೀತಿಯ ಗದ್ಯಗೀತೆಗಳೆಂದು ವಚನಗಳನ್ನು ಕರೆಯಬಹುದು. ಭಾವಕ್ಕೆ ಅನುಗುಣವಾದ ವಿಶಿಷ್ಟ "ಲಯ" ಅವುಗಳಲ್ಲಿ ಕಂಡುಬರುತ್ತದೆ. ಉದಾಹರಣೆಗೆ :

"ಚಕೋರಂಗೆ ಚಂದ್ರಮನ ಬೆಳಗಿನ ಚಿಂತೆ,
ಅಂಬುಜಕ್ಕೆ ಭಾನುವಿನ ಉದಯದ ಚಿಂತೆ,
ಭ್ರಮರಂಗೆ ಪರಿಮಳದ ಬಂಡುಂಬ ಚಿಂತೆ,
ಎನಗೆ ನಮ್ಮ ಕೂಡಲಸಂಗಮದೇವರ ನೆನೆವುದೆ ಚಿಂತೆ."

ಇದೊಂದು ವಿಶಿಷ್ಟಮಾದರಿ. ಹೀಗೆ ವಚನಗಳಲ್ಲಿ ಪ್ರಾಸವಿದ್ದೇತೋರಬೇಕೆಂದಲ್ಲ. ಯಾವೊಂದು ನಿಯಮಕ್ಕೆ ಅವು ಕಟ್ಟುಬೀಳದೆ, ಒಂದೊಂದು ವಚನವೂ ಭಾವಕ್ಕೆ ಸನ್ನಿವೇಶಕ್ಕೆ ವ್ಯಕ್ತಿತ್ವಕ್ಕೆ ಅನುಗುಣವಾಗಿ ತನ್ನದೇ ಆದ ನಿಯಮವನ್ನು ರೂಪಿಸಿ ಕೊಳ್ಳುತ್ತದೆ.

"ಮೇಲಾಗಲೊಲ್ಲೆನು, ಕೀಳಾಗಲೊಲ್ಲದೆ;
ಕೀಳಿಂಗಲ್ಲದೆ ಹಯನ ಕರೆವುದೋ ?

ಮೇಲಾಗಿ ನರಕದೊಳೋಲಾಡಲಾರೆನು
ನಿಮ್ಮ ಶರಣರ ಪಾದಕ್ಕೆ ಕೀಳಾಗಿರಿಸು
ಮಹಾದಾನಿ ಕೂಡಲಸಂಗಮದೇವಾ."

" ಇಳೆ ನಿಮ್ಮ ದಾನ, ಬೆಳೆ ನಿಮ್ಮ ದಾನ,
ಸುಳಿದು ಬೀಸುವ ವಾಯು ನಿಮ್ಮ ದಾನ,
ನಿಮ್ಮ ದಾನವನುಂಡು ಅನ್ಯರ ಹೊಗಳುವ
ಕುನ್ನಿಗಳನೇನೆಂಬೆ ರಾಮನಾಥ."

-ಹೀಗೆ ಯಾವ ಒಂದು ಸೂತ್ರದಿಂದಲೂ ವಿವರಿಸಲು ಸಾಧ್ಯವಲ್ಲದ " ತಂತ್ರ "ವೊಂದು ವಚನಗಳ ಗದ್ಯವನ್ನು ಸಾಮಾನ್ಯ ಗದ್ಯದಿಂದ ಬೇರ್ಪಡಿಸಿದೆ, ವಚನಗಳನ್ನು " ಗದ್ಯಗೀತೆ ''ಗಳನ್ನಾಗಿಸಿದೆ.

ವಚನಗಳ ಸ್ವರೂಪವೆಂದರೆ ವಚನಕಾರರ ಮನಸ್ಸಿನ ಸ್ವರೂಪ. ದೈವಶಕ್ತಿಯನ್ನು ಕುರಿತ ಅವರ ಹಂಬಲ, ಪ್ರಾರ್ಥನೆ, ಭಕ್ತಿಯ ವಿವಿಧ ಭಾವಗಳು, ತಾವು ಕಂಡ ಸತ್ಯಸ್ವರೂಪವನ್ನು ಇತರರಿಗೂ ಪರಿಚಯಮಾಡಿಕೊಡುವ ಲೋಕಕಾರುಣ್ಯ–ಈ ಎಲ್ಲವನ್ನೂ ವಚನಗಳ ರೂಪದಲ್ಲಿ ಕಾಣುತ್ತೇವೆ. ಇವುಗಳ ತೀವ್ರತೆಯಿಂದ ಹೊರ ಹೊಮ್ಮಿದ ವಚನಗಳು ಉತ್ತಮ ಸಾಹಿತ್ಯಕೃತಿಗಳಾಗಿ ಪರಿಣಮಿಸಿವೆ. ಅವುಗಳಲ್ಲಿ ಶರಣರ ಹೃದಯದ ಗರ್ಭಗುಡಿಯಲ್ಲಿರುವ ನಂದಾದೀಪದ ಬೆಳಕು ಕಾಣುತ್ತದೆ.

ಶರಣರು ತಮ್ಮ ಕೃತಿಯಿಂದ ಜನಮೆಚ್ಚುಗೆಯನ್ನು ಪಡೆಯಬೇಕೆಂದು ಬರೆದವರಲ್ಲ. ಬಸವೇಶ್ವರುಹೇಳುವಂತೆ '' ನುಡಿದರೆ ಲಿಂಗ ಮೆಚ್ಚಿ ಅಹುದಹುದೆನ್ನಬೇಕು ''– ಎಂದು ಆ ದೈವಶಕ್ತಿಯ ಮೆಚ್ಚುಗೆಗಾಗಿ ತಮ್ಮ ವಾಕ್‌ಶಕ್ತಿಯನ್ನು ಧಾರೆಯೆರೆದು ಮಾತಿನಲ್ಲಿ ಮಹತ್ತನ್ನು ಮೂಡಿಸಿದವರು. ಆದುದರಿಂದಲೇ ವಚನಗಳಲ್ಲಿ ಅವರ ಜೀವನದರ್ಶನ ಸಂಪೂರ್ಣವಾಗಿ ಅವತರಿಸಿದೆ.

ಶರಣರ ಜೀವನ ಬಹುಮುಖವಾದದ್ದು. ಕೆಲವರಂತೂ ಒಂದು ಕಡೆ ಸಾಧಕರು; ಇನ್ನೊಂದುಕಡೆ ಸಮಾಜಸೇವಕರು; ಮತ್ತೊಂದು ಕಡೆ ಧರ್ಮದ ಬೆಳಕನ್ನು ಹೊತ್ತ ದೀವಟಿಗರು, ಕ್ರಾಂತಿಕಾರರು. ಆದರೂ ತಮ್ಮ ನಿತ್ಯಜೀವನದ ಕಾಯಕವನ್ನು ನಮ್ರಭಾವದಿಂದ ಮಾಡುವ ಕರ್ಮಕುಶಲಿಗಳು. ಜೀವನವನ್ನು ತೆರೆದ ಕಣ್ಣಿಂದ ನೋಡಿದವರು; ಲೋಕದ ಕಷ್ಟಕಾರ್ಪಣ್ಯಗಳನ್ನು ಕಂಡು ಕನಿಕರಿಸಿದವರು; ಕಷ್ಟ ಸುಖಗಳನ್ನು ತಾವೂ ಉಂಡವರು; ಸ್ತುತಿ ನಿಂದೆಗಳನ್ನು ಏಕಪ್ರಕಾರವಾಗಿ ಬರಮಾಡಿಕೊಂಡವರು–ಈ ಎಲ್ಲ ಮುಖಗಳಿಂದ ನೂರಾರು ಅನುಭವಗಳನ್ನು ಪಡೆದ ಅವರ ಚೇತನ ಶ್ರೀಮಂತವಾಗಿದೆ; ಗಗನಗಾಮಿಯಾಗಿ ಮೇಲೇರಿದೆ. ಅದೆಲ್ಲದರ ಪ್ರಭಾವವನ್ನು ವಚನಗಳಲ್ಲಿ ಕಾಣುತ್ತೇವೆ.

ತಮ್ಮ ಅನುಭವವನ್ನು ಅನ್ಯಹೃದಯವೇದ್ಯವಾಗುವಂತೆ ಹೇಳುವ ಶರಣರ ಶಕ್ತಿಯೂ ಅಪೂರ್ವವಾದ ಸಿದ್ಧಿ. ಅವರು ಕೊಡುವ ಉಪಮಾನಗಳು, ಹೋಲಿಕೆ

ಗಳು, ಸಾದೃಶ್ಯಗಳು ಗಾದೆಯಂತೆ ಸೂತ್ರರೂಪವಾದ ಮಾತುಗಳು–ಎಲ್ಲವೂ ಅವರ ಅಪಾರವಾದ ಲೋಕಾನುಭವಕ್ಕೂ ಲೋಕಕಾರುಣ್ಯಕ್ಕೂ ಸಾಕ್ಷಿಯಾಗಿವೆ. ಅವು ಓದುಗರ ಅನುಭವದ ಪರಿಧಿಯನ್ನು ವಿಸ್ತಾರಗೊಳಿಸುತ್ತವೆ.

ಶರಣರ ಕಾವ್ಯದ ವಸ್ತು, ವ್ಯಕ್ತಿಯ ಅಂತರಂಗವನ್ನು ಕುರಿತದ್ದು. ಅದಕ್ಕೂ ಈ ಪ್ರಪಂಚಕ್ಕೂ ಇರುವ ಸಂಬಂಧದ ರಹಸ್ಯವನ್ನು ಭೇದಿಸಲು ಉದ್ಯುಕ್ತವಾದದ್ದು. ಆ ಸಂವೇದನೆಗಳನ್ನು ವ್ಯಕ್ತಗೊಳಿಸುವಾಗ ಭಾವದ ತೀವ್ರತೆಗೆ ಅನುಗುಣವಾಗಿ ಅಲಂಕಾರಗಳನ್ನೂ ನಿರೂಪಣಾರೀತಿಯನ್ನೂ ರೂಪಿಸಿಕೊಳ್ಳುತ್ತದೆ. ಸಂಸಾರದ ನಿಸ್ಸಾರತೆಯನ್ನೂ ನಶ್ವರತೆಯನ್ನೂ ಕುರಿತು ಅವರು ಹೇಳುವ ಮಾತುಗಳು ಎಂತಹ ಲೌಕಿಕವಾದಿಗಳ ಮನಸ್ಸನ್ನೂ ಕ್ಷಣಕಾಲ ಅಂತರಂಗದ ಆತ್ಮವೀಕ್ಷಣೆಯ ಕಡೆಗೆ ತಿರುಗಿಸ ಬಲ್ಲುವು. ಉದಾಹರಣೆಗೆ:

> “ಇಲಿಗಡುಹನೊಡ್ಡಿದಲ್ಲಿರ್ಪಂತೆ ಎನ್ನ ಸಂಸಾರ
> ತನು ಕೆಡುವನ್ನಕ್ಕ ಮಾಣದು
> ಹೆರರ ಭಾಧಿಸುವುದು, ತನುಕೆಡುವನ್ನಕ್ಕ ಮಾಣದು.
> ಹೆರರ ಛಿದ್ರಿಸುವುದು, ತನು ಕೆಡುವನ್ನಕ್ಕ ಮಾಣದು.
> ಅಕಟಕಟಾ ಸಂಸಾರಕ್ಕಾಸತ್ತೆ
> ಕೂಡಲಸಂಗಮದೇವಾ”.

ಸಂಸಾರಕ್ಕಾಸತ್ತೆ’ ಎಂಬುದಕ್ಕೆ ಅವರು ಕೊಡುವ ಉಪಮಾನ “ಇಲಿಗಡುಹನೊಡ್ಡಿದಲ್ಲಿರ್ಪಂತೆ” ಎಂಬುದು. ಚೂರುರೊಟ್ಟಿಯ ಆಸೆಗಾಗಿ ತನ್ನ ಕೊರಳನ್ನು ಕತ್ತರಿಗೆ ಸಿಲುಕಿಸಿ ಒಪ್ಪಾಡುವ ಇಲಿಯನ್ನು ಕಂಡವರಿಗೆ ತಮ್ಮ ಗತಿಯೂ ಹಾಗಾಗಿದೆ ಎಂಬುದನ್ನು ತೋರಿಸಿಕೊಟ್ಟಾಗ ಬಸವಣ್ಣನವರು ಹೇಳಬೇಕೆಂದಿದ್ದ ಅಭಿಪ್ರಾಯ ಎಷ್ಟೊಂದು ಪರಿಣಾಮಕಾರಿಯಾಗಿ ನಾಟುತ್ತದೆ. ಹಾಗೆಯೇ “ಕಪ್ಪೆ ಸರ್ಪನ ನೆರಳಿನಲ್ಲಿಪ್ಪಂತೆ” “ಹರಕೆಗೆ ತಂದ ಕುರಿ ತೋರಣಕ್ಕೆ ಕಟ್ಟಿದ ತಳಿರ ಮೇಯಿತ್ತು” “ಹಾವಿನ ಬಾಯ ಕಪ್ಪೆ ಹಸಿದು, ಹಾರುವ ನೊಣಕ್ಕೆ ಆಸೆ ಮಾಡುವಂತೆ”– ಮುಂತಾದ ಉಪಮಾನಗಳೂ ಸಂಸಾರದ ಅನಿತ್ಯತೆಯನ್ನು ಮನದಟ್ಟುಮಾಡಿಕೊಡುತ್ತವೆ. ಇದೇ ಮಾತನ್ನು ಚೆನ್ನಬಸವಣ್ಣ ಒಂದು ಸುಂದರವಾದ ಹೋಲಿಕೆಯನ್ನು ಕೊಟ್ಟು ಹೀಗೆ ಹೇಳಿದ್ದಾನೆ:

> “ಗುಬ್ಬಿ ಹೆರರ ಮನೆ, ತನ್ನ ಮನೆ ಎಂಬಂತೆ,
> ಧರೆ ಧನ ವನಿತೆಯರೆನ್ನವರು ತನ್ನವರೆಂದು
> ಹೋರಿ ಹೋರಿ ಸಾವುತ್ತಿದೆ,
> ಜೀವಕರ್ತು ಕೂಡಲ ಚೆನ್ನಸಂಗಯ್ಯನೆಂದರಿಯದೆ”.

ಗುಬ್ಬಿ ಇನ್ನೊಬ್ಬರ ಮನೆಯಲ್ಲಿ ಗೂಡುಕಟ್ಟಿ ಅದು ತನ್ನ ಮನೆಯೆಂದು ಬಗೆಯುವಂತೆ

ನಮ್ಮ ಜೀವನ. ಮನೆಯೊಡೆಯನ ಕೈಯ್ಯ ಕೋಲು, ನಮ್ಮ ತಲೆಯ ಮೇಲಿದ್ದರೂ ಅರಿಯದೆ ಆ ಗೂಡನ್ನೇ ನಮ್ಮ ನಿಜವಾದ ಮನೆಯೆಂದು ನಂಬಿ ವ್ಯವಹರಿಸುತ್ತೇವೆ.

ಅರ್ಥವತ್ತಾದ ಮತ್ತು ಧ್ವನಿಪೂರ್ವಕವಾದ ಮಾತುಗಳಿಂದ, ಸಂಸಾರದ ಸ್ವರೂಪವನ್ನು ಹೇಳಿದಂತೆ, ಶರಣರು ಈ ಸಂಸಾರವನ್ನೇ ನಿತ್ಯವೆಂದು ತಿಳಿದು ಆಚರಿಸುತ್ತಿರುವ ಮನಸ್ಸಿನ ಮರವೆಯನ್ನು ಚಂಚಲತೆಯನ್ನು ಮನಮುಟ್ಟುವಂತೆ ನಿರೂಪಿಸಿದ್ದಾರೆ. ಚಿತ್ರವನ್ನು ಅತ್ತಿಯ ಹಣ್ಣಿಗೆ, ಕೊಂಬೆಯ ಮೇಲಣ ಮರ್ಕಟಕ್ಕೆ, ಅಂದಣವನ್ನೇರಿದ ಸೊಣಗಕ್ಕೆ, ತುಪ್ಪದ ಸವಿಗೆ ಅಲಗನೆಕ್ಕುವ ನಾಯಿಗೆ–ಹೋಲಿಸುವ ಬಸವಣ್ಣನವರ ಹೋಲಿಕೆಗಳಂತೂ ಅರ್ಥಪೂರ್ಣವಾದವುಗಳು. ಇದೇ ಸಂದರ್ಭದಲ್ಲಿಯೇ ಅವರು ಹೇಳುವ ಆತ್ಮಗತ ಭಾವಗೀತೆಗಳಂತಿರುವ ಕೆಲವು ವಚನಗಳನ್ನು ನೋಡಬಹುದು :

" ವಿಷಯವೆಂಬ ಹಸುರನೆನ್ನ ಮುಂದೆ ತಂದು ಪಸರಿಸಿದೆಯಯ್ಯಾ,
ಪಶುವೇನಬಲ್ಲುದು ? ಹಸುರೆಂದೆಳಸುವುದು.
ವಿಷಯರಹಿತನ ಮಾಡಿ, ಭಕ್ತಿರಸವ ದಣಿಯ ಮೇಯಿಸಿ
ಸುಬುದ್ಧಿಯೆಂಬುದಕವನೆರೆದು
ನೋಡಿ ಸಲಹಯ್ಯ ಕೂಡಲಸಂಗಮದೇವಾ. "

" ಎನ್ನ ಕಾಯವ ದಂಡಿಗೆಯ ಮಾಡಯ್ಯ,
ಎನ್ನ ಸಿರವ ಸೋರೆಯ ಮಾಡಯ್ಯ,
ಎನ್ನ ನರವ ತಂತಿಯ ಮಾಡಯ್ಯ,
ಎನ್ನ ಬೆರಳ ಕಡ್ಡಿಯ ಮಾಡಯ್ಯ
ಬತ್ತೀಸ ರಾಗವ ಹಾಡಯ್ಯ, ಉರದಲೊತ್ತಿ ಬಾರಿಸು
ಕೂಡಲಸಂಗಮ ದೇವಾ"

"ಉಳ್ಳವರು ಶಿವಾಲಯವ ಮಾಡುವರು
ನಾನೇನ ಮಾಡುವೆ, ಬಡವನಯ್ಯ.
ಎನ್ನ ಕಾಲೇ ಕಂಭ, ದೇಹವೇ ದೇಗುಲ
ಸಿರ ಹೊನ್ನ ಕಳಶವಯ್ಯ
ಕೂಡಲಸಂಗಮ ದೇವ ಕೇಳಯ್ಯ
ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ "

ಮನಸ್ಸಿನ ದೌರ್ಬಲ್ಯವನ್ನೂ ಚಂಚಲತೆಯನ್ನೂ ಕುರಿತು ಅವರು ಹೇಳುವ ಈ ವಚನವಂತೂ ನೇರವಾಗಿ ಮನಸ್ಸನ್ನು ನಾಟುತ್ತದೆ :

" ಓತಿ ಬೇಲಿವರಿದಂತೆ ಎನ್ನ ಮನವಯ್ಯಾ
ಹೊತ್ತಿಗೊಂದು ಪರಿಯಪ್ಪ ಗೋಸುಂಬೆಯಂತೆನ್ನ ಮನವು.
ಬಾವುಲ ಬಾಳುವೆಯಂತೆನ್ನ ಮನವು.

ನಡುವಿರುಳೊಳಿದ್ದ ಕುರುಡಂಗೆ ಅಗಸೆಯಲ್ಲಿ ಬೆಳಗಾದಂತೆ
ನಾನಿಲ್ಲದ ಭಕ್ತಿಯ ಬಯಸಿದರುಂಟೇ ?
ಕೂಡಲ ಸಂಗಮ ದೇವಾ."

ಓತಿಯು ಬೇಲಿಯಲ್ಲಿಯೇ ತಿರುಗುವಂತೆ ಈ ಮನಸ್ಸು ತಾನು ಮೆಚ್ಚಿದ ವಿಷಯಗಳಲ್ಲಿಯೇ ಅಲೆದಾಡುತ್ತದೆ. ಗೋಸುಂಬೆಯಂತೆ ಹೊತ್ತಿಗೊಂದು ಬಣ್ಣವನ್ನು ಧರಿಸುತ್ತದೆ. ತಲೆಕೆಳಗಾಗಿ ಮರಕ್ಕೆ ನೇತುಬೀಳುವ ಬಾವುಲದ ಬಾಳುವೆಯಂತೆ ಇದರ ಸ್ಥಿತಿ. ಇಂತಹ ಸ್ಥಿತಿಯಲ್ಲಿರುವ ಮನಸ್ಸು ಭಕ್ತಿಯನ್ನು ಪಡೆಯುವುದೆಂದರೆ ಮಧ್ಯರಾತ್ರಿಯಲಿದ್ದ ಕುರುಡ, ಊರಹೊರಭಾಗದಲ್ಲಿ ಬೆಳಗಾಯಿತೆನ್ನುವಂತೆ ಹಾಸ್ಯಾಸ್ಪದವಾಗುತ್ತದೆ–ಎಂದು ಮನಸ್ಸಿನ ಚಂಚಲತೆಯನ್ನು ಪರಿಣಾಮಕಾರಿಯಾದ ಉಪಮಾನಗಳಿಂದ ಎತ್ತಿ ತೋರಿಸಿದ್ದಾರೆ.

ಆಡಂಬರದಿಂದ ಅಹಂಕಾರದಿಂದ, ಕೇವಲ ಜನಮೆಚ್ಚುಗೆಗಾಗಿ ಮಾಡುವ ಭಕ್ತಿಯನ್ನು ಖಂಡಿಸುವಲ್ಲಿ ಶರಣರ ಮಾತು ಇನ್ನೂ ಹರಿತವಾಗಿ ಮನಸ್ಸನ್ನು ಚುಚ್ಚಿ ಎಚ್ಚರಿಸುವಂತೆ ಮೂಡಿ ಬರುತ್ತದೆ. "ಎಳ್ಳಿಲ್ಲದ ಗಾಣವನಾಡಿದಂತೆ" ಆ ಭಕ್ತಿ ವ್ಯರ್ಥ:

" ಒಳ್ಳಿಹ ಮೈಲಾರನ ಒಳಗೆಲ್ಲ ಸೆಣಬು
ಹೊರಗಣ ಬಣ್ಣ ಕರಲೇಸಾಯಿತಯ್ಯ
ಶ್ವಾನನ ನಿದ್ರೆ ಅಜ್ಞಾನಿಯ ತಪದಂತೆ... "

ಸಣಬಿನ ನಾರನ್ನು ತುಂಬಿ ಕಟ್ಟಿ, ಬಣ್ಣವನ್ನು ಬಳಿದು ಅಲಂಕಾರವನ್ನು ಮಾಡಿ ಕುಳ್ಳಿರಿಸಿದ ಗೊಂಬೆಯೊಂದು ದೂರದ ನೋಟಕ್ಕೆ ಸುಂದರವಾಗಿ ಕಾಣಬಹುದು. ಆದರೆ ಅದನ್ನು ಒಡೆದು ನೋಡಿದಾಗ ಗೊತ್ತಾಗುತ್ತದೆ ಒಳಗಣ ಹೂರಣ. ಆಡಂಬರದ ಭಕ್ತಿಯು ಆ ಸೆಣಬಿನ ಮೈಲಾರನಿಗೆ, ಶ್ವಾನನ ನಿದ್ರೆಗೆ, ಅಜ್ಞಾನಿಯ ತಪಕ್ಕೆ ಸಮ–ಎನ್ನುತ್ತಾನೆ ಬಸವೇಶ್ವರ. ಇಂತಹ ಭಕ್ತಿ, ಗುರಿಯನ್ನು ಸಾಧಿಸಲಾರದು. "ಹೊರಿಸಿಕೊಂಡು ಹೋದ ನಾಯಿ ಮೊಲನೇನ ಹಿಡಿವುದಯ್ಯ ?" ಎಂಬ ಮಾತಿನಲ್ಲಿ ಬಹಳ ಅರ್ಥವತ್ತಾಗಿ ಇದನ್ನು ವ್ಯಕ್ತಪಡಿಸಿದ್ದಾನೆ. " ಹುತ್ತವ ಬಡಿದೊಡೆ ಹಾವು ಸಾಯಬಲ್ಲುದೇ ಅಯ್ಯ ? " ಎಂಬ ಬಸವಣ್ಣನವರ ಮಾತು ಕೂಡ ಅಪಾರ ಧ್ವನಿಸಂಪತ್ತಿನಿಂದ ಕೂಡಿ ಅಂತರಂಗ ಶುದ್ಧಿಯ ಆವಶ್ಯಕತೆಯನ್ನೂ ವ್ಯರ್ಥ ಆಡಂಬರದ ನಿರರ್ಥಕತೆಯನ್ನೂ ಸೂಚಿಸುತ್ತದೆ :

" ಚಿತ್ರದ ಹುಲಿ ಮನುಷ್ಯನ ಕಚ್ಚಬಲ್ಲುದೆ ?
ಮರ್ತ್ಯದೊಳಗೆ ಈಶನ ಲಾಂಛನ ಹೊತ್ತವರಿಗೆಲ್ಲಾ ನಿತ್ಯತ್ವವುಂಟೇ ?
ಇದರ ರಚ್ಚೆಯು ಹೊರಲಾರದೆ ಮರ್ತ್ಯಕ್ಕೆ ಹೊರಗೆಂದ
ನಿಶ್ಚಟ ಶರಣ ನಿಷ್ಕಳಂಕ ಮಲ್ಲಿಕಾರ್ಜುನಾ. "

ಎಂದು ಆಡಂಬರದ ಭಕ್ತಿ ಚಿತ್ರದ ಹುಲಿ ಇದ್ದಂತೆ ನಿರ್ಜೀವ, ಜಡ, ಎನ್ನುತ್ತಾನೆ ಮೋಳಿಗೆ ಮಾರಯ್ಯ.

ಆಡಂಬರ ಅಹಂಕಾರ ಅಳಿಮನಸ್ಸು ಇವುಗಳಿಂದ ಪ್ರೇರಿತವಾದ ತೋರಿಕೆಯ ಭಕ್ತಿಯನ್ನು ಖಂಡಿಸುವಂತೆಯೇ, ಅಂತರಂಗದ ಪ್ರೇಮದಿಂದ ಪರಿಶುದ್ಧವಾಗಿ ಉಕ್ಕಿ ಹರಿಯುವ ಭಕ್ತಿಯ ಮಹತ್ವವನ್ನೂ ಅಂತಹ ಭಕ್ತರ ಹಿರಿಮೆಯನ್ನೂ ಹೃದಯ ತುಂಬಿ ವರ್ಣಿಸುವುದರಲ್ಲಿಯೂ ಶರಣರ ಸಾಹಿತ್ಯ—ಶಕ್ತಿಯನ್ನು ಕಂಡುಕೊಳ್ಳುತ್ತೇವೆ.

“ ಕರಿ ಘನ, ಅಂಕುಶ ಕಿರಿದೆನ್ನಬಹುದೇ ? ಬಾರದಯ್ಯ.
ಗಿರಿ ಘನ, ವಜ್ರ ಕಿರಿದೆನ್ನಬಹುದೇ ? ಬಾರದಯ್ಯ.
ತಮಂಧ ಘನ, ಜ್ಯೋತಿ ಕಿರಿದೆನ್ನಬಹುದೇ ? ಬಾರದಯ್ಯ.
ಮರಹು ಘನ, ನಿಮ್ಮ ನೆನೆವ ಮನ ಕಿರಿದೆನ್ನಬಹುದೇ ?
ಬಾರದಯ್ಯ ಕೂಡಲಸಂಗಮದೇವಾ ”.

ಅಜ್ಞಾನವು ಆನೆಯಂತೆ, ಗಿರಿಯಂತೆ, ತಮಂಧದಂತೆ ಬಲವತ್ತರವಾದುದು. ಆದರೆ ಪರಮಪ್ರೇಮದಿಂದ ಏಕೈಕ ಮನಸ್ಸಿನಿಂದ ಆತನನ್ನು ನೆನೆಯುವುದು ಆನೆಗೆ ಅಂಕುಶದಂತೆ, ಗಿರಿಗೆ ವಜ್ರಾಯುಧದಂತೆ, ತಮಂಧಕ್ಕೆ ಜ್ಯೋತಿಯಂತೆ ಎಂಬ ಉಪಮಾನಗಳಿಂದ ಆತನ ನಾಮಮಹಿಮೆ ಮನದಟ್ಟಾಗುತ್ತದೆ. ಇದೇ ಮಾತನ್ನು ಅಲ್ಲಮಪ್ರಭು :

“ ಮಣಿಯನೆಣಿಸಿ ದಿನವ ಕಳೆಯಲು ಬೇಡ,
ಕಣಿಯ ಪೂಜಿಸಿ ದಿನವ ಕಳೆಯಲು ಬೇಡ,
ಕ್ಷಣವಾದರೂ ನಿಜದ ನೆನಹೇ ಸಾಕು,
ಕ್ಷಣದೊಳಗಣ ಅರ್ಧವಾದರೂ ನಿಜದ ನೆನಹೇ ಸಾಕು,
ಬೆಂಕಿಯೊಳಗುಳ್ಳ ಬಿಸಿ ನೀರೊಳಗುಂಟೇ ಗುಹೇಶ್ವರಾ ”

ನಿಜದ ನೆನಹು ಅರ್ಧಕ್ಷಣವಾದರೂ ಸಾಕು. ಬಿಸಿ ಇರುವುದು ಬೆಂಕಿಯಲ್ಲಿ, ನೀರಿನಲ್ಲಲ್ಲ.

“ ಗರ್ವದಿಂದ ಮಾಡುವ ಭಕ್ತಿ, ದ್ರವ್ಯದ ಕೇಡು
ನಡೆಯಿಲ್ಲದ ನುಡಿ, ಅರಿವಿಂಗೆ ಹಾನಿ.
ಕೊಡದೆ ತ್ಯಾಗಿ ಎನಿಸಿಕೊಂಬುದು ಮುಡಿಯಿಲ್ಲದ ಶೃಂಗಾರ.
ದೃಢವಿಲ್ಲದ ಭಕ್ತಿ, ಅಡಿ ಒಡೆದ ಕುಂಭದಲ್ಲಿ ಸುಖಜಲವ ತುಂಬಿದಂತೆ
ಮಾರಯ್ಯ ಪ್ರಿಯ ಅಮಳೇಶ್ವರಲಿಂಗ ಮುಟ್ಟದ ಭಕ್ತಿ. ”

ಇಂತಹ ಅನೇಕ ವಚನಗಳಲ್ಲಿ ನಿಜವಾದ ಭಕ್ತಿಯ ಮಹತ್ವವನ್ನು ಸುಂದರವಾಗಿ ಮತ್ತು ಪರಿಣಾಮಕಾರಿಯಾಗಿ ವ್ಯಕ್ತಪಡಿಸಿದ್ದಾರೆ.

ಹೀಗೆ ಶರಣರು ತಾವು ಪ್ರತಿಪಾದಿಸಬೇಕಾದ ವಿಷಯವಾವುದೇ ಆಗಲಿ ಅದನ್ನು ಅನ್ಯಹೃದಯವೇದ್ಯವಾಗುವಂತೆ ಮಾಡುವಲ್ಲಿ ಸಫಲತೆ ಪಡೆದಿದ್ದಾರೆ. ವಚನಗಳಲ್ಲಿ

ಕಂಡುಬರುವ ಕಾವ್ಯಸತ್ವವು, ಪರಿಣಾಮಕಾರಿಯಾಗಿ ಹೇಳುವ ಅವರ ಮಾತಿನ ರೀತಿಯಲ್ಲಿ, ಅಲಂಕಾರಾದಿಗಳಲ್ಲಿ ವ್ಯಕ್ತವಾಗುವುದಲ್ಲದೆ, ಶರಣರ ಮಾನಸಿಕ ಪ್ರಜ್ಞೆಯ ವಿಕಾಸದ ವಿವಿಧ ಹೆಜ್ಜೆಗಳನ್ನು ಸುಂದರವಾಗಿ ಒಳಗೊಂಡಿದೆ. ವಚನಕಾರರ ಪ್ರಜ್ಞೆಯು ಸಾಮಾಜಿಕ ವೈಷಮ್ಯಗಳ ಮಧ್ಯದಲ್ಲಿ ನಿಂತು ಹೋರಾಡಿದ ಸಾಧಕರ ಸಾಧನೆಯ ಮಾತುಗಳಿಂದ ಹಿಡಿದು, ಲೌಕಿಕವನ್ನು ಮೀರಿ ಮೇಲೇರಿ ಸಮರಸಗೊಂಡ ಧನ್ಯತೆಯ ಉದ್ಗಾರದವರೆಗೂ ಬೆಳೆದುನಿಂತಿದೆ.

ಕಾವ್ಯಕ್ಕೆ ಮೂಲಸಾಮಗ್ರಿ ಬಾಹ್ಯಪ್ರಪಂಚವೇ. ಆದರೆ ಅದನ್ನು ನೋಡುವ ಮತ್ತು ಅದರಿಂದ ಕವಿ ಪಡೆಯುವ ಭಾವನೆಗಳ ಮೇಲೆ ಕಾವ್ಯದ ಮಹೋನ್ನತಿ ಸಿದ್ಧವಾಗುತ್ತದೆ. ಬಾಹ್ಯವಸ್ತುಗಳ ಸೌಂದರ್ಯವನ್ನೂ ಘಟನೆಗಳನ್ನೂ 'ಕಾವ್ಯಪ್ರಜ್ಞೆ' ಪ್ರತಿಬಿಂಬಿಸುತ್ತದೆ. ಇನ್ನು ಕೆಲವು ವೇಳೆ ಅದನ್ನು ವಿಮರ್ಶಿಸುತ್ತದೆ. ಆಗೊಮ್ಮೆ ಈಗೊಮ್ಮೆ ಅದನ್ನು ಮೀರಿ ನಿಂತು, ಸದ್ಯದಲ್ಲಿ ಸಿದ್ಧವಾಗದಿದ್ದರೂ, ಭವಿಷ್ಯದಲ್ಲಿ ಸಾಧ್ಯಮಾನವಾದ ಆದರ್ಶ ಪ್ರಪಂಚದ ದರ್ಶನವನ್ನು ಮಾಡಿಸುತ್ತದೆ. ಶರಣರ ಕಾವ್ಯಪ್ರಜ್ಞೆಯಾವಾಗಲೂ ಈ ಮಹೋನ್ನತ ಗುರಿಯ ಕಡೆಗೇ ಹರಿದಿದೆ. ಲೌಕಿಕ ವೈವಿಧ್ಯ ವೈಷಮ್ಯಗಳ ಮಧ್ಯೆ ಅದು ಇದ್ದಾಗಲೂ ಅದರ ಪ್ರಯಾಣ ಆ ದಿಕ್ಕಿನಲ್ಲಿಯೇ. ಒಮ್ಮೊಮ್ಮೆ ಲೋಕದ ನಡೆನುಡಿಗಳನ್ನು ಕಂಡು ಕೆರಳುತ್ತದೆ; ಅಂತರ್ಮುಖವಾಗುತ್ತದೆ. ತನ್ನ ತನದ ನಿಜಸ್ವರೂಪವನ್ನು ಹುಡುಕುತ್ತದೆ.

"ಅಜ್ಞಾನವೆಂಬ ತೊಟ್ಟಿಲೊಳಗೆ, ಜ್ಞಾನವೆಂಬ ಶಿಶುವ ಮಲಗಿಸಿ,
ಸಕಲವೇದಶಾಸ್ತ್ರವೆಂಬ ನೇಣಕಟ್ಟಿ, ಹಿಡಿದು ತೂಗಿ,
ಜೋಗುಳವಾಡುತ್ತಾ ಇದ್ದಾಳೆ, ಭ್ರಾಂತಿಯೆಂಬ ತಾಯಿ.
ತೊಟ್ಟಿಲು ಮುರಿದು, ನೇಣು ಹರಿದು, ಜೋಗುಳಸಿಂದಲ್ಲದೆ
ಗುಹೇಶ್ವರನೆಂಬ ಲಿಂಗವ ಕಾಣಬಾರದು."

ಈ ವಚನ ಶರಣರ ಮನೋವಿಕಾಸದ ಚಿತ್ರವನ್ನು ಚೆನ್ನಾಗಿ ನಿರೂಪಿಸುತ್ತದೆ. ಸಂಸಾರವೆಂಬ ಅಜ್ಞಾನದ ತೊಟ್ಟಿಲಲ್ಲಿ, ಜ್ಞಾನವೆಂಬ ಶಿಶು ತನ್ನ ಸ್ವರೂಪವನ್ನು ಮರೆತು ಮಲಗಿದೆ. ಆ ತೊಟ್ಟಿಲನ್ನು ಮುರಿದುಕೊಂಡು ವೇದಶಾಸ್ತ್ರಗಳೆಂಬ ಹಗ್ಗಗಳನ್ನು ಕಿತ್ತು ಭ್ರಾಂತಿಯ ಬಾಯನ್ನು ಕಟ್ಟಿ ಹೊರಗೆ ಬರಬೇಕಂತೆ! ಆತ್ಮನು ಜ್ಞಾನಸ್ವರೂಪಿಯಾದವನು; ಅಜ್ಞಾನದ ಮರವೆಗೆ ಒಳಗಾಗಿ ತನ್ನ ಸ್ವರೂಪವನ್ನು ಮರೆತಿದ್ದಾನೆ. ಅಜ್ಞಾನವನ್ನು ಕತ್ತರಿಸಿಕೊಂಡು ತನ್ನ ಸ್ವಸ್ವರೂಪವನ್ನು ಮತ್ತೆ ಪಡೆಯಬೇಕು–ಎಂಬ ಈ ಮಾತನ್ನು ಸುಂದರವಾದ ಕಲ್ಪನೆಯಿಂದ ನಿರೂಪಿಸಿದ್ದಾನೆ ಅಲ್ಲಮಪ್ರಭು.

ಇದನ್ನು ಪಡೆಯುವುದು ಹೇಗೆ? ಈ ದೇಹದಲ್ಲಿ ಪರಸ್ಪರ ವಿರುದ್ಧ ಶಕ್ತಿಗಳು ಕೆಲಸಮಾಡುತ್ತಿವೆ. ಒಂದು ಪ್ರವೃತ್ತಿ ಮೇಲೇರಲು ಹವಣಿಸಿದರೆ ಇನ್ನೊಂದು ಕೆಳಗೆಳೆಯುತ್ತದೆ. "ಕಾಲಲಿ ಕಟ್ಟಿದ ಗುಂಡು, ಕೊರಳಲ್ಲಿ ಕಟ್ಟಿದ ಬೆಂಡು, ತೇಲಲೀಯದು ಗುಂಡು, ಮುಳಗಲೀಯದು ಬೆಂಡು" ಎಂದು ಬಸವಣ್ಣನವರು ಒಂದು ಕಡೆ

ಹೇಳುತ್ತಾರೆ. ಇದನ್ನೇ ಪ್ರಭುದೇವ ಸುಂದರವಾದ ಕಲ್ಪನೆಯನ್ನು ಅವಲಂಬಿಸಿ ಹೀಗೆ ಹೇಳಿದ್ದಾನೆ :

" ಕಾಲುಗಳೆರಡು ಗಾಲಿ ಕಂಡಯ್ಯ.
ದೇಹವೆಂಬುದು ತುಂಬಿದ ಬಂಡಿ ಕಂಡಯ್ಯ.
ಬಂಡಿಯ ಹೊಡೆವರೈವರು ಮಾನಿಸರು.
ಒಬ್ಬೊರಿಗೊಬ್ಬರು ಸಮವಿಲ್ಲವಯ್ಯಾ.
ಅದರಿಚ್ಛೆಯನರಿದು ಹೊಡೆಯದಿದ್ದರೆ
ಅದರಚ್ಚು ಮುರಿಯಿತ್ತು ಗುಹೇಶ್ವರಾ."

ಈ ದೇಹವೇ ಒಂದು ಗಾಡಿ, ಇದನ್ನು ಪಂಚೇಂದ್ರಿಯಗಳು ನಡೆಸುತ್ತಿವೆ. ಅವು ಪರಸ್ಪರ ಕಚ್ಚಾಡಿದರೆ ಗಾಡಿಯ ಅಚ್ಚು ಮುರಿಯುತ್ತದೆ. ಇನ್ನೊಂದು ಕಡೆಯಲ್ಲಿ ಬಸವೇಶ್ವರ :

" ಮನವೇ ಸರ್ಪ, ತನುವೇ ಹೇಳಿಗೆ,
ಹಾವಿನೊಡತಣ ಹುದುವಾಳಿಗೆ;
ಇನ್ನಾವಾಗ ಕೊಂದಿಹುದೆಂದರಿಯೆ,
ಇನ್ನಾವಾಗ ತಿಂದಿಹುದೆಂದರಿಯೆ;
ನಿಚ್ಚಕ್ಕೆ ನಿಮ್ಮ ಪೂಜಿಸ ಬಲ್ಲೊಡೆ
ಅದೇ ಗಾರುಡ ಕೂಡಲಸಂಗಮದೇವಾ."

ಎಂದು ಹೇಳಿದ್ದಾನೆ. ದೇಹವು ಮನಸ್ಸೆಂಬ ಸರ್ಪವನೊಳಗೊಂಡ ಬುಟ್ಟಿ. ನಿಜವಾದ ಭಕ್ತಿಯಿಂದ ಕೂಡಲಸಂಗನನ್ನು ಪೂಜಿಸಿದರೆ ಆ ಹಾವಿನ ಹೆಡೆ ಮುಚ್ಚುತ್ತದೆ. ಆ ಗಾರುಡವನ್ನು ಮರೆತು ವಿಷಯಸುಖಭೋಗದಿಂದ ಅದರ ಹೆಡೆಯನ್ನು ಚುಚ್ಚಿದರೆ ಕಚ್ಚಿಸಿಕೊಳ್ಳಬೇಕಾಗುತ್ತದೆ. ಸಾಧಕನ ಮರ್ತ್ಯಪ್ರಜ್ಞೆ, ಲೌಕಿಕ ಪ್ರಪಂಚದಲ್ಲಿ ನಿಂತು ಅಲ್ಲಿಂದ ಮೇಲೇರಬೇಕಾದ ಸಾಹಸವನ್ನು ಕಾಣುತ್ತೇವೆ ಈ ವಚನದಲ್ಲಿ.

ಅವರ ಪ್ರಜ್ಞಾವಿಕಾಸದ ಮುಂದಿನ ಹೆಜ್ಜೆಯಲ್ಲಿ, ಸಾಮಾಜಿಕ ವೈಷಮ್ಯಗಳನ್ನೂ ಮತ್ತು ವ್ಯಕ್ತಿಗತವಾದ ಅಡ್ಡಿ ಆತಂಕಗಳನ್ನೂ ಮೀರಿ ಮೇಲೇರ ಬಲ್ಲ ನಿರ್ಲಿಪ್ತತೆ ಕಂಡು ಬರುತ್ತದೆ. ಅದು ಸಾಕ್ಷೀಭೂತವಾದ ಕಾವ್ಯಪ್ರಜ್ಞೆಯಾಗಿ ಪರಿಣಾಮಕಾರಿಯಾದ ರೀತಿಯಲ್ಲಿ ಅಭಿವ್ಯಕ್ತಗೊಂಡಿದೆ :

" ಮಾಡುವ ಭಕ್ತನ ಕಾಯ, ಬಾಳೆಯ ಕಂಭದಂತಿರಬೇಕು.
ಮೆಲ್ಲಮೆಲ್ಲನೆ ಹೊರೆಯೆತ್ತಿ ನೋಡಿದರೆ ಒಳಗೆ ಕೆಚ್ಚಿಲ್ಲದಿರಬೇಕು.
ಮೇಲಾದ ಫಲವ ನಮ್ಮವರು ಬೀಜಸಹಿತ ನುಂಗಿದರು,
ಎನಗಿನ್ನಾವ ಭಯವಿಲ್ಲ ಕಾಣಾ ಕೂಡಲಸಂಗಮದೇವಾ."

ಭಕ್ತನ ಕಾಯದಿಂದ ಒಂದೊಂದು ಪೊರೆಯನ್ನು ತೆಗೆದುಹಾಕುತ್ತಾ ಹೋದರೆ 'ನಾನು' ಎಂಬ ಅಹಂಕಾರದ ಕೆಚ್ಚು ಉಳಿಯಬಾರದು ಅಲ್ಲಿ. ಆ ನಿರಹಂಕಾರ

ಸಹಿತವಾದ ಭಕ್ತ ಎಂಬ ಫಲವನ್ನು ಬೀಜಸಹಿತ ನುಂಗಬೇಕು. ಅಂದರೆ ಕರ್ಮಗಳನ್ನು ನಿರ್ಲಿಪ್ತಭಾವನೆಯಿಂದ ಮಾಡಬೇಕು. ಅದರ ಸೋಲುಗೆಲುವುಗಳ ಬಂಧನ ಬೀಜ ರೂಪವಾಗಿದ್ದು, ಮತ್ತೆ ಮೊಳೆತು ತಲೆಯೆತ್ತದಂತೆ ಬೀಜಸಹಿತ ಅದನ್ನು ನುಂಗಬೇಕು. ಹಾಗೆಯೇ–

"ಕಳ್ಳಗಂಜಿ ಕಾಡ ಹೊಕ್ಕರೆ ಹುಲಿ ತಿಂಬುದ ಮಾಬುದೇ ?
ಹುಲಿಗಂಜಿ ಹುತ್ತವ ಹೊಕ್ಕರೆ, ಸರ್ಪ ತಿಂಬುದ ಮಾಬುದೇ ?
ಕಾಲಕ್ಕಂಜಿ ಭಕ್ತನಾದೊಡೆ, ಕರ್ಮತಿಂಬುದ ಮಾಬುದೆ ?
ಮೃತ್ಯುವಿನ ಬಾಯ ತುತ್ತದ ವೇಷಡಂಭಕರನೇನೆಂಬೆ ಗುಹೇಶ್ವರಾ."

ಎನ್ನುತ್ತಾನೆ ಅಲ್ಲಮಪ್ರಭು. ಕಳ್ಳನಿಗೆ ಹೆದರಿ ಕಾಡನ್ನು ಹೊಕ್ಕರೆ ಹುಲಿ ತಿನ್ನುತ್ತದೆ ; ಹುಲಿಗೆ ಹೆದರಿ ಹುತ್ತವನ್ನು ಹೊಕ್ಕರೆ ಹಾವು ತಿನ್ನುತ್ತದೆ. ಸಂಸಾರಕ್ಕೆ ಹೆದರಿ ಸನ್ಯಾಸಿಗಳಾಗುವವರಿಗೆ ಇದು ಎಚ್ಚರಿಕೆಯ ಮಾತು.

ಸಂಗವಿಲ್ಲದೆ ನಿಸ್ಸಂಗ ಸಾಧ್ಯವಿಲ್ಲವೆಂಬುದನ್ನು ಅನೇಕ ಬಗೆಯಲ್ಲಿ ಹೇಳುತ್ತಾರೆ. ಶರಣರು "ಆಕಾಶದಲ್ಲಾಡುವ ಪಟಕ್ಕಾದರೂ ಮೂಲಸೂತ್ರವಿರಬೇಕು." ಬಾಹ್ಯ ಕ್ರಿಯಾಚರಣೆಯ ಸೂತ್ರವನ್ನು ಅವಲಂಬಿಸಿ ಸಾಧಕನ ಸಾಕ್ಷೀ ಪ್ರಜ್ಞೆಯು ಊರ್ಧ್ವ ಮುಖ ಗಮನವನು ಕೈಕೊಂಡು ಹಾರಾಡಬೇಕು :

"ಮುತ್ತು ನೀರಲಾಯಿತ್ತು. ವಾರಿಕಲ್ಲು ನೀರಲಾಯಿತ್ತು, ಉಪ್ಪು ನೀರಲಾಯಿತ್ತು;
ಉಪ್ಪು ಕರಗಿತ್ತು, ವಾರಿಕಲ್ಲು ಕರಗಿತ್ತು,
ಮುತ್ತು ಕರಗಿದುದನಾರೂ ಕಂಡವರಿಲ್ಲ
ಈ ಸಂಸಾರಿ ಮಾನವರು ಲಿಂಗಮುಟ್ಟಿ ಭವಭಾವಿಗಳಾದರೂ ;
ನಾ ನಿಮ್ಮ ಮುಟ್ಟಿ ಕರಿಗೊಂಡೆನಯ್ಯ ಚೆನ್ನಮಲ್ಲಿಕಾರ್ಜುನಯ್ಯ."

ಎಂದು ಅಕ್ಕಮಹಾದೇವಿ ಈ ನಿಸ್ಸಂಗತ್ವದ ನಿಲವನ್ನು ಹೇಳಿದ್ದಾಳೆ. ಉಪ್ಪು ವಾರಿ ಕಲ್ಲೂ ನೀರಿನಲ್ಲಿ ಕರಗುತ್ತವೆ. ಮುತ್ತು ಕರಗುವುದಿಲ್ಲ. ಹಾಗೆಯೇ ಭವಭಾವಿಗಳು ಸಂಸಾರ ದುಃಖದಲ್ಲಿ ಬೆಂದು ಹೋಗುತ್ತಾರೆ. ಅದಕ್ಕೆ ಒಳಗಾಗದ ನಿರ್ಲಿಪ್ತಸ್ಥಿತಿಯ ಭಕ್ತರು ಕರ್ಮಮಾಡುತ್ತಲಿ ಅದನ್ನು ಗೆಲ್ಲುತ್ತಾರೆ :

"ತನುವ ಕೊಟ್ಟಬಳಿಕ ದೇಹವೆಲ್ಲಿಯದೋ,
ಧನವ ಕೊಟ್ಟಬಳಿಕ ಭೋಗಗಳೆಲ್ಲಿಹವೋ ?
ಇವೆಲ್ಲಾ ಬರಿಯ ಭ್ರಮೆ.
ಕೊಟ್ಟೆವೆಂಬುವರ ಮುಖ ನೋಡಲಾಗದು.
ಕೊಟ್ಟು ಭಕ್ತನಾದೆನೆಂಬ ನುಡಿ ಸಮನಿಸದಯ್ಯ
ಗುರುವೇ ನಿಮ್ಮ ಬುದ್ಧಿಗೆ, ಕಪಿಲಸಿದ್ಧಮಲ್ಲಿಕಾರ್ಜುನಾ."

ಎಂಬ ಸಿದ್ಧರಾಮನ ವಚನ ಈ ಸಾಕ್ಷೀಪ್ರಜ್ಞೆ, ಅಳವಡುವುದಕ್ಕೆ ಸಹಾಯಕವಾದ

ರೀತಿಯನ್ನು ಸೂಚಿಸುತ್ತದೆ. ಕೊಟ್ಟವನು ನಾನೆಂಬ ಭಾವವು ಇಲ್ಲದೆ ಸರ್ವಸಮರ್ಪಣೆಯಿಂದ ಮಾಡುವ ಕರ್ಮವು ನಿರ್ಮಲಕರ್ಮ. " ನಿರ್ಮಲ ಕರ್ಮವದು ಸದ್ಗತಿಗೆ ಸಾಧ್ಯ; ನಿರ್ಮಲ ಕರ್ಮವದು ಜ್ಞಾನಕ್ಕೆ ವರ್ಧನ. "

ಸಾಮರಸ್ಯವೇ ಶರಣ ಮಾರ್ಗದ ಕೊನೆಯಗುರಿ. ಇಲ್ಲಿ ಅರಿಯುವ ಬಯಕೆಯೂ ಮರೆಯಾಗಿ ತಾನೇ ಅರಿವಿನ ಸ್ವರೂಪವಾಗಿ ಪರಿಣಮಿಸುತ್ತಾನೆ, ಸಾಧಕ. ಎರಡೆಂಬ ಭಾವವಳಿದು ಏಕಾಖಂಡ ಪರಿಪೂರ್ಣ ಸ್ವರೂಪನಾಗುತ್ತಾನೆ. ಅವನ ಮಾನಸಿಕ ವಿಕಾಸ ಪೂರ್ಣಗೊಂಡು ಸೃಷ್ಟಿಶಕ್ತಿಯೊಡನೆ ಸಮರಸವಾಗುತ್ತದೆ. ಮಾತಿಗೆಮೀರಿದ ಆ ನಿಲವನ್ನು ಮಾತಿನಲ್ಲಿ ಹಿಡಿದಿಡಲು ಪ್ರಯತ್ನಿಸುವ ಶರಣರ ಸಾಹಸ ಮಾತನ್ನೇ ಜ್ಯೋತಿರ್ಲಿಂಗವಾಗಿಸಿದೆ:

" ಸ್ವಸ್ಥಾನ ಸುಸ್ಥಿರದ ಸುಮನ ಮಂಟಪದೊಳಗೆ
ನಿತ್ಯ ನಿರಂಜನ ಪ್ರಭೆಯ ಬೆಳಗು;
ಶಿವಯೋಗದನುಭಾವ ಏಕಾರ್ಥವಾಗಿ, ಗುಹೇಶ್ವರಾ,
ನಿಮ್ಮ ಶರಣನು ಅನುಪಮ ಸುಖಿಯಾಗಿರ್ದನು. "

" ಗಗನವೇ ಗುಂಡಿಗೆ, ಆಕಾಶವೇ ಅಗ್ಗವಣಿ,
ಚಂದ್ರ ಸೂರ್ಯರಿಬ್ಬರು ಪುಷ್ಪ,
ಬ್ರಹ್ಮಧೂಪ, ವಿಷ್ಣು ದೀಪ,
ರುದ್ರನೋಗರ, ಸುಯಿಧಾನ ನೋಡಾ
ಗುಹೇಶ್ವರ ಲಿಂಗಕ್ಕೆ ಪೂಜೆ ನೋಡಾ."

ಇಂತಹ ವಚನಗಳ ಭವ್ಯವಾದ ಬೆಳಕಿನಿಂದ ಕಣ್ಣು ಕೋರೈಸುತ್ತದೆ. " ಅಪ್ಪುವಿನಲ್ಲಿನ ಉಪ್ಪಿನಂತೆ " "ಮರದೊಳಗಣ ಕಿಚ್ಚು ಮರವನ್ನು ಸುಟ್ಟಂತೆ" "ಕರ್ಪೂರದ ಗಿರಿಯನ್ನು ಉರಿ ಹಿಡಿದಂತೆ " " ಉರಿಯ ಪರ್ವತವನ್ನು ಅರಗಿನ ಬಾಣದಿಂದ ಹೊಡೆದಂತೆ "–ಎಂದು ಮುಂತಾಗಿ ಲಿಂಗಾಂಗ ಸಾಮರಸ್ಯದ ನಿಲವನ್ನು ವರ್ಣಿಸಿದ್ದಾನೆ. ಈ ಸಮರಸ ಪ್ರಜ್ಞೆಯ ಬೆಳಕು ದೇಹವನ್ನು ವ್ಯಾಪಿಸಿದಂತೆಲ್ಲಾ ಅಂಗಗುಣಗಳೆಂಬ ಮಂಜು ಹರಿದುಹೋಗುತ್ತದೆ :

" ಹೊಸ ಸುಪ್ಪಾಣಿಯ ಮುತ್ತಿನಂತೆ ಲಿಂಗೈಕ್ಯವು;
ಸ್ಫಟಿಕದ ಘಟದೊಳಗಣ ಪ್ರಭೆಯಂತೆ ಲಿಂಗೈಕ್ಯವು;
ವಾಯುವಿನ ಸಂಚದ ಪರಿಮಳದ ನಿಲವಿನಂತೆ,
ಲಿಂಗೈಕ್ಯನ ಸಂಬಂಧವಿದು ಗುಹೇಶ್ವರಾ. "

ಎಂದು ಜೀವನ್ಮುಕ್ತನ ನಿಲವನ್ನು ಪ್ರಭುದೇವ ವರ್ಣಿಸುತ್ತಾನೆ. ಅಲ್ಲಿ ಲೌಕಿಕದ ಮಣ್ಣಿನದೇಹ ಮರೆಯಾಗಿ, ಅದು ಪ್ರಭೆಯನ್ನು ಪ್ರತಿಬಿಂಬಿಸುವ ಸ್ಫಟಿಕದ ದೇಹವಾಗಿ ಪರಿಣಮಿಸುತ್ತದೆ.

ಹೀಗೆ ಶರಣರ ಸಾಹಿತ್ಯದಲ್ಲಿ ಅವರ ಕಾವ್ಯ ಪ್ರಜ್ಞೆಯ ವಿವಿಧ ಹಂತಗಳನ್ನು

ಕಾಣುತ್ತೇವೆ. ಸಾಹಿತ್ಯವೆನ್ನುವುದು ಕೇವಲ ಕಾಲ ಹರಣಕ್ಕೆ ಸಹಾಯಕವಾದ ಮನೋರಂಜನೆಯನ್ನೊದಗಿಸುವ ವಸ್ತುವಲ್ಲ. ಜೀವನವನ್ನು ಮಹೋನ್ನತ ಗೊಳಿಸುವ ಎಲ್ಲ ಭಾವನೆಗಳನ್ನೂ ಅನುಭವಗಳನ್ನೂ ಅದು ಒಳಗೊಳ್ಳಬಲ್ಲುದು, ಒಳಗೊಳ್ಳಬೇಕು. ಇಂತಹ ಪೂರ್ಣ ದೃಷ್ಟಿಯನ್ನು ತಾವು ಜೀವನದಲ್ಲಿಯೂ ಕಂಡು ಸಾಹಿತ್ಯದಲ್ಲಿಯೂ ಅದನ್ನು ರೂಢಿಸಿ ಸಾಹಿತ್ಯವನ್ನು ಪೂರ್ಣತೆಯ ಮಟ್ಟಕ್ಕೇರಿಸಿದ ಅನುಭಾವಿಗಳು ಶರಣರು.

ವಚನಗಳಲ್ಲಿ ಬರುವ ಸುಂದರವಾದ ಅನೇಕ ಉಕ್ತಿಗಳು ಜನಜೀವನದಲ್ಲಿ ಹಾಸುಹೊಕ್ಕಾಗಿ ಸೇರಿಸಿಕೊಳ್ಳುವಂತಹ ಗಾದೆಯ ಮಾತುಗಳಾಗಿ ಉಳಿದಿವೆ. ಮೊಗೆದಷ್ಟೂ ಜಲವನ್ನು ಕೊಡುವ ಬತ್ತದ ಒರತೆಗಳಂತೆ, ಅಗೆದಷ್ಟೂ ಅರ್ಥವನ್ನು ಕೊಡುವ ಸೂತ್ರರೂಪವಾದ ಅನೇಕ ಮಾತುಗಳನ್ನು ವಚನಸಾಹಿತ್ಯದಲ್ಲಿ ಕಾಣುತ್ತೇವೆ. ಉದಾಹರಣೆಗೆ: "ಅರಿದೊಡೆ ಶರಣ; ಮರೆದೊಡೆ ಮಾನವ" "ಅಂಗಕ್ಕೆ ಬಡತನವಲ್ಲದೆ ಮನಕ್ಕೆ ಬಡತನವುಂಟೆ?" "ಆರಿಗಾರೂ ಇಲ್ಲ, ಕೆಟ್ಟವರಿಗೆ ಕೆಳೆಯಿಲ್ಲ" "ಕಾಯಕವೇ ಕೈಲಾಸ" "ಕೋಪಿ ಮಜ್ಜನಕ್ಕೆರೆದರೆ ರತ್ನದ ಧಾರೆ" "ತನಗೆ ಮುನಿವರಿಗೆ ತಾ ಮುನಿಯಲೇಕಯ್ಯ" "ತನ್ನ ತಾನರಿದೊಡೆ ತನ್ನರಿವೇ ಗುರು" "ದಯವೇ ಧರ್ಮದ ಮೂಲವಯ್ಯ" "ದೇವನೊಬ್ಬ ನಾಮ ಹಲವು" "ನಂಬಿದರೆ ಪ್ರಸಾದ ನಂಬದಿದ್ದರೆ ವಿಷ" "ಪಾಪಿಯ ಧನ ಪ್ರಾಯಶ್ಚಿತ್ತಕ್ಕಲ್ಲದೆ ಸತ್ಪಾತ್ರಕ್ಕೆ ಸಲ್ಲದಯ್ಯ" "ಭಕ್ತಗೊಂದೇ ವಾಕ್ಯ, ಬಾಳಿಗೊಂದೇ ಫಲ" "ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟ" "ಮಾಡುವ ಭಕ್ತಂಗೆ ಮನವೇ ಸಾಕ್ಷಿ" "ಹಾಲ ಹಿಡಿದು ಬೆಣ್ಣೆಯನರಸ ಉಂಟೆ?" "ಹೆಗ್ಗಣವನಿಕ್ಕಿ ನೆಲಗಟ್ಟು ಕಟ್ಟುವರೆ?"- ಇಂತಹ ಅಸಂಖ್ಯಾತವಾದ ಮಾತುಗಳಲ್ಲಿ ಶರಣರ ಲೋಕಾನುಭವ ಅಡಕವಾಗಿದೆ. ಅಡಕವಾದ ಮಾತುಗಳಲ್ಲಿ ಅಪಾರವಾದ ಅರ್ಥವನ್ನು ತುಂಬುವ ವಿಶಿಷ್ಟ ಶಕ್ತಿಯನ್ನು ಭಾಷೆಗೆ ಸಾಧಿಸಿಕೊಟ್ಟರು ಶರಣರು. ತಮ್ಮ ಉನ್ನತವಾದ ಮನೋಧರ್ಮದ ಮುದ್ರೆಯನ್ನು ಭಾಷೆಯ ಮೇಲೆ ಒತ್ತಿ ಅದನ್ನು ಶ್ರೀಮಂತವನ್ನಾಗಿಸಿದರು.

ಕನ್ನಡ ಸಾಹಿತ್ಯ ವಾಹಿನಿಯ ಒಂದು ಉಜ್ವಲ ಘಟ್ಟವಾಗಿ ಪರಿಣಮಿಸಿತು ಶರಣಸಾಹಿತ್ಯ. ಶರಣರ ಬಹು ಮುಖವಾದ ಪ್ರತಿಭೆ, ಅನುಭವ ಮತ್ತು ಸಾಧನೆಗಳನ್ನು ಅದು ಒಳಗೊಂಡಿದೆ. ಅವರ ನಿರೂಪಣೆಯ ಮಾರ್ಗ, ಮಾತಿನ ರೀತಿ, ಕೊಡುವ ಉಪಮಾನ ಸಾದೃಶ್ಯಗಳು, ವಿಷಯ ಪ್ರತಿಪಾದನೆಯ ಕ್ರಮ, ಕೊನೆಯಲ್ಲಿ ಉಂಟುಮಾಡುವ ಪರಿಣಾಮ–ಇವೆಲ್ಲವುಗಳು ವಚನಸಾಹಿತ್ಯದ ವಿಶಿಷ್ಟ ಶಕ್ತಿಯನ್ನು ತೋರಿಸುತ್ತವೆ. ಒಟ್ಟಿನಲ್ಲಿ ಈ ಸಾಹಿತ್ಯ ತನ್ನ ರೂಪ ಮತ್ತು ಸ್ವರೂಪದಿಂದಲೂ ಕೂಡ ಕನ್ನಡ ಸಾಹಿತ್ಯ ಭಂಡಾರದ ಅಮೂಲ್ಯ ಸಂಪತ್ತಾಗಿ ವಿಶ್ವಸಾಹಿತ್ಯದ ದೃಷ್ಟಿಯಿಂದ ಕನ್ನಡದ ಬೆಲೆಯನ್ನು ಹೆಚ್ಚಿಸಿದೆ.

ಬಿ. ಸಿ. ಜವಳಿ

ರಗಳೆ

ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ 'ರಗಳೆ'ಯೆಂಬುದನ್ನು ಸಾಹಿತ್ಯದ ರೂಪವನ್ನಾಗಿ (Form of literature) ಮಾಡಿದ ಶ್ರೇಯಸ್ಸು ಪ್ರಪ್ರಥಮವಾಗಿ ಮಹಾಕವಿ ಹಂಪೆಯ ಹರಿಹರದೇವನಿಗೆ ಸಲ್ಲುತ್ತದೆ. ಸಾಹಿತ್ಯದ ಈ ರೂಪದ ಪ್ರಾರಂಭೋತ್ಸವ ಮತ್ತು ಮುಕ್ತಾಯ ಸಮಾರಂಭಗಳೆರಡನ್ನೂ ಆತನೇ ಮಾಡಿದನೆಂದು ಹೇಳಿದರೆ ಅತಿಪ್ರಶಂಸೆಯಾಗಲಿಕ್ಕಿಲ್ಲ. 'ರಗಳೆ', ಕಾವ್ಯಮಾಧ್ಯಮದ ಮತ್ತು ಛಂದಸ್ಸಿನ ರೂಪ ವೇನೋ ನಿಜ; ಹರಿಹರಕವಿಯವರೆಗೆ ಕಾವ್ಯದ ಮಾಧ್ಯಮವಾದುದಕ್ಕೆ ನಮಗೆ ದೃಷ್ಟಾಂತಗಳಿಲ್ಲ; ಹರಿಹರನ ಪೂರ್ವದಲ್ಲಿ, ಹರಿಹರನ ನಂತರ ಬಂದ ಕವಿಗಳು ರಗಳೆಯನ್ನು ಬಳಸಿದ್ದರೂ ಅವನಷ್ಟು ಸತ್ವಪೂರ್ಣವಾಗಿ ಯಾರೂ ಬಳಸದೇ ಇದ್ದುದರಿಂದ ಅದನ್ನು ಬಳಸಿ, ಬೆಳಸಿದ ಶ್ರೇಯಸ್ಸು ಸಂಪೂರ್ಣವಾಗಿ ಆತನಿಗೆಯೇ ಸಲ್ಲುತ್ತಿದೆ.

ಹರಿಹರದೇವನನ್ನು ಹೊರತುಪಡಿಸಿ ಮತ್ತೆ ಕೆಲವರು ರಗಳೆಗಳನ್ನು ಬಳಸಿರುವುದೂ ಕಂಡುಬರುತ್ತಿದೆ. ಉದಾಹರಣೆಗೆ ಸಾಹಿತ್ಯ ಚರಿತ್ರೆಯಲ್ಲಿ ಕೆರೆಯ ಪದ್ಮರಸರ 'ದೀಕ್ಷಾಬೋಧೆ', ಪಾಲ್ಕುರಿಕೆ ಸೋಮನಾಥನ 'ಸದ್ಗುರು ರಗಳೆ', 'ಚೆನ್ನಬಸವ ಸ್ತೋತ್ರ', 'ಶರಣಬಸವರಗಳೆ', ಭೀಮಕವಿಯ 'ಭೀಮಕವೀಶ್ವರ ರಗಳೆ', ನಿಜಗುಣ ಶಿವಯೋಗಿಗಳ 'ಪರಮಾರ್ಥಗೀತೆ', ಈ ಹೆಸರುಗಳು ಕಣ್ಣಿಗೆ ಬೀಳುತ್ತವೆ[1]. ಇವುಗಳಲ್ಲಿ ಕೆರೆಯ ಪದ್ಮರಸರು, ಪಾಲ್ಕುರಿಕೆಯ ಸೋಮನಾಥನು ಹರಿಹರನ ಸಮಕಾಲೀನ ರೆಂದಿಟ್ಟುಕೊಂಡರೆ, ಭೀಮಕವಿ ಮತ್ತು ನಿಜಗುಣಶಿವಯೋಗಿಗಳು ನಂತರ ಬಂದ ಕವಿಗಳು. ಒಟ್ಟಾರೆ ಹರಿಹರನನ್ನು ಹೊರತುಪಡಿಸಿ ರಗಳೆಯನ್ನು ಬರೆದು ಪ್ರಚಾರಕ್ಕೆ ತಂದವರು ಅತಿಕಡಿಮೆ; ಆ ಕೃತಿಗಳೂ ಉದ್ದಾಮಕೃತಿಗಳಾಗಿಲ್ಲ; ಆದುದರಿಂದ 'ರಗಳೆ'ಯ ವಿಷಯವಾಗಿ ಹೇಳುವಾಗ ಹರಿಹರನೇ ಆ ಸಾಹಿತ್ಯರೂಪದ ಉದ್ದಾಮ ಪ್ರತಿನಿಧಿ; ಸಾರ್ವಭೌಮನೆಂದು ತಿಳಿಯಲಡ್ಡಿಯಿಲ್ಲ.

---

[1] ಕನ್ನಡ ಸಾಹಿತ್ಯ ಚರಿತ್ರೆ, ರಂ. ಶ್ರೀ. ಮುಗಳಿ (೧೯೫೩), ಪುಟ ೧೪೧, ೧೪೩. ೨೨೮.

ಬಡವರ ಮನೆಯ ಕಿರುಜೊಡರಂತೆ ಕನ್ನಡ ಚಂಪೂಕಾವ್ಯಗಳಲ್ಲಿ ರಗಳೆಯ ಮಟ್ಟು ಅಲ್ಲಲ್ಲಿ ಮಿಣುಮಿಣನೆ ಮಿಣುಕುತ್ತಿದ್ದುದು, ಹರೀಶ್ವರನ ಕೈಯಲ್ಲಿ ತೇಜಃಪುಂಜ ವಾಯಿತು. ಕವಿಗಳು ರಗಳೆಯನ್ನು ಅಲ್ಲಲ್ಲಿ ಉಪಯೋಗಿಸಿದ್ದಾರೆ, ನಿಜ; ಆದರೆ ಅದು ಮೆಚ್ಚಿಗಾಗಿ, ದೇಶೀಯರಿಗಾಗಿ; ಅದರಲ್ಲೂ ಬರೆಯಬಲ್ಲೆನೆಂದು ತೋರಿಸಿಕೊಳ್ಳುವುದ ಕ್ಕಾಗಿ; ಅಷ್ಟೇ ಹೊರತು ಕನ್ನಡ ಛಂದಸ್ಸಿನಲ್ಲಿಯೇ ಗ್ರಂಥ ಬರೆಯಲು ಯಾವ ಕವಿಯೂ ಯತ್ನಿಸಿದಂತೆ ತೋರುವುದಿಲ್ಲ[2]. ಹೆಚ್ಚಾಗಿ ಪಂಪ, ರನ್ನ ಮೊದಲಾದವರ ಕಾವ್ಯಗಳಲ್ಲಿ ರಗಳೆಯ ಛಂದಸ್ಸು ಬಂದ ಸನ್ನಿವೇಶಗಳನ್ನು ನೋಡಿದರೆ ಅದು ವರ್ಣನಾ ಭಾಗಕ್ಕೆ ಕೆಲವೆಡೆ ಬಂದಂತೆ ತೋರುತ್ತದೆ. ಮಹಾಕಾವ್ಯಗಳ ಮಾಧ್ಯಮವಾದ ಚಂಪೂರೂಪವು ಮಹಾವ್ಯಕ್ತಿಗಳ ಕಥೆಯನ್ನೇ ಸಂಸ್ಕೃತ ಶೈಲಿ, ವೃತ್ತಗಳ ಮೆರುಗಿನಿಂದ ಮೆರೆಸುತ್ತಿತ್ತು. ಅರಸರ ರಾಜವೇಷದಂತೆ ಕಂಗೊಳಿಸುತ್ತಿದ್ದ ಗೀರ್ವಾಣ ಭಾಷೆಯ ವೃತ್ತಗಳಿಂದಿಡಿದ ಚಂಪೂಶೈಲಿಯು, ನಾಡಿನ ನಾಡಿಯಂತಿದ್ದ ಶ್ರೀಸಾಮಾನ್ಯನ ಚರಿತ್ರೆಗೆ ಮೆರುಗು ತಂದೀತೇ ಎಂಬ ಭಾವನೆ ಕವಿಗಳಿಗಿದ್ದಿರಬಹುದಾದುದರಿಂದ ತನ್ನ ಕಥಾನಾಯಕರ ಚರಿತ್ರೆಯನ್ನು ಬರೆಯಲು ಶ್ರೀ ಸಾಮಾನ್ಯನನ್ನು ಅಂದವಾಗಿಸಬಲ್ಲ ಮಾಧ್ಯಮವನ್ನೇ ರಗಳೆಯನ್ನಾಗಿ ಆಯ್ದುಕೊಂಡುದು ಹರಿಹರ ಕವಿಯ ಜಾಣ್ಮೆ ಯೆಂದೆನ್ನಬಹುದು.

'ಯಥಾರಾಜಾ ತಥಾಪ್ರಜಾ'; 'ರಾಜನ ದೋಷವಿಲ್ಲದೆ ಪ್ರಜೆಗಳಲ್ಲಿ ದೋಷವಿಲ್ಲ' ಎನ್ನುವ ಅಂದಿನ ಕಾಲದಲ್ಲಿ ರಾಜನೇ ಆದರ್ಶಪುರುಷನೆಂಬ ಕಾರಣದಿಂದ, ಮಹಾವ್ಯಕ್ತಿಗಳೆಂದರೆ ದೇವತೆಗಳು, ಅರಸರು ಎಂದು ಪರಿಭಾವಿಸಿ ಕಾವ್ಯನಿರ್ಮಾಣ ಮಾಡಿದ ಭಾರತೀಯ ಸಾಹಿತ್ಯದ ಹಿನ್ನೆಲೆಯಲ್ಲಿಯೇ ಕನ್ನಡದಲ್ಲಿ ಜೈನಸಾಹಿತ್ಯವು ಬೆಳೆದುಬಂದಿದೆ. ನಾಡಿನ ಕೂಲಿಕಾರನೊಬ್ಬ, ಬಡ ಒಕ್ಕಲಿಗನೊಬ್ಬ, ಬಡ ವಿಧವೆಯೊಬ್ಬಳು ತನ್ನ ಪಾಡಿಗೆ ತಾನು ಉತ್ತಮ ಜೀವನ ನಡೆಸಿಕೊಂಡುಬಂದು ಆತ್ಮೋದ್ಧಾರಮಾಡಿಕೊಂಡಿದ್ದರೆ ಅವರ ಪ್ರಭಾವವು ಇತರರ ಮೇಲೆ ಆಗಬಹುದೇ? ಇಂದು ಸಹ ನಮಗೆ ಇಂತಹ ಯಾವ ವ್ಯಕ್ತಿಗಳ ಚರಿತ್ರೆಮಾನ್ಯವಾಗಿದೆಯೆ? ಅವರನ್ನು ಮಹಾವ್ಯಕ್ತಿಗಳೆಂದು–ಚರಿತ್ರಾರ್ಹರೆಂದು, ಪೂಜ್ಯರೆಂದು ಪರಿಗಣಿಸಿ ಕಥೆ–ಕಾವ್ಯ ಬರೆವರಾರು? ಆದರೆ ಹರೀಶ್ವರ ಮಹಾಕವಿ ಮಾತ್ರ ಆತ್ಮೋದ್ಧಾರ ಮಾಡಿಕೊಂಡ ಯಾವುದೇ ಸ್ತ್ರೀ ಇರಲಿ, ಪುರುಷನಿರಲಿ, ಗುರು ಇರಲಿ, ಶಿಷ್ಯನಿರಲಿ, ಬಾಲ–ಬಾಲಕಿಯಿರಲಿ, ವೃದ್ಧರಿರಲಿ ಅವರೂ ಮಹಾನುಭಾವರೆಂದು ಬಗೆದು, ಪುರಾತನ ರನ್ನು ಪ್ರಮಥರನ್ನು ಹೆಣ್ಣು ಗಂಡು, ಮೇಲುಕೀಳು ಎಂಬ ಭೇದವಿಲ್ಲದೆ, ಮಹಿಮರ ಮಹಿಮೆಯ ಕೊಂಡಾಟಕ್ಕೆ ರಗಳೆಯನ್ನೇ ಉಪಯೋಗಿಸಿಕೊಂಡಿದ್ದಾನೆ. ಅಂದಮೇಲೆ ಅವನಿಗೆ ಸಾಮಾನ್ಯವೆಂದಿದ್ದ ರಗಳೆಯೂ ಪೂಜ್ಯವೇ ಆಯ್ತು. ಅರಸರಿಗೆ ಚಿಕ್ಕಮನೆ

---

2 ಕನ್ನಡ ಸಾಹಿತ್ಯ, (೧೯೫೦); ಕೆ. ವೆಂಕಟರಾಮಪ್ಪ, ಎಂ.ಎ., ಪುಟ ೩೧

ಯಾದರೆ ಸರಿಹೊಂದೀತೇ? ಭವ್ಯ ಅರಮನೆಯೇ ಆಗಬೇಕು. ಅಂತೆಯೇ ಸಮಾಜದ ಕಣ್ಣಿನಲ್ಲಿ ಕಿರಿಯರಾಗಿದ್ದವರ ಬಣ್ಣನೆಗೆ ಹಿರಿದಾದರೂ ಅಷ್ಟೇ ಕಿರಿದಾದರೂ ಅಷ್ಟೇ; ಹಿರಿದು ಕಿರಿದೆರಡನ್ನು ವಿವರಿಸಬಲ್ಲ ಕಾವ್ಯಮಾಧ್ಯಮವಾಯ್ತು ರಗಳೆ ಹರೀಶ್ವರ ಸತ್ಕವಿಗೆ. ಎಲ್ಲಿ ಬೇಕೋ ಅಲ್ಲಿ ನಿಲ್ಲಬಹುದು; ಎಷ್ಟು ಬೇಕೋ ಅಷ್ಟು ಲಂಬಿಸ ಬಹುದು. ಕಥೆಗೆ ತಡೆಬಾರದ ಸುಂದರವಾದ ಮಾಧ್ಯಮವಾಗಿ ಹರಿಹರನು ರಗಳೆ ಯನ್ನು ಈ ಕಾರಣಕ್ಕಾಗಿ ಬಳಸಿಕೊಂಡಿದ್ದಾನೆಂದು ತಿಳಿಯಲವಕಾಶವಿದೆ. ಈ ಕಾರಣದಿಂದಲೇ ಅಂತಹ ಶರಣರನ್ನು 'ಲಿಂಗಾರ್ಚನೆ'ಯ ಕಾಲದಲ್ಲಿ ಸ್ಮರಿಸಬಹುದೆಂದು ಕಣ್ಣಪ್ಪ, ಚೋಳಿಯಕ್ಕ, ಒಕ್ಕಲಿಗಮುದ್ದಯ್ಯ, ಮಾದಾರ ಚೆನ್ನಯ್ಯ ಮೊದಲಾದ ಹಲವು ಶಿವಶರಣರ ಮಹಿಮೆಯನ್ನು ತನ್ನ 'ಲಿಂಗಾರ್ಚನೆಯ ರಗಳೆ'ಯಲ್ಲಿ ಹಾಡಿ ತೃಪ್ತಿ ಹೊಂದಿದ್ದಾನೆ. ಈ ಶಿವಶರಣರೆಲ್ಲ ನಾನಾ ಜಾತಿಗಳಲ್ಲಿ ಜನಿಸಿದವರಾಗಿದ್ದರೂ ಶಿವಭಕ್ತಿಯನ್ನಪ್ಪಿ, ಲಿಂಗಪೂಜೆ, ಲಿಂಗಧ್ಯಾನಮಾಡಿ ಆತ್ಮೋದ್ಧಾರ ಮಾಡಿಕೊಂಡು, ನಾಡಿನ ಉದ್ಧಾರ, ಕುಲೋದ್ಧಾರ ಮಾಡಿದವರೆಂದು ಬಗೆದೇ ಹರೀಶ್ವರ ಕವಿಯು ಆ ಕಾವ್ಯದಲ್ಲಿ:

> " ಆವ ಜಾತಿಗಳೊಳಗೆ ಹುಟ್ಟಿಸಿದೊಡೆಲೆ ದೇವ
> ನೀವಲ್ಲದರಿಯದಂತಿರಿಸೆನ್ನನೆಲೆ ದೇವ " [3]

ಎಂದು ಹೇಳಿದ್ದಾನೆ. ನಮ್ಮ ನಾಡಿನಲ್ಲಿ ಕಿರಿಯರಿಗೂ ವ್ಯಕ್ತಿತ್ವವಿದೆ, ಬುದ್ಧಿಯಿದೆ, ಚರಿತ್ರೆಯಿದೆಯೆಂಬುದನ್ನು ಕನ್ನಡ ನಾಡಿಗೆ ಎತ್ತಿತೋರಿಸಿದ ಕೀರ್ತಿ ಪ್ರಥಮವಾಗಿ ಆವನಿಗೆ ಸಲ್ಲಲೇಬೇಕು. ಜಾತಿಯಿಂದ ಹೀನನಾದವನು ಸರ್ವಕಾಲಕ್ಕೂ ಕೀಳಾಗಿಯೇ ಇರಬೇಕೆಂಬುದು ಶಿವಶರಣರಿಗೆ ಸೇರಲಿಲ್ಲ; ಅದನ್ನೆ ಹರಿಹರಕವಿಯು ಅನುಮೋದಿಸಿದ. ನಾಡಿನಲ್ಲಿ ಆತ್ಮವಿಕಾಸಮಾಡಿಕೊಂಡವರು, ಅಂತರಂಗ ಬಹಿರಂಗಶುದ್ಧರಾದವರು ಎಲ್ಲಿಯೇ ಇರಲಿ, ಹಿರಿಯರೇ ಇರಲಿ ಕಿರಿಯರೇ ಇರಲಿ ಅವರು ಎಂದೆಂದಿಗೂ ಪೂಜ್ಯ ರೆಂಬುದನ್ನು ಭರತಖಂಡದಲ್ಲಿ ತೋರಿಸಿದ ಶ್ರೇಯಸ್ಸು ಕನ್ನಡ ಕವಿಯೊಬ್ಬನಿಗೆ ಸಲ್ಲುತ್ತಿದೆಯೆಂದರೆ ಹೆಮ್ಮೆಯ ಮಾತೇ ಸರಿ. 'ಆವ ಜಾತಿ'ಯೆಂದರೆ ಕವಿಯ ಅಭಿ ಪ್ರಾಯದಲ್ಲಿ ಕೇವಲ ಮಾನವ ಜಾತಿಯಲ್ಲ; ಪ್ರಾಣಿಗಳಾಗಿ ಹುಟ್ಟಿದರೆಯೂ ಶಿವ ಭಕ್ತರ ರಾಜ್ಯದಲ್ಲಿ–ಶಿವಭಕ್ತರ ದೃಷ್ಟಿಗೆ ಬಿದ್ದರೆ ಅವರಿಗೆ ಮುಕ್ತಿದೊರಕುತ್ತಿದೆ ಎಂಬ ಉನ್ನತ ವಿಚಾರವು ಹರಿಹರ ಕವಿಯದು. ಹೀಗಿರುವುದರಿಂದಲೇ ತನ್ನ 'ಬೇಡರ ಕಣ್ಣಪ್ಪನ ರಗಳೆ'ಯಲ್ಲಿ, ಒಂದೆಡೆಗೆ ಬೇಡರ ಕಣ್ಣಪ್ಪನು ಬೇಟೆಯಾಡುವಾಗ, ಆ ಬಾಣಗಳಿಗೆ ಎಷ್ಟೋ ಪ್ರಾಣಿಗಳು ಆಹುತಿಯಾದಾಗ ಕವಿಯು ಈ ರೀತಿ ಬಣ್ಣಿಸಿದ್ದಾನೆ.

---

[2] ಲಿಂಗಾರ್ಚನೆಯ ರಗಳೆ–ಹರಿಹರನ ರಗಳೆಗಳು (೧೯೩೩), ಸಂ. ಫ. ಗು. ಹಳಕಟ್ಟಿ. ಪು. ೭೫

"ಇಂಬಿನಿಂ ಮೃಗಕುಳವನೆಸುವ ಪರಿ ಪೊಸತಾಗೆ
ಎಸುತಬರೆ ಸಗ್ಗಕ್ಕೆ ಹಾರುತ್ತಿಪ್ಪವು ನೋಡಾ !
ಕಂಡವಂ ಮರುಮೆಟ್ಟ ಮೆಟ್ಟಲೀಯದೆ ಯೆಸುತೆ
ಕಂಡವಂ ಮರುಹುಟ್ಟ ಹುಟ್ಟಲೀಯದೆ ಯೆಸುತೆ-"[4]

ಬೇಟೆಯಾಡಿದನೆಂದು ಕವಿಯು ವರ್ಣಿಸಿದ್ದಾನೆ ! ಇಲ್ಲಿ ಬೇಡರ ಕಣ್ಣಪ್ಪನ ಬಾಣಗಳಿಗೆ ಪ್ರಾಣಿಯ ವೃಂದವು ಆಹುತಿಯಾಗುತ್ತಿದ್ದುದೂ ಕವಿಯ ದೃಷ್ಟಿಯಲ್ಲಿ ಪುಣ್ಯಕಾರ್ಯವೇ! ಅವುಗಳಿಗೆ ಮರುಹುಟ್ಟು (ಪುನರ್ಜನ್ಮ) ಇಲ್ಲ ! ಮಾನವನಿಗೆ ಮುಕ್ತಿಯನ್ನು ಸಾಧಿಸ ಬೇಕಾದರೆಯೇ ಅನೇಕ ಜನ್ಮಗಳು ಬೇಕೆಂದು ಭಾರತೀಯ ದರ್ಶನಗಳು ಹೇಳುತ್ತಿದ್ದರೆ, ಹರೀಶ್ವರನ ದರ್ಶನದಲ್ಲಿ ಶಿವಭಕ್ತರ ದೃಷ್ಟಿತಾಗಿದವನು ಯಾವುದೇ ಜೀವಿಯಾಗಿರಲಿ, ಅವನಿಗೆ ಸ್ವರ್ಗವಿದೆಯೆಂಬುದನ್ನು ತಿಳಿಸುವುದು ಸಾಮಾನ್ಯ ಮಾತಲ್ಲ ! ಮಾನವ ಜೀವಿಗಿಂತಲೂ ಬೇಡರ ಕಣ್ಣಪ್ಪನ ಬಾಣಗಳಿಗೆ ಆಹುತಿಯಾದ ಪ್ರಾಣಿಗಳ ಬಾಳುವೆಯೇ ಉತ್ತಮ ಎಂಬುದು ಅವನಿಗೆ ಒಪ್ಪಿತ ತತ್ವವಾದ್ದರಿಂದ ಅವನಿಗೆ ಮಾನವ ಜನ್ಮವೇ ಹಿರಿದಾಗಿ ತೋರಿಲ್ಲ. ಯಾವ ಜನ್ಮದಲ್ಲಿದ್ದರೂ ಶಿವಭಕ್ತರ ಸಾನ್ನಿಧ್ಯದಲ್ಲಿದ್ದು ಶಿವನನ್ನು ಅರಿತು ಬಾಳುವುದೇ ಮೇಲಾದುದು ಎಂಬುದು ಅವನ ಸಂದೇಶವಾಗಿದೆ.

ಹರಿಹರನು ಮಹಾಭಕ್ತ ; ಮಹಾಕವಿ. ಆತನ ಕಾವ್ಯಗಳಲ್ಲಿ ವಿಷಯ ಸಂಗ್ರಹ, ಕಾವ್ಯಸೌಂದರ್ಯ ಪ್ರಜ್ಞೆ ತುಂಬಿತುಳುಕುತ್ತವೆ. ನಮ್ಮ ದೇಶದಲ್ಲಿ ಚರಿತ್ರೆಯೆಂದರೆ ರಾಜ-ರಾಣಿಯರ ದಿನಚರಿ ; ಅವರು ಲಗ್ನವಾದ-ಜನಿಸಿದ-ಸತ್ತ, ಕೆಲಬಾರಿ ಯುದ್ಧ ಮಾಡಿದ ವಿಷಯಗಳ ವರದಿ ಇವೆ. ಕಾವ್ಯದಲ್ಲಿಯೂ ಅದೇ ಆಗಿತ್ತು ; ಆದರೆ ಹರಿಹರನ ಕಾವ್ಯ ಸಂಪತ್ತು ಜನತೆಯ ಆತೆ-ಆಕಾಂಕ್ಷೆ, ಜನಜೀವನದ ಹೋರಾಟ, ಜನತೆಯ ಸುಖ-ದುಃಖಗಳಿಂದ ಕೂಡಿರುವುದರಿಂದ ಅವನು ನಿಜವಾದ ಚರಿತ್ರೆಕಾರನೂ, ಜನತೆಯ ಪ್ರತಿನಿಧಿಯೂ ಆಗಿದ್ದಾನೆನ್ನಲು ಅಡ್ಡಿ ಇಲ್ಲ. ಹರೀಶ್ವರನ ಶಿವಶರಣರ ಚರಿತ್ರೆಗಳಿಗೆ 'ರಗಳೆ' ಒಂದು ಮಾಧ್ಯಮ ಮಾತ್ರ. ಶರಣನ ಚರಿತ್ರೆ ಪದ್ಯದಲ್ಲಿ ಬರೆದ ಕಿರುಗತೆ-ಕೆಲವೆಡೆ ನೀಳ್ಗತೆಯೆನ್ನಬಹುದು. ಅವನ ಕಾವ್ಯದಲ್ಲಿ ವ್ಯಕ್ತಿಗಳು ಪ್ರಾಯಕ್ಕೆ ಬೆಲೆಯಿತ್ತವರಲ್ಲ ; ಅಭಿಪ್ರಾಯಕ್ಕೆ ಬೆಲೆಯಿತ್ತವರು. ಆದುದರಿಂದ ಕೋಳೂರು ಕೊಡಗೂಸಿನ ಚರಿತ್ರೆಯೂ ಪೂಜ್ಯವೇ. ಯಾಕೆಂದರೆ ಅವರೆಲ್ಲ ಪ್ರಥಮತಃ ಶಿವಭಕ್ತರು ; ಪ್ರಮಥರು, ಪೂಜ್ಯರು. ಯಾವುದೇ ಕಲೆಯಿರಲಿ, ಉದ್ಯೋಗವಿರಲಿ, ಭಕ್ತಿಯ ಶಕ್ತಿಯಿಂದ ಪರುಷಮುಟ್ಟಿದ ಕಬ್ಬಿಣ ಹೊನ್ನಾದಂತೆ-ಅದು ಶಾಶ್ವತವಾಗುತ್ತಿದೆಯೆಂಬುದನ್ನು ನಾವು ಭಕ್ತರ ಪ್ರತ್ಯಕ್ಷ ಚರಿತ್ರೆಯಿಂದ ತಿಳಿಯಲವಕಾಶವಿದೆ. ಉದಾಹರಣೆಗೆ, ಕಾಳಿದಾಸನ ಕಾವ್ಯ, ಪಂಪ-ಬಸವೇಶ್ವರ-ಹರಿಹರಾದಿಗಳ ಕಾವ್ಯ, ನಿಜಗುಣ

4. ಕಣ್ಣಪ್ಪನ ಮಹಾತ್ಮೆ ; ಹರಿಹರನ ರಗಳೆಗಳು (೧೯೩೩) ; ಸಂ. ಫ. ಗು. ಹಳಕಟ್ಟಿ. ಪು. ೨-೩.

ಶಿವಯೋಗಿ–ಪುರಂದರದಾಸ–ತ್ಯಾಗರಾಜಾದಿಗಳ ಸಂಗೀತ, ಜಕ್ಕಣಾಚಾರ್ಯನ ಶಿಲ್ಪ, ಮೈಕೆಲ್‌ಏಂಜೆಲೋನ ಶಿಲ್ಪ ಮತ್ತು ತೈಲಚಿತ್ರ, ಬೇಡರಕಣ್ಣಪ್ಪ, ಕುಂಬಾರ ಗುಂಡಯ್ಯ ಇವರ ಉದ್ಯೋಗಇವೆಲ್ಲ ಅಮರವಾಗಿರುವುದು ಭಕ್ತಿಯಶಕ್ತಿಯಿಂದಲೇ ಎನ್ನುವುದನ್ನು ನಾವು ಮರೆಯಬಾರದು. ಆ ಕಾರಣದಿಂದ ಹರಿಹರಕವಿಯು ಶಿವಶರಣರ ಚರಿತ್ರೆಯಲ್ಲಿ ಪ್ರತಿಪಾದಿಸಿದ ‘ ಭಕ್ತಿ ತತ್ವವು ’ ಅಂದಿಗೆ ಮಾತ್ರವಲ್ಲ, ಎಂದೆಂದಿಗೂ ಉತ್ತಮಫಲವನ್ನು ಕೊಡುವ ಮೌಲ್ಯ ವಾಗಿದೆಯೆಂದು ತಿಳಿಯಬೇಕು. ಈ ದೃಷ್ಟಿಯಿಂದಲೇ ಹರೀಶ್ವರ ಕವಿಯ ಕಾವ್ಯಗಳು ಅಮರ ಕಾವ್ಯಗಳು. ಆ ಭಕ್ತರ ಉಜ್ವಲ ಚರಿತ್ರೆಯಲ್ಲಿ ಅಂದಿನ ಜನಜೀವನದ ಚಿತ್ರವು ಅತಿರಮಣೀಯವೂ ಸಹಜವೂ ಆಗಿ ಚಿತ್ರಿತವಾಗಿರುವುದರಿಂದ ನಮ್ಮ ಇತಿಹಾಸದ ತಿಳಿವಿಗೆ ಶಿಲಾಶಾಸನಗಳೆಷ್ಟು ಆಧಾರವೋ ಅಷ್ಟೇ ಬೆಲೆಯುಳ್ಳ ಸಾಮಾಗ್ರಿಗಳು ಆತನ ಕಾವ್ಯಗಳು ; ಚಾರಿತ್ರಿಕ ವಿವರ–ಕಾವ್ಯಪ್ರಜ್ಞೆಗೆ ಉತ್ತಮ ನಿರ್ದಶನ ; ಸುಳಿವ ಶಾಸನವಿದ್ದಂತೆ. ಭಕ್ತಿಯೊಂದು ಚಿರಂತನ ಮೂಲ್ಯವೆಂಬಂತೆ ತಿಳಿದುಕೊಂಡ ಕವಿಯು ಆ ಭಕ್ತಿಯ ಪರಿಣಾಮಗಳನ್ನು ಈ ರೀತಿ ತಿಳಿಸಿದ್ದಾನೆ.

“ ಭಕ್ತಿಸುಖದಿಂದಿತರ ಸುಖವದೆಲ್ಲಿಯದೆನಿಸಿ,
ಮುಕ್ತಿ ಸುಖದಿಂದಧಿಕಮಿದಕೆ ಪಡಿಯಿಲ್ಲೆನಿಸಿ,
ಪರುಷವಂ ಬಿಸುಡೆಂದು ಸುರಭಿಯಂ ತೆಗೆಯೆಂದು,
ಸುರತರುವನೊಲ್ಲೆನೆಂದಮೃತವಂ ಚೆಲ್ಲೆಂದು,
ನಿಧಿಗಳಂ ನೂಂಕು ಚಿಂತಾಮಣಿಯನಿಡುಕೆಂದು,
ಮಧುಗಿಧುಗಳೆಲ್ಲಯುವವೇತೇಜಿವವೇಕೆಂದು,
ಉರವಣಿಪ ಪರಮಬಕುತಿಯ ಸುಖದ ಸೊಕ್ಕೇಱಿ,
ಪರಮಪದದಾನಂದ ಸುಖದ ಸುಧೆ ತಲೆಗೇಱಿ,
....
ಮುತ್ತಿದರಿಷಡ್ವರ್ಗವತ್ತ ಸಾಕುತ್ತಮಿರೆ
ಹತ್ತಿರ್ದ ತಾಪತ್ರಯಂ ತಣ್ಣನಾಗುತಿರೆ” [5]

ಈ ರೀತಿಯ ವಿವರಗಳಲ್ಲಿ ಕವಿಯು, ಭಕ್ತಿಯ ಪರಿಣಾಮವು ಅರಿಷಡ್ವರ್ಗದಿಂದ ಮಾನವನನ್ನು ದೂರವಿರಿಸಿ ತಾಪತ್ರಯಗಳನ್ನು ನೀಗಿಸಿ, ವ್ಯಾಮೋಹವನ್ನು ತೊಲಗಿಸಿ, ಪರುಷ, ಸುರಭಿ, ಚಿಂತಾಮಣಿ, ಸುರತರು, ಮಧು, ಸುಧೆಗಳ ಫಲಕ್ಕಿಂತಲೂ ಉನ್ನತವಾದ ಫಲಗಳನ್ನೀಯುತ್ತದೆ ಎಂಬ ತತ್ವವನ್ನು ತಿಳಿಸಿದುದನ್ನು ಕಾಣುತ್ತೇವೆ. ಆದುದರಿಂದ ಅವನ ಶರಣರು ಈ ಹಿನ್ನಲೆಯುಳ್ಳವರು ಎಂದು ಅರಿಯಬೇಕು. ಇವೆಲ್ಲವುಗಳನ್ನು ಅಪೇಕ್ಷಿಸಿದವನು ಲೌಕಿಕದ ಸ್ವಾರ್ಥಕ್ಕೆ ಬಲಿಬೀಳುತ್ತಾನೆ; ಇವೆಲ್ಲವುಗಳನ್ನು ತ್ಯಜಿಸಿದವನು ಲೌಕಿಕ ಸುಖ ದುಃಖಗಳಿಗೆ ಮಾರುಹೋಗುವವನಲ್ಲ ಈ ಭಕ್ತಿಭಾವದಿಂದಲೇ

---

5 ಪುಷ್ಪ ರಗಳೆ–ಹಂಪೆಯ ಹರಿಹರದೇವನ ರಗಳೆಗಳು ಭಾಗ ೧ (೧೯೫೮); ಸಂ: ಬಿ. ಸಿ. ಜವಳಿ, ಎಂ. ಎ., ಮತ್ತು ಮಲ್ಲಾಬಾದಿ ವೀರಭದ್ರಪ್ಪ, ಪುಟ ೪೨

ಹರಿಹರನ ಪುಷ್ಪರಗಳೆ ಹೊರಹೊಮ್ಮಿದೆ. ಕವಿಗೆ ಪುಷ್ಪಗಳಮೇಲೆ ಪ್ರೀತಿಯುಂಟಾದುದು ಪುಷ್ಪಗಳು ಶಿವನಪೂಜೆಗೆ ಆಭರಣಗಳಾಗಿವೆಯೆಂಬ ಕಾರಣದಿಂದಲ್ಲ ; ಶಿವನ ಪರಿಮಳ ಪುಷ್ಪರೂಪದಲ್ಲಿ ಪ್ರಕಟವಾಗಿದೆಯೆಂಬ ಕಾರಣದಿಂದ. ದವನವನ್ನು ವರ್ಣಿಸುವಾಗ :

" ದವನವೇ ಶಿವನಪರಿಮಳದ ಹಬ್ಬವೇ, ಬಾರ ;
ಭುವನದೊಳ್ನಿನಗೆ ಸರಿಯಿಲ್ಲ, ಸೌರಭ ಸಾರ !" [6]

ಎಂದು ವರ್ಣಿಸಿದ್ದಾನೆ. ಈ ದೃಷ್ಟಿಯನ್ನು ಬೆಳಸಿಕೊಳ್ಳುವುದು ಲೇಸೆಂದು ಪರಿಗಣಿಸಿ ದಲ್ಲಿ ವಸ್ತುಸೌಂದರ್ಯವೆಲ್ಲ ಶಿವಸ್ವರೂಪಿಯಾಗಿ ಕಂಗೊಳಿಸುತ್ತದೆ ; ಆತ್ಮೋದ್ಧಾರಕ್ಕೆ ದಾರಿಯಾಗುತ್ತದೆ. ಹರಿಹರನು ಭಕ್ತಿಯನ್ನು ಕೊಂಡಾಡುವಾಗ ಅದರ ಫಲಗಳನ್ನು ಈ ರೀತಿ ಕಾಣುತ್ತೇವೆ : ೧) ಭಕ್ತಿಯು ಕರ್ಮವನ್ನು ಛೇದನೆಮಾಡುತ್ತದೆ ; ೨) ಯೋಗವೊನ್ನೊದಗಿಸಿ ಆತ್ಮತೃಪ್ತಿಯನ್ನೊದಗಿಸುತ್ತದೆ ; ೩) ಮೋಕ್ಷವನ್ನು ಕೊಡುತ್ತದೆ ; ೪) ಜೀವನಕ್ಕೆ ಸೌಂದರ್ಯಪ್ರಜ್ಞೆ, ಪ್ರಾಮಾಣಿಕತೆಯನ್ನೊದಗಿಸುತ್ತದೆ ; ೫) ಅರಿಷಡ್ವರ್ಗ, ತಾಪತ್ರಯಗಳನ್ನು ನಿವಾರಿಸುತ್ತದೆ ; ೬) ಉದ್ಯೋಗವನ್ನು ಶಿವಪೂಜೆಯನ್ನಾಗಿಮಾಡುತ್ತದೆ ; ಶಿವಭಕ್ತಿಯಿಂದ ಮಾಡಿದ ಉದ್ಯೋಗವೇ ಯೋಗವಾಗುತ್ತದೆ. ಭಕ್ತನಿಗೆ ಜಗತ್ತಿನ ವ್ಯವಹಾರ, ಜೀವನದ ಸುಖದುಃಖ ಎಲ್ಲವೂ 'ಶಿವಲೀಲೆ' ಎಂಬ ಭಾವನೆ ಹರೀಶ್ವರನದು. ಈ ತತ್ತ್ವವನ್ನು ನಾವು ಕಾಣಬೇಕೆಂದರೆ ಅವನ ಬೇಡರ ಕಣ್ಣಪ್ಪನ ಚರಿತ್ರೆಯನ್ನು ಒಂದುಬಾರಿ ಅವಲೋಕಿಸಬೇಕು. ಪ್ರಾಣಿವಧೆ ಮಾಡುತ್ತಿದ್ದ ಕಣ್ಣಪನಿಗೆ ಅದು ಹಿಂಸೆ ಎಂಬ ಭಾವನೆಯೇ ಸುಳಿದಿಲ್ಲ. ಜಾತಿಯಿಂದ ಲುಬ್ಧನಾದ ಬೇಡನಿಗೆ ಉದ್ಧಾರಕ್ಕೆ ಅನುವು ಮಾಡಿ ಕೊಟ್ಟವನು ಶಿವನೇ. ಹರಿಹರ ಕವಿಯ ಹೇಳಿಕೆಯಂತೆಯೇ ಬೇಡರ ಕಣ್ಣಪ್ಪನು :

" ಸತ್ಯಮಂ ನುಡಿವುದಂ ಕನಸಿನೊಳ್ ಕಂಡರಿಯ–
ನತ್ಯಂತ ಶಿವನೆಂಬುದಂ ಮನಸಿನೊಳಗರಿಯ–
ನರಿಯನಾತಂ ಬೇರೆ ಪಿರಿಯರುಂಟೆಂಬುದಂ
ಪಸಿವಿಂಗೆ ತೆರಪಿಲ್ಲ, ವಿಷಯಕ್ಕೆ ತೆರಪಿಲ್ಲ
ವ್ಯಸನಕ್ಕೆ ತೆರಪಿಲ್ಲ ಪುಸಿವುದಕೆ ತೆರಪಿಲ್ಲ
ತನ್ನುವಂ ತಾನರಿಯನಿದಿರುವುಂ ಪರಿಕಿಸಂ
ಮುನ್ನಿನಾರಾಧನೆಯ ಪರಿಯುಂ ವಿಚಾರಿಸಂ "

ಎಂದಿದ್ದಾನೆ ಕವಿ. ಹೀಗಿದ್ದ ಲುಬ್ಧನಿಗೆ ಶಿವನೊಲುಮೆ ಆದುದು ಎಂತು ? ಯಾವ ಕಾರಣಕ್ಕಾಗಿ ? ಉತ್ತರವಿಷ್ಟೇ ; ಮುನ್ನ ಆರಾಧನೆ ಮಾಡಿದ್ದಾನೆ ; ಆದ್ದರಿಂದಲೇ ಶಿವನೊಲುಮೆಯಾಗಿದೆ; ಮಾಯಾಜಂಗಮರೂಪದಲ್ಲಿ ಶಿವನೇ ಬಂದು, ಕಾಳಹಸ್ತೀಶ್ವರ

---

6 ಅದೇ–ಪುಟ ೩೨

ದೇವಾಲಯಕ್ಕೆ ಆತನನ್ನು ಕರೆದೊಯ್ದು, ಅಲ್ಲಿ ಅವನಿಗೆ ಶಿವಜ್ಞಾನೋದಯವಾಗುವಂತೆಯೇ ಕರುಣಿಸಿದ್ದಾನೆ. ಮಾಯವಾದ ಮೃಗ ಕಣ್ಣಿಗೆ ಬಿದ್ದೊಡನೆ ಕಣ್ಣಪ್ಪನು :

"ಅಯ್ಯಯ್ಯ ಇಂತಪ್ಪ ನನ್ನಿಯಂ ಕಂಡೆನೇ !
ಕಯ್ಯಮೇಲೆ ತೋರುವೊಡೆಯನಂ ಕಂಡೆನೇ !"

ಎಂದು ಶಿವನ ಮಹಿಮೆಯನ್ನರಿತು ಪ್ರತ್ಯಕ್ಷಪ್ರಮಾಣದಿಂದ ಫಲವುಂಡು ನಂಬಿಗೆ ಬಲಿಸಿಕೊಳ್ಳುತ್ತಾನೆ. ಅಂದಿನಿಂದ ಮನೆಮಾರು ಎಲ್ಲವನ್ನೂ ಮರೆತು ಶಿವನ ಸೇವೆಯಲ್ಲಿಯೇ ಮಗ್ನನಾದ. "ಎನಗುಳ್ಳವಂ ನೀನೆ ; ನಿನಗುಳ್ಳವಂ ನಾನೆ" ಎಂಬ ಭಾವನೆ ಬಲಿಸಿಕೊಳ್ಳುತ್ತಾನೆ. ಲೌಕಿಕದಲ್ಲಿ ನಿರ್ಮೋಹಿಯಾಗಿ ಶಿವನಲ್ಲಿ ಮೋಹಿಯಾಗುತ್ತಾನೆ. ಹೀಗಾದರೆಯೇ ಭಕ್ತಿಸಾಧ್ಯವೆನ್ನುವಂತೆ ಕಣ್ಣಪ್ಪನ ರಗಳೆ ಪ್ರಾರಂಭವಾಗುತ್ತದೆ. ಬೇಡಿಬಯಸದಿದ್ದರೂ ಎಂದೋ ಮಾಡಿದ ಶಿವಾರಾಧನೆ ಕಣ್ಣಪ್ಪನ ಬೆನ್ನಟ್ಟಿ ಅವನ ಉದ್ಧಾರಕ್ಕೆ ಬರುತ್ತಿದೆ ; ಇಲ್ಲದಿದ್ದರೆ ಶಾಸ್ತ್ರರೀತ್ಯಾ ಕಣ್ಣಪ್ಪನಿಗೆ ಶಿವನೊಲುಮೆ ಸಾಧ್ಯವೇ ? ಮಾಯೆಮುಸುಕಿದ ಮಾತ್ರಕ್ಕೆ ಅವರನ್ನು ಜಡರೆನ್ನಬಹುದೇ ? ಕವಿಯು ಕಣ್ಣಪ್ಪನನ್ನು

"ಕಾರಣಿಕನೆಂದರಿಯಬಾರದಾತನ ವೇಷ !
ಆರಯ್ಯೆ ಕಾರ್ಮುಗಿಲ ಮರೆಯ ಸೂರ್ಯನ ವೇಷ" !

ಎಂದು ಕರೆದದು ಅದಕ್ಕೆಯೇ. ಮಹಿಮರನ್ನು ವೇಷದಿಂದ, ಉದ್ಯೋಗದಿಂದ, ಜಾತಿಯಿಂದ ಗುರುತಿಸಬಹುದೇ? ಎಂದೂ ಆಗದು ಎಂಬುದೇ ಹರೀಶ್ವರನು ನಂಬಿದ ತತ್ವವಾಗಿದೆ. ಆದುದರಿಂದ ಅವನ ಕಣ್ಣಪ್ಪನ ರಗಳೆ ಅತಿ ರಸವತ್ತಾದುದೂ, ರಮಣೀಯವಾದುದೂ, ನಾಟಕೀಯವಾದುದೂ ಆಗಿದೆ. ಕಣ್ಣಪ್ಪನ ಭಕ್ತಿ, ಶಿವನಲ್ಲಿಟ್ಟ ಅತಿಮಮತೆ, ಶಿವನಿಗೆ ಮಾಡಿನೀಡಿದ ಮಾಂಸದ ಉಣಿಸು, ಯಾರನ್ನಾದರೂ ತೃಪ್ತಿಪಡಿಸುವಂತಿವೆ ; ಶಿವನೂ ತೃಪ್ತಿಪಡೆದಿದ್ದಾನೆ ! ನಾಲಿಗೆಯಮೇಲೆ ಬೆಲ್ಲದಂತಹ ಮಾತುಗಳಿದ್ದು ಹೃದಯದಲ್ಲಿ ನಂಜಿರುವುದು ಯಾವಲೇಸು ? ಕಣ್ಣಪ್ಪನು ಮನಶುದ್ಧ, ಭಾವಶುದ್ಧವಾಗಿ ಶಿವನಿಗೆ ರಸೋಪೇತವಾದ ಮಾಂಸದ ಉಣಿಸನ್ನು ಉಣಿಸುತ್ತಾನೆ. ಅವನು ಶಿವನಿಗಾಗಿ ಅಡುವುದನ್ನು ಕವಿಯೂ ಈ ರೀತಿ ವರ್ಣಿಸಿದ್ದಾನೆ.

"ಕೆಂಪುಳ್ಳ ನುಪುಂಳ್ಳ ಸೊಂಪುಳ್ಳ ಖಂಡಮಂ
ಇಂಪುಳ್ಳ ಕಂಪುಳ್ಳ ಹೆಂಪುಳ್ಳ ಖಂಡಮಂ
ಕಾಸುತಂ ತೆಗೆತೆಗೆದು ಪರಿಪಾಕಮಂ ಮಾಡಿ
ಲೇಸಪ್ಪ ಮೃದುವಪ್ಪ ತಳ್ಗಂಡಮಂ ನೋಡಿ
ನಾಲಿಗೆಯೊಳಾಯ್ದಾಯ್ದು ಖಂಡವಂ ಬೇರಿರಿಸಿ,"

ಕರಿದಾದವುಗಳನ್ನು ತೆಗೆದು ಚೆನ್ನಾಗಿರುವುದನ್ನು ಕಣ್ಣಳಿಂದ ಶೋಧಿಸಿ, ಸಿಹಿಯಾಗಿರುವು

ದನ್ನು ನಾಲಗೆಯಿಂದ ರುಚಿನೋಡಿ, ಕಂಪುಳ್ಳುದನ್ನು ಘ್ರಾಣದಿಂದ ವಾಸಿಸಿ, ಕೊಡುವುದು ಶಿವನಿಗೆ ಪ್ರಿಯಕರವಾಗಿದೆ. ಅವನ ಆರಾಧನೆಯಾದರೂ ಎಂತಹದು! ಬಾಯಿಂದ ಮುಕ್ಕುಳಿಸಿದುದಕದಭಿಷೇಕ! ತಲೆಯಲ್ಲಿ ಮುಡಿದ ಹೂ ಪುಷ್ಪ! ಎಂಜಲಿಸಿದ ನೈವೇದ್ಯ, ಮಾಂಸಭಕ್ಷಣೆ! ಆದರೆ ಮನದಲ್ಲಿ ಅತಿಸ್ನೆಹ, ಅತಿಮಮತೆ! ಆ ಸ್ನೇಹ ಪತಿವ್ರತೆಯಭಕ್ತಿಗಿಂತ ಮಿಗಿಲು! ಆ ಮಮತೆ ತಾಯಿ ಮಗುವಿಗೆ ತೋರುವ ವಾತ್ಸಲ್ಯಕ್ಕಿಂತ ಮಿಗಿಲು. ಈ ಶಿವಭಕ್ತಿಯ ಬಗೆಗೆ ನಾಡಿನ ಜನತೆ, ಅದರಲ್ಲಿಯೂ ಅತಿ ಶಾಸ್ತ್ರೀಯವಾದ, ಅತಿಧರ್ಮಿಷ್ಠರೆನಿಸಿಕೊಂಡ ಜನ ಸಂಶಯಗೊಳ್ಳಬಾರದೆಂದೇ ಹರಿಹರ ಕವಿಯು ತನ್ನ ಕಾವ್ಯದಕೊನೆಗೆ ತಾನೇ ತೀರ್ಪುಹೇಳುವುದರ ಬದಲು, ಶಿವ ಪಾರ್ವತಿಯರ ಸಂಭಾಷಣೆಯ ರೂಪದಲ್ಲಿ ಪಾರ್ವನ ಅರ್ಚನೆಯನ್ನು ಮತ್ತು ಕಣ್ಣಪ್ಪನ ಅರ್ಚನೆಯನ್ನು ಹೋಲಿಸಿ ವಿಮರ್ಶಿಸಿದ್ದಾನೆ. ಒಂದು ದೃಷ್ಟಿಯಿಂದ ಹರಿಹರಕವಿಯು ತನ್ನ ಪಾತ್ರಗಳ ವಿಮರ್ಶೆಯನ್ನು ತಾನೇ ಮಾಡುತ್ತಾನೆ. ಪಾರ್ವತಿಯು ಬೇಡನನ್ನು ನಿಂದಿಸಿ ಪಾರ್ವನ ಪೂಜೆಯನ್ನು ಹೊಗಳುತ್ತಾಳೆ. ಇವು ಪಾರ್ವತಿಯ ನುಡಿಗಳು:

"ಬೇಡನ ಚರಿತ್ರವಿದು ಧರಣಿಗೆ ವಿರುದ್ಧಮಿದು!
ನೋಡೆ ನಿಮ್ಮಡಿಗಳ್ಗೆ ಮಿಗೆ ಸೈರಿಸಿರ್ದಪುದು!
ಮುಕ್ಕುಳಿಸಿದುದಕಮಂ ಮಜ್ಜನಕ್ಕೆರೆದರುಂಟೆ?
ಅಕ್ಕಕ್ಕ; ಮುಡಿದ ಹುವ್ವಿಂ ಪೂಜಿಸಿದರುಂಟೇ?
ಬರಿಮಾಂಸವಲ್ಲ! ಅದರಮೇಲೆಂಜಲಿಂತುಂಟೇ?
ಕರಿಗೊರಲ ನಿನ್ನೊಲ್ದೊಡೆನಲಮ್ಮೆ! ಇಂತುಂಟೇ?
ಕಾಲಿಂದೆ ಪೂಜೆಯಂ! ಶಿವಶಿವಾ! ಎನಲಮ್ಮೆ?"

ಅಲ್ಲದೆ ಹುಟ್ಟಿದಂದಿನಿಂದ ವಿಭೂತಿಯನಿಟ್ಟು ಬಲ್ಲವನಲ್ಲ; ಶಿವಶಿವಾ ಎಂದವನಲ್ಲ; 'ಎನ್ನವನೇ ಎನ್ನವನೇ' ಎಂಬುದನ್ನು ಮಂತ್ರದಂತೆ ಎಂದವನು ಎಂದು ತೆಗಳಿದಾಗ ಶಿವನಾಡಿದ ನುಡಿಗಳಿವು:

"ಪಾರ್ವನಗ್ಗವಣಿ ತಿಳಿ; ಮನ ಕದಡು ಎಲೆ, ಗೌರಿ!
ಪಾರ್ವನರ್ಚನೆ ಇನಿತು [ದು]; ಮನವತಿ ವಿಷಂ, ಗೌರಿ!
ಅವಟನ್ನಿ ಭಸಿತವವನಂ ಮುಟ್ಟದೆಲೆ, ಗೌರಿ;
ಅವನ ರುದ್ರಾಕ್ಷಿಯುವನಂ ಪೊರ್ದದೆಲೆ, ಗೌರಿ;
ಬಾಯ ಮಂತ್ರಂ, ಮನದ ಕ್ಷುದ್ರ ತಂತ್ರಂ ಸೂಸೆ!
ಕಾಯ ವೇಷಂ, ಮನದ ಭವಿತನವದೇಂ ಲೇಸೇ?
ಎನ್ನನರ್ಚಿಸಿ ಭವಿಗೆ ಕೈಯಾನುವರೆ ದೇವಿ?
ಎನ್ನ ಪೊಗಳುತಲನ್ಯರಂ ಪೊಗಳ್ವರೆ ದೇವಿ?
ಸತ್ಯವಲ್ಲದ ಪೂಜೆ ಸಸಿನವಪ್ಪುದೆ, ಗೌರಿ;
ನಿತ್ಯವಲ್ಲದ ಹಾಡು ಸೊಗಸಪ್ಪುದೇ ಗೌರಿ;
ಮನವಿಲ್ಲದವ ಮುಟ್ಟೆ ಬಡಿವಡೆದ ತೆರನೆನಗೆ!

ಮನವುಳ್ಳವಂ ಬಡಿಯೆ ಪೂಜಿಸಿದ ತೆರನೆನಗೆ !
....
ಬೇಡನವನಿಂದ್ರ ರವಿ ಚಂದ್ರಾಧಿ ಪದವಿಯಂ !
ಬೇಡನವನಜಹರಿಗಳೆಳಸಿರ್ಪ ಪದವಿಯಂ !
ಎನ್ನನಲ್ಲದೆ ಹಾಡನೆನ್ನನಲ್ಲದೆ ಬೇಡ.
ಎನ್ನನಲ್ಲದೆ ನೋಡನೆನ್ನನಲ್ಲದೆ ಕೂಡ.
ಅವನ ಕಯೊಳ್ಬೊಲಸು ; ಮನದೊಳಮೃತಂ ಗೌರಿ !
ಅವನ ಮುಖದೊಳು ಜಲಂ ; ಮನದೊಳಗ್ಗವಣೆ ಗೌರಿ !
ಅವನ ಮುಂಡೆಯ ಹುವ್ವು ; ಮನದ ಪರಿಮಳವೆನಗೆ!"

ಶ್ರೀ ಬಸವಣ್ಣನವರು 'ಕಳಬೇಡ ಕೊಲಬೇಡವೆಂದರೆ' ಕಣ್ಣಪ್ಪನು ಕೊಲುವುದನ್ನೇ ಮಾಡಿದರೂ ಪೂಜ್ಯನಾದನು ! ಅವನ ಕೊಲುವ ವೃತ್ತಿಯೂ ಪೂಜ್ಯವಾಯಿತು. ತಾನು ಮಾಡುವುದು ಕೊಲೆ ಎಂಬುದರ ಪರಿಜ್ಞಾನವಿಲ್ಲದ ಮುಗ್ಧನು ಹೀಗೆ ಮಾಡಿದಾಗ ಅವನ ಮನದ ಪ್ರೇಮ ಪರಿಪಾಕವನ್ನು ಕಂಡು ಅದು ತಪ್ಪಲ್ಲವೆಂದೇ ಹೇಳಬೇಕು. ಆ ರೀತಿ ಹರಿಹರ ಕವಿಯು ಕಣ್ಣಪ್ಪನ ಪಾತ್ರವನ್ನು ವಿಶ್ಲೇಷಿಸಿದ್ದಾನೆ. ಕೊಲೆ ಮಾಡುವುದು-ಹಿಂಸೆಯಾಗುವುದು ಅದರ ಉದ್ದೇಶದಿಂದಲೋ ಏನೊ ! ಅವನ ಉದ್ದೇಶ ಪವಿತ್ರವಿದೆ ; ಎಂದಮೇಲೆ ಅದೆಂತು ಹಿಂಸೆ ? ಮೇಲಿನ ಮಾತುಗಳಲ್ಲಿ ಹರಿಹರ ಕವಿಯು, ಶಿವಭಕ್ತಿಯ ರಹಸ್ಯವನ್ನರಿಯಬೇಕೆನ್ನುವವರಿಗೆ ಸುವರ್ಣಾಕ್ಷರಗಳಲ್ಲಿ ಬರೆದಿಡುವಂತಹ, ಮುತ್ತಿನಂತಹ ಮಾತುಗಳನ್ನು ಬರೆದಿದ್ದಾನೆ. ಈ ಮಾತು ಅಂದಿನ ಸತ್ಯವಲ್ಲ ; ಎಂದೆಂದಿಗೂ ಸತ್ಯ ; ಸರ್ವಕಾಲೀನ ಮೌಲ್ಯ. ವೃತ್ತಿಯ ಪಾವಿತ್ರ್ಯವು ಅದರ ಉದ್ದೇಶವನ್ನವಲಂಬಿಸಿದೆಯೆಂಬುದನ್ನು ನಾವು ಎಂದೂ ಮರೆಯಲಾಗದು. ಹೊರಗಣ್ಣ ಬಣ್ಣದ ಸೌಂದರ್ಯಕ್ಕಿಂತ ವ್ಯಕ್ತಿಯ ಅಂತರಂಗದ ಸೌಂದರ್ಯಕ್ಕೆ ಮಹತ್ವಕೊಡಬೇಕೆಂಬುದು ಹರಿಹರನ ತತ್ವವಾಗಿದೆ. ಅಯೋಗ್ಯರ ಮಧ್ಯದಲ್ಲಿ ನೂರು ದೇವಾಲಯಗಳಿದ್ದರೇನು ? ಅಯೋಗ್ಯರು ಯಾವ ಉದ್ಯೋಗ ಮಾಡಿದರೇನು ? ಬೇಡರ ಕಣ್ಣಪ್ಪನಂತಹ ಲುಬ್ಧನ ಚರಿತ್ರೆಯನ್ನು ಹೇಳಿದರೂ ಮನಸ್ಸು ಶಿವಭಕ್ತಿಯಿಂದ ಪರಿಮಳಿತವಾಗುವಂತೆ ಹರಿಹರ ಕವಿಯು ನಿರೂಪಿಸಿದ್ದಾನೆಂಬುದನ್ನು ನಾವು ನೆನಪಿನಲ್ಲಿಡಬೇಕು. ಅಂತೆಯೇ ಆತನ ಅಚ್ಚ ಶಿವ ಭಕ್ತಿಗೆ ಕವಿಯ ಮನ ಸೂರೆಗೊಂಡಿದೆ ! ಆದಕಾರಣ ಅವನ ಕವಿತೆ ಇನಿದಾಗಿಯೂ, ರಸವತ್ತಾಗಿಯೂ ಇದೆ. ಕನ್ನಡ ಸಾಹಿತ್ಯದಲ್ಲಿ ಹರಿಹರನು ರಚಿಸಿದ ಇಲ್ಲಿಯ ಕೆಲ ಮಾತುಗಳು ಚಿರಂತನವಾಗಿ ಉಳಿಯಬಲ್ಲವೆಂದು ಹೇಳಬಹುದಾಗಿದೆ. 'ಪ್ರಾಣಿಯಂ ಕೊಲಲೀವುದಿದು ಧರ್ಮವೇ ದೇವ?' ಎಂದು ಅನಾಚಾರಕ್ಕೆ ಹೇಸಿದ ಪಾರ್ವನು, ಕಾಳಹಸ್ತೀಶ್ವರನ ಗುಡಿಗೆ ಬಂದಾಗ ಶಿವನಿಗೆ ಆಡಿದ ನುಡಿಗಳಿವು. ಪ್ರಾಣಿಗಳನ್ನು ದೇವಾಲಯದಲ್ಲಿ ಕೊಂದವನನ್ನು ಕಂಡರೆ: 'ಕೊಲ್ವೆನವನಂ; ಬಳಿಕ ಬಂದರ್ಚಿಪೆಂ ನೋಡ !' ಎಂದಾಡುತ್ತಾನೆ ಆ ಪಾರ್ವ. ತಾನೇನಾಡುತ್ತಾನೆಂಬುದರ ಪರವೆಯೇ ಇಲ್ಲದೇ ಧರ್ಮಾಧರ್ಮದ ಸ್ವರೂಪನಿರ್ಣಯ ಹೇಳುತ್ತಾನೆ ! ಎಷ್ಟು ಜನರು ಇಂತಹರು ನಮ್ಮ

ಮಧ್ಯದಲ್ಲಿಲ್ಲ. ಅಧರ್ಮದಿಂದ ನಡೆಯದಿಪ್ಪುದೇ ಧರ್ಮವೆಂದು ಅವನು ಬಲ್ಲನೇ? ಒಂದು ಶಾಸ್ತ್ರೀಯವಾದ ದುರಾಚಾರ; ಇನ್ನೊಂದು ಅರಿಯದೆ ನಡೆದ ದುರಾಚಾರ. ಅರಿಯದೆ ನಡೆವ ದುರಾಚಾರವನ್ನು ಕ್ಷಮಿಸಬಹುದು; ಆದರೆ ಅರಿತೂ ಮಾಡುವ ದುರಾಚಾರಕ್ಕೆ ಕ್ಷಮೆಯುಂಟೇ? ಇಂದಿನ ಸಮಾಜದಲ್ಲಿ ಅಲ್ಲ, ಎಂದೆಂದಿನ ಸಮಾಜದಲ್ಲೂ ಪ್ರಭಾವಿತ ವ್ಯಕ್ತಿಯಾಗದಿರಬಲ್ಲತಂಹವನು, ಹರಿಹರನ ಕಥಾಸಾಮ್ರಾಜ್ಯದ ಪೂಜ್ಯ ವ್ಯಕ್ತಿ. ಕಾರಣವಿಷ್ಟೇ, ಅವನು ಶಿವನನೊಲಿಸಿಕೊಂಡವನು, ಸದ್ಗುಣ ಭರಿತ, ನಿರ್ಮೋಹಿ ಎಂಬುದರಿಂದ. ಪ್ರಿಯರಾದವರು ಎಂತು ಮಾತನಾಡಿದರೇನು ಎಂಬುದೇ ಇಲ್ಲಿಯ ಹೇಳಿಕೆ.

ವೃತ್ತಿಗಳ ಪಾವಿತ್ರ್ಯ, ವೃತ್ತಿಗಳ ರೀತಿಗೆ ಹರಿಹರನು ನಿರೂಪಿಸಿದ 'ಕುಂಬಾರ ಗುಂಡಯ್ಯನ' ರಗಳೆಯನ್ನು ಇಲ್ಲಿ ಒಂದು ನಿದರ್ಶನವನ್ನಾಗಿ ತೆಗೆದುಕೊಳ್ಳುವಾ. ವೃತ್ತಿಯನ್ನು ಮಾಡುವುದರ ರಹಸ್ಯವನ್ನು ಶ್ರೀ ಬಸವೇಶ್ವರರು ಈ ರೀತಿ ಬಣ್ಣಿಸಿದ್ದಾರೆ:

"ನಾನು ಆರಂಬವ ಮಾಡುವೆನಯ್ಯಾ ಗುರುಪೂಜೆಗೆಂದು;
ಬೆವಹಾರವ ಮಾಡುವೆನಯ್ಯಾ, ಲಿಂಗಾರ್ಚನೆಗೆಂದು;
ನಾನು ಪರಸೇವೆಯ ಮಾಡುವೆನಯ್ಯಾ ಜಂಗಮ ದಾಸೋಹಕ್ಕೆಂದು
ನಾನಾವ ಕರ್ಮಂಗಳ ಮಾಡಿದರೆಯೂ
ಆ ಕರ್ಮಫಲಭೋಗವ ನೀ ಕೊಡುವೆಯೆಂಬುದ ನಾನು ಬಲ್ಲೆನು...."[7]

ಕಾಯಕಗಳ ರಹಸ್ಯವೇ ಇಲ್ಲಿದೆ. ಗುರುಪೂಜೆ, ಲಿಂಗಪೂಜೆ, ಜಂಗಮಪೂಜೆಗೆಂದು ಕಾಯಕ ತತ್ವವಿದೆ. ಕುಂಬಾರ ಗುಂಡಯ್ಯನು ಮಾಡುತ್ತಿದ್ದ ಕಾಯಕ ಗಡಿಗೆ-ಮಡಕೆ ಮಾಡುವ ಕಾಯಕ. ಅವನು ವೃತ್ತಿಯಿಂದ ಸಾಮಾನ್ಯ; ಸಾಮಾಜಿಕ ಸ್ಥಾನಮಾನದಿಂದಲೂ ಕಿರಿಯ. ಅವನು ಮಹಾಕಾವ್ಯದ ನಾಯಕನಾದ 'ಧೀರ'ನಾಗಲಿ, ಧೀರೋದಾತ್ತನಾಗಲಿ ಇಲ್ಲವೇ 'ಮಹಾವ್ಯಕ್ತಿ' ಯಾಗಲೀ ಅಲ್ಲ. ಆದರೆ ವೃತ್ತಿಯಲ್ಲಿ ಅವನಿರಿಸಿದ ಶ್ರದ್ಧೆ, ಮತ್ತು ದೈವದಲ್ಲಿ ಅವನಿರಿಸಿದ ನಿಷ್ಠೆ ಅದ್ವಿತೀಯವಾದುವು. ವೃತ್ತಿಯ ಶ್ರದ್ಧೆಗೆ ದೈವಭಕ್ತಿ ಮಿಳಿತವಾದರೆ ಇಹಲೋಕದಲ್ಲಿ ವೃತ್ತಿಯ ಮೂಲೋದ್ದೇಶವಾದ ಉದರಪೋಷಣೆಯೂ, ಜೀವನದ ಪರಮೋದ್ದೇಶವಾದ ಪಾರಮಾರ್ಥವೂ ಲಭಿಸುತ್ತವೆಯೆಂಬುದನ್ನು ಹರೀಶ್ವರ ಕವಿಯೂ ಈ ಪುಟ್ಟಕಾವ್ಯದಲ್ಲಿ ವಿವರಿಸಿದ್ದಾನೆ. 'ಕರ್ಮವೇ ಯೋಗ' ವಾಗುವ ಬಗೆಯನ್ನು ಇಲ್ಲಿ ನಾವು ಕಾಣುತ್ತೇವೆ. ಇಂದಿನ ಕಾಲದಲ್ಲಿ ನಾವೆಲ್ಲ ಉದ್ಯೋಗವನ್ನು ಮಾಡುತ್ತೇವೆ; ಆದರೆ ಅದರಲ್ಲಿ ಕೇವಲ ಉದರ ಪೋಷಣೆಯೇ ಮುಖ್ಯಗುರಿಯಾಗಿದೆ! ಅದು ಕಡಿಮೆಯಾಗಿ ಭಕ್ತಿಯಿಂದ ಉದ್ಯೋಗಗಳನ್ನು ಮಾಡುವುದಾದರೆ, ಮೋಸ ವಂಚನೆಗಳು ದೂರಾಗಿ ವ್ಯಕ್ತಿಯ ಉದರಪೋಷಣೆಯೊಂದಿಗೆ ಸಾಮಾಜಿಕ-ಹಿತವೂ ಸಾಧ್ಯವಾಗುತ್ತದೆ.

---

[7] ಬ. ವ. ೭೦೪.

ಉದ್ಯೋಗವನ್ನವಲಂಬಿಸಿ ವ್ಯಕ್ತಿಗೆ ಸ್ಥಾನಮಾನ ದೊರೆತರು ಕುಂಬಾರಿಕೆ ಮಾಡುವುದರಿಂದ ಸಮಾಜದಲ್ಲಿ ಅವನಿಗೆ ಹಿರಿಯಸ್ಥಾನ ದೊರೆಯುವುದು ಅತಿವಿರಳ ; ಅದು ಭಕ್ತಿಯಿಂದ ದೊರಕುತ್ತಿದೆ. ಕುಂಬಾರ ಗುಂಡಯ್ಯನು ತನ್ನ ವೃತ್ತಿಯನ್ನೇ ಯೋಗವನ್ನಾಗಿಸಿ ಕೊಂಡಿದ್ದನೆಂಬುದನ್ನು ಹರಿಹರಕವಿಯು ಈ ರೀತಿ ಬಣ್ಣಿಸಿದ್ದಾನೆ :

" ಆಧಾರಮೆಯಾಧಾರಮುದಾಗಿರೆ,
ವೇಧೆಯಚಕ್ರದ ಮೊಳೆ ತಾನಾಗಿರೆ,
ಮಿಗೆಷಟ್ಚಕ್ರಮೆ ಚಕ್ರಮುದಾಗಿರೆ,
ಸೊಗಯಿಪ ನಾಭಿಯೆ ನಾಭಿಯದಾಗಿರೆ,
ಕನಸಿನ ಕಾಯಂ ಮೃತ್ತಿಕೆಯಾಗಿರೆ,
ನೆನಹಂ ಚಟಿದಾರಂಗಳವಾಗಿರೆ,
ನಿಷ್ಠೆಯೆ ತಿರುಹುವ ದಂಡವದಾಗಿರೆ,
ಮುಟ್ಟಿ ತಿರುಗುವುದು ಜೀವವದಾಗಿರೆ
ಮಾಡುವ ಭಕ್ತಿ ಕಟಾಹಮುದಾಗಲು,
....
ಇಂತೊಳಗಣಘಟಕಾಯಕವೊಪ್ಪಲು
ಸಂತತ ಹೊರಗಣ ಮಾಟಮುದೊಪ್ಪಲು" [8]

ಹೀಗೆ ವೃತ್ತಿಮಾಡುತ್ತಾ, ಯೋಗಸಂಪಾದನೆ ಮಾಡುತ್ತಾನೆ. ಇಂದ್ರಿಯಗಳೆಲ್ಲ ಕಾಯಕದಲ್ಲಿ; ಚಿತ್ತವೆಲ್ಲ ಪರಮಾತ್ಮನಲ್ಲಿ. ಆ ವೃತ್ತಿ ಮಾಡುವಾಗ ದೇವರ ಮೇಲೆ ನೆನಹು; ದೇವರ ನಾಮಸ್ಮರಣೆ ಬಾಯಲ್ಲಿ; ಆಡುವ ಆಟ, ಹಾಡುವ ಹಾಡು ಪರಮಾತ್ಮನ ಹಾಡು. ಪಾಪ, ಹಗಲು ರಾತ್ರಿ ದುಡಿದರೂ ಅವನ ಹೊಟ್ಟೆ ತುಂಬಿರಲಿಕ್ಕಿಲ್ಲ. ಊಟ ನಿದ್ರೆಗೆ ವೇಳೆಯಿಲ್ಲದಂತೆ ಘಟ ಕಾಯಕ ಮಾಡುತ್ತಾ, ಘಟವನ್ನು ಬಾರಿಸುತ್ತಲೇ ಧ್ಯಾನಮಾಡುತ್ತ ರಾತ್ರಿಯನ್ನು ಕಳೆಯುತ್ತಾನೆ. ಹೀಗೆ ಮಾಡುವುದರಿಂದ ಪಾತಕವಿಲ್ಲ ; ದುರಾಸೆಯಿಲ್ಲ ; ಅರಿಷಡ್ವರ್ಗವಿಲ್ಲ ; ಆತ್ಮತೃಪ್ತಿ, ಪರಮಾತ್ಮ ತೃಪ್ತಿಯಿದೆ. ಶಿವನು ಅವನ ವೃತ್ತಿಗೆ ಸಂಪ್ರೀತನಾದುದರಿಂದಲೇ ಕವಿಯು :

" ನೆನೆದಂದದಿ ಮಡಿಕೆಗಳಾಗುತ್ತಿರೆ,
ಮನದಂದದಿ ಶಿವನೊಳಗಾಡುತ್ತಿರೆ "

ಎಂದು ವರ್ಣಿಸಿದ್ದಾನೆ. ಶಿವನೊಲಿದಮೇಲೆ ನೆನೆದಷ್ಟು ಮಡಿಕೆಗಳಾಗುವುದೇನು ಮಹಾ ! ಭಕ್ತರಿಗೆ ಅದು ಅಚ್ಚರಿಯ ಮಾತಲ್ಲ. ಯಾಕೆಂದರೆ ಅವರು :

" ಹರನೀವ ಕಾಲಕ್ಕೆ ಸಿರಿಯು ಬೆನ್ನಲಿ ಬರ್ಕು ;
ಹರಿದು ಹೆದ್ದೊರೆಯಾಗಿ ಬರುತಿರ್ಕು ! "

---

[8] ಕುಂಬಾರ ಗುಂಡಯ್ಯನ ರಗಳೆ,-ಹರಿಹರನ ರಗಳೆಗಳು, ಭಾಗ-೬. (೧೯೩೭) ಸಂ : ಫ. ಗು. ಹಳಕಟ್ಟಿ. ಪುಟ ೯೦

ಎಂಬ ತತ್ವದಲ್ಲಿ ನಂಬಿಕೆಯುಳ್ಳವರು. ಹೀಗೆ ಅವನು ಕಾಯಕದಲ್ಲಿ ನಿರತನಾಗಿ ಘಟಗಳನ್ನು ಬಾರಿಸುವ ಸದ್ದು, "ಹಲಗೆಯ ಶಬ್ದ, ಕರಡೆಯ ಶಬ್ದ, ಮರುಜೆ [ಮುರಜೆ]ಯ ಶಬ್ದ, ಆವುಜದ ಶಬ್ದ, ಕಹಳೆಯ ಶಬ್ದ, ಕಾಸಾಳದ ನಾದ", ಮೊದಲಾದ ಧ್ವನಿಗಳಂತೆ ಶಿವನ ಕಿವಿಗೆ ಇಂಪಾಗಿದೆ. ಹೊರಗೆ ಗುಂಡಯ್ಯನ ಆಟ, ಒಳಗೆ ಶಿವನಕೂಟ! ಇವುಗಳ ಮೇಳದಿಂದ ಗುಂಡಯ್ಯನು:

"ಬಂದರನರಿಯದೆ ಹೋದರನರಿಯದೆ,
ನಿಂದರನರಿಯದೆ ನೆರೆದರನರಿಯದೆ,
ಮಾಟವನರಿಯದೆ ನಿಪ್ರೆಯನರಿಯದೆ,
ನೋಟವನರಿಯದೆ ನೆನೆವುದನರಿಯದೆ"

ವೃತ್ತಿಯನ್ನು ನಡೆಸಿಕೊಂಡು ಬರುತ್ತಾನೆ. ಗುಂಡಯ್ಯನ ಬಾರಿಸುವ ಧ್ವನಿಗೆ ಶಿವನು ತನ್ನ ಗಣ ಸಹಿತ:

"ಶಿವಪದದಂದುಗೆ ಘಲಘಲಕೆಂದೆನೆ,
ನವಕಟಕಧ್ವನಿ ಝುಂಝುಣತೆಂದೆನೆ"

ಕುಣಿದು, "ಸ್ಥಾನದ ಭೇದಮನರಿಯದೆ" ಗುಂಡಯ್ಯನ ಮನೆಯಂಗಣದಲ್ಲಿಯೂ ಶಿವನು ಕುಣಿಯುತ್ತಾನೆ! ಶಿವನನ್ನು ಕಂಡು ಗುಂಡಯ್ಯನು ಸುತ್ತಾಡಿ, ಸುಖಿಯಾಗಿ, ಇಬ್ಬರೂ ಕುಣಿಯುತ್ತಾರೆ. ಆಗ ಹರಿಹರನು:

"ಶಿವನಂ ಕಂಡಾ ಭಕ್ತಂ ಕುಣಿಯಲು,
ಶಿವಭಕ್ತನ ಕೂಡ ಭವಂ ಕುಣಿಯಲು,
ಈರ್ವರನೀಕ್ಷಿಸಿ ಗಣತತಿ ಕುಣಿಯಲು,
ಸರ್ವಸ್ಥಾವರ ಜಂಗಮವಾಡಲು"

ಎಂದು ಅವರ ಕುಣಿತವನ್ನು ವರ್ಣಿಸಿದ್ದಾನೆ. ಇದನ್ನು ನೆನೆದಾಗ ಭಕ್ತಿಯ ಭವ್ಯ ಚಿತ್ರವು ಕಣ್ಣುಮುಂದೆ ನಿಲ್ಲುತ್ತದೆ. ಭಕ್ತಿಯ ಹಿನ್ನಲೆಯು ನಮ್ಮ ಉದ್ಯೋಗಿಗಳಿಗೆ ಎಂತಹ ಶಕ್ತಿಯನ್ನೊದಗಿಸುತ್ತದೆಯೆಂಬುದಕ್ಕೆ ಇದಕ್ಕಿಂತ-ಉತ್ತಮ ನಿರ್ದಶನ ಬೇಕಿಲ್ಲ. ಆದುದರಿಂದ ಕುಂಬಾರ ಗುಂಡಯ್ಯನನ್ನು ಹರಿಹರನು ಪ್ರಶಂಸೆಮಾಡುವಲ್ಲಿ ಆತನ ಭಕ್ತಿಯನ್ನು ಎತ್ತಿತೋರಿಸುವುದಾಗಿದ್ದರೂ ಅವನ ವೃತ್ತಿ, ಅವನ ನರ್ತನ, ಅವನ ಸಂಗೀತದ ಮಹಿಮೆಯನ್ನೂ ಮಾಡಿದ್ದಾನೆ. ಬಸವಣ್ಣನವರು ಒಂದೆಡೆ "ಆನು ಒಲಿದಂತೆ ಹಾಡುವೆ'' ಎಂದಂತೆ ಗುಂಡಯ್ಯ ಕುಣಿದುದೇ ನರ್ತನ; ಹಾಡಿದುದೇ ಸಂಗೀತ; ಬರೆದುದೇ ಸಾಹಿತ್ಯವಾಗುತ್ತದೆ; ಆತ್ಮೋದ್ಧಾರವಾಗುತ್ತದೆ. ಹೀಗೆ ಹರಿಹರನು ಈ ಚಿಕ್ಕ ರಗಳೆಯಲ್ಲಿ ಸಾಮಾನ್ಯ ವೃತ್ತಿಯನ್ನು ಮಾಡಿ ಆತ್ಮೋದ್ಧಾರಮಾಡಿಕೊಂಡ ಕಿರಿಯನ ಘನತೆಯನ್ನು ನಮ್ಮ ಇಂದಿನ ಪ್ರಪಂಚಕ್ಕೆ ಪರಿಚಯ

ಮಾಡಿಕೊಟ್ಟಿದ್ದಾನೆ. ಶಿವನೊಲುಮೆಗೆ ವೃತ್ತಿಗಳು ಎಂದೂ ಬಾಧಕವಲ್ಲ ; ಯಾವ ರೀತಿಯಿಂದಲೂ ನಿರ್ಬಂಧವಿಲ್ಲ. ಶಿವಭಕ್ತರು ಯಾವುದೇ ವೃತ್ತಿಯನ್ನು ಕೈಕೊಂಡಿರಲಿ ಅವರು ಈ ರೀತಿ ಮಾಡಿದರೆ ಅದು ಶಿವಪ್ರೀತಿಗೆ ಕಾರಣವೆಂಬ ಉದ್ಯೋಗಾಯ್ಕೆಯ ಸ್ವಾತಂತ್ರ್ಯದ ತತ್ವವನ್ನು ಪ್ರತಿಪಾದಿಸಿದುದು ನಮ್ಮಕಾಲ, ನಮ್ಮ ದೇಶದ ಜನಕ್ಕಲ್ಲ ; ಎಲ್ಲ ಕಾಲ, ಎಲ್ಲ ದೇಶದ ಜನರೂ ಮೆಚ್ಚುವ ಮೌಲ್ಯವಾಗಿದೆಯೆನ್ನಬಹುದು. ಬಡತನವೊಂದು ಆರನೆಯ ಮಹಾಪಾತಕವೆಂದು ತಿಳಿದವರಿಗೆ ಸುಖಶಾಂತಿಯಿಂದ ಬದುಕಲು ದಾರಿತೋರುವ ಕಥೆ ಇದಾಗಿದೆಯೆನ್ನಬಹುದು. ಅಧಿಕ ಹಣವುಳ್ಳವರು ಸುಖದಿಂದ ಬಾಳುವರೋ ಇಲ್ಲವೋ ; ಆದರೆ ಕುಂಬಾರ ಗುಂಡಯ್ಯನು ತನ್ನ ಬಡತನದಲ್ಲಿಯೂ ಎಂತಹ ಸುಖಿಯಾಗಿದ್ದನೆಂದು ನಾವು ಅರಿಯುವುದು ಲೇಸು. ಇಂತಹ ಸುಖಜೀವನಕ್ಕೆ-ಸುಖಜೀವದ ಭಕ್ತನಿಗೆ, ಹಗಲು ರಾತ್ರಿಗಳೆಂಬ ಭೇದವೇ ಇಲ್ಲ. 'ಪರಮಾತ್ಮನ ನೆನಹಾದಾಗಳೇ ಉದಯ; ಪರಮಾತ್ಮನ ಮರಹಾದಾಗಳೆ' ಅಸ್ತಮಾನ. ಇದುವೇ ಅವನ ಜೀವನದ ಉಸಿರಾಗಿತ್ತು. ಅವನಿಗೆ ಎಲ್ಲಕೂಲಿಕಾರರಂತೆಯೇ ನಿತ್ಯದ ಜೀವನದಲ್ಲಿಯೂ ಕಷ್ಟಗಳಿದ್ದುವು. ಆದರೆ ಅವೆಲ್ಲಶಿವನಿರ್ಮಿತ ಪ್ರಪಂಚದಲ್ಲಿ ಬರಬೇಕಾದುದೆವೇ ಎಂದು ಭಾವಿಸಿದ ಗುಂಡಯ್ಯ. ಆತನ ಕರ್ತವ್ಯದೊಡನೆಯೇ ಶಿವನನಾಮ ಸ್ಮರಣೆ ಬೆಳೆಯುತ್ತಲೇ ಇದೆ. ಒಂದರೊಡನೊಂದು ಬೆಳೆಯುತ್ತವೆ. ಅದೇ ಅವನ ವೃತ್ತಿಗೆ ಕಾಂತಿಯನ್ನಿತ್ತಿದೆ ; ಜೀವನಕ್ಕೆ ಮುಕ್ತಿಯನ್ನೊದಗಿಸಿದೆ.

ಹರಿಹರನ ರಗಳೆಯಲ್ಲಿಯ ವ್ಯಕ್ತಿಗಳು ಸ್ವಪ್ರತಿಷ್ಠೆಗಿಂತ ತತ್ವನಿಷ್ಠೆಗೆ ಬಾಳಿದವರು ; ಸತ್ಯಕ್ಕೆ ಬಾಳಿದವರು ; ಅನ್ಯಾಯಕ್ಕೆ ಪ್ರತಿಭಟಿಸಿದವರು. ಜೀವನದ ರೀತಿ-ನೀತಿಗಳ ಬಗೆಗೆ ಶ್ರೀ ಬಸವೇಶ್ವರನಿಂದ ಹೊಸ ಅರ್ಥವೇ ಬರತೊಡಗಿತ್ತೆಂಬುದನ್ನು ಹರಿಹರಕವಿಯೂ ಅರಿತಿದ್ದ. ಉದಾಹರಣೆಗೆ ಬಸವಣ್ಣನವರ ಒಂದೆರಡು ಮಾತನ್ನು ಇಲ್ಲಿ ಅವಲೋಕಿಸೋಣ. ' ಮಾರಿ ' ಎಂದರೆ ' ಮೃತ್ಯುದೇವತೆ ' ಎಂಬುದೇ ನಮ್ಮೆಲ್ಲರ ಗಮನಕ್ಕೆ ಬಂದ ಅರ್ಥ. ಬಸವಣ್ಣನವರು ಮೃತ್ಯುದೇವತೆಯಾರು ಎಂದು ಕೇಳಿದವರಿಗೆ ತಿಳಿಸಿ ಹೇಳಿದರು ; ಇಂತು ಇದೆ ಅವರು ಹೇಳಿದ ಅರ್ಥದ ವಚನ :

> " ಮಾರಿ ಮಸಣಿ ಎಂಬುವು ಬೇಱಿಲ್ಲಕಾಣಿರೋ !
> ಮಾರಿಯೆಂಬುದೇನು ?
> ಕಂಗಳು ತಪ್ಪಿನೋಡಿದರೆ ಮಾರಿ !
> ನಾಲಗೆ ತಪ್ಪಿನುಡಿದರೆ ಮಾರಿ ।
> ಕೂಡಲಸಂಗಮದೇವರ ನೆನಹ ಮಱೆದರೆ ಮಾರಿ!"

ಇಲ್ಲಿ 'ಮಾರಿ'ಯೊಬ್ಬ ದೇವತೆ. ಮನುಷ್ಯನನ್ನು ನುಂಗುವ ಯಾವುದೋ ಒಬ್ಬ ದೇವತೆ ಅಲ್ಲ. ' ಕಂಗಳು ತಪ್ಪಿನೋಡುವುದು ; ನಾಲಗೆ ತಪ್ಪಿ ನುಡಿವುದು ; ದೇವರ ನೆನಹ ಮರೆವುದು '; ಇವೆಲ್ಲ ಮಾನವನ ಕರ್ತವ್ಯಗಳು. ಅಂತೆಯೇ ಸ್ನಾನವೆಂದರೆ

ತೊರೆಯೊಳು ಮೀಯುವುದಲ್ಲ, ಅದು "ಪರನಾರಿಯ ಸಂಗವ ತೊಱೆಯುವುದು; ಪರಧನದಾಮಿಷವ ತೊಱೆಯುವುದು"[10] ಇತ್ಯಾದಿ. ಮಾತುಗಳಲ್ಲಿ ಮಾನವನ ಕರ್ತ್ರವ್ಯಗಳ ಶುದ್ಧಾಶುದ್ಧತೆ ಅವನ ಹಿರಿಮೆಯನ್ನು ನಿರ್ಣಯಿಸುತ್ತದೆಯೆಂದು ಹೇಳಿದುದನ್ನು ಹರಿಹರ ಕವಿಯು ತನ್ನ ಶಿವಶರಣರ ಕಥೆಗಳಲ್ಲಿ ಕೊಂಡಾಡಿದ್ದಾನೆ. ಕಥೆಗಳು ಕಿರಿಯವಾದರೂ ಅವುಗಳ ಸತ್ವ ಕಿರಿದಲ್ಲ. ಅವನ ವ್ಯಕ್ತಿಗಳು ಬಾಳಿನಲ್ಲಿ ಅಂದಿನ ಸಾಮಾಜಿಕ ಸ್ಥಾನಮಾನಗಳಿಂದ ಕಿರಿಯರಾದರೂ ಅವರು ಬದುಕಿನಲ್ಲಿ ಜೀವಿಸಿದ ನಿಷ್ಠೆ ಕಿರಿದಲ್ಲ. ಕೂಲಿಕಾರನೊಬ್ಬನು ಬಾಳಿದ್ದನ್ನು ಚಕ್ರಾಧಿಪತಿಗೆ ಹೋಲಿಸಿ ಕಾವ್ಯ ಬರೆಯುವುದು ಅಸಮಂಜಸ; ಆದರೆ ಕೂಲಿಕಾರನು ತನ್ನ ಸದ್ವರ್ತನೆಯಿಂದೇಕೆ ಚಕ್ರವರ್ತಿಯಾಗಬಾರದು? ಆದರ್ಶ ಪುರುಷನಾಗಬಾರದು? ಸೊತ್ತಿನಿಂದ ಸಣ್ಣವನಾದ ಕೂಲಿಕಾರನ ಬದುಕನ್ನು ಹರಿಹರನು ಚಿತ್ರಿಸಿದ ಬಗೆಯನ್ನು ಕಾಣಲು ಇಲ್ಲಿ 'ಅರಿವಾಳ್ತಾಂಡರು' ಎಂಬೊಬ್ಬ ಶಿವಶರಣನನ್ನು ನೋಡೋಣ; ಕವಿಯ ಮಾತುಗಳಲ್ಲಿಯೇ ಅವನನ್ನು ಅರಿಯೋಣ.

ಚೋಳದೇಶದಲ್ಲಿ 'ತಿಣ್ಣಮಂಗಳ'ವೆಂಬ ಪುರದಲ್ಲಿ 'ಶಿವಭಕ್ತಿಗೆ ಕಣ್ಣಿನಂತೆ' ಜನಿಸಿ, ಬತ್ತವನ್ನು ಕೊಯ್ದು, ಆ ಪ್ರಸಾದವನ್ನು ಶಿವನಿಗರ್ಪಿಸಿ ಬದುಕಿದವನು. ಅವನು ತನ್ನ ಜೀವನದಲ್ಲಿ :

> "ನನ್ನಿ ಇಲ್ಲದೆ ಬೇರೆ ನುಡಿಗಳಂ ನುಡಿದರಿಯ !
> ಅನ್ನೆಯಂಗಳನೆಂದುವುಂ ಮರೆದು ಕೇಳ್ದರಿಯ !

ಜೀವನದಲ್ಲಿ ಇದಕ್ಕಿಂತ ಮಿಗಿಲಾದುದುಂಟೇ? ಇದು ಮಾನವ ಸಂಸ್ಕೃತಿಗೆ ತಳಹದಿ. ತನ್ನ ಕಾಯಕದಲ್ಲಿ ನಿರತನಾದ ಈತನು ಶಿವನಿರ್ಪ ತಿರುನಲ್ಲೂರ್ಗೆ ನಡೆದುಬಂದು;

> "ಶಿವ ನಿನ್ನಬಾಗಿಲಲ್ಲದೆ ಮತ್ತರಿವುದಿಲ್ಲ;
> ಶಿವ, ನಿನ್ನಮುಖವಲ್ಲದಿನ್ನರಿವ ಮುಖವಿಲ್ಲ;
> ಎನಗಪ್ಪವಂ ನೀನೆ; ಎನಗುಳ್ಳವಂ ನೀನೆ."

ಎಂದು ಶಿವಭಕ್ತಿವಿಡಿದು ಜೀವಿಸುತ್ತಾನೆ. ಅವನು :

> "ಎರಗನಾಸೆಗೆ ಸಲ್ಲ; ನಿಚ್ಚಗುಚ್ಚುಕನಾಗ !
> ಎಂತಪ್ಪ ಲಾಭಂಗಳೆಲ್ಲ ಉಂಟಾದೊಡಂ-
> ಕಂತುಹರನಂ ಬಿಟ್ಟು ಪೋಗನೇನಾದೊಡಂ"

ಎಂದಿದ್ದಾನೆ ಹರೀಶ್ವರ ಕವಿ. ಇಂತಹ ಶಿವಭಕ್ತನ ಬದುಕು ಅವನದು; ಕಾಯಕದೊಡನೆಯೇ ಶಿವಭಕ್ತಿ; ಶಿವಭಕ್ತಿಯೊಡನೆಯೇ ಕಾಯಕ ಬೆಳೆಯುತ್ತದೆ. ಶಿವಭಕ್ತಿ ಬೆಳೆಯುವುದೆಂದರೆ ಸತ್ಯ, ಧರ್ಮಗಳ ಬೆಳವಣಿಗೆಯೆಂದೇ ಕವಿಯ ವಿಚಾರ. ಆದುದರಿಂದ ಅವನು ತನ್ನ ಉದ್ಯೋಗದಲ್ಲಿ ಅತ್ಯಾಸೆಗೆ ಆಶಿಸದವನು. ಶಿವನು ನಡೆಸಿದಂತೆ

ನಡೆವವನು ; ಯಾವ ಲಾಭಕ್ಕೂ ಬಯಸಿದವನಲ್ಲ. ಇದು ರಾಷ್ಟ್ರೀಯ ಮನೋ ಧರ್ಮವಲ್ಲವೇ ? ದುರಾಸೆಗೆ ಎಳಸದಿರುವುದು ಅನ್ಯಾಯಕ್ಕೆ ತಲೆಬಾಗದಿರುವುದು ಅವನ ಶೀಲವನ್ನೇ ಎತ್ತಿತೋರುತ್ತಿವೆ. ಇಂದಿನ ಜನಕ್ಕೆ ಅದರಲ್ಲಿಯೂ ಭಾರತೀಯರಿಗೆ ಈ ಗುಣಗಳು ಅತ್ಯಾವಶ್ಯಕವಾಗಿವೆ. ತಿರುನಲ್ಲೂರ ಶಿವನನ್ನು ಬೀಳ್ಕೊಂಡು ತನ್ನೂರಿಗೆ ಬಂದು, ನೆಲ್ಲು ಕೊಯ್ಯುವ ಉದ್ಯೋಗವನ್ನು ಕೈಕೊಂಡು ಅನ್ನ, ಹಾಲು, ಮಾವು ಗಳನ್ನು ನೈವೇದ್ಯಕ್ಕೆ ಕೊಟ್ಟು ಜೀವಿಸುತ್ತಾನೆ. ಈತನು ಕೊಯ್ಯಲು ಒಪ್ಪಿಕೊಂಡ ಬತ್ತದ ಗದ್ದೆಗಳ ಫಲವು ವಿಫಲವಾಗುತ್ತದೆ ; ಆದರೆ ಅದು ಹೊಲದ ಒಡೆಯರಿಗೆ ತಿಳಿದರೂ ಅವನಿಗೆ ತಿಳಿಯದು. ಅವನ ಭಾವಮಾತ್ರಯಾವಾಗಲೂ ಶಿವನತ್ತ; ಭಕ್ತರನ್ನು ಕಂಡರೆ ಅವರನ್ನು ಆದರದಿಂದ ಕಂಡು ನಮಿಸುತ್ತಾನೆ. ಯಾಕೆಂದರೆ ದೇವರನ್ನು ಪ್ರೀತಿಸಬೇಕಾದವನು ಜನರನ್ನು ಪ್ರೀತಿಸದಿದ್ದರೆಂತು ? ಹೀಗೆಯೇ ಶಿವಭಕ್ತಿಯು ಅವನಲ್ಲಿ ದಳವೇರುತ್ತದೆ. ಆದರೆ ಕೆಲವು ದಿವಸಗಳ ತರುವಾಯ ಬತ್ತದ ಪಯಿರು ಬಾರದೆ ಅರಿವಾಳ್ತಾಂಡರು ಸತತವಾಗಿ ಇಪ್ಪತ್ತು ದಿವಸ ಉಪವಾಸ ಕಳೆಯುತ್ತಾರೆ. ಕೂಲಿಕಾರರಿಗೆ ಉಪವಾಸ ಬೀಳುವ ಪರಿಸ್ಥಿತಿ ಹೊಸದೇನೂ ಅಲ್ಲ ; ಎಂದಿನಿಂದಲೇ ನಡೆದುಬಂದಿದೆ ! ಆದರೆ ಅರಿವಾಳ್ತಾಂಡನು ಉಪವಾಸ ಬಿದ್ದೆನೆಂದು ಅಂಜಿದವನಲ್ಲ ; ಅಳುಕಿದವನಲ್ಲ. ಆ ಉಪವಾಸ ಬಿದ್ದ ಶಿವಭಕ್ತನಿಗಾಗಿ ಕವಿ ಬರೆದ ಮಾತುಗಳಿವು : "ಕೋಡದೆ, ಕೊಂಕದೆ, ಅಲುಗದೆ ಅಲ್ಲಾಡದೆ ಇರೆ, ರಾಗದಿಂದೊಂದು ದಿನಕೆ ಕಳೆ ಏರುತಿರೆ"—ಅವನು ಜೀವಿಸುತ್ತಾನೆ. ಶಿವಭಕ್ತಿಯು ಇಂತಹ ಕಠಿಣಪರಿಸ್ಥಿತಿ ಯಲ್ಲಿಯೂ ವ್ಯಕ್ತಿಗೆ ಕಳೆತರುತ್ತಿದೆ ಎಂಬುದೇ ಕವಿಯ ಮಹೋನ್ನತ ವಿಚಾರವೆನ್ನ ಬಹುದು. [11] ಕೂಲಿಕಾರನ ಬದುಕಿಗೆ-ಕಷ್ಟಕ್ಕೆ ಶಾಂತಿದೊರೆಯಬೇಕಾದರೆ ಹರಿಹರನ ಈ ಕಥೆಯನ್ನೊಮ್ಮೆ ಮೆಲುಕು ಹಾಕಬೇಕು. ಬಡತನದ ಜೀವನಕ್ಕೆ ನೆಮ್ಮದಿಯ ನ್ನುಂಟುಮಾಡುತ್ತದೆ ಈ ಕಥೆಯೆನ್ನಬಹುದು. ಈ ಭಕ್ತನ ಶಿವಭಕ್ತಿಯ ಪಂಥವು ಶಿವನನ್ನೇ ಅಲ್ಲಾಡಿಸುತ್ತದೆ ! ಈ ಗುಪ್ತಮಾಹೇಶ್ವರನನ್ನು ತೋರಿಸಬೇಕೆಂದು ಗಿರಿಜೆ ಯೊಡನೆ ಶಿವನು ಅರಿವಾಳ್ತಾಂಡರಿದ್ದ ಗದ್ದೆಗೆ ಬಂದು ಉಪವಾಸದಿಂದ ಬಳಲುವ

---

11. ಭಕ್ತಿಯಲ್ಲಿ ಶಿವನು ಭಕ್ತನ ತನು, ಮನ ಧನವೆಲ್ಲವನ್ನೂ ಅಲ್ಲಾಡಿಸಿ ನೋಡಿದಾಗಳೂ ಅಂಜಬಾರದೆಂದು ಬಸವಣ್ಣನವರ ಹೇಳಿಕೆ. ಬ. ವ. ೨೧೪ ; ದೇವರ ದಾಸಿಮಯ್ಯನವರು :

> " ಹರ ತನ್ನ ಭಕ್ತರ ತಿರಿವಂತೆ ಮಾಡುವ ;
> ಒರೆದು ನೋಡುವ ಸುವರ್ಣದ ಚಿನ್ನದಂತೆ ;
> ಅರೆದು ನೋಡುವ ಚಂದನದಂತೆ ;
> ಅರಿದು ನೋಡುವ ಕಬ್ಬಿನ ಕೋಲಿನಂತೆ ;
> ಬೆದರದೆ ಬೆಚ್ಚದೆ ಇದ್ದಡೆ—
> ಕರವಿಡಿದೆತ್ತಿ ಕೊಂಬ ನಮ್ಮ ರಾಮನಾಥನು "—ವಚನ ೯೦

' ದೇವರ ದಾಸಿಮಯ್ಯನ ವಚನಗಳು ' ಸಂ : ಫ. ಗು. ಹಳಕಟ್ಟಿ.

ಒಕ್ಕಲು ಮಗನನ್ನು, ಈತನೇ 'ಆ ಸಾತ್ವಿಕ ಮಹೇಶ್ವರಂ' ಎನ್ನಲು, ಗಿರಿಜೆಯು: "ಈತನೇ ಭಕ್ತನೇ? ನಿಮ್ಮನರ್ಚಿಸಲ್ಬಲ್ಲನೇ? ಪಾಡಲ್, ಆಡಲ್, ಪೊಗಳಲ್ ಅರಿವನೇ? ಒಕ್ಕಲಮಗಂಗೊಲಿವರೇ ದೇವ?" ಎಂದು ಪ್ರಶ್ನಿಸುತ್ತಾಳೆ. ಆಗ ಪರಮೇಶ್ವರನಾಡಿದ ಮಾತುಗಳಿವು:

"ನಿನಗೆ ಪೇಳ್ವೆಂ ಕೇಳು ಕಡುಹಿತವನಿಂತೆನಗೆ;
ಅರ್ಚಿಸಲ್ಕರಿಯಂ; ಅನ್ಯಕ್ಕಳಿಪದಿರ ಬಲ್ಲ!
ಎಚ್ಚತ್ತು ಪೊಗಳಲರಿಯಂ; ಹುಸಿಯದಿರ ಬಲ್ಲ!
ಆಡಲರಿಯಂ; ಬಲ್ಲವರ್ಬಲ್ಲನೆಲೆದೇವಿ!
ಪಾಡಲರಿಯಂ; ಪಾಡಿನರ್ತವೀತಂ ದೇವಿ!
ಎನ್ನನರಿಯದ ಚೆಲ್ವು ಶಬುದ ಚೆಲ್ವಲೆ ಗಿರಿಜೆ!
ಎನ್ನನರಿಯದ ಪಾಡು ಪಲವಾದಿತಲೆ ಗಿರಿಜೆ!
ನಡೆ ಇಲ್ಲದನ ಪಾಡ ನಾನೊಲ್ವೆನೇ ದೇವಿ?
ನುಡಿದು ಪುಸಿವನ ನುಡಿಯ ನಾನೊಲ್ವೆನೇ ದೇವಿ
ನುಡಿ ಕಿರಿದು; ನಡೆ ಪಿರಿದು, ನೋಡೆನ್ನ ಭಕ್ತರ್ಗೆ!
ನುಡಿಗಳುಂ ನಡೆಗಳುಂ ಪೊರಪೊಣ್ಮವಾತಂಗೆ!
ಒಡಲ ಪಿಡಿದಿಹ ಗುಣಗಳಿಲ್ಲವಾ ಭಕ್ತಂಗೆ!
ಸಡಗರದ ಸಂಭ್ರಮದ ಬಗೆ ಪೊರ್ದವೀತಂಗೆ!
ಅವನ ಚರಿತವ ಪೊಗಳ್ವಡರಿದು ವೇದಂಗಳಿಗೆ!
ಭುವನದೊಳು ನಡೆವ ಮನುಜರ ಪರಿಯು ಅಲ್ಲಿವಗೆ!

ಇಂತಹ ಉಕ್ತಿಗಳಿಂದ ಕನ್ನಡ ನುಡಿಯ ಚೆಲ್ವು, ಬೆಲೆ ಹೆಚ್ಚಾಗಿವೆಯೆಂದೇ ಹೇಳಬಹುದು. ಗಿರಿಜೆ–ಪರಮೇಶ್ವರರ ಸಂವಾದವನ್ನು ನಾಟಕೀಯವಾಗಿ ಕಲ್ಪಿಸಿಕೊಂಡು, ಹರೀಶ್ವರನು ತನ್ನ ಬಡ ಭಕ್ತನ ಜೀವನದಲ್ಲಿ ಕಂಡ ಮೌಲ್ಯಗಳ ಮಾಲೆಯನ್ನೇ ಹೆಣೆದಿದ್ದಾನೆ ಈ ಮಾತಿನ ಮಾಲೆಯಲ್ಲಿ[12]. ಅರ್ಚಿಸಲು ಶಾಸ್ತ್ರೋಕ್ತವಾಗಿ ಬಲ್ಲವನಲ್ಲದಿದ್ದರೂ ಅನ್ಯಕ್ಕೆ ಆಪೇಕ್ಷಿಸಲಾರ; ಪೊಗಳಲು ನಾಲಗೆ ಸಾಲದಿದ್ದರೂ ಹುಸಿಯಾಡಲಾರ! ನುಡಿ ಕಿರಿದು; ನಡೆ ಪಿರಿದು! ಶಬ್ದ ಚೆಲುವು ಗೊತ್ತಿಲ್ಲ; ಆದರೆ ಶಿವನ ಮೇಲಿನ ಮಮತೆಯನ್ನು ಬಲ್ಲ. ಇಂತಹ ಚಿಕ್ಕ ಚಿಕ್ಕ ನುಡಿಗಡಣದಲ್ಲಿ ಕಿರಿಯ ಶಿವಭಕ್ತನೊರ್ವನ ಹಿರಿಯ ಗುಣಗಳನ್ನು ಪ್ರಶಂಸಿಸಿದ್ದಾನೆ. ಗುಣಕೆ ಮತ್ಸರವಿಲ್ಲದ ದೃಷ್ಟಿ ಕವಿಯದು. ಭಕ್ತನ ಬದುಕು ಎಂತು ಹಸನಾದುದು ಎಂಬುದನ್ನೂ, ಬಡವರಾದರೇನು, ಅಜ್ಞರಾದರೇನು, ಉನ್ನತ ಗುಣಗಳನ್ನು ಪಡೆದವರೇ ಉದಾತ್ತರು, ಉದಾರ ಚರಿತರು; ಒಂದು ದೃಷ್ಟಿಯಲ್ಲಿ ಅವರೇ ಹರಿಹರಕವಿಗೆ ಅರಸರು.

---

12. ಈ ರೀತಿಯ ಕ್ರಮವನ್ನು ಹರಿಹರನು ಅನೇಕ ಕಥೆಗಳಲ್ಲಿ ಅನುಸರಿಸಿದ್ದಾನೆ. ಉದಾಹರಣೆಗೆ ಬೇಡರ ಕಣ್ಣಪ್ಪನ ರಗಳೆಯನ್ನು ನೋಡಬಹುದು.

ಅರಿವಾಳ್ತಾಂಡನ ಪತ್ನಿಯನ್ನು ಈ ಕಾರಣದಿಂದಲೇ ಕವಿಯು ಒಂದೆಡೆ ‘ ಅರಸಿ ’ ಎಂದೇ ಸಂಬೋಧಿಸಿದ್ದಾನೆ. ಈ ಮೌಲ್ಯಗಳು ಇಂದಿನ ಕಾಲಕ್ಕಂತೂ ಅತ್ಯವಶ್ಯವೆಂದೇ ಹೇಳಬಹುದು. ಮಾನವನು ಏನೇ ಮಾಡಲಿ, ಏನೇ ನುಡಿಯಲಿ ಅದರ ಹಿನ್ನೆಲೆಯ ಉದ್ದೇಶವೇ ಮಹತ್ವದ್ದೆಂದು ಅರಿಯಬೇಕೆಂಬುದೇ ಕವಿಯ ಸಂದೇಶವಾಗಿದೆ. ಇವನ ಕತೆ ಸಂಸ್ಕೃತಿಯ ವರ್ಧನೆಗೆ, ಹಸನಾದ ಬದುಕಿಗೆ, ಭಾವಶುದ್ಧಿಗೆ ಸಾಧನೆಯೆಂದೇ ಕವಿಯ ಭಾವನೆ. ಶಿವಭಕ್ತಿಯು ನಾಡಿಗೆ ಎಂತಹ ಸದ್ಗುಣಗಳನ್ನು ಕಲಿಸುತ್ತದೆ ಯೆಂಬುದಕ್ಕೆ ಇದೊಂದು ನಿದರ್ಶನ.[13] ರಾಷ್ಟ್ರದ ಉತ್ಪಾದನೆಯು ಹೆಚ್ಚಾಗುವುದು ಅತ್ಯವಶ್ಯವಿರುವ ಇಂದಿನ ಕಾಲದಲ್ಲಿ ಹರಿಹರ ಕವಿಯು ಚಿತ್ರಿಸಿದ ಇಂತಹ ಕೂಲಿಕಾರರ ಉದಾತ್ತಜೀವನ ದೃಷ್ಟಿಯು ನಮ್ಮ ನಾಡಿಗೆ ಯೋಗ್ಯವೆನಿಸುವುದರಲ್ಲಿ ಸಂದೇಹವೇ ಇಲ್ಲವೆನ್ನಬಹುದು.

ಹರಿಹರನು ಒಂದೊಂದು ಕಥೆಯಲ್ಲಿಯೂ ಒಂದೊಂದು ಜೀವನದ ಮೂಲ್ಯವನ್ನು ಬಿತ್ತರಿಸಿದ್ದಾನೆ. ಅವನ ಶರಣರು ಪ್ರಮುಖವಾಗಿ ಒಂದೊಂದು ಸಾಧ್ಯವಾಗಬಲ್ಲ ಆದರ್ಶಕ್ಕೆ ಹೆಣಗಿದವರು. ಹರೀಶ್ವರ ಕವಿಯ ನಂಬಿಯಣ್ಣ, ಪ್ರಭುದೇವ, ಆದಯ್ಯ, ಮಲುಹಣ ಇವರ ಜೀವನ ರೀತಿಯೇ ಬೇರೆ. ‘ ಇಹ ಪರಗಳಲ್ಲಿ ಅವರು ಪ್ರೇಮ ಜೀವಿಗಳಾಗಿ ಬಾಳಿ ಬದುಕಿದವರು ’. ಅವರು ಲೌಕಿಕರಾಗಿದ್ದ ಕಾಲದಲ್ಲಿ ಸಕಲೇಂದ್ರಿಯ ಸುಖವನ್ನೂ ಪರಮಾತ್ಮನ ಸ್ಮರಣೆಯಿಂದ ಸವಿದವರು. ಕವಿಯು ಈ ಮಾತನ್ನು ಆದಯ್ಯನ ರಗಳೆಯಲ್ಲಿ :

> “ ಪದ್ಮಾವತಿಯಂ ಆದಯ್ಯನುಂ ಗಾಢಾಲಿಂಗನದ ಮುತ್ತಿಗೆಯತ್ತಲಗ್ಗಳವಾಗಿ ....
> ಸುಖಂ ಸೂರೆವೋಗಿ, ಮನಂ ಪಿಡಿವಟ್ಟು, ಮುಟ್ಟದ ಸುಖಮುಂ ಸೋಮನಾಥನ ಸ್ಮರಣೆಯಿಂ
> ಸವಿವುತ್ತಿರ್ಪ ಸುಖ ಸಮಯದೊಳು ” 14

ಎಂದು ತಿಳಿಸಿದ್ದಾನೆ. ನಂಬಿಯಣ್ಣನ ರಗಳೆಯಲ್ಲಿ :

> “ ನೋಡುವ ಚೆಲ್ವುಮಂ ನುಡಿವ ವಾಕ್ಯಮುಮಂ ಮನದುಳಿದಕ್ಕಱಿಂ
> ಕೂಡುವ ಸೌಖ್ಯಮುಂ, ತನಗೆ ಬಂದ ಮಹೋನ್ನತ ಸಂಪದಂಗಳಂ,
> ಪಾಡಿಸುವಳ್ತಿಯಂ ಸವಿವ ಸರ್ವ ಪದಾರ್ಥ ಸುಖಂಗಳಂ ಕರಂ,
> ಕೂಡೆ ಶಿವಾರ್ಪಿತಂಗುಡುತೆ ಸೌಂದರನೊಪ್ಪುತಿರಲ್ ನಿರಂತರಂ ” 15

---

13. ಈ ಕಥೆಗೆ ‘ ಹರಿಹರನ ರಗಳೆಗಳು ಭಾಗ ೪ ’ (?) ಸಂ : ಫ. ಗು. ಹಳಕಟ್ಟಿ—ಈ ಪುಸ್ತಕವನ್ನು ಬಳಸಿಕೊಳ್ಳಲಾಗಿದೆ.

14. ಆದಯ್ಯನ ರಗಳೆ ; ಪುಟ ೮೦ ; ಹರಿಹರನ ರಗಳೆಗಳು ಭಾಗ ೨ ; ಸಂ. ಫ. ಗು. ಹಳಕಟ್ಟಿ.

15 ನಂಬಿಯಣ್ಣನ ರಗಳೆ ; ಪುಟ ೭೮ ; ಸಂ : ಪ್ರೊ. ತೀ. ನಂ. ಶ್ರೀ (೧೯೪೯).

ಎಂದಿರುವುದಲ್ಲದೆ, ಮಲುಹಣನ ರಗಳೆಯಲ್ಲಿ :

" ಪರಿಭಕ್ತಗೆ ಇಹಪರವೆರಡುಂ ಕೈಸಾರ್ಗೆ " [16]

ಎಂದಿದ್ದಾನೆ. ಜೀವನದಲ್ಲಿ ಪರಮಾತ್ಮನೊಲುಮೆಗಾಗಿ, ಇಲ್ಲವೆ ಮಾನವರ ಒಲುಮೆಗಾಗಿ 'ಕಪಟವಳಿದು', 'ಉಪಚಾರ' ವಿಲ್ಲದಿದ್ದರೆ ಅದೇ ಪವಿತ್ರ ಜೀವನವೆಂದಿದ್ದಾನೆ ಮಲುಹಣನ ರಗಳೆಯಲ್ಲಿ :

" ಕಪಟವಳಿದನುರಾಗವೊಳಗೊಪ್ಪಿ, ನೆಱೆನಂತೆ
ಉಪಚಾರವಳಿದು ಸತ್ಯಸ್ನೇಹವಿರ್ದಂತೆ
ಇರ್ದನಾ ಮಲುಹಣಂ " [17]

ಹೀಗೆ ಹರಿಹರ ಕವಿಯು ಜೀವನದ ಸರ್ವಸ್ವವೆನಿಸಿದ ಮೂಲ್ಯಗಳನ್ನು ಅಲ್ಲಿ ಸೆರಗೊಳಿಸಿದ್ದಾನೆ. ಯಾವುದನ್ನೇ ಕೈಕೊಂಡರೂ ಅಲ್ಲಿ ಶಿವಾರ್ಪಣಭಾವವಿದ್ದು, ಕಪಟ, ಉಪಚಾರಗಳಿಂದ ದೂರವಿದ್ದು, ಸತ್ಯ ಸ್ನೇಹವುಳ್ಳುದೆ ಅವರಂತಹ ಉತ್ತಮ ಬದುಕೊಂದಿಲ್ಲವೆಂದು ತಿಳಿಸಿದ್ದಾನೆ. ಈ ಜೀವನ ತತ್ವವನ್ನು ಸಹ ಅವನು ಶ್ರೀ ಬಸವೇಶ್ವರನಿಂದಲೇ ಪಡೆದಂತಿದೆ. ಬಸವಣ್ಣನವರು ಒಂದೆಡೆ :

" ಕರ್ಮ ಫಲಗೂಡಿ ಕೂಡಲ ಸಂಗಮದೇವಂಗೆ
ಆತ್ಮ ಸ್ವವೇದ್ಯನ ಮಾಡಿದವನೆ ಧನ್ಯ " [18]
" ನಾನಾ ಕರ್ಮಂಗಳ ಮಾಡಿದರೆಯೂ
ಆ ಕರ್ಮಫಲ ಭೋಗವ ನೀ ಕೊಡುವೆಯೆಂಬುದ ನಾನು ಬಲ್ಲೆನು " [19]

ಎಂಬ ಬಸವೇಶ್ವರರ ಶಿವಾರ್ಪಣೆ ಭಾವದಲ್ಲಿದ್ದ ಯಾವಕ್ರಿಯೆಯೂ ಹೊಲ್ಲವಲ್ಲವೆಂಬ ಶಿವಶರಣರ ತತ್ವವನ್ನು ಹರಿಹರನು ಅಂಗೀಕರಿಸಿದುದರಿಂದಲೇ ಆ ಮೂಲ್ಯವನ್ನು ಈ ಕಥೆಗಳಲ್ಲಿ ಹುದುಗಿದ್ದಾನೆ. ನಮ್ಮ ಕರ್ಮಗಳನ್ನು ಬಿಡುವುದಾಗಲಿ, ಪೂಜೆ, ಸ್ಮರಣೆಗಳನ್ನು ಬಿಡುವುದಾಗಲಿ ಯೋಗ್ಯವಲ್ಲ. ಕರ್ಮಗಳನ್ನು ತೊರೆದವರೆ ಭಿಕ್ಷುಕವೃತ್ತಿಯನ್ನು ಕೈಕೊಳ್ಳಬೇಕು. ನಾಡಿನ ತುಂಬೆಲ್ಲಾ ಇಂತಹರೇ ತುಂಬಿದರೆ ಗತಿ ಏನು? ಆ ಕಾರಣದಿಂದ ಹರಿಹರನ ಈ ತತ್ವವು, ಜೀವನವನ್ನು ಹೊಕ್ಕು ಅದರಿಂದ ಪರಿತ್ಯಕ್ತನಾಗದೆ, ಲಿಂಗಾಂಗ ಸಾಮರಸ್ಯ–ಶಿವಸಾಯುಜ್ಯವನ್ನು ಪಡೆಯಲು ಬರುತ್ತದೆಯೆಂದು ತಿಳಿಸಿದುದನ್ನು ನಾವಿಂದು ಅಂಗೀಕರಿಸಿದಲ್ಲಿ ನಾಡಿಗೆ ಅತಿಹಿತವಾದೀತು. ಅದರಿಂದಲೇ ಸಂಸಾರಿಗಳಾಗಿದ್ದೂ ಶಿವಯೋಗಿಗಳಾಗಿದ್ದಾರೆ ಆತನ ಅನೇಕ ಶಿವಶರಣರು. ಶ್ರೀ ರೇವಣಸಿದ್ಧ,

---

[16] ಮಲುಹಣನ ರಗಳೆ. ಪುಟ ೧೩. (೧೯೫೬) ; ಸಂ. ಶ್ರೀ ವಿ. ಮು. ಮಲ್ಲಾಬಾದಿ, ಮತ್ತು ಸೌ. ಚೆನ್ನಬಸಮ್ಮ ಮಲ್ಲಾಬಾದಿ.

[17] ಅದೇ–ಪುಟ ೨೧.

[18] ಬ. ವ. ೭೭೩, ೭೭೪.

[19] ಬ. ವ. ೭೦೪.

ಬಸವೇಶ್ವರ ಶಂಕರದಾಸಿಮಯ್ಯ, ಆದಯ್ಯ ಮೊದಲಾದವರು ಈ ಗುಂಪಿಗೆ ಸೇರಿದವರು. ಶಿವಯೋಗ ಸಂಪಾದನೆಗೆ ಸಂಸಾರವು ಹೊರೆಯಲ್ಲ ಎಂಬ ದಿವ್ಯ ತತ್ವವನ್ನು ಹರಿಹರನು ಈ ಕಥೆಗಳಲ್ಲಿ ಬೋಧಿಸಿದ್ದಾನೆ. ಹರಿಹರನು, ಶರಣರು ಈ ಭೂಲೋಕಕ್ಕೆ ಬಂದ ಉದ್ದೇಶವನ್ನು ರೇವಣ ಸಿದ್ಧೇಶ್ವರ ದೇವರ ರಗಳೆಯಲ್ಲಿ:

> " ಲೋಕಮಂ ಪಾವನಂ ಮಾಡುವುದ್ಯೋಗದಿಂ
> ಆಕಸ್ಮಿಕಂಗಳಂ ತೋಱುವನುರಾಗದಿಂ " [20]

ಬಂದರೆಂದು ತಿಳಿಸಿದ್ದಾನೆ. "ಸಕಲಜೀವರಾಶಿಗಳಿಗೆ ಲೇಸನೇ ಬಯಸಬೇಕೆಂಬ" ಬಸವಣ್ಣನವರ ದೃಷ್ಟಿಯೇ ಇದಾಗಿದೆ. ರೇವಣಸಿದ್ಧನ ದೃಷ್ಟಿಯನ್ನು ಕವಿಯು:

> " ತ್ರಿಕಾಲಜ್ಞಾನದ ಋಷಿ, ತನ್ನ ಮನದೊಳ್ ನೆನೆದು ನೋಡಿ,
> ರಾಕ್ಷಸ ಮಿಥುನಂ ಶಾಪಹತರಾಗಿರ್ಪುದನಱಿದು ಇವಂದಿರ ದೆಸೆಯಿಂದಪ್ಪ
> ಪ್ರಾಣಿವಧೆಯಂ ಮಾಣಿಸುವೆಂ ;
> ಜಗದ್ಧಿತಾರ್ಥಮಾಗಿಂತಿವಂ ತೀರ್ಚುವೆಂ "

ಆ "ಪರಮಶಿವಯೋಗಿಯು" ಎರಡು ತಗುಣೆಗಳೆರಡನ್ನೂ ಲೋಹದ ಗುಂಡಾಗಿ ಮಾರ್ಪಡಿಸುತ್ತಾನೆ. ಅಲ್ಲದೆ ರೇವಣಸಿದ್ಧನು 'ಕನ್ಯಾಬಲಿ' ಪದ್ಧತಿಯನ್ನೂ ನಿವಾರಿಸಿದನೆಂದು ಕವಿಯ ಹೇಳಿಕೆ.[21] ರೇವಣ ಸಿದ್ಧೇಶ ಮತ್ತು ಶಂಕರ ದಾಸಿಮಯ್ಯರು 'ಲೋಕ ಹಿತಮಂ' ಮಾಡುವ ಉದ್ದೇಶದಿಂದಲೇ ಅನೇಕ ಅಶಾಸ್ತ್ರೀಯ ಆಚರಣೆಗಳನ್ನು ಖಂಡಿಸಿದುದಲ್ಲದೆ, ಭೈರವ ಪೂಜೆ, ಮೈಲಾರನ ಪೂಜೆ, ಮಾರಿಮಸಣಿಯರ ಉಪಟಳಗಳನ್ನು ಕಡಿಮೆ ಮಾಡಿದರೆಂದೂ ಕವಿಯು ವರ್ಣಿಸಿದ್ದಾನೆ ಅವರ ಚರಿತ್ರೆಗಳಲ್ಲಿ. ಬಸವಣ್ಣನವರ ಕಾಲದಲ್ಲಿ ಮತ್ತು ಅವರ ಪೂರ್ವದಲ್ಲಿ ಶೈವಧರ್ಮದ ವಿವಿಧ ಶಾಖೆಗಳಲ್ಲಿಯೇ ಪ್ರಚಲಿತವಿದ್ದ ನರಬಲಿ, ಕನ್ಯಾಬಲಿ, ಪಶುಬಲಿಗಳನ್ನೂ ಅವರು ಕಡಿಮೆ ಮಾಡಿದ್ದಾರೆ ತಮ್ಮ ಆಕಸ್ಮಿಕಂಗಳ ಪ್ರಭಾವದಿಂದ. ಹರಿಹರನ ಕಥಾನಾಯಕರು ಶಿವಭಕ್ತರಾದುದರಿಂದ ಪರರಿಗೆ ನೋವನ್ನುಂಟುಮಾಡುವುದು ಅವರ ವ್ಯಕ್ತಿತ್ವಕ್ಕೇ ಕುಂದು ತರುವಂತಹದು. ಆದರೆ ಶಿವಭಕ್ತರಾಗಿಯೂ ಅವರಲ್ಲಿ ಕೆಲವರು ವಿಶೇಷತಃ ರೇವಣಸಿದ್ಧ, ಆದಯ್ಯ, ಶಂಕರ ದಾಸಿಮಯ್ಯ ಮತ್ತು ಏಕಾಂತದ ರಾಮಯ್ಯ ಮೊದಲಾದವರು ಅತಿ ಉಗ್ರರೂ ಕಟ್ಟಾ ಶಿವಭಕ್ತರೂ, ಏಕ ದೇವನಿಷ್ಠಾಪರರೂ ಆದುದರಿಂದ ಅವರಲ್ಲಿ ಕೆಲವರು ಜೈನರ ಹಾಗೂ ವೈಷ್ಣವರ ಮೂರ್ತಿಗಳನ್ನು ಭಗ್ನಗೊಳಿಸುವಷ್ಟರ ಮಟ್ಟಿಗೆ ಹೋದರೆಂದು ಕವಿಯು

---

20 'ರೇವಣ ಸಿದ್ಧೇಶ್ವರ ದೇವರ ರಗಳೆ', ಪುಟ ೪; -ಹರಿಹರನ ಮೂರು ರಗಳೆಗಳು, (೧೯೪೭) ಸಂ: ಸ. ಸ. ಮಾಳವಾಡ.

21 ಅದೇ-ಪುಟ ೨೩; 'ಲೋಕದೊಳ್ ಕನ್ನಿಕೆಯರಂ ಕೊಲ್ವುದತಿ ಪಾಪ!'

ವರ್ಣಿಸಿದ್ದನ್ನೇ ಇಟ್ಟುಕೊಂಡು, ಅವರನ್ನು 'ಮತಾಂಧ'ರೆಂದೂ 'ಕ್ರೂರ' ಭಕ್ತರೆಂದೂ 'ತಾಮಸ' ಭಕ್ತರೆಂದೂ ಕರೆಯಬಾರದು. ಯಾಕೆಂದರೆ ಶಿವಶರಣರು ತಾವಾಗಿಯೇ ಯಾರೊಡನೆಯೂ ವಾದಕ್ಕಿಳಿವರಲ್ಲ; ಆದರೆ ಯಾರಾದರೂ ಅವರಿಗೆ ಕಟಕಿಯನ್ನಾಡಿದರೆ, ಅವರ ಶೈವನಿಷ್ಠೆಗೆ ಕುಂದುತಂದರೆ ಮಾತ್ರ ಸೇಡು ತೀರಿಸಿಕೊಳ್ಳದೇ ಬಿಡುತ್ತಿರಲಿಲ್ಲ. ಇನ್ನೊಬ್ಬರು ಕಾಲುಕೆರಿದು ಜಗಳತೆಗೆದಾಗ ಮಾತ್ರ ಉಗ್ರರಾಗಿದ್ದಾರೆ. ಆದಯ್ಯನು ಜೈನರ ಬಸದಿಯಲ್ಲಿ ಸೋಮನಾಥನನ್ನು ಸ್ಥಾಪಿಸಲು ಪ್ರಯತ್ನಪಟ್ಟುದು ತನ್ನ ಜೈನಮಾವನಾದವನಿಂದ ಶೈವಗುರುಗಳಿಗೆ, ಶಿವಧರ್ಮಕ್ಕೆ ಅವಮಾನ ಉಂಟಾದಾಗ ಮಾತ್ರ. ಅದಗಂತೆಯೇ ಶಂಕರದಾಸಿಮಯ್ಯನು, ಕೆಲವು ಕುಹಕಿಗಳು ವಿಷ್ಣು ಪ್ರತಿಮೆಯನೀಕ್ಷಿಸಲು ಕಟಕಿಯಿಂದ ಹೇಳಿದಾಗ :

"ನೋಡಿದ ಪ್ರತಿಮೆಗಳ್ಗಳಿವಕ್ಕು ; ನಿಮಗೆ ನಿರೋಧಂ ಬರ್ಕುಂ ; ಬೇಡ ಬೇಡಕಟಾ !
ಪ್ರಾಣಿಗಳ ಮನವ ನೋಯಿಸಲೇಕಯ್ಯ ? ಬೇಡ ! ಎಂದು ನೋಡಲೊಲ್ಲದೆ ನೀತಿ",

ಕುಹಕಿಗಳು ಮತ್ತೆ :

"ಎಲೆ ದೇವಾ, ನಿಮ್ಮಡಿಗಳ್ ನೋಡಿದೊಡಳಿವುಂಟೇ? ಸುಪ್ರತಿಷ್ಠಮಕ್ಕುಂ; ಎಂದಾಕ್ಷೇಪದಿಂ ಪರಿಹಾಸಮನಾಡೆ, ಕಟಕಿಯಂ ಸೈರಿಸಲಾರದೆ, ಕಡುಮಾನಿ ...."

ತನ್ನ ಬಿಸಿಗಣ್ಣನ್ನು ತೆರೆದೊಡನೆ, ವಿಷ್ಣು ಪ್ರತಿಮೆ ಘುರಘುರಲೆನಲು ಉರಿದು ಹೋಯ್ತೆಂದು ಕವಿಯು ವರ್ಣಿಸುತ್ತಾನೆ.[22] ಹೀಗೆ ಹರಿಹರನು ತನ್ನ ಕೆಲ ಶಿವಶರಣರು ಮೂಲ ಯಾವ ಧೋರಣೆಯುಳ್ಳವರಾಗಿದ್ದರೆಂಬುದನ್ನು ಸ್ಪಷ್ಟಪಡಿಸಿರುವಾಗಲೂ ಅವರನ್ನು ತಾಮಸರೆಂದು ತಿಳಿಯುವುದು ಸಮಂಜಸವಲ್ಲ. ಅಷ್ಟೇ ಅಲ್ಲ ಈ ರೀತಿ ಬದುಕುವುದು ಎಲ್ಲ ಕಾಲಕ್ಕೂ ವಿಹಿತ. ವ್ಯಕ್ತಿ ತನಗೆ ಸರಿಕಂಡಂತೆ ನಡೆಯುವ ಸ್ವಾತಂತ್ರ್ಯವಿರಬೇಕು; ಅದರಿಂದ ಇತರರಿಗೆ ಅನ್ಯಾಯವಾಗಿರಬಾರದು. ಹೀಗೆ ನಡೆದಾಗಲೂ ಯಾರಾದರೂ ಕೆಣಕಿ ಆ ವ್ಯಕ್ತಿಯ ಜೀವನದ ಶ್ರದ್ಧೆಯನ್ನೇ ಪ್ರಶ್ನಿಸಿದರೆ ಅದಕ್ಕೆ ಪ್ರತೀಕಾರ ಮಾಡಿ ಆ ಕಿಡಿಗೇಡಿಗಳ, ಕುಹಕಿಗಳ, ಕಟಕಿಗಳ ಗರ್ವಭಂಗ ಮಾಡದಿದ್ದರೆ ಮಾನವಂತನ ಮರ್ಯಾದೆಯ ಬಾಳುವೆಗೆ ಅಸ್ತಿತ್ವವೇ ಇಲ್ಲದಂತಾಗುತ್ತಿದೆಯೆಂಬ ಮಹತ್ವದ ಮೂಲ್ಯವನ್ನೇ ಕವಿಯು ಇವರ ಚರಿತ್ರೆಗಳಲ್ಲಿ ತಿಳಿಸಿದ್ದಾನೆ. ಅದು ಇಂದಿನ ಜೀವನಕ್ಕೂ ಆಚರಿಸಲು ಯೋಗ್ಯವೆಂದೇ ಹೇಳಬಹುದು. ಅವರ ಛಲವೂ ಸದುದ್ದೇಶ ಪೂರಿತವಾಗಿರುವುದರಿಂದ ಅದನ್ನು ಕಡೆಗಣಿಸಲಾಗದು. ಬಸವಣ್ಣನವರು ಹೇಳಿದ :

"ಛಲಬೇಕು ಶರಣಂಗೆ ಪರದೈವವನೊಲ್ಲೆನೆಂಬ"[23]

---

22 'ಶಂಕರ ದಾಸಿಮಯ್ಯನ ರಗಳೆ'–ಪುಟ ೨೦; 'ಹರಿಹರನ ಮೂರು ರಗಳೆಗಳು' (೧೯೪೭) ಸಂ : ಸ. ಸ. ಮಾಳವಾಡ.

23 ಬ. ವ. ೬೭೬.

ಮಾತೂ ಇದೇ ಮೂಲ್ಯವನ್ನೇ ಸಮರ್ಥಿಸುತ್ತದೆ. ಈ ಛಲವನ್ನು ಶರಣರು ಆತ್ಮ ರಕ್ಷಣೆ, ಧರ್ಮರಕ್ಷಣೆಗೆ ವಿನಿಯೋಗಿಸಿ ಕೊಂಡಿದ್ದಾರೆ. ಅಲ್ಲದೆ ಹರಿಹರ ಕವಿಯು ಶಿವಭಕ್ತರ ಕಥೆಗಳನ್ನು ಹೇಳುವಾಗ ಒಂದೆಡೆ :

" ಮರೆಹುಗಲ್ ಕಾವುತುಂ ಮರೆತರಂ ಸೀಳುತುಂ "[24]

ವೀರಭದ್ರನು ಬಂದನೆಂದು ' ವೀರಭದ್ರದೇವರ ರಗಳೆ 'ಯಲ್ಲಿ ತಿಳಿಸಿದ್ದಾನೆ. ' ಮಲೆತರೆ ಕೊಲ್ಲುವುದು,' ' ಶರಣಾಗತರಾದರೆ ಕಾಯುವುದು ' ನಮ್ಮ ನಾಡಿನ ಕಡುಗಲಿಗಳ ಧರ್ಮವಾಗಿತ್ತು. ಅದನ್ನೇ ಕಡುಗಲಿಗಳಾದ ಶರಣರ ಚರಿತ್ರೆಯಲ್ಲಿ ಹರಿಹರನು ನಿರೂಪಿಸಿದ್ದಾನೆ. ಪಾತಕಿಗಳನ್ನು ದ್ರೋಹಿಗಳನ್ನು ಕೊಂದರೂ ಪಾಪವಲ್ಲವೆಂಬುದನ್ನು ನಾವು ಮರೆಯ ಕೂಡದು. ಈ ಕಾರಣದಿಂದಲೇ ' ಪಾತಕಿಗಳು ' ' ಕುಹಕಿಗಳು ' ' ಶಿವದ್ರೋಹಿಗಳು ' ಆದವರು ಹರಿಹರ ಕವಿಯ ಅನುಕಂಪೆಯನ್ನು ಪಡೆಯುವುದಿಲ್ಲ. ಹರೀಶ್ವರನ ಕಾವ್ಯಗಳಲ್ಲಿ ಈ ಮೂಲ್ಯಗಳನ್ನು ಅರಿತುಕೊಳ್ಳುವುದು ಕಷ್ಟವಾಗುವುದಿಲ್ಲ ; ಯಾಕೆಂದರೆ ಆ ಶಿವಶರಣರ ಜೀವನ ಚರಿತ್ರೆಯ ಸಾರವತ್ತಾದ ಭಾಗವನ್ನು ತಾನೇ ಅಲ್ಲಲ್ಲಿ ನಿರೂಪಿಸಿ ಬಿಡುತ್ತಾನೆ. ಏಕಾಂತದ ರಾಮಯ್ಯನ ರಗಳೆಯಲ್ಲಿ ಅವನನ್ನು ಕುರಿತು ಕವಿಯು ಆಡಿದ ಮಾತುಗಳಿವು :

" ನುಡಿಯಂ ನುಡಿದ ಬಳಿಕ ತಪ್ಪನಚಳಿತ ವಚನ !
ಹಿಡಿದ ಭಾಷೆಯ ಬಿಡದೆ ಕಡೆಗಣಿಪ ದೃಢದ ಮನ !
ಎಡೆಗೊಡಂ ಕೊಟ್ಟು ಹಿಮ್ಮೆಟ್ಟನಂತಹಹ ಕಲಿ !
ತೊಡಕನುಂ ತೊಡಕಿ ಬಿಡಿಸಲ್ಬಾರದಂತು ಛಲಿ !
ನೋಡು ಪಾರ್ವತಿ, ಧೀರನಂ ಮಹಾಭಕ್ತನಂ ;
ನೋಡು ನಂದೀಶ, ನಿಷ್ಠಾ ಭಕ್ತಿಯುಕ್ತನಂ ;
ಉರವಣಿಸಿ ಎನ್ನ ವಿಶ್ವಾಸಿಸಿದರಿಂತುಂಟೇ ? "[25]

ಒಂದು ಕಾಲದಲ್ಲಿ ಕನ್ನಡನಾಡಿನ ಜನತೆ ಕೊಟ್ಟಮಾತನ್ನು ಪೂರೈಸುವುದಕ್ಕೆ .ಶಿರ ಚ್ಛೇದನಕ್ಕೂ ಹಿಂದು ಮುಂದೆ ನೋಡುತ್ತಿರಲಿಲ್ಲ ; ' ಆಣೆ ', ' ಭಾಷೆ 'ಗಳಿಗೆ ಅಂಜಿಕೆ ಇದ್ದ ಕಾಲವದು. ಶಿವಶರಣರು ತಮ್ಮಿಂದಾಗಿ ' ಆಣೆ 'ಗೆ ಭಂಗಬರಬಾರದೆಂಬ ಧೋರಣೆಯುಳ್ಳ ಜನ. ನಾಲಗೆಯನ್ನು ಜೀಕಿಗೆ ಹರಿಯಗೊಡದ ಜನ. ಆದರೆ ಇಂದು ನಮ್ಮ ದೇಶದಲ್ಲಿ ಬಾಯಿ ಇದೆಯೆಂದು ಬೇಕಾದುದನ್ನು ನುಡಿದು ಮನಬಂದಂತೆ

---

24 ' ವೀರಭದ್ರ ದೇವರ ರಗಳೆ '-ಪುಟ ೯೮. ಹಂಪೆಯ ಹರಿಹರದೇವನ ರಗಳೆಗಳು –ಭಾಗ ೧ (೧೯೫೮) ಸಂ : ಬಿ. ಸಿ. ಜವಳಿ ಮತ್ತು ಮಲ್ಲಬಾದಿ ವೀರಭದ್ರಪ್ಪ.

25 ಏಕಾಂತರಾಮಿ ತಂದೆಗಳ ರಗಳೆ ; –ಹರಿಹರನ ರಗಳೆಗಳು ಭಾಗ ೭ (೧೯೩೭) ಸಂ : ಫ. ಗು. ಹಳಕಟ್ಟಿ.

ನಡೆಯುವುದಾಗಿದೆ. ಜನರಲ್ಲಿಯೇ ವಿಶ್ವಾಸವನ್ನು ಬಂಧುಗಳಲ್ಲಿಯೇ ಪ್ರೀತಿಯನ್ನು ತಾಳದ ಜನ, ದೇವರಲ್ಲೆಂತು ವಿಶ್ವಾಸ ನಿಷ್ಠೆಯನ್ನು ತಾಳೀತು? ಆದರೆ ನಿಷ್ಠೆ ವಿಶ್ವಾಸಗಳನ್ನು ಬೆಳೆಸಿಕೊಳ್ಳದೇ ಜನಾಂಗ ಬದುಕಲಾರದೆಂಬುದನ್ನು ನಾವು ಮರೆಯಲಾಗದು. ಅಲ್ಲದೆ ಕಲಿತನದ ಕಾಲದಲ್ಲಿ ಕಲಿಯಾಗಿಯೂ ಶಿವಶರಣರು ಬಾಳಿದರು*. ಏಕಾಂತದ ರಾಮಯ್ಯನು ಪ್ರತಿಜ್ಞೆ ಕೈಕೊಂಡ ಕಾಲದಲ್ಲಿ ಆ ಪ್ರಸಂಗವನ್ನು ನೋಡಲು ನಾಡಿನ ಶಿವಶರಣರು-

> " ಶಾಂತರು, ಉಗ್ರರು, ಸತ್ಯರು, ಅನುಪಮರ್, ತ್ಯಾಗಿಗಳು,
> ಸಂತೋಷಿಗಳು, ಸುಖಿಗಳು, ಅಸಮುಶಿವಯೋಗಿಗಳು "[26]

ಬಂದಿದ್ದರೆಂದು ತಿಳಿಸುವಾಗ ಶಿವಭಕ್ತರ ವಿವಿಧ ರೀತಿಗಳನ್ನೂ ತಿಳಿಸಿದ್ದಾನೆ. ಆ ವರ್ಗದಲ್ಲಿ ಉಗ್ರಶಿವಭಕ್ತನ ವರ್ಗಕ್ಕೆ ಈತನು ಸೇರುತ್ತಾನೆ. ಹಾಗಾಗಲು ಕಾರಣಗಳೆಂದರೆ ಹನ್ನೆರಡನೆಯ ಶತಮಾನದ ಶಿವಶರಣರ ಕ್ರಾಂತಿಯು ರಕ್ತದಲ್ಲಿ ಪರ್ಯಾವಸಾನಗೊಂಡುದು. ಈ ಏಕಾಂತದ ರಾಮಯ್ಯನು ಆದಯ್ಯ ಮತ್ತು ಸಿದ್ಧರಾಮಯ್ಯನವರ ತರುವಾಯ ಬಂದನೆಂಬುದನ್ನು ಕವಿಯು ವರ್ಣಿಸಿದುದನ್ನೂ ನಾವು ನೆನಪಿನಲ್ಲಿಟ್ಟುಕೊಳ್ಳಬೇಕು. ರಾಮಯ್ಯನ ಛೇದಿಸಿದ ಶಿರವನ್ನು ತಟ್ಟೆಯಲ್ಲಿಟ್ಟುಕೊಂಡು ಶಿವಶರಣರು " ಪುಲಿಗೆರೆಯ ಸೋಮನಾಥ "ನನ್ನು, " ಸೊನ್ನಲಿಗೆಯೊಳು ಜಗದ್ಗುರು ಸಿದ್ಧರಾಮಯ್ಯಂಗೆ ನಿನ್ನ ಪ್ರಸಾದವೀಯೆನುತೆ " ಏಳು ಶಿವದೇವಾಲಯಗಳ ಸಂದರ್ಶನ ಪಡೆದು ಪುನಃ ಅಬ್ಬಲೂರಿಗೆ ಬಂದನೆಂದು ಕವಿಯು ವರ್ಣಿಸಿದ್ದಾನೆ.[27]

ಕಾಯಕ, ಶಿವಭಕ್ತಿಗಳಲ್ಲಿ ನಿರತರಾದ ಶಿವಶರಣರು ಬಡತನಕ್ಕೆ ಅಂಜಿದವರಲ್ಲ ; ತಮಗೊದಗಿದ ವಿಪತ್ತುಗಳನ್ನು ಶಿವಾನುಗ್ರಹವೆಂದೇ ಸ್ವೀಕರಿಸಿದರು. ಕಾಂಚೀಪುರದ ' ತಿರುಕುರುಂಪೆ ತೊಂಡರೆ'ಂಬ ಮಡಿವಾಳ ಕಾಯಕದ ಬಡಭಕ್ತನ ಜೀವನವನ್ನು ಚಿತ್ರಿಸುತ್ತಾ ಹರಿಹರ ಕವಿಯು ಅವನು ತನ್ನ ಜೀವನವನ್ನೇ ಹೇಗೆ ಆಧ್ಯಾತ್ಮಮಯವಾಗಿರಿಸಿಕೊಂಡಿದ್ದನೆಂಬುದನ್ನು :

> " ಪಾಪವೆಂಬ ಮಲಿನ ಮನದ ಸೀರೆಯಂ ತೆರಳ್ಚಿ ಕಟ್ಟಿ,
> ಕೋಪವೆಂಬ ಕತ್ತೆನಿಲಲು ಬೆನ್ನಮೇಲೆ ಸೂಣದೊಟ್ಟಿ,

---

*ಆದಯ್ಯನ ರಗಳೆಯಲ್ಲಿ : ಆದಯ್ಯನು " ಧುರದೊಳಗಿದಿರಾದವರಂ ತೀರ್ಚುತ್ತೆ, ಮರೆವೊಕ್ಕವರ ನೆರೆ ರಕ್ಷಿಸುತ್ತಂ " ಜೀವಿಸಿದನೆಂದು ಕವಿಯ ಹೇಳಿಕೆ.

26 ಅದೇ-ಪುಟ ೭. ಏಕಾಂತರಾಮಿ ತಂದೆಗಳ ರಗಳೆ-

27 ,, ,, ೧೨ ; ಅಲ್ಲದೆ ಚೆನ್ನಬಸವಣ್ಣನವರ ಒಂದು ವಚನದಲ್ಲಿಯೂ ' ಹರಿದ ಶಿರಕೂಡಿದ ' ವಿಷಯ ಬಂದಿದೆ. ನೋಡಿರಿ. ಚೆ. ಬ. ವ. ೧೨೬ ; ಕ. ವಿ. ವಿ. ಪ್ರಕಟಣೆ (೧೯೬೫).

ನಡೆದು ಭವನ ರಸದ ಹೊಳೆಯ ಭಕ್ತಿ ತಡಿಯ ಬಳಿಗೆ ಬಂದು,
ಮೃಡನೆ ಶರಣೆನುತ್ತ ದೇಹಮೆಂಬ ಕಲ್ಲಬಳಿಗೆ ಬಂದು ”

ದೇಹಭಾವವಳಿದು, ಶಿವಭಾವದಿಂದ ಸಂತೋಷದಿಂದ ಬಟ್ಟೆಗಳನ್ನು ತೊಳೆದುಕೊಡುತ್ತಿದ್ದನಲ್ಲದೆ ಭಕ್ತರ ಮನದ ಮೈಲಿಗೆಯನ್ನೂ ತೊಳೆವ ಭಕ್ತನಿಗೆ ಉಪವಾಸಬೀಳುವ ಪ್ರಸಂಗಗಳು ತಲೆದೋರುತ್ತವೆ. ನಮ್ಮ ದೇಶದಲ್ಲಿ ಮನವಾರೆ ಮೈಮುರಿದು ದುಡಿದರೂ ಕೂಲಿಕಾರರು ಉಪವಾಸ ಬೀಳುತ್ತಿರುವುದು ಹೊಸದೇನೂ ಅಲ್ಲ. ಹಾಗೆಯೇ ಅಂದು ಸಹ. ಅಂತಹ ಉಪವಾಸದ ಪ್ರಸಂಗಗಳಲ್ಲಿ ಶಕ್ತಿಗುಂದಿ ಬಳಲಿದವನಾಗಿದ್ದರೂ ಭಕ್ತರು ತೊಟ್ಟ ಬಟ್ಟೆಗಳನ್ನೊಗೆದು ಮನದೊಳುತ್ಸವವನ್ನು ತಾಳುತ್ತಾನೆ. ಆದರೆ ಅವನ ಶಿವನ ನಿಷ್ಠೆ ಹಿರಿದಾದುದು ಆಗಿದ್ದುದರಿಂದ ಅದೆಲ್ಲವೂ ಶಿವಾರ್ಪಿತ ಭಾವದಿಂದ ನಡೆಯುತ್ತಿದ್ದುದರಿಂದ ಅವನಿಗೆ ಆಯಾಸವಿನಿತೂ ಇರಲಿಲ್ಲ. ಅವನ ಕಾಯಕ ನಿಷ್ಠೆ, ಶಿವನಿಷ್ಠೆಯ ಪರೀಕ್ಷೆಗೋಸ್ಕರ ಭಕ್ತವೇಷದಿಂದ ಶಿವನೇ ಬಂದು ತನ್ನ ಬಟ್ಟೆಯನ್ನೊಗೆಯಲು ತಿಳಿಸಿ ಮಾರನೆಯ ದಿವಸವೇ ಬಟ್ಟೆ ಬೇಕೆಂದು ಹೇಳುತ್ತಾನೆ. ವಿಪರೀತ ಮಳೆ ಆರಂಭವಾಗಿ ತಿರುಕುರುಂಪೆತೊಂಡರು ಕೆಲಸ ಮಾಡಲು ಶಿವನಾಜ್ಞೆಯಿಂದ ತೊಂದರೆ ಪಟ್ಟುಕೊಳ್ಳುತ್ತಾರೆ. ಆದರೆ ಶಿವಭಕ್ತರ ‘ ಕಂಥೆ ’ ಧವಳವಾಗಲಿಲ್ಲವಲ್ಲ ಎಂಬ ಮನದುಮ್ಮಳದಲ್ಲಿಯೇ ಕಾಲಕಳೆಯುತ್ತಾನೆ. ಆಗ ಸಮಯಕ್ಕೆ ಸರಿಯಾಗಿ ಭಕ್ತರು ತಮ್ಮ ಕಂಥೆಯನ್ನು ಬೇಡಲು ಬಂದರು. ಆಗ ತಿರುಕುರುಂಪೆ ತೊಂಡರನ್ನು ಕವಿಯು ವರ್ಣಿಸಿದ ರೀತಿಯಿದು :

“ ನಿತ್ಯಪದದ ನಿಷ್ಠೆ ನಿಮಿರ್ದು ನೆತ್ತಿಗೇರಿ ಮೀರಿ ನೆಗೆದು,
ಧೈರ್ಯವಳಿದು ಲಜ್ಜೆಯುಳಿದು, ಮನದೊಳಲ್ಲಿ ಚಿಂತೆ ಮಾಡಿ,
ವೀರ್ಯವೆತ್ತಿ ನೆನೆಹು ಭಕ್ತಿ ತನುವಿಸರ್ಜನಕ್ಕೆ ಮಾಡಿ,
ಹುಸಿದು ಬರ್ದುಕುವಾಸೆಯಿಂದೆ ಸತ್ತೊಡೊಳ್ಳಿತೆಂಬ ತೆರದಿ,
ಎಸೆವ ಕಂಥೆಗೆನ್ನ ತನುವನೊಗೆದು ಕೊಡುವೆನೆಂಬ ತೆರದಿ,
ತನ್ನನೊಗೆದು ಕೊಂಡನಾಹ ತಿರುಕುರುಂಪೆ ತೊಂಡರಲ್ಲಿ [28]

ಈ ರೀತಿ ನಮ್ಮ ನಾಡಿನ ಕೂಲಿಕಾರನ ಬದುಕಿನಲ್ಲಿ ಕಂಡ ಕರ್ತವ್ಯದ ಶ್ರದ್ಧೆಯ ಜೀವನಮೂಲ್ಯವನ್ನು ಕವಿಯು ಬಣ್ಣಿಸಿದ್ದಾನೆ ಇಲ್ಲಿ. ದಿನಾಲು ಸಾವಿರ ಸುಳ್ಳು ಹೇಳಿ ಬದುಕುವುದೇ ನಮ್ಮ ಕಾಯಕಗಳ ಲಕ್ಷಣವಾದರೆ, ಹರೀಶ್ವರನ ಈ ಶಿವಭಕ್ತನು “ ಹುಸಿಯಲರಿಯದಚ್ಚ ಸತ್ಯ ಶರಣ; ಹುಸಿಗೆ ಹೇಸಿ ತನ್ನನೊಗೆದುಕೊಂಡ ಶರಣ; ಹುಸಿದು ಬದುಕುವುದಕ್ಕಿಂತ ಸಾವುದೇ ಮೇಲಾದುದು ” ಎಂದು ಭಾವಿಸಿದ ಬಡ ಅಗಸನ

[28] ತಿರುಕುರುಂಪೆ ತೊಂಡರ ಮಹಾತ್ಮೆ, ಪುಟ ೪೫; ಹರಿಹರನ ರಗಳೆಗಳು ಭಾಗ ೪: ಸಂ. ಫ. ಗು. ಹಳಕಟ್ಟಿ.

ಬಾಳನ್ನು ಕಡೆಗಣಿಸಬಹುದೇ? ಈ ರೀತಿ ಹರಿಹರನು ಶರಣರ ಬಾಳಿನಲ್ಲಿ ಕಂಡ ಚಿರಂತನ ಮೌಲ್ಯಗಳನ್ನು ಚಿತ್ರಿಸುವುದರಲ್ಲಿ ಯಶಸ್ಸನ್ನು ಪಡೆದಿದ್ದಾನೆ. ವ್ಯಕ್ತಿ ಪ್ರಶಂಸೆಗಿಂತ ವ್ಯಕ್ತಿಗಳ ಗುಣಪ್ರಶಂಸೆ ಮಾಡಬೇಕೆಂಬ ಹಿರಿದಾದ ಕಾವ್ಯ ತತ್ವವನ್ನು ತನ್ನ ಕಾವ್ಯಗಳ ಮೂಲಕ ಬಿತ್ತರಿಸಿದ್ದಾನೆ.

ಜನರಲ್ಲಿ ಸರ್ವಸಮಾನತೆಯನ್ನು ಸಂಸ್ಥಾಪಿಸಲು ಆರ್ಥಿಕ ಸ್ಥಿತಿ ಸುಧಾರಿಸಿದರೆ ಸಾಧ್ಯ. ವ್ಯಕ್ತಿಗಳ ಆರ್ಥಿಕ ಸ್ಥಿತಿಯ ಸುಧಾರಣೆಯಿಂದ ವರ್ಗಭೇದವು ಅಳಿಯುತ್ತದೆ. ಆದರೆ ವರ್ಣಭೇದವನ್ನು ಅಳಿಯುವುದು ಎಂತು? ಚಾತುರ್ವರ್ಣದಲ್ಲಿದ್ದ ಶೂದ್ರರು ಬ್ರಾಹ್ಮಣರು ಆಗುವುದು ಸಾಧ್ಯವೇ? ಈ ಪ್ರಶ್ನೆ ಶ್ರೀ ಬಸವೇಶ್ವರಾದಿಗಳ ಎದುರು ಬಂದಾಗ ಅದು ಅಸಾಧ್ಯವೆಂದು ತಿಳಿದೇ ಅವರೆಲ್ಲರೂ ಶಿವಭಕ್ತರಾಗುವುದು, ಶಿವದೀಕ್ಷೆ ತೆಗೆದುಕೊಳ್ಳುವುದು ಸಾಧ್ಯವಾಗುವಂತೆ ವ್ಯವಸ್ಥೆಮಾಡಿದರು ಮಾತ್ರವಲ್ಲ, ಕುಲಗಳ ವಿಷಯದಲ್ಲಿ:

> "ಹೊಲೆಗಂಡಲ್ಲದೆ ಪಿಂಡದ ನೆಲೆಗಾಶ್ರಯವಿಲ್ಲ,
> ಜಲ ಬಿಂದುವಿನ ವ್ಯವಹಾರವೊಂದೇ!
> ಆಶೆಯಾಮಿಷ ರೋಷ ಹರುಷ ವಿಷಯಾದಿಗಳೆಲ್ಲ ಒಂದೆ!
> ಏನನೋದಿ, ಏನ ಕೇಳಿ, ಏನು ಫಲ?
> ಕುಲಜನೆಂಬುದಕ್ಕಾವುದು ದೃಷ್ಟ? ...." [29]
> "ಶ್ವಪಚೋಪಿಯಾದರೇನು ಶಿವಭಕ್ತನೇ ಕುಲಜನು" [30]

ಎಂದು ಹೇಳಿದ ಮಾತುಗಳು ಹರಿಹರನಿಗೆ ಸಹಾಯಕಾರಿ. 'ಕೆಂಭಾವಿ ಭೋಗಣ್ಣನ' ರಗಳೆಯಲ್ಲಿ ಭೋಗಣ್ಣನ ವಿಷಯವನ್ನು ತಿಳಿಸುವಾಗ ಕವಿಯು:

> "ಶಿವಭಕ್ತರೊಳಗೆ ಜಾತಿಯ ವಿಚಾರಿಪುದಿಲ್ಲ,
> ಶಿವಭಕ್ತರೊಳಗೆ ಭೇದವ ಕಲ್ಪಿಸುವುದಿಲ್ಲ" [31]

ಎಂದು ಆಡಿದ ಮಾತುಗಳು 'ಶಿವನೊಲಿದವರಿಗೆ' 'ಲಿಂಗವಿದ್ದವರಿಗೆ' ಕುಲವಿಲ್ಲವೆಂಬುದನ್ನು ಒಪ್ಪಲು ಕಾರಣ. ಶಿವಭಕ್ತಿಯು ಸಂಸ್ಕಾರವನ್ನೊದಗಿಸುವುದರಿಂದ ಅವರೆಲ್ಲರನ್ನೂ ಸಮಾನರೆಂದು ಪರಿಭಾವಿಸುವುದರಲ್ಲಿ ಯಾವ ದೋಷವೂ ಇಲ್ಲ. ಜಾತಿ-ಜಾತಿಗಳ ಕಲಹದಿಂದ ಇಂದಿಗೂ ಉಂಟಾಗುವ ಬಡಿದಾಟಗಳ ಕಲಹವನ್ನು ತಪ್ಪಿಸಲು ಹರೀಶ್ವರಾದಿಗಳು ನಿರೂಪಿಸಿದ ತತ್ವವನ್ನು ಒಪ್ಪಿದಲ್ಲಿ ನಾಡಿಗೆ ಎಷ್ಟೋ ಅನುಕೂಲವಾಗಬಹುದು. ಭಕ್ತನು ದೇವನನ್ನು ಪ್ರೀತಿಸುವುದರಿಂದ ದೈವೀಪುರುಷನಾಗುತ್ತಾನೆ.

---

29 ಬ. ವ. ೫೯೧.

30 ಬ. ವ. ೫೯೦.

31 ಕೆಂಭಾವಿ ಭೋಗಣ್ಣನ ರಗಳೆ ಪುಟ. ೩೦: ಹರಿಹರನ ರಗಳೆಗಳು, ಭಾಗ ೬. (೧೯೩೭); ಸಂ: ಫ. ಗು. ಹಳಕಟ್ಟಿ.

ಭಕ್ತನ ಭಕ್ತಿಯನ್ನು ಮೆಚ್ಚಿದ ಪರಮಾತ್ಮನು ಭಕ್ತಾಧೀನನೂ ಭಕ್ತವತ್ಸಲನೂ ಆಗುವುದರಿಂದ ಇಬ್ಬರಲ್ಲಿಯೂ ಒಂದು ರೀತಿಯ ತಾದಾತ್ಮ್ಯವುಂಟಾಗುತ್ತದೆ. ಈ ಕಾರಣದಿಂದಲೇ ಭಕ್ತನ ಕುಲ–ಜಾತಿಗಳನ್ನು ನೋಡಲಾಗದು ಎಂದು ಹರೀಶ್ವರನು:

> "ದೇವಂಗೆ ಭಕ್ತನೆಣೆ ; ಭಕ್ತಂಗೆ ದೇವನೆಣೆ ;
> ದೇವಂಗೆ ಭಕ್ತಂಗೆ ಸದ್ಭಕ್ತಿ ತಾನೆ ಹೊಣೆ" [32]

ಎಂದು ಹೇಳಿರುವುದರಿಂದ ಭಕ್ತನು ನರನಲ್ಲ, ದೇವರಿಗೆ ಸಮಾನನು. ಅವನನ್ನು ಕೀಳು ಜಾತಿಯವನೆಂದು ಬಗೆದು ಅನಾದರಿಸುವುದಾದರೂ ಹೇಗೆ? ಈ ಕಾರಣದಿಂದ ಹರ ಭಕ್ತರು ಈಶ್ವರನನ್ನೊಲಿಸಿದವರೆಂದೂ ಅವರು ಕುಲಜಾತಿಗಳನ್ನು ಮೀರಿ ಶುದ್ಧಾತ್ಮರೆಂದೂ ಅವರನ್ನು ಪ್ರಶಂಸಿಸುವುದು ಪುಣ್ಯದ ಕೆಲಸವೆಂದೂ ಹರೀಶ್ವರನು ಬರೆದಿದ್ದಾನೆಂಬುದು ತಿಳಿಯಬೇಕಾದ ಅಂಶವೇ.

ಪ್ರಾಮಾಣಿಕ ತನ, ಕೊಟ್ಟಮಾತುಗಳನ್ನು ಪೂರೈಸುವಲ್ಲಿಯೇ ದೇವರುಂಟು ಎಂಬ ಭಾವವನ್ನು ತಿರುನೀಲಕಂಠರ ರಗಳೆಯಲ್ಲಿ, 'ಒಲುಮೆಯೇ ದೇವರು' ಎಂಬ ಮೂಲ್ಯವನ್ನು ಮಲುಹಣನ ರಗಳೆಯಲ್ಲಿ, 'ಪ್ರೇಮವದು ಶಿವಲಿಂಗಪೂಜೆ'ಯೆಂಬ ತತ್ವವನ್ನು ಪ್ರಭುದೇವರ ರಗಳೆಯಲ್ಲಿ, 'ನೀತಿಯೇ ದೇವರು' ಎಂಬ ಮೂಲ್ಯವನ್ನು ಮನುಚೋಳನ ರಗಳೆಯಲ್ಲಿ, 'ದೇವನೊಲ್ದ ಅಧಮನ ಕುಲವೂ ಸತ್ಕುಲ' ಎಂಬ ಜೀವನದ ತತ್ವವನ್ನು ಮಾದರ ಚೆನ್ನಯ್ಯನ ರಗಳೆಯಲ್ಲಿ ಹರೀಶ್ವರ ಕವಿಯು ವ್ಯಕ್ತಪಡಿಸಿದ್ದಾನೆ. ಈ ಜೀವನ ತತ್ವಗಳು ಇಂದು ಸಹ ಅತ್ಯಾವಶ್ಯಕವಾಗಿವೆ. ಈ ಗುಣಗಳಿಲ್ಲದೆ ರಾಷ್ಟ್ರೀಯ ವಿಚಾರಗಳು ಬೆಳೆಯಲಾರವು. ಅಂತೆಯೇ ಹರೀಶ್ವರನು ಈ ಚಿಕ್ಕ ಚಿಕ್ಕ ಚರಿತ್ರೆಗಳಲ್ಲಿ ಅನರ್ಘ್ಯರತ್ನಗಳಂತಿದ್ದ ಜೀವನದ ಮೂಲ್ಯಗಳನ್ನು ಹುದುಗಿಸಿದ್ದಾನೆ. ಅವನು ಚಿತ್ರಿಸಿರುವ ಅನೇಕ ವ್ಯಕ್ತಿಗಳು, ಅಧಿಕಾರ, ಸಂಪತ್ತುಗಳಿಂದ ಕಿರಿಯರಾದರೂ ಶಿವಭಕ್ತಿಯ ನೆಳಲಲ್ಲಿ ಬೆಳೆಸಿಕೊಂಡ ಸದ್ಗುಣಗಳ ಬಲದಿಂದ ಹಿರಿಯರೂ, ವಿವೇಕಿಗಳೂ, ಪೂಜ್ಯರೂ, ಶಾಂತರೂ, ಆದರ್ಶ ಸಂಸ್ಕೃತಿವಂತರೂ ಆಗಿ ಕಂಗೊಳಿಸುತ್ತಾರೆ.[33] ಅಲ್ಲದೇ ಹರೀಶ್ವರನ ಬಸವೇಶ್ವರನು ದಾನ, ಭಕ್ತಿ, ಸಾಮಾಜಿಕ ಸಂಘಟನೆ, ದಯಾದೃಷ್ಟಿ, ನಿಷ್ಕಪಟ ಭಾವ, ಉಜ್ವಲ ಉದಾತ್ತಗುಣ, ನಿರಹಂಕಾರ ಮೊದಲಾದ ಗುಣಗಣಗಳ ಮೂರ್ತಿಯಾಗಿದ್ದಾನೆ. ಯಾರಿಗಾದರೂ ಐಶ್ವರ್ಯ ಅಧಿಕಾರಗಳು ಬಂದರೆ ಆ ಐಶ್ವರ್ಯ ಅಧಿಕಾರಗಳನ್ನು ಹೇಗೆ ಸದ್ವಿನಿಯೋಗ ಮಾಡ

---

32 ಶಂಕರ ದಾಸಿಮಯ್ಯನ ರಗಳೆ.

33 ಈ ವಿಚಾರಗಳ ವಿಸ್ತಾರ ವಿವೇಚನೆಗೆ ಇದೇ ಲೇಖಕನ– 'ಹರಿಹರ ಮಹಾಕವಿಯ ಕೆಲವು ಮಹೋನ್ನತ ವಿಚಾರಗಳು' ಎಂಬ ಪುಸ್ತಕ ನೋಡಿರಿ. (೧೯೬೬, ಕ. ವಿ.ವಿ. ಪ್ರಚಾರೋಪನ್ಯಾಸಮಾಲೆ. ೩೩).

ಬೇಕೆಂಬುದನ್ನು ಬಸವರಾಜದೇವರರಗಳೆಯಲ್ಲಿ ಚಿತ್ರಿಸಿದ್ದಾನೆ.[34] ಶಿವಶರಣರು ಸಿರಿಸಂಪದ, ಅಧಿಕಾರಗಳು ಶಿವಾನುಗ್ರಹದಿಂದ ಬಂದರೆ ತೊರೆದವರಲ್ಲ; ಆದರೆ ಅವುಗಳಿಗೇ ಮಾರುಹೋಗಿ ಭಕ್ತಿಯನ್ನು ಬಿಟ್ಟವರಲ್ಲ. ಅವರು ಪ್ರಥಮತಃ ಭಕ್ತಿಜೀವಿಗಳು. ಧನಕನಕಾದಿಗಳು ಬರುವುದಕ್ಕೂ ಹರಾನುಗ್ರಹವೇ ಮುಖ್ಯವೆಂದು ಅವರ ಮತ. ಶಿವಭಕ್ತಿಗೆ ತಮ್ಮ ಅಧಿಕಾರಾದಿಗಳು ಅಡ್ಡಬರುತ್ತಿದ್ದರೆ ತಾವಾಗಿಯೇ ಆ ಅಧಿಕಾರಗಳನ್ನು ತೊರೆಯುತ್ತಿದ್ದ ನಿರಪೇಕ್ಷಿಗಳು, ನಿಸ್ಪೃಹರು ಅವರು. ಈ ವಿಷಯವನ್ನು ಹರೀಶ್ವರ ಕವಿಯು ಕೇಶಿರಾಜದಣ್ಣಾಯಕರ ರಗಳೆಯಲ್ಲಿಯೂ ಈ ರೀತಿ ತಿಳಿಸಿದ್ದಾನೆ. ಕೇಶಿರಾಜ ದಣ್ಣಾಯಕರು ಕಲ್ಯಾಣದ 'ಪೆರ್ಮಾಡಿರಾಯನ' ಅಪ್ಪಣೆಯಂತೆ 'ಹಿರಿಯ ಪ್ರಧಾನಿಕೆ'ಯ ಕೈಕೊಂಡು ಕೊಂಡೆಯರ ಮಾತಿಂಗೆ ಕಿವಿಗೊಟ್ಟು, ಪೆರ್ಮಾಡಿರಾಯನು ದಣ್ಣಾಯಕರ ಮೇಲೆ ಅವಿಶ್ವಾಸ ತಾಳಿದಾಗ, ಕೊಂಡುಗುಳಿ ಕೇಶಿರಾಜ ದಣ್ಣಾಯಕರು :

"ಸಿರಿಯು ಸಂಗಂ ಶರಣ ಸಂಗಕ್ಕೆ ಪಗೆಯಾಯ್ತು;
ನರನೋಲಗದಪರಾಧವು ಮರುಳು ಮಾಡಿತ್ತು."

ಎಂದು ನಿರ್ಧರಿಸುತ್ತಾನೆ.

"ಸೇವಕಾವೃತ್ತಿಯಂ ಮನದ ಕಾಲಿಂದೊದೆದು,
ದೇವ ಸೋಮಯ್ಯನಂ ಚಿತ್ತಹಸ್ತದಿ ಪಿಡಿದು,
ಪೊರಮಟ್ಟನುನ್ನತೈಶ್ವರ್ಯ ನಿಧಿ ನಿಷ್ಠೆಯೊಳ್
ಪೊರಮಟ್ಟನಳ್ತಿಯಿಂ ನಿಸ್ಪೃಹದ ಬಟ್ಟೆಯೊಳ್
ಪೊರಮಟ್ಟನಲ್ಲಿ ವೈರಾಗ್ಯ ಸಂಪದ ವರಂ"

ಎಂದು ಕವಿಯು ಬಣ್ಣಿಸಿದ್ದಾನೆ. ಅಲ್ಲದೆ ಅವನ ಜೀವನದ ಮಹತ್ವವನ್ನು ತಿಳಿಸುವಲ್ಲಿ:

"ನುಡಿವಲ್ಲಿ ಸತ್ಯವಲ್ಲದೆ ಬೇರೆ ನುಡಿವೊಡಂ,
ನಡೆವಲ್ಲಿ ನಾಂ ದುರಾಚಾರದಿಂ ನಡೆದೊಡಂ,
ಮನಸಿನೊಳ್ ನೀನಲ್ಲದನ್ಯವಂ ನೆನೆದೊಡಂ
ಕನಸಿನೊಳ್ ನೀನಲ್ಲದನ್ಯವಂ ಕಂಡೊಡಂ
ಇದು ದಿಬ್ಯ"

ಎಂಬ ಅವನ ವಚನವೊಂದನ್ನೇ ಕವಿಯು ಉದ್ಧರಿಸಿದ್ದಾನೆ. 'ಸಿರಿಯನೊಲ್ಲದೆ ಭಕ್ತಿಯನ್ನೇ ಅಪೇಕ್ಷಿಸಿದ'ವನೆಂದು ಕೊಂಡಾಡುತ್ತಾನೆ.[35] ಇಂತಹ ಜೀವನದ ಮೂಲ್ಯಗಳಿಗಾಗಿ ಹರಿಹರನ ಶರಣರು ಬಾಳಿದ್ದಾರೆಂಬುದನ್ನು ನಾವು ಮರೆಯಲಾಗದು.

---

34 ಇದೇ ಲೇಖಕನ "ಬಸವೇಶ್ವರ ದೇವರ ಚರಿತ್ರೆ ಗದ್ಯಾನುವಾದ ಹಾಗೂ ಕಾವ್ಯ ವಿಮರ್ಶೆ" (೧೯೬೬) ನೋಡಿರಿ.

35 ಕೇಶಿರಾಜ ದಣ್ಣಾಯಕರ ರಗಳೆ; ಹರಿಹರನ ರಗಳೆಗಳು ಭಾಗ ೬. (೧೯೩೩), ಸಂ. ಫ. ಗು. ಹಳಕಟ್ಟಿ.

ಮನುಷ್ಯನಿಗೆ ಅರ್ಥ, ಅಧಿಕಾರ, ವಿದ್ಯೆ ಬಂದರೆ ಅವನು ಸಜ್ಜನನಾಗಬೇಕೇನೋ ನಿಜ. ಆದರೆ ಅವನು ಬಹಳಷ್ಟು ಸಾರಿ ಮದಾಂಧನಾಗಿ ಮುಕ್ತಿಗೆ ದೂರನಾಗುತ್ತಾನೆಂಬ ಅನುಭವವು ಶಿವಶರಣರಿಗೆ ಒದಗಿದೆ. ಅರ್ಥ, ಅಧಿಕಾರಕ್ಕೆ ಲವಲವಿಸುವ ಬುದ್ಧಿಯು ದೇವರತ್ತ ಹೊರಳುವುದು ವಿರಳ. ಆ ಕಾರಣದಿಂದಲೇ ಬಸವಣ್ಣನವರು :

"ಕಾಂಚನಕ್ಕೆ ವೇಳೆಯಲ್ಲದೆ ಲಿಂಗಕ್ಕೆ ವೇಳೆಯಿಲ್ಲಾ"[36]

ಎಂದರು. ದೇವರ ದಾಸಿಮಯ್ಯನವರು :

ಕರಿಯನಿತ್ತಡೆ ಒಲ್ಲೆ ; ಸಿರಿಯನಿತ್ತಡೆ ಒಲ್ಲೆ
ಹಿರಿದಪ್ಪ ರಾಜ್ಯವನಿತ್ತಡೆ ಒಲ್ಲೆ ;
ನಿಮ್ಮ ಶರಣರ ಸೂಳ್ನುಡಿಯ ಒಂದರಗಳಿಗೆ ಇತ್ತಡೆ
ನಿಮ್ಮನಿತ್ತೆ ಕಾಣಾ, ರಾಮನಾಥಾ"[37]

ಎಂದು ಆಡಿದುದು ವೈರಾಗ್ಯದ ಸಂಕೇತವಾಗಿದ್ದರೂ ಕರಿಸಿರಿಗಳು ಮಾನವನನ್ನು ಮೋಹಜಾಲಕ್ಕೆಳಸುತ್ತವೆಯೆಂದೇ ಅವರ ಭಾವನೆ. ನಮ್ಮ ಪಾಂಡಿತ್ಯವೂ ಅತಿಭಾರವಾದ ಕಾಲಕ್ಕೆ ನಮ್ಮ ಗರ್ವವೂ ಅಷ್ಟೇ ಭಾರವಾಗಿ ತನುಮದಕ್ಕೆ, ಅಹಂಕಾರಕ್ಕೆ ಸಂಪೂರ್ಣ ಅವಕಾಶ ಮಾಡಿಕೊಡುವಂತೆ ತೋರುತ್ತದೆ. ಹರಿಹರನ ಪೂರ್ವದಲ್ಲಿ ಈ ರೀತಿ ಪಾಂಡಿತ್ಯದಿಂದ ಭಾರವಾದ ಜನರು ಇತರರನ್ನು ತುಚ್ಛೀಕರಿಸಿ ಕಾಣುತ್ತಿದ್ದ ಸ್ವಾರ್ಥಮಯ ಸಾಮಾಜಿಕ ಚಿತ್ರಣವನ್ನು ನಾವು ಹರಿಹರನ ಹಲವು ಶಿವಶರಣರ ಚರಿತ್ರೆಗಳಲ್ಲಿ ಕಾಣುತ್ತೇವೆ. ಅಂತಹ ಪ್ರಸಂಗಗಳನ್ನು ನಮಗೆ ಇತಿಹಾಸವು ಒದಗಿಸುವುದಿಲ್ಲ. ಅದೊಂದು ದುರ್ದೈವದ ಸಂಗತಿ. ಯಾಕೆಂದರೆ ನಮ್ಮ ನಾಡಿನ ಇತಿಹಾಸವು ರಾಜರಾಣಿಯರ ಜೀವನದ ಚಿತ್ರಣವಾಗಿದೆಯೇ ವಿನಾ ಜನಾಂಗದ ಸುಖ ದುಃಖಗಳ ಹೋರಾಟ–ಏರಾಟಗಳ ಇತಿಹಾಸವಾಗಿಲ್ಲ. ಆ ಕಾರಣದಿಂದ ನಮ್ಮ ಜನಾಂಗದ ಸ್ಥಿತಿಗಳನ್ನು ಅರಿಯಬೇಕಾದಲ್ಲಿ ನಾವು ಹರೀಶ್ವರನ ಕಾವ್ಯಗಳಿಗೇ ಮೊರೆಹೋಗಬೇಕು. ಆದುದರಿಂದ ಅವನ ಕಾವ್ಯಗಳು ಐತಿಹಾಸಿಕ ದಾಖಲೆಗಳನ್ನೊದಗಿಸುವಲ್ಲಿ ಅತ್ಯಂತ ಉಪಯುಕ್ತವೆನಿಸಿವೆ. ಅಂತಹವರ ಮಾದರಿಗೆಂದು ಇಲ್ಲಿ 'ಸಾಮವೇದಿಯೆಂಬ' ಶಿವಶರಣನ ಚರಿತ್ರೆಯನ್ನು ಅರಿಯುವುದು ಒಳಿತು.

'ಸಾಮವೇದಿ' ಯೆಂಬವನೊರ್ವನು ಭೂಮಿಯೊಳಗುಳ್ಳ, ಶಾಸ್ತ್ರ, ಕಾವ್ಯ, ನಾಟಕ, ವ್ಯಾಕರಣ, ವೇದಾಂತ, ಸಿದ್ಧಾಂತಗಳನ್ನು ಮುಖೋದ್ಗತ ಮಾಡಿಕೊಂಡು, ಮಹಾವಾಗ್ಮಿಯೆನಿಸಿಕೊಂಡು, ಸಕಲ ವಿದ್ವಾಂಸರಿಂದ ಪೂಜಿತನಾಗಿ ಮೂರು ಸಾವಿರದ ಐನೂರು ಶಿಷ್ಯರೊಡಗೂಡಿ, ಆರಣ್ಯವನೋದಲು ಅರಣ್ಯಕ್ಕೆ ತನ್ನ ವಿದ್ಯಾರ್ಥಿ

---

[36] ಬ. ವ. ೩೧೩.

[37] ದೇವರ ದಾಸಿಮಯ್ಯನ ವಚನಗಳು–ವಚನ ೧. ಸಂ. : ಫ. ಗು. ಹಳಕಟ್ಟಿ.

ಸಮುದಾಯ ಕೂಡಿ ಹೋಗಿ ಯಾರಿಗೂ ತಿಳಿಯದಂತೆ ಭೋಥೆಮಾಡಿ ಆಕಾಶ ಮಾರ್ಗದಿಂದೆ ತನ್ನ ಮನೆಗೆ ಬರುತ್ತಾನೆ. ಅದೇ ಕಾನನದಲ್ಲಿ 'ಶ್ವಪಚದೇವ'[38]ನೆಂಬ ಶಿವಭಕ್ತನು ಯಾರೂ ಅರಿಯದಂತೆ; ಅರಣ್ಯದಲ್ಲಿ ಸೆಜ್ಜೆಯಿಂದ ಶಿವಲಿಂಗವನ್ನು ತೆಗೆದು ಪೂಜಿಸಿ, ಅಲ್ಲಿಗೆ ಶಿವಾರ್ಪಣೆಗೆಂದು ಒಲೆ ಹೂಡಿ ತನ್ನ ಜಾತಿ ಧರ್ಮಕ್ಕನುಗುಣವಾಗಿ :

"ಕಪಟರಹಿತಂ ಜಾತಿಧರ್ಮದೋಗರವಿರಲ್,
ಶ್ವಪಚನಾಮಕ್ಕೆ ತಾನನುಕೂಲನಾಗಿರಲ್,
ಆ ಕಪಾಲದ ನಡುವೆಯಾಯೋಗರವನ್ನಿಕ್ಕಿ,
ಲೋಕವುಂ ಸೋಂಕದ ಸಮರ್ಥ ಮನದೊಳಗುಕ್ಕಿ
ಭಸಿತದಿಂದೆಲ್ಲವಂ ನೆರೆಶುದ್ಧ ಮಾಡುತಂ"

ಇರುವಾಗ, ಸಾಮವೇದಿಗಳು ಆಕಾಶಮಾರ್ಗದಲ್ಲಿ ಹೋಗುತ್ತಿದ್ದಾಗ ಅವನ ನೆರಳು ತನ್ನ ಪಾಕದಮೇಲೆ ಬೀಳಬಾರದೆಂದು ತನ್ನ ಕೆರಗಳಿಂದೆ ಪಾತ್ರೆಯನ್ನು ಶ್ವಪಚದೇವನು ಮುಚ್ಚುತ್ತಾನೆ. ಅದನ್ನು ಕಂಡ ಸಾಮವೇದಿಯು ಅಚ್ಚರಿಗೊಂಡು, 'ಏಕಯ್ಯ, ಏಕೆ ಮುಚ್ಚಿದೆ?' ಎಂದು ಕೇಳಲು, ಶ್ವಪಚದೇವನು ಲೆಕ್ಕಿಸದೆ ಸುಮ್ಮನೆ ಇರುತ್ತಾನೆ. ಎರಡು ದಿನ ಕಳೆದ ಮೇಲೆ ಅವನ ಕನಸಿನಲ್ಲಿ ಶಿವನು ಬಂದು :

"ಎಲೆ ಸಾಮವೇದಿ, ನೀನೇಕೆ ಮರುಳಾದಪ್ಪೆ ?
ಕುಲದ ಗರ್ವದೊಳಿಂತು ಕೆಟ್ಟು ಹಾಳಾದಪ್ಪೆ ;
ನೀನವರ್ಗಾಳಾಗೆ ನಿನಗೆ ತೀರದುದಿಲ್ಲ ;
ಆನೆಂದೊಡಂ ಶ್ವಪಚದೇವರೆನೆ ಬೇರಿಲ್ಲ !"

ಎಂದು ನುಡಿಯುತ್ತಾನೆ. ಅದೇ ಮಾತು ನಂಬಿ ಸಾಮವೇದಿಗಳು ಶ್ವಪಚದೇವರಲ್ಲಿಗೆ ಬಂದು, ಮಾತನಾಡಿಸದೇ ನಿಲ್ಲಲು, "ಏಕೆ–ನುಡಿಯಿರಿದೇವ?" ಎಂದು ಪ್ರಶ್ನಿಸುತ್ತಾನೆ. 'ವಿಭೂತಿಯನಿಟ್ಟುಕೊಂಡರೆ ನುಡಿವೆ' ನೆನಲು ಸಾಮವೇದಿಯು ಹಾಗೆಯೇ ಮಾಡು ತ್ತಾನೆ. ಆಗ ಶ್ವಪಚದೇವರು :

"ಎಲೆ ವಿಪ್ರ, ಲಿಂಗಾರ್ಚನೆಯೊಳಿರುತ್ತೆಂದುವುಂ,
ಎಲೆ, ಭವಿಗಳೊಡನೆ ನುಡಿ ಇಲ್ಲ ಕೇಳೆಂದುವುಂ ;
ಮುಚ್ಚಿದೆಂ ಕೆರಹಿನಿಂ ಭವಿಕಾಣದಂತಿದಂ !
ಮುಚ್ಚದಿರ್ದೊಡೆ ಶಂಭು ಕೈಕೊಳ್ಳನಿಂತಿದಂ ;"

ಎಂದೊಡೆ, ಈ 'ಗಿಡು, ಮರ, ಮೃಗ, ಬೇಡರು, ಚಾಂಡಾಲರೂ ಭಕ್ತರೇ?' ಎಂದು ಸಾಮವೇದಿಗಳು ಕೇಳಿದುದಕ್ಕೆ ಶ್ವಪಚದೇವರು :

---

[38] ಹರಿಹರನು ಅವನನ್ನು 'ಶ್ವಪಚ' ನೆಂಬುದರ ಬದಲು 'ಶ್ವಪಚ ದೇವ'ನೆಂದು ಗೌರವದಿಂದ ಸಂಬೋಧಿಸಿದುದೇ ಅವನು ಅವರನ್ನು ಕಾಣುತ್ತಿದ್ದುದಕ್ಕೊಂದು ನಿದರ್ಶನ.

" ಗಿಡು ಮರದ ಹೂ ಪತ್ರೆ ಶಂಭುವಿಂಗೇರುವುದು ;
ನಡೆ ಪೆಣನೆ, ನಿನ್ನ ತನು ಹೆಬ್ಬಡಿಕೆ ನಾರುವುದು !
ಕಾಮ ಉಂಟೇ ಮರಕೆ ? ಕ್ರೋಧ ಉಂಟೇ ಲತೆಗೆ ?
ಕಾಮಾದಿ ಷಡ್ವರ್ಗವಿದು ತೀವಿತ್ತು ನಿನಗೆ ! "[39]

ಇನ್ನು ಬೇಡರು, ಚಾಂಡಾಲರು :

" ಜಾತಿ ಧರ್ಮಮಂ ಬೇಂಟೆ ಎಂದಿರ್ಪರಂತವರ್,
ಜಾತಿ ಚಾಂಡಾಲರೆಂದೆನಿಸಿರ್ಪರಂತವರ್ ;
ಕರ್ಮ ಚಾಂಡಾಲನೆಂದೆನಿಸಿಕೊಳ್ವಂ ನೀನೆ !
ಮತಿವಂತರೆನಿಸಿರ್ಪ ಭಕ್ತ ಚರಿತವನರಿದು,
ಅರಿದರಿದು ಕುರಿಯಾದ ನಿನ್ನಿಂದೆ ಮರುಳುಂಟೇ ?
ಪಂಚ ಮುಖನಂ ಪೂಜಿಸದ ಪಾತಕಂ ನೀನೆ !
ಪಂಚವದನನ ಸ್ತುತಿಸದಿರ್ಪ ಪತಿತಂ ನೀನೆ !
ಕತ್ತೆ ಕರ್ಪುರದ ಹೇರಂ ಹೇರಿ ನಿಂದಂತೆ ;
ಹೊತ್ತ ವೇದಂಗಳರ್ಥವನರಿಯದಕಟೆಂತೆ !
ಮರದಿಂದೆ ಗಿಡುವಿಂದೆ ಮೃಗದಿಂದೆ ಪುಳುವಿಂದೆ,
ಬರೆ ಬೇಡರಿಂದೆ ಚಾಂಡಾಲರಿಂದೆ ನಾಯಿಂದೆ,
ನೀನೆ ಕಷ್ಟಂ, ಸುಡು ಸುಡಲೆ ಭವಿ ನೀನೆ !
ನೀನೆ ಪತಿತಂ ಪಂಚ ಮಹಾಪಾತಕಂ ನೀನೆ ! "[40]

ಎಂದು ಸಾರಾಸಾರವಾಗಿ ಜೀವನದಲ್ಲಿ ಲೇಸಾವುದು, ಹೊಲ್ಲವಾವುದು ಎಂಬುದರ ಪರಿಜ್ಞಾನವನ್ನು ಶ್ವಪಚದೇವರು ಸಾಮವೇದಿಗಳಿಗೆ ತಿಳಿಸಿದಾಗ, ಅವರು ಒಪ್ಪಿ ಶ್ವಪಚದೇವರಿಂದ ಲಿಂಗದೀಕ್ಷೆಪಡೆದು ಮುಕ್ತಿ ಹೊಂದಿದ ಶಿವಭಕ್ತರ ಕಥೆಯನ್ನು ಹರಿಹರನು ಇಲ್ಲಿ ಬಣ್ಣಿಸಿದ್ದಾನೆ. ಹರಿಹರ ಕವಿಯು, ಕುಲಜಾತಿಗಳ ಬಗೆಗೆ ಒಂದು ರೀತಿಯಲ್ಲಿ ಅಂತಿಮನಿರ್ಣಯ ಕೊಟ್ಟಂತೆಯೇ ತಿಳಿಸಿದ್ದಾನೆ.[41] ನಾಗರಿಕತೆಯ

---

[39] ನೋಡಿರಿ: " ಒಡಲ ಕಳವಳಕ್ಕಾಗಿ ಗಿಡು ಗಿಡುದಪ್ಪದೆ ಬೇಡಿದೆನೆನ್ನ ಅಂಗಕ್ಕೆಂದು.... ಆನು ಬೇಡಿ ಭವಿಯಾದೆನು ; ಅವು ನೀಡಿ ಭಕ್ತರಾದವು "– ಮಹಾದೇವಿಯಕ್ಕನ ವಚನ, ೧೬೮, ' ಉಡುತಡಿಯ ಮಹಾದೇವಿಯಕ್ಕನವರ ಸಾಹಿತ್ಯ ' (೧೯೬೩) ಸಂ : ಜಿ. ಸಿ. ಜವಳಿ, ಮತ್ತು ವೀರಭದ್ರಪ್ಪ ಮಲ್ಲಾಬಾದಿ.

ಮತ್ತು ಶರಣನಿಗೆ ಕುಲಮದ, ವಿದ್ಯಾಮದ, ಧನಮದಾದಿಗಳಿಲ್ಲವೆಂದು ಅಕ್ಕನ ಮತ. ಅಕ್ಕನ ವಚನ. ೧೧೬.

[40] ಸಾಮವೇದಿಗಳ ಮಹಾತ್ಮೆ ; ' ಹರಿಹರನ ರಗಳೆಗಳು ಭಾಗ ೫ ' ; ಸಂ. ಫ. ಗು. ಹಳಕಟ್ಟಿ (೧೯೩೫).

[41] " ಚಾಂಡಾಲಂಗೆ ಜ್ಞಾನವಂಕುರಿಸಿದೊಡೆ, ಆತನ ಅಂತರಂಗದ ವೃತ್ತಿಗೆ ಪೂಜ್ಯತೆಯಲ್ಲವೆ ಬಹಿರಂಗದ ತನುವಿಗೆ ಪೂಜ್ಯತೆಯಾಗದು .... " ಚೆನ್ನಬಸವಣ್ಣನವರ ವಚನ, ೧೦೧. (ಕ. ವಿ. ವಿ. ಪ್ರಕಟನೆ).

ಸೋಗಿನಲ್ಲಿ ಓದಿದವರು ಅನೇಕ ರೀತಿಯಲ್ಲಿ ಕೊಲೆ, ಸುಲಿಗೆ, ಕಪಟ, ವಂಚನೆ ಮಾಡುತ್ತಿದ್ದುದನ್ನು ಹರಿಹರನು ಅಂದೇ ಬಯಲಿಗೆಳೆದಿರುವುದನ್ನು ನಮ್ಮ ಇಂದಿನ ಜನಾಂಗವು ಮುಕ್ತಕಂಠದಿಂದ ಪ್ರಶಂಸಿಸಬೇಕು. ಬಹಳಷ್ಟು ಓದಿದ–ನಾಗರಿಕರೆಂಬುವ ಜನವೇ ಇಂದಿನ ಭಾರತದಲ್ಲಿ ಕೂಡ ಅನೀತಿ, ಅನಾಚಾರ, ದುರ್ನೀತಿಗಳಿಂದ ನಡೆಯುತ್ತಿರುವುದರಿಂದಲೇ ಭಾರತವು ದುರ್ದೆಸೆಗಿಳಿಯುತ್ತ ನಡೆದಿದೆ. ನಮ್ಮ ದೇಶದಲ್ಲಿ ಧರ್ಮ, ನೀತಿ, ಪ್ರೇಮ ಮೊದಲಾದ ಗುಣಗಳು ಇನ್ನೂ ಕೆಲವೆಡೆ ಉಳಿದುಕೊಂಡು ಬಂದಿದ್ದರೆ ಅವು ನಾಗರಿಕತೆಯ ಸ್ಪರ್ಶಕ್ಕೆ ದೂರವಿದ್ದವರಲ್ಲಿ, ಮತ್ತು ಸ್ತ್ರೀಯರಲ್ಲಿ. ಅಂತಹವರ ಪ್ರಶಂಸೆ ಸಂಸ್ಕೃತಿಯ ವರ್ಧನೆಗೆ ಅತ್ಯಾವಶ್ಯ. ಆ ಹಿನ್ನೆಲೆಯಲ್ಲಿಯೂ ಈ ಕಥೆಗಳನ್ನು ನೋಡಬೇಕು; ಆಗ ಅವುಗಳ ಮಹತಿ ಗೋಚರಿಸುತ್ತದೆ.

ಕುಲಕ್ಕೂ ಕಲೆಗೂ, ಕುಲಕ್ಕೂ ಶಿವಭಕ್ತಿಗೂ ಯಾವ ಸಂಬಂಧವೂ ಇಲ್ಲವೆಂಬುದನ್ನು ಹರಿಹರನು ತನ್ನ ಅತಿಚಿಕ್ಕ ರಗಳೆ 'ತಿರುನೀಲಕಂಠಪಾಣರು'[42] ಎಂಬುದರಲ್ಲಿ ಎತ್ತಿ ತೋರಿಸಿದ್ದಾನೆ. ತಿರುನೀಲಕಂಠಪಾಣರು ಗಾನವಿದ್ಯಾ ವಿಶಾರದರು; ಆದರೆ ಕುಲದಿಂದ ಅಂತ್ಯಜರು. ಭಕ್ತಿಯಿಂದ ಹಾಡುತ್ತ ಮದುರೆಯ 'ಶ್ರೀವಾಲಮುಖಹರ'ನ (ಮೀನಾಕ್ಷಿ ದೇವಾಲಯ) ನೋಡಲು ಬಂದು ಬಾಗಿಲಲ್ಲಿ ನಿಂದಿರಲು ಅಲ್ಲಿಯ ಜನರು:

"ಅಂತ್ಯಜರು ಪುಗಬಹುದೇ ಈ ಶಿವನಿಳಯಮಂ ?"

ಎಂದು ಪ್ರತಿಭಟಿಸಿ ತಡೆಯುತ್ತಾರೆ. ಆಗ ತಿರುನೀಲಕಂಠಪಾಣರು, "ಸಪ್ತಸ್ವರ, ತ್ರಿಸರದಿಂದ, ಮಲಹರಿ, ಪಳಮಂಜರಿ, ಭೈರವಿ, ಲಲಿತೆ, ವರಾಳಿ, ಕನ್ನಡ, ಗೌಳ, ದೇಶಿ, ನಾಟೆ, ಬಹುಳಿ, ರಾಮಕ್ರಿಯಾ, ಶುದ್ಧಸಾಳ, ಶುದ್ಧ, ಸಂಕೀರ್ಣರಾಗಗಳಿಂದ, ತಾನ, ಶ್ರುತಿ, ಪಂಜಳ, ವೈಯಾರ'ದಿಂದ ಮನಮುಟ್ಟಿ ಹಾಡುತ್ತಾರೆ. ಅವರ ಗಾನಶಕ್ತಿಗೆ, ಅಪಾರವಾದ ಶಿವಭಕ್ತಿಗೆ ಮೆಚ್ಚಿ, ಅವರಿಗೆ ದೇವಾಲಯದಲ್ಲಿ ಪ್ರವೇಶಿಸಲು ಭಕ್ತರು ನಂತರ ಅನುಮತಿ ನೀಡುತ್ತಾರೆ. ನವರಸಗಳಲ್ಲಿ ಶಿವನ ಮಹಿಮೆಗಳನ್ನು ತಿರುನೀಲಕಂಠಪಾಣರು ಮತ್ತೆ ಮತ್ತೆ ಹಾಡುತ್ತಾರೆ.[43] ಹೀಗೆ ಮಹಾತ್ಮಾಗಾಂಧೀಯವರ

---

42 "ವೇದಶಾಸ್ತ್ರದವರ ಹಿರಿಯರೆನ್ನೆ; ಮಾಯಾಭ್ರಾಂತಿ ಕವಿದ ಗೀತಜ್ಞರ ಹಿರಿಯರೆನ್ನೆ! ಇವರು ಹಿರಿಯರುಗಳೇ? ಯಾಗ ನಟ್ಟುವಿಗ ಪಾಣರು! ... ." ಬ. ವ. ೬೧೩. 'ಪಾಣ' ಎಂದರೆ ಕೈಯಲ್ಲಿ ತಾಳ ಮೊದಲಾದವುಗಳನ್ನು ತೆಗೆದುಕೊಂಡು ಭಕ್ತಿಯಿಂದ ಭಕ್ತಿಯ ಪದಗಳನ್ನು ಕುಣಿಯುತ್ತ ಹಾಡುವವ ಎಂದರ್ಥ.

43 ಹರಿಹರನು ಹೇಳುವ ಈ ಅನೇಕ ರಾಗಗಳು ಸಂಗೀತದ ಬೆಳವಣಿಗೆಯ ದೃಷ್ಟಿಯಿಂದ ಅತಿ ಮಹತ್ವದವು. ಹರಿಹರನ ಕಾಲಕ್ಕೆ ಇಂದಿನಂತೆ 'ಹಿಂದುಸ್ಥಾನೀ' ಹಾಗೂ 'ಕರ್ಣಾಟಕ, ಸಂಗೀತವೆಂಬ ಪ್ರಭೇದಗಳು ಇದ್ದಂತೆ ಗೋಚರಿಸುವುದಿಲ್ಲ. ಆದರೆ ಬೇರೆ ಬೇರೆ ದೇಶದ, ಹೆಸರುಗಳುಳ್ಳ ರಾಗಗಳು–(ಉದಾ. ಬಂಗಾಳ, ಮಲಹರಿ, ಕನ್ನಡ ಇತ್ಯಾದಿ) ಅಂದು ಪ್ರಚಲಿತವಿದ್ದು ಸಂಗೀತಜ್ಞನು ಅವೆಲ್ಲವನ್ನೂ ಕಲಿಯುತ್ತಿದ್ದಂತೆ ತಿಳಿದುಬರುತ್ತದೆ.

ಕಾಲಕ್ಕೆ ಹರಿಜನರಿಗೆ ದೇವಾಲಯ ಪ್ರವೇಶವು ಎಂತು ಸಮಸ್ಯೆಯಾಗಿದ್ದಿತೋ ಅಂತೆಯೇ ಹರಿಹರನ ಪೂರ್ವದಲ್ಲಿಯೂ ಇದ್ದಾಗ, ಅಂದಿನ ಭಕ್ತಮಂಡಳಿಯು ಸದ್ಗುಣಶಾಲಿಯಾದ ಭಕ್ತನ ಕುಲಜಾತಿಗಳನ್ನು ನೋಡದೆಯೇ ಪ್ರವೇಶ ಕೊಟ್ಟು ದೊಂದು ಮಹತ್ವದ ದಾಖಲೆಯೆನ್ನಬಹುದು. ಈ ಶಿವಭಕ್ತನು ಸಂಸ್ಕಾರ ಜೀವಿ ಯಾದುದರಿಂದಲೇ ಯಾವ ಪ್ರತಿಭಟನೆಯನ್ನೂ ಮಾಡಲಿಲ್ಲ. ಅಲ್ಲದೆ ದೇವನಿಂದ ತನಗೆ ದೊರೆತ ಗಾನಶಕ್ತಿಯನ್ನು ಶಿವನ ಸ್ತೋತ್ರಕ್ಕೇ ಮೀಸಲಾಗಿರಿಸಿದನು. ಆದುದರಿಂದ ಇಂತಹ ವ್ಯಕ್ತಿಗಳನ್ನು ಸಮಾಜವು ಕೀಳೆಂದು ಭಾವಿಸುವುದೇ?

ಇನ್ನೊಂದೆಡೆ 'ಪೂಸಲೆಯಾಂಡರು' ಎಂಬ ಶಿವಭಕ್ತರು 'ಕಮ್ಮೆಕುಲ'ದ ವಿಪ್ರರಾಗಿ ಜನಿಸುತ್ತಾರೆ. ಆದರೆ 'ಗರ್ವವನ್ನು ಬಿಟ್ಟು ಈಶ ಕಿಂಕರ'ರಾಗುತ್ತಾರೆ. ಅಖಿಲ ವೇದ, ಶಾಸ್ತ್ರ, ತಂತ್ರ ಮೊದಲಾದವು ಶಿವಜ್ಞಾನಕ್ಕಿಂತ ಕಡಿಮೆಯೆಂದೇ ಭಾವಿಸುತ್ತಾರೆ. ಅವರು ದೇವರು:

> "ಒಬ್ಬನಲ್ಲದೆ ಮತ್ತೆ ಇಬ್ಬರಿನ್ನಿಲ್ಲೆಂದು,
> ಬೊಬ್ಬಿಡುತಲಿದೆ ವೇದ ಇಬ್ಬರಿನ್ನಿಲ್ಲೆಂದು"[44]

ಹಾಡುತ್ತಾರೆ. ಶಿವಭಕ್ತರನ್ನೂ ಶಿವನೆಂಬ ಭಾವನೆಯಿಂದಲೇ ಸೇವೆ ಮಾಡುತ್ತಾರೆ. ತನುಮನಧನಗಳಿಂದ ಶಿವನನ್ನು ಶಿವಭಕ್ತರನ್ನು ಸೇವೆಮಾಡುತ್ತಿರುವಾಗ ಅವರ ಧನವು ಸವೆದುಹೋಗುತ್ತದೆ. ಆದರೆ ಅವರ ಧರ್ಮಬುದ್ಧಿ ಸವೆಯುವುದಿಲ್ಲ! ಅವರು ತಾವೊಂದು ಶಿವಾಲಯ ರಚಿಸಬೇಕೆಂಬ ಭಕ್ತಿಯ ಆಸೆಯಿಂದ ಧನಿಕರನ್ನು ಹಣ ಕೇಳುತ್ತಾರೆ. ಎಷ್ಟೋ ವಣಿಜರು ಹಣವಿಲ್ಲೆಂದು ಹೇಳಿಕಳಿಸುತ್ತಾರೆ. ಮನೆಮನೆಗೆ ಕೈಯೊಡ್ಡಿ ನಿರಾಶರಾಗಿ ಕೊನೆಗೆ ಇನ್ನೊಬ್ಬ ವಣಿಜನನ್ನು ಯಾಚಿಸಲು, ಆಗ ಆ ವಣಿಜನು:

> "ಬೇಡಿದಾ ಧನದೊಳಗೆ ದೇವಾಲಯವ ರಚಿಸುವುವೇ ?
> ಮಾಡದಿರ್ದೊಡೆ ನಿಮ್ಮ ಭಕ್ತಿಗೇಂ ಕೇಡಹುದೇ ?"

ಎಂದು ನುಡಿಯುತ್ತಾರೆ. ಅಲ್ಲದೆ ಗರ್ಭಗೃಹ-ಮಂಟಪ ಮೊದಲಾದವುಗಳಿಗೆ ಎಷ್ಟೆಂದು ಕೊಡಬಹುದು? ಎಂದು ಯೋಚಿಸಿ 'ಹತ್ತುಹೊನ್ನು' ಕೊಡುತ್ತಾರೆ. ಆಗ ಬೇಡುವುದೇ ವಿಹಿತವಲ್ಲೆಂದು 'ಪೂಸಲೆಯಾಂಡರು' ಹಾಗೇ ತಿರುಗುತ್ತಾರೆ. ಆಗಲೇ ಅವರಿಗೊಂದು ಯೋಚನೆ ಹೊಳೆಯುತ್ತದೆ. ಅದೇನೆಂದರೆ:

> "ಮನೆಯೊಳಗೆ ನಾನು, ದೇಗುಲದೊಳಗೆ ಶಿವನೆನುತೆ !
> ನೆನೆವುತ್ತ ಪೋಗುತ್ತ ತಿರುತಿರುಗಿ ಬಪ್ಪುದು ;
> ಹೋದಹೆನು ಬಂದಹೆನು ಎಂಬ ಭೇದವದೇಕೆ ?
> ಮಾದೇವನೆನ್ನೊಳಗೆ ನಿಲಿಸಿಕೊಳುವುದು ಬೇಕು".

ಎಂದು ಯೋಚಿಸಿ,

---

[44] 'ದೇವನೊಬ್ಬ ನಾಮ ಹಲವು"-ಬ. ನ. ೬೧೫.

"ದೇಹದೊಳು ದೇವಾಲಯ[ವ] ಮಾಡತೊಡಗಿದಂ". [45]

ಅಲ್ಲಿಂದ ಮುಂದೆ ಚಿತ್ತದಲ್ಲಿರಿಸಿಕೊಂಡ ಶಿವನಿಗೇ ಪೂಸಲೆಯಾಂಡರು ಪೂಜೆ ಸಲ್ಲಿಸಿದರು. ಈ ರೀತಿ ಮಾನಸ ಪೂಜೆಯಿಂದ 'ಲಿಂಗವೇ ಅಂಗ, ಅಂಗವೇ ಲಿಂಗ' ವಾಗುತ್ತಾರೆ. ಶಿವನೊಲುಮೆಗೆ ಕಾರಣವಾಗುತ್ತಾರೆ. ದೇವಾಲಯಗಳನ್ನು ರಚಿಸುತ್ತಿದ್ದವರ ದೇವಾಲಯಗಳಲ್ಲಿ ಶಿವನು ಇರುವುದನ್ನು ಬಿಟ್ಟು ಪೂಸಲೆಯಾಂಡರ ದೇಹದಲ್ಲಿಯೇ ವಾಸವಾಗಲು ಪ್ರಾರಂಭಿಸಿದ್ದರಿಂದ ಅವರೆಲ್ಲ ಈ ಶರಣರಲ್ಲಿಗೇ ಬಂದು ಶಿವನನ್ನು ಕಾಣುವಂತಾಗುತ್ತದೆ. ಈ ರೀತಿ ಪೂಸಲೆಯಾಂಡರು ಅಹಂಕಾರವಿಲ್ಲದೆ, ಶಿವಜ್ಞಾನಿಯಾಗಿ, ಹೊಸ ಪರಿಯ ದೇವಾಲಯ ರಚನೆ ಮಾಡಿದುದು ಇಂದಿನ ಬಡಪರಿಸ್ಥಿತಿಯ ಭಾರತಕ್ಕಂತೂ ಅತ್ಯಾವಶ್ಯಕವಾಗಿ ಅನುಸರಿಸಬೇಕಾದ ತತ್ವವೇ ಎನ್ನಬಹುದು. ಯಾಕೆಂದರೆ ಅಪಾರ ಹಣದಿಂದ ನಮ್ಮ ಪೂರ್ವಜರು ಕಟ್ಟಿಸಿದ ದೇವಾಲಯಗಳು ಪರಕೀಯರ ಆಕ್ರಮಣಕ್ಕೆ ತುತ್ತಾದುದಲ್ಲದೆ, ಆಳಿದುಳಿದವುಗಳೂ ಯಾರ ರಕ್ಷಣೆಯೂ ಇಲ್ಲದೆ–ಪೂಜೆಪುರಸ್ಕಾರಗಳಿಲ್ಲದೆ, ಕೊಳೆಯುತ್ತಿರುವುದನ್ನು ನಾವಿಲ್ಲಿ ಸ್ಮರಿಸಿಕೊಳ್ಳಬೇಕು. ಅಂತಹದೇ ತಪ್ಪನ್ನು ಮತ್ತೆ ಮಾಡಬಾರದೆಂದರೆ ಈ ತತ್ವಾನುಸರಣೆಯು ಅತಿ ವಿಹಿತ.[46]

ಈ ರೀತಿ ಹರಿಹರನ ರಗಳೆಗಳು ಕನ್ನಡ ಸಾಹಿತ್ಯದ ಅನರ್ಘ್ಯ ರತ್ನಗಳು. ಕಿರಿದರೊಳು ಹಿರಿದಾದ ತತ್ವವನ್ನು ಸಾರುವಂತಹವು. ಜೀವನದಲ್ಲಿ ಗುಣಕ್ಕೆ ಬೆಲೆ ಕೊಟ್ಟು, ಮಾನಮರ್ಯಾದೆಗೆ ಅಂಜಿ, ಲೋಕಹಿತಕ್ಕೆ ದುಡಿದು, ಪ್ರಚಾರದ ಬೆನ್ನು ಹತ್ತದೆ, ಕರ್ತವ್ಯದ ಕಡೆಗೆ, ಲೇಸಿನ ಕಡೆಗೆ, ಗಮನವಿತ್ತವರ ಬಾಳು ಶಾಂತಿ ಪ್ರೇಮ ಗಳಿಗೆ ಮಾದರಿ. ಅವರ ಬದುಕಿನಲ್ಲಿ ಶಾಂತಿ, ನುಡಿಯಲ್ಲಿ ಶಾಂತಿ ತುಂಬಿದೆ. ಅವರ ಬದುಕು ಅಹಂಕಾರದಿಂದ ದೂರ; ನಾಟಕೀಯತೆಯಿಂದ ತೀರ ದೂರ. ಅವರ ವಿನಮಿತತನ, ಶೀಲ, ಸಂಯಮ, ಭಕ್ತಿ, ಎಲ್ಲ ಕಾಲಕ್ಕೂ ಬೇಕಾದ ಮೂಲ್ಯಗಳೇ. ಅವರ ಬದುಕು ಒಳಗೂ ಹೊರಗೂ ಒಂದೇ ತೆರನಾದುದು; ಅಲ್ಲಿ ಮುಚ್ಚುಮರೆಯಿಲ್ಲ. 'ಮಾಡಿದೆನೆಂಬ' ಅಹಂಕಾರವಾಗಲೀ, ಜಾತಿ ಕುಲಗಳ ಅಧಿಕಾರ, ಐಶ್ವರ್ಯಗಳ ಮದಗಳಾಗಲೀ ಅವರತ್ತ ಸುಳಿಯವು. ಹರಿಹರ ಕವಿಯು ಸಣ್ಣವರೆನಿಸಿ

---

[45] ದೇವಾಲಯದ ದೇವರನ್ನು ಬಿಟ್ಟು ದೇಹದಲ್ಲಿ ದೇವಾಲಯ ಮಾಡಿಕೊಳ್ಳಬೇಕೆಂಬ ಬಸವಣ್ಣನವರ ವಿಚಾರವು ಪೂರ್ವದ ಈ ಶಿವಶರಣನಿಗೆ ಹೊಳೆದುದು ಇಲ್ಲಿ ಗೋಚರಿಸುತ್ತದೆ. ಹೀಗೆ ಪುರಾತನ ಶಿವಶರಣರಲ್ಲಿಯ ಒಂದೊಂದು ಗುಣವೂ ಬಸವಣ್ಣನವರು ಕಟ್ಟಬಯಸಿದ ಸಮಾಜಕ್ಕೆ ಪ್ರೇರಣೆಯನ್ನೊದಗಿಸಿವೆ ಎಂಬುದು ನಮಗೆ ಹರಿಹರನ ಈ ಕಥೆಗಳಿಂದ ತಿಳಿಯುತ್ತದೆ. ಆ ಕಾರಣದಿಂದಲೇ ಬಸವಣ್ಣನವರಿಗೆ–ವೀರಶೈವರಿಗೆ ಪುರಾತನರು ಅತಿಪೂಜ್ಯರು.

[46] ಪೂಸಲೆಯಾಂಡರು ಮತ್ತು ತಿರುನೀಲಕಂಠಪಾಣರ ಚರಿತ್ರೆಗಳ್ನು ಮೂಲದಲ್ಲಿ ಓದಲು ತಾಳೆಯೋಲೆಯ ಪ್ರತಿಯನ್ನು ಶ್ರೀ ವೀರಭದ್ರಪ್ಪ ಮಲ್ಲಾಬಾದಿಯವರು ದಯಪಾಲಿಸಿದ್ದಾರೆ. ಆ ಅಪ್ರಕಟಿತ ಕೃತಿಗಳನ್ನು ನನಗೆ ಒದಗಿಸಿದ್ದಕ್ಕೆ ಅವರಿಗೆ ಉಪಕೃತನಾಗಿದ್ದೇನೆ.

ಕೊಂಡಿದ್ದವರಲ್ಲಿ, ಕೀಳೆನಿಸಿಕೊಂಡಿದ್ದವರಲ್ಲಿ ಹುದುಗಿದ ರಾಷ್ಟ್ರೀಯ ಮಹೋನ್ನತ ವಿಚಾರಗಳನ್ನು ಎತ್ತಿತೋರಿಸಲು ಮುಂದಾದ ಎದೆಗಾರ. ಅವನ ಕಥೆಗಳು ನಾಟಕೀಯ ವಾಗಿರುವುದರಿಂದ 'ನಾಟಕ'ದ ಸಂಭಾಷಣೆಗಳನ್ನೂ, ಕಾವ್ಯಮಯವಾಗಿರುವುದರಿಂದ ಕಾವ್ಯದ ರಸಜ್ಞತೆಯನ್ನೂ ಕಿರಿಯವಾಗಿರುವುದರಿಂದ 'ಸಣ್ಣ ಕಥೆ'ಗಳ ಸೊಬಗನ್ನೂ ಒಳಗೊಂಡಿರುವುದೊಂದು ವಿಶೇಷ. ಕುದಿಯುತ್ತಿರುವ ಜನಾಂಗದ ಭಾವನೆಗೆ ಆವು ರಗಳೆಗಳೆಂದರೆ ಕೈದೀವಿಗೆ; ಐತಿಹಾಸಿಕ ಸಾಮಗ್ರಿಗೆ ಉತ್ತಮ ಕೊಡುಗೆ. ಈ ಕಾರಣದಿಂದ ಹರಿಹರನೇ ಎಂಬ ಭಾವನೆಯೇ ವಿದ್ವಾಂಸರಲ್ಲಿರುವುದರಿಂದ ಅವನೇ ಆ ಸಾಹಿತ್ಯದ ಸರ್ವಸ್ವ ಎಂಬ ಭಾವನೆಯಿಂದ ಇಲ್ಲಿ ಆತನ ಕೆಲಕೃತಿಗಳನ್ನು ಜೀವನ ಮೂಲ್ಯಗಳ ಅದರಲ್ಲಿಯೂ ಇಂದಿನ ಜೀವನ ದೃಷ್ಟಿಯನ್ನು ಎದುರಿಗಿಟ್ಟುಕೊಂಡು ವಿವೇಚಿಸಲಾಗಿದೆ.

ಈ ವಿಶ್ವವಿದ್ಯಾನಿಲಯದ ಯೋಜನೆಯಲ್ಲಿ ಸೇರಿಸಿರುವ ಕನ್ನಡ ಸಾಹಿತ್ಯದ ವ್ಯಾಸಂಗಕ್ಕೆ ವಿಶೇಷ ಪ್ರೋತ್ಸಾಹವನ್ನು ಕೊಡಬೇಕೆಂಬ ವಿಚಾರದಲ್ಲಿ ನನಗೆ ಸ್ವಾಭಾವಿಕವಾಗಿ ತುಂಬ ಆಸಕ್ತಿ ಇದೆ. ಈಗಿನ ಕಾಲದಲ್ಲಿ ನಾಡಿನ ನುಡಿಗಳ ವ್ಯಾಸಂಗವನ್ನು ಸ್ಕೂಲುಗಳಲ್ಲಿಯೂ ಕಾಲೇಜುಗಳಲ್ಲಿಯೂ ಉದಾಸೀನ ಮಾಡುತ್ತಿರುವರೆಂಬುದನ್ನು ನಾವೆಲ್ಲರೂ ಬಲ್ಲೆವು. ನಮ್ಮ ವಿಶ್ವವಿದ್ಯಾನಿಲಯವು ಕನ್ನಡದ ಮತ್ತು ಮೈಸೂರಿನಲ್ಲಿ ಬಳಕೆಯಲ್ಲಿರುವ ಇತರ ದಾಕ್ಷಿಣಾತ್ಯ ಭಾಷೆಗಳ ಪೂರ್ಣವೂ ಸಂತತವೂ ಆದ ವ್ಯಾಸಂಗಕ್ಕೆ ಏರ್ಪಾಡು ಮಾಡಿರುವುದು ನನಗೆ ತುಂಬ ಸಂತೋಷವನ್ನುಂಟು ಮಾಡಿದೆ.

ನಾಲ್ಮಡಿ ಕೃಷ್ಣರಾಜ ಒಡೆಯರು

ಎಂ. ಮರಿಯಪ್ಪ ಭಟ್ಟ

ಷಟ್ಪದಿ

ಪ್ರಾಯಃ ಪ್ರಾಚೀನ ಮಹಾಕಾವ್ಯಗಳ ಪುನರ್ಮೌಲ್ಯವನ್ನು ಗಮನಿಸುವಾಗ ಅವುಗಳ ಬೆಲೆ ಮೇಲೇರುವುದರಲ್ಲಿ ಸಂದೇಹ ಬೇಡ. ಅಂದಿಗೆ ಅದೇ ಸುಖ. ಇಂದಿಗೆ ಅವುಗಳ ಪ್ರಕಾರಗಳು ಕಾಲಾತೀತವಾಗಿರುವುದು ಸ್ವಾಭಾವಿಕ. ಸಂಸ್ಕೃತ ಭೂಯಿಷ್ಠವಾದ ಹಳಗನ್ನಡವು ಪ್ರಚಲಿತವಾಗಿದ್ದ ಪ್ರಾಚೀನ ಯುಗದಲ್ಲಿ ವರ್ಣವೃತ್ತಗಳಿಂದ ಪೋಣಿಸಲ್ಪಟ್ಟ ಚಂಪೂಕಾವ್ಯಗಳು ಸುಂದರವಾಗಿ ಶೋಭಿಸಿದುವು. ಪಂಡಿತ ಪ್ರಪಂಚದಲ್ಲಿ ಮಾತ್ರ ಅವುಗಳ ರಸಾಸ್ವಾದನೆ ಈಗಲೂ ಸಮೀಕ್ಷಿಸಿದಲ್ಲಿ ಅವುಗಳ ಹಿರಿಮೆ ಸ್ಫುಟವಾಗುವುದು. ಜನಸಾಮಾನ್ಯಕ್ಕೆ ಅವು ದುರ್ಗಮ. ಅಂದರೆ ಆ ಕಾವ್ಯ ರಾಶಿಯಲ್ಲಿದ್ದ—ಶಾಶ್ವತ ಮೌಲ್ಯವುಳ್ಳ—ಪಂಪಭಾರತ ಗದಾಯುದ್ಧದಂತಹ ಕೃತಿ ರತ್ನಗಳು ಜನಸಾಮಾನ್ಯಕ್ಕೆ ಎಟಕದ ವಸ್ತು.

ತತ್ಪರಿಣಾಮ, ವಚನಕಾರರ ಅನುಭವಸುಧೆಯು ವಚನರೂಪದಲ್ಲಿ ೧೨ನೆಯ ಶತಮಾನದಿಂದ ಎಲ್ಲರ ಜ್ಞಾನತೃಷೆಯನ್ನು ತಣಿಸುತ್ತಾ ಬಂತು. ಎಲ್ಲರಿಗೂ ಅರಿಯುವ—ಎಲ್ಲರೂ ಆಡುವ ಅಂದಿನ ಹೊಸಗನ್ನಡದಲ್ಲಿ (ಇಂದಿನ ನಡುಗನ್ನಡದಲ್ಲಿ) ಈ ವಚನಗಳು ರಚನೆಗೊಂಡುವು. ಒಂದು ನವೀನ ಬಗೆಯ ದೇಶೀಯ ಸಾಹಿತ್ಯ ರೂಪಿತವಾಗುತ್ತಿತ್ತು. ಆದರೆ ಜನತೆಗೆ ಛಂದೋಬದ್ಧವಾದ, ಸುಶ್ರಾವ್ಯವಾಗಿ ಹಾಡುವುದಕ್ಕೆ ಬರುವ, ಸುಲಭವಾಗಿ ಅರ್ಥವಾಗುವ, ಸದಾ ಸ್ಮರಣೆಯಲ್ಲಿಟ್ಟುಕೊಳ್ಳಲು ಅನುಕೂಲವಾಗುವ ಕಾವ್ಯಾವತಾರ ಬೇಕಾಗಿತ್ತು. ಮಾರ್ಗ ಸಂಪ್ರದಾಯದ ವರ್ಣ ವೃತ್ತಗಳು ಇದಕ್ಕೆ ಸರಿಹೋಗದು. ಮಾರ್ಗದ ಸರ್ವಾಧಿಕಾರ ಸಾಕಾಗಿ ಹೋಗಿತ್ತು.

ಅತ್ತ ದೇಶ್ಯದ ಉಸಿರಿನಂತಿದ್ದ, ಹಾಡುಗಬ್ಬಕ್ಕೆ ಸುಲಭವಾಗಿ ಹೊಂದಿಕೊಳ್ಳುವ ಮಾತ್ರಾವೃತ್ತ ಮುಂದೆಬಂತು. ಹಳ್ಳಿಯ ಹಾಡುಗಳಲ್ಲಿ ಇದರ ಉಪಯೋಗವನ್ನು ತ್ರಿಪದಿ ಆದಿಯಿಂದಲೇ ಮಾಡುತ್ತಾ ಬಂದಿತ್ತು. ಕೆಲವು ಹಳಗನ್ನಡ ಶಾಸನಗಳಲ್ಲಿ ತ್ರಿಪದಿ ತನ್ನ ತ್ರಿವಿಕ್ರಮಾವತಾರದ ಮುಂಚಿನ ವಾಮನಾವತಾರವನ್ನು ಕಾಣಿಸಿದೆ. ದೇಶ್ಯ ಅಂಶಗಳಾದ ಅಕ್ಕರ ವೃತ್ತಗಳೂ ಬಂದುದುಂಟು. ಅಲ್ಲೊಂದು ಇಲ್ಲೊಂದು

ಶರಷಟ್ಪದಿಯಲ್ಲಿ ರಚಿತವಾದ ಪದ್ಯವೂ ಉಂಟು. ಆದರೂ ಮಹಾಕೃತಿಗಳ ಬಂಧಕ್ಕೆ ಅವಿನ್ನೂ ಅರ್ಹತೆ ಪಡೆದಿರಲಿಲ್ಲ, ಪಂಡಿತ ಮಂಡಲಿಯಲ್ಲಿ ಅವಕ್ಕೆ ಸ್ವಾಗತವಿರಲಿಲ್ಲ.

ಈ ದಿಸೆಯಲ್ಲಿ ಕ್ರಾಂತಿಯನ್ನೆಬ್ಬಿಸಿ ಹಾಡುಗಬ್ಬದ ಬಾವುಟವನ್ನು ಮೊದಲಿಗೆ ಹಾರಿಸಿದ ಕೀರ್ತಿ ಹರಿಹರನಿಗೆ ಸಲ್ಲತಕ್ಕದ್ದು. ಹೃದಯಂಗಮವಾದ ರಗಳೆಗಳನ್ನು ರಚಿಸಿ ಕನ್ನಡ ಕಾವ್ಯವಾಹಿನಿಯು ಮಹಾಪೂರವನ್ನು ಹರಿಯಿಸಿದ ಪವಾಡ ಪುರುಷ ನೆಂದರೆ ಹರಿಹರ (೧೨೦೦). ಆತನೇ ಆ ಕ್ಷೇತ್ರದಲ್ಲಿ ಮೊದಲಿಗ. ಹರಿಹರನ ಸೋದರಳಿಯನೂ ಪಟ್ಟಶಿಷ್ಯನೂ ಆದ ರಾಘವಾಂಕ (೧೨೨೫) ಹಾಡುಗಬ್ಬದ ಮತ್ತೊಂದು ಕ್ಷೇತ್ರದಲ್ಲಿ ಫಲಭರಿತವಾದ ಕೃಷಿಮಾಡಿದ ಮೊದಲಿಗ. ಷಟ್ಪದಿಯ ವಿಧಾತ. ಆತನಿಗಿಂತ ಹಿಂದೆ ಕ್ವಚಿತ್ತಾಗಿ ಷಟ್ಪದಿ ಪ್ರಯೋಗವಿದ್ದಿರಬಹುದಾದರೂ ಅದನ್ನು ಪರಿಪೂರ್ಣತೆಗೊಳಿಸಿ ಮಹಾಕಾವ್ಯರಚನೆಗೆ ಅಳವಡಿಸಿದ ಮೂಲಪುರುಷ ರಾಘವಾಂಕ. ಆತನಿಂದ ಷಟ್ಪದಿಯುಗ ಪ್ರಾರಂಭವಾಯಿತೆಂದರೆ ತಪ್ಪಾಗದು. ರಾಘವಾಂಕನ ಮೇರುಕೃತಿಯಾದ ಹರಿಶ್ಚಂದ್ರಕಾವ್ಯ ವಾರ್ಧಕ ಷಟ್ಪದಿಯಲ್ಲಿ ರಚಿತವಾಗಿದೆ. ಷಟ್ಪದಿಗಳ ಗಣವಿಭಾಗಕ್ಕೂ ರಗಳೆ ತ್ರಿಪದಿಗಳ ಗಣವಿಭಾಗಕ್ಕೂ ಬಹಳ ಸಾಮ್ಯವಿದೆ. ಇದನ್ನರಿಯಲು ಒಂದೇ ಉದಾಹರಣೆ ಸಾಕು. ಲಲಿತ ರಗಳೆ ಯಲ್ಲಿ ಪಾದವೊಂದಕ್ಕೆ ಐದು ಮಾತ್ರೆಯ ನಾಲ್ಕು ಗಣಗಳು ಇರುತ್ತವೆ. ಎಷ್ಟು ಪಾದಗಳಾದರೂ ಇರಬಹುದು. ವಾರ್ಧಕ ಷಟ್ಪದಿಯಲ್ಲಿ ಒಂದನೇ, ಎರಡನೇ, ನಾಲ್ಕನೇ, ಐದನೇ ಪಾದಗಳಲ್ಲಿ ಐದು ಮಾತ್ರೆಯ ನಾಲ್ಕು ಗಣಗಳು, ಮೂರನೇ ಆರನೇ ಪಾದಗಳಲ್ಲಿ ಐದು ಮಾತ್ರೆಯ ಆರು ಗಣಗಳು ಮತ್ತೊಂದು ಗುರು ಇರುತ್ತವೆ. ಹಳೆಯ ರಗಳೆಗಳನ್ನೇ ನೂತನವಾಗಿ ಅಳವಡಿಸಿ ವಿವಿಧ ಷಟ್ಪದಿಗಳನ್ನು ಮಾಡಿಕೊಂಡಂತಿದೆ. ರಾಘವಾಂಕನು ಹರಿಹರನ ರಗಳೆಯ ಮೂಲದ್ರವ್ಯವನ್ನು ಬಳಸಿ ಷಟ್ಪದಿಯನ್ನು ರೂಪಿಸಿದನೊ? ರಗಳೆಗಳು ಸುದೀರ್ಘವಾಗಿ ಕಥನಕಾರ್ಯವನ್ನು ಎಸಗುವುದಕ್ಕೆ ಅನುಕೂಲವುಳ್ಳವು; ಆದರೆ ಆ ಎಲ್ಲೆಯಿಲ್ಲದ ಓಟ ಒಮ್ಮೊಮ್ಮೆ ಬೇಸರಿಕೆಯನ್ನು ತಂದುಬಿಡುವುದು. ಷಟ್ಪದಿಯಲ್ಲಾದರೆ ಆರು ಪಾದಗಳಲ್ಲಿ ಹೆಚ್ಚಾಗಿ ಒಂದು ಪುಟ್ಟ ಘಟ್ಟಕ್ಕಾದರೂ ಬರುತ್ತೇವೆ. ಹೀಗಾಗಿ ಷಟ್ಪದಿಯಲ್ಲಿ ರಗಳೆಯ ಗುಣವನ್ನುಳಿಸಿಕೊಂಡು ಅವಗುಣವನ್ನು ಕಳೆಯಲಾಗಿದೆ ಎನ್ನಬಹುದು. ಉತ್ತಮ ವಿಷಯಗಳನ್ನೊಳಕೊಂಡ ಷಟ್ಪದಿಯನ್ನು ಸುಲಭವಾಗಿ ಬಾಯಿಪಾಠಮಾಡಿ ಸದಾ ನೆನಪಿನಲ್ಲಿಟ್ಟುಕೊಳ್ಳಬಹುದು.

ಕನ್ನಡ ಕಾವ್ಯ ಪ್ರಪಂಚದಲ್ಲಿ ಶರ, ಕುಸುಮ, ಭೋಗ, ಭಾಮಿನಿ, ಪರಿವರ್ಧಿನಿ, ವಾರ್ಧಕ ಎಂಬುದಾಗಿ ಆರು ಬಗೆಯ ಷಟ್ಪದಿಗಳು ಪ್ರಸಿದ್ಧವಾಗಿವೆ. ಇವಲ್ಲದೆ ನಾಲ್ಕು ಮಾತ್ರೆಗಳ ಗಣಗಳನ್ನೊಳಕೊಂಡ ಉದ್ದಂಡ ಷಟ್ಪದಿ ಎಂಬೊಂದು ಪ್ರಕಾರವೂ ಉಂಟು. ಇದನ್ನು ರೌದ್ರರಸ ಪ್ರಧಾನವಾದ ವೀರೇಶ ಚರಿತೆಯನ್ನು ರಚಿಸುವಲ್ಲಿ ರಾಘವಾಂಕನೇ ಯಶಸ್ವಿಯಾಗಿ ಪ್ರಯೋಗಿಸಿ ಆ ವಿಶಿಷ್ಟಪ್ರಕಾರದ

ಕವಿತೆಯನ್ನು 'ಮಿಾಸಲುಗವಿತೆ'ಯೆಂದು ಹೊಗಳಿಕೊಂಡಿದ್ದಾನೆ. ಅದು ನಿಜನಾಗಿಯೂ ರಾಘವಾಂಕನಿಗೆ ಮಿಾಸಲು ಇರಬಹುದು. ಇದನ್ನು ಸಿದ್ಧನಂಜೇಶನೆಂಬ ಕವಿ (೧೬೫೦) ಆತನು ರಚಿಸಿದ ರಾಘವಾಂಕ ಚಾರಿತ್ರದಲ್ಲಿ ಸೂಚಿಸಿದ್ದಾನೆ :

ಭೂಸುರ ಕವಿಪ್ರವರ ರಾಘವಾಂಕಂ ಮುದದಿ
ನೀಶಾಲಯದ ಬೆಂಗಡೆಯೊಳೊಲ್ದು ಕುಳಿತು ಮು
ನ್ನೀ ಷಟ್ಪದಿಯೊಳಾರು ಪೊಗಟ್ದಿಲ್ಲೆನ್ನಿಂದ ನಿರ್ಮಿತಮುಮದು ಕಾರಣಂ
ಮಿಾಸಲಕವಿತ್ವವೆಂದೆಂಬ ಪೆಸರೀ ಕೃತಿಗೆ
ಭೂಷಣವಲಾ......................

ರಾಘವಾಂಕನ ಕೃತಿಗಳ ಮೌಲ್ಯವನ್ನು ಮತ್ತೊಮ್ಮೆ ಸಮಿಾಕ್ಷಿಸಿದಾಗ ಅವುಗಳ ಘನತೆ ಮತ್ತಷ್ಟು ಎದ್ದು ಕಾಣುತ್ತದೆ. ರಾಘವಾಂಕ ಷಟ್ಪದಿಯನ್ನು ಬಿಟ್ಟು ಬೇರಾವ ಛಂದಸ್ಸಿಗೂ ಕೈ ಹಾಕಲಿಲ್ಲ. ಹರಿಶ್ಚಂದ್ರ ಕಾವ್ಯ, ಸೋಮನಾಥ ಚರಿತ್ರೆ, ಸಿದ್ಧರಾಮ ಪುರಾಣಗಳನ್ನು ವಾರ್ಧಕ ಷಟ್ಪದಿಯಲ್ಲಿ ಬರೆದನು. ಮಿಾಸಲುಗವಿತೆಯಾಗಿ ವೀರೇಶ ಚರಿತೆಯನ್ನು ಉದ್ದಂಡ ಷಟ್ಪದಿಯಲ್ಲಿ ಪಾಕಮಾಡಿದನು.

ರಾಘವಾಂಕನ ಕೃತಿಗಳಲ್ಲಿ ಹರಿಶ್ಚಂದ್ರ ಕಾವ್ಯ ಉತ್ತಮೋತ್ತಮವಾಗಿದೆ. ಆತನಿಗೆ ಆದ್ಯಷಟ್ಪದಿ ಕವಿ, ಷಟ್ಪದಿ ಚಕ್ರವರ್ತಿ ಎಂಬ ಬಿರುದುಗಳನ್ನೂ ಅದು ತಂದಿದೆ ಎನ್ನಬಹುದು. ವಸ್ತುರಚನೆ, ಪಾತ್ರನಿರೂಪಣೆ, ರಸಪುಷ್ಟಿ, ಸನ್ನಿವೇಶ ನಿರ್ಮಾಣ, ವರ್ಣನೆ ಮುಂತಾದ ಅಂಶಗಳು ಹೃದಯಂಗಮವಾಗಿವೆ. ರಾಘವಾಂಕನು ಹಳಸಿದ ಕವಿಸಮಯಗಳಿಗೆ ಎಲ್ಲಿಯೂ ಬಲಿ ಬೀಳಲಿಲ್ಲ. ರಸವತ್ತಾದ ನಾಟಕೀಯ ಗುಣವುಳ್ಳ ಸಂಭಾಷಣೆಗಳು, ಪಂಡಿತಪಾಮರರಿಗೂ ಮುಂದಟ್ಟಾಗುವ ಸಂದರ್ಭೋಚಿತ ವಾಗಿ ಬಂದ ಬೆಡಂಗಿನ ನಾಣ್ಣುಡಿಗಳು ಈ ಕಾವ್ಯದ ಘನತೆಯನ್ನು ಸಾರುತ್ತವೆ. ಹರಿಶ್ಚಂದ್ರಕಾವ್ಯ ಕಾಲದೇಶಾತೀತವಾದ ಶ್ರೇಷ್ಠ ಕೃತಿ. ರಾಘವಾಂಕನನ್ನು ಮಹಾ ಕವಿಗಳ ಸ್ಥಾನದಲ್ಲಿರಿಸಲು ಇದೊಂದೇ ಸಾಕು.

ಕನ್ನಡ ಸಾಹಿತ್ಯ ರಾಶಿಯನ್ನು ಅವಲೋಕಿಸಿದರೆ ಸುಮಾರು ಐವತ್ತು ಬೆಲೆಯುಳ್ಳ ಷಟ್ಪದಿ ಕಾವ್ಯಗಳನ್ನು ಕಾಣಬಹುದು. ಇವುಗಳ ಕಾಲಾವಧಿ ಸುಮಾರು ಏಳು ಶತಮಾನಗಳು. ರಾಘವಾಂಕನಿಂದ (೧೨೨೫) ಮುದ್ದಣನ (೧೯೦೦) ವರೆಗೆ ಇನ್ನೆಷ್ಟೊ ಚಿಕ್ಕ ಪುಟ್ಟ ಕಾವ್ಯಗಳು, ಖಂಡ ಕಾವ್ಯಗಳು, ಹಾಡುಗಳು ಷಟ್ಪದಿ ಮೂಲಕ ಝೇಂಕರಿಸಿವೆ. ಆದರೆ ಅವನ್ನೆಲ್ಲ ಇಲ್ಲಿ ಹೆಸರಿಸುವುದು ಕೂಡ ಕಷ್ಟ. ಆದರೆ ಇಷ್ಟನ್ನು ಹೇಳಲೇಬೇಕು. ಕಳೆದ ಏಳು ಶತಮಾನಗಳಲ್ಲಿ ಕಾವ್ಯ ರಚನೆಯಲ್ಲಿ ಷಟ್ಪದಿಗಳಷ್ಟು ಜನಪ್ರಿಯತೆ, ಕವಿಪ್ರಿಯತೆ ಪಡೆದ ಛಂದಸ್ಸು ಬೇರೊಂದಿಲ್ಲ. ಅವುಗಳಲ್ಲಿಯೂ ವಾರ್ಧಕ ಷಟ್ಪದಿ, ಭಾಮಿನಿ ಷಟ್ಪದಿಗಳು ಅತ್ಯಂತ ಪ್ರಿಯವಾಗಿದ್ದುವು, ಕವಿಕಂಠಾಭರಣಗಳಾದುವು. ಷಟ್ಪದಿ ಮೋಹ ಈ ಶತಮಾನದ ಮೊದಲ ಎರಡು ದಶಕಗಳ ವರೆಗೂ ಇದ್ದಿತು. ಅಂದಿನ ಶಾಲಾವಿದ್ಯಾರ್ಥಿಗಳು ವಾರ್ಧಕ ಅಥವಾ

ಭಾಮಿನಿ ಷಟ್ಪದಿಯಲ್ಲಿ ಒಂದೆರಡಾದರೂ ಕವನ ಕಟ್ಟಿ ಕವಿಯೆಂಬುದಾಗಿ ಹೊಗಳಿಸಿಕೊಳ್ಳಲು ಹಾತೊರೆಯುತ್ತಿದ್ದರು.

ಷಟ್ಪದಿ ಕಾವ್ಯಪ್ರಪಂಚದಲ್ಲಿ ರಾಘವಾಂಕನ ತರುವಾಯ ಮರೆಯಲಾಗದ ಕೃತಿಗಳಲ್ಲಿ ಕೆಲವನ್ನು ಹೆಸರಿಸೋಣ. ಕುಮಾರವ್ಯಾಸನ ಭಾರತ (೧೪೦೦), ಪದ್ಮಣಾಂಕನ ಪದ್ಮರಾಜಪುರಾಣ (೧೪೦೦), ಭೀಮಕವಿಯ ಬಸವಪುರಾಣ (೧೪೦೦), ಭಾಸ್ಕರನ ಜೀವಂಧರ ಚರಿತೆ (೧೪೨೫), ಲಕ್ಕಣ್ಣ ದಂಡೇಶನ ಶಿವತತ್ವ ಚಿಂತಾಮಣಿ (೧೪೨೫), ಚಾಮರಸನ ಪ್ರಭುಲಿಂಗಲೀಲೆ (೧೪೩೦), ಕುಮಾರ ವಾಲ್ಮೀಕಿಯ ತೊರವೆ ರಾಮಾಯಣ (೧೫೦೦), ಮೂರನೆಯ ಮಂಗರಸನ ಜಯನೃಪ ಕಾವ್ಯ, ಸಮ್ಯಕ್ತ್ವಕೌಮುದಿ (೧೫೧೦), ತಿಮ್ಮಣ್ಣಕವಿಯ ಭಾರತ (೧೫೧೦), ಗುಬ್ಬಿಯ ಮಲ್ಲಣಾರ್ಯನ ಭಾವಚಿಂತಾರತ್ನ (೧೫೧೩), ಚಾಟುವಿಠಲನಾಥನ ಭಾಗವತ (೧೫೩೦), ಸಾಳ್ವನ ಭಾರತ (೧೫೫೦), ಲಕ್ಷ್ಮೀಶನ ಜೈಮಿನಿಭಾರತ (೧೫೫೦) ಕನಕದಾಸನ ಹರಿಭಕ್ತಿಸಾರ (೫೫೦), ವಿರೂಪಾಕ್ಷ ಪಂಡಿತನ ಚೆನ್ನಬಸವಪುರಾಣ (೧೫೮೦), ನಾಗರಸನ ಕನ್ನಡ ಭಗವದ್ಗೀತೆ (೧೬೫೦), ರಂಗನಾಥನ ಅನುಭವಾಮೃತ (೧೬೭೫), ಜಗನ್ನಾಥದಾಸನ ಹರಿಕಥಾಮೃತಸಾರ (೧೭೭೫), ಮುದ್ದಣನ ರಾಮಪಟ್ಟಾಭಿಷೇಕ (೧೯೦೦)—ಈ ಕೆಲವು ಕೃತಿಗಳು ವೈಶಿಷ್ಟ್ಯವುಳ್ಳ ಷಟ್ಪದಿ ಕಾವ್ಯಗಳೆನ್ನಬಹುದು.

ಈ ಪಟ್ಟಿಕೆಯನ್ನು ಪರಿಶೀಲಿಸಿದರೆ, ಕವಿಕಾವ್ಯ ವಿಚಾರವಾಗಿ ವೈವಿಧ್ಯವನ್ನು ಕಾಣುತ್ತೇವೆ. ವೈದಿಕ ಪುರಾಣೇತಿಹಾಸಗಳಾದ ರಾಮಾಯಣ ಭಾರತ ಭಾಗವತಗಳು ಕಾವ್ಯವಸ್ತುವನ್ನು ಕೊಟ್ಟಿವೆ. ಜೈನ ವೀರಶೈವ ಧರ್ಮಗಳು ಅನೇಕ ಉತ್ತಮ ಕೃತಿಗಳಿಗೆ ಸ್ಫೂರ್ತಿಯನ್ನಿತ್ತಿವೆ.

ಕುಮಾರವ್ಯಾಸನ ಕವಿತಾಧೋರಣೆಗೆ ಮನಸೋತ ರಾಷ್ಟ್ರಕವಿಯ ಹೃದಯಾಂತರಾಳದ ಈ ವಾಣಿ ಆ ಮಹಾಕೃತಿಯ ಪುನರ್ಮೌಲ್ಯವನ್ನು ಕಟ್ಟಿಬಿಟ್ಟಿದೆ :

ಕುಮಾರವ್ಯಾಸನು ಹಾಡಿದನೆಂದರೆ
ಕಲಿಯುಗ ದ್ವಾಪರವಾಗುವುದು

ಭಾರತದ ಘಟನೆಗಳೆಲ್ಲ ಕಣ್ಣಮುಂದೆ ನಿಲ್ಲುವುವು. ಆ ಕವಿಯ ಶಬ್ದಗಳು ಶಬ್ದಗಳಲ್ಲ, ಜೀವಂತ ಚಿತ್ರಗಳು. ಕುಮಾರವ್ಯಾಸನು ರೂಪಕ ಸಾಮ್ರಾಜ್ಯ ಚಕ್ರವರ್ತಿ ಎನ್ನುವುದುಂಟು. ಆತನು ಹೆಚ್ಚಾಗಿ ರೂಪಕದಲ್ಲಿಯೇ ಮಾತನಾಡುತ್ತಾನೆ. ದುರ್ಯೋಧನನು ಯುದ್ಧವನ್ನು ಮಾಡುವ ನಿರ್ಣಯಕ್ಕೆ ಬಂದನೆಂಬ ವಿಚಾರವನ್ನು ಕವಿ ಹೇಳುವ ಸಂದರ್ಭದಲ್ಲಿ ಪ್ರತಿಯೊಂದು ಮಾತೂ ಸಾರ್ಥಕ್ಯವಾದ ರೂಪಕವೇ ಆಗಿದೆ

ನೆನೆದ ಮಂತ್ರವ ತನ್ನ ತಂದೆಯ
ಮನದ ಮಚ್ಚದೊಳೊರೆದು ಕರ್ಣನ
ನೆನಹಿನೊಳು ಪುಟವಿಟ್ಟು ಶಕುನಿಯ ನೀತಿಯೊಳು ನಿಗುಚಿ

ಅನುಜಮತದೊಳು ವಿಸ್ತರಿಸಿ ಮೈ
ದುನನ ಮತದೊಳು ಬಣ್ಣವಿಟ್ಟನು
ಜನಪನಪಕೀರ್ತ್ಯಂಗನೆಗೆ ತುಡಿಸಿದನು ಭೂಷಣವ
(ಉದ್ಯೋಗಪರ್ವ ೩-೭೭)

ಅಪಕೀರ್ತಿ ಎಂಬ ಅಂಗನೆಗೆ ತೊಡಿಸಿದ ಆಭರಣಕ್ಕೆ ಎಷ್ಟು ಶ್ರಮಪಟ್ಟಿದ್ದಾನೆ ದುರ್ಯೋಧನ. ಇಲ್ಲಿ ಮುಂಬರುವ ಅಪಜಯವನ್ನು ಸೂಚಿಸಿರುವುದು ಸುಂದರವಾಗಿದೆ. ಇದೊಂದು ಅಚ್ಚಳಿಯದ ಮಾತು.

ಕುಮಾರವ್ಯಾಸನು ಪಾತ್ರನಿರೂಪಣೆಯಲ್ಲಿ ನಿಸ್ಸೀಮ. ಕೃಷ್ಣ, ಅರ್ಜುನ, ಭೀಮ, ದ್ರೌಪದಿ, ವಿದುರ, ಭೀಷ್ಮ ಇವರು ಕವಿಯ ಪ್ರೀತಿಯ ಪಾತ್ರಗಳು. ಇವರನ್ನು ನಿಜವಾಗಿಯೂ ಚಿರಂಜೀವಿಗಳಾಗಿ ಮಾಡಿದ್ದಾನೆ. ದುಷ್ಟಚತುಷ್ಟಯದ ಚಿತ್ರ ಸಹಜವಾಗಿ ಕಪ್ಪಾಗಿದೆ. ಪಲಾಯನ ಪಂಡಿತ ಉತ್ತರನು ಹಾಸ್ಯದ ಮೂರ್ತಿಯಾಗಿ ನಲಿಯುತ್ತಾನೆ. ಭಾಮಿನಿ ಷಟ್ಪದಿಯಲ್ಲಿ ನಲಿದು ನಲಿಸುವ ಐಂದ್ರಜಾಲಿಕ ಕುಮಾರವ್ಯಾಸ. ನಿಜವಾಗಿಯೂ ಕಾವ್ಯಕ್ಕೆ ಗುರುವೆಂಬುದಾಗಿ ಈ ಮಹಾಕೃತಿ ಮೆರೆದಿದೆ, ಇಂದಿಗೂ ಮೆರೆಯುತ್ತಲಿದೆ.

ಭೀಮಕವಿಯಿಂದ ಅದೇ ಸಮಯ ರಚಿತವಾದ ಬಸವಪುರಾಣವೂ ಭಾಮಿನಿ ಷಟ್ಪದಿಯಲ್ಲಿದೆ. ಇದು ತೆಲುಗಿನಲ್ಲಿ ಪಾಲ್ಕುರಿಕೆ ಸೋಮನಾಥನು ಬರೆದ ಬಸವಪುರಾಣದ ಅನುವಾದ. ಆದರೂ ಕವಿಯಶೈಲಿ, ಕಥನಕೌಶಲ, ವರ್ಣನೆ, ಇವನ್ನು ಗಮನಿಸಿದರೆ, ಇದೊಂದು ಸುಂದರ ಸ್ವತಂತ್ರ ಕೃತಿಯಂತಿದೆ. ಬೆಲೆಯುಳ್ಳುದಾಗಿದೆ. ಇದು ವರ್ಣಕ ಕಾವ್ಯವೆಂದು ಉಪೇಕ್ಷೆಮಾಡಬೇಡಿ ಎಂಬುದಾಗಿ ಕವಿ ವಾಚಕರನ್ನು ಬಿನ್ನವಿಸಿಕೊಳ್ಳುತ್ತಾನೆ. ಈ ಕೃತಿಯಲ್ಲಿ ಅಷ್ಟಾದಶ ವರ್ಣನೆಗಳು ಬಂದಿರುವುದರಿಂದ ಇಲ್ಲಿ ದೇಸಿಮಾರ್ಗಗಳ ಮಿಲನವನ್ನೂ ಕಾಣುತ್ತೇವೆ. ಭಾಮಿನಿ ಷಟ್ಪದಿಯಲ್ಲಿ ಸಂಪೂರ್ಣವಾಗಿ ರಚಿಸಲ್ಪಟ್ಟ ಮೊದಲನೆಯ ಕಾವ್ಯ ಇದೇ ಎನ್ನಬಹುದು. ಪ್ರಾಯಃ ಭೀಮಕವಿ ಕುಮಾರವ್ಯಾಸನಿಗಿಂತ ಮೂರು ದಶಕ ಹಿಂದಿನವನಿದ್ದರೂ ಇರಬಹುದು. ಮಾತ್ರವಲ್ಲ ಕುಮಾರವ್ಯಾಸ ಭಾರತದ ರಚನೆಯನ್ನು ಸಂಪೂರ್ಣ ಮಾಡಿರಲಿಲ್ಲ.

ಸುಮಾರು ಇದೇ ಸಮಯದಲ್ಲಿ (೧೪೦೦) ಪದ್ಮಣಾಂಕನೆಂಬ ಕವಿ ಪದ್ಮರಾಜ ಪುರಾಣವನ್ನು ವಾರ್ಧಕ ಷಟ್ಪದಿಯಲ್ಲಿ ರಚಿಸಿದನು, ಚಾರಿತ್ರಿಕ ಮೌಲ್ಯವುಳ್ಳ ಷಟ್ಪದಿ ಕಾವ್ಯಗಳಲ್ಲಿ ಇದೇ ಮೊದಲಿನದೆನ್ನಬಹುದು. ಅಂದು ಈ ಪಟ್ಟಿನ ಚರಿತ್ರೆ ದೃಷ್ಟಿಯುಳ್ಳ ಕವಿಯೋರ್ವನಿದ್ದನೆಂಬುದು ಅಭಿಮಾನದ ವಿಷಯವಾಗಿದೆ. ಇದು ಕವಿಯ ಹಿರಿಯನಾದ ಕೆರೆಯ ಪದ್ಮರಸನ ಕಥೆ. ಹರಿಹರನ ವಿಚಾರವೂ ಬಂದಿದೆ. ಚರಿತ್ರೆಯ ಬೆಲೆಯುಳ್ಳ ಈ ಕೃತಿಯಲ್ಲಿ ಸುಶ್ರಾವ್ಯತೆ ಅಷ್ಟಾಗಿಲ್ಲ. ಕಾರಣ ಆತ ಹಿತವಾದ ನಡುಗನ್ನಡಕ್ಕೆ ಅಸುಖವಾದ ಸಂಸ್ಕೃತ ಭೂಯಿಷ್ಠ ಸಮಾಸಗಳನ್ನು ಹಚ್ಚಿ ಷಟ್ಪದಿ ಕುಸಿಯುವಂತೆ ಮಾಡಿದುದು.

ಭಾಸ್ಕರನು (೧೪೨೪) ಜೀವಂಧರ ಚರಿತೆಯನ್ನು ಭಾಮಿನಿ ಷಟ್ಪದಿಯಲ್ಲಿ ರಚಿಸಿದನು. ಜೈನ ಧರ್ಮಕ್ಕೆ ಸಂಬಂಧಿಸಿದಂತೆ ಷಟ್ಪದಿಯಲ್ಲಿ ರಚಿತವಾದ ಕೃತಿಗಳಲ್ಲಿ ಇದು ಮೊದಲನೆಯದು. ಸಂಸ್ಕೃತದ ಮೂಲವನ್ನು ಆಧಾರವಾಗಿಟ್ಟುಕೊಂಡು ಬರೆದನು. ಸತ್ಯಂಧರರಾಜನ ಕುಮಾರ ಜೀವಂಧರನ ಕಥೆಯಿದು. ಅನೇಕ ಕಷ್ಟ ಪರೀಕ್ಷಗಳನ್ನನುಭವಿಸಿ ಕೊನೆಗೆ ವಿಜಯಿಯಾದನು. ಇದು ಪುರಾಣ ಕಥೆಯಾದರೂ ಸಂಪ್ರದಾಯಕ್ಕೆ ಕಟ್ಟುಬಿದ್ದರೂ, ಕವಿ ತನ್ನ ಕಲ್ಪನಾಶಕ್ತಿಯನ್ನು ಸಾಧ್ಯವಾದಲ್ಲಿ ಉಪಯೋಗಿಸಿ ಸ್ವಾರಸ್ಯವಾದ ತುಣುಕುಗಳನ್ನಿತ್ತಿದ್ದಾನೆ. ಹೃದಯಂಗಮವಾದ ಸರಳ ಶೈಲಿಯಲ್ಲಿ ನೀತಿಬೋಧೆಯನ್ನು ಯಶಸ್ವಿಯಾಗಿ ಮಾಡಿರುತ್ತಾನೆ.

ಸುಮಾರು ೧೪೩೫ರಲ್ಲಿ ಪ್ರೌಢದೇವರಾಯನ ಮಹಾ ಪ್ರಧಾನನಾಗಿದ್ದ ಲಕ್ಕಣ ದಂಡೇಶನು ಶಿವತತ್ವಚಿಂತಾಮಣಿ ಎಂಬ ಬೃಹತ್ ಗ್ರಂಥವೊಂದನ್ನು ವಾರ್ಧಕ ಷಟ್ಪದಿಯಲ್ಲಿ ಬರೆದನು. ಹೆಸರೇ ಸೂಚಿಸುವಂತೆ ಇದೊಂದು ವೀರಶೈವ ಧರ್ಮಕ್ಕೆ ಸಂಬಂಧಿಸಿದ ವಿಶ್ವಕೋಶದಂತಿದೆ. ಭಾಷೆ, ಶೈಲಿ, ವಸ್ತು ನಿರೂಪಣೆ ಮೊದಲಾದವಲ್ಲಿ ಕವಿಯ ಪ್ರತಿಭೆ ಪಾಂಡಿತ್ಯಗಳು ಎದ್ದು ಕಾಣುತ್ತವೆ. ಜನಸಾಮಾನ್ಯರಿಗೂ ಎಟುಕುವ ಉದ್ಘ ಕೃತಿ.

ತದನಂತರ ಬರುವ ಮರೆಯಲಾರದ ಕೃತಿ ಪ್ರಭುಲಿಂಗಲೀಲೆ (೧೪೩೦). ಇದು ಚಾಮರಸನು ಭಾಮಿನಿ ಷಟ್ಪದಿಯಲ್ಲಿ ರಚಿಸಿದ ಮಹಾ ಕೃತಿ. ಕುಮಾರವ್ಯಾಸನ ಭಾರತ ಮತ್ತು ಚಾಮರಸನ ಪ್ರಭುಲಿಂಗ ಲೀಲೆ–ಇವೆರಡು ಸೂರ್ಯಚಂದ್ರರಂತೆನ್ನಬಹುದು. ಕುಮಾರವ್ಯಾಸ ಶ್ರೀಕೃಷ್ಣನ ಲೀಲೆಯನ್ನು ತನ್ನ ಕಾವ್ಯದಲ್ಲಿ ಮೆರೆಯಿಸಿದಂತೆ ಚಾಮರಸನು ಅಲ್ಲಮ ಪ್ರಭುವಿನ ಲೀಲೆಯನ್ನು ಮೆರೆಯಿಸುತ್ತಾನೆ. "ಅಲ್ಲಮ ಪ್ರಭುವೆಂದೆನಿಸಿಕೊಂಬುವನು ಪ್ರತ್ಯಕ್ಷ ಪರಬೊಮ್ಮ" (ಚಾಮರಸ). "ತಿಳಿಯ ಹೇಳುವೆ ಕೃಷ್ಣ ಕಥೆಯನು" (ಕುಮಾರವ್ಯಾಸ) "ಉಜ್ವಲ ವ್ಯಕ್ತಿಗಳ ಚರಿತ್ರೆಯನ್ನು "ಅವರ ವ್ಯಕ್ತಿತ್ವಕ್ಕೆ ಕುಂದುಬಾರದ ರೀತಿಯಲ್ಲಿ ಬರೆಯಬೇಕೆನ್ನುವವರಿಗೆ ಚಾಮರಸನ ಮಾರ್ಗವು ಆದರ್ಶವಾಗಿದೆ" (ಶಿ. ಶಿ. ಬಸವನಾಳ). ಚಾಮರಸನ ಕಾವ್ಯಾಂಗನೆ ನಿರಾಡಂಬರ ಸುಂದರಿ. ಸುಲಭ ಸರಳ ಸುಂದರ ಶೈಲಿಯ ವಿಧಾತನೆಂದರೆ ಚಾಮರಸ. ಪದ್ಯ ಜೇನಿನ ಎದಿ. ಸಹಜ ಚಿತ್ರಗಳು. ಉಚಿತ ಪದ ಪ್ರಯೋಗ. ಒಂದೆಡೆಯಾದರೂ ಎಲ್ಲೆ ಮೀರಿದ ಅತಿಶಯದ ಮಾತಿಲ್ಲ. ನೇರವಾದ ಅಭಿವ್ಯಕ್ತಿ ಕಥನ ಕಾವ್ಯಕ್ಕೆ ಚಾಮರಸನೇ ಮೊದಲಿಗನೊ ಎಂಬಂತಿದೆ. ಕನ್ನಡದ ದೇಸಿ ಆತನಿಗೆ ಲೀಲಾಜಾಲವಾಗಿ ಒಲಿದಂತಿದೆ.

ಲಕ್ಷ್ಮೀಶ ವಿರೂಪಾಕ್ಷ ಪಂಡಿತರು ಮತ್ತಿನ ಶ್ರೇಷ್ಠ ಅವಳಿ ಜವಳಿ ಷಟ್ಪದಿ ಕವಿಗಳು. ಭಾಮಿನಿ ಷಟ್ಪದಿಯನ್ನು ಅಮರವಾಗಿಸಲು ಕುಮಾರವ್ಯಾಸ ಚಾಮರಸರು ಜನ್ಮತಾಳಿದಂತೆ, ಲಕ್ಷ್ಮೀಶ ವಿರೂಪಾಕ್ಷರು ಉದಿಸಿ ರಾಘವಾಂಕನ ಮಹಾಪ್ರಸಾದವಾದ ವಾರ್ಧಕ ಷಟ್ಪದಿಯನ್ನು ಅಮರವಾಗಿಸಿದರು. ವಿರೂಪಾಕ್ಷಪಂಡಿತನ ಚೆನ್ನಬಸವ ಪುರಾಣ ಚೆನ್ನಬಸವೇಶ್ವರನ ಜೀವನ ಚರಿತ್ರೆ. ಇದರಲ್ಲಿ ವೀರಶೈವ ಧರ್ಮಕ್ಕೆ

ಸಂಬಂಧಿಸಿದ ಅನೇಕ ಅಮೂಲ್ಯವಾದ ಅಂಶಗಳೂ ಬಂದಿರುತ್ತವೆ. ಚೆನ್ನಬಸವೇಶ್ವರನು ಬಿಜ್ಜಳನಿಗೆ ಹೇಳುವ ರಾಜನೀತಿ ಅತ್ಯುತ್ತಮವಾಗಿದೆ. ಇದೊಂದು ಉದಾಹರಣೆಯೇ ಸಾಕು :

ಸಾಮವೇ ವೇದಂಗಳೊಳಗಧಿಕವಾದಂತೆ
ಸಾಮವೇ ಮಿಗಿಲಾಯ್ತುಪಾಯಂಗಳಲ್ಲಿ ತ
ತ್ಸಾಮವೇ ಭೂಭುಜರ ಬಾಳ್ಕೆಗನುಸಾರಿ ಮಿಕ್ಕಿನ ಮೂರುಪಾಯಂಗಳು
ಸಾಮಾನ್ಯಮವರೊಳಗೆ ದಂಡವೆಂದೆಂಬುದಿದು
ಸಾಮಾನ್ಯದೊಳಗೆ ಸಾಮಾನ್ಯಮಿದನರಿಯದರು
ಸಾಮಾನ್ಯರೆನಿಪರವನೀಪತಿಗಳೊಳು ನೃಪಲಲಾಮನೀ ಕೇಳೆಂದನು.

ಮಹಾಕಾವ್ಯಕ್ಕೆ ಸರಿಹೋಗುವಂತೆ ಅಷ್ಟಾದಶವರ್ಣನೆಗಳನ್ನು ಸಾಂಪ್ರದಾಯಿಕವಾಗಿ ತಂದಿರುತ್ತಾನೆ. ಇದೇಕೆಂದರೆ, ವರ್ಣಕದಲ್ಲಿ (ದೇಸಿ ಛಂದಸ್ಸಿನಲ್ಲಿ) ಹೇಳುವಲ್ಲಿ ಲಕ್ಷಣ ಬೇಕಾಗಿಲ್ಲ ಎಂಬ ಜನರ ಅಭಿಪ್ರಾಯವನ್ನು ಸುಳ್ಳುಮಾಡುವುದಕ್ಕೆ ಎಂಬುದಾಗಿ ಕವಿಯೇ ಹೇಳುತ್ತಾನೆ.

ವಿರೂಪಾಕ್ಷನಲ್ಲಿ ಅಗಾಧವಾದ ಪಾಂಡಿತ್ಯ, ಸಹಜ ಕವಿತಾ ಶಕ್ತಿ, ಕಥನ ಕೌಶಲ, ಸ್ವಧರ್ಮಾಭಿಮಾನಗಳು ಸಮ್ಮಿಳಿತವಾಗಿವೆ. ಶ್ರೇಷ್ಠಕವಿ.

ಲಕ್ಷ್ಮೀಶನು ಸಂಸ್ಕೃತ ಜೈಮಿನಿ ಭಾರತವನ್ನು ಸಂಕ್ಷೇಪವಾಗಿ ಅನುವಾದ ಮಾಡಿದ್ದಾನೆ. ಆತನೊಬ್ಬ ಭಗವದ್ಭಕ್ತ ಕವಿ. ಅಲ್ಲಲ್ಲಿ ಬರುವ ಸಂದರ್ಭೋಚಿತ ಆಖ್ಯಾನಗಳು ಖಂಡ ಕಾವ್ಯಗಳಂತಿವೆ. ಚಂದ್ರಹಾಸನ ಕಥೆ, ಸೀತಾ ಪರಿತ್ಯಾಗ ಇತ್ಯಾದಿ ಸ್ವತಂತ್ರವಾಗಿಯೂ ಶಾಶ್ವತವಾಗಿಯೂ ನಿಲ್ಲ ಬಲ್ಲುವು. ಭಾಷೆ, ಶೈಲಿ, ವರ್ಣನೆ, ರಸಪುಷ್ಟಿ ಇತ್ಯಾದಿ ಅಂಶಗಳಲ್ಲಿ ಲಕ್ಷ್ಮೀಶನದು ಸಿದ್ಧ ಹಸ್ತ. ಅದ್ಭುತ ಪ್ರತಿಭಾಶಾಲಿ. ಆತನ ಕವಿತೆಯ ಪದಮೈತ್ರಿಯಲ್ಲಿ ಒಂದು ವಿಶಿಷ್ಟವಾದ ಮಾಧುರ್ಯವುಂಟು. ಆದುದರಿಂದಲೇ ಅವನನ್ನು ನಾದಲೋಲನೆಂದು ವಿಮರ್ಶಕರು ಕೊಂಡಾಡಿರುವರು. ಅವನು ತನ್ನನ್ನು ಕುರಿತು ಹೇಳಿಕೊಂಡ 'ಕರ್ಣಾಟಕವಿ ಚೂತವನ ಚೈತ್ರ' ನೆಂಬ ಬಿರುದು ತೀರಾ ಸಾರ್ಥಕ್ಯವಾಗಿದೆ ಎನ್ನಬಹುದು.

ಲಕ್ಷ್ಮೀಶ—ವಿರೂಪಾಕ್ಷರು ಸಮಕಾಲೀನರೂ ಆಗಿದ್ದರೆಂಬಂತಿದೆ. ಆದುದರಿಂದ ಅವರು ಪರಸ್ಪರ ಪ್ರಭಾವಿತರಾಗಿದ್ದಿರಬೇಕು.

ನಾಗರಸನ ಕನ್ನಡ ಭಗವದ್ಗೀತೆ (೧೬೫೦), ಕನಕದಾಸರ ಹರಿಭಕ್ತಿ ಸಾರ, ರಂಗನಾಥನ ಅನುಭವಾಮೃತ (೧೬೭೫), ಜಗನ್ನಾಥ ದಾಸರ ಹರಿಕಥಾಮೃತಸಾರ ಮೊದಲಾದುವು ಧರ್ಮದರ್ಶನಗಳ ಕ್ಷೇತ್ರದಲ್ಲಿ ಹೆಸರಾಂತ ಷಟ್ಪದಿ ಕಾವ್ಯಗಳು. ಇವುಗಳಲ್ಲಿ ಕನಕದಾಸರ ಕೃತಿಗಳು ಪಂಡಿತ ಪಾಮರರೆನ್ನದೆ, ಸ್ತ್ರೀಪುರುಷರೆನ್ನದೆ, ಜಾತಿ ವಿಜಾತಿಯೆನ್ನದೆ ಸರ್ವರಿಗೂ ಸದಾಕಾಲವೂಹೃದಯವನ್ನು ಮುಟ್ಟುವಂಥವು. ಹರಿಭಕ್ತಿ ಸಾರದ ಇದೊಂದು ಪದ್ಯ ಶರಣಾರ್ಥಿಯ ಹೃದಯದಂತಿದೆ :

ದೀನ ನಾನು ಸಮಸ್ತ ಲೋಕಕೆ
ದಾನಿ ನೀನು ವಿಚಾರಿಸಲು ಮತಿ
ಹೀನ ನಾನು ಮಹಾ ಮಹಿಮ ಕೈವಲ್ಯ ಪತಿ ನೀನು
ಏನ ಬಲ್ಲೆನು ನಾನು ನೆರೆ ಸು
ಜ್ಞಾನ ಮೂರುತಿ ನೀನು ನಿನ್ನ ಸ
ಮಾನರುಂಟೇ ದೇವ ರಕ್ಷಿಸು ನಮ್ಮನನವರತ

ರಂಗನಾಥನ ಅನುಭವಾಮೃತವೆಂಬ ಅದ್ವೈತ ಪ್ರತಿಪಾದನ ಗ್ರಂಥ ಭಾಮಿನಿ ಷಟ್ಪದಿಯಲ್ಲಿ ರಚಿತವಾಗಿದೆ. ಅದೊಂದು ಉತ್ತಮ ದರ್ಶನ ಗ್ರಂಥ. ಇದರ ಘನ ಮೌಲ್ಯವನ್ನರಿತು ಇದನ್ನು ಸಂಸ್ಕೃತಕ್ಕೆ ಅನುವಾದ ಮಾಡಿರುವರು. ಕನ್ನಡದ ಅಭಿಮಾನದ್ಯೋತಕ ಪದ್ಯವೊಂದು ಆ ಕವಿಯಿಂದ ನಮಗೆ ಬಂದಿದೆ. ಅದೊಂದು ಅಮರ ವಾಕ್ಯ :

ಸುಲಿದ ಬಾಳೆಯ ಹಣ್ಣಿನಂದದಿ
ಕಳೆದ ಸಿಗುರಿನ ಕಬ್ಬಿನಂದದಿ
ಅಳಿದ ಉಷ್ಣದ ಹಾಲಿನಂದದಿ ಸುಲಭವಾಗಿರುವ
ಲಲಿತವಹ ಕನ್ನಡದ ನುಡಿಯೊಳು
ತಿಳಿದು ತನ್ನೊಳು ತನ್ನ ಮೋಕ್ಷವ
ಗಳಿಸಿಕೊಂಡರೆ ಸಾಲದೇ ಸಂಸ್ಕೃತದೊಳಿನ್ನೇನು ?

ಸುಲಿಯದ ಬಾಳೆ ಹಣ್ಣಿನಂತಿರುವ, ಸಿಗುರು ಕಳೆಯದ ಕಬ್ಬಿನಂತಿರುವ, ಭಯಂಕರ ಸುಡುವ ಹಾಲಿನಂತಿರುವ ಸಂಸ್ಕೃತ ನಮಗೆ ಬೇಕಿಲ್ಲ, ಕನ್ನಡವೇ ನಮಗೆ ಆವಶ್ಯಕ ಮತ್ತು ಸಾಕು ಎಂಬ ಧ್ವನಿ ಈ ಮಾತಿನಲ್ಲಿ ಅಡಗಿದೆ. ಎಷ್ಟು ವಿಶ್ವಾಸ ಕನ್ನಡದ ಶಕ್ತಿಯ ಮೇಲೆ !

ಇಲ್ಲಿ ಹೇಳಿದ ಕಾವ್ಯಗಳು ಕೇವಲ ಪ್ರಾತಿನಿಧಿಕ. ಹೇಳಿದವನ್ನು ವಿವರವಾಗಿ ಹೇಳಿಲ್ಲ. ಆದರೆ ಅವುಗಳ ಮೌಲ್ಯ ಕುಂದಿಲ್ಲವೆಂಬುದು ನಿಜ. ಒಂದು ಕಾಲದಲ್ಲಿ ನಮ್ಮ ನಾಡಿನ ಜನರ ಶಿಕ್ಷಣ ಕೈಪಿಡಿಗಳಾಗಿದ್ದವು ಅವು. ಪ್ರಾಚೀನದ ವಿದ್ಯಾ ಕೇಂದ್ರಗಳು ಕೇವಲ ಮೇಲ್ತರಗತಿಯವರಿಗೆ ಮಾತ್ರ ಪ್ರವೇಶ ಕೊಡುತ್ತಿದ್ದವು. ಮುಂದೆ ಅವೂ ಕ್ಷೀಣವಾಗುತ್ತಾ ಬಂದು ಕಣ್ಮರೆಯಾದವು. ಮಧ್ಯ ಕಾಲದಲ್ಲೂ ಸಾಹಿತ್ಯ ಶ್ರೀ ರಾಜಾಶ್ರಯದಲ್ಲಿದ್ದು ರಾಜರ ಕೃಪಾಕಟಾಕ್ಷಕ್ಕೆ ಪಾತ್ರರಾದ ಕುಟುಂಬಗಳಿಗೆ ಮಾತ್ರ ಮೀಸಲಾಗಿತ್ತು. ಮುಂದೆ ವಿದೇಶೀಯರ ಆಕ್ರಮಣ ಕಾಲದಲ್ಲಿ ಸಾಹಿತ್ಯಕ್ಕೆ ಗ್ರೀಷ್ಮ ಋತು ಆಘಾತವನ್ನೆಸಗಿತು. ಜನ ಸಾಮಾನ್ಯಕ್ಕೆ ಶಿಕ್ಷಣಕ್ಕಾಗಿದ್ದ ಐಗಳ ಮಠಗಳೂ ಚೈತನ್ಯವಿಲ್ಲದಾದವು. ಮತ್ತೊಮ್ಮೆ ನಾಡು ಚೇತರಿಸುವತನಕ ನಮ್ಮ ಷಟ್ಪದಿ ಕಾವ್ಯಗಳೂ ಯಕ್ಷಗಾನ ಬಯಲಾಟಗಳೂ ತಾಳ ಮದ್ದಳೆಗಳೂ ಜನತೆಯ ಶಿಕ್ಷಣ ಕೇಂದ್ರಗಳಾದುವು. ಸಂಸ್ಕೃತಿಯ ನೆಲೆಬೀಡಾದುವು. ನಿರಕ್ಷರ ಕುಕ್ಷಿಗಳಾದರೂ

ಸುಸಂಸ್ಕೃತರಾಗುವಂತೆ ಸಹಾಯಮಾಡಿದುವು. ಕವಿರಾಜಮಾರ್ಗಕಾರ ಘೋಷಿಸಿದ 'ಕುಱಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್' ಹೌದೆಂಬಂತಾಯಿತು.

ಹಳ್ಳಿಹಳ್ಳಿಗಳಲ್ಲಿ, ಮನೆಮನೆಗಳಲ್ಲಿ ಅಚ್ಚಿನ ಪುಸ್ತಕಗಳಿಲ್ಲದ ಆ ಕತ್ತಲೆಯ ವಾತಾವರಣಕ್ಕೆ ಷಟ್ಪದಿ ಕಾವ್ಯಗಳು ಬೆಳಕನ್ನು ಬೀರಿದವು. ತಾಳೆಓಲೆಯ ಹೊತ್ತಗೆಗಳಲ್ಲಿ ಶಾರದೆ ನರ್ತಿಸುತ್ತಿದ್ದಳು. ಪರಂಪರೆಯಿಂದ ಬಂದ ದೇಶೀಯ ಗಮಕ ಕಲೆಯ ಒಂದು ಸಹಜ ಗತ್ತಿನಿಂದ ಬಲ್ಲವರು ಕುಮಾರವ್ಯಾಸ ಭಾರತ, ಪ್ರಭುಲಿಂಗಲೀಲೆ, ಚೆನ್ನಬಸವಪುರಾಣ, ಜೈಮಿನಿಭಾರತ, ಚಾಟುವಿಠಲನಾಥನ ಭಾಗವತ, ತೊರವೆ ರಾಮಾಯಣ ಮೊದಲಾದ ಕಾವ್ಯಗಳನ್ನು ಸುಶ್ರಾವ್ಯವಾಗಿ ವಾಚನ ಮಾಡುತ್ತಾ ಸಾಹಿತ್ಯಶ್ರೀಯನ್ನು ಶ್ರೀಸಾಮಾನ್ಯಕ್ಕೆ ನೀಡುತ್ತಿದ್ದರು. ಶ್ರೋತೃವೃಂದವು ಮನದಣಿಯೆ ಆ ರಸದೂಟವನ್ನುಂಡು ಅಮೂಲ್ಯವಾದ ವಿಷಯ ಸಂಗ್ರಹ ಮಾಡಿಕೊಳ್ಳುತ್ತಿದ್ದರು.

ಇಂದಿಗೂ ಅವುಗಳ ಬೆಲೆ ಇದ್ದೇ ಇದೆ. ಈ ಷಟ್ಪದಿ ಕಾವ್ಯಗಳ ನೂತನ ಆವೃತ್ತಿಗಳು, ಸಂಗ್ರಹಗಳು, ಅವುಗಳ ಕುರಿತಾದ ಅನೇಕ ವಿಮರ್ಶೆಗಳು, ಅವುಗಳ ನಿತ್ಯನೌಲ್ಯವನ್ನು ಸಾರುತ್ತವೆ; ಹೊಸಮೌಲ್ಯವನ್ನು ತರುತ್ತವೆ; ಅಂತು ಅಪಮೌಲ್ಯವಾಗಲಿಲ್ಲವೆಂಬುದು ನಿಜ. ಏಕೆ, ಹೊಸಕವಿತೆಗಳ ವಸ್ತು ಛಂದಸ್ಸಿಗೆ ಪಾಶ್ಚಾತ್ಯ ಸಾಹಿತ್ಯದ ಪ್ರಭಾವ ಸಾಕಷ್ಟು ಬೀರಿದ್ದರೂ, ಅವುಗಳ ಸರಳರಗಳೆಯ ಅಂತಸ್ಸತ್ವದಲ್ಲಿ ಷಟ್ಪದಿ ಕಾವ್ಯಗಳ ಅನೂಚಾನವಾದ ಸ್ಫೂರ್ತಿ ಇದ್ದೇ ಇರುತ್ತದೆ.

ಕನ್ನಡ ಈಗ ಸುಪುಷ್ಟವಾಗಿ ಬೆಳೆದಿದೆ ; ಅದರಿಂದ ಇಂಥ ಅಂಥ ಕೆಲಸವಾಗಲಾರದೆಂಬ ಅಧೈರ್ಯಕ್ಕೆ ಕೊಂಚವೂ ಕಾರಣವಿಲ್ಲ. ಹೊರ ಬಂದಿರುವ ಬರುತ್ತಲಿರುವ ಗ್ರಂಥರಾಶಿಯನ್ನು ಪರಾಂಬರಿಸಿದರೆ ಯಾವ ಕನ್ನಡಿಗನ ಎದೆ ತಾನೆ ಸಂತಸಾವೇಶದಿಂದ ಉಬ್ಬುವುದಿಲ್ಲ ? ವಿಜ್ಞಾನಾದಿ ಶಾಸ್ತ್ರ ಗ್ರಂಥಗಳನ್ನು ಕನ್ನಡಕ್ಕಿಳಿಸುವುದು ಸಾಧ್ಯವೆ ? ಎಂದು ಹಲವರು ಶಂಕಿಸಬಹುದು. ಅವರಿಗೆ ನನ್ನದೊಂದು ಬಿನ್ನಪ. ಶುಚಿ ಸಂಕಲ್ಪದಿಂದ ಕಷ್ಟಪಟ್ಟು ಕೆಲಸಮಾಡಿದರೆ ಅದು ಸಾಧ್ಯ ; ಕನ್ನಡ ನುಡಿಯಲ್ಲಿ ತ್ರಾಣವಿದೆ ; ವೈವಿಧ್ಯವಿದೆ, ಬಳುಕುವ, ಹೊಂದಿಕೊಳ್ಳುವ ಗುಣವಿದೆ. ಅದನ್ನು ನಂಬಿ ರೂಢಿಸಿಕೊಳ್ಳುವ ಮಂದಿ ಬೇಕು.

ಎಸ್. ವಿ. ರಂಗಣ್ಣ

ಎಸ್. ಬಸವಾರಾಧ್ಯ

ಸಾಂಗತ್ಯ

ಕನ್ನಡ ಸಾಹಿತ್ಯ ಚರಿತ್ರೆಯನ್ನು ಅವಲೋಕಿಸಿದ ವಿದ್ವಾಂಸರಿಗೆ ಸಾಂಗತ್ಯ ಗ್ರಂಥಗಳು ಗಮನಾರ್ಹ ಸಂಖ್ಯೆಯಲ್ಲಿರುವುದು ಕಂಡುಬರುತ್ತದೆ. ಸಾಂಗತ್ಯ ಕೃತಿಗಳು ಇಷ್ಟೊಂದು ಗಮನಾರ್ಹ ಸಂಖ್ಯೆಯಲ್ಲಿದ್ದರೂ ಪ್ರಾಚೀನ ಛಂದಃಕಾರರು ಇದರ ಲಕ್ಷಣವನ್ನು ತಿಳಿಸಿಲ್ಲ. ಅಷ್ಟೇ ಏಕೆ ಇದರ ಹೆಸರನ್ನೂ ಉಲ್ಲೇಖಿಸಿಲ್ಲ. ಪ್ರಥಮ ಲಾಕ್ಷಣಿಕನಾದ ನಾಗವರ್ಮನ ಛಂದೋಂಬುಧಿಯಲ್ಲೂ, ತರುವಾಯದ ಜಯಕೀರ್ತಿಯ ಛಂದೋನು ಶಾಸನದಲ್ಲೂ, ಈಶ್ವರ ಕವಿಯ ಕವಿಜಿಹ್ವಾಬಂಧನದಲ್ಲೂ, ನಂದಿಯ ನಂದಿ ಛಂದಸ್ಸಿನಲ್ಲೂ ಸಾಂಗತ್ಯದ ಪ್ರಸ್ತಾಪವಿರುವುದು ಕಂಡುಬರುವುದಿಲ್ಲ. ಸುಮಾರು ಐದಾರು ಶತಮಾನಗಳ ಹಿಂದಿನಿಂದಲೂ ಪ್ರಚಲಿತವಾಗಿರುವ ಸಾಂಗತ್ಯದ ಲಕ್ಷಣವನ್ನು ಲಾಕ್ಷಣಿಕರು ವಿವೇಚಿಸದಿರುವುದರ ಕಾರಣವನ್ನು ವಿದ್ವಾಂಸರು ಸಂಶೋಧಿಸಬೇಕಾಗಿದೆ.

"ಗೀತಿಕೆಯ ಎರಡು ಪಾದಗಳ ಅಥವಾ ಪಿರಿಯಕ್ಕರದ ಎರಡು ಪಾದಗಳ ರೂಪಾಂತರವೇ ಸಾಂಗತ್ಯವಾಗಿ ತೋರುವುದು"[1] ಎಂದು ಕೆಲವು ವಿದ್ವಾಂಸರೂ, "ಸಾಂಗತ್ಯವು ತ್ರಿಪದಿಯಿಂದ ಹೊರಟ ಮಟ್ಟೆಂದೂ, ತ್ರಿಪದಿಯ ಎರಡನೆಯ ಚರಣವನ್ನು ಆವೃತ್ತಿಮಾಡಿ ಹಾಡುವ ರೂಢಿಯು ಸಾಂಗತ್ಯದ ರೂಪ ನಿರ್ಮಾಣಕ್ಕೆ ದಾರಿಯನ್ನು ಮಾಡಿತು"[2] ಎಂದು ಮತ್ತೆ ಕೆಲವು ವಿದ್ವಾಂಸರೂ ಅಭಿಪ್ರಾಯ ಪಟ್ಟಿದ್ದಾರೆ. ಈ ವಿದ್ವಾಂಸರ ಅಭಿಪ್ರಾಯಗಳನ್ನು ಪರಿಶೀಲಿಸಿದರೆ ಸಾಂಗತ್ಯಕ್ಕೆ ಪ್ರತ್ಯೇಕ ಅಸ್ತಿತ್ವವಿರಲಿಲ್ಲವೆಂದೂ, ಮತ್ತಾವುದೋ ಪ್ರಾಚೀನ ಮಟ್ಟನಿಂದ ಇದು ಆವಿರ್ಭವಿಸಿತೆಂದೂ ವ್ಯಕ್ತವಾಗುತ್ತದೆ. ಸಾಂಗತ್ಯಕ್ಕೆ ಪ್ರಾಚೀನ ಶಾಸನ ಕಾವ್ಯಾದಿಗಳಲ್ಲಿ ಉದಾಹರಣೆಗಳು ಸಿಕ್ಕದಿರುವುದರಿಂದಲೂ ಲಾಕ್ಷಣಿಕರಾರೂ ಇದರ ಲಕ್ಷಣವನ್ನು ಹೇಳದಿರುವುದರಿಂದಲೂ ಇದಕ್ಕೆ ಪ್ರತ್ಯೇಕ ಅಸ್ತಿತ್ವವೇ ಇಲ್ಲ ಎಂಬ ವಾದ ಸಾಧುವಾಗಲಾರದು. ತ್ರಿಪದಿ, ಷಟ್ಪದಿ, ರಗಳೆ, ಅಕ್ಕರ ಮುಂತಾದ ದೇಶೀಯ ಮಟ್ಟುಗಳಂತೆ ಸಾಂಗತ್ಯವೂ ಒಂದು ಸ್ವತಂತ್ರ ಮಟ್ಟು ಆಗಿರಲಿಕ್ಕೆ ಸಾಧ್ಯ. ಇದು ಗೀತಿಕೆಯ

---

[1] ಕನ್ನಡ ಕೈಪಿಡಿ.

[2] ಕನ್ನಡ ಛಂದೋವಿಕಾಸ, ಪುಟ ೨೦೮.

ಎರಡು ಪಾದಗಳ ಅಥವಾ ಪಿರಿಯಕ್ಕರದ ರೂಪಾಂತರವಾಗಲಿ, ತ್ರಿಪದಿಯಿಂದ ಹೊರಟ ಮಟ್ಟಾಗಲಿ ಆಗಿರಬೇಕೆಂಬುದಕ್ಕೆ ಆಧಾರಗಳು ಕಂಡುಬಂದಿಲ್ಲ. ತ್ರಿಪದಿಯ ಎರಡನೆಯ ಪಾದವನ್ನು ಅರ್ಥಸ್ವಾರಸ್ಯಕ್ಕಾಗಿ ಪುನರುಚ್ಚರಿಸಿದ ಮಾತ್ರಕ್ಕೇ ಅದು ನಾಲ್ಕು ಪಾದಗಳ ಸಾಂಗತ್ಯವಾಗಿರಬೇಕಾಗಿಲ್ಲವಷ್ಟೆ. ಒಟ್ಟಿನಲ್ಲಿ ಇದರ ಮಥಿತಾರ್ಥವಿಷ್ಟೆ. ಸಾಂಗತ್ಯ ಶುದ್ಧ ದೇಶೀಯ ಮಟ್ಟು. ಇತರ ದೇಶೀಯ ಮಟ್ಟುಗಳಂತೆಯೇ ಇದಕ್ಕೆ ಪ್ರತ್ಯೇಕ ಅಸ್ತಿತ್ವವುಂಟು. ಅಂಶಗಣ ಘಟಿತವಾದ ಸಾಂಗತ್ಯಕ್ಕಿಂತಲೂ ಪ್ರಾಚೀನವಾದ ತ್ರಿಪದಿ ಕಾಲಕ್ರಮದಲ್ಲಿ ಮಾತ್ರಾಗಣಕ್ಕೆ ತಿರುಗಿದುದೂ, ತ್ರಿಪದಿಗಿಂತ ಈಚಿನದಾದ ಸಾಂಗತ್ಯ ಇಂದಿಗೂ ಅಂಶಗಣ ಘಟಿತವಾಗಿರುವುದೂ ಸಾಂಗತ್ಯದ ಪ್ರತ್ಯೇಕ ಅಸ್ತಿತ್ವಕ್ಕೆ ಜೀವಂತ ನಿದರ್ಶನವಾಗಿದೆ. ಅನುಮಾನವನ್ನು ಆಧರಿಸಿ ಸಾಂಗತ್ಯದ ಚರಿತ್ರೆಯನ್ನು ಸ್ಥೂಲವಾಗಿ ಸಮೀಕ್ಷಿಸಲಾಗಿದೆ.

ಸಾಂಗತ್ಯವು ಅರ್ಧಸಮಪಾದ ವೃತ್ತ. ಇದರ ಒಂದು ಮತ್ತು ಮೂರನೆಯ ಪಾದಗಳು ಒಂದು ಸಮನಾಗಿಯೂ, ಎರಡು ಮತ್ತು ನಾಲ್ಕನೆಯ ಪಾದಗಳು ಮತ್ತೊಂದು ಸಮನಾಗಿಯೂ ಇರುತ್ತವೆ. ದ್ರಾವಿಡ ಗಣವಿಭಾಗದ ಪ್ರಕಾರ ಸಾಂಗತ್ಯ ಅಂಶಗಣ ಘಟಿತವಾದುದು. ಅಂದಿನಿಂದ ಇಂದಿನವರೆಗೂ ಅದು ಅಂಶಗಣ ಘಟಿತವಾಗಿಯೇ ಉಳಿದುಕೊಂಡು ಬಂದಿದೆ. ಸಾಂಗತ್ಯದಲ್ಲಿ ಒಟ್ಟು ಹದಿನಾಲ್ಕು ಗಣಗಳಿರುತ್ತವೆ. ಒಂದು ಮತ್ತು ಮೂರನೆಯ ಪಾದಗಳಲ್ಲಿ ನಾಲ್ಕು ನಾಲ್ಕು ವಿಷ್ಣುಗಣಗಳೂ, ಎರಡು ಮತ್ತು ನಾಲ್ಕನೆಯ ಪಾದಗಳಲ್ಲಿ ಎರಡೆರಡು ವಿಷ್ಣುಗಣ ಮತ್ತು ಕೊನೆಯಲ್ಲಿ ಒಂದೊಂದು ಬ್ರಹ್ಮಗಣವೂ ಇರುತ್ತದೆ. ಉದಾಹರಣೆ :

ವಿ ವಿ ವಿ ವಿ
ಪರಮ ಪ । ರಂಜ್ಯೋತಿ । ಕೋಟಿ ಚಂ । ದ್ರಾದಿತ್ಯ ।
ವಿ ವಿ ಬ್ರ
ಕಿರಣ ಸು । ಜ್ಞಾನ ಪ್ರ । ಕಾಶ ।
ವಿ ವಿ ವಿ ವಿ
ಸುರರ ಮ । ಕುಟಮಣಿ । ರಂಜಿತ । ಚರಣಾಬ್ಜ
ವಿ ವಿ ಬ್ರ
ಶರಣಾಗು । ಪ್ರಥಮ ಜಿ । ನೇಶ ।[3]

ಈ ಮೇಲೆ ವಿವರಿಸಿರುವುದು ಸಾಂಗತ್ಯದ ನಿರ್ದಿಷ್ಟವಾದ ಲಕ್ಷಣ. ಆದರೆ ಅಂಶಗಣ ಸಂಘಟಿತವಾದ ಹಾಡುಗಬ್ಬದ ಜಾತಿಗೆ ಸೇರಿದ ಈ ಸಾಂಗತ್ಯದ ಗಣನಿಯಮದಲ್ಲಿ ಸ್ವತಂತ್ರ ಮನೋಭಾವದ ಕೆಲವು ಕವಿಗಳು ಕೆಲವು ಅಪವಾದ (exception) ಗಳನ್ನು ಮಾಡಿಕೊಂಡಿದ್ದಾರೆ. ಅರ್ಥದ ಸ್ವಾರಸ್ಯಕ್ಕಾಗಿ ಹಾಡಿನ ಸೌಲಭ್ಯಕ್ಕಾಗಿ

---

3 ಭರತೇಶ ವೈಭವ, ಆ ೧, ಪ ೧.

ವಿಷ್ಣುಗಣದ ಸ್ಥಾನದಲ್ಲಿ ಬ್ರಹ್ಮಗಣವನ್ನೂ ರುದ್ರಗಣವನ್ನೂ, ಬ್ರಹ್ಮಗಣದ ಸ್ಥಾನದಲ್ಲಿ ವಿಷ್ಣುಗಣವನ್ನೂ ಬಳಸಿದ್ದಾರೆ. ಉದಾಹರಣೆ:

(i)
ವಿ ಬ್ರ ವಿ ವಿ
ಸುರತಾಳ । ಗಾಸು । ದ್ದಿಯ ನೇಮಿ । ಖಾನನು ।
ವಿ ವಿ ಬ್ರ
ಭರದಿಂದ । ಪೋಗಿ ಬಿ । ನ್ನವಿಸೆ ।
ಬ್ರ ವಿ ವಿ ವಿ
ತೆರಳೆ । ನ್ನೇಕೆ ಸಂ । ದೇಹ ಕು । ಮ್ಮಟಕೆಂ
ವಿ ವಿ ಬ್ರ
ದೊರೆದನ । ವನಿಗಸು । ರೇಂದ್ರ.[4]

(ಇದರಲ್ಲಿ ಎರಡು ಮತ್ತು ಎಂಟನೆಯ ಗಣಗಳ ಸ್ಥಾನದಲ್ಲಿ ವಿಷ್ಣುಗಣಕ್ಕೆ ಬದಲಾಗಿ ಬ್ರಹ್ಮಗಣಗಳು ಬಂದಿವೆ).

(ii)
ವಿ ವಿ ರು ರು
ಗರುಡನು । ಉರುಗಾಗೆ । ಮೊರೆದು ಯೆರ । ಗುವ ತೆರದಿ ।
ವಿ ವಿ ಬ್ರ
ಗಿರಿಗೆ ಬಂ । ದಡರ್ವಂತೆ । ಸಿಡಿಲು
ವಿ ವಿ ವಿ ವಿ
ಯರಡು ಭಾ । ಗದ ಮೇಲೆ । ಅನುಜರೀ । ರ್ವರು ಯೇರೆ ।
ರು ರು ಬ್ರ
ಕೊರೆದು ಕೆಡೆ । ವುತ ಕಣೆಕೆ । ತೆರದಿ ।[5]

(ಇದರಲ್ಲಿ ಮೂರು, ನಾಲ್ಕು, ಹನ್ನೆರಡು ಮತ್ತು ಹದಿಮೂರನೆಯ ಗಣಗಳ ಸ್ಥಾನದಲ್ಲಿ ವಿಷ್ಣುಗಣಕ್ಕೆ ಬದಲಾಗಿ ರುದ್ರಗಣಗಳು ಬಂದಿವೆ).

(iii)
ವಿ ವಿ ವಿ ವಿ
ಸೊಬಗಿನ । ಸೋನೆಯ । ನೊಲಿದಾ । ಲಿಸಿ ಕೇಳೆ ।
ವಿ ವಿ ವಿ ವಿ
ಸೊಬಗಿನೀ । ಸೋನೆಯೆ । ನಿಪಂ ಪ್ರಿಯೆ ।
ವಿ ವಿ ವಿ ವಿ
ಕಬರಿಯಿಂ । ದೆಸೆವ ಕಂ । ಜರಿಮಾಳ । ವನವರಿ ।
ವಿ ವಿ ವಿ
ಸಬಲೆಸೀ । ನೆಂದ ವಿ । ಕ್ರಮನಂದು[6] ।

---

[4] ಕುಮಾರರಾಮನ ಸಾಂಗತ್ಯಗಳು, ಪುಟ ೩೫೫

[5] ಕುಮಾರ ರಾಮನ ಸಾಂಗತ್ಯಗಳು: ಪುಟ ೩೫೮

[6] ಸೊಬಗಿನ ಸೋನೆ, ೧-೨೨

(ಇದರಲ್ಲಿ ಏಳು ಮತ್ತು ಹದಿನಾಲ್ಕನೆಯ ಗಣಗಳ ಸ್ಥಾನದಲ್ಲಿ ಬ್ರಹ್ಮಗಣಕ್ಕೆ ಪರ್ಯಾಯವಾಗಿ ವಿಷ್ಣುಗಣಗಳು ಬಂದಿವೆ).

ಪ್ರಾಸ ಕನ್ನಡ ಕಾವ್ಯಗಳಲ್ಲಿರಲೇಬೇಕಾದ ಒಂದು ಅಪರಿಹಾರ್ಯವಾದ ಅಂಶ. ಸಾಂಗತ್ಯ ಕೃತಿಗಳಲ್ಲೂ ಈ ನಿಯಮವನ್ನು ತಪ್ಪದೆ ಅನುಸರಿಸಿಕೊಂಡು ಬರಲಾಗಿದೆ. ಆದರೆ ಕೆಲವು ಸಾಂಗತ್ಯ ಗ್ರಂಥಗಳಲ್ಲಿ ಅಲ್ಲೊಮ್ಮೆ ಇಲ್ಲೊಮ್ಮೆ ಪ್ರಾಸೋಲ್ಲಂಘನೆಯಾಗಿರುವುದು ಕಂಡುಬರುತ್ತದೆ. ಉದಾಹರಣೆ :

ಸಾರಿ ಹೇಳುವ ಹೆಗ್ಗಾಳೆಗೆ ತುರುಕರ
ಪಾಳೆಯ ಗದಗಾಪಿಸಿತು
ದಾಳಿಕಾರನು ರಾಮ ಧೀರ ಬರುತಹನೆಂದು
ಜಾಣರಾದವರೆಲ್ಲ ತೊಲಗಿ[7]

ಇದೇ ರೀತಿ ಪ್ರಾಸೋಲ್ಲಂಘನೆಯಾಗಿರುವುದನ್ನು ಹೆಳವನಕಟ್ಟೆ ಗಿರಿಯಮ್ಮನ ಉದ್ದಾಲಿಕನ ಕಥೆಯಲ್ಲಿ ಪ್ರಧಾನವಾಗಿ ಕಾಣಬಹುದು. ಮಹಲಿಂಗಸ್ವಾಮಿಯ ಕುಮಾರರಾಮನ ಸಾಂಗತ್ಯದಲ್ಲಿ ಪ್ರಾಸವನ್ನು ನಿಯತವಾಗಿ ಪಾಲಿಸದಿರುವುದಕ್ಕೆ ಹಲವಾರು ಪದ್ಯಗಳು ಕಂಡುಬರುತ್ತವೆ. ಇನ್ನೂ ಕೆಲವರಲ್ಲಿ ಪ್ರಾಸೋಲ್ಲಂಘನೆಗೆ ಉದಾಹರಣೆಗಳು ಸಿಕ್ಕುತ್ತವೆ.

ಕನ್ನಡ ಸಾಹಿತ್ಯದ ಸಾಂಗತ್ಯ ಚರಿತ್ರೆಯಲ್ಲಿ ಬಸವೇಶ್ವರ ವಿರಚಿತ ಕಾಲಜ್ಞಾನ ವಚನವೇ ಪ್ರಥಮ ಸಾಂಗತ್ಯ ಗ್ರಂಥವೆಂದು ಡಾ. ಕರ್ಕಿ ಅವರು ಕವಿಚರಿತ್ರೆಯಿಂದ ಒಂದು ಪದ್ಯವನ್ನು ಉದಾಹರಿಸಿದ್ದಾರೆ[8]. ಆ ಪದ್ಯ ಹೀಗಿದೆ :

ಮಳೆಯಿಲ್ಲ ಬೆಳೆಯಿಲ್ಲ ಹೊಳೆಯಿಲ್ಲ ಕೆರೆಯಿಲ್ಲ
ನೆಳಲಿಲ್ಲ ಉದಕಮುನ್ನಿಲ್ಲ
ಮೊಳೆಯಿಲ್ಲ ಸೂರ್ಯನ ಕಳೆಯಿಲ್ಲ ಗೆಲವಿಲ್ಲ
ಉಳಿವಿಲ್ಲ ಆ ಪಾಪಿಗಳಿಗೆ

ಈ ಪದ್ಯದಲ್ಲಿ ಪ್ರಧಾನವಾಗಿ ಎದ್ದು ಕಾಣುವುದು ಅಂಶಗಣಗಳಿಗೆ ಬದಲಾಗಿ ಮಾತ್ರಾಗಣ ವಿನ್ಯಾಸ. ಕಾಲಜ್ಞಾನಗಳನ್ನು ಬರೆದವರು ಬಹುಶಃ ತಾವು ಕಂಡು ಕೇಳಿದುದನ್ನು ಬರೆದಿರಬಹುದು. ಆದುದರಿಂದ ಪ್ರಥಮ ಸಾಂಗತ್ಯ ಕೃತಿಯೆಂದು ಭಾವಿಸಲಾಗಿರುವ ಈ ಕಾಲಜ್ಞಾನ ವಚನ ಬಸವೇಶ್ವರನ ಹೆಸರಿನಲ್ಲಿ ಆರೋಪಿಸಲ್ಪಟ್ಟಿರುವ ಪ್ರಕ್ಷಿಪ್ತ ಕೃತಿಯಾಗಿರಬಹುದು. ಇದಾದಮೇಲೆ ಕಂಡುಬರುವ ಸಾಂಗತ್ಯಕಾರ, ಕಾಲ ದೃಷ್ಟಿಯಿಂದ ಸಂದಿಗ್ಧತೆಗೊಳಗಾಗಿರುವ ಶಿಶುಮಾಯಣ. ಈತನನ್ನು ಕವಿಚರಿತೆ

---

[7] ಕುಮಾರ ರಾಮನ ಸಾಂಗತ್ಯಗಳು, ಪುಟ ೩೫೬

[8] ಕನ್ನಡ ಛಂದೋವಿಕಾಸ, ಪುಟ ೨೧೯

ಕಾರರು ಪ್ರಥಮ ಸಾಂಗತ್ಯಕಾರನೆಂದು ಹೇಳಿದ್ದಾರೆ. ಆತನ ಕಾಲವನ್ನು ಕ್ರಿ.ಶ. ೧೨೩೨ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ. ಆತನ ಕೃತಿಗಳು ತ್ರಿಪುರದಹನ ಸಾಂಗತ್ಯ ಮತ್ತು ಅಂಜನಾ ಚರಿತ್ರೆ. ಶಿಶುಮಾಯಣನ ಕಾಲದ ವಿಚಾರದಲ್ಲಿ ವಿದ್ವಾಂಸರಲ್ಲಿ ತೀವ್ರ ಭಿನ್ನಾಭಿಪ್ರಾಯಗಳಿವೆ. ತ್ರಿಪುರದಹನ ಸಾಂಗತ್ಯದ ಕಾಲಸೂಚಿ ಪದ್ಯವೊಂದರ ಆಧಾರದಿಂದ ಆತನ ಕಾಲವನ್ನು ಹದಿನೈದನೆಯ ಶತಮಾನವೆಂದು ನಿರ್ಧರಿಸಲಾಗಿದೆ.[9] ಇದರಂತೆ ಶಿಶುಮಾಯಣನು ಪ್ರಥಮ ಸಾಂಗತ್ಯಕಾರನಾಗಲಿಲ್ಲ. ಇವನಾದ ಮೇಲೆ ಕಾಣಿಸಿಕೊಳ್ಳುವ ದೇಪರಾಜನೇ ಪ್ರಕೃತ ಪ್ರಥಮ ಸಾಂಗತ್ಯಕಾರನೆಂದು ಒಪ್ಪಿಕೊಳ್ಳ ಬೇಕಾಗುತ್ತದೆ. ಈತನ ಕಾಲ ಕ್ರಿ. ಶ. ಸುಮಾರು ೧೪೧೦. ಈತನ ಕೃತಿ ಸೊಬಗಿನ ಸೋನೆ. ದೇಪರಾಜನ ಸೊಬಗಿನ ಸೋನೆಯಲ್ಲಿನ ಬ್ರಹ್ಮಗಣಗಳಿಗೆ ಪರ್ಯಾಯವಾಗಿ ವಿಷ್ಣುಗಣಗಳನ್ನು ಬಳಸಿರುವುದು ಕಂಡುಬರುತ್ತದೆ. ಮತ್ತೆ ಕೆಲವರು ಇದನ್ನು ಬ್ರಹ್ಮಗಣ ಮತ್ತು ಒಂದು ಅಂಶ ಎಂದು ಅಭಿಪ್ರಾಯಪಡುತ್ತಾರೆ. ಬಹುಶಃ ಸಾಂಗತ್ಯ ಛಂದೋಬಂಧದ ಪ್ರಾಯೋಗಿಕ ಕಾಲ ಆದಾಗಿರಬಹುದೆಂದು ತೋರುತ್ತದೆ. ಉದಾಹರಣೆಗಾಗಿ ಈ ಕೆಳಗಿನ ಪದ್ಯವನ್ನು ನೋಡಬಹುದು :

ಕಂಡರು| ಖಚರ ಕಂ| ಜರೆಯರು| ಸಾಂದರ
ಮಂಡಲ| ಪತಿ ತಮ್ಮ| ಯ್ಯನಾ
ದಿಂಡುಗೆ| ಡದುಹೊರ| ಳಿದರಡಿ| ಯೊಳು ಬಿದ್ದು
ದಂಡಿಯಿ| ನ್ನೆಂತೊ ಮ| ಕ್ಕಳನೇಹಾ

ನಿಯತವಾಗಿ ಬ್ರಹ್ಮಗಣದ ಸ್ಥಾನದಲ್ಲಿ ವಿಷ್ಣುಗಣವನ್ನು ಅಥವಾ ಬ್ರಹ್ಮಗಣ ಮತ್ತು ಒಂದು ಅಂಶವನ್ನು ಬಳಸಿರುವ ದೇಪರಾಜನ ಕೃತಿಗೆ 'ಸೊಬಗಿನ ಸೋನೆಯ ಮಟ್ಟು' ಎಂಬ ಹೆಸರೇ ಪ್ರಚಲಿತವಾಗಿದೆ. ಈ ಶತಮಾನಕ್ಕೆ ಸೇರುವ ಮತ್ತೊಬ್ಬ ಪ್ರಮುಖ ಸಾಂಗತ್ಯಕಾರ ಶಿಶುಮಾಯಣ. ಗುಣದ ದೃಷ್ಟಿಯಿಂದಲೂ ಗಾತ್ರದ ದೃಷ್ಟಿಯಿಂದಲೂ ಈತನ ಕೃತಿಗಳು ಮಿಗಿಲಾಗಿವೆ. ಅಂಜನಾಚರಿತೆ ಸಾಹಿತ್ಯ ಮತ್ತು ಐತಿಹಾಸಿಕ ದೃಷ್ಟಿಯಿಂದ ಉಲ್ಲೇಖಾರ್ಹವಾಗಿದೆ.

ಸಾಂಗತ್ಯದ ಚರಿತ್ರೆಯಲ್ಲಿ ಹದಿನಾರನೆಯ ಶತಮಾನವು ಸುವರ್ಣಯುಗ. ಈ ಶತಮಾನದಲ್ಲಿ ಸುಮಾರು ಇಪ್ಪತ್ತೆಂಟು ಸಾಂಗತ್ಯ ಕೃತಿಗಳು ಸೃಷ್ಟಿಯಾಗಿವೆ. ಮುಂದಿನ ಶತಮಾನಗಳಲ್ಲಿ ರಚಿತವಾದ ಸಾಂಗತ್ಯ ಗ್ರಂಥಗಳಿಗಿಂತ ಸಂಖ್ಯೆಯಲ್ಲಿ ಇದು ಕಡಮೆ ಎಂದು ಕಂಡುಬಂದರೂ ಗುಣ ಮತ್ತು ಮೌಲ್ಯದ ದೃಷ್ಟಿಯಿಂದ ವೈಶಿಷ್ಟ್ಯ ಪೂರ್ಣವಾಗಿವೆ. ಈ ಶತಮಾನದ ಮಂಗರಸನ ನೇಮಿಜಿನೇಶನ ಸಂಗತಿ, ಪ್ರಭಂಜನ ಚರಿತೆ, ಶ್ರೀಪಾಲಚರಿತೆಗಳೂ, ನಂಜುಂಡನ ಕುಮಾರರಾಮಚರಿತೆಯೂ,

---

9. ತ್ರಿಪುರದಹನ ಸಾಂಗತ್ಯ, ಪೀಠಿಕೆ vii

ಕನಕದಾಸನ ಮೋಹನ ತರಂಗಿಣಿಯೂ, ರತ್ನಾಕರವರ್ಣಿಯ ಭರತೇಶ ವೈಭವವೂ ಅತ್ಯಂತ ಪ್ರಸಿದ್ಧವಾದ ಕೃತಿಗಳು.

ಈ ಶತಮಾನದಲ್ಲಿಯೇ ರಚಿತವಾದ ಕಿಕ್ಕೇರಿಯಾರಾಧ್ಯ ನಂಜುಂಡ ವಿರಚಿತ ಭೈರವೇಶ್ವರ ಕಾವ್ಯ ಛಂದೋದೃಷ್ಟಿಯಿಂದ ವಿದ್ವಾಂಸರ ಗಮನವನ್ನು ಸೆಳೆದಿದೆ. ಈ ಕಾವ್ಯದ ಸಂಪಾದಕರು ಅದನ್ನು ಷಟ್ಪದಿಯೆಂದು ನಿರ್ಧರಿಸಿ ಪ್ರತಿ ಪದ್ಯವನ್ನೂ ಆರು ಪಾದಗಳಾಗಿ ವಿಂಗಡಿಸಿ ಅಚ್ಚುಮಾಡಿದ್ದಾರೆ. ಇವರ ಅಭಿಪ್ರಾಯದಂತೆ ಪ್ರತಿ ಪದ್ಯದ ಒಂದು ಎರಡು, ನಾಲ್ಕು ಮತ್ತು ಐದನೆಯ ಪಾದಗಳು ಶರಷಟ್ಪದಿಯಲ್ಲೂ, ಮೂರು ಮತ್ತು ಆರನೆಯ ಪಾದಗಳು ಕುಸುಮ ಷಟ್ಪದಿಯಲ್ಲೂ ರಚಿತವಾಗಿವೆ. ಕನ್ನಡ ಸಾಹಿತ್ಯ ಚರಿತ್ರೆಯನ್ನು ಪರಿಶೀಲಿಸಿದರೆ ಒಂದು ಪದ್ಯದ ಬೇರೆ ಬೇರೆ ಪಾದಗಳು ಎರಡು ಪ್ರಕಾರದಲ್ಲಿ (ಅಂದರೆ ಶರ ಮತ್ತು ಕುಸುಮಷಟ್ಪದಿ) ರಚಿತವಾಗಿರುವುದು ಕಂಡುಬರುವುದಿಲ್ಲ. ವಸ್ತುತ: ಈ ಕಾವ್ಯ ರಚಿತವಾಗಿರುವುದು ಸಾಂಗತ್ಯದಲ್ಲಿ ಷಟ್ಪದಿಯಲ್ಲಲ್ಲ. ಈ ಭ್ರಾಂತಿಗೆ ಕಾರಣ ಕವಿ ಪ್ರತಿಪಾದದಲ್ಲೂ ಒಳಪ್ರಾಸವನ್ನು ಅನುಸರಿಸಿರುವುದರಿಂದ. ಈ ವಿಧದ ಒಳಪ್ರಾಸವನ್ನು ಒಳ ಕೊಂಡಿರುವ ಕೃತಿಗಳು ಇನ್ನೂ ಕೆಲವು ಕಂಡುಬರುತ್ತವೆ.

ಹದಿನೇಳನೆಯ ಶತಮಾನದಲ್ಲಿ ಸುಮಾರು ಅರವತ್ತು ಸಾಂಗತ್ಯ ಕೃತಿಗಳು ಕಂಡುಬರುತ್ತವೆ. ಸಂಖ್ಯೆಯ ದೃಷ್ಟಿಯಿಂದ ಈ ಶತಮಾನದ ಗ್ರಂಥಗಳು ವಿಪುಲ ವಾಗಿದ್ದರೂ ಕಾವ್ಯದ ದೃಷ್ಟಿಯಿಂದಲೂ ಗುಣದ ದೃಷ್ಟಿಯಿಂದಲೂ ಅಷ್ಟೇನೂ ಹೇಳಿ ಕೊಳ್ಳುವಂತಹ ಕೃತಿಗಳು ಹುಟ್ಟಲಿಲ್ಲ. ಆದರೆ ಇದಕ್ಕೆ ಅಪವಾದವೋ ಎಂಬಂತೆ ಗೋವಿಂದ ವೈದ್ಯನ ಕಂಠೀರವ ನರಸರಾಜ ವಿಜಯ ಈ ಶತಮಾನದಲ್ಲಿಯೇ ಮೈತಳೆದ ಕೃತಿ. ವೀರರಸ ಪ್ರತಿಪಾದನೆಗೆ ಸಾಂಗತ್ಯವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳು ವುದು ಸಾಧ್ಯ ಎಂಬುದನ್ನು ಈತನ ಕೃತಿ ಸಾರಿ ತೋರುತ್ತದೆ. ಈ ಶತಮಾನದ ಮತ್ತೊಂದು ವೈಶಿಷ್ಟ್ಯವೆಂದರೆ ಸ್ತ್ರೀಯರು ಸಾಂಗತ್ಯ ರಚನೆಗೆ ಕೈ ಹಾಕಿದುದು. ಅವರಲ್ಲಿ ಚಿಕ್ಕದೇವರಾಜನ ಆಸ್ಥಾನದಲ್ಲಿದ್ದ ಸಂಚಿಯ ಹೊನ್ನಮ್ಮನ 'ಹದಿಬದೆಯ ಧರ್ಮ' ನೀತಿ ಪ್ರಧಾನವಾದ ಒಂದು ಉತ್ಕೃಷ್ಟ ಕೃತಿ. ಮತ್ತೊಬ್ಬ ಕವಯಿತ್ರಿ ಶೃಂಗಾರಮ್ಮ. ಈಕೆಯ ಕೃತಿ ಪದ್ಮಿನೀಪರಿಣಯ.

ಹದಿನೆಂಟು ಮತ್ತು ಹತ್ತೊಂಬತ್ತನೆಯ ಶತಮಾನಗಳು ಸಾಂಗತ್ಯದ ಬೆಳವಣಿಗೆ ಯಲ್ಲಿ ಇಳಿಗಾಲವೋ ಎಂಬಂತೆ ಕಾಣುತ್ತದೆ. ಹದಿನೆಂಟನೆಯ ಶತಮಾನದಲ್ಲಿ ಸುಮಾರು ಹದಿನೇಳು ಗ್ರಂಥಗಳೂ ಹತ್ತೊಂಬತ್ತನೆಯ ಶತಮಾನದಲ್ಲಿ ಕೇವಲ ಎಂಟು ಗ್ರಂಥಗಳೂ ರಚಿಸಲ್ಪಟ್ಟಿವೆ. ಹದಿನೆಂಟನೆಯ ಶತಮಾನದ ಪ್ರಮುಖ ಸಾಂಗತ್ಯ ಕಾರ್ತಿಯರಲ್ಲಿ ಹೆಳವನಕಟ್ಟೆಗಿರಿಯಮ್ಮ ಸುಪ್ರಸಿದ್ಧಳು. ಈಕೆಯ ಚಂದ್ರಹಾಸನ ಕಥೆ, ಉದ್ದಾಲೀಕನ ಕಥೆ, ಭಕ್ತಿ ಮತ್ತು ನೀತಿಯನ್ನು ಪ್ರತಿಪಾದಿಸುತ್ತವೆ. ಈ ಶತಮಾನದ ಮತ್ತೊಬ್ಬ ಕವಯಿತ್ರಿ ಚೆಲುವಾಂಬೆ. ಈಕೆಯ ಕೃತಿ ವರನಂದೀ ಕಲ್ಯಾಣ.

ಇಪ್ಪತ್ತನೆಯ ಶತಮಾನದಲ್ಲೂ ಸಾಂಗತ್ಯದ ರಚನೆ ಅವ್ಯಾಹತವಾಗಿ ನಡೆದು ಕೊಂಡು ಬಂದಿದೆ. ಶ್ರೀಯುತರಾದ ಬಿ. ಎಂ. ಶ್ರೀಕಂಠಯ್ಯ, ಬೇಂದ್ರೆ, ಪು. ತಿ. ನರಸಿಂಹಾಚಾರ್, ಎಸ್. ವಿ. ಪರಮೇಶ್ವರ ಭಟ್ಟ ಇವರು ಸಾಂಗತ್ಯವನ್ನು ಬಳಸಿದ್ದಾರೆ. ಕೆಲವರು ಇಡೀ ಗ್ರಂಥಗಳನ್ನೇ ಸಾಂಗತ್ಯದಲ್ಲಿ ಬರೆದಿದ್ದಾರೆ.

ಈ ಸಾಂಗತ್ಯ ಚರಿತ್ರೆಯಲ್ಲಿ ಸೇರದ ಯಕ್ಷಗಾನ ಮುಂತಾದ ಜನಪದ ಸಾಹಿತ್ಯ ದಲ್ಲಿ ಸಾಂಗತ್ಯಗಳು ಇಡಿಯಾಗಿಯೋ ಬಿಡಿಯಾಗಿಯೋ ಕಂಡುಬರುತ್ತವೆ. ಅಷ್ಟೇ ಅಲ್ಲದೆ ಕೆಲವು ಷಟ್ಪದಿ, ವೃತ್ತ ಕಂದಗಳಲ್ಲಿ ರಚಿತವಾಗಿರುವ ಕೃತಿಗಳಲ್ಲಿ ಅಲ್ಲಲ್ಲಿ ಸಾಂಗತ್ಯಗಳು ಸೇರಿವೆ. ಒಟ್ಟಿನಲ್ಲಿ ಹದಿನೈದನೆಯ ಶತಮಾನದಿಂದ ಇಂದಿನವರೆಗೂ ಈ ಸಾಂಗತ್ಯ ಜೀವಂತವಾಗಿದೆ. ಅಂದಿನ ತನ್ನ ಮೂಲ ಅಂಶಗಣ ಸ್ವರೂಪವನ್ನು ಉಳಿಸಿಕೊಂಡೇ ಬಂದಿದೆ.

ಪ್ರಾಚೀನ ಕಾವ್ಯಪರಂಪರೆಯಲ್ಲಿ ಪ್ರಮುಖವಾದ ಚಂಪೂ, ಷಟ್ಪದಿ ಮುಂತಾದ ಪ್ರೌಢ ಛಂದೋಬಂಧಗಳಲ್ಲಿಯೇ ರಚಿತವಾಗಿದ್ದ ಕಾವ್ಯ, ಶಾಸ್ತ್ರ, ಧರ್ಮ ಪ್ರತಿಪಾದಕ ಗ್ರಂಥಗಳು ಜನಸಾಮಾನ್ಯಕ್ಕೆ ಸುಲಲಿತವಾಗಿ ನಿಲುಕುವಂತೆ ಶುದ್ಧ ದೇಶೀಯ ಛಂದಸ್ಸಿನಲ್ಲಿ ಹೊರಬರುವುದಕ್ಕೆ ವಾಹಕವಾದುದು ಸಾಂಗತ್ಯ. ವೇದ ಪುರಾಣ ಶಾಸ್ತ್ರಾಗಮಗಳಲ್ಲಿ ಅಡಗಿದ್ದ ನಿಗೂಢವಾದ ಧರ್ಮ ಪ್ರಕ್ರಿಯೆಗಳನ್ನು ಸುಲಭವಾಗಿ ಸರಳವಾಗಿ ಸಾಂಗತ್ಯದಲ್ಲಿ ನಿರೂಪಿಸಿದವರು ಜೈನ ವೀರಶೈವ ಮತ್ತು ಬ್ರಾಹ್ಮಣ ಕವಿಗಳು. ಇವರು ತಮ್ಮ ತಮ್ಮ ಧರ್ಮವನ್ನು ಪರಿಣಾಮಕಾರಿಯಾಗಿ ಈ ಹಾಡುಗಬ್ಬ ವಾದ ಸಾಂಗತ್ಯದ ಮೂಲಕ ಅಭಿವ್ಯಕ್ತಗೊಳಿಸಿದ್ದಾರೆ.

ಕನ್ನಡ ಛಂದಶಾಸ್ತ್ರದ ಇತಿಹಾಸದಲ್ಲಿ ಬೇರಾವ ಛಂದೋ ಪ್ರಕಾರಕ್ಕೂ ಇಲ್ಲದ ವೈಶಿಷ್ಟ್ಯ ಸಾಂಗತ್ಯಕ್ಕಿದೆ. ಪ್ರಾಚೀನ ಛಂದೋ ಮಟ್ಟುಗಳಾದ ತ್ರಿಪದಿ ಷಟ್ಪದಿಗಳು ಕಾಲಕ್ರಮದಲ್ಲಿ ಮಾತ್ರಾಗಣಗಳ ಪ್ರಭಾವಕ್ಕೊಳಗಾಗಿ ತಮ್ಮ ಸ್ವರೂಪವನ್ನು ಕಳೆದು ಕೊಂಡವು. ಆದರೆ ಸಾಂಗತ್ಯ ಮಾತ್ರ ಅಂದಿನಿಂದ ಇಂದಿನವರೆಗೂ ಯಾವೊಂದು ಆಘಾತಕ್ಕೂ ಒಳಗಾಗದೆ ಜೀವಂತವಾಗಿ ಉಳಿದುಬಂದಿದೆ. ಅದಕ್ಕೆ ಅದರ ಗೇಯತೆ ಮತ್ತು ಸೌಲಭ್ಯಗಳೇ ಕಾರಣವೆಂದು ಹೇಳಬಹುದು. ಕನ್ನಡ ದೇಶೀಯ ಮಟ್ಟಾದ ಈ ಸಾಂಗತ್ಯ ಬಂಧ ಕೇವಲ ಜನಪ್ರಿಯತೆಯಿಂದ ಮಾತ್ರವಲ್ಲದೆ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಮಕುಟಪ್ರಾಯವಾದ ಕೃತಿಗಳನ್ನು ಒದಗಿಸಿದೆ.

ನಾನು ಅವಧೂತನಾಗಿ ಹೋಗುವುದಿಲ್ಲ. ಕನ್ನಡವು ತನ್ನ ಸ್ಥಾನವನ್ನು ಅಧಿಕೃತವಾಗಿ ಪಡೆಯುವ ತನಕ, ನನ್ನ ಪ್ರಾಣವಿರುವ ತನಕ ಕನ್ನಡಕ್ಕಾಗಿ ದುಡಿಯುವುದು, ಕನ್ನಡಕ್ಕಾಗಿ ದುಡಿಯಲು ವ್ಯಕ್ತಿಗಳನ್ನು ಪ್ರಚೋದಿಸುವುದು, ಅದಕ್ಕಾಗಿ ಭಗವಂತನಲ್ಲಿ ಮೊರೆ ಯಿಡುವುದು ಮಾಡುತ್ತೇನೆ. ನನ್ನೆಲ್ಲ ತಪಶ್ಶಕ್ತಿಯನ್ನು ಅಥವಾ ಪ್ರಾರ್ಥನಾಶಕ್ತಿಯನ್ನು ಕನ್ನಡದ ಸೇವೆಗಾಗಿ ವಿನಿಯೋಗಿಸುತ್ತೇನೆ—ಹೇ ರಾಜಕಾರಣಿ, ಹೇ ಮಂತ್ರಿವರೇಣ್ಯ, ಹೇ ಅಧಿಕಾರಿ ಸರ್ವೋತ್ತಮ, ಹೇ ಸಾಹಿತ್ಯಕ, ಹೇ ಶ್ರಮಜೀವಿ, ಹೇ ಅಧ್ಯಾಪಕ ಮಹಾಶಯ, ಓ ನೇಗಿಲಯೋಗಿ, ನೀನು ಯಾರೆ ಆಗಿರು, ಎಲ್ಲಿಯೆ ಇರು, ಕನ್ನಡವನ್ನು ಕೈಬಿಡದಿರು—ಇದು ನಿನ್ನ ಭಾಷೆ; ಇದು ದೇಶಭಾಷೆ; ಇದು ಸಾವಿರಾರು ವರ್ಷಗಳ ಸುದೀರ್ಘ ಸಾಹಿತ್ಯ ಭಾಷೆ; ಇದು ಮಹಾಕವಿಗಳನ್ನೂ ಶಿಲ್ಪಿಗಳನ್ನೂ, ರಾಜಾಧಿರಾಜರನ್ನೂ, ವೀರಾಧಿವೀರರನ್ನೂ, ರಸಋಷಿ ದಾರ್ಶನಿಕರನ್ನೂ ಪಡೆದಿರುವ ಭಾಷೆ...ನಿನ್ನ ತಾಯಿ ರಾಣಿಯಾಗಿದ್ದ ಗೇಹವನ್ನು ಮರೆತುಬಿಡುವೆಯ? ಸ್ವತಂತ್ರನಾದ ಮೇಲೆಯೂ ಆಕೆಯನ್ನು ತೊತ್ತಾಗಿರಿಸುವೆಯ?

ಕು.ವೆಂ.ಪು

ಡಿ. ಎಸ್. ಕರ್ಕಿ

ತ್ರಿಪದಿ

ಹಾಲುಂಡ ತವರೀಗಿ ಏನೆಂದು ಹಾಡಲಿ
ಹೊಳೆದಂಡಿಲಿರುವ ಕರಕೀಯ ಕುಡಿಯಂಗ
ಹಬ್ಬಲಿ ಅವರ ರಸ ಬಳ್ಳಿ

ನೆಲೆ–ಕಲೆ

ಯಾವುದೇ ಜನಾಂಗದ ಸಾಹಿತ್ಯ ಮೂಲದಲ್ಲಿ ಹಾಡಿನಿಂದ ಮೊದಲಾಗುವುದೆಂದು ಹೇಳಬಹುದು. ಹಾಡು ಜೀವನದ ಪಾಡನ್ನು ಸಹಜವಾಗಿ ಸುಳುಹುಗಾಣಿಸುವ ಒಂದು ರೀತಿ: ಜೀವನದ ನಗೆ–ನೋವುಗಳನ್ನು, ಒಲವು–ಗೆಲವುಗಳನ್ನು ಹಾಡಿನ ಹಾದಿಯಲ್ಲಿ ಮೂಡಿಸುವ ಪ್ರವೃತ್ತಿ ಮಾನವನ ಹೃದಯಕ್ಕೆ ಸ್ವಾಭಾವಿಕವಾದುದು. ಯಾವುದೊಂದು ಭಾವದ ಕುಡಿ ನಾದಲಯದಲ್ಲಿ ಹೊಮ್ಮಿದಾಗ ಅದು ಹಾಡಾಗಿ ಪರಿಣಮಿಸುತ್ತದೆ. ಇದು ಹಾಡಿನ ನೆಲೆ. ಲಯದಲ್ಲಿ ನುಡಿಯು ಅರ್ಥವನ್ನು ಸೂಚಿಸುವಂತೆ ಹವಣಾಗಿ ಹದುಳವಾಗಿ ಹೊಂದಿಕೊಂಡಾಗ ಹಾಡು ಒಂದು ಕಲೆಯಾಗುತ್ತದೆ. ಇದು ಹಾಡಿನ ನೆಲೆ–ಕಲೆ–ಒಂದು ಜನಾಂಗದ ಹಾಡು ಮೂಲತಃ ಉದಯಿಸುವುದು ಜಾನಪದದ ರೀತಿಯಲ್ಲಿ. ನಮ್ಮ ಕನ್ನಡ ಹಾಡುಗಬ್ಬದ ಉದಯವು ಹೀಗೆ ಆಗಿರಲು ಸಾಕು. ಹಾಡು ಹುಟ್ಟುವಾಗ ರಾಗದಲ್ಲಿ ಹುಟ್ಟುತ್ತದೆ ತಾನೆ? ಕನ್ನಡ ಹಾಡುಗಳಲ್ಲಿ ಮೊದಲಿನಿಂದಲೂ ಒಂದು ರಾಗ ವಿಶೇಷ ಸೂತ್ರದಂತೆ ಅಡುತ್ತ ಬಂದಿದೆ; ಒಂದು ವಿಶಿಷ್ಟ ನಾದಲಯ ಸಹಜವಾಗಿ ನುಡಿಯುತ್ತ ಬಂದಿದೆ. ಈ ನಾದಲಯವನ್ನು ಒಳಗೊಂಡ ಛಂದೋಬಂಧಕ್ಕೆ 'ತ್ರಿಪದಿ' ಎಂಬ ಹೆಸರು ರೂಢವಾಗಿದೆ. ಈ ಮಾತನ್ನು ಒಂದು ಉದಾಹರಣೆಯಿಂದ ಸಾಕಾರಗೊಳಿಸಬಹುದು :

ಬೆಳ್ಳನ್ನ ಬೆಳಗಾಗಿ ಬೆಳ್ಳಿ ಮೂಡಲವಾಗಿ
ಒಳ್ಳೊಳ್ಳೆ ಮೀನ ಗರಿ ತೆಗೆದು ಆಡ್ಯಾವ
ಗರತಿ ಗಂಗಮ್ಮ ನುಡಿಯಾಗ

ರೂಪ–ರಾಗ

ಇದೊಂದು ಜಾನಪದ ರೀತಿಯ ಪದ್ಯ. ಇದಕ್ಕೆ ದನಿಗೂಡಿಸಿ ನುಡಿದರೆ ಇದರಲ್ಲಿ

ಒಂದು ರಾಗವುಂಟೆಂದು ಹೊಳೆಯದಿರದು. ಇದನ್ನು ಮೂಡಿಸಿದ ರೀತಿಯನ್ನು ಗಮನಿಸಿದರೆ ಇದಕ್ಕೆ ಒಂದು ರೂಪವೂ ಇದೆ. ಈ ರಾಗದಿಂದಾಗಿ, ಈ ರೂಪದಿಂದಾಗಿ ಈ ಮೂರು ಪಾದಗಳ ಬಂಧ 'ತ್ರಿಪದಿ'ಯೆಂಬ ಹೆಸರನ್ನು ಪಡೆದಿದೆ. ಮೇಲಿನ ಪದ್ಯದಲ್ಲಿ ಬೆಳಗಿನ ಜಾವದ ಒಂದು ಹೃದ್ಯವಾದ ಚಿತ್ರ ಮೂಡಿದೆ ತಾನೆ? ಬೆಳಗಿನ ಚೆಲುವನ್ನು ಕಂಡ ಕಣ್ಣಿಗೆ ಹೊಳೆದ ಬಿತ್ತರದ ಚಿತ್ರವದು. ಅದರಲ್ಲಿ ಕೌತುಕದ ಭಾವ ಅಂದವಾಗಿ ಅಭಿವ್ಯಕ್ತವಾಗಿದೆ. ಪದ್ಯವೋ ಕಿರಿದು, ನೋಟ ಎಷ್ಟು ವಿಶಾಲ ವಾದುದು! ಇದು ಈ ಪದ್ಯದ ಸಾಹಿತ್ಯಗುಣಕ್ಕೆ ಸಾಕ್ಷಿ. ಇದು ಒಂದು ಪದ್ಯವಲ್ಲ, ಇಡಿಯ ಭಾವವನ್ನು ಬೆಳಗಿದ ಒಂದು ಹಾಡು.

ಗೀತ–ಸಂಪ್ರದಾಯ

ತ್ರಿಪದಿಯಲ್ಲಿ ರಚಿತವಾದ ಇಂಥ ಅನೇಕ ಗೀತಗಳಲ್ಲಿ ಸಾಹಿತ್ಯದ ಗುಣ ಸಮಾವೇಷ ವಾಗಿದೆ. ತ್ರಿಪದಿ ಸಾಹಿತ್ಯ ನಿನ್ನೆ ಮೊನ್ನೆಯದಲ್ಲ. ಹಾಡಿನಲ್ಲಿ ಹೊಮ್ಮುತ್ತ ಬಂದ ಈ ಸಾಹಿತ್ಯಕ್ಕೆ ಸುದೀರ್ಘವಾದ ಗೀತ–ಸಂಪ್ರದಾಯವಿದೆ. ಇದಕ್ಕೆ ಏನಿಲ್ಲೆಂದರೂ ಒಂದು ಸಾವಿರದ ಮೇಲೆ ಐದುನೂರು ವರುಷಗಳ ಪರಂಪರೆ ಇದೆ. ತ್ರಿಪದಿಯ ಲಯವು ಎಂದಿನಿಂದಲೋ ಹೊಮ್ಮುತ್ತ ಬಂದಿರುವ ನಮ್ಮ ಜನಪದ ಗೀತಗಳಲ್ಲಿ ಹಾಸು ಹೊಕ್ಕಾಗಿದೆ. ನಮ್ಮ ನುಡಿಯ ನಡೆಗೆ ತುಂಬ ಹೊಂದಿಕೊಂಡ ಲಯವದು. ತ್ರಿಪದಿ ನಮ್ಮ ಹಾಡುಗಳ ಮೂಲ ನಾಡಿ; ಜೀವನಾಡಿಯೂ ಅಹುದು. ಆದುದರಿಂದಲೇ ಕನ್ನಡ ಹಾಡುಗಳು ಬಹು ಪ್ರಾಚೀನಕಾಲದಿಂದಲೂ ತ್ರಿಪದಿಯ ಲಯದಲ್ಲಿ ಅನೂಚಾನವಾಗಿ ಸ್ಪಂದಿಸುತ್ತ ಬಂದಿವೆ. ಕನ್ನಡ ಜನಾಂಗದ ಭಾವ–ಭಾವನೆಗಳನ್ನು, ರೀತಿ–ನೀತಿಗಳನ್ನು, ಆಶೆ–ಆಕಾಂಕ್ಷೆಗಳನ್ನು ಕನ್ನಡಿಸುತ್ತ ಬಂದಿವೆ. ಮನೆತನಕ್ಕೆ ಸಂಬಂಧಿಸಿದ ಅನುಭವ ಗಳು, ಹಬ್ಬ–ಹುಣ್ಣಿಮೆಗಳ ಸಡಗರ ಸಂಭ್ರಮಗಳು, ಜೀವನದ ಗತಿಯಲ್ಲಿ ಬರುವ ವಿವಿಧ ಸಂದರ್ಭ ಸನ್ನಿವೇಶಗಳನ್ನು ಕುರಿತ ನೆನಹುಗಳು ಈ ಜನಪದ ಗೀತಗಳಲ್ಲಿ ಪಡಿಮೂಡುತ್ತ ಬಂದಿವೆ. ಇವುಗಳನ್ನು ಸಂದರ್ಭಗಳಿಗೆ ಅನುಸಾರವಾಗಿ ಸವಿಯಾಗಿ ಹಾಡಿ ಹಾಡಿಸಿ ನಲಿಯುವ ಸಂಪ್ರದಾಯವೂ ಈ ನಾಡಿನಲ್ಲಿ ಬೆಳೆದುಬಂದಿದೆ. ದನಿ ತೆಗೆದರೆ ಸಾಕು ಅದು ತ್ರಿಪದಿಯ ಹಾಡೆಂದು ಕೂಡಲೇ ಹೊಳೆಯುವಷ್ಟು ಸುಪರಿಚಿತ ಈ ಸರಳ ಸುಂದರ ನಾದಲೀಲೆ. ದಿನದಿನದ ಜೀವನದ ಗತಿಯಲ್ಲಿಯೂ ಈ ತ್ರಿಪದಿಯ ಹಾಡುಗಳು ದನಿದೋರುತ್ತ ಬಂದಿವೆ.

ಲಿಖಿತ ರೂಪದಲ್ಲಿ ದೊರೆತ ತ್ರಿಪದಿ ಸಾಹಿತ್ಯವನ್ನಷ್ಟೇ ಗಣನೆಗೆ ತೆಗೆದು ಕೊಂಡರೂ ಅದರ ಪುರಾತನತೆ ಕ್ರಿ. ಶ. ೭೦೦ರಷ್ಟು ಹಿಂದೆ ಹೋಗುತ್ತದೆ. ಇಲ್ಲಿಯವರೆಗೆ ತಿಳಿದುಬಂದ ಮಟ್ಟಿಗೆ ಬರವಣಿಗೆಯ ರೂಪದಲ್ಲಿ ಅದು ಮೊಟ್ಟಮೊದಲು ಕಾಣುವುದು ಬಾದಾಮಿಯ ೭೦೦ರ ಶಾಸನದಲ್ಲಿ. ಆ ಶಿಲಾಲೇಖದಲ್ಲಿ ಮೂಡಿದ ತ್ರಿಪದಿಗಳು ಒಳ್ಳೆಯ ಸಾಹಿತ್ಯದ ಲಕ್ಷಣಗಳನ್ನು ಒಳಗೊಂಡಿವೆ. ಅದರಲ್ಲಿಯ ಒಂದು ತ್ರಿಪದಿ ಸಾಕು ಈ ಮಾತಿಗೆ ಸಾಕ್ಷಿಯಾಗುವುದಕ್ಕೆ.

ಸಾಧುಗೆ ಸಾಧು ಮಾಧುರ್ಯಂಗೆ ಮಾಧುರ್ಯಂ
ಬಾಧಿಪ್ಪ ಕಲಿಗೆ ಕಲಿಯುಗ ವಿಪರೀತನ್
ಮಾಧವನೀತನ್ ಪೆಜನಲ್ಲ.

ಈ ಪದ್ಯದಲ್ಲಿ ಆ ಕಾಲದ ಗಣ್ಯ ಕನ್ನಡಿಗನೊಬ್ಬನ ವ್ಯಕ್ತಿತ್ವ ಮೂಡಿದೆ. ಸತ್ವದೊಡನೆ ಮಾಧುರ್ಯ ಬೆರೆದ ವ್ಯಕ್ತಿತ್ವವದು. ಅಂದಿನ ಕನ್ನಡಿಗರ ಸತ್ವ ಸಂಸ್ಕೃತಿಗಳನ್ನು ಎತ್ತಿತೋರಿದಂತಿದೆ ಈ ತ್ರಿಪದಿ. ಲಿಖಿತರೂಪದ ತ್ರಿಪದಿ ಸಾಹಿತ್ಯದ ಮುಂದಿನ ನೆಲೆಗಳನ್ನು ಹೀಗೆ ನಿರ್ದೇಶಿಸಬಹುದು.

ನಮ್ಮ ನಾಡು–ನುಡಿಗಳ ಹಿಂದಣ ಚರಿತೆಯ ಮೇಲೆ ಬೆಳಕುಬೀರಲು ತುಂಬ ನೆರವಾದ ‘ ಕವಿರಾಜ ಮಾರ್ಗ ’ ಗ್ರಂಥದಲ್ಲಿ ತ್ರಿಪದಿಯ ಪ್ರಸ್ತಾಪ ಬಂದುದು ಈ ಸಂಬಂಧದಲ್ಲಿ ಗಮನಾರ್ಹವಾದುದು.

ಕನ್ನಡ ಆದಿಕವಿಯೆಂದು ಪೆಂಪು ತಳೆದ ಪಂಪ ಮಹಾಕವಿಯಿಂದ ‘ ಚಂಪೂ ’ ಸಾಹಿತ್ಯ ಪ್ರಾರಂಭವಾಯಿತಷ್ಟೆ. ಈ ಕಾವ್ಯ ಸಂಪ್ರದಾಯ ‘ ಮಾರ್ಗ ’ವೆಂದೂ ಗಣ್ಯವಾಗಿದೆ. ಈ ಮಾರ್ಗದ ಉದ್ದಾಮ ಕಾವ್ಯ–ಕೃತಿಗಳಲ್ಲಿ ತ್ರಿಪದಿಯು ವಿವಿಧ ವೃತ್ತಿಗಳೊಡನೆ ಅಲ್ಲಲ್ಲಿ ಸುಳಿದು ತನ್ನ ಕಳೆದೋರಿದೆ.

ಆ ತರುವಾಯದ ೧೨ನೆಯ ಶತಮಾನದ ಉತ್ತರಾರ್ಧದಲ್ಲಿ ಉದಿಸಿಬಂದ ‘ ದೇಸಿ ’ ಕೃತಿಗಳಲ್ಲಿ ತ್ರಿಪದಿ ತಲೆದೋರಿದುದು ತುಂಬ ವಿರಳ. ಆ ಗಡುವಿನ ಸಾಹಿತ್ಯದಲ್ಲಿ ಅದು ಕಂಡುಬರುವುದು ಮಹಾದೇವಿ ಅಕ್ಕನವರ ‘ ಯೋಗಾಂಗ ತ್ರಿವಿಧಿ ’ಯಲ್ಲಿ, ಅಷ್ಟೆ. ಕೆಳಗಿನ ಪದ್ಯದಲ್ಲಿ ಅದರ ಪರಿಯನ್ನು ಅರಿಯಬಹುದು :

ಅಷ್ಟದಳ ಕಮಲದಾ ಬಟ್ಟಬಯಲೊಳಗೊಂದು
ಮುಟ್ಟಬಾರದ ಘನವಿಹುದು ಮನದೊಳಗೆ
ದೃಷ್ಟಿಯಿಟ್ಟವನೆ ಕಡು ಜಾಣಾ

ಆ ಮೇಲೆ ತ್ರಿಪದಿ ತೋರಿಬರುವುದು ನಿಜಗುಣರ ‘ ಅನುಭವಸಾರ ’ದಲ್ಲಿ ಮತ್ತು ‘ ಪುರಾತನರ ತ್ರಿವಿಧಿ ’ಯಲ್ಲಿ. ನಿಜಗುಣರ ರಚನೆಗೆ ಇಲ್ಲಿ ಒಂದು ಉದಾಹರಣೆ :

ಇಂಗಡಲೊಳಿಂಪು ಬೆಳದಿಂಗಳೊಳು ತಂಪು ಕುಸು–
ಮಂಗಳೊಳು ಕಂಪು ಬೆರದಂತೆ ಪರಮನೊಳು
ಪಿಂಗದಗಸುತೆಗೆ ನತ ನಷ್ಫೆ

ತದನಂತರ ತ್ರಿಪದಿ ಸಾಹಿತ್ಯ ತನ್ನ ಮೇಲ್ಮೆಯನ್ನು ಮೆರೆದುದು ಸರ್ವಜ್ಞನ ವಚನಗಳಲ್ಲಿ. ಸರ್ವಜ್ಞನ ಪದಗಳ ಜನಪ್ರಿಯತೆಯನ್ನು ಯಾರು ಅರಿಯರು? ಗುರಿ ತಪ್ಪದಂತೆ–ನೇರವಾಗಿ ಮನ–ಮುಟ್ಟುವ ಹದ ಸರ್ವಜ್ಞನ ತ್ರಿಪದಿಗಳ ವೈಶಿಷ್ಟ್ಯ.

ಲೋಕಾನುಭವ ಹಾಗೂ ಸ್ವಾನುಭವಗಳಿಂದ ಕೂಡಿದ ಅವನ ನುಡಿಯ ಚದುರು, ಮಾತಿನ ಮೊನೆ, ನಗೆ, ವಿಡಂಬನೆ, ಕಿರಿ ನುಡಿಯಲ್ಲಿ ಹಿರಿ ಅರ್ಥವನ್ನು ಥಳ್ಳನೆ ಬೆಳಗುವ ಹದ, ಅಹುದಹುದು ಎನಿಸುವಂಥವುಗಳು. ಅವನ ಚದುರು ನುಡಿಯ ಚುರುಕನು ನೋಡಬಹುದು :

ಸಾಲವನು ಕೊಂಬಾಗ ಹಾಲೋಗರುಂಡಂತೆ
ಸಾಲಿಗನು ಬಂದು ಕೇಳಿದರೆ ಕಿಬ್ಬದಿಯ
ಕೀಲು ಮುರಿದಂತೆ ಸರ್ವಜ್ಞ

ಇದು ಗ್ರಂಥ ರೂಪದಲ್ಲಿ ರಚನೆಗೊಂಡ ಚರಿತೆ.

ಆದರೆ ಕೊರಳು ಕೊರಳಿನಿಂದ ಸ್ಪುರಗೈಯುತ್ತಬಂದ ಜನಪದ ತ್ರಿಪದಿ-ಸಾಹಿತ್ಯದ ಪ್ರವಾಹ ಸಂತತವಾದುದು. ಅದರ ಲಯದಲ್ಲಿ ಶಬ್ದಗಳ ಗುರು-ಲಘು ಸ್ವರಗಳನ್ನು ಕೀಲಿಸಿಯೋ ತೇಲಿಸಿಯೋ ರಾಗಿಸಲು ಅನುಕೂಲವಿರುವ ಈ ಜನಪದ ಛಂದದ ರೀತಿ ಸಾಧ್ಯವಿದ್ದಮಟ್ಟಿಗೆ ಸ್ವಚ್ಛಂಥ. ಇದರಿಂದಾಗಿ ಜನಪದ ತ್ರಿಪದಿಗಳ ಲಯ ಹೆಚ್ಚು ಮನೋಹರವಾಗಿ ಪರಿಣಮಿಸುತ್ತದೆ. ತ್ರಿಪದಿ ಗೀತಗಳ ಅಚ್ಚ-ರಸ-ರುಚಿಗಳನ್ನು ಜಾನಪದದಲ್ಲಿಯೇ ಅನುಭವಿಸಬಹುದು. ಹಿನ್ನೆಲೆಯ ದೃಷ್ಟಿಯಿಂದಲೂ ತ್ರಿಪದಿಯ ಹಾಡುಗಳ ಮಹತಿ ಹೆಚ್ಚು. ಆದುದರಿಂದ ತ್ರಿಪದಿ ಸಾಹಿತ್ಯದ ಪುನರ್ಮೌಲ್ಯವನ್ನು ನಿರ್ಧರಿಸುವವರು ಯುಗ ಯುಗದ ಕಂಠದಿಂದ ತುಳುಕಿಬಂದ ಜನಪದ ತ್ರಿಪದಿಯ ಹಾಡುಗಳನ್ನು ಮುಖ್ಯವಾಗಿ ಲಕ್ಷಿಸುವುದು ಒಳಿತು. ಬಿಂಕವಿಲ್ಲದ ತಿರುಳು ನುಡಿಯ ಬಿನ್ನಾಣವು ಈ ಬಗೆಯ ಹಾಡುಗಳ ಒಂದು ಹೆಚ್ಚಿನ ಅಂದ. ಈ ಸರಳ ನುಡಿಯ ರಾಗದ ಸೊಬಗಿನ ಸೋನೆಯನ್ನು ಗುರುತಿಸಬಹುದು ಕೆಳಗಣ ತ್ರಿಪದಿಗಳಲ್ಲಿ :

ಬಿತ್ತಿದ ಹೊಲದಾಗ ಒತ್ತಿ ಹಾಯುವಳ್ಯಾರ
ಮುತ್ತಿನುಡಿಯ್ಯಾಕಿ ಬನದಮ್ಮ ಸುಳಿದರ
ಬಿಚ್ಚಿ ಬಿದ್ದಾವ ಬಿಳಿ ಜೋಳ
ಯಾರ ಮಗಳವ್ವ ನೀ ಎರಳಿ ನೋಟದ ಗೊಂಬಿ
ಸುರುಳಿ ಗೂದಲ ಸುಲಹಲ್ಲ ನನಗೆಳದಿ
ಸುಗುಣಿ ನೀನ್ಯಾರ ಮಗಳವ್ವ
ಕೊಂಬು ಕೊಳಗ ಶುದ್ಧ ಇಂಬುಳ್ಳ ಇಣಿ ಶುದ್ಧ
ಬಂಗಾರದಿಣಿಯ ಬಸವಣ್ಣ ಬರುವಾಗ
ತುಂಬಿದ ಗಂಗಾ ತುಳಕ್ಯಾಳೊ

ರಸ-ಪೋಷಣೆ

ಜನಪದ ಸಾಹಿತ್ಯದಲ್ಲಿ ತ್ರಿಪದಿಯ ಹಾಡುಗಳೇ ಮುಕ್ಕಾಲು-ಮೂರು ವೀಸ ಪಾಲು.

ಅವುಗಳಲ್ಲಿ ಗರತಿಯರ ಹಾಡುಗಳಂತೂ ರಸದ ಒರತೆಗಳಾಗಿವೆ. ಅವು ಸೂಸಿದ ರಸ ಮುಖ್ಯವಾಗಿ ಮೂರು : ಸಿಂಗಾರ, ಕರುಣೆ, ತಿಳಿಹಾಸ್ಯ. ಸಿಂಗಾರದ ಸೊಬಗು ಗರತಿಯರ ಹಾಡುಗಳಲ್ಲಿ ಸುಳಿದೋರಿದುದು ಹೀಗೆ. ಒಂದು ಸುಳಿ :

ಹಚ್ಚಡದ ಪದರಾಗ ಅಚ್ಚಮಲ್ಲಿಗಿ ಹೂವ
ಬಿಚ್ಚಿ ನನ ಮ್ಯಾಲ ಒಗವಂಥ ರಾಯರನ
ಬಿಟ್ಯಾಂಗ ಬರಲಿ ಹಡೆದವ್ವ !

ಇದೇ ಬಗೆಯ ಇನ್ನೊಂದು ಸರಸ ಸುಳಿ :

ಕಮುಳದ ಹೂ ನಿನ್ನ ಕಾಣದೆ ಇರಲಾರೆ
ಮಲ್ಲೀಗೆ ಮಾಯ ಬಿಡಲಾರೆ ಕೇದಿಗೆ
ಗರಿ ನಿನ್ನನಗಲಿ ಇರಲಾರೆ

ನಸು ಮುನಿಸು ಸರಸಕ್ಕೆ ತಿರುಗಿದ ಹದನ :

ನುಡಿ :

ಮಡದೀನ ಬಡದಾನ ಮನದಾಗ ಮರುಗ್ಯಾನ
ಒಳಗ್ಹೋಗಿ ಸೆರಗ ಹಿಡಿಯೂತ-ಕೇಳ್ಯಾನ
ನಾ ಹೆಚ್ಚೊ ನಿನ್ನ ತವರ್‍ಹೆಚ್ಚೊ

ಮಾರ್ನುಡಿ :

ತಾಯಿದ್ರ ತವರ್‍ಹೆಚ್ಚ ತಂದಿದ್ರ ಬಳಗ್ಹೆಚ್ಚ
ಸಾವಿರಕೆ ಹೆಚ್ಚು ಪತಿಪುರುಷ-ಹೊಟ್ಟೀಯ
ಮಾಣಿಕದ ಹರಳು, ಮಗ ಹೆಚ್ಚು

ಸಂವಾದ ಗೀತಗಳಿಗೆ ತ್ರಿಪದಿ ತುಂಬ ಹೊಂದಿಕೊಳ್ಳುವ ಮಟ್ಟು ಎಂಬುದು ಮೇಲಿನ ಪದ್ಯಗಳಿಂದ ಹೊಳೆಯದಿರದು.

ಒಲವು ಒಂದಾಗಿ ನಿಂದ ಸಮರಸ ಜೀವನದಲ್ಲಿ ಮಗು ಪರಿಮಳ ಸೂಸುವ ಮೊಗ್ಗು :

ಕೂಸು ಇದ್ದ ಮನಿಗೆ ಬೀಸಣಿಕೆ ಯಾತಕ
ಕೂಸು ಕಂದಯ್ಯ ಒಳ ಹೊರಗ ಆಡಿದರ
ಬೀಸಣಿಕೆ ಗಾಳಿ ಸುಳಿದಾವ

ಇನ್ನು ತ್ರಿಪದಿಯ ಹಾಡುಗಳಲ್ಲಿ 'ಕರುಣೆ' ತುಳುಕಿದ ಬಗೆಯನ್ನು ನೋಡ ಬಹುದು. ಮಗಳು ಮೊದಲು ಸಲ ಅತ್ತೆಯ ಮನೆಗೆ ಹೋಗುವಾಗ ಮಿಡಿದ ತಾಯಿಯ ಕರುಳು :

ಒಂಬತ್ತು ತಿಂಗಳು ತುಂಬಿಕೊಂಡು ತಿರುಗೇನs
ಹಂಬಲಿಸೀ ನಿನ್ನ ಹಡೆದೇನ | ಸೋ
ಹಂಬಲಿಸೀ ನಿನ್ನ ಹಡೆದೇನs ಚಿತ್ರದ
ಗೊಂಬಿ ನಿನಗೊಪ್ಪಿಸಿ ಕೊಡಲ್ಹ್ಯಾಂಗ | ಸೋ

ಆದೇ ಸನ್ನಿವೇಶದಲ್ಲಿ ಬಳಗದ ಕಂಬನಿ :

ಕಣಗೀಲ ಗಿಡದಾಗ ಗಿಣಿ ಹಿಂಡು ಕುಂತಾಂಗs
ಸಣ್ಣ ನೀಲವ್ವನ ಬಳಗಾವು | ಸೋ
ಸಣ್ಣ ನೀಲವ್ವನ ಬಳಗಾವು ಕಣ್ಣೀರು
ಹನ್ನೊಂದ್ಹೊಳಿಯಾಗೀ 'ಹರಿದಾವ' | ಸೋ

ಮಕ್ಕಳಿಲ್ಲದ ಕೊರಗು :

ಕಂದನ ಕೊಡು ಶಿವನೆ ಬಂಧನ ಪಡಲಾರೆ
ಹಂಗೀನ ಬಾನ ಉಣಲಾರೆ ಜಗದಾಗ
ಬಂಜೆಂಬ ಶಬುದ ಹೊರಲಾರೆ

ಸರಸವಾದ ನಗೆಯೂ ಈ ಹಾಡುಗಳಲ್ಲಿ ಅಲ್ಲಲ್ಲಿ ಮಿನುಗಿದೆ :

ಕಪ್ಪು ಹೆಂಡತಿಯೆಂದು ಕರಕರಿ ಪಡಬ್ಯಾಡ
ಜಂಬು ನೀರಲು ಅತಿ ಕಪ್ಪು ಇದ್ದರೂ
ತಿಂದು ನೋಡಿದರ ರುಚಿ ಬಹಳ

ಸರಸ ನಗೆ ರಸಮಯ ವಾಗಬಲ್ಲುದು ಹೀಗೆ :

ಅಕ್ಕನ ಕರೆಂಪೆಂದರೆ ಕತ್ತಲೆಯಾಯ್ತಂಡ
ಕಟ್ಟಾಣಿ ಕೊರಳ ಮಡದಿಯು ಕರೆಯೆಂದ್ರೆ
ತಿಂಗಳ ಬೆಳಕು ಹಗಲೆಂದ

ಒಮ್ಮೊಮ್ಮೆ ನಗೆ ವಿಡಂಬನೆಯಲ್ಲಿ ಬೆರೆಯುವುದುಂಟು. ಇದಕ್ಕೆ ಒಂದು ಉದಾಹರಣೆ :

ಒನಕೆ ಅದು ಒಳ್ಳೆಯದು ನೆಗೆದು ಕುಟ್ಟುವರಿಲ್ಲ
ಸೀರೆ ಒಳ್ಳೆಯದು ನೆರಗಿಲ್ಲ ಅಣ್ಣನ
ನಾರಿ ಒಳ್ಳೆಯವಳು ಗುಣವಿಲ್ಲ

ನಯ ನಾಜೂಕಿನ ಗತಿಯಲ್ಲಿ ನಿರಿ ಚಿಮ್ಮುವ ತ್ರಿಪದಿ-ಛಂದಸ್ಸಿಗೆ ವೀರ, ಅದ್ಭುತ ರಸೋತ್ಪಾದನೆ ಅಸಾಧ್ಯವೆಂದೇ ಹೇಳಬೇಕು. ಉಳಿದ ರಸಗಳಲ್ಲಿ ಭಕ್ತಿಯೊಡನೆ ಬೆರೆದ ಶಾಂತ ರಸ ವಿರಳವಾಗಿಯಾದರೂ ಸುಳುಹುದೋರಿದೆ.

ಭಕ್ತಿಗೆ ಉದಾಹರಣೆ :

ಏಳುತಲೆ ಎದ್ದು ಯಾರ್‍ಯಾರ ನೆನೆಯಲಿ
ಎಳ್ಳು ಜೀರಿಗೆ ಬೆಳೆಯೋಳೆ–ಭೂಮಿತಾಯ
ಎದ್ದೊಂದು ಗಳಿಗೆ ನೆನವೇನು

ಭಕ್ತಿ ಬೆರೆದ ಶಾಂತ ರಸದ ಪರಿ :

ಹರೆಯು ಹೊತ್ತಲೆ ಎದ್ದು ಅತ್ತಿ ಮಾವಗ ಶರಣ
ಮತ್ತೊಂದು ಶರಣ ಗುರುವಿಗೆ ನಾ ಮಾಡಿ
ತೊಡಗೇನು ಮನೆಯ ಕೆಲಸಕ

ಕಲ್ಪನಾ–ವಿಲಾಸ

ರಸದಂತೆ ಕಲ್ಪನೆಯೂ ಕಾವ್ಯಕ್ಕೆ ಆವಶ್ಯಕ. ಕಾವ್ಯಕ್ಕೆ ಕಳೆ ನೀಡುವ ಕಲ್ಪನಾ ವಿಲಾಸವು ತ್ರಿಪದಿಯ ಹಾಡುಗಳಲ್ಲಿ ಅಲ್ಲಲ್ಲಿ ಲೀಲೆಗೈದಿದೆ. ಈ ಬಗೆಗೆ ಒಂದು ಉದಾಹರಣೆ :

ಬಂಗಾರ ಬಸವನ ಹೆಂಡತಿ ನೀಲಮ್ಮ
ರಂಗೋಲೆ ಮುತ್ತ ಹಿಡಿಕೊಂಡು ಕೈಲಾಸದ
ಲಿಂಗಾಕೆ ಆರತಿ ಬೆಳಿಗ್ಯಾಳೆ

'ನೀಲಮ್ಮ' ಎಂಬ ಹೆಸರಿನಲ್ಲಿರುವ 'ನೀಲ'ವು ನಿರಭ್ರವಾದ ಆಕಾಶವೆಂದೂ 'ರಂಗೋಲಿ' ಆ ನೀಲಾಕಾಶದಲ್ಲಿ ಚೆಲ್ಲವರಿದ ನಕ್ಷತ್ರಗಳೆಂದೂ ಭಾವಿಸಿದರೆ ಈ ಹೃದ್ಯವಾದ ಪದ್ಯದ ಅನುಪಮ ಕಲ್ಪನಾ ವಿಲಾಸ ಕಣ್ಣು ಮುಂದೆ ನಿಂತೀತು. ಭಕ್ತಿಯ ಗುಡಿಗೆ ಇಲ್ಲಿ ಕಲ್ಪನೆ ಕಳಸವನ್ನೇ ಇಟ್ಟಿದೆ.

ಅಲಂಕಾರ

ಉಪಮೆ, ರೂಪಕ, ದೃಷ್ಟಾಂತಗಳು ತ್ರಿಪದಿಯ ಹಾಡುಗಳಲ್ಲಿ ಚೆಲುವುದೋರಿವೆ. ಉಪಮಾ ಮತ್ತು ರೂಪಕಗಳನ್ನು ಒಳಗೊಂಡ ಶಬ್ದ ಚಿತ್ರಗಳನ್ನು ತ್ರಿಪದಿ ಚೆನ್ನಾಗಿ ಕಣ್ಣಿಗೊತ್ತಿದುದುಂಟು. ನೋಡಬಹುದು :

ಉಪಮಾ ಚಿತ್ರ :

ಅಳುವ ಕಂದನ ತುಟಿಯು ಹವಳದ ಕುಡಿಯಂಗ
ಕುಡಿ ಹುಬ್ಬು ಬೇವಿನೆಸಳಂಗ—ಕಣ್ಣೋಟ
ಶಿವನ ಕೈಯಲಗು ಹೊಳೆದಂಗ

ರೂಪಕಚಿತ್ರ :

ಹೂವಿನಾಗ ಹುದುಗ್ಯಾನ ಮೂಲ್ಯಾಗ ಮಲಗ್ಯಾನ
ಮೊಗ್ಗಾಗ ಕಣ್ಣು ತೆರೆದಾನ—ಲಿಂಗಯ್ಯನ
ನೋಡ ನೋಡತ ನಿದ್ದಿ ಬಯಲಾಗಿ

ದೃಷ್ಟಾಂತ :

ಕಪ್ಪು ಹೆಂಡತಿಯೆಂದು ಕರಕರಿ ಪಡಬ್ಯಾಡ
ಜಂಬು ನೀರಲ ಅತಿ ಕಪ್ಪು ಇದ್ದರೂ
ತಿಂದು ನೋಡಿದರ ರುಚಿ ಬಹಳ

ತ್ರಿಪದಿಯ ವಿಶಿಷ್ಟ ಗುಣ

ಇಡಿಯ ಕಾವ್ಯಕೃತಿಗಾಗಿ ಉದ್ದಕ್ಕೂ ಬಳಕೆಯಾದ ಭಾಗ್ಯ ತ್ರಿಪದಿಗೆ ಇಲ್ಲವೆಂದರೂ ಸಲ್ಲುವುದು. ಹೀಗೆ ರಚಿತವಾದ ಗಣ್ಯಕಾವ್ಯ ತ್ರಿಪದಿಯಲ್ಲಿ ಇನ್ನೂ ದೊರೆತಿಲ್ಲ. ತ್ರಿಪದಿಯ ಛಂದಕ್ಕೆ ಬಹುಶಃ ಈ ಶಕ್ತಿ ಸಾಲದು ಎಂದು ಕಾಣುತ್ತದೆ. ಬಿಡಿಬಿಡಿ ಅನುಭವಗಳನ್ನು ಬಿಡಿ–ಬಿಡಿ ಪದಗಳಲ್ಲಿ ಕುಡಿಕುಡಿಯಾಗಿ ಕುಸುರಿಸುವ ಕಲೆಯಲ್ಲಿ ತ್ರಿಪದಿ ಎತ್ತಿದ ಕೈ. ಒಂದೊಂದು ತ್ರಿಪದಿಯೂ ಒಂದೊಂದು ಹಾಡಾಗಬಲ್ಲದು ಈ ವಿಶಿಷ್ಟ ಗುಣದಿಂದಾಗಿ. ಪರಿಶೀಲಿಸಬಹುದು :

ಗಿಡದಾಗ ಗಿಡ ಛಲುವ ಮಾವಿನ ಗಿಡ ಛಲುವ
ಹಕ್ಕಿ ಪಕ್ಕಾಗ ಗಿಣಿ ಛಲುವ—ಮ್ಯಾಗೀನ
ಚಿಕ್ಕಾಗ ಚೆಲುವ ಚಂದ್ರಾಮ

ವಸ್ತ್ರದಲ್ಲಿ ಬಿಡಿ ಬಿಡಿ ಕಸೂತಿ (ಕಸೀದೆ) ಹಾಕಿದ ಅಂದವಿದು.

ಅಕ್ಕ–ತಂಗೆರ ಬಣ್ಣ ಅವರಿ ಹೂವಿನ ಬಣ್ಣ
ಕುಬಸದ ಬಣ್ಣ ಕುತನೀಯ—ಹಡೆದಂಥ
ನಾರಿ ನಿನ ಬಣ್ಣ ರವಿ ಚಿನ್ನ

ಬಣ್ಣವನ್ನೆತ್ತಿ–ತೋರುವ ಬಿನ್ನಾಣವಿದು.

ಹಾಸೀಗಿ ಮಾಡಿರಲಿ ಕೂಸಲ್ಲಿ ಮಲಗಿರಲಿ
ಸಂಪಿಗ್ಹೂವಿರಲಿ ಬನದಾಗ—ಹಡೆದವ್ವ
ಮಾತಿರಲಿ ನಿನ್ನ ಮನದಾಗ

ಪರಿಮಳಿಸುವಪರಿಸರದ ಪ್ರಶಾಂತತೆಯನ್ನು ನೆಯ್ದಂತಿದೆ ಈ ನೆಯ್ಗೆಯಲ್ಲಿ.

ಸರ್ವಜ್ಞನ ಪದಗಳಲ್ಲೂ ತ್ರಿಪದಿಯ ಈ ಗುಣ ಎದ್ದು ಕಾಣುತ್ತದೆ. ಅಗುಳಿನ ಮೇಲಿಂದ ಅನ್ನದ ಹದವನ್ನು ಅರಿಯಬಹುದು.

ಜೋಳದ ಬೋನಕ್ಕೆ ಬೇಳೆಯು ತೊಗೆಯಾಗಿ
ಕಾಳೆಮ್ಮೆ ಕರೆದ ಹಯನಾಗಿ ಬೆಳುವಲದ
ಮೇಳ ನೋಡೆಂದ ಸರ್ವಜ್ಞ

ಆಡದೆ ಮಾಡುವನು ರೂಢಿಯೊಳಗುತ್ತಮನು
ಆಡಿ ಮಾಡುವನು ಮಧ್ಯಮನು ಅಧಮ ತಾ
ನಾಡಿ ಮಾಡದವ ಸರ್ವಜ್ಞ

ಉತ್ತಮ, ಮಧ್ಯಮ, ಅಧಮ ಗುಣಗಳ ಹೆಣಿಕೆಯಿಲ್ಲಿದೆ, ಉತ್ತಮಿಕೆಯ ಲಕ್ಷಣವನ್ನು ಎತ್ತಿ ತೋರಲಾಗಿದೆ.

ಬೆರಳಿಗುಂಗುರ ಲೇಸು, ಹುರುಳಿ ಕುದುರೆಗೆ ಲೇಸು
ಮರಳು ನೆಲ ತೆಂಗಿಗಿರಲೇಸು; ಹೆಂಗಳಿಗೆ
ಕುರುಳು ಲೇಸೆಂದ ಸರ್ವಜ್ಞ

ಸರಳವಾದ ಪ್ರಾಸ–ಅನುಪ್ರಾಸಗಳ ವಿನ್ಯಾಸದಿಂದಾಗಿ ತ್ರಿಪದಿಯ ಈ ಹವಣ (ಪಾಯಸದ ಸುರುಕಿನಂತೆ) ರುಚಿಕೊಡುತ್ತದೆ.

ಲಯದಲ್ಲಿ ನುಡಿ–ನುಡಿಯನ್ನು ನಾಣ್ನುಡಿಯಂತೆ ಕೆಚ್ಚುವ ಕಲೆ ತ್ರಿಪದಿಯ ಇನ್ನೊಂದು ವಿಶಿಷ್ಟ ಗುಣ. ನೋಡಬಹುದು :

‘ ಗಂಡ–ಹೆಂಡಿರ ಜಗಳ ಗಂಧ ತೀಡಿದ್ಹಾಂಗ ’
‘ ಕಂದನ ಕರೆಯಮ್ಮಾ ಚಂದನದ ಗೊಂಬೀಯ ’
‘ ಚಂದರನ ಚೆಲುವೀರ ಇಂದರಿನ ಹೋಲಿರ ’
‘ ಮಾತೀನ ಮರವಾಗಿ ಸೂತರದ ಗೊಂಬೀಗಿ ’
‘ ತಾಯಿ–ಮಕ್ಕಳ ಧನಿಯು ತಾಳ ಬಾರಿಸಿದಾಂಗ ’
‘ ಗಂಜೀಯ ಕುಡಿದರು ಗಂಡನ ಮನಿ ಲೇಸ ’

ಸರ್ವಜ್ಞನ ಪದಗಳಲ್ಲಿ ಈ ಅಂದಕ್ಕೆ ನಾಲ್ಕಾರು ಉದಾಹರಣೆಗಳು :

‘ ಸಜ್ಜನರ ಸಂಗವದು ಹೆಜ್ಜೇನು ಸವಿದಂತೆ ’
‘ ಮಾತು ಬಲ್ಲಾತಂಗೆ ಯೇತವದು ಸುರಿದಂತೆ ’
‘ ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆಯೇ ಲೇಸು ’
‘ ಕೋಪವೆಂಬುದು ಕೇಳು ಪಾಪದ ನೆಲೆಗಟ್ಟು ’
‘ ರಸಿಕನಾಡಿದ ಮಾತು ಶಶಿ ಉದಿಸಿ ಬಂದಂತೆ ’
‘ ಜಾತಿ ಹೀನರ ಮನೆಯು ಜ್ಯೋತಿ ತಾ ಹೀನವೇ ’

ಲೋಕಪ್ರಿಯತೆ

ತ್ರಿಪದಿಯ ಹಾಡುಗಳು ಹೀಗೆ ಲೋಕಪ್ರಿಯವಾಗುತ್ತ ಬಂದಿವೆ ಈ ಎಲ್ಲ ರಸ

ರುಚಿಗಳಿಂದಾಗಿ. ಈ ತ್ರಿಪದಿಯ ಜನಪ್ರಿಯತೆಯ ಕಾರಣಗಳನ್ನು ಸಂಕ್ಷಿಪ್ತವಾಗಿ ಹೀಗೆ ಮಂಡಿಸಬಹುದು :

(೧) ತ್ರಿಪದಿಯ ರಾಗ ಸರಳ.

(೨) ತ್ರಿಪದಿಯ ರಚನೆ ತೀರ ಸುಲಭ; ಕಲಿತವರೂ ಕಲಿಯದವರೂ ಕೂಡಿಯೇ ತ್ರಿಪದಿಯ ಪದ್ಯಗಳನ್ನು ರಚಿಸಬಹುದು; ರಚಿಸುತ್ತಾ ಬಂದಿದ್ದಾರೆ. ಕನ್ನಡ 'ಮಟ್ಟು'ಗಳಲ್ಲೆಲ್ಲಾ ತ್ರಿಪದಿಯ ಮಟ್ಟು ಪದ್ಯ ಕಟ್ಟಲು ಬಲು ಹಗುರು.

(೩) ನಮ್ಮ ನುಡಿಯ ಜಾಯಮಾನಕ್ಕೂ ತ್ರಿಪದಿಯ ಲಯಕ್ಕೂ ಇರುವ ಸಂಬಂಧ ಸಜೀವವಾದುದು; ತ್ರಿಪದಿಯ ಛಂದೋಲಯವಲ್ಲಿ ಕನ್ನಡ ಶಬ್ದಗಳು ಅರ್ಥವನ್ನು ಬೆಳಗುವಂತೆ ಹದುಳವಾಗಿ ಹೊಂದಿಕೊಳ್ಳುತ್ತವೆ.

(೪) ನಾದಲಯದ ಕೀಲವನ್ನೇ ಕಿವಿಗೊತ್ತಿ ತೋರುವಂತೆ ಅಳವಡುತ್ತ ಬಂದ ಆದಿ-ಅನುಪ್ರಾಸಗಳು ತ್ರಿಪದಿಯನ್ನು ಪ್ರಿಯಗೊಳಿಸಲು ನೆರವಾಗಿವೆ.

(೫) ಎಲ್ಲಕ್ಕೂ ಮಿಗಿಲಾಗಿ ತನ್ನ ಗೇಯತೆಯಿಂದಾಗಿ ತ್ರಿಪದಿ ಜನ-ಮನಕ್ಕೆ ಪ್ರಿಯವಾಗುತ್ತ ಬಂದಿದೆ.

ಒಟ್ಟಾರೆ ಗತಿಯ ಸಹಜತೆ, ರಚನಾ ಸೌಲಭ್ಯ, ನುಡಿ-ನಾದಲಯಗಳ ಸಜೀವ ಸಕೀಲತೆ, ಹಿತವಾದ ಪ್ರಾಸ ವಿನ್ಯಾಸದ ರೀತಿ, ಮಿಗಿಲಾಗಿ ಅದರ ಗೇಯತೆ-ಇವುಗಳಿಂದಾಗಿ ತ್ರಿಪದಿಯ ಗೀತಗಳು ಜನಾನುರಾಗಕ್ಕೆ ಪಾತ್ರವಾಗುತ್ತಾ ಬಂದಿವೆ.

ಕಾಯಕದ ಸುತ್ತ ತಿರುಗಿದ ರಾಗ

ಈ ಸವಿ ಹಾಡುಗಳು, ರಾಗ-ರಚನೆಗಳ ಸಂದರ್ಭ ಸನ್ನಿವೇಶಗಳನ್ನು ಕುರಿತು ವಿವೇಚಿಸಿದರೆ, ಅವು ಹೆಚ್ಚಾಗಿ ಕಾಯಕದ ಸುತ್ತ ತಿರುಗುತ್ತಬಂದ ಹಾಡುಗಳು ಎನ್ನಲು ಅಭ್ಯಂತರವಿರದು. ದುಡಿತದಿಂದ ದಣಿವಾಗದಂತೆ ದನಿ ಎಳೆಯುತ್ತ ಬಂದಿವೆ ಅವು. ಗರತಿಯರ ಹಾಡುಗಳಿಗಂತೂ ಈ ಮಾತು ವಿಶೇಷವಾಗಿ ಅನ್ವಯಿಸುತ್ತದೆ. ಕುಟ್ಟುವಾಗ ಬೀಸುವಾಗ ಹಾಗೂ ಉಳಿದ ಮನೆಗೆಲಸಗಳಲ್ಲಿ ತೊಡಗಿದಾಗ ಗರತಿಯರ ದನಿ ಈ ಹಾಡುಗಳಲ್ಲಿ ಆಡುತ್ತ ಬಂದುದುಂಟು. ಆ ಹಾಡುಗಳಲ್ಲಿಯೇ ಈ ಬಗೆಗೆ ಸೂಚನೆ ಉಂಟು :

ಕುಟ್ಟುಬೀಸುವ ಹಾಡು ಯಾವ್ಯಾಕಿ ಕಲಿಸ್ಯಾಳ
ಕೃಷ್ಣನ ತಂಗಿ ಸುಭದ್ರ—ಕಲಿಸ್ಯಾಳ
ಕೃಷ್ಣನ ಮ್ಯಾಲ ಪದಗೋಳ್

ರಾಗಿ ಬೀಸುವ ಕಲ್ಲೆ ರಾಜಾನ್ನ ಒಡೆಗಲ್ಲೆ
ರಾಯ ಅಣ್ಣಯ್ನ ಅರಮನೆ– ರಾಗಿ ಕಲ್ಲೆ
ರಾಜ ಬೀದಿಗೆ ದನಿದೋರೆ

ಇಷ್ಟೇ ಏಕೆ ಕಾಯಕದ ಕಲ್ಪನೆ ಕೈಲಾಸದೆತ್ತರಕ್ಕೆ ಏರಿದುದುಂಟು ನಮ್ಮ ಗರತಿಯರ ಹಾಡುಗಳಲ್ಲಿ.

ಕಸವ ಹೊಡೆದ ಕೈಯು ಕಸ್ತೂರಿ ನಾತಾವ
ಬಸವಣ್ಣ ನಿನ್ನ ಸೆಗಣೀಯ – ಬಳಿದ ಕೈ
ಎಸಳ ಯಾಲಕ್ಕಿ ಗೊನಿ ತಾನ

ಇನ್ನು ಗಂಡಸರ ಕೃಷಿಕಾರ್ಯದ ಹಾಡುಗಳಲ್ಲೂ ತ್ರಿಪದಿಯೇ ಪ್ರಮುಖವಾಗಿ ದನಿದೋರಿದೆ. ಹೊಲವನ್ನು ಉತ್ತುವಾಗ, ಬಿತ್ತುವಾಗ, ಬಂದ ಬೆಳೆಯನ್ನು ರಾಶಿ ಮಾಡುವಾಗ ಸೂಸಿ ಬಂದ ಹಾಡುಗಳ ವೋಡಿ ತ್ರಿಪದಿಗಳಲ್ಲಿಯೇ ಮೂಡಿ ಬಂದಿದೆ.

ಬಿತ್ತುವ ದಿನ ಬಂತು ಎತ್ತು ತಯ್ಯಾರ ಮಾಡೊ
ಮುತ್ತಿನ ಕೂರಗಿ ಹೊರಗಿಡೊ ನಂಬಸವಗೆ
ಎತ್ತಿ ಆರತಿ ಬೆಳಗೀರೆ

ಕೃಷಿ ಕಾರ್ಯಕ್ಕೆ ಹೀಗೆ ಸಡಗರದಿಂದ ಸಜ್ಜುಗೊಂಡಾಗ ಮಳೆರಾಜ ದಯದೋರ ದಿರುವನೆ ?

ಮುಂಗಾರಿ ಮಳೆರಾಜ ಸಿಂಗಾರ ಏನಾಗ್ಯಾನ
ಭಂಗಾರ ಕಣ್ಣ ತೆರೆದಾನ – ಒಕ್ಕಲಮಗನ
ಕೋಲಿಯು ಕುಂಟೆ ಹರಗ್ಯಾನ

ಹಾಡುವ ಬಗೆಗಳು

ಬಾಳಿನ ನಡೆ–ನುಡಿ, ನಯ–ನಾಜೂಕು, ಅಂದ–ಚೆಂದ, ಸರಳ ಸಂಸ್ಕೃತಿಯ ಸಂಪದ ಗರತಿಯರ ಹಾಡುಗಳಲ್ಲಿ ದನಿದೋರಿವೆ. ಇವುಗಳನ್ನು ಕೊರಳೆತ್ತಿ ಹಾಡುವ ರೀತಿ ಒಂದಲ್ಲ ಹಲವು. ಸಂದರ್ಭಾನುಸಾರವಾಗಿ 'ತೋಲ' 'ನೀಲ' 'ಸೋ' ಈ ಮೊದಲಾದ ಸೊಲ್ಲುಗಳನ್ನು (ದನಿ) ಪಲ್ಲವಿಗಳಂತೆ ಹೊಂದಿಸಿಕೊಂಡು ರಾಗಿಸುವ ಸಂಪ್ರದಾಯ ಗರತಿಯರ ಹಾಡುಗಳಲ್ಲಿ ರೂಢವಾಗಿದೆ. ಬೀಸುವ-ಕುಟ್ಟುವ ಮನೆಗೆಲಸದ ಹಾಡುಗಳು, ಲಾಲಿ ಪದಗಳು, ಮದುವೆಯ ಸಂದರ್ಭದ ಹಾಡುಗಳು, ಸೋಬನ ಪದಗಳು, ಹಸೆಗೆ ಕರೆಯುವ ಹಾಡುಗಳು, ಇವುಗಳ ಝುಳುಕಗಳು ಸ್ವಲ್ಪ ಬೇರೆ ಬೇರೆ ಕೋಲಾಟದ ಪದಗಳಲ್ಲಿ ತ್ರಿಪದಿ ಒಂದು ವಿಶೇಷ ಸ್ವರ–ಲಹರಿಯನ್ನು ತಾಳುತ್ತದೆ. ಸನ್ನಿವೇಶಕ್ಕೆ ತಕ್ಕಂತೆ ತ್ರಿಪದಿಯ ಪದಗಳನ್ನು ಮಂದ ಗತಿಯಲ್ಲಿಯೋ, ಮಧ್ಯಮಗತಿಯಲ್ಲಿಯೋ, ತ್ವರಿತ ಗತಿಯಲ್ಲಿಯೋ ಹೇಳುತ್ತಾರೆ. ತ್ರಿಪದಿಯ ಸ್ವಾರಸ್ಯಕ್ಕೆ ಹೀಗೆ ಶ್ರುತಿ ವೈವಿಧ್ಯವೂ ಒಂದಿನಿತು ಕಾರಣವಾಗುತ್ತದೆ.

ತ್ರಿಪದಿಯ ಎರಡನೆ ಚರಣವನ್ನು ತಿರುಗಿ ಹೇಳುವ ಸಂಪ್ರದಾಯದಿಂದ ಅದರ

ಸೊಗಸು ಇನ್ನೂ ಹೆಚ್ಚುತ್ತದೆ. ತ್ರಿಪದಿಯ ಹಾಡುಗಳನ್ನು ಹೀಗೆ ಹೇಳುವ ಬಗೆಯನ್ನು ಕೆಳಗೆ ರೂಪಿಸಿ ತೋರಲಾಗಿದೆ.

ಸರದಾರ ಬರುವಾಗ ಸುರಿದಾವ ಮಲ್ಲೀಗಿ
ದೊರೆ ನನ್ನ ತಮ್ಮ ಬರುವಾಗ
ದೊರೆ ನನ್ನ ತಮ್ಮ ಬರುವಾಗ– ಯಾಲಕ್ಕಿ
ಗೊನಿ ಬಾಗಿ ಹಾಲ್ಸ ಸುರಿದಾವ

'ನೀಲ' ಎಂಬ ಸೊಲ್ಲನ್ನು ಸೇರಿಸಿ ಹೇಳುವ ಹದಕ್ಕೆ ಉದಾಹರಣೆ:

ಅಕ್ಕ ತಂಗೆರು ನಾವು ಅಚ್ಚ ಮುತ್ತೈದೆರು
ಹಚ್ಚೋಣು ಬಾರ ಅರಿಷಣ। ನೀಲ
ಹಚ್ಚೋಣು ಬಾರ ಅರಿಷಣ ತಮ್ಮನ
ಸುತ್ತೋಣು ಬಾರ ಸುರಗೀಯ। ನೀಲ.

(ಅರಿಷಣ ಹಚ್ಚುವ ಹಾಡಿನಿಂದ)

ಇದರಂತೆ 'ಕೋಲ' ಎಂಬ ಸೊಲ್ಲಿನೊಡನೆ ರಾಗಿಸುವ ರೀತಿ:

'ದನಿ': ಜಾಲಗಾರನ ಮಗಳ ಜಾಜಿ ಹೂವನ ಕೊಯ್ದು
ಲಿಂಗಕ್ಕೈದ್ಹೂವ ದಯಮಾಡ। ಕೋಲ

'ಮಾರ್ದನಿ': ಲಿಂಗಕ್ಕೈದ್ಹೂವ ದಯಮಾಡಿ ಕೊಟ್ಟೆರ
ನಮ್ಮವರು ನನ್ನ ಬೈವಾರ। ಕೋಲ

(ಗಂಗೀ–ಗೌರಿ ಹಾಡಿನಿಂದ)

ಮೇಲಿನ ಪದ್ಯದಲ್ಲಿ ದನಿ ಮಾರ್ದನಿಗಳನ್ನು ಗುರುತಿಸಿ ತೋರಿದುದನ್ನು ಗಮನಿಸಿದರೆ ತ್ರಿಪದಿಯನ್ನು ಸಂವಾದ ಗೀತಗಳಿಗೆ ಸರಸವಾಗಿ ಬಳಸಬಹುದೆಂಬುದು ತಿಳಿದುಬಂದೀತು. ಕಥನ ಗೀತಗಳಲ್ಲಿ ಈ ತೆರನಾದ ಸಂವಾದ ಸುರಮ್ಯವಾಗಿ ಬಳಕೆಗೊಂಡಿದೆ.

'ಸೋ' ಎಂದು ದನಿಗೂಡಿಸಿಕೊಂಡು ಹಾಡುವ ಸವಿಗೆ ಒಂದು ಉದಾಹರಣೆ:

ಮಾವಿನ ಕಾಯಿ ತಂದು ಮಾವ ಉಡಿಯಲಿ ತುಂಬಿ
ಮಾಯದ ಮಕ್ಕಳ ಹಡೆಯೆಂದು। ಸೋ
ಮಾಯದ ಮಕ್ಕಳ ಹಡೆಯೆಂದು ತಂಗೆವಗ
ಮಾವಯ್ಯ ಹರಕೆ ಕೊಟ್ಟಾನ। ಸೋ

(ಉಡಿತುಂಬುವ ಹಾಡಿನಿಂದ)

ಸಾಮಾನ್ಯವಾಗಿ ಸೋಬಾನೆ (ಶೋಭನ) ಪದಗಳನ್ನು ಹೇಳುವ ಬಗೆಯಿದು.
ಇದೇ ಬಗೆಗೆ ಇನ್ನೊಂದು ತ್ರಿಪದಿ :

ಅತ್ತಿಂದ ಬಂದಾವ ಮುತ್ತಿನೆರಡಾರೂತಿ
ಉಪ್ಪರಗಿ ಗಗನ ತುಳುಕೂತ | ಸೋ
ಉಪ್ಪರಗಿ ಗಗನ ತುಳುಕೂತ ತಂಗೆವ್ವನ
ಅತ್ತಿ ಆರೂತಿ ಬೆಳಗ್ಯಾಳ | ಸೋ

ನಮ್ಮ ಸಂಸ್ಕೃತಿಯ ಶಿಷ್ಟ ಸಂಪ್ರದಾಯ ಮಿನುಗಿದೆ ಇಲ್ಲಿ. ಎಳೆದಂತೆ ದನಿ ಹೊರಡುತ್ತದೆ ತ್ರಿಪದಿಯಲ್ಲಿ. ಅದರಿಂದಾಗಿಯೇ ಈ ವಿವಿಧ ರಾಗ–ರಂಜನೆ ಸಾಧ್ಯ.

ಈಚೆಗೆ

ಇದೆಲ್ಲಾ ಸರಿ, ಆದರೆ ಇತ್ತೀಚೆಗೆ ತ್ರಿಪದಿಯ ರಚನೆ ಮತ್ತು ರಾಗ ಇಳಿಮುಖದಲ್ಲಿವೆ. ಈ ಯುಗದ ಭಾವಗೀತಗಳಲ್ಲಿ ತ್ರಿಪದಿ ಕಣ್ಣಿಗೆ ಬೀಳುವುದು ತುಂಬಾ ಕಡಮೆ; ತೀರ ವಿರಳ. ನಾಲ್ಕಾರು ಕವಿಗಳು ಮಾತ್ರ ತ್ರಿಪದಿಯನ್ನು ಪ್ರಯೋಗಿಸಿದ್ದಾರೆ; ಅಪರೂಪವಾಗಿ. ಇಂದಿನ ತ್ರಿಪದಿ ರಚನೆಯ ಮಾದರಿ :

ಕಂದ ಹಾಡಿದರನ್ನ ಕೆನೆ ಹಾಲು ಕುಡಿದಂತ
ಆಡಿದರ ಮಾತನಾಡಿದರ ಹಾಡಿದರ
ಉಂಟೆ ಬೇರೊಂದು ಅದರಂತ

—ಅಂಬಿಕಾತನಯದತ್ತ

ಅತ್ತ ಸರಸತಿಯಾಗಿ ಮತ್ತೆ ಸಿರಿ ಸೊಸೆಯಾಗಿ
ಹತ್ತು ಬೆರಳುಗಳು ತೊತ್ತಾದರೆಲ್ಲರಿಗು
ಹೆತ್ತಪ್ಪ ಕಡುಬು ಸಾರಜ್ಞ |

—ಗಂಗಪ್ಪವಾಲಿ

ನನ್ ರತ್ನ : ನೀ ಬಂದು ಬಡಿಗಿಡಿಯೋದ್ ಎಲ್ಬಂತು ?
ಗಾಳ್ನಾಗಿ ನೀ ಬಂದ್ರೆ ನನಗೇನು—ನಾನೊಂದು
ಮೀನಾಗಿ ಒಳೆಯಾಗ ಮುಳಗೇನು

—ರಾಜರತ್ನಂ

ಇತ್ತೀಚೆಗೆ ತ್ರಿಪದಿ ಸಾಹಿತ್ಯವನ್ನು ರಚಿಸಿದವರಲ್ಲಿ ಶ್ರೀಮತಿ ಜಯದೇವಿತಾಯಿ ಲಿಗಾಡೆಯವರ ಕಾಣಿಕೆ ಗಾತ್ರದಲ್ಲಿ ಹಿರಿದು. ಅವರ 'ತಾಯಿ–ಪದಗಳು' 'ಸಿದ್ಧರಾಮ ಪುರಾಣ' ಉದ್ದಕ್ಕೂ ತ್ರಿಪದಿಯಲ್ಲಿಯೇ ರಚಿತವಾಗಿವೆ. ಅವರ ರಚನೆಗೆ ಒಂದು ಉದಾಹರಣೆ :

ತರತರದ ಹೂಗಳು ಮೈ ಮರೆತು ನಿಂತಾವ
ಬೆರತಾವ ಶಿವನ ಲೀಲೆಯೋಳು
ಬೆರತಾವ ಶಿವನ ಲೀಲೆಯೊಳು ಒಂದೀನ
ಮೆರೆದು ಉದರ್ಯಾವ ಅವನಡಿಗೆ

('ತಾಯಿ-ಪದ'ಗಳಿಂದ)

ತ್ರಿಪದಿಯ ಹಾಡುಗಳನ್ನು ಸಂಗ್ರಹಿಸಿ ಸಂಪಾದನೆ ಮಾಡುವ ಕಾರ್ಯ ಈ ಯುಗದಲ್ಲಿ ಉತ್ಸಾಹದಿಂದ ನಡೆಯಿತು; ಇನ್ನೂ ನಡೆಯುತ್ತಿದೆ. ಇದೊಂದು ಸುದೈವ. ಇದರ ಪರಿಣಾಮವಾಗಿ ಓದುಗರ ಕೈಗೆ ಅಚ್ಚಾಗಿ ಬಂದ ಜನಪದ ಹಾಡುಗಳ ಸಂಗ್ರಹಗಳಲ್ಲಿ 'ಗರತಿಯರ ಹಾಡು', 'ಮಲ್ಲಿಗೆ ದಂಡೆ', 'ನಾಡ ಪದಗಳು' ಇವೇ ಮೊದಲಾದವುಗಳನ್ನು ಹೆಸರಿಸಬಹುದು. ತೀರ ಇತ್ತೀಚೆಗೆ 'ಸಂಪಿಗೆ ಅರಳಾವೆ', 'ಕೋಲು ಮಲ್ಲಿಗೆ ಕೋಲೆ', 'ಮಲ್ಲಿಗೆ ನಗುತಾವೆ'-ಇವುಗಳನ್ನು ಹೆಸರೆತ್ತಿ ಹೇಳಬಹುದು. ಈ ಕಾರ್ಯ ಭರದಿಂದ ಸಾಗಿದಷ್ಟೂ ಒಳಿತು.

ತ್ರಿಪದಿಯ ದನಿಯಾದರೋ ಇಂದಿನ ಜೀವನದಲ್ಲಿ ಅಡಗಿಹೋಗುತ್ತಿದೆ. ಇಂದಿನ ಜೀವನದ ರೀತಿ-ನೀತಿ, ರುಚಿ-ಅಭಿರುಚಿಗಳಲ್ಲಾದ ಬದಲಾವಣೆ, ಇದಕ್ಕೆ ಒಂದಿಷ್ಟು ಕಾರಣವೆನ್ನಬಹುದು. ಇಂದಿನ ವಾತಾವರಣದಲ್ಲಿ ನುಗ್ಗಿಬರುತ್ತಿರುವ ಚಿತ್ರ-ವಿಚಿತ್ರ ಗತಿ-ಗತ್ತುಗಳ ಸಂದಟ್ಟಣೆಯಲ್ಲಿ ತ್ರಿಪದಿಯ ಮೆಲುದನಿ ಕೇಳದಂತಾಗಿದೆ. ಆದರೆ ಹಿಂದಣ ಹಾಡುಗಳ ಸೌರಭ, ಸಂಪದ ತಕ್ಕಷ್ಟು ಸೂಸಿ ಬಾರದಿದ್ದರೆ ತುಂಬು ಬದುಕಿನ ದೃಷ್ಟಿಯಿಂದ ಒಂದಿಷ್ಟು ಕೊರತೆಯೇ ಸರಿ. ಈ ಕೊರತೆ ಪರಿಹಾರವಾಗ ಬೇಕಾದರೆ ಮೂರು ದಿಶೆಯಲ್ಲಿ ಕಾರ್ಯ ನಡೆಯುವುದು ವಿಹಿತ :

(೧) ತ್ರಿಪದಿಯ ಅಪಾರ ಸಾಹಿತ್ಯ ಸಂಪತ್ತು ಶೋಧವಾಗದೆ ಅದೆಷ್ಟೋ ಉಳಿದಿರಲುಸಾಕು; ಅದು ಶೋಧವಾಗಬೇಕು.

(೨) ಶೋಧವಾದ ಹಾಗೆ ಅಚ್ಚಾಗಿ ಓದುಗರಿಗೆ ಒದಗುವಂತಾಗಬೇಕು.

(೩) ತ್ರಿಪದಿ ಸಾಹಿತ್ಯ ಮೂಲತಃ ಹಾಡುಗಬ್ಬ. ಸುದೈವದಿಂದ ಈ ಜನಪದ ಹಾಡುಗಳನ್ನು ಮೂಲ ರಾಗದಲ್ಲಿ ರುಚಿಯಾಗಿ-ಶುಚಿಯಾಗಿ ಹಾಡುವವರು ಇನ್ನೂ ಅಲ್ಲಲ್ಲಿ ಜೀವಿಸಿದ್ದಾರೆ. ಅವರಿಂದ ಜನಪದ ತ್ರಿಪದಿಗಳನ್ನು ಹಾಡಿಸಿ ಧ್ವನಿಮುದ್ರಣ ಮಾಡಿಕೊಳ್ಳಬೇಕು. ಹಾಗೆ ಮಾಡಿದರೆ ಬಾನುಲಿ ಕೇಂದ್ರಗಳಿಂದ ಈ ಹಾಡುಗಳನ್ನು ತರಂಗ-ತರಂಗವಾಗಿ ಬಿತ್ತರಿಸಲು ಅನುವಾಗುವುದು. ಈ ಬಗೆಗೆ ತಕ್ಕ ಏರ್ಪಾಡು ಆಗಬೇಕು. ಜನಪದ ಗೀತಗಳು ಇಂತು ತಮ್ಮ ಸವಿರಾಗವನ್ನು ನಾಡಿನಲ್ಲೆಲ್ಲ ಸೂಸುವಂತಾದರೆ ಅವು ಮರಳಿ ಜನಾನುರಾಗವನ್ನು ಪಡೆಯದಿರವು. ನಮ್ಮ ಜನಪದ ಹಾಡುಗಳ ಜೀವ ಸ್ವರ ಮರಳಿ ಹೊನಲುಗೊಳ್ಳುವುದಕ್ಕೆ ಇದೊಂದು ದಾರಿ. ಇದರಿಂದ ತ್ರಿಪದಿ ಸಾಹಿತ್ಯ ಪುನರುಜ್ಜೀವನ ಹೊಂದೀತು; ಅವರ ಪರಿಮಳ ನಮ್ಮ ಬದುಕಿಗೆ ಒದಗುವಂತಾದೀತು.

ಡಾ. ಕೆ. ಎಂ. ಕೃಷ್ಣರಾವ್

ದಾಸ ಸಾಹಿತ್ಯ

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ದಾಸ ಸಾಹಿತ್ಯ ಪ್ರಶಂಸಾರ್ಹವಾದ, ವಿಶಿಷ್ಟವಾದ ಮತ್ತು ಹೃದಯಂಗಮವಾದ ಒಂದು ಹೊನಲಾಗಿದೆ. ಈ ಸಂಕೀರ್ತನಾತ್ಮಕ ಭಕ್ತಿ ಸಾಹಿತ್ಯ ಪ್ರವಾಹ ಆಪಾತ ಮಧುರವೂ, ಆಲೋಚನಾಮೃತವೂ ಆಗಿದೆ.

'ದಾಸ'ರೆಂದರೆ ಭಕ್ತರು–ಇಲ್ಲಿ ಹರಿಭಕ್ತರು ಎಂದರ್ಥ. ಅವರು ಸೃಜಿಸಿದ, ಸ್ಫೂರ್ತಿಯಿಂದ ಹಾಡಿದ ರಸವತ್ಕೃತಿ 'ಸಮುದಾಯಕ್ಕೆ ಹರಿದಾಸ ಸಾಹಿತ್ಯ' 'ದಾಸ ಸಾಹಿತ್ಯ' 'ದಾಸರ ಪದಗಳು' ಎಂದು ಮುಂತಾಗಿ ಕರೆಯುವುದು ವಾಡಿಕೆ.

ಸಾವಿರ ವರುಷಗಳಿಗಿಂತಲೂ ಹೆಚ್ಚು ಪ್ರಾಚೀನತೆಯುಳ್ಳ ಪ್ರೌಢ–ಪಂಡಿತ–ಪರಂಪರೆಯ ಸಂಪತ್ತುಳ್ಳ ಸಿರಿಗನ್ನಡ ಸಾಹಿತ್ಯದ ಎರಡು ವಿಶಿಷ್ಟ ಸ್ರೋತಗಳು ಶಿವಶರಣ ಸಾಹಿತ್ಯ ಮತ್ತು ಹರಿದಾಸ ಸಾಹಿತ್ಯ. ಎರಡೂ ಭಕ್ತಿ–ನೀತಿ, ಸದಾಚಾರ–ನಿರಾಡಂಬರ, ಹಸನಾದ ಜೀವನ ಬೋಧಕವೇ. ಕಾಲಾನುಕ್ರಮದಲ್ಲಿ ಮೊದಲು ಹರಿದು ಬಂದುದು ಶರಣ ಸಾಹಿತ್ಯ; ಅನಂತರ ಉಗಮಹೊಂದಿ ಹೊನ್ನಿನಂತೆ ಹೊಳೆದು ಬೆಳಗಿದುದು ಹರಿದಾಸ ಸಾಹಿತ್ಯ. ಎತ್ತರದಲ್ಲಿ ಹರಿದು ಸಾಮಾನ್ಯರಿಗೆ ಎಟುಕದಂತಿದ್ದ ಪ್ರೌಢತತ್ತ್ವಗಳೆಂಬ ಗಗನ ಗಂಗಾಸಲಿಲವನ್ನು ಸಾಮಾನ್ಯಜನಮನೋಮಂದಿರಕ್ಕೆ ಹಾಯಿಸಿ, ಹೃದಯವನ್ನು ಹಸನುಮಾಡಿದ, ನಾಡನ್ನು ಪವಿತ್ರಗೊಳಿಸಿ, ಓದಿಕೇಳಿ ಮನನಮಾಡಿದವರನ್ನು ಪೂತಾತ್ಮರನ್ನಾಗಿ ಮಾಡಿದ ಸತ್ಕೀರ್ತಿ ಶಿವಶರಣರಿಗೂ ಹರಿದಾಸರಿಗೂ ಸಮನಾಗಿ ಸಲ್ಲುತ್ತದೆ–ತತ್ತ್ವ ಸಿದ್ಧಾಂತಗಳ ದೃಷ್ಟಿಯಿಂದ ಇವೆರಡು ಪಂಥಗಳೂ ಬೇರೆಬೇರೆಯಾದರೂ. ಆಯಾ ಕಾಲಗಳಲ್ಲಿ ಅದರ ಆವಶ್ಯಕತೆಯನ್ನು ಅರಿತು ಆತ್ಮೋದ್ಧಾರಕವಾದ ಈ ಉದಾತ್ತ ಉಪಕಾರವನ್ನು ಮಾಡಿದ ಈ ಹಿರಿಯ ಚೇತನರಿಗೆ ನಾಡು ಚಿರಕೃತಜ್ಞ.

ಪ್ರಸಕ್ತ ಪ್ರಬಂಧ ಹರಿದಾಸಸಾಹಿತ್ಯದ ಉಗಮ, ವೃದ್ಧಿ, ಗ್ರಂಥರಾಶಿ, ಆದರ್ಶದಾಸರು, ಅವರ ಪೀಳಿಗೆ, ದಾಸರ ಬೋಧೆ–ಸಂದೇಶ–ವೈಶಿಷ್ಟ್ಯ ಮತ್ತು ಉಪಕಾರಗಳನ್ನು ಪರಿಶೀಲಿಸುವುದಾಗಿದೆ.

ದಾಸಸಾಹಿತ್ಯದ ಕೃತಿಗಳು ಶಾಸ್ತ್ರೀಯವಾಗಿ ಪರಿಷ್ಕರಣ ಹೊಂದಿ ಪ್ರಕಟ

ವಾಗಿರುವುದು ತುಂಬ ಕಡಿಮೆ ಎಂಬುದನ್ನು ಮೊದಲು ಹೇಳಬೇಕಾದುದು ಅಗತ್ಯ. ಈ ಪರಿಷ್ಕರಣ ಕಾರ್ಯದಲ್ಲಿ ಗ್ರಂಥಸಂಪಾದನೆಯ, ಸಂಶೋಧನೆಯ ಸಮಸ್ಯೆಗಳೂ ಹೇರಳವಾಗಿವೆ. ಆದರೂ ಅಲ್ಲಲ್ಲೇ ದೊರೆತ ಹಸ್ತಪ್ರತಿಗಳಿಂದ, ಪರಂಪರಾಗತವಾಗಿ ಹಲವರ ಬಾಯಿಯಲ್ಲಿ ಹರಿದು ಬಂದ ನುಡಿಮುತ್ತುಗಳಿಂದ ಸಂಗ್ರಹಿಸಿದ ಕೃತಿಗಳು ಅಲ್ಲಲ್ಲೇ ಪ್ರಕಟವಾಗಿವೆ.

ಇವುಗಳಲ್ಲಿ ಉಡುಪಿಯ ಶ್ರೀ ಪಾವಂಜೆಯವರ, ಬೆಂಗಳೂರಿನ ಸುಬೋಧ ಅವರ ಮತ್ತು ಲಿಂಗಸುಗೂರಿನ ಶ್ರೀವರದೇಂದ್ರ ಹರಿದಾಸ ಸಾಹಿತ್ಯ ಮಂಡಲದವರ ಮತ್ತು ಬೆಂಗಳೂರಿನಿಂದ ಸುಮಾರು ಹನ್ನೆರಡುವರ್ಷಕಾಲ ಪ್ರಕಾಶಗೊಂಡ ಶ್ರೀ ಹರಿದಾಸ ಭಾರತೀ ಪತ್ರಿಕೆಯ ಪ್ರಕಟಣೆಗಳು ಮುಖ್ಯವಾದುವು. ಈ ಪ್ರಕಟಣೆಗಳಲ್ಲೆಲ್ಲಾ ಪಾಠವೇ ಮುಂತಾದ ಸಮಸ್ಯೆಗಳು ಹೇರಳವಾಗಿವೆ. ಅಷ್ಟಾದರೂ ಪ್ರಾರಂಭಕಾರ್ಯ ಅವರಿಂದ ಆಗಿರುವುದು ಮುಂದಿನ ಸಂಶೋಧನೆಗೆ, ಸಮಸ್ಯೆಯ ಅರಿವಿಗೆ, ವಿಮರ್ಶೆ ಪರಿಶೀಲನೆಗಳಿಗೆ ಎಷ್ಟೋ ಸಹಾಯಕವಾಗಿರುವುದರಿಂದ ಈ ನಾಲ್ವರು ಪ್ರಕಾಶಕರೂ ನಾಡಿನ ಕೃತಜ್ಞತೆಗೆ ಪಾತ್ರರು.

ಇವುಗಳಲ್ಲದೆ ೧೯೬೪ರಲ್ಲಿ ನಡೆದ ಶ್ರೀ ಪುರಂದರದಾಸರ ನಾಲ್ಕುನೂರು ವರ್ಷಗಳ ಪುಣ್ಯೋತ್ಸವ ಸಮಯದಲ್ಲೂ, ೧೯೬೫ರಲ್ಲಿ ಜರುಗಿದ ಶ್ರೀ ಕನಕದಾಸರ ಚತುಶ್ಶತ ಮಾನೋತ್ಸವ ಸಮಯದಲ್ಲೂ ಈ ಇಬ್ಬರು ಹರಿದಾಸವರ್ಯರ ಕೃತಿಗಳು ಧಾರವಾಡ, ಹುಬ್ಬಳ್ಳಿ ಮತ್ತು ಬೆಂಗಳೂರುಗಳಲ್ಲಿನ ಆಯಾ ಉತ್ಸವ ಸಮಿತಿಯವರಿಂದ ಪ್ರಕಟವಾಗಿವೆ. ಇವು ಬಹುಮಟ್ಟಿಗೆ ತೃಪ್ತಿಕರವೂ ಆಗಿದೆ ಎಂದೂ ಹೇಳಬಹುದು. ಆದರೂ ಇನ್ನೂ ಪ್ರಕಟವಾಗಬೇಕಾದ ದಾಸಸಾಹಿತ್ಯ ರಾಶಿ ಭೂಯಿಷ್ಠವಾಗಿದೆ.

ಉಗಮ

ಕನ್ನಡ (ಹರಿ) ದಾಸ ಸಾಹಿತ್ಯ ಪಂಥದ ಉಗಮ ಯಾರಿಂದ ಮತ್ತು ಯಾವಾಗ ಆಯಿತು ಎಂಬುದರಲ್ಲಿ ಭಿನ್ನಾಭಿಪ್ರಾಯಗಳುಂಟು. ಇದರಲ್ಲಿ ಮುಖ್ಯವಾಗಿ ಮೂರು ಅಭಿಪ್ರಾಯಗಳು ಕಂಡುಬಂದಿವೆ.

ಕ್ರಿ. ಶ. ೮೭೯ (ಶಾ. ಶ. ೮೦೧) ರಲ್ಲಿದ್ದರು ಎನ್ನಲಾಗಿರುವ ಶ್ರೀ ಅಚಲಾನಂದ ದಾಸರಿಂದ; ಕ್ರಿ. ಶ. ೧೩೩೦ರಲ್ಲಿದ್ದ ಶ್ರೀ ನರಹರಿತೀರ್ಥರಿಂದ ಮತ್ತು ೧೫ನೆಯ ಶತಮಾನದ ಶ್ರೀ ಶ್ರೀಪಾದರಾಜರಿಂದ ಎಂಬುವೇ ಆ ಮೂರು ಭಿನ್ನಾಭಿಪ್ರಾಯಗಳು. ಈ ಅಭಿಪ್ರಾಯಗಳ ಪರಿಶೀಲನೆ, ವಿವೇಚನೆ ಅಗತ್ಯ.

ಈ ಮೂರು ಅಭಿಪ್ರಾಯಗಳಲ್ಲಿ ಮೊದಲೆರಡಕ್ಕಿಂತ ಮೂರನೆಯದು ಹೆಚ್ಚು ಸಮಂಜಸವೆಂದು ಹೇಳಲು ಆಧಾರಗಳಿವೆ. ಈ ವಿಚಾರದಲ್ಲಿ ಕೊನೆಯಮಾತು ಎಂದು ಹೇಳುವುದು ಕಷ್ಟವಾದರೂ, ೧೪ನೆಯ ಶತಮಾನದವರಾದ ಶ್ರೀ ನರಹರಿತೀರ್ಥರು ಕೆಲವು ಕೃತಿಗಳನ್ನು ಕನ್ನಡದಲ್ಲಿ ರಚಿಸಿ ಈ ಬಗೆಯ ಸಾಹಿತ್ಯ ಪ್ರಕಾರಕ್ಕೆ ಬೀಜಾಂಕುರ

ಮಾಡಿದರು ಎಂದೂ, ಅನಂತರ ೧೫ನೆಯ ಶತಮಾನದ ಶ್ರೀ ಶ್ರೀಪಾದರಾಜರು ಈ ಹರಿದಾಸ ಪಂಥದ ಆದ್ಯ ಪ್ರವರ್ತಕರಾಗಿ, ಗಟ್ಟಿಯಾದ ಅಸ್ತಿಭಾರವನ್ನು ಹಾಕಿ ತಮ್ಮ ಶಿಷ್ಯ ಶ್ರೇಷ್ಠರಿಂದ ಮುಂದುವರಿದು ಬೆಳಗಲು ಕಾರಣರಾದರೆಂದೂ ಸದ್ಯಕ್ಕೆ ಇಟ್ಟುಕೊಳ್ಳ ಬೇಕಾಗಿದೆ.

ಶ್ರೀ ಅಚಲಾನಂದ ದಾಸರು ಶಾಲಿವಾಹನ ಶಕ ೮೦೧ (ಕ್ರಿ. ಶ. ೮೭೯) ರಲ್ಲಿದ್ದರು ಎಂದು ಹೇಳುತ್ತ ಶ್ರೀ ಬೇಲೂರು ಕೇಶವದಾಸರು ಒಂದು ಸಂಸ್ಕೃತ ಶ್ಲೋಕದ ಆಧಾರವನ್ನು ಕೊಡುತ್ತಾರೆ. ಶ್ರೀ ಅಚಲಾನಂದರಿಗೆ ವಿಳಂಬಿ ಸಂವತ್ಸರದ ಚೈತ್ರ ಶುದ್ಧ ದಶಮಿ ಮಧ್ಯಾಹ್ನ ವಿಠಲನ ಸಾಕ್ಷಾತ್ಕಾರವಾಯಿತು ಎಂದು ಆ ಶ್ಲೋಕದ ಅರ್ಥ.

ಕಾಶೀತಿ ಸಂಖ್ಯಾ ಶತಕಾಲ ಕೇಬ್ದೇ ವಿಳಂಬಿ ವರ್ಷೇ ಕಲಿಚೈತ್ರ ಶುಕ್ಲೇ।
ಪಕ್ಷೇ ದಶಮ್ಯಾಂ ದಿನ ಮಧ್ಯಕಾಲೇ ಪ್ರತ್ಯಕ್ಷ ಕೋಽಭೂತ್ ಗುರು ವಿಠಲಾಖ್ಯ[1]

ಆದರೆ ಈ ವರ್ಷ ೧೨೮೧ ವಿಳಂಬ ಸಂವತ್ಸರ ಎಂಬ ಅಭಿಪ್ರಾಯವೂ ಇದೆ.[2] ಆದ್ದರಿಂದ ಈ ಕಾಲ ನಿಶ್ಚಿತವಲ್ಲ. ಆ ಶ್ಲೋಕವನ್ನು ರಚಿಸಿದವರು ಯಾರು ಯಾವಾಗ ಎಂಬುದೂ ಪರಿಶೀಲನಾರ್ಹ.

ಅಚಲಾನಂದರ ಉಗಾಭೋಗಗಳು-ಪದಗಳು ಕೆಲವು ದೊರೆತಿವೆ (ಸುಮಾರು ೩೦). ಅವುಗಳ ಭಾಷೆ ಒಂಭತ್ತನೆಯ ಶತಮಾನದ ಕನ್ನಡ ಭಾಷೆಯಂತಿಲ್ಲ. ಉದಾ :

ಸಿರಿ ನಿನಗುಂಟೆಂದು ಗರ್ವಿಸಲಿ ಬೇಡ
ಸಿರಿ ಎನಗಿಲ್ಲೆಂದು (ಜರಿದು) ಮುನಿದು ನೋಡಲಿಬೇಡ
ಹರಿಯೆ ನಿನ್ನಂಥ ಒಡೆಯರು ಎನಗುಂಟು
ಆರುಹೊ ನಿನ್ನೊಡೆಯರ ಅಚಲಾನಂದ ವಿಠಲ

ಕೊಡಲಿ ಬೇಕು ಪಾಪದ ಬೇರ ಕಡಿವಡೆ
ಕೊಡಲಿ ಬೇಕು ಗುರುಹಿರಿಯರ ಕೈಯಲಿ
ಕೊಡಲಿ ಬೇಕು ಸತ್ಪಾತ್ರರಿದ್ದೆಡೆಯಲಿ
ಕೊಡಲಿಲ್ಲ ಕೊಡಲಿಲ್ಲ ಕೊಡಲಿಲ್ಲದವಗೆ
ಕೊಡಲಿಲ್ಲ ಎನ್ನೊಡೆಯ
ಕೇಳೋ ಅಚಲಾನಂದ ವಿಠಲ[3]

---

1 ಶ್ರೀ ಬೇಲೂರು ಕೇಶವದಾಸರ ಸಾಹಿತ್ಯ—ಪುಟ ೧೭.

2 ಡಾ. ಎಚ್. ಕೆ. ವೇದವ್ಯಾಸಾಚಾರ್ಯ ಅವರ 'ಕರ್ಣಾಟಕದ ಹರಿದಾಸರು,' ಪುಟ ೨೪೯.

3 ಶ್ರೀಹರಿದಾಸರ ಉಗಾಭೋಗಗಳು—ಶ್ರೀ ಹರಿದಾಸ ಭಾರತೀ ಗ್ರಂಥರತ್ನಮಾಲೆ.

ಶಿವಶರಣರ ವಚನದ ಪ್ರಭಾವ ಕಾಣುವಂತಹ ವಚನಗಳೂ ಇವೆ:
ಉದಾಹರಣೆಗೆ ಬಸವಣ್ಣನವರ (ಕಾಲ. ಸು. ೧೧೫೦):

ಕುಂಬಳಕಾಯಿಗೆ ಕಬ್ಬುನದ ಕಟ್ಟು ಕೊಟ್ಟರೆ
ಕೊಳೆವುದಲ್ಲದೆ ಬಲುಹಾಗಬಲ್ಲುದೆ
ಅಳಿಮನದವರಿಗೆ ಶಿವದೀಕ್ಷೆಯ ಕೊಟ್ಟರೆ
ಭಕ್ತಿ ಎಂತಹುದೋ—ಮುನ್ನಿನಂತೆ
ಕೂಡಲ ಸಂಗಯ್ಯಾ ಮನಹೀನನ ಮೀಸಲ ಕಾಯ್ದಿರಿಸಿದಂತೆ

ಎಂಬ ವಚನವನ್ನು ಅಚಲಾನಂದರ ಈ ಕೆಳಗಿನ ಉಗಾಭೋಗದೊಂದಿಗೆ ಹೋಲಿಸಬಹುದು:

ಕುಂಬಳಕಾಯಿಗೆ ಕಬ್ಬಿಣದ ಕಟ್ಟನು ಹಾಕೆ
ಅಳಿವಲ್ಲದೆ ಮತ್ತೆ ಉಳಿಯಬಲ್ಲುದೆ ದೇವ
ಅಳಿಮನದವರಿಗೆ ದೀಕ್ಷೆ ಇತ್ತರೆ ದೀಕ್ಷೆ ದೀಕ್ಷೆಯಂತೆ
ತಾನು ತನ್ನಂತೆ ಕೇಳಯ್ಯ ದೇವ ಅಚಲಾನಂದ ವಿಠಲ.[4]

ಇದೂ ಅಲ್ಲದೆ ಅಚಲಾನಂದರು ಬೇಲೂರ ಚೆನ್ನಕೇಶವನನ್ನು ಸ್ತುತಿಸಿರುವ ಒಂದು ಉಗಾಭೋಗ ಹೀಗಿದೆ:

ಚಂದ್ರಕಾಂತದ ಕರಡಿಯೊಳಗೆ ಇಂದ್ರನೀಲದಿಂದೆಸೆವ
ಕುಂದ ಕುಡ್ಮಲ ಪ್ರಜ್ವಲಿತ ಇಂದೀವರ ಶಾಮಕೋಮಲಾಂಗ
ಚಂದದಿಂದೆನ್ನ ಮನದಿಂದಗಲದಿರು ಹರಿ ನಿನ್ನ ಸಿರಿಚರಣವಿರಲಿ
ಅಚಲಾನಂದ ವಿಠ್ಠಲ ಬೇಲೂರ ಚೆನ್ನರಾಯ[5]

ಬೇಲೂರಿನ ಚೆಲುವ ಚೆನ್ನಿಗ ಚೆನ್ನಕೇಶವ ದೇವಮಂದಿರ ನಿರ್ಮಾಣವಾದುದು ಹೊಯ್ಸಳ ವಿಷ್ಣುವರ್ಧನನ ಕಾಲದಲ್ಲಿ (ಸು ಕ್ರಿ. ಶ. ೧೧೪೦). ಈ ಸ್ತೋತ್ರ ಆ ತರುವಾಯ ತಾನೆ ಆಗಿರಬೇಕು?

ಅಚಲಾನಂದರು ದ್ವೈತಸಿದ್ಧಾಂತ ಸ್ಥಾಪನಾಚಾರ್ಯರಾದ ಶ್ರೀಮದಾನಂದ ತೀರ್ಥರನ್ನು (೧೨೩೮-೧೩೧೭) ಸ್ತುತಿಸಿರುವುದೂ ಕಂಡುಬರುತ್ತದೆ.

ಕೇಳೊ ಜೀವವೇ ನೀ ಮಧ್ವಮತವನನುಸರಿಸಿ
ಶ್ರೀ ಲೋಲನಂಘ್ರಿಗಳ ನೆನೆದು ಸುಖಿಸೊ[6]

---

4 ಅದೇ.

5 ಅದೇ.

6 ಶ್ರೀ ಹಲಗೂರು ಕೃಷ್ಣಾಚಾರ್ಯರ 'ಕರ್ಣಾಟಕ ಸಂಗೀತವೂ ಹರಿದಾಸಕೂಟವೂ.'

ಮತ್ತು

ಗುರು ಪವಮಾನನೊಡೆಯ ಅಚಲಾನಂದ ವಿಠ್ಠಲಹರಿಯ
ಚರಣ ಸೇವಕನಾಗಿ ನೀ ಬಾಳು[7]

ಈ ವಾಕ್ಯಗಳು ಸ್ಪಷ್ಟವಾಗಿ ಶ್ರೀ ಮಧ್ವಾಚಾರ್ಯರ ಸ್ತುತಿಸೂಚನೆಯಾಗಿದೆ. ಅವರ ಕಾಲ ೧೩ನೆಯ ಶತಮಾನ. ಆದ್ದರಿಂದಲೂ ಅಚಲಾನಂದರು ಇದಕ್ಕಿಂತ ಹಿಂದೆ ಇದ್ದರೆನ್ನುವಂತಿಲ್ಲ.

ಇಷ್ಟರ ಜೊತೆಗೆ ಪುರಂದರದಾಸರ ಪ್ರಭಾವದಿಂದ ಆರಾಧ್ಯರೆಂಬ ಅರುವತ್ತು ಮಂದಿ ಪಂಡರಪುರದಲ್ಲಿ ಹರಿದಾಸಪಂಥಕ್ಕೆ ಸೇರಿದರು ಎಂಬ ಐತಿಹ್ಯದ ಬೆಂಬಲ ಬೇರೆ ಇದೆ. ಈ ಅರುವತ್ತು ಮಂದಿಯ ಪ್ರಮುಖರೇ ಅಚಲಾನಂದರು ಎಂಬ ಪ್ರತೀತಿಯೂ ಇದೆ. ಇದು ನಿಜವಾಗಿದ್ದರೆ ಪುರಂದರದಾಸರ ವಿಚಾರವಾಗಿ ಅಚಲಾನಂದರು ಹೇಳುವ ಕೃತಿ ದೊರೆತರೆ, ಈ ವಿಚಾರ ಇತ್ಯರ್ಥವೆ ಆಗುತ್ತದೆ. ಈಗ ದೊರೆತಿರುವ ಅಚಲಾನಂದರ ಅಲ್ಪಸಂಖ್ಯೆಯ ಕೃತಿಗಳಲ್ಲಿ ಪುರಂದರದಾಸರ ಸ್ಮರಣೆ—ಸ್ತುತಿಪರ ವಾದುದು ಕಂಡುಬಂದಿಲ್ಲ. ಆದರೂ ಪುರಂದರದಾಸರ ಕಾಲದವರು ಅಥವಾ ತರುವಾಯದವರು ಎಂಬುದಕ್ಕೆ ಒಂದು ಆಧಾರವೂ ಇದೆಯೆನ್ನಬಹುದು. ಶ್ರೀ ವಿಜಯದಾಸರ ಅಪ್ಪಣೆ ಪ್ರಕಾರ ಶ್ರೀ ಆನಂದದಾಸರು ರಚಿಸಿದ 'ಸಂತರನ ನೆನೆಸಿ ಜನರು' ಎಂಬ ಕೃತಿಯ ಕೆಲವು ನುಡಿಗಳು ಹೀಗಿವೆ. ಅನೇಕ ಹರಿದಾಸರನ್ನು, ಇತರ ಸಂತರನ್ನು ಹದಿನೆಂಟು ನುಡಿಗಳಲ್ಲಿ ಹೇಳಿದ ತರುವಾಯ :

ಪುರಂದರದಾಸ। ಗುರುವರದಪ್ಪ ಅಭಿನವ। ಗುರುಮಧ್ವಪತಿದಾಸ।
ಸಿರಿಸೊಬಗು ನರಸಿಂಹ ವಿಠ್ಠಲಾ। ನರಹರಿದಾಸ ವ್ಯಾಸಪತಿ
ಗುರು ಅಚಲಾನಂದ ಶ್ರೀ। ಕರ ವೈಕುಂಠ। ಯೋಗೇಂದ್ರ
ರಂಗಪತಿ। ಅರವಿಂದನಾಭ ಚನ್ನಸ್ವಾಮಿ ಗೋಪಿನಾಥ
ವರಲಕ್ಷ್ಮಿಪತಿ ಸುಂದರ ವೆಂಕಟೇಶ ಅರುವತ್ತುಮಂದಿ ಜನರೂ ॥ ೧೯ ॥
ಮೊದಲ ಆದ್ಯರು ವಂಭತ್ತುಮಂದಿ ಮತ್ತೆ........[8]

ಎಂಬ ಸಂತರ ಪಟ್ಟಿಯಲ್ಲಿ ಅಚಲಾನಂದರ ಹೆಸರು ಪುರಂದರದಾಸರ ತರುವಾಯ ಬಂದಿರುವುದು ಗಮನಾರ್ಹವೆನಿಸುತ್ತದೆ.

ಇನ್ನು ಶ್ರೀ ನರಹರಿತೀರ್ಥರು ಕನ್ನಡದಲ್ಲಿ ಕೃತಿಗಳನ್ನು ರಚಿಸಿ ಹರಿದಾಸ ಸಾಹಿತ್ಯದ ಉಗಮಕ್ಕೆ ಕಾರಣರು ಎಂಬ ಪ್ರತೀತಿಯ ವಿಚಾರ. ಸುಮಾರು ೧೩೦

---

[7] ಶ್ರೀಹರಿದಾಸರ ಉಗಾಭೋಗಗಳು–ಶ್ರೀ ಹರಿದಾಸ ಭಾರತೀ ಗ್ರಂಥರತ್ನ ಮಾಲೆ.

[8] ಶ್ರೀ ವಿಜಯದಾಸರ ಪದಗಳು—ಭಾಗ ೨—ಶ್ರೀ ವರದೇಂದ್ರ ಹರಿದಾಸ ಸಾಹಿತ್ಯ ಮಂಡಲದ ಪ್ರಕಟಣೆ—ಪುಟ ೧೭೯–೧೮೦.

(೨೩೦ ಎಂದೂ ಹೇಳುತ್ತಾರೆ?) ಪದ್ಯಗಳನ್ನು ಹಿಂದಿನ ಹಸ್ತಪ್ರತಿಗಳಲ್ಲಿ (ಚಪ್ಪಗಿರಿಯಲ್ಲಿ) ಶ್ರೀ ನರಹರಿತೀರ್ಥರು ರಚಿಸಿದರೆಂದು ಹೇಳುವ ಮೂರು ಕೃತಿಗಳಿವೆಯೆಂದೂ, ಅಲ್ಲದೆ ಹಂಪೆಯ ಬಳಿಯ ನವವೃಂದಾವನ (ಅವುಗಳಲ್ಲಿ ಶ್ರೀ ನರಹರಿತೀರ್ಥರ ವೃಂದಾವನವೂ ಒಂದು) ಸನ್ನಿಧಿಯಲ್ಲಿ ಭಜನೆ ಮಾಡುವಾಗ ನರಹರಿತೀರ್ಥರ ಪದಗಳನ್ನು ಹಾಡಿಯೇ ಭಜನೆ ಮುಗಿಸುವ ಸಂಪ್ರದಾಯ ಬಹು ಹಿಂದಿನಿಂದ ಹಿರಿಯರ ಅಪ್ಪಣೆ ಪ್ರಕಾರ ನಡೆಯುತ್ತಿದೆ ಎಂದೂ ಹೇಳುತ್ತಾರೆ.[10]

ಶ್ರೀ ನರಹರಿತೀರ್ಥರು ಶ್ರೀಮನ್ಮಧ್ವಾಚಾರ್ಯರ ಪೀಠದಲ್ಲಿ ಕ್ರಿ. ಶ. ೧೩೨೪–೧೩೩೩ ರವರೆಗೆ ವಿರಾಜಮಾನರಾಗಿದ್ದವರು, ಅವರ ಸಾಕ್ಷಾತ್ ಶಿಷ್ಯರು. ಪೂರ್ವಾಶ್ರಮದ ಹೆಸರು ಶಾಮಶಾಸ್ತ್ರಿಗಳೆಂದು. ಪ್ರಸಿದ್ಧ ವಿದ್ವಾಂಸರೂ ಹಿರಿಯ ಅಧಿಕಾರಿಗಳೂ ಆಗಿದ್ದವರು. ಮಧ್ವಾಚಾರ್ಯರೊಂದಿಗೆ ಅನೇಕ ದಿನಗಳು ವಾದಮಾಡಿ, ಕೊನೆಗೆ ಸೋತು ಅವರಲ್ಲಿ ಗೌರವತಾಳಿ ಅವರ ಶಿಷ್ಯತ್ವವನ್ನೂ, ಅವರಿಂದಲೇ ಸನ್ಯಾಸವನ್ನು ಹೊಂದಿ ಅನಂತರ ಅವರ ಪೀಠವನ್ನಲಂಕರಿಸಿದವರು. ಇವರ ಸ್ಥಳ ಗೋದಾವರೀ ತೀರದ ಗಂಜಾಂ ಜಿಲ್ಲೆಯ ಚಿಕಾಕೋಲು. ಕಳಿಂಗದೇಶದ ಒಂದನೆಯ ನರಸಿಂಹದೇವ, ಭಾನುದೇವ ಮತ್ತು ಎರಡನೆಯ ನರಸಿಂಹದೇವ ಎಂಬ ಅರಸರಿಗೆ ಶಾಮಶಾಸ್ತ್ರಿಗಳು ಸಚಿವರಾಗಿದ್ದರು. ೧೨೬೪–೧೨೮೮ರಲ್ಲಿ ಇವರು ರಾಜಪ್ರತಿನಿಧಿಗಳೂ ಆಗಿದ್ದರು, ಶ್ರೀ ಕೂರ್ಮಕ್ಷೇತ್ರದ ಶಾಸನಗಳು ಇದನ್ನೆಲ್ಲಾ ಹೇಳಿವೆ. ೧೨೮೧ರಲ್ಲಿ ಇವರು ಅಲ್ಲಿ ದೇವಾಲಯ ನಿರ್ಮಾಣವನ್ನೂ ಮಾಡಿದ್ದಾರೆ. ಹೀಗೆ ಶಾಮಶಾಸ್ತ್ರಿಗಳು ಹುಟ್ಟು ಆಂಧ್ರರಾಗಿದ್ದರೂ ಅಧಿಕಾರದಲ್ಲಿದ್ದುದು ಕಳಿಂಗ ದೇಶದಲ್ಲಿ. ವಿದ್ವತ್ ಪರೀಕ್ಷೆ ವಾದ ವಿವಾದ ಮಾಡಿದ್ದು ಕನ್ನಡ ದೇಶದಲ್ಲಿ. ಸಂಸ್ಕೃತದಲ್ಲಿ ನಿಸ್ಸೀಮ ಪಂಡಿತರು. ಕನ್ನಡದೇಶದ ಸಂಪರ್ಕವಿದ್ದುದರಿಂದ ಕನ್ನಡ ಬಲ್ಲವರಾಗಿದ್ದಿರಬಹುದು.

ಈ ಮಹನೀಯರದು ಮೂರು ಕೃತಿಗಳು ಮಾತ್ರ ದೊರೆತಿವೆ: 'ಇಂತು ಮರುಳಾದೆ' (೨೩ ನುಡಿಗಳು), 'ಹರಿಯೆ ಇದು ಸರಿಯೆ?' (ಏಳುನುಡಿ) ಮತ್ತು 'ತಿಳಿಕೊ ನಿನ್ನೊಳಗೆ ನೀನೆ' (ಹದಿನೈದು ನುಡಿಗಳು).[11] ಈ ಪದಗಳಲ್ಲಿ 'ರಘುಕುಲ ತಿಲಕ', 'ಸ್ವಾಮಿ ರಘುಪತಿ' ಮತ್ತು 'ನರಹರಿ' ಎಂದು ಮೂರು ವಿಧವಾಗಿ ಅಂಕಿತವಿರುವುದು ಕಂಡುಬರುತ್ತದೆ.

---

9 ಶ್ರೀ ಗೋವಿಂದಾಚಾರ್ ಹನುಮಂತರಾವ್ ಕುಲಕರ್ಣಿ ಅವರು ಸಂಪಾದಿಸಿದ ವೈಷ್ಣವಾಹ್ನಿಕ ಸಂಪುಟ ೨–ಸಂಚಿಕೆ ೧. (ಹರಿದಾಸರ ಪದಕುಸುಮಗಳು).

10 ಶ್ರೀ ಹರಿದಾಸ ಭಾರತೀ ಪತ್ರಿಕೆ–ಜನವರಿ ೧೯೫೭, ಪುಟ ೬೮ ಅಡಿಟಿಪ್ಪಣಿ.

11 ಹರಿದಾಸರ ಪದಕುಸುಮಗಳು–ಶ್ರೀ ಪದ್ಮನಾಭ ಹರಿದಾಸಸಾಹಿತ್ಯ ಮಂಡಲ, ಇದರಲ್ಲಿ ಶ್ರೀ ನರಹರಿತೀರ್ಥರದು ನಾಲ್ಕು ಪದಗಳು ಎಂದು ಹೇಳಿ 'ಎದಿದ್ದ್ಯೊ ಗುರುವೆ ಪಾದ್ಯರೊ' ಎಂಬ ಕೃತಿ 'ಅವರದೇ ಎಂಬುದು ವಿಚಾರಾರ್ಹವಾದದ್ದು' ಎಂದಿದ್ದಾರೆ.

೧೩೩೩ರ ತರುವಾಯ ಸು. ೧೪೫೦ರ ವರೆಗೆ ಎಂದರೆ ಶ್ರೀನರಹರಿತೀರ್ಥರ ತರುವಾಯದ ಕಾಲದಿಂದ ಶ್ರೀ ಶ್ರೀಪಾದರಾಜರ ವರೆಗೆ ಯಾವ ಹರಿದಾಸರ ಹೆಸರೂ ಕೃತಿಗಳೂ ಇದುವರೆಗೆ ಉಪಲಬ್ಧವಿಲ್ಲ. ಶ್ರೀ ನರಹರಿತೀರ್ಥರ ಕರಕಮಲ ಸಂಜಾತರೇ ಆಗಲಿ, ಇತರ ಶಿಷ್ಯರೇ ಆಗಲೀ ಕನ್ನಡದಲ್ಲಿ ಕೃತಿಗಳನ್ನು ರಚಿಸಿದಂತೆ ಇದುವರೆಗೂ ಕಂಡು ಬಂದಿಲ್ಲ. ಆದ್ದರಿಂದಲೇ ಬಹುಶಃ,

> ನಮಃ ಶ್ರೀಪಾದರಾಜಾಯ ನಮಸ್ತೇ ವ್ಯಾಸಯೋಗಿನೇ
> ನಮಃ ಪುರಂದರಾರ್ಯಾಯ ವಿಜಯಾರ್ಯಾಯ ತೇನಮಃ

ಎಂಬ ಹರಿದಾಸರ ಸ್ತೋತ್ರ ಶ್ಲೋಕದಲ್ಲಿ ನರಹರಿತೀರ್ಥರ ಹೆಸರು ಇಲ್ಲದಿರಬಹುದು. ಪ್ರಮುಖರ ಹೆಸರುಗಳನ್ನು ಮಾತ್ರ ಇಲ್ಲಿ ಅಳವಡಿಸಲಾಗಿದೆಯೋನೋ ಎನ್ನಿಸುತ್ತದೆ. ಪಂಥದ ಉಗಮಕ್ಕೆ ಕಾರಣರಾದವರ, ಅದನ್ನು ವಿಶೇಷವಾಗಿ ಬೆಳೆಸಿದವರ, ಅಪಾರ ಕೃತಿ ರಾಶಿಯನ್ನು ಸೃಷ್ಟಿಸಿ ಜನಪ್ರಿಯರಾದವರ ನಾಯಕಮಣಿಗಳ ಹೆಸರುಗಳನ್ನು ಮಾತ್ರ ಇಲ್ಲಿ ಸೇರಿಸಿರಬೇಕೆನ್ನಿಸುತ್ತದೆ.

ಇನ್ನು ಚಾರಿತ್ರಿಕವಾಗಿ ಪರಿಶೀಲಿಸಿದರೆ ೧೫ನೆಯ ಶತಮಾನ ದಾಸ ಪಂಥದ ಉಗಮಕ್ಕೆ ಸರಿಯಾದ ಸನ್ನಿವೇಶ ಸಮಯಾನುಕೂಲವಿದ್ದ ಕಾಲ; ಪರಿಸ್ಥಿತಿ ಹದ ವಾಗಿದ್ದ, ಅಗತ್ಯವೂ ಕಂಡು ಬಂದಿದ್ದ ಕಾಲ ಎಂದು ಹೇಳಲು ಅವಕಾಶವಿದೆ. ೧೫ನೆಯ ಶತಮಾನದ ಹೊತ್ತಿಗೆ ಶ್ರೀಮಧ್ವಾಚಾರ್ಯರು (೧೨೩೮–೧೩೧೭) ತಮ್ಮ ಸಿದ್ಧಾಂತವನ್ನು ಸ್ಥಾಪಿಸಿ, ಪ್ರಚುರಪಡಿಸಿ ಇನ್ನೂರು ವರ್ಷಗಳಾಗಿದ್ದುವು. ಗೀರ್ವಾಣವಾಣಿಯಲ್ಲಿ ಆ ಸಿದ್ಧಾಂತವನ್ನು ಕುರಿತು–ಮೂಲ ಗ್ರಂಥಗಳನ್ನು ಕುರಿತು ನೂರಾರು ಟೀಕೆ ಟಿಪ್ಪಣಿ ವ್ಯಾಖ್ಯಾನ ಗ್ರಂಥಗಳು ವಿದ್ವನ್ಮಣಿಗಳಿಂದ ರಚಿತವಾಗಿದ್ದುವು. ಅಲ್ಲದೆ ಆ ಶತಮಾನದ ಹೊತ್ತಿಗೆ ದೇಶಭಾಷಾ ಪ್ರಾಚುರ್ಯ ಪ್ರಾರಂಭವಾಗಿ ಕೆಲ ಕಾಲ ಆಗಿತ್ತು. ಕನ್ನಡದಲ್ಲಿ ಶರಣರ ಸೂಳ್ನುಡಿ ಸುಂದರ ಸಾಹಿತ್ಯ ರೂಪದಿಂದ ಹೊರಹೊಮ್ಮಿ ಜನ ಮನದಲ್ಲಿ ಇಳಿದಿತ್ತು.

ಸಂಸ್ಕೃತ ಪರಂಪರೆ ಶಿಥಿಲವಾಗುತ್ತಿತ್ತು. ಆದರ ವ್ಯಾಸಂಗವೂ ಮೊದಲಿಗಿಂತ ತುಂಬ ಕಡಿಮೆಯಾಗಿತ್ತು. ಸಂಸ್ಕೃತ ಪರಿಚಯವಿಲ್ಲದವರಿಗೆ ತತ್ತ್ವ ಸಿದ್ಧಾಂತ ದೂರವಾಗುತ್ತ ಬರುತ್ತಿದ್ದಿತು. ಶಾಸ್ತ್ರವಿದ್ಯೆ, ಸದಾಚಾರ ಮತ್ತು ಸಾಮಾನ್ಯ ಜನ ಇವುಗಳ ಮಧ್ಯೆ ಕಂದರವೇ ನಿರ್ಮಾಣವಾಗಿ, ಅದು ಬರಬರುತ್ತಾ ಆಳವೂ ಅಗಲವೂ ಆಗುತ್ತಿತ್ತು. ನೆರೆನಾಡ ತಮಿಳರು ತಮ್ಮ ತಾಯ್ನುಡಿಯಲ್ಲಿ ತತ್ತ್ವಗಳನ್ನು ರಚಿಸಿಕೊಂಡಿದ್ದರು. ಜೈನ ತತ್ತ್ವಗಳಂತೂ ಕನ್ನಡದಲ್ಲಿ ಬಹುಕಾಲದ ಹಿಂದಿನಿಂದಲೂ ಬೆಳೆದು ನಿಂತಿತ್ತು. ಸಂಸ್ಕೃತದಲ್ಲಿ ಭೂಯಿಷ್ಠವಾಗಿ ಬೆಳೆದ ದ್ವೈತ ತತ್ತ್ವ ಕನ್ನಡ ನುಡಿಯಲ್ಲಿ ರೂಪಗೊಳ್ಳಬೇಕಾದುದು ಕೇವಲ ಅಗತ್ಯವಾಗಿತ್ತು. ಈ ಹಿನ್ನೆಲೆಯೂ ಹರಿದಾಸ ಪಂಥದ ಉಗಮಕ್ಕೆ ಪ್ರಮುಖ ಕಾರಣವೆಂಬುದನ್ನು ಮನಗಾಣಬಹುದು.

ಶ್ರೀ ಮಧ್ವಾಚಾರ್ಯರ ಸಾಕ್ಷಾತ್ ಶಿಷ್ಯರಾದ ಶ್ರೀ ಪದ್ಮನಾಭತೀರ್ಥರಿಂದ ಎಂಟನೆಯವರಾದ ಶ್ರೀ ಸ್ವರ್ಣವರ್ಣತೀರ್ಥರ ಪೀಠಕ್ಕೆ ಬಂದ ಚೆನ್ನಪಟ್ಟಣದ ಬಳಿಯ ಅಬ್ಬೂರಿನ(ಅನಂತರ ಕೋಲಾರದ ಬಳಿಯ ಮುಳುಬಾಗಿಲಿನ) ಶ್ರೀ ಲಕ್ಷ್ಮೀನಾರಾಯಣ ಮುನಿ[12] ಅಥವಾ ಶ್ರೀ ಶ್ರೀಪಾದರಾಜರು ಶ್ರೀರಂಗ (ತಮಿಳುನಾಡು)ದಲ್ಲಿ ಬಹುಕಾಲ ಇದ್ದರು. ಶಾಸ್ತ್ರ–ಸಿದ್ಧಾಂತಗಳ ಸಾರ ತಿಳಿಗನ್ನಡದಲ್ಲಿ ಹರಿಯಬೇಕು, ಜನಮನವನ್ನು ಮುಟ್ಟಿ ಅವರನ್ನು ಉದ್ಧರಿಸಿ ಅದು ಸಾರ್ಥಕವಾಗಬೇಕು ಎಂಬ ಸದುದ್ದೇಶದಿಂದ ಶ್ರೀ ಶ್ರೀಪಾದರಾಜರು ಈ ಹರಿದಾಸ ಪಂಥವನ್ನು ಪ್ರಾರಂಭಿಸಿ ಸಿದ್ಧಾಂತ ಸಾಹಿತ್ಯ–ಸಂಗೀತ ನೃತ್ಯ ಸಮ್ಮಿಳಿತವಾದ ಹರಿದಾಸ ಸಾಹಿತ್ಯ, ಭಕ್ತಿ ಸಾಹಿತ್ಯ, ಜ್ಞಾನಸಾಹಿತ್ಯ, ಶಾಸ್ತ್ರಸಾಹಿತ್ಯ ಮೊದಲಾದವನ್ನು ರಚನೆ ಮಾಡಿದರು. ಬಹುಶಃ ಶ್ರೀ ನರಹರಿತೀರ್ಥರು ಹಾಕಿದ ಕನ್ನಡ ದಾಸಸಾಹಿತ್ಯ ಬೀಜ ಇಲ್ಲಿ ಮೊಳೆತು ಮುಂದೆ ಮರವಾಗಿ ಬೆಳೆದು ಶಾಖೋಪ ಶಾಖೆಗಳಿಂದ ಹಬ್ಬಿ ಸತ್ಫಲ ಸಿಹಿಫಲಗಳನ್ನು ನೀಡಿತು ಎಂದು ಸದ್ಯಕ್ಕೆ ಭಾವಿಸಬಹುದಾಗಿದೆ. ಶ್ರೀಪುರಂದರದಾಸರ ಕಾಲದ ಹೊತ್ತಿಗೆ ಆಭಾಸ ದಾಸರು ಅನೇಕರಿದ್ದರು ಎಂಬುದು ಶ್ರೀವ್ಯಾಸರಾಜರ 'ದಾಸರೆಂದರೆ ಪುರಂದರದಾಸರಯ್ಯ' ಎಂಬ ಕೃತಿಯಿಂದ ಸ್ಪಷ್ಟವಾಗುತ್ತದೆ. ದಾಸನ ವೇಷದಿಂದ ಕಾಸುಗಳಿಸುವವರು; ಡಂಭಕದಿಂದ ತಂಬೂರಿ ಮೀಟುವವರು, ಲೋಭಿಗಳು, ಸ್ವಾರ್ಥಿಗಳು, ಪಾತಕನ ರೀತಿಯ ಬೂಟಕದುವರೇ ಮೊದಲಾದವರ ಚಿತ್ರವನ್ನು ಕೊಟ್ಟು ಈ ಪುರಂದರದಾಸರು ಅಂತಲ್ಲ, ಅವರು ಪೂತಾತ್ಮರು, ಕೃಷ್ಣನನ್ನು ಪೂಜಿಸಿ ಒಲಿಸಿಕೊಂಡವರು ಎಂದು ಆ ಕೃತಿ ಸಾರಿದೆ.

ಸ್ವರೂಪ

ಹರಿದಾಸರಿಗೆಲ್ಲ ಮುಖ್ಯ ಗುರುಗಳು ಶ್ರೀ ಆನಂದತೀರ್ಥರು. ಹರಿದಾಸರ ಹಾಡುಗಳೆಲ್ಲ ದರ ಅಡಿಗಲ್ಲು ಆನಂದತೀರ್ಥರ 'ತತ್ತ್ವವಾದ' ಸಿದ್ಧಾಂತ. ಅದರ ವಿವಿಧ ತತ್ತ್ವಗಳನ್ನು ಹೃದಯಂಗಮವಾಗಿ ನಾನಾ ಬಗೆಗಳಲ್ಲಿ ಹರಿದಾಸರು ಚಿತ್ರಿಸಿದ್ದಾರೆ. ಅವುಗಳಿಗೆ ಅವಿರೋಧವಾಗಿಯೇ ಇತರ ಎಲ್ಲ ವಿಚಾರಗಳನ್ನೂ ಅವರು ಹೇಳಿರುವುದು ಕಂಡುಬರುತ್ತದೆ. ರಾಮಾಯಣ ಮಹಾಭಾರತ ಭಾಗವತ ಪುರಾಣಗಳು ಮೊದಲಾದ ಪ್ರಾಚೀನ ಪವಿತ್ರ ಕೃತಿಗಳಿಂದ ಆಯ್ದ ಕಥಾನಕಗಳನ್ನೂ ಹಿರಿಯ ಆದರ್ಶ ಜೀತನರ ಪಾತ್ರಗಳ ಪರಿಚಯವನ್ನೂ ಹರಿದಾಸರ ಕೃತಿಗಳಲ್ಲಿ ಕಾಣಬಹುದು.

ಎಲ್ಲರಿಗಿಂತ ಹಿರಿಯನಾದ ಸರ್ವೋತ್ತಮನಾದವನು ಶ್ರೀಹರಿ–ಎಂದು ನಂಬಿ ಅವನ ಪ್ರಸಾದವನ್ನು ಗಳಿಸುವುದೇ ಜೀವನದ ಹೆಗ್ಗುರಿ ಎಂದು ಘೋಷಿಸಿ

12. ಇವರ ಪೂರ್ವಜರು ತಿರುಚೀರಪಳ್ಳಿ ಜಿಲ್ಲೆಯ ಶ್ರೀರಂಗ ಕ್ಷೇತ್ರದ ಕೋಟಂತಿಲ್ಲಾಯ ಮನೆತನಕ್ಕೆ ಸೇರಿದ ತುಳುವ ವೈಷ್ಣವರು ಎನ್ನುತ್ತಾರೆ.

ಅವನನ್ನು ಮತ್ತು ಅವನ ಪರಿವಾರದವರನ್ನು ನಾನಾ ರೀತಿಯಲ್ಲಿ ಕೊಂಡಾಡುವ, ಪರಿಪರಿಯಾಗಿ ಸ್ತೋತ್ರಮಾಡುವ ಪ್ರಾರ್ಥಿಸುವ ಕೃತಿಗಳು ಹೇರಳವಾಗಿವೆ. ಭಗವಾನ್ ವೇದವ್ಯಾಸ ಪ್ರಣೀತವಾದ ಶ್ರೀ ಮದ್ಭಾಗವತದ ದಶಮ ಸ್ಕಂಧದಲ್ಲಿ ವರ್ಣಿತವಾಗಿರುವ ಶ್ರೀಕೃಷ್ಣನ ಬಾಲಲೀಲೆಗಳಿಗೆ ಹರಿದಾಸರ ಬಹುಕೃತಿಗಳು ಮೀಸಲಾಗಿವೆ. ಬೃಂದಾವನ–ಗೋಕುಲ ಪ್ರಾಂತದಲ್ಲಿ ಯಮುನಾತೀರದ ವನಗಳಲ್ಲಿ ಗೋಪಾಲಕರ ಮತ್ತು ಗೋಪಿಯರ ಮಧ್ಯೆ ಆಡಿದ ರಾಮ ಕೃಷ್ಣರ ಹೃದಯಂಗಮ ಚಿತ್ರ ದಾಸ ಸಾಹಿತ್ಯದ ಒಂದು ರಮ್ಯವಿಭಾಗ. ಭಕ್ತರ ನಡೆ–ನುಡಿಗಳ ಆದರ್ಶವನ್ನು, ಹಿಂದೆ ಆಗಿಹೋದ ಭಕ್ತಶಿರೋಮಣಿಗಳನ್ನು ಹರಿದಾಸರು ವಿವಿಧ ಬಗೆಗಳಲ್ಲಿ ಬಣ್ಣಿಸಿದ್ದಾರೆ. ತಮ್ಮ ಆತ್ಮಚರಿತ್ರೆಯ ಹಲವು ವಿಚಾರಗಳನ್ನು ಅಲ್ಪಸ್ವಲ್ಪ ಅಲ್ಲಲ್ಲಿ ಸೂಚಿಸಿದ್ದಾರೆ.

ಹರಿದಾಸರ ಲಕ್ಷಣಗಳನ್ನು ಚಿತ್ರಿಸಿ ಅದಕ್ಕನುಗುಣವಾಗಿ ಅವರು ನಡೆದು ಕೊಂಡಿದ್ದಾರೆ. ಅವರ ವೈಶಿಷ್ಟ್ಯವನ್ನು ಹೀಗೆ ವಿವರಿಸಿದ್ದಾರೆ:

ಹರಿದಾಸರು ಪರ ನಿಂದಕರಿಂದ ದೂರವಿರಬೇಕು
ಗರ್ವ ಕೋಪ ಮದ ಮತ್ಸರ ಪರಧನ ಪರಸತಿ ಬಿಡಬೇಕು
ನರರು ಬೈದರೆ ಆದರದಿಂದ ಹರುಷಪಡಬೇಕು
ಪರರು ಕೊಟ್ಟರೂ ಆ ವಸ್ತುಗಳ ಮೇಲೆ ಮನವಿಡದಿರಬೇಕು
ವಿಷಯದಾಸೆಗೆ ಯಾವಾಗಲೂ ಒಳಗಾಗಬಾರದು
ಕುಜನರ ಸಂದಣಿಯೊಳಗೆ ಸೇರಬಾರದು
ಹಾಳು ಹರಟೆಯನ್ನು ಕೊಚ್ಚಲೇಬಾರದು
ಪರತತ್ತ್ವ ವಿಚಾರಗಳನ್ನು ದುಷ್ಟರಿಗೆ ಹೇಳಬಾರದು
ತಮ್ಮೊಳಗೆ ತಾವು ಅವುಗಳನ್ನೆಂದಿಗೂ ಮರೆಯಬಾರದು
ಒಳ್ಳೆಯದಾಯಿತೆಂದರೆ ಶ್ರೀಹರಿಯ ಕಾರುಣ್ಯವೆನಬೇಕು
ಲೇಸಾಗದೆ ಬಲುಮೋಸದಲಿ ಕ್ಲೇಶ ಬಂದೊದಗಲು
ಏಸುಜನ್ಮದ ಪಾಪರಾಶಿ ಫಲಿಸಿತೊ ಎನ್ನ ಕರ್ಮ ಎಂದು
ಕೊಂಡು ದುಃಖಪಡದೆ ಕ್ಲೇಶಾನಂದಗಳೀಶಾಧೀನ
ವೆನುತಿರಬೇಕು.
ನೋಯದಲೆ ಶ್ರೀಶ, ನೀನೆ ಗತಿ ಎನುತಿರಲಿಬೇಕು
ವಿಜಯವಿಠಲನಾದ ಹರಿಯದಾಸಾನುದಾಸರ ದಾಸನಾಗಬೇಕು.

ತಂಬೂರಿ ಮೀಟಿದವ ಭವಾಬ್ಧಿ ದಾಟಿದವ
ಗೆಜ್ಜೆಯ ಕಟ್ಟಿದವ ಖಳರೆದೆ ಮೆಟ್ಟಿದವ
ತಾಳವ ಕಟ್ಟಿದವ ಸುರರೊಳು ಕೂಡಿದವ
ಪುರಂದರವಿಠಲನ್ನ ಧ್ಯಾನವ ಮಾಡಿದವ
ಹರಿಮೂರ್ತಿ ನೋಡಿದವ.......

ಈ ಚೌಕಟ್ಟಿನಲ್ಲೇ ದಾಸಸಾಹಿತ್ಯದಲ್ಲಿ ಪ್ರಕೃತಿ ವರ್ಣನೆ, ಧೀರವೀರ ನಿಲವು, ಬಾಳಿನ ಧ್ಯೇಯ ಗೊತ್ತುಗುರಿಗಳು, ಸಮಾಜದ ರೀತಿ ನೀತಿ, ಜನರ ನಡೆನುಡಿ,

ಸದಾಚಾರ ಅನಾಚಾರ ಆಷಾಢಭೂತಿಯ ವಿದ್ಯೆಗಳನ್ನು ಹರಿದಾಸರು ಚಿತ್ರಿಸಿದ್ದಾರೆ. ವಿಡಂಬನೆ ಕೊಂಚ ಕಟಕಿ ಇದ್ದರೂ ಅದು ಚಿಕಿತ್ಸಕ ದೃಷ್ಟಿಯಿಂದ ಮಾತ್ರ ಆಗಿದೆ. ಪರ ಸಿದ್ಧಾಂತವನ್ನು ಯುಕ್ತಿಯುಕ್ತವಾಗಿ ತೆಗಳಲಾಗಿದೆ–ಖಂಡಿಸಲಾಗಿದೆ.

ಗ್ರಂಥರಾಶಿ

ಹರಿದಾಸ ಸಾಹಿತ್ಯದ ಈ ಸ್ವರೂಪವನ್ನು ಗಮನಿಸಿದರೆ ಇದು ಎಷ್ಟು ವಿಸ್ತಾರವಾಗಿದೆ ದೊಡ್ಡದಾಗಿದೆ ಎಂಬುದನ್ನು ಊಹಿಸಬಹುದು. ಸಂಖ್ಯಾದೃಷ್ಟಿಯಿಂದಲೇ ವಿವೇಚಿಸಿದರೂ ಇದು ಅಗಾಧವಾಗಿದೆ. ಇದುವರೆಗೆ ಕೃತಿಗಳನ್ನು ರಚಿಸಿದ ಹರಿದಾಸರ ಸಂಖ್ಯೆ ಇನ್ನೂರು ಎಂದು ಸಂಶೋಧನೆಯಿಂದ ಸ್ಥಿರಪಟ್ಟಿದೆ.[13] ಒಬ್ಬೊಬ್ಬರೂ ನೂರಾರು ಸಾವಿರಾರು ಕೃತಿಗಳನ್ನು ರಚಿಸಿದ್ದಾರೆ. ಪುರಂದರದಾಸರೊಬ್ಬರೇ ನಾಲ್ಕೂಕಾಲು ಲಕ್ಷ[14] ಕೃತಿಗಳನ್ನು ರಚಿಸಿದ್ದೇನೆಂದು ಹೇಳಿರುವ ಕೃತಿಯೇ ಇದೆ! (ವಾಸುದೇವನ ಕಥಾಮೃತಸಾರ, ವ್ಯಾಸರಾಯರನುಗ್ರಹದಲಿ–ಕೃಷ್ಣನಾಮಗಳ ಪೇಳ್ಪೆ ಇತ್ಯಾದಿ). ಐದುಲಕ್ಷ ಪೂರ್ತಿಮಾಡುವ ಎಪ್ಪತ್ತೈದುಸಾವಿರ ಕೃತಿಗಳನ್ನು ವಿಜಯದಾಸರು ರಚಿಸಿದರೆಂದು ಪ್ರತೀತಿ.

ಆದರೆ ಸದ್ಯಕ್ಕೆ ದೊರೆತಿರುವ ಹರಿದಾಸರ ಕೃತಿಸಂಖ್ಯೆ ಈ ದೃಷ್ಟಿಯಿಂದ ಅತ್ಯಲ್ಪ. ಪುರಂದರದಾಸರ ಕೃತಿಗಳು ಸಿಕ್ಕಿರುವುದೇ ಎರಡು ಸಾವಿರದಷ್ಟೂ ಇಲ್ಲ. ವಿಜಯದಾಸರದೂ ಅಷ್ಟೆ. ಆದರೂ ಎಲ್ಲ ಹರಿದಾಸರ ದೊರೆತಿರುವ ಕೃತಿ ಸಂಖ್ಯೆಯನ್ನೇ ಗಮನಿಸಿದರೂ ಸುಮಾರು ಹತ್ತು ಸಾವಿರದಷ್ಟಾಗುತ್ತದೆ. ಇದಲ್ಲದೆ ಕೆಲವು ಇಡೀ ಗ್ರಂಥಗಳೂ ಇವೆ. ಸಿಕ್ಕಿರುವ ಈ ಸಂಪತ್ತನ್ನಾದರೂ ಶುದ್ಧವಾದ ರೀತಿಯಲ್ಲಿ ಸಂಗ್ರಹಿಸಿ ಸಂಪಾದಿಸಿ ಜೋಪಾನವಾಗಿಟ್ಟುಕೊಳ್ಳಬೇಕಾಗಿದೆ. ಸಂಶೋಧನೆಯನ್ನು ಮುಂದುವರಿಸಿ ಸಿಗುವಷ್ಟನ್ನು ಸಂಗ್ರಹಿಸಬೇಕಾಗಿದೆ.

ಪೀಳಿಗೆ: ಬೆಳೆವಣಿಗೆ

ಶ್ರೀಪಾದರಾಜರು (ಸು. ೧೪೫೦) 'ರಂಗವಿಠಲ' ಮುದ್ರಿಕೆಯಿಂದ ನೂರಾರು ಕೃತಿಗಳನ್ನು ರಚಿಸಿದರು; ತಮ್ಮ ಶಿಷ್ಯರಾದ ಶ್ರೀವ್ಯಾಸರಾಜರು ಈ ಮಾರ್ಗವನ್ನು ಮುಂದುವರಿಸುವಂತೆ ಮಾಡಿದರು. ಶ್ರೀವ್ಯಾಸರಾಜರು ಗುರುಗಳ ಅಪ್ಪಣೆಯ

---

[13] ಈ ಪಟ್ಟಿಯನ್ನು 'ಶ್ರೀ ಜಗನ್ನಾಥದಾಸರು' (ಉಷಾ ಸಾಹಿತ್ಯಮಾಲೆ–ಮೈಸೂರು) ಗ್ರಂಥದಲ್ಲಿ [ಪುಟ ೩೮೮–೪೦೦ (ಅನುಬಂಧ ೩)] ನೋಡಬಹುದು. ಈಚೆಗೆ ಮಂಗಳೂರಿನ ಹಸ್ತಪ್ರತಿಯೊಂದರಲ್ಲಿ ವರಾಹ ತಿಮ್ಮಪ್ಪ ಎಂಬ ಅಂಕಿತದ ಹಲವು ಕೃತಿಗಳನ್ನು ನೋಡಿದೆ. ಇನ್ನೂ ಕೆಲವರು ಹೊಸಬರ ಕೃತಿಗಳಿರಬಹುದು.

[14] 'ತ್ರಿಪಾದೋನ ಪಂಚಲಕ್ಷ' 'ಮಟ್ಟಿಕೆ ತ್ರಿಪಾದ ಕಡಿಮೆ' ಎಂದು ಶ್ರೀ ವಿಜಯದಾಸರ ಹೇಳಿಕೆ.

ಪ್ರಕಾರ ಅವರ ಮೇಲ್ಪಾಲನ್ನೇ ಅನುಸರಿಸಿ 'ಕೃಷ್ಣ' 'ಶ್ರೀಕೃಷ್ಣ' ಎಂಬ ಅಂಕಿತದಿಂದ ತಾವೇ ನೂರಾರು ಕೃತಿಗಳನ್ನು ರಚಿಸಿದುದಲ್ಲದೆ ಅನೇಕರಿಗೆ ಅಂಕಿತೋಪದೇಶಮಾಡಿ ಈ ಪಂಥ-ಸಾಹಿತ್ಯ ಸಮೃದ್ಧವಾಗಿ ಬೆಳೆಯುವಂತೆ ಮಾಡಿದರು. ಇವರ ಸನ್ಯಾಸಿ ಶಿಷ್ಯರಾದ ಶ್ರೀ ವಾದಿರಾಜರು ಶ್ರೀವಿಜಯೀಂದ್ರರು ಅನೇಕ ಕೃತಿಗಳನ್ನು ರಚಿಸಿದರು. ಗೃಹಸ್ಥಶಿಷ್ಯರಾದ ಪ್ರಸಿದ್ಧ ಪುರಂದರದಾಸರು, ಕನಕದಾಸರು ಮತ್ತು ವೈಕುಂಠದಾಸರು ಅದೇ ಕಾಲದಲ್ಲಿ ಸಾವಿರಾರು ಕೃತಿಗಳನ್ನು ರಚಿಸಿದರು. ಪುರಂದರದಾಸರ ನಾಲ್ವರು ಮಕ್ಕಳೂ ಅನೇಕ ಕೃತಿಗಳನ್ನು ರಚಿಸಿದರು. ಈ ಕಾಲದವರೇ ಇರಬಹುದಾದ ಅಚಲಾನಂದರು, ಅವರ ಅರುವತ್ತು ಮಂದಿಯ ಗುಂಪು 'ತಂದೆ ಅಚಲನಾಂದವಿಠಲ' 'ಮುದ್ದು ಅಚಲಾನಂದವಿಠಲ' ಮುಂತಾದ ಅಂಕಿತಗಳಿಂದ ಬಹು ಸಂಖ್ಯೆಯಲ್ಲಿ ಉಗಾಭೋಗಗಳನ್ನೂ ಪದಗಳನ್ನೂ ರಚಿಸಿದರು. ಹೀಗೆ ಈ ೧೫-೧೬ನೆಯ ಶತಮಾನಗಳ ಹರಿದಾಸಪಂಥದ ಕೇಂದ್ರ ವಿಜಯನಗರ-ಹಂಪೆ-ಎನ್ನಬಹುದು.

ಇದಾದ ಸುಮಾರು ನೂರು ವರ್ಷಗಳ ಕಾಲ ಈಗ ನಡೆದಿರುವ ಸಂಶೋಧನೆಯ ದೃಷ್ಟಿಗೆ ಯಾವ ಹರಿದಾಸರ ಹೆಸರೂ ಕೃತಿಯೂ ಕಂಡುಬಂದಿಲ್ಲ. ಪರಂಪರೆ ಮುಂದುವರಿದಿರಬೇಕೆನ್ನಿಸುತ್ತದೆ ; ಬೆದಕಿ ನೋಡಬೇಕಾಗಿದೆ.

ಸದ್ಯಕ್ಕೆ ಎರಡನೆಯ ಉಚ್ಛ್ರಾಯ ಕಾಲ ಸುಮಾರು ೧೭೦೦-೧೮೫೦. ಈಗ ಹರಿದಾಸರ ಕಾರ್ಯರಂಗದ ಕೇಂದ್ರ ಹಂಪೆಯಿಂದ ರಾಯಚೂರಿಗೆ ಹೋಯಿತು. ರಾಯಚೂರು ಜಿಲ್ಲೆಯ ಚೀಕಲಪರಿವೆ, ಉತ್ತನೂರು, ವೇಣೀ ಸೋಮಪುರ, ಮಾನ್ವಿ, ಐಜಿಗಳಲ್ಲಿ ಪ್ರಸಿದ್ಧ ಹರಿದಾಸರು ಆಗಿಹೋದರು. ಅಲ್ಲದೆ ಧಾರವಾಡ ಜಿಲ್ಲೆಯ ಕರ್ಜಗಿ ರಿತ್ತಿ ; ಬಳ್ಳಾರಿ ಜಿಲ್ಲೆಯ ಆದವಾನಿ; ಬೀಜಾಪುರ ಜಿಲ್ಲೆಯ ಬಾಗಲಕೋಟೆ, ಬಾದಾಮಿ ; ಚಿತ್ರದುರ್ಗ ಜಿಲ್ಲೆಯ ಮಲೆಬೆನ್ನೂರು ; ಬೆಂಗಳೂರಿನ ದೊಡ್ಡಬಳ್ಳಾಪುರ-ತುಮಕೂರಿನ ದೇವರಾಯದುರ್ಗಗಳಲ್ಲೂ ಹಲವರು ಹರಿದಾಸರಿದ್ದರು.

ಈ ಎರಡನೆಯ ಉಚ್ಛ್ರಾಯ ಕಾಲದ ಪ್ರಮುಖ ಹರಿದಾಸರೆಂದರೆ ಶ್ರೀವಿಜಯದಾಸರು ಮತ್ತು ಅವರ ಶಿಷ್ಯ ಪ್ರಶಿಷ್ಯವರ್ಗದವರು. ಶ್ರೀಪಂಗನಾಮದ ತಿಮ್ಮಣ್ಣಯ್ಯನವರು, ಶ್ರೀ ಗೋಪಾಲದಾಸರು, ಶ್ರೀ ಪ್ರಸನ್ನ ವೆಂಕಟದಾಸರು, ಶ್ರೀವ್ಯಾಸ ತತ್ತ್ವಜ್ಞರು, ಶ್ರೀ ಮೋಹನದಾಸರು, ಶ್ರೀ ಜಗನ್ನಾಥದಾಸರು, ಶ್ರೀ ಕರ್ಜಗಿದಾಸರು, ಶ್ರೀಪ್ರಾಣೇಶದಾಸರು, ಶ್ರೀಮತಿ ಹೆಳವನಕಟ್ಟೆಗಿರಿಯಮ್ಮನವರು ಶ್ರೀ ಮುದ್ದುಮೋಹನದಾಸರು ಮತ್ತು ತಂದೆ ಮುದ್ದು ಮೋಹನದಾಸರು. ಇವರಲ್ಲಿ ಅನೇಕರ ಹರಿದಾಸಸಂತತಿ ಇಂದಿಗೂ ನಡೆದು ಬರುತ್ತಿದೆ.[15]

---

[15] ಹರಿದಾಸರ ವಂಶವೃಕ್ಷವನ್ನೂ, ಇತರ ವಿವರಗಳನ್ನೂ 'ಶ್ರೀ ಜಗನ್ನಾಥದಾಸರು' ಗ್ರಂಥದಲ್ಲಿ ನೋಡಬಹುದು.

ಹರಿದಾಸರ ಉಪದೇಶ–ಸಂದೇಶ

ಹರಿದಾಸರ ಉಪದೇಶ ಪ್ರಮುಖವಾಗಿ ಆಧ್ಯಾತ್ಮಿಕ. ಇಹ–ಪರ ಸಾಧನೆಯನ್ನು ಮಾಡಿ, ಇಲ್ಲಿದ್ದಾಗಲೇ ಅಲ್ಲಿನದನ್ನು ಗಳಿಸಿಕೊಳ್ಳಿ–ಪಾಥೇಯವಕಟ್ಟಿರೊ–ಮುಂದೆ ಉಣಲು ಬರುವುದು ಎಂಬುದು ಉಪದೇಶ ಸರಣಿ. ಇದು ಏನು–ಹೇಗೆ? ಎಂಬುದನ್ನು ವಿಧ ವಿಧವಾಗಿ ಬಣ್ಣಿಸುವಾಗ ಸಾಹಿತ್ಯ ಮಾರ್ಗಾವಲಂಬನೆ ಕಾಣುತ್ತದೆ.

ದಾಸ ಸಾಹಿತ್ಯದಲ್ಲಿ ಬೋಧಿತವಾಗಿರುವ ತತ್ತ್ವಸರಣಿ ಹೀಗಿದೆ :

ಪರಮಾತ್ಮನೆಂಬೊಬ್ಬ ಪರಮಸ್ವಾಮಿಯಿದ್ದಾನೆ. ನಮ್ಮ ಕಣ್ಣಿಗೆ ಕಾಣುವ ಕಾಣದಿರುವ ಹಲವು ಲೋಕಗಳು ಅಲ್ಲಿರುವ ಪದಾರ್ಥಗಳು ಸೃಷ್ಟಿಯಾಗಿ, ಚೇತನ ಅಚೇತನ ವಸ್ತುಗಳೆಲ್ಲಾ ಅಲ್ಲಿ ಪಾಲನೆಯಾಗುತ್ತಿರುವುದು; ಅನಂತರ ಒಮ್ಮೆ ಲಯವಾಗುವುದು ಅವನಿಂದಲೇ. ಜಗತ್ತಿನ ಚೇತನ ಅಚೇತನಗಳೆಲ್ಲ ಯಾವಾಗಲೂ ಅವನ ಅಧೀನವೇ. ಅವನು ಈಶ; ಉಳಿದ ಎಲ್ಲರೂ ಅವನ ದಾಸರು. ಅವನ ದಾಸರೆಂದು ದೃಢವಾಗಿ ನಂಬಿ ಸರ್ವೋತ್ತಮನು ಪ್ರಭುವಾದ ಅವನನ್ನು ಅಮಲ ಭಕ್ತಿಯಿಂದ ತ್ರಿಕರಣ ಶುದ್ಧಿಯಿಂದ ಭಜಿಸಿ, ಅವನ ಅಚಿಂತ್ಯ ಅತ್ಯದ್ಭುತ ಮಹಿಮೆಗಳನ್ನು ತಿಳಿದು ಆರಾಧಿಸಬೇಕು. ಎಷ್ಟೇ ಕಷ್ಟಗಳು ಬಂದರೂ ನಮ್ಮ ಕರ್ಮ ಎಂದು ಭಾವಿಸಿ, ಅವನಲ್ಲಿ ಭಕ್ತಿಯನ್ನು ನಂಬಿಕೆಯನ್ನು ಸಡಿಲಗೊಳಿಸದೆ ಅವನನ್ನೆ ಆರಾಧಿಸುತ್ತಿರಬೇಕು–ಚಿಂತಿಸುತ್ತಿರಬೇಕು. ಸುಖಸಂಪತ್ತುಗಳು ಬಂದಾಗ, ಕಡುಕಷ್ಟ ಎರಗಿದಾಗ, ಒಂದೇ ಸಮನಾಗಿರಬೇಕು. ಆದು ಎಲ್ಲ ಆವನ ಚಿತ್ತ ಎಂಬ ಸಮಚಿತ್ತವನ್ನು ಗಳಿಸಬೇಕು. ನಂಬಿಕೆಟ್ಟವರಿಲ್ಲವೊ ರಂಗಯ್ಯನ ಎಂಬ ದಾರ್ಢ್ಯ ಬರಬೇಕಾದರೆ ಮನಸ್ಸು ಸದಾ ಜಾಗ್ರತವಾಗಿರಬೇಕು. ಶ್ರವಣ ಅಧ್ಯಯನ ಮನನ ನಿಧಿಧ್ಯಾಸನಗಳಲ್ಲಿ ಅನವರತವೂ ನಿರತರಾಗಿದ್ದರೆ ಮಾತ್ರ ಇದು ಸಾಧ್ಯ. ಮನಸ್ಸಿನ ಸ್ವಭಾವ ಚಂಚಲ ಹರಿದೋಡುತ್ತದೆ.

ಮನಸು ನಿಲಿಸುವುದು ಬಲುಕಷ್ಟ
ದುರುಳಮನ ನಿಲಿಸುವುದು ಸುರರಿಗಳವಲ್ಲ !

ಅದು ಕೋತಿಯಂತೆ ಜಿಗಿದಾಡುತ್ತಿರುತ್ತದೆ. ಮನಸ್ಸನ್ನು ಹದದಲ್ಲಿರಿಸಿಕೊಂಡರೆ, ಇಂದ್ರಿಯಗಳನ್ನು ಹತೋಟಿಯಲ್ಲಿಟ್ಟುಕೊಂಡರೆ, ಆಸೆಯನ್ನು ಮಿತಿಗೊಳಿಸಿಕೊಂಡರೆ, ಭಗವಂತನೆಡೆಗೆ ಮನಹರಿಯಲು ಬಿಟ್ಟರೆ, ಲೋಕದ ಅಶಾಶ್ವತ–ದುಃಖಮಿಶ್ರಿತ ಸುಖಸಂಪಾದನೆಯ ಕಡೆಗೇ ಇರುವ ನಮ್ಮ ಮನಸ್ಸು ಆಧ್ಯಾತ್ಮಿಕದೆಡೆಗೆ ಹೆಚ್ಚು ಹೆಚ್ಚಾಗಿ ಹೋಗುತ್ತದೆ. ಆಗ ಲೋಕಾಸಕ್ತಿ ಇಂಗಿ ಅನಾಸಕ್ತಿ ಉದಯವಾಗುತ್ತದೆ; ಆತ್ಮೋದ್ಧಾರದ ದಾರಿ ಹತ್ತುತ್ತದೆ–ಎಂದು ಹರಿದಾಸರು ಬೋಧಿಸಿದ್ದಾರೆ.

ಎಂದ ಮಾತ್ರಕ್ಕೇ ಲೋಕ ಬಿಟ್ಟು ಓಡಿಹೋಗಿ ಅಡವಿ ಸೇರಬೇಕೆಂದೇನೂ ಅವರ ಅಭಿಪ್ರಾಯವಲ್ಲ. ಸಂಸಾರದಲ್ಲಿಯೇ ಇದ್ದರೂ ಕಷ್ಟಸುಖಗಳ ಚಕ್ರದಲ್ಲೇ

ಸಿಲುಕಿದ್ದರೂ, ಅದಕ್ಕೆ ಅಂಟಿಕೊಳ್ಳಬಾರದು ಎಂದಿದ್ದಾರೆ. ಜೀವನದಲ್ಲಿ ಬರುವ ಎಡರು ತೊಡರುಗಳನ್ನು ಎದುರಿಸುವ ಸ್ಥೈರ್ಯವನ್ನು ಸಂಪಾದಿಸಬೇಕು. ಮನಸ್ಸನ್ನು ಸ್ಥಿಮಿತವಾಗಿರಿಸಿಕೊಂಡಿರಬೇಕು. ಕಂಸಾರಿಯ ನೆನೆವೆಂಬ ಸೌಭಾಗ್ಯವಿದ್ದರೆ ಸಂಸಾರವೊಂದು ಭಾಗ್ಯವಾಗುತ್ತದೆ; ಇಲ್ಲದಿದ್ದರೆ ಉಳಿದುದೇನಿದ್ದರೂ ನರಕಕ್ಕೆ ದಾರಿಯಾಗುತ್ತದೆ ಎಂಬುದೇ ಹರಿದಾಸರ ಅಭಿಪ್ರಾಯ.

ಸಂಸಾರ ಹೇಯ ಎಂದು ಸಾರಿದ್ದರೂ ಹರಿದಾಸರು ಅದನ್ನು ತ್ಯಜಿಸಿ ಎಂದಿಲ್ಲ. ಅವರ ಗಂಡುಮಾತನ್ನು ಗಮನಿಸಿ :

ಈಸಬೇಕು ಇದ್ದು ಜೈಸಬೇಕು
ಹೇಸಿಗೆ ಸಂಸಾರದಲ್ಲಿ ಆಶಾಲೇಸವಮಾಡದ್ಹಾಂಗೆ
ತಾಮರಸ ಜಲದಂತೆ ಪ್ರೇಮವಿಟ್ಟು ಭವದೊಳು
ಸ್ವಾಮಿ ರಾಮನೆನುತೆ ಪಾಡಿ ಕಾಮಿತ ಕೈಗೊಂಬರೆಲ್ಲ
ಗೇರು ಹಣ್ಣಿನಲ್ಲಿ ಬೀಜ ಸೇರಿದಂತೆ ಸಂಸಾರದಿ
ಮಾರಿ ಆಸೆ ಮಾಡದ್ಹಾಂಗೆ ಧೀರಕೃಷ್ಣನ ನೆನೆವರೆಲ್ಲ
ಮಾಂಸದಾಸೆಗೆ ಮತ್ಸ್ಯ ಸಿಲುಕಿ ಹಿಂಸೆಪಟ್ಟ ಪರಿಯಂತೆ
ಮೋಸಹೋಗದ್ಹಾಂಗೆ ಜಗದೀಶ ಪುರಂದರವಿಠ್ಠಲನೆನುತೆ
....
ಕಾಳ ಬೆಳದಿಂಗಳು ಈ ಸಂಸಾರ ಕತ್ತಲೆ ಬೆಳದಿಂಗಳು
....
ಉಂಟಾದಕಾಲಕ್ಕೆ ನೆಂಟರು ಇಷ್ಟರು
ಬಂಟರಾಗಿ ಬಂದು ಬಾಗಿಲ ಕಾಯ್ವರು
ಉಂಟಾದ ದಿನತಪ್ಪಿ ಬಡತನ ಬಂದರೆ
ಒಂಟಿಹಾಗೆ ಕತ್ತ ಮೇಲಕೆತ್ತುವರು !
....
ಶುಕನ ಓದುಗಳಂತೆ ಎನ್ನ ಓದುಗಳಯ್ಯ !
ಮಿಂದು ನೀದಾನೆ ಹುಡಿಹೊಯ್ದು ಕೊಂಬುವಂತೆ
ಮಂದಮತಿಯಾದೆನಯ್ಯ ತಂದೆ ಶ್ರೀಕೃಷ್ಣ !

ಸಂಸಾರವನ್ನು ದೊಡ್ಡ ಸಮುದ್ರಕ್ಕೂ, ಅದರಲ್ಲಿ ತೇಲುತ್ತಿರುವ ದೋಣಿಗೆ ಈ ದೇಹವನ್ನೂ ಹೋಲಿಸಿ ರೂಪಕಮಾಡಿ ಪುರಂದರದಾಸರು ಸಂಸಾರಸಾಗರದಿಂದ ಜೀವನನ್ನು ದಾಟಿಸಿ ಪಾರುಮಾಡು ಎಂದು ಅಂಬಿಗನೆಂಬ ಭಗವಂತನನ್ನು ಬೇಡಿ ಹಾಡಿರುವ ಕೃತಿ ಸೊಗಸಾಗಿದೆ.

ಅಂಬಿಗ ನಾ ನಿನ್ನ ನಂಬಿದೆ ಜಗ
ದಂಬಾರಮಣ ನಾ ನಿನ್ನ ನಂಬಿದೆ
ತುಂಬಿದ ಹರಿಗೋಲಂಬಿಗ ಅದ

ಒಂಬತ್ತು ಛಿದ್ರಗಳಂಬಿಗ
ಸಂಭ್ರಮದಿ ನೀನಂಬಿಗ ಅದ
ಇಂಬು ನೋಡಿ ನಡೆಸಂಬಿಗ
ಹೊಳೆಯ ಭರವ ನೋಡಂಬಿಗ ಅದಕೆ
ಸೆಳೆವು ಘನವಯ್ಯ ಅಂಬಿಗ
ಸುಳಿಯೊಳು ಮುಳುಗಿದೆ ಅಂಬಿಗ ಎನ್ನ
ಸೆಳೆದುಕೊಂಡೊಯ್ಯೊ ನೀನಂಬಿಗ
ಆರುತೆರೆಯು ನೋಡಂಬಿಗ ಅದು
ಮೀರಿ ಬರುತಲಿದೆ ಅಂಬಿಗ
ಆರಿಂದಲಾಗದು ಅಂಬಿಗ ಅದನ
ಪಾರಿಸಿ ದಾಟಿಸೊ ಅಂಬಿಗ
ಹತ್ತು ಬೊಬ್ಬುಳಿಗಳು ಅಂಬಿಗ ಅದಕೆ
ಹತ್ತಿದವೈವರು ಅಂಬಿಗ
ಮುತ್ತಿಗೆಗೊಳಗಾದೆನಂಬಿಗ ಎನ್ನ
ಎತ್ತಿಕೊಂಡೊಯ್ಯೊ ನೀನಂಬಿಗ
ಸತ್ಯವೆಂಬುದೆ ಹುಟ್ಟಂಬಿಗ
ಭಕ್ತಿ ಎಂಬುದೆ ಪಟವಂಬಿಗ
ನಿತ್ಯಮೂರುತಿ ನಮ್ಮ ಪುರಂದರವಿಠಲ
ಮುಕ್ತಿ ಮಂಟಪಕೊಯ್ಯೊ ಅಂಬಿಗ

ಈ ರೂಪಕಭಾವಗೀತೆಯಲ್ಲಿರುವ ಸಂಕೇತಾರ್ಥಗಳನ್ನು ತಿಳಿಯದಿದ್ದರೆ ಅನ್ವಯ ತೊಡಕಾಗಬಹುದು. ಇದೊಂದು ವೇದವ್ಯಾಸರನ್ನು ಕುರಿತ ಪ್ರಾರ್ಥನಾಗೀತೆ. ಅಂಬಿಗರ ಹೆಣ್ಣಾದ ಸತ್ಯವತಿಯ ಸುತರಾದ ಪ್ರಯುಕ್ತ ಅವರು ಅಂಬಿಗರು. ಜಗದಂಬೆಯ ಲಕ್ಷ್ಮೀದೇವಿಯ ರಮಣ ಪುರಂದರ ವಿಠಲನ ಒಂದು ಅವತಾರವೇ ಅದು.

ಹರಿಗೋಲು ಎಂದರೆ ದೋಣಿ ಎಂಬುದೇ ದೇಹ. ಸೆಳೆವು ಎಂದರೆ ಈಷಣತ್ರಯ (ದಾರಾ–ವಿತ್ತ–ಪುತ್ರ). ಸುಳಿ ಎಂದರೆ ಷಡ್ರಿಪುಗಳು (ಕಾಮ ಕ್ರೋಧ ಲೋಭ ಮೋಹ ಮದ ಮಾತ್ಸರ್ಯ). ಆರು ತೆರೆಗಳೆಂದರೆ ಷಡೂರ್ಮಿಗಳು (ಹಸಿವು ದಾಹ ಶೋಕ ಮೋಹ ಮುಪ್ಪು ಮರಣ). ಹತ್ತು ಬೊಬ್ಬುಳಿಗಳೆಂದರೆ ದಶೇಂದ್ರಿಯಗಳು. ಹತ್ತಿದವೈವರು ಎಂದರೆ ಪಂಚತನ್ಮಾತ್ರಗಳು (ಶಬ್ದಸ್ಪರ್ಶರೂಪರಸಗಂಧ). ಈ ಸಂಕೇತಾರ್ಥವನ್ನಿಟ್ಟುಕೊಂಡರೆ ಆಧ್ಯಾತ್ಮಿಕ ಅರ್ಥ ಹೊಳೆದು ಕೃತಿಯ ಸೊಬಗು ತಿಳಿಯುವುದು.

ಈ ದೋಣಿಯ ಹಾಡಿನಲ್ಲಿ ಹರಿದಾಸರು ಮಾನವ ಜೀವನದ ನೈಜ ಚಿತ್ರವನ್ನು ಸುಂದರವಾಗಿ ಬಣ್ಣಿಸಿದ್ದಾರೆ. ಜೀವನದ ಗುರಿ ಈ ಭವಸಾಗರವನ್ನು ದಾಟುವುದೇ ಆಗಿದೆ. ಅದಕ್ಕೇನುಪಾಯವೆಂಬುದನ್ನು ಈ ಕೃತಿ ಸೂಕ್ಷ್ಮವಾಗಿ ಚಿತ್ರಿಸಿದೆ.

ಮನುಷ್ಯ ಅದು ಬೇಕು ಇದು ಸಾಲದು; ಇಷ್ಟು ದೊರಕಿದರೆ ಮತ್ತಷ್ಟು

ಬೇಕೆಂಬಾಸೆ; ಅಷ್ಟು ದೊರಕಿದರೆ ಮತ್ತಷ್ಟರಾಸೆ; ಕಷ್ಟ ಬೇಡೆಂಬಾಸೆ; ಕಡುಸುಖವ ಕಾಂಬಾಸೆಗಳ ಜಂಜಾಟದಲ್ಲಿ ತೊಳಲಿ ಬೆಂಡಾಗುತ್ತಾನೆ. ಈ ಪರದಾಟವೇ ಬೇಡ. ಮನಸ್ಸು ನಿರ್ಮಲವಾಗಿ ಸ್ಥಿರವಾಗಿ ಇರಲಿ ಎಂದು ಕನಕದಾಸರು ಬೋಧಿಸಿದ್ದಾರೆ.

ತಲ್ಲಣಿಸದಿರು ಕಂಡ್ಯ ತಾಳು ಮನವೆ
ಎಲ್ಲರನು ಸಲಹುವನು ಇದಕೆ ಸಂಶಯಬೇಡ
ಬೆಟ್ಟದಾ ತುದಿಯಲ್ಲಿ ಹುಟ್ಟಿರುವ ವೃಕ್ಷಕ್ಕೆ
ಕಟ್ಟೆಯನು ಕಟ್ಟಿ ನೀರೆರೆದವರು ಯಾರೊ
ಅಡವಿಯೊಳಗಾಡುವ ಮೃಗಪಕ್ಷಿಗಳಿಗೆಲ್ಲ
ಅಡಿಗಡಿಗೆ ಆಹಾರವಿತ್ತವರು ಯಾರೂ!
....
ಕಲ್ಲೊಳಗೆ ಹುಟ್ಟಿ ಕೂಗುವ ಕಪ್ಪೆಗಳಿಗೆಲ್ಲ
ಅಲ್ಲಲ್ಲಿಗಾಹಾರವಿತ್ತವರು ಯಾರೊ!
ಬಲ್ಲಿದನು ಕಾಗಿನೆಲೆಯಾದಿ ಕೇಶವರಾಯ
ಎಲ್ಲರನು ಸಲಹುವನು ಇದಕೆ ಸಂಶಯವಿಲ್ಲ

ಆದರೆ ನಾವು ಮಾತ್ರ ತಾಳ್ಮೆಯಿಂದ ಇರಬೇಕು. ತಾಳ್ಮೆಯೆ ತಪಸ್ಸು.

ತಾಳುವದಕಿಂತ ತಪವು ಇಲ್ಲ
....
ದುಷ್ಟಮನುಜರು ಪೇಳ್ವ ನಿಷ್ಠುರದ ನುಡಿ ತಾಳು
ಕಷ್ಟಬಂದರೆ ತಾಳು ಕಂಗೆಡದೆ ತಾಳು
ನೆಟ್ಟ ಸಸಿ ಫಲ ಬರುವತನಕ ಶಾಂತಿಯ ತಾಳು
ಕಟ್ಟುಬುತ್ತಿಯ ಮುಂದೆ ಉಣಲುಂಟು ತಾಳು
ಹಳಿದು ಹಂಗಿಸುವಂಥ ಹಗೆಯ ಮಾತನು ತಾಳು
ಅಳುಕದಲೆ ಬಿರುಸು ಬಿಂಕದ ನುಡಿಯ ನೀ ತಾಳು
ಹಲಧರಾನುಜನನ್ನು ಹೃದಯದಲಿ ತಾಳು
ನಕ್ಕು ನುಡಿವರ ಮುಂದೆ ಮುಗ್ಗರಿಸಿದರು ತಾಳು
ಅಕ್ಕಸವ ಮಾಡುವವರ ಅಕ್ಕರದಿ ತಾಳು
ಪಕ್ಷೀಶ ಹಯವದನ ಶರಣೆಂದು ಬಾಳು

ಹಬ್ಬದ ಸ್ವರೂಪವನ್ನು ಹರಿದಾಸರು ಬಹಳ ಸೊಗಸಾಗಿ ಹೇಳಿದ್ದಾರೆ.

ಕಾಮಕ್ರೋಧವ ಬಿಡುವುದೆ ಹಬ್ಬ
ಕಾಮನ ಉಪಹತಿಗೆ ಅಂಜುವುದೆ ಹಬ್ಬ
ಭೂಮಿಯೊಳಗೆ ಜ್ಞಾನಿಯಾಗುವುದೆ ಹಬ್ಬ
ಬಂದ ಅತಿಥಿಗಳ ಪೂಜಿಸುವುದೇ ಹಬ್ಬ

ನಿಂದಕಜನರಲ್ಲಿ ಬೆರೆಯದಿಪ್ಪುದೆ ಹಬ್ಬ
ಋಣರೂಪವಾಗದ ಸಂಸಾರವೇ ಹಬ್ಬ
ಮನ ನೆರೆಹೊರೆ ನೋಡಿ ಬಳಲದಿಪ್ಪುದೆ ಹಬ್ಬ !
ಚಿನುಮಯಮೂರುತಿ ವಿಜಯವಿಠಲನ
ಮನಸಿನೊಳನುದಿನ ನೆನೆವುದೆ ಹಬ್ಬ
ಫಾಲಲಿಪಿಗೆ ಮನನೋಯದಿಪ್ಪುದೆ ಹಬ್ಬ
ದಂಪತಿಗಳು ಏಕವಾಗಿಪ್ಪುದೆ ಹಬ್ಬ
ಶಂಪದಂತೆ ವಿಜಯವಿಠಲಪೊಳೆವುದೆ ಹಬ್ಬ !

ಹರಿದಾಸರ ಅಪಾರ ಸಂಖ್ಯೆಯ ಹಾಡುಗಳಿಂದ ಅವರ ಹಲವು ಸಂದೇಶಾತ್ಮಕ ಬೋಧನಾತ್ಮಕ ನುಡಿಮುತ್ತುಗಳನ್ನು ಆಯ್ದು ಪೋಣಿಸಿದರೆ ಅದೊಂದು ಅನರ್ಘ್ಯ ಮುತ್ತಿನ ಹಾರವಾಗುತ್ತದೆ; ಜನರ ಹೃದಯವನ್ನು ಹಸನುಮಾಡುವ ಹಗುರ ಮಾಡುವ ಗಾದೆಯ ಮಾತುಗಳಾಗುತ್ತವೆ. ಅವುಗಳ ಆಳವಾದ ಅರ್ಥವನ್ನು ಮೆಲುಕು ಹಾಕುತ್ತ ಇರುವಂತಾಗುತ್ತದೆ. ಆದರಿಂದ ನಮಗೆ ಪ್ರಯೋಜನವೂ ಆಗುತ್ತದೆ. ನಮ್ಮ ಶಬ್ದ ಸಂಪತ್ತು ಅಧಿಕವಾಗಿ, ಸ್ಮೃತಿ ಚಿಗುರಿ, ಸ್ಮರಿಸಿದಾಗೆಲ್ಲ ಆನಂದವನ್ನೀಯುವ ಅಕ್ಷಯನಿಧಿಯಾಗುತ್ತದೆ. ಸ್ಥಳಸಂಕೋಚನಿಮಿತ್ತ ಅಂತಹ ಕೆಲವನ್ನು ಮಾತ್ರ ಇಲ್ಲಿ ಸೂಚಿಸಬಹುದು.

'ಸಜ್ಜನ ಸಂಗವಮಾಡೊ
ದುರ್ಜನ ಸಂಗವಬಿಡೊ'
'ಗುರುವಿನ ಗುಲಾಮನಾಗುವತನಕ
ದೊರೆಯದಣ್ಣ ಮುಕುತಿ'
'ಹೂವ ತರುವರ ಮನೆಗೆ ಹುಲ್ಲತರುವ
ಅವ್ವಲಕುಮಿ ರಮಣ ಇವಗಿಲ್ಲಗರುವ'
'ಹರಿಯ ನೆನಸಿದ ನಿಮಿಷ ಆವಾಗಲೂ ಹರುಷ'
'ತಾಳಮೇಳಗಳಿದ್ದು ಪ್ರೇಮವಿಲ್ಲದ ಗಾನ
ಕೇಳನೊ ಹರಿ ತಾಳನೊ'
'ಚಿತ್ತನಿನ್ನಯ ಸೇವೆಯೊಳಿರಲಿ
ಚಿಂತೆ ಇತರ ಬಿಡಲಿ'
'ಆದರವಿಲ್ಲದ ಊಟ ಅಮೃತಾನ್ನವಾದರೇನು ? '
'ಯಾತರ ಭಯ ಶ್ರೀನಾಥನ ಪರಮಪ್ರೀತಿಯ ಪಡೆದವಗೆ'
'ಬಂದದ್ದೆಲ್ಲ ಬರಲಿ ಗೋವಿಂದನ ದಯವಿರಲಿ'
'ಸಿರಿಯೆಂಬ ಸೊಡರಿಗೆ ಮಾನ್ಯರ ಅವಮಾನ'
'ಬಿರುಗಾಳಿ ಎಚ್ಚರಿಕೆ'
'ಲೋಕಾಪವಾದಕೆ ಅಂಜಿನಡೆವುದು ಎಚ್ಚರಿಕೆ'
'ಕಲ್ಲಾಗಿ ಇರಬೇಕು ಕಠಿಣಭವ ತೊರೆಯೊಳಗೆ'

'ಬಿಲ್ಲಾಗಿ ಇರಬೇಕು ಬಲ್ಲವರೊಳಗೆ'
'ಬೆಲ್ಲವಾಗಿರಬೇಕು ಬಂಧುಜನರೊಳಗೆ'
'ಚರ್ಮವತೊಳೆದರೆ ಕರ್ಮವು ಪೋಪುದೆ?'
'ಕ್ಲೇಶಾನಂದಗಳೀಶಾಧೀನ'
'ದಾನವೇ ಭೂಷಣ ಎರಡು ಹಸ್ತಂಗಳಿಗೆ'
'ಆಸೆಗೊಳಗಾದವನು ಜನರಿಗೆ ದಾಸನೆನಿಸುವನು'
'ಆಸೆಯನು ನಿಜದಾಸ ಗೈದಿದಾಪುಂಸ ದಾಸನೆನಿಸುವನು'
'ಆರಿಗಾರಿಲ್ಲವಾಪತ್ಕಾಲದೊಳಗೆ'
'ಮಾನವ ಜನ್ಮ ದೊಡ್ಡದು'
'ಈಸಬೇಕು ಇದ್ದು ಜೈಸಬೇಕು'
'ತಲ್ಲಣಿಸದಿರು ಕಂಡ್ಯ ತಾಳು ಮನವೆ'

ಇತ್ಯಾದಿ ಇತ್ಯಾದಿ

ಈ ವಾಕ್ಯಗಳು ಕುಳಿತು ಜೋಕೆಯಿಂದ ಆಯ್ದುವಲ್ಲ, ಅಲ್ಲಲ್ಲೇ ಓದಿದ ನೆನಪಿನಿಂದ ಗುರುತು ಹಾಕಿದುವು. ಅದೇ ಉದ್ದೇಶದಿಂದ ಹೆಕ್ಕಿ ತೆಗೆದರೆ ಕಡಲ ಆಳದಲ್ಲಿ ದೊರೆಯುವ ರತ್ನಗಳಂತೆ ಅಪಾರವಾಗಿ ದೊರೆಯುತ್ತವೆ. ಇವುಗಳಲ್ಲಿ ಒಂದೊಂದನ್ನೂ ವ್ಯಾಖ್ಯಾನ ಮಾಡಿದರೆ ಅನೇಕ ಪುಟಗಳಷ್ಟಾಗುತ್ತದೆ. ಅರ್ಥಗರ್ಭಿತವಾಗಿ ರಸವತ್ತಾಗಿ ಆಕರ್ಷಕವಾಗಿ ಹೃದಯಂಗಮವಾಗಿ ಹೇಳುವ ಜಾಣ್ಮೆ ಇಲ್ಲಿ ಹೇಗೆ ಅಡಕವಾಗಿದೆ ಎಂಬುದನ್ನು ಪರಿಭಾವಿಸಬಹುದು.

ವೈಶಿಷ್ಟ್ಯ

ಹರಿದಾಸರು ಶ್ರೇಷ್ಠಮಟ್ಟದ ಹರಿಭಕ್ತರಾಗಿದ್ದು ಜನರ ಉದ್ಧಾರಾರ್ಥವಾಗಿ ಶ್ರದ್ಧೆಯಿಂದ ಹಾಡಿರುವುದರಿಂದ ಅವರ ಮಾತುಗಳಲ್ಲಿ ರಸತುಂಬಿ ಹರಿದಿದೆ; ಜನರ ಮೆಚ್ಚಿಕೆ ಮನ್ನಣೆಗಳಿಗೆ ಪಾತ್ರವಾಗಿದೆ. ದೈವಸಾಕ್ಷಾತ್ಕಾರವನ್ನೂ ಕೃಪೆಯನ್ನೂ ಗಳಿಸಿಕೊಂಡ ಅಪರೋಕ್ಷಿಗಳ ಅನುಭವದ ಅಮೃತನುಡಿಗಳಾಗಿರುವುದೇ ಅದಕ್ಕೆ ಮುಖ್ಯ ಕಾರಣವಾಗಿದೆ.

ದೈವಭಕ್ತಿಯಿಂದ ಹರಿಬಂಟನಾಗಿದ್ದು ಅವನ ಅಪ್ಪಣೆಗನುಗುಣವಾಗಿ ನಡೆದವರಿಗೆ ಕಷ್ಟದ-ದುಃಖದ ಪ್ರಸಂಗವೇ ಇಲ್ಲ ಎಂದು ಹರಿದಾಸರು ಘೋಷಿಸಿರುವುದರಿಂದ ಸಮಾಜದಲ್ಲಿ ಪರಸ್ಪರ ಸಾಮರಸ್ಯಕ್ಕೂ ಇವರ ವಾಣಿ ಸಹಾಯಕವಾಗಿದೆ. ಬದುಕು ಹಸನಾಗುವ ಮಾರ್ಗವನ್ನು ಹರಿದಾಸರು ತೋರಿ ಲೋಕಶಿಕ್ಷಕರಾಗಿದ್ದಾರೆ. ತಾವು ನಡೆದು ಅದನ್ನೆ ನುಡಿದು ತೋರಿರುವುದೇ ಹರಿದಾಸರ ಹಿರಿಯ ವೈಶಿಷ್ಟ್ಯ.

ತಾಳ ರಾಗಲಯ ಬದ್ಧವಾಗಿ ಭಕ್ತಿಭರಿತವಾಗಿ ಹರಿದಾಸರ ಕೃತಿಗಳನ್ನು ಹಾಡಿದರೆ ಶ್ರೋತೃಗಳ ಹೃದಯವದು ಪಾಷಾಣವಾಗಿದ್ದರೂ ಕರಗಿ ಮೃದುವಾಗಿ ಅಲುಗಾಡುತ್ತದೆ. ದೈವಮಹಿಮೆಯನ್ನು ಮೈಮರೆತು ಮೊರೆಹೊಕ್ಕು ಹಾಡಿದ ಅವರ ದಿವ್ಯವಾಣಿ

ಹೃದಯವನ್ನು ನೇರವಾಗಿ ಹೊಕ್ಕು ಭಕ್ತ್ಯುದ್ರೇಕವನ್ನುಂಟುಮಾಡುತ್ತದೆ; ಭಾವಗಳನ್ನು ಮಿಾಟುತ್ತದೆ; ಚಿತ್ತದ ಮೇಲೆ ಅಳಿಸಲಾಗದ ಪರಿಣಾಮವನ್ನುಂಟುಮಾಡುತ್ತದೆ.

ನವವಿಧ ಭಕ್ತಿಯಲ್ಲೂ ಹರಿದಾಸರ ಹಾಡುಗಳಿವೆ. ಸ್ವಾಮಿ–ಸಖ–ಸೇವಕ–ಶಿಶು ಎಂಬೆಲ್ಲ ನಂಟಿನಿಂದ ಹಾಡಿದ್ದಾರೆ. ಇವುಗಳಲ್ಲಿ ಬಾಲಕೃಷ್ಣನ ಲೀಲೆಗಳನ್ನು ಚಿತ್ರಿಸುವ ತಾಯಿ–ಮಗು ಚಿತ್ರಣ ಬಹು ರಮ್ಯವಾದುದು. ಈ ಬಗೆಯ ಶಿಶುಸಾಹಿತ್ಯ ಕೃತಿಗಳ ಸಂಖ್ಯೆ ಪುರಂದರದಾಸರೊಬ್ಬರದೇ ಸುಮಾರು ಇನ್ನೂರು ಇವೆ.

ಸಂಸ್ಕೃತ ಭಾಷೆಯ, ಅದರಲ್ಲಿ ಅರಳಿರುವ ಅಪಾರ ಪ್ರೌಢಕೃತಿರಾಶಿಯ ಪರಿಚಯ ಲೇಶವೂ ಇಲ್ಲದ ಶುದ್ಧ ಕನ್ನಡಿಗನೊಬ್ಬ ಸಿದ್ಧಾಂತದ ಸಾರವನ್ನು, ಗಹನತತ್ತ್ವವಿವೇಕವನ್ನು, ನಡೆನುಡಿಗಳ ಆದರ್ಶವನ್ನು ಗಳಿಸಿಕೊಳ್ಳುವುದು ಹರಿದಾಸಸಾಹಿತ್ಯ ವ್ಯಾಸಂಗದಿಂದ ಸಾಧ್ಯವಿದೆ. ವೇದೋಪನಿಷತ್ತುಗಳ ಸಾರವನ್ನು ಭಾವಗರ್ಭಿತವಾದ ಸರಳನುಡಿಯಲ್ಲಿ ಈ ಸಾಹಿತ್ಯ ನಿರೂಪಿಸಿದೆ. ಹರಿದಾಸರ ಹಾಡುಗಳು ಜನತೆಯ ಜೀವನಾಡಿಯನ್ನು ಮಿಡಿದು, ಬೆಂದು ಬಾಯಾರಿ ಬಸವಳಿದವರಿಗೆ ತಂಪಾದ ಸಿಹಿಯಾದ ಅರಿವಿನ ತಿಳಿನೀರನ್ನು ಊಡುವ ಅರವಟ್ಟಿಗೆಗಳಾಗಿವೆ. ಆಧ್ಯಾತ್ಮ ಲೋಕದಲ್ಲಿ ಕನ್ನಡ ಸಾಹಿತ್ಯಕ್ಕೆ ವಿಶೇಷ ಮನ್ನಣೆ ದೊರಕಿರುವುದು ಹರಿದಾಸರಂತಹವರು ಸೃಷ್ಟಿಸಿರುವ ಸಂತಸಾಹಿತ್ಯ ರಾಶಿಯಿಂದ.

ಕರ್ಣಾಟಕ ಸಂಗೀತದ ಪಾಠಪದ್ಧತಿಯನ್ನು ಪುನರ್ವಿಮರ್ಶಿಸಿ ಅದಕ್ಕೊಂದು ಬಲವಾದ ತಳಪಾಯವನ್ನು ಹರಿದಾಸರು ಹಾಕಿಕೊಟ್ಟಿದ್ದಾರೆ. ಸರಳೆ ವರಸೆ ಅಲಂಕಾರಗಳನ್ನು ರಚಿಸಿಕೊಟ್ಟು ಸಂಗೀತ ವಿದ್ಯಾರ್ಥಿಗಳು ಎಂದೂ ಮರೆಯದ ಉಪಕಾರವನ್ನು ಮಾಡಿಕೊಟ್ಟಿದ್ದಾರೆ. ಕನ್ನಡ ಎಳೆದಂತೆಲ್ಲ ಸರಳವಾಗಿ ಮಧುರವಾಗಿ ಬರುವ ಒಳ್ಳೆಯ ಕಣಕದಂತೆ, ಸರಳಸುಂದರ ಭಾಷೆ, ಅದು ಸಂಗೀತಭಾಷೆ ಎಂಬುದನ್ನು ಪ್ರಮಾಣಸಹಿತ ತೋರಿಕೊಟ್ಟಿದ್ದಾರೆ.

ವಿಶ್ವವ್ಯಾಪಕವೂ ವಿಶಾಲವೂ ಆದ ದೃಷ್ಟಿಯಿಂದ ಸ್ತ್ರೀಪುರುಷರಾದಿಯಾಗಿ ಬಡವರು ಬಲ್ಲಿದರು ಪಂಡಿತಪಾಮರರು ಅಜ್ಞರು ಎಲ್ಲರಿಗೂ ಅನ್ವಯಿಸುವಂತೆ ಅನುಭವವಾಣಿಯಿಂದ ಕೃತಿಗಳನ್ನು ರಚಿಸಿ, ಅವರ ನಡೆ ನುಡಿಗಳನ್ನು ಹರಿಭಕ್ತಿಯಿಂದ ಚಿಕಿತ್ಸಿಸಿ ಯೋಗ್ಯವೂ ಸಾಮರಸ್ಯದಿಂದೊಡಗೂಡಿದುದೂ ಆದ ಸಮಾಜ ನಿರ್ಮಾಣಕ್ಕೆ ಹರಿದಾಸರು ಕಾರಣರಾಗಿದ್ದಾರೆ.

ಹರಿದಾಸರ ಉಪದೇಶದ ವೈಶಿಷ್ಟ್ಯವೆಂದರೆ ದೈವವಾದ ಮತ್ತು ಪ್ರಯತ್ನವಾದಗಳ ಹೃದಯಂಗಮ ಸಂಗಮದ ಸಾಧನೆ ಎನ್ನಬಹುದು. 'ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ' ಎಂಬ ಶ್ರೀಕೃಷ್ಣ ವಾಣಿಗನುಸಾರವಾಗಿ ಮಾನವ ತನ್ನ ಕೈಲಾದ ಪ್ರಯತ್ನವನ್ನು ಧರ್ಮಕ್ಕೆ ಅವಿರೋಧವಾಗಿ ತ್ರಿಕರಣಪೂರ್ವಕ ಮಾಡಿ ಫಲವನ್ನು ಮಾತ್ರ ಪರಮಾತ್ಮನ ವಿತರಣೆಗೆ ಇಚ್ಛೆಗೆ ಬಿಡಬೇಕು ಎಂಬ ತತ್ತ್ವಸಾರವನ್ನು ಹರಿದಾಸರು ನಿಷ್ಕೃಷ್ಟವಾಗಿ ಬೋಧಿಸಿದ್ದಾರೆ. ಆಸೆ ನಿರಾಸೆಗಳ ಜಂಜಡ ತಪ್ಪಿ ನಿರಾಳ

ಮನಸ್ಸು ಇದರಿಂದ ಗಳಿತವಾಗುತ್ತದೆ. ಮನಸ್ಸು ನಿರಾಳವಾಗುವುದಕ್ಕಿಂತ ಬೇಕಾದು ದೇನಿದೆ ? ಬೇರೇನಿದೆ ?

ವಿಹಿತ ಮಾರ್ಗದಲ್ಲಿ ನಡೆದು ಧರ್ಮದಿಂದ ಗಳಿಕೆಯೆಷ್ಟಾಗುವುದೋ ಅಷ್ಟನ್ನು ಪಡೆದು ಯದೃಚ್ಛಾಲಾಭ ಸಂತುಷ್ಟನಾಗಿ 'ಸರಳ ಜೀವನ–ಉನ್ನತ ಆಲೋಚನ' ಮಾಡುತ್ತ ಸದಾ ಸಮಚಿತ್ತದಲ್ಲಿರಬೇಕೆಂಬ ಹರಿದಾಸರ ಉಪದೇಶ–ಸಂದೇಶ ಮನನೀಯ ವಾಗಿದೆ, ವಿಶಿಷ್ಟವಾಗಿದೆ.

ಮಾನವ ಜನ್ಮ ದೊಡ್ಡದು. ಅದನ್ನು ವೃಥಾ ಕಳೆದುಬಿಡಬಾರದು. ಸಾಧನೆ ಮಾಡಿಕೊಂಡು ಗಾಳಿಬಂದಾಗ ತೂರಿಕೊಳ್ಳಬೇಕು– ಈಸಬೇಕು, ಇದ್ದು ಜೈಸಬೇಕು ಎಂಬ ನಿಲವನ್ನು ಹರಿದಾಸರು ತಳೆದಿದ್ದಾರೆ.

ದಾಸಸಾಹಿತ್ಯ ಹೀಗೆ ಅಮೃತವಾಣಿಯಿಂದ ನೊಂದವರನ್ನು ಸಮಾಧಾನ ಮಾಡುತ್ತದೆ; ಉತ್ತಮಗೊಳ್ಳುವ ಅಪೇಕ್ಷೆಯುಳ್ಳವರನ್ನು ಉದಾತ್ತಗೊಳಿಸುತ್ತದೆ; ಮನದ ಮಂಕನ್ನು ಕಳೆದು ತತ್ತ್ವಬೀಜವನ್ನು ಹಸನಾದ ಹೃದಯದಲ್ಲಿ ಬಿತ್ತಿ ಉದ್ಧರಿಸುತ್ತದೆ; ತಾವೂ ಬದುಕಿ ಇತರರನ್ನೂ ಬದುಕಿಸುವ ಸಂಜೀವನ ಶಕ್ತಿ ಅದಕ್ಕಿದೆ.

ಮಾನವ ಸಭ್ಯ ಸಾಮಾಜಿಕ, ಆದರ್ಶಭಕ್ತ, ಜಿವನ್ಮುಕ್ತನಾಗುವಂತೆ ದಾಸ ಸಾಹಿತ್ಯ ಮಾಡಬಲ್ಲುದಾಗಿದೆ. ಮನೆಮನೆಯಲ್ಲಿ ಮನಮನದಲ್ಲಿ ಅರಿವಿನ ನಂದಾ ದೀಪದ ಬೆಳಕನ್ನು ಬೀರುತ್ತದೆ. ಹರಿದಾಸರ ಈ ತಾಯ್ನುಡಿಯ ಸೇವೆ ಹಿರಿದು ಹೆಮ್ಮೆ ಪಡುವಂತಹುದು.

ಒಂದು ಜನಾಂಗವು ಬದುಕಿಕೊಂಡಿರಬೇಕಾದರೆ ಅದಕ್ಕೊಂದು ಭಾಷೆ ಅಗತ್ಯ. ಅದು ಮನುಷ್ಯನ ನಿತ್ಯದ ಆಹಾರ ನಿದ್ರಾದಿ ಸಾಮಾನ್ಯ ವ್ಯವಹಾರಗಳಿಗೆ ಉಪಯುಕ್ತವಾಗುವಷ್ಟೇ ಇದ್ದರೆ ಸಾಲದು. ಆ ಭಾಷೆ ಒಂದು ಬರೆಹ, ಬರೆಹದಲ್ಲುಳ್ಳ ಒಂದು ಉತ್ತಮ ಗ್ರಂಥ ರಾಶಿ, ಗ್ರಂಥಗಳನ್ನು ಅನುಭವಿಸುತ್ತಿರುವ ಜನರು, ಹಾಗಿದ್ದರೇ ಆ ಜನಾಂಗವು ತನ್ನ ಬಾಳನ್ನು ಕಾಪಾಡಿಕೊಂಡೀತು; ಹಾಗಿಲ್ಲದಿದ್ದರೆ ಜನರೊಳಗೆ ಪರಸ್ಪರ ವ್ಯವಹಾರಕ್ಕೆ ತೊಡಕಾಗಿ, ವಿಚಾರ ವಿನಿಮಯವು ನಿಂತುಹೋಗಿ ಭಾವಗಳು ಅರಳದೆ, ಆ ಜನಾಂಗವು ಬರಬರುತ್ತ ದುರ್ದೆಶೆಗೆ ತಗುಲಿ ಸಂಸ್ಕಾರಗೆಟ್ಟು ಬದುಕಿ ಬದುಕದಂತಾಗಿದ್ದೀತು. ಒಂದು ಭಾಷೆ ಮೇಲ್ಮೊಗವಾದರೆ ಆ ಭಾಷೆಯ ಜನರ ಬೆಳವಣಿಗೆ ಮುಂದು ವರಿಯುತ್ತದೆಂದೂ ಇಳಿಮೊಗವಾದರೆ ಜನಾಂಗವು ಕ್ಷಯಿಸುತ್ತದೆಂದೂ ಬಹುಮಟ್ಟಿಗೆ ಹೇಳಬಹುದು.

ಪಂಜೆ ಮಂಗೇಶರಾವ್

ಕಾವ್ಯಾವಲೋಕನ

ಸಾಹಿತ್ಯ ಅಕಾಡಮಿ ಪ್ರಶಸ್ತಿ ಪಡೆದ ಗ್ರಂಥಗಳು

ಪ್ರಭುಶಂಕರ

ಮಹಾ ಛಂದಸ್ಸಿನ ಶ್ರೀ ರಾಮಾಯಣ ದರ್ಶನಂ

ಪ್ರವೇಶ

ರಾಮಾಯಣದ ಕಥೆ ಎಲ್ಲರಿಗೂ ತಿಳಿದದ್ದೇ. ಮಹರ್ಷಿ ವಾಲ್ಮೀಕಿಗಳು ಮೊಟ್ಟ ಮೊದಲ ಸಲ ರಾಮನ ಕಥೆಯನ್ನು ಸಂಸ್ಕೃತದಲ್ಲಿ ಮಹಾಕಾವ್ಯವಾಗಿ ರಚಿಸಿದ್ದೂ ಎಲ್ಲರಿಗೂ ಗೊತ್ತಿರುವ ವಿಷಯವೇ. ಅನಂತರ ಭರತಖಂಡದ ಅನೇಕ ಭಾಷೆಗಳಲ್ಲಿ ಜನಪದ ಗೀತೆಗಳಾಗಿ, ನಾಟಕಗಳಾಗಿ, ಕಾವ್ಯವಾಗಿ, ಯಕ್ಷಗಾನವಾಗಿ, ಹರಿಕಥೆಯಾಗಿ –ಇಡಿಯಾಗಿಯೋ ಭಾಗ ಭಾಗವಾಗಿಯೋ–ಸೀತಾರಾಮರ ಪುಣ್ಯಕಥೆ ಬೇರೆ ಬೇರೆ ಕಾಲಗಳಲ್ಲಿ ಮೈದಳೆಯುತ್ತ ಬಂದಿದೆ. ಕನ್ನಡದಲ್ಲೂ ಜೈನ ಧರ್ಮದ ದೃಷ್ಟಿಯಿಂದ ನಾಗಚಂದ್ರ, ಸಂಪ್ರದಾಯ ಕ್ರಮದಲ್ಲಿ ತೊರವೆ ನರಹರಿ ರಾಮಾಯಣಗಳನ್ನು ರಚಿಸಿದ್ದಾರೆ. ಆದರೆ ಅವೆಲ್ಲಕ್ಕಿಂತ ಭಿನ್ನವಾಗಿ, ಈ ಯುಗದ ಮೇರುಕೃತಿಯಾಗಿ ಮೂಡಿದೆ ಶ್ರೀ ಕುವೆಂಪುರವರ 'ಶ್ರೀ ರಾಮಾಯಣ ದರ್ಶನಂ'.

ಬಾಹುಳ್ಯ

ಕವಿಯ ಕೃತಿಯನ್ನು ಕೈಗೆತ್ತಿಕೊಳ್ಳುತ್ತಿದ್ದಂತೆ ನಮ್ಮನ್ನು ಮೊದಲು ಬೆರಗುಗೊಳಿಸುವುದು ಗ್ರಂಥದ ಬಾಹುಳ್ಯ. ಶ್ರೀ ರಾಮಾಯಣ ದರ್ಶನಂ ಕಾವ್ಯದಲ್ಲಿ ಇಪ್ಪತ್ತೆರಡು ಸಾವಿರದ ಇನ್ನೂರತೊಂಬತ್ತಾರು ಪಂಕ್ತಿಗಳಿವೆ. ಇಂಗ್ಲಿಷ್ ಮತ್ತು ಅನೇಕ ಯೂರೋಪಿಯನ್ ಭಾಷೆಗಳಲ್ಲಿ ಪ್ರಕಾಂಡ ಪಾಂಡಿತ್ಯವನ್ನು ಪಡೆದಿದ್ದ ದಿವಂಗತ ಮಂಜೇಶ್ವರ ಗೋವಿಂದ ಪೈ ಅವರು ಒಮ್ಮೆ ಹೇಳಿದರು: "ಮಿಲ್ಟನ್ ಕವಿಯ 'ಪ್ಯಾರಡೈಸ್ ಲಾಸ್ಟ್' ಮತ್ತು 'ಪ್ಯಾರಡೈಸ್ ರೀಗೇಯಿನ್ಡ್' ಕಾವ್ಯಗಳ ಅನಂತರ ಜಗತ್ತಿನ ಬೇರಾವ ಭಾಷೆಯಲ್ಲಿಯೂ ಇಂತಹ ಅದ್ಭುತ ಪ್ರಮಾಣದ ಮಹಾಕಾವ್ಯ ರಚಿತವಾಗಿಲ್ಲ". ಬರಿಯ ಬಾಹುಳ್ಯ ದೃಷ್ಟಿಯಿಂದಲಾದರೂ ಇಂತಹ ಒಂದು ದೊಡ್ಡ ಪ್ರಮಾಣದ ಕೃತಿಯನ್ನು ಜಗತ್ತಿಗೆ ನೀಡಿದ ಕೀರ್ತಿ ಕನ್ನಡದ್ದು. ಹಾಗೆ ನೋಡಿದರೆ ಇಂಗ್ಲಿಷ್‌ನಲ್ಲಿ ಕೂಡ ಇಂತಹ ಒಂದು ಭವ್ಯ ಪ್ರಮಾಣದ ಕೃತಿಯನ್ನು ಜಗತ್ತಿಗೆ ನೀಡಿದ ಕೀರ್ತಿಯೂ ಭಾರತದ್ದೇ. ಇಪ್ಪತ್ತಮೂರು ಸಾವಿರ ಪಂಕ್ತಿಗಳನ್ನು ಉಳ್ಳ

ಶ್ರೀ ಅರವಿಂದರ 'ಸಾವಿತ್ರೀ' ಮಹಾಕಾವ್ಯವನ್ನು ಇಲ್ಲಿ ನೆನೆಯುತ್ತಿದ್ದೇನೆಂದು ಬೇರೆಯಾಗಿ ಹೇಳಬೇಕಾಗಿಲ್ಲ.

ಮಹಾಕಾವ್ಯ ಬೇಕೆ?

ಈ ಯುಗದಲ್ಲಿ ಮಹಾಕಾವ್ಯ ರಚನೆ ಅನಗತ್ಯ ಎಂದು ಕೆಲವು ವಿಮರ್ಶಕರ ಅಭಿಪ್ರಾಯ. ಒಂದು ಪಂಕ್ತಿ, ಒಂದೂವರೆ ಪಂಕ್ತಿ ಪದ್ಯ ಬರೆದು ಜಗತ್ಪ್ರಸಿದ್ಧಿಯನ್ನು ಪಡೆಯಬೇಕೆಂದು ಭಾವಿಸುವ, ಪಡೆದಿದ್ದೇವೆಂದು ಭ್ರಮಿಸುವ ಕವಿಗಳೂ, ಅಂತಹ ಕವಿಗಳ ಪಕ್ಷಪಾತಿಗಳೂ ಆದ ವಿಮರ್ಶಕರ ಭಾವನೆ ಅದು. ಒಂದು ದೇಶದ ಸಂಸ್ಕೃತಿಸಮಸ್ತ ತಳೆಯುವ ರೂಪ ಮಹಾಕಾವ್ಯ ಎಂಬುದನ್ನು ಅವರು ಒಪ್ಪರು. ಆನೆಯಂತಹ ಒಂದು ಪ್ರಾಣಿ ಇರುವುದು ಸಾಧ್ಯ, ಸತ್ಯ ಎಂಬುದನ್ನು ಯಾವ ತರ್ಕದಿಂದ ತಾನೆ ಇರುವೆಗೆ ತಿಳಿಯಪಡಿಸುವುದು ಸಾಧ್ಯ?

ಹಳೆಯ ಕಥೆ ಏಕೆ?

ನನ್ನಂತೆ ಅನೇಕ ಓದುಗರನ್ನು ಒಂದು ಪ್ರಶ್ನೆ ಮತ್ತೆ ಮತ್ತೆ ಕಾಡುತ್ತದೆ: ಭೀಮ ಪ್ರತಿಭೆಯ ಕುವೆಂಪು ಇಷ್ಟು ಹಳೆಯದಾದ ಒಂದು ಕಥೆಯನ್ನು ತಮ್ಮ ಮಹಾಕಾವ್ಯದ ವಸ್ತುವನ್ನಾಗಿ ಏಕೆ ಆರಿಸಿಕೊಂಡರು? ಕಾವ್ಯಕ್ಷೇತ್ರದಲ್ಲಿ ಅವರ ಸಾಧನೆ–ಸಿದ್ಧಿಗಳನ್ನು ಗಮನಿಸಿದರೊ 'ಕಾನೂರು ಸುಬ್ಬಮ್ಮ ಹೆಗ್ಗಡಿತಿ' ಮತ್ತು 'ಮಲೆಗಳಲ್ಲಿ ಮದುಮಗಳು' ಕಾದಂಬರಿಗಳನ್ನು ನೆನೆದರೆ, ತಮ್ಮ ಅನುಭವ–ಕಾಣ್ಕೆಗಳ ಅಭಿವ್ಯಕ್ತಿಗೆ ಒಂದು ನೂತನ ಕಾವ್ಯವಸ್ತುವನ್ನು ಸೃಷ್ಟಿಸುವುದು ಅವರಿಗೆ ಅಸಾಧ್ಯವಾಗಿರಲಿಲ್ಲ ಎಂಬುದು ಸ್ಪಷ್ಟವಾಗಿದೆ. ಆದರೂ ಅವರು ಸಾವಿರಾರು ವರ್ಷಗಳಷ್ಟು ಹಳೆಯದಾದ, ನೂರಾರು ಕವಿಗಳು ನೂರಾರು ರೀತಿಯಲ್ಲಿ ಹಾಡಿ ಮುಗಿಸಿರುವ, ಅಷ್ಟೇನೂ ಜಟಿಲವಾಗಿಲ್ಲದೆ ಸರಳವಾಗಿರುವ ವಸ್ತುವನ್ನೇ ಆರಿಸಿಕೊಂಡಿದ್ದಾರೆ, ಏಕೆ? ತಮ್ಮ ಕಾವ್ಯದ ಪ್ರಾರಂಭದಲ್ಲಿ ವಾಲ್ಮೀಕಿಯನ್ನುದ್ದೇಶಿಸಿ ಕವಿ ಹೇಳುತ್ತಾರೆ:

> ಕಲೆಯನಲ್ಲದೆ ಶಿಲ್ಪಿ ಶಿಲೆಯನೇಂ ಸೃಷ್ಟಿಪನೆ?
> ತನು ನಿನ್ನದಾದೊಡಂ ಚೈತನ್ಯಮೆನ್ನದೆನೆ,
> ಕಥೆ ನಿನ್ನದಾದೊಡಂ, ನೀನೆ ಮೇಣಾಶೀರ್ವದಿಸಿ
> ಮತಿಗೆ ಬೋಧವನಿತ್ತೊಡಂ, ಕೃತಿ ನನ್ನ ದರ್ಶನಂ
> ಮೂರ್ತಿವೆತ್ತೊಂದಮರ ಕಾವ್ಯದಾಕೃತಿಯಲ್ತೆ?
> ಪಂಜರದ ಪಳಮೆಯೊಳ್ ಪ್ರಾಣ ನವ ಪಕ್ಷಿಯಂ,
> ವಿಗ್ರಹಕೆ ದೇವತಾವಾಹನಂ ಗೆಯ್ವವೋಲ್,
> ಭಕ್ತಿಯಿಂದಾಹ್ವಾನಿಪೆನ್[1]

---

1 ಸಂ. ೧, ಸಂಚಿಕೆ ೧, ಪಂ. ೧೦೦–೧೦೭

ಇಲ್ಲಿನ ಮೊದಲನೆಯ ಪಂಕ್ತಿ ನಮ್ಮ ಕುತೂಹಲಕ್ಕೆ ಉತ್ತರ ನೀಡುತ್ತದೆ. ಕಲಾಕೃತಿಯನ್ನು ಸೃಷ್ಟಿಸಹೊರಟಿರುವ ಶಿಲ್ಪಿ ಕಲೆಯನ್ನು ಮಾತ್ರ ಸೃಷ್ಟಿಸುತ್ತಾನಲ್ಲದೆ ಶಿಲೆಯನ್ನಲ್ಲ. ಎಂದರೆ ಮೂಲವಸ್ತುವನ್ನು ಅವನು ಪ್ರಕೃತಿಯಿಂದ ಅದು ಇರುವಂತೆ ಸ್ವೀಕರಿಸುತ್ತಾನೆ. ರಾಮಾಯಣ ಕಾವ್ಯರೂಪವಾಗಿ ಮೈಗೊಂಡದ್ದು ಮಹರ್ಷಿ ವಾಲ್ಮೀಕಿಗಳಲ್ಲಿ, ನಿಜ. ಆದರೆ ಬಹುಶಃ ಅದಕ್ಕೆ ಮುಂಚೆ ಮತ್ತು ಅನಂತರ ಖಚಿತವಾಗಿ, ದೀರ್ಘಕಾಲ, ಅದು ಜನ ಮನೋಮಂದಿರದಲ್ಲಿ ಬಹುರೂಪಿಯಾಗಿ, ಆರಾಧನಾ ಮೂರ್ತಿ ಸಮೂಹವಾಗಿ ನಿಂತಿದೆ. ಗಂಗೆ ಹಿಮಾಚಲಗಳಂತೆ, ಕಾವೇರಿ ಸಹ್ಯಾದ್ರಿಗಳಂತೆ ಅದೂ ಭರತ ಖಂಡದ ಪ್ರಕೃತಿಯ ಭಾಗವಾಗಿಹೋಗಿದೆ. ಅದನ್ನು ನೇರವಾಗಿ ತಮ್ಮ ಕಾವ್ಯವಸ್ತುವನ್ನಾಗಿ ಕವಿ ಪಡೆದಿದ್ದಾರೆ. ಭಾಸ ಭವಭೂತಿ ಕಾಳಿದಾಸಾದಿಗಳೂ, ಕಂಬ ಕೃತ್ತಿವಾಸಾದಿಗಳೂ, ರಂಗನಾಥ ತುಳಸೀದಾಸಾದಿಗಳೂ ತಮ್ಮ ಕವಿತಾವಿಲಾಸ, ಭಕ್ತಿ ಮತ್ತು ದರ್ಶನಗಳನ್ನು ಅಭಿವ್ಯಕ್ತಗೊಳಿಸಲು ವಾಲ್ಮೀಕಿ ಮಹರ್ಷಿಗಳಿಗೆ ಋಣಿಗಳಾಗಿರುವುದನ್ನು ಇಲ್ಲಿ ನೆನೆಯಬಹುದು.

ಹಳೆಯ ಕಥೆಯೊಂದನ್ನು ತನ್ನ ಕಾವ್ಯವಸ್ತುವನ್ನಾಗಿ ಆರಿಸಿಕೊಳ್ಳುವುದರಲ್ಲಿ ಕವಿಗೆ ಮನಶ್ಶಾಸ್ತ್ರೀಯವಾದ ಒಂದು ಅನುಕೂಲತೆಯೂ ಉಂಟು; ಹಾಗೆ ನೋಡಿದರೆ ಕವಿ–ಸಹೃದಯರಿಬ್ಬರಿಗೂ ಉಂಟು. ಸಹಸ್ರಾರು ವರ್ಷಗಳಕಾಲ ಈ ಕಥೆ ಭರತ ಖಂಡದ ಜನಪರಂಪರೆಯ ಚೇತನದ ಭಾಗವಾಗಿ ಬೆರೆತು ಹರಿದಿದೆ; ಅವರ ಇರವಿನ ಅನೇಕ ಪದರಗಳಲ್ಲಿ ಅದು ಅನುಭವದ ಸಾರವಾಗಿ ತಂಗಿದೆ; ಅವರ ಪ್ರಜ್ಞೆಯ ನಾನಾ ಸ್ತರಗಳಲ್ಲಿ ಸಂಸ್ಕಾರವಾಗಿ ರೂಪುಗೊಂಡಿದೆ. ಹೀಗಾಗಿ ನಮಗೆ ಅದು ಪರಿಚಿತ ಪ್ರಪಂಚ. ರಾಮ, ಸೀತೆ–ಈ ಹೆಸರುಗಳಾಗಲಿ, ಅಹಲ್ಯೆಯ ಶಾಪವಿಮೋಚನೆ, ಸಮುದ್ರಲಂಘನ–ಈ ಘಟನೆಗಳಾಗಲಿ ಹೆಸರಿಸಿದ ಕೂಡಲೇ ನಮ್ಮಲ್ಲಿ ಅನೇಕ ತಂತಿಗಳನ್ನು ಮಿಡಿಯುತ್ತವೆ, ಅನೇಕ ಭಾವಕೋಶಗಳನ್ನು ತೆರೆಯುತ್ತವೆ. ಹೀಗಾಗಿ ಕವಿ ನಮಗೆ ಅನುಭವ ಮಾಡಿಕೊಡಬೇಕಾಗಿರುವ ನೂತನ ಅನುಭವಗಳನ್ನಾಗಲಿ, ಪರಿಚಯ ಮಾಡಿಕೊಡಬೇಕಾಗಿರುವ ದರ್ಶನವನ್ನಾಗಲಿ ನಮಗೆ ಪ್ರವಹಣ ಮಾಡಲು ವಿಶೇಷವಾಗಿ ಕಷ್ಟಪಡಬೇಕಾಗಿಲ್ಲ. ಇದು ಈಗಾಗಲೇ ನಮಗೆ ಚೆನ್ನಾಗಿ ತಿಳಿದಿರುವ ಭಾಷೆಯಲ್ಲಿ ಸಂಭಾಷಣೆ ನಡೆಸಿದಂತೆ. ಕವಿಗೊಬ್ಬನಿಗೇ ತಿಳಿದಿರುವ ಒಂದು ಭಾಷೆಯನ್ನು ನಾವು ಕಲಿತು ಅರ್ಥಮಾಡಿಕೊಳ್ಳಲು ಶ್ರಮಿಸಬೇಕಾಗಿ ಬಂದರೆ, ಅಥವಾ ಒಂದು ಹೊಸ ಭಾಷೆಯನ್ನು ಕವಿ ಮತ್ತು ನಾವು ಇಬ್ಬರೂ ಹೊಸದಾಗಿ ಕಲಿತು ಸಂಭಾಷಿಸಬೇಕಾಗಿ ಬಂದರೆ ಉಂಟಾಗುವ ಕಷ್ಟವನ್ನು ನಾವು ಸುಲಭವಾಗಿ ಊಹಿಸಿಕೊಳ್ಳಬಹುದು.

ಅಲ್ಲದೆ ರಾಮಾಯಣದ ಕಥೆ ನಿಂತ ನೀರಲ್ಲ, ನಿರಂತರವೂ ಹರಿಯುತ್ತಿರುವ ಶುಭ್ರ ಜೀವನ ಪ್ರವಾಹ. ಆದುದರಿಂದ ಅದನ್ನು ಪ್ರತಿಯುಗದಲ್ಲೂ ಯುಗಪ್ರತಿನಿಧಿಯಾದ ಕವಿ ಮನಮನಕ್ಕೂ ಹರಿಸುವುದರಲ್ಲಿ ವಿಶೇಷ ಪ್ರಯೋಜನವಿದೆ. ಆ ಯುಗದ ಆಶೋತ್ತರಗಳು, ಜನರ ಮನಸ್ಸು ಹಳೆಯದನ್ನು ಸ್ವೀಕರಿಸಬಯಸುವ ವಿಧಾನ–

ಇವುಗಳನ್ನು ಅರಿತ ಕವಿ ಹಳೆಯ ವಸ್ತುವನ್ನು ಆರಿಸಿಕೊಳ್ಳುವಾಗ ಆ ಕಥಾವಸ್ತುವಿಗೂ ಉಪಕಾರ ಮಾಡುತ್ತಾನೆ, ಸಹೃದಯರಿಗೂ ಉಪಕಾರಮಾಡುತ್ತಾನೆ.

ಪಂಪ 'ವ್ಯಾಸ ಮಹರ್ಷಿಗಳ ವಿಸ್ತಾರವಾದ ವಚನಾಮೃತವೆಂಬ ಸಮುದ್ರವನ್ನು ಈಸುತ್ತೇನೆ, ನಾನೇ ಕವಿವ್ಯಾಸ ಎಂಬ ಗರ್ವ ನನಗಿಲ್ಲ' ಎಂದು ವಿನಯವನ್ನು ಮುಂದಿಟ್ಟು ಮಹತ್ತನ್ನು ಸಾಧಿಸಿರುವಂತೆ ಕುವೆಂಪು ಅವರೂ ವಿನಯದಿಂದ ವಾಲ್ಮೀಕಿ ಮಹರ್ಷಿಗಳಿಗೆ ನಮಿಸಿ ಮಹತ್ತನ್ನು ಸಾಧಿಸಿದ್ದಾರೆ.

ಬದಲಾವಣೆಗಳು–ಮಂಥರೆ

ರಾಮಾಯಣದ ಕಥೆ ವಾಲ್ಮೀಕಿ ರಾಮಾಯಣದಲ್ಲಿದ್ದಂತೆಯೇ ಯಥಾವತ್ತಾಗಿ ನಿರೂಪಿತವಾಗಿಲ್ಲ ಶ್ರೀ ರಾಮಾಯಣ ದರ್ಶನಂ ಕಾವ್ಯದಲ್ಲಿ. ಹಾಗೆಂದು ಕಥೆಯನ್ನು ಕವಿ ಮನಸ್ವಿಯಾಗಿ ಬದಲಾಯಿಸಿಯೂ ಇಲ್ಲ. ಕಥೆಯ ಹೊರರೇಖೆ ಹೆಚ್ಚು ಕಡಮೆ ಮೂಲದಲ್ಲಿದ್ದಂತೆಯೇ ಇದೆ. ಒಳಗಿನ ವಿವರಗಳಲ್ಲಿ ಕವಿಯ 'ದರ್ಶನ'ಕ್ಕೆ ಅಳವಡುವಂತೆ ಕೆಲವು ವ್ಯತ್ಯಾಸಗಳಿವೆ. ಅಂತಹ ಮುಖ್ಯವಾದ ಕೆಲವು ಬದಲಾವಣೆಗಳನ್ನು ಮೊದಲು ನೋಡಬಹುದು.

ರಾಮನ ವನವಾಸ ಮತ್ತು ತದನಂತರದ ತೋರಿಕೆಯ ವಿಪತ್ತುಗಳ ಪರಂಪರೆಯ ಸಿಡಿತಕ್ಕೆ ಮೂಲ ಕಿಡಿಯಂತಿರುವ ಮಂಥರೆ ಮೂಲ ರಾಮಾಯಣದ ಕಾಲದಿಂದಲೂ ಶತಶತಮಾನಗಳ ಜನ ತಿರಸ್ಕಾರಕ್ಕೆ ಪಾತ್ರಳಾಗಿದ್ದಾಳೆ. ಅವಳ ವಿಷಯಕ್ಕೆ ಕನಿಕರ ಮೂಡುವುದಿರಲಿ ಸಹನೆಯನ್ನು ಹುಟ್ಟಿಸುವುದೂ ಸಾಹಸದ ಕೆಲಸವೇ. ಮೂಲ ಕಥೆಯಲ್ಲಿ ಮಂಥರೆ ಯಾರು, ಏಕೆ ಅವಳು ಅಷ್ಟರಮಟ್ಟಿಗೆ ಭರತಮಾತೆಯ ಪಕ್ಷಪಾತಿಯೂ ರಾಮಮಾತೆಯ ದ್ವೇಷಿಯೂ ಆದಳು, ಎಂಬುದರ ಪ್ರಸ್ತಾಪವಿಲ್ಲ. ಪಾತ್ರಗಳ ಅಂತರಂಗದ ವಿಶ್ಲೇಷಣೆ ವಾಲ್ಮೀಕಿ ರಾಮಾಯಣದಂತಹ ಮಹಾಕಾವ್ಯಗಳಲ್ಲಿ ನಡೆಯುವುದೂ ಇಲ್ಲ. ಸಾಮಾನ್ಯವಾಗಿ ಹಿಂದಿನ ಮಹಾಕಾವ್ಯಗಳಲ್ಲಿ ಪಾತ್ರಗಳು ಎರಡು ಗುಂಪಿಗೆ ಸೇರುತ್ತವೆ. ಒಂದು ಸದ್ಗುಣ ಸಂಪನ್ನರದ್ದು; ಮತ್ತೊಂದು ಅಧಮರದ್ದು. ಇವೆರಡು ಗುಂಪುಗಳಲ್ಲಿ ಪಕ್ಷಾಂತರ ಸಾಮಾನ್ಯವಾಗಿ ಇಲ್ಲ! ಆದರೆ ಕುವೆಂಪು ರಾಮಾಯಣದಲ್ಲಿ ಅನೇಕ ಪಾತ್ರಗಳ ಅಂತರಂಗದ ಅನ್ವೇಷಣೆ ವಿಸ್ತಾರವಾಗಿ ನಡೆದಿದೆ. ಮನಶ್ಶಾಸ್ತ್ರದ ವ್ಯಾಪಕ ಪ್ರಯೋಜನವನ್ನು ಪಡೆದಿದ್ದಾರೆ ಕವಿ. ಕೆಲವು ಪಾತ್ರಗಳ ಹಿಂದನ್ನು ಮತ್ತೆ ಕೆಲವು ಪಾತ್ರಗಳ ಮುಂದನ್ನು ತಮ್ಮ ಪ್ರತಿಭೆಯಿಂದ ರಚಿಸಿದ್ದಾರೆ. ಅಂಥ ಪಾತ್ರಗಳಲ್ಲಿ ಮಂಥರೆಯದೂ ಒಂದು.

ಮೂಲ ರಾಮಾಯಣದ ಮಂಥರೆ ಕೈಕೇಯಿಯ ತವರುಮನೆಯಿಂದ ಆಕೆಯೊಂದಿಗೆ ದಶರಥನ ಅರಮನೆಗೆ ಬಂದು ನೆಲಸಿದವಳು. ಅವಳ ಸೇವಕಿ. ರಾಮನ ಮೇಲೇಕೆ ಅವಳಿಗೆ ಸಿಟ್ಟು ಎಂದರೆ ರಾಮನ ತಾಯಿ ತನ್ನ ಒಡತಿಯಾದ ಕೈಕೇಯಿಯ ಸವತಿಯಾದುದರಿಂದ! ಅಷ್ಟಕ್ಕೇ ಅತ್ಯಂತ ನೀಚಕಾರ್ಯಕ್ಕೆ–ರಾಮನಿಗೆ ರಾಜ್ಯವನ್ನು

ತಪ್ಪಿಸಿ ಕಾಡಿಗೆ ಅಟ್ಟುವುದಕ್ಕೆ—ಅವಳು ಕೈಕೇಯಿಯನ್ನು ಪ್ರೇರೇಪಿಸುತ್ತಾಳೆ. ತನ್ನ ಪ್ರಯತ್ನದಲ್ಲಿ ಜಯವನ್ನು ಗಳಿಸುತ್ತಾಳೆ. ಆದರೆ ಜಯಮಾತ್ರ ಅವಳದು, ಯಶಸ್ಸಲ್ಲ. ಅವಳಿಗೆ ಈ ಕಾರ್ಯದಿಂದ ದೊರೆತದ್ದು ಶಾಶ್ವತವಾದ ಅಪಕೀರ್ತಿ.

ಕುವೆಂಪು ರಾಮಾಯಣದಲ್ಲಿ ಒಂದು 'ಸಂಚಿಕೆ'ಯೇ ಅವಳ ಹೆಸರನ್ನುಹೊತ್ತು ನಿಂತಿದೆ: 'ಮಮತೆಯ ಸುಳಿ ಮಂಥರೆ.' ಮತ್ತೊಂದು ಸಂಚಿಕೆ 'ಅಗ್ನಿಯಾತ್ರೆ'ಯೂ ಅವಳ ವೃತ್ತಾಂತದಿಂದಲೇ ಸಮಾಪ್ತಿಯಾಗುತ್ತದೆ. ಶ್ರೀ ರಾಮಾಯಣ ದರ್ಶನಂ ಕಾವ್ಯದ ಮೊದಲ ಸಂಚಿಕೆ 'ಕವಿಕ್ರತು ದರ್ಶನಂ' ಅಲ್ಲೂ ಸುಮಾರು ನೂರಿಪ್ಪತ್ತು ಪಂಕ್ತಿಗಳಲ್ಲಿ ಮಂಥರೆಯ ಪಾತ್ರವರ್ಣನೆಯಿದೆ. ಮಹಾಕಾವ್ಯ ಕೊನೆಯಾಗುವಾಗ 'ತಪಸ್ಸಿದ್ಧಿ'ಯಲ್ಲಿಯೂ ಮತ್ತೊಮ್ಮೆ ಅವಳ 'ದರ್ಶನ'ವಾಗುತ್ತದೆ. ಇಷ್ಟೆಲ್ಲ ಮಹತ್ವ ಅವಳಿಗೇಕೆ?

ರಾಮಾಯಣದ ಅನೇಕಾನೇಕ ವಿಪತ್ತುಗಳಿಗೆ ಮಂಥರೆ ಕಾರಣವಾಗಿ ತೋರುತ್ತಾಳೆ ನಿಜ. ಆದರೆ ಅವಳೇ ಅವಕ್ಕೆಲ್ಲ 'ಮೂಲ' ಕಾರಣವೆ? 'ನಿಮಿತ್ತ' ಕಾರಣವಾದರೆ ಯಾವ ವ್ಯಕ್ತಿ ಅಥವಾ 'ಶಕ್ತಿ'ಗೆ ಅವಳು ನಿಮಿತ್ತ? ಈ ಮಹಾಕೃತಿಯನ್ನೆಲ್ಲ ವ್ಯಾಪಿಸಿರುವ 'ದರ್ಶನ' ದೃಷ್ಟಿ, ಮಂಥರೆಯ ಪ್ರವೇಶವಾದಾಗಲೇ, ಈ ಮುಂದಿನ ಪಂಕ್ತಿಗಳಲ್ಲಿ ಸೂತ್ರರೂಪವಾಗಿ ವ್ಯೆದಳೆದಿದೆ.

> ನೆಯ್ದಾಳುತಿದೆ ಜಗವನೊಂದತಿವಿರಾಣ್ ಮನಂ,
> ಸೂಕ್ಷ್ಮಾತಿ ಸೂಕ್ಷ್ಮತಂತ್ರದಿ ಬಿಗಿದು ಕಟ್ಟಿಯುಂ
> ಜೀವಿಗಳ್ಗಿಚ್ಛೆಯಾ ಸ್ವಾತಂತ್ರ್ಯ ಭಾವಮಂ
> ನೀಡಿ. ಮಂಥರೆ ಸೀತೆ ರಾಮು ರಾವಣರೆಲ್ಲರುಂ
> ಸೂತ್ರಗೊಂಬೆಗಳಲ್ತೆ ಆ ವಿಧಿಯ ಹಸ್ತದಲಿ?[2]

ದರ್ಶನ ದೀಪ್ತರಾದ ಕವಿಯ ದೃಷ್ಟಿಯಲ್ಲಿ ಸೀತೆ ರಾಮು ರಾವಣರ ಪಂಕ್ತಿಯಲ್ಲೇ ನಿಲ್ಲುತ್ತಾಳೆ ಮಂಥರೆಯೂ. ಒಂದು ವಿರಾಟ್ ಮನ ಎಲ್ಲ ವ್ಯಕ್ತಿಗಳನ್ನೂ—ರಾವಣನನ್ನು ಹೇಗೋ ಹಾಗೆ ರಾಮನನ್ನೂ—ಒಂದೂ ಸೂಕ್ಷ್ಮಾತಿ ಸೂಕ್ಷ್ಮ ತಂತ್ರದಿಂದ ಬಿಗಿದು ಕಟ್ಟಿದೆ. ಆ ವಿಧಿಯ ಹಸ್ತದಲ್ಲಿ ಎಲ್ಲರೂ ಸೂತ್ರದ ಬೊಂಬೆಗಳೇ. ಹಾಗಾದರೆ ವ್ಯಕ್ತಿಗಳಿಗೆ ಸ್ವಾತಂತ್ರ್ಯವೇ ಇಲ್ಲವೇ, ಸ್ವಂತ ಇಚ್ಛೆಯೇ ಇಲ್ಲವೆ? ಇಚ್ಛೆಯ ಸ್ವಾತಂತ್ರ್ಯ ಭಾವ ಮಾತ್ರ ಉಂಟು!

ರಾಮ ಪಟ್ಟಾಭಿಷೇಕದ ಹಿಂದಿನ ರಾತ್ರಿ ಮಂಥರೆ ಒಂದು ಕೆಟ್ಟ ಕನಸನ್ನು ಕಂಡಳು. ಅದರಿಂದ ಎಚ್ಚತ್ತವಳೇ ಅಂದಿನ ಮಂಗಳ ಕಾರ್ಯಕ್ಕೆ ಭಂಗವನ್ನು ತರುವ ನಿರ್ಧಾರವನ್ನು ಕೈಗೊಂಡು ಅದರಂತೆ ನಡೆದಳು. ಆ ಕನಸಿಗೆ ಕಾರಣವನ್ನು ಕುವೆಂಪು ಮತ್ತೆ ದರ್ಶನ ದೃಷ್ಟಿಯಿಂದಲೇ ವಿವರಿಸುತ್ತಾರೆ: 'ಮಥಿಸಿದುದು ದಶಶಿರನ ವಿಧಿ

---

2 ಸಂಚಿಕೆ ೩, ಪಂ. ೧೩೧ ರಿಂದ ೧೩೫.

ಮಂಥರೆಯ ಮನದಿ ತನ್ನ ತಂತ್ರದ ಕೃತಿಯನಾ ಇರುಳ ಕನಸಿನಲಿ!'[3] ಇದು ಪಲಾಯನವಾದವಲ್ಲ; ಬದುಕನ್ನು ಪೂರ್ಣದೃಷ್ಟಿಯಿಂದ ನೋಡಬಲ್ಲ ದ್ರಷ್ಟಾರನಿಗೆ ಕಾಣಬಲ್ಲ ಸತ್ಯ.

ಹಾಗೆಂದು ಈ ಸತ್ಯವನ್ನು ತತ್ವಶಾಸ್ತ್ರದ ಮಾತುಗಳಲ್ಲಿ ನಿರೂಪಿಸುವುದಿಲ್ಲ, ಕವಿ. ಹಾಗೆ ಮಾಡಿದ್ದರೆ ಇದು ತತ್ವಶಾಸ್ತ್ರದ ಪಠ್ಯಪುಸ್ತಕವಾಗಬಹುದಾಗಿತ್ತೇ ಹೊರತು ಮಹಾ ಕಾವ್ಯವಾಗುತ್ತಿರಲಿಲ್ಲ. ಆ ಸತ್ಯ ಕಾವ್ಯಮಯವಾಗಿ ಮೂಡಿದೆ ಇಲ್ಲಿ. ಪಾತ್ರಗಳ ಹಿಂದು ಮುಂದುಗಳನ್ನು 'ಭವ'ದ ದೃಷ್ಟಿಯಿಂದಲೂ, ಜೀವದ ನಾನಾ ಸಹಜ 'ವಾಸನೆ'ಗಳ ದೃಷ್ಟಿಯಿಂದಲೂ ಭಾವ–ತರ್ಕಗಳು ಒಪ್ಪುವಂತೆ ನಿರೂಪಿಸುತ್ತಾರೆ ಕವಿ. ಮಂಥರೆಯ ಪಾತ್ರದಲ್ಲಿಯೇ ಇವನ್ನು–ದರ್ಶನ, ಜೀವನ, ಮಂಥನ–ಈ ಮೂರೂ ಮೆಚ್ಚುವಂತೆ ಬೆರತಿರುವುದನ್ನು ನಾವು ಕಾಣಬಹುದು.

ಮಗು ರಾಮನಿಗೆ ಚಂದ್ರ ಬೇಕಾಯಿತು. ಚಕ್ರವರ್ತಿಯೇ ಆದರೂ ದಶರಥ ಅದನ್ನು ತನ್ನ ಮುದ್ದು ಕಂದನಿಗೆ ಕೊಡಲಾರದಾದ. ಎಲ್ಲರೂ ಕಂಗಾಲಾಗಿರುವಾಗ ಮಂಥರೆ ಅಲ್ಲಿಗೆ ಬಂದಳು. ಅವಳು ಜಾಣ್ಮೆಯಿಂದ ನೀಡಿದ ಕನ್ನಡಿಯಲ್ಲಿ ಚಂದ್ರನನ್ನು ಕಂಡು ರಾಮ ಅಳುವನ್ನು ನಿಲ್ಲಿಸಿದ. ಅವನ ಮುಖ ಅರಳಿತು. ಅಲ್ಲಿದ್ದವರ ಮುಖಗಳೂ ಅರಳಿದುವು. ಆ ಸುಖಕ್ಕೆ ಕಾರಣಳಾದ ಮಂಥರೆಯ ಮುಖವೂ ಅರಳಿತು. ಸಂತೋಷ ದಿಂದ ಮಗುವನ್ನು ಎತ್ತಿಕೊಳ್ಳಲು ಕೈ ಚಾಚಿದಳು. ಆದರೆ ಕೌಸಲ್ಯೆಯ ಭ್ರಾಂತಿ ಅವಳ ಕೈಯನ್ನು ತಡೆಯಿತು: "ಕಂದಂಗಮಂಗಳಂ ಮುಟ್ಟದಿರ್, ಮುಟ್ಟದಿರ್, ಬೇಡ, ಬೇಡ." ಇದರ ಪ್ರತಿಕ್ರಿಯೆ? ಮಂಥರೆಯ ಮೈತ್ರಿ ಜಜ್ಜರಿತವಾಯಿತು.

> ಮುರಿದೊಲ್ಮೆಯವಮಾನದಿಂದೆ ಕಣ್ಬನಿ ಚಿಮ್ಮಿ
> ನಿಲ್ಲದಲ್ಲಿಂ ನಡೆದಳಯ್ ಭರತನಂ ಬಿಗಿದಪ್ಪಿ,
> ತುಳಿದ ಸರ್ಪಿಣಿಯಂತೆ ಮುಳಿಸಿನುರಿಯಿಂ ಪೊಗೆದು,
> ಸುಯ್ದು ಹೆಡೆಯೆತ್ತಿ![4]

ಇಲ್ಲಿಂದ ಕಥೆಯ ಮುಂದಿನ ದೃಶ್ಯಕ್ಕೆ ಸಾಗುವ ಬದಲು, ಹಿಂದಿನ ದೃಶ್ಯ ವೊಂದಕ್ಕೆ ನಮ್ಮನ್ನು ಕರೆದೊಯ್ಯುತ್ತಾರೆ, ಕವಿ. ಕೇಕೆಯ ರಾಜನ ಬೇಟೆ. ಅಲ್ಲಿಗೆ ಒಂದು ಮಗುವಿನ ಅಳು ಕೇಳಿಬರುತ್ತದೆ, ಇಡೀ ಕಾಡೇ ಅಳುತ್ತಿರುವಂತೆ. ಹಿಂದಿರುಗು ತ್ತಿದ್ದುದು ಬೇಟೆಯಂತಹ ಕ್ರೂರ ಕರ್ಮದಿಂದ. ಆದರೆ ರಾಜನ ಹೃದಯದಲ್ಲಿ ಹುಟ್ಟಿದ್ದು ಕರುಣೆ: 'ಕಟ್ಟಲಿಹ ಕಬ್ಬಕೆ ಮೊದಲ್ ಗುದ್ದಲಿಯ ಪೂಜೆಪೋಲ್!' ಮುಂದಿನ ಮಹಾಕಾವ್ಯಕ್ಕೆ ಅದೇ ಗುದ್ದಲಿಯ ಪೂಜೆ! ಮಗು ಮಲಗಿದೆ, ಮುಳ್ಳೂ ಮಣ್ಣೂ ತರಗೆಲೆ ತುಂಬಿದ ನೆಲದಮೇಲೆ, ಇರುವೆ ಮುತ್ತಿ. ಆ ಮಗುವನ್ನು ರಾಜ

---

[3] ಮೇಲಿನದೇ ಪಂ. ೧೩೬–೧೩೭.

[4] ಸಂ. ೧, ಪಂ. ೫೪೯–೫೭೨.

ಎತ್ತಿಕೊಂಡು ಒರಸಿ ಮನೆಗೆ ಕರೆದುತಂದ. ಅಲ್ಲಿ ಆರೈಕೆ ಮಾಡಿ ಪೋಷಿಸಿದ. ತುಂಬ ವಿಕಾರವಾಗಿದ್ದ ಮಗು ಇನ್ನೂ ವಿಕಾರವಾಗಿ ಬೆಳೆಯಿತು. ಎಲ್ಲೆಲ್ಲಿಯೂ ಆಕೆಗೆ ದೊರೆತದ್ದು ಅಸಹ್ಯ ತಿರಸ್ಕಾರಗಳೇ. ಮುಂದೆ ಕೈಕೇಯಿ ಹುಟ್ಟಿದಳು. ಆ ಸುಂದರ ಶಿಶುವಿನ ಆರೈಕೆ ಮಂಥರೆಯ ಪಾಲಿಗೆ ಬಂತು. ಮಂಥರೆ, ಹಾಲಿನಲ್ಲಿ ಇದ್ದಲಿನ ಚೂರಿನಂತೆ ಕೈಕೇಯಿಯ ಸೌಂದರ್ಯದಲ್ಲಿ ತೇಲಾಡಿದಳಂತೆ. ಅನಂತರ ಆಕೆ ಕೈಕೇಯಿಯ ಜತೆ ಅಯೋಧ್ಯೆಗೂ ಬಂದಳು. ಅಲ್ಲಿಯೂ ಅವಳಿಗೆ ಕಾದಿದ್ದುದು ಅಸಹ್ಯ ತಿರಸ್ಕಾರವೇ. ಮಂಥರೆ ಮಾತ್ರ ತನ್ನ ಒಡತಿಯ ಒಲ್ಮೆಗಾಗಿ, ಅವಳ ಸುಖಕ್ಕಾಗಿ ಜೀವನವನ್ನೇ ಹೋಮಮಾಡಿದಳು, ಕಮ್ಮಾರನ ಅಡಿಗಲ್ಲಿನಂತೆ ಬಾಳಿದಳು. ಇದು ಅವಳ ಹಿನ್ನೆಲೆ. ಅದು ಅವಳ ಕೈಕೆಯೀ ಪ್ರೇಮಕ್ಕೂ ಉಳಿದವರೆಲ್ಲರ ದ್ವೇಷಕ್ಕೂ ಸಮರ್ಪಕವಾದ ಮನಶ್ಶಾಸ್ತ್ರೀಯವಾದ ಹಿನ್ನೆಲೆಯೂ ಆಗಿದೆ.

ಉಳಿದ ಕಥೆ ಎಲ್ಲರಿಗೂ ತಿಳಿದದ್ದೇ. ಆದರೆ ತಿಳಿಯದ ಭಾಗವೆಂದರೆ ಮಂಥರೆಯ ಅಗ್ನಿಪ್ರವೇಶ. ಮಂಥರೆ ಯಾವುದರಲ್ಲಿ ಒಳಿತನ್ನು ಕಂಡಳೋ ಅದರಲ್ಲಿ ಭರತ ಶತ್ರುಘ್ನರು ಒಳಿತನ್ನು ಕಾಣಲಿಲ್ಲ. ಅಷ್ಟೇ ಅಲ್ಲ ಶತ್ರುಘ್ನ ರೋಷದಿಂದ ಅವಳನ್ನು ಹಿಡಿದು ಕುಕ್ಕಲೂ ಹೇಸಲಿಲ್ಲ. ಮಂಥರೆ ದಿಕ್ಕುಗೆಟ್ಟಳು. ಆದರೆ ಅವಳ ಭರತ ಪ್ರೇಮ ಎಷ್ಟು ತೀವ್ರವಾದದ್ದೆಂದರೆ ತಕ್ಷಣ ತನ್ನ ಮನದ ವಿಷವನ್ನು ಹೊರಹಾಕಿ ಭರತನಿಗೆ ಪ್ರಿಯ ವಾದ ರಾಮಾಮೃತವನ್ನು ಹೃದಯದಲ್ಲಿ ತುಂಬಿಕೊಂಡಳು. 'ದೃಢಮನದ ಹೆಡೆಯೆತ್ತಿ ತನ್ನ ನಂಜಂ ತಾನೆ ಹೀರಲೆಳಸುವ ಕಾಳ ಸರ್ಪಿಣಿಯ ತೆರದಿ' ಎದ್ದು ಹೊರಡುತ್ತಾಳೆ. ಅವಳಿಗೀಗ ಒಂದೇ ಬಯಕೆ, ಭರತನನ್ನು ಸಂತೋಷಗೊಳಿಸುವುದು. ಅದಕ್ಕೆ ಒಂದೇ ದಾರಿ, ರಾಮನನ್ನು ಹಿಂದಕ್ಕೆ ಕರೆದುತರುವುದು. ಅವಳು ರಾಮನ ಹೆಸರನ್ನು ಹಿಡಿದು ಕೂಗುತ್ತಾ ರಭಸವಾಗಿ ನಡೆಯುತ್ತಾಳೆ—ಪುಣ್ಯವನ್ನು ಹುಡುಕಿಕೊಂಡು ಹೊರಟ ಪಾಪದಂತೆ! ರಾಮ ಅವಳಿಗೆ ಕೇವಲ ಭರತನಣ್ಣಯ್ಯ! ಹಾಗೆಯೇ ಕೂಗುತ್ತಾ ಓಡಿದವಳು ಕಾಡುಕಿಚ್ಚನ್ನು ರಾಮನೆಂದು ಭಾವಿಸಿ—ಅವನೂ ಜ್ಯೋತಿಸ್ಸ್ವರೂಪ ತಾನೆ-ಹೋಗಿ ಅಪ್ಪುತ್ತಾಳೆ. ಮಂಥರೆ ಚಿಟ್ಟೆಯಂತೆ ಸೀದುಹೋದಳು. ಕವಿ ಕೇಳುತ್ತಾರೆ: ವಿಶ್ವದೇಶವನ್ನೆಲ್ಲ ಪರಿಮಳದ ಪುಣ್ಯ ಪವನ ಪ್ರಸರಿಸುವಂತೆ, ಮಂಥರೆಯ ಅಂತರಾತ್ಮದ ದಯಾಲಕ್ಷ್ಮಿ ತನ್ನ ಕೀರ್ತಿಯ ಪುಣ್ಯದ ಅಮೃತ ಸೌಂದರ್ಯವನ್ನು ಲೋಕಲೋಕ ಗಳಲ್ಲೂ ತುಂಬುವುದಿಲ್ಲವೆ, ಹೇಳು?

ಮೂಲ ರಾಮಾಯಣದಲ್ಲಿ ಮೇಲಿನ ಯಾವ ಸಂಗತಿಯೂ-ಎಂದರೆ ಅವಳ ಹುಟ್ಟಿನ ವಿಷಯ, ಮತ್ತೆ ಅಗ್ನಿಪ್ರವೇಶದ ವಿಷಯ—ಇಲ್ಲ. ಹಾಗೆಯೇ ಅಲ್ಲಿಲ್ಲದ ಮತ್ತೊಂದು ಸಂಗತಿಯೆಂದರೆ ಮಂಥರೆ ಸೂಕ್ಷ್ಮ ತನುವಿನಲ್ಲಿ ಮತ್ತೊಮ್ಮೆ ಕಾಣಿಸಿ ಕೊಳ್ಳುವುದು. ರಾಮ ಇನ್ನೂ ವನವಾಸ ಮುಗಿಸಿ ಹಿಂದಿರುಗಿಲ್ಲ. ಅವಧಿ ಮುಗಿಯುತ್ತ ಬಂದಿದೆ. ಭರತ ಕಳವಳಗೊಂಡಿದ್ದಾನೆ. ಕೊನೆಯ ರಾತ್ರಿ ಕಳೆಯುತ್ತಿದೆ, ಮರುದಿನ ಅಗ್ನಿಪ್ರವೇಶವೇ ಸರಿ ಎಂದು ಭರತ ನಿಶ್ಚಯಿಸುತ್ತಿದ್ದಾನೆ. ಆಗ ಇದ್ದಕ್ಕಿದ್ದಂತೆ

ಯಜ್ಞ ಕುಂಡದ ಅಗ್ನಿಯಿಂದ ಏಳುವ ಜ್ವಾಲೆಯಲ್ಲಿ ಲೀನವಾಗಿದೆಯೋ ಎಂಬಂತೆ ಒಂದು ಅಮರ ಸುಂದರ ಸೂಕ್ಷ್ಮ ತೇಜದ ದೇವತಾಮೂರ್ತಿ ಮೈದೋರಿತು. ಅಶರೀರ ವಾಣಿ ಮಿಡಿಯಿತು : "ಕಂದ, ನಿನ್ನ ಅಣ್ಣ ಇಂದೊ ನಾಳೆಯೊ ದಿಟವಾಗಿ ಹಿಂದಕ್ಕೆ ಬರುತ್ತಾನೆ. ಮನಸ್ಸಿನ ನಿಶ್ಚಯವನ್ನು ಬಿಡು." ನಮ್ಮಂತೆಯೇ ಆಶ್ಚರ್ಯಚಕಿತನಾದ ಭರತ ಕೇಳಿದ : "ದೇವಿ, ನೀನು ಯಾರು? ಬೆಂದ ನನ್ನ ಎದೆಗೆ ಸುಧಾ ಸುಖವನ್ನು ಎರೆಯುತ್ತಿದ್ದೀಯೆ." ಉತ್ತರ ಬಂತು : "ಸದಾ ನಿನ್ನ ಸುಕ್ಷೇಮ ಚಿಂತನೆಯಲ್ಲಿ ಇರುವವರು ಮತ್ತೆ ಯಾರು? ಮಂಥರೆಯನ್ನು ಬಿಟ್ಟು." ಆ ಹೆಸರೂ ಅವನಿಗೆ ಬೇಡ–ಅಷ್ಟು ಅಸಹ್ಯ ಅದು. ಆದರೆ ಆ ವಾಣಿ ಹೇಳುತ್ತದೆ : "ವತ್ಸ, ಅವಳು ಆ ಕುಬ್ಜೆ ಕಾರಣಳಲ್ಲ, ಬರಿಯ ಕರಣ. ವಿಕೃತಳಾದ ಆ ಕುಬ್ಜೆ ಮಾಡಿದ ಕೆಲಸ ಹೊರನೋಟಕ್ಕೆ ಪಾಪವೇಷಿ. ನಾನೇ ನೋಡು ನಿನ್ನ ಮಂಥರೆಯ ಅಂತರಾತ್ಮದ ಪುಣ್ಯಲಕ್ಷ್ಮಿ!"

ಈ ಹೊಸಸೃಷ್ಟಿ ಸರಿಯೆ ಎಂಬುದು ಸಹೃದಯನ ಪ್ರಶ್ನೆ. 'ಅಗ್ನಿಯಾತ್ರೆ'ಯ ಇಪ್ಪತ್ತು ಪಂಕ್ತಿಗಳು (೭೯–೯೯) ಎರಡು ರೀತಿಯ ಉತ್ತರಗಳನ್ನೊಳಗೊಂಡಿವೆ. ಕವಿ ಹೇಳುತ್ತಾರೆ : "ಓ ಪತಿತೆ, ಓ ಕುಬ್ಜೆ, ಓ ಮಂಥರೆಯೆ ಕವಿ ಸಹಜವಾದ ಕರುಣೆಯಿಂದ ನಿನಗಾಗಿ ನಾನು ಮರುಗುತ್ತೇನೆ. ಲೋಕ ಕ್ರೋಧವೆಂಬ ಮದಿಸಿದಾನೆಯ ಕಾಲ್ತುಳಿತದ ರೋಷದ ಕಾಡುಕಿಚ್ಚಿಗೆ ಆಹುತಿಯಾಗಿ ಬಿದ್ದ ನಿನ್ನ ಭಸ್ಮರಾಶಿಯನ್ನು ತೊಳೆಯುತ್ತಿದೆ ಇದೋ ಕಣ್ಗಂಗೆ, ಕಾವ್ಯಮಹಿಮೆಯ ಸಮುದ್ರ ತೀರ್ಥಕ್ಕೆ ಕಂಸನರಮನೆಗಾಗಿ ಪರಿಮಳ ದ್ರವ್ಯಗಳನ್ನು ಹೊತ್ತು ಹೊರಟಿದ್ದ ಕುಬ್ಜಿಕೆಗೆ ಕೃಷ್ಣನ ಸೋಂಕಿನಿಂದ ಸಿರಿಚೆಲ್ವು ದೊರೆಕೊಂಡಂತೆ, ಕಾವ್ಯ ಕರುಣಾರಸದ ಲಹರಿಯ ಹರಿಯ ಸಿರಿಯ ಕರಪದ್ಮ ಚುಂಬನಕ್ಕೆ ನಿನ್ನ ಕೀಳುರೂಪ ನಾಶವಾಗಿ ಮತ್ತೆ ಹೃದಯದ ಹೊಳೆಯುವ ರೂಪ ಮೆರೆಯದಿರುತ್ತದೆಯೆ? ತನ್ನ ಯಾವ ಪುರುಷಾರ್ಥಕ್ಕೆ, ಯಾವ ಸಂಪತ್ತಿಗೆ, ಯಾವ ಸುಖಕ್ಕೆ ಆ ಗೂನಿ ಕೈಕೆಗೆ ಉಪದೇಶ ಕೊಟ್ಟಳು? ಹುಟ್ಟಿದಂದಿನಿಂದ ಇತರರ ಚೆಲುವಿನಲ್ಲೇ ತನ್ನ ಚೆಲುವನ್ನು ಕಂಡು ಒಲಿದು, ಇತರರ ಸುಖದಲ್ಲೇ ತನ್ನ ಸೊಬಗನ್ನು ಕಂಡು ಉಂಡು ಇದ್ದ ಆ ದಾಸಿ (ಅಂತಹ ಕೆಲಸ ಮಾಡಿದ್ದೇಕೆ?) ತನ್ನ ನಚ್ಚಿನ ಒಡತಿಗೆ ಮತ್ತೆ ಆಕೆಯ ಮೆಚ್ಚಿನ ಮಗನಿಗೆ ತಾನು ತೊತ್ತಾದುದಕ್ಕೆ ಒಳ್ಳೆಯದನ್ನು ಮಾಡುತ್ತೇನೆ ಎಂದು ಹಾಗೆ ಮಾಡಿದರೆ ಆಕೆಯ ಪರಾರ್ಥತೆಯ ಶುದ್ಧಿಯಲ್ಲಿ ಸ್ವಾರ್ಥದೋಷವನ್ನು ಕಾಣುತ್ತಾರೆಯೆ?"

ಇಲ್ಲಿ ಎರಡು ಅಂಶಗಳನ್ನು ಗಮನಿಸಬೇಕು. ಒಂದು ಹಿಂದಿನಿಂದ ತಿರಸ್ಕಾರವನ್ನೇ ಕುಡಿದಿದ್ದ ವ್ಯಕ್ತಿಗೆ ಕವಿ ಹೃದಯ ಕರುಣೆಯನ್ನು ಸೂರೆಚೆಲ್ಲಿರುವುದು, ಎರಡನೆಯದು ಆ ಕರುಣೆ ಸಕಾರಣವಾಗಿದೆ ಎಂಬುದು. ಎಂದರೆ ಬರಿಯ ತರ್ಕದ ದೃಷ್ಟಿಯಿಂದ–ಎಂದರೆ ಕರುಣೆ ತೋರಿಸುವುದಕ್ಕಾಗಿ ಕಾರಣ ಹುಡುಕಿ ಅಲ್ಲ–ಅವಳು ಕರುಣೆಗೆ ಪಾತ್ರಳು ಎಂದು ವಾದಿಸಿಲ್ಲ. ವ್ಯಕ್ತಿಯ ಹಿನ್ನೆಲೆ ಒಂದು ನಿರ್ದಿಷ್ಟ ರೀತಿಯ ವರ್ತನೆಗೆ ಕಾರಣವಾಗುತ್ತದೆ ಎಂಬುದು ಮನೋವೈಜ್ಞಾನಿಕ ಸತ್ಯ. ಇದೆಲ್ಲಕ್ಕಿಂತ ಹೆಚ್ಚಿನ ಸತ್ಯ

ಪೂರ್ಣದೃಷ್ಟಿಯಿಂದ ನೋಡಿದಾಗ ಪ್ರತಿಯೊಬ್ಬ ವ್ಯಕ್ತಿಯೂ ತನಗಿಷ್ಟವಿರಲಿ, ಬಿಡಲಿ, ಕೀರ್ತಿ ಬರಲಿ ಅಪಕೀರ್ತಿ ಬರಲಿ ತನ್ನ ಕರ್ತವ್ಯವನ್ನು, ಪೂರ್ಣತೆಯ ದೃಷ್ಟಿಯಿಂದ, ಮಾಡಿಯೇತೀರಬೇಕು. ಈ ದೃಷ್ಟಿ ಗಮನದಲ್ಲಿದ್ದರೆ ಎಲ್ಲ ಪಾತ್ರಗಳ ಪೂರ್ಣ ಪರಿಚಯವೂ ಸ್ಪಷ್ಟವಾಗಿ ದೊರೆಯುತ್ತದೆ.

ರಾಮ

ಈ ಕಾವ್ಯದಲ್ಲಿ ಬರುವ ರಾಮನೂ ರಾವಣನೂ ವಿಕಾಸಸೂತ್ರಕ್ಕೆ ಸಮಾನವಾಗಿ ಒಳಪಡುವಂಥವರೇ. ಎಂದರೆ ಭಗವದ್ದೃಷ್ಟಿಯಿಂದ ಪೂರ್ಣನಾದ ಅವತಾರಿ ಶ್ರೀರಾಮಚಂದ್ರನಲ್ಲೂ ಅಂತರಂಗದ ವಿಕಾಸವುಂಟು. ಅವನೂ ತಪ್ಪುಮಾಡುತ್ತಾನೆ, ತಿದ್ದಿಕೊಳ್ಳುತ್ತಾನೆ, ಅವನ ಅವತಾರತ್ವವೂ ಕ್ರಮಕ್ರಮವಾಗಿ ವಿಕಾಸಗೊಳ್ಳುತ್ತದೆ. ರಾವಣನೂ ರಾಮನಂತೆಯೇ ಈ ಸೂತ್ರಕ್ಕೆ ಒಳಪಟ್ಟವನಾದುದರಿಂದ ಅವನ ಅಂತರಂಗದಲ್ಲೂ, ಮೂಲ ಸ್ವಭಾವದಲ್ಲೂ ಪರಿವರ್ತನೆಯುಂಟು. ವಿವರಗಳಿಗೆ ಪ್ರವೇಶಿಸದೆ ಒಂದೆರಡು ನಿದರ್ಶನಗಳಿಂದ ಮೇಲಿನ ಹೇಳಿಕೆಗಳನ್ನು ಸಮರ್ಥಿಸಲು ಪ್ರಯತ್ನಿಸಬಹುದು.

ರಾಮ ಜನ್ಮತಃ ಸಿದ್ಧಪುರುಷನಲ್ಲ ಇಲ್ಲಿ. ಆತನೂ ಸಾಧಕ. ಅವತಾರಪುರುಷನಿಗೆ ಸಾಧನೆಯ ಮಾತೆ ? ಎಂದರೆ ಅದಕ್ಕೆ ಉತ್ತರ ಶ್ರೀ ಕುವೆಂಪು ಅವರ ಮಾತುಗಳಲ್ಲಿದೆ : ಸಿದ್ಧಿ ಬೇಕೆನ್ನುವ ಯಾರಿಗೂ ಸಾಧನೆ ತಪ್ಪಿದ್ದಲ್ಲ. ಅವತಾರ ಪುರುಷರಿಗೂ ತಪ್ಪಿದುದಲ್ಲ. ಈಶ್ವರನು ಜಗತ್ತಿನಲ್ಲಿ ಮನುಷ್ಯಶರೀರ ಧಾರಣೆ ಮಾಡಿ ಜನ್ಮವೆತ್ತಿದಮೇಲೆ ಮನುಷ್ಯನಂತೆಯೇ ಆಚರಿಸಿ ಸಾಧನೆ ಮಾಡಬೇಕು. ಇಲ್ಲದಿದ್ದರೆ ಆತನು ಮಾರ್ಗದರ್ಶಿಯಾಗಲಾರನು. ಜನರು ಆತನನ್ನು ಅನುಸರಿಸುವ ಬದಲು ಆಶ್ಚರ್ಯಪಟ್ಟು ಕೈಮುಗಿದು ಸುಮ್ಮನಾಗುವರು. ಏಕೆಂದರೆ, ಸರ್ವಶಕ್ತನಿಗೆ ಎಲ್ಲದೂ ಸಾಧ್ಯ ; ನಾವು ಸಾಧಾರಣ ಮಾಡುವರು ನಾವು ಅವನಂತೆ ಮಾಡುವುದು ದುಸ್ಸಾಧ್ಯ ಎಂದುಬಿಡುತ್ತಾರೆ; ಪರಮಹಂಸರು ಹೀಗೆ ಹೇಳಿದ್ದಾರೆ : “ ದೇವರು ನರನಾಗಿ ಬಂದಮೇಲೆ ನರನಂತೆಯೇ ಸುಖದುಃಖಗಳನ್ನು ಅನುಭವಿಸಿ ಮಾನವನ ಸಮಸ್ಯೆಗಳನ್ನು ಮಾನವನಂತೆ ಸಾಹಸಪಟ್ಟು, ಬಿಡಿಸಿ, ಮನುಷ್ಯನಂತೆಯೇ ಕಷ್ಟಪಟ್ಟು ತಪಸ್ಸುಮಾಡಿ ಮುಕ್ತನಾಗಬೇಕು. ”[5]

ಇಲ್ಲಿನ ಶ್ರೀರಾಮ ನಿತ್ಯಸಾಧಕ, ತಪಸ್ವಿ. ಕೊಟ್ಟ ಕೊನೆಯಲ್ಲಿ ತನ್ನ ಸ್ವಸ್ವರೂಪದ ಸಂಪೂರ್ಣ ದರ್ಶನ ದೊರೆಯುವವರೆಗೂ ಆತ ಸಾಧನೆಯಲ್ಲಿ ತೊಡಗಿರುವುದನ್ನು ಕಾಣಬಹುದು. ಸಾಂಪ್ರದಾಯಿಕವಾದ ಅರ್ಥದಲ್ಲಿ ಜಟೆ ಬಿಟ್ಟು ನಿಯಮಾದಿಗಳಲ್ಲಿ ತೊಡಗಿ ಒಂದು ಕಡೆ ಕುಳಿತು ಮನಸ್ಸನ್ನು ಏಕಾಗ್ರಗೊಳಿಸುವುದರಲ್ಲಿ ರಾಮ ತೊಡಗಿದ ಎಂದಲ್ಲ. ರಾಮನ ಸಾಧನೆ ಅಥವಾ ತಪಸ್ಸೆಂದರೆ ಬದುಕನ್ನೇ ಯೋಗವನ್ನಾಗಿ

[5] ಶ್ರೀ ಕುವೆಂಪು : ಶ್ರೀರಾಮಕೃಷ್ಣ ಪರಮಹಂಸ.

ಪರಿವರ್ತಿಸುವ ಕ್ರಿಯೆ. ಕರ್ಮ, ಭಕ್ತಿ, ಜ್ಞಾನ, ವೈರಾಗ್ಯಗಳಲ್ಲಿ ಅವನಿಗೆ ಈ ಮಹಾ ದುದ್ಯಮದಲ್ಲಿ ನೆರವು ನೀಡುತ್ತವೆ. ಜೀವನದ ಸುಖ-ದುಃಖಗಳಲ್ಲಿ ತನ್ಮಯನಾಗಿ ಅವುಗಳನ್ನು ಆತ ತನ್ನ ಚೇತನ ಸಮಸ್ತದಿಂದಲೂ ಅನುಭವಿಸುತ್ತಾನೆ. ಆದರೆ ಅವುಗಳಿಂದ ಬೇರೆ ನಿಲ್ಲುವ ಕಲೆಯನ್ನು ಅಭ್ಯಾಸ ಮಾಡುತ್ತಾನೆ. ಇದ್ದಕ್ಕಿದ್ದಂತೆ ಅಪರೂಪ ಸಂದರ್ಭಗಳಲ್ಲಿ ಕ್ವಚಿತ್ತಾಗಿ ಸ್ವಸ್ವರೂಪದ ಅಭಿವ್ಯಕ್ತಿಯಾದಾಗಲೂ, ತನ್ನ ಮುಂಚಿನ ಮುಗ್ಧಸ್ವಭಾವಕ್ಕೆ ಸಹಜವಾಗಿ ಹಿಂದಿರುಗುತ್ತಾನೆ. ಎಲ್ಲ ಸಂದರ್ಭಗಳಲ್ಲೂ, ಸಾಧ್ಯವಾದಷ್ಟು ಲೌಕಿಕ ಮರ್ಯಾದೆಗಳನ್ನು ಪರಿಪಾಲಿಸಲು ಪ್ರಯತ್ನಿಸುತ್ತಾನೆ. ರಾಮನಿಗೆ ದೊರೆತ ಪ್ರಥಮ ಭಾವಸಮಾಧಿಯ ಸಂದರ್ಭವನ್ನು ನೋಡಿ. ಅದು ಅಹಲ್ಯೆಯ ಶಾಪವಿಮೋಚನೆಯ ಅಮೃತಮುಹೂರ್ತ. "ಬಾಹ್ಯ ಸಂಜ್ಞೆಯನ್ನು ಕಳೆದುಕೊಂಡು ರಘುನಂದನ ಭಾವದ ಸಮಾಧಿಯಿಂದ ನರ್ತಿಸತೊಡಗಿದ .... ಋಷಿ ಕೃಪಾವಚನದಂತೆ ಮುಂದಿದ ಬಂಡೆಯನ್ನೇರಿ ಲಾಸ್ಯವಾಡಿದ. ತಕ್ಷಣ ಚರಣ ಚುಂಬನಕ್ಕೆ ಕಲ್ಲೇ ಬೆಣ್ಣೆಯಾದಂತೆ ಕರಗಿತು. ದಿವ್ಯಮಾಯಾಶಿಲ್ಪಿ ಕಲ್ಪನಾದೇವಿಯನ್ನು ಕಲ್ಲ ಸೆರೆಯಿಂದ ಬಿಡಿಸಿ, ಕೃತಿಸಿದನೋ ಎನ್ನುವಂತೆ ಒಂದು ತಪಸ್ವಿನೀ ವಿಗ್ರಹ ರಾಮನ ಅಡಿಪಾವರೆಗೆ ಹಣೆ ಮಣಿದು ನಿಂತಿತು." ರಾಮ ಮಾಡಿದುದೇನು ?

ಪೆತ್ತ ತಾಯಂ ಮತ್ತೆ ತಾನೆ ಪಡೆದಂತಾಗೆ
ನಮಿಸಿದನೊ ರಘುಜನುಂ ಗೌತಮಸತಿಯ ಪದಕೆ,
ತನ್ನ ಕಾವ್ಯಕೆ ತಾಂ ಮಹಾ ಕವಿ ಮಣಿಯುವಂತೆ ![6]

ಒಂದು ಕ್ಷಣ ಭಾವಸಮಾಧಿಯಲ್ಲಿದ್ದವನು ಮರುಕ್ಷಣ ಬಾಲಕನಂತೆ ನಿಬ್ಬೆರಗಾಗಿ ವರ್ತಿಸುತ್ತಾನೆ !

ದುಃಖದ ಸಂದರ್ಭದಲ್ಲೂ ಅಷ್ಟೆ. ಭವದ ಭಾವಗಳಲ್ಲಿ ಅವನ ತನ್ಮಯತೆ ಅಂಥದು, ಅವನನ್ನು ಹೊರನೋಟದಲ್ಲಿ ಬೇರೆಯ ವ್ಯಕ್ತಿಗಳಿಗಿಂತ ಬೇರೆಯೆಂದು ಕಾಣಲಾಗದು. ಸೀತೆಯನ್ನು ಕಳೆದುಕೊಂಡು ರಾಮ ದುಃಖದಲ್ಲಿ ಬೇಯುತ್ತಿದ್ದಾನೆ. ಶಬರಿಯ ಗುಡಿಸಿಲಿನ ಬಳಿಗೆ ಬಂದಾಗ ಅವನಿದ್ದ ಸ್ಥಿತಿ ಹೀಗೆ: "ಹೊದೆ ಹೊದೆ ಕೆದರಿದ ತಲೆ. ಕೊಳೆ ಬೆವರ್ ಪತ್ತಿದ ಉಡೆ, ತೇಜಸ್ಸು ಮಸುಳಿ ಹೋದ ಮುಖ, ಖಿನ್ನತೆಯ ಕೋರೆ ಉತ್ತಿದ ಕಪೋಲದ ಹೊಲ, ಹೆಂಡತಿಯ ವಿಯೋಗವೆಂಬ ಅಗ್ನಿಗೆ ಕಟ್ಟಿಗೆಯಾದ ಶರೀರ–ಒಟ್ಟಿನಲ್ಲಿ ಒರಟೊರಟು ರೂಪ. ಅವನನ್ನು ಕಂಡು ಮಂದಗಣ್ಣಿನ ಶಬರಜ್ಜಿ ಅವನು ಒಬ್ಬ ಬೇಡ ಎಂದು ಭಾವಿಸಿರಬೇಕಾದರೆ ಮೈಥಿಲೀ ಪ್ರಿಯನ ದಾರುಣ ಸ್ಥಿತಿಗೆ ಇನ್ನು ಬೇರೆ ಸಾಕ್ಷಿ ಏಕೆ ?" ಅನಂತರ ಆ ತಪಸ್ವಿನಿ ಮಾತಿನ ಮಧ್ಯೆ–ಈತನೇ ರಾಮನೆಂದು ತಿಳಿಯದೆ–ರಾಮನನ್ನು ವರ್ಣಿಸುತ್ತಾ ಹೇಳುತ್ತಾಳೆ: "ಶಾಂತಿನಿಧಿ

6 ಶ್ರೀ ರಾ.ದ. ಶಿಲಾತಪಸ್ವಿನಿ. ೨೯೧–೨೯೩.

ಆತನಂ ಕಾಣ್ಬುದೆ ಪರಮ ಶಾಂತಿ !" ತಟಕ್ಕನೆ, ನೀರು ತುಂಬಿದ ಕಣ್ಣಿನ, ಗದ್ಗದ ಸ್ವರದ ರಾಮು ಉತ್ತರ ಕೊಡುತ್ತಾನೆ : "ಶಾಂತಿನಿಧಿ ಆತಂಗೆ ಶಾಂತಿಯಿಲ್ಲದೆ ತೊಳಲು ತಿಹನಲ್ತೆ ?" ಮುಂದುವರಿದು ಹೇಳುತ್ತಾನೆ : "ಸಾಮಾನ್ಯನನ್ನು ದೇವಮಾನ್ಯ ನೆಂದು ತಪ್ಪು ತಿಳಿದದ್ದು, ಅಜ್ಜ, ನಿನ್ನ ಅಕ್ಕರೆಯ ಊಹೆ !" ಇದು ಬರಿಯ ವಿನಯ ಮಾತ್ರವಲ್ಲ. ಅವನ ಸ್ವಸ್ವರೂಪದ ಅರಿವು ಅವನಿಗೆ ಎಲ್ಲ ಸಮಯದಲ್ಲೂ ಇಲ್ಲ, ಎಂಬುದಕ್ಕೆ ನಿದರ್ಶನ.

ಅವನು ಎಂತಹ ವಿನಯ ನಿಧಿ ಎಂಬುದನ್ನು ವಾಲಿಯ ವಧೆಯ ಅನಂತರದ ಮಾತುಕತೆಯಲ್ಲಿ ನೋಡಬಹುದು. ಶ್ರೀ ರಾಮಚಂದ್ರ ವಾಲಿಯ ಬೆನ್ನಿಗೆ ಬಾಣವನ್ನು ಬಿಟ್ಟು ಅವನನ್ನು ಕೊಂದದ್ದು ಎಲ್ಲರಿಗೂ ತಿಳಿದದ್ದು. ರಾಮನ ಈ ವರ್ತನೆಯನ್ನು ಯಾವ ಲೌಕಿಕ ವಿಧಾನಗಳಿಂದಲೂ ಸಮರ್ಥಿಸುವುದು ಸಾಧ್ಯವೇ ಇಲ್ಲ. ಶ್ರೀ ಕುವೆಂಪು ಅಲೌಕಿಕ ಕಾರಣಗಳನ್ನು ನೀಡಿ ಅದನ್ನು ಸಮರ್ಥಿಸಲು ಪ್ರಯತ್ನಿಸಿದ್ದಾರೆ. ಅವರು ಹೇಳುತ್ತಾರೆ : "ದೈವವನ್ನು ನಿರ್ಲಕ್ಷಿಸಿ, ದೈವೀಪರವಾದ ಶಕ್ತಿಗಳನ್ನು ಪ್ರತಿಭಟಿಸಿ ; ತನ್ನ ಅಹಂಕಾರವನ್ನೂ, ಸ್ವಬಲವನ್ನೂ, ಸ್ವಾರ್ಥವನ್ನೂ ನೆಮ್ಮಿ ; ಛಲದಿಂದ ವಿರೋಧಿಸಲೆಂದೇ ವೈರಭಾವವನ್ನು ತಳೆದ, ಆಸುರೀ ಸಾಧನೆಯ, ದೈವೀ ವಿಮುಖವಾದ ಲೌಕಿಕ ಪರಾಕ್ರಮದ ಶಿಕ್ಷಾರಕ್ಷೆಗೆ, ಹೇಳು, ಬೆನ್ನಲ್ಲದೆ, ತುದಿಗೆ ಬೇರೆ ಯಾವ ಗುರಿ ತಾನೆ ಇದೆ, ಕೃಪಾ ಬಾಣಕ್ಕೆ." ಈ ಘಟನೆಯನ್ನು ಕುರಿತು ಆಧ್ಯಾತ್ಮಿಕವಾಗಿ ಚಿಂತಿಸಿದರೆ ಇದು ಸರಿ ಎನ್ನಿಸಿದರೂ ಲೌಕಿಕದ ದೃಷ್ಟಿಯಿಂದ ಇಂಥದನ್ನು ಒಪ್ಪುವುದು ಕಷ್ಟವಾಗುತ್ತದೆ. ಆದರೆ ಇಲ್ಲಿಯ ರಾಮು ತನ್ನ ಕ್ಷಮಾ ಯಾಚನೆಯಿಂದ ದೈವತ್ವವನ್ನು ಮೀರಿ ಬೆಳೆಯುತ್ತಾನೆ, ನಮ್ಮ ದೃಷ್ಟಿಯಲ್ಲಿ. ವಾಲಿ ತಾನು ನಿರಪರಾಧಿಯೆಂದೂ, ಈಗ ಸುಗ್ರೀವನ ಬಗೆಗೆ ಬದಲಾದ ಹೃದಯ ವುಳ್ಳವನೆಂದೂ, ತನ್ನನ್ನು ರಾಮು ಮೃತ್ಯುಮುಖಕ್ಕೆ ತಂದದ್ದು ಪರಮ ಅನ್ಯಾಯ ವೆಂದೂ ಹೇಳಿದ ಕೂಡಲೇ 'ಕಂಬನಿಯ ಗದ್ಗದದ ರಾಮಚಂದ್ರ ಬಿಲ್ಲು ಬಾಣ ಬತ್ತಳಿಕೆಗಳನ್ನು ಪಕ್ಕಕ್ಕೆಸೆದು, ವಾಲಿಯ ಮೆಯ್ಗೆ ಸೋಂಕಿ ನೆಲಕ್ಕೆ ಕುಸಿದ ! ಮತ್ತೆ ಅವನ ವ್ಯಕ್ತಿತ್ವವನ್ನು–ವಾಲ್ಮೀಕಿ ರಾಮಾಯಣದಲ್ಲಿ ಇದೇ ಸಂದರ್ಭದಲ್ಲಿ ರಾಮ ಕಿರಾತನಂತೆ ಮಾತನಾಡುತ್ತಾನೆ ಎಂಬುದನ್ನು ಗಮನಕ್ಕೆ ತೆಗೆದುಕೊಂಡರೆ–ಅತ್ಯುನ್ನತಿಗೆ ಏರಿಸುವಂತೆ ವಾಲಿಯ ಬಳಿ ಕ್ಷಮೆಯನ್ನು ಬೇಡುವ ಮಾತುಗಳನ್ನು ಆಡುತ್ತಾನೆ : "ಮನ್ನಿಸು ನನ್ನನ್ನು ಮಹಾವೀರ. ಬ್ರಹ್ಮವರದ ಬಲೆಗೆ ಸಿಕ್ಕಿ ತಪ್ಪುಮಾಡಿದೆ. ನಿನಗೆ ಆ ವರವೆ ಶಾಪವಾಯಿತು ! ನನ್ನ ಕೀರ್ತಿಗೇ ಕಳಂಕ ಬಂದು ನನ್ನನ್ನು ಅಡಗಿಸಿತು. ಮರವನ್ನು ನಾನು ಮರೆಹೊಕ್ಕೆ ! ಮಾಡಿದ ತಪ್ಪನ್ನು ಒಪ್ಪಿಕೊಳ್ಳುವುದೇ ಲೌಕಿಕದ ವೀರಕ್ಕೆ ಸಲ್ಲಕ್ಷಣ : ಅಯ್ಯೋ, ಸೀತೆಯನ್ನು ಅಗಲಿ ಹಗಲೂ ರಾತ್ರಿ ಹೊಗೆಯಾಡು ತ್ತಿರುವ ಈ ಮನಸ್ಸಿನ ಕನ್ನಡಿಗೆ ಮಬ್ಬುಕರೆಯ ಮಂಕು ಅಡಸಿತಯ್ಯ. ಐಹಿಕ ಕೀರ್ತಿಯನ್ನೂ, ಧರ್ಮವನ್ನೂ, ಕೊನೆಗೆ ನಿನ್ನನ್ನೂ ಓ ಕಪಿಕುಲ ಲಲಾಮ, ಶೀಘ್ರ ಸೂತ್ರಕ್ಕೆ ಹೋಮಮಾಡಿಬಿಟ್ಟೆ."

ಹೀಗೆ ಹೇಳಿ ತನ್ನ ಪಕ್ಕದಲ್ಲಿ ಕುಳಿತು ರೋದಿಸುತ್ತಿದ್ದ ವಾಲಿಯ ಹೃದಯದಲ್ಲಿ ಕ್ಷಮೆಯೂ ಮೆಚ್ಚುಗೆಯೂ ಉಕ್ಕಿಹರಿದುವು. ತನ್ನನ್ನು ಕೊಂದವನ ವಿಷಯದಲ್ಲಿ ವಾಲಿ ಆಡುವ ಮಾತುಗಳು ಏಕಕಾಲದಲ್ಲಿ ಅವನನ್ನೂ ರಾಮನನ್ನೂ ಉನ್ನತಿಯ ಶಿಖರಕ್ಕೆ ಒಯ್ಯುತ್ತವೆ. ಮೃತ್ಯುಮುಖವಾದ ಜೀವಕ್ಕೆ ಸತ್ಯ ಸಮೀಪತರವಾಗುತ್ತದೆ ಎಂಬಂತೆ, ನೋವಿನ ನಡುವೆಯೂ ನಗೆಯನ್ನು ಅರಳಿಸಿ ವಾಲಿ ಹೀಗೆ ಹೇಳಿದ: "ನಿನ್ನ ಮಹಾತ್ಯಾಗದ ವಿಷಯವನ್ನೂ ಧೈರ್ಯದ ವಿಷಯವನ್ನೂ ಕೇಳಿದ್ದೆ. ಇಂದು ಅದನ್ನು ಕಣ್ಣಾರೆಕಾಣುವ ಪುಣ್ಯ ಒದಗಿತಯ್ಯ. ನೀನು ಸತ್ಯವ್ರತನೇ ದಿಟ. ಇಲ್ಲದಿದ್ದರೆ ಸೋತು ಉರುಳಿದವರ ಮುಂದೆ ತಪ್ಪನ್ನು ಒಪ್ಪಿಕೊಳ್ಳುವವರಿದ್ದಾರೆಯೆ?"

ಇಲ್ಲಿಯ ರಾಮನ ಪಾತ್ರ ಮೂಲರಾಮಾಯಣದಿಂದ ಹೇಗೆ ಬದಲಾವಣೆ ಹೊಂದುತ್ತಿದೆ ಎಂಬುದನ್ನು ಮೇಲಿನ ಎರಡು ನಿದರ್ಶನಗಳು ತೋರಿಸುತ್ತವೆ. ಶ್ರೀ ಕುವೆಂಪು ಕೆಲವುಕಡೆ ಮೂಲರಾಮಾಯಣದಲ್ಲಿ ಸೂಚನೆಕೂಡ ಇಲ್ಲದ ಘಟನೆಗಳನ್ನು ತಂದು ಪಾತ್ರವೈಶಿಷ್ಟ್ಯವನ್ನು ವಿಶದಪಡಿಸುವುದುಂಟು. ಅದಕ್ಕೆ ಒಂದು ಉದಾಹರಣೆ ಸೀತೆಯ ಅಗ್ನಿಪ್ರವೇಶದ ಸಂದರ್ಭ. ಕವಿಪ್ರತಿಭೆ ಕವಿದರ್ಶನದ ಪರಮೋತ್ಕೃಷ್ಟ ಪ್ರಭಾವವನ್ನು ಪ್ರದರ್ಶಿಸಿದೆ ಇಲ್ಲಿ. ವಾಲ್ಮೀಕಿ ರಾಮಾಯಣದಂತೆ ಇಲ್ಲಿಯೂ ಸೀತೆ ಅಗ್ನಿಯನ್ನು ಪ್ರವೇಶಿಸುತ್ತಾಳೆ. ಆ ಮಹಾಪತಿವ್ರತೆ ಅಗ್ನಿಯನ್ನು ಹೊಗುವ ಮುನ್ನ ಹೀಗೆ ಹೇಳುತ್ತಾಳೆ: "ಓ ಅಗ್ನಿ, ನೀನು ಲೋಕ ಸಾಕ್ಷಿ. ನಡೆನುಡಿಗಳಲ್ಲಿ, ಮನಸ್ಸಿನಲ್ಲಿ ರಾಘವೇಂದ್ರನನ್ನು ಬಿಟ್ಟು ನನ್ನ ಉಸಿರು ಚರಿಸಿರುವುದು ಹೌದಾದರೆ ನನ್ನನ್ನು ಆಹುತಿ ತೆಗೆದುಕೋ. ಸೂರ್ಯ, ಚಂದ್ರ, ಸಂಧ್ಯೆ, ರಾತ್ರಿ, ಭೂಮಿ ಇವುಗಳು ಸಾಕ್ಷಿಯಾಗಿ ಪುರುಷಶ್ರೇಷ್ಠನಾದ ನನ್ನ ಪತಿಯ ಪಾದಪದ್ಮದಲ್ಲೇ ನಿತ್ಯವೂ ನಾನು ನೆಲಸಿರುವುದಾದರೆ, ಓ ಅನಿಲ ಸಖ (ಅಗ್ನಿ), ನಿನ್ನ ಈ ಮಗಳನ್ನು, ನನ್ನ ಪತಿ ಚರಣ ಸೇವೆಗಾಗಿ ಕಾಪಾಡಿಕೋ." ಹೀಗೆ ಹೇಳುತ್ತ ಹೇಳುತ್ತ ಆ ಪೂಜ್ಯೆ ಅಗ್ನಿಯನ್ನು ಪ್ರವೇಶಿಸಿದಳು. ಅಲ್ಲಿ ನೆರೆದಿದ್ದ ವಾನರ ರಾಕ್ಷಸ ಮಾನವ ಮಹಾ ನೆರವಿಯಂತೆ ನಾವೂ ಓಓಓ ಹೋ ಎಂದು ರೋದಿಸುತ್ತೇವೆ. ಆ ರೋದನ ದಿಗಂತಗಳನ್ನು ವ್ಯಾಪಿಸುತ್ತದೆ. (ಆದರೆ ಅದೇ ದಿಗಂತವಲ್ಲ. ಇದ್ದಕ್ಕಿದ್ದಂತೆ ದಿಕ್ಕುಗಳು ವಿಸ್ತಾರವಾಗುತ್ತವೆ. ಮತ್ತೊಂದು ಮಹಾದ್ಭುತವನ್ನು ಹಿಂದೆ ಯಾವ ರಾಮಾಯಣ ಕವಿಯೂ ಕಲ್ಪಿಸಿಕೊಳ್ಳದುದನ್ನು, ನಾವು ಏನೇ ಮಾಡಿದರೂ ಕಲ್ಪಿಸಿಕೊಳ್ಳಲಾರದ್ದನ್ನು ನಾವು ದಿಢೀರನೆ ಕಾಣುತ್ತೇವೆ.)

ಅಲ್ಲಿಯವರೆಗೂ "ನಿಷ್ಠುರಶಿಲಾಮೂರ್ತಿಯಂತೆ ಕಣ್ಣೆವೆಯಿಕ್ಕದೆ ನಿಂತು ಅಷ್ಟನ್ನೂ ಸಾಕ್ಷಿಯಂತೆ ನೋಡುತ್ತಿದ್ದ ರಾಮನ ಮುಖ ದೀಪ್ಯಮಾನವಾಯಿತು. ಆತ ಚಿತೆಗೆ ನಡೆದ, ನೋಡುವವರ ವಿಸ್ಮಯ ಚಿಂತೆಗೆ ತಿರುಗುವಂತೆ! ಓವೋವೋ ಎಂಬಷ್ಟರಲ್ಲೇ ಉಜ್ವಲಿಸುತ್ತಿದ್ದ ಗೋಪುರೋಪಮವಾದ ಅಗ್ನಿಯ ಮಧ್ಯೆ ಮರೆಯಾದನಯ್ಯ, ಪರಶುರಾಮನನ್ನೂ ಜಯಿಸಿದಾತ (ಶ್ರೀರಾಮ.)"

"ಮುಂದೆ ನಡೆದುದನ್ನು ಏನೆಂದು ಹೇಳುವುದು? ಇಂದ್ರಿಯವಾದುದಕ್ಕೆ ಅತೀಂದ್ರಿಯ ತನ್ನ ಹೆಬ್ಬಾಗಿಲನ್ನು ತೆರೆಯಿತೋ ಎಂಬಂತೆ, ಅಸಂಖ್ಯಾತ ದೇವತೆಗಳ ಕಂಠದ ಧ್ವನಿಕೂಡಿ ಆಕಾಶವೇ ವೀಣೆಯ ತುಂಬಿಯಾದ ಅಶರೀರ ವೀಣಾ ಸಹಸ್ರ ತಂತಿಯ ಧ್ವನಿ ಎಲ್ಲರಿಗೂ ಕೇಳಿತು...." ಮುಂದಿನ ಅವರ್ಣನೀಯ ಅನುಭವವನ್ನು ಓದಿಯೇ ಪಡೆಯಲು ಪ್ರಯತ್ನಿಸಬೇಕು. ಮತ್ತೆ ಅಗ್ನಿಯಿಂದ ಪವಿತ್ರ ತನುವಾಗಿ ಶ್ರೀರಾಮಚಂದ್ರ ಜಾನಕೀ ಪಾಣಿಗ್ರಹಣ ಕೃಪಾಲುವಾಗಿ ಹೊರಬಂದ. ಕಪಿಗಳು ರಾಕ್ಷಸರು ಒಟ್ಟಾಗಿ ಘೇ ಘೇ ಎಂದು ಉದ್ಘೋಷಿಸಿ ಹರ್ಷಿಸಿದರು.

ರಾಮ ಹೀಗೇಕೆ ಮಾಡಿದ? ಅವನಿಗೇಕೆ ಅಗ್ನಿಪರೀಕ್ಷೆ? ರಾಮನೇ ಅಗ್ನಿಯನ್ನು ಪ್ರವೇಶ ಮಾಡುವಂತೆ ಮಾಡಿದ ಈ ರಾಮಾಯಣ ಯಾವುದು? ಈ ಪ್ರಶ್ನೆಗಳನ್ನು ಕೇಳಿಕೊಳ್ಳುವುದಕ್ಕೂ ಸಮಯವಿಲ್ಲ. ವಿಭೀಷಣನ ಮಗಳು ಅನಲೆ ಓಡಿಬಂದು ರಾಮನ ಪಾದಗಳ ಮೇಲೆ ದಿಂಡುರುಳುತ್ತಾಳೆ. ಸಮಸ್ತ ವೀಕ್ಷಕರ ಶ್ರೋತೃಗಳ ಪ್ರತಿನಿಧಿಯಾಗಿ ಮಾತನಾಡುತ್ತಾಳೆ: "ಮನ್ನಿಸು ಸ್ವಾಮಿ. ದೇವಿಯನ್ನು ನಿಂದಿಸಿದ ನಿನ್ನನ್ನು ನಾನು ಎಷ್ಟೆಷ್ಟೋ ಬಯ್ದೆ. 'ಆ ಪತಿವ್ರತೆಯನ್ನು ಅಗ್ನಿಪ್ರವೇಶ ಮಾಡಿಸುವುದಿರಲಿ, ತನ್ನನ್ನು ಪರೀಕ್ಷಿಸುವವರು ಯಾರೋ? ತಾನೇನು ಪಾಪದ ದೋಷಕ್ಕೆ ಹೊರತೋ?' ಎಂದು ಶಂಕಿಸಿದೆ. ನೀನು ಒಡ್ಡಿದ ಈ ಲೋಕಪಾವಕ ಅಗ್ನಿಯಿಂದ ಆ ನಿಂದೆ ಭಸ್ಮವಾಯಿತು, ತಂದೆ. ಪೂಜ್ಯೆಯನ್ನು ಪಾಲಿಸುವ ನೆವದಿಂದ ನೀನೂ ಪರೀಕ್ಷಿತನಾದೆಯಲ್ಲ. ಲೋಕ ತೃಪ್ತಿಗೆ ಲೋಕಮರ್ಯಾದೆಗೊಳಗಾದೆ; ಸರ್ವಲೋಕ ಪ್ರಭುವೆ ನೀನು ನಿಜವಾಗಿಯೂ ಲೋಕ ಗುರು."

ಹೀಗೆ ರಾಮಾಯಣದರ್ಶನಂ ಕಾವ್ಯದ ರಾಮ ಸತ್ಯಶೀಲ ಸಾಧಕನಾಗಿ, ಲೋಕಗುರುವಾಗಿ ಪರಮಾವತಾರಿಯಾಗಿ ಚಿತ್ರಿತನಾಗಿದ್ದಾನೆ.

ರಾವಣ

ಇನ್ನು ರಾವಣನೋ? ಈ ಕಾವ್ಯದಲ್ಲೂ ಬಹುದೂರ ವಾಲ್ಮೀಕಿ ಮತ್ತು ಕುವೆಂಪು ರಾವಣರು ಜತೆ ಜತೆಯಾಗಿ ನಡೆಯುತ್ತಾರೆ. ಆದರೆ ಕೊನೆಕೊನೆಗೆ ಇಲ್ಲಿನ ರಾವಣ ರಾಮಪರವಾಗಿ ನಡೆಯುತ್ತಾನೆ. ಇದು ಅದ್ಭುತ, ಅಸಾಧ್ಯವೂ ಅಲ್ಲ, ಅಸಾಧುವೂ ಅಲ್ಲ. ಅವನು ವ್ಯವಹರಿಸುತ್ತಿದ್ದುದು ಲೋಕಮಾತೆಯಾದ ಸೀತೆಯ ಜತೆ. ಅವಳನ್ನು ಕಾಮಿಸಿಯೇ ಹತ್ತಿರಹೋಗಲಿ, ಪ್ರೇಮಯಾಚನೆಗಾಗಿಯೇ ಅವಳ ಸುತ್ತ ಸುತ್ತುತ್ತಿರಲಿ, ಆ ಲೋಕೋತ್ತರ ಪತಿವ್ರತೆಯ ಹತ್ತಿರ ಹೋಗುವಿಕೆ ತೀರ್ಥಯಾತ್ರೆಯಾಗಿ ಅವಳ ಸುತ್ತ ಸುತ್ತುವಿಕೆ ಪ್ರದಕ್ಷಿಣೆಯಾಗಿ ಯಾರಿಗೇ ತಾನೆ ಆಗದಿರುವುದು, ಅವನು ರಾವಣನೇ ಆಗಲಿ, ಹೇಗೆ ಸಾಧ್ಯ? ಅವನಿಗರಿವಿಲ್ಲದೆಯೇ ಅವನ ಹೃದಯ ಪರಿವರ್ತನೆಯಾಗುತ್ತದೆ. ಕೇಳುತ್ತಿದ್ದ ಮಂಡೋದರಿಗೆ ರೋಮಾಂಚನವಾಗುವಂತೆ ರಾವಣ ಹೇಳುತ್ತಾನೆ: "ನಿನಗಿಂತಲೂ ಹೆಚ್ಚಾಗಿ ನನಗೆ ಸೀತೆ, ಮಾತೆ, ದೇವತೆ! ಶ್ರದ್ಧೆ

ಕೆಟ್ಟಿದ್ದ ನನಗೆ ಶ್ರದ್ಧೆಯನ್ನು ಮರಳಿ ದೊರಕಿಸಿಕೊಡುತ್ತಾ ಆತ್ಮದ ಉದ್ಧಾರವನ್ನು ತಂದ ದೇವತೆ, ಪುಣ್ಯಮಾತೆ !" ಹೌದು, ದಿಟ, ಈ ಮಾತುಗಳನ್ನು ಆಡುತ್ತಿರುವವನು ರಾವಣನೇ ! ಇನ್ನು ಕೇಳಿ : "ರಾಮನರ್ಧಾಂಗಿಯನ್ನು ನಾನೇ (ರಾಮನಿಗೆ) ಕಪ್ಪವಾಗಿ ನೀಡಿ ಕ್ಷಮಾ ಭಿಕ್ಷೆಯನ್ನು ಬೇಡಿ ತಪ್ಪನ್ನು ಒಪ್ಪಿಕೊಳ್ಳುತ್ತೇನೆ !....ಸೀತೆ ನನ್ನನ್ನು ಗೆದ್ದಳು. ಆದುದರಿಂದ ಯುದ್ಧದಲ್ಲಿ ರಾಮನನ್ನು ಗೆದ್ದು ಅವನನ್ನು ತಂದು (ಸೀತೆಗೆ) ಕಪ್ಪವಾಗಿ ನೀಡುತ್ತೇನೆ!" ಹಾಗಾದರೆ ಯುದ್ಧ ಮಾಡಬೇಕು ಏಕೆ? ರಾವಣ ಜನ್ಮತಃ ವೀರನಾದುದರಿಂದ. ಮಂಡೋದರಿಯ ಪ್ರಶ್ನೆ : "ನಿನ್ನ ಈ ಹೃದಯಪರಿವರ್ತನೆ ವೈರಿಗೆ ತಿಳಿಯದಲ್ಲ !" ರಾವಣನ ಉತ್ತರ : "ತಿಳಿಯಬಾರದು. ಅದೇ ವೀರತೆಗೆ ದೀಕ್ಷೆ : ಅಲ್ಲದೆ ಅದನ್ನು ಹೇಳಿದರೂ ನಂಬುವವರು ಯಾರು ? ಹೇಳಿದರೆ ಹೇಡಿತನವಲ್ಲದೆ ಬೇರೆ ಯಾವ ಪ್ರಯೋಜನವೂ ತೋರದು." ಮುಂದೆ ಘೋರ ಯುದ್ಧ ನಡೆಯುತ್ತದೆ. ರಾವಣ ಸಾಯುತ್ತಾನೆ. ಸತ್ತು ಏನಾಗುತ್ತಾನೆ? ಅದಕ್ಕೆ ಉತ್ತರ ಹಿಂದೆಯೇ ಸೂಚಿತವಾಗಿದೆ, ರಾವಣನಿಗಾದ 'ಸ್ವಪ್ನ-ದರ್ಶನ'ದಲ್ಲಿ.

ಸ್ವಪ್ನ-ದರ್ಶನ

ಶ್ರೀರಾಮಾಯಣ ದರ್ಶನಂ ಕಾವ್ಯದಲ್ಲಿ 'ಸ್ವಪ್ನ-ದರ್ಶನ' ಅದ್ಭುತವಾದ ಪಾತ್ರವಹಿಸುತ್ತದೆ. ಅದರ ವಿವೇಚನೆ, ಮನಶ್ಶಾಸ್ತ್ರದ ದೃಷ್ಟಿಯಿಂದ, ಒಂದು ಮಹಾ ಪ್ರಬಂಧವಾಗುತ್ತದೆ. ಆ ಸಾಹಸಕ್ಕೆ ಇಲ್ಲಿ ತೊಡಗುವುದಿಲ್ಲ. ಸಂಕ್ಷೇಪಿಸಿ ಹೀಗೆ ಹೇಳಬಹುದು. ಶ್ರೀರಾಮನ ಚಿತ್ತಪಸ್ಸಿನ ತೇಜಸ್ಸು ರಾವಣನ ಮೂಲಬಲವನ್ನು ಸಂಹಾರ ಮಾಡಿದೆ. ಅದರಿಂದ ಧೃತಿಕಲಕಿದ ರೋಷದಿಂದ ರಾವಣ ಶಿವಮಂದಿರಕ್ಕೆ ಬಂದು ಪ್ರಾರ್ಥನೆ ನಡೆಸಿದ್ದಾನೆ. ದೇವಿ ಅವನಿಗೆ ದರ್ಶನ ನೀಡಿದಳು. ಸಂಭಾಷಣೆಯ ಸೊಗಸಿಗೆ ಮತ್ತೊಂದು ಕಾವ್ಯದಲ್ಲಿ ಸಮಾನತೆ ಸಿಗದು ಎನ್ನುವಂತೆ ಸೊಗಸಾಗಿ ನಿರ್ವಹಿಸುತ್ತಿದ್ದಾರೆ ಕವಿ.

ರಾವಣ : ದಶರಥ ಸುತನು ಯುದ್ಧದಲ್ಲಿ ಸೋಲುವಂತೆ ನನಗೆ ಕೃಪೆ ಮಾಡು !

ದೇವಿ : ತಥಾಸ್ತು !

ರಾ : ಸೀತೆ ವಶವಾಗುವಂತೆ !

ದೇ : ತಥಾಸ್ತು !

ರಾ : ನೀನು ತಾಯಿಯೆ ದಿಟ ! ನೀನು ಕೃಪೆಯ ಸಾಗರವೇ ದಿಟ ! ರಾಮ ಜಯಕ್ಕಿಂತಲೂ ಹೆಚ್ಚು, ಸೀತೆ ಸೋಲುವುದೇ ಆಶ್ಚರ್ಯ.

ದೇ : ಏಕೆ ಆಶ್ಚರ್ಯ? ಒಲಿದ ಕಂದನಿಗೆ ತಾಯಿ ಸೋಲುವುದು ಆಶ್ಚರ್ಯವೆ? ಸಹಜ !

ರಾ : ಅದೇನು ಮತ್ತೆ ವಕ್ರೋಕ್ತಿ ?

ದೇ : ಅದರಲ್ಲಿ ವಕ್ರವೇನು ಬಂತು? ನಿನ್ನ ಎದೆಯ ಗೂಢವೃತ್ತಿಗೆ ನನ್ನದು ಉಕ್ತಿ!

ರಾ : ಸೀತೆ ಸೋಲುತ್ತಾಳೆಯೆ? ರಾಮನನ್ನು ಗೆಲ್ಲುವುದು ದಿಟವೆ?

ದೆ : ಸೀತೆ ಆಲಂಗಿಸುತ್ತಾಳೆ, ಚುಂಬಿಸಿ ಎದೆಗೊತ್ತುತ್ತಾಳೆ; ಯುದ್ಧದಲ್ಲಿ ರಾಮನನ್ನು ಸೋಲಿಸುತ್ತೀಯೆ, ಮುಂದಿನ ಜನ್ಮದಲ್ಲಿ! ನೋಡು ದೃಶ್ಯವನ್ನು :

ಮುಂದೆ ಒಂದು ವಿಸ್ತಾರವಾದ ದರ್ಶನ. ಅದನ್ನೂ ಸಂಗ್ರಹಿಸಬೇಕಾಗಿದೆ. ಒಂದು ದೇವಾಲಯ. ಪೀಠಾಗ್ರದಲ್ಲಿ ದೇವ ವಿಗ್ರಹದ ಬದಲು ಭೀಮಕಾಯದ ಒಂದು ಅಶ್ವ. ಬೆದರಿದ ರಾವಣ ನೋಡು ನೋಡುತ್ತಿರುವಾಗಲೇ ದೀರ್ಘ ಖಡ್ಗವನ್ನು ಹಿಡಿದ ಒಂದು ದೊಡ್ಡ ಮುಷ್ಟಿ ಕುದುರೆಯ ಕೊರಳಿಗೆ ಇಳಿದು ಅದನ್ನು ಕತ್ತರಿಸಿತು. ರಕ್ತದ ಹೊಳೆ ಹರಿಯಿತು. ರಾವಣ ಓಡಿ ಹೊಳೆಯ ದಡದಲ್ಲಿದ್ದ ಒಂದು ದೋಣಿಯನ್ನು ಏರಿದ. ರುಂಡದಿಂದ ಬೇರಾಗಿ ದಿಂಡುರುಳಿದ ಅಶ್ವ ಮುಂಡ ನೆಗೆದು, ಕುಪ್ಪಳಿಸಿ, ಬಿದ್ದು ಎದ್ದು ಕುಣಿಕುಣಿದು ಹಾರಾಡಿ ದೊಪ್ಪನೆ ಅಪ್ಪಳಿಸಿ ಚಿಮ್ಮಿ ರಾವಣನ ಕಡೆಗೆ ಮುಂಬರಿಯಿತು. ಅಸುರನ ನೌಕೆ ಬಿರುಬಿರನೆ ತೇಲಿತು. ನದಿಯ ನೀರೆಲ್ಲ ರಕ್ತದ ಓಕುಳಿಯಾಗಿ ಕೆರಳುವಂತೆ ಕುದುರೆಯಮುಂಡ ಧುಡುಮ್ಮನೆ ಉರುಳಿತು. ತೆರೆ ಮೇಲೆ ಹಾಯಿತು. ದೋಣಿ ಮಗುಚಿತು. ರಾವಣ ಆ ರಕ್ತಮಯ ನದೀಜಲದಲ್ಲಿ ಮುಳುಗಿದ, ತೇಲಿದ. ತಟಕ್ಕನೆ ಕುಂಭಕರ್ಣನನ್ನು ಕಂಡು ಕೂಗಿದ. ಇಬ್ಬರು ಸೋದರರೂ ಬದುಕುವಾಸೆಗೆ ಹೊಳೆಯೊಡನೆ ಹೋರಾಡಿ ದಡಕ್ಕೇರಿದರು. ಇದೇನು? ಶಿಶುಗಳಾಗಿದ್ದಾರೆ! ಸುತ್ತ ಒಂದು ಆಶ್ರಮ. ಚಿತ್ತಕೆ ತಪಶ್ಶಾಂತಿ ದೊರಕಿತು. ಮನುಸ್ಸು ತನ್ನ ಹಿಂದನ್ನು ಮರೆಯಿತು. ನೆನಸಿಕೊಳ್ಳಲು ರಾವಣನೇನೋ ಪ್ರಯತ್ನಪಟ್ಟ, ವ್ಯರ್ಥ. ಅವನ ಆತ್ಮ ವಿಸ್ಮೃತಿಯ ವೈತರಣಿಯಲ್ಲಿ ಮುಳುಗಿತು. ಶಿಶುವಾಗಿ ಕುಂಭಕರ್ಣ ಅಳುತ್ತಿದ್ದುದನ್ನು ಕಂಡು ರಾವಣನೂ ಆಗಲೇ ಹುಟ್ಟಿದ ಮಗುವಿನಂತೆ ಅಳತೊಡಗಿದ. ಅದೋ, ಅಲ್ಲಿಗೆ ಸೀತೆ ಬಂದಳು. ಮಕ್ಕಳನ್ನೆತ್ತಿ ಮುದ್ದಾಡಿದಳು. ಹಾಡಿ ಮೊಲೆಯೂಡಿದಳು. ತೊಡೆಯಮೇಲೆತ್ತಿಕೊಂಡು ಕುಂಭಕರ್ಣನನ್ನೂ ತನ್ನನ್ನೂ ಅವಳಿ ಮಕ್ಕಳನ್ನು ಅಪ್ಪಿ ಮುದ್ದಾಡಿದಳು!

ಎಂತಹ ಅಪೂರ್ವ ಸ್ವಪ್ನ–ದರ್ಶನ! ಎಂತಹ ದರ್ಶನ ಧ್ವನಿ. ಅತೀವ ಆಸಕ್ತಿಯನ್ನು ಪಡೆದಿರುವ ರಾವಣನಿಗೆ ಸೀತೆಯ ತೊಡೆಯೇರುವ ಸೌಭಾಗ್ಯ ದೊರಕುತ್ತದೆ–ಶಿಶುವಾಗಿ, ಮುಂದಿನ ಜನ್ಮದಲ್ಲಿ, ತಾನೂ ತನ್ನ ತಮ್ಮನೂ ಆಕೆಯ ಹೊಟ್ಟೆಯಲ್ಲಿ ಲವಕುಶರಾಗಿ ಜನ್ಮ ತಳೆದಾಗ! ರಾಮನನ್ನು ಗೆಲ್ಲುವ ಅವನ ಇಚ್ಛೆಯೂ ಪೂರ್ಣವಾಗುತ್ತದೆ, ಆಗ ಶ್ರೀ ಕುವೆಂಪುರವರು ಹೇಳುತ್ತಿರುತ್ತಾರೆ ಪರಿವರ್ತನೆ ಭಾವದಲ್ಲಿ; ಆದರೆ ಸಾಲದು, ಭವದಲ್ಲೂ ಆಗಬೇಕು. ಅದಾದಾಗಲೇ ರಾವಣನಿಗೆ ರಾವಣತ್ವ ಪೂರ್ಣವಾಗಿ ಅಳಿದದ್ದು.

ಎರಡನೆಯ ಪಂಕ್ತಿಯ ಪಾತ್ರಗಳು : ಮಹಾಪಾರ್ಶ್ವ

ಮಹಾಪಾತ್ರಗಳ ವಿಷಯವಾಯಿತು, ಸಣ್ಣ ಪಾತ್ರಗಳೋ. ಕುವೆಂಪು ಪ್ರತಿಭೆ ಅವುಗಳಿಗೂ ಅಷ್ಟೇ ಗಮನ ನೀಡಿ ಅಷ್ಟೇ ಸೊಗಸಾಗಿ ಅವುಗಳನ್ನೂ ಕಡೆದಿದೆ. ಮಹಾಪಾರ್ಶ್ವ ಎಂಬುವನ ಪಾತ್ರವನ್ನು ನೋಡೋಣ. ಆತನನ್ನು ನಾವು ಮೊದಲು ಕಾಣುವುದು ದೈತ್ಯಸಭೆಯಲ್ಲಿ. ರಾವಣನ ಆಸ್ಥಾನದಲ್ಲಿ ಸಭೆ ಸೇರಿದೆ–ಯುದ್ಧಕ್ಕೆ ಸ್ವಲ್ಪ ಮುಂಚೆ. ಒಬ್ಬೊಬ್ಬ ವೀರನೂ ತನ್ನ ಸ್ವಾಮಿನಿಷ್ಠೆಯನ್ನು ಹೇಳಿ ತಮ್ಮ ಸೈನ್ಯದ ಶಕ್ತಿಯನ್ನು ವರ್ಣಿಸುತ್ತಿದ್ದಾನೆ. ಆಗ ಆ ವೀರರಲ್ಲಿ ಒಬ್ಬನಾದ ದೈತ್ಯದಳಪತಿ ಮಹಾಪಾರ್ಶ್ವ ಎದ್ದ. ಅವನು ಎದ್ದುದ್ದು ಮಹತ್ ಶಿಖರವುಳ್ಳ ಭವ್ಯ ಗಿರಿಯೊಂದು ಸಮುದ್ರದಿಂದ ಮೇಲೇಳುವಂತೆ. ಅವನ ಎರಡೂ ಭುಜಗಳು–ಭೂಮಿಯ ಕ್ಷೇಮ ಭಾರವನ್ನು ಹೊರಲೆಂದೇ ಹುಟ್ಟಿರುವ ಪರ್ವತಗಳಂತೆ. ಸಿಂಹಸಮನಾದ ಅವನ ವಿಶಾಲವಾದ ಧೈರ್ಯದ ವಕ್ಷ ವೇದಿಕೆಯಲ್ಲಿ ಭೀತಿಯರಿಯದ ಭರವಸೆ ಓಲಗಕೊಟ್ಟಿತಂತೆ! ಶಕ್ತಿಪೂಜೆಯ ತ್ರಿಶೂಲದ ಭಯಂಕರ ಚಿಹ್ನೆ ಅವನ ಹಣೆಯಲ್ಲಿ ಮೂರನೆಯ ಕಣ್ಣಿನಂತೆ ರಾಜಿಸಿತು! ಆ ಮಂತ್ರ ಸಂಗ್ರಾಮ ವಿದ್ಯೆಯ ಪರಮಗುರು ಮಾತನಾಡು ತ್ತಿದ್ದರೆ ರಾವಣನೂ ಸೇರಿ ಆ ಮಹಾಸಮಿತಿ ಸೊಲ್ಲುಳಿದು ಕಿವಿ ಬೆಸೆದು ಕೇಳಿತಂತೆ!

ತಮ್ಮ ಸೇನೆಯ ಮಹಾಶಕ್ತಿಯನ್ನು ಅನುಪಮವಾಗಿ ವರ್ಣಿಸಿದರೂ ಆತ ಮಾತನ್ನು ಮುಗಿಸುವುದು ಹೀಗೆ: "ಬರಿಯ ಪರಾಕ್ರಮ ಇಲ್ಲಿಗೆ ಸಾಲದು. ಧರ್ಮ ದೇವತೆಯ ಕೋಪವನ್ನು ಪ್ರತಿಭಟಿಸಿ ಯಾರೂ ಗೆಲ್ಲಲಾರರು. ಸಾಕ್ಷಿಬೇಕಾದರೆ, ಮಹಾದ್ವಾರದಲ್ಲಿ ಮುಖವನ್ನು ತಿರುಗಿಸಿ ನಿಂತಿರುವ ನಮ್ಮ ನಗರ ಲಕ್ಷ್ಮಿಯ ಕಯ್ಯ ಕೊಂಕಿರುವ ತ್ರಿಶೂಲವನ್ನು ನಡೆದು ನೋಡಿ!"

ಹೀಗೆ ಹೇಳಿದರೂ ಅಂದಿನ ಭೀಷಣ ಸಮರದಲ್ಲಿ ತನ್ನ ಪ್ರಭುವಿಗೆ ಕಷ್ಟ ಪ್ರಾಪ್ತಿ ಯಾದಾಗ, ರಾಮನೇ ಧನುರ್ಧಾರಿಯಾಗಿ ನಿಂತು ರಾಕ್ಷಸ ಬಲವನ್ನು ಮೂಲೋತ್ಪಾಟನೆ ಮಾಡ ತೊಡಗಿದಾಗ, ಅದನ್ನೆದುರಿಸುವ ಸಾಮರ್ಥ್ಯ ತನಗಲ್ಲದೆ ಬೇರೆಯವರಿಗಿಲ್ಲದಾಗ, ಮಹಾಪಾರ್ಶ್ವ ಒಡೆಯನಿಗೆ ನೆರವಾಗಿ ನಿಂತ. ಪ್ರತಿಜ್ಞೆಮಾಡಿದ, "ನಿನ್ನಾಜ್ಞೆಯನ್ನು, ಸರ್ವಸೇನಾಧಿಪತ್ಯದ ಮಹಾಪಟ್ಟವನ್ನು, ಮುಡಿಯಲ್ಲಿ ಧರಿಸಿದ್ದೇನೆ. ರಾಮ ಸಂಗ್ರಾಮ ಶಕ್ತಿಯನ್ನು ನಾಳೆ ಸೂರ್ಯೋದಯವಾಗುವವರಿಗೂ ತಡೆಯುತ್ತೇನೆ. ಅಲ್ಲಿಂದ ಅನಂತರ ಆಯುಷ್ಯತೀರುವವರೆಗೂ ದುಡಿಯುತ್ತೇನೆ. ನಿನ್ನ ತೇರಿನನೊಗಕ್ಕೆ ಹೆಗಲು ಕೊಟ್ಟುಸಾಯುತ್ತೇನೆ ಹೊರತು ಮತ್ತೆ ಲಂಕೆಯನ್ನು ಪ್ರವೇಶಿಸುವುದಿಲ್ಲ. ತನ್ನ ಮಿತಿ ಯನ್ನು ತಾನು ತಿಳಿದವನು ಎಂದೂ ದೊರೆಗೆ ಹುಸಿ ಭರವಸೆಯ ಬಲೆಯನ್ನು ಒಡ್ಡುವುದಿಲ್ಲ.

ಹೇಳಿದಂತೆಯೇ ಆತ ಹೋರಾಡಿದ. ರಾತ್ರಿಯೆಲ್ಲ ಶತ್ರು ಸೈನ್ಯದ ರಕ್ತದಲ್ಲಿ ಮಿಂದ. ಅಸಂಖ್ಯಾತ ಶತ್ರು ಸೈನಿಕರನ್ನು ಕೊಂದ. ನೀಲನ ಶೌರ್ಯದ ಕನ್ನೈದಿಲೆಗೆ ಸೂರ್ಯನಾದ. ಹನುಮಂತನ ಗರ್ವದ ಗಿರಿಗೆ ವಜ್ರಾಯುಧವಾದ. ಲಕ್ಷ್ಮಣನ ಕಡುಗಲಿತನದ ಖಡ್ಗ ಒರೆಯನ್ನು ಪ್ರವೇಶಿಸುವಂತೆ ಮಾಡಿದ. ಅವನಿಂದ ಅಂಗದನ

ರಣಗೌರವಕ್ಕೆ ರಾಹು ಹಿಡಿಯಿತು. ಕೊನೆಗೆ ರಾಮನೇ ಸಾಕ್ಷಾತ್ತಾಗಿ ಕಾದಿದರೂ ಸಮಸಮನಾಗಿ ಹೋರಾಡಿದ. ಆದರೆ ಗಾಯಗೊಂಡು ಮೈಮರೆತ. ಅವನ ಸಾರಥಿ ಅವನನ್ನು ರಣರಂಗಕ್ಕೆ ದೂರವಾದ ಒಂದು ಜನರಹಿತ ಕಾನನದ ಗಿರಿಯ ನೆತ್ತಿಗೆ ಕೊಂಡೊಯ್ದ. ಕ್ರಮ ಕ್ರಮವಾಗಿ ಕಣ್ಣು ತೆರೆದ ಮಹಾಪಾರ್ಶ್ವ ಲೋಕಚಕ್ಷುವಾದ ಸೂರ್ಯನಿಗೆ ಕೈಮುಗಿದು, ಸಾರಥಿಯನ್ನು ನೋಡಿ ಹೇಳಿದ: "ಸೂತ, ಶುಶ್ರೂಷೆ ಯನ್ನು ನಿಲ್ಲಿಸು. ಮೃತ್ಯುವಿನ ಕರೆಯ ಕೊಳಲಿನ ಮಧುರ ಧ್ವನಿ ನನಗೆ ಕೇಳುತ್ತಿದೆ. ಅದೋ ಆ ಪಕ್ಷಿ ಕಂಠಸ್ವನ ಮರ್ತ್ಯವನ್ನು ದಾಟಿದೆ. ವೀರರಿಗೆ ರಣಧರೆಯೇ ಮರಣ ಶಯ್ಯೆ. ನೀನೇಕೆ ನನ್ನನ್ನು ಇಲ್ಲಿಗೆ ತಂದೆ?" ಒಡೆಯ ಬದುಕುತ್ತಾನೆ. ಅವನು ಹಾಗೆ ಬದುಕಿದರೆ ಜಯ ತಮ್ಮದು ಎಂಬುದು ಭೃತ್ಯನ ಆಸೆ. ಆದರೆ ಅದು ಹುಸಿ ಎಂಬುದು ಮಹಾಪಾರ್ಶ್ವನ ದೃಢವಾಣಿ. ಆಳನ್ನು ಕೇಳಿಕೊಳ್ಳುತ್ತಾನೆ, ರಥದಿಂದಿಳಿಸಿ ಭೂಮಿಯ ಮೇಲೆ ಮಲಗಿಸುವಂತೆ. ಅವನು ಹಾಗೆ ಮಾಡಿದ ಮೇಲೆ ತನ್ನ ಅಂತಿಮ ಸಂದೇಶವನ್ನು ಹೇಳುತ್ತಾನೆ: "ಕೇಳು, ಸೂತ. ನನ್ನ ಈ ಮುಂಗಾಣ್ಕೆಯನ್ನು, ರಾವಣನ ಹೊರತು, ಮತ್ತೆ ಯಾರಿಗೂ ಹೇಳಬೇಡ. ನೀನಿನ್ನು ಭೂಮಿಯ ವ್ಯಕ್ತಿ. ನಾನೋ ಅರ್ಧಕ್ಕಿಂತ ಹೆಚ್ಚಾಗಿ ಆಗಲೆ ಅಲೌಕಿಕನಾಗಿದ್ದೇನೆ. ಕಣ್ಣೀರನ್ನು ಒರಸಿಕೋ, ನನ್ನ ಮುಖದ ಮುಗಳ್ನಗೆಯ ಶಾಂತಿಯನ್ನು ಕಾಣು. ನೀನೂ ಹಾಗೆಯೇ ಸಮಾಧಾನವನ್ನು ತಾಳು." ಶ್ರದ್ಧೆಯೇ ಕಣ್ಣು ತೆರೆದಂತೆ ಸಾರಥಿಗೆ ತನ್ನ ಸೇನಾಪತಿಯ ಮಾತಿನಲ್ಲಿ ಸಿದ್ಧಪುರುಷನ ವಾಣಿ ಮೈದೋರಿತು. ಶಕ್ತಿ ಸಾಧಕನ ಮಾತು ಮುಂದು ವರೆಯಿತು:

''ಪಾಪ ಕೂಡ ಪುಣ್ಯಮುಖಿ! ಐಹಿಕದ ವೈರಿ ಆಧ್ಯಾತ್ಮಿಕಕ್ಕೆ ಸ್ನೇಹಿತನಾಗು ತ್ತಾನೆ, ಗುರುವಾಗುತ್ತಾನೆ. ತನ್ನ ಕಾರ್ಯಸಾಧನೆಗೆ ವಿಧಿಗೆ ಬಹುಪಥಗಳುಂಟು. ಲಂಕಾಧಿನಾಥನನ್ನು ನನ್ನ ಇಷ್ಟದೇವತೆಯೇ ಸೀತಾಸ್ವರೂಪದಿಂದ ಮೋಹಿಸಿದಂತೆ ತೋರುತ್ತಿದೆ. ಇಲ್ಲದಿದ್ದರೆ ನನ್ನ ಸಾಧನೆಗೆ ಇಷ್ಟು ಶೀಘ್ರವಾಗಿ, ಮರಣ ತೋರಣ ದಾಚೆ ಕಾಣುತ್ತಿರುವ ಅಮರಸಿದ್ಧಿ ಲಭಿಸುತ್ತಿತ್ತೆ?''

ಮಾತನಾಡುತ್ತಿರುವವನು ಯುದ್ಧ ಮಾಡಿ ಬಳಲದ ರಾಕ್ಷಸನೆ? ಅವನ ಮಾತು ನಮ್ಮ ಕಿವಿಗೆ ದಿನಬಳಕೆಯದೆ? ಕುವೆಂಪು ಅವರು ಚಿತ್ರಿಸಿರುವ ಕೆಲವು ಅತ್ಯುತ್ತಮ ಪಾತ್ರಗಳು ಈ ಬಗೆಯವು.

ಮಹಾಪಾರ್ಶ್ವನ ಸಾವೂ ಅಪೂರ್ವರೀತಿಯದು. ಅವನು ಸಾರಥಿಗೆ ಹೇಳು ತ್ತಾನೆ: ''ನನ್ನ ಆತ್ಮಯಾತ್ರೆಯ ಸಮಾರಂಭ ಸಂಭ್ರಮ ನರರು ನೋಡಬಾರ ದಂಥದು.'' ಸಾರಥಿ ನಡೆದ. ಸಂಗತಿಯನ್ನು ರಾವಣನಲ್ಲಿ ಅರಿಕೆ ಮಾಡಿದ. ಆತನೋ ತಕ್ಷಣ ದೂತರನ್ನು ಕಳುಹಿಸಿದ. ಅವರು ತಂದ ವಾರ್ತೆಯಾದರೋ ಇದು: ''ಜೀಯ, ಚಮೂಪತಿ ಅಲ್ಲಿಲ್ಲ. ಕಳೇಬರಕ್ಕೆ ಬದಲು ಅಲ್ಲಿದ್ದುದು ಈ ಅಲೌಕಿಕ ಕುಸುಮರಾಶಿ!'' ಭೂಮಿ ಹೆರಲಾರದಂಥ ಆ ಹೊಸ ಹೂಗಳನ್ನು ನೋಡಿ, ಸ್ವಲ್ಪ ಹೊತ್ತು

ಧ್ಯಾನಿಸುತ್ತ ಏನನ್ನೋ ನಿಶ್ಚಯಿಸಿ ರಾವಣ ತನ್ನ ಪೂಜೆಯ ಶಿವನಿಕೇತನಕ್ಕೆ ಆ ಸುಮಸ್ತೋಮವನ್ನು ಮೆರವಣಿಗೆ ಕಳುಹಿಸಿದ.

ವಹ್ನಿ-ರಂಹರು

ಎರಡು ಸಾಮಾನ್ಯ ಪಾತ್ರಗಳನ್ನು ತೆಗೆದುಕೊಂಡು ಅಸಾಮಾನ್ಯವಾದ ಸಿದ್ಧಿಗಳನ್ನು ಸಾಧಿಸುವ ಕುಶಲತೆಯನ್ನು ಒಂದೆಡೆ ಪ್ರದರ್ಶಿಸಿದ್ದಾರೆ ಶ್ರೀ ಕುವೆಂಪು. ಇಬ್ಬರು ಸಾಮಾನ್ಯ ಸೈನಿಕರು ತಿರುಗಾಡುತ್ತಿದ್ದಾರೆ. ನೀಲ ರಾಮನ ಮಾತಿನಂತೆ ಅವರನ್ನು ಬಳಿಗೆ ಕರೆಯುತ್ತಾನೆ. ಒಬ್ಬ ಕುಳ್ಳ ಒಬ್ಬ ದೀರ್ಘ. ಮೊದಲನೆಯವನು ರಂಹ, ಎರಡನೆಯವನು ವಹ್ನಿ. ರಾಮಚಂದ್ರ ಸ್ನೇಹವಾಣಿಯಿಂದ ಪ್ರಶ್ನಿಸುತ್ತಾನೆ. “ನೀವು ಯಾರಪಡೆಯವರು ?” ಅವರು ಹೇಳಿಕೊಳ್ಳುತ್ತಾರೆ. ತಾವು ದಧಿಮುಖೇಂದ್ರನ ಧೀರ ದಳದವರು ಎಂದು. ಅವರ ಸಾಹಸವೋ ಕಾಡಾನೆಯನ್ನು ಕೋಡು ಮುರಿದು ನೆತ್ತಿಯನ್ನು ಹಿಸುಕಿ ಹಾಕಿದವನು ಒಬ್ಬ, ಮುಷ್ಟಿಯುದ್ಧದಲ್ಲಿ ಮಲ್ಲ. ಮತ್ತೊಬ್ಬ ಆಕಾಶ ಗಮನದಲ್ಲಿ ಸಾಹಸಿ. ಬಂಡೆಯನ್ನು ಎತ್ತಿ ಕವಣೆಕಲ್ ಬೀರಿದನೆಂದರೆ ಬಲಿಷ್ಠವಾದ ಕೋಟೆಗಳು ಬಿರಿಯುತ್ತವೆ. ಬಿಲ್ಲು ವಿದ್ಯೆ ಆತನಿಗೆ ಮಕ್ಕಳಾಟ. ಖಡ್ಗಕಲೆಯಲ್ಲೂ ಕಲಿ. ಗದಾಯುದ್ಧದಲ್ಲಿ ಅತಿಭೈರವ. ಆದರೆ ಆತ ಹೇಳಿಕೊಳ್ಳುವುದೇನು ಗೊತ್ತೆ ? “ದಧಿಮುಖೇಂದ್ರನ ದಳದಲ್ಲಿ ನಾನೊಬ್ಬ ಅತ್ಯಲ್ಪ.” ರಾಮ ಮೆಚ್ಚಿ ಉತ್ತರಿಸುತ್ತಾನೆ: “ನೀನೇ ಅಲ್ಪನಾಗಿರುವಂತಹ ಸಾಹಸಿಗಳನ್ನು ಪಡೆದ ದಧಿಮುಖನೇ ಧನ್ಯ !” ಇದ್ದಕ್ಕಿದ್ದಂತೆ ಇವರ ಸಂಭಾಷಣೆ ಯುದ್ಧವಲಯದಿಂದ ಮನೆವಾರ್ತೆಗೆ ತಿರುಗುತ್ತದೆ. ಈ ಕಾವ್ಯದ ರಾಮನ ಪಾತ್ರ ವಿಶೇಷ, ಶ್ರೀ ಸಾಮಾನ್ಯರಲ್ಲಿ ಅವನ ಆಸಕ್ತಿ, ಅವರ ವಿಷಯದಲ್ಲಿ ಅನುಕಂಪೆ ಎಲ್ಲವನ್ನೂ ಒಮ್ಮೆಲೇ ಹೊರತೋರುತ್ತದೆ ಮುಂದಿನ ಸಂಭಾಷಣೆ. ರಾಮ ಕೇಳಿದ: “ವಹ್ನಿ, ನಿನಗೆ ಸಹಧರ್ಮಿಣಿಯ ಸುಖಸಂಗ ಇರುವುದೇನಯ್ಯ ?” ವಹ್ನಿ ಉತ್ತರ ಹೇಳಿದ: “ಇತ್ತು, ನನ್ನ ಊರಲ್ಲಿ”. ಪ್ರತ್ಯುತ್ತರದ ಇಂಗಿತದ ವ್ಯಂಗ್ಯವನ್ನು ಅರಿತು, ಸೀತಾ ಪ್ರಾಣವಲ್ಲಭ ಸ್ವಲ್ಪ ಮಾತ್ರ ನಕ್ಕು ಹೇಳಿದ: “ಇತ್ತೆ? ಅಯ್ಯೋ, ಇದ್ದುದನ್ನು ಬಿಟ್ಟು ಬಂದು ಏಕೆ ಸಂಕಟಕ್ಕೆ ಸಿಕ್ಕಿದೆ? ನಿನ್ನಂತೆಯೆ ನಿನ್ನಾಕೆಯೂ ದುಃಖಿ!” ಮತ್ತೆ ನಿಟ್ಟುಸಿರುಬಿಟ್ಟು ಕೇಳಿದ: “ನನ್ನಿಂದಾಗಿ ನಿಮಗೆ ಈಭಂಗ ಬಂದಿತಲ್ಲವೆ, ವಹ್ನಿ?” ವಹ್ನಿ ಬಿಸಿಯುಸಿರಿನ ಬೇಗೆಗೆ ಸಿಕ್ಕಿ ತತ್ತರಿಸಿದ. ತನ್ನ ಹಾಸ್ಯ ಇಷ್ಟು ದೂರ ಹೋಗಿ ಸೀತಾನಾಥನ ಹೃದಯದಲ್ಲಿ ದುಃಖವನ್ನು ಮಿಡಿಯುತ್ತದೆ ಎಂದು ಅವನು ನಿರೀಕ್ಷಿಸಿರಲಿಲ್ಲ. ಕೈಮುಗಿದು ಮೊಣಕಾಲೂರಿ ಬೇಡಿದ: “ದೇವ, ನನ್ನ ವಿನೋದವನ್ನು ಮನ್ನಿಸು. ಅರ್ಥವ್ಯಾಪ್ತಿ ತಪ್ಪಿತು.” ಅವರ ನಡುವೆ ನಡೆದ ಸಂಭಾಷಣೆ ರಾಮನ ಹೃದಯದ ದೇವ ಮಾರ್ದವತೆಯನ್ನು, ಕಪಿಸೈನ್ಯದ ಸಾಮನ್ಯ ಸೈನಿಕನ ಅಂತರಂಗದ ಸಂಸ್ಕೃತಿ ಸಂಪತ್ತನ್ನು ಮನೋಹರವಾಗಿ ಚಿತ್ರಿಸುತ್ತದೆ. ರಾಮ ಆತನನ್ನು ಏಳಿಸುತ್ತಾ ಧ್ವನಿಯೇ ಸ್ನೇಹವನ್ನು ಸೂಸುವಂತೆ ಕೇಳಿದ: “ನಿನಗೆ ಮಕ್ಕಳಿದ್ದಾರೆಯೆ ?”

ವಹ್ನಿ : ಒಬ್ಬನಿದ್ದಾನೆ, ದೇವ.

ರಾಮ : ಚಿಕ್ಕವನೆ ?

ವ : ಅಲ್ಲದಿದ್ದರೆ, ನಿನ್ನ ಸೇವೆಯ ದೇವಕಾರ್ಯಕ್ಕಾಗಿ ಪಕ್ಕದಲ್ಲಿರುತ್ತಿರಲಿಲ್ಲವೆ?

ರಾ : ಅವರಿಗೆ ರಕ್ಷಕರು ಯಾರು ?

ವ : ನಾನೆ !

ರಾ : (ನಿಟ್ಟುಸಿರು ಬಿಟ್ಟು ವೀರ ವಹ್ನಿಯ ಕಣ್ಣುಗಳನ್ನು ಕರುಣೆಯಿಂದ ನೋಡಿ) "ನೀನೆ? (ಹಾಗೆ ಹೇಳಿ ಮತ್ತೆ ಸ್ವಲ್ಪ ಧ್ಯಾನಿಸಿ) ಮರಣದಲ್ಲಿ ರಣವಿದೆ, ವಹ್ನಿ; ಹಣೆಬರೆಹ ಹೇಳುವುದಿರಲಿ, ಕೈ ಬರೆಹವೂ ಹೇಳುತ್ತಿದೆ!

ಆ ಮಾತಿನ ಧ್ವನಿಯನ್ನು ತಿಳಿದು ರಾಮ ನೀಲರೊಂದಿಗೆ ಭಟ ವರಿಷ್ಠನಾದ ವಹ್ನಿಯೂ ನಕ್ಕ. ತನ್ನ ಧೈರ್ಯಕ್ಕೆ ಹೀಗೆ ನಾಲಗೆ ನೀಡಿದ : "ಯಾವ ಧರ್ಮಕ್ಕಾಗಿ ನಾವು ಸಾವನ್ನಪ್ಪುತ್ತೇವೆಯೋ ಆ ಧರ್ಮ ಈ ಲೊಕವನ್ನು ಕಾಪಾಡುತ್ತದೆ. ನನ್ನ ಸತಿ ಸುತರು ಮಾತ್ರಹೊರತೆ? ಕೇಳು ರಾಜೇಂದ್ರ, ಈ ನೀಲ ದೇವನು ನಮ್ಮನ್ನು ನಡೆಸಿದರೆ ಜೀವಸಹಿತ ಎಲ್ಲರೂ ಮನೆಯ ಮಂಗಳವನ್ನು ಕಾಣುತ್ತೇವೆ. ಅಲ್ಲದಿದ್ದರೆ, ವಿಧಿ ಬೇರೆಯದನ್ನೇ ಬಗೆದರೆ, (ನಾನು ಬಲ್ಲೆ ವಿಧಿಗಿಲ್ಲ ಎದೆ !) ಬದುಕಿಗಿಂತಲೂ ಸಾವೆ ಮೇಲು ! ರಾವಣ ಹೊತ್ತುಕೊಂಡು ಹೋದದ್ದು ಒಬ್ಬನ ಸತಿಯನ್ನಲ್ಲ, ಸತೀತ್ವವನ್ನೇ ಅವನು ಕೊಂಡೊಯ್ದಿದ್ದಾನೆ ! ಆ ಸತೀತ್ವವನ್ನು ಕಾಪಾಡಲಾಗದವರೆಗೂ ಭೂಮಿಯ ಮೇಲೆ ಒಬ್ಬ ಪುರುಷನೂ ಇರಲಾಗದು. ರಘುವರ, ನೀನೇ ಈ ಕುಶಲ ಪ್ರಶ್ನೆಯನ್ನು ಕೇಳಿದುದರಿಂದ ನನ್ನವರು ಸುರಕ್ಷಿತರು."

ಈ ಮಾತುಗಳನ್ನು ಕೇಳಿ ಉನ್ನತ ನುಡಿಕಾಣಿಕೆಯನ್ನು ಸಲ್ಲಿಸುತ್ತಾನೆ ರಾಮ : "ನಿಮ್ಮ ಸಂಸ್ಕೃತಿ ನಿಮ್ಮ ನಾಗರಿಕತೆಗಿಂತ ಹಿರಿದು". ಈ ಸಂಚಿಕೆಗೆ "ರಣವ್ರತರ್ ವಹ್ನಿರಂಹರ್" ಎಂದು ಹೆಸರು ಕೊಟ್ಟೂ ಆ ಶ್ರೀ ಸಾಮಾನ್ಯ ವೀರ ಅಲೌಕಿಕರಿಗೆ ಗೌರವ ಸೂಚಿಸಿದ್ದಾರೆ ಕುವೆಂಪು.

ಇವರಿಗೆ ಪ್ರತಿರೂಪಗಳಾಗಿ ರಾಕ್ಷಸತ್ವದ ಪ್ರತಿನಿಧಿಗಳಾಗಿ, ಆದರೆ ರಾಕ್ಷಸೇಂದ್ರನಿಗೆ ಅದ್ವಿತೀಯ ಪ್ರಭುಭಕ್ತರಾಗಿ, ಅತ್ಯಂತ ಪರಾಕ್ರಮಿಗಳಾಗಿ, ರಾಮನನ್ನು ಅವನ ಸಮ್ಮುಖದಲ್ಲೇ ಝಂಕಿಸಿ ನಮ್ಮ ಪ್ರಶಂಸೆಯನ್ನು ಸೆಳೆಯುತ್ತಾರೆ ಶುಕಸಾರಣರು. ಕವಿಗೂ ಅವರ ಬಗ್ಗೆ ಪ್ರಶಂಸೆಯೇ. ಅಂತೆಯ ಒಂದು ಸಂಚಿಕೆ ಅವರ ಹೆಸರನ್ನು ತಳೆದಿದೆ : "ಶುಕಂಸಾರಣಂವೆರಸಿ."

ಛಂದಸ್ಸು-ಶೈಲಿ

ಶ್ರೀ ರಾಮಾಯಣ ದರ್ಶನಂ ಕಾವ್ಯದ ಛಂದಸ್ಸು ಶೈಲಿಗಳನ್ನು ಕುರಿತು ಒಂದೆರಡು

ಮಾತು ಅಗತ್ಯ. ಮಹಾಛಂದಸ್ಸನ್ನು ಆರಿಸಿಕೊಂಡು ಶ್ರೀ ಕುವೆಂಪು ಶೈಲಿಯಲ್ಲಿ ಅನಂತ ವೈವಿಧ್ಯಕ್ಕೆ ಎಡೆಮಾಡಿಕೊಂಡಿದ್ದಾರೆ. ಇಲ್ಲಿ ಸರಳ ರಗಳೆಯಂತೆ ೫+೫+೫+೫ ಈ ಓಟ ಮಾತ್ರವಲ್ಲ. ಇಲ್ಲಿ ಘಟಕ ಒಂದು ಭಾವನೆ. "ಪೋದುವಾಗಳೆ ಸುದ್ದಿ." [7] ೭+೩ ಈ ಅರ್ಧಪಂಕ್ತಿಯೇ ಘಟಕ. ಮತ್ತೊಂದರಲ್ಲಿ ಒಂದು ಪಂಕ್ತಿ–"ಹಬ್ಬುತಿದೆ ಮಲೆಯ ಮೇಲೆನಿತು ಸುಂದರ ಸಂಧ್ಯೆ!"[8]–ಅದೇ ಘಟಕ. ಉಳಿದಂತೆ ಹೆಚ್ಚಾಗಿ ಅನೇಕ ಪಂಕ್ತಿಗಳಿಗೆ ಹರಡಿ ಭಾವ ಅಥವಾ ಆಲೋಚನೆ ಮುಗಿದಾಗಲೇ ಘಟಕ.

ಗೆಂಟೆರೊಳರೆಯ ಮೇಲೆ
ಕುಳಿತಿರ್ಪನೆಕ್ಕಟಿಯೊಳಾ ದಿವ್ಯ ತೇಜಸ್ವಿ,
ಕಡಲೆಡೆಗೆ ಕಣ್ಣಾಗಿ, ಕಣ್ಣೊಳಗೆ ಕಡಲಾಗಿ,
ವಾಯುಸುತನಾಂಜನೇಯಂ![9]

ಅಥವಾ ಇನ್ನೂ ಹೆಚ್ಚಿನ ಬೀಸುಳ್ಳ ಘಟಕಕ್ಕೆ ನಿದರ್ಶನ:

ತನ್ನ ಕಲಿತನಕೆ
ಜಲಕಲಿ ಸರಿತ್ಪತಿಯ ವಿಸ್ತೀರ್ಣದಾ ಶೌರ್ಯಮಂ
ತೋಳ್ತೂಗಿ ನೋಳ್ಪವೋಲತ್ತಣ್ಗೆ ಕಣ್ಬೆಸೆದು,
ಕಲ್ಪಟ್ಟು, ಪಡಿಮೆಯಂತಿರ್ಪನಂ ಬಳಿಸಾರ್ದು
ಜಾಂಬವಂತಂ, ಶಿಲಾಶಿಲ್ಪಿಯ ಕಲಾಕೃತಿಗೆ
ದೇವತಾಹ್ವಾನದಿಂ ಪ್ರಾಣಪ್ರತಿಷ್ಠೆಯಂ
ಗೆಯ್ಯೆ ಮಂತ್ರಿಸುವಾತ್ಮಸಾಧಕನವೋಲ್, ನಿಂದು
ಫಲಸಿದ್ಧಿಯೊಳ್ ಸುಪೃಥ ಬುದ್ಧಿಯಿಂ, ಶ್ರದ್ಧೆಯಂ
ನುಡಿದನಾವೇಶದಿಂ[10]

ಶೈಲಿಯನ್ನು ಕುರಿತು ಮಾತನಾಡುವಾಗ ಮೊದಲು ಶ್ರೀ ದೇ.ಜ.ಗೌ. ಅವರ ಮಾತುಗಳನ್ನು ಸ್ಮರಿಸಬೇಕು. ಏಕೆಂದರೆ ಶ್ರೀ ಕುವೆಂಪುರವರ ಶೈಲಿಯನ್ನು ಕುರಿತು ಹೇಳಬಹುದಾದನ್ನು ಸಂಕ್ಷೇಪವಾಗಿ, ಪರಿಣಾಮಕಾರಿಯಾಗಿ ಶ್ರೀ ದೇ.ಜ.ಗೌ. ಹೇಳಿದ್ದಾರೆ ಶ್ರೀ ರಾಮಾಯಣ ದರ್ಶನಂ ಕಾವ್ಯಶೈಲಿ ಎಂಬ ತಮ್ಮ ಪ್ರಬಂಧದ ಈ ಪಂಕ್ತಿಗಳಲ್ಲಿ: "ಪಂಪರನ್ನರ ವೃತ್ತಗಳ ಬೀಸು ಭೋರ್ಗರತೆಗಳು, ಹರಿಹರನ ರಗಳೆಯ ನಿರರ್ಗಳ ಪ್ರವಾಹಕತೆ, ಜನ್ನನ ಕಂದಗಳ ಲಾಲಿತ್ಯ, ನಾರಣಪ್ಪನ ಷಟ್ಪದಿಗಳ ಸರ್ವಂಭರತ್ವ, ರಾಘವಾಂಕನ ನಾಟಕೀಯತೆ, ಲಕ್ಷ್ಮೀಶನ ನಾದಮಯತೆ, ಮಿಲ್ಟನ್ನನ ಮಹೋನ್ನತಿ–

[7] ಕಿಷ್ಕಿಂಧಾ ಸಂಪುಟಂ, ಸಂ. ೬. ಪಂ, ೪೦೦.

[8] ಅಲ್ಲೇ ಪಂ. ೪೧೩.

[9] ಕಿಷ್ಕಿಂಧಾ ಸಂಪುಟಂ ಸಂ. ೧೦, ಪಂ. ೯೪೦–೯೪೩.

[10] ಅಲ್ಲೇ ಪಂ: ೯೪೩–೯೫೧.

ಇವೆಲ್ಲವೂ ಈ ಮಹಾಛಂದಸ್ಸಿನಲ್ಲಿ ಪಡಿಮೂಡಿ ಸಮಗ್ರ ಕನ್ನಡ ಕಾವ್ಯಶೈಲಿಯ ನೈರಂತರ್ಯವನ್ನು ಪ್ರತಿಬಿಂಬಿಸುವುದರ ಜೊತೆಗೆ ನೂತನ ಪರಂಪರೆಯ ನಿರ್ಮಾಣಕ್ಕೆ ಕಾರಣಭೂತವಾಗಿವೆ."[11]

ಅನೇಕರು ಅಭಿಪ್ರಾಯಪಡುತ್ತಾರೆ, ಶ್ರೀ ರಾಮಾಯಣದರ್ಶನಂ ಶೈಲಿ ಸಂಸ್ಕೃತಮಯವಾಗಿದೆ ಎಂದು. ಅವರ ಅಭಿಪ್ರಾಯಕ್ಕೆ ಆಧಾರ ಇಲ್ಲದಿಲ್ಲ. ಕೆಳಗಿನ ಪಂಕ್ತಿಗಳನ್ನು ನೋಡಿ :

ದಿವ್ಯಾಂಗ ರಾಗದಿಂದವತಂಸ ಯೋಗದಿಂ
ಭೋಗೀಂದ್ರ ಶಾಯಿಯರ್ಧಾಂಗಿಗೊಪ್ಪುವ ತೆರದಿ
ಸಿಂಗರಿಸಿ ಸುಮಗಂಧದಿಂ[12]

ಮತ್ತು ಕೆಲವು :

ವಿಸ್ತೃತ ಸಲಿಲ ಸೀಮೆಯ
ಸರಿತ್ಪತಿಯ ಸಮ್ಮುಖದೊಳಾ ಸಿಕತನೇಮಿಯ
ಮಹನ್ಮಂಚದೊಳ್ ಕುಶಾಸ್ತೀರ್ಣದೊಳ್, ಮಖಸುಕೃತ
ವೇದಿಯೊಳ್ ಮಂಡಿಪ ಹುತಾಶನನವೋಲಿರ್ದು
ಅನಶನವ್ರತಿಯಾಗಿ, ಸತಿಗಾಗಿ ತಪಮಿರ್ದ,
'ಮರಣಮಥವಾ ಶರಧಿ ತರಣಂ' ಪ್ರತಿಜ್ಞೆಯಿಂ
ಸರ್ಪಭೂಷಣ ಭಾಳನೇತ್ರ ಭೀಷಣನಾಗಿ
ಲೋಕಪ್ರಳಯಕರ ಭಯಂಕರಕೆ ಕಾರ್ಯಕ್ಕೆ
ಕೋಪ ಚಾಪಕೆ ಘೋರ ಚಿತ್ತನಾರಾಚಮುಂ
ಸಂಧಾನಗೈವ ವಿಕಟಕ್ರಿಯಾ ನಿಕಟನಂ
ಬಳಿಸಾರ್, ಕಪೀಂದ್ರ ಸಂಕಟ ತಪ್ತ ಸಂವೀತ
ಕಟಕನಂ.[13]

ಆದರೆ ಇಂಥವು ಎಲ್ಲಿವೆ ಎಂಬುದನ್ನು ಕಷ್ಟಪಟ್ಟು ಹುಡುಕಬೇಕು. ಅಲ್ಲದೆ ಯಾವ ಸಂದರ್ಭದಲ್ಲಿ, ಏನನ್ನು ನಿರೂಪಿಸುವಾಗ ಇಂಥ ಪಂಕ್ತಿಗಳು ಬರುತ್ತವೆ ಎಂಬುದನ್ನೂ ಗಮನಿಸಬೇಕು. ಪಂಪಕವಿ "ಇದಜಿರೊಳ್ ಶ್ವೇತಾತ ಪತ್ರಸ್ಥಗಿತ ದಶದಿಶಾ ಮಂಡಲಂ" ಎಂಬುದನ್ನು "ಸುಲಿದ ಬಾಳೆಯ ಹಣ್ಣಿನಂದದಿ" ಎಂದು ಹೇಳಲಾಗುವುದಿಲ್ಲ ಎಂಬುದನ್ನು ನೆನಪುಮಾಡಿಕೊಂಡರೆ ಸಾಕು.

ಬದಲಾಗಿ ಕನ್ನಡ ತನ್ನತನವನ್ನು ಸಾಕ್ಷಾತ್ಕರಿಸಿಕೊಂಡಿರುವುದು, ಸಾರ್ಥಕಪಡಿಸಿ

---

11 ಅವಲೋಕನ, ಪು. ೩೦.

12 ಶ್ರೀ ಸಂಪುಟಂ ಸಂ. ೧೧, ಪಂ. ೧೮೮–೧೯೦.

13 ಲಂಕಾ ಸಂಪುಟಂ ಸಂ. ೯, ಪಂ. ೭–೧೮.

ಕೊಂಡಿರುವುದು ರಾಮಾಯಣ ದರ್ಶನಂ ಕಾವ್ಯದ ತಿರುಳು ಎನ್ನಿಸುತ್ತದೆ. ಅದಕ್ಕೆ ಉದಾಹರಣೆಗಾಗಿ ಎಲ್ಲಿಯೂ ಹುಡುಕಬೇಕಾಗಿಲ್ಲ. ಯಾವ ಪುಟವೂ ಅದಕ್ಕೆ ಸಾಕ್ಷಿ ಹೇಳುತ್ತದೆ.

ರಾಮ ಲಕ್ಷ್ಮಣರು, ಸೀತೆಯು ನೆರವನ್ನು ನಿರಾಕರಿಸದೆ, ಪಂಚವಟಿಯಲ್ಲಿ ಪರ್ಣಕುಟಿಯನ್ನು ಕಟ್ಟಿದರು, ಹೀಗೆ:

ಬಿದಿರ್ಗಂಬದ ಹಂದರ, ಬಿದಿರ್ಗಳ ತೊಲೆಮಾಡಿ,
ಸುಟ್ಟೆಲೆಗಳಿಂ ಹೊದಿಸಿ, ಹೆದೆಗೆಸಕ್ಕೆಯ ಸೀಳ್
ಸಲಾಕೆ ಬಿಗಿದು ಕಟ್ಟಿ, ಹಂಬು ಬೆತ್ತದ ಕಡಿದು,
ಸಿಗಿದು, ತಪ್ಪಲ ಹೊದಿಸಿ, ತಡಿಕೆ ಗೋಡೆಯನಿಟ್ಟು,
ಜಗಲಂಡಿಯಿಂ ಬಿಟ್ಟು ಸುತ್ತದೆರೆಯಂ ಸುತ್ತಿ,
ಕಪಿಲೆಯ್ದ ಬಾಗಿಲಂ ಬಲಿದು, ಸುತ್ತುತ್ತಲುಂ
ಮುಳ್ವೇಲಿ ಸುತ್ತಿದರ್. ಮೇಣ್ ತಪಸ್ಯೆಯುಮಂಗೋಪ್ಯಕಂ
ಪೂಜಿ, ನಿರಪೇಕ್ಷದಾತ್ಮಸುಂದರಶಿಲ್ಪಕೃತಿಯಂ
ಸುಮನೋಜ್ಞಮಂ ॥

ಸಂಭಾಷಣೆ

ಕೊನೆಯದಾಗಿ ಒಂದು ವಿಶೇಷವಾದ ಸೊಬಗಿನ ಕಡೆಗೆ ಓದುಗರ ಗಮನವನ್ನು ಸೆಳೆಯುವ ಹಂಬಲ ನನ್ನದು, ಅದು ಸಂಭಾಷಣಾ ಕೌಶಲ. ಕನ್ನಡದಲ್ಲಿ ನಾಟಕೀಯತೆಯ ಅಂಶವನ್ನು, ಅದರಲ್ಲೂ ಸಂಭಾಷಣೆಯ ಕುಶಲತೆಯನ್ನು ಒಳಗೊಂಡಿರುವ ಕಾವ್ಯಗಳು ಸ್ವಲ್ಪವೇ. ಮಾತಿಗೆ ಪ್ರತಿಮಾತು, ಸಂಕ್ಷಿಪ್ತತೆ, ನಾದ ಪ್ರಖರತೆ ಇವೆಲ್ಲ ಒಟ್ಟುಗೂಡಿರುವ ಕೃತಿಗಳಲ್ಲಿ ಅಗ್ರಸ್ಥಾನವನ್ನು ಪಡೆಯುತ್ತದೆ, ಶ್ರೀ ರಾಮಾಯಣ ದರ್ಶನಂ. ಕೆಲವು ನಿದರ್ಶನಗಳನ್ನು ಜಾಬಾಲಿ–ರಾಮರ ಸಂಭಾಷಣೆಯಲ್ಲಿ, ರಾಮ–ವಾಲಿಗಳ, ರಾವಣ–ಸೀತೆಯರ, ಇನ್ನೂ ಅನೇಕ ಸಂದರ್ಭಗಳ ಸಂಭಾಷಣೆಯಲ್ಲಿ ನೋಡಬಹುದು.

ಒಟ್ಟಿನಲ್ಲಿ ಶ್ರೀರಾಮಾಯಣ ದರ್ಶನಂ ಕನ್ನಡದ ಅಪೂರ್ವ ಕಾವ್ಯ, ಕನ್ನಡಕ್ಕೆ ಗೌರವ ತಂದುಕೊಟ್ಟ ಕಾವ್ಯ, ಕನ್ನಡದ ಸೌಭಾಗ್ಯವನ್ನು ಹೆಚ್ಚಿಸಿದ ಕಾವ್ಯ.

---

೨೪ ಅಯೋಧ್ಯಾ ಸಂಪುಟ: ೧೧. ಪಂ. ೫೯-೭೭.

ಕೆ. ವೆಂಕಟರಾಮಪ್ಪ

ಕನ್ನಡ ಸಾಹಿತ್ಯ ಚರಿತ್ರೆ

ಡಾ. ರಂ. ಶ್ರೀ. ಮುಗಳಿಯವರು ರಚಿಸಿರುವ 'ಕನ್ನಡ ಸಾಹಿತ್ಯಚರಿತ್ರೆ'ಯು ಕನ್ನಡ ಸಾಹಿತ್ಯಾಭ್ಯಾಸಿಗಳಿಗೆ ಬಹಳ ಅಗತ್ಯವಾಗಿ ಬೇಕಾಗಿದ್ದ ಒಂದು ಉಪಯುಕ್ತ ಗ್ರಂಥ ವಾಗಿದೆ. ಆರಂಭಕಾಲದಿಂದ ಈ ಶತಮಾನದ ಆರಂಭದವರೆಗೆ ಅವಿಚ್ಛಿನ್ನವಾಗಿ ಬೆಳೆದುಬಂದಿರುವ ಕನ್ನಡ ಕಾವ್ಯಸಂಪತ್ತಿನ ವಿಪುಲತೆ, ವೈವಿಧ್ಯ, ಮಹತ್ವಗಳನ್ನು ಸಮಗ್ರ ವಾಗಿ ನಿರೂಪಿಸುವ ಈ ಗ್ರಂಥ ಎಲ್ಲರೂ ಮೆಚ್ಚುವಂತಹುದೇ ಸರಿ. ಕನ್ನಡ ಸಾಹಿತ್ಯದ ಸಂಪೂರ್ಣಕಥೆ ಒಂದುಕಡೆ ದೊರಕದಿದ್ದ ಕೊರತೆ ಅಭ್ಯಾಸಿಗಳಿಗೂ ಅಧ್ಯಾಪಕರಿಗೂ ಬಹಳಕಾಲದಿಂದ ಅನುಭವದಲ್ಲಿದ್ದ ಸಂಗತಿ. ಆ ಕೊರತೆಯನ್ನು ಶ್ರೀಮುಗಳಿಯವರು ಈ ಪುಸ್ತಕದಿಂದ ಪರಿಹರಿಸಿದ್ದಾರೆನ್ನಬಹುದು. ಅಲ್ಪಾವಕಾಶದಲ್ಲಿಯೇ ಈ ಗ್ರಂಥದ ಪುನರ್ಮುದ್ರಣವಾದದ್ದು ಅದರ ಉಪಯುಕ್ತತೆಗೂ ಜನಪ್ರಿಯತೆಗೂ ಸಾಕ್ಷಿಯಾಗಿದೆ. ಶ್ರೀಯುತರ ಅನೇಕವರ್ಷಗಳ ವಿದ್ವತ್ಪರಿಶ್ರಮದ ಫಲವಾಗಿ ರೂಪುಗೊಂಡ ಈ ಕೃತಿಗೆ ಸಾಹಿತ್ಯ ಅಕಾಡೆಮಿಯವರು ಪ್ರಶಸ್ತಿ ನೀಡಿ ಗೌರವಿಸಿದರು.

ಇದಕ್ಕಿಂತ ಮುಂಚೆ ಕನ್ನಡ ಸಾರಸ್ವತ ಸಂಪತ್ತಿನ ಇತಿಹಾಸ ನಿರೂಪಣೆಗೆ ಯಾರೂ ಪ್ರಯತ್ನಪಟ್ಟಿರಲಿಲ್ಲವೆಂದು ಹೇಳುವಂತಿಲ್ಲ. ರೆವೆರೆಂಡ್ ಎಫ್. ಕಿಟ್ಟೆಲ್‌ರವರು ತಾವೇ ಶೋಧಿಸಿ ಪ್ರಕಟಿಸಿದ 'ಕನ್ನಡ ಛಂದೋಂಬುಧಿ'ಯ ಪೀಠಿಕೆಯಲ್ಲಿ ಅಂದಿನವರೆಗೆ ಲಭಿಸಿದ್ದ ಕನ್ನಡ ಸಾಹಿತ್ಯವನ್ನು ಕುರಿತು ಒಂದು ಪ್ರಬಂಧವನ್ನೇ ಬರೆದರು. ಇದು ಕನ್ನಡ ಸಾಹಿತ್ಯಚರಿತ್ರೆಯನ್ನು ಹೇಳಲು ಮೊದಲನೆಯ ಪ್ರಯತ್ನವೆಂದು ತಿಳಿಯ ಬಹುದು. ತರುವಾಯ ಇ.ಪಿ. ರೈಸ್‌ರವರು ಆಂಗ್ಲಭಾಷೆಯಲ್ಲಿ ಕನ್ನಡ ಸಾಹಿತ್ಯ ಚರಿತ್ರೆಯೊಂದನ್ನು ರಚಿಸಿ ಪುಸ್ತಕರೂಪದಲ್ಲಿ ಪ್ರಕಟಿಸಿದರು. ಆಚಾರ್ಯ ಬಿ.ಎಂ. ಶ್ರೀಕಂಠಯ್ಯನವರು ಕನ್ನಡ ಸಾಹಿತ್ಯ ಚರಿತ್ರೆಯ ರಚನೆಗೆ ಕೈ ಹಾಕಿದರಾದರೂ ನಮ್ಮದುರ್ದೈವದಿಂದ ಅದು ಅರ್ಧದಲ್ಲಿಯೇ ನಿಂತುಹೋಯಿತು. ಮೈಸೂರು ವಿಶ್ವವಿದ್ಯಾ ನಿಲಯದ ಪ್ರಚಾರ ಪುಸ್ತಕ ಮಾಲೆಯಲ್ಲಿ ಪ್ರಕಟಿತವಾದ 'ಕನ್ನಡಸಾಹಿತ್ಯ' ಒಂದು ಪುಟ್ಟ ಪುಸ್ತಕ. ಅದನ್ನು 'ಸಾಹಿತ್ಯ ಚರಿತ್ರೆ'ಯೆಂದು ಭಾವಿಸುವುದು ಸಾಧ್ಯವಲ್ಲ. ಸಾಮಾನ್ಯ ಓದುಗರಿಗೆ ಕನ್ನಡ ಕಾವ್ಯಸಂಪತ್ತಿನ ಸ್ಥೂಲಪರಿಚಯ ಮಾಡಿಕೊಡುವುದಷ್ಟೇ

ಅದರ ಧ್ಯೇಯ. 'ಕನ್ನಡ ಸಾಹಿತ್ಯವಾಹಿನಿ' ಇನ್ನೂ ಸ್ವಲ್ಪ ವಿಸ್ತಾರವಾಗಿದ್ದರೂ ಸಾಹಿತ್ಯಾಭ್ಯಾಸಿಗಳಿಗೆ ಅದೂ ಸಾಲದು. ಈ ಕ್ಷೇತ್ರದಲ್ಲಿ ವಿಶೇಷವಾದ ಕೃಷಿ ಮಾಡಿದ ಸ್ವರ್ಗೀಯ ಗೋವಿಂದ ಪೈಯವರು ಅನೇಕ ಲೇಖನಗಳನ್ನೂ ರಚಿಸಿದರು. ವಿದ್ವತ್ಪೂರ್ಣವಾದ ಅವರ ಬರಹಗಳು ಕನ್ನಡ ಸಾಹಿತ್ಯದ ಪ್ರಾಚೀನತೆ ಮೊದಲಾದ ಅನೇಕ ವಿಷಯಗಳ ಮೇಲೆ ಹೊಸ ಬೆಳಕನ್ನು ಚೆಲ್ಲಿವೆ. ಆದರೆ ಅವರು ಆದ್ಯಂತವಾಗಿ ಸಾಹಿತ್ಯದ ಕಥೆಯನ್ನು ಹೇಳುವ ಕಾರ್ಯವನ್ನು ಕೈಗೊಳ್ಳಲಿಲ್ಲ. ಇಷ್ಟಲ್ಲದೆ ಕನ್ನಡ ಕವಿ ಕಾವ್ಯಗಳನ್ನು ಕುರಿತು ಅನೇಕ ವಿದ್ವಾಂಸರು ಹಲವಾರುಲೇಖನಗಳನ್ನು ಬರೆದಿದ್ದಾರೆ. ಅವೆಲ್ಲ ಬೇರೆ ಬೇರೆ ಪತ್ರಿಕೆಗಳಲ್ಲಿ ಬಿಡಿ ಬಿಡಿಯಾಗಿ ಹಂಚಿಹೋಗಿವೆ. ಅವೆಲ್ಲ ಪುಸ್ತಕರೂಪದಲ್ಲಿ ಬರುವುದಾಗಿಲ್ಲ.

ಕನ್ನಡ ಸಾಹಿತ್ಯ ಚರಿತ್ರೆಯ ವಿಚಾರಕ್ಕೆ ತೊಡಗಿದಾಗ ನಾವು ಮೊಟ್ಟಮೊದಲು ಸ್ವರ್ಗೀಯ ಶ್ರೀ ಆರ್. ನರಸಿಂಹಾಚಾರ್ಯರನ್ನು ಸ್ಮರಿಸಬೇಕು. ಅವರು ಅನೇಕ ವರ್ಷಗಳ ಅಖಂಡ ಪರಿಶ್ರಮದಿಂದ ಸಂಶೋಧನೆ ಮಾಡಿ ಸಿದ್ಧಪಡಿಸಿದ 'ಕರ್ಣಾಟಕ ಕವಿಚರಿತೆ' ಎಲ್ಲ ಅಭ್ಯಾಸಿಗಳಿಗೂ ಅನಿವಾರ್ಯವಾದ ಆಧಾರ ಗ್ರಂಥವಾಗಿದೆ. ಕನ್ನಡದಲ್ಲಿ ಕೃತಿ ರಚನೆ ಮಾಡಿದವರೆಲ್ಲರನ್ನೂ ಹೆಸರಿಸಿ ಅವರ ದೇಶ ಕಾಲಗಳನ್ನು ನಿರ್ಣಯಿಸಿ ಹೇಳಿ ಅವರು ರಚಿಸಿದ ಕೃತಿಗಳಿಂದ ಆಯ್ದ ಕೆಲವು ಭಾಗಗಳನ್ನು ಎತ್ತಿ ಬರೆದು ಅವುಗಳ ಸ್ಥೂಲ ಪರಿಚಯ ಮಾಡಿಸಿರುವುದಲ್ಲದೆ, ಸ್ಥಾಲೀಪುಲಾಕನ್ಯಾಯದಂತೆ ಕಾವ್ಯಯೋಗ್ಯತಾ ನಿರ್ಣಯಕ್ಕೂ ಆಚಾರ್ಯರು ತಮ್ಮ 'ಕರ್ಣಾಟಕ ಕವಿ ಚರಿತೆ'ಯ ಮೂರು ಬೃಹತ್ಸಂಪುಟಗಳಲ್ಲಿ ಅನುವು ಮಾಡಿಕೊಟ್ಟಿದ್ದಾರೆ. 'ಕವಿ ಚರಿತೆ' ಎಲ್ಲ ಅಭ್ಯಾಸಿಗಳಿಗೂ ಪ್ರಮಾಣ ಗ್ರಂಥವಾಗಿದೆ. ಆಚಾರ್ಯರು ಮಾಡಿದ ಕವಿಕಾಲ ನಿರ್ಣಯವನ್ನು ಕುರಿತು ವಿದ್ವಜ್ಜನರು ಭಿನ್ನಾಭಿಪ್ರಾಯಗಳನ್ನು ಪ್ರಕಟಿಸಿದ್ದಾರೆ. ಅಂಥವರಲ್ಲಿ ಡಾ. ಎ. ವೆಂಕಟಸುಬ್ಬಯ್ಯನವರು ಪ್ರಮುಖರೆಂದು ಹೇಳಬಹುದು. ಅವರು 'ಕೆಲವು ಕನ್ನಡ ಕವಿಗಳ ಜೀವನ ಕಾಲ ವಿಚಾರ' ಎಂಬ ತಮ್ಮ ಗ್ರಂಥದಲ್ಲಿ ಹಲವು ಕವಿಗಳ ಕಾಲವನ್ನು ನಿರ್ಧರಿಸಲು ಶ್ರಮಿಸಿದ್ದಾರೆ. ಅವರ ಕೆಲವು ಅಭಿಪ್ರಾಯಗಳನ್ನು ಕವಿ ಚರಿತಕಾರರೂ ಒಪ್ಪಿಕೊಂಡರು.

ಕವಿ ಕಾಲನಿರ್ಣಯವೇ ಅಲ್ಲದೆ ಕೆಲವು ಕಾವ್ಯಗಳ ಕರ್ತೃತ್ವ ವಿಚಾರದಲ್ಲಿಯೂ ಕವಿಗಳ ಮತ ಧರ್ಮಗಳ ವಿಚಾರದಲ್ಲಿಯೂ ಸಾಕಷ್ಟು ಜಿಜ್ಞಾಸೆ ನಡೆದಿದೆ. 'ಕವಿರಾಜಮಾರ್ಗ'ದ ಕರ್ತೃ ಯಾರು? ನೃಪತುಂಗನೆ, ಶ್ರೀವಿಜಯನೆ, ಕವೀಶ್ವರನೆ? ನಾಗವರ್ಮರೆಷ್ಟು ಮಂದಿ? ಕಾದಂಬರಿಯನ್ನು ಬರೆದ ನಾಗವರ್ಮ ಜೈನನೆ ಶೈವನೆ? ಹೀಗೆ ಹಲವು ಪ್ರಶ್ನೆಗಳಿಗೆ ಸಂಶಯಕ್ಕೆಡೆಯಿಲ್ಲದಂಥ ಸರ್ವಸಮರ್ಪಕವೆನಿಸುವಂತಹ ಉತ್ತರ ಹೇಳಲು ಇನ್ನೂ ಸಾಧ್ಯವಾಗಿಲ್ಲ. ಇಂಥ ಪ್ರಸಂಗಗಳಲ್ಲಿ ಚರಿತ್ರಕಾರನು ಅನಿವಾರ್ಯವಾಗಿ ವಾಚಕರನ್ನು ಸಂದೇಹದಲ್ಲಿಡಬೇಕಾದೀತು. ಈಗ ಲಭ್ಯವಾಗಿರುವ ಎಲ್ಲ ಸಾಕ್ಷ್ಯಾಧಾರಗಳನ್ನೂ ಅವಲೋಕಿಸಿ ಅನೇಕ ಗ್ರಂಥಗಳನ್ನೂ ಲೇಖನಗಳನ್ನೂ

ಓದಿ ಪರಿಶೀಲಿಸಿ ಶ್ರೀ ಮುಗಳಿಯವರು ಸ್ವಯಂ ಪೂರ್ಣವೆನಿಸಿದ ಒಂದು 'ಸಾಹಿತ್ಯ ಚರಿತ್ರೆ'ಯನ್ನು ರಚಿಸಿ ನಮ್ಮ ಶ್ಲಾಘನೆಗೆ ಪಾತ್ರರಾಗಿದ್ದಾರೆ. ಆದಿಯಿಂದ ನಂದಳಿಕೆ ಲಕ್ಷ್ಮೀನಾರಣಪ್ಪನವರೆಗೆ ಕನ್ನಡದಲ್ಲಿ ನಡೆದಿರುವ ಕಾವ್ಯರಚನೆಯ ಇತಿಹಾಸವನ್ನು ಈ ಗ್ರಂಥದಲ್ಲಿ ನಾವು ಕಾಣಬಹುದಾಗಿದೆ. ಆಧುನಿಕ ಸಾಹಿತ್ಯದ ವಿಮರ್ಶೆಯನ್ನು ಗ್ರಂಥಕರ್ತರು ಉದ್ದೇಶಪೂರ್ವಕವಾಗಿಯೇ ಕೈಬಿಟ್ಟಿರುವಂತೆ ತೋರುತ್ತದೆ.

ಸಾಹಿತ್ಯ ಚರಿತ್ರೆಯನ್ನು ವ್ಯಾಸಂಗಮಾಡುವಾಗ ಅಧ್ಯಯನ ಸೌಲಭ್ಯಕ್ಕಾಗಿ ಅದರ ಕಾಲ ವಿಭಜನೆ ನಡೆಸಿ ಬೇರೆ ಬೇರೆ ಯುಗಗಳಾಗಿ ವಿಂಗಡಿಸಿಕೊಳ್ಳುವುದು ವಾಡಿಕೆ. ಕವಿಗಳ ಮತಾನುಸಾರವಾಗಿ ವಿಂಗಡಿಸಿ ಕನ್ನಡ ಸಾಹಿತ್ಯವನ್ನು ಜೈನ ಸಾಹಿತ್ಯ, ವೀರಶೈವ ಸಾಹಿತ್ಯ, ವೈಷ್ಣವಸಾಹಿತ್ಯ ಎಂದು ಮೂರು ಭಾಗಗಳಾಗಿ ವಿಚಾರ ಮಾಡುವುದುಂಟು. ಈ ಶತಮಾನಕ್ಕೆ ಹಿಂದೆ ಕನ್ನಡದಲ್ಲಿ ಕಾವ್ಯರಚನೆ ಮಾಡಿದವರೆಲ್ಲ ಪ್ರಾಯಿಕವಾಗಿ ಈ ಮೂರು ಮತಗಳವರೇ ಆಗಿದ್ದಾರೆ. ಆದರೆ ಕೆಲವರು ವಿದ್ವಾಂಸರು ಈ ಮತಾನುಸಾರವಾದ ವಿಂಗಡಣೆಯನ್ನು ಒಪ್ಪದೆ, ಚಂಪೂ ಸಾಹಿತ್ಯ, ರಗಳೆ, ಷಟ್ಪದಿ, ವಚನಸಾಹಿತ್ಯ, ಸಾಂಗತ್ಯ ಎಂದು ಆಯಾ ಕಾವ್ಯಗಳ ಛಂದಸ್ಸಿಗೆ ಅನುಗುಣವಾಗಿ ವಿಭಾಗಿಸುವುದುಂಟು. ಇನ್ನು ಕೆಲವರು ಪ್ರಭಾವಶಾಲಿಗಳಾದ ಕವಿಗಳ ಹೆಸರುಗಳನ್ನೇ ಒಂದೊಂದು ಕಾಲಕ್ಕೆ ಕೊಟ್ಟು, ಪಂಪಯುಗ, ಹರಿಹರ ಬಸವಯುಗ ಎಂದು ಮೊದಲಾಗಿ ವಿಂಗಡಿಸುತ್ತಾರೆ. ಈ ಕೆಲವು ಕವಿ ಶ್ರೇಷ್ಠರು ತಮ್ಮ ಸಮಕಾಲೀನರಾದ ಕವಿಗಳ ಮೇಲೆ ಪ್ರಭಾವ ಬೀರಿದವರಾದ್ದರಿಂದ ಈ ವಿಭಜನೆಯೇ ಸರಿಯೆಂದು ಅವರ ಅಭಿಮತ. ಆರಂಭಕಾಲ, ಮತಪ್ರಾಬಲ್ಯಕಾಲ, ಆಧುನಿಕ ಸಾಹಿತ್ಯ ಎಂದು ಶ್ರೀಯವರು ವಿಭಾಗಮಾಡಿರುವುದು ಒಂದು ದೃಷ್ಟಿಯಿಂದ ಬಹಳ ಸಮಂಜಸವೆಂದು ಕಂಡರೂ ಪಂಪನಿಂದ ತೊಡಗಿ ಕೆಂಪುನಾರಾಯಣನವರೆಗೆ, ಅಂದರೆ! ಒಂದು ಸಾವಿರ ವರ್ಷಗಳಸಾಹಿತ್ಯವನ್ನು ಒಂದು ವಿಭಾಗವಾಗಿ ಒಪ್ಪಿಕೊಳ್ಳಬೇಕಾಗುತ್ತದೆ, ಮತ ಪ್ರಚಾರದ ಉದ್ದೇಶವಿಲ್ಲದ ಕೆಲವು ಕಾವ್ಯಗಳೂ ಆ ಕಾಲದ ಕನ್ನಡ ಸಾಹಿತ್ಯದಲ್ಲಿ ಇವೆ.

ಶ್ರೀ ಮುಗಳಿಯವರು ಈ ಎಲ್ಲ ವಿಭಾಗಕ್ರಮಗಳನ್ನೂ ವಿಸ್ತಾರವಾಗಿ ಚರ್ಚಿಸಿ ಒಂದೊಂದು ಕ್ರಮದಲ್ಲಿಯೂ ಇರುವ ದೋಷಗಳನ್ನು ತೋರಿಸಿ ಯಾವುದನ್ನೂ ಸಂಪೂರ್ಣವಾಗಿ ಮೆಚ್ಚಲಾರದೆ, ಪಂಪಪೂರ್ವಯುಗ, ಪಂಪಯುಗ, ಬಸವಯುಗ, ಕುಮಾರವ್ಯಾಸಯುಗ ಎಂದು ತಮ್ಮ ಗ್ರಂಥದಲ್ಲಿ ಕನ್ನಡಸಾಹಿತ್ಯ ಚರಿತ್ರೆಯನ್ನು ನಾಲ್ಕು ಭಾಗಗಳಾಗಿ ವಿಂಗಡಿಸಿಕೊಂಡಿದ್ದಾರೆ. ಆದರೆ ಮತ್ತೆ ಆ ಒಂದೊಂದು ಕಾಲದಲ್ಲಿಯೂ ಜೈನ, ವೀರಶೈವ, ಬ್ರಾಹ್ಮಣಗಳೆಂಬ ಮತವಿಭಾಗಗಳನ್ನೂ ಅನುಸರಿಸಿ ದ್ದಾರೆ! ಆದರೂ ಅವರು 'ಕನ್ನಡದ ಹಲವು ಹಿರಿಯ ಕವಿಗಳಲ್ಲಿ ಅವರ ಮತವು ಕಾಲೋಚಿತವಾದ ಹೆಸರು–ವೇಷಗಳನ್ನೂ ಪಡೆದಿದ್ದರೂ ಅವರ ವಿಶಾಲವಾದ ಜೀವನ ದರ್ಶನದಿಂದ ಪುನೀತವಾಗಿ ಅದು ತನ್ನ ಬಗೆಯಲ್ಲಿ ಒಂದು ಅಚ್ಚರಿಯ ಸಮನ್ವಯವನ್ನು

ತೋರಿದೆ ಎಂಬುದನ್ನೂ ಮರೆಯಕೂಡದು. ಇಂಥ ಸಂದರ್ಭಗಳಲ್ಲಿ ಆಯಾ ಕವಿಗಳನ್ನು ಜೈನ, ವೀರಶೈವ, ಬ್ರಾಹ್ಮಣ, ಎಂದು ಮಾತ್ರ ಕರೆದು ನಾವು ಅವರಿಗೆ ಅನ್ಯಾಯ ಮಾಡುತ್ತೇವೆ'[1] ಎಂದು ಹೇಳಲು ಸ್ವಲ್ಪವೂ ಹಿಂಜರಿದಿಲ್ಲ. ಮತಾನುಗುಣವಾದ ವಿವೇಚನೆಯಲ್ಲಿನ ಒಂದು ದೊಡ್ಡ ದೋಷವನ್ನು ಇಲ್ಲಿ ಅವರು ಸ್ಪಷ್ಟಪಡಿಸಿದ್ದಾರಾದರೂ ಅದನ್ನು ಕೈಬಿಡಲು ಅದೇಕೋ ಹಿಂಜರಿದಿದ್ದಾರೆ. ಅಲ್ಲದೆ 'ಮಾರ್ಗಯುಗ, ಸಂಕ್ರಮಣ ಯುಗ, ದೇಸಿಯುಗ ಎಂಬ ಪರ್ಯಾಯ ಪದಗಳನ್ನು ಆಗಾಗ ಬಳಸಿ ಆಯಾ ಯುಗಗಳ ಸಾಹಿತ್ಯಿಕ ಸ್ವರೂಪದ ವೈಶಿಷ್ಟ್ಯಗಳನ್ನು ವಿವೇಚಿಸುತ್ತೇವೆ[2]' ಎಂದು ತೀರ್ಮಾನಿಸಿ ಯಾವುದೇ ಒಂದು ವಿಭಾಗ ಕ್ರಮವನ್ನೂ ಏಕಚಿತ್ತದಿಂದ ಒಪ್ಪಿ ಕಟ್ಟು ನಿಟ್ಟಾಗಿ ಅನುಸರಿಸಲು ಇಷ್ಟಪಡದೆ ಎಲ್ಲ ಕ್ರಮಗಳನ್ನೂ ಅಳವಡಿಸಿಕೊಳ್ಳಲು ಪ್ರಯತ್ನ ಪಟ್ಟಹಾಗೆ ತೋರುತ್ತದೆ. ಬಹುಶಃ ಅವರು ಹೀಗೆ ಅನಿಶ್ಚಿತಮನರಾಗಲು 'ಯಾವುದೇ ಕಾಲ ವಿಭಾಗವು ಎಂದಿಗೂ ನಿರ್ದುಷ್ಟವಾಗದು'[3] ಎಂಬ ತೀರ್ಮಾನಕ್ಕೆ ಬಂದುದೇ ಕಾರಣವೆಂದು ತೋರುತ್ತದೆ.

ಕುಮಾರವ್ಯಾಸ ಯುಗ ಕ್ರಿ. ಶ. ೧೪೦೦ರಿಂದ ಮೊದಲಾಗಿ ೧೯೦೦ರವರೆಗೆ ಬೆಳೆದಿದೆ. ಈ ಐನೂರು ವರ್ಷಗಳ ದೀರ್ಘಕಾಲದ ಸಾಹಿತ್ಯ ಚರಿತ್ರೆಗೆ ಕುಮಾರವ್ಯಾಸನ ಹೆಸರಿಡುವುದು ಉಚಿತವೆನ್ನಿಸದು. ಕುಮಾರವ್ಯಾಸನು ಮಹಾ ಪ್ರತಿಭಾವಂತ ನಾದ ಷಟ್ಪದೀಕವಿ. ಅವನು ರಚಿಸಿದ ಭಾರತ 'ಕಾವ್ಯಕೆ ಗುರು'. ಆತನ ಮೇಲ್ಪಂಕ್ತಿ ಯನ್ನು ಅನುಸರಿಸಿ ಕೃತಿರಚನೆ ಮಾಡಿದವರು ಹಲವರಿದ್ದಾರೆ. ಇದೆಲ್ಲ ಸರಿ. ಆದರೆ ಚಂಪೂ ಸಾಹಿತ್ಯದ ಪುನರುತ್ಥಾನಕ್ಕೆ ಶ್ರಮಿಸಿದ ಷಡಕ್ಷರದೇವ, ತಿರುಮಲಾರ್ಯರು; 'ಮುದ್ರಾ ಮಂಜೂಷ'ವೆಂಬ ವಚನಕಾವ್ಯವನ್ನು ರಚಿಸಿದ ಕೆಂಪುನಾರಾಯಣಶರ್ಮ ಮೊದಲಾದವರನ್ನು ಕುಮಾರವ್ಯಾಸನಿಂದ ಪ್ರಭಾವಿತರಾದವರೆಂದು ಭಾವಿಸುವುದಾಗ ಬಹುದೆ?

ಕನ್ನಡಿಗರಿಗೆ ಅಭಿಮಾನಾಸ್ಪದವಾದ ಒಂದು ಹೊಸಸಾಹಿತ್ಯ ಪ್ರಕಾರವನ್ನು ಬೆಳಸಿ ಬಲಪಡಿಸಿದ ಪುರಂದರದಾಸರು ಆಮೇಲೆ ಬಂದ ಅನೇಕ ಹರಿದಾಸರಿಗೆ, ಕೀರ್ತನೆ ಗಳನ್ನು ಕಟ್ಟಿದ ಕವಿಗಳಿಗೆ ಆದರ್ಶರಾಗಿಲ್ಲವೆ? ದಾಸಸಾಹಿತ್ಯದ ಮೇಲೆ ಕುಮಾರವ್ಯಾಸನ ಪ್ರಭಾವವೆಷ್ಟೆಂಬುದು ವಿಚಾರಾರ್ಹವಾದ ವಿಷಯ. 'ಹರಿದಾಸ ಯುಗ' ವೆಂದೇ ಹೆಸರಿಸಬಹುದಾಗಿತ್ತು. 'ದಾಸರಾಯ'ರೆಂಬ ಮನ್ನಣೆಗೆ ಪಾತ್ರರಾದ ಪುರಂದರದಾಸರ ಹೆಸರನ್ನೇ ಆಕಾಲಕ್ಕೆ ಕೊಟ್ಟಿದ್ದರೆ ಉಚಿತವೆನ್ನಬಹುದಾಗಿತ್ತು. ವೀರಶೈವ ವಚನಸಾಹಿತ್ಯದಂತೆ ದಾಸಸಾಹಿತ್ಯವೂ ಕನ್ನಡಜನತೆಯಲ್ಲಿ ನೀತಿ, ತತ್ತ್ವ,

---

[1] ಕನ್ನಡ ಸಾಹಿತ್ಯ ಚರಿತ್ರೆ ಪುಟ ೪೨.

[2] ಅದೇ, ಪುಟ ೪೬.

[3] ಅದೇ, ಪು. ೪೩.

ಧರ್ಮಗಳನ್ನು ಪ್ರಚಾರಮಾಡಿ ಲೋಕಪ್ರಿಯವಾಗಿದೆ. ದಾಸಸಾಹಿತ್ಯದ ಪ್ರಭಾವ ಕನ್ನಡಭಾಷೆಯ ಮೇಲೆ ವಿಶೇಷವಾಗಿ ಬಿದ್ದಿದೆ. ಕುಮಾರವ್ಯಾಸ ಯುಗ, ಪುರಂದರ ಯುಗ, ತಿರುಮಲಾರ್ಯ ಯುಗ ಎಂದು ವಿಭಾಗಿಸುವುದು ಹೆಚ್ಚು ಸಮರ್ಪಕವಾದೀತೆಂದು ನಾವು ಭಾವಿಸುತ್ತೇವೆ.

ವಚನಕಾರರಲ್ಲಿ ಸುಪ್ರಸಿದ್ಧನಾದ ಬಸವಣ್ಣನ ಹೆಸರನ್ನೇ ಆಯುಗಕ್ಕೆ ಇಟ್ಟಿರುವುದು ಸಮಂಜಸವಾಗಿದೆ. ಮತಕ್ಷೇತ್ರದಲ್ಲಿ ಹೇಗೆಯೋ ಹಾಗೆಯೇ ಬಸವಣ್ಣ ಸಾಹಿತ್ಯ ಕ್ಷೇತ್ರದಲ್ಲಿಯೂ ಒಂದು ಅಸಾಧಾರಣವಾದ ವಿಚಾರ ಕ್ರಾಂತಿಯನ್ನುಂಟು ಮಾಡಿದನು. ಆದರೆ ರಗಳೆಯ ಕಾವ್ಯಗಳನ್ನು ಹಲವನ್ನು ರಚಿಸಿ ಆ ಮೇಲಿನ ಅನೇಕ ಕನ್ನಡಕವಿಗಳಿಗೆ ಸ್ಫೂರ್ತಿದಾತನಾದ ಹಂಪೆಯ ಹರಿಹರನನ್ನು ಮರೆಯಬಾರದಿತ್ತು. ಷಡಕ್ಷರದೇವನು ಕೂಡ ಹರಿಹರನ ಮೇಲ್ಮೆಯನ್ನು ಸ್ಮರಿಸಿ ಕೊಂಡಾಡಿದ್ದಾನೆ ; ಆತನಿಂದ ಸ್ಫೂರ್ತಿ ಪಡೆದಿದ್ದಾನೆ. ರಗಳೆಯಲ್ಲಿಯೇ ಇಡೀ ಕಾವ್ಯವೊಂದನ್ನು ರಚಿಸುವ ಸಾಹಸ ನಡೆಸಿದವ ರಲ್ಲಿ ಹರಿಹರ ಮೊದಲಿಗ. 'ರಗಳೆಯ ಕವಿ' ಎಂಬುದು ಹೆಮ್ಮೆಯ ಹೆಸರೇ ಹೊರತು ತಿರಸ್ಕಾರದ ಹೆಸರಾಗಬೇಕಾಗಿಲ್ಲ. ಚಂಪೂ, ರಗಳೆಗಳಲ್ಲಿಯೇ ಅಲ್ಲದೆ ವಚನ ರಚನೆಯಲ್ಲಿಯೂ ಹರಿಹರ ಗಣ್ಯನಾಗಿದ್ದಾನೆ. ಆತನ ಶಿವಶರಣ ಚರಿತ್ರೆಗಳಲ್ಲಿ ಒಂದು ಅಧ್ಯಾಯವನ್ನು ರಗಳೆಯಲ್ಲಿ ಬರೆದರೆ ಇನ್ನೊಂದು ಅಧ್ಯಾಯವನ್ನು ವಚನದಲ್ಲಿ, ಅಂದರೆ ಸರಳಗದ್ಯದಲ್ಲಿ ಬರೆದಿದ್ದಾನೆ. ಕನ್ನಡದ ಗದ್ಯದ ಬೆಳವಣಿಗೆಯಲ್ಲಿ ಹರಿಹರನ ಪಾತ್ರವೂ ಇದೆ. ತಮಿಳಿನಿಂದ ಶರಣರ ಕಥೆಗಳನ್ನು ಆರಿಸಿಕೊಂಡು ಸ್ವಂತವಾಗಿ ರಚಿಸಿ ಹರಿಹರನು ಸಂಸ್ಕೃತ ಪ್ರಾಕೃತಗಳಿಂದ ಮಾತ್ರವಲ್ಲದೆ ಸೋದರ ದ್ರಾವಿಡ ಭಾಷಾ ಸಾಹಿತ್ಯಗಳಿಂದಲೂ ಕನ್ನಡಿಗರು ಕಲಿಯುವುದಿದೆ ಎಂಬುದನ್ನು ತೋರಿಸಿಕೊಟ್ಟಿದ್ದಾನೆ. ಕನ್ನಡಕ್ಕೆ ಹರಿಹರನ ಕೈಂಕರ್ಯ ಮಹತ್ವಪೂರ್ಣವಾದದ್ದು. ಬಸವ, ಹರಿಹರ, ಕುಮಾರವ್ಯಾಸ, ಪುರಂದರದಾಸ, ತಿರುಮಲಾರ್ಯ, ರತ್ನಾಕರ ವರ್ಣಿ–ಇವರು ತಮ್ಮ ತಮ್ಮ ರೀತಿಗಳಲ್ಲಿ ಪ್ರಭಾವಶಾಲಿಗಳಾದ ಕವಿಗಳೆನ್ನಿಸಿಕೊಂಡು ಇತರರನೇಕರಿಗೆ ಮಾರ್ಗದರ್ಶಕರಾಗಿದ್ದಾರೆ. ಶ್ರೀ ಮುಗಳಿಯವರೂ ಈ ವಿಚಾರವನ್ನು ಗಮನಿಸದೆ ಬಿಟ್ಟಿಲ್ಲ. "ಪಂಪ–ರನ್ನ, ಬಸವ–ಹರಿಹರ, ಕುಮಾರವ್ಯಾಸ–ಪುರಂದರದಾಸ, ತಿರುಮಲಾರ್ಯ–ಷಡಕ್ಷರಿ, ಹೀಗೆ ಕವಿದ್ವಯದ ಹೆಸರಿನಲ್ಲಿ ಯುಗಗಳನ್ನು ಹೆಸರಿಸಿ ಸಾಹಿತ್ಯಿಕ ಹಾಗೂ ಇತರ ಪ್ರಭಾವಗಳನ್ನು ಸೂಚಿಸಬಹುದು"[4] ಎಂದು ಅವರೇ ಅಭಿಪ್ರಾಯಪಟ್ಟಿದ್ದಾರೆ. ಆದರೆ ಅದು ಅಭಿಪ್ರಾಯ ವಾಗಿಯೇ ಉಳಿಯಿತು ; ಕಾರ್ಯರೂಪಕ್ಕೆ ಇಳಿಯಲಿಲ್ಲ. 'ಕುಮಾರವ್ಯಾಸ ಯುಗ'ವೆಂದು ಹೆಸರಿಸಿರುವ ಐದು ಶತಮಾನಗಳಷ್ಟು ದೀರ್ಘ ಅವಧಿಯಲ್ಲಿ ಷಟ್ಪದಿ, ಸಾಂಗತ್ಯ, ತ್ರಿಪದಿ, ಚಂಪು, ಗದ್ಯ, ಮೊದಲಾದ ವಿವಿಧ ಕಾವ್ಯಪ್ರಕಾರಗಳೂ ಬಳಕೆಯಾಗಿವೆ. ರತ್ನಾಕರ ವರ್ಣಿಯ 'ಭರತೇಶ ವೈಭವ'ದಂಥ ಬೃಹತ್ಕೃತಿ ಸಾಂಗತ್ಯದಲ್ಲಿ ರಚಿತ

---

4 ಪುಟ ೪೫.

ವಾದದ್ದು ಈ ಕಾಲದಲ್ಲಿಯೇ. ಇವರೆಲ್ಲ ಕುಮಾರವ್ಯಾಸನ ಪ್ರಭಾವಕ್ಕೊಳಪಟ್ಟವರೆಂದು ಹೇಳುವುದರಲ್ಲಿ ಔಚಿತ್ಯವೇನಿದೆ? ಕುಮಾರವ್ಯಾಸನನ್ನು ಮೆಚ್ಚಿಕೊಳ್ಳುವವರು, ಅವನ ಭಾರತವನ್ನು ಓದಿ, ಓದಿಸಿ ಕೇಳಿ ಆನಂದಿಂದ ಮೈಮರೆಯುವವರು ಇಂದಿಗೂ ಬೇಕಾದ ಹಾಗಿದ್ದಾರೆ. ಆದರೆ ಈ ಕಾಲವನ್ನು ಕುಮಾರವ್ಯಾಸ ಯುಗವೆನ್ನಲಾದೀತೆ? ವಿಭಿನ್ನ ಕಾಲಗಳಲ್ಲಿ ಜನಜೀವನದ ಮೇಲೂ ಕವಿ, ಲೇಖಕರ ಮೇಲೂ ಪ್ರಭಾವ ಬೀರಿದ ತತ್ವ, ಶಕ್ತಿಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಅವಕ್ಕೆ ಕಾರಣಭೂತರಾದ ಪ್ರಧಾನ ಕವಿಗಳ ಹೆಸರುಗಳನ್ನೇ ಒಂದೊಂದು ಕಾಲವಿಭಾಗಕ್ಕೂ ಕೊಡುವುದೇ ಸಮರ್ಪಕ ಮಾರ್ಗ.

ಪಂಪ ಪೂರ್ವಯುಗದ ಕವಿ ಕಾವ್ಯಗಳ ವಿಷಯ ನಮಗೆ ಹೆಚ್ಚು ತಿಳಿಯದು. 'ಕವಿರಾಜಮಾರ್ಗ' ವೊಂದೇ ನಮಗೆ ಲಭಿಸಿರುವ ಆ ಕಾಲದ ಕನ್ನಡ ಗ್ರಂಥ. 'ವಡ್ಡಾರಾಧನೆ'ಯನ್ನೂ ಗ್ರಂಥಕರ್ತರು ಈ ಕಾಲಕ್ಕೇ ಸೇರಿಸಿರುವರಾದರೂ ಹಾಗೆ ನಿರ್ಣಯಿಸಲು ಸಾಕಷ್ಟು ಆಧಾರವಿಲ್ಲ. ಆ ಕಾವ್ಯದಲ್ಲಿ ಕೆಲವು ಪ್ರಾಚೀನ ಶಬ್ದ ರೂಪಗಳಿವೆಯೆಂಬಷ್ಟೇ ಕಾರಣದಿಂದ ಇದರ ಕಾಲವನ್ನು ನಿರ್ಧರಿಸುವುದು ಸಮಂಜಸ ವಾಗದು. ಕವಿಗಳು ತಮ್ಮ ಕೃತಿಗಳಲ್ಲಿ ಹೆಚ್ಚಾಗಿ ಗ್ರಾಂಥಿಕ ರೂಪಗಳನ್ನು ಬಳಸಲು ಇಷ್ಟ ಪಡುತ್ತಿದ್ದಕಾಲ, ಅದು. ಯಾವ ಕಾಲದಲ್ಲಿಯೇ ಆದರೂ ವಿದ್ವಾಂಸರ ಕೃತಿಗಳಲ್ಲಿ ಕೆಲವು ಪ್ರಾಚೀನ ಶಬ್ದಗಳು ಬಳಕೆಯಾಗುವುದುಂಟು. ಶಿವಾಕೋಟ್ಯಾ ಚಾರ್ಯನ ಕೃತಿಯಲ್ಲಿಯೂ ಹಾಗೆಯೇ ಆಗಿರುವ ಸಂಭವವೂ ಉಂಟು. ಅವನು ಪಂಪನ ಸಮಕಾಲೀನನೇ ಇದ್ದರೂ ಇರಬಹುದು. ಈತನ ಕಾಲವಿಚಾರದಲ್ಲಿ ಸಂಶೋಧಕರು ಏಕಾಭಿಪ್ರಾಯಕ್ಕೆ ಬರಲುಸಾಧ್ಯವಾಗಿಲ್ಲ. ಇನ್ನು 'ಕವಿರಾಜಮಾರ್ಗ' ದಲ್ಲಿ ಹೇಳಿರುವ ಪದ್ಯ ಗದ್ಯ ಕವಿಗಳ ಹೆಸರುಗಳು, ಆ ಕಾಲದ ಕನ್ನಡ ಸಾಹಿತ್ಯ ಸಂಪತ್ತನ್ನು ಕುರಿತ ಊಹೆಗಳು ಮುಂತಾದ ವಿಚಾರಗಳನ್ನೆಲ್ಲ ಶ್ರೀಯುತರು ಬಹಳ ಸಮಂಜಸವಾಗಿ ನಿರೂಪಿಸಿರುವರಲ್ಲದೆ 'ಕವಿರಾಜಮಾರ್ಗ'ದ ಕರ್ತನವಿಚಾರವಾಗಿ ನಡೆದಿರುವ ಜಿಜ್ಞಾಸೆಯನ್ನು ವಿವರಿಸಿ ಕೊನೆಯಲ್ಲಿ ತಮ್ಮ ಅಭಿಪ್ರಾಯವನ್ನು 'ಗ್ರಂಥ ರಚನೆ ಮಾತ್ರ ಅರಸನಿಂದ ಆದುದಲ್ಲ' ಎಂದು ಹೇಳಿದ್ದಾರೆ.

ಶ್ರೀಮುಗಳಿಯವರು ತಮ್ಮ ಗ್ರಂಥವನ್ನು ಆರಂಭಿಸುತ್ತ 'ಸಾಮಾನ್ಯವಾಗಿ ಭಾಷೆಯ ಉದಯದೊಡನೆ ಒಂದು ಬಗೆಯ ಸಾಹಿತ್ಯದ ಉದಯವೂ ಆಗುತ್ತದೆ' ಎಂದು ಹೇಳಿದ್ದಾರೆ. ಇದರಲ್ಲಿ 'ಸಾಮಾನ್ಯವಾಗಿ' ಎಂಬ ಚೌಕಾಸಿಯ ಪದವಿದೆ. ವಿಶೇಷ ಸಂದರ್ಭಗಳಲ್ಲಿ ಮಾತ್ರ ಭಾಷೆಯ ಜತೆಯಲ್ಲಿ ಸಾಹಿತ್ಯ ಉದಯಿಸುವುದಿಲ್ಲ ವೆಂದು ಗ್ರಂಥಕರ್ತರ ಅಭಿಪ್ರಾಯವೆ? ಅಂಥ ವಿಶೇಷ ಸಂದರ್ಭಗಳು ಯಾವುವೆಂಬು ದನ್ನು ಇಲ್ಲಿ ವಿವರಿಸಿದ್ದರೆ ಚೆನ್ನಾಗಿತ್ತು. ಆದರೆ ಭಾಷೆ, ಸಾಹಿತ್ಯ, ಎರಡೂ ಏಕ ಕಾಲದಲ್ಲಿ ಹುಟ್ಟುವುವೆಂದು ಭಾವಿಸುವುದು ಸಾಧುವಾದೀತೆ? ಭಾಷೆಯ ಉದಯಕ್ಕೂ ಸಾಹಿತ್ಯದ ಉದಯಕ್ಕೂ ನಡುವೆ ಕಾಲದ ಅಂತರವೇ ಇರುವುದಿಲ್ಲವೆ? ಹೀಗೆ ನಾವು ಯೋಚಿಸುತ್ತಿರುವಂತೆಯೇ ಗ್ರಂಥಕರ್ತರು ಮುಂದುವರಿದು 'ಇಷ್ಟೇ ಯಾಕೆ, ಭಾಷೆಯ

ಉದಯವೆಂದರೆ ಸಾಹಿತ್ಯದ ಉದಯವೇ ಸರಿ' ಎಂದು ಘೋಷಿಸಿದ್ದಾರೆ. ಆದರೆ ಮುಂದೆ ಕನ್ನಡ ಸಾಹಿತ್ಯೋದಯದ ಕಾಲವನ್ನು ಕುರಿತು ವಿಚಾರ ಮಾಡುತ್ತ 'ಭಾಷೆ ಯಿದ್ದ ಮಾತ್ರಕ್ಕೆ ಗ್ರಂಥಸ್ಥವಾದ ಸಾಹಿತ್ಯವಿರಲೇಬೇಕೆಂದಿಲ್ಲ' ಎಂದಿದ್ದಾರೆ, ನಿಜ. ಗ್ರಂಥಸ್ಥವಾಗಬೇಕಾದರೆ ಭಾಷೆಗೆ ಲಿಪಿ ಇರಬೇಕು. ಲಿಪಿಯಅಗತ್ಯ ವಿರದ ಸಾಹಿತ್ಯ ವೆಂದರೆ ಶ್ರುತಿಯಂತೆ ವ್ಯಕ್ತಿಯಿಂದ ವ್ಯಕ್ತಿಗೆ ಹಬ್ಬುವ ಜನಪದ ಸಾಹಿತ್ಯ. ಬಹುಶಃ ಇದನ್ನು ಮನಸ್ಸಿನಲ್ಲಿಟ್ಟುಕೊಂಡೇ ಅವರು ಗ್ರಂಥದ ಮೊದಲ ವಾಕ್ಯದಲ್ಲಿ 'ಒಂದು ಬಗೆಯ ಸಾಹಿತ್ಯ' ಎಂದು ವಿಶೇಷಿಸಿ ಹೇಳಿರಬಹುದು. ಆದರೆ ಜನಪದ ಸಾಹಿತ್ಯವೇ ಆದರೂ ಭಾಷೆಯ ಜೊತೆಯಲ್ಲಿಯೇ ಹುಟ್ಟುವುದು ಸಾಧ್ಯವೇ? ಇನ್ನೂ ಕೊಂಚ ಮುಂದೆ ಹೋದರೆ ಗ್ರಂಥಕರ್ತರು "ವ್ಯವಹಾರದಲ್ಲಿದ್ದ ಮಾತ್ರಕ್ಕೆ ಯಾವುದೊಂದು ಭಾಷೆಗೆ ಸಾಹಿತ್ಯವಿದ್ದೇತೀರಬೇಕೆಂದಿಲ್ಲ" ಎಂದು ತಿಳಿಯ ಹೇಳಿದ್ದಾರೆ. ಅಂದರೆ ಮೊದಲು ಭಾಷೆ ಬಳಕೆಗೆ ಬಂದು ಕೊಂಚಕಾಲವಾದ ಮೇಲೆ ಸಾಹಿತ್ಯ ಹುಟ್ಟುವುದೆಂದು ಹೇಳಿದ ಹಾಗಾಯಿತು. ಈ ಎರಡು ವಿರುದ್ಧಾಭಿಪ್ರಾಯಗಳಿಗೆ ಸಾಮಂಜಸ್ಯವನ್ನು ಕಲ್ಪಿಸುವುದು ಕಷ್ಟ. ಭಾಷೆ, ಸಾಹಿತ್ಯ, ಗ್ರಂಥಸ್ಥವಾದ ಸಾಹಿತ್ಯ, ಇವೆಲ್ಲ ಒಟ್ಟಿಗೆ ಹುಟ್ಟುವುವೆ? ಗ್ರಂಥಸ್ಥವಾದ ಸಾಹಿತ್ಯವಿಲ್ಲದ ಭಾಷೆಗಳು ಜಗತ್ತಿನಲ್ಲಿರುವುದು ಸಾಧ್ಯ. ಕೆಲವು ಭಾಷೆಗಳಿಗೆ ಈಗಲೂ ಸ್ವಂತವಾದ ಲಿಪಿಯೇ ಇಲ್ಲ. ಅಂಥವುಗಳಲ್ಲಿ ಗ್ರಂಥ ರಚನೆಗೆ ತಡವಾಗುತ್ತಿರುತ್ತದೆ. 'ಭಾಷೆಯ ಉದಯವೆಂದರೆ ಸಾಹಿತ್ಯದ ಉದಯವೇ ಸರಿ' ಎಂದಾಗ ಸಾಹಿತ್ಯ ಸೃಷ್ಟಿಯಾದ ಭಾಷೆಯೇ ಮೌಲಿಕವಾದ ಭಾಷೆ, ಅದಿಲ್ಲದ ಭಾಷೆ ಇದ್ದಲೆಕ್ಕವೇ ಅಲ್ಲವೆಂದು ಗ್ರಂಥಕರ್ತರ ಅಭಿಪ್ರಾಯವೆ? ಇನ್ನೊಂದು ಕಡೆ ಶ್ರೀಮುಗಳಿಯವರು 'ಒಟ್ಟಿನಲ್ಲಿ ಬಾಹ್ಯಜೀವನದ ವ್ಯವಸ್ಥೆಯ ಗುರುತಾದ ನಾಗರಿಕತೆ, ಆಂತರಿಕ ಜೀವನದ ಗುರುತಾದ ಸಂಸ್ಕೃತಿ–ರಸಿಕತೆಗಳು ಒಂದು ಮಟ್ಟಕ್ಕೆ ಬಂದಾಗ ಮಾತ್ರ ಸಾಹಿತ್ಯ ಉದಯವಾಗುತ್ತದೆ, ಪರಂಪರೆಯಾಗಿ ಮುನ್ನಡೆಯುತ್ತದೆ'[5] ಎಂದು ಹೇಳಿ ಭಾಷೆಯ ಉದಯಕ್ಕೂ ಸಾಹಿತ್ಯದ ಉದಯಕ್ಕೂ ಮಧ್ಯೆ ಅಂತರ ವಿರುವುದು ಸಹಜವೆಂಬುದನ್ನು ಖಚಿತಪಡಿಸಿದ್ದಾರೆ. ಈ ವಿಚಾರವನ್ನು ಇನ್ನು ಕೊಂಚ ವಿವರವಾಗಿ ಬರೆದು ಪರಸ್ಪರ ಅವಿರೋಧವಾದ ಅಭಿಪ್ರಾಯವನ್ನು ಕೊಟ್ಟಿದ್ದರೆ ಅಭ್ಯಾಸಿ ಗಳಾದ ಓದುಗರಿಗೆ ಈ ಭಾಗ ಹೆಚ್ಚು ಸ್ಪಷ್ಟವೂ ಉಪಯುಕ್ತವೂ ಆಗುತ್ತಿತ್ತೆಂಬ ವಿಚಾರದಲ್ಲಿ ಸಂಶಯವಿಲ್ಲ.

ಪಂಪ ಕವಿಯು ಆದಿಪುರಾಣ, ವಿಕ್ರಮಾರ್ಜುನವಿಜಯಗಳೆರಡನ್ನೂ ಒಂದೇ ವರ್ಷದಲ್ಲಿ ಬರೆದು ಮುಗಿಸಿರಬಹುದೆಂಬ ಹೇಳಿಕೆಯನ್ನು ಸಮರ್ಥಿಸುತ್ತ ಗ್ರಂಥ ಕರ್ತರು 'ಆದರೆ ಅಚಿಂತ್ಯ ಪ್ರತಿಭೆಯ ಆಳವನ್ನು ಯಾರು ಅರಿಯಬಲ್ಲರು?'[6] ಎಂದು

[5] ಪುಟ ೪.

[6] ಪುಟ ೯೭.

ಪ್ರಶ್ನಿಸಿದ್ದಾರೆ. ಆದರೆ ಅದೇ ಉಸಿರಿನಲ್ಲಿಯೇ 'ಆದಿಪುರಾಣದಲ್ಲಿ ತೋರಿದ ಧರ್ಮ ದೃಷ್ಟಿ, ಆದಿನಾಥನ ಜನ್ಮಯಾತ್ರೆಯ ಸಮ್ಯಕ್ತ್ವ ಕಲ್ಪನೆ, ತಾತ್ವಿಕತೆಗಳು ನಾಲ್ವತ್ತರ ವಯಸ್ಸಿಗೆ ಸಾಮಾನ್ಯವಾಗಿ ಸಾಧ್ಯವೆ?'[7] ಎಂದು ಕೇಳಿದ್ದಾರೆ. ಅದೇ ಅಚಿಂತ್ಯ ಪ್ರತಿಭೆಯ ಅರಿಯಬಾರದ ಆಳ! ಅದಕ್ಕೆ ಕವಿಯ ವಯಸ್ಸು ಪ್ರಧಾನವಲ್ಲ.

ಪಂಪನು ಭಾರತಕಥೆಯಲ್ಲಿ ಮಾಡಿಕೊಂಡ ವ್ಯತ್ಯಾಸಗಳನ್ನು ಪ್ರಸ್ತಾಪಿಸುತ್ತ ಮಾನ್ಯ ಗ್ರಂಥಕರ್ತರು 'ಅರಿಕೇಸರಿ–ಅರ್ಜುನರ ಅಭೇದದಿಂದಲೂ ಕಥಾನಾಯಕನ ವ್ಯತ್ಯಾಸದಿಂದಲೂ ಆಭಾಸಗಳೂ ಅನೌಚಿತ್ಯಗಳೂ ಉಂಟಾಗಿವೆ.'[8] ಎಂದು ಹೇಳಿ 'ಆದರೆ ಇಬ್ಬರು ಹೆಂಡಂದಿರ ನಡುವೆ ಸಿಕ್ಕುಗೊಂಡಲಗೊಂಡ ಗಂಡನಂತೆ ಅರ್ಜುನ ಮತ್ತು ಪಂಪ ಇವರ ಸ್ಥಿತಿಯಾಗಿದೆ'[9] ಎಂದು ಸೂತ್ರಪ್ರಾಯವಾದ ಟೀಕೆ ಮಾಡಿರುವುದು ಸ್ವಾರಸ್ಯವಾಗಿದೆ. ರತ್ನತ್ರಯರ ಕಾವ್ಯಪರಿಚಯ, ವಿಮರ್ಶೆಗಳು ಸಾಕಷ್ಟು ವಿಸ್ತಾರವಾಗಿ ನಡೆದಿವೆ.

ಕನ್ನಡ 'ಪಂಚತಂತ್ರ' ಕರ್ತನಾದ ದುರ್ಗಸಿಂಹ ಕವಿಯ ವಿಚಾರಕ್ಕೆ ತೊಡಗಿ ಆತನ ಗ್ರಂಥಕ್ಕೆ ಆಕರವಾದ ವಸುಭಾಗಭಟ್ಟನ ಕೃತಿಯು 'ಅಂಶತಃ ಆದರೂ ಜೈನಧರ್ಮ ಪರವಾಗಿತ್ತೆಂದು ತಿಳಿಯಲು ಸಾಕಷ್ಟು ಅವಕಾಶವಿದೆ'[10] ಎಂದು ಗ್ರಂಥ ಕರ್ತರು ಹೇಳಿದ್ದಾರೆ. ಆದರೆ ಅವರೇ ಹೇಳಿರುವಂತೆ ವಸುಭಾಗಭಟ್ಟನ ಕೃತಿ ಉಪಲಬ್ಧವಿಲ್ಲ. ಆದ್ದರಿಂದ ಆ ಕವಿ ಜೈನನೆ, ಅಲ್ಲವೆ, ಅವನಕೃತಿ ಜೈನಮತ ಪಕ್ಷಪಾತ ದಿಂದ ಕೂಡಿತ್ತೆ, ಇಲ್ಲವೆ, ಎಂಬುದು ಸಂಪೂರ್ಣವಾಗಿ ಓದುಗರ ಊಹೆಗೆ ಬಿಟ್ಟ ವಿಚಾರ. ದುರ್ಗಸಿಂಹ ಬ್ರಾಹ್ಮಣ. ಅವನ ಆಶ್ರಯದಾತನೂ ಜೈನನಲ್ಲ. ಆದರೂ ದುರ್ಗಸಿಂಹನ ಕೃತಿಯಲ್ಲಿ ಜೈನಧರ್ಮದ ಪ್ರಭಾವ ಕಾಣುತ್ತಿದೆ. ಆತನು ಸಂಪೂರ್ಣವಾಗಿ ಮೂಲ ಗ್ರಂಥವನ್ನು ಅನುಸರಿಸಿ ಬರೆದನೆ, ಅಥವಾ ಕಥಾವಸ್ತುವನ್ನು ಮೂಲದಿಂದ ಆಯ್ದು ಕೊಂಡು ತನಗೆ ಸರಿತೋರಿದಂತೆ ಅದನ್ನು ಸ್ವತಂತ್ರವಾಗಿ ರಚಿಸಿದನೆ, ಎಂಬುದನ್ನೂ ನಾವು ನಿಷ್ಕರ್ಷೆಯಾಗಿ ತಿಳಿದುಕೊಳ್ಳಲು ಸಾಧ್ಯವಿಲ್ಲ. ವಸುಭಾಗಭಟ್ಟ ಕೃತಿಯನ್ನು 'ಪೊಸತಾಗಿರೆ ವಿರಚಿಸುವೆಂ' ಎಂದು ದುರ್ಗಸಿಂಹ ಹೇಳಿಕೊಂಡಿರುವುದುಂಟು. ಆದರೆ ಕನ್ನಡಕ್ಕೆ ಈ 'ಪಂಚತಂತ್ರ' ಹೊಸತು ಎಂಬ ಭಾವವಿದ್ದರೂ ಇರಬಹುದು, ಅಥವಾ ಇದು ಸಕ್ರಮವಾದ ಅನುವಾದವಲ್ಲವೆಂಬ ಭಾವನೆಯೂ ಇರಬಹುದು. ಅದು ಹೇಗೇ ಇದ್ದರೂ ದುರ್ಗಸಿಂಹನು ಪಂಪಕವಿಯ ಪ್ರಭಾವಕ್ಕೆ ಒಳಗಾಗಿರುವನೆಂಬ ವಿಷಯದಲ್ಲಿ ಏನೇನೂ ಸಂಶಯವಿಲ್ಲ. ಪಂಪಭಾರತದಿಂದ ದುರ್ಗಸಿಂಹನು ಕೆಲವು ಪದಪುಂಜಗಳನ್ನೂ

---

7 ಅದೇ

8 ಪುಟ ೯೯

9 ಪುಟ ೧೦೦

10 ಪುಟ ೧೩೬

ಪದ್ಯಗಳನ್ನೂ ಧಾರಾಳವಾಗಿ, ನಿಸ್ಸಂಕೋಚವಾಗಿ, ಬಳಸಿಕೊಂಡಿದ್ದಾನೆ. ಗ್ರಂಥದ ಅವತರಣಿಕೆಯಲ್ಲಿ 'ಪಂಪನ ಗೀರ್ಗುಂಫದ ಪೆಂಪ'ನ್ನು ಹೊಗಳಿದ್ದಾನೆ. ದುರ್ಗಸಿಂಹನಿಗೆ ಅನ್ಯಮತದವನೆಂಬ ಅಸಹನೆಯಿಲ್ಲ. ಹಿರಿಯ ಕವಿಗಳ ಪ್ರತಿಭೆ ಪಾಂಡಿತ್ಯಗಳನ್ನು ಮನಗಂಡು ಮೆಚ್ಚಿ ಹೊಗಳಿದ್ದಾನೆ. ಪಂಪನ ಆದಿಪುರಾಣ, ಭಾರತಗಳನ್ನು ಓದಿ ಮೆಚ್ಚಿದ ದುರ್ಗಸಿಂಹ ಜೀವದಯೆಯನ್ನು ಮೆಚ್ಚಿಕೊಂಡು ತನ್ನ ಕಾವ್ಯದಲ್ಲಿಯೂ ಅದನ್ನು ಪ್ರಸ್ತಾಪಿಸಿರುವುದರಲ್ಲಿ ಆಶ್ಚರ್ಯವೇನೂ ಇಲ್ಲ. 'ಒಳ್ಳೆಯ ಅನುವಾದಕನ ವ್ಯುತ್ಪತ್ತಿ–ಪ್ರತಿಭೆಗಳು ದುರ್ಗಸಿಂಹನಲ್ಲಿವೆ'[11] ಎಂದು ಒಮ್ಮೆ ಹೇಳಿ, 'ಕನ್ನಡ ಅನುವಾದಕಾರರಲ್ಲಿ ದುರ್ಗಸಿಂಹನು ಮಧ್ಯಮ ತರಗತಿಯ ಮನ್ನಣೆಯ ಸ್ಥಾನಕ್ಕೆ ತಕ್ಕವನು'[12] ಎಂದು ಇನ್ನೊಂದೆಡೆಯಲ್ಲಿ ವಿಮರ್ಶಿಸಿದ್ದಾರೆ.

ಮೂಲಗ್ರಂಥವಾದ ವಸುಭಾಗಭಟ್ಟನ ಪಂಚತಂತ್ರವೇ ನಮಗೆ ಲಭಿಸದಿರುವಾಗ ಅದರ ಕನ್ನಡ ಅನುವಾದ ಉತ್ತಮವಾದುದೆಂದಾಗಲಿ, ಅಲ್ಲವೆಂದಾಗಲಿ ಸಾಧಿಸಲು ನಮಗೇನು ಆಧಾರವಿದೆ? ನಾಗವರ್ಮನಿಗಿದ್ದ 'ಶಕ್ತಿವಿಶೇಷವಾಗಲಿ ಮೇಲಾದ ಕವಿಯ ಸ್ವತಂತ್ರ ಸ್ಫೂರ್ತಿಯಾಗಲಿ'[13] ದುರ್ಗಸಿಂಹನಲ್ಲಿಲ್ಲವೆನ್ನಬೇಕೆಂಬ ಗ್ರಂಥಕರ್ತರ ಹೇಳಿಕೆಯೂ ಸಮಂಜಸವಾಗದು. ನಾಗವರ್ಮ ಆರಿಸಿಕೊಂಡದ್ದು ಲೋಕಪ್ರಸಿದ್ಧನಾದ ಬಾಣಭಟ್ಟನ ಕಾದಂಬರಿ. ಅದು ಅತ್ಯಪೂರ್ವವಾದ ಪ್ರೇಮ ಕಥಾನಕ. ಆ ಪ್ರೌಢವಾದ ಸಂಸ್ಕೃತ ಗದ್ಯಕಾವ್ಯ ರತ್ನವನ್ನು ನಾಗವರ್ಮ ಸಂಸ್ಕೃತ ಪ್ರಾಬಲ್ಯವುಳ್ಳ ಶೈಲಿಯಲ್ಲಿಯೇ ಗದ್ಯಪದ್ಯಾತ್ಮಕವಾಗಿ ರಚಿಸಿರುವುದು ಪಂಡಿತರ ಪ್ರೀತಿಗೆ ಪಾತ್ರವಾಗುವುದು ಸಹಜವೇ ಆಗಿದೆ. ಆದರೆ ದುರ್ಗಸಿಂಹ ನೀತಿಬೋಧನೆಗಾಗಿ ಪಶುಪಕ್ಷಿ ಮೃಗಕೀಟಕಾದಿಗಳ ಕಥೆಗಳನ್ನು ಬರೆದಿದ್ದಾನೆ. ನೀತ್ಯುಪದೇಶವೇ ಅವನ ಧ್ಯೇಯ. ಆ ಧ್ಯೇಯ ಸಾಧನೆಗೆ ತಕ್ಕ ಭಾಷೆಯನ್ನು ಅವನು ಅಳವಡಿಸಿಕೊಂಡು ಗ್ರಂಥ ರಚನೆಮಾಡಿ ಕೃತಕೃತ್ಯನಾಗಿರುವನೆಂದೇ ನಮಗೆ ತೋರುತ್ತದೆ. ಅಲ್ಲಲ್ಲಿ ಬರುವ ಕೆಲವು ಪ್ರಾಣಿಗಳ ವೀರ ವಿಹಾರ ವರ್ಣನೆಗಳನ್ನು ಓದಿದಾಗ ಅವುಗಳಲ್ಲಿ ದುರ್ಗಸಿಂಹನ ವ್ಯಂಗ್ಯ ವೈಭವವೂ ಪ್ರಕಟವಾಗಿರಬಹುದೆಂಬ ಸಂಶಯ ಬರುತ್ತದೆ. ಬಯಸಿದಾಗ ದುರ್ಗಸಿಂಹ ಪ್ರೌಢವಾದ ಸಂಸ್ಕೃತ ಸಮಾಸ ಪುಂಜ ಪರಿಶೋಭಿತ ವಿದಗ್ಧ ಭಾಷೆಯನ್ನೂ ಬಳಸಬಲ್ಲನೆಂಬುದರಲ್ಲಿ ಸಂಶಯವಿಲ್ಲ. ಅದಕ್ಕಿಂತ ಮಿಗಿಲಾಗಿ ದುರ್ಗಸಿಂಹನ ಪಂಚತಂತ್ರದಲ್ಲಿ ಬರುವ ಕನ್ನಡ ಗದ್ಯದ ಹಿರಿಮೆ ಗಮನಾರ್ಹವಾದದ್ದು. 'ಪಂಚತಂತ್ರ' ಚಂಪೂಕಾವ್ಯವೇ ಆದರೂ ಅದರಲ್ಲಿ ದುರ್ಗಸಿಂಹ ಸರಳವೂ ಸುಂದರವೂ ಆದ ಗದ್ಯಶೈಲಿಯನ್ನು ಮೆರೆದಿದ್ದಾನೆ.

---

11 ಪುಟ ೧೨೭

12 ಅದೇ

13 ಅದೇ

ಬಸವಯುಗದ ಸಾಹಿತ್ಯ ವಿವೇಚನೆ ಮಾಡುತ್ತ ನಮ್ಮ ಗ್ರಂಥಕಾರರು 'ಒಟ್ಟಿನಲ್ಲಿ ವಚನಗಳಿಗೆ ಕೃತಿಗಿಂತ ಶ್ರುತಿಯ ಲಕ್ಷಣವಿದೆ. ಮೂಲದಲ್ಲಿ ಬರೆದರು ಎನ್ನುವುದಕ್ಕೆ ಒರೆದರು ಎಂದರೆ ಲೇಸು'[14] ಎಂದು ಅಭಿಪ್ರಾಯ ಪಟ್ಟಿರುವುದು ಬಹಳ ಸಮಂಜಸವಾಗಿದೆ. ಬಸವಾದಿ ವಚನಕಾರರು ಧರ್ಮ ಪ್ರಚಾರಕ್ಕೆ ಕಂಕಣ ಕಟ್ಟಿಕೊಂಡವರು ; ನೀತಿ ಪ್ರಚಾರ ತತ್ತ್ವೋಪದೇಶ, ಆ ಮೂಲಕ ಸಮಾಜ ಸುಧಾರಣೆಗೆ ದೀಕ್ಷೆ ವಹಿಸಿದವರು. ಅವರು ತಮ್ಮ ಉಪದೇಶಗಳನ್ನು ಆರಾಮವಾಗಿ ಕುಳಿತು ಬರೆಯಲು ಅವರಿಗೆ ವಿರಾಮವಿರಲಿಲ್ಲ. ಅನೇಕ ಉತ್ತಮ ವಚನಗಳ ಜೀವಂತ ಭಾಷೆಯನ್ನು ಗಮನಿಸಿದರೆ ಅವು ಸಮಯ ಸ್ಫೂರ್ತಿಯಿಂದ, ಯಾವುದೊ ಧಾರ್ಮಿಕ ಆವೇಶ ಭರದಲ್ಲಿ ನುಡಿದ ಮಾತುಗಳಂತೆ ತೋರುವುವೇ ಹೊರತು ಆಲೋಚನೆ ಮಾಡಿ ಬರೆದು ತಿದ್ದಿ ಸಾವಕಾಶವಾಗಿ ಸಿದ್ಧಪಡಿಸಿದ ಕವಿ ಕೃತಿಗಳಂತೆ ತೋರುವುದಿಲ್ಲ. ವಚನಗಳು ಬಹುತೇಕ ಆಶು ಕವಿತೆಗಳು. 'ವಚನ' ಎಂಬ ಸಂಸ್ಕೃತ ಮಾತಿಗೆ 'ಹೇಳುವುದು' ಎಂದೇ ಅರ್ಥ. 'ಪ್ರವಚನ'' ನಿರ್ವಚನ', ಎಂಬ ಮಾತುಗಳನ್ನೂ ಗಮನಿಸಬಹುದು. ವಚನಗಳನ್ನು ಶರಣರು ಲೋಕೋಪದೇಶಕ್ಕಾಗಿ ಹೇಳಿದಾಗ ಅವುಗಳನ್ನು ಭಕ್ತಿ ಶ್ರದ್ಧೆಗಳಿಂದ ಆಲಿಸಿದ ಭಕ್ತ ಶ್ರೋತೃಗಳು ಆಮೇಲೆ ನೆನಪಿನಿಂದ ಬರೆದಿಟ್ಟಿರಬೇಕು. ಕೊಂಚಕಾಲವಾದ ಮೇಲೆ ಅವುಗಳನ್ನು ಪ್ರತಿಪಾದಿಸಿದ ವಿಷಯಾನುಗುಣವಾಗಿ ವಿಂಗಡಿಸುವ ಕೆಲಸ ನಡೆದು 'ವಚನ ಸಾಹಿತ್ಯ'ದ ಸೃಷ್ಟಿ ಆಯಿತೆಂದು ತಿಳಿದರೆ ತಪ್ಪಾಗಲಾರದು. ಶರಣರು ನುಡಿದದ್ದು ಕಾವ್ಯವಾಯಿತು ! ಅಪ್ರಯತ್ನವಾಗಿ, ಭಗವತ್ಪ್ರೇರಣೆಯಿಂದ ಮೂಡಿಬಂದ ವಚನಗಳು ಆ ಕಾಲದ ಆಡು ಮಾತಿಗೆ ಬಹಳ ಹತ್ತಿರವಾಗಿ ಇದ್ದಿರಬೇಕು. ಏಕೆಂದರೆ ಆ ಕಾಲಕ್ಕೆ ಅಕ್ಷರ ಬಲ್ಲವರು ನಮ್ಮ ನಾಡಿನಲ್ಲಿ ಕಡಿಮೆಯೇ. ಜನಕ್ಕೆ ತಿಳಿಯಬೇಕಾದುದನ್ನು ಅವರಿಗೆ ಕೇಳುವ ಹಾಗೆ, ಸುಲಭವಾಗಿ ತಿಳಿಯುವ ಹಾಗೆ, ಹೇಳ ಬೇಕಾಗಿತ್ತು. ಪ್ರಚಾರ ದೀಕ್ಷೆಕೊಟ್ಟವರು ಬಹುಸಂಖ್ಯೆಯ ಶ್ರೋತೃಗಳಿಗೆ ಸುಲಭವಾಗಿ ಅರ್ಥವಾಗದ ಪಂಡಿತ ಭಾಷೆಯಲ್ಲಿ ಹೇಳಿದರೆ ಯಾವ ಪುರುಷಾರ್ಥ ಸಾಧನೆಯಾಗುತ್ತದೆ? ಆದ್ದರಿಂದ ವೀರಶೈವ ವಚನ ಕಾರರಿಗೆ ನಿಜವಾಗಿ 'ಹಲಗೆ ಬಳಪವ ಹಿಡಿಯದ ಅಗ್ಗಳಿಕೆ' ನೂರಕ್ಕೆ ನೂರರಷ್ಟು ಸಲ್ಲುವುದೆಂದೇ ನಮ್ಮ ಅಭಿಪ್ರಾಯ. ಅವರು ನುಡಿದದ್ದು ಕವಿತೆ.

ಶ್ರೀಮುಗುಳಿಯವರು ಕನ್ನಡ ಪ್ರಧಾನ ಕವಿಗಳ ಕೃತಿಗಳ ಪರಿಚಯ ಮಾಡಿಸಲು ಪ್ರಯತ್ನಿಸಿದ್ದಾರಲ್ಲದೆ ಆದ ಮಟ್ಟಿಗೂ ಆ ಕೃತಿಗಳ ಮೌಲ್ಯ ನಿರ್ಣಯವನ್ನೂ ಮಾಡಿದ್ದಾರೆ. ಆದರೆ ತಮ್ಮ ಆ ನಿರ್ಣಯಗಳನ್ನು ಆದಷ್ಟು ನೇರವಾದ ಭಾಷೆಯಲ್ಲಿ ತಿಳಿಸಿದ್ದರೆ ಬಹಳ ಚನ್ನಾಗಿರುತ್ತಿತ್ತು. ನುರಿತ ವಿಮರ್ಶಕರೂ ಅನುಭವಿ ಪ್ರಾಧ್ಯಾಪಕರೂ ವಿದ್ವಾಂಸರೂ ಆದ ಲೇಖಕರ ಅಭಿಪ್ರಾಯವನ್ನು ತಿಳಿಯುವ ಕುತೂಹಲ

---

14 ಪುಟ ೧೭೬

ಎಲ್ಲ ಓದುಗರಿಗೂ ಇರುವುದು ಸಹಜವಾಗಿದೆ. 'ಪಾಠ ಹೇಳುವ ಅಧ್ಯಾಪಕರಿಗೂ ಕೇಳುವ ವಿದ್ಯಾರ್ಥಿಗಳಿಗೂ' ಇದು ಕೇವಲ ಕುತೂಹಲ ಮಾತ್ರವಲ್ಲದೆ ತೀವ್ರ ಅಪೇಕ್ಷೆಯೇ ಆಗಿರುತ್ತದೆ. ಅಂಥವರಿಗೆ ಉಪಯೋಗವಾಗಲೆಂಬ ಆಶಯದಿಂದಲೇ ಈ ಗ್ರಂಥನಿರ್ಮಾಣ ನಡೆದಿದೆ. ಆದರೆ ಅನೇಕ ಸಂದರ್ಭಗಳಲ್ಲಿ ಶ್ರೀ ಮುಗಳಿಯವರು ತಮ್ಮ ನಿಶ್ಚಿತಾಭಿಪ್ರಾಯಗಳನ್ನು ಸ್ಪಷ್ಟೋಕ್ತಿಯಿಂದ ಹೇಳದೆ ಒಗಟೆಗಳಂತಹ ಮಾತು ಗಳಲ್ಲಿ ಹೇಳಿದ್ದಾರೆ. ಕುಮಾರವ್ಯಾಸ ಭಾರತದ ಕೃಷ್ಣಪಾತ್ರವನ್ನು ಕುರಿತು ಶ್ರೀಯುತರು ಹೇಳಿರುವ ಈ ಮಾತನ್ನು ಗಮನಿಸಿ : "ಅಂತೂ ಸ್ಥೂಲವಾದ ಇಲ್ಲವೆ ಶುಷ್ಕತರ್ಕದಿಂದ ಪರಿಮಿತವಾದ ಮನಸ್ಸಿಗೆ ಕೃಷ್ಣಪಾತ್ರ ವಿರೋಧಗಳ ಕಗ್ಗಂಟು; ಸೂಕ್ಷ್ಮವಾದ ತಿಳಿವಳಿಕೆಯುಳ್ಳ ಇಲ್ಲವೆ ಭಕ್ತಿಪ್ರವಣವಾದ ಚಿತ್ತಕ್ಕೆ ಅದು ಅರ್ಥವಾದರೂ ಆಗದ ಒಗಟು."[15] ಒಗಟು ಬಿಡಿಸಲು ಆಗದವರಿಗೆ ಅದು ಕಗ್ಗಂಟೇ ಆಗುವುದಲ್ಲವೆ? ಮುಗಳಿಯವರ ಈ ವಿಮರ್ಶಾವಾಕ್ಯ ನಿಜವಾಗಿಯೂ ಒಂದು ಹೊಸ ಒಗಟೆನಂತೆ ತೋರುತ್ತದೆ. 'ಅದು ಉದ್ದಾಮಕಾವ್ಯ. ಆದರೆ ಉನ್ನತಕಾವ್ಯವಲ್ಲ' ಎಂದು ಷಡಕ್ಷರ ದೇವನ ರಾಜಶೇಖರ ವಿಲಾಸವನ್ನು ಕುರಿತು ಹೇಳುವಾಗ ಗ್ರಂಥಕರ್ತರ ಚಿತ್ತದಲ್ಲಿ 'ಉದ್ದಾಮ' 'ಉನ್ನತ' ಎಂಬ ಮಾತುಗಳಿಗೆ ಏನು ವಿವರಣೆಯಿತ್ತೋ ನಮಗೆ ತಿಳಿಯುವುದಿಲ್ಲ. 'ಶಬರಶಂಕರವಿಲಾಸವು ಮಧ್ಯಮಗುಣದ ಮಧ್ಯಮಗಾತ್ರದ ವಿದಗ್ಧ ಕಾವ್ಯ' ಎಂಬ ಸೂತ್ರಪ್ರಾಯವಾದ ವಾಕ್ಯವೊಂದಿದೆ. ಆ ಕಾವ್ಯ ಮಧ್ಯಮಗಾತ್ರದ್ದೆನ್ನು ವುದು ಸರಿ. ಉತ್ತಮ ಮಧ್ಯಮಾಧಮಗಳೆಂಬ ಗುಣ ತಾರತಮ್ಯಗಳಿರುವುದೂ ನಿಜವೇ. ಆದರೆ ಅದನ್ನು ನಿರ್ಣಯಮಾಡುವ ಅಳತೆಗೋಲು ಯಾವುದೆಂಬುದನ್ನು ಗ್ರಂಥಕರ್ತರು ತಿಳಿಯ ಹೇಳಬೇಕು. ಅದು ಮಧ್ಯಮಗುಣದಾದರೂ 'ವಿದಗ್ಧಕಾವ್ಯ' ವಾಗಿದೆ! ವಿದಗ್ಧತೆ ಕಾವ್ಯದ ಉತ್ತಮಿಕೆಗೆ ಕಂಟಕವೆನಿಸಬಹುದೆ? ಈಗ ಕಂಡಹಾಗೆ ಉದ್ದಾಮಕಾವ್ಯ, ಉನ್ನತಕಾವ್ಯ, ವಿದಗ್ಧಕಾವ್ಯ, ಮಧ್ಯಮಗುಣದ ಕಾವ್ಯ ಎಂಬ ನಾಲ್ಕು ಅಂತಸ್ತುಗಳನ್ನು ಹೇಳಿದಂತಾಯಿತು. 'ಲಕ್ಷ್ಮೀಶ ಮಹಾಕವಿಯಾದರೂ ಅವನ ಜೈಮಿನಿ ಭಾರತವು ಅಂಶದಲ್ಲಿ ಮಹತ್ತಾಗಿದೆ, ಸಮಗ್ರದಲ್ಲಿ ಮಹಾಕೃತಿಯಾಗಿಲ್ಲ' ಎಂದಾಗ ಇದನ್ನು ಓದಿದ ಸಾಮಾನ್ಯ ವಿದ್ಯಾರ್ಥಿ ವಾಚಕನಿಗೆ ದಿಗ್ಭ್ರಮೆಯಾದರೆ ಆಶ್ಚರ್ಯವೇನಿದೆ? ಮೊದಲನೆಯದಾಗಿ ಲಕ್ಷ್ಮೀಶನು ಮಹಾಕವಿಯೆಂದು ಹೇಳಿ ಆಮೇಲೆ ಅವನ ಕೃತಿ ಅಂಶದಲ್ಲಿ ಮಹತ್ತಾಗಿದೆಯೆಂದು ಸವರಣೆ ಮಾಡಿದ್ದಾರೆ. ಲಕ್ಷ್ಮೀಶನು ಮಹಾಕವಿಯೆಂದು ನಿರ್ಣಯಿಸುವುದಕ್ಕೆ ಅವನ ಜೈಮಿನಿ ಭಾರತವಲ್ಲದೆ ಬೇರಾವ ಆಧಾರವೂ ಇದ್ದಂತೆ ನಮಗೆ ತಿಳಿಯದು. ಆ ಕಾವ್ಯದ ಆಧಾರದಿಂದಲೇ ಲಕ್ಷ್ಮೀಶನ ಹಿರಿಮೆ ಕಿರಿಮೆಗಳನ್ನು ನಾವು ನಿರ್ಧರಿಸಬೇಕು. ಅದು ಅಂಶದಲ್ಲಿ ಮಹತ್ತಾಗಿರುವುದರಿಂದಲೇ ಅವನು ಮಹಾಕವಿಯೆನಿಸಿದನೆಂದು ತಿಳಿಯೋಣವೆ? ಆದರೆ

15 ಪುಟ ೨೬೮

ಜೈಮಿನಿಭಾರತ ಸಮಗ್ರದಲ್ಲಿ ಮಹಾಕೃತಿಯಾಗಿಲ್ಲವೆಂದು ಗ್ರಂಥಕರ್ತರು ಖಚಿತಪಡಿಸಿದ್ದಾರೆ. ಎಂಥ ಮಹಾಕವಿಯೇ ಆದರೂ ವಿಸ್ತಾರವಾದ ಕೃತಿರಚನೆ ಮಾಡುವಾಗ ಕೆಲವೆಡೆಗಳಲ್ಲಿ ಉತ್ತಮಿಕೆಯಿಲ್ಲದಿರಬಹುದು. 'ಹೋಮರನು ಕೂಡ ತೂಕಡಿಸುತ್ತಾನೆ' ಎಂಬ ಗಾದೆ ಎಲ್ಲರಿಗೂ ಪರಿಚಿತವಾದದ್ದೇ. ಕೆಲವೆಡೆ ತೂಕಡಿಸಿದರೂ ಹೋಮರ್ ಮಹಾಕವಿಯೆಂಬ ವಿಷಯದಲ್ಲಿ ಲೇಶವೂ ಸಂಶಯಕ್ಕೆಡೆಯಿಲ್ಲ. ಲಕ್ಷ್ಮೀಶನೂ ಅಂಥ ತೂಕಡಿಕೆಯುಳ್ಳ ಮಹಾಕವಿಯೆಂದು ಲೇಖಕರ ಅಭಿಪ್ರಾಯವೆ?

'ಅವನಲ್ಲಿ ಮಹಾಕವಿಯ ಅಂಶವಿದೆಯಾದರೂ ಒಟ್ಟಿನಲ್ಲಿ ಅವನು ಸತ್ಕವಿಯಾಗಿ ತನ್ನ ಕೃತಿಗಳಲ್ಲಿ ತೋರಿದ್ದಾನೆ' (ಪುಟ ೪೧೦) 'ಇದು ಮೇಲ್ಗತೆಯಾದರೂ ಮಹಾಕೃತಿಯಲ್ಲವೆಂದು ಸ್ಪಷ್ಟವಾಗಿದೆ' (ಪುಟ ೩೦೭) 'ಇದು ಮಹಾಪುರಾಣವಾಗಲಾರದು, ಮಹಾಕಾವ್ಯವೂ ಅಲ್ಲ; ಮಹಾಕಾವ್ಯದ ಸತ್ವವುಳ್ಳ ಸತ್ಕಾವ್ಯವೆಂದು ಇದನ್ನು ಕರೆಯಬಹುದು' (ಪುಟ ೧೩೪) 'ಪಂಪ ರಾಮಾಯಣವು ಮಹಾಕವಿಯೋಗ್ಯತೆಯುಳ್ಳ ಕವಿಯ ಸತ್ಕಾವ್ಯವೆಂದು ನಮಗೆ ತೋರುತ್ತದೆ' (ಪುಟ ೧೩೮) 'ಜನತೆಯ ಕವಿಗಳೆಂದು ಹೆಸರಾದ ಕನ್ನಡ ಕಲೋಪಾಸಕರಲ್ಲಿ ನಯಸೇನನು ತೀರ ಎತ್ತರದಲ್ಲಿ ಅಲ್ಲದಿದ್ದರೂ ಎದ್ದು ಕಾಣುವ ನೆಲೆಯಲ್ಲಿ ಕೂಡಬಲ್ಲ ನಿರುಪಮ ಸಹಜಕವಿಯಾಗಿದ್ದಾನೆ' (ಪುಟ ೧೪೧). 'ಅಂತೇ ಈ ಕಾವ್ಯದಲ್ಲಿ ಮಹಾಕಾವ್ಯದ ಸತ್ವವಿದ್ದರೂ ಮಹಾಕಾವ್ಯದ ಸಿದ್ಧಿಯಿಲ್ಲ' (ಪುಟ ೨೦೧)—ಇವೇ ಮೊದಲಾದ ಹೇಳಿಕೆಗಳು ವಿದ್ಯಾರ್ಥಿಗಳನ್ನು ಅಭ್ಯಾಸಿಗಳನ್ನು ಗೊಂದಲದಲ್ಲಿ ಕೆಡವಿದರೆ ಸೋಜಿಗವೇನೂ ಇಲ್ಲ. ಮಹಾಕವಿ, ಸತ್ಕವಿ, ವಿದಗ್ಧಕವಿ, ಉದ್ದಾಮಕವಿ, ಉನ್ನತಕವಿ, ಸಹಜಕವಿ ಎಂಬ ಮಾತುಗಳಿಗೂ ಮಹಾಕಾವ್ಯ, ಸತ್ಕಾವ್ಯ, ಮಹಾಕಾವ್ಯದ ಸತ್ವವುಳ್ಳ ಸತ್ಕಾವ್ಯ, ಮೇಲ್ಗತೆ, ಎಂಬ ಈ ಮಾತುಗಳಿಗೂ ಸ್ಪಷ್ಟವಾದ ವಿವರಣೆಯನ್ನು ಈ ಗ್ರಂಥದ ಯಾವುದಾದರೊಂದು ಭಾಗದಲ್ಲಿ ಕೊಟ್ಟಿದ್ದರೆ ವ್ಯಾಸಂಗ ತತ್ಪರರಾದ ಅಭ್ಯಾಸಿಗಳಿಗೆ ಈ ಗ್ರಂಥದ ಉಪಯುಕ್ತತೆ ಬಹಳವಾಗಿ ಹೆಚ್ಚುತ್ತಿದ್ದಿತೆಂಬುದರಲ್ಲಿ ಸಂಶಯವಿಲ್ಲ. ಕವಿಗಳ, ಕಾವ್ಯಗಳ ಯೋಗ್ಯತಾನುಸಾರವಾದ ವಿಂಗಡಣೆ (Gradation) ಅಗತ್ಯ. ಉತ್ತಮ ಮಧ್ಯಮ ಕಾವ್ಯಗಳ ಅಂತರವನ್ನು ವಾಚಕರು ಅರಿಯಲು ಅದು ಬಹಳ ಅಗತ್ಯ. ಸಾಹಿತ್ಯ ಚರಿತ್ರೆಯ ವ್ಯಾಸಂಗದ ಮುಖ್ಯ ಉದ್ದೇಶಗಳಲ್ಲಿ ಕವಿ ಕಾವ್ಯಗಳ ಯೋಗ್ಯತಾನಿರ್ಣಯವೂ ಒಂದಾಗಿದೆ. ಶ್ರೀಮುಗಳಿಯವರು ಸೂತ್ರರೂಪದಲ್ಲಿ ಕೊಟ್ಟಿರುವ ಅನೇಕ ಹೇಳಿಕೆಗಳಿಗೆ ಸಾಕಷ್ಟು ವಿಸ್ತಾರವಾದ ಭಾಷ್ಯವೂ ಅಗತ್ಯವೆಂದು ತೋರುತ್ತದೆ. ಗ್ರಂಥಕರ್ತರಂತೆಯೇ ಕನ್ನಡ ಸಾಹಿತ್ಯದ ಪ್ರಮುಖ ಕೃತಿಗಳನ್ನು ಆಮೂಲಾಗ್ರವಾಗಿ ವ್ಯಾಸಂಗಮಾಡಿ ಕವಿ ಶಕ್ತಿಯನ್ನು ಅರಿತು ಅರ್ಥಮಾಡಿಕೊಂಡು ಅಳೆದು ಬೆಲೆಕಟ್ಟಿರುವ ವಿದ್ವಾಂಸರಿಗೆ ಇದೆಲ್ಲ ಸುಲಭ. ಅವರಿಗೆ ಈ ಸೂತ್ರಗಳಾಗಲಿ, ಅವುಗಳಿಗೆ ಭಾಷ್ಯವಾಗಲಿ ಅಗತ್ಯ ಬೀಳದೆ ಇರಬಹುದು. ನಮ್ಮಲ್ಲಿ 'ಮಹಾಕವಿ' ಶಬ್ದವನ್ನು ಧಾರಾಳವಾಗಿ ಬಳಸಲಾಗುತ್ತಿದೆ. ಮಹಾಕವಿ ಯಾಗಬಲ್ಲವನು ಯಾರು?

ಸತ್ಕವಿಯೆಂದು ಯಾರನ್ನು ಹೆಸರಿಸಬಹುದು? ಸತ್ಕವಿ ಮಹಾಕವಿಯೇಕಲ್ಲ? ಈ ಪ್ರಶ್ನೆಗಳಿಗೆ ನಿಷ್ಕರ್ಷೆಯಾದ ಉತ್ತರ ವಿದ್ಯಾರ್ಥಿಗಳಿಗೆ ಅಗತ್ಯವಾಗಿ ಬೇಕು. ಅದು ಲಭಿಸಿದರೆ 'ಜೊಳ್ಳನ್ನು ತೂರಿ ಕಾಳನ್ನು ಆಯ್ದುಕೊಳ್ಳುವ' ಕಾರ್ಯದಲ್ಲಿ ಧೈರ್ಯವಾಗಿ ಮುಂದುವರಿಯಲು ಅನುಕೂಲವಾಗಬಹುದು. ಅಂಥ ತಿಳಿವಳಿಕೆಯನ್ನು ಅರಿತು ನುರಿತ ವಿದ್ವಾಂಸರೂ ಶ್ರೇಷ್ಠವರ್ಗದ ವಿಮರ್ಶಕರೂ ದೀರ್ಘಕಾಲ ಪ್ರೌಢಪಾಠ ಹೇಳಿದ ಅನುಭವವುಳ್ಳ ಪ್ರಾಧ್ಯಾಪಕರೂ ಆದ ಡಾ. ರಂ. ಶ್ರೀ ಮುಗಳಿಯವರು ಖಂಡಿತವಾಗಿಯೂ ನೀಡಬಲ್ಲರು.

ಭಾಷಾಭೂಷಣ, ಶಬ್ದಮಣಿದರ್ಪಣ ಮೊದಲಾದ ವ್ಯಾಕರಣ ಗ್ರಂಥಗಳನ್ನು ಕುರಿತು ಶ್ರೀಯುತರು ಸಾಕಷ್ಟು ಮಾಹಿತಿಯನ್ನು ಕೊಟ್ಟಿಲ್ಲವೆಂದು ಹೇಳಬೇಕಾಗಿದೆ. 'ವ್ಯುತ್ಪತ್ತಿ ಸಾಧಕವಾದ ಸಮಗ್ರ ಗ್ರಂಥಗಳನ್ನು ಕನ್ನಡಕ್ಕೆ ಒದಗಿಸಿದ ಅಪೂರ್ವ ಶ್ರೇಯಸ್ಸು ಇವನಿಗೆ ಸಲ್ಲುತ್ತದೆ' (ಪುಟ ೧೪೬) ಎಂದಿಷ್ಟು ಹೇಳಿ ೨ನೆಯ ನಾಗವರ್ಮನ ಪಾಂಡಿತ್ಯ, ರಸಿಕತೆ, ಕವಿತಾಸಾಮರ್ಥ್ಯ ಮೊದಲಾದ ಗುಣಾತಿಶಯಗಳನ್ನು ಹೊಗಳಿ ಗ್ರಂಥಕರ್ತರು ತೃಪ್ತರಾಗಿದ್ದಾರೆ; 'ಭಾಷಾಭೂಷಣ' ಅಥವಾ 'ಕಾವ್ಯಾವಲೋಕನ'ದ ಸ್ಥೂಲ ಪರಿಚಯವನ್ನೂ ಮಾಡಿಕೊಡುವ ಗೋಜಿಗೆ ಹೋಗಿಲ್ಲ. ಕನ್ನಡ ವ್ಯಾಕರಣವನ್ನು ಸಂಸ್ಕೃತದಲ್ಲಿ ಮೊದಲು ಬರೆದ ಯಶಸ್ಸು ಈತನದೆಂಬ ಅಂಶವನ್ನು ಸಹ ಇಲ್ಲಿ ಹೇಳಿಲ್ಲ. ಕಾವ್ಯಾವಲೋಕನ ಅಗತ್ಯವಾಗಿ ವಿದ್ಯಾರ್ಥಿಗಳು ಪರಿಚಯಮಾಡಿಕೊಳ್ಳಬೇಕಾದ ಕನ್ನಡ ಶಾಸ್ತ್ರಗ್ರಂಥ. 'ಶಬ್ದಸ್ಮೃತಿ'ಯು 'ಕಾವ್ಯಾವಲೋಕನ'ದಲ್ಲಿ ಒಂದು ಭಾಗವೇ ಅಲ್ಲವೆ? ತನ್ನಕಾಲಕ್ಕೆ ಪ್ರಸಿದ್ಧವಾಗಿದ್ದ ಕಾವ್ಯಗಳಿಂದ ಆಯ್ದ ಪದ್ಯಗಳನ್ನೇ ಸೂತ್ರಗಳಿಗೆ ದೃಷ್ಟಾಂತಗಳಾಗಿ ಕೊಟ್ಟಿರುವುದರಿಂದ ಇದು ಕವಿಕಾಲ ನಿರ್ಣಯಕ್ಕೂ ಸಹಾಯಕವಾದ ಪ್ರಮಾಣ ಗ್ರಂಥವಾಗಿದೆ. 'ಜಡಬುದ್ಧಿಯ ಪಂಡಿತನಾಗಿರದೆ ವಿವೇಚನ ಶಕ್ತಿಯುಳ್ಳ ವಿದ್ವಾಂಸನೂ ವಿಮರ್ಶಕನೂ ಆಗಿದ್ದನು' (ಪುಟ ೧೪೬) ಎಂದು ನಾಗವರ್ಮನನ್ನು ಪ್ರಶಂಸಿಸಿದ್ದಾರೆ. ಈ ಪ್ರಶಂಸೆ ನಾಗವರ್ಮನಿಗೆ ಸಲ್ಲಬಹುದಾದರೂ ಜಡಬುದ್ಧಿಗೂ ಪಂಡಿತನಿಗೂ ಏನೂ ಸಂಬಂಧವಿಲ್ಲವೆನ್ನಿಸುತ್ತದೆ. ವಿದ್ವತ್ತು, ವಿಮರ್ಶಕತ್ವ, ವಿವೇಚಕಶಕ್ತಿ, ತೀಕ್ಷ್ಣಬುದ್ಧಿ–ಇವೆಲ್ಲ ಇದ್ದರೆ ತಾನೆ ಪಂಡಿತರಾಗಲು ಸಾಧ್ಯ? ಶಬ್ದಮಣಿದರ್ಪಣದ ಪ್ರಶಂಸೆ (ಪುಟ ೨೨೩) ಬಂದಿದೆಯಾದರೂ ಆ ಗ್ರಂಥದ ಸ್ವರೂಪ ಪರಿಚಯ ಸಿಕ್ಕುವುದಿಲ್ಲ. ದರ್ಪಣಕಾರನು ಅನುಸರಿಸಿರುವ ವಿಷಯ ವಿಭಾಗಕ್ರಮ, ಬಳಸಿರುವ ಶಾಸ್ತ್ರ ಪರಿಭಾಷೆಯ ಸ್ವರೂಪ, ಮುಂತಾದುವನ್ನೆಲ್ಲ ಹೇಳಿ ಅದು ಉಳಿದ ಕನ್ನಡ ವ್ಯಾಕರಣಗಳಿಗಿಂತ ಹೇಗೆ ಭಿನ್ನವಾಗಿದೆ, ಅದರ ವೈಶಿಷ್ಟ್ಯವೇನೆಂಬುದನ್ನೂ ತಿಳಿಸಬೇಕಾಗಿತ್ತೆಂದು ತೋರುತ್ತದೆ. ಉಳಿದ ಶಾಸ್ತ್ರಗಳ ವಿಷಯ ಹೇಗೇ ಇದ್ದರೂ ಸಾಹಿತ್ಯಾಭ್ಯಾಸಕ್ಕೆ ಅಗತ್ಯವಾದ ವ್ಯಾಕರಣ, ಛಂದಸ್ಸು, ಅಲಂಕಾರ ಶಾಸ್ತ್ರಗಳ ಗ್ರಂಥಗಳ ಸಾಕಷ್ಟು ವಿಸ್ತಾರವಾದ ಪರಿಚಯ ಮಾಡಿಸುವುದು ಅಗತ್ಯ.

ಕನ್ನಡ ಸಾಹಿತ್ಯದ ಉಗಮ, ಬೆಳವಣಿಗೆಗಳನ್ನು ಸಾಕಷ್ಟು ಸಮಗ್ರವಾಗಿ

ವಿವೇಚಿಸಿರುವ ಶ್ರೀ ಮುಗಳಿಯವರ ಈ ಗ್ರಂಥ ಕನ್ನಡದಲ್ಲಿ ಮೊದಲನೆಯದೆಂದು ಹೇಳಿದರೆ ತಪ್ಪಾಗಲಾರದು. ಇದಕ್ಕೆ ಮುಂಚೆ ಈ ವಿಷಯವಾಗಿ ಕನ್ನಡದಲ್ಲಿ ರಚಿತವಾದವು ಚಿಕ್ಕ ಪುಟ್ಟ ಪುಸ್ತಕಗಳು ಮಾತ್ರ. ಆದ್ದರಿಂದ ಈ ಉದ್ಯಮಕ್ಕೆ ಶ್ರೀ ಮುಗಳಿಯವರು ಆದ್ಯರಾಗಿದ್ದಾರೆ! ಮುಂದಿನ ಲೇಖಕರಿಗೆ ಇವರ ಗ್ರಂಥ ಪ್ರಚೋದನೆ, ಪ್ರೋತ್ಸಾಹ, ಮಾರ್ಗದರ್ಶನಗಳನ್ನು ನೀಡಬಲ್ಲುದು. ಈ ಗ್ರಂಥದಲ್ಲಿ ಅಡಕವಾಗಿರುವ ಗ್ರಂಥಗಳ ಪಟ್ಟಿ, ಲೇಖನಗಳ ಪಟ್ಟಿ, ಗ್ರಂಥಗಳ ಮತ್ತು ಗ್ರಂಥಕಾರರ ಅಕಾರಾದಿ; ಒಬ್ಬೊಬ್ಬ ಕವಿಯ ವಿಷಯವಾಗಿ ಇಂದಿನವರೆಗೆ ಬೇರೆ ಬೇರೆ ವಿದ್ವಾಂಸರು ರಚಿಸಿರುವ ವಿಮರ್ಶ ಗ್ರಂಥಗಳ ವಿಸ್ತಾರವಾದ ಪಟ್ಟಿಗಳು, ಇವೆಲ್ಲ ಇದರ ಉಪಯುಕ್ತತೆಯನ್ನು ಬಹಳವಾಗಿ ಹೆಚ್ಚಿಸಿವೆ. ದೀರ್ಘಕಾಲದ ಪರಿಶ್ರಮದ ಫಲವಾಗಿ ಮೂಡಿ ಬಂದಿರುವ ಈ ಬೃಹದ್ಗ್ರಂಥ ಕನ್ನಡಿಗರ ಪ್ರೇಮಾದರಗಳಿಗೆ ಪಾತ್ರವಾಗಿರುವುದು ಸಹಜವಾಗಿಯೇ ಇದೆ. ಇಂಥ ಉಪಯುಕ್ತವೂ ಅಭ್ಯಾಸಯೋಗ್ಯವೂ ಆದ ದೊಡ್ಡ ಗ್ರಂಥವನ್ನು ರಚಿಸಿದ ಶ್ರೀ ಮುಗಳಿಯವರೂ ಇದನ್ನು ಅಚ್ಚುಕಟ್ಟಾಗಿ ಮುದ್ರಿಸಿ ಪ್ರಕಟಿಸಿದ ಮೈಸೂರಿನ ಉಷಾ ಸಾಹಿತ್ಯ ಮಾಲೆಯ ಒಡೆಯರೂ ಅಭಿನಂದನಾರ್ಹರು.

ಜಿ. ಎಸ್. ಸಿದ್ಧಲಿಂಗಯ್ಯ

ಅರಳು–ಮರಳು

೧

ಅಂಬಿಕಾತನಯದತ್ತ ಕಾವ್ಯನಾಮದಿಂದ ಖ್ಯಾತರಾದ ಶ್ರೀ ದತ್ತಾತ್ರೇಯ ರಾಮಚಂದ್ರ ಬೇಂದ್ರೆಯವರ ಪಂಚಕಾವ್ಯಗುಚ್ಛ ಇದು. ೧೯೫೬ರಲ್ಲಿ ಹೊರಬಿದ್ದ ಹೃದಯಸಮುದ್ರ, ಮುಕ್ತಕಂಠ ಮತ್ತು ಸೂರ್ಯಪಾನ ಹಾಗೂ ೧೯೫೭ರಲ್ಲಿ ಹೊರಬಂದ ಚೈತ್ಯಾಲಯ ಮತ್ತು ಜೀವಲಹರಿ ಎಂಬ ಈ ಐದು ಕವನಸಂಕಲನಗಳನ್ನು ಶ್ರೀ ಬೇಂದ್ರೆಯವರೇ 'ಅರಳು–ಮರಳು' ಹೆಸರಿನಲ್ಲಿ ಒಟ್ಟುಗೂಡಿಸಿದ್ದಾರೆ. ಇವು ಬಿಡಿಬಿಡಿಯಾಗಿಯೂ ಇಡಿಯಾಗಿಯೂ ಧಾರವಾಡದ ಸಮಾಜ ಪುಸ್ತಕಾಲಯದವರಿಂದ ಪ್ರಕಟಿಸಲ್ಪಟ್ಟಿವೆ. ಕರ್ಣಾಟಕ ವಿಶ್ವವಿದ್ಯಾನಿಲಯದ ಉಪಕುಲಪತಿಗಳಾಗಿದ್ದ ಶ್ರೀ ದಾನಪ್ಪ ಸಿ. ಪಾವಟೆಯವರಿಗೆ ಈ ಕೃತಿ ಅರ್ಪಿತವಾಗಿದೆ. ಬೆಂಗಳೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳಾಗಿದ್ದ ಶ್ರೀ ವಿನಾಯಕ ಕೃಷ್ಣ ಗೋಕಾಕರು ಮುನ್ನುಡಿ ಬರೆದಿದ್ದಾರೆ. ಹನ್ನೊಂದು ಪುಟ ವ್ಯಾಪಿಸಿರುವ ಈ ಮುನ್ನುಡಿ ಅಂಬಿಕಾತನಯದತ್ತರ ಕಾವ್ಯದ ಸ್ಥೂಲ ಪರಿಚಯ ಹಾಗೂ 'ಅರಳು–ಮರಳಿ'ನ ಸಾರಪರಿಚಯ ಮಾಡಿಕೊಡಲು ಯತ್ನಿಸಿದೆ. ಚೈತ್ಯಾಲಯದಲ್ಲಿರುವ ೫೪ ಕವಿತೆಗಳನ್ನು ಬಿಟ್ಟು ಉಳಿದ ಹೃದಯಸಮುದ್ರ (೬೦ ಕವಿತೆಗಳು) ಸೂರ್ಯಪಾನ (೬೦ ಕವಿತೆಗಳು), ಮುಕ್ತಕಂಠ (೪೨ ಕವಿತೆಗಳು) ಮತ್ತು ಜೀವಲಹರಿ (೬೦ ಕವಿತೆಗಳು) ಸಂಕಲನಗಳಲ್ಲಿ ಬರುವ ಕವಿತೆಗಳಿಗೆ ಶ್ರೀ ಬೇಂದ್ರೆಯವರೇ ಭಾವಸಂದರ್ಭ ಸೂಚಿಯನ್ನು ಕೊಟ್ಟಿದ್ದಾರೆ.

ಕನ್ನಡ ರಾಜ್ಯೋತ್ಸವದ ದ್ವಿತೀಯ ಹಬ್ಬದ ದಿನ ಅತ್ಯಂತ ಅರ್ಥಪೂರ್ಣವಾಗಿ ಪ್ರಕಟವಾದ ಈ ಉದ್ಘಕೃತಿ ಆ ವರ್ಷದಲ್ಲಿ ಹೊರಬಿದ್ದ ಕನ್ನಡ ಭಾಷೆಯ ಶ್ರೇಷ್ಠ ಕೃತಿಯೆಂದು ಕೇಂದ್ರ ಸಾಹಿತ್ಯ ಅಕೆಡೆಮಿಯಿಂದ ಗೌರವಪ್ರಶಸ್ತಿಯನ್ನು ಪಡೆದಿದೆ.

೨

ಶ್ರೀ ಬೇಂದ್ರೆಯವರ ಕವನಸಂಕಲನಗಳನ್ನು ವಿಮರ್ಶಿಸುವಾಗ ಬರುವ ಒಂದೆರಡು ತೊಡಕುಗಳನ್ನು ಗಮನಿಸಿದರೆ ಅಪ್ರಸ್ತುತವಲ್ಲ. ಅವರ ಪ್ರತಿಭೆ ಬೀಜದಿಂದ ಮೊಳಕೆ

ಜೊತೆಜೊತೆ ತಲೆದೂಗುತ್ತ ಸಾಗುತ್ತಿದ್ದು ಇದು ಸಾಮಾನ್ಯವಾಗಿ ಒಗ್ಗಿ ಹೊಂದ್ಯಾಗಿ ಹೊಸದಾಗಿ ಹೊಸದಾದ ಕ್ರಮಬದ್ಧವಾದ ವಿಕಾಸವನ್ನು ಗುರುತಿಸುವಂತೆ ಪ್ರಕಟವಾಗಿಲ್ಲ. ಅವರ ಕಾವ್ಯರಾಶಿ ಮಳೆಗಾಲದಲ್ಲಿ ಬೆಟ್ಟದಿಂದ ಬೆಟ್ಟದವರೆಗೆ ಬೆಳಗಾಗುತ್ತ, ಹಸಹಸನೆ ಹೊಳೆಯುತ್ತ, ಹರಿತೆರೆಗಳ್ಳುವ ಮುಂಗಾರಿನ ಬಳ್ಳಿಮಿಂಚುಗಳಂತೆ, ಅನೇಕ ತಿರುವುಗಳಿಂದ ಕಂಗೊಳಿಸುತ್ತ, ಹರಿಹಂಚಿಕೊಂಡಿರುವ ಸಹ್ಯಾದ್ರಿ ಶ್ರೇಣಿಯಂತೆ ವಿವಿಧತೆಗಳಿಂದ ಹಬ್ಬಿ ಕೊಂಡಿದೆ. ಅವರ ಮೊದಲ ಪ್ರಕಟಿತ ಕವನಸಂಕಲನ 'ಗರಿ'ಯಲ್ಲಿಯೇ ಎಷ್ಟೋ ಶ್ರೇಷ್ಠ ಕವಿತೆಗಳಿವೆ. ಮುಂದೆ ಬಂದ ಸಖೀಗೀತ, ನಾದಲೀಲೆ, ಉಯ್ಯಾಲೆ, ಮೇಘದೂತ ಮತ್ತು ಹಾಡುಪಾಡು, ಕೃಷ್ಣಕುಮಾರಿ ಮತ್ತು ಹಾಡು–ಪಾಡು, ಗಂಗಾವತರಣ ಇವುಗಳೆಲ್ಲ ದರ್ಶನವನ್ನು ಒಳ್ಳೆಯ ಕವಿತೆಗಳೂ ಸಾಕಷ್ಟು ಸಾಧಾರಣ ಕವಿತೆಗಳೂ ಇವೆ. ಈ ಅರ್ಥದಲ್ಲಿ ಇವರ ಕವಿತೆಗಳು ಇವರ ಕಾವ್ಯದ ಬೆಳವಣಿಗೆಯ ಕ್ರಮವನ್ನು ಸೂಚಿಸ ಲಾರದಾಗಿವೆ. "ಗರಿ ಬರೆಯುವುದಕ್ಕಿಂತ ಮೊದಲೇ ಬರೆದ ಎಷ್ಟೋ ಕವಿತೆಗಳು ಇತ್ತೀಚೆಗೆ ಹೊರಬಿದ್ದ ಅರಳು–ಮರಳು ಸಂಗ್ರಹದಲ್ಲಿ ದೊರೆಯುತ್ತವೆ.[1] ಹೀಗಾಗಿ ಅವರ ಕಾವ್ಯದ ಬೆಳವಣಿಗೆಯ ಜಾಡನ್ನು ಕಂಡುಹಿಡಿಯುವುದು ಬಿಗಿಯಾಗಿದೆ."[2] ಈ ಕಾರಣ ಹಾಗೂ ಹೊಂದುವಂತೆ ಈ ಸಂಬಂಧವಾಗಿ ಗುಣ್ಯ ದಿಕ್ಕು ಕನ್ನಡ ಕವನ ಸಂಕಲನಗಳ ಸಂಪ್ರದಾಯದಿಂದ ಹೆಚ್ಚು ಭಿನ್ನವಾಗೇನೂ ಇಲ್ಲ. ಕನ್ನಡದಲ್ಲಿ ಸಾಮಾನ್ಯವಾಗಿ ಯಾವ ಕವಿಯೂ ತನ್ನ ಸಂಕಲನವನ್ನು ಸಿದ್ಧಪಡಿಸುವಾಗ ಕಲಾದೃಷ್ಟಿಯಿಂದ ಪ್ರಮುಖ ವಾಗುವ ಕವನಗಳನ್ನಷ್ಟೆ ಕೂಡಿಸುವ ಸತ್ಪ್ರಯತ್ನ ಮಾಡಿದಂತಿಲ್ಲ. ಹೊಸಗನ್ನಡ ಸಾಹಿತ್ಯ ಜನಕನಾದ ಶ್ರೀ ಬಿ. ಎಂ. ಶ್ರೀಕಂಠಯ್ಯನವರಿಂದ ಹಿಡಿದು ಇಂದಿನ ವರೆಗೆ ಹೆಚ್ಚು ಕವಿಗಳು ಎಲ್ಲರೂ ಒಳ್ಳೆಯ ಹಾಗೂ ಸಾಧಾರಣ ಕವಿತೆಗಳನ್ನು ಒಟ್ಟಾಗಿ ಸೇರಿಸಿಯೇ ತಮ್ಮ ಕೃತಿಗಳನ್ನು ಸಿದ್ಧಪಡಿಸಿದ್ದಾರೆ. ಪ್ರಬುದ್ಧಪೂರ್ಣವಾದ ಸಾಹಿತ್ಯ ಸೃಷ್ಟಿಗೆ ಕೈಹಾಕಿ ಪ್ರಾಮಾಣಿಕ ಕಾವ್ಯಮಾರ್ಗವನ್ನು ಉದ್ಘೋಷಿಸಿ ಮುನ್ನಡೆದ ಶ್ರೀ ಎಂ. ಗೋಪಾಲಕೃಷ್ಣ ಅಡಿಗರಲ್ಲಿಯೂ ಅವರ ' ಭೂಮಿಗೀತ ' ಎಂಬ ಕೊನೆಯ ಸಂಕಲನವನ್ನುಳಿದು ಮಿಕ್ಕ ಕವನ ಸಂಕಲನಗಳಲ್ಲಿ ಒಳ್ಳೆಯ ಹಾಗೂ ಸಾಧಾರಣ ಕವಿತೆಗಳು–ಇವುಗಳ ಪ್ರಮಾಣ ಕವಿಯ ಯೋಗ್ಯತೆಗೆ ತಕ್ಕಂತೆ ಹೆಚ್ಚು ಕಡಿಮೆಯಾಗಿ ಬೆರೆತು–ಒಟ್ಟಾಗಿಯೇ ಸೇರಿವೆ. ಅಂದರೆ ಇದರಿಂದ ಕನ್ನಡದಲ್ಲಿ ಕವನ–ಸಂಕಲನಗಳು ಸಿದ್ಧವಾಗುವ ಸಂಪ್ರದಾಯದ ಸ್ಥೂಲಪರಿಚಯ ಆಗಬಹುದು. ಶ್ರೀ ಬೇಂದ್ರೆಯವರ ಈ ಉದ್ಯಕೃತಿಗಳ ಈ ಸಂಪ್ರದಾಯದಿಂದ ಭಿನ್ನವಾಗಿಲ್ಲ ಎಂಬುದನ್ನು ನೆನಸಬೇಕು. ಇಂಥ ಸಂದರ್ಭಗಳಲ್ಲಿ ಚೆನ್ನಾಗಿಲ್ಲದ ಹತ್ತು ಕವಿತೆಗಳನ್ನು ಕಂಡ ಬೇಸರದಲ್ಲಿ ಒಳ್ಳೆಯ ಕವಿತೆಗಳನ್ನು ತಾತ್ಸಾರ ಮಾಡಬಲ್ಲೆವಾದರೆ ಕವಿಗೆ ಅನ್ಯಾಯಮಾಡಿದಂತೆ. ಈ

---

[1] ಅರಳುಮರಳು ಅರಳು–ಮರಳು ಇತಿಹಾಸ ಪ್ರಕಟವಾಯಿತು

[2] ಬೇಂದ್ರೆಯವರ ಬಾಳು–ಕೃತಿ ೫೦–ಕೆ. ಡಿ. ಕುರ್ತಕೋಟಿ

ಹಿನ್ನೆಲೆಯಲ್ಲಿ ವರಕವಿ ಬೇಂದ್ರೆಯವರ ಈ ಕೃತಿಯನ್ನು ವಿಮರ್ಶಿಸುವವನು ಎಂಟು ಕಣ್ಣವನಾಗಬೇಕಾಗುತ್ತದೆ.

ಈ ಸಂಕಲನದಲ್ಲಿರುವ ಸುಮಾರು ೨೭೬ ಕವಿತೆಗಳನ್ನು ಬಿಡಿಬಿಡಿಯಾಗಿ ನೋಡುವುದೆಂದರೆ ಈ ಲೇಖನದ ಗಾತ್ರಕ್ಕೆ ಅಸಾಧ್ಯವೇ ಸರಿ. ವಿಮರ್ಶೆಯ ಅನುಕೂಲಕ್ಕಾಗಿ ಈ ಕವಿತೆಗಳನ್ನೆಲ್ಲ ಅನುವಾದ ಹಾಗೂ ಅಧ್ಯಾತ್ಮ ಗೀತೆಗಳು, ವ್ಯಕ್ತಿಗಳನ್ನು ಕುರಿತ ಕವಿತೆಗಳು, ಚರಮ ಕವಿತೆಗಳು, ವಿಡಂಬನ ಕವಿತೆಗಳು ಹಾಗೂ ಭಾವಗೀತಗಳು ಎಂದು ಸ್ಥೂಲವಾಗಿ ವಿಂಗಡಿಸುವ ಯತ್ನಮಾಡಿದ್ದೇನೆ. ಈರೀತಿ ಕವಿತೆಗಳನ್ನು ವಿಂಗಡಿಸುವುದು ಹರಿಯುವ ನೀರನ್ನು ಚಾಕಿನಿಂದ ಕೊಯ್ದು ಬೇರೆಮಾಡಿದಂತೆ ಎಂಬ ಅರಿವೂ ನನಗಿದೆ. ಕೆಲವು ಕವಿತೆಗಳು ಎರಡು ಮೂರು ನಾಲ್ಕು ಪ್ರಕಾರಗಳಲ್ಲಿ ಹರಡಿಕೊಳ್ಳಬಲ್ಲವೂ ಆಗಿವೆ. ಉದಾಹರಣೆಗೆ 'ಕೇಳಿರೊಂದು ಸೋಜಿಗ', 'ಮಹಾ ಪ್ರಸ್ಥಾನ' ಕವಿತೆಗಳನ್ನೆ ನೋಡಿರಿ. ಚರಮಗೀತೆ, ವ್ಯಕ್ತಿಗೀತೆ ಎರಡು ಗುಂಪಿಗೂ ಸೇರಿದ 'ಕೇಳಿರೊಂದು ಸೋಜಿಗ' ವಿಡಂಬನಕ್ಕೂ ಕಾಲಿಡುತ್ತದೆ; 'ಮಹಾಪ್ರಸ್ಥಾನ' ಅಧ್ಯಾತ್ಮ ಭಾಗಕ್ಕೂ ಹಬ್ಬಿಕೊಳ್ಳುತ್ತದೆ. ಆದ್ದರಿಂದ ಈ ವಿಭಜನೆ ಕೇವಲ ವಿವೇಚನೆಯ ಅನುಕೂಲಕ್ಕಾಗಿ ಮಾತ್ರ ಎಂದು ವಿನಮ್ರನಾಗಿ ಸೂಚಿಸುತ್ತೇನೆ.

೩

ಯಾವುದೇ ಒಂದು ಭಾಷೆಯ ದೊಡ್ಡಕವಿಯ ಕವಿತೆಗಳನ್ನೆಲ್ಲ ನೋಡಿದರೆ ಅವು ಬಿಡಿಬಿಡಿಯಾಗಿ ಎಷ್ಟು ಪ್ರಮುಖವಾಗುತ್ತವೆಯೊ ಅದಕ್ಕಿಂತ ಹೆಚ್ಚಾಗಿ ಒಟ್ಟಾಗಿ ಆ ಭಾಷೆಯ ಹಾಗೂ ಜನಾಂಗದ ಸಂಸ್ಕಾರ, ಸಂಸ್ಕೃತಿಗಳ ದೃಷ್ಟಿಯಿಂದ ಪ್ರಮುಖವಾಗಬೇಕಾಗುತ್ತದೆ. ಅಂಥ ಕೃತಿಸಮುದಾಯವೇ ಒಬ್ಬನನ್ನು ಒಂದು ಭಾಷೆಯ ಅಗ್ರಕವಿಗಳಲ್ಲೊಬ್ಬನನ್ನಾಗಿ ಮಾಡಬಲ್ಲುದು. ಶ್ರೀ ಬೇಂದ್ರೆಯವರ ಕವಿತೆಗಳು ಈ ಮಾನದಂಡದಿಂದ ಗೆದ್ದುಬರುವಂಥವಾಗಿವೆ. ಅವರ ಕೃತಿಸಮುದಾಯ ಒಂದು ಮಹಾಕಾವ್ಯದಂತೆ ಪರಿಣಾಮಕಾರಿಯಾಗುತ್ತದೆ. ಇವರ ಕಾವ್ಯದ ಅತ್ಯಂತ ಪ್ರಮುಖವಾದ ಅಂಶ ಅದರ ದೇಸಿ ಅಥವಾ ಜನಪದ ಕಾವ್ಯದ ಸೊಗಡು. ವಚನಕಾರರು, ಕುಮಾರವ್ಯಾಸ, ಕೀರ್ತನಕಾರರು, ಸರ್ವಜ್ಞ, ರತ್ನಾಕರ, ನಿಜಗುಣ ಶಿವಯೋಗಿ, ಮುಪ್ಪಿನ ಷಡಕ್ಷರಿ ಮತ್ತು ಜನಪದ ಸಾಹಿತ್ಯ ಇವುಗಳ ಶುದ್ಧ ದೇಸೀ ಪರಂಪರೆ ಇವರ ಕಾವ್ಯದಲ್ಲಿ ಅತ್ಯಂತ ಸಾರವತ್ತಾಗಿ ಮುಂದುವರಿದಿದೆ. ಇವರ ಹೆಚ್ಚು ಕವಿತೆಗಳಲ್ಲಿ ಈ ಜಾನಪದ ಸತ್ವ ತುಂಬು ಪ್ರವಾಹದಂತೆ ಭೋರ್ಗರೆಯುತ್ತಿದೆ. ಭಾಷೆ, ಛಂದಸ್ಸು, ವಸ್ತು, ಜೀವನದೃಷ್ಟಿ–ಈ ಎಲ್ಲ ದೃಷ್ಟಿಗಳಲ್ಲೂ ಇವರ ಕಾವ್ಯ ಮಿಕ್ಕ ಎಲ್ಲ ಹೊಸಗನ್ನಡ. ಕವಿಗಳ ಕಾವ್ಯಕ್ಕಿಂತ ಹೆಚ್ಚು ದೇಶೀಯವಾಗಿದೆ. ಅವರ ಕಾವ್ಯದ ವೈಶಿಷ್ಟ್ಯವೆಂಬಷ್ಟು ಈ ಗುಣ ವಿಜೃಂಭಿಸುತ್ತದೆ. ಉತ್ತರ ಕನ್ನಡದ ಭಾಷೆಯನ್ನು

ಇವರು ಕಾವ್ಯಕ್ಕೆ ಹೂಡಿಕೊಂಡದ್ದೂ ರಂಜಕವೂ ಅಪರೂಪದ್ದೂ ಆಗಿದೆ. ಅವರ ಭಾಷೆಗೆ ದೇಶಿಯ ಅರ್ಥದ ಪದರಗಳು ಹೂವಿಗೆ ಗಂಧ ಕೂಡಿಬರುವಂತೆ ತಾವಾಗಿಯೇ ಕೂಡಿಬರುವುದನ್ನು ನೋಡಬೇಕು. ಉದಾಹರಣೆಗೆ 'ಮುವತ್ತು ಮೂರು ಕೋಟಿ' ಹಾಗೂ 'ಸೂರ್ಯನ ಹೊಳಿ' ಕವಿತೆಗಳಲ್ಲಿ ಬರುವ ಈ ಪದ್ಯ ಭಾಗಗಳನ್ನು ಗಮನಿಸಿ:

ಮೂವತ್ತು ಮೂರು ಕೋಟೀ, ಮೂವತ್ತು ಮೂರು ಕೋಟಿ!
ಬಯಕೆಗಳು ಬಸಿರುಗಳು ಹಡೆದದ್ದು ಹಿಂಗಿದ್ದು
ಮೂವತ್ತು ಮೂರು ಕೋಟಿ!
ಸೂಲಗಳು[3]
ಮೂವತ್ತು ಮೂರುಕೋಟಿ!

ಮತ್ತು

ನಿನ್ನ ಸ್ಪರ್ಶ ಹರ್ಷದಾ ಚಿಲುಮಿ—ಅಲ್ಲಿ ನೀರಾಟವಾಡತದ ಒಲುಮಿ
ನೀನಂತಿಯಂತೆ ನಾ ನೀರ
ನ್ನೀನ ಆಹಾರ
ಮತ್ತ ನಿನ ನೀರ
ಗಾಳಿಗೆ ಬೇರೆ ಮೈಸೋಂಕಿ ಹೊತ್ತೀತ ಬೆಂಕಿ ಕಮ್ಮಾರನ ಕುಲುಮಿ
ನಿನ ಸ್ಪರ್ಶ ಹರ್ಷದಾ ಚಿಲುಮಿ.[4]

ಮೇಲಿನ ಎರಡು ಉದಾಹರಣೆಗಳಲ್ಲಿ 'ಸೂಲಗಳು' ಮತ್ತು 'ಚಿಲುಮಿ' ಪದಗಳಲ್ಲಿ 'ಮಕ್ಕಳು' ಹಾಗೂ 'ಬುಗ್ಗೆ' ಎಂಬ ಸಾಮಾನ್ಯ ಅರ್ಥದೊಂದಿಗೆ 'ಶೂಲ' ಹಾಗೂ 'ಸೇದುವ ಚಿಲುಮೆ' (ಭಂಗಿ), ಎಂಬರ್ಥಗಳೂ ದೇಸಿನೆಲೆಯಿಂದ ಆ ಭಾವ ಸಂದರ್ಭಗಳಿಗೆ ಅತ್ಯಂತ ಉಚಿತವಾಗಿ ಹೊಮ್ಮಿ ಬರುತ್ತವೆ. ಬೇಂದ್ರೆಯವರ ಭಾಷೆ ದೇಸಿಯ ನೆಲೆಗಟ್ಟಿನಿಂದಾದುದು ಎಂದಾಗ ಉತ್ತರ ಕನ್ನಡದ ಪ್ರಾಂತ ಭಾಷೆಯನ್ನು ಬಳಸಿದ್ದರಿಂದ ಮಾತ್ರವೇ ದೇಸಿಯಾಯಿತೆಂಬ ಸಂಕುಚಿತಾರ್ಥ ಕೆಲವರಿಗಾದರೆ ಅದು ತಪ್ಪು. ಇತಿಮಿತಿ ಶಕ್ತಿಗಳಿಂದ ಕೂಡಿದ ಆ ಭಾಷೆಯ ಜೊತೆಗೇ ಬೇಂದ್ರೆಯವರು ಅಕ್ಕರ, ಸಾಂಗತ್ಯ, ತ್ರಿಪದಿ ಮೊದಲಾದ ದೇಸೀವೃತ್ತಗಳನ್ನು ತುಂಬ ಶಕ್ತಿಯುತವಾಗಿ ಬಳಸಿ ಅತ್ಯದ್ಭುತವಾದ ಸಖೀಗೀತದಂಥ ಶ್ರೇಷ್ಠ ಕೃತಿಗಳನ್ನು ರಚಿಸಿದ್ದಾರೆ. ಕೀರ್ತನಕಾರರು ಹಾಗೂ ಅಜ್ಞಾತ ಜಾನಪದ ಕವಿಗಳನ್ನು ಬಿಟ್ಟರೆ ದೇಸಿಯ ಗೇಯತೆಯನ್ನು ಇವರಷ್ಟು ಸಮರ್ಥವಾಗಿ ಅದರ ವಿವಿಧತೆಯಲ್ಲಿಯೇ ಕಾವ್ಯಮಯವಾಗಿ ಬಳಸಿಕೊಂಡ

3 ಈ ಪದದ ಅರ್ಥ ಹಾಗೂ ಧ್ವನಿ ಶಕ್ತಿಗಳನ್ನು ವಿವರವಾಗಿ ತಿಳಿಯಬೇಕೆನ್ನುವವರು ಶ್ರೀ ತೀ. ನಂ. ಶ್ರೀ ಅವರ ಕಾವ್ಯ ಮೀಮಾಂಸೆಯ (೨೫೯–೬೦) ಪುಟಗಳನ್ನು ನೋಡಬಹುದು.

4 ೧೯೬೭ರ ಪ್ರಜಾಮತದ ದೀಪಾವಳಿ ಸಂಚಿಕೆಯನ್ನು ನೋಡಿರಿ. ಶ್ರೀ ಕೆ. ಡಿ. ಕುರ್ತಕೋಟಿಯವರು ಚಿಲುಮಿ ಎಂಬ ಪದದ ಅರ್ಥದ ಪದರಗಳನ್ನು ಅಲ್ಲಿ ತೆರೆದಿಟ್ಟಿದ್ದಾರೆ.

ಮತ್ತೊಬ್ಬ ಶಕ್ತ ಕನ್ನಡ ಕವಿ ಇಲ್ಲ ಎನ್ನಬಹುದು. ಇವರ ಮಾತ್ರಾವೃತ್ತಗಳೂ ತಮ್ಮ ಸಹಜಗೇಯತೆಯಿಂದ ಅಂಶಲಯದತ್ತಲೆ ಹೊರಳುತ್ತವೆ. ಇವರ ಎಷ್ಟೋ ಕವಿತೆಗಳಲ್ಲಿ ಹೂವಿನೊಳಗೆ ಸೇರಿ ಹೋದ ಕಂಪಿನಂತೆ ಗೇಯತೆ ಸೇರಿಹೋಗಿದೆ. ಇವಲ್ಲದೆ ಮರಾಠಿಯ ಲಾವಣಿ ವೃತ್ತದಂಥ ಹಲವು ಗೇಯ ವೃತ್ತಗಳನ್ನು ಶ್ರೀ ಬೇಂದ್ರೆಯವರು ಕನ್ನಡ ಭಂಡಾರಕ್ಕೆ ತಂದು ತುಂಬಿಬಿಟ್ಟಿದ್ದಾರೆ. ಹೃದಯ ಸಮುದ್ರದಲ್ಲಿ ಬರುವ ಓ 'ತಾಯಿ-ಮಾಯಿ'ಯ ಈ ಭಾಗವನ್ನು ನೋಡಿರಿ :

ಮಕರಂದ ಪಾನದ ಝುರೀ
ತೆರಿ ತೆರೀ ನಿನ್ನ ತಾವರೀ
ಬಂದ್ಯದ ತುಂಬಿಯಾ ಮರೀ

ಈ ಲಯ ಶುದ್ಧ ಮರಾಠಿ ವೃತ್ತದ್ದು. ಮೂರ್ತಿ ಮತ್ತು ಕಾಮ ಕಸ್ತೂರಿ ಮತ್ತಿತರ ಕವನ ಸಂಕಲನಗಳಲ್ಲಾಗಲೆ ಈ ಲಯ ತನ್ನ ಅನೋಘ ಸೌಂದರ್ಯವನ್ನು ಮೆರೆದಿದೆ, ಕನ್ನಡದ್ದಾಗಿಹೋಗಿದೆ. ಜನಪದ ಸಾಹಿತ್ಯದ ಕೋಲಾಟದ ಹಾಡು ಹಾಗೂ ಲಾವಣಿಗಳನ್ನು ಕೂಡ ಬೇಂದ್ರೆಯವರು ತಮ್ಮ ಕಾವ್ಯದಲ್ಲಿ ಬಳಸಿಕೊಂಡಿದ್ದಾರೆ. ಗೇಯತೆಯೊಂದಿಗೇ ಬೆಳೆದು ಬಂದ ಬೇಂದ್ರೆಯವರ ಕಾವ್ಯ ಸಂದರ್ಭದಲ್ಲಿ 'ಕಗ್ಗ'ವಂತೂ ಲಾವಣಿಕಾರನ ಅಂಕಿತವನ್ನೂ ಒಳಗೊಂಡು ಇಂದೂ ಲಾವಣಿ ಕನ್ನಡ ಸಾಹಿತ್ಯಕ್ಕೆ ಹೇಗೆ ದುಡಿಯಬಹುದೆಂಬುದಕ್ಕೆ ಉದಾಹರಣೆಯಾಗುವಂತಿದೆ. ಕೆಲಸಿಗರ ಹಾಡೂ ಅಷ್ಟೆ. 'ಕಗ್ಗ'ದ ಈ ಸಾಲುಗಳನ್ನು ನೋಡಿ :

ಸಂಸಾರದಾಗ ಇಲ್ಲದಂಥಾ ಸಿನೇಮಾ ನೋಡ್ತಾರ
ಕೂತು ಕೂತಲ್ಲೆ ಮಂಗಚ್ಯಾಷ್ಟಿ ಹ್ಯಾಂಗೋ ಮಾಡ್ತಾರ
    ಕತ್ತಲೆಯೊಳಗಿನ ಆಟ ಛಂದಾ
    ಸುತ್ತಲಿದ್ದವೂ ಅಷ್ಟೇ ಧುಂದಾ
ತಮ್ಮ ತಮ್ಮಗೆ ಗಮ್ಮತ ಮಾಡ್ತಾ ಹೋಗ್ತಾರ ಬರ್‍ತಾರs
ಕುಡೀದಿದ್ದರೂ ಎಚ್ಚರಗೊಂಡು ಯಾರ ಇರ್‍ತಾರs ?

ಬೇಂದ್ರೆಯವರ ಜಾನಪದ ಸತ್ವಕ್ಕೆ ಉದಾಹರಣೆಯಾಗುವ 'ಜೀವಲಹರಿ' ಕವಿತೆಯನ್ನೂ ಪರೀಕ್ಷಿಸಬಹುದು.

ಇದು ವೈಷ್ಣವ ಇದು ಜೈನವು ಇದು ಶಾಕ್ತವು ಶೈವ
ಇದು ಜೀವನು ಇದು ಜೀವನ-ಪುರುಷಾರ್ಥವು ದೈವ
ಒಮ್ಮುಖವಿದು ಹಲವೊಗದೊಲು ತೋರುತ ತರತಮತೆ
ಇದು ನಿಮ್ಮದು ಇದು ನಮ್ಮದು ಇದು ಎಲ್ಲರ ಮಮತೆ
ಇದು ಮಣ್ಣಿನ ನರುಮಲ್ಲಿಗೆ, ಇದು ನೆಲದ ನಿಧಾನ.

ಈ ಪಂಕ್ತಿಗಳಲ್ಲಿ ಕನ್ನಡ ನಾಡಿನ ಜನ ಜೀವನಗಳನ್ನು ತುಂಬಿದ ಧರ್ಮಗಳು ಅದರೊಡನೆ ಹಾಸುಹೊಕ್ಕಾಗಿ ಸೇರಿದ ನಾಡಿನ ಜೀವನದ ಲಹರಿಗಳ ಚಿತ್ರವಿದೆ. ಈ

ಧರ್ಮದೃಷ್ಟಿಗಳ ಭಿನ್ನತೆಯಲ್ಲಿಯೇ ಏಕತೆಯನ್ನು ಪಡೆದಿರುವ ಕನ್ನಡ ಸಂಸ್ಕಾರ, ಅದಕ್ಕಿಂತ ಮಿಗಿಲಾಗಿ 'ಇದು ನಿಮ್ಮದು ಇದು ನಮ್ಮದು' ಎಂಬ ಮಾತಿನಲ್ಲಿರುವ ಆತ್ಮೀಯತೆ ಸೌಹಾರ್ದತೆಗಳನ್ನು ಗಮನಿಸಬೇಕು. ಇದಕ್ಕಿಂತಲೂ ಪ್ರಧಾನವಾದ ಮಾತು : ಇದು ಮಣ್ಣಿನ ನರುಮಲ್ಲಿಗೆ, ಇದು ನೆಲದ ನಿಧಾನ ಎಂಬುದು. ಜೀವ ಲಹರಿಗಳಾಗಿರುವ ಕಾವ್ಯ ಮತ್ತು ಸಂಸ್ಕೃತಿಗಳಿಗೂ ಮಣ್ಣಿಗೂ ಇರುವ ಸಾವಯವ ಸಂಬಂಧ ಇದು ಮಣ್ಣಿನ ನರುಮಲ್ಲಿಗೆ ಎಂಬಲ್ಲಿ ಧ್ವನಿತವಾಗಿದೆ. ಇದು ನೆಲದ ನಿಧಾನ ಎಂಬ ಮಾತು 'ನೆಲದ ಮರೆಯ ನಿಧಾನದಂತೆ ಗುಹೇಶ್ವರಾ ನಿಮ್ಮ ನಿಲವು' ಎಂಬ ಅಲ್ಲಮ ಪ್ರಭುವಿನ ವಚನದ ಅರ್ಥಪುಷ್ಟಿಯನ್ನೆಲ್ಲ ಕೂಡಿಕೊಂಡು ನಮ್ಮ ನಾಡಿನ ಜೀವಲಹರಿಯು ಹೇಗೆ ವ್ಯಾಪಿಸಿಕೊಂಡಿದೆ ಎಂಬುದನ್ನು ಧ್ವನಿಸುವ ಅರ್ಥರಮ್ಯತೆಯನ್ನು ಅನುಭವಿಸಿಯೇ ಸವಿಯಬೇಕು. ಬೇಂದ್ರೆಯವರ ಕಾವ್ಯವು ಹೀಗೆ ವಚನ ಸತ್ವದಲ್ಲಿಯೂ ತನ್ನ ಬೇರುಗಳನ್ನೂರಿ ನಿಂತಿದೆ. ಹೀಗೆಯೇ ಅವರ ಕಾವ್ಯದ ಜಾನಪದ ಗುಣಗಳನ್ನು ಬೇಕಾದಷ್ಟು ಕಲೆಹಾಕಬಹುದು.[5] ಈ ಅರ್ಥದಲ್ಲಿಯೇ ಬೇಂದ್ರೆಯವರ ಕಾವ್ಯ ದೇಸಿಮಾರ್ಗಕ್ಕೆ ಸೇರಿದ್ದು. ಅವರ ಶ್ರೇಷ್ಠ ಕವಿತೆಗಳಾದ ಜೋಗಿ, ಮಾಯಾಕಿನ್ನರಿ, ಪಾತರಗಿತ್ತಿ, ಸಚ್ಚಿದಾನಂದ, ಹುಬ್ಬಳ್ಳಿಯಾವಾ, ಬೆಳಗು, ನಾದಲೀಲೆ, ಕಥೆಯಾದಳು ಹುಡುಗಿ ಮೊದಲಾದೆಡೆಗಳಲ್ಲೆಲ್ಲ ದೇಸಿಯ ಸೊಗಸು ಕಂಪಿನ ಅಲೆಗಳಂತೆ ತಂಬಿಕೊಂಡು ಘಮಘಮಿಸುತ್ತಿದೆ. ಪ್ರಕೃತಿ–ಪುರುಷ ಹಾಗೂ ಸೃಷ್ಟಿ ಇಂಥ ಕವಿತೆಗಳು ಬೆಡಗಿನ ವಚನಗಳಂತಿವೆ. ಹೀಗೆ ಕನ್ನಡ ದೇಸಿಕಾವ್ಯವಾಗಿ ನಿಲ್ಲುವ ಇವರ ಕಾವ್ಯಶ್ರೇಣಿಯನ್ನು ಗಮನಿಸಿದರೆ ಯಾವ ಸಂಕೋಚವೂ ಇಲ್ಲದೆ ಸಂಕುಚಿತಾರ್ಥದ ಭೀತಿಯೂ ಇಲ್ಲದೆ ಇವರನ್ನು ಜಾನಪದ ಮಹಾ ಕವಿಗಳೆಂದು ಕರೆಯಬಹುದು. 'ಅರಳು–ಮರಳು' ಸಂಕಲನಕ್ಕೆ ಮುನ್ನುಡಿ ಬರೆದ ಶ್ರೀ ವಿ. ಕೃ. ಗೋಕಾಕರು ಬಹುಶಃ ಇದೇ ಅರ್ಥದಲ್ಲಿಯೇ ಶ್ರೀ ಬೇಂದ್ರೆಯವರನ್ನು ಜನಪದ ಗೀತೆಗಳ ಚಕ್ರವರ್ತಿ ಎಂದು ಕರೆದಿರಬೇಕು. ಹೀಗೆ ಜನಪದ ಜೀವನದಲ್ಲಿ ಬೇರಿಳಿದಿದ್ದರಿಂದಲೇ ಇವರ ಪ್ರತಿಭೆಗೆ ಕೈಚಾಚಿದೆಡೆಯಲ್ಲೆಲ್ಲ ದೇಸಿಲಯಗಳು, ನುಡಿಗಾರಿಕೆ ಮತ್ತು ನಮ್ಮ ನಾಡಿನ ಕಾವ್ಯ ಪುರಾಣಗಳ ಕಥೆ ಕಲ್ಪನೆಗಳೇ ತೊಡಕಿಕೊಳ್ಳುತ್ತವೆ.

೪

ಅನುವಾದ ಹಾಗೂ ಅಧ್ಯಾತ್ಮ ಕವಿತೆಗಳು : ಶಿಲ್ಪ, ಲಯ ಹಾಗೂ ಜೀವನ ದೃಷ್ಟಿಗಳಲ್ಲಿ ನವ್ಯ ಮಾರ್ಗವು ಕನ್ನಡ ಕಾವ್ಯಕ್ಕೆ ಮಾಡಿದ ಕಾಯಕಲ್ಪವನ್ನು ಒಪ್ಪಿಕೊಂಡರೂ ಇದರ ಅಬ್ಬರ ಒಮ್ಮೊಮ್ಮೆ ಹೆಚ್ಚಿ ಹಿಂದಿನವರ ಕಾವ್ಯಗಳನ್ನು ಅಸಡ್ಡೆಗೆ ಗುರಿ ಮಾಡಿರುವುದುಂಟು. ಹಿಂದೆಲ್ಲ ವಿಮರ್ಶೆ ಬಹುಪಾಲು ಪ್ರಶಂಸೆ

---

[5] ಇವರ ಕಾವ್ಯದ ಜಾನಪದ ಸತ್ವವನ್ನು ಪ್ರತ್ಯೇಕ ಪ್ರಬಂಧದಲ್ಲಿ ವಿವರವಾಗಿ ವಿವೇಚಿಸಲಾಗುವುದು.

ಅಥವಾ ನಿಂದೆಯ ಮುಖವಾಡ ಧರಿಸಿದ್ದರೆ, ಇಂದು ಅದು ಪ್ರಾಂತ, ಗುಂಪುಗುಳಿತನ ದಿಂದ ಕಿಲುಬಿ ಹೋಗುತ್ತಿದೆ. ಬೇಂದ್ರೆಯವರ 'ಅರಳು–ಮರುಳು' ಸಾಹಿತ್ಯ ಅಕೆಡೆಮಿಯ ಪ್ರಶಸ್ತಿಪಡೆದು ಸನ್ಮಾನಿತವಾದ ಮೇಲೂ ಈ ಕೃತಿಯ ಅತಿ ಪ್ರಮುಖ ವೈಶಿಷ್ಟ್ಯವಾದ ಅಧ್ಯಾತ್ಮ ಹಾಗೂ ಅನುವಾದ ಕವಿತೆಗಳತ್ತ ಜನ ಕಣ್ಬಿರುಗಿಸದೆಹೋದದ್ದು ಆಶ್ಚರ್ಯ. ವಾಸ್ತವಿಕತೆ ಹಾಗೂ ಪ್ರಾಮಾಣಿಕತೆ ಎಂಬ ಪದಗಳು ಹಬ್ಬಿಸಿದ ಸಾಂಕ್ರಾಮಿಕ ಪಿಡುಗು ಅಷ್ಟಿಷ್ಟಲ್ಲ. ಈ ಪಿಡುಗಿನ ಭೀತಿಯಲ್ಲಿ ಕನ್ನಡದ ವಿಮರ್ಶೆ ನಮ್ಮ ನಾಡಿನ ಆಧ್ಯಾತ್ಮಿಕ ಮೌಲ್ಯಗಳನ್ನೆ ನಿರ್ಲಕ್ಷಿಸುವವರೆಗೆ ಹೋದದ್ದು ಅವನತಿಯ ಚಿಹ್ನೆಯಷ್ಟೇ ಆಗಿದೆ. ಆದಿಪುರಾಣದ ಪಂಪ, ವಚನಕಾರರು, ಕುಮಾರವ್ಯಾಸ ಇಂಥವರ ಕಾವ್ಯಗಳಲ್ಲಿ ಬಂದಿರುವ ಆಧ್ಯಾತ್ಮಿಕ ಮೌಲ್ಯಗಳು ಆ ಕಾವ್ಯಗಳ ಗಟ್ಟಿತನಕ್ಕೆ ಎಷ್ಟೋ ಕಾರಣವಾಗಿವೆ. ಹಾಗೆಯೇ ಇಂದಿನ ನಮ್ಮ ಕನ್ನಡ ಕಾವ್ಯದಲ್ಲಾದರೂ ಯಾಕಾಗಬಾರದು ಎಂಬ ಕುತೂಹಲವಾದರೂ ನಮಗೆ ಹುಟ್ಟದಿದ್ದರೆ ಗತಿಯೇನು ? ಶ್ರೀ ಬೇಂದ್ರೆ ಅವರಿಗೆ ಅರವತ್ತರ ಅರಳು–ಮರಳು ಆರಂಭವಾಗಿದೆ ಎಂದೇ ಅನ್ನಲಿ, ಅವರು ಮಾತ್ರ ದೃಢವಾಗಿ ತಮ್ಮ ಅನುಭವವನ್ನು ಕಾವ್ಯವಾಗಿ ಮಾಡುವ ಗಟ್ಟಿ ಪ್ರಯತ್ನವನ್ನು ಕಾಯಕದಂತೆ ನಡಸಿಬಿಟ್ಟರು. ಹಾಗಾಗಿಯೇ ಇಲ್ಲಿನ ಅನುವಾದಗಳು[6] ಹಾಗೂ ಸ್ವಂತ ಅಧ್ಯಾತ್ಮ ಕವಿತೆಗಳು ವಚನ ಹಾಗೂ ಕೀರ್ತನ ಸಾಹಿತ್ಯಗಳ ಪರಂಪರೆಯನ್ನು ಸಾರ್ಥಕವಾಗಿ ಬೆಳೆಸಿದಂತೆಯೇ ಕನ್ನಡಕ್ಕೆ ಅವುಗಳಿಗಿಂತ ಸ್ವಲ್ಪ ಭಿನ್ನವಾದ ಸವಿಯನ್ನೂ ತಂದುಕೊಟ್ಟವು.

ಹೃದಯ ಸಮುದ್ರದಲ್ಲಿನ ಕೆಲವು ಕವಿತೆಗಳು, ಮುಕ್ತಕಂಠ ಸಂಕಲನದ ಮೊದಲಿನ ಮುವ್ವತ್ತು ಪುಟಗಳಲ್ಲಿ ಹರಡಿರುವ ಕವಿತೆಗಳು, ಚೈತ್ಯಾಲಯದ ತುಂಬ ಇರುವ ಕವಿತೆಗಳು, ಜೀವಲಹರಿ ಹಾಗೂ ಸೂರ್ಯಪಾನಗಳಲ್ಲಿ ಅಲ್ಲಿಲ್ಲೊಂದು ಇರುವ ಕವಿತೆಗಳು ಇವರು ಅನುವಾದಿಸಿದ ಕೃತಿಗಳಾಗಿವೆ. 'ಕೃತಿಯು ರಸವತ್ತಾಗಬೇಕಾದರೆ ಭಾಷಾಂತರಕ್ಕಿಂತ ಭಾವಾನುವಾದವೇ ಲೇಸು' ಎಂದು ಚೈತ್ಯಾಲಯದ ಮುನ್ನುಡಿಯಲ್ಲಿ ಕವಿಗಳೇ ತಮ್ಮ ಅನುವಾದದ ರೀತಿ ಯಾವುದೆಂಬುದನ್ನು ಹೇಳಿದ್ದಾರೆ. ಸಂತಜ್ಞಾನೇಶ್ವರರ ಅನುಭವಾಮೃತ, ಶ್ರೀ ಶಂಕರಾಚಾರ್ಯರ ಆನಂದಲಹರಿ, ಶ್ರೀ ಅರವಿಂದರ ಸಾವಿತ್ರಿ ಕಾವ್ಯದ ಕೆಲ ತುಣಕುಗಳು ಹಾಗೂ ಅವರ ಅನೇಕ ಅನುಭಾವ ಕವಿತೆಗಳು, ಶ್ರೀ ವಾಸಿಷ್ಟ ಗಣಪತಿ ಮುನಿಗಳ ಹಾಗೂ ಶ್ರೀ ಕಪಾಲಿಶಾಸ್ತ್ರಿಗಳ ಉಕ್ತಿವಿನ್ಯಾಸದಿಂದ ಕೂಡಿದ ಶ್ರೀರಮಣ ಮಹರ್ಷಿಗಳ ಮೂಲಾನುಭವಗಳು, ಉಮರನ ಕೆಲವು ರುಬಾಯಿಯತ್‌ಗಳು ಈ ಅನುವಾದಿತ ಕೃತಿಗಳಲ್ಲಿ ಸೇರುತ್ತವೆ. ಈ ಕೃತಿಗಳು ಎಷ್ಟರಮಟ್ಟಿಗೆ ಕನ್ನಡ ಕಾವ್ಯ ಸಮೃದ್ಧಿಯನ್ನು ಹೆಚ್ಚಿಸುತ್ತವೆ ಎಂಬುದನ್ನು ಗಮನಿಸ ಬೇಕು.

---

[6] ಇಲ್ಲಿರುವ ಅನುವಾದಗಳೆಲ್ಲ ವಿಶೇಷವಾಗಿ ಅಧ್ಯಾತ್ಮಗೀತೆಗಳೇ.

ಸ್ವಪ್ನನೌಕೆ, ಮಿಹಿರದ್ವೀಪ, ಪ್ರಾಣಾಂಗನೆ, ಪ್ರತೀಕ್ಷಾಸಮಾಧಿ, ಅನಂತಸಾಹಸ, ಆರೋಹ ೧ ಮತ್ತು ೨, ಐಕ್ಯಸಾಗರ ಇಂಥ ಅನುವಾದಗಳನ್ನು ಓ ತಾಯಿ ಮಾಯಿ, ಧ್ರುವಮಾರ್ಗ, ಸಹಸ್ರತಂತ್ರೀ ನಿಃಸ್ವನದಂತೆ ಎಂಬಂಥ ಹಲವು ಸ್ವತಂತ್ರ ಅಧ್ಯಾತ್ಮ ಕವಿತೆಗಳನ್ನೂ ಗಮನಿಸಬೇಕು. ಯಾವುದೇ ಭಾಷೆಯ ಸಂಪತ್ತನ್ನು ಹೆಚ್ಚಿಸಬಲ್ಲ ಕೃತಿಗಳಿವು. ಉದಾಹರಣೆಗೆ ಸ್ವಪ್ನನೌಕೆ ಕವಿತೆಯನ್ನೆ ನೋಡೋಣ.

ಇದು ಅರವಿಂದರ Dream boat ಕವಿತೆಯ ಕನ್ನಡ ಸೃಷ್ಟಿಯಾಗಿದೆ. ಇದರ ಮಧುರಭಾವವು ಕನ್ನಡಿಗರಿಗೆ ಅದರಲ್ಲೂ ಅಕ್ಕನ ವಚನ ವೊದಲಾದುವನ್ನು ಓದಿದವರಿಗೆ ಹೊಸದೇನೂ ಅಲ್ಲ. ಇಲ್ಲಿ ಮದುವಣಿಗನಿಗಾಗಿ ಕಾಯುತ್ತಿರುವ ವಧುವಿನಂತೆ ದೇವರಿಗಾಗಿ ಕಾಯುತ್ತಿರುವ ಹಾಗೂ ಅನಂತರದಲ್ಲಿ ನಿರಾಶಳಾಗುವ ಜೀವದ ಚಿತ್ರವಿದೆ. ಜೀವದ ಮೇಲೆ ಕೃಪೆದೋರಿ ಬರುವ ದೇವನನ್ನು ಹಡಗೇರಿ ಬರುವ ಚಿರಯುವಕನನ್ನಾಗಿ ಕಲ್ಪಿಸಿಕೊಂಡಲ್ಲಿಯೇ ವಿಶೇಷ ಬೆಡಗಿದೆ. ಅವನಂತೂ ಜನಪದ ಕತೆಗಳಲ್ಲಿ ತನ್ನ ಪ್ರಿಯೆ ರಾಜಕುಮಾರಿಯನ್ನು ಒಲಿಸಲು ಬರುವ ರಾಜಕುಮಾರನಂತೆ ಬರುತ್ತಾನೆ. ಅವನು ಬರುವುದು ಸ್ವಪ್ನಾಗ್ನಿ ಸೃಷ್ಟ ಹಡಗನ್ನೇರಿ. ಅವನ ಹುಬ್ಬುಗಳು ಅನಂಗನು ಚಿತೆಯಲ್ಲಿ ಮಣಿಸಿದ ಕಬ್ಬಿನಂತಿವೆ. ಅವನ ಕಾಯ ಬಂಗಾರವಾಗಿ ಮಿಂಚುತ್ತಿದೆ. ಮೌನವನ್ನು ಕರಗಿಸಿ ಸೆಳೆಮಿಂಚಿನ ರೀತಿಯಿಂದವನು ವಧುವನ್ನು ಕೇಳುತ್ತಾನೆ :

> ' ಆ ಹೃದಯಾ ಜ್ವಾಲಾಮಾಲ್ಯಾಲಂಕೃತಾ ಯಜ್ಞಾ ಸಿದ್ಧವೇನೇ ?
> ಕಂಕಣಾಬದ್ಧವೇನೇ ?
> ಬಂದೆನೇ ! ಬರುವಿಯೇನೇ ? '

ಪ್ರಿಯನು ಬಂದ ಸಂಭ್ರಮ, ಮುಂದೇನಾಗುವುದೋ ಎಂಬ ದಿಗಲು, ಏನು ಮಾಡಬೇಕೆಂಬುದನ್ನರಿಯದ ಮುಗ್ಧ ದಿಗ್ಭ್ರಾಂತಿ ಇವುಗಳಿಂದ ವಧು ಸುಮ್ಮನೆ ನಿಂತು ಬಿಡುತ್ತಾಳೆ. ಗಳಿಗೆ ಮೀರಿತೆಂದು ಬಂದವನು ಹೋಗಿಬಿಡುತ್ತಾನೆ. ಭಗ್ನನೇ ಎಚ್ಚತ್ತ ಅವಳು ' ಓಹೋ ಹೋಯಿತೋ ಹಡಗಾ ಬಂಗಾರದ ಹುಡುಗಾ ' ಎಂದು ಪ್ರಲಾಪಿಸುತ್ತಾಳೆ. ' ಟೊಳ್ಳೋ ಈ ಜಗವೆಲ್ಲಾ ಬಯಲಿನ ಡೊಗರು. ಈ ಶೂನ್ಯತೆ–ಒಲವಿಲ್ಲ ಬಾರನು ನಲ್ಲ. ಹಳೆ ಹಿಗ್ಗಿಗೆ ಮೂಡದು ಚಿಗುರು ' ಎಂದು ನೋವಿನಿಂದ ಅವಳ ಹೃದಯ ನರಳುತ್ತದೆ. ದೇವರ ಕೃಪೆ ಬಂದಾಗ ಜೀವ ಬೆರಗಾಗಿ ಹಿಗ್ಗಿ ದುರ್ದೈವದಿಂದದು ದೂರವಾದಮೇಲೆ ಅದಕ್ಕಾಗಿ ಕೊರಗುವ ಈ ಆಧ್ಯಾತ್ಮಿಕ ಭಾವದಲ್ಲಿ ಪ್ರಣಯ ಕವಿತೆಯ ತಲ್ಲೀನತೆಯಿದೆ; ಇದರಲ್ಲಿ ಬಳಕೆಯಾಗಿರುವ ಭಾಷೆ ಪ್ರತಿಮೆಗಳಲ್ಲಿ ಭಾರತೀಯ ಸಂಸ್ಕೃತಿಯ ಮೌಲ್ಯಗಳ ಬೆಡಗಿದೆ. ಅನಂಗನು ಚಿತೆಯಲ್ಲಿ ಮಣಿಸಿದ ಹುಬ್ಬುಗಳು ಭಾರತೀಯ ಪ್ರೇಮ ತತ್ತ್ವವನ್ನೇ ಧ್ವನಿಸುತ್ತಿದ್ದರೆ ' ಹಿರಣ್ಯಾಗರ್ಭಚ್ಛಾಯಾ ' ಪದ ಪುಂಜವು ಶರೀರದ ಕಾಂತಿಯನ್ನು ಕುರಿತ ಹಾಗೂ ಹಿರಣ್ಯಗರ್ಭನಾದ ಬ್ರಹ್ಮದೇವನನ್ನು ಕುರಿತ ಅರ್ಥಗಳೆರಡನ್ನೂ ಒಟ್ಟೊಟ್ಟಿಗೆ ವ್ಯಂಜಕಗೊಳಿಸುತ್ತವೆ. ಬಂಗಾರದ ಹಡಗನ್ನೇರಿ

ಬಂದ ಹುಡುಗ–ಚಿರತರುಣನ ಚಿತ್ರವಂತೂ ಕವಿತೆಗೆ ರೋಮಾಂಚಕ ಅರ್ಥಪುಷ್ಟಿಯನ್ನು ಕೊಟ್ಟಿದೆ. ಅವನು ಆಡುವ ಮಾತುಗಳನ್ನು ನೋಡಿ:

‘ ಹೃದಯ ಜ್ವಾಲಾ ಮಾಲ್ಯಾಂಲಂಕೃತಾ ಯಜ್ಞಾ ಸಿದ್ಧವೇನೇ ?
ಕಂಕಣಾ ಬದ್ಧವೇನೇ ?’

ಈ ಮಾತುಗಳಲ್ಲಿ ಆಧ್ಯಾತ್ಮಿಕ ಹಾಗೂ ವೈವಾಹಿಕ ವಿಧಿಗಳೆರಡರ ಅರ್ಥದ ಪದರಗಳೂ ಬಿಡಿಸಲಾಗದಂತೆ ಬೆರೆತುಕೊಂಡಿವೆ. ‘ ಕಂಕಣಾಬದ್ಧವೇನೇ ’ ಎಂಬ ಪ್ರಶ್ನೆಯಲ್ಲಿ ತಾನಿನ್ನು ಕಾಯಲಾರದ ಆತುರವೇ ಅಭಿನಯಿಸಲ್ಪಟ್ಟಿದೆ. ‘ಬಂದೆನೇ !’ ಎಂಬ ಮಾತಿನ ಕೊನೆಯ ದೀರ್ಘ ಹಾಗೂ ಆಶ್ಚರ್ಯ ಚಿಹ್ನೆಗಳು ತಾನು ಬಂದಿರುವುದನ್ನು ಕಂಡು ನಂಬಲಾರದ ಮುಗ್ಧ ಹುಡುಗಿಯನ್ನು ನಂಬಿಸುವ ಆತ್ಮೀಯತೆಯಿಂದ ಕೂಡಿದೆ. ‘ ಬರುವಿಯೇನೇ ? ’ ಮಾತಿನಲ್ಲಂತೂ ಕರೆಯೂ ಇದೆ; ವಧು ಬರಲಾರದೆ ಹೋಗುವ ಸೂಚನೆಯೂ ಇದೆ. ಈ ನಾಲ್ಕು ಪಾದಗಳಲ್ಲಿರುವ ಭಾವಾಭಿನಯ ಅಮೋಘ ವಾದುದು. ಇಂಥ ಕಡೆ ಅನುವಾದ ಸ್ವತಂತ್ರ ಕೃತಿಯ ಗೌರವಕ್ಕೆ ಪಾತ್ರವಾಗುತ್ತದೆ. ಮುಂದಿನ ಸಾಲಿನಲ್ಲಿ ವರನು ತನ್ನನ್ನು ಬಿಟ್ಟೇ ಹೋದದ್ದಕ್ಕಾಗಿ ಪ್ರಾಣಪಕ್ಷಿ ಪಟಪಟನೆ ರೆಕ್ಕೆಬಡಿಯುತ್ತಿರುವ ಚಿತ್ರ ವಿರಹದ ತೀವ್ರತೆಯನ್ನು ಮನಗಾಣಿಸುತ್ತದೆ. ಉತ್ಕಟ ವಿರಹದಿಂದ ಕೂಡಿದ ಈ ಕವಿತೆಯ ಅರ್ಥದ ಸುರುಳಿಗಳು ಆಧ್ಯಾತ್ಮಿಕ ನೆಲೆಯವರೆಗೆ ಹರಡಿಕೊಳ್ಳುತ್ತ ಅರಳಿಕೊಳ್ಳುವದೇ ಈ ಕವಿತೆಯ ಯಶಸ್ಸಿಗೆ ಕಾರಣವಾಗಿದೆ. ಇಂಥ ಕೃತಿಗಳು ಕನ್ನಡ ಭಂಡಾರಕ್ಕೆ ಹೊಸ ಐಶ್ವರ್ಯಗಳನ್ನು ತುಂಬುತ್ತವೆ. ಉದಾಹರಣೆಗೆ ‘ ಮಿಹಿರ ದ್ವೀಪ ’ ಎಂಬ ಇನ್ನೂ ಒಂದು ಕವನವನ್ನು ಗಮನಿಸಬಹುದು.

ಜೀವ ಪರಮಾತ್ಮನ ಬೀಡಾದ ಮಿಹಿರ ದ್ವೀಪಕ್ಕೆ ಯಾತ್ರೆ ಹೊರಟದ್ದೇ ಇಲ್ಲಿಯ ವಸ್ತು. ಬಂಗಾರದ ಕಡಲು, ರಜತ ತೀರ, ದೃಷ್ಟಿದೀಪಿಸುವ ಕ್ಷೇತ್ರಗಳು, ಕೆಚ್ಚಿನ ಕಸುವಿನ ಬೆಟ್ಟಗಳು, ಹರ್ಷಜ್ವಾಲೆಯ ಶಿಖರಗಳು, ಆತ್ಮ ವಿಸ್ಮೃತಿಯ ಕಡಲುಗಳು, ರುದ್ರನಿದ್ರೆಗಳ ಗಿರಿದರಿಗಳು ಇವನ್ನು ದಾಟಿದರೆ ಅಲ್ಲಿ ಕಾಲರಹಿತವಹ ಕಾಲದ ಆಯನ–ಅಲ್ಲಿಯೇ ಮಿಹಿರದ್ವೀಪ. ಈ ಕವಿತೆಯಲ್ಲಿ ಆತ್ಮಯಾತ್ರೆಯ ತಾತ್ವಿಕ ಚಿಂತನೆಯ ವರ್ಣನೆಯಿದೆ. ಬೆಟ್ಟ ಕಡಲು, ತೀರ, ಶಿಖರಗಳು, ಗಾಳಿಗಳು ಇವೆಲ್ಲ ಸಿಂದಬಾದನ ಕಡಲಯಾತ್ರೆಯಲ್ಲಿ ಎದುರಾದ ವಿಸ್ಮಯಕರ ಚಿತ್ರಗಳಂತೆಯೇ ರಂಜಕ ವಾಗಿದ್ದು ಆಧ್ಯಾತ್ಮಿಕ ಚಿಂತನಾರ್ಥದಿಂದಲೂ ಕೂಡಿವೆ. ‘ ಕಾಲರಹಿತವಹ ಕಾಲದ ಆಯನ ’ ಎಂಬುದರ ಅರ್ಥವಂತೂ ಜೀವದೇವರ ಅವಿನಾಭಾವ ಬಾಂಧವ್ಯಗಳನ್ನೂ ಈ ಲೀಲೆಯ ಅಂತರಾರ್ಥಗಳನ್ನೂ ಕೂಡಿಸಿಕೊಂಡು ಉಪನಿಷದ್ವಾಣಿಯಂತಿದೆ. ಚರ್ವಣ ಮಾಡಿದಷ್ಟೂ ಅದರ ಸವಿಯೇರತೊಡಗುತ್ತದೆ. ಇಡೀ ಕವನದ ಭಾವಗಳು ಮತ್ತು ಚಿತ್ರಗಳು ಉರಿಯುತ್ತಿರುವ ಅಗ್ನಿಯಂತೆ ಧಗಧಗಿಸಿ ಪ್ರಜ್ವಲಿಸುತ್ತಿವೆ. ಅನಂತಸಾಹಸ, ಪ್ರತೀಕ್ಷಾ ಸಮಾಧಿ ಮೊದಲಾದ ಕವನಗಳಾದರೂ ಹಾಗೆಯೇ. ಈ

ಬಗೆಯ ಕವಿತೆಗಳಿಂದ ಕನ್ನಡಕ್ಕೆ ಹೊಸ ಸೊಗಸೊಂದನ್ನು ಬೇಂದ್ರೆಯವರು ತುಂಬಿ ಕೊಟ್ಟಿದ್ದಾರೆ.

ಕಾಲಕಾಲಕ್ಕೆ ಕನ್ನಡ ಭಾಷೆಯನ್ನು ಈ ಬಗೆಯಲ್ಲಿ ಹೊಸಹೊಸ ಅನುಭವಗಳಿಂದ ಸಿಂಗರಿಸುವ ಕಾರ್ಯ ನಡೆಯುತ್ತಲೇ ಬಂದಿದೆ. ಹನ್ನೆರಡನೆಯ ಶತಮಾನದ ವಚನಕಾರರ ಕಾಲದಲ್ಲಿ ಅವರು ಅಲೌಕಿಕ ಚಿಂತನೆಯ ಮುಕ್ತಾಫಲಗಳಂತಿರುವ ಉಪನಿಷತ್ತುಗಳ ಸಾರವನ್ನೂ ಹೀರಿಕೊಂಡು ಸಾಹಿತ್ಯ ಹಾಗೂ ಧರ್ಮ ಎರಡೂ ದೃಷ್ಟಿಗಳಿಂದ ಇನ್ನೂ ಹೆಚ್ಚಾದ ಸಿದ್ಧಿಯನ್ನು ಬಸವಣ್ಣ, ಅಲ್ಲಮನಂಥವರು ಪಡೆದರು. ಅವರ ವಚನಗಳಲ್ಲಿ ಆಧ್ಯಾತ್ಮಿಕ ಭಾವದಷ್ಟೇ ಮಾನವ ಮೌಲ್ಯ ಹಾಗೂ ಕಾವ್ಯಮೌಲ್ಯಗಳೂ ಬೆಲೆಪಡೆದು ನಿಂತವು. ಮುಂದೆ ಬಂದ ಕೀರ್ತನಕಾರರಲ್ಲಿ ಈ ಅಧ್ಯಾತ್ಮ ಮುಂದುವರಿಯಿತಾದರೂ ಅವರಿಗೆ ದರ್ಶನ ಮುಖ್ಯವಾದಷ್ಟು ಕಾವ್ಯಮೌಲ್ಯವೂ ಪ್ರಾಯಶಃ ಮುಖ್ಯವಾಗಿರಲಿಕ್ಕಿಲ್ಲ. ಅನೇಕ ವೇಳೆ ಕೀರ್ತನಗಳು ರಬ್ಬರನ್ನು ಉದ್ದಕ್ಕೆ ಜಗ್ಗಿ ಎಳೆದಂತೆ ಒಂದೇ ಭಾವವನ್ನು ಹಿಗ್ಗಲಿಸಿದ್ದಾಗಿ ಜೊಳ್ಳಾಗಿವೆ. ಆದರೆ ಕೀರ್ತನಕಾರರ ಈ ಸಾಹಿತ್ಯಿಕ ಸೋಲನ್ನು ಗಮನಿಸುವ ಭರದಲ್ಲಿ, ಅವರು ಅಲ್ಲಿಯವರೆಗೂ ಬಣ್ಣಬಣ್ಣದ ಕಾರಂಜಿಗಳಂತೆ ದೇಶದಲ್ಲೆಲ್ಲ ಚಿಮ್ಮುತ್ತಿದ್ದ ದೇಸಿಯ ಗೇಯ ರೂಪಗಳಿಗೆಲ್ಲ ಒಂದು ವ್ಯವಸ್ಥಿತವಾದ ಕರ್ಣಾಟಕ ಸಂಗೀತ ಪದ್ಧತಿಯ ಮಹದದ್ಭುತ ರೂಪವನ್ನು ಕೊಟ್ಟು ನಿಜವಾದ ಅರ್ಥದಲ್ಲಿ ದೇಸಿಯಗೇಯಕಾರರಾದುದನ್ನು ಮರೆಯಬಾರದು. ಬಹುಶಃ ಪುರಂದರರಂಥ ಪ್ರತಿಭಾಶಾಲಿಗಳ ಇಡೀ ಯತ್ನ ಕನ್ನಡದ ಪ್ರಚಲಿತ ಗೇಯರೂಪಗಳಿಗೆಲ್ಲ ಒಂದು ಘನವಾದ ಹರಳಿನ ರೂಪವನ್ನು ಕೊಡುವುದೂ ಆಗಿರಬೇಕು. ಹಾಗಾದ್ದರಿಂದಲೇ ಯಾವ ಕೀರ್ತನಗಳನ್ನೂ ಅವುಗಳ ರಾಗಕ್ಕಾಗಿಯೇ ವಚನಗಳನ್ನು ಜಗ್ಗಾಡಿದಂತೆ ಎಳೆದಾಡಬೇಕಾಗುವುದಿಲ್ಲ; ಕೀರ್ತನೆಗಳು ಸಂಗೀತ ಪದ್ಧತಿಗೆ ಬಿದ್ದೂ ಆತ್ಮೀಯತೆಯ ಧ್ವನಿಯನ್ನು ಉಳಿಸಿಕೊಂಡಿದೆ. ಅಲ್ಲದೆ ಅವರು ಭಾಗವತದ ಕಲ್ಪನೆಗಳನ್ನು ತಂದು ಶ್ರೀಕೃಷ್ಣನ ಬಾಲಲೀಲೆ, ರಾಸಲೀಲೆ, ಮುರಲೀಲೀಲೆ ಹಾಗೂ ದಶಾವತಾರ ಕಲ್ಪನೆಗಳಿಂದ ಕನ್ನಡವನ್ನು ಅಲಂಕರಿಸಿಬಿಟ್ಟರು. ಬೇಂದ್ರೆಯವರ ಕಾವ್ಯದ ಗೇಯತೆ ಹಾಗೂ ಕಾವ್ಯಮಯತೆಗಳಲ್ಲಿರುವ ಉತ್ತಮ ದಾಂಪತ್ಯವನ್ನು ಗಮನಿಸಿದರೆ ಕನ್ನಡದ ಉಳಿದ ಯಾವ ಕವಿಗಿಂತಲೂ ಹೆಚ್ಚಾಗಿ ಹಾಗೂ ಚೆನ್ನಾಗಿ ಶ್ರೀಬೇಂದ್ರೆಯವರು ದೇಸಿಯಗೇಯತೆಯನ್ನು ಕಾವ್ಯಕ್ಕೆ ಬಳಸಿಕೊಂಡಿರುವುದು ತಿಳಿಯುತ್ತದೆ. ಇವರು ವಚನ ಮತ್ತು ಕೀರ್ತನೆಗಳ ಸೊಗಸನ್ನು ಕನ್ನಡದಲ್ಲಿ ಬೆಳಸಿದವರೂ ಆಗಿದ್ದಾರೆ. ಅಲ್ಲದೆ ಉಪನಿಷತ್ತಿನ ಆತ್ಮ ಸಾಹಸಯಾತ್ರೆಯ ಅಲೌಕಿಕ ಚಿಂತನಗಳ ಪರಂಪರೆಯನ್ನು ಈ ಅನುವಾದಗಳಿಂದ ಕನ್ನಡಕ್ಕೆ ತಂದವರೂ ಆಗಿದ್ದಾರೆ. ಈ ಬಗೆಯ ಅನುವಾದ ಹಾಗೂ ಸ್ವಂತ ಕೃತಿಗಳ ಅಧ್ಯಾತ್ಮದ ಬೆಲೆಗಳನ್ನು ಗಮನಿಸಿದರೆ ಒಂದರ್ಥದಲ್ಲಿ ದೇವುಡುರವರ ನೆನಪಾಗುತ್ತದೆ. ಮಹಾಬ್ರಾಹ್ಮಣ, ಮಹಾಕ್ಷತ್ರಿಯ, ಮಹಾದರ್ಶನಗಳಲ್ಲಿ ಭಾರತೀಯ ಆರ್ಷ ಜೀವನವನ್ನು ಪುನಸ್ಸೃಷ್ಟಿಸುವ ಕಾರ್ಯವನ್ನವರು

ಮಾಡಿದಂತೆ ಇವರೂ ಭಾರತದ ಮಹಾ ಅಧ್ಯಾತ್ಮವಾದಿಗಳಾದ ಶಂಕರರ ಕಾವ್ಯಮಯವಾದ ಆನಂದಲಹರಿ, ಅರವಿಂದರ ಬಹು ಪ್ರತಿಭಾನ್ವಿತವಾದ ಕವಿತೆಗಳು, ಸಂತಜ್ಞಾನೇಶ್ವರರ ಅಮೃತಾನುಭವ ಇಂಥವನ್ನು ಕನ್ನಡಿಗರಿಗಾಗಿ ಸೃಷ್ಟಿಸಿದ್ದಾರೆ. ಇವು ಅನುವಾದಗಳೆಂಬುದಕ್ಕಿಂತ ಮೂಲಕೃತಿಗಳ ತೇಜಸ್ಸಿನಿಂದ ಕೂಡಿವೆ ಎನ್ನಬೇಕು. ಈ ಕವಿತೆಗಳಲ್ಲಿ ಅವರು ಬಳಸುವ ಪ್ರಾಣಲಿಂಗ, ಬಯಲು, ನಿರ್ವಯಲು, ಅಗ್ನಿಲಿಂಗ, ನೆಲದ ನಿಧಾನ ಈ ವಚನ ಪರಿಭಾಷೆಯನ್ನು ಲಕ್ಷಿಸಿದರೆ ಅವರ ಸಾಧನೆಯ ಅರಿವಾದೀತು.

ಕಾಲಿದಾಸನ ಮೇಘದೂತ, ನಮ್ಮ ಕೊನೆಯ ಶರಣು ಇಂಥವನ್ನು ಅನುವಾದಿಸಿ ಕನ್ನಡಕ್ಕೆ ತಂದಾಗ ಅವರು ಪಡೆದಿರುವ ಸಿದ್ಧಿಯನ್ನು ಬಲ್ಲವರಿಗೆ ಅವರ ಅನುವಾದಗಳೇ ಎಂಥ ಕಾಣಿಕೆ ಕನ್ನಡಕ್ಕೆ ಎಂಬುದು ತಿಳಿಯುತ್ತದೆ. ಶ್ರೀ ಬೇಂದ್ರೆಯವರು ಅನುವಾದಗಳಲ್ಲಿ ಭಾವಾನುವಾದ ಕ್ರಮವನ್ನೇ ಅನುಸರಿಸುವ ಕಾವ್ಯನಿಷ್ಠೆ ಉಳಿಸಿಕೊಂಡದ್ದು ಕನ್ನಡದ ಭಾಗ್ಯವಾಗಿದೆ. ಇವರು ಉಮರನ ಕೆಲವು ರುಬಾಯಿಯತ್‌ಗಳನ್ನು ಚಾಚು ತಪ್ಪದೆ ಅನುವಾದಿಸಿದ್ದಾರೆ. ಅದರ ಸ್ಫೂರ್ತಿಯಿಂದ 'ಓಮರ' ಹೆಸರಿನಡಿ ಅನೇಕ ಮುಕ್ತಕಗಳು ಪ್ರಕಟವಾಗಿವೆ. ಅವುಗಳಲ್ಲಿ ದೇಶೀಯ ಮುಕ್ತಕದ ಹೊಳಪು ಕಾಣುವುದುಂಟು. ಉದಾಹರಣೆಗೆ ಇದನ್ನು ನೋಡಿ :

'ಕಣ್ಣು ನನ್ನದೇ? ಮನವು ನನ್ನದೇ? ಜಿಹ್ವೆ ನನ್ನದೇನೇ?
ನಿನ್ನದಯ್ಯ ಶಿವ' ಎಂದು ಬಾಳಿದನು ತನ್ನದೆನ್ನದೇನೇ!
ತನ್ನ ಮರೆವಿಗೇ ತನ್ನ ಅರಿವಿನಲಿ ನಕ್ಕ ವಿಶ್ವಬಂಧು
ನೀನು ನಕ್ಕರದು ಅಕ್ಕರಹುದೆ? –ಸರ್ವಜ್ಞ ನಕ್ಕನೆಂದು!

ಚೌಪದಿಯಾಗಿದ್ದರೂ ತ್ರಿಪದಿಯ ಕೊನೆಯ ಸಾಲಿನ ತಿರುವನ್ನು ಇದು ಬಿಟ್ಟುಕೊಟ್ಟಿಲ್ಲ. ಜಾನಪದ ಮುಕ್ತಕದಂತೆ ದೇಸಿಯ ಮುಕ್ತಕವಾಗಿ ಬಂದಿದೆ. ಯಾವುದೇ ಪದ್ಯಜಾತಿಯನ್ನು ತನ್ನ ನಾಡಿನ ಸಂಪ್ರದಾಯಕ್ಕೆ ಒಗ್ಗಿಸಿಕೊಳ್ಳುವ ಶಕ್ತಿಯಿಂದ ಕೂಡಿದುದಾಗಿದೆ ಶ್ರೀ ಬೇಂದ್ರೆಯವರ ಪ್ರತಿಭೆ.

ಆರೋಹ, ಐಕ್ಯಸಾಗರ, ಪ್ರತೀಕ್ಷಾಸಮಾಧಿ ಇಂಥ ಕವಿತೆಗಳ ಛಂದಸ್ಸನ್ನು ಕುರಿತು ಒಂದು ಮಾತು ಹೇಳಬೇಕಾಗಿದೆ. ಅಕ್ಷರ ವೃತ್ತಲಯದಿಂದ ಕೂಡಿದ ಇವುಗಳ ನಡಿಗೆ ಸಾಮಗಾನ ಘೋಷದಂತಿದೆ. ಶ್ರೀ ಬೇಂದ್ರೆಯವರೇ ಇದನ್ನು ಕುರಿತು 'ಕೆಲ ಕವನಗಳಿಗಾಗಿ ಬಳಸಿದ ಛಂದಸ್ಸಿನಲ್ಲಿ ಒಂದು ಬಗೆಯ ಹೊಸತು ಇದೆ' ಎಂದು ಚೈತ್ಯಾಲಯದ ಮುನ್ನುಡಿಯಲ್ಲಿ ಸೂಚಿಸಿ, ಅದನ್ನು ಸಾಮಗಾನದಲ್ಲಿ ಸ್ವರವಿಸ್ತಾರ ಮಾಡಿಕೊಳ್ಳುವಂತೆ ಉಚ್ಚರಿಸುವಾಗ ಗಮನಿಸಬೇಕೆಂದಿದ್ದಾರೆ. ಅದರಲ್ಲಿ ಅತಿಶಯೋಕ್ತಿಯೇನೂ ಇಲ್ಲ. ಅವರ ಸ್ವತಂತ್ರ ಕವಿತೆ 'ಸಪ್ತಕಲಾ'ದಲ್ಲಿ ಈ ಛಂದಸ್ಸಿನ ಬಳಕೆ ಮೊದಲಾಗಿದೆ. ಅಲ್ಲಿನ್ನೂ ಆ ಲಯಕ್ಕೆ ಬಿಗುವು ಬಾರದೆ ಎಳೆದಾಟವಿದೆ; ಇನ್ನೂ ಆ ಛಂದ ಪೂರಾ ಒಗ್ಗಿಲ್ಲದಿರುವುದು ಸ್ಪಷ್ಟ. ಆದರೆ ಮುಂದೆ 'ಐಕ್ಯಸಾಗರ'ದಲ್ಲಿ ಮಾತ್ರ ಈ ಲಯದ ಬೆಡಗೇ ಬೇರೆಯಾಗಿಬಿಟ್ಟಿದೆ.

ಇಗೋss ಈ ಮೌನಾ ಸುತ್ತೂ ಮುತ್ತೂ ಜಗದಗಲಾ ವಾಚಾತೀತಾ
ಶ್ವೇತಾss ಶುಭ್ರಾ ಸ್ಫೀತಾ ಖಗಮಾಲಾ ಸಾಗರ ಮಗ್ನಾs
ದಿಗಂತೋಡ್ಡೀನಾ ಲೀನಾ
ನಿಃಶಬ್ದಾಕಾಶವ್ಯಾಪ್ತಾs ನಿರ್ನಾದಾ ಪಾರಾವಾರಾ
ನೀಲಾಂತರ್ನೀಲಾ ಅಗಾಧಾss ಅನ್ಯೋನ್ಯಾ ಸಾಕ್ಷೀ ಮೂಕಾ
—ಇಗೋ ಈ ಮೌನಾ.

ಇಂಥ ಬರೆವಣಿಗೆಯಿಂದ ಯಾವ ಭಾಷೆತಾನೆ ಸಂಪದ್ಯುಕ್ತವಾಗುವುದಿಲ್ಲ? ಯಾವ ಕವಿತಾನೆ ಆ ಭಾಷೆಯ ಜನದ ಕೃತಜ್ಞತೆಗೆ ಪಾತ್ರನಾಗುವುದಿಲ್ಲ? ಛಂದಸ್, ಕಾವ್ಯ ಎರಡೂ ಮಂತ್ರವಾಗಿವೆ ಇಲ್ಲಿ. ಕನ್ನಡಕ್ಕೆ ಈ ವೇದಘೋಷವನ್ನು ತುಂಬಿದ ಹಿರಿಮೆಯೂ ಬೇಂದ್ರೆಯವರದಾಗಿದೆ.

ಹೃದಯಸಮುದ್ರ, ಧ್ರುವಮಾರ್ಗ, ಓ ತಾಯಿ–ಮಾಯಿ, ಸಹಸ್ರ ತಂತ್ರೀ–ನೀಸ್ವನದಂತೆ ಎಂಬಂಥ ಸ್ವತಂತ್ರ ಕವಿತೆಗಳು ಕೂಡ ಬೇಂದ್ರೆಯವರ ಪ್ರತಿಭೆಯ ಛಾಪಿನಿಂದ ದೂರವಾಗಿಲ್ಲ; ಅಲ್ಲೂ ಅದೇ ಕಾಂತಿ ಕಸುವುಗಳಿವೆ.

'ಅರಳು–ಮರಳು' ಕೃತಿಯಲ್ಲಿ ಬಹು ಪ್ರಧಾನಭಾಗ ಇವಾದ್ದರಿಂದಲೇ ಇಷ್ಟು ದೀರ್ಘವಾಗಿ ಈ ಕವಿತೆಗಳ ಪ್ರಧಾನಾಂಶಗಳನ್ನು ಲಕ್ಷಿಸಿದ್ದಾಯಿತು. ಬೇಂದ್ರೆಯವರ ಅನುವಾದ ಹಾಗೂ ಅಧ್ಯಾತ್ಮ ಗೀತೆಗಳಲ್ಲಿರುವ ಇಷ್ಟು ಗುಣಾಂಶಗಳನ್ನು ಲಕ್ಷಿಸಿದ ಮೇಲೆ ಅವರ ಕಾವ್ಯದ ಒಂದೆರಡು ತೊಡಕು ತಂಟೆಗಳನ್ನು ಅಲ್ಲಗಳೆಯಬೇಕಾದುದೇನೂ ಇಲ್ಲ. ರಮಣ ಹೃದಯ ಎಂಬ ೧೫೬ ಸಾಲುಗಳಷ್ಟು ಹರಡಿರುವ ಬಹುಪಾಲು ಕವಿತೆ ಸಾಹಿತ್ಯದೃಷ್ಟಿಯಿಂದ ನೀರಸವಾಗಿಬಿಡುತ್ತದೆ. ಹೃದಯ–ಪುಂಡರೀಕ, ಪಂಚಮುಖ, ವಿಶ್ವ ಒಂದು ಅಶ್ವ ಇಂಥ ಹಲವಾರು ಕವಿತೆಗಳಲ್ಲಿನ ಅಧ್ಯಾತ್ಮ ಕೇವಲ ಶಾಬ್ದಿಕವಾಗಿದೆ. ಹಲವೊಮ್ಮೆ ಬೇಂದ್ರೆಯವರ ಪ್ರತಿಭೆ ಕಾಮರೂಪಿಯಾಗಬಹುದಾದ ಹಾಗೆಯೇ ಕೇವಲ ಆಧ್ಯಾತ್ಮಿಕ ಹಾಗೂ ಬೌದ್ಧಿಕ ಚಮತ್ಕಾರಗಳಲ್ಲಿ ತೊಡಗುವುದೂ ಉಂಟು. ಉದಾಹರಣೆಗೆ ಜೀವಲಹರಿಯ 'ಕಿಡಿ–ಕಿಡಿ'ಯ ಈ ಎರಡು ಪದ್ಯಗಳನ್ನು ನೋಡಿ:

ನನ್ನ ಯಕ್ಷಿ (X) ಗೆ
ನನ್ನ ಸಾಕ್ಷಿ (Psyche) ಗೆ
ಮುತ್ತಿನೀ ಮುಡಿಪಿಡುವೆನು
ಚಿತ್ತಯಕ್ಷನು
ನಿತ್ಯದಕ್ಷನು
ಮುತ್ತಿನ್ನೇನನು ಕೊಡುವನು?

* * *

ಸಂಖ್ಯೆ ಎಂಬುವದು ಆಕೃತಿ ಭಾಷೆ
ಆಕೃತಿ ಎಂಬುದು ಸಂಖ್ಯೆಯ ಆಸೆ
ಸಂಖ್ಯಾಕೃತಿಯಲಿ ಗುಣ ಮೈದೋರೆ
ಕ್ರಿಯಾಶೀಲವಾಯಿತು ಆ ಹೋರೆ.

ಈ ಬಗೆಯ ಬರೆವಣಿಗೆಯಲ್ಲಿನ ಅಧ್ಯಾತ್ಮವು ದೊಂಬರಾಟದಂತೆ ಕಾಣಿಸಿದರೆ ಆಶ್ಚರ್ಯವಿಲ್ಲ. ಆದರೆ ಇಂಥವನ್ನು ಮಾತ್ರವೇ ಹುಡುಕಿನೋಡುತ್ತ ಹೋದರೆ ಕವಿ ಬೇಂದ್ರೆಯವರಿಗೆ ಅಪಚಾರವಾಗುತ್ತದೆ ಎಂಬ ಎಚ್ಚರವಮಾತ್ರ ಇರಬೇಕು.

೫

ವಿಡಂಬನ ಕವಿತೆಗಳು : ಓ ಚಾರ್ವಾಕು, ಮಧುವಾತಾ ಋತಾಯತೇ, ಬೀದಿನಾಯಿ ರಾಧೆ, ಕಗ್ಗ, ಕೆಲಸಿಗರ ಹಾಡು, ಸದ್ದು, ವೈತಂಕವಾದ, ಪ್ರಾಣಿಗಳು, ಗಿರಡಿ–ಬುರಡೀ ಅವರ ಸಾಮಾಜಿಕ ತತ್ತ್ವಜ್ಞಾನ, ಯಮದೇವನ ಒಕ್ಕಲು, ಶ್ರೀಕೃಷ್ಣ ಪಕ್ಷದ ಮಧ್ಯರಾತ್ರಿ, ಹುಚ್ಚನ ಹಾಡು, ಬಿಚ್ಚುಹಾಡು, ಊರು ಮತ್ತು ಖಾಲ್ಡಿಯಾ, ದರಿದ್ರನಾರಾಯಣ ಇವೆಲ್ಲ ವಿಡಂಬನದ ಗುಂಪಿಗೆ ಸೇರಿದ ಕವಿತೆಗಳು.

ಕಗ್ಗ, ಕೆಲಸಿಗರಹಾಡು, ಹುಚ್ಚನಹಾಡು, ಊರು ಮತ್ತು ಖಾಲ್ಡಿಯಾ, ಸದ್ದು, ಓ ಚಾರ್ವಾಕು ಇವುಗಳ ವಿಡಂಬನದ ಮೊನೆ ಹರಿತ. ಸಾಲದುದಕ್ಕೆ ಕವಿಯ ವಾಚಾಳಿತನವೂ ಹೆಚ್ಚಾಗಿಯೇ ಇದೆ.

> ಚಾರ್ವಾಕು ! ನೀನು ಕಾರ್ಮಿಕರ ಗಂಡ, ಧಾರ್ಮಿಕರ ಮಿಂಡ ಅಬ್ಬಾ
> ಕಳ್ಳಸಂತೆ ಸಿರಿವಂತ ಸಭ್ಯರಾ ನರ್ಮ ಸಚಿವನೊಬ್ಬಾ
> ಅಪ್ಪ ಶಿಕ್ಷಿತನು ಅವ್ವ ಧೂರ್ತೆ, ಅಂಥವರ ಮಗನು ನೀನು
> ಕ್ಷಣಿಕ ಬಾಳು ತಾತ್ಪೂರ್ವ ತರ್ಕ ಆ ನಿಜದ ಗೊಡವೆ ಏನು ?

ಈ ಬಗೆಯ ಮಾತಿನ ಗತ್ತು ಇದ್ದರೂ ದರಿದ್ರನಾರಾಯಣ, ಮಧುವಾತಾ ಋಣಯತೇ ಮತ್ತು ಬೀದಿನಾಯಿ ರಾಧೆ ಗಂಭೀರತರ ವಿಡಂಬನ ಕವಿತೆಗಳಾಗಿವೆ. ದರಿದ್ರನಾರಾಯಣ ಕವನದ ಈ ಸಾಲುಗಳನ್ನು ನೋಡಿ :

> " ಗಾಂಧಿ ಜಯಂತಿ ದಿನ ಸತ್ಯವನ್ನಾಡೋಣ
> ಸುಳ್ಳಿಗೋ ಇಡಿವರುಷ ತೆರೆದೆ ಇಹುದು."

ಎಂದು ಅಭೂತಪೂರ್ವವಾಗಿ ಆರಂಭವಾಗುವ ಈ ಕವಿತೆಯಲ್ಲಿ ಹರಡಿರುವ ನಾಡಿನ ಚಿತ್ರಗಳು ಇವು :

> ಕಳ್ಳರಿಗೆ ಸೆರೆಮನೆಯು ಸೂಳೆಗೋ ಅರಮನೆಯು
> ಬೈರಾಗಿ ದಂಪತಿಗೆ ಧರ್ಮ ಶಾಲೆ
>
> * * * *
>
> ಕಾಯಕವು ಕೈಲಾಸ ಭಕ್ತರಿಗೆ ಉಪವಾಸ
> ಶರಣರಿಗೆ ವನವಾಸ ಉಳಿವಿ ಹಾದಿ
> ಎಲ್ಲೆಲ್ಲೊ ಇದ್ದವರಿಗಲ್ಲಲ್ಲೆ ಮಣ್ಣಾಯ್ತು
> ಬಸವಣ್ಣನವರಿಗೋ ಜಲ ಸಮಾಧಿ.

ಇಷ್ಟು ಅರ್ಥಪೂರ್ಣವಾಗಿರುವ ಈ ಕವಿತೆಯು ಕೊನೆಗೂ ಸ್ವಲ್ಪ ವಾಚಾಳಿತನ ಹಾಗೂ ಸಡಿಲತೆಯಿರುವುದನ್ನು ಒಪ್ಪಿಕೊಂಡರೂ ಈ ಪದ್ಯದ ವಿಡಂಬನವು ತಾತ್ಸಾರ

ಹಾಗೂ ಟೀಕೆಗಳ ಮೂಲದಿಂದ ಚೇಳಿನ ಕೊಂಡಿಯಂತಾಗಿಲ್ಲ. ಸಮಾಜದ ಅವನತಿಯನ್ನು ಕಂಡ ನೋವಿನಿಂದ ಈ ಮಾತುಗಳಿಗೆ ಒಂದು ತೀಕ್ಷ್ಣತೆ ಬಂದಿದೆ. ಒಳ್ಳೆಯ ವಿಡಂಬನ ಕವಿತೆಯಿದು. ಮಧುವಾತಾಋತಾಯತೇ ಕೂಡ ಇದೇ ರೀತಿ ಯಶಸ್ವಿಯಾಗಿದೆ. ಇಲ್ಲಿ ಬೇಂದ್ರೆಯವರ ಬರೆವಣಿಗೆ ಸ್ವಚ್ಛಂದ ಛಂದದಲ್ಲಿ ನಡೆದಿದೆ. ನವ್ಯ ಮಾರ್ಗದ ಥಾಟಿಯೆನ್ನಬಹುದಾದ ಅನ್ಯಭಾಷಾಪದಗಳನ್ನು ಮಾತಿನ ಗತ್ತಿಗಾಗಿ ಬಳಸುವ ರೀತಿಯೂ ಇಲ್ಲಿದೆ. ಆದರೆ ಈ ಸಾಲುಗಳನ್ನು ನೋಡಿ :

ಫ್ರಾಡು, ಮಾರ್ಕ್ಸ್, ಆಡ್ಲರು ಜುಂಗು, ಮೇಲೀಗ ಏನಸ್ಟೀನು
ಕ್ಯಾಪಿಟಲ್ಲು ಏನು ? ಆಟಮ್ಮು ಬಾಂಬು, ತಲೆತುಂಬ ತಿಂಡಿ ಹೇನು
*   *   *   *
ಸುಂದೋಪಸುಂದರಾಖ್ಯಾನ ಮತ್ತೆ ಜನಜಾತ್ರೆ ಯಕ್ಷಗಾನ
ನವಭಾಗವತರೆ ಬಲ್ಲವರು ಅದರ ಆ ವಿಷವು ತಾನಮಾನ.

ಎರಡನೆಯ ಸಾಲಿನ ಕೊನೆಗಿರುವ 'ತಲೆ ತುಂಬ ತಿಂಡಿ ಹೇನು!' ಎಂಬ ಮಾತುಗಳು ವಿಡಂಬನೆಯೆಂಬುದಕ್ಕಿಂತ ಸಿಂದನೆಯಾಗಿವೆ. ಅಲ್ಲದೆ ಮೂರನೆಯ ಸಾಲಿನ ಅರ್ಥ ತಾನಾಗಿ ಪೂರ್ಣವಾಗಿದೆ; ನಾಲ್ಕನೆಯ ಸಾಲು ಮೂರನೆಯ ಸಾಲಿನ ಅರ್ಥವನ್ನೆ ಮತ್ತೆ ಹೇಳಲು ರಚಿತವಾಗಿದೆ. ಈ ಬಗೆಯ ಮಾತುಗಾರಿಕೆ ರಚನೆಯಲ್ಲಿ ಶಿಥಿಲತೆಯನ್ನುಂಟುಮಾಡಿ ವಿಡಂಬನದ ಮೊನೆಯನ್ನು ಮೊಂಡುಮಾಡಿ ಬಿಡುತ್ತದೆ. ಈ ಕವಿತೆಯ ಕೊನೆಯ ಭಾಗವೆಲ್ಲ ಇದಕ್ಕೆ ಉದಾಹರಣೆಯಾಗುತ್ತದೆ ಎನ್ನಬಹುದು.

ಬೀದಿನಾಯಿ ರಾಧೆ ಕವಿತೆ ತುಂಬಾ ಯಶಸ್ವಿಯಾಗಿದೆ ಎನ್ನಬಹುದು.

ಬೀದಿನಾಯಿ ರಾಧೆಗೆ
    ಹೊಟ್ಟೆತುಂಬ ಮೊಲೆಗಳು
ಹೊಟ್ಟೆತುಂಬ ಎದೆಯುತುಂಬ
    ಜೋಲು ಮೊಲೆಯ ಸಾಲ್ಗಳು.

ಎಂದು ಈ ಕವಿತೆ ಆರಂಭವಾಗುವಾಗಲೆ ಈ ವಿಡಂಬನದ ಮೂಲ ಕರುಣವಾಗಿದೆ 'ಹೊಟ್ಟೆತುಂಬ ಮೊಲೆಗಳು' ಎಂಬಲ್ಲಿನ ವ್ಯಂಗ್ಯವನ್ನು ಗಮನಿಸಬೇಕು. ಮೊಲೆ ತಾಯ್ತನದ ಸಂಕೇತವಾಗಿ ಆ ರಾಧೆಯ ಹೊಟ್ಟೆತುಂಬ ತಾಯಿತನವೇ ತುಂಬಿರುವ ಕರುಣಾಜನಕ ಸ್ಥಿತಿ ಕಂಬನಿ ಮಿಡಿಸುತ್ತದೆ. 'ಹೊಟ್ಟೆತುಂಬ ಎದೆಯ ತುಂಬ ಜೋಲು ಮೊಲೆಯ ಸಾಲ್ಗಳು' ಎಂಬ ಮುಂದಿನ ಎರಡು ಸಾಲುಗಳಲ್ಲಿ ಆ ನಾಯಿಯ ಶೋಷಣೆಗೊಂಡ ದರಿದ್ರಸ್ಥಿತಿ ಚಿತ್ರಿತವಾಗಿದೆ. 'ರಾಧೆ' ಎಂಬ ಅಂಕಿತ ನಾಮ ಕವನ ಬೆಳೆದಂತೆ ಈ ಕವಿತೆಯ ಅರ್ಥ ನಾಯಿಗೆ ಮಾತ್ರ ಸೀಮಿತವಾಗದೆ ಮಾನವಪ್ರಾಣಿಗೂ ಹಬ್ಬಿಕೊಳ್ಳುವಂತೆ ಮಾಡಿದೆ.

ಹರುಕ ತಿರುಕ ಹಾದಿ ಹೋಕ
ಚೋರ ಪೋರನಲ್ಲನು.

ಎಂಬ ಮಾತುಗಳಲ್ಲಿದು ಸ್ಪಷ್ಟವಾಗಿ ಬೆಳೆಯುವುದು. ಅಷ್ಟೇ ಅಲ್ಲ ಶ್ರೀ ಕೃಷ್ಣನ ಪ್ರಣಯಿನಿ ರಾಧೆಯನ್ನೂ ನೆನಪಿಗೆ ತರುವುದು; ಜೊತೆಗೇ ಆ ರಾಧೆಗೂ ಈ ರಾಧೆಗೂ ಇರುವ ಕರುಣಾಜನಕ ಸ್ಥಿತಿಯ ಅಂತರವೂ ಬೆಳೆದು ಕವನದ ಅರ್ಥ ಹಾಗೂ ಪರಿಣಾಮಗಳನ್ನು ಹೆಚ್ಚಿಸಿಬಿಡುವುದು.

ಬೀದಿನಾಯಿ ರಾಧಿಯು
ಮೊನ್ನೆ ಹೇಗೊ ಸತ್ತಳು
ದುರುಳನೊಬ್ಬ ಏಕೊ ನಕ್ಕ
ಹೊಲಸೂಳೆಯು ಅತ್ತಳು.

ಇಲ್ಲಂತೂ ಕವಿತೆಯದು ಪೂರ್ಣಯಶಸ್ಸಾಗಿದೆ. ವಿಡಂಬನೆ ಹೀಗೆ ಕರುಣೆಯ ಆಳದಿಂದ ಮೂಡಿದಾಗ ಕವಿತೆಯಲ್ಲಿ ವಸ್ತುನಿಷ್ಠೆ ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಕವಿಯ ವೈಯಕ್ತಿಕ ಒಲವು ಓರೆಗಳು ಕವಿತೆಯಲ್ಲೂ ವಿಡಂಬಲನದ ಮುಸುಕಿನಲ್ಲಿ ಹೊರಬೀಳುತ್ತವೆ. ('ಕೇಳಿರೊಂದು ಸೋಜಿಗ' ಎಂಬ ಕವಿತೆಯನ್ನು ಚರಮ ಕವಿತೆಗಳ ಗುಂಪಿನಲ್ಲಿ ಪ್ರಸ್ತಾಪಿಸಲಾಗುವುದು).

೬

ಚರಮಕವಿತೆಗಳಲ್ಲಿ ಪ್ರಮುಖವಾದುವು ಎರಡು : ಕೇಳಿರೊಂದು ಸೋಜಿಗ ಮತ್ತು ಮಹಾಪ್ರಸ್ಥಾನ. ಇವೆರಡೂ ಶ್ರೇಷ್ಠ ಕವಿತೆಗಳಾಗಿವೆ, (ಗೆಳೆಯ 'ಶಂಕರಗೌಡರಿಗೆ' ವ್ಯಕ್ತಿ ಕವಿತೆಗಳಲ್ಲಿ ಬಂದಿದೆ). ಕೇಳಿರೊಂದು ಸೋಜಿಗ ಮಹಾತ್ಮ ಗಾಂಧೀಜಿಯವರ ಮರಣವನ್ನು ಕುರಿತ ಕವಿತೆ.

ಹೀಗು ಉಂಟು ಈ ಜಗ
ಕೇಳಿರೊಂದು ಸೋಜಿಗ

ಎಂದು ಅತ್ಯಂತ ನಾಟಕೀಯವಾಗಿ ಆರಂಭವಾಗುವ ಈ ವಿಷಾದ–ವಿಸ್ಮಯ ಗಾಂಧಿಯ ಸಾವನ್ನು ಕುರಿತದ್ದಾಗಿದೆ. ಇದು ಬೆಳೆಯುವ ರೀತಿ ನೋಡಿ :

ಪ್ರಾರ್ಥನೆಗೇ ಬಂದರಂತೆ
ಆಗದವರು ಕೊಂದರಂತೆ
ಗಾಂಧಿಯವರು ಬಿದ್ದರಂತೆ
ನೋಡುವವರು ಇದ್ದರಂತೆ
... ...
....
ಗಾಂಧೀಜೀ ಮಹಾತ್ಮರಂತೆ
(ಆದರೂನು) ಅಂತು ಒಮ್ಮೆ ಸತ್ತರಂತೆ.

ಇಲ್ಲಿಯ ಮಾತುಗಳಲ್ಲಿ ಗಾಂಧೀಜಿಯ ಸಾವನ್ನು ಕುರಿತ ಶೋಕ, ಅಂಥವರ ಸಾವನ್ನು ನಂಬಲಾಗದ ದಿಗಿಲು ಎರಡೂ ಇವೆ. ಈ ದಿಗಿಲು ನಂಬಿಕೆಯ ಬುಡವನ್ನೆ ಅಲುಗಿಸುವ ವಿಸ್ಮಯವಾಗಿಬಿಡುತ್ತದೆ. ಇತಿಹಾಸ ಕಣ್ಣೆದುರು ನಿಲ್ಲುತ್ತದೆ.

ಸಾಕ್ರಟೀಸ ಆತ್ಮವೀರ
ಕುಡಿದನಲ್ಲ ವಿಷದ ನೀರ
ಧೀರಕ್ರೈಸ್ತ ಇದ್ದನೆಲ್ಲಿ?
ಅವನ ದೇಹ ಶಿಲುಬೆಯಲ್ಲಿ

ಈ ಚಿತ್ರಗಳ ಜೊತೆಗೆ ಹಿಂದಿನವರನ್ನು ಕೊಲ್ಲಲು ವಿಚಾರಣೆಯ ನಾಟಕವಾದರೂ ನಡೆದಿತ್ತಲ್ಲ ಎಂಬ ನೆನಪು ಬಂದು 'ಅದೂ ಬೇಡವಾಯ್ತೆ ಇಲ್ಲಿ?' ಎಂಬಲ್ಲಿನ ಯಾತನೆಯನ್ನು ಗಮನಿಸಬೇಕು. ಈ ಕವಿತೆಯ ಸ್ಥಾಯಿ ಕರುಣ ಹಾಗೂ ವಿಷಾದ-ವಿಸ್ಮಯಗಳೇ ಆಗಿವೆ.

ಸಾವು ನೋವು ಮೀರಿದಾ
ಗಾಂಧಿ ಹೇಗೆ ತೀರಿದಾ?
ಕೇಳಿರೊಂದು ಸೋಜಿಗ

ಈ ಸಾಲುಗಳ ಅರ್ಥ ಸುರುಳಿ ಬಿಚ್ಚುತ್ತದೆ. ಗಾಂಧೀಜಿಯಂಥವರನ್ನು ಉಳಿಸಿಕೊಳ್ಳಲಾಗದ ವಿಷಾದ ಈ ಮಾತಿನ ಹಿನ್ನೆಲೆಗಿದೆ. ಇಂಥವರನ್ನೂ ಕೊಂದರಲ್ಲಾ, ಇನ್ನು ಹೇಗೆ ಮಾನವ ಆದರ್ಶಗಳಿಂದ ಬದುಕಬೇಕೆಂಬ ಭೀತಿ-ವಿಸ್ಮಯಗಳೂ ಮೇಲಿನ ಪ್ರಶ್ನೆಯಲ್ಲಿ ಅಂತರ್ಗತವಾಗಿ ಜಗತ್ತಿನ ಜೀವನದ ಬಗ್ಗೆ ನಮ್ಮನ್ನು ಚಿಂತಾಂತರ್ಮುಖಿಗಳಾಗಿ ಮಾಡುತ್ತದೆ. 'ಕೇಳಿರೊಂದು ಸೋಜಿಗ' ಎಂಬ ಮಾತು ಕವಿ ತನಗೆ ತಾನೇ ಪಲ್ಲವಿಯಂತೆ ಮತ್ತೆ ಮತ್ತೆ ದಿಗಿಲಿನಿಂದ ಹೇಳಿಕೊಳ್ಳುವ ದಿಗಿಲಿನ-ಸ್ವಗತದಂತೆ ಭಯಾವಹನಾಗಿದೆ. ಕವಿತೆ ಪರಿಣಾಮದಲ್ಲಿ ಅತ್ಯಮೋಘವಾಗಿದೆ.

ವಾಲ್ಮೀಕಿಗೂ ಹೀಗೆಯೇ ಆಗಿತ್ತು. ಕ್ರೌಂಚ ಮಿಥುನದಲ್ಲಿ ಒಂದನ್ನು ಕೊಂದ ನಿಷಾದನನ್ನು ತಟ್ಟನೆ ಶಪಿಸಿದರೂ ಮರುಕ್ಷಣ ಅವನ ಮನಸ್ಸು ಆ ಬಗ್ಗೆಯೂ ಆಶೋಕ ತಪ್ತವಾಯಿತು. ಹಾಗಾಗಿಯೇ ಶೋಕ ಶ್ಲೋಕವಾಯಿತು; ಶಾಪವೇ ಆಗಲಿಲ್ಲ. ಇಲ್ಲದಿದ್ದರೆ ರಾಮಾಯಣ ಕಾವ್ಯದ ಬದಲು ಬರೀ ಬೈಗುಳದ ಪಟ್ಟಿ ಬೆಳೆಯಬೇಕಾಗುತ್ತಿತ್ತು. ವ್ಯಾಸರಲ್ಲಾದರೂ ಅಷ್ಟೆ; ತಾನು ಎರಡು ಕೈಗಳನ್ನು ಮೇಲೆ ಆಕಾಶಕ್ಕೆ ಎತ್ತಿ ಬೇಡಿಕೊಂಡರೂ ತನ್ನ ವಿವೇಕದ ಮಾತುಗಳಿಗೆ ಕಿವಿಗೊಡದೆ ಹಾಳಾದವರನ್ನು ಕುರಿತು ಹೇಳಿದ ಕತೆ ಭಾರತವಾಯಿತು ದೊಡ್ಡ ಕವಿ ಯಾವಾಗಲೂ ವಿಡಂಬನಕ್ಕಿಂತ ಕರುಣದಲ್ಲಿ ನೆಲೆನಿಲ್ಲುತ್ತಾನೆ. ಬೇಂದ್ರೆ ಅವರ ನಿಲುವಾದರೂ ಇದೇ ಆಗಿದೆ.

ಮಹಾಪ್ರಸ್ಥಾನ ಕವಿತೆಯಲ್ಲಿ ಮಹರ್ಷಿ ಅರವಿಂದರ ಪ್ರಾಣೋತ್ಕ್ರಮಣ ಕಲ್ಯಾಣ ಚಿತ್ರವಿದೆ. ಹೊಸಗನ್ನಡದಲ್ಲಿ ಶ್ರೀ ಗೋವಿಂದಪೈಗಳ ಗೊಲ್ಗೊಥಾ ಮತ್ತು

ವೈಶಾಖಿಗಳಲ್ಲಿ ಕ್ರಿಸ್ತ ಮತ್ತು ಬುದ್ಧರ ಸಾವಿನ ಚಿತ್ರ ದೊರೆಯುವುದಾದರೂ ಅವು ಕಥನರೂಪವಾದುವು. ಇಲ್ಲಿಯ ದೃಷ್ಟಿ ಬೇರೆ. ಮಹಾಯೋಗಿಯೊಬ್ಬನ ಸಾವು ಎಂತಹ ಭಾರತೀಯ ಆಧ್ಯಾತ್ಮಿಕ ಮೌಲ್ಯಗಳನ್ನು ಬೆಳಗಿಸುತ್ತದೆಂಬುದನ್ನು ಇಲ್ಲಿ ಕಾಣಬಹುದು. ಅರವಿಂದರ ದೇಹೋತ್ಸರ್ಗವನ್ನು ಮಹಾಪ್ರಸ್ಥಾನ ಎಂದು ಗ್ರಹಿಸುವಲ್ಲಿಯೇ ವಿಶೇಷ ಅರ್ಥಗಳು ತುಂಬಿಕೊಂಡಿವೆ. ಇದು ಕೇವಲ ತಾತ್ವಿಕ ವಿಚಾರವಾಗಿ ಉಳಿಯದೆ ಜೈನಪುರಾಣಗಳಲ್ಲಿ ಬರುವ ಜಿನನ ಪಂಚಕಲ್ಯಾಣಗಳಲ್ಲಿ ಅಂತಿಮವಾದ ಕೈವಲ್ಯ ಬೋಧೋತ್ಸವದ ವೈಭವದಂತೆಯೇ ಮೂಡಿಬಂದಿದೆ. ಆದರಿದು ಅರವಿಂದರ ದೇಹತ್ಯಾಗವಾದ್ದರಿಂದ ಭಾರತೀಯ ಆಧ್ಯಾತ್ಮಿಕ ಪೌರಾಣಿಕ ಪ್ರತಿಮೆಗಳು ದೀಪಗಳಂತೆ ಬೆಳಗಿ ಜ್ಯೋತಿರ್ವಲಯವನ್ನು ನಿರ್ಮಿಸಿಬಿಡುತ್ತವೆ.

ಅರವಿಂದರ ದೇಹದಾನ ಅವಭೃತದಸ್ನಾನ ಎಂದು ವರ್ಣಿತವಾಗಿರುವಲ್ಲಿ 'ಅವಭೃತದಸ್ನಾನ' ಎಂಬುದರ ಯಜ್ಞವಿಧಿಯ ಅರ್ಥವ್ಯಾಪ್ತಿ ಅರಿವಾಗಬೇಕು. ಅವಭೃತವು ಯಜ್ಞದ ಅಂತ್ಯದಲ್ಲಿ ಮಾಡುವ ಮಂಗಳಸ್ನಾನ. ಅದರ ಸಿದ್ಧತೆ ನಡೆದ ವೈಭವ ಹೀಗೆ ಮೂಡಿದೆ: ಕೈಲಾಸ ಜಾತ್ರೆಯಲ್ಲಿ ಆಕಾಶಗಂಗೆಯಲ್ಲಿ ನಡೆಯುವ ಅಭಿಷೇಕ, ಈ ಮಂಗಳಸ್ನಾನಕ್ಕಾಗಿ ಕೊರಳೆತ್ತಿ ಹರಸುತ್ತಿರುವ ವೇದಘೋಷಗಳು, ಯಮತಂತ್ರವನ್ನು ಸಂಯಮಿಸುವ ಸಾವಿತ್ರ ಮಂತ್ರ, ಅವಭೃತದ ಸ್ನಾನದಲ್ಲಿ ವಿಚಿಕೇತಿಸಿರುವ (ಉಪಚಿಕಿತ್ಸೆ ಮಾಡುತ್ತಿರುವ) ನಚಿಕೇತ ಅಗ್ನಿ, ಇವುಗಳ ಅರ್ಥವನ್ನು ನಿಧಾನವಾಗಿ ಪರಿಭಾವಿಸಬೇಕು.

ಇನ್ನೇನು ಅವಭೃತದ ಸ್ನಾನ ಮುಗಿಸಿ ಪೂರ್ಣಯಜ್ಞ ಫಲಪಡೆವ ಅರವಿಂದರ ಆತ್ಮವನ್ನು 'ತಾಪಾರ್ತ ಜನಕೆ ನೆರಳಾಗಿ ನೀಡಿ ವಟವೃಕ್ಷವಾದ ಜೀವ' ಮತ್ತು 'ಬ್ರಹ್ಮದಲ್ಲಿ ಬೇರ್ಬಿಟ್ಟು ಇಳಿದ ಅಶ್ವತ್ಥದಂಥಭಾವ' ಎಂದು ವರ್ಣಿಸಿರುವುದನ್ನು ನಿದಾನವಾಗಿ ಗ್ರಹಿಸಬೇಕು. ಯಜ್ಞ, ವಟವೃಕ್ಷ, ಅಶ್ವತ್ಥ ಈ ಪ್ರತಿಮೆಗಳಿಂದ ಗೀತೆಯಲ್ಲಿ ಬರುವ 'ಊರ್ಧ್ವಮೂಲಮಧಶ್ಶಾಖಂ' ಆದ ಪರಮಾತ್ಮ ಚಿತ್ರ ನಮ್ಮಲ್ಲಿ ಅರಳಿಕೊಳ್ಳುತ್ತದೆ. 'ಅಗೊ ಎದ್ದ ಗೆದ್ದ ಋಷಿರಾಜತೇಜ ವೈದೇಹ ಜನಕನಂತೆ, ಎಂಬ ಮಾತಿನಲ್ಲಿ 'ವೈದೇಹ' ಪದ ವಿದೇಹದೇಶದ ರಾಜ ಜನಕ ಎಂಬ ಐತಿಹಾಸಿಕ ಅರ್ಥವನ್ನೂ, ಸ್ಥಿತಪ್ರಜ್ಞನೂ, ಜೀವನ್ಮುಕ್ತನೂ ಆಗಿ ನಿಜವಾಗಿ ವೈದೇಹನಾಗಿರುವ ಜನಕನ ಚಿತ್ರವನ್ನೂ ಕಣ್ಣೆದುರು ಕಟ್ಟುತ್ತದೆ. ಅಷ್ಟೆ ಅಲ್ಲ ಅಂಥ ಮುಕ್ತ ನಿಜವಾಗಿ ಲೋಕದ ಜನಕ (ತಂದೆ). ಅವಭೃತದಸ್ನಾನ ಮುಗಿದು ಜೀವನ ಯಜ್ಞ ಮುಗಿಯುವ ಸೂಚನೆ ಯಜ್ಞ, ವಟವೃಕ್ಷ, ಅಶ್ವತ್ಥ, ವೈದೇಹಜನಕ ಈ ಪದಗಳಿಂದ ಬೆಳೆದು ಭಾರತೀಯ ಆಧ್ಯಾತ್ಮಿಕ ಮೌಲ್ಯಗಳನ್ನೆ ಬೆಳಗಿಸಿಬಿಡುತ್ತದೆ. ಅದಕ್ಕಾಗಿಯೇ ಕವಿ ಬೇಂದ್ರೆಯವರು 'ಆ ಒಂದೆ ರಾಂತ್ರಿಯಲಿ ಬಯಲು ತುಂಬಿತೋ ಪಾರಿಜಾತಕೀರ್ತಿ' ಎಂದು ವರ್ಣಿಸುವಲ್ಲಿ ಆ ಜೀವದ ಸಕಲ ಗುಣಗಳನ್ನೂ ಬೆಳಗಿಸುತ್ತ ಹೋಗುತ್ತಾರೆ. 'ಮಾನವನ ಹೃದಯವನೆ ಯೋನಿಗೊಳಿಸಿ ಬರಲಿಹುದು ದೇವಜಾತಿ' ಎಂಬ

ಮಾತಿನಲ್ಲಿ ಯೋಗೀಶ್ವರರ ಜನ್ಮ ಹೇಗೆ ದೈವಿಕವಾದದ್ದೆಂಬುದನ್ನು ಸೂಚಿಸುತ್ತಾರೆ. ಜನ್ಮ ಮರಣ ಎರಡರಲ್ಲಿಯೂ ಯೋಗೀಶ್ವರರ ಜೀವನ ಎಷ್ಟು ಅರ್ಥಪೂರ್ಣವಾದದ್ದೆಂಬ ಭಾರತೀಯ ಪ್ರಜ್ಞೆ ಈ ಕವಿತೆಯಲ್ಲಿ ಅರಳಿಕೊಂಡಿದೆ. ಬೇಂದ್ರೆಯವರ ವೈದಿಕ ಪ್ರಜ್ಞೆಯ ಆಳ ಎತ್ತರಗಳು ಅವರ ಆಧ್ಯಾತ್ಮಿಕ ಕವಿತೆಗಳಲ್ಲಿ ಗೋಚರವಾಗುವಂತೆಯೇ ಇಲ್ಲಿಯೂ ಕಾಣುತ್ತವೆ.

೭

ವ್ಯಕ್ತಿಗೀತೆಗಳು : ಅರವಿಂದರು, ಮಹಾಮಾತೆಯವರು, ರವೀಂದ್ರರು, ಗಾಂಧೀಜಿಯವರು, ಬಾಲಗಂಗಾಧರತಿಲಕರು, ಗೆಳೆಯ ಶಂಕರಗೌಡರು–ಇವರನ್ನು ಕುರಿತ ಕವಿತೆಗಳಿವೆ. ಇಲ್ಲಿ ಮೂಡಿರುವ ವ್ಯಕ್ತಿಚಿತ್ರಗಳು ಕಾವ್ಯದೃಷ್ಟಿಯಿಂದ ಎಷ್ಟು ಮುಖ್ಯ ಎಂಬುದಷ್ಟೆ ನಮಗೆ ಪ್ರಮುಖ. ಕಾವ್ಯದೃಷ್ಟಿಯಿಂದ ಮಹಾಮಾತೆಯವರ ವ್ಯಕ್ತಿತ್ವಕ್ಕಿಂತ ಶ್ರೀ ಅರವಿಂದರ ವ್ಯಕ್ತಿತ್ವವನ್ನು ಕುರಿತ ಕವಿತೆಯೇ ಪ್ರಮುಖವಾಗಿ ಕಾಣಿಸುವುದು. ಈ ಮಾತುಗಳನ್ನು ಗಮನಿಸಿ :

ನಿನ್ನಾ ಹುಬ್ಬಿನ ಇಬ್ಬದಿ
ಗರಿಚಾಚಿದೆ ಗರುಡ
ಬಾನ್ಗಣ್ಣಾಗಿಹೆ ನೀ, ನಾ
ಗುರಿಯಿಲ್ಲದ ಕುರುಡ.
ಕಣ್ಣೆವೆ ಚಾಟಿಗೆ ಕಟ್ಟಿದೆ
ಆನಂದದ ಹುಟ್ಟು
ಒಳಗಿದೆ ಹೂವರಳಿದವೊಲು
ವಿಶ್ವದ ಇಡಿ ಗುಟ್ಟು
ಕೊಡು ತಂದೇ ಇನ್ನೊಂದೇ
ಒಂದೇ ಬಾಯ್ತುಟುಕು
ಕೊಡುತಾಯೇ, ಇನ್ನೊಮ್ಮೇ
ಒಮ್ಮೇ ಎದೆಗುಟುಕು.

ಹುಬ್ಬಿನ ಇಬ್ಬದಿಗೂ ಗರಿಚಾಚಿದ ಗರುಡನ ಚಿತ್ರ ಅರವಿಂದರ ಭಾವಚಿತ್ರವನ್ನು ರೂಪಿಸಿದ ಹಾಗೆಯೇ, ಅವರ ವ್ಯಕ್ತಿತ್ವವನ್ನೆ ಕಣ್ಣೆದುರು ಕಡೆಯತೊಡಗುತ್ತದೆ. ಆದರೆ ಮುಂದೆ ಮಾತ್ರ ಈ ವ್ಯಕ್ತಿ ಚಿತ್ರ ಬೇಂದ್ರೆಯವರ ಪ್ರಾರ್ಥನಾಗೀತೆಯ ಮಾದರಿಯಲ್ಲಿ ಬೆಳೆದಿದೆ, ಅಲ್ಲಿ ಅರವಿಂದರ ವಾತ್ಸಲ್ಯಧಾರೆಯ ಚಿತ್ರ ಮಸುಕಾಗಿ ಸುಳಿದೂ ಹೋಗಿಬಿಡುತ್ತದೆ. ರವೀಂದ್ರ ದರ್ಶನ ಕವಿತೆಯಲ್ಲಿ ರವೀಂದ್ರರ ಚಿತ್ರವಿದೆ. ಇದು ಶ್ರೀಶಂಕರರಾವ್ ಅಳಂದಕರರ ಚಿತ್ರಾವಲಿಯಿಂದ ಪ್ರೇರಿತವಾದದ್ದು.

'ಚತುರಸ್ರತೆಯೇ ಲಂಬಿಸೆ ತಾನು
ಗಡ್ಡಕೆ ಜೋತಿದೆ ಜ್ಞಾನಿಯ ಜೇನು'

ಎಂದು ರವೀಂದ್ರರ ವ್ಯಕ್ತಿತ್ವ–ಚಿತ್ರದೊಂದಿಗೆ ಅಮೋಘವಾಗಿ ಆರಂಭವಾಗಿದ್ದರೂ ಈ ಕವಿತೆಯಲ್ಲಿ ಸಡಿಲತೆ ತಾನೇ ತಾನಾಗಿದೆ. ಬಹುಶಃ ಈ ಬಗೆಯ ಸಡಿಲತೆ ಬೇಂದ್ರೆಯವರ ಹಲವಾರು ದೀರ್ಘಕವಿತೆಗಳಲ್ಲಿ (ಉದಾಹರಣೆಗೆ ಗಂಗಾವತರಣ, ಕುಣಿಯೋಣ ಬಾರ ಇಂಥ ಕವಿತೆಗಳಲ್ಲಿ) ಇದ್ದದ್ದೇ. 'ಮರಣ ?' ಚರಮಕವಿತೆ ಗುಂಪಿಗೆ ಸೇರಿದರೂ ಗಾಂಧಿಯವರ ವ್ಯಕ್ತಿತ್ವ ಇಲ್ಲಿ ತ್ರಿವಿಕ್ರಮನಾಗಿ ಇರುವುದನ್ನು ಕಾಣಬಹುದು.

ಎಂಥ ನಗು ! ಎಂಥ ಮಗು ! ಎಂಥ ಮನುಜ
ನಮ್ಮಂತೆ ಕಂಡರೂ ದೇವತನುಜ

ಈ ಮಾತುಗಳಲ್ಲಿರುವ ಚಿತ್ರ ಅಷ್ಟೇ ಅಪರೂಪದ್ದಲ್ಲ. ಆದರೆ ಇವು ಅವರ ವ್ಯಕ್ತಿತ್ವವನ್ನು ಕಡೆಯಲು ಬಳಸಿದ ಕೆಲವು ಗೆರೆಗಳು. ಈ ಗೆರೆಗಳಿಗೆ ಹೇಗೆ ಬಣ್ಣ ಜೀವಗಳು ತುಂಬುತ್ತವೆ ನೋಡಿ :

ಮಣಿಹ ಸಂದಿತು ; ದೇಹ ಕೆಳಗೆ ಇಟ್ಟ ;
ಧ್ಯೇಯವನೆ ನಕ್ಷತ್ರಮಾಡಿಬಿಟ್ಟ

'ಧ್ಯೇಯವನೆ ನಕ್ಷತ್ರ ಮಾಡಿಬಿಟ್ಟ' ಎಂಬ ಮಾತಿನಲ್ಲಂತು ಗಾಂಧೀಜಿ ಬಾನೆತ್ತರಕ್ಕೂ ಬೆಳೆದ ಚಿತ್ರವಿದೆ. ಇಲ್ಲಿ ಮಾನವನ ಸಾಧನೆಯ ಎತ್ತರವೂ ಸೂಚಿತ ವಾಗಿದೆ. ಚಿಕ್ಕದಾದರೂ ಉತ್ತಮವಾದ ಕವಿತೆಯಿದು. ಬಾಲಗಂಗಾಧರ ತಿಲಕರನ್ನು ಕುರಿತ ಕವಿತೆಯೊಂದಿದೆ. ಶ್ರದ್ಧಾಂಜಲಿ, ಅಮರಮರಣ, ಜಯಜಯಾ ಗಾಂಧಿ ಮೋಹನಾ–ಈ ಮೂರು ಕವಿತೆಗಳಲ್ಲಿ ಗಾಂಧಿಜಿಯ ಸಾವಿನ ಸೆನೆಪಿನೊಂದಿಗೆ ಅವರ ವ್ಯಕ್ತಿತ್ವವನ್ನೂ ಮೂಡಿಸುವ ಪ್ರಯತ್ನ ನಡೆದಿದೆ. ವ್ಯಕ್ತಿಕವಿತೆಗಳ ಗುಂಪಿನಲ್ಲಿ 'ಗೆಳೆಯ ಶಂಕರಗೌಡರಿಗೆ' ಕವಿತೆಮಾತ್ರ ಉತ್ತಮವಾದದ್ದು, ಅಲ್ಲಿ ಮೂಡುವ ಶರಣನ ಚಿತ್ರ ಚೈತನ್ಯಮಯವಾದದ್ದು. ಶಂಕರಗೌಡರ ಸಾವಿನ ಸುದ್ದಿಯಿಂದ ಆರಂಭಗೊಳ್ಳುವ ಕವಿತೆ ಕಟ್ಟುವ ವಾತಾವರಣ ನೋಡಿ ಹೇಗಿದೆ :

ಶಿವಾಯನಮ ಓಂ ಶಿವಾಯನಮಃ ದಿಮಡಿ ಮಿಡಿಯುತಿತ್ತು
ಏಕನಾದವೂ ಶಿವಾಯನಮ ಓಂ ಶ್ರುತಿಯ ಹಿಡಿಯುತಿತ್ತು
ಶಿವಾಯನಮ ಓಂ ಬಯಲಿನಲ್ಲಿ ಪಡಿನುಡಿಯು ಸಿಡಿಯುತಿತ್ತು

ದಿಮಿಡಿ, ಏಕನಾದ, ಬಯಲು, ಶಿವಾಯನಮಃ ಎಂಬ ಮಂತ್ರ ಮತ್ತು ಅವುಗಳು ಬಳಕೆಯಾದ ಕ್ರಮ ಧ್ವನಿಪೂರ್ಣವಾದದ್ದು. ಇವೆಲ್ಲ ಶರಣ ವಾತಾವರಣವನ್ನು ಬೆಳೆಯಿಸುತ್ತವೆ. ಅಲ್ಲಿ ಓಡಾಡಿದ ವ್ಯಕ್ತಿಯ ರೀತಿ ಹೀಗೆ ಮೂಡಿದೆ :

ಕಂಠದಲ್ಲಿ ನೆಲೆಗೊಂಡು ಇತ್ತು ಕನ್ನಡದ ತಾಯಿಬೇರು
ಬಯಲಸೀಮೆಯಲಿ ಉರುಳುತಿತ್ತು ಪ್ರಭುದೇವರೊಂದು ತೇರು

ಅವರ ಜೀವನವೇ ಬಯಲಿನಲ್ಲಿ ಹೊರಟ ಪ್ರಭುದೇವರ ತೇರು ಎಂಬುದರ

ಅರ್ಥವ್ಯಾಪ್ತಿಯನ್ನು ಅನುಭವಿಸಿಯೆ ತೀರಬೇಕು. ಆ ವ್ಯಕ್ತಿತ್ವದ ತಾಯಿಬೇರು ಕನ್ನಡ ಎಂದು ಬೇಂದ್ರೆಯವರು ಹೇಳುವಾಗ ಬೇಂದ್ರೆಯವರ ತಾಯಿಬೇರೂ ಧ್ವನಿತ ವಾಗುತ್ತದೆ. ಆ ಎರಡು ಪ್ರತಿಮೆಗಳು ಜೇನು ಗೂಡು ಕಟ್ಟುವಂತೆ ಶಿವಯೋಗಿಯ ರೂಪವನ್ನು ರೂಪಿಸತೊಡಗುತ್ತವೆ.

"ನಿಮ್ಮ ಬದುಕು ಅದು ಕಾಶ್ಮೀರಿಶಾಲು ಅದು ಅಲ್ಲ ತೇಪೆ ಕವುದೆ
................ಹೆಗಲಲ್ಲಿ ಇರಿಸಿ ಕಂಥೆ
ಜೋಗಿ ಎದ್ದಂತೆ ಅಲಕನೆದ್ದು ಮುಗಿಸಿದಿರಿ ಒಂದು ಸಂಥೆ"

ಈ ಮಾತುಗಳಿಂದ ವಚನಕಾಲದ ಸಂತನೊಬ್ಬ ನಮ್ಮ ಕಣ್ಣೆದುರಿಗೇ ಓಡಾಡಿದ ಅನುಭವ ವಾಗುತ್ತದೆ. ಇಡೀ ಕವನದಲ್ಲಿ ಬಳಸಿರುವ ಶೈವ ವಾತಾವರಣ ಆ ವ್ಯಕ್ತಿತ್ವದ ಬಣ್ಣಗೆರೆಗಳು ಇನ್ನಷ್ಟು ಖಚಿತಗೊಳ್ಳುವಂತೆ ಮಾಡಿವೆ. ಇದೊಂದು ಶ್ರೇಷ್ಠವಾದ ಕವಿತೆ.

ಬೇಂದ್ರೆಯವರ ವ್ಯಕ್ತಿಕವಿತೆಗಳು ಭಾವಚಿತ್ರದ ಮಾದರಿಯವಲ್ಲ. ವ್ಯಕ್ತಿತ್ವದ ಮೌಲ್ಯಗಳನ್ನು ಕುರಿತವು. ಹೀಗಾಗಿ ಇವುಗಳಲ್ಲಿ ವ್ಯಕ್ತಿಗಳ ಆಕಾರ ಮೊದಲಾದ ಭೌತಿಕ ವಿವರಗಳು ದೊರಕದಿರುವುದು ದೌರ್ಬಲ್ಯವಾಗುವುದಕ್ಕಿಂತ ಹೆಚ್ಚಾಗಿ ಕವಿಯ ಗುರಿಯನ್ನು ಅನವಶ್ಯಕವಾಗಿ ಅತ್ತಿತ್ತ ತಿರುಗಿಸದೆ ಅವನಲ್ಲಿ ತಾನು ಬರೆಯುತ್ತಿರುವ ವ್ಯಕ್ತಿಯನ್ನು ಕುರಿತ ನಿಷ್ಠೆ ಉಳಿದಿರಲು ಅವಕಾಶಮಾಡಿಕೊಟ್ಟಿವೆ. 'ಗೆಳೆಯ ಶಂಕರ ಗೌಡರಿಗೆ' ಎಂಬುದು 'ಅರಳು–ಮರಳಿ'ನ ಅತ್ಯುತ್ತಮ ಕವಿತೆಗಳಲ್ಲೊಂದಾಗಿದೆ.

೮

ಭಾವಗೀತೆಗಳು : ಭಾವಗೀತಗಳೆಂದರೆ ಬೇಂದ್ರೆಯವರ ಕಾವ್ಯದ ಉಸಿರೆಂದೇ ಹೇಳಬೇಕು. 'ಭೃಂಗದ ಬೆನ್ನೇರಿ ಬಂತು ಕಲ್ಪನಾವಿಲಾಸ' ಎಂಬುದು ಅವರ ಅನೇಕ ಭಾವಗೀತೆಗಳಿಗೆ ಅನ್ವಯವಾಗುವಂಥ ಮಾತು. ಜೊಂಪಿಸಿತ್ತು ಮಣ್ಣು, ಮಳೆಗಾಲ, ನವ ಊರ್ಮಿ, ಸಮೃದ್ಧ, ಧ್ರುವಮಾರ್ಗ, ಕಿಮಪಿತತ್, ಸುದರ್ಶನದಲ್ಲಿ, ಕಣಸು, ಅಳಿ, ಅಹನೆ ಮತ್ತು ಗೋವತ್ಸ ಲೀಲೆಗಳು, ದೀಪದಮಲ್ಲಿ, ದೇವ–ಮಾತಾ, ಸೊಂಟದ ಮೇಲೆ ಕೈಯಿಟಕೊಂಡು, ಮೌನವಾರ, ಕಥೆಯಾದಳು ಹುಡುಗಿ–ಇವು ಹೆಚ್ಚು ಪ್ರಮುಖವಾದ ಭಾವಗೀತಗಳಾಗಿವೆ.

'ಕಥೆಯಾದಳು ಹುಡುಗಿ' ಬೇಂದ್ರೆಯವರ ಭಾವಗೀತ ಸ್ವರೂಪಕ್ಕೆ ಸವಿಯಾದ ಉದಾಹರಣೆಯಾಗಿದೆ. ಈ ಕೆಲವು ಪ್ರಮುಖ ಪಂಕ್ತಿಗಳನ್ನು ಗಮನಿಸಿ :

ಹಸಿಯಿದ್ದಳು ಬಿಸಿಯಾದಳು
ಸಸಿಯಿದ್ದಾ ಹುಡುಗಿ
ಹುಸಿಯರಿಯದ ಹುಡುಗಿ
....

ಚಿಗುರಿದ್ದಳು ಚಿಗರೆಯ ಮರಿ
    ಹೂ ಬಿಟ್ಟಳು ಹುಡುಗಿ
    ಮೊಗ್ಗಿದ್ದಾ ಹುಡುಗಿ
....
ಒಗರಳಿದಿತು ಹುಳಿಯೊಡೆಯಿತು
....
ಆ ಪಾಕವೊ ಆ ಪಾಡೋ
    ತಾಯಾದಳು ಹುಡುಗಿ
    ಹಾಯಾದಳು ಹುಡುಗಿ
....
ಪಾಡಾದಳು ಹಣ್ಣಾದಳು
    ಮಣ್ಣಾದಳು ಹುಡುಗಿ
    ನೆನಪಾದಳು ಹುಡುಗಿ
ವ್ಯಥೆಯಾದಳು ಕಥೆಯಾದಳು
    ಎದೆಯಲ್ಲಿಯೆ ಮಡಗಿ

ಹೆಣ್ಣುಮಗು ಬೆಳೆದು ವಧುವಾಗಿ ಗರತಿಯಾಗಿ ಹಣ್ಣಾಗಿ ಮಣ್ಣಾಗುವವರೆಗಿನ ರೋಮಾಂಚಕ ಚಿತ್ರಗಳು ವಿಸ್ಮಯಕರ ಮಾಂತ್ರಿಕತೆಯಿಂದ ಮೂಡಿಬಿಟ್ಟಿವೆ ಇಲ್ಲಿ. ತುಂಬ ಧ್ವನಿಪೂರ್ಣವಾಗಿ ಬೆಳೆದ ಇಡೀ ಕವಿತೆ ಬೇಂದ್ರೆಯವರ ಗಾರುಡಿಗೆ ಉದಾಹರಣೆ ಯಂತಿದೆ. ಆದರೆ ಇಲ್ಲೆಲ್ಲೂ ಹೆಣ್ಣನ್ನು ಕುರಿತ ಲೇವಡಿಯಾಗಲಿ, ಅನವಶ್ಯಕವಾದ ಮಾದಕತೆಯಾಗಲಿ ಇಲ್ಲದೆ ಹೆಣ್ಣಿನ ಭಿನ್ನ ಪಾತ್ರಗಳನ್ನು ಹಾಗೂ ಘಟ್ಟಗಳನ್ನು ನೋಡುವಾಗ ಕವಿಗಿರುವ ತಲ್ಲೀನತೆ ಅನ್ಯಾದೃಶವಾದುದು; ಇಲ್ಲಿ ಕವಿ ತೋರುವ ವಿಸ್ಮಯ, ಅರಿವು, ಮಾಂತ್ರಿಕತೆ ಮತ್ತು ಗೌರವಗಳು ಹೆಣ್ಣಿನ ಸ್ವರೂಪವನ್ನೇ ಬೇಧಿಸಲು ಹೊರಟಿವೆ. ಹೆಣ್ತನದ ಮಾಂತ್ರಿಕತೆಗೂ, ತಾಯ್ತನದ ಸಮೃದ್ಧಿಗೂ ಹಾಗೆಯೇ ಅದರ ಸ್ಫೂರ್ತಿಶಕ್ತಿಗೂ ಕೊಟ್ಟ ತರ್ಪಣ ಈ ಕವಿತೆ. ಈ ಕವಿತೆಯಂತೂ ಎಜ್ರಪೌಂಡನ A Girl ಎಂಬ ಕವಿತೆಯಂತೆಯೇ ಬೆಳೆಯುತ್ತದೆ; ಆದರೆ ಅದಕ್ಕಿಂತ ಹೆಚ್ಚು ಆಳವಾಗುತ್ತ ಹೋಗಿದೆ.

'ದೀಪದಮಲ್ಲಿ' ಕವಿತೆಯಲ್ಲಿ ಬೊಂಬಾಳದ ಸರ್ವಾಂಗ ಸುಂದರ ಧ್ಯಾನ ಮೂರ್ತಿಯೊಂದನ್ನು ಕಂಡಾಗ ಎದ್ದ ಭಾವನಾಲಹರಿಗಳಿವೆ. ಮುಗ್ಧವಾದ ಮಾತು ಗಳಲ್ಲಿ ಅದರ ಸೌಂದರ್ಯವನ್ನು ಸವಿಯುತ್ತ 'ಯಾರು ಕೊಟ್ಟರು ಮಣಿಹ, ದೇಹಕ್ಕಿಲ್ಲವೆ ದಣಿಹ ಅರ್ಪಣವೆ ಮೈಗೊಂಡ ಹಾಗೆ ಇರುವೆ' ಎಂದು ವಿಸ್ಮಯಗೊಂಡು ಆ ಅಜರ ಅಮರ ಮೂರ್ತಿಯನ್ನು 'ನಿರ್ವಿಕಲ್ಪವು ಹೂತ ಕಲ್ಪತರುವೆ!' ಎನ್ನುತ್ತಾರೆ. ನಿರ್ವಿಕಲ್ಪವು ಹೂವಾಗುವುದೇ ಒಂದು ಲೋಕದ ಪುಣ್ಯ. ಕಲ್ಪವೃಕ್ಷವೇ ಆಗಿಬಿಟ್ಟರೆ ಕೊರತೆಯಿನ್ನೇನು? 'ದೀಪದಮಲ್ಲಿ' ಹೇಗೆ ರೂಪತಾಳಿರಬಹುದೆಂಬುನ್ನು ಊಹಿಸ ತೊಡಗುವ ಈ ಮಾತು ಸುಂದರ ಕಲಾಕೃತಿ ಸಂಭೂತಿಯ ರಹಸ್ಯದ ಬಾಗಿಲನ್ನೆ ತೆರೆಯುತ್ತದೆ.

'ದೇವ-ಮಾತಾ' ಕವಿತೆಯ ಮೊದಲರ್ಧದಲ್ಲಿ ಬರುವ 'ಕಣ್ಣು ಕವಳೆಯ ಹಣ್ಣು, ಗಿಣಿ-ಮಾವಿನೊಲು ಮೂಗು .... ಸೇಬುಹಣ್ಣಿನ ಅಂದ ಗದ್ದಗಲ್ಲಗಳಲ್ಲಿ' ಎಂಬ ಹಣ್ಣಿನ ಚಿತ್ರಗಳು ತಾಯಾಗಬೇಕಾದ ಯೌವ್ವನದ ತುಂಬುತನ ರಸವಂತಿಕೆಗಳನ್ನೂ ಪಕ್ವತೆಯನ್ನೂ ಜೊತೆಜೊತೆಗೆ ಸೂಚಿಸುತ್ತವೆ. ಹಾಗಾಗಿಯೇ 'ದೇವಬೀಜಕ್ಕೆ ಇದು ತಾಯಿ ಹೊಲವು' ಎಂಬ ನುಡಿಯಲ್ಲಿ ಭೋಗಪೀಠದ ಮೇಲೆ ಕುಳಿತ ಮಾತೃತ್ವದ ಚಿತ್ರವಿದೆ. ತಾಯ್ತನದ ಹಿಗ್ಗು, ಪಕ್ವತೆ, ಸಂತೃಪ್ತಿ ಹಾಗೂ ಸೃಷ್ಟಿ ಶಕ್ತಿಗಳು ಇಲ್ಲಿ ಚೆನ್ನಾಗಿ ಮೂಡಿಬಂದಿವೆ. 'ಮೌನವಾರ' ಕವಿತೆಯ ಬೆಡಗೇ ಅಪರೂಪವಾದದ್ದು. ಉಳಿದ ಕವಿತೆಗಳಲ್ಲಿ ವಿಶೇಷತಃ ಪೌರಾಣಿಕ ಪ್ರತಿಮೆಗಳು ಬಹಳ ಅರ್ಥವತ್ತಾಗಿ ಹರಡಿಕೊಂಡಿರುವುದು ಕಾಣಿಸುತ್ತದೆ.

ಪ್ರೇಮದ ಪರಿಯನ್ನು ಕುರಿತ ಶ್ರೀ ಬೇಂದ್ರೆಯವರ ಚಿಂತನಗಳು ಅ ಆ, ಅಹಸೆ ಮತ್ತು ಗೋವತ್ಸ ಲೀಲೆಗಳಲ್ಲಿ ಮೂಡಿದ್ದು ಅವುಗಳಲ್ಲಿ ಅನನ್ಯವಾದ ಸೊಗಸಿದೆ. 'ಮಣ್ಣ ಮೈಯ ಮಗು ಮೂಡಿದಾಗ ಮಗ ಮಗಿಸಿತಣ್ಣ ಮುಗಿಲು' ಸಾಲಿನಲ್ಲಿ ಪ್ರೇಮಸ್ವರೂಪ ಕಾವ್ಯವಾಗಿ ಪರಿಮಳಿಸುವದು. ಅಷ್ಟೇ ಅಲ್ಲ, ಗೋವತ್ಸ ಲೀಲೆಯಲ್ಲಿ ಭಾಗವತ ಶೈವ ಪುರಾಣಗಳ ಪ್ರತಿಮೆಗಳು ಕೈಜೋಡಿಸಿ ಪ್ರೇಮಪಾಕವನ್ನು ಬಣ್ಣಿಸುತ್ತವೆ. ಕೊಳಲುಲಿಯಿಂದ ಯೋಗಭೂಮಿಯೋ ಭೋಗಭೂಮಿಯೋ ಎಂದು ಭ್ರಮಿಸುತ್ತಿರುವಾಗ ಮೂಡುವ ಚಿತ್ರಗಳು ಇವು :

ಸೋಮತಾರೆಯರ ಮೈತ್ರಿ ಕೂಡಿತ್ತು ಶಕ್ತಿ ನೇತ್ರದಲ್ಲಿ
ಪುಷ್ಪದತ್ತ ಅರಳಿದನು ಒಲವಿನಲಿ ವಿಷದ ಪಾತ್ರದಲಿ
ಸತಿಮುಖದ ಸುಖಕೆ ಶಿವನಟ್ಟಹಾಸ ಕಡಲಾಗಿ ಉಕ್ಕುತಿತ್ತು
....
ಬಯಲಾಗಿ ನಿಂತ ನಿರ್ವಾಣ ಮೂರ್ತಿ ನಗುತಿತ್ತು ಬಾಯಿತುಂಬ

ಇಲ್ಲಿ ಪಂಕ್ತಿಯಿಂದ ಪಂಕ್ತಿಗೆ ಅರ್ಥವು ಬೆಳೆಯುತ್ತ ಶಿಖರವನ್ನು ಮುಟ್ಟುತ್ತದೆ. ಮೊದಲ ಸಾಲಿನ ಸೋಮತಾರೆಯರ ಮೈತ್ರಿಕೂಡಿತ್ತು ಎಂಬಲ್ಲಿ ಪ್ರೇಮದ ಕುಡಿಯೇಳುತ್ತಿದೆ. ತಾತ್ವಿಕವಾದ ಹಾಗೂ ಪ್ರೇಮ ಸಂಬಂಧವಾದ ಎರಡೂ ಅರ್ಥಗಳು ಶಕ್ತಿ, ಸೋಮ, ತಾರೆ ಎಂಬ ಪದಗಳಿಂದ ಬೆಳೆದರೆ ನೇತ್ರಮೈತ್ರಿ ಪದಪುಂಜವು ಪ್ರಣಯ ಪರವಾದ ಅರ್ಥಗಳನ್ನು ಜೊಗಸೆ ಜೊಗಸೆಯಾಗಿ ತುಂಬಿಕೊಳ್ಳುತ್ತಿದೆ. ವಿಷದ ಪಾತ್ರದಲ್ಲಿ ಪುಷ್ಪದತ್ತನು ಅರಳಿದ ಶೈವಪುರಾಣದ ಚಿತ್ರ ಹಾಲಾಹಲವನುಂಡೂ ಪುಷ್ಪದತ್ತನಂಥ ಪ್ರೇಮಿಯನ್ನು ಸೃಷ್ಟಿಸಬಲ್ಲ ಪ್ರೇಮದ ನಂಜುಂಡಶಕ್ತಿ ಹಾಗೂ ಅಮೃತ ಸತ್ವಗಳನ್ನು ಪರಿಭಾವಿಸುವಂತೆ ಮಾಡುತ್ತವೆ. 'ಬಯಲಾಗಿ ನಿಂತ' ಮಾತಿನಲ್ಲಿ ಪ್ರೇಮದ ತುತ್ತತುದಿ ಚಿತ್ರಿತವಾಗಿದೆ. ನಿರ್ವಾಣ ಎಂಬ ಪದ ಬೆತ್ತಲೆ ಎಂಬ ಪ್ರೇಮದ ಶರೀರ ಸಂಬಂಧದ ಅರ್ಥದೊಂದಿಗೇ ನಿರ್ವಾಣಸ್ಥಿತಿಯ ಆಧ್ಯಾತ್ಮಿಕ ಅರ್ಥವನ್ನೂ ಬೆಳೆಯಿಸುತ್ತ ಕವಿತೆಯ ಭಾವವನ್ನು ಪುಷ್ಟಗೊಳಿಸುತ್ತದೆ. 'ನಿರ್ವಾಣ

ಮೂರ್ತಿ ನಗುತ್ತಿತ್ತು ಬಾಯಿತುಂಬ' ಎಂಬುದರ ಅರ್ಥ ವ್ಯಾಪಕವಾಗತೊಡಗುತ್ತದೆ. ಈ ಕವಿತೆಯಲ್ಲಿ ತಾತ್ವಿಕತೆ ಹಾಗೂ ಜೀವನಗಳು ಹೀಗೆ ಒಂದನ್ನೊಂದು ಬಿಡದಂತೆ ಅಪ್ಪಿಕೊಂಡು ಬೆಳೆಯುತ್ತವೆ.

ಈ ಕವಿತೆಗಳಲ್ಲಿನ ಮತ್ತೊಂದು ವೈಶಿಷ್ಟ್ಯ ಇವುಗಳ ಪೌರಾಣಿಕ ಹಾಗೂ ಪ್ರಾಚೀನ ಕಾವ್ಯಪ್ರತಿಮೆಗಳದು. ಅರಳು–ಮರಳು ಮತ್ತು ಅಲ್ಲಿಂದಿತ್ತ ಅವರ ಕಾವ್ಯಗಳಲ್ಲಿ ಈ ಪ್ರತಿಮೆಗಳು ವಿಪುಲವಾಗತೊಡಗಿವೆ. ಅವರ ಪ್ರಜ್ಞೆಯ ಮೂಲ ಈ ಭಾರತೀಯತೆಯಲ್ಲಿರುವುದರಿಂದಲೇ ಅವರ ಕಾವ್ಯದ ಊರ್ಧ್ವ ಶಾಖೆಗಳ ಸತ್ಯ ಸೌಂದರ್ಯಗಳನ್ನು ಕಾಣುವುದಕ್ಕಾಯಿತು ನಮಗೆ.

೯

'ಅರಳು ಮರಳು' ಕೃತಿಯನ್ನು ಮೇಲೆ ಕಂಡಂತೆ ವಿಮರ್ಶಿಸುವ ಯತ್ನ ಮಾಡಿದ್ದೇನೆ. ಈ ಕೃತಿಯನ್ನು ಮಾತ್ರ ದೃಷ್ಟಿಯಲ್ಲಿಟ್ಟುಕೊಂಡಿದ್ದರೂ ಬೇಂದ್ರೆಯವರ ಇಡೀ ಕಾವ್ಯಸಮುದಾಯದ ಮೌಲ್ಯ ಕಣ್ಣಿಂದ ದೂರವಾಗಿಲ್ಲ, ಹಾಗೂ ಆ ಹಿನ್ನೆಲೆ ಯಲ್ಲಿ ಈ ಕೃತಿಯನ್ನು ಕುರಿತ ಅಭಿಪ್ರಾಯಗಳು ಸ್ವಲ್ಪ ಪ್ರಭಾವಿತವಾಗಿವೆ ಎಂಬುದನ್ನು ವಿನಮ್ರನಾಗಿ ಸೂಚಿಸುತ್ತೇನೆ.

ಬೇಂದ್ರೆಯವರ ಪ್ರತಿಭೆ ಶ್ರೇಷ್ಠವರ್ಗದ್ದು. ಆ ಪ್ರತಿಭೆ ಬಣ್ಣ ಕೊಟ್ಟ ವಿಷಯ ಗಳಾದರೂ ಕಡಿಮೆಯಾಗಿಲ್ಲ. ಹಲವು ವೇಳೆ ಹಲವಾರು ನೂರು ಕವಿತೆಗಳನ್ನು ರಚಿಸಿರುವ ಕವಿಯ ಹತ್ತಾರು ಕವಿತೆಗಳು ಸಡಿಲವೆಂದಾಗಲಿ, ಚಮತ್ಕಾರವೆಂದಾಗಲಿ ಕಾಣಿಸಿದರೆ ಅವುಗಳಷ್ಟೇ ಕಣ್ಣಿಗೆಬಿದ್ದ ವಿಮರ್ಶಕ ಹಾದಿ ತಪ್ಪಬಹುದು. 'ಅರಳು–ಮರಳಿ' ನಲ್ಲಿ ಅಧ್ಯಾತ್ಮವನ್ನು ಕುರಿತ ಕವಿತೆಗಳು ಸ್ವಲ್ಪ ಹೆಚ್ಚಾಗಿಯೇ ಇರುವುದರಿಂದ ಓದುವ ಮೊದಲೇ ಆ ಬಗೆಗೆ ಮೂಗು ಮುರಿಯುವ ಚಟ ಆದರೂ ಆಗಿಬಿಡಬಹುದು.

ಈ ಸಂದರ್ಭದಲ್ಲಿ ಅರಳು–ಮರಳು ಕೃತಿಯನ್ನು ಕುರಿತ ಒಂದು ಅಭಿಪ್ರಾಯವನ್ನು ಪರಿಶೀಲಿಸಿದರೆ ತಪ್ಪಲ್ಲ. ಶ್ರೀ ಎಂ. ಗೋಪಾಲಕೃಷ್ಣ ಅಡಿಗರ ಭೂಮಿಗೀತ ಕವನ ಸಂಕಲನಕ್ಕೆ ಮುನ್ನುಡಿ ಹಾಗೂ ವಿಮರ್ಶೆಗಳನ್ನು ಬರೆದ ಶ್ರೀ ಯು. ಆರ್. ಅನಂತಮೂರ್ತಿಯವರು ಅಲ್ಲಿ ಪ್ರಾಸಂಗಿಕವಾಗಿ ಈ ಕೃತಿಯನ್ನು ಕುರಿತು ಒಂದು ಮಾತಾಡಿದ್ದಾರೆ. ಅಲ್ಲಿ 'ಅರಳು–ಮರಳು, ಸಂಗ್ರಹಕ್ಕಿಂತ ಹಿಂದಿನ ಬೇಂದ್ರೆ....ಕನ್ನಡದ ಅತಿಶ್ರೇಷ್ಠ ಕವಿ....' ಎಂದಿದ್ದಾರೆ. ಆ ವಾಕ್ಯ ಬರೆದಾಗ 'ಅರಳು–ಮರಳು' ಮಾತ್ರ ರಚಿತವಾಗಿದ್ದು, ಈಗ 'ಅರಳು–ಮರಳು' ಮತ್ತು ಅನಂತರದ ಬೇಂದ್ರೆಯವರು ಸಾರ್ಥಕ ಕವಿತೆಗಳನ್ನು ಬರೆಯಲಾರರು ಎಂಬ ಪ್ರವಾದಿತನದ ಗತ್ತೂ ಆ ಮಾತಿಗೆ ಬಂದು ಬಿಟ್ಟಿದೆ. ಕಾವ್ಯದ ಬಗ್ಗೆ ಅತ್ಯಂತ 'ರಿಲಿಜಿಯಸ್' ಆಗಿರುವ ಶ್ರೀ ಅನಂತಮೂರ್ತಿಯವರು ಪ್ರಾಯಶಃ ಹಾಗೆ ಈ ಮಾತನ್ನು ಬಳಸಿರಲಾರರೆಂದು ನನ್ನ ಗ್ರಹಿಕೆ. ಸ್ವಪ್ನನೌಕೆ, ಕಥೆಯಾದಳು ಹುಡುಗಿ, ಗೋವತ್ಸಲೀಲೆ, ಮಹಾಪ್ರಸ್ಥಾನ, ಕೇಳಿರೊಂದು ಸೋಜಿಗ,

ಮೀನಕೇತು, ನಮ್ಮ ಕೊನೆಯ ಶರಣು ಇಂಥವು ಸಾರ್ಥಕ ಕವಿತೆಗಳಲ್ಲದಿದ್ದರೆ ಇನ್ನಾವುವು ಆಗುತ್ತವೆಯೊ ಅರ್ಥವಾಗುವದು ಕಷ್ಟವಾಗುತ್ತದೆ. ಸಾಲದುದಕ್ಕೆ ಬೇಂದ್ರೆಯವರ ದೇಸಿ ಪ್ರತಿಭೆಯು ನಮ್ಮ ನಾಡಿನ ಕಾವ್ಯಪುರಾಣಗಳಲ್ಲಿ ಬಹು ಆಳವಾಗಿ ಬೇರೂರಿದೆ. ಇಂದಿಗೂ ಅವರಿಗಿರುವ ಕಾವ್ಯನಿಷ್ಠೆ, ಅದರಲ್ಲೂ ಕಾವ್ಯ 'ಶಬ್ದ'ದ ಬಗೆಗಿರುವ ಒಂದು ಬಗೆಯ ಧಾರ್ಮಿಕ ಶ್ರದ್ಧೆ ಅವರ ಕವಿತನವನ್ನು ಜೀವಂತ ವಾಗಿಯೇ ಉಳಿಸಿಕೊಳ್ಳುತ್ತಿದೆ. ಎಂದಿನವರೆಗೆ ಕವಿಗೆ ಆ 'ಶಬ್ದ' ಗೌರವ ಇರುತ್ತದೋ ಅಲ್ಲಿಯವರೆಗೆ ಆತನ ಬಗ್ಗೆ ನಾಡು ಕುತೂಹಲದಿಂದ ನೋಡಬಹುದೆನ್ನಿಸು ತ್ತದೆ. ಬಹುಶಃ ಅನಂತಮೂರ್ತಿಯವರ ಮಾತು ಸ್ವಲ್ಪ ಅವಸರದ ತೀರ್ಮಾನವಾಗಿದೆ.

ನವ್ಯಮಾರ್ಗ ಕನ್ನಡದಲ್ಲಿ ಸಾಕಷ್ಟು ಖಚಿತರೂಪದಲ್ಲಿ ಬೆಳೆಯುತ್ತಿರುವ ಈ ಕಾಲದಲ್ಲೂ ಬೇಂದ್ರೆಯವರು ತಮ್ಮ ಕಾವ್ಯಮಾರ್ಗದಲ್ಲಿಯೇ ಉತ್ತಮ ಕೃತಿಗಳನ್ನು ರಚಿಸುತ್ತಿದ್ದಾರೆ ಎಂಬುದು ಅವರ ಕಾವ್ಯದ ಜೀವಂತತನವನ್ನೂ ಶ್ರೇಷ್ಠತೆಯನ್ನೂ ಜೊತೆಗೂಡಿಯೇ ಹೇಳಬಲ್ಲುದಾಗಿದೆ. ಈ ಮಾತನ್ನು ಹೇಳುವಾಗ ನವ್ಯತೆಯಿಂದ ಬೇಂದ್ರೆಯವರು ಪೂರ್ಣ ಮುಖತಿರುಗಿಸಿದ್ದಾರೆಂದಾಗಲಿ ಅಥವಾ ಅದಕ್ಕೆ ಭ್ರಮೆಬಿದ್ದು ತಾವೂ ಹಾಗೆ ಬರೆಯುವ ಚಪಲಕ್ಕೆ ಬಿದ್ದರೆಂದಾಗಲಿ ಹೇಳಲಾಗುವದಿಲ್ಲ. ಒಬ್ಬ ಜೀವಂತಕವಿ ತನ್ನ ಸಮಕಾಲೀನ ಸಾಹಿತ್ಯದ ಎಲ್ಲ ಶಕ್ತ ಚಟುವಟಿಕೆಗಳೊಡನೆಯೂ ತನ್ನ ಸಂಬಂಧವನ್ನು ಉಳಿಸಿಕೊಳ್ಳುವಂತೆಯೇ ಬೇಂದ್ರೆಯವರೂ ಉಳಿಸಿಕೊಂಡಿದ್ದಾರೆ. ಅಲ್ಲಿಲ್ಲಿ ಸದ್ದು, ಮಧುವಾತಾಖುತಾಯತೇ-ಇಂಥ ಕವಿತೆಗಳಲ್ಲಿ ನವ್ಯತೆಯೆನ್ನಬಹುದಾದ ಬರೆವಣಿಗೆಯಿದೆ. ಆದರೆ ಇದು ಚಪಲವಾಗದೆ ಬೇಂದ್ರೆಯವರ ಪ್ರತಿಭೆಯು ತನ್ನ ಸುತ್ತಮುತ್ತಲಿನ ಚಟುವಟಿಕೆಗಳೊಡನೆ ಇರಿಸಿಕೊಂಡಿರುವ ಸಂಬಂಧದ ಕುರುಹಾಗಿದೆ. ಈ ಸಂದರ್ಭದಲ್ಲಿ ನವ್ಯತೆಯನ್ನು ಕುರಿತ ಅವರ ಪ್ರತಿಕ್ರಿಯೆಯನ್ನೂ ಗಮನಿಸ ಬಹುದಾಗಿದೆ.

"ಈಗ ೩೦ ವರ್ಷಗಳಿಗೆ ಮೇಲ್ಪಟ್ಟು ಅವರ ಕಾವ್ಯದ ಆಳದಲ್ಲಿ ಮಿಂದಿದ್ದರೂ ಅದರ ಗಭೀರತೆ ಇನ್ನೂ ಹೆಚ್ಚುತ್ತಿದೆ--ಅದರ ಆಳವನ್ನೆಲ್ಲ ನಾನು ಅಳೆದಿದ್ದೇನೆಂದು ಹೇಳಲಾಗುವುದಿಲ್ಲ, ಅದರ ವಿಸ್ತಾರಗಳನ್ನೆಲ್ಲ ವಿವೇಚಿಸಿದ್ದೇನೆಂದು ನಾನು ಹೇಳಲಾರೆ" ಎಂದು ವಿ. ಕೃ. ಗೋಕಾಕರು 'ಅರಳು-ಮರಳು' ಮುನ್ನುಡಿಯಲ್ಲಿ ಹೇಳಿದ್ದಾರೆ. ಇದು ಸಾಂಪ್ರದಾಯಿಕ ವಿನಯದ ಮಾತಲ್ಲ; ಬೇಂದ್ರೆಯವರ ಪ್ರತಿಭೆಯ ಜೀವಂತತನ ಹಾಗೂ ಕಾಮರೂಪಗಳನ್ನು ನೋಡುವ ಎಲ್ಲ ರಸಿಕರಿಗೂ ಅನ್ನಿಸುವ ಮಾತು ಎಂದು ನಾನು ಗ್ರಹಿಸುವೆ. ಏಕೆಂದರೆ ಇಂಥ ಕವಿ ಒಂದು ನಾಡಿನ ಭಾಗ್ಯ. ಇಂಥವರ ಕಾವ್ಯದಲ್ಲಿ ಇಡೀ ನಾಡಿನ ಸಂಸ್ಕೃತಿ ಮಿಡಿಯುತ್ತಿರುತ್ತದೆ.

ಟಿ. ಕೇಶವ ಭಟ್ಟ

ಯಕ್ಷಗಾನ ಬಯಲಾಟ

ಸಾಹಿತ್ಯ-ಕಲಾ ವಿಲಾಸಗಳ ಬಹುಮುಖ ಪ್ರತಿಭೆಯಿಂದ ಕಂಗೊಳಿಸುವ ಯೋಗ ಡಾ. ಶಿವರಾಮಕಾರಂತರದು. ಕನ್ನಡ ಸಾಹಿತ್ಯದ ವಿವಿಧ ಪ್ರಭೇದಗಳ ಕಡೆಗೆ ದೃಷ್ಟಿಕ್ಷೇಪ ಮಾಡಿದಾಗಲೆಲ್ಲ, ಅಲ್ಲಲ್ಲಿ ಅವುಗಳ ಕರ್ತೃಗಳಲ್ಲೊಬ್ಬರಾಗಿ ನಾವು ಕಾರಂತರನ್ನೂ ಕಾಣುತ್ತೇವೆ. ಬಹುಶಃ ಮಹಾಕಾವ್ಯರಚನೆಯ ಹೊರತು, ಆಧುನಿಕ ಸಾಹಿತ್ಯ ನಿರ್ಮಾಣಗಳಲ್ಲೆಲ್ಲ ಅವರ ಪದನ್ಯಾಸವಿದೆ. ಕೆಲವು ಸಾಹಿತ್ಯ ಪ್ರಭೇದಗಳಲ್ಲಿ ಅವರ ಪದಚಿಹ್ನೆ ಅಚ್ಚಳಿಯದಂತೆ ಇದೆ, ಹಿರಿಮೆಯಲ್ಲಿ ಮೀರಿ ನಿಂತಿದೆ. ಅವರ ರಚನಾಕೌಶಲ, ತೀಕ್ಷ್ಣಮತಿತ್ವಗಳು ಉಜ್ವಲವಿವೆ. ಅವರು ಸಾಹಿತ್ಯ-ಕಲೆಗಳ ಸಾಂಪ್ರದಾಯಿಕ ಅಭ್ಯಾಸಿಗಳು ಮಾತ್ರವೇ ಅಲ್ಲ, ನೂತನ ರಚನಾ ಬ್ರಹ್ಮರೂ ಹೌದು. ನವೀನ ಪ್ರಯೋಗ ಪರಿಣತಮತಿಗಳೂ ಆಗಿದ್ದಾರೆ. ಅವರ ಬರವಣಿಗೆಗೆ ಹರಿತವಿದೆ; ಅದರಲ್ಲಿ ವೈಜ್ಞಾನಿಕ ದೃಷ್ಟಿಯೂ ಭಾವಪುಷ್ಟಿಯೂ ವಿವೇಚನೆಯ ದೃಷ್ಟಿಯೂ ಇವೆ. ಹಿಡಿದ ಕೆಲಸವನ್ನು ಈಡೇರಿಸುವ ಏಕಾಂಗ ನಿಷ್ಠೆ ಅವರಿಗಿದೆ. ಸಾಹಿತ್ಯ-ಕಲಾ ವಿಷಯಕವಾದ ಅಧ್ಯಯನದಲ್ಲಿ-ಸಂಶೋಧನೆಯಲ್ಲಿ ಸತತವಾದ ಒಲವೂ, ತನಗೆ ಸರಿಯೆನಿಸಿದುದನ್ನು ಕೊನೆತನಕ ಸಾಧಿಸಿ ನೋಡುವ ಚಲವೂ ಇರುವುದನ್ನು ಕಾಣುತ್ತೇವೆ. ಇದರಿಂದಲೇ ಇರಬೇಕು ಡಾ. ಕಾರಂತರು ಎಲ್ಲ ರಂಗಗಳಲ್ಲಿ ಕಂಗೊಳಿಸಿ, ತಮ್ಮ ಪ್ರತಿಭೆಯನ್ನು ತೊರಿಸಿದ್ದಾರೆ. ಕತೆ, ಕಾದಂಬರಿ, ನಾಟಕ, ಗೀತ ನಾಟಕ, ಛಾಯಾ ನಾಟಕ, ಮಕ್ಕಳ ಸಾಹಿತ್ಯ, ಪ್ರಬಂಧ, ಪ್ರವಾಸ ಸಾಹಿತ್ಯ, ವಿಜ್ಞಾನ, ಚಿತ್ರಕಲೆ, ಕೋಶರಚನೆ, ಗ್ರಂಥ ಮುದ್ರಣ, ರಾಜಕೀಯ-ಇತ್ಯಾದಿ ಬಹುಮುಖ ಕ್ಷೇತ್ರಗಳಲ್ಲಿ ವ್ಯವಸಾಯಾತ್ಮಕವಾದ ಅವರ ಕ್ರಿಯಾಶಕ್ತಿ ಯಕ್ಷಗಾನ ಕಲೆಯಲ್ಲಿಯೂ ಆಸಕ್ತವಾಗಿ, ಆ ಕುರಿತ ಸಂಶೋಧನ ಪ್ರಬಂಧವನ್ನು ರಚಿಸಿರುವುದು ಆಶ್ಚರ್ಯವಲ್ಲ.

ಅಖಿಳ ಕರ್ಣಾಟಕದ ಕಡಲಕರೆಯ ನಾಡೆನಿಸುವ ‘ ಕನ್ನಡ ಜಿಲ್ಲೆ ’ (ದಕ್ಷಿಣ ಕನ್ನಡ-ಉತ್ತರ ಕನ್ನಡ, ಎಂಬೆರಡೂ ಸೇರಿ) ಯಕ್ಷಗಾನ ಕಲೆಗೆ ಹೆಸರಾದ ಸೀಮೆ. ಯಕ್ಷಗಾನದ ವಿಕಸಿತ ರೂಪವನ್ನು ಅಥವಾ ಪ್ರಯೋಗ ನೈಪುಣ್ಯವಡೆದ ಸ್ವರೂಪವನ್ನು ಈ ಪ್ರದೇಶದಲ್ಲಿ ಕಾಣಬಹುದು. ಗೀತ, ವಾದನ, ನೃತ್ಯ, ಬಣ್ಣಗಾರಿಕೆ, ಸಾಹಿತ್ಯ

—ಎಂಬ ಹಲವು ಕುಶಲಕಲೆಗಳ ಸಮ್ಮಿಶ್ರಿತ ರೂಪವೆನಿಸುವ ಯಕ್ಷಗಾನ ಕಲೆಯಲ್ಲಿ ಅಭಿರುಚಿ, ಅಭಿಮಾನಗಳಲ್ಲದೆ ಪರಿಶ್ರಮವು ಕೂಡ ಈ ಪ್ರದೇಶದಲ್ಲಿ ಹುಟ್ಟಿ ಬೆಳೆದವರಿಗೆ ಸಹಜವೇ. ಇದರಂತೆ ಇತರ ಗಾನ, ವಾದನ, ನೃತ್ಯ, ಸಾಹಿತ್ಯಾದಿ ವ್ಯಷ್ಟಿ ಕಲೆಗಳು ಇಲ್ಲಿನ ಜನತೆಯನ್ನು ಆಕರ್ಷಿಸಿಲ್ಲ. ನಾಟಕಕ್ಕಿಂತ ಬಯಲಾಟವೂ ಸಂಗೀತ, ಗಮಕ, ಹರಿಕಥೆ ಮುಂತಾದವುಗಳಿಗಿಂತ ಯಕ್ಷಗಾನವೂ ಇಲ್ಲಿನ ಜನಸಾಮಾನ್ಯರಿಗೆ ಮೆಚ್ಚಿನವು. ಡಾ. ಶಿವರಾಮ ಕಾರಂತರು ಬಾಲ್ಯದಿಂದಲೇ ಈ ಯಕ್ಷಗಾನದ ಕಡೆಗೆ ಆಕರ್ಷಿತರಾದರು ; ಈ ಕಲೆಯ ವಿವಿಧ ಅಂಗಗಳನ್ನು ಅಭ್ಯಸಿಸಿ, ಇದರ ಸುಧಾರಣೆಯ ಕಡೆಗೂ ದೃಷ್ಟಿಯಿಟ್ಟರು. ಯಕ್ಷಗಾನದೊಳಗೇ ಹಲವು ಕಥಾನಕಗಳನ್ನು ಕುಣಿದು ತೋರಿಸುವ 'ಕಿನ್ನರ ನೃತ್ಯ'ವನ್ನು ಡಾ. ಕಾರಂತರೇ ಆವಿಷ್ಕಾರ ಮಾಡಿರುವಂತೆ ಕಾಣುತ್ತದೆ.

ಯಕ್ಷಗಾನ ಬಯಲಾಟದ ರೂಪಾಂತರಗಳಾದ ತೊಗಲುಗೊಂಬೆಯಾಟ, ಗೊಂಬೆಯಾಟಗಳ ಮರ್ಮವನ್ನೂ ಕಾರಂತರು ಅರಿತರು. ಆಸ್ಟ್ರಿಯಾ, ಹಂಗೇರಿ, ಜೆಕೊಸ್ಲೋವೆಕಿಯಾ ಮುಂತಾದ ವಿದೇಶಗಳಲ್ಲಿ ಪ್ರಚಲಿತವಿರುವ ಗೊಂಬೆಯಾಟಗಳನ್ನೂ ಕಾರಂತರು ಅಧ್ಯಯನ ಮಾಡಿದ್ದಾರೆ. ದಕ್ಷಿಣ ಕನ್ನಡ ಜುಲ್ಲೆಯಲ್ಲಿ ಪುತ್ತೂರಿಗೆ ಬರುತ್ತಿದ್ದ ತೆಂಕುತಿಟ್ಟಿನ ಯಕ್ಷಗಾನ ಬಯಲಾಟಗಳಲ್ಲಿ ಜಿಗುಪ್ಸೆಪಟ್ಟು, ಶ್ರೀಯುತರು ತಮ್ಮ ಊರಿಗೆ ಹೋಗಿ ಅಲ್ಲಿ ಪ್ರಚಲಿತವಾದ ಬಡಗುತಿಟ್ಟಿನ ಯಕ್ಷಗಾನ ಪ್ರಯೋಗಗಳಿಂದ ತೃಪ್ತಿಪಟ್ಟಂತೆ ಹೇಳಿಕೊಂಡಿದ್ದಾರೆ. ಅಲ್ಲಿನ ಯಕ್ಷಗಾನ ಕಲಾವಿದರೊಡನೆ ಸೇರಿ, ಅವರಿಗೆ ಮಾರ್ಗದರ್ಶಕರಾಗಿ, ಹಲವು ಪ್ರಯೋಗಗಳನ್ನೂ ಮಾಡಿದರು. ಯಕ್ಷಗಾನವೇನೂ ಪ್ರಚಾರದಲ್ಲಿಲ್ಲದ ಮುಂಬಯಿಯಂತಹ ಕಡೆಗಳವರು ಶ್ರೀ ಕಾರಂತರ ಪ್ರಯೋಗಗಳನ್ನು ಬಹಳ ಮೆಚ್ಚಿದರು. ರಷ್ಯನ್ ರಂಗಭೂಮಿಯ ವೇಷನಿರ್ಮಾಪಕರೂ ಈ ಯಕ್ಷಗಾನದ ಕುಣಿತ-ವೇಷಗಳನ್ನು ಕಂಡು ಮರುಳಾದರು. ಹಲವರು ವಿದೇಶೀ ಕಲಾವಿದರು ಡಾ. ಕಾರಂತರಿಂದ ಯಕ್ಷಗಾನ ನರ್ತನಕ್ಕೆ ಸಂಬಂಧಿಸಿದ ಚಿತ್ರಗಳನ್ನು ಸಂಗ್ರಹಿಸಿಕೊಂಡರು. ಹೀಗೆ ಕಾರಂತರಿಗೆ ಯಕ್ಷಗಾನ ಕಲೆಯಲ್ಲಿ ಅಭಿರುಚಿ-ಅಭಿಮಾನಗಳು ಹೆಚ್ಚಿ ಅವರ ಒಲವು ಸಂಶೋಧನೆಯ ಕಡೆಗೆ ಹರಿಯಿತು. ಅದರ ಪರಿಣಾಮವಾಗಿ 'ಯಕ್ಷಗಾನ ಬಯಲಾಟ' ಎಂಬ ಸಂಶೋಧನ ಪುಸ್ತಕವೊಂದು ಪ್ರಕಟವಾಗುವಂತಾಯಿತು. ಇಂಟರ್ ನ್ಯಾಶನಲ್ ಡಾನ್ಸ್ ಆರ್ಕೈವ್ಸ್-ಎಂಬ ಸಂಸ್ಥೆಯ ಅಧ್ಯಕ್ಷರಾದ 'ರಾಲ್ಫ್ ದ ಮಾರಿ' ಎಂಬವರು ತಮಗೆ ಕಾರಂತರು ಯಕ್ಷಗಾನ ಚಿತ್ರಸಂಗ್ರಹವನ್ನು ಒದಗಿಸಿದುದಕ್ಕಾಗಿ ಮತ್ತು ಯಕ್ಷಗಾನದಲ್ಲಿ ಶ್ರೀಯುತರು ಮಾಡಿರುವ ಕೆಲಸಗಳ ಸಲುವಾಗಿ 'ಕಂಚಿನ ಪದಕ'ವನ್ನು ಕೊಟ್ಟು ಸನ್ಮಾನಿಸಿದರು. ಹೀಗೆ ಪರದೇಶೀಯರು ಪ್ರಾರಂಭಿಸಿದ ಸನ್ಮಾನ ಸ್ವದೇಶೀಯರ ಕಣ್ಣು ತೆರೆಯಿಸಿತು. ಪರಿಣಾಮವಾಗಿ ಭಾರತೀಯ ಸಾಹಿತ್ಯ ಅಕಾಡೆಮಿಯವರು ಕಾರಂತರ ಈ 'ಯಕ್ಷಗಾನ ಬಯಲಾಟ' ಎಂಬ ಪುಸ್ತಕಕ್ಕೆ ಪ್ರಶಸ್ತಿ ನೀಡಿ, ಬಹುಮಾನಿಸಿದರು. ಅನಂತರ

ಕನ್ನಡಿಗರ ಬೇರೆ ಬೇರೆ ಸಂಸ್ಥೆಗಳು ಕಾರಂತರನ್ನು ಸನ್ಮಾನಿಸಿದವು. ಹೀಗೆ ಯಕ್ಷಗಾನ ವಿಷಯಕ್ಕೆ ಕಾರಂತರು ಅದ್ವಿತೀಯರಾದರು.

'ಯಕ್ಷಗಾನ ಬಯಲಾಟ' ಎಂಬೀ ಸಂಶೋಧನ ಗ್ರಂಥದ ಮೊದಲನೆಯ ಮುದ್ರಣ ೧೯೫೭ರಲ್ಲಾಯಿತು. ಕತೆ–ಕಾದಂಬರಿ–ನಾಟಕ ಕ್ಷೇತ್ರಗಳಲ್ಲಿ ನುರಿತ ಕಾರಂತರ ಈ ಗ್ರಂಥವನ್ನು ಕನ್ನಡ ಜನತೆ ಅಷ್ಟೇ ಆದರ–ಅಭಿಮಾನಗಳಿಂದ ಓದಿತು. ಅಕಾಡೆಮಿ ಪುರಸ್ಕೃತ ಗ್ರಂಥವೆಂದು ಇನ್ನಷ್ಟು ಆಸಕ್ತಿಯಿಂದ ನೋಡಿತು. ಯಕ್ಷಗಾನ ಕಲಾವಿದರ ವಿಮರ್ಶನ ನಿಕಷಕ್ಕೂ ಇದು ಒದಗಿತು. ಇದರ ಪರಿಣಾಮವಾಗಿ ಮತ್ತು ಲೇಖಕರು ಅವಿರತವಾಗಿ ನಡೆಸಿದ ಸಂಶೋಧನೆ–ಪ್ರಯೋಗಗಳಿಂದ ಪಡೆದ ಅನುಭವದ ಪರಿಣಾಮವಾಗಿ, ಹಲವು ಹೊಸ ವಿಚಾರಗಳನ್ನು ಸೇರಿಸಿ, ತಿದ್ದುಪಡಿಗಳನ್ನು ಮಾಡಿ, ೧೯೬೩ರಲ್ಲಿ ದ್ವಿತೀಯ ಸಂಸ್ಕರಣವನ್ನು ತಂದರು. ಯಕ್ಷಗಾನ ಕಲಾಸ್ವರೂಪದ ವಿವರಣೆ, ಪ್ರಸಂಗ ಕರ್ತೃಗಳು, ಯಕ್ಷಗಾನ ಸಾಹಿತ್ಯದ ಆದಿಕಾಲ–ಇತ್ಯಾದಿ ಸಂಗತಿಗಳಲ್ಲಿ ಹೆಚ್ಚಿನ ಮಾರ್ಪಾಡನ್ನು ಈ ಸಂಸ್ಕರಣದಲ್ಲಿ ತರುವಂತಾಯಿತು. ಹಲವು ಕವಿಗಳ ಕಾಲನಿರ್ಣಯದಲ್ಲಿ ಹಿಂದೆ ಆಗಿ ಹೋದ ತಪ್ಪುಗಳನ್ನು, ಈಗ ತಮಗೆ ಒಪ್ಪಿದೆಡೆ ತಿದ್ದುಪಡಿ ಮಾಡುವಂತಾಯಿತು. ಇಷ್ಟೆಲ್ಲ ಪರಿಷ್ಕಾರಕ್ಕೆ ಒಳಗಾದ ಮೇಲೂ ಸಮಸ್ಯೆಯಾಗಿಯೇ ಉಳಿದಿರುವ ಅಂಶಗಳು ಇದರಲ್ಲಿ ಇಲ್ಲವೆಂಬಂತಿಲ್ಲ. ಹಲವರ ಸಂಶೋಧನ ಗ್ರಂಥರಚನೆಯ ಪಾಡು ಬಹುಶಃ ಹೀಗೆಯೆ ಏನೋ?—ಎಂಬಲ್ಲಿಗೆ 'ಯಕ್ಷಗಾನ ಬಯಲಾಟ' ಒಂದು ಉದಾಹರಣೆಯಾಗಿ ತೋರಬಹುದು.

'ಯಕ್ಷಗಾನ' ಎಂಬ ಶಬ್ದವು ಅದೊಂದು ಗಾನಸ್ವರೂಪವೆಂದು ಮಾತ್ರ ಧ್ವನಿಸಬಹುದು. ವಾಸ್ತವವಾಗಿ ಅದರಲ್ಲಿ ಗಾನವಿದೆ, ವಾದನವಿದೆ, ಸಾಹಿತ್ಯವಿದೆ. ಅದು ರೂಪಕವೆನಿಸಿದಾಗ ಅಲ್ಲಿ ನೃತ್ಯವಿರುತ್ತದೆ, ಅಭಿನಯವಿರುತ್ತದೆ; ವೇಷ ಭೂಷಣಗಳೂ ಬಣ್ಣಗಾರಿಕೆಯೂ ಇರುತ್ತವೆ. ಪಾತ್ರ ಸಂಭಾಷಣೆಯಿರುತ್ತದೆ. ಇದರಿಂದ ಯಕ್ಷಗಾನವೆಂಬುದು ಒಂದು 'ಸಮಷ್ಟಿ ಕಲೆ'. ಇದರ ಪ್ರಯೋಗದಲ್ಲಿ ಎರಡು ಪ್ರಭೇದಗಳಿವೆ–ತಾಳಮದ್ದಳೆ ಮತ್ತು ಬಯಲಾಟ. ತಾಳಮದ್ದಳೆಯಲ್ಲಿ ವೇಷಭೂಷಣಗಳಿಲ್ಲ. ಭಾಗವತನು ಶ್ರುತಿ–ರಾಗ–ತಾಳಬದ್ಧವಾಗಿ ಯಕ್ಷಗಾನದ ಪದಗಳನ್ನು ಹಾಡುವನು. ಆ ತಾಳಕ್ಕೆ ಸರಿಯಾಗಿ ಮದ್ದಳೆಗಾರನು ಮದ್ದಳೆ ಬಾರಿಸುವನು. ಭಾಗವತನು ಹಾಡಿದ ಪದದ ಅರ್ಥಕ್ಕೆ ಅನುಗುಣವಾಗಿ ಅರ್ಥಧಾರಿಗಳು ಕುಳಿತುಕೊಂಡೇ ಆಶು ಸಂಭಾಷಣೆಯನ್ನು ಮಾಡುವರು. ರಸಭಾವೋಚಿತವಾದ ಈ ಸಂವಾದದಿಂದ ಶ್ರೋತೃಗಳು ತಲ್ಲೀನತೆಯನ್ನು ಅನುಭವಿಸುವರು. ಇಂತಹ ಈ ತಾಳಮದ್ದಳೆಯ ಪ್ರಾಚೀನತೆ ೧೬ನೇ ಶತಮಾನಕ್ಕೇ ಹೋಗುತ್ತದೆ. ಬಳ್ಳಾರಿ ತಾಲೂಕಿನ ಸೋಮಸಮುದ್ರದ ಲಕ್ಷ್ಮೀನಾರಾಯಣ ದೇವಾಲಯದಲ್ಲಿರುವ ಕ್ರಿ.ಶ. ೧೫೫೬ನೆಯ ಶಾಸನದಲ್ಲಿ ಆ ದೇವರಿಗೆ ತಾಳ ಮದ್ದಳೆಯ ಸೇವೆಗಾಗಿ ಅರ್ಪಿಸಿದ ಮಾನ್ಯ–ಎಂಬ ವಿಚಾರ ಬಂದಿದೆ. ಈ ಉದಾಹರಣದಿಂದ ಕಾರಂತರು ತಾಳ ಮದ್ದಳೆಯ ಪ್ರಾಚೀನತೆಯನ್ನು ಹೇಳಿ ಅಭಿಮಾನವನ್ನುಂಟುಮಾಡಿದ್ದಾರೆ.

ಈ ಪುಸ್ತಕ ರಚನೆಗೆ ಪ್ರೇರಣೆಯ ಕುರಿತಾಗಿ ಲೇಖಕರ ಕೆಲವು ಮಾತುಗಳಿವು:

"ಈ ಬರಹಕ್ಕೆ ಕಾರಣವಾದ 'ಯಕ್ಷಗಾನ ಬಯಲಾಟ'ವು ಕರ್ನಾಟಕ ಸಂಸ್ಕೃತಿಯ ಒಂದು ಉತ್ತಮವಾದ ಅಂಗ. ಅದು ಅಖಿಲ ಕರ್ನಾಟಕದ ಬೇರೆ ಬೇರೆ ಮೂಲೆಗಳಲ್ಲಿ ಹತ್ತೆಂಟು ಆಕಾರಗಳಲ್ಲಿ ಕಾಣಸಿಗುತ್ತದೆ. ಆದರೆ, ಅದರ ಪುಷ್ಟವಾದ, ಸಂಪನ್ನಸಮೃದ್ಧವಾದ, ರಸಾವಿಷ್ಟವಾದ ರೂಪವನ್ನು ನಾವು ಕಾಣಬೇಕಾದರೆ ಕರ್ನಾಟಕದ ಮಲೆನಾಡಿನ ಕಡೆಗೆ ದೃಷ್ಟಿಯನ್ನು ಹರಿಯಿಸಬೇಕು....ಕನ್ನಡ ನಾಡಿನ ಯಕ್ಷಗಾನ ಬಯಲಾಟದ ಪರಂಪರೆಯು ಇಲ್ಲಿನ ಸಂಸ್ಕೃತಿಯ ಅತ್ಯಂತ ಸುಂದರವಾದ ಅಂಗವಾಗಿದೆ. ಒಂದು ಕಾಲದಲ್ಲಿ ಅದು ಇಲ್ಲಿನ ಜನಜೀವನದ ಮನಸ್ಸನ್ನು ನೂರಕ್ಕೆ ಐವತ್ತರಷ್ಟು ತುಂಬಿಸಲು ಶಕ್ತಿಯುಳ್ಳ ಕಲೆಯಾಗಿತ್ತು. ಆದರೆ, ಅನ್ಯದೇಶೀಯ ....ಮೋಹ, ನಾವೀನ್ಯತೆಯ ಮೋಹ ಜನಗಳ ಮೇಲೆ ಬೀಸತೊಡಗಿದೆ. ಇಂದು ಅಂಥ ಮೋಹ ಬೆಳೆ ಬೆಳೆದು, ಬದನಿಕೆಗಳ ಸಮುದಾಯದಂತೆ ಯಕ್ಷಗಾನ ಕಲೆ ಜೀವ ಹಿಂಸೆಗೆ ಕಾರಣವಾಗಿದೆ. ಇಂಥ ಕಾಲದಲ್ಲಿ ಬರಿದೆ 'ನಮ್ಮ ಸಂಸ್ಕೃತಿ' ಎಂಬ ಅಭಿಮಾನ ವಿದ್ದರೆ, ಏನು ಬಂತು? ಅರಿವಿನಿಂದ ನಮಗೆ ಅಂಥ ಅಭಿಮಾನ ಬಂದರೆ ಆಗ ಅದಕ್ಕೆ ತಾಳಿಕೆ ಬರುತ್ತದೆ; ಪ್ರಯೋಜನ ಬಗುತ್ತದೆ. ನಮ್ಮದರ ಬೆಲೆ ನಮಗೆ ತಿಳಿಯುತ್ತದೆ.... ಅದಕ್ಕಾಗಿ ನಾನು ಈ ಪ್ರಬಂಧದ ಕನಸನ್ನು ಕಟ್ಟಿಕೊಂಡೆ. ಸುಮಾರು ಇಪ್ಪತ್ತೈದು ವರ್ಷಗಳ ನಿರೀಕ್ಷಣೆಯ ಮತ್ತು ಅಭ್ಯಾಸದ ಅನುಭವವನ್ನು ನಾನಿಲ್ಲಿ ಹೇಳಲು ಪ್ರಯತ್ನಿಸುತ್ತಿದ್ದೇನೆ" (ಪುಟ ೩–೪).

'ಯಕ್ಷಗಾನ ಬಯಲಾಟ' ಮಲೆನಾಡಿನದೊಂದು ದೇಶೀಯ ಕಲೆಯೆಂದೂ ಭರತನಾಟ್ಯವನ್ನಾಗಲೀ ಕೇರಳದ ಕಥಕಳಿಯನ್ನಾಗಲೀ ಅನುಸರಿಸದಿರುವ ರೂಪವುಳ್ಳ ದೆಂದೂ ಕಾರಂತರು ತಮಗಿರುವ ಬಡಗುತಿಟ್ಟಿನ ಯಕ್ಷಗಾನದ ಒಲವಿನಿಂದ ನಿರ್ಣಯಿಸಿ ದ್ದಾರೆ. ಕಥಕಳಿ ಹುಟ್ಟುವ ಮೊದಲೇ 'ನಾಗರ ಖಂಡ'ವೆನಿಸಿದ್ದ ಈ ಭಾಗದಲ್ಲಿ ಪೂಜಾವಿಧಿಯೊಂದರಲ್ಲಿ ಬಳಸುತ್ತಿದ್ದ, ಮತ್ತು ಈಗಲೂ ಬಳಸುತ್ತಿರುವ ನೃತ್ಯ ಮಾರ್ಗವೇ ಬಯಲಾಟದ ನೃತ್ಯವಾಗಿ ರೂಪಗೊಂಡಿತೆಂದು ಅಭಿಪ್ರಾಯಪಟ್ಟಿದ್ದಾರೆ. ವೈದ್ಯಮನೆತನದ ಬ್ರಾಹ್ಮಣರು 'ನಾಗಮಂಡಲ' ಸಮಾರಂಭದಲ್ಲಿ ಮಾಡುವ ದೇಶೀಯ ವಿಶಿಷ್ಟ ನೃತ್ಯದಿಂದಲೇ ಯಕ್ಷಗಾನ ಬಯಲಾಟಕ್ಕೆ ಪ್ರೇರಣೆ ಬಂದಿದೆಯೆಂದು ತಮ್ಮ ಸಂಶೋಧನೆಯಿಂದ ತಿಳಿಸಿದ್ದಾರೆ. ವೈದ್ಯನೃತ್ಯದ ಚಿತ್ರಗಳನ್ನೂ ಕೊಟ್ಟಿದ್ದಾರೆ.

ಬಯಲಾಟವಾಡುವ ಕಲಾವಿದರ ತಂಡವನ್ನು 'ಮೇಳ' ಎನ್ನುವರು. ವರ್ಷದಲ್ಲಿ ಸುಮಾರು ಆರು ತಿಂಗಳ ಕಾಲ ಈ ಮಲೆನಾಡು ಸೆರಗಿನ ಕನ್ನಡ ಜಿಲ್ಲೆಯಲ್ಲಿ ಮಳೆ ಗಾಲವಿರುವುದರಿಂದ ಈ ಮೇಳಗಳು ಆಗ ಹೊರಡಲಾರವು. ಮಳೆಗಾಲದಲ್ಲಿ ಯಕ್ಷಗಾನವೆಂದರೆ, ತಾಳಮದ್ದಳೆಗಳ ಕೂಟವೇ ಸರಿ. ಮೇಳದವರಲ್ಲಿ ಹೆಚ್ಚಿನವರು ಬೇಸಾಯವೃತ್ತಿಯವರಾಗಿರುವುದರಿಂದ, ಮಳೆಗಾಲ ಕಳೆದನಂತರ ಮೇಳಗಳು ಹೊರಡುವವು. ಈ ಮೇಳಗಳು, ಆಯಾ ಊರಿನ ದೇವಾಲಯಕ್ಕೆ ಸಂಬಂಧಿಸಿರುತ್ತವೆ.

ಆಯಾ ಮೇಳದವರು ಮೊದಲು ತಮ್ಮ ಇಷ್ಟದೇವರ ಸನ್ನಿಧಿಯಲ್ಲಿ ಮೊದಲನೆಯ 'ಸೇವೆ'ಯಾಗಿ ಆಡಿ, ಆಮೇಲೆ ವೀಳೆಯವಿತ್ತು ಕರೆಯಿತ್ತಲ್ಲಿಗೆ ಹೋಗಿ, ಬಯಲಾಟ ಮಾಡುವರು. ಬಯಲಾಟಮಾಡುವಲ್ಲಿ ರಂಗಸ್ಥಳ ಮತ್ತು ಚೌಕಿ (ನೇಪಥ್ಯ) ಹಾಕಿ, ಆಟವಾಡುವರು. ಈ ಕಾರ್ಯಕ್ರಮ ರಾತ್ರಿ ಇಡೀ ನಡೆಯುವುದು. ಊರವರೆಲ್ಲ– ಹೆಂಗುಸರು ಮಕ್ಕಳೆನ್ನದೆ ಬಂದು ಈ ಮನೋರಂಜನೆಯಲ್ಲಿ ಭಾಗಿಯಾಗುವರು. ಹೀಗೆನ್ನುವಾಗ ಬಯಲಾಟ ಪ್ರಚಲಿತವಿಲ್ಲದ ಕಡೆಯವರಿಗೆ ಅಚ್ಚರಿಯಾಗುವುದು.

ಯಕ್ಷಗಾನದ ಪ್ರಾಚೀನತೆಯ ವಿಚಾರವಾಗಿ ಈ ಪುಸ್ತಕದಲ್ಲಿ ಹಲವು ವಿಚಾರ ಗಳಿವೆ. ಇವುಗಳಲ್ಲಿ ಕೆಲವು ಅನ್ಯತ್ರ ಇತರರು ಹೇಳಿರುವಂಥವಾದರೂ ಒಂದೆಡೆ ಕೂಡಿಸಿ, ತಮ್ಮ ವಿಚಾರಗಳನ್ನೂ ಕೂಡಿಸಿರುವುದು ಪ್ರಶಸ್ತವಾಗಿದೆ.

ದಿ. ಮುಳಿಯ ತಿಮ್ಮಪ್ಪಯ್ಯನವರು ಯಕ್ಷಗಾನ ಪ್ರಬಂಧ ರಚನೆಯೂ ಪ್ರಯೋಗಕ್ರಮವೂ ಕವಿರಾಜಮಾರ್ಗ ಕಾಲದಲ್ಲೇ (೯ನೇ ಶತಮಾನ) 'ಪಗರಣ' ರೂಪದಲ್ಲಿ 'ಬೆದಂಡೆ'ರೂಪದಲ್ಲಿ ಇದ್ದಿರಬೇಕೆಂದು ವಿವರಿಸಿದ್ದರು. ಹನ್ನೆರಡನೆ ಶತಮಾನದಲ್ಲಿದ್ದ ಅಗ್ಗಳನೆಂಬ ಕವಿ ತನ್ನ ಚಂದ್ರಪ್ರಭಪುರಾಣದಲ್ಲಿ ಉಲ್ಲೇಖಿಸಿರುವ 'ಎಕ್ಕಲ ಗಾಣಂ' ಎಂಬುದು ಯಕ್ಷಗಾನವನ್ನು ಹಾಗೂ ಯಕ್ಷಗಾನದ ಹಾಡು ಗಾರನನ್ನು ಕುರಿತದ್ದು ಎಂದು ಪ್ರತಿಪಾದಿಸಿದ್ದರು. ಹಿಂದೆ ಸಾಂಗ್ಲಿಗೆ ಹೋದ ಉತ್ತರ ಕನ್ನಡದ ಒಂದು ಯಕ್ಷಗಾನ ಬಯಲಾಟದ ಮೇಳದವರಿಂದ ಪ್ರೇರಿತರಾದ ಮಹಾರಾಷ್ಟ್ರ ದವರು ತಮ್ಮ ನಾಟಕ ರಚನೆಯನ್ನು ಪ್ರಾರಂಭಿಸಿದರು ಎಂತಲೂ ಆಧಾರಪೂರ್ವಕವಾಗಿ ಹೇಳಿದ್ದಾರೆ. ತಂಜಾವೂರಿನ ನಾಯಕ ರಾಜವಂಶೀಯನಾದ ರಘುನಾಥನಾಯಕನು (ಕ್ರಿ.ಶ. ೧೬೧೭) ಯಕ್ಷಗಾನ ಪ್ರಬಂಧ ಕವಿಯಾಗಿದ್ದುದನ್ನೂ ಸೂಚಿಸಿದ್ದಾರೆ. ಮೈಸೂರು ಮುಮ್ಮಡಿ ಕೃಷ್ಣರಾಜ ಒಡೆಯರು ೧೮೮೧ರಲ್ಲಿ ದಕ್ಷಿಣ ಕನ್ನಡದಿಂದ ವೇಷಧಾರಿಗಳನ್ನು ಕರೆಸಿಕೊಂಡು 'ದಶಾವತಾರ ಮೇಳ'ವನ್ನು ತಮ್ಮ ಆಸ್ಥಾನದಲ್ಲಿ ನೆಲೆಗೊಳಿಸಿದ್ದುದನ್ನೂ ಹೇಳಿದ್ದಾರೆ. ಇವುಗಳಲ್ಲಿ ಎಲ್ಲವನ್ನಲ್ಲದಿದ್ದರೂ ಒಂದೆರಡು ಸಂಗತಿಗಳನ್ನು ಕಾರಂತರು ತಮ್ಮ ಋಣಿತ್ವವನ್ನು ಸೂಚಿಸದಿದ್ದರೂ 'ಬಯಲಾಟ' ಪುಸ್ತಕದಲ್ಲಿ ಸೇರಿಸಿಕೊಂಡು, ಕೆಲವು ಹೊಸ ಅಂಶಗಳನ್ನು ತಿಳಿಸಿರುತ್ತಾರೆ.

ಕೆಳದಿಯ ವೆಂಕಟಪ್ಪನಾಯಕನು ಇಕ್ಕೇರಿಯಲ್ಲಿ ಒಂದು ನಾಟಕಶಾಲೆಯನ್ನು ನಿರ್ಮಿಸಿದನೆಂಬುದಾಗಿ ಲಿಂಗಣ್ಣ ಕವಿಯ 'ಕೆಳದಿಯ ನೃಪವಿಜಯ'ದಲ್ಲಿ ಹೇಳಿರುವುದು ಯಕ್ಷಗಾನ ಬಯಲಾಟಕ್ಕೆ ಹೋಲುವಂಥದೆಂಬುದಾಗಿ ಭರತೇಶವೈಭವದ ಪದ್ಯದ ಆಧಾರದಿಂದ ಸಮರ್ಥಿಸಿದ್ದಾರೆ. ಭರತೇಶನ ಆಸ್ಥಾನದಲ್ಲಿ ಎಕ್ಕಡಿಗರೂ ಇದ್ದರಂತೆ.

ಗಣಿಕೆಯರೆಕ್ಕಡಿಗರು ನಾಟ್ಯಶಾಸ್ತ್ರ ಲ
ಕ್ಷಣಿಕರು ಭಾವರಂಜಕರು
ಗುಣಿಗಳು ಮಂತ್ರಿಗಳರಸನ ಕಂಡು ತಿಂ
ತಿಣಿಯಾಗಿ ಕುಳಿತರೋಜೆಯೊಳು

ಇಲ್ಲಿ ಹೇಳಿರುವ "ಎಕ್ಕಡಿಗ" ಎಂಬುದು ಎಕ್ಕಟಿ+ಗ ಎಂಬ ನಿಷ್ಪತ್ತಿಯುಳ್ಳು ದಾದರೆ 'ಏಕಾಂತ ವಿಚಾರದಲ್ಲಿ ಪ್ರವರ್ತಿಸುವವ' ಆಗಬಹುದು. ಎಕ್ಕಡ+ಇಗ ಎಂಬುದರಿಂದ ಎಕ್ಕಡ ಮಾಡುವವನೂ ಆಗಬಹುದು. 'ಎಕ್ಕ' ಎಂಬುದು ಕಾರಂತರ ಅಭಿಪ್ರಾಯದಂತೆ 'ಯಕ್ಷ' ಎಂಬುದರ ತದ್ಭವರೂಪವಾಗಿದ್ದರೆ ಆಗ 'ಎಕ್ಕ+ಅಡಿಗ' ಎಂಬ ಸಂಯೋಗದಿಂದ 'ಯಕ್ಷಾರಾಧಕ' ಎಂಬ ಅರ್ಥ ಬರಬಹುದು. 'ಯಕ್ಷ ಗಾಯಕ' ಎಂಬ ಅರ್ಥವನ್ನು ಕಾರಂತರು ಈ ಶಬ್ದಕ್ಕೆ ಕೊಟ್ಟಿದ್ದಾರೆ. ಕ್ರಿ.ಶ. ೧೫೫೭ರಲ್ಲಿದ್ದ ರತ್ನಾಕರನು ತನ್ನ ಭರತೇಶವೈಭವದ ಪೂರ್ವನಾಟಕ–ಉತ್ತರ ನಾಟಕ ಸಂಧಿಗಳಲ್ಲಿ ಪ್ರಸ್ತಾವಿಸಿರುವ ವಿಚಾರಗಳು ಯಕ್ಷಗಾನ ಬಯಲಾಟವನ್ನೇ ಉದ್ದೇಶಿಸಿವೆಯೆಂದು ವಿವರಿಸಲಾಗಿದೆ (ಪುಟ ೩೩–೩೪). ರತ್ನಾಕರವರ್ಣಿಯ ಕಾಲದಲ್ಲಿ ಗಾನ–ನೃತ್ಯ–ತಾಳ–ಮೇಳಗಳುಳ್ಳ ನಾಟಕ ರೂಢಿಯಲ್ಲಿದ್ದಿರಬೇಕಾದರೆ, ಅವನಿಗಿಂತಲೂ ಮೊದಲು ಸಾಮಾನ್ಯ ಒಂದು ನೂರು ವರ್ಷಗಳಷ್ಟು ಹಿಂದಣ ಪರಂಪರೆಯಾದರೂ 'ನಮ್ಮ' ಬಯಲಾಟಕ್ಕೆ ಇದ್ದಿರಬೇಕು–ಎಂದರೆ ತಪ್ಪಾಗ ಲಾರದು—ಎಂಬ ನಿರ್ಣಯ ಕಾಣುತ್ತಿದೆ. ಈ ಯಕ್ಷಗಾನದ ನೃತ್ಯ, ವೇಷ, ಚಿತ್ರ (ಬಣ್ಣ), ಗಾನ–ಇತ್ಯಾದಿ ಯಾವ ಕ್ರಮಗಳೂ ಎರವಿನಿಂದ ಬಂದಿಲ್ಲವೆಂಬ ನಿರ್ಣಯವು ಅಭಿಮಾನಾಸ್ಪದವಾಗಿದೆ.

ಯಕ್ಷಗಾನದ ವ್ಯಾಪ್ತಿಯ ವಿಚಾರಗಳಿವು: ಯಕ್ಷಗಾನವು ಆಂಧ್ರದಲ್ಲಿಯೂ ಪ್ರಚಲಿತವಿದೆ. ಸುಮಾರು ಹದಿನಾರನೆಯ ಶತಮಾನದಿಂದ ಅಲ್ಲಿ ಅದು 'ಜಕ್ಕುಲು ಕಥಾ' ಎಂಬ ಹೆಸರಿನಿಂದ ಪ್ರಸಿದ್ಧವಾಗಿತ್ತು. ಅಲ್ಲಿಂದ ಅದು ತಂಜಾವೂರಿಗೆ ಹೋಯಿತು. ಸಂಗೀತಪಂಡಿತರಾದ ಗೋವಿಂದದೀಕ್ಷಿತರು (೧೬೨೦) ತಮ್ಮ 'ಸಂಗೀತ ಸುಧೆ'ಯಲ್ಲಿ ಯಕ್ಷಗಾನದ ಕುರಿತಾಗಿ ಹೇಳಿದ್ದಾರೆ. ಸಂಗೀತಶಾಸ್ತ್ರಕಾರ ಶಾರ್ಙ್ಗದೇವನು 'ಜಕ್ಕ' ಎಂಬೊಂದು ಸಂಗೀತಶೈಲಿಯನ್ನು ಹೇಳಿದ್ದಾನೆ– 'ಚಾಲಿರ್ಜಕ್ಕೇತಿ ಕೀರ್ತಿತಾ' (ಪುಟ ೪೨). ಆಂಧ್ರದಲ್ಲಿ ೧೬ನೆಯ ಶತಮಾನದಲ್ಲಿ ಕುಂದಕೂರಿ ರುದ್ರಯ್ಯನು ಬರೆದ 'ಸುಗ್ರೀವ ವಿಜಯ' ಎಂಬುದು ಮೊದಲನೆಯ ಪ್ರಸಂಗವೆಂದು ತಿಳಿದುಬರುತ್ತದೆ. ಆಂಧ್ರದಲ್ಲಿ ಕೂಚಿಪುಡಿ ಬ್ರಾಹ್ಮಣರು ತೆಲುಗು ಯಕ್ಷಗಾನ ಪ್ರಚಾರಕರು. ಅವರಲ್ಲಿ ಸಿದ್ಧೇಂದ್ರಯತಿ ಪ್ರಮುಖನು. ಆತನು ಮೊದಲು 'ಸಿದ್ದಪ್ಪ' ಎಂಬ ಹೆಸರುಳ್ಳವನಾಗಿದ್ದು ಶ್ರೀ ಕಾಕುಳಮಿನಲ್ಲಿ ಗುರುಗಳಾಗಿದ್ದ ಶ್ರೀ ನರಹರಿತೀರ್ಥರಿಂದ ಪ್ರೇಷಿತನಾಗಿ ಉಡುಪಿಯಲ್ಲಿ ಇಪ್ಪತ್ತು ವರ್ಷಕಾಲ ವೇದಶಾಸ್ತ್ರ–ನಾಟ್ಯಶಾಸ್ತ್ರಗಳನ್ನು ಕಲಿತು ಊರಿಗೆ ಮರಳಿದನೆಂಬುದನ್ನು ಕಾರಂತರು ಸಂಶೋಧಿಸಿ ತಿಳಿಸಿದ್ದಾರೆ. ಹೀಗೆ ಆಂಧ್ರದಲ್ಲಿ ಯಕ್ಷಗಾನದ ಪ್ರಚಾರ–ಪ್ರಸಾರಗಳಿಗೆ ಮೂಲ ದಕ್ಷಿಣ ಕನ್ನಡದಲ್ಲಿ ಅಂದು ಪ್ರಚಲಿತವಿದ್ದ ಯಕ್ಷಗಾನ ಸ್ವರೂಪವೇ ಇರಬೇಕೆಂದು ಇಲ್ಲಿ ಅಭಿಪ್ರಾಯವಿದೆ. ಕೇರಳದ ರಾಮನಾಟ, ಕಥಕಳಿಗಿಂತ ಯಕ್ಷಗಾನವು ಕಾಲದೃಷ್ಟಿಯಲ್ಲಿ ಪೂರ್ವವಾದುದು ಎಂಬುದನ್ನು ಈ ಪುಸ್ತಕದಲ್ಲಿ ನಿರೂಪಿಸಲಾಗಿದೆ.

ನಮ್ಮ ಬಯಲಾಟ

'ಯಕ್ಷಗಾನ ಬಯಲಾಟ' ಮಹಾ ಪ್ರಬಂಧದಲ್ಲಿ ಕೆಲವೆಡೆ 'ನಮ್ಮ ಬಯಲಾಟ' ಎಂಬ ಉಲ್ಲೇಖವನ್ನು ಕಾಣಬಹುದು. ಈ 'ನಮ್ಮ ಬಯಲಾಟ'ವು ಬಡಗುತಿಟ್ಟಿನ ಬಯಲಾಟವೆಂದು ಓದುಗರು ತಿಳಿದಿರುವುದು ಆವಶ್ಯಕ. ಈ ಪ್ರಭೇದಗಳ ಕುರಿತು ಲೇಖಕರ ಮಾತುಗಳಿವು:

"ಮಲೆನಾಡಿನ ಬಯಲಾಟದಲ್ಲಿ ಸಣ್ಣಪುಟ್ಟ ಭೇದಗಳೂ ಇವೆ. ಇದಕ್ಕೆ ಹಿಂದೆ ಎಂಥ ಹಿನ್ನೆಲೆ ಇತ್ತೆಂದು ನನಗಂತೂ ಹೊಳೆಯುವುದಿಲ್ಲ. ಮೂಡಲಪಾಯ, ಪಡುವಲಪಾಯ, ತೆಂಕುತಿಟ್ಟು, ಬಡಗುತಿಟ್ಟು—ಹೀಗೆ ಮಲೆನಾಡು ನಾಲ್ಕು ಭಾಗವೆನಿಸಿದೆ. ಪಡುವಣ ಕಡಲ ಕರಾವಳಿಯ ಭಾಗವೆಲ್ಲ ಪಡುವಲಪಾಯ. ಘಟ್ಟದ ಸೆರಗಿನ ಮೂಡಣ ಭಾಗದ ಸಂಪ್ರದಾಯ ಮೂಡಲಪಾಯ. ಈ ಪಾಯ ಇಂದು ಹೆಸರಿಗಷ್ಟೇ ಉಳಿದಿದೆ. ಹಾಗೆಯೇ ಕನ್ನಡ ಜಿಲ್ಲೆಗಳಲ್ಲಿ ಉಡುಪಿಯನ್ನು ಗಡಿಯಾಗಿರಿಸಿಕೊಂಡು, ಅದರ ಉತ್ತರದಲ್ಲಿ ಬಡಗುತಿಟ್ಟು; ತೆಂಕಣದಲ್ಲಿ ತೆಂಕುತಿಟ್ಟು ಎನ್ನುತ್ತಾರೆ. ಪುಸ್ತಕಗಳ ಮೇಲೆಯೂ ಹಾಗೆ ಅಚ್ಚು ಹಾಕಿಸುವುದುಂಟು. ಆದರೆ ಈ ಕಡೆಯವರು ಆ ಕಡೆಯ ಪ್ರಸಂಗಗಳನ್ನೂ, ಆ ಕಡೆಯವರು ಈ ಕಡೆಯ ಪ್ರಸಂಗಗಳನ್ನೂ ಆಡುತ್ತಿರುತ್ತಾರೆ. ಪ್ರಸಂಗಸಾಹಿತ್ಯದಲ್ಲಿ ಯಾವ ತೆರನ ಭೇದವೂ ಇಲ್ಲ. ಪೂರ್ವಸಂಪ್ರದಾಯದ ಹಾಡುಗಾರಿಕೆಯಲ್ಲೂ ಅಂಥ ಭೇದವಿದ್ದಿಲ್ಲ. ಇರುವ ಭೇದ ತೆಂಕಣದವರು ತಾಳದ ಬದಲು ಜಾಗಟೆ ಬಾರಿಸುತ್ತಾರೆ. ಹಾಡಿನ ಮುಕ್ತಾಯಗಳನ್ನು ಬಾರಿಸುವುದರಲ್ಲಿ ತುಸು ವ್ಯತ್ಯಾಸವಿರಬಹುದು. ಕುಂಬಳೆಯಂತಹ ಕೇರಳದ ಗಡಿನಾಡಿನಲ್ಲಿ ಕಥಕ್ಕಳಿ ವೇಷಗಳ ಪ್ರಭಾವವೂ ಸ್ವಲ್ಪಮಟ್ಟಿಗೆ ಕಾಣಿಸುತ್ತಿದೆ ಹೊರತು, ಯಕ್ಷಗಾನ ಕಲೆಯಮೇಲೆ ಪ್ರಭಾವವನ್ನು ಬೀರಿ 'ಇದೇ ಒಂದು; ಅದೇ ಇನ್ನೊಂದು' ಎನಿಸುವ ಭೇದವಲ್ಲ".

ಈ ವಿವರಣೆಯಲ್ಲಿ ಪಾಯ–ತಿಟ್ಟುಗಳು ಭೌಗೋಲಿಕ ವಿಚಾರಗಳೆಂದು ಸೂಚಿತವಾಗಿದೆ. ತಿಟ್ಟುಗಳೊಳಗಣ ವ್ಯತ್ಯಾಸ–ವೈಶಿಷ್ಟ್ಯ ವಿವರಣೆ ಇಲ್ಲಿ ಅಸಮಗ್ರವೆಂದು ಈ ಎರಡು ಯಕ್ಷಗಾನ ಪ್ರಯೋಗಗಳನ್ನು ನೋಡಿದವರಿಗೆ ಹೊಳೆಯದಿರದು.

ತೆಂಕು–ಬಡಗು ತಿಟ್ಟುಗಳೊಳಗೆ ಪ್ರಚಲಿತವಿರುವ ಯಕ್ಷಗಾನ ಪ್ರಸಂಗಗಳಲ್ಲಿ ಅಷ್ಟೇನೂ ವ್ಯತ್ಯಾಸವಿಲ್ಲದಿದ್ದರೂ ಹಾಡುವ ಕ್ರಮದಲ್ಲಿ, ವ್ಯತ್ಯಾಸವು ಹಿಂದೆಯೂ ಇತ್ತು, ಇಂದಿಗೂ ಇದೆ. ವಾದ್ಯಸ್ವರೂಪದಲ್ಲಿ, ವಾದನ ಕ್ರಮದಲ್ಲಿ, ನೃತ್ಯ ವಿಧಾನದಲ್ಲಿ, ನಿಲವು–ಗತ್ತುಗಳಲ್ಲಿ ಉತ್ತರ–ದಕ್ಷಿಣಗಳಷ್ಟೇ ವ್ಯತ್ಯಾಸಗಳಿರುವುದು ಒಮ್ಮೆ ನೋಡಿದಾಗಲೇ ಕಾಣುತ್ತದೆ. ಬಡಗಣ ಭಾಗವತನು ತಾಳಬಿಲ್ಲೆ (ಚಕ್ರತಾಳ) ಹಿಡಿಯುತ್ತಾನೆ. ತಾಳದ ಗತಿಯಲ್ಲಿ ಅಲ್ಲಿ ಏಕರೂಪತೆಯಿಲ್ಲ; ನಿಧಾನವಾಗಿ ಪ್ರಾರಂಭವಾದುದು ಸ್ವಲ್ಪ ಸ್ವಲ್ಪವೇ ತೀವ್ರವಾಗಿ ಹೋಗುವ ಸಂಪ್ರದಾಯ ಬಡಗುತಿಟ್ಟಿನಲ್ಲಿದೆ. ತಾಳಕ್ಕೆ ಬಿಡಿತ ಮುಕ್ತಾಯಗಳೆಂಬ ಅಂತಸ್ತುಗಳೂ ಅಲ್ಲಿ ಗೋಚರಿಸುವುದಿಲ್ಲ. ತೆಂಕುತಿಟ್ಟಿನ ತಾಳಕ್ಕೆ ಜಾಗಟೆ ಬೇಕು. ಭಾಗವತನು ಹಾಡನ್ನೆತ್ತಿ ಆಲಾಪಿಸಿ ಜಾಗಟೆ ಎತ್ತಿ, ಬಿಡಿತ

ತೆಗೆಯುವನು. ಬಿಡಿತದನಂತರ ಪದವನ್ನು ಪೂರ್ತಿಯಾಗಿ ಹೇಳಿ, ಪುನಃ ಜಾಗಟೆ ಎತ್ತಿ ಮುಕ್ತಾಯಮಾಡುವನು. ಈ ತಾಳದ ಅಂತಸ್ತುಗಳಲ್ಲಿ ಮದ್ದಳೆ ಬಾರಿಸುವ ನಿಶ್ಚಿತವಾದ ಪೆಟ್ಟುಗಳಿವೆ. ಪದಗಳ ರಸಾನುಗುಣವಾಗಿ ಮೃದಂಗವಾದನ ಮಾಡುವ ಕ್ರಮ ತೆಂಕುತಿಟ್ಟಿನಲ್ಲಿದೆ. ಬಡಗುತಿಟ್ಟಿನ ಮದ್ದಳೆ ಚಿಕ್ಕದು—ಅದರ ಎಡಗಡೆಯ ಮುಚ್ಚಿಗೆಗೆ ಬೋನ ಹಚ್ಚುವರು. ಆದರೆ ತೆಂಕುತಿಟ್ಟಿನ ಮದ್ದಳೆ ದೊಡ್ಡದು, ಅದಕ್ಕೆ ಬೋನವಿಲ್ಲ; ಎರಡೂಕಡೆ ಕರ್ನವಿರುತ್ತದೆ. ತೆಂಕುತಿಟ್ಟಿನ ಮದ್ದಳೆಗಾರನು ಸಭೆಗೆ ಮುಖಮಾಡಿಗುವ ಭಾಗವತನ ಬಲದಪಕ್ಕದಲ್ಲಿ ಆತನಿಗೆ ಮುಖಮಾಡಿ ಕುಳಿತುಕೊಳ್ಳುತ್ತಾನೆ. ಬಡಗುತಿಟ್ಟಿನ ಮದ್ದಳೆಗಾರನು ಭಾಗವತನಂತೆ ಸಭೆಗೆ ಮುಖಮಾಡಿರುತ್ತಾನೆ.

ಅಪಸ್ವರವಿಲ್ಲದ ಜಾಗಟೆಯನ್ನೇ ತೆಂಕುತಿಟ್ಟಿನಲ್ಲಿ ಉಪಯೋಗಿಸುವುದು ಕ್ರಮ. ಭಾಗವತನ ಜತೆಗೆ ಸಂಗೀತಗಾರನೊಬ್ಬನು ಆಲಾಪಕ್ಕೆ ಮೇಳಕೊಡುವುದನ್ನು ಕಾರಂತರು ಪ್ರಸ್ತಾಪಿಸಿದ್ದಾರೆ. ಈ ಕ್ರಮ ತೆಂಕುತಿಟ್ಟಿನಲ್ಲಿಲ್ಲ; ಇದ್ದರೆ ಹಾಸ್ಯಾಸ್ಪದವೆನಿಸುವುದು. ಭಾಗವತನ ಜತೆಯಲ್ಲಿ ಪಾತ್ರಧಾರಿಗಳು ಹಾಡುವ ಕ್ರಮಕೂಡ ಬಡಗಣದು. ಅಲ್ಲಿ ಕೆಲವೊಮ್ಮೆ ಪಾತ್ರಧಾರಿ ಅಬದ್ಧ ಶ್ರುತಿಯಲ್ಲಿ ಹಾಡಿ, ಕತ್ತು ಹಿಸುಕಿದಂತಾಗುವುದನ್ನು ಲೇಖಕರು ಹೇಳಿದ್ದಾರೆ. ಚೆಂಡೆ ಮದ್ದಳೆಗಳ ವಾದನದಲ್ಲಂತೂ ತೆಂಕುತಿಟ್ಟು ತನ್ನದೇ ಆದ ಕಲಾತ್ಮಕ ವೈಶಿಷ್ಟ್ಯವನ್ನಿಟ್ಟುಕೊಂಡಿದೆ. ಬಡಗುತಿಟ್ಟಿನಲ್ಲಿ ಅನುಭವಪಡೆದ ಕೆಲವರು ಭಾಗವತರು ಮತ್ತು ವೇಷಧಾರಿಗಳು ಇಂದು ತೆಂಕುತಿಟ್ಟಿನಲ್ಲಿ ಸೇರಿ, ಕಲಾಭ್ಯಾಸವನ್ನು ಮಾಡಿ, ಧನ್ಯತೆಯನ್ನು ಅಭಿಮಾನದಿಂದ ಹೇಳಿಕೊಳ್ಳುವವರಿದ್ದಾರೆ. ವೇಷಗಳ ಬಣ್ಣಗಾರಿಕೆಯಲ್ಲಿ, ನೃತ್ಯದಲ್ಲಿ ತೆಂಕಣ ಪದ್ಧತಿ ಕಾಣಿಸುವ ಕಲಾವೈಶಿಷ್ಟ್ಯವು ಕಾರಂತರ 'ಯಕ್ಷಗಾನ ಬಯಲಾಟ'ದಲ್ಲಿ ಉಪೇಕ್ಷಿತವಾಗಿದೆ. ಅಲ್ಲಿ ಇಲ್ಲಿ ಕಲಾಭಂಗದ ವಿಡಂಬನಕ್ಕಾಗಿ ಮಾತ್ರ ಪ್ರಯೋಗಿಸಿದಂತಾಗಿದೆ. ಈ ತೆಂಕುತಿಟ್ಟಿನ ಬಗೆಗೂ ಸಹೃದಯಾತ್ಮಕ ವಿವೇಚನೆಯನ್ನು ವಿಶೇಷವಾದ ಅಭ್ಯಾಸದಿಂದ ಈ ಪುಸ್ತಕದಲ್ಲಿ ಮಾಡಿರುತ್ತಿದ್ದರೆ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಿಂತ ಹಿರಿದೆನಿಸುವ ಸಹೃದಯ ಹೃದಯಾಹ್ಲಾದದ 'ಕಂಕಣ'ಕ್ಕೆ ಗ್ರಂಥಕರ್ತರು ಪಾತ್ರರಾಗುತ್ತಿದ್ದರು. ಡಾ. ಕಾರಂತರು ತೆಂಕುತಿಟ್ಟಿನ ಯಕ್ಷಗಾನದಲ್ಲಿ ಅನಭಿಜ್ಞರೆಂದು ಅಥವಾ ವಿಮುಖರೆಂದು ಹಲವು ವಿದ್ವಾಂಸರ ಅಭಿಪ್ರಾಯವಿದೆ.

ಯಕ್ಷಗಾನ–ಎಕ್ಕಲಗಾಣವೆ?

ಈ ಯಕ್ಷಗಾನವನ್ನೆ ಹಿಂದಣ ಕವಿಗಳು 'ಎಕ್ಕಲಗಾಣ' ಎಂಬ ಮಾತಿನಿಂದ ಕರೆದರು—ಎಂದು ಕಾರಂತರು ದಿ. ಮುಳಿಯ ತಿಮ್ಮಪ್ಪಯ್ಯನವರ ಮಾತನ್ನೆ ಸಮರ್ಥಿಸಿದ್ದಾರೆ. ಎಕ್ಕಲಗಾಣವನ್ನು ಪ್ರಸ್ತಾಪಿಸಿರುವ ಅಗ್ಗಳಕವಿಯ (೧೧೮೯) ಚಂದ್ರಪ್ರಭ ಪುರಾಣದ ಪದ್ಯದ ವಿವರಣೆಯಲ್ಲಿ ಯಕ್ಷಗಾನ ಹಾಡುಗಾರನ ದೂಷಣೆಯಿರುವುದಾಗಿ ಕಂಡಿದ್ದಾರೆ. ಆ ಪದ್ಯವಿದು—

ತಾಳಮನಿತ್ತು ಸಮ್ಮನಿಸದೊತ್ತುವ ಪಂಚಮ ನುಣ್ಚರಕ್ಕಣಂ
ಮೇಳತೆಯಿಲ್ಲ ಬೀಣೆಯ ಸರಂಬಿಡದಿಲ್ಲಿಯೆನಿಪ್ಪ ಠಾಯೆಯಿಂ
ದಾಣತಿ ಮಾಡಿ ಸಾಳಗದ ದೇಸಿಯ ಗೀತಮನಂದು ಪಾಡುವಿಂ
ಪಾಣನನುರ್ವರಾಧಿಪತಿ ಲೀಲೆಯಿನೆಕ್ಕಲಗಾಣನೊರ್ವನಂ ॥
ಕೇಳುತ್ತುಮಿರ್ದಂ.

ಈ ಕಾವ್ಯದಲ್ಲಿ ಬರುವ ಅಜಿತಸೇನನು ಶಶಿಪ್ರಭೆಯೊಡನೆ ಉದ್ಯಾನದ ವಸಂತ ಗೃಹದಲ್ಲಿದ್ದಾಗ ಒಬ್ಬ ಎಕ್ಕಲಗಾಣನು ಹಾಡಿದನಂತೆ. ಅದರ ಬಣ್ಣನೆಯಿದು–ತಿಮ್ಮಪ್ಪಯ್ಯನವರು ವಿವರಿಸಿರುವ ಪ್ರಕಾರ ಇದು ಯಕ್ಷಗಾನದ ಹಾಡುವಿಕೆಯ ಸ್ವರೂಪ ಲಕ್ಷಣ. ಗಂಧರ್ವಗಾನದಲ್ಲಿ ನೂರೆಂಟರವರೆಗೂ ತಾಳಗಳ ಸಂಖ್ಯೆಯಿದ್ದರೆ, ಯಕ್ಷಗಾನದಲ್ಲಿ ಎಂಟು-ಹತ್ತು ಇರಬಹುದಾದುದರಿಂದ 'ತಾಳಮನಿತ್ತು ಸಮ್ಮನಿಸದು' ಎಂಬ ಮಾತು ಸರಿಯಾಗುವುದು. 'ಪಂಚಮನುಣ್ಚರಕ್ಕೆ ಮೇಳತೆಯಿಲ್ಲ' ಯಕ್ಷಗಾನದ ಹಾಡುಗಾರಿಕೆಗೆ ಶ್ರುತಿಯಾಗಿ ಏಕತಾನವಿರುತ್ತದೆ ಎಂಬುದಿಲ್ಲಿ ಅಭಿಪ್ರಾಯವಾಗಿ ಕಾಣುತ್ತದೆ. 'ಬೀಣೆಯ ಸರಂ ಬಿಡದು'—ವೀಣಾನಾದದಂತಹ ಕೋಮಲ ನಾದವನ್ನು ಪ್ರಕಟಿಸುವ ಸಾಮಗ್ರಿಯೂ ಇಲ್ಲಿಲ್ಲ, ಏಕೆಂದರೆ ಯಕ್ಷಗಾನಕ್ಕೆ ತಂತ್ರೀ ವಾದ್ಯದ ಬಳಕೆಯಿಲ್ಲವಷ್ಟೆ. ಹೀಗಿರತಕ್ಕ ಠಾಯೆ (ಸ್ವರರಚನೆ)ಯಿಂದ ಆಲಾಪನೆ ಮಾಡಿ ದೇಸಿಯೆನಿಸುವ ಸಾಳಗ ರಾಗದ ಗೀತವನ್ನು ಇಂಪಾಣ (ಇನಿದಾಗಿ ಹಾಡುವವ)ನಾದ ಒಬ್ಬ ಎಕ್ಕಲಗಾಣನು ಹಾಡಿದನು. ಆ ಸುಶ್ರಾವ್ಯವಾದ ಹಾಡನ್ನು ರಾಜನು ಸಂತೋಷದಿಂದ ಕೇಳಿದನು. ಈ ವಿವರಣೆಯಿಂದ ಆ ಹಾಡು ಯಕ್ಷಗಾನ ಪದ್ಧತಿಯದೇ ಆಗಿರಬೇಕೆಂದು ತಿಮ್ಮಪ್ಪಯ್ಯನವರು ಅಭಿಪ್ರಾಯ ಪಟ್ಟಿದ್ದಾರೆ (ಪಾರ್ತಿಸುಬ್ಬ-ಪುಟ ೩೦-೩೧).

ಯಕ್ಷಗಾನ ಬಯಲಾಟದಲ್ಲಿ ಮೇಲಿನ ವಿವರಣೆಯನ್ನು ಒತ್ತಟ್ಟಿಗಿಟ್ಟು ಹೀಗೆನ್ನಲಾಗಿದೆ—"ನಾವು ಆರಂಭದಲ್ಲಿ ಉದಾಹರಿಸಿದ ಬಣ್ಣನೆಯ ಮಾತು-ಒಬ್ಬ ಪುಸ್ತಕ ಪಂಡಿತನ ಮಾತು; ದೇಸಿಯನ್ನು ಕುರಿತು ಸಾಂಪ್ರದಾಯಿಕವಾಗಿ ಬಂದಿರುವ ತಾತ್ಸಾರವನ್ನು ಅದು ಸೂಚಿಸುತ್ತದೆ. ಆದರೆ ತಾಳಕ್ಕೂ ಸಮಗೊಳ್ಳದ, ಪಂಚಮ ಶ್ರುತಿಗೆ ಸರಿಬಾರದ, ಹೊಂದಿಕೆಯಿಲ್ಲದ, ವೀಣೆಗಂತೂ ಮೇಳವನ್ನೇ ಕೊಡದೆನ್ನುವ ಈ ಬಣ್ಣನೆಯು ಯಕ್ಷಗಾನದ ಲಕ್ಷಣವನ್ನು ಹೇಳುವ ಪದ್ಯವಾದರೆ ಅದು ಹೊಗಳಿಕೆಯಲ್ಲ; ಅದನ್ನು ಕುರಿತಾದ ನಿಂದೆಯೇ ಸರಿ. ಆದರೂ ಶ್ರುತಿಹೀನವಾದ ಆ ಸಂಗೀತವನ್ನು ಹಾಡುವ ಗಾಯನವನ್ನು ಈ ಕವಿಯು 'ಇಂಪಾಣನು' ಎಂದು ಕರೆದಿದ್ದಾನೆ. ಅರಸು ಆನಂದದಿಂದ ಆ ಇಂಪಾಣನನ್ನು ಕೇಳಿದನಂತೆ! ಸಂಗೀತದ ದೃಷ್ಟಿಯಿಂದ ಇಂತಹ ಮಾತಿನ ವ್ಯಾಪ್ತಿ ಏನಾಗುತ್ತದೆಂಬುದನ್ನು ವಿವೇಚಿಸದೆಯೇ, ಬರೆದ ಇತರರೂ ಕೆಲವರಿದ್ದಾರೆ. ಅದಕ್ಕೆ ಅಂದಿನ ಕಾಲದ ಕೆಲವು ಹೊಗಳಿಕೆ ತೆಗಳಿಕೆಗಳು ಕಾರಣವಿರಬಹುದು (ಪುಟ ೮೨). ಇಲ್ಲಿ ಅರ್ಥವಾಗದ ಮಾತುಗಳ ಕುರಿತ ಮಾತುಗಳೂ ಸರಿಯಾಗಿ ಅರ್ಥವಾಗದಂತೆಯೇ ಇವೆ.

'ಪಂಚಮ ನುಣ್ಚರಕ್ಕಣಂ ಮೇಳತೆಯಿಲ್ಲ' ಎಂಬೀ ವಾಕ್ಯಕ್ಕೆ ಉಪಪತ್ತಿಕ ವಿವರಣೆಯನ್ನು ಕೊಡುತ್ತಾ ಕಾರಂತರು ದೇಶಿಯು 'ಪಂಚಮ ಹೀನ'ವೆಂಬ ವಿಚಾರ ದಲ್ಲಿ ಹಲವು ಸಂಗೀತಾಚಾರ್ಯರ ಮಾತುಗಳಿಂದ ಪರಿಶೀಲನೆ ನಡೆಸಿದ್ದಾರೆ.

ಶ್ರೀ ಕುಕ್ಕಿಲ ಕೃಷ್ಣಭಟ್ಟರು 'ಎಕ್ಕಲಗಾಣ' ಎಂಬ ವಿಚಾರದಲ್ಲಿ ಒಂದು ಸಂಶೋಧನ ಲೇಖನವನ್ನು ಬರೆದಿದ್ದಾರೆ. ಸಂಗೀತಾರತ್ನಾಕರದಲ್ಲಿ ಹೇಳಿರುವ 'ಏಕಏವತು ಯೋ ಗಾಯೋದಸೌ ಏಕಲಗಾಯನಃ' ಎಂಬುದನ್ನು ಪ್ರಸ್ತಾಪಿಸಿ, 'ಏಕಲ ಗಾಯನ' ಎಂಬುದರ ತದ್ಭವವಾಗಿರುವ 'ಎಕ್ಕಲಗಾಣ' ಎಂಬುದಕ್ಕು ಯಕ್ಷಗಾನಕ್ಕೂ ಏನೂ ಸಂಬಂಧವಿಲ್ಲವೆಂದು ವಿವರಣೆ ಮಾಡಿದ್ದಾರೆ (ರಾಷ್ಟ್ರಮತ ೧೯೬೦-೬೧ ವಿಶೇಷ ಸಂಚಿಕೆ). ಅಲ್ಲಿ ಉಕ್ತನಾದ ಇಂಪಾಣನು ತಾಳಬದ್ಧವಾಗಿ ಗೀತವನ್ನು ಹಾಡುವುದಕ್ಕೆ ಪೂರ್ವಭಾವಿಯಾಗಿ ರಾಗಾಲಾಪನೆ ಮಾಡಿದ ವರ್ಣನೆ ಇದೆಂದು ಅವರ ವಿವರಣೆ. ಇದೂ ಅಲ್ಲದೆ ದಾಮೋದರ ಪಂಡಿತನು ಹೇಳಿದುದಾಗಿ ಶ್ರೀ ಕಾರಂತರು ಉದಾಹರಿಸಿರುವ 'ದೇಶಿ ಪಂಚಮ ಹೀನಾ' ಎಂಬ ಉಕ್ತಿಗೆ ಯುಕ್ತವಾದ ಅರ್ಥವನ್ನು ಹೇಳಿದ್ದಾರೆ. "ರಾಗಿಣಿಗಳಲ್ಲಿ ಒಂದಾಗಿರುವ 'ದೇಶೀ' ಎಂಬ ರಾಗಕ್ಕೆ ಪಂಚಮಸ್ವರವಿಲ್ಲ-ಎಂಬುದು ಇಲ್ಲಿ ಅರ್ಥವಲ್ಲದೆ, ದೇಶೀಯ ರಾಗಗಳಿಗೆಲ್ಲಾ ಪಂಚಸ್ವರವಿಲ್ಲವೆಂದು ಅರ್ಥಮಾಡುವುದು ತಪ್ಪೆಂದು" ಭ್ರಮನಿರಸನ ಮಾಡಿದ್ದಾರೆ. ಪಂಚಮಹೀನವೆನಿಸುವ ರಾಗಗಳು ಹಿಂದೋಳ, ವಸಂತ, ಶ್ರೀರಂಜಿನಿ-ಮುಂತಾದ ಇತರವೂ ಇವೆಯೆಂದು ವಿವರಿಸಿದ್ದಾರೆ. ಶ್ರೀ ಕುಕ್ಕಿಲರು "ಪಂಚಮ ನುಣ್ಚರಕ್ಕಣಂ ಮೇಳತೆಯಿಲ್ಲ" ಎಂಬಲ್ಲಿನ ಪಾಠಾಂತರ ವಾಗಿ ಮೂಲ ಗ್ರಂಥದಲ್ಲಿ 'ಪಂಚದ' ಎಂದಿರುವುದನ್ನು ಕಂಡು 'ಪಂಚ' ಎಂದರೆ 'ವಂಶವಾದ್ಯ' ಎಂದು ಉಪರ್ಯುಕ್ತ ಲೇಖನದಲ್ಲಿ ವಿವರಣೆ ಮಾಡಿದ್ದಾರೆ.

ಕವಿ ಸಮಸ್ಯೆ

'ಯಕ್ಷಗಾನ ಬಯಲಾಟ' ಪ್ರಬಂಧದಲ್ಲಿ ಸಮಸ್ಯೆಯಾಗಿ ಉದ್ಭವಿಸಿದ ಇನ್ನೊಂದು ವಿಚಾರವೆಂದರೆ, ಕುಂಬಳ ಪಾರ್ತಿಸುಬ್ಬನಿಗೆ ಸಂಬಂಧಿಸಿದುದು. ಪಾರ್ತಿಸುಬ್ಬನು ತನ್ನ 'ಪಟ್ಟಾಭಿಷೇಕ ಪ್ರಸಂಗ'ದಲ್ಲಿ ಹೇಳಿರುವಂತೆ ಪಾರ್ವತೀನಂದನನಾಗಿ, ಕುಂಬಳೆಯವನಾಗಿ, ಕಣ್ವಪುರದ (ಕುಂಬಳೆಯ) ಗೋಪಾಲ ಕೃಷ್ಣಭಕ್ತನಾಗಿ, ರಾಮಾಯಣಾದಿ ಹಲವು ಪ್ರಸಂಗಗಳ ಕರ್ತೃವಾಗಿ, ಭಾಗವತನೂ ಆಗಿ, ಮದವೂರ (ಕಾಸರಗೋಡಿನ ಸಮೀಪದಲ್ಲಿದೆ) ವಿಘ್ನೇಶನನ್ನು ಸ್ತುತಿಸಿದವನಾಗಿ ಹೆಸರು ವಾಸಿಯಾದವನು. ಆಂಧ್ರದಲ್ಲಿ ಯಕ್ಷಗಾನದ ಪುರಸ್ಕರ್ತನೆನಿಸಿದ ಸಿದ್ಧೇಂದ್ರಯತಿಯಂತೆ, ಕೇರಳದಲ್ಲಿ ಕಥಕಳಿ ರಾಮಾಯಣ ಕರ್ತೃ ಕೊಟ್ಟಾರಕರ ಮಹಾರಾಜನಂತೆ, ದಕ್ಷಿಣ ಕನ್ನಡದಲ್ಲಿ ತೆಂಕುತಿಟ್ಟಿನ "ಯಕ್ಷಗಾನ ಬಯಲಾಟ"ದ ನಿರ್ದಿಷ್ಟವೈಶಿಷ್ಟ್ಯಾತ್ಮಕ ರೂಪಕತೆಯನ್ನು ತುಂಬಿ, ಸುಧಾರಣೆ ಮಾಡಿದವನು-ಎಂಬುದು ಆಧಾರಪೂರ್ವಕವಾಗಿ ಸಿದ್ಧವಾದುದು. ಅವನ ಪ್ರಸಂಗಗಳು ಬಡಗುತಿಟ್ಟಿನವರಿಗೂ ಮಾನ್ಯವಾದುವು.

ಆದರೆ 'ಯಕ್ಷಗಾನ ಬಯಲಾಟ' ಪ್ರಬಂಧಕರ್ತರು ತಮಗೆ ಉತ್ತರ ಕನ್ನಡದಲ್ಲಿ ದೊರೆತ ತಾಡವಾಲೆಗಳ ಆಧಾರದಿಂದಲೂ ತಮ್ಮೂರ ಕಡೆಯ ಕೆಲವರ ಮಾತಿನಿಂದಲೂ ಅಜಪುರದ ವೆಂಕಾರ್ಯನ ಮಗನಾದ ಸುಬ್ಬನೇ ರಾಮಾಯಣ ಪ್ರಸಂಗಗಳ ಕರ್ತೃವೆಂದು ತಿಳಿದರು. ಕುಂಬಳೆಯ ಪಾರ್ತಿಸುಬ್ಬನು ಒಬ್ಬ ಕವಿ ಎಂಬ ಭಾವನೆಯನ್ನೇ ಸಂಪೂರ್ಣವಾಗಿ ಬಿಟ್ಟುಬಿಟ್ಟರು. 'ಯಕ್ಷಗಾನ ಬಯಲಾಟ'ದ ದ್ವಿತೀಯ ಮುದ್ರಣದ ಹೊತ್ತಿಗೆ ಲೇಖಕರು ತಮ್ಮ ಪೂರ್ವನಿಶ್ಚಯವನ್ನು ಮಾರ್ಪಡಿಸಿ, ರಾಮಾಯಣ ಪ್ರಸಂಗಗಳ ಕರ್ತೃ "ನನ್ನ ಪಾಲಿಗೆ ಹೆಸರಿಲ್ಲದವನು. ಅವನ ಹೆಸರು 'ಸುಬ್ಬ' ಎನ್ನುವುದಕ್ಕೂ ಆಧಾರವಿಲ್ಲ. ಅವನ ಕಾಲ ಹದಿನೇಳನೆಯ ಶತಮಾನದ ಆರಂಭ. ಅವನ ಊರು ಉಡುಪಿಗೆ ಸಮೀಪ" ಎಂದಿದ್ದಾರೆ. ಹೀಗೆ ಕವಿವಿಚಾರದ ಸಮಸ್ಯೆಯನ್ನು ಅಲ್ಲಿಗೆ ನಿಲ್ಲಿಸಿದ್ದಾರೆ. ತಮ್ಮ ಮೊದಲನೆಯ ಮುದ್ರಣದಲ್ಲಿ ಕಾಣಿಸಿರುವ ತಮ್ಮ ಕವಿ ಕಾಲನಿರ್ಣಯಗಳು ತಪ್ಪೆಂದು ಇತರರು ತೋರಿಸಿ ಕೊಟ್ಟುದನ್ನು ಒಪ್ಪಿ, ಸರಿಗೊಳಿಸಲು ಯತ್ನಿಸಿದ್ದಾರೆ "ಒಂದು ಚಿಕ್ಕ ಕೂಸು ಸಹ ಹೇಳಿದ ಮಾತಿನಲ್ಲೂ ಸತ್ಯವಿದ್ದರೆ ಒಪ್ಪೋಣ" ಎಂದು ಕಾರಂತರು ಸ್ವತಃ ನಮಗೆ ತಿಳಿಸಿದ್ದಾರೆ. ಕಾಲಗಣತಿಯ ತಪ್ಪುಗಳು ಇನ್ನೂ ಉಳಿದಿರುವುದರಿಂದಲೇ "ಪಾರ್ತಿಸುಬ್ಬನು ಹುಟ್ಟುವ ಮೊದಲೇ ಆತನವೆನ್ನಲಾದ ಪ್ರಸಂಗಗಳ ಪ್ರತಿಗಳನ್ನು ಬರೆಯಲಾಗಿದೆ" ಎಂಬ ಮಾತನ್ನು ಅವರು ಆಡಿರುವರೆಂದು ಇವೆಲ್ಲ ವಿಚಾರಗಳ ಮೇಲಿನ ಸಂಶೋಧಕರ ಅಭಿಪ್ರಾಯ.

ಶ್ರೀ ಕಾರಂತರು ಹೇಳಿರುವ ಅಜಪುರದ ಸುಬ್ಬನು ಬ್ರಹ್ಮಾವರದವನೆಂಬುದೂ ನಿರ್ಧರಿತವಲ್ಲ. ಬ್ರಹ್ಮಾವರಕ್ಕೆ 'ಅಜಪುರ' ಎಂಬ ಹೆಸರಿದ್ದುದನ್ನು ಲೇಖಕರು ಸ್ಪಷ್ಟಪಡಿಸಿದುದರಿಂದ ಕವಿ ಬೇರೆ 'ಅಜಪುರ'ದವನಲ್ಲವೆನ್ನಲಾದೀತೆ? ಸುಬ್ಬನು ಬರೆದ ಹನೂಮದ್ರಾಮಾಯಣದಲ್ಲಿ ತಾನು "ಆಡುವಳ್ಳಿಯ ವೆಂಕಾರ್ಯನ ತನುಜನಾದ ಸುಬ್ರಹ್ಮಣ್ಯ"ನೆಂದು ಹೇಳಿಕೊಂಡಿದ್ದಾನೆ. ಆತನ ಮಗನಾದ ವೆಂಕಟನು ಬರೆದ 'ಮೈರಾವಣ ಕಾಳಗ' ಎಂಬ ಯಕ್ಷಗಾನದಲ್ಲಿ ತನ್ನ ತಂದೆ "ಅಜಪುರದ ವೆಂಕಾರ್ಯ ತನುಜನೆನಿಪ ಸುಬ್ಬ" ಎಂದಿದ್ದಾನೆ. ಇಲ್ಲಿ 'ಆಡುವಳ್ಳಿ' ಎಂಬ ಪದವನ್ನು ಸಂಸ್ಕೃತದಲ್ಲಿ 'ಅಜಪುರ' ಎಂದು ರೂಪಿಸಿದುದು ಸ್ಪಷ್ಟವಿದೆ. ಈ 'ಆಡುವಳ್ಳಿ' ಎಂಬುದು ಮೈಸೂರು ಸೀಮೆಯ ಕಳಸದ ಸಮೀಪವಿರುವ ಸ್ಥಳವೆಂದು ತಿಳಿದು ಬರುತ್ತದೆ. ಇಂದಿನ ಬ್ರಹ್ಮಾವರಕ್ಕೂ 'ಅಜಪುರ' ಎಂಬ ಹೆಸರು ಸಲ್ಲುವುದೆಂಬುದರಿಂದ ಸುಬ್ಬನನ್ನು ಬ್ರಹ್ಮಾವರದವನನ್ನಾಗಿ ಮಾಡಿರುವ ರಹಸ್ಯವನ್ನು ಶ್ರೀ ಕುಕ್ಕಿಲ ಕೃಷ್ಣಭಟ್ಟರು ಪ್ರಕಟಪಡಿಸಿದ್ದಾರೆ (ಮಧುಪುರ–ಇದರಲ್ಲಿ 'ಕಾರಂತರ ಸುಬ್ಬನ ಸಮಸ್ಯೆ' ಎಂಬ ಲೇಖನ).

ಯಕ್ಷಗಾನವು ಸ್ವತಂತ್ರವಾದೊಂದು ಸಂಗೀತ ಸಂಪ್ರದಾಯ ವೆನಿಸುವುದು ಹೇಗೆ? ಎಂಬ ಪ್ರಶ್ನೆ ಸಂಗೀತಜ್ಞರಿಂದ ಬರುವುದುಂಟು. ದಕ್ಷಿಣಾದಿ ಸಂಗೀತದಲ್ಲಿ

ಬರುವ ರಾಗಗಳು ಯಕ್ಷಗಾನದಲ್ಲೂ ಇವೆ. ಇದರಲ್ಲಿ ವೈಶಿಷ್ಟ್ಯವೇನಾಯಿತು? ಎಂದು ಪ್ರಶ್ನಿಸುತ್ತಾರೆ. ಈ ಪ್ರಶ್ನೆಗೆ ಕಾರಂತರು ಸಮರ್ಪಕ ಉತ್ತರವನ್ನು ಕೊಟ್ಟಿದ್ದಾರೆ: "ಹಿಂದುಸ್ತಾನೀ ಕರ್ಣಾಟಕೀ ಸಂಗೀತಗಳಲ್ಲಿ ಸಮಾನ ರಾಗಗಳು ಎಷ್ಟೋ ಇರುವಂತೆ ಯಕ್ಷಗಾನದಲ್ಲೂ ಇವೆ. ಯಕ್ಷಗಾನದ ಹಾಡುಗಾರ ಮೋಹನವನ್ನೋ ನಾಟಿ ಇಲ್ಲವೆ ಮಧ್ಯಮಾವತಿಯನ್ನೋ ಹಾಡಿದರೆ, ಅವು ದಕ್ಷಿಣಾದಿಯ ಅವೇ ಸ್ವರಗಳನ್ನು ಹತ್ತಿ ಇಳಿದರೂ, ಇದರ ಆಲಾಪನೆಯ ಶೈಲಿಯೇ ಬೇರೆ; ಗಮಕದ ಶೈಲಿಯೇ ಬೇರೆ. ಯಕ್ಷಗಾನದಲ್ಲಿ ಪಲ್ಲವಿಯನ್ನು ನಿಲ್ಲಿಸುವ ಕ್ರಮ, ಚರಣ ಎತ್ತಿಕೊಳ್ಳುವ ಕ್ರಮ, ಭಾವಕ್ಕೆ ತಕ್ಕಂತೆ ಕಾಲವನ್ನು ದ್ವಿಗುಣಿಸುವ ಕ್ರಮ—ಅದಕ್ಕೇನೇ ವಿಶಿಷ್ಟವಾಗಿದೆ (ಪುಟ ೯೫). ಯಕ್ಷಗಾನದ ಹಾಡುಗಾರರು ಇರಿಸಿಕೊಳ್ಳುವ ಶ್ರುತಿ ಏರಿನದು. ಅವರು ಹೆಚ್ಚಾಗಿ ಹಾಡುವ ರಾಗಗಳ ಸಂಚಾರ ತಾರಸ್ಥಾಯಿಯಲ್ಲೇ ನಡೆಯುತ್ತದೆ....ತೀರ ಮೇಲಣಸ್ಥಾಯಿಯಲ್ಲಿ ಹಾಡುವಾಗ ಬರುವ ತೊಡಕೆಂದರೆ, ರಾಗಾಲಾಪಕ್ಕಿರುವ ಮಿತ ವಿಸ್ತಾರ....ಯಾವತ್ತು ರಾಗಗಳನ್ನು ಏಕಸ್ಥಾಯಿಯಲ್ಲೇ ಹಾಡಿ ಮುಗಿಸುವ ರೀತಿಯಿಂದಾಗಿ ನಮ್ಮ ಕಿವಿಗೆ ಕೇಳಿಸುವ ವೈವಿಧ್ಯವೂ ಮಿತಗೊಳ್ಳುತ್ತದೆ. ಹೀಗಾಗಿ ಅದನ್ನು ದೇಸಿಗೀತಗಳೆಂದು ಭ್ರಮಿಸಿ (ಭಾವಿಸಿ)ದರೆ ಆಶ್ಚರ್ಯವೇನಿಲ್ಲ" (ಪುಟ ೮೦).

"ಯಕ್ಷಗಾನ ಪ್ರಸಂಗಗಳಲ್ಲಿ ನಮ್ಮ ಭಾಗವತರು, ರಾಗಗಳಿಗಿಂತ ಧಾಟಿಗಳಿಗೆ ಹೆಚ್ಚಿನ ಪ್ರಾಧಾನ್ಯ ಕೊಟ್ಟಂತೆ ಕಾಣುತ್ತದೆ. ಅವರು ಶಾಸ್ತ್ರೀಯವಾಗಿ ತಮ್ಮ ಗುರುಗಳಿಂದ ಇಪ್ಪತ್ತು ಮೂವತ್ತು ರಾಗಗಳನ್ನು ಕಲಿತುಕೊಂಡರೂ ಕೂಡ, ಪ್ರಸಂಗ ಕಾವ್ಯಗಳಲ್ಲಿ ಬರೆದಿರುವಂತೆ, ಪ್ರತಿಯೊಂದು ಹಾಡಿಗೂ ಅದದರ ರಾಗವನ್ನು ಬಳಸುವುದು ಕಡಿಮೆ. ಒಂದು ದೊಡ್ಡ ಪ್ರಸಂಗದ ಇನ್ನೂರು, ಮುನ್ನೂರು ಹಾಡುಗಳನ್ನು ಹತ್ತಾರು ರಾಗಗಳಲ್ಲಿ ಹಾಡಿ ಮುಗಿಸುತ್ತಾರೆ" (ಪುಟ ೯೪.)

ಮಾರ್ಗದರ್ಶನ

'ಯಕ್ಷಗಾನ ಬಯಲಾಟ' ಪ್ರಬಂಧದಲ್ಲಿ ಸಂಕ್ಷೇಪಿಸಿ ಮೇಲೆ ತಿಳಿಸಲಾದ ಕಲಾಸ್ವರೂಪ ನಿರೂಪಣೆ, ಸಂಶೋಧನೆ, ಸಮಸ್ಯೆ-ಮುಂತಾದುವಲ್ಲದೆ ಸೂಕ್ತ ಮಾರ್ಗದರ್ಶನವೂ ಇದೆ. ಯಕ್ಷಗಾನ ಕಲೆಯ ಅಭಿವೃದ್ಧಿಗೆ, ಅದರ ಸೌಂದರ್ಯ ಸಾಧನೆಗೆ, ವೈಶಿಷ್ಟ್ಯದ ಉಳಿವಿಗೆ, ದೋಷದ ಅಳಿವಿಗೆ ದಾರಿಗಳನ್ನೂ ಕಾರಂತರು ತೋರಿಸಿ ಉಪಕಾರ ಮಾಡಿದ್ದಾರೆ. ಅವನ್ನು ಒಂದಿಷ್ಟು ಅವಲೋಕಿಸುವ:

ಭಾಗವತರು ಮತ್ತು ಪಾತ್ರಧಾರಿಗಳು

ಹಲವು ಆಧುನಿಕ ಭಾಗವತರು ದಕ್ಷಿಣಾದಿ ಸಂಗೀತದ ಅನುಕರಣೆಯಿಂದ ಶುದ್ಧ ಯಕ್ಷಗಾನವನ್ನು ಕೆಡಿಸುವುದು ಕಳವಳದ ಸಂಗತಿ. ಕರ್ನಾಟಕೀ ಸಂಗೀತದ ಅನುಕರಣೆಯಿಂದ ಯಕ್ಷಗಾನವನ್ನು ಸುಧಾರಿಸಿದಂತಾಗುವುದಿಲ್ಲ; ಕೆಡಿಸಿದಂತಾಗುತ್ತದೆ

(ಪುಟ ೯೫). ಹೀಗೆ ಸಾಂಪ್ರದಾಯಿಕ ಯಕ್ಷಗಾನಕ್ಕೆ ಪುರಸ್ಕಾರವನ್ನು ಕೊಡುತ್ತ ಲೇಖಕರು ಹಲವು ಯಕ್ಷಗಾನ ಪದಗಳಿಗೆ ಸ್ವರಪ್ರಸ್ತಾರವನ್ನೂ ಹಾಕಿ ತೋರಿಸಿದ್ದಾರೆ. ಈ ಸ್ವರಪ್ರಸ್ತಾರವು ಉಚಿತ ಕಾರ್ಯವಲ್ಲ; ಹೀಗೆ ಸ್ವರಪ್ರಸ್ತಾರದಿಂದ ಯಕ್ಷಗಾನವನ್ನು ಕಲಿವ ಪದ್ಧತಿಯಿಲ್ಲವೆಂದು ಲೇಖಕರೇ ಹೇಳಿದ್ದಾರೆ. ರಸಭಾವಾನುಗುಣವಾಗಿ ಸ್ವರ ಗಮಕಗಳನ್ನು ಹೊಂದಿಸಿ, ಹಾಡುವ ಭಾಗವತನ ಸ್ವಾತಂತ್ರ್ಯಕ್ಕೆ ಇಂತಹ ಪ್ರಸ್ತಾರದ ಅನುಸರಣೆ ಒಂದು ತಡೆಯೇ ಆಗಬಹುದು. ಯಕ್ಷಗಾನದ ವಾದ್ಯಗಳಾಗಿ ವೀಣೆ ಪಿಟೀಲುಗಳನ್ನು ಉಪಯೋಗಿಸಬಹುದೆಂಬುದೂ ದಾರಿಬಿಟ್ಟು ಹೋಗಬಹುದೆಂಬುದಕ್ಕೆ ಸರಿಯಾಗುವುದು.

ಪಾತ್ರಧಾರಿಗಳು ಭಾಗವತನ ಜತೆಯಲ್ಲಿ ಹಾಡುವುದುಂಟು. (ಇದು ಬಡಗು ತಿಟ್ಟಿಗೆ ಅನ್ವಯಿಸುವಂಥದು). ಹಾಗೆ ಹಾಡುವವರಿಗೆ ಒಳ್ಳೆಯ ಕಂಠವಿರಬೇಕು; ಶ್ರುತಿಯೂ ಕೂಡುತ್ತಿರಬೇಕು. ಕೆಲವೊಮ್ಮೆ ಅಬದ್ಧಶ್ರುತಿಯಲ್ಲಿ ಪಾತ್ರಧಾರಿ ತಾನಾಗಿ ಹಾಡನ್ನೆತ್ತಿ ಕೊಡುವಾಗ, ಕತ್ತು ಹಿಸುಕಿದಂತಾಗುತ್ತದೆ. . . . ಭಾಗವತರು ಶ್ರುತಿ ಸುಲಭವಾಗುವಂತೆ ಇರಿಸಿಕೊಳ್ಳಬೇಕು. ಹೆಚ್ಚಿನ ಭಾಗವತರು ಈ ವಿಚಾರವನ್ನು ಅಲಕ್ಷಿಸಿ ತೀರ ಮೇಲಿನ ಶ್ರುತಿಯಲ್ಲಿ ಹಾಡುತ್ತಾರೆ. ಧ್ವನಿ ತಾರಕಕ್ಕೆ ಹೋದಂತೆ, ಅಪಸ್ವರ, ಕರ್ಕಶತೆಗಳು ಆಗ ಬಂದೇ ಬರುತ್ತವೆ. ಆಡಿನ ಮರಿಯೊಂದು ಕಿರಿಚಿದಂತೆ ಕೇಳಿಸುತ್ತದೆ (ಪುಟ ೧೧೨).

ಯಕ್ಷಗಾನದ ಅರ್ಥಧಾರಿಗಳಲ್ಲಿ ಅಥವಾ ಪಾತ್ರಧಾರಿಗಳಲ್ಲಿ ವ್ಯಕ್ತಿಪ್ರಜ್ಞೆ ಇರಬೇಕು. "ಹೆಚ್ಚಿನ ತಾಳಮದ್ದಳೆಗಳಲ್ಲಿ–ರಂಗಸ್ಥಳದಲ್ಲಿ ಗಂಡಹೆಂಡಿರಾಗಿ ಕಾಣಿಸ ಬೇಕಾದ ರಾಮಸೀತೆಯರು, ಅಣ್ಣತಮ್ಮಂದಿರಾಗಿ ಕಾಣಿಸಬೇಕಾದ ಧರ್ಮರಾಯ–ಅರ್ಜುನರು–ಪಾತ್ರಧಾರಿಗಳ ವ್ಯಕ್ತಿಸ್ಪರ್ಧೆ, ದುರಭಿಮಾನಗಳಿಂದಾಗಿ ಹಗೆ ತುಂಬಿದ ದಾಯಾದಿಗಳಾಗಿ ಕಾಣಿಸುತ್ತಾರೆ—ಇದು ಸಲ್ಲದು." 'ಕಂಸಾಸುರ ವಧೆ' ಆರಿಸಿದ ಕಥೆಯಾದರೆ, ಅದನ್ನು ಆಧುನಿಕ ರಾಜಕೀಯಕ್ಕೆ ಹೋಲಿಸಿ, ಸರ್ವಾಧಿಕಾರಿ, ಸಮಾಜವಾದ, ಸಹಜೀವನ, ದೇಶೋದ್ಧಾರ–ಎಂಬಿವೇ ಮೊದಲಾದ, ದಿನಪತ್ರಿಕೆ ಗಳಿಂದ ಎರವಲುಕೊಂಡ ರಾಜಕೀಯ ಪದಗಳಿಂದ ತುಂಬಿಸಿ, ಈ ಕಲೆಯನ್ನು ಅಪಹಾಸ ಗೊಳಿಸುವ ಜನರೂ ಇದ್ದಾರೆ. ಕೆಲವರು ಅರ್ಥಧಾರಿಗಳು ಹೆಸರಾದ ಬಗೆಯೇ ಇದು!

ಅರ್ಥಧಾರಿಗಳಲ್ಲಿ ಪೌರಾಣಿಕ ಕಥಾಜ್ಞಾನವಿದ್ದರೆ ಸಾಲದು, ಆ ಕಾಲದ ಜನ ಜೀವನದ ಪರಿಜ್ಞಾನವೂ ಇರಬೇಕು. ಆ ಕಾಲದ ಆಚಾರ–ವಿಚಾರಗಳನ್ನು ಶ್ರೋತೃ ಪ್ರೇಕ್ಷಕರ ಮುಂದಿಡುತ್ತಿದ್ದೇವೆ–ಎಂಬ ಜಾಗ್ರತಾವಸ್ಥೆ ಇರಬೇಕು. ಆ ಹಿಂದಣವರ "ಬಾಯಿಂದ ಯಾವ ಮಾತು ಬಂದೀತು, ಯಾವುದು ಬರದು" ಎಂಬ ಅರಿವು ಅರ್ಥಧಾರಿಗಳಿಗೆ ಇರಬೇಕು.

ಬಯಲಾಟದಲ್ಲಿ ಹನುಮನಾಯಕನಿಗೆ ಹೆಚ್ಚಿನ ವಾಕ್‌ಸ್ವಾತಂತ್ರ್ಯವಿದ್ದರೂ ಅವನಮಾತು ಕಡಿವಾಣವಿಲ್ಲದ ಕುದುರೆಯಾಗಬಾರದು. ನೂರಾರು ಸ್ತ್ರೀಪುರುಷರು

ನೆರೆದಿರುವಲ್ಲಿ ಬಂಡು ಮಾತುಗಳನ್ನು ಯಾವ ಅಳುಕೂ ಇಲ್ಲದೆ ಅವನು ಆಡುವುದು ಸರಿಯಲ್ಲ. ಸಂಸ್ಕೃತಿವಂತ ಸಮಾಜದಲ್ಲಿ ಪಾಮರರಂಜನೆಗೂ ಒಂದು ಮಿತಿಬೇಕು.

ಅರ್ಥಧಾರಿಗಳ ಸಂಭಾಷಣೆ ಕೆಲವೊಮ್ಮೆ ಭಾಷಣವೇ ಆಗುವುದುಂಟು; ಇದು ಸರಿಯಲ್ಲ. ಸಂಭಾಷಣೆಯ ಮಾತುಗಳಲ್ಲಿ ಮೊನೆಬೇಕು; ಭಾವ ತುಂಬಿರಬೇಕು. ಚುರುಕುತನವೂ ಬೇಕು. ಮಾತು–ಇದಿರು ಮಾತುಗಳಿಂದ ವಿಷಯದ ಚರ್ಚೆಯು ತೀವ್ರತೆ, ಆವೇಗ, ಭರಗಳನ್ನು ಗಳಿಸಿಕೊಳ್ಳುತ್ತ ಸಾಗಬೇಕು. ಇದನ್ನು ಬಯಲಾಟದ ರಂಗಸ್ಥಳದಲ್ಲೋ, ಸಾಮಾನ್ಯ ಹಳ್ಳಿಯ ಅರ್ಥಗಾರರಲ್ಲೋ ನಾವಿನ್ನೂ ಕಾಣಬಹುದು. ಸಿಟ್ಟಿನಮಾತು ಬರುವಾಗ ಕೋಪದ ಧ್ವನಿ–ನಗು, ದುಃಖ, ಮತ್ಸರ ಮೊದಲಾದವಕ್ಕೆ ಆಯಾಬಗೆಯ ಸ್ಪಷ್ಟವಾದ ಧ್ವನಿಗಳು ಪ್ರಕಟವಾಗುವುದನ್ನು ಅವರಲ್ಲಿ ಕಾಣುತ್ತೇವೆ. ನಮ್ಮ ವಿದ್ವಾಂಸರುಗಳ ಪ್ರದರ್ಶನದಲ್ಲಿ ಇವೆಲ್ಲಕ್ಕೂ ಈಗೀಗ ಸಂಚಕಾರ ಬರುತ್ತಿದೆ. ಉದ್ದುದ್ದ ಉಪನ್ಯಾಸಗಳನ್ನು ಮಾಡುವಾಗ, ಬೇಕೆಂದೇ ಬುದ್ಧಿವಂತಿಕೆಯನ್ನು ಖರ್ಚು ಮಾಡುವಾಗ ಇದಿರಾಳಿಯ ಮೇಲೆ ಹೊಟ್ಟೆಯಲ್ಲಿ ಹುದುಗಿಕೊಂಡ ನಂಜಿನ ಧ್ವನಿ ಕಾಣಿಸುತ್ತದೆ ಹೊರತು, ಆವಿರ್ಭವಿಸಿಕೊಳ್ಳದ ಪಾತ್ರದ ಸುಖದುಃಖಗಳು ಹೇಗೆ ಕಾಣಿಸಬೇಕು? ಇಂಥವರ ಮಾತು ಸಂಭಾಷಣೆಯೆನಿಸುವಂತಿಲ್ಲ (ಪುಟ ೧೪೪).

'ಯಕ್ಷಗಾನ ಬಯಲಾಟ'ದ ಪುನರುಜ್ಜೀವನಕ್ಕೆ ಲೇಖಕರ ಮಾರ್ಗದರ್ಶನಗಳಿವು: ಸುಮಾರು ಎಂಟುಗಂಟೆ ನಡೆವ ಕಾಲಕ್ಷೇಪವನ್ನು ಮೂರುಗಂಟೆಗೆ ಇಳಿಸುವುದು; ಭಾಗವತನು ಕಿರಿಚದೆ ಭಾವಯುಕ್ತವಾಗಿ ಹಾಡುವುದು; ಮದ್ದಳೆಗಾರನು ತನ್ನ ವಾದನದ ಧ್ವನಿಯಿಂದ ಹಾಡುಗಾರಿಕೆಯನ್ನು ಮುಳುಗಿಸದಿರುವುದು; ಹಿಮ್ಮೇಳದ ಪರಿಕರವನ್ನು ಹೆಚ್ಚಿಸುವುದು; ರಂಗಸ್ಥಳದ ಹಿಂದೆ ಪ್ರೇಕ್ಷಕರು ನಿಲ್ಲದಂತೆ ಮಾಡುವುದು, ಅಲ್ಲಿ ಒಂದು ತೆರೆಯನ್ನು ತೂಗುವುದು; ರಂಗಸ್ಥಳವನ್ನು ಚೌಕವಾಗಿಡುವುದಕ್ಕಿಂತ ಮುಕ್ಕಾಲಂಶ ವರ್ತುಲವಾಗಿಡುವುದು; ರಂಗಸ್ಥಳದ ನಡುವೆ ಆಚೀಚೆ ಮನಸ್ವಿಯಾಗಿ ಪ್ರೇಕ್ಷಕರು ನಡೆದಾಡುವ ಅಸಹ್ಯ ಪರಿಪಾಠವನ್ನು ನಿಲ್ಲಿಸುವುದು; ವೇಷಭೂಷಣಗಳ ಪುನರ್ಯೋಜನೆ, ಗ್ಯಾಸ್‌ದೀಪಗಳನ್ನು ಉಪಯೋಗಿಸದಿರುವುದು; ಪಾತ್ರಗಳು ಪಾದ–ಹಸ್ತಗಳಿಗೂ ಬಣ್ಣ ಹಾಕುವುದು; ಅಲಂಕಾರಗಳ ಮೇಲೆ ಗಾಜಿನ ಮಣಿಸರ–ಕಾಗದದ ಹೂ ಮೊದಲಾದವನ್ನು ತೊಡದಿರುವುದು; ರಂಗಸ್ಥಳದಲ್ಲಿ ಬಿಲ್ಲು–ಬಾಣ ಮುಂತಾದ ಹಳೆಯ ಆಯುಧ ವಸ್ತುಗಳನ್ನೇ ಉಪಯೋಗಿಸುವುದು–ಇತ್ಯಾದಿ.

ಇಷ್ಟುಮಟ್ಟಿಗೆ ಸರ್ವಾಂಗೀಣ ವಿಚಾರಗಳನ್ನೊಳಗೊಂಡಿರುವ ಈ 'ಯಕ್ಷಗಾನ ಬಯಲಾಟ' ಪ್ರಬಂಧವು ಸಚಿತ್ರಕವೂ ಆಗಿರುವುದು ಇದರ ಹಿರಿಮೆಗೊಂದು ಲಕ್ಷಣ. ಚಿತ್ರಗಳಲ್ಲಿ ಹಲವು ವರ್ಣರಂಜಿತವಾಗಿಯೂ ಇವೆ. ಹಲವಾರು ಪಾತ್ರಭೂಮಿಕೆಗಳ ಬಡಗುತಿಟ್ಟಿನ ವೇಷಗಳನ್ನಿಲ್ಲಿ ಕಾಣಬಹುದು. ಕುಂಬಳೆಸೀಮೆಯ ಮೇಳದ ರಾಕ್ಷಸ ಭೂಮಿಕೆಯ ಒಂದು ಚಿತ್ರವೂ ಇದೆ. ಢಕ್ಕೆಬಲಿಯ ವೈದ್ಯನೃತ್ಯ, ಗೊಂಬೆಯಾಟ, ತೊಗಲು ಗೊಂಬೆಯಾಟಗಳ ಚಿತ್ರಗಳಿಂದ ಯಕ್ಷಗಾನ ಕಲೆಯನ್ನು ಪುಸ್ತಕಸ್ಥವಾಗಿ ತೋರಿಸಲು ಸಾಧ್ಯವಿರುವಷ್ಟೂ ಮಟ್ಟಿನ ಪ್ರಯತ್ನವಿಲ್ಲಿ ನಡೆದಿದೆ.

ದಕ್ಷಿಣಕನ್ನಡ ಜಿಲ್ಲೆಯಲ್ಲಿ ಯಕ್ಷಗಾನದ ಪ್ರಭಾವವು ಸಾಹಿತ್ಯ–ಸಂಗೀತಾದಿ ಕಲೆಗಳಲ್ಲೆಲ್ಲ ಇಣುಕುಹಾಕಿದೆ. ಕನ್ನಡಕ್ಕೆ ಹಲವಾರು ಕವಿಗಳನ್ನು ಒದಗಿಸಿದೆ. ನಿರಕ್ಷರರಾದ ಹಳ್ಳಿಗರಿಗೆ ಭಾರತ–ರಾಮಾಯಣಾದಿಗಳ ಪರಿಚಯಮಾಡಿಸಿ, ಅವರಲ್ಲಿ ಉದಾತ್ತ ಭಾವಗಳನ್ನೂ ಸಂಸ್ಕೃತಿಯನ್ನೂ ತುಂಬಲು ಸಹಾಯಕವಾಗಿದೆ. ಕನ್ನಡಿಗರಿಗೆ ಭಾಷಾಶಕ್ತಿ–ಕವಿತಾಶಕ್ತಿಗಳನ್ನೂ ಉಂಟುಮಾಡುತ್ತಿದೆ. ಹಾಗೆಯೇ ಶಾಸ್ತ್ರೀಯವಾಗಿ ಸಂಗೀತಾಭ್ಯಾಸ ಮಾಡದಿರುವವರಿಗೂ ರಾಗ–ತಾಳಬದ್ಧವಾಗಿ ಹಾಡುವ ಅಭ್ಯಾಸವನ್ನು ಈ ಯಕ್ಷಗಾನವು ಉಂಟುಮಾಡಿದೆ. ಮನೋರಂಜನೆಯೊಡನೆ ಬುದ್ಧಿಗೆ ಬೆಳಕಿತ್ತು ಕರ್ತವ್ಯಾಕರ್ತವ್ಯಜ್ಞಾನವನ್ನೂ ಕಲಾಭಿಜ್ಞತೆಯನ್ನೂ ನೀಡಿದೆ, ನೀಡುತ್ತಿದೆ. ಗೀತ–ವಾದನ–ನೃತ್ಯ–ಸಾಹಿತ್ಯ ಎಂಬೀ ಚತುರ್ವಿಧ ಕಲೆಗಳ ಸಂಗಮವುಳ್ಳ ಯಕ್ಷಗಾನ ವ್ಯಕ್ತಿತ್ವದ ಸರ್ವಾಂಗಪೂರ್ಣ ವಿಕಾಸಕ್ಕೆ ನೆರವಾಗಿದೆ, ಇಂತಹ ಜನಪದ ಕಲೆಯ ಕಡೆಗೆ ಅಖಿಳ ಕರ್ಣಾಟಕದ ಜನಮನ ಸೆಳೆವಂತೆ ಪರಿಚಯ ಮಾಡಿಕೊಡುವ 'ಯಕ್ಷಗಾನ ಬಯಲಾಟ' ಪ್ರಬಂಧಕರ್ತ ಡಾ. ಶಿವರಾಮಕಾರಂತರು ಬಹುಮಾನಿತರು.

ಕನ್ನಡಿಗರಿಗೆ ಕನ್ನಡ ದೇಶದಲ್ಲಿ ಹಿರಿಯ ಆಸ್ತಿಯಾಗಿ ಉಳಿದಿರುವುದು ಅವರ ಕನ್ನಡ ಭಾಷೆ; ಅದನ್ನು ಉಳಿಸಿಕೊಳ್ಳಿ ಎಂದು ಕನ್ನಡಿಗರಿಗೂ ಉಳಿಸಿಕೊಡಿ ಎಂದು ಇತರರಿಗೂ ಪ್ರಾರ್ಥನೆ ಮಾಡಬೇಕಾಗಿದೆ. ಈಗ ಇರುವ ಅಡ್ಡಿ ಅಡಚಣೆಗಳು ಶಾಶ್ವತವಾಗಿರಲಾರವು. ಆದರೆ ಅವು ಹೋಗುವಾಗ ತಮ್ಮಲ್ಲಿ ಒಳ್ಳೆಯದಿದ್ದರೆ ಅದನ್ನು ಗಂಟುಕಟ್ಟಿಕೊಂಡು ಹೋಗುತ್ತವೆ; ಬಿಟ್ಟುಹೋದುದನ್ನು ಛತ್ರದವರು ಗುಡಿಸಿ ಸಾರಿಸುವುದೇ ದೊಡ್ಡ ಕೆಲಸವಾಗಿಬಿಡುತ್ತದೆ. ದೇವಸ್ಥಾನಗಳ ಗೋಪುರದ ಮೇಲೆ ಸಾಸಿವೆ ಕಾಳಿಗಿಂತ ಚಿಕ್ಕದಾದ ಒಂದು ಆಲದ ಬೀಜ ಬಿದ್ದು, ಕಣ್ಣಿಗೆ ಕಾಣದಂತೆ ಬೇರೂರಿ ಗಿಡವಾದರೆ, ಅದರಿಂದ ಮುಂದೆ ಶಿಖರವು ಚೂರು ಚೂರಾಗಿ, ದೇವಾಲಯವು ದೇಗುಲವಾಗಬಹುದು. ಹಳೆಯಬೀಡಿನಲ್ಲಿ ಹೀಗಾಗಿದೆ. ಈ ಮಾತುಗಳು ಕನ್ನಡ ಒಂದಕ್ಕೆ ಅನ್ವಯಿಸುವುದಿಲ್ಲ; ಎಲ್ಲ ಮಾತೃಭಾಷೆಗಳಿಗೂ ಅನ್ವಯಿಸುತ್ತವೆ. ಆದ್ದರಿಂದ ಎಲ್ಲ ಜನರೂ ಈ ಭಾಷಾಭಕ್ತಿಪರಾಯಣತೆಯನ್ನು ಅನುಮೋದಿಸುತ್ತಾರೆಂದು ನಂಬುತ್ತೇನೆ.

—ಗೊರೂರು ರಾಮಸ್ವಾಮಿ ಅಯ್ಯಂಗಾರ್

ಸ. ಸ. ಮಾಳವಾಡ

ದ್ಯಾವಾಪೃಥಿವೀ

ನೆಲ-ಮುಗಿಲುಗಳು ಎಂದಿನಿಂದಲೂ ಮಾನವನನ್ನು ಆಕರ್ಷಿಸಿವೆ. ಅಂತೆಯೆ ಅವು ಕಾವ್ಯಕ್ಕೆ ವಸ್ತುವನ್ನು ಒದಗಿಸಿವೆ. ಆಧುನಿಕ ಕನ್ನಡದಲ್ಲಿ 'ದೇವತಾಪೃಥಿವೀ' ಎಂಬ ಮಧುರಚೆನ್ನರ ಆಧ್ಯಾತ್ಮಿಕ ಗೀತವಲ್ಲದೆ ಭೂಮಿಯ ಬಗೆಗೆ ಬೇರೆ ದೃಷ್ಟಿಯ ಕವನಗಳೂ ಬಂದಿವೆ. ವ್ಯೋಮವೂ ಕವನಗಳಲ್ಲಿ ಮೂಡಿಬಂದಿದೆ. ಭೂಮಿ ವ್ಯೋಮಗಳೆರಡನ್ನೂ ಸಮನ್ವಯಿಸಿಕೊಂಡ ವಿನಾಯಕರ ಕಾವ್ಯ 'ದ್ಯಾವಾಪೃಥಿವೀ'.

ಹಿಂದಿನ ದೃಷ್ಟಿಯನ್ನು ಅಲ್ಲಗಳೆಯದೆ, ಇಂದಿನ ಹೊಸ ಅನುಭವಗಳಿಂದ ಪ್ರೇರಿತವಾಗಿ ನವೀನ ಬಗೆಯ ಅಭಿವ್ಯಕ್ತಿಯಿಂದ ಕೂಡಿರುವ ೭೬ ಪುಟಗಳ ಈ ಕೃತಿಯು ೧೯೫೭ರಲ್ಲಿ ಪ್ರಕಟವಾಯಿತು. ಮುಂದೆ ಅದು ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯನ್ನು ಪಡೆಯಿತು. ಆಗ ಈ ಕೃತಿಯ ಗಾತ್ರ ಚಿಕ್ಕದು, ಎಂಬ ಮಾತೂ ಕೇಳಬಂದಿತು. ಆದರೆ ಚಿಕ್ಕಗಾತ್ರದ ಈ ಕಾವ್ಯವು ವಿಪುಲ ಚರ್ಚೆಯನ್ನು ಪ್ರಚೋದಿಸಿದೆ. ವಿನಾಯಕರ ಸಾಹಿತ್ಯ ಕೃತಿಗಳು ವಿಚಾರಪ್ರಚೋದಕವೂ ಅಹುದು. ಆಧುನಿಕ ಕನ್ನಡ ಸಾಹಿತ್ಯದಲ್ಲಿ ವಿನಾಯಕರು ಎತ್ತರದ ಹಂತವನ್ನು ತಲುಪಿದ್ದಾರೆ. ಅವರ ವ್ಯಕ್ತಿತ್ವಸಾಧನೆಯಲ್ಲಿಯೂ ಎತ್ತರವಿದೆ. ಅವರ ಕಾವ್ಯಕ್ಕೆ ವಿಶಾಲ ವ್ಯಾಸಂಗದ, ಅನುಭವದ, ಚಿಂತನೆಯ ಹಿನ್ನೆಲೆಯಿದೆ. ಮಾನವೀಯ ಬಾಳಿನಲ್ಲಿಯ ವೈಯಕ್ತಿಕ, ಸಾಂಘಿಕ ದರ್ಶನ—ಸಂಘರ್ಷಣ, ತನ್ಮೂಲಕ ಪರಿಪೂರ್ಣ ಜೀವನಪಥದ ಪ್ರಜ್ಞೆ—ಈ ನಿಲುವೆ ವಿನಾಯಕರ ಕಾವ್ಯದ್ದಾಗಿದೆ.

'ದ್ಯಾವಾಪೃಥಿವೀ'ಯಲ್ಲಿ 'ನೀರದ' ಮತ್ತು 'ಇಳಾಗೀತ' ಎಂಬ ಎರಡು ಭಾಗಗಳಿವೆ. ಅವೆರಡೂ ಸ್ವಯಂಪೂರ್ಣವೆಂದರೂ ಅವುಗಳಲ್ಲಿ ಸಮನ್ವಯವೂ ಇದೆ. 'ನೀರದ'ದಲ್ಲಿ ಹತ್ತು ಎಸಳುಗಳಿವೆ. ಅವುಗಳಲ್ಲಿ 'ಇಕ್ಷ್ವಾಯಣ' ಎಂಬ ನವೀನ ಪುರಾಣವೂ ಸೇರಿದೆ. 'ಇಳಾಗೀತ'ದಲ್ಲಿ ಹನ್ನೊಂದು ಎಸಳುಗಳಿವೆ. ಅಲ್ಲಿ ದಶಾವತಾರಗಳ ಹಳೆಯ ಪುರಾಣದ ಹೊಸ ನಿರೂಪಣೆಯಿದೆ. ಬರಲಿರುವ ಅವತಾರದ ಹಾರೈಕೆಯಿದೆ. ಕಾವ್ಯದ ಮೊದಲಿಗೆ ಬೇಂದ್ರೆಯವರ ಮುನ್ನೋಟ, ಕೊನೆಗೆ ಅಭ್ಯಾಸಿಯ ಟಿಪ್ಪಣಿಗಳಿವೆ.

ನೆಲದಲ್ಲಿ ನಿಂತು ಮೇಲಿನ ಮೋಡಗಳ ಚೆಲುವನ್ನು ಕವಿ ದೃಷ್ಟಿಸುವ ಸನ್ನಿವೇಶ ದಿಂದ ಈ ಕಾವ್ಯದ ಆರಂಭ. ಕವಿಯ ದೃಷ್ಟಿಗೆ ಮೋಡವು 'ನೀಲಿಮದ ಆಳದಿ ತೇಲುವ ಓಡ'ವಾಗಿ ಕಂಡಿದೆ. ನೆಲ ಮಳೆಗಾಗಿ ಬಾಯ್ದೆರೆದು ನಿಂತಿದೆ. ಮೋಡ 'ಬಾನ ಹೊಲ ದಲ್ಲಿ ಗಾಳಿಯೆಂಬ ಕುರುಬ ತರುಬಿದ ಬಿಳಿಯ ಕುರಿಮರಿಗಳ ಹಿಂಡಿನಂತೆ' ಗೋಚರ ವಾಗಿದೆ. ಕಾವ್ಯದ ಆರಂಭದ ಸಾಲುಗಳಲ್ಲಿಯೇ ಈ ಬಗೆಯ ಪ್ರತಿಮೆಗಳ ಶೋಭೆಯಿದೆ. 'ನೀರದ'ದ ಮೊದಲ ಎಸಳಿನಲ್ಲಿ ಮೋಡಗಳ ಸಾಲಿನ ಸಾಮೂಹಿಕ ಚಿತ್ರಣವಿದೆ. ಮಲೆ ನಾಡಿನ ದಟ್ಟಡವಿಯ 'ಮತ್ತಗಜ ಸಮೂಹ', 'ಗುಲಗಂಜಿಗಣ್ಣಿನ ಬೇಡರ ಪಡೆ', ಸಿಡಿಲು ಸಿಡಿಯುವ 'ಅಣುಸ್ಫೋಟದ ಪ್ರಯೋಗಶಾಲೆ'—ಇಂತಹ ಅರ್ಥವತ್ತಾದ ಪ್ರತಿಮೆಗಳು ಬಂದಿವೆ. ಕೊನೆಯ ಪ್ರತಿಮೆಯಲ್ಲಿ ಇಂದಿನ ಮಾನವನ ವಿನಾಶಕಾರೀ ಪ್ರವೃತ್ತಿಯು ರೂಪುದಳೆದಿದೆ.

ಎರಡನೆಯ ಎಸಳಿನಲ್ಲಿ ಮೋಡಕ್ಕೆ ವ್ಯಕ್ತಿತ್ವವನ್ನು ಆರೋಪಿಸಲಾಗಿದೆ. ಕವಿಯು ಮೋಡದ ವ್ಯಕ್ತಿತ್ವದಲ್ಲಿ 'ಜೀವನವೇ ಜೀವಿತದ ಗುರಿ' ಎಂಬ ಸಂದೇಶವನ್ನು ಕಂಡು ಕೊಳ್ಳುತ್ತಾನೆ. ಶೆಲ್ಲಿ ಕವಿಯ ವಿನೂತನ ತತ್ವ, ಪ್ರತಿಮೆಗಳನ್ನು ಇಲ್ಲಿ ಬಳಸಿಕೊಂಡಿ ದ್ದರೂ ಭಾರತೀಯ ಸನಾತನ ದೃಷ್ಟಿಯನ್ನು ಆಧರಿಸಿ ಮೋಡವನ್ನು 'ಸೌಂದರ್ಯ ನಿರ್ಜರ ಶಿಶು ಮೇಲೆ ಒರಗಿದ ಆಲದ ಎಲೆ'ಯೆಂದು ಪ್ರತಿಮಿಸಲಾಗಿದೆ. ಶೆಲ್ಲಿ ಕವಿ ಯನ್ನು ಕುರಿತ ಆಸ್ಥೆಯೊಂದಿಗೆ ಈ ಕವಿಗೆ ಭಾರತದ ಆರ್ಷ ದೃಷ್ಟಿಯ ಬಗೆಗೆ ಮೆಚ್ಚುಗೆಯೂ ಇದೆ.

ಇಲ್ಲಿಯ ನೀರದ ಸಂಚಾರದ ರಮ್ಯ ಚಿತ್ರಣವಿಂತಿದೆ:

> ಮೌನದ ವೀಣೆಯ ಸುಳುವಿನಿಂದ ಮಿಡಿದು,
> ....
> ನೀಹಾರಿಕೆಗಳ ಸುವರ್ಣ ಛಾಯೆಯಲಿ,
> ತಾರಾ ವ್ಯೂಹದ ಮಾಯೆಯಲಿ
> ಚಂದ್ರನ ಶೀತಲ ಸ್ಪರ್ಶದಲಿ
> ಸೂರ್ಯನ ರಜತೋತ್ಸವದ ಹರ್ಷದಲಿ,
> ಗಗನ ವಿಹಾರಿ, ತ್ರಿಭುವನ ಸಂಚಾರಿ.

ಮೋಡದ ವ್ಯಕ್ತಿತ್ವವನ್ನು ಗುರುತಿಸಿದ ಕವಿ ಅದನ್ನು 'ವಿಶ್ವಪ್ರೇಮಿ; ಏಕಾಕಿ—ಆದರೂ ವಿವೇಕಿ' ಎಂದು ಅರ್ಥಯಿಸಿದ್ದಾನೆ. ಮೋಡವು ಬುವಿಗೆ ಮಳೆಯನ್ನು ಸುರಿಸುವ 'ನೀರದ' ವಾಗಿರುವಂತೆ, ಬುವಿಯ ಜನಕ್ಕೆ ಮಾನವ ಧರ್ಮದ ಸಂದೇಶವನ್ನು ತರುವ 'ನಾರದನೂ' ಅಹುದೆಂಬುದು ಈ ಕವಿಯ ಕಾಣ್ಕೆ. 'ನೀರದ-ನಾರದರ' ಹೊಂದಿಕೆ ಯಲ್ಲಿ ಪದಪ್ರಾಸದಂತೆ ಅರ್ಥಪುಷ್ಟಿಯೂ ಇದೆ. ಪದಗಳಿಗೆ ವಿವಿಧಾರ್ಥಬೋಧೆಯಿರುವ ಸಂಸ್ಕೃತ ಭಾಷೆಯಲ್ಲಿ ನೀರದ, ನಾರದ ಪದಗಳು ಸಮಾನಾರ್ಥಕ ಶಬ್ದಗಳಾಗಿರುವುದೂ ಉಂಟು. ಅಲ್ಲದೆ 'ನಾರದ' ಶಬ್ದಕ್ಕೆ ನರನ ಧರ್ಮವನ್ನು ಒದಗಿಸುವವ, ಪರಮಾತ್ಮ

ವಿಷಯಕ ಜ್ಞಾನವನ್ನು ಕೊಡುವವ, ಎಂಬ ವಿಶೇಷ ಅರ್ಥವೂ ಇದೆ. ವಿಚಾರಪರತೆ ವಿನಾಯಕ ಕಾವ್ಯದ ವಿಶೇಷವಾದ ವೈಶಿಷ್ಟ್ಯವೂ ಆಹುದು. ಆದರೆ ಆ ವಿಚಾರಪರತೆಯು ಇಲ್ಲಿ ಕಲ್ಪನೆ-ಭಾವನೆಗಳ ಬೆನ್ನೇರಿ ಬಂದು ಹೆಚ್ಚು ಕಾವ್ಯಮಯವಾಗಿ ಪರಿಣಮಿಸಿದೆ. ನೀರದ—ನಾರದರ ವ್ಯಕ್ತಿತ್ವವು ಮಾನವನಲ್ಲಿಯೂ ಸ್ಫುರಿಸಬೇಕು—ಇದು ಕವಿಯ ಹಾರೈಕೆ. ಮೂರನೆಯ ಎಸಳಿನಲ್ಲಿ ಇದು ಸ್ಪಷ್ಟವಾಗಿದೆ.

ಎಲ್ಲ ಬಗೆಯ ಉಗಿ, ಹೊಗೆಗಳಿಂದ ರೂಪುಗೊಂಡ ಮೋಡವು ಮರ್ತ್ಯಲೋಕದ ವೈವಿಧ್ಯಮಯ ಬಾಳಿನ ಪ್ರತೀಕವೆಂಬಂತೆ ಮೂರನೆಯ ಎಸಳಿನಲ್ಲಿ ಚಿತ್ರಿತವಾಗಿದೆ. ಅನಾಥಬಾಲೆಯ, ಸಾಯಲಾರದೆ ಸತ್ತವರ ಉಸಿರು; ಮಾನವೀಯ ಡೊಂಕು, ಡೋಕಾರಿತನ—ಇತ್ಯಾದಿ 'ಮನುಕುಲದ ಜೀವನದ ತಪ್ತ ಕ್ಷಾರೋದಧಿಯ ಬಾಷ್ಪದೊಲು ಸೇರಿಹವು ಮುಗಿಲ ಗುಮ್ಮಟದಲ್ಲಿ!' ಈ ಚಿತ್ರಣದಲ್ಲಿಯ ಸಾಮಾಜಿಕ ಪ್ರಜ್ಞೆಯ ತೀವ್ರತೆಯು ಗಮನಾರ್ಹ. ಆದರೆ ಈ ಬಗೆಯ ಚಿತ್ರವು ಏಕದೇಶೀಯವೂ ಆಗಿಲ್ಲ :

ಎಲ್ಲವು ನೀಲಿಮದೊಡಲಲಿ ತಂಗಿತ್ತು.
ಕುಸುಮ ಕೋಮಲ ಜೀವದೂದು ಬತ್ತಿಯ ಕಂಪು
ಎಳೆಬಾಳ ಹೂಗಂಪಿನಾ ಸ್ವಪ್ನಸೌರಭವು;
ಸಮರ್ಪಣ-ಭಾವ-ದೀಪ್ತ ವಿಹ ಕರ್ಪೂರ:
ಸಾತ್ವಿಕರ ಭಾವನ್ನದಂಪು; ತವಸಿಗಳಗ್ನಿ
ಯೋಪಾಸನೆಯು; ಭಕ್ತರಿಕ್ಕಿರುವ ಲೋಭಾನ;
ಕಾದಲರು ಕಂಡ ಹಾಲ್ಗನಸು, ಸಕ್ಕರೆಗನಸು :—
ಎಲ್ಲ ಸಂಚಯಿಸಿಹವು ಕಾರ್ಬೊನ್ನ ಹೊಗೆಯೊಡನೆ
ಮುಗಿಲ ಗುಮ್ಮಟದಲ್ಲಿ ತೇಲುತಿಹವು!

ಮಾನವೀಯ ಬಾಳಿನ ಸಮಗ್ರತೆಯ ದೃಷ್ಟಿ ಇಲ್ಲಿ ಹರಿದುಬಂದಿದೆ. ಇಂತಹ ಸಮಗ್ರತೆಯ ದೃಷ್ಟಿಯನ್ನು ನಾವು ಕವಿಯಿಂದ ಅಪೇಕ್ಷಿಸುತ್ತೇವೆ. ಏಕದೇಶೀಯ ವಿಕೃತಿಯು ಮಾತ್ರ ಬಾಳಲ್ಲ. ಆ ಬಗೆಯ ಚಿತ್ರಣವೊಂದೇ ಕಾವ್ಯದ ಗಮ್ಯವಾಗಬೇಕಾಗಿಲ್ಲ. ಶೆಲ್ಲಿ, ಅರವಿಂದರಂತಹರ ಮಾರ್ಗಗಳಿಂದ ಉದ್ರೇಕವುಂಟಾಗಬೇಕಾದ ಆವಶ್ಯಕತೆಗೂ ಕಾರಣವಿಲ್ಲ.

ಈ ಕವಿಗೆ ಆಕಾಶವು 'ಕಾಲಪುರುಷನ ಕ್ರೀಡಾಂಗಣ'. ಬಹುರೂಪಿಯಾದ ಮೋಡದ ಬಣ್ಣನೆಯೂ ಇಲ್ಲಿ ಬಣ್ಣದುಂಬಿ ಬಂದಿದೆ. 'ದುರ್ಗಾಮಾತೆಯ ವಾಹನ', 'ವೀಣಾ ಪಾಣಿಯ....ಮೇಘಮಯೂರ', 'ಈಸುಗಾವಿನ ಕೂರ್ಮ', 'ಬೆದರು ಗಂಗಳ ಸಾರಂಗ', 'ಕ್ರೂರದಂಷ್ಟ್ರ ವರಾಹ', 'ಮುಗಿಲ್ಗಡಲಿನ ಅಷ್ಟಾವಕ್ರ—ಎಂಟುಗಾಲಿನೇಡಿ' ಇತ್ಯಾದಿ ರೂಪಗಳಲ್ಲಿ ಮೋಡ ಕವಿಗೆ ಕೂಡಿದೆ. ಗೋಗ್ರಹಣದ ದುಶ್ಶಾಸನನೊಂದಿಗೆ, ಕುಲೋದ್ಧಾರಕ ಏಸುವಿನ ಸ್ಮರಣೆಯನ್ನು ತಂದಿದೆ.

'ಕೊಳ್ಳಿದೆವ್ವಗಳ ಕುಣಿತ'ದೊಂದಿಗೆ 'ಗಂಧರ್ವರ ಗಾನದ ಹೊಳೆ'ಯೂ ಹರಿಯುತ್ತಿದೆ. ಬಾಳಿನಲ್ಲಾಗಲಿ, ಕಾವ್ಯದಲ್ಲಾಗಲಿ ಕೊಳ್ಳಿಯ ದೆವ್ವಗಳ ಕುಣಿತ ಮಾತ್ರವಿರಬೇಕಾಗಿಲ್ಲ. ಬರಿಯ ಗಂಧರ್ವರ ಗಾನ ಏಕತಾನವೂ ಅಹುದು. ಇಲ್ಲಿ 'ವರ್ಷಾಕಾಲದ ಧಾರೆಯ ಬೆನ್ನಿಗೆ ಉರಿಯುವ ಬೆಂಗಾಡಿನ ಮಳಲು' ಇದೆ. ಇಂತಿದೆ, ಮರ್ತ್ಯಲೋಕ. ಮೋಡದ ವಿವಿಧ ರೂಪುಗಳಿಂದ ಕವಿಯು ಇದನ್ನು ಪ್ರತಿಮಿಸುತ್ತಾನೆ.

....

ಇಂತಿದೆ ನೀರದ ಸೃಷ್ಟಿ.
ಭೂಮಿವ್ಯೋಮಗಳನಾಳಲುಬೇಕು
ನಾರದನುಜ್ವಲ ದೃಷ್ಟಿ.

ಭೂಮಿಯನ್ನು ಜಯಸಿದ್ದೇನೆಂದು ಭ್ರಮೆಗೊಂಡಿರುವ ಮಾನವನೀಗ ವ್ಯೋಮವನ್ನಾಳಲು ಹವಣಿಸುತ್ತಿದ್ದಾನೆ. ಆತನಿಗೆ ನಾರದನುಜ್ವಲ ದೃಷ್ಟಿ ಮೂಡಿ ಬಂದಿಲ್ಲ. ಅದುವೇ ಇಂದಿನ ವಿಶ್ವದ ವೈಷಮ್ಯಕ್ಕೆ ಕಾರಣವಾಗಿದೆ. ನೀರದದಂತೆ ಇಳೆಯೂ ಬಹುರೂಪಿ. ಮಾನವನ ಮಾನಸಿಕ ರಚನೆಗಳೂ ಅಂತೆಯೆ. ಮಾನವ 'ನಾರದ'ನಂತೆ ಧರ್ಮಸಂದೇಶವಾಹಕನಾಗಬೇಕಾಗಿದೆ. ನೀರದ, ಇಳೆಗಳು ಬಹು ರೂಪಿಯಾಗಿದ್ದರೂ ಶುದ್ಧ ಚೈತ್ಯರೂಪ ಒಂದೇ ಆಗಿದೆ. ಮಾನವನ ಅಂತರಾತ್ಮವೂ ಅಂತೆಯೆ. ಈ ಬಗೆಯ ಚಿಂತನಪರತೆಯು ಇಲ್ಲಿ ಕಾವ್ಯರೂಪದಲ್ಲಿ ಬಂದಿದೆ. ಪ್ರತಿಮಾ ವಿಧಾನದಿಂದ ನೆಲ—ಮುಗಿಲು—ಮಾನವರ ಸಂಯೋಗವು ಚಿತ್ರಿತವಾಗಿದೆ.

ಕುಂಬಾರ ನೆನಸಿದ ರೂಪವನ್ನು ಮಣ್ಣಿನ ಪಾತ್ರೆಯು ಪಡೆಯುವಂತೆ 'ನೆನಸಿದ ರೂಪವ ತಳೆವುದು ನೀರದ.' ಆ ರೂಪದಲ್ಲಿ ಅಡಕವಾಗಿರುವ ಸೂತ್ರವನ್ನು ನಾಲ್ಕನೆಯ ಎಸಳಿನಲ್ಲಿ ನಿರೂಪಿಸಲಾಗಿದೆ. ಬಾಷ್ಪವು ಊರ್ಧ್ವಮುಖವಾಗಿ ಸಾಗಿ, ಗಗನ ಪುಷ್ಪವಾಗಿ ವಿಕಾಸಪಡೆದು 'ಪಯೋಧರ' ಫಲದಂತೆ ಹಣ್ಣಾಗಿ ಮತ್ತೆ ರಸಗಂಗೆಯಾಗಿ ನೆಲಕ್ಕೆ ಇಳಿಯುವುದೇ 'ನೀರದ' ಸೂತ್ರ. ಊರ್ಧ್ವತೆ, ಚಲನ, ಧಾರಣ, ಅವತರಣ—ಇದು 'ನಾರದ' ಸೂತ್ರವೂ ಅಹುದು. ಅದು 'ನರನ' ಸೂತ್ರವೂ ಆಗಬೇಕಾಗಿದೆ ಮಾನವೀ ಸಂಕಲ್ಪದ ಆರೋಹಣ, ದೈವೀಕೃಪೆಯ ಅವತರಣ—ಇವೆರಡು ಸಂಧಿಸ ಬೇಕು. ವಿಕಾಸಪಥದ ಆರೋಹಣದಲ್ಲಿ ಕೊನೆಯದಾದ ಅತಿಮಾನಸದ ಹಂತವನ್ನು ತಲುಪಬೇಕು; ಮತ್ತೆ ಜಡದಲ್ಲಿ ಅದರ ಅವತರಣವಾಗಬೇಕು—ಇದು ಶ್ರೀ ಅರವಿಂದ ದರ್ಶನದ ತಿರುಳು. ವಿನಾಯಕರು ಇದನ್ನು ಈ ಕಾವ್ಯದಲ್ಲಿ ಸಮುಚಿತವಾಗಿ, ಸುಂದರವಾಗಿ ಬಳಸಿಕೊಂಡಿದ್ದಾರೆ. ಅತಿಮಾನಸದ ಹಂತವನ್ನು ಗಮನಿಸದ ಮತ ಪಂಥಗಳು ದ್ವಂದ್ವಕ್ಕೊಳಗಾಗಿ ಅರ್ಧಮರ್ಧ ದರ್ಶನದ ಜಾಲಗಳಾಗಿವೆ. ಬಹು ರೂಪಿಯಾದ 'ನೀರದ'ವೂ ಇಂತಹ ಜಾಲದಲ್ಲಿ ತೊಡಕಿಕೊಂಡಿದೆ. ಆದುದರಿಂದ ಕವಿಯ ಪ್ರಾರ್ಥನೆ ಹೀಗೆ ಹರಿದು ಬಂದಿದೆ :

ರೂಪದಿಂದ್ರ ಜಾಲಗಳ ಹೊರೆಯಿಂದ
....
ಜಡದವಾದ ಜಂಜಡದ ಜಡೆಯಿಂದ
....
ಬಿಡಿಸಿಕೊಂಡು ಬಾ
ಬಿಡಿಸಲೆನ್ನ ಬಾ
ಬಾ. ಬಾ. ಬಾ.
ಓ ನೀರದ ಬಾ.

ಇಂದ್ರಜಾಲದಿಂದ ನೀರದ ತನ್ನನ್ನು ಬಿಡಿಸಿಕೊಂಡು ಬರಬೇಕು; ನನ್ನನ್ನೂ ಬಿಡಿಸಬೇಕು—ಎಂಬ ಕವಿಯ ಪ್ರಾರ್ಥನೆಯು ಆರನೆಯ ಎಸಳಿನಲ್ಲಿಯೂ ಮುಂದುವರಿದಿದೆ.

ಶುದ್ಧ ಚೈತ್ಯದ ಶುಭ್ರತೆಯೊಂದರಿಂದಲೇ ಬಾಳು ಪರಿಪೂರ್ಣವಾಗುವುದಿಲ್ಲ. ದಿವ್ಯಜೀವನಪಥದಲ್ಲಿ ವೈವಿಧ್ಯದ ವರ್ಣಮಯ ಅನುಭವವೂ ಆವಶ್ಯಕ — ಈ ಮಾತು ಶ್ರೀ ಅರವಿಂದರ ತತ್ವಪ್ರಣಾಲಿಯಲ್ಲಿದೆ. ಈ ಕವಿವಾಣಿಯಲ್ಲಿ ಅದು ಮೂಡಿಬಂದಿರುವುದು ಹೀಗೆ :

ಸ್ಫಟಿಕದಂತೆ ಶುಭ್ರವಿರುವಿ (ನೀರದ) ; ಬಣ್ಣ
ದಾಟಬೇಡವೆ ?
ಬರಿಯ ಮಂಜಿನಾಕೃತಿ ಸುಭಗಾಕೃತಿ ನೋಡೆವೇ ?
ಮೌನವಿದೆ ; ಗಾನವೆಲ್ಲಿ ? ತಂತಿಯಿದೆ ; ತಾನವೆಲ್ಲಿ ?
ಸಾಕ್ಷಿಯಿವೆ ; ಸೃಷ್ಟಿಯೆಲ್ಲಿ ? ಸುರಸವೃಷ್ಟಿಯಲ್ಲಿ ?
....
ಎಲ್ಲಬೇಕು ; ಬಣ್ಣಬೇಕು.................

ಮರ್ತ್ಯದ ಬಾಳಿನಲ್ಲಿ ದುಷ್ಟ ಶಕ್ತಿಗಳಿರುವುದೂ ನಿಜ. ಅಂತಹ ದುಷ್ಟ ಶಕ್ತಿಗಳ ಪ್ರತೀಕವಾಗಿದೆ, ಕಾರ್ಮೋಡ. ಆದರೆ ಪ್ರಪಂಚವು ಎಂದೆಂದಿಗೂ ವಕ್ರವೇ ಆಗಿರಬೇಕೇ ? ಅಮೃತದ ಬಳ್ಳಿಗೆ ಆನಂದ ಕೊನರುವ ಸ್ಥಿತಿ ಬರಲಾರದೇ ? ಎಂದಾದರೂ ಬೆಳ್ಳಿಯ ಚಿಕ್ಕೆ ಮೂಡಲಾರದೇ ? ಬೆಳ್ಳಿಯ ಚಿಕ್ಕೆ ಮೂಡಬೇಕು ; ಮೂಡುತ್ತಿದೆ, ಮಾನವ ಸಂಕಲ್ಪ ದೈವೀ ಕರುಣೆಗಳಿಂದಾಗಿ. ಆಗ ಕಾರ್ಮೋಡವಳಿದು 'ನವನೀರದ' ತಲೆದೋರುತ್ತಿದೆ.

ನವನೀರದ ದರ್ಶನವು ಏಳನೆಯ ಎಸಳಿನಲ್ಲಿದೆ. ನವನೀರದ ನವಮಾನವನ ಪ್ರತೀಕ. ಇಂದ್ರದೇವ ದೈವೀಕರುಣೆಯ ಪ್ರತೀಕ. ಗಿರಿಗಳ ರೆಕ್ಕೆಗಳನ್ನು ಇಂದ್ರ ಕತ್ತರಿಸಿದ ಪೌರಾಣಿಕ ಸಂದರ್ಭವನ್ನು ಸ್ಮರಿಸಿಕೊಂಡ ಕವಿಯು ಈಗ ಮತ್ತೊಮ್ಮೆ ಇಂದ್ರನ ಆಗಮನವನ್ನು ಕಾಣುತ್ತಾನೆ. ವಜ್ರಾಯುಧದ ಪ್ರಭೆಯನ್ನು ದಿಗ್ದೆಸೆಗೆ ಮೂಡಿಸುತ್ತ ಇಂದ್ರ ಬರುತ್ತಾನೆ. ದುಷ್ಪ್ರವೃತ್ತಿಗಳ ಪ್ರತೀಕವಾದ ಕಾರ್ಮೋಡವನ್ನು

ಸಂಹರಿಸುತ್ತಾನೆ. ಅನಂತರ 'ನವನೀರದ'ರ ಸೃಷ್ಟಿಯಾಗುತ್ತಿದೆ. ಆ 'ನವನೀರದ 'ನವಮಾನವ ಸಂಸಾರ ವಿಸ್ತಾರದ ನೌಕೆ'ಯಾಗಿ, ಅದರ ಧ್ರುವಪತಾಕೆಯಾಗಿ ನಲಿಯುತ್ತಿದೆ :

....
ಅನ್ಯಾಯವು ಕವಿಯದಂತೆ, —
ಸಾತ್ವಿಕಭಾವಗಳ ಬೆಳಗಿ
ವಿವಿಧ ರೂಪಗಳಲಿ ತೊಳಗಿ
ಪೂರ್ಣವಿದರ ಪೂರ್ಣತೆಯನು
ವಿಕಸನ ಪಥದಲ್ಲಿ ತೋರಿ
ನೀರದ ತಾನಲೆಯುತಿದೆ.

ಆಗ ನವಮಾನವನ ಸಂತಾನವಾದ ' ಇಕ್ಷು ' ಬುವಿಯಲ್ಲಿ ಹುಟ್ಟಿ ಬರುತ್ತಾನೆ. ಗ್ರೀಕ್ ಪುರಾಣದ ಇಕ್ಸಿಯನ್‌ನ ಕಥೆಯನ್ನು ಈ ಸಂದರ್ಭದಲ್ಲಿ ಬಳಸಿಕೊಂಡಿರುವ ಕವಿಯು ಆ ಕಥೆಗೆ ಭಾರತೀಯ ದೀಕ್ಷೆಯನ್ನು ಕೊಟ್ಟಿದ್ದಾನೆ. ಇಕ್ಷ್ವಾಯಣ ದಿಂದಾಗಿ ಇದುವರೆಗೆ ಪ್ರತೀಕ ಪ್ರಧಾನವಾಗಿದ್ದ ಕಾವ್ಯ ಕಥನಾತ್ಮಕವಾಗಿ ಮುಂದು ವರಿದಿದೆ.

ಇಕ್ಷು ತನಗೆ ಆದಿಶಕ್ತಿಯ ಪರಿಚಯ ಮಾಡಿಕೊಡಬೇಕೆಂದು ಇಂದ್ರನನ್ನು ಕೇಳುತ್ತಾನೆ. ಆದಿಶಕ್ತಿಯನ್ನು ಕಂಡುಕೊಳ್ಳುವ ಸಾಮರ್ಥ್ಯ ಇಕ್ಷುವಿಗೆ ಇನ್ನೂ ಬಂದಿಲ್ಲವೆಂದು ಇಂದ್ರ ಹೇಳುತ್ತಾನೆ. ತನ್ನ ಸಾಮರ್ಥ್ಯದ ಬಗೆಗೆ ಹೆಮ್ಮೆಯಿರುವ ಇಕ್ಷು ತನ್ನ ಹಟವನ್ನೇ ಮುಂದುವರಿಸುತ್ತಾನೆ. ಆಗ ಇಂದ್ರ ' ಭೂಲೋಕದ ಮಾತೆಯನ್ನು ಮೊದಲು ಅರಿತುಕೋ ' ಎಂದು ಹೇಳಿ ತನ್ನ ಮಡದಿ ಶಚಿಯನ್ನು ಇಕ್ಷುವಿಗೆ ತೋರಿಸುತ್ತಾನೆ. ಶಚಿಯ ಸೌಂದರ್ಯಕ್ಕೆ ಮೋಹಿತನಾದ ಇಕ್ಷು ಆಕೆಯನ್ನು ಶೃಂಗಾರಾನ್ವಿತ ದೃಷ್ಟಿಯಿಂದ ಕಾಣುತ್ತಾನೆ. ಕೋಪಗೊಂಡ ಇಂದ್ರ ಒಂದು ಮೋಡಕ್ಕೆ ಶಚಿಯ ರೂಪವನ್ನು ಕೊಡುತ್ತಾನೆ. ಈ ನೀರದ ಶಚಿಯೊಂದಿಗೆ ಇಕ್ಷು ಸಂಸಾರ ಹೂಡುತ್ತಾನೆ. ಆಗ,

ಅರ್ಧಮಾನಿಸರು, ಅರ್ಧಕುದುರೆಮೈಯ್ಯು,
ಅಶ್ರುಮಧ್ಯದಾ ಸಂತತಿ ಹುಟ್ಟಿದೊಲು,
ಅರ್ಧನೆಳಲು ಇನ್ನರ್ಧ ತಿಳಲದಾಗಿ
ಔರಸರೊಗೆತಂದರು ....

ಹೀಗೆ ವಿಚಿತ್ರ ವಿಲಕ್ಷಣ ಅರ್ಧಮರ್ಧ ಪ್ರಜ್ಞೆಯಲಿ ಪಳಗಿದ ಸಂತಾನವನ್ನು ಪಡೆದ ಇಕ್ಷು ಕನಿಕರದ ಸ್ಥಿತಿಗೆ ಈಡಾಗುತ್ತಾನೆ. ಪಶ್ಚಾತ್ತಾಪಪಟ್ಟ ಆತನು ಇಂದ್ರನ ಮೊರೆಹೊಗುತ್ತಾನೆ. ಆಗ ಇಂದ್ರ ಇಕ್ಷುವಿಗೆ ಆದಿಶಕ್ತಿಯ ಪರಿಚಯ ಮಾಡಿಕೊಡಲು

ತೊಡಗುತ್ತಾನೆ. ಇದಿಷ್ಟು ಕಥೆಯ ಹಂದರ. ಈ ಕಥೆಯ ಇಕ್ಷು ನವಮಾನವನ ಪ್ರತೀಕವಾದರೆ ಅವನಿಗೂ ಪತನವೇಕೆ? ಆತನು ತನ್ನ ಆತ್ಮಸಾಕ್ಷಾತ್ಕಾರ ಮಾಡಿಕೊಂಡ ನವಮಾನವನಹುದು. ಆದರೆ ಆತನಿನ್ನೂ ವಿಶ್ವದ ಆತ್ಮವನ್ನು ಕಂಡುಕೊಂಡು ಪರಿಪೂರ್ಣನಾಗಿಲ್ಲ. ಅಲ್ಲದೆ ಅಹಂಕಾರದಿಂದ ಕೂಡಿದ್ದು ಚಿತ್ತಸಮತೆಯನ್ನೂ ರೂಢಿಸಿಕೊಂಡಿರಲಿಲ್ಲ. ಅಂತೆಯೆ ಆತನಿಗೂ ಪತನವಿದೆ. ಆತನಲ್ಲಿದ್ದ ದೌರ್ಬಲ್ಯದ ಅಂಶವನ್ನು ತೋರಿಸಿಕೊಟ್ಟು ಆತನನ್ನು ಇನ್ನಿಷ್ಟು ಪರಿಶುದ್ಧಗೊಳಿಸಲೆಂದೇ ಈ ಪತನ. ಹೀಗೆ ಪತನಕ್ಕೊಳಗಾದ ಇಕ್ಷು ಮುಂದೆ ಪರಿಪೂರ್ಣನಾಗುವ ದಿಸೆಯಲ್ಲಿ ಸಾಗುತ್ತಾನೆ.

ಇಕ್ಷ್ವಾಯಣವು ಕಥೆ, ಪ್ರತೀಕ, ಪ್ರತಿಮೆಗಳನ್ನು ಗರ್ಭೀಕರಿಸಿಕೊಂಡಿದೆ. ಆದಿಶಕ್ತಿಯ ವಿರಾಟ್ ಸ್ವರೂಪದ ಚಿತ್ರಣದಲ್ಲಿ ಕವಿಯ ದರ್ಶನವು ಗೋಚರವಾಗುತ್ತದೆ. ಶ್ರೀ ಅರವಿಂದರ ಕಾವ್ಯದ ಪ್ರಭಾವವೂ ಇಲ್ಲಿದೆ. ಇಕ್ಷುವಿಗೆ ಇಂದ್ರನಿತ್ತ ಸಂದೇಶವಿಂತಿದೆ :

ದಾಟು ಕ್ಷಿತಿಜದ ದೃಶ್ಯರೇಖೆಯನು. ಎವೆಯೆತ್ತಿ,
ತಲೆಯೆತ್ತಿ ನೋಡು ನಿರ್ವಯಲ ನಿಸ್ಸೀಮೆಯನು ;
ಶೂನ್ಯವೆ ಬೆಸಲಾಗಿ ಕೋಟಿ ನಕ್ಷತ್ರವನು
ಬಯಲ ಮುಂಟಪದಲ್ಲಿ ಬರೆದಿರುವ ಹಿರಿಮೆಯನು.
....
....
ಎಲ್ಲವರ್ಷಿಸುತವಳ ಚರಣದಲ್ಲಿ
ಅಮೃತಸ್ಪರ್ಶವನಿರಿಸು ಹರಣದಲ್ಲಿ.
....
ಶೂನ್ಯದಲಿ ಸ್ಥಾನವಾಗಿಸುವ ಧಾರಣಶಕ್ತಿ
ಯಾರದೆನೆ, — ಅದೆ ತಾಯ ಸಹಜಲೀಲೆ
....
ವ್ಯಕ್ತ ಮಧ್ಯವು ಪೂರ್ಣ ಪೂರ್ಣವವ್ಯಕ್ತ.
ಇದನು ತಿಳಿದವ ಪ್ರಾಜ್ಞ, ಇದನಳೆದವನೆ ಮುಕ್ತ.
....
ಹಣೆಗಣ್ಣು ದೀಕ್ಷಿಸಲು ಸೂಕ್ಷ್ಮಲೋಕದ ಪರಿಯು,
ಮೂರ್ಧ್ನ ನೇತ್ರಕೆ ವಿದಿತವೀ ವಿರಾಟತೆಯ ಸಿರಿ,
ಸ್ವರ್ ಗಂಗೆಯಾಚೆಗಿಹ ವಿಸ್ತಾರ; ಕಾಣದನು.
ಅಂದು ತೆರೆವುದು ಭಾಗ್ಯ ನಿನ್ನದಾಗುವುದು ಗುರಿ.
ಆದಿಶಕ್ತಿಯು ಬಹಳು ನೆಲ–ಮುಗಿಲ ಹೊಂದಿಸುತ.
ಅಂದು ನಿನಗಾಗುವುದು ಜಗವೆ ಜ್ಯೋತಿರ್ಲಿಂಗ

'ನೀರದ'ದ ಕೊನೆಯ ಎಸಳಿನಲ್ಲಿ ಕಾವ್ಯ ಮತ್ತೆ ಪ್ರತೀಕಾತ್ಮಕವಾಗಿದೆ. ಅಲ್ಲಿ ಘನಮನದ ಪ್ರಜ್ಞೆ, ನವಮನುಕುಲ ವಿಕಸನದ ಮಂತ್ರಗಳು ಸೂಚಿತವಾಗಿವೆ.

ನೀರದದೊಲು ವರ್ಷಿಸ ಬಾ
ನಾರದನೊಲು ಹರ್ಷಿಸ ಬಾ

ಎಂಬ ಪ್ರಾರ್ಥನೆಯೊಂದಿಗೆ ಈ ಭಾಗ ಕೊನೆಗೊಳ್ಳುತ್ತದೆ.

೨

'ಇಳಾಗೀತೆ'ಯು ವಿಮಾನಯಾನದಲ್ಲಿ ಕವಿಗೆ ಕಂಡ ಇಳೆಯ ವರ್ಣನೆಯಿಂದ ಆರಂಭವಾಗುತ್ತದೆ. ನಿಸರ್ಗದ ರುದ್ರ ರಮಣೀಯ ದೃಶ್ಯಗಳ ಚಿತ್ರಣ 'ನೀರದ' ದಲ್ಲಿಯೂ ಬಂದಿದೆ. ಆದರೆ ಇಲ್ಲಿರುವುದು ಮೇಲಿನಿಂದ ನೆಲದತ್ತ ನೋಡಿದ ದೃಷ್ಟಿ. ಇಳೆಯು ಕವಿಗೆ ಇಲ್ಲಿ ದೇವನಿರ್ಮಿತ ಕಾವ್ಯಕೃತಿಯಾಗಿ ಕಂಡಿದೆ: ಶೈಲಾಗ್ರಗಳ ಶೈಲಿ; ಗಿರಿಕಂದರದ ಛಂದ; ತರುಲತೆಯ ಅಲಂಕಾರ; ನದಿ–ನದದ ನವರಸ. ಈ ಬಗೆಯ ಕಾವ್ಯಕೃತಿಯಲ್ಲಿಯ ಧ್ವನಿಯನ್ನೂ ನಾವು ಅರ್ಥಯಿಸಿಕೊಳ್ಳಬೇಕು.

ಗಾಳಿಗಡಲಲಿ ಗಾಳಿದೋಣಿಯನು ನೂಕುತ್ತಿರುವ ಕವಿಯು ಭೂದೇವಿಯ ಭಾವಗೀತದ ಚೆಲುವನ್ನು, ಹಿರಿಗಬ್ಬದ ಗಭೀರತೆಯನ್ನು ಎರಡನೆಯ ಎಸಳಿನಲ್ಲಿ ಹಾಡಿದ್ದಾನೆ:

ಎತ್ತರದಲ್ಲಿ ಆಕಾಶಯಾನ ನಡೆದಿರುವಾಗ, ಮಂಜು ಮುಸುಕಿದಾಗ,

ಭೂಗೋಲ ಹಾಯಾಗಿ ತುಸುಗೋಚರ:
ಅಲ್ಲಲ್ಲಿ....................
ರೇಖೆಗಳ ಶಾಖೆಗಳ
ಮಸಕು ಎಸಕ
ಅಂದ ಚೆಂದ
ಶೃಂಗಗಳ ಚೇತರಿಸಿ ತಲೆಯೆತ್ತಿದೆ
ಆ ಚಿರಂತನ ರಜನಿ ಜಲಧಿಯೊಳಗಿಂದ!
....
....
ಮಂಜುಸರಿಯಲು ಬೆಳ್ಳಿಹಳ್ಳ ಹರಿಯುವ ಹೊಂಚು—
ಅದಕಚ್ಚ ಹಸಿರಿನಂಚು!
....
ಅಜೇಯ ಆ ಗೆಲುವು
ಅನುಪಮವು ಆ ಚೆಲುವು
ಲಾವಣ್ಯದೆದುರು ನಾನಾದೆ ಮೂಕ

ಆಕಾಶಯಾನದಲ್ಲಿ ಕವಿಗೆ 'ಮೋಡದಾನೆಯಮರಿ' 'ಮುಗಿಲಗೂಳಿ'ಗಳ ಪ್ರತಿಮೆ ಕಂಡಿವೆ. ಮೂರನೆಯ ಎಸಳಿನಲ್ಲಿಯೂ ಈ ಬಣ್ಣನೆ ಮುಂದುವರಿದಿದೆ:

ಗೊಮ್ಮಟೇಶ್ವರ ರಾಯಸುತ್ತಮಾಂಗದ ಮೇಲೆ
ಸುಳಿಯ ಗುಂಗುರಗೂದಲೆಂತೊ ಅಂತೆ
ಕಡಲು ಕಂಗೊಳಿಸಿರುವದೆಲರೊಡನೆ ತಿಳ್ಳಿಯಾಡಿ !

ಗೊಮ್ಮಟೇಶ್ವರನ ಕಲ್ಪನೆ ಇಲ್ಲಿ ಪ್ರತಿಭಾಪೂರ್ಣವಾಗಿ ಬಂದಿದೆ. ಮಂಜಿನ ಮುಸುಕಿನಲ್ಲಿ ಕಾಣುವ ಪೃಥ್ವಿಗೆ ರವಿಸ್ಪರ್ಶವೊದಗುತ್ತಿದೆ. ಆಗ ಆಕೆ 'ಮಂದಸ್ಮಿತೆ', 'ಚಿರವಿಸ್ಮಿತೆ'

ಇಳೆಯ ಇಳಕಲ್ಲು ಸೀರೆ!
ಕಸೂತಿಯಾ ಬೆಡಗು ಬೇರೆ!
ಹೊನ್ನುಡುಪನುಟ್ಟ ನೀರೇ!
ಏನವಳ ಬಿತ್ತರದ ಚೆಲುವು?
ಮುಪ್ಪಿರದ ಒಲವು
ಇದು ಹವಳ
ಇದು ನಿವಳ.

ಹೀಗೆ ಇಲ್ಲಿಯ ಬಣ್ಣನೆ 'ನಿವಳ'ವಾಗಿದೆ. (ಉತ್ತರ ಕರ್ಣಾಟಕದ ದೇಸಿಯ ಶೋಭೆ ಅರ್ಥಪೂರ್ಣತೆಗಳಿಂದ ಕೂಡಿದ 'ನಿವಳ', 'ಹುಂಬ', 'ಡೋಕಾರಿತನ', 'ಕೊಡ, ಪಾನ', 'ಝುಕ್ಕಿಸಿತು', 'ಮೂರೆಲೆಯಾಟ', 'ಇಳಿಕಲ್ಲು ಸೀರೆ', 'ತಿಳ್ಳಿನೂಟ', 'ಹುಲಿ' ಇಂತಹ ಪದಗಳ ಬಳಕೆ ಈ ಕಾವ್ಯದಲ್ಲಿದೆ.) ಈ ಬಗೆಯ ವರ್ಣನೆಯ ನಂತರ ಸೃಷ್ಟಿಯ ವಿಕಾಸ ಕ್ರಮದೊಂದಿಗೆ ದಶಾವತಾರಗಳನ್ನು ಮೇಳವಿಸಿದ ಕಲ್ಪನೆಯು ಹರಿದಿದೆ:

ಮತ್ಸ್ಯಾವತಾರ ಸಮಯದಲಿ ಆಳಿದಳಿವಳು
ಹೆಮ್ಮೀನ-ಮೊಸಳೆಯೊಲು ಬೆಳೆದುಕೊಂಡು.
ಕೂರ್ಮಾವತಾರ ಕಾಲದಲಿ ಬಾಳಿದಳಿವಳು
ಆಮೆಯೊಲು ಮೆಯ್ಯನೊಳಗೆಳೆದುಕೊಂಡು.
ವರಾಹವತಾರದ ಕಾಲದಲಿ ತಾಳಿದವಳಿವಳು
ಮೃಗದ ಕೋರೆಯ ಮೇಲಕುಳಿದುಕೊಂಡು
ನರಸಿಂಹ ಬರಲೀಕೆ ಭೂದೇವಿ............

ಇಳೆಯು ರೂಪುಗೊಳ್ಳುವಲ್ಲಿಯ ವರುಣ—ಮರುತರ ಸಾಹಸಗಳು ಮುಂದಿನ ಎಸಳು ಗಳಲ್ಲಿ ಚಿತ್ರಿತವಾಗಿವೆ.

ಸಾವಿರ ಕಂಬಗಳೆದ್ದಿವೆ:
ಬೆಟ್ಟವೆ ತಲೆದಿಂಬಾಗಿ
ರಾಜವೈಭವದಿ ಬಿದ್ದಿವೆ
ಸಾಲುಗೊಳ್ಳುತಿಂಟಾಗಿ!

ನೂರು ಕಂಬಗಳ ಕರಗಿಸಿ ಮಾಡಿದೊಂದು ಸ್ತಂಭ!
ಝುಕ್ಕಿಸಿತಿದರೆದುರಿಗೆಲ್ಲ ಜಕ್ಕಣ್ಣರ ಜಂಭ!"
"ಬಾಲ ಮರುತರಿದೊ ರಚಿಸಿರುವಾಟಗೆ ದಿನ್ನೆಗಳು!
ಗುಬ್ಬಚ್ಚಿಯ ಗೂಡುಗಳು!
ತಪ್ಪಲು ಕರುಮಾಡಗಳು!
ಕೋರೈಸುವ ಡೊಂಕುಗಳು!
ಶೃಂಗಗಳಿದೊ ಶಂಖಗಳು!
ಸಹ್ಯಾದ್ರಿಯ ತೊಡೆಯನೇರುತಮರರಾಡಿದಾಟ!
ಸೌಂದರದೊಳು ಮುಳುಗೇಳುವ ಮರಿಮಾರುತರ ಮಾಟ!

ಸೃಷ್ಟಿಯ ವಿಕಾಸಕ್ರಮ ಆರನೆಯ ಎಸಳಿನಲ್ಲಿಯೂ ಮುಂದುವರಿದಿದೆ:

....
ಮನೋಮಯದ ರಾಗವಿರಾಗದ ಮಾದಕವಿಲ್ಲ!
ಶಾಂತಳು, ಸುಂದರಳು, ಧ್ಯಾನಮಗ್ನಳಿವಳು ಮೇದಿನಿ:
ಮೌನಯೋಗಿನಿಯು, ಸ್ವಪ್ನಜೀವಿ, ಅಲ್ಹಾದಿನಿ!

ಮುಂದೆ ಮಾನವನು ಹುಟ್ಟಿಬಂದ:

ಮೌನವಿದನು ಕದಡಿಬಂದ: ಮನುಜನಿಂದ ಧ್ವಂಸ!
ಬಗೆದು,–ಬುವಿಯ ಹೂಗೊಳದಲಿ ತಾನೆ ರಾಜಹಂಸ!
ಮನುಕುಲದೊಡನೆದ್ದಿತು
ಹೂಲಿ–ಧರೆಯನದ್ದಿತು
ಜ್ವಾಲಾಮುಖಿ ಮೇಖಲೆಯಲಿ; ಪ್ರಳಯಮಾನವಾಯಿತು.
ಪ್ರಕೃತಿಗುಣವು; ಧರಾಂಗನೆಗೆ ರಕ್ತಸ್ನಾನವಾಯಿತು.

ಅಂತು ಮಾನವನ ಉದಯದೊಂದಿಗೆ ಧರಾಂಗನೆಗೆ ರಕ್ತಸ್ನಾನವಾಯಿತು. ಕಂಸನ ಜಯಭೇರಿ!

ಕೆಂಜಿಗಗಳು ಕಟ್ಟಿರುವೆಯ ಹುತ್ತಕಿಟ್ಟುದಾಳಿ
ಲಗ್ಗೆ ಹಾಕಿದೊಲು ನುಗ್ಗುತ...... ....
....
ನಗರಗಳನು ನಾಶಮಾಡಿ
ಸೆಗಣಿಯಲ್ಲಿ ಸೆಗಳಿಹುಳಗಳಂತೆ ಕದನವೆಸಗಿ
ಸೆಣಸಿದ ನರ ತನ್ನ ಕುಲದ ಕರುಳುಗಳನೆ ಹಿಸುಕಿ.

ಮಾನವನ ಪ್ರಾಣಮಯದ ಈ ಅಟ್ಟಹಾಸವನ್ನು ಕಂಡು,
............ನಕ್ಕ ರವಿಯು
ನಕ್ಕಶಶಿ, ನಕ್ಕ ಕವಿಯು:

ನಕ್ಕವೆಲ್ಲ ತಾರೆಗಳು ಬಿದ್ದು ಬಿದ್ದು........
ಬೊಕ್ಕೆಂದವು ದಶದಿಶೆಗಳು........
....
ಕೋಣನ ಕಿಂ–ನರ–ಗೀತಕೆ
ಕಿಲಕಿಲನೆ ನಕ್ಕಿತು
ಕಾಲಪಕ್ಷಿ !...........

ಸೃಷ್ಟಿಯಲ್ಲಿಯ ಮನುಕುಲದ ಪಾತ್ರವನ್ನು ಕುರಿತ ಈ ಬಗೆಯ ನಿರೂಪಣೆಯು ದಶಾವತಾರಗಳಲ್ಲಿಯ ಮುಂದಿನವುಗಳ ಪ್ರತೀಕದೊಂದಿಗೆ ಹೊಂದಿಕೊಂಡು ಏಳನೆಯ ಎಸಳಿನಲ್ಲಿಯೂ ಸಾಗಿದೆ. ಮಾನವನಿಂದ ಬರಿಯ ಹಿಂಸಾಕೃತ್ಯ ಮಾತ್ರವಲ್ಲ, ನಿರ್ಮಾಣಕಾರ್ಯವೂ ನಡೆದಿದೆ :

ಯಾವ ನರಸಿಂಹನೋ ! ಸಂಹರಿಸಿ ಸಿಂಹಗಳನು
ಗಿರಿಗಂಹ್ವರಗಳ ಸುತ್ತಿ
ಸೀಳ್ದಾರಿಗಳ ಕೊರೆದ ಶೃಂಗಗಳ ತುತ್ತ ತುದಿಗೆ,
ಕೋಡುಗಲ್ಲುಗಳ ಮುತ್ತಿ.
ಯಾವ ವಾಮನನೋ ! ವ್ಯಾಪಿಸುತ ಮರ್ತ್ಯವಿದನು
ನವಗ್ರಹದ ಪಥವ ತಿಳಿದು.
ಮೆಟ್ಟಿ ಬಲಿಯನ್ನರಿತ ಪಾತಾಳಕಿಹ ಮಾರ್ಗವ :
ವಿರಾಟನಾಗಿ ಬೆಳೆದು
ಉತ್ತರಾಪಥದಿಂದ ದಕ್ಷಿಣಾಪಥದ ತುದಿಗೆ
ಪರಿಕಿಸುತ ಪಂಥಾನವ
ರಾಮಾಭಿರಾಮನವನಿತಿಹಾಸವಾಗಿಸಿದನು–
ತನ್ನಾ ಮಹಾಯಾನವ.

ಮಾನವನು ಕೃಷಿಕೃತ್ಯದಲ್ಲಿ ಮುಂದುವರಿದ :

ಬೂದಿ–ಹಳದಿ ಬಣ್ಣದ ನೆಲದ ನಡುವೆ
ಉತ್ತಿದ ಶ್ಯಾಮಲ, ಬಿತ್ತಿದ ಹಸಿರು ಹೊಲ !
ಗಂಜಿಗಂಟೆಯೊಲು ನೆಲಕಂಟಿದ ವೃಕ್ಷ :
ನಳನಳಿಸುವ ದೃಶ್ಯದ ಚೆಲುವಿದು ಅಮಲ.
ಸುವರ್ಣಭೂಮಿ ವಿಸ್ತಾರ ಮಧ್ಯದಲ್ಲಿ
ಯಮುನೆಯಲ್ಲೊಗೆದು ತಂದ
ಗಿಳಿಹಸಿರು ಬಣ್ಣದಾ ಸೀರೆಗಳನೊಣಗಲೆಂದು
ಗೋಪಿಯರು ಹಾಸಿದಂದ !

ಮಾನವನಲ್ಲಿ ಶಕುನಿ ಬುದ್ಧಿಯೂ ತಲೆಯೆತ್ತಿತು :

ಕೌರವಾಗ್ರಣಿ ದ್ಯೂತದಾಟವನ್ನಾಡಲೆಂದು
ಹಾಸಿದನು ಪಗಡೆ ಪಟ್ಟ.

ಮುಂದೆ ನಾಗರಿಕತೆಯೂ ತಲೆದೋರಿತು :

ಉರಿಬಿಸಿಲಿಗೆ ಹೊಳೆಯುವ ಬೆಂಗಾಡಿನಲಿ
ಶ್ವೇತಭವನ-ಹರ್ಮ್ಯಗಳು ಗುಂಪುಗೊಂಡು
ಒತ್ತಡಿಸಿವೆ ತಂಗೊಳದಡಿ ನೀರಡಿಸಿ,
ನಗರವೆಂದುಕೊಂಡು !

ನಾಗರಿಕತೆಯಲ್ಲಿ ಹೆಚ್ಚು ಮುಂದುವರಿದ ಮಾನವನು ಔದ್ಯೋಗಿಕ ಯುಗದಲ್ಲಿ ವಿಚಿತ್ರ ಪರಿಸ್ಥಿತಿಯನ್ನು ನಿರ್ಮಿಸಿದ. ಕಲಿಯುಗವನ್ನು ಇಳೆಗೆ ತಂದ. ಮುಂಬಯಿನಗರ ಇದರ ಪ್ರತೀಕವಾಗಿ ಎಂಟನೆಯ ಎಸಳಿನಲ್ಲಿ ವಿಡಂಬನೆ ಪಡೆದಿದೆ :

ಒಬ್ಬನ್ನಿನ ರಸ್ತೆಯ ಸುಳಿವನು ಹಿಡಿದು
ಬಸ್ಸು-ಟ್ರಾಮುಗಳು
ಎಡಬಲ ಗೊಂಬೆಯ ಮಹಡಿ ಮನೆ; ನಡುವೆ
ರಿವಾಂಡು ಹೋಮುಗಳು.
ಕೋಣೆಗೊಂದು ಕಾಮಾರ್ಥದ ದಾಂಪತ್ಯ ;
ಕಲಿಯ ಪಾರುಪತ್ಯ !
ಕಲಿ ತಾ ಹೂಡಿದ ಮೂರೆಲೆಯಾಟವಿದು !
ಗೊಂಬೆಯ ಬೇಟವಿದು !
....
ಕರಿ ಹೊಗೆ ಪುಟಿಸುವ ಕಾರಂಜಿಗಳಂತೆ-
ಫ್ಯಾಕ್ಟರಿಗಳ ಸಂತೆ !
ಕಲಿಯುಗದೊಳು ನರ ನಿರ್ಮಿಸಿರುವ ಪುರವು
ಮುಂಬಾಽ ದೈತ್ಯನ ವರವು !
....
....
ರಬ್ಬರು ಗಾಲಿಯ ಮೇಲೆ ನಿತ್ಯ ಭ್ರಮಣ
....
ರಬ್ಬರು ಕೋಗಿಲೆಗಳ ವಸಂತಮಾಸ :
ಓ ಎಂಥಾ ಮೋಸ !
ಇಂದಿನ ನಾಗರಿಕತೆಯಬ್ಬರ, ಹೊಯ್ದಾಟ
ಬರಿ ರಬ್ಬರಿನಾಟ !
....
ಆಕಾಂಕ್ಷೆಗಳೋ ? ಪಣ, ಆಕ್ರಮಣ
ಸದೈವ ಚಿತ್ರ ಭ್ರಮಣ

ಯಂತ್ರಯುಗದ ಮಾನವನ ವಿಕೃತಿಯ ಈ ಚಿತ್ರ ಪರಿಣಾಮಕಾರಿಯಾಗಿಯೇ ಮೂಡಿ ಬಂದಿದೆ. ಇಂತಹ ಚಿತ್ರದ ಬಗೆಗೆ ಕವಿಯ ಅರ್ಥ ವಿವರಣೆಯಿದು :

ಇಂದಿನ ಯುಗಕೀ ಕಲಿಯೇ ಗುರುವು.
ಶುದ್ಧ ತಿರುವು--ಮುರುವು !

ಆದರೆ ಸೃಷ್ಟಿಯ ವಿಕಾಸಕ್ರಮವು ಕಲಿಯ ಪ್ರವೇಶಕ್ಕೇ ಸೀಮಿತವೆಂದು ಭಾವಿಸಿ ಅಲ್ಲಿಯ ಕೊಳ್ಳಿಯದೆವ್ವದ ಕುಣಿತವನ್ನು ಮಾತ್ರ ನಾವು ಗಮನಿಸಬೇಕಾಗಿಲ್ಲ. ಆದುದರಿಂದ ಕವಿ ಹೇಳುತ್ತಿದ್ದಾನೆ : ಕಲಿಪುರುಷ ಬರಿಯ ಬೂತುಗ—ಬೆಂತರವಲ್ಲ. ಅವನು ಕಲ್ಕಿಯ ಆಗಮನಕ್ಕೆ ಹಾದಿಯನ್ನೂ ಸಿದ್ಧಗೊಳಿಸುತ್ತಾನೆ. ಔದ್ಯೋಗಿಕರಣವು ವಿಚಿತ್ರ ಪರಿಸ್ಥಿತಿಯನ್ನು ನಿರ್ಮಿಸಿತಾದರೂ ಅದು ಜಾಗತಿಕ ಐಕ್ಯವನ್ನೂ ತೋರಿಸಿ ಕೊಟ್ಟಿತು. ಈ ವಿಚಾರಧಾರೆ ಒಂಬತ್ತನೆಯ ಎಸಳಿನಲ್ಲಿಯ ಕಾವ್ಯ ವಸ್ತುವನ್ನೊದಗಿಸಿದೆ.

ಹಿಂದೆ ಮುಂಬಯಿ ನಗರದಲ್ಲಿ 'ಕಲಿಯ ಮೂರೆಲೆಯಾಟ'ವನ್ನು ಕಂಡ ಕವಿದೃಷ್ಟಿಯೀಗ ಬೇರೆ ತೆರನಾಗಿ ಹರಿದಿದೆ :

ಮುಂಬಯಿ ನಗರವು ಮೆರೆದಿದೆ ಝುಗಝುಗಿಸಿ
ಆಗಿ ಜಗದ ಜಗಲಿ.....................

ಕಲಿಪುರುಷ ಕಲ್ಕಿಯಾಗಿ ರೂಪಾಂತರ ಪಡೆಯುತ್ತಿರುವುದನ್ನು ಕವಿ ಕಾಣುತ್ತಿದ್ದಾನೆ :

ಭೂಮಿಯೊಳಡಗಿದ ವ್ಯೋಮತತ್ವವನ್ನು,
ನಭದ ಸತ್ವವನ್ನು
ಕಲ್ಕಿಗಾಗಿ ಕಲಿ ಸ್ಫುರ್ತಿಸಿದ; ——
....
ಭಿನ್ನ ವಿಚ್ಛಿನ್ನ ಧಾರಣೆಯುಹುದಿಂದು
ಒಂದೇ ಭೂಗೋಲ.
ಮಾನವ ಮನವೊಂದಾಗಲಿಹುದು ; ಬಹುದು
ಹೊಂದಿಕೆಗಳ ಕಾಲ !

ಮಾನವನೀಗ 'ಕಾಲ–ದೇಶಗಳ ವಿಸ್ತಾರವ ಜಯಿಸಿ ಸೌರಪಥವ ಬಯಸಿ' ಮುಂದುವರಿಯುತ್ತಿದ್ದಾನೆ. ಈಗ ವಿಷಮತೆಯಿದ್ದರೂ 'ಹೊಂದಿಕೆಗಳ ಕಾಲ ಬಹುದು' ಎಂಬ ಆಶಾವಾದವನ್ನು ಕವಿ ವ್ಯಕ್ತಪಡಿಸಿದ್ದಾನೆ. ಈ ಬಗೆಯ ಆಶಾವಾದವಿಲ್ಲದಿದ್ದಾಗ ಬುವಿಯ ಆಟ ಹುಚ್ಚರ ಕತೆಯಾಗಿ ಕಾಣುತ್ತದೆ. ಇಳೆಯು ಯುಗ ಯುಗಗಳಲ್ಲಿ ವಿಕಾಸಮುಖವಾಗಿಯೆ ಸಾಗಿದೆ. ಅದರ ಫಲಶ್ರುತಿಯನ್ನು ಕವಿಯು ಹತ್ತನೆಯ ಎಸಳಿನಲ್ಲಿ ಹಾಡಿದ್ದಾನೆ :

....

ಮತ್ತೆ ಕಂಡೆನಿದೀಗ ಕಣ್ತುಂಬ ಮಾತೆಯನ್ನು

....

ಹೊರಹೊಮ್ಮುತಿಹುದೊಂದಪಾರ ಸೌಂದರ್ಯ,
ಬುಗ್ಗೆಯೊಲು ತಾಯ್ತನದ ಹೃದಯದೌದಾರ್ಯ !
ಅದನು ಕಾಣಲು ಬೇಕು ದಿವ್ಯನೇತ್ರ.
ಅದರ ಹಾಡೂ ಅಹುದು ದಿವ್ಯ ಸ್ತೋತ್ರ.

....

ಸಹಸ್ರಬಾಹುವಿನ, ಓ ! ಸಾವಿರಂಗೈಗಳಿವು
ಸಿಟ್ಟಿಸವೆ ದೃಷ್ಟಾರರಮಿತ ದೃಷ್ಟಿ ?
ಸಾಸಿರದಲೊಂದು ಕರತಲವೆನ್ನ ಧರೆಯು

....

ಕರತಲವ ಬಲ್ಲವಗೆ ಕರತಲಾಮಲಕ
ದೇವ ದೇವನ ರೂಹು ; ಭೂಲೋಲಕ !

ಮತ್ತೆ ದಶಾವತಾರಗಳ ಬಗೆಗೆ ವಿಚಾರಮಥನ :

ವಿಶ್ವಮಾನವನು ರಾಕ್ಷಸಗಣವ ಶಿಕ್ಷಿಸಿದ
ನರಸಿಂಹನಾಗಿ ಮುಗ್ಧರನು ಗೆಲಸಿ ;
ಆಗಿ ವಾಮನನು ಬಲಿಚಕ್ರವರ್ತಿಯ ತುಳಿದ,
ನರಕಕ್ಕೆ ಸ್ವರ್ಗದಾಸೆಯನು ಕಲಿಸಿ.

....

ದಾಶರಥಿಯಾಗುತ್ತ ನೀತಿಸ್ತಂಭವನೆಟ್ಟು
ರಾಮರಾಜ್ಯಕೆ ಬಾಳಮುಡಿಪನಿತ್ತ ;

ಶ್ರೀಕೃಷ್ಣನು ಘನಮನದ ಪ್ರತೀಕವೆಂಬ ಶ್ರೀ ಅರವಿಂದರ ಹೇಳಿಕೆಯನ್ನು ಇಲ್ಲಿ ಬಳಸಿಕೊಳ್ಳಲಾಗಿದೆ. ವ್ಯಕ್ತಿ ತನ್ನ ಬಾಳ ಶಿಲ್ಪಿಯಾಗಬಲ್ಲನೆಂಬ ಸಂದೇಶವನ್ನು ಬುದ್ಧನಿಂದ ಪಡೆಯಲಾಗಿದೆ. ಮುಂದೆ ' ನೂತನ ಯುಗದ ತೋರಣ 'ವನ್ನು ತೋರ ಲಾಗಿದೆ :

ಕಲಿಯುಗದಿ ಕಲಕಿರಲು ಮನ, ಕಲ್ಕಿ ತೋರಿಹನು
ವಿಶ್ವವೊಂದೆ ಕುಟುಂಬವಿಹ ಘೋರಣ ;
ವಿಶ್ವಮಾನವನೀಗ ಶ್ರೀಮನದುಪಾಸಕನು :

ಶ್ರೀ ಅರವಿಂದ ದರ್ಶನದಲ್ಲಿ ಶ್ರೀಮನ (ಅಧಿಮಾನಸ)ವು ವಿಕಾಸದ ಶಿಖರವಾಗಿದೆ. ಈಗ ವಿಶ್ವಮಾನವನು ಶ್ರೀ ಮನದ ಉಪಾಸಕನೆಂಬುದು ಈ ಕವಿಯ ಶ್ರದ್ಧೆ. ವಿಕಾಸ ಕ್ರಮದಲ್ಲಿ,

ಪ್ರಾಣಪಲ್ಲವವು ಮನೋಮಯದಿ ಕುಸುಮವಾಯಿತು ;
ವಿಜ್ಞಾನಮಯದಿ ಫಲೋನ್ಮುಖತೆಯು ಸಮವಾಯಿತು !

ಈವರೆಗಿನದು 'ಫಲೋನ್ಮುಖತೆ' ಮಾತ್ರ. ಆದರೆ ಪರಿಪಕ್ವತೆಯತ್ತ ನಾವು ಸಾಗಬೇಕಾಗಿದೆ. ಹಾಗೆ ಸಾಗುವಾಗ "ಮಂಣೆ ಮುಗಿಲಗಂಣು" ಎಂಬ ಸೂತ್ರವೂ ಆವಶ್ಯಕವೆಂಬ ಶ್ರದ್ಧೆ ಈ ಕವಿಯದಾಗಿದೆ.

ಹನ್ನೊಂದನೆಯ ಎಸಳಿನಲ್ಲಿ ಈ ಕಾವ್ಯದ ಸಂದೇಶ ಸಾರವತ್ತಾಗಿ ಮೂಡಿ ಬಂದಿದೆ :

ವಾಯು ಸಮುದ್ರದಿ ವಿಹರಿಸಿ,
....
ಮೋಡದಾಚೆಗಿರುವ ನಾಡ
ನೋಡಿ ಹಾಡಿ ಬಂದರೂ
ಮುಗಿಲ ಪಾರಿಜಾತಗಳನು
ಸವಿನೆನಹಿಗೆ ತಂದರೂ
ಮರಳಿ ಬಂದೆನಿಳೆಯು ತೊಡೆಗೆ
ಭೂಮಿತಾಯಿ ಕರೆಯುವೆಡೆಗೆ :
ನೆಲವೇ ಆಧಾರಾ
ನೆಲವೇ ಆ-ಧಾರ !
ಆತ್ಮಪಕ್ಷಿ ರೆಕ್ಕೆಯೆತ್ತಿ
ಸಪ್ತ ಲೋಕಗಳನು ಸುತ್ತಿ
....
ಬ್ರಹ್ಮದೇಕತಾನದಲ್ಲಿ ನಿಂದು
....
ಕೋಟಿ ಸೂರ್ಯರ ಸಮ ಪ್ರಭೆಯೊ-
ಳದರ ಜ್ಯೋತಿ ಹೊಳೆದರೂ

ಆದು 'ಮರಳಿ ಮತ್ತೆ ನಮ್ಮ ಧರೆಗೆ, ಜಗದ ಕರೆಗೆ' ಓಗೊಡಬೇಕು. ಜಡವನ್ನು ಅತಿಮಾನಸವು (Super mind)ಪರಿವರ್ತಿಸಬೇಕೆಂಬ ದರ್ಶನ ಶ್ರೀ ಅರವಿಂದರದು. ಅಂತೆಯೆ ಕವಿಯು,

ಮರ್ತ್ಯದಲ್ಲಿ ನಿಂತು ಗೆಲ್ಲು :
ಮರ್ತ್ಯವೇ ಒರೆಗಲ್ಲು
ನೆಲವೇ ಆಧಾರಾ
ನೆಲವೇ ಆ-ಧಾರ !

ಎಂಬುದಾಗಿ ಕಾವ್ಯವನ್ನು ಕೊನೆಗೊಳಿಸಿದ್ದಾನೆ.

ಸಮುದ್ರದ ಮೇಲಿಂದ ಹಾಯ್ದು ಆಕಾಶಮಾರ್ಗದಿಂದ ಸಾಗಿ, ನೆಲದಲ್ಲಿ ನಿಂತು ಇಳೆಯನ್ನು ಕಂಡ ವಿನಾಯಕರು ಈ ಕಾವ್ಯದಲ್ಲಿ ಭೂಮಿ–ವ್ಯೋಮ–ಸಾಗರ–ಮಾನವರ ಬಗೆಗೆ ತಮ್ಮ ಕಲ್ಪನೆಯನ್ನು ಹರಿಯಿಸಿದ್ದಾರೆ, ಚಿಂತನೆಯನ್ನು ಮೂಡಿಸಿದ್ದಾರೆ. ಅವರು ವಿವಿಧ ಕವಿಗಳಿಂದ, ಅನುಭಾವಿಗಳಿಂದ ಪ್ರಚೋದನೆ ಪಡೆದಿದ್ದಾರೆ. ಬಣ್ಣನೆ, ಭಾವನೆ, ಯೋಚನೆ, ಕಥೆ, ಪ್ರತೀಕ, ಪ್ರತಿಮೆಗಳಿಂದ ಕೂಡಿದ ಈ ಚಿಕ್ಕ ಗಾತ್ರದ ಕಾವ್ಯ ಸಮನ್ವಯ ಸಾಧಕ ವಿನಾಯಕರ ಸಮನ್ವಯ ಗೀತದಂತಿದೆ.

ಸಿ. ಕೃಷ್ಣ

ಬಂಕಿಮಚಂದ್ರ

ಶ್ರೀ ಕೃಷ್ಣಶಾಸ್ತ್ರಿಗಳು ಕನ್ನಡನಾಡಿನ ಆಬಾಲವೃದ್ಧರಿಗೂ ಅವರ ಬಹುಮುಖವಾದ ಕೃತಿಗಳಿಂದ ಚಿರಪರಿಚಿತರಾಗಿದ್ದಾರೆ. ಅವರ ಒಂದೊದು ಕೃತಿಯೂ ಒಂದೊಂದು ಹೊಸ ಕ್ಷೇತ್ರವನ್ನು ಆವಿಷ್ಕಾರಮಾಡಿಕೊಟ್ಟು, ಮಾರ್ಗದರ್ಶಕವಾಗಿದೆ. 'ಬಂಕಿಮಚಂದ್ರ' ಅಂತಹ ಇನ್ನೊಂದು ಕೃತಿ. ನಮ್ಮ ಸಾಹಿತ್ಯದ ಮತ್ತು ನಮ್ಮ ಲೇಖಕರ ಪರಿಚಯ, ಗಾಢವಾದ ಅಭ್ಯಾಸ ನಮ್ಮ ಸಾರಸ್ವತ ಸಂಪತ್ತಿನ ಮತ್ತು ಸಂಸ್ಕೃತಿಗಳ ಅರಿವಿಗೆ ಅವಶ್ಯಕವಾದ ತಳಹದಿ. ಹಾಗೆಯೇ ಬೇರೆ ಸಾಹಿತ್ಯಗಳ ಮತ್ತು ಅವುಗಳ ಲೇಖಕರ ಪರಿಚಯ ಮತ್ತು ವಿಶೇಷಜ್ಞಾನ, ಸಾಹಿತ್ಯ ವಿಷಯಿಕವಾದ ನಮ್ಮ ಅಭಿಪ್ರಾಯಗಳು ವಿಶಾಲಗೊಳ್ಳುವಂತೆ ಮಾಡುವುದಲ್ಲದೆ, ಹೊಸಬಗೆಯ ಕೃತಿಗಳು ಮೂಡುವಂತೆ ಪ್ರೇರೇಪಿಸುತ್ತದೆ. ಇಂದು ನಮಗೆ ಭಾರತದ ಇತರ ಪ್ರದೇಶಗಳ ಸಾಹಿತ್ಯ ಸಂಸ್ಕೃತಿಗಳ ಅರಿವು ಸಾಮಾನ್ಯರೀತಿಯಲ್ಲಿ ತಿಳಿದಿದ್ದರೆ ಸಾಲದು. ಭಾರತೀಯ ಸಾಹಿತ್ಯಪ್ರಪಂಚದ ವೈವಿಧ್ಯ ಹಿರಿಮೆ ಸಾಧನೆಗಳಲ್ಲಿ ಅಭಿಮಾನ ಮತ್ತು ಹೆಮ್ಮೆ ಹಲವು ಕಾರಣಗಳಿಗಾಗಿ ಅತ್ಯವಶ್ಯಕವಾದ ಸಾಮಗ್ರಿಗಳಲ್ಲೊಂದು. ಅದರಂತೆಯೇ ಪ್ರಪಂಚದ ಪ್ರತಿಭಾವಂತ ಲೇಖಕರ ಮತ್ತು ಅವರ ಕೃತಿಗಳ ಪರಿಚಯ ಮತ್ತು ವಿಮರ್ಶೆಗಳೂ ಸ್ವಾಗತಾರ್ಹವಾಗಿವೆ. ಶ್ರೀ ಕೃಷ್ಣಶಾಸ್ತ್ರಿಗಳು ಈ ದಿಕ್ಕಿನಲ್ಲಿ ನಮಗಿರುವ ಅಗತ್ಯವನ್ನರಿತು, ನಮ್ಮ ವಿದ್ವಾಂಸರು ಮತ್ತು ಲೇಖಕರು ಯಾವ ರೀತಿಯಲ್ಲಿ ಇದನ್ನು ತುಂಬಿಕೊಡಬಹುದೆಂಬುದಕ್ಕೆ ದಾರಿ ತೋರಿಸಿದ್ದಾರೆ.

ಶ್ರೀ ಶಾಸ್ತ್ರಿಗಳು ಕನ್ನಡನಾಡಿನ ಹಿರಿಯ ವಿದ್ವಾಂಸರಲ್ಲೊಬ್ಬರು. ಅವರ ಶಿಷ್ಯ ಪರಂಪರೆ ಗಣನಾತೀತವಾಗಿ ಬೆಳೆದಿದೆ. ಇಂದಿನ ಹಲವು ಕವಿಗಳು ಲೇಖಕರು,

"ಇದಂ ಕವಿ ಭ್ಯೋ ಪೂರ್ವೇಭ್ಯೋ ನಮೋ ವಾಕಂ ಪ್ರಶಾಸ್ಮಹೇ" ಎಂದು ಹೇಳುವಾಗ, ಶ್ರೀ ಶಾಸ್ತ್ರಿಗಳು ಆ ಪೂರ್ವಕವಿಗಳ ಪಂಕ್ತಿಯಲ್ಲಿ ಮಾನ್ಯಸ್ಥಾನ ಪಡೆದವರು. ಕವಿ ಎಂಬ ಪದ ವಿಶಾಲವಾದ ಅರ್ಥದಲ್ಲಿ ಅವರಿಗೆ ಸಲ್ಲುವುದು. ಅವರಂತಹ ಮನೀಷಿಗಳೂ ದೂರದರ್ಶಿಗಳೂ ಅಪರೂಪ. ಕವಿಕುಲಕ್ಕಂತು ಗುರುಗಳೇ ಆಗಿದ್ದಾರೆ ಅವರು. ನಮ್ಮಲ್ಲಿ ಪ್ರಾಚೀನರು ಗದ್ಯಪದ್ಯವಿಭಾಗವನ್ನು ಹೇಳಿದ್ದರೂ, ಕಾವ್ಯವು ಗದ್ಯಪದ್ಯಾತ್ಮಕ

ವೆಂದು ನಿರ್ಣಯಿಸಿದ್ದರು. ಶ್ರೀ ಶಾಸ್ತ್ರಿಗಳ ಗದ್ಯದ ಕಾವ್ಯಸೌರಭವನ್ನು ಮನಗಾಣ ದಿರುವವರು ಯಾರು?

ಬಂಕಿಮಚಂದ್ರರ ಕೃತಿಗಳನ್ನು ಕುರಿತು ಶ್ರೀ ಶಾಸ್ತ್ರಿಗಳು ವಿಮರ್ಶಾಗ್ರಂಥ ಬರೆ ದಿರುವುದು ಒಂದು ಅಪೂರ್ವ ಸಂಯೋಗ. ಕವಿ ರವೀಂದ್ರರು ಬಂಕಿಮಚಂದ್ರರನ್ನು ಬಂಗಾಳಿ ಲೇಖಕರ ಗುರುವೆಂದು ಕರೆದಿದ್ದಾರೆ. ರಾಷ್ಟ್ರಕವಿ ಪುಟ್ಟಪ್ಪನವರೇ ಮೊದ ಲಾದವರು ಶ್ರೀ ಶಾಸ್ತ್ರಿಗಳಲ್ಲಿ ಗುರುಭಾವನೆಯಿಟ್ಟಿದ್ದಾರೆ. ಬಂಕಿಮಚಂದ್ರ ಕೃಷ್ಣಶಾಸ್ತ್ರಿ ಗಳಿಬ್ಬರಿಗೂ ಅನೇಕ ವಿಷಯಗಳಲ್ಲಿ ಸಾಮ್ಯವಿದೆ. ಇಬ್ಬರೂ ಪ್ರಾಚೀನ ಭಾರತೀಯ ಸಂಸ್ಕೃತಿಯ ಆರಾಧಕರು, ಆಚಾರಶೀಲರು, ಮಡಿವಂತರು, ಮಾನವಸ್ವಭಾವ ಅರಿತವರು, ದುಃಖಿಗಳಲ್ಲಿ ಆರ್ತರಲ್ಲಿ ಅನುಕಂಪವುಳ್ಳವರು. ಜೀವನದ ನಯನೀತಿಗಳಲ್ಲಿ ನಿಷ್ಕೃಷ್ಟ ವಾದ ಅಭಿಪ್ರಾಯವುಳ್ಳವರು. ತಪ್ಪೆಂದು ಕಂಡುಬಂದದ್ದನ್ನು ನಿರ್ದಾಕ್ಷಿಣ್ಯವಾಗಿ ಖಂಡಿಸಿದರೂ, ಜಾರಿಬಿದ್ದವರನ್ನು ದಯಾಪೂರ್ಣವಾಗಿ ನೋಡುವ ಮಾನವೀಯತೆ ಯುಳ್ಳವರು. ಹೀಗಾಗಿ ಬಂಕಿಮಚಂದ್ರರ ಕೃತಿಗಳ ಸೌಂದರ್ಯವನ್ನು ಪೂರ್ಣ ರೂಪದಲ್ಲಿ ತೋರಿಸಿಕೊಟ್ಟು, ಅಲ್ಪಸ್ವಲ್ಪವಾಗಿ ಬಂಕಿಮರನ್ನು ಪರಿಚಯಮಾಡಿ ಕೊಂಡಿದ್ದ ಕನ್ನಡಿಗರಿಗೆ ಬಹು ದೊಡ್ಡ ಉಪಕಾರವನ್ನು ಶ್ರೀ ಶಾಸ್ತ್ರಿಗಳು ಮಾಡಿ ಕೊಟ್ಟಿದ್ದಾರೆ.

ಇನ್ನೊಂದು ಸಾಹಿತ್ಯದ ಲೇಖಕರ ಕೃತಿಗಳನ್ನು ವಿಮರ್ಶೆಮಾಡಬೇಕಾದರೆ ವಿಮರ್ಶಕನು ವಿಶೇಷ ಸಿದ್ಧತೆಮಾಡಿಕೊಳ್ಳಬೇಕು. ಆ ಭಾಷೆಯನ್ನು ತಿಳಿದಿರಬೇಕು, ಏಕೆ, ಪಾಂಡಿತ್ಯವನ್ನೇ ಪಡೆದಿರಬೇಕು. ಆ ಜನರ ಮಧ್ಯೆ ಕೆಲವು ಕಾಲ ಇರಬೇಕು, ಇಲ್ಲದಿದ್ದರೆ ಆ ಸಾಹಿತ್ಯವನ್ನು ಓದಿ ಓದಿ ಆ ಜನಗಳ ಆತ್ಮವನ್ನೂ ಆ ಲೇಖಕನ ಆತ್ಮವನ್ನೂ ತನ್ನದಾಗಿಮಾಡಿಕೊಳ್ಳುವ ಅಸಾಧಾರಣ ಪ್ರತಿಭೆ ಪಡೆದಿರಬೇಕು. ಕೀಟ್ಸ್ (Keats) ಕವಿಯು ಗ್ರೀಕ್ ಜನಾಂಗದ ಸತ್ತ್ವವನ್ನೂ, ಷೇಕ್ಸ್‌ಪಿಯರಿನ ಮನೋಧರ್ಮವನ್ನೂ ಹೀಗೆ ಅರ್ಥಮಾಡಿಕೊಂಡಿದ್ದನೆನ್ನುತ್ತಾರೆ. ಶಾಸ್ತ್ರಿಗಳಿಗೂ ಬಂಕಿಮಚಂದ್ರರಿಗೂ ಇದೇ ಬಗೆಯ ಸಂಬಂಧವಿದೆಯೆನ್ನಿಸುತ್ತದೆ. ಭಾರತೀಯರೇ ಆದ ಬಂಗಾಳಿಗಳಲ್ಲಿ, ನಮ್ಮ ಪ್ರಾಚೀನ ಸಂಸ್ಕೃತಿಯಲ್ಲಿ ವಿಶೇಷ ಅಭಿಮಾನ ತಳೆದಿದ್ದ ಬಂಕಿಮಚಂದ್ರರ ಹೃದಯ ಮತ್ತು ಶ್ರೀ ಶಾಸ್ತ್ರಿಗಳ ಹೃದಯ ಒಂದೇ ಶಕ್ತಿಯು ಕೈಯಾಡಿಸುತ್ತಿದ್ದ ಎರಡು ವೀಣೆಗಳಂತಿವೆಯೆಂದು ತೋರುತ್ತದೆ. ಗ್ರಂಥಕರ್ತನ ಬಿನ್ನಹದಲ್ಲಿ ಹೇಳಿಕೊಂಡಿರುವಂತೆ ಶ್ರೀ ಶಾಸ್ತ್ರಿಗಳು ಕನ್ನಡ ಮಾಧ್ಯಮಿಕ ಶಾಲೆಯಲ್ಲಿ ಓದುತ್ತಿದ್ದಾಗಲೆ ಬಂಕಿಮರ 'ಆನಂದಮಠ' (ಶ್ರೀ ಬಿ. ವೆಂಕಟಾಚಾರ್ಯರ ಭಾಷಾಂತರ)ವು ಅವರ ಮನಸ್ಸನ್ನು ಸೂರೆಗೊಂಡಿತು. ಕಾಲೇಜಿನಲ್ಲಿ ಪಾಠ ಹೇಳುವಾಗ ಮೂಲಕೃತಿಗಳ ಮತ್ತು ಅವಕ್ಕೆ ಸಂಬಂಧಪಟ್ಟ ಗ್ರಂಥಗಳ ಅವಲೋಕನ ಸಾವಧಾನ ವಾಗಿ ನಡೆಯಿತು. ಹೀಗೆ ನಲವತ್ತು ವರ್ಷಗಳು ಕ್ಷೇತ್ರವನ್ನು ಸಿದ್ಧಪಡಿಸಿಕೊಂಡರು. ಪ್ರಾಧ್ಯಾಪಕ ವೃತ್ತಿಯಿಂದ ನಿವೃತ್ತರಾದಮೇಲೆ ಎಂಟು ವರ್ಷಗಳು ತದೇಕನಿಷ್ಠೆಯಿಂದ

ಅವಿಶ್ರಾಂತವಾಗಿ ಶ್ರಮಿಸಿ ಈ ಬೃಹದ್ಗ್ರಂಥವನ್ನು ಹೊರತಂದರು. "ಸೃಷ್ಟಿಸಾಹಿತ್ಯದಲ್ಲಿ ಬಂಕಿಮರು ಸಾಧಿಸಿರುವ ಔನ್ನತ್ಯವನ್ನು ಶ್ರೀ ಶಾಸ್ತ್ರಿಗಳು ತಮ್ಮ ವಿಮರ್ಶಕೃತಿಯಲ್ಲಿ ಹೊಯ್‌ಕಯ್ ಆಗುವಂತೆ ಸಾಧಿಸಿದ್ದಾರೆ" ಎಂದು ನಂಬಲು ಸಾಕಷ್ಟು ಕಾರಣಗಳಿವೆ. ಕನ್ನಡದಲ್ಲಿ ಇದೊಂದು ಹೊಸಬಗೆಯ ಕೃತಿ.

ಇಂತಹ ಕೃತಿಯು ಜನಪ್ರಿಯವಾಗುವುದೆ ? ಆಗದಿರಲು ಕಾರಣಗಳೇನು ? ಕೃತಿಯ ಪರಿಚಯವಿಲ್ಲದವರಿಗೆ ವಿಮರ್ಶೆ ಹೇಗೆ ಹಿಡಿಸೀತು ? ಲೇಖಕನ ಹಿನ್ನೆಲೆ ತಿಳಿಯದಿದ್ದರೆ ಕೃತಿಗಳ ಹಿರಿಮೆಯಾದರೂ ಹೇಗೆ ಅರ್ಥವಾದೀತು ? ಶ್ರೀ ಶಾಸ್ತ್ರಿಗಳು ಈ ನ್ಯೂನತೆಗಳನ್ನು ಬಹಳ ಚೆನ್ನಾಗಿ ಹೋಗಲಾಡಿಸಿದ್ದಾರೆ.

ಮೊದಲಿನಲ್ಲಿರುವ ರವೀಂದ್ರರ ಕವಿಕಾಣಿಕೆಯು ಬಂಕಿಮರಲ್ಲಿ ಓದುಗರ (ಬಂಕಿಮರ ಸಾಹಿತ್ಯಪರಿಚಯವಿಲ್ಲದಿದ್ದರೂ) ಕುತೂಹಲವನ್ನು ಕೆರಳಿಸುತ್ತದೆ. ಬಂಗಾಳಿ ಸಾಹಿತ್ಯದ ಸಂಕ್ಷಿಪ್ತ ಚರಿತ್ರೆ—ಅದೂ ಬಂಕಿಮರ ಇಂಗ್ಲಿಷ್ ಲೇಖನದ ಅನುವಾದ—ಅದಾದಮೇಲೆ ಬರುವ ಬಂಕಿಮಚಂದ್ರನ ಸಂಕ್ಷಿಪ್ತ ಚರಿತ್ರೆ, ಅವಶ್ಯಕವಾದ ಹಿನ್ನೆಲೆಯನ್ನೊದಗಿಸುತ್ತವೆ. ಹಾಗೆಯೇ ಪ್ರತಿ ಕಾದಂಬರಿಯ ಕಥಾಸಂಗ್ರಹವನ್ನೂ ಒದಗಿಸಿಕೊಟ್ಟಿರುವುದು ಈ ದಿಶೆಯಲ್ಲಿ ಅತ್ಯಂತ ಉಪಯುಕ್ತವಾಗಿದೆ.

ಕಥಾಸಂಗ್ರಹಗಳು ನೀರಸವಿರಬಹುದೆಂದು ಶ್ರೀ ಶಾಸ್ತ್ರಿಗಳು ಶಂಕಿಸಿರುವುದು ಸ್ತುತ್ಯರ್ಹವಾದ ಅವರ ವಿನಯವನ್ನು ತೋರಿಸುತ್ತದೆ. ಬಂಗಾಳಿ ಮೂಲಗ್ರಂಥವನ್ನು ಓದಿದವರೂ ಕಥಾಸಂಗ್ರಹಗಳನ್ನು ಓದಲು ಮೊದಲುಮಾಡಿದರೆ ಅವು ಮುಗಿಯುವ ವರೆಗೂ ಪುಸ್ತಕವನ್ನು ಕೆಳಗಿಡಲು ಅವರಿಗೆ ಮನಸ್ಸು ಬಾರದು. ಎಂದೂ ಮೂಲಗಳನ್ನು ಓದಿಲ್ಲದವರಿಗಂತು ಅವುಗಳ ಆವಶ್ಯಕತೆ ಮತ್ತು ಆಕರ್ಷಣೆ ಇನ್ನೂ ಹೆಚ್ಚು. ಶ್ರೀ ಕೃಷ್ಣಶಾಸ್ತ್ರಿಗಳು ಬಂಕಿಮರ ಕೃತಿಗಳ ಇನ್ನೊಂದು ಭಾಷಾಂತರವನ್ನು ಹೊರತರ ಬೇಕೆಂಬ ಆಸೆ ಇಟ್ಟುಕೊಂಡಿದ್ದರೆಂದೂ, ಕಾರಣಾಂತರಗಳಿಂದ ಅದನ್ನು ಬಿಡಬೇಕಾಯಿತೆಂದೂ ತಿಳಿಸಿದ್ದಾರೆ. ಆ ಭಾಷಾಂತರ ಒಂದು ಕೊರತೆಯನ್ನು ಬಹಳ ಯಶಸ್ವಿಯಾಗಿ ನಿವಾರಿಸುತ್ತಿತ್ತು. ಅದು ಸಾಧ್ಯವಾಗದಿರುವುದು ಕನ್ನಡಿಗರ ದುರದೃಷ್ಟ. ಈಗ ಕಥಾ ಸಂಗ್ರಹಗಳಾದರೂ ಇವೆಯಲ್ಲ ಎಂದು ಸಮಾಧಾನ ಪಟ್ಟುಕೊಳ್ಳಬೇಕು.

ಬಂಕಿಮರು ಸೃಷ್ಟಿಸಿರುವ ಸಾಹಿತ್ಯದಲ್ಲಿ ದೊಡ್ಡ ಕೃತಿಗಳೂ ಸಣ್ಣ ಕೃತಿಗಳೂ ಇವೆ. ಇದು ಗಾತ್ರವನ್ನು ಕುರಿತು ಮಾಡಿದ ವಿಭಾಗ. ವಸ್ತುದೃಷ್ಟಿಯಿಂದ ವಿಭಾಗಿಸಿದರೆ, "ಕಾದಂಬರಿಗಳು ಮತ್ತು ವಿಡಂಬನೆಗಳು" ಎಂದೂ "ಧಾರ್ಮಿಕ ಗ್ರಂಥಗಳು ಮತ್ತು ಲೇಖನಗಳು" ಎಂದೂ ಎರಡು ಗುಂಪಾಗುವುವು. ಕಾದಂಬರಿಗಳನ್ನು ವಿಮರ್ಶೆಗೆ ಮೊದಲು ತೆಗೆದುಕೊಂಡಿರುವುದರಲ್ಲಿ ಔಚಿತ್ಯವಿದೆ. ಕೇವಲ ಜನಪ್ರಿಯತೆಯೊಂದೇ ಅದಕ್ಕೆ ಕಾರಣವಲ್ಲ ; ಸಾಹಿತ್ಯಗುಣಗಳು ಕಾದಂಬರಿಗಳಲ್ಲಿ ಪ್ರಧಾನವಾಗಿವೆ ; ಧರ್ಮಗ್ರಂಥಗಳಲ್ಲಿ ಅವುಗಳ ಸ್ಥಾನ ಗೌಣ. ಸಾಹಿತ್ಯಕ್ಕಿರುವ ಒಂದು ಬಗೆಯ ಕಾಲದೇಶಗಳನ್ನು ಮೀರಿದ ಹಿರಿಮೆ ಧರ್ಮಗ್ರಂಥಗಳಿಗಿಲ್ಲ.

ಸಾಹಿತ್ಯವು ಜೀವನದ ಎಲ್ಲ ಕ್ಷೇತ್ರಗಳನ್ನೂ ತನ್ನದಾಗಿ ಮಾಡಿಕೊಳ್ಳುವಂತೆ ಧರ್ಮ (ಅದರಲ್ಲೂ ಯಾವುದೋ ಒಂದು ಮತಧರ್ಮ) ಮಾಡಲಾರದು. ಕಾದಂಬರಿಗಳ ವಿಮರ್ಶೆಗಾಗಿ ಗ್ರಂಥದ ಅರ್ಧಕ್ಕೂ ಹೆಚ್ಚು ಭಾಗ (೫೦೦ ಪುಟಗಳಲ್ಲಿ ಸುಮಾರು ೩೦೦ ಪುಟಗಳು) ಮೀಸಲಾಗಿರುವುದು ಅರ್ಥಗರ್ಭಿತವಾಗಿದೆ. ಉಪನ್ಯಾಸ (ಉತ್ತರದಲ್ಲಿ ಕಾದಂಬರಿಗೆ ಪರ್ಯಾಯ ನಾಮ) ಕಾರರಾಗಿಯೇ ಬಂಕಿಮರು ಚಿರಸ್ಮರಣೀಯರಾಗಿ ಉಳಿಯುವರು. ಸಾಹಿತ್ಯದೃಷ್ಟಿಯಿಂದ ಕಾದಂಬರಿಗಳಿಗೆ ಅಗ್ರಸ್ಥಾನ ಸಲ್ಲುವುದು ನ್ಯಾಯ.

ಬಂಕಿಮರು ಬಂಗಾಳಿ ಸಾಹಿತ್ಯ ಚರಿತ್ರೆಯ ಒಂದು ಘಟ್ಟದ ಪ್ರಮುಖ ಲೇಖಕರು. ಅವರ ಪ್ರಭಾವ ಅವರಿಗಿಂತ ಈಚಿನ ಲೇಖಕರ ಮೇಲೆ ಹೇಗೆ ಕಾಣಬರುತ್ತದೆಯೋ ಹಾಗೆ ಅವರಲ್ಲಿಯೂ ಅವರಿಗೆ ಮೊದಲಿದ್ದ ಸಾಹಿತ್ಯದ ಪ್ರಭಾವ ಕಾಣಿಸಿಕೊಂಡಿದೆ. ಎಷ್ಟರಮಟ್ಟಿಗೆ ಯೆಂಬುದಕ್ಕೆ ಉತ್ತರ ಹೆಚ್ಚು ಕಡಿಮೆಯಾಗಬಹುದೆ ಹೊರತು ಯಾವ ಲೇಖಕನೂ ಈ ನಿಯಮಕ್ಕೆ ಹೊರತಾದವನಲ್ಲ. ಅವರು ರಚಿಸಿರುವ ಕಾದಂಬರಿಗಳಲ್ಲಿಯೇ ಇದಕ್ಕೆ ಸಾಕ್ಷಿಯಿದೆ. ಮೊದಲಿನಿಂದಲೂ ಬಂಗಾಳಿ ಉಪನ್ಯಾಸ ಸಾಹಿತ್ಯದಲ್ಲಿ ಎರಡು ಪ್ರವಾಹಗಳಿವೆ: ೧ ಐತಿಹಾಸಿಕ ೨ ಸಾಮಾಜಿಕ, ಸಾಂಸಾರಿಕ ಅಥವಾ ಕೌಟುಂಬಿಕ. ಇದು ಬಾಣನು ಉಲ್ಲೇಖಿಸಿರುವ ಆಖ್ಯಾಯಿಕಾ ಮತ್ತು ಕಥೆ ಸಂತತಿಗಳೊ ಏನೋ! ಅರಿತೊ ಅರಿಯದೆಯೊ ಈ ಸಂಪ್ರದಾಯವನ್ನೇ ಅನುಸರಿಸಿ ಬಂಕಿಮರೂ ತಮ್ಮ ಕಾದಂಬರಿಗಳನ್ನು ಬರೆದಂತೆ ಕಾಣುತ್ತದೆ. 'ವಿಷವೃಕ್ಷ', 'ಕೃಷ್ಣಕಾಂತನ ಉಯಿಲು', 'ರಜನೀ', 'ಇಂದಿರಾ', 'ಯುಗುಳಾಂಗುರೀಯ', ಮತ್ತು 'ರಾಧಾರಾಣಿ' ಇವು ಆರು ಕೌಟುಂಬಿಕ ಕಾದಂಬರಿಗಳು; 'ದುರ್ಗೇಶನಂದಿನೀ', 'ಕಪಾಲ ಕುಂಡಲಾ', 'ಮೃಣಾಳಿನೀ', 'ಚಂದ್ರಶೇಖರ', 'ರಾಜಸಿಂಹ', 'ಆನಂದ ಮಠ', 'ದೇವೀಚೌಧೂರಾಣೀ', ಮತ್ತು 'ಸೀತಾರಾಮ'—ಇವು ಎಂಟು ಐತಿಹಾಸಿಕ ಕಾದಂಬರಿಗಳು. ಜಾತಿಗಳಾಗಿ ವಿಂಗಡಿಸುವುದು ಎಲ್ಲಿಯೂ ಸಮಸ್ಯಾತ್ಮಕವಾದುದೆ. ತಮ್ಮ ಐತಿಹಾಸಿಕ ಕಾದಂಬರಿಗಳು ಬಂಕಿಮಚಂದ್ರರಿಗೇ ಅಷ್ಟು ಸಮರ್ಪಕವಾಗಿ ಕಂಡುಬಂದಂತೆ ತೋರುವುದಿಲ್ಲ ಸ್ಕಾಟ್ (Scot), ಲಿಟ್ಟನ್ (Lytton) ಇವರ ಐತಿಹಾಸಿಕ ಕಾದಂಬರಿಗಳಿಂದ ಪ್ರಭಾವಿತರಾಗಿದ್ದ ಬಂಕಿಮರು ತಮ್ಮ ಕೃತಿಗಳು ಆ ಉನ್ನತ ಮಟ್ಟದಲ್ಲಿಲ್ಲವೆಂದು ಭಾವಿಸಿದ್ದರು. ಈ ಕಾದಂಬರಿಗಳು ಉತ್ತಮ ಐತಿಹಾಸಿಕ ಕಾದಂಬರಿಗಳು ಹೌದೋ ಅಲ್ಲವೋ ಆ ಮಾತು ಬೇರೆ; ಅವು ಉತ್ತಮ ಕಾದಂಬರಿಗಳಾಗಿರುವುವೆಂಬುದು ಮಾತ್ರ ನಿರ್ವಿವಾದವಾದ ಅಂಶ. ಶ್ರೀ ಶಾಸ್ತ್ರಿಗಳು ಅಲ್ಲಲ್ಲೆ ಸೂಚಿಸಿರುವಂತೆ, ಕೌಟುಂಬಿಕ ಕಾದಂಬರಿಯಾಗಲಿ, ಐತಿಹಾಸಿಕ ಕಾದಂಬರಿಯಾಗಲಿ ಬಂಕಿಮರ ಮನೋಧರ್ಮ ಗಂಡು ಹೆಣ್ಣಿನ (ಗಂಡಹೆಂಡಿರ) ಸಮಸ್ಯೆಯನ್ನೇ ಪ್ರಧಾನವಾಗಿ ಚಿತ್ರಿಸುವುದಾಗಿದೆ. ಇತಿಹಾಸವನ್ನು ಕೇವಲ ಹಿನ್ನೆಲೆಯಾಗಿಟ್ಟುಕೊಂಡು ವ್ಯಕ್ತಿಗಳ ಜೀವನವನ್ನೂ ಪ್ರಮುಖವಾದದ್ದನ್ನಾಗಿ

ಚಿತ್ರಿಸಿದರೆ, ಅದು ಉತ್ತಮ ಮಟ್ಟದ ಐತಿಹಾಸಿಕ ಕಾದಂಬರಿಯಾಗುವುದು ಹೇಗೆ ಸಾಧ್ಯ ?

'ಕಪಾಲ ಕುಂಡಲೆ'ಯನ್ನು ಐತಿಹಾಸಿಕ ಕಾದಂಬರಿಗಳ ನಡುವೆ ವಿಮರ್ಶಿಸಿದ್ದರೂ, ಅದನ್ನು "ಐತಿಹಾಸಿಕ ಕಾದಂಬರಿಯೆಂದು ಕರೆಯಬಹುದೊ ಇಲ್ಲವೋ" ಎಂದು ಸಂಶಯ ಪಟ್ಟಿದ್ದಾರೆ (ಪು ೧೪೦). "'ರಾಜಸಿಂಹ' (ನಾಲ್ಕನೆಯ ಮುದ್ರಣ)ವೇ ಅವನು ಬರೆದ ಮೊಟ್ಟಮೊದಲನೆಯ ಐತಿಹಾಸಿಕ ಕಾದಂಬರಿ, ಅದೇ ಕೊನೆಯದೂ ಆಯಿತು ಎಂದಿದ್ದಾರೆ (ಪು ೨೨೬). ಇದೇ ಸಂಬಂಧದಲ್ಲಿ ಯದುನಾಥ ಸರ್ಕಾರ್ ಅವರು 'ಆನಂದ ಮಠದ' ಭೂಮಿಕೆಯಲ್ಲಿ ಹೇಳಿರುವ ಮಾತುಗಳು ಉದಾಹೃತವಾಗಿವೆ. "ಹಿನ್ನೆಲೆಯು ನಮಗೆ ಗೊತ್ತಿರುವ ಚರಿತ್ರೆಯದಾಗಿದ್ದು ಪಾತ್ರಗಳು ಚರಿತ್ರೆಯಲ್ಲಿ ಇದ್ದ ವ್ಯಕ್ತಿಗಳಲ್ಲದಿದ್ದರೂ ಅದನ್ನು ಐತಿಹಾಸಿಕ ಕಾದಂಬರಿಯೆನ್ನಬೇಕು. ಈ ದೃಷ್ಟಿಯಿಂದ 'ದುರ್ಗೇಶ ನಂದಿನಿ' ಮೊದಲು ಮಾಡಿಕೊಂಡು 'ಸೀತಾರಾಮ'ದವರೆಗೆ ರಚಿತವಾಗಿರುವ ಏಳು (ಎಂಟು ?) ಕಾದಂಬರಿಗಳೂ ಐತಿಹಾಸಿಕ ಕಾದಂಬರಿಗೆ ತಕ್ಕವೇ" (ಪು ೧೪೧ ಅಡಿ ಟಿಪ್ಪಣಿ). ಇದು ಐತಿಹಾಸಿಕ ಕಾದಂಬರಿಯೆಂದು ಪರಿಗಣಿಸುವುದರಲ್ಲಿ ನೋಡಬೇಕಾದ ಒಂದು ಅಂಶ. ಆನಂದ ಮಠದ ವಿಮರ್ಶೆಯಲ್ಲಿ, "ಆದರೆ (ಆನಂದ ಮಠವು) ಐತಿಹಾಸಿಕ ಕಾದಂಬರಿಯಲ್ಲವೆಂಬುದು ಅವನ (ಬಂಕಿಮಚಂದ್ರನ) ಅಭಿಪ್ರಾಯ" ಎಂದು ತಿಳಿಸಿ, ಅದಕ್ಕೂ ಯದುನಾಥಸರ್ಕಾರರು 'ಭೂಮಿಕೆ'ಯಲ್ಲಿ ವ್ಯಕ್ತಪಡಿಸಿರುವ ಅಭಿಪ್ರಾಯವನ್ನು ಅಡಿಟಿಪ್ಪಣಿಯಲ್ಲಿ ಉಲ್ಲೇಖಿಸಿದ್ದಾರೆ (ಪು ೨೬೬). "ಇದನ್ನು ಬೇಕಾದರೆ ಒಪ್ಪಿಕೊಳ್ಳೋಣ. ಆದರೆ, 'ಆನಂದ ಮಠ', 'ದೇವೀ ಚೌಧೂರಾಣೀ', 'ಸೀತಾರಾಮ'ಗಳಲ್ಲಿ ಇರುವ ಅಮೃತರಸವನ್ನು ಈ ಮೂರು ಗ್ರಂಥಗಳಿಗಿಂತಲೂ ನೂರರಷ್ಟು ಹೆಚ್ಚು 'ಸತ್ಯ'ವಿರುವ ಯಾವ ಐತಿಹಾಸಿಕ ಕಾದಂಬರಿಯಿಂದಲೂ ಪಡೆಯಲಾಗುವುದಿಲ್ಲ." ಸಾಹಿತ್ಯ ಭೇದಗಳಿಗೆಲ್ಲ ಇರುವ ಸಾಮಾನ್ಯ ಅಂಶ ರಸ. ಹಾಗೆ ಹೇಳಿದುದರಿಂದ ಇವು ಉತ್ತಮ ಮಟ್ಟದ ಐತಿಹಾಸಿಕ ಕಾದಂಬರಿಗಳೆಂದು ನಿಶ್ಚಯಿಸಿದಂತಾಗಲಿಲ್ಲ. ವಸ್ತು, ಪಾತ್ರ, ಕಾದಂಬರಿಕಾರನ ದೃಷ್ಟಿ ಇವೆಲ್ಲವನ್ನೂ ಗಣನೆಗೆ ತೆಗೆದುಕೊಳ್ಳಬೇಕು. 'ರಜನಿ'ಗೆ ಸ್ಫೂರ್ತಿಕೊಟ್ಟ ಕಾದಂಬರಿ 'ಲಾಸ್ಟ್‌ಡೇಸ್ ಆಫ್ ಪಾಂಪೇ' (Last days of Pompeii) ಐತಿಹಾಸಿಕ. ಆದರೆ 'ರಜನಿ'ಯಲ್ಲಿ ಆ ಹಿನ್ನೆಲೆಯಿಲ್ಲದಿರುವುದರಿಂದ, ಅದು ಕೌಟುಂಬಿಕವೋ ಮನೋವಿಶ್ಲೇಷಣಾತ್ಮಕವೋ ಆದ ಕಾದಂಬರಿಯಾಯಿತು. ಥ್ಯಾಕರೆ (Thackeray)ಯ ಹೆನ್ರಿ ಎಸ್ಮಾಂಡ್ (Henry Esmond) ಅನ್ನು ಒಂದು ಶ್ರೇಷ್ಠ ಐತಿಹಾಸಿಕ ಕಾದಂಬರಿಯೆನ್ನುತ್ತಾರೆ. ಅದರಲ್ಲಿ ಐತಿಹಾಸಿಕ ವ್ಯಕ್ತಿಗಳು ಬರುವುದು ಕಡಿಮೆ, ಬಂದಿರುವ ಒಂದೆರಡೂ ಪ್ರಧಾನ ಪಾತ್ರಗಳಲ್ಲ. ಆದರೆ ಅದರಲ್ಲಿ ಬಳಸಿರುವ ಭಾಷೆ(Language) ಮತ್ತು ವ್ಯವಹಾರ (Manners) ಹದಿನೆಂಟನೆಯ ಶತಮಾನದ ಯುಗಧರ್ಮ (Spirit of the age) ವನ್ನು ಯಥಾವತ್ತಾಗಿ ಪ್ರತಿಬಿಂಬಿಸುತ್ತವೆ. ಈ ಕಾರಣದಿಂದ

ಅದು ಉತ್ತಮ ಐತಿಹಾಸಿಕ ಕಾದಂಬರಿಯಾಗಿದೆ. ‘ರಾಜಸಿಂಹ’ದಲ್ಲಿ ವಸ್ತು, ಪಾತ್ರಗಳು, ಸಾಮಾಜಿಕ ಪರಿಸ್ಥಿತಿ ಇತಿಹಾಸಕ್ಕೆ ಪೂರ್ಣವಾಗಿ ಹೊಂದಿಕೊಂಡು ಕಾದಂಬರೀಕಾರನ ದೃಷ್ಟಿಯೂ ಈ ಚೌಕಟ್ಟನ್ನು ಮೀರಿ ಯಾವುದೋ ಬೇರೆ ಉದ್ದೇಶ ಪ್ರತಿಪಾದನೆಗಾಗಿ ಕಾದಂಬರಿಯನ್ನು ಸೃಷ್ಟಿಸಿಲ್ಲದಂತಿರುವುದರಿಂದ ಇದೂ ಉತ್ತಮ ಐತಿಹಾಸಿಕ ಕಾದಂಬರಿಯಾಗಿದೆ. ಉಳಿದ ಕಾದಂಬರಿಗಳಲ್ಲಿ ಹಿನ್ನೆಲೆ ಐತಿಹಾಸಿಕವಾಗಿ, ಅಥವಾ ಕೆಲವು ಘಟನೆಗಳು ಮತ್ತು ಪಾತ್ರಗಳು ಐತಿಹಾಸಿಕವಾಗಿದ್ದು, ಸ್ವಲ್ಪಮಟ್ಟಿಗೆ ಆ ಕಾಲಸ್ಥಿತಿಯನ್ನು ನಿರೂಪಿಸಿರುವುದರಿಂದ ಅವುಗಳನ್ನೂ ಐತಿಹಾಸಿಕವೆಂದು ಕರೆಯುವುದರಲ್ಲಿ ಯಾವ ಅಡ್ಡಿಯೂ ಕಾಣುವುದಿಲ್ಲ. ಹಳದಿ ಕೆಂಪು ಬಣ್ಣಗಳನ್ನು ಮಿಶ್ರ ಮಾಡಿದಾಗ ಕೆಂಪು ಹೆಚ್ಚಾದರೆ ಕೆಂಪು, ಹಳದಿ ಹೆಚ್ಚಾದರೆ ಹಳದಿ. ಆದರೆ ಅಚ್ಚ ಹಳದಿಯೂ ಅಲ್ಲ., ಅಚ್ಚ ಕೆಂಪೂ ಅಲ್ಲ. ಅಂತು ಬಂಕಿಮರ ಐತಿಹಾಸಿಕ ಕಾದಂಬರಿಗಳ ವಿಮರ್ಶೆಯಲ್ಲಿ ಇದೊಂದು ದೊಡ್ಡ ಸಮಸ್ಯೆ. ಶ್ರೀ ಶಾಸ್ತ್ರಿಗಳು ಅಲ್ಲಲ್ಲೆ ಇದನ್ನು ವಿವೇಚಿಸಿದ್ದಾರೆ.

ಪ್ರತಿ ಕಾದಂಬರಿಗೂ ಪ್ರತ್ಯೇಕ ಅಧ್ಯಾಯವಿದೆ. ಪ್ರತಿ ಅಧ್ಯಾಯದಲ್ಲೂ ಪೀಠಿಕೆ, ಕಥಾಸಾರಾಂಶ ಮತ್ತು ವಿಮರ್ಶೆ ಎಂಬ ಮೂರುಭಾಗಗಳಿವೆ. ಪೀಠಿಕೆಯಲ್ಲಿ ಮತ್ತು ವಿಮರ್ಶೆಯಲ್ಲಿ ಶ್ರೀ ಶಾಸ್ತ್ರಿಗಳ ಪ್ರತಿಭೆ ಪೂರ್ಣವಾಗಿ ಎದ್ದು ಕಾಣುತ್ತದೆ. ಅಲ್ಲಿ ಕೇವಲ ಪ್ರಕೃತ ಕೃತಿಗಳಿಗೇ ಸಂಬಂಧಿಸಿದ ಅಂಶಗಳೇ ಅಲ್ಲ, ವಿಶಾಲ ಸಾಹಿತ್ಯ ಪ್ರಪಂಚಕ್ಕೆ, ಇನ್ನೂ ವಿಶಾಲವಾದ ಜೀವನರಂಗಕ್ಕೆ ಸಂಬಂಧಪಟ್ಟ ವಿಷಯಗಳೂ ಇವೆ. ಕೆಲವು ಕಡೆ ಒಂದೆರಡು ವಾಕ್ಯಗಳಲ್ಲೆ ಈ ವಿಮರ್ಶೆ ಮುಗಿಯುತ್ತದೆ; ಹಲವೆಡೆಗಳಲ್ಲಿ ದೀರ್ಘವಿವೇಚನೆಯಿರುತ್ತದೆ. ‘ವಿಷವೃಕ್ಷ’ವನ್ನು ಕುರಿತ ೫ನೆಯ ಅಧ್ಯಾಯದ ಪೀಠಿಕೆಯಲ್ಲಿ (ಪು. ೪೭) ಸಣ್ಣ ಕಥೆ ಕಾದಂಬರಿಗಳನ್ನು ಕುರಿತ ವಿವೇಚನೆಯಿದೆ; ಮತ್ತು ಬಂಗಾಳಿಯಲ್ಲಿ ಸಣ್ಣ ಕಥೆಯ ಆವಿರ್ಭಾವವೂ ಸೂಕ್ಷ್ಮವಾಗಿ ಸೂಚಿತವಾಗಿದೆ. ಐತಿಹಾಸಿಕ ಕಾದಂಬರಿಯನ್ನು ಕುರಿತ ವಿವೇಚನೆಯಂತೂ ಎಲ್ಲ ಐತಿಹಾಸಿಕ ಕಾದಂಬರಿಗಳ ಪೀಠಿಕೆ ಮತ್ತು ವಿಮರ್ಶೆಗಳಲ್ಲೂ ಬರುತ್ತದೆ. ಪಾತ್ರಗಳ ಹೆಸರುಗಳು ಅನ್ವರ್ಥವಾಗಿರುವುವೆಂದು ವಿವರಿಸಿರುವ ಭಾಗಗಳು ಸಮಂಜಸವೂ ಮನೋಜ್ಞವೂ ಆಗಿವೆ. ‘ವಿಷವೃಕ್ಷ’ದ ಪಾತ್ರಗಳನ್ನೂ (ಪು. ೬೬), ‘ಆನಂದ ಮಠ’ದ ಪಾತ್ರಗಳನ್ನೂ (ಪು. ೨೬೬–೨೬೮), ‘ದೇವೀ ಚೌಧೂರಾಣಿ’ಯ ಪಾತ್ರಗಳನ್ನೂ (ಪು. ೨೮೭) ಹೀಗೆ ವಿವರಿಸಿದ್ದಾರೆ.

ಜೀವನದಲ್ಲಿ ಎಂದೂ ಸಮಸ್ಯೆಯಾಗಿರುವ, ಮುಂದೆಯೂ ಸಮಸ್ಯೆಯಾಗಿಯೇ ಉಳಿಯುವ ಅನೇಕ ವಿಷಯಗಳೂ ಬರುತ್ತವೆ. ಪ್ರೇಮ, ಕಾಮ, ಸುಖ, ಭೋಗ, ವಿಧಿ, ದೇವರು, ಕರ್ಮಜ್ಞಾನ, ಭಕ್ತಿ, ಸುಖ ದುಃಖ, ಪ್ರೇಯಸ್ಸು, ಶ್ರೇಯಸ್ಸುಗಳ ಕಾರಣ—ಇವೇ ಮೊದಲಾದ ದೊಡ್ಡ ದೊಡ್ಡ ಸಮಸ್ಯೆಗಳನ್ನು ಮತ್ತೆ ಮತ್ತೆ ತಿರುಗಿಸಿ ತಿರುಗಿಸಿ ನೋಡಿ ಪರೀಕ್ಷಿಸಿದ್ದಾರೆ. ಯಾರುತಾನೆ ಈ ಪ್ರಶ್ನೆಗಳಿಗೆ

ಸಮಾಧಾನಕರವಾದ ಉತ್ತರಗಳನ್ನು ಕೊಡಬಲ್ಲರು? ಒಂದು ಕಾಲಕ್ಕೆ ಒಂದು ಸನ್ನಿವೇಶಕ್ಕೆ ಸರಿಯಾದ ಉತ್ತರ ಸಿಗಬಹುದೇನೊ! ಇವಕ್ಕೆ ಉತ್ತರವಲ್ಲ ಬೇಕಾದುದ್ದು. ಬಾಳು ಎಷ್ಟು ವೈವಿಧ್ಯಪೂರ್ಣವಾಗಿದೆ, ಎಷ್ಟು ಚಿರನೂತನ ವಾಗಿದೆ, ಎಷ್ಟು ಗಂಭೀರವಾಗಿದೆ, ಎಷ್ಟು ಮೋಹಕವಾಗಿದೆ, ಎಷ್ಟು ದುರಂತದಿಂದ ಕೂಡಿದೆ, ಎಷ್ಟು ಆಶಾಪೂರ್ಣವಾಗಿದೆಯೆಂಬ ಅನಂತ ಜ್ಞಾನ. ಶಾಸ್ತ್ರಿಗಳು ಕಾವ್ಯ ಸರೋವರಕ್ಕೂ ಜೀವನ ಮಹಾಸಾಗರಕ್ಕೂ ಹೆದ್ದಾರಿಯನ್ನು ಕಲ್ಪಿಸಿ, ಸಮಯೋಚಿತ ವಾಗಿ ಸಾಗರದಿಂದ ಸರೋವರಕ್ಕೂ, ಸರೋವರದಿಂದ ಸಾಗರಕ್ಕೂ ತಮ್ಮೊಡನೆ ಸಹೃದಯರನ್ನು ಕರೆದೊಯ್ದು ಅವುಗಳ ಪರಸ್ಪರ ಸಂಬಂಧದ ಮೇಲೆ ಜೀವನದ ಅಗಾಧ ಗಭೀರತೆಯನ್ನೂ ಕಾವ್ಯದ ಸಾರ್ಥಕತೆಯನ್ನೂ ವಿಶದಗೊಳಿಸುತ್ತಾ ಹೋಗುತ್ತಾರೆ.

ಬಂಕಿಮರ ಮೊದಲನೆಯ ಕೃತಿ 'ರಾಜಮೋಹನನ ಹೆಂಡತಿ' ('Raj Mohan's Wife'). ಅದನ್ನು ಅವನು ಇಂಗ್ಲಿಷಿನಲ್ಲಿ ಬರೆದನು. 'ಇಂಗ್ಲಿಷ್ ಓದಿದವರಿಗೆ ಇಂಗ್ಲಿಷಿನಲ್ಲಿ ಬರೆಯುವುದು ಸ್ವಾಭಾವಿಕ. ಇದನ್ನು ಬರೆದಾಗ ಬಂಕಿಮನ ವಯಸ್ಸು ಇನ್ನೂ ಇಪ್ಪತ್ತೈದು ವರ್ಷ' ಎಂದು ಶಾಸ್ತ್ರಿಗಳು ತಿಳಿಸಿದ್ದಾರೆ. ಡಾ. ಹೇಮೇಂದ್ರನಾಥರು ತಮ್ಮ 'ಬಂಕಿಮಚಂದ್ರ' ಗ್ರಂಥದಲ್ಲಿ, ಬಂಕಿಮರು ತಮ್ಮ ಹದಿನೆಂಟನೆಯ ವಯಸ್ಸಿ ನಲ್ಲಿಯೇ ಒಂದು ಸಣ್ಣ ಕೃತಿಯನ್ನು ರಚಿಸಿದ್ದರೆಂದೂ ತಿಳಿಸುತ್ತಾರೆ. ಅವರು ಕಾಲೇಜಿನಲ್ಲಿ ಓದುತ್ತಿದ್ದಾಗಲೇ ಒಂದು ಬಂಗಾಳಿ ಉಪನ್ಯಾಸವನ್ನು (ಕಾದಂಬರಿಯನ್ನು) ಬರೆದಿದ್ದ ರೆಂದು ಶ್ರೀ ಗಿರಿಜಾ ಪ್ರಸನ್ನರಾಯ್ ಚೌಧುರಿಯವರ 'ಬಂಕಿಮಚಂದ್ರ, ಆಧುನಿಕ ಸಾಹಿತ್ಯ'ದಿಂದ ತಿಳಿದುಬರುತ್ತದೆ. ಆದರೆ ಆ ಕೃತಿಯಾಗಲಿ ಕಾದಂಬರಿಯಾಗಲಿ ಉಪಲಬ್ಧವಿಲ್ಲ. ಡಾ. ಸುಕುಮಾರ ಸೇನ್‌ರವರು ತಮ್ಮ ಬಂಗಾಳಿ ಸಾಹಿತ್ಯ ಚರಿತ್ರೆ ಯಲ್ಲಿ ಬಂಕಿಮರು ಒಂದು ಸ್ಪರ್ಧೆಗೆ ಕಿರುಕಾದಂಬರಿಯೊಂದನ್ನು ಬರೆದು ಕಳುಹಿಸಿದ್ದ ರೆಂದೂ, ಅವರಿಗೆ ಬಹುಮಾನ ದೊರಕಲಿಲ್ಲವೆಂದೂ ಅದು ಪ್ರಕಟವಾಗಲಿಲ್ಲವೆಂದೂ ಬರೆದಿದ್ದಾರೆ. ಶ್ರೀ ಶಾಸ್ತ್ರಿಗಳೂ ಅಡಿಟಿಪ್ಪಣಿಯಲ್ಲಿ (ಪು. ೩೪) "'Raj Mohan's Wife' ಕಾದಂಬರಿಯ ಮೊದಲ ಮೂರು ಪರಿಚ್ಛೇದಗಳ ಭಾಷೆಯನ್ನೂ ಶೈಲಿಯನ್ನೂ ನೋಡಿದರೆ ಅವು ಬಂಗಾಳಿಯಲ್ಲೇ ಮೊದಲು ಬರೆದಂತೆ ಕಾಣುತ್ತವೆ" ಎಂದು ಅಭಿಪ್ರಾಯ ಪಟ್ಟಿದ್ದಾರೆ. ಬಂಕಿಮರು ತಮ್ಮ ಆದರ್ಶ ಸ್ಕಾಟ್ (Scott)ನಂತೆ ಮೊದಲು ಕವಿತೆಗಳನ್ನು ಬರೆಯಲು ಪ್ರಾರಂಭಿಸಿ ಅನಂತರ ಅದನ್ನು ಬಿಟ್ಟು ಕಾದಂಬರೀ ಜಗತ್ತಿನಲ್ಲಿ ಕಾಲಿಟ್ಟು ಪ್ರಸಿದ್ಧರಾದರು. "ರಾಜಮೋಹನನ ಹೆಂಡತಿ"ಯು ಬೆಳಕನ್ನು ಕಂಡ ಮೊದಲನೆಯ ಕೃತಿಯಾದರೂ, ಅದಕ್ಕೆ ಮುಂಚಿನಿಂದಲೂ ಬಂಗಾಳಿಯಲ್ಲಿ ಅವರು ಬರೆಯುತ್ತಿದ್ದಿರಬೇಕು.

ಬಂಕಿಮರು ಪ್ರಾರಂಭದಲ್ಲಿ ಐತಿಹಾಸಿಕ ಕಾದಂಬರಿಗಳನ್ನು ಬರೆದರು; ಕೊನೆ ಕೊನೆಗೂ ಐತಿಹಾಸಿಕ ಕಾದಂಬರಿಗಳೇ ಬಂದುವು. ಮಧ್ಯಕಾಲದಲ್ಲಿ ಸಾಮಾಜಿಕ

ಕಾದಂಬರಿಗಳನ್ನು ಬರೆದರು. ಏಕೆ ಹಾಗೆ ಮಾಡಿದರೋ ಯಾರು ಬಲ್ಲರು? ಐತಿಹಾಸಿಕ ಕಾದಂಬರಿಗಳನ್ನು ಬರೆಯುವುದಕ್ಕೆ ಸುಲಭ. ಆದುದರಿಂದ ೧೯ನೆಯ ಶತಮಾನದ ಅಂತ್ಯಭಾಗದ ಕಾದಂಬರಿಕಾರರು ಐತಿಹಾಸಿಕ ಕಾದಂಬರಿಗಳನ್ನೇ ಹೆಚ್ಚು ಹೆಚ್ಚಾಗಿ ಬರೆಯತೊಡಗಿದರೆಂದು ಡಾ. ಸುಕುಮಾರಸೇನ್ ಅಭಿಪ್ರಾಯಪಟ್ಟಿದ್ದಾರೆ. ರವೀಂದ್ರರ ಅಭಿಪ್ರಾಯದಂತೆ ಬಂಕಿಮರ ಕಾದಂಬರಿಗಳಲ್ಲಿ ಅತ್ಯುತ್ತಮವಾದದ್ದೂ ಐತಿಹಾಸಿಕ ಕಾದಂಬರಿಯೇ.

ಮೊದಮೊದಲ ಕಾದಂಬರಿಗಳನ್ನು ಬರೆಯುವಾಗ ಬಂಕಿಮರು ಯಾವುದಾದರೂ ಧ್ಯೇಯವನ್ನಿಟ್ಟುಕೊಂಡಿದ್ದರೋ ಇಲ್ಲವೋ ತಿಳಿಯದು. ಎಲ್ಲ ಕಾದಂಬರಿಗಳಲ್ಲೂ ಪ್ರಣಯವೇ ವಸ್ತುವಾಗಿದ್ದರೂ, ಅನಂತರದ ಕಾದಂಬರಿಗಳೆಲ್ಲವೂ ಯಾವುದಾದರೊಂದು ಉದ್ದೇಶದಿಂದ ಪ್ರಚೋದಿತವಾದದ್ದಾಗಿವೆ. 'ವಿಷವೃಕ್ಷ', 'ಕೃಷ್ಣಕಾಂತನ ಉಯಿಲು' ವಿಧವಾ ವಿವಾಹಕ್ಕೆ ಸಂಬಂಧಿಸಿದುವಾಗಿವೆ. ಶ್ರೀ ಶಾಸ್ತ್ರಿಗಳು 'ಕೃಷ್ಣಕಾಂತನ ಉಯಿಲ'ನ್ನು ಎರಡನೆಯ 'ವಿಷವೃಕ್ಷ'ವೆಂದು ಕರೆದಿರುವುದು ಸರಿಯಾಗಿ ಹೊಂದಿಕೊಳ್ಳುತ್ತದೆ. ವಿಧವಾ ವಿವಾಹ ಸಮಸ್ಯೆ ಬಂಕಿಮರನ್ನು ಬಹಳ ಕಾಡುತ್ತಿದ್ದಂತೆ ತೋರುತ್ತದೆ. ವಿಧವಾ ವಿವಾಹ ಸುಧಾರಣೆ ಅವರ ಮನಸ್ಸಿಗೆ ಹಿಡಿಸದಾಗಿತ್ತು. ಬೇರೆ ಕಾದಂಬರಿಗಳಲ್ಲೂ ಪ್ರಾಸಂಗಿಕವಾಗಿ ಇದರ ಪ್ರಸ್ತಾಪ ಬರುತ್ತದೆ. ಅದನ್ನು ನಗೆಗೀಡುಮಾಡುವುದೂ ಅವರ ಉದ್ದೇಶವಾಗಿತ್ತು.

ಕೊನೆಕೊನೆಗೆ ಬಂಕಿಮರ ಮನಸ್ಸು ಧರ್ಮದ ಕಡೆಗೆ ತಿರುಗಿತು. ಕೊನೆಗಂತು, ಅವರು ಸಾಹಿತ್ಯಸೃಷ್ಟಿಯನ್ನು ಬದಿಗಿಟ್ಟು ಕೃಷ್ಣಚರಿತ್ರ, ಧರ್ಮತತ್ತ್ವ ಮತ್ತು ಭಗವದ್ಗೀತೆಗಳ ಚಿಂತನ ಮತ್ತು ವ್ಯಾಖ್ಯಾನಗಳಿಗೆ ತಮ್ಮ ಕಾಲವನ್ನೆಲ್ಲ ಮೀಸಲಾಗಿಟ್ಟರು. 'ಆನಂದಮಠ', 'ದೇವೀ ಚೌಧೂರಾಣೀ', 'ಸೀತಾರಾಮ'ಗಳು ಹಿಂದೂ ಧರ್ಮ ಮತ್ತು ಭಗವದ್ಗೀತೆಗಳ ಹಿರಿಮೆಯನ್ನು ಪ್ರತಿಪಾದಿಸುವ ಕಾದಂಬರಿಗಳಾಗಿವೆ.

ಯಾವ ಕಾದಂಬರಿಯಲ್ಲೇ ಆಗಲಿ, ದಾಂಪತ್ಯಪ್ರೇಮ ಮತ್ತು ಗೃಹಸ್ಥ ಧರ್ಮಗಳು ಪ್ರಧಾನವಾಗಿಲ್ಲದೆ ಇಲ್ಲ. 'ಆನಂದಮಠ', 'ದೇವೀ ಚೌಧೂರಾಣೀ'ಗಳಲ್ಲಿ ದುರಂತದ ಕಾರ್ಮೋಡಗಳು ಸುಳಿದರೂ, ಅವುಗಳ ಹಿಂಬದಿಯಿಂದ ನವಪ್ರಕಾಶನವೊಂದು ಮೂಡಿಬರುವುದೆಂಬುದು ಸೂಚಿತವಾಗಿದೆ. 'ಸೀತಾರಾಮ'ದಲ್ಲಿ ಸರ್ವನಾಶದ ಭಾವನೆಯುಂಟಾಗುತ್ತದೆ. 'ದೇವೀ ಚೌಧುರಾಣೀ'ಯಲ್ಲಿ ಗೀತೆಯ ಉಪದೇಶದಂತೆ ನಡೆದುದರಿಂದ ಎಲ್ಲ ಪಾತ್ರಗಳೂ ಹೊಸ ಬೆಳಕನ್ನು ಕಾಣುತ್ತಾರೆ. 'ಸೀತಾರಾಮ'ದಲ್ಲಿ ತದ್ವಿರುದ್ಧವಾಗಿರುವುದರಿಂದ ಅಂಧಕಾರ ಮುಸುಗಿದೆ. ಅಂತು ಒಂದೇ ಉದ್ದೇಶ ಎರಡು ದಿಕ್ಕುಗಳಿಂದ ಪ್ರತಿಪಾದಿತವಾಗಿದೆ.

'ವಿಷವೃಕ್ಷ'ದಲ್ಲಿ ವಿಧವಾ ವಿವಾಹವು ಸುಖಮಯ ಸಂಸಾರದ ಪ್ರಶಾಂತ ವಾತಾವರಣವನ್ನು ಹೇಗೆ ಕಲಕಿತು, ಮತ್ತೆ ಮೊದಲಿನಂತಾಗಲು (ಮೊದಲಿನಂತಾಯಿತೆ?) ಎಂತಹ ನಷ್ಟವನ್ನನುಭವಿಸಬೇಕಾಯಿತು, ಎಂಬುದು ವರ್ಣಿತವಾಗಿದೆ.

'ಕೃಷ್ಣಕಾಂತನ ಉಯಿಲು'ನಲ್ಲಿ ಅದು ಎಂತಹ ಸರಿಮಾಡಲಾಗದ ಘೋರ ಪರಿಣಾಮವನ್ನುಂಟುಮಾಡಿತು ಎಂದು ತೋರಿಸಿಕೊಟ್ಟಿದೆ. ಅಂತು ಒಟ್ಟಿನಲ್ಲಿ ವಿಧವಾ ವಿವಾಹ—ಶಾಸ್ತ್ರಸಮ್ಮತ ಹೌದೆ ಅಲ್ಲವೆ ಎಂಬ ವಿವಾದವಲ್ಲ—ನಮ್ಮ ಸಮಾಜದಲ್ಲಿ ಸಂಸಾರ ಸುಖಕ್ಕೆ ಮಾರಕ. ಇದೇ ಈ ಕಾದಂಬರಿಗಳನ್ನು ಬರೆಯುವುದರಲ್ಲಿ ಬಂಕಿಮರ ಉದ್ದೇಶ.

ಇನ್ನೂ ಆಳವಾಗಿ ನೋಡಿದರೆ, ಸಂಸಾರದಲ್ಲಿ ಸಮರಸವೇ ಜೀವನ, ಪ್ರೇಮವೇ ಗಂಡುಹೆಣ್ಣುಗಳ ಪರಸ್ಪರ ಸಂಬಂಧವನ್ನು ಸುಖಮಯವನ್ನಾಗಿ ಮಾಡಬಲ್ಲ ಏಕೈಕ ದಿವ್ಯಶಕ್ತಿ. ರೂಪಮೋಹ ಮತ್ತು ಕಾಮಪಿಪಾಸೆಗಳಿಗೊಳಗಾಗಿ ಗಂಡುಹೆಣ್ಣುಗಳಲ್ಲಿ ಯಾರು ದುಡುಕಿದರೂ, ಅವರಿಗೂ ಅವರ ಸುತ್ತಮುತ್ತ ಇರುವವರಿಗೂ ದುರಂತ ಕಾದಿದೆ—ಎಂಬ ಸತ್ಯವನ್ನು ಎಲ್ಲ ಕೃತಿಗಳಲ್ಲೂ ಕಾವ್ಯ ಸಹಜವಾದ ರೀತಿಯಲ್ಲಿ ಪ್ರತಿಪಾದಿಸಲಾಗಿದೆ. 'ಇಂದಿರಾ' 'ಯುಗುಳಾಂಗುರೀಯ' 'ರಾಧಾರಾಣಿ'ಗಳು, ಗಭೀರಸಮಸ್ಯೆಗೆ ಕೈಹಾಕದೆ ಚಿತ್ತರಂಜನೆಗೆಂದೆ ಬರೆದಿದ್ದಹಾಗಿದ್ದರೂ ಪರಸ್ಪರಾನುರಕ್ತರಾದ ಸತಿಪತಿಗಳ ಮತ್ತು ಪ್ರೇಮಿಗಳ ಪುನರ್ಮಿಲನವೆಂತಹ ಹರ್ಷೋತ್ಸಾಹಗಳನ್ನುಂಟುಮಾಡುವುದೆಂದು ಸೂಚಿಸುತ್ತದೆ. ಹೊಸರೀತಿಯೊಂದನ್ನು ಆಂಗ್ಲ ಸಾಹಿತ್ಯದಿಂದ ಎರವು ತೆಗೆದುಕೊಂಡು ಯಶಸ್ವಿಯಾದ ರೀತಿಯಲ್ಲಿ ಬಂಕಿಮರು ಬಳಸಿಕೊಂಡಿದ್ದಾರೆಂಬುದನ್ನು 'ರಜನೀ' ತೋರಿಸುತ್ತದೆ. ಆದರೆ ಉದ್ದೇಶ ಮಾತ್ರ, 'ಧರ್ಮ ವಿರುದ್ಧಕಾಮ", (ಪ್ರೇಮದ)ದ ವಿಜಯ. 'ರಜನೀ' ಬಂಗಾಳಿಯಲ್ಲಿ ಮೊತ್ತಮೊದಲನೆಯ ಮನೋವಿಶ್ಲೇಷಣಾತ್ಮಕ ಕಾದಂಬರಿಯಾಗಿದೆ. ಆದರೆ, ಅದರಲ್ಲಿ ಯಾವ ಪಾತ್ರವೂ, ಎಡವಿದ್ದರೂ, ಮುಗ್ಗರಿಸಿ ಬೀಳದಿರುವುದರಿಂದ ಕಾದಂಬರಿಯು ಆದರ್ಶವ್ಯಕ್ತಿಗಳಿಂದ ಕೂಡಿದುದಾಗಿ ಆಹಿತವಲ್ಲದ ರೀತಿಯಲ್ಲಿ ಕೊನೆಗೊಳ್ಳುತ್ತದೆ.

ಮೊದಲಿನಿಂದ ಕೊನೆಯವರೆಗೂ ಬಂಕಿಮರು ಇದೇ ದೃಷ್ಟಿಯನ್ನಿಟ್ಟುಕೊಂಡು ಐತಿಹಾಸಿಕ ಕಾದಂಬರಿಗಳನ್ನೂ ಬರೆದಿರುವಂತೆ ಕಾಣುತ್ತದೆ. ಇದು 'ಕಪಾಲ ಕುಂಡಲಾ'ದಲ್ಲಿ ನೇರವಾಗಿ ತೋರಿಬರದಿದ್ದರೂ ಸೂಚ್ಯವಾಗಿದೆ.

ಶ್ರೀ ಶಾಸ್ತ್ರಿಗಳು ಈ ಅಂಶಗಳೆಲ್ಲವನ್ನೂ ತಮ್ಮ ವಿಮರ್ಶೆಯಲ್ಲಿ ಹೊರಗೆಡವಿದ್ದಾರೆ. ಪ್ರತಿಯೊಂದು ಕೃತಿಯನ್ನೂ ಪ್ರತ್ಯೇಕವಾಗಿ ತೆಗೆದುಕೊಂಡು ವಸ್ತು ಪಾತ್ರಗಳನ್ನು ವಿಮರ್ಶಿಸಿದ್ದಾರೆ. ಬೇರೆ ಬೇರೆ ಕೃತಿಗಳನ್ನೂ, ಅವುಗಳ ವಸ್ತುಗಳನ್ನೂ ಪಾತ್ರಗಳನ್ನೂ ಒಂದರಪಕ್ಕದಲ್ಲೊಂದನ್ನಿಟ್ಟು ತುಲನಾತ್ಮಕವಾಗಿ ವಿಮರ್ಶಿಸಿದ್ದಾರೆ. ಎಲ್ಲವನ್ನೂ ಜೀವನದ ನಿಕಷದಲ್ಲಿ ಒರೆಯಿಟ್ಟು ನೋಡಿ ಪರೀಕ್ಷೆಮಾಡಿದ್ದಾರೆ. ಬಂಗಾಳಿ ಸಾಹಿತ್ಯ, ಬಂಕಿಮರ ಜೀವನ ಮತ್ತು ಸಾಧನೆ, ಕಥಾಸಂಗ್ರಹಗಳು, ವಿಮರ್ಶೆ—ಇಷ್ಟನ್ನೂ ಒಟ್ಟಿಗೆ ಕೊಡಬೇಕಾಗಿ ಬಂದುದರಿಂದ, ಕೆಲವು ಬಾರಿ, ಕೆಲವರಿಗೆ ಮುಖ್ಯವೆನಿಸುವ ಅಂಶಗಳು ಇಲ್ಲಿ ತೇಲಿಸಿ ಹೇಳಿರುವಂತೆ ಕಾಣುತ್ತವೆ.

ಬಂಕಿಮರನ್ನೂ, ವೆಂಕಟಾಚಾರ್ಯರನ್ನೂ ಕಂಡರೆ ಶ್ರೀ ಶಾಸ್ತ್ರಿಗಳಿಗೆ ಅಪಾರ

ಗೌರವ. ಜೀವನ ಪರಿಪಕ್ವಾವಸ್ಥೆಗೆ ಬಂದಮೇಲೆ ಸಾಮಾನ್ಯವಾಗಿ ಸಂಸ್ಕೃತಾತ್ಮರಲ್ಲಿ ಒಂದು ಬಗೆಯ ಉದಾರಭಾವನೆ ಬರುತ್ತದೆ. ಬಹುಶಃ ಹಾಗಾಗಿ ಶ್ರೀ ಶಾಸ್ತ್ರಿಗಳು, ಉಳಿದವರು ನಿರೀಕ್ಷಿಸುವಷ್ಟು ಮಟ್ಟಿಗೆ ನಿರ್ದಾಕ್ಷಿಣ್ಯವಾಗಿ ತಮ್ಮ ಅಭಿಪ್ರಾಯಗಳನ್ನು ಹಲವೆಡೆ ವ್ಯಕ್ತಗೊಳಿಸಿಲ್ಲವೆನ್ನಿಸುತ್ತದೆ.

ಬಂಕಿಮರು ಚಿತ್ರಿಸಿರುವ ಜೀವನ ಪರಿಮಿತವಾದದ್ದು. ಬಹುಮಟ್ಟಿಗೆ ವಿದ್ಯಾವಂತರಾದ (ಇಂಗ್ಲಿಷು ಓದಿದ್ದ) ಮಧ್ಯಮವರ್ಗದ, ಅದರಲ್ಲೂ ಸುಖವಾಗಿದ್ದ ಬಂಗಾಳಿ ಬಾಬುಗಳ ಬಾಳು ಅವರ ಕಾದಂಬರಿಗಳ ವಸ್ತು. ಬಡತನದ ಬೇಗೆ ಬಂಕಿಮರಿಗೆ ಅನುಭವವಾಗಿರಲಿಲ್ಲ. ಕೇವಲ ಪ್ರಣಯದ ಸುಖದುಃಖಗಳಿಗೆ ಮಾತ್ರ ಅವರ ಗಮನ. ಕ್ಷೇತ್ರ ಅಷ್ಟು ವಿಶಾಲವಾಗಿಯೂ ಇಲ್ಲ, ಅಷ್ಟು ಆಳವಾಗಿ ಅಗೆಯಲೂ ಇಲ್ಲ ಅವರು.

ಕಾಳಿದಾಸ ಭವಭೂತಿಗಳಲ್ಲಿ ಏಕೊ ಅವರಿಗೆ ಅಷ್ಟು ಭಕ್ತಿಯಿಲ್ಲ. 'ವಿಷವೃಕ್ಷ'ದಲ್ಲಿ ಹರಘೋಷಾಲನ ಪತ್ರದಲ್ಲಿ ಕಾಳಿದಾಸ ಬೈರನ್‌ರನ್ನು ಒಂದೇ ಗುಂಪಿಗೆ ಸೇರಿಸಿದ್ದಾರೆ. ಭವಭೂತಿಯ 'ಉತ್ತರ (ರಾಮ) ಚರಿತ'ವನ್ನು ವಿಮರ್ಶೆಮಾಡುತ್ತಾ (ಪು. ೪೫೭-೫೮) 'ಭವಭೂತಿಯ ರಾಮನಲ್ಲಿ ಯಾವ ವೀರಲಕ್ಷಣವೂ ಇಲ್ಲ. ಸೀತೆಯ ಅಪವಾದವನ್ನು ಕೇಳಿದಕೂಡಲೆ, ಅವನು ಹುಡಗಿಯ ಹಾಗೆ ಅಳುತ್ತಾನೆ." "ಅವನು (ಭವಭೂತಿಯು) ರಾಮವಿಲಾಪವನ್ನು ಇಷ್ಟು ದೊಡ್ಡದು ಮಾಡಿಬಿಟ್ಟಿದ್ದಾನೆ. ಇದರಿಂದ ಅವನ ಯಶಸ್ಸಿಗೆ ತುಂಬ ಲಾಘವವುಂಟಾಗಿದೆ" ಎಂದು ಬಂಕಿಮರು ಹೇಳಿದ್ದಾರೆ. 'ಮಹಾವೀರ ಚರಿತೆ'ಯನ್ನು ಬರೆದ ಭವಭೂತಿಗೆ, 'ಉತ್ತರರಾಮ ಚರಿತೆ'ಯಲ್ಲಿಯೇ ಲವಕುಶರನ್ನು ಚಿತ್ರಿಸಿದ ಭವಭೂತಿಗೆ ರಾಮನಲ್ಲಿ ವೀರಲಕ್ಷಣವನ್ನು ತೋರಿಸಲಾಗುತ್ತಿರಲಿಲ್ಲವೆ? ಸೀತಾ ಪರಿತ್ಯಾಗ ನಿರ್ಧಾರವು ಹೇಡಿಗೆ ಸಾಧ್ಯವೆ? ಭವಭೂತಿಯು ಉತ್ತರರಾಮ ಚರಿತೆಯನ್ನು ಬರೆಯುವಾಗ ಯಾವುದನ್ನು ಪ್ರತಿಪಾದ್ಯ ವಿಷಯವನ್ನಾಗಿ ಇಟ್ಟುಕೊಂಡಿದ್ದನೆಂಬುದನ್ನು ಸಹೃದಯ ವಿಮರ್ಶಕನು ಮರೆಯಬಾರದು. ಉತ್ತರರಾಮ ಚರಿತೆಯಲ್ಲೇ ಹೇಳಿದ ಹಾಗೆ ಪಾಪ! ರಾಮನಿಗೆ ಅಳುವುದಕ್ಕೂ ಸ್ವಾತಂತ್ರ್ಯವಿಲ್ಲ. 'ವಿಷವೃಕ್ಷ'ದಲ್ಲಿ, ಸೂರ್ಯಮುಖಿಯನ್ನು ಕಳೆದುಕೊಂಡ ಬಂಗಾಳಿ ಬಾಬು ನಗೇಂದ್ರನ ಅಳುವನ್ನು ಅಷ್ಟು ದೊಡ್ಡದುಮಾಡಿದ ಬಂಕಿಮರಿಗೆ ಆದರ್ಶಪತಿ ರಾಮನು ಆದರ್ಶಸತಿ ಸೀತೆಯನ್ನು ಇನ್ನೂ ದೊಡ್ಡ ಆದರ್ಶಕ್ಕಾಗಿ ತ್ಯಾಗ ಮಾಡಿ, ವೈಯುಕ್ತಿಕ ನಷ್ಟಕ್ಕಾಗಿ ಮರುಗುವುದು ದೋಷವಾಗಿ ಕಂಡುಬಂದಿತಲ್ಲ!

ಬಂಕಿಮರು ತಮ್ಮ ಕೃತಿಗಳ ರಚನೆಯಲ್ಲಿ ಆ ಕಾಲದಲ್ಲಿ ಪ್ರಸಿದ್ಧರಾಗಿದ್ದ ಆಂಗ್ಲ ಕಾದಂಬರಿಕಾರರನ್ನು ಮಾದರಿಯಾಗಿ ಇಟ್ಟುಕೊಂಡಿದ್ದರು. ಆ ಕಾಲದ ಕಾದಂಬರಿಗಳ ದೋಷವನ್ನು ಈಚಿನ ವಿಮರ್ಶಕರು ತೋರಿಸಿಕೊಟ್ಟಿದ್ದಾರೆ. ಕಾದಂಬರಿಯ ಮಧ್ಯೇ ಮಧ್ಯೇ 'ವಾಚಕರೇ!' 'ಪಾಠಕರೇ!' ಎಂದು ಸಂಬೋಧಿಸುವುದು, ಸಂಭಾಷಿಸುವುದು, ನೀತಿ ಬೋಧೆಗೆ ತೊಡಗುವುದು, ಉಪನ್ಯಾಸಮಾಡುವುದು—ಇವು ಕಥನ

ಕಲೆಯಲ್ಲಿ ದೋಷಗಳು. ಅವುಗಳಿಂದ ಒಂದು ಬಗೆಯ ಕೃತಕತೆಯುಂಟಾಗುತ್ತದೆ. ಈ ದೋಷಗಳು ಬಂಕಿಮರಲ್ಲಿ ಸಾಮಾನ್ಯ. ಅಲ್ಲದೆ ಬಂಕಿಮರ ಕಾದಂಬರಿಗಳೆಲ್ಲ 'ರೊಮಾನ್ಸ್' (Romance) ಗುಂಪಿಗೆ ಸೇರಿದುವು; ವಾಸ್ತವಿಕತೆ ಕಡಿಮೆ.

ಕೆಲವೆಡೆ ಬಂಕಿಮರ ಮನಸಿನಲ್ಲೆ ಒಂದು ನಿಶ್ಚಿತವಾದ ಅಭಿಪ್ರಾಯವಿಲ್ಲ. ಅವರಿಗೆ ಬ್ರಿಟಿಷ್ ಪ್ರಭುತ್ವವನ್ನು ಕಂಡರೆ ಮೋಹವೇ ದ್ವೇಷವೇ ಎಂಬುದು 'ಆನಂದ ಮಠ'ದಲ್ಲಿ ನಿಶ್ಚಿತವಾಗಿ ತೋರದು. Ānandamath was his vengeance as well as tribute ಎಂದು ಡಾ. ಸುಕುಮಾರ ಸೇನರು ಹೇಳಿದ್ದಾರೆ. ಹಾಗೆಯೇ ವಿಧವಾ ವಿವಾಹವಿರುದ್ಧಿ ಬಂಕಿಮರು 'ವಿಷವೃಕ್ಷ'ದಲ್ಲಿ ಮಾಡಿರುವುದೇನು? ಕುಂದನಂದಿನಿಯ ಪಾತ್ರ, ಅವಳ ನಿಷ್ಕಾರಣವಾದ ಸಾವು ವಿಧವಾ ವಿವಾಹ ಅಗತ್ಯವಾಗಿ ಬೇಕಾದ ಸುಧಾರಣೆಯೆಂದು ತೋರಿಸಿಕೊಡುವುದಿಲ್ಲವೆ?

ಹೆಂಗಸು ಗೃಹಿಣಿಯಾಗಿಯೇ ತನ್ನ ಮೋಕ್ಷಗಳಿಸಿಕೊಳ್ಳಬೇಕೇ ಹೊರತು ಬೇರೆ ಮಾರ್ಗ ಅವಳಿಗೆ ಸಲ್ಲದು ಎಂಬುದು ಬಂಕಿಮರ ಅಭಿಪ್ರಾಯ. ಶಾಂತಿಯು ಸತ್ತು ಬದುಕಿದ ಜೀವಾನಂದನೊಡನೆ ತಪಸ್ಸಿಗೆ ತೆರಳಬೇಕು. ಯಾವ ಸುಖಕ್ಕೆ? ಏನು ಸಾಧನೆಗೆ? ಪ್ರಫುಲ್ಲೆಯು ತನಗೆ ಮಕ್ಕಳಂತಿದ್ದ ಅನಂತ ಅನುಯಾಯಿಗಳನ್ನು ತೊರೆದು ಅನಾಥರಕ್ಷಕಳಾಗಿರುವುದನ್ನು ಬಿಟ್ಟು ಗಂಡ ಅತ್ತೆ ಮಾವ ಸವತಿಯರು ಮತ್ತು ಸವತಿಯ ಮಕ್ಕಳು ಇರುವ ಸಂಸಾರವೆಂಬ ಸಣ್ಣ ಪ್ರಪಂಚಕ್ಕೆ ಇಳಿಯಬೇಕಾಯಿತು. ಏಕೆಂದರೆ, ಬಂಕಿಮರ ದೃಷ್ಟಿಯಲ್ಲಿ ಅದೇ ಸರಿ. 'ಸೀತಾರಾಮ'ದ ಶ್ರೀ, ಜಯಂತಿ ಹೆಸರಿಲ್ಲದ ಹಾಗೆ ಹೋದುದು ಗೃಹಿಣೀ ಧರ್ಮತ್ಯಾಗಮಾಡಿದುದರಿಂದಲೇ. ಅನೇಕ ಬಂಗಾಳಿ ವಿಮರ್ಶಕರು 'ಆನಂದ ಮಠ'ವನ್ನು ಬರೆಯುವ ವೇಳೆಗೆ ಬಂಕಿಮರ ಪ್ರತಿಭೆ ಇಳಿಮುಖವಾಗಿತ್ತೆನ್ನುತ್ತಾರೆ. ಹೀಗೆ ಅಸಹಜವಾಗಿ ಕಾದಂಬರಿಗಳನ್ನು ಮುಕ್ತಾಯ ಮಾಡಿರುವುದು ಆ ಅಭಿಪ್ರಾಯಕ್ಕೆ ಎಡೆಮಾಡಿಕೊಟ್ಟಿರಬೇಕು. 'ಆನಂದಮಠ'ದ ವಿಜ್ಞಾಪನೆಯಲ್ಲಿ 'ಬಂಗಾಳಿ ಹೆಂಗಸರು ಅನೇಕ ಸಂದರ್ಭದಲ್ಲಿ ಬಂಗಾಳಿಗಳಿಗೆ ಸಹಾಯ; ಅನೇಕ ಸಮಯಗಳಲ್ಲಿ ಅಲ್ಲ' ಎಂದು ಹೇಳಿದ್ದಾರೆ. ಶಾಂತಿ ಪ್ರಫುಲ್ಲೆ ಯಂತಹವರು ಸಹಾಯ; ರಮಾ, ಶ್ರೀ ಅಂತಹವರು ಅಲ್ಲ. ಬಂಕಿಮರಿಗೆ ಇಬ್ಸನ್ (Ibsen)ನ 'ಡಾಲ್ಸ್ ಹೌಸ್'(Doll's House)ನ ನೋರಾ (Nora) ಹೇಗೆ ಗೋಚರಕ್ಕೆ ಬಂದಾಳು!

ದಿವಂಗತ ಬಿ. ವೆಂಕಟಾಚಾರ್ಯರಿಗೆ ಗ್ರಂಥವನ್ನು ಅರ್ಪಣೆಮಾಡಿರುವುದು ಬಹಳ ಸೂಕ್ತವಾಗಿದೆ. ಆದರೆ ಶ್ರೀ ವೆಂಕಟಾಚಾರ್ಯರ ಅನುವಾದ ಶ್ರೀ ಶಾಸ್ತ್ರಿಗಳಿಗೆ ಸಮರ್ಪಕವಾಗಿತ್ತೆಂದು ಹೇಳಲಾಗುವುದಿಲ್ಲ. 'ವಿಷವೃಕ್ಷ'ದ ನಗೇಂದ್ರನನ್ನು ನಾಗೇಂದ್ರನನ್ನಾಗಿ ವೆಂಕಟಾಚಾರ್ಯರು ಮಾಡಿರುವುದನ್ನು ಶ್ರೀ ಶಾಸ್ತ್ರಿಗಳು ಅಡಿ ಟಿಪ್ಪಣಿಯಲ್ಲಿ ತಿಳಿಸಿದ್ದಾರೆ. (ಪು. ೪೯). ಇನ್ನೊಂದೆಡೆಗೆ ಅಡಿ ಟಿಪ್ಪಣಿಯಲ್ಲಿ (ಪು. ೧೫೬) "ಬಿ. ವೆಂಕಟಾಚಾರ್ಯರ ಭಾಷಾಂತರ; ಮೂಲದಲ್ಲಿ ವಾಕ್ಯಗಳು ಚಿಕ್ಕ

ಪಾಗಿವೆ; ವಿಷಯ ಒಂದೆ” ಎಂದಿದ್ದಾರೆ. ಹೇಳಿರುವುದು ಒಂದೆರಡಾದರೆ, ಇರುವುದು ಹತ್ತಾರಿರಬಹುದು. ಬಂಕಿಮರು ಹೊಸ ಸಂಸ್ಕರಣಗಳನ್ನು ಹೊರತಂದಾಗಲೆಲ್ಲ ಸಣ್ಣ ದೊಡ್ಡ ಮಾರ್ಪಾಡುಗಳನ್ನು ಮಾಡುತ್ತಿದ್ದರು. ವೆಂಕಟಾಚಾರ್ಯರು ಗ್ರಂಥ ಗಳು ಬಂಗಾಳಿಯಲ್ಲಿ ಪ್ರಕಟವಾದ ಹಾಗೆ ಕನ್ನಡಕ್ಕೆ ಭಾಷಾಂತರಿಸುತ್ತಿದ್ದರು. ಅವುಗಳ ಪುನರ್ಮುದ್ರಣವಿದೆಯೇ ಹೊರತು ಹೊಸ ಸಂಸ್ಕರಣವಿಲ್ಲ. ಹೀಗಾಗಿ ಈಚಿನ ಬಂಗಾಳಿ ಮೂಲಕ್ಕೂ ಕನ್ನಡ ಭಾಷಾಂತರಕ್ಕೂ ಬಹಳ ವ್ಯತ್ಯಾಸವಿದೆ. ಇಲ್ಲದಿದ್ದರೆ, ಇನ್ನೊಂದು ಭಾಷಾಂತರ ಬೇಕೆಂದೆನ್ನಿಸುತ್ತಿರಲಿಲ್ಲ ಶ್ರೀ ಶಾಸ್ತ್ರಿಗಳಿಗೆ.

ಇದೆಲ್ಲವನ್ನೂ ಶ್ರೀ ಶಾಸ್ತ್ರಿಗಳು ಎಷ್ಟು ನವಿರಾಗಿ ಮೃದುವಾಗಿ ಸೂಚಿಸಿದ್ದಾರೆ!

ಈ ಗ್ರಂಥವು ಒಂದು ದೃಷ್ಟಿಯಿಂದ ವಿಮರ್ಶಾ ಗ್ರಂಥವಾದರೆ, ಇನ್ನೊಂದು ದೃಷ್ಟಿಯಿಂದ ಸ್ವತಂತ್ರ ಗ್ರಂಥವಾಗಿದೆಯೆಂದೂ ಹೇಳಬಹುದು. ಅಲ್ಲಲ್ಲಿ ಶ್ರೀ ಶಾಸ್ತ್ರಿ ಗಳು ವ್ಯಕ್ತಪಡಿಸಿರುವ ಲೋಕಾಭಿರಾಮವಾದ ಸೂಕ್ತಿಗಳು ಗ್ರಂಥಕ್ಕೆ ಅಲಂಕಾರ ಪ್ರಾಯಗಳಾಗಿವೆ.

‘ಚಂದ್ರಶೇಖರ’ದಲ್ಲಿ ಪ್ರತಾಪನನ್ನು ಕುರಿತ ಶೈವಲಿನಿಯ ಅನುರಾಗವನ್ನು ಹೀಗೆ ವಿವೇಚಿಸಿದ್ದಾರೆ. “ಕೆಲವು ರಾಜಸ ಸ್ವಭಾವದ ಜನ (ಹೆಣ್ಣುಗಳು) ಮೆಚ್ಚುವುದು ‘ಜಂಗಿಸಿಪಾಯಿ’ಯನ್ನೇ. ಅವನು ಬಡವನಾಗಿರಲಿ ಸಿಡುಕನಾಗಿರಲಿ, ಅವನಲ್ಲಿ ಅವರಿಗೆ ಗೌರವವೇ. ಅವನ ದರಬಾರು ದೌಲತ್ತುಗಳು—ಕೊನೆಗೆ ಪೌಷ್ಟ್ಯ, ಧೂರ್ತತೆ, ದೌರ್ಜನ್ಯಗಳೂ ಕೂಡ—ಗೌರವತರುವ ಘನಗುಣಗಳೇ. ಸಾತ್ವಿಕನನ್ನು ಉಪಶಾಂತನನ್ನು ಕಂಡರೆ, ಅವನು ‘ಸಪ್ಪೆ’ ಎಂದು ಅವರಿಗೆ ತಿರಸ್ಕಾರ. ಅವನ ವಿದ್ಯೆ ಬುದ್ಧಿ ಸಂಪತ್ತು ಸಂಸ್ಕೃತಿ ಯಾವುದೂ ಅವರಿಂದ ಅವನಿಗೆ ಗೌರವವನ್ನು ತರವು. ಅವನ ಮುದ್ದೂ ಅಸಹ್ಯ ಅವರಿಗೆ”

ದುಂಬಿಯ ಜೀವನ ನಡೆಸಿದ ಜೇಬಉನ್ನಿಸಳು ಮುಬಾರಕನ ಮರಣವನ್ನು ಕೇಳಿ ಅತ್ತು ಹೊರಳಾಡಿದುದು ಶ್ರೀ ಶಾಸ್ತ್ರಿಗಳಿಗೆ ರತೀಪ್ರಲಾಪವನ್ನು ಜ್ಞಾಪಕಕ್ಕೆ ತರುತ್ತದೆ. “ವಸುಧಾಲಿಂಗನ ಧೂಸರಸ್ತನೀ ವಿಲಲಾಪ ವಿಕೀರ್ಣ ಮೂರ್ಧಜಾ” ಎಂದು ಬರೆಯುತ್ತಾರೆ (ಪು. ೨೪೯).

ಶ್ರೀ ಶಾಸ್ತ್ರಿಗಳು ಹೊರನೋಟಕ್ಕೆ ಪ್ರಾಚೀನ ಪಂಡಿತರಂತೆ ತೋರಿಬಂದರೂ, ಆಚಾರನಿಷ್ಠರಾದರೂ, ಸಹೃದಯ ವಿಮರ್ಶಕರಾದ ಅವರಿಗೆ ‘ಸ್ತ್ರೀ ಹೃದಯದ ವಿಶೇಷಾವಸ್ಥೆಗಳ ಮರ್ಮ ತಿಳಿಯದೆ ಇಲ್ಲ. ಹಾಗೆಯೇ ಅವರ ದೃಷ್ಟಿ ಆಧುನಿಕ ವಿಚಾರಧಾರೆಯ ವಾಸ್ತವಿಕತೆಯಿಂದ ದೂರವಾಗಿಲ್ಲ.

ಆನಂದಮಠದ ವಿಮರ್ಶೆಯಲ್ಲಿ ಸ್ವಾತಂತ್ರ್ಯ ಕ್ರಾಂತಿಯನ್ನು ವಿವರಿಸುತ್ತಾ (ಪು. ೨೮೩) “ಅದರಲ್ಲಿ ಭಾಗವಹಿಸಿದ ನಾಯಕರು ಯಾರೂ ಆಸ್ತಿಮಾಡಿಕೊಳ್ಳಲಿಲ್ಲ; ತಮ್ಮ ನಂಟರಿಷ್ಟರಿಗೆ ಆಸ್ತಿ ಅಧಿಕಾರಗಳನ್ನು ಸಂಪಾದಿಸಿಕೊಡಲಿಲ್ಲ” ಎಂದು ಬರೆದಿರು ವುದು ಎಷ್ಟು ಅರ್ಥಗರ್ಭಿತವಾಗಿದೆ!

'ಕೃಷ್ಣಕಾಂತನ ಉಯಿಲ'ನ್ನು ವಿಮರ್ಶಿಸುತ್ತಾ ಹೆಣ್ಣುಮಕ್ಕಳ ಮದುವೆಯ ವಿಷಯವಾಗಿ ಹೀಗೆ ಅಭಿಪ್ರಾಯನೀಡಿದ್ದಾರೆ. "ಕನ್ಯಾವರಯತೇ ರೂಪಂ' ಎಂಬುದು ಎಷ್ಟು ನಿಜವೊ 'ವರೋವರಯತೇ ರೂಪಂ' ಎಂಬುದು ಅಷ್ಟೇ ನಿಜ. ಈಗ ಮದುವೆಯ ಪೇಟೆಯಲ್ಲಿ ವರಗಳ ಬೆಲೆ ಯದ್ವಾತದ್ವಾ ಏರಿರುವಾಗ 'ಎಣ್ಣೆಗೆಂಪಿನ' ಹುಡುಗಿಯರಿಗೂ ಮದುವೆಯಾಗುವುದು ಕಷ್ಟ."

ಇನ್ನೂ ಮುಂದೆ, ಇದೇ ಭಾಗದಲ್ಲಿ ಗಂಡಹೆಂಡಿರನ್ನು ಒಟ್ಟಿಗೆ ಹಿಡಿದಿಡುವ ಬಂಧನದ ವಿಷಯ ಹೇಳುತ್ತಾ,. "ಪ್ರಿಯರಾದವರು ಕಣ್ಮರೆಯಾಗಬಾರದು, ಪ್ರೇಮ ಬಂಧನ ಗಟ್ಟಿಯಾಗಬೇಕಾದರೆ ಕಟ್ಟಿದ ಹಗ್ಗ ಸಣ್ಣದಾಗಬೇಕು. ಅದರಲ್ಲಿಯೂ ಗಂಡಹೆಂಡಿರು ಒಬ್ಬರಿಗೊಬ್ಬರು ಕೋಟೆಯ ಗೋಡೆ ಹಾಗೆ. ಅವರು ಒಟ್ಟಿಗಿದ್ದರೆ ಹೊರಗಿನ ಶತ್ರುಗಳ ಭಯ ಕಡಿಮೆ. ದಂಪತಿಗಳೂ ದಾರಿ ಬಿಟ್ಟುಹೋಗುವುದು ಕಷ್ಟ; ದೂರ ಹೋದರೆ ಸ್ನೇಹ ಮಸಕಾಗುತ್ತದೆ; ಮನಸ್ಸು ಲಗಾಮು ಬಿಚ್ಚಿದ ಕುದುರೆಯಾಗುತ್ತದೆ; ಸಾಧುಕುದುರೆಯಾಗಿ ಮನೆಗೆ ಬಂದರಂತೂ ಸರಿಹೋಯಿತು; ಇಲ್ಲದೆ, ತೊಂಡು ಬಿದ್ದರೆ?"

'ದೇವೀ ಚೌಧೂರಾಣೀ'ಯನ್ನು ಕುರಿತು ಬರೆಯುತ್ತಾ ಒಂದು ಕಡೆ (ಪು. ೨೯೪) "ಹೆಂಡತಿಗೆ ಗಂಡ ದೇವತಾ ಸಮಾನನಾದರೆ, ಗಂಡನಿಗೆ ಹೆಂಡತಿಯೂ ದೇವತಾ ಸಮಾನಳಾಗಕೂಡದೇಕೆ ಎಂದು ಕೇಳಬಹುದು" ಎಂದು ಪ್ರಾರಂಭಿಸಿ, "—ಈ ವಿಚಾರಸರಣಿ ಪ್ರಕೃತ ಕಾದಂಬರಿಯಲ್ಲಿ ಪ್ರತಿಪಾದಿತ ವಿಷಯವನ್ನು ಬಿಟ್ಟುಹೋಗುತ್ತದೆ" ಎಂದು ಮುಗಿಸುತ್ತಾರೆ.

ಮಿಲ್ಟನ್‌ನ 'ಪ್ಯಾರಡೈಸ್ ಲಾಸ್ಟ್' ಮಹಾಕಾವ್ಯದಲ್ಲಿ ಸೈತಾನನು ಮಾನವನ ಪತನಕ್ಕೆ ಯೋಜನೆ ಹಾಕಿಕೊಂಡು ಭೂಗ್ರಹದ ಕಡೆಗೆ ಹಾರಿಬರುತ್ತಾನೆ. ಆ ಸಂದರ್ಭದಲ್ಲಿ (Book III, LL 40–50) ಮಿಲ್ಟನ್ ಮೊದಲು ತನ್ನ ಅಂಧತ್ವವನ್ನು ಕುರಿತು ಹಲುಬಿಕೊಳ್ಳುತ್ತಾನೆ. ಅದನ್ನು ವಿಮರ್ಶಿಸುತ್ತಾ ಡಾ. ಜಾನ್‌ಸನ್ ಅದು ಅಪ್ರಕೃತವಾದರೂ ಅಂತಹ ಸಂದರ್ಭಗಳು ಇನ್ನಷ್ಟು ಬಂದಿದ್ದರೆ ಚೆನ್ನಾಗಿರುತ್ತಿತ್ತು ಅನ್ನುತ್ತಾನೆ. ಮೇಘದೂತದಲ್ಲಿ ಯಕ್ಷನು 'ವಕ್ರಃ ಪಂಥಾ ಯದಪಿ' (ದಾರಿ ಸುತ್ತಾದರೂ ಚಿಂತೆಯಿಲ್ಲ) ಸುಂದರವಾದ ಉಜ್ಜಯಿನಿಯನ್ನು ನೋಡಿಹೋಗು ಎಂದು ಮೇಘಕ್ಕೆ ಹೇಳುತ್ತಾನೆ. ಹಾಗೆಯೇ ಶ್ರೀ ಶಾಸ್ತ್ರಿಗಳ ಹಲವು ಸೂಕ್ತಿಗಳೂ ಅಭಿಪ್ರಾಯಗಳೂ ಅಪ್ರಕೃತವೆಂದು ಕಂಡುಬಂದರೂ ಆದರಣೀಯವೇ.

ಗ್ರಂಥಕ್ಕೆ ಕಳೆಕಟ್ಟಿರುವ ಇನ್ನೊಂದು ಅಂಶವನ್ನು ಮರೆಯುವುದಕ್ಕಾಗುವುದಿಲ್ಲ. ಅಲ್ಲಲ್ಲೆ ಮತ್ತು ಅಧ್ಯಾಯಗಳ ಕೊನೆಯಲ್ಲಿ ಪ್ರಸಿದ್ಧ ಕಾವ್ಯಗಳ ಮಾತುಗಳು ಸಂದರ್ಭೋಚಿತವಾಗಿ ಕಾಣಿಸಿಕೊಳ್ಳುತ್ತವೆ. ಪ್ರಕೃತ ವಿಷಯಪ್ರತಿಪಾದನೆಯ ಜೊತೆಗೆ, ಆ ಕಾವ್ಯಗಳ ಪರಿಚಯವಿದ್ದವರಿಗೆ, ಆ ಉಲ್ಲೇಖಗಳು ಅಲೌಕಿಕವಾದ ಮನಃಪ್ರಸಾದವನ್ನೊದಗಿಸುತ್ತವೆ.

ಬಂಕಿಮರ ಕೃತಿಗಳಲ್ಲಿ ನಮ್ಮ ಸಂಸ್ಕೃತ ಪ್ರಾಚೀನ ಕಾವ್ಯಗಳ ಪ್ರಭಾವ ಚೆನ್ನಾಗಿಯೇ ಕಾಣಬರುತ್ತದೆಯೆಂಬ ಅಂಶವನ್ನು ಶ್ರೀ ಶಾಸ್ತ್ರಿಗಳು ಸಂದರ್ಭೋಚಿತವಾಗಿ ಜ್ಞಾಪಿಸುತ್ತಾರೆ. 'ಕಪಾಲಕುಂಡಲಾ' ಭವಭೂತಿಯ 'ಮಾಲತೀ ಮಾಧವ'ವನ್ನು ಜ್ಞಾಪಕಕ್ಕೆ ತರುವುದೆಂದು ತಿಳಿಸಿದ್ದಾರೆ (ಪು. ೧೬೫ ಅಡಿಟಿಪ್ಪಣಿ). 'ವಿಷವೃಕ್ಷ'ದ ಶಯ್ಯಾಗೃಹದ ಘಟನೆಗಳು ಭಾಸನ 'ಸ್ವಪ್ನವಾಸವದತ್ತಾ' ಮತ್ತು ಭವಭೂತಿಯ 'ಉತ್ತರರಾಮ ಚರಿತೆ'ಗಳನ್ನು ಜ್ಞಾಪಕಕ್ಕೆ ತರುತ್ತವೆಯೆನ್ನಿಸುತ್ತದೆಯಲ್ಲವೆ?

ಬಂಗಾಳಿಭಾಷೆ ಬಂಗಾಳಿಗಳಿಗೆ 'ಬಿಚಿತ್ರ' (ಮನೋಹರ); ಕೆಲವೆಡೆ ನಮಗೆ ಅದು 'ವಿಚಿತ್ರ'. ಬಂಗಾಳಿಯನ್ನು ಹೆಚ್ಚು ಪರಿಚಯಮಾಡಿಕೊಂಡಿರುವವರು ಬಂಗಾಳಿ ಗ್ರಂಥಗಳ ವಿಷಯವಾಗಿ ಬರೆಯುವಾಗ ಕೆಲವು ಬಾರಿ ಬಂಗಾಳಿ ಪದಗಳನ್ನು ಬಂಗಾಳಿ ಅರ್ಥದಲ್ಲೇ ಉಪಯೋಗಿಸುವಂತಾಗುವುದು ಸಹಜ. 'ಕ್ಷುದ್ರ' ಎಂದರೆ ಪ್ರಮಾಣದಲ್ಲಿ ಚಿಕ್ಕದು ಎಂದು, 'ಕ್ಷುದ್ರಕಥೆ' (ಪು. ೧೧೬) ಎಂಬುದನ್ನು ಈ ಅರ್ಥದಲ್ಲಿ ಗ್ರಹಿಸಬೇಕು. ಅದು 'ಸಣ್ಣ ಕತೆ'ಯಲ್ಲ. 'ವಿಷಯಿ' (ಪು. ೮೩) ಎಂದರೆ ಆಸ್ತಿಪಾಸ್ತಿ ದುಡ್ಡುಕಾಸುಗಳಲ್ಲಿ ಆಸಕ್ತನಾದವನು, ವಿಷಯಾಸಕ್ತನಲ್ಲ. ವಿಷಯ ಎನ್ನುವುದನ್ನು ಐಹಿಕಸಂಪತ್ತು ಎಂಬ ಅರ್ಥದಲ್ಲಿ ಉಪಯೋಗ ಬಂಗಾಳಿಯಲ್ಲಿ ಸಾಮಾನ್ಯ. 'ನವೀನಾ' (ಪು. ೧೦೦) ಎಳೆಯ ವಯಸ್ಸಿನವಳು, ನವವಧು. ಆದರೆ ಇಂತಹ ಪ್ರಯೋಗಗಳು ಅಪರೂಪ; ಅವುಗಳಿಂದ ತೊಂದರೆಯೂ ಆಗಿಲ್ಲ.

ಗ್ರಂಥವನ್ನು ಮುಗಿಸಿರುವುದು ಬಂಕಿಮರ ಮತ್ತು ರವೀಂದ್ರರ ಸಮಾಗಮದ ಒಂದು ಮನೋಹರ ಘಟನೆಯೊಡನೆ. ಕೊನೆಗೊಂದು ಉಪನಿಷದ್ವಾಕ್ಯದ ಕನ್ನಡ ಅನುವಾದ. ಎಂತಹ ಹಾರೈಕೆ! ತರುಣಸಾಹಿತಿಗಳಿಗೆ ವೃದ್ಧಸಾಹಿತಿಯ ಸ್ವಾಗತ ಮತ್ತು ಆಶೀರ್ವಾದ. ವಿದ್ವಜ್ಜನದಲ್ಲಿ ವಿದ್ವೇಷ ತೊಲಗಿ ಓದು ಓಜಸ್ಸಿನಿಂದ ಕೂಡಿ ಬರಬೇಕು, ನಿಜ.

ಈ ಅಮೂಲ್ಯವಾದ ಗ್ರಂಥವನ್ನು ನೀಡಿದ ಶ್ರೀ ಶಾಸ್ತ್ರಿಗಳಿಗೆ ಕನ್ನಡಿಗರು ಚಿರ ಋಣಿಗಳು. ಇಂತಹ ಗ್ರಂಥಗಳ ಸಂತತಿ ಬೆಳೆಯಬೇಕು. ಈ ಗ್ರಂಥ ಬಂಗಾಳಿಗೆ ಭಾಷಾಂತರವಾದರೆ, ಬಾಂಧವ್ಯ ಎರಡು ದಿಕ್ಕುಗಳಿಂದಲೂ ಬೆಳೆದು ದೃಢವಾಗುವುದರಲ್ಲಿ ಸಂಶಯವಿಲ್ಲ.

ಸಿ. ಆರ್. ಶ್ರೀನಿವಾಸ ಅಯ್ಯಂಗಾರ್

ಮಹಾಕ್ಷತ್ರಿಯ

ಮಹಾಕ್ಷತ್ರಿಯ ಒಂದು ಪೌರಾಣಿಕ ಕಾದಂಬರಿ. ಖ್ಯಾತನಾಮರಾದ ಶ್ರೀ ದೇವುಡು ನರಸಿಂಹಶಾಸ್ತ್ರಿಗಳ ಸುವರ್ಣ ಲೇಖನಿಯಿಂದ ರೂಪುತಾಳಿನಿಂತ ಅಚ್ಚುಕಟ್ಟಾದ ಸುಂದರ ಕಾದಂಬರಿ. ಕನ್ನಡಕ್ಕೆ ಹೊಸತಾದ, ಅಷ್ಟೇ ಏಕೆ, ಭಾರತೀಯ ಸಾಹಿತ್ಯ ಭಂಡಾರಕ್ಕೆ ರತ್ನಪ್ರಾಯವಾದ ಕೃತಿ. ನಮ್ಮ ಸಂಸ್ಕೃತಿಯ ಸಾರವನ್ನೆಲ್ಲಾ ಎರಕ ಹೊಯ್ದಿದ್ದಾರೆ ದೇವುಡು. ವಸ್ತು ಪೌರಾಣಿಕವಾದರೂ, ಅದನ್ನು ಸರಳ ಸುಂದರ ಶೈಲಿಯಲ್ಲಿ ಬೆಳಸಿಕೊಂಡು ಹೋಗಿದ್ದಾರೆ.

ದೇವುಡು ಸಂಸ್ಕೃತದಲ್ಲಿಯೂ ಇಂಗ್ಲಿಷಿನಲ್ಲಿಯೂ ಉದ್ದಾಮ ಪಂಡಿತರಾಗಿದ್ದರು. ಮಹಾ ಮಹೋಪಾಧ್ಯಾಯ ಶ್ರೀ ವೈದ್ಯನಾಥಶಾಸ್ತ್ರಿಗಳ ಬಳಿಯಲ್ಲಿ ಮೀಮಾಂಸಾ ಶಾಸ್ತ್ರವನ್ನು ಅಭ್ಯಾಸಮಾಡಿದ್ದರು. ಸಾಹಿತ್ಯ, ಪುರಾಣ, ವೇದಾಂತ ಎಲ್ಲವನ್ನೂ ಆಳವಾಗಿ ಅಭ್ಯಾಸಮಾಡಿ ಅರಗಿಸಿಕೊಂಡಿದ್ದರು. ಅವರ ಲೇಖನಿಯಿಂದ ಇಂತಹ ಒಂದು ಅಮೋಘಕೃತಿ ಹೊರಬಂದುದು ಕನ್ನಡಿಗರ ಭಾಗ್ಯವೆಂದೇ ಹೇಳಬೇಕು. ದೇವುಡು ಅವರ ಬಹುಮುಖ ಪಾಂಡಿತ್ಯದ ಬಗೆಗೆ ಒಂದು ಸಂದರ್ಭವನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು.

೧೯೫೪ನೇ ವರ್ಷದ ಅಕ್ಟೋಬರ್ ತಿಂಗಳಿರಬಹುದು. ದೇವುಡು ಚನ್ನರಾಯ ಪಟ್ಟಣದ ಕರ್ಣಾಟಕ ಸಂಘದ ಆಶ್ರಯದಲ್ಲಿ ತಮ್ಮ ಅಕ್ಷರ ಪ್ರಚಾರ ಯೋಜನೆಗೆ ಕಾರ್ಯಕರ್ತರನ್ನು ತರಪೇತಿಮಾಡಲು ಒಂದು ಶಿಬಿರವನ್ನು ನಡೆಸುತ್ತಿದ್ದರು. ಸುಮಾರು ೬೦–೭೦ ಮಂದಿ ಕಾರ್ಯಕರ್ತರು ಅಲ್ಲಿ ಶಿಕ್ಷಣ ಪಡೆಯುತ್ತಿದ್ದರು. ಆಗ ಹಾಸನದ ಜಿಲ್ಲಾಧಿಕಾರಿಗಳಾಗಿದ್ದ ದಿವಂಗತ ಶ್ರೀ ಟಿ. ರಾಮಯ್ಯನವರು ಕರ್ಣಾಟಕ ಸಂಘಗಳಿಗೆ ತುಂಬಾ ಪ್ರೋತ್ಸಾಹ ನೀಡುತ್ತಿದ್ದರು. ದೇವುಡು ಅವರ ಪ್ರಚಾರ ಕಾರ್ಯಕ್ಕೆ ಸರ್ಕಾರದಿಂದ ಸ್ವಲ್ಪ ಧನಸಹಾಯವನ್ನೂ ಅವರು ಕೊಡಿಸಿದ್ದರು. ಅದೇ ಕಾಲದಲ್ಲಿ ಅಲಹಾಬಾದ್ ವಿಶ್ವವಿದ್ಯಾನಿಲಯದ ಉಪಕುಲಪತಿಯಾಗಿದ್ದ ಡಾ. ಅಮರನಾಥ ಝಾ ಅವರು ಮೈಸೂರು ವಿಶ್ವವಿದ್ಯಾನಿಲಯದ ಆ ವರ್ಷದ ಘಟಿಕೋತ್ಸವಕ್ಕೆ ದಯಮಾಡಿ ಸಿದ್ದರು. ಶ್ರವಣಬೆಳಗೊಳಕ್ಕೆ ಹೋಗುವ ಮಾರ್ಗದಲ್ಲಿ ಜಿಲ್ಲಾಧಿಕಾರಿಗಳು ಸ್ವಲ್ಪ ಹೊತ್ತು ಡಾ. ಝಾರವರಿಗೂ, ಕಾರ್ಯಕರ್ತರಿಗೂ ಭೇಟಿ ಏರ್ಪಡಿಸಿದ್ದರು.

ದೇವುಡು, ಝಾರವರ ನಡುವೆ 'ಭಾರತೀಯ ದರ್ಶನ'ದ ಬಗೆಗೆ ವಿಚಾರ ವಿನಿಮಯ ನಡೆಯಿತು. ಅದೊಂದು ರಸದೌತಣ, ದೇವುಡುರವರ ಜ್ಞಾನ ಸಂಪತ್ತನ್ನೂ, ವಾಗ್ವೈಖರಿಯನ್ನೂ ಕಂಡು ಡಾ. ಅಮರನಾಥ ಝಾ ಮುಗ್ಧರಾಗಿ ಹೋದರು. 'ನಮ್ಮ ತಂದೆ ದೊಡ್ಡ ಸಂಸ್ಕೃತ ವಿದ್ವಾಂಸರಾಗಿದ್ದರು. ಆದರೆ ನನಗೆ ಮೀಮಾಂಸೆ ಏನೂ ಗೊತ್ತಿಲ್ಲ' ಎಂದು ಸಂಕೋಚದಿಂದ ನುಡಿದರು. "ನಿಮ್ಮ ಪಾಂಡಿತ್ಯ ಅಗಾಧವಾದುದು. ಅದನ್ನೆಲ್ಲಾ ಜನರಿಗೆ ಕೊಡುವ ಪ್ರಯತ್ನಮಾಡಿ" ಎಂದು ಸೂಚಿಸಿ ದೇವುಡು ಅವರನ್ನು ಅಭಿನಂದಿಸಿದರು.

ಜನಸಾಮಾನ್ಯರಿಗೆ ಭಾರತೀಯ ಸಂಸ್ಕೃತಿಯ ಹಿರಿಮೆಯನ್ನು ತಿಳಿಸಲು ದೇವುಡು ಆದಷ್ಟು ಪ್ರಯತ್ನ ಮಾಡಿದರು. ಚನ್ನರಾಯಪಟ್ಟಣದ ತಾಲ್ಲೋಕಿನಲ್ಲಿಯೇ ಅವರು ಪ್ರವಾಸಮಾಡಿ ಗೀತೆ, ಉಪನಿಷತ್ತು, ಪುರಾಣಗಳು, ಹಾಗೂ ಮಹಾಕಾವ್ಯಗಳನ್ನು ಕುರಿತು ಉಪನ್ಯಾಸ ಮಾಡಿದರು. ಜನತೆಗೆ ನಮ್ಮ 'ದರ್ಶನ'ದ ಪರಿಚಯ ಮಾಡಿಸಲು ಅವರು ತವಕಿಸುತ್ತಿದ್ದರು. ಅವರೊಂದಿಗೆ ಸಂಭಾಷಿಸುವುದೆಂದರೆ ಅದೊಂದು ದೊಡ್ಡ ಹಬ್ಬ. ವಾದದಲ್ಲಿ, ಸರಸ ಸಂಭಾಷಣೆಯಲ್ಲಿ ಚತುರರು ದೇವುಡು. ಕಾಲ ದೇಶಗಳ ಪರಿವೆಯಿಲ್ಲದೆ ಗಂಟೆಗಟ್ಟಲೆ ಸಂಭಾಷಣೆಯಲ್ಲಿ ತೊಡಗಿರುತ್ತಿದ್ದ ಅವರ ಪ್ರತಿಭೆ ಅನನ್ಯ ಸಾಧಾರಣವಾದುದು.

ಸಾಹಿತ್ಯ, ವೇದಾಂತ, ನಾಟಕ, ರಾಜಕಾರಣ, ಕಾಮಶಾಸ್ತ್ರದಿಂದ ಹಿಡಿದು ಗೀತಾಶಾಸ್ತ್ರದ ತನಕ ಅವರಿಗೆ ಅದ್ಭುತ ಪರಿಶ್ರಮವಿತ್ತು. ನಾಟಕ, ಸಿನಿಮಾ ಕ್ಷೇತ್ರಗಳಲ್ಲಿಯೂ ಅವರು ಹೆಸರು ಸಂಪಾದಿಸಿದ್ದರು. 'ಮಂಡೋದರಿ'ಯ ನಾಟಕದಲ್ಲಿ ರಾವಣನ ಪಾತ್ರ ಅವರದು. ಬ್ರಹ್ಮವಾನಿ, ನಚಿಕೇತ ಮುಂತಾದ ಸಿ. ಕೆ. ವಿ. ಅವರ ನಾಟಕಗಳಲ್ಲಿಯೂ ಅವರು ಪಾತ್ರವಹಿಸಿದ್ದರು. 'ರಂಗಭೂಮಿ ಮತ್ತು ನಮ್ಮ ಪುಸ್ತಕ' ಪತ್ರಿಕೆಗಳ ಸಂಪಾದಕರಾಗಿಯೂ ಕೆಲಸಮಾಡಿದ್ದರು. ದಾರಿಯಲ್ಲಿ ಸಿಕ್ಕಿದರೆ ಸಾಕು ಅವರಿಂದ ಬಿಡಿಸಿಕೊಂಡು ಪಾರಾಗಲು ಸಾಧ್ಯವಾಗುತ್ತಲೇ ಇರಲಿಲ್ಲ. ಸಾಕ್ರೆಟೀಸನ ಹಾಗೆ ಸಂಭಾಷಣೆಯಲ್ಲಿ ತೊಡಗುತ್ತಿದ್ದರು. ಹಿಂದೆ ಇದ್ದ ಸಾಕ್ರಟೀಸ್ ಕುರೂಪಿ ಆದರೆ ಈ ನವ ಸಾಕ್ರಟೀಸ್ ತೇಜಸ್ವಿ; ಆಜಾನುಬಾಹು. ಕಂಚಿನಂತಹ ಕಂಠ, ಅವರು ಸ್ನೇಹಿತರನ್ನು ತಮ್ಮ ತೋಳಿನಲ್ಲಿ ಬಾಚಿ ಅಪ್ಪಿಕೊಂಡರೆ ಅವರಗತಿ ತೀರಿದಹಾಗೆ.

ಜೀವನದಲ್ಲಿ ದೇವುಡು ಅಷ್ಟೇನೂ ಭಾಗ್ಯಶಾಲಿಯಾಗಿರಲಿಲ್ಲ. ಆರ್ಥಿಕ ದೃಷ್ಟಿಯಿಂದ ಅವರ ಸ್ಥಿತಿ ಒಮ್ಮೊಮ್ಮೆ ಕಠಿಣವಾಗಿರುತ್ತಿತ್ತು. ಎಂತಹ ಸಂದರ್ಭದಲ್ಲಿಯೂ ಅವರು ಇನ್ನೊಬ್ಬರಿಗೆ ತಲೆ ಬಾಗಲು ಇಚ್ಛಿಸುತ್ತಿರಲಿಲ್ಲ. ಹಂಗಿನಬಾಳು ಅವರಿಗೆಂದೂ ಹಿಡಿಸಲಿಲ್ಲ. ಸ್ವಾತಂತ್ರ್ಯ ಅವರ ಜನ್ಮಸಿದ್ಧವಾದ ಹಕ್ಕು. ಎಂ. ಎ. ಪದವೀಧರರಾಗಿದ್ದ ಅವರು ಯಾವ ಹುದ್ದೆಗೆ ಸೇರಿದ್ದರೂ, ಕೊನೆಯವೇಳೆಗೆ ೪೦೦–೫೦೦ರೂ ವೇತನ ಪಡೆಯುವುದು ಸಾಧ್ಯವಾಗಿತ್ತು. ಅವರು ಅದಕ್ಕಾಗಿ

ಒಪ್ಪಾಡಲಿಲ್ಲ; ಯಾಚಿಸಲಿಲ್ಲ. "ನನ್ನ ಸೇವೆ ಬೇಡವಾದರೆ ನಷ್ಟ ದೇಶಕ್ಕೇ ಹೊರತು 'ದೇವುಡು 'ವಿಗಲ್ಲ' ಎಂದು ಒಮ್ಮೊಮ್ಮೆ ಮಾತಾಡುತ್ತಿದ್ದುದುಂಟು.

ತಮ್ಮ ಸಲುವಾಗಿ ದೇವುಡು ಯಾರನ್ನೂ ಬೇಡಲಿಲ್ಲ. ಸ್ನೇಹಿತರಿಗಾಗಿ ಇದ್ದು ಬದ್ದುದನ್ನೆಲ್ಲಾ ವೆಚ್ಚಮಾಡಿ ಬರಿಕೈ ಮಾಡಿಕೊಳ್ಳುವ ಚಟ ಅವರದು. ಐದು ರೂಪಾಯಿ ತಮ್ಮಲ್ಲಿದ್ದರೆ ಸಾಕು, ಇದ್ದಬದ್ದ ಸ್ನೇಹಿತರಿಗೆಲ್ಲಾ ತಿಂಡಿತೀರ್ಥಗಳ ಸಮಾರಾಧನೆ! ಎದುರಿಗೆ ಬಂದ ಸ್ನೇಹಿತರನ್ನೆಲ್ಲಾ ಕರೆದುಕೊಂಡು ಫಲಾಹಾರ ಮಂದಿರಕ್ಕೆ ಹೋಗುತ್ತಿದ್ದರು. ದೇವುಡು ಸ್ನೇಹಪರರು. ಅವರು ಪಾಂಡಿತ್ಯದಲ್ಲಿ, ಅನುಭವದಲ್ಲಿ ಬಲುದೊಡ್ಡವರಾದರೂ, ಸರಳತೆಯ ಮೂರ್ತಸ್ವರೂಪವೆನಿಸಿದ್ದರು. ಅವರಿಗೆ ಅಹಂಕಾರವೂ ಇರಲಿಲ್ಲ; ಹಾಗೆಯೇ ದಾಕ್ಷಿಣ್ಯಪರತೆಯೂ ಇರಲಿಲ್ಲ.

'ಮಹಾಕ್ಷತ್ರಿಯ ಕಾದಂಬರಿ'ಯ ಕರ್ತೃಗಳಾದ ದೇವುಡು ಅವರ ಮನಃ ಪರಿಪಾಕ, ವ್ಯಕ್ತಿತ್ವ, ಇಂತಹುದು. 'ಸರಳ ಜೀವನ, ಉದಾತ್ತ ವಿಚಾರಗಳ ಚಿಂತನ' ಅವರ ವ್ಯಕ್ತಿತ್ವದ ವಿಶಿಷ್ಟಗುಣ. ದೇವುಡು ಸ್ವಭಾವವನ್ನು ಚೆನ್ನಾಗಿ ತಿಳಿದುಕೊಳ್ಳದೆ, ಅವರ ಗ್ರಂಥಗಳ ಶ್ರೇಷ್ಠತೆಯನ್ನೂ ಒರೆಹಚ್ಚುವುದು ಸುಲಭವಲ್ಲ.

ಈ ಕಾದಂಬರಿಯಲ್ಲಿ ನಾಯಕ ನಹುಷನು ಮಹಾಕ್ಷತ್ರಿಯನೆನ್ನಿಸಿಕೊಂಡಿದ್ದಾನೆ. ಮಾನವೇಂದ್ರನಾದ ಆತನು ಮಾನವಲೋಕದ ಹಿರಿಮೆಯನ್ನು ದೇವಲೋಕದಲ್ಲಿ ಸ್ಥಾಪಿಸಿದ ಮಹಾನುಭಾವ. ಈ ಮಾನವೇಂದ್ರನ ಮುಂದೆ ದೇವೇಂದ್ರ ಒಬ್ಬ ಸಾಮಾನ್ಯ ವ್ಯಕ್ತಿಯಾಗಿ ಕಾಣುತ್ತಾನೆ. ದೇವಲೋಕದಲ್ಲಿ ತನಗೆ ದೊರೆತ ಅವಕಾಶ ವನ್ನು ತನ್ನ ಕುಲದ ಶ್ರೇಷ್ಠತೆಯನ್ನು ಹೆಚ್ಚಿಸಿಕೊಳ್ಳಲು ಉಪಯೋಗಿಸಿಕೊಂಡನು. ಚ್ಯವನಾದಿ ಮಹರ್ಷಿಗಳ ಉಪದೇಶದಿಂದ, ಧರ್ಮಾಚರಣೆಯಿಂದ ತಾನು ಮೊದಲೇ ಪಡೆದಿದ್ದ ಅಮೂಲ್ಯವಾದ ಜ್ಞಾನದ ಭಂಡಾರವನ್ನು ಇನ್ನೂ ಶ್ರೀಮಂತವನ್ನಾಗಿ ಮಾಡಿಕೊಂಡನು. ಇಂದ್ರನಿಂದ, ಯಮನಿಂದ, ಬೃಹಸ್ಪತಿಯಿಂದ, ಸಪ್ತರ್ಷಿಗಳಿಂದ ತನಗೆ ಬೇಕಾದುದನ್ನೆಲ್ಲಾ ಸಂಗ್ರಹಿಸಿಕೊಂಡು, ತನ್ನ ಜೀವನವನ್ನು ಸಾರ್ಥಕಪಡಿಸಿ ಕೊಂಡನು. ದೇವಲೋಕದಲ್ಲಿದ್ದರೂ, ಮಾನವಧರ್ಮವನ್ನು ಮಾತ್ರ ಬಿಡದೇ ಜಾಗರೂಕನಾಗಿದ್ದನು.

ದೇವತೆಗಳಿಗೆ ಆಡಳಿತವೂ ಬಾರದು. ಇಂದ್ರನು ಬರಿಯ ಸುಖಲೋಲುಪನಾಗಿ, ಆಡಳಿತದಲ್ಲಿ ಹೆಚ್ಚಿನ ಆಸಕ್ತಿ ಇಟ್ಟಿರಲಿಲ್ಲವೇನೋ ಎನ್ನಿಸುತ್ತದೆ. ಅಲ್ಲದೆ ದೇವತೆಗಳಿಗೂ ಅಸೂಯೆ ತಪ್ಪಿದ್ದಲ್ಲ. ಸಮಯಬಂದಾಗ ಉಪಯೋಗಿಸಿಕೊಂಡು, ಬೇಡವಾದಾಗ ತಳ್ಳಿಬಿಡುವ ದೇವತೆಗಳ ಕ್ಷುಲ್ಲಕತನವನ್ನು ಬಯಲಿಗೆಳೆದು ಅವರಿಗೆ ಬುದ್ಧಿಗಲಿಸಿದ. ಅವರ ಒಳಸಂಚಿಗೆ ತಾನು ಒಳಗಾಗದೇ ತನ್ನ ಆಡಳಿತ ಸಾಮರ್ಥ್ಯವನ್ನೂ, ವಿವೇಚನಾ ಶಕ್ತಿಯನ್ನೂ ಚೆನ್ನಾಗಿ ಪ್ರಕಟಿಸಿ 'ಭಲೆ ನಹುಷ! ಅಧಿಕಾರವಿದ್ದರೆ ದೊಡ್ಡದಲ್ಲ; ಅದನ್ನು ಸರಿಯಾಗಿ ಉಪಯೋಗಿಸುವುದಕ್ಕೂ ಸಾಮರ್ಥ್ಯ ಬೇಕು' ಎಂದು ಸ್ವತಃ ದೇವತೆಗಳಿಂದಲೇ ಹೊಗಳಿಸಿಕೊಳ್ಳುವ ಪುಣ್ಯ ಅವನಿಗಿತ್ತು.

ದೇವೇಂದ್ರನ ಧರ್ಮಪತ್ನಿ ಶಚೀದೇವಿ ನಹುಷೇಂದ್ರನ ದೊಡ್ಡತನವನ್ನು ಮೆಚ್ಚಿಕೊಂಡಳು. ಬೃಹಸ್ಪತ್ಯಾಚಾರ್ಯರು, ಶುಕ್ರಾಚಾರ್ಯರು ಆತನನ್ನು ಹೊಗಳಿದರು. ನಹುಷನ ನ್ಯಾಯನಿಷ್ಠೆಗೆ, ಮನಸ್ಸಿನ ಸಮತೆಗೆ ಸಪ್ತರ್ಷಿಗಳೂ ಚಕಿತರಾದರು. ಪರಿಗ್ರಹಕ್ಕಿಂತ ತ್ಯಾಗವೇ ದೊಡ್ಡದು. ಭೋಗದಿಂದ ಶಕ್ತಿಕ್ಷಯ, ತೇಜಸ್ಸಿನ ಹ್ರಾಸ. ಭೋಗವನ್ನು ನಿರಾಕರಿಸಿ ತ್ಯಾಗವನ್ನು ಎತ್ತಿಹಿಡಿದ ನಹುಷನು 'ಅತೀಂದ್ರ' ಎನ್ನಿಸಿಕೊಂಡನು. ತನ್ನಪತಿ ದೇವೇಂದ್ರನಿಗಿಂತಲೂ ನಹುಷನು ಹೆಚ್ಚು ಎಂಬ ಭಾವನೆ ಶಚಿಯಲ್ಲಿ ಅಂಕುರಗೊಳ್ಳುವಂತೆ ಆತನ ನಡತೆ ನಿರ್ದುಷ್ಟವುಕ್ತ. ಭಯಗ್ರಸ್ತಳಾದ 'ಪರವಧು'ವಿಗೆ ಅಭಯದ ವಜ್ರಕವಚವಿಟ್ಟು, ಆಕೆಯಿಂದಲೂ ವರಗಳನ್ನು ಪಡೆದುಕೊಂಡನು.

ದೇವುಡು ಅವರ ಈ ಕಲ್ಪನೆ ಅದ್ಭುತ ರಮ್ಯವಾಗಿದೆ. ನಹುಷನು ವಿಷಯ ಲಂಪಟನಾಗಿ ಶಚಿಯನ್ನು ಬಯಸಿ ಶಾಪಗ್ರಸ್ತನಾದನೆಂಬ ಸಾಮಾನ್ಯ ಪ್ರಚಲಿತ ಸಂದರ್ಭವನ್ನು ಕೈಬಿಟ್ಟು, ನಹುಷನ ನಿಜವಾದ ವ್ಯಕ್ತಿತ್ವದ ಪ್ರಕಾಶನಕ್ಕೆ ಎಡೆ ಮಾಡಿಕೊಟ್ಟಿರುವುದು ಉಚಿತವಾಗಿಯೇ ಇದೆ. ನಹುಷ ಧರ್ಮಪ್ರಭು; ಏಕಪತ್ನೀ ವ್ರತಸ್ಥ. ವಿರಜಾದೇವಿಯಂತಹ ಭಾಗ್ಯಶಾಲಿನಿಯಾದ ಸಾಧ್ವೀಮಣಿ ಆತನ ಛಾಯಾನುವರ್ತಿಯಾಗಿರುವಾಗ, ನಹುಷನು ದಾರಿದಪ್ಪಿದನೆಂದು ಹೇಳುವುದು ಆ ರಾಜರ್ಷಿಯ ಧವಳ ಕೀರ್ತಿಯನ್ನು ಮಲಿನಗೊಳಿಸಿದಂತಾಗುತ್ತದೆ. ಇದು ಅಸಂಭವ. ಕುತೂಹಲಕ್ಕಾಗಿ ಆತನು 'ಶಚಿ' ರಹಸ್ಯವನ್ನರಿಯಲು ಆಶಿಸಿದ. ದೇವತೆಗಳ ಮೋಸದ ಮುಖವಾಡವನ್ನು ಕಳಚಿ, ಅವರ ನಿಜ ಸ್ವರೂಪವನ್ನು ಪ್ರಕಟಿಸುವುದೇ ಆತನು ಹಾಗೆ ಮಾಡಿದುದರ ಉದ್ದೇಶವೆಂಬ ಕಲ್ಪನೆ ಸಾಧುವಾಗಿದೆ. ಶಚಿಗೆ ಪತಿಯನ್ನು ದೊರಕಿಸಿಕೊಟ್ಟನು. ಮೂಲೆ ಗುಂಪಾಗಿ ಎಲ್ಲಿಯೋ ಅವಿತಿದ್ದ ಇಂದ್ರನನ್ನು ಮಹಾವಿಪತ್ತಿನಿಂದ ಪಾರುಮಾಡಿ, ಆತನನ್ನು ಅಮರಾವತಿಗೆ ಕರೆಸಿಕೊಂಡನು. ತನ್ನ ಅಧಿಕಾರವನ್ನು ಪ್ರಯೋಗಿಸುವ ಇಚ್ಛೆ ಆತನಿಗೆ ಸಾಮಾನ್ಯವಾಗಿರಲಿಲ್ಲ. ಆದರೆ ಪರಿಸ್ಥಿತಿಯ ಒತ್ತಾಯದಿಂದ ಅದನ್ನು ಪ್ರಯೋಗಿಸಬೇಕಾಗಿ ಬಂದಾಗ, ಸ್ವಲ್ಪವೂ ಧೃತಿಗೆಡದೆ, ದೃಢವಾದ ನಿರ್ಧಾರವನ್ನು ಕೈಗೊಂಡುದು ಆತನ ಆಡಳಿತ ಸಾಮರ್ಥ್ಯವೆಷ್ಟು ಎಂಬುದನ್ನು ತೋರಿಸುತ್ತದೆ. ತನ್ನ ಪರಮಾಧಿಕಾರವನ್ನು ಉಪಯೋಗಿಸಿ ಹತ್ಯೆಯನ್ನು ಧ್ವಂಸಮಾಡಿ, ಇಂದ್ರನನ್ನು ಕರೆಸಲೇಬೇಕೆಂದು ಆತನು ಘೋಷಿಸಿದಾಗ ದೇವಲೋಕವೆಲ್ಲ ಒಮ್ಮೆ ಕಂಪಿಸಿತು. ಆಚಾರ್ಯದ್ವಯರು ಸ್ತಂಭಿತರಾದರು. ಅಗ್ನಿವಾಯುಗಳಿಗೆ ತಮ್ಮ ಅಧಿಕಾರಗಳ ಸ್ವಸ್ವರೂಪ ಜ್ಞಾನ ಉದಯಿಸಿತು. ಹತವೀರ್ಯರಾಗಿದ್ದ ಅವರು ಧೈರ್ಯಸಾಹಸಗಳನ್ನು ತಂದುಕೊಂಡು "ಮೊದಲೇ ಹೀಗೆ ಆಜ್ಞೆಮಾಡಿದ್ದರೆ ನಾವು ತಪ್ಪದೇ ನೆರವೇರಿಸುತ್ತಿದ್ದೆವು. ಈ ಮೊದಲು ಇಂತಹ ಅನುಜ್ಞೆಕೊಟ್ಟವರೇ ಇಲ್ಲ" ಎಂದುಕೊಂಡು ಕರ್ತವ್ಯತತ್ಪರರಾದರು.

ದೇವತೆಗಳಿಗೂ ತೋಚದೆ ಪೆಚ್ಚುನೋರೆ ಹಾಕಿಕೊಂಡು ಕುಳಿತಿದ್ದ ಸಂಧಿ

ಕಾಲದಲ್ಲಿ, ನಹುಷ ಅಧಿಕಾರವನ್ನು ಹೇಗೆ ಉಪಯೋಗಿಸಿಕೊಳ್ಳಬೇಕು ಎಂಬುದನ್ನು ತೋರಿಸಿಕೊಟ್ಟ. ದೇವೇಂದ್ರನು ಬಂದಾಗ ನಹುಷನು ಏನು ಮಾಡುವನೋ ಎಂದು ಚಿಂತಿಸುತ್ತಿದ್ದಾಗ ತಾನೇ ಅವನಿಗಾಗಿ ಸಿಂಹಾಸನವನ್ನು ತ್ಯಾಗಮಾಡಿದನು.

ವಿರಜಾದೇವಿ ನಹುಷನ ಧರ್ಮಪತ್ನಿ. ದೇವಕನ್ಯೆಯಾದರೂ ಮನುಷ್ಯಲೋಕದ ಧರ್ಮವನ್ನು ಬಿಡಲಿಲ್ಲ. ನಹುಷನನ್ನು ಸದಾ ಅನುಸರಿಸುತ್ತ ಆತನ ಧರ್ಮ ಸಂಪಾದನಾ ಕಾರ್ಯದಲ್ಲಿ ನೆರವಾಗಿದ್ದಳು. ಪತಿಗೆ ಇಂದ್ರಪದವಿ ಬಂದುದು ಅವಳಿಗೆ ಸಂತೋಷ. ಅದನ್ನು ಬಿಡಬೇಕಾಗಿ ಬಂದಾಗ ಆಕೆಯು ತನ್ನ ಸಮ್ಮತಿಯನ್ನು ನೀಡಲು ಹಿಂಜರಿಯಲಿಲ್ಲ. ಇಂದ್ರಪದವಿಯನ್ನು ಬಿಟ್ಟಮೇಲೆ, ತಾನು ಮತ್ತೆ ರಾಜ್ಯವಾಳಲು ನಹುಷನು ಸಿದ್ಧನಾಗಿರಲಿಲ್ಲ. ಮಗನಾದ ಯಯಾತಿಗೆ ಅದನ್ನು ಬಿಟ್ಟುಕೊಟ್ಟಿದ್ದನು. ನಹುಷನು ಆರಿಸಿಕೊಂಡದ್ದು ತಪಸ್ಸು, ಅರಣ್ಯವಾಸ. ವಿರಜಾದೇವಿಗೆ ಅದೂ ಸಂತೋಷಕರವಾಗಿಯೇ ಇತ್ತು. ವಿರಜೆಯಂತಹ ಸತೀರತ್ನವನ್ನು ಪಡೆದಿದ್ದ ನಹುಷನು ಇಂದ್ರಪತ್ನಿಯಾದ ಶಚೀದೇವಿಯನ್ನು ಬಯಸಿದನೆಂದು ಭಾವಿಸುವುದು ಮೂರ್ಖತನದ ಪರಮಾವಧಿಯಲ್ಲವೆ?

ಸಪ್ತರ್ಷಿ ಶಿಬಿಕಾರೋಹಣ ಕಾಲದಲ್ಲಿ ಆತನಿಗೆ ಸಮಾಧಿ ಭಂಗವಾಗುವಂತೆ ನಿಯತಿ ಏರ್ಪಡಿಸಿದಳು. ವಿಧಿಯ ಇಚ್ಛೆಗೆ ತಲೆಬಾಗಿ, ಸ್ವಲ್ಪ ಸಮಾಧಿಭಂಗಕ್ಕೆ ಆತನು ಒಪ್ಪಬೇಕಾಯಿತು, ಸ್ವಸಂತೋಷದಿಂದಲೇ ಅದನ್ನು ಅವನು ಅಂಗೀಕರಿಸಿದ. ಏಳನೇ ದಿನ ಸಮಾಧಿ ಭಂಗವಾಯಿತು. ಇಂದ್ರನಾದುದರಿಂದ ತನಗೆ ತಾನೇ ಶಿಕ್ಷೆ ವಿಧಿಸಿಕೊಳ್ಳಬೇಕಾಯಿತು. ಋಷಿಗಳು ಆ ಕೆಲಸವನ್ನು ಮಾಡದೆ ನಹುಷನಿಗೆ ಒಂದು ಪರೀಕ್ಷೆಯನ್ನು ಒಡ್ಡಿದರು. ಅದರಲ್ಲಿಯೂ ಆತನು ಜಯಶಾಲಿಯಾದನು. 'ಸರ್ಪ ಜನ್ಮವೇ' ಯೋಗ್ಯವೆಂದು ನಿರ್ಧರಿಸಿ ಆ ರೀತಿ ಶಿಕ್ಷೆ ವಿಧಿಸಿಕೊಂಡನು. ಭೂಲೋಕದಲ್ಲಿ ನ್ಯಾಯವಿತರಣೆ ಮಾಡಿ ಧರ್ಮ ಪ್ರಭುವೆಂಬ ಖ್ಯಾತಿಪಡೆದಿದ್ದ ಆತನು ಇಂದ್ರ ಪದವಿಯಲ್ಲಿಯೂ ಅದೇರೀತಿ ನ್ಯಾಯನಿಷ್ಠೆಯನ್ನು ಪರಿಪಾಲಿಸಿದನು. ಬೇರೆಯವರಲ್ಲಿ ನಡೆಯುವಂತೆಯೇ, ತನ್ನ ವಿಷಯದಲ್ಲಿಯೂ ನಡೆದುಕೊಂಡನು. ಆ ಬಗೆಯ ಸಮಚಿತ್ತತೆ ಸಾಮಾನ್ಯರಿಗೆ ಬರುವುದಿಲ್ಲ. ದೇವತೆಗಳೇ ಆತನನ್ನು ತಮ್ಮ ನಾಯಕನನ್ನಾಗಿ ಆರಿಸಿಕೊಂಡರೆಂದರೆ ಅದೇನು ಸಾಮಾನ್ಯ ವಿಷಯವೆ?

ಆತನಿಗೆ ಇಂದ್ರನಾದುದರಿಂದ ಮೂರು ಬಗೆಯ ಲಾಭಗಳು ದೊರಕಿದವು: (೧) ತನ್ನ ಜ್ಞಾನಭಂಡಾರವನ್ನು ಮತ್ತಷ್ಟು ತುಂಬಿಕೊಂಡನು. (೨) ಶಾಪ ವಿಮೋಚನೆಯಾದ ಮೇಲೆ ನಹುಷ ದಂಪತಿಗಳು ದೇವಲೋಕದಲ್ಲಿ ಇಂದ್ರಸಖರಾಗಿ ನಿರಂತರವಾಗಿ ವಾಸಿಸುವ ಆಹ್ವಾನವನ್ನು ಒಪ್ಪಿಕೊಂಡನು; (೩) ಇಂದ್ರನಾದುದರಿಂದ ಸರ್ಪಕ್ಕೆ ಜಾತಿಸ್ಮಾರತ್ವ, ಇಂದ್ರಾನಂದ ಎರಡೂ ಇರತಕ್ಕದ್ದೆಂದು ವರಪಡೆದನು.

ಶಾಪವಿಮೋಚನೆ ಮಾಡಲು ಬಂದಾಗ ಇಂದ್ರನನ್ನು ಕುರಿತು ಹೇಳಿದ: "ನಾನಾಗಿ ಕೇಳಿದಾಗ ಶಾಪ ವಿಲೋಪಮಾಡುವಿಯಂತೆ. ಈಗ ನಾನೇನು

ಬೇಡಲಿಲ್ಲವಷ್ಟೆ" ಎಂದು ವಿನಯದಿಂದ ಆತನ ಹಂಗನ್ನು ನಿರಾಕರಿಸಿದನು. ಪರರಿಗೆ ಎಲ್ಲವನ್ನು ದಾನಮಾಡಬಲ್ಲವನು, ಬೇರೊಬ್ಬರಿಂದ ದಾನ ಪಡೆಯುವುದೆ? ಇಲ್ಲಿಯೂ ನಹುಷನದೇ ಮೇಲುಗೈ. ಹೇಗೆನೋಡಿದರೂ ನಹುಷನು ಅತೀಂದ್ರ?

ಇನ್ನು ದೇವುಡು ಅವರ ಶೈಲಿಯ ಬಗೆಗೆ ಒಂದು ಮಾತು. ಸಂಸ್ಕೃತಕ್ಕೆ ಒಪ್ಪುವಂತಹ, ಕನ್ನಡಕ್ಕೆ ಆಕರ್ಷಕವಾಗಬಲ್ಲ, ಒಂದು ಹೊಸಪರಿಯನ್ನು ಅವರು ಕಂಡುಕೊಂಡಿದ್ದಾರೆ. ತಿಳಿಯಾದ, ಹದವಾದ ಗಂಭೀರ ಶೈಲಿ. ಮಾತು ತುಂಬಾ ಸರಳವಾದರೂ ಬಂಧದಲ್ಲಿ ಬಿಗುಪಿದೆ. ವಿಧಗ್ಧೆಯಾದ ಮಹಿಳಾ ಮಣಿಯಂತೆ ಗಂಭೀರವಾಗಿದೆ ಅವರ ಶೈಲಿ.

ವೇದಾಂತದ ಪ್ರಕ್ರಿಯೆಗಳನ್ನು ಸರಳವಾಗಿ ಹೇಳಲು ಪ್ರಯತ್ನಮಾಡಿದ್ದಾರೆ. ಬಲುಮಟ್ಟಿಗೆ ಯಶಸ್ಸನ್ನು ಗಳಿಸಿದ್ದಾರೆ. ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ದೊರಕಿದ ಈ ಗ್ರಂಥ ನಮ್ಮ ಸಂಸ್ಕೃತಿಯನ್ನು ಯಥಾವತ್ತಾಗಿ ಪ್ರತಿಬಿಂಬಿಸುವ ಅಮೋಘಕೃತಿ. ವೇದೋಪನಿಷತ್ತುಗಳಲ್ಲಿ ಶ್ರುತಿಸ್ಮೃತಿಗಳಲ್ಲಿ ಹೇಳಿರುವುದರ ಸಾರವನ್ನೆಲ್ಲಾ ಸುಲಭವಾದ ಮಾತುಗಳಲ್ಲಿ ತಿಳಿಸಲು ಅವರು ಮಾಡಿರುವ ಪ್ರಯತ್ನಗಳು ಅಭಿನಂದನೀಯವಾಗಿವೆ. ಜ್ಞಾನ, ಅನುಭವದ ಮೂಸೆಯಲ್ಲಿ ಬೆಂದಾಗ ತನ್ನ ಕೊಳೆಯನ್ನೆಲ್ಲಾ ಕಳೆದುಕೊಂಡು ಅಪರಂಜಿಯಾಗುತ್ತದೆ. ಈ ಅಪರಂಜಿಯೇ ಮಹಾಕ್ಷತ್ರಿಯ.

ಮೂವರು ಇಂದ್ರರು

ದೇವಲೋಕವನ್ನು ಮೂವರು ಇಂದ್ರರು ಆಳಿದರು. ಅವರಲ್ಲಿ ನಿತ್ಯನಾದ ಮಹೇಂದ್ರ. ಸ್ವಲ್ಪಕಾಲ ವೃತ್ರನು ಇಂದ್ರಪದವಿಯಲ್ಲಿದ್ದನು. ಮಧ್ಯಮ ಲೋಕದ ಚಕ್ರವರ್ತಿಯಾದ ನಹುಷನು ಮೂರನೇ ಇಂದ್ರ. ಇವರಲ್ಲಿ ಯಾರು ಹೇಗೆ ಹೇಗೆ ಆಳಿದರು? ಅವರು ನಮ್ಮ ದೃಷ್ಟಿಯಲ್ಲಿ ಎಂತಹವರು? ಎಂಬುದನ್ನು ಈ ಕೃತಿ ಸ್ಪಷ್ಟಗೊಳಿಸುತ್ತದೆ.

ಒಮ್ಮೆ ಇಂದ್ರನು ದೇವಗುರು ಬೃಹಸ್ಪತಿಗಳ ವಿಚಾರದಲ್ಲಿ ನಡೆದುಕೊಂಡ ರೀತಿಯೇ ಎಲ್ಲಾ ಅನರ್ಥಗಳಿಗೂ ಕಾರಣವಾಯಿತು. ಮಹರ್ಷಿಗಳಿಗೆ ಯಾವುದೋ ವಿಚಾರದಲ್ಲಿ ಸಂದೇಹವುಂಟಾಯಿತು. ಅದನ್ನು ದೇವೇಂದ್ರನೇ ನಿವಾರಿಸಬೇಕೆಂದು ಸಪ್ತರ್ಷಿಗಳ ಅಪ್ಪಣೆಯಾಯಿತು. "ದೇಹವು ನಾನಲ್ಲ ಎಂದು ತಿಳಿದಿದ್ದರೂ, ದೇಹಗತವಾಗಿರುವ ಮನೋಬುದ್ಧಿಗಳನ್ನು ಪ್ರತ್ಯೇಕಿಸುವುದೆಂತು?" ಎಂಬುದಾಗಿ ಮಹರ್ಷಿಗಳು ಪ್ರಶ್ನಿಸಿದರು.

ದೇವೇಂದ್ರನು ಉತ್ತರ ಹೇಳಲು ಸಿದ್ಧನಾಗಿ, ಅದಕ್ಕೆ ಬೇಕಾದ ಅನುಗ್ರಹ ಮುದ್ರೆಯನ್ನು ಧಾರಣೆ ಮಾಡಿದನು. ಆ ವೇಳೆಗೆ ದೇವಗುರು ಅಲ್ಲಿಗೆ ಬಂದರು. ಇಂದ್ರನನ್ನು ಹರಸಲು ಕೈಯೆತ್ತಿ "ವಿಜಯೀ...." ಎನ್ನುವಷ್ಟರಲ್ಲಿ ಇಂದ್ರನು ತಮ್ಮ ಬಗೆಗೆ ಉದಾಸೀನನಾಗಿದ್ದಾನೆಂದು ಅವರು ಭಾವಿಸಿ ನಿಂತಲ್ಲಿಯೇ ಅಂತರ್ಧಾನ ಹೊಂದಿದರು. ದೇವತೆಗಳ ಸಂದೇಹವನ್ನು ನಿವಾರಿಸಿ ಬೀಳ್ಕೊಟ್ಟದ್ದೇನೋ ಆಯಿತು.

ಆದರೆ ಇಂದ್ರನಿಗೆ ತಾನು ಮಾಡಿದ್ದು ಸರಿಯಲ್ಲವೆಂಬ ಭಾವನೆ ಉಂಟಾಯಿತು. 'ಧರ್ಮಬ್ರಹ್ಮ ಪ್ರಶ್ನೆ'ಯನ್ನು ಧರ್ಮಾಂಗಣದಲ್ಲಿ ಬಿಡಿಸದೆ, ದೇವಸಭೆಯಲ್ಲಿ ವಿಮರ್ಶಿಸ ಹೊರಟಿದ್ದು ತಪ್ಪು ಎಂದು ಆತನಿಗೆ ತೋರಿತು. ಪೂರ್ಣಧ್ಯಾನದಲ್ಲಿದ್ದು 'ಪುರಂದರ ಪ್ರಶ್ನೆ'ಯನ್ನು ಬಿಡಿಸುವುದು ಅನಿವಾರ್ಯವಾಗಿತ್ತು. ದೇವಾಚಾರ್ಯರು ಅಷ್ಟುಹೊತ್ತಿಗೆ ಅಲ್ಲಿಗೆ ಬರಬೇಕೆ? ಧ್ಯಾನಮುದ್ರೆ ಬದಲಿಸಿದರೆ ಮಹರ್ಷಿಗಣಕ್ಕೆ ಕೋಪಬರಬಹುದು. ಹಾಗೆಯೇ ಇದ್ದುದರಿಂದ ಬೃಹಸ್ಪತಿಗಳಿಗೆ ಅಸಮಾಧಾನ. ತನ್ನತಪ್ಪು ತಿದ್ದಿಕೊಳ್ಳಬೇಕೆಂದು ಆತನು ನಿರ್ಧರಿಸಿದನು.

ಧರ್ಮಾಚಾರ್ಯನಿಲ್ಲದೆ ತ್ರಿಲೋಕಾಧಿಪತ್ಯವನ್ನು ಕಾಪಾಡಿಕೊಳ್ಳುವುದು ಕಷ್ಟ. ನಿಯತಕಾಲಿಕವಾದ ಕರ್ಮಗಳನ್ನು ಕಾಲವರಿತು ಮಾಡಿಸುವವನೇ ದೇವ ಗುರು. ಆತನಿಲ್ಲದೆ ಕರ್ಮಾಚರಣೆಯೆಲ್ಲಿ? ಕರ್ಮಲೋಪದಿಂದ ಧರ್ಮಲೋಪ. ಧರ್ಮ ಲೋಪದಿಂದ ಅಧರ್ಮದ ಪ್ರಾದುರ್ಭಾವ. ಅಸುರರಿಗೆ ಉಚ್ಛ್ರಾಯ ಕಾಲ. ಸೃಷ್ಟಿ ಕಾಲದಲ್ಲಿ ತಮಗೆ ದತ್ತವಾದ ಜಗತ್ತಿನ ಭೋಗ ಭಾಗ್ಯಗಳಾದ ಸಾಮಗ್ರಿಗಳನ್ನೆಲ್ಲ ಎಲ್ಲರಿಗೂ ಹಂಚುವ ಕೆಲಸವೂ ದೇವತೆಗಳದೇ. ಆದುದರಿಂದ ದೇವತೆಗಳಿಂದ ಜಗತ್ತಿಗೆ ಸುಖ. ಅಸುರರಿಂದ ದುಃಖ. ದೇವತೆಗಳು ಸುಖವನ್ನೂ, ಸುಖವನ್ನು ಅನುಭವಿಸುವ ಶಕ್ತಿಯನ್ನೂ, ಕೊನೆಗೆ ಆನಂದವಾಗುವ ಶಕ್ತಿಯನ್ನೂ ಕೊಡಬಲ್ಲರು. ರಾಕ್ಷಸರು ದುಃಖವನ್ನೂ ಕೊನೆಗೆ ಎಲ್ಲವನ್ನೂ ದುಃಖದಲ್ಲಿಯೇ ಮುಗಿಸುವ ಶಕ್ತಿಯನ್ನೂ ಪೋಷಿಸುವರು. ದೇವತೆಗಳಂತೆಯೇ ರಾಕ್ಷಸರೂ ಹವ್ಯಾದಿಗಳಿಂದ ಆರಾಧಿತರಾದರೂ ಅವರು ಸುಖವನ್ನು ಕೊಡಲಾರರು. ರಕ್ಕಸರನ್ನು ತುಳಿದಿರಿಸಿ, ದೇವತೆಗಳಿಗೆ ಅಜರಾಮರತ್ವವನ್ನು ಕೊಟ್ಟಿದೆ ನಿಸರ್ಗ. ಈ ಒಂದು ಸ್ಥಿತಿಯ ಪರಿಪಾಲನೆಗೆ ಧರ್ಮಾ ಚಾರ್ಯನ ಅವಶ್ಯಕತೆಯುಂಟು.

ಬೇರೊಬ್ಬ ಧರ್ಮಚಾರ್ಯನನ್ನು ಹುಡುಕುವ ಕೆಲಸ ನಡೆಯಿತು. ಅಸುರರು ದೇವತೆಗಳ ಮೇಲೆ ಯುದ್ಧ ಮಾಡಲು ಅಣಿ ಮಾಡಿಕೊಳ್ಳುತ್ತಿರುವರೆಂಬ ಕಳವಳಕರವಾದ ಸುದ್ದಿ ಬೇರೆ. ಅಸುರ ಸೇನಾಡಂಬರದ ವಿಚಾರವಾಗಿ ಗೂಢಚಾರರು ಬಗೆ ಬಗೆಯ ವರದಿಗಳನ್ನು ತಂದರು. ಅಲ್ಲಲ್ಲಿ ಹೋರಾಟವೂ ನಡೆಯಿತೆಂದು ಸುದ್ದಿ ಬೇರೆ. "ಯಾರನ್ನಾದರೂ ಕೆಡಿಸಬೇಕೆಂದರೆ ಅವರಿಂದ ಧರ್ಮ ಲೋಪ ಮಾಡಿಸಬೇಕು" ಎಂಬ ಗಾದೆಯ ಅರ್ಥವನ್ನು ದೇವತೆಗಳು ಚೆನ್ನಾಗಿ ಬಲ್ಲರು. ರಾಕ್ಷಸರು ಯಮಧರ್ಮರಾಯನ ರಾಜಧಾನಿ ಸಂಯಮಿನೀ ಪುರದತ್ತ ಧಾಳಿ ಮಾಡಲಾರಂಭಿಸಿದರೆಂದು ಸುದ್ದಿ ಹೊರಟಿತು. ಕೊನೆಗೆ ಬ್ರಹ್ಮದೇವನ ಬಳಿಗೆ ದೇವೇಂದ್ರನು ಬಂದನು. ಬೇರೊಬ್ಬನನ್ನು ಗೊತ್ತು ಮಾಡಿಕೊಡುವಂತೆ ಕೇಳಿಕೊಂಡನು. ಬೃಹಸ್ಪತಿ ಕುಪಿತನಾದ್ದುದು ಬ್ರಹ್ಮದೇವನಿಗೆ ತಿಳಿದಿತ್ತು. ತ್ವಷ್ಟೃ ಬ್ರಹ್ಮನ ಮಗನಾದ ವಿಶ್ವರೂಪಾಚಾರ್ಯನೇ ಆ ಕೆಲಸಕ್ಕೆ ಯೋಗ್ಯನೆಂದು ಬ್ರಹ್ಮನು ಸೂಚಿಸಿದನು. ಆತನು ಉಭಯಕುಲಗಳಿಗೂ ಬೇಕಾದವನು. ಬೃಹಸ್ಪತಿಯಷ್ಟೇ ವೇದಾಧ್ಯಯನಸಂಪನ್ನ. ಆದರೆ ಸುರಾಪಾನ ಮಾತ್ರ ಆವನಿಗೆ ಅಂಟಿ

ಕೊಂಡಿದ್ದ ಜಾಡ್ಯ. ಅದನ್ನು ಮಾತಾಮಹರಿಂದ ಪಡೆದಿದ್ದನು. ಅವನ ತಾಯಿ ರಾಕ್ಷಸ ಕುಲದವಳು.

ತ್ವಷ್ಟೃ ಬ್ರಹ್ಮನಮಗನಾದ ವಿಶ್ವರೂಪಾಚಾರ್ಯನು ದೇವ ಗುರು ಪೀಠವನ್ನೇರಿದ. ಅಮರಾವತಿಗೆ ರಾಕ್ಷಸರು ಧೈರ್ಯವಾಗಿ ಬರಲು ಆರಂಭವಾಯಿತು. ಆದರೆ ವಿಶ್ವ ರೂಪನಿಗೆ ಉಭಯತ್ರರಿಗೂ ಒಳಿತನ್ನುಂಟು ಮಾಡಬೇಕೆಂಬ ಆಸೆ ಇತ್ತು. ದೇವಾಸುರರ ದ್ವೇಷ ಸೃಷ್ಟಿಕಾಲದಿಂದ ಬಂದದ್ದು. ಇಂದ್ರನು ವಿಶ್ವರೂಪಾಚಾರ್ಯನ ಬಗೆಗೆ ಸಂದೇಹಗಳನ್ನು ಬಿಡಲಿಲ್ಲ. ಗೂಢಚಾರರನ್ನು ಇಟ್ಟು, ಅವನ ಚಟುವಟಿಕೆಗಳನ್ನೆಲ್ಲಾ ಸೂಕ್ಷ್ಮವಾಗಿ ಪರಿಶೀಲಿಸುತ್ತಾ ಬಂದ. ಅಂತೂ ಅವರಿಬ್ಬರಿಗೂ ಒಗ್ಗಿ ಬರಲಿಲ್ಲ. ಸುರಾಪಾನದ ಬದಲು ಸೋಮಪಾನ ಮಾಡಬೇಕೆಂದು ಇಂದ್ರನು ಸಲಹೆ ಮಾಡಿದನು. ವಿಶ್ವರೂಪನಿಗೆ ಅಸಾಧ್ಯವಾದ ಕೋಪ ಬಂತು. ಈ ವೇಳೆಗೆ ಬೃಹಸ್ಪತಿಗೂ ಬೇಸರ ವಾಗಿತ್ತು. ಇಂದ್ರನಿಗೂ ವಿಶ್ವರೂಪನು ಬೇಡವಾಗಿದ್ದನು. ಗುಟ್ಟಾಗಿ ಬೃಹಸ್ಪತಿ ಇರುವ ವಿಚಾರವನ್ನು ತಿಳಿದು, ತನ್ನ ದೂತರನ್ನು ಅಟ್ಟಿದನು. ಉಪಾಯವಾಗಿ ವಿಶ್ವರೂಪಾಚಾರ್ಯನನ್ನು ಪದಚ್ಯುತಿಗೊಳಿಸಿದಲ್ಲಿ, ತಾನು ಬರಲು ಅಡ್ಡಿಯಿಲ್ಲವೆಂದು ದೇವಗುರು ಹೇಳಿದ. ಅಂತೂ ಇಂದ್ರನೂ ವಿಶ್ವರೂಪನನ್ನು ವಧೆ ಮಾಡಿಬಿಟ್ಟ. ಬ್ರಹ್ಮಹತ್ಯೆಯ ಪಾಪ ಅವನನ್ನು ಹಿಂಬಾಲಿಸಿತು. ತ್ವಷ್ಟೃ ಬ್ರಹ್ಮನು ವೃತ್ರಾಸುರನನು ಸೃಷ್ಟಿಸಿ, ಇಂದ್ರನ ಮೇಲೆ ಬಿಟ್ಟನು. ವೃತ್ರನನ್ನು ಎದುರಿಸಲಾಗದೇ ಇಂದ್ರನು ಅವನಿಗೆ ತನ್ನ ಪದವಿಯನ್ನು ಬಿಟ್ಟುಕೊಟ್ಟು, ಅವನ ಸ್ನೇಹಿತನಾಗಿರುವುದಾಗಿ ಹೇಳಿದ. ದೇವತೆಗಳೂ, ಅಗ್ನಿವಾಯುಗಳೂ, ಬೃಹಸ್ಪತಿಯೂ ತಮ್ಮ ತಮ್ಮ ಮರ್ಯಾದೆ ಉಳಿದರೆ ಸಾಕೆಂದು ಹೇಗೋ ಇರತೊಡಗಿದರು. ಆದರೂ ಇಂದ್ರನೂ ದೇವತೆಗಳೂ ವೃತ್ರನನ್ನು ಸಂಹರಿಸಲು ಹೊಂಚು ಕಾಯುತ್ತಿದ್ದರು. ದಧೀಚಿಯಿಂದ ಆತನ ಮೂಳೆಗಳನ್ನು ಪಡೆದ ಇಂದ್ರನು, ವಿಶ್ವಕರ್ಮನಿಂದ ವಜ್ರಾಯುಧವಾಗಿ ಅವುಗಳನ್ನು ಮಾರ್ಪಡಿಸಿ ಕೊಂಡನು. ವೃತ್ರನು ಪಾನಮತ್ತನಾಗಿ ದೇವತೆಗಳ ಕಪಟವನ್ನರಿಯದೇ ದೇವೇಂದ್ರ ನೊಂದಿಗೆ ವಿನೋದನಾಗಿ ಮಲ್ಲಯುದ್ಧಕ್ಕೆ ನಿಂತನು. ವಜ್ರಾಯುಧವನ್ನು ಪ್ರಯೋಗಿಸಿ ಇಂದ್ರನು ವೃತ್ರನನ್ನು ವಧೆ ಮಾಡಿದನು. ವೃತ್ರವಧೆಯೇ ಎಲ್ಲಕ್ಕೂ ಮೂಲವಾಯಿತು. ಹತ್ಯೆ ಇಂದ್ರನ ಬೆನ್ನು ಹತ್ತಿತು. ಆತನು ಅದನ್ನು ಕಳೆದುಕೊಂಡಲ್ಲದೆ ಸಿಂಹಾಸನವನು ಏರಲಾಗದೆಂದು ಸಿಂಹಾಸನದ ಅಧಿದೇವತೆ ಹೇಳಿದಳು. ಕೆಲವುಕಾಲ ಇಂದ್ರಸಿಂಹಾಸನ ಶೂನ್ಯವಾಗಿಯೇ ಉಳಿಯುವ ಪರಿಸ್ಥಿತಿ ಒದಗಿತು. ದೇವತೆಗಳು ಚಿಂತಾಕ್ರಾಂತರಾದರು. ಇಂತಹ ಸನ್ನಿವೇಶದಲ್ಲಿ ನಹುಷನು ಇಂದ್ರ ಪದವಿಯನ್ನು ವಹಿಸಿಕೊಳ್ಳಬೇಕಾಯಿತು.

ದಾನಶೌಂಡನೂ, ನಿತ್ಯಾಗ್ನಿ ಹೋತ್ರಿಯೂ ಆದ ನಹುಷನು ಒಪ್ಪಿಕೊಂಡರೆ ಆತನನ್ನು ಇಂದ್ರನನ್ನಾಗಿ ಮಾಡಲು ಎಲ್ಲರೂ ಒಪ್ಪಿದರು. ನಹುಷನು ಒಪ್ಪುತ್ತಾನೋ ಇಲ್ಲವೋ ಎಂಬ ಸಂದೇಹ ಅವರಿಗಿತ್ತು. ವಿಶೇಷ ವರಗಳನ್ನಾದರೂ ಕೊಟ್ಟು ಅವನನ್ನು ಇಂದ್ರಪದವಿಗೆ ತರಬೇಕೆಂದು ಕೆಲವರು ಅಭಿಪ್ರಾಯಪಟ್ಟರು. ಬೃಹಸ್ಪತಿಯ

ನೇತೃತ್ವದಲ್ಲಿ ಬಂದ ದೇವತೆಗಳ ನಿಯೋಗವು ನಹುಷನನ್ನು ಭೇಟಿಮಾಡಿ ತನ್ನ ಮನೋಗತವನ್ನು ತಿಳಿಸಿತು.

ನಹುಷನಿಗೆ ಒಂದು ಸಂದೇಹ. "ಮನುಷ್ಯರು ದೇವತೆಗಳ ಮೇಲೆ ಅಧಿಕಾರವನ್ನು ಚಲಾಯಿಸುವುದು ಹೇಗೆ?" ಎಂದು ಆತನು ಕೇಳಿದ. "ಪಿತೃಗಳು ನಿನ್ನ ಮಾನವತ್ವವನ್ನು ತೆಗೆದು ದೇವತ್ವವನ್ನು ಸ್ಥಾಪಿಸುವರು" ಎಂದು ಭರವಸೆ ನೀಡಿದರು ದೇವತೆಗಳು. ಆನಂದದಿಂದ, ಆನಂದಭೋಗದಿಂದ ಅದರ ಅರಿವು ಆತನಿಗಾಗುವುದೆಂದು ಸಹ ಅವರು ಹೇಳಿದರು.

ಅಧಿಕಾರ, ಆನಂದ ಎರಡನ್ನೂ ಕೊಟ್ಟು ಆತನನ್ನು ದೇವತೆಗಳು ಇಂದ್ರನನ್ನಾಗಿ ಮಾಡಿದರು. ಆದರೆ ನಹುಷ ಬುದ್ಧಿವಂತ. ಅಷ್ಟರಿಂದಲೇ ಆತನಿಗೆ ಸಮಾಧಾನ ವಾಗಲಿಲ್ಲ. ಅವನು ಹಾಕಿದ ಷರತ್ತುಗಳು ಹೀಗೆ ಇದ್ದವು : "ವಿರಜಾದೇವಿ ಅಲ್ಲಿಯೂ ತನಗೆ ಪತ್ನಿಯಾಗಿರಬೇಕು ; ಅರಮನೆಯಲ್ಲಿ ನಡೆಯುವ ಎಲ್ಲಾ ಧರ್ಮಗಳೂ ಅಲ್ಲಿಯೂ ನಡೆಯಬೇಕು. ತಾನು ಕೇಳುವ ಯಾವುದೇ ರಹಸ್ಯವನ್ನು ತನಗೆ ತಿಳಿಸಬೇಕು."

ನಿಬಂಧನೆಗಳಿಗೆ ದೇವತೆಗಳು ಒಪ್ಪಿಕೊಂಡರು. ಆದರೆ "ರಹಸ್ಯ ತಾನಾಗಿ ತಿಳಿದರೆ ವರ; ನೀನಾಗಿ ಭೇದಿಸಿದರೆ ಶಾಪ" ಎಂದು ಹೇಳಿದರು. ಮಾನವೇಂದ್ರನು ಮಹೇಂದ್ರನಾದನು.

ನಹುಷೇಂದ್ರನು ಇಂದ್ರಾಧಿಕಾರವನ್ನು ಚೆನ್ನಾಗಿಯೇ ನಿರ್ವಹಿಸಿದನು. ನಹುಷೇಂದ್ರನು ನಿತ್ಯದಾನಶೀಲ. ಧರ್ಮಗಳನ್ನು ಮಾಡುತ್ತಿದ್ದನು. ಆ ಧರ್ಮಗಳು ದೇವಲೋಕದ ಬದಲು, ಭೂಲೋಕದಲ್ಲಿ ವಿನಿಯೋಗವಾಗುತ್ತಿದ್ದವು. ಇಂದ್ರನು ಹತ್ಯೆಗೆ ತಲೆಮರೆಸಿಕೊಂಡು ಎಲ್ಲಿಯೋ ಓಡಿಹೋಗಿರುವನೆಂಬ ಸುದ್ದಿ ಪ್ರಚಲಿತವಾಗಿತ್ತು. ಈ ವಿಚಾರವನ್ನು ನಹುಷನು ಅಗ್ನಿಯೊಡನೆ ಪ್ರಸ್ತಾಪಿಸಿದನು. "ಇಂದ್ರನು ಹಿಂದಿರುಗುವವರೆಗೂ ಕಾಯಬೇಕು. ಎಷ್ಟು ದಿವಸಗಳಾಗುವುದೋ ಹೇಳಲು ಸಾಧ್ಯವಿಲ್ಲ" ಎಂದು ಅಗ್ನಿ ಹೇಳಿದನು. "ಹಾಗಾದರೆ ಅವನನ್ನು ಕರೆಸಲು ಸಾಧ್ಯವಿಲ್ಲವೆ?" ಎಂದು ನಹುಷನು ಮತ್ತೆ ಕೇಳಿದನು. "ಇಬ್ಬರು ಇಂದ್ರರಾಗುವಂತಿಲ್ಲ" ಎಂದು ಹೇಳಿ ಅಗ್ನಿ ಸುಮ್ಮನಾದನು.

'ಇಂದ್ರಪದವಿ ಶಾಶ್ವತವಲ್ಲ' ಎಂಬುದು ನಹುಷನಿಗೆ ಚೆನ್ನಾಗಿ ಅರ್ಥವಾಯಿತು. ಬೃಹಸ್ಪತಿಯನ್ನು ಕರೆಸಿ ಕೇಳಿದ : "ನನ್ನ ಇಂದ್ರಪದವಿ ಪೂರ್ಣವಾಗಿದೆಯೆ" ಎಂದು. ದೇವಗುರು ಹೇಳಿದ : "ನೀನಾಗಿ ಮಾನವತ್ವವನ್ನು ಒಪ್ಪಿಕೊಂಡಿರುವೆಯಾಗಿ ಅದು ಅಪೂರ್ಣ. ಕಾಲದೃಷ್ಟಿಯಿಂದ ಪೂರ್ಣವಾಗುವಷ್ಟು ಅಧಿಕಾರ ನಿನಗಿದೆ." ಶಚೀಪತಿಯಾಗುವವರೆಗೂ ಇಂದ್ರತ್ವವು ಪೂರ್ಣವಾಗುವಂತಿಲ್ಲವೆಂಬ ರಹಸ್ಯವನ್ನು ದೇವಗುರು ಬಯಲುಮಾಡಿದ. ಇಂದ್ರನೂ, ಶಚೀಪತಿಯೂ ಒಬ್ಬನೇ ಆಗಿದ್ದುದರಿಂದ ಈ ಸಮಸ್ಯೆ ಇದುವರೆಗೆ ತಲೆದೋರಿರಲಿಲ್ಲ. ಈ ವಿಚಾರ ಈಗ ಇತ್ಯರ್ಥವಾಗಿ ಬಿಡಬೇಕೆಂದು ನಹುಷನು ಹೇಳಿದ. ದೇವಸಭೆ ನಡೆದು, ಶಚಿದೇವಿ ಅಧಿಕಾರ ನಿಮಿತ್ತ

ಇಂದ್ರಾಣಿಯೆಂಬ ತೀರ್ಮಾನಕ್ಕೆ ಬಂದಿತು. ಶಚೀದೇವಿಯ ಸ್ಥಿತಿ ಶೋಚನೀಯ ವಾಯಿತು. ಬೃಹಸ್ಪತಿ ದುಡುಕಿ ತೆಗೆದುಕೊಂಡ ನಿರ್ಣಯದಿಂದ ಇಲ್ಲದ ಗೊಂದಲಕ್ಕೆಡೆ ಯಾಯಿತು.

ದೇವಾಚಾರ್ಯನ ಸೂಚನೆಯಂತೆ ಶಚೀದೇವಿ ನಹುಷನನ್ನು ಭೇಟಿಮಾಡಲು ನಿಶ್ಚಯಿಸಿದಳು. ಆಕೆ ಭಯ ಸಂದೇಹಗಳಿಂದಲೇ ಆತನ ಬಳಿಗೆಹೋದಳು. ಶಾಸ್ತ್ರದಲ್ಲಿ ಹೇಳಿರುವಷ್ಟು ಕಾಲ ತನ್ನ ಪತಿಯನ್ನು ಹುಡುಕಿಸಲು ತನಗೆ ಅವಕಾಶಬೇಕೆಂದು ಕೇಳಿದಳು. ನೂತನ ಇಂದ್ರನು ಮಹಾನುಭಾವನೆಂಬ ಅರಿವು ಆಕೆಗೆ ಉಂಟಾಯಿತು. ತನ್ನ ಪತಿಗಿಂತಲೂ ನಹುಷನೇ ಹೆಚ್ಚು ಸಾತ್ವಿಕನೆಂಬ ಭಾವನೆ ಆಕೆಗುಂಟಾಯಿತು. ನಹುಷನು ಇಂದ್ರನಾಗಿರುವುದು ಮೂರು ಲೋಕಗಳ ಸೌಭಾಗ್ಯವೆಂದು ತನ್ನಲ್ಲಿ ಭಾವಿಸಿಕೊಂಡಳು.

"ದೇವತೆಗಳು ಯಾವಾಗಲೂ ವಿಷಮಿಶ್ರಿತವಾದ ಮೃಷ್ಟಾನ್ನವನ್ನೇ ವರವಾಗಿ ಕೊಡುವರು. ನಾವು ಮೃಷ್ಟಾನ್ನವನ್ನು ಕಾಣುವೆವೇ ಹೊರತು ವಿಷವನ್ನಲ್ಲ" ಎಂದು ತನ್ನ ಪತ್ನಿಗೆ ಹೇಳಿದನು ನಹುಷ. "ಅನಿತ್ಯವಾದ ಅರ್ಥಕ್ಕೆ ಹಾನಿಯಾದರೂ ಚಿಂತೆಯಿಲ್ಲ, ನಿತ್ಯವಾದ ಧರ್ಮವನ್ನು ಪಾಲಿಸಿದರಾಯಿತು" ಎಂದು ಹೇಳಿ ಆತನು ವಿರಜೆಗೆ "ಶಚಿ ಒಲಿದರೂ ಅವಳನ್ನು ನಾನು ಒಲಿಯುವುದಿಲ್ಲ: ಗ್ರಹಚಾರವಶದಿಂದ ಒಲಿದರೂ ಆಕೆ ಅರ್ಥಪತ್ನಿಯೇ ಹೊರತು ಧರ್ಮಪತ್ನಿಯಾಗಲಾರಳು" ಎಂದು ಭರವಸೆ ನೀಡಿದ.

"ಎಷ್ಟುಕಾಲವಾದರೂ ನಿನ್ನಪತಿಯನ್ನು ಹುಡುಕಿಸು" ಎಂದು ಅಭಯವಿತ್ತು ಶಚಿಯನ್ನು ಗೌರವದಿಂದ ಬೀಳ್ಕೊಟ್ಟ. ಶಚಿ ಹಿಗ್ಗುತ್ತ ತನ್ನ ಅರಮನೆಗೆ ಧಾವಿಸಿದಳು.

ಪರಿಗ್ರಹಕ್ಕಿಂತ ತ್ಯಾಗವೇ ಹೆಚ್ಚು

ದೇವತೆಗಳು ಅನತಿ ಕಾಲದಲ್ಲಿಯೇ ತನ್ನನ್ನು ಉರುಳಿಸಿ ಬಿಡುವರೆಂಬ ಭಾವನೆ ನಹುಷನಿಗೆ ಉಂಟಾಗಲು ಬಹಳಕಾಲ ಹಿಡಿಯಲಿಲ್ಲ. ಇಂದ್ರಪದವಿಯಿಂದ ತನಗೇನೂ ಹೆಚ್ಚಿನ ಲಾಭವಾಗಲಿಲ್ಲವೆಂದು ಅವನಿಗೆ ತೋರಿತು. ದೀಪದ ಪ್ರಕಾಶ ಹೆಚ್ಚಿದಷ್ಟೂ ಕತ್ತಲೆ ದಟ್ಟವಾಗುವುದು. ಹಾಗಾಯಿತು ನಾವು ಇಂದ್ರಪದವಿಯನ್ನು ಒಪ್ಪಿಕೊಂಡದ್ದು. ಆನಂದ ಲಭಿಸಿತು. ಆದರೆ ದುಃಖಾಭಾವವು ಮಾತ್ರ ಬರಲಿಲ್ಲ. ಬರುವುದೂ ಇಲ್ಲ. ಹೇಗಾದರೂ ಇವರು ನಮ್ಮನ್ನು ಉರುಳಿಸಿಯೇ ತೀರುತ್ತಾರೆ. ಇಂದ್ರನು ಮಾಡದಿದ್ದ ಏನಾದರೂ ಮಾಡಿ, ಇಂದ್ರಪದವಿಯನ್ನು ನಾವಾಗಿ ಬಿಟ್ಟುಬಿಡೋಣ. ಹಾವಿನ ಹೆಡೆಯ ನೆರಳಿನಲ್ಲಿ ವಾಸಮಾಡುವುದು ಸಾಕು. ಅದಕ್ಕೆ ನೀನೇನೆನ್ನುವೆ?" ಎಂದು ವಿರಜಾದೇವಿಯನ್ನು ಆತನು ಪ್ರಶ್ನಿಸಿದ. ಪತಿಪರಾಯಣೆ, ಸಾಧ್ವಿ ವಿರಜಾದೇವಿ ಹೇಳಿದಳು: "ಇದರಲ್ಲಿ ಸಂಪತ್ತಿಗಿಂತ ವಿಪತ್ತೇ ಹೆಚ್ಚು. ನನಗೆ ತಮ್ಮ ಪಾದಸೇವೆ ಯೊಂದೇ ಸಾಕು. ನನ್ನ ಪತಿ ದೇವನು ಇಂದ್ರನಾದರೆ ಪಡುವ ಆನಂದವನ್ನು,

ಆತನು ಯಃಕಶ್ಚಿತನಾದರೂ ಪಡೆಯುವೆನೆಂಬ ನಂಬಿಕೆ ನನಗಿದೆ. ನೀವು ಯೋಚಿಸಿರುವುದು ಸರಿ."

"ಇಂದ್ರನು ಮಾಡಲು ಹಿಂತೆಗೆಯುತ್ತಿದ್ದುದನ್ನು ಮಾಡೋಣ. ಭೂಲೋಕದಿಂದ ಮಕ್ಕಳು, ಮೊಮ್ಮಕ್ಕಳು ಬರಲಿ. ಅದನ್ನು ನೆರವೇರಿಸಿದ ಮೇಲೆ ಇಂದ್ರಪದವಿಯನ್ನು ಬಿಡೋಣ" ಎಂದನು. ವಿರಜೆ ಒಪ್ಪಿದಳು.

ಇಂದ್ರನನ್ನು ಹುಡುಕಿಸುವ ಪ್ರಯತ್ನ ಎಷ್ಟುಮಟ್ಟಿಗೆ ಸಫಲವಾಗಿದೆ ಎಂಬುದನ್ನು ತಿಳಿಯಲು ಆತನು ಬಯಸಿದನು. ದೇವಾಚಾರ್ಯನು ಮಹಾವಿಷ್ಣುವಿನ ಬಳಿಗೆ ಹೋಗಿರುವ ವಿಚಾರವನ್ನು ಶಚಿ ನಹುಷನಿಗೆ ವಿಜ್ಞಾಪಿಸಿದಳು. "ನಮ್ಮಿಂದ ಏನಾದರೂ ಆಗಬೇಕಾದರೆ ಸಂಕೋಚವಿಲ್ಲದೆ ಹೇಳಬೇಕು" ಎಂದು ನಹುಷನು ಹೇಳಿದಾಗ ಶಚಿಗೆ ಪರಮಾಶ್ಚರ್ಯವಾಯಿತು. ದೇವಸಭೆಯು ಕೊಟ್ಟಿರುವ ಇಂದ್ರಪದವಿಯ ಅವಧಿ ಮುಗಿಯುವತನಕ ಕಾಯಬೇಕೆಂದು ಶಚಿ ಹೇಳಿದಳು. "ನಾನು ಈಗ ಹೇಳಿರುವ ಉದ್ದೇಶ ಸಫಲವಾದರೆ ತಾವು ಕಾಲಯಾಪನೆ ಮಾಡಬೇಕಾಗಿಲ್ಲ. ಇಂದ್ರಪತ್ನಿಯೆಂದು ಸಂಬೋಧಿಸಿ ನಾನು ಇಂದ್ರಪದವಿ ಬಿಡುತ್ತೇನೆ. ಇಂದ್ರನು ಮಾಡದೇ ಇದ್ದ ಕೆಲಸವನ್ನು ಮಾಡಿ, 'ನ ಭೂತೋ ನ ಭವಿಷ್ಯತಿ' ಎನ್ನಿಸಿಕೊಂಡು ಇಂದ್ರತ್ವವನ್ನು ಬಿಟ್ಟು ವಾನಪ್ರಸ್ಥನಾಗುವೆನು" ಎಂದನು.

ಸಪ್ತರ್ಷಿ ಶಿಬಿಕಾರೋಹಣ ಇಂದ್ರನಿಗೆ ಮಾತ್ರ ಸಲ್ಲುವ ಮರ್ಯಾದೆ. ಮನ್ವಂತರದವರೆಗೂ ವೇದರಕ್ಷಣೆಯ ಹೊರೆಹೊತ್ತಿರುವ ಸಪ್ತರ್ಷಿಗಳೇ ಬಂದು ಇಂದ್ರನನ್ನು ಪಲ್ಲಕ್ಕಿಯಲ್ಲಿ ಕೂರಿಸಿ ತಾವು ವಾಹಕರಾಗಿರುವರು. ಸಪ್ತರ್ಷಿಗಳ ಮೇಲಿನ ಗೌರವದಿಂದ ಇಂದ್ರನು ಏರಿದಂತೆಮಾಡಿ ಅಲ್ಲಿಗೆ ಬಿಡುವನು. ಅದಕ್ಕಿಂತ ಹೆಚ್ಚಿನ ಗೌರವ ಇಂದ್ರನಿಗಿಲ್ಲ. ಶಚಿ ಕೆಲವು ಎಚ್ಚರಿಕೆಯ ಮಾತನ್ನು ಹೇಳಿದಳು: "ಭೋಗ ಭೋಗವೂ ಅನುಭವಿಸಿದಂತೆಲ್ಲಾ ಕರ್ತನ ತೇಜಸ್ಸನ್ನು ತಿನ್ನುವುದು. ದೇವಲೋಕದಲ್ಲಿರುವ ದೇವತೆಗಳಿಗಂತೂ ಅದು ತಪ್ಪಿದ್ದಲ್ಲ. ಸಪ್ತರ್ಷಿ ಶಿಬಿಕಾರೋಹಣ ದೇವತೆಗಳಿಗೂ ತೇಜೋಹಾನಿ ಉಂಟುಮಾಡದಿರದು." ಆದರೆ ನಹುಷನ ಜ್ಞಾನ ಇನ್ನೂ ಹೆಚ್ಚು ಪಕ್ವವಾದುದು. ಪ್ರತಿಯೊಂದು ಕರ್ಮವೂ ಅಧಿದೈವ, ಅಧಿಯಜ್ಞ ಆದಾಗ ತೇಜೋಹಾನಿ ಆಗದೆ ವೃದ್ಧಿಯಾಗುವುದು ಎಂದು ಆತನು ಬಲ್ಲ. ಶಚಿ ಅವನ ಪ್ರಶ್ನೆಗೆ ಉತ್ತರಿಸಲಿಲ್ಲ.

ಹತ್ಯಾಭೀತಿಯಿಂದ ತಲೆಮರೆಸಿಕೊಂಡಿದ್ದ ಇಂದ್ರನ ಶುದ್ಧಿಯಾಗುವುದಂತೂ ಖಚಿತವಾಗುತ್ತಾ ಬಂತು. ಆ ವೇಳೆಗೆ ಅಂದರೆ ಉತ್ತರಾಯಣ ಪುಣ್ಯಕಾಲದ ಮರುದಿನ ಶಿಬಿಕಾರೋಹಣ ನಡೆಯತಕ್ಕದ್ದೆಂದು ನಿಶ್ಚಯವಾಯಿತು. ಆ ವೇಳೆಗೆ ದೇವೇಂದ್ರನು ಬಂದರೆ ಇಂದ್ರಾಭಿಷೇಕವನ್ನೂ ನೆರವೇರಿಸುವುದಾಗಿ ನಹುಷ ನಿರ್ಧರಿಸಿದ. ಶಚಿ ಎಂದಳು: "ಇಂದು ದೇವತ್ವಕ್ಕಿಂತ ಮನುಷ್ಯತ್ವ ಶ್ರೇಷ್ಠವಾಯಿತು. ಇದುವರೆಗೂ ದೇವತೆಗಳು ಮಾನವರಿಗೆ ವರಕೊಡುತ್ತಿದ್ದರು. ಈಗ ಮಾನವನು ದೇವತೆಗಳಿಗೆ

ವರಕೊಡುವಂತಾಯಿತು. ಅರ್ಥಾತ್ ನೀವು ನಮಗೆ ಪೂಜ್ಯರಾದಿರಿ." ಇಂದ್ರನ ಉತ್ತರ ಸಿದ್ಧವಾಗಿಯೇ ಇತ್ತು : "ನಮಗೆ ಬೇಡವಾದುದನ್ನು ಬಿಡುವುದು, ಇತರರಿಗೆ ವರವಾದೀತೆ?" ಎಂದನು. ಆತನು ಮುಂದುವರಿದು ಹೇಳಿದ :

"ಶಾಸ್ತ್ರಗಳಲ್ಲಿ ಗಾರ್ಹಸ್ಥ್ಯಕ್ಕಿಂತ ವಾನಪ್ರಸ್ಥವೇ ಹೆಚ್ಚೆಂದು ಹೇಳಿದೆ. ಶಾಸ್ತ್ರಗಳು ಹೇಳಿರುವುದು ನಿಜವಾದರೆ ಪರಿಗ್ರಹಕ್ಕಿಂತ ತ್ಯಾಗವೇ ಹೆಚ್ಚು. ಪದವಿಗಳಲ್ಲೆಲ್ಲಾ ಇಂದ್ರಪದವಿ ಅನಧಿಕವಾದುದು. ಅಂತಹುದು ಸಿಕ್ಕಿತು. ಇಂದ್ರನಿಗಿಂತ ಹೆಚ್ಚಾಗುವ ಉಪಾಯವನ್ನು ನೀವು ಹೇಳಿಕೊಟ್ಟಿರಿ. ಈಗ ಉಳಿದಿರುವುದು ತ್ಯಾಗ ತಾನೆ?"

ಶಚಿ ತನ್ನಲ್ಲಿಯೇ ಹೀಗೆ ಹೇಳಿಕೊಂಡಳು : "ಭೋಗವೆಂದರೆ ಅಂಟಿಗಿಂತಲೂ ಹೆಚ್ಚಾಗಿ ಅಂಟಿಕೊಳ್ಳುವ ದೇವತ್ವಕ್ಕಿಂತಲೂ, ತ್ಯಾಗವನ್ನು ಆರಾಧಿಸುವ ಮನುಷ್ಯತ್ವವು ಹೆಚ್ಚು ಎನ್ನಬೇಕು. ಭೋಗಕ್ಕಿಂತ ತ್ಯಾಗ ಹೆಚ್ಚು ಎಂಬುದನ್ನು ಒಪ್ಪಿಕೊಳ್ಳಲು ಚಿತ್ತಶುದ್ಧಿಯು ಬೇಕೋ ಏನೋ."

ವಿಶ್ವಜಿದ್ ಯಜ್ಞ

ಸಪ್ತರ್ಷಿ ಶಿಬಿಕಾರೋಹಣವನ್ನು 'ವಿಶ್ವಜಿದ್‌ಯಜ್ಞ' ಎಂದು ಕರೆದ ಭರದ್ವಾಜರು "ಇದನ್ನು ಮಾಡುವವರು ಅಹಂಕಾರವನ್ನು ಬಿಡಬೇಕು. ಅಭಿಮಾನವನ್ನು ತ್ಯಜಿಸಬೇಕು. ಶತ್ರು ಮಿತ್ರ ಭೇದವನ್ನು ಬಿಡಬೇಕು. ರಾಗ ದ್ವೇಷಗಳನ್ನು ಬಿಡಬೇಕು." ಎಂದು ಹೇಳಿದರು. ಧರ್ಮವಾಗಿ ಬಿಡಬಹುದಾದ್ದನ್ನೆಲ್ಲಾ ಬಿಡುವುದಾಗಿ ಒಪ್ಪಿದ ನಹುಷನು ತನ್ನ ಪತ್ನಿಯನ್ನು ಹೇಗೆ ತ್ಯಾಗ ಮಾಡಬೇಕು? ಧರ್ಮದ ಲೋಪವಾಗುವಂತಹ ಯಾವುದನ್ನೂ ಮಾಡಲು ಸಿದ್ಧನಿಲ್ಲ ಆತ. ರಾಗದ್ವೇಷಗಳನ್ನು ಪೂರ್ತಿಯಾಗಿ ಬಿಡಲೊಲ್ಲ. ಅಸಾಧ್ಯ. ಅವುಗಳ ಬಗ್ಗೆ ಉದಾಸೀನರಾಗಿದ್ದು ಧರ್ಮವನ್ನು ಮಾತ್ರ ಆಚರಿಸಬೇಕು. ರಾಗದ್ವೇಷಗಳನ್ನು ಹದ್ದಿನಲ್ಲಿಡಬಹುದು.

"ಶಿಬಿಕೆಯಲ್ಲಿ ಕುಳಿತಿರುವಾಗ ಮಹಾವಿಷ್ಣುವಿನಲ್ಲಿ ಮನಸ್ಸಿಟ್ಟು ಸರ್ವವನ್ನು ಆತನಿಗೊಪ್ಪಿಸಿರಬೇಕಲ್ಲ." ಆಗ ಅದು ವಿಶ್ವಜಿದ್ ಯಜ್ಞವಾಗುವುದೆಂದು ಹೇಳಿದರು. "ಶಿಬಿಕಾರೋಹಣ ಇಂದ್ರತ್ವದ ಪರಮಾವಧಿ ಸಗುಣ ಮೂರ್ತೀಕರಿಸಿ, ನಿರ್ಗುಣವಾಗಿರಬೇಕು. ತ್ರಿಪುಟೀ ರಹಿತನಾಗಿ ಶಬಿಕಾರೋಹಣಮಾಡಬೇಕು. ಶಿಬಿಕೆಯಲ್ಲಿರುವಾಗ ತ್ರಿಪುಟಿಯು ಉದಯವಾದರೆ ಅನರ್ಥವಾಗುವುದು" ಎಂದು ಮಹರ್ಷಿ ಹೇಳಿದರು.

ಉತ್ಸವಕ್ಕೆ ಸರ್ವಸಿದ್ಧತೆಯೂ ನಡೆಯಿತು. ದಾನವ ಗುರು ಶುಕ್ರಾಚಾರ್ಯನು ಹೇಳಿದಂತೆ ಎಲ್ಲರಿಗೂ ಆಹ್ವಾನಗಳನ್ನು ಕಳುಹಿಸಿ ಕೊಟ್ಟನು. ಹೊಸ ಇಂದ್ರನ ಸೌಜನ್ಯದಿಂದ ಅಸುರಾಚಾರ್ಯನು ಮುಗ್ಧನಾಗಿ ಹೋದನು. ಭೂಲೋಕದಿಂದ ಯಯಾತಿ, ಆತನ ಮಡದಿ ಮಕ್ಕಳು ಬಂದರು. ಅಮರಾವತಿ ಅತಿಥಿಗಳಿಂದ ಕಿಕ್ಕಿರಿಯಿತು. ಬ್ರಹ್ಮವಿದ್ಯೆಯನ್ನು ಮತ್ತಷ್ಟು ಚೆನ್ನಾಗಿ ತಿಳಿಯಲು ನಹುಷನಿಗೆ

ಆಸೆಯಾಯಿತು. ನಿರ್ವಿಕಲ್ಪ ಸಮಾಧಿಯ ಬಗ್ಗೆ ಹೆಚ್ಚಾಗಿ ತಿಳಿಸಲು ಸಮರ್ಥರು ಮೂವರು. ಪ್ರಜಾಪತಿಯಿಂದ ಅವಸ್ಥಾತ್ರಯ ಪೂರ್ವಕವಾದ ಬ್ರಹ್ಮವಿದ್ಯೆಯನ್ನು ಇಂದ್ರನು ಪಡೆದನು. ಹೃದಯ ಗ್ರಂಥಿ ವಿಚ್ಛೇದನಾ ರೂಪವಾದ ಬ್ರಹ್ಮ ವಿದ್ಯೆಯನ್ನು ಯಮಧರ್ಮನು ಬಲ್ಲ. ವರುಣನು ಪಂಚಕೋಶಾತ್ಯಯ ಪೂರ್ವಕ ಬ್ರಹ್ಮವಿದ್ಯೆ ಯನ್ನು ಬಲ್ಲ. ಈ ಮೂವರಲ್ಲಿ ಯಾರಿಂದಲಾದರೂ ಬ್ರಹ್ಮ ವಿದ್ಯೆಯನ್ನು ಕಲಿಯ ಬೇಕೆಂದು ಬೃಹಸ್ಪತಿ ನಹುಷನಿಗೆ ಹೇಳಿದ.

ಮೂವರನ್ನೂ ಕರೆಯಿಸಲು ಇಂದ್ರನು ನಿರ್ಧರಿಸಿದ. ನಹುಷೇಂದ್ರನ ಪ್ರಶ್ನೆ ಯನ್ನು ಕೇಳಿ ದೇವಾಚಾರ್ಯನು ತಬ್ಬಿಬ್ಬಾದನು. ಇಂದ್ರನ ಹತ್ಯೆಯನ್ನು ನಿವಾರಿಸಿ, ದೇವೇಂದ್ರನನ್ನು ಕರೆತರಲು ಕಠಿಣವಾದ ಆಜ್ಞೆ ಮಾಡಿದ. ಇಂದ್ರನನ್ನು ಕರೆತರಲು ಇಂದ್ರನ ಸೇನಾನಿಗಳು ಅಣಿಯಾಗಿ ನಿಂತರು. ಆಯುಧಗಳು ಸಜ್ಜಾಗಿ ನಿಂತವು. ' ಇಂದ್ರನು ಇಲ್ಲಿಗೆ ಬರಲೇಬೇಕು ' ಎಂದು ನಹುಷೇಂದ್ರನ ಅಪ್ಪಣೆ. ಕ್ಷಣಮಾತ್ರದಲ್ಲಿ ಆಡಳಿತಗಾರನಾದ ನಹುಷೇಂದ್ರನ ಗರ್ಜನೆ ಕೆಲಸವನ್ನು ಆರಂಭಿಸಿತು. " ಅಧಿಕಾರವನ್ನು ಉಪಯೋಗಿಸುವುದಕ್ಕೂ ಶಕ್ತಿ ಬೇಕು " ಎಂದು ದೇವಾಚಾರ್ಯನುಡಿದ. " ಭಲೆ, ಪ್ರಭುವೆಂದರೆ ಹೀಗಿರಬೇಕು " ಎಂದು ಶುಕ್ರಾಚಾರ್ಯನು ಹೇಳಿದ. ಅವನ ಪ್ರತಿಭಟನೆಯೇ ಇಲ್ಲದಂತಾಯಿತು. ಅಮರಾವತಿಯ ಬಾಗಿಲಲ್ಲಿ ಇಂದ್ರನ ಸ್ವಾಗತಕ್ಕೆ ಸಂಭ್ರಮದ ಏರ್ಪಾಡುಗಳಾದವು. ಆಚಾರ್ಯರೆಲ್ಲರೂ " ನಹುಷ, ನೀನು ಇಂದ್ರನಲ್ಲ ಅತಿಂದ್ರ ಪ್ರಭುತ್ವವು ಒಂದು ತೂಕವಾದರೆ, ಅದನ್ನು ಉಪಯೋಗಿಸಲು ಬೇಕಾದ ಬುದ್ಧಿ ಸಾಮರ್ಥ್ಯಗಳು ಎರಡರಷ್ಟು ತೂಕ. ನೀನು ಇಂದ್ರನಾಗುವುದಕ್ಕೆ ಮಾತ್ರವಲ್ಲ, ಅತೀಂದ್ರನಾಗಿ ಇಂದ್ರಗಣವನ್ನು ಆಳಬಲ್ಲವನು '' ಎಂದು ಹೊಗಳಿದರು.

ಯಮನು ಹೃದಯಗ್ರಂಥಿ ವಿಚ್ಛೇದನಾರೂಪವಾದ ಬ್ರಹ್ಮವಿದ್ಯೆಯನ್ನು ಬೋಧಿಸಿ ಅದರ ಅನುಭವವನ್ನು ಮಾಡಿಕೊಟ್ಟ. ನಿರ್ವಿಕಲ್ಪ ಸಮಾಧಿಯೆಂದರೇನು ಎಂಬುದನ್ನು ತಿಳಿದು ನಹುಷ ಆನಂದಿಸಿದ. ವರುಣನು ಪಂಚಕೋಶಾತ್ಯಯ ಪೂರ್ವಕವಾದ ಬ್ರಹ್ಮ ವಿದ್ಯೆಯನ್ನು ವಿವರಿಸಿ ನಿರ್ವಿಕಲ್ಪ ಸಮಾಧಿಯ ಪರಿಚಯ ಮಾಡಿಕೊಟ್ಟ. ಜ್ಞಾನ, ಅನುಭವ ಎರಡೂ ಒಂದಾಗಲು ನಹುಷನು ಆನಂದ ತುಂದಿಲನಾದನು.

ನಿಯತಿಯ ಇಚ್ಛೆಯಂತೆ ಏಳನೇ ದಿವಸ ನಿರ್ವಿಕಲ್ಪ ಸಮಾಧಿಯ ಭಂಗ ಮಾಡಿಕೊಳ್ಳಲು ಆತನು ಒಪ್ಪಿದ. ಇಂದ್ರ ಶಚಿಯರು ಓಡಿಬಂದು ನಹುಷನ ಕಾಲಿಗೆರಗಿದರು. " ನಿತ್ಯೇಂದ್ರನು ನೈಮಿತ್ತಿಕೇಂದ್ರನಿಗೆ ನಮಸ್ಕಾರ ಮಾಡಬಾರದು " ಎಂದು ನಹುಷನು ತನ್ನ ವಿನಯವನ್ನು ಪ್ರಕಟಿಸಿದನು. " ಬುದ್ಧಿಯಲ್ಲಿ ಪ್ರಭಾವದಲ್ಲಿ ಸಾಮರ್ಥ್ಯದಲ್ಲಿ, ಪ್ರತಿಯೊಂದರಲ್ಲೂ ನೀನು ನನಗಿಂತ ಹೆಚ್ಚು. ಅಲ್ಲದೆ ಹತ್ಯೆಯ ಕೈಗೆ ಸಿಕ್ಕಿ ಗೋಳಿಡುತ್ತಿದ್ದ ನನ್ನನ್ನು ಉದ್ಧರಿಸಿದೆ. ಇಂತಹ ಪರಮೋಪಕಾರಕ್ಕೆ ನಾನೇನು ಮಾಡಲಿ ".

" ಹತ್ಯೆಯನ್ನು ನಿವಾರಿಸಿಕೊಳ್ಳಲು ಸಾಧ್ಯವಿದ್ದರೂ ನನಗೆ ಬುದ್ಧಿ ಓಡಲಿಲ್ಲ.

ಆದ್ದರಿಂದ ನೀನು ಬುದ್ಧಿಯಲ್ಲಿ ಜ್ಯೇಷ್ಠನು. '' ಶಚೀ ದೇವಿಯು " ನೀನೆ ಇಂದ್ರಪದವಿಗೆ ತಕ್ಕವನು. ಇಂದ್ರಾಣೀತ್ವವನ್ನು ವಿರಜಾದೇವಿಗೆ ಒಪ್ಪಿಸುವೆನು. ದೇವತೆಗಳು ಅನುಗ್ರಹಿಸಿರುವ ಈ ತ್ರೈಲೋಕಾಧಿಪತ್ಯ ನಿನ್ನದಾಗಿರಲಿ '' ಎಂದು ಬೇಡಿಕೊಂಡಳು.

ಭೋಗದ ಪರಾಕಾಷ್ಠೆಯನ್ನು ಅನುಭವಿಸಿದ ಮೇಲೆ ಬೇಕಾಗಿರುವುದು ತ್ಯಾಗವೇ ಹೊರತು, ಭೋಗವಲ್ಲ. ಮನುಷ್ಯ ದೇಹದಲ್ಲಿ ದಿವ್ಯ ಮನಸ್ಸನ್ನು ಧರಿಸಿ ಮಾನುಷಾನಂದಕ್ಕೆ ಕೋಟಿ ಪಾಲು ಮಿಗಿಲಾದ ಆನಂದವನ್ನು ಅನುಭವಿಸಿದ್ದೂ ಆಯಿತು. ಆದ್ದರಿಂದ ನಹುಷ ದಂಪತಿಗಳು ' ಇಂದ್ರಪದವಿ 'ಯನ್ನು ಖಂಡಿತವಾಗಿ ಒಪ್ಪಲಿಲ್ಲ.

ಸಪ್ತರ್ಷಿ ಶಿಬಿಕಾರೋಹಣದ ಏಳನೇ ದಿನ ನಹುಷನು ಶಿಥಿಲ ಸಮಾಧಿಯ ಅಪರಾಧಕ್ಕೆ ಪಕ್ಕಾದನು. ಗುರುತರವಾದ ಅಪರಾಧಕ್ಕೆ ಯೋಗ್ಯವಾದ ಶಿಕ್ಷೆಯನ್ನೆ ಆತನು ವಿಧಿಸಿಕೊಂಡನು. ಇಂದ್ರಾದಿಗಳು ದಿಗ್ಭ್ರಾಂತರಾದರು. ಅಜಗರವಾಗಿ ಹುಟ್ಟುವುದೇ ಆತನು ವಿಧಿಸಿಕೊಂಡ ಶಿಕ್ಷೆ. ಇಂದ್ರನು ಸರಿಯಾದ ಶಿಕ್ಷೆ ವಿಧಿಸಿಕೊಂಡನೆಂದು ಎಲ್ಲರೂ ಒಪ್ಪಿಕೊಂಡರು. ಆದರೆ ಶಿಕ್ಷೆಯ ವಿಲೋಪಕ್ಕೆ ನಹುಷನು ಒಪ್ಪಲಿಲ್ಲ. ಎಲ್ಲರಿಗೂ ಸಮಾಧಾನ ಹೇಳಿ ಇಂದ್ರಾಭಿಷೇಕದಲ್ಲಿ ಪಾಲ್ಗೊಳ್ಳಲು ಎಲ್ಲರನ್ನೂ ಪ್ರೋತ್ಸಾಹಪಡಿಸಿದನು.

ಹಲವಾರು ವೇದಾಂತದ ಪ್ರಕ್ರಿಯೆಗಳನ್ನು ವಿವರಿಸಲು ಕಾಲದೇಶಗಳ ಪರಿಮಿತಿಗೆ ಒಳಪಟ್ಟು ಈ ಸಣ್ಣಲೇಖನದಲ್ಲಿ ಸಾಧ್ಯವಿಲ್ಲ. ಅಂತಾಗಿಯೇ ಇಲ್ಲಿ ಅದರ ಬಗ್ಗೆ ವಿವರವಾಗಿ ಏನನ್ನೂ ಹೇಳಿಲ್ಲ. ಆದರೆ ಒಂದು ವಿಷಯ ಸುಸ್ಪಷ್ಟ. ಈ ಕಾದಂಬರಿಯನ್ನು ಓದಿದ ಮೇಲೆ ಮನಸ್ಸಿಗೆ ನೆಮ್ಮದಿಯುಂಟಾಗುತ್ತದೆ. ತೃಪ್ತಿ ತುಂಬಿ ಬರುತ್ತದೆ. ಅಲ್ಲದೆ ಇದನ್ನು ಮತ್ತೆ ಮತ್ತೆ ಓದಬೇಕು ಎನ್ನಿಸುತ್ತದೆ· ಇದು ಅಡಿಯಿಂದ ಮುಡಿಯ ವರೆಗೂ ಸರ್ವಾಂಗ ಸುಂದರವಾದ ಕಾದಂಬರಿ. ಕನ್ನಡಿಗರು ಹೆಮ್ಮೆ ಪಡುವಂತಹ ಕಾದಂಬರಿ. ಭಾರತೀಯ ಸಂಸ್ಕೃತಿಯನ್ನು ಪ್ರೀತಿಸುವವರಿಗೆಲ್ಲಾ ಇದೊಂದು ಅಮೂಲ್ಯ ಕಾಣಿಕೆ.

ತರುಣ ಜನಾಂಗದ ಕಣ್ತೆರೆಸುವ, ಹಿರಿಯರು ಹೆಮ್ಮೆ ಪಡುವ, ಅಮೋಘ ಕೃತಿ. ಮಹಿಳೆಯರಿಗೆ ಇದು ಮಾಣಿಕ್ಯ. ಇದನ್ನು ಮತ್ತೆ ಮತ್ತೆ ಓದಿ ಲಾಭ ಪಡೆಯಲಿ ನಮ್ಮ ಜನ. ಓದುವವರ ಧರ್ಮಾಭಿಮಾನ ಹೆಚ್ಚಾಗಲಿ. ದೇವುಡು ಬಯಸಿದಂತೆ ಸಂಹಿತೆ, ಇತಿಹಾಸ, ಪುರಾಣ ಇವುಗಳಲ್ಲಿ ಬರುವ ಕತೆಗಳನ್ನು ಅಧ್ಯಯನ ಮಾಡಿ, ಉಪಬ್ರಹ್ಮಣ ಮಾಡಿ ವಿಸ್ತಾರವಾಗಿ, ಸಮಂಜಸವಾಗಿ ಹೇಳುವ ಪುಣ್ಯವಂತರ ಪಡೆಯು ಹೆಚ್ಚಾಗಲಿ. ಭಾರತೀಯ ಪೂರ್ವ ವೈಭವವು ಮತ್ತೆ ಗೋಚರಿಸಲಿ !

ಎಚ್. ಎಸ್. ಹರಿಶಂಕರ್

ಕ್ರಾಂತಿಕಲ್ಯಾಣ

ಕನ್ನಡ ನಾಡು ನುಡಿಗಳ ಇತಿಹಾಸದಲ್ಲಿ ಹನ್ನೆರಡನೆಯ ಶತಮಾನದ ಮಧ್ಯಭಾಗವು ಸಾಹಿತ್ಯ, ಸಮಾಜ, ಧರ್ಮ, ರಾಜಕೀಯಗಳಲ್ಲಿ ಪ್ರಗತಿಗಾಮಿಯಾದ ನವಚೈತನ್ಯ ಅಂಕುರಿಸಿ ಕ್ರಾಂತಿ ಕೋಲಾಹಲಗಳು ನಡೆದ ಸಂಕ್ರಮಣದ ಕಾಲ. ಆಗ ಕಲಚೂರ್ಯ ಬಿಜ್ಜಳನು ಚಾಳುಕ್ಯ ರಾಜವಂಶವನ್ನು ಮೂಲೆಗೊತ್ತಿ ಅರಸೊತ್ತಿಗೆಯನ್ನು ಆಕ್ರಮಿಸಿ ಕೊಂಡಿದ್ದನು. ಬಿಜ್ಜಳನನ್ನು ಸರ್ವಾಧಿಕಾರಿಯಾಗಿ ಮಾಡಿ ಅವನ ರಾಜ್ಯಾಪಹಾರಕ್ಕೆ ದಾರಿ ತೋರಿಸಿದ ಮುಮ್ಮಡಿ ತೈಲಪನ ಸಹೋದರ ಜಗದೇಕಮಲ್ಲನು ಹೆಸರಿಗೆ ಅರಸನಾಗಿ ಬಿಜ್ಜಳನ ಸೆರೆಯಲ್ಲಿದ್ದನು. ಬಸವಣ್ಣನವರು ಕಲ್ಯಾಣದಲ್ಲಿ ಅನುಭವ ಮಂಟಪವನ್ನು ಕಟ್ಟಿ ಕನ್ನಡನಾಡಿನಲ್ಲಿ ಅಭೂತಪೂರ್ವ ಧರ್ಮಕ್ರಾಂತಿಗೆ ಕಾರಣರಾದರು. ಆ ಮಹಾಕ್ರಾಂತಿಯ ಸಾಹಿತ್ಯಕ, ಸಾಮಾಜಿಕ ಮತ್ತು ಧಾರ್ಮಿಕ ಸ್ವರೂಪವನ್ನು ಉದಯರವಿ, ರಾಜ್ಯಪಾಲ, ಕಲ್ಯಾಣೇಶ್ವರ ಕಾದಂಬರಿಗಳಲ್ಲಿ ವಿವರಿಸಲಾಗಿದೆ.

ಈ ಧರ್ಮಕ್ರಾಂತಿಯ ಅನಂತರ ಕೆಲವು ವರ್ಷಗಳಲ್ಲಿಯೇ ಇನ್ನೊಂದು ಬೇರೆ ಸ್ವರೂಪದ ಕ್ರಾಂತಿಯುಂಟಾಯಿತು. ಮೊದಲನೆಯ ಕ್ರಾಂತಿ ರಚನಾತ್ಮಕ ಮತ್ತು ಸಾಂಸ್ಕೃತಿಕವಾದರೆ, ಎರಡನೆಯದು ಮಾನಸಿಕ ಮತ್ತು ರಾಜಕೀಯವಾಗಿತ್ತು. ಈ ಎರಡನೆಯ ಕ್ರಾಂತಿಯ ಪರಿಣಾಮವಾಗಿ ಕಲ್ಯಾಣದಲ್ಲಿ ನೆರೆದಿದ್ದ ಶರಣರೆಲ್ಲ ತಮ್ಮ ಕೊನೆಯ ನಿಲುವನ್ನು ಕಾಣಲು ಚದುರಿಹೋಗಬೇಕಾಯಿತು. ಈ ವಿಚಾರಗಳನ್ನು ನಾಗಬಂಧ, ಮುಗಿಯದಕನಸು ಮತ್ತು ಕ್ರಾಂತಿಕಲ್ಯಾಣಗಳಲ್ಲಿವಿವರಿಸಲಾಗಿದೆ.

ಹೀಗೆ ಆರು ಸಂಪುಟಗಳಲ್ಲಿ ಬಸವೇಶ್ವರರ ಕಾಲ, ಜೀವಿತ, ಧ್ಯೇಯ, ಪ್ರಗತಿ, ಪರಿಸಮಾಪ್ತಿಗಳನ್ನು ಶ್ರೀಮಾನ್ ಬಿ. ಪುಟ್ಟಸ್ವಾಮಯ್ಯನವರು ಸವಿಸ್ತಾರವಾಗಿ ಮತ್ತು ಸುಂದರವಾಗಿ ಚಿತ್ರಿಸಿದ್ದಾರೆ. ಐತಿಹಾಸಿಕ ವ್ಯಕ್ತಿಯಾಗಿ, ಅದರಲ್ಲೂ ಆ ವ್ಯಕ್ತಿಯ ಜೀವಿತದ ಪ್ರಮಾಣಗಳು ಸರಿಯಾಗಿ ದೊರಕದೆ, ಆತ ಧಾರ್ಮಿಕ ವ್ಯಕ್ತಿಯಾಗಿದ್ದು ಒಂದು ಪಂಥದ ಜನರಿಗೆ ಸರ್ವಮಾನ್ಯವಾದ ವ್ಯಕ್ತಿಯೊಬ್ಬನ ಚಿತ್ರಣವನ್ನು ಕೊಡುವುದು ಸಾಮಾನ್ಯವಲ್ಲ. ಐತಿಹಾಸಿಕ ಘಟನೆಗಳಿಗೆ ಲೋಪಬಾರದಂತೆ ಕಲ್ಪನೆ ಯನ್ನು ಕಲುಷಿತಗೊಳಿಸದೆ, ಒಂದು ಕಾಲದ ಸಮಗ್ರ ಚಿತ್ರಣವನ್ನು ಕೊಡುವುದು,

ಅದರಲ್ಲಿಯೂ ಬಸವೇಶ್ವರರ ಕಾಲ–ಜೀವಿತಗಳಲ್ಲಿ ಅನೇಕ ವಾದಗ್ರಸ್ತ ಅಂಶಗಳಿದ್ದರೂ, ಕೆಲವು ಗ್ರಾಹ್ಯ ಪ್ರಮಾಣಗಳಿಂದ ಅವಲೋಕಿಸಿ ತುಲನಾತ್ಮಕವಾದ ಚಿತ್ರಣವನ್ನು ನೀಡುವುದುಕಷ್ಟದ ಕೆಲಸವೇ ಸರಿ. ಅಂಥ ಒಂದು ಸಾಹಸದ ಕೆಲಸಕ್ಕೆ ಕೈಯಿಟ್ಟು ಶ್ರೀ ಪುಟ್ಟಸ್ವಾಮಯ್ಯನವರು ಬಹುಮಟ್ಟಿಗೆ ಯಶಸ್ವಿಯಾಗಿದ್ದಾರೆ ಎನ್ನಬೇಕು. ಕೆಲವು ಲೋಪದೋಷಗಳಿದ್ದರೂ ಅದು ಗೌಣ.

ಈ ಕಾದಂಬರಿಯ ಆರು ಸಂಪುಟಗಳಲ್ಲಿ ಮೊದಲ ಮೂರು ಸಂಪುಟಗಳು ಉದಯರವಿ, ರಾಜ್ಯಪಾಲ, ಕಲ್ಯಾಣೇಶ್ವರ ನಾಮಾಂಕಿತದಿಂದ ಡೆಮಿ ಅಷ್ಟದಳ ೬೮೬ ಪುಟಗಳ ಹರವಿನಲ್ಲಿದೆ. ಕೊನೆಯ ಮೂರು ಸಂಪುಟಗಳಾದ ನಾಗಬಂಧ, ಮುಗಿಯದ ಕನಸು, ಕ್ರಾಂತಿಕಲ್ಯಾಣ ಕ್ರೌನ್ ಅಷ್ಟದಳ ೧೧೫೫ ಪುಟಗಳ ಹರವಿನಲ್ಲಿದೆ. ಈ ಆರು ಸಂಪುಟಗಳನ್ನು ಬೆಂಗಳೂರಿನ ಶಾರದಾ ಪ್ರಕಟನಾಲಯದವರು ಪ್ರಕಟಿಸಿದ್ದಾರೆ.

ಬಸವೇಶ್ವರ–ಬಿಜ್ಜಳರಾಯರನ್ನ ಕುರಿತು ಈ ಐತಿಹಾಸಿಕ ಕಾದಂಬರಿಗೆ ಭಾರತ ಸರಕಾರ ೧೯೬೪ರಲ್ಲಿ ಅಕ್ಯಾಡಮಿ ಪ್ರಶಸ್ತಿ ನೀಡಿ ೫೦೦೦ ರೂ. ಗಳ ಬಹುಮಾನವನ್ನು ಕೊಟ್ಟು ಪುರಸ್ಕರಿಸಿರುವುದು ಉಚಿತವಾಗಿದೆ, ಯೋಗ್ಯವಾಗಿದೆ.

ಆರು ಸಂಪುಟಗಳ ಕಾದಂಬರಿಯ ಸ್ಥೂಲಪರಿಚಯವನ್ನು ಬಹು ಸಂಕ್ಷೇಪವಾಗಿ ಮುಂದೆ ಕಾಣಿಸಲಾಗಿದೆ.

ಉದಯರವಿ

ಆಗ ಕಾರ್ತೀಕಮಾಸ. ಸಂಗಮೇಶ್ವರದ ನದೀತೀರದ ಶಿಲಾಸನದ ಮೇಲೆ ಮೂವರು ನವತರುಣಿಯರು ಕುಳಿತಿದ್ದರು. ಒಬ್ಬಳು ಕಲಚೂರ್ಯ ರಾಜಕನ್ಯೆ, ಮಹಾ ಮಂಡಲೇಶ್ವರ ಬಿಜ್ಜಳರಾಯನ ತಂಗಿ ನೀಲಲೋಚನೆ, ಗುಲಾಬಿಯಂತೆ ಆನಂದಮಯಿ. ಇನ್ನೊಬ್ಬಳು ಮಂತ್ರಿ ಬಲದೇವರಸರ ಮಗಳು ಗಂಗಾಂಬಿಕೆ, ಮಲ್ಲಿಗೆಯಂತೆ ಮೃದು ಮಧುರ. ಮಗದೊಬ್ಬಳು ಮಧುವರಸರ ಮಗಳು ಲಾವಣ್ಯವತಿ, ಬ್ರಾಹ್ಮಣ ಕನ್ಯೆ, ಕೆಂಡಸಂಪಿಗೆಯಂತೆ ಸುಗಂಧವತಿ. ಮೂವರೂ ಒಂದೇ ವಯಸ್ಸಿನವರು, ಸ್ನೇಹಿತೆಯರು, ತಾರುಣ್ಯದ ಹೊಂಗನಸನ್ನು ಕಾಣುತ್ತಿರುವವರು.

ಆಶ್ರಮದ ತಾಣ ಒಂದರಲ್ಲಿ ಗಾಯಕಿಯರ ತಂಡ ನೆರೆದಿತ್ತು. ಹೊಸಬರು ಯಾರೂ ಬರದಂತೆ ಸುತ್ತ ದಾಸಿಯರನ್ನು ಕಾವಲಿಟ್ಟು ನೀಲಲೋಚನೆ ಲಾವಣ್ಯವತಿಯರಿಬ್ಬರೂ ನಿರ್ಜನವಾದ ಆ ಬಯಲಲ್ಲಿ ನರ್ತನಾಭ್ಯಾಸಕ್ಕೆ ತೊಡಗಿದರು. ನರ್ತನವಾದರೋ ಶಿವನ ಭಿಕ್ಷಾಟನವನ್ನು ಕುರಿತದ್ದಾಗಿತ್ತು. ನೀಲಲೋಚನೆ ಲಾವಣ್ಯವತಿಯರು ವಿಪ್ರಲಂಭ ಶೃಂಗಾರಭಾವಗಳನ್ನು ಪ್ರದರ್ಶಿಸುತ್ತಾ ನರ್ತನದಲ್ಲಿ ತಲ್ಲೀನರಾದರು.

ಆ ರಸಾಸ್ವಾದನೆಗೆ ಕ್ಷಣಕಾಲ ಅಡಚಣೆಯುಂಟಾಯಿತು. ದೂರದ ಶಿಲಾ ಮಂಟಪದಲ್ಲಿ ಧ್ಯಾನಾಸಕ್ತನಾಗಿದ್ದ ಆಶ್ರಮದ ತರುಣ ವಿದ್ಯಾರ್ಥಿಯೊಬ್ಬನು ಆ

ಪ್ರಮದೆಯರ ಗದ್ದಲದಿಂದ ದೂರ ಸರಿಯಬೇಕೆಂದು ಯೋಚಿಸಿ ಬೇರೆ ದಾರಿಯಿಲ್ಲದೆ ಅಲ್ಲಿಯೇ ಹಾದುಹೋಗಬೇಕಾಗಿ ಬಂದಾಗ ಎಲ್ಲರೂ ಬೆರಗಾದರು. ಜ್ಞಾನ ವೈರಾಗ್ಯಗಳ ಅಪರಂಜಿಯಂತೆ ಕಂಗೊಳಿಸುತ್ತಿದ್ದ ಆ ತರುಣ ತೇಜೋಮೂರ್ತಿಯನ್ನು ಕಂಡು ನೀಲಲೋಚನೆ ಚಕಿತಳಾದಳು ; ಗಂಗಾಂಬಿಕೆಗೆ ಲಜ್ಜೆ ಮುಸುಕಿತು, ಲಾವಣ್ಯವತಿ ಕ್ಷಣಕಾಲ ಶಿಲಾಮೂರ್ತಿಯಾದಳು. ಮೂವರೂ ಕ್ಷಮೆಯಾಚಿಸಿದರು. ಸಂಗಮೇಶ್ವರದ ಪೀಠಾಧಿಪತಿ ಜಾತವೇದ ಮುನಿಗಳ ಆಶ್ರಮದ ಆ ತರುಣ ವಿದ್ಯಾರ್ಥಿ ಹೆಚ್ಚು ಮಾತಾಡದೆ ಯಾರನ್ನೂ ಕಣ್ಣೆತ್ತಿ ನೋಡದೆ ಮುಂದೆ ನಡೆದನು. ಮೂವರ ಮನಸ್ಸು ಆತನ ಹಿಂದೆ ಹಿಂದೆ ನಡೆದವು.

ಮಂತ್ರಿ ಬಲದೇವರಸರು ಕಲ್ಯಾಣದಿಂದ ಸಂಗಮೇಶ್ವರಕ್ಕೆ ಬರಲು ಬಲವಾದ ಕಾರಣವಿತ್ತು. ವಿಹಾರದ ನೆಪವೊಡ್ಡಿ ಮಗಳ ಸಮೇತ ರಾಜಕನ್ಯೆ ನೀಲಲೋಚನೆಯ ರೊಡಗೂಡಿ ಅಲ್ಲಿಗೆ ಬಂದ್ದದ್ದು ಮುಖ್ಯ ಉದ್ದೇಶವೊಂದಕ್ಕಾಗಿ. ತಮ್ಮ ಮಗಳು ಗಂಗಾಂಬಿಕೆಗೆ ಯೋಗ್ಯವರನನ್ನು ಆಶ್ರಮದಲ್ಲಿ ಆರಿಸುವುದೇ ಅವರ ಆಗಿನ ಆಶಯ ವಾಗಿತ್ತು. ಜಾತವೇದ ಮುನಿಗಳನ್ನು ಕಂಡು ತಾನು ಬಂದ ಕಾರ್ಯಾರ್ಥವನ್ನು ತಿಳಿಸಿದನು. ತನಗೆ ದೂರದ ಸಂಬಂಧಿಯಾಗಿದ್ದ ಆಶ್ರಮ ವಿದ್ಯಾರ್ಥಿ ಬಸವೇಶ (ಕಸಪಯ್ಯ)ನನ್ನು ವರನಾಗಿ ಗೊತ್ತುಪಡಿಸಿದನು. ಆ ವರ ಯಾರೆಂದು ಈ ತರುಣಿಯರು ನೋಡಿದಾಗ ಯಾರೂ ಅಲ್ಲದೆ ಶಿಲಾಮಂಟಪದಲ್ಲಿ ಧ್ಯಾನಾಸಕ್ತನಾಗಿ ಕುಳಿತಿದ್ದ ವಿದ್ಯಾರ್ಥಿಯೇ ಆಗಿದ್ದನು. ಆ ತೇಜೋ ಮೂರ್ತಿಯನ್ನು ಕೂಡಲು ಗಂಗಾಂಬಿಕೆಗೆ ಆನಂದವಾದರೂ, ರಾಜಕನ್ಯೆ ನೀಲಲೋಚನೆಗೆ ಅದೊಂದು ಆಘಾತವೇ ಆಯಿತು. ಅವಳು ಸೃಜಿಸಿಕೊಂಡಿದ್ದ ಸ್ವಪ್ನಲೋಕ ಕೆಳಗುರುಳಿತು.

ಈ ಸಂಸಾರ ಬಂಧನಕ್ಕೆ ತನ್ನನ್ನು ಅಣಿಗೊಳಿಸಿಕೊಳ್ಳುವುದು ಬಸವೇಶನಿಗೆ ಇಷ್ಟವಿರಲಿಲ್ಲ. ಅವನು ಖತಿಗೊಂಡು ಖಿನ್ನನಾದನು. ಇದನ್ನರಿತ ಜಾತವೇದ ಮುನಿಗಳು ಬಸವೇಶನನ್ನು ಹತ್ತಿರ ಕರೆಸಿಕೊಂಡು ಹೇಳಿದರು—"ಬಸವೇಶ, ಮಾದಿರಾಜ ನಿನ್ನನ್ನು ಸಾಕಿದುದು ಇಂಗಳೇಶ್ವರ ಬೃಹನ್ಮಠದ ಮಹಂತನನ್ನಾಗಿ ಮಾಡಲು ; ಅದು ನನಗೆ ಸರಿಬೀಳಲಿಲ್ಲ. ಮಠಾಧಿಪತಿಯ ಸಂಕುಚಿತವಾತಾವರಣದಲ್ಲಿ ನಿನ್ನಂಥ ಪ್ರತಿಭಾವಂತ ತನ್ನ ವ್ಯಕ್ತಿತ್ವವನ್ನು ಕಳೆದುಕೊಂಡಿರಬಾರದು. ಲೋಕ ಸೇವೆಯ ವಿಶಾಲ ಕ್ಷೇತ್ರದಲ್ಲಿ ನಿನ್ನ ಬೆಳಗಿ ಆದರ್ಶವಾದಿಯಾಗಿರಬೇಕು. ಈಗಿನ ಸಕಾಲ ; ಕಲ್ಯಾಣಕ್ಕೆ ಹೋಗಿ ಇನ್ನು ಆದರ್ಶಗಳನ್ನು ಬೆಳಗು" ಎಂದು ಆಶೀರ್ವದಿಸಿದರು. ಗುರುಗಳ ಆಜ್ಞೆಗೆ ಕಟ್ಟು ಬಿದ್ದ ಬಸವೇಶನ ಕಣ್ಣುಗಳು ತೇವಗೊಂಡವು—ಮುಂದಿನ ಆಶಾ ಬಂಧನಕ್ಕೆ ಬೆದರಿ.

ಶೈವ ಸಿದ್ಧಾಂತ ಪರಿಷತ್ತಿನಲ್ಲಿ ಕಾಶ್ಮೀರ ಪಂಡಿತರನ್ನು ಸೋಲಿಸಿ ವಾದೀಭಸಿಂಹ ಎಂಬ ಬಿರುದು ಪಡೆದ ಚಂದ್ರರಾಜನ ಮಗ ಬಸವೇಶ. ಬಾಗೇವಾಡಿಯ ಅಗ್ರಹಾರ ದಲ್ಲಿದ್ದ ಚಂದ್ರರಾಜ ಮತ್ತು ಆತನ ಹೆಂಡತಿ ಸಾಂಕ್ರಾಮಿಕ ರೋಗಕ್ಕೆ ತುತ್ತಾಗಿ ಮರಣ ಹೊಂದಿದರು. ಮೂರು ವರ್ಷದ ಬಾಲಕ ಬಸವೇಶ ಅನಾಥನಾದನು.

ಕಾರಣಾಂತರದಿಂದ ಅಗ್ರಹಾರದವರ ದ್ವೇಷಕ್ಕೆ ತುತ್ತಾದ ಚಂದ್ರರಾಜನ ವಂಶ ನಿರ್ಮೂಲವಾಗಲೆಂದು ಬಯಸಿದ ಜನರು ಹುಡುಗ ಬಸವೇಶನನ್ನು ಆದರಿಸಲಿಲ್ಲ. ಒಂದು ಸಂಜೆ ಅನಾಥ ಬಾಲಕ ಬಸವೇಶ ಬಾಯಾರಿಕೆಯಿಂದ ಕಲ್ಯಾಣಿಯಲ್ಲಿಳಿದು ನೀರು ಕುಡಿಯುತ್ತಿರುವುದನ್ನು ಕಂಡ ಮಾದಿರಾಜನ ಮಗಳು ನಾಗಲಾಂಬೆ ಕಕ್ಕುಲತೆಯಿಂದ ಆ ಬಾಲಕನನ್ನು ಕರೆದುತಂದು ಸಲಹಿದಳು. ಕಸಪಯ್ಯನೆಂದು ಕರೆಯುತ್ತಿದ್ದ ಆ ಬಾಲಕನನ್ನು ಅಂದಿನಿಂದ ಬಸವೇಶನೆಂದು ಕರೆದಳು ನಾಗಲಾಂಬೆ. ಸ್ವಯಂ ಸಂಸಾರ ಬಂಧನಕ್ಕೆ ಸಿಲುಕಲು ಹೆದರಿದ ನಾಗಲಾಂಬೆ ಬಸವೇಶನಿಗೆ ತಾಯಾದಳು, ಅಷ್ಟೇಕೆ ಸರ್ವಸ್ವವಾದಳು.

ಬಸವೇಶನಿಗೆ ಎಂಟು ವರುಷ ತುಂಬಿತು. ಅವನ ಸಮಸ್ತ ಹೊಣೆಯನ್ನು ನಾಗಲಾಂಬೆ ಹೊತ್ತಿದ್ದಳು. ಮುಂದಿನ ವಿದ್ಯಾಭ್ಯಾಸಕ್ಕಾಗಿ ಸಂಗಮೇಶ್ವರಕ್ಕೆ ಹೊರಟ ಬಸವೇಶನನ್ನು ಸಲಹಲು ತನ್ನ ತಂದೆಯ ಸಮ್ಮತಿ ಪಡೆದು ತಾನೂ ಹೊರಟಳು. ಸಂಗಮೇಶ್ವರದಲ್ಲಿ ಬಸವೇಶ ತನ್ನ ಅಸಾಧಾರಣ ಬುದ್ಧಿಯಿಂದ ಎಲ್ಲರ ಮೆಚ್ಚುಗೆಗೆ ಪಾತ್ರನಾದನು. ನಾಗಲಾಂಬೆಯ ಕಣ್ಮಣಿಯಾದನು. ಆ ಕಾಲದಲ್ಲಿ ಭಂಡ ಕುಣಿತದವರು ಪುರಾಣ ಕಥೆಗಳ ಅಸಂಗತ ಅಶ್ಲೀಲ ಸನ್ನಿವೇಶಗಳನ್ನು ಪ್ರೇಕ್ಷಕರ ಎದುರಿನಲ್ಲಿ ಅಭಿನಯಿಸಿ ಪುರಾಣಗಳ ಬಗ್ಗೆ ಜನರಲ್ಲಿ ಅನಾದರ ಮೂಡಿಸುತ್ತಿದ್ದುದನ್ನು ಕಂಡು ಬಸವೇಶ ರೊಚ್ಚಿಗೆದ್ದನು. ಅಂತಹ ತಂಡದವರ ವಿರುದ್ಧ ವಾದಿಸಿ ಅವುಗಳನ್ನು ನಿಲ್ಲಿಸಲು ಯತ್ನಿಸಿದನು. ಹೀಗೆ ಬಸವೇಶನ ಮನಸ್ಸು ನಾಲ್ಕೂ ನಿಟ್ಟಿನಲ್ಲಿ ಚಲಿಸಿತು.

ಇತ್ತ ನಾಗಲಾಂಬೆ ಸಂಗಮೇಶ್ವರದಲ್ಲೇ ನಿಂತಿದ್ದಳು. ಒಮ್ಮೆ ಅವಳ ತಾಯ್ತನದ ಹಂಬಲ ಅತೀವವಾಯಿತು. "ಪಾರ್ವತಿಯ ಚಿತ್ಕಲಾಂಶದಿಂದ ಅವತರಿಸಿದ ನೀನು ಕಾರಣ ಕನ್ಯೆ. ಶೈವಧರ್ಮದ ಉದ್ಧಾರಕ್ಕಾಗಿ ಷಣ್ಮುಖನು ನಿನ್ನ ಗರ್ಭದಲ್ಲಿ ತಳೆಯಬೇಕಾಗಿದೆ. ಶಿವನ ಅಂಶದಿಂದ ಜನಿಸಿರುವ ಶಿವಸ್ವಾಮಿಯನ್ನು ಕೂಡಿ ನಿನ್ನ ತಾಯ್ತನದ ಅಭೀಷ್ಟವನ್ನು ಪೂರ್ಣಮಾಡಿಕೋ" ಎಂಬ ಅದೃಶ್ಯವಾಣಿಯ ಕರೆಗೆ ಕಿವಿಗೊಟ್ಟು ಗುರುಗಳ ಅನುಮತಿ ಪಡೆದು ಶಿವಸ್ವಾಮಿಯನ್ನು ವರಿಸಿದಳು. ನಾಲ್ಕಾರು ವರ್ಷಗಳ ಅವರ ದಾಂಪತ್ಯ ಜೀವನ ಚಿಗುರಿ ಜ್ಞಾನಮೂರ್ತಿ ಚೆನ್ನಬಸವಣ್ಣನನ್ನು ಪಡೆದಳು. ಕೃಷ್ಣೆ ಒಮ್ಮೆ ತುಂಬಿ ಹರಿದಾಗ ನಾಗಲಾಂಬೆಯ ಗಂಡ ಶಿವಸ್ವಾಮಿ ಕೊಚ್ಚಿಹೋದನು. ಅನಿರೀಕ್ಷಿತವಾಗಿ ಆರಂಭವಾದ ಅವರ ದಾಂಪತ್ಯಜೀವನ ಅನಿರೀಕ್ಷಿತವಾಗಿ ಕೊನೆಗೊಂಡಿತು.

* * * *

ಹೀಗೆ ಬಸವೇಶ—ಚೆನ್ನಬಸವರನ್ನು ಪಡೆದ ನಾಗಲಾಂಬೆ ಸಂಗಮೇಶ್ವರದ ಕುಲಪತಿಗಳ ಅನುಜ್ಞೆ ಪಡೆದು ಬಸವೇಶ—ಚನ್ನಬಸವೇಶ್ವರರ ಸಮೇತ ಕಲ್ಯಾಣಕ್ಕೆ ಹೊರಟಳು.

ಸಮಸ್ತ ಭುವನಾಶ್ರಯ ಪೃಥ್ವೀವಲ್ಲಭ ಮಹಾರಾಜಾಧಿರಾಜ ಪರಮೇಶ್ವರ ಪರಮ ಭಟ್ಟಾರಕ ಸತ್ಯಾಶ್ರಯ ಕುಲತಿಲಕ ಚಾಲುಕ್ಯಾಭರಣ ಶ್ರೀಮತ್ತ್ರೈಲೋಕ್ಯಮಲ್ಲ ನೂರ್ಮಡಿ ತೈಲಪದೇವನು ಕಲ್ಯಾಣದಲ್ಲಿ ರಾಜ್ಯಭಾರ ಮಾಡುತ್ತಿದ್ದರೂ ಹೆಸರಿಗೆ ಮಾತ್ರ ದೊರೆಯಾಗಿದ್ದನು. ವಿಲಾಸಪ್ರಿಯನಾದ ರಾಜನ ಅನಾಸಕ್ತಿಯಿಂದಾಗಿ ರಾಜ್ಯಾಡಳಿತದ ಸಮಸ್ತ ಭಾರವೆಲ್ಲ ಮಹಾಮಂಡಲೇಶ್ವರ ಕಲಚೂರ್ಯ ಬಿಜ್ಜಳನ ಅಧೀನದಲ್ಲಿತ್ತು. ಹೆಸರಿಗೆ ಮಾತ್ರ ದೊರೆಯೆನಿಸಿಕೊಂಡ ತೈಲಪನು ಹೊಯ್ಸಳ ವೀರನರಸಿಂಹ ಖಿಳಳ ಜನ ಗಣಿಕೆಯರಿಗೆ ಒಡೆಯನಾಗಿ ಇನ್ನೂ ಸ್ತ್ರೀರತ್ನಗಳಿಗಾಗಿ ಚಪ್ಪನ್ನ ದೇಶಗಳನ್ನು ಶೋಧಿಸುತ್ತಿರುವುದನ್ನು ಕೇಳಿ ಚಿಂತೆಗೊಳಗಾದನು. ಅವನ ಸಂಖ್ಯೆಯನ್ನು ಮೀರಿಸುವ ಗಣಿಕೆಯರನ್ನು ಕಲೆಹಾಕಬೇಕೆಂಬ ಯೋಚನೆಯಲ್ಲಿ ನಿರತನಾದ ತೈಲಪನು ಪಾರಶೀ ವಣಿಕನೊಬ್ಬನು ಅಲೆಗ್ಜಾಂಡ್ರಿಯಾದ ಗುಲಾಮ ಮಾರುಕಟ್ಟೆಯಲ್ಲಿ ಕೊಂಡ ಮ್ಯಾಸಿಡೋನಿಯಾ ರಾಜಕುಲದಲ್ಲಿ ಹುಟ್ಟಿದ ಕನ್ಯೆ ಆಫ್ರೊಡೈಟಳ ನೃತ್ಯ ಸೌಂದರ್ಯಗಳಿಗೆ ಮಾರುಹೋದನು. ಪ್ರಿಯಸಖಿ ಪಾಟಲಿಕೆಯಿಂದ ಅವಳ ಬೆಲೆ ಮೂವತ್ತು ಸಾವಿರ ವರಹಗಳೆಂದು ತಿಳಿದ ರಾಜ ಅವಳನ್ನು ಕೊಳ್ಳಲು ಅರಮನೆಯ ಕೋಶಾಗಾರದಲ್ಲಿ ಹಣವಿಲ್ಲವೆಂದು ಯೋಚನೆಗೊಳಗಾದನು. ಸ್ತ್ರೀ ಚಪಲಕ್ಕೆ ಒಳಗಾದ ತೈಲಪ ಮಾರಾಟ ಮಾಡಲು ಬಂದ ದುರಾಣಿಯನ್ನೇ ಬಂಧಿಸುವಂತೆ ಆಜ್ಞೆ ಮಾಡಿದನು.

ಅದೇ ಸಮಯಕ್ಕೆ ಮಹಾ ಮಂಡಲೇಶ್ವರ ಬಿಜ್ಜಳರಾಯನು ತೈಲಪನ ಸಂದರ್ಶನಕ್ಕೆ ಬಂದನು. ಆಗ ಬಿಜ್ಜಳರಾಯನಲ್ಲಿ ವಿಷಯ ತಿಳಿಸಿ ಮುಂದಿನ ವರುಷದಲ್ಲಿ ಅರಮನೆಗೆ ಕೊಡಲಿರುವ ರಾಜಧನದಿಂದ ಮುಂಗಡ ರೂಪವಾಗಿ ಎರಡು ಲಕ್ಷ ವರಹಗಳನ್ನು ಕಳುಹಿಸುವಂತೆ ಕೇಳಿಕೊಂಡನು. ಹೀಗೆ ತೈಲಪನ ವಿಲಾಸಪ್ರಿಯತೆ ನಡೆದಿದ್ದಿತು.

ಹಾಗೆ ಪಡೆದಂತಹ ಅಫ್ರೋಡೈಟಳ ತೋಳುಗಳಲ್ಲಿ ಮೈ ಮರೆತಿದ್ದ ತೈಲಪ ದೇವನಿಗೆ ಆ ರಾತ್ರಿಯ ಎರಡನೆಯ ಪ್ರಹಾರದಲ್ಲಿ ಅತೀವ ನಿರಾಶೆಯಾಯಿತು. ಒಂದು ಕಡೆ ಕೋಪ ಇನ್ನೊಂದುಕಡೆ ಭಯವಿಹ್ವಲನಾದ ತೈಲಪದೇವನ ಎದುರಿಗೆ ಕರ್ಹಾಡದ ಶಿಲಾಹಾರದ ಅಧಿಪತಿ ವಿಜಯಾರ್ಕದೇವನ ತಂಗಿ ಸ್ವಯಂ ಮಹಾರಾಣಿ ಕಾಮೇಶ್ವರೀ ದೇವಿಯೇ ನಿಂತಿರುವುದನ್ನು ಕಂಡನು. ಅಲ್ಲಿಯೇ ಮಂಚದಡಿ ತನ್ನ ನಗ್ನ ದೇಹವನ್ನು ಉತ್ತರೀಯದಿಂದ ಮುಚ್ಚಿ ಕುಳಿತಿದ್ದ ಆ ಹೊಂಗೂದಲ ಅಫ್ರೊಡೈಟಳನ್ನು ರಾಣಿ ಹೊರಗೆಳೆದು ತನ್ನ ಪಾದುಕೆಗಳನ್ನು ಬಿಚ್ಚಿಸಿ ಪನ್ನೀರಿನ ಬಟ್ಟೆಯಿಂದ ಒರೆಸುವಂತೆ ಆಜ್ಞೆ ಮಾಡಿದಳು. ರಾಣಿಯ ಆಜ್ಞೆಯಂತೆ ನಡೆದಳು ಆ ಯವನ ಕನ್ಯೆ. ಅನಂತರ ರಾಣಿ ಅವಳನ್ನೂ ಪಾಟಲಿಕೆಯನ್ನೂ ಹೊರಗಟ್ಟಿ ಬಾಗಿಲುಗಳನ್ನು ಭದ್ರಗೊಳಿಸಿ ಮಹಾರಾಜನ ಹತ್ತಿರ ಬಂದು ವಿಲಾಸ ಪ್ರಿಯತೆಯನ್ನು ಕಡಿಮೆ ಮಾಡಬೇಕೆಂದು ಬೇಡಿಕೊಂಡಳು. ತಾನೀಗ ಅಸಭ್ಯತೆಯಲ್ಲಿ ವರ್ತಿಸಿದುದು ಅತಿಕಾಮಿ ಹೆಣ್ಣಾ ತಾನೆಂದು

ದಾಸಿಯರಲ್ಲಿ ಪ್ರಚಾರವಾಗಿರುವುದನ್ನು ಸಮರ್ಥಿಸಲು ಎಂದು ಹೇಳಿ ತೈಲಪನ ಕ್ಷಮೆ ಯಾಚಿಸಿ ತಾನು ಬಂದ ರಾಜಕಾರ್ಯವನ್ನು ತಿಳಿಸಿದಳು. ಇನ್ನು ಸಾಮಂತರನ್ನೂ ಆಳುವ ಶಕ್ತಿ ತಮ್ಮಲ್ಲಿ ಉಳಿದಿಲ್ಲ. ಬಿಜ್ಜಳನು ಸರ್ವಾಧಿಕಾರಿಯಾಗಿದ್ದಾನೆ. ಹಾನುಗಲ್ಲು ಬನವಸೆಗಳ ಕದಂಬರು, ನೊಳಂಬವಾಡಿಯ ವೀರಪಾಂಡ್ಯ, ಓರಂಗಲ್ಲಿನ ಪ್ರೊಲ್ಲರಾಜ, ಹೊಯಿಸಳ ನರಸಿಂಹ ಸ್ವತಂತ್ರರಾಗಲು ಹವಣಿಸುತ್ತಿದ್ದಾರೆ. ಈ ಸಮಯದಲ್ಲಿ ತನ್ನ ಗರ್ಭಸಂಭವನಾದ ತಮ್ಮ ಪ್ರಿಯಕುಮಾರ ಎಂಟು ವರ್ಷದ ಜಗ್ಗುಗ ಕೀರ್ತಿವರ್ಮನನ್ನು ತಮ್ಮ ಉತ್ತರಾಧಿಕಾರಿಯನ್ನಾಗಿ ಮಾಡಿರಿ. ಅವನನ್ನು ತನ್ನ ರಕ್ಷಣೆಯಲ್ಲಿಟ್ಟು ಪ್ರಾಪ್ತ ವಯಸ್ಕನಾದಾಗ ಸಿಂಹಾಸನಾರೂಢನಾಗುವಂತೆ ನಿರೂಪ ಮಾಡಿರೆಂದು ಹೇಳಿ, ತಾನಾಗಲೇ ಸಿದ್ಧಪಡಿಸಿ ತಂದಿದ್ದ ನಿರೂಪಕ್ಕೆ ತೈಲಪದೇವನನ್ನು ಒಲಿಸಿಕೊಂಡು ಸಹಿ ಹಾಕಿಸಿದಳು. ಇದು ಬಿಜ್ಜಳನ ರಾಜ್ಯಾಪಹಾರ ಕ್ರಮಕ್ಕೆ ಮುನ್ನೆಚ್ಚರಿಕೆಯೆಂದು ತಿಳಿಸಿ ಅಂದು ಕಾಮೇಶ್ವರಿದೇವಿ ತೈಲಪನನ್ನು ಬೀಳ್ಕೊಂಡಳು.

*   *   *   *

ಸಾಮಂತರೂ ಮಹಾಮಂತ್ರಿಗಳೂ ಆದ ಬಲದೇವರಸರ ಮಗಳು ಗಂಗಾಂಬಿಕೆ ಯೊಡನೆ ಬಸವೇಶನ ಲಗ್ನವಾಗಿ ಅಕ್ಕ ನಾಗಲಾಂಬೆ ಮತ್ತು ಆಕೆಯ ಮಗ ಚೆನ್ನಬಸವ ಕಲ್ಯಾಣದಲ್ಲಿ ನೆಲಸಿದರು. ಬಲದೇವರಸರು ತಮ್ಮ ಒಬ್ಬಳೇ ಮಗಳಾದ ಗಂಗಾಂಬಿಕೆ ಹಾಗೂ ಬಸವೇಶರಿಗೆ ತಮ್ಮ ಸಮಸ್ತ ಆಸ್ತಿಪಾಸ್ತಿಗಳನ್ನು ದಾನವಾಗಿ ಬರೆಯ ಬೇಕೆಂದಿರುವವಿಷಯವನ್ನು ಬಿಜ್ಜಳನು ಬಸವೇಶನನ್ನು ಕರೆಯಿಸಿ ತಿಳಿಸಿದನು. ಮಾವನ ಆಸ್ತಿ ತನಗೆ ಬೇಡ, ತಾನು ಯಾವುದಾದರೂ ಒಂದು ಕಾಯಕ ಮಾಡಿ ಜೀವಿಸುತ್ತೇನೆಂಬ ಸ್ವತಂತ್ರ ಮನೋವೃತ್ತಿಯನ್ನು ತೋರಿಸಿದಾಗ, ಬಿಜ್ಜಳನು ಬಸವೇಶನಲ್ಲಿ ಅವ್ಯಕ್ತ ಪ್ರೀತಿಯನ್ನು ತಳೆದನು. ಕಾವ್ಯ, ವ್ಯಾಕರಣ, ಅರ್ಥಶಾಸ್ತ್ರ, ಗಣಿತ ಶಾಸ್ತ್ರಗಳಲ್ಲಿ ಪ್ರಾವೀಣ್ಯತೆಯಿರುವ ಬಸವೇಶನಿಗೆ ತನ್ನ ಮುಂದಿದ್ದ ಕಳೆದ ನಾಲ್ಕು ವರ್ಷಗಳ ರಾಜಾದಾಯ ಪಟ್ಟಿಯನ್ನು ಪರೀಕ್ಷಿಸುವಂತೆ ಬಿಜ್ಜಳನು ಹೇಳಿದನು. ಅಧೀರನಾಗದೆ ದೂರಾಲೋಚನೆಯುಳ್ಳ ಬಸವೇಶ ರಾಜಾದಾಯದ ಪಟ್ಟಿಯಲ್ಲಿನ ಲೋಪದೋಷಗಳನ್ನು ಸ್ಥೂಲವಾಗಿ ಪರೀಕ್ಷಿಸಿ ಹೇಳಿದನು. ಬಸವೇಶನ ಅರ್ಥವ್ಯಾಖ್ಯೆಯನ್ನು ಮೆಚ್ಚಿದ ಬಿಜ್ಜಳ ರಾಜಾಧ್ಯಕ್ಷ ಶಾಖೆಯಲ್ಲಿ ಕರಣಿಕನನ್ನಾಗಿ ಬಸವೇಶನನ್ನು ನೇಮಿಸಿ ವರುಷಕ್ಕೆ ೭೦೦ ವರಹಗಳ ವೇತನವನ್ನು ಗೊತ್ತುಮಾಡಿದನು. ಅಂದೇ ಬಸವೇಶ ಮಹಾಮಂಡಳೇಶ್ವರ ಬಿಜ್ಜಳರಾಯನ ಕೃಪೆಗೆ ಪೂರ್ಣ ಪಾತ್ರನಾದನು. ಇದು ಬಲದೇವರಸ ಹಾಗೂ ಮಾದಿರಾಜರಿಗೆ ಅತೀವ ಆನಂದವನ್ನುಂಟುಮಾಡಿತು.

ರಾಜಾಧ್ಯಕ್ಷ ಶಾಖೆಯಲ್ಲಿ ಬಸವೇಶ ದಕ್ಷತೆಯಿಂದ ಕೆಲಸಮಾಡಿದನು. ಅರ್ಥ ಮಂತ್ರಿ ಮಂಚಣನಾಯಕರಿಂದ ಮಾಹಿತಿ ಪಡೆದು ಮಂಡಲಾಧ್ಯಕ್ಷ, ಸೈನ್ಯಾಧ್ಯಕ್ಷ, ಅಶ್ವಾಧ್ಯಕ್ಷ, ಕೋಶಾಗಾರ ಮುಂತಾದವುಗಳ ಲೆಕ್ಕಪತ್ರಗಳನ್ನೂ ಪರಿಶೀಲಿಸಿ ಅದರ

ನ್ಯೂನತೆಗಳೇನೆಂದು ತಿಳಿದನು. ಅದುವರೆಗೂ ಬೊಕ್ಕಸಕ್ಕೆ ಆಗಿರುವ ನಷ್ಟದ ಅಂಕಿ ಅಂಶಗಳನ್ನು ಕೆಲವೇ ದಿನಗಳಲ್ಲಿ ತಯಾರಿಸಿ ಬಿಜ್ಜಳನ ಅವಗಾಹನೆಗೆ ಕಳುಹಿಸಿದನು. ಬಸವೇಶನ ಕಾರ್ಯತತ್ಪರತೆಗೆ ಮೆಚ್ಚಿದ ಬಿಜ್ಜಳನು ಬಸವೇಶನನ್ನು ಶ್ಲಾಘಿಸಿ, ರಾಜಾದಾಯವನ್ನು ಹೆಚ್ಚಿಸಲು ಬಸವೇಶ ನೀಡಿದ ಸಲಹೆಗಳನ್ನು ಪರಿಶೀಲಿಸಲು ಬಿಜ್ಜಳರಾಯನು ಮಂತ್ರಿಪರಿಷತ್ತನ್ನು ಕರೆದನು.

ಇತ್ತ ಮಗಳ ಮದುವೆಮಾಡಿ ಮುಗಿಸಿದ ಬಲದೇವರಸರ ಆರೋಗ್ಯ ಕೆಡುತ್ತಾ ಬಂದಿತು ಬಸವೇಶ ತಮ್ಮ ಆಸ್ತಿಪಾಸ್ತಿಗಳನ್ನು ನಿರಾಕರಿಸಿದ್ದು, ಧಾರ್ಮಿಕ, ರಾಜಕೀಯ ವಿಚಾರಗಳಲ್ಲಿ ಬಸವೇಶ ತೋರಿಸುವ ಕ್ರಾಂತಿಕಾರಕ ಭಾವನೆಗಳನ್ನು ಗಮನಿಸಿದ ಬಲದೇವರಸರು ಚಿಂತೆಗೊಳಗಾದರು. ಇದನ್ನರಿತ ನಾಗಲಾಂಬೆ ಅವರ ಚಿಂತೆಯನ್ನು ದೂರಮಾಡಿದಳು. ಒಂದು ಸೋಮವಾರ ಪೂಜೆಗೆ ಕುಳಿತ ಬಲದೇವರಸರು ತಮ್ಮ ಇಹಲೋಕಯಾತ್ರೆಯನ್ನು ಮುಗಿಸಿದರು. ಇತ್ತ ಬಸವೇಶನಿಂದ ರೂಪಿತವಾದ ಹೊಸ ಆರ್ಥಿಕಯೋಜನೆಗಳನ್ನು ಬಿಜ್ಜಳನು ಜಾರಿಗೆ ತಂದನು.

* * * *

ನೂರ್ಮಡಿ ತೈಲಪದೇವನ ಪಿತಾಮಹ, ಚಾಲುಕ್ಯ ಅರಸರಲ್ಲಿ ವಿಖ್ಯಾತ ಗಂಗ ಪೆರ್ಮಾಡಿ ತ್ರಿಭುವನಮಲ್ಲ ವಿಕ್ರಮಾದಿತ್ಯದೇವನಿಗೆ ನಾಲ್ವರು ಮಡದಿಯರು. ಅವರಲ್ಲಿ ನಾಲ್ಕನೆಯವಳಾದ ಚಂದಲಾದೇವಿ ಕರ್ಹಾಡ ಶಿಲಾಹಾರವಂಶದ ಮಾರಸಿಂಹನ ಪುತ್ರಿ. ಆ ಚಂದಲಾದೇವಿ ಕಲ್ಯಾಣಕ್ಕೆ ನಾಲ್ಕು ಹರಿದಾರಿ ದೂರದಲ್ಲಿ ಚಂದಲಾಪುರ ಅಗ್ರಹಾರ ರಚಿಸಿ ವಿಜಯೇಶ್ವರ ದೇವಾಲಯವನ್ನು ಕಟ್ಟಿಸಿದ್ದಳು. ಬಿಜ್ಜಳನು ಸರ್ವಾಧಿಕಾರಿಯಾದ ಮೇಲೆ ಚಂದಲಾಪುರ ದೇವಸ್ಥಾನದ ಜೀರ್ಣೋದ್ಧಾರಕ್ಕೆ ಏರ್ಪಾಟುಮಾಡಿದನು. ಆ ಮಹಾದ್ವಾರಗಳನ್ನು ಮಾರ್ಪಡಿಸುವಾಗ ಭೂಮಿ ಕುಸಿದುಬಿದ್ದು ಸುರಂಗವೊಂದು ಕಂಡಿತು. ಅದನ್ನು ಪರೀಕ್ಷಿಸಲಾಗಿ ನೆಲಮಾಳಿಗೆಯೊಂದು ಸಿಕ್ಕಿ ಅಲ್ಲಿ ವಿವಿಧಾಕೃತಿಯ ಶಿಲೆ ಮತ್ತು ಲೋಹದ ಅನೇಕ ಪ್ರತಿಮೆಗಳನ್ನು ಸಂಗ್ರಹಿಸಿ ಅಡಕಿದಂತೆ ಕಂಡಿತು. ಅವನ್ನೆಲ್ಲ ಹೊರತೆಗೆದು ರಾಜಸ್ಥಪತಿಯ ಮುಖೇನ ವಿಚಾರ ಬಿಜ್ಜಳನಿಗೆ ತಲುಪಿತು. ಬಿಜ್ಜಳನು ಆ ಅಮೂಲ್ಯ ವಿಗ್ರಹಗಳನ್ನು ಭಿನ್ನವಾಗದಂತೆ ಎಚ್ಚರದಿಂದ ನಗರಕ್ಕೆ ತರಿಸಿದನು. ನಗರದ ನೂರು ಕಂಬದ ಅರಮನೆಯಲ್ಲಿ ಅವುಗಳನ್ನೆಲ್ಲಾ ವೀಕ್ಷಣೆಗಾಗಿ ಇಟ್ಟು ನಗರದ ಪ್ರಭು, ಪಂಡಿತ, ಶ್ರೀಮಂತ ಮನ್ನೆಯರಿಗೆಲ್ಲ ಆಹ್ವಾನ ಕಳುಹಿಸಿದನು.

ನೆಲಮಾಳಿಗೆಯಲ್ಲಿ ಸಿಕ್ಕಿದ ವಸ್ತುಗಳಲ್ಲಿ ಮುಖ್ಯವಾದದ್ದು ಎಂದರೆ ಚಾಲುಕ್ಯ ರಾಜವಂಶದ ಲಾಂಛನಗಳನ್ನು ಪಡೆದಿದ್ದ ಶಿಲಾಸಂಪುಟ ಮತ್ತು ಅದರೊಳಗಿದ್ದ ರಾಜಶಾಸನ. ಬಿಜ್ಜಳನು ನಗರದ ಪಂಡಿತರೆಲ್ಲರಿಗೂ ಆಹ್ವಾನ ನೀಡಿ ಆ ರಾಜಶಾಸನವನ್ನು ಓದುವಂತೆ ಬಿನ್ನವಿಸಿಕೊಂಡನು. ಆದರೆ ಯಾರಿಂದಲೂ ಅದನ್ನು ಓದಲಾಗಲಿಲ್ಲ. ಕೆಲವು ದಿನಗಳ ಪರಿಶ್ರಮದ ಪ್ರಯತ್ನದ ಮೇಲೆ ಬಸವೇಶನು ಆ ರಾಜಶಾಸನವನ್ನು

ಓದಿದನು. ವಿಕ್ರಮಾದಿತ್ಯನು ಹುದುಗಿಸಿಟ್ಟ ಗುಪ್ತನಿಧಿ ಹಾಗೂ ಅದರ ವಿತರಣೆಯ ವಿವರಣೆಯನ್ನೂ ತಿಳಿಸಿದನು. ಆದರೆ ಆ ಗುಪ್ತನಿಧಿ ಎಲ್ಲಿದೆಯೆಂಬುದು ಸ್ಪಷ್ಟವಿರಲಿಲ್ಲ.

"ಸಹಸ್ರಾಕ್ಷಃ ಸಹಸ್ರಪಾತ್ ಎಂದು ವೇದ
ನುಡಿವುದಾಗಿ ಕುಬೇರನ ವಿಸ್ಮರವನಲ್ಲಾಡಿಸಿ
ಸ್ವರ್ಗ ನರಕವನುಳಿದು ಪಾತಾಳಮಂ ಪೊಕ್ಕು
ಪದ್ಮವನಮಂ ದಾಟಿ ಪದ್ಮಿನಿಯಂ ಪಡೆವುದು"

ಎಂಬ ಒಗಟಿನ ವಚನವನ್ನು ಬಿಡಿಸಿ ಸಾವಿರ ಕಂಬದ ಅರಮನೆಯ ನೆಲಮಾಳಿಗೆಯಲ್ಲಿ ಹುದುಗಿಸಿಟ್ಟ ಗುಪ್ತನಿಧಿಯನ್ನು ಬಸವೇಶನು ಬಿಜ್ಜಳನಿಗೆ ತೋರಿಸಿದನು. ಇದರಿಂದಾಗಿ ಬಸವೇಶನು ನಗರದ ಮುಖ್ಯಮಾನ್ಯರಲ್ಲಿ ಒಬ್ಬನಾದನು. ಬಿಜ್ಜಳನು ಒಂದು ಮಹಾನಾಡನ್ನು ಕರೆದು ವಿಕ್ರಮಾದಿತ್ಯರ ನಿಧಿಯ ವಿಚಾರವಾಗಿ ಚರ್ಚಿಸಿ ಅಂದೇ ಬಸವೇಶನನ್ನು ಮಂತ್ರಿ ಪದವಿಗೇರಿಸಿ ವಿಕ್ರಮಾದಿತ್ಯರ ನಿಧಿ ಆಡಳಿತದ ಮಹಾ ಕಾರ್ಯದರ್ಶಿಯನ್ನಾಗಿ ನೇಮಿಸಿದನು. ಇದರಿಂದ ಬಸವೇಶನು ಅನಾವಶ್ಯಕವಾಗಿ ಕೆಲವರ ಪ್ರೀತಿ, ಕೆಲವರ ದ್ವೇಷಗಳನ್ನು ಕಟ್ಟಿಕೊಳ್ಳಬೇಕಾಯಿತು.

* * * *

ಮಹಾನಾಡನ್ನು ಕರೆದಾಗ ರಾಜಮಹಿಳೆಯರ ಸಭಾಮಂಟಪದಲ್ಲಿ ಕುಳಿತಿದ್ದ ಬಿಜ್ಜಳನ ತಂಗಿ ನೀಲಲೋಚನೆ ಬಸವೇಶನಲ್ಲಿ ಅತೀವ ಪ್ರೀತಿ ತಳೆದಳು ; ಒಂದು ವರ್ಷದ ಹಿಂದೆಯೇ ಸಂಗಮೇಶ್ವರದಲ್ಲಿ ಬಸವೇಶನನ್ನು ನೋಡಿದ ತಕ್ಷಣವೇ ತನ್ನ ಹೃದಯವನ್ನು ಅರ್ಪಿಸಿದ್ದ ನೀಲಲೋಚನೆ ಅಂದು ದೃಢನಿರ್ಧಾರ ಮಾಡಿಕೊಂಡು ಬಸವೇಶನಿಗೆ ತನ್ನ ತನುಮನವನ್ನು ಅರ್ಪಿಸಲು ಸಿದ್ಧಳಾದಳು. ಆ ರಾತ್ರಿಯೇ ವಟುವಿನ ವೇಷಧರಿಸಿ ಬಸವೇಶನನ್ನು ಮಹಮನೆಯಲ್ಲಿ ನೋಡಿ ತನ್ನ ಇಂಗಿತವನ್ನು ಗಂಗಾಂಬಿಕೆ ನಾಗಲಾಂಬಿಕೆಯರಲ್ಲಿ ತೋಡಿಕೊಂಡಳು. ಅಂದೇ ಅರಮನೆಗೆ ಹಿಂದಿರುಗಿ ವಿರಹದಗ್ಧಳಾಗಿ ಹಾಸಿಗೆ ಹಿಡಿದಳು. ಕೊನೆಗೆ ಗಂಗಾಂಬಿಕೆಯ ಸಮಯೋಚಿತ ಫಲದಿಂದಾಗಿ ಬಸವೇಶನನ್ನು ಒಪ್ಪಿಸಿ ಮೃತ್ಯುಶಯ್ಯೆಯಲ್ಲಿದ್ದ ತನ್ನ ಗೆಳತಿಯನ್ನು ಉಳಿಸಿಕೊಂಡಳು. ಅತ್ತ ಬಿಜ್ಜಳನ ಧರ್ಮಪತ್ನಿ ಕಸ್ತೂರಿ ಕಾಮೋದಿನಿ ಬಿಜ್ಜಳನಿಗೆ ನೀಲಲೋಚನೆಯ ನಿರ್ಧಾರದ ಬಗ್ಗೆ ತಿಳಿಸಿ ಬಸವೇಶನ ಕೈಹಿಡಿಯುವಂತೆ ಮಾಡಿದಳು. ಚಂದಲಾಪುರದ ವಿಜಯೇಶ್ವರ ದೇವಸ್ಥಾನದಲ್ಲಿ ಬಸವೇಶ ನೀಲಲೋಚನೆಯರ ವಿವಾಹ ಜರುಗಿತು.

ರಾಜ್ಯಪಾಲ

ರಾಜಕದಲ್ಲಿ ಆಸಕ್ತಿತೋರದ ತೈಲಪದೇವನು ಯಾತ್ರೆಯ ನೆಪವೊಡ್ಡಿ ಗೋಕರ್ಣಕ್ಕೆ ಬಂದನು. ಆದರೆ ಗೋಕರ್ಣಕ್ಕೆ ಬಂದ ಆರು ತಿಂಗಳಿಂದಲೂ ತೈಲಪದೇವನು

ನಿಜವಾದ ಸನ್ಯಾಸಿಯಂತೆಯೇ ಬಾಳತೊಡಗಿದನು. ತಾನು ಅತಿಯಾಗಿ ಪ್ರೀತಿಸುತ್ತಿದ್ದ ಪಾಟಲಿಕೆ–ಪ್ರೇಮಾವತಿಯರನ್ನೂ ದೂರವಿರಿಸಿದ್ದನು. ಒಮ್ಮೆ ಪ್ರೇಮಾವತಿ ಗೋಕರ್ಣ ದಲ್ಲಿ ಸಮುದ್ರಸ್ನಾನಮಾಡುತ್ತಿದ್ದಾಗ ಕೊಚ್ಚಿಹೋಗುತ್ತಿದ್ದಳು. ಆ ಸಮಯದಲ್ಲಿ ತೇಜೋಮೂರ್ತಿ ಸನ್ಯಾಸಿಯೊಬ್ಬ ಮಹಾರಾಜರ ಕ್ರೀತದಾಸಿ ಪ್ರೇಮಾವತಿ (ಅಫ್ರೋಡೈಟ್)ಯನ್ನು ಉಳಿಸಿದನು. ಮತ್ತೆ ಅವನನ್ನು ಹುಡುಕುವಲ್ಲಿ ಯಾರ ಕಣ್ಣಿಗೂ ಕಾಣದಾಗಿದ್ದನು. ಅವನಾರೂ ಅಲ್ಲದೆ ಮುಂದೆ ಅನುಭವಮಂಟಪದ ಅಧ್ಯಕ್ಷ ಪೀಠವನ್ನು ಏರಿದ ಬಳ್ಳಿಗಾವೆಯ ನಾಮ ಶಕ್ತಿ–ಪ್ರಭುದೇವ–ಅಲ್ಲಮನೇ ಆಗಿದ್ದನು.

ಮಹಾರಾಜರು ಗೋಕರ್ಣದಲ್ಲಿರುವಾಗ ಬನವಾಸಿಯ ಮಂಡಲೇಶ್ವರ ಮಹಾದೇವರಸ ಮತ್ತು ಗೋವೆಯ ಕದಂಬರಸು ಶಿವಚಿತ್ತ ಪೆರ್ಮಾಡಿಯ ಸಹೋದರ ವಿಷ್ಣುಚಿತ್ತ ಪೆರ್ಮಾಡಿ ಮಹಾರಾಜರ ದರ್ಶನಕ್ಕೆ ಬಂದರು. ಇತ್ತ ಮಂಡಲಗಳಿಗೆ ಹಂಚಲು ವಿಕ್ರಮಾದಿತ್ಯರ ನಿಧಿಯಿಂದ ಆರು ಕೋಟಿ ವರಹಗಳು ಕಲ್ಯಾಣದಿಂದ ಬಿಜ್ಜಳನ ಸೈನಿಕ ರಕ್ಷಣೆಯಲ್ಲಿ ಹೊರಟಿತ್ತು. ವಿಷಯ ತಿಳಿದ ಮಹಾರಾಜರು ಅದು ಗೊತ್ತಾದ ಸ್ಥಳಗಳಿಗೆ ತಲಪುವ ಮುನ್ನವೇ ಅದನ್ನು ಅಪಹರಿಸಬೇಕೆಂದು ನಿರ್ಧರಿಸಿದರು. ಆ ನಿಧಿಯ ಅಪಹಾರ ಕಾರ್ಯವನ್ನು ವಿಷ್ಣುಚಿತ್ತ ಪೆರ್ಮಾಡಿ ವಹಿಸಿಕೊಂಡನು. ಹಾಗೆ ಅಪಹರಿಸಿದ ಹಣದಿಂದ ಬಿಜ್ಜಳನ ವಿರುದ್ಧ ಸೈನ್ಯ ಕಟ್ಟುವುದು ಅವರ ಆಗಿನ ಕೆಲಸ ವಾಗಿತ್ತು.

ತೈಲಪದೇವನು ಗೋಕರ್ಣದಿಂದ ಬನವಾಸಿಗೆ ಬಂದನು. ರಾಜಮಾರ್ಗದಲ್ಲಿ ದರೋಡೆಕೋರರಂತೆ ನಿಧಿಯನ್ನು ಅಪಹರಿಸಲಾಯಿತು. ಈ ವಿಚಾರ ರಾಜಭಟರಿಂದ ಸಕಾಲದಲ್ಲಿ ಬಿಜ್ಜಳನಿಗೆ ತಿಳಿಸಲಾಯಿತು. ಅಲ್ಲದೆ ತೈಲಪದೇವ ಬನವಾಸಿಗೆ ಬಂದಮೇಲೆ ಬನವಾಸಿಯ ಮಂಡಲೇಶ್ವರ ಮಹಾದೇವರಸನಿಂದ ಆಡಳಿತಸೂತ್ರವನ್ನು ಕಿತ್ತುಕೊಂಡು ತೈಲಪದೇವನೇ ಸ್ವಯಂ ಆಡಳಿತವನ್ನು ಘೋಷಿಸಿದನು.

ಮಹಾರಾಜರು ನಿಧಿಯನ್ನು ಅಪಹರಿಸಿದ್ದು, ಬನವಾಸಿಯಲ್ಲಿ ನಡೆಸಿದ ಕಾರ್ಯಾಚರಣೆಗಳನ್ನು ಗುಪ್ತವಾಗಿ ತಿಳಿದ ಬಿಜ್ಜಳನು ಮಂತ್ರಿಮಂಡಲವನ್ನು ಕರೆದು ಮಹಾರಾಜರು ನಡೆಸಿರುವ ಯೋಗ್ಯವಲ್ಲದ ಕಾರ್ಯಗಳನ್ನು ತಿಳಿಸಿದನು ; ಇದರಿಂದಾಗಿ ಮುಂದೆ ಚಾಲುಕ್ಯರಾಜ್ಯದಲ್ಲಿ ತಲೆದೋರಬಹುದಾದ ಅಂತಃಕಲಹಗಳನ್ನು ಸೂಚಿ ಸಿದನು. ಇದನ್ನು ತಪ್ಪಿಸಿ ಮಹಾರಾಜರಿಗೆ ಯಥಾಸ್ಥಿತಿಯನ್ನು ಅರಿಕೆಮಾಡಿ ಅವರನ್ನು ಕಲ್ಯಾಣಕ್ಕೆ ಕರೆಸುವ ಬಗೆ ಹೇಗೆಂದು ಮಂತ್ರಿಮಂಡಲ ಚರ್ಚಿಸಿತು. ಕೊನೆಯಲ್ಲಿ ಬಸವೇಶನನ್ನು ಮಹಾರಾಜರ ಬಳಿ ರಾಜದೂತನನ್ನಾಗಿ ಕಳುಹಿಸಬೇಕೆಂದೂ, ಅವರಲ್ಲಿ ತಲೆದೋರಿರುವ ಅಂಕೆಶಂಕೆಗಳನ್ನು ನಿವಾರಿಸಿ ಯಥಾಸ್ಥಿತಿಯನ್ನು ತಿಳಿಸಿ ಅವರನ್ನು ಕಲ್ಯಾಣಕ್ಕೆ ಕರೆತರುವಂತೆ ಸಂಧಾನಮಾಡಬೇಕೆಂದೂ ನಿಯೋಜಿಸಲಾಯಿತು. ಮಂತ್ರಿಮಂಡಲದ ನಿರ್ಧಾರಕ್ಕೆ ಮಣಿದು ಬಸವೇಶನು ವಿಧಿಯಿಲ್ಲದೆ ದೂತಕಾರ್ಯವನ್ನು

ಒಪ್ಪಬೇಕಾಯಿತು. ಬಿಜ್ಜಳನು ಬಸವೇಶನ ಕೈಲಿ ಮಹಾರಾಜರಿಗೆ ಕೊಡಲು ಅಭಿಯೋಗ ಪತ್ರವೊಂದನ್ನು ಕೊಟ್ಟನು. ಅದರ ವಿವರಗಳು ಈ ರೀತಿಯಿದ್ದವು:

"ಮಹಾರಾಜರು ಸಾಮ್ರಾಜ್ಯದ ದಕ್ಷಿಣ ಮಂಡಲಗಳ ಯಾತ್ರೆ ಮುಗಿಸಿಕೊಂಡು ಜಾಗ್ರತೆ ಕಲ್ಯಾಣದ ನೆಲೆವೀಡಿಗೆ ಹಿಂದಿರುಗುವುದು, ಚಾಲುಕ್ಯರಾಜ್ಯದ ಹಿತಶಾಂತಿಗಳಿಗೆ ಆಗತ್ಯವೆಂದು ಮಂತ್ರಿಮಂಡಲ ಅಭಿಪ್ರಾಯಪಡುತ್ತದೆ."

"ಮಹಾರಾಜರು ಕಲ್ಯಾಣಕ್ಕೆ ಹಿಂದಿರುಗಿದ ಕೂಡಲೇ ವಿಕ್ರಮಾದಿತ್ಯ ದೇವರ ಮಹಾನಿಧಿಯಲ್ಲಿ ಅವರಿಗೆ ಸಲ್ಲುವ ರಾಜಾದಾಯದ ಉಳಿಕೆ ಹಣವನ್ನು ಅರಮನೆಯ ಕೋಶಾಗಾರಕ್ಕೆ ಸಂದಾಯಮಾಡಲು ಮಂತ್ರಿಮಂಡಲ ಆಜ್ಞೆಮಾಡಿದೆ."

"ಮಹಾರಾಜರ ಪಟ್ಟಮಹಾದೇವಿ ಕಾಮೇಶ್ವರಿ ಅಮ್ಮನವರ ಗರ್ಭದಲ್ಲಿ ಜನಿಸಿದ ಕುಮಾರ ಕೀರ್ತಿವರ್ಮ ದೇವರನ್ನು ರಾಜ್ಯದ ಉತ್ತರಾಧಿಕಾರಿಯಾಗಿ ಮಂತ್ರಿಮಂಡಲ ಅಂಗೀಕರಿಸುತ್ತದೆ."

"ವಿಧಿರೂಪವಾದ ಈ ನಿರ್ಣಯಗಳ ಅಭಿಪ್ರಾಯ ಉದ್ದೇಶಗಳಿಗೆ ಚ್ಯುತಿಬಾರದ ರೀತಿಯಲ್ಲಿ ತೈಲಪ ಮಹಾರಾಜರೊಡನೆ ಸಂಧಾನ ನಡೆಸಲು ಈ ಶಾಸನದ ಮೂಲಕ ಬಸವೇಶ ದಂಡನಾಯಕರಿಗೆ ಅಧಿಕಾರ ಕೊಟ್ಟಿದೆ."

ಮಹಾಮಂಡಲೇಶ್ವರ ಸರ್ವಾಧಿಕಾರಿ
ಬಿಜ್ಜಳರಾಯರ ಸ್ವಹಸ್ತ

ಬಸವೇಶ ಬನವಾಸಿಗೆ ರಾಜದೂತನಾಗಿ ಹೋಗುವ ಸುದ್ದಿ ಕಲ್ಯಾಣದಲ್ಲಿ ಹರಡಿತು. ಇದರಿಂದಾಗಿ ಅವರು ರಾಜಿಕದಲ್ಲಿ ಮತ್ತಷ್ಟು ಮೇಲೇರುವರೆಂದು ಸರ್ವರಿಗೂ ವಿದಿತವಾಯಿತು. ಆದರೆ ಈ ಕೆಲಸವನ್ನು ಬಸವೇಶರು ಯಶಸ್ವಿಯಾಗಿ ನಡೆಸುವರೇ ಎಂಬ ಶಂಕೆ ಬಹುಜನರಲ್ಲಿ ಉಳಿಯಿತು. ಗೊತ್ತಾದ ದಿನದಲ್ಲಿ ಬಸವೇಶ ದಂಡನಾಯಕನು ಮಿತಪರಿವಾರದೊಡನೆ ಬನವಾಸಿಗೆ ಪ್ರಯಾಣಮಾಡಿದನು. ಬಸವೇಶನು ತನ್ನ ಚತುರತೆಯಿಂದ ಬನವಾಸಿಯಲ್ಲಿ ನಡೆಯುತ್ತಿದ್ದ ರಾಜಕಾರ್ಯಕ್ಕೆ ಸಂಬಂಧಿಸಿದ ಅನೇಕ ವಿದ್ಯಮಾನಗಳನ್ನು ವೀಕ್ಷಿಸಿದನು. ಮಹಾರಾಜರು ಆಪಹರಿಸಿದ ಹಣಸೈನ್ಯಜವಾವಣೆಯ ನೆಪದಲ್ಲಿ ಅಕ್ರಮವಾಗಿ ಪೋಲಾಗುತ್ತಿರುವುದನ್ನು ಕಣ್ಣಾರೆ ಕಂಡನು. ಅಂದು ಬನವಾಸಿಯ ಮಧುಕೇಶ್ವರ ದೇವಸ್ಥಾನದಲ್ಲಿ ನಡೆದ ನರ್ತನವನ್ನು ವೀಕ್ಷಿಸಿ ಪ್ರಭುಗಳನ್ನು ಬಸವೇಶನು ಭೇಟಿಯಾದನು. ತೈಲಪ ದೇವರಲ್ಲಿದ್ದ ಅನೇಕ ಸಂಶಯಗಳನ್ನು ನಿವಾರಿಸಿ ಮಂತ್ರಿಮಂಡಲ ತೀರ್ಮಾನಿಸಿ ನೀಡಿದ್ದ ಅಭಿಯೋಗ ಶಾಸನವನ್ನು ಮಹಾರಾಜರಿಗೆ ನೀಡಿ ಅದಕ್ಕೆ ಅವರ ಒಪ್ಪಿಗೆ ನಿರೂಪವನ್ನು ಬೇಡಿದನು. ಬಸವೇಶನ ಜಾಗತಿಕ ದೂರದೃಷ್ಟಿಯ ಮಾತುಗಳಿಗೆ ಒಲಿದ ಮಹಾರಾಜ ಬಿಜ್ಜಳನ ಮಂತ್ರಿಮಂಡಲದ ತೀರ್ಮಾನವನ್ನು ಒಪ್ಪಿದುದಾಗಿ ನಿರೂಪ ಬರೆಸುವಲ್ಲಿ ತೊಡಗಿದನು.

ಏತನ್ಮಧ್ಯೆ ಮತ್ತೊಂದು ಅಹಿತಕರ ಪ್ರಕರಣವೊಂದು ನಡೆಯಿತು. ಕದಂಬ

ವಂಶಕ್ಕೆ ಸೇರಿದ ಕೀರ್ತಿದೇವರಸನ ಮಗಳು ಕುಸುಮಾವಳಿ ಪದ್ಧತಿಯಂತೆ ಮಧುಕೇಶ್ವರ ದೇವಸ್ಥಾನದಲ್ಲಿ ಹುಣ್ಣಿಮೆಯ ಮಹೋತ್ಸವದಲ್ಲಿ ನರ್ತಿಸಿದಳು. ರಾಜಕನ್ಯೆಯ ರೂಪ ರಾಶಿಗೆ ಮರುಳಾದ ತೈಲಪದೇವ ರಾಜಭವನದಲ್ಲಿ ನರ್ತಿಸುವಂತೆ ಆಜ್ಞಾಪಿಸಿದನು. ಕೀರ್ತಿದೇವರಸ ಆಜ್ಞೆಯನ್ನು ನಿರಾಕರಿಸಿದನು. ಅಲ್ಲಿಯೇ ಇದ್ದ ಬಸವೇಶನೂ ಕೀರ್ತಿದೇವರಸನ ಮಾತನ್ನೆ ಅನುಮೋದಿಸಿದನು. ಅಂದೇ ರಾತ್ರಿ ಅರಮನೆಯಲ್ಲಿ ಭೋಜನಕೂಟವಿತ್ತು. ಬಸವೇಶನಿಗೂ ವಿಶೇಷ ಆಹ್ವಾನವಿತ್ತು. ಆದರೆ ಕಲ್ಯಾಣ ದಿಂದ ಬಂದ ಒಬ್ಬ ಬೇಹುಗಾರನನ್ನು ಆ ರಾತ್ರಿ ಗುಪ್ತವಾಗಿ ಸ್ವರ್ಣಕಾರರ ಬೀದಿಯಲ್ಲಿ ನೋಡುವುದೆಂದು ಬಸವೇಶನು ಗೊತ್ತುಪಡಿಸಿದ್ದನು. ಇದನ್ನು ತಿಳಿದ ವಿಷ್ಣುಚಿತ್ತ ಪೇರ್ಮಾಡಿಯು ಭಟರನ್ನು ಕಳುಹಿಸಿ ಬಸವೇಶನ ಮೇಲೆ ಬೀಳುವಂತೆ ಮಾಡಿದನು. ಪೂರ್ವಸಿದ್ಧತೆಯಿಲ್ಲದ ನಿರಾಯುಧನೊಬ್ಬನ ಮೇಲೆ ಬಿದ್ದ ಭಟರಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲದೆ ಬಸವೇಶನು ಕೆಳಗೆ ಬಿದ್ದನು. ಆ ಸಮಯದಲ್ಲಿ ಕೀರ್ತಿದೇವರಸನ ಕಡೆಯವರು ಬಸವೇಶನನ್ನು ರಕ್ಷಿಸಿ ಮೂರು ವಾರಗಳ ಕಾಲ ಚಿಕಿತ್ಸೆ ನಡೆಸಿದರು. ಸ್ವಯಂ ಕುಸುಮಾವಳಿಯೇ ಬಸವೇಶನ ಸೇವೆಗೆ ನಿರತಳಾಗಿದ್ದಳು.

ಇದೇ ಸಮಯದಲ್ಲಿ ಬಸವೇಶನು ಕುಸುಮಾವಳಿಯಿಂದ ಅವಳ ಅಕ್ಕ ಮಾಯಾ ದೇವಿಯ ಕಥೆಯನ್ನು ತಿಳಿದನು. ಬಳ್ಳಿಗಾವೆಯಿಂದ ಬಂದ ಮದ್ದಲಿಗ ನಾಮಶಕ್ತಿ ಯೆಂಬುವನ ರೂಪಲಾವಣ್ಯಗಳಿಗೆ ಮನಸೋತ ತನ್ನ ಅಕ್ಕ ಆತನನ್ನು ತನ್ನ ಮಾಯೆ ಯಿಂದ ಕಟ್ಟಿಹಾಕಲು ಯತ್ನಿಸಿದುದು; ಅದು ಸಫಲವಾಗದೆ ತನ್ನ ಅಕ್ಕ ಅಸುನೀಗಿದ ಕಥೆಯನ್ನು ಹೇಳಿದಳು. ಆ ವೇಳೆಗೆ ತೈಲಪರಿಂದ ನಿರೂಪ ಬಂದಿತು. ಆದರೆ ಆ ನಿರೂಪ ಬಸವೇಶ ಒಪ್ಪಿಸಿದ್ದ ಸಂಧಾನಕ್ಕೆ ವಿರುದ್ಧವಾಗಿತ್ತು. ಇಂಥ ನಿರಾಶಾನಿರೂಪವನ್ನು ಪಡೆದು ಕಲ್ಯಾಣಕ್ಕೆ ಹಿಂತಿರುಗುವುದೆಂತು ಎಂಬ ಚಿಂತೆಗೆ ಬಸವೇಶನು ಒಳಗಾದನು. ಆದರೇನು ಅಷ್ಟರಲ್ಲಿ ತೈಲಪದೇವ ಮತ್ತು ಅವನ ಪರಿವಾರದವರು ಬನವಾಸಿಯನ್ನು ಬಿಟ್ಟು ಹಂಪೆಯಕಡೆ ಹೊರಟಿದ್ದರು.

ತೈಲಪದೇವನು ಬನವಾಸಿಯನ್ನು ಬಿಟ್ಟಮೇಲೆ ಮಹಾರಾಜರನ್ನು ಅರಸಿ ಕಾಮೇಶ್ವರಿದೇವಿ ಬನವಾಸಿಗೆ ಬಂದಳು. ಮಂಡಲೇಶ್ವರ ಮಹಾದೇವರಸ ಆಕೆಯ ಬಿಡಾರಕ್ಕೆ ಅನುಕೂಲ ಮಾಡಿದ್ದನು. ಕಾಮೇಶ್ವರಿಯ ಕಂಚುಕಿಯೊಬ್ಬಳು "ವಿಪದ್ಗ್ರಸ್ತ ಹೆಣ್ಣೊಬ್ಬಳು ಚಾಲುಕ್ಯ ಬಿಡಾರದಲ್ಲಿ ನಿಮ್ಮ ಬರವನ್ನೇ ನಿರೀಕ್ಷಿಸು ತ್ತಿದ್ದಾಳೆ" ಎಂಬ ಪತ್ರವನ್ನು ಬಸವೇಶನಿಗೆ ಕೊಟ್ಟಾಗ ಹಿಂದೆ ಮುಂದೆ ನೋಡದೆ ಕಾಮೇಶ್ವರಿದೇವಿಯನ್ನು ಕಾಣಲು ತತ್ಕ್ಷಣವೇ ಬಸವೇಶನು ಹೊರಟನು. ಆದರೆ ಅಲ್ಲೊಂದು ವಿಚಿತ್ರಾನುಭವ ಬಸವೇಶನಿಗಾಗಿ ಕಾದಿತ್ತು. ನಾಲ್ಕು ವಾರಗಳ ಸೇವೆ ನಡೆಸಿದ ಕುಸುಮಾವಳಿ ಬಸವೇಶರಲ್ಲಿ ಅವ್ಯಕ್ತ ಅನುರಾಗ ತಳೆದಿದ್ದಳು. ಕಾಮೇಶ್ವರಿ–ಕುಸುಮಾವಳಿ ಸ್ನೇಹಿತೆಯರು. ಸ್ನೇಹಿತೆಯ ವಿರಹವನ್ನು ಹೋಗಲಾಡಿಸಿ ಪ್ರಿಯಸಂಗ ವನ್ನು ಕಲ್ಪಿಸಲು ರಾಣಿ ಒಂದು ಹೂಟವನ್ನೆ ಹೂಡಿ ಬಸವೇಶನನ್ನು ಅರಮನೆಗೆ

ಕರೆಸಿದಳು. ಕುಸುಮಾವಳಿ ಬಸವೇಶರು ಏಕಾಂತದಲ್ಲಿ ಸಂಧಿಸುವಂತೆ ಅನುವುಮಾಡಿದಳು. ಆದರೆ ಸಂಯಮಿ ಬಸವೇಶನ ಮುಂದೆ ಕುಸುಮಾವಳಿಯ ತಪ್ತಹೃದಯ ನಡುಗಿತು. ತನ್ನ ತಪ್ಪನ್ನು ತಿಳಿದು ಕುಸುಮಾವಳಿ ಪಶ್ಚಾತ್ತಾಪ ಪಟ್ಟು ಕ್ಷಮೆಬೇಡಿದಳು. ಅನಂತರ ಕಾಮೇಶ್ವರಿದೇವಿಯನ್ನು ಬಸವೇಶ ಕಂಡು ಕಲ್ಯಾಣದ ರಾಜಿಕವನ್ನು ತಿಳಿಸಿದನು. ತೈಲಪ ದೇವರ ದುಡುಕುತನವನ್ನು ವಿವರಿಸಿದನು. ಕಾಮೇಶ್ವರಿ ಬಸವೇಶನ ರಾಜದೂತ ಕಾರ್ಯವನ್ನು ಶ್ಲಾಘಿಸಿದಳು. ಚಾಳುಕ್ಯರಾಜ್ಯ ಅನ್ಯಾಕ್ರಾಂತವಾಗಬಾರದೆಂದು ತಿಳಿಸಿದಳು. ತೈಲಪದೇವರನ್ನು ಹೇಗಾದರೂ ಮಾಡಿ ಒಲಿಸಿಕೊಳ್ಳುವಂತೆ ಹೇಳಿ ಮುಂದೆ ಚಾಲುಕ್ಯ ಗದ್ದುಗೆ ಕೀರ್ತಿವರ್ಮನಿಗೆ ಸೇರಬೇಕೆಂಬ ತನ್ನ ಆಶಯುವನ್ನು ಬಸವೇಶನ ಎದುರಿಗೆ ತಿಳಿಸಿದಳು.

ಇತ್ತ ಬಸವೇಶನು ಹಂಪೆಯ ಕಡೆಗೆ ತೈಲಪದೇವನನ್ನು ಅರಸಿ ಹೊರಟನು. ದಾರಿಯಲ್ಲಿ ಪಾಟಲಿಕೆ–ಪ್ರೇಮಾವತಿಯರನ್ನು ಭಟರು ಹಿಂಸಿಸುತ್ತಿರುವುದನ್ನು ಕಂಡು ಅವರನ್ನು ಭಟರ ಕೈಯಿಂದ ಬಿಡಿಸಿ ಅವರ ಮುಖೇನ ತೈಲಪನ ಇರವನ್ನು ತಿಳಿದನು. ತೈಲಪದೇವ ವಿಷ್ಣುಚಿತ್ತನ ವಂಚನೆಗೆ ಒಳಗಾಗಿ ಬನವಾಸಿಯಿಂದ ಹಂಪೆಗೆ ಬಂದಿದ್ದನು. ಹಂಪೆಯಲ್ಲಿ ಸಿದ್ಧಿಪುರುಷನೊಬ್ಬನ ಪರಿಚಯಮಾಡಿಸುತ್ತೇನೆ, ಅವನ ಹತ್ತಿರವಿರುವ ಚಂದ್ರಹಾಸ ಖಡ್ಗಪಡೆದರೆ ನಿಮಗೆ ಜಯ ಖಂಡಿತವೆಂದು ತಿಳಿಸಿದ ವಿಷ್ಣುಚಿತ್ತನ ಮಾತನ್ನೂ ನಂಬಿ ತೈಲಪನು ಮೋಸಹೋಗಿ ಗಜಪತಿ ಪ್ರೊಲ್ಲರಾಜನ ಶಿಬಿರದ ಮೇಲೆ ದಂಡೆತ್ತಿಹೋಗಿ ಕೈಸೆರೆಯಾಗಿದ್ದನು. ಬಸವೇಶನು ಸಕಾಲದಲ್ಲಿ ಬಂದು ಗಜಪತಿ ಪ್ರೊಲ್ಲರಾಜ ಹಾಗೂ ಸಿಂಧನಾಡಿನ ರಾಚಮಲ್ಲರನ್ನು ಸಂಧಿಸಿ ಅವರಿಂದ ನಿಜಸ್ಥಿತಿ ತಿಳಿದು ಅವರಿಗೆ, ನಿಜಸ್ಥಿತಿಯನ್ನು ಅರುಹಿ ತೈಲಪನ ಬಿಡುಗಡೆಗೆ ಕಾರಣನಾದನು. ಅನಂತರ ತೈಲಪದೇವನನ್ನು ತುಂಗಭದ್ರೆಯ ನಡುಗೆಡ್ಡೆಯ ಮೇಲಿದ್ದ ವಿಹಾರಭವನದಲ್ಲಿ ಕಂಡು ಬನವಾಸಿಯಲ್ಲಿ ಅರ್ಥಕ್ಕೆನಿಂತ ದೂತಕಾರ್ಯವನ್ನು ಯಶಸ್ವಿಯಾಗಿ ನಡೆಸಿ ತೈಲಪನಿಂದ ನಿರೂಪವೊಂದನ್ನು ಬರೆಸಿದನು. ನಿರೂಪದಲ್ಲಿ ತೈಲಪದೇವ ತನ್ನೆಲ್ಲ ಅಧಿಕಾರವನ್ನು ಬಿಜ್ಜಳನಿಗೆ ಕೊಟ್ಟಿರುವುದಾಗಿಯೂ, ಕೀತಿವರ್ಮ ರಾಜ್ಯದ ಉತ್ತರಾಧಿ ಕಾರಿಯೆಂದೂ, ತಮ್ಮ ಜೀವಿತದ ಉಳಿದಕಾಲವನ್ನು ಕಂಪಿಲದುರ್ಗದಲ್ಲಿ ಕಳೆಯು ವುದಾಗಿಯೂ ತೀರ್ಮಾನಿಸಿರುವುದಾಗಿ ತಿಳಿಸಲಾಗಿತ್ತು. ಬಸವೇಶ ಹೊತ್ತು ಹೊರಟ ಈ ನಿರೂಪ ಸಾಮಂತ ಮಂಡಲಿಕರಲ್ಲಿ ಒಂದು ಬಗೆಯ ಸಂತೃಪ್ತಿ ತಂದಿತು. ಬಿಜ್ಜಳನ ರಾಜನೀತಿ ದಕ್ಷತೆಗಳನ್ನು ಕಂಡು ಜನ ತಲೆದೂಗಿದರು. ರಾಜದೂತ ಕಾರ್ಯವನ್ನು ಯಶಸ್ವಿಯಾಗಿ ನಡೆಸಿದ ಬಸವೇಶನನ್ನು ಬಿಜ್ಜಳ ಬನವಾಸಿಯ ರಾಜ್ಯಪಾಲನನ್ನಾಗಿ ನೇಮಿಸಿದನು.

ಬನವಾಸಿಯ ರಾಜ್ಯಪಾಲನಾದಮೇಲೆ ಬಸವೇಶನು ಧರ್ಮಾಧಿಕರಣ, ಅರ್ಥಾಧಿಕರಣಗಳನ್ನು ವ್ಯವಸ್ಥೆಗೊಳಿಸಿ ವಾಣಿಜ್ಯ ಕೈಗಾರಿಕೆಗಳು ಅಭಿವೃದ್ಧಿ ಯಾಗುವಂತೆ ಮಾಡಿ ಎಲ್ಲರ ಮೆಚ್ಚಿಗೆಗೂ ಪಾತ್ರನಾದನು.

ಆ ಸಮಯದಲ್ಲಿ ನಾಗಲಾಂಬೆಯ ಮಗ ಚನ್ನಬಸವನು ಬಳ್ಳಿಗಾವೆಯ ನೋಡಿ ಮಠದಲ್ಲಿ ವ್ಯಾಸಂಗಮಾಡುತ್ತಿದ್ದು ಆತನನ್ನು ಬಳ್ಳಿಗಾವೆಯಲ್ಲೇ ನೋಡಿಬರುವುದೆಂದು ನೀಲಲೋಚನೆ, ಗಂಗಾಂಬಿಕೆ ಮತ್ತು ನಾಗಲಾಂಬೆಯರು ಸನ್ನಾಹಮಾಡಿದರು. ಅವರ ಜೊತೆಯಲ್ಲಿ ಬಸವೇಶನೂ ಸೋದರಳಿಯನನ್ನು ನೋಡಲು ಹೊರಟನು. ಮಧ್ಯ ದಾರಿಯಲ್ಲಿ ರಾಜ್ಯಪಾಲನಿಗೆ ನಗರ ಗ್ರಾಮಗಳ ಜನರಿಂದ ವಿಶೇಷ ಸನ್ಮಾನಗಳು ನಡೆದವು. ಅಂದು ರಾತ್ರಿ ಬೀಡುಬಿಟ್ಟಾಗ ಸುತ್ತಲಿನವರಿಗೆಲ್ಲ ವಿವಾದಾಸ್ಪದ ವ್ಯಕ್ತಿಯಾಗಿದ್ದ, ದರೋಡೆಕಾರ ಎನಿಸಿದ ;

“ ವೀರರಿಗೆ ವೀರ, ದಾನಿಗ
ಳ ದಾನಿ, ಕಲಿಸಿಂಗಿ ರಾಜದೇವಂ ಕೈಯೊಳ್
ಖಡ್ಗವ ಪಿಡಿದೈತರೆ ಗಡ !
ಗಡ ! ನಡುಗಿತು ಚಂದ್ರಗುತ್ತಿ ಕಂಪಣಮೆಲ್ಲಂ ”

ಎಂದು ಹೇಳಿಕೊಳ್ಳುತ್ತಿದ್ದ ಸಿಂಗಿರಾಜ ಬಸವೇಶನ ಪ್ರಭಾವಕ್ಕೆ ಒಳಗಾಗಿ ತಾನಾಗಿ ಬಂದು ಶರಣಾದನು. ಶರಣಾದ ಸಿಂಗಿರಾಜನನ್ನು ಕಲ್ಯಾಣಕ್ಕೆ ಕಳುಹಿಸಿ ಅಲ್ಲಿ ಆತ ಹತ್ತುವರ್ಷ ಸೆರೆಮನೆಯಲ್ಲಿದ್ದು ಹೊರಬಂದನು. ಅನಂತರ ಆತನೆ ಸಿಂಗಿರಾಜ ಪುರಾಣ ಅಮಲಬಸವಚರಿತ್ರೆ ಬರೆದು ವಿಖ್ಯಾತ ಕವಿಯಾಗುತ್ತಾನೆ.

ಬಸವೇಶ ಮತ್ತು ಆತನ ಸಮೂಹ ಬಳ್ಳಿಗಾವೆಯನ್ನು ತಲುಪಿ ಚನ್ನಬಸವನನ್ನು ಕಂಡರು. ಚನ್ನಬಸವನ ವಿದ್ಯಾಪ್ರಗತಿಯನ್ನು ಕಂಡು ಬಸವೇಶನಿಗೆ ಮೆಚ್ಚುಗೆಯಾಯಿತು. ಅಲ್ಲಿನ ವಿದ್ಯಾಭರಣ ಪಂಡಿತರಿಂದ ವಾಮಶಕ್ತಿ–ಪ್ರಭು–ಅಲ್ಲಮನೆಂದು ವಿವಿಧ ಹೆಸರುಗಳಿಂದ ಕರೆಯುತ್ತಿದ್ದ ವ್ಯಕ್ತಿ ಮತ್ತು ಆತನ ಹುಟ್ಟಿನ ಬಗ್ಗೆ ಬಸವೇಶನು ತಿಳಿದುಕೊಂಡನು. ಬನವಾಸಿಯಲ್ಲಿ ಕುಸುಮಾವಳಿಯಿಂದ ಕೇಳಿದ ಕಥೆ, ಹಂಪೆಯಲ್ಲಿ ತಾನು ಕಂಡ ಸನ್ಯಾಸಿಯ ತೇಜಸ್ಸು ಮತ್ತಾರದೂ ಅಲ್ಲದೆ ನಿರಾಕಾರ ನಿರ್ವಿಕಾರ ಮೂರ್ತಿ ಅಲ್ಲಮನದೆಂದು ಬಸವೇಶರು ಚಿಂತಿಸಿದರು.

ಕದಂಬಕುಲದ ಬೊಪ್ಪರಸ ಸಿರಿಯಾದೇವರಿಗೆ ಅವಳಿ ಮಗನಾಗಿ ಅಲ್ಲಮ ಜನಿಸಿದನು. ಇವನು ಶೈವಧರ್ಮ ಉದ್ಧಾರ ಮಾಡುವನೆಂದು ಜ್ಯೋತಿಷ್ಕರಿಂದ ತಿಳಿದು ಅರಸನು ಮಗನನ್ನು ವೃದ್ಧ ದಾಸಿಯ ಮೂಲಕ ಅದೇ ಊರಿನ ವೇಶ್ಯೆ ಕಾಮಲತೆಗೆ ಕೊಟ್ಟನು. ಆ ಮಗು ಅವಳಲ್ಲಿ ಹತ್ತು ವರ್ಷ ಬೆಳೆದು ಪಂಚಲಿಂಗೇಶ್ವರ ವಿದ್ಯಾಪೀಠದಲ್ಲಿ ವಿದ್ಯಾರ್ಥಿಯಾಗಿ ಸೇರಿ ೧೪ ವರ್ಷಗಳ ಕಾಲ ಜ್ಞಾನಾರ್ಜನೆಮಾಡಿ ಸನ್ಯಾಸ ಸ್ವೀಕರಿಸಲು ಉದ್ಯುಕ್ತನಾದನು. ಕಾಮವನ್ನು ಸುಡುವ ಚಿಚ್ಛಕ್ತಿ ತನ್ನಲ್ಲಿ ಇದೆಯೇ ಎಂದು ತಿಳಿಯಲು ತಾರುಣ್ಯಪಡೆದ ಅಲ್ಲಮ ಕಾಮಲತೆಯ ಮನೆಯಲ್ಲಿ ಒಂದು ತಿಂಗಳಿದ್ದು ಕಾಮವನ್ನು ಜಯಿಸಿ ಸನ್ಯಾಸವನ್ನು ಸ್ವೀಕರಿಸಿ ಮಠದಲ್ಲಿ ನಿಂತನು. ಕೊನೆಗೆ ವಿದ್ಯಾರ್ಥಿಯೊಬ್ಬನ ಅವಹೇಳನದ ಮಾತನ್ನು ಕೇಳಿ ಅಲ್ಲಿಂದ ಅದೃಶ್ಯವಾಗಿ

ಬನವಾಸಿಗೆ ಹೋಗಿ ಅಲ್ಲಿ ಮಾಯೆಯ ಮೋಹಪಾಶವನ್ನು ಕಿತ್ತೊಗೆದು ಪೂರ್ಣ ಜ್ಞಾನಿಯಾಗಿ ಹೊರಟ ವಿಚಾರವನ್ನು ವಿದ್ಯಾಭರಣ ಪಂಡಿತರಿಂದ ತಿಳಿದ ಬಸವೇಶ ಅಲ್ಲಮನಿಗೆ ಮನದಲ್ಲೇ ವಂದಿಸಿದನು.

ಇತ್ತಲಾಗಿ ಕಾಮೇಶ್ವರಿದೇವಿ ಕಂಪಿಲದುರ್ಗವನ್ನು ಸೇರಿ ತೈಲಪನನ್ನು ಕೂಡಿ ಕೊಂಡಳು. ಈ ಮಧ್ಯೆ ಒಂದು ಅಹಿತಕರ ಪ್ರಸಂಗ ನಡೆಯಿತು. ಕಾಮೇಶ್ವರಿಯ ಅಕ್ಕನ ಮಗನಾದ ೧೬ ವರ್ಷದ ಕಾಮಾರ್ಣವನನ್ನು ತೈಲಪ ತನ್ನ ಅರಮನೆಗೆ ಬರಮಾಡಿಕೊಳ್ಳಲು ಇಚ್ಛಿಸಿದನು. ಆ ದೂರನ್ನು ಹೊತ್ತು ಕಾಮಾರ್ಣವ ಕಾಮೇಶ್ವರಿಯ ಕಡೆ ಬಂದನು. ಆತನ ಮುಗ್ಧರೂಪಿಗೆ ಬೆರಗಾಗಿ ಪುತ್ರವಾತ್ಸಲ್ಯದಿಂದ ಅವನನ್ನು ಬಿಗಿದಪ್ಪಿದಳು. ಇದನ್ನು ದೂರದಿಂದ ಕಂಡ ತೈಲಪ ಸ್ವಭಾವದಲ್ಲಿ ವಿಲಾಸ ಪ್ರಿಯೆಯಾದ ತನ್ನ ಪತ್ನಿ ಕಾಮಾರ್ಣವನನ್ನು ಪ್ರಿಯನನ್ನಾಗಿ ಸ್ವೀಕರಿಸಿರುವ ಳೆಂದು ಆರೋಪಿಸುತ್ತಾನೆ. ಈ ಮಾತುಗಳಿಂದ ಸಿಡಿದೆದ್ದ ಕಾಮೇಶ್ವರಿ ರಾಜನನ್ನು ತ್ಯಜಿಸಿ ಅಂದೇ ಕರ್ಹಾಡಕ್ಕೆ ಹೊರಟಳು.

ಅದೇ ಸಮಯಕ್ಕೆ ದ್ವಾರಸಮುದ್ರ ಯದುಗಿರಿ ಶ್ರೀರಂಗಗಳಿಗೆ ಯಾತ್ರೆ ಹೋಗಿದ್ದ ತೈಲಪನ ತಮ್ಮ ಜಗದೇಕಮಲ್ಲನು ಅಣ್ಣನನ್ನು ಕಂಪಿಲದುರ್ಗದಲ್ಲಿ ಕಂಡನು. ತೈಲಪದೇವ ತಮ್ಮನ ಕೈಲಿ ಬಿಜ್ಜಳನಿಗೆ ತಲುಪಿಸಲು ಎರಡು ಪತ್ರಗಳನ್ನು ಕೊಟ್ಟನು. ಆದರೆ ಮಧ್ಯೆದಾರಿಯಲ್ಲಿ ಜಗದೇಕಮಲ್ಲನ ಆಪ್ತಸಚಿವನಾದ ಬೊಮ್ಮರಸನು ಆ ಪತ್ರಗಳಲ್ಲಿ ಒಂದನ್ನು ಹರಿದು ಹಾಕಿ, ಅದರ ಬದಲು ರಾಜಮುದ್ರೆ ಹಾಗೂ ತೈಲಪದೇವನ ಸಹಿಯಿರುವ ಒಂದು ಪತ್ರವನ್ನು ಸೃಜಿಸಿ ಪತ್ರದಲ್ಲಿ "ಕೀರ್ತಿವರ್ಮ ಕಾಮೇಶ್ವರಿಯ ಜಾರಜ ಪುತ್ರ, ರಾಜ್ಯದ ಉತ್ತರಾಧಿಕಾರಿ ಜಗದೇಕಮಲ್ಲನೆಂದು ಬರೆದು ಬಿಜ್ಜಳನಿಗೆ ಮುಟ್ಟಿಸಿದನು. ಅದು ಸೃಷ್ಟಿ ಪತ್ರವೆಂದು ತಿಳಿದ ಬಿಜ್ಜಳನು ಕ್ಷಣ ಕಾಲ ಗೊಂದಲಕ್ಕೀಡಾಗಿ ತತ್‌ಕ್ಷಣವೇ ಜಗದೇಕಮಲ್ಲನನ್ನು ರಾಜಬಂಧಿಯಾಗಿ ಮಾಡಿ, ಹೊರಗಡೆ ನೆಪಕ್ಕೆ ಮಾತ್ರ ಜಗದೇಕಮಲ್ಲನೇ ರಾಜನೆಂದು ಘೋಷಿಸಿ ನಿರೂಪವೊಂದನ್ನು ಕಂಪಿಲದುರ್ಗದಲ್ಲಿರುವ ತೈಲಪನಿಗೆ ಕಳುಹಿಸಿದನು. ಅದುವರೆಗೂ ಉತ್ತಮ ರಾಜಕಾರಣಿಯೆನಿಸಿದ ಬಿಜ್ಜಳನ ರಾಜ್ಯದಾಹದ ನಾಲಗೆ ನಾಲ್ಕೂದಿಕ್ಕಿಗೆ ಚಾಚಿ ಪ್ರಪಾತಕ್ಕೆ ಬಿದ್ದನು.

ಬಿಜ್ಜಳನು ಕೀರ್ತಿವರ್ಮನ ಬದಲಿಗೆ ಜಗದೇಕಮಲ್ಲನನ್ನು ಮಹಾರಾಜನಾಗಿ ಘೋಷಿಸಿದ ವಾರ್ತೆಯನ್ನು ಕೇಳಿದ ತೈಲಪನಿಗೆ ಕಂಪಿಲದುರ್ಗದಲ್ಲಿ ಪಾರ್ಶ್ವವಾಯು ಬಡಿಯಿತು. ಒಂದೆರಡು ದಿನಗಳಲ್ಲಿ ಮಹಾರಾಜ ತನ್ನವರು ಎಂಬುವವರು ಯಾರೂ ಇಲ್ಲದೆ ಅಸು ನೀಗಿದನು. ಆ ಸಮಯದಲ್ಲಿ ಹತ್ತಿರದಲ್ಲಿದ್ದ ಪಾಟಲಿಕೆ-ಪ್ರೇಮಾವತಿ ಮತ್ತು ವೃದ್ಧ ಕಂಚುಕಿ ಧರ್ಮಾಂಗದರನ್ನು ಬಿಟ್ಟು ಉಳಿದವರು ಕೈಗೆ ಸಿಕ್ಕದೆ ಪರಾರಿಯಾದರು. ತೈಲಪನ ಮೂರನೆಯ ಸೋದರ ಸೋಮೇಶ್ವರನು ತನ್ನ ಸ್ನೇಹಿತರಿಂದ ವಾರ್ತೆ ತಿಳಿದು ತೈಲಪನ ಅಂತ್ಯ ಸಂಸ್ಕಾರದಲ್ಲಿ ಭಾಗವಹಿಸಿದನು.

ಬಸವೇಶನ ನೇತೃತ್ವದಲ್ಲಿ ತೈಲಪ ಮಹಾರಾಜನ ಅಂತ್ಯ ಸಂಸ್ಕಾರವಾಯಿತು. ಅನಂತರ ಪಾಟಲಿಕೆ–ಪ್ರೇಮಾವತಿಯರು ಕಲ್ಯಾಣದತ್ತ ಹೊರಟರು.

ತೈಲಪನ ಮರಣದಿಂದಾಗಿ ಬಿಜ್ಜಳನ ರಾಜ್ಯದಾಹವನ್ನು ತಿಳಿದ ಬಸವೇಶನು ಬಿಜ್ಜಳನ ರಾಜನೀತಿಯನ್ನು ಪ್ರತಿಭಟಿಸಿ ಆರು ವರ್ಷಗಳ ಕಾಲ ಬನವಾಸಿಯ ತಮ್ಮ ರಾಜ್ಯಪಾಲ ವೃತ್ತಿಯಿಂದ ನಿವೃತ್ತರಾದರು. ನಿವೃತ್ತನಾದ ಬಸವೇಶ ದಂಡನಾಯಕನು ತಮ್ಮ ಉಳಿದ ಜೀವಿತವನ್ನು ಕಲ್ಯಾಣದಲ್ಲಿ ತತ್ತ್ವಾನುಸಂಧಾನ ಧರ್ಮಾಚರಣೆಯಲ್ಲಿ ತೊಡಗಿದರು.

ಕಲ್ಯಾಣೇಶ್ವರ

ತೈಲಪದೇವನ ಮರಣಾನಂತರ ಕಂಪಿಲದುರ್ಗದಿಂದ ಕಲ್ಯಾಣಕ್ಕೆ ಹಿಂದಿರುಗಿದ ಪಾಟಲಿಕೆ ಪ್ರೇಮಾವತಿಯರು ಒಬ್ಬರನ್ನು ಬಿಟ್ಟು ಮತ್ತೊಬ್ಬರು ಅಗಲದಾದರು. ಒಬ್ಬಳು ದೇಹ, ಇನ್ನೊಬ್ಬಳು ಪ್ರಾಣ ಎನ್ನುವಂತಾದರು. ಕಲ್ಯಾಣದಲ್ಲಿ ಅವರು ನೆಮ್ಮದಿಯ ಜೀವನ ನಡೆಸಲು ಉದ್ಯುಕ್ತರಾದರು. ಗೋಕರ್ಣದ ಕಡಲ ನೊರೆಯಲ್ಲಿ ನೀರಹುಲಿಯ ಬಾಯಿಂದ ಸನ್ಯಾಸಿಯೊಬ್ಬ ರಕ್ಷಿಸಿದಾಗಲಿಂದ ಅಫ್ರೊಡೈಟಿ ಹೋಗಿ ಪ್ರೇಮಾವತಿಯಾದಳು. ಅಂದೇ ಪಾಟಲಿಕೆ ಅವಳಿಗೆ ಶೈವಧರ್ಮದ ದೀಕ್ಷೆಕೊಡಿಸಿದಳು. ಅಂದಿನಿಂದ ಪ್ರೇಮಾವತಿಯ ಜೀವನದಲ್ಲಿ ಮಹತ್ವದ ಬದಲಾವಣೆಗಳಾಗತೊಡಗಿದವು. ತೈಲಪದೇವನ ಅವಸಾನವೂ ಆಕೆಯ ಮೇಲೆ ಹೆಚ್ಚಿನ ಪರಿಣಾಮವನ್ನುಂಟುಮಾಡಿತ್ತು. ಆದರೆ ಕಲ್ಯಾಣದ ನಿಬಂಧನೆಯಂತೆ ಹೆಣ್ಣು ಆಶ್ರಯದಾತನನ್ನು ಪಡೆದು ಗಣಿಕಾಧ್ಯಕ್ಷ ಮಂಡಲಿಗೆ ಕನಿಷ್ಠ ತೆರ ಕೊಡಲೇಬೇಕಿತ್ತು.

ಕಾಶ್ಮೀರದೇಶದ ರಾಜಕುಮಾರ ಮಾರಸಿಂಹ ಮಲ್ಲಿಕಾಮೋದನು ಕಲ್ಯಾಣಕ್ಕೆ ರಾಜದೂತನಾಗಿ ಬಂದಿದ್ದನು. ಪ್ರೇಮಾವತಿಯ ಸೌಂದರ್ಯಕ್ಕೆ ಮರುಳಾದ ರಾಜಕುಮಾರ ಪ್ರೇಮಾವತಿಯ ಆಶ್ರಯದಾತನಾಗಲು ಒಪ್ಪಿದನು. ಮಾರಸಿಂಹ ಪ್ರೇಮಾವತಿಯ ಸರಳ ನಡತೆ ನಿಷ್ಕಲ್ಮಷ ಜೀವನವನ್ನು ನೋಡಿ ಅವಳನ್ನು ಮದುವೆಯಾದವರಂತೆ ನಡೆಸಿಕೊಳ್ಳಲು ಒಪ್ಪಿದನು. ಪಾಟಲಿಕೆಯು ಮಾರಸಿಂಹನ ಪ್ರೇಯಸಿಯಾದಳು.

ನವರಾತ್ರಿಯಲ್ಲಿ ಹೊಸದಾಗಿ ಸಿಂಹಾಸನಾರೂಢನಾದ ಜಗದೇಕಮಲ್ಲನು ರಾಜಸಭೆ ನಡೆಸುವನೆಂದು ಕುಟುಂಬ ಸಮೇತನಾಗಿ ರಾಜಸಭೆಗೆ ಬರಲು ಮಾರಸಿಂಹನಿಗೆ ಆಹ್ವಾನ ಹೋಯಿತು. ಮಾರಸಿಂಹ ಪಾಟಲಿಕೆ–ಪ್ರೇಮಾವತಿಯರು ತನ್ನ ಪತ್ನಿಯರೆಂದೇ ಹೇಳಿ ರಾಜಸಭೆಗೆ ಅವರ ಸಮೇತ ಬಂದನು. ಇದನ್ನು ಕಂಡ ನಾರಣಕ್ರಮಿತ, ಮಂಚಣ, ಮಧುವರಸ, ಕರ್ಣದೇವರು ಸಿಡಿದೆದ್ದರು. ಮುಂದೆ ಅದರ ವಿಚಾರಣೆಗೆ ಬಂದಿತು. ಆ ವಿಚಾರಣಾಸಭೆಯ ಅಧ್ಯಕ್ಷತೆಯನ್ನು ಬಸವೇಶ ದಂಡನಾಥರಿಗೆ ವಹಿಸಲಾಗಿತ್ತು. ವಿಚಾರಣೆ ನಡೆದನಂತರ ಪಾಟಲಿಕೆ–ಪ್ರೇಮಾವತಿಯರ ನಡತೆ

ಸಭ್ಯ ಮಹಿಳೆಯರನ್ನೂ ನಾಚಿಸುವಂತಿದೆ. ಅವರನ್ನು ಮಾರಸಿಂಹ ತನ್ನ ಕುಟುಂಬದವರಂತೆ ಕಾಣುತ್ತಿರುವುದು ನ್ಯಾಯಬಾಹಿರವಲ್ಲವೆಂದು ಘೋಷಿಸಿದರು. ಇದನ್ನು ಕೇಳಿದ ನಾರಣ ಕ್ರಮಿತನ ಕೋಪಾಗ್ನಿಯ ಒಂದು ಕಿಡಿ ಬಸವೇಶರ ಮೇಲೆ ಸಿಡಿಯಿತು.

ಬಸವೇಶರ ನ್ಯಾಯತೀರ್ಪು ಕೇಳಿದ ಪ್ರೇಮಾವತಿ–ಪಾಟಲಿಕೆಯರು ಸಂತುಷ್ಟರಾದರು. ಅವರು ಒಮ್ಮೆ ಮಹಮನೆಗೆ ಹೋಗಿ ಅಲ್ಲಿನ ಕೆಲಸಕಾರ್ಯಗಳನ್ನು ವೀಕ್ಷಿಸಿದರು. ಅಲ್ಲಿ ನಾಗಲಾಂಬೆಯಿಂದ ಆದರದ ಸ್ವಾಗತ ಪಡೆದು ಬಂದ ಪ್ರೇಮಾವತಿ ನಿಜವಾದ ಸನ್ಯಾಸಿನಿಯೇ ಆದಳು. ತಾನು ಅಂದು ಗೋಕರ್ಣದಲ್ಲಿ ಕಂಡ ಆ ಸನ್ಯಾಸಿಯ ಮೂರ್ತಿಯನ್ನು ಮಣ್ಣಿನಲ್ಲಿ ರಚಿಸಿ ನಿತ್ಯವೂ ಅದರ ಮುಂದೆ ಕೊರಗತೊಡಗಿದಳು. ಪ್ರೇಮಾವತಿ ವಿಷಯಾಸಕ್ತಿಗಳಿಂದ ದೂರವಾಗಿರುವುದನ್ನು ಪಾಟಲಿಕೆಯಿಂದ ಕೇಳಿ ತಿಳಿದ ಮಾರಸಿಂಹನು ನೊಂದು ಅವಳು ಪೂಜಿಸುತ್ತಿದ್ದ ಮಣ್ಣಿನ ಮೂರ್ತಿಯನ್ನು ಕೆಳಗುರುಳಿಸಿದನು. ಅಂದೇ ಪ್ರೇಮಾವತಿಯ ಪ್ರಾಣ ಹಾರಿತು. ಒಂದುದೇಹ ಇನ್ನೊಂದು ಪ್ರಾಣ ಎಂಬಂತಿದ್ದ ಪಾಟಲಿಕೆಯೂ ಅಸು ನೀಗಿದಳು. ಈ ಇಬ್ಬರ ಮರಣದಿಂದ ನೊಂದ ಮಾರಸಿಂಹ ತಾನೂ ಸನ್ಯಾಸ ದೀಕ್ಷೆಯನ್ನು ಪಡೆದನು.

ತೈಲಪದೇವನು ಅಸುನೀಗಿದ ಒಂದೇ ವಾರದಲ್ಲಿ ಒಬ್ಬನೇ ಮಗನಾದ ಕೀರ್ತಿವರ್ಮನನ್ನು ಕಳೆದುಕೊಂಡ ರಾಣಿ ಕಾಮೇಶ್ವರಿದೇವಿಯು ನವರಾತ್ರಿಯಲ್ಲಿ ಜಗದೇಕಮಲ್ಲರು ಸಿಂಹಾಸನಾರೂಢರಾಗಿ ರಾಜಸಭೆ ನಡೆಸುವುದನ್ನು ನೋಡಲು ಕರ್ಹಾಡದಿಂದ ಕಲ್ಯಾಣಕ್ಕೆ ಒಂದು ಮಿತಪರಿವಾರದೊಡನೆ ಬಂದಳು. ಅವಳು ಕಲ್ಯಾಣಕ್ಕೆ ಬಂದ ಉದ್ದೇಶವೇ ಬೇರೆಯಿತ್ತು. ಜಗದೇಕಮಲ್ಲನಿಗೆ ಪುತ್ರರಿರಲಿಲ್ಲ. ಮುಂದೆ ಚಾಲುಕ್ಯ ವಂಶದ ಸಿಂಹಾಸನಕ್ಕೆ ಉತ್ತರಾಧಿಕಾರಿಯಿಲ್ಲದಂತಾಗಬಾರದೆಂದು ಯೋಚಿಸಿ, ಧರ್ಮಶಾಸ್ತ್ರಗಳಲ್ಲಿ ಹೇಳಿರುವ ನಿಯೋಗಪದ್ಧತಿಯನ್ನು ಅನುಸರಿಸಿ ತನ್ನ ಪತಿಯ ವಂಶಜನಾದ ಜಗದೇಕಮಲ್ಲನಿಂದ ಕ್ಷೇತ್ರಜಪುತ್ರನನ್ನು ಪಡೆಯಬೇಕೆಂದು ಕಲ್ಯಾಣಕ್ಕೆ ಬಂದಳು. ಈ ವಿಚಾರವನ್ನು ಕರ್ಹಾಡದ ಮಹಾಮಂಡಲೇಶ್ವರ ವಿಜಯಾರ್ಕನ ಮನೆಹೆಗ್ಗಡೆ ಪ್ರಭಾಕರ ಪಂಥನು ಬಿಜ್ಜಳನಿಗೆ ತಿಳಿಸಿ ಕಾಮೇಶ್ವರಿ ಹಾಗೂ ಜಗದೇಕಮಲ್ಲರ ಭೇಟಿಗಾಗಿ ಕೇಳಿಕೊಂಡನು. ವಿಚಾರವನ್ನು ತಿಳಿದ ಬಿಜ್ಜಳ ಇದಕ್ಕೆ ಸೊಪ್ಪುಹಾಕದೆ ಹೋದನು. ಪರಿಣಾಮವಾಗಿ ಜಗದೇಕಮಲ್ಲರ ಅರಮನೆಗೆ ಇನ್ನೂ ಹೆಚ್ಚಿನ ಕಾವಲು ಪಡೆಹಾಕಿದನು. ವಾಸ್ತವದಲ್ಲಿ ಜಗದೇಕಮಲ್ಲರ ಅರಮನೆಯ ಕಾವಲಿನ ಉಸ್ತುವಾರಿಯೆಲ್ಲ ಕರ್ಣದೇವನ ಪಾಲಿನದಾಗಿತ್ತು. ಅರಮನೆಯಲ್ಲಿ ಬಾಹ್ಯಪ್ರಪಂಚವನ್ನು ಮರೆತ ಜಗದೇಕಮಲ್ಲ ಪಾನಾಸಕ್ತನಾಗಿ ಸ್ತ್ರೀಲಂಪಟನಾಗಿ ಕಾಲಕಳೆಯಲಾರಂಭಿಸಿದ್ದನು.

ಮೂರು ವಾರಗಳು ಕಳೆದರೂ ಬಿಜ್ಜಳನಿಂದ ಯಾವೊಂದು ಉತ್ತರವೂ ಬಾರದೆ ನಿರಾಶಳಾದ ಕಾಮೇಶ್ವರಿ ಜಗದೇಕಮಲ್ಲನನ್ನು ಸಂಧಿಸಲು ಬೇರೊಂದು ಹಂಚಿಕೆ

ಹೂಡಿದಳು. ಅದು ಕರ್ಣದೇವನ ಮುಖಾಂತರವೇ ನಡೆಯಿತು. ಸ್ವಭಾವತಃ ಸ್ತ್ರೀಲೋಲನಾದ ಕರ್ಣದೇವ ಕಾಮೇಶ್ವರಿಯ ಜೊತೆಗೂಡಿ ಬಂದಿದ್ದ ಕುಸುಮಾವಳಿಯ ಸೌಂದರ್ಯಕ್ಕೆ ಮಾರುಹೋಗಿ ಜಗದೇಕಮಲ್ಲನನ್ನು ಮೃಗಯಾವಿಹಾರಕ್ಕೆ ಒಡಂಬಡಿಸಿದನು.

ಈ ಮಧ್ಯೆ ಕಲ್ಯಾಣದ ಶಿವಭಕ್ತ ಮುಚ್ಚಿಗ ಹರಳಯ್ಯನವರ ಮಗ ಸುಂದರ ಕಾಯನಾದ ಶೀಲವಂತ ಕಾಮೇಶ್ವರಿಯ ಸನ್ನಿಧಿಗೆ ಬಂದು ನಾಲ್ಕಾರ ಜೊತೆಹೊಸಮೆಟ್ಟು ಗಳನ್ನು ಮಾಡಲು ರಾಣಿಯ ಪಾದಗಳ ಅಳತೆ ಪಡೆದು ಸುಂದರವಾದ ಮೆಟ್ಟುಗಳನ್ನು ತಯಾರಿಸಿ ತಂದುಕೊಟ್ಟಿದ್ದನು. ಶೀಲವಂತನ ರೂಪು ಮುಗ್ಧತನಕ್ಕೆ ಮರುಳಾದ ಕಾಮೇಶ್ವರಿ ಆತನಲ್ಲಿ ರಕ್ತಗತವಾಗಿಬಂದಿದ್ದ ಚಿತ್ರಕಲೆಯನ್ನು ತಿಳಿದು ಅದನ್ನು ಊರ್ಜಿತಗೊಳಿಸಿದಳು. ಅರಮನೆಯಲ್ಲಿಯೇ ಅವನನ್ನು ಇಟ್ಟುಕೊಂಡು ಹಲವಾರು ಚಿತ್ರಗಳನ್ನು ಬರೆಸಿದಳು. ಶೀಲವಂತನು ಕಾಮೇಶ್ವರಿಯ ಮೆಚ್ಚಿನವನಾದ; ಆತನನ್ನು ಮೃಗಯಾವಿಹಾರಕ್ಕೆ ಬೆಂಗಾವಲಾಗಿ ಕರೆದೊಯ್ದಳು.

ಮೃಗಯಾವಿಹಾರ ಮುಗಿದು ಬಿಡಾರದಲ್ಲಿ ವಿಶ್ರಮಿಸಿಕೊಳ್ಳುತ್ತಿದ್ದ ಜಗದೇಕ ಮಲ್ಲನನ್ನು ಕಾಮೇಶ್ವರಿ ಗೋಮಂತಕ ನರ್ತಕಿಯ ಮಾರು ವೇಷದಲ್ಲಿ ಸಂಧಿಸಿ ಆ ರಾತ್ರಿ ಅವನನ್ನು ಕೂಡಿ ಕಲ್ಯಾಣಕ್ಕೆ ಹಿಂದಿರುಗಿದಳು. ಜಗದೇಕಮಲ್ಲನನ್ನು ರಾಣಿ ಸಂಧಿಸಿದ ಆ ರಾತ್ರಿ ಕುಸುಮಾವಳಿ ಬಿಡಾರದಲ್ಲಿ ಒಬ್ಬಳೇ ಇದ್ದುದನ್ನು ತಿಳಿದ ಕರ್ಣದೇವ ಅವಳ ಮಾನಭಂಗಮಾಡಲು ಮುನ್ನುಗ್ಗಿದನು. ಶೀಲವಂತನ ಸಮಯ ಚತುರತೆಯಿಂದಾಗಿ ಅದು ವಿಫಲವಾಯಿತು. ಕುಸುಮಾವಳಿ ಕರ್ಣದೇವನಿಂದ ಅಂದು ಬದುಕಿದಳು.

ತನ್ನ ಕಾಮುಲಾಲಸೆಗೆ ಎದುರಾದ ಶೀಲವಂತನನ್ನು ಕರ್ಣದೇವ ಬಂಧಿಸಿ ಚಿತ್ರಹಿಂಸೆಗೆ ಒಳಪಡಿಸಿದನು. ಈ ವಿಚಾರವನ್ನು ಸ್ವತಃ ಕಾಮೇಶ್ವರಿಗೆ ಕರ್ಣದೇವ ತಿಳಿಸಿ ತನ್ನ ಬಂಧನದಲ್ಲಿರುವ ಶೀಲವಂತನ ಪ್ರಾಣ ಉಳಿಯಬೇಕಾದರೆ ಸ್ವಯಂ ಕಾಮೇಶ್ವರೀ ದೇವಿಯವರೇ ಕರ್ಣದೇವನ ವಶವಾದರೆ ಶೀಲವಂತ ಬದುಕುತ್ತಾನೆ ಎಂದು ಬೆದರಿಕೆ ಹಾಕಿದನು. ನಿರಪರಾಧಿ ಶೀಲವಂತನನ್ನು ಉಳಿಸಲು ಕಾಮೇಶ್ವರಿ ಕರ್ಣದೇವನ ಅಭೀಷ್ಟಕ್ಕೆ ಬಲಿಯಾಗಬೇಕಾಯಿತು. ಆ ದಿನ ಕಾಮೇಶ್ವರಿ ಹೆಣ್ಣಿನ ಸಹಜ ಚತುರತೆಯಿಂದಾಗಿ ಕರ್ಣದೇವನಿಂದ ಪಾರಾದಳು. ಶೀಲವಂತ ಜೀವಂತ ಉಳಿದರೂ ಅವನ ದೇಹ ಮತ್ತು ಮನದ ಮೇಲೆ ಆದ ಆಘಾತ ಅಪಾರವಾಗಿತ್ತು.

ಈ ಪ್ರಕರಣದಿಂದ ಅಧೀರಳಾದ ಕುಸುಮಾವಳಿ ಶೀಲವಂತನ ಮನೆಗೆ ನಡೆದಳು. ಅಲ್ಲಿ ಶೀಲವಂತನನ್ನು ಕಾಣದೆ ಗಾಬರಿಯಾಗಿ ಬಸವೇಶರ ಮಹಮನೆಗೆ ನಡೆದಳು. ಬಸವೇಶರ ಬಳಿ ಶೀಲವಂತನಿಗೆ ಒದಗಿದ ವಿಪತ್ತನ್ನು ತೋಡಿಕೊಂಡಳು. ಅದೇ ಸಮಯದಲ್ಲಿ ಹರಳಯ್ಯನವರು ಬಸವೇಶರಲ್ಲಿ ತಮ್ಮ ಮಗನ ಮೇಲೆ ನಡೆಸಿರುವ ಅತ್ಯಾಚಾರವನ್ನು ವಿವರಿಸಿದರು ಇದರಿಂದ ನೊಂದ ಬಸವೇಶರು ಕುಸುಮಾವಳಿಗೆ ಸಮಾಧಾನ ಹೇಳಿ ನಾಲ್ಕು ದಿನ ಅವಳನ್ನು ಮಹಮನೆಯಲ್ಲಿರಿಸಿಕೊಂಡರು.

ಕದಂಬ ರಾಜಕನ್ಯೆ ಮಹಮನೆಯಲ್ಲಿ ಬಿಡಾರ ಮಾಡಿರುವಳೆಂದು ತಿಳಿದ ಮಧುವರಸರ ಮಗಳು ಲಾವಣ್ಯವತಿ ನೋಡಲು ಬಂದಳು. ಮಹಮನೆಯ ಕೊಠಡಿಯೊಂದರಲ್ಲಿ ಇಬ್ಬರೂ ಸಂಧಿಸಿದರು. ಇಬ್ಬರಲ್ಲೂ ಬಹಳ ಹತ್ತಿರದ ಸಾಮ್ಯ. ಯಾರು ಯಾರು ಎನ್ನುವಷ್ಟು ಸಾದೃಶ್ಯ. ಲಾವಣ್ಯವತಿ ಶೀಲವಂತನ ಆಗಿನ ಸ್ಥಿತಿಯನ್ನು ಹೇಳಿದಳು. ಶೀಲವಂತ ಏನನ್ನೂ ಹೇಳುತ್ತಿಲ್ಲ. ಶರಣನಾಗಿ ಶರಣ ಧರ್ಮಕ್ಕೆ ಉಚಿತವಲ್ಲದ ಕಾಮನೆಗಳಿಗೆ ಮನಸ್ಸಿನಲ್ಲಿ ಎಡೆಗೊಟ್ಟೆ ಎಂದು ನೊಂದುಕೊಳ್ಳುತ್ತಿರುವನೆಂದು ತಿಳಿಸಿದಳು. ಶೀಲವಂತ ಗುಣಮುಖನಾದ ಕೂಡಲೆ ಕಲಾಭಿರುಚಿಯನ್ನು ಮೆಚ್ಚಿದ ಬಸವೇಶರು ಮಹಮನೆಯ ಮಹಾನಿಧಿಯಿಂದ ಸಹಾಯ ಮಾಡಿ ಭಿತ್ತಿ ಚಿತ್ರಗಳ ಅಧ್ಯಯನಕ್ಕಾಗಿ ಅಜಂತಕ್ಕೆ ಕಳುಹಿಸುತ್ತಾರೆ ಎಂದಳು. ಆಗ ಕುಸುಮಾವಳಿ ಶೀಲವಂತನನ್ನು ಒಮ್ಮೆ ನೋಡಬೇಕೆಂದು ಬಯಸಿದಳು. ಆದರೆ ಲಾವಣ್ಯವತಿ ಅವಳ ಆಶೆಯ ಮೇಲೆ ತಣ್ಣೀರು ಹಾಕಿದಳು.

ಕಾಮೇಶ್ವರಿ ಕಲ್ಯಾಣದ ಗಡಿದಾಟಿದುದು ಬಿಜ್ಜಳನಿಗೆ ವರದಿಯಾಯಿತು. ಅದೇ ಸಮಯದಲ್ಲಿ ಬಿಜ್ಜಳನಿಗೆ ಶೀಲವಂತನ ಬಗ್ಗೆ ಮಂಚಣರು ವರದಿಮಾಡಿದರು. ಬಲದೇವರಸರು ದಾನಮಾಡಿದ್ದ ಸಂಪತ್ತನ್ನೆಲ್ಲ ಗಂಗಾಂಬಿಕೆಯವರು ಶರಣ ಧರ್ಮ ಪ್ರತಿಷ್ಠಾಪನಾ ಕಾರ್ಯಕ್ಕೆ ವಿನಿಯೋಗಿಸಲು ಅನುಮತಿ ಕೇಳಿದ್ದಾಳೆ. ಪ್ರಭುಗಳು ಇದನ್ನು ನಿರಾಕರಿಸಬೇಕು, ಇಲ್ಲದಿದ್ದರೆ ಶೈವಮತ ದೇಶದಾದ್ಯಂತವೂ ಹರಡುವುದು ಎಂದರು ಮಂಚಣರು.

ಅಂದೇ ನೀಲಲೋಚನೆ ಬಿಜ್ಜಳನ ಅರಮನೆಯಿಂದ ತನ್ನ ಪತಿಯಾದ ಬಸವೇಶರನ್ನು ಕೂಡಲು ಮಹಮನೆಗೆ ನಡೆದಳು. ತಂಗಿಯ ಆ ನಿರ್ಧಾರಕ್ಕೆ ಕಾರಣವೇನೆಂದು ಬಿಜ್ಜಳ ತನ್ನ ಪತ್ನಿ ಕಸ್ತೂರಿಕಾಮೋದಿನಿಯನ್ನು ಕೇಳಿದನು. ಉಡುತಡಿಯಿಂದ ಗ್ರಾಮಿಣ ಹೆಣ್ಣು ಮಗಳೊಬ್ಬಳು ಅಲ್ಲಿನ ಅರಸನ ಕೈಹಿಡಿಯಲು ನಿರಾಕರಿಸಿ ಶ್ರೀ ಶೈಲ ಮಲ್ಲಿಕಾರ್ಜುನನೇ ತನ್ನ ಮದುವಣಿಗನೆಂದು ವಿರಾಗಿಣಿಯಾಗಿ ಬಸವೇಶ ದಂಡನಾಥರ ದರ್ಶನಕ್ಕಾಗಿ ಬರುತ್ತಿರುವಳಂತೆ. ಅವಳೇ ರಚಿಸಿದ ಗಾಥೆಯೊಂದನ್ನು ಕೇಳಿ ನೀಲಲೋಚನೆಯ ಮನಸ್ಸು ಪಲ್ಲಟವಾಗಿ ಮಹಮನೆಗೆ ನಡೆದಳು, ಎಂದಳು ಕಾಮೋದಿನಿ.

ನೀಲಲೋಚನೆ ಮಹಮನೆಗೆ ಬಂದು ಗಂಗಾಂಬಿಕೆ–ನಾಗಲಾಂಬೆಯರನ್ನು ಕೂಡಿದಳು. ಅಂದು ರಾತ್ರಿ ಮಹಮನೆಯಲ್ಲಿ ಕಳ್ಳನೊಬ್ಬ ಜಂಗಮವೇಷದಲ್ಲಿ ಬಂದು ಗಂಗಾಂಬಿಕೆಯ ಕರ್ಣಾಭರಣ ಕಂಠಾಭರಣಕ್ಕೆ ಕೈಹಾಕಿದನು. ಇದರಿಂದ ಭಯಗೊಂಡ ಗಂಗಾಂಬಿಕೆ ಚೀರಿದಳು. ತತ್‌ಕ್ಷಣ ಎಚ್ಚೆತ್ತ ಬಸವೇಶರು ಎದುರಿಗಿದ್ದ ಕಳ್ಳವೇಷದ ಜಂಗಮನನ್ನು ಕಂಡು :

"ಒತನಿರ್ದ ಸತಿಯೆಂದು ನಚ್ಚಿರ್ದೆನಯ್ಯಾ !
ಕೈಹಿಡಿದ ಸಜ್ಜನೆಯೆಂದು ನಂಬಿರ್ದೆನಯ್ಯಾ !
ನಮ್ಮಯ್ಯನ ಕೈನೊಂದಿತು

ತೆಗೆದುಕೊಡಾ! ಎಲೆ! ಚಂಡಾಲಗಿತ್ತಿ
ಕಳ್ಳನ ಮನೆಗೊಬ್ಬ ಬಲುಗಳ್ಳ ಬಂದಡೆ
ಕೂಡಲ ಸಂಗಮದೇವನಲ್ಲದೆ ಆರೂ ಅಲ್ಲ!" ಎಂದರು

ಆದರೆ ಹಾಗೆ ಕಳ್ಳವೇಷದಲ್ಲಿ ಬಂದವನು ಯಾರೂ ಅಲ್ಲದೆ ಮಹಾಜ್ಞಾನಿ ಗುಣಗಳ್ಳ ಯೋಗೀಶ್ವರನಾಗಿದ್ದನು.

* * * *

ಉಡುತಡಿಯಿಂದ ವಿರಾಗಿಣಿಯಾಗಿ ಬಂದ ಅಕ್ಕಮಹಾದೇವಿ ಅನುಭವಮಂಟಪ ಮುಟ್ಟುವ ಮುನ್ನ ಹಲವು ಪರೀಕ್ಷೆಗೆ ಒಳಗಾದಳು. ಬೊಮ್ಮಯ್ಯ ಶರಣನು ಅವಳ ಸತ್ವ ಪರೀಕ್ಷೆನೂಡಿ ಸಾಷ್ಟಾಂಗ ಹಾಕಿದನು. ಅನಂತರ ಅಕ್ಕನು ಅನುಭವ ಮಂಟಪಕ್ಕೆ ಬಂದು ಎಲ್ಲರೆದುರು ತನ್ನ ನಿರ್ವಿಕಾರವನ್ನು ತೋರಿಸಿದಳು. ಪ್ರಭುದೇವರು ಅಕ್ಕನನ್ನು ಬಗೆ ಬಗೆಯಾಗಿ ಪ್ರಶ್ನಿಸಿದರು. 'ರೂಪದಲ್ಲಿ ಹೆಣ್ಣಾದರೇನು, ಮನವರಳಿ ಬಗೆ ಬೆಚ್ಚಿತವಾಗಿ ಆತ್ಮ ಅನುಸಂಧಾನದ ಹೊಸ್ತಿಲನ್ನು ಮುಟ್ಟಿದೆ....' ಎಂದು ಪ್ರಭುದೇವರು ಪ್ರಶಂಸಿಸಿದರು.

ಅಕ್ಕನ ಬಗ್ಗೆ ನಡೆದ ವಾದ ಪ್ರತಿವಾದಗಳನ್ನು ಕೇಳಿದ ಕುಸುಮಾವಳಿಗೆ ತನ್ನ ಅಕ್ಕ ಮಾಯೆ ಬನವಾಸಿಯಲ್ಲಿ ಮದ್ದಲಿಗ ವಾಮಶಕ್ತಿಯನ್ನು ಕಂಡು ಬಲೆಬೀಸಿ ಅಂದು ಸೋತು ಸಾವನ್ನಪ್ಪಿದ ಹೆಣ್ಣು ಇಂದು ಮಹಾದೇವಿಯಾಗಿ ಬಂದುಮಾಯಾ ತೀತನನ್ನು ಗೆದ್ದಿದ್ದಾಳೆ ಎನ್ನಿಸಿತು. ಅಲ್ಲಿಂದ ಎರಡು ವರ್ಷಗಳ ದೇಶಾಟನೆಗೆ ಹೊರಟರು.

ಇತ್ತ ಕಲ್ಯಾಣದಲ್ಲಿ ಶೂನ್ಯಪೀಠದ ಕೆಲಸವೆಲ್ಲ ಮುಗಿದಿತ್ತು. ಬಸವೇಶರಿಗೆ ಅಪೂರ್ವ ಕನಸೊಂದು ಆಯಿತು. ಶರಣ ಮಾದರಸ, ಚೆನ್ನಬಸವಣ್ಣ ಮತ್ತು ಅಕ್ಕ ಎಲ್ಲರೂ ಪ್ರಭುದೇವರ ಬರವನ್ನೇ ಹಾರೈಸಿದರು. ಪ್ರಭುದೇವರನ್ನು ಎದಿರುಗೊಳ್ಳಲು ಅಪೂರ್ವ ಸಿದ್ಧತೆಗಳಾದವು. ಆದರೆ ಪ್ರಭುದೇವರ ದರ್ಶನವೇ ಇಲ್ಲ. ಮೌನಯ್ಯ ಸ್ವಾಮಿಗಳ ಮೆರವಣಿಗೆ ದೂರದಲ್ಲಿ ಬರುವುದನ್ನು ಶರಣರ ತಂಡ ಕಂಡಿತು. ಆ ಸ್ವಾಮಿಗಳೇ ಪ್ರಭುದೇವರೆಂದು ಬಸವೇಶರ ಅಂತಃಚಕ್ಷು ಗುರುತು ಹಚ್ಚಿತು. ಅನುಭವಮಂಟಪದಲ್ಲಿ ಲಕ್ಷದ ತೊಂಬತ್ತಾರು ಸಾವಿರ ಶರಣರು ಮಹಮನೆಯ ಪ್ರಸಾದವನ್ನು ಸ್ವೀಕರಿಸಿದರು. ಬಿಜ್ಜಳನೂ ಕೂಡ ಆ ವೈಭವವನ್ನು ಕಂಡು ಅವಾಕ್ಕಾದನು.

ನಾಗಬಂಧ

ಕಲ್ಯಾಣದಲ್ಲಿ ಅಲ್ಲಮಪ್ರಭುವನ್ನು ಎದಿರುಗೊಳ್ಳುವ ಸಮಯದಲ್ಲಿ ಗೊಂದಲ ವೆಬ್ಬಿಸಿದ ಬ್ರಹ್ಮಶಿವ ಕರ್ಹಾಡವನ್ನು ಸೇರಿ ವಿಜಯಾರ್ಕನನ್ನು ಮರೆಹೊಕ್ಕಿದ್ದನು. ಬ್ರಹ್ಮಶಿವ–ಅಗ್ಗಳರು ಪರಸ್ಪರ ಪರಿಚಯ ಮಾಡಿಕೊಂಡರು. ಮೊದಲಿಗೆ ಶರಣ

ಧರ್ಮವನ್ನು ಸ್ವೀಕರಿಸಿದ್ದ ಬ್ರಹ್ಮಶಿವ ಜೈನ ಧರ್ಮವನ್ನು ಸ್ವೀಕರಿಸಿ ಶೈವಧರ್ಮ ದ್ವೇಷಿಯಾಗಿದ್ದನು. ಜಿನಸಮಯಿ ಬ್ರಹ್ಮಶಿವ ಕೆಲವು ವಚನಗಳ ಅಣಕವಾಡನ್ನು ಅಗ್ಗಳನಿಗೆ ಓದಿ ತೋರಿಸಿದನು. ಅವುಗಳನ್ನು ಅವನೇ ರಚಿಸಿದ್ದನು. ಅಂತೂ ಕಾಮೇಶ್ವರಿಗೆ ಸಂಬಂಧಿಸಿದ ಕೆಲವು ವಿಚಾರಗಳನ್ನು ಬ್ರಹ್ಮಶಿವನಿಂದ ಅಗ್ಗಳ ಸಂಗ್ರಹಿಸಿದನು.

ಕರ್ಹಾಡದಿಂದ ಹೊರಟ ಕಾಮೇಶ್ವರಿಯ ಯಾತ್ರಾತಂಡ ಅಥಣಿಯ ಸಮೀಪ ಕೃಷ್ಣಾನದಿಯ ತೀರದಲ್ಲಿ ಬೀಡುಬಿಟ್ಟಿತು. ನದೀತೀರದ ಬಿಡಾರದಲ್ಲಿ ಬೆಳುದಿಂಗಳ ರಾತ್ರಿಯಲ್ಲಿ ಕಾಮೇಶ್ವರಿ ಮನೆ ಹೆಗ್ಗಡೆ ಅಗ್ಗಳನನ್ನು ಕರೆದು ಅವನ ಕೆಲವು ಆಶು ಕವಿತೆಗಳನ್ನು ವಾಚನ ಮಾಡಿಸಿ ಏಕಾಂತದಲ್ಲಿ ಆನಂದಿತಳಾದಳು. ಅಂದೇ ತನ್ನ ಬಗ್ಗೆ ಕಾಮೇಶ್ವರಿ ಎಲ್ಲ ವಿಚಾರಗಳನ್ನು ತಿಳಿಸಿ, ಪ್ರೇಮಾರ್ಣವನನ್ನು ಚಾಲುಕ್ಯ ಸಿಂಹಾಸನದಲ್ಲಿ ಕುಳ್ಳಿರಿಸಲು ತಾನು ತೊಟ್ಟ ಪಣವನ್ನು ಹೇಳಿದಳು. ಕ್ಷತ್ರಿಯ ಪದ್ಧತಿಯಂತೆ ಅಗ್ಗಳನಿಗೆ ಸಹೋದರಿಯೊಬ್ಬಳು ತೊಡಿಸುವ ರಕ್ಷಾ ಬಂಧನವನ್ನು ತೊಡಿಸಿ ಅವನನ್ನು ಸಹೋದರ ಪೀಠದಲ್ಲಿ ಕುಳ್ಳಿರಿಸಿ ಮುಂದೆ ಅವಳ ರಕ್ಷಣೆಗೆ ನಿಲ್ಲಬೇಕೆಂದು ಅವನನ್ನು ಬೇಡಿದಳು.

ರಾಣಿಯ ಬಿಡಾರ ಅಥಣಿಯನ್ನು ಬಿಟ್ಟು ಎರಡು ವಾರಗಳ ತರುವಾಯ ಕಲ್ಯಾಣವನ್ನು ಮುಟ್ಟಿತು. ಅಲ್ಲಿಯವರೆಗೂ ಜೊತೆಗೆ ಬಂದ ಬ್ರಹ್ಮಶಿವ ಜಗದೇಕ ಮಲ್ಲರಸರ ಆಪ್ತನಾಗಿ ಅವನ ಪಟ್ಟದ ಸಮಯದಲ್ಲಿ ಬಿಜ್ಜಳನಿಂದ ತಪ್ಪಿಸಿಕೊಂಡು ಓಡಿಹೋದ ಬೊಮ್ಮರಸನನ್ನು ಕಂಡನು. ವಿಜಯಾರ್ಕದೇವ ಚಾಲುಕ್ಯ ರಾಜ್ಯದ ಪುನಃ ಪ್ರತಿಷ್ಠೆಗಾಗಿ ಹೆಣಗುತ್ತಿರುವುದನ್ನು ಹೇಳಿ ತಾವೆಲ್ಲ ಅವನಿಗೆ ಸಹಾಯಕರಾಗಿ ನಿಲ್ಲಬೇಕೆಂದು ತಿಳಿಸಿದನು. ಹಣ ಹಾಗೂ ಮಂಡಲೇಶ್ವರನಾಗಬಹುದೆಂಬ ಆಶೆಯನ್ನು ಬ್ರಹ್ಮಶಿವ ಬೊಮ್ಮರಸನ ಮನದಲ್ಲಿ ಬಿತ್ತಿದನು. ಬೊಮ್ಮರಸ–ಬ್ರಹ್ಮಶಿವ ಇಬ್ಬರೂ ಒಂದಾಗಿ ಕಲ್ಯಾಣದ ಬಿಜ್ಜಳನ ರಾಜಿಕಕ್ಷೇರದಲ್ಲಿ ಹುಳಿ ಹಿಂಡಲು ತಯಾರಾದರು. ಇಬ್ಬರೂ ವ್ಯಾಪಾರೀ ವೇಷದಲ್ಲಿ ಕಲ್ಯಾಣವನ್ನು ಮುಟ್ಟಿದರು.

ಕಾಮೇಶ್ವರಿ ಕಲ್ಯಾಣಕ್ಕೆ ಬಂದುದು ಬಿಜ್ಜಳನಿಗೆ ಒಗಟೇ ಆಯಿತು. ಈ ಹೆಣ್ಣು ಏನಾದರೂ ಮಾಡಿಯಾಳೆಂಬ ಭಯ ಆವರಿಸಿತು. ಕಾಮೇಶ್ವರಿ ಎರಡು ದಿನಗಳ ಕಾಲ ಕಲ್ಯಾಣದಲ್ಲಿದ್ದು ದೇವಗಿರಿಗೆ ಹೋಗುತ್ತಾರೆ–ದೇವಗಿರಿಯಾತ್ರೆ ತೀರಿಸಿಕೊಂಡು ಬಂದು ಮತ್ತೆ ಕೆಲವುದಿನಗಳ ಕಾಲ ಕಲ್ಯಾಣದಲ್ಲಿರುತ್ತಾರೆಂಬ ವದಂತಿ ಹಬ್ಬಿತು. ಈ ಮಧ್ಯೆ ಬ್ರಹ್ಮಶಿವ–ಬೊಮ್ಮರಸರು ಗುಪ್ತವಾಗಿ ರಾಣಿಯನ್ನು ಕಂಡು ತಾವು ಮುಂದೆ ನಡೆಸಲಿರುವ ಸಂಚಿನ ವಿಷಯಗಳನ್ನು ತಿಳಿಸಿ ರಾಣಿಯ ಸಲಹೆ ಪಡೆದು ಹೊರಟರು.

ಅದೇ ಸಮಯದಲ್ಲಿ ಬಿಜ್ಜಳನಿಗೆ ಆತನ ಕುಮಾರ ಸೋಮೇಶ್ವರನು ಗೋವೆಯಲ್ಲಿ ಸುಂದರವಲ್ಲಿಯೆಂಬ ಹೆಣ್ಣಿನ ಜತೆಯಲ್ಲಿ ತಾನು ವಿವಾಹವಾಗಿರುವ ವಿಷಯ

ತಿಳಿಸಿ ತನ್ನ ತಂದೆಯ ಕ್ಷೇಮ ಕೇಳಿ ಪತ್ರ ಬರೆದಿದ್ದನು. ಹೊಯ್ಸಳ ಮಹಾಮಂಡಲೇಶ್ವರ ವಿಷ್ಣುವರ್ಧನ ಮಹಾರಾಜರ ಸಾಮಂತ ಮುಕ್ತೇಶ್ವರ ತಿರುವಡಿ ದೇವರ ಮಗಳೇ ಸುಂದರವಲ್ಲಿ. ಗೋವೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ ಸೋಮೇಶ್ವರ ಸುಂದರವಲ್ಲಿಯನ್ನು ಗಾಂಧರ್ವರೀತಿಯಲ್ಲಿ ಮದುವೆಯಾಗಿ ಗೋವೆಯನ್ನು ಬಿಟ್ಟು ಕಲ್ಯಾಣದತ್ತ ಹೊರಟು ದಂಪತಿಗಳು ದಿಗ್ಯಾತ್ರೆಗೆ ಬಂದಿಳಿದರು. ಅಲ್ಲಿಂದ ಬಾದಾಮಿಗೆ ಬಂದರು. ಬಾದಾಮಿಯಲ್ಲಿ ಅವರಿಗೆ ಅಭೂತಪೂರ್ವ ಸ್ವಾಗತ ದೊರಕಿತು. ಬಾದಾಮಿಯ ಗುಹೆಗಳನ್ನು ನೋಡಿ ನವದಂಪತಿಗಳು ಹರ್ಷಚಿತ್ತರಾದರು. ಬಾದಾಮಿಯಲ್ಲಿ ಮಂಗಳೇಶ ವಿಷ್ಣುಗುಹೆಗೆ ಪೂಜೆಗೆ ಹೋಗಿದ್ದಾಗ ಸ್ವಯಂಲಕ್ಷ್ಮೀದೇವಿಯೇ ಸುಂದರವಲ್ಲಿಯ ಮೈಮೇಲೆ ಬಂದು ನಾಟ್ಯವಾಡಿದಳು. ಅಂದಿನಿಂದ ಸುಂದರವಲ್ಲಿ ಸಾವಲ ದೇವಿಯಾಗಿ ಖ್ಯಾತಿ ಪಡೆದಳು.

ದೇವಗಿರಿಯ ಇಲ್ವಲ ನಗರಕ್ಕೆ ಕಲಚೂರ್ಯ ಸೋಮೇಶ್ವರ ದಂಪತಿಗಳು, ಚಾಲುಕ್ಯ ರಾಣಿ ಕಾಮೇಶ್ವರಿಯೂ ಏಕಕಾಲದಲ್ಲಿ ಬಂದು ಬೇರೆ ಬೇರೆ ಬಿಡಾರವನ್ನು ಹೂಡಿದರು.

ಇಲ್ವಲದ ಕೈಲಾಸನಾಥ ದೇವಾಲಯದ ಎದಿರು ಹಾಕಿದ್ದ ರಂಗಮಂಚದಲ್ಲಿ ಗಿರಿಜಾಕಲ್ಯಾಣ ನರ್ತನ ನಡೆಯುತ್ತಿತ್ತು. ದೇವಗಿರಿಯ ಮಂಡಲೇಶ್ವರ ಭಿಲ್ಲದೇವನೊಡನೆ ಭದ್ರಾಸನದಲ್ಲಿ ಕುಳಿತು ಕಾಮೇಶ್ವರಿ ನರ್ತನವನ್ನು ವೀಕ್ಷಿಸುತ್ತಿದ್ದಳು. ಭಿಲ್ಲದೇವ ಕಾಮೇಶ್ವರಿಯ ಬಂಧು. ಕಾಮಾರ್ಣವನ ತಂದೆ. ಅಂದೇ ಕಲ್ಯಾಣದಿಂದ ಬಂದ ಶರಣರತಂಡ ನಾರಣಕ್ರಮಿತ ಏರ್ಪಡಿಸಿದ್ದ ಪಶುಯಜ್ಞವನ್ನು ತಡೆದರು. ಕಲ್ಯಾಣದಿಂದ ಪಶುಯಜ್ಞಕ್ಕಾಗಿ ಬಂದ ನಾರಣಕ್ರಮಿತನ ಬಗ್ಗೆ ಕವಿ ಅಗ್ಗಳನಿಂದ ಕೆಲವು ವಿಚಾರಗಳನ್ನು ರಾಣಿ ಕಾಮೇಶ್ವರಿ ತಿಳಿದಳು. ಪಶುಯಜ್ಞ ನಿಲ್ಲಲು ಚನ್ನಬಸವಣ್ಣನವರೇ ಕಾರಣವೆಂದು ತಿಳಿಸಿದನು. ಅದೇ ಸಮಯಕ್ಕೆ ನಾರಣಕ್ರಮಿತ ದೂರುಹೊತ್ತು ರಾಣಿಯವರನ್ನು ಕಾಣಲು ಬಂದನು. ಬಿಜ್ಜಳನಿಂದ ನಿಯೋಜಿತನಾಗಿ ರಾಣಿಯವರನ್ನು ಕಂಡು ರಾಜಿಕವನ್ನು ತಿಳಿಯಲು ಬಂದ ನಾರಣಕ್ರಮಿತ ರಾಣಿಯಿಂದ ಮುಖಭಂಗಿತನಾದರೂ, ಆಕೆ ನೀಡಿದ ಸ್ವರ್ಣ ವರಹಗಳಿಂದ ಸಂತೃಪ್ತನಾಗಿ ಹಿಂದಿರುಗಬೇಕಾಯಿತು. ಅಂದು ರಾಣಿಯ ಇದುರಿನಲ್ಲಿ ನರ್ತಿಸಿದ ಹೊಯ್ಸಳ ನರಸಿಂಹನ ಆಸ್ಥಾನ ನರ್ತಕಿ ನೀಲಾಂಜನೆಯನ್ನು ರಾಣಿ ತನ್ನ ಗೂಢಚಾರಿಣಿಯನ್ನಾಗಿ ನಿಯಮಿಸಿ ಅವಳನ್ನು ಕ್ರಮಿತನ ಜತೆಯಲ್ಲಿ ಕಲ್ಯಾಣಕ್ಕೆ ಕಳುಹಿಸಿದಳು. ಅವಳನ್ನು ಕ್ರಮಿತ ತನ್ನ ಹಿಂದೆ ಕರೆದೊಯ್ಯಲು ಸಂತೋಷದಿಂದ ಒಪ್ಪಿದನು. ಇದು ಮುಂದೆ ನಡೆಯುವ ಕ್ರಾಂತಿ ಸಂಕಲೆಗೆ ಇನ್ನೊಂದು ಬೆಸುಗೆಯಾಯಿತು.

ಇಲ್ವಲದಲ್ಲಿ ಬೀಡುಬಿಟ್ಟ ಶರಣರ ತಂಡದಲ್ಲಿ ಕುಸುಮಾವಳಿ ಇರುವಳೆಂದು ತಿಳಿದ ಕಾಮೇಶ್ವರಿ ಅವಳನ್ನು ಕಾಣಲು ಶರಣರ ತಂಡಕ್ಕೆ ಹೊರಟಳು. ಆಗ ಚನ್ನಬಸವಣ್ಣನವರಪ್ರವಚನ ನಡೆಯುತ್ತಿದ್ದಿತು. ಆ ತಂಡದಲ್ಲಿ ಕುಳಿತಿದ್ದ ಕುಸುಮಾವಳಿ

ಯನ್ನು ಸಂದರ್ಶಿಸಿ ಕಾಮೇಶ್ವರಿ ಶೀಲವಂತನ ಬಗ್ಗೆ ವಿಚಾರಿಸಿದಳು. ಶೀಲವಂತ ಅಲ್ಲಿಯೇ ಕೆಲವು ವರ್ಷಗಳಿಂದ ಚಿತ್ರಕಲಾಭ್ಯಾಸ ಮಾಡುತ್ತಿರುವನೆಂದು ತಿಳಿದ ರಾಣಿಗೆ ಆರು ವರ್ಷಗಳ ಹಿಂದಿನ ನೆನಪು ಉಕ್ಕಿ ಹರಿಯಿತು. ಅಂದು ನಡೆಸಿದ ಸಂಭಾಷಣೆಯಲ್ಲಿ ಕುಸುಮಾವಳಿ ಶೀಲವಂತನನ್ನು ಪ್ರೀತಿಸುತ್ತಿರುವಳೆಂದು ಕಾಮೇಶ್ವರಿ ತಿಳಿದಳು.

ಅಂದು ಶರಣರ ತಂಡದ ಜೊತೆಯಲ್ಲಿ ಮಹಾರಾಣಿ ಕಾಮೇಶ್ವರಿ, ಸೋಮೇಶ್ವರ ದಂಪತಿಗಳು ಇಲ್ವಲದ ಕೈಲಾಸ ಮಂದಿರವನ್ನು ನೋಡಿದರು. ಅಪರಾಹ್ನದ ಮೊದಲ ಪ್ರಹರದಲ್ಲಿ ಚಾರು ಚಿತ್ರಗಳಿರುವ ಉಳಿದ ಗುಹೆಗಳನ್ನು ವೀಕ್ಷಿಸಲು ಕಾಮೇಶ್ವರಿ ಆಶಿಸಿದಳು. ಚನ್ನಬಸವಣ್ಣನವರ ಅನುಮತಿ ಪಡೆದು ಕುಸುಮಾವಳಿಯನ್ನು ರಾಣಿ ಜೊತೆಗೆ ಕರೆದುಕೊಂಡಳು. ಶೀಲವಂತ ಗುಹೆಗಳನ್ನು ತೋರಿಸಲು ಮುಂದಾದನು. ಸುಂದರವಲ್ಲಿ ಕುಸುಮಾವಳಿ ಮುಂದೆ ಮುಂದೆ ಹೊರಟರು.

ಬಹು ಹಿಂದೆ ಉಳಿದ ಕಾಮೇಶ್ವರಿ ಶೀಲವಂತನನ್ನು ಏಕಾಂತದಲ್ಲಿ ಮಾತನಾಡಿಸಿ ಆರು ವರ್ಷಗಳ ಹಿಂದೆ ತಾವು ಕಳೆದ ರಸದಿನಗಳನ್ನು ನೆನಪಿಗೆ ತಂದಳು. ಶೀಲವಂತ ಕೃತಜ್ಞತೆಯಿಂದ ರಾಣಿಯನ್ನು ನೆನೆದನು. "ಶೀಲವಂತ, ನಿನ್ನ ಜೀವನದಲ್ಲಿ ನಾನು ಉತ್ಪಾತದ ಧೂಮಕೇತುವಾದೆ. ನನ್ನನ್ನು ಮರೆತುಬಿಡು. ಇದೇ ನಮ್ಮ ಕೊನೆಯ ಭೇಟಿ" ಎಂದಳು ಕಾಮೇಶ್ವರಿ ಶೀಲವಂತನ ಕೃತಜ್ಞತೆಯ ಭಾರವನ್ನು ಹೊರಲಾರದೆ. ಯಾರು ಆರು ವರ್ಷಗಳಿಂದ ಅವನ ಕನಸಿನ ರಾಣಿಯಾಗಿ ಅವನ ಕಲಾಭಿರುಚಿಯ ಅಧಿ ದೇವತೆಯಾಗಿದ್ದಳೋ ಆ ರಾಣಿ ಕಾಮೇಶ್ವರಿಯ ಎದುರಿನಲ್ಲಿ ತನ್ನ ಆತ್ಮಾರ್ಪಣ ವನ್ನು ಮಾಡಿಕೊಂಡು ತನ್ನನ್ನೇ ಆಕೆಗೆ ಅರ್ಪಿಸಲು ಶೀಲವಂತನು ಸಿದ್ಧನಾದನು.

ತಾರುಣ್ಯದ ಮತ್ತೇರಿ ಪ್ರೌಢಾಂಗನಾದ ಶೀಲವಂತನ ಆಗಿನ ಅಭೀಷ್ಟವೇನೆಂದು ತಿಳಿದ ರಾಣಿ ಏನೊಂದೂ ತೋಚದೆ, "ವಿಷಕುಡಿಯಲು ಅಪೇಕ್ಷಿಸುತ್ತಿರುವ ಶೀಲವಂತ. ಆದರೆ ನಿನ್ನ ಕೈಲಿರುವ ಆ ವಿಷದ ಬಟ್ಟಲನ್ನು ಕಿತ್ತು ಬಿಸಾಡಲು ನನಗೆ ಶಕ್ತಿಯಿಲ್ಲ. ನಿನ್ನನ್ನು ನೋಡದೇ ಓಡಿಹೋಗಿದ್ದರೆ ಚೆನ್ನಿತ್ತು," ಎಂದು ನಿರುಪಾಯಳಾದ ರಾಣಿ ನುಡಿದಳು. ಶೀಲವಂತ ಒಮ್ಮೆ ಕಾಮೇಶ್ವರಿಯನ್ನು ನಖಶಿಖಾಂತವಾಗಿ ನೋಡಿ ಅವಳನ್ನು ಆಲಂಗಿಸಿಕೊಂಡನು. ಅವಳ ಚೆಂದುಟಿಯನ್ನು ಬಾರಿ ಬಾರಿ ಚುಂಬಿಸಿದನು. "ಹೀಗಾಗುವುದೆಂದು ನನಗೆ ತಿಳಿದಿತ್ತು ಶೀಲವಂತ, ಇದೇ ನಮ್ಮ ಕೊನೆಯ ಭೇಟಿ" ಎಂದು ಕಾಮೇಶ್ವರಿಯೂ ಶೀಲವಂತನನ್ನು ಮನಸಾರೆ ಚುಂಬಿಸಿದಳು. ಶೀಲವಂತನಿಗೆ ಅಷ್ಟರಲ್ಲಿ ಪ್ರಜ್ಞೆಮೂಡಿ ಬಂದು ಮುಂದಿನ ಅಕಾರ್ಯಕ್ಕೆ ಅವನ ವಿವೇಕ ಅಡ್ಡಿ ತಂದಿತು.

ಅಲ್ಲಿಂದ ಬೇಗ ಬೇಗ ನಡೆದು ಶೀಲವಂತ-ಕಾಮೇಶ್ವರಿಯರು ಸೋಮೇಶ್ವರ ದಂಪತಿ, ಕುಸುಮಾವಳಿಯರನ್ನು ಕೂಡಿಕೊಂಡರು. ಗುಹೆಯೊಂದರಲ್ಲಿ ಸೋಮೇಶ್ವರ ಸುಂದರವಲ್ಲಿಗೆ ಸಿದ್ಧಾರ್ಥನ ಎದಿರು ನಾಟ್ಯಭಂಗಿಯಲ್ಲಿ ನಿಂತ ರಾಗಿಣಿಯನ್ನು ತೋರಿಸಲು ಪಂಜನ್ನು ಎತ್ತಿಹಿಡಿವಾಗ ಗುಹೆಯ ಯಾವುದೋ ಮೂಲೆಯೊಂದರಲ್ಲಿ

ಅಡಗಿದ್ದ ವಿಷಸರ್ಪವೊಂದು ಶೀಲವಂತನನ್ನು ಕಚ್ಚಿತು. ಪ್ರಜ್ಞೆತಪ್ಪಿ ಕೆಳಗೆ ಬಿದ್ದ ಶೀಲವಂತನನ್ನು ಎತ್ತಿ ಹಿಡಿದು ಹಾವು ಕಚ್ಚಿದ ಜಾಗದಲ್ಲಿ ಕುಸುಮಾವಳಿ ತನ್ನ ಬಾಯಿಟ್ಟು ವಿಷರಕ್ತವನ್ನು ಹೀರಿ ಹೀರಿ ಹೊರಚಲ್ಲತೊಡಗಿದಳು.

ಇದರ ಪರಿಣಾಮವಾಗಿ ಕುಸುಮಾವಳಿ ಕೆಲಸಮಯದಲ್ಲಿ ವಿಷವೇರಿ ಅಸು ನೀಗಿದಳು. ದೀರ್ಘೋಪಚಾರದಿಂದ ಶೀಲವಂತ ಎಚ್ಚೆತ್ತನು. ಆದರೆ ಶೀಲವಂತನಲ್ಲಿ ಪೂರ್ವ ಸ್ಮರಣೆ ಹೋಗಿತ್ತು. ಇಲ್ವಲದಲ್ಲೇ ಕುಸುಮಾವಳಿಯ ಅಂತ್ಯಕ್ರಿಯೆಗಳನ್ನು ಶರಣ ತಂಡದವರು ನೆರವೇರಿಸಿದರು. ಅಂದೇ ಅಗ್ಗಳನಿಗೆ ಕಾಮೇಶ್ವರಿ ತಾನು ಶೀಲವಂತನನ್ನು ಕಂಡ ಮೊದಲದಿನದಿಂದ ಕೊನೆಯ ದಿನದವರೆಗೂ ನಡೆದ ಘಟನಾ ವಳಿಗಳನ್ನು ಸಾದ್ಯಂತವಾಗಿ ಲಜ್ಜೆ ಸಂಕೋಚಗಳಿಲ್ಲದೆ ಹೇಳಿದಳು.

ಮುಗಿಯದ ಕನಸು

ಇಲ್ವಲದ ಚಾಲುಕ್ಯ ಬಿಡಾರದಲ್ಲಿ ಮಹಾರಾಣಿ ಕಾಮೇಶ್ವರಿಯನ್ನು ಬ್ರಹ್ಮಶಿವ ಬೊಮ್ಮರಸರಿಬ್ಬರು ಸಂದರ್ಶಿಸಿ, ಬಿಜ್ಜಳನು ಸೋಮೇಶ್ವರನ ರಾಜ್ಯಾಭಿಷೇಕಕ್ಕಾಗಿ ಮಂಗಳವೇಢೆಯಲ್ಲಿ ಹೆಚ್ಚಿನ ಸಿದ್ಧತೆ ಮಾಡುತ್ತಿರುವುದು ಹಾಗೂ ಬಿಜ್ಜಳನ ಆಡಳಿತ ಕ್ರಮದಲ್ಲಾದ ಮಾರ್ಪಾಟುಗಳು-ಕೆಲವು ಹಿರಿಯ ಅಧಿಕಾರಿಗಳ ಪದಭ್ರಷ್ಟತೆ ಮತ್ತು ರಾಜಾಧ್ಯಕ್ಷ, ಅರ್ಥಾಧ್ಯಕ್ಷ ಚಾವಡಿಗಳನ್ನು ತಾನೇ ವಹಿಸಿಕೊಂಡು ನಿರೂಪಗಳೆಲ್ಲಾ ಅವನ ಹೆಸರಿನಲ್ಲೇ ಪ್ರಕಟವಾಗುತ್ತಿರುವುದನ್ನು ತಿಳಿಸಿದರು.

ಮರುದಿನ ಕಾಮೇಶ್ವರಿಗೆ ಬಿಜ್ಜಳನ ವಿಶೇಷ ಆಹ್ವಾನ ಪತ್ರ ಬಂದಿತು ಕುಮಾರ ಸೋಮೇಶ್ವರನ ರಾಜ್ಯಾಭಿಷೇಕ ಮಂಗಳವೇಢೆಯಲ್ಲಿ ನಡೆಯುವುದೆಂದೂ ಸಮಾರಂಭಕ್ಕೆ ರಾಣಿಯವರು ಅಗತ್ಯ ಬರಬೇಕೆಂದೂ ಆಹ್ವಾನದಲ್ಲಿ ತಿಳಿಸಲಾಗಿತ್ತು. ಆಹ್ವಾನ ಪತ್ರ ತಂದ ದೂತ ರಾಣಿಯವರು ಇಚ್ಛಿಸುವುದಾದಲ್ಲಿ ಅದೇ ಸಂದರ್ಭದಲ್ಲಿ ಪ್ರೇಮಾರ್ಣವನ ರಾಜ್ಯಾಭಿಷೇಕವನ್ನೂ ಬಿಜ್ಜಳರು ನಡೆಸಲು ಸಿದ್ಧರಾಗಿದ್ದಾರೆ ಎಂದನು. ಪತ್ರದಲ್ಲಿ ತಿಳಿಸದ ಆ ವಿಷಯವನ್ನು ಕೇಳಿ ರಾಣಿ ವಿಸ್ಮಿತಳಾದಳು. ಇದರಲ್ಲಿ ಏನೋ ರಾಜಿಕವಿದೆಯೆಂದುಕೊಂಡಳು. ತಕ್ಷಣವೇ ಕಲ್ಯಾಣದ ಪರಿಸ್ಥಿತಿಯನ್ನು ತಿಳಿಯಲು ಅಗ್ಗಳನನ್ನು ಕಳುಹಿಸುವ ಏರ್ಪಾಟುಮಾಡಿದಳು. ನಾಲ್ಕು ದಿನಗಳ ಅನಂತರ ಅಗ್ಗಳ, ಬ್ರಹ್ಮಶಿವ, ಬೊಮ್ಮರಸ ಮೂವರೂ ಕಲ್ಯಾಣವನ್ನು ಸೇರಿದರು.

ನಾರಣಕ್ರಮಿತ ದೇವಗಿರಿಗೆ ಹೋಗಿದ್ದು ಎರಡು ಉದ್ದೇಶಗಳಿಗಾಗಿ. ಒಂದು, ಸೋಮೇಶ್ವರನನ್ನು ಕಂಡು ತಂದೆ ಮಗನಲ್ಲಿರುವ ಭಿನ್ನಾಭಿಪ್ರಾಯವನ್ನು ಪರಿಹರಿಸುವುದು; ಎರಡನೆಯದು, ಶರಣರ ಕರ್ತವ್ಯ ನಿಷ್ಠೆ ಪ್ರಭಾವಗಳನ್ನು ಪರೀಕ್ಷಿಸುವುದೇ ಆಗಿತ್ತು. ಆದ್ದರಿಂದಲೇ ಕ್ರಮಿತ ಪಶುಯಜ್ಞದ ನೆಪ ಹೇಳಿ ದೇವಗಿರಿಗೆ ಹೋಗಿದ್ದು. ದೇವಗಿರಿಯಿಂದ ಹಿಂದಿರುಗಿದ ನಾರಣಕ್ರಮಿತ ಬಿಜ್ಜಳನಿಗೆ ಅಲ್ಲಿನ ಪೂರ್ಣವರದಿ ಒಪ್ಪಿಸಿದನು. ಅಲ್ಲಿ ತನಗಾದ ಅವಮಾನವನ್ನು ಬಣ್ಣಿಸಿದನು.

ಕಾಮೇಶ್ವರಿಯ ಕ್ಷೇತ್ರಜಪುತ್ರ ಪ್ರೇಮಾರ್ಣವನ ಬಗ್ಗೆ ತಿಳಿಸಿದನು. ಶರಣರನ್ನು ಮಟ್ಟಹಾಕಬೇಕಾದರೆ ರಾಜ್ಯಾಧ್ಯಕ್ಷ, ಅರ್ಥಾಧ್ಯಕ್ಷ ಚಾವಡಿಗಳನ್ನು ತಾವೇ ವಹಿಸಿ ಕೊಳ್ಳಬೇಕೆಂದು ಸಲಹೆ ನೀಡಿದನು. ಬಿಜ್ಜಳನ ಸಂಪೂರ್ಣ ಕೃಪೆಗೆ ಪಾತ್ರನಾಗಲು ಕ್ರಮಿತ ದೇವಗಿರಿಯಲ್ಲಿ ಕಾಮೇಶ್ವರಿ ತನ್ನ ಜೊತೆಯಲ್ಲಿ ಕಳುಹಿಸಿದ ನಿಲಾಂಜನೆ ಯನ್ನು ಒಪ್ಪಿಸಿದನು. ನಿಲಾಂಜನೆಯ ರೂಪುರಾಶಿಗೆ ಮಾರುಹೋದ ಬಿಜ್ಜಳ ಅವಳನ್ನು ಹಿಡಿಯಲು ಹೋದಾಗ ಅವಳು ಮೂರ್ಛಿತಳಾದಳು.

ಶರಣರ ತಂಡ ದೇವಗಿರಿಯಿಂದ ಕಲ್ಯಾಣಕ್ಕೆ ಬಂದಿತು. ಮಹಮನೆಯ ಆರೋಗ್ಯಧಾಮದಲ್ಲಿ ವೈದ್ಯ ಮಧುರಯ್ಯ ಹಾವು ಕಚ್ಚಿದ ಶೀಲವಂತನಿಗೆ ಚಿಕಿತ್ಸೆ ನಡೆಸತೊಡಗಿದನು. ಶೀಲವಂತನ ಉಪಚಾರದಲ್ಲಿ ತೊಡಗಿದ ಮಧುವರಸರ ಮಗಳು ಲಾವಣ್ಯವತಿಯಲ್ಲಿ ಅನೇಕ ಬದಲಾವಣೆಗಳಾದವು. ಸತ್ತುಹೋದ ಕುಸುಮಾವಳಿಯ ನಡೆನುಡಿಯನ್ನು ಲಾವಣ್ಯವತಿ ಅನುಸರಿಸುವಂತೆ ಕಂಡಿತು ಮಧುರಯ್ಯನಿಗೆ. ಶೀಲವಂತನು ನಿಜವಾದ ಲಾವಣ್ಯವತಿಯನ್ನು ಮರೆತು ಅವಳೇ ಕುಸುಮಾವಳಿಯೆಂದು ಭ್ರಮಿಸಿದನು. ಒಂದು ದಿನ ಮಧುರಯ್ಯನವರ ಅನುಮತಿ ಪಡೆದು ಶೀಲವಂತ ಲಾವಣ್ಯವತಿಯರಿಬ್ಬರು ಮಾರಯ್ಯನವರ ಓಣಿಗೆ ಹೋಗಿ ಮಾರಯ್ಯ ಹಾಗೂ ಅವರ ಪತ್ನಿ ಗಂಗಾದೇವಿಯರನ್ನು ಕಂಡರು. ಅಲ್ಲಿ ಶೀಲವಂತ ಮಾರಯ್ಯನವರಿಂದ ಇಲ್ಲವಲದಲ್ಲಿ ತನಗೇನಾಯಿತು, ತನಗೇನು ನಡೆಯಿತು, ಕುಸುಮಾವಳಿ ಹೇಗೆ ಮಡಿದಳು ಎಂಬುದನ್ನೆಲ್ಲಾ ತಿಳಿದನು.

ಮಾರನೆಯ ದಿನ ಮಧುವರಸರಿಂದ ಬಂದ ಅವಸರದ ಕರೆಗೆ ಓಗೊಟ್ಟು ಮಧುರಯ್ಯನವರು ಹೋದರು. ಲಾವಣ್ಯಳಲ್ಲಿ ಆಗಿರುವ ಬದಲಾವಣೆಗೆ ಕಾರಣ ವೇನೆಂದು ಮಧುವರಸರು ಕೇಳಿದ ಮಾತಿಗೆ ಮಧುರಯ್ಯನವರು ಪೇಚಿನಲ್ಲಿ ಬಿದ್ದರು. ಅನಂತರ ಮಧುವರಸರ ಅನುಮತಿಪಡೆದು ಲಾವಣ್ಯಳನ್ನು ಮನೋವೈಜ್ಞಾನಿಕ ಪರೀಕ್ಷೆಗೆ ಒಳಪಡಿಸಿದನು.

ಸತ್ತ ಕುಸುಮಾವಳಿ ಶೀಲವಂತನನ್ನು ಜಾಗೃತಗೊಳಿಸಲು ಲಾವಣ್ಯಳ ಮೇಲೆ ಬಂದು ಅವನೆದುರಿಗೆ ನರ್ತಿಸಿದಳು. ಹಾಗೆ ಮೈಮೇಲೆ ಬಂದ ಕುಸುಮಾವಳಿ ಹಿಂದಿರುಗದೆ ಲಾವಣ್ಯಳಲ್ಲೇ ನೆಲಸಿದಳು. ಇದನ್ನು ಕಂಡ ಶೀಲವಂತ ಮತ್ತೂ ಭ್ರಾಂತನಾದ. ಮಾರಯ್ಯನವರ ಮನೆಗೆ ಹೋದಾಗ ಲಾವಣ್ಯಳ ಸ್ಥಾನದಲ್ಲಿದ್ದ ಕುಸುಮಾವಳಿ ಮಾರಯ್ಯನವರ ಎದುರು ನಿಲ್ಲದೆ ಪೆಚ್ಚಾದಳು. ಏಳುನೂರು ವರ್ಷಗಳ ಹಿಂದೆ ನನ್ನನ್ನು ಗುಹೆಯಲ್ಲಿ ಸೆರೆಹಿಡಿದಿದ್ದ ಕಲಾವಿದನೊಬ್ಬ. ಶೀಲವಂತ ನನ್ನ ಸೆರೆಯನ್ನು ಬಿಡಿಸಿದ, ನನ್ನ ಚಿತ್ರಕ್ಕೆ ಜೀವ ತುಂಬಿದ. ಜೀವ ತುಂಬಿಕೊಂಡ ನಾನು ಅವನ ಹಿಂದೆಯೇ ಬಂದೆ. ನಾನು ಗುಹೆಗಳಲ್ಲಿ ಚಿತ್ರಿಸಿದ ರಾಗಿಣಿ ಇದೀಗ ಜೀವ ತುಂಬಿಕೊಂಡು ಲಾವಣ್ಯಳಲ್ಲಿ ನೆಲೆಸಿದ್ದೇನೆ. ಮಾರಯ್ಯನವರ ಮನೆಯಲ್ಲಿ ಕುಸುಮಾ ವಳಿಯನ್ನು ಓಡಿಸಿ ಅವಳ ಸ್ಥಾನದಲ್ಲಿ ನಾನು ನಿಂತೆನು. ನಾನೀಗ ರಾಗಿಣಿ. ಲಾವಣ್ಯವತಿ ಶೀಲವಂತನನ್ನು ಬಯಸುತ್ತಾಳೆ, ಅವಳ ಇಷ್ಟಾರ್ಥವನ್ನು ತಪ್ಪದೆ

ನೆರವೇರಿಸಿ ಎಂದು ಮೈಮೇಲಿದ್ದ ರಾಗಿಣಿ ಲಾವಣ್ಯವತಿಯಿಂದ ಹಿಂದೆ ಸರಿದಳು. ಸ್ವಲ್ಪ ಕಾಲಾನಂತರ ಲಾವಣ್ಯ ನಿಜಲಾವಣ್ಯಳಾಗಿ ಚೇತರಿಸಿಕೊಂಡಳು.

ಇದೇ ವಿಚಾರಗಳನ್ನು ಬಹಳ ಹೊತ್ತು ಚಿಂತಿಸಿದ ಮಧುವರಸರು ತಮ್ಮ ಮಗಳ ಮನದ ವಿರುದ್ಧ ಹೋಗಬಾರದೆಂದು ನಿರ್ಧರಿಸಿದರು. ಶೀಲವಂತನ ತಂದೆ ಹರಳಯ್ಯನನ್ನು ಕರೆಸಿ ಶೀಲವಂತ ಲಾವಣ್ಯವತಿಯರ ಮದುವೆಯ ವಿಷಯವನ್ನು ತಿಳಿಸಿ ಸಿದ್ಧತೆಗೆ ತೊಡಗಿದರು. ಈ ಮಧ್ಯೆ ತಮ್ಮ ಐದು ಲಕ್ಷ ವರಹ ಬಾಳುವ ಆಸ್ತಿಯ ದಾನ ಶಾಸನ ಮಾಡಿಸಿ ಬಿಜ್ಜಳನ ಒಪ್ಪಿಗೆ ರಾಜಮುದ್ರಾಂಕಿತಕ್ಕೆ ಮಂಚಣನನ್ನು ಮಂಗಳವೇಢೆಗೆ ಮಧುವರಸನು ಕಳುಹಿಸಿದನು. ಮಂಗಳವೇಢೆ ಮುಟ್ಟಿದ ಮಂಚಣನು ದಾನ ಶಾಸನಕ್ಕೆ ಬಿಜ್ಜಳನ ಸಹಿ ಹಾಕಿಸಿದನು. ಅಂದೇ ಕುಮಾರ ಸೋಮೇಶ್ವರ ದಂಪತಿಗಳು ದೇವಗಿರಿಯಿಂದ ಬಂದು ನಾಲ್ಕು ದಿನ ಕಲ್ಯಾಣದಲ್ಲಿದ್ದು ಮಂಗಳವೇಢೆಯನ್ನು ಮುಟ್ಟಿದ್ದರು. ಮಗ ಮತ್ತು ಸೊಸೆಯರನ್ನು ಬಿಜ್ಜಳನು ಅತ್ಯಾನಂದದಿಂದ ಎದಿರುಗೊಂಡನು.

ಬಿಜ್ಜಳನ ಅನುಮೋದನೆ ಪಡೆದ ಮೂರು ದಾನಪತ್ರಗಳನ್ನು ಹಿಡಿದು ಕಲ್ಯಾಣಕ್ಕೆ ಮಂಚಣನು ಬಂದನು. ಅವುಗಳಲ್ಲಿ ಒಂದು ಭಾಗ ಧರ್ಮಪ್ರತಿಷ್ಠಾಪನೆಗೆಂದೂ ಇನ್ನೊಂದು ಭಾಗ ರಾಜ್ಯದ ವಿದ್ಯಾಪೀಠಗಳ ಅಭಿವೃದ್ಧಿಗೆಂದೂ, ಮತ್ತೊಂದು ಭಾಗ ಮಧುವರಸರ ಪುತ್ರಿಕಾಪುತ್ರಿ ಲಾವಣ್ಯವತಿಗೆಂದು ತಿಳಿಸಲಾಗಿತ್ತು. ಅನುಭವ ಮಂಟಪದ ಸಭಾಪತಿ ಅಲ್ಲಮದೇವರು ಬಳ್ಳಿಗಾವೆಗೆ ಹೊರಡುವ ದಿನ ಸನ್ನಿಹಿತವಾಗಿತ್ತು. ತಾತ್ಕಾಲಿಕ ಸಭಾಪತಿಯಾಗಿ ಸಕಲೇಶ ಮಾದರಸರನ್ನು ಆರಿಸಲಾಗಿತ್ತು. ಅದೇ ಸಮಯದಲ್ಲಿ ಮಧುವರಸರು ತಮ್ಮ ಮೂರು ದಾನಪತ್ರಗಳನ್ನು ಚೆನ್ನಬಸವಣ್ಣ, ಬಸವೇಶ, ಪ್ರಭುದೇವರ ಎದುರಿಗಿಟ್ಟರು. ಲಾವಣ್ಯವತಿಯನ್ನು ಶೀಲವಂತನಿಗೆ ಕೊಟ್ಟು ಮದುವೆ ಮಾಡುವ ವಿಚಾರವನ್ನು ಅರಿಕೆಮಾಡಿಕೊಂಡರು. ಆ ದಿನದ ಸಂಜೆಯ ಶರಣಗೋಷ್ಠಿಯಲ್ಲಿ ಪ್ರಭುದೇವರು ಶೀಲವಂತ ಲಾವಣ್ಯವತಿಯರನ್ನು ಆಶೀರ್ವದಿಸಿ ಈರೀತಿ ನುಡಿದರು :

ಮನ ಬಸುರಾದರೆ ಕೈಬೆಸಲಾಯಿತ್ತ ಕಂಡೆ,
ಕರ್ಪೂರದ ಕಂಪ ಕಿವಿ ಕುಡಿಯಿತ್ತ ಕಂಡೆ,
ಮುತ್ತಿನಢಾಳವ ಮೂಗು ನುಂಗಿತ್ತ ಕಂಡೆ,
ಕಂಗಳು ಹಸಿದು ವಜ್ರವ ನುಂಗಿತ್ತ ಕಂಡೆ,
ಒಂದು ನೀಲದೊಳಗೆ ಮೂರುಲೋಕವು
ಅಡಗಿತ್ತ ಕಂಡೆ, ಗುಹೇಶ್ವರಾ !

ಮಂಗಳವೇಢೆಯಿಂದ ನಾರಣಕ್ರಮಿತ ಕಲ್ಯಾಣಕ್ಕೆ ಹಿಂದಿರುಗುವವೇಳೆಗಾಗಲೇ ಮುಚ್ಚಿಗ ಶೀಲವಂತ ಹಾಗೂ ಬ್ರಾಹ್ಮಣ ಕನ್ಯೆ ಲಾವಣ್ಯವತಿಯರ ಮದುವೆ ನಡೆದು ಹೋಗಿತ್ತು. ಇದನ್ನು ಕೇಳಿದ ಕ್ರಮಿತ ಕ್ರುದ್ಧನಾದನು. ಅಸವರ್ಣ ವಿವಾಹಕ್ಕೆ

ನೆರವಾದ ಬ್ರಾಹ್ಮಣ ಧರ್ಮವನ್ನು ಹಾಳುಮಾಡಲು ಹೊರಟ ಶರಣರನ್ನು ಶಪಿಸಿದನು.

ಈ ಅಚಾತುರ್ಯವನ್ನು ಚಿಂತಿಸಿ ಚಿಂತಿಸಿ ಕ್ರಮಿತ ಕೊನೆಗೊಮ್ಮೆ ಬಿಜ್ಜಳ ದೇವನ ತಮ್ಮ ಕಲ್ಯಾಣದ ನಗರಾಧ್ಯಕ್ಷ ಕರ್ಣದೇವನನ್ನು ಕಾಣಲು ಹೊರಟನು. ಸಕಾಲದಲ್ಲಿ ಕ್ರಮಿತ ಕರ್ಣದೇವನನ್ನು ಕಂಡು ನಡೆದುಹೋಗಿರುವ ವಿಷಯವನ್ನೆಲ್ಲಾ ತಿಳಿಸಿದನು. ಬ್ರಾಹ್ಮಣ ಧರ್ಮಕ್ಕೆ ಆಗಿರುವ ಅಪಮಾನವನ್ನು ವಿವರಿಸಿ ವಿಷಾದವನ್ನು ವ್ಯಕ್ತಪಡಿಸಿದನು. ಸೂಕ್ಷ್ಮಗ್ರಾಹಿ, ವಿಷಯಲಂಪಟನಾದ ಕರ್ಣದೇವ ಕೂಡಲೇ ಕ್ರಮಿತನಿಗೆ ಸಹಾಯಮಾಡಲು ಒಪ್ಪಿದನು.

ಆ ಸಂಜೆ ಮಧುವರಸರ ಮನೆಯಲ್ಲಿ ಶೀಲವಂತ ಲಾವಣ್ಯವತಿಯರ ಆರತಕ್ಷತೆ ಏರ್ಪಟ್ಟಿತ್ತು. ನಗರದ ಶ್ರೀಮಂತ ಸಾಮಂತ ನಾಗರೀಕ ಪ್ರಭು ಮನ್ನೆಯರಿಗೆಲ್ಲಾ ಆಹ್ವಾನ ಹೋಗಿತ್ತು, ಒಬ್ಬೊಬ್ಬರಾಗಿ ಸಮಾರಂಭಕ್ಕೆ ಬರತೊಡಗಿದ್ದರು. ಏತನ್ಮಧ್ಯೆ ಅನಿರೀಕ್ಷಿತವಾಗಿ ಕ್ರಮಿತ ಸಮಾರಂಭದ ಮಧ್ಯೆ ಪ್ರವೇಶಿಸಿ ಈ ಅಸವರ್ಣ ವಿವಾಹ ಹಿಂದೂ ಧರ್ಮದಲ್ಲಿ ಬಾಹಿರವಾದದ್ದು; ಇದು ವಿವಾಹವಲ್ಲ, ದಾಸೀ ವಿಕ್ರಯ, ಇದನ್ನು ಬಹಿಷ್ಕರಿಸಿ ಘಟಸ್ಫೋಟ ಮಾಡುತ್ತೇನೆಂದು ಹೇಳಿ ಶೌಚಕೂಪ ತೊಳೆಯುವ ದಾಸಿಯೊಬ್ಬಳು ಹೊತ್ತುತಂದ ಎಣ್ಣೆ ಗಡಿಗೆಯನ್ನು ನೆಲಕ್ಕೆ ಬಿಸುಡಿದನು. ಇದೇ ಸಮಯದಲ್ಲಿ ಕ್ರಮಿತರಿಂದ ನಿಯಮಿತರಾದ ಋತ್ವಿಕ್ಕುಗಳು ಉಚ್ಚಾಟನಾ ಕರ್ಮಕ್ಕೆ ಗೊತ್ತಾದ ಮಂತ್ರಗಳನ್ನು ಪಠಿಸಿದರು.

ಇದರಿಂದಾಗಿ ಸಭೆಯಲ್ಲಿ ಗೊಂದಲವೆದ್ದಿತು. ಕ್ರಮಿತ ಅಲ್ಲಿಂದ ಕಾಲುಕಿತ್ತನು. ಯುವರಾಜ ಸೋಮದೇವ ಸುಂದರವಲ್ಲಿಯರು ಅನಿರೀಕ್ಷಿತವಾಗಿ ಅಲ್ಲಿಗೆ ಬಂದು ಶೀಲವಂತ ಲಾವಣ್ಯವತಿಯರನ್ನು ಕರೆದುಕೊಂಡು ಕೂರ್ಮದುರ್ಗದ ತಮ್ಮ ಅರಮನೆ ಯತ್ತ ಹೊರಟರು. ಆ ಸಮಯದಲ್ಲಿ ಸೋಮೇಶ್ವರ ದಂಪತಿಗಳು ಅಲ್ಲಿಗೆ ಬಾರದಿದ್ದರೆ ಶೀಲವಂತ ಲಾವಣ್ಯವತಿಯರು ಕರ್ಣದೇವನ ಬಂಧಿಗಳಾಗಿ ಚಿತ್ರಹಿಂಸೆಗೆ ಗುರಿಯಾಗುತ್ತಿದ್ದರು.

ನಾಲ್ಕು ದಿನಗಳ ಕಾಲ ಸೋಮೇಶ್ವರನ ಅತಿಥಿಗಳಾಗಿ ಶೀಲವಂತ ಲಾವಣ್ಯ ವತಿಯರು ಉಳಿದರು. ಸೋಮೇಶ್ವರ ನಡೆದ ವಿಚಾರವನ್ನು ಮಂಗಳವೇಢೆಗೆ ವರದಿ ಮಾಡಿದನು. ಅಂದೇ ಕ್ರಮಿತನೂ ಬಿಜ್ಜಳನಿಗೆ ವರದಿ ಕಳುಹಿಸಿದ್ದನು. ಮದಾಂಧ ಬಿಜ್ಜಳನ ಒಲವು ಕ್ರಮಿತನ ಪತ್ರದ ಮೇಲೆ ಬಿದ್ದಿತೇ ವಿನಾ ತನ್ನ ಮಗನ ಪತ್ರದಲ್ಲಿದ್ದ ಸತ್ಯಾಂಶಗಳನ್ನು ತಿಳಿಯಲು ಅಸಮರ್ಥವಾಯಿತು.

ನಾರಣಕ್ರಮಿತ ಕರೆದು ತಂದು ಬಿಜ್ಜಳನಿಗೆ ಒಪ್ಪಿಸಿದ ಹೊಯ್ಸಳನ ಆಸ್ಥಾನ ನರ್ತಕಿ ನೀಲಾಂಜನೆ ಬಿಜ್ಜಳನ ಗಣಿಕಾ ಪರಿವಾರದಲ್ಲಿ ಸೆರೆಯಾದಳು. ಸೆರೆಯಾದ ನೀಲಾಂಜನೆ ವಿರಾಗಿಣಿಯಂತೆ ಜೀವಿಸತೊಡಗಿದಳು. ಕೊನೆಗೊಂದು ದಿನ ನೀಲಾಂಜನೆ ದಾಸಿಯ ಸಹಾಯ ಪಡೆದು ಅರ್ಧ ರಾತ್ರಿಯಲ್ಲಿ ಅರಮನೆಯಿಂದ ತಪ್ಪಿಸಿಕೊಂಡು

ಹೋಗಿ ಮಹಮನೆಯಲ್ಲಿ ಬಸವಣ್ಣನವರನ್ನು ಕಂಡು ಬರಬೇಕೆಂದು ಯತ್ನಿಸಿದಳು. ಆದರಂತೆ ಆರಮನೆಯ ಒಂದು ದ್ವಾರದಲ್ಲಿ ನಿಂತು ಮಹಮನೆಯ ಕನಸು ಕಾಣುತ್ತಿದ್ದ ನೀಲಾಂಜನೆ ಶಿಥಿಲವಾದ ಗೋಪುರವೊಂದು ಅವಳ ಮೇಲೆ ಕುಸಿದುಬಿದ್ದಾಗ ಕೆಳಗುರುಳಿದಳು. ದಾಸಿಯು ಸಂಚಿನಂತೆ ನೀಲಾಂಜನೆಯನ್ನು ಅರಮನೆಯಿಂದ ಮಹ ಮನೆಗೆ ಕರೆದೊಯ್ಯಲು ಹೊರಗಡೆ ಕಾದಿದ್ದ ಜಂಗಮನೊಬ್ಬನು ಇದನ್ನು ಕಂಡು ಅಪಾಯ ಸಂಭವಿಸಿದ ಜಾಗಕ್ಕೆ ಬಂದು ನೀಲಾಂಜನೆಯನ್ನು ಉಪಚರಿಸುತ್ತಿದ್ದನು. ಅಷ್ಟರಲ್ಲಿ ಕಾವಲು ಭಟನು ಇದನ್ನು ನೋಡಿ ಶರಣನನ್ನು ಇರಿದನು. ಅದೇ ಸಮಯದಲ್ಲಿ ಗೋಪುರದ ಇನ್ನೊಂದು ಕಲ್ಲು ಕಳಚಿ ಭಟನ ಮೇಲುರುಳಿತು. ಈರೀತಿ ಮೂವರೂ ಏಕಕಾಲದಲ್ಲಿ ಸಾವನ್ನಪ್ಪಿದರು.

ಆದರೆ ಈ ಸುದ್ದಿ ಬೇರೊಂದು ರೀತಿಯಲ್ಲಿ ಕಾಳ್ಗಿಚ್ಚಿನಂತೆ ಕಲ್ಯಾಣದಲ್ಲಿ ಹರಡಿತು. ಎಲ್ಲೆಲ್ಲೂ ಶರಣರ ಕೊಲೆಯಾಗಿದೆಯೆಂಬ ಗುಜು ಗುಜು ಹಬ್ಬಿತು. ಮಡಿದ ಶರಣರ ದೇಹಗಳನ್ನು ಪಡೆದು ಅವರ ಕ್ರಿಯೆಗಳನ್ನು ನಡೆಸಲು ಶರಣರ ತಂಡ ವೊಂದು ಮೋಳಿಗೆ ಮಾರಯ್ಯನವರ ನೇತೃತ್ವದಲ್ಲಿ ಹೊರಟಿತು. ಮೃತ ದೇಹಗಳ ಕಾವಲ ಪಡೆಗೂ ಮಾರಯ್ಯನವರಿಗೂ ಮಾತುಕತೆಗಳು ನಡೆದವು. ನೂರಹತ್ತು ವಯಸ್ಸಿನ ಮಾರಯ್ಯನವರು ರಾಹುತಪಡೆಯ ಯಜಮಾನನ ಕಬ್ಬಿಣದ ಭಲ್ಲೆ ಯೊಂದನ್ನು ಕಬ್ಬು ಬಗ್ಗಿಸಿದಂತೆ ಬಗ್ಗಿಸಿದಾಗ ಅವನ ಕೊರಳಿಗೆ ಹೂಮಾಲೆ ಹಾಕಿದರು. ಇದನ್ನು ಕಂಡು ರಾಹುತರು ಶರಣರ ದೇಹವನ್ನು ಒಪ್ಪಿಸಿ ಹಿಮ್ಮೆಟ್ಟಿದರು. ಹಾಗೆ ಪಡೆದ ಮೃತದೇಹಗಳ ಅಂತ್ಯಕ್ರಿಯೆ ನಡೆಸಿ ಮಾರಯ್ಯನವರು ಈ ರೀತಿ ನುಡಿದರು :

“ ಆನೆ ಕುದುರೆ ಬಂಡಿ ಭಂಡಾರವಿದ್ದಡೇನೋ ?
ತಾನುಂಬುದು ಪಡಿಯಕ್ಕಿ, ಒಂದಾವಿನ ಹಾಲು.
ಮಲಗುವುದು ಅರ್ಧಮಂಚ. ಈ ಹುರುಳಿಲ್ಲದ
ಸಿರಿಯ ನೆಚ್ಚಿ ಕೆಡಬೇಡ, ಮನುಜಾ !
ಒಡಲು ಭೂಮಿಯ ಸಂಗ, ಒಡವೆ ತಾನೇನಪ್ಪುದೋ ?
ಕೈವಿಡಿದ ಮಡದಿ ಪರರ ಸಂಗ, ಪ್ರಾಣ ವಾಯುವಿನ ಸಂಗ,
ಸಾವಿಂಗೆ ಸಂಗಡವಾರೂ ಇಲ್ಲ ಕಾಣಾ,
ನಿಃಕಳಂಕ ಮಲ್ಲಿಕಾರ್ಜುನಾ ! ”

* * * *

ಚಾಲುಕ್ಯ ಆರಮನೆಯ ಬಾಹ್ಯೋದ್ಯಾನದ ಒಂದು ಸ್ಥಳದಲ್ಲಿ ಏರ್ಪಡಿಸಿದ್ದ ರಾಜ ಸಭೆ ಇನ್ನೇನು ತನ್ನ ಕಾರ್ಯ ಕಲಾಪಗಳನ್ನು ಪ್ರಾರಂಭಿಸಬೇಕಿತ್ತು. ಅಂದಿನ ಸಭೆ ಮಹತ್ವಪೂರ್ಣದ್ದಾಗಿತ್ತು. ಸಭೆಯಲ್ಲಿ ಮುಖ್ಯವಾಗಿ ಶೀಲವಂತ ಲಾವಣ್ಯ ವತಿಯರ ವಿಷಮ ವಿವಾಹವು ಚರ್ಚೆಗೆ ಬರುವುದರಲ್ಲಿತ್ತು. ಮಧುವರಸ, ಹರಳಯ್ಯ, ಬಸವೇಶ, ಮಂಚಣ ಎಲ್ಲರೂ ಸಭೆಗೆ ಆಗಮಿಸಿದ್ದರು. ಅಂದು ನಾರಣಕ್ರಮಿತನದೇ

ಮುಖ್ಯ ಪಾತ್ರವಾಗಿತ್ತು. ಕ್ರಮಿತ ನಾಗರಿಕರ ಬಿನ್ನಪವನ್ನು ಧರ್ಮಾಧಿಕರಣಕ್ಕೆ ಒಪ್ಪಿಸಿದನು. ಬಿನ್ನಪದಲ್ಲಿ ಬಸವೇಶ ಹಾಗೂ ಅವರು ಆರಂಭಿಸಿದ ಶರಣ ಧರ್ಮ ಪುನರುಜ್ಜೀವನ ಮತ್ತು ಶೀಲವಂತ ಲಾವಣ್ಯವತಿಯರ ವಿವಾಹದ ಮೇಲೆ ದೂರಿದ್ದುವು. ನಾಗರಿಕರ ಬಿನ್ನಪದ ಪರವಾಗಿ ವಾದಿಸಲು ವಿಜಯಪುರದ ನ್ಯಾಯಶಾಸ್ತ್ರಿ ರುದ್ರಭಟ್ಟ ಧರ್ಮಾವತಾರರ ಅಪ್ಪಣೆ ಬೇಡಿ ಸಭೆಯಲ್ಲಿ ನಿಂತನು. ವಾದವಿವಾದಗಳು ಹೇಳಿಕೆ ಕೇಳಿಕೆಗಳು ಎಲ್ಲ ಮುಗಿದ ಮೇಲೆ ನ್ಯಾಯತೀರ್ಪಿಗಾಗಿ ಬಿಜ್ಜಳನು ಮಂತ್ರಿಮಂಡಲದ ಹಿರಿಯನಾದ ಮಂಚಣನಾಯಕನ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಿದನು. ನಾರಣಕ್ರಮಿತ, ರುದ್ರಭಟ್ಟರನ್ನು ಆ ಸಮಿತಿಯ ಸದಸ್ಯರುಗಳಾಗಿ ನೇಮಿಸಿದನು. ಬಿಜ್ಜಳನ ರಾಜತಂತ್ರವನ್ನು ಅರಿಯದ ಜನತೆ ಅಂದಿನ ಬಿಜ್ಜಳನ ಧರ್ಮದರ್ಶಿತನವನ್ನು ಮೆಚ್ಚಿದರು. ಆದರೆ ಮಹಮನೆಯ ಶರಣರು ಮುಂಬರುವ ತೀರ್ಪು ನ್ಯಾಯ ವಿರುದ್ಧವಾಗಿರುವುದೆಂದು ಅಂದೇ ಊಹಿಸಿದರು. ಮಡಿವಾಳ ಮಾಚಿದೇವರು ಶರಣರು ಮುನ್ನೆಚ್ಚರಿಕೆಯಿಂದ ವರ್ತಿಸಬೇಕೆಂದು ಹೇಳಿ ಕೋಪಾವಿಷ್ಟರಾದರು.

ಅದೇ ಸಮಯದಲ್ಲಿ ರಾಹುತನೊಬ್ಬ ಬಿಜ್ಜಳನ ನಿರೂಪವನ್ನು ಬಸವಣ್ಣನವರಿಗೆ ಒಪ್ಪಿಸಿದನು. ನಿರೂಪದಲ್ಲಿ ಈ ರೀತಿ ತಿಳಿಸಲಾಗಿತ್ತು: ಬಸವಣ್ಣನವರು ಅನುಭವ ಮಂಟಪದ ಧರ್ಮ ಪ್ರತಿಷ್ಠಾಪನ ಸಂಬಂಧವನ್ನು ತ್ಯಜಿಸಬೇಕೆಂದು ಧರ್ಮಾಧಿಕರಣ ನೀಡಿದ ಸಲಹೆಯನ್ನು ಅವರು ನಿರಾಕರಿಸಿದ್ದರಿಂದ ತಲೆದೋರಿರುವ ಪ್ರಕ್ಷುಬ್ಧ ಪರಿಸ್ಥಿತಿ ಶಾಂತವಾಗುವವರೆಗೂ ಬಸವೇಶರು ಕಲ್ಯಾಣ ಬಿಡುವುದು ಉಚಿತವೆನಿಸುತ್ತದೆ. ಆದುದರಿಂದ ನಾಳಿನ ಸೂರ್ಯೋದಯವಾಗುವ ಮುನ್ನವೇ ಕಲ್ಯಾಣವನ್ನು ತ್ಯಜಿಸಿ ಮಲಾಪಹಾರಿ ತೀರದ ಸಂಗಮೇಶ್ವರ ಗುರುಕುಲದಲ್ಲಿ ಸ್ಥಾನಬದ್ಧರಾಗಬೇಕೆಂದು ರಾಜಾಜ್ಞೆಯಾಗಿತ್ತು.

ಪ್ರಭುತ್ವದ ಆಜ್ಞೆಗೆ ತಲೆ ಬಾಗಿದ ಬಸವೇಶರು ಸೂರ್ಯೋದಯಕ್ಕೆ ಮುನ್ನವೇ ಕಲ್ಯಾಣವನ್ನು ಬಿಡಲು ಸಿದ್ಧರಾದರು. ಕಲ್ಯಾಣದಲ್ಲಿ ತಮ್ಮ ಗೈರುಹಾಜರಿಯಲ್ಲಿ ಶರಣರು ಮಾಡಬೇಕಾದ ಅನುಭವಮಂಟಪದ ಕಾರ್ಯಾಚರಣೆಗಳನ್ನೆಲ್ಲಾ ಚನ್ನ ಬಸವಣ್ಣ ಮಧುವರಸ ಹರಳಯ್ಯ ಮಾಚಿದೇವರು ಮಾರಯ್ಯ ಮೊದಲಾದ ಶರಣರಿಗೆ ತಿಳಿಸಿದರು. ಆ ರಾತ್ರಿ ಬಸವೇಶರು ಧ್ಯಾನಾಸಕ್ತರಾದಾಗ ಕಲ್ಯಾಣದ ಅಧೋಗತಿ ಅವರ ಕಣ್ಣು ಮುಂದೆ ಹಾಯ್ದು ಬಂದಿತು. ಅದನ್ನೇ ವಚನ ರೂಪದಲ್ಲಿ ಈ ರೀತಿ ತಿಳಿಸಿದರು.

> “ಅರಸು ವಿಚಾರ, ಸಿರಿಯು ಶೃಂಗಾರ, ಸ್ಥಿರವಲ್ಲ, ಮಾನವಾ:
> ಕೆಟ್ಟಿತ್ತು ಕಲ್ಯಾಣ, ಹಾಳಾಯಿತ್ತು, ನೋಡಾ!
> ಒಬ್ಬ ಜಂಗಮನ ಅಭಿಮಾನದಿಂದ.
> ಚಾಲುಕ್ಯರಾಯರ ಆಳ್ವಿಕೆ ತೆಗೆಯಿತ್ತು!
> ಸಂದಿತ್ತು, ಕೂಡಲಸಂಗಮದೇವಾ! ನಿಮ್ಮ ಕವಳಿಗೆ.”

ಬಸವಣ್ಣನವರು ಕಲ್ಯಾಣವನ್ನು ಬಿಟ್ಟು ಸಂಗಮೇಶ್ವರದ ಕಡೆ ಹೊರಟರು. ಅವರ ಜೊತೆಯಲ್ಲಿ ಗಂಗಾಂಬಿಕೆ ಹೊರಡಬೇಕೆಂದು ನಿಶ್ಚಯಿಸಲಾಯಿತು. ನೀಲಲೋಚನೆ ಕಲ್ಯಾಣದಲ್ಲಿದ್ದು ಮಹಮನೆಯ ಕೆಲಸ ಕಾರ್ಯಗಳಲ್ಲಿ ನಾಗಲಾಂಬಿಗೆ ಸಹಾಯಕಳಾಗಿ ನಿಲ್ಲಬೇಕೆಂದು ತೀರ್ಮಾನಿಸಲಾಯಿತು. ಬಸವೇಶ, ಗಂಗಾಂಬಿಕೆ, ಸಂಗಮನಾಥ ಕಲ್ಯಾಣವನ್ನು ಬಿಟ್ಟರು. ಬಸವೇಶ್ವರರನ್ನು ಬೀಳ್ಕೊಡಲು ಹೊರಟ ಶರಣರ ಯಾತ್ರಾದಳ ನಗರದ ಮಹಾದ್ವಾರದ ಹತ್ತಿರಕ್ಕೆ ಹೋಗುತ್ತಿದ್ದಂತೆ ಸುದ್ದಿ ಕಾಳ್ಗಿಚ್ಚಿನಂತೆ ಬೀದಿ ಬೀದಿಯಲ್ಲಿ ಹರಡಿತು. ಬಸವೇಶ್ವರರ ಕಲ್ಯಾಣ ನಿಷ್ಕ್ರಮಣಕ್ಕಾಗಿ ಇಡೀ ಕಲ್ಯಾಣವೇ ಕಣ್ಣೀರಿಟ್ಟಿತು.

ಅಗ್ಗಳ, ಬೊಮ್ಮರಸ, ಬ್ರಹ್ಮಶಿವರು ಅದೇ ಸಮಯಕ್ಕೆ ದೇವಗಿರಿಯನ್ನು ಬಿಟ್ಟು ಕಲ್ಯಾಣಕ್ಕೆ ಬಂದಿದ್ದರು. ಅಗ್ಗಳ ಕೊನೆಯಬಾರಿಗೆ ಬಸವೇಶ್ವರರ ದರ್ಶನ ಪಡೆದು ಆಶೀರ್ವಾದ ಪಡೆದನು. ಬಸವೇಶರು ತಮ್ಮ ಹಲವು ವಚನಗಳಲ್ಲಿ ಶರಣರಿಗೆ ಸಂದೇಶವನ್ನು ನೀಡಿ ಕಲ್ಯಾಣವನ್ನು ತ್ಯಜಿಸಿದರು.

ಕ್ರಾಂತಿ ಕಾಲ್ಯಾಣ

ಬಿಜ್ಜಳನ ಧರ್ಮಾಧಿಕರಣದ ವಿಚಾರಣೆ ಮುಗಿದು ಬಸವೇಶರ ನಿರ್ವಾಸನದ ಆಜ್ಞೆಯಾಗಿ ಅವರು ಕಲ್ಯಾಣವನ್ನು ಬಿಟ್ಟದಿನ ಸಂಜೆ ನಾರಣಕ್ರಮಿತ ಸದಾಚಾರಿ ಮಠದ ಪಕ್ಕದಲ್ಲಿದ್ದ ಪಾಂಥನಿವಾಸಕ್ಕೆ ಬಂದನು. ಅಲ್ಲಿ ಕವಿ ಅಗ್ಗಳನನ್ನು ಕಂಡು ಅವನನ್ನು ಬಿಜ್ಜಳನ ಸಮ್ಮುಖಕ್ಕೆ ಕರೆದೊಯ್ದನು. ಅಗ್ಗಳನ ಜೊತೆಯಲ್ಲಿ ಮಾರುವೇಷದಲ್ಲಿದ್ದ ಬ್ರಹ್ಮಶಿವ ಹಾಗೂ ಬೊಮ್ಮರಸರಿಗೆ ಅಗ್ಗಳನು ಪತ್ರವೊಂದನ್ನು ಬರೆದಿಟ್ಟು ಬಿಜ್ಜಳನ ಅರಮನೆಗೆ ಹೊರಟನು. ಬಿಜ್ಜಳನ ಸಂದರ್ಶನಪಡೆದ ಅಗ್ಗಳನು ಅವನ ಆಜ್ಞಾಪ್ತನಾಗಿ ಚಾಲುಕ್ಯ ಅರಮನೆಯಲ್ಲಿ ಬಂದಿಯಾಗಿರುವ ಜಗದೇಕ ಮಲ್ಲರಸರನ್ನು ಕಾಣಲು ಹೊರಟನು. ಹಾಗೆ ಅರಸನನ್ನು ಕಂಡು ಕುಮಾರ ಪ್ರೇಮಾರ್ಣವನಿಗೆ ಯುವರಾಜ ಪಟ್ಟಕಟ್ಟಲು ಅನುಮತಿಪಡೆದು ಬರಬೇಕೆಂದು ಬಿಜ್ಜಳನು ಅಗ್ಗಳನನ್ನು ನಿಯೋಜಿಸಿದ್ದನು. ಬಿಜ್ಜಳನ ಆಣತಿಯಂತೆ ಅಗ್ಗಳನನ್ನು ಜಗದೇಕಮಲ್ಲರ ಅರಮನೆಯಲ್ಲಿ ಬಿಟ್ಟು ಕ್ರಮಿತ ಪಂಡಿತಕವಿ ಅಗ್ಗಳದೇವರು ಜಗದೇಕಮಲ್ಲರಸರ ಸುಮ್ಮುಖದ ಕಾವ್ಯೋಪದೇಶಕರಾಗಿ ಬಿಜ್ಜಳನಿಂದ ನಿಯುಕ್ತವಾಗಿರುವ ವಿಚಾರವನ್ನು ತಿಳಿಸಿದನು. ಕ್ರಮಿತನ ಯುಕ್ತಾಯುಕ್ತತೆಯನ್ನು ಕಂಡ ಅಗ್ಗಳ ತಲೆದೂಗಿದನು.

ಮೂರನೆಯದಿನ ನಾರಣಕ್ರಮಿತ ಜಗದೇಕಮಲ್ಲರಸರನ್ನು ಕರ್ಣದೇವನ ಸಮ್ಮುಖದಲ್ಲಿ ಕಂಡು ಅಗ್ಗಳನ ಪರಿಚಯ ಮಾಡಿಸಿದನು. ಆ ರಾಜಸಭೆಯಲ್ಲಿ ರಸಿಕ ಕವಿ ಅಗ್ಗಳ ಜಗದೇಕಮಲ್ಲ ಹಾಗೂ ಕರ್ಣದೇವನನ್ನು ಒಂದೇ ನಿಮಿಷದಲ್ಲಿ ಒಲಿಸಿಕೊಂಡನು. ಇದರಪರಿಣಾಮವಾಗಿ ಜಗದೇಕಮಲ್ಲ ಕರ್ಣದೇವರ ಪಾನಗೊಷ್ಠಿಯಲ್ಲಿ ಭಾಗವಹಿಸಲು ಅಗ್ಗಳನಿಗೆ ಆಹ್ವಾನಬಂದಿತು. ಪಾನಗೊಷ್ಠೀಯ ಸಮಯದಲ್ಲಿ

ನಡೆಯುತ್ತಿದ್ದ ಅನೀತಿಸಂಬಂಧ ಹಾಗೂ ಕರ್ಣದೇವ ಜಗದೇಕಮಲ್ಲನನ್ನು ನಡೆಸಿಕೊಳ್ಳುತ್ತಿದ್ದ ರೀತಿಯನ್ನುಕಂಡು ಬಹುವಾಗಿ ಅಗ್ಗಳ ನೊಂದನು. ಹೀಗೆ ಕೆಲದಿನಗಳು ಕಳೆದವು. ಆದರೂ ಅಗ್ಗಳ ಅಲ್ಲಿಗೆಬಂದ ಉದ್ದೇಶ ನೆರವೇರಿರಲಿಲ್ಲ.

ಮತ್ತೊಂದು ದಿನ ಬೇಟೆಯಾಡಲು ಹೊರಟ ಜಗದೇಕಮಲ್ಲ ತನ್ನಹಿಂದೆಯೇ ಬರುತ್ತಿದ್ದ ಅಗ್ಗಳನನ್ನು ಏಕಾಂತದಲ್ಲಿ ಕಂಡು ಅಗ್ಗಳನವಿಚಾರವನ್ನು ಕುರಿತು ಪ್ರಶ್ನಿಸಿದನು. ಅರಸನ ಪ್ರಶ್ನೆಗೆ ಉತ್ತರವಿತ್ತ ಅಗ್ಗಳ ಚಾಲುಕ್ಯಮಹಾರಾಣಿ ಚಾಲುಕ್ಯಅರಸುಗದ್ದುಗೆಯ ಪುನರುದ್ಧಾರಕ್ಕಾಗಿ ಸಂಚುಹೂಡಿರುವುದನ್ನು ತಿಳಿಸಿ ಅರಸನ ಸಹಕಾರವನ್ನು ಕೋರಿದನು ; ಕುಮಾರಪ್ರೇಮಾರ್ಣವನ ವೃತ್ತಾಂತವನ್ನೂ ತಿಳಿಸಿದನು. ಮಾಘಮಾಸದಲ್ಲಿ ನಡೆಯುವ ಕುಮಾರಸೋಮೇಶ್ವರನ ಪಟ್ಟಾಭಿಷೇಕಕ್ಕೆ ಮಂಗಳವೇಢೆಗೆ ಬರಬೇಕೆಂದು ಬಿಜ್ಜಳನಿಂದ ರಾಣಿಯವರಿಗೆ ಆಹ್ವಾನಬಂದಿರುವುದನ್ನು ತಿಳಿಸಿ, ಒಂದುವೇಳೆ ರಾಣಿಯವರು ಆಹ್ವಾನವನ್ನು ಅಂಗೀಕರಿಸಿದರೆ ಕಲ್ಯಾಣದಲ್ಲಿ ತಮ್ಮನ್ನು ನೋಡುವರೆಂದು ಹೇಳಿದನು.

"ಇದರಲ್ಲೇನೋ ಮೋಸವಿದೆ, ರಾಣಿಯು ಮಂಗಳವೇಢೆಗೆ ಹೋಗದಂತೆ ತಡೆಯಬೇಕು. ಪ್ರೇಮಾರ್ಣವನ ನಿಜವಾದ ತಂದೆ ಯಾರು? ರಾಣಿ ನನ್ನನ್ನು ಯಾವಾಗ ಕೂಡಿದಳು, ಪ್ರೇಮಾರ್ಣವನನ್ನು ಯಾವಾಗ ಪಡೆದಳು ? ಕುಮಾರನ ಧಮನಿಯಲ್ಲಿ ಚಾಲುಕ್ಯರಕ್ತ ಹರಿಯುತ್ತಿದೆ" ಎಂದು ಹೇಳುವ ಅಗ್ಗಳನ ಮಾತಿನ ಅರ್ಥವೇನು ? ಜಗದೇಕಮಲ್ಲನು ಕ್ಷಣಕಾಲ ಚಿಂತೆಗೊಳಗಾದನು. ಆರುವರ್ಷಗಳ ಹಿಂದೆ ಮೃಗಯಾವಿಹಾರ ಬಿಡಾರದಲ್ಲಿ ಗೋಮಂತಕಕನ್ಯೆಯಾಗಿ ತನ್ನೊಂದಿಗೆ ಕೂಡಿದ ಕಾಮೇಶ್ವರಿಯ ನೆನಪುಬಂದಿತು. ಮುಂದೆ ಜಗದೇಕಮಲ್ಲನು ಅದನ್ನೇ ಕನಸಿನ ರೂಪದಲ್ಲಿ ಕಂಡೆನೆಂದು ನಾರಣಕ್ರಮಿತನಿಗೆ "ಪ್ರೇಮಾರ್ಣವನು ನನ್ನ ಔರಸಪುತ್ರ. ಅವನುರಾಜ್ಯದ ಉತ್ತರಾಧಿಕಾರಿಯಾಗುವುದನ್ನು ಒಪ್ಪುತ್ತೇನೆ. ಬೇಗನೆ ಪ್ರೇಮಾರ್ಣವನ ಪಟ್ಟಾಭಿಷೇಕಕ್ಕೆ ಏರ್ಪಡಿಸಲು ಬಿಜ್ಜಳರಾಯರಿಗೆ ತಿಳಿಸಿರಿ" ಎಂದು ಹೇಳಿದನು.

ನಾರಣಕ್ರಮಿತನಿಂದ ಈ ವಿಚಾರವನ್ನು ತಿಳಿದ ಬಿಜ್ಜಳ ಒಂದು ನಿರೂಪವನ್ನು ಹೊರಡಿಸಿದನು. ನಿರೂಪದ ಪ್ರತಿಯೊಂದನ್ನು ಕಾಮೇಶ್ವರಿಗೆ ಕಳುಹಿಸಿ ಪ್ರೇಮಾರ್ಣವನ ಪಟ್ಟಾಭಿಷೇಕಕ್ಕೆ ಸಿದ್ಧತೆಗಳು ನಡೆಯುತ್ತಿವೆ. ಕುಮಾರನೊಂದಿಗೆ ರಾಣಿ ಮಂಗಳವೇಢೆಗೆ ಬರಬೇಕೆಂದು ಆಹ್ವಾನವಿತ್ತನು.

ಪಾಂಥರಂತೆ ಬಂದ ಬ್ರಹ್ಮಶಿವ ಬೊಮ್ಮರಸರು ಜಂಗಮವೇಷದಲ್ಲಿ ಮಹಮನೆಯನ್ನು ಸೇರಿದರು. ಜಗದೇಕಮಲ್ಲನು ನಡೆಸಲಿಚ್ಛಿಸಿದ ಜಂಗಮದಾಸೋಹಕ್ಕೆ ಮಹಮನೆಯಿಂದ ಇಬ್ಬರು ಕಾರ್ಯಕರ್ತರನ್ನು ಕಳುಹಿಸಬೇಕೆಂದು ಬಿಜ್ಜಳನಿಂದ ಮಹಮನೆಗೆ ನಿರೂಪ ಬಂದಿತು. ನಿರೂಪಕ್ಕೆ ಉತ್ತರವಾಗಿ ತಕ್ಕಿನ ವೇಷಧಾರಿಗಳಾದ ಬ್ರಹ್ಮೇಂದ್ರ ಶಿವಯೋಗಿ ಹಾಗೂ ಅವನ ಶಿಷ್ಯ (ಬ್ರಹ್ಮಶಿವ, ಬೊಮ್ಮರಸ)ನನ್ನು ಜಗದೇಕಮಲ್ಲರ ಅರಮನೆಗೆ ಕಳುಹಿಸಲಾಯಿತು.

ಬಸವೇಶರು ನಿರ್ವಾಸಿತರಾದ ಮೇಲೆ ಕಲ್ಯಾಣದಲ್ಲಿ ಮಧುವರಸರು ಅಸ್ವಸ್ಥರಾದರು ಮಹಮನೆಯ ಕೆಲಸ ಮಾಚಿದೇವರು ಚನ್ನಬಸವಣ್ಣನವರ ತಲೆಯ ಮೇಲೆ ಬಿದ್ದಿತು. ನೀಲಲೋಚನೆ ನಾಗಲಾಂಬೆಯರು ಮಹಮನೆಯ ದಾಸೋಹ ಕಾರ್ಯವನ್ನು ನೋಡ ತೊಡಗಿದರು. ರಾಜಿಕದಲ್ಲಿ ನಿಪುಣನೆನಿಸಿದ ಬಿಜ್ಜಳ ಒಂದು ದಿನ ಮಹಮನೆಗೆ ಬಂದು ತೆರವಾಗಿರುವ ಮಂತ್ರಿಸ್ಥಾನವೊಂದನ್ನು ಚನ್ನಬಸವಣ್ಣನವರು ತುಂಬಬೇಕೆಂದು ಕೇಳಿಕೊಂಡನು. ಚನ್ನಬಸವಣ್ಣನವರಿಗೆ ಆ ಪದವಿ ಇಷ್ಟವಿಲ್ಲದಿದ್ದರೂ ಶರಣರೆಲ್ಲರ ಮಾತಿಗೆ ಕಟ್ಟುಬಿದ್ದು ಮಂತ್ರಿ ಪದವಿಯನ್ನು ಒಪ್ಪಿಕೊಳ್ಳಬೇಕಾಯಿತು.

ಇತ್ತ ಜಗದೇಕಮಲ್ಲರಸನ ಅರಮನೆಯಲ್ಲಿ ಕವಿ ಅಗ್ಗಳ ಕಾವ್ಯೋಪದೇಶಿಯಾಗಿಯೂ ಬೊಮ್ಮರಸ ಬ್ರಹ್ಮೇಂದ್ರ ಶಿವಯೋಗಿಯಾಗಿ ಧರ್ಮೋಪದೇಶಿಕನಾಗಿಯೂ ಬ್ರಹ್ಮಶಿವ ಹರೀಶರುದ್ರನಾಗಿ ಸೇರಿಕೊಂಡು ಒಳಸಂಚಿಗೆ ಸನ್ನಾಹ ಮಾಡತೊಡಗಿದರು.

ಬಿಜ್ಜಳನ ಆಹ್ವಾನವನ್ನು ಅಂಗೀಕರಿಸಿದ ಕಾಮೇಶ್ವರಿ ಕುಮಾರ ಪ್ರೇಮಾರ್ಣವನನ್ನು ಕರೆದುಕೊಂಡು ಮಂಗಳವೇಢೆಗೆ ಬಂದಿಳಿದಳು. ಸೋಮೇಶ್ವರನ ಪಟ್ಟಾಭಿಷೇಕ ಮಹೋತ್ಸವದ ಸಿದ್ಧತೆಗಳು ರಭಸದಲ್ಲಿ ನಡೆಯುತ್ತಿದ್ದವು. ಮಂಗಳವೇಢೆಗೆ ಬಂದ ರಾಣಿಯನ್ನು ಸ್ವಯಂ ಬಿಜ್ಜಳನೇ ಸ್ವಾಗತಿಸಿ ಮೊಣಕಾಲೂರಿ ವಂದಿಸಿ ರಾಜೋಚಿತವಾದ ಆದರಾತಿಥ್ಯದಿಂದ ರಾಣಿ ಹಾಗೂ ಅವನ ಕ್ಷೇತ್ರಜ ಪುತ್ರನನ್ನು ಸ್ವಾಗತಿಸಿದನು. ಪ್ರೇಮಾರ್ಣವನನ್ನು ಅಲ್ಲಿ ನೆರೆದಿದ್ದ ಶ್ರೀಮಂತ ಸಾಮಂತ ಪ್ರಭು ಮನ್ನೆಯರಿಗೆ ಪರಿಚಯಮಾಡಿಸಿಕೊಟ್ಟು ಶೀಘ್ರದಲ್ಲೇ ಪ್ರೇಮಾರ್ಣವನ ಯುವರಾಜ ಪಟ್ಟಾಭಿಷೇಕ ನೆರವೇರುವುದೆಂದು ಉದ್ಘೋಷಿಸಿದನು. ಇದನ್ನು ಕೇಳಿ ಸಂತಸಗೊಂಡ ಜನತೆ ಜಯಕಾರಮಾಡಿತು.

ಆದರೆ ಕಾಮೇಶ್ವರಿ ಮಂಗಳವೇಢೆಗೆ ಬರುವ ಮುನ್ನ ಹಾಡುಗಾರನೊಬ್ಬ ಪಾನಶಾಲೆಯ ಮುಂದೆ ಹಾಡೊಂದನ್ನು ಹಾಡುತ್ತಿದ್ದ :

ಒಲಿದಾನ ಬಿಜ್ಜಳ ಚಾಲುಕ್ಯ ಲಕ್ಕಿಗೆ,
ಒಲಿದಾಳ ಲಕ್ಕಿ ಬಿಜ್ಜಳಗೆ.
ಹಿಟ್ಟು ಹಳಸಿತ್ತ ! ನಾಯಿ ಹಸಿದಿತ್ತ !
ಚೆನ್ನಾಯ್ತು ಮೇಳ ಇಬ್ಬರಿಗೆ !

ತೈಲವಿಲ್ಲದ ದೀಪ, ಗಂಡನಿಲ್ಲದ ತಾಪ,
ಹಾರಿಹತ್ತಿಕ್ಕಾಳ ಲಕ್ಕಿ !
ಬಿಜ್ಜಳನ ಬಿಡುತಾಳ, ತೊಡೆಯೇರಿ ಕುಳಿತಾಳ
ಇಬ್ಬರಿಗೂ ಮುಕ್ಕೀಕಾ ಮುಕ್ಕಿ !

ಎರಡು ವರಹಕ್ಕೊಂದು ಗದ್ಯಾಣವೇಕೆಂದು
ಕೇಳುತಿದ್ದಾರೆಲ್ಲ ಕೊಸರಿ,

ಎರಡಕ್ಕ ಬೆಲೆ ಮೂರು ಲೋಕವೆಂದನುತಾಳ
ಹೆಸರು ಕಾಮುಕ್ಕ, ಅಧೀಶ್ವರಿ !

ಹಾಡನ್ನು ಕೇಳಿದ ಬಿಜ್ಜಳನ ಭಟರು ಹಾಡುಗಾರನನ್ನು ಹಿಡಿದು ಹೆಡೆಮುರಿ ಕಟ್ಟಿ ಒಯ್ದರು.

* * * *

ಕಾಮೇಶ್ವರಿ ಮಂಗಳವೇಢೆಗೆ ಬಂದ ಮಾರನೆಯದಿನ ಸೋಮೇಶ್ವರನ ಪಟ್ಟಾಭಿಷೇಕಕ್ಕೆ ಒಂದು ದಿನ ಮಾತ್ರ ಉಳಿದಿತ್ತು. ಅಗ್ಗಳ ಕಾಮೇಶ್ವರಿಯ ದರ್ಶನಕ್ಕೆ ಮಾತ್ರ ಬಂದನು. ಕಾಮೇಶ್ವರಿ ಮಂಗಳವೇಢೆಯಲ್ಲಿ ತನಗೆ ದೊರೆತ ಸ್ವಾಗತವನ್ನು ಅವನೆದುರಿಗೆ ವಿವರಿಸಿದಳು. ದೂರದೃಷ್ಟಿಯುಳ್ಳ ಅಗ್ಗಳ ಬಿಜ್ಜಳನ ವಂಚನೆ ಹಾಗೂ ಹಾಡುಗಾರ ರಚಿಸಿದ ಹಾಡಿನ ಪ್ರತಿಯೊಂದನ್ನು ರಾಣಿಯ ಕೈಗಿತ್ತು ಅಲ್ಲಿರುವವರೆಗೂ ಎಚ್ಚರದಿಂದಿರಬೇಕೆಂದು ತಿಳಿಸಿದನು. ಆ ಹಾಡುಗಾರನನ್ನು ಶೂಲಕ್ಕೇರಿಸಿದ ವಿಚಾರ ತಿಳಿದು ಹಾಗೂ ಹಾಡಿನ ಪ್ರತಿಯನ್ನು ಓದಿದ ಕಾಮೇಶ್ವರಿಯು ಚಿಂತಾಪರವಶಳಾದಳು.

ಗೊತ್ತಾದ ದಿನದಲ್ಲಿ ಕುಮಾರ ಸೋಮೇಶ್ವರ ಅವನ ಹೆಂಡತಿ ಸಾವಳದೇವಿಯೆಂದು ಕರೆಯುತ್ತಿದ್ದ ಸುಂದರವಲ್ಲಿ ಪಟ್ಟಾಭಿಷಿಕ್ತರಾಗಿ ಮಂಡಲದ ಜನಗಳಿಗೆ ದರ್ಶನ ನೀಡಿದರು. ಸಮಾರಂಭ ಮುಗಿದ ಕೂಡಲೇ ಕರ್ಹಾಡಕ್ಕೆ ಹೊರಟ ಕಾಮೇಶ್ವರಿಯನ್ನು ಬಿಜ್ಜಳನು ತಡೆದು ದಶಮಿಯವರೆಗೂ ಅವನ ಅತಿಥಿಯಾಗಿರಬೇಕೆಂದು ಬೇಡಿದನು. ನಿರ್ವಾಹವಿಲ್ಲದೆ ಕಾಮೇಶ್ವರಿ ಒಪ್ಪಿ ನಿಂತಳು.

ನವಮಿಯಂದು ಬಿಜ್ಜಳನ ಅರಮನೆಯಲ್ಲಿ ಸ್ತ್ರೀಪುರುಷರೆಂಬ ಭೇದವಿಲ್ಲದೆ ಎಲ್ಲರೂ ಭಾಗವಹಿಸುವ ದ್ಯೂತ ಸಭೆ ಏರ್ಪಡಿಸಲಾಯಿತು. ಅದನ್ನು ನೋಡಲು ಬಂದ ಕಾಮೇಶ್ವರಿ ಆಟದಲ್ಲಿ ಭಾಗವಹಿಸಿದಳು. ಬಿಜ್ಜಳನ ಇಚ್ಛೆಯೂ ಅದೇ ಆಗಿತ್ತು. ಸ್ಪರ್ಧೆ ನೇರ ಬಿಜ್ಜಳ ಹಾಗೂ ಕಾಮೇಶ್ವರಿಯರಲ್ಲಿ ನಡೆಯಿತು. ಕಾಮೇಶ್ವರಿಗೆ ಅಂದು ವಿಜಯದ ಮೇಲೆ ವಿಜಯ. ಬಿಜ್ಜಳ ತನ್ನ ಸರ್ವಸ್ವವನ್ನೂ ಪಣವಿಟ್ಟು ಸೋತನು. ದ್ಯೂತದಲ್ಲಿ ಕಾಮೇಶ್ವರಿ ಕಳೆದು ಹೋಗಿದ್ದ ಚಾಲುಕ್ಯ ರಾಜ್ಯವನ್ನು ಬಿಜ್ಜಳನಿಂದ ಪುನಃ ಪಡೆದಳು. ಕೊನೆಗೆ ಬಿಜ್ಜಳ ತನ್ನನ್ನೇ ಪಣವಾಗಿಟ್ಟುಕೊಂಡು ಸೋತು ಕಾಮೇಶ್ವರಿಯ ಗಂಡನಾದನು. ಆಟದ ಕೊನೆಯಲ್ಲಿ ಕಾಮೇಶ್ವರಿ ಬಿಜ್ಜಳನಿಂದ ಪಡೆದ ಸಂಪತ್ತನ್ನೆಲ್ಲಾ ಹಿಂದಿರುಗಿಸಿ ಆದುವರೆಗೂ ಆಡಿದ ಆಟ ಕೇವಲ ವಿನೋದಕ್ಕಾಗಿ ಎಂದು ಹೇಳಿ ಹೊರಟಳು. ಹೀಗೆ ದ್ಯೂತ ಸಭೆ ಮುಗಿಯಿತು.

ಅಂದು ರಾತ್ರಿ ಅಗ್ಗಳನೊಡನೆ ಕರ್ಣದೇವ ಮಧುಮತ್ತನಾದಾಗ ಹಿಂದೊಮ್ಮೆ ಕರ್ಣದೇವನ ಜಾಣ್ಮೆಗೆ ಸಿಲುಕಿದ ಕಾಮೇಶ್ವರಿ ಅವನಿಂದ ತಪ್ಪಿಸಿಕೊಂಡು ಅವಳ ಜಾಗದಲ್ಲಿ ದಾಸಿಯನ್ನು ಇಟ್ಟ ಸತ್ಯವೊಂದನ್ನು ಅಗ್ಗಳದೇವನು ತಿಳಿಸಿದನು. ಶೀಲವಂತನೊಡನೆ ರಾಣಿಗಿರುವ ಅನೀತಿ ಸಂಬಂಧ ಕೇವಲ ಕಲ್ಪಿತವೆಂದೂ ತಿಳಿಸಿದನು.

ಅಂದು ಕಾಮೇಶ್ವರಿಯ ಜೀವಿತದಲ್ಲಿ ದುರ್ದಿನವೆನ್ನಬೇಕು. ಆ ರಾತ್ರಿ ಬಿಜ್ಜಳ ತನ್ನ ಅರಮನೆಯಲ್ಲಿದ್ದ ರಾಣಿಯನ್ನು ವಂಚಿಸಿ ಬಲವಂತದಿಂದ ಕಾಮೇಶ್ವರಿಯನ್ನು ಕೂಡಿದನು. ಬೇರೆ ದಿಕ್ಕುಕಾಣದ ರಾಣಿ ಬಿಜ್ಜಳನ ಕಾಮದಾಹಕ್ಕೆ ಬಲಿಯಾದಳು. ಬಿಜ್ಜಳನ ಕಾಮೋನ್ಮಾದ ಇಳಿದಮೇಲೆ ಅದುವರೆಗೂ ಅವಳು ಕಾಪಾಡಿಕೊಂಡು ಬಂದ ಅವಳ ಸತೀತ್ವದ ಸತ್ಯಕಥೆಯನ್ನು ಹೇಳಿ ಅವಳ ಬಗ್ಗೆ ಈ ವರೆಗೂ ಹುಟ್ಟಿರುವ ಕಥೆಗಳು ಕಲ್ಪಿತವೆಂದು ತಿಳಿಸಿ ವಾಸ್ತವದಲ್ಲಿ ನಡೆದು ಹೋದ ಇತಿ ವೃತ್ತವನ್ನೆಲ್ಲಾ ಬಿಜ್ಜಳನಿಗೆ ನಿವೇದಿಸಿ ಅವನನ್ನು ಬೀಳ್ಕೊಂಡಳು. ಆ ರಾತ್ರಿಯೇ ರಾಣಿ ತನ್ನ ಮೆಚ್ಚಿನದಾಸಿ ಉಷಾವತಿಯನ್ನು ಕರೆದು ಪ್ರೇಮಾರ್ಣವನನ್ನು ಅವನ ಕೈಗೊಪ್ಪಿಸಿ ಅದುವರೆಗೂ ನಡೆದ ವಿಷಯವನ್ನೆಲ್ಲಾ ಅವಳಿಗೆ ತಿಳಿಸಿದಳು. ಬಿಜ್ಜಳನ ಧೂರ್ತತೆಯನ್ನು ಹೇಳಿ ಹೇಗಾದರೂ ಮಾಡಿ ಈ ಎಲ್ಲ ವಿಚಾರಗಳನ್ನು ಜಗದೇಕಮಲ್ಲರನ್ನು ಕಂಡು ತಿಳಿಸಬೇಕೆಂದು ವಿನಂತಿಸಿಕೊಂಡು ಕೆಲವು ವಿಚಾರಗಳನ್ನು ಅವಳಿಗೆ ಬಾಯಿ ಪಾಠ ಮಾಡಿಸಿದಳು. ಅನಂತರ ಮಹಾರಾಣಿ ಕಾಮೇಶ್ವರಿ ಬಿಜ್ಜಳನ ಅರಮನೆಯಲ್ಲಿ ತನ್ನನ್ನು ಅಗ್ನಿಗೆ ಅರ್ಪಿಸಿಕೊಂಡಳು. ದಶಮಿಯಂದು ಮಂಗಳವೇಢೆಯ ಬಿಜ್ಜಳನ ಅರಮನೆ ಭೂವ್ಯಾಕಾಶಗಳಿಗೆ ಹೊಂದಿ ಉರಿಯುತ್ತಿತ್ತು.

ಹರಳಯ್ಯ ಮಧುವರಸರ ಮೇಲೆ ವರ್ಣಸಂಕರದ ಆಪಾದನೆ ಹೊರಿಸಿ ಸಲ್ಲಿಸಿದ್ದ ಮನವಿ ಪತ್ರದ ವಿಚಾರಣೆ ಒಪ್ಪಿಸಿದ್ದರೂ ಅದು ಕಾರ್ಯರೂಪಕ್ಕೆ ಅನೇಕ ವಾರಗಳು ಕಳೆದಿದ್ದರೂ ಬಂದಿರಲಿಲ್ಲ. ಕೊನೆಗೊಂದು ದಿನ ಅದರ ವಿಚಾರಣೆ ಆರಂಭವಾಯಿತು. ಹರಳಯ್ಯ ಮಧುವರಸ, ಶೀಲವಂತ ಲಾವಣ್ಯವತಿಯರ ಪಾಟೀ ಸವಾಲುಗಳು ನಡೆದವು. ಪಾಟೀಸವಾಲಿನ ಸಮಯದಲ್ಲಿ ನಾರಣಕ್ರಮಿತ ನಡೆಸಿದ ಅವ್ಯವಹಾರಿಕ ವಿಷಯಗಳಿಗಾಗಿ ನೊಂದ ಮಂಚಣ್ಣನು ಮಾಚಿದೇವರಿಗೆ ಪತ್ರಬರೆದು "ಮಧುವರಸ ಹರಳಯ್ಯ ಶೀಲವಂತರಿಗೆ ವರ್ಣ ಸಂಕರದ ಅಪರಾಧಕ್ಕಾಗಿ ಮರಣದಂಡನೆ ವಿಧಿಸಲು ಬಿಜ್ಜಳರಾಯರು ನಿರ್ಧರಿಸಿದ್ದಾರೆ. ಈ ವಿಚಾರದಲ್ಲಿ ನಿಪುಣರ ಸಮಿತಿಯ ಅಧ್ಯಕ್ಷನಾದ ನನ್ನ ಒಪ್ಪಿಗೆಯನ್ನು ಕೇಳಿದರು. ನಾನು ನಿರಾಕರಿಸಿದೆ. ಈ ವಿಚಾರವನ್ನು ನೀವು ಅನುಭವಮಂಟಪದ ಶರಣರಿಗೆ ತಿಳಿಸಿ ಆಪಾದಿತರ ಬಿಡುಗಡೆಗೆ ಪ್ರಯತ್ನಿಸಿ" ಎಂದು ತಿಳಿಸಿದರು. ಆ ರಾತ್ರಿಯೇ ವೃದ್ಧ ಮಂಚಣ ಹಾಗೂ ಅವನ ಪತ್ನಿ ಶಿವಪೂಜಾ ನಿರತರಾಗಿದ್ದಾಗ ಅಸುವನ್ನು ನೀಗಿದರು.

ಶೀಲವಂತನಿಗೇ ಬೇರೆ ದಂಡಾಜ್ಞೆಯನ್ನು ವಿಧಿಸಲಾಗಿತ್ತು. ಕಾಮೇಶ್ವರಿ, ಕದಂಬರಾಜಕನ್ಯೆ ಕುಸುಮಾವಳಿ ಇನ್ನೂ ಮುಂತಾದ ಉತ್ತಮ ಕುಲದ ಹೆಂಗಸರನ್ನು ಕೆಡಿಸಿರುವನೆಂದು ಆಪಾದಿಸಲಾಗಿತ್ತು. ಅವನ ಶಿರಶ್ಛೇದ ಮಾಡಿ ಅವನ ದೇಹವನ್ನು ತುಂಡುತುಂಡಾಗಿ ಕತ್ತರಿಸಿ ನಾಯಿನರಿಗಳಿಗೆ ಹಾಕತಕ್ಕದ್ದೆಂದೂ, ಕತ್ತರಿಸಿದ ಅವನ ತಲೆಯನ್ನು ಕಬ್ಬಿಣದ ಪಂಜರದಲ್ಲಿಟ್ಟು ನಗರದ ದಕ್ಷಿಣ ಮಹಾದ್ವಾರದಲ್ಲಿ ತೂಗು ಹಾಕಬೇಕೆಂದೂ ರಾಜಾಜ್ಞೆಯಾಗಿತ್ತು.

ಅಂದೇ ಅವಧೂತ ಸನ್ಯಾಸಿಯೊಬ್ಬನು ಬಿಜ್ಜಳನ ಸಂದರ್ಶನ ಪಡೆದು ಅಯ್ಯಾವಳಿಯ ಐನೂರ್ವರು ಸ್ವಾಮಿಗಳ ಸಂಗ, ಅದರ ಕ್ರಿಯಾರೂಪವಾದ ವೀರ ಬಣಂಜು ವಾಣಿಜ್ಯ ಸಂಘ ಬಂಧಿತರನ್ನು ಬಿಡುಗಡೆ ಮಾಡಿದರೆ ಹತ್ತು ಲಕ್ಷ ಸ್ವರ್ಣ ವರಹಗಳನ್ನು ಮಂಗಳವೇಢೆ ರಾಜಭಂಡಾರಕ್ಕೆ ನೀಡಲು ಒಪ್ಪಿದೆಯೆಂದು ಹೇಳಿ ಹಣದ ಪೆಟ್ಟಿಗೆಯನ್ನು ತೋರಿಸಿದನು. ಬಿಜ್ಜಳನು ಆ ಪ್ರಲೋಭನೆಗೆ ಒಳಗಾಗದೆ ನಿಧಿಯನ್ನು ನಿರಾಕರಿಸಿದನು. ಅಂದಿನಿಂದ ಅದು ಹೊನ್ನಮ್ಮನ ಚಾವಡಿಯೆಂದು ಹೆಸರಾಯಿತು.

ಅಪಾದಿತರ ಮರಣದಂಡನೆ ಕಾರ್ಯಗತ ಮಾಡಲು ಒಂದು ದಿನ ಉಳಿದಿತ್ತು. ಲಾವಣ್ಯವತಿ ಬಿಜ್ಜಳನನ್ನು ಏಕಾಂತದಲ್ಲಿ ಕಂಡು ತನ್ನ ಪತಿ ಶೀಲವಂತ, ಮಾವ ಹರಳಯ್ಯ, ಹಾಗೂ ತನ್ನ ತಂದೆ ಮಧುವರಸರ ಬಿಡುಗಡೆಗಾಗಿ ಬೇಡಿದಳು. ಬಿಜ್ಜಳ ಅವಳ ವಾದಕ್ಕೆ ಮಣಿದು ಬಂಧಿತರನ್ನು ಬಿಡುಗಡೆ ಮಾಡಲು ಒಪ್ಪಿದನು, ಆದರೊಂದು ಶರತ್ತಿನ ಮೇಲೆ. ಲಾವಣ್ಯವತಿ ಬಿಜ್ಜಳನ ಪ್ರೇಯಸಿಯಾದರೆ ಬಿಡುಗಡೆ ಸಾಧ್ಯ ವೆಂದನು. ಇದನ್ನು ಕೇಳಿದ ಲಾವಣ್ಯವತಿ ಉರಿದೆದ್ದು ಅಲ್ಲಿಯೇ ಉರಿಯುತ್ತಿದ್ದ ದೀಪಸ್ತಂಭದ ಉರಿಬತ್ತಿಗಳನ್ನು ತೆಗೆದುಕೊಂಡು ತನ್ನೆರಡೂ ಕೆನ್ನೆಗಳಿಗೆ ಉಜ್ಜಿಕೊಂಡು ವಿಕಾರ ರೂಪವನ್ನು ತಾಳಿದಳು.

ರಾಜಾಜ್ಞೆಯಂತೆ ಮೂವರ ವಧೆಯೂ ಆಯಿತು. ಶೀಲವಂತನ ದೇಹವನ್ನು ತುಂಡರಿಸಿದರು. ಬಿಜ್ಜಳನ ಅರಮನೆಯಿಂದ ಹೊರಟ ಲಾವಣ್ಯವತಿ ವಧೆಯಾದ ದೇಹಗಳನ್ನು ಅರಸಿಹೋದಾಗ ಅವಳನ್ನು ತಿವಿದುಕೊಂದರು. ಮಾಚಿದೇವರ ಸುಮ್ಮುಖದಲ್ಲಿ ಶರಣರು ಮೃತದೇಹಗಳನ್ನು ಪಡೆದು ಶರಣ ಧರ್ಮಕ್ಕನುಸಾರವಾಗಿ ಸಂಸ್ಕಾರವೆಸಗಿದರು. ಆಗ ಮೋಳಿಗೆಯಮಾರಯ್ಯನವರು ಇಂತೆಂದರು :

"ಅಗ್ರಜ-ಅಂತ್ಯಜ, ವರ್ಣಧರ್ಮದ ಎರಡು ಧ್ರುವಗಳು ;
ಒಂದು ಉತ್ತರ, ಇನ್ನೊಂದು ದಕ್ಷಿಣ, ನಡುವೆ ದೊಡ್ಡ ಕಮರಿ !
ಅನುರಾಗದ ಗಾಳಿ ಬೀಸಿ, ಪ್ರೇಮ ಸೂತ್ರ ಬಂಧಿಸಿತ್ತು ಎರಡನ್ನು
ಅಗ್ರಜನ ಪುತ್ರಿ ಅಂತ್ಯಜನಣುಗನ ಕೈ ಹಿಡಿದಳು
ಸಾಧಿಸಿತ್ತು ಮಾನವತೆಯ ಮಹಾಸಿದ್ಧಿ ಶರಣರಲ್ಲಿ.
ನಿಃಕಲಂಕ ಮಲ್ಲಿಕಾರ್ಜುನಾ ! ನೋಡಿ ಬೆರಗಾದೆ ನಾನು !"

ವಧಾಪ್ರಕರಣಗಳು ಮುಗಿದಮೇಲೆ ಸಕಲೇಶಮಾದರಸರ ಅಧ್ಯಕ್ಷತೆಯಲ್ಲಿ ಅನುಭವಮಂಟಪದಲ್ಲಿ ಸೇರಿದ್ದ ಶರಣರೆಲ್ಲ ಶರಣಧರ್ಮದ ಜಾಗ್ರತೆಗಾಗಿ ಪಣತೊಟ್ಟರು. ಇದನ್ನು ತಿಳಿದ ಬಿಜ್ಜಳ ಚೆನ್ನಬಸವಣ್ಣನವರನ್ನು ಕರೆಸಿ ಈ ಬಗ್ಗೆ ಪ್ರಶ್ನಿಸಿದನು. 'ಶರಣರು ಸರಿಯಾದ ಮಾರ್ಗದಲ್ಲಿ ನಡೆಯುತ್ತಿದ್ದಾರೆ. ನಿಜವಾದ ತಪ್ಪಿತಸ್ಥರು ಬಿಜ್ಜಳರಾಯರೇ' ಎಂದು ಹೇಳಿ ಬಂದರು ಚೆನ್ನಬಸವಣ್ಣನವರು. ಕೂಡಲೇ ಚೆನ್ನಬಸವಣ್ಣ ಮಾಚದೇವರು

ಸೇರಿ ಆದಷ್ಟುಬೇಗನೆ ಶರಣರು ಕಲ್ಯಾಣವನ್ನು ಬಿಡುವುದು ಒಳಿತೆಂದು ನಿರ್ಧರಿಸಿ ದಿನವನ್ನೂ ಗೊತ್ತುಮಾಡಿದರು.

ಅತ್ತದಾಸಿ ಉಷಾವತಿ ಅಗ್ಗಳನನ್ನು ಕೂಡಿ ಚತುರತೆಯಿಂದ ಜಗದೇಕ ಮಲ್ಲರಸರನ್ನು ಮಾರುವೇಷದಲ್ಲಿ ಕಂಡು ಕಾಮೇಶ್ವರಿಯ ಅಂತಿಮ ಸಂದೇಶವನ್ನು ತಲುಪಿಸಿದಳು. ಆ ಸಂದೇಶ ಈರೀತಿಯಿತ್ತು:

ಕುಮಾರ ಸೋಮೇಶ್ವರನ ಪಟ್ಟಾಭಿಷೇಕಕ್ಕಾ ಗಿರಾಜಾತಿಥಿಯಾಗಿ ಮಂಗಳವೇಢೆಗೆ ಹೋಗಿದ್ದ ನನ್ನ ಬಿಡಾರಕ್ಕೆ ಮಾಘಶುದ್ಧ ನವಮಿಯಂದು ಸರಿರಾತ್ರಿಯಲ್ಲಿ ಬಿಜ್ಜಳನು ವಂಚನೆಯಿಂದ ಬಂದು ನನ್ನ ಮಾನಹರಣ ಮಾಡಿದನು. ಆ ದಾನವನ ಸ್ಪರ್ಶದಿಂದ ಕಳಂಕಿತವಾದ ದೇಹವನ್ನು ಅಗ್ನಿಯಿಂದ ದಹಿಸಲು ನಿರ್ಧರಿಸಿದ್ದೇನೆ. ನನ್ನಭಾಗಕ್ಕೆ ಮರಣವೇ ಮಹಾನವಮಿ. ಈ ಸಂದೇಶ ನಿಮಗೆ ತಲುಪುವಷ್ಟರಲ್ಲಿ ಈ ಅಭಾಗಿನಿಯ ಮರಣದ ಸುದ್ದಿಯನ್ನು ನೀವು ಕೇಳುವಿರಿ. ಬಿಜ್ಜಳನು ಶರಣಧರ್ಮದ ಪರಮ ಶತ್ರು. ಚಾಲುಕ್ಯರಾಜ್ಯದ ಎಲ್ಲ ಶೈವ ಮಠಗಳನ್ನು ನಾಶಮಾಡಿ ಶರಣಧರ್ಮವನ್ನು ನಿರ್ಮೂಲ ಗೊಳಿಸುವುದು ಅವನ ಉದ್ದೇಶ. ಚಾಲುಕ್ಯರ ಹೆಸರನ್ನು ಇತಿಹಾಸದಿಂದ ತೊಡೆದು ಹಾಕಿ ಕಲಚುರ್ಯ ಸಾಮ್ರಾಜ್ಯವನ್ನು ಸ್ಥಾಪಿಸಲು ಅವನು ಹವಣಿಸುತ್ತಿದ್ದಾನೆ. ಈ ದಾನವರೂಪೀ ನಿರಂಕುಶ ಪ್ರಜಾಪೀಡಕನನ್ನು ವಧಿಸಿ ಚಾಲುಕ್ಯರಾಜ್ಯವನ್ನು, ಶರಣಧರ್ಮವನ್ನು ವಿಪತ್ತಿನಿಂದ ಉದ್ಧರಿಸುವ ಧೈರ್ಯ ಸಾಹಸಗಳು ನಿಮಗಿದೆಯೆ? ಅದರಿಂದ ಮಾತ್ರ ನಾನು ಕಳಂಕಮುಕ್ತೆಯಾಗುವೆನು. ನನ್ನ ಆತ್ಮಕ್ಕೆ ಶಾಂತಿ ದೊರಕುವುದು.

ಇತಿ ಚರಣದಾಸಿ ಕಾಮೇಶ್ವರಿ.

ರಾಣಿಯ ಅಂತಿಮ ಸಂದೇಶವನ್ನು ತಿಳಿದ ಜಗದೇಕಮಲ್ಲರಸ ರೊಚ್ಚಿಗೆದ್ದು ಬೊಮ್ಮರಸನನ್ನು ಸಂಗಡ ಕರೆದುಕೊಂಡು ಗುಪ್ತವೇಷದಲ್ಲಿ ಅರಮನೆಯನ್ನು ಬಿಟ್ಟರು. ಹಾಗೆ ಬಿಟ್ಟವರು ನೇರ ಹೊನ್ನಮ್ಮನ ಚಾವಡಿಗೆ ಹೋಗಿ ಅಲ್ಲಿ ಬಿಜ್ಜಳನನ್ನು ಇರಿದು ಕೊಂದು ಪರಾರಿಯಾದರು. ಆದರೆ ಹಿಂಬಾಲಿಸಿ ಬರುತ್ತಿದ್ದ ರಾಜಭಟರಿಂದ ಜಗದೇಕ ಮಲ್ಲರಸರ ವಧೆಯಾಯಿತು, ಬೊಮ್ಮರಸನು ತಪ್ಪಿಸಿಕೊಂಡನು. ಅರಮನೆಯಲ್ಲಿ ಕಾಣೆಯಾದ ಜಗದೇಕಮಲ್ಲರಸನನ್ನು ಹುಡುಕಿಕೊಂಡು ಬಂದ ಕರ್ಣದೇವ ಅವನ ಮೃತದೇಹವನ್ನು ಸಾಗಿಸಿಕೊಂಡು ಹೋಗಿ ಅರಮನೆಯಲ್ಲಿಟ್ಟು ಅಸ್ವಸ್ಥತೆಯಿಂದ ಜಗದೇಕಮಲ್ಲರು ಸತ್ತರೆಂಬ ಸುದ್ದಿಯನ್ನು ಹರಡಿದನು. ಅಂದೇ ಬಿಜ್ಜಳ ಶರಣದ್ವೇಷಿ ಮಾಧವನಾಯಕನನ್ನು ಮಹಾದಂಡ ನಾಯಕನನ್ನಾಗಿ ಮಾಡಿದ್ದನು. ಮಾಧವ ನಾಯಕ ದಂಡನಾಯಕನಾಗಿ ನೇಮಿತವಾದುದು ಬಿಜ್ಜಳನತಮ್ಮ ಕರ್ಣದೇವನಿಗೆ ಇಷ್ಟವಿರಲಿಲ್ಲ. ಮಾಧವನಾಯಕ ಶರಣರನ್ನು ಸದೆಬಡಿಯಲು ಬಿಜ್ಜಳನ ಕೊನೆಯ ಆಜ್ಞೆಗಾಗಿ ಕಾದು ಸೈನ್ಯಸಿದ್ಧತೆ ಮಾಡಿಕೊಂಡು ನಗರದ ಮಹಾದ್ವಾರಗಳಲ್ಲಿ ನಿಂತಿದ್ದನು.

ಇತ್ತ ಶರಣರೆಲ್ಲ ಉಳಿವಿಗೆ ಹೋಗುವುದೆಂದು ತೀರ್ಮಾನಿಸಿದ್ದರು. ಗಂಗಾಂಬಿಕೆ ಕೂಡಲಸಂಗಮದಿಂದ ಹಿಂದಿರುಗಿದ್ದಳು. ತಾನೂ ಉಳಿವಿಗೆ ಶರಣರ ಜೊತೆ ಹೋಗುವುದಾಗಿ ತಿಳಿಸಿ ನೀಲಲೋಚನೆಯನ್ನು ಕಂಡು ಅವಳು ಕೂಡಲಸಂಗಮಕ್ಕೆ ಕೂಡಲೇ ತೆರಳಬೇಕೆಂದು ಹೇಳಿದಳು. ಬಸವೇಶರ ಅಭಿಪ್ರಾಯವು ಅದೇ ಅಗಿತ್ತು.

ಗೊತ್ತಾದ ದಿನ ಶರಣರತಂಡ ನಗರದ ನೈಋತ್ಯದ ದ್ವಾರಕ್ಕೆ ಬಂದಾಗ ಅಲ್ಲಿಯ ಬಾಗಿಲುಮುಚ್ಚಿತ್ತು. ಮಾಧವನಾಯಕ ನಗರದ ಮಹಾದ್ವಾರಗಳನ್ನೆಲ್ಲಾ ಮುಚ್ಚಿಸಿದ್ದನು. ಮಾಚಿದೇವರು ದ್ವಾರಬಾಗಿಲ ಹತ್ತಿರಬಂದು 'ಕಲಿದೇವರದೇವ ಪರಾಕ್' ಎಂದು ಘರ್ಜಿಸಿದಾಗ ಕಾವಲು ಭಟ ಹೆಬ್ಬಾಗಿಲನ್ನು ತೆರೆದನು. ಆದರೆ ಶರಣರೆಲ್ಲಾ ಹೋದನಂತರ ವಿಶೇಷ ಅನುಮತಿಯಿಲ್ಲದೆ ಮಹಾದ್ವಾರದಬಾಗಿಲು ತೆರೆಯಬಾರದೆಂಬ ದಂಡನಾಯಕನ ಆಜ್ಞೆ ಭಟನ ಕೈಸೇರಿತು. ಆದೇ ಭಟನಿಂದ ಕರ್ಣದೇವರಸರು ಮಾಧವನಾಯಕನ ಬಂಧಿಯಾಗಿದ್ದಾರೆ. ಮಾಧವನಾಯಕ ತಾನೇ ಸರ್ವಾಧಿಕಾರಿಯಾಗಲು ಯತ್ನಿಸುತ್ತಿದ್ದಾನೆಂದು ಮಾಚಿದೇವರು ತಿಳಿದರು.

ಅಲ್ಲಿಂದ ಹೊರಟ ಶರಣರತಂಡ ಆಂಜನೇಯನ ಹೊಳೆ ದಾಟಿತ್ತು. ಹೊಳೆಯಾಚೆ ದಡದಲ್ಲಿ ಗಣಾಚಾರರ ಭಕ್ತಯೋಧರ ತಂಡ ಅವರನ್ನು ಸ್ವಾಗತಿಸಿತು. ನೀಲಲೋಚನೆಗೆ ಸಂದಿಗ್ಧಸಮಯವದು. ಪತಿ ಸೇವೆಗಾಗಿ ಕೂಡಲಸಂಗಮಕ್ಕೆ ಹೋಗುವುದೆ ? ಇಲ್ಲವೆ ತನ್ನ ಅಣ್ಣ ಬಿಜ್ಜಳನ ಅಂತಿಮ ದರ್ಶನಕ್ಕೆ ಕಲ್ಯಾಣಕ್ಕೆ ಹೋಗುವುದೆ ? ಅಥವಾ ಇವೆರಡೂ ಬಿಟ್ಟು ಆತ್ಮೋದ್ಧಾರಕ್ಕಾಗಿ ಶರಣರ ಜೊತೆಯಲ್ಲಿ ಉಳಿವಿಗೆ ಹೋಗುವುದೆ? ಎಂದು. ಕೂಡಲೇ ಯಾವುದೇ ನಿರ್ಧಾರಕ್ಕೆ ಬರದಾದಳು. ಕೊನೆಯಲ್ಲಿ ಬಸವಣ್ಣನವರ ಅನುಮತಿ ಕೇಳುವುದೆಂದು ನಿರ್ಧರಿಸಿದಳು. ಆದರಂತೆ ಓಲೆಯೊಂದನ್ನು ಅಪ್ಪಣ್ಣನ ಕೈಲಿತ್ತಳು. ಕಲ್ಯಾಣದ ವಿಚಾರವನ್ನೆಲ್ಲಾ ಬಸವೇಶರಿಗೆ ತಿಳಿಸಲು ಪಡಿಹಾರಿ ಅಪ್ಪಣನನ್ನು ನಿಯೋಜಿಸಲಾಗಿತ್ತು.

ಶರಣರ ಶಿಬಿರ ಅಶ್ವತ್ಥ ಕಟ್ಟೆಯ ಬಳಿ ಇದ್ದಾಗ ಸೊನ್ನಲಾಪುರದ ಸಿದ್ಧರಾಮ ಶಿವಯೋಗಿ ಮೋಳಿಗೆ ಮಾರಯ್ಯನವರು ಅವರ ಜೊತೆ ಕೂಡಿಕೊಂಡರು. ಅವರೆಲ್ಲ ಅಲ್ಲಿ ಕಲೆತು ಮುಂದೇನು ಮಾಡಬೇಕೆಂದು ಚಿಂತಿಸಿತೊಡಗಿದರು. ಆ ಸಮಯದಲ್ಲಿ ಕರ್ಣದೇವ ಗುಪ್ತವೇಷದಿಂದ ಬಂದು ಮಾರಯ್ಯ ಹಾಗೂ ಸಿದ್ಧರಾಮರನ್ನು ಕಂಡು ಶರಣರು ಈಗ ತನ್ನ ಕಡೆ ಒಲಿಯುವುದಾದರೆ ಮಾಧವನಾಯಕನ ಮೇಲೆ ತಾನು ಯುದ್ಧ ಹೂಡುವುದಾಗಿ ಶರಣರ ಅನುಮತಿ ಕೇಳಿದನು. " ಶರಣರು ಅಪೇಕ್ಷಿಸುವುದು ಸುಖೀರಾಜ್ಯ. ಕಲ್ಯಾಣದಲ್ಲಿ ಇನ್ನು ಆದು ದೊರಕಲಾರದು ", ಎಂದು ಕರ್ಣದೇವನ ಕೇಳಿಕೆಯನ್ನು ನಿರಾಕರಿಸಿದರು. ಶರಣರ ಸಹಾಯವಿಲ್ಲದೆ ನಿರಾಶೆಯಿಂದ ಹಿಂದಿರುಗಿ ಕರ್ಣದೇವ ಮಾಧವನಾಯಕನ ಮೇಲೆ ದಂಡೆತ್ತಿ ಹೊರಟನು.

ಕೂಡಲ ಸಂಗಮಕ್ಕೆ ಸಕಾಲದಲ್ಲಿ ಬಂದ ಅಪ್ಪಣ್ಣ ಬಿಜ್ಜಳರಾಯನ ಕೊಲೆ ಯಾದುದು, ಶರಣರ ತಂಡ ಉಳಿವಿಗೆ ಹೊರಟಿರುವುದು, ಮಾಧವನಾಯಕ ಶರಣ

ದ್ವೇಷಿಯಾಗಿರುವ ವಿಷಯವನ್ನೆಲ್ಲ ವಿವರಿಸಿದನು. ಬಿಜ್ಜಳನ ಕೊಲೆಗಾಗಿ ಬಸವಣ್ಣನವರು ಬಹಳವಾಗಿ ನೊಂದರು. ಆಗ ಬಸವೇಶರು ಶರಣರಿಗೆ ಹೇಳಿದ ವಚನಗಳಿವು :

"ನಿಮ್ಮ ಬಂಟರ ಬಂಟ ನಾನಯ್ಯ,
ನಿಮ್ಮ ಲೆಂಕರ ಲೆಂಕ ನಾನಯ್ಯ,
ನಾನು ನಿಮ್ಮ ತೊತ್ತಿರ ಪಡುಗವ ತೆಗೆವ ಪಡಿಗತೊತ್ತಯ್ಯ
ಕೂಡಲ ಸಂಗನ ಶರಣರಿಗೆಲ್ಲ ಸಂಗನ ಬಸವನ ಬಿನ್ನಪ:
ಕವಳಿಗೆ ಸಂದುದು. ನಿಮ್ಮ ನಿಜ ಪದದಲ್ಲಿ
ಬೆರೆಸೆಂದು ಕೃಪೆ ಮಾಡಿರಯ್ಯ.

ಆನು ಮಾಡಿದ ತಪ್ಪನೆಣಿಸಿಹೆನೆಂದಡೆ ಗಣನೆಯಿಲ್ಲ.
ನಡೆದು ತಪ್ಪುವೆನು, ನುಡಿದು ತಪ್ಪುವೆನು.
ಮಾಡಿ ತಪ್ಪುವೆ, ನೀಡಿ ತಪ್ಪುವೆ, ಕೂಡಿ ತಪ್ಪುವೆ,
ಅರಿದು ತಪ್ಪುವೆ, ಮರೆದು ತಪ್ಪುವೆ.

ಎನ್ನ ತಪ್ಪನೊಪ್ಪಮಾಡಿಕೊಂಬುದಲ್ಲದೆ ಚಿತ್ತಕ್ಕೆ ತರಲಾಗದು
ಕೂಡಲ ಸಂಗಮದೇವಯ್ಯನೆಂಬ ಗಂಡನೆನ್ನ
ಬೆರೆಯಬೇಕೆಂದು ಕರೆಯಲಟ್ಟಿದನು.
ಶಿವಶರಣರೆಲ್ಲರಿಗೆ ಶರಣೆಂದು ಬೀಳ್ಕೊಂಬ ತವಕದಲ್ಲಿದ್ದೆ."

ಅದೇ ಸಮಯದಲ್ಲಿ ಕವಿ ಅಗ್ಗಳ ಸಂಗಮದಲ್ಲಿ ಬಸವೇಶರನ್ನು ಕಂಡು ಅವರ ಆಶೀರ್ವಾದ ಅನುಗ್ರಹವನ್ನು ಬಯಸಿದನು. ಅಪ್ಪಣ್ಣ ನೀಡಿದ ನೀಲಲೋಚನೆಯ ಪತ್ರಕ್ಕೆ ಉತ್ತರವಾಗಿ 'ತನ್ನನ್ನು ತಾನು ತಿಳಿಯುವುದು ಮುಕ್ತಿಯ ರಾಜಪಥ........ ಆ ಮಾರ್ಗವನ್ನು ನೀಲಲೋಚನೆ ಮುಟ್ಟಿದುದು ನನಗೆ ಸಮಾಧಾನವನ್ನುಂಟು ಮಾಡಿದೆಯೆಂದು ತಿಳಿಸು' ಎಂಬುದಾಗಿ ಅಪ್ಪಣ್ಣನಿಗೆ ಹೇಳಿ ಬಸವೇಶರು ನದೀತೀರದ ಇನ್ನೊಂದು ಶಿಲಾಮಂಟಪದ ಕಡೆ ನಡೆದರು.

ಶಿಲಾಮಂಟಪದಲ್ಲಿ ಕುಳಿತ ಬಸವೇಶರು ಧ್ಯಾನಾಸಕ್ತರಾದರು. ಚಾಚಿದ ವಾಮಹಸ್ತದಲ್ಲಿ ಬಿಲ್ವಪತ್ರೆಗಳಿಂದ ಮುಚ್ಚಿದ ಇಷ್ಟಲಿಂಗ ಉರಿ ಹಿಂಗಿದ ಕೆಂಡದಂತೆ ಬೆಳಗಿತು. ಅವರ ಕಣ್ಣುಗಳು ಮುಚ್ಚಿದ್ದವು. ಬಸವೇಶರು ಲಿಂಗೈಕ್ಯರಾಗಿದ್ದರು. ಅವರ ಸಮಾಧಿ ಅಲ್ಲಿಯೇ ನಡೆಯಿತು.

ಉಳಿವಿಗೆ ಹೊರಟ ಶರಣರ ಯಾತ್ರಾದಳ ಕಲ್ಯಾಣವನ್ನು ಬಿಟ್ಟು ಕೃಷ್ಣನದಿಯ ಉತ್ತರದಡದಲ್ಲಿ ತಂಗಡಿ ಗ್ರಾಮಕ್ಕೆ ಬಂದಿತು. ಬಿಜ್ಜಳನ ಕೊಲೆ ಮಾಡಿದ ಇಬ್ಬರು ಅಪರಾಧಿಗಳಲ್ಲಿ ಒಬ್ಬನು ಸಿಕ್ಕಿ ಇನ್ನೊಬ್ಬನನ್ನು ಅಲ್ಲೇ ಇರಿದು ಕೊಲ್ಲಲಾಯಿತು. ಆತನೇ ಜಗದೇಕಮಲ್ಲರಸ ಎಂಬ ವಾರ್ತೆ ಶರಣರತಂಡಕ್ಕೆ ಬಂದಿತು. ಆದರೆ ಆ ಕೊಲೆಯ ಆಪಾದನೆಯನ್ನು ಮಾಧವನಾಯಕ ಶರಣರ ಮೇಲೆ ಹೊರಿಸಿರುವುದನ್ನು

ಕೇಳಿ ಶರಣರೆಲ್ಲ ವಿಷಣ್ಣ ಮನಸ್ಕರಾದರು. ಈ ಎಲ್ಲದರ ಪರಿಣಾಮದಿಂದಾಗಿ ಶರಣರು ಕೃಷ್ಣೆಯನ್ನು ಆ ರಾತ್ರಿಯೇ ದಾಟಿ ಬೇಗನೆ ಉಳಿವಿಗೆ ಹೋಗಬೇಕೆಂದು ತೀರ್ಮಾನಿಸಿದರು. ಇತ್ತ ಮಾಚಿದೇವರು ಶರಣರ ಕಾವಲು ಪಡೆಯನ್ನೂ ಹೆಚ್ಚಿಸಿದರು.

ಅದೇ ಸಮಯದಲ್ಲಿ ಬಸವೇಶರು ಸಂಗಮದಲ್ಲಿ ಲಿಂಗೈಕ್ಯರಾದ ದುರ್ವಾರ್ತೆ ಶರಣರ ತಂಡಕ್ಕೆ ಬರಸಿಡಿಲೆರಗಿದಂತಾಯಿತು. ಚನ್ನಬಸವಣ್ಣನವರು ಗದ್ಗದಿತ ಕಂಠದಿಂದ ಹೇಳಿಪರು :

ಎನ್ನ ಮನವ ಮಹಾತತ್ತ್ವದಲ್ಲಿ ಲಯವ ಮಾಡಿ
ನಿರ್ವಯಲಾಗಿ, ಹೋದೆಯಲ್ಲಾ ನಿಜಲಿಂಗೈಕ್ಯ ಬಸವಣ್ಣಾ !
ನಿನ್ನ ಒಕ್ಕು ಮಿಕ್ಕ ಶೇಷವನಿಕ್ಕಿ ಆಗುಮಾಡಿ
ನಿನ್ನಂತರಂಗದಲ್ಲಿ ಅನ್ವೆ ನಾಗಾಯಿಯನಿಂಬುಗೊಂಡೊಡೆ,
ಎನ್ನಮನ ನಿಮ್ಮ ಪಾದದಲ್ಲಿ ಕೊರಗಿತ್ತಯ್ಯ
ಸಂಗನ ಬಸವಣ್ಣಾ !

ನಾಗಲಾಂಬೆ ಇಂತೆಂದಳು :

....
ಮರ್ತ್ಯಲೋಕದ ಮಹಾಮನೆ ಶೂನ್ಯವಾಯಿತ್ತು, ಬಸವಣ್ಣಾ !
ಎನ್ನನೊಯ್ಯದೆ ಹೋದೆಯಲ್ಲಾ, ಪಂಚ ಪುರುಷ ಮೂರ್ತಿ
ಬಸವಣ್ಣಾ !
ಬಸವಣ್ಣ ಪ್ರಿಯ ಚೆನ್ನ ಸಂಗಯ್ಯಂಗೆ ಪ್ರಾಣಲಿಂಗವಾಗಿ
ಹೋದೆಯಲ್ಲಾ, ಸಂಗನ ಬಸವಣ್ಣಾ !

ಮಾಚಿದೇವರು ಹೀಗೆಂದರು :

"ಆಕಾರ ನಿರಾಕಾರವಾಯಿತ್ತಲ್ಲಾ, ಬಸವಣ್ಣಾ !
ಪ್ರಾಣ ನಿಃಪ್ರಾಣವಾಯಿತ್ತಲ್ಲಾ, ಬಸವಣ್ಣಾ !
ಲಿಂಗಜಂಗಮದ ಮಾಟಕೂಟ ಸಮಾಪ್ತಿಯಾಯಿ
ತ್ತಲ್ಲಾ, ಬಸವಣ್ಣಾ !
ನಿಃಶಬ್ದ ವೇದ್ಯವಾದೆಯಲ್ಲಾ, ಬಸವಣ್ಣಾ !
ಕಲಿದೇವರ ದೇವನ ಹೃದಯ ಕಮಲವ ಹೊಕ್ಕು
ದೇವರಿಗೆ ದೇವನಾಗಿ ಹೋದೆಯಲ್ಲಾ, ಸಂಗನ ಬಸವಣ್ಣಾ !"

ಬಸವೇಶರು ಲಿಂಗೈಕ್ಯರಾದ ವಾರ್ತೆ ಕೇಳಿದಾಗ ನೀಲಲೋಚನೆ ಶಿವಪೂಜೆಗೆ ಕುಳಿತಿದ್ದಳು. ಪೂಜೆಗೆ ಕುಳಿತ ನೀಲಲೋಚನೆ ಮತ್ತೆ ಮೇಲೇಳಲೇ ಇಲ್ಲ.

ಬಿಜ್ಜಳನ ಮರಣ ವಾರ್ತೆಯನ್ನು ಕೇಳಿದ ಕುಮಾರ ಸೋಮೇಶ್ವರನು ಮಂಗಳವೇಢೆಯಿಂದ ಸೈನ್ಯಸಜ್ಜಿತನಾಗಿ ಬಂದು ಮಾಧವನಾಯಕನನ್ನು ಸೋಲಿಸಿದನು.

ಈ ಎಲ್ಲ ಅನ್ಯಾಯಗಳನ್ನು ಕಣ್ಣಾರೆ ಕಂಡು ದುಃಖದಲ್ಲಿ ಮುಳುಗಿದ್ದ ಕ್ರಮಿತನ ಬಾಯಿಂದ ಮಾಧವನಾಯಕನು ಶರಣರಿಗೆ ಮಾಡಿದ ವಿದ್ರೋಹವನ್ನು ಸಾದ್ಯಂತವಾಗಿ ತಿಳಿದುದಲ್ಲದೆ ತನಗೆ ಸಿಕ್ಕಿದ ಕಾಮೇಶ್ವರಿಯ ದಾಸಿ ಉಷಾವತಿಯ ಕೈಲಿ ಕಳುಹಿಸಿದ್ದ ಸಂದೇಶವನ್ನು ಸೋಮೇಶ್ವರನಿಗೆ ಕ್ರಮಿತನು ನೀಡಿದನು.

ಇತ್ತ ಮಾಧವನಾಯಕನ ಸೈನ್ಯ ಶರಣರನ್ನು ಬೆನ್ನಟ್ಟಿ ಹೋಗಿ ತಂಗಡಿಯಲ್ಲಿ ಅವರ ಮೇಲೆರಗಿತು. ಮಾಚಿದೇವರು ಚನ್ನಬಸವಣ್ಣನವರು ಧೈರ್ಯಸಾಹಸದಿಂದ ಹೋರಾಡಿ ಮಾಧವನಾಯ್ಕನ ಸೇನೆಯನ್ನು ಹಿಮ್ಮೆಟ್ಟಿಸಿದರು. ಅಲ್ಲೆ ಗಾಯಗೊಂಡ ಮಾಧವನಾಯ್ಕ ಕಲ್ಯಾಣಕ್ಕೆ ಹಿಂದಿರುಗಿದಾಗ ಕುಮಾರ ಸೋಮೇಶ್ವರ ಆತನನ್ನು ದಂಡನಾಯಕ ಪದವಿಯಿಂದ ನಿವೃತ್ತಿಗೊಳಿಸಿ ತಾನೇ ಅಧಿಕಾರವನ್ನು ವಹಿಸಿ ಕೊಂಡಿದ್ದನು.

ಯಾವ ಧರ್ಮವನ್ನು ಬಿಜ್ಜಳನು ಹಿಂಸೆ ದಬ್ಬಾಳಿಕೆಯಿಂದ ನಿರ್ಮೂಲನ ಗೊಳಿಸಲು ಪ್ರಯತ್ನಿಸಿದನೋ ಆ ಶರಣ ಧರ್ಮ ಕಾಲಕ್ರಮದಲ್ಲಿ ಚಾಲುಕ್ಯ ಹೊಯ್ಸಳ ರಾಜ್ಯಗಳಲ್ಲಿ ಪ್ರಭಾವ ಶಾಲಿ ಧರ್ಮವಾಗಿ ಬೆಳೆದು, ಶರಣರು ನಾಡು ನುಡಿಗಳಿಗೆ ಅಪಾರವಾದ ಸೇವೆಸಲ್ಲಿಸುವಂತಾಯಿತು. ಬಿಜ್ಜಳನ ಹೆಸರು ಇತಿಹಾಸದಲ್ಲಿ ಇನ್ನೂ ಉಳಿದಿರುವುದು ಆ ಧರ್ಮದ ಪ್ರಭಾವದಿಂದಲೇ ಎಂದು ಹೇಳಬಹುದು.

* * * *

ಬಸವೇಶ್ವರ ಬಿಜ್ಜಳರಾಯರ ಇತಿಹಾಸವನ್ನು ಕುರಿತ ಕಾದಂಬರೀ ಮಾಲಿಕೆಯು ಮೇಲೆ ಕಾಣಿಸಿದ ಆರು ಭಾಗಗಳಲ್ಲಿ ಮೂಡಿಬಂದಿದೆ. ನಡೆದ ಘಟನಾವಳಿಗಳನ್ನು ಇದುವರೆಗೂ ಸ್ಥೂಲವಾಗಿ ಹೇಳಿದ್ದಾಗಿದೆ. ಕಾದಂಬರಿಯ ಓಟ ಓಘಗಳು, ಪಾತ್ರಗಳು ಮೂಡಿ ಬಂದು ಅವು ತಮ್ಮ ವ್ಯಕ್ತಿತ್ವವನ್ನು ಮೆರೆಯುವುದನ್ನು ಕಾದಂಬರಿಕಾರರು ಹೇಗೆ ಸೃಜಿಸಿರುವರೋ ಅದೇ ಮಾರ್ಗದಲ್ಲಿ ಕತೆಯ ಪರಿಚಯವನ್ನು ಮಾಡಿಕೊಡ ಲಾಗಿದೆ. ಮುಖ್ಯವಾಗಿ ಕಾಣಿಸಿಕೊಳ್ಳುವ ಯಾವ ಪಾತ್ರಗಳನ್ನೂ ಬಿಡದೆ ಆ ಪಾತ್ರಗಳ ಸ್ಥೂಲಚಿತ್ರಣ ಕಾದಂಬರಿಯನ್ನು ಓದದೇ ಇದ್ದರೂ ಪರಿಚಯವಾಗು ವಂತೆ ಇಲ್ಲಿ ಕೊಡಲು ಯತ್ನಿಸಲಾಗಿದೆ. ಒಟ್ಟನಲ್ಲಿ ಕಾದಂಬರಿಯ ಆರು ಭಾಗಗಳ ಸಾರಸರ್ವಸ್ವವೆಲ್ಲವನ್ನೂ ಅಡಕಗೊಳಿಸಲಾಗಿದೆ.

ಸಾಮಾನ್ಯವಾಗಿ ಮಹಾತ್ಮರ ಜೀವನ ಚರಿತ್ರೆಗಳನ್ನು ಅವರ ಸಮಕಾಲೀನ ರಾದವರು ಯಾರೂ ಬರೆದಿಡದಿರುವುದರಿಂದ ಚರಿತ್ರೆಯಲ್ಲಿ ವಿವಾದಾಸ್ಪದ ಸಂಗತಿಗಳು ಕಾಲ ಕಾಲಕ್ಕೂ ಕಾಣಬರುತ್ತಿವೆ. ಒಂದು ಕಾಲಕ್ಕೆ ಸತ್ಯಸ್ಯ ಸತ್ಯವಾಗಿ ಕಂಡುದು ಕಾಲ ಕಳೆದಂತೆ, ಸಂಶೋಧನೆಯಲ್ಲಿ ಹೊಸ ಬೆಳಕು ಮೂಡಿದಂತೆ, ಹಳೆಯ ಹೇಳಿಕೆಗಳೆಲ್ಲಾ ಪೊಳ್ಳಾಗುತ್ತಾ ಬರುತ್ತವೆ. ಇದಮಿತ್ಥಂ ಎಂದು ಹೇಳುವುದಾದರೂ ಹೇಗೆ?

ಹನ್ನೆರಡನೆ ಶತಮಾನದಲ್ಲಿ ಕಲ್ಯಾಣಿಯ ಚಾಲುಕ್ಯವಂಶದ ಹನ್ನೊಂದನೆಯ

ಅರಸು ಮುಮ್ಮಡಿ ತೈಲಪನ ಆಲಸ್ಯ ಮತ್ತು ವಿಲಾಸ ಪ್ರವೃತ್ತಿ, ಅದರ ಪರಿಣಾಮವಾಗಿ ಬಿಜ್ಜಳನ ರಾಜ್ಯಾಪಹಾರಕ್ಕೆ ಒದಗಿದ ಪ್ರತ್ಯಕ್ಷ ಪರೋಕ್ಷ ಸಹಾಯಗಳು, ಬಿಜ್ಜಳನ ರಾಜ್ಯಾಧಿಕರಣದಲ್ಲಿ ಕರಣಿಕನಾಗಿ ಜೀವನಾರಂಭ ಮಾಡಿದ ಭಕ್ತಿಭಾಂಡಾರಿ ಬಸವಣ್ಣನವರು ತಮ್ಮ ಕರ್ತವ್ಯ ನಿಷ್ಠೆ ದಕ್ಷತೆಗಳಿಂದ ಅನುಕ್ರಮವಾಗಿ ಮಂತ್ರಿ ಮತ್ತು ದಂಡನಾಯಕನ ಪದವಿಗೇರಿದುದು, ತೈಲಪನ ರಾಜ್ಯತ್ಯಾಗ ಮತ್ತು ಅಂತ್ಯ, ಬಸವಣ್ಣನವರ ಅಧಿಕಾರ ನಿವೃತ್ತಿ, ಅನಂತರ ಕಲ್ಯಾಣದಲ್ಲಿ ನೆಲಸಿ ತನ್ಮೂಲಕ ಅನುಭವ ಮಂಟಪದಲ್ಲಿ ನಡೆಸಿದ ಧರ್ಮ ಕ್ರಾಂತಿ, ಆಮೇಲೆ ನಡೆದ ರಾಜ್ಯ ಕ್ರಾಂತಿ, ಇದರಿಂದಾಗಿ ಶರಣ ಧರ್ಮದ ಮೇಲೆ ಆಘಾತ–ವಿಘಾತಗಳ ಒಂದು ಸಮಗ್ರಚಿತ್ರಣವನ್ನು ಸಾಕಷ್ಟು ಆಧಾರಗಳಿಲ್ಲದೆ ಅಂದು ನಡೆದಂತೆ ಇಂದು ಚಿತ್ರಿಸುವುದು ಕಷ್ಟದ ಕೆಲಸವೇ ಸರಿ. ಬಸವೇಶ್ವರರು ಸಾಮಾನ್ಯರಲ್ಲ. ವೀರಶೈವ ಧರ್ಮವನ್ನು ಪುನರುಜ್ಜೀವನಗೊಳಿಸಿ, ಸಮತೆ, ಸೋದರತ್ವ, ಸ್ವಾತಂತ್ರ್ಯ, ಸತ್ಯ, ಅಹಿಂಸೆ, ಕಾಯಕ ವೃತ್ತಿ ಮುಂತಾದ ಉದಾತ್ತ ಹಾಗೂ ಪ್ರಗತಿಪರತತ್ತ್ವಗಳ ಮೇಲೆ ಒಂದು ನವಸಮಾಜವನ್ನೇ ನಿರ್ಮಿಸಿದ ಕಾರಣ ಪುರುಷ. ಅಂತಹ ವ್ಯಕ್ತಿಯೊಬ್ಬನ ಚರಿತ್ರೆಯ ಮೇಲೆ ಕಾಣಬರುವಷ್ಟು ವಾದಗ್ರಸ್ತ ಅಂಶಗಳು ಮತ್ತಾರ ಚರಿತ್ರೆಯ ಮೇಲೂ ಇರಲಾರದು. ಅವುಗಳಲ್ಲಿ ಕೆಲವನ್ನು ಉಲ್ಲೇಖಿಸುವುದಾದರೆ :

ಬಸವೇಶ್ವರರ ಜನ್ಮಕಾಲ–ಜನ್ಮಸ್ಥಳ–ತಂದೆ ತಾಯಿಗಳು-ಕಲ್ಯಾಣದಲ್ಲಿ ಅವರು ನಡೆಸಿದ ಧಾರ್ಮಿಕ ಮತ್ತು ಸಾಮಾಜಿಕ ಹೋರಾಟದ ನಿಜಸ್ವರೂಪ. ಕಸಪಯ್ಯ–ಬಸವೇಶರು ಒಬ್ಬರೆಯೋ ? ಅಥವಾ ಭಿನ್ನರೋ ? ಬಿಜ್ಜಳನ ಸೇನಾಪತಿ-ಪ್ರಧಾನ ಮಂತ್ರಿಯಾಗಿದ್ದರೆ ? ಬಿಜ್ಜಳನ ಕೊಲೆಯಾಯಿತೆ ? ಕೊಲೆಯಾಗಿದ್ದರೆ ಕೊಲೆ ಮಾಡಿದವರಾರು ? ಕಾರಣವೇನು ? ಬಸವೇಶ್ವರರ ಲಿಂಗೈಕ್ಯದ ಕಾಲನಿರ್ಣಯ........ ಇತ್ಯಾದಿ, ಇತ್ಯಾದಿ.

ಈ ವಾದಗಳ ಸತ್ಯಾಸತ್ಯತೆಯನ್ನು ತಿಳಿಯಲು ಹೊರಟರೆ ಬಸವೇಶ್ವರರ ಸಮಕಾಲೀನ ಶಿವಶರಣರ ವಚನಗಳನ್ನು ತಿಳಿಯ ಬೇಕಾಗುತ್ತದೆ; ಇಲ್ಲವೆ ಶಾಸನಗಳನ್ನು ನೋಡಬೇಕಾಗುತ್ತದೆ. ಆದರೆ ಅವುಗಳಲ್ಲಿ ಕಾಣುವ ಚಾರಿತ್ರಿಕ ಅಂಶಗಳಿಗಿಂತಲೂ ತಮ್ಮ ಗೌರವಕ್ಕೆ ಪಾತ್ರರಾದ ವ್ಯಕ್ತಿಯ ಹೊಗಳಿಕೆಯೇ ಹೆಚ್ಚಾಗಿರುತ್ತದೆ. ಅಂದಿನಿಂದ ಇಂದಿನವರೆಗೂ ವಾಸ್ತವಾಂಶಕ್ಕಿಂತ ಕಲ್ಪನಾಂಶವೇ ಹೆಚ್ಚಾಗಿ ಕೆಲಸ ಮಾಡಿದೆ. ಅದೇ ಮಾರ್ಗದಲ್ಲಿ ಶ್ರೀ ಪುಟ್ಟಸ್ವಾಮಯ್ಯನವರು ಹೋಗಿ ತಮ್ಮ ಸಮೃದ್ಧವಾದ ಕಲ್ಪನೆಯಿಂದ ಆ ಕಾಲದ ಒಂದು ಚಿತ್ರಣವನ್ನು ಇತಿಹಾಸಕ್ಕೆ ಲೋಪಬಾರದಂತೆ ಕೊಡಲು ಯತ್ನಿಸಿ ಬಹುಮಟ್ಟಿಗೆ ಯಶಸ್ವಿಯಾಗಿದ್ದಾರೆ ಎನ್ನಲೇಬೇಕು. ಒಂದು ಗುಂಪಿಗೆ ಪೂಜ್ಯವೆನಿಸಿದ ವ್ಯಕ್ತಿಯೊಬ್ಬನ ಚಿತ್ರಣ ನೀಡುವುದು ಸಾಮಾನ್ಯವಲ್ಲ. ಹೇಗೆ ಬರೆದರೂ ತಪ್ಪೆ, ಸೂಜಿಯ ಮೇಲೆ ನಡೆದಂತೆ. ಆದ್ದರಿಂದ ವಾದಗ್ರಸ್ತ ಅಂಶಗಳು ಏನೇ ಇರಲಿ, ಅವುಗಳನ್ನು ಗೌಣವಾಗಿ ಇಲ್ಲಿ ಕಾಣಬಹುದು.

ಬಿಜ್ಜಳ, ಕಾಮೇಶ್ವರಿ, ಬಸವೇಶ, ಅಲ್ಲಮಪ್ರಭು, ನಾಗಲಾಂಬೆ, ಪ್ರೇಮಾವತಿ ಕುಸುಮಾವಳಿ, ಶೀಲವಂತ, ಲಾವಣ್ಯವತಿ ಮೊದಲಾದವರ ಪಾತ್ರಗಳಂತೂ ಕಣ್ಣಿಗೆ ಕಟ್ಟಿದಂತೆ ಮೂಡಿ ಬಂದಿವೆ. ಬಿಜ್ಜಳ ಒಳ್ಳೆಯ ಆಡಳಿತಾಧಿಕಾರಿ. ಪ್ರಜಾಪ್ರಭುತ್ವಕ್ಕೆ ಅನುಗುಣವಾದ ಯೋಚನೆ ಯೋಜನೆಗಳು; ಆ ಪ್ರಗತಿ ಪರ ಆಲೋಚನೆಗಳಿಂದಾಗಿಯೇ ಉಗ್ರಜನರ ವಿಶ್ವಾಸಗಳಿಸಿ ಮಂಡಲೇಶ್ವರನಿಂದ ಮಹಾಮಂಡಲೇಶ್ವರನಾಗಿ ಚಾಲುಕ್ಯ ರಾಜ್ಯದ ಸರ್ವಾಧಿಕಾರಿಯೂ ಆದುದು. ಆದರೆ ಕಾಲಕ್ರಮೇಣ ಅವನಲ್ಲಿ ಮೂಡಿದ ರಾಜ್ಯಾಪಹರಣ ದಾಹ ಇಡೀ ಒಂದು ಆಳ್ವಿಕೆಯನ್ನೇ ಕೊನೆಗೊಳಿಸಿ ರಾಜ್ಯದ ಕ್ರಾಂತಿಗೆ ಹೇಗೆ ಕಾರಣನಾದನೆಂಬುದನ್ನು ಬಹು ಸುಂದರವಾಗಿ ಚಿತ್ರಿಸಲಾಗಿದೆ. ಬಿಜ್ಜಳನ ಪಾತ್ರ ಕಣ್ಣಿಗೆ ಕಟ್ಟಿದಂತೆ ನಿಂತಿದೆ. ಕಾದಂಬರಿಯ ಭಾಗಗಳಿಂದ ಭಾಗಗಳಿಗೆ ಹೋಗುವಾಗ ಬಿಜ್ಜಳನ ನಾನಾ ಮುಖಗಳ ಪರಿಚಯವಾದಾಗ ಅವನ ಬಗ್ಗೆ ಮೊದಮೊದಲು ಮೂಡಿದ ಸದ್ಭಾವನೆ ಮರೆಯಾಗಿ ಅವನು ನಡೆಸುವ ಆಸುರೀ ಕೃತ್ಯಗಳಿಗಾಗಿ ಓದುಗ ಉರಿದೇಳುವುದರಲ್ಲಿ ಸಂಶಯವಿಲ್ಲ. ಕಾಮೇಶ್ವರಿಯನ್ನು ವಂಚಿಸಿ ಮಾನಭಂಗಮಾಡಿದುದು, ಲಾವಣ್ಯವತಿಯನ್ನು ಬಯಸಿದ್ದು, ನೀಲಾಂಜನೆಯನ್ನು ಹಿಡಿದುದು—ಈ ಪ್ರಕರಣಗಳಿಂದಾಗಿ ಓದುಗನ ಸಹಾನುಭೂತಿಯಿಂದ ವಂಚಿತವಾಗುತ್ತಾನೆ. ಬಸವೇಶರ ಉತ್ಕರ್ಷ–ಅಪಕರ್ಷಗಳಿಗೆ ಕಾರಣನಾದ ಬಿಜ್ಜಳನ ಉಗ್ರಮುಖವನ್ನು ಕಾದಂಬರಿಯಲ್ಲಿ ಸ್ಪಷ್ಟಪಡಿಸಲಾಗಿದೆ.

ಈ ಕಾದಂಬರಿಯ ಕೇಂದ್ರ ವ್ಯಕ್ತಿ ಬಸವೇಶ್ವರರ ಪಾತ್ರವೂ ಅಷ್ಟೆ; ಬಹು ಸುಂದರವಾಗಿ ನೈಜವಾಗಿ ಒಡಮೂಡಿದೆ. ಬಸವೇಶ್ವರರನ್ನು ಮೊದಲು ಸಂಗಮನಾಥನ ಸನ್ನಿಧಿಯಲ್ಲಿ ವಿದ್ಯಾರ್ಥಿಯಾಗಿ ನೋಡುತ್ತೇವೆ. ಅಲ್ಲಿಂದ ಕ್ರಮೇಣ ಅವನ ಜೀವನದ ಉತ್ಕರ್ಷವನ್ನು ಕಾಣುತ್ತಾ ಹೋಗುತ್ತೇವೆ. ನಿಧಿಯನ್ನು ಪತ್ತೆಹಚ್ಚಿಕೊಡುವುದು, ಬನವಾಸಿಯ ರಾಜದೂತ ಕಾರ್ಯ, ಅನಂತರ ರಾಜ್ಯಪಾಲರಾಗುವುದು, ಏತನ್ಮಧ್ಯೆ ವೀರಶೈವಧರ್ಮದ ಪುನರುಜ್ಜೀವನಕ್ಕೆ ಒಂದೊಂದೇ ಹಂತವಾಗಿ ಹತ್ತಿ ಸಮಸ್ತ ಶರಣರ ಹೃದಯದಲ್ಲಿ ನೆಲಸುವುದು ಮನೋಜ್ಞವಾಗಿ ಬಂದಿದೆ. ಅನುಭವಮಂಟಪದ ಕಾರ್ಯ ಕಲಾಪಗಳು, ಮಹಮನೆಯ ಪ್ರವಚನಗಳು, ಅಲ್ಲಿ ನಡೆಯುವ ಧರ್ಮ ಜಿಜ್ಞಾಸೆ ಕಣ್ಣಿಗೆ ಕಟ್ಟಿದಂತೆ ಚಿತ್ರಿಸಲಾಗಿದೆ. ಬಿಜ್ಜಳನ ಸರ್ವಾಧಿಕಾರವನ್ನು ಎದುರಿಸಿ ರಾಜ್ಯಪಾಲ ವೃತ್ತಿಯಿಂದ ನಿವೃತ್ತಿಯಾಗುವ ಬಸವೇಶ್ವರರ ಆ ಒಂದು ಚಿತ್ರಣ ಓದುಗನ ಹೃದಯವನ್ನು ಸೂರೆಗೊಳ್ಳುವುದರಲ್ಲಿ ಸಂಶಯವಿಲ್ಲ. ಹೀಗೆ ಬಸವೇಶ್ವರರ ಪಾತ್ರ ಅತ್ಯುತ್ತಮವಾಗಿ ಚಿತ್ರಿತವಾಗಿದೆ.

ಕಾದಂಬರಿಯ ಇನ್ನೊಂದು ಪ್ರಭಾವಶಾಲಿ ಪಾತ್ರವೆಂದರೆ ಅಲ್ಲಮಪ್ರಭುವಿನದು. ಕಾದಂಬರಿಯ ಉದ್ದಕ್ಕೂ ಪ್ರಭು ಮಿಂಚಿನಂತೆ ಮಿಂಚಿ ಮಾಯವಾಗುತ್ತಾರೆ. ಗೋಕರ್ಣ ತೀರದಲ್ಲಿ ಮುಳುಗುತ್ತಿದ್ದ ತೈಲಪನ ಕ್ರೈಸ್ತದಾಸಿ ಅಫ್ರೊಡೈಟಳನ್ನು ಎತ್ತಿ ದಡದ ಮೇಲಿಟ್ಟು ಮರೆಯಾಗುವ ಪ್ರಭು ಕಾದಂಬರಿಯ

ಉದ್ದಕ್ಕೂ ಅಲ್ಲಲ್ಲಿ ಕಾಣಿಸಿಕೊಂಡು ಅನುಭವಮಂಟಪದ ಅಧ್ಯಕ್ಷ ಪದವಿ ವಹಿಸಿ ಕಲ್ಯಾಣ ಶರಣರೆಲ್ಲರನ್ನು ಸೂಕ್ತ ರೂಪದಲ್ಲಿ ಸೆರೆಹಿಡಿದು ಜ್ಞಾನ ಸೇಚನೆ ಮಾಡಿದ ಅವರ ಪಾತ್ರ ಮನೋಜ್ಞವಾದುದು. ಬಳ್ಳಿಗಾವೆಯ ಅಲ್ಲಮನ ಪೂರ್ವೇತಿಹಾಸ, ಬನವಾಸಿಯ ಮಾಯೆಯ ಎದುರಿನ ಮದ್ದಲಿಗ (ವಾಮಶಕ್ತಿ), ಕಲ್ಯಾಣದ ಪ್ರಭು ದೇವರು, ಎಷ್ಟೊಂದು ಪಾತ್ರವನ್ನು ವಹಿಸಿದ ಅಲ್ಲಮನ ಕಲ್ಪನೆ ಕಾದಂಬರಿಕಾರರ ಶ್ರೀಮಂತ ಕಲ್ಪನಾಶಕ್ತಿಗೆ ಸಾಕ್ಷಿಯಾಗಿದೆಯೆನ್ನಬೇಕು.

ಇನ್ನು ಕಾದಂಬರಿಯ ಉದ್ದಕ್ಕೂ ಎಲ್ಲರ ಗಮನವನ್ನು ಸೆಳೆದು ಚಾಳುಕ್ಯ ರಾಜ್ಯದ ಪುನರ್ ಪ್ರತಿಸ್ಥಾಪನೆಗೆ ಅವಿಶ್ರಾಂತವಾಗಿ ಹೆಣಗಿ ಅಸುನೀಗಿದ ಕಾಮೇಶ್ವರಿಯ ಪಾತ್ರವೂ ಅಷ್ಟೇ. ಮೊದಮೊದಲು ವಿಲಾಸಪ್ರಿಯೆಯಾಗಿ ಕಾಣಿಸಿಕೊಂಡ ಕಾಮೇಶ್ವರಿ ಕೊನೆ ಕೊನೆಯಲ್ಲಿ ಓದುಗರ ಸಮಸ್ತ ಸಹಾನುಭೂತಿಯನ್ನು ಪಡೆಯುತ್ತಾಳೆ. ಅವಳು ನಿಜವಾಗಿಯೂ ರಾಜಕನ್ಯೆ. ರಾಜಪುತ್ರಿಗೆ ಇರಬೇಕಾದ ರೂಪುಲಾವಣ್ಯ ಗುಣಾತಿಶಯಗಳೆಲ್ಲ ಅವಳಲ್ಲಿವೆ. ಕಾದಂಬರಿಯಲ್ಲಿ ಮೊದಲು ಕಾಣಿಸಿಕೊಳ್ಳುವುದು ತೈಲಪನ ಕೈಸ್ತ್ರದಾಸಿಯಿಂದ ತನ್ನ ಚಲ್ಲಣಗಳನ್ನು ಬಿಚ್ಚಿಸಿಕೊಂಡು ಅವಳ ಎದಿರಿನಲ್ಲಿಯೇ ತೈಲಪನನ್ನು ಚುಂಬಿಸುವ ಧೂರ್ತ ವಿಲಾಸಪ್ರಿಯ ಹೆಂಗಸಾಗಿ. ಕ್ರಮೇಣ ಅವಳ ನಿಜಸ್ವರೂಪ ತಿಳಿದಾಗ, ಒಂದು ಹೆಣ್ಣು ಬಯಸುವ ಅಭೀಷ್ಟವೇನು ಎಂದು ತಿಳಿದಾಗ, ಅವಳ ಅಸಹಾಯಕತೆಗಾಗಿ ಮರುಗಬೇಕಾಗುತ್ತದೆ. ಇಷ್ಟಾಗಿಯೂ ಚಾಲುಕ್ಯ ಸಿಂಹಾಸನದ ಬಗ್ಗೆ ಅವಳಿಗಿದ್ದ ಮಮತೆ, ಅದರ ರಕ್ಷಣೆಗಾಗಿ ಬಿಜ್ಜಳನ ವಿರುದ್ಧ ಹೂಡುವ ಸಂಚು, ರಾಜ್ಯದ ಉತ್ತರಾಧಿಕಾರಿ ತೈಲಪನ ಪುತ್ರ ಮಡಿದಾಗ, ಧರ್ಮ ಸೂಕ್ಷ್ಮವನ್ನು ತಿಳಿದು ತೈಲಪನ ತಮ್ಮ ಜಗದೇಕಮಲ್ಲನನ್ನು ಕೂಡಿ ಕ್ಷೇತ್ರಜಪುತ್ರನನ್ನು ಪಡೆಯುವ ಸಾಹಸ ನಿಜಕ್ಕೂ ಅವಳನ್ನು ವೀರರಮಣಿಯನ್ನಾಗಿ ಮಾಡಿದೆ.

ಕಾಮಾಂಧ ಬಿಜ್ಜಳನ ತಮ್ಮ ಉಪಾಯದಲ್ಲಿ ರಾಣಿಯನ್ನು ಸೆರೆಹಿಡಿದಾಗ ಅಲ್ಲಿಂದ ಪಾರಾಗುವುದು, ಕೊನೆಯಲ್ಲಿ ಬಿಜ್ಜಳನ ಕೈಲಿ ಸಿಕ್ಕ ಮಾನಭಂಗಿತಳಾದ ಹೆಣ್ಣು ತನ್ನನ್ನೇ ಅಗ್ನಿಸ್ಪರ್ಶ ಮಾಡಿಕೊಂಡು ತನ್ನ ದಾಸಿಯ ಕೈಲಿ ಕಳುಹಿಸುವ ಅವಳ ಕೊನೆಯ ಸಂದೇಶ ಮೈನವಿರೇರಿಸುತ್ತದೆ. ಬಿಜ್ಜಳನ ಕೈಲಿ ಸಿಕ್ಕಿ ಅದುವರೆಗೂ ತಾನು ಕಾಪಾಡಿಕೊಂಡುಬಂದ ತನ್ನ ಶೀಲದ ಬಗ್ಗೆ ವಾಸ್ತವಸ್ಥಿತಿ ಹೇಳಿದಾಗ ಓದುಗನಿಗಿದ್ದ ಅವಳ ಮೇಲಿನ ತಪ್ಪು ಕಲ್ಪನೆಯೆಲ್ಲ ಮಾಯವಾಗಿ ಎಲ್ಲರ ಅನುಕಂಪೆ, ಸಹಾನುಭೂತಿಗೆ ಪಾತ್ರಳಾಗುತ್ತಾಳೆ. ಉತ್ತಮ ಕಲ್ಪನೆಗೆ ಕಾಮೇಶ್ವರಿಯ ಪಾತ್ರವೂ ಸಾಕ್ಷಿಯಾಗಿದೆ. ಒಂದುವೇಳೆ ಕಾಮೇಶ್ವರಿ ನಿಜವಾಗಿ ಪ್ರೇಮಿಸಿ ಬಯಸಿದಳು ಸುಂದರ ತರುಣ ಶೀಲವಂತನನ್ನು ಎಂದರೂ, ತನ್ನ ಘನತೆ ಗೌರವಗಳ ಎಲ್ಲೆ ಕಟ್ಟನ್ನು ಮೀರದೆ ಅವನಿಂದ ದೂರವಾಗಿ ನಿಂತು ಅವನ ಏಳಿಗೆಯನ್ನು ಬಯಸುತ್ತಾಳೆ. ಶೀಲವಂತನಲ್ಲಿ ನಿಜವಾಗಿ ರಾಣಿಯ ಬಗ್ಗೆ ಪ್ರೇಮ ಮೂಡಿದಾಗಇಬ್ಬರಲ್ಲಿಯೂ ವಿವೇಕ ಎಚ್ಚರಿಸಿ ಕೇವಲ ಪರಸ್ಪರ ಚುಂಬನಗಳಿಂದ ತಮ್ಮ ಪ್ರೇಮವನ್ನು

ತೋಡಿಕೊಂಡು ದೂರಾಗುತ್ತಾರೆ. ಕಾಮೇಶ್ವರಿಯ ನಿಲುವು ಚೆಲುವುಗಳು ನಿಜವಾಗಿಯೂ ಅವಳು ವಿದ್ಯಾಧರ ವಂಶದ ವಿದ್ಯಾಧರ ಕನ್ಯೆಯಾಗಿಯೇ ಉದ್ದಕ್ಕೂ ಕಂಡು ಮರೆಯಾಗುತ್ತಾಳೆ.

ಇನ್ನೊಂದು ಪಾತ್ರವನ್ನು ನಾವು ಮರೆಯುವಂತೆಯೇ ಇಲ್ಲ. ಅದೇ ಶೀಲವಂತನ ಪಾತ್ರ. ಕಲ್ಯಾಣದಲ್ಲಿ ಬಸವೇಶ್ವರರ ಪಾತ್ರ ಎಷ್ಟು ಮುಖ್ಯವಾಯಿತೋ ಮತ್ತೊಂದು ದೃಷ್ಟಿಯಿಂದ ಶೀಲವಂತನ ಪಾತ್ರವೂ ಅಷ್ಟೇ ಆಗಿದೆ. ಕಲ್ಯಾಣದ ಕ್ರಾಂತಿಗೆ ಶೀಲವಂತನೇ ಹೇತು. ಸುಂದರ–ಬುದ್ಧಿವಂತನಾದ ತರುಣನವ. ಆದರೆ ಜಾತಿಯಲ್ಲಿ ಮುಚ್ಚಿಗ. ಅವನನ್ನು ನೋಡಿದ ರಾಜಕನ್ಯೆಯರೆಲ್ಲ ಬಯಸಿ ಮುಗಿಬೀಳುತ್ತಾರೆ. ಮೊದಲು ಕಾಮೇಶ್ವರಿ ಅನಂತರ ಕುಸುಮಾವಳಿ ಕೊನೆಯಲ್ಲಿ ಲಾವಣ್ಯ. ವರ್ಣಸಂಕರವೊಂದು ತಲೆಹಾಕಿ ಇಡೀ ಕಲ್ಯಾಣವೇ ತಲೆ ಕೆಳಕಾಗಿ ಬಿಜ್ಜಳನ ಸರ್ವಾಧಿಕಾರತನವೇ ಉರುಳುತ್ತದೆ. ಅಂತಹ ಒಂದು ವ್ಯಕ್ತಿಯ ಪಾತ್ರವನ್ನು ಕಾದಂಬರಿಕಾರರು ತುಂಬ ಎಚ್ಚರಿಕೆಯಿಂದ ತಂದಿದ್ದಾರೆ ; ತುಂಬ ಮನೋಜ್ಞವಾದ ಪಾತ್ರವದು.

ಇನ್ನು ಉಳಿದ ಪಾತ್ರಗಳೆಲ್ಲ ಚೆನ್ನಾಗಿಯೇ ಬಂದಿವೆಯೆನ್ನಬೇಕು. ಅಕ್ಕ ನಾಗಲಾಂಬೆಯ ಪಾತ್ರವಂತೂ ಮರೆಯಲಾಗದ ಪಾತ್ರ. ಉತ್ತಮ ಮಾರ್ಗದಲ್ಲಿ ನಡೆದ ಒಂದು ಹೆಣ್ಣು ಲೋಕವನ್ನು ಹೇಗೆ ತಿದ್ದಬಲ್ಲಳು ಎನ್ನುವುದಕ್ಕೆ ಸಾಕ್ಷಿಯಾಗಿದೆ. ಬಸವೇಶ್ವರರ ಅನಾಥತನವನ್ನು ಕಂಡ ನಾಗಲಾಂಬೆ ತಾನು ಸಂಸಾರಿಯಾಗಬೇಕೆಂಬ ಆಸೆಯನ್ನು ತೊರೆದು ಅವನನ್ನೇ ಮಗನೆಂದು ಗಣಿಸಿ ಬೆಳಸಿ ಮಾರ್ಗದರ್ಶನ ಮಾಡಿ ಅವನ ಜೊತೆಯಲ್ಲಿಯೇ ಅವನ ಅಭಿವೃದ್ಧಿ ಬಯಸಿ ನಿಲ್ಲುವ ಆ ಹೆಣ್ಣು ಕಾರಣ ಕನ್ನಿಕೆಯಾಗಿ ಕಾದಂಬರಿಯಲ್ಲಿ ಕಾಣಿಸಿಕೊಂಡಿದ್ದಾಳೆ. ಬಸವೇಶ್ವರರಿಗೆ ಅಕ್ಕ, ತಾಯಿ ಎಲ್ಲವೂ ಆಗಿ ಅವರ ಬಾಳಿನುದ್ದಕ್ಕೂ ಅಮೃತಸೇಚನ ಮಾಡಿದ ಹೆಣ್ಣು ನಾಗಲಾಂಬೆ ಮುಂದೆ ತಾನು ಮದುವೆಯಾಗಿ ಜ್ಞಾನಮೂರ್ತಿ ಚೆನ್ನಬಸವಣ್ಣನವರನ್ನು ಪಡೆದರೂ ಅವರ ಅಭಿಮಾನವೆಲ್ಲ ಬಸವೇಶ್ವರಮೇಲೆ. ಬಸವೇಶ್ವರರಿಗೂ ಅಷ್ಟೇ, ಅಕ್ಕನಾಗಲಾಂಬೆ ಸಾಕ್ಷಾತ್ ಮಾತೃ ಸ್ವರೂಪಳು.

ಕುಸುಮಾವಳಿ, ನಾಗಲಾಂಬೆ, ಗಂಗಾಂಬಿಕೆ, ನೀಲಲೋಚನೆ, ಲಾವಣ್ಯವತಿ, ಪ್ರೇಮಾವತಿ, ಪಾಟಲಿಕೆ, ಇವರೆಲ್ಲರ ಪಾತ್ರವೂ ಹಿತಮಿತವಾಗಿ ಕಾದಂಬರಿಯ ಪೋಷಣೆಗೆ ಅನುಕೂಲವಾಗುವಂತೆ ಬಂದಿವೆ.

ಮಹಾಶರಣರಾದ ಮಧುವರಸ, ಮೋಳಿಗೆ ಮಾರಯ್ಯ, ಮಾಚಿದೇವರು ಮೊದಲಾದವರ ಪಾತ್ರಗಳೆಲ್ಲ ಕಲ್ಯಾಣದಲ್ಲಿ ಶರಣಧರ್ಮದ ಉತ್ಕರ್ಷಕ್ಕೆ ಪೋಷಕವಾಗಿ ಬಂದಿವೆ. ಅಂತೂ ಕಾದಂಬರಿಕಾರರ ಅನುಪಮ ಕಲ್ಪನೆಗೆ ಮೆಚ್ಚಬೇಕಾಗಿದೆ. ಇಷ್ಟೊಂದು ಪಾತ್ರಗಳನ್ನು ಕಾದಂಬರಿಯ ಉದ್ದಕ್ಕೂ ನಡೆಸಿಕೊಂಡು ಬಂದು, ಅವುಗಳೆಲ್ಲ ಒಂದು ಘಟ್ಟವನ್ನು ತಲುಪುವಂತೆ ಮಾಡುವುದು ತುಂಬ ದುಸ್ಸಾಧ್ಯವಾದ ಕೆಲಸ. ಆ ಕೆಲಸವನ್ನು ಶ್ರೀಪುಟ್ಟಸ್ವಾಮಯ್ಯನವರು ಯಶಸ್ವಿಯಾಗಿ ನಿರ್ವಹಿಸಿದ್ದಾರೆ.

ಇಲ್ಲಿ ಬರುವ ಸಮಸ್ತಪಾತ್ರಗಳು ಶರಣ ಧರ್ಮಕ್ಕೆ ವಿನಾಸಲಾಗಿರುವುದನ್ನು ನಾವು ಕಾಣಬಹುದು.

ಕಾದಂಬರಿಯ ಗಾತ್ರವನ್ನು ಇನ್ನೂ ಕಡಿಮೆಮಾಡಬಹುದಿತ್ತು ಅಂತೂ ಎಲ್ಲರೂ ಓದಿ ಮನಗಾಣುವ ಉತ್ತಮ ಕಲ್ಪನಾಚಿತ್ರವುಳ್ಳ, ಕಾದಂಬರಿ ಮಾಲಿಕೆ ಇದು ಎಂದು ಧಾರಾಳವಾಗಿ ಹೇಳಬಹುದು.

ಬಿ. ಎಚ್. ಶ್ರೀಧರ

ರಂಗ ಬಿನ್ನಪ

ರಂಗ ಬಿನ್ನಪವು ೫೮೨ ಪುಟಗಳಷ್ಟಿರುವ ಒಂದು ಸಾಹಿತ್ಯ ಗ್ರಂಥ. ಮೈಸೂರಿನ ಕಾವ್ಯಾಲಯವು ಇದನ್ನು ಪ್ರಕಾಶಿಸಿದೆ. ಇದರ ಪ್ರಥಮ ಮುದ್ರಣದ ಇಸವಿ ೧೯೬೩; ಇದರ ಕಾಗದದ ಮುಚ್ಚೋಲೆಯ ಪ್ರತಿಯ ಬೆಲೆ ೧೫ ರೂಪಾಯಿಗಳು ಮತ್ತು ಬಟ್ಟೆಯ ಮುಚ್ಚೋಲೆಯ ಪ್ರತಿಯ ಬೆಲೆ ೨೦ ರೂಪಾಯಿಗಳು.

'ರಂಗ ಬಿನ್ನಪ'ವು ಗ್ರಂಥಕರ್ತರ ಪ್ರಕಾರ ಅವರ "ಕನ್ನಡ ವಾಂಛಲ್ಯದ ಫಲ," 'ವಚನ' ದಾಸ್ಯದ ಪರಿಣಾಮ, ಚೆನ್ನಪಟ್ಟಣದ ಪರಿಸರದ ನಿಸರ್ಗ ಕೊಟ್ಟ ಪ್ರೇರಣೆಯ ಅನುಕ್ರಿಯೆ. 'ಮಚ್ಚರಿಲ್ಲದ ಮಾಂದ್ಯವಿಲ್ಲದ ಶುದ್ಧ ಸಂತೋಷವೇ ಸ್ವರ್ಗ, ಆ ಸಂತೋಷದೊಳು ನೀನಿಹೆಯಯ್ಯ, ಮಾವಿನಕೆರೆಯ ರಂಗಯ್ಯ' ಎಂಬುದು ಗ್ರಂಥ ಕರ್ತರ ದರ್ಶನ, ಮೂಲತತ್ವ ಅಥವಾ ಮಹಾವಿಚಾರ.

ಈ ಗ್ರಂಥ ೧೨೧೨ 'ವಚನ', 'ಗದ್ಯಗೀತೆ', ಅಥವಾ ಪದ್ಯಗಂಧಿ ಗದ್ಯಗಳಿಂದ ಕೂಡಿದೆ. ಇದು ಗ್ರಂಥ ಕರ್ತರ 'ಮೇದಸ್ಸಿನ' ಮಗು. ಏಕೆಂದರೆ ಅವರ ಹೇಳಿಕೆಯಂತೆ ಇದು ಮೂರು ನಾಲ್ಕು ಆವರ್ತಿ 'ರೂಪ ಪಲ್ಲಟ'ವನ್ನು ಹೊಂದಿದೆ. ಇದರಲ್ಲಿ 'ಭಾವ–ಭಾವನೆಯ ಅನುಭವ' ತುಂಬಿದೆ ಎಂದಿದ್ದಾರೆ ಅವರು. ನುಡಿದ ಒಂದೊಂದು ನುಡಿಯೂ 'ಇಷ್ಟ ದೈವದ ಸ್ವೀಕಾರ ತಿರಸ್ಕಾರಕ್ಕೆ ಅಧೀನವಾದದ್ದು' ಎಂಬುದು ಅವರ ದೃಢನಿಶ್ಚಯ. 'ಸಂಶಯಾತ್ಮಾ ವಿಶಿಷ್ಯತಿ' ಎಂಬ ರಸೆಲ್ಲೀನ ಉದ್ಗಾರವೂ ಅವರದೇ.

ಗ್ರಂಥ ಕರ್ತರ ಪ್ರಕಾರ ಈ ಬಿನ್ನಪವು ಗೀತೆ, ಕಥನ, ವರ್ಣನೆ, ಹೇಳಿಕೆ, ಚಾಟೂಕ್ತಿ, ನಾಟುನುಡಿ, ಸಂಭಾಷಣೆ, ಶಬ್ದ ಚಮತ್ಕಾರ, ವಿಡಂಬನೆ ಪರಿಹಾಸ ಮುಂತಾದವುಗಳಿಂದ ಕೂಡಿದ 'ಉಪದೇಶ'. ಈ ಉಪದೇಶವನ್ನು ಭಗವಂತನಿಗೆ ವಿಜ್ಞಾಪಿಸಿದ್ದೇನೆಂದು ಅವರ ಹೇಳಿಕೆ. ಒಮ್ಮೊಮ್ಮೆ ವ್ಯಕ್ತಿ ಅಥವಾ ಘಟನೆಯು ಗಾಢಸತ್ವದ ಉಜ್ವಲ ಕಾಂತಿಯಿಂದ ಹೊಳೆ ಹೊಳೆದು ನಮ್ಮ ಕಣ್ಣನ್ನು ಕೋರೈಸಿ, ಹೃದಯವನ್ನು ಕಲಕಿ, ತೀವ್ರ ರಾಗವನ್ನು ಪ್ರಚೋದಿಸಿ, ಮನಸ್ಸನ್ನು ಹೊಕ್ಕು ಭಾವನಾತರಂಗ ಎಬ್ಬಿಸಿ, ಆತ್ಮದೊಳಕ್ಕೆ ಪ್ರವೇಶಿಸಿ ಆವುದೊ ಅಧಿಷ್ಠಾನ ಸತ್ಯದ

ಮೇಲೆ ಹಲಕೆಲವು ಕಿರಿಣಗಳ ಬೆಳಕನ್ನು ಚೆಲ್ಲುತ್ತದೆ–ಎಂಬುದು ಅವರ ಅಭಿಪ್ರಾಯ. ಹಾಗೇ 'ಸತ್ಯಂ ಜ್ಞಾನಮನಂತಂ ಬ್ರಹ್ಮಮಾನಂದರೂಪಮಮೃತಂ ಯದ್ವಿಭಾತಿ' ಎಂಬುದೊಂದು 'ಸೃಷ್ಟಿಕಾರಕ ಅನುಭವ ವಿಶೇಷ'; ಅದಕ್ಕೆ ಕಾವ್ಯವಸ್ತು ವಾಗುವ ಅರ್ಹತೆಯುಂಟು—ಎಂದಿದ್ದಾರೆ ಅವರು. ಆದರೆ ಭಾವಗೀತೆ ಪ್ರಬಂಧ, ಮುಕ್ತಕ, ನಾಟುನುಡಿ, ಪ್ರಗಾಥ, ಹಳ್ಳಿಯ ಹಾಡು, ವಚನ ಮೊದಲಾದುವೆಲ್ಲ 'ಸ್ವವಿಷಯಿಕ ಸಾಹಿತ್ಯ[1]' (Subjective Literature) ಎಂದಿರುವುದು ರಸಿಕರ ಅನುಭವ ಒಪ್ಪಲಾರದ ಮತ್ತು ಸೌಂದರ್ಯ ಶಾಸ್ತ್ರದ ತರ್ಕದ ಒರೆಗಲ್ಲಿಗೆ ಹತ್ತಲಾರದ ಒಂದು ಉದ್ಗಾರ. ಅನುಭಾವಿಯಾಗಲಿ, ಯಾವನೇ ಆಗಲಿ, ಅಂತಃಕರಣದಲ್ಲಿ ಉದಯವಾದ ಸ್ವಂತ ಭಾವೋದ್ರೇಕವು ವಾಕ್ಯವಾಗಿ ಹೊರಬೀಳಲು ಅವಕಾಶ ಕೊಡುವುದು ಅಲೌಕಿಕ ಅಥವಾ ಲೌಕಿಕ ಅನುಭವದ ಅಭಿವ್ಯಕ್ತಿ ಯಾಗುವುದಲ್ಲದೆ, ಕಲಾಕೃತಿ (ಕಾವ್ಯಕೃತಿ) ಯಾಗದು. ಕಲಾನುಭವವು ಅಲೌಕಿಕ(Supramundane) ಮತ್ತು ಲೌಕಿಕ (Worldly) ಅನುಭವಗಳಿಂದ ಭಿನ್ನವಾದುದು. ಪ್ರಕೃತಿ-ಕಲಾ ಕೃತಿಗಳು ಭಿನ್ನ ಜಾತಿಯ ಅನುಭವ ಪ್ರೇರಕಗಳು; ಭಿನ್ನಕಾರಣಗಳಿಂದ ಭಿನ್ನ ಕಾರ್ಯಗಳುಂಟಾಗುವುದು ವಿಚಾರ ಸಾಧು.

ಆಮೇಲೆ ಆತ್ಮಸಮರ್ಥನೆಗಾಗಿ ಗ್ರಂಥಕರ್ತರು 'ವಿರೋಧ' ವೆಂಬ ನಿಂದೆಯನ್ನು ವಿಮರ್ಶಕರು ಸುಮ್ಮ ಸುಮ್ಮನೆ ಆಡಕೂಡದು–ಎಂದು, ಆಗಾಗ ಚಿಮ್ಮುವ ಮನೋ ಭಾವಗಳೇ ತಿರುಳಾಗಿರುವ ಸಾಹಿತ್ಯದಲ್ಲಿ ಪೂರ್ವಾಪರ ವಿರೋಧ ಅಲ್ಲಲ್ಲಿ ಕಂಡುಬರುವಂತೆ ತೋರಿದ್ದರ ಬಗ್ಗೆ ಹೇಳಿದ್ದಾರೆ. ಸೌಂದರ್ಯತರ್ಕ ಮತ್ತು ತರ್ಕಸೌಂದರ್ಯಗಳ ಭೇದವನ್ನು ಬಲ್ಲ ಯಾವ ವಿಮರ್ಶಕನೂ 'ವಿರೋಧಾಭಾಸ' ವನ್ನು 'ವಿರೋಧ' ವೆಂದು ಆಪಾದಿಸ ಲಾರ ಎಂದು ಅವರಿಗೆ ಆಶ್ವಾಸನವನ್ನು ಕೊಡಬಹುದಾಗಿದೆ.

ಪ್ರಾರ್ಥನೆ, ದೈನ್ಯ, 'ಆನಂದರೂಪಮಮೃತಂಯದ್ವಿಭಾತಿ', ಪರಿಹಾಸ, ಸಂದೇಹ, ವಿಧವೆಯ ಮುಂಡನ ವಿಧಿಯನಿಂದೆ, ಸ್ನೇಹದ ಆಶ್ಚರ್ಯಚರ್ಯ, ಹೆಣ್ಣು ಜಾತಿಯ ಸಹಜಾಪೇಕ್ಷೆ ಎನ್ನಿಸಿದ ಬಹುಪುತ್ರವತಿತ್ವದ ನಿಂದೆ, ಕೃತಘ್ನರ ಜೀವನರಹಸ್ಯದ ಬಗ್ಗೆ ಪ್ರಶ್ನೆ, ಕರ್ತೃದೋಷವನ್ನು ಕರಣದ ಮೇಲೆ ಆರೋಪಿಸುವ ರೂಢಿಯ ವಿಡಂಬನ, ಉತ್ತಮ ಮಧ್ಯಮ ಅಧಮ ವರ್ತನೆಗಳ ವಿವೇಕ, 'ನ ಕದಾಚಿದನೀದೃಶಂ ಜಗತ್' ಪ್ರಾರ್ಥನೆ, ಬಾಲಾವಿವಾಹ ನಿಂದೆ, ದೈವಸಾಕ್ಷಾತ್ಕಾರವಾಗದುದಕ್ಕಾಗಿ ಚಿಂತೆ, 'ಕಾಮಧೇನುವಿದ್ದುಮೂಟಕೆ ಗೊಡ್ಡಾ ಕಳನಾಳ್ವರೇ ?', ಆತ್ಮವಿಜಯಪ್ರಶಂಸೆ, ಮೂಕಪ್ರಶಂಸೆ, ಸಂತೋಷಪ್ರಶಂಸೆ, ಉತ್ತಮಕಲಾನುಭೂತಿ ವಿಸ್ಮಯೋದ್ರೇಕಾಂತ ವಾದುದು ಮತ್ತು ದೈವವು ಅಸದೃಶ ವಿಸ್ಮಯಕಾರಕ ಪದಾರ್ಥ, 'ಆತ್ಮಜ್ಞಾನವಿ

[1]. The opposition between objective scientific fact and subjective poetic experience cannot be maintained to day —
Sanskrit poetics, p. 249

ಹೀನಾ ಮೂಢಾಃ', ಭಾರತೀಯರ ಧೈರ್ಯಹೀನತೆಯ ವಿಡಂಬನ, 'ದುರ್ಜನಂ ಪ್ರಥಮಂ ವಂದೇ' ಮತ್ತು ದೇವನಿಗೆ ನಿಂದೆಯೊಂದು ವ್ಯಾಜನಿಂದೆ ಎನ್ನಿಸುತ್ತದೆ; ಆದುದರಿಂದ ದುರ್ಜನರ ಮೇಲೆ ದೇವರಿಗೆ ದಯೆ ಉಂಟಾಗುವುದೆಂಬುದು ಧ್ವನಿತ; ದೇವನಿಂದಕರು ದುರ್ಜನರು–ಎಂಬುದೂ ಹಾಗೇ ವಾರುಣೀವರ್ಣನ, ವ್ಯಧಿಕರಣಾನುಮಾನ ವಿಡಂಬನ, ವಿಧವಾವಹೇಳನನಿಂದೆ, ಹಳತು-ಹೊಸತುಗಳ ಸಮದರ್ಶಿತ್ವದ ಬೋಧೆ, ಹೇಳುವುದು ಶಾಸ್ತ್ರವನ್ನು ಮತ್ತು ಹಾಕುವುದು ಗಾಳವನ್ನು, ದಾಸ್ಯಕ್ಕಿಂತ ಸ್ವಾತಂತ್ರ್ಯ ಮೇಲು, ಅನುಭವಕ್ಕಿಂತ ಅನುಭಾವಿ ಮುಖ್ಯ–ಅನುಭವವುಳ್ಳವನು ಅನುಭಾವಿ, ಕನ್ನಡಕ್ಕೆ 'ಹೆಸರಾದರೂ ಕೂಡ ಹೇಳ ಹೆಸರಿಲ್ಲ'–ಎಂಬ ಚಿಂತೆ, ಶೋಕಪರಿಮಾರ್ಜನವು ಮಾತೃಗುಣ ಮತ್ತು ಭಯನಿವಾರಣವು ಪಿತೃಗುಣ, ನಗರಸ್ಥರಾದ ಮಿಶ್ರಿತವಸ್ತುಗಳ ವ್ಯಾಪಾರಿಗಳ ವಿಡಂಬನ, ಮಿಥ್ಯೆಯ ಸತ್ಯವೇಷಧಾರಿತ್ವ ಮತ್ತು ಸತ್ಯದ ದಿಗಂಬರತ್ವ ಪ್ರಾಪ್ತಿಗಳ ಪರಿಹಾಸ, ಸ್ವಾವಲಂಬನ ಪ್ರಶಂಸೆ, 'ಸಾಲಿಗನು ಬಂದು ಎಳೆವಾಗ ಕಿಬ್ಬದಿಯ ಕೀಲು ಮುರಿದಂತೆ', ಗ್ರಂಥಗಳ ಗಾತ್ರ ಮಾತ್ರಪ್ರಾಧಾನ್ಯದ ವಿಡಂಬನ, ಪ್ರಕೃತಿಯ ಮಾನವಾತೀತ ಪರಿವರ್ತನೆಗಳ ಅಧಿಕ ಚೋದ್ಯತೆ–ಗ್ರಂಥದಲ್ಲಿರುವ ೧೨೧೨ ವಚನಗಳಲ್ಲಿ ಗ್ರಾಹ್ಯವಾದ ಭಾವಸಾರ–ವಸ್ತುಸಾರಗಳನ್ನು ಹೀಗೆ ಗ್ರಹಿಸುತ್ತ ಹೋಗಬಹುದಾಗಿದೆ. ಮಾದರಿಗಾಗಿ ಮೊದಲಿನ ೪೦ ವಚನಗಳ ಬೆಣ್ಣೆ ಮುದ್ದೆಗಳನ್ನು ಇಲ್ಲಿ ಕಡೆದು ಕೊಡಲಾಗಿದೆ.

ಇಂಥ ಸಾರಾಂಶಗಳನ್ನು ಉಳ್ಳ ರಂಗಬಿನ್ನಪಗಳನ್ನು ಗಮನಿಸಿದಾಗ ನಮಗೆ ಭಾರತೀಯಸಾಹಿತ್ಯದ ಶಿರೋಮಣಿವರ್ಗಗಳಲ್ಲಿ ಒಂದಾದ ಸುಭಾಷಿತಗಳ ಭಂಡಾರದ ನೆನಪಾಗದೆ ಉಳಿಯದು, ವಚನಸಾಹಿತ್ಯದ ಸ್ಮರಣೆ ಉಂಟಾಗದಿರದು, ಉಪನಿಷತ್ತಿನ ಉದ್ಗಾರಗಳು ಹೊಳೆಯದಿರವು, ಸರ್ವಜ್ಞವಚನ ಮತ್ತುಸೋಮೇಶ್ವರಶತಕಗಳು ಮನೋಮುಕುರದ ಮೇಲೆ ಹಾಯ್ದು ಹೋಗದಿರಲಾರವು, ನೀತಿ–ವೈರಾಗ್ಯ–ಶೃಂಗಾರ–ಭಕ್ತಿಗಳ ಶತಕ ಸಾಹಿತ್ಯ ಮನಸ್ಸಿನೆದುರು ಸುಳಿದು ಹೋಗದಿರದು ಮತ್ತು ದಾಸರ ಪದಗಳು ಹೃದಯದಲ್ಲಿ ಒಮ್ಮೆ ಉದ್ದೀಪ್ತವಾಗದೆ ಇರಲಾರವು! ಗ್ರಂಥಕರ್ತರ ಸಂಸ್ಕಾರದಲ್ಲಿ ಉಕ್ತ ಹಾಗೂ ಇತರ ಸದೃಶ ಸಾಹಿತ್ಯ ಕೃತಿವರ್ಗಗಳ ಅಂಶಗಳು ಅಡಗಿರುವುದು ಇಂದಿನ ಐತಿಹಾಸಿಕ ಸಂದರ್ಭದ ಬಲದಿಂದ ಸುಲಭೋಹ್ಯವಾಗಿದೆ. ಈ ಗ್ರಂಥದಲ್ಲಿ ಮೇಲೆ ಹೇಳಿದ ಗ್ರಂಥರಾಶಿಗಳಲ್ಲಿ ವ್ಯಕ್ತವಾದ ಅಲ್ಪ ಅಥವಾ ಮಹಾ ವಿಚಾರಗಳು, ನೀತಿ ತತ್ವಗಳು ಮತ್ತು ಭಾವನಾ ಪ್ರಕಾರಗಳು ಅಡಕವಾಗಿರುವುದು ಕಾವ್ಯ ಕಲಾ ಪ್ರಪಂಚದ ಒಂದು ಅಪ್ರತಿಹತ ಸೂತ್ರವನ್ನು ನಿದರ್ಶಿಸುತ್ತದೆ:

> ನಿರಂತರ ರಸೋದ್ಗಾರ ಗರ್ಭಸಂದರ್ಭನಿರ್ಭರಾಃ
> ಗಿರಃ ಕವೀನಾಂ ಜೀವಂತಿ ನ ಕಥಾಮಾತ್ರಮಾಶ್ರಿತಾಃ

ಸುಂದರರಾದ ತಂದೆ–ಮಕ್ಕಳಿಬ್ಬರಲ್ಲಿ ಸರ್ವಗುಣಗಳ ಸಾದೃಶ್ಯವಿದ್ದಾಗಲೂ ಶರೀರ ಸೌಂದರ್ಯದ ನಾವೀನ್ಯದ ಭೇದವು ಕಂಡು ಬರಬಹುದಲ್ಲವೆ? ಆತ್ಮವು ಶುದ್ಧ ಬ್ರಹ್ಮ,

ಅದು ಸರ್ವವ್ಯಕ್ತಿ ಸಾಧಾರಣ; ಆದರೆ ಇಂದ್ರಿಯ–ಮನಸ್ಸು ಅಹಂಕಾರಗಳಿಂದ ಕೂಡಿದ ವ್ಯಕ್ತಿಶರೀರಗಳು ಭಿನ್ನವಲ್ಲವೇ? ಈ ವೇದಾಂತ ನಿದರ್ಶನದ ಪ್ರಕಾರ ಆಕಾರಭೇದಗಳಿರುವ ಒಂದು ವಚನವರ್ಗದಲ್ಲಿ ಅಂತಃಸಾರ ಭೇದವು ಬುದ್ಧಿಗೆ ಗೋಚರಿಸುವಂತೆ ಇಲ್ಲವಾಗಿರಬಹುದು. ವಚನವು 'ಗಿರಃ' ಅಥವಾ ಕಾವ್ಯವಾಣಿ. ಆದುದರಿಂದ ಮಹಾಭಾರತದ ರಸಿಕಪರಂಪರೆಗೆ ಅನುಗುಣವಾಗಿ ಬೆಳೆದ ಪ್ರಾಚೀನ ಕನ್ನಡ ಧಾರ್ಮಿಕ ಚಂಪೂ ಕಾವ್ಯಗಳಿಂದ ಆರಂಭಿಸಿ ಹೊಸಗನ್ನಡದಲ್ಲಿ ಇಂದು ಪ್ರಚಲಿತವಾಗಿರುವ ಚುಟುಕು ಕಾವ್ಯಗಳ ವರೆಗೆ ಭಿನ್ನ ರೂಪಗಳ (Forms) ಕಾವ್ಯ ಕೃತಿಗಳು ಅನೇಕ ಕಡೆಗಳಲ್ಲಿ ಒಂದೇ ಎಂದು ಬುದ್ಧಿಯು ಗ್ರಹಿಸಬಹುದಾದ ಅರ್ಥಪ್ರಣಾಲಿಯನ್ನು (Content) ಗರ್ಭೀಕರಿಸಿಕೊಂಡಿರಬಹುದು; ಅವುಗಳಲ್ಲಿ ಒಂದಕ್ಕಿಂತ ಇನ್ನೊಂದು ಒಂದಲ್ಲ ಒಂದು ಕಲಾಗುಣದಲ್ಲಿ ಹೆಚ್ಚು ಅಥವಾ ಕಡಿಮೆ ಎಂದು ರಸಿಕರಿಗೆನ್ನಿಸಬಹುದು. ಆದರೂ ಅವೆಲ್ಲವೂ ಹೃದ್ಯಗಳೇ ಆಗಿರುವುದು ಸೌಂದರ್ಯಾನುಭವ(Aesthetic Realisation)ದಲ್ಲಿರುವ ನಿತ್ಯನೂತನತೆಯ ಎರಡು ರಹಸ್ಯವನ್ನು ಎತ್ತಿತೋರಿಸುತ್ತದೆ: ೧. ಶರೀರದ ಹೊಸತನದ ಆಕರ್ಷಕತೆಯೊಂದು, ೨. ಶರೀರದ ಅವಯವವಿನ್ಯಾಸವು ಅಕ್ಷಯ ಪಾತ್ರೆಯಂತೆ ಸೂಕ್ಷ್ಮವಾಗಿ ಮತ್ತು ಆಳವಾಗಿ ನೋಡುತ್ತ ಹೋದ ಹಾಗೆ ರಸಿಕನ ಹೃದಯದಲ್ಲಿ ಹೊಸ ಹೊಸ ಆಕರ್ಷಕಾಂಶಗಳು ಪಳಚ್ಚನೆ ಹೊಳೆಯುವಂತೆ ಮಾಡುವ ಆವತಾರಿಕ ಹೊಸತನದ ಆಕರ್ಷಕತೆ ಇನ್ನೊಂದು—ಈ ಎರಡು ಬಗೆಗಳ ಹೊಸತನವನ್ನೂ ಕೆಳಗಿನ ಸೂತ್ರದಲ್ಲಿ ಕಾಣಬಹುದು:

ಪ್ರತಿಕ್ಷಣಂ ಯನ್ನವತಾಂ ಏಧತ್ತೇ
ತದೇವರೂಪಂ ರಮಣೀಯತಾಯಾಃ!

ಆದುದರಿಂದಲೇ ನಾವಿಂದು ಗ್ರಂಥಕರ್ತರಿಗೆ ಸ್ಫೂರ್ತಿಯನ್ನು ಕೊಟ್ಟ ಹಿಂದಿನ ಗ್ರಂಥಗಳನ್ನೂ ಅವರ ಈ ಇಂದಿನ ಗ್ರಂಥದ ಜೊತೆಗೇ ಸಮದರ್ಶನದಿಂದ ಓದಿ ಆನಂದಿಸಬಲ್ಲವರಾಗಿದ್ದೇವೆ. ಇಬ್ಬಣಗಳಲ್ಲಿ ಒಂದನ್ನು ಬಿಟ್ಟು ಇನ್ನೊಂದಕ್ಕೇ ಅಂಟಿಕೊಳ್ಳಬೇಕಾದ ಅನಿವಾರ್ಯತೆ ಇಲ್ಲ. ಭಾವಗಳಂತೆಯೇ ಎಷ್ಟೋ ಸಲ ವಿಚಾರಗಳೂ ಇವುಗಳಲ್ಲಿ ಬಹಳ ಭಿನ್ನವಾಗಿರದೆ ಇದ್ದರೂ ಆ ಈ ಪಕ್ಷಗಳಲ್ಲಿ ಒಂದರ ಬಗೆಗೆ ಜುಗುಪ್ಸೆಯುಂಟಾಗದು. ಏಕೆಂದರೆ—

ಇಕ್ಷುಕ್ಷೀರ ಗುಡಾದೀನಾಂ ಮಾಧುರ್ಯಸ್ಯಾಂತರಂ ಮಹತ್
ತಥಾಪಿ ನ ತದಾಖ್ಯಾತುಂ ಸರಸ್ವತ್ಯಾಪಿ ಶಕ್ಯತೇ

ಬುದ್ಧಿಗಮ್ಯತೆ–ಹೃದ್ಗಮ್ಯತೆಗಳ ವಿವೇಕ ಇಂತಿದೆ. ಆದುದರಿಂದ ಹಳತು–ಹೊಸತುಗಳ ವಾದವು ಉತ್ತಮ ಕಾವ್ಯ ಕೃತಿಗಳಲ್ಲಿ ಗಣ್ಯವಾಗುವುದಿಲ್ಲ. ಇಲ್ಲಿ ಉತ್ತಮತ್ವವು ಒಂದೇ ಮೌಲ್ಯವಲ್ಲ, ಸಮಾನ ಮೌಲ್ಯಗಳ ಒಂದು ಸಮಪಂಕ್ತಿ. ಬುದ್ಧಿಗಮ್ಯ ಮೌಲ್ಯದಲ್ಲಿ ಐಕ್ಯ ಕಂಡಲ್ಲಿಯೂ ಹೃದ್ಗಮ್ಯ ಮೌಲ್ಯದಲ್ಲಿ ಅನನ್ಯತೆ ಇದೆ.

ಇದು ಉಪದೇಶಗಳಿಂದ ತುಂಬಿದ ಗ್ರಂಥ ಎಂದು ಗ್ರಂಥಕರ್ತರು ಹೇಳಿಕೊಂಡಿದ್ದಾರೆ. ರಾಮದಾಸರು 'ಮನಾಚೇ ಶ್ಲೋಕ' ಎಂಬ ಗ್ರಂಥದಲ್ಲಿ ತಮ್ಮ ಮನಸ್ಸಿಗೇ ತಾವು ಉಪದೇಶ ಮಾಡಿಕೊಂಡ ಶೈಲಿಯನ್ನು ಹಿಡಿದಿದ್ದಾರೆ; ದಾಸರ ಪದ ಮತ್ತು ಶರಣರ ವಚನಗಳಲ್ಲಿ ಮುಂದಿಗೆ ಉಪದೇಶ ಮಾಡುವ ಶೈಲಿ ಇದೆ. ಇಂಥ ಲಕ್ಷಣ ಕಂಡುಬಂದಲ್ಲಿ ಒಂದು ಸಾಹಿತ್ಯ ಕೃತಿಯನ್ನು Didactic-ಉಪದೇಶ ಪ್ರಧಾನವಾದದ್ದು ಎಂದು ಅದಕ್ಕೆ ಪ್ರಥಮ ಶ್ರೇಣಿಯಲ್ಲಿ ಸ್ಥಾನ ಕೊಡದೆ ಇರುವ ಒಂದು ಸಂಪ್ರದಾಯವಿದೆ. ಈ ಸಂಪ್ರದಾಯವು ಭಾರತೀಯ ರುಚಿಮಾರ್ಗದ ದೃಷ್ಟಿಯಿಂದ ವಿವಾದಾಸ್ಪದವಾದದ್ದು. ಮಹಾಭಾರತವೊಂದು ಮಹಾಕಾವ್ಯ; ಹಾಗೇ ಪಂಪ, ರನ್ನ, ಪೊನ್ನ, ಜನ್ನ ಮುಂತಾದವರು ಬರೆದ ಕೃತಿಗಳಲ್ಲಿ ಆ ಪಂಚಮವೇದದ ಪದ್ಧತಿಯಂತೆಯೇ ಧಾರ್ಮಿಕ (ತಾತ್ವಿಕ+ನೈತಿಕ) ಅಂಶಗಳಿಂದ ತುಂಬಿದ ಕೃತಿಗಳಿವೆ. ಅವು ಉತ್ತಮ ಮಹಾಕಾವ್ಯಗಳೆಂಬದು ನಮ್ಮ ಪರಂಪರೆ. ಏಕೆಂದರೆ ಅವುಗಳಲ್ಲಿ ನೈತಿಕ, ಬೌದ್ಧಿಕ, ತಾತ್ವಿಕ ವಿಚಾರಗಳೆಷ್ಟೇ ತುಂಬಿದ್ದರೂ ಅವು ಅವುಗಳಲ್ಲಿ ರಸಾಪಕರ್ಷಕಗಳಾಗಿ ಪರಿಣಮಿಸಲಿಲ್ಲ. ರಸಾಪಕರ್ಷಕಗಳು ಮಾತ್ರ ಅಕ್ಷಮ್ಯ ದೋಷಗಳು–ಎಂಬುದು ಭಾರತೀಯ ವಿಮರ್ಶ ಮಾರ್ಗದ ಧ್ರುವತಾರೆ. ಈ ನ್ಯಾಯದ ಪ್ರಕಾರ 'ರಂಗಬಿನ್ನಪ' ಉತ್ತಮ ಕಾವ್ಯವೆಂದೆನ್ನಿಸಲು ಯಾವ ಅಡ್ಡಿಯೂ ಇಲ್ಲ.

ರೂಪಕೋಕ್ತಿ ಅಥವಾ ಅಲಂಕೃತವಾಣಿ ಹೇಗೆ ಪ್ರಸಿದ್ಧವಾದ ಒಂದು ಕ್ಯಾವ್ಯ ಭಾಷೆಯೋ ಹಾಗೇ ಹಾಸ್ಯ, ರೌದ್ರ, ಶೃಂಗಾರ, ವೀರರಸಗಳು ಹೊರ ಕವಚವಾಗಿ ಕೆಲಸಮಾಡುವಂತೆ ರಚಿತವಾದ ಕೃತಿಗಳಲ್ಲಿ ಕೆಲವೊಮ್ಮೆ ಅವು (ರಸಗಳು, ಕಾವ್ಯಾರ್ಥಗಳು) ವಿಶಿಷ್ಟವಾದ ಕಾವ್ಯಭಾಷೆಗಳೆನ್ನಿಸಿಕೊಳ್ಳುತ್ತವೆ. ಹಾಗೆನ್ನಿಸಿದಾಗ ಅವು ಗಂಭೀರವಾದ ಯಾವುದಾದರೊಂದು ಕಲಾಪೋಷಕ ಅಭಿಪ್ರಾಯವನ್ನೋ ಕಲಾತ್ಮಕ ಭಾವನೆಯನ್ನೋ ವ್ಯಕ್ತಪಡಿಸುತ್ತವೆ. ಭಕ್ತಿಯು ಪ್ರಧಾನ ಸ್ಥಾಯಿಯಾಗಿರುವ ಕೃತಿಗಳಲ್ಲಿ ಅನೇಕ ಕಡೆಗಳಲ್ಲಿ ಇದಕ್ಕೆ ತಕ್ಕ ಉದಾಹರಣೆಗಳು ಸಿಕ್ಕುತ್ತವೆ. ಭಕ್ತಿಯನ್ನು ವ್ಯಕ್ತ ಮಾಡುವ ಕಾವ್ಯಭಾಷೆ ಅಥವಾ ಮಾಧ್ಯಮ ಎನ್ನಿಸಿದ ವ್ಯಾಜನಿಂದೆಯು ಅಂಥ ಮತ್ತೊಂದು ತಂತ್ರ. ಗ್ರಂಥದಲ್ಲಿ ಪ್ರತಿಯೊಂದು ವಚನವೂ ಮಾಡಿ ಕೊಳ್ಳುವುದು ದೇವರಲ್ಲಿ ವಿಜ್ಞಾಪನೆಯನ್ನು. ಆದುದರಿಂದ ಅದರ ಕಾವ್ಯಾರ್ಥವು ಪ್ರಧಾನವಾಗಿ ಭಕ್ತಿ. ಆದರೆ ಭಕ್ತಿಯ ವ್ಯಕ್ತೀಕರಣಕ್ಕೆ ಅದು ಹಿಡಿದ ಮಾರ್ಗ ಅಥವಾ ತಂತ್ರ ವಿಶಿಷ್ಟವಾದುದು : "ಹೊಂದಿ ಬಂದ ಹಳೆ ಎಕ್ಕಡದಂತೆ ಕ್ರೋಧ ದ್ವೇಷ ಕಾಣಿಸುವುವು ; ಹೆಜ್ಜೆಯಿಕ್ಕಿದರೆ ಹಿತ, ನಡೆದಾಡುವುದು ಸುಲಭ—ಎನ್ನುತ್ತ ಮೋಹ ಬೀರುವುವು. ಎನ್ನ ಅಂತರ್ಯವೇತಕ್ಕೋ ಅವನ್ನು ಮೆಟ್ಟಲು ನಾಚಿಕೊಂಡು ಹಿಮ್ಮೆಟ್ಟುವುದು ಬರಿಗಾಲಿನಲ್ಲೆ. ಸರಿಯೊ ತಪ್ಪೊ ನಿನಗೆ ಗೊತ್ತು ಮಾಸಾಮಿ ರಂಗ"—ಎಂಬ ವಚನದಲ್ಲಿ ಎಕ್ಕಡದ ಹಾಸ್ಯಪ್ರೇರಕ ಉಪಮೆಯು ಛದ್ಮವೇಷಧಾರಿಯಾದ ಅಜ್ಞಾನ ಪ್ರಕಟನಾ ತಂತ್ರದ ಮೂಲಕ ಪ್ರಲೋಭನದಲ್ಲಿ ಸಿಲುಕಿಕೊಳ್ಳದೆ ಉಳಿದ ಒಂದು

ಪಾತ್ರದ ದೇವತರ್ಪಣದ ಒಲವನ್ನು ಪ್ರಥಮ ಪುರುಷದ ವಾಕ್‌ಪ್ರಣಾಲಿಯಿಂದ ವ್ಯಕ್ತ ಪಡಿಸಲಾಗಿದೆ. ಸರಿ–ತಪ್ಪುಗಳನ್ನರಿಯೆನೆಂಬ ಸಂದೇಹೋಕ್ತಿಯ ಆಭಾಸಿಕತೆಯು ಸರಿಯಾಗಿಯೇ ನಡೆದುಕೊಂಡು ನಿರ್ಧಾರ ಬುದ್ಧಿಯ ಬಗ್ಗೆ ಅಭಿಮಾನವಿರುವುದನ್ನು ಲಘುಹಾಸ್ಯಚ್ಛನ್ನತೆಯಿಂದ ವ್ಯಕ್ತ ಮಾಡುತ್ತದೆ. ಇದರ ಸ್ವಾರಸ್ಯ ಹೀಗೆ; ಇಲ್ಲಿ ಹೊಳೆಯುವ ಭಕ್ತಿಭಾವದ ಪ್ರಕಟನೆಗೆ ಈ ರಂಗಿದೆ: ಇದೇ ರಂಗಣ್ಣನವರ ರಂಗು !

ಮೇಲೆ ಹೇಳಿದ ಪರಿಹಾಸ ವಿಜಲ್ಪನದ ಶೈಲಿಯ ಭಕ್ತಿ ಧಾರೆಯನ್ನೊಳಗೊಂಡ ವಚನಗಳೇ ಗ್ರಂಥದಲ್ಲಿ ಹೆಚ್ಚು: ಇದು ಗ್ರಂಥಕರ್ತರ ವ್ಯಕ್ತಿತ್ವದ ಪ್ರಸಾದ ಗಾಂಭೀರ್ಯವನ್ನು ಹೊರಗೆಡಹುತ್ತದೆ. "ಪ್ರಾಪ್ತ ವಯಸ್ಸಿನ ಪುರುಷ ಹೃದಯ ವಾದಿಸುವುದು ಹೀಗೆ ಹಾಡು ಹಾಡುತ್ತ: ಮುಂದೊಂದು ದಿನ ತೇಜವಡಗಿ ಹಳೆಯ ಗಾಜಿನಂತಾಗುವುದೆಂದು, ಈ ಹೊತ್ತು ಮಿಂಚಿನ ಮಾಯ ಜಾಲದ ಮೀನಲೋಚನಕ್ಕೆ ಮನಸೋಲದಿರಬಹುದೆ? ಮುಂದೊಂದು ದಿನ ಶುಷ್ಕ ದವಡೆಯ ಮೂಳೆಗೆ ಅಂಟಿಕೊಂಡು ವಿಕಾರ ಪ್ರೇತ ನಗುವಿನಿಂದ ಘೋರವಾಗುವುದೆಂದು, ಈ ಹೊತ್ತು ಪೂರ್ಣೇಂದು ಥಾಳಥಳ್ಯದ ದಂತಪಂಕ್ತಿಯ ಮೆಚ್ಚದಿರಬಹುದೆ? ಮುಂದೊಂದು ದಿನ ಮಣ್ಣಿನಲ್ಲಿ ಮಣ್ಣಾಗುವುದೆಂದು, ಈ ಹೊತ್ತು ಮೃದುವಾದ ಮುದ್ದು ಮಾಂಸಲ ದೇಹವನು ಮುಟ್ಟಬಯಸದಿರಬಹುದೆ? ವ್ಯಾಮೋಹದ ವಾದಕ್ಕೆ ಉತ್ತರವೇನಿದೆ, ರಂಗ? ಉತ್ತರದಿಂದ ವಾದಿಗೆ ಉಪಯೋಗವೇನಿದೆ ರಂಗ?—ಎಂಬಂತಹ ವಚನಗಳಲ್ಲಿ ತರ್ಕಾಭಾಸದ ಸೊಗಸಿದೆ; "ಈ ಸವಾಲ್ಗೇನೆಳ್ತೀರಣ್ಣ?" ಎಂಬ ರೀತಿಯ "ಯೆಂಡ್ಕುಡ್ಕ ರತ್ನ" ತನವಿದೆ. ಇದೊಂದು ರಂಗು; ಇದರಲ್ಲಿ ಉತ್ತರಿಸಲಾರದ ಯಾವ ತತ್ವಸಮಸ್ಯೆಯೂ ಇಲ್ಲ; ಆದರೆ ಅಂಥ ಸಮಸ್ಯೆ ಇದೆಯೋ ಏನೋ ಎಂಬಂತಹ ಊಹೆ ಬರುವಂತೆ ಮಾಡಿ, ಹಗರಣ ನುಡಿಯ ಮೂಲಕ ಬುದ್ಧಿಮತ್ತೆಯ ಪೌರುಷದ ನಿಶ್ಚಯಾತ್ಮಕತೆಯಿಂದ ದೇವರನ್ನು ಮೂದಲಿಸುವಂತೆ ಪ್ರಶ್ನಿಸುವ ಸಖ್ಯಭಕ್ತಿಯು ವ್ಯಕ್ತವಾಗಿದೆ.

ಗ್ರಂಥಕರ್ತರ ಕವಿತ್ವ ಶಕ್ತಿಗೆ ೬೦೭ನೆಯದಾದ ಮೈಸೂರಿನ ಚಾಮುಂಡಿ ಬೆಟ್ಟದ ವರ್ಣನೆಯನ್ನುಳ್ಳ ವಚನವು ಒಳ್ಳೆಯ ನಿದರ್ಶನ ವಾಗಬಲ್ಲುದು: ಈ ವಚನವು ೨೪೮ ಸಾಲುಗಳನ್ನುಳದ್ದು. ಇಂಥ ಲಲಿತ (ಶಾಸ್ತ್ರೀಯವಲ್ಲದ) ಕೃತಿಯಲ್ಲಿ ನೂರಕ್ಕೆ ೪೨ ರಷ್ಟು ಸಂಸ್ಕೃತ ಪದಗಳೂ ೫೮ ರಷ್ಟು ತದ್ಭವ (ಸಂಸ್ಕೃತ ಜನ್ಯ) ಮತ್ತು ದೇಶ್ಯ ಹಾಗೂ ಆಂಗ್ಲಜ ಪದಗಳೂ ಇವೆ. ಪ್ರತೀತಿ, ಅಶ್ಮ, ಪರುಷತ್ವ ಹಿಮವದ್ ಗೋಪಾಲ, ಪ್ರಪಾತ, ಗಿರಿಸಾನು, ಉತ್ತಮಾಂಗ, ನವವತ್ಸರ, ದುಕೂಲ ಮುಂತಾದವು ಸಂಸ್ಕೃತ (ತತ್ಸಮ ಅಥವಾ ಸಮಸಂಸ್ಕೃತ ಪದಗಳನ್ನು ಈ ವರ್ಗದಲ್ಲಿ ಗ್ರಹಿಸಿದೆ); ಕುವರ, ಸೀರೆ, ಹಬ್ಬ, ಸಂತಸ ಮುಂತಾದವು ತದ್ಭವಗಳು; ನನಗು, ಒಡಬಾಳು, ಮುಗಿಯಿತು, ಉಂಟಾಯ್ತು, ಐದು, ಹಿಂದಕ್ಕೆ ಮುಂತಾದವು

ದೇಶ್ಯಗಳು (ಶುದ್ಧ ಕನ್ನಡ ಪದಗಳು); ಟಾರು ಜಲ್ಲಿ ಮಿಲಿಯ—ಎಂಬಂತಹ ಒಂದೆರಡು ಆಂಗ್ಲಜ ಪದಗಳು; ಮತ್ತು ಜಾನುವಾರು, ಮೊಗಲಾಯಿ—ಎಂಬಂತಹ ಒಂದೆರಡು ಇತರ ದೇಶ್ಯಪದಗಳು. ಇಂಥ ವೈವಿಧ್ಯವುಳ್ಳ ಪದ ಪದ್ಧತಿ ಇಂದಿನ ಕನ್ನಡಕ್ಕೆ ಸಹಜ—ಎಂಬುದನ್ನು ಈ ವಚನಗಳು ಸಾರಿ ಹೇಳುತ್ತವೆ. "ನವ ತೋರ್ಕೆಗಳ ತವರೂರು ಚಾಮುಂಡಿ, ನವೀನ ಭಾವೋತ್ಕರ್ಷಗಳ ಪವಿತ್ರ ವರ್ಷ ಚಾಮುಂಡಿ![2] ಅರುಣೋದಯದ ನೋಟ ಒಂದು: ನಸು ಕಪ್ಪು ಅವ್ಯಕ್ತತೆಯ ಭೇದಿಸುತ ಸೂಚನೆಯೀವನೋಟ. ಸೂರ್ಯೋದಯದ ಕಾಣ್ಕೆ ಇನ್ನೊಂದು: ಎಚ್ಚೆತ್ತು ಮೈ ಕೊಡಹುತ್ತ ಕಣ್ಣುತೆರೆಯುವ ಕಾಣ್ಕೆ. ಬೆಳಗಿನ ದೃಶ್ಯಕ್ಕೆ ಬೇಗ ಬೇಗ ಲವಲವಿಕೆ ಹೆಚ್ಚಾಗಿ ಉಲ್ಬಣವಾಗುವ ಚಲಕಾಂತಿ. ಮಟ ಮಟ ಮಧ್ಯಾಹ್ನ, ಸ್ಥಿರಬದ್ಧ ಹಠಯೋಗದಲ್ಲಿ ಆಸನ ಕುಳಿತಿರುವ ಪರಮ ಬಿಗುಮಾನ. ಅಪರಾಹ್ನದಲ್ಲಿ ಒಂದು ಗುಡ್ಡದ ನೆರಳು ಮತ್ತೊಂದರ ಮೇಲೆ ಬಿದ್ದು ತನ್ಮೂಲಕ ಬೆಳೆಯುವ ಧ್ಯಾನ ಮಗ್ನತೆಯ ಮೃದು ಸೊಬಗು. ಪಶ್ಚಿಮದಿಗಂತದ ಮೇಲೆ ದಿವಾಕರ ಸೊಗಯಿಸುವಾಗ, ಅತ್ಯುತ್ಕೃಷ್ಟ ಕ್ರಮದಲ್ಲಿ ದಿವಸ ಸವೆದು ಹೋದದ್ದಕ್ಕೆ ನಲಿನಲಿವ ಹಸನ್ಮುಖದ ಉಲ್ಲಾಸ. ಸಾಯಂಕಾಲ ಸಮೀಪವಾದಂದು ಉಚಿತ ವಿಶ್ರಾಂತಿಗೆ ಸಜ್ಜುಗೊಳ್ಳುವ ರಭಸರಹಿತ ಸಡಗರ. ಚೆನ್ನಾಗಿ ಹೊತ್ತಿಸಿ ಮೇಲಕ್ಕೆತ್ತಿ ಹಿಡಿದ ಪಂಜಿನಂತೆ ಕುಮುದ ಬಾಂಧವ ಬೆಳ್ದಿಂಗಳನು ಹರಡುವ ಸಮಯಗಳಲ್ಲಿ ಕನಕ ಮಂಡಲದ ಪರಾತ್ಪರ ಪ್ರಭೆಯೊಂದು ಕಂಗೊಳಿಸುವುದು ಬೆಟ್ಟದ ಶರೀರದಿಂದ. ರಾತ್ರಿ ಪೂರ್ತ ವಿದ್ಯುದ್ದೀಪ ಮುತ್ತುಗಳಿಂದ ಕರೆಕಟ್ಟಿದ ಕರಿ ರೇಸಿಮೆ ಹಚ್ಚಡವ ಹೊದ್ದು ಶಯನಿಸುವ ಶಾಂತ ವಿಲಾಸ. ಮಹಾಮೇಘವೊಂದು ತಳಕ್ಕಿಳಿದು ಹೆಪ್ಪುಗಟ್ಟಿ ತಿರುಗಿ ಮೇಲಕ್ಕೇರಲಾರದೆ ಮೈಸೂರು ಬಳಿಯೆ ಉಳಿದು ಬಿಟ್ಟಿತೊ ಏನೊ ಎಂಬಂತೆ ಭಾಸವಾಗುವುದು ಈಗ. ಸ್ವರ್ಗ ಸಾಗರದ ತಿಮಿಂಗಿಲವೊಂದು ಭೂಮಿಗೆ ಬಂದು ಮೈಮರೆತು ಮಲಗಿದೆಯೊ ಎಂಬ ಅನುಮಾನ ಏಳುವುದು ಆಗ. ನಿನ್ನೆಯ ಬೆಡಗಿನ ಗಾಡಿ ಬದಲಾವಣೆ ಯಾಗಿರುವುದು ಇವೊತ್ತು; ಒಂದು ಘಳಿಗೆಯ ಭಂಗಿಗೆ ಮುಂದಣ ಘಳಿಗೆಯಲ್ಲಿ ಮಾರ್ಪಾಟು; ಈಕ್ಷಿಸುವ ಅಕ್ಷಿಗಳಿಗೆ ಎನಿತೆನಿತೊ ಹೊಸ ಹಬ್ಬ; ಚಿಂತನ ಗೈವ ಚಿತ್ತಕ್ಕೆ ಎಷ್ಟೆಷ್ಟೊ ನೂತನ ಹರ್ಷ; ಚೇತನಕ್ಕೆ ಯಾವಾಗಲು ಸವಿ ಸಮಾಧಾನ ಸಮೃದ್ಧಿ!" ಈ ಅವತರಣಿಕೆ ಕೃತಿಕರ್ತರ ವಾಚ್ಯಲಕ್ಷ್ಯವಾದ ಅಲಂಕೃತ ಶೈಲಿಯ ಪದ್ಯಗಂಧಕ್ಕೆ ಸೂಕ್ತ ಉದಾಹರಣೆಯಾಗಿದೆ. ಇಲ್ಲಿ ಕ್ಲಿಷ್ಟತೆಯಿಲ್ಲ, ಪ್ರಸಾದವಿದೆ; ಸಮಬಂಧ ಸಾಗಿದೆ, ಭಾವಮಾಧುರ್ಯದ ಧ್ವನಿಯು ಲಕ್ಷಿತವಾಗಿದೆ, ಸಮಾಧಿ ಸನ್ನಿಹಿತವಾಗಿದೆ! ಪಂಡಿತ ಸಂಸ್ಕೃತದ ಶುದ್ಧತೆಯೊಡನೆ

---

2. "There is no constant nature of things, so far as poetry is concerned. For the poets mind and poetic expression conceive of things in all sorts of ways"—Avanti Sundari

ಅಲ್ಲಲ್ಲಿ ನಾಜೂಕು, ಮಖಮಲ್ಲು, ಕಾರ್ತೀಕ, ತಯಾರಿಕೆ, ಇವೊತ್ತು, ಜಾನುವಾರು, ನಕಾಶಿರಹಿತ, ನವಾಯಿ ಮುಂತಾದ ಆಡುನುಡಿಗಳ ಗ್ರಾಮಾಭಿರಾಮತೆಯೂ ಕೂಡಿದೆ ಈ ವರ್ಣನಾತ್ಮಕ ವಚನದಲ್ಲಿ. ಚಾಮುಂಡಿಯನ್ನು ಗ್ರಂಥಕರ್ತರು ಅಮರ ತತ್ವದ ಸಂಕೇತವೆಂದಿರುವುದು ಶುದ್ಧ ಸಂಕೇತ. ನಿಃಶಬ್ದ ವಿಡಂಬನೆ ರೂಪುಗೊಂಡಂತೆ ಚಾಮುಂಡಿ ಇರುವುದು ಸುಂದರ ಪ್ರತಿಮೆ. ಅಶ್ಮ, ಶಿಲೆ, ಕಲ್ಲು, ಬಂಡೆ, ಹರಳು ಮಣ್ಣು, ಮಜ್ಜಿಗೆಹುಲ್ಲು, ಕೊತ್ತಿ, ಕಳ್ಳಿ, ಕತ್ತಾಳೆ, ಕಾರೆ, ಎಕ್ಕ, ಮುಳ್ಳು ಮೆಳೆ, ಗಂಟಿ ಗಣಿಗಲ, ಲತೆ ಗುಲ್ಮ, ಚದುರಂಗ, ತುತ್ತೂರಿ ಹೂಗಿಡ, ಕಾಡುನೇರಿಳೆ, ಬೇವು, ಸರ್ವೆ, ಹುಳಿಮಾವು, ಈಚಲು, ಬಿಲ್ವ, ಆಲ, ಪಣಿಯಾಲ, ಮಳೆ ವೃಕ್ಷ, ಸೀಬೆ, ಬಸುರಿ, ಸೀತಾಫಲ, ಪೊದೆಗಾಡು, ಮರಗಾಡುಗಳಿಂದ ಚಾಮುಂಡಿ ಬೆಟ್ಟ ತುಂಬಿ ಹೋಗಿದೆ—ಎಂಬ ಕಾವ್ಯಮಯ ವರ್ಣನೆಯು ವ್ಯಾಸ-ವಾಲ್ಮೀಕಿಗಳ ಗಿರಿ ವನ ವರ್ಣನೆಗಳನ್ನು ನೆನಪಿಗೆ ತಂದು ಕೊಡುತ್ತದೆ. ಅವತರಣಿಕೆಯ ಕೊನೆಯ ವಾಕ್ಯಗಳಲ್ಲಿ ಕಂಡು ಬರುವ ಉತ್ಪ್ರೇಕ್ಷೆಗಳು ಗ್ರಂಥಕರ್ತರ ಕಲ್ಪನಾಶಕ್ತಿಯ ಸೌಂದರ್ಯಕ್ಕೆ ಒಳ್ಳೆಯ ನಿದರ್ಶನಗಳಾಗಿವೆ. "ಚಾಮುಂಡಿಗು ನನಗು ಒಡಬಾಳು" ಎಂದು ವಚನವು ಮುಗಿದಿರುವುದು ಕವಿಮನದ ಪ್ರಕೃತಿ ಪ್ರೇಮವನ್ನು ಸಾರುತ್ತದೆ.

೬೧೪ನೆಯ ವಚನವು ಅಜಾತಶತ್ರುತ್ವದ ಅಮರ ಸಂದೇಶವನ್ನು ಪೌರುಷ ವಾಣಿಯಿಂದ ಸಾರುತ್ತದೆ. "ಅವರಿಗುಂಟೆ ನನ್ನ ವೈರಿಗಳೆನ್ನಿಸಿಕೊಳುವ ಯೋಗ್ಯತೆ? ಯಾರೆನ್ನ ರಿಪು ?........ನನ್ನ ಮಾನಸ ಸರೋವರಕ್ಕೆ ಕ್ಷುದ್ರ ಕ್ಷೋಭೆಯ ಭಯವಿಲ್ಲ" ಎಂಬ ಮೇಘನಾದವೂ ಇಲ್ಲಿ ಭಕ್ತಿ ಪ್ರಕಾಶನದ ಮಾಧ್ಯಮವಾಗಿದೆ. ಅಭಯ ಸಿದ್ಧಿಯು ಯೋಗಿಯ ಮಹಾದರ್ಶ. "ಭಯವೂ ನಾನೂ ಸೋದರರು ; ನಾನು ಹಿರಿಯ, ಅದು ಕಿರಿಯ" ಎಂದ ಜೂಲಿಯಸ್ ಸೀಸರನ ಉದ್ಗಾರದ ಧಾರ್ಷ್ಟ್ಯ ಇದರಲ್ಲಿದೆ. ಈ ಕೆಚ್ಚು ಅಚ್ಚಾಗಿ ಮೂಡಿದ ಚುಟುಕವು ಭಕ್ತಿ ಕಾವ್ಯಕ್ಕೆ ಹೊಸ ಮೆರುಗನ್ನು ಕೊಡುತ್ತದೆ.

೬೧೬ನೆಯ ವಚನವೊಂದು ಕಾಲಜ್ಞಾನ, ಸಾಮಾಜಿಕರ ಟೀಕೆ. ಅದು ಇಂದಿನ ಜನೋದ್ಧಾರಗಳ ಅಸ್ಪಷ್ಟ ತಾತ್ಪರ್ಯವಂತಿಕೆಯನ್ನು ನಿಂದಿಸುತ್ತದೆ, 'ಅಸ್ಮಾಕೂಣಾಂ ತಾರ್ಕಿಕೇಷಾಂ ಅರ್ಥಚ್ಯೇವನ ಶಬ್ದರಿ' ಎಂಬಂತಹ ವಿಚಾರ ವಾದವನ್ನು ಬೋಧಿಸುತ್ತದೆ. ಮಾತಿನಿಂದ ಮನೆಕಟ್ಟುವ ರಾಜಕೀಯ ನೇತೃತ್ವದ ಮೇನಕಾ ನರ್ತನವು ವಿಚಾರವಂತರಿಗೆ ಉಂಟುಮಾಡಿದ ಜುಗುಪ್ಸೆಯನ್ನು ಅವರ ದನಿಯಾಗಿ ಇದು ಪ್ರಕಟ ಮಾಡುತ್ತದೆ. ಇಂಥ ವಚನಗಳು ವಿಚಾರವಂತ ಓದುಗರ ಸಹಾನುಭೂತಿಯನ್ನು ಸುಲಭವಾಗಿ ಪಡೆಯುತ್ತವೆ. "ಬೇಜಾರು ಬರೆಹ ಬಲ್ಮೆಯ ವಚನವಾದೀತೆ, ರಂಗೇಶ ?" ಎಂಬ ೬೨೦ನೆಯ ವಚನಕ್ಕೆ ಬೇಜಾರವನ್ನು ಧ್ವನಿಸಿದ ಮೇಲಿನ ವಚನವು ಪ್ರತ್ಯುತ್ತರದಂತೆ ತೋರುವುದು ಒಂದು ಚಮತ್ಕಾರ! 'ಬ್ರಾಹ್ಮಣ ಮಾಡುವುದೆಲ್ಲ ಆಚಾರವಲ್ಲ; ಜಂಗಮ ಹಾಡುವುದೆಲ್ಲ ಶೀಲವಲ್ಲ; ಕವಿ

ತೋರುವುದೆಲ್ಲ ಸಮರ್ಪಕವಲ್ಲ; ಸಚಿವ ಸಾರುವುದೆಲ್ಲ ಒಪ್ಪತಕ್ಕದ್ದಲ್ಲ; ಎಚ್ಚರಿಕೆ ಪರಿಶೀಲನೆ ಎರಡೂ ಅಗತ್ಯ, ರಂಗಯ್ಯ, ಪ್ರಜಾಸ್ವಾತಂತ್ರ್ಯ ಇರುವ ರಾಷ್ಟ್ರದಲ್ಲಿ' ಎಂಬ ವಚನವು 'Eternal Vigilance is the watchword of Liberty' ಎಂಬ ರಾಜಕೀಯ ಸಂದೇಶವನ್ನು ಬೀರುತ್ತದೆ; "ಸಂತಃ ಪರೀಕ್ಷಾನ್ಯತರದ್ ಭಜಂತೇ" ಎಂಬ ಮಹಾಬೋಧವನ್ನು ಸಾರುತ್ತದೆ; ಬುದ್ಧಿ ಜೀವಿಗಳ ಕೈದೀಪವಾಗಿ ನಿಲ್ಲುತ್ತದೆ.

"ನಿಜವಾದ ದೈವ ಶ್ರದ್ಧೆಯನು ವಿಾರಿಸುವ ನರಾಸಕ್ತಿ ಅದೆಲ್ಲಿದೆ, ಸೋಲಿಸುವ ನರ ಶಕ್ತಿ ಅದಾವುದು?" ಎಂಬ ವಚನೋದ್ಗಾರವು ದೈವಶ್ರದ್ಧೆಯ ಅಜಯ್ಯ ಸತ್ವವನ್ನು ಘೋಷಿಸುತ್ತದೆ. 'ಸಂಶಯಾತ್ಮಾ ವಿನಶ್ಯತಿ' ಎಂಬುದರ ಸರಿಯಾದ ಸಾಂದರ್ಭಿಕ ತಾತ್ಪರ್ಯವನ್ನಿದು ನಿದರ್ಶಿಸುತ್ತದೆ. ಹಾಗೇ ಅದರ ಮುಂದಿನ ವಚನವು (೬೭೮) "ಹೊಗಳಿದವರೆನ್ನ ಹೊನ್ನ ಶೂಲಕಿಕ್ಕಿದರು ಕೂಡಲ ಸಂಗಮದೇವ" ಎಂಬ ವಚನವನ್ನು ನೆನಪು ಮಾಡಿಕೊಡುತ್ತದೆ. ಸ್ತುತಿ ಪರವಶತೆಯು ಮನುಷ್ಯರಿಗೆ ಅಪರಿಹರಣೀಯವಾಗುತ್ತದೆ ಎಂಬುದು ಒಂದು ಉತ್ಸರ್ಗ ಸತ್ಯ. "ಮಕ್ಕಳ ನಲಿವು ರಂಗ, ಮಕ್ಕಳಿಗೆ ಸಾಧ್ಯ" ಎಂಬ ಮುಂದಿನ ಏಕವಾಕ್ಯ ವಚನವು ಇನ್ನೊಂದು ವಿಶ್ವವಾಣಿ.

೬೮೫ನೆಯ ವಚನವು "ಕಾಕಸ್ಯ ಕತಿವಾ ದಂತಾ ಮೇಷಸ್ಯಾಂಡಂ ಕಿಯತ್ಪಲಂ? ಕಂಬಲೇ ಕತಿ ರೋಮಾಣಿ ಕಾ ವಾರ್ತಾ ಚೋಳ ಮಂಡಲೇ?" ಎಂಬ ಸುಭಾಷಿತದ ತಾತ್ಪರ್ಯವನ್ನು ಬಿಂಬಿಸುತ್ತದೆ, ಶುಷ್ಕ ಪಾಂಡಿತ್ಯವನ್ನು 'ರೀಸರ್ಚಿ'ನ ಹೆಸರಿನಲ್ಲಿ ಮೆರೆಯಿಸುವ ವಿಕೃತ ಕುತೂಹಲ ನಮ್ಮ ವಿಶ್ವವಿದ್ಯಾನಿಲಯಗಳಲ್ಲಿ ಕೆಲವೆಡೆ ಬೆಳೆಯು ತ್ತಿರುವುದನ್ನು ಖಂಡಿಸುತ್ತದೆ. ಹಾಗೇ ೬೮೦ನೆಯ ವಚನವು ಬೆಳ್ಳಕ್ಕರಿಗರನ್ನು ನಿಂದಿಸುತ್ತದೆ. ಮುಂದಿನ ವಚನ ಪ್ರಜಾಪ್ರಭುತ್ವದ ಬಹುಮತ ಮಾಡಿದ್ದೆಲ್ಲವೂ ನ್ಯಾಯವೆಂಬ ನಂಬಿಗೆಯನ್ನು ಖಂಡಿಸುತ್ತದೆ. ಇದೇ ಪ್ರಕಾರ ಸ್ವಾರ್ಥನಿಂದೆ ಮುಂತಾದವುಗಳನ್ನು ಮಾಡುತ್ತ ಹೋಗಿರುವ ವಚನಗಳ ಗುಂಪೊಂದು 'ಲೋಕ ಶಿಕ್ಷಣ ಟ್ರಸ್ಟ್' ಎನ್ನಬಹುದಾಗಿದೆ, 'ನೀತಿ ಸಹಸ್ರಕ' ಎಂದೆನ್ನಬಹುದಾಗಿದೆ.

೬೮೭ನೆಯ ವಚನವು—ಈ ವಚನಾದಿ ಸಾಹಿತ್ಯರೂಪಗಳು ಅಪ್ರಾಮಾಣಿಕತೆ ಯನ್ನು ಬಿಂಬಿಸದಿದ್ದರೆ ಸಾಕು, ಅಷ್ಟರಿಂದ ಅವು ಗ್ರಾಹ್ಯ—ಎಂಬ ರೂಲನ್ನು ಹೇಳಿರುವುದು ವಿಮರ್ಶಕನಿಗೆ ಕೊಟ್ಟ ಒಂದು ಎಚ್ಚರಿಕೆಯ ಧ್ವನಿಯೂ ಆಗಬಹುದು, ಕೃತಿರಚನೆ ಮಾಡಿದುದರ ಸಮರ್ಥನೆಯೂ ಆಗಬಹುದು, ವಿನಯೋಕ್ತಿಯೂ ಆದೀತು, 'ರಂಗ ಬಿನ್ನಪ'ವೆನ್ನಿಸಲೂ ಬಹುದು! ಇಂಥ ವಿವಿಧ ಪ್ರಪಂಚವೆನ್ನಿಸುವ ಕೃತಿಯನ್ನು ಕುರಿತೇ ಅಭಿನವ ಪಂಪನು "ಪರಮಬ್ರಹ್ಮ ಶರೀರ ಪುಷ್ಟಿ, ಜನತಾಂತರ್ ದೃಷ್ಟಿ, ಕೈವಲ್ಯ ಬೋಧರವಾ ಮೌಕ್ತಿಕ ಹಾರಯಷ್ಟಿ ಕವಿತಾವಲ್ಲೀ ಸುಧಾವೃಷ್ಟಿ ಸರ್ವರಸೋತ್ಪಾದ ನವೀನ ಸೃಷ್ಟಿ ಬುಧಹರ್ಷಾಕೃಷ್ಟಿ ಸರ್ವಾಂಗ ಸುಂದರಿ ವಿದ್ಯಾನಟಿ

ನಾಟ್ಯಮಂ ನಲಿಗೆ ಮತ್ಕಾವ್ಯಸ್ಥಲೀರಂಗದೊಳ್" ಎಂದು ಹೇಳಿರಬೇಕೆನ್ನಿಸುತ್ತದೆ. 'ಎನ್ನಪ್ಪ ಸತ್ಯನಾರಾಯಣ' ಎಂದು ಉಕ್ತ ವಚನದಲ್ಲಿ ಬಂದಿರುವುದಾದರೂ 'ಸತ್ಯೇನ ವಿಧೃತಂ ಸರ್ವಂ ಸರ್ವಂ ಸತ್ಯೇ ಪ್ರತಿಷ್ಠಿತಂ' ಎಂಬ ವ್ಯಾಸವಾಣಿಯ 'ಸತ್ಯ' ಪದದ ವಿವಿಧಾರ್ಥಗಳನ್ನು ಧ್ವನಿಸಲೆಂದೇ ಎಂದು ತೋರುತ್ತದೆ. 'ಸತ್ಯ' ಎಂದರೆ ಏಳನೆಯ ಊರ್ಧ್ವಲೋಕ, ಅಶ್ವತ್ಥವೃಕ್ಷ, ರಾಮ, ವಿಷ್ಣು, ನಾಂದೀಮುಖ ಶ್ರಾದ್ಧದ ಅಧಿದೇವತೆ, ಸತ್ಯತೆ, ಪ್ರಾಮಾಣಿಕತೆ, ಒಳ್ಳೆಯತನ, ಪಾವಿತ್ರ್ಯ, ಶಪಥ, ವಚನದಾನ, ನಿದರ್ಶಿತ ಸತ್ಯ ಅಥವಾ ನಂಬಿಗೆ, ಕೃತಯುಗ, ದೇವಾಧಿದೇವ—ಎಂದು ಮುಂತಾಗಿ ಅನೇಕ ಅರ್ಥಗಳುಂಟು; ಇವುಗಳಲ್ಲಿ ಯಾವ ಒಂದನ್ನು ಉಳ್ಳವನೂ ಸತ್ಯವಂತ, ಪ್ರಾಮಾಣಿಕ ಎನ್ನಿಸಬಲ್ಲ! Poetic sincerity and sincerity of the factual world ಕಾವ್ಯ ಸತ್ಯ, ಲೋಕ ಸತ್ಯ[3]—ಎಂಬ ಯಾವ ಸತ್ಯ ಅಥವಾ ಪ್ರಾಮಾಣಿಕತೆಯಾದರೂ ಸರಿ—ಎಂಬಂತಹ ಉದ್ಗಾರವು ಮೇಲಿನ ವಿಮರ್ಶನಿರ್ಧಾರವನ್ನು ಸಮರ್ಥಿಸದಿರದು. ಅವರವರಿಗೆ ಬೇಕಾದ ಅರ್ಥವನ್ನು ಅವರವರು ತೆಗೆದುಕೊಳ್ಳಬಹುದಾಗಿರುವಂತೆ ರಚಿತವಾಗಿರುವುದೇ ಮಹಾಕಾವ್ಯ ಅಥವಾ ಬ್ರಹ್ಮಕಾವ್ಯ—ಎಂದೊಮ್ಮೆ ಕನ್ನಡದ ಉದ್ದಾಮ ವಿಮರ್ಶಕರೊಬ್ಬರು ನುಡಿದದ್ದಿಲ್ಲಿ ಸ್ಮರಣೀಯ!

ಕಲಾಕೃತಿಗಳಲ್ಲಿ ಭಾಸವಾಗುವ ಜೀವನ ಸತ್ಯಗಳು ಸಾದೃಶ್ಯ ಸಂಬಂಧವುಳ್ಳವುಗಳಲ್ಲದೆ ತಾದಾತ್ಮ್ಯ ಸಂಬಂಧವುಳ್ಳವುಗಳಲ್ಲ; ಲೌಕಿಕವಾದ ವಸ್ತು ಸತ್ಯಗಳಿಗೆ ಅವು ಸದೃಶವಲ್ಲದೆ ಸಾಕ್ಷಾತ್ ವಸ್ತುಸತ್ಯಗಳಲ್ಲ. ಆದುದರಿಂದ ಅವುಗಳನ್ನು ಕಲೇತರ ದೃಷ್ಟಿಯಿಂದ ಯಾರಾದರೂ ನಂಬಿದರೆ ನಂಬಬಹುದು, ಬಿಟ್ಟರೆ ಬಿಡಬಹುದು. ರಸವಿಮರ್ಶೆಗೆ ಅಂಥ ನಂಬಿಗೆ-ಅಪನಂಬಿಗೆಗಳು ಪ್ರೇರಕಗಳಲ್ಲ. ಕಲಾಕೃತಿಗಳಲ್ಲಿರುವ ಸಂಗತಿಗಳು ಕಲಾಸಂಗತಿಗಳು, ವಸ್ತುಸಂಗತಿಗಳಲ್ಲ. ಮನುಷ್ಯರ ಆಸೆ, ಭಾವನೆ, ವಿಚಾರ ಹಾಗೂ ಅವರ ಪರಿಸ್ಥಿತಿಗಳೆಲ್ಲವೂ ಭಾವಗಳು, ಕಲಾಸಂಗತಿಗಳು ಅಥವಾ ರಸಪ್ರೇರಕ ಪ್ರತಿಮೆಗಳು—ಕಲಾಕೃತಿಗತವಾದಾಗ. ಆದುದರಿಂದ 'ರಂಗ ಬಿನ್ನಪ' ಒಂದು ಕಲಾಕೃತಿಯೇ ಆದರೆ ಅದಕ್ಕೆ ವಸ್ತು ಸತ್ಯಗಳನ್ನು ಪ್ರಾಮಾಣಿಕವಾಗಿ ಕೋರ್ಟಿನಲ್ಲಿ ಹೇಳಿದಂತೆ ಹೇಳಬೇಕೆಂಬ ಹೊಣೆ ಇಲ್ಲ. ಆದರೆ ಬರೆವವನಲ್ಲಿ ವಸ್ತು ಸತ್ಯಗಳ ತೂಕವಿದ್ದಷ್ಟೂ ಕಲಾಸತ್ಯಗಳು ಹೆಚ್ಚು ಹೆಚ್ಚು ಪ್ರಭಾವಿ ಸ್ವರೂಪಗಳಿಂದ ರಸಪ್ರೇರಣೆಯನ್ನು ಮಾಡುವುವು. ಈ ಅಂಶಗಳೆಲ್ಲವನ್ನೂ ಗಮನಿಸಿದರೆ ದಾಸರ ಪದ ಶರಣ ಸಾಹಿತ್ಯಗಳಲ್ಲಿರುವಂತಹ ವಸ್ತು ಸತ್ಯಗಳ ಹಿನ್ನೆಲೆ ಇದಕ್ಕೂ—ಇರಬಲ್ಲುದಾಗಿದೆ;

---

[3]. The proper and immediate object of Science is the acquirement or communication of truth; the proper and immediate object of Poetry is the communication of pleasure
—Coleridge

ಅಪ್ಸರ ಮಟ್ಟಿನ ವಾಸ್ತವಿಕತೆಯ ಆಭಾಸವನ್ನಿದು ಉಂಟುಮಾಡಬಲ್ಲುದು. ಅಂದರೆ ಗ್ರಂಥಕರ್ತರು ಅನುಭಾವಿಗಳೋ? ಅನುಭಾವಿಗಳು ಯೋಗಿಗಳಾಗಿರಬಹುದು ಅಥವಾ ಭಕ್ತರಾಗಿರಬಹುದು; ಅನುಭಾವಿ ಕವಿಗಳು ಅಂಥ ಅವತಾರಗಳನ್ನು ಅಲ್ಪ ಕಾಲ ತಾಳಬಲ್ಲರು. ಈ ಇನೆಯ ವರ್ಗದಲ್ಲಂತೂ ಗ್ರಂಥಕರ್ತರಿಗೆ ಸ್ಥಾನವಿದೆ. "ಭೋ ಶರಣು, ಶರಣು ದೇವರ ದೇವ ರಂಗನಾಥ! ನಾಥ ನೀನೊಬ್ಬನೆ ಅನಾಥ ಸನಾಥರಿಗೆಲ್ಲ. ಎಲ್ಲೆಲ್ಲು ನೀನಿದ್ದೆ ಇದ್ದೀಯೆ; ಇದ್ದೀಯೆ ಮುಖ್ಯವಾಗಿ ಮಾವಿನ ಕೆರೆಯ ಬೆಟ್ಟದ ಮೇಲೆ. ಬೆಟ್ಟದ ಮೇಲಣ ಗವಿಯೊಳಗೆ ನಿನ್ನದು ಸಾತ್ವಿಕ ಲಿಂಗರೂಪ; ಸಾತ್ವಿಕ ಲಿಂಗರೂಪದ ರಾಜಸ ವೆಂಕಟರಮಣ ನೀನು. ವೆಂಕಟರಮಣ ನೀನು ಅಪೇಕ್ಷಿಸಿದೆ ರಂಗನಾಥನೆಂಬ ಸವಿಹೆಸರ. ರಂಗನಾಥನೆಂಬ ಸವಿಹೆಸರೆ ನನ್ನ ವಂಶಕ್ಕೆ ನನಗೆ ಇಷ್ಟ ದೈವ! ದೈವಕೃಪೆ ಎಂಬುದಿದ್ದರೆ ನೋಡಬೇಕು ಅದನ್ನು ನಿನ್ನಲ್ಲಿ. ನಿನ್ನಲ್ಲಿ ತಾನೆ ನಮ್ಮ ಕಷ್ಟ ಸುಖ ನಷ್ಟ ನಲಿವು, ನಮ್ಮೆಲ್ಲ ಕಾಯಕ ವಚನ ಧ್ಯಾನ? ಧ್ಯಾನಕ್ಕೆ ಮಾತ್ರ ನಿನ್ನ ರಹಸ್ಯ ಅಷ್ಟಿಷ್ಟು ಗೋಚರ, ಚರಾಚರದ ಸೃಷ್ಟಿ ಸ್ಥಿತಿ ಲಯ ಕರ್ತೃ; ಲಯ ಕರ್ತೃ ಶಿವ ಸೃಷ್ಟಿಕಾರಕ ಬ್ರಹ್ಮ ಎರಡು ನೀನೆ. ನೀನೆ ಎರಡು ಮೂರು ಒಂದೆಂಬ ವಿಡಂಬದ ದೊಡ್ಡ ಆಟಗಾರ. ಆಟಗಾರನಾಗಿ ಮಾಟಗಾರನಾಗಿ ಜೀವಿಗಳ ಮುಸುಕಿರುವೆ ಮಾಯೆಯಿಂದ. ಮಾಯೆಯಿಂದ ಬಿಡುಗಡೆಯ ನಮಗೆ ದಯಪಾಲಿಸು, ದಯಪಾಲಿಸು ರಂಗಯ್ಯ. ಪಾಲಿಸು ರಂಗಯ್ಯ, ರಂಗಯ್ಯ, ಅಯ್ಯ!" ಈ ವಚನ ನಿದರ್ಶಿಸುವಂತೆ ಗ್ರಂಥಗತ ವಚನಗಳಲ್ಲಿ ಅರ್ಥಸ್ಪಷ್ಟತೆ, ತಾರ್ಕಿಕ ಹೊಂದಿಕೆ, ಉದ್ದೇಶಸ್ಫುಟತೆ ಮತ್ತು ಭಕ್ತಿಮಾಧುರ್ಯಗಳು ಅನುಸ್ಯೂತವಾಗಿವೆ. ಆದುದರಿಂದ ಇವು 'ಪ್ರತೀತಿಸುಭಗ' ವಚನಗಳು. ಇವುಗಳಲ್ಲಿ ನವ್ಯಂಮನ್ಯರ ಅಥವಾ ಯೋಗಿಮಾನಿಗಳ ಒಡಪುನುಡಿಗಳ ಸೀಗೆ ಬಲ್ಲೆಗಳಿಲ್ಲ. ಇವುಗಳದು 'ಸೀದಾರಾಸ್ತಾ'. ಈ ಮಿತ್ರಸಂಮಿತಿಗರ್ಭಿತವಾದ ಕಾಂತಾಸಂಮಿತಿಯು[4] 'ಕನ್ನಡ ನಾಡಲ್ಲಿ ಹೊಕ್ಕ ಕಲಿಯುಗವನ್ನು ಹೊಡೆದೋಡಿಸಿ' ಶುಭವನ್ನುತರಬಲ್ಲ ಜನಶಕ್ತಿಯನ್ನು ಪ್ರೇರಿಸುವ ಪ್ರಯತ್ನಗಳಲ್ಲಿ ಗಣ್ಯವಾದ ಒಂದು—ಎಂದು ಭಾಸವಾಗುವಷ್ಟು ಕಲೆಗಾರಿಕೆಯಿಂದ ತುಂಬಿದೆ. ಇಂಥ ಸಾಹಿತ್ಯ ಶಕ್ತಿಯಿಂದ ತುಂಬಿದ ಗ್ರಂಥಗಳು ಕನ್ನಡದಲ್ಲೀಗ ವಿರಳ.

ಧರ್ಮಾರ್ಥಕಾಮಮೋಕ್ಷಾಣಾಂ
ವೈಚಕ್ಷಣ್ಯಂ ಕಲಾಸು ಚ
ಕರೋತಿ ಕೀರ್ತಿಂ ಪ್ರೀತಿಂಚ
ಸಾಧು ಕಾವ್ಯನಿಷೇವಣಂ

ಎಂಬ ಸೂತ್ರವನ್ನು ನಿದರ್ಶಿಸುವ ಹಳಗನ್ನಡದ ಧಾರ್ಮಿಕ ಮಹಾ ಚಂಪೂ ಕಾವ್ಯಗಳಂತೆ ಗುಣ–ಗಾತ್ರಗಳಲ್ಲಿ ಬೃಹತ್ತಾಗಿರುವ ಪ್ರಸ್ತುತ ಗ್ರಂಥವನ್ನು ಒಂದು

4. The criticism inherent in art has a moral component..
—Thomas Maun

ಭಕ್ತಿಸಂಪುಟಗರ್ಭಿತವಾದ ಮಹಾ ನೀತಿಕಾವ್ಯವೆನ್ನಬಹುದು. ಇಲ್ಲಿಯ ನೀತಿ ಮುಖವಾದ ವಿಚಾರವು 'ಗೃಹಸ್ಥ ಸಂನ್ಯಾಸಿ'ಗೆ ಸಹಜವಾದುದು; ಅಂದರೆ ಯೋಗೋನ್ಮುಖ ಬುದ್ಧಿಯಿಂದ ಭೋಗದೊಡನೆ ರಾಜಿಮಾಡಿಕೊಂಡು ಸಂತುಷ್ಟಿಯನ್ನು ಕಾಣುವ ನಮ್ರಪ್ರವೃತ್ತಿ. ಕಾಳಿದಾಸನ ಪ್ರವೃತ್ತಿ ಹೀಗೇ ಇತ್ತು—ಎಂದು ಅವನ ಕೃತಿಗಳನ್ನೋದಿದ ಕೆಲ ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ಇದು ಒಂದು ವಿಧದ 'ರಾಜಯೋಗ'. ಪ್ರಪಂಚದಲ್ಲಿ ಬದುಕುವಾಗ ಕಷ್ಟಗಳಿಗಿಂತ ಸುಖಗಳನ್ನು ಹೆಚ್ಚಾಗಿ ಅನುಭವಿಸಿದ ಶಾರೀರಕನು ತನ್ನ ಇಂದಿನ ಸಾಮಾನ್ಯ ನಾಗರಿಕ ಜೀವನದ ಬಗ್ಗೆ ನೂರಕ್ಕೆ ೬೦–೭೦ರಷ್ಟು ಅಂಶತೃಪ್ತನಾಗಿ, ಹಿರಿಯರು ಹೇಳಿದ ಮುಕ್ತಿಸುಖವು ಬಹಳಕಾಲದ ಮೇಲೆ (ಜನ್ಮಾಂತರಗಳು ಉರುಳಿದ ಮೇಲೆ) ಹೇಗಾದರೂ ಸುಲಭವಾಗಿ ಸಿಕ್ಕುವಂತಾಗಲಿ–ಎಂದು ದೇವರನ್ನು ಪ್ರಾರ್ಥಿಸುವ 'ಗರತಿತನ' ಈ ಪ್ರವೃತ್ತಿಯಲ್ಲಿ ಕೆಲವೆಡೆ ಗುಪ್ತಗಾಮಿನಿಯಾಗಿಯೂ ಮತ್ತೆ ಕೆಲವೆಡೆ ಪ್ರಕಟಗಾಮಿನಿಯಾಗಿಯೂ ಹರಿಯುತ್ತದೆ. ಇದು ಸಾಮಾನ್ಯ ಸುಸಂಸ್ಕೃತ ಭಾರತೀಯ 'ಜೆಂಟ್ಲ್‌ಮೆನ್‌ಗಿರಿ'ಯ ಮಧ್ಯಮಮಾರ್ಗ, ನರನ ಅಯನ, ನಾರಾಯಣ. ಈ ನಾರಾಯಣೀಯವು ವೇದಾಂತ ಹೇಳಿರುವ ಸಾಧನ ಚತುಷ್ಟಯದಲ್ಲಿ ಒಂದಾದ 'ಶಮದಮಾದಿ ಸಾಧನ ಸಂಪತ್ತಿ'ಯನ್ನು ಗಳಿಸಲು ಹೊರಡುವ ಮಂದವಾದ ಖಚಿತ ಗತಿಯನ್ನು ಪಡಿನುಡಿಯುತ್ತದೆ. ಮುಕ್ತಿರೂಪದ ಪರಾತ್ ಪರದ ಬೆಲೆಯನ್ನು ಇಹದ ಬೆಲೆಗಿಂತ ಸ್ವಲ್ಪಮಾತ್ರ ಹೆಚ್ಚೆಂದು ಹೃದಯದಲ್ಲಿ ನಂಬಿ, ಇಹವನ್ನು ಧರ್ಮಾವಿರುದ್ಧವಾಗಿ ಅನುಭವಿಸುತ್ತ, ಕ್ರಮೇಣ, ಚಿರಕಾಲದಲ್ಲಿ–ನಿತ್ಯಾನಿತ್ಯ ವಸ್ತು ವಿವೇಕ, ಇಹಾಮುತ್ರ ಭೋಗವಿರಾಗ ಮತ್ತು ದೃಢವಾದ ಮುಮುಕ್ಷುತ್ವಗಳನ್ನು ಸಾಧಿಸುವ ಆದರ್ಶೋನ್ಮುಖ ಮಹತ್ವಾಕಾಂಕ್ಷೆಯುಳ್ಳ ಲೌಕಿಕ ಗೃಹಸ್ಥನ ನಿತ್ಯಜೀವನದ ಆಧಾರ ಶ್ರದ್ಧೆಯನ್ನು ಪ್ರತಿಬಿಂಬಿಸುವ ಈ ವಚನಗ್ರಂಥವು ವಿದ್ಯಾರ್ಥಿಗಳ ಚಾರಿತ್ರ ನಿರ್ಮಿತಿಗೆ[5] ಪ್ರೇರಕವಾಗುವ ಒಳ್ಳೆಯ ಶೈಕ್ಷಣಿಕ ಪಠ್ಯವಾಗಬಲ್ಲುದು. 'ಭಾರತೀಯತೆ' ಎಂದರೇನೆಂದು ತಿಳಿಯದೆ ಯದ್ವಾತದ್ವಾ ವಾದಿಸುವ ಆಧುನಿಕತಾಭಾಸದ ವ್ಯಾಮೋಹಕ್ಕೆ ಸಿಲುಕಿದ ಅನೇಕ ಪದವೀಧರರ ಅಭಾರತೀಯ ಸ್ವರೂಪವು ಅನುಕರಣೀಯವೆಂದು ತರುಣ–ತರುಣಿಯರಿಗೆ ತೋರಿದಾಗ ಅಂಥ ಧೃತರಾಷ್ಟ್ರ ದೃಷ್ಟಿಯ ಮಾಲಿನ್ಯಕ್ಕೆ ಮದ್ದರೆಯಬಲ್ಲ Wisdom Pills– ವಿವೇಕದ ಗುಳಿಗೆಗಳು ಈ ವಚನಗಳ ಕಪಾಟಿನ ಅರೆಗಳಲ್ಲಿವೆ. "ಚೆಂಬಿನಲಿ ಗಾಳಿ ತುಂಬಿರಲು ನೀರೆಂದು ಕುಡಿಯಲಾದೀತೇ? ಮೋಡಗಳ ಉಂಡೆಗಟ್ಟಿ ಭಕ್ಷಿಸಿ ಹಸಿವು ನೂಕಬಹುದೆ? ಸೌಖ್ಯವೀಯುವುದೆಂದು ನೆರಳನ್ನು ಅಪ್ಪಿಕೊಳ್ಳುವುದು ಸಾಧ್ಯವೆ? ಸಂಜಿನ ದಿಗಂತದಲ್ಲಿ ಹೊಳೆವ ಹೊಂಬಣ್ಣ

[5]. The great poets are judged by the frame of mind they induce.—Emerson

ವನು ಹಣದಂತೆ ಎಣಿಸಿಡಬಹುದೆ, ರಂಗೇಶ? ಬರಿಭಕ್ತಿಯನು ನೆಚ್ಚಿ ಕುಳಿತುಬಿಟ್ಟಲ್ಲಿ ಭಾರ ಇಳಿಯುವುದೆ ಬದುಕು ಸಾಗುವುದೆ ಸಮಾಜಜೀವಿಗೆ?''-ಎಂಬ ವಚನವು ಮೇಲಿನ ಅಭಿಪ್ರಾಯಕ್ಕೆ ಒಂದು ಆಧಾರ ನಿದರ್ಶನ. ವ್ಯಾವಹಾರಿಕವನ್ನು ಬಿಟ್ಟು ಪಾರಮಾರ್ಥಿಕದಲ್ಲಿ ಮುಳುಗುವುದು ಸಮಾಜಜೀವಿಗೆ ಅವಿವೇಕ–ಎಂಬುದೇ ಈ ವಚನವು ಹೇಳುವ ವಿವೇಕ. ಪಾರಮಾರ್ಥಿಕವು ''ನಾನು ತಾನು ಗುಡಿ ದೀಪ ಅರ್ಚಕ ಎಂಬುದೊಂದೂ ಗೋಚರಿಸಲಿಲ್ಲ ದೇವಿಯ ಧ್ಯಾನದಲ್ಲಿ ಲೀನನಾದೆನಗೆ'' ಎಂಬ ಒಂದು ವಚನಾಂತ ವಾಕ್ಯದಲ್ಲಿರುವಹಾಗೆ ಇರುತ್ತದೆ; ಅದು ಅಪರೂಪದ ಹಬ್ಬದ ಅಡಿಗೆಯನ್ನುಂಡಂತೆ ಇರಬೇಕು, ನಿತ್ಯವೂ ಉಣ್ಣತಕ್ಕ ಅಡಿಗೆಯಲ್ಲ; ಅಥವಾ ಇಡಿ ದಿವಸದಲ್ಲಿ ಒಂದುಕ್ಷಣ ದೇವರ ತೀರ್ಥವನ್ನು ಕುಡಿದು ತೃಪ್ತಿಹೊಂದುವ ಹಾಗಿರಬೇಕು, ೨೪ ತಾಸುಗಳಲ್ಲೂ ಕುಡಿಯತಕ್ಕ ವಸ್ತುವಲ್ಲ–ಎಂಬುದು ವಚನಗಳ ವಿವಿಧ ಸಂದರ್ಭಗಳನ್ನು ಕೂಡಿಸಿ ಓದುವುದರಿಂದ ಅನುಮಿತವಾಗುವ ತಾತ್ಪರ್ಯ. ಹಾಗಾದರಿದು ಕಪಟ ಸಂನ್ಯಾಸಿತನವೋ? ಅಲ್ಲ; ಅದಕ್ಕೆ ಸಾಕಷ್ಟು ವಿರುದ್ಧ ವಾದುದು. ಅಲ್ಪ ಕಾಲಿಕವಾದರೂ ಇಲ್ಲಿಯ ಪಾರಮಾರ್ಥಿಕತೆ ಅಪ್ರಾಮಾಣಿಕವಲ್ಲ; ಅದಿದ್ದಾಗ ಇದಿಲ್ಲ, ಇದಿದ್ದಾಗ ಅದಿಲ್ಲ–ಅಷ್ಟೆ. ಆದರೆ ಪಾರಮಾರ್ಥಿಕ ಪ್ರಜ್ಞೆಯ ಆಳ–ಅಗಲಗಳು ಹೆಚ್ಚಾಗುತ್ತ ಹೋಗುತ್ತಿದ್ದರೆ ಮಾತ್ರ ಈ 'ಗೃಹಸ್ಥ ಸಂನ್ಯಾಸ' ಸ್ವೀಕಾರ್ಯ; ಹಾಗಲ್ಲದೆ ಕಡಿಮೆಯಾಗುತ್ತ ಹೋದರೆ ಅತಿ ವ್ಯಾವಹಾರಿಕತೆಯ ಈ ಸಾಮಾಜಿಕತೆ ಟೊಳ್ಳುಗಟ್ಟಿಯಾಗುವುದು; ಪಾರಮಾರ್ಥಿಕತೆ ಇದ್ದಷ್ಟೇ ಇದ್ದರೆ ಮುಂದಿನ ಜನ್ಮದಲ್ಲಿ ಸುಧಾರಿಸೀತು–ಎಂದು ಊಹಿಸಬಹುದು; ಆದರೆ ಯಾಂತ್ರಿಕ ವಾದರೆ ಪ್ರಯೋಜನ ಕಡಿಮೆ; ಜಾಗರಿತವಾಗಿದ್ದರೆ ಮಾತ್ರ ಇದ್ದಷ್ಟಕ್ಕೆ ಇದ್ದಷ್ಟು ಬೆಲೆ ಇರುತ್ತದೆ. ಯಾಂತ್ರಿಕವಾಗುವುದು ಬೇರೆ, ಪಾರಮಾರ್ಥಿಕತೆ ಸ್ವಭಾವವಾಗಿ ಹೋಗುವುದು ಬೇರೆ. ಪರಮಾರ್ಥದ ಯಾಂತ್ರಿಕತೆ ಸಾಧಕನಿಗೆ ಪಾರಮಾರ್ಥಿಕವಾಗಿ ನಿರ್ಮೂಲ್ಯವಾದ Conditioned Reflex–ಕ್ಷೇಪ ಕ್ರಿಯಾಪ್ರಕಾರ; ಹದಿನಾರಾಣೆ ಇಂದ್ರಿಯ ದಾಸ್ಯದ ಭೋಗಕ್ಕಿಂತ ಉತ್ತಮ–ಅಷ್ಟೆ.

'ಶುದ್ಧ ಸಂತೋಷವೇ ಸ್ವರ್ಗ' ಎಂಬುದು ವಚನ ವಕ್ತಾರರ ಪಾರಮಾರ್ಥಿಕ ಆದರ್ಶ. ಕಾಮಕ್ರೋಧಾದಿ ಅರಿಷಡ್ವರ್ಗದಿಂದ ಮುಕ್ತವಾದದ್ದು ಶುದ್ಧ. ಹಾಗೆ ಕಾಮಕ್ರೋಧಾದಿಗಳ ಛಾಯೆಯಿಂದ ಕೂಡ ತನ್ನ ಮನಸ್ಸು ಪ್ರಚಲಿತವಾಗುತ್ತಿಲ್ಲ— ಎಂಬುದನ್ನು ಸತ್ಯವಾಗಿ ಪರೀಕ್ಷಿಸಿ ತಿಳಿದುಕೊಳ್ಳಬಲ್ಲ ಜ್ಞಾನವಂತಿಕೆಯು ಆರ್ಜನೀಯ. ಮುಗ್ಧತೆಯಿಂದ ಬರುವ ಆನಂದವು ಹದಿನಾರಾಣೆ ಶುದ್ಧವೆಂದು ನಿತ್ಯವಾಗಿ ಗ್ರಹಿಸಲು ಸಾಧ್ಯವಿಲ್ಲ; ಮುಗ್ಧತೆಯಲ್ಲಿ ನಿಷ್ಪಾಪತೆಯು ಮೌಢ್ಯವನ್ನು ಆಧರಿಸಿರುತ್ತದೆ; ಪಾಪತ್ವವು ಜ್ಞಾನ ಹೆಚ್ಚಾದ ಹಾಗೆ ಸಾಕ್ಷಾತ್ಕರವಾಗುತ್ತದೆ. ಆದುದರಿಂದ ಅರ್ಥಕ್ರಿಯಾಕಾರಿಯಾದ ಪೂರ್ಣ ಪ್ರಜ್ಞತೆಯೇ ಸಾತ್ಮ್ಯಹೊಂದಿದ ಬ್ರಹ್ಮಜ್ಞಾನ ಅಥವಾ ಶುದ್ಧ ಸಂತೋಷಸ್ಥಿತಿ ಅಥವಾ ಜೀವನ್ಮುಕ್ತಿ, ರಮಣಮಹರ್ಷಿತ್ವ. ಈ

ಔಪನಿಷದಿಕತೆಯು ಭಾರತೀಯ ನಾಗರಿಕತೆಯ ಗೌರೀಶಂಕರ ಶಿಖರ, ವ್ಯಕ್ತಿ ವಿಕಾಸದ ಪರಾಕಾಷ್ಠೆ. ಇದನ್ನು ತ್ರಿಕರಣಶುದ್ಧವಾಗಿ ಅನುಭವಿಸದಿರುವಾಗ ನಿಂದ್ಯವಾದ ಬಾಯಬ್ರಹ್ಮದ ಬರಡುವೇದಾಂತ ಪ್ರಕಟವಾಗುತ್ತದೆ. ಅದನ್ನು ಪ್ರಸ್ತುತ ವಚನಕಾರರೂ ತೆಗಳಿದ್ದಾರೆ. ಆದುದರಿಂದ ಅಯ್ಯಣ್ಣ ದೀಕ್ಷಿತರು 'ವ್ಯಾಸತಾತ್ಪರ್ಯ ನಿರ್ಣಯ'ದಲ್ಲಿ ಅಬಾಧಿತವಾಗಿ ಸಿದ್ಧಮಾಡಿರುವಂತೆ ನಾವಾದರೂ ಇಲ್ಲಿ ಗ್ರಂಥಕರ್ತರ ಮಹಾಸಿದ್ಧಾಂತವನ್ನು ಮೇಲೆ ಹೇಳಿದಂತೆ ನಿಗಮನಿಸಬಹುದು. ಈ Great Idea–ಮಹಾವಿಚಾರವನ್ನು ಗುಪ್ತ–ಪ್ರಕಟ ಮಹಾವೀಚಿಗಳಿಂದ ಈ ವಚನ ಸಾಗರದಲ್ಲಿ ಗುರುತಿಸಬಹುದು. ಹೀಗೆ ಪ್ರಯತ್ನಿಸಿ ಗುರುತಿಸಬೇಕಾಗಿ ಬಂದಿರುವುದು ಕಾವ್ಯವಾಣಿಯ ಕಾಂತಾಸಂಮಿತಿಸ್ವರೂಪದ ದೆಸೆಯಿಂದ. ಇದರಿಂದ ಪ್ರಸ್ತುತ ಗ್ರಂಥದ ಕಾವ್ಯತ್ವವು ಸಮರ್ಥಿಸಲ್ಪಡುತ್ತದೆ.

ಉದ್ದಕ್ಕೂ Rambling Style–ಸ್ವಚ್ಛಂದ ಲಘು ವೃತ್ತಿಯ ಶೈಲಿ[6] ಎದ್ದು ಕಾಣುವ ಈ ವಚನಗಳಲ್ಲಿ ಬಂದಿರುವ ಅಭಿಪ್ರಾಯ ಪ್ರಕಟನೆಗಳು ಒಂದಲ್ಲ, ಎರಡಲ್ಲ. ಲೋಕದ ಆಚಾರ–ವಿಚಾರಗಳಲ್ಲಿ ಡೊಂಕೆಂದು ತೋರಿದವುಗಳೆಲ್ಲವನ್ನೂ ಗ್ರಂಥಕರ್ತರು ಟೀಕಿಸಿದ್ದಾರೆ. ಗ್ರಂಥಕ್ಕೆ ಕಾವ್ಯತ್ವವಿರುವುದರಿಂದ (ಶಾಸ್ತ್ರಶೈಲಿ ಇಲ್ಲದುದರಿಂದ) ಅವುಗಳಲ್ಲಿ ಹಲವೆಡೆ ಸೌಂದರ್ಯ ತರ್ಕವೇ ಎದ್ದು ಕಾಣುವಂತಾಗಿದೆ. ಧಾರ್ಮಿಕ ಕಾವ್ಯಕ್ಕೆ ಲೌಕಿಕವಾದ ಕಾವ್ಯ ಎಂಬ ಪರಿಭಾಷಾನಾಮ ಬೇಕಾಗಿಲ್ಲ— ಎಂಬ ಅಭಿಪ್ರಾಯ ಪ್ರಕಟನೆಯೊಂದು ಉದಾಹರಣೆ. ಕಾವ್ಯವೂ ಅಲ್ಲ, ಶಾಸ್ತ್ರವೂ ಅಲ್ಲ—ಎನ್ನಿಸುವಂತಹ ಕೃತಿಗೆ ಸುಕೃತಿತ್ವವನ್ನು ಕೊಡಲು ಸಾಧ್ಯವಾಗದುದರಿಂದ ಧರ್ಮ (ದೈವಿಕತೆ+ನೈತಿಕತೆ) ಗರ್ಭಿತವೂ ಕಾವ್ಯಗುಣ ಪ್ರಧಾನವೂ ಆದ ಕೃತಿಯನ್ನು ಧಾರ್ಮಿಕ ಕಾವ್ಯವೆಂದು ಕರೆಯುವುದು ರೂಢಿ. ಭಕ್ತಿಯು ಭಾವನಾಂತರ್ಗತ, ಬಯಕೆ—ವಿಚಾರಗಳು ತದನುಯಾಯಿಗಳು—ಧಾರ್ಮಿಕ ಕಾವ್ಯದಲ್ಲಿ; ದೈವಿಕ, ನೈತಿಕ ವಿಚಾರಗಳು ಬೌದ್ಧಿಕ ವಿಚಾರಗಳಂತೆಯೇ ವಿಚಾರಗಳು[7] ಸಮರ್ಥಿತವಾಗಿರಲಿ, ಅಸಮರ್ಥಿತವಾಗಿರಲಿ. ಗ್ರಂಥಕರ್ತನಿಂದ ಕೃತವಾದೊಡನೆಯೆ ಇವೆಲ್ಲವೂ ಗ್ರಾಂಥಿಕ ಸಂಗತಿಗಳು (Facts). ಕಾವ್ಯಗ್ರಂಥದ ಸಂಗತಿಗಳು ಕಾವ್ಯರಸದ (Aesthetic Perception) ಆಸ್ವಾದದ ಪ್ರೇರಕಗಳು (Stimulants). ಆದುದರಿಂದ ಧಾರ್ಮಿಕ ಕೃತಿಯೊಂದು ಕಾವ್ಯವರ್ಗಕ್ಕೆ ಸೇರಬಲ್ಲುದಾಗಿದೆ. ಗದ್ಯ–ಪದ್ಯಗಳೆರಡೂ ಕಾವ್ಯಗಳಾಗಬಲ್ಲವು. ಆದುದರಿಂದ 'ರಂಗಬಿನ್ನಪ'ದ ಗದ್ಯವು ವಚನಸಾಹಿತ್ಯದಂತೆ ನವ್ಯ ಕಾವ್ಯದಂತೆ, ಚೂರ್ಣಿಕಾ ಮಾಲೆಯಂತೆ ಧಾರ್ಮಿಕ ಅಥವಾ ನೈತಿಕ ಕಾವ್ಯ

---

6. Style is a way of seeing things —Flaubert

7. Literature is of its nature involved with ideas because it deals with man in society. . —Trilling

ವೆಂದೆನಿಸಿದೆ. ಈ ಕಾವ್ಯದಲ್ಲಿ ಕಂಡುಬರುವ ರೂಪಕ ಸೌಂದರ್ಯ ಹೀಗಿದೆ: (೧) ಕಂದ ವೃತ್ತದ ಗಂಧವೀಳ್ಯ, (೨) ರಗಳೆ ಷಟ್ಪದಿಯ ಹಾರ ತುರಾಯಿ, (೩) ಮಣ್ಣು ಕಣ ನಾನು, (೪) ಚಿಂತೆ ರಾಕ್ಷಸಿಗೆ ಸಂತಾನ ಸಾವಿರ, (೫) ಸಾಲವದು ವೇದನೆಯ ಕಣಜ, (೬) ವಿವೇಕದಲ್ಲಿ ಬಲ್ಲಿದಗೆ ದುಡ್ಡು ಕೊರತೆ ಕಂಟಕವ ಛೇದಿಸಲು ಕರವಾಳು, (೭) ವೈರಾಗ್ಯ ಒಳ್ಳೆಯದಣ್ಣ. ಕೆರೆಯ ತೂಬು ; ಆದರಿಂದ ಹೊರ ಹೊರಟ ಕಾಲುವೆಯೆ ತೃಪ್ತಿ; ಹುಲುಸಾಗಿ ಬೆಳೆಸುವುದು ಸಂತೋಷಪಯಿರ, (೮) ನಿನ್ನೆ ನಾಳೆಗಳು ವೇಶ್ಯೆಯರು. ನಿರ್ಬಲದ ನರನ ಇಕ್ಕೆಲದಿ ಪಿಡಿದು ತಮ್ಮ ಥಳುಕಿನ ಬೆಡಗಿನಲಿ ಸೆಳೆದು ಬಳುಕಿಸಿ ತಬ್ಬಿಬ್ಬು ಮಾಡುವರು, (೯) ಕುಲವಧು ಕಲೆಯ ದುರ್ಭೇದ್ಯ ಹೃದಯವನು ಕದಿಯಬಲ್ಲ ಕಾದಲನೆ ರಸಜ್ಞ, (೧೦) ಕನ್ನಡವೆ ಮನೆಯ ಮಾಣಿಕ, (೧೧) ಬಡವನಿಗೆ ಹಸಿವು ನೀರಡಿಕೆಯ ಹಾವು ಚೇಳು, (೧೨) ಸಕಲರಿಗೂ ಜಾತಿ ಪದವಿ ಚರ್ಮ ತಾರತಮ್ಯಗಳ ವೈತರಣಿ, (೧೩) ಕಾಯ ಮನಸ್ಸುಗಳು ಕತ್ತರಿಯ ಕಾಲುಗಳು: ಎರಡೊಂದಾಗಿ ಕೂಡದಿದ್ದರೆ ಅಡ್ಡಿ ತೃಣವನು ಕತ್ತರಿಸುವುದೆಂತು? (೧೪) ಚಿತ್ತ ವೆಂಬುದು ಅತಿ ನಸನಸೆಯ ಪದಾರ್ಥ. ತೃಪ್ತಿ ಉಡಿಗೆಯ ಧರಿಸಲೊಪ್ಪದು ; ಶಾಂತಿ ತೊಡಿಗೆಯ ಒಲ್ಲೆನೆಂಬುದು, (೧೫) ಯೌವನ ದಶೆಯ ಬಹು ಜಲಾವರ್ತಗಳ ಈಜಿ ದಾಟಲು ತರುಣನಿಗೆ ಕುಟುಂಬಿನಿಯ ಹಿತಬೋಧೆಗಳೆ ಬೆನ್ನಿನ ಬೆಂಡು, ಉಳಿಸುವ ಸೊಂಟ ಪಟ್ಟಿ, (೧೬) ಲಕ್ಷ್ಮಿಯ ಕಟಾಕ್ಷ ಬಹುವಾಗಿ ಯಾರ ಮೇಲಿ ದೆಯೋ ಅವ ಯಥಾವತ್ತು ಲೋಕವ ಅರಿಯಲಾರ ಎಂದಿಗೂ, (೧೭) ನಾಲ್ಕು ಬಿಂದಿಗೆ ನೀರು ಸಣ್ಣ ಮೀನಿಗೆ ಸರೋವರ, (೧೮) ಲೇಖನಿ ಬರಿ ಕರಿಯ ಕಡ್ಡಿಯಲ್ಲ; ಎಚ್ಚರಿಕೆ! ಛದ್ಮವೇಷದ ಕಾಳಿಂಗ ಸರ್ಪ: ಅಚ್ಚಿನ ಹುಚ್ಚಿನಲಿ ಪಿಡಿದಲ್ಲಿ ಕಚ್ಚದೆ ಬಿಡದು, (೧೯) ಅನ್ಯ ಭಾಷೆಯ ಅನ್ಯಾಯ ಕಾಮವೆನ್ನುವ ಸಾಂಕ್ರಾಮಿಕ ಜಾಡ್ಯ ಸೋಂಕದಿರಲು, ಆರು ತಿಂಗಳು ತೀರುವುದರೊಳಗೆ ಕನ್ನಡ ಸಿಡುಬು ಹಾಕಿಸಬೇಕು, (೨೦) ಕೆಲಸ ಮಾಡುವ ಹಂಬಲವೆ ಹೆಂಡತಿ, (೨೧) ತನ್ನ ಮಡದಿಯೆ ತನಗೆ ರಂಭೆ ತಿಲೋತ್ತಮೆ ರತಿ ದ್ರೌಪದಿ ದಮಯಂತಿ ಸೀತೆ ಶಾರದೆ ಲಕ್ಷ್ಮಿ ಗೌರಿ—ಎಂದು ಕೊಳ್ಳುತ್ತ ಯಾವನು ಒಲಿಯುವನೊ ನಲಿಯುವನೊ ಬಲವಾಗಿ ನಂಬುವನೊ ರಂಗನಿಗೆ ನಮಸ್ಕರಿಸುವನೊ ಅವನ ನೆಮ್ಮದಿಯೊಂದು ನಂದಾದೀಪ; ಎಂದೆಂದು ನಂದುವುದಿಲ್ಲ.

ಮೇಲೆ ಕೊಟ್ಟ ಉದಾಹರಣೆಗಳಲ್ಲಿ ಹಲವಾರು ಲೋಕಾನುಭವದ ಉಕ್ತಿಗಳು: ಕೆಲವು ಗಾದೆ, ಕೆಲವು ಬೋಧೆ, ಕೆಲವು ವಾದ, ಕೆಲವು ಸ್ವಾದ. ಭಾರತದ ಸಂತ ಸಾಹಿತ್ಯದಲ್ಲಿ ಈ ಬಗೆ ಸ್ವಾಭಾವಿಕ. ಮನುಷ್ಯನು ತನ್ನ ಅನುಭವಗಳನ್ನು ಅನ್ಯರಿಗೆ ಹೇಳಬೇಕೆಂದು ಲವಲವಿಕೆ ತಾಳುವುದು ಸ್ವಾಭಾವಿಕ; ಆದರೆ ಇಂದು ಅಂಥವುಗಳನ್ನು ಕೇಳಬೇಕು, ಓದಬೇಕು ಎಂಬ ಕುತೂಹಲ ಅಷ್ಟು ಎದ್ದು ಕಾಣುವುದಿಲ್ಲ. ಇದೊಂದು ಆಧುನಿಕ ರೋಗ. ಒಬ್ಬನ ಆಯುಷ್ಯ ನೂರರ ಪರಿಮಿತಿಯುಳ್ಳದ್ದಾದುದರಿಂದ;

ಅವನಿಗೆ ಬಾಲ್ಯ, ಕೌಮಾರ, ಯೌವನ ಮತ್ತು ವಾರ್ಧಕ್ಯಗಳೆಂಬ ದೈಹಿಕ-ಮಾನಸಿಕ ಅವಸ್ಥಾಂತರಗಳು ಉಂಟಾಗುವುದರಿಂದ 'It is many times too late to mend —ಎಷ್ಟೋಸಲ ತಿದ್ದಿಕೊಳ್ಳುವ ಕಾಲವಿಾರಿ ಹೋಗಿರುತ್ತದೆ' ಎಂಬುದು ಅನುಭವಿಕ ಸತ್ಯವಾಗಿರುವಾಗ ಕೇಳುವ ಕುತೂಹಲ, ಶುಶ್ರೂಷೆ, ಕಲಿಯುವ ಆಶೆ ಎಂಬ ರೂಪದ ಶಿಕ್ಷಣವು 'Prevention is better than cure—ರೋಗ ಬಂದಮೇಲೆ ಚಿಕಿತ್ಸೆ ಮಾಡಿ ಗುಣಪಡಿಸಿಕೊಳ್ಳುವುದಕ್ಕಿಂತ ರೋಗ ಬಾರದಂತೆ ಮುಂಜಾಗ್ರತೆ ವಹಿಸುವುದೇ ಮೇಲು' ಎಂಬ ತತ್ವವೊಂದರಿಂದಲೇ ಸಮರ್ಥಿತವಾಗಿದೆ. ಆದುದರಿಂದ ಉಪದೇಶ ಸಾಹಿತ್ಯದತ್ತ ಮೂಗು ಮುರಿಯುವ ಆಧುನಿಕತೆಯು ಆತ್ಮಗ್ಲಾನಿಗೆ ಕಾರಣವಾಗಿದೆ. 'Education makes you a polished ass—ಶಿಕ್ಷಣವು ನಿನ್ನನ್ನೊಂದು ಉಜ್ಜಿ ಚೊಕ್ಕಮಾಡಿದ ಮೈಯನ್ನುಳ್ಳ ಕತ್ತೆಯನ್ನಾಗಿ ಮಾಡುತ್ತದೆ' ಎಂಬ ಮಾತಿನಂತೆ ಇಂದಿನ ಶಿಕ್ಷಣವು ಅಸಮರ್ಥ ಭಾರತೀಯತೆಯಿಂದ ಕೂಡಿದ ತರುಣ ತರುಣಿಯರನ್ನು ಶಿಕ್ಷಣದ ಕಾರಖಾನೆಗಳಲ್ಲಿ ರೂಪಿಸಿ ಹೊರಗೆ ಹಾಕುತ್ತಿರುವುದಕ್ಕೆ ಉಪದೇಶ ವಿಮುಖತೆಯನ್ನು ಪ್ರಶಂಸಿಸುತ್ತ ಅಥವಾ ಅಲಕ್ಷಿಸುತ್ತ ಬಂದುದೇ ಕಾರಣ. ಉಚ್ಚ ವೃತ್ತಗಳಲ್ಲಿ ಈ ಅಲಕ್ಷ್ಯಪರಾಧೀನರು ತುಂಬಿರುವಾಗ 'ರಂಗ ಬಿನ್ನಪ'ದಂಥ ಸಮಾಜ ಶಿಕ್ಷಣ ಮಾಧ್ಯಮಗಳು ಅಲ್ಲಿ ಇಲ್ಲಿ ಪ್ರಶಂಸಿಸಲ್ಪಟ್ಟರೂ, ಹಾರ್ದಿಕವಾಗಿ ಆಸ್ವಾದ್ಯವಾಗಿ ಮತ್ತು ಬೌದ್ಧಿಕವಾಗಿ ಪ್ರೇರಕ ಕಾರ್ಯವನ್ನು ಮಾಡಬಲ್ಲವು ಎಂಬುದು ಸಂದೇಹಾಸ್ಪದ. ಲೇಖನಿ ಇಂದು ಬರಿ ಕರಿಯ ಕಡ್ಡಿ; ಅದು ಕತ್ತಿಗಿಂತ ಬಲಿಷ್ಠವಲ್ಲ ಎಂಬಂತಾಗಲು ಕಳೆದ ೨೦ ವರ್ಷಗಳಲ್ಲಿ ನಮ್ಮ ದೇಶವು ಆಂಗ್ಲ ಮಾಧ್ಯಮದ, ಆಂಗ್ಲ ಗ್ರಂಥಗಳ ಮೂಲಕ ಪಡೆಯುತ್ತ ಬಂದ ವೈಜ್ಞಾನಿಕವೆಂದುಕೊಂಡ ನೀತಿ ಪಾಠಗಳೇ ಕಾರಣ. ಆಂಗ್ಲ ವಿಚಾರಗಳಷ್ಟೇ ಹೊಸ, ಸ್ವತಂತ್ರ ವಿಚಾರಗಳು ಎಂಬ ಮೋಹದಲ್ಲಿ ಭಾರತದಲ್ಲಿ ಸ್ವತಂತ್ರವೂ ತರ್ಕಶುದ್ಧವೂ ಆದ ವಿಚಾರವನ್ನು ಮೂಲಭೂತವಾಗಿ ಮಾಡುವ ಪ್ರವೃತ್ತಿ ಶಿಕ್ಷಿತರಲ್ಲಿ ಮಾಯವಾಗುತ್ತ ಹೋದದ್ದೇ ಹೆಚ್ಚು. ಹೀಗಿರುವಾಗ ಆಂಗ್ಲಪಂಡಿತರಾದ ಗ್ರಂಥಕರ್ತರು ತಮ್ಮ ಕನ್ನಡತನವನ್ನು ವಾಕ್ಯಶೈಲಿಯಲ್ಲಿ ಎಂದೂ ಕೊರತೆಗೀಡು ಮಾಡದೆ ಬಳಸಿಕೊಂಡು ಬಂದುದಲ್ಲದೆ, ಅನೇಕ ಕಡೆಗಳಲ್ಲಿ ಆಭಾಸಿಕವಲ್ಲದ (ನಿಜವಾದ) ತರ್ಕಶುದ್ಧತೆಯ ಕಾವಿನಿಂದ ನಮ್ಮ ಸಮಾಜ ಜೀವನದಲ್ಲಿ ಹಾಗೂ ಕುಟುಂಬ ಜೀವನದಲ್ಲಿ ಕಂಡುಬರುವ ಭಾರತೀಯ—ಅಭಾರತೀಯ "ಹೊಲೆ" ಗಳೆಷ್ಟನ್ನೋ ಎತ್ತಿ ತೋರಿಸಿ, ಭಾರತೀಯ ಸಂತರ ಸಹಜ ರೀತಿಯ ಒಕ್ಕಣೆಯ ಮೂಲಕ ಸುಸಂಸ್ಕೃತರ ಮನಸ್ಸನ್ನು ಸೂರೆಗೊಳ್ಳಲು ಈ ಗ್ರಂಥದ ಮೂಲಕ ಸಮರ್ಥರಾಗಿರುವುದು ಬಹಳ ಅಭಿನಂದನೀಯ. ಹಿತಮಿತವಾದ ಮೃದು ಮಧ್ಯಮ ಮಾರ್ಗ ಹಿಡಿದು ಬದುಕಬೇಕೆಂಬವರು ತಿಳಿದುಕೊಳ್ಳಬೇಕಾದ ಕಲಾಮೌಲ್ಯ, ನೀತಿಮೌಲ್ಯ ಮತ್ತು ಭೋಗಮೌಲ್ಯಗಳ ತಾರತಮ್ಯ ಜ್ಞಾನವನ್ನು ಆರೋಗ್ಯಕರವಾಗಿ ಕೊಡುವ 'ರಂಗಬಿನ್ನಪ'ವು ಒಂದು ದೃಷ್ಟಿಯಿಂದ ಒಂದು

'Book of knowledge—ಜ್ಞಾನಗ್ರಂಥ'[8] ವಾಗಿರುವುದು 'ಭಾರತಃ ಪಂಚಮೋ ವೇದಃ' ಎಂಬ ಸೂತ್ರದಂತೆ ಸಮರ್ಥನೀಯ. ಸದ್ಗುರುಗಳೆನ್ನಿಸಿ ಬಾಳಿದ ಗ್ರಂಥಕರ್ತರ ಅಪಾರ ಅನುಭವಗಳನ್ನು ಪ್ರತಿಬಿಂಬಿಸುವ ಈ ಗ್ರಂಥವನ್ನು ಅವರ ಸಚ್ಛಿಷ್ಯ ಲೋಕವಂತೂ ಶಿರಸಾವಹಿಸದಿರದು. "ರಂಗಬಿನ್ನಪ"ದ ಮಾತಿನಲ್ಲೇ ಹೇಳಬೇಕಾದರೆ ಇದರ ವಚನಗಳು ಚಾಮುಂಡಿ ಉಡುವ ಅಸಮಾನ ಸೀರೆಗಳಂತಿವೆ: "ಮಸುಕು ಬಿಳಿವಸನ, ಥಾಳಥಳ್ಯದ ಬೂದುರೇಸಿಮೆ, ಘಟ್ಟನೀಲಿಯ ಮುಖಮಲ್ಲು, ಹಸನು ಹೊಂಬಣ್ಣದ ಸಕಂಲಿಕೆ, ತೊಳಗಿ ಬೆಳಗುವ ನೀರಾಜಿ, ಜೇಡಬಲೆಯಂತೆ ತೆಳುವಾದ ನೂಲು, ಭಸ್ಮವರ್ಣದ ಕೈಮಗ್ಗ ಕವುದಿ; ಕಣ್ಣು ಮುಚ್ಚಾಲೆಯ ಚಂಚಲ ಶಾಲೆ; ಸರಸ್ವತಿ ಬಣ್ಣದ ನಿರ್ಮಲ ದುಕೂಲ; ಒಂದೊಂದಕ್ಕೆ ಒಂದೊಂದು ಕಳೆಯಿರುವುದನ್ನು ಕಂಡಿಹೆನಯ್ಯ, ರಂಗೇಶ".

---

[8]. From the point of view of the embodied beings, true knowledge is defined by Krishna as the awareness of all the aspects, fundamental and evolutionary, of the material world and of the spirit that abides as the ground of the world

—Krishna chaitanya

ಈಗಲಾಗಲಿ ಬಹುಕಾಲಾನಂತರದಲ್ಲಾಗಲಿ, ಹಿಂದೂ ದೇಶಕ್ಕೆಲ್ಲ ಒಂದೇ ಸಾಮಾನ್ಯ ಭಾಷೆಯೇರ್ಪಡುವ ಸಂಭವವು ಸ್ವಪ್ನೇಪಿ ಉಂಟಾಗ ತಕ್ಕುದಲ್ಲವೆಂದು ಹೇಳಬಹುದು. ಇಂಗ್ಲಿಷ್ ಭಾಷೆಯೂ ಸಂಸ್ಕೃತ ಭಾಷೆಯೂ ದೇಶದಲ್ಲೆಲ್ಲ ವಿದ್ಯಾವಂತರಿಗೆ ಮಾತ್ರ ಇದ್ದಮಟ್ಟಿಗೆ ಸಾಮಾನ್ಯ ಭಾಷೆಗಳಾಗಿವೆ. ಆದರೆ ಜನಸಮುದಾಯವನ್ನು ತೆಗೆದು ಕೊಂಡರೆ ಇಂಗ್ಲಿಷ್ ಎಂದಿಗೂ ಸಾಮಾನ್ಯ ಭಾಷೆಯಾಗಲಾರದು. ಈ ರೀತಿಯಲ್ಲಿ ಅನ್ಯಭಾಷೆಗೆ ಸರ್ವಜನ ಸೇವ್ಯವಾದ ದೇಶಭಾಷೆಗಳು ತಮಗಿರುವ ತ್ರಾಣದಿಂದ ಅವಕಾಶವನ್ನು ಕೊಡದೆ ಇರುವಾಗ, ಅವುಗಳನ್ನೇ ಅಭಿವೃದ್ಧಿಪಡಿಸಿ, ಈ ಕಾಲದ ಅಭಿಪ್ರಾಯಗಳಿಗೆ ತಕ್ಕಂತೆ ಉದಾರವಾದ ದೇಶಾಭಿಮಾನವು ಹುಟ್ಟಿ ವೃದ್ಧಿ ಹೊಂದುವುದಕ್ಕೆ ಬೇಕಾದ ನಾನಾ ವಿಷಯ ಜ್ಞಾನಾರ್ಜನೆಗೆ ಸಾಧಕವಾಗುವಷ್ಟು ಯೋಗ್ಯವಾಗಿ ಮಾಡುವುದು ಆವಶ್ಯಕವಲ್ಲವೆ?

ಎಚ್. ವಿ. ನಂಜುಂಡಯ್ಯ

(೧೯೨೧)

ಗುಂಡ್ಮಿ, ಚಂದ್ರಶೇಖರ ಐತಾಳ

ಹಂಸದಮಯಂತಿ ಮತ್ತು ಇತರ ರೂಪಕಗಳು

೧

ಪು.ತಿ.ನ. ಅವರ 'ಹಂಸ ದಮಯಂತಿ ಮತ್ತು ಇತರ ರೂಪಕಗಳು' ಎಂಬ ಕೃತಿಗೆ ಲಭಿಸಿದ ಪ್ರಶಸ್ತಿ ಆ ಕವಿ ಕನ್ನಡ ಸಾಹಿತ್ಯಕ್ಕೆ ಸಲ್ಲಿಸಿದ ಸೇವೆಗೆ, ಅವರದೇ ಆದ ವಿಶಿಷ್ಟ ಕಾವ್ಯ ಪ್ರಕಾರಕ್ಕೆ ದಕ್ಕಿದ ಪರಮಗೌರವ. ಪಂಪ ಚಂಪೂಕಾವ್ಯ ಶೈಲಿಗೆ ಹೇಗೋ, ಹರಿಹರ ರಗಳೆಗೆ ಹೇಗೆ ಪ್ರತಿಷ್ಠಿತನೋ, ಕುಮಾರವ್ಯಾಸ ತನ್ನ ಕಾವ್ಯಭಾಮಿನಿಯನ್ನು ಬಳುಕಿಸಿ ಹೇಗೆ ಮಹಾಕವಿಯೆನಿಸಿದನೋ, ತ್ರಿಪದಿಗೆ ಸರ್ವಜ್ಞ ಹೇಗೆ ಸರ್ವಶ್ರೇಷ್ಠನೋ, ಸಾಂಗತ್ಯಕ್ಕೆ ರತ್ನಾಕರವರ್ಣಿ ಹೇಗೆ ರತ್ನಪ್ರಾಯನೋ, ಬೇಂದ್ರೆಯವರು ಜನಪದ ಭಾವಗೀತ ಭಂಡಾರಕ್ಕೆ ಹೇಗೆ ಒಡೆಯರೋ, ಮಹಾಛಂದಸ್ಸಿನ ರಾಮಾಯಣ ದರ್ಶನಕ್ಕೆ ಕುವೆಂಪು ಹೇಗೆ ಅದ್ವಿತೀಯರೋ, ಪು.ತಿ.ನ. ಅವರು ಗೀತರೂಪಕಕ್ಕೆ ಹಾಗೆ ಸಿದ್ಧಿಪಡೆದವರು. ಗೀತರೂಪಕವನ್ನು ಬರೆಯಲು ಬರಿಯ ಕವಿಯಾಗಿದ್ದರೆ ಮಾತ್ರ ಸಾಲದು; ಆ ಕವಿಚೇತನದಲ್ಲಿ ಸಂಗೀತ, ನೃತ್ಯ, ನಾಟಕ ಕಲೆಗಳ ಸಂಸ್ಕಾರ ಬಟ್ಟೆಯಿಳಿದಿರಬೇಕು.

೨

'ಹಂಸ ದಮಯಂತಿ' ಗೀತರೂಪಕದಲ್ಲಿರುವ ಕಥಾವಸ್ತು ಹೊಸದೇನೂ ಅಲ್ಲ. ಇದು ಮೂಲತಃ ವ್ಯಾಸಪ್ರಣೀತ ಮಹಾಭಾರತದ ವನಪರ್ವದಲ್ಲಿ ಉಪಾಖ್ಯಾನ ರೂಪದಲ್ಲಿ ವರ್ಣಿತವಾಗಿದೆ. ಅನಂತರ ಸೋಮದೇವಭಟ್ಟ ತನ್ನ ಕಥಾಸರಿತ್ಸಾಗರದಲ್ಲಿ ಈ ಕಥೆಯನ್ನು ಹೇಳಿದ್ದಾನೆ. ಮಹಾಭಾರತದಲ್ಲಿ ಕೇವಲ ನಳದಮಯಂತಿಯರ ಇತಿವೃತ್ತದ ವರ್ಣನೆ ಬರುತ್ತದೆ. ಕಥಾಸರಿತ್ಸಾಗರದಲ್ಲಿ ಕಥೆಗೇ ಹೆಚ್ಚಿನ ಪ್ರಾಶಸ್ತ್ಯ.

ಮತ್ತೆ ಈ ಕಥಾವಸ್ತುವನ್ನು ತೆಗೆದುಕೊಂಡು ೧೨ನೇ ಶತಮಾನದಲ್ಲಿ ಕಾಶೀದೇಶದ ರಾಜನಾಗಿದ್ದ ವಿಜಯಚಂದ್ರನ ಆಸ್ಥಾನದ ಪ್ರಧಾನ ಪಂಡಿತನಾಗಿದ್ದ ಶ್ರೀ ಹೀರನ ಮಗ ಶ್ರೀ ಹರ್ಷ 'ನೈಷಧ' ಎಂಬ ೨೨ ಸರ್ಗಗಳುಳ್ಳ ಮಹಾಕಾವ್ಯವನ್ನು ಮೊತ್ತ ಮೊದಲ ಬಾರಿಗೆ ಸೃಷ್ಟಿಸಿದ. ಇದು ಸಂಸ್ಕೃತದ ಬೃಹತ್ತ್ರಯೀ ಕಾವ್ಯಗಳಲ್ಲಿ ಒಂದೆಂದು ಪರಿಗಣಿತವಾಗಿದೆ. ಮಾಘನ ಶಿಶುಪಾಲವಧ, ಭಾರವಿಯ ಕಿರಾತಾರ್ಜುನೀಯ ಗಳೊಡನೆ ನೈಷಧವೂ ಸೇರಿ ಗಣನೀಯವಾಗಿದೆ. ನೈಷಧದಲ್ಲಿ ಮೂಲ ಮಹಾಭಾರತದಲ್ಲಿ ವರ್ಣಿತವಾದ ಇತಿವೃತ್ತವನ್ನೇ ಆಧಾರವಾಗಿಟ್ಟುಕೊಂಡು ಕಾವ್ಯವಾಗಿ ಕಡೆದ ಕೌಶಲವನ್ನು ಕಾಣುತ್ತೇವೆ. ಅದರಲ್ಲಿ ನಳಮಹಾರಾಜ ಹಿಡಿದ ಹಂಸದ ಕರುಣಾ ಕ್ರಂದನದ ಸನ್ನಿವೇಶ ಮುಖ್ಯವಾಗಿದೆ. ಕನ್ನಡದಲ್ಲಿಯೂ ಈ ಕಥೆಯನ್ನು ಕನಕದಾಸ ಕಾವ್ಯವಾಗಿ ಸೃಷ್ಟಿಸಿದ್ದಾನೆ. ಬಸವಪ್ಪಶಾಸ್ತ್ರಿಗಳು 'ದಮಯಂತೀ ಸ್ವಯಂವರ' ಎಂಬ ಚಂಪೂಕಾವ್ಯವನ್ನು ರಚಿಸಿದ್ದಾರೆ.

'ನೀಲಾಕಾಶಕ್ರಮಣಚತುರ'ವೂ, 'ಹೈಮಕಾಸಾರಗೇಹ'ವೂ ಆದ ಹಂಸ 'ಮರ್ತ್ಯ ಪ್ರಣಯ ವಹನ'ಕ್ಕೆ ಸಾಧನವಾಯಿತು ಎಂಬ ವೈಚಿತ್ರ್ಯವೇ ಕವಿಯನ್ನು 'ಹಂಸ ದಮಯಂತಿ' ಎಂಬ ಗೀತರೂಪಕವನ್ನು ಬರೆಯಲು ಪ್ರೇರೇಪಿಸಿತಂತೆ. ಇದು ಕವಿಯ ಉದ್ದೇಶದಂತೆ, 'ನೈಜಂ ನೈಜಂ ಪ್ರಮುದಫಲದಂ ಸರ್ವಕಾಲಕ್ಕಂ' ಎಂಬಂತಾಗಿದೆ. ಸೂತ್ರಧಾರ ಕತೆಗಾರನನ್ನೂ, ಅವನ ಸಾಮರ್ಥ್ಯವನ್ನೂ ಹೊಗಳುವ ಹಾಡು ಆರಂಭದಲ್ಲಿ ಸುಂದರವಾಗಿ ಮೂಡಿದೆ; ಈ ಭೂಮಪ್ರೇಮದ ಕಥೆಗೆ ಕವಿ ಹೃದಯ ಮಾರು ಹೋಗುತ್ತದೆ :

ವ್ಯಥೆಗಳ ಕಳೆಯುವ ಕತೆಗಾರ
ನಿನ್ನ ಕಲೆಗೆ ಯಾವುದು ಭಾರ
ಯಾವುದು ವಿಸ್ತರ ಯಾವುದು ದುಸ್ತರ
ನಿನಗೆಲೆ ಹರ್ಷದ ಹರಿಕಾರ ?

ಕಪಿ ಹಾರಿತು ಹೆಗ್ಗಡಲನು ಎಂಬೆ
ಕಡಲನೆ ಕಡೆದರು ಬೆಟ್ಟದೊಳೆಂಬೆ
ನಿನ್ನೊಹೆಯು ಹೇರಾಳವ ತುಂಬೆ
ಸೃಷ್ಟಿ ಕರ್ತನಿಗು ಅರಿದೆಂಬೆ.

ಪುರುಷಸಿಂಹ ನಳಮಹಾರಾಜ ತನ್ನ ಯೌವನದ ಪೂರ್ವಾವಸ್ಥೆಯಲ್ಲೂ ಕೂಡ ಅಸ್ಪಷ್ಟವಾದ ರೀತಿಯಲ್ಲಿ ಯಾವುದೋ ಒಲುಮೆಗೆ ಕಾತರನಾಗಿರುವಾಗ ಆಕಾಶದಲ್ಲಿ ಹಂಸಗಳು ಹಿಮಾಲಯದಲ್ಲಿನ ಮಾನಸ ಸರೋವರಕ್ಕೆ ಕಾತರಿಸುತ್ತ ಹಾರಿಬರುವುದನ್ನು ಕಾಣುತ್ತಾನೆ ; ಹಂಸಧ್ವನಿ ಕೇಳಿಸುತ್ತದೆ :

ಮಂಜಿನ ಸೆರೆಯನು ಕಳೆದಿರೆ ರವಿಕರ
ನೀರೋಟಗಳಿಗೊ ಧುಮುಕುತಿವೆ
ನೆಗೆದು ನೆಗೆದು ಬರಸೆಳೆದಪ್ಪುವ ತೆರೆ—
ತೆಕ್ಕೆಯೊಳಗೆ ಸಲ್ಲಪಿಸುತಿವೆ
ತಡೆಯಿರದೆ
ದಡಕಲೆವ
ಅಲೆಗಳ ಬೇಸರ ಕಳೆಯುವಿರಾ?
ಬರಿನೀಲದ ತೆಳುನೀರಿನ ಹರಹಿನ
ಬೆಳುಪಿನ ತೆರಪನು ತುಂಬುವಿರಾ?
ನೀರಿನೆಳೆಯ ತಂಬೂರಿಯ ಮೀಟುತ
ಶ್ರುತಿನುಡಿಸುವ ಪಾದಗಳೆಲ್ಲಿ?
ಕೊರಳ ಬಳುಕಿನೊಳೆ ತಾಳವನಂಕಿಸಿ
ನಡೆಯ ತೋರ್ವ ಬಿನದಿಗಳೆಲ್ಲಿ?
ಚಂಚಲ ಜಲದಲ್ಲಿ
ಬಿಂಬವ ಚೆಲ್ಲಿ
ಎದೆಯೊಳಗಣ ಬರಿ ಮೂಕಭಾವಗಳೆ
ರೇಖೆಗೊಳುವ ಪರಿ ನೆರಳಿಂದೇಳುತ
ತೇಲುವ ಚಂದಿಗರೆಲ್ಲಿ?

—ಈ ಹಂಸಧ್ವನಿಯಲ್ಲಿ 'ಹಂಸಧ್ವನಿ'ಯ ಮಾಧುರ್ಯವಿದೆ; ಅಚ್ಛೋದ ಸರಸ್ಸಿನ ಸ್ವಚ್ಛತೆ ಇದೆ; ಹಂಸ ವಿಹಾರದ ಸ್ವಚ್ಛಂದವಿದೆ. ಮಾನಸ ಸರೋವರದ ಅಲೆ ಅಲೆಗಳ ಅಪ್ಪಳಿಸುವಿಕೆಯೂ ನಮ್ಮ ಕಿವಿಗೆ ಕೇಳಿಸುವಷ್ಟು ಹತ್ತಿರವಾಗುತ್ತದೆ. ಇಂಥ ಸಾಹಿತ್ಯ ಸಂಗೀತಗಳ ಸುಮಧುರ ಸಂಬಂಧವನ್ನು ಇನ್ನೆಲ್ಲಿ ಕಾಣಲಿ? ಸಾಹಿತ್ಯಕ್ಕಾಗಿ ಸಂಗೀತ ಬಲಿಯಾಗಿಲ್ಲ; ಗೀತಕ್ಕಾಗಿ ಭಾವ ದುರ್ಬಲವಾಗಿಲ್ಲ. ಈ ಸಿದ್ಧಿ ಅಪೂರ್ವ.

ಮಾನಸ ಸರೋವರದತ್ತ ಹಾರುತ್ತಿದ್ದ ಈ ಹಂಸಗಳ ಹಿಂಡಿಗೆ ನಳಮಹಾರಾಜನ ಉದ್ಯಾನ ಗೋಚರಿಸುತ್ತದೆ. ಅಲ್ಲಿಯ ಕಮಲ ವನ ದಣಿವನ್ನು ಕೆರಳಿಸಿತಂತೆ! ಬಿಡುವಿನೆಡೆಯನ್ನು ತೋರಿ ಅವುಗಳ ಬಗೆ ಅತ್ತ ಜಾರಿತಂತೆ. ಆ ಪ್ರಶಾಂತವನದಲ್ಲಿ ಹಂಸಗಳು ಬಂದು ತಂಗುತ್ತವೆ. ಪ್ರಶಾಂತವನದ ಪ್ರಥಮ ದರ್ಶನದಿಂದ ನಳ ಪುಲಕಿತನಾಗಿ 'ವನಂ ನವಮ್ಮಾತಿಥ್ಯಕ್ಕನುಮತಿಸಿ ಬಂದಂತಿದೆ!' ಎಂದು ಉದ್ಗರಿಸುತ್ತಾನೆ. ವಿದೂಷಕ ಅದಕ್ಕೆ 'ನಿನ್ನಂಥವನಿಗೆ ಉದ್ಯಾನವನ, ನನ್ನಂಥವನಿಗೆ ಕಾಡು' ಎಂದು ತಿಳಿಹಾಸ್ಯವನ್ನು ಹಾರಿಸುತ್ತಾನೆ. ನಳ ವಿದೂಷಕರಲ್ಲಿ ಕವಿ ರಸಿಕ-ಅರಸಿಕರ ಹೃದಯಗಳನ್ನು ಸೃಷ್ಟಿಸಿದ್ದಾರೆ; ರಸಿಕನಿಗೆ ಯಾವುದು ಸುಂದರವೋ ಅದು ಅರಸಿಕನ ಪಾಲಿಗೆ ಬೇಸರವೆನಿಸಬಹುದು ಎಂಬುದನ್ನು ಧ್ವನಿಸಿದ್ದಾರೆ.

ತಾರೆಗಳ ನಡುವಿರುವ ಕತ್ತಲಲ್ಲಿ ಏನನ್ನೋ ಹುಡುಕುತ್ತಿರುವಂತೆ ನಳನ ಬಗೆ ಅಲೆದಾಡುವುದು. ಎಳನೆರೆಯ ಬಟ್ಟಲಿಂದ ತೊಟ್ಟಿಡುವ ಬೆಳ್ಳಿಯನ್ನು ಕಂಡು ಅದನ್ನು

ತುಳುಕಿಸುವವರಾರು ಎಂದು ನಳ ಸುಯ್ಯುವನು. ಹೂಗುರುಳ ಹೆಮ್ಮರಗಳಾಚೆಯ ಬಾನು ನಳನ ಹಂಬಲದ ತವರಾಗುತ್ತದೆ. ಅದಕ್ಕೆ ಸರಿಯಾಗಿ ವಿದೂಷಕ, "ಹೀಗೆ ಅಲೆದಾಡುವ ನಿನ್ನ ಮನಸ್ಸನ್ನು ತಡೆದಿಡಬಲ್ಲ ವಸ್ತು ಎಲ್ಲೋ ದೂರದಲ್ಲಿರಬೇಕು" ಎಂದು ವಿನೋದ ಮಾಡುತ್ತಾನೆ. ನಳನ ಸೌಂದರ್ಯಾಸ್ವಾದನೆ ವಿದೂಷಕನಿಗೆ ಬೇಸರವನ್ನುಂಟುಮಾಡುತ್ತದೆ. "ನನ್ನ ಮೇಲೆ ಕನಿಕರಿಸು, ನನ್ನ ರೆಪ್ಪೆಯ ಮೇಲೆ ಮಲೆಯಂಥ ನಿದ್ರೆ" ಎಂದು ಸರೋವರದ ಹತ್ತಿರದ ಕಲ್ಲುಮಂಚದತ್ತ ನಡೆಯುತ್ತಾನೆ.

ನಳ ಹಂಸವೊಂದನ್ನು ಹಿಡಿದುದರಿಂದ ಉಂಟಾದ ಹಂಸಗಳ ಚೀತ್ಕೃತಿ ವಿದೂಷಕನಿಗೆ ಕೇಳಿಸುತ್ತದೆ. "ನಿನ್ನ ಅತಿಥಿ ನಾನು, ಕೊಲ್ಲದಿರು ಕೊಲ್ಲದಿರು" ಎಂಬ ಹಂಸವನ್ನು ಕಂಡು ನಳ, "ನಮ್ಮ ನುಡಿಯನ್ನು ಎಲ್ಲಿ ಕಲಿತೆ? ನೀನು ಸರಸ್ವತಿಯ ಹಂಸದ ಬಳಗವೇ?" ಎಂದು ವಿಸ್ಮಿತಚಿತ್ತನಾಗಿ ಕೇಳುತ್ತಾನೆ. ಆ ಮುದ್ದು ಹಕ್ಕಿ ನಳನಿಗೆ ರಾಜಹಂಸವಾಗಿ ಕಾಣಿಸುತ್ತದೆ.

> ಜಗದಿತರ ವಸ್ತುಗಳ ಚೆಲುವ ಶಂಕಿಸುವಂಥ ಕೊರಲ ಕೊಂಕು
> ಬೆಳ್ಳಿ ಬೆಳ್ಮಲರು ಬೆಳುದಿಂಗಳೀ ಮೆಯ್ಯ ಬೆಳುಪಿದಿರು ಮಂಕು

—ಆ ಸೌಂದರ್ಯಕ್ಕೆ, ಆ ಬೆಳಕಿನ ಬಿತ್ತಕ್ಕೆ ಮಾರುಹೋಗುತ್ತವೆ ನಳನ, ಕವಿಯ ಚಿತ್ತಗಳು:

> ಹೆಮ್ಮಲೆಯ ಘನತೆಯನು ಬೆಳ್ಮುಗಿಲ ಲಘಿಮೆಯನು
> ಬಾಂದಳದ ಬಿತ್ತರವ ದಿವದೆತ್ತರವನು
> ಮಲರಿನುಲ್ಲಸಿಕೆಯನು ಜಲದ ಮಂಗಲವನ್ನು
> ನಿನ್ನ ಹಿಡಿದೊಂದೆ ಹಿಡಿಯೊಳೆ ಹಿಡಿದೆನೆಂಬೆ.

ನಳ ತನ್ನನ್ನು ಮೆಚ್ಚಿದಹಾಗೆ ಹಂಸವೂ ನಳನನ್ನು, "ಗಂಡು ಜಾತಿಯೊಳಿಲ್ಲ ನಿನ್ನ ತೆರ, ಇನ್ನೊಬ್ಬ ದೊರೆ ಕುಮಾರ" ಎಂದು ಹೊಗಳುತ್ತದೆ. ಆ ಪ್ರಶಂಸೆಗೆ ನಳ ವಯೋನುಗುಣ ಸಹಜವಾಗಿ, "ಎಲೆ ಹಂಸ, ನನ್ನ ಸಮರಿಹರೆಂಬೆಯಾ ಹೆಂಗಳೊಳಗೆ?" ಎಂದು ವಿಚಾರಿಸುತ್ತಾನೆ. ಹಂಸ ಹೌದೆನ್ನುತ್ತದೆ. "ಅವಳಂತೆ ಇನ್ನೊಬ್ಬಳಬಲೆ ಜಾತಿಯೊಳಿಲ್ಲ, ಅದ್ವಿತೀಯಳು ಆಕೆ, ಅದ್ವಿತೀಯನು ನೀನು" ಎನ್ನುತ್ತದೆ. ಅವಳ ಆ ಅಸಮ ಸೌಂದರ್ಯವನ್ನು ಪ್ರಶಂಸಿಸಿ ಹಂಸ ಹಾಡುತ್ತದೆ:

> ನಿಂದೆಡೆಯನು ತುಂಬುವ ಸುಂದರನೇ
> ಕಂಡಿಹೆ ನಿನಗೆಣೆಯಾಕೆಯನು

* * *

ಕಳೆಮೊಗದೊಳು ಬೆಳಕಾಡುವ ಕಣ್ಣೊಳು
ಚೆಂದುಟಿಯೊಳನಗೆ ಹೊಳಹಿನೊಳು
ಕೆನ್ನೆಯ ಕುಳಿಯೊಳು ಗಲ್ಲದ ಸುಳಿಯೊಳು
ಹ್ರೀಶ್ರೀ ಕೀರ್ತಿಗಳೆಸೆವ ಚೆನ್ನೆಯನು
ಕಂಡಿಹೆ ನಿನಗೆಣೆಯಾಕೆಯನು.

ಬಾನಂಚಿನ ಅಂಚೆ, ನಲ್ನುಡಿಯ ಸಂಚು, ತಿಳಿಸಿದ 'ನೆಲದವಳೋ, ಜಲದವಳೋ, ಮುಗಿಲವಳೋ' ಆದ ಹೆಣ್ಣಿನ ಬಣ್ಣನೆಗೆ ನಳ ಮುಗ್ಧನಾದ. "ಹೆಸರಿಗೆ ತಕ್ಕವ, ದಮಯಂತಿಗೆ ಮಿಕ್ಕವ ನೀ" ಎಂದು ಹಂಸ ಇನ್ನಷ್ಟು ನಳನನ್ನು ಹೊಗಳುತ್ತದೆ. "ಸಂದೆಗಗೊಳ್ಳದಿರೈ ಚೆಲುವ, ಹೆಣ್ಣಾವಳು ಒಲ್ಲಳು ನಿನ್ನೊಲವ?" ಎಂದು ಉಬ್ಬಿಸುತ್ತದೆ. ಮನಸ್ಸಿನಲ್ಲಾದ ಹರ್ಷೋತ್ಕರ್ಷದಿಂದ ನಳ ಕಲಹಂಸವನ್ನು ಬಿಡುಗಡೆ ಮಾಡುತ್ತಾನೆ; ಆ 'ಆಗಸದವತಂಸ'ವನ್ನು ಹೋಗೆಂದು ಹಾರಿಸಿ ಬಿಡುತ್ತಾನೆ. ನಳನ ಹಿಗ್ಗು ಹಾಡಾಗಿ ಹರಿಯುತ್ತದೆ; ಆ ಹಾಡಿನಲ್ಲಿ ಸಹೃದಯನೂ ಹಿಗ್ಗಿ ಹಾಡುವಂತಾಗುತ್ತದೆ:

ಪೋ ಪೋ ಪೋ ಹಂಸ
ಆಗಸದವತಂಸ
ಪೋ ಸುಖಿಯಾಗೆಲೆ ಮಾನಸ ಸಖಿಯೇ
ಪೋಗು ಪೋಗು ಮನಬರುವೆಡೆ ಪೇಳಾ
ದಮಯಂತಿಗೆ ನಳನೆಂಬನ ತೆರವನು
ಪೋ ಪೋ ಪೋ ಹಂಸ
ಆಗಸದವತಂಸ

ಹಂಸ ಆ ಮಾತಿಗೆ ನಳನಷ್ಟೇ ಹಿಗ್ಗಿನಿಂದ ಹಾಡಿ ಉತ್ತರಿಸುತ್ತದೆ:

ಪೋಪೆ ಪೋಪೆ ಪೋಪೆ, ಅರಸೆ,
ಆ ಹೆಣ್ಣು ನಿನ್ನನೆ ವರಿಸೆ.
ಪೋಗಿ ಪೇಳಿ ನಿನ್ನಿರವಿನ ತೆರವನು
ಭಾಮಿನಿಯೆದೆಯನು ತೆರೆವೆನು ನಿನಗೆ
ಪೋಪೆ ಪೋಪೆ ಹರಸುತ ಅರಸೆ
ಆ ಹೆಣ್ಣು ನಿನ್ನನೆ ವರಿಸೆ.

ನಳನಿಗೀಗ ದಮಯಂತಿಯ ಹೆಸರೇ ಮಹಾಮಹಿಮೆಯಾಗಿ ತೋರುತ್ತದೆ; ಹಂಸ ವ್ಯೋಮದ ಅಂತರ್ಯಾಮಿಯಾಗುತ್ತದೆ:

ವ್ಯೋಮದಂತರ್ಯಾಮಿ ಶುಭ್ರತನು ಪಕ್ಷ ಶಾಲಿ
ಕಾಮುವನು ಕೊಂಡೊಯ್ಯುವದೋ ರಕ್ತ ಚಂಚುಪುಟದಿ
ನಿರ್ಬದ್ಧ ನಿರ್ವೇದದೊಳಗೆಲ್ಲು ರಮಿಸದ ಮನ
ನಿರ್ಬದ್ಧಮಾಯ್ತು ದಮಯಂತಿ ಎಂಬೀ ನಾಮದಿ.

ಹಂಸದ ಬೇಟೆಯಲ್ಲಿ ಉದ್ಯುಕ್ತನಾದ ನಳನಿಗೆ ಹೆಣ್ಣಿನ ಬೇಟವಾಯಿತು. ಪ್ರಣಯ ದೂತ ಹಂಸ ನಳನ ಒಲವಿನಂಚೆಯನ್ನು ಹೊತ್ತು ಹಿಗ್ಗಿನಿಂದ ದಮಯಂತಿಯ ಅಂತಃಪುರದ ಉದ್ಯಾನವನದಲ್ಲಿ ಇಳಿಯುತ್ತದೆ.

ಸಂಜೆ ಬಿನದಕೆ ಬನ್ನಿರೇ, ಸಖಿ, ಬನ್ನಿರೇ
ದುಂಡು ಮಲ್ಲಿಗೆ ಮುಗುಳಿನ ಚೆಂಡ ತನ್ನಿರೇ

—ಎಂದು ದಮಯಂತಿ ತನ್ನ ಸಖಿಯರನ್ನು ಹಾಡಿ ಕುಣಿಯಲು ಕರೆಯುತ್ತಾಳೆ:

ಬಾ ವಿಮಲೇ ಬಾ ಕಮಲೇ ಬನ್ನಿರಿ ಬಾರೆ ಶಕುಂತಲೇ
ಆಟದ ವೈಕುಲುಕಾಟದಿ ಕೆದರಲಿ ತಳಿರಸಿಂಗರದ ಮುಂದಲೆ
ಸುಳಿಗುರುಳೊಳು ನರು-
ಬೆಳಕನು ಬೀರುವ
ಮಣಿಯನುರುಳಿಸಲಿ ಚೈತಲೆ
ಬಾ ವಿಮಲೇ ಬಾ ಕಮಲೇ ಬನ್ನಿರಿ ಬನ್ನಿ ಶಕುಂತಲೇ

* * *

ನಡೆವಡೆ ನೆಲಧೆದೆ ಜುಮ್ಮೆಂದಿತೊ ಎನೆ
ನೇವುರದಿನಿದನಿಯೇಳುತಿರೆ
ಬಳುಕಿ ಬಳುಕಿ ಚೆಂಡಾಡುವ ಚಳಕವ
ಬಳೆಯಿಂಚರ ಬಲು ಹೊಗಳುತಿರೆ

—ಎಂದು ಸಖಿಯರು ದಮಯಂತಿಯ ಬಿನದವನ್ನು ಬಣ್ಣಿಸುತ್ತಾರೆ. ಹೆಮ್ಮರಗಳ ಅಂಚಿನಲ್ಲಿ ಸುಳಿದ ಅಂಚೆಯನ್ನು ಕಂಡು ದಮಯಂತಿ,

ಹಂಸ, ಹಂಸ, ಹಂಸ!
ಏನು ಚೆಲುವೇ
ಎಂಥ ಚೆಲುವೇ,
ಹಂಸ, ಹಂಸ, ಹಂಸ!

—ಎಂದು 'ಬಿಳಿಮುಗಿಲು ಬೆಳ್ಳಿ ಮುಗಿಲು ಹರಣವ ಕೊಂಡಿಹುದೋ' ಎಂಬಂತೆ ಕಂಡು ಬಂದ ಹಂಸವನ್ನು ಕಂಡು ವಿಸ್ಮಿತಳಾಗುತ್ತಾಳೆ. 'ಇಂಗಡಲಿನ ಸೊದೆಗಡಲಿನ ಮೆಲ್ದೆರೆಯ ಸೆರಗೋ, ಶಚಿಕಿವಿಯಿಂ ಜಗುಳಿರುವ ಮಂದಾರವೊ ಏನಿದು ಎನೆ', 'ಮೂಡಿಬರುವ ಕನಸೋ' ಎಂಬಂತಿರುವ ಹಂಸದ ಚೆಂದವನ್ನು ಹೊಗಳುತ್ತಾಳೆ. 'ಬಾನ್ ಮನದ ಸ್ವಪ್ನ' 'ಸರೋವರದ ಸುಕುಮಾರಿ'ಯಾದ ಆ ಅರಸಂಚೆ ದಮಯಂತಿಗೆ ಪ್ರಿಯವೆನಿಸುತ್ತದೆ. ದಮಯಂತಿ ಹಿಡಿಯ ಹೋದರೆ,

ಸಿಕ್ಕಿ ಸಿಕ್ಕಿ ಸಿಕ್ಕದಂತೆ ಹಕ್ಕಿಯೆ
ದಕ್ಕದೆಯೆ ಪೋಪೆ ಕೈ ಮಿಕ್ಕಿಯೆ
ಪಕ್ಕಬಡಿದು ಕೊಕ್ಕನೋರೆ—
ಮಾಡಿ ನಕ್ಕು ನಡೆವೆ!

—ಎಂದು ನುಡಿಯುವಂತೆ ಮಾಡುವ ಆ ಠಕ್ಕಿನ ಹಕ್ಕಿಯ ಹಂಸಗಮನವನ್ನು ಕವಿ ಸುಂದರವಾಗಿ ಮಾತಿನಲ್ಲಿ ಮೂಡಿಸಿದ್ದಾರೆ. ಹಂಸವನ್ನು ಆ ಹಂಸಗಮನೆ ಹಿಡಿದಾಗ ಅದು ನುಡಿವ ಮಾತು ಎಷ್ಟೊಂದು ಉಚಿತವಾಗಿದೆ ಆ ಪ್ರಣಯ ಸನ್ನಿವೇಶಕ್ಕೆ: 'ಎಷ್ಟು ಒರಟೇ ನಿನ್ನ ಕೈ, ಆತನದು ಎಷ್ಟು ಮೃದು!' 'ಪಟ್ಟಿನೊಳು ಹಿಡಿದರು ಪೆಟ್ಟಾಗದಂದದಿ' ಎಂದು ನಳನು ತನ್ನನ್ನು ಹಿಡಿದ ರೀತಿಯನ್ನು ಬಣ್ಣಿಸುವ ನೆಪದಲ್ಲಿ ಅವನನ್ನೇ ವರ್ಣಿಸುತ್ತದೆ ಹಂಸ! 'ಆತನನ್ನು ಕಂಡ ಹೊರತು ಅಂಥವನಿದ್ದಾನೆಂಬುದನ್ನು ತಿಳಿಯುವುದು ಕಷ್ಟ' ಎಂದು ಪ್ರಶಂಸಾ ಪತ್ರವನ್ನು ಕೊಡುತ್ತದೆ ಹಂಸ! ಕುತೂಹಲ ಕೆರಳಲು ಇಷ್ಟುಸಾಕು. ಮುಂದೆ ಹಂಸ ನಳನ ರೂಪ, ಯೌವನ, ಸಾಮರ್ಥ್ಯವನ್ನು ಕುರಿತು ಹಾಡುತ್ತದೆ. 'ದಿಟ್ಟಿ ಮುಟ್ಟಲೆದೆ ತಟ್ಟನೆ ತೆರೆವ' ಇನಸಮತೇಜನನ್ನು ನಾನು ಕಂಡೆನೆಂದು ಬಣ್ಣಿಸುತ್ತದೆ. ದಮಯಂತಿ ಆಲಿಸುತ್ತಾಳೆ. ತನ್ನ ಹೃದಯವನ್ನೇ ಸೂರೆಗೊಡುತ್ತಾಳೆ:

ಬಾನೆವೆ ಕವಿದಿಹ ಕಡಲ ಕಣ್ಣವನ
ನೋಟದಿ ನಲ್ಕಳೆ ಹೊಳೆಸುವನ
ಎಲ್ಲರ ಹದುಳಕು ಇಲ್ಲಾಸರೆ ಎನೆ
ಬಿತ್ತರದೆದೆಯ ಎತ್ತರದಾಳನು
ಕಂಡೆ ಕಮಲಮುಖಿ—

ಹರಳಿನ ಬಿಳುಪನು ಹೂವಿನ ಮೆಲುಪನು
ಒಂದೆ ಹಿಡಿಯೊಳೇ ಹಿಡಿದವನ
ಶಕ್ತಿ ಪುಷ್ಟಿ ಸೌಷ್ಠವ ಸರ್ವಾಂಗದಿ
ಕಟ್ಟುವಡೆದ ಮೈಕಟ್ಟಿನವನನು
ಕಂಡೆ ಕಮಲಮುಖಿ—

ಹುಲಿಯೊಲು ಹಿಡಿದೆನ್ನೆರಳೆ ಕಂಗಳಿಂ
ನೋಡಿ ಕೊರಲ ನೇವರಿಸಿದನ
ಜಗದೊಳು ನಿನಗೆಣೆ ಗಂಡಿಲ್ಲವು ಎನೆ
ಹೆಣ್ಣೊಳಿಹರೆ ಎಂದರೆನಗೆ ನಕ್ಕನ
ಕಂಡೆ ಕಮಲಮುಖಿ—

ತನ್ನ ಕನಸಿಗೇ ತಾ ಮರುಳಾಗುತ
ಮರವಿನೊಳೆಲ್ಲವ ನೋಡುವನ
ಒಳಸಲವಿನ ನಗೆವೆಳಗನು ಚೆಲ್ಲುತ

ಕೊನೆ ಬೆರಳನು ಮೊನೆ ಮೀಸೆಗೆಳೆವನ
ಕಂಡೆ ಕಮಲಮುಖಿ ಇನಸಮ ತೇಜನ
ತುಂಬುಗಣ್ಣೊಳರಳಂಬನೆಸೆವನ
ಕಂಡೆ ಕಮಲಮುಖಿ—

ಎದೆಯುಗಲದೊಳೇ ಬಗೆಯ ಹಿಡಿವನ
ಕಂಡೆ ಕಮಲಮುಖಿ—
ಬಗೆಯ ಲಹರಿಯೊಳು ಜಗವ ತೂರುವನ
ಕಂಡೆ ಕಮಲಮುಖಿ—
ಕಂಡ ಕಣಸಿನೊಳು ಕಾಂಬುದನೊಲ್ಲದನ
ಕಂಡೆ ಕಮಲಮುಖಿ—

ತನ್ನಂಥವನಿನ್ನೊಬ್ಬನಿಲ್ಲದನ
ಚೆಂದುಳ್ಳವಳೇ ನಿನಗೆ ತಕ್ಕವನ
ಕಂಡೆ ಕಮಲಮುಖಿ.

—ಎಷ್ಟೊಂದು ಸುಂದರವಾಗಿದೆ ನಳಮಹರಾಜ ಹಂಸದ ಹೃದಯಾಕಾಶದಲ್ಲಿ ದಮಯಂತಿಗೆ ಬರೆದ ಈ ಪ್ರಣಯ ಪತ್ರ ! ಹಾಡಿನ ಜೋಡಿದೆ ; ಅನುರಾಗದ ರಾಗವಿದೆ ; ಸಾಹಿತ್ಯದ ಸುಧೆಯಿದೆ; ಇನ್ನೇನು ಬೇಕು ಸಹೃದಯನಿಗೆ ! ಇವನ್ನು ಕೇಳಿದ ದಮಯಂತಿಯ ಹೃದಯ ಎಷ್ಟು ಹಿಗ್ಗಿತೋ ಹಾಗೆ ಸಹೃದಯನೂ ಹಿಗ್ಗಿ ಹಿಗ್ಗಿ ಕುಣಿಯುತ್ತಾನೆ.

ಸವಿ ನುಡಿಯೊಳೆ ನನ್ನ ಹದುಳ ಕೆಡುವೊಲುಗೈದೆ
ನಾನೊಲಿದೀ ನಾನೇ ನನ್ನಿಂ ಜಗುಳುವವೋಲಾದೆ

—ದಮಯಂತಿ ಹಂಸದ ಈ ಬಣ್ಣನೆಗೆ ತನ್ನನ್ನು ತಾನೇ ಮರೆಯುತ್ತಾಳೆ. ಹಂಸ, ನಳದಮಯಂತಿಯರ ಪ್ರಣಯಪ್ರವಾಹದ ಸೇತುವಾಗುತ್ತದೆ. ಹಂಸದ ಹಿಂಡು ಈ ಪ್ರಣಯದೂತನನ್ನು ರೆಕ್ಕೆ ಬಡಿದು ಕೂಗಿ ಕರೆಯುತ್ತದೆ. ಹಂಸ,

ಬಂದೆ ಬಂದೆ ಬಂದೆನಿಗೋ ಬಳಗವೇ
ಹಾರಿ, ಹಾರಿ
ಹೆಣ್ಣಿನ ಚಿಗುರು ಕೈಗಳಿಂ ಜಾರಿ

—ಎಂದು ಮರುದನಿಗೊಡುತ್ತದೆ. ಹಂಸ ಬರಿಯ ಹಕ್ಕಿಯಾಗದೆ ನಳನ ನೆಂಟನೋ, ದಮಯಂತಿಯ ಸಖಿಸೋ ಎಂಬಂತೆ ಕಾಣಿಸುತ್ತದೆ. ಹೀಗೆ ಕವಿಮನಸ್ಸಿನ ಸರೋವರ ದಲ್ಲಿ ಗಳಿಗೆ ಕಾಲ ನಿಂತ ಹಂಸ ಕಲೆಯ ಕೊಡುಗೆಯನ್ನುಂಟುಮಾಡಿತು. ನೈಷಧ ಕಾವ್ಯದಲ್ಲಿ, ಕನಕನ ನಳಚರಿತ್ರೆಯಲ್ಲಿ, ದಮಯಂತೀ ಸ್ವಯಂವರದಲ್ಲಿ ಬಂದುದಕ್ಕಿಂತಲೂ ಸುಂದರವಾಗಿ ಈ ಸನ್ನಿವೇಶ ಗೀತ, ರೂಪಕ, ಸಾಹಿತ್ಯಗಳ ತ್ರಿವೇಣೀ ಸಂಗಮದೊಂದಿಗೆ

ಕಣ್ಣಿಗೆ ಕಟ್ಟುವಂತೆ ಚಿತ್ರಿತವಾಗಿದೆ; ಜೀವಂತವಾಗಿ ರಸ ಮಿಡಿಯುತ್ತದೆ. ಮಹಾಕವಿಗಳು ವಿವರವಾಗಿ ಹೇಳದೆ ಬಿಟ್ಟ ಸನ್ನಿವೇಶ ಪ್ರತಿಭಾವಂತ ಕವಿಯ ಕೈಯಲ್ಲಿ ಪುನಃ ಸೃಷ್ಟಿಯಾಗಿ ರಸಕೃತಿಯಾಗುವುದು ಸಾಧ್ಯ ಎಂಬುದನ್ನು ತೋರಿಸಿಕೊಟ್ಟಿದೆ.

೩

'ಹರಿಣಾಭಿಸರಣ' ಎಂಬ ಗೀತರೂಪಕದ ಹೆಸರಿನಲ್ಲಿ ಹರಿಣಾಕ್ಷಿ ಜಾನಕಿ ಸ್ವರ್ಣವರ್ಣದ ಹರಿಣಕ್ಕೆ ಮೋಹಗೊಂಡ ಭಾವನೆ ಎಷ್ಟು ಚೆನ್ನಾಗಿ ಅಭಿವ್ಯಕ್ತವಾಗಿದೆ. 'ಶ್ರೀರಾಮನ ಸತಿಗಾಗಲು ಮಾಯಾಮೃಗದೀಹೆ, ಶ್ರೀರಾಮಾಯಣವಾಯಿತು ಮುನಿ ಕರುಣೆಯ ಗಾಹೆ' ಎಂಬ ನಾಂದೀ ಶ್ಲೋಕದೊಂದಿಗೆ ಆರಂಭವಾಗುತ್ತದೆ, ಈ ಗೀತ ರೂಪಕ. ರಾಮಾಯಣ ಮಹಾಕಾವ್ಯದಲ್ಲಿ ನಡೆದ ಆ ಸಣ್ಣ, ಆದರೂ ಮುಖ್ಯವಾದ ಘಟನೆಯನ್ನು ಎತ್ತಿಕೊಂಡು ಕವಿ ಗೀತರೂಪಕವಾಗಿ ಸೃಷ್ಟಿಸಿದ್ದಾರೆ. ಸೀತೆಯಂಥ ರೂಪ ಸ್ತ್ರೀಯನ್ನು ಕಂಡು ಎಂಥವರಿಗೂ ಕೂಡ ರಾವಣನಂತಾಗುವುದು ಆಶ್ಚರ್ಯವಲ್ಲ:

ಅಡಿಯಿಡುವೆಡೆಯೊಳು ಅಲರಲರರಳಿತೊ
ಎನೆ ಮೃದುಪದಗತಿ ನೆಲವನು ಪುಳಕಿಸೆ
ಮಲೆ ಬನ ಹೊನಲಿನ ದುಂಡುಕೊಂಕುಗಳ
ರೇಖಿಸಿ ಸೃಷ್ಟಿಯ ಮೊನೆಯಿದೆ ಎನಿಸುವ
ರೂಪಿನ ತರುಣಿಯು ಕಂಡು

ಪುರುಷರಿಬ್ಬರನ್ನು ತಿರೆಯಲ್ಲಿರಗೊಡದ ಚೆಲುವು ಸೀತೆಯದಂತೆ! ಪುರುಷೋತ್ತಮನಾದ ಶ್ರೀರಾಮನ ಒಲವು ಅಂಥವಳಲ್ಲಿ ನೆಲೆಸಿರುವುದು ಅಚ್ಚರಿಯಲ್ಲ ಎಂಬಂತಾಗುವುದು. ಅಂಥ ಸೀತೆಗೆ ಪಂಚವಟಿಯ ಹೊದರಿನಲ್ಲಿ ಸ್ವರ್ಣವರ್ಣದ ಹರಿಣವೊಂದು ಕಾಣಿಸುವುದು; ಹೊದರಿನ ಅರಳೆಂಬಂತೆ ಹೊಳೆಯುವುದು:

ಚಿಟ್ಟೆಗೆ ಬಣ್ಣವ ಕಲಿಸುವ ಹೂವೆ
ಕಲಿಸು, ಕಲಿಸು ಗೊಂಚಲೊಳೇ ಬಿಡುವೆ
ಹಾಡಿಗಿಂತಲೂ ಮೌನವೆ ಸವಿಯೆನೆ
ದುಂಬಿಯು ತಂಗಿಸಿದೆಯ ಪೊಲ್ಲೆನನೆ
ಅಲ್ಲಾ ಹೊದರೊಳು ಏನದು ಹೊಗರು?
ರನ್ನದರಳು ಚೆಂಬೊನ್ನಿನ ಚಿಗುರು!

'ಬಾ ಬೇಗ ರಮಣ, ಆಗೋ ನೋಡು ಎಂಥ ಹರಿಣ' ಎಂದು ಆಶ್ಚರ್ಯಪಟ್ಟರೆ ರಾಮನೂ ಅದರ ಸೌಂದರ್ಯಕ್ಕೆ ಮಾರುಹೋಗುವಂತಾಗುತ್ತದೆ. ಕಾನನ ಚೇತನದಾಭರಣವಾಗಿ, ದಿಟ ತೋರಿಕೆಗಳ ಭ್ರಮೆಯನ್ನು ತರುತ್ತ, ಕಡಲಿನ ನೀಲದ ಕಿಡಿ, ಎದೆ

ಗೆಂಪಿನ ಕುಡಿ, ಮಿಂಚಿನ ಹುಡಿಯಾಗಿ ಸುಳಿಯುತ್ತದೆ ಹರಿಣ. ರಾಮ ಸೀತೆಯರಿಗೆ ಈ ರೀತಿ ಕಂಡರೆ ಲಕ್ಷ್ಮಣನ ಸೂಕ್ಷ್ಮ ಅಕ್ಷಿಗೆ ಅದು ತೋರುವ ಬಗೆಯೇ ಬೇರೆ:

ನೋಡುತ ನೋಡುತ ಮೂಡುವುದೆನ್ನೊಳು ಶಂಕೆ
ಆಹ ಎಂಥ ತಳಕು ಜಿಂಕೆ!

ಈ ಆಕ್ಷೇಪಣೆಗೆ ಸೀತೆಯ ಮನಸ್ಸಿನಲ್ಲಾದ ಜಿಂಕೆಯ ಮೋಹವನ್ನು ಯಾರೂ ಬದಲಾಯಿಸಲಾರರೆಂಬಂತೆ ಈ ಅರಣ್ಯವಾಸದ ಕೊನೆಯ ಅವಧಿಯಲ್ಲಿ ವನ ತಮ್ಮನ್ನು ಬೀಳ್ಕೊಡಲು ಕಾಣಿಕೆಯರ್ಪಿಸಿತೋ ಎಂಬಂತೆ ಆ ಜಿಂಕೆ ಸೀತೆಗೆ ತೋರಿತಂತೆ:

ಬಿಡುವ ಮುನ್ನ ಬನ ನಮಗೀವರ್ತಿಯ
ಕಾಣಿಕೆಯಂತಿದೆ ಜಿಂಕೆ!
ಇದರೊಳು
ನಮಗೇತಕೆ ಶಂಕೆ?

'ಹಬ್ಬಕೆ ಸಿಂಗರಗೊಂಡಿರುವಂತಿದೆ ಬನಹರಣ, ಅಗೊ ಕಾಂಬುದೆಂಥ ಹರಿಣ!' ಎಂದು ರಾಮನೂ ಸೀತೆಯ ಮಾತಿಗೆ ಶ್ರುತಿಗೂಡಿಸುವನು. ಬಣ್ಣಕ್ಕೆ ಭ್ರಮೆಗೊಂಡ ಅಣ್ಣನಿಗೆ ಬುದ್ಧಿ ಹೇಳುತ್ತಾನೆ ಲಕ್ಷ್ಮಣ:

ಚಿಂತಿಸು ಚಿಂತಿಸು ಅಣ್ಣ—ನೀನಿದ
ಹಿಡಿಯಲು ಹೋಗುವ ಮುನ್ನ
ಜಿಂಕೆಗೇತಕೀ ಮೈಬಣ್ಣ
ಕೆರಳಿಸಲೆಲ್ಲರ ಕಣ್ಣ!

—ಎಂದು ಸತ್ಯಸ್ಥಿತಿಯನ್ನು ಹೇಳಿದರೂ ಕೇಳುವುದಿಲ್ಲ. 'ಇದು ಹೊಂಡದ ಮೇಗಣ ಸೊಂಪಿನ ತೆನೆ' ಎಂಬ ಒಂದು ಮಾತಿನಲ್ಲಿ ಮಾರೀಚನ ಮಾಯಾ ಮೃಗವೇಷವನ್ನು ಎಷ್ಟು ಸುಂದರವಾಗಿ ನಿರೂಪಿಸಿದ್ದಾರೆ!

ಆಗಲು ತಕ್ಕುದು ಈ ಮಿಗ ಜಗದಾಭರಣ
ಅಗೊ ನೋಡು ಎಂಥ ಹರಿಣ!

—ಪುನಃ ಪುನಃ ಈ ಭಾವದ ಆವೃತ್ತಿ ಸೀತೆಯ ಅಸೀಮ ಆಸೆಯನ್ನು ಧ್ವನಿಸುತ್ತದೆ. ರಾಮನೂ ಕೂಡ ಸೀತೆಯ ಭ್ರಮನಿರಸನ ಮಾಡದೆ ಅವಳ ಅನಿಸುವಿಕೆಗೆ ಅಸ್ತು ಎನ್ನುತ್ತಾನೆ:

ಕಲ್ಲು ಹೂವಿನ ಬಂಡೆಯಿದಿರಿದು
ಎಂಥ ಚೆಲುವನು ತಳೆದಿದೆ!
ನೋಡ ನೋಡುತ ನಿನ್ನೊಲೆನಗೂ
ಇದರೊಳಾಸೆಯು ಬಲಿದಿದೆ

ಇಂಥ ಮಿಗ ವನವಾಸದಳಲನು
ಕಳೆವುದೆಮ್ಮೊಡನಾಡಲು
ಎಂಥ ಚೆಲುವದು, ಸೀತೆ, ನಿನ್ನೀ
ಚೆಂಬೊಗಸೆ ನೀರೀಂಟಲು!

ಹಿಡಿಯಲು ಸಿಕ್ಕದಿದ್ದರೆ ಬಾಣವನ್ನು ನೆಟ್ಟು ಇದರ ಮರ್ಮವನ್ನು ಒಡೆದು ಸ್ವರ್ಣ ಚರ್ಮವನ್ನು ತರುವೆನು ಎಂದು ರಾಮ ಧನುಷ್ಟಂಕಾರಮಾಡುತ್ತ ಹೋಗುತ್ತಾನೆ. ಲಕ್ಷ್ಮಣ ನಮ್ಮ ದುರಿತವೆಲ್ಲ ಪರಿಶಮಿಸಲಿ; ನಮ್ಮನ್ನು ನಮ್ಮ ಪೂರ್ವಜರ ಸುಕೃತ ಪೊರೆಯಲಿ ಎನ್ನುತ್ತಾನೆ.

ಕೆಟ್ಟುದದು ಕೆಟ್ಟರೂಪದೊಳೆ ಬರಲು
ಸುಲಭವದ ಪರಿಹರಿಸಲು
ಶಿವದ ಸೋಗಿನೊಳಶಿವ ವಂಚಿಸಬರೆ
ದುಷ್ಕರವದುಪಶಮಿಸಲು!

—ಎಂಬ ನಿತ್ಯಸತ್ಯವನ್ನು ಲಕ್ಷ್ಮಣ ಕಾಣುತ್ತಾನೆ.

ಘನವಿಪಿನ ಚಲಹರಿಣ ನೋಡು ಮೈದುನ
ಘನಕು ಘನನ ಚಲಕು ಚಲನ ನೋಡೆನ್ನಿನನ
ಅಹಹ ತನ್ನ ಮೆಯ್ಯೆ ತನಗೆ ವೈರಿ, ಎಂಥ ಮರುಳಿದು
ತನ್ನ ಮರೆಯು ತಾನೆ ತೆಗೆವ ತೆರದಿ ದಿಟ್ಟಿಸೆಳೆವುದು
ಕರಿಮುಗಿಲೊಳು ಮಿಸುಮಿಸುಗುವ ಕಿರಿಮಿಂಚೊಲು ಮಿನುಗುತ
ಹೋಹೋಹೆಡೆ ಬನಗತ್ತಲ ಮೈಹೊಗರಿಂ ಬೆಳಗುತ

—ಎಂದು ಸೀತೆ ತನ್ನ ಸ್ವಾಮಿಯ ಸಾಹಸವನ್ನೂ, ಹರಿಣ ಹರಿಯುವ ವೇಗವನ್ನೂ ಹೊಗಳುತ್ತಿದ್ದಾಗ ಲಕ್ಷ್ಮಣ, 'ತಿರೆಯನೆ ಮಥಿಸುತ್ತಿಹನೋ ಅಣ್ಣ ಹುಲ್ಲೆ ಕಡೆಗೋಲಿಂ' ಎಂದು ಸಿಕ್ಕಿಯೂ ಸಿಕ್ಕದಂತೆ ಓಡುತ್ತಿದ್ದ ಹರಿಣಗತಿಯನ್ನು ಕಂಡು ತನ್ನ ಸಂದೇಹ ಎಲ್ಲಿ ಸತ್ಯವಾಗುತ್ತದೋ ಎಂದು ಗಾಬರಿಪಡುವನು.

ರಾಮನಾರ್ತಸ್ವರವನ್ನು ಕೇಳಿದ ಸೀತೆ ಸ್ತ್ರೀಸಹಜವಾದ ಭಯದಿಂದ ಅಣ್ಣನ ರಕ್ಷಣೆಗೆ ಹೋಗು ಎಂದು ಲಕ್ಷ್ಮಣನನ್ನು ಆಗ್ರಹಪಡಿಸುವಳು. ಎಂಥ ಮೈದುನನೂ ಕೇಳಲಾರದ, ಕೇಳಬಾರದ ಮಾತನ್ನು ಆಡುವಳು:

ಕ್ಷುಲ್ಲ ಸಾಕು ನಿನ್ನುಪದೇಶ
ಮಿಗ ಅಲ್ಲ ರಕ್ಕಸ, ನೀ ರಕ್ಕಸ!

* * *

ದುರುಳ ನನ್ನೆಡೆಯನೇಕೆ ಬಿಡುವೆ?
ಇಂಥ ವೇಳೆಯುನರಸಿಯೇ ಬನಕೆ ಬಂದೆ
ಅಣ್ಣ ಸಾವೊಡೆ ನಿನಗೆ ನಾ ದೊರೆವೆನೆಂದೇ!

—ಇಂಥ ನಿಷ್ಠುರದ ನುಡಿಯನ್ನು ಎಂಥ ಸಹನಶೀಲ ಮೈದುನನೂ ಕೇಳಿ ಸುಮ್ಮನಿರುವುದು ಸಾಧ್ಯವಿಲ್ಲ. ಲಕ್ಷ್ಮಣನ ಸಹನೆ ಸಾಗರವರಿದಿದೆ ಇಲ್ಲಿ :

ಹೆಣ್ಣು, ನೀ, ನಿಷ್ಠುರದ ಮಾತಿನೊಳು ಕಡು ಜಾಣೆ
ತಂದೆ ಅವ, ತಾಯಿ ನೀನೆಂದೆ ಬಗೆದಿಹೆನಣ್ಣನಾಣೆ

—ಈ ಎರಡು ಮಾತಿನಲ್ಲಿ ಎಂಥ ಗಿರಿಯ ತೂಕವಿದೆ! ಲಕ್ಷ್ಮಣನ ಪಾತ್ರವನ್ನು ಪು.ತಿ.ನ. ಅವರು ಈ ಎರಡು ಮಾತುಗಳನ್ನಾಡಿಸಿ ಉದ್ಧರಿಸಿದ್ದಾರೆ. ಸೀತೆಯೂ ಕೂಡ ಆ ಮಾತನ್ನು ಕೇಳಿ ತಾನು ಮುಂದುವರಿಸಿದುದು ತಪ್ಪಾಯಿತು ಎಂದು ಪಶ್ಚಾತ್ತಾಪ ಪಡಬೇಕು. ಆದರೆ ನಡೆಯಬೇಕಾದುದು ನಡೆಯದೆ ವಿಧಿಯಿಲ್ಲ; ಸೀತೆಯ ಆಗ್ರಹ ನೆಪಮಾತ್ರವಾಗುತ್ತದೆ. ರಾವಣ ಸೀತೆಯ ಸೌಂದರ್ಯವನ್ನು ಕಂಡು ಮೋಹಿತನಾಗುತ್ತಾನೆ.

ಈ ರೂಪಿಗಾ ಮೊರದುಗುರವಳ ಹೊಗಳು ಬರಿ ತೆಗಳು
ಏಗೆಯ್ವೆ, ಏಗೆಯ್ವೆ, ಕೊರಲಡಗೆ ತೋಳುಡುಗೆ
ಜಾರುತಿರುವೆನ್ನ ರಕ್ಕಸತನವನೆಲ್ಲಿ ಬಚ್ಚಿಡುವೆ?
ಈ ಚೆಲುವ ಹೊಳೆಸುತಿರುವೊಳ ಬೆಳಕನೆಂತು ಹಿಡಿವೆ?

—ಎಂದು ರಾವಣ ತನ್ನ ಉದುರಿಬೀಳುವ ಕಪಟವೇಷವನ್ನು ತಡೆಹಿಡಿಯಲು ಪ್ರಯತ್ನಿಸುತ್ತಾನೆ. ಉತ್ತಮರ ಮುಂದೆ ಕಪಟ ವಂಚನೆಗಳು ನಿಲ್ಲಲಾರವು ಎಂಬುದನ್ನು ಕವಿ ಎಷ್ಟು ಸುಂದರವಾಗಿ ಧ್ವನಿಸಿದ್ದಾರೆ ಇಲ್ಲಿ! ಅತಿಥಿಯಾಗಿ ಬಂದ ರಾವಣ ಯತಿಯನ್ನು ಕಂಡು ಏಕಾಕಿನಿಯಾಗಿದ್ದ ಸೀತೆಗೆ ಸಂತೋಷವಾಗುವುದು :

ಒಳ್ಳೆ ಸಮಯಕೆ ಬಂದೆ, ಸಾಧುಪುರುಷ,
ಅತಿಥಿ ನೀ ದೇವಸಮ, ನಿನ್ನ ಕಂಡೆನಗಾಯ್ತು ಹದುಳ ಹರುಷ.

—ಎಂಬ ಸೀತೆಯ ಕಪಟವರಿಯದ ಸಹಜವಾದ ಮಾತು ರಾವಣನಿಗೆ ಬೇರೊಂದು ಅರ್ಥ ಕೊಡುತ್ತದೆ. ಆದರೂ ಅವನು ಮುಂದುವರಿಯಲು ಹೇಸುತ್ತಾನೆ. ಕನಿಕರಕ್ಕೆ ಪಾತ್ರಳಾದ ಅವಳನ್ನು ನೀಚದೃಷ್ಟಿಯಿಂದ ನೋಡುವುದು ತರವಲ್ಲ; ಅವಳ ಲಾವಣ್ಯ ತನ್ನನ್ನು ಉನ್ಮಾದಗೊಳಿಸದಿದ್ದರೆ ತಾನವಳನ್ನು ಬಿಟ್ಟು ಹೋಗುತ್ತಿದ್ದೆ ಎನ್ನುತ್ತಾನೆ, ಮಹಾನುಭಾವನಾದ ರಾವಣ :

ಎಂತಿವಳ ಲಾವಣ್ಯ ಉನ್ಮಾದಗೊಳಿಸುತಿದೆ!
ಇಲ್ಲದಿರೆ ಕನಿಕರಕೆ ತಕ್ಕಳಿವಳು
ಈಕೆ ಕುಗ್ಗಿರುವಂದೆ ಈ ಪರಿಯೊಳೆಸೆವುತಿರೆ
ಹರ್ಷದೊಳಗೀ ಚೆಲುವಿಗೆಂಥ ಹುರುಳು!

* * *

ಇಂದೆನ್ನ ನಾಳ್ಗೈದ ಸುಂದರಿಯು ನಾ ಕಂಡೆ
ಸರ್ವಸ್ವ ತ್ಯಾಗಕ್ಕೆ ಪಾತ್ರವನು ಕಂಡೆ
ಎಲ್ಲ ವಿಭವಂಗಳಿಗು ಬೆಲೆ ಕೊಡುವ ನೆಲೆ ಕಂಡೆ
ದಶಮುಖದಿ ಕಂಗಳಸು ತಳೆದ ಸೊಗವುಂಡೆ !

ಸೀತೆ ತನ್ನ ಕಥೆ ಹೇಳುತ್ತಾಳೆ, ಸಹಜ ಮುಗ್ಧೆಯಾಗಿ ; ರಾವಣ ಕೇಳುತ್ತಾನೆ, ಕಾಮ ದಗ್ಧನಾಗಿ ! ಸೀತೆಯ ಮುಖವನ್ನೇ ಕಾಣುತ್ತ ಅವಳ ಅಂಗಾಂಗಗಳ ಸೌಂದರ್ಯಾಸ್ವಾದ ಮಾಡುತ್ತಿದ್ದ ರಾವಣನನ್ನು ಸೀತೆ ವಿಚಾರಿಸುವಳು :

ಏಕೆ, ಮುನಿ, ಹಣ್ಣ ಮೆಲ್ಲುವುದ ಬಿಟ್ಟೆ ?

—ಆ ಒಂದು ಮಾತಿನಲ್ಲಿ ಎಷ್ಟು ಅರ್ಥವನ್ನು ಹುದುಗಿಸಿಟ್ಟಿದ್ದಾರೆ, ಕವಿ ! ಈ ಹೆಣ್ಣನ್ನು ಕಾಣುವ ಆತುರದಲ್ಲಿ ಅವನಿಗೆ ಆ ಹಣ್ಣು ಯಾಕೆ ಬೇಕು ? ರಾವಣನ ಕಾಮುಕ ದೃಷ್ಟಿ ಪರಿಣಾಮಕಾರಿಯಾಗಿ ಮೂಡಿದೆ ಇಲ್ಲಿ, ಒಂದು ಮಾತಿನಲ್ಲಿ ! ಸಹಜ ಮುಗ್ಧೆ ಸೀತೆಗೆ ರಾವಣ ಸುಳ್ಳು ಹೇಳುವುದೂ ಕೂಡ ಸಾಧ್ಯವಾಗುವುದಿಲ್ಲ. ತನ್ನ ಪರಿಚಯವನ್ನು ಮುಚ್ಚುಮರೆಯಿಲ್ಲದೆ ಮಾಡುವನು ; ರಾವಣನೇನೂ ಅಲ್ಪಬಲನಲ್ಲ ; ನಿರುಪಮ ಸತ್ತ್ವ ಎಂಬ ಮಾತು ಸತ್ಯ :

ಕಲ್ಯಾಣಿ, ನೀನೆನಗೆ ನಿಜದಿ ನಡೆದುದರಿಂದ
ಮರೆ ಮಾಚೆ ನಾನೆನ್ನ ನಿಜವ ನಿನ್ನಿಂದ
ನಾ ತ್ರಿಲೋಕಾಧಿಪತಿ ಲಂಕೇಶ್ವರ
ನೋಡು, ನನ್ನೀ ತೋಳ್ಗಳಿಂ ಪರಮೇಶ್ವರ
ಪಡೆದನಲ ಕೈಲಾಸ ಡೋಲೋತ್ಸವದ ಸೊಗದ ಬೆರಗ
ಅಪ್ಸರೋಗಣದಿದಿರು ದೇವೇಂದ್ರಗಿತ್ತೆ ನಾ ಕೊರಗ
ರವಿಯೆನಗೆ ಶಶಿ, ಶಶಿ ನಾನು ಕುಡಿದು ಬಿಸುಡುವ
ಪಾನಪಾತ್ರ, ಬಾಣಸಿಗನೆನಗಾ ವೀತಿಹೋತ್ರ
ಮೇರೆಯಿಲ್ಲದ ನನ್ನ ನೆಲದೊಂದು ಮೂಲೆಯೊಳು
ನೆಲಸಿಹ ಭಿಕಾರಿ ನನ್ನಗ್ರಜ ಕುಬೇರ
ನನ್ನ ಸಿರಿಗಿಲ್ಲ ಪಾರ

* * *

ಪೊಡವಿಯುಸಮಾನ ರತ್ನವೇ, ನಿನಗೀ ಅಡವಿಯೇ ?
ವರನಲ್ಲ ನಿನಗಾ ನರ
ವರಿಸೆನ್ನ ಕಲ್ಯಾಣಿ, ನಾ ನಿನಗೆ ಕಿಂಕರ

—ಎಂದು ರಾವಣ ತನ್ನ ವೈಭವ ಪರಾಕ್ರಮಗಳನ್ನು ಬಣ್ಣಿಸುತ್ತಾನೆ. 'ಮಂಗಳೇ, ಎದೆ ಕಡಲಿನ ತಿಂಗಳೇ' ಎಂದು ಕಾಮಕಾತುರನಾಗುತ್ತಾನೆ. ಸೀತೆಗೆ ಈಗ ಅರಿವಾಗು

ತ್ತದೆ ಲಕ್ಷ್ಮಣ ಹೇಳಿದ ವಾಸ್ತವ ವಿಚಾರ. 'ನಮಗೆಂದೆ ಸೊಗತೊರೆದ ಧರ್ಮಿಷ್ಠ' ಎಂದು ಹಲುಬುತ್ತಾಳೆ. ಕೈ ಹಿಡಿದ ಹೆಂಡತಿಯನ್ನು ಗುರು ಹಿರಿಯರ ಸೇವೆಗಾಗಿ ಅಯೋಧ್ಯೆಯಲ್ಲೇ ಬಿಟ್ಟು ಅಣ್ಣ ಅತ್ತಿಗೆಯರಿರುವ ಆರಣ್ಯವನ್ನೇ ಅಯೋಧ್ಯೆಯೆಂದು ಬಗೆದು ಅರಣ್ಯವಾಸವನ್ನು ಸಹಿಸುತ್ತಾನೆ ಲಕ್ಷ್ಮಣ. ಅವನ ಧರ್ಮಪ್ರಜ್ಞೆ ಈಗ ಅರ್ಥವಾಗುತ್ತದೆ ಸೀತೆಗೆ. ಆದರೆ ಕಾಲ ಮಿಂಚಿತ್ತು. ನಡೆಯಬೇಕಾದುದು ನಡೆದೇ ಹೋಯಿತು. ಜಟಾಯುವಿನ ಆಗಮನದಿಂದ ರೂಪಕ ಮುಕ್ತಾಯವಾಗುತ್ತದೆ. ಹರಿಣ, ರಾವಣ, ಲಕ್ಷ್ಮಣರ ಪಾತ್ರಗಳು ಈ ಗೀತರೂಪಕದಲ್ಲಿ ಸಹೃದಯನನ್ನು ಮಾತನಾಡಿಸುತ್ತವೆ.

೪

ಪು.ತಿ.ನ. ಅವರ 'ವಸಂತ ಚಂದನ', 'ವರ್ಷಹರ್ಷ', 'ಶರದ್ವಿಲಾಸ' ಎಂಬ ಈ ಮೂರು ಚಿಕ್ಕ ಚಿಕ್ಕ ಗೀತರೂಪಕಗಳು ಮೂರು ಋತುಗಳ ಸೌಂದರ್ಯವನ್ನು ಕಂಡುಂಡ ಬಗೆಯನ್ನು ಬಣ್ಣಿಸುತ್ತವೆ. ಆನಂದವೇ ಅವುಗಳ ಸ್ಥಾಯಿಭಾವ. ವಸಂತ, ವರ್ಷ, ಶರದೃತುಗಳಲ್ಲಿ ಕವಿಚೇತನ ಅನುಭವಿಸಿದ ಹರ್ಷೋತ್ಕರ್ಷಕ್ಕೆ ಮೂರ್ತ ಸ್ವರೂಪವನ್ನು ಕೊಟ್ಟು ಕವಿ ಗೀತರೂಪಕಗಳನ್ನಾಗಿ ಕಡೆದಿದ್ದಾರೆ. ವಸಂತದ ಇಂಥ ಸಂಜೆಯ ತಂಪಿಗಾಗಿ ಅಂಥ ಹಗಲಿನ ತಾಪವನ್ನೂ ಕೂಡ ಜನ ಸಹಿಸುತ್ತಾರೆ; ವಸಂತದ ಉತ್ಸಾಹವನ್ನು ಕೊಂಡಾಡುತ್ತಾರೆ:

ಮುನಿಮುನದ ಮೊನೆ ಮುರಿವ ಮಲ್ಲಿಗೆ–
ನನೆಯು ಕಂಪಿನ ಸೂಸಿಗೆ
ಬಂದಿತಿದಿಗೋ ಬೇಸಿಗೆ
ಮಾರ ತೇರೇರೆಂಬ ಮಾವಿನ
ಕೆಂದಳಿರ ಕೈಬೀಸಿಗೆ!

—ಎಂದು ಸಮಾನ ಹೃದಯೆಯಾದ ಸಹಚರಿ ಭಾವುಕನನ್ನು ಪ್ರೇರೇಪಿಸುತ್ತಾಳೆ. ಪ್ರೇಯಸಿಯ ದಂತಕ್ಷತದಂತೆ ಕೋಗಿಲೆಯ ಕೂಗೂ ಭಾವುಕನ ಸಮಾಧಾನವನ್ನು ತೀಕ್ಷ್ಣಸುಖದಿಂದ ನೋಯಿಸುತ್ತದೆ. ವಸಂತಚಂದನೋತ್ಸವಕ್ಕೆ ನಾಂದಿಯಂತೆ ಕೋಗಿಲೆ ಕುಕಿಲುತ್ತದೆ. 'ಈ ತೊರೆ, ಈ ಮಲೆ, ಈ ನಾಡು, ಈ ಗುಡಿ, ಈ ಜನ, ಈ ತರುಣ ತರುಣಿಯರ ಗುಂಪು ನಮ್ಮೆಲ್ಲ ಹಿಗ್ಗಿನ ಸೊಂಪನ್ನು ಈ ಋತುಧರ್ಮವನ್ನನುಸರಿಸಿ ಹಾಡಿ ಕುಣಿದು ನಮ್ಮ ಪ್ರಾಣಪ್ರೇರಣ ಶಕ್ತಿಗರ್ಪಿಸುವ ಉತ್ಸವ ಈ ಚಂದನೋತ್ಸವ' ಎಂದು ಭಾವುಕ ಉದ್ಗರಿಸುತ್ತಾನೆ.

ವಸಂತ ಚಂದನ
ನಂದನ ಗಂಧವ ನಿಂದಿಸುತಿಹ ಆ–
ನಂದದೊಳಂಜಲಿಯೊಳು ಕೊಳುವೆಲರಿನ

—ಎಂಬ ಪಲ್ಲವಿಯಿಂದ ಚಂದನೋತ್ಸಾಹದ ವಸಂತವರ್ಣನೆಯ ಹಾಡು ಹೇಳುತ್ತಾರೆ.

ತೆರೆದೆದೆಯನು ಸುಮಹಾರವು ಮುತ್ತಿಡೆ
ಬಾಂದೊರೆಯಂತೆಲರಂಗವನಪ್ಪಿಡೆ
ಉದಿತೋದಿತರಾಗವ ಲೇಖಿಸುವೊಲು
ಚಂದನಕಾಗಲಿ ವಕ್ಷಃಸ್ಥಲವೆಡೆ

—ಎಂದು ಭಾವುಕ ಭಾವೋನ್ಮತ್ತನಾಗಿರಲು, 'ಚಿತ್ತಕಿಟ್ಟ ಚಿತ್ತಜನಿದೋ ದಾಳಿ'. ತರುಗಳ ಪ್ರಸೂನ ಹಾಸಕ್ಕೆ ತರುಣ ತರುಣಿಯರು ಒಲಿಯುತ್ತಾರೆ; ಮೃದಂಗನಾದಕ್ಕೆ ಅಡಿ ತುಡಿಯುತ್ತದೆ. ಹಕ್ಕಿಯ ಹಿಂಡಿಗೆ ಸೂಜಿಯ ಕಲ್ಲೆಂಬಂತೆ ಮರಗಳ ಸೆಳವು ಎಲ್ಲೆಲ್ಲೂ ಹರಡಿದೆ! ವಸಂತ ಸಮಯದ ಅವಭೃಥವೆಂಬ ಪರಿ ದಿವನೆಲಕೆರಚಿದೆ ಚೆಂಬೆಳಕೋಕುಳಿ! ಹಗಲಿನ ಕಳೆ ಹರಳೋಲೆಯನ್ನು ಸೇರಿತ್ತು! ನಾಡೇ, ನಿನ್ನಂತೆ ಬೇರೊಂದು ನೆಲವುಂಟೇ, ನಿನ್ನ ಚಂದನದಂಥ ಕಂಪು ಬೇರುಂಟೆ ಎಂದು ಭಾವುಕ ಉದ್ಗರಿಸುವಂತಾಯಿತು. ತರುಣರು 'ನೀರಜಾಕ್ಷಿ ನೀ ಬಳಿಯಿರೆ ಜಾರಿ ಹೋಹುದೀ ಶಿರೆ' ಎಂಬಂತಾಯಿತು. ಎಲ್ಲೆಲ್ಲೂ ವಸಂತ ಚಂದನೋತ್ಸವವನ್ನು ಕಾಣುವಂತಾಯಿತು.

ತುಂಬಿದಿಂದು ಬರೆ ಬಾನಿಗೆ ಚಂದನ
ಹೂತ ಬನಕೆ ಹೂಧೂಳಿಯು ಚಂದನ
ಬಹು ಮಹೋತ್ಸವಾಮೋದ ಸ್ಯಂದನ
ಹೃದಯೋತ್ಸವಕೀ ವಸಂತ ಚಂದನ
ಕೊಳ್ಳಿರಿ ಚಂದನ
ನಂದನ ಗಂಧವ ನಿಂದಿಸುತಿದ ಆ–
ನಂದದೊಳಂಜಲಿಯೊಳು ಕೊಳುವೆಲರಿನ
ವಸಂತ ಚಂದನ

೬೦೯
609
ಬೆಂಗಳೂರು-19

ಮನದನ್ನ ಮನದನ್ನೆಯರು ಚಂದ್ರೋದಯದ ಸೌಂದರ್ಯವನ್ನು ಆಸ್ವಾದಿಸುತ್ತಾರೆ :

ಉದ್ಯಾನದ ಪುಷ್ಪಬೃಂದ
ಲಜ್ಜೆಯ ಸಿರಿ ಹೊಂದಿದಂದ
ತೆಳುಬೆಳಕಿನ ಮೇಲುದುವನು
ತಳೆಯುವಂತಿಗೋ–
ತಮವನುಳಿದವೆನುವ ತೆರದಿ
ನಿಡಿದು ನೆಳಲ ಬಿಸುಟು ನೆಲದಿ
ತರುಗಳೆದ್ದು ಬೇರೆ ತರವ
ತೋರುವಂತಿಗೋ–

ಈ ನೆಳಲು ಬೆಳಕಿನ ಆಟ ಶ್ಯಾಮಗೋಪಿಯರ ಕೂಟವಾದಂತೆ ಕಾಣಿಸುತ್ತದೆ. ಲೌಕಿಕ ಆನಂದ ಆಧ್ಯಾತ್ಮಿಕ ಆನಂದದೆತ್ತರಕ್ಕೆ ಮುಟ್ಟುತ್ತದೆ. ಬೆಳುದಿಂಗಳನ್ನು ಕರೆಯುತ್ತಾರೆ:

ಸೂರ್ಯನ ತೆರ ಮುಳುಗಿ ಚಂದ್ರನ ತೆರ ಎದ್ದು
ಕ್ಷೀರದ ಕಡಲಿನ ಸಾರವನೆತ್ತುತ
ತಾರಣ್ಣ ಬೆಳುದಿಂಗಳೇ

ಭಾವುಕ ಹಾಡಿನಲ್ಲಿ ಡೋಲಾಯಮಾನನಾಗಿ ಚಂದನದ ಕಂಪಿನ ಸ್ತುತಿಯಲ್ಲಿ ತೇಜಗೊಳ್ಳುತ್ತ ಬೆಳುದಿಂಗಳಿನಲ್ಲಿ ತನ್ನ ಮಂದಸ್ಮಿತವನ್ನು ಹರಡುತ್ತಿರುವ ಸಕಲಾಂತರ್ಯಾಮಿಯನ್ನು ಕಂಡು ನಲಿಯುವುದು ಇಂತಲ್ಲದೆ ಇನ್ನೆಂತು ಎಂದು ಅದರಲ್ಲಿ ಕರಗಿ ಹೋಗುತ್ತಾನೆ.

ಹೃದಯತಲದ ಸೊದೆಯೆತ್ತುವ ಮಧುಮಥನನಿಗೊಸಗೆ
ಸಿರಿ ನಿಂತಿರೆ ಹಸೆಗೆ
ಶಿವಶಿವೆಯರ ಜೊತೆಗೆ
ಮಧುವನದೊಳು ಮುದ ಹರಿಸುವ ಮಧುಮಾಧವ ಮಧುರೋತ್ಸವ
ಹರಿಚಂದನದೊಸಗೆ

ತರುಣರೆಲ್ಲ ರಾಘವ, ಅಜ, ನಳರಾಗುತ್ತಾರೆ. ತರುಣಿಯರೆಲ್ಲ ಜಾನಕಿ, ಇಂದುಮತಿ, ದಮಯಂತಿಯರಾಗುತ್ತಾರೆ. ಇಂಥ ಗೆಲವೂ ಇಂಥ ನಲವೂ ಕೊನೆಗೊಳ್ಳಲೇಬೇಕು ಎಂದು ಭಾವುಕ ನೊಂದುಕೊಳ್ಳುತ್ತಾನೆ. ' ಮೇಲಿನ ಮೇಲೆ ತೇಲಲಿಂಥ ಕಾಲ ಬಾರದೇ ' ಎಂದು ಹಂಬಲಿಸುತ್ತಾನೆ.

ತಡಿಯಣ ನೇವುರದುಲಿವಿಗೆ ಕೊಳವರಳಿಸೆ ಹೂಕಂಗಳ
ಹಾಲ್ಗಡಲಿನ ಕುವರಿಯರೆನೆ ಲೋಲಬಾಲೆಯರಾಡುವಿಂಥ
ಕಾಲಬಾರದೇ

*　　*　　*

ತಿರೆಯು ಪ್ರೀತಿ ದಿವದ ರೀತಿಯಾಯಿತೆಂದೆ ಎನಿಸುವಂಥ
ಕಾಲಬಾರದೇ

ಸಹೃದಯನೂ ಕೂಡ ಗೀತ ರೂಪಕಗಳನ್ನು ಇನ್ನಷ್ಟು ಸವಿಯುವ ಕಾಲ ಬಾರದೇ ಎಂದು ಶ್ರುತಿಗೂಡಿಸುವಂತಾಗುತ್ತದೆ.

೫

ಕವಿ ಶ್ರಾವಣ ಭಾದ್ರಪದ ಮಾಸಗಳಲ್ಲಿ ಭಾವುಕನು ಅನುಭವಿಸಿದ ವರ್ಷ ಕಾಲದ ಹರ್ಷಕ್ಕೆ ಇಲ್ಲಿ ರೂಪ ಕೊಟ್ಟಿದ್ದಾರೆ. ತರುಣ ತರುಣಿಯರು ಸಾಲು ಹಬ್ಬಗಳಲ್ಲಿ ಪಾಲುಗೊಂಡ ಹಾಡುಗಬ್ಬವಾಗಿದೆ ಈ ವರ್ಷಹರ್ಷ. ತರುಣ ತರುಣಿಯರಿಬ್ಬರೂ ಮಳೆಯ ನೀರಿನ ಧಾರೆಯನ್ನು ಹಿಡಿದು ಮೋಡದ ಮೇಲೇರಿ ಬರುತ್ತಾರೆ. ಅಲ್ಲಿನ ತೇಜಃಪುಂಜವಾದ ತಿಳಿಬಾನನ್ನು ಕಂಡು ತರುಣಿ ಅಚ್ಚರಿ ಪಡುತ್ತಾಳೆ :

ಮನವನಪ್ಪಿ ನೀರ ಧಾರೆಯೇರಿ ಬಾರೆ, ನೀರೆ,
ಮೋಡದ ಮೇಗಣಾಗಸದಿಂದ ಆ ಮಾಡಕೆ ಜಾರೆ
ಮೇಲೆ ತೇಲುತೇರುವಂತೆ ನಾನಾದೆನು ಹಗುರ
ಹೆರಳ ಸುರುಳಿಯಲ್ಲಿ ಸಿಕ್ಕೆ ಎಳೆವೆರೆಯ ಚಿಗುರ
ಚಂದ್ರದೀಪ ತಾರೆ ಕುಸುಮ ಶೃಂಗಾರದ ಹಂದರ
ಕಂಪನಲರೆ ಕುಟ್ಟಿಮವಾಗೆ ಕಿನ್ನರಿ ನಾ, ಕಿನ್ನರ

ಮುಂದೆ ಬಿರುಗಾಳಿ ಬೀಸುತ್ತದೆ. 'ಬಿಡಿ ಬಿಡಿ ಬಿಡಿ ಕರಿಮುಗಿಲಿಗೆ ದಾರಿ, ಕಡಲಣುಗಗೆ ದಾರಿ, ಮಳೆಯೊಡೆಯಗೆ ದಾರಿ' ಎಂದು ಬಿರುಗಾಳಿ ಅಬ್ಬರಿಸುತ್ತದೆ. ಕಪ್ಪು ಮೋಡದ ಕಾಂತಿ ನೀಲ ಮೇಘ ಶ್ಯಾಮನನ್ನು ನೆನಪಿಸುತ್ತದೆ:

ದಿಟ, ಇನಿಗಪ್ಪಿದು ರಮಣ, ಈ ಮೋಡದ ಕಪ್ಪು
ಅದಕೇ ಇದು ತಾನಾಯಿತು ಶ್ಯಾಮನಿಗೊಪ್ಪು

* * *

ಕಡಲಿನಾಳದೊಳು ತೇಲುವ
ಶ್ಯಾಮನೊ ಈ ಮಲೆ ಸಾಲು

ಇಂಥ ವರ್ಷ ಋತುವಿನ ಆತ್ಮೀಯ ವರ್ಣನೆ ಮನಸ್ಸನ್ನು ಮರುಳುಗೊಳಿಸದಿರದು. ಮಿಂಚಿನ ಹುಬ್ಬನ್ನು ಹಾರಿಸಿ ಮೋಡ ಕವಿಯುವ ಹದವನ್ನು ಕಂಡು ಕವಿ ಮುದ ತಾಳುತ್ತಾರೆ. 'ಕಿರಿದೆನಿಸುತ ಬಾನ್, ಹಿರಿದೆನಿಸುತ ತಾನ್' ಮಳೆ ಸುರಿಯುತ್ತದಂತೆ. ಮೋಡ ಮೊಳಗುತ್ತದೆ, ತನ್ನ ಅಗ್ಗಳಿಕೆಯನ್ನು :

ಜಡೆಯನೊದರಿ ನೆರೆಯ ತಂದೆ
ಬೆಳಕ ಬಿಡಿಸಿ ಬಿಲ್ಲ ತಂದೆ
ನೀರ ಮಸೆದು ಮಿಂಚ ತಂದೆ
....
ಬಿಟ್ಟ ಮಲೆಗೆ ಹಸಿರ ತಂದೆ
ಸುಟ್ಟಡವಿಗೆ ಸೊಂಪ ತಂದೆ
ಕಂಡ ನೆಲಕೆ ಕಂಪ ತಂದೆ
ಬೆಂದೊಡಲಿಗೆ ತಂಪ ತಂದೆ.

ಸೃಷ್ಟಿ ಪುನಃ ಚಿಗುರಲು ತಂದೆಯಾದ ಮಳೆಯೊಡೆಯ ಮೋಡದ 'ತಂದೆ' ಎನ್ನುವ ಪದ ಪುನರುಕ್ತವಾಗಿ ತನ್ನ ಅಸ್ತಿತ್ವವನ್ನು ಇನ್ನಷ್ಟು ಸೂಚ್ಯವಾಗಿ ಹೇಳುವುದು. ಜೋಗಿ ಬಗೆ ಬಗೆಯ ಹೂಗಳನ್ನು ಹೊಗಳುವನು :

ಓ ಶ್ಯಾಮಳ ನೀರದ ಚಿಕುರೆ, ಗೌರವ್ವ
ಜಾತಿ ಶ್ಯಾಮಂತಿಕೆ ಮುಕುರೆ
ಮರೆಯಾದ ನೀಲವ ಅಂಗೈಯೊಳೆ ಹಿಡಿದು ನೆಲಸಂಪಿಗೆ ಮೆಲ್ಲನೇಳೆ

* * *

ಮುಂದೆ ತರುಣಹಾಡುವ ವರ್ಷ-ಅಷ್ಟಕ ಯಾರಿಗೆ ತಾನೇ ಹರ್ಷದ ಪಟ್ಟವನ್ನು ಕಟ್ಟುವುದಿಲ್ಲ :

ವಿಯನ್ಮೇಘ ಸಾರಂ
ಅದೃಷ್ಟಾರ್ಕ ತಾರಂ
ಅರಣ್ಯಾದ್ರಿ ಸೇವ್ಯಂ
ಘನಂ ಕಾವ್ಯ ಭಾವಂ
ಶುಭಾವಿಷ್ಟ ರೌದ್ರಂ
ಜಗತ್ಪ್ರಾಣನಾದ್ರಂ
ಅಹೋ ವರ್ಷಯೋಗಂ
ಪ್ರಿಯೇ ದೇವಭೋಗಂ

ಈ ವರ್ಷಯೋಗದ ದೇವಭೋಗವನ್ನು ಸಹೃದಯರಿಗೆಲ್ಲ ಸಮಾರಾಧನೆಗೈದ ಕವಿ ಧನ್ಯರು. ಈ ವರ್ಷಹರ್ಷದಿಂದ ಸಹೃದಯರಿಗೆ ಹರ್ಷವರ್ಷವಾಗುತ್ತದೆ.

೬

ಸರ್ವಋತುಗಳ ಸೌಂದರ್ಯ ಸಂಗಮಿಸುವುದು ಶರದೃತುವಿನಲ್ಲಿಯಂತೆ. ಕೆರೆಯಲ್ಲಿ ಚೆಂದಾವರೆ, ತೊರೆಯಲ್ಲಿ ತಿಳಿನೀರು, ತಿಳಿಬಾನಿನಲ್ಲಿ ಬಿಳಿಮೋಡ, ಮಲೆಯಲ್ಲಿ ಬನ, ಬನಕ್ಕೆ ಹಸುರಿನ ಪೆಂಪು, ಹೊದರು ಹೊದರಿಗೂ ಹೂವು, ಹೊಲಗದ್ದೆಗಳಲ್ಲಿ ಪೈರಿನ ಸಿರಿ—ಇವೆಲ್ಲವನ್ನೂ ಕವಿ ‘ ಶರದ್ವಿಲಾಸ ’ ಎಂಬ ಗೀತ ರೂಪಕದಲ್ಲಿ ಚಿತ್ರಿಸಿದ್ದಾರೆ. ಮಂಜಿಲ್ಲದ ಮುಂಜಾನೆ, ದಗೆಯಿಲ್ಲದ ಹಗಲು, ರಂಗಿನ ಸಂಜೆಯ ಬೆಂಗಡೆ ಝುಗ ಝುಗಿಸುವ ಇರುಳು, ಬೆಳುದಿಂಗಳ ಶರದ್ವಿಲಾಸವನ್ನು ಯಾರುತಾನೇ ನೋಡಿ ಸುಮ್ಮನಿದ್ದಾರು ?

ತ್ರಿದಶಾಲಯುದ ಕದವ ಮುಚ್ಚಿ
ಧಾರಿಣಿಯನು ತೆರೆಯುತ
ಸುಂದರಕಂದರಕಮುರರು ಸಂದರೊ
ಕಿರಣ ಹಿಡಿದು ಜಾರುತ

ರಾತ್ರಿ ತನ್ನ ನೀಲನಿದ್ರೆಯ ಮುಸುಕಿನಲ್ಲಿ ತಾರೆಕಂಗಳನ್ನು ಮುಚ್ಚುತ್ತ ಭಾನು ನೇತ್ರವನ್ನು ತೆರೆದು ತಿರೆಯ ಈ ನವ್ಯ ರಚನೆಯನ್ನು ಕಾಣುತ್ತಿರುವಳಂತೆ ! ಭಾವುಕ ಎಲ್ಲೆಲ್ಲೂ ನೀಲದ ಲೀಲೆಯನ್ನು ಕಂಡು ಮನಸ್ಸಿ ಮಾರುಹೋಗುತ್ತಾನೆ :

ಶಾರದೀ ಶೋಭಾ
ವಿಮಲ ಸಲಿಲ ಕಮಲ ಕಲಿತ
ಶಾರದೀ ಶೋಭಾ

ಜಲನೀಲ ವನನೀಲ ಗಿರಿನೀಲ
ವ್ಯೋಮನೀಲ ಶುಭ್ರಾಭ್ರಜಾಲ
ಶಾರದೀ ಶೋಭಾ
ಪ್ರಸನ್ನ ವಸುಧಾಭಾ
ವಿಶದ ಜಲದ ಪುಲಿನ ವಿಸೃತ
ಶಾರದೀ ಶೋಭಾ

ಗಂಧರ್ವಾಪ್ಸರೆಯರು ಶರದ್ವಿಲಾಸದ ಬಗೆ ಬಗೆಯ ಬಣ್ಣವನ್ನೂ, ಸಂಗೀತವನ್ನೂ, ಹೂವನ್ನೂ, ಹೊನಲನ್ನೂ ಕುರಿತು ಸುಮಧುರವಾಗಿ ಹಾಡುತ್ತಾರೆ. ಮಾತು ಮಾತು ಮಥಿಸಿ ಗೀತವಾಗಿರುವುದನ್ನು ಇಲ್ಲಿ ನಾವು ಕೇಳಬಹುದು :

ಶರರುಹರಾಗಂ
ಶರದಾಭೋಗಂ
ನೀರದವಲಭಿವನಾಗಾರಂ–ಶುಭ್ರ
ನೀರದವಲಭಿವನಾಗಾರಂ
ಕಂದರತಟಿನೀ ಮಂಜುಳ ಜಲ್ಪಂ
ಈವುದಲ ನಮಗೀವುದಲ
ಸಮ್ಮುದದೇರಂ

* * *

ತೆರೆಯು ತೆರೆಯ ಕರವ ಹಿಡಿದ
ರವಿಯು ರವಿಯ ರಾಸ
ದಡದ ದಡದ ಗಿಡದ ಗಿಡದ
ಪುಷ್ಪ ಮಂದಹಾಸ
ಎದೆಗೆಚ್ಚರ ತರುವಿಂಚರ
ಹೊರಳಿಸೆ ಬನದೆಡೆಗೆ
ಕಣ್ಣ ಹೊರಳಿಸೆ ಬನದೆಡೆಗೆ
ಹೊದಹೊದರೆತ್ತಿರೆ ಹೂವಿನ ಹಣತೆ
ಹರಡಿರಲೆಲ್ಲೆಡೆ ಚೆಲುವಿನ ಸಮತೆ
ನರವಿದಲ–ಶರದ್ವರವಿದಲ
ಈ ಭಾವುಕತೆ

ನಲವಿನ ಗರಿಕೆದರಿ ಮನಸ್ಸಿನ ನವಿಲು ನಲಿಯುತ್ತದೆ. ಬಿಳಿಮೋಡ ಕನಸು ಮನಸುಗಳ ಕರುಮಾಡವಾಗುತ್ತದೆ. ಕೊಡುಗೈಯಿಂದ ಸಿರಿಯ ಮಳೆಗರೆದ ಬಿಳಿ ಮೋಡ ತಿರೆಗೆ ಬೆಳ್ಗೊಡೆಯಾಗುತ್ತದೆ; ಕೊಟ್ಟುದನ್ನು ಮರೆತು ಹಾಯಾಗಿ ಮೇಲು ಮೇಲಕ್ಕೆ ತೇಲುತ್ತದೆ. ದೇವರ ದೋಣಿಯನ್ನು ಹೋಲಿ ನೀಲಾಕಾಶದಲ್ಲಿ ಹಂಸ ರಥದಂತೆ ತೇಲುತ್ತದೆ. ಶರದ್ವಿಲಾಸ ಸ್ವರ್ಗದಲ್ಲೂ ಇಲ್ಲವೆಂಬಂತಾಗುತ್ತದೆ.

೭

'ದೀಪಲಕ್ಷ್ಮಿ' ಎಂಬ ಗೀತರೂಪಕ ದೀಪಾವಳಿಯನ್ನು ಕುರಿತ ಸಂಗೀತ ರೂಪಕ. ಇದರಲ್ಲಿ ಎರಡು ದೃಶ್ಯಗಳಿವೆ. ಮೊದಲನೆಯದರಲ್ಲಿ ನಾವು ಈ ಸಂಜೆ ನಮ್ಮ ನಮ್ಮ ಮನೆಗಳಲ್ಲಿ ಹೊತ್ತಿಸಿದ ಹಣತೆಗಳ, ಅವು ಮನಸ್ಸಿನಲ್ಲಿ ಮೂಡಿಸುವ ಭಾವನಾಲಹರಿಗಳ ವರ್ಣನೆಯಿದೆ. ಎರಡನೆಯದರಲ್ಲಿ 'ಎಲ್ಲಿಂ ಬಂದಿತೀ ದೀವಿಗೆ? ಎಂಬ ಪ್ರಶ್ನೆಗೆ ಉತ್ತರವಾಗಿ ನರಕಾಸುರನ ರಾಜಧಾನಿಗೆ ನಮ್ಮ ಮನಸ್ಸು ಧಾವಿಸುತ್ತದೆ. ನರಕನನ್ನು ಗೆದ್ದು ಶ್ರೀ ಕೃಷ್ಣ ಸತ್ಯಭಾಮೆಯೊಡನೆ ಗರುಡಾರೂಢನಾಗಿ ಆ ಅರಸನು ಸೆರೆ ತಂದಿಟ್ಟಿದ್ದ ರಾಜಕುಮಾರಿಯರನ್ನು ಬಿಡಿಸುವುದಕ್ಕೆ ಬರುವಾಗ ಆತ ಅವರಿಗೆ ಎಂಥ ದರ್ಶನವನ್ನು ಕೊಟ್ಟ, ಅವರು ಆತನನ್ನು ಹೇಗೆ ಪೂಜಿಸಿ ಆನಂದಿಸಿದರು ಎಂಬುದರ ವರ್ಣನೆಯಿದೆ.

ಬೆಳಕಿನ ತೆನೆ
ನಲವಿನ ನನೆ
ಇಂದು ಸಿರಿಗೇ ತವರೆಮ್ಮ ಮನೆ

—ಎಂದು ತರುಣಿಯರು ಹಾಡುತ್ತಾರೆ. ದೀಪಾವಳಿಯನ್ನು ಕಂಡು, 'ನಮ್ಮ ತಿಮಿರವ ಗೆಲೆ ಬಹ ಮಿಹಿರನ ಪಡೆಯೋ' ಎಂದು ಕಲ್ಪಿಸಿರುವುದು ಅದ್ಭುತ ರಮ್ಯವಾಗಿದೆ. 'ದೀಪಲಕ್ಷ್ಮಿ'ಯಲ್ಲಿ ಸಾಹಿತ್ಯಕ್ಕಿಂತ ಸಂಗೀತವೇ ಹೆಚ್ಚಾಗಿ ಮೆರೆದಂತೆ ಕಾಣುತ್ತದೆ. ಕವಿಗಳೇ ಇದನ್ನು 'ದೀಪಾವಳಿಯ ಸಂಗೀತ ಚಿತ್ರ' ಎಂದಿರುವುದರಿಂದ ಇದರಲ್ಲಿ ಕಾವ್ಯರಸವನ್ನು ಅರಸುವುದು ಉಚಿತವಲ್ಲ.

೮

'ರಾಮ' ಎಂಬ ಶಬ್ದ ಕೇಳುತ್ತಲೇ ಭವಭಾರ ಗರಿಹಗುರವಾಗುವಂಥ ಹೆಸರಿನ ಮಹಿಮೆ ರಾಮನದು. 'ರಾಮೋದಯಂ' ಎಂಬ ಗೀತರೂಪಕದಲ್ಲಿ ರಾಮನ ಅವತಾರದಿಂದ ಸಂತೋಷೋದಯವಾಯಿತು ಎಂಬುದನ್ನು ಕವಿ ಧ್ವನಿಸಿದ್ದಾರೆ. ವಾಲ್ಮೀಕಿ ಗಿರಿಯಲ್ಲಿ ಜನಿಸಿ ರಾಮಾಬ್ಧಿಯನ್ನು ಸೇರುವ ಪುಣ್ಯರಾಮಾಯಣ ಮಹಾನದಿ ಜಗತ್ತನ್ನು ಪಾವನಗೊಳಿಸಲಿ ಎಂದು ಕವಿ ಆರಂಭದಲ್ಲಿ ಹಾರೈಸಿದ್ದಾರೆ. ರಾಮಾವತಾರಕ್ಕಾಗಿ ಮಹಾಲಕ್ಷ್ಮಿ ಮಹಾವಿಷ್ಣುವನ್ನು ಎಚ್ಚರಿಸುತ್ತಾಳೆ. ದುರಿತ ಭರೆ ಧರೆ ಪರಿಹಾರಕ್ಕೆರೆದಳೆಂದು, ನರರ ಚರಿತೆ ಹದಗೆಟ್ಟಿದೆಂದು, ಸಿರಿಗೆಲ್ಲೆಯಿಟ್ಟಿದೆಂದು, ಕಡಲ ಕಡೆಯೆ ಕೂರ್ಮನಾದ, ಪೊಡವಿಯೆತ್ತೆ ವರಾಹನಾದ, ಜಡದೊಳೊಡೆದು, ತುಡುಗನ ತರಿದು ಹುಡುಗನ ಪೊರೆದು ನರಸಿಂಹನಾದ ಮಹಾವಿಷ್ಣು ರಾಮಾವತಾರವನ್ನು ತಾಳಿದನಂತೆ. ಅವನು, 'ಬಾನ ಬಣ್ಣದವನು, ಮಿಂಚ ಹೀನಗೈವ ಕಂಗಳವನು, ಕಡಲ ತೂಗಿನ ಬಿನದಿಗನು'. ಪೌರಪುರಂಧ್ರೀವೃಂದ ರಾಮನನ್ನು ತೂಗುತ್ತ ಕೌಸಲ್ಯೆಯ ಭಾಗ್ಯವನ್ನು ಹೊಗಳುವರು:

ಸೊದೆಯನುಂಡು ಸುತನಪಡೆದೆ
ಮುದವೆ ನೈ ತಾಳಿದಂಥ
ಹಿಡಿ ಹಿಡಿ ಎನುತ
ಕೊಡುವನು ನೋಡೆ
ಹಿಡಿಸಲಾರದಷ್ಟು ಹರ್ಷವ
ಕೌಸಲ್ಯೆ, ನಿನ್ನದೇನು ಭಾಗ್ಯವೆ!
ಹರಸಿ ಹರಸಿಕೊಂಡು ಲೋಕ
ಹರಸಿಕೊಳ್ಳುವಂಥನ ಪಡೆದೆ

ಮೇಲಿನ ಗೀತ, 'ಗೋಪಿಯ ಭಾಗ್ಯವಿದು, ಶ್ರೀಪತಿ ತಾ ಶಿಶುರೂಪಿನಲ್ಲಿರುವುದು' ಎಂಬ ಪುರಂದರದಾಸರ ಕೀರ್ತನೆಯ ಮಾಧುರ್ಯವನ್ನುಂಟುಮಾಡುವುದು. ಋಷಿವರರು ರಾಮನಿಗೆ, 'ರಸನೆಗಮೃತವೆನಿಸಿ ವ್ಯಸನವೆಲ್ಲವ ಕಳೆವ' ಹೆಸರನ್ನಿಡುತ್ತಾರೆ. 'ರಾಮೋದಯಂ' ನಿಜವಾಗಿ ಸಹೃದಯರಿಗೆ ಅಭಿರಾಮೋದಯವಾಗುತ್ತದೆ.

೯

ಈ ಗ್ರಂಥದಲ್ಲಿರುವ ಕೊನೆಯ ಗೀತರೂಪಕ 'ಸೀತಾ ಪರಿಣಯಂ'. ಹೆಸರಿನಿಂದಲೇ ಗೀತರೂಪಕದ ವಸ್ತು ವ್ಯಕ್ತವಾಗುತ್ತದೆ. ಪು.ತಿ.ನ. ಅವರ ಈ ಕೃತಿ ಸಂಗೀತಕ್ಕಾಗಿ ರಚಿತವಾದಂತಿದೆ. ಚಿರಪರಿಚಿತವಾದ ರಾಮಾಯಣದ ಸೀತಾಸ್ವಯಂವರದ ಕಥೆ ಇಲ್ಲೇನೂ ವಿಶಿಷ್ಟ ಪ್ರತಿಭಾಸೃಷ್ಟಿಯಾಗಿಲ್ಲ.

೧೦

ಪು.ತಿ.ನ. ಅವರ ಎಲ್ಲ ಗೀತರೂಪಕಗಳನ್ನೂ ಸಂಗೀತದ, ಛಂಧೋವೈವಿಧ್ಯದ, ಭಾವಗೀತೆಯ, ನಾಟಕದ ದೃಷ್ಟಿಗಳಿಂದ ವಿವರವಾಗಿ ವಿಮರ್ಶಿಸಬಹುದು. ನಾವು ಇಲ್ಲಿ ರಸೈಕದೃಷ್ಟಿಯಿಂದ ಮಾತ್ರ ಅವುಗಳ ಸೌಂದರ್ಯವೇನೆಂಬುದನ್ನು ಸಹೃದಯನ ರಸಾನುಭವಕ್ಕನುಗುಣವಾಗಿ ತೋರಿಸಿಕೊಟ್ಟಿದ್ದೇವೆ. ಪು.ತಿ.ನ. ಅವರ ಗೀತರೂಪಕಗಳನ್ನೆಲ್ಲ ಸಮಗ್ರವಾಗಿ ಸಮನ್ವಯ ದೃಷ್ಟಿಯಿಂದ ಪರಿಶೀಲಿಸಿದಲ್ಲಿ ಅವರು ಕನ್ನಡಕ್ಕೆ ಗೀತರೂಪಕ ಸಾಹಿತ್ಯಪ್ರಕಾರವನ್ನು ತಮ್ಮ ವಿಶಿಷ್ಟ ಪ್ರತಿಭಾ ಸೃಷ್ಟಿಯಾಗಿ ಕೊಟ್ಟಿದ್ದಾರೆ ಎನ್ನಬೇಕು. ಬೇರೆ ಯಾವ ಕನ್ನಡದ ಕವಿಯೂ ಗೀತರೂಪಕವನ್ನು ಇಷ್ಟು ಸುಂದರವಾಗಿ ಸೃಷ್ಟಿಸಿಲ್ಲ. "ಗೀತಗಳ ರಚನೆ ಕವನಗಳಷ್ಟು ಸುಲಭವಲ್ಲ; ಕವನಗಳ ಉಗಮಕ್ಕೆ ವಿಷಾದದ ನೀಲಛಾಯೆ ಸಾಕು; ಹಾಡುಗಳೋ ಮನಸ್ಸು ಗೆಲವಾಗಿರುವಾಗ ಮಾತ್ರ ಹುಟ್ಟುತ್ತವೆ" ಎಂದು ಪು.ತಿ.ನ. ಹೇಳಿರುವುದು ಸತ್ಯ. ಕಾವ್ಯಮಥನದ ನವನೀತವಾಗಿ ಗೀತರೂಪಕ ಸೃಷ್ಟಿಯಾಗುತ್ತದೆ. "ಈ ಹಾಡುಗಳನ್ನು ನಾನು ರಚಿಸಿಲ್ಲ; ಅವೇ ನನ್ನನ್ನು ರೂಪಿಸಿದುವು" ಎಂಬ ಪು.ತಿ.ನ.

ಅವರ ಗೀತರೂಪಕಗಳು ಸ್ವರಭಾವ ವಾಗರ್ಥಗಳ ಅಪೂರ್ವ ಸಂಯೋಗ; ಅವು ಕನ್ನಡಿಗರ ಸುಯೋಗ. ಸಂಗೀತದ ದೃಷ್ಟಿಯಿಂದ ಪ್ರಸಿದ್ಧ ವಾಗ್ಗೇಯಕಾರರಾದ ಪುರಂದರದಾಸರು, ಕನಕದಾಸರು, ತ್ಯಾಗರಾಜರು, ಮೈಸೂರಿನ ವಾಸುದೇವಾಚಾರ್ಯರು —ಇವರ ಸಾಲಿಗೆ ಈ ಗೀತರೂಪಕಗಳ ಕರ್ತೃ ಸೇರುತ್ತಾರೆ. ಇಲ್ಲಿ ಮಧ್ಯೆ ಮಧ್ಯೆ ಬಿಡಿ ಬಿಡಿಯಾಗಿ ಬರುವ ಕೆಲವು ಹಾಡುಗಳು ಅತ್ಯುತ್ತಮ ಭಾವಗೀತೆಗಳು, ಉತ್ಕೃಷ್ಟ ಸಂಗೀತ ರಚನೆಗಳು. ಬಂಗಾರಕ್ಕೆ ಪರಿಮಳವೂ ಸೇರಿದಂತೆ ಸಾಹಿತ್ಯ ಸಂಗೀತ ಕೈಕೈ ಹಿಡಿದು ನಲಿಯುತ್ತಿವೆ ಇಲ್ಲಿ! ಪುರಾಣೇತಿಹಾಸಗಳ ಕಥಾವಸ್ತುಗಳಲ್ಲಿರುವ ಸನ್ನಿವೇಶಗಳೆಂಬ ಲೋಹ ಪು.ತಿ.ನ. ಅವರ ಪ್ರತಿಭಾಪರುಷ ಸ್ಪರ್ಶದಿಂದ ತಮ್ಮ ಅವಲೋಹ ಕಳೆದುಕೊಂಡು ಮಿರುಗುವ ಬಂಗಾರವಾಗುತ್ತವೆ. ಮಹಾಕವಿಗಳ ಮಹಾಕಾವ್ಯ ಕುಸುಮಗಳಲ್ಲಿರುವ ವಸ್ತುಮಕರಂದವನ್ನು ಹೀರಿ, ಕವಿಕಲ್ಪನಾ ವಿಲಾಸದ ಪರಾಗರೇಣುಗಳೊಡನೆ ಕಲಸಿ, ಕವಿಪ್ರತಿಭೆಯ ಶರೀರ ಶಾಖವನ್ನು ಕೊಟ್ಟು 'ಪು.ತಿ.ನ.' ಕವಿ ಚೇತನ ಮಧುಮಕ್ಷಿಕೆ ಗೀತರೂಪಕಗಳ ಜೇನುಮಳೆ ಗರೆದಿದ್ದಾರೆ.

ಸಿ. ಪಿ. ಕೆ.

ಶ್ರೀಮದ್ಭಗವದ್ಗೀತಾತಾತ್ಪರ್ಯ ಅಥವಾ ಜೀವನಧರ್ಮಯೋಗ

೧

ಗೀತಾ ಸುಗೀತಾ ಕರ್ತವ್ಯಾ
ಕಿಮನ್ಯೈಃ ಶಾಸ್ತ್ರವಿಸ್ತರೈಃ
ಯಾ ಸ್ವಯಾ ಪದ್ಮನಾಭಸ್ಯ
ಮುಖಪದ್ಮಾದ್ವಿನಿಃಸೃತಾ

ಶ್ರೀಮದ್ಭಗವದ್ಗೀತೆಯ ಸ್ವರೂಪ ವೈಶಿಷ್ಟ್ಯಗಳನ್ನು ಸೊಗಸಾಗಿ ಸಂಗ್ರಹಿಸುತ್ತದೆ ಈ ಶ್ಲೋಕ: ಭಗವದ್ಗೀತೆ ಕರ್ತವ್ಯವನ್ನು ಬೋಧಿಸುವಂಥದು; ಸ್ವಯಂ ಭಗವಂತನ ಮುಖದಿಂದ ಅವತರಿಸಿದ್ದು; ಅದನ್ನು ಅನುಶೀಲನ ಮಾಡಿದರೆ ಸಾಕು, ಮತ್ತಾವ ಶಾಸ್ತ್ರದ ಅಗತ್ಯವೂ ಇರದು. ಇಂಥ ಧರ್ಮಗ್ರಂಥ ಭರತಖಂಡದಲ್ಲಿ–ಅಷ್ಟೇಕೆ, ಭೂಮಂಡಲದಲ್ಲಿ–ಇನ್ನೊಂದಿಲ್ಲ. ವೇದೋಪನಿಷತ್ತುಗಳ ಪಾಲಿಗೂ ಇಲ್ಲದ ಸನ್ಮಾನ ಪೂಜೆಗಳನ್ನು ಗೀತೆ ಯುಗಯುಗಾಂತರಗಳಿಂದ ಭಾರತೀಯರ ಮನೋಮಂದಿರಗಳಲ್ಲಿ ಪಡೆಯುತ್ತ ಬಂದಿದೆ; ಅದರ ಮಹತ್ತ್ವದಿಂದ ಲಬ್ಧವಾದದ್ದು ಈ ಗೌರವ, ಜನಪ್ರಿಯತೆ. ಅದು ಸಮಸ್ತ ವೇದೋಪನಿಷತ್ತುಗಳ ಸಾರ[1]; ಸಾಮಾನ್ಯ ಮತಿಗಳಿಗೆ ದುರವಗಾಹ್ಯವಾದ ವೇದೋಪನಿಷತ್ತುಗಳ ತತ್ತ್ವ ಬೋಧೆಗಳು ಗೀತೆಯಲ್ಲಿ ಸ್ವಾದುವಾಗಿ ಸುಲಭಗ್ರಾಹ್ಯವಾಗಿ ಪ್ರಣೀತವಾಗಿವೆ. ವೇದೋಪನಿಷತ್ತುಗಳ ಅಧ್ಯಯನಕ್ಕೆ ವಿಶೇಷಾಧಿಕಾರ ಬೇಕು; ಗೀತೆಯಾದರೊ ಎಲ್ಲರಿಗೂ ಎಟಕುವಂಥದು, ಸಮಷ್ಟಿಗಾಗಿ ಉದ್ದಿಷ್ಟವಾದುದು. ಪ್ರಸ್ಥಾನತ್ರಯವೆನಿಸಿಕೊಂಡಿರುವ

---

1 'ಸರ್ವೋಪನಿಷದೋ ಗಾವೋ ದೋಗ್ಧಾ ಗೋಪಾಲನಂದನಃ'—ಗೀತಾಧ್ಯಾನಶ್ಲೋಕ.
'ಸಮಸ್ತವೇದಾರ್ಥಸಾರಸಂಗ್ರಹಭೂತಂ, ತದರ್ಥ ವಿಜ್ಞಾನೇ ಸಮಸ್ತ ಪುರುಷಾರ್ಥಸಿದ್ಧಿ,
—ಶಂಕರ ಭಗವತ್ಪಾದರು.
'ಉಪನಿಷತ್ತುಗಳ ಮೇಲಿನ ವ್ಯಾಖ್ಯಾನ ಗೀತೆ; ಉಪನಿಷತ್ತುಗಳು ಭಾರತದ ಬೈಬಲ್'
—ವಿವೇಕಾನಂದರು (Complete works, Vol. 1, p. 446)

ಉಪನಿಷತ್ತು, ಬ್ರಹ್ಮಸೂತ್ರ, ಭಗವದ್ಗೀತೆಗಳಲ್ಲಿ ಗೀತೆಗೇ ಅಗ್ರಸ್ಥಾನ; ಉಳಿದವೆಲ್ಲ ಅದರಲ್ಲಿ ಅಂತರ್ಗತ. ಹೀಗಾಗಿ, ಭಗವದ್ಗೀತೆ ಭಾರತದ ಆಧ್ಯಾತ್ಮಿಕ ಜೀವನದ ತಳಹದಿಯಾಗಿ, ಹಿಂದೂ ಧರ್ಮದ ಪ್ರಮುಖ ಆಧಾರ ಸ್ತಂಭವಾಗಿ, ಸರ್ವರ ಉದ್ಧಾರ ಯೋಗಕ್ಷೇಮಗಳ ಹೊಣೆ ಹೊತ್ತ ಅಮೃತ ಶಕ್ತಿಯಾಗಿ ನಿಂತು ಕೊಂಡಿದೆ.

ಭರತಖಂಡದ ತ್ರಿಮತಸ್ಥಾಪನಾಚಾರ್ಯರಾದ ಶಂಕರ, ರಾಮಾನುಜ, ಮಧ್ವರಿಗೆ ಗೀತೆಯೇ ಪ್ರಮಾಣ; ತಾವು ಹೊಸದೇನನ್ನೂ ಹೇಳುತ್ತಿಲ್ಲ, ತಮ್ಮ ಸಿದ್ಧಾಂತದ ಬೇರುಗಳು ಗೀತೆಯಲ್ಲೇ ಇವೆ ಎಂಬುದು ಈ ಆಚಾರ್ಯರ ಪ್ರತಿಪಾದನೆ. ಹೀಗೆಯೆ ಭಾರತದ ಸಾಧು ಸಂತ ವಿಭೂತಿಗಳೆಲ್ಲ ಈ ಗೀತಾದೀಪಿಕೆಯಿಂದ ತಮ್ಮ ಬಾಳನ್ನು ಬೆಳಗಿಕೊಂಡಿದ್ದಾರೆ; ಅದಕ್ಕೆ ತಮ್ಮ ಭಾಷ್ಯ ವ್ಯಾಖ್ಯಾನಗಳ ಪುಷ್ಪಾಂಜಲಿ ಗಳನ್ನರ್ಪಿಸಿದ್ದಾರೆ. ಮಹಾತ್ಮ ಗಾಂಧಿಯವರು ಭಗವದ್ಗೀತೆಯನ್ನು ಮಾತೆಯೆಂದು ಸಂಭಾವಿಸಿರುವುದಲ್ಲದೆ, "ನನಗೆ ಅರ್ಥವಾಗದ ಇಂಗ್ಲಿಷ್ ಪದಗಳ ಅರ್ಥಕ್ಕೆ ಇಂಗ್ಲಿಷ್ ಶಬ್ದಕೋಶಗಳನ್ನು ನಾನು ಆಶ್ರಯಿಸುತ್ತಿದ್ದಂತೆ ನನ್ನೆಲ್ಲ ತೊಂದರೆಗಳ ಸಿದ್ಧ ಪರಿ ಹಾರಕ್ಕಾಗಿ ಈ ಶೀಲ–ಶಬ್ದಕೋಶವನ್ನು ಆಶ್ರಯಿಸುತ್ತಿದ್ದೆ"[2] ಎಂದಿದ್ದಾರೆ; ಆಚಾರ್ಯ ವಿನೋಬಾ ಅವರು "ನನ್ನ ಮೈ ತಾಯ ಹಾಲಿನಿಂದ ಬೆಳೆದಿದೆ; ಅದಕ್ಕಿಂತ ಹೆಚ್ಚಾಗಿ ನನ್ನ ಮನಸ್ಸು ಗೀತೆಯ ಹಾಲಿನಿಂದ ಬೆಳೆದಿದೆ" ಎಂದು ಹೇಳಿದ್ದಾರೆ.

ಭಗವದ್ಗೀತೆಯ ಹಿನ್ನೆಲೆ ಅತ್ಯಂತ ಅರ್ಥಪೂರ್ಣವಾದದ್ದು; ಗೀತೆ ಹುಟ್ಟಿದ್ದು ಯಾವುದೋ ಕಾಡಿನ ನಿರ್ಜನ ಪ್ರದೇಶದಲ್ಲಲ್ಲ, ಕುರುಕ್ಷೇತ್ರದ ರಣತುಮುಲದ ನಡುವೆ ಎಂಬುದನ್ನು ಅದು ತಿಳಿಸಿಕೊಡುತ್ತದೆ. ಅಲ್ಲಿ ಅರ್ಜುನ ನಿಮಿತ್ತ ಮಾತ್ರ; ಸಂಶಯಾಕುಲಚಿತ್ತರಿಗೆ ಅವನು ಪ್ರತಿನಿಧಿ. ಜೀವನ ಸಂಗ್ರಾಮದಲ್ಲಿ ಎಲ್ಲರಿಗೂ ಆ ಪಾರ್ಥಾವಸ್ಥೆ ಮತ್ತೆ ಮತ್ತೆ ಉಂಟಾಗುತ್ತದೆ; ಆಗ ಮೊಳಗಿಬರುತ್ತದೆ ಭಗವದ್ವಾಣಿ. ಆದ್ದರಿಂದ ಭಗವದ್ಗೀತೆಯೊಂದು ಮಹಾಪ್ರತಿಮೆ, ದಿವ್ಯಪ್ರತಿಮೆ. ಅದು ಮೋಕ್ಷ ನಿಷ್ಠವಾದ ಬರಿಯ ಆಧ್ಯಾತ್ಮಿಕ ಗ್ರಂಥವಲ್ಲ; ಬಾಳಿನ ಹೋರಾಟದಲ್ಲಿ ಹಜ್ಜೆಹಜ್ಜೆಗೂ ಕವಿಯುವ ಸಂಶಯ ಗ್ಲಾನಿಗಳನ್ನು ನಿವಾರಿಸಿ, ಹೃದಯ ದೌರ್ಬಲ್ಯವನ್ನು ತೊಲಗಿಸಿ, ಕರ್ತವ್ಯಾಕರ್ತವ್ಯಗಳನ್ನು ಬೋಧಿಸಿ ಭರವಸೆಯಿತ್ತು ಹುರಿದುಂಬಿಸುವ ತೂರ್ಯನಿನಾದ. ಮೋಕ್ಷಸಾಧನೆಗೆ ಅದು ಎಷ್ಟರ ಮಟ್ಟಿಗೆ ಅವಶ್ಯವೊ, ಲೌಕಿಕ ಜೀವನರಂಗದಲ್ಲಿ ಯಶೋಲಾಭಕ್ಕೂ ಅಷ್ಟೇ ಅವಶ್ಯಕ. ಅದರ ಸಂದೇಶ ಆಸ್ತಿಕರಿಗೆ ಮಾತ್ರವಲ್ಲ, ನಾಸ್ತಿಕರಿಗೂ ಉಪಾದೇಯ. ವಿನೋಬಾ ಹೇಳುವಂತೆ, "ಬಾಳಿನ ವಿಕಾಸಕ್ಕೆ ಅಗತ್ಯವಾದ ಪ್ರತಿಯೊಂದು ವಿಚಾರವೂ ಬಹುಶಃ ಗೀತೆಯಲ್ಲಿ ಬಂದೇ ಇದೆ." ಈ ಕಾರಣದಿಂದ ಭಗವದ್ಗೀತೆ ಬರಿಯ ಸಂಕುಚಿತ ಮತ ಗ್ರಂಥವಾಗದೆ, ಸರ್ವಕಾಲ

---

[2] ಆತ್ಮಚರಿತ್ರೆ (ಇಂಗ್ಲಿಷ್), ಪು. ೯೮.

ಸರ್ವದೇಶಗಳಿಗೂ ಅನ್ವಯಿಸುವಂಥ ಉದಾರ ಸುಂದರವಾದ ಧರ್ಮ ಗ್ರಂಥವಾಗಿ ಪರಿಣಮಿಸಿದೆ. ಕೇವಲ ಏಳು ನೂರು ಶ್ಲೋಕಗಳಿದ್ದರೂ ಅದೊಂದು ವಿಶ್ವಕೋಶ; ಅದರಲ್ಲಿ ಏನಿಲ್ಲ? ದ್ವೈತ, ಅದ್ವೈತ, ವಿಶಿಷ್ಟಾದ್ವೈತ, ಸಗುಣೋಪಾಸನೆ, ನಿರ್ಗುಣೋಪಾಸನೆ, ಭಕ್ತಿಯೋಗ, ಕರ್ಮಯೋಗ, ಜ್ಞಾನಯೋಗ–ಎಲ್ಲವೂ ಇದೆ: ಅದೊಂದು ಸಮನ್ವಯಶಕ್ತಿ. ಯಾರು ಬೇಕಾದರೂ ತಮ್ಮ ತಮ್ಮ ಶಕ್ತಿಗೆ, ಸ್ವಧರ್ಮಕ್ಕೆ, ಅಭಿರುಚಿಗೆ ಅನುಸಾರವಾಗಿ ಅದರಿಂದ ಮಾರ್ಗದರ್ಶನ ಪಡೆದುಕೊಳ್ಳಬಹುದು. ತಾಯಿ ತನ್ನೆಲ್ಲ ಮಕ್ಕಳನ್ನೂ ಭೇದವೆಣಿಸದೆ ನೋಡಿಕೊಳ್ಳುವಂತೆ, ಅವರವರಿಗೆ ಬೇಕಾದುದನ್ನು ಕೊಡುವಂತೆ, ಗೀತೆ ಎಲ್ಲ ಸ್ತರಗಳ ಜನರಿಗೂ ಅಮೃತಾಹಾರವುಣಿಸಿ ಸಂತೃಪ್ತಿಗೊಳಿಸುತ್ತದೆ.

ಮಹಾಭಾರತದ ಭೀಷ್ಮಪರ್ವದಲ್ಲಿ ಭಗವದ್ಗೀತೆಯ ಆವಿರ್ಭಾವ. ಆದರೆ ಗೀತೆ ಭಾರತದ ಒಂದು ಅಂಗವಲ್ಲ, ಅದೇ ಅಂಗಿ. ಪಂಚಮವೇದವೆಂದು ನೆಗಳ್ತೆಗೊಂಡಿರುವ ಇಡೀ ಮಹಾಭಾರತ ಈ ಗೀತೆಯೆಂಬ ಜ್ಯೋತಿಗೆ ಎರೆದ ತೈಲ, ಬರೆದ ಭಾಷ್ಯ.[3] ಎಂದಮೇಲೆ ಗೀತೆಯ ಶ್ರೇಷ್ಠತೆಗೆ, ಪರಮ ಪ್ರಾಶಸ್ತ್ಯಕ್ಕೆ ಅನ್ಯ ನಿದರ್ಶನ ಬೇಕಿಲ್ಲ.

ಗೀತೆ ಮೊದಲ ಬಾರಿಗೆ ಈಸ್ಟ್ ಇಂಡಿಯಾ ಕಂಪನಿಯಿಂದ ಇಂಗ್ಲಿಷಿಗೆ ಭಾಷಾಂತರಗೊಂಡಾಗ ವಾರನ್ ಹೇಸ್ಟಿಂಗ್ಸ್, " These (writings of the inhabitants of India) will survive when British Dominion in India shall have long ceased to exist and when the sources which it once yielded of wealth and power are lost to remembrance " ಎಂದು ಅಭಿಪ್ರಾಯಿಸಿದನಂತೆ.[4] ಇದರಲ್ಲಿ ಸೋಜಿಗವೇನೂ ಇಲ್ಲ. ಗೀತೆ ಹೇಸ್ಟಿಂಗ್ಸ್‌ನ ಬಾಯಿಂದ ಭವಿಷ್ಯವನ್ನು ಸರಿಯಾಗಿಯೇ ನುಡಿಯಿಸಿತೆನ್ನಬೇಕು: ಬ್ರಿಟಿಷ್ ಸಾಮ್ರಾಜ್ಯ ಅಸ್ತಂಗತವಾಯಿತು; ಭಗವದ್ಗೀತೆ ಮಾತ್ರ ಧ್ರುವತೇಜೋಗೋಲವಾಗಿ ಉಳಿದಿದೆ.

೨

ಭಗವದ್ಗೀತೆಗೆ ಭರತಖಂಡದಲ್ಲಿ ಅಸಂಖ್ಯ ಭಾಷ್ಯಗಳು, ವ್ಯಾಖ್ಯಾನಗಳು ಹುಟ್ಟಿಕೊಂಡಿವೆ; ಇಷ್ಟರಮಟ್ಟಿಗೆ ಭಾಷ್ಯಗೌರವವನ್ನು ಪಡೆದ ಗ್ರಂಥ ಇನ್ನೊಂದಿಲ್ಲ. ಶಾಂಕರಭಾಷ್ಯ ಗೀತಾಭಾಷ್ಯಗಳಲ್ಲಿ ಪ್ರಪ್ರಾಚೀನವಾದುದು; ಅನಂತರ ರಾಮಾನುಜ, ಮಧ್ವಾಚಾರ್ಯರ ಭಾಷ್ಯಗಳು ಬರುತ್ತವೆ. ಈ ಆಚಾರ್ಯತ್ರಯದ ಭಾಷ್ಯಗಳು ಸುಪ್ರಖ್ಯಾತ; ಇವುಗಳಿಗೆ ವ್ಯಾಖ್ಯಾನಗಳು, ಆ ವ್ಯಾಖ್ಯಾನಗಳಿಗೆ ಟೀಕೆಗಳು, ಅವಕ್ಕೆ ದೀಪಿಕೆಗಳು–

[3] ' ನಮೋಸ್ತು ತೇ ವ್ಯಾಸ ವಿಶಾಲಬುದ್ಧೇ....ಯೇನ ತ್ವಯಾ ಭಾರತತೈಲಪೂರ್ಣಃ ಪ್ರಜ್ವಾಲಿತೋ ಜ್ಞಾನಮಯ ಪ್ರದೀಪಃ '–ಗೀತಾಧ್ಯಾನ ಶ್ಲೋಕ.

[4] ಸ್ವಾಮಿ ಚಿದ್ಭವಾನಂದರಿಂದ ಉದ್ಧೃತ: *The Bhagavadgita*, Introduction, p. 43.

ಹೀಗೆ ಭಾಷ್ಯಸಂತಾನ ಹೇರಳವಾಗಿ ಸೃಷ್ಟಿಯಾಗಿದೆ. ಪ್ರಾಚೀನರಲ್ಲದೆ ತಿಲಕರು, ಅರವಿಂದರು, ಗಾಂಧೀಜಿ, ವಿನೋಬಾ, ರಾಧಾಕೃಷ್ಣನ್ ಮುಂತಾದ ಅರ್ವಾಚೀನರೂ ಗೀತೆಗೆ ವ್ಯಾಖ್ಯಾನ ಮಾಡಿದ್ದಾರೆ.

ಹೀಗೆ ಸಂಸ್ಕೃತದಲ್ಲಿ, ಇಂಗ್ಲಿಷಿನಲ್ಲಿ, ದೇಶಭಾಷೆಗಳಲ್ಲಿ ಗೀತಾವಾಣಿ ನಿರಂತರವಾಗಿ ಪ್ರವಹಿಸಿದೆ. ಕನ್ನಡದಲ್ಲಿ ಇದರ ಪಾಲು ಕಡಿಮೆಯಿಲ್ಲ; ಬೇಕಾದಷ್ಟು ಗದ್ಯ ಪದ್ಯಾನುವಾದಗಳು, ವ್ಯಾಖ್ಯಾನಗಳು ಈ ಭಾಷೆಯಲ್ಲಿ ಸೃಷ್ಟಿವೆ. ಇವುಗಳ ಪಂಕ್ತಿಯಲ್ಲಿ ತೀರ ಇತ್ತೀಚಿಗೆ ಕಾಣಿಸಿಕೊಂಡಿರತಕ್ಕದ್ದು ಶ್ರೀ ಡಿ.ವಿ.ಜಿ. ಯವರ 'ಶ್ರೀಮದ್ಭಗವದ್ಗೀತಾತಾತ್ಪರ್ಯ ಅಥವಾ ಜೀವನಧರ್ಮಯೋಗ' ಎಂಬ ಹೆಬ್ಬೊತ್ತಗೆ. ಇದು ಬೃಹತ್ತಿನಿಂದ ಮಾತ್ರವಲ್ಲದೆ ಮಹತ್ತಿನಿಂದಲೂ ಗಮನ ಸೆಳೆಯುವಂತಿದ್ದು, ಸದ್ಯಕ್ಕೆ ಸೀಮಾಕೃತಿಯಾಗಿದೆ.

ಗೀತೆಯನ್ನು ಕುರಿತು ಈಗಾಗಲೆ ಅಪರಿಮಿತ ಸಂಖ್ಯೆಯ ವ್ಯಾಖ್ಯಾನಗಳು ಬಂದಿರುವಾಗ, ಡಿ.ವಿ.ಜಿ.ಯವರು ಮತ್ತೊಂದು ಗೀತಾತಾತ್ಪರ್ಯವನ್ನು ರಚಿಸುವ ಅಗತ್ಯವೇನಿತ್ತು ಎಂಬ ಪ್ರಶ್ನೆ ಸಹಜವಾಗಿ ಮೂಡುತ್ತದೆ. ಇದಕ್ಕೆ ಡಿ.ವಿ.ಜಿ. ಯವರೆ 'ಭೂಮಿಕೆ'ಯಲ್ಲಿ ಸುದೀರ್ಘವಾಗಿ ಉತ್ತರಿಸಿ, ತಮ್ಮ ಉದ್ದೇಶ ಧೋರಣೆಗಳನ್ನೂ ತಮ್ಮ ಗ್ರಂಥದ ವಿಶಿಷ್ಟತೆಯನ್ನೂ ಸ್ಪಷ್ಟಪಡಿಸಿದ್ದಾರೆ.

'ಜೀವನ ಧರ್ಮಯೋಗ'ದಲ್ಲಿ ಒಟ್ಟು ಇಪ್ಪತ್ತು ಪ್ರಕರಣಗಳಿವೆ; ಇವುಗಳಲ್ಲಿ ಮೊದಲನೆಯದು ಪ್ರಸ್ತಾವನಾರೂಪವಾದ 'ಭೂಮಿಕೆ'; ಕಡೆಯದು 'ಉಪಸಂಹಾರ'; ನಡುವಣ ಹದಿನೆಂಟು ಪ್ರಕರಣಗಳು ಗೀತೆಯ ಹದಿನೆಂಟು ಅಧ್ಯಾಯಗಳ ಸುವಿಸ್ತಾರವಾದ ವಿಶ್ಲೇಷಣೆ. ಗ್ರಂಥಾಂತ್ಯದಲ್ಲಿ ಏಳು ಪರಿಶಿಷ್ಟಗಳು ಸೇರಿವೆ.

ಭೂಮಿಕೆಯಲ್ಲಿ ಗ್ರಂಥಸ್ವರೂಪ, ಗೀತಾ ವ್ಯಾಸಂಗಕ್ಕೆ ಬೇಕಾದ ಪೂರ್ವಸಿದ್ಧತೆ, ಮತಭೇದಗಳು, ಗೀತೆಯ ಕರ್ತೃತ್ವ, ಸಾಧನ ಚತುಷ್ಟಯ, ಪುರುಷಾರ್ಥ ಚತುಷ್ಟಯ, ಜೀವನಯೋಗ, ಗೀತೆಯ ಮಹೋಪದೇಶ—ಮುಂತಾದ ವಿಷಯಗಳು ವಿವರವಾಗಿ ಚರ್ಚಿತವಾಗಿವೆ. ಗೀತೆಯನ್ನು ಕುರಿತ ಸುಂದರವಾದ, ಸಂಕ್ಷಿಪ್ತವಾದ ವಿಮರ್ಶೆಯಾಗಿದೆ ಈ ಭೂಮಿಕೆ.

ಡಿ.ವಿ.ಜಿ. ಯವರು ಏಳು ಅಂಶಗಳನ್ನು ಮುಂದಿರಿಸಿ ತಮ್ಮ ಪ್ರಬಂಧವನ್ನು ಸಮರ್ಥಿಸಿಕೊಂಡಿದ್ದಾರೆ.

(೧) ಪೂರ್ವಾಚಾರ್ಯರ ದೃಷ್ಟಿಯಲ್ಲಿ ಭಗವದ್ಗೀತೆ ಮುಖ್ಯವಾಗಿ ಮೋಕ್ಷಶಾಸ್ತ್ರ. ಗೀತೋಪದೇಶದ ಲೌಕಿಕ ಜೀವನಾನ್ವಯ ನಮ್ಮ ಉದ್ದೇಶ.

(೨) ಪೂರ್ವಾಚಾರ್ಯರು ದ್ವೈತ, ಅದ್ವೈತ, ವಿಶಿಷ್ಟಾದ್ವೈತ ಮೊದಲಾದ ಮತಭೇದಗಳಿಗೆ ಗಮನ ಕೊಟ್ಟಿದ್ದಾರೆ. ಇಲ್ಲಿ ಅವುಗಳ ಸಾಮರಸ್ಯ ಸಾಧ್ಯವೆಂದು ನಂಬಿಕೆಯಿಟ್ಟುಕೊಂಡಿದೆ.

(೩) ಭಗವದುಪಾಸನೆಯಲ್ಲಿ ಕರ್ಮ ಮುಖ್ಯವೆ? ಭಕ್ತಿ ಮುಖ್ಯವೆ? ಜ್ಞಾನ

ಮುಖ್ಯವೆ? ಈ ವಿಚಾರದಲ್ಲಿಯೂ ಪೂರ್ವಿಕರಲ್ಲಿ ತರ್ಕಾತಿರೇಕ ಕಾಣುತ್ತದೆ. ಇಲ್ಲಿ ಅವೆಲ್ಲಕ್ಕೂ ಸಾಹಚರ್ಯ ಸಾಧ್ಯವೆಂಬ ನಂಬಿಕೆಯಿದೆ.

(೪) ಪೂರ್ವಿಕರಿಗೆ ಶ್ರುತಿಸ್ಮೃತಿ ಮುಖ್ಯಾಧಾರ. ಇಲ್ಲಿ ವೈಜ್ಞಾನಿಕ ಸಾಮಾನ್ಯವಾದ ಪ್ರಾಶ್ನಿಕ ಬುದ್ಧಿ ವೃತ್ತಿಗೆ ಲಕ್ಷ್ಯ.

(೫) ಪೂರ್ವ ವ್ಯಾಖ್ಯಾನಕಾರರು ಶಾಸ್ತ್ರ ಪಾರಂಗತರು; ಶಾಸ್ತ್ರಪರಿಶ್ರಮ ಮಾಡಿದವರನ್ನು ದೃಷ್ಟಿಯಲ್ಲಿರಿಸಿಕೊಂಡು ಬರೆದರು. ಅವರಿಗೆ ತರ್ಕವ್ಯಾಕರಣಾದಿ ಶಾಸ್ತ್ರಪಾಂಡಿತ್ಯದ ಒಲವು ಹೆಚ್ಚಾಗಿತ್ತು. ಇಲ್ಲಿ ಮೂಲ ಗ್ರಂಥದ ವಾಕ್ಯಗಳಿಂದ ಋಜುವಾಗಿ ಹೊರಡುವ ಅರ್ಥವೇನೆಂಬುದರ ಕಡೆಗೆ ಹೆಚ್ಚು ಗಮನ. ಋಜುವೂ ಸರಳವೂ ಆದ ಮಾರ್ಗ ಇಲ್ಲಿನದು.

(೬) ವೇದಮತದವರನ್ನು ಮಾತ್ರವೇ ಅಲ್ಲದೆ ಎಲ್ಲ ಮತಗಳ ಸಾಮಾನ್ಯ ಜನರನ್ನೂ ಉದ್ದೇಶಿಸಲಾಗಿದೆ.

(೭) ಸಾಮಾನ್ಯ ಮನುಷ್ಯನೊಬ್ಬನ ನಿಲುವಿನಿಂದ ದೇವರು, ಜೀವ, ಅದೃಷ್ಟ, ಧರ್ಮ, ಇಂಥ ಆಳವಾದ ವಿಷಯಗಳ ಸಮಾಲೋಚನೆ ಇಲ್ಲಿದೆ.

ಈ ಕಾರಣಗಳಿಂದ ಗೀತೋಪದೇಶವನ್ನು ಡಿ.ವಿ.ಜಿ. ಯವರು ಜೀವನ ಧರ್ಮ ಯೋಗವೆಂದು ಭಾವಿಸಿದ್ದಾರೆ. ಪೂರ್ವಿಕರು ಗೀತೆಯನ್ನು ಮೋಕ್ಷಶಾಸ್ತ್ರವೆಂದು ಕರೆದರು; ಅದು ಮೋಕ್ಷಶಾಸ್ತ್ರವೂ ಹೌದು, ಅದರ ಜೊತೆಗೆ ಜೀವನಶಾಸ್ತ್ರವೂ ಹೌದು ಎಂಬುದು ಡಿ.ವಿ.ಜಿ. ಯವರ ನಿಲುವು; ಇದು 'ಭಗವದ್ಗೀತಾತಾತ್ಪರ್ಯ'ದ ಉದ್ದಕ್ಕೂ ಕಂಡುಬರುತ್ತದೆ.

ಡಿ.ವಿ.ಜಿ. ಯವರದು ಒಟ್ಟಿನಲ್ಲಿ ಸಮನ್ವಯದೃಷ್ಟಿ ಎನ್ನಬಹುದು; ಇದರಲ್ಲೇ ಅವರ ವ್ಯಾಖ್ಯಾನದ ಹೊಸತನವಿರುವುದು. "ಸತ್ಯ ಒಂದು, ಸತ್ಯದರ್ಶನ ಸಾವಿರ. ಇದನ್ನು ಜ್ಞಾಪಕದಲ್ಲಿರಿಸಿಕೊಂಡರೆ ದ್ವೈತಾದ್ವೈತಾದಿ ಹಿಂದೂ ಮತಭೇದಗಳು ಹಾಗಿರಲಿ, ಜೈನ ಬೌದ್ಧ ಮುಸಲ್ಮಾನ್ ಕ್ರೈಸ್ತ ಮೊದಲಾದ ಸಮಸ್ತ ಅವೈದಿಕ ಮತಗಳೂ ಗೀತೆಯನ್ನಂಗೀಕರಿಸಬಹುದೆಂದು ಸಿದ್ಧವಾಗುತ್ತದೆ. ಪ್ರಕೃತ, ನಮ್ಮ ಇಲ್ಲಿಯ ಗೀತಾಪ್ರವಚನದಲ್ಲಿ ನಮ್ಮ ಮತಾಚಾರ್ಯರುಗಳಲ್ಲಿ ಯಾರಿಗೂ ವಿರೋಧ ವಾಗದಂತೆ ಅರ್ಥಾವಲೋಕನೆ ಕೊಡಬೇಕೆಂಬುದು ಉದ್ದೇಶ. ತಕರಾರಿರುವ ಕಡೆ ಅವರವರ ಅಭಿಪ್ರಾಯದ ಸ್ವಾತಂತ್ರ್ಯ ಅವರವರಿಗೆ ಉಂಟೇ ಉಂಟು. ನಮ್ಮ ಗಮನ ಮುಖ್ಯವಾಗಿರುವುದು ತಕರಾರು ಅಂಶದ ಮೇಲೆ ಅಲ್ಲ; ಸರ್ವಸಮ್ಮತವಾಗಬೇಕಾದ ಅಂಶದ ಮೇಲೆ" (ಪು. ೪೨) ಎಂಬುದು ಅವರ ವಿವರಣೆ. ಭಿನ್ನಾಭಿಪ್ರಾಯಕ್ಕೆ ಆಸ್ಪದವಿರುವ ಮೋಕ್ಷವಿಚಾರ ತಮಗೆ ಪ್ರಧಾನವಲ್ಲವೆಂದೂ ಏಕವಾಕ್ಯತೆ ಸಾಧ್ಯವಿರುವ ಧರ್ಮ ತಮಗೆ ಮುಖ್ಯವೆಂದೂ ಅವರು ಚೆನ್ನಾಗಿ ಸ್ಪಷ್ಟೀಕರಿಸಿದ್ದಾರೆ. "ಆಚಾರ್ಯರುಗಳ ಮತಭೇದವಿರುವುದು ಗ್ರಂಥದ ಧರ್ಮವಿಚಾರ ಭಾಗದಲ್ಲಲ್ಲ; ತತ್ತ್ವವಿಚಾರ ಭಾಗದಲ್ಲಿ.

ತತ್ತ್ವ ಭಾಗಕ್ಕೆ ಅವರು ಹೆಚ್ಚು ಪ್ರಾಧಾನ್ಯ ಕೊಟ್ಟಿದ್ದಾರೆ. ಕಾರಣ ಏನೆಂದರೆ ತತ್ವ ಸಿದ್ಧಾಂತವು ಮೋಕ್ಷಸ್ವರೂಪ ಮೊದಲಾದ ಕಡೆಕಡೆಯ ಪ್ರಶ್ನೆಗಳನ್ನು ಕುರಿತದ್ದು. ತತ್ವ ಜಿಜ್ಞಾಸೆಯನ್ನು ಬೆಳಸಿ, ಜೀವದ ಪರಮ ಪರಾಕಾಷ್ಠಗತಿಯನ್ನು ಅತಿಶಯವಾಗಿ ಚರ್ಚಿಸಿದ್ದರಿಂದ ಗ್ರಂಥವು ಮುಖ್ಯವಾಗಿ ಮೋಕ್ಷಪರವಾದದ್ದೆಂದೂ ಧರ್ಮಪ್ರಶ್ನೆ ಅದಕ್ಕೆ ಗೌಣಮಾತ್ರವೆಂದೂ ಜನರಲ್ಲಿ ಭಾವನೆ ಹರಡುವಂತಾಯಿತು. ಅದು ಸಮಂಜಸವಲ್ಲ. ಜನಸಾಮಾನ್ಯಕ್ಕಾದರೋ ಪ್ರಯೋಜನ ದೃಷ್ಟಿಯಿಂದ ಮುಖ್ಯ ವಾದದ್ದು ಸಾಧನೆ ಅಥವಾ ಅನುಸಂಧಾನ" (ಪು. ೭೩). ಭಗವದ್ಗೀತೆ ಹುಟ್ಟಿದ್ದು ವಾದಕ್ಕಾಗಿ ಅಲ್ಲ, ಅನುಷ್ಠಾನಕ್ಕಾಗಿ. ಆದ್ದರಿಂದ ಜನಸಾಮಾನ್ಯರ ಆವಶ್ಯಕತೆಯ ದೃಷ್ಟಿಯಿಂದ ಗೀತೆಯನ್ನು ನೋಡುವುದು ಡಿ.ವಿ.ಜಿ.ಯವರ ಉದ್ದೇಶ.

ಆಚಾರ್ಯರ ಭಾಷ್ಯಗಳಲ್ಲಿ ತರ್ಕಜಿಜ್ಞಾಸೆಗಳೇ ಮೇಲುಗೈಯಾದುದಕ್ಕೆ ಡಿ.ವಿ.ಜಿ. ಹೀಗೆ ಕಾರಣ ಹೇಳುತ್ತಾರೆ: "ಶಂಕರಾಚಾರ್ಯರ ಭಾಷ್ಯವೇ ಅತ್ಯಂತ ಪುರಾತನ. ಅವರು ತತ್ತ್ವಜಿಜ್ಞಾಸೆಗೆ ಹೆಚ್ಚು ಪ್ರಾಮುಖ್ಯ ಕೊಟ್ಟ ಕಾರಣದಿಂದ ಅವರ ಪ್ರತಿವಾದಿಗಳೂ ಹಾಗೆ ಜಿಜ್ಞಾಸೆಯನ್ನು ಬೆಳಸಬೇಕಾಯಿತು". ಆದರೆ "ನಮ್ಮ ಕಾಲದಲ್ಲಿ ಆ ತರ್ಕಪ್ರಾಚುರ್ಯ ಅನಾವಶ್ಯಕ. ಚರ್ವಿತ ಚರ್ವಣದಿಂದ ನಮಗೆ ಆಗುವ ಪ್ರಯೋಜನಕ್ಕಿಂತ ಗ್ರಂಥವನ್ನು ಪ್ರಕೃತ ಲೋಕದ ದೃಷ್ಟಿಯಿಂದ ನೋಡುವುದು ಹೆಚ್ಚು ಪ್ರಯೋಜನಕರ" (ಪು. ೭೪)

ಡಿ.ವಿ.ಜಿ.ಯವರ ಪ್ರಕಾರ ಭಗವದ್ಗೀತೆ ಇಂದಿನವರಿಗೆ ಧರ್ಮಶಾಸ್ತ್ರ. "ಲೋಕಜೀವನದ ಸಮ್ಯಗ್ವಿಧಾನವೇ ಧರ್ಮ; ಧರ್ಮ ಮೋಕ್ಷಗಳು ಒಂದನ್ನೊಂದು ಬಿಟ್ಟಿರಲಾರವು. ಮೋಕ್ಷಕ್ಕೆ ಬೇಕಾದ ಪೂರ್ವಸಿದ್ಧತೆಯೇ ಧರ್ಮ; ಧರ್ಮದ ಫಲ ಪರಿಪೂರ್ಣತೆ, ಮೋಕ್ಷ. ಹೀಗೆ, ಯಾವುದು ಪೂರ್ವಿಕರಿಗೆ ಮೋಕ್ಷಶಾಸ್ತ್ರವಾಯಿತೋ ಅದು ಇಂದಿನವರಿಗೆ ಧರ್ಮಶಾಸ್ತ್ರವಾಗಿದೆ" (ಪು. ೪೫)

ವಾಸ್ತವವಾಗಿ, ವ್ಯಾವಹಾರಿಕ ಪಾರಮಾರ್ಥಿಕಗಳೆರಡೂ ಗೀತಾಚಾರ್ಯರಿಗೆ ಸಮ್ಮತವಾದವೇ. ನಮ್ಮ ಪ್ರಾಚೀನ ಭಾಷ್ಯಕಾರರು ಸಹ ಮೋಕ್ಷಕ್ಕೆ ಪ್ರಾಶಸ್ತ್ಯವನ್ನು ಕೊಟ್ಟರೂ ಲೋಕಜೀವನದ ದೃಷ್ಟಿಯಿಂದಲೂ ಗೀತೋಪದೇಶವನ್ನು ಎಲ್ಲ ಜನರೂ ಅಂಗೀಕರಿಸತಕ್ಕದ್ದೆಂದು ಪ್ರತಿಪಾದಿಸಿದ್ದಾರೆ ಎಂಬುದನ್ನು ಡಿ.ವಿ.ಜಿ. ಮರೆತಿಲ್ಲ. ಆದರೆ ಕಾಲಕ್ರಮೇಣ ಗೀತೆಯ ಐಹಿಕ ಪ್ರಾಮುಖ್ಯ ಹಿಂದೆ ಬಿದ್ದುದರಿಂದ ಅದನ್ನು ಎತ್ತಿ ಹಿಡಿಯುವ ಧ್ಯೇಯ ಅವರದು. ಅಂತೂ ಅವರ ವಿಚಾರಗಳು ಪ್ರಾಚೀನರ ಸಿದ್ಧಾಂತ ಗಳಿಗೆ ವಿರುದ್ಧವಲ್ಲ. "ನಮ್ಮ ಹೊಸ ಆಲೋಚನೆಗಳೂ ಹೊಸ ಅನುವಾದಗಳೂ ಹಿಂದಿನವಕ್ಕೆ ಅನುಸ್ಯೂತವಾಗಿ ಅಂಟಿಕೊಂಡಿರಬೇಕಾದವು" ಎಂದು ಹೇಳಿ, ಪರಂಪರೆ ಯಲ್ಲಿ ಮುನ್ನಡೆಯಬೇಕಾದ ಅಗತ್ಯವನ್ನವರು ಮನಗಾಣಿಸಿದ್ದಾರೆ.

ಭಗವದ್ಗೀತೆ ಶಾಸ್ತ್ರವೆ ಅಥವಾ ಕಾವ್ಯವೆ ಎಂಬ ಪ್ರಶ್ನೆಯನ್ನೆತ್ತಿ, ಅದು

ಶಾಸ್ತ್ರಕಾವ್ಯವೆಂದು ನಿರ್ಣಯಿಸುತ್ತಾರೆ ಡಿ.ವಿ.ಜಿ.[5] ಅದರದು ಅಲಂಕೃತ ಭಾಷೆ, ಶೈಲಿ ಕಾವ್ಯಧೋರಣೆಯದು; ಅದರಲ್ಲಿ ತರ್ಕರಗಳೆಗಳಿಗೆ ಆಸ್ಪದವಿಲ್ಲ ಎಂಬ ಅವರ ಅಭಿಪ್ರಾಯ ಒಪ್ಪುವಂಥದು–ಗೀತೆ ಮುಖ್ಯವಾಗಿ ಕಾವ್ಯವಾದುದರಿಂದ, ಅಸಂಭಾವ್ಯತೆಯ ಆರೋಪವನ್ನು ಅದರ ಮೇಲೆ ಹೊರಿಸಲಾಗದು; ಆದ್ದರಿಂದ ಡಿ.ವಿ.ಜಿ. ಯವರು ಎರಡು ಮುನ್ನೆಚ್ಚರಿಕೆಗಳನ್ನು ಕೊಡುತ್ತಾರೆ: (೧) ಕಥಾಸಂಗತಿಯಲ್ಲಿ ಅಪನಂಬಿಕೆಯನ್ನು ಅಮಾನತ್ತಿನಲ್ಲಿರಿಸುವುದು. ('willing suspension of disbelief') (೨) ವಾಕ್ಯಧೋರಣೆಯಲ್ಲಿ ತಾತ್ಪರ್ಯಾರ್ಥವನ್ನು–ವಾಚ್ಯಾರ್ಥವನ್ನಲ್ಲ–ಲಕ್ಷ್ಯದಲ್ಲಿರಿಸಿಕೊಳ್ಳುವುದು.

ಗೀತೆಯದು ಮಿತ್ರಸಂಭಾಷಣೆಯ ಶೈಲಿಯೆಂದೂ, ನಿಷ್ಕೃಷ್ಟವಾದ ವಿಷಯವಿಭಾಗವಾಗಲಿ ಪ್ರಕರಣಾನುಕ್ರಮವಾಗಲಿ ಅಲ್ಲಿಲ್ಲವೆಂದೂ ಡಿ.ವಿ.ಜಿ. ಸೂಚಿಸುತ್ತಾರೆ; ಅಧ್ಯಾಯವ್ಯವಸ್ಥೆಯಿದ್ದರೂ ಒಂದರ ವಿಷಯ ಮತ್ತೊಂದರಲ್ಲಿ ಬೆರೆತಿರುತ್ತದೆ ಎಂದೂ ಈ ಕಾರಣದಿಂದ ಗೀತೆಯದು ಪ್ಲೇಟೋ ಸಂವಾದ ಗ್ರಂಥಗಳ ರೀತಿ ಎಂದೂ ಅವರು ಹೇಳಿರುವುದು ಲಕ್ಷಿಸಬೇಕಾದ ಸಂಗತಿ.

ಗೀತೆಯಲ್ಲಿ ಯಜ್ಞವಿಷಯಕವಾದ ನಂಬಿಕೆ, ದೇವಯಾನ, ಪಿತೃಯಾನ ಇತ್ಯಾದಿ ತತ್ಕಾಲೀನವಾದ ಅಂಶಗಳುಂಟೆಂದೂ ಅವುಗಳನ್ನು ಬಿಟ್ಟರೂ ಗೀತೆಯ ಹೃದಯಭಾಗಕ್ಕೆ ಲೋಪವಿಲ್ಲವೆಂದೂ ಡಿ.ವಿ.ಜಿ. ಯವರು ಪ್ರತಿಪಾದಿಸುವುದು ಅವರ ಸಾಂಪ್ರತ ದೃಷ್ಟಿಕೋನಕ್ಕೆ ಸಾಕ್ಷಿಯಾಗಿದೆ.

ವೈಚಾರಿಕತೆ ಗೀತೆಯ ಜೀವಾಳ. "ಭಗವದ್ಗೀತೆಯ ಬೋಧನೆ ಯಾವ ಅಂಶದಲ್ಲಿಯೂ ಮನುಷ್ಯಬುದ್ಧಿಯ ಹೇತು ವಿಚಾರಪ್ರವೃತ್ತಿಗೆ (Rationality) ಪ್ರತಿಕೂಲವಾಗಿಲ್ಲ. ಗೀತೆಯಲ್ಲಿ ಪಕ್ಷೈಕವಾದವಿಲ್ಲ (No dogmatism); ಮತಪಾಷಂಡತ್ವವಿಲ್ಲ; ಅನ್ಯಾಭಿಪ್ರಾಯ–ಅಸಹನೆಯಿಲ್ಲ" (ಪು. ೭೯) ಎನ್ನುತ್ತಾರೆ ಡಿ.ವಿ.ಜಿ.; ಅದು ಸರ್ವಾಂಗಪೂರ್ಣವಾದ ಸಾರ್ಥಕ ಜೀವನದರ್ಶನ ಎಂದು ತೀರ್ಮಾನಿಸುತ್ತಾರೆ.

ಗೀತೆಯ ಅಧ್ಯಯನ ಅನುಷ್ಠಾನಗಳಿಂದ ಏನು ಲಾಭ? ಏನು ಕೊಡಬಲ್ಲುದು ಗೀತೆ? ಡಿ.ವಿ.ಜಿ. ಉತ್ತರಿಸುತ್ತಾರೆ: "ಪ್ರತಿಯೊಬ್ಬನಿಗೂ ಪ್ರತಿಯೊಬ್ಬಳಿಗೂ ಜೀವನದಲ್ಲಿ ಒಂದು ಗೌರವ, ಕರ್ತವ್ಯದ ವಿಷಯದಲ್ಲಿ ಒಂದು ಉತ್ಸಾಹ, ಆಪತ್ಕಾಲದಲ್ಲಿ ಧೈರ್ಯ, ಸಂಶಯ ಹುಟ್ಟಿದಾಗ ನೆಮ್ಮದಿಯನ್ನುಂಟುಮಾಡುವ ನಂಬಿಕೆ–ಇವು ಗೀತೆಯಿಂದ ನಾವು ಸಂಪಾದಿಸಿಕೊಳ್ಳಬಹುದಾದ ಸಂಪತ್ತು" (ಪು. ೪೦). ಮನಸ್ಸಮಾಧಾನ, ಸಾವಧಾನಗಳು ಗೀತಾಭ್ಯಾಸಿಗಳಿಗೆ ಇರಬೇಕಾದ ಗುಣಗಳೆಂದೂ ಅವರು ಸೂಚಿಸುತ್ತಾರೆ.

[5] ಗೀತೆಯ ಕಾವ್ಯಗುಣವನ್ನು ಶ್ರೀ ಪು.ತಿ.ನ. ಅವರು 'ಗೀತೆ ಮತ್ತು ಕವಿತೆ' ಎಂಬ ಲೇಖನದಲ್ಲಿ ಹೃದ್ಯವಾಗಿ ವಿವೇಚಿಸಿರುವುದು ಗಮನಾರ್ಹ ('ಗೀತಾಧ್ವನಿ').

ಒಟ್ಟಿನಲ್ಲಿ, ಜನಸಾಮಾನ್ಯರ ಜೀವನೋತ್ಕರ್ಷದ ದೃಷ್ಟಿಯಿಂದ ಗೀತೆಯನ್ನು ವ್ಯಾಸಂಗಿಸುವುದು, ವ್ಯಾಖ್ಯಾನಿಸುವುದು ಡಿ.ವಿ.ಜಿ.ಯವರ ವಿವಕ್ಷೆ. ಆ ಕೆಲಸವನ್ನು ಅವರು ಬಹು ಸಮರ್ಪಕವಾಗಿ, ಸಮರ್ಥವಾಗಿ ಸಾಧಿಸಿದ್ದಾರೆ. ಆದರೆ ಇಲ್ಲಿ ಒಂದು ಪ್ರಶ್ನೆಗೆ ಅವಕಾಶವಿದೆ : ಜನತಾದೃಷ್ಟಿಯಿಂದ ಗೀತೆಯನ್ನು ನೋಡಲು ಹೊರಟವರಲ್ಲಿ ಡಿ.ವಿ.ಜಿ. ಮೊದಲಿಗರೆ? ಈ ದೃಷ್ಟಿ ಹಿಂದೆ ಯಾರಿಗೂ ಇರಲೆ ಇಲ್ಲವೆ? ಇಲ್ಲಿ ಡಿ.ವಿ.ಜಿ. ಯವರ ಹಕ್ಕು ಬಿದ್ದುಹೋಗುವಂತೆ ತೋರುತ್ತದೆ. ಏಕೆಂದರೆ, ಗಾಂಧೀಜಿಯವರು ಗೀತೆಯನ್ನು ಕಂಡ ದೃಷ್ಟಿ ಯಾವುದು? ವಿನೋಬಾ ಅವರು ನೋಡಿದ್ದು ಹೇಗೆ? ಈ ಮಹನೀಯರೂ ಸಾಧಾರಣರ ಕಣ್ಣಿನಿಂದಲೆ ಗೀತೆಯನ್ನು ಅವಲೋಕಿಸಿದ್ದು. "ಗೀತೆ ಬಹಳ ಗೂಢಗ್ರಂಥ ಎನ್ನುತ್ತಾರೆ....ನಮ್ಮಂಥ ಸಾಮಾನ್ಯಜನರಿಗೆ ಅದು ಗೂಢಗ್ರಂಥ ವಲ್ಲ" ಎನ್ನುತ್ತಾರೆ ಗಾಂಧಿ; ಈ ಮಾತಿನಲ್ಲಿ ಪಂಡಿತನ ಧೋರಣೆಯುಂಟೆ? "ಬಾಳಿನ ಸಂಬಂಧವಿಲ್ಲದ ಯಾವ ವಿಚಾರವೂ ವಾದವೂ ಇದರಲ್ಲಿಲ್ಲ. ಹಳ್ಳಿಗಳಲ್ಲಿ, ಪಟ್ಟಣಗಳಲ್ಲಿ ಇರುವ ಕೂಲಿಕಾರ ಕೃಷಿಕರಿಗೆ ಕೂಡ ಇದರಿಂದ ಸಾಂತ್ವನ, ಶ್ರಮಪರಿಹಾರ ಆದೀತು ಎಂಬ ವಿಶ್ವಾಸ ನನಗಿದೆ" ಎಂದು ವಿನೋಬಾ ತಮ್ಮ 'ಗೀತಾಪ್ರವಚನ'ದ ಮುನ್ನುಡಿಯಲ್ಲಿ ಹೇಳಿಕೊಳ್ಳುತ್ತಾರಲ್ಲ, ಇವರದು ಯಾವ ಮನೋಧರ್ಮ? ಡಿ.ವಿ.ಜಿ. ಯವರು ತಮ್ಮ ಗ್ರಂಥದಲ್ಲಿ ಈ ಮಹಾತ್ಮರ ಕೃತಿಗಳ ಹೆಸರನ್ನೆ ಎಲ್ಲೂ ಎತ್ತಿಲ್ಲ.[6] ಗಾಂಧಿಯವರ ಹೆಸರು ಒಂದೆರಡು ಕಡೆ ಬಂದಿದೆ—ಬಹಳ ಗೌಣವಾಗಿ, ಬರದಿದ್ದರೇ ಚೆನ್ನಾಗಿತ್ತು ಎನಿಸುವಂತೆ. ವಿನೋಬಾರನ್ನಾಗಲಿ ಅರವಿಂದರನ್ನಾಗಲಿ ಅವರು ಹೆಸರಿಸಿಲ್ಲ. ಪರಂಪರೆಯನ್ನು ಕುರಿತು ಬಹಳ ಉಪದೇಶ ಕೊಡುವ ಡಿ.ವಿ.ಜಿ.ಯವರು ಈ ಮಹಾಪುರುಷರನ್ನು ಸ್ಮರಿಸಿದ್ದರೆ ಏನು ನಷ್ಟವಾಗುತ್ತಿತ್ತು?

ಆದ್ದರಿಂದ, ಡಿ.ವಿ.ಜಿ.ಯವರು ತಮ್ಮ 'ಜೀವನಧರ್ಮಯೋಗ'ದಲ್ಲಿ ವ್ಯಕ್ತ ಪಡಿಸಿರುವ ನಿಲುವು ಸ್ವಾಗತಾರ್ಹವಾದುದಾದರೂ ಅಪೂರ್ವವಾದುದೇನೂ ಅಲ್ಲ ಎಂದುಕೊಂಡು, ಅವರ ಬರೆವಣಿಗೆಯ ಪರಿಚಯ ಮಾಡಿಕೊಳ್ಳಬಹುದು.

೩

ಡಿ.ವಿ.ಜಿ.ಯವರ ಪ್ರಕಾಂಡಪಾಂಡಿತ್ಯ, ವ್ಯುತ್ಪತ್ತಿ, ಕಾವ್ಯಶಾಸ್ತ್ರಪರಿಶ್ರಮ, ಲೋಕಾನುಭವಬಾಹುಳ್ಯ—ಇವುಗಳನ್ನು ಪುಟಪುಟದಲ್ಲೂ ತುಂಬಿಕೊಂಡಿರುವ 'ಜೀವನ ಧರ್ಮಯೋಗ' ದಿಟಕ್ಕೂ ಆಶ್ಚರ್ಯಚೋದಕವಾದ ಮಹಾಗ್ರಂಥ.

ಗೀತೆಯ ಅಷ್ಟಾದಶಾಧ್ಯಾಯಗಳಿಗೆ ಡಿ.ವಿ.ಜಿ.ಯವರು ಪ್ರಾಕೃತ ಕಾರುಣ್ಯ

---

[6] ಗಾಂಧಿ, ವಿನೋಬಾ ಹೋಗಲಿ—ಕನ್ನಡದಲ್ಲಿ 'ಗೀತಾಗಾಂಭೀರ್ಯ' ಬರೆದಿರುವ ಶ್ರೀರಂಗರೂ ಕೂಡ "ಹಿಂದಣ ಪಂಡಿತರ ಭಾಷ್ಯವಿವರಣೆಗಳನ್ನು ಓದಿದಂತೆ ನಮ್ಮ ಅಸಂತೋಷ ಹೆಚ್ಚಿತು" ಎಂದೂ ತಮ್ಮ ಕೃತಿ "ಆ ಸಂವಾದದಲ್ಲಿ ಅಡಕವಾದ ಜೀವನ ತತ್ತ್ವಗಳನ್ನು ಕುರಿತು ಕೃಷ್ಣನ ವಿಚಾರಸರಣಿಯನ್ನನುಸರಿಸುವ ವಿವೇಚನೆಯಾಗಿದೆ" ಎಂದೂ ತಿಳಿಸಿದ್ದಾರೆ.

ಯೋಗ, ತತ್ತ್ವವಿವೇಕಯೋಗ, ಸ್ವಧರ್ಮಯೋಗ, ನಿರ್ಲೇಪಕರ್ಮಯೋಗ, ಕರ್ಮಜ್ಞಾನಸಾಮರಸ್ಯಯೋಗ, ಧ್ಯಾನಾಭ್ಯಾಸಯೋಗ, ಜಗಜ್ಜೀವೇಶ್ವರಯೋಗ, ಪ್ರಣವಾರ್ಥಯೋಗ, ಬ್ರಹ್ಮಜಗತ್ಸಂಬಂಧಯೋಗ, ಈಶ್ವರವೈಭವಯೋಗ, ವಿಶ್ವರೂಪಸಂದರ್ಶನಯೋಗ, ಭಕ್ತಿಸೋಪಾನಯೋಗ, ಪ್ರಕೃತಿಪುರುಷವಿವೇಕ ಯೋಗ, ತ್ರಿಗುಣತಂತ್ರಜಾಗರೂಕಯೋಗ, ಅಶ್ವತ್ಥಮೂಲೋಪಾಸನಯೋಗ, ದೈವಾಸುರ ಭೇದವಿವೇಕಯೋಗ, ಶ್ರದ್ಧಾತ್ರಯ ವಿವೇಕಯೋಗ, ತದೇಕಶರಣತಾ ಯೋಗ–ಎಂಬ ನವಶೀರ್ಷಿಕೆಗಳನ್ನು ಕೊಟ್ಟಿದ್ದಾರೆ. ಈ ಹದಿನೆಂಟು ಯೋಗಗಳನ್ನು ಹದಿನೆಂಟು ಪ್ರಕರಣಗಳಲ್ಲಿ ಎಳೆಎಳೆಯಾಗಿ ಕೂಲಂಕಷವಾಗಿ ವಿಮರ್ಶಿಸಿ, ಗೀತಾಚಾರ್ಯನ ತತ್ತ್ವೋಪದೇಶಗಳನ್ನು ಸ್ಫುಟವಾಗಿ ವಿಶದಪಡಿಸಿದ್ದಾರೆ ಡಿ.ವಿ.ಜಿ. ಯವರು. ಪ್ರತಿಯೊಂದು ಪ್ರಕರಣದಲ್ಲೂ ಮೊದಲು ಮೂಲಗ್ರಂಥವನ್ನು ಕೊಡಲಾಗಿದೆ; ಅನಂತರ ಆಯಾ ಗೀತಾಧ್ಯಾಯದ ಮುಖ್ಯ ವಿಷಯಗಳ ಸೂಚನೆ ಬರುತ್ತದೆ; ಬಳಿಕ ಅವುಗಳ ವಿಸ್ತಾರವಾದ ವಿವೇಚನೆ; ಕಡೆಯಲ್ಲಿ ಆಯಾ ಪ್ರಕರಣದ ಸಾರ ಸಂಗ್ರಹ ಮತ್ತು ಅಗತ್ಯವಿದ್ದೆಡೆ ಅನುಬಂಧ–ಇದು ಡಿ.ವಿ.ಜಿ.ಯವರ ಕ್ರಮ. ಮೂಲದ ಪ್ರತಿಪದಾರ್ಥವಾಗಲಿ ಅನುಕ್ರಮಿಕ ಭಾವಾನುವಾದವಾಗಲಿ ಇಲ್ಲಿ ಸಿಕ್ಕುವುದಿಲ್ಲ; ಯಾವುದೇ ವಿಷಯವನ್ನು ಕುರಿತು ಗೀತಾಕಾರನ ಒಟ್ಟಿನ ಅಭಿಮತವೇ ನೆಂಬುದನ್ನು ಸ್ಪಷ್ಟೀಕರಿಸುವುದು ಗ್ರಂಥಕರ್ತರ ಮುಖ್ಯೋದ್ದೇಶ.

ಗೀತೆಯ ಬಗೆಗೆ ಹಿಂದಿನವರ ದೃಷ್ಟಿ, ಗೀತೋಪದೇಶಕ್ಕೆ ಅವರು ಕಲ್ಪಿಸಿದ ಅರ್ಥ ಏನಾದರೂ ಇರಲಿ, ಇಂದಿನ ದೃಷ್ಟಿಯಿಂದ ನಾವದನ್ನು ಪರಿಭಾವಿಸಬೇಕು ಎನ್ನುವುದು ತಾನೆ ಡಿ.ವಿ.ಜಿ.ಯವರ ನಿಲುವು. ಯಜ್ಞವನ್ನು ಅವರು ಅರ್ಥೈಸುವ ಪರಿ ಇದಕ್ಕೆ ಒಂದು ಉತ್ತಮ ನಿದರ್ಶನ : ‘‘ಇಂಡಿಯ ದೇಶದಿಂದ ಹೊರಗಿರುವ ದೇಶಗಳು, ವೇದಶಾಸ್ತ್ರಗಳನ್ನರಿಯದ ದೇಶಗಳು ಯಜ್ಞಾದಿಗಳಿಲ್ಲದೆಯೇ ಮಳೆ ಬೆಳೆಗಳನ್ನು ಪಡೆಯುತ್ತಿವೆ ಎಂಬ ಮಾತನ್ನು ಕೂಡ ಹಾಗೆಯೇ ಒಪ್ಪತಕ್ಕದ್ದಲ್ಲ. ಯಜ್ಞವೆಂದರೆ ದೇವತಾಪೂಜೆ. ಆ ವಿಶಾಲಾರ್ಥದಲ್ಲಿ ಯಜ್ಞಮಾಡದ ಜನಾಂಗವೇ ಇಲ್ಲ. ಆಫ್ರಿಕಾ ಖಂಡದ ಅನಾಗರಿಕ ಜನಾಂಗಗಳಲ್ಲಿ ಕೂಡ ದೇವರೆಂಬ ಒಂದು ನಂಬಿಕೆಯೂ ದೇವತಾಗ್ರಹದ ಭಯವೂ ದೇವತಾನುಗ್ರಹಶ್ರದ್ಧೆಯೂ ದೃಢವಾಗಿ ಉಂಟು. ಬಹುಶಃ ನಾಗರಿಕ ಜನದಲ್ಲಿರುವುದಕ್ಕಿಂತ ಅವರಲ್ಲಿ ಅದು ಪ್ರಬಲವಾಗಿದೆ. ಮತವಿಲ್ಲದ ಮನುಷ್ಯನಿಲ್ಲ; ಯಜ್ಞವಿಲ್ಲದ ಮತವಿಲ್ಲ’’ (ಪು. ೧೭೩). ಮತ್ತೊಂದೆಡೆ ಹೀಗೆ ವಿವರಿಸುತ್ತಾರೆ : ‘‘ಮಾಡಬೇಕಾದ ಪ್ರತಿಯೊಂದು ಕಾರ್ಯವನ್ನೂ ಯಜ್ಞ ಬುದ್ಧಿಯಿಂದ ಮಾಡಬೇಕು. ಶ್ರುತಿಯ ಉಪದೇಶವೂ ಇದೇ : ಯಜ್ಞ ಬುದ್ಧಿಯಿಂದ ಬದುಕಬೇಕೆಂದು. ಯಜ್ಞವೆಂದರೆ ನಮ್ಮ ಮನಸ್ಸಿನಲ್ಲಿ ಹವನ, ಹೋಮ, ತುಪ್ಪ ಇತ್ಯಾದಿಗಳ ಚಿತ್ರ ಏಳಬಹುದು–ಅದಲ್ಲ. ಎಲ್ಲ ಪೂಜಾಕಾರ್ಯವೂ ಯಜ್ಞವೇ. ವ್ಯಾಕರಣದಲ್ಲಿ ಇರುವುದೇ ಹಾಗೆ : ‘ಯಜ ಪೂಜಾಯಾಂ’. ರೂಢಿಯಿಂದ ಯಜ್ಞಕ್ಕೆ

ಆಹುತಿ, ಅರ್ಪಣೆ ಎಂಬರ್ಥ ಬಂದಿದೆ. ತನಗೆ ಪ್ರಿಯವಾದದ್ದನ್ನು ಅನ್ಯಪ್ರೀತ್ಯರ್ಥವಾಗಿ ಸಮರ್ಪಿಸುವುದು ಯಜ್ಞ" (ಪು. ೨೦೫).

ಭಗವದ್ಗೀತೆಯ ವಿಚಾರಗಳನ್ನು ವ್ಯಾಖ್ಯಾನಿಸುವಾಗ ಸ್ಪಷ್ಟೀಕರಣ ಹಾಗೂ ಪುಷ್ಟೀಕರಣಕ್ಕಾಗಿ ಡಿ.ವಿ.ಜಿ. ಯವರು ವೇದ, ಉಪನಿಷತ್ತು, ಶಾಸ್ತ್ರ, ಕಾವ್ಯಾದಿಗಳಿಂದ ವಿಪುಲವಾಗಿ ಉದಾಹರಿಸುತ್ತಾರೆ; ದೊಡ್ಡವರ ಸೂಕ್ತಿಗಳನ್ನು ಉದ್ಧರಿಸುತ್ತಾರೆ; ಅಲ್ಲಲ್ಲಿ ಪಾಶ್ಚಾತ್ಯ ಕವಿಗಳ, ದಾರ್ಶನಿಕರ ಮಾತುಗಳೂ ಕಾಣಿಸಿಕೊಳ್ಳುತ್ತವೆ. ವಿಷಯ ಎಲ್ಲರಿಗೂ ಮನದಟ್ಟಾಗುವಂತೆ, ಪರಿಣಾಮಕಾರಿಯಾದ ಕತೆ ಉಪಮಾನ ದೃಷ್ಟಾಂತ ಗಳನ್ನು ಹಜ್ಜೆಹಜ್ಜೆಗೂ ಅಳವಡಿಸಲಾಗಿದೆ; ಈ ಉಪಮಾನ ದೃಷ್ಟಾಂತಗಳು ದೈನಂದಿನ ಜೀವನದಿಂದ ಎತ್ತಿಕೊಂಡವಾಗಿದ್ದು ಸರ್ವಸುಪರಿಚಿತವಾಗಿರುತ್ತವೆ. ಇದರಿಂದ ಯಾವುದೇ ಸಂಗತಿ ಎಂತಹ ಸಾಮಾನ್ಯನಿಗೂ ಗ್ರಾಹ್ಯವಾಗುತ್ತದೆ (ಇಲ್ಲಿ ಸಾಮಾನ್ಯ ನೆಂದರೆ ವಿದ್ವನ್ಮತಿಯಲ್ಲದವನು ಎಂದರ್ಥವೇ ಹೊರತು ದಡ್ಡನೆಂದಲ್ಲ.) ಒಟ್ಟಿನಲ್ಲಿ ಸರಳವೂ ಆಕರ್ಷಕವೂ ಆದ ಪ್ರವಚನ ಮಾರ್ಗ ಡಿ.ವಿ.ಜಿ.ಯವರದು. ದಿಗ್ಭ್ರಾಂತಿ ಗೊಳಿಸುವ ಜಟಿಲಗಹನವಾದ ವಿಚಾರಸರಣಿ ಇಲ್ಲಿ ಬಹುಮಟ್ಟಿಗೆ ವರ್ಜಿತ.

ಡಿ.ವಿ.ಜಿ.ಯವರ ಸರಸನಿರೂಪಣೆಗೆ ಕೆಲವು ನಿದರ್ಶನಗಳನ್ನು ನೋಡಬಹುದು.

ಪರಮಾರ್ಥಬೋಧನೆಯ ವಿಷಯದಲ್ಲಿ ಅವಸರ ತೋರಿಸಬಾರದೆಂಬುದನ್ನು ಅವರು ತಿಳಿಸುವ ರೀತಿಯಿದು : "ಎಳೆಯ ಮಗುವನ್ನು ಜೊತೆಯಲ್ಲಿ ಕರೆದುಕೊಂಡು ಹೋಗುತ್ತಿರುವ ತಂದೆ ಅದಕ್ಕೆ ಚೆನ್ನಾಗಿ ನಡಿಗೆ ಕಲಿಸಬೇಕೆಂದು ತಾನು ಹೋಗುವ ವೇಗದಲ್ಲಿ ಅದನ್ನು ಸೆಳೆದುಕೊಂಡುಹೋದರೆ ಅದಕ್ಕೆ ಇರುವ ಶಕ್ತಿಯೂ ಹೊರಟು ಹೋಗುತ್ತದೆ. ಉಸಿರೇ ಹೋದರೂ ಹೋಗಬಹುದು. ಅಧ್ಯಾತ್ಮವಿದ್ಯೆಯಲ್ಲಿಯೂ ಹಾಗೆಯೇ" (ಪು. ೧೮೧).

ಪರಂಪರೆಯನ್ನು ಕುರಿತು ಅವರು ಹೇಳುವ ಮಾತುಗಳಿವು : "ಮಾನವಪ್ರಗತಿ ಯನ್ನು ಸಾಧಿಸುವವರು ಮನೆಕಟ್ಟುವವರ ನೀತಿಯನ್ನು ಅನುಸರಿಸುತ್ತಾರೆ. ಅಡಿಪಾಯದ ಮೇಲೆ ಇಟ್ಟಿಗೆಯ ಸಾಲು ; ಆ ಸಾಲಿನ ಮೇಲೆ ಇನ್ನೊಂದು ಸಾಲು, ಒಂದು ಮಾಳಿಗೆಯ ಆಧಾರದ ಮೇಲೆ ಇನ್ನೊಂದು ಮಹಡಿ. ಹೀಗೆ ತಳದಿಂದ ತುದಿಯವರೆಗೆ ಒಂದಕ್ಕೊಂದು ಸೇರಿಕೊಂಡಿರಬೇಕಾದದ್ದು ಮುಖ್ಯ. ಯಾವ ಕಟ್ಟಡ ಹಾಗೆ ಬೆಳೆದು ಬಹುಕಾಲ ಗಟ್ಟಿಯಾಗಿ ನಿಂತಿದೆಯೋ ಅದು ಮಳೆ ಗಾಳಿ ಬಿಸಿಲುಗಳ ಹೊಡೆತವನ್ನೂ ವಾಸಸ್ಥರಿಂದ ತಗುಲುವ ಏಟು ಪೋಟುಗಳನ್ನೂ ಸಹಿಸಿ ನಿಲ್ಲಬಲ್ಲಷ್ಟು ಶಕ್ತಿಯುಳ್ಳದ್ದು ಎಂದು ರುಜುವಾತಾಗುತ್ತದೆ.... ಇದನ್ನೇ ಇಂಗ್ಲಿಷಿನಲ್ಲಿ ಟ್ರೈಡಿಷನ್ (ಸಂಪ್ರದಾಯ) ಎಂದು ಕರೆಯುತ್ತಾರೆ. ಯಾವ ಜನಾಂಗಕ್ಕೆ ಒಂದು ಸಂಪ್ರದಾಯ ವಿಲ್ಲವೋ ಆ ಜನಾಂಗದ ಪಾಡು ಗಾಳಿಗೆ ಸಿಕ್ಕಿದ ಹತ್ತಿಯ ಹಿಂಜಿಯಂತೆ ಗೊತ್ತುಗುರಿ ಯಿಲ್ಲದ್ದಾಗುತ್ತದೆ....ಸಂಪ್ರದಾಯವೆಂದರೆ ಶುಕಪಠಿತವಲ್ಲ. ಪಾರಂಪರ್ಯವೆಂದರೆ ಪೌನಃಪುನ್ಯವಲ್ಲ" (ಪು. ೧೯೬).

ಮಾಯಾಸ್ವರೂಪವನ್ನು ಡಿ.ವಿ.ಜಿ. ವಿವರಿಸುವುದು ಎಲ್ಲರ ಅನುಭವಕ್ಕೂ ಬಂದಿರುವ ಒಂದು ಸಂಗತಿಯ ಹೋಲಿಕೆಯಿಂದ : "ನಾವು ಬೆಂಗಳೂರಿನಿಂದ ರೈಲಿನಲ್ಲಿ ಹೊರಟು ಮೈಸೂರಿಗೆ ಪ್ರಯಾಣಮಾಡುತ್ತಿದ್ದೇವೆ. ಮದ್ದೂರು ಬಳಿ ನಮ್ಮ ರೈಲು ತಲುಪಿದಾಗ್ಗೆ ಅಲ್ಲಿ ಮೈಸೂರಿನಿಂದ ಬಂದ ಗಾಡಿ ಅದುವರೆಗೂ ಕಾದಿದ್ದು ಆಗ ಬೆಂಗಳೂರು ಕಡೆ ಹೊರಡುತ್ತದೆ. ನಮ್ಮ ಬಂಡಿ ನಿಂತೇ ಇರುತ್ತದೆ. ಅದರ ಕಿಟಕಿಯಿಂದ ನಾವು ಹೊರಕ್ಕೆ ನೋಡುತ್ತಿದ್ದರೆ ಚಲನಮಾಡುತ್ತಿರುವುದು ನಮ್ಮ ಬಂಡಿ, ಮೈಸೂರಿನಿಂದ ಬಂದದ್ದಲ್ಲ ಎಂದು ನಮಗೆ ಭಾಸವಾಗುತ್ತದೆ. ಹೀಗೆ ವಸ್ತುಸ್ಥಿತಿಯನ್ನು ಬೇರೆಮಾಡಿ ಅಥವಾ ಮರೆಮಾಚಿ ನಮ್ಮ ಮನಸ್ಸಿಗೆ ಬರುವ ಪ್ರತೀತಿ ಮಾಯೆ" (ಪು. ೨೭೯).

ಆಧುನಿಕ ಜಗತ್ತಿಗೆ ನಾವು ಹೊಂದಿಕೊಳ್ಳಬೇಕೆಂಬುದನ್ನು ಹೇಳುವಲ್ಲಿ ಈ ಒಂದು ಸ್ವಾರಸ್ಯವಾದ ಉಪಮಾನ ಬಂದಿದೆ: "ಮುದುಕಿ ಮಡಿಯುಟ್ಟು ಅಂಗಳದಲ್ಲಿ ತುಳಸೀಕಟ್ಟೆಯ ಬಳಿ ಕುಳಿತು 'ಯಾರೂ ನನ್ನನ್ನು ಮುಟ್ಟಬೇಡಿ, ಮೈಲಿಗೆ ಮಾಡಬೇಡಿ' ಎಂದು ಸಾರಿ ಸಾರಿ ಕೂಗಿಹೇಳುತ್ತಿದ್ದರೂ, ಮನೆಯ ಮಕ್ಕಳು ಅದನ್ನು ಕೇಳುತ್ತಾರೆಯೆ? ಅವರ ಚೆಂಡಾಟದ ಸಂಭ್ರಮದಲ್ಲಿ ಆಕೆಯ ಮೇಲೆ ಚೆಂಡು ಬೀಳುವುದು ತಪ್ಪೀತೆ? ಜೂಟ್ ಆಟದ ಓಡಾಟದಲ್ಲಿ ಆಕೆಗೆ ಮೈಸೋಕದಿರುವುದು ಆದೀತೆ? ಇಂದಿನ ಪ್ರಪಂಚದ ಸಂತೆಯಲ್ಲಿ ಭಾರತದ ಜನ ಮಾತ್ರ ಮಡಿಯುಳಿಸಿಕೊಂಡಿರುವುದು ಸಾಧ್ಯವಾಗದು. ಪ್ರಪಂಚದೊಡನೆ ಬಾಳಬೇಕು" (ಪು. ೬೩೪).

ಧರ್ಮವನ್ನಾಚರಿಸಿದರೆ ಮೋಕ್ಷ ಅಪ್ರಯತ್ನವಾಗಿ ಪ್ರಾಪ್ತಿಸುತ್ತದೆ ಎಂದು ಹೇಳುವುದಕ್ಕಾಗಿ ಬರುತ್ತದೆ ನಿದ್ದೆಯ ಸಾಮತಿ : "ಧರ್ಮವಿದ್ದ ಕಡೆ ಮೋಕ್ಷ ತಾನಾಗಿ ಹಿಂದುಗೂಡಿ ಬರುತ್ತದೆ. ಹಗಲು ದುಡಿದು ಮಾಡಬೇಕಾದದ್ದನ್ನು ಯಥಾಶಕ್ತಿ ಮಾಡಿ, ಆರೋಗ್ಯವಿಧಿಯಂತೆ ಬಾಳಿದವನು ರಾತ್ರಿ ನಿದ್ದೆಗಾಗಿ ಗುಳಿಗೆ ಸೇವಿಸಬೇಕಾದದ್ದಿಲ್ಲ. ಆಹಾರ ಜೀರ್ಣವಾದವನು ಕೃತಕೃತ್ಯ ಸಮಾಧಾನದಿಂದ ತಲೆ ನೆಲಕ್ಕಿಟ್ಟರೆ ನಿದ್ದೆ ತಾನಾಗಿ ಬರುತ್ತದೆ. ವಿವೇಕ ಜಾಗರೂಕತೆಗಳಿಂದ ಧರ್ಮಸೇವೆ ಮಾಡಿದವನಿಗೆ ಮೋಕ್ಷ ಸ್ವತಃಸಿದ್ಧವಾಗಿರುತ್ತದೆ" (ಪು. ೫೭).

ಡಿ.ವಿ.ಜಿ.ಯವರ ಶೈಲಿ ಸರಳವಾಗಿದ್ದರೂ ಅದರಲ್ಲಿ ಹೊಳಪು, ಬಿಗಿ, ಖಚಿತತೆಗಳಿವೆ; ಸಂಸ್ಕೃತ–ಕನ್ನಡಗಳ ಹಾಳತವಾದ ಸಂಯೋಗವಿದೆ. ಮುಂದಿನ ಭಾಗಗಳು ಅವರ ಶೈಲಿಗೆ, ವ್ಯಾಖ್ಯಾನದ ಸೊಗಸಿಗೆ ಉದಾಹರಣೆಗಳು :

(ಆತ್ಮಾನಂ ರಥಿನಂ ವಿದ್ಧಿ ಶರೀರಂ ರಥಮೇವ ತು, ಇಂದ್ರಿಯಾಣಿ ಹಯಾನಾಹುಃ –ಎಂಬ ಉಪನಿಷದ್ವಾಕ್ಯವನ್ನು ವಕ್ಕಾಣಿಸುವಲ್ಲಿ) "ಕುದುರೆ ಎಲ್ಲೆಲ್ಲಿಗೋ ಓಡೀತೆಂಬ ಹೆದರಿಕೆಯಿಂದ ಕುದುರೆಯ ಬೆನ್ನಿನಿಂದ ಇಳಿದುಬಿಡುವುದು ಸವಾರನ ಲಕ್ಷಣವಲ್ಲ. ಕುದುರೆಯ ಮೇಲೆ ದೃಢವಾಗಿ ಕುಳಿತಿರಬೇಕು ; ಹಾಗೆಯೇ ಕುದುರೆಯನ್ನು ಹತೋಟಿಯಲ್ಲಿರಿಸಿಕೊಂಡು ಬೇಕಾದ ಕಡೆ ಹೋಗಬೇಕು. ಲಗಾಮು ಕಡಿವಾಣಗಳ ಉಪಯೋಗ

ವನ್ನರಿತವನು ಎಂಥ ಕುದುರೆಯನ್ನಾದರೂ ಸ್ವಾಧೀನದಲ್ಲಿರಿಸಿಕೊಳ್ಳುತ್ತಾನೆ. ಜಿತೇಂದ್ರಿಯನು ಮೃತೇಂದ್ರಿಯನಲ್ಲ. ಇಂದ್ರಿಯಜಯವು ಇಂದ್ರಿಯಧ್ವಂಸನವಲ್ಲ. ಇಂದ್ರಿಯಗಳಿರಬೇಕು; ಅವು ಪಟುವಾಗಿರಬೇಕು; ಆದರೂ ದುಷ್ಟತನಕ್ಕೆ ಹೋಗದೆ ಇರಬೇಕು" (ಪು. ೧೪೪).

"ಸೌಂದರ್ಯವೆಂಬುದೂ ಅವ್ಯಕ್ತದ ವ್ಯಕ್ತದಶೆ. ಕಣ್ಣು ಕಿವಿ ಬಾಯಿ ಮೂಗು ಕೆನ್ನೆ ಕೂದಲು—ಇವು ಎಲ್ಲ ಮುಖಗಳಿಗೂ ಉಂಟಾದ ಸಹಜಸಂಪತ್ತು. ಶಸ್ತ್ರವೈದ್ಯನ ದೃಷ್ಟಿಗೆ ಎಲ್ಲ ಮೈಗಳೂ ಏಕಪ್ರಕಾರವಾಗಿ ಚರ್ಮ ರಕ್ತನಾಳ ಮೂಳೆ—ಇಂಥವು. ರಾಸಾಯನಿಕನ ಕಣ್ಣಿಗೆ ಒಬ್ಬ ಮನುಷ್ಯನ ಅವಯವದ ಮೂಲಸಾಮಗ್ರಿಗೂ ಇನ್ನೊಬ್ಬನದಕ್ಕೂ ವ್ಯತ್ಯಾಸವೇನೂ ತೋರುವುದಿಲ್ಲ. ರೂಪರಸಿಕನು ಅದನ್ನೊಪ್ಪಿಯಾನೆ? ಶಸ್ತ್ರವೈದ್ಯ ರಾಸಾಯನಿಕರ ವಿಶ್ಲೇಷಣಕ್ರಿಯೆಗೆ ಸಿಕ್ಕದಿರುವ ಅವಯವಾತೀತವಾದ ಗುಣವೊಂದು ಅಲ್ಲಿ ಸೇರಿಕೊಂಡಿದ್ದರೆ ಅದು ಸುಂದರ, ಇಲ್ಲದಿದ್ದರೆ ಕುರೂಪ.[7] ಆ ಗುಣ ಒಂದು ಕಾಂತಿ, ಒಂದು ಚಲನೆ, ಒಂದು ಭಾವಸೂಚನೆ. ಮುನಿದಿದ್ದ ಮುಖ ಯಾರನ್ನೋ ಕಂಡಾಗ ಪ್ರಸನ್ನವಾಗುತ್ತದೆ. ಸಾಮಾನ್ಯವೆನಿಸಿದ್ದ ಮುಖವನ್ನು ಯಾರೋ ನೋಡಿದಾಗ ಅಲ್ಲಿ ಲಾವಣ್ಯ ಸುಳಿದಾಡುತ್ತದೆ. ಅದು ನೋಡುವವನ ಪುಣ್ಯ. ಅವ್ಯಕ್ತವಾಗಿದ್ದ ಸೊಬಗು ಯಾವುದೋ ಒಂದು ಅಪೂರ್ವಯೋಗದಿಂದ ನೋಡುವವನ ಅಂತರಂಗಕ್ಕೆ ವ್ಯಕ್ತಪಡುತ್ತದೆ" (ಪು. ೪೧೬-೧೭).

ಡಿ.ವಿ.ಜಿ.ಯವರ ಲೇಖನಿ ಎಷ್ಟು ಪಾರದರ್ಶಕವಾಗಿ ಬರೆಯಬಲ್ಲದೆಂಬುದಕ್ಕೆ, ಬ್ರಹ್ಮಸಂಬಂಧದ ಬಗೆಗೆ ಅವರು ಕೊಡುವ ಸಾಮತಿಯನ್ನೂ ಬಳಸುವ ಭಾಷೆಯನ್ನೂ ನೋಡಬಹುದು: "ಮುದ್ದು ಮಗು ಆನೆ ಬೇಕೆಂದಳುತ್ತದೆ. ಅಜ್ಜ ಪೇಟೆಗೆ ಹೋಗಿ ಬಚ್ಚಾಣಿ ಬಣ್ಣದ ಆನೆಯನ್ನು ತಂದುಕೊಡುತ್ತಾನೆ. ಮಗುವಿಗೆ ತೃಪ್ತಿಯಾಗುತ್ತದೆ. ಬಂದವರಿಗೆ ಆ ಬೊಂಬೆಯನ್ನು ತೋರಿಸಿ ಆನೆ ಆನೆ ಎಂದು ಹೆಮ್ಮೆಪಡುತ್ತ ಹಿಗ್ಗುತ್ತದೆ. ಆ ಆನೆಯಲ್ಲಿರುವುದೇನೋ ಮರ ಅಥವಾ ಮಣ್ಣು. ಅದನ್ನು ಯಾರಾದರೂ ಮಣ್ಣೆಂದು ಕರೆದಾರೊ? ಪಾತ್ರೆ ತಿಕ್ಕುವುದಕ್ಕೆ 'ಒಂದು ಹಿಡಿ ಮಣ್ಣು ತಾ' ಎಂದರೆ ಯಾರಾದರೂ ಆ ಬೊಂಬೆಯನ್ನು ತಂದಾರೆ? ಆ ಬೊಂಬೆಯಲ್ಲಿ ಹೊರನೋಟಕ್ಕೆ ಆನೆಯಿದೆ; ಒಳನೋಟಕ್ಕೆ ಆನೆಯಿಲ್ಲ; ಒಳನೋಟಕ್ಕೆ ಮಣ್ಣಿದೆ, ಹೊರನೋಟಕ್ಕೆ ಮಣ್ಣಿಲ್ಲ. ಒಂದು ದೃಷ್ಟಿಯಿಂದ ಉಂಟು, ಇನ್ನೊಂದು ದೃಷ್ಟಿಯಿಂದ ಇಲ್ಲ" (ಪ್ರ. ೩೩೧).

ವಿಷಯಪ್ರತಿಪಾದನೆಗೆ ಡಿ.ವಿ.ಜಿ.ಯವರು ಅಲ್ಲಲ್ಲಿ ಹಾಸ್ಯದ ಲೇಪ ಕೊಟ್ಟು ಅದು ಮನೋರಂಜಕವೂ ಆಗುವಂತೆ ಮಾಡುವುದುಂಟು. ಇದೋ ಒಂದು

---

[7] "ಯತ್ತತ್ಪ್ರಸಿದ್ಧಾವಯವಾತಿರಿಕ್ತಂ ವಿಭಾತಿ ಲಾವಣ್ಯಮಿವಾಂಗನಾಸು" ಎಂಬ ಆನಂದವರ್ಧನನ ಉಪಮೆ ನೆನಪಾಗುತ್ತದೆ.

ಉದಾಹರಣೆ: "ಲೋಕದಲ್ಲಿ ಕೆಲಮಂದಿಗೆ ಶ್ರದ್ಧೆಯಿರುತ್ತದೆ, ಆದರೆ ಅದು ಶಾಸ್ತ್ರ ವಿಧಿಯಲ್ಲಲ್ಲ, ತಾನೇ ಕಲ್ಪಿಸಿಕೊಂಡ ಇನ್ಯಾವುದೋ ಒಂದರಲ್ಲಿ. ಅಂಥವರ ಪಾಡೇನು? ಇಂಥವರನ್ನು ನಾವು ಈಗ ನಮ್ಮ ಸುತ್ತಮುತ್ತ ಆಗಾಗ ನೋಡುತ್ತಿದ್ದೇವೆ. ಹೊಸ ಹೊಸ ಉಪದೇಶಕರು ಬರುತ್ತಿದ್ದಾರೆ. ಹೊಸಹೊಸ ಉಪಾಸನೆಗಳನ್ನು ತರುತ್ತಿದ್ದಾರೆ. ಪರಿಮಳದಾಡಿಕಾಸ್ವಾಮಿಗಳು, ಎಂಟು ದಿನ ಕಾಲಿಗೆ ಮುದ್ರೆ ಹಾಕಿ ಕುಳಿತ ಗಟ್ಟಿತಿಷ್ಠೆ ಸ್ವಾಮಿಗಳು, ಜಡಿಮಳೆಯಂತೆ ವಾಗ್ಧಾರೆ ಸುರಿಸುವ ಬೈರಿಗೆ ಸ್ವಾಮಿಗಳು, ಯಂತ್ರ ಮಂತ್ರ ಯಕ್ಷಿಣೀ ಸ್ವಾಮಿಗಳು, ಪವಾಡ ಪ್ರಚಂಡ ಸ್ವಾಮಿಗಳು—ಇಂಥವರು ಲೋಕಾಕರ್ಷಣ ಸಮರ್ಥರಾಗಿದ್ದಾರೆ" (ಪು. ೪೯೬)

'ಜೀವನ ಧರ್ಮಯೋಗ'ದ ಬಗೆಗೆ ಒಟ್ಟಿನ ಮೇಲೆ ಈ ಮಾತು ಹೇಳಬಹುದು: ಇದು ಗೀತಾಪ್ರವಚನ ಮಾತ್ರವಲ್ಲ, ಒಂದು ರೀತಿಯಲ್ಲಿ ವೇದೋಪನಿಷತ್ ಪ್ರವಚನವೂ ಹೌದು; ಈ ವ್ಯಾಪ್ತಿಯಿಂದಾಗಿ ಇದು ಹಿಂದೂಧರ್ಮಕ್ಕೊಂದು ಉತ್ಕೃಷ್ಟವಾದ ಕೈಗನ್ನಡಿಯಾಗಿದೆ.

೪

ಈಗ, ಗೀತೆಯಲ್ಲಿ ಪ್ರತಿಪಾದಿತವಾಗಿರುವ ಒಂದು ಮೂಲಭೂತ ವಿಚಾರವನ್ನು—ವರ್ಣವ್ಯವಸ್ಥೆ ಹಾಗೂ ಸ್ವಧರ್ಮಕ್ಕೆ ಸಂಬಂಧಿಸಿದ್ದು—ಕುರಿತು ಡಿ.ವಿ.ಜಿ. ಅವರು ಏನು ಹೇಳುತ್ತಾರೆಂಬುದು ಕುತೂಹಲಕಾರಿಯಾಗಿದೆ. 'ಚಾತುರ್ವರ್ಣ್ಯಂ ಮಯಾ ಸೃಷ್ಟಂ ಗುಣಕರ್ಮವಿಭಾಗಶಃ' ಎಂದೂ 'ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋ ಭಯಾವಹಃ' ಎಂದೂ ಗೀತಾಚಾರ್ಯ ಬೇರೆ ಬೇರೆ ಕಡೆ ನುಡಿದಿದ್ದಾನೆ. ಈ ಬಗ್ಗೆ ಡಿ.ವಿ.ಜಿ. ಯವರ ವಾದಸರಣಿ ಎಚ್ಚರಿಕೆಯಿಂದ ಪರಿಶೀಲಿಸಬೇಕಾದುದಾಗಿದೆ. ಏಕೆಂದರೆ, 'ದೇವರು ಕೊಟ್ಟರೂ ಪೂಜಾರಿ ಕೊಡ' ಎಂಬ ಅರ್ಥವತ್ತಾದ ಗಾದೆಯಂತೆ, ಭಗವದ್ಗೀತೆ ಕೊಡುವುದನ್ನು ಭಾಷ್ಯಕಾರರು ಕಸಿದುಕೊಳ್ಳುವುದುಂಟು!

'ನಾಲ್ಕು ವರ್ಣಗಳನ್ನು ನಾನು ಗುಣಕರ್ಮ ವಿಭಾಗಾನುಸಾರವಾಗಿ ಸೃಷ್ಟಿಸಿದೆ' ಎಂದು ಹೇಳಿರುವ ಭಗವಂತ ಆ ನಾಲ್ಕೂ ವರ್ಣಗಳ ಗುಣಕರ್ಮಗಳನ್ನು ಸವಿಸ್ತರವಾಗಿ ನಿರೂಪಿಸಿದ್ದಾನೆ:

ಶಮೋ ದಮಸ್ತಪಃ ಶೌಚಂ ಕ್ಷಾಂತಿರಾರ್ಜವಮೇವ ಚ
ಜ್ಞಾನಂ ವಿಜ್ಞಾನಮಾಸ್ತಿಕ್ಯಂ ಬ್ರಹ್ಮಕರ್ಮ ಸ್ವಭಾವಜಂ

(ಶಮ ದಮ ತಪಸ್ಸು ಶೌಚ ಕ್ಷಮೆ ಆರ್ಜವ ಜ್ಞಾನ ವಿಜ್ಞಾನ ಮತ್ತು ಆಸ್ತಿಕಭಾವ—ಇವು ಸ್ವಭಾವದಿಂದ ಉಂಟಾದ ಬ್ರಾಹ್ಮಣನ ಕರ್ಮ)

ಶೌರ್ಯಂ ತೇಜೋ ಧೃತಿರ್ದಾಕ್ಷ್ಯಂ ಯುದ್ಧೇ ಚಾಪ್ಯಪಲಾಯನಂ
ದಾನಮೀಶ್ವರಭಾವಶ್ಚ ಕ್ಷಾತ್ರಂ ಕರ್ಮ ಸ್ವಭಾವಜಂ

(ಶೌರ್ಯ ಪ್ರಾಗಲ್ಭ್ಯ ಧೃತಿ ಕಾರ್ಯದಕ್ಷತೆ ಯುದ್ಧದಲ್ಲಿ ಪಲಾಯನ ಮಾಡದಿರುವುದು ದಾನ ಮತ್ತು ಪ್ರಭುತ್ವ ಇವು ಸ್ವಭಾವದಿಂದ ಉಂಟಾದ ಕ್ಷತ್ರಿಯನ ಕರ್ಮ).

ಕೃಷಿ ಗೌರಕ್ಷ ವಾಣಿಜ್ಯಂ ವೈಶ್ಯ ಕರ್ಮ ಸ್ವಭಾವಜಂ
ಪರಿಚರ್ಯಾತ್ಮಕಂ ಕರ್ಮ ಶೂದ್ರಸ್ಯಾಪಿ ಸ್ವಭಾವಜಂ

(ಕೃಷಿ, ಗೋರಕ್ಷಣೆ ಮತ್ತು ವಾಣಿಜ್ಯ—ಇವು ಸ್ವಭಾವದಿಂದ ಉಂಟಾದ ವೈಶ್ಯನ ಕರ್ಮ. ಪರಿಚರ್ಯಾರೂಪವಾದ ಕರ್ಮವು ಶೂದ್ರನಿಗೆ ಸ್ವಭಾವದಿಂದ ಉಂಟಾದುದು).

—ಭ.ಗೀ. ೧೮, ೪೩–೪೪

ಇಲ್ಲಿ ಗೀತಾಚಾರ್ಯನ ಅಭಿಪ್ರಾಯ ಸುಸ್ಪಷ್ಟವಾಗಿದೆ. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ನಾಲ್ಕು ವರ್ಣಗಳು ಗುಣಕರ್ಮಗಳನ್ನು ಅವಲಂಬಿಸಿದವು; ಆಯಾ ವ್ಯಕ್ತಿಯ ಹುಟ್ಟಿಗೂ ಈ ಗುಣಕರ್ಮಗಳಿಗೂ ಯಾವ ಸಂಬಂಧವೂ ಇಲ್ಲ. 'ಸ್ವಭಾವಜಂ' ಎಂದು ಗೀತಾಚಾರ್ಯ ಮತ್ತೆ ಮತ್ತೆ ಹೇಳುವುದನ್ನು ಗಮನಿಸಬೇಕು; ವರ್ಣವ್ಯವಸ್ಥೆಗೆ 'ಸ್ವಭಾವ' ಮೂಲಾಧಾರವೆ ವಿನಾ 'ಸ್ವಭವ'ವಲ್ಲ; ಭಾವ-ಭವ ಎರಡೂ ಅಭಿನ್ನವಲ್ಲ. ಇದು ಗೀತೆಯ ಇಂಗಿತ. ಆದರೆ ಕಾಲಕ್ರಮದಲ್ಲಿ ಗೀತಾಚಾರ್ಯನ ಮಾತಿಗೆ ಉದ್ದೇಶಪೂರ್ವಕವಾಗಿಯೆ ಅಪಾರ್ಥ ಕಲ್ಪಿಸಿ, ವರ್ಣವ್ಯವಸ್ಥೆಯನ್ನು ಹುಟ್ಟಿನ ತಳಹದಿಯ ಮೇಲೆ ನಿಲ್ಲಿಸಿ, ಭಯಂಕರವಾದ ಜಾತಿಪದ್ಧತಿಯನ್ನು ನಿರ್ಮಿಸಲಾಯಿತು. ಇದು ಹಿಂದೂಧರ್ಮದ ಮಹಾದುರಂತ; ಇದರಿಂದ ಸಮಾಜದಲ್ಲಿ ವರ್ಗಭೇದವುಂಟಾಯಿತು, ಒಂದು ವರ್ಗದವರ ಉದ್ಧಾರಕ್ಕೆ ಅವಕಾಶಗಳು ಹೇರಳವಾಗಿ ಕಲ್ಪಿತವಾಗಿ ಮತ್ತೊಂದು ವರ್ಗದ ಪಾಲಿಗೆ ಅಮಾವಾಸ್ಯೆಯೆ ನಿತ್ಯವಿಧಿಯಾಯಿತು; ಶೋಷಣೆ ತಾನೆ ತಾನಾಯಿತು. ಶೂದ್ರನ ಹೊಟ್ಟೆಯಲ್ಲಿ ಹುಟ್ಟಿದವನು ಶೂದ್ರ, ಅವನು ಎಂತಹ ಶೀಲವಂತನಾಗಿದ್ದರೂ ವಿದ್ಯೆ ಕಲಿಯುವಂತಿಲ್ಲ, ಅವನಿಗೆ ವೇದ ಶಾಸ್ತ್ರಾದಿಗಳ ಅಧ್ಯಯನಕ್ಕೆ ಹಕ್ಕಿಲ್ಲ, ಸಮಾಜದಲ್ಲಿ ಅವನಿಗೆ ನಿಕೃಷ್ಟವಾದ ಸ್ಥಾನ; ಬ್ರಾಹ್ಮಣಜಾತಿಯಲ್ಲಿ ಹುಟ್ಟಿದವನು ಎಂತಹ ದುರಾಚಾರಿಯಾದರೂ ಅವನಿಗೆ ಸಮಾಜದಲ್ಲಿ ಅಗ್ರಪೂಜೆ, ಧರ್ಮವೆಲ್ಲ ಅವನ ಸೊತ್ತು, ವಿದ್ಯೆಗಳೆಲ್ಲ ಅವನ ತೊತ್ತು—ಹಿಂದೂಧರ್ಮ ಪೋಷಿಸಿಕೊಂಡು ಬಂದ ಈ ವಿಷವ್ಯವಸ್ಥೆ ಸರ್ವೋದಯ ರಾಹುವಾಗಿ, ಭಾರತೀಯ ಸಮಾಜಕ್ಕೆ ಹಿಡಿದ ಬಂದಳಿಕೆಯಾಗಿ, ಅನಿಷ್ಟ ಮಾರಕ ಶಕ್ತಿಯಾಗಿ ವಿಜೃಂಭಿಸಿದ್ದು ಇತಿಹಾಸದ ಕಡೆಗೆ ಕಣ್ಣು ಹಾಯಿಸುವವರೆಲ್ಲರಿಗೂ ನಿಚ್ಚಳವಾಗಿ ತಿಳಿದುಬರುವ ವಿಷಯ.

ವಾಸ್ತವವಾಗಿ, ಬಹಳ ಹಿಂದೆ, ವೇದೋಪನಿಷತ್ತುಗಳ ಕಾಲದಲ್ಲಿ ಈ ಜಾತಿ

ಪದ್ಧತಿ ಇದ್ದಂತೆ ತೋರುವುದಿಲ್ಲ. ಎಷ್ಟೋ ಮಂದಿ ಋಷಿಗಳು ಮೂಲತಃ ಬ್ರಾಹ್ಮಣರೇನೂ ಅಲ್ಲ; ತಪಸ್ಸಿನಿಂದ ಅವರು ಆ ಪದವಿಗೇರಿದರು.[8] ಬ್ರಾಹ್ಮಣರು ಕ್ಷತ್ರಿಯ ಧರ್ಮವನ್ನು ಆಶ್ರಯಿಸಿ ರಾಜ್ಯಕಟ್ಟಿದ ನಿದರ್ಶನಗಳೂ ಚರಿತ್ರೆಯಲ್ಲಿವೆ. ತಮ್ಮ ತಮ್ಮ ಗುಣ ಅಭಿರುಚಿ ಸಾಮರ್ಥ್ಯಗಳಿಗನುಸಾರವಾಗಿ ಯಾವ ವೃತ್ತಿಯನ್ನಾದರೂ ಅವಲಂಬಿಸುವ ಅವಕಾಶ ಮೊದಮೊದಲು ಇದ್ದುದರಲ್ಲಿ ಸಂದೇಹವಿಲ್ಲ. ಆದರೆ ಜನ್ಮಸಿದ್ಧವಾದ ವೃತ್ತಿಯನ್ನೇ ವ್ಯಕ್ತಿ ಕೈಗೊಳ್ಳಬೇಕು; ಅದರಲ್ಲೇ ಅವನಿಗೆ ಮೋಕ್ಷ, ತನ್ನ ಅಭಿರುಚಿ ಪ್ರವೃತ್ತಿಗಳು ಬೇರೊಂದು ವೃತ್ತಿಯಲ್ಲಿದ್ದರೂ ಅದನ್ನು ಹಿಡಿಯಲು ಅವನಿಗೆ ಅಧಿಕಾರವಿಲ್ಲ ಎಂಬ ನಿಷ್ಠುರವಾದ ಶನಿನಿಯಮ ಈಚೀಚೆಗೆ ಪ್ರಬಲಿಸಿತೆಂದು ಹೇಳಬಹುದು.[9] ಇದರಿಂದ ಸಮಾಜದಲ್ಲಿ ಸಮಾನತೆ ಲುಪ್ತವಾಯಿತು; ಮೇಲು ಕೀಳಿನ ಭಾವನೆ ಸರ್ವವ್ಯಾಪಿಯಾಗಿ, ಹಿಂದುಳಿದವರು ಹಿಂದೆಯೇ ಉಳಿದರು; ಕೆಲವರು ಮಾತ್ರ ಆ ನತದೃಷ್ಟರನ್ನು ತುಳಿದು ಅಟ್ಟಹಾಸದಿಂದ ಮುಂದೆ ಹೋದರು.

ಇದು ಇತಿಹಾಸ; ಆದರೆ ಈಗ ಕಾಲಧರ್ಮ ವ್ಯತ್ಯಸ್ತವಾಗಿದೆ; ಸ್ವಾತಂತ್ರ್ಯ, ಸಮಾನತೆ, ಸೋದರತೆಯ ಭಾವನೆಗಳ ಕಹಳೆ ಜಾಗತಿಕವಾಗಿ ಮೊಳಗುತ್ತಿದೆ. ಸರ್ವೋದಯ ಇಂದಿನ ಯುಗಧರ್ಮ; ಇದಕ್ಕೆ ವಿರುದ್ಧವಾದ ಜಾತಿಪದ್ಧತಿ ಇಂದು ಕುಸಿದುಬೀಳುವುದು ಅನಿವಾರ್ಯ. ಈ ವ್ಯವಸ್ಥೆಯ ದುಷ್ಟಪರಿಣಾಮಗಳನ್ನು ನಿರ್ಮೂಲ ಮಾಡಲು ಈ ಶತಮಾನದಲ್ಲಿ ಮಹಾತ್ಮ ಗಾಂಧಿಯವರು ಶ್ರಮಿಸಿದರು; ಅಸ್ಪೃಶ್ಯರೆನಿಸಿಕೊಂಡಿದ್ದವರನ್ನು ಹರಿಜನರೆಂದು ಕರೆದು ಮೇಲೆತ್ತಿದರು; ವರ್ಣಸಾಂಕರ್ಯವನ್ನು ಪ್ರೋತ್ಸಾಹಿಸಿದರು. ಇಂದು ಹುಟ್ಟಿನಿಂದ ವರ್ಣವನ್ನು ನಿರ್ಣಯಿಸುವುದು ಹೊಲ್ಲ; ಅವರವರ ಶೀಲಸ್ವಭಾವಗಳು, ತದನುಗುಣವಾಗಿ ಅವರು ಕೈಕೊಳ್ಳುವ ಕರ್ಮ–ಇವೇ ಮಾನದಂಡ. ಹೀಗಾಗಿ ಯುಗಯುಗಗಳಿಂದ ದಮನಗೊಂಡಿದ್ದ ಜನ ಈಗ ತಕ್ಕಮಟ್ಟಿಗಾದರೂ ಮೇಲೇಳುತ್ತಿದ್ದಾರೆ.

ಆದರೆ ಈ ಪರಿವರ್ತನೆ ಕೆಲವು ಪಟ್ಟಭದ್ರ ಹಿತಾಸಕ್ತಿಗಳಿಗೆ, ಪ್ರತಿಗಾಮಿ ಶಕ್ತಿಗಳಿಗೆ ಅಪಥ್ಯವೆನಿಸುವುದು ಸಹಜವೇ; ಡಿ.ವಿ.ಜಿ.ಯವರಿಗೂ ಅದು ಅಪಥ್ಯ

---

8 ಋಷಿಮೂಲ, ನದೀಮೂಲಗಳನ್ನು ನೋಡಬಾರದು ಎಂಬ ಗಾದೆಯೊಂದುಂಟು; ಏಕೆಂದರೆ ಎಷ್ಟೋ ಋಷಿಗಳ ಮೂಲವನ್ನು ನೋಡಿದರೆ ಅಲ್ಲಿ ಬ್ರಾಹ್ಮಣ್ಯ ಸಿಕ್ಕುವುದಿಲ್ಲ.

9 ವಿದ್ವಾಂಸರೊಬ್ಬರ ಹೇಳಿಕೆಯನ್ನು ನೋಡಿ: "But this much is known with certainty that, although Portions of the vedas were left in the keeping of particular priestly families, yet there was no hereditary system of castes, in which members practiced complementary professions, generation after generation, as in later times. It is universally agreed that the caste system, with its hierarchy of previleged and unprveileged orders, grew up in later times" —Nirmal Kumar Bose, *Cultural Heritage of India*, Vol 1, p. 11

ವೆನಿಸಿದೆ. ಮೊದಲು ವರ್ಣವ್ಯವಸ್ಥೆಯ ಬಗೆಗೆ ಅವರ ಸೂಕ್ತಿ ಮುಕ್ತಾವಳಿಯನ್ನು ನೋಡಬಹುದು :

"ಜಾತಿ ವ್ಯವಸ್ಥೆಯನ್ನು ಕುರಿತು ಹೇಳಬೇಕಾದ ವಿಶೇಷಾಂಶ ಒಂದಿದೆ. ನಮ್ಮ ಕಾಲದ ಸುಧಾರಕರು ಜಾತಿನಿಯಮವು ಸಮಾನತ್ವತತ್ತ್ವಕ್ಕೆ ವಿರೋಧಿಯಾದದ್ದು, ಆದ್ದರಿಂದ ಅದು ದೋಷ–ಎಂದು ವಾದಿಸುತ್ತಾರೆ. ಗೀತಾಚಾರ್ಯರ ಮತವು ಸಮಾನತ್ವವನ್ನು ಬೋಧಿಸುವುದೇ ಆದರೂ, ಆ ಸಮಾನತ್ವವು ಪ್ರಯೋಗ ಕ್ರಮದಿಂದ ಜೀವಹಿತದಲ್ಲಿ ಪರ್ಯವಸಾನವಾಗಬೇಕೆಂಬುದು ಅಂತರಂಗ. ವರ್ಣವ್ಯವಸ್ಥೆಯಲ್ಲಿ ಇರುವ ಮುಖ್ಯ ತಾತ್ಪರ್ಯವು ವ್ಯಷ್ಟಿ ಮನುಷ್ಯನು ತನ್ನ ಜನ್ಮದ ಉಪಾಧಿಗಳನ್ನು ಸಮಸ್ತರ ಸೇವೆಯಲ್ಲಿ ಸವೆಯಿಸಬೇಕೆಂಬುದು. ವ್ಯಷ್ಟಿಯ ಉತ್ಕರ್ಷವು ಮುಖ್ಯವಾದದ್ದು ನಿಜ; ಆದರೆ ಆ ಉತ್ಕರ್ಷವು ಬರಿಯ ತೋರಿಕೆಯ ಉತ್ಕರ್ಷವಾಗದೆ ವಾಸ್ತವವಾದ ಉತ್ಕರ್ಷವಾಗಬೇಕಾದರೆ ಅದು ಸಮಷ್ಟಿಯ ಅತ್ಯಂತ ಪ್ರಯೋಜನದಲ್ಲಿ ಪೂರಯಿಸಬೇಕು. ಸಮಷ್ಟಿಲೋಕದ ಅತ್ಯಂತ ಪ್ರಯೋಜನದಲ್ಲಿ ಉತ್ಕರ್ಷವನ್ನು ಸಾಧಿಸಬೇಕೆಂಬುದು ವರ್ಣವ್ಯವಸ್ಥೆಯ ಆಧಾರತತ್ತ್ವ. ಆ ಅತ್ಯಂತ ಪ್ರಯೋಜನಕ್ಕೆ ಒದಗತಕ್ಕವು ಸ್ವಾಭಾವಿಕವಾದ ಗುಣಕರ್ಮಶಕ್ತಿಗಳು.

ಭಗವದ್ವಾಕ್ಯವು ಸ್ವಾಭಾವಿಕವಾಗಿರುವ ವಸ್ತುಸ್ಥಿತಿಯನ್ನು ವರ್ಣಿಸುವುದೇ ಹೊರತು ಮನುಷ್ಯಕೃತಕಲ್ಪನೆಯನ್ನಲ್ಲ. ಮನುಷ್ಯಸಮಾಜದ ಈ ಚತುರ್ಭಾಗ ವ್ಯವಸ್ಥೆಯು ಸ್ವಾಭಾವಿಕವಾದದ್ದು ಎಂದಮೇಲೆ ಅದು ಎಲ್ಲ ಮನುಷ್ಯಲೋಕಕ್ಕೂ ಎಲ್ಲ ದೇಶಗಳಿಗೂ ಅನ್ವಯಿಸತಕ್ಕದ್ದೆಂಬುದು ಸಿದ್ಧವಾಗಿದೆ.

ಜನತೆಯ ನಾನಾ ವರ್ಗಗಳಲ್ಲಿ ಸ್ವಾಭಾವಿಕವಾಗಿ ಹಂಚಿರುವ ನಾನಾ ಗುಣಗಳನ್ನೂ ಆ ನಾನಾಗುಣಗಳಿಂದ ಲೋಕಕ್ಕೆ ಆಗಬಹುದಾದ ನಾನಾ ಹಿತಕಾರ್ಯಗಳನ್ನೂ ನೋಡಿ ಜಾತಿವ್ಯವಸ್ಥೆಯನ್ನು ಭಗವಂತನೇ ಮಾಡಿದ್ದಾನೆ. ಪ್ರಕೃತಿಸಿದ್ಧವಾದ ಸತ್ತ್ವರಜಸ್ತಮೋಗುಣಗಳು ಯಾರ್‍ಯಾರಲ್ಲಿ ಯಾವ್ಯಾವ ಪ್ರಮಾಣದಲ್ಲಿ ಹೇಗೆಹೇಗೆ ಬೆರೆತಿವೆಯೋ ಅದಕ್ಕನುಸಾರವಾಗಿ ಜಾತಿಧರ್ಮ ಕುಲಧರ್ಮಗಳನ್ನು ಗೊತ್ತುಮಾಡಿರುವವನು ಅವನು" (ಪು. ೧೯೯–೨೦೦).

ಜಾತಿವ್ಯವಸ್ಥೆ ಮನುಷ್ಯಕೃತವಲ್ಲ, ದೈವಕೃತ, ಅದು ಅನುಲ್ಲಂಘನೀಯ ಎಂಬುದು ಡಿ.ವಿ.ಜಿ.ಯವರು ಕೊಡುವ ಎಚ್ಚರಿಕೆ. 'ಜಾತಿ' ಎಂಬ ಮಾತನ್ನೆ ಗೀತಾಚಾರ್ಯ ಬಳಸಿಲ್ಲ; ಚಾತುರ್ವರ್ಣ್ಯಕಲ್ಪನೆಗೆ ಅವನು ಹಿಡಿದ ಆಧಾರ ಯಾವುದೆಂಬುದನ್ನು ಹಿಂದೆಯೇ ನೋಡಿದ್ದೇವೆ. ದೇವರ ಆಣೆ ಇಟ್ಟಾದರೂ ಜಾತಿಪದ್ಧತಿಯನ್ನು ಯಥಾವತ್ತಾಗಿ ಉಳಿಸಿಕೊಳ್ಳಬೇಕೆಂಬುದು ಡಿ.ವಿ.ಜಿ.ಯವರ ಸಂಕಲ್ಪವೆಂದು ಕಾಣುತ್ತದೆ.

ಇದಕ್ಕಾಗಿ ಅವರ ವಾದ ಬಹಳ ವಿಚಿತ್ರವಾಗಿ, ಆದರೂ ಬುದ್ಧಿವಂತಿಕೆಯಿಂದ ಕೂಡಿದ್ದಾಗಿ, ಜಟಿಲಕುಟಿಲಪಥಗಳಲ್ಲಿ ಸಾಗುತ್ತದೆ. ಒಂದೆಡೆ ಅವರು ಹೇಳುತ್ತಾರೆ :

"ವರ್ಣವ್ಯವಸ್ಥೆ ಕರ್ಮವ್ಯವಸ್ಥೆಗಳಲ್ಲಿ ಒಂದು ತಾರತಮ್ಯಭಾವನೆ ಕಾಣುತ್ತದೆ. ಬ್ರಾಹ್ಮಣನು ಮುಖ, ಕ್ಷತ್ರಿಯನು ಭುಜ, ವೈಶ್ಯನು ಕುಕ್ಷಿ, ಶೂದ್ರನು ಪಾದ–ಈ ವಿಧವಾದ ರೂಪಕವರ್ಣನೆ ತಕರಾರಿಗೆ ಕಾರಣವಾಗಿದೆ. ಆ ತಕರಾರು ಅವಿಚಾರದಿಂದ ಹುಟ್ಟಿದ್ದು. ಸಮಾಜದೃಷ್ಟಿಯಿಂದ ಎಲ್ಲ ಕರ್ಮಗಳೂ ಸಮಾನಹಿತಕಾರಿಗಳೇ. ಇಲ್ಲಿ ಧ್ಯೇಯವೇನು? ಮೊದಲು, ವ್ಯಷ್ಟಿಮನುಷ್ಯನಲ್ಲಿರುವ ತ್ರಿಗುಣಮಲ ಸವೆಯ ಬೇಕೆಂಬುದು; ಎರಡನೆಯದಾಗಿ, ಅವನಲ್ಲಿರುವ ಶಕ್ತಿಯೋಗ್ಯತೆ ವಿಕಸಿತವಾಗ ಬೇಕೆಂಬುದು; ಮೂರನೆಯದಾಗಿ, ಈ ಎರಡು ಉದ್ದೇಶಗಳೂ ಸಾಗಬೇಕಾದರೆ ಅದಕ್ಕೆ ಲೋಕಸಂಪರ್ಕವೇ ಸಾಧನಭೂಮಿಯೆಂಬುದು; ನಾಲ್ಕನೆಯದಾಗಿ, ಅವನ ಗುಣ ಶಕ್ತಿಗಳ ಅಭಿವ್ಯಕ್ತಿಯಿಂದ ಲೋಕಕ್ಕೆ ಪ್ರಯೋಜನವಾಗಬೇಕೆಂಬುದು. ಹೀಗೆ ವ್ಯಷ್ಟಿಜೀವದ ಉತ್ಕರ್ಷ, ಲೋಕದ ಸಮಷ್ಟಿಸಂಸ್ಥಿತಿ–ಇವೆರಡು ಧರ್ಮಕರ್ಮದಲ್ಲಿರ ಬೇಕಾದ ಧ್ಯೇಯಗಳು. ಈ ದೃಷ್ಟಿಯಿಂದ ನೋಡುವವರಿಗೆ ವ್ಯಷ್ಟಿಮನುಷ್ಯನ ದ್ರವ್ಯಲಾಭ ಪ್ರತಿಷ್ಠೆ ಅಧಿಕಾರಗಳು ವಿಶೇಷವಾಗಿ ಗಣನೆಗೆ ಬಾರವು. ಸಮಷ್ಟಿ ಲೋಕಾರಾಧನೆ ಮುಖ್ಯ; ಭಗವತ್ಸೇವೆ ಮುಖ್ಯ; ಸ್ವಲಾಭ ಸ್ವಪ್ರತಿಷ್ಠೆಗಳು ಮುಖ್ಯವಲ್ಲ. ನಮ್ಮ ಕರ್ತವ್ಯದ ದಾರಿ ನಮ್ಮ ಸ್ವಭಾವಕ್ಕೆ ಯಾವುದು ಒಗ್ಗುತ್ತದೋ ಅದು.

ಮಗುವಿನ ಪೋಷಣೆಯಲ್ಲಿ ಹಾಲುಕುಡಿಸುವವರು ಶ್ರೇಷ್ಠರು, ತೊಟ್ಟಿಲು ಬಟ್ಟೆ ಎತ್ತುವವರು ನಿಕೃಷ್ಟರು ಎಂದುಂಟೋ? ತೊಟ್ಟಿಲು ತೂಗುವವರು ಶ್ರೇಷ್ಠರು, ಹಿತ್ತಲಿಗೆ ಕರೆದುಕೊಂಡು ಹೋಗುವವರು ನಿಕೃಷ್ಟರು ಎಂದುಂಟೋ? ಮಗುವಿನಲ್ಲಿ ತಾಯಿಗಿರುವ ಪ್ರೀತಿಯಿಂದ ಆ ಮಗುವಿನ ಸಂತೋಷಕ್ಕಾಗಿ ಆಗಬೇಕಾದ ಎಲ್ಲ ಕೆಲಸಗಳೂ ಆಕೆಗೆ ಒಂದೇ; ಅದರಲ್ಲಿ ತಾರತಮ್ಯಗಣನೆಯೇನೂ ಇರದು. ಭಗವಂತನ ಸೇವೆಯಲ್ಲಿಯೂ ಹಾಗೆಯೇ; ದೊಡ್ಡದು ಚಿಕ್ಕದು ಎಂಬ ಭೇದ ಸಲ್ಲುವುದಿಲ್ಲ. ಆಂಜನೇಯ ಬೆಟ್ಟವೆತ್ತಿದ; ಅಳಿಲು ಮಳಲು ಹೊತ್ತಿತು" (ಪು. ೫೪೪–೪೫).

ಬ್ರಾಹ್ಮಣ ಉಚ್ಚಸ್ಥಾನದಲ್ಲೇ ಇರಬೇಕು, ಶೂದ್ರ ಅವನ ಸೇವೆಮಾಡುತ್ತ ನೀಚಸ್ಥಾನವನ್ನೇ ಅಲಂಕರಿಸಿರಬೇಕು ಎಂಬುದು ಈ ಹೇಳಿಕೆಯ ತಾತ್ಪರ್ಯವಲ್ಲದೆ ಮತ್ತೇನೂ ಅಲ್ಲ. ಯಾವ ಕರ್ತವ್ಯವೂ ಹೀನವಲ್ಲ, ದಿಟ. ಹಾಲುಕುಡಿಸುವವರಂತೆ ತೊಟ್ಟಿಲುಬಟ್ಟೆ ಎತ್ತುವವರೂ ಶ್ರೇಷ್ಠರು ಎಂಬುದು ನಿಜವಾದಲ್ಲಿ, ಹಾಲುಕುಡಿಸು ವವರೇಕೆ ತೊಟ್ಟಿಲುಬಟ್ಟೆ ಎತ್ತಬಾರದು? ಇದಕ್ಕೆ ಡಿ.ವಿ.ಜಿ.ಯವರ ಸಮ್ಮತಿ ಯಿದೆಯೆ? ಪ್ರಾಯಶಃ ಇರಲಿಕ್ಕಿಲ್ಲ. ಅವರು ಈ ಕೆಲಸ ಮಾಡುವುದಿಲ್ಲ, ಇವರು ಆ ಕೆಲಸ ಮಾಡಕೂಡದು–ಆದರೆ ಎರಡು ಕೆಲಸಗಳೂ ಶ್ರೇಷ್ಠವೇ! ಮೇಲುನೋಟಕ್ಕೆ ಅಂಗೀಕಾರಾರ್ಹವಾಗಿ ಕಂಡರೂ ವಸ್ತುತಃ ಎಷ್ಟು ಅಪಾಯಕಾರಿಯಾದ ವಾದವಿದು! ಸಮಾನತಾತತ್ತ್ವದ ಬುಡಕ್ಕೇ ಕೊಡಲಿಪೆಟ್ಟು ಬಿದ್ದಿದೆ–ದೇವರ ಹೆಸರಿನಲ್ಲಿ! 'ನೀನು ಮಲ ಬಳಿದು ತಲೆಯ ಮೇಲೆ ಹೊರುವ ಕೆಲಸವೂ ಪವಿತ್ರ, ನಾನು ದೇವಸ್ಥಾನದಲ್ಲಿ

ಪುರೋಹಿತನಾಗಿ ಪೂಜೆಮಾಡುವುದೂ ಪವಿತ್ರ ; ನೀನು ಸದಾ ಅದನ್ನೆ ಮಾಡುತ್ತಿರು, ನಾನು ಇದನ್ನೆ ಮಾಡುತ್ತಿರುತ್ತೇನೆ; ನಮ್ಮ ಕಾರ್ಯವಿನಿಮಯ ಮಾತ್ರ ಅಧಾರ್ಮಿಕ, ಪಾಪಕರ!' ಎಂದು ಬ್ರಾಹ್ಮಣ ಜಾಡಮಾಲಿಗೆ ಹೇಳುವ ರೀತಿ ಮೇಲಿನ ವಾಕ್ಯಗಳಲ್ಲಿ ತುಸು ಸಭ್ಯವಾಗಿ ಬಂದಿದೆಯಷ್ಟೆ !

ಬ್ರಾಹ್ಮಣನಾಗಿ ಹುಟ್ಟಿದವನು ದುರ್ಮಾರ್ಗಗಾಮಿಯಾದರೂ ಅವನನ್ನು ಬ್ರಾಹ್ಮಣನೆಂದು ಕರೆಯಬಹುದೆ? ಛೆ, ಛೆ, ಬ್ರಾಹ್ಮಣ ಕೆಡುವುದೆಂದರೇನು? ಡಿ.ವಿ.ಜಿ.ಯವರ ಸಿದ್ಧಾಂತವಿದೋ: "ಬ್ರಾಹ್ಮಣ ಗುಣಗಳು ಪೂರ್ವಿಕರಿಂದ ಸಾಂಪ್ರತದವನಿಗೆ ಸಹಜವಾಗಿ ಕಿಂಚಿತ್ತಾದರೂ, ಸಂಕುಚಿತವಾಗಿಯಾದರೂ ಬಂದಿರುತ್ತವೆಂದು ನಿಸ್ಸಂದೇಹವಾಗಿ ಹೇಳಬಹುದು" (ಪು. ೫೪೪). ಈ ತರ್ಕಕ್ಕೆ ಏನು ಹೇಳೋಣ? ವಿಜ್ಞಾನವಾದರೂ ಇದನ್ನು ಒಪ್ಪುತ್ತದೆಯೆ? ಹೋಗಲಿ, ಲೋಕಸತ್ಯ ಸಮರ್ಥಿಸುತ್ತದೆಯೆ?

"ಜಾತಿವ್ಯವಸ್ಥೆ ವರ್ಣವ್ಯವಸ್ಥೆಗಳಲ್ಲಿ ಮೂಲತಃ ದೋಷವಿಲ್ಲ, ಗುಣವುಂಟು. ಐರೋಪ್ಯರ ಜೀವವಿಜ್ಞಾನ ವಂಶವಿಜ್ಞಾನಗಳು ಇದಕ್ಕೆ ವಿರೋಧವಾಗಿ ಏನನ್ನೂ ಕಂಡಿಲ್ಲ. ಐರೋಪ್ಯರಲ್ಲೂ ಸಮಾಜವಿಭಾಗ ವರ್ಗವಿಭಾಗಗಳುಂಟು ; ನಮ್ಮಲ್ಲಿಯಷ್ಟು ಶಾಸ್ತ್ರೋಕ್ತವಾಗಿಲ್ಲದಿದ್ದರೂ ಜನರೂಢಿಯಲ್ಲಿ ಬಹುಮಟ್ಟಿಗೆ ಉಂಟು....ಲೋಕದಲ್ಲಿ ಕ್ಷತ್ರಿಯ ರಾಜರು ಎಂದು ಮುಗಿದರೋ ಅಂದು ಮನುಸ್ಮೃತಿಯ ಅಧಿಕಾರ ಮುಗಿಯಿತು. ಈಗ ಜಾತಿಯೇನಿದ್ದರೂ ವ್ಯಷ್ಟಿಜನರ ಜೀವನಕ್ಷೇತ್ರದಲ್ಲಿ—ವಿವಾಹಾದಿ ಸಂಬಂಧಗಳಲ್ಲಿ—ನಿಂತಿದೆ. ಆದರಿಂದ ರಾಷ್ಟ್ರಕ್ಕೆ ಯಾವ ಅನನುಕೂಲತೆಯೂ ಆಗುವಂತಿಲ್ಲ, ಆ ಪುರಾತನ ವ್ಯವಸ್ಥೆಯನ್ನು ಒಡೆಯುವುದು ಅವಶ್ಯವಲ್ಲ; ಅಪಾಯಕಾರಿ" ಎಂಬುದು ಡಿ.ವಿ.ಜಿ. ಯವರ ಅಂತಿಮನಿರ್ಣಯ (ಪು. ೬೨೦) "ಜಾತಿಪಂಗಡ ತಪ್ಪಾದರೆ ಭಾರತೀಯತೆ ಎನ್ನುವುದೇನು? ದೇಶೀಯತೆಯೆನ್ನುವುದೇನು? ಅವೂ ಮನುಷ್ಯವರ್ಗದ ವಿಭಾಗಗಳೇ" ಎಂದು ಅವರು ಆಕ್ರೋಶದಿಂದ ಉದ್ಗರಿಸುತ್ತಾರೆ. ಜಾತೀಯತೆಯನ್ನು ಭಾರತೀಯತೆ ರಾಷ್ಟ್ರೀಯತೆಗಳೊಡನೆ ಸಮೀಕರಿಸುವಷ್ಟರಮಟ್ಟಿಗೆ ಡಿ.ವಿ.ಜಿ.ಯವರ ಬುದ್ಧಿ ಬಾಲಿಶವಾಗಿದೆಯೆಂಬುದು ನಮಗೆ ಗೊತ್ತಿರಲಿಲ್ಲ.

ಇನ್ನು 'ಸ್ವಧರ್ಮ'ದ ವಿಚಾರ. ಗೀತಾಪ್ರಣೀತವಾದ ಸ್ವಧರ್ಮಶಬ್ದವನ್ನು ಡಿ.ವಿ.ಜಿ.ಯವರು ಉದ್ದಕ್ಕೂ ಜಾತಿ ಮತ್ತು ತತ್ಸಿದ್ಧವಾದ ಉದ್ಯೋಗ ಎಂಬ ಪರಿಮಿತಾರ್ಥದಲ್ಲೆ ನಡೆಸಿಕೊಂಡು ಹೋಗಿರುವುದು ಹಾಸ್ಯಾಸ್ಪದವಾಗಿ ಕಾಣುತ್ತದೆ. ಸ್ವಧರ್ಮದ ವಿಷಯದಲ್ಲಿ ಗೀತಾವಾಣಿ ಅಸಂದಿಗ್ಧವಾಗಿದೆ; ಸಂದಿಗ್ಧತೆಯನ್ನುಂಟು ಮಾಡುವವರು ನಮ್ಮ ವ್ಯಾಖ್ಯಾನಕಾರರು. ಸ್ವಧರ್ಮವೆಂದರೆ ಜಾತಿಯಲ್ಲ ಅಥವಾ ಜಾತಿಕರ್ಮವಲ್ಲ; ವ್ಯಕ್ತಿಯ ಪ್ರವೃತ್ತಿ ಮತ್ತು ಅದರಿಂದ ಸಿದ್ಧವಾಗುವ ವೃತ್ತಿ. ಅದು ವೃತ್ತಿಯಾಗಿರುವುದಕ್ಕಿಂತ ಹೆಚ್ಚಾಗಿ ಚಿತ್ತವೃತ್ತಿಯಾಗಿರುತ್ತದೆ. ಅರ್ಜುನ ಜನ್ಮತಃ ಕ್ಷತ್ರಿಯ ಎಂಬುದಲ್ಲ ಮುಖ್ಯ ; ಅವನ ಮನೋವೃತ್ತಿ ಕ್ಷಾತ್ರಪರವಾದದ್ದು, ಅದನ್ನು

ಕೈಬಿಡಬಾರದು ಎಂಬುದು ಶ್ರೀಕೃಷ್ಣನ ಬೋಧನೆ. ಯುಧಿಷ್ಠಿರ ಕ್ಷತ್ರಿಯ ಕುಲ ಜನಲ್ಲವೋ? ಆದರೂ ಅವನಲ್ಲಿ ಕ್ಷಾತ್ರರಾಜಸಕ್ಕಿಂತ ಸಾತ್ತ್ವಿಕಗುಣವೆ ಪ್ರಧಾನ ವಾಗಿತ್ತೇಕೆ? ಕ್ಷಾತ್ರ ಅವನ ಸ್ವಧರ್ಮವಲ್ಲ. ಆದಕಾರಣ, ಸ್ವಧರ್ಮವೆಂದರೆ ನಮ್ಮ ನಮ್ಮ ಅಪ್ಪ ಅಜ್ಜ ಮಾಡುತ್ತಿದ್ದ ಕಸುಬು ಎಂದಷ್ಟೆ ಅರ್ಥ ಕಲ್ಪಿಸುವುದು ಗೀತಾಚಾರ್ಯನಿಗೆ ಸಗುವ ಪರಮ ಅನ್ಯಾಯವಾಗುತ್ತದೆ.

ಸ್ವಧರ್ಮದ ಬಗೆಗೆ ಡಿ.ವಿ.ಜಿ.ಯವರ ಮನೋಗತವೇನೆಂಬುದನ್ನು ಅವರು ಹೇಳುವ ಒಂದು ಪ್ರಸಂಗದಿಂದ ಅರಿಯಬಹುದಾಗಿದೆ: "ನಮ್ಮೂರಿನಲ್ಲಿ ಸಾಹುಕಾರರ ಮನೆಯಲ್ಲಿ ಮದುವೆಯೆಂದರೆ ಮಡಿವಾಳ ಮಾಚಯ್ಯನಿಗೆ ಒಂದು ತಿಂಗಳು ಮೈಮುರಿಯ ಕೆಲಸ. ಆದರೆ ಏನು? ಲಗ್ನದ ದಿವಸ ಜಮಖಾನದ ಮೇಲೆ ಕುಳಿತು ಹೂವಿನ ಹಾರ ಹಾಕಿಸಿಕೊಳ್ಳುವವನು ಸಂಗೀತದ ರಂಗಪ್ಪ. ಇದನ್ನು ನೋಡಿ ನೋಡಿ ಮಾಚಯ್ಯನ ಮನಸ್ಸು ರೋಸಿಹೋಗಿತ್ತು. ತನ್ನ ಮಗ ಮಾರಯ್ಯನನ್ನು ಸಂಗೀತಕ್ಕೆ ಹಾಕಿದ. ಹತ್ತು ವರ್ಷ ಪಾಠ ನಡೆಯಿತು. ಮಾರಯ್ಯನ ಹಾಡಿಕೆ ಬೀದಿಯ ಭಜನೆಗೆ ಬೇಕಾದಷ್ಟಾಯಿತು. ಊರಿಗೆ ಈಗ ಒಳ್ಳೆಯ ಅಗಸ ಇಲ್ಲವಾದ, ಒಳ್ಳೆಯ ಸಂಗೀತಗಾರ ಬಂದ ಹಾಗಾಯಿತೋ?—ಎಂದು ಕೇಳಿದವು ಕತ್ತೆಗಳು" (ಪು. ೧೮೩-೮೪). ಇಲ್ಲಿ ಡಿ.ವಿ.ಜಿ.ಯವರ ಕೊಂಕು, ವ್ಯಂಗ್ಯ ಎದ್ದು ಕಾಣುತ್ತಿವೆ. ಅಗಸರವನು ಸಂಗೀತ ಕಲಿಯುವುದೆ ಸಾಧ್ಯವಿಲ್ಲವೆ ಅಥವಾ ಕಲಿಯಲೆಬಾರದೆ? ಸಂಗೀತವಿದ್ಯೆ ಬ್ರಾಹ್ಮಣರಿಗೇ ಮೀಸಲೊ? ಒಳ್ಳೆಯದನ್ನೆಲ್ಲ ಗುತ್ತಿಗೆ ಹಿಡಿಯುವ ಸಂಕುಚಿತ ಸ್ವಾರ್ಥ ಮನೋಭಾವ, ಮಡಿವಂತಿಕೆ ಇಂಥ ವಿಡಂಬನೆಗಳಿಗೆ ಪ್ರೇರಕವಾಗುತ್ತದೆ.

ಡಿ.ವಿ.ಜಿ.ಯವರು ಈ ಶತಮಾನದಲ್ಲಿ ನಿಂತು ಮಾತನಾಡುತ್ತಿಲ್ಲ, ಯಾವುದೋ ಗತಕಾಲದಲ್ಲಿ ಮುಳುಗಿಕೊಂಡಿದ್ದಾರೆ ಎಂಬುದಕ್ಕೆ ಇನ್ನೂ ಒಂದು ಸಾಕ್ಷಿ, ಇಂದಿನ ವಿಶಾಲತತ್ತ್ವಗಳನ್ನು ಕಟುವಾಗಿ ಗೇಲಿಮಾಡುವ ಈ ಮಾತುಗಳು: "ಕಸ್ತೂರಿ ಮಾರುವವನ ಪಕ್ಕದಲ್ಲಿ ಗೊಬ್ಬರದವನು ಅಂಗಡಿ ಇಡಲಿ. ಅದೇ ಸಮಾನತ್ವ. ನಿತ್ಯ ಸ್ನಾನಿಯ ಮೈಯನ್ನು ನೀರು ಸೋಕದವನು ತಿಕ್ಕಲಿ. ಅದೇ ಅಲ್ಲವೇ ಸೋದರತ್ವ? ಜೀತಗಾರರು ತಾವು ಜೀತಮಾಡುವವರೆಂಬ ಸಂಕೋಚದಿಂದ ಕುಗ್ಗದೆ ತಾವೇ ಯಜಮಾನ ರೆಂದುಕೊಂಡು ಹಿಗ್ಗುವಂತೆ ಆಗಬೇಕು. ಬಂಡವಾಳ ಕರಗಿದರೆ ಕರಗಲಿ, ಬಂಡಾಯ ಗಾರರು ಸಂತುಷ್ಟರಾಗಬೇಕು." ಇಲ್ಲೆಲ್ಲ ಪ್ರಚಲಿತಯುಗವಿರೋಧಿಯಾದ ಅನುದಾರ ದೃಷ್ಟಿ ಸುವ್ಯಕ್ತವಾಗುತ್ತದೆ.

ಈ ಸಂದರ್ಭದಲ್ಲಿ ನಾವು ಚಾತುರ್ವರ್ಣ್ಯ, ಸ್ವಧರ್ಮಗಳ ಬಗೆಗೆ ಸಂತ ವಿನೋಬಾ ಏನು ಹೇಳುತ್ತಾರೆಂಬುದನ್ನು ಹೋಲಿಕೆಗಾಗಿ ನೋಡಬಹುದು. ವರ್ಣವ್ಯವಸ್ಥೆಯನ್ನು ಕುರಿತು ಅವರು ನುಡಿಯುತ್ತಾರೆ: "ವರ್ಣಧರ್ಮದ ಕಲ್ಪನೆ ಸವಿ. ಆದರೆ ಈ ವರ್ಣಧರ್ಮ ಅಷ್ಟು ದೃಢವೇ? ಕುರಿಗೆ ಕುರಿತನ, ಹಸುವಿಗೆ ಹಸುತನ ಇದ್ದಂತೆ ಬ್ರಾಹ್ಮಣನ ಬ್ರಾಹ್ಮಣತ್ವ, ಕ್ಷತ್ರಿಯನ ಕ್ಷತ್ರಿಯತ್ವ ಇದೆಯೆ? ವರ್ಣಧರ್ಮ ಅಷ್ಟು

ಗಟ್ಟಿಯಲ್ಲ ; ಒಪ್ಪುತ್ತೇನೆ....ಸಾಮಾಜಿಕ ವ್ಯವಸ್ಥೆಗಾಗಿ ಮಾಡಿದ ಯುಕ್ತಿ ವರ್ಣ ಧರ್ಮ ಎಂದುಕೊಂಡರೆ ಅದರಲ್ಲಿ ಅಪವಾದ ಸಿದ್ಧ. ಅಪವಾದವನ್ನು ಲೆಕ್ಕ ಹಿಡಿದೇ ನಡೆಯ ಬೇಕು. ಅದನ್ನು ಲೆಕ್ಕ ಹಿಡಿದಿದೆ ಗೀತೆ"[10] ಸ್ವಧರ್ಮದ ಅರ್ಥ ವ್ಯಾಪಕವೆಂಬುದು ವಿನೋಬಾ ಅವರ ಮಾತಿನಿಂದ ವಿದಿತವಾಗುತ್ತದೆ : "ಸ್ವಧರ್ಮದಲ್ಲಿ ಸ್ವದೇಶಿಧರ್ಮ, ಸ್ವಜಾತಿಧರ್ಮ, ಸ್ವಕಾಲೀನ ಧರ್ಮಗಳು ಬರುತ್ತವೆ. ಈ ಮೂರರಿಂದ ಸ್ವಧರ್ಮ ವಾಗುತ್ತದೆ. ನನ್ನ ವೃತ್ತಿಗೆ ಯಾವುದು ಅನುಕೂಲ, ಅನುರೂಪ; ಯಾವ ಕರ್ತವ್ಯ ನನಗೆ ಪ್ರಾಪ್ತವಾಗಿದೆ, ಈ ಎಲ್ಲ ಸ್ವಧರ್ಮವೂ ತಾನೇ ತಿಳಿಯುತ್ತದೆ....ಸ್ವಧರ್ಮದಲ್ಲಿ ಎರಡು ವಿಭಾಗ : ಒಂದು ಬದಲಾಗುವ ವಿಭಾಗ, ಇನ್ನೊಂದು ಬದಲಾಗದುದು."[11] ವಿನೋಬಾ ಅವರ ವ್ಯಾಖ್ಯಾನಕ್ಕೂ ಡಿ.ವಿ.ಜಿ.ಯವರ ವ್ಯಾಖ್ಯಾನಕ್ಕೂ ಇರುವ ಅಂತರ ಬಹಳ ಸ್ಪಷ್ಟ. ಸ್ವಧರ್ಮವನ್ನು ಕುರಿತು ಸ್ವಾಮಿ ಸೋಮನಾಥಾನಂದರು, "ಇಲ್ಲಿ ಜಾತಿಯಲ್ಲ ಮುಖ್ಯ. ನಾವು ಯಾವ ವರ್ಣವನ್ನು ಅನಂತರ ನಮ್ಮ ಯೋಗ್ಯತೆ ಮತ್ತು ಅಭಿರುಚಿಗೆ ತಕ್ಕಂತೆ ಆರಿಸಿಕೊಳ್ಳುವೆವೊ ಅದು ಮುಖ್ಯ. ಪ್ರತಿಯೊಂದು ವೃತ್ತಿಗೂ ಒಂದು ಧರ್ಮವಿದೆ. ಅದನ್ನು ಅನುಸರಿಸಬೇಕು. ಯಾವ ವೃತ್ತಿಯ ಮೇಲೆ ನಮಗೆ ಅಭಿರುಚಿ ಇರುವುದೋ ಮತ್ತು ಯಾವುದಕ್ಕಾಗಿ ಹಲವು ವರ್ಷಗಳು ತರಬೇತನ್ನು ತೆಗೆದುಕೊಂಡಿರುವೆವೊ ಅದನ್ನು ಬಿಡದೆ ಅದರಲ್ಲಿ ಮತ್ತು ಅದಕ್ಕಾಗಿ ನಮ್ಮ ಪ್ರಾಣವನ್ನು ಅರ್ಪಿಸಬೇಕು"[12] ಎಂದು ವಿವರಿಸಿರುವುದೂ ಗಮನಾರ್ಹ.

ಅಂತೂ ಪೂರ್ವವ್ಯವಸ್ಥೆಗಳನ್ನು—ಅವು ಎಷ್ಟೇ ಅನಿಷ್ಟವಾಗಿರಲಿ—ಉಳಿಸಿ ಕೊಂಡೇ ಹೋಗಬೇಕೆಂಬುದು ಡಿ.ವಿ.ಜಿ.ಯವರ ಕಳಕಳಿಯ ವಾದ. ಇದು ಕಾಲಚಕ್ರ ವನ್ನು ಹಿನ್ನೂಕುವ ವಿಫಲ ಪ್ರಯತ್ನ. ಇಂದಿನ ಅಗತ್ಯಗಳ ದೃಷ್ಟಿಯಿಂದ, ಜನ ಸಾಮಾನ್ಯರ ನಿಲುವಿನಿಂದ ಗೀತಾತಾತ್ಪರ್ಯವನ್ನು ವಿಶದಗೊಳಿಸುತ್ತೇವೆಂದು ಹೊರಟ ಡಿ.ವಿ.ಜಿ.ಯವರು ಚಾತುರ್ವರ್ಣ್ಯ ಸ್ವಧರ್ಮಗಳನ್ನು ಅರ್ಥೈಸುವಲ್ಲಿ ಸನಾತನಿಯಾಗಿ ದ್ದಾರೆ, ಸಮಷ್ಟಿ ವಿಮುಖರಾಗಿದ್ದಾರೆ ಎಂದು ಹೇಳದೆ ಗತ್ಯಂತರವಿಲ್ಲ. ಸಾಧಾರಣ ಜನತೆಯ ಉದ್ಧಾರ ಅವರ ಕಣ್ಣ ಮುಂದಿಲ್ಲ ಎನ್ನುವುದು ಅಂಗೈ ನೆಲ್ಲಿಯಂತೆ ಗೋಚರ. ಡಿ.ವಿ.ಜಿ. ಅವರಂಥ ಧೀಮಂತರಿಗೆ ಭರತಖಂಡ ಸ್ವಾತಂತ್ರ್ಯ ಪಡೆದುದೇ ಅಷ್ಟೊಂದು ಅಪೇಕ್ಷಣೀಯವಾದ ವಿಚಾರವಲ್ಲ ; ಇಂಗ್ಲಿಷ್ ಭಾಷೆಯ ಸ್ಥಾನದಲ್ಲಿ ದೇಶಭಾಷೆಗಳು ಕುಳಿತುಕೊಳ್ಳುವುದೂ ಅವರಿಗೆ ಸಹನೀಯವಲ್ಲ. ಇಂತಹವರು ಚಾತುರ್ವರ್ಣ್ಯ, ಸ್ವಧರ್ಮಗಳ ಬಗ್ಗೆ ಅನ್ಯರೀತಿಯಲ್ಲಿ ಬರೆಯಬೇಕೆಂದು ನಿರೀಕ್ಷಿಸುವುದು ಸಲ್ಲದೇನೊ.

---

10 'ಗೀತಾಪ್ರವಚನ', ಪು. ೨೯೮.

11 ಅದೇ, ಪು. ೨೯೭.

12 'ಭಗವದ್ಗೀತಾಸಂದೇಶ', ಪು. ೫೨.

ಸುಧಾಕರ

ಸಣ್ಣಕತೆಗಳು : ೧೨–೧೩

ಕನ್ನಡದಲ್ಲಿ ಸಣ್ಣಕತೆಯನ್ನು ಮೊದಲು ಬರೆದವರು ಇಂಥವರು ಎಂದು ಬೆದಕುವುದಕ್ಕಿಂತ, ಕನ್ನಡ ನೆಲದಲ್ಲಿ ಸಣ್ಣಕತೆಯ ಸಮೃದ್ಧಿಯ ಬೆಳೆ ಬೆಳೆದವರು, ಜನಪ್ರಿಯಗೊಳಿಸಿದವರು ಮಾಸ್ತಿಯವರು ಎಂಬುದರಲ್ಲಿ ಸಂದೇಹವಿಲ್ಲ. ಅವರಿಗೆ ಕುಮ್ಮಕ್ಕಾಗಿ ಸಣ್ಣಕತೆಯ ಸಾಗುವಳಿ ಜಮೀನನ್ನು ಹಸನುಮಾಡಿ ಹೊಸ ಬೆಳೆ ಬೆಳೆಯುವುದರಲ್ಲಿ ಅನೇಕರು ಕೆಲಸಮಾಡಿದ್ದಾರೆ; ಮಾಡುತ್ತಿದ್ದಾರೆ. ಒಂದು ಹೆಚ್ಚಳದ ಅಂಶವೆಂದರೆ ಮುದಿತನದಲ್ಲೂ ಮಾಸ್ತಿಯವರು ಈ ಕ್ಷೇತ್ರದ ದುಡಿಮೆಯನ್ನು ಕಡೆಗಣಿಸಿಲ್ಲ; ಕಸುಬನ್ನು ಕೈಬಿಟ್ಟಿಲ್ಲ. ಹೊಸರಕ್ತದವರ ಕಾಣಿಕೆಗಳ ಜೊತೆಗೆ ತಮ್ಮ ಕಾಣಿಕೆಯನ್ನೂ ಅರ್ಪಿಸುತ್ತಾ ಬರುತ್ತಿದ್ದಾರೆ. ಅದಕ್ಕೆ ಸಾಕ್ಷಿ "ಸಣ್ಣಕತೆಗಳು—ಭಾಗ ೧೨ ಮತ್ತು ೧೩."

ಇವರು ಹುಟ್ಟುಕತೆಗಾರರು. ಕವಿ—ಮಾಸ್ತಿಯವರಲ್ಲಾಗಲೀ, ಕಾದಂಬರಿಕಾರ—ಮಾಸ್ತಿಯವರಲ್ಲಾಗಲೀ, ಕತೆಗಾರ—ಮಾಸ್ತಿ ತಲೆಹಾಕದಿರುವುದಿಲ್ಲ. ಏಕೆಂದರೆ ಕವಿತೆಯಾಗಲಿ ಕಾದಂಬರಿಯಾಗಲಿ—ಅಲ್ಲೆಲ್ಲ ಕಥನಾಂಶವನ್ನು ಪ್ರಧಾನವಾಗಿ ಕಾಣುತ್ತೇವೆ. ಅವರ ಅನುಭವ ಸಮಗ್ರವಾಗಿ, ಸಮತೂಕವಾಗಿ ಅಭಿವ್ಯಕ್ತಗೊಂಡದ್ದು—ಗೊಳ್ಳುತ್ತಿರುವುದು ಸಣ್ಣಕತೆಯ ಮಾಧ್ಯಮದ ಮುಖಾಂತರವೇ.

ಅವರ ಕತೆಗಳನ್ನು ಓದಿದವರಿಗೆ ತಟ್ಟನೆ ಅರಿವಾಗುವ ಅಂಶವೆಂದರೆ ಸರಳತೆ. ಯಾವ ಕತೆಯಲ್ಲೂ ತಾಂತ್ರಿಕವಾಗಿ ಹಿಂಗಣ್ಣು–ಮುಂಗಣ್ಣು ಹೊಡೆಯಲು ಹೋಗಿಲ್ಲ; ಹೋಗುವುದಿಲ್ಲ. ಹೇಳಬೇಕಾದದ್ದನ್ನು ನೇರವಾಗಿ, ಚಿತ್ರವತ್ತಾಗಿ, ಉದ್ವೇಗರಹಿತರಾಗಿ, ಸಹಾನುಭೂತಿಪರರಾಗಿ ಸ್ವಸ್ಥಚಿತ್ತದಿಂದ ಚಿತ್ರಿಸುತ್ತಾರೆ. ಜೀವನಶ್ರದ್ಧೆ, ನಿಷ್ಪಕ್ಷಪಾತ ನೋಟ, ಸಾರಾಸಾರ ವಿವೇಚನೆ, ಸಂಪ್ರದಾಯ ಸಂಸ್ಕೃತಿಗಳ ಬಗ್ಗೆ ಇರುವ ಆತ್ಮೀಯತೆ, ಭಾವುಕತನಕ್ಕೆ ಪಕ್ಕಾಗದೆ ಸಮಚಿತ್ತದಿಂದ ನೋಡುವ ತಾಳ್ಮೆ—ಇವು ಅವರಲ್ಲಿರುವುದರಿಂದಲೇ ಈ ಮುಪ್ಪಿನಲ್ಲೂ ಅವರ ಕತೆಗಳಲ್ಲಿ ಜೀವಂತಿಕೆಯನ್ನು ಕಾಣುತ್ತೇವೆ; ಯಶಸ್ಸನ್ನೂ ಸಹ.

ಅವರ ಕತೆಗಳಲ್ಲಿ ಕಂಡುಬರುವ ಮತ್ತೊಂದು ಅಂಶವೆಂದರೆ ಹೊಲಸು, ರೊಚ್ಚು,

ಕ್ರೂರ ಭಾವನೆಗಳು ಕಂಡುಬಾರದಿರುವುದು; ಕೋಮಲ ಭಾವನೆಗಳು ಕಂಡುಬರುವುದು. ಸ್ವಭಾವತಃ ಅವರು ಮೆದುಮನಸ್ಸಿನವರು ಎಂಬುದು ಇದರಿಂದ ವ್ಯಕ್ತವಾಗುತ್ತದೆ. ಹೃದಯ ಮಾಗಿದಂತೆಲ್ಲಾ ಮೃದುತ್ವ ಮಡುಗಟ್ಟುತ್ತದೆ; ಮಾತು ಕೃತಿಯಲ್ಲಿ ಅದು ವ್ಯಕ್ತವಾಗುತ್ತದೆ. ಎಂಥ ಭಾವನೆಗಳಿಗಾದರೂ ಪುಟ್ಟಪುಟ್ಟ ವಾಕ್ಯಗಳಲ್ಲಿ ಕಣ್ಕಟ್ಟುವಂತೆ ಮಾತಿನ ರೂಪ ಕೊಡಬಲ್ಲವರಾದ್ದರಿಂದ ಅವರ ಗದ್ಯ ತುಂಬ ಹೃದ್ಯವಾಗಿದೆ.

ಸಣ್ಣ ಕತೆಗಳು ಭಾಗ ೧೨ ಮತ್ತು ೧೩ರಲ್ಲಿ ಸಾಮಾಜಿಕ ವಸ್ತುವನ್ನೊಳಗೊಂಡ ಕತೆಗಳಿಗಿಂತ ಐತಿಹಾಸಿಕ ಮತ್ತು ಪೌರಾಣಿಕ ಕತೆಗಳೇ ಜಾಸ್ತಿ. ಅಷ್ಟೇ ಅಲ್ಲದೆ ಕಥಾವಸ್ತು ಪ್ರಾದೇಶಿಕ ಸೀಮಿತತ್ವವನ್ನು ಮೀರಿ ಜಾಗತಿಕ ವ್ಯಾಪ್ತಿಯನ್ನು ಪಡೆದಿರುವುದನ್ನು ಕಾಣುತ್ತೇವೆ.

'ರಾಣಿ ಹಾಟ್‌ಷೇಪ್‌ಸಿಟೂ' ಕತೆ ಈಜಿಪ್ಟಿನ ರಾಜಕುವರಿಯೊಬ್ಬಳ ಜೀವನದ ದುರಂತವನ್ನು ಮನಗಾಣಿಸುವಂಥದು. ಈಜಿಪ್ಟ್ ರಾಷ್ಟ್ರದ ಸಂಪ್ರದಾಯದಲ್ಲಿ ರಾಜಸಂತತಿ ತನಗೆ ಸಮಾನವಾದ ರಾಜಸಂತತಿಯಲ್ಲೇ ಮದುವೆಯಾಗಬೇಕಿತ್ತಾದ ಕಾರಣ, ಅಣ್ಣತಂಗಿಯರಾಗಲೀ ಅಕ್ಕತಮ್ಮಂದಿರಾಗಲೀ ಮದುವೆಯಾಗಿ ರಾಜರಾಣಿಯಾಗುವ ಸಂದರ್ಭವಿತ್ತು. ಅದೇ ರೀತಿ ಹುಟ್ಟನಿಂದ ಅಕ್ಕತಮ್ಮಂದಿರಾದ ರಾಣಿ ಹಾಟ್‌ಷೇಪ್‌ಸಿಟೂ ಮತ್ತು ರಾಜ ಟೀಹುಟಿಮೀಸ್ ದಂಪತಿಗಳಾಗುತ್ತಾರೆ. ಆದರೆ ತಮ್ಮ ಇನ್ನೂ ಕಿರಿಯವನಾಗಿದ್ದಾಗಿನಿಂದಲೂ ಗಂಡಸಿನಂತೆ ರಾಜ್ಯಸೂತ್ರಗಳನ್ನು ಹಿಡಿದು ನಡೆಸಿಕೊಂಡು ಬಂದ ಅಕ್ಕ ಹಾಟ್‌ಷೇಪ್‌ಸಿಟೂ, ಉಡಿಗೆತೊಡಿಗೆಯಲ್ಲಿ ವ್ಯವಹಾರದಲ್ಲಿ ಗಂಡಾಗಿಯೇ ವರ್ತಿಸುತ್ತಾಳೆ. ಆದರೆ ಅಕ್ಕತಮ್ಮಂದಿರು ಮದುವೆಯಾಗಬೇಕಾದ ಕಾಲ ಬಂದಾಗ, ಅಕ್ಕ ಉಳಿದವರ ಭಾಗಕ್ಕೆ ಗಂಡಾಗಿ ವರ್ತಿಸಿದರೂ ಸಹ ತಮ್ಮನ ಭಾಗಕ್ಕೆ ಹೆಣ್ಣಾಗಿ—ಕೈಹಿಡಿದ ಹೆಂಡತಿಯಾಗಿ ವರ್ತಿಸಬೇಕಾಗುತ್ತದೆ. ಕಾಲಕ್ರಮೇಣ ಇವರಿಬ್ಬರಿಗೆ ಒಂದು ಹೆಣ್ಣು ಮಗುವಾಗುತ್ತದೆ. ಮತ್ತೆ ಮಕ್ಕಳಾಗುವುದಿಲ್ಲ. ಆಗ ಆ ಹೆಣ್ಣು ಮಗುವಿಗೆ ಗಂಡು ಸಿಕ್ಕುವ ಹಾಗಿಲ್ಲ; ಮದುವೆಯಾಗುವ ಹಾಗಿಲ್ಲ ಎಂಬ ಭಾವನೆ ರಾಜನಿಗೆ ಉಂಟಾಗುತ್ತದೆ. ಕೆಲವು ದಿನಗಳಲ್ಲಿಯೇ ರಾಜ ಮತ್ತೊಬ್ಬಳನ್ನು ಮದುವೆಯಾಗುತ್ತಾನೆ. ಬೇರೊಂದು ಮದುವೆಗೆ ಅನುಮತಿ ಕೇಳಿದಾಗ ಆಗಲಿ ಎಂದು ಮೌನತಾಳಿದ ಅಕ್ಕ, ಮದುವೆಗಾಗಲೀ ಕಿರಿಯ ರಾಣಿಗೆ ಗಂಡುಮಗು ಹುಟ್ಟಿದಾಗಲಾಗಲೀ ಬರುವುದಿಲ್ಲ. ಅಷ್ಟೇ ಅಲ್ಲ, ಅವರಾರೂ ತಾನಿರುವ ಕಡೆ ಸುಳಿಯಕೂಡದೆಂದು ಅಪ್ಪಣೆಮಾಡುತ್ತಾಳೆ.

ಕೆಲ ಕಾಲಾನಂತರ ಶತ್ರುಗಳನ್ನೆಲ್ಲ ಧ್ವಂಸಮಾಡಿ ನಗರಕ್ಕೆ ಹಿಂತಿರುಗಿದ ರಾಜ ಕಾಯಿಲೆ ಬೀಳುತ್ತಾನೆ. ಹೇಳಿಕಳಿಸಿದರೆ ಅಕ್ಕ, ರಾಣಿ ಬರುವುದಿಲ್ಲ. ತಮ್ಮನಿಗೆ ರೇಗುತ್ತದೆ. ಆದರೆ ಕಿರಿಯ ರಾಣಿ ಸಮಾಧಾನಪಡಿಸುತ್ತಾಳೆ. ಇದಕ್ಕೆ ಕಾರಣ ತನ್ನ ಹಾಗೂ ತನ್ನ ಮಗನ ಭವಿಷ್ಯವೇ! ಪಟ್ಟದ ರಾಣಿಗೆ ವಿರೋಧವಾಗಿ, ಒರಟಾಗಿ ನಡೆದುಕೊಂಡರೆ ಅವಳ ಮಗಳನ್ನು ತನ್ನ ಮಗನಿಗೆ ಎಲ್ಲಿ ಕೊಡುವುದಿಲ್ಲವೋ ಎಂಬ

ಭಯವೇ ಹಿರಿಯರಾಣಿಯ ಬಗ್ಗೆ ಗೌರವರೂಪವನ್ನು ತಾಳಿತ್ತೋ ಏನೋ! ಅಂತೂ ಕಡೆಗೊಮ್ಮೆ ಒತ್ತಾಯಕ್ಕೆ ಮಣಿದು ಅಕ್ಕ ತಮ್ಮನ ಕಾಯಿಲೆ ನೋಡಲು ಬಂದಾಗ, ತಮ್ಮನ ಹಾಗೂ ಕಿರಿಯ ರಾಣಿಯ ಗೌರವದ ಮಾತುಕತೆಯಿಂದ ನಡೆನುಡಿಯಿಂದ ತೃಪ್ತಿಗೊಂಡ ಹಾಟ್‌ಷೇಪ್‌ಸಿಟೂ ರಾಜನ ಇಚ್ಛೆಯಂತೆ ತನ್ನ ಮಗಳು ಹಾಗೂ ಕಿರಿಯ ರಾಣಿಯ ಮಗ ರಾಜದಂಪತಿಗಳಾಗಲು ಅನುಮತಿ ನೀಡುತ್ತಾಳೆ. "ಅನಂತರ ರಾಣಿ, ರಾಜನ ಅನುಮತಿ ಪಡೆದು, ಕಿರಿಯ ರಾಣಿಗೆ ಅರ್ಧಮಾತನ್ನು ಹೇಳಿ, ಹುಡುಗನ ತಲೆಯಮೇಲೆ ಕೈಯಿಟ್ಟು ಹರಕೆ ನುಡಿದು, ತನ್ನ ಭವನಕ್ಕೆ ನಡೆದಳು" ಎಂಬ ಒಂದು ವಾಕ್ಯದಲ್ಲೇ ಅವಳ ಆಂತರಿಕ ತುಮುಲ, ಯಾತನೆ ತಾನಾಗಿಯೇ ಅರಿವಾಗುತ್ತದೆ. "ರಾಣಿಗೆ ಅರ್ಧಮಾತನ್ನು ಹೇಳಿ" ಎಂಬುದು ಎಷ್ಟು ಅರ್ಥವನ್ನು ಬೇಕಾದರೂ ನೀಡಬಲ್ಲುದಾಗಿದೆ. ಹೀಗಿರುವಾಗ ಕತೆಗಾರರು ಕಥಾಭಾಗ ಆರರಲ್ಲಿ ಇದರ ವಿವರಣೆ ತಂದು ಸಂಕೀರ್ಣತೆಯನ್ನು ಸರಳಗೊಳಿಸಿ ಸಪ್ಪೆ ಮಾಡಿದ್ದಾರೆ ಎನ್ನಬೇಕು. ಆದರೂ, ತೀರ ಮೇಲಂತಿಸ್ತಿನಲ್ಲಿರುವವರಿಗೆ ನಿಜವಾದ ಸುಖ—ಹೆಣ್ಣು ಪಡೆಯುವಂಥದು—ಹೇಗೆ ಹತ್ತಿರ ಹೋದಂತೆಲ್ಲ ದೂರಸಾಗುವ ಬಾನಂಚಾಗುತ್ತದೆ ಎಂಬುದು ಹಾಟ್‌ಷೇಪ್‌ಸಿಟೂ ಪಾತ್ರದ ಮುಖೇನ ವ್ಯಕ್ತವಾಗುತ್ತದೆ.

'ಕೆಟ್ಟಕಾಲ' ಕತೆಯ ಬಗ್ಗೆ ಮುನ್ನುಡಿಯಲ್ಲಿ 'ಒಂದು ಜನತೆ ದಾರಿ ತಪ್ಪಿದರೆ ಎಂಥ ದುರವಸ್ಥೆಗೆ ಬರಬಹುದೆಂದು ತೋರಿಸುವ ಈ ಬರೆಹ ದಿಟದಲ್ಲಿ ಒಂದು ಉಪನ್ಯಾಸ; ಆ ಜೀವನವನ್ನು ಚಿತ್ರಿಸುವುದರಿಂದ ಕತೆ ಆಗಿದೆ' ಎಂದಿದ್ದಾರೆ ಕತೆಗಾರರು.

ರೋಂ ಚಕ್ರಾಧಿಪತ್ಯದ ಕಾಲದಲ್ಲಿ ಜನ ಹಣಕ್ಕಾಗಿ, ಅಧಿಕಾರಕ್ಕಾಗಿ, ಅಂತಸ್ತಿಗಾಗಿ ಏನೆಲ್ಲ ಕೆಟ್ಟ ಕೆಲಸಗಳನ್ನು ಮಾಡಲು ಹೇಸುತ್ತಿರಲಿಲ್ಲ; ಹಾಗೂ ನ್ಯಾಯ ಹೇಳುವ ಮಂದಿಯೇ ಹಣದಾಸೆಗಾಗಿ ಹೇಗೆ ನ್ಯಾಯಾಲಯಗಳಲ್ಲಿ ನ್ಯಾಯ ಲಯವನ್ನು ಮಾಡುತ್ತಿದ್ದರು ಎಂಬುದು ಈ ಕತೆಯಿಂದ ವ್ಯಕ್ತವಾಗುತ್ತದೆ.

ಈ ಕತೆಯ ಕೇಂದ್ರವ್ಯಕ್ತಿ ಓಪಿಯಾನಿಕಸ್ ಹಣದಾಸೆಗಾಗಿ ಹೆಂಡತಿಗೆ ವಿಷ ಕೊಟ್ಟು ಸಾಯಿಸಿ ಮತ್ತೊಬ್ಬಳನ್ನು ಮದುವೆಯಾಗಿದ್ದು; ಆಸಿನಿಯಸ್ ಎಂಬ ಶ್ರೀಮಂತನ ಆಸ್ತಿಯನ್ನು ಹೊಡೆದುಕೊಳ್ಳಲು ಸ್ನೇಹಿತನೊಬ್ಬನನ್ನು ಕಾಯಿಲೆ ಬೀಳಿಸಿ, ಆತನೇ ಆಸಿನಿಯಸ್ ಎಂದು ಸುಳ್ಳು ಸಾಕ್ಷಿಗಳನ್ನು ಹಾಕಿಸಿ, ಆಸ್ತಿಯೆಲ್ಲ ಅವನು ಸತ್ತಮೇಲೆ ತನಗೆ ಸಲ್ಲುವಂತೆ ಮರಣಶಾಸನವನ್ನು ಬರೆಸಿ, ಅನಂತರ ನಿಜವಾದ ಆಸಿನಿಯಸ್‌ನ ಕೊಲೆಮಾಡಿಸಿ ಆ ಆಸ್ತಿಗೆ ತಾನೇ ದಣಿಯಾಗುತ್ತಾನೆ. ಆಮೇಲೆ ತನ್ನ ತಮ್ಮನ ಹೆಂಡತಿಯಾದ ಮ್ಯಾಜಿಯಾಳನ್ನು ಕೆಡಿಸಿದ್ದೂ ಅಲ್ಲದೆ, ಅವಳ ಅಣ್ಣಂದಿರು ಅವಳ ಹೊಟ್ಟೆಯಲ್ಲಿ ಹುಟ್ಟುವ ಮಗುವಿಗೆ ಬರೆದಿದ್ದ ಆಸ್ತಿಯನ್ನು ಹೊಡೆದುಕೊಳ್ಳಲು ಕಂಟಕರಾಗಿದ್ದವರನ್ನೆಲ್ಲ ವಿಷಕೊಡಿಸಿ ಕೊಲ್ಲಿಸುತ್ತಾನೆ. ಈ ದೂರು ನ್ಯಾಯಾಲಯಕ್ಕೆ ಹೋದಾಗ, ಅರ್ಧ ಆಸ್ತಿಯನ್ನು ನ್ಯಾಯಾಧೀಶರಿಗೆ

ಕೊಟ್ಟು ಕೇಸು ಗೆಲ್ಲುತ್ತಾನೆ. ಅತ್ತೆಯೊಡನೆ ಗುಪ್ತಸಂಪರ್ಕ ಇಟ್ಟುಕೊಂಡು, ಕೊನೆಗೆ ಹೆಂಡತಿಯನ್ನು ಬಿಟ್ಟು, ಅತ್ತೆಯನ್ನೇ ರಾಜಾರೋಷ್ವಾಗಿ ಇಟ್ಟುಕೊಂಡಿದ್ದ ನೀತಿಹೀನ ಮೆಲೀನಸ್, ಓಪಿಯಾನಿಕಸ್‌ನ ವಿರುದ್ಧ ಮುಂಪಾಳಾಗಿ ನಿಂತಾಗ, ಓಪಿಯಾನಿಕಸ್ ರೋಂನಲ್ಲಿದ್ದ ಸರ್ವಾಧಿಕಾರಿ ಸಲ್ಲಾನಿಗೆ ಚಾಡಿ ಹೇಳಿ, ಅಪ್ಪಣೆ ಪಡೆದು, ಅವರೆಲ್ಲರನ್ನೂ ತಾನೇ ಕೊಲ್ಲುತ್ತಾನೆ.

ಬಳಿಕ ಮ್ಯಾಜಿಯಾಳನ್ನು ತೊರೆದು ಮೆಲೀನಸ್ ಇಟ್ಟುಕೊಂಡಿದ್ದ ಸಾಸಿಯಾಳನ್ನು ಹಣದಾಸೆಗಾಗಿ ಮದುವೆಯಾಗುತ್ತಾನೆ. ಆದರೆ ಅದಕ್ಕೂ ಮೊದಲು ಅವಳು ಹಾಕಿದ ಶರತ್ತನ್ನು—ಓಪಿಯಾನಿಕಸ್‌ನ ಮೊದಲನೆಯ ಮಗನನ್ನುಳಿದು ಇಬ್ಬರು ಮಕ್ಕಳನ್ನು ಕೊಂದರೆ ಮದುವೆಯಾಗುತ್ತೇನೆ ಎಂಬುದನ್ನು—ತನ್ನ ಕೈಯಾರವೇ ಪೂರ್ಣಮಾಡಿ ಮದುವೆಯಾಗುತ್ತಾನೆ!

ಇದರಿಂದ ರೊಚ್ಚಿಗೆದ್ದ ಜನರು ಶಾಸನಸಭಾ ಸದಸ್ಯನಿಗೆ ಖುದ್ದಾಗಿ ಅವನ ಅನ್ಯಾಯವನ್ನು ತೋರಿಸಿದಾಗ ಮತ್ತೊಮ್ಮೆ ಓಪಿಯಾನಿಕಸ್ ಕೋರ್ಟಿಗೆ ಬರಬೇಕಾಗುತ್ತದೆ. ಒಬ್ಬರಿದ್ದರೆ ಅನ್ಯಾಯವಾಗುತ್ತದೆಂದು ಮೂವತ್ತೆರಡು ಜನ ನ್ಯಾಯಾಧೀಶರಿರುವ ಸಭೆಯಲ್ಲಿ ಒಬ್ಬ ಇವನಿಂದ ಅಪಾರ ಹೊನ್ನುಪಡೆದು ಹದಿನೈದು ಜನ ನಿನ್ನ ಪರವಾಗುವಂತೆ ಮಾಡುತ್ತೇನೆನ್ನುತ್ತಾನೆ. ಆದರೆ ಅವರಿಗೆಲ್ಲ ಹಣ ಹಂಚಿದರೆ ತನಗೇನು ಉಳಿಯುವುದಿಲ್ಲವೆಂದು ತಿಳಿದು, ಯಾರಿಗೂ ಹಣ ಕೊಡದೆ, ಕೊನೆಗೆ ಓಪಿಯಾನಿಕಸ್‌ಗೆ ಶಿಕ್ಷೆಯಾಗುತ್ತದೆ.

ಕತೆಯ ಮುಂದಿನ ಭಾಗಗಳಲ್ಲಿ ಸಾಸಿಯಾ ತನಗೆ ವಿರುದ್ಧವಾಗಿ ನಿಂತ ಮಗ ಕ್ಲುಯೆಂಟಿಯಸ್ ಮೇಲೆ ಸೇಡು ತೀರಿಸಿಕೊಳ್ಳುವ ವಿಷಯ ಪ್ರಸ್ತಾಪಿಸಲ್ಪಟ್ಟಿದೆ. ಓಪಿಯಾನಿಕಸ್ ಸಾಯಲು ಕ್ಲುಯೆಂಟಿಯಸ್ಸೇ ಕಾರಣವೆಂದೂ, ಆಸ್ತಿಯ ಆಸೆಗಾಗಿ ಗೆಳೆಯನೊಬ್ಬನನ್ನು ತನ್ನ ಮಗ ಕೊಲೆಮಾಡಿದನೆಂದೂ ದೂರು ಕೊಡುತ್ತಾಳೆ. ಈ ಭಾಗ ಅನಗತ್ಯ. ಏಕೆಂದರೆ ಇಂಥ ಇನ್ನೂ ಅನೇಕ ಅನ್ಯಾಯ ಪರಂಪರೆಗಳನ್ನು ಚಿತ್ರಿಸಿಕೊಂಡು ಹೋಗಲು ಸಾಧ್ಯ. ಅದಕ್ಕೆ ಕೊನೆಯೆಲ್ಲಿ? ಆದರೆ ಸಾಸಿಯಾಳ ಸ್ವಭಾವ ಚಿತ್ರಣಕ್ಕಾಗಿ ಈ ಭಾಗ ಅಗತ್ಯ ಎಂದು ಹೇಳುವುದಾದರೆ, ಮಗಳ ಗಂಡನೊಡನೆಯೇ ಅಕ್ರಮ ಸಂಪರ್ಕ ಇಟ್ಟುಕೊಂಡು ಕೊನೆಗೆ ಮಗಳಿಂದ ತಪ್ಪಿಸಿ ಅಳಿಯನನ್ನು ತನ್ನವನನ್ನಾಗಿ ಮಾಡಿಕೊಂಡ ಸಾಸಿಯಾಳ ಸ್ವಭಾವ ಏನೆಂಬುದು ಮೊದಲೇ ಗೊತ್ತಾಗಿರುವುದರಿಂದ, ಈ ಪ್ರಕರಣದ ವಿಸ್ತರಣೆ ಅನಗತ್ಯ. ಅದೂ ಅಲ್ಲದೆ ಓಪಿಯಾನಿಕಸ್ ಪಾತ್ರದ ಮುಖಾಂತರ ಅಂದಿನ ಸಮಾಜದಲ್ಲಿ ಮೌಲ್ಯಗಳು ಹೇಗೆ ಸಮಾಧಿಯಾಗಿದ್ದುವು ಎಂಬುದರ ದಿಗ್ದರ್ಶನ ಮಾಡಿಸುವುದೇ ಕತೆಯ ಉದ್ದೇಶವಾಗಿರುವಾಗ, ಅಂತ್ಯದಲ್ಲಿ ಸಾಸಿಯಾಳನ್ನು ಕುರಿತ ಈ ಭಾಗ ಕಥೆಗೆ ಭಾರವಾಗುತ್ತದೆ.

'ನೇಷ್‌ಹುವಲ್ ಕೊಯೋಟಲ್' ಕತೆ, ದಕ್ಷಿಣ ಅಮೆರಿಕಾದ ತೇಷ್‌ಕೂಕೊ

ಜನತೆಯ ಶ್ರೇಷ್ಠ ಪ್ರಭುವಿನ ಬಾಳುವೆ ಎಷ್ಟು ಶುಚಿಯಾಗಿತ್ತು; ಸುಸಂಸ್ಕೃತವಾಗಿತ್ತು ಎಂಬುದನ್ನು ಚಿತ್ರಿಸುತ್ತದೆ. ಆದರೆ ಇದು ಕತೆಯು ಬಿಗಿ ಹಾಗೂ ವೇಗವನ್ನು ಪಡೆದುಕೊಳ್ಳದೆ, ಕೇವಲ ನೇಷ್‌ಹುವಲ್‌ಕೊಯೋಟಲ್‌ನ ಚಾರಿತ್ರಿಕ ಮಾಹಿತಿಯಂತಿದೆ. ಭಾಗ ಆರು ಮತ್ತು ಏಳರಲ್ಲಿ ಅವನ ಉನ್ನತ ಮನೋಧರ್ಮ ಅಥವಾ ಸದ್ಗುಣವನ್ನು ಚಿತ್ರಿಸಲು ನಾಲ್ಕು ಘಟನೆಗಳನ್ನು ವರದಿಮಾಡಿದ್ದಾರೆ ಕತೆಗಾರರು. ಸಣ್ಣಕತೆಯಲ್ಲಿ ಇಂತಹ ಒಂದು ಘಟನೆ, ಅಬ್ಬಬ್ಬ ಎಂದರೆ ಎರಡು ಘಟನೆಗಳ ಚಿತ್ರಣ ಸಾಕು. ಉಳಿದವು ಭಾರ ಎನ್ನಿಸುತ್ತವೆ. ಒಂದೇ ನಿದರ್ಶನ ಅವನ ಸದ್ಗುಣವನ್ನು ಚಿತ್ರಿಸುವಾಗ ಅಂತಹ ಹತ್ತಾರು ನಿದರ್ಶನ ಸಣ್ಣಕತೆಯಲ್ಲಿ ಅನಾವಶ್ಯಕ; ಕತೆಯ ಕಲಾತ್ಮಕತೆಗೆ ಅಡ್ಡಿ.

ಈ ಕತೆಯಲ್ಲಿ ನಾಟಕೀಯ ಅಂಶ, ಒಳಹೊರಗುಗಳ ತಿಕ್ಕಾಟ ಕೊಂಚವೂ ಇಲ್ಲದೆ, ಮೊದಲಿಂದ ಕೊನೆಯವರೆಗೂ ಕತೆಗಾರರ ನಿರೂಪಣಾ ಧಾಟಿಯಿಂದ ಕತೆ ಚಾರಿತ್ರಿಕ ವರದಿಯಂತೆ ಭಾಸವಾಗುತ್ತದೆ.

'ವಿಚಿತ್ರಪ್ರೇಮ' ಎಂಬುದು ತುಂಬ ಚೊಕ್ಕವಾದ ಹಾಗೂ ಪರಿಣಾಮಕಾರಿಯಾದ ಕತೆ. ಪ್ರಭುವಿ ಹಾಗೂ ಚಾಟ್‌ಲೈಟ್ ಪ್ರಭುವಿನ ಪಾತ್ರಗಳ ಅಸಾಧಾರಣ ವ್ಯಕ್ತಿತ್ವದ ಚಿತ್ರಣ ಕತೆಗೆ ಕಾಂತಿಯನ್ನು ನೀಡಿವೆ. ಒಂದು ಹೆಣ್ಣು; ಮೂರು ಗಂಡು—ಈ ನಡುವಿನ ವಿಚಿತ್ರಪ್ರೇಮವನ್ನು ಹೃದಯಸ್ಪರ್ಶಿಯಾಗಿ ಚಿತ್ರಿಸಲಾಗಿದೆ. ಪ್ರಭುವಿಗೆ ಚಾಟ್‌ಲೈಟ್ ದೊರೆಯಿಂದ ಐಶ್ವರ್ಯ ಅಂತಸ್ತು, ವಾಲ್ಟೇರ್ ಸಾಹಿತಿಯಿಂದ ಜಾಣನ ಒಲವು ಹಾಗೂ ಸೆಯಿಂಟ್ ಲ್ಯಾಂಬರ್ಟ್‌ನಿಂದ ರೂಪದ ಅನುಭವ ದೊರಕಿ, ಅವಳು ಸಂತೃಪ್ತಿಯಿಂದ ಜೀವಬಿಡುತ್ತಾಳೆ. ಕೊನೆಯಲ್ಲಿ ಅವಳ ಮಾತಿನ ಮುಖಾಂತರ ಚಾಟ್‌ಲೈಟ್ ದೊರೆಯ ವ್ಯಕ್ತಿತ್ವದ ದೊಡ್ಡತನ ಮೂಡಿ ಓದುಗರ ಮೆಚ್ಚುಗೆ ಗಳಿಸುತ್ತದೆ. ಕೆಲವು ಮಾತುಗಳು ಪ್ರೇಮಪ್ರಪಂಚದ ಸೂಕ್ತಿಗಳಂತೆ ರಂಜಿಸಿ ಕತೆಗೆ ಮೆರುಗನ್ನಿತ್ತಿವೆ. ಉದಾಹರಣೆಗೆ: "ಮಾನವ ಜಾತಿಯ ಸ್ತ್ರೀ ಮಾನವಿ, ನಾಯಿ ಜಾತಿಯ ಹೆಣ್ಣಲ್ಲ. ಅವಳ ಸಲುವಾಗಿ ಪುರುಷರು ನಾಯಿಗಳಂತೆ ಕಚ್ಚಾಡುವುದು ತರವಲ್ಲ" "ಒಲಿಯದ್ದು ನನಗೆ ಹೆಣ್ಣಲ್ಲ; ನಲಿಸದ್ದು ನಿನಗೆ ಗಂಡಲ್ಲ" ಇತ್ಯಾದಿ. ಅಂತೂ ಪಾತ್ರಗಳ ವಿಶಾಲಮನೋಧರ್ಮದ ಚಿತ್ರಣದಿಂದ ಕತೆ ತನ್ನಷ್ಟಕ್ಕೆ ತಾನೇ ಬೆಳಗಿ ಓದುಗರಲ್ಲಿ ವಿಸ್ಮಯಭಾವನೆಯನ್ನು ಉಂಟುಮಾಡುತ್ತದೆ.

'ನರ್ತಕಿಯ ಪರಾಭವ' ಎಂಬ ಕತೆಯ ವಸ್ತು, ವಿಲಾಸವಂತ ನರ್ತಕಿ ಮತ್ತು ಸ್ವೈರಪ್ರೇಮದ ಪ್ರವರ್ತಕಿ ಇಸಡೋರಾ ಮಾಸ್ಕೊ ನಗರಕ್ಕೆ ನರ್ತನ ಕಾರ್ಯಕ್ರಮಕ್ಕೆ ಬಂದಿದ್ದಾಗ, ಎಲ್ಲ ಕಡೆಯಂತೆ—ತಾನು ಇಚ್ಛಿಸಿದ ಗಂಡಿನೊಡನೆ ಸುಖಪಟ್ಟು, ಸಾಕಾದಾಗ ನಿರಾಕರಿಸಿ ಬೇರೊಬ್ಬರೊಡನೆ ಸುಖಿಸುವಂತೆ—ನಟ ಸ್ಟೇನಿಸ್‌ಲಾವ್‌ಸ್ಕಿಯನ್ನು ಇಚ್ಛಿಸಿ, ಕೊನೆಗೆ ಅವನ ಆಧುನಿಕ ವಿಚಾರಸರಣಿಯಿಂದ

ಪರಾಜಿತಳಾಗುವುದೇ ಆಗಿದೆ. ಫ್ರೆಂಚ್ ಲೇಖಕಿ ಜಾರ್ಜ್‌ಸಾನಳ ಮನೋಧರ್ಮವನ್ನು ಮೆಚ್ಚಿ ಅದಕ್ಕನುಗುಣವಾಗಿ ನಡೆದುಕೊಳ್ಳುತ್ತಿದ್ದ ಇಸಡೋರಳಿಗೆ ನಟ ಸ್ಟೇನಿಸ್ ಲಾವ್‌ಸ್ಕಿ ವಾಸ್ತವತೆಯ ಅಥವಾ ನಿಜದ ಹೊಸ ಗವಾಕ್ಷವನ್ನು ತೆರೆದುತೋರಿಸಿ, ಅವಳ ಕರೆಯನ್ನು ನಿರಾಕರಿಸುತ್ತಾನೆ. ಯಾವ ಗಂಡಿನಿಂದಲೂ ಪರಾಜಿತಳಾಗದಿದ್ದ ಇಸಡೋರಾ ಇದರಿಂದ ಬೇಸತ್ತು, ಅಂದು ಹುಚ್ಚಳಂತೆ ವರ್ತಿಸುತ್ತಾಳೆ; ಬಳಿಕ ಸಂಭಾಳಿಸಿಕೊಳ್ಳುತ್ತಾಳೆ. ಇದು ಅರ್ಜುನ–ಉರ್ವಶೀ ಪ್ರಸಂಗವನ್ನು ನೆನಪಿಗೆ ತರುತ್ತದೆ. ಆದರೆ ಪರಿಣಾಮೋದ್ದೇಶಗಳಲ್ಲಿ ಅಂತರವಿದೆ. ನಾಯಕಿ ಮತ್ತು ನಟನಿಗೆ ನಡೆಯುವ ಸಂವಾದದಲ್ಲಿ ವೈಚಾರಿಕತೆಯ ಹೊಳಪಿದೆ.

'ನಾಲ್ಕನೆಯ ಅಧ್ಯಾಯ' ಎಂಬ ಕತೆಯ ವಸ್ತು, ನಿರಂಜನ, ವಾಣಿ, ಕಸ್ತೂರಿ ಇವರು ಹೇಳಿದ ಕತೆಗಳ ಕೊನೆಯ ಅಧ್ಯಾಯವೆಂದು ಲೇಖಕರು ಹೇಳಿಕೊಂಡಿದ್ದಾರೆ. ಈ ಕಥೆಯ ಬಂಧದಲ್ಲಿ ಬಿಗಿ ಇಲ್ಲ. ಸಿನಿಮೀಯ ಸನ್ನಿವೇಶಗಳು ಕಂಡು ಬರುತ್ತವೆ. ಮಾಗಿದ ಹೃದಯದ ಕತೆಗಾರ ತನ್ನ ವೈಚಾರಿಕ ಶಕ್ತಿಯನ್ನು ಅಳವಡಿಸಿಕೊಂಡು ಕೊಡುವ ಗಟ್ಟಿಮುಟ್ಟಾದ ಬೆನ್ನೆಲುಬುಳ್ಳ ಕತೆಯಲ್ಲ; ಕಥಾಕ್ಷೇತ್ರಕ್ಕೆ ಕಾಲಿಡುವವನು ಸೃಷ್ಟಿಸುವ ಎಳಸು ಕತೆಯಂತಿದೆ.

'ಹೆಸರು ಸಾಯುವುದಿಲ್ಲ' ಎಂಬುದು ಗ್ರೀಕ್‌ರೋಮನ್ ಮಹಾಪುರುಷರ ಜೀವನಚರಿತೆಗಳ ಲೇಖಕನಾದ ಪ್ಲೂಟಾರ್ಕನ ಸುತ್ತ ಹೆಣೆದ ಕತೆ. ಬೋಯೀಷಿಯಾ ಪ್ರಾಂತದಲ್ಲಿ ಹುಟ್ಟಿದ ಪ್ಲೂಟಾರ್ಕ್ ಏಥೆನ್ಸ್ ನಗರದಲ್ಲಿದ್ದ ತತ್ವಜ್ಞಾನಿ ಅಮ್ಮೋನಿಯಸ್ ಬಳಿ ವ್ಯಾಸಂಗಕ್ಕೆ ಬರುತ್ತಾನೆ. ಅಲ್ಲಿ ಶ್ರೀಮಂತ ಥೆಮಿಸ್ಟಾಕ್ಲೀಸನನ್ನು ನೋಡಿ ಅವನ ವಂಶಸ್ಥನಾದ ಇತಿಹಾಸದ ಮಹಾಪುರುಷ ಥೆಮಿಸ್ಟಾಕ್ಲೀಸನ ಅನ್ಯಾಯ ಅತ್ಯಾಚಾರಗಳನ್ನು ಸ್ಮರಿಸಿಕೊಳ್ಳುತ್ತಾನೆ; ಹಾಗೂ ತಿಳಿದುಕೊಳ್ಳುತ್ತಾನೆ. ಹಾಗೆಯೇ ಇನ್ನೊಬ್ಬ ನಿಷ್ಠಾವಂತ ಇತಿಹಾಸ ಮಹಾಪುರುಷ ಅರಿಸ್ಟೈಡೀಸ್ ಎಂಬುವನ ಕತೆಯೂ ನೆನಪಾಗುತ್ತದೆ. ಅವರಿಬ್ಬರ ಮನೆತನದವರಿಂದ ಆದಷ್ಟು ವಿಷಯಗಳನ್ನು ಸಂಗ್ರಹಿಸಿ, ತನ್ನ ಗುರುವಿನ ಮುಂದೆ ಹೇಳುತ್ತಾನೆ. ಶಿಷ್ಯನ ಈ ಕುತೂಹಲಾಸಕ್ತಿಯನ್ನು ಕಂಡು, ಗುರು ಆತನಿಗೆ ಗ್ರೀಕ್‌ರೋಮನ್ ಮಹಾಪುರುಷರ ಜೀವನಚರಿತ್ರೆಯನ್ನು ಬರೆಯುವಂತೆ ಪ್ರೇರೇಪಿಸುತ್ತಾನೆ. "ಕೆಟ್ಟವರ ಹೆಸರೂ ಉಳಿಯುತ್ತದೆ; ಒಳ್ಳೆಯವರ ಹೆಸರೂ ಉಳಿಯುತ್ತದೆ. ಒಂದು ಎಚ್ಚರಿಕೆ ನೀಡುತ್ತದೆ. ಮತ್ತೊಂದು ದಾರಿದೀಪವಾಗುತ್ತದೆ. ಆದ್ದರಿಂದ ತತ್ವಶಾಸ್ತ್ರದ ಗುರಿಯೂ ಒಂದೇ; ಎಲ್ಲ ಸಾಹಿತ್ಯದ ಬರವಣಿಗೆಗಳ ಗುರಿಯೂ ಒಂದೆ" ಎಂಬ ಗುರುವಿನ ಮಾತಿನ ಮುಖಾಂತರ ತತ್ವಶಾಸ್ತ್ರ ಸಾಹಿತ್ಯಗಳ ಉದ್ದೇಶ ವ್ಯಕ್ತವಾಗುತ್ತದೆ. ಆದರೂ ಇದು ಕತೆಗಿಂತ ಒಂದು ಘಟನೆಯ ವರದಿಯಂತೆ ಕಂಡುಬರುತ್ತದೆ.

'ಧರ್ಮಕಿಂಕರ ಫಿಟ್ಸ್ ಸ್ಟೀಫನ್' ಎಂಬುದು ಹೆಸರೇ ಸೂಚಿಸುವಂತೆ ಫಿಟ್ಸ್‌ಸ್ಟೀಫನ್ ಎಂಬ ನ್ಯಾಯಾಧೀಶ ಅಥವಾ ನಗರಾಧ್ಯಕ್ಷ 'ಧರ್ಮ ನಡೆಯಬೇಕು'

ಎಂದು ('ಜನ ಬದುಕಬೇಕು' ಎಂದು ರಾಘವಾಂಕ ಹರಿಶ್ಚಂದ್ರ ಕಾವ್ಯವನ್ನು ಬರೆದಂತೆ) ತಪ್ಪುಮಾಡಿದ ತನ್ನ ಮಗನನ್ನು ತಾನೇ ವಿಚಾರಣೆಗೆ ಗುರಿಮಾಡಿ, ಮರಣದಂಡನೆ ವಿಧಿಸಿ, ಯಾರೂ ಒಪ್ಪದಿದ್ದಾಗ ತಾನೇ ಅವನನ್ನು ಗಲ್ಲಿಗೇರಿಸಿದ ಸಂಗತಿಯನ್ನು ಕುರಿತದ್ದು ಈ ಕತೆ.

ತಪ್ಪುಮಾಡಿದ ತನ್ನ ಮಗನನ್ನು ತನ್ನ ಕೈಯಾರವೇ ಗಲ್ಲಿಗೇರಿಸಿದ ಫಿಟ್ಸ್‌ಸ್ಟೀಫನ್‌ನನ್ನು ಕುರಿತು ಮಿತ್ರರೊಬ್ಬರು "ನಿನ್ನಿಂದ ಇಂಥ ಕೆಲಸವನ್ನು ಈ ಊರಿನ ಜನ ಮಾಡಿಸಬಾರದಿತ್ತು" ಎಂದಾಗ, ಆತ ಹೇಳಿದ ಉತ್ತರ ಸರ್ವಕಾಲ ಸರ್ವಜನ ಸ್ಮರಣೀಯ : "ನಾನು ಮಾಡಿದೆ, ನನ್ನ ಮಗ, ಎನ್ನುವುದು ತಪ್ಪು. ಒಬ್ಬ ಮನುಷ್ಯ ಈ ತಪ್ಪುಮಾಡಿದ, ಒಬ್ಬ ಶಿಕ್ಷೆ ವಿಧಿಸಬೇಕಾಗಿತ್ತು ವಿಧಿಸಿದ, ಒಬ್ಬ ಇದನ್ನು ನಡೆಸಬೇಕಾಗಿತ್ತು ನಡೆಸಿದ. ಇಷ್ಟೇ ಪ್ರಕೃತ. ಧರ್ಮ ನಡೆಯಬೇಕು. ನನ್ನ ಕೈಯಿಂದ ನಡೆದರೆ ತಪ್ಪು, ಇನ್ನೊಬ್ಬನ ಕೈಯಿಂದ ನಡೆದರೆ ಸರಿಯೆ?" ಈ ಮಾತುಗಳು ಆ ಪಾತ್ರವನ್ನು ಮೇಲ್ಮಟ್ಟಕ್ಕೆ ಕೊಂಡೊಯ್ಯುತ್ತವೆ. ಮರೆಯಲಾಗದ ಪಾತ್ರವನ್ನಾಗಿ ಮಾಡುತ್ತವೆ.

ರಾಯರು ಇಂಗ್ಲೆಂಡಿಗೆ ಹೋಗಿದ್ದಾಗ ಐರ್ಲೆಂಡ್ ದೇಶದಲ್ಲಿ ಹುಟ್ಟಿದ ಪ್ರಖ್ಯಾತ ಪ್ರಬಂಧ ಲೇಖಕ ಲಿಂಡ್‌ನ ಪರಿಚಯವಾಗಿ, ಅವನ ಮೂಲಕ ಕಾವ್ಯದಲ್ಲಿ ಕಂಡು ಬರುವ ಆದರ್ಶ, ನ್ಯಾಯ ಹೇಗೆ ಅನುಷ್ಠಾನದಲ್ಲಿ ತೋರಿಸಿದ ವ್ಯಕ್ತಿಯೊಬ್ಬ ಐರ್ಲೆಂಡಿನಲ್ಲಿ ಬದುಕಿದ್ದ—ಎಂಬುದನ್ನು ಆ ಪ್ರಬಂಧಕಾರನ ಬಾಯಿಂದ ಕೇಳುವ ಸಾಂಪ್ರದಾಯಿಕ ತಂತ್ರದೊಡನೆ ಕತೆ ಆರಂಭವಾಗಿದ್ದರೂ, ಪಾತ್ರದ ಉದಾತ್ತತೆ ಮತ್ತು ನಿಷ್ಠುರ ನಿಯಮಪಾಲನೆ ಕತೆಗೆ ಮೆರಗನ್ನಿತ್ತು, ಸಹೃದಯರ ಹೃದಯವನ್ನು ತಟ್ಟುತ್ತದೆ.

'ಇರುವೆಗಳ ಲೋಕ' ಎಂಬ ಕತೆಯ ವಸ್ತು ಕೇಕಯ ರಾಜ ಅಶ್ವಪತಿ, ಕೈಕೇಯಿ ಮತ್ತು ದಶರಥ ಇವರ ವಿವಾಹವಾದ ಸಂದರ್ಭದಲ್ಲಿ, ಜಾಬಾಲಿಮಹರ್ಷಿಗಳ ಕೋರಿಕೆಯಂತೆ ಇರುವೆಗಳ ಲೋಕದ ಕತೆಯನ್ನೂ ವಿವರಿಸುವುದೇ ಆಗಿದೆ. ಹೇಗೆ ಅವು ಸ್ನೇಹಭಾವದಿಂದ ಇರುತ್ತವೆ; ಅವಿಭಕ್ತ ಕುಟುಂಬದ ಸಜ್ಜನರಂತೆ ವರ್ತಿಸುತ್ತವೆ; ಎಲ್ಲರೂ ದುಡಿಯುವುದು ಎಲ್ಲರಿಗಾಗಿ ಎಂಬ ಸರ್ವೋದಯ ಮಂತ್ರ ಹೇಗೆ ಅಲ್ಲಿ ದಿನಚರಿಯಾಗಿದೆ– ಎಂಬುದನ್ನೆಲ್ಲ ವಿವರಿಸಿದ ಅಶ್ವಪತಿ ಇರುವೆಗಳ ಮತ್ತೊಂದು ಮುಖವಾದ ದ್ವೇಷಾಸೂಯೆಯನ್ನು ಚಿತ್ರಿಸುತ್ತಾನೆ. ಕಿರಿರಾಣಿ ಇರುವೆ ಹಿರಿರಾಣಿ ಇರುವೆಯನ್ನು ಕೊಂದು ಹೇಗೆ ತನ್ನ ಸಂತಾನಾಭಿವೃದ್ಧಿಯನ್ನು ಮಾಡಿಕೊಳ್ಳುತ್ತದೆ ಎಂಬುದನ್ನು ಹೇಳುತ್ತಿರುವಾಗ ದಶರಥನ ಮುಖ ಕಪ್ಪಿಡುತ್ತದೆ. ಈ ಇರುವೆಗಳ ಲೋಕದ ಕತೆ ಮಾನವಲೋಕದ ಮೇಲೆ ಬೆಳಕನ್ನು ಚೆಲ್ಲುತ್ತಿರುವಾಗ (ಕಿರಿಯರಾಣಿ ಕೈಕೇಯಿ ಏನು ಮಾಡಿದಳು ಎಂಬುದು ಓದುಗರಿಗೆ ಅರ್ಥವಾಗುತ್ತಿರುವಾಗ) ಕತೆಗಾರರು ಕೊನೆಯಲ್ಲಿ ವಸಿಷ್ಠನ ಬಾಯಿಂದ "ಮಾನವಲೋಕ ಇರುವೆಗಳ ಲೋಕ ಬೇರೆ ಅಲ್ಲ" ಎಂದು ಆಡಿಸಿರುವುದು ಕತೆಯನ್ನು ಅತಿವಾಚ್ಯಕ್ಕೆಳೆದು ತರುತ್ತದೆ. ಆ ಮಾತಿಲ್ಲದೆಯೇ ಭಾವ

ಸೂಚಿತವಾಗುವಾಗ ಆ ರೀತಿಯ ಮಾತನ್ನು ಸೇರಿಸಿ ಸಪ್ಪೆ ಮಾಡುವುದೇಕೋ ಅರ್ಥವಾಗುವುದಿಲ್ಲ.

'ದಾಂಪತ್ಯದ ಹೊಸ ಪರಿ' ಎಂಬ ಕತೆಯ ಉದ್ದೇಶ, ರಮಣಮಹರ್ಷಿಗಳ ಅರುಣಾಚಲ ಆಶ್ರಮಕ್ಕೆ ಬಂದಿದ್ದ ಆಂಗ್ಲಲೇಖಕ ಸಾಮರ್‌ಸೆಟ್ ಮಾಮ್ ಅವರು ಅಲ್ಲಿನ ದಾಂಪತ್ಯಪದ್ಧತಿಯನ್ನು ಕುರಿತು ಹೇಳಿದ ಒಂದು ಸಂಗತಿಯ ಮುಖೇನ ಭಾರತೀಯ ದಾಂಪತ್ಯ ಮನೋಧರ್ಮಕ್ಕೂ ಪಾಶ್ಚಾತ್ಯ ದಾಂಪತ್ಯ ಮನೋಧರ್ಮಕ್ಕೂ ಇರುವ ಅಂತರವನ್ನು, ಸಾಧಕಬಾಧಕಗಳನ್ನು ಸ್ಪಷ್ಟಪಡಿಸುವುದೇ ಆಗಿದೆ. ಹೆಂಡತಿ ಗಂಡನ ಗುಲಾಮಳು ಎಂಬಂತೆ ನಡೆಸಿಕೊಂಡ ಹಿಂದಿನವರ ವರ್ತನೆಗೆ ಹೇಸಿ, ಗಂಡ ಹೆಂಡತಿ ಸರಿಸಮಾನರು, ಸ್ವತಂತ್ರರು, ಇಚ್ಛೆ ಇಲ್ಲದಿದ್ದಾಗ ವಿಚ್ಛೇದನ ಮಾಡಿಕೊಳ್ಳಲು ಅವಕಾಶವಿರಬೇಕು—ಎಂಬ ಆಧುನಿಕ ಸುಧಾರಣಾ ಮನೋಭಾವದಿಂದ ಏನೆಲ್ಲ ನೋವನ್ನು ಸಹಿಸಬೇಕು ಎಂಬುದನ್ನು ಸಾಮರ್‌ಸೆಟ್ ತಮ್ಮ ಗೆಳೆಯನ ಜೀವನಸಂಗತಿಯ ಮುಖಾಂತರ ವಿವರಿಸುತ್ತಾರೆ. ಕತೆಯ ಕೊನೆಯಲ್ಲಿ ಬರುವ "ಪತಿ ಮುಖ್ಯ ಎಂಬ ಸಮಾಜದಲ್ಲಿ ಪತ್ನಿ ಸಹಿಸಿಕೊಳ್ಳುತ್ತಾಳೆ, ಪತ್ನಿ ಮುಖ್ಯ ಎಂಬಲ್ಲಿ ಪತಿ ಸಹಿಸಿಕೊಳ್ಳುತ್ತಾನೆ; ಎರಡಕ್ಕೂ ಮನಸ್ಸು ಕಾರಣ" ಎಂಬ ಮಾತುಗಳು ಸಮತೂಕದಿಂದ ಕೂಡಿ ಬೆತ್ತಲೆ ದಿಟವನ್ನು ಬಯಲುಮಾಡುತ್ತವೆ. ಯಾವುದೋ ಒಂದು ತಪ್ಪು ಕಂಡು ಸುಧಾರಣೆ ಮಾಡಿದಾಗ, ಆ ಸುಧಾರಣೆಯಲ್ಲೂ ಮತ್ತಾವುದೋ ಒಂದು ತಪ್ಪು ತಲೆ ಹಾಕಿ ತೆವೆದಾಡಲಾರಂಭಿಸುತ್ತದೆ ಎಂಬುದು ಕತೆಯಲ್ಲಿ ಸೂಚಿತವಾಗುತ್ತದೆ. ಧರ್ಮಕಿಂಕರ ಫಿಟ್ಸ್‌ಸ್ಟೀಫನ್ ಕತೆ ಮತ್ತು ಈ ಕತೆಯ ತಂತ್ರಗಳೆರಡೂ ಒಂದೇ. ಆದರೆ ಕತೆಗಾರರ ಜೀವನದ ನಿಚ್ಚಳನೋಟ ಎರಡು ಕತೆಗಳಲ್ಲೂ ಹೆಚ್ಚಳವನ್ನುಂಟುಮಾಡಿವೆ.

ವ್ಹಿಟ್‌ಸನ್ ಎಂಬ ಆಂಗ್ಲೊಇಂಡಿಯನ್ ತಾಯಿಯ ಧೀರೋದಾತ್ತ ವ್ಯಕ್ತಿತ್ವವನ್ನು ಮನಗಾಣಿಸುವುದೇ 'ಚಟ್ಟೀಕಾರ ತಾಯಿ' ಕತೆಯ ಉದ್ದೇಶ. ಕತೆಗಾರರು ರೈಲಿನಲ್ಲಿ ಹುಬ್ಬಳ್ಳಿಯಿಂದ ಬೆಂಗಳೂರಿಗೆ ಬರುವಾಗ, ಅದೇ ಬೋಗಿಯಲ್ಲಿದ್ದ ವ್ಯಕ್ತಿಯ ನಯವಾದ ಮಾತುಕತೆಯಿಂದ ಆಕರ್ಷಿತರಾಗಿ, ಕೊನೆಗೆ ಆತನ ಬಾಯಿಂದಲೇ ತಾಯಿಯ ಸ್ವಭಾವದ ಗುಣಗಾನ ಕೇಳಿ, ಅದು ಮಕ್ಕಳಲ್ಲಿ ಹೇಗೆ ಮೂರ್ತಿಗೊಂಡಿದೆ ಎಂಬುದನ್ನು ಅರಿತುಕೊಂಡು, ಅದನ್ನೇ ಈ ಕತೆಯಲ್ಲಿ ಧ್ವನಿಸಿದ್ದಾರೆ.

ಮಕ್ಕಳು ಮುಷ್ಕರ ಹೂಡಲು ಯತ್ನಿಸಿದಾಗ, ಅವರ ಮೇಲಧಿಕಾರಿಯೊಡನೆ ಆಕೆ ನಡೆಸಿದ ಮಾತುಕತೆ, ಕುಡುಕ ಗಂಡ ಮನೆಯ ಖರ್ಚುವೆಚ್ಚಕ್ಕೆ ಹಣ ಕೊಡದಿದ್ದಾಗ ತೋರಿಸಿದ ದಿಟ್ಟತನ, ಎರಡನೆಯ ಮಗನನ್ನು ಅನಾಥಾಶ್ರಮದಲ್ಲಿ ಇರಿಸಲು ಹೋದಾಗ ಅನಾಥಾಶ್ರಮದ ಒಡೆಯನಿಗೆ ಕೊಟ್ಟ ಉತ್ತರ ಮತ್ತು ಹಿರಿಯ ಮಗ ಹೆಂಡತಿಯ ಪಕ್ಷ ವಹಿಸಿ ತಾಯಿಯ ಎದುರಾಗಿ ನಿಂತಾಗ ಆಕೆ ವರ್ತಿಸಿದ ರೀತಿ—ಈ ಎಲ್ಲ ಸಂಗತಿಗಳ ಮುಖೇನ, ಆ ಚಟ್ಟೀಕಾರ ತಾಯಿಯ ವ್ಯಕ್ತಿತ್ವ ಓದುಗನ ಮುಂದೆ ಕಣ್ಕಟ್ಟಿದಂತೆ ನಿಲ್ಲುತ್ತದೆ.

ಸಾಮಾನ್ಯವಾಗಿ ಚಟ್ಟೀಕಾರರು ಎಂದರೆ ಕೀಳುಜನ, ನೀತಿನೇಮವಿಲ್ಲದವರು ಎಂಬ ಭಾವನೆ ಇರುವಾಗ, ಅಂಥವರಲ್ಲೂ ಎಂಥ ಒಳ್ಳೆಯ ಜನರಿದ್ದಾರೆ ಎಂಬುದನ್ನು ಕತೆಗಾರರು ತೋರಿಸಲು ಯತ್ನಿಸಿದ್ದಾರೆ. ಅಷ್ಟೇ ಅಲ್ಲದೆ ಆ ಒಳ್ಳೆಯತನಕ್ಕೆ ತಾಯಿ ಹೇಗೆ ಕಾರಣ ಎಂಬುದೂ ವ್ಯಕ್ತವಾಗುತ್ತದೆ. ವಸ್ತುವಿನ ನಾವೀನ್ಯತೆ, ನಿರುದ್ವೇಗ ಶೈಲಿ, ಸಮತೂಕದ ನೋಟ—ಎಲ್ಲಾ ಮೇಳವಿಸಿಕೊಂಡು ಕತೆಯ ವಿಶಿಷ್ಟತೆಗೆ ಕಾರಣ ವಾಗಿವೆ.

"ಆ್ಯನ್‌ಷೇಕ್ಸ್‌ಪಿಯರ್" ಎಂಬ ಕತೆಯ ಉದ್ದೇಶ ಷೇಕ್ಸ್‌ಪಿಯರ್ ಪತ್ನಿಯ ಉದಾತ್ತತೆಯನ್ನು ಚಿತ್ರಿಸುವುದೇ ಆಗಿದೆ. ತನ್ನ ಗಂಡ ತಾನು ಗಳಿಸಿದ ಆಸ್ತಿಪಾಸ್ತಿ ಯನ್ನೆಲ್ಲ ತನ್ನ ಕೊನೆಗಾಲದಲ್ಲಿ ಮಕ್ಕಳು, ಒಡಹುಟ್ಟಿದವರು, ಬಂಧುಬಳಗಕ್ಕೆ ವಿಲೇವಾರಿ ಮಾಡುವ ಉಯಿಲನ್ನು ಸಿದ್ಧಪಡಿಸುವಾಗ, ಆ್ಯನ್‌ಷೇಕ್ಸ್‌ಪಿಯರ್ ತನಗೆ ಹಳೆಯ ಹಾಸಿಗೆ ಮತ್ತು ಅದಕ್ಕೆ ಸಂಬಂಧಪಟ್ಟ ವಸ್ತುಗಳು ಕೊನೆಯವರೆಗೂ ಇರಬೇಕೆಂದು ಒತ್ತಾಯಮಾಡಿ ಆ ಶಾಸನದಲ್ಲಿ ಬರೆಸುತ್ತಾಳೆ. ಹಳೆಯದು ಏಕೆ ಹೊಸದು ತೆಗೆದುಕೊ ಎಂದು ಅಳಿಯ, ಮಗಳು ಮತ್ತು ಗಂಡ—ಯಾರು ಹೇಳಿದರೂ ಕೇಳದೆ, ಗಂಡನ ಕೈಯಲ್ಲಿ ಆ ವಿಷಯವನ್ನು ಶಾಸನಕ್ಕೆ ಸೇರಿಸುತ್ತಾಳೆ. ಷೇಕ್ಸ್‌ಪಿಯರ್ ಸತ್ತಮೇಲೆ, ಎಲ್ಲರಿಗೂ ಆಸ್ತಿಯನ್ನು ಮಾಡಿದ್ದರೂ ತನ್ನ ಹೆಂಡತಿಗೆ ಹಳೆಯ ಹಾಸಿಗೆಯನ್ನುಳಿದು ಏನನ್ನೂ ಮಾಡಿಲ್ಲ; ದ್ರೋಹಿ ಎಂದು ಜನ ಅವನನ್ನು ತೆಗಳಿದರು. ಮಗಳು ಸೂಸ್ಯಾನ ತಾಯಿಯ ಹಟದಿಂದ ಅಪ್ಪನಿಗೆ ಅಪಖ್ಯಾತಿ ಬಂದಿತು ಎಂದು ನೊಂದುಕೊಳ್ಳುತ್ತಾಳೆ. ಆದರೆ ಆ್ಯನ್‌ಷೇಕ್ಸ್‌ಪಿಯರ್ ಸಾಯುುವ ಮೊದಲು ತನ್ನ ಮಗಳು ಸೂಸ್ಯಾನಾಳಿಗೆ, ತನಗೆ ಹಳೆಯ ಹಾಸಿಗೆಯೇ ಬೇಕು; ಗಂಡನ ಹೊಸ ಹಾಸಿಗೆ ಬೇಡ ಎಂದು ಏಕೆ ಹಟ ಹಿಡಿದೆ ಎಂಬುದಕ್ಕೆ ಕಾರಣ ಹೇಳುತ್ತಾಳೆ. ಒಂದು ದಿನ ಬೆಳಗಿನ ಜಾವ ಆಕೆ ಎದ್ದು ಷೇಕ್ಸ್‌ಪಿಯರ್ ಮಲಗಿದ್ದ ಕೊಠಡಿಗೆ ಬಂದಾಗ, ಆ ಹೊಸ ಹಾಸಿಗೆಯ ಮೇಲೆ ನಾಟಕ ಕಂಪೆನಿಯ ಹೆಂಗಸೊಬ್ಬಳು ತನ್ನ ಗಂಡನ ಜೊತೆ ಮಲಗಿರುವುದನ್ನು ನೋಡಿ ನೋವಾಗಿ ಹಿಂದಿರುಗುತ್ತಾಳೆ. "ಹೆಂಡತಿ ಬೇರೆ ಗಂಡನನ್ನು ಮುಟ್ಟಬಾರದು ಅನ್ನೋ ಹಾಗೆ ಗಂಡ ಬೇರೆ ಹೆಣ್ಣನ್ನು ಮುಟ್ಟಬಾರದು ಅಂತ ನಾ ಅನ್ನೋಲ್ಲ ಕಾಣಮ್ಮ. ಆದರೆ ನನ್ನ ಮನೇಲೇ, ಹೀಗೆ ಒಬ್ಬ ಹೆಂಗಸು ನನ್ನ ಗಂಡನ ಹಾಸಿಗೇಲಿ ಬಂದು ಮಲಗಿದ್ದು ನನಗೆ ಸಹಿಸಲಿಲ್ಲ ತಾಯಿ. ನನಗೆ ಆ ಹಾಸಿಗೆ ನೆನೆದರೆ ಮನಸ್ಸಿಗೆ ಹೇಸಿಗೆ ಆಯಿತು. ಆ ಹೊತ್ತು ಅಂದ್ಕೊಂಡೆ, ಅದನ್ನು ಮುಟ್ಟೋದಿಲ್ಲ ಅಂತ, ಅಂದುಕೊಂಡದ್ದನ್ನು ನಡೆಸಿದೆ" ಎಂದು ಮಗಳಿಗೆ ಹೇಳುವ ಮಾತುಗಳಿಂದ ಅವಳ ಉದಾತ್ತ ಹೃದಯದ ಅರಿವಾಗುತ್ತದೆ; ಓದುಗರಿಗೆ ಕೂಡಲೇ ಆ ಪಾತ್ರದ ಬಗ್ಗೆ ಮೆಚ್ಚುಗೆ ಮೂಡುತ್ತದೆ. ಏಕೆಂದರೆ ಗಂಡನ ಈ ತಪ್ಪನ್ನು ಆಕೆ ಎಂದೂ ಪ್ರಸ್ತಾಪಮಾಡಿದ್ದೇ ಇಲ್ಲ. ಜೊತೆಗೆ ಗಂಡನ ದೊಡ್ಡತನವನ್ನೇ ಬಾಯಿತುಂಬ ಹೊಗಳುತ್ತಾಳೆ. ಹೀಗೆ ಈ ಕತೆ ಪ್ರಾರಂಭದಲ್ಲಿ ಕುತೂಹಲವನ್ನು

ಕೆರಳಿಸಿ, ಅಂತ್ಯದಲ್ಲಿ ಪಾತ್ರದ ಉದಾತ್ತತೆಯನ್ನು ಹೃದಯಂಗಮವಾಗಿ ಚಿತ್ರಿಸುವುದರಿಂದ ಪಾತ್ರಪ್ರಧಾನ ಕತೆಯಾಗಿ ಯಶಸ್ವಿಯಾಗಿದೆ.

'ಟಾಲ್‌ಸ್ಟಾಯ್ ಮಹರ್ಷಿಯ ಭೂರ್ಜವೃಕ್ಷಗಳು' ಎಂಬ ಕತೆಯಲ್ಲಿ ಟಾಲ್‌ಸ್ಟಾಯ್ ಮಹರ್ಷಿಯ ಕೊನೆಗಾಲದ ಮನೋತುಮುಲಕ್ಕೆ ಕಾರಣವಾದ ಘಟನೆಯ ಮುಖಾಂತರ ಕತೆಗಾರರು, ಅವನು ಪ್ರತಿಪಾದಿಸಿದ ಸಾಮ್ಯವಿರುದ್ಧವಾದ ಎಷ್ಟರಮಟ್ಟಿಗೆ ಅಸಾಧ್ಯ ಎಂಬುದನ್ನು ತೋರಿಸಲು ಯತ್ನಿಸಿದ್ದಾರೆ. ಶ್ರೀಮಂತಿಕೆಯಲ್ಲಿ ಹುಟ್ಟಿ ಶ್ರೀಮಂತಿಕೆಯಲ್ಲಿ ಬೆಳೆದುಬಂದ ಟಾಲ್‌ಸ್ಟಾಯಿಗೆ ವೈಚಾರಿಕ ಶಕ್ತಿ ಬಂದಾಗ "ಆಸ್ತಿ ಮನುಜಕುಲದ ಕ್ಷೇಮಕ್ಕೆ ಎಡರಾದ ವೊದ್ಮೊದಲ ಕುತ್ತ; ಆದ್ದರಿಂದ ಆಸ್ತಿಯ ಒಡೆತನವನ್ನು ಸರ್ವರೂ ತ್ಯಜಿಸಬೇಕು" ಎಂದು ಯೋಚಿಸಿ, ಆ ಸಾಮ್ಯ ವಿರುದ್ಧವಾದದ ಅನುಷ್ಠಾನಕ್ಕೆ ಪ್ರಪ್ರಥಮ ನಿದರ್ಶನವೆಂಬಂತೆ ತಾನೇ ತನ್ನ ಆಸ್ತಿ ಪಾಸ್ತಿಯ ಒಡೆತನವನ್ನು ತೊರೆಯಲು ಮುಂದಾಗುತ್ತಾನೆ. ಆದರೆ ಅವನ ಹೆಂಡತಿ ಸೋಫಿಯಾಗೆ ಇದು ಸರಿತೋರದೆ ಆಸ್ತಿಯ ಉಸ್ತುವಾರಿಯನ್ನು ತಾನು ವಹಿಸಿಕೊಳ್ಳುತ್ತಾಳೆ.

ಆದರೆ ಟಾಲ್‌ಸ್ಟಾಯ್ ಮನೆಯ ಮುಂದಿದ್ದ ಭೂರ್ಜವನದ ಬಗ್ಗೆ ವೊದಲಿನಿಂದಲೂ ಒಂದು ರೀತಿಯ ಮಮತೆ, ಅಭಿಮಾನ ಅಥವಾ ಒಂದು ರೀತಿಯ ಸ್ವಾಮ್ಯ ಅವನಲ್ಲಿ ರೂಪುಗೊಂಡಿತ್ತು. ಮನೆಯ ಖರ್ಚುವೆಚ್ಚಕ್ಕೆ ಹಣವಿಲ್ಲವಾದ್ದರಿಂದ ಕೆಲವು ಮರಗಳನ್ನು ಮಾರೋಣ ಎಂದು ಹೆಂಡತಿ ಸೂಚಿಸಿದಾಗ, ಟಾಲ್‌ಸ್ಟಾಯ್ ಎಲ್ಲಾದರೂ ಉಂಟೆ? ಎನ್ನುತ್ತಾನೆ. ಇದರ ಮುಖಾಂತರ ಕತೆಗಾರರು ಸಾಮ್ಯವಾದದ ಛಾಯೆ ಹೇಗೆ ರಕ್ತಗತವಾಗಿದೆ ಎಂಬುದನ್ನು ಸಾಬೀತುಪಡಿಸುತ್ತಾರೆ. ಮುಂದೆ ಜೀತದಾಳುಗಳ ಒತ್ತಡದ ಮೇರೆಗೆ ಟಾಲ್‌ಸ್ಟಾಯ್ ಸ್ನೇಹಿತ, ಸಮತಾವಾದಿ ಚೆರ್ಟ್‌ಕಾಫ್, ಜೀತದಾಳುಗಳಿಗೆ ಮನೆಕಟ್ಟಿಕೊಳ್ಳಲು ಈ ಭೂರ್ಜವೃಕ್ಷಗಳನ್ನು ಕೊಡು ಎಂದು ಟಾಲ್‌ಸ್ಟಾಯಿಗೆ ಹೇಳಿದಾಗ ಅವನು "ಸ್ವಾಮ್ಯ ಕೂಡದು ಎಂದು ಹೇಳಿದ ಮೇಲೆ ನಾನು ಅಪ್ಪಣೆ ಕೊಡುವುದೇನು? ಜೀತ ಉಂಟು ಮರ ಉಂಟು" ಎನ್ನುತ್ತಾನೆ. ಆದರೆ ಈ ಮಾತಿನಲ್ಲಿ ಆತ್ಮಪೂರ್ವಕ ಸಂತೋಷವಿಲ್ಲ; ಬದಲಾಗಿ ಅಸಮಾಧಾನ, ನೋವಿದೆ ಎಂಬುದು ವ್ಯಕ್ತವಾಗುತ್ತದೆ. ಅವನ ಹೆಂಡತಿ ತಡೆದರೂ ಜೀತದಾಳುಗಳು ಟಾಲ್‌ಸ್ಟಾಯಿಗೆ ಪ್ರಿಯವಾಗಿದ್ದ ಭೂರ್ಜವೃಕ್ಷಗಳನ್ನು ಕಡಿದುಕೊಂಡು ಹೋದ ಮೇಲೆ ದಿನೇ ದಿನೇ ಅವನು ನವೆದುಹೋಗಿ ಕೊನೆಗೆ ಮನೆಬಿಟ್ಟು ರೈಲ್ವೆ ನಿಲ್ದಾಣವೊಂದರಲ್ಲಿ ಪ್ರಾಣನೀಗುತ್ತಾನೆ.

ಕತೆ ಸಿದ್ಧಾಂತವಾಗಿ, ಹೇಳಿಕೆಯಾಗಿ ಮುಕ್ತಾಯವಾಗದೆ ಅರ್ಥಪೂರ್ಣವಾದ ಪ್ರಶ್ನೆಗಳಲ್ಲಿ ಮುಕ್ತಾಯಗೊಂಡಿರುವುದು ಲೇಖಕರ ಭಾವುಕತನವಿಲ್ಲದ ವೈಚಾರಿಕ ನೆಲೆಗಟ್ಟನ್ನು ಸೂಚಿಸುತ್ತದೆ: "ಮರ ಹೋದವೆಂಬ ದುಃಖವೆ? ಹೆಂಡತಿ ತನ್ನ ಔದಾರ್ಯಕ್ಕೆ ಅಡ್ಡಿಯಾದಳೆಂಬ ಬೇಸರವೆ? ಸ್ವಾಮ್ಯ ಕೂಡದೆಂದು ಬುದ್ಧಿ ಹೇಳುತ್ತಿರುವಲ್ಲಿ

ಮರ ತನ್ನದೆಂಬ ಅಭಿಮಾನ ಕಾಡಿತೆಂಬ ಉದ್ವೇಗವೆ? ಅವನ ಜೀವ ಈ ಭಾವ ಯಾವುದರಲ್ಲಿ ತೊಳಲುತ್ತ ಮುಗಿಯಿತು? ಇಲ್ಲ ಮೂರೂ ಭಾವ ಆ ಮನಸ್ಸಿನಲ್ಲಿ ಸಾಯುವ ವೇಳೆ ತುಮುಲ ಮಾಡಿದುವೊ?''

ಆದರೆ ಕತೆಗಾರರ ಧೋರಣೆ ಕತೆಯ ಆರಂಭದಲ್ಲಿಯೇ ವ್ಯಕ್ತವಾಗಿ, ಅದು ಅಂತ್ಯದ ಮೇಲೂ ಬೆಳಕು ಚೆಲ್ಲದೆ ಇರುವುದಿಲ್ಲ. ''ನನ್ನ ಕೈಯಿಂದ ಹಿಡಿದ ಅನ್ನ ನನ್ನದು ಎನ್ನುವುದು ತಪ್ಪಾದರೆ ಯಾವನೇ ಆಗಲಿ ಊಟಮಾಡುವುದು ಹೇಗೆ?" ಎಂಬ ಆರಂಭದ ಲೇಖಕರ ಮಾತು ಅಂತ್ಯದಲ್ಲಿ ಕಿವಿಯಲ್ಲಿ ನಿನದಿಸಿ, ಟಾಲ್‌ಸ್ಟಾಯ್ ಸಾವಿಗೆ ಮೂಲ ಏನೆಂಬುದನ್ನೂ ಪರೋಕ್ಷವಾಗಿ ಧ್ವನಿಸಿದಂತಾಗುತ್ತದೆ.

'ಕುಚೇಲನ ಭಾಗ್ಯ' ಎಂಬ ಕತೆ ಹೊಸ ದೃಷ್ಟಿಯಿಂದ ಇಲ್ಲಿ ಚಿತ್ರಿತವಾಗಿದೆ. ಬಡವ ಬಲ್ಲಿದ ಭಾವನೆ ಸ್ನೇಹಕ್ಕೆ ಅಡ್ಡಿಯಾಗುವುದಿಲ್ಲ ಎಂಬುದು ಕೃಷ್ಣ ಕುಚೇಲರ ವರ್ತನೆಯಿಂದ ವ್ಯಕ್ತವಾಗುತ್ತದೆ. ರುಕ್ಮಿಣಿ ಕೃಷ್ಣ ಇವರ ಮಧ್ಯೆ ಸಾಗುವ ಮಾತು ಕತೆಗಳು ನಿರ್ಮಲ ಹಾಸ್ಯಕ್ಕೆ ದ್ಯೋತಕವಾಗಿವೆ. ಕುಚೇಲ ಕೃಷ್ಣನ ಅರಮನೆಯಿಂದ ತನ್ನ ಊರಿಗೆ ಹೋದಾಗ, ಕೃಷ್ಣನ ಕೈವಾಡದಿಂದ ತನ್ನ ಗುಡಿಸಲು ಅರಮನೆಯಾಗಿರುವುದನ್ನು ಕಂಡು, ಗುಡಿಸಲನ್ನು ನಾಶಪಡಿಸದೆ ಅರಮನೆಯ ಒಂದು ಭಾಗದಲ್ಲಿ ಉಳಿಸಿರುವುದನ್ನೂ ನೋಡಿ ಆನಂದಪಟ್ಟು ಹೆಂಡತಿಗೆ ''ಗೆಳೆಯನ ಪ್ರೀತಿಯ ಗುರುತು ಅಂತ ಈ ಅರಮನೇನ, ಆದರಲ್ಲಿ ನಿನ್ನನ್ನ ನೋಡುತ್ತಾ ಹಿರಿಯರಿಂದ ಬಂದದ್ದು ಅಂತ ನಾನು ಆ ಗುಡಿಸಲಲ್ಲಿ ಬಾಳಬೇಕು" ಎಂದು ಹೇಳುವ ಮಾತುಗಳು ಅವನ ಪಾತ್ರವನ್ನು ಮೇಲ್ಮಟ್ಟಕ್ಕೆ ಕೊಂಡೊಯ್ಯುತ್ತವೆ. ಮೇಲೇರಿದರೂ ಅಹಂಕಾರದಿಂದ ಕೆಳಗಿನ ಸ್ಥಿತಿಯನ್ನು ಮರೆಯದಿದ್ದರೆ ಅಂಥವರಿಗೆ ಸುಖ ಸಿಗುತ್ತದೆ; ಅದರಿಂದ ಬೇರೆಯವರಿಗೂ ಸುಖ ಸಿಗುತ್ತದೆ—ಎಂಬುದು ವ್ಯಕ್ತವಾಗುತ್ತದೆ.

'ಶಾಲೆಯ ಆಚಾರ್ಯರು' ಎಂಬ ಕತೆಯ ಉದ್ದೇಶ ಸಿರಿಗುಂದದ ಅರಮನೆಯಲ್ಲಿ ದೇಸಾಯಿ ಕುಮಾರರಿಗೆ ವಿದ್ಯೆ ಕಲಿಸುವ ಗುರುವಾಗಿದ್ದ ಬ್ರಹ್ಮಶ್ರೀ ರಾಮಚಂದ್ರಾಚಾರ್ಯರ ಆಕಿಂಚನ್ಯ ವ್ರತವನ್ನು ಸ್ಪಷ್ಟಪಡಿಸುವುದೇ ಆಗಿದೆ. ಇದನ್ನು ಕತೆ ಎನ್ನುವುದಕ್ಕಿಂತ ವ್ಯಕ್ತಿಚಿತ್ರ ಎನ್ನಬಹುದೇನೋ!

ಇಲ್ಲಿಯವರೆಗಿನ ಪರಿಶೀಲನೆಯಿಂದ ಈ ಸಂಗ್ರಹದಲ್ಲಿ ಹೆಚ್ಚು ಐತಿಹಾಸಿಕ ಕತೆಗಳೂ, ಆಮೇಲೆ ಪೌರಾಣಿಕ ಕತೆಗಳೂ, ಕೆಲವು ಸಾಮಾಜಿಕ ಕತೆಗಳೂ ಇರುವುದನ್ನು ನೋಡಿದ್ದಾಯಿತು. ಸಾಹಿತ್ಯ ಅಕೆಡಮಿಯ ಪ್ರಶಸ್ತಿಗೆ ಭಾಜನವಾದ ಈ ಸಂಗ್ರಹದ ಕತೆಗಳು ಭಾರತೀಯ ಭಾಷೆಗಳೆಲ್ಲಕ್ಕೂ ಅನುವಾದವಾಗುವ ಸಂಭವವಿರುವುದರಿಂದ ಕನ್ನಡ ನೆಲದ ವಾಸನೆಯನ್ನು ಒಳಗೊಂಡ ಕತೆಗಳು ಈ ಸಂಗ್ರಹದಲ್ಲಿದ್ದರೆ ಚೆನ್ನಾಗಿತ್ತೇನೋ ಅನ್ನಿಸದಿರದು. ಆದರೂ ಈ ಸಂಗ್ರಹದಲ್ಲಿ ಬಂದಿರುವ 'ವಿಚಿತ್ರಪ್ರೇಮ', 'ಆ್ಯನ್ ಷೇಕ್ಸ್‌ಪಿಯರ್', 'ಟಾಲ್‌ಸ್ಟಾಯ್ ಮಹರ್ಷಿಯ ಭೂರ್ಜವೃಕ್ಷಗಳು' 'ಚಟ್ಟೇಕಾರ ತಾಯಿ', 'ಧರ್ಮಕಿಂಕರ ಫಿಟ್ಸ್‌ಮನ್'

ಮೊದಲಾದ ಕತೆಗಳು ಕತೆಗಾರರ ಉತ್ತಮ ಕತೆಗಾರಿಕೆಗೆ ಸಾಕ್ಷಿಗಳಾಗಿವೆ. ಇಲ್ಲೆಲ್ಲ ಲೇಖಕರ ಜೀವನದ ಬಗೆಗಿನ ಶ್ರದ್ಧೆ, ಸ್ವಚ್ಛ ನಿಚ್ಚಳ ನೋಟ, ಮಾನವೀಯ ಗುಣಗಳ ಚಿತ್ರಣ, ನಿರುದ್ವೇಗ ನಿರ್ಲಿಪ್ತ ಬರವಣಿಗೆಯ ಧಾಟಿ ಕಂಡುಬರುತ್ತವೆ ; ಹಾಗೂ ಅವರ ಕತೆಗಳ ಉತ್ತಮಿಕೆಗೆ ಕಾರಣವಾಗಿವೆ.

ಪ. ವಿ. ಚಂದ್ರಶೇಖರ

ಕರ್ಣಾಟಕ ಸಂಸ್ಕೃತಿ ಸಮೀಕ್ಷೆ

ಜೀವನದ ಅಂತರಂಗ ಸಂಸ್ಕೃತಿಯಾದರೆ ಬಹಿರಂಗ ನಾಗರಿಕತೆ. ಒಂದು ಜೀವನದ ಒಳಗನ್ನು ಅರಳಿಸಿ ಗಮಗಮಿಸಿದರೆ ಇನ್ನೊಂದು ಜೀವನದ ಹೊರಗನ್ನು ರೂಪಿಸಿ ಕಾಂತಿಗೊಳಿಸುತ್ತದೆ. ಹಾಗೆ ನೋಡಿದರೆ ಇವುಗಳ ಮಾರ್ಗ ಬೇರೆಯಾಗಿ ಕಂಡರೂ ಗುರಿ ಒಂದೆ. ಅದು ಮಾನವ ಕಲ್ಯಾಣ. ಅದರಲ್ಲಿ ಇವು ಒಂದಕ್ಕೊಂದು ಪೂರಕ, ಒಂದಕ್ಕೊಂದು ಪೋಷಕ.

ಈ ಕಾರ್ಯದಲ್ಲಿ ಸಂಸ್ಕೃತಿ ಮಾನವನ ಅಂತರಂಗವನ್ನು ತುಂಬಿ, ಬೆಳಗಿ, ಪರಿಷ್ಕರಿಸುತ್ತದೆ. ನಾಗರಿಕತೆಯಾದರೊ ಮಾನವನ ಬಹಿರಂಗದ ಸಮಸ್ಯೆಗಳನ್ನು ಎದುರಿಸಿ ಅವುಗಳಿಗೆ ಸೌಲಭ್ಯವನ್ನು ಕಲ್ಪಿಸುತ್ತದೆ.

ಹೀಗೆ ಮಾನವನ ಬದುಕು ಪೂರ್ಣವಾಗಲು ಅವನ ವ್ಯಕ್ತಿತ್ವ ವಿಕಾಸವಾಗಬೇಕು. ದೇಹದಂತೆ ಬುದ್ಧಿಯೂ, ಬುದ್ಧಿಯಂತೆ ಅವನ ಬಹುಭಾವ ರಂಜಿತವಾದ ಚಿತ್ತವೂ ಪ್ರಬುದ್ಧವಾಗಬೇಕು. ಇಂತಹ ಕಾರ್ಯಕ್ಕೆ ನಾಗರಿಕತೆಯಂತೆಯೇ ಸಂಸ್ಕೃತಿಯ ಕಾರ್ಯವೂ ಬಹು ಮುಖ್ಯವಾದುದು. ಮೃಗಸದೃಶನಾದ ಮಾನವ ನಾಗರಿಕನಾಗಿ ಸುಸಂಸ್ಕೃತನಾಗಿ ಪರಿಣಮಿಸಿದಾಗಲೇ ಅವನು ಸತ್ಪ್ರಜೆ ಎನಿಸುವುದು. ಹಾಗೆ ಆದಾಗಲೇ ಅವನು ಸುಗಂಧಿತ ಪುಷ್ಪದಂತೆ ಸಮಾಜದಲ್ಲಿ ಆಹ್ಲಾದಕರನಾಗುವುದು.

ಹೀಗೆ ಮನುಷ್ಯರಿಗೆ ಬೆಲೆಯನ್ನು ತರುವ, ಬದುಕನ್ನು ತುಂಬುವ ಈ ಸಂಸ್ಕೃತಿಯ ಸುಗಂಧವನ್ನು ಕಾಣುವುದೂ, ವಿವರವಾಗಿ ಬಣ್ಣಿಸುವುದೂ ಶ್ರಮಸಾಧ್ಯವಾದ ಕೆಲಸ. ಇಂತಹ ಶ್ರಮಸಾಧ್ಯವಾದ ಕೆಲಸವನ್ನು ಡಾ. ಹೊನ್ನಾಳಿ ತಿಪ್ಪೇರುದ್ರಸ್ವಾಮಿಯವರು ತಮ್ಮ ಈ 'ಕರ್ಣಾಟಕ ಸಂಸ್ಕೃತಿ ಸಮೀಕ್ಷೆ'ಯ ಮೂಲಕ ಚೆನ್ನಾಗಿ, ಸಮರ್ಥವಾಗಿ ಮಾಡಿಕೊಟ್ಟಿದ್ದಾರೆ. ಈ ಗಾತ್ರ ವೈಭವದ ಗ್ರಂಥ 'ಕರ್ಣಾಟಕ ಸಂಸ್ಕೃತಿ ಸಮೀಕ್ಷೆ' ತನ್ನ ಏಳುನೂರ ಎಂಬತ್ತೆರಡು ಪುಟಗಳಲ್ಲಿ ಕನ್ನಡಿಗರ ಇಪ್ಪತ್ತಾಲ್ಕು ಶತಮಾನಗಳ ಸಂಸ್ಕೃತಿಯ ಇತಿಹಾಸವನ್ನು ಸಂಕ್ಷೇಪವಾಗಿ ತಿಳಿಸುತ್ತದೆ. ಕ್ರಿ.ಪೂ. ನಾಲ್ಕನೆಯ ಶತಮಾನದ ವೇಳೆಗೇ ಕನ್ನಡ ಜನತೆ ಸ್ಫುಟವಾದ ಅಸ್ತಿತ್ವವನ್ನು ಪಡೆದಿತ್ತು ಎಂಬುದನ್ನು ಡಾ. ತಿಪ್ಪೇರುದ್ರಸ್ವಾಮಿಯವರು ನಮೂದಿಸಿದ್ದಾರೆ. ಈ ಗ್ರಂಥವೇ ವಿಸ್ತಾರವಾಗಿ

ಬೆಳೆದರೆ ಇಂತಹ ಒಂಬತ್ತು ಸಂಪುಟಗಳಾಗಬಹುದಾದಷ್ಟು ವಿಷಯವೈಪುಲ್ಯವನ್ನು ಪಡೆದಿದೆ.

ಈ ಗ್ರಂಥದ ಯೋಜನೆಯಲ್ಲಿ ಹತ್ತು ವಿಭಾಗಗಳಿವೆ:

೧. ಭಾರತೀಯ ಸಂಸ್ಕೃತಿ ೨. ಕರ್ಣಾಟಕರಾಜ್ಯ ೩. ಕನ್ನಡ ಜನಪದ ೪. ಶಾಸನಗಳಲ್ಲಿ ಸಂಸ್ಕೃತಿ ೫. ಸಾಹಿತ್ಯದಲ್ಲಿ ಸಂಸ್ಕೃತಿ ೬. ಜಾನಪದ ಸಾಹಿತ್ಯ ೭. ವಾಸ್ತುಶಿಲ್ಪ ಮತ್ತು ಶಿಲ್ಪ ೮. ಸಂಗೀತ ಮತ್ತು ನೃತ್ಯ ೯. ಚಿತ್ರಕಲೆ ೧೦. ಸಮಾರೋಪ.

ಮೊದಲ ಅಧ್ಯಾಯದಲ್ಲಿ ಸಂಸ್ಕೃತಿ ಮತ್ತು ನಾಗರಿಕತೆಗಳ ಅರ್ಥವ್ಯಾಪ್ತಿಯನ್ನೂ ಅವು ಬೆಳೆಯುವ ಮಾರ್ಗಗಳನ್ನೂ ಹೇಳುತ್ತ ಲೇಖಕರು, "ನಾಗರಿಕತೆ ಯಾವಾಗಲೂ ಪ್ರಗತಿಮಾರ್ಗದಲ್ಲಿಯೇ ಮುನ್ನಡೆಯುತ್ತದೆ; ಆದರೆ ಸಂಸ್ಕೃತಿಯ ವಿಚಾರದಲ್ಲಿ ಅದೇ ಮಾತನ್ನು ಹೇಳುವಂತಿಲ್ಲ" ಎನ್ನುತ್ತಾರೆ. "ಹೆನ್ರಿ ಫೋರ್ಡನ ಆಟೋಮೊಬೈಲ್ ಯಂತ್ರವನ್ನು ಅನಂತರ ಬಂದವರು ಸುಧಾರಿಸುತ್ತಾ ಉತ್ತಮ ಯಂತ್ರವನ್ನಾಗಿ ಮಾಡಿದಂತೆ ಗ್ರೀಕ್ ಶಿಲ್ಪವನ್ನಾಗಲೀ, ಸೊಫೋಕ್ಲೀಸನ ನಾಟಕವನ್ನಾಗಲೀ ಉತ್ತಮ ಪಡಿಸುತ್ತಾರೆನ್ನುವುದು ಸಾಧ್ಯವಿಲ್ಲ. ವಾಲ್ಮೀಕಿ, ಕಾಳಿದಾಸರ ಕಾವ್ಯಗಳಾಗಲೀ ಷೇಕ್ಸ್‌ಪಿಯರನ ನಾಟಕಗಳಾಗಲೀ ಆ ಯುಗಕ್ಕೆ ಉತ್ತುಂಗಶಿಖರಗಳಾಗಿ ನಿಂತುವು.... ನಾಗರಿಕತೆಯ ಯಂತ್ರಗಳಂತೆ ಅವನ್ನು ಪ್ರಯತ್ನಪೂರ್ವಕವಾಗಿ ನಿರ್ಮಿಸುವುದಾಗಲೀ ಸಾಮೂಹಿಕವಾಗಿ ಬೆಳೆಸುವುದಾಗಲೀ ಸಾಧ್ಯವಿಲ್ಲ."

ಇದು ಸರಿಯೆ. ಅಂತಹ ಪ್ರಯತ್ನ ಅನಾವಶ್ಯಕವಾದುದೂ ಕೂಡ. ಇಲ್ಲಿ ವಿಚಾರ ಮಾಡಬೇಕಾದ ಒಂದು ಅಂಶ ಇದೆ. ಸೌಂದರ್ಯಾನುಭವ ಅಸಂಖ್ಯ ರೂಪ, ರೀತಿಗಳಿಂದ ಸಾಧ್ಯವಾಗುತ್ತದೆ. ಅಂತಹ ಒಂದೊಂದು ಕಲಾರೂಪವೂ ವೈಯಕ್ತಿಕವಾದ ಪ್ರತಿಭೆಯಿಂದ, ಸಮಷ್ಟಿ ಮನಸ್ಸಿನ ಕಲಾಭಿರುಚಿಯಿಂದ ಒಟ್ಟು ಪರಿಣಾಮವಾಗಿ ಸಿದ್ಧವಾಗುತ್ತದೆ. ರಸಾನುಭವದ ದೃಷ್ಟಿಯಿಂದ ಪರಿಪೂರ್ಣವಾದ ಇವನ್ನು ಪರಿಷ್ಕರಿಸುವ ಮಾತೇ ಇಲ್ಲ. ಅವಶ್ಯವೂ ಅಲ್ಲ. ಕಾರಣ ಹೀಗಿರಬಹುದು: ಮನುಜರ ಜ್ಞಾನ ವಿಕಾಸವಾದಂತೆ, ಬುದ್ಧಿ ಬೆಳದಂತೆ ಸೌಖ್ಯಾನುಭವದ ಹೊಸ ಮಾರ್ಗಗಳು ಗೋಚರಿಸುತ್ತಲೇ ಹೋಗುತ್ತವೆ. ಹಳೆಯಮಾರ್ಗ ಅನುಪಯುಕ್ತ ವಾಗುತ್ತದೆ, ಹೊಸಮಾರ್ಗ ಸೃಷ್ಟಿಯಾಗುತ್ತದೆ. ಕಲೆಯಾದರೊ ಬದಲಾವಣೆ ಅಶಕ್ಯವಾದ ಮಾನವರ ಮೂಲಪ್ರವೃತ್ತಿಗಳಲ್ಲೆ ಬೇರುಬಿಟ್ಟು, ಸ್ಥಾಯೀಭಾವವೇ ಮುಂತಾದುವುಗಳನ್ನು ಅವಲಂಬಿಸಿ ರೂಪುಗೊಳ್ಳುವುದರಿಂದ ಅವು ಅಂದು ಸಂದಂತೆಯೇ ಇಂದೂ ಸಲ್ಲುತ್ತವೆ.

ನಾಗರಿಕತೆಯನ್ನು ಅಪ್ರಯತ್ನಪೂರ್ವಕವಾಗಿ ನಾವು ನಮ್ಮ ಹಿಂದಿನವರಿಂದ ಪಡೆಯಬಹುದು. ಸಂಸ್ಕೃತಿಯನ್ನಾದರೊ ನಾವು ಪ್ರಯತ್ನಪೂರ್ವಕವಾಗಿ ರೂಢಿಸಿ ಕೊಳ್ಳಬೇಕು. ದೇಶವಿದೇಶಗಳ ನಾಗರಿಕತೆಯನ್ನು ಸುಲಭವಾಗಿ ನಮ್ಮದನ್ನಾಗಿ

ಮಾಡಿಕೊಳ್ಳಬಹುದು. ಆದರೆ ಸಂಸ್ಕೃತಿಯ ವಿಷಯದಲ್ಲಿ ಈ ಮಾತು ಕಷ್ಟ. ಸಂಸ್ಕೃತಿಯು ಧರ್ಮದ, ಕಲೆಯ ವಲಯವನ್ನು ಮೀರಿ ವ್ಯಾಪಕವಾಗಿ ಬೆಳೆಯುತ್ತದೆ. ಅದು ಬಳ್ಳಿಯಲ್ಲಿ ಹೂವು ಅರಳಿದಂತೆ. ಬಳ್ಳಿಗೆ ನೀರು ಗೊಬ್ಬರ ಹಾಕಿ ಆರೈಕೆ ಮಾಡಿದರೂ ಕೊನೆಯಲ್ಲಿ ಬಿಡುವ ಹೂವು ಬಳ್ಳಿಯಲ್ಲಿ ಅಂತರ್ಗತವಾಗಿರುವ ಸಂಕಲ್ಪ ಶಕ್ತಿಯಿಂದಲೇ ಅರಳಬೇಕು. ಹಾಗೆಯೇ ಸಂಸ್ಕೃತಿ ಎಂಬುದು. ಎಲ್ಲ ವಿದ್ಯೆಗಳನ್ನು ಬಳಸಿಕೊಂಡು ಬೆಳೆಯುವ ಸಂಸ್ಕಾರ ಪರಾಗ. ಇದು ವೈಯಕ್ತಿಕವಾಗಿ ಬೆಳೆಯುವಂತಹದು ಎನ್ನುತ್ತಾರೆ. ಇದು ಸುಂದರವಾದ ಮಾತು. ಹೀಗೆ ಸಂಸ್ಕೃತಿಯ ಅರ್ಥ ವ್ಯಾಪ್ತಿಯನ್ನೂ, ಅದರ ನಾನಾ ಮುಖಗಳನ್ನೂ ಕುರಿತು ಹೇಳುತ್ತ ಕೊನೆಗೆ ಅದೊಂದು ವಿರಾಡ್ರೂಪಿ ಎಂದು ತೀರ್ಮಾನಿಸುತ್ತಾರೆ.

ವೇದಪೂರ್ವದ ಸಿಂಧು ಸಂಸ್ಕೃತಿಯ ಸ್ವರೂಪವನ್ನು ವರ್ಣಿಸಿ, ಅನಂತರ ಭಾರತೀಯ ಸಂಸ್ಕೃತಿಗೆ ನರನಾಡಿಗಳಂತಿರುವ ವೇದ ಉಪನಿಷತ್ತುಗಳ ಸಾರವನ್ನು ಸಂಗ್ರಹವಾಗಿ ಸೂಚಿಸಿದ್ದಾರೆ. ಇತಿಹಾಸ ಪುರಾಣಗಳು ಭಾರತೀಯ ಮನೋಧರ್ಮ ವನ್ನು ಸಂಸ್ಕರಿಸಿದ ಬಗೆಯನ್ನು ಹೇಳಿ, ಅನಂತರ ಸ್ಮೃತಿ ಮತ್ತು ಆಗಮಾದಿಗಳ ಪ್ರಸ್ತಾಪ ಮಾಡುತ್ತಾರೆ. ಕೊನೆಯಲ್ಲಿ ಅವುಗಳ ಒಟ್ಟು ಪ್ರಭಾವ ಹೇಳುತ್ತ ಭಾರತೀಯ ಸಂಸ್ಕೃತಿಯ ಮುಖ್ಯ ಗುಣ ಸಮನ್ವಯ ದೃಷ್ಟಿ–ಎಂದೆನ್ನುತ್ತಾರೆ. "ಇಹಪರಗಳಲ್ಲಿ ಸಮನ್ವಯ; ಭಕ್ತಿ ಜ್ಞಾನ ಕರ್ಮಗಳಲ್ಲಿ ಸಮನ್ವಯ; ಹಳತು ಹೊಸತರಲ್ಲಿ ಸಮನ್ವಯ; ವ್ಯಕ್ತಿ ಸಮಾಜಗಳಲ್ಲಿ ಸಮನ್ವಯ ; ಏಕ ಅನೇಕಗಳಲ್ಲಿ ಸಮನ್ವಯ"—ಹೀಗೆ ಅದರ ಹಾದಿ ಎನ್ನುತ್ತ—"ಕೊನೆಗೆ ಇದು ಒಳಿತು ಕೆಡಕುಗಳಲ್ಲಿಯೂ ಸಮನ್ವಯವನ್ನು ಕಾಣುವ ದೌರ್ಬಲ್ಯದ ಮಟ್ಟಕ್ಕೆ ಇಳಿಯಿತು" ಎಂದು ಟೀಕಿಸುತ್ತಾರೆ.

ಇದೆಲ್ಲಾದರೂ ಸಾಧ್ಯವೇ? ಕೆಡುಕಿನಲ್ಲಿ ಒಳಿತನ್ನರಸುವ ಪ್ರಯತ್ನ ಹೀಗೆ ಕಂಡಿರಬಹುದು. ಹಲವು ಏಳುಬೀಳುಗಳನ್ನು ಕಂಡ ನಮ್ಮ ಜನ ಒಂದೆರಡು ಬಾರಿ ಕುಸಿದು ದೌರ್ಬಲ್ಯದಿಂದ ನರಳಿರಬಹುದು. ಆದರೆ ಅವರು ಮುಂದೆ ಇಮ್ಮಡಿಯಾದ ಉತ್ಸಾಹಶಕ್ತಿಗಳಿಂದ ಮುಂದುವರೆದುದನ್ನು ನಾವು ಕಾಣುತ್ತೇವೆ.

ಭಾರತೀಯ ಸಂಸ್ಕೃತಿ ಬರಿಯ ಆರ್ಯ ಸಂಸ್ಕೃತಿಯಲ್ಲ, ದ್ರಾವಿಡ ಸಂಸ್ಕೃತಿ ಯಲ್ಲ ಅಥವ ಇನ್ನಾವುದೇ ಮೂಲನಿವಾಸಿಗಳ ಸಂಸ್ಕೃತಿಯಲ್ಲ. ಅವೆಲ್ಲವುಗಳ ಸುಂದರ ಸಾಮರಸ್ಯದಿಂದ ಸಾಕಾರಗೊಂಡ ಸಂಸ್ಕೃತಿ. ಧರ್ಮ ಅರ್ಥ ಕಾಮ ಮೋಕ್ಷ ಗಳೆಂಬ ಚತುರ್ವಿಧ ಪುರುಷಾರ್ಥಗಳನ್ನು ಹೇಳುವ ಜೀವನದ ಪರಿಪೂರ್ಣದೃಷ್ಟಿಯ ಸಂಸ್ಕೃತಿ. ಪರಿಪೂರ್ಣ ಜೀವನಕ್ಕೆ ಧರ್ಮದ ತಳಹದಿ ಬಹುಮುಖ್ಯ. ಜತೆಗೆ ವೈಯಕ್ತಿಕ ಪರಿಪೂರ್ಣತೆಗೂ ನಿರಂತರ ಆಧಾರ. ಹಾಗೆಯೇ ಲೌಕಿಕ ಶಾಸ್ತ್ರಗಳ ಉನ್ನತಿಯನ್ನೂ, ಕಲೆಗಳಲ್ಲಿ ಧಾರ್ಮಿಕದೃಷ್ಟಿಯನ್ನೂ ನಾವು ಮೆಚ್ಚುತ್ತೇವೆ. ಇವು ನಮ್ಮ ಸಂಸ್ಕೃತಿಯ ಮುಖ್ಯಾಂಶಗಳು. ಇಂತಹ ತಾಯಿಬೇರಿನಿಂದ ಪೋಷಿತವಾದ ಕರ್ನಾಟಕ ಸಂಸ್ಕೃತಿಶಾಖೆಯ ವೈಶಿಷ್ಟ್ಯವನ್ನು ನಾನಾ ಕಲೆ ಮತ್ತು ಜನಪದ

ಸಾಹಿತ್ಯದ ಮೂಲಕ ನೋಡುವ ಪ್ರಯತ್ನ ಮಾಡಿ ಅದಕ್ಕೆ ಹಿನ್ನೆಲೆಯಾಗಿ ಕನ್ನಡಿಗರ ರಾಜಕೀಯ ಪರಂಪರೆಯನ್ನೂ ಸಾಮಾಜಿಕ ಜೀವನದ ಸ್ಥೂಲರೂಪವನ್ನೂ ಅಭ್ಯಸಿಸಿದ್ದಾರೆ. ಇದು 'ಕರ್ಣಾಟಕ ರಾಜ್ಯ'ವೆಂಬ ಎರಡನೆಯ ಹಂತ.

ಕನ್ನಡಿಗರ ರಾಜಕೀಯ ಇತಿಹಾಸ ಒಂದು ಅಭಿಮಾನದ, ಆತಂಕದ ಇತಿಹಾಸ. ಕ್ರಿ.ಪೂ. ನಾಲ್ಕನೆಯ ಶತಮಾನಕ್ಕಾಗಲೇ ಕನ್ನಡಿಗರು ಪ್ರಭಾವಶಾಲಿಗಳಾದ ಪ್ರಸಿದ್ಧ ರಾದ ಜನತೆ. ಕನ್ನಡನಾಡನ್ನಾಳಿದ ಪ್ರಮುಖ ರಾಜವಂಶಗಳಾದ ಕದಂಬ, ಗಂಗ, ಚಾಲುಕ್ಯ, ರಾಷ್ಟ್ರಕೂಟ, ಹೊಯ್ಸಳ—ಇವರ ರಾಜಕೀಯ ಇತಿಹಾಸವನ್ನು ಇಲ್ಲಿ ಸಂಕ್ಷೇಪವಾಗಿ ಚಿತ್ರಿಸಿದ್ದಾರೆ. ಅವರಲ್ಲಿ ತಮ್ಮ ಸಾಹಸ, ಶೌರ್ಯ, ಸಾಮರ್ಥ್ಯ, ದಕ್ಷತೆ, ಸುಸಂಸ್ಕೃತಿ, ಜನಾನುರಾಗದಿಂದ ಕನ್ನಡದ ಹಿರಿಮೆಯನ್ನು ಬೆಳಸಿದ ರಾಜರನ್ನು ಹೆಮ್ಮೆ ಅಭಿಮಾನಗಳಿಂದ ಬಣ್ಣಿಸಿದ್ದಾರೆ. ಈ ಅಧ್ಯಾಯ ವಿಜಯನಗರ ಸಾಮ್ರಾಜ್ಯ, ಕೆಳದಿ ಮತ್ತು ಮೈಸೂರರಸರ ರಾಜಕೀಯ ಇತಿಹಾಸವನ್ನೂ ಒಳಗೊಳ್ಳುತ್ತದೆ. ಇದೊಂದು ಸೊಗಸಾದ ಅಧ್ಯಾಯ. ಇತಿಹಾಸವೇ ಆದರೂ ವಿಸ್ಫಾರಿತನೇತ್ರರಾಗಿ, ರೋಮಾಂಚಿತ ರಾಗಿ ಓದಬಹುದಾದ ಮನೋಹರ ಬರವಣಿಗೆಯನ್ನು ಇಲ್ಲಿ ಕಾಣುತ್ತೇವೆ.

ಒಂದೊಂದು ರಾಜವಂಶದಲ್ಲಿಯೂ ಹಲವು ಜನ ಶೂರರು ಉತ್ಸಾಹಕ್ಕೆ ಕಾರಣ ರಾಗಿ, ಹೆಮ್ಮೆಗೆ ಪಾತ್ರರಾಗಿ ಕರ್ಣಾಟಕದ ಹಿರಿಮೆಯ ಪುತ್ರರಾಗಿ ಬೆಳಗುವರು. ಕದಂಬರ ಮಯೂರಶರ್ಮ, ಕಾಕುಸ್ಥವರ್ಮರು ಸ್ವಾಭಿಮಾನದಿಂದ ಉಗ್ರ ರೂಪ ತಳೆದ ಬ್ರಾಹ್ಮಣರು. ಅವರು ನಾಡಿಗೆ ಶೌರ್ಯ ಧೈರ್ಯಗಳ ಕಹಳೆಯನ್ನೂದಿದವರು, ಪರಮತ ಸಹಿಷ್ಣುತೆಯ ನಾಂದಿಯನ್ನು ಹಾಡಿದವರು. ಗಂಗರ ದುರ್ವಿನೀತ ಬಹು ಮುಖ ವ್ಯಕ್ತಿತ್ವವುಳ್ಳವನು. ಆತ ದಯಾಮಯ, ರಣಭಯಂಕರ, ಕಲಾಪೋಷಕ, ಸ್ವತಃ ಕವಿ, ವ್ಯಾಖ್ಯಾನಕಾರನಾದರೆ, ಅದೇ ವಂಶದ ರಾಚಮಲ್ಲ ಸಂಸ್ಕೃತಿಯ ಉನ್ನತ ಶಿಖರವೆಂದು ಪ್ರಸಿದ್ಧವಾದ ವಿಶ್ವಮಾನ್ಯವಾದ ಗೊಮ್ಮಟನ ಬೃಹದ್ವಿಗ್ರಹದ ಪ್ರತಿಷ್ಠಾಪನೆಗೆ ಪ್ರೋತ್ಸಾಹವಿತ್ತವನು. ಚಾಲುಕ್ಯರ ಪುಲಿಕೇಶಿ, ಕೀರ್ತಿವರ್ಮ ಮತ್ತು ಎರಡನೆಯ ಪುಲಿಕೇಶಿಯರು ಕನ್ನಡದ ಕೀರ್ತಿಪತಾಕೆಯನ್ನು ಸ್ಥಿರವಾಗಿ ಸ್ಥಾಪಿಸಿದವರು. ಅವರಲ್ಲಿ ಇಮ್ಮಡಿ ಪುಲಿಕೇಶಿ 'ದಕ್ಷಿಣಾಪಥೇಶ್ವರ'ನೆಂದು ಶ್ರೀಹರ್ಷನಿಂದ ಗೌರವ ಪಡೆದವನು. ಕನ್ನಡಿಗರೊಡಲು ನವಿರೇಳುವಂತಹ ಸಾಹಸ ಈತನದು. ಪರ್ಷಿಯಾದ ದೊರೆಗಳಿಂದ ರಾಯಭಾರವನ್ನು ಪಡೆದವನು. ವಿದೇಶ ಯಾತ್ರಿಕರು ಈತನ ದಕ್ಷತೆಯನ್ನು, ಶೌರ್ಯ ಸಾಹಸಗಳನ್ನು, ಮಹಾನುಭಾವತೆ ಯನ್ನು ಕೊಂಡಾಡಿದ್ದಾರೆ. ರವಿಕೀರ್ತಿಯ ಐಹೊಳೆ ಶಾಸನ ಈತನ ವಿಜಯಸ್ಮಾರಕ ಗೀತೆಯಾಗಿ ಉಳಿದಿದೆ.

ಬಾದಾಮಿಯ ಚಾಲುಕ್ಯರ ಇಂತಹ ಸಾಧನೆಗಳನ್ನು ಕಲ್ಯಾಣಿಯ ಚಾಲುಕ್ಯರು ಮುಂದುವರಿಸಿ ಕನ್ನಡ ರಾಜಕೀಯ ಮತ್ತು ಸಾಂಸ್ಕೃತಿಕ ಇತಿಹಾಸದ ಉಜ್ವಲತೆಗೆ ಕಾರಣರಾದರು. ಇವರಲ್ಲಿ ವೇಂಗಿಯ ಚಾಲುಕ್ಯರ ಎರಡನೆಯ ಅರಿಕೇಸರಿ, ಕಲ್ಯಾಣದ

ಚಾಲುಕ್ಯರ ಎರಡನೆಯ ತೈಲಪ ಮತ್ತು ಸತ್ಯಾಶ್ರಯರು ಪ್ರಮುಖರು. ಇವರು ಕನ್ನಡ ಸಾಹಿತ್ಯಕ್ಕೆ ಚಿನ್ನದ ಮಳೆಗರೆದ ಪಂಪ, ರನ್ನರಿಗೆ ಆಶ್ರಯದಾತರು. ಇದೇ ಶಾಖೆಯಲ್ಲಿ ಎರಡೂವರೆ ಶತಮಾನಗಳ ನಂತರ ಆಳಿದ ಬಿಜ್ಜಳನು ವೀರಶೈವ ಕ್ರಾಂತಿಗೆ ಸಾಕ್ಷಿ. ಈ ಪರಿಯಲ್ಲಿ ಕನ್ನಡ ಸಾಹಿತ್ಯದ ಬೆಳವಣಿಗೆ, ಪೋಷಣೆಗೆ, ಚಿತ್ರ ಶಿಲ್ಪ ಕಲೆಗಳಿಗೆ ಚಾಲುಕ್ಯ ಅರಸರ ಪ್ರೋತ್ಸಾಹ ಅಪಾರವಾದುದು. ಹೊಯ್ಸಳರು ಕನ್ನಡ ನಾಡನ್ನಾಳುವುದು ೧೧ನೆಯ ಶತಮಾನದಲ್ಲಿ ಮತ್ತು ಅಲ್ಲಿಂದ ಮುಂದೆ. ಗಂಗವಾಡಿಯ ಉತ್ತರದ ಸೊಸೆವೂರಿನಲ್ಲಿ ತಲೆಯೆತ್ತಿಕೊಂಡ 'ಸಳ'ನಿಂದ ಈ ರಾಜವಂಶ ತೊಡಗಿತು. ಇವರಲ್ಲಿ ವಿಷ್ಣುವರ್ಧನ ಮತ್ತು ವೀರಬಲ್ಲಾಳರು ಪ್ರಸಿದ್ಧರು. ಶೌರ್ಯ ಸಾಹಸಗಳನ್ನು ರಣರಂಗದಲ್ಲಿ ತೋರಿ ನಾಡನ್ನು ವಿಸ್ತರಿಸಿ ಇತರ ರಾಜವಂಶಗಳ ಹುಟ್ಟಡಗಿಸಿದಂತೆಯೇ ಜಗತ್ಪ್ರಸಿದ್ಧವಾಗುವಂತಹ ವಾಸ್ತುಶಿಲ್ಪ ಕೃತಿಗಳನ್ನು ನಿರ್ಮಾಣ ಮಾಡಿಸಿ ಕಲೆಯ ಲೋಕದ ರಸಿಕರನ್ನು ಸೂರೆಗೊಂಡವರು. ವೈಷ್ಣವ ಧರ್ಮಕ್ಕೆ ಪ್ರೋತ್ಸಾಹವನ್ನೂ ಜೈನ ಧರ್ಮಕ್ಕೆ ಜೀವವನ್ನೂ ಎರೆಯುತ್ತ ಶೈವ ಧರ್ಮವನ್ನು ಬೆಳೆಸಿದವರು ಈ ಅರಸರು. ಪರಮತ ಸಹಿಷ್ಣುತೆಯ ಪರಾಕಾಷ್ಠೆಯನ್ನು ನಾವಿಲ್ಲಿ ಕಾಣಬಹುದು. ತಮ್ಮ ಚಾರಿತ್ರ್ಯದಿಂದ ಕನ್ನಡಿಗರಲ್ಲಿ ಸ್ಫೂರ್ತಿಯನ್ನು ತುಂಬಿ ಬಾಳ್ವೆಗೆ ಹೊಸ ಹುರುಪನ್ನು ತಂದವರು.

ವಿಜಯನಗರ ಸಾಮ್ರಾಜ್ಯ ಸ್ಥಾಪಿತವಾಗುವ ಕಾಲಕ್ಕೆ ದಕ್ಷಿಣ ಭಾರತವನ್ನು ದೌರ್ಬಲ್ಯದ ಮೇಘ ವ್ಯಾಪಿಸಿಕೊಂಡಿದ್ದಿತು. ಹಲವು ರಾಜವಂಶಗಳು ಈ ಸಾಮ್ರಾಜ್ಯವನ್ನು ಆಳಿದರೂ ಅದನ್ನು ಸ್ಥಾಪಿಸಿದ ವಿದ್ಯಾರಣ್ಯರೂ ಆಳಿದ ಕೃಷ್ಣದೇವರಾಯನೂ ಜಗತ್ಪ್ರಸಿದ್ಧರು. ಇವರ ಸಾಂಸ್ಕೃತಿಕ, ರಾಜಕೀಯ ಮತ್ತು ಧಾರ್ಮಿಕ ದಿಗ್ವಿಜಯ ನಮ್ಮ ಇತಿಹಾಸದ ಒಂದು ಹೆಮ್ಮೆಯ ಪುಟ. ಇವರ ರಾಜ್ಯದ ಐಸಿರಿ ಒಂದು ಕನಸೆಂಬಂತೆ ಅದ್ಭುತ. ಈ ಧೀರರ ಶೌರ್ಯ ಸಾಹಸಗಳು, ಧರ್ಮಾನುರಾಗಾದಿ ಹೆಗ್ಗಳಿಕೆಗಳು ಹಲವು ರೋಮಾಂಚಕಾರಿ ಕೃತಿಗಳಿಗೆ ವಸ್ತುಗಳಾಗಬಲ್ಲವು.

ಹದಿನೇಳನೆಯ ಶತಮಾನದ ವೇಳೆಗೆ ಕೆಳದಿ ಮತ್ತು ಮೈಸೂರು ರಾಜವಂಶಗಳು ಬೆಳೆದು ಬಾಳತೊಡಗಿದವು. ಕೆಳದಿಯ ಸದಾಶಿವ ನಾಯಕ, ವೆಂಕಟಪ್ಪ, ಶಿವಪ್ಪ ನಾಯಕರು ಇತಿಹಾಸದ ಕೊನೆಯ ಪುಟಗಳಲ್ಲಿ ತೊಳಗುವ ತಾರೆಗಳು. ಮೈಸೂರರಸರ ಪೈಕಿ ರಾಜಒಡೆಯರು, ರಣಧೀರಕಂಠೀರವ ಮತ್ತು ಚಿಕ್ಕದೇವರಾಜ ಒಡೆಯರು ಸಾಹಸವನ್ನು ಬೆಳೆಸಿದವರು; ಸಾಹಿತ್ಯ ಸಂಸ್ಕೃತಿಗಳನ್ನು ಹಬ್ಬಿಸಿ ಹರಡಿದವರು; ನಾಡಿಗೆ ನೆಮ್ಮದಿಯನ್ನು ಕರೆದವರು. ಇವರ ನಂತರ ಇಡಿಯ ಭಾರತವೇ ಆಂಗ್ಲರ ಕೈವಶವಾಯಿತು. ಇಂತು ಕನ್ನಡ ನಾಡಿನ ರಾಜಕೀಯ ಜೀವನದ ಸಿಂಹಾವಲೋಕನ ಮಾಡಿ ಕನ್ನಡದ ಜನಪದವನ್ನು ಕುರಿತ ಮೂರನೆಯ ವಿಭಾಗಕ್ಕೆ ಬರುತ್ತಾರೆ.

ಜನಪದದ ಇತಿಹಾಸವೆನ್ನುವುದು ಶ್ರೀ ಸಾಮಾನ್ಯರ ಇತಿಹಾಸ. ರಾಜಛತ್ರಗಳಡಿಯಲ್ಲಿ, ಅವುಗಳ ಏಳು ಬೀಳಿನಿಂದ ಹೆಚ್ಚು ಪ್ರಭಾವಿತವಾಗದೆ, ಕಲುಷಿತ

ವಾಗದೆ ನಿರ್ಮಲವಾದ ಜೀವನದಿ ಹರಿವುದನ್ನು ಇದರಲ್ಲಿ ಮನಗಾಣಬಹುದು. ಅದು ಭಾರತೀಯ ಸಂಸ್ಕೃತಿಯ ಸ್ಫುಟವಾದ ಪ್ರಭಾವವನ್ನೂ ಪಡೆದಿರುವುದಲ್ಲದೆ ಕನ್ನಡತನ ಹೆಮ್ಮೆಯಿಂದ ಕೂಡಿರುವುದನ್ನೂ ನಾವಿಲ್ಲಿ ನಿಚ್ಚಳವಾಗಿ ಕಾಣುತ್ತೇವೆ. ಧರ್ಮಶಾಸ್ತ್ರಗಳೂ ನಿಬಂಧಗಳೂ ರೂಪಿಸಿದ ರಾಜಕೀಯ ಸಾಮಾಜಿಕ ಧಾರ್ಮಿಕ ವ್ಯವಸ್ಥೆಗಳು ಕಂಡುಬರುವುದರ ಜತೆಗೆ ಕರುನಾಡಿಗರ ಪರಧರ್ಮ ಸಹಿಷ್ಣುತೆ, ಔದಾರ್ಯ, ಸಂಯಮ, ವಿವೇಚನಾಶೀಲತೆಗಳೊಡನೆ ಕೂಡಿದ ಪ್ರಸನ್ನತೆ, ಕಲಾ ಪ್ರೀತಿ ಮನಸೆಳೆಯುತ್ತವೆ. ಆರ್ಯದೇವತೆಗಳೊಡನೆಯೇ ನಮ್ಮ ಗ್ರಾಮಗಳಲ್ಲಿನ ಶಕ್ತಿದೇವತೆಯರೂ ಪ್ರಾಮುಖ್ಯತೆಯನ್ನು ಹೊಂದಿದ್ದಾರೆ. ರಾಜಕೀಯ ರಂಗಗಳಲ್ಲಿ, ಕಲೆಯ ಪ್ರಪಂಚದಲ್ಲಿ, ಧಾರ್ಮಿಕ ವ್ಯವಹಾರಗಳಲ್ಲಿ ಸ್ತ್ರೀಯರ ಪಾತ್ರ ಪ್ರಮುಖವಾಗಿ ತೋರುತ್ತದೆ. ನಾನಾ ಧರ್ಮಗಳು ಕನ್ನಡ ನಾಡಿನಲ್ಲಿ ಅಲೆಯಲೆಯಾಗಿ ಪ್ರವಹಿಸಿದವು. ಹಿಂದೂ ಧರ್ಮವನ್ನು ಉಳಿಸಬೇಕೆಂಬ ಉತ್ಸಾಹವೂ ಹಿಂದಿನಿಂದಲೇ ಹರಿಯಿತು. ಪರಮತ ಸಹಿಷ್ಣುತೆ ಸಾಕೆ? ಸ್ವಮತ ಸಂಸ್ಥಾಪನೆ, ಉದ್ಧರಣಗಳೂ ಅನಿವಾರ್ಯವಾದ ಕೆಲಸ.

'ಶಾಸನಗಳಲ್ಲಿ ಸಂಸ್ಕೃತಿ' ಎಂಬ ನಾಲ್ಕನೆಯ ವಿಭಾಗ ಆಸಕ್ತಿಯನ್ನುಂಟು ಮಾಡುವ ಒಂದು ಅಧ್ಯಾಯ. ನಮ್ಮ ನಾಡಿನ ಮತ್ತು ಸಂಸ್ಕೃತಿಯ ಉಜ್ವಲ ವರ್ಣಮಯ ಅನುಭವವನ್ನು ಈ ಶಾಸನಗಳು ನಮಗೆ ಉಂಟುಮಾಡುತ್ತವೆ. ನಮ್ಮವರ ಗತಜೀವನವನ್ನು ಚಿತ್ರಿಸುವ ಈ ಒಂದೊಂದು ಪುಟಗಳೂ ಕನ್ನಡಿಗರ ಕಲಿತನ, ಧರ್ಮ, ಪ್ರೀತಿ, ಉನ್ನತಿ, ಸೌಂದರ್ಯದೃಷ್ಟಿಗಳನ್ನು ಸಾರುತ್ತವೆ. ತಾಯಿ ಹಾಲಿನೊಡನೆ ಎರೆದ ಆದರ್ಶವೇ ಲಕ್ಷ್ಮೀಧರಾಮಾತ್ಯನ ಧರ್ಮಾನುರಾಗವಾಗಿ ಬೆಳೆದ ಪರಿಗೆ ಮನಸೋಲುತ್ತೇವೆ. ಸುಗುಣಗಣ ವಿಭೂಷಿತೆಯಾದ ಅತ್ತಿಮಬ್ಬೆಯೂ, ತಂದೆ ಮತ್ತು ಅಣ್ಣಂದಿರೊಡನೆ ಸೇರಿ ಊರನ್ನು ಮುತ್ತಿದ್ದ ಪುಂಡರನ್ನು ಹೊಡೆದಟ್ಟಿದ ಹರಿಯಕ್ಕನೂ ನಮ್ಮ ಕಣ್ಣ ಮುಂದೆ ಸ್ಫುಟವಾಗಿ ನಿಲ್ಲುತ್ತಾರೆ. ಕಾಡು ಮೇಡುಗಳಲ್ಲಿ ವಾಸಿಸುತ್ತ ರಾಜದಂಡಕ್ಕೆ ಸಿಲುಕದೆ ಜಾರುತ್ತ ಊರ ಶಾಂತಿಯನ್ನು ಕಲಕುವ ತುಡುಗ ಬೇಡರ ಪಡೆಯನ್ನಟ್ಟಿ, ವೀರಾವೇಶದಿಂದ ಕಾದಿ ಊರನ್ನು ಕಾಪಿಟ್ಟ ಸಹಣಿಯ ಚಿಣ್ಣ ಮತ್ತು ಹೆಲ್ಲಿಗರು ನಮ್ಮ ಅಭಿಮಾನಕ್ಕೆ ಪಾತ್ರರಾಗುತ್ತಾರೆ. ಹೊಯ್ಸಳರ ವೀರಬಲ್ಲಾಳನ ಕಾಲದ ಸಾತೇನಹಳ್ಳಿಯ ಸೆಟ್ಟಿಕವ್ವೆ ಅದ್ವಿತೀಯಳು. ಸಮಾಜ ಸೇವೆಗೆ ಹಿರಿಯ ಆದರ್ಶವೂ ಆದವಳು. ಮಡದಿಯರು ಯಾವಾಗಲೂ ಒರಳು ಒಲೆ ಗೆರಸಿ ಕಾವಲಿ ತಂಬಿಗೆ ಹುಟ್ಟುಸಟ್ಟುಗ ಎಂದಿರುತ್ತಾರೆ. ಆದರೀಕೆ ಅದನ್ನೇ ಹಚ್ಚಿಕೊಂಡು ಮುಳುಗಿರದೆ ದುಷ್ಟರನ್ನು ಶಿಕ್ಷಿಸುವುದರಲ್ಲಿ ಸಾಕ್ಷಾತ್ ದುರ್ಗಿಯ ಅವತಾರವಾಗಿದ್ದಳು. ದೇವಾಲಯವನ್ನು ನಿರ್ಮಿಸಿ ಮೃಡನನ್ನು ಪ್ರತಿಷ್ಠೆ ಮಾಡಿಸಿದ ಹಿರಿಮೆ ಈಕೆಯದು. ದೇವಾಲಯಕ್ಕೆ ಆನೆ ಕುದುರೆಗಳ ರಥವನ್ನು ದಾನವಾಗಿತ್ತು ದೇವದಾಸಿ ಬಾಡಿಪೊಡ್ಡಿ ಅನ್ವರ್ಥನಾಮಳಾಗಿ ರಂಜಿಸುತ್ತಾಳೆ. ಇವು

ಅಲ್ಲೊಂದು ಇಲ್ಲೊಂದು ಎತ್ತಿಕೊಂಡ ಹೆಸರುಗಳಷ್ಟೆ. ಕನ್ನಡ ನಾಡಿನ ಕೋಟ್ಯಾಂತರ ಹಳ್ಳಿಗಳಲ್ಲಿ ವೀರಗಲ್ಲು ಮಾಸ್ತಿಗಲ್ಲುಗಳು, ಶಾಸನಗಳು ನಮ್ಮ ಸಂಸ್ಕೃತಿಯ ವಿವಿಧ ವರ್ಣಗಳನ್ನು ಬಿಡಿಸುತ್ತವೆ, ನಮ್ಮ ಜನರ ಭಾವ ಪರಿಪುಷ್ಟಿಯನ್ನು ಚಿತ್ರಿಸುತ್ತವೆ.

ಶಾಸನಗಳ ಬಹುಮುಖವಾದ ಪ್ರಯೋಜನವನ್ನು ತಿಳಿಸಿ ಶ್ರೀಮಾನ್ ತಿಪ್ಪೇರುದ್ರಸ್ವಾಮಿಯವರು 'ಸಾಹಿತ್ಯದಲ್ಲಿ ಸಂಸ್ಕೃತಿ' ಎಂಬ ಐದನೆಯ ಅಧ್ಯಾಯಕ್ಕೆ ಬರುತ್ತಾರೆ. ಇಲ್ಲಿ ಕನ್ನಡ ಸಾಹಿತ್ಯ ವಾಹಿನಿಯನ್ನು ಸಂಸ್ಕೃತಿಯ ದೃಷ್ಟಿಯಿಂದ ಸಿಂಹಾವಲೋಕನ ಮಾಡಿದ್ದಾರೆ. ಕ್ರಮವಾಗಿ ಕನ್ನಡಿಗರ ಸಂಸ್ಕೃತಿಯ ವಿಕಾಸವನ್ನು ಹೇಳುವ ಉದ್ದೇಶವಿಲ್ಲಿಲ್ಲ. ಆದರೆ ಅದರ ರೂಪುರೇಖೆಗಳನ್ನು ಆಳ ಅಗಲಗಳನ್ನು ಸಮರ್ಥವಾಗಿ ಸಂಕ್ಷೇಪವಾಗಿ ಬಿಡಿಸಿದ್ದಾರೆ. ಜೀವನಕ್ಕೆ ತಳಹದಿಯಾದ ಧರ್ಮವೇ ಕಲೆಗಳಿಗೂ ಕಾವ್ಯಕ್ಕೂ ತಳಹದಿ. ನವರಸ ಭರಿತವಾಗಿ ನಾನಾ ಅಲಂಕಾರ ಗುಣ ರೀತಿಗಳಲ್ಲಿ ಹೊಳೆವ ಕಾವ್ಯಧಾರೆ, ವ್ಯಷ್ಟಿಯ ಮತ್ತು ಸಮಷ್ಟಿಯ ಮನಸ್ಸನ್ನು ತಿದ್ದುವುದಕ್ಕೆ ಉದ್ದೇಶಪಟ್ಟಿದೆ. ಬಾಳ್ವೆಯೆ ಒಂದು ಕಲೆ. ಅದನ್ನು ಸಾರ್ಥಕವಾಗಿ ಬಾಳುವುದೆ ಧನ್ಯತೆ. ಅದರಿಂದಲೆ ಆನಂದ ಪ್ರಾಪ್ತಿ. ಆನಂದ ಪ್ರಾಪ್ತಿಗೆ ತಕ್ಕ ಹಾದಿಯನ್ನು ಜೀವನದ ನಾನಾ ಜಟಿಲ ಕುಟಿಲ ವ್ಯೂಹಗಳಲ್ಲಿ ಸಿಲುಕಿದ ಜೀವಕ್ಕೆ ತೋರುವುದೆ ತತ್ವಜ್ಞರ ಶರಣರ ಭಾಗವತರ ಕೆಲಸ. ಅದರಲ್ಲಿ ಕಾವ್ಯದ ಪರಿಮಳವನ್ನು ಸೂಸಿದ ಸುಸಂಸ್ಕೃತರಾದ ಕವಿಗಳ ಪರಂಪರೆಯೇ ಇಲ್ಲಿ ಕಂಡು ಬರುತ್ತದೆ. ಕಾಲ ಸರಿದಂತೆ ಜನರ ದೃಷ್ಟಿಕೋನ ಬದಲಾಗಿದೆ. ಧರ್ಮವನ್ನು ಬೇರೆ ಬೇರೆ ಬಗೆಯಲ್ಲಿ ಅರ್ಥೈಸಿರುವುದು ಕಾಣುತ್ತದೆ. ಪಂಪ ರನ್ನರೇ ಮುಂತಾದ ಜೈನ ಕವಿಗಳು, ಪ್ರೌಢ ಗಂಭೀರವಾದ ಚಂಪೂ ಶೈಲಿಯಲ್ಲಿ ಬಣ್ಣಿಸುವ ತ್ಯಾಗ ಭೋಗಗಳ ಉನ್ನತಿ, ಉದಾತ್ತ ವೀರ ಜೀವನ, ಧಾರ್ಮಿಕ ಶ್ರದ್ಧೆಗಳದು ಒಂದು ಅಲೆ. ಮಾಂತ್ರಿಕನಂತೆ ನಡುಗನ್ನಡದ ಆಡು ಮಾತಿನ ಸಿರಿಯಲ್ಲಿ ಸಾಮಾನ್ಯರ ಕಿವಿಗೆ ವಚನಗಳ ಉಪನಿಷತ್ತನ್ನು ವೇದವನ್ನು ಬರೆದು ಹೊಸ ಸಮಾಜವನ್ನು ಹೊಸ ಕಾವ್ಯ ಪಂಥವನ್ನು ಕಟ್ಟಿದ ಬಸವಣ್ಣ ಮತ್ತಿತರ ವಚನಕಾರರ ಸಮೂಹ ಇನ್ನೊಂದು ಅಲೆ. ಅಲ್ಲಿಂದ ಮುಂದೆ ಗೋಕುಲದ ಕೃಷ್ಣನ ಮಾಯೆಯನ್ನು ಬೀಸಿ, ಜನರನ್ನು ಮುಗ್ಧರನ್ನಾಗಿಸಿ ಜಾಗೃತಿಗೆ ತಂದ ಭಾಗವತ ಕವಿಗಳ ಕಾವ್ಯವಾಣಿ ಮತ್ತೊಂದು ಅಲೆಯಾಗಿ ನಾಡನ್ನು ವ್ಯಾಪಿಸಿತು. ಹಾಡನ್ನು ಬೆಳೆಯಿಸಿ ಸಂಗೀತದಲ್ಲಿ ಮೀಯಿಸಿ ಮನವನ್ನು ಹೊಕ್ಕು ನಿಂತ, ಅಂತರಂಗವನ್ನು ಮುಟ್ಟಿದ ಧೀರರು ಇವರು. ಅಲ್ಲಿಂದ ಇಂದಿಗೆ, ಕುವೆಂಪುರವರ ವರೆಗೆ, ಬೆಳೆದ, ಬೆಳೆಯುತ್ತಿರುವ ಕನ್ನಡ ಸಾಹಿತ್ಯ ಸಂಸ್ಕೃತಿಯ ನಾನಾ ಎಳೆಗಳನ್ನು ಇಲ್ಲಿ ಬಿಡಿಸುವ ಪ್ರಯತ್ನ ಮಾಡಿದ್ದಾರೆ. ನವಯುಗದ ಪಾಶ್ಚಾತ್ಯ ಮತ್ತು ವಿಶ್ವಸಂಸ್ಕೃತಿಯ ಪ್ರಭಾವ ಕನ್ನಡ ಜನತೆಯ ಮೇಲೆ ಎಂತಾಯಿತು ಎಂಬ ವರೆಗೆ ಈ ಅಧ್ಯಾಯದ ಹರಹು.

ಮುಂದೆ 'ಜಾನಪದ ಸಾಹಿತ್ಯ'ವನ್ನು ಕುರಿತು ಒಂದು ಅಧ್ಯಾಯ. ಇದೊಂದು ರಸದ ಹರಿಗೋಲು. ಕನ್ನಡ ಜನತೆಯ ಹೃದಯ ಸಮುದ್ರದಲೆಗಳ ಮೇಲೆ, ಭಾವ

ವೀಚಿಗಳ ನಡುವೆ ಸುಳಿಯುಬಹುದು. ಕನ್ನಡಿಗರ ಸಂಸ್ಕೃತಿಯ ಮೂಲರೂಪವನ್ನು ಇಲ್ಲಿ ನೋಡಬಹುದು. ಮುಖ್ಯವಾಗಿ ತತ್ವ ಧರ್ಮಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಮಾತನ್ನು ಹೇಳಿದೆ. ಜನಪದ ಸಾಹಿತ್ಯ ನಮ್ಮ ಸಂಸ್ಕೃತಿಯ ಶಿಖರಕ್ಕೆ ತಪ್ಪಲು. ಈ ಕೃತಿ ಸಮುದಾಯದ ಕಾಲವನ್ನು ಕುರಿತು ನಿಖರವಾದ ಅಭಿಪ್ರಾಯ ಕಷ್ಟ. ಆದರೆ ವಿದ್ವತ್ಸಮಾಜದ ಪ್ರಭಾವಕ್ಕೆ ಅಷ್ಟಾಗಿ ಒಳಪಡದ ಹಳ್ಳಿಯ ಸಮಾಜ–ರೈತರು, ನಾನಾ ಬಗೆಯ ಕರ್ಮಕಾರರು, ಹೆಂಗಳೆಯರು ಇಲ್ಲಿ ಕಾಣಸಿಗುತ್ತಾರೆ. ಅವರ ಸರಳ ಜೀವನ ಈ ಸಾಹಿತ್ಯದಲ್ಲಿ ಢಾಳಾದ ಬಣ್ಣಗಳಲ್ಲಿ ಚಿತ್ರಿತವಾಗಿದೆ. ಓರೆ ಕೋರೆಗಳನ್ನು ಜಟಿಲತೆಯನ್ನು ಅರಿಯದ ಅವರ ಕವಡಿಲ್ಲದ ಬಗೆ ಈ ಹಾಡುಗಳ ತುಂಬ ಕಾಣಸಿಗುತ್ತದೆ. ಇಹಜೀವವನ್ನು ನಿರ್ಲಿಪ್ತರಾಗಿ ನೋಡಿ ಅಲ್ಲಿನ ಚೆಲುವನ್ನು ಗುರುತಿಸಬಲ್ಲ ಹುಟ್ಟು ಪ್ರತಿಭಾವಂತರು ಇವರು. ಸಾಮಾನ್ಯ ಜೀವನದ ಬಿಳುಪಿನೊಳಗೆ ಕಾಮನ ಬಿಲ್ಲಿನ ಸೌಂದರ್ಯವನ್ನು ಗುರುತಿಸಬಲ್ಲ ಧೀರರು ಇವರು. ದೇವ ದೇವಿಯರನ್ನು ತಮ್ಮ ನೆರೆಯವರಂತೆ ಕಾಣುತ್ತಾರೆ. ಅವರಲ್ಲೂ ಶಕ್ತರು ಅಶಕ್ತರು ಇದ್ದಾರೆ. ಅವರಿಗೂ ಸಂಸಾರದ ಭಂಗ ಬಿಡದು. ಫಲಭಾರದಿಂದ ಬಾಗಿದ ತೋಟಗಳು, ನಿಂಬೆಯ ಹಣ್ಣಿನಂತೆ ತುಂಬಿ ಬಾಳೆಯ ಹಣ್ಣಿನಂತೆ ಬಾಗಿದ ಕೆರೆ, ಮುಂಗೈಯ ನೋಡಿ ನಗುವ ಮೀನುಗಳು, ಹೊಳಪು ಮೈಯಿನ ಬಸವಣ್ಣಗಳ ಮಧ್ಯೆ ಅಣ್ಣ ತಮ್ಮಂದಿರ, ಅಕ್ಕ ತಂಗೆಂದಿರ, ಭಾವ ಮೈದುನರ, ಅತ್ತಿಗೆ ನಾದನಿಯರ, ಅತ್ತೆ ಮಾವಂದಿರ, ತಂದೆ ತಾಯಂದಿರ ಬದುಕು ನಾನಾ ವರ್ಣಗಳಲ್ಲಿ ಸಾಗುತ್ತದೆ. ಎಳ್ಳು ಜೀರಿಗೆ ಹೊಲಗಳ ಸೆರಗಿನ ತಾಯಿ, ಒಳ್ಳೊಳ್ಳೆ ಮೀನು ಗರಿಬಿಚ್ಚಿ ಆಡುವ ಗರತಿ ಗಂಗಮ್ಮನ ಮಡಿಲು ಇವರ ಜೀವಕ್ಕೆ ರಕ್ಷೆಯಾಗಿದೆ. ಪ್ರಕೃತಿಯ ಹಿನ್ನೆಲೆಯಲ್ಲಿ ಸರಿವ ಇವರ ಜೀವನದಿಗೆ ಯಾವ ಆತಂಕ? ಮುಗ್ಧರಾಗಿ ಇವರು ಸುಖಿಗಳು. ಇವರ ಅನುಭವದ ಸವಿಯನ್ನು ಸಾಹಿತ್ಯ ಶಕ್ತಿಯನ್ನು ಗೀತೆಗಳಲ್ಲಿ ಗಾದೆಗಳಲ್ಲಿ ಏಕಪ್ರಕಾರವಾಗಿ ಕಾಣಬಹುದು. ಸತ್ಯವೂ ಸೌಂದರ್ಯವೂ ಎರಡು ಕಣ್ಣಾಗಿ ಹೊಳೆವ ಜನಪದ ಸಾಹಿತ್ಯವನ್ನು ಶ್ರೀಮಾನ್ ತಿಪ್ಪೇರುದ್ರಸ್ವಾಮಿಯವರು ಇಲ್ಲಿ ಎಚ್ಚರಿಕೆಯಿಂದ ಸಂಗ್ರಹಿಸಿದ್ದಾರೆ. ಅದರ ಬಹುಮುಖವಾದ ರೂಪನ್ನು ಇಲ್ಲಿ ಮನಗಾಣಿಸಿದ್ದಾರೆ. ಇವುಗಳನ್ನುಇನ್ನೂ ಹೇಳಬೇಕೆಂಬ ಆಶಯ ಉತ್ಸಾಹ ಅವರಲ್ಲಿರುವುದು ಕಂಡು ಬರುತ್ತದೆ.

ವಾಸ್ತುಶಿಲ್ಪ ಮತ್ತು ಶಿಲ್ಪವೆಂಬ ಏಳನೆಯ ವಿಭಾಗದಲ್ಲಿ ಪ್ರಾಚೀನ ಶಾಸ್ತ್ರಗ್ರಂಥಗಳ ಸಾರ ಮತ್ತು ಆಧುನಿಕ ಲೇಖಕರ ವಿಮರ್ಶನ ದೃಷ್ಟಿಗಳೆರಡರ ಲಾಭ ನಮಗೆ ದೊರೆಯುತ್ತದೆ. ನಿರಾಕಾರವಾದ ಆಕಾಶವನ್ನು ವ್ಯವಸ್ಥೆಗೊಳಿಸಿ ಅದಕ್ಕೊಂದು ರೂಪು ಕೊಡುವ ಕಲೆಯೆ ವಾಸ್ತುಶಿಲ್ಪ. ಗೋಡೆ ಛಾವಣಿಗಳನ್ನು ಹಾಕಿ ಅನಂತವಾದ ಆಕಾಶವನ್ನು ಸಾಂತಗೊಳಿಸುವುದು, ವಾಸಯೋಗ್ಯವಾಗಿ ಮಾಡುವುದು ವಾಸ್ತುಕಲೆ ಎಂದು ಹೇಳುತ್ತಾರೆ. ಭರತಖಂಡದ ವಾಸ್ತುಶಿಲ್ಪದ ಚರಿತ್ರೆ ಎಂದರೆ ನಮ್ಮ ಜನಾಂಗದ

ಅಭಿರುಚಿಯ ಚರಿತ್ರೆ. ಇದು ಧಾರ್ಮಿಕ, ರಾಜಕೀಯ, ಸಾಮಾಜಿಕ ಕಾರಣಗಳಿಗೆ ಬೆಳೆಯಿತು ಬದಲಾಯಿತು. ಅಂತೆಯೇ ವಾಸ್ತುಶಿಲ್ಪದ ಇತಿಹಾಸ ವಿಪುಲ, ವೈವಿಧ್ಯಮಯ ಮತ್ತು ಸಾಹಸಪೂರ್ಣವಾಯಿತು ಎಂದಿರುವುದು ಸಹಜವೇ.

ಹರಪ್ಪ ಮೊಹೇಂಜೊದಾರೊಗಳಲ್ಲಿನ ವಾಸ್ತುಶಿಲ್ಪದ ಅವಶೇಷಗಳನ್ನು ಕುರಿತು ಪ್ರಸ್ತಾಪಿಸಿ ಅಲ್ಲಿನ ಜನತೆಯ ಸಾಧನೆಯ ಮಟ್ಟವನ್ನು ವಿವರಿಸುತ್ತಾರೆ. ಎಳೆಯ ಬೊಂಬಿನಲ್ಲಿ ವೃತ್ತಾಕಾರವಾಗಿ ರಚಿತವಾದ ಜೇನುಗೂಡಿನಂತಹ ಗುಡಿಸಲುಗಳಿಂದ ಮೊದಲುಗೊಂಡು ಹಸಿಯಮಣ್ಣಿನ ಇಟ್ಟಿಗೆಗಳಿಂದ ನಿರ್ಮಿತವಾದ ಮನೆಗಳಾಗಿ ಮುಂದೆ ಮರದಿಂದ ರಚಿತವಾದ ಸುಂದರವಾದ ಮಾಡಗಳಾಗಿ, ಕೊನೆಗೆ ಕಲ್ಲಿನ ಕಟ್ಟಡಗಳಾದುದೆ ಈ ಕಲೆಯ ವಿಕಾಸದ ಪಥ. ನಡುವೆ ಗುಹಾಂತರ್ದೇವಾಲಯಗಳದು ಒಂದು ಮಾದರಿ. ಇವೆಲ್ಲವುಗಳಲ್ಲಿ ನಾನಾ ವಿಧಾನಗಳು ಕಂಡು ಬಂದುವು. ಇದು ನಮ್ಮ ನಾಗರಿಕತೆ ಬೆಳೆದ ಹಾದಿ. ಸಂಸ್ಕೃತಿ ತಕ್ಕಮಟ್ಟಿಗೆ ಶಾಶ್ವತವಾದ ರೂಪವನ್ನು ಪಡೆಯಿತು. ಅವುಗಳಲ್ಲಿ ಗಾಂಧಾರ ರೀತಿ, ಮಥುರಾ ರೀತಿಗಳನ್ನು ಹೇಳಿ ಅನಂತರ ಕರ್ನಾಟಕದ ವಾಸ್ತುಶಿಲ್ಪದ ಇತಿಹಾಸವನ್ನು ಅವಲೋಕಿಸುತ್ತಾರೆ. ಪಾರಿಭಾಷಿಕ ವಿವರಗಳಿಗೆ ಹೋಗದೆ ಪ್ರಮುಖ ದೇವಾಲಯಗಳನ್ನು ಮಾತ್ರ ಕುರಿತು ಹೇಳುತ್ತೇನೆಂದು ತಮ್ಮ ಪರಿಮಿತಿಯನ್ನು ತಿಳಿಸುತ್ತಾರೆ.

ಕರ್ನಾಟಕದ ವಾಸ್ತುಶಿಲ್ಪದ ಇತಿಹಾಸದಲ್ಲಿ ನಾಲ್ಕು ಘಟ್ಟಗಳು. ಕದಂಬ ಯುಗ (ಚಾಲುಕ್ಯ ಪೂರ್ವಯುಗ), ಚಾಲುಕ್ಯಯುಗ, ಹೊಯ್ಸಳ ಯುಗ, ವಿಜಯನಗರ ಯುಗ—ಅಲ್ಲಿ ಒಂದು ಕವಲಾಗಿ ಮುಸ್ಲಿಂ ಶೈಲಿ—ಎಂದು ಅದರ ಸ್ಥೂಲರೇಖೆಗಳನ್ನು ತಿಳಿಸುತ್ತಾರೆ. ಇವುಗಳಲ್ಲಿ ಕಂಡುಬರುವ ಸೌಂದರ್ಯ, ಕುಸುರಿ ಕೆಲಸ, ಭಾವಪೂರ್ಣತೆಗಳನ್ನು ತಿಳಿಸಿ ದೇವಾಲಯದ ಯೋಜನೆಯಲ್ಲಿ ಕಂಡು ಬರುವ ಮಾರ್ಪಾಡುಗಳನ್ನು ವಿವರವಾಗಿ ಬಣ್ಣಿಸುತ್ತಾರೆ. ಧಾರ್ಮಿಕ ಆವಶ್ಯಕತೆಗಳಿಗೆ ತಕ್ಕಂತೆ ಸಾಮಾಜಿಕ ಸ್ಥಿತಿಗತಿಗಳಿಗೆ ತಕ್ಕಂತೆ ರೂಪಿತವಾದ ಗುಹಾಂತರ್ದೇವಾಲಯಗಳ ಬೆಳವಣಿಗೆ ನಮಗೊಂದು ಸೋಜಿಗವಾಗಿದೆ.

ಮೂರ್ತಿ ಶಿಲ್ಪದ ಇತಿಹಾಸ ವಾಸ್ತುಶಿಲ್ಪಕ್ಕಿಂತ ಪ್ರಾಚೀನವಾದುದು. ಧಾರ್ಮಿಕ ಶ್ರದ್ಧೆಯೇ ಮೂಲವಾಗಿ ಉಳ್ಳದ್ದು. ನಮ್ಮ ಕಲೆಯನ್ನು ಬೆಳೆಸಿರುವ ಅಂಶಗಳಲ್ಲಿ ಧರ್ಮದ ಪಾಲು ಬಹುದೊಡ್ಡದು. ಶಿಲ್ಪಕಲೆ ವೈವಿಧ್ಯಮಯವಾದರೂ ಶಿಲ್ಪಶಾಸ್ತ್ರದ ತಳಹದಿಯಲ್ಲಿ ಏಕಸೂತ್ರತೆ ಇದೆ ಎಂದೂ, ಅದು ಅಳತೆ ಪ್ರಮಾಣಗಳನ್ನು ನಿಖರವಾಗಿ ಹೇಳಿ ಎಂತೆಂತಹ ವಿಗ್ರಹಗಳನ್ನು ಯಾವ ಯಾವ ಬಗೆಯಲ್ಲಿ ಕಡೆಯಬೇಕೆಂದು ತಿಳಿಸುತ್ತದೆ ಎನ್ನುತ್ತಾರೆ. ಹೊಯ್ಸಳ ಶಿಲ್ಪದಲ್ಲಿ ಕುಸುರಿಯ ನಾಜೂಕು ಮನಸೆಳೆದರೆ, ಗಂಗರ ಶಿಲ್ಪದಲ್ಲಿ ಸರಳವೂ ಭವ್ಯವೂ ಆದ ರೂಪವೈಭವ ಬೆರಗುಪಡಿಸುವುದು ಎಂದು ಹೇಳಿ, ಗೊಮ್ಮಟನ ವಿಗ್ರಹದ ಅಸದೃಶವಾದ ಚೆಲ್ವಿಕೆಯನ್ನು ಬಣ್ಣಿಸಿದ್ದಾರೆ. ಅಧ್ಯಾಯದ ಕೊನೆಗೆ ಕನ್ನಡಿಗರ ಕಂಚಿನ ಎರಕದ ಕಲಾಪರಿಣತಿಯನ್ನು, ದಂತ ಮತ್ತು ಗಂಧದ

ಮರದ ವಿಗ್ರಹಗಳಲ್ಲಿ ಅವರು ತೋರಿರುವ ಕೌಶಲವನ್ನು ಸಂಕ್ಷೇಪವಾಗಿ ಸೂಚಿಸಿದ್ದಾರೆ. ಇದು ಇನ್ನೂ ವಿವರವಾಗಬಹುದಿತ್ತೆಂದು ಕಾಣುತ್ತದೆ.

ಈ ಅಧ್ಯಾಯದ ತುಂಬ ಶಾಸ್ತ್ರೀಯವಾದ ವಿವರಗಳಿವೆ. ನಮ್ಮ ನಾಡಿನ ಮೂಲೆ ಮೂಲೆಗಳಲ್ಲಿ ಮೌನವಾಗಿ ನಿಂತಿರುವ ಇತಿಹಾಸ ಪ್ರಸಿದ್ಧವಾದ ಮತ್ತು ಕಲೆಯ ವಿಕಾಸದ ಹಾದಿಯಲ್ಲಿ ಮೈಲಿಗಲ್ಲುಗಳಾದ ದೇವಾಲಯಗಳ ಮೂರ್ತಿ ಶಿಲ್ಪಗಳ ಕೆಲವು ಚಿತ್ರಗಳಿವೆ. ಓದುಗರ ಆಸಕ್ತಿಯನ್ನು ಪ್ರಚೋದಿಸಿ, ಉಪಯುಕ್ತವಾದ ಸಲಹೆಗಳನ್ನು ಇವು ಕೊಡುತ್ತವೆ. ಕರ್ಣಾಟಕದ ಮತ್ತು ಭಾರತೀಯ ಸಂಸ್ಕೃತಿಗೆ ನಮ್ಮ ಶಿಲ್ಪಿಗಳ ಕೊಡುಗೆ ಬಹಳ ಹಿರಿದೆಂಬುದನ್ನು ನಾವಿಲ್ಲಿ ಮನಗಾಣಬಹುದು.

ಸಂಗೀತ ಮತ್ತು ನೃತ್ಯವನ್ನು ಕುರಿತ ಎಂಟನೆಯ ಅಧ್ಯಾಯದಲ್ಲಿ ಸಂಗೀತ ಕಲೆ ಒಂದು ಅರ್ಥದಲ್ಲಿ ಎಲ್ಲ ಕಲೆಗಳಿಗಿಂತ ಪ್ರಾಚೀನ ಮತ್ತು ಪ್ರಭಾವಶಾಲಿ ಎನ್ನುತ್ತಾರೆ. ಭಗವಂತನ ಗಾಯನ ಸೃಷ್ಟಿಯ ರೂಪದಲ್ಲಿ ಅಭಿವ್ಯಕ್ತವಾಗಿದೆ. ಅಲ್ಲಿ ರಾಗ ಲಯಗಳು ಮಿಳಿತವಾಗಿರುವ ಬಗೆಯನ್ನು ಎಲ್ಲರೂ ಅರಿತವರೆ ಎಂದು ಹೇಳಿ, ಭಾರತೀಯ ಸಂಗೀತಕ್ಕೆ ಮೂಲ ಋಗ್ವೇದ, ಅಲ್ಲಿಂದ ಕ್ರಮಕ್ರಮವಾಗಿ ಇತರ ವೇದಗಳಲ್ಲಿ ವಿಸ್ತಾರಗೊಂಡು ಸಪ್ತಸ್ವರಗಳಿಂದ ಪೂರ್ಣವಾಗಿ ಲೌಕಿಕ ಸಂಗೀತವೆಂಬ ಶಾಖೆಯನ್ನು ಪಡೆಯಿತು ಎನ್ನುತ್ತಾರೆ. ಮೊದಲು ಗೀತ ವಾದ್ಯ ನೃತ್ಯವನ್ನು ಸಂಗೀತವೆನ್ನುತ್ತಿದ್ದರು. ಈಗ ಗೀತ ವಾದ್ಯಗಳನ್ನು ಮಾತ್ರ ಸಂಗೀತವೆಂಬ ಹೆಸರಿನಿಂದ ವ್ಯವಹರಿಸುತ್ತಾರೆ. ಧ್ವನಿಸಮುದಾಯವನ್ನು ಕುರಿತು ಸೂಕ್ಷ್ಮಾತಿಸೂಕ್ಷ್ಮವಾದ ಪ್ರಯೋಗಗಳನ್ನು ನಡೆಸಿ ಸಂಗೀತಕಲೆಯನ್ನು ನಮ್ಮ ಕಲಾವಿದರು ಅತ್ಯಂತ ಸೂಕ್ಷ್ಮವೂ ಸಂಪೂರ್ಣವೂ ಆಗುವಂತೆ ಮಾಡಿದ್ದಾರೆ. ಲೌಕಿಕ ಸಂಗೀತದಲ್ಲಿ ಮಾರ್ಗ ಮತ್ತು ದೇಸಿಗಳೆಂಬ ಎರಡು ಕವಲು. ಈ ದೇಸೀ ಸಂಗೀತವೇ ಮುಂದೆ ಪ್ರಾದೇಶಿಕ ಭಿನ್ನತೆಗೆ ಒಳಗಾಗಿ ಕರ್ಣಾಟಕ ಮತ್ತು ಹಿಂದೂಸ್ತಾನಿ ಎಂಬ ಎರಡು ಸಂಪ್ರದಾಯಗಳಾದವು. ಈ ನಾದದ ಹೊಳೆಯನ್ನು ವ್ಯವಸ್ಥೆಗೊಳಿಸಿ ಕಲೆಯ ಮಾಧ್ಯಮವಾಗಿ ಶಾಸ್ತ್ರವಾಗಿ ಬೆಳೆಸಿದವರು ಮುಖ್ಯವಾಗಿ ಭರತ, ಮತಂಗ, ನಾರದ, ಸಾರಂಗದೇವ, ಹರಿಪಾಲ, ಅಹೋಬಲ, ವಿದ್ಯಾರಣ್ಯ, ರಾಮಾಮಾತ್ಯ, ವೆಂಕಟಮುಖಿ, ತುಳಜ ಮತ್ತು ಪುಂಡಲೀಕ ವಿಠ್ಠಲರು. ಅಲ್ಲದೆ ಅಭಿನವಗುಪ್ತ, ಕಲ್ಲಿನಾಥ, ಸಿಂಹಭೂಪಾಲರೆಂಬ ವ್ಯಾಖ್ಯಾನಕಾರರೂ ಆ ದಿಸೆಯಲ್ಲಿ ಸಾಕಷ್ಟು ಸೇವೆ ಸಲ್ಲಿಸಿದ್ದಾರೆ. ಶ್ರುತಿ ಮತ್ತು ತಾಳಗಳ ನಡುವೆ ಹರಿವ ಈ ನಾದದ ಹೊಳೆಗೆ ವೈಯಕ್ತಿಕವಾದ ಅನುಭವ ಮಿಳಿತವಾಗುವುದರಿಂದ ಇಲ್ಲಿ ಶಾಸ್ತ್ರದ ತಳಹದಿಯ ಮೇಲೆ ಕಲೆ ಪುನಃಪುನಃ ಸೃಷ್ಟಿಯಾಗಿ ರಂಜಿಸುತ್ತದೆ. ಶ್ರೀಮಾನ್ ತಿಪ್ಪೇರುದ್ರಸ್ವಾಮಿಯವರು ಕರ್ಣಾಟಕ ಮತ್ತು ಹಿಂದೂಸ್ತಾನಿ ಸಂಗೀತಗಳಲ್ಲಿರುವ ಭೇದವನ್ನೆಣಿಸುತ್ತ, ಕರ್ಣಾಟಕ ಸಂಗೀತ ತಾಳಕ್ಕೆ ಪ್ರಾಧಾನ್ಯವಿತ್ತರೆ ಹಿಂದೂಸ್ತಾನಿ ಶ್ರುತಿಗೆ ಪ್ರಧಾನತೆ ಕೊಡುತ್ತದೆ. ಅವೆರಡರಲ್ಲಿ ಒಂದು ಸಾಹಿತ್ಯಶುದ್ಧಿ ಮತ್ತು ಇನ್ನೊಂದು ನಾದಲೀನತೆಗೆ ಪ್ರಾಮುಖ್ಯವೀಯುತ್ತದೆ ಎಂದಿದ್ದಾರೆ. ಅಷ್ಟೇ ಅಲ್ಲದೆ

'ಸ್ವರದಿಂದ ಸ್ವರಕ್ಕೆ ಜಾರುವ ಕ್ರಮದಲ್ಲಿಯೂ ಈ ಭೇದ ಕಂಡುಬರುತ್ತದೆ' ಎಂಬುದು ಆಧುನಿಕ ವಿದ್ವಾಂಸರ ಮತ.

ಸಂಗೀತದಲ್ಲಿ ಕರ್ನಾಟಕದ ಸಾಧನೆ ವಿಶಿಷ್ಟವಾದುದು ಮತ್ತು ಹೆಮ್ಮೆ ಪಡುವಂತಹುದು. ನಿರಂತರವಾಗಿ ಈ ಅಮೃತವರ್ಷವನ್ನು ಉದಾರತೆಯಿಂದ ಪೋಷಿಸಿಕೊಂಡು ಬಂದು, ಉತ್ತರದವರ ಸಂಗೀತ ಮುಸ್ಲಿಂ ಪ್ರಭಾವಕ್ಕೆ ಸಿಕ್ಕಿ ಬದಲಾಗತೊಡಗಿದಾಗ ದಕ್ಷಿಣದ ಸಂಪ್ರದಾಯವನ್ನುಳಿಸಿ ಅದಕ್ಕೊಂದು ಕಟ್ಟನ್ನು ನಿರ್ಮಿಸಿ ಕರ್ನಾಟಕ ಕಾಪಿಟ್ಟಿತು. ಆದ್ದರಿಂದಲೇ ಕರ್ನಾಟಕ ಸಂಗೀತವೆಂಬ ಸಾರ್ಥಕನಾಮ ಅದಕ್ಕುಳಿದುದು. ಕ್ರಿ. ಶ. ೪ನೆಯ ಶತಮಾನದ ಇಳಂಗೋವಡಿಗಳೆಂಬ ಚೇರಮರಾಜನ ಕೃತಿಯೇ ಮೊದಲುಗೊಂಡು ಐದನೆಯ ಶತಮಾನದ, ಕನ್ನಡದ ಮತಂಗನ 'ಬೃಹದ್ದೇಶಿ' ಸಂಗೀತ ಪ್ರಪಂಚವನ್ನು ವಿಸ್ತರಿಸಿದವು. ಚಾಲುಕ್ಯ ಸೋಮೇಶ್ವರ ಭೂಲೋಕಮಲ್ಲನ 'ಮಾನಸೋಲ್ಲಾಸ'ವು ಸಂಗೀತವನ್ನು ಕುರಿತ ವಿಶ್ವಕೋಶವೇ ಆಗಿದ್ದು, ಕರ್ನಾಟಕ ಸಂಗೀತವೆಂಬ ಹೆಸರನ್ನು ಮೊದಲ ಬಾರಿಗೆ ಉಲಿಯಿತು. ಈ ಮಾತನ್ನು ಮುಂದೆ ಹರಿಪಾಲನು ಅನುಮೋದಿಸಿದ್ದಾನೆ. ಸಾರಂಗದೇವ, ಗೋಪಾಲನಾಯಕ ಮುಂತಾದವರು ಬೆಳೆಸಿ ಹರಡಿದ, ಪುಂಡರೀಕ ವಿಠಲನು ಪ್ರಚುರಪಡಿಸಿದ ಕರ್ನಾಟಕ ಸಂಗೀತ ಶಿವಶರಣರ ಹಾಡುಗಾರಿಕೆಗೆ ಅನುವಾಗಿ, ಪುರಂದರ ದಾಸರಿಂದ ಸರಳ ಸುವ್ಯವಸ್ಥಿತ ರೂಪವನ್ನು ತಾಳಿತು. ಕಲಿಯುವವರಿಗಾಗಿ ಸರಳೆ ಜಂಟಿ ವರಸೆಗಳನ್ನು ಪಿಳ್ಳಾರಿ ಗೀತೆಗಳನ್ನು ಅವರು ರಚಿಸಿ ಸಂಗೀತ ಹೆಚ್ಚು ಜನಪ್ರಿಯವಾಗುವಂತೆ, ಎಲ್ಲರ ಬಾಯಲ್ಲೂ ಸುಲಭವಾಗಿ ನಲಿಯುವಂತೆ ಮಾಡಿದರು ಎಂದು ಹೇಳಿ, ತುಂಬ ವಿವರವೂ ಅಭಿಮಾನವನ್ನುಂಟುಮಾಡುವುದೂ ಆದ ಈ ಅಧ್ಯಾಯವನ್ನು ಮುಗಿಸಿ ಡಾ. ತಿಪ್ಪೇರುದ್ರಸ್ವಾಮಿಯವರು ಮುಂದೆ ನರ್ತನದ ವಿಕಾಸವನ್ನು ಅವಲೋಕಿಸಿದ್ದಾರೆ.

ಸೃಷ್ಟಿಯೇ ಶಿವನ ನಾಟ್ಯ, ನಟರಾಜನೇ ಅದರ ಅಧಿದೇವತೆ ಎಂದು ಹೇಳಿ, ಭರತನ ನಾಟ್ಯಶಾಸ್ತ್ರದಲ್ಲಿ ನೃತ್ಯವನ್ನು ಕುರಿತ ವಿವರಣೆಗಳನ್ನು ಸಂಗ್ರಹಿಸುತ್ತ ಅದರ ಅಂಗ ಪ್ರತ್ಯಂಗಗಳನ್ನೂ ನಾನಾ ಪಾರಿಭಾಷಿಕ ಶಬ್ದಗಳನ್ನೂ ವರ್ಣಿಸಿದ್ದಾರೆ. ನಂದಿಕೇಶ್ವರನ ಅಭಿನಯದರ್ಪಣವನ್ನು ಪ್ರಸ್ತಾಪಿಸಿ, ಸೂಕ್ಷ್ಮವಾಗಿ ಬೆಳೆದ ಈ ಅಭಿನಯ ಶಾಸ್ತ್ರವನ್ನು, ಆ ಮೂಲಕವಾಗಿ ಸಾಧ್ಯವಾಗುವ ಕಲೆಯ ಅಭಿವ್ಯಕ್ತಿಯನ್ನೂ ಅಚ್ಚರಿ ಯಿಂದ ಬಣ್ಣಿಸಿದ್ದಾರೆ. ಭರತನಾಟ್ಯ ಕರ್ನಾಟಕದಲ್ಲಿ ಬೆಳೆದಿರುವುದಲ್ಲದೆ, ಯಕ್ಷಗಾನ ದೊಡ್ಡಾಟಗಳು ಇಲ್ಲಿನ ಪ್ರಾದೇಶಿಕ ಅಭಿರುಚಿ ಮತ್ತು ಸ್ವತಂತ್ರ ಮನೋಧರ್ಮವನ್ನು ಪ್ರಕಟಿಸಿವೆ ಎಂದಿದ್ದಾರೆ. ಇವುಗಳ ಪ್ರತಿಧ್ವನಿಯಾಗಿ ಬಯಲಾಟ ಬೆಳೆದಿದೆ ಎನ್ನುವರು. ಯಕ್ಷಗಾನ ಬೊಂಬೆಯಾಟವನ್ನು ಕುರಿತು ಇಲ್ಲಿ ಪ್ರಸ್ತಾಪವಿಲ್ಲ.

ಕೊನೆಯದಾಗಿ ಚಿತ್ರಕಲೆಯನ್ನು ಕುರಿತ ಒಂಬತ್ತನೆಯ ಅಧ್ಯಾಯದಲ್ಲಿ ಇತರ ಕಲೆಗಳಂತೆ ಚಿತ್ರಕಲೆಯೂ ಬಹು ಪ್ರಾಚೀನ ಕಾಲದಿಂದಲೂ ಮಾನವನ

ಸಂಗಾತಿ. "ನಾಗರಿಕನಾಗುವುದಕ್ಕೂ ಮೊದಲು ಆದಿಮಾನವ ತನ್ನ ಗುಹೆಗಳಲ್ಲಿ ತನ್ನ ಭಾವಗಳನ್ನು ಚಿತ್ರಗಳ ಮೂಲಕ ವ್ಯಕ್ತಪಡಿಸಿಕೊಂಡಿದ್ದಾನು" ಎನ್ನುವರು.

ಭಾರತೀಯ ಚಿತ್ರಕಲೆಯ ಇತಿಹಾಸವನ್ನು ಬಿಡಿಸಲು ಆಧಾರಗ್ರಂಥಗಳನ್ನು ಪ್ರಸ್ತಾಪಿಸಿ, ಪ್ರಾಚೀನಕಾಲದ ಗುಹಾಂತರ್ದೇವಾಲಯಗಳಲ್ಲಿ ಮೂಡಿದ ಚಿತ್ರಗಳನ್ನು ವಿಶ್ಲೇಷಿಸುತ್ತಾರೆ. ಇಲ್ಲಿ ಅವರು ಭಿತ್ತಿಯನ್ನು ಸಿದ್ಧಪಡಿಸಿಕೊಳ್ಳುತ್ತಿದ್ದ ರೀತಿ, ಅವರ ಬಣ್ಣಗಳ ತಯಾರಿಕೆಯ ವಿವರಗಳು ಸ್ವಾರಸ್ಯವಾಗಿವೆ. ಭಿತ್ತಿಯ ನಿರ್ಮಾಣದಲ್ಲಿ ಆದ ಬದಲಾವಣೆ ಎನ್ನುವುದು ನಾಗರಿಕತೆಯ ಮುನ್ನಡೆಯ ಕುರುಹು. ಅಂದಿನ ಬೌದ್ಧಭಿಕ್ಷು ತಮ್ಮ ಶಾಂತವಾದ ಮನದ ಧರ್ಮಾನುರಾಗವನ್ನು ಬುದ್ಧನ ಪರವಾದ ಈ ಸುಂದರ ಚಿತ್ರಗಳಲ್ಲಿ ತೋರ್ಪಡಿಸಿದ್ದಾರೆ.

ಬಾದಾಮಿಯ ಹಸಿಗಾರೆಯ ಭಿತ್ತಿಯ ಮೇಲೆ ರೂಪುಗೊಂಡ ಚಿತ್ರಗಳು, ವಿಜಯನಗರದ ಚಿತ್ರಕಲಾ ವೈಭವ, ಮೈಸೂರರಸರ ಪ್ರೋತ್ಸಾಹದಿಂದ ಬೆಳೆದ ವಿಶಿಷ್ಟವಾದ ಬಣ್ಣನೆಯನ್ನು ಕುರಿತು ಹೇಳುತ್ತಾರೆ. ಶ್ರವಣಬೆಳುಗೊಳದ ಚಿತ್ರ ಕಲೆಯನ್ನು, ಶ್ರೀರಂಗಪಟ್ಟಣದ ಚಿತ್ರಗಳನ್ನು ವರ್ಣಿಸಿ ಈ ಅಧ್ಯಾಯ ಕೊನೆ ಮುಟ್ಟುತ್ತದೆ. ದರಿಯಾದೌಲತ್ತಿನ ಐತಿಹಾಸಿಕ ಚಿತ್ರಗಳು ಗಮನಾರ್ಹವಾದುವು. ಟೀಪುವಿನ ಯುದ್ಧದ ಚಿತ್ರಗಳು, ಮಕ್ಕಳ ಪ್ರತಿಕೃತಿಗಳು, ಮೈಸೂರರಸರ ದರ್ಬಾರು, ಅಂತಃಪುರ ಜಂಬೂಸವಾರಿಗಳ ಚಿತ್ರಗಳನ್ನು ಹೆಸರಿಸಿದೆ.

ಒಟ್ಟಾರೆ ಧರ್ಮದ ಪತಾಕೆಯನ್ನು ಎತ್ತಿಹಿಡಿದ, ಬಣ್ಣಗಳಲ್ಲಿ ಸೃಷ್ಟಿಯ ಮತ್ತು ಅಂತರಂಗದ ಚೆಲುವನ್ನು ಸೆರೆಹಿಡಿವ ಬಯಕೆ ಭಾರತೀಯ ಮತ್ತು ಕರ್ಣಾಟಕದ ಚಿತ್ರಕಲೆಯಲ್ಲಿ ಕಂಡುಬರುತ್ತದೆ. ಕನ್ನಡದ ಕಲಾವಿದರಲ್ಲಿ ಕೆ. ವೆಂಕಟಪ್ಪನವರು ಹೆಸರಾಂತವರು. ಅವರು ನಮ್ಮ ವಿಶಿಷ್ಟ ಕಲೆಯನ್ನು ಬೆಳೆಸಿದವರು, ಎನ್ನುತ್ತ ಅಧ್ಯಾಯವನ್ನು ಮುಗಿಸುವರು.

ಗ್ರಂಥದ ಸಮಾರೋಪ ಮಾಡುತ್ತ ಶ್ರೀ ಸ್ವಾಮಿಯವರು ಕರ್ಣಾಟಕ ಸಂಸ್ಕೃತಿಯ ಎಲ್ಲ ಅಂಶಗಳನ್ನೂ ಇಂತಹ ಪರಿಮಿತ ಪ್ರಯತ್ನದಲ್ಲಿ ಸಮಗ್ರವಾಗಿ ಹಿಡಿದು ನಿಲ್ಲಿಸುವುದು ಸಾಹಸವೇ ಸರಿ. ಸಾವಿರಾರು ವರ್ಷಗಳಿಂದ ಸಾರ್ಥಕವಾಗಿ ಬೆಳೆದು ಬಾಳುತ್ತಿರುವ ಈ ಜೀವಂತ ಸಂಸ್ಕೃತಿಯನ್ನು ಸಂಪೂರ್ಣವಾಗಿ ವಿವೇಚಿಸಿ ಕೊನೆ ಮುಟ್ಟುವುದು ಸಾಧ್ಯವಿಲ್ಲದ ಕೆಲಸ ಎಂದು ಸರಿಯಾಗಿಯೇ ಹೇಳಿದ್ದಾರೆ. ಕರ್ಣಾಟಕದ ಜನತೆ ತನ್ನ ಉಪಯುಕ್ತ ಕಲೆಯ ಉಪಕರಣಗಳಲ್ಲಿ ತೋರಿರುವ ಕುಶಲತೆಯನ್ನು ಮೆಚ್ಚಿ, ಎಲ್ಲದರಲ್ಲಿಯೂ ಒಂದು ಸೌಂದರ್ಯದೃಷ್ಟಿಯನ್ನೂ ಉತ್ತಮವಾದ ಅಭಿರುಚಿಯನ್ನೂ ಹೊಂದಿರುವುದು ಅದರ ಸಂಸ್ಕೃತಿಯ ಮುಖ್ಯ ಲಕ್ಷಣವೆಂದಿದ್ದಾರೆ. ಈ ಸಂದರ್ಭದಲ್ಲಿ ನಾಣ್ಯಗಳನ್ನು ಕುರಿತು ಹೇಳುತ್ತ ಬೇರೆ ಬೇರೆ ರಾಜವಂಶಗಳು ನಿರ್ಮಿಸಿದ ನಾಣ್ಯಗಳ ರೂಪ ಆಕಾರ ಮೌಲ್ಯಗಳನ್ನು ವಿಸ್ತಾರವಾಗಿ ವರ್ಣಿಸಿದ್ದಾರೆ.

ನಮ್ಮ ಸಂಸ್ಕೃತಿಯ ಹಿರಿಮೆಯನ್ನು ಅದರ ಒಂದೊಂದು ಹೆಜ್ಜೆಯಲ್ಲಿಯೂ

ಗುರುತಿಸಬಹುದು. ಇಂದಿಗೂ ಬದಲಾಗುತ್ತಿರುವ ಜನಜೀವನದಂತರಾಳದಲ್ಲಿ ಹೊಸ ರೂಪ ಹೊತ್ತು ಹಳೆಯ ಸತ್ವವನ್ನು ಹೊಂದಿ ಬೆಳೆಯುತ್ತಿರುವ ಕರ್ನಾಟಕ ಸಂಸ್ಕೃತಿಯನ್ನು ನಾವು ಕಂಡು ಅದು ಪಲ್ಲವಿಸಲು ಪ್ರಚೋದಿಸಿ ಅದರ ವಿಜಯಕ್ಕೆ ಕಾರಣರಾಗಬೇಕು. ನಮ್ಮ ಸಂಸ್ಕೃತಿಯ ಸಾಧನೆಯ ಫಲ ಜಗತ್ತಿಗೆ ದೊರೆಯ ಬೇಕು ಎಂಬ ಮಂಗಳಾಕಾಂಕ್ಷೆಯೊಡನೆ ಗ್ರಂಥಕ್ಕೆ ಮುಕ್ತಾಯ ಹಾಡಿದ್ದಾರೆ.

ಶ್ರೀಮಾನ್ ತಿಪ್ಪೇರುದ್ರಸ್ವಾಮಿಯವರು ಹೇಳುವಂತೆ ಇದೊಂದು ನಮ್ರವಾದ ಪ್ರಯತ್ನ. ಇಂತಹ ಒಂದು ಗ್ರಂಥದ ಆವಶ್ಯಕತೆ ನಮ್ಮ ಅಭ್ಯಾಸಿಗಳಿಗಿದ್ದಿತು. ಓದುಗರನ್ನು ಈ ಪುಸ್ತಕ ತನ್ನೊಳಗಿರುವ ಅರಿವಿನಿಂದ ಸುಭಗತೆಯಿಂದ ರಂಜಿಸುತ್ತದೆ. ಗ್ರಂಥದ ಒಂದೊಂದು ಅಧ್ಯಾಯವೂ ಏಳೆಂಟುನೂರು ಪುಟಗಳಷ್ಟು ವಿಸ್ತಾರವಾಗಿ ಸಮಸ್ತ ವಿಷಯಗಳನ್ನೊಳಗೊಂಡು ಎಲ್ಲ ಕಡೆಗಳಿಂದ ಬೆಳೆದು ಬರಲಿ, ನಾವದನ್ನು ಕೂಡಲೆ ಓದಿಯೇವು ಎಂಬ ಉತ್ಸಾಹ ಅಭಿರುಚಿಗಳನ್ನು ಡಾ. ತಿಪ್ಪೇರುದ್ರಸ್ವಾಮಿಯವರ ಬರವಣಿಗೆ ಪ್ರಚೋದಿಸುತ್ತದೆ.

ಇಂತಹ ಈ ಗ್ರಂಥಕ್ಕೆ ೧೯೬೮ರ ಸಾಲಿನ ಕೇಂದ್ರ ಅಕಾಡೆಮಿಯ ಪ್ರಶಸ್ತಿ ಲಭಿಸಿರುವುದು ಕನ್ನಡಿಗರೆಲ್ಲರಿಗೆ ಹೆಮ್ಮೆಯ ಸಂಗತಿ. ಈ ಪ್ರಶಸ್ತಿಯನ್ನು ನೀಡುವುದರ ಮೂಲಕ ಸಾಹಿತ್ಯ ಅಕಾಡೆಮಿ ಕೇವಲ ಒಂದು ಗ್ರಂಥವನ್ನಲ್ಲ ಇಡೀ ಕರ್ನಾಟಕ ಸಂಸ್ಕೃತಿಯನ್ನೇ ಗೌರವಿಸಿದೆ ಎನ್ನುವುದು ಇನ್ನೂ ಅತಿಶಯದ ಸಂಗತಿ. ಹೀಗೆ ಡಾ. ಹೊನ್ನಾಳಿ ತಿಪ್ಪೇರುದ್ರಸ್ವಾಮಿಯವರ ಹಲವಾರು ವರ್ಷಗಳ ಸಾರಸ್ವತ ತಪಸ್ಸಿನ ಫಲ 'ಕರ್ನಾಟಕ ಸಂಸ್ಕೃತಿ ಸಮೀಕ್ಷೆ'ಯಾಗಿ ಮೂಡಿ ನಾಡಿನ ಬಹುದಿನದ ಬಯಕೆಯನ್ನು ಪೂರೈಸಿದೆ; ರಾಷ್ಟ್ರೀಯ ಪ್ರಶಸ್ತಿಗೆ ಅರ್ಹವಾಗಿ ನಾಡಿನ ಹಿರಿಮೆಯನ್ನು ಮತ್ತೂ ಹೆಚ್ಚಿಸಿದೆ. ಇದರಿಂದ ಡಾ. ಎಚ್. ತಿಪ್ಪೇರುದ್ರಸ್ವಾಮಿ, ಅವರು ನಾಡಿನ ಕೃತಜ್ಞತೆ, ಅಭಿಮಾನಗಳಿಗೆ ಚಿರಪಾತ್ರರಾಗಿದ್ದಾರೆ.

ಇಂಗ್ಲಿಷು ಮತ್ತು ಇತರ ಭಾಷೆಗಳ ವಿಷಯದಲ್ಲಿ ನಾವು ಅನುಸರಿಸಬೇಕಾದ ಮರ್ಯಾದೆಯೂ ಇಷ್ಟೇ. ಆವಶ್ಯಕತೆ, ಔಚಿತ್ಯ (ಅಥವಾ ಹೊಂದಿಕೆ)—ಈ ಎರಡು ತತ್ತ್ವಗಳನ್ನು ಮರೆಯದೆ ಎಲ್ಲಿಂದ ಪದಸಂಗ್ರಹ ಮಾಡುವುದಕ್ಕೂ ಹಿಂಜರಿಯಬೇಕಾದುದಿಲ್ಲ. ನಮ್ಮ ಪ್ರತ್ಯಯದ ಮುದ್ರೆಯನ್ನೊತ್ತಿದ ಮೇಲೆ–ನಮ್ಮ ತದ್ಭವದ ಸಂಕಲಿಕೆಯನ್ನು ಸಡಿಸಿಲಿಸಿದ ಮೇಲೆ—ಎಲ್ಲಿಂದ ಬಂದ ಪದವಾದರೂ ಅದು ನಮ್ಮದೇ. ಪ್ರಕೃತಿ–ವಿಜ್ಞಾನ, ಸಮಾಜ–ವಿಜ್ಞಾನ ಶಾಸ್ತ್ರಗಳನ್ನು ಬರೆಯುವಾಗ ಇಂಗ್ಲಿಷ್, ಜರ್ಮನ್, ಲ್ಯಾಟಿನ್ ಭಾಷೆಗಳ ಮಾತುಗಳನ್ನು–ಸಮಾಸ ಪದಗಳನ್ನು–ಉಂಡುಂಡೆಯಾಗಿ, ಅನಾಮತ್ತಾಗಿ, ತೆಗೆದುಕೊಳ್ಳಬೇಕಾದೀತು, ಅದಕ್ಕೆ ಸಂಕೋಚಪಡಬೇಕಾದುದಿಲ್ಲ. ಇಂಗ್ಲಿಷಿನವರು ಹಾಗೆ ಮಾಡಿದ್ದಾರೆ, ಆವಶ್ಯಕತೆ ಔಚಿತ್ಯಗಳಿಗೆ ತಕ್ಕಂತೆ ಶಬ್ದಗಳನ್ನಾಯ್ದು ಜೋಡಿಸಿಕೊಳ್ಳುವ ಸ್ವಾತಂತ್ರ್ಯದಲ್ಲಿ ಕುಮಾರವ್ಯಾಸ ಮಹಾಕವಿ ನಮಗೆ ಗುರುವಾಗಿದ್ದಾನೆ. ನಮಗೆ ಸಂಸ್ಕೃತವೂ ಬೇಕು, ಇಂಗ್ಲಿಷೂ ಬೇಕು, ಹಿಂದಿ ಮರಾಠಿ ಬಂಗಾಳಿಗಳೂ ಬೇಕು; ಇವುಗಳ ಉಪಭಾಷೆ ಶಾಖಾಭಾಷೆಗಳೂ ಸಹ ಬೇಕು; ಆದರೆ ನಮ್ಮ ಮೇಲೆ ಕೈನಡೆಸುವುದಕ್ಕಲ್ಲ, ನಮ್ಮ ಬಲವನ್ನು ಹೆಚ್ಚಿಸುವುದಕ್ಕೆ.

—ಡಿ. ವಿ. ಜಿ.

ಎ. ವಿ. ನರಸಿಂಹಮೂರ್ತಿ

ಕರ್ಣಾಟ ಸಂಸ್ಕೃತಿಯ ಪೂರ್ವಪೀಠಿಕೆ

ಕರ್ಣಾಟಕ ಇತಿಹಾಸಪೂರ್ವಚರಿತ್ರೆ, ಇತಿಹಾಸ ಮತ್ತು ಸಂಸ್ಕೃತಿಗಳ ಬಗೆಗಿನ ಸಂಶೋಧನೆಗಳು ವಿಶೇಷವಾಗಿ ಆಗಿಯೇ ಇಲ್ಲ. ಬಹು ಪ್ರಾಚೀನಕಾಲದಿಂದಲೂ ಒಂದಲ್ಲ ಒಂದು ರೀತಿಯ ವೈಶಿಷ್ಟ್ಯದಿಂದ ಪ್ರಖ್ಯಾತವಾಗಿರುವ ನಮ್ಮ ನಾಡಿನ ಸಂಸ್ಕೃತಿಯ ಅಧ್ಯಯನವು ವಿದ್ವಾಂಸರನ್ನು ಏಕೆ ಆಕರ್ಷಿಸಿಲ್ಲವೆಂಬುದು ಉತ್ತರಿಸಲಾಗದ ಪ್ರಶ್ನೆಯಾಗಿದೆ. ವಿಪುಲವಾದ ಸಾಧನ ಸಾಮಗ್ರಿಗಳು ದೊರಕಿವೆ. ಶಾಸನಗಳಂತೂ ಅತ್ಯಧಿಕ ಸಂಖ್ಯೆಯಲ್ಲಿ ದೊರಕಿವೆ. ಪ್ರಾಚೀನ ನಾಣ್ಯಗಳೂ ದೊರಕಿವೆ. ಸಂಸ್ಕೃತಿಯ ಪ್ರತಿಬಿಂಬವಾಗಿರುವ ವಾಸ್ತುಶಿಲ್ಪ ಕಲಾಕೇಂದ್ರಗಳೂ ಸಾಕಷ್ಟು ಸಂಖ್ಯೆಯಲ್ಲಿವೆ. ಈ ಎಲ್ಲ ಮಾಹಿತಿಗಳನ್ನೂ ಒಂದೆಡೆ ಕೂಡಿಸಿ ಅವುಗಳಿಂದ ಹೊರಹೊಮ್ಮುವ ಕರ್ಣಾಟಕದ 'ಪರ್ಸನಾಲಿಟಿ'ಯನ್ನು ರಚಿಸಲು ವಿದ್ವಾಂಸರು ಇನ್ನೂ ಮುಂದೆ ಬರದೇ ಇರುವುದು ಶೋಚನೀಯವೇ ಸರಿ. ಸಿ. ಫಾಕ್ಸ್‌ರವರ 'ಪರ್ಸನಾಲಿಟಿ ಆಫ್ ಬ್ರಿಟನ್', ಬೆಂಡಪುಡಿ ಸುಬ್ಬರಾಯರ 'ಪರ್ಸನಾಲಿಟಿ ಆಫ್ ಇಂಡಿಯ'ಗಳಂತಹ ಗ್ರಂಥವೊಂದು ಕರ್ಣಾಟಕಕ್ಕೆ ಏಕೆ ಸಿದ್ಧವಾಗಿಲ್ಲವೆಂಬ ಪ್ರಶ್ನೆಯನ್ನು ಅನೇಕರು ಹಲವಾರು ಸಾರಿ ಕೇಳಿದ್ದಾರೆ. ಆದರೆ ಇದಕ್ಕೆ ಉತ್ತರವಿನ್ನೂ ದೊರಕಬೇಕಾಗಿದೆ.

ಇತ್ತೀಚಿನ ವರ್ಷಗಳಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿಯ ಬಹುಮಾನವು ಸಾಹಿತ್ಯವೇ ಪ್ರಧಾನವಾದ ಗ್ರಂಥಗಳನ್ನು ಬಿಟ್ಟು ಕರ್ಣಾಟಕದ ಇತಿಹಾಸ ಮತ್ತು ಸಂಸ್ಕೃತಿಯನ್ನು ಕುರಿತಾದ ಗ್ರಂಥಗಳನ್ನು ಆರಿಸಿಕೊಂಡು ಹೋಗುತ್ತಿರುವುದು ನಮ್ಮ ಇತಿಹಾಸದ ಅಧ್ಯಯನ ಮತ್ತು ಸಂಶೋಧನೆಗಳಿಗೆ ಒಳ್ಳೆಯ ಭವಿಷ್ಯವಿದೆಯೆಂಬುದರ ಸಂಕೇತವಾಗಿದೆಯೆಂದರೆ ತಪ್ಪಲ್ಲ. ಈ ವರ್ಷದ ಕೇಂದ್ರ ಸಾಹಿತ್ಯ ಅಕಾಡೆಮಿಯ ಬಹುಮಾನವನ್ನು ಇತಿಹಾಸವೇ ಪ್ರಧಾನವಾದ, ಶಂ. ಬಾ. ಜೋಶಿಯವರ 'ಕರ್ಣಾಟ ಸಂಸ್ಕೃತಿಯ ಪೂರ್ವ ಪೀಠಿಕೆ' ಎಂಬ ಮಹದ್ಗ್ರಂಥಕ್ಕೆ ಕೊಟ್ಟು ಅಕಾಡೆಮಿಯವರು ಇತಿಹಾಸಕಾರರಿಗೆ ಒಂದು ಹೊಸ ಉತ್ತೇಜನ ನೀಡಿದ್ದಾರೆ. ವಯೋವೃದ್ಧರೂ ಜ್ಞಾನವೃದ್ಧರೂ ಆದ ಶಂ. ಬಾ. ಜೋಶಿಯವರಿಗೆ ಈ ಗೌರವವು ವೈಯಕ್ತಿಕವಾಗಿ

ದೊರಕಿದ್ದರೂ ಇದು ನಮ್ಮ ನಾಡಿನ ಇತಿಹಾಸಪೂರ್ವಚರಿತ್ರೆಯ ಅಧ್ಯಯನಕ್ಕೆ ಸಿಕ್ಕಿದ ದೊಡ್ಡ ಗೌರವವೆಂಬುದನ್ನು ಅವರೂ ಖಂಡಿತ ಒಪ್ಪುತ್ತಾರೆ.

ಶಂ. ಬಾ. ಜೋಶಿಯವರ 'ಕರ್ಣಾಟ ಸಂಸ್ಕೃತಿಯ ಪೂರ್ವ ಪೀಠಿಕೆ' ಕನ್ನಡ ನಾಡಿನ ಇತಿಹಾಸಪೂರ್ವಚರಿತ್ರೆಯನ್ನು ಅವಲೋಕಿಸುವ ಒಂದು ಮಹದ್ಗ್ರಂಥ. ಕನ್ನಡದಲ್ಲಿ ಈ ರೀತಿಯ ಒಂದು ಗ್ರಂಥ ಇದುವರೆಗೂ ಬೆಳಕು ಕಂಡಿಲ್ಲ. ಹಾಗೆ ನೋಡುವುದಾದರೆ, ಕನ್ನಡದಲ್ಲಿಯೇ ಏಕೆ, ಇಂಗ್ಲಿಷಿನಲ್ಲಿಯೂ ಈ ವಿಷಯವನ್ನು ಒಳಗೊಂಡ ಅಡಕವಾದ ಗ್ರಂಥವೊಂದಿಲ್ಲವೆಂದರೆ ತಪ್ಪಾಗಲಾರದು. ಶಾತವಾಹನರ ಕಾಲದಿಂದೀಚೆಗಿನ ಕರ್ಣಾಟಕದ ಇತಿಹಾಸ ಮತ್ತು ಸಂಸ್ಕೃತಿಗಳನ್ನು ವಿಶ್ಲೇಷಿಸುವ ಗ್ರಂಥಗಳು ಹಲವಿವೆ. ಆದರೆ ಅದಕ್ಕಿಂತ ಮುಂಚಿನ ಕರ್ಣಾಟಕದ ವಿಷಯಗಳನ್ನು ತಿಳಿಸುವ ಗ್ರಂಥಗಳಿಲ್ಲ. ಅಂದರೆ ಕನ್ನಡನಾಡು ಯಾವ ನೆಲಗಟ್ಟಿನ ಮೇಲೆ ನಿಂತಿದೆ ಎಂದು ಕೆದಕಿ ನೋಡುವ ಪ್ರಯತ್ನವಿದು. ಈ ಪ್ರಯತ್ನವು ಸಫಲವಾಗಿ ಈ ವಿಷಯದಲ್ಲಿ ಆಸಕ್ತಿ ಹೊಂದಿರುವರಿಗೆ ಅನೇಕ ಹೊಸ ವಿಷಯಗಳನ್ನು ತಿಳಿಸುತ್ತದೆ. ಈ ಗ್ರಂಥದ ಪುಟಗಳನ್ನು ಮಗುಚುವಾಗ ಕಂಡುಬರುವ ಶಂ. ಬಾ. ಜೋಶಿಯವರ ಅಪಾರ ವಿದ್ವತ್ತು ಯಾರನ್ನಾದರೂ ಬೆರಗುಗೊಳಿಸುವಂತಹದು. ಅವರು ಬಳಸುವ ಸಾಧನಗಳು, ಇತಿಹಾಸ ಪೂರ್ವಚರಿತ್ರೆ, ಮಾನವಶಾಸ್ತ್ರ, ಸಮಾಜಶಾಸ್ತ್ರ, ಭಾಷಾಶಾಸ್ತ್ರ, ಶಾಸನ ಶಾಸ್ತ್ರ, ಸಾಹಿತ್ಯ, ವೇದೋಪನಿಷತ್ತುಗಳು, ಪುರಾಣಗಳು, ಐತಿಹ್ಯಗಳು ಮುಂತಾದ ಭಿನ್ನ ಶಾಸ್ತ್ರಗಳಿಗೆ ಸಂಬಂಧಪಟ್ಟವು. ಅವುಗಳನ್ನು ಲೀಲಾಜಾಲವಾಗಿ ಉಪಯೋಗಿಸುವ ಅವರ ಬಹುಮುಖ ಪ್ರತಿಭೆ ಅಸಾಧಾರಣವಾದುದು. ಒಟ್ಟಿನಲ್ಲಿ ಹೇಳುವುದಾದರೆ ಶಂ. ಬಾ. ಜೋಶಿಯವರ ಈ ಗ್ರಂಥವು ವಿದ್ವಾಂಸರಿಗೊಂದು ಸವಾಲು. ಕರ್ಣಾಟಕದ ಜನರು ಈ ಗ್ರಂಥಕ್ಕಾಗಿ ವಿದ್ವಲ್ಲೇಖಕರಿಗೆ ಋಣಿಯಾಗಿರಬೇಕು.

ಈ ಗ್ರಂಥವು ಅನೇಕ ಸಂಶೋಧನ ಗ್ರಂಥಗಳಿಗಿಂತ ಭಿನ್ನವಾದ ಮಾರ್ಗದಲ್ಲಿ ಬೆಳೆದು ಬಂದಿದೆ. ಅದು ಜೋಶಿಯವರ ವೈಶಿಷ್ಟ್ಯವಿರಬಹುದು. ಅವರು ಹಾಕಿಕೊಂಡಿರುವ ಮಾರ್ಗವೂ ವಿಭಿನ್ನವಾದುದು. ಬಳಸುವ ಸಾಧನಗಳೂ ಹತ್ತಾರು ಶಾಸ್ತ್ರಗಳಿಗೆ ಸಂಬಂಧಪಟ್ಟವು. ಕರ್ಣಾಟಕದ ಸಂಸ್ಕೃತಿಗಿಂತ ಅದರ ನೆಲಗಟ್ಟನ್ನು ಪರೀಕ್ಷಿಸುವ ಗ್ರಂಥವಿದೆನ್ನುವುದನ್ನು ನೆನಪಿನಲ್ಲಿಡಬೇಕು. "ಗೋದಾವರಿವರಂ ಇರ್ದ್ದ ಜನಪದ ಎನ್ನುವ ಮಾತು ಎಲ್ಲರ ಮುಖೋದ್ಗತವಿದೆ. ಆದರೆ ಕಂನಡ ಜನಪದ ಅಲ್ಲಿಯವರೆಗೆ ಇದ್ದಿತೆಂಬುದಕ್ಕೆ ಬೇರೆ ಪ್ರಮಾಣಗಳಿವೆಯೇನು ? ಇದು ಅತಿಶಯೋಕ್ತಿ ಏಕಲ್ಲ? ಎಂದರೆ ಬಾಯಿ ಕಟ್ಟಿತು" ಎಂಬುದನ್ನು ಒರೆಹಚ್ಚಿ ನೋಡುವುದೇ ಜೋಶಿಯವರ ಮುಖ್ಯ ಉದ್ದೇಶ. ಕನ್ನಡ ನಾಡು ಗೋದಾವರಿಯವರೆಗೆ ಇದ್ದುದಕ್ಕೆ ಶಾಸನಗಳಲ್ಲಿ ಮಾಹಿತಿ ದೊರಕುತ್ತದೆ. ಆದರೆ ಈಗಿನ ರಾಜಕೀಯ ಮತ್ತು ಪ್ರಾಂತೀಯ ಭಾವನೆಗಳಿಂದಾಗಿ ಇದನ್ನು ನಂಬುವುದೇ ಕಷ್ಟವಾಗಿ ತೋರುತ್ತಿದೆ. ನಾವು ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ ಚರಿತ್ರೆಯನ್ನು ಪ್ರಾಚೀನತೆಯ

ದೃಷ್ಟಿಯಿಂದ ನೋಡಬೇಕೆಂಬುದು. ಇಂದಿನ ಪ್ರಾಂತೀಯ ಗಡಿಗಳ ಆಧಾರದ ಮೇಲೆ ಪ್ರಾಚೀನ ಚರಿತ್ರೆಯನ್ನು ವಿಶ್ಲೇಷಿಸುತ್ತಿರುವುದು ನಾವು ಮಾಡುತ್ತಿರುವ ಒಂದು ದೊಡ್ಡ ಅಪರಾಧವಾಗಿ ಪರಿಣಮಿಸಿದೆ. ರಾಷ್ಟ್ರಕೂಟರು ಮಹಾರಾಷ್ಟ್ರದವರು ಎಂಬ ಒಂದು ವಾದ ಬೆಳೆದು ಬಂದಿದೆ. ಡಾ. ಅಳತೇಕರರು, ದಂತಿದುರ್ಗನು ಸುಮಾರು ಕ್ರಿ. ಶ. ೭೫೦ರ ಹೊತ್ತಿಗೆ ಮಹಾರಾಷ್ಟ್ರೀಯನಾಗಿದ್ದನು ಎಂದು ಹೇಳುತ್ತಾರೆ. "ರಾಷ್ಟ್ರಕೂಟ ಕಾಲದಲ್ಲಿಯೂ ಕರ್ನಾಟ ಮರಾಠ ಎಂಬ ಇಂದಿನಂತಹ ಪ್ರಾಂತೀಯ ವಿಭಜನೆ ಆಗಿತ್ತೆ? ಇಂದಿನ ಸ್ವರೂಪದ ಸ್ಥಾನಿಕ ಹಾಗೂ ಭಾಷಿಕ ಅಹಂಕಾರದ ಆವೇಶ ಇದ್ದಿತೆ? ದಂತಿದುರ್ಗನು ಕ್ರಿ. ಶ. ೭೫೦ರ ಸುಮಾರಿಗೆ ಮಹಾರಾಷ್ಟ್ರೀಯನಾದನು ಎಂದರೆ ಏನು? ಈ ದಂತಿದುರ್ಗನ ತರುವಾಯ ದಂತಿದುರ್ಗನ ವಂಶಜನಾದ ನೃಪತುಂಗನು ಗೋದೆಯವರೆಗೂ ಕಂನಡ ಜನಪದ ಇದ್ದಿತೆಂದು ಹೇಳುವ ಅಭಿಪ್ರಾಯವನ್ನು ಅನುಮತಿಸಿದ್ದಾನಲ್ಲ? ಇದನ್ನು ಡಾ. ಅಳತೇಕರರು ದುರ್ಲಕ್ಷಿಸಿದ್ದೇಕೆ?" ಎಂಬ ಪ್ರಶ್ನೆ ಮಾಲಿಕೆಯನ್ನೇ ಜೋಶಿಯವರು ಓದುಗರ ಮುಂದೆ ಇಡುತ್ತಾರೆ. ಇದರಿಂದ ಡಾ. ಅಳತೇಕರರ ವಾದವು ಹುರುಳಿಲ್ಲದ್ದೆಂದು ಸುಲಭವಾಗಿ ಅರ್ಥವಾಗುತ್ತದೆ. ಇದೇ ರೀತಿಯಲ್ಲಿ ಡಾ. ಅಳತೇಕರರೇ ಮೊದಲಾದ ಮರಾಠೀ ಚರಿತ್ರಕಾರರು ದೇವಗಿರಿಯಲ್ಲಿ (ಈಗಿನ ಮಹಾರಾಷ್ಟ್ರ) ಆಳಿದ ಯಾದವರು ಕರ್ನಾಟಕದವರಲ್ಲವೆಂದೂ ಅವರು ಮರಾಠಿಯವರೆಂದೂ ಸಿದ್ಧಪಡಿಸಲು ತಮ್ಮೆಲ್ಲ ಪ್ರಯತ್ನಗಳನ್ನೂ ಮಾಡಿದರು. ಈ ವಿಷಯದಲ್ಲಿ ಡಾ. ಅಳತೇಕರರು ಕೊಡುವ ಕಾರಣ ಉಲ್ಲೇಖನೀಯ. ಯಾದವರ ರಾಜಧಾನಿಯಾದ ದೇವಗಿರಿಯು ಈಗಿನ ಮಹಾರಾಷ್ಟ್ರದಲ್ಲಿದೆ ಎಂಬುದೇ ಅವರ ವಾದ. ಯಾದವರು ಆಳಿದ ಕಾಲದಲ್ಲಿ ದೇವಗಿರಿಯು ಮಹಾರಾಷ್ಟ್ರದ ಭಾಗವಾಗಿದ್ದಿತೇ? ಹಾಗಿದ್ದ ಪಕ್ಷದಲ್ಲಿ ಆಗಿನ ಮಹಾರಾಷ್ಟ್ರಕ್ಕಿದ್ದ ಅರ್ಥವ್ಯಾಪ್ತಿ ಎಂಬುದನ್ನು ಅವರು ಚರ್ಚಿಸುವ ಗೋಜಿಗೆ ಹೋಗಲಿಲ್ಲ. ಈ ಎಲ್ಲ ದೃಷ್ಟಿಗಳಿಂದ ಜೋಶಿಯವರ ವಾದವು ಅತ್ಯಂತ ಬಲಯುತವಾಗಿದೆ.

ಕಂನಾಡು, ಕರ್ಣಾಟ, ಕರ್ನಾಟ ಎಂಬ ಪದಗಳ ಬಗೆಗೆ ಜೋಶಿಯವರು ವಿವೇಚಿಸಿದ್ದಾರೆ. ಜೋಶಿಯವರಿಗೆ ಪ್ರಿಯವಾದುದು ಕಂನಾಡು ಎಂಬ ಪದ. ಕರ್ಣಾಟಕ್ಕಿಂತ ಅದು ಹೆಚ್ಚು ಸಮಂಜಸವೆಂದು ಅವರು ವಾದಿಸುತ್ತಾರೆ. ಕನ್ನವಳ್ಳಿ, ಕನ್ನೂರು, ಕಣ್ಣವಿಷಯ ಮುಂತಾದ ಸ್ಥಳನಾಮಗಳು ಕಾವೇರೀ ತೀರದಿಂದ ನರ್ಮದೆಯವರೆಗೆ ಕಾಣಬರುವುದರಿಂದ ಕಂನಾಡು ಎಂಬ ಪದನೇ ಅತ್ಯಂತ ಪ್ರಾಚೀನವಾದುದೆಂದು ಅವರ ತರ್ಕ. ಇದರ ಪ್ರಾಚೀನತೆಯನ್ನು ನಿರ್ಧರಿಸುವಲ್ಲಿ ಅವರಿಗೆ ಮಾಹಿತಿಗಳೇನು ಎಂಬುದನ್ನು ಎಲ್ಲಿಯೂ ಸೂಚಿಸಿಲ್ಲ. ಕರ್‌ನಾಡ ಎಂಬ ನಾಮವನ್ನು ಸೂಚಿಸುವ ಸ್ಥಳನಾಮಗಳಿವೆಯೆ ಎಂದು ಅವರು ಪ್ರಶ್ನಿಸುತ್ತಾರೆ. ಆದರೆ ಸಮಂಜಸವಾದ ಕಾರಣಗಳನ್ನು ಕೊಡದೆ ಸ್ವಲ್ಪ ಆತುರದಲ್ಲಿಯೋ ಎನ್ನುವಂತೆ, ಜೋಶಿಯವರು "ಕಂನಡ ಎಂಬಲ್ಲಿ ಜನಜೀವನ, ಸಾಹಿತ್ಯ ಪ್ರವೇಶಕ್ಕೆ ದೊರೆಯುವ ಸೌಲಭ್ಯ

ಕರ್ಣಾಟ ಎಂದರೂ ಇಲ್ಲ! ಕರ್ನಾಟ ಎಂದರೂ ಇಲ್ಲ" ಎಂದು ತಮಗೆ ಅತಿ ಪ್ರಿಯವಾದ ಸಿದ್ಧಾಂತವನ್ನು ಅಭಿಮಾನದಿಂದ ಹೇಳುತ್ತಾರೆನ್ನಿಸುತ್ತದೆ. ಬಹು ತರ್ಕಬದ್ಧವಾಗಿ ತಮ್ಮ ವಾದಗಳನ್ನು ಮುಂದಿಡುವ ಲೇಖಕರು ಇಲ್ಲಿ ತಮ್ಮ ಸಿದ್ಧಾಂತವನ್ನು ಪುಷ್ಟೀಕರಿಸುವ ಮಾಹಿತಿಗಳನ್ನು ನೀಡಿಲ್ಲ.

ಸ್ಥಳನಾಮಗಳ ಅಧ್ಯಯನವು ಚರಿತ್ರೆಯನ್ನು ತಿಳಿಯಲು ಪ್ರಯೋಜನಕಾರಿ ಎಂಬುದನ್ನು ಯಾರೂ ಅಲ್ಲಗಳೆಯುವಂತಿಲ್ಲ. ಹಾಗೆ ನೋಡುವುದಾದರೆ ನಮ್ಮಲ್ಲಿ ಈ ಅಧ್ಯಯನವು ಸಮರ್ಪಕವಾಗಿ ನಡೆದಿಲ್ಲ. ಆದರೆ ಭಾಷಾಶಾಸ್ತ್ರ ದೃಷ್ಟಿಯಿಂದ ಸ್ಥಳನಾಮಗಳನ್ನು ಪರೀಕ್ಷಿಸುವಾಗ ಚರಿತ್ರಕಾರನು ವಿಶೇಷ ಎಚ್ಚರಿಕೆ ವಹಿಸಬೇಕಾಗುತ್ತದೆ. ಅವುಗಳು ಕೇವಲ ವಿಷಯಸೂಚಕಗಳೆಂದು ತಿಳಿಯಬೇಕು. ಅವುಗಳಿಂದ ಸಿದ್ಧಾಂತಗಳನ್ನೇ ಪ್ರತಿಪಾದಿಸುವುದು ಶಿಥಿಲ ತಳಹದಿಯ ಮೇಲೆ ನಿಂತಂತೆ ಎಂಬುದನ್ನು ಅರಿಯಬೇಕು. ಜೋಶಿಯವರು ಅನೇಕ ಸ್ಥಳನಾಮಗಳ ಹೋಲಿಕೆಯ ಮೇಲೆ ಸಿದ್ಧಾಂತಗಳನ್ನು ಪ್ರತಿಪಾದಿಸುತ್ತಾರೆನ್ನಿಸುತ್ತದೆ. ಸೈಂಧವ ಸಂಸ್ಕೃತಿಯ ಹರಪ್ಪ ಎನ್ನುವ ನಗರದ ಹೆಸರು ಕನ್ನಡವೆಂದು ಇತ್ತೀಚೆಗೆ ಒಬ್ಬರು ಹೇಳಿದ ಮಾತು ಎಷ್ಟು ಹಾಸ್ಯಾಸ್ಪದವೆಂದು ಊಹಿಸಬಹುದು.

"ಕಂನಾಡು ಕ್ಷೀಣಿಸಿ ಮರ್‍ಹಾಟವು ಮಹಾರಾಷ್ಟ್ರವಾಯಿತು" ಎಂಬ ಉಪಶೀರ್ಷಿಕೆಯ ಭಾಗವು ಬಹು ಚೆನ್ನಾಗಿ ಚರ್ಚಿತವಾಗಿದೆ. ಮರಾಠಿಯವರೇ ಆದ ಶ್ರೀ ವಿಟ್ಠಲ ರಾಮು ಸಿಂಧೆಯವರ ಹೇಳಿಕೆ "ಮರಾಠಿಯು ಕಂನುಡಿಯ ಅತ್ತೆತನದಲ್ಲಿ ಬೆಳೆದಿದೆ" ಎಂಬುದೂ ಮತ್ತು ಬಾಲ ಗಂಗಾಧರ ತಿಲಕರ ಅಭಿಪ್ರಾಯ "ಒಂದು ಕಾಲದ ಕರ್ಣಾಟವೇ ಇಂದು ಮಹಾರಾಷ್ಟ್ರವಾಗಿದೆ" ಮುಂತಾದವುಗಳನ್ನು ಜೋಶಿಯವರು ಬಹಳ ಜಾಣ್ಮೆಯಿಂದ ಬಳಸಿಕೊಂಡು ಸಾಮಾನ್ಯ ಜನರಿಗೂ ಅರ್ಥವಾಗುವ ತಮ್ಮ ವಾದವನ್ನು ನಮ್ಮ ಮುಂದಿಟ್ಟಿದ್ದಾರೆ. ತಮ್ಮ ವಾದವನ್ನು ಪುಷ್ಟೀಕರಿಸುವಾಗ ಲೇಖಕರು ಬ್ಲೋಕ್ ಎಂಬ ವಿದ್ವಾಂಸನ ಅಭಿಪ್ರಾಯವನ್ನು ಹೇಳಿದ್ದಾರೆ. ಬಲೂಚಿಯ ಬ್ರಾಹುಯಿ, ನರ್ಮದೆಯ ಉತ್ತರದ ಕುರ್ಖ-ಮಾಲ್ತೊ ಇವು 'Canara' ಗುಂಪಿನ ಮಾತುಗಳು ಎಂಬ ಬ್ಲೋಕ್ ಅವರ ಅಭಿಪ್ರಾಯವನ್ನು ಅನುಮೋದಿಸುವಲ್ಲಿ ಜೋಶಿಯವರು ದುಡುಕಿದ್ದಾರೆಯೋ ಎಂದೆನಿಸುತ್ತದೆ. ಇಂತಹ ಮುಖ್ಯವಾದ ಸಿದ್ಧಾಂತವನ್ನು ಅನುಮೋದಿಸುವಾಗ ಜೋಶಿಯವರು ಕೊನೆಯಪಕ್ಷ ನಾಲ್ಕಾರು ಪದಗಳನ್ನು ತುಲನಾತ್ಮಕ ರೀತಿಯಿಂದ ಪರೀಕ್ಷಿಸಿದ್ದರೆ ಬ್ಲೋಕ್ ಅವರ ಅಭಿಪ್ರಾಯವು ಸ್ಪಷ್ಟವಾಗುತ್ತಿದ್ದಿತು ಮತ್ತು ಜೋಶಿಯವರ ಸಿದ್ಧಾಂತವನ್ನು ಪ್ರಶ್ನಿಸುವುದು ಅಸಾಧ್ಯವೂ ಆಗುತ್ತಿದ್ದಿತು. ಹಾಗೆ ಮಾಡದೆ ಬ್ಲೋಕ್ ಮತ್ತು ಗೇಟ್ ಮುಂತಾದವರ ಸಿದ್ಧಾಂತಗಳನ್ನು ವಿಮರ್ಶಿಸದೆ ಒಪ್ಪಿಕೊಂಡಿರುವುದು, ಅಭಿಮಾನದ ಮಾತು ಎಂದು ಹೇಳಲು ಅವಕಾಶವನ್ನು ಕಲ್ಪಿಸಲು ಸಾಕು.

ಸಾತವಾಹನರು ಕಂನಾಡಿನವರೆಂದು ಅಲ್ಲಲ್ಲಿ ವಾದಗಳು ಕೇಳಿ ಬರುತ್ತಿವೆ.

ಅವರ ಶಾಸನಗಳು ಬಳ್ಳಾರಿ ಜಿಲ್ಲೆಯಲ್ಲಿ ದೊರೆತಿರುವುದನ್ನು ಮುಖ್ಯವಾಗಿಟ್ಟು ಕೊಂಡರೆ ಸಾತವಾಹನೀಹಾರ (ಅಥವಾ ರಠ) ಎಂಬುದು ಬಳ್ಳಾರಿ ಜಿಲ್ಲೆಯ ಭಾಗ ವಾಗಿದ್ದಿತೆಂದು ಗೊತ್ತಾಗುತ್ತದೆ. ಡಾ. ಸುಖಟನಕರ್, ಗೋವಿಂದ ಪೈ ಮುಂತಾದ ಖ್ಯಾತವಿದ್ವಾಂಸರು ಈ ವಿಷಯವನ್ನು ಚರ್ಚಿಸಿ ಸಾತವಾಹನರು ಕನ್ನಡ ನಾಡಿನವರೆಂದು ತೀರ್ಮಾನಿಸಿದ್ದಾರೆ. ಇವರು ಒದಗಿಸಿರುವ ಮಾಹಿತಿಗಳು ಸಾಕಷ್ಟು ಬಲವಾಗಿವೆ. ಆದರೆ ಡಿ.ಸಿ. ಸರ್ಕಾರ್ ಮುಂತಾದ ವಿದ್ವಾಂಸರು ಪುರಾಣಗಳ ಆಧಾರದ ಮೇಲೆ ಸಾತವಾಹನರು ಆಂಧ್ರರು ಎಂದು ಹೇಳುತ್ತಾರೆ. ಸಾತವಾಹನ ರಾಜರ ಹೆಸರುಗಳನ್ನೂ ಅವರು ಆಳಿದ ಕಾಲಗಳನ್ನೂ ತಿಳಿಸುವ ಪುರಾಣಗಳನ್ನು ನೋಡಿದರೆ ಅವುಗಳಲ್ಲಿಯೇ ಒಂದಕ್ಕೊಂದು ಎಷ್ಟೊಂದು ವಿರೋಧವಾಗಿದೆಯೆನ್ನುವುದು ಯಾರಿಗಾದರೂ ಸುಲಭ ವಾಗಿ ಮನದಟ್ಟಾಗುತ್ತದೆ. ಅಂದರೆ ಪುರಾಣಗಳನ್ನು ಚರಿತ್ರೆಯ ಸಾಧನವಾಗಿ ಬಳಸಬಾರದು ಎಂದಲ್ಲ. ಆದರೆ ಅವುಗಳ ಮಾಹಿತಿಗಳನ್ನು ಇತಿಹಾಸವೆಂದು ಸ್ವೀಕರಿಸುವಾಗ ಅವುಗಳನ್ನು ವಿಮರ್ಶೆಗೆ ಒಳಪಡಿಸಿ ನಂತರ ಅವುಗಳನ್ನು ಗಮನಿಸ ಬೇಕು. ಆದರೆ ಡಿ.ಸಿ. ಸರ್ಕಾರರು ಪುರಾಣಗಳ ಆಧಾರದ ಮೇಲೆ ತಮ್ಮ ಸಿದ್ಧಾಂತ ವನ್ನು ಪ್ರತಿಪಾದಿಸಿದ್ದಾರೆ. ಡಾ. ಓರುಗಂಟಿ ರಾಮಚಂದ್ರಯ್ಯ, ಗುರ್ತಿವೆಂಕಟರಾವ್ ಮುಂತಾದವರೂ ಇದನ್ನು ಅನುಮೋದಿಸಿದ್ದಾರೆ. ಇಲ್ಲದಿದ್ದರೆ ಆಂಧ್ರ ಚರಿತ್ರೆಯ ಮೊಟ್ಟಮೊದಲನೆಯ ಸಾಮ್ರಾಜ್ಯವೇ ಆಂಧ್ರದೇಶದವರಿಗಿಲ್ಲದಂತಾಗುತ್ತದೆ. ಆದುದರಿಂದ ಆಂಧ್ರದ ವಿದ್ವಾಂಸರು ಸಾತವಾಹನ=ಆಂಧ್ರ ಎಂದು ವಾದಿಸಿದ್ದಾರೆ. ಈ ಎಲ್ಲ ಅಂಶಗಳನ್ನೂ ಬಹು ಸೂಕ್ಷ್ಮವಾಗಿ ಪರೀಕ್ಷಿಸಿ ಶಂ. ಬಾ. ಜೋಶಿಯವರು ಸಾತವಾಹನರು ಕಂನಡದವರು ಎಂಬುದಕ್ಕೆ ತಮ್ಮ ಸ್ವಂತ ಸಂಶೋಧನೆಯ ಆಧಾರಗಳನ್ನು ಕೊಟ್ಟು, ಇತರ ಚರಿತ್ರಕಾರರ ಮತವನ್ನು ಸ್ಪಷ್ಟಗೊಳಿಸಿದ್ದಾರೆ. ಇಂತಹ ಕಡೆಗಳಲ್ಲಿ ನಾವು ಜೋಶಿಯವರ ನಿಶಿತಮತಿಯನ್ನು ಸುಲಭವಾಗಿ ಗುರುತಿಸ ಬಹುದು.

ಬಳ್ಳಾರಿಯ ಸಾತವಾಹನರು ಉಜ್ಜಯಿನಿಗೆ ಏಕೆ ಹೋದರು ಎಂಬುದನ್ನು ಅವರು ಸ್ಪಷ್ಟಪಡಿಸಿಲ್ಲ. "ದಕ್ಷಿಣಾಪಥದ ತತ್ಪೂರ್ವ ಕೇಂದ್ರವು ಸಾತವಾಹನರ ಕಾಲದಲ್ಲಿಯೇ ಉಜ್ಜಯಿನಿಯಲ್ಲಿರಬೇಕು. ಆದರೆ ಕ್ಷತ್ರಪರ ಧಾಳಿಗಳಿಂದ ಸಾತವಾಹನರಿಗೆ ದಕ್ಷಿಣಕ್ಕೆ ಸರಿಯುವ ಹೊತ್ತು ಬರುತ್ತದೆ. ಅಲ್ಲಿ ಪೈಠಣದಲ್ಲಿ ಪ್ರತಿಷ್ಠಾನ ಮಾಡಿಕೊಳ್ಳುತ್ತಾರೆ!" ಎಂದು ಜೋಶಿಯವರು ಉಲ್ಲೇಖಿಸಿದ್ದಾರೆ. ಆದರೆ ಇದು ಕೇವಲ ಊಹೆಯೇ ಸರಿ. ಬಳ್ಳಾರಿಯಲ್ಲಿದ್ದ ಸಾತವಾಹನರು ಉಜ್ಜಯಿನಿಯತ್ತ ಪ್ರಯಾಣ ಬೆಳೆಸಿದುದಾಗಿ ನಮಗೆ ತಿಳಿದುಬಂದಿಲ್ಲ. ಹಾಗೆ ಪ್ರಯಾಣ ಬೆಳೆಸಿದ್ದರೆ, ಅದು ಯಾವಾಗ? ಅದಕ್ಕೆ ಆಧಾರಗಳೇನು? ಅದೂ ಅಲ್ಲದೆ ಕ್ಷತ್ರಪರೇ ಮೊದಲಾದ ಬಲಿಷ್ಠರು ಇವರು ಅಲ್ಲಿ ನೆಲೆಸಲು ಅವಕಾಶವನ್ನು ಕೊಟ್ಟರೆ? ಈ ಎಲ್ಲ ಪ್ರಶ್ನೆಗಳೂ ಜೋಶಿಯವರ ಉಲ್ಲೇಖದಿಂದ ಹೊರಹೊಮ್ಮುತ್ತವೆ.

ಮಧ್ಯಪ್ರದೇಶದವರೆಗೂ ಕಂನಾಡನ್ನು ವಿಸ್ತರಿಸುವುದೇ ಜೋಶಿಯವರ ಮುಖ್ಯ ಉದ್ದೇಶವಾಗಿದ್ದಿತೋ ಎಂಬ ಸಂದೇಹವೂ ಬರುತ್ತದೆ.

ಸೈಂಧವ ಸಂಸ್ಕೃತಿಗೂ ಕರ್ಣಾಟಕಕ್ಕೂ ಸಂಬಂಧವನ್ನು ಕಲ್ಪಿಸಲು ಮೊಹೆಂಜೊ ದಾರೊ, ಹರಪ್ಪಗಳಿಗೆ ಕೋಲಾರದಿಂದ ಚಿನ್ನವು ಸರಬರಾಜಾಗುತ್ತಿದ್ದಿತೆಂಬ ಊಹೆಯೇ ಮುಖ್ಯ ಆಧಾರ. ಅಲ್ಲಿನ ಚಿನ್ನವು ಹಟ್ಟಿ ಚಿನ್ನದ ಗಣಿಯಿಂದ ಸೈಂಧವ ಸಂಸ್ಕೃತಿಯ ನಗರಗಳಿಗೆ ಹೋಗಿರಬೇಕೆಂಬ ವಾದವನ್ನು ಅನೇಕರು ಈಗ ಒಪ್ಪುತ್ತಿದ್ದಾರೆ. ತೆಕ್ಕಲಕೋಟೆಯ ಅಗೆತದ ಆಧಾರದ ಮೇಲೆ ಜೋಶಿಯವರು ಈ ವಾದವನ್ನೇ ಎತ್ತಿ ಹಿಡಿದಿದ್ದಾರೆ. ಕೋಲಾರದಲ್ಲಾಗಲೀ, ಹಟ್ಟಿಯಲ್ಲಾಗಲೀ ಅಥವಾ ದಕ್ಷಿಣಾಪಥದ ಇನ್ನಾವ ನಗರದಲ್ಲಾಗಲೀ ಸೈಂಧವ ಸಂಸ್ಕೃತಿಯ ಕಾಲದಲ್ಲಿ ಚಿನ್ನವು ಶೋಧಿಸಲ್ಪಡುತ್ತಿದ್ದಿತೆಂಬ ಅಂಶವನ್ನು ಹೊರಗೆಡಹುವ ಅಧ್ಯಯನವು ಇನ್ನೂ ನಡೆಯಬೇಕಾಗಿದೆ. ಚಿನ್ನವನ್ನು ಕಂನಡ ಜನರು ಸೈಂಧವ ಜನರಿಗೆ ಮಾರಿದ್ದರೆ ಅಥವಾ ಅದರ ಬದಲಾಗಿ ಏನಾದರೂ ಬೇರೆ ವಸ್ತುವನ್ನು ಹಿಂದಕ್ಕೆ ಪಡೆದಿದ್ದರೆ, ಅದು ಖಂಡಿತವಾಗಿಯೂ ಸಾಂಸ್ಕೃತಿಕ ವಿನಿಮಯಕ್ಕೂ ಅವಕಾಶವನ್ನು ಕಲ್ಪಿಸಲು ಶಕ್ಯವಾಗುತ್ತಿದ್ದಿತು. ಅದು ತಾನಾಗಿಯೇ ಆಗಬೇಕಾಗಿದ್ದಿತು. ಇದುವರೆವಿಗೂ ಆ ರೀತಿಯ ಸಾಂಸ್ಕೃತಿಕ ಸಂಬಂಧವನ್ನು ಸೂಚಿಸುವ ಯಾವ ಅವಶೇಷಗಳಾಗಲೀ ಇಲ್ಲವೇ ವಸ್ತುಗಳಾಗಲೀ ಸೈಂಧವ ಸಂಸ್ಕೃತಿಯ ನೆಲೆಗಳಲ್ಲಿ ಮತ್ತು ಕರ್ಣಾಟಕದಲ್ಲಿ ದೊರಕಿಲ್ಲ. ಅಲ್ಲಿಯವರೆಗೆ ಈ ಊಹೆಯನ್ನೇ ಆಧಾರವಾಗಿಟ್ಟುಕೊಂಡು ಸೈಂಧವ ಸಂಸ್ಕೃತಿಯ ಜನರಿಗೆ ಚಿನ್ನವನ್ನು ಒದಗಿಸಿದ ಕೀರ್ತಿಯು ನಮ್ಮದೆಂದು ನಾವು ಹೇಳಿಕೊಳ್ಳಬಹುದಾಗಿದೆ.

ಅಶೋಕನ ಶಾಸನಗಳು ಕನ್ನಡ ನಾಡಿನಲ್ಲಿ ಅನೇಕ ಕಡೆಗಳಲ್ಲಿ ದೊರಕಿರುವುದು ಗಮನಾರ್ಹವಾದ ವಿಷಯವೇ ಸರಿ. ಈ ಶಾಸನಗಳು ಜನಸಾಮಾನ್ಯರಿಗೋಸ್ಕರ ಬರೆಯಲ್ಪಟ್ಟಿದ್ದೆಂದೂ, ಆದುದರಿಂದ ಅವುಗಳು ಪ್ರಾಕೃತ ಭಾಷೆಯಲ್ಲಿವೆಯೆಂದೂ ಒಂದು ವಾದ. ಅಶೋಕನ ಕಾಲಕ್ಕಾಗಲೇ ಇಲ್ಲಿ ಪ್ರಾಕೃತ ಭಾಷಿಕರು ಇದ್ದರೆಂಬುದು ಸ್ಪಷ್ಟವಾಗುತ್ತದೆ. ಇದನ್ನೇ ಆಧಾರವಾಗಿಟ್ಟುಕೊಂಡು "ಪಾಟಲೀಪುತ್ರದಲ್ಲಿ ಕಂನುಡಿಯನ್ನು ಬಲ್ಲ ಪ್ರಾಕೃತ ಭಾಷಿಕ ಮಧ್ಯಸ್ಥರು ಇರಬೇಕು" ಎಂದು ಜೋಶಿಯವರು ಊಹಿಸುತ್ತಾರೆ. ಇನ್ನೂ ಮುಂದೆ ಹೋಗಿ "ಧರ್ಮ ಪ್ರಚಾರಕ್ಕಾಗಿ ಬರುವವರಲ್ಲಿ ಕೆಲವರಿಗಾದರೂ ಪಾಲಿ, ಪ್ರಾಕೃತದಂತೆ ಕಂನುಡಿಯ ಪರಿಚಯವಾದರೂ ಇದ್ದಿತೆಂದು ಗ್ರಹಿಸುವಲ್ಲಿ ಅವಾಸ್ತವತೆಯು ಕಾಣದು" ಎಂದು ಹೇಳುತ್ತಾರೆ. ಇದು ಕೇವಲ ಅಭಿಮಾನದ ಮಾತು ಮತ್ತು ಊಹೆ ಎಂದು ಹೇಳುವವರಿಗೆ ಉತ್ತರವನ್ನು ಕೊಡುವುದು ಕಷ್ಟವೇ ಸರಿ. ಜೋಶಿಯವರ ಈ ವಾದವನ್ನು ಒಪ್ಪುವ ವಿದ್ವಾಂಸರು ಬಹುಮಂದಿ ಸಿಗಲಾರರು.

ಕರ್ಣಾಟಕದ ಇತಿಹಾಸಪ್ರಾರಂಭಕಾಲದ ಸಂಸ್ಕೃತಿಯನ್ನು ತಿಳಿಯಲು

ಮುಖ್ಯವಾಗಿರುವ ಸಾಧನಗಳೆಂದರೆ ಉತ್ಖನನದ ವರದಿಗಳು. ನಮ್ಮ ದುರದೃಷ್ಟವೋ ಎಂಬಂತೆ ನಮ್ಮಲ್ಲಿ ಹೆಚ್ಚಿನ ಉತ್ಖನನಗಳು ನಡೆದಿಲ್ಲ. ಡಾ. ಆಲ್‌ಚಿನ್ ಮತ್ತು ಡಾ. ನಾಗರಾಜರಾವ್‌ರವರ ಉತ್ಖನನ ವರದಿಗಳನ್ನು ಜೋಶಿಯವರು ಚೆನ್ನಾಗಿ ಬಳಸಿಕೊಂಡಿದ್ದಾರೆ. ಭಾರತಿಯ ಪುರಾತನ ಸಂಸ್ಕೃತಿಯ ವಿಶ್ಲೇಷಣದಲ್ಲಿ ಆಸ್ಟ್ರೊಲಾಯಿಡ್, ದ್ರಾವಿಡ ಮತ್ತು ಆರ್ಯ ಎಂಬ ಮೂರು ಬಗೆಯ ಪದರಗಳನ್ನು ಗುರುತಿಸಲಾಗಿದೆ. ಈಗ ನಮಗೆ ತಿಳಿದಿರುವಂತೆ 'ಮೆಗಾಲಿಥಿಕ್' ಸಂಸ್ಕೃತಿಯ ಜನರು ದ್ರಾವಿಡರು. 'ನಿಯೋಲಿಥಿಕ್' ಜನರು ಈ ಪಂಗಡದವರಲ್ಲ. ಆದರೆ ಜೋಶಿಯವರು ಈ 'ನಿಯೋಲಿಥಿಕ್' ಜನಗಳನ್ನು ದ್ರಾವಿಡರೆಂದು ಮಾತ್ರವಲ್ಲದೆ ಕಂದಮಿಳರೆಂದೂ ಉಲ್ಲೇಖಿಸಿದ್ದಾರೆ. ಇದು ಡಾ. ನಾಗರಾಜರಾವ್‌ರವರ ತೆಕ್ಕಲ ಕೋಟೆಯ ಉತ್ಖನನದ ವರದಿಯಿಂದಾಗಲೀ ಡಾ. ಆಲ್‌ಚಿನ್‌ರವರ ಬೂದಿಗುಡ್ಡಗಳ ಉತ್ಖನನದಿಂದಾಗಲೀ ಹೊರಪಟ್ಟಿಲ್ಲ. ಜೋಶಿಯವರು ತಮ್ಮ ಸಿದ್ಧಾಂತಕ್ಕೆ ಒದಗಿಸಿರುವ ಮಾಹಿತಿಗಳು ತೀರಾ ದುರ್ಬಲ.

ಉತ್ತರಾಪಥದಲ್ಲಿ ಕ್ರಿಸ್ತಪೂರ್ವ ೮-೫ ಶತಮಾನಗಳಿಂದ ಪ್ರಾರಂಭವಾದ ರಾಜಕೀಯ ಹಾಗೂ ಸಾಮಾಜಿಕ ಮತ್ತು ಧಾರ್ಮಿಕ ಕ್ರಾಂತಿಗಳಿಂದ ಕಾಣತೊಡಗಿದ ಜೀವನದ ಅಸ್ಥಿರತೆಯಲ್ಲಿ ಈ ಜನವನ್ನು ಅನೇಕ ಹಿಂದಿನ ತಲೆಮಾರಿನ ಸುಪ್ತಸ್ಮೃತಿಗಳು ಇತ್ತ ಕಡೆಗೇ ಎಳೆದು ತಂದವೋ ಎನ್ನುವಂತಿದೆ ಈ ವಿಧಿಘಟನೆ" ಎನ್ನುತ್ತಾರೆ ಜೋಶಿಯವರು. ಉತ್ತರಾಪಥದ ಧಾರ್ಮಿಕ ಕ್ರಾಂತಿಗಳು (ಹೊಸಮತಗಳ ಉಗಮ) ಕ್ರಿ. ಪೂ. ಆರನೆಯ ಶತಮಾನದಲ್ಲಿ ನಡೆಯಿತು. ಅದರ ಆದಿಯನ್ನು ಏಳನೆಯ ಶತಮಾನಕ್ಕೂ ಒಯ್ಯಬಹುದು. ಜೋಶಿಯವರು ಹೇಳುವ ಕ್ರಿ. ಪೂ. ೮-೫ನೆಯ ಶತಮಾನದ ಈ ಕ್ರಾಂತಿಗಳು ಯಾವುವು ಎನ್ನುವುದು ಅರ್ಥವಾಗುವುದಿಲ್ಲ. ಇದರಿಂದಾಗಿ "ಮಾಳವದಿಂದ....ಕಂನಾಡಿಗೆ ವಲಸೆ ಬಂದ" ಜನರ ವಿಷಯವು ಸ್ಪಷ್ಟವಾಗುವುದಿಲ್ಲ.

ತೆಕ್ಕಲಕೋಟೆ, ಬ್ರಹ್ಮಗಿರಿ ಮತ್ತು ಚಂದ್ರವಳ್ಳಿಯ ಅವಶೇಷಗಳು ಕ್ರಿ. ಪೂ. ಎರಡು ಸಾವಿರ ವರ್ಷ ಪುರಾತನವಾದುದೆಂದು ಜೋಶಿಯವರು ಹೇಳುತ್ತಾರೆ. ಈ ಪಟ್ಟಿಯಿಂದ ಚಂದ್ರವಳ್ಳಿಯನ್ನು ತೆಗೆದು ಹಾಕಿದರೆ ಆಗ ಅವರ ಹೇಳಿಕೆಯು ಸರಿ ಎನಿಸುತ್ತದೆ.

ಈ ಗ್ರಂಥದಲ್ಲಿ ಅನೇಕ ವಿಷಯಗಳು ಅಡಕವಾಗಿವೆ. ಕೆಲವು ಕಡೆಗಳಲ್ಲಂತೂ ಉತ್ತಮ ಹೊಸ ಅಂಶಗಳು ಬೆಳಕಿಗೆ ಬಂದಿವೆ. ಉತ್ಸಾಹದ ರಭಸದಲ್ಲಿ ಜೋಶಿಯವರು ಒಂದು ಕಡೆಯಿಂದ ಇನ್ನೊಂದು ಕಡೆಗೆ ಹಾರುತ್ತಾರೆ. ಜನಸಾಮಾನ್ಯರಿಗೆ ಇವರ ಜೊತೆ ಹಾರುವುದು ಕಷ್ಟವಾಗುತ್ತದೆ.

ಕೆಲವು ಕಡೆಗಳಲ್ಲಿ ಮೂಲಕಥೆಗಿಂತ ಬಹು ಭಿನ್ನವಾದ ಭಾಗಗಳು ಅನವಶ್ಯಕವಾಗಿ ಬೆಳೆದು ಬಂದಿವೆ. ಉದಾಹರಣೆಗೆ, "ಕಂನುಡಿಯು ಆಕೃತಿ ಪಡೆದ ಪರಿಸರ" ಎಂಬ

ಭಾಗದ ನಂತರ ಮುಂದಿನ ಒಂದುನೂರು ಪುಟಗಳಲ್ಲಿ ಕಾಣಬರುವ ಚರ್ಚೆಗೂ ಕರ್ಣಾಟ ಸಂಸ್ಕೃತಿಯ ಚರ್ಚೆಗೂ ಯಾವ ವಿಧವಾದ ಸಂಬಂಧವೂ ಇಲ್ಲವೆಂದು ತೋರುತ್ತದೆ. ಋಗ್ವೇದೋಪನಿಷತ್ತುಗಳ ಕಾಲದ ಬ್ರಾಹ್ಮಣಿಕೆ, ಮತಸಂಪ್ರದಾಯಗಳು ಮುಂತಾದ ವಿಚಾರಗಳ ದೀರ್ಘ ಚರ್ಚೆಯು ಗ್ರಂಥದ ಕೇಂದ್ರವಾದಕ್ಕೆ ಯಾವ ಪುಷ್ಟಿಯನ್ನೂ ಒದಗಿಸುವುದಿಲ್ಲ. ಈ ಭಾಗದಲ್ಲಿ ಒಂದು ಸಣ್ಣ ಬೇರೆ ಗ್ರಂಥಕ್ಕಾಗುವಷ್ಟು ಮಾಹಿತಿಗಳು ತುಂಬಿವೆ. ಇದೇ ಗ್ರಂಥದೊಡನೆ ಸೇರಿಸಿ ಪ್ರಕಟಿಸಬೇಕೆಂದು ಅಪೇಕ್ಷೆಪಟ್ಟಿದ್ದ 'ಅರ್ಥಮೀಮಾಂಸೆ' ಎಂಬ ಇನ್ನೊಂದು ಗ್ರಂಥದಲ್ಲಿ ಇವು ಹೆಚ್ಚು ಸಮಂಜಸವಾಗುತ್ತಿದ್ದವು. ಡಾ. ಆಲ್‌ಚಿನ್‌ರವರು ಮಾಡಿರುವ ಬೂದಿಗುಡ್ಡೆಗಳ ಅಗೆತದ ವಿಚಾರ ಮಾಡುತ್ತಿದ್ದ ಲೇಖಕರು ಇದ್ದಕ್ಕಿದ್ದಂತೆ ಅದನ್ನು ಬಿಟ್ಟು, "ಜಾತ್ರಿಯು ತಂದೆಯಿಂದಲೋ? ತಾಯಿಯಿಂದಲೋ? ಏನೊಂದೂ ನಿಶ್ಚಿತವಿಲ್ಲದ್ದರಿಂದ ಈ ಎರಡೂ ದಿಕ್ಕಿನಿಂದಲೂ, ಹಿಂದೂ ಎಂಬ ಸಮಾಜದ ಸಂಖ್ಯೆಯು ಮುಸಲ್ಮಾನ ಶರೀರ ಸಂಬಂಧದಲ್ಲಿ ದಿನದಿನಕ್ಕೂ ಕಡಿಮೆಯಾಗುತ್ತ ಹೋಗುವುದು ನಿಶ್ಚಿತವೇ ಇದೆ...." ಈ ರೀತಿ ಮುಂದುವರಿದು ಮತ್ತೆ ಡಾ. ಆಲ್‌ಚಿನ್‌ರವರ ಬೂದಿ ಗುಡ್ಡದ ಕಡೆಗೆ ತಿರುಗುತ್ತಾರೆ. ಮತ್ತೆ ಒಂದು ಪುಟದನಂತರ ಸತ್ಯ, ಪವಾಡ, ಅಮೂರ್ತ, ಸತ್ ಮುಂತಾದ ಬಗೆಗೆ ನಾಲ್ಕಾರು ಪುಟಗಳನ್ನು ಮುಂದುವರಿಸಿ ಮತ್ತೆ 'ಪ್ರಸ್ತುತಕ್ಕೆ' ಬರುತ್ತಾರೆ. ಈ ರೀತಿ ಅನೇಕ ಕಡೆಗಳಲ್ಲಿ ಇತಿಹಾಸದ ನಿಷ್ಠ ವಿದ್ಯಾರ್ಥಿಗೆ ಅಡ್ಡದಾರಿಯ ದರ್ಶನವಾಗುವುದು ಮಾತ್ರವಲ್ಲದೆ ಅಧ್ಯಯನಕ್ಕೆ ಅಡಚಣೆಯೂ ಉಂಟಾಗುತ್ತದೆ. ಇದರಿಂದ ಈ ವಿದ್ವತ್ಪೂರ್ಣ ಗ್ರಂಥವು ಓದುಗರ ಮೇಲೆ ಸಾಕಷ್ಟು ಪರಿಣಾಮ ಬೀರಲು ಇದು ಒಂದು ಮುಖ್ಯ ಅಡ್ಡಿಯಾಗುತ್ತದೆ.

ಇತಿಹಾಸಕಾರರಲ್ಲಿ ಅಭಿಪ್ರಾಯ ಭೇದಗಳು ಬಹು ಸಾಮಾನ್ಯ. ಭಿನ್ನವಾದ ಸಿದ್ಧಾಂತಗಳನ್ನು ಮಂಡಿಸಿರುವ ವಿದ್ವಾಂಸರುಗಳನ್ನು ಟೀಕಿಸುವಾಗ ಇತಿಹಾಸದ ಸಂಶೋಧಕನು ಬಹು ಎಚ್ಚರಿಕೆ ವಹಿಸಬೇಕು. ಟೀಕೆಯಲ್ಲಿ ವ್ಯಂಗ್ಯವಾಗಲೀ ವೈಯಕ್ತಿಕ ವಿಚಾರಗಳಾಗಲೀ ಸುಳಿಯಬಾರದೆಂಬ ಇತಿಹಾಸದ ನಿಯಮ ಎಲ್ಲರಿಗೂ ತಿಳಿದಿದ್ದೇ. ಆದರೆ ಅದನ್ನು ಕಾರ್ಯಗತ ಮಾಡುವುದು ಕಷ್ಟವಾದುದು. ಜೋಶಿಯವರು, ಡಾ. ಡಿ. ಸಿ. ಸರ್ಕಾರ್, ಡಾ. ಎಚ್. ಡಿ. ಸಾಂಕಳಿಯ ಮುಂತಾದವರ ವಾದಗಳಿಂದ ರೊಚ್ಚಿಗೆದ್ದು ಅದನ್ನು ವ್ಯಂಗ್ಯಪೂರಿತ ಧ್ವನಿಯಲ್ಲಿ ತೋರಿಸಿದ್ದಾರೆ. ಸಂಶೋಧನೆಯೇ ಪ್ರಧಾನವಾದ ಈ ಗ್ರಂಥಕ್ಕೆ ಇದು ಶೋಭಿಸುವುದಿಲ್ಲ.

ಈ ಗ್ರಂಥದಲ್ಲಿರುವ ಮುಖ್ಯ ದೋಷವೆಂದರೆ ಮುದ್ರಾರಾಕ್ಷಸನ ಹಾವಳಿ. ಪ್ರತಿಪುಟದಲ್ಲಿಯೂ ತಪ್ಪುಗಳಿವೆಯೆಂದರೆ, ಅದು ಓದುಗನ ಮೇಲೆ ಯಾವ ರೀತಿಯ ಪರಿಣಾಮವನ್ನುಂಟುಮಾಡುತ್ತದೆಯೆಂಬುದನ್ನು ಊಹಿಸಬಹುದು. ಇಂತಹ ಉನ್ನತ ಮಟ್ಟದ ಸಂಶೋಧನ ಗ್ರಂಥಕ್ಕೆ ಇದು ತರವಲ್ಲ. ಆಲ್‌ಚಿನ್ ಎನ್ನುವ ಹೆಸರು ಆಲ್‌ಜಿನ್, ಅಲ್‌ಜಿನ್, ಅಲ್‌ಚಿನ್ ಎಂಬ ವಿವಿಧ ರೂಪಗಳಲ್ಲಿ ಕಾಣಬರುತ್ತವೆ.

technic, Palaetithic, Cultur, Tekkakota ಮುಂತಾದ ತಪ್ಪುಗಳು ಹೇರಳವಾಗಿವೆ. ಮುದ್ರಣವೂ ಸುಂದರವಾಗಿಲ್ಲ. ಇಂತಹ ಶ್ರೇಷ್ಠ ಕೃತಿಯು ಬೇಗನೆ ಎರಡನೆಯ ಮುದ್ರಣವನ್ನು ಕಂಡು, ಅಚ್ಚಿನ ದೋಷಗಳಿಂದ ಬಿಡುಗಡೆಹೊಂದಿ ಸುಂದರವಾಗಿ ಹೊರಬರಲೆಂದು ಆಶಿಸಬಹುದು.

ಈ ರೀತಿಯ ಗ್ರಂಥದಲ್ಲಿ ಅಡಿಟಿಪ್ಪಣಿಗಳು, ಆಧಾರ ಗ್ರಂಥಗಳ ಪಟ್ಟಿ ಮತ್ತು ಪದಸೂಚಿಗಳು ಬಹು ಮುಖ್ಯ. ಎರಡನೆಯ ಮುದ್ರಣದಲ್ಲಿ ಇವುಗಳೆಲ್ಲವನ್ನೂ ಸೇರಿಸಿ ಇದರ ಉಪಯುಕ್ತತೆಯನ್ನು ಹೆಚ್ಚಿಸಬಹುದು.

ಒಟ್ಟಿನಲ್ಲಿ ' ಕರ್ನಾಟ ಸಂಸ್ಕೃತಿಯ ಪೂರ್ವಪೀಠಿಕೆ ' ಕನ್ನಡ ಭಾಷೆಯ ಶ್ರೇಷ್ಠ ಸಂಶೋಧನ ಗ್ರಂಥಗಳಲ್ಲೊಂದು. ಇಂತಹ ವಿದ್ವತ್ಪೂರ್ಣ ಗ್ರಂಥವನ್ನು ಬರೆದ ಶಂ. ಬಾ. ಜೋಶಿಯವರೂ, ಇದನ್ನು ಪ್ರಕಟಿಸಿದ ಸಮಾಜ ಬುಕ್‌ಡಿಪೋವಿನ ಮಾಲೀಕರೂ ಮತ್ತು ಇದರ ಮಹತ್ವವನ್ನು ಗುರುತಿಸಿದ ಕೇಂದ್ರ ಸಾಹಿತ್ಯ ಅಕಾಡೆಮಿಯವರೂ ಅಭಿನಂದನಾರ್ಹರು.

ಸಂಪಾದಕೀಯ

ಹಾ. ಮಾ. ನಾಯಕ

'ಪ್ರಬುದ್ಧ ಕರ್ಣಾಟಕ'ದ ಈಚಿನ ಇಪ್ಪತ್ತೈದು ವರ್ಷಗಳು

"ಈ ಸಂಚಿಕೆ ಪ್ರಕಟವಾಗಲು ಇಷ್ಟು ತಡವಾದುದಕ್ಕಾಗಿ ಕ್ಷಮೆ ಬೇಡುತ್ತೇವೆ. ಬೆಳ್ಳಿಯ ಕಾಣಿಕೆಯನ್ನು ಪ್ರೀತಿ ವಿಶ್ವಾಸಗಳಿಂದ ಸ್ವೀಕರಿಸಬೇಕೆಂದು ಪ್ರಾರ್ಥನೆ. ಈ ಸಂಬಂಧದಲ್ಲಿ ನಡೆದಿರುವ ಎಲ್ಲ ತಪ್ಪುಗಳನ್ನೂ, ಇದರಲ್ಲಿ ಇರುವ ಎಲ್ಲ ಲೋಪದೋಷಗಳನ್ನೂ ಮನ್ನಿಸಬೇಕೆಂದು ಬೇಡುತ್ತೇವೆ."

'ಪ್ರಬುದ್ಧ ಕರ್ಣಾಟಕ'ದ ಬೆಳ್ಳಿ ಸಂಚಿಕೆಯ ಸಂಪಾದಕೀಯದ ಈ ಮಾತುಗಳನ್ನೇ ನಾವು ಚಿನ್ನದ ಸಂಚಿಕೆಯ ವಿಷಯದಲ್ಲಿಯೂ ಹೇಳಬೇಕಾಗಿದೆ. ಬೆಳ್ಳಿ ಸಂಚಿಕೆ ಪ್ರಕಟವಾಗುವಲ್ಲಿ ಎಷ್ಟು ಕಾಲ ವಿಳಂಬವಾಯಿತೊ ತಿಳಿಯದು. ಆದರೆ ಚಿನ್ನದ ಸಂಚಿಕೆಯ ಯೋಜನೆ ಪೂರ್ಣಗೊಳ್ಳುವಲ್ಲಿ ಕೆಲವು ವರ್ಷಗಳ ವಿಳಂಬವೇ ಆಗಿದೆ.

'ಪ್ರಬುದ್ಧ ಕರ್ಣಾಟಕ'ದ ಚಿನ್ನದ ಹಬ್ಬದ ನೆನಪಿಗೆಂದು ಒಂದು ವಿಜ್ಞಾನ ಸಂಪುಟವನ್ನೂ, ಒಂದು ಸಾಹಿತ್ಯ ಸಂಪುಟವನ್ನೂ ಪ್ರಕಟಿಸಬೇಕೆಂದು ತೀರ್ಮಾನಿಸಲಾಗಿತ್ತು. ಅದರಂತೆ ವಿಜ್ಞಾನ ಸಂಪುಟ ಚಿನ್ನದ ಹಬ್ಬದ ಹೊತ್ತಿಗೇ ಎರಡು ಭಾಗಗಳಲ್ಲಿ ಪ್ರಕಟಗೊಂಡು ಕನ್ನಡ ವಿಜ್ಞಾನ ಸಾಹಿತ್ಯದಲ್ಲಿ ಒಂದು ಆಕರಗ್ರಂಥದ ಸ್ಥಾನ ಪಡೆದಿದೆ. ಅದರ ವಿಸ್ತಾರ ವೈವಿಧ್ಯಗಳು ವಿಜ್ಞಾನ ಸಾಹಿತ್ಯದಲ್ಲಿ ಆಸಕ್ತರಾದವರೆಲ್ಲರ ಮೆಚ್ಚುಗೆಯನ್ನು ಗಳಿಸಿವೆ. ಕನ್ನಡದಲ್ಲಿ ವಿಜ್ಞಾನ ಸಾಹಿತ್ಯದ ಬೆಳವಣಿಗೆಗೆ ಅಗತ್ಯವಾದ ಅವಕಾಶಗಳನ್ನು ಕಲ್ಪಿಸಿ, ಹಲವಾರು ಲೇಖಕರಿಗೆ ಪ್ರೋತ್ಸಾಹ ನೀಡಿದ 'ಪ್ರಬುದ್ಧ ಕರ್ಣಾಟಕ'ದ ಚಿನ್ನದ ಹಬ್ಬದಲ್ಲಿ, ಆಧುನಿಕ ಕಾಲದ ಅಗತ್ಯಕ್ಕೆ ಅನುಗುಣವಾಗಿ, ವಿಜ್ಞಾನ ಸಂಪುಟಕ್ಕೆ ಆದ್ಯತೆಯನ್ನು ಕೊಟ್ಟದ್ದೂ, ಸಾಹಿತ್ಯ ಸಂಪುಟಕ್ಕಿಂತ ಅದರ ಗಾತ್ರವನ್ನು ಹೆಚ್ಚಿಸಿದ್ದೂ ತುಂಬ ಸಹಜವಾಗಿದೆ. ಅಷ್ಟೇ ಅಲ್ಲ 'ವಿಜ್ಞಾನ ಕರ್ಣಾಟಕ' ಎಂಬ ವಿಜ್ಞಾನ ವಿಷಯಗಳಿಗೇ ಮೀಸಲಾದ ತ್ರೈಮಾಸಿಕ ಇದೇ ಸಂದರ್ಭದಲ್ಲಿ ರೂಪುಗೊಂಡದ್ದೂ ಅಷ್ಟೇ ಉಚಿತವಾಗಿದೆ.

ನಮ್ಮ ಕಾಲ ವಿಜ್ಞಾನದ ಕಾಲ. ದಿನದಿನಕ್ಕೂ ವಿಜ್ಞಾನದ ಬೆಳವಣಿಗೆ ನಮ್ಮನ್ನು ಗಾಬರಿಗೊಳಿಸುವಷ್ಟರ ಮಟ್ಟಿಗೆ ನಮ್ಮ ಬದುಕನ್ನು ವ್ಯಾಪಿಸಿಕೊಳ್ಳುತ್ತಿದೆ. ಅದರ ವೇಗ ವಿಪುಲತೆಗಳಿಗೆ ಹೊಂದಿಕೊಳ್ಳದಿದ್ದರೆ ಪ್ರಪಂಚದ ಯಾವ ಭಾಷೆಯಾದರೂ ಆಧುನಿಕ ಕಾಲದ ಅಗತ್ಯಗಳನ್ನು ಸಮರ್ಪಕವಾಗಿ ಸಮರ್ಥವಾಗಿ ಈಡೇರಿಸಲಾರದು. ಹೊಸ ಹೊಸ ತತ್ವಗಳು, ಕಲ್ಪನೆಗಳು, ಆವಿಷ್ಕಾರಗಳು, ಅವನ್ನು ನಿರೂಪಿಸುವ ಪರಿಭಾಷೆ, ತಾಂತ್ರಿಕತೆಗಳಿಗೆ ಅನುಗುಣವಾಗಿ ಮಾತ್ರ ಜನರನ್ನು ಮುಟ್ಟಬಲ್ಲವು. ಈ ಮಹತ್ತರ ಸಂವಹನಕ್ಕಾಗಿ ಭಾಷೆ ಸಜ್ಜುಗೊಳ್ಳಬೇಕಾಗಿದೆ. 'ಪ್ರಬುದ್ಧ ಕರ್ಣಾಟಕ' ಮೂಲತಃ ಶುದ್ಧ ಸಾಹಿತ್ಯದ ಪತ್ರಿಕೆಯಾಗಿ ಆರಂಭಗೊಂಡಿದ್ದರೂ, ಕನ್ನಡ ಭಾಷೆಯ ಸರ್ವತೋಮುಖ ಬೆಳವಣಿಗೆಯೂ ಅದರ ಜವಾಬ್ದಾರಿಯಾಗಿತ್ತು. ಆದ್ದರಿಂದ ಅದು ಶಾಸ್ತ್ರವಿಷಯಗಳಿಂದ ದೂರವಾಗಿರುವುದು ಸಾಧ್ಯವಿರಲಿಲ್ಲ. ಫಲವಾಗಿ ಅದರಲ್ಲಿ ಎಲ್ಲ ಬಗೆಯ ಲೇಖನಗಳಿಗೂ ಆಸ್ಪದ ದೊರೆಯುವಂತಾಯಿತು.

ಈಚಿನ ವರ್ಷಗಳಲ್ಲಂತೂ ಅದು, ಕೆಲವು ಮಹತ್ವದ ವೈಜ್ಞಾನಿಕ ಪುಸ್ತಕಗಳು ಕನ್ನಡದಲ್ಲಿ ಪ್ರಕಟಗೊಳ್ಳಲು ಕಾರಣವಾಯಿತು. ಜಿ. ಹನುಮಂತರಾಯರ 'ವಿಜ್ಞಾನ', ಆರ್. ಎಲ್. ನರಸಿಂಹಯ್ಯನವರ 'ಜಗತ್ತುಗಳ ಹುಟ್ಟು ಸಾವು'—ಇಂಥ ಚಿರ ಕೃತಿಗಳು ಮೊದಲು 'ಪ್ರಬುದ್ಧ ಕರ್ಣಾಟಕ'ದಲ್ಲಿಯೇ ಪ್ರಕಟವಾದವೆಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು. ಪತ್ರಿಕೆಯ ಮೊದಲ ೨೫ ವರ್ಷಗಳ ಅವಧಿ ಯಲ್ಲಿ ೮೫ ವಿಜ್ಞಾನ ಸಂಬಂಧವಾದ ಲೇಖನಗಳು ಪ್ರಕಟವಾಗಿದ್ದರೆ ಎರಡನೆಯ ಇಪ್ಪತ್ತೈದು ವರ್ಷಗಳ ಅವಧಿಯಲ್ಲಿ ೨೫೦ ಲೇಖನಗಳು ಪ್ರಕಟವಾಗಿವೆ. ಪ್ರತ್ಯೇಕ ವಿಜ್ಞಾನ ಸಂಚಿಕೆಗಳೇ ಪ್ರಕಟವಾಗಿದ್ದು ಅವುಗಳ ಒಟ್ಟು ಪುಟ ಸಂಖ್ಯೆ ೨೩೬೯ ಆಗಿದೆ. ಈ ಅಂಕೆ ಸಂಖ್ಯೆಗಳು 'ಪ್ರಬುದ್ಧ ಕರ್ಣಾಟಕ' ವಿಜ್ಞಾನ ಸಾಹಿತ್ಯದ ಬಗೆಗೆ ತೋರುತ್ತಾ ಬಂದ ಧೋರಣೆಯನ್ನು ತಿಳಿಸುತ್ತವೆ. ಆದ್ದರಿಂದ ಪತ್ರಿಕೆಯ ಚಿನ್ನದ ಹಬ್ಬದಲ್ಲಿ ವಿಜ್ಞಾನ ಸಂಪುಟವೇ ಮೊದಲು ಪ್ರಕಟವಾದದ್ದೂ ಉಚಿತವಾಗಿಯೇ ಇದೆ. ವಿಶ್ವವಿದ್ಯಾನಿಲಯಗಳ ಮಟ್ಟದಲ್ಲಿ ಕನ್ನಡ ಭಾಷೆಯಲ್ಲಿ ಆಗಬೇಕಾದ ಕೆಲಸ ವನ್ನೂ, ಆ ಕೆಲಸದ ಮಹತ್ವವನ್ನೂ ಈ ಸಂದರ್ಭವು ಸಂಕೇತಿಸುತ್ತದೆಂದು ನಮ್ಮ ಭಾವನೆ.

ಚಿನ್ನದ ಹಬ್ಬದ ನೆನಪಿನ ಈ ಸಾಹಿತ್ಯ ಸಂಪುಟದ ಸ್ವರೂಪ ತನ್ನಷ್ಟಕ್ಕೇ ಸ್ವಲ್ಪವಾದರೂ ಸ್ಪಷ್ಟವಾಗುತ್ತದೆ. ಅದಕ್ಕಾಗಿ ಒಂದು ನಿರ್ದಿಷ್ಟಯೋಜನೆಯನ್ನು ರೂಪಿಸಿ ಚಿನ್ನದ ಸಂಪುಟವು ಸೃಜನಶೀಲ ಸಾಹಿತ್ಯದ ಹಾಗೂ ಸಾಹಿತ್ಯ ವಿಮರ್ಶೆಯ ಅತ್ಯುತ್ತಮ ಸಂಚಯನವಾಗಬೇಕೆಂದು ಆಶಿಸಿದೆವು. ಈ ಆಸೆಯ ಈಡೇರಿಕೆಗೆ, ಯೋಜನೆಯ ಯಶಸ್ಸಿಗೆ ಕನ್ನಡ ನಾಡಿನ ಹಲವಾರು ಸಿದ್ಧ ಪ್ರಸಿದ್ಧ ಲೇಖಕರನ್ನು ಸಂಪರ್ಕಿಸಿದೆವು. ಲೇಖಕರನ್ನು ಆಯುವಲ್ಲಿ ವಯಸ್ಸಿನ, ಪಂಥದ ಅಥವಾ ಪ್ರದೇಶದ ಯಾವ ಅಂಶಗಳನ್ನೂ ಗಮನಿಸದೆ ಅತ್ಯುತ್ತಮ ಕನ್ನಡ ಬರಹಗಾರರನ್ನೆಲ್ಲ ಕೇಳಿ

ಕೊಂಡಿವು. ಕನ್ನಡ ನವೋದಯಕ್ಕೆ ಒಂದು ಕಾರಣವಾದ ‘ಪ್ರಬುದ್ಧ ಕರ್ಣಾಟಕ’ದ ಚಿನ್ನದ ಹಬ್ಬದ ಸ್ಮರಣೆಯಲ್ಲಿ, ಆ ನವೋದಯದ ಫಲವಾದ ಪ್ರತಿಭಾವಂತ ಬರಹಗಾರರೆಲ್ಲ ಸೇರಬೇಕೆಂಬುದೇ ನಮ್ಮ ಅಪೇಕ್ಷೆಯಾಗಿತ್ತು. ಆದರೆ ಅನೇಕ ಕಾರಣಗಳಿಂದ ಈ ಸಂಪುಟ ಮೂಲಯೋಜನೆಯಂತೆ ಸಿದ್ಧವಾಗುವುದು ಸಾಧ್ಯವಾಗಲಿಲ್ಲ. ಅನೇಕರು ನಮ್ಮ ಆಹ್ವಾನವನ್ನು ಒಪ್ಪಿಕೊಳ್ಳಲಿಲ್ಲ; ಕೆಲವರು ಉತ್ತರ ಕೊಡುವ ಸೌಜನ್ಯವನ್ನೂ ತೋರಲಿಲ್ಲ; ಮತ್ತೆ ಕೆಲವರು ನಾವು ಕೇಳಿದ ಬರಹವನ್ನು ಕೊಡಲು ಸಿದ್ಧರಿರಲಿಲ್ಲ; ಇನ್ನು ಕೆಲವರಿಗಾಗಿ ಬಹು ಕಾಲ ಕಾಯಬೇಕಾಯಿತು. ಇದೆಲ್ಲದರ ಒಟ್ಟು ಫಲವೆಂದರೆ ಸಂಪುಟದ ಮೂಲ ಉದ್ದೇಶ ವಿಫಲವಾದದ್ದು; ಪ್ರಕಟಣೆಯಲ್ಲಿ ವಿಳಂಬ ಆದದ್ದು. ಇದಕ್ಕಾಗಿ ನಮಗೆ ವಿಷಾದವಾಗಿದ್ದರೂ, ನಿರಾಶೆಯಾಗಿಲ್ಲ. ಏಕೆಂದರೆ ಮೂಲ ಆಶಯಕ್ಕನುಗುಣವಾಗಿ ಸಂಪುಟ ಪ್ರಕಟವಾಗದಿದ್ದರೂ ಅದರ ಸತ್ವ ವೈವಿಧ್ಯಗಳಿಗೆ ಯಾವುದೇ ರೀತಿಯ ಕೊರೆಯೂ ಉಂಟಾಗಿಲ್ಲ. ಇದು ಸಂತೋಷದಿಂದ ಓದಬಹುದಾದ ಒಂದು ಸಮೃದ್ಧ ಸಾಹಿತ್ಯ ಸಂಪುಟವಾಗಿದೆ.

ಇದನ್ನು ಸಿದ್ಧಪಡಿಸುವಲ್ಲಿ ನೆರವಾದವರು ಒಬ್ಬಿಬ್ಬರಲ್ಲ; ಅವರನ್ನೆಲ್ಲ ಇಲ್ಲಿ ಹೆಸರಿಸುವುದು ಸಾಧ್ಯವಿಲ್ಲ.। ಆದರೂ ಕೆಲವರನ್ನು ಮಾತ್ರ ಉಲ್ಲೇಖಿಸಲೇಬೇಕು. ಈ ಸಂಪುಟಕ್ಕೆ ಬರೆದಿರುವ ಲೇಖನದಾರರು, ನನ್ನ ಜೊತೆ ಸಂಪಾದಕರಾದ ಡಾ. ಎಚ್. ತಿಪ್ಪೇರುದ್ರಸ್ವಾಮಿ ಮತ್ತು ಶ್ರೀ ಜೆ. ಆರ್. ಲಕ್ಷ್ಮಣರಾವ್, ಮೈಸೂರು ವಿಶ್ವವಿದ್ಯಾನಿಲಯದ ಮುದ್ರಣಾಲಯದ ನಿರ್ದೇಶಕರಾದ ಶ್ರೀ ಎಚ್. ನರಸಣ್ಣ, ಪ್ರಕಾಶಕರಾದ ಪ್ರಸಾರಾಂಗದ ನಿರ್ದೇಶಕ ಡಾ. ಪ್ರಭುಶಂಕರ ಇವರ ಸಹಾಯ ಸಹಕಾರಗಳಿಲ್ಲದಿದ್ದದ್ದರೆ ಈ ಸಂಪುಟ ಹೀಗೆ ಮೈತಳೆಯುವುದು ಸಾಧ್ಯವೇ ಇರುತ್ತಿರಲಿಲ್ಲ. ಕೆಲವು ಕಾರಣಗಳಿಂದ ಪ್ರಕಟಣೆಯಲ್ಲಿ ಆದ ವಿಳಂಬಕ್ಕಾಗಿ ನಾನು ಎಲ್ಲರನ್ನೂ, ಮುಖ್ಯವಾಗಿ ‘ಪ್ರಬುದ್ಧ ಕರ್ಣಾಟಕ’ದ ಓದುಗರನ್ನು ಕ್ಷಮೆ ಕೇಳುತ್ತೇನೆ. ಈ ಸಂಪುಟದ ಪ್ರಕಟಣೆ ಅವರೆಲ್ಲರ ತಾಳ್ಮೆಯನ್ನು ಕೆಣಕಿದೆ ಎಂಬುದು ನನಗೆ ಗೊತ್ತಿದೆ. ಆದರೆ ಹಲವರನ್ನು ಅವಲಂಬಿಸಿದ ಕೆಲಸಗಳ ಪಾಡು ಹೀಗಾಗುವುದು ಅನಿವಾರ್ಯ. ಅದರಲ್ಲಿ ನನ್ನ ಪಾಲಿಗಾಗಿ ನನ್ನ ವಿಷಾದವಿದೆ.

* * * *

‘ಪ್ರಬುದ್ಧ ಕರ್ಣಾಟಕ’ದ ಅರ್ಧಶತಮಾನದ ಬದುಕು ನಮ್ಮ ಸಾಹಿತ್ಯ ಚರಿತ್ರೆಯಲ್ಲಿ ವಿಶೇಷ ಉಲ್ಲೇಖಕ್ಕೆ ಅರ್ಹವಾದ ಸಾರ್ಥಕ ಬದುಕು. ಅದರ ಮೊದಲ ಸಂಚಿಕೆ ಪ್ರಕಟವಾದದ್ದು ೧೯೧೯ರಲ್ಲಿ ಸಿದ್ಧಾರ್ಥಿ ಸಂವತ್ಸರದ ಯುಗಾದಿಯಲ್ಲಿ. ಎಸ್. ವಿ. ರಂಗಣ್ಣ, ಸಿ. ಕೆ. ವೆಂಕಟರಾಮಯ್ಯ ಮತ್ತು ನಾಡಿಗ ನೀಲಕಂಠಪ್ಪನವರ ಮೂರು ಲೇಖನಗಳೊಡನೆ ಆ ಸಂಚಿಕೆ ಪ್ರಕಟವಾಯಿತು. ಆ ಮೂವರು ಲೇಖಕರು ಪತ್ರಿಕೆಯ ಚಿನ್ನದ ಹಬ್ಬದ ಸಮಾರಂಭದ ಗೌರವಗಳನ್ನು ಸ್ವೀಕರಿಸುವಂತಾದದ್ದು

ಒಂದು ಯೋಗ. ರಂಗಣ್ಣನವರೂ, ನೀಲಕಂಠಪ್ಪನವರೂ ಸಮಾರಂಭದಲ್ಲಿ ಸ್ವತಃ ಭಾಗಿಗಳಾಗಿದ್ದರು. ಅನಾರೋಗ್ಯದ ಕಾರಣ ವೆಂಕಟರಾಮಯ್ಯನವರಿಗೆ ಭಾಗ ವಹಿಸುವುದು ಸಾಧ್ಯವಾಗಲಿಲ್ಲ. ಅನಂತರ ಚನ್ನಪಟ್ಟಣದ ತಮ್ಮ ಮನೆಯಲ್ಲಿ ಅವರು 'ಪ್ರಬುದ್ಧ ಕರ್ಣಾಟಕ'ದ ಕೃತಜ್ಞತೆಗಳನ್ನು ಸ್ವೀಕರಿಸಿದರು.

ಮೊದಲ ಸಂಚಿಕೆಯ ಮೊದಲ ಲೇಖನದಲ್ಲಿ ಬೆಳಗಾದರೂ ನಿದ್ದೆ ಮಾಡು ತ್ತಿರುವ, ತೂಕಡಿಸುತ್ತಿರುವ ಹುಡುಗರ ಒಂದು ಚಿತ್ರ ಬರುತ್ತದೆ. ಪತ್ರಿಕೆಯ ಸ್ಥಾಪಕರಾದ ಎ. ಆರ್. ಕೃಷ್ಣಶಾಸ್ತ್ರಿಗಳ ಎದುರಿಗಿದ್ದುದು ಹೀಗೆ ನಿದ್ದೆ ಹೋದ ಜನ. ಅವರನ್ನು ಎಬ್ಬಿಸಲು ಶಾಸ್ತ್ರಿಗಳು ಹಿಡಿದ ಸಾಧನಗಳು ಎರಡು: ಒಂದು, ಕರ್ಣಾಟಕ ಸಂಘ; ಇನ್ನೊಂದು, 'ಪ್ರಬುದ್ಧ ಕರ್ಣಾಟಕ'. 'ಪ್ರಬುದ್ಧ ಕರ್ಣಾಟಕ'ವನ್ನು ಸ್ಥಾಪಿಸುವಲ್ಲಿ ಶಾಸ್ತ್ರಿಗಳು ಇಟ್ಟುಕೊಂಡಿದ್ದುದು ಶುದ್ಧ ಸಾಹಿತ್ಯಕ ಉದ್ದೇಶಗಳು. ಅವರ ಮಾತಿನಲ್ಲಿಯೇ ಹೇಳುವುದಾದರೆ "ಕಾವ್ಯಸೃಷ್ಟಿಗೆ ಬೇಕಾದ ಸಾಮಗ್ರಿಗಳನ್ನು ಒದಗಿಸಿಕೊಡುವುದು" ಹಾಗೂ "ಒಂದು ಕಡೆ ವಿಮರ್ಶೆಯನ್ನೂ ಮತ್ತೊಂದುಕಡೆ ರಚನೆಯನ್ನೂ" ಬೆಳಸುವುದು. ಆದರೆ ಅವರಿಗೆ ಕನ್ನಡಿಗರ ಸಾಂಸ್ಕೃತಿಕ ಜೀವನದಲ್ಲಿ ಚಟುವಟಿಕೆಗಳನ್ನುಂಟುಮಾಡುವುದು ಬಹು ಮುಖ್ಯವಾಗಿತ್ತು.

೧೯೧೫ರ ಸುಮಾರಿಗೆ ಕೃಷ್ಣಶಾಸ್ತ್ರಿಗಳೂ, ಟಿ. ಎಸ್. ವೆಂಕಣ್ಣಯ್ಯನವರೂ ಬೆಂಗಳೂರಿನ ರಾಮಕೃಷ್ಣಾಶ್ರಮದ ಸಂಪರ್ಕ ಪಡೆದಿದ್ದರು. ಅಲ್ಲಿನ ನಿರ್ಮಲಾನಂದ ಸ್ವಾಮಿಗಳು 'ಪ್ರಬುದ್ಧ ಕರ್ಣಾಟಕ' ಎಂಬ ಹೆಸರಿನಲ್ಲಿ ಧಾರ್ಮಿಕ ಪತ್ರಿಕೆಯೊಂದನ್ನು ಹೊರಡಿಸಲು ಸೂಚಿಸಿದರಂತೆ. "ಹೇಗೂ ಇಂಗ್ಲಿಷಿನಲ್ಲಿ 'ಪ್ರಬುದ್ಧ ಭಾರತ' ಇದೆ. ಮಲೆಯಾಳದಲ್ಲಿ 'ಪ್ರಬುದ್ಧ ಕೇರಳಂ' ಇದೆ. ಕನ್ನಡದಲ್ಲಿಯೂ ಅಂಥದೊಂದು ಪತ್ರಿಕೆ ಬೇಕು" ಎಂದು ಸ್ವಾಮಿಗಳು ಹೇಳಿದ್ದರಂತೆ. ಆದರೆ ಅಂಥ ಪತ್ರಿಕೆ ಪ್ರಕಟ ವಾಗಲಿಲ್ಲ. ೧೯೧೮ರಲ್ಲಿ ಕೃಷ್ಣಶಾಸ್ತ್ರಿಗಳು ಕರ್ಣಾಟಕ ಸಂಘವನ್ನು ಸ್ಥಾಪಿಸಿ ಮರು ವರ್ಷ ಪತ್ರಿಕೆ ಹೊರಡಿಸಬೇಕಾಗಿ ಬಂದಾಗ ತುಂಬ ಯೋಚಿಸಿ ತಮ್ಮ ನೆನಪಿನಲ್ಲಿ ನಿಂತಿದ್ದ 'ಪ್ರಬುದ್ಧ ಕರ್ಣಾಟಕ' ಹೆಸರನ್ನೇ ಇಟ್ಟುಕೊಂಡರು. ಎಚ್ಚೆತ್ತ ಕನ್ನಡ ನಾಡಿನ ವಿಕಸಿತಗೊಂಡ ಕನ್ನಡ ಮನಸ್ಸಿನ ಸಂಕೇತ 'ಪ್ರಬುದ್ಧ ಕರ್ಣಾಟಕ'. ನಿರ್ಮಲಾನಂದ ಸ್ವಾಮಿಗಳು ಉದ್ದೇಶಿಸಿದ್ದು ಧಾರ್ಮಿಕ ಪತ್ರಿಕೆ. ಕೃಷ್ಣಶಾಸ್ತ್ರಿಗಳು ಆರಂಭಿಸಿದ್ದೂ ಧಾರ್ಮಿಕ ಪತ್ರಿಕೆ. ಆದರೆ ಇಬ್ಬರ ಉದ್ದೇಶಿತ ಧರ್ಮಗಳೂ ತೀರ ಭಿನ್ನ ವಾದವು. ಶಾಸ್ತ್ರಿಗಳದು ಕನ್ನಡ ಧರ್ಮ. ಕನ್ನಡದ ಕಾರಣವನ್ನು ಅವರು ಧರ್ಮ ಪ್ರಚಾರಕರ ಶ್ರದ್ಧೆ ಉತ್ಸಾಹ ಭಕ್ತಿಗಳಿಂದ ಎತ್ತಿಕೊಳ್ಳದಿದ್ದಿದ್ದರೆ ಕನ್ನಡ ಇವತ್ತು ಈ ಸ್ಥಿತಿಯಲ್ಲಿ ಇರುತ್ತಿರಲಿಲ್ಲ. ಶಾಸ್ತ್ರಿಗಳ ಧರ್ಮ ಪ್ರಸಾರವನ್ನು 'ಪ್ರಬುದ್ಧ ಕರ್ಣಾಟಕ' ಯಶಸ್ವಿಯಾಗಿ ನಿರ್ವಹಿಸುತ್ತಾ ಬಂದಿದೆ.

'ಪ್ರಬುದ್ಧ ಕರ್ಣಾಟಕ' ಈಗ ಎಲ್ಲರಿಗೂ ತಿಳಿದಿರುವಂತೆ ವಿಶ್ವವಿದ್ಯಾನಿಲಯದ ಪ್ರಕಟಣೆ. ಆರಂಭದಲ್ಲಿ ಅದು ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘದ ವತಿಯಿಂದ

ಪ್ರಕಟವಾಗುತ್ತಿತ್ತು. ನೂರುಜನ ವಿದ್ಯಾರ್ಥಿಗಳಿಂದ ತಲಾ ಒಂದು ರೂಪಾಯಿ ಮುಂಗಡ ಚಂದಾ ಸಂಗ್ರಹಿಸಿ ಕೃಷ್ಣಶಾಸ್ತ್ರಿಗಳು ಮೊದಲ ಸಂಚಿಕೆಯನ್ನು ಪ್ರಕಟಿಸಿದರು. ಆಗ ಆರ್ಥಿಕ ಅಡಚಣೆಗಳು ಬಹಳ ಇದ್ದವು. ಎಷ್ಟೋ ಸಲ ಶಾಸ್ತ್ರಿಗಳು ಪತ್ರಿಕೆಯನ್ನು "ನಿಲ್ಲಿಸಿ ಬಿಡಲೇ" ಎಂದೂ ಯೋಚಿಸುತ್ತಿದ್ದರಂತೆ. ಪ್ರಕಟಣೆಯ ಎಲ್ಲ ಜವಾಬ್ದಾರಿಗಳನ್ನೂ ಅವರು ಹೊತ್ತಿದ್ದರು. ಆಗ ಬಿ. ಎಂ. ಶ್ರೀಕಂಠಯ್ಯನವರ ಪ್ರಯತ್ನದ ಫಲವಾಗಿ ಡಾ. ಮೆಟ್‌ಕಾಫ್ ಮೈಸೂರು ವಿಶ್ವವಿದ್ಯಾನಿಲಯದ ಉಪ ಕುಲಪತಿಗಳಾಗಿದ್ದಾಗ ವಿಶ್ವವಿದ್ಯಾನಿಲಯವೇ 'ಪ್ರಬುದ್ಧ ಕರ್ಣಾಟಕ'ದ ಪ್ರಕಟಣೆಯನ್ನು ವಹಿಸಿಕೊಂಡಿತು. ಇದು ೧೯೩೨ರಲ್ಲಿ. ಅಲ್ಲಿಂದ ಮುಂದೆ ವಿಶ್ವವಿದ್ಯಾನಿಲಯ ಈ ಪತ್ರಿಕೆಯನ್ನು ಸಂಪಾದಕ ಮಂಡಳಿಯೊಂದರ ನೇತೃತ್ವದಲ್ಲಿ ಬಹು ಉದಾರವಾಗಿ ಪ್ರಕಟಿಸಿಕೊಂಡುಬಂದಿದೆ. ಆರ್ಥಿಕ ದೃಷ್ಟಿಯಿಂದ ಯಾವ ವರ್ಷವೂ ಅದು ಲಾಭದಾಯಕವಾಗಿಲ್ಲ. ಆದರೆ ಅದು ವಿಶ್ವವಿದ್ಯಾನಿಲಯದ ಹೆಮ್ಮೆ. ಪತ್ರಿಕೆಯ ಮೊದಲನೆಯ ಸಂಪುಟದಲ್ಲಿ ೧೨೦ ಪುಟಗಳಿದ್ದರೆ, ಐವತ್ತನೆಯ ವರ್ಷದ ಸಂಪುಟದಲ್ಲಿ ೧೨೦೦ ಪುಟಗಳಿವೆ. ಇದು ವಿಶ್ವವಿದ್ಯಾನಿಲಯ 'ಪ್ರಬುದ್ಧ ಕರ್ಣಾಟಕ'ದ ವಿಷಯದಲ್ಲಿ ಬೆಳೆಸಿಕೊಂಡು ಬಂದ ಉದಾರ ನೀತಿಯ ಫಲ, ಅಷ್ಟೆ. ವಾಸ್ತವವಾಗಿ 'ಪ್ರಬುದ್ಧ ಕರ್ಣಾಟಕ'ವನ್ನು ಸಕಾಲದಲ್ಲಿ ಶ್ರೀಮಂತವಾಗಿ ಪ್ರಕಟಿಸಲು ಅಡೆತಡೆಗಳಿದ್ದರೆ ಅದು ಖಂಡಿತ ಹಣಕಾಸಿನದಲ್ಲ. ಚೆನ್ನಾದ ಒಂದು ಪಂಡಿತ ಪತ್ರಿಕೆಯನ್ನು ಹಣಕಾಸಿನ ಬೆಂಬಲವಷ್ಟರಿಂದಲೇ ನಡೆಸಿಕೊಂಡು ಬರುವುದು ಸಾಧ್ಯವಿಲ್ಲ.

ಈ ಪತ್ರಿಕೆ ನಮ್ಮ ಸಾಹಿತ್ಯ ಇತಿಹಾಸದಲ್ಲಿ ವಹಿಸಿದ ಪಾತ್ರವನ್ನು ಡಾ. ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರು ಒಂದು ಕಡೆ ಮನೋಜ್ಞವಾಗಿ ವರ್ಣಿಸಿದ್ದಾರೆ :

> "...ಹೊಸ ಸಾಹಿತ್ಯದ ಮುಂಬರಿವಿಗೆ 'ಪ್ರಬುದ್ಧ ಕರ್ಣಾಟಕ' ಯಾವ ಯಾವ ವಿವರದಲ್ಲಿ ಯಾವ ಯಾವ ರೀತಿಯಲ್ಲಿ ನೆರವಾಯಿತು ಎನ್ನುವುದನ್ನು ಸೂಕ್ಷ್ಮವಾಗಿ ಸೂಚಿಸಬಹುದು. ಮೊದಲಾಗಿ ಪತ್ರಿಕೆ ಹೊಸಗನ್ನಡದ ಗದ್ಯ ಹೊಸ ಕಾಲದ ವಿಷಯಗಳನ್ನು ನಿರೂಪಿಸುವುದರಲ್ಲಿ ಯಾವ ಆಕಾರದಲ್ಲಿರಬೇಕು ಎನ್ನುವುದು ನಿರ್ಧಾರವಾಗುವುದಕ್ಕೆ ನೆರವಾಯಿತು . . . . ಈ ಪತ್ರಿಕೆ ಹೊಸ ಲೇಖಕನು ಯಾವ ಯಾವ ತೆರದ ಕೆಲಸವನ್ನು ಮಾಡಬಹುದು ಎಂಬುದನ್ನು ಉದಾಹರಿಸುವಂತೆ ಹಲವು ತರದ ವಿಷಯಗಳನ್ನು ಒಳಗೊಂಡಿತು. ಪ್ರೌಢ ವಿದ್ಯೆಯನ್ನು ಪಡೆದ ಕನ್ನಡ ತರುಣರು ಕನ್ನಡದ ಜನಕ್ಕಾಗಿ ಸ್ವತಂತ್ರ ಲೇಖನಗಳನ್ನು ಬರೆಯಬೇಕು ಎಂಬ ಒಂದು ಸಂಪ್ರದಾಯವನ್ನು ನಿರ್ಮಿಸಿತು. ಬೆಂಗಳೂರಿನ ಕಾಲೇಜು ತರುಣರು ತಾಯ್ನುಡಿಯ ಸೇವೆಯಲ್ಲಿ ಸಹಕರಿಸುವಂತೆ ಅಭ್ಯಾಸಕೊಟ್ಟು, ಅವರು ಹೋದ ಕಡೆಗೆ ಕನ್ನಡ ಸೇವಾದೀಕ್ಷೆ ಅವರನ್ನು ಹಿಂಬಾಲಿಸುವಂತೆ ಮಾಡಿತು. ಮುಖ್ಯವಾಗಿ ವಿದ್ಯಾರ್ಥಿಗಳ ಲೇಖನಕ್ಕೆ

ಆಶ್ರಯ ಕೊಡಬೇಕೆಂದು ಹೊರಟ ಪತ್ರಿಕೆ ಬಹು ಶೀಘ್ರದಲ್ಲಿ ಈ ಗುರಿಯನ್ನು ದಾಟಿ ಕನ್ನಡದಲ್ಲಿ ಬರೆಯುವ ಮನಸ್ಸುಳ್ಳ ಹಿರಿಯರನ್ನೂ ತನ್ನ ಸಹಾಯಕ್ಕೆ ಕರೆದುಕೊಂಡಿತು. ಅದೂ ಅದರಂಥ ಸಾಹಿತ್ಯವೂ ಒಳಿತೆಂದು ದನಿಯೆತ್ತಿ ಸಾರಿತು. ಬರೆದವರಿಗೆ ತೃಪ್ತಿಯನ್ನು, ಧೈರ್ಯವನ್ನು ನೀಡಿತು. ಮಿಗಿಲಾಗಿ ಕನ್ನಡದ ಹೊಸ ವಿಮರ್ಶನದ ಪದ್ಧತಿಯನ್ನು ಸ್ಥಾಪನೆಮಾಡಿತು . . . . ಕನ್ನಡ ಸಾಹಿತ್ಯ ಈಗ ಅಗೆಯನ್ನು ಬಿಟ್ಟು ನಾಟಿಯಾಗಿ ಗದ್ದೆಗೆ ಬಂದಿದೆ. ಅದು ಅಗೆಯ ಸ್ಥಿತಿಯಲ್ಲಿದ್ದಾಗ ಅದಕ್ಕಾಗಿ ದುಡಿದವರು ಯಾರು ಎಂಬುದನ್ನು ಜ್ಞಾಪಕದಲ್ಲಿಡುವುದು ಲೇಖಕ ಲೋಕಕ್ಕೆ ಶ್ರೇಯಸ್ಕರ."

ಪತ್ರಿಕೆ ತನ್ನ ಉದ್ದೇಶದಲ್ಲಿ ಸ್ವಲ್ಪಮಟ್ಟಿಗಾದರೂ ಯಶಸ್ಸು ಪಡೆದದ್ದು ಸ್ಥಾಪಕರಾದ ಕೃಷ್ಣಶಾಸ್ತ್ರಿಗಳಿಗೇ ಸಂತೋಷವನ್ನೂ, ತೃಪ್ತಿಯನ್ನೂ ತಂದುಕೊಟ್ಟಿತು. ಆದ್ದರಿಂದಲೇ ಅವರು ಪತ್ರಿಕೆಗೆ ಇಪ್ಪತ್ತೈದು ತುಂಬಿದಾಗ ಹೀಗೆ ಬರೆದರು :

". . . ಹೊಸಗನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಎಷ್ಟೋ ಉತ್ತಮವಾದ ವ್ಯವಸಾಯ ನಡೆದಿದೆ. 'ಪ್ರಬುದ್ಧ ಕರ್ಣಾಟಕ'ವು ಅದು ನಡೆಯುವಂತೆ ಸ್ವಲ್ಪವಾದರೂ ಸಾಧನವಾಗಿ, ಕಾಡು ಕಡಿದು, ಭೂಮಿಯನ್ನು ಉತ್ತು, ನೆಲ ಹದಮಾಡಿ, ಜೀಲಿ ಹಾಕಿ, ಅಷ್ಟೋ ಇಷ್ಟೋ ನೀರು ಬೀಜ ಗೊಬ್ಬರಗಳನ್ನು ಒದಗಿಸಿಕೊಟ್ಟಿದೆ, ಎಂದು ನಾನು ನಂಬಿದ್ದೇನೆ."

'ಪ್ರಬುದ್ಧ ಕರ್ಣಾಟಕ' ನಿಸ್ಸಂದೇಹವಾಗಿ ಹೊಸಗನ್ನಡದ ಒಂದು ಗುರಿ ನಿರ್ಮಾಪಕ, ಒಂದು ಧ್ಯೇಯ ಸಾಧಕ ಅಪೂರ್ವ ಶಕ್ತಿ. ೧೯೪೪ರ ತಾರಣ ಸಂವತ್ಸರ ದಲ್ಲಿ ಅದಕ್ಕೆ ಕಾಲುಶತಮಾನ ತುಂಬಿತು. ಆ ನೆನಪಿನ ಬೆಳ್ಳಿಸಂಚಿಕೆಯನ್ನು ವಿ. ಸೀತಾರಾಮಯ್ಯನವರು ಸಂಪಾದಿಸಿದರು. ದೇವರ ಕೃಪೆಯಿಂದ ಅವರು ಇನ್ನೂ ನಮ್ಮೊಡನಿದ್ದಾರೆ. ಹತ್ತಿರ ಹತ್ತಿರ ಐನೂರು ಪುಟಗಳಿರುವ ಸಂಚಿಕೆ ಅದು. ಅದರಲ್ಲಿ ಆರು ಭಾಗಗಳಿವೆ. ಮೊದಲ ಭಾಗದಲ್ಲಿ ಪತ್ರಿಕೆಯ ಸ್ವಂತ ವಿಷಯಗಳಿವೆ. ಕೃಷ್ಣ ಶಾಸ್ತ್ರಿಗಳೇ ಸ್ವತಃ 'ಪ್ರಬುದ್ಧ ಕರ್ಣಾಟಕ'ದ ಹುಟ್ಟು ಬೆಳವಣಿಗೆಯನ್ನು ಸ್ವಾರಸ್ಯ ವಾಗಿ ಚಿತ್ರಿಸಿದ್ದಾರೆ. ಅದರ ಇಪ್ಪತ್ತೈದು ವರ್ಷಗಳ ಚರಿತ್ರೆಯನ್ನು ಅಂಕಿ ಅಂಶ ಗಳೊಡನೆ ವಿವರವಾಗಿ ಸಮಾಲೋಚಿಸಿದ್ದಾರೆ. ಎರಡನೆಯ ಭಾಗದಲ್ಲಿ ಸಾಹಿತ್ಯದ ಕೆಲಪ್ರಕಾರಗಳ ಸಮೀಕ್ಷೆಗಳಿವೆ. ಮೂರನೆಯ ಭಾಗ ಸೋದರ ಸಾಹಿತ್ಯಗಳ ಪರಿಚಯಕ್ಕೆ ಮೀಸಲು. ನಾಲ್ಕನೆಯದು ಲೋಕ ಪರಿಚಯದ ಭಾಗ. ಇದರಲ್ಲಿ ಮನಶ್ಶಾಸ್ತ್ರ, ಭೌತಶಾಸ್ತ್ರ ಮೊದಲಾದವುಗಳ ಬೆಳವಣಿಗೆಯ ವಿವೇಚನೆಯಿದೆ. ಐದನೆಯ ಭಾಗ ಸೃಷ್ಟಿ ಸಾಹಿತ್ಯದ್ದು. ಕೊನೆಯಲ್ಲಿ ಇಪ್ಪತ್ತೈದು ವರ್ಷಗಳಲ್ಲಿ ಪತ್ರಿಕೆ ಪ್ರಕಟಿಸಿದ ಲೇಖನಗಳ ಪಟ್ಟಿಯಿದೆ. ಲೇಖಕ ವರ್ಗದಲ್ಲಿ ಕುವೆಂಪು, ಕಾರಂತ, ಗೊರೂರು, ಪುತಿನ ಮೊದಲಾದವರು ಸೇರಿದ್ದಾರೆ. ಅದು ಒಂದು ತುಂಬ ಉಪಯುಕ್ತ

ಸಂಗ್ರಾಹ್ಯ ಸಂಚಿಕೆ. ಅಲ್ಲಿಯವರೆಗೆ ಪ್ರಕಟವಾದ 'ಪ್ರಬುದ್ಧ ಕರ್ಣಾಟಕ'ದ ಸಂಚಿಕೆಗಳಲ್ಲೆಲ್ಲ ಅದೇ ದೊಡ್ಡ ಗಾತ್ರದ್ದು.

ಪತ್ರಿಕೆಯ ಅರ್ಧಶತಮಾನದ ಜೀವಿತದ ಕೆಲವು ವಿವರಗಳನ್ನು ಮುಂದೆ ಕೊಟ್ಟಿದೆ.

ಪ್ರಧಾನ ಸಂಪಾದಕರು ಹಾಗೂ ಸಂಪಾದಕ ಮಂಡಳಿಯ ಅಧ್ಯಕ್ಷರು : ಬಿ.ಎಂ. ಶ್ರೀಕಂಠಯ್ಯ (೧೯೩೨-೪೨); ಎ. ಆರ್. ಕೃಷ್ಣಶಾಸ್ತ್ರೀ (೧೯೪೩-೪೬); ಕೆ. ವಿ. ಪುಟ್ಟಪ್ಪ (೧೯೪೬-೫೯); ಡಿ. ಎಲ್. ನರಸಿಂಹಾಚಾರ್ (೧೯೫೯-೬೨); ದೇ. ಜವರೇಗೌಡ (೧೯೬೨-೬೯); ಹಾ. ಮಾ. ನಾಯಕ (೧೯೬೯-).

ಈ ಕೆಳಕಂಡಂತೆ ಪತ್ರಿಕೆಯ ಸಂಪಾದನೆಯ ಕೆಲಸ ನಡೆದಿದೆ :

ಸಂಪಾದಕರು	ಸಂಪಾದಿಸಿದ ಸಂಪುಟಗಳು ಮತ್ತು ಸಂಚಿಕೆಗಳು	ವರ್ಷ
೧. ಎ. ಆರ್. ಕೃಷ್ಣಶಾಸ್ತ್ರೀ	೧-೧೩.೪	೧೯೧೯-೩೨
೨. ಟಿ. ಎಸ್. ವೆಂಕಣ್ಣಯ್ಯ ಮತ್ತು ಎ. ಆರ್. ಕೃಷ್ಣಶಾಸ್ತ್ರೀ	೧೪.೧-೨೦.೨	೧೯೩೨-೩೯
೩. ಎ. ಆರ್. ಕೃಷ್ಣಶಾಸ್ತ್ರೀ	೨೦.೩-೨೪.೪	೧೯೩೯-೪೩
೪. ವಿ. ಸೀತಾರಾಮಯ್ಯ	೨೫.೧-೨೯.೧	೧೯೪೩-೪೭
೫. ಕೆ. ವಿ. ರಾಘವಾಚಾರ್	೨೯.೨	೧೯೪೭
೬. ಎನ್. ಅನಂತರಂಗಾಚಾರ್ ಮತ್ತು ಟಿ. ಎಸ್. ಶಾಮರಾವ್	೨೯.೩-೩೪.೪	೧೯೪೮-೫೩
೭. ಎಸ್. ವಿ. ಪರಮೇಶ್ವರಭಟ್ಟ ಮತ್ತು ದೇ. ಜವರೇಗೌಡ	೩೫.೧-೩೬.೪	೧೯೫೩-೫೫
೮. ಎಸ್ ವಿ. ಪರಮೇಶ್ವರಭಟ್ಟ ಮತ್ತು ಉ. ಕಾ. ಸುಬ್ಬರಾಯಾಚಾರ್	೩೭.೧-೩೯.೨	೧೯೫೫-೫೭
೯. ಎಸ್. ವಿ. ಪರಮೇಶ್ವರಭಟ್ಟ ಮತ್ತು ಪ್ರಭುಶಂಕರ	೩೯.೩-೪೧.೧	೧೯೫೭-೫೯
೧೦. ಪ್ರಭುಶಂಕರ ಮತ್ತು ಎಸ್. ನಾರಾಯಣ ಶೆಟ್ಟಿ	೪೧.೨-೪೨.೧	೧೯೫೯-೬೦
೧೧. ಎಸ್. ನಾರಾಯಣ ಶೆಟ್ಟಿ	೪೨.೨-೪೨.೩	೧೯೬೦
೧೨. ಜಿ. ವರದರಾಜರಾವ್ ಮತ್ತು ಎಸ್. ನಾರಾಯಣ ಶೆಟ್ಟಿ	೪೨.೪-೪೭.೨	೧೯೬೧-೬೫

ಸಂಪಾದಕರು	ಸಂಪಾದಿಸಿದ ಸಂಪುಟಗಳು ಮತ್ತು ಸಂಚಿಕೆಗಳು	ವರ್ಷ
೧೩. ಹಾ. ಮಾ. ನಾಯಕ ಮತ್ತು ಜಿ. ವರದರಾಜರಾವ್	೪೭.೩-೪೯.೧	೧೯೬೫-೬೭
೧೪. ಹಾ. ಮಾ. ನಾಯಕ ಮತ್ತು ಎಚ್. ತಿಪ್ಪೇರುದ್ರಸ್ವಾಮಿ	೪೯.೨-೫೦.೪	೧೯೬೭-೬೯.

ಸಂಪುಟ ೨೬ರಿಂದ ೫೦ರ ವರೆಗೆ ಪುಟಸಂಖ್ಯೆ :

೨೬ (೭೬೩); ೨೭ (೫೪೨); ೨೮ (೫೯೫); ೨೯ (೬೩೦); ೩೦ (೫೩೪); ೩೧ (೫೨೯); ೩೨ (೪೬೧); ೩೩ (೫೮೮); ೩೪ (೩೬೧); ೩೫ (೫೮೬); ೩೬ (೭೫೪); ೩೭ (೧೦೫೩); ೩೮ (೧೦೧೫); ೩೯ (೮೧೩); ೪೦ (೧೦೫೨); ೪೧ (೧೦೭೭); ೪೨ (೧೦೫೫); ೪೩ (೯೩೦); ೪೪ (೮೩೫); ೪೫ (೭೯೨); ೪೬ (೧೨೧೭); ೪೭ (೯೫೦); ೪೮ (೧೦೬೧); ೪೯ (೧೦೦೫); ೫೦ (೧೧೨೬)

ವಿಜ್ಞಾನ ಸಂಚಿಕೆಗಳ ಪುಟಗಳು ೨೩೬೨.

ಲೇಖಕರ–ಲೇಖನಗಳ ಒಟ್ಟುನೋಟದ ವಿವರಗಳು ಮುಂದಿನಂತಿವೆ. ಆವರಣ ಚಿಹ್ನೆಗಳಲ್ಲಿರುವ ಸಂಖ್ಯೆಗಳಲ್ಲಿ ಮೊದಲನೆಯದು ಬೆಳ್ಳಿ ಸಂಚಿಕೆ ವರೆಗಿನದು; ಎರಡನೆಯದು ಚಿನ್ನದ ಸಂಚಿಕೆ ವರೆಗಿನದು.

ಲೇಖಕರು (೨೪೪ : ೫೬೦); ಸಾಹಿತ್ಯ ಲೇಖನಗಳು (೧೪೩ : ೫೨೮); ಕವಿತೆಗಳು (೨೯೮ : ೮೮೪); ನಾಟಕಗಳು (೨೨ : ೪೯); ಸಣ್ಣ ಕಥೆ ಪ್ರಬಂಧ ಇತ್ಯಾದಿ (೧೨೫ : ೨೪೪); ಇತಿಹಾಸ ಲೇಖನಗಳು (೨೦ : ೪೪); ವಿಜ್ಞಾನ ಇತ್ಯಾದಿ (೮೫ : ೨೫೦); ವಿಮರ್ಶೆಯಾದ ಪುಸ್ತಕಗಳು, ಪತ್ರಿಕೆಗಳು (೩೭೪ : ೮೫೬); ಚಿತ್ರಗಳು (೧೪೦ : ೨೯೧); ಲೇಖನಗಳಿಂದಾದ ಪುಸ್ತಕಗಳು (೪೭ : ೭೦). ಕಮ್ಮಟದ ಕಿಡಿ ಲೇಖನಗಳು ೪೭ (೧೯೬೦ರಿಂದ ಈಚಿನ ಕೆಲವು ವರ್ಷಗಳಲ್ಲಿ ಮಾತ್ರ ಪ್ರಕಟವಾದವು).

ಬೆಳ್ಳಿ ಹಬ್ಬದ ಸಂಚಿಕೆಯಲ್ಲಿ ಇಪ್ಪತ್ತೈದು ವರ್ಷಗಳ ಲೇಖಕರ ಹಾಗೂ ಲೇಖನಗಳ ವರ್ಗೀಕೃತ ಸೂಚಿಯೊಂದನ್ನು ಕೊಡಲಾಗಿದೆ. ಅಂಥದೇ ಸೂಚಿಯನ್ನು ಈ ಚಿನ್ನದ ಹಬ್ಬದ ಸಂಪುಟಕ್ಕೂ ಸೇರಿಸಬೇಕೆಂದು ಉದ್ದೇಶಿಸಲಾಗಿತ್ತು. ಆದರೆ ಆ ಬಗೆಯ ಸೂಚಿಯೊಂದನ್ನು ಎನ್. ಅನಂತರಂಗಾಚಾರ್ ಅವರು ಸಿದ್ಧಪಡಿಸಿದ್ದು ವಿಶ್ವವಿದ್ಯಾನಿಲಯ ಅದನ್ನು ಪ್ರತ್ಯೇಕ ಪುಸ್ತಕ ರೂಪದಲ್ಲಿ ಪ್ರಕಟಿಸುತ್ತಿರುವುದರಿಂದ ಮತ್ತೆ ಇಲ್ಲಿ ಅದನ್ನು ಕೊಡಲಿಲ್ಲ. ವಾಚಕರು ಆ ಪ್ರತ್ಯೇಕ ಸೂಚಿಯ ಪೂರ್ಣ ಉಪಯೋಗವನ್ನು ಪಡೆದುಕೊಳ್ಳುತ್ತಾರೆಂದು ಆಶಿಸಲಾಗಿದೆ.

‘ ಪ್ರಬುದ್ಧ ಕರ್ಣಾಟಕ ’ದಲ್ಲಿ ಪ್ರಕಟವಾದ ಬರಹಗಳಿಂದ ಆದ ಕೆಲವು ಪುಸ್ತಕಗಳು :

ಅಂಗುಲೀಮಾಲಾ (ಪ್ರಭುಶಂಕರ); ಅರಿಸ್ಟಾಟಲನ ಕಾವ್ಯಮೀಮಾಂಸೆ (ಎನ್. ಬಾಲಸುಬ್ರಹ್ಮಣ್ಯ) ; ಆನಂದವರ್ಧನನ ಕಾವ್ಯಮೀಮಾಂಸೆ ಮತ್ತು ಕನ್ನಡ ಧ್ವನ್ಯಾಲೋಕ (ಕೆ. ಕೃಷ್ಣಮೂರ್ತಿ) ; ಉರಿಲಿಂಗದೇವನ ವಚನಗಳು (ಸಂ : ಬಿ. ಎಸ್. ಸಣ್ಣಯ್ಯ); ಓಬವ್ವ(ಜಿ. ವರದರಾಜರಾವ್); ಕನ್ನಡ ಅಮರು ಶತಕ (ಪ್ರೇಮಾರಾಧನ) (ಎಸ್.ವಿ. ಪರಮೇಶ್ವರಭಟ್ಟ); ಕನ್ನಡ ಕಾವ್ಯ ಪ್ರಕಾಶ (ಕೆ. ಕೃಷ್ಣಮೂರ್ತಿ); ಕನ್ನಡ ಕಾವ್ಯಾಲಂಕಾರ (ಕೆ. ಕೃಷ್ಣಮೂರ್ತಿ) ; ಕನ್ನಡ ಕುಮಾರಸಂಭವ (ಎಸ್. ವಿ. ಪರಮೇಶ್ವರಭಟ್ಟ) ; ಕನ್ನಡ ಯಶೋಧರ ಚರಿತ (ಸಿ.ಪಿ.ಕೆ.) ; ಕನ್ನಡ ಸೌಂದರ್ಯಲಹರಿ (ಸಿ.ಪಿ.ಕೆ.) ; ಕಲಹಕುತೂಹಲ (ಕ್ಷೀರಸಾಗರ) ; ಕಾಶೀಯಾತ್ರೆ (ಕ್ಷೀರಸಾಗರ) ; ಕುಮಾರರಾಮನ ದುಂದುಮೆ (ಸಂ : ಬಿ. ಎಸ್. ಗದ್ದಗೀಮಠ) ; ಕೌಸಲ್ಯಾ ವಿವಾಹ (ಸಂ : ಎಸ್. ಎನ್. ಕೃಷ್ಣಜೋಯಿಸ್) ; ಗಜೇಶಮಸಣಯ್ಯನ ವಚನಗಳು (ಸಂ : ಬಿ. ಎಸ್. ಸಣ್ಣಯ್ಯ) ; ಚಂದ್ರಹಾಸ (ಕುವೆಂಪು) ; ಜಗತ್ತುಗಳ ಹುಟ್ಟು ಸಾವು (ಆರ್. ಎಲ್. ನರಸಿಂಹಯ್ಯ) ; ಬದ್ಧ ಪ್ರಮಿತ್ಯೂಸ್ (ಟಿ. ವಿ. ವೆಂಕಟಾಚಲ ಶಾಸ್ತ್ರೀ) ; ಬೆರಳ್ಗೆ ಕೊರಳ್ (ಕುವೆಂಪು) ; ಮಹಾಕಾವ್ಯ ಲಕ್ಷಣ (ಟಿ. ವಿ. ವೆಂಕಟಾಚಲ ಶಾಸ್ತ್ರೀ) ; ರತಿವಿಲಾಪ (ಕೃಷ್ಣಮೂರ್ತಿ ಪುರಾಣಿಕ) ; ವಸಂತ ಚಂದನ (ಪುತಿನ); ಹೊರೆಸನ ಸಾಹಿತ್ಯ ವಿಮರ್ಶೆ (ಎನ್. ಬಾಲಸುಬ್ರಹ್ಮಣ್ಯ)—ಇತ್ಯಾದಿ.

೧೯೪೭ರಲ್ಲಿ ೨೯ನೇ ಸಂಪುಟದ ಮೊದಲನೆಯ ಸಂಚಿಕೆಯಿಂದ ಪತ್ರಿಕೆಯ ಮುಖಪುಟದ ವಿನ್ಯಾಸದಲ್ಲಿ ಬದಲಾವಣೆಯಾಯಿತು. ೧೯೪೮ರಲ್ಲಿ ೨೯–೩ನೇ ಸಂಚಿಕೆ ಗಾಂಧೀಜಿ ಸಂಚಿಕೆ ಎಂದು ಪ್ರಕಟಗೊಂಡಿತು. ಪತ್ರಿಕೆಯ ಪ್ರಕಟಣೆಯ ಕಾಲಾವಧಿ ೧೯೫೦ರಲ್ಲಿ ಬದಲಾವಣೆಯಾಯಿತು. ಅಲ್ಲಿಯವರೆಗೆ ವಿನಾಯಕ, ದೀಪಾವಳಿ, ಸಂಕ್ರಾಂತಿ ಮತ್ತು ಕಾಮನ ಸಂಚಿಕೆಗಳೆಂದು ಪ್ರಕಟವಾಗುತ್ತಿದ್ದ ಸಂಚಿಕೆಗಳು ಚೈತ್ರ, ಆಷಾಢ, ಆಶ್ವಯುಜ ಮತ್ತು ಪುಷ್ಯ ಸಂಚಿಕೆಗಳೆಂದು ಬದಲಾದವು (೩೨–೧). ವಿಜ್ಞಾನ ವಿಶೇಷಾಂಕದ ಪ್ರಕಟಣೆ ೧೯೫೭ರಲ್ಲಿ ಆರಂಭವಾಯಿತು (೩೮–೪). ಮರು ವರ್ಷದಿಂದಲೇ (೧೯೫೮) ಪ್ರತಿ ವರ್ಷ ಎರಡು ವಿಜ್ಞಾನ ವಿಶೇಷಾಂಕಗಳ ಪ್ರಕಟಣೆ ತೊಡಗಿತು (೪೦–೨, ೪). ೧೯೩೪ರಿಂದಲೂ ಪತ್ರಿಕೆಯನ್ನು ಮೈಸೂರಿನ ವೆಸ್ಲಿ ಪ್ರೆಸ್ ಮುದ್ರಿಸುತ್ತಿತ್ತು (೧೫–೧). ಅದಕ್ಕಿಂತ ಮೊದಲು ಬೆಂಗಳೂರು ಪ್ರೆಸ್ (೧–೧), ಮೈಸೂರು ಕ್ರೌನ್ ಪ್ರೆಸ್ (೧–೨), ಬೆಂಗಳೂರಿನ ಬಿ.ಬಿ.ಡಿ. ಪವರ್ ಪ್ರೆಸ್ (೧೦–೨), ಮೈಸೂರಿನ ಜಿ.ಟಿ.ಎ. ಪ್ರೆಸ್ (೧೪–೧)ಗಳಲ್ಲಿ ಪತ್ರಿಕೆ ಮುದ್ರಣವಾಗುತ್ತಿತ್ತು. ೧೯೬೦ರಲ್ಲಿ ಪತ್ರಿಕೆಯ ಮುದ್ರಣ ವೆಸ್ಲಿ ಪ್ರೆಸ್ಸಿನಿಂದ ಮೈಸೂರು ವಿಶ್ವವಿದ್ಯಾನಿಲಯದ ಮುದ್ರಣಾಲಯಕ್ಕೆ ವರ್ಗಾವಣೆಯಾಯಿತು (೪೨–೧). ಅದೇ ವರ್ಷ ಪತ್ರಿಕೆಯಲ್ಲಿ ‘ ಕಮ್ಮಟದ ಕಿಡಿಗಳು ’ ವಿಭಾಗ ಮೊದಲಾಯಿತು (೪೨–೧).

ರವೀಂದ್ರನಾಥ ಠಾಕೂರರ ಶತಮಾನೋತ್ಸವ ಸಂದರ್ಭದಲ್ಲಿ ೧೯೬೧ರಲ್ಲಿ 'ರವೀಂದ್ರಾಂಕ' ಪ್ರಕಟವಾಯಿತು (೪೩-೧). ೧೯೬೩ರಿಂದ ವಿಜ್ಞಾನ ವಿಶೇಷಾಂಕಗಳು ಸಾಹಿತ್ಯಾಂಕದೊಡನೆ ಕೂಡಿಯೇ ಪ್ರಕಟವಾಗತೊಡಗಿದವು (೪೫-೨). ೧೯೬೪ರಲ್ಲಿ ಸ್ವಾಮಿ ವಿವೇಕಾನಂದರ ವಿಶೇಷ ಸಂಚಿಕೆ (೪೫-೪), ೧೯೬೫ರಲ್ಲಿ ಮೆಂಡೆಲ್ ವಿಶೇಷಾಂಕ (೪೬-೪) ಪ್ರಕಟವಾದವು. ಪತ್ರಿಕೆಯ ಮೊದಲ ಪುಟದಲ್ಲಿ ಯಾವಾಗಲೂ ಪದ್ಯವೇ ಇರುತ್ತಿದ್ದು ೪೬ನೇ ಸಂಪುಟದ ಮೂರನೇ ಸಂಚಿಕೆಯಲ್ಲಿ (೧೯೬೫) ಗದ್ಯಲೇಖನದ ಪ್ರಕಟಣೆ ಕಾಣಿಸಿಕೊಂಡಿತು. ೧೯೬೬ರಿಂದ ಆರಂಭದ ಒಳ ಪುಟಗಳ ವಿನ್ಯಾಸದಲ್ಲಿ ಬದಲಾವಣೆಗಳಾದವು (೪೮-೧).

'ಪ್ರಬುದ್ಧ ಕರ್ಣಾಟಕ'ದ ಸ್ಥಾಪಕ ಸಂಪಾದಕರಾದ ಎ. ಆರ್. ಕೃಷ್ಣಶಾಸ್ತ್ರಿಗಳ ನೆನಪಿನ ಸಂಚಿಕೆಯನ್ನಾಗಿ ಐವತ್ತನೇ ವರ್ಷದ ಮೊದಲ ಸಂಚಿಕೆಯನ್ನು ಪ್ರಕಟಿಸಲಾಯಿತು (೧೯೬೮). ಈ ಸಂಚಿಕೆಯೊಡನೆ ಪತ್ರಿಕೆಯ ಮುಖಪುಟದ ವಿನ್ಯಾಸದಲ್ಲಿ ಬದಲಾವಣೆಯಾಯಿತು. ಇದೇ ಸಂಚಿಕೆ ಅತ್ಯಧಿಕ ಪುಟಗಳ ಬಿಡಿ ಸಂಚಿಕೆ (೫೧೯ ಪುಟಗಳು)ಯೂ ಹೌದು. ಸಂಪುಟ ಐವತ್ತರ ನಾಲ್ಕನೆಯ ಸಂಚಿಕೆ ೧೯೬೯ರ ಜನವರಿಯಲ್ಲಿ ಪ್ರಕಟವಾಯಿತು. ಈ ವರ್ಷ 'ಪ್ರಬುದ್ಧ ಕರ್ಣಾಟಕ'ಕ್ಕೆ ಚಿನ್ನದ ಹಬ್ಬದ ವರ್ಷ. ಸಂದರ್ಭದ ನೆನಪಿಗಾಗಿ 'ವಿಜ್ಞಾನ ಸಂಪುಟ' ಮತ್ತು 'ಸಾಹಿತ್ಯ ಸಂಪುಟ'ಗಳನ್ನು ಪ್ರಕಟಿಸುವುದೆಂದು ತೀರ್ಮಾನಿಸಲಾಯಿತು. ವಿಜ್ಞಾನ ಸಂಪುಟ ಎರಡು ಭಾಗಗಳಲ್ಲಿ ಆಗಲೇ ಪ್ರಕಟವಾಯಿತು. ಸಾಹಿತ್ಯ ಸಂಪುಟ ಈಗ ಪತ್ರಿಕೆ ವಜ್ರದ ಹಬ್ಬದ ಹೊಸತಿಲು ಹತ್ತುತ್ತಿರುವಾಗ ಪ್ರಕಟವಾಗುತ್ತಿದೆ.

ಹಣಕಾಸಿನ ದೃಷ್ಟಿಯಿಂದ 'ಪ್ರಬುದ್ಧ ಕರ್ಣಾಟಕ' ಸಾಮಾನ್ಯವಾಗಿ ಯಾವಾಗಲೂ ಲಾಭದ ಉದ್ಯಮವಾಗಿರಲಿಲ್ಲ. ಅದು ವಿಶ್ವವಿದ್ಯಾನಿಲಯದ ಉದ್ದೇಶವೂ ಅಲ್ಲ. ಆದರೆ ಅದನ್ನು ಲಾಭನಷ್ಟಗಳಿಲ್ಲದೆ ನಡೆಸಿಕೊಂಡು ಹೋಗಬೇಕಾದ ಜವಾಬ್ದಾರಿ ಕನ್ನಡಿಗರಮೇಲಿದೆ ಎಂಬುದನ್ನು ಮರೆಯುವಂತಿಲ್ಲ. "ಇಂದಿಗೂ 'ಪ್ರಬುದ್ಧ ಕರ್ಣಾಟಕ'ಕ್ಕೆ ಬೆಳ್ಳಿ ಇಲ್ಲ ಬಂಗಾರವಿಲ್ಲ. ಅದರ ಲೇಖಕರಿಗೆ ಅದು ಇಷ್ಟು ದಿನವಾದರೂ ಒಂದು ಬಿಡಿಗಾಸನ್ನೂ ಸಂಭಾವನೆಯಾಗಿ ಕೊಟ್ಟಿಲ್ಲ. ಸಂಭಾವನೆಯನ್ನು ಕೊಟ್ಟು ನೋಡೋಣವೆಂಬ ಸಲಹೆ ಒಂದೆರಡು ಸಲ ಬಂದಿತ್ತು; ಇದರಿಂದ ಪರಿಸ್ಥಿತಿ ಉತ್ತಮವಾಗದೆ ಬೇಡವಾದ ಲೇಖನಗಳು ಬಂದು ತುಂಬಿಕೊಂಡು ಅನಾವಶ್ಯಕವಾದ ವೈಮನಸ್ಯಗಳು ಉಂಟಾಗುವುದೇ ಸಂಭವವಾಗಿದ್ದದ್ದರಿಂದ ಆ ಯೋಚನೆಯನ್ನು ಬಿಟ್ಟದ್ದಾಯಿತು" ಎಂದು ಕೃಷ್ಣಶಾಸ್ತ್ರಿಗಳು ಪತ್ರಿಕೆಯ ಬೆಳ್ಳಿ ಸಂಚಿಕೆಯಲ್ಲಿ ಬರೆದರು. ಆ ಮಾತು ಇಂದಿಗೂ ನಿಜ. ಅಲ್ಲದೆ ಉತ್ತರಾರ್ಧ ಅಂದಿಗಿಂತ ಇಂದು ಹೆಚ್ಚು ಉಚಿತವೆನಿಸುವ ಸ್ಥಿತಿಯಲ್ಲಿದ್ದೇವೆ. ಆದ್ದರಿಂದ ಈಚಿನ ವರ್ಷಗಳಲ್ಲಿ ಲೇಖಕರಿಗೆ ಸಂಭಾವನೆ ಕೊಡುವ ವಿಚಾರವನ್ನು ಕೆಲವು ಸಲ ಪರಿಶೀಲಿಸಿ ಕೈಬಿಟ್ಟದ್ದಾಗಿದೆ. ಸರ್ಕಾರಿ ನಿಯಂತ್ರಣದ ಸಂಸ್ಥೆಗಳಲ್ಲಿ ಸಂಭಾವನೆ ಕೊಟ್ಟು ಕೆಲಸ ಮಾಡಿಸುವುದರಲ್ಲಿ

ತೊಂದರೆಗಳು ಅನೇಕ ಕಾಣಿಸಿಕೊಳ್ಳುತ್ತವೆ. ಆದ್ದರಿಂದ “ನಾವು ಕೊಟ್ಟರೆ ತಾನೇ ಅವರಿಗೆ ಎಷ್ಟು ಕೊಟ್ಟೇವು? ಅಭಿಮಾನದಿಂದ ಬರೆಯುವವರು ದುಡ್ಡಿಗೆ ಬರೆದಾರೆ? ಅದರಿಂದ ಅವರ ಹೊಟ್ಟೆ ತುಂಬೀತೆ?” ಎಂಬ ಮಾತು ಒಂದು ದೃಷ್ಟಿಯಿಂದ ಸರಿಯಲ್ಲದಿದ್ದರೂ, ಇನ್ನೊಂದು ದೃಷ್ಟಿಯಿಂದ ಇಂದಿಗೂ ಸರಿಯಾಗಿಯೇ ಇದೆ.

“ಇವೊತ್ತಿಗೂ, ಒಬ್ಬ ಗುಮಾಸ್ತರಿಗೆ ತುಟ್ಟಿ ಭತ್ಯ ಸೇರಿ ೨೫ ರೂಪಾಯಿ ಸಂಬಳ, ಒಬ್ಬ ಆಳಿಗೆ ೧೧ ರೂಪಾಯಿ ಸಂಬಳ. ಇಷ್ಟು ಹೊರತು ಪ್ರಬುದ್ಧ ಕರ್ಣಾಟಕದ ಕೆಲಸಕ್ಕೆ ಯಾರೂ ಒಂದು ಕಾಸನ್ನು ಸಂಬಳವಾಗಿಯಾಗಲಿ ಸಂಭಾವನೆಯಾಗಿಯಾಗಲಿ ಪಡೆಯುತ್ತಿಲ್ಲ”—ಇದು ಪತ್ರಿಕೆಯ ಇಪ್ಪತ್ತೈದನೆಯ ವರ್ಷದ ಸ್ಥಿತಿ. ಆದರೆ ಈ ಸ್ಥಿತಿ ಈಗ ಬದಲಾಗಿದೆ. ‘ಪ್ರಬುದ್ಧ ಕರ್ಣಾಟಕ’ಕ್ಕೇ ಎಂದು ಪ್ರತ್ಯೇಕವಾಗಿ ಕಛೇರಿ ವ್ಯವಸ್ಥೆ, ಆಳುಕಾಳಿನ ವ್ಯವಸ್ಥೆ ಇಲ್ಲದಿದ್ದರೂ ಅದು ಒಂದು ದೊಡ್ಡ ವ್ಯವಸ್ಥೆಯ ಭಾಗವಾಗಿದೆ. ಪತ್ರಿಕೆಯ ಸಂಪಾದಕರಿಗೆ ಪ್ರತಿಯೊಬ್ಬರಿಗೂ ಪ್ರತಿ ಸಂಚಿಕೆಗೂ ಒಂದುನೂರಐವತ್ತು ರೂಪಾಯಿ ಸಂಭಾವನೆ ಕೊಡಲು ಈಚೆಗೆ ವ್ಯವಸ್ಥೆ ಮಾಡಲಾಗಿದೆ. ಸಂಪಾದಕರು ಪತ್ರಿಕೆಯ ಪ್ರಕಟಣೆಗೆ ತಮ್ಮ ಕಾಲ ಮತ್ತು ಆಸಕ್ತಿಯನ್ನು ಕೊಡಬೇಕಾದ ಕಾರಣ ಅದನ್ನು ಕೇವಲ ಗೌರವದ ಹುದ್ದೆಯನ್ನಾಗಿಸಬಾರದೆಂದು ಈ ತೀರ್ಮಾನಕ್ಕೆ ಬರಲಾಯಿತು. ಪತ್ರಿಕೆಯ ಅಸ್ತಿತ್ವದ ಐವತ್ತು ವರ್ಷಗಳು ಕಳೆದ ಮೇಲೆ ಈ ಸಂಭಾವನೆ ವ್ಯವಸ್ಥೆ ಜಾರಿಗೆ ಬಂದಿರುವುದು ಒಂದು ಮುಖ್ಯವಾದ ಘಟ್ಟವನ್ನು ಸೂಚಿಸುತ್ತದೆ.

ಪತ್ರಿಕೆಯ ಚಂದಾದಾರರ ಸಂಖ್ಯೆ ಉತ್ತೇಜದಾಯಕವಾದುದೇನೂ ಅಲ್ಲ. ಪ್ರತಿ ಸಂಚಿಕೆಯ ಮುದ್ರಣ ಆದೇಶ ಕೇವಲ ಸಾವಿರ ಪ್ರತಿಗಳಿಗೆ. ವರ್ಷದ ಆರಂಭದಲ್ಲಿ ನೂರಿನ್ನೂರು ಚಂದಾದಾರರಿದ್ದು ಆ ಸಂಖ್ಯೆ ವರ್ಷ ಮುಗಿಯುವ ಹೊತ್ತಿಗೆ ಐನೂರು-ಆರುನೂರಕ್ಕೆ ಏರುವುದು ಪ್ರತಿವರ್ಷದ ಕ್ರಮ. ಆದರೆ ಐವತ್ತನೇ ವರ್ಷದ ಮೊದಲ ಸಂಚಿಕೆ ಮಾತ್ರ ಪ್ರಕಟವಾದ ಕೆಲವು ವಾರಗಳಲ್ಲಿಯೇ ಮುಗಿದು ಹೋಗಿ, ವರ್ಷದ ಆರಂಭದಲ್ಲಿಯೇ ಚಂದಾದಾರರ ಸಂಖ್ಯೆ ಸಾವಿರದ ಹತ್ತಿರ ಹೋಯಿತು ; ಸಾವಿರವೇ ಆಯಿತು. ಇದಕ್ಕೆ ಕಾರಣ ಆ ಗಾತ್ರದ ಸಂಚಿಕೆ; ಆ ಅಗ್ಗದ ಚಂದಾ ಅಲ್ಲದೆ ಇನ್ನೇನೂ ಅಲ್ಲ. ಕೃಷ್ಣಶಾಸ್ತ್ರಿಗಳ ಹೆಸರು ಆ ಕೆಲಸ ಮಾಡಿತು. ಅವರು ದೊಡ್ಡವರು. ಇದ್ದಾಗಲೂ ಆಸರೆಯಾಗಿದ್ದರು ; ಇಲ್ಲದಾಗಲೂ ಕೈಬಿಡಲಿಲ್ಲ. ಆ ನೆನಪಿನ ಸಂಚಿಕೆ ಎಷ್ಟು ಜನಪ್ರಿಯವಾಯಿತೆಂದರೆ ಬಹುಬೇಗನೆ ಪ್ರತ್ಯೇಕ ಪುಸ್ತಕ ರೂಪದಲ್ಲಿ ಮತ್ತೆ ಪ್ರಕಟವಾಗಬೇಕಾಯಿತು.

* * * *

ಆತ್ಮಶೋಧನೆಗಾಗಿಯಾದರೂ ಕೆಲವು ವಿಚಾರಗಳನ್ನು ನಾವು ಗಮನಿಸಬೇಕು. ಇದು ಸ್ವಲ್ಪ ಕಹಿ ಎನಿಸಿದರೂ, ನಾವು ನಡೆಯಬೇಕಾಗಿರುವ ದಾರಿ ದೂರದ್ದಾದುದರಿಂದ ಅಗತ್ಯವೆಂದೇ ಭಾವಿಸುತ್ತೇನೆ. ‘ಪ್ರಬುದ್ಧ ಕರ್ಣಾಟಕ’ಕ್ಕೆ ಐವತ್ತು ಕಳೆದಿದೆ ;

ಅರುವತ್ತು ಬರುತ್ತಿದೆ. ಈಗ ಅದಕ್ಕೆ ಮೊದಲಿನ ಕಳೆ ಹಲವು ಅಂಶಗಳಲ್ಲಿ ಇಲ್ಲ. ಯಾಕೆ? 'ಪ್ರಬುದ್ಧ ಕರ್ಣಾಟಕ'ದ ಆರಂಭದ ಪರಿಸ್ಥಿತಿಯಿಂದ ಇಂದಿನ ಪರಿಸ್ಥಿತಿ ತೀರ ಬೇರೆಯಾಗಿವೆ. ಆ ದಿನಗಳಲ್ಲಿ ಅದರ ಎದುರಿಗಿದ್ದ ಅನೇಕ ಗುರಿಗಳು ಈಗ ಈಡೇರಿವೆ ಇಲ್ಲ ಮರೆಯಾಗಿವೆ. ಅದರ ಪ್ರಕಟಣೆಯಲ್ಲಿ ಆಗ ಇದ್ದ ವೈಯಕ್ತಿಕ ಆಸಕ್ತಿ ಈಗ ಕೇವಲ ನಿಯಮಾನುಸಾರದ ಕರ್ತವ್ಯವೆನಿಸಿದೆ. ಪ್ರಕಟಣೆ ತಾಳ್ಮೆ ಕೆಡಿಸುವಷ್ಟು ನಿಧಾನವಾಗುವುದುಂಟು; ಮುದ್ರಣ ದೋಷಗಳು ಅನೇಕ ಕಾಣಿಸಿಕೊಳ್ಳುತ್ತವೆ. ಆಗ ಇಂಥ ಪತ್ರಿಕೆ ಇದೊಂದೇ ಆಗಿತ್ತು; ಈಗ ಇಂಥ ಪತ್ರಿಕೆಗಳು ಕೆಲವಾದರೂ ಬೇರೆ ಇವೆ. ಪ್ರಕಟಣೆಗೆ ಲೌಕಿಕ ಆಸಕ್ತಿಗಳು ಈಗ ಅಂದಿಗಿಂತ ಹೆಚ್ಚಾಗಿ ಸೇರಿಕೊಂಡಿವೆ. ಸರ್ಕಾರಿ ಆಡಳಿತದ 'ತಾಂತ್ರಿಕ' ಅಡಚಣೆಗಳು, ಪ್ರಜಾಪ್ರಭುತ್ವದ ದೋಷಗಳು ಇಂಥ ಕೆಲಸದ ಗುಣವನ್ನು ಕಾಪಾಡಿಕೊಂಡು ಬರಲು ಕಷ್ಟವಾದ ಸ್ಥಿತಿಯನ್ನೊಡ್ಡಿವೆ ಎನ್ನುವುದು ನಿಜವಾದರೂ, ಇದರ ವ್ಯವಸ್ಥೆಯ ಭಾರ ಹೊತ್ತಿರುವ ನಾವು ಸಂಪೂರ್ಣವಾಗಿ ಹೊಣೆಗಾರಿಕೆಯಿಂದ ಜಾರಿಕೊಳ್ಳುವಂತಿಲ್ಲ. 'ಪ್ರಬುದ್ಧ ಕರ್ಣಾಟಕ'ಕ್ಕೆ ಈಗ ಎರಡು ಜೋಡಿ ಪತ್ರಿಕೆಗಳಿವೆ—'ವಿಜ್ಞಾನ ಕರ್ಣಾಟಕ' ಮತ್ತು 'ಮಾನವಿಕ ಕರ್ಣಾಟಕ'. ಹೆಸರೇ ಸೂಚಿಸುವ ಹಾಗೆ ಆ ಪ್ರಕಟಣೆಗಳು ವಿಜ್ಞಾನಕ್ಕೆ ಮತ್ತು ಮಾನವಿಕಗಳಿಗೆ ಮೀಸಲಾಗಿವೆ. ಫಲವಾಗಿ 'ಪ್ರಬುದ್ಧ ಕರ್ಣಾಟಕ' ಕೇವಲ ಸೃಜನಶೀಲ ಸಾಹಿತ್ಯ ಮತ್ತು ಸಾಹಿತ್ಯ ವಿಮರ್ಶೆಗೇ ಮೀಸಲಾದ ಪತ್ರಿಕೆಯಾಗಿ ಉಳಿದಿದೆ. ಇದನ್ನು ಹಾಗೆಯೇ ಬೆಳೆಸಿಕೊಂಡು ಹೋಗಬೇಕಾದ ಜವಾಬ್ದಾರಿ ನಮ್ಮೆಲ್ಲರ ಮೇಲೆ ಇದೆ. ಚಿನ್ನದ ಹೊಳಪು ವಜ್ರದ ಕಾಂತಿ ಸಂಗಮಿಸಿರುವ ನಮ್ಮ ನಾಡಿನ ಅತ್ಯಂತ ಹಿರಿಯ ಈ ನಿಯತಕಾಲಿಕವನ್ನು ಶ್ರೇಷ್ಠ ಸಾಹಿತ್ಯ ಪ್ರಕಟಣೆಯನ್ನಾಗಿ ಉಳಿಸಬೇಕಾಗಿದೆ. ಈ ಕಡೆ ನನ್ನ ಸಹೋದ್ಯೋಗಿಗಳು ಗಮನಕೊಡುತ್ತಾರೆಂದು ಭರವಸೆ ತಾಳಿದ್ದೇನೆ.

ಬೆಳ್ಳಿ ಸಂಚಿಕೆಯ ಸಂಪಾದಕೀಯದಲ್ಲಿ ಈ ಮಾತು ಹೇಳಿದ್ದರು:

> "೧೯೨೦ರ ಸುಮಾರಿನಲ್ಲಿ ಮೊದಲಾದ ಉತ್ಸಾಹ ಈ ೧೯೪೫ ರವರೆಗೂ ಒಂದು ರೀತಿ ಬಂದಿದೆ; ಇಲ್ಲಿಂದ ಎರಡನೆಯ ಘಟ್ಟ ಮೊದಲಾಗಬೇಕು; ಮುಂದಿನ ೨೫ ವರ್ಷಗಳ ವಿಶಾಲ ಆಧುನಿಕ ಜೀವನದ ಮಹಾಯೋಗಿಯಾಗಿ, ಮಹಾಸ್ಫೂರ್ತಿಯಾಗಿ, ಸಾಧಕವಾಗಿ, ಪ್ರೋತ್ಸಾಹಕವಾಗಿ ಪ್ರಬುದ್ಧ ಕರ್ಣಾಟಕವು ಶ್ರಮಿಸಲು ಶಕ್ಯವಾಗುವಂತೆ ನಾಡಿನ ಎಲ್ಲ ಸಾಹಿತಿಗಳೂ ನೆರವಾಗಬೇಕೆಂದೂ ಅದಕ್ಕೆ ಆದರ ಕೊಡಬೇಕೆಂದೂ ಬೇಡುತ್ತೇವೆ."

ಎರಡನೆಯ ಘಟ್ಟದ ಇಪ್ಪತ್ತೈದು ವರ್ಷಗಳನ್ನು 'ಪ್ರಬುದ್ಧ ಕರ್ಣಾಟಕ' ಆ ಹಾರೈಕೆಯಂತೆ ಯಶಸ್ವಿಯಾಗಿಯೇ ಕಳೆದಿದೆ. ತನ್ನ ಸೀಮಿತಗಳಲ್ಲಿಯೇ ಅದು ಸ್ಫೂರ್ತಿಯೂ, ಸಾಧಕವೂ, ಪ್ರೋತ್ಸಾಹಕವೂ ಆಗಿ ತನ್ನ ಪಾಲಿನ ಕರ್ತವ್ಯಗಳನ್ನು

ನಿರ್ವಹಿಸಿದೆ. ಇನ್ನು ಮುಂದೆ ಅದು ಪ್ರಬುದ್ಧ ಕನ್ನಡಿಗನ ಶಕ್ತಿ ದೃಷ್ಟಿ ಆಸೆ ಆಕಾಂಕ್ಷೆಗಳಿಗೆ ಕಲಾತ್ಮಕವಾಣಿಯಾಗಬೇಕಾಗಿದೆ. ಕನ್ನಡ ಸಾಹಿತ್ಯದ ಮಹಾ ಪ್ರವಾಹದಲ್ಲಿ ಅದು ತನ್ನ ಬಣ್ಣವನ್ನು ಉಳಿಸಿಕೊಳ್ಳಬೇಕಾಗಿದೆ. ಕನ್ನಡದ ಬರಹಗಾರ ಬಂಧುಗಳು 'ಪ್ರಬುದ್ಧ ಕರ್ಣಾಟಕ'ದ ಈ ಸಾಹಸದಲ್ಲಿ ಭಾಗಿಯಾಗುತ್ತಾರೆಂದು ನಿರೀಕ್ಷಿಸಲಾಗಿದೆ; ಪಾಲುದಾರರಾಗಲು ಪ್ರಾರ್ಥಿಸಲಾಗಿದೆ.

ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಸ್ನಾತಕೋತ್ತರ ವಿಭಾಗ ಮಾನವಿಕ ಭವನದಲ್ಲಿದ್ದ ದಿನಗಳಲ್ಲಿ, ತಮ್ಮ ಸಾವಿಗೆ ಕೆಲವು ಕಾಲದ ಮೊದಲು, ಎ. ಆರ್. ಕೃಷ್ಣ ಶಾಸ್ತ್ರಿಗಳು ವಿಭಾಗಕ್ಕೆ ಭೇಟಿಕೊಟ್ಟಿದ್ದರು. ಅಧ್ಯಾಪಕ ವರ್ಗದವರ ಪರಿಚಯ ಮಾಡಿಕೊಡುತ್ತಿದ್ದಾಗ ಪಕ್ಕದಲ್ಲಿದ್ದ ಯಾರೋ ನನ್ನನ್ನು 'ಪ್ರಬುದ್ಧ ಕರ್ಣಾಟಕ'ದ ಸಂಪಾದಕನೆಂದು ಪರಿಚಯಿಸಿದರು. ಶಾಸ್ತ್ರಿಗಳು ಅದರ ಪ್ರಕಟಣೆಯ ವಿಷಯದಲ್ಲಿ ಹತ್ತಾರು ಪ್ರಶ್ನೆ ಕೇಳಿದರು. "ಇಷ್ಟರಲ್ಲಿಯೇ ಅದರ ಚಿನ್ನದ ಹಬ್ಬ ಬರಬೇಕಲ್ಲವೆ?" ಎಂದರು. "ಹೌದು" ಎಂದೆ. ನನ್ನ ಬೆನ್ನು ತಟ್ಟುತ್ತಾ ಅವರು ಕೇಳಿದರು: "ಪ್ರಬುದ್ಧ ಕರ್ಣಾಟಕದ ಹುಟ್ಟು-ಬೆಳವಣಿಗೆ ಕುರಿತ ನನ್ನ ಲೇಖನ ಓದಿದ್ದೀರಾ?" ಮತ್ತೆ "ಹೌದು" ಎಂದು ತಲೆಯಾಡಿಸಿದೆ. ಅವರು "ಅದನ್ನು ಇನ್ನೊಮ್ಮೆ ಓದಿ" ಎಂದರು. "ಆಗಲಿ" ಎಂದೆ. ಕೃಷ್ಣಶಾಸ್ತ್ರಿಗಳು ಯಾಕೆ ಹಾಗೆ ಹೇಳಿದರೆಂದು ನನಗೆ ಇನ್ನೂ ಗೊತ್ತಾಗಿಲ್ಲ. ಪತ್ರಿಕೆಗೆ ಐವತ್ತು ತುಂಬುವ ಹೊತ್ತಿಗೆ ಸಂಪಾದಕರಾಗಿರುವವರಿಗೆ ಅದರ ಇತಿಹಾಸ ಚೆನ್ನಾಗಿ ತಿಳಿದಿರಬೇಕೆಂಬುದು ಅವರ ಅಪೇಕ್ಷೆಯಾಗಿತ್ತೊ ಏನೊ. ನಡೆದು ಬಂದ ದಾರಿ ನೋಡುವುದು ಮುಂದೆ ದಾರಿ ನಡೆಯಲು ಸಹಾಯಕವೆಂಬುದು ಅವರ ಸೂಚನೆಯಾಗಿದ್ದಿರಬಹುದು. ಅದೇನೇ ಇರಲಿ ಆ ಲೇಖನವನ್ನು ಮುಂದೆ ನಾನು ಎರಡು ಮೂರು ಬಾರಿ ಓದಿದ್ದೇನೆ. ಅದರ ಕೊನೆಯ ಮಾತುಗಳು ಹೀಗಿವೆ:

> "ಈಗ ಪ್ರಬುದ್ಧ ಕರ್ಣಾಟಕವು ೨೬ನೆಯ ವರ್ಷವನ್ನೂ ದಾಟಿದೆ. ಆದರೆ ಈ ಸಂಪುಟದ ಪ್ರಸ್ತಾಪವನ್ನು ಪ್ರಬುದ್ಧ ಕರ್ಣಾಟಕದ ಚಿನ್ನದ ಸಂಚಿಕೆಗೆ ಬರೆಯುವ ಪುಣ್ಯವಂತರ ಪಾಲಿಗೆ ಬಿಟ್ಟು ನನ್ನ ಈ ಲೇಖನವನ್ನು ಇಲ್ಲಿಗೆ ಮುಗಿಸುತ್ತೇನೆ."

ಈ ಮಾತುಗಳನ್ನು ಓದಿದಾಗಲೆಲ್ಲ ನಾನು ಪುಳಕಗೊಂಡಿದ್ದೇನೆ. ಕೃಷ್ಣಶಾಸ್ತ್ರಿಗಳು ಹೇಳಿದ ಚಿನ್ನದ ಸಂಚಿಕೆಗೆ ಬರೆಯುವ ಪುಣ್ಯವಂತ ನಾನು ಎಂಬುದನ್ನು ನೆನೆದುಕೊಂಡಾಗಲೆಲ್ಲ ಹೃದಯ ಉಕ್ಕುತ್ತದೆ. ನಮ್ರನಾಗುತ್ತೇನೆ. ಶಾಸ್ತ್ರಿಗಳು ಎಲ್ಲಿಂದಲೋ ನನ್ನ ಕೆಲಸವನ್ನು ನೋಡುತ್ತಿದ್ದಾರೆಂದು ನನಗೆ ಅನ್ನಿಸಿದಾಗ ಭಯವಾಗುತ್ತದೆ; ಸಂಕೋಚ ಹೆಚ್ಚುತ್ತದೆ. ಶಾಸ್ತ್ರಿಗಳು ತಮ್ಮ ಲೇಖನವನ್ನು ಅಲ್ಲಿಗೆ ಮುಗಿಸಿದರು; ಆದರೆ ಅವರ ಪರಂಪರೆಗೆ ಮುಗಿತಾಯವಿಲ್ಲ. ಅದು ಚಿನ್ನದ ಹಬ್ಬಕ್ಕೆ

ಮುಗಿಯುವುದಿಲ್ಲ. ವಜ್ರೋತ್ಸವ ಬರುತ್ತದೆ; ಎಪ್ಪತ್ತೈದಾಗುತ್ತದೆ; ಶತಮಾನ ತುಂಬುತ್ತದೆ; ಶತಮಾನಗಳೂ ಕಳೆಯುತ್ತವೆ. ಆ ಸಂಚಿಕೆಗಳಿಗೆ ಬರೆಯುವ ಪುಣ್ಯವಂತರು ಇದ್ದೇ ಇರುತ್ತಾರೆ. ಆ ಪುಣ್ಯವಂತರ ಪರಂಪರೆಗೆ ಕೊನೆ ಇಲ್ಲದಿರಲಿ. ಕೃಷ್ಣಶಾಸ್ತ್ರಿಗಳಂಥ ಹಿರಿಯರ ಹರಕೆ ಹಾರೈಕೆಗಳಿಂದ ನಾಡಿನ ಪುಣ್ಯ ಶಾಶ್ವತವಾಗಿರಲಿ.

ಈ ಸಂಪುಟದ ಲೇಖಕರು

೧. **ಕುವೆಂಪು** (ರಾಷ್ಟ್ರಕವಿ ಡಾ. ಕೆ. ವಿ. ಪುಟ್ಟಪ್ಪ), (ಜ. ೧೯೦೪, ಕುಪ್ಪಳಿ), ಎಂ.ಎ. ಕನ್ನಡ, ಡಿ.ಲಿಟ್, ಪದ್ಮಭೂಷಣ; ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಪ್ರಾಧ್ಯಾಪಕರಾಗಿ, ಇಲಾಖಾ ಮುಖ್ಯರಾಗಿ, ಮಹಾರಾಜಾ ಕಾಲೇಜಿನ ಪ್ರಿನ್ಸಿಪಾಲರಾಗಿ, ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳಾಗಿ ನಿವೃತ್ತರಾಗಿದ್ದಾರೆ. ಕೃತಿಗಳು: ಕೊಳಲು, ನವಿಲು, ಪಕ್ಷಿಕಾಶಿ ಮುಂತಾದ ಅನೇಕ ಕವನ ಸಂಕಲನಗಳು, ರಕ್ತಾಕ್ಷಿ, ಬಿರುಗಾಳಿ, ಶ್ಮಶಾನ ಕುರುಕ್ಷೇತ್ರ, ಚಂದ್ರಹಾಸ ಮುಂತಾದ ಅನೇಕ ನಾಟಕಗಳು, ಸನ್ಯಾಸಿ ಮತ್ತು ಇತರ ಕಥೆಗಳು ಮುಂತಾದ ಕಥಾಸಂಕಲನಗಳು, ಕಾನೂರು ಹೆಗ್ಗಡಿತಿ, ಮಲೆಗಳಲ್ಲಿ ಮದುಮಗಳು ಮುಂತಾದ ಮಹಾಕಾದಂಬರಿಗಳು, ಶ್ರೀ ರಾಮಾಯಣ ದರ್ಶನಂ ಮಹಾಕಾವ್ಯ, ಅನೇಕ ವಿಮರ್ಶಾಗ್ರಂಥಗಳು, ಜೀವನ ಚರಿತ್ರೆ, ಶಿಶುಗೀತೆ ಇತ್ಯಾದಿ. 'ಶ್ರೀ ರಾಮಾಯಣ ದರ್ಶನಂ' ಮಹಾಕಾವ್ಯಕ್ಕೆ ಜ್ಞಾನಪೀಠ ಪ್ರಶಸ್ತಿ. ವಿಳಾಸ: 'ಉದಯ ರವಿ', ವಾಣಿವಿಲಾಸ ಮೊಹಲ್ಲ, ಮೈಸೂರು.

೨-೩. **ದ. ರಾ. ಬೇಂದ್ರೆ** (ಅಂಬಿಕಾತನಯದತ್ತ), (ಜ. ೧೮೯೬, ಧಾರವಾಡ), ಎಂ. ಎ. ಕನ್ನಡ, ಡಿ. ಲಿಟ್. ಅನೇಕ ವರ್ಷ ಸೊಲ್ಲಾಪುರದ ಡಿ.ಎ.ವಿ. ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿದ್ದರು. ೧೯೪೩ರ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರು. ಕೃತಿಗಳು : ಗರಿ, ಉಯ್ಯಾಲೆ, ನಾದಲೀಲೆ, ಅರಳು–ಮರಳು ಇತ್ಯಾದಿ.

೪. **ಪು.ತಿ ನ.** (ಪುರೋಹಿತ ತಿರುನಾರಾಯಣ ನರಸಿಂಹಾಚಾರ್), (ಜ. ೧೯೦೫, ಮೇಲುಕೋಟೆ), ಬಿ.ಎ., ಡಿ.ಲಿಟ್. ಸೈನ್ಯ ಇಲಾಖೆ, ಅಠಾರಕಛೇರಿ, ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್-ಕನ್ನಡ ನಿಘಂಟು ಕಛೇರಿಯಲ್ಲಿ ಸೇವೆಸಲ್ಲಿಸಿ ನಿವೃತ್ತರಾಗಿದ್ದಾರೆ. ಕೃತಿಗಳು: ಹಣತೆ, ಶಾರದಯಾಮಿನಿ, ರಸಸರಸ್ವತಿ ಮುಂತಾದ ಅನೇಕ ಕವಿತಾ ಸಂಕಲನಗಳು, ಅಹಲ್ಯೆ, ಗೋಕುಲ ನಿರ್ಗಮನ ಮುಂತಾದ ಅನೇಕ ಗೀತ ನಾಟಕಗಳು, ರಾಮಾಚಾರಿಯ ನೆನಪು, ಈಚಲು ಮರದ ಕೆಳಗೆ ಮುಂತಾದ ಅನೇಕ ಗದ್ಯ ಚಿತ್ರಗಳು, ಧ್ವಜರಕ್ಷಣೆ ಮುಂತಾದ ಕಥಾ ಸಂಕಲನಗಳು. 'ಹಂಸದಮಯಂತಿ ಮತ್ತು ಇತರ ರೂಪಕಗಳು' ಕೃತಿಗೆ ರಾಷ್ಟ್ರಪ್ರಶಸ್ತಿ. ವಿಳಾಸ : ಜಯಲಕ್ಷ್ಮೀಪುರಂ, ಮೈಸೂರು.

೫. **ಎಸ್. ವಿ. ರಂಗಣ್ಣ** (ಜ. ೧೮೯೮, ಸಾಲಗಾಮೆ), ಎಂ.ಎ. ಇಂಗ್ಲಿಷ್, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಾಗಿ, ಮಹಾರಾಜಾಕಾಲೇಜಿನ ಪ್ರಿನ್ಸಿಪಾಲರಾಗಿ, ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್ ಕನ್ನಡ ನಿಘಂಟಿನ ಪರಿಷ್ಕರಣದ ಸಂಪಾದಕರಾಗಿ ಸೇವೆಸಲ್ಲಿಸಿ ನಿವೃತ್ತರಾಗಿದ್ದಾರೆ. ಕೃತಿಗಳು: ಶೈಲಿ, ಕಿರುನಾಟಕಗಳು, ಉತ್ತರಕುಮಾರ, ರಂಗಬಿನ್ನಪ, ಪಾಶ್ಚಾತ್ಯ ಗಂಭೀರನಾಟಕಗಳು ಇತ್ಯಾದಿ. ರಾಷ್ಟ್ರಪ್ರಶಸ್ತಿ ವಿಜೇತರು. ವಿಳಾಸ: ೧೪೬೧/೧, ಕೃಷ್ಣಮೂರ್ತಿಪುರಂ, ಮೈಸೂರು.

೬. **ಎಸ್. ವಿ. ಪರಮೇಶ್ವರ ಭಟ್ಟ** (ಜ. ೧೯೧೪), ಎಂ. ಎ. ಕನ್ನಡ, ನಿರ್ದೇಶಕರು, ಮಂಗಳಗಂಗೋತ್ರಿ, ಮಂಗಳೂರು. ಅನೇಕ ವರ್ಷ ಮೈಸೂರು ವಿಶ್ವವಿದ್ಯಾ

ನಿಲಯದ ಕನ್ನಡ ಸ್ನಾತಕೋತ್ತರ ವಿಭಾಗದಲ್ಲಿ ರೀಡರಾಗಿ ಸೇವೆಸಲ್ಲಿಸಿದ್ದಾರೆ. ಕಾಳಿದಾಸನ ಎಲ್ಲ ಕೃತಿಗಳನ್ನು ಕನ್ನಡಕ್ಕೆ ತಂದಿದ್ದಾರೆ. ಇತರ ಕೃತಿಗಳು: ರಾಗಿಣಿ, ಇಂದ್ರಚಾಪ, ಚಿತ್ರಪಥ, ಕೃಷ್ಣಮೇಘ ಮೊದಲಾದ ಸುಮಾರು ಐವತ್ತು ಗ್ರಂಥಗಳು

೭. ಸುಬ್ಬಣ್ಣ ರಂಗನಾಥ ಎಕ್ಕುಂಡಿ (ಜ. ೧೯೨೩), ಅಧ್ಯಾಪಕರು, ಆನಂದಾಶ್ರಮ, ಬಂಕಿಕೊಡ್ಲ. ಕೃತಿಗಳು: ಸಂತಾನ, ಆನಂದ ತೀರ್ಥರು, ಹಾವಾಡಿಗರ ಹುಡುಗ, ಪು.ತಿ. ನರಸಿಂಹಾಚಾರ್, ನೆರಳು ಇತ್ಯಾದಿ.

೮. ಸಿ. ಕೆ. ವೆಂಕಟರಾಮಯ್ಯ (ಜ. ೧೮೯೬, ಚೆನ್ನಪಟ್ಟಣ, ಎಂ.ಎ, ಎಲ್‌ಎಲ್.ಬಿ. ಮೈಸೂರು ಸರಕಾರದ ಮುಖ್ಯ ಭಾಷಾಂತರಕಾರರಾಗಿ, ಸಾಹಿತ್ಯ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾಗಿ ಸೇವೆಸಲ್ಲಿಸಿ ನಿವೃತ್ತರಾಗಿದ್ದಾರೆ. ೧೯೪೭ ರ ಸಾಹಿತ್ಯ ಸಮ್ಮೇಳನಾಧ್ಯಕ್ಷರು. ಕೃತಿಗಳು: ಮಂಡೋದರಿ, ನಚಿಕೇತ, ಅಬ್ರಾಹಂ ಲಿಂಕನ್, ಭಾಸಮಹಾಕವಿ, ಬ್ರಹ್ಮಪಾಣಿ, ಆಳಿದ ಮಹಾಸ್ವಾಮಿಯವರು ಮುಂತಾದುವು. ವಿಳಾಸ: ಬಡಾವಣೆ, ಚೆನ್ನಪಟ್ಟಣ, ಬೆಂಗಳೂರು ಜಿಲ್ಲೆ.

೯. ಕೆ. ಗೋಪಾಲಕೃಷ್ಣರಾಯ (ಜ. ೧೯೦೬), ಬೆಂಗಳೂರು.
ಕೃತಿಗಳು: ಉಡುಗೊರೆ, ಬಂಗಾರದ ಡಾಬು, ಕನ್ಯಾರ್ಥಿ, ಆಶೆನಿರಾಶೆ.

೧೦. ಅಶ್ವತ್ಥ (ಅಶ್ವತ್ಥನಾರಾಯಣರಾವ್), (ಜ. ೧೯೧೨ ಚಾಮರಾಜನಗರ), ಬಿ ಇ ಬನಾರಸ್ ವಿಶ್ವವಿದ್ಯಾನಿಲಯದ ಇಂಜಿನಿಯರಿಂಗ್ ಇಲಾಖೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ. ಕೃತಿಗಳು: ಸಣ್ಣಕತೆಗಳು (೪ ಸಂಪುಟ), ಮುನಿಯನ ಮಾದರಿ, ಮರ್ಯಾದೆ ಮಹಲು, ರಂಗನಾಯಕಿ ಮುಂತಾದುವು.

೧೧. ಕೊರಟಿ ಶ್ರೀನಿವಾಸರಾವ್ (ಜ. ೧೯೨೬, ಕೊರಟಿ), ಎಂ.ಎ., ಬಿ.ಕಾಂ., ಕನ್ನಡ ಅಧ್ಯಾಪಕರು, ಆಚಾರ್ಯ ಪಾಠಶಾಲ, ಬೆಂಗಳೂರು ಕೃತಿಗಳು: ತೂರಿಬಂದ ತಾರೆ, ಮಂಗಳ ದೀಪ, ಗೃಹಿಣಿ, ಜಗನ್ಮೋಹಿನಿ, ಶಾಂತಿಪಾದಿ, ರಾಜದ್ರೋಹಿ, ಇನ್ನೂ ಅನೇಕ.

೧೨. ಬೆಸಗರಹಳ್ಳಿ ರಾಮಣ್ಣ (ಜ. ೧೯೪೦), ಎಂ.ಬಿ.ಬಿ.ಎಸ್. ಸರಕಾರಿ ವೈದ್ಯರು, ಪ್ರಾಥಮಿಕ ಆರೋಗ್ಯಕೇಂದ್ರ, ದೇವಲಾಪುರ, ನಾಗಮಂಗಲ ತಾಲ್ಲೂಕು. ಕೃತಿ: ನೆಲದ ಒಡಲು. ವಿಳಾಸ: ೪೬೯, ವೀರಭದ್ರಸ್ವಾಮಿ ಗುಡಿರಸ್ತೆ, ನಾಗಮಂಗಲ, ಮಂಡ್ಯಜಿಲ್ಲೆ.

೧೩. ಬಿ. ಪುಟ್ಟಸ್ವಾಮಯ್ಯ (ಜ. ೧೮೯೭), ಬೆಂಗಳೂರು, ಪತ್ರಿಕೋದ್ಯೋಗಿಗಳು. ಕೃತಿಗಳು: ಕುರುಕ್ಷೇತ್ರ, ನಾಟ್ಯರಂಗ ಚಿತ್ರರಂಗ, ನಾಟ್ಯಮೋಹಿನಿ, ಸುಧಾಮಯಿ, ಕ್ರಾಂತಿ, ಕಲ್ಯಾಣ ಚಿರಕುಮಾರ ಸಭಾ ಮುಂತಾದುವು. 'ಕ್ರಾಂತಿ', ಕಲಾಣ ಕೇಂದ್ರ ಸಾಹಿತ್ಯ ಅಕಾದೆಮಿಯ ಪ್ರಶಸ್ತಿ ಪಡೆದ ಕಾದಂಬರಿ. ವಿಳಾಸ: ೬೧೪, ಅರಳೆಪೇಟೆ, ಬೆಂಗಳೂರು.

೧೪. ಉಮಾಶಂಕರ (ಜ. ೧೯೩೦), ಎಂ.ಎ. ಕನ್ನಡ, ಸಹಾಯಕ ಸಂಪಾದಕರು, ಕನ್ನಡ ವಿಶ್ವಕೋಶ, ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು-೬. ಈ ಹಿಂದೆ ಪತ್ರಿಕೋದ್ಯೋಗಿಯಾಗಿದ್ದರಲ್ಲದೆ, ಸಹಕಾರಿ ಇಲಾಖೆ, ಪೋಲೀಸ್

ಇಲಾಖೆ, ಪ್ರಾಚ್ಯವಿದ್ಯಾ ಸಂಶೋಧನಾಲಯ, ಪ್ರಸಾರಾಂಗಗಳಲ್ಲಿ ಕೆಲಸಮಾಡಿದ್ದಾರೆ. ಕೃತಿಗಳು: ಸುಧಾತರಂಗ, ಕರುಳುಮಿಡಿದ ಕಂಬನಿ, ಸತ್ತವನ ಹಿಂದೆ. ವಿಳಾಸ: ೨೩, ಆದಿಪಂಪ ರಸ್ತೆ, ವಿ. ವಿ. ಮೊಹಲ್ಲ, ಮೈಸೂರು.

೧೫. ಚೆನ್ನವೀರ ಕಣವಿ (ಜ. ೧೯೨೮), ಎಂ.ಎ., ಪ್ರಕಟಣಶಾಖೆಯ ಕಾರ್ಯದರ್ಶಿಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ಕೃತಿಗಳು: ಕಾವ್ಯಾಕ್ಷಿ, ಭಾವಜೀವಿ, ಆಕಾಶಬುಟ್ಟಿ, ಮಧುಚಂದ್ರ, ದೀಪಧಾರಿ, ನವ್ಯಧ್ವನಿ ಮುಂತಾದುವು.

೧೬. ಸಮೇತನಹಳ್ಳಿ ರಾಮರಾಯ (ಜ. ೧೯೧೭), ಮೈಸೂರು ಸರಕಾರದ ಆರೋಗ್ಯ ಇಲಾಖೆಯಲ್ಲಿ ಸೇವೆಸಲ್ಲಿಸುತ್ತಿದ್ದಾರೆ. ಕೃತಿಗಳು: ಭೀಷ್ಮಸಂಕಲ್ಪ, ರಾಸಲೀಲೆ, ಸವತಿ ಗಂಧವಾರಣೆ, ಶಾಕುಂತಲಾ ಮುಂತಾಗಿ ಹದಿನೈದಕ್ಕೂ ಹೆಚ್ಚು.

೧೭. ರಾಕು (ಆರ್.ವಿ. ಕುಲಕರ್ಣಿ) (ಜ. ೧೯೧೮, ಹುಬ್ಬಳ್ಳಿ), ಉಪಸಂಪಾದಕರು, ಕನ್ನಡ ನಿಘಂಟು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. ಹಾವೇರಿಯ ನಗರಸಭೆಯ ಪ್ರೌಢಶಾಲೆಯಲ್ಲಿ ಶಿಕ್ಷಕರಾಗಿ ಸೇವೆಸಲ್ಲಿಸಿದ್ದಾರೆ. ಕೃತಿಗಳು: ಗಾಳಿಪಟ, ದೇವಕನ್ಯೆ.

೧೮. ಗೊರೂರು ರಾಮಸ್ವಾಮಯ್ಯಂಗಾರ್ (ಜ. ೧೯೦೪, ಗೊರೂರು), ಮದರಾಸು ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗ; ಅಧ್ಯಕ್ಷರು, ಪ್ರಥಮ ಜಾನಪದ ಸಮ್ಮೇಳನ, ತರೀಕೆರೆ (೧೯೬೭); ಮೈಸೂರು ವಿಧಾನ ಪರಿಷತ್ತಿನ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದಾರೆ. ಕೃತಿಗಳು: ಹಳ್ಳಿಯ ಚಿತ್ರಗಳು, ಹಳ್ಳಿಯ ಹಾಡುಗಳು, ಹಳ್ಳಿಯಬಾಳು, ಬೆಸ್ತರ ಕರಿಯ, ಶಿವರಾತ್ರಿ, ಹೇಮಾವತಿಯ ತೀರದಲ್ಲಿ, ಭಾರತ ಭಾಗ್ಯವಿದಾತ ಮುಂತಾದುವು. ವಿಳಾಸ: ಗೊರೂರು, ಹಾಸನ ತಾಲ್ಲೂಕು.

೧೯. ವಿ.ಸೀ. (ವಿ. ಸೀತಾರಾಮಯ್ಯ), (ಜ. ೧೮೯೯), ಎಂ.ಎ.; ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಉಪಪ್ರಾಧ್ಯಾಪಕರಾಗಿ ನಿವೃತ್ತರಾಗಿದ್ದಾರೆ; ೧೯೫೮ರ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರು. ಕೃತಿಗಳು: ಪಂಪಾಯಾತ್ರೆ, ಗೀತಗಳು, ಸೊಹ್ರಾಬ್ ಮತ್ತು ರುಸ್ತುಂ, ನೆಳಲು ಬೆಳಕು, ಕವಿಕಾವ್ಯದೃಷ್ಟಿ, ಹಣಪ್ರಪಂಚ, ದ್ರಾಕ್ಷಿ ದಾಳಿಂಬೆ, ಮಹಾಕವಿಪಂಪ (ಇಂಗ್ಲಿಷ್) ಮುಂತಾದುವು. ವಿಳಾಸ: ಎರಡನೆಯ ಮೇಯಿನ್‌ರಸ್ತೆ, ಚಾಮರಾಜಪೇಟೆ, ಬೆಂಗಳೂರು

೨೦. ನಾಡಿಗ ನೀಲಕಂಠಪ್ಪ (ಜ. ೧೮೯೪ ಸೊರಬ), ಬಿ.ಎ, ಬಿ.ಇ., ಇಂಜಿನಿಯರಿಂಗ್ ಇಲಾಖೆಯಲ್ಲಿ ೧೯೩೫ ರಿಂದ ೧೯೫೨ರ ವರೆಗೆ ಸೇವೆ ಸಲ್ಲಿಸಿದ್ದಾರೆ. ೧೯೫೧ ರಿಂದ ೧೯೫೨ರ ವರೆಗೆ ಚೀಫ್ ಇಂಜಿನಿಯರ್ ಆಗಿ ಕೆಲಸಮಾಡಿದ್ದಾರೆ. ವಿಳಾಸ: ಮಾಲತಿ, ದೇಗುಲ ರಸ್ತೆ, ಜಯಲಕ್ಷ್ಮೀಪುರಂ, ಮೈಸೂರು.

೨೧. ಎನ್. ಪ್ರಹ್ಲಾದರಾವ್ (ಜ. ೧೯೨೦), ಎಂ.ಎ. ಕನ್ನಡ, ಸಂಯೋಜಕ ಸಂಪಾದಕರು, ಕನ್ನಡ ವಿಶ್ವಕೋಶ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು-೬. ಈ ಮುನ್ನ ಸೆಕ್ರೆಟರಿಯೇಟ್, ಸರಕಾರಿ ಕಾಲೇಜುಗಳಲ್ಲಿ ಸೇವೆ ಸಲ್ಲಿಸಿದ್ದಾರೆ ಕೃತಿಗಳು: ಮಧುವ್ರತ, ರಥರಥಿಕ, ಲೇಖನಕಲೆ, ಮಿಂಚುಳ್ಳಿ, ಮುತ್ತಿನಹಾರ ಮುಂತಾದುವು. ವಿಳಾಸ: ೫೧೦, ಹದಿಮೂರನೆಯ ಮೇಯಿನ್, ಸರಸ್ವತಿಪುರಂ, ಮೈಸೂರು.

೨೨. ಎಚ್ಚೆಸ್ಕೆ (ಎಚ್. ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್) (ಜ. ೧೯೨೦, ಹಳೆಯೂರು ಕೆ. ಆರ್. ನಗರ ತಾ.), ಸಂಪಾದಕರು, ಕನ್ನಡ ವಿಶ್ವಕೋಶ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು. ಕೆಲವು ವರ್ಷ ಮೈಸೂರಿನ ಡಿ ಬನುಮಯ್ಯ ಕಾಲೇಜಿನ ಪ್ರಿನ್ಸಿಪಾಲರಾಗಿ ಸೇವೆ ಸಲ್ಲಿಸಿದ್ದಾರೆ. ಕೃತಿಗಳು: ಕನ್ನಡದಲ್ಲಿ ವಿಡಂಬನ ಸಾಹಿತ್ಯ, ಮುಕ್ತಿಮಾರ್ಗ, ಬಯಕೆಯಬೆಲೆ, ಕಳ್ಳ ಹೊಕ್ಕ ಮನೆ, ಜೇಡನ ಬಲೆ, ವ್ಯಾವಹಾರಿಕ ಕನ್ನಡ, ಬದುಕು-ಬೆಳಕು ಇತ್ಯಾದಿ.

೨೩. ಎಂ. ವಿ. ಸೀತಾರಾಮಯ್ಯ (ರಾಘವ) (ಜ. ೧೯೧೨, ಮೈಸೂರು), ಎಂ. ಎ. ಕನ್ನಡ ಬೆಂಗಳೂರಿನ ಸರಕಾರಿ ಕಾಲೇಜಿನಲ್ಲಿ ಕನ್ನಡ ಉಪಪ್ರಾಧ್ಯಾಪಕರಾಗಿ ನಿವೃತ್ತರಾಗಿದ್ದಾರೆ. ಕೃತಿಗಳು: ಹೂವಿನ ಆಸೆ, ಮಾರ್ಗದರ್ಶಕ, ಹಕ್ಕಿಹಾಡು, ಮಾದನ ಮಗಳು, ಮುಗಿಲುಗಳು, ಕವಿರಾಜಮಾರ್ಗ ಮುಂತಾದುವು. ವಿಳಾಸ: ೯, ಮೂರನೆ ಮೇಯಿನ್ ರಸ್ತೆ, ಗವಿಪುರಂ ಗುಟ್ಟಹಳ್ಳಿ, ಬೆಂಗಳೂರು.

೨೪. ಎಲ್. ಎಸ್. ಶೇಷಗಿರಿರಾವ್ (ಜ. ೧೯೨೫), ಎಂ.ಎ., ಸಂಪಾದಕರು, ಜ್ಞಾನ ಗಂಗೋತ್ರಿ, ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಇಂಗ್ಲಿಷ್ ಅಧ್ಯಾಪಕರಾಗಿ ಸೇವೆಸಲ್ಲಿಸಿದ್ದಾರೆ. ಕೃತಿಗಳು: ವಿಶ್ವಕವಿ ರವೀಂದ್ರರು, ಇದು ಜೀವನ, ಜಗದ ಜಾತ್ರೆಯಲ್ಲಿ, ಬೆಳಕಿನ ದೂತರು, ಕಾದಂಬರಿ ಮತ್ತು ಸಾಮಾನ್ಯ ಮನುಷ್ಯ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಕನ್ನಡ ಸಣ್ಣಕತೆಗಳು ಇತ್ಯಾದಿ.

೨೫. ಜಿ. ಎಸ್. ಶಿವರುದ್ರಪ್ಪ (ಜ. ೧೯೨೬), ಎಂ. ಎ. ಕನ್ನಡ, ಪಿಎಚ್. ಡಿ., ಕನ್ನಡ ಪ್ರಾಧ್ಯಾಪಕರು ಮತ್ತು ಇಲಾಖಾ ಮುಖ್ಯರು, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು. ಕೆಲವು ವರ್ಷ ಮೈಸೂರು ವಿಶ್ವವಿದ್ಯಾನಿಲಯ ಹಾಗೂ ಉಸ್ಮಾನಿಯ ವಿಶ್ವವಿದ್ಯಾನಿಲಯಗಳಲ್ಲಿ ಸೇವೆಸಲ್ಲಿಸಿದ್ದಾರೆ. ಕೃತಿಗಳು: ಸಾಮಗಾನ, ದೇವಶಿಲ್ಪ, ಚೆಲುವು ಒಲವು, ಸಂಜೆದಾರಿ, ದೀಪದಹೆಜ್ಜೆ, ಕರ್ಮಯೋಗಿ, ಸೌಂದರ್ಯಲಹರಿ ಮುಂತಾದುವು.

೨೬. ವರದರಾಜ ಹುಯಿಲಗೋಳ (ಜ. ೧೯೧೭, ಮುದ್ದೆಬಿಹಾಳ್), ಎಂ.ಎ., ಬಿ. ಟಿ. ಪಿಎಚ್‌ಡಿ. ಧಾರವಾಡದಲ್ಲಿ ಪ್ರೌಢಶಾಲಾ ಅಧ್ಯಾಪಕರು. 'ಜ್ಞಾನಗಂಗೋತ್ರಿ'ಯ ಸಂಪಾದಕ ವರ್ಗದಲ್ಲಿ ಕೆಲಕಾಲ ಸೇವೆಸಲ್ಲಿಸಿದ್ದಾರೆ. ಕೃತಿಗಳು: ಫಲಸಂಚಯ, ಚಂದ್ರತಾರೆ, ಬಡಗಿಯಮನೆ, ಬಾಗಿಲು ತೆರೆದಿತ್ತು, ಇತಿಶ್ರೀ, ಅಮೃತಮತಿ ಇತ್ಯಾದಿ. ವಿಳಾಸ: ಸಾಧನ ಕೇರಿ, ಧಾರವಾಡ.

೨೭. ಎಚ್. ಜೆ. ಲಕ್ಕಪ್ಪಗೌಡ ಎಂ. ಎ. ಕನ್ನಡ, ಕನ್ನಡ ಅಧ್ಯಾಪಕರು, ಮಂಗಳ ಗಂಗೋತ್ರಿ, ಮಂಗಳೂರು. ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ, ವಿಶ್ವವಿದ್ಯಾನಿಲಯದ ಸಂಜೆ ಕಾಲೇಜಿನಲ್ಲಿ ಕೆಲಕಾಲ ಸೇವೆಸಲ್ಲಿಸಿದ್ದಾರೆ. ಕೃತಿಗಳು: ವಸಂತಗೀತ, ಅಬ್ಬನಿ, ಹೊನ್ನಾರು, ಜನಪದ ಕಥಾವಳಿ.

೨೮. ಮಿರ್ಜಿ ಅಣ್ಣಾರಾಯ (ಜ. ೧೯೧೮ ಶೇಡಬಾಳ್), ಪ್ರಾಥಮಿಕ ಶಿಕ್ಷಕರಾಗಿ ಅನೇಕ ವರ್ಷಗಳಿಂದ ಸೇವೆಸಲ್ಲಿಸುತ್ತಿದ್ದಾರೆ. ಕೃತಿಗಳು: ನಿಸರ್ಗ, ಅಶೋಕಚಕ್ರ, ಪ್ರಣಯ ಸಮಾಧಿ, ಜೈನಧರ್ಮ, ಭಾರತೀಯ ಸಂಸ್ಕೃತಿಯ ಹೃದಯ, ಮೂಲ ಶಿಕ್ಷಣ ಮೌಲ್ಯಮಾಪನ ಇತ್ಯಾದಿ. ವಿಳಾಸ: ಸಾಹಿತ್ಯ ಸೇವಾ ಸದನ, ಶೇಡಬಾಳ್, ಬೆಳಗಾಂ ಜಿಲ್ಲೆ.

೨೯. ಎಸ್. ಅನಂತನಾರಾಯಣ (ಉಷಾಪ್ರಿಯ) (ಜ. ೧೯೨೫, ಮೈಸೂರು), ಎಂ. ಎ. ಇಂಗ್ಲಿಷ್, ಇಂಗ್ಲಿಷ್ ಅಧ್ಯಾಪಕರು, ಮೈಸೂರು ವಿಶ್ವವಿದ್ಯಾನಿಲಯ. ಕೃತಿಗಳು: ಆಧುನಿಕಚೈನ, ಬಾಡದ ಹೂ, ಕಾರಂತರ ಕಾದಂಬರಿಗಳು, ಪಯಣದ ಹಾದಿಯಲ್ಲಿ, ಬಾಬು ರಾಜೇಂದ್ರ ಪ್ರಸಾದ್, ಮುತ್ತುಹವಳ ಇತ್ಯಾದಿ. ವಿಳಾಸ: ಗಂಗಾತರಂಗ, ಅರನೆಯ ಮೆಯಿನ್, ಸರಸ್ವತೀಪುರಂ, ಮೈಸೂರು.

೩೦. ಜೀ. ಶಂ. ಪರಮಶಿವಯ್ಯ (ಜ. ೧೯೩೩, ಅಂಬಲ ಜೀರಹಳ್ಳಿ), ಎಂ.ಎ., ಕನ್ನಡ, ಕನ್ನಡ ರೀಡರ್, ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು. ಮೈಸೂರಿನ ಜೆ. ಎಸ್. ಎಸ್. ಕಾಲೇಜು, ವಿಶ್ವವಿದ್ಯಾನಿಲಯದ ಸಂಜೆ ಕಾಲೇಜುಗಳಲ್ಲಿ ಕನ್ನಡ ಅಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ. ಕೃತಿಗಳು: ಜೀವನಗೀತ, ಕಾನಲಂಗಾರ ಮತ್ತು ಇತರ ಕತೆಗಳು, ಮಬ್ಬುಜಾರಿದ ಕಣಿವೆಯಲ್ಲಿ, ಜನಪದ ಸಾಹಿತ್ಯಸಮೀಕ್ಷೆ, ಕನ್ನಡ ಜನಪದ ಕತೆಗಳು, ಜನಪದ ಕಾವ್ಯಕತೆಗಳು, ಮೇದರ ಕಲ್ಲು ಮುಂತಾಗಿ ಇಪ್ಪತ್ತಕ್ಕೂ ಹೆಚ್ಚು ಕೃತಿಗಳು. ವಿಳಾಸ: ೨೫, ಅಧ್ಯಾಪಕರ ನಿವಾಸ, ಮಾನಸ ಗಂಗೋತ್ರಿ, ಮೈಸೂರು–೬.

೩೧. ಎಚ್. ಎಂ. ಚನ್ನಯ್ಯ (ಜ. ೧೯೩೩), ಎಂ. ಎ. ಕನ್ನಡ, ಕನ್ನಡ ಅಧ್ಯಾಪಕರು, ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು–೬. ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿ ಕೆಲವು ವರ್ಷ ಸೇವೆ ಸಲ್ಲಿಸಿದ್ದಾರೆ. ಕೃತಿಗಳು: ಕಾಮಿ, ಅಮೆ.

೩೨. ಕೆ. ಕೃಷ್ಣಮೂರ್ತಿ (ಜ. ೧೯೨೩, ಕೇರಳಾಪುರ), ಎಂ. ಎ. ಸಂಸ್ಕೃತ, ಪಿಎಚ್.ಡಿ, ಸಂಸ್ಕೃತ ಪ್ರಾಧ್ಯಾಪಕರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ಕೆಲವು ವರ್ಷ ಕುಮಟಾ ಕೆನರಾ ಕಾಲೇಜಿನಲ್ಲಿ ಸಂಸ್ಕೃತ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ. ಕೃತಿಗಳು: ಕನ್ನಡ ಪ್ರತಿಮಾನಾಟಕ, ಕನ್ನಡ ಉತ್ತರರಾಮ ಚರಿತೆ, ಕನ್ನಡ ಕಾವ್ಯಾಲಂಕಾರ, ರಸೋಲ್ಲಾಸ, ಕನ್ನಡ ಕಾವ್ಯಪ್ರಕಾಶ, ಧ್ವನ್ಯಾಲೋಕ ಇತ್ಯಾದಿ.

೩೩. ಎಂ. ಜಿ. ನಂಜುಂಡಾರಾಧ್ಯ (ಜ. ೧೯೧೪, ಗುಂಡ್ಲಹಳ್ಳಿ), ಪ್ರಾಧ್ಯಾಪಕರು, ಮಹಾರಾಜ ಸಂಸ್ಕೃತ ಕಾಲೇಜು, ಮೈಸೂರು. ಕೃತಿಗಳು: ಸಿರಿಗನ್ನಡ ಶಿಶುಪಾಲ ವಧಂ, ಗೀತಾ ಅಂತರ್ವಾಣಿ, ಕೈವಲ್ಯೋಪನಿಷದ್ ಭಾಷ್ಯಂ, ಮುಂಡಕೋಪನಿಷದ್ ಭಾಷ್ಯಂ, ಶ್ರೀ ಶಿವರಾತ್ರಿ ಶಿವಾಚಾರ್ಯರ ಮುಂತಾದುವು. ವಿಳಾಸ: ೭೮೮/೧೦೬ ರಾಮಾನುಜಾ ರಸ್ತೆ, ಮೈಸೂರು.

೩೪. ಎಂ. ರಾಮರಾವ್ (ಜ. ೧೯೧೪, ಮ. ೧೯೭೧), ಎಂ. ಎ. ಇಂಗ್ಲಿಷ್, ಮೈಸೂರು ವಿಶ್ವವಿಧ್ಯಾನಿಲಯದಲ್ಲಿ ಇಂಗ್ಲಿಷ್ ಅಧ್ಯಾಪಕರಾಗಿ, ಇಂಗ್ಲಿಷ್–ಕನ್ನಡ ನಿಘಂಟಿನ ಸಂಪಾದಕರಾಗಿ ಸೇವೆ ಸಲ್ಲಿಸಿದವರು. ಕೃತಿಗಳು: ಅರಣ್ಯಯಾತ್ರೆ ಮತ್ತು ಇತರ ಪ್ರಬಂಧಗಳು, ಇಪ್ಪತ್ತಾರು ಇಂಗ್ಲಿಷ್ ಪ್ರಬಂಧಗಳು, ವ್ಯಾಧಿಗೆ ತಕ್ಕವೈದ್ಯ, ಹರಪಾರ್ವತಿ, ಗ್ರಿಮ್ ಸಹೋದರರ ಕತೆಗಳು, ಪಾದಯಾತ್ರೆ ಮುಂತಾದ ಮೂವತ್ತಕ್ಕೂ ಹೆಚ್ಚು ಗ್ರಂಥಗಳು.

೩೫. ಪ್ರಧಾನ್ ಗುರುದತ್ (ಜ. ೧೯೩೮), ಎಂ. ಎ. ಕನ್ನಡ, ಎಂ. ಎ. ಹಿಂದಿ. ಅಧ್ಯಾಪಕ, ಭಾಷಾಂತರ ಹಾಗೂ ಪಠ್ಯಪುಸ್ತಕ ವಿಭಾಗ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ. ಈ ಮೊದಲು ಮೈಸೂರಿನ ಡಿ. ಬನುಮಯ್ಯ ಕಾಲೇಜಿನಲ್ಲೂ, ಶೃಂಗೇರಿಯ ಜೆ. ಸಿ. ಬಿ. ಎಂ. ಕಾಲೇಜಿನಲ್ಲಿಯೂ ಕನ್ನಡ ಅಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ. ಕೃತಿಗಳು : ಊರ್ಮಿಳಾ (ಹಿಂದಿ ಮತ್ತು ಕನ್ನಡ), ಅನುವಾದಗಳು : ಲೋಕದೇವ ನೆಹರು, ನರೇಂದ್ರರ ಶ್ರೇಷ್ಠ ಪ್ರಬಂಧಗಳು (ಕನ್ನಡಕ್ಕೆ), ಸ್ವತಂತ್ರ ಸಮಾಜದ ಶಿಕ್ಷಣ ಪದ್ಧತಿ, ವ್ಯಾವಹಾರಿಕ ಹಿಂದಿ. ವಿಳಾಸ : ೧೯, ಅಧ್ಯಾಪಕರ ನಿವಾಸ, ಮಾನಸಗಂಗೋತ್ರಿ, ಮೈಸೂರು.

೩೬. ಎನ್. ಅನಂತರಂಗಾಚಾರ್ (ಜ. ೧೯೦೬), ಎಂ. ಎ., ಬಿ. ಟಿ., ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಉಪಪ್ರಾಧ್ಯಾಪಕರಾಗಿ ಸೇವೆಸಲ್ಲಿಸಿ ನಿವೃತ್ತರಾಗಿದ್ದಾರೆ. ಕೃತಿಗಳು : ವೇದಾಂತ ದೇಶಿಕರು ಮತ್ತು ಅವರ ಕೃತಿಗಳು, ಕವಿ ರನ್ನ, ಮಾನೌವಿ ಚೌಪದ, ಸಾಹಿತ್ಯ ಭಾರತಿ, ಮುಂತಾಗಿ ಇಪ್ಪತ್ತಕ್ಕೂ ಹೆಚ್ಚು ಕೃತಿಗಳು.

೩೭. ಟಿ. ವಿ. ವೆಂಕಟಾಚಲಶಾಸ್ತ್ರೀ (ಜ. ೧೯೩೩), ಬಿ. ಎ. (ಆನರ್ಸ್) ಕನ್ನಡ, ಎಂ. ಎ. ಕನ್ನಡ, ಕನ್ನಡ ಅಧ್ಯಾಪಕರು, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು. ಬೆಂಗಳೂರಿನ ಸೆಂಟ್‌ಜೋಸೆಫ್ಸ್ ಕಾಲೇಜು, ಉಸ್ಮಾನಿಯ ವಿಶ್ವವಿದ್ಯಾನಿಲಯಗಳಲ್ಲಿ ಕನ್ನಡ ಅಧ್ಯಾಪಕರಾಗಿ ಸೇವೆಸಲ್ಲಿಸಿದ್ದಾರೆ. ಕೃತಿಗಳು : ಬದ್ಧ ಪ್ರಮಿತ್ಯೂಸ್, ಮಹಾಕಾವ್ಯಲಕ್ಷಣ, ಕನ್ನಡ ಛಂದಸ್ಸು, ಶ್ರೀವತ್ಸ ನಿಘಂಟು, ಕಂಸ ಮುಂತಾದುವು.

೩೮. ಜಿ. ವರದರಾಜರಾವ್ (ಜ. ೧೯೧೮, ಬೆಂಗಳೂರು), ಎಂ ಎ. ಕನ್ನಡ, ಪಿಎಚ್. ಡಿ. ಕನ್ನಡ ರೀಡರ್, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು-೬. ಮೈಸೂರು ಸರಕಾರದ ವಿವಿಧ ಕಾಲೇಜುಗಳಲ್ಲಿ ಕನ್ನಡ ಅಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ. ಕನ್ನಡ ಅಧ್ಯಯನ ಸಂಸ್ಥೆಯ ದಾಸಸಾಹಿತ್ಯ ವಿಭಾಗದ ಮುಖ್ಯರಾಗಿಯೂ ಸೇವೆ ಸಲ್ಲಿಸುತ್ತಿದ್ದಾರೆ. ಕೃತಿಗಳು : ಸೀತಾಪರಿತ್ಯಾಗದ ಸಮಸ್ಯೆಗಳು, ತೋರಣ, ಕಲಿಕರ್ಣ, ಕುಮಾರರಾಮನ ಸಾಂಗತ್ಯಗಳು ಇತ್ಯಾದಿ. ವಿಳಾಸ : ಸುದರ್ಶನ, ಜಯನಗರ, ಮೈಸೂರು.

೩೯. ರಾವೆಂಶ್ರೀ (ಆರ್. ವಿ. ಶ್ರೀನಿವಾಸಮೂರ್ತಿ) (ಜ. ೧೯೨೨, ಶಿವಮೊಗ್ಗ), ಬಿ. ಎ. ; ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯಲ್ಲಿ ಪ್ರಕಟಣಶಾಖೆಯ ಸಂಪಾದಕರಾಗಿ ಸೇವೆಸಲ್ಲಿಸಿ ಈಗ ಖಾಸಗಿ ಮುದ್ರಕರಾಗಿ, ಪ್ರಕಾಶಕರಾಗಿ ಹೆಸರಾಗಿದ್ದಾರೆ. ಕೃತಿಗಳು : ಮಾನಸಗಳು, ಸವತಿ, ಹೆಣ್ಣಿನಕಣ್ಣು, ಬಿಸಿಲುಗುದುರೆ, ಪುನರ್ಜನ್ಮ ಮುಂತಾದುವು. ವಿಳಾಸ : ಶ್ರೀಶಕ್ತಿ ಮುದ್ರಣಾಲಯ, ಜಯನಗರ, ಮೈಸೂರು.

೪೦. ರಾ. ಸತ್ಯನಾರಾಯಣ (ಜ. ೧೯೨೯, ಮೈಸೂರು), ಎಂ. ಎಸ್ಸಿ., ರಸಾಯನಶಾಸ್ತ್ರದ ಅಧ್ಯಾಪಕರು, ಶಾರದಾ ವಿಲಾಸ ಕಾಲೇಜು, ಮೈಸೂರು, ಕೃತಿಗಳು : *Studies in Indian Dance, Bhartanatya : A critical study, Sangītā Sudhakara of Haripaladeva*, ವೀಣಾಲಕ್ಷಣ, ಮುಂತಾಗಿ ಹತ್ತಕ್ಕೂ ಹೆಚ್ಚು ಗ್ರಂಥಗಳು, ಅನೇಕ ಸಂಶೋಧನಾತ್ಮಕ ಲೇಖನಗಳು.

೪೧. **ಕೆ. ಶಿವರಾಮ ಐತಾಳ** (ಜ. ೧೯೩೭, ಕಾರ್ಕಳ), ಎಂ.ಎ. ಕನ್ನಡ, ಕನ್ನಡ ಅಧ್ಯಾಪಕರು, ಶಾರದಾ ವಿಲಾಸ ಕಾಲೇಜು, ಮೈಸೂರು. ಕೃತಿಗಳು: ಭಗ್ನಪ್ರತಿಮೆ, ಕನ್ನಡ ಛಂದಸ್ಸಿನ ಪರಿಚಯ, ಛಂದಸ್ಸಿನ ಔಚಿತ್ಯ, ದಕ್ಷಿಣ ಕನ್ನಡದ ಜನಪದ ಸಾಹಿತ್ಯ, ಹೊಸಬೆಳಕು (ಸಂ. ಇತರರೊಡನೆ).

೪೨. **ಸಿಂಧುವಳ್ಳಿ ಅನಂತಮೂರ್ತಿ** (ಜ. ೧೯೩೧, ಸಿಂಧುವಳ್ಳಿ), ಎಂ.ಎ. ಕನ್ನಡ, ನಾಟಕ ಶಾಸ್ತ್ರದ ಅಧ್ಯಾಪಕರು, ಲಲಿತ ಕಲಾ ಕಾಲೇಜು, ಮೈಸೂರು, ಮೈಸೂರಿನ ಡಿ. ಬನುಮಯ್ಯ ಕಾಲೇಜಿನಲ್ಲಿ ಕೆಲವು ವರ್ಷ ಕನ್ನಡ ಅಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ. ಕೃತಿಗಳು: ಕಾಡುಪ್ರಾಣಿ, ವಿನಾಯಕವಾಙ್ಮಯ (ಡಾ. ಹಾ. ಮಾ. ನಾಯಕ ಅವರೊಡನೆ ಸಂಪಾದಿತ), ನಾಟಕ ರಂಗದಲ್ಲಿ ಅನೇಕ ಪ್ರಯೋಗಗಳನ್ನು ನಡೆಸಿ ಹೆಸರಾಗಿದ್ದಾರೆ. ವಿಳಾಸ: ಸುರುಚಿ ಪ್ರಕಾಶನ, ಒಂದನೆಯ ಮೆಯಿನ್, ಸರಸ್ವತೀಪುರಂ, ಮೈಸೂರು-೫.

೪೩. **ಪಿ. ಆರ್. ತಿಪ್ಪೇಸ್ವಾಮಿ** (ಜ. ೧೯೨೨, ಹರ್ತಿಕೋಟೆ) ಕ್ಯೂರೇಟರ್, ಜಾನಪದ ವಸ್ತು ಸಂಗ್ರಹಾಲಯ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು-೬. ಪ್ರಸಿದ್ಧ ಕಲಾವಿದರು. ಕೃತಿಗಳು: ಭಾರತೀಯ ಚಿತ್ರಕಲೆ, ಕಲೋಪಾಸಕರು, ಕರ್ನಾಟಕ ಚಿತ್ರಕಲೆ, ರಸಯಾತ್ರೆ, ಇತರರೊಡನೆ ಸಂ. ಸಾಹಿತ್ಯ ಸಮೀಕ್ಷೆ. ವಿಳಾಸ: ೧೭೩, ರಮಾವಿಲಾಸ ಅಗ್ರಹಾರ, ಮೈಸೂರು-೧.

೪೪. **ಎಂ. ಬಿ. ಸಿಂಗ್** (ಜ. ೧೯೨೫, ಮೈಸೂರು), ಸಹಸಂಪಾದಕರು, ಸುಧಾ ಪತ್ರಿಕೆ, ಬೆಂಗಳೂರು: ಕೆಲವು ಕಾಲ ಪ್ರಜಾವಾಣಿ ಪತ್ರಿಕೆಯಲ್ಲೂ ಸೇವೆ ಸಲ್ಲಿಸಿದ್ದಾರೆ. ಕೃತಿಗಳು: ಸ್ವಾತಂತ್ರ್ಯ ಶಿಲ್ಪಿಗಳು. ಮಹಾಮಸ್ತಕಾಭಿಷೇಕ ಮುಂತಾದ ಕೆಲವು ಸಂಸ್ಮರಣ ಸಂಚಿಕೆಗಳನ್ನು ಸಂಪಾದಿಸಿದ್ದಾರೆ.

೪೫. **ಎಚ್. ಎಂ. ಶಂಕರನಾರಾಯಣರಾವ್** (ಜ. ೧೯೧೩, ಹರಿಹರ), ಎಂ.ಎ. ಕನ್ನಡ, ಕನ್ನಡ ಪ್ರಾಧ್ಯಾಪಕರು ಇಲಾಖಾ ಮುಖ್ಯರು, ಶಾರದಾವಿಲಾಸ ಕಾಲೇಜು, ಮೈಸೂರು. ಕೃತಿಗಳು: ಕವಿರಾಘವಾಂಕ, ಚಂದ್ರಗುಪ್ತವಿಜಯ, ಯಶೋಧರನಕತೆ, ಭೀಮ ದುರ್ಯೋಧನೀಯ, ಜನಪದ ಮುಕ್ತಕಗಳು ಮುಂತಾದುವು. ವಿಳಾಸ: ಶಾರದಾ ಮಂದಿರ, ರಾಮಯ್ಯರ್ ರಸ್ತೆ, ಕೃಷ್ಣಮೂರ್ತಿಪುರಂ, ಮೈಸೂರು.

೪೬. **ಎಚ್. ನರಸಣ್ಣ** (ಜ. ೧೯೨೮, ಹುಲಿಕಟ್ಟೆ), ಎಂ.ಎ. ಕನ್ನಡ; ನಿರ್ದೇಶಕರು, ಮೈಸೂರು ವಿಶ್ವವಿದ್ಯಾನಿಲಯದ ಮುದ್ರಣಾಲಯ; ಕೃತಿಗಳು: ಹಳ್ಳಿಯದರ್ಶನ, ಮುದ್ರಣ ಸಮೀಕ್ಷೆ, ಇತರರೊಡನೆ ಸಂಪಾದಿತ: ದ್ರೋಣಪರ್ವ ಸಂಗ್ರಹ, ವಿನೋಭಾಭಾವೆ.

೪೭. **ಟಿ. ವಿ. ಸುಬ್ರಹ್ಮಣ್ಯಂ** (ಜ. ೧೯೨೭), ಎಂ.ಎ. ಇಂಗ್ಲಿಷ್, ಬಿ.ಲಿಬ್. ಸೈನ್ಸ್ ಅಧ್ಯಾಪಕರು, ಗ್ರಂಥಾಲಯ ವಿಜ್ಞಾನ, ವಿಶ್ವವಿದ್ಯಾನಿಲಯದ ಗ್ರಂಥಾಲಯ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು. ಬೆಂಗಳೂರಿನ ನ್ಯಾಷನಲ್ ಕಾಲೇಜಿನಲ್ಲಿ ಕೆಲವು ವರ್ಷ ಇಂಗ್ಲಿಷ್ ಅಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ. ಕೃತಿಗಳು: ಗ್ರಂಥ ಸೂಚಿಯ ರಚನೆ; ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ ಲೇಖನಗಳ ಸೂಚಿ, ಗ್ರಂಥಾಲಯ ವಿಜ್ಞಾನದ ಬಗ್ಗೆ ಕನ್ನಡ ಹಾಗೂ ಇಂಗ್ಲಿಷಿನಲ್ಲಿ ಅನೇಕ ಲೇಖನಗಳು, ಲೇಖಕರ ಸೂಚಿ, ಗಾಂಧಿ ಸಾಹಿತ್ಯ ಸೂಚಿ, ಎ. ಆರ್. ಕೃ. ಸಾಹಿತ್ಯ ಸೂಚಿಗಳ ರಚನೆ.

೪೮. **ಆರ್.ಜಿ. ಕೃಷ್ಣನ್** (ಜ. ೧೯೧೩) (ರಾಮಣ್ಣ ಗೋಪಾಲಕೃಷ್ಣನ್), ಎಸ್.ಎಸ್.ಎ.ಎಂ. ನಿವೃತ್ತ ಕನ್ನಡ ಶೀಘ್ರಲಿಪಿ ಅಧ್ಯಾಪಕರು, ಪೋಲಿಸ್ ಟ್ರೈನಿಂಗ್ ಕಾಲೇಜು. ಕೆಲವು ವರ್ಷ ಸಿ.ಐ.ಡಿ. ಶಾಖೆಯ ರಿಪೋರ್ಟಿಂಗ್ ಬ್ಯೂರೋವಿನಲ್ಲಿ ಸೇವೆ ಸಲ್ಲಿಸಿದ್ದಾರೆ. ಕನ್ನಡ ಶೀಘ್ರಲಿಪಿ ತಜ್ಞರು. ಕೃತಿಗಳು: ತಜ್ಞ ಕನ್ನಡ ಶೀಘ್ರಲಿಪಿ ಬರಹಗಾರ ಗ್ರೇಡೆಡ್ ಡಿಕ್ಟೇಷನ್ ಹಾಗೂ ಅನೇಕ ಲೇಖನಗಳು, ವಿಳಾಸ: ೧೪೬/೪ ಶ್ರೀನಗರ ಬಡಾವಣೆ, ಬೆಂಗಳೂರು–೧೯.

೪೯. **ಚಿ. ನ. ಮಂಗಳ** (ಜ. ೧೯೩೮, ಬೆಂಗಳೂರು): ಎಂ.ಎ. ಇಂಗ್ಲಿಷ್; ಪ್ರಿನ್ಸಿಪಾಲರು ರಾಷ್ಟ್ರೀಯ ವಿದ್ಯಾಲಯ ಮಹಿಳಾ ಕಾಲೇಜು, ಬೆಂಗಳೂರು. ಕೆಲಕಾಲ 'ಜ್ಞಾನ ಗಂಗೋತ್ರಿ'ಯಲ್ಲಿ ಉಪಸಂಪಾದಕಿಯಾಗಿ ಸೇವೆಸಲ್ಲಿಸಿದ್ದಾರೆ. ಕೃತಿಗಳು: ಹೆಲನ್ ಕೆಲರ್, ಹುಲಿಯ ಬೆನ್ನೇರಿದಾಗ, ಮಹಾತ್ಮರ ಬರವಿಗಾಗಿ, ಮಾರ್ಗದರ್ಶಿ, ಅಭಾಗಿನಿ ಮುಂತಾದುವು.

೫೦. **ಜಿ. ಹನುಮಂತರಾವ್** (ಜ. ೧೮೯೮), ಎಂ.ಎ., ಮೈಸೂರು ವಿಶ್ವವಿದ್ಯಾನಿಲಯದಲ್ಲಿ ತತ್ತ್ವಶಾಸ್ತ್ರದ ಉಪಪ್ರಾಧ್ಯಾಪಕರಾಗಿ, ವಿಶ್ವವಿದ್ಯಾನಿಲಯದ ಪುಸ್ತಕಭಂಡಾರದ ಮುಖ್ಯಾಧಿಕಾರಿಗಳಾಗಿ, ಪ್ರಕಟಣ ಶಾಖೆಯ ಕಾರ್ಯದರ್ಶಿಗಳಾಗಿ ಸೇವೆಸಲ್ಲಿಸಿ ನಿವೃತ್ತ ರಾಗಿದ್ದಾರೆ. ಕೃತಿಗಳು: ಸಮಾಜದ ರೋಗರುಜಿನಗಳು; ಪಾಶ್ಚಾತ್ಯ ತತ್ವಶಾಸ್ತ್ರ ಸಮಸ್ಯೆ ಗಳು, ಕುಟುಂಬ ಜೀವನ, ತರ್ಕಶಾಸ್ತ್ರ, ವಿಜ್ಞಾನ, ಧರ್ಮದೀಪಕರು, ಋಗ್ವೇದ ಸೂತ್ರ ಗಳು ಮುಂತಾದುವು. ವಿಳಾಸ: ೧೨೧೦, ಕಾಂತರಾಜ ರಸ್ತೆ, ಕೃಷ್ಣಮೂರ್ತಿಪುರಂ, ಮೈಸೂರು-೪.

೫೧. **ಎಂ. ಚಿದಾನಂದಮೂರ್ತಿ** (ಜ. ೧೯೩೦) ಎಂ.ಎ., ಪಿಎಚ್. ಡಿ. ಕನ್ನಡ ರೀಡರ್, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು. ಈ ಮೊದಲು ಮೈಸೂರು ಸರಕಾರಿ ಕಾಲೇಜು ಹಾಗೂ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಅಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ. ಕೃತಿಗಳು: ಶೂನ್ಯಸಂಪಾದನೆಯನ್ನು ಕುರಿತು, ಭಾಷಾವಿಜ್ಞಾನದ ಮೂಲ ತತ್ವಗಳು, ಸಂಶೋಧನ ತರಂಗ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಬಸವಣ್ಣನವರು, ಸಂಶೋಧನೆ ಇತ್ಯಾದಿ.

೫೨. **ಹಂಪ ನಾಗರಾಜಯ್ಯ** (ಜ. ೧೯೩೬), ಎಂ.ಎ. ಕನ್ನಡ, ಕನ್ನಡ ಅಧ್ಯಾಪಕರು. ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು. ಬೆಂಗಳೂರಿನ ಸರಕಾರಿ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿ ಗಳಾಗಿ, ಜೀವನ ಪತ್ರಿಕೆಯ ಸಂಪಾದಕರಾಗಿ ಸೇವೆ ಸಲ್ಲಿಸಿದ್ದಾರೆ. ಕೃತಿಗಳು: ಪಂಪಭಾರತ ಸಂಗ್ರಹ, ನಾಗಶ್ರೀ, ದ್ರಾವಿಡಭಾಷಾವಿಜ್ಞಾನ, ಭರತೇಶವೈಭವ, ಗೋವಿಂದಪೈ ಅವರ ಮೂರು ನಾಟಕಗಳು, ಜಯನೃಪ ಕಾವ್ಯಸಂಗ್ರಹ ಇತ್ಯಾದಿ.

೫೩. **ಎಚ್. ತಿಪ್ಪೇರುದ್ರಸ್ವಾಮಿ** (ಜ. ೧೯೨೬, ಹೊನ್ನಾಳಿ) ಎಂ.ಎ. ಕನ್ನಡ ಪಿಎಚ್.ಡಿ. ಕನ್ನಡ ರೀಡರ್, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು. ನಿರ್ದೇಶಕರು, ಗಾಂಧೀಭವನ, ಮೈಸೂರು ವಿಶ್ವವಿದ್ಯಾನಿಲಯ. ಕೆಲವು ವರ್ಷ ಸರಕಾರಿ ಕಾಲೇಜುಗಳಲ್ಲಿ ಕನ್ನಡ ಅಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ. ಕೃತಿಗಳು: ಶೂನ್ಯತತ್ತ್ವ ವಿಕಾಸ ಮತ್ತು ಶೂನ್ಯಸಂಪಾದನೆ, ಶರಣರ ಅನುಭಾವ ಸಾಹಿತ್ಯ, ಪರಿಪೂರ್ಣದೆಡೆಗೆ,

ಕದಳಿಯ ಕರ್ಪೂರ, ಜ್ಯೋತಿ ಬೆಳಗುತಿದೆ, ಸತ್ಯಾಶ್ರಯ ಸಾಮ್ರಾಜ್ಯ, ತಪೋರಂಗ, ವಿಧಿ ಪಂಜರ, ಕರ್ಣಾಟಕ ಸಂಸ್ಕೃತಿ ಸಮೀಕ್ಷೆ ಇತ್ಯಾದಿ.

೫೪. **ಬಿ. ಸಿ. ಜವಳಿ** (ಜ. ೧೯೩೨), ಎಂ.ಎ. ಕನ್ನಡ, ಕನ್ನಡ ಅಧ್ಯಾಪಕರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ಕೃತಿಗಳು: ಹಂಪೆಯ ಹರಿಹರದೇವ ಮಹಾಕವಿಯ ಗಿರಿಜಾ ಕಲ್ಯಾಣವು, ಮಹಾಕವಿ ಹಂಪೆಯ ಹರಿಹರ ದೇವನ ರಗಳೆಗಳು, ಉಡುತಡಿಯ ಮಹಾದೇವಿ ಅಕ್ಕನವರ ಸಾಹಿತ್ಯ, ಚಾಮರಸ ಕವಿಯ ಪ್ರಭುಲಿಂಗಲೀಲೆ ಇತ್ಯಾದಿ.

೫೫. **ಎಂ. ಮರಿಯಪ್ಪಭಟ್ಟ** (ಜ. ೧೯೦೬), ಎಂ.ಎ., ಮದರಾಸು ವಿಶ್ವವಿದ್ಯಾನಿಲಯದ ಕನ್ನಡ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ. ಈಗ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟಿನ ಪ್ರಧಾನ ಸಂಪಾದಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ ಕೃತಿಗಳು: ಛಂದಸ್ಸಾರ, ಕನ್ನಡ ಸಂಸ್ಕೃತಿ, ಸಂಗೀತ ರತ್ನಾಕರ, ಹಳಗನ್ನಡ ನಡುಗನ್ನಡ ಕಾವ್ಯ ಸಂಗ್ರಹ. ಸಂಕ್ಷಿಪ್ತ ಕನ್ನಡ ಸಾಹಿತ್ಯ ಚರಿತ್ರೆ, ಅಭಿನವ ಮಂಗರಾಜ ನಿಘಂಟು, ವರ್ಧಮಾನ ಪುರಾಣ, ಪಾರ್ಶ್ವನಾಥ ಪುರಾಣ, ಜಾತಕತಿಲಕ ಇತ್ಯಾದಿ.

೫೬. **ಎನ್. ಬಸವಾರಾಧ್ಯ** (ಜ ೧೯೨೬) ಬಿ.ಎ. ಆನರ್ಸ್ (ಕನ್ನಡ), ಎಂ.ಎ. ಕನ್ನಡ; ಡೆಪ್ಯೂಟಿ ಡೈರೆಕ್ಟರ್, ಸಂಪಾದನ ವಿಭಾಗ, ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು. ಕೆಲಕಾಲ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟಿನ ಸಂಪಾದಕರಾಗಿದ್ದರು. ಕೃತಿಗಳು: ಸಂಪಾದಿತ: ಹರಿಶ್ಚಂದ್ರಕಾವ್ಯ, ತೊರವೆ ರಾಮಾಯಣ, ಚಂದ್ರಹಾಸನ ಕತೆ, ಕನ್ನಡ ಕಾವ್ಯವಿಕಾಸ, ಕನ್ನಡ ಗದ್ಯಾವಲೋಕನ. ಪಂಪಭಾರತ ಸಂಗ್ರಹ ಇತ್ಯಾದಿ.

೫೭. **ಡಿ. ಎಸ್. ಕರ್ಕಿ** (ಜ. ೧೯೦೭), ಎಂ.ಎ., ಬಿ.ಟಿ., ಪಿಎಚ್.ಡಿ. ನಿವೃತ್ತ ಪ್ರಿನ್ಸಿಪಾಲರು, ಕಾಡಸಿದ್ಧೇಶ್ವರ ಕಾಲೇಜು, ಹುಬ್ಬಳ್ಳಿ. ಕೃತಿಗಳು: ನಕ್ಷತ್ರಗಾನ, ಬಣ್ಣದಚೆಂಡು, ಭಾವ ತೀರ್ಥ, ಕನ್ನಡ ಛಂದೋವಿಕಾಸ, ನಾಲ್ದೆಸೆಯ ನೋಟ ಇತ್ಯಾದಿ. ಯು.ಜಿ.ಸಿ. ಸಂಶೋಧನ ಪ್ರಾಧ್ಯಾಪಕರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೫೮. **ಕೆ. ಎಂ. ಕೃಷ್ಣರಾವ್** (ಜ. ೧೯೩೩): ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಕನ್ನಡ ವಿಭಾಗ, ಉಸ್ಮಾನಿಯ ವಿಶ್ವವಿದ್ಯಾನಿಲಯ, ಹೈದರಾಬಾದ್. ಮೈಸೂರು ಮತ್ತು ಬೆಂಗಳೂರು ವಿಶ್ವವಿದ್ಯಾನಿಲಯಗಳಲ್ಲಿ ಅನೇಕವರ್ಷ ಸೇವೆಸಲ್ಲಿಸಿದ್ದಾರೆ. ಕೃತಿಗಳು: ಭರತ ಬಾಹುಬಲಿ, ಯಕ್ಷಗಾನ ಸಾಹಿತ್ಯ, ಶ್ರೀ ಜಗನ್ನಾಥದಾಸರು, ದ್ರುಪದ ನಂದಿನಿ, ಆಡಳಿತ ಶಬ್ದಕೋಶ ಮುಂತಾಗಿ ಇಪ್ಪತ್ತಕ್ಕೂ ಹೆಚ್ಚು ಗ್ರಂಥಗಳು.

೫೯. **ಪ್ರಭುಶಂಕರ** (ಜ. ೧೯೨೯, ಚಾಮರಾಜನಗರ), ಎಂ.ಎ., ಕನ್ನಡ, ಪಿಎಚ್.ಡಿ. ನಿರ್ದೇಶಕರು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ ಮೈಸೂರು. ಬೆಂಗಳೂರು, ಕೋಲಾರ ಮತ್ತು ಮೈಸೂರು ಕಾಲೇಜುಗಳಲ್ಲಿ ಅಧ್ಯಾಪಕರಾಗಿ ಸೇವೆಸಲ್ಲಿಸಿದ್ದಾರೆ. ಕೃತಿಗಳು: ನಿವೇದಿತ, ಅಂಗುಲಿಮಾಲ, ಕನ್ನಡದಲ್ಲಿ ಭಾವಗೀತೆ, ಇತ್ಯಾದಿ. ವಿಳಾಸ: ಅಧ್ಯಾಪಕರ ನಿವಾಸ, ಮಾನಸಗಂಗೋತ್ರಿ, ಮೈಸೂರು-೬.

೬೦ **ವೆಂಕಟರಾಮಪ್ಪ** (ಜ. ೧೯೦೬), ಎಂ.ಎ. ಕನ್ನಡ, ನಿವೃತ್ತ ಕನ್ನಡ ಉಪಪ್ರಾಧ್ಯಾಪಕರು, ಮೈಸೂರು ವಿಶ್ವವಿದ್ಯಾನಿಲಯ: ಕೆಲವು ವರ್ಷ ತುಮಕೂರು, ಬೆಂಗಳೂರು ಮುಂತಾದ ಕಡೆಗಳ ಸರಕಾರಿ ಕಾಲೇಜುಗಳಲ್ಲಿ ಕನ್ನಡ ಅಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ. ಕೃತಿಗಳು:

ಸಾರಸ್ವತ ಉಪನ್ಯಾಸಗಳು, ಕನ್ನಡ ಸಾಹಿತ್ಯ, ತೆಲುಗು ಚಾಟು ಪದ್ಯಗಳು. ಶ್ರೀಕೃಷ್ಣ ಚರಿತೆ, ಜನ್ನನ ಕಾವ್ಯಪರಿಚಯ, ಕನ್ನಡ ಭಾಗವತ ಇತ್ಯಾದಿ ಇಪ್ಪತ್ತಕ್ಕೂ ಹೆಚ್ಚು.

೬೧. ಜಿ. ಎಸ್. ಸಿದ್ಧಲಿಂಗಯ್ಯ (ಜ. ೧೯೩೧) ಎಂ.ಎ. ಕನ್ನಡ ರೀಡರ್, ಸರಕಾರಿ ಕಾಲೇಜು, ಬೆಂಗಳೂರು ಕೃತಿಗಳು : ಮಹಾನುಭಾವ ಬುದ್ಧ, ರಸಗಂಗೆ, ಉತ್ತರ, ಧೃತರಾಷ್ಟ್ರನ ಪರಿನಿಷ್ಕ್ರಮಣ ಮತ್ತು ಇತರ ಕವನಗಳು.

೬೨. ಟಿ. ಕೇಶವಭಟ್ಟ (ಜ. ೧೯೨೫) ಕನ್ನಡ ಅಧ್ಯಾಪಕರು, ಆಚಾರ್ಯ ಪಾಠಶಾಲಾ, ಬಸವನ ಗುಡಿ, ಬೆಂಗಳೂರು. ಕೆಲವು ವರ್ಷ ಮೈಸೂರು ರಾಜ್ಯದ ಶಿಕ್ಷಣ ಇಲಾಖೆಯಲ್ಲಿ ಕನ್ನಡ ಅಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ. ಕೃತಿಗಳು : ಭಾಷಾದೀಪಿಕೆ, ಸತ್ತ್ವಾವಲೋಕನಂ, ತೂಗುದೀವಿಗೆ, ಪಂಚವಟಿ ರಾಮಾಯಣ, ಸಂಶೋಧನ ರತ್ನಮಾಲಿಕೆ, 'ಹಾಡಿನ ಚೂಡಾ ಮಣಿ ಇತ್ಯಾದಿ.

೬೩. ಎಸ್. ಎಸ್. ಮಾಳವಾಡ (ಜ. ೧೯೧೦, ಮುಣಸಿಗಿ), ಎಂ.ಎ. ಕನ್ನಡ, ನಿವೃತ್ತ ಕನ್ನಡ ಪ್ರಾಧ್ಯಾಪಕರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಕೃತಿಗಳು : ಕರ್ನಾಟಕ ಸಾಹಿತ್ಯ ಸಂಸ್ಕೃತಿದರ್ಶನ, ಹರಿಹರನ ನೂರು ರಗಳೆಗಳು, ಸಾಹಿತ್ಯ ಸಮಾಲೋಚನೆ, ಹರಿಹರನ ರಗಳೆಗಳಲ್ಲಿ ಜೀವನದರ್ಶನ ಇತ್ಯಾದಿ.

೬೪. ಸಿ. ಕೃಷ್ಣ (ಜ. ೧೯೧೬. ಚನ್ನರಾಯಪಟ್ಟಣ), ಎಂ.ಎ., ಎಂ.ಎಡ್. ಇಂಗ್ಲಿಷ್ ಅಧ್ಯಾಪಕರು, ಶಾರದಾ ವಿಲಾಸ ಕಾಲೇಜು, ಮೈಸೂರು. ಕೃತಿಗಳು : ಮುಗುಪೆಯರ ಪತ್ರಗಳು ಮತ್ತು ನನ್ನ ಅಪ್ಸರೆ, ಗೌರಿಯ ಮದುವೆ, ಆನಂದ ಮಠ (ಅನು : ಬಂಗಾಲಿಯಿಂದ), ಮಹಾರಾಷ್ಟ್ರ ಜೀವನ ಪ್ರಭಾತ, ರಜಪೂತ ಜೀವನ ಸಂಧ್ಯಾ, ಸಮಾಜ, ಸಂಸಾರ, ಶುಕ್ಲವಸನಾ ಸುಂದರಿ.

೬೫. ಸಿ. ಆರ್. ಶ್ರೀನಿವಾಸ ಅಯ್ಯಂಗಾರ್ (ಜ. ೧೯೧೪), ಕನ್ನಡ ಪಂಡಿತರು, ನವೋದಯ ಹೈಸ್ಕೂಲು, ಚೆನ್ನರಾಯಪಟ್ಟಣ. ಕೃತಿಗಳು: ಶ್ರವಣಬೆಳುಗೊಳದ ಕೈಪಿಡಿ, ಸರ್ ಮಿರ್ಜಾ ಎಂ. ಇಸ್ಮಾಯಿಲ್ ಅವರ ಜೀವನ ಚರಿತ್ರೆ, ಚಿಕ್ಕದೇವರಾಜ ಒಡೆಯರು, ಮಹಾ ಭಾರತದ ಸೂತ್ರಧಾರ, ಸಾರ್ಥಕ ಜೀವಿಗಳು, ಮೈಸೂರಿನ ಮಹಾಶಿಲ್ಪಿ ಕೃಷ್ಣರಾಜ ಒಡೆಯರ್‌ರವರು, ವಿಳಾಸ: ಶ್ರೀ ವೀರನಾರಾಯಣ ಕೃಪ, ಬಡವಾಣೆ, ಚೆನ್ನರಾಯ ಪಟ್ಟಣ, ಹಾಸನಜಿಲ್ಲೆ.

೬೬. ಎಚ್. ಎಸ್. ಹರಿಶಂಕರ್ (ಜ. ೧೯೪೦), ಎಂ.ಎ. ಕನ್ನಡ, ಅಧ್ಯಾಪಕರು. ಭಾಷಾಂತರ ಮತ್ತು ಪಠ್ಯಪುಸ್ತಕ ವಿಭಾಗ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು. ಕೃತಿಗಳು : ಚಿಕದೇವರಾಯಸಪ್ತಪದಿ, ಆಧುನಿಕ ಯೂರೋಪಿನ ಇತಿಹಾಸ (ಅನು) ಸಿಂಗರಾರ್ಯ, ತಿಮ್ಮಕವಿ; ಅನುವಾದ: ಕಷ್ಟಾಂಕ ಮತ್ತು ಇತರ ಕತೆಗಳು (ರಷ್ಯನ್ ಮೂಲದಿಂದ) ವಿಳಾಸ: ಶಾರದಾ ಮಂದಿರ, ರಾಮಯ್ಯರ್ ರಸ್ತೆ, ಕೃಷ್ಣಮೂರ್ತಿಪುರಂ, ಮೈಸೂರು.

೬೭. ಬಿ. ಎಚ್. ಶ್ರೀಧರ (ಜ. ೧೯೧೮); ಎಂ.ಎ, ಸಂಸ್ಕೃತ ಪ್ರಾಧ್ಯಾಪಕರು ಹಾಗೂ ಪ್ರಿನ್ಸಿಪಾಲರು, ಆರ್ಟ್ಸ್ ಮತ್ತು ಸೈನ್ಸ್ ಕಾಲೇಜು, ಸಿದ್ಧಾಪುರ (ಉ.ಕ.) ಕೃತಿಗಳು : ಮೇಘಾನಂದ, ಅಮೃತಬಿಂದು, ಹೊಸಗನ್ನಡ ಸಾಹಿತ್ಯಶೈಲಿ, ಮಂಜುಗೀತ, ಭಾರತೀಯ ವಾಙ್ಮಯ ಮುಂತಾದುವು.

೬೮. **ಗುಂಡ್ಮಿ ಚಂದ್ರಶೇಖರ ಐತಾಳ** (ಜ. ೧೯೩೬), ಎಂ.ಎ. ಕನ್ನಡ. ಕನ್ನಡ ಅಧ್ಯಾಪಕರು, ಮಂಗಳಗಂಗೋತ್ರಿ, ಮಂಗಳೂರು. ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟು ಕಛೇರಿಯಲ್ಲಿಯೂ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ದಾಸಸಾಹಿತ್ಯ ವಿಭಾಗದಲ್ಲಿಯೂ ಕೆಲವು ವರ್ಷ ಸೇವೆ ಸಲ್ಲಿಸಿದ್ದಾರೆ. ಕೃತಿಗಳು: ಸೌಂದರ್ಯದ ಸಾನ್ನಿಧ್ಯದಲ್ಲಿ, ನಿಮ್ಮ ಸೈಕಲ್, ಬೆಳಗಾಯಿತು, ಕೈಲಿಯ ಕರೆದನೊರೆಹಾಲು, ಮಾತೃ ಸಂಹಿತೆ ಮುಂತಾದುವು.

೬೯. **ಸಿ. ಪಿ. ಕೆ.** (**ಸಿ. ಪಿ. ಕೃಷ್ಣಕುಮಾರ್**) (ಜ. ೧೯೩೯), ಎಂ.ಎ. ಕನ್ನಡ, ಕನ್ನಡ ರೀಡರ್, ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು. ಮೈಸೂರು ವಿಶ್ವವಿದ್ಯಾನಿಲಯದ ಪ್ರಾಚ್ಯವಿದ್ಯಾ ಸಂಶೋಧನಾಲಯದಲ್ಲಿ, ಮಹಾರಾಜಕಾಲೇಜಿನಲ್ಲಿ ಕೆಲಕಾಲ ಸೇವೆ ಸಲ್ಲಿಸಿದ್ದಾರೆ. ಕೃತಿಗಳು: ತಾರಾಸಖ, ಪ್ರಕೃತಿ, ಕನ್ನಡ ಚತುರ್ಮುಖ, ಜಾನಪದ ಪ್ರತಿಭೆ, ಸಾಹಿತ್ಯ ಪ್ರವೇಶ, ಪಾಶ್ಚಾತ್ಯ ಕಾವ್ಯಚಿಂತನ, ಕನ್ನಡ ಯಶೋಧರ ಚರಿತ, ಭಾಸನ ಎರಡು ನಾಟಕಗಳು, ಹರಿಶ್ಚಂದ್ರ ಸಾಂಗತ್ಯ, ಭಾರತೀಯ ಶಾಸನ ಶಾಸ್ತ್ರ ಪರಿಚಯ ಮುಂತಾಗಿ ಇಪ್ಪತ್ತೈದಕ್ಕೂ ಹೆಚ್ಚು.

೭೦. **ಸುಧಾಕರ** (ಜ. ೧೯೩೩), ಎಂ.ಎ. ಕನ್ನಡ, ಕನ್ನಡ ಅಧ್ಯಾಪಕರು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು. ಮಂಡ್ಯ ಸರಕಾರಿ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿ ಕೆಲವು ವರ್ಷ ಸೇವೆ ಸಲ್ಲಿಸಿದ್ದಾರೆ. ಕೃತಿಗಳು: ಕಣ್ಣಕಿತ್ತ ಹಸು, ಗರಿಕೆ ಬೇರು, ಜನಪದ ಬೆಡಗಿನ ವಚನಗಳು.

೭೧. **ಪ. ವಿ. ಚಂದ್ರಶೇಖರ** (ಜ. ೧೯೩೩, ಸೊಲ್ಲಾಪುರ, ಶಿವಮೊಗ್ಗ ಜಿಲ್ಲೆ) ಕನ್ನಡ ಅಧ್ಯಾಪಕರು, ಮೈಸೂರು ವಿಶ್ವವಿದ್ಯಾನಿಲಯದ ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆ, ಮೈಸೂರು. ಕೆಲವು ವರ್ಷ ದಾವಣಗೆರೆ ಸರಕಾರಿ ಕಾಲೇಜಿನಲ್ಲಿ, ಮೈಸೂರಿನ ಮಹಾರಾಣಿ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ. ಕೃತಿಗಳು: ಇರುವೆಯ ಕಥೆ, ಸಾಕ್ರಟೀಸನ ದರ್ಶನ, ಚಿನ್ನದ ಗರಿಗಳು, ಅಂಡಯ್ಯ; ಸಂಪಾದಿತ: ಉಡುಗೊರೆ, ವಿ.ಸೀ., ಸಂಮ್ಯಕ್ತ್ವ ಕೌಮುದಿ, ಅನುವಾದ: ರಷ್ಯಾದ ಸಣ್ಣಕಥೆಗಳು.

೭೨. **ಎ. ವಿ. ನರಸಿಂಹಮೂರ್ತಿ** (ಜ. ೧೯೩೪), ಎಂ.ಎ. ಇಂಡಾಲಜಿ, ಪಿಎಚ್.ಡಿ. ರೀಡರ್, ಇಂಡಾಲಜಿ ವಿಭಾಗ, ಮಾನಸಗಂಗೋತ್ರಿ, ಮೈಸೂರು. ಹಾರ್ವರ್ಡ್ ವಿಶ್ವವಿದ್ಯಾನಿಲಯದಲ್ಲಿ ಫುಲ್‌ಬ್ರೈಟ್ ಸ್ಕಾಲರ್ ಆಗಿ ಅಧ್ಯಯನ ನಡೆಸಿದ್ದಾರೆ. ಕೃತಿಗಳು: ಕನ್ನಡ ಲಿಪಿಯ ಉಗಮ ಮತ್ತು ವಿಕಾಸ, ಕರ್ನಾಟಕದ ಸೇವುಣರ ಇತಿಹಾಸ (ಕನ್ನಡ ಮತ್ತು ಇಂಗ್ಲಿಷ್), ಸಾಂಸ್ಕೃತಿಕ ಬೃಹದ್ಭಾರತ, ವಿಳಾಸ: ದೇವಗಿರಿ, ಜಯಲಕ್ಷ್ಮೀಪುರಂ, ಮೈಸೂರು-೧೨.

೭೩. **ಹಾ. ಮಾ. ನಾಯಕ** (ಜ. ೧೯೩೧, ಹಾರೋಗದ್ದೆ) ಬಿ.ಎ. ಆನರ್ಸ್ ಕನ್ನಡ, ಮೈಸೂರು. ಎಂ.ಎ. ಭಾಷಾಶಾಸ್ತ್ರ ಕಲ್ಕತ್ತ, ಪಿಎಚ್.ಡಿ. ಭಾಷಾಶಾಸ್ತ್ರ, ಇಂಡಿಯಾನ ವಿಶ್ವವಿದ್ಯಾನಿಲಯ, ಅಮೆರಿಕ. ನಿರ್ದೇಶಕರು, ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು. ಕೆಲವು ವರ್ಷ ತುಮಕೂರು, ಶಿವಮೊಗ್ಗ ಸರಕಾರಿ ಕಾಲೇಜುಗಳಲ್ಲಿ ಕನ್ನಡ ಅಧ್ಯಾಪಕರಾಗಿದ್ದರು. ಕೃತಿಗಳು: ಬಾಳ್ನೋಟಗಳು, ನಮ್ಮ ಮನೆಯ ದೀಪ, ರವೀಂದ್ರ

ನಾಥಠಾಕೂರ್, ಸಂಕೀರ್ಣ, ಸಮೀಕ್ಷೆ, ಸಂಚಯ, ಸಂವಾದ, ಸಾಹಿತ್ಯಸಲ್ಲಾಪ, ಸಲ್ಲಾಪ *Kannada Literary and Colloquial*, *Kannada Literature–A Decade* ಇತ್ಯಾದಿ ೨೫ಕ್ಕೂ ಹೆಚ್ಚು ಕೃತಿಗಳು. ವಿಳಾಸ: ಗೋಧೂಳಿ, ಜಯಲಕ್ಷ್ಮೀಪುರಂ, ಮೈಸೂರು.

609
ಬೆಂಗಳೂರು-19

WO 5871—MUPM—21-4-80

ಗ್ರಂಥಾಲಯ
609
ಬೆಂಗಳೂರು-19